

ನಿಸಾರ್

ನಿಮಗಿದೋ ನಮನ



ಸಪ್ನ



ನಿಸಾರ್ ನಿಮಗಿದೋ ನಮನ

ಸಂಪಾದಕರು :
ಪ್ರೊ. ಜಿ. ವೆಂಕಟಸುಬ್ಬಯ್ಯ
ಡಾ. ದೇ. ಜವರೇಗೌಡ
ಪ್ರೊ. ಎಚ್ಚೆಸ್ಕೆ
ಶ್ರೀ ವ್ಯಾಸರಾಯ ಬಲ್ಲಾಳ
ಡಾ. ಪ್ರಭುಶಂಕರ

SINCE 1967 Sapna
ಸಪ್ನ ಬುಕ್ ಹೌಸ್®
3ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು - 9
ದೂರವಾಣಿ : 40114455

NISAR NIMAGIDO NAMANA—Felicitation Volume on Nadoja Prof. K. S. NISAR AHMED, on the occasion of his 71st year celebration—Edited by **Prof. G. Venkatasubbaiah, Dr. D. Javare Gowda, Prof. H. S. Krishnaswamy Iyengar, Sri Vyasaraya Ballala and Dr. Prabhushankara**; published by ***Smt. Bhanumati S. Shah*** on behalf of **Sapna Book House**, Gandhinagar, B'lore-9, Tel. : 40114455. (K.B. 1091)

ISBN : 81-280-0573-1

ಪುಟಗಳು : xxvi + 1826 + 32 (ಚಿತ್ರಗಳು) = 1884

ಪ್ರಥಮ ಮುದ್ರಣ : ಸೆಪ್ಟೆಂಬರ್ 2006

ಹಂಚಿಕೆದಾರರು :
ಕರ್ನಾಟಕ ಬುಕ್ ಏಜೆನ್ಸಿ
ನಂ. 11, 2ನೇ ಮಹಡಿ, 3ನೇ ಮುಖ್ಯರಸ್ತೆ
ಗಾಂಧಿನಗರ, ಬೆಂಗಳೂರು - 560 009

ಮುಖಪುಟ ವಿನ್ಯಾಸ :

ಅಕ್ಷರ ಜೋಡಣೆ :

ಮುದ್ರಣ : ರವಿ ಗ್ರಾಫಿಕ್ಸ್
ಬೆಂಗಳೂರು

ನಿಮ್ಮೊಂದಿಗೆ ಕೆಲವು ನಿಮಿಷಗಳು

ಪ್ರೊ. ಕೆ. ಎಸ್. ನಿಸಾರ್ ಅಹಮದ್ ನಮ್ಮೆಲ್ಲರ ಮೆಚ್ಚಿನ ಕವಿ ಮತ್ತು ಗದ್ಯಕಾರ ಜೊತೆಗೆ ಸ್ನೇಹಶೀಲ ಸಜ್ಜನ. ಇಂಥ ಅಪೂರ್ವ ವ್ಯಕ್ತಿ ತಮ್ಮ ಸಾರ್ಥಕ ಬದುಕಿನ ಎಪ್ಪತ್ತನೆಯ ವರ್ಷವನ್ನು ಮುಗಿಸಿದ ಸಂದರ್ಭದಲ್ಲಿ ಅವರ ಆಪ್ತಮಿತ್ರರೂ ಅಭಿಮಾನಿ ಹಿತೈಷಿಗಳೂ ಶ್ರೀಯುತರಿಗೆ ಒಂದು ಸಂಭಾವನಾ ಗ್ರಂಥವನ್ನು ಅರ್ಪಿಸುವ ಅಭಿಲಾಷೆಯನ್ನು ಹೊಂದಿದ್ದರು. ಈ ಗ್ರಂಥ ನಿಸಾರ್ ಅಹಮದ್ ಅವರ ಒಟ್ಟಂದದ ಪರಿಚಯವನ್ನು ಮಾಡಿಕೊಡುವ ಆಶಯವನ್ನು ತಾಳಿರಬೇಕೆಂಬುದು ಈ ಮಹನೀಯರ ಇಚ್ಛೆಯಾಗಿತ್ತು. ಈ ಸಂಗತಿಯನ್ನು ನಿಸಾರರ ಎದುರಿಗೆ ಪ್ರಸ್ತಾಪಿಸಿದಾಗ ಅವರು ಈ ಯೋಜನೆಯ ಬಗೆಗೆ ಹೆಚ್ಚಿನ ಉಮೇದನ್ನು ವ್ಯಕ್ತಪಡಿಸಲಿಲ್ಲ.

ವರ್ಷಂಪ್ರತಿ ಕನ್ನಡದಲ್ಲಿ ಕೆಲವೊಂದು ಅಭಿನಂದನ ಗ್ರಂಥಗಳು ಪ್ರಕಟಣೆಗೊಳ್ಳುತ್ತವೆ. ಅವುಗಳ ಹೂರಣ ಹೆಚ್ಚು ಕಡಮೆ ಒಂದೇ ತೆರನಾಗಿರುತ್ತದೆ. ಲೇಖಕರ ಕೃತಿಗಳ ಮೇಲಿನ ವಿವೇಚನೆಗಿಂತ ಅಧಿಕವಾಗಿ ಆ ವ್ಯಕ್ತಿಗಳ ಬದುಕನ್ನು ಕುರಿತು ಬರೆದ ಲೇಖನಗಳು ಮೇಲುಗೈ ಪಡೆದಿರುತ್ತವೆ. ಇದರಿಂದ ಪ್ರಯೋಜನ ಇಲ್ಲವೆಂದಲ್ಲ. ಆದರೆ ಲೇಖಕರ ಸಾಹಿತ್ಯ ಸಾಧನೆಯ ಬಗೆಗೆ ರಚಿಸಿದ ಬರವಣಿಗೆಗಳಿಗೆ ಅಧಿಕತರ ಆದ್ಯತೆಯನ್ನು ನೀಡಿದರೆ, ಆ ಗ್ರಂಥದ ಗುಣಮೌಲ್ಯ ಹೆಚ್ಚುತ್ತದೆ; ಅದರ ಪ್ರಯೋಜನ ವ್ಯಾಪಕವಾಗಿ ಆಗುವುದರ ಜೊತೆಗೆ ಸಾಹಿತ್ಯಾಭ್ಯಾಸಿಗಳಿಗೆ ಅತಿಶಯವಾಗಿ ಉಪಯೋಗಕ್ಕೆ ಬರುತ್ತದೆ. ಇಂಥ ಆಶಯದ ಗೌರವ ಗ್ರಂಥವನ್ನು ತರುವುದಿದ್ದರೆ ತಮಗೆ ಒಪ್ಪಿತ ಎಂಬ ಇಂಗಿತವನ್ನು ನಿಸಾರರು ಸೂಚಿಸಿದರೆಂದು ಗೊತ್ತಾಯಿತು.

ಇದನ್ನು ಮನವರಿಕೆ ಮಾಡಿಕೊಂಡ ನಿಸಾರರ ಆತ್ಮೀಯರಾದ ಪ್ರೊ. ಎಚ್. ಪಿ. ರಾಜಶೇಖರ ಶೆಟ್ಟಿ, ಶ್ರೀ ಅ. ನಾ. ಪ್ರಹ್ಲಾದ ರಾವ್, ಶ್ರೀ ವೈ. ಜಿ. ಗಿರಿಶಾಸ್ತ್ರಿ ಮತ್ತು ಶ್ರೀಮತಿ ಭವಾನಿ ಗಂಗಾಧರ್ ಅವರು ನನ್ನನ್ನೂ ನನ್ನ ಜೊತೆಗಿರುವ ನಾಲ್ವರು ಸಹ ಸಂಪಾದಕ ಮಹನೀಯರನ್ನೂ ಈ ಅಭಿನಂದನ ಗ್ರಂಥದ ಸಂಪಾದಕರಾಗಲು ಕೋರಿದರು. ಅವರ ಉದ್ದೇಶವನ್ನು ಅರಿತ ಮೇಲೆ ನಾವೆಲ್ಲರೂ ಸಂತೋಷದಿಂದ ಸಮ್ಮತಿ ಸೂಚಿಸಿದೆವು. ಇದಕ್ಕೆ ಮುಖ್ಯ ಕಾರಣ, ನಿಸಾರ್ ಅಹಮದ್ ಅವರ ಬಗೆಗೆ ನಮಗಿರುವ ಅಕ್ಕರೆ ಮತ್ತು ವಿಶ್ವಾಸದ ಭಾವನೆ. ನನಗೆ ಹೇಗೋ ಹಾಗೆಯೇ ನನ್ನ ಜೊತೆಗಿರುವ ಸಂಪಾದಕರಿಗೂ ಅವರ ಪರಿಚಯ ಹಾಗೂ ಆತ್ಮೀಯತೆ ಹಲವು ದಶಕಗಳಷ್ಟು ಹಿಂದಿನದು. ನಿಸಾರರ ಕವನಗಳು, ಗದ್ಯ ಲೇಖನಗಳು ನಮಗೆ ಮೆಚ್ಚಾಗಿರುವಂತೆ ಅವರ

ಸರಳ ನೇರ ನಡೆ ನುಡಿ, ಸಭ್ಯತೆಗಳೂ ನಮಗೆ ಇಷ್ಟವಾದಂಥವು. ಪರಂಪರೆಯನ್ನು ಸಾರಾಸಗಟಾಗಿ ಧಿಕ್ಕರಿಸದೆ, ಅದರಲ್ಲಿನ ಪ್ರಸ್ತುತವೆನ್ನಿಸುವ ಸನ್ಮೌಲ್ಯಗಳನ್ನು ತಮ್ಮ ಬದುಕು-ಬರಹಗಳಲ್ಲಿ ಆರ್ಜಿಸಿಕೊಂಡು ಸುಪುಷ್ಟವಾಗಿ ಬೆಳೆಯುತ್ತ ಸಾಗಿರುವ ಈ ಕವಿ ಮತ್ತು ವಿಚಾರಪರ ಬರಹಗಾರರ ಬಗೆಗೆ ಅತೀವ ಅಧಿಕತರವಾದ ಹೆಮ್ಮೆ, ಆದರಗಳಿವೆ. ಸ್ವಂತದ್ದೆನ್ನಿಸುವುದರ ಬಗ್ಗೆ ಅತೀವ ವ್ಯಾಮೋಹ ಬೆಳಸಿಕೊಳ್ಳದೆ, ಅನ್ಯವೆನ್ನುವುದನ್ನು ಹಳಿಯದೆ ಒಂದು ಸಮತೋಲನದ ಸಮನ್ವಯ ಸ್ಥಿತಿಯನ್ನು ಜೀವನದಲ್ಲಿ ರೂಢಿಸಿ ಕೊಂಡು ತತ್ಪರಿಣಾಮವಾದ ಉದಾರ ಮಾನವೀಯ ಗುಣವನ್ನು ತಮ್ಮ ವಿವಿಧ ಬಗೆಯ ಬರವಣಿಗೆಗಳಲ್ಲಿ ಅಭಿವ್ಯಕ್ತಿಗೊಳಿಸುತ್ತ ಬಂದಿರುವ ನಿಸಾರರು ನಮಗೆ ಪ್ರೀತಿಪಾತ್ರ ರಾಗಿರುವಂತೆ, ಕಿರಿಯರಿಗೆ ಮಾದರಿಯಾಗಿದ್ದಾರೆ. ಇಂತಹ ಸದ್ವ್ಯಕ್ತಿಯ ಬಗ್ಗೆ ಹೊರತರುತ್ತಿರುವ ಗೌರವ ಗ್ರಂಥಕ್ಕೆ ಸಂಪಾದಕರಾಗಲು ನಮಗೆ ನಿಜಕ್ಕೂ ಸಂತಸವಾಗಿದೆ.

ಒಂದು ವರ್ಷದ ಹಿಂದೆ ಸಂಕಲ್ಪ ರೂಪದಲ್ಲಿದ್ದ ಅಭಿನಂದನ ಗ್ರಂಥದ ಕಲ್ಪನೆ ಈಗ ಫಲಕಾರಿಯಾಗುತ್ತಿದೆ. ಆಗ ನಾವು ಆಲೋಚಿಸಿದ್ದು ಸುಮಾರು ೭೦೦-೮೦೦ ಪುಟಗಳ ಕೃತಿ. ಈಗ ಮೈ ತಳೆದಿರುವುದು ಸುಮಾರು ೨೦೦೦ ಪುಟಗಳ ಹೆಬ್ಬೊತ್ತಿಗೆ. ಇದು ನೆರವೇರಬೇಕಾದರೆ ನಿಸಾರರ ಆಪ್ತೇಷ್ಟರಾದ ಪ್ರೊ. ಎಚ್. ಪಿ. ರಾಜಶೇಖರ ಶೆಟ್ಟಿ, ಶ್ರೀಯುತರಾದ ಅ. ನಾ. ಪ್ರಹ್ಲಾದ ರಾವ್, ವೈ. ಜಿ. ಗಿರಿಶಾಸ್ತ್ರಿ ಮತ್ತು ಶ್ರೀಮತಿ ಭವಾನಿ ಯವರು ಪಟ್ಟಿರುವ ಶ್ರಮ, ವ್ಯಯಸಿರುವ ಸಮಯ, ವಹಿಸಿರುವ ಶ್ರದ್ಧಾಸಕ್ತಿ ಅಷ್ಟಿಷ್ಟಲ್ಲ.

ನಿಸಾರರ ಕಾವ್ಯ ಮತ್ತು ಗದ್ಯವನ್ನು ಕುರಿತ ಸಮಗ್ರವಾದ ವಿಷಯವಾರು ಲೇಖನಗಳ ಶೀರ್ಷಿಕೆಗಳ ಪಟ್ಟಿಯನ್ನು ತಯಾರಿಸುವ ಕಷ್ಟಸಾಧ್ಯವಾದ ಕೆಲಸವನ್ನು ದಿನಗಟ್ಟಲೆ ಆಲೋಚಿಸಿ ಸಿದ್ಧಪಡಿಸಿದ ಬಳಿಕ, ಸೂಕ್ತ ಕಂಡವರನ್ನು ಲೇಖನ ಬರೆಯಲು ಕೋರುವುದು ಈ ಗ್ರಂಥ ಯೋಜನೆಯ ಪ್ರಾಥಮಿಕ ಹಂತ. ಇದಾದ ಬಳಿಕ ಆ ಲೇಖಕರನ್ನು ಮೇಲಿಂದ ಮೇಲೆ ದೂರವಾಣಿಯ ಮೂಲಕವೊ, ಅಂಚೆಯ ಮುಖೇನವೊ, ಖುದ್ದಾಗಿ ಭೇಟಿಯಾಗಿಯೊ ಸಂಪರ್ಕಿಸಿ ನೆನಪು ಮಾಡಿಕೊಟ್ಟು, ಬರಹವನ್ನು ಆದಷ್ಟು ಬೇಗ ಕಳಿಸಿಕೊಡಬೇಕಾಗಿ ವಿನಂತಿಸಿಕೊಳ್ಳುವುದು ತರುವಾಯದ ಗುರುತರ ಕೆಲಸ. ಬರೆಯುತ್ತೇವೆ ಎಂದು ಒಪ್ಪಿಕೊಂಡು ಕೆಲವು ಅಪರಿಹಾರ್ಯವಾದ ಸನ್ನಿವೇಶಗಳ ನಿಮಿತ್ತವೊ, ಸಮಯಾಭಾವದ ಕಾರಣದಿಂದಲೊ ಕೆಲ ಕಾಲಾನಂತರ ಸಾಧ್ಯವಿಲ್ಲ ವೆಂದವರಿಗೆ ಪರ್ಯಾಯವಾಗಿ ಸಮರ್ಥರೆನ್ನಿಸಿದ ಬೇರೆಯವರನ್ನು ಹುಡುಕಿ ಅವರಿಗೆ ಪುನರ್ಮನವಿ ಮಾಡಿ ಒಪ್ಪಿಸಿ, ಅವರಿಂದ ಲೇಖನವನ್ನು ಪಡೆಯಲು ಪದೇ ಪದೇ ಒತ್ತಾಯಿಸಿ ಸಫಲರಾಗುವುದು ಇನ್ನೊಂದು ಬಗೆಯ ಅಪೂರ್ವಾನುಭವ. (ದೈವವಶಾತ್ ಹೀಗೆ ಬರೆಯಲು ಸಮ್ಮತಿಸಿ ಆಮೇಲೆ ಆಗುವುದಿಲ್ಲವೆಂದವರ ಸಂಖ್ಯೆ ಅತ್ಯಲ್ಪ. ವಿನಂತಿಸಿಕೊಂಡ ಬಹುತರ ಎಲ್ಲರೂ ತಡವಾಗಿಯಾದರೂ ತಮ್ಮ ಅಮೂಲ್ಯ ಲೇಖನಗಳನ್ನು ನಮಗೆ ಕಳಿಸಿ ಉಪಕಾರವೆಸಗಿದ್ದಾರೆ.) ಒಟ್ಟಿನಲ್ಲಿ, ನಿಸಾರ್ ಅಹಮದ್

ಅವರ ಮೇಲಿನ ಪ್ರೀತ್ಯಾದರಗಳ ಪ್ರತೀಕವಾಗಿ ೨೦ಂಕ್ಕೂ ಮಿಕ್ಕು ಬರಹಗಳು ನಮಗೆ ಸಂದಿವೆ. ಕೆಲವು ಲೇಖಕರು ಹಿಂದೆ ಬರೆದ ಅರ್ಥಪೂರ್ಣ ಹಾಗೂ ಪ್ರಸ್ತುತ ಬರವಣಿಗೆಗಳೂ ಈ ಗ್ರಂಥದಲ್ಲಿ ಸೇರಿವೆ. ಒಂದು ವರ್ಷದ ಅವಧಿಯಲ್ಲಿ ಈ ಕೆಲಸಕ್ಕಾಗಿ ಸಮರ್ಪಿಸಿಕೊಂಡು, ಅತ್ಯಂತ ಪರಿಶ್ರಮಪೂರ್ಣವಾದರೂ ಎದೆಗುಂದದೆ ಲವಲವಿಕೆಯಿಂದ ನೆರವೇರಿಸಿರುವ ರಾಜಶೇಖರ ಶೆಟ್ಟಿ, ಪ್ರಹ್ಲಾದ ರಾವ್, ಗಿರಿಶಾಸ್ತ್ರಿ ಮತ್ತು ಭವಾನಿಯವರು ಶ್ಲಾಘನೀಯರು. ಅವರ ಅವಿಚ್ಛಿನ್ನ ಹಾಗೂ ಏಕಪ್ರಕಾರದ ಸಹಕಾರದಿಂದ ಸಂಪಾದಕರ ಕೆಲಸ ಹಗುರವಾಗಿದೆ.

ಸಂಪಾದಕರಿಗೆ ಆಶ್ಚರ್ಯ ಮತ್ತು ಕೊಂಚ ಬೇಸರ ಬರಿಸಿದ ವಿಚಾರವೆಂದರೆ ನಿಸಾರರ ಬಗೆಗೆ ಈತನಕ ಪ್ರಕಟವಾಗಿರುವ ವಿಮರ್ಶಾ ಲೇಖನಗಳ ಅಭಾವ. ಐವತ್ತು ವರ್ಷಗಳಿಗೂ ಮಿಕ್ಕು ಸಾಹಿತ್ಯವನ್ನು ತಪಸ್ಸೆಂದು ಬಗೆದು ಅವಿರತವಾಗಿ ಗದ್ಯ ಪದ್ಯ ರಚನೆಗಳಲ್ಲಿ ತೊಡಗಿಕೊಂಡಿರುವ, ಕನ್ನಡಕ್ಕೆ ಅತ್ಯಪೂರ್ವವೆನ್ನಿಸುವ ಬರವಣಿಗೆಯ ಹಲವು ಬೆಲೆಯುಳ್ಳ ಕಾಣಿಕೆಗಳನ್ನು ಸಲ್ಲಿಸಿ ಸಾಹಿತ್ಯ ಮತ್ತು ಭಾಷೆಯ ಕಸುವನ್ನು ಹೆಚ್ಚಿಸಿರುವ, ಸಮಾಜೋಪಯೋಗಿ ಎನ್ನಿಸಿರುವ ಮೌಲ್ಯಗಳನ್ನು ಸತತವಾಗಿ ಸಾರುತ್ತ ಜನಕ್ಕೆ ಹತ್ತಿರವೆನ್ನಿಸಿರುವ ನಿಸಾರ್ ಅಹಮದ್ ಅವರಂಥ ಶ್ರೇಷ್ಠ ಶ್ರೇಣಿಯ ಸಾಹಿತ್ಯಕರ್ತನ ಬಗೆಗೆ ಈವರೆಗೆ ಹೊರಬಂದಿರುವ ಕೃತಿ-ವಿವೇಚನಾತ್ಮಕ ಲೇಖನಗಳ ಅಲ್ಪ ಸಂಖ್ಯೆಯನ್ನು ಗಮನಿಸಿದರೆ, ನಮ್ಮ ವಿಮರ್ಶಾ ಜಗತ್ತಿನ ವಿದ್ಯಮಾನಗಳ ಅರಿವು ನಮಗಾಗುತ್ತದೆ. ಪಕ್ಷಪಾತ, ಸಾಹಿತ್ಯೇತರ ಕಾರಣಗಳ ಕೈವಾಡ ತದಿತರ ಅನಪೇಕ್ಷಿತ ಸಂಗತಿಗಳ ಸ್ವರೂಪ ನಮ್ಮ ಮನಸ್ಸಿನೆದುರು ಬಿಚ್ಚಿಕೊಳ್ಳುತ್ತವೆ. ಆದರೆ ನಿಸಾರರು ಈ ಕಾರಣಕ್ಕೆ ಎದೆಗುಂದಿ ನಿರಾಶರಾಗಿ ಕುಗ್ಗಲಿಲ್ಲ; ತಲೆ ಕೆಡಿಸಿಕೊಂಡು ಸಿನಿಕರಂತೆ ವರ್ತಿಸಲಿಲ್ಲ. ತಮ್ಮ ಪಾಡಿಗೆ ತಾವು, ತಮಗೆ ಸರಿ ತೋಚಿದಂತೆ ಬರೆಯುತ್ತ ಮುಂದಕ್ಕೆ ಸಾಗಿದರು. ಜನರಿಗೆ ನಿಕಟವಾದರು. ನಾಡಿನ ಸಂಸ್ಕೃತಿಯ ಒಂದು ಅಂಶವಾಗಿ ಸೇರ್ಪಡೆಯಾಗಿ ಕೃತಾರ್ಥರಾದರು. ಅವರು ಮೂವತ್ತು-ನಲವತ್ತು ವರ್ಷಗಳ ಹಿಂದೆ ರಚಿಸಿರುವ ಹಲವು ಪದ್ಯ ಮತ್ತು ಗದ್ಯ ಲೇಖನಗಳು ಇಂದಿಗೂ ಪ್ರಸಕ್ತವೆನ್ನಿಸಿವೆ, ಸ್ಮರಣೀಯವಾಗಿವೆ. ಒಬ್ಬ ಕವಿಗೆ ಇದಕ್ಕಿಂತ ಹಿರಿದಾದ ಭಾಗ್ಯ ಯಾವುದಿದೆ?

ಹಿಂದಿನ ಈ ಕೊರತೆಯನ್ನು ಒಮ್ಮೆಗೇ ತೊಡೆಯಲೋ ಎನ್ನುವಂತೆ ಈ ಗ್ರಂಥದಲ್ಲಿ ಯಥೇಚ್ಛ ಸಂಖ್ಯೆಯಲ್ಲಿ ಲೇಖನಗಳು ಸೇರ್ಪಡೆಯಾಗಿವೆ. ಇವು ನಿಸಾರರ ಕಾವ್ಯ ಮತ್ತು ಗದ್ಯದ ವೈವಿಧ್ಯ, ಆಳ ಅಗಲಗಳ ದಿಗ್ದರ್ಶನವನ್ನೂ ಕೆಲವೊಮ್ಮೆ ತಲಸ್ಪರ್ಶಿಯಾದ ಅಧ್ಯಯನವನ್ನೂ ಒಳಗೊಂಡಿರುವುದನ್ನು ಶಿಷ್ಟ ವಾಚಕ ವರ್ಗ ಮನಗಾಣಬಹುದು. ನಿಸಾರರ ವಾಙ್ಮಯದ ಪ್ರಧಾನ ಆಶಯಗಳನ್ನು, ಒಲವು-ಓಲುವೆಗಳನ್ನು ಹಾಗೂ ಉದಾತ್ತ ಸಾಹಿತ್ಯಾಭಿರುಚಿಯ ಸನ್ನೆ ಸೂಕ್ಷ್ಮಗಳನ್ನು ಈ ಗ್ರಂಥದ ವಿವಿಧ ಬರಹಗಾರರು ಸರಿಯಾಗಿ ಗುರುತಿಸಿದ್ದಾರೆ. ಮುಂದೆ ನಿಸಾರರ ಸಾಹಿತ್ಯವನ್ನು ಕುರಿತು

ಬರೆಯುವವರಿಗೆ ಮಾರ್ಗದರ್ಶಕಪ್ರಾಯವಾದ ಸೂಚನೆಗಳನ್ನು ಅಲ್ಲಿಲ್ಲಿ ನೀಡಿದ್ದಾರೆ. ಒಬ್ಬ ಕವಿಯ ಬಗೆಗಾಗಲಿ, ಇತರ ಸಾಹಿತ್ಯ ಪ್ರಕಾರದಲ್ಲಿ ಸಾಧನೆ ನಡೆಸಿದವರ ಬಗೆಗಾಗಲಿ ಮೌಲ್ಯಭರಿತ ವಿಮರ್ಶೆ ಸಾಧ್ಯವಾಗುವುದು ಸಹಾನುಭೂತಿಪರ ಮತ್ತು ನೈಜ ಕಳಕಳಿಯ ಮುಕ್ತ ಮನಸ್ಸಿನಿಂದ ತೊಡಗಿಕೊಳ್ಳುವವರಿಂದ.

ಕೇವಲ ಟೀಕೆ ಮಾಡಲೆಂದೇ, ಹುಳುಕುಗಳನ್ನು ಪತ್ತೆ ಹಚ್ಚಲೆಂದೇ ಹೊರಡುವವರಿಂದ ಮತ್ತು ಕವಿಯ ಬಗೆಗೆ ಯಾವುದಾದರೂ ಪೂರ್ವಗ್ರಹದಿಂದ ಪ್ರೇರಿತರಾದವರಿಂದ ಸಮತೂಕದ ವಿವೇಚನೆ ಎಂದಿಗೂ ಸಾಧ್ಯವಾಗದು. ಅಷ್ಟೇ ಅಲ್ಲದೆ, ಕೆಲವು ದಶಕಗಳಿಂದ ಚಾಲ್ತಿಯಲ್ಲಿರುವ ಇನ್ನೊಂದು ಹುನ್ನಾರಿನಿಂದಲೂ ಕವಿಗೆ ನ್ಯಾಯ ದೊರಕಲಾರದು. ಅದೆಂದರೆ, ಕೃತಿಯೊಂದನ್ನು ನೆಪ ಮಾತ್ರಕ್ಕೆ ಇಟ್ಟುಕೊಂಡು, ತಮ್ಮ ಕಲಿಕೆ ಹಾಗೂ ಜಾಣ್ಮೆಗಳನ್ನು ಪ್ರದರ್ಶಿಸಿ ಪ್ರತಿಷ್ಠಿತರಾಗಲು ಬಯಸುವ 'ಬುದ್ಧಿಜೀವಿ' ವಿಮರ್ಶಕರ ಸ್ವನಿಷ್ಠ ನಿಲುಮೆ. ಪಾಶ್ಚಾತ್ಯ ವಿಮರ್ಶಕರು ಯಾವುದೋ ಸಂದರ್ಭದಲ್ಲಿ ಯಾರ ಬಗೆಗೋ ಉವಾಚಿಸಿದ್ದನ್ನು ನಮ್ಮ ಭಾಷೆಯ ಸಾಹಿತ್ಯಕರ್ತನ ಕೃತಿಗೆ ಹೇಗೋ ಲಗತ್ತಿಸಿ, ಅವನ ಬರವಣಿಗೆಯಲ್ಲಿ ಕುಂದು ಕರೆಗಳನ್ನು, ಸಾಧಾರಣತೆಯನ್ನು ಆರೋಪಿಸಿ ಆತನ ಮಹತ್ವವನ್ನು ತಗ್ಗಿಸುವುದು.

ಇಂತಹ ಅಪಾಯಗಳಿಂದ ಪಾರಾಗಿ ನಿಸಾರರ ಕೃತಿಗಳ ವಿವಿಧ ಅಂಗಗಳ ವ್ಯಾಸಂಗವನ್ನು ಪ್ರಾಮಾಣಿಕವಾಗಿ ನಡೆಸಿ ಕೆಲವು ಮಹತ್ತರವಾದ ಅಭಿಪ್ರಾಯಗಳನ್ನು ಈ ಗ್ರಂಥದ ಲೇಖಕ-ಲೇಖಕಿಯರು ವ್ಯಕ್ತಪಡಿಸಿರುವುದು ಪ್ರಶಂಸನೀಯ ಎನ್ನಿಸುತ್ತದೆ. ನಿಸಾರರ ಬರವಣಿಗೆಯ ಗುಣಗಳನ್ನು ಹೊಗಳುವುದರ ಜೊತೆಯಲ್ಲೇ ಕೆಲವೊಂದು ಅರೆಕೊರೆಗಳನ್ನೂ ಇಲ್ಲಿನ ಕೆಲವು ಬರಹಗಾರರು ಸೂಚಿಸಿದ್ದಾರೆ. ಇವುಗಳನ್ನು ಯಾವ ರೀತಿಯಲ್ಲಿ ಹೋಗಲಾಡಿಸಬಹುದಿತ್ತೆಂಬ ಪರಿಹಾರವನ್ನೂ ಅವರಲ್ಲಿ ಕೆಲವರು ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಇಲ್ಲಿನ ಬರಹಗಳನ್ನು ಪರಿಶೀಲಿಸಿದಾಗ ಪ್ರಬುದ್ಧವಾದ ಮನಸ್ಸುಗಳು ಅವುಗಳಲ್ಲಿ ಕಾರ್ಯಶೀಲವಾಗಿರುವ ಅಂಶ ಸುವಿದಿತವಾಗದಿರದು. ಭಾವುಕತೆಯ, ಆವೇಶೋದ್ಗಾರದ ಘೋಷಣೆಗಳಿಗಿಂತ ನಿರಾಳ ಮನಸ್ಸಿನ ಸ್ತಿಮಿತ ಸ್ವರೂಪದ ಭಾವಗಳೂ ಆಲೋಚನೆಗಳೂ ಇಲ್ಲಿನ ಲೇಖನಗಳಲ್ಲಿ ಮೇಲ್ಮೆ ಪಡೆದಿವೆ. ಇದು ನಿಜಕ್ಕೂ ಮೆಚ್ಚತಕ್ಕ, ಹೊಗಳತಕ್ಕ ವಿಚಾರ. ಈ ಎಲ್ಲ ಲೇಖಕ-ಲೇಖಕಿಯರಿಗೆ ಸಂಪಾದಕರ ಪರವಾಗಿ ಹಾರ್ದಿಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಹಲವು ತಿಂಗಳುಗಳ ಮುಂಚೆ, ಪ್ರಖ್ಯಾತ ಪ್ರಕಾಶನ ಸಂಸ್ಥೆಯಾಗಿರುವ 'ಸಪ್ನ ಬುಕ್ ಹೌಸ್'ನ ವತಿಯಿಂದ ಬರಹಗಳನ್ನು ಕೋರಿ ನಾವು ಕಳಿಸಿದ ಮನವಿ ಪತ್ರದಲ್ಲಿ ಹೀಗೆ ಬರೆದಿದ್ದೆವು: 'ನಿಸಾರರ ಬಗೆಗಿನ ಈ ಅಭಿನಂದನ ಗ್ರಂಥ ಹತ್ತರ ಕೂಡ ಹನ್ನೊಂದಾಗದೆ ಅನನ್ಯವಾಗಿರಬೇಕೆಂಬ ಮಹದಾಸೆ ನಮ್ಮದು. ಕನ್ನಡದ ಅತ್ಯಂತ ಪ್ರೀತ್ಯಾದರದ ಕವಿಯ ಸಾರಸ್ವತ ಸಾಧನೆ, ವೈಯಕ್ತಿಕ ಬದುಕಿನ ವಿವರಗಳನ್ನು; ಅವರ

ಅಭಿರುಚಿ, ಒಲವು-ಓಲುವೆ, ಜೀವನ ದೃಷ್ಟಿ ಮತ್ತಿತರ ಆತ್ಮೀಯ ಸಂಗತಿಗಳನ್ನು ಒಳಗೊಂಡ ಹೆಬ್ಬೊತ್ತಿಗೆ ನಿಸಾರರ ಬಗ್ಗೆ ಅಧಿಕೃತವಾಗಿ ತಿಳಿಯಬೇಕೆನ್ನಿಸುವವರಿಗೆ, ಅವರನ್ನು ಕುರಿತು ಬರೆಯಬೇಕೆನ್ನುವವರಿಗೆ ಆಕರ ಗ್ರಂಥವಾಗಿ ದೀರ್ಘ ಸಮಯದವರೆಗೆ ಪ್ರಯೋಜನಕಾರಿಯಾಗಬೇಕೆಂಬ ಹಂಬಲ ನಮ್ಮ ಈ ಪ್ರಕಟನ ಪ್ರಯತ್ನದ ಹಿನ್ನೆಲೆಗಿದೆ.

'...ನಿಸಾರ್ ಅವರದು ಬಹುದಿಶಾ ವ್ಯಕ್ತಿತ್ವ, ಹಲವು ಕ್ಷೇತ್ರಗಳ ಸಾಧನೆ. ಇವುಗಳ ಪರಿಚಯವಿರುವ ಸಾಹಿತಿ-ವಿಮರ್ಶಕರಿಂದ, ಹಿರಿಯ ಗಣ್ಯರಿಂದ, ಮಿತ್ರರಿಂದ ಹಾಗೂ ಹಿತೈಷಿಗಳಿಂದ ಲೇಖನಗಳನ್ನು ಕೋರುತ್ತಿದ್ದೇವೆ. ಈ ಮಹನೀಯರಲ್ಲಿ ತಮ್ಮಂತಹ ಆತ್ಮೀಯರೂ ಒಂದಾಗಿರುವುದು ನಮಗೆ ಹೆಮ್ಮೆಯ ಸಂಗತಿ.'

—ಈ ನಮ್ಮ ಆಶಯ ಇಂದು ಬಹುಮಟ್ಟಿಗೆ ಕೈಗೂಡಿದೆ. ನಿಸಾರರ ಬರವಣಿಗೆಯ ಹೆಚ್ಚುಗಾರಿಕೆ, ಅನನ್ಯತೆಗಳ ಅನಾವರಣ ಈ ಉದ್ಗ್ರಂಥದಲ್ಲಿ ಆಗಿರುವುದು ನಮಗೆ ಹರ್ಷಪ್ರದ ಸಂಗತಿಯೆನ್ನಿಸಿದೆ. ಮಾಹಿತಿಗಳ ಮಹದಾಕರ ಈ ಗೌರವ ಕೃತಿಯಲ್ಲಿದ್ದು ವಿಮರ್ಶಾ ಕ್ಷೇತ್ರಕ್ಕೆ ಗಣನೀಯ ಕೊಡುಗೆ ಸಂದಿದೆ ಎನ್ನಬಹುದು.

ನಿಸಾರರನ್ನು ವೈಯಕ್ತಿಕವಾಗಿ ಬಲ್ಲವರು ಬಾಲ್ಯದಿಂದ ಈವರೆಗಿನ ತಮ್ಮ ಒಡನಾಟದ ಕೆಲವು ಅನುಭವಗಳನ್ನು, ಘಟನೆಗಳನ್ನು ಚಿತ್ರಿಸಿದ್ದಾರೆ. ಅವುಗಳ ಮೂಲಕ ಈ ಕವಿಯ ಸ್ವಭಾವ ಚಿತ್ರಣವನ್ನು ಮಾಡಿಕೊಟ್ಟಿದ್ದಾರೆ. ಕೆಲವು ಸಂಗತಿಗಳು ರೋಚಕವಾಗಿದ್ದರೆ, ಮತ್ತೆ ಕೆಲವು ಅವರ ಸೃಜನಶೀಲ ಪ್ರವೃತ್ತಿಯ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡುತ್ತವೆ.

ಅಮೇರಿಕನ್ನಡಿಗ ಅಭಿಮಾನಿಗಳು ಇಷ್ಟೊಂದು ವಿಪುಲ ಸಂಖ್ಯೆಯಲ್ಲಿ ನಿಸಾರರ ಬಗ್ಗೆ ಬರೆದಿರುವುದೂ ಒಂದು ವಿಶೇಷವೆನ್ನಬೇಕು. ಈ ಕವಿಯ ಸ್ನೇಹಪರತೆ, ಜನಾದರಣೀಯತೆಗಳಿಗೆ ಈ ವಿದೇಶದ ಬರಹಗಳು ಕನ್ನಡಿ ಹಿಡಿಯುವಂತಿವೆ. ನಿಸಾರರನ್ನು ವೈಯಕ್ತಿಕವಾಗಿ ಬಲ್ಲಂಥವರಿಂದ ಅವರ ಬದುಕಿನ ಕೆಲವು ಘಟ್ಟಗಳಲ್ಲಿನ ಸಂಗತಿಗಳನ್ನು ನಿರೂಪಿಸಿರುವ ಇಂತಹ ಲೇಖನಗಳಿಗಿಂತ ಅವರ ಗದ್ಯ ಪದ್ಯ ಕೃತಿಗಳ ವಿವಿಧಾಂಶಗಳ ಬಗೆಗೆ ರಚಿತವಾಗಿರುವ ಬರಹಗಳು ಸಂಖ್ಯೆಯಲ್ಲಿ ಅಧಿಕವಾಗಿವೆ. ಇದು ನಾವು ಮೊದಲಿನಿಂದ ಅಪೇಕ್ಷೆಪಟ್ಟ ವಿಷಯ. ಇಂತಹ ಕೃತಿ-ವಿವೇಚನೆಯ ಬರವಣಿಗೆಗಳಿಂದ, ನಾವು ಮೊದಲೇ ನಿವೇದಿಸಿದಂತೆ ಈ ಬೃಹತ್ಸಂಪುಟದ ಮೌಲ್ಯ ಹೆಚ್ಚಿದೆ. ಹೀಗಾಗಿ, ನಿಸಾರರ ಬಗ್ಗೆ ಇದೊಂದು ಅಮೋಘವಾದ ಪರಾಮರ್ಶನ ಗ್ರಂಥದ ಸ್ವರೂಪವನ್ನು ಪಡೆದಿರುವುದು ನಮಗೆ ಸಂತೋಷದ ಸಂಗತಿಯೆನ್ನಿಸಿದೆ.

ಇಂತಹ ದೊಡ್ಡ ಪ್ರಮಾಣದ ಪುಸ್ತಕದಲ್ಲಿರುವ ಸದೃಶ ಅಥವಾ ನಿಕಟವಾದ ಬರಹಗಳಲ್ಲಿ ಅಲ್ಲಲ್ಲಿ ಸಾಮ್ಯ ತಲೆದೋರುವುದು ಸ್ವಾಭಾವಿಕ. ಅವುಗಳನ್ನು ಪೂರ್ತಿ ತೊಡೆದು ಹಾಕುವುದು ಸಾಧ್ಯವಿಲ್ಲದಿದ್ದರೂ ಕಡಿಮೆಗೊಳಿಸುವ ಸಾಧ್ಯತೆಯಿರುವುದರಿಂದ

ಅಲ್ಲೊಮ್ಮೆ ಇಲ್ಲೊಮ್ಮೆ ಕೆಲವು ಲೇಖನಗಳನ್ನು ಪರಿಷ್ಕರಿಸುವ ಅಗತ್ಯ ಕಂಡು ಬಂದಿತು. ಹಾಗೆಯೇ, ಬರಹಕ್ಕೆ ನೇರವಾಗಿ ಸಂಬಂಧಪಡದ ಸಂಗತಿಗಳನ್ನೊ, ದೂರಾನ್ವಯದ ವಿಷಯಗಳನ್ನೊ ತೆಗೆದುಹಾಕಬೇಕಾದ ಅನಿವಾರ್ಯವೂ ತಲೆದೋರಿತು. ಇಂಥ ಸಂದರ್ಭಗಳಲ್ಲಿ ಎಷ್ಟು ಉಚಿತವೋ ಅಷ್ಟನ್ನು ಉಳಿದು ಸಂಪಾದಕರು ಮಿಕ್ಕಿದ್ದಕ್ಕೆ ಕತ್ತರಿ ಪ್ರಯೋಗ ಮಾಡಿಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ.

ಈ ಹೊತ್ತಗೆಯ ಲೇಖನಗಳ ಕೊನೆಯಲ್ಲಿ ಉಳಿದಿರುವ ಖಾಲಿ ಜಾಗದಲ್ಲಿ ನಿಸಾರರ 'ಸ-ರಸೋಕ್ತಿಗಳ ಸಂಗಾತಿ' (೨೦೦೪) ಪುಸ್ತಕದಿಂದ ಆಯ್ಕೆಮಾಡಿದ ವಾಕ್ಯಖಂಡ ಗಳನ್ನು ಮುದ್ರಿಸಲಾಗಿದೆ. ತೆರವಾಗಿರುವ ಎಡೆಯನ್ನು ಭರ್ತಿ ಮಾಡುವುದೊಂದೇ ಇದರ ಉದ್ದೇಶವಲ್ಲ. ಎಷ್ಟೋ ವಾಚಕರು ಈ ಉದ್ಗ್ರಂಥವನ್ನು ಪೂರ್ಣವಾಗಿ ಓದದೇ ಇರಬಹುದು. ಕೆಲವರು ತಮಗೆ ಇಷ್ಟವಾದ ಬರಹಗಳನ್ನು ಮಾತ್ರ ಆರಿಸಿಕೊಂಡು ಓದಿ ತೃಪ್ತರಾಗಬಹುದು. ಇನ್ನೂ ಕೆಲವು ವಾಚಕರಿಗೆ ಅಲ್ಲಿಲ್ಲಿನ ಲೇಖನಗಳ ಮೇಲೆ ಕಣ್ಣು ಹಾಯಿಸುವುದೇ ದುಷ್ಕರವೆನ್ನಿಸಬಹುದು. ಹೀಗೆ, ಸಮಯದ ಅಭಾವದಿಂದಲೋ ಅನಾಸಕ್ತಿಯಿಂದಲೋ ಈ ಗ್ರಂಥದ ಅವಗಾಹನೆ ಸಾಧ್ಯವಾಗದೆ ಇರಬಹುದು. ಕೊನೆಯ ಪಕ್ಷ, ನಿಸಾರರು ಬದುಕಿನ ನಾನಾ ವಿಷಯಗಳ ಬಗ್ಗೆ ತಳೆದಿರುವ ಅಭಿಪ್ರಾಯದ ಕಿಂಚಿತ್ತಾದರೂ ತಿಳಿವು ಮೂಡಲೆಂಬ ಉದ್ದೇಶದಿಂದ ಈ ವಾಕ್ಯಾವಳಿಯನ್ನು ಅಚ್ಚು ಮಾಡಿದ್ದೇವೆ. ಇದೊಂದು ಕೈ ಮರ. ಮುಂದೆ ಇದರ ನೆರವಿನಿಂದ ಊರಿನ ದರ್ಶನ ಮಾಡುವುದು ಶಿಷ್ಟ ವಾಚಕರಿಗೆ ಬಿಟ್ಟಿದ್ದು. ಒಟ್ಟಿನಲ್ಲಿ ಇದರಿಂದ ಪ್ರಯೋಜನವಾಗುವು ದೆಂಬ ನಂಬಿಕೆ ನಮಗಿದೆ.

ಸಂಪಾದನ ಕಾರ್ಯದಲ್ಲಿ ಸರ್ವ ರೀತಿಯಲ್ಲೂ ಸಹಕರಿಸಿರುವ ಎಲ್ಲರಿಗೆ ನಾನು ಸಂಪಾದಕರ ಪರವಾಗಿ ಮತ್ತೊಮ್ಮೆ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ, ಲಾಭ-ನಷ್ಟಗಳ, ಯಶಸ್ಸು-ಅಪಯಶಸ್ಸುಗಳ ಲೆಕ್ಕಾಚಾರ ಹಾಕದೆ ಈ ಗಾತ್ರ ಮತ್ತು ವೈವಿಧ್ಯದ ಬೃಹತ್ಕೃತಿಯನ್ನು ಪ್ರಕಟಿಸಿರುವ 'ಸಪ್ನ ಬುಕ್ ಹೌಸ್'ನ ನಿತಿನ್ ಷಾ, ಆರ್. ದೊಡ್ಡೇಗೌಡ ಧನ್ಯವಾದಾರ್ಹರು.

ನಮ್ಮ ಈ ಮಹತ್ತರ ಕಾರ್ಯದಲ್ಲಿ ಒತ್ತಾಸೆಯಾಗಿ ನಿಂತವರು ಬಹಳ ಮಂದಿ. ಮುಖ್ಯವಾಗಿ ಅಮೇರಿಕದ ಅಯೋವಾ ರಾಜ್ಯದ ಸೀಡರ್ ಫಾಲ್ಸ್‌ನ ನಿವಾಸಿಗಳೂ, ವಿಶ್ವವಿಖ್ಯಾತ ಜಾನ್ ಡೀರ್ ಟ್ರ್ಯಾಕ್ಟರ್ ಕಂಪೆನಿಯ ಹಿರಿಯ ಇಂಜಿನಿಯರ್ ಮತ್ತು ನಿಸಾರರ ಸನ್ಮಿತ್ರರಾದ ಶ್ರೀ ಸಿ. ಕೃಷ್ಣಶಾಸ್ತ್ರಿ, ಬೆಂಗಳೂರಿನ ಮಹಾನಗರ ಪಾಲಿಕೆಯ ಕೋರಮಂಗಲ ಪ್ರದೇಶದ ಜನಪ್ರಿಯ ಕೌನ್ಸಿಲರ್ ಆಡುಗೋಡಿ ಬಿ. ಮೋಹನ್, ಮಹಾನಗರ ಪಾಲಿಕೆಯ ಕಮೀಷನರ್ ಶ್ರೀ ಜೈರಾಜ್, ನಿಸಾರರ ಸಹೋದರಿಯರೂ ದುಬೈ ನಗರದ ನಿವಾಸಿಗಳೂ ಆದ ಶ್ರೀಮತಿ ದಿಲ್‌ಷಾದ್, ಷಹನಾಜ್ ದಾಫುರ್ ಮತ್ತು ನಿಸಾರರ ಧರ್ಮಪತ್ನಿ ಶ್ರೀಮತಿ ಷಹನವಾಜ್ ಬೇಗಂ ಅವರನ್ನು ನಾನು ಕೃತಜ್ಞತೆಯಿಂದ

ನೆನೆಯುತ್ತೇನೆ.

ದಿವ್ಯ ಪ್ರಿಂಟ್ರಾನಿಕ್ಸ್‌ನ ಮಾಲೀಕ ಆರ್. ರಾಮಕೃಷ್ಣ, ಸಿಬ್ಬಂದಿ ವರ್ಗ ಮತ್ತು ಮುದ್ರಕರಾದ ರವಿ ಗ್ರಾಫಿಕ್ಸ್ ಹಾಗೂ ಮುಖಪುಟ ಕಲಾವಿದ ಶ್ರೀಪಾದ ಅವರಿಗೆ ನನ್ನ ಹಾರ್ದ ನೆನಕೆಗಳು. ಹಾಗೆಯೇ, ಚಕ್ರಪಾಣಿ, ಪಾರ್ಥಸಾರಥಿ ಮತ್ತು ಈ ಕಾರ್ಯದಲ್ಲಿ ವಿವಿಧ ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ಸಹಕಾರವನ್ನು ನೀಡಿರುವ ಎಲ್ಲ ಮಹನೀಯರಿಗೆ ಒಳಿತನ್ನು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ.

ಬೆಂಗಳೂರು
೭.೯.೨೦೦೬

ನಿಸಾರ್ ಅಭಿನಂದನ ಗ್ರಂಥದ
ಸಂಪಾದಕರ ಪರವಾಗಿ
ಜಿ. ವೆಂಕಟಸುಬ್ಬಯ್ಯ

ಹೂರಣ

ಭಾಗ - I

ಕಾವ್ಯವನ್ನು ಕುರಿತ ಲೇಖನಗಳು :

ಭಾಗ - II

ಗದ್ಯವನ್ನು ಕುರಿತ ಲೇಖನಗಳು :

ಭಾಗ - III

ಬಿಡಿ ಕವಿತೆಗಳ ಪ್ರಾಯೋಗಿಕ ವಿಮರ್ಶೆ :

ಭಾಗ - IV

(ಅ) ಬಿಡಿ ಕವನ ಸಂಕಲನಗಳ ಸಮಾಲೋಕನ :

(ಆ) ಬಿಡಿ ಗದ್ಯ ಸಂಕಲನಗಳ ಸಮಾಲೋಕನ :

ಭಾಗ - V

(ಅ) ನನ್ನ ದೃಷ್ಟಿಯಲ್ಲಿ ನಿಸಾರ್ :

(ಆ) ಅಮೇರಿಕನ್ನಡಿಗರ ದೃಷ್ಟಿಯಲ್ಲಿ ನಿಸಾರ್ :

ಭಾಗ - VI

ನಿಸಾರರನ್ನು ಕುರಿತ ಕವಿತೆಗಳು :

ಭಾಗ - VII

ಅನುಬಂಧ :

ಭಾಗ-೧

ಕಾವ್ಯವನ್ನು ಕುರಿತ ಲೇಖನಗಳು





ಹುಟ್ಟು ಕವಿಯ ಹೃದಯವಂತಿಕೆಯ ಕಾವ್ಯ

♦ ಪ್ರೊ. ಜಿ. ವೆಂಕಟಸುಬ್ಬಯ್ಯ

ಅರ್ಧ ಶತಮಾನದ ಹಿಂದಿನಿಂದಲೂ ಕಾವ್ಯರಚನೆಯಲ್ಲಿ ತೊಡಗಿಕೊಂಡಿರುವ ಕೆ. ಎಸ್. ನಿಸಾರ್ ಅಹಮದ್ ಅವರು ಕನ್ನಡ ಸಾಹಿತ್ಯದ ಎಲ್ಲ ಆಂದೋಳನಗಳಲ್ಲಿ ಭಾಗವಹಿಸಿದ್ದರೂ ಅನೇಕ ಹಿರಿಯ ಕವಿಗಳ ವೈಯಕ್ತಿಕ ಸಂಪರ್ಕಕ್ಕೆ ಸಂದಿದ್ದರೂ ತಮ್ಮ ಸ್ವಂತವಾದ ನಿಶ್ಚಿತ ಮಾರ್ಗದಿಂದ ಸಿಡಿದು ಬೇರೆಯಾಗಲಿಲ್ಲ. ಪರಾನುಕರಣೆಗೆ ಮಾರು ಹೋಗಿ ತಮ್ಮ ಸ್ವಂತ ಪ್ರತಿಭೆಯನ್ನು ಮುಕ್ಕುಗೊಳಿಸಿಕೊಳ್ಳಲಿಲ್ಲ. ತಾವು ನಂಬಿದ ತತ್ವಗಳನ್ನು, ಮೆಚ್ಚಿದ ಮೌಲ್ಯಗಳನ್ನು ಆಧರಿಸಿ ಕವನಿಸುತ್ತಲೇ ಇದ್ದಾರೆ. ಅವರ ಮೊದಲನೆಯ ಕವನ ಸಂಗ್ರಹವಾದ 'ಮನಸು ಗಾಂಧಿ ಬಜಾರು'ವಿನ 'ನನ್ನ ನುಡಿ' ಹೆಸರಿನ ಪ್ರಾಸಯುಕ್ತ ರಚನೆಯಲ್ಲೇ ಅವರು ತಳೆದಿದ್ದ ಆತ್ಮವಿಶ್ವಾಸ, ಅಂಗೀಕರಿಸಿದ್ದ ಆಶಯ ಮತ್ತು ಆದರ್ಶಗಳ ಸ್ಪಷ್ಟ ಚಿತ್ರಣವಿದೆ. ಅವರ ಮುಂದಿನ ಕವನಗಳ ಸೃಷ್ಟಿಗೆ ಆ ಪದ್ಯ ಒಂದು ಕೈಮರದಂತಿದೆ. ನಿರ್ಭೀತವಾದ ಒಂದು ಮನೋಧರ್ಮ; ಕುತ್ಸಿತತೆ, ದಬ್ಬಾಳಿಕೆ, ಅನ್ಯಾಯಗಳನ್ನು ಪ್ರತಿಭಟಿಸುವ ಒಂದು ನಿಶ್ಚಿತವಾದ ಧೋರಣೆ ಆಗಲೇ ಅವರಲ್ಲಿ ರೂಪುಗೊಳ್ಳುತ್ತಿದ್ದುದನ್ನು ಗುರುತಿಸಬಹುದು:

'ನಗೆ ಮೊಗ ತಾಳಿದ ಹಗೆ ಮಾಡುವ್ವ ಬಗೆ
ಮಾಟಕೆ ಮರುಳಾಗದು ಎಂದೂ;
ಕಪಟ ಮೋಸಗಳ ದರ್ಪಕೆ, ಅಜ್ಞೆಗೆ
ತಲೆ ಬಾಗದು ಇದು ಎಂದೆಂದೂ!' (ನನ್ನ ನುಡಿ)

ಹಾಗೆಯೇ, ಅನುಕಂಪಪೂರ್ಣವಾದ ತುಂಬು ಮಾನವೀಯ ಗುಣದ ಕಡೆಗೆ ಅವರ ಜೀವ ತುಡಿಯುತ್ತಿರುವುದನ್ನೂ ಸಂತಪ್ತ ಮನಸ್ಸುಗಳಿಗೆ ಸಾಂತ್ವನ, ಧೈರ್ಯಗಳನ್ನು ಊಡಿಸುವ ಉದಾತ್ತ ಸಂಕಲ್ಪ ತಳೆದಿರುವುದನ್ನೂ ಸಹ ನಾವು ಕಾಣಬಹುದು :

'ಮಾನವ ಕೋಟಿಯ ಮೂಕ ಸಂಕಟಕೆ
ಮಾತಿನ ಪ್ರತಿನಿಧಿ ನನ್ನ ನುಡಿ;
ನಿರ್ಬಲ ಸಾಹಸವಿಹೀನ ಬದುಕಿಗೆ
ಅಭಯದ ಗುಡಿ ಈ ನನ್ನ ನುಡಿ.' (ಅದೇ)

ಅವರ ಕಾವ್ಯನಿರ್ಮಾಣದಲ್ಲಿ ನಾನು ಎರಡು ಘಟ್ಟಗಳನ್ನು ಗುರುತಿಸುತ್ತೇನೆ. 1976ರಲ್ಲಿ ಅವರ `ನಿತ್ಯೋತ್ಸವ' ಎಂಬ ಹೆಸರಿನ ಕವನ ಸಂಗ್ರಹ ಪ್ರಕಟವಾಗುವವರೆಗೆ ಅವರ ಬರವಣಿಗೆ ಒಂದು ಬಗೆಯಾಗಿ ಒಂದು ನಿರ್ದಿಷ್ಟ ನಿಟ್ಟಿನಲ್ಲಿ ಬೆಳೆಯುತ್ತಲೇ ಇತ್ತು. ಆ ಕವನ ಸಂಗ್ರಹ ಹೊರ ಬಂದ ಅನಂತರ ಅವರು ಒಂದು ಗಟ್ಟಿಯಾದ ತಳಹದಿಯನ್ನು ಹಾಕಿಕೊಂಡ, ಎಲ್ಲರೂ ಗಮನಿಸಬೇಕಾದ ಕವಿಯಾಗಿಬಿಟ್ಟರು. ಅಂದರೆ ಅವರ ದೃಷ್ಟಿ, ಬಾಳಿನ ಅನೇಕ ಗಂಭೀರ ವಿಷಯಗಳ ಕಡೆಗೆ ಹರಿಯಿತು. ಸ್ವಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಆಳವಾದ ಅರಿವನ್ನು ಸಂಪಾದಿಸಲು ಅದನ್ನು ಪರಿಣಾಮಕಾರಿಯಾಗಿ ಅಭಿವ್ಯಂಜಿಸಲು ಶುರುವಿಟ್ಟಿತು.

ಜನಪ್ರಿಯತೆಯನ್ನು ವ್ಯಾಪಕವಾಗಿ ಗಳಿಸಿಕೊಂಡಿರುವ ನಿಸಾರ್ ಅವರು, ಅವರ ಅಭಿಮಾನಿಗಳು ಗುರುತಿಸಿರುವಂತೆ, ಎರಡು ಸಂಸ್ಕೃತಿಗಳ ಸಂಗಮವಾಗಿದ್ದಾರೆ. ಆ ಎರಡು ಸಂಸ್ಕೃತಿಗಳ ಸಾರವಾದ ವಿಶಾಲ ದೃಷ್ಟಿಯನ್ನು ನಾವು ಅವರ ಕವನಗಳಲ್ಲಿ ಗುರುತಿಸ ಬಹುದು.

ಸಮಾಜಪರವಾದ ಕವನಗಳ ರಚನೆಯ ಜೊತೆಗೇ ಅನೇಕ ಸ್ವಕೀಯವಾದ ಅನುಭವಗಳಿಗೆ ಸ್ಪಂದಿಸುವುದನ್ನು ನಾವು ಮನಗಾಣುತ್ತೇವೆ. ಬಾಳಿನ ಸುಂದರ ಸನ್ನಿವೇಶಗಳ ಅನೇಕ ಕವನಗಳು ಓದುಗರನ್ನು ಸಂತೋಷಪಡಿಸಿವೆ.

`ಪ್ರೀತಿ'ಯನ್ನು ಸೂತ್ರೀಕರಿಸಲು ಪ್ರಯತ್ನಮಾಡಿರುವ ಅವರು `ಹರಯ ಲತೆಯ ಜಾಜಿ ಪ್ರೀತಿ' ಎಂದು ಪ್ರಾರಂಭಿಸಿ, `ಬಾಳ ಬೆರಳಿನುಂಗುರಕ್ಕೆ ಪಚ್ಚೆ ಹರಳ ಮಿರುಗು ಪ್ರೀತಿ' ಎಂದು ವಿವರಿಸಿ, `ಸ್ವಂತ ಅನ್ಯ ಎಣಿಸದೇಕ ನೀತಿ ಹಕ್ಕಿ ಕಾವು ಪ್ರೀತಿ' ಎಂದು ತೀರ್ಮಾನಿಸು ವಲ್ಲಿ ಸಾಗಿದ ದಾರಿ ಎಷ್ಟು ಆಪ್ಯಾಯಮಾನಕರವಾಗಿದೆ, ಮಧುರವಾಗಿದೆ ಎಂಬುದನ್ನು ಪರಿಶೀಲಿಸಬೇಕು.

ಕವಿ ಮನಸ್ಸು ವಿಕಾಸವಾದಂತೆ, ಅವನ ದೃಷ್ಟಿ ವಿಶಾಲವಾದಂತೆ ತನ್ನ ಕೃತಿಗಳಲ್ಲಿ ವ್ಯಕ್ತಗೊಳಿಸುತ್ತಿರುವ ಭಾವಾಲೋಚನೆಗಳ ಆತ್ಮಾವಲೋಕನ ನಡೆದು, ತಾನು ಈ ತನಕ ಸೃಜಿಸಿದ ರಚನೆಗಳಿಗಿಂತ ವಿಭಿನ್ನವಾದ ಹಾಗೂ ಉನ್ನತವಾದ ವಿಭಾವನೆಗಳ ಅಭಿವ್ಯಕ್ತಿಗಾಗಿ ಹಾತೊರೆಯುವುದರ ಸುಳಿವು ಗೋಚರಿಸುತ್ತದೆ.

ಇಂಥ ಅನನ್ಯ ಹಾಗೂ ಉದಾತ್ತ ಭಾವವು ಬೆಳೆಯಬೇಕೆಂಬ ಕವಿ, ಮತ್ತೊಂದು

ಹಾಡಿನಲ್ಲಿ 'ಬೇರೆ ಹಾಡ ಕಲಿಸು ತಾಯೆ, ಬೇರೆ ತೆರನ ರಾಗವ' ಎಂದು ಹೇಳಿ ತಮ್ಮ ನಿರೀಕ್ಷೆಯನ್ನು ಹೀಗೆ ವಿವರಿಸುತ್ತಾರೆ:

'ನಾನು ನನ್ನದೆಂಬ ಮೋಹ
ತೆರೆಯು ಮರೆಗೆ ಸರಿಯಲಿ;
ಗಾನಗೊಂಡು ವಿಶ್ವಭಾವ
ಬಾನಿನಗಲ ಮೊರೆಯಲಿ.' (ಬೇರೆ ಹಾಡ ಕಲಿಸು)

—ಕವಿಯ ದೃಷ್ಟಿ ಹೇಗೆ ವಿಶ್ವವ್ಯಾಪಿಯಾಗಲು ಬಯಸಿದೆ ಎಂಬುದು ಸುಸ್ಪಷ್ಟ.

ನಿಸಾರರು ಮುಂಚಿನಿಂದಲೂ ಮತಧರ್ಮಗಳ ವಿಧಿ ನಿಯಮಗಳಿಗಿಂತ, ಬಾಹ್ಯಾಚಾರಗಳಿಗಿಂತ ಅದರ ಅಂತರಾರ್ಥ ಸ್ವರೂಪದ ಸರ್ವೋದಾರವೂ, ಸರ್ವೋದ್ಧಾರಕವೂ ಆದ ಉದಾತ್ತ ತತ್ವಗಳನ್ನು ಗೌರವಿಸುವ ಮನೋಭಾವದವರು. ಅವರಿಗೆ ಪೈಗಂಬರರು ಹೇಗೋ ಹಾಗೆಯೇ ರಾಮಕೃಷ್ಣ ಪರಮಹಂಸರು, ಏಸುಕ್ರಿಸ್ತ, ಬಸವೇಶ್ವರ, ಪುರಂದರ ದಾಸರು ಸಹ ಪೂಜ್ಯರೆ. 'ಯದ್ಯದ್ವಿಭೂತಿ ಮತ್‌ಸತ್ವಂ...' ಎಂಬ ಪ್ರಾಚೀನ ವಾಕ್ಯದ ತಿರುಳನ್ನು ಅಕ್ಷರಶಃ ನಂಬುವವರು ನಿಸಾರ್.

ಕವಿಯ ವಿಶ್ವವಿಶಾಲ ದೃಷ್ಟಿಗೆ, ಅದು ಮನಗಾಣುವ ಅಲೌಕಿಕ ಸತ್ವವೊಂದರ ಪಾರಮ್ಯ, ಸಚರಾಚರಗಳ ಮೇಲಿನ ಸೂತ್ರಧಾರೀ ಸ್ವಾಮಿತ್ವ ಬಹುಮಟ್ಟಿಗೆ ಕಾರಣ. ಅಂತಹ ಒಂದು ಪಾರಲೌಕಿಕ ಶಕ್ತಿ ಸರ್ವರನ್ನೂ, ಸರ್ವವನ್ನೂ ಏಕಮೇವ ಕೃಪಾಕಟಾಕ್ಷದಿಂದ ಕಾಪಾಡಿದೆ ಎನ್ನುವ ವಿಶ್ವಾಸ ಕವಿಯದು. 'ನವೋಲ್ಲಾಸ' ಎಂಬ ಸುಂದರ ಕವನದಲ್ಲಿ ಅವರು ಆ ವಿಶ್ವಶಕ್ತಿಗೆ ನಮಿಸಿರುವ ರೀತಿ ಅರ್ಥವತ್ತಾಗಿದೆ. ಆ ಕವನದ ಕೆಲವು ಹೃದಯಂಗಮ ಸಾಲುಗಳು ಇವು:

'ಭೂಮಿಯು ಬಾಯಾರಿದಾಗ
ಜೀವನ ಹೌಹಾರಿದಾಗ
ನೆಮ್ಮದಿ ಮೊಗದಿರುಹಿದಾಗ
ಗಗನದಿಂದ ಧಾರೆಯಿಳಿವ
ಧೈರ್ಯ ನವೋಲ್ಲಾಸವೇ
....
ಮಾತ್ಸರ್ಯವ ಮೈತ್ರಿಯಲ್ಲಿ
ತಿಮಿರವ ನವ ರಾತ್ರಿಯಲ್ಲಿ
ವಿರಸವ ರಸ ಸೂತ್ರದಲ್ಲಿ
ಬದಲಿಸಿ, ಜಗದೊಳಿತ ತರುವ
ತಳಿರಿಡಿಸುವ ಬೀಜವೇ;' (ನವೋಲ್ಲಾಸ)

ಆ ಕವಿತೆ ಕೊನೆಗಾಣುವುದು ಹೀಗೆ:

'ಕರುಣಾಪ್ರದ ಅಭಯಾಸ್ಪದ ನಿನಗಾವುದು ಹೋಲುವೆ?
ನಮೋ ಎನುವೆ ಸಕಲ ಕಾರ್ಯಕಾರಣಗಳ ಮೂಲವೆ!' (ಅದೇ)

ಯಾವುದೋ ಅತಿ ಮಾನುಷವಾದ ಪರಾಶಕ್ತಿಯಲ್ಲಿ ನಂಬಿಕೆಯಿರುವುದು ಎಲ್ಲ ಮತ ಧರ್ಮಗಳ ಮೊದಲ ಅಗತ್ಯ. ಇಂಥ ನಂಬಿಕೆಯಲ್ಲಿ ಏಕೋದೃಢತೆ ಇದ್ದರೆ ಅಂಥ ವ್ಯಕ್ತಿಗಳಿಂದ ಆಗುವ ಕಾರ್ಯಗಳ ಮೂಲದಲ್ಲಿ ಒಂದು ನೈತಿಕ ಧೈರ್ಯ, ದೈವೀಶಕ್ತಿಯ ಬೆಂಬಲದ ವಿಶ್ವಾಸವಿರುತ್ತದೆ. ಮಹತ್ವದ ಕವಿಗಳೆಲ್ಲರೂ ಇಂಥ ಯಾವುದೋ ಧೈರ್ಯವನ್ನು ಅವಲಂಬಿಸಿಯೇ ತಮ್ಮ ಸೃಷ್ಟಿಶೀಲ ಕವನಗಳಲ್ಲಿ ತಮ್ಮ ತಮ್ಮ ಪ್ರತಿಭೆಯನ್ನು ಬಿಂಬಿಸುತ್ತಾರೆ; ಬದುಕಿನ ತಮ್ಮ ಕಾಣ್ಕೆಯನ್ನು ಕಡೆದಿಟ್ಟಿರುತ್ತಾರೆ. ನಿಸಾರರಲ್ಲಿ ಇಂಥ ನಂಬಿಕೆಯೂ, ಪ್ರತಿಭೆಯೂ ಇರುವುದರಿಂದ ನಾನು ಅವರ ಕವನಗಳನ್ನು ಪ್ರೀತಿಯಿಂದ, ಕುತೂಹಲಾಸಕ್ತಿಯಿಂದ ಓದುತ್ತ ಬಂದಿದ್ದೇನೆ. ಅಂಥ ಕೆಲವು ಕವನಗಳ ಸೊಗಸನ್ನು ನಿದರ್ಶನಪೂರ್ವಕವಾಗಿ ನಿರೂಪಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

ಹೊಸದನ್ನು ಹೇಳಬೇಕೆಂಬ ನಿರ್ಧಾರ, ಸಮಾದ ಕೆಡುಕನ್ನು ಅನ್ಯಾಯ ಅಕ್ರಮವನ್ನು ವಿಡಂಬನೆಯಿಂದ ಪ್ರತಿಬಿಂಬಿಸಬೇಕೆಂಬ ಆಸೆ; ಅಭಿವ್ಯಕ್ತಿಯಲ್ಲಿ ಸ್ವಂತಿಕೆ, ಅನುಕರಣೆಯಿಂದ ದೂರವಾಗಿರುವಿಕೆ, ವಸ್ತುವೈವಿಧ್ಯ, ನೂತನ ಶಬ್ದ ನಿರ್ಮಾಣ, ಶೈಲಿಯಲ್ಲಿ ಆಧುನಿಕತೆ ಇವು ನಿಸಾರರ ಪ್ರಮುಖ ಕವನಗಳಲ್ಲಿರುವ ವಿಶೇಷತೆಗಳು.

ನಿಸಾರರ ಒಡನಾಡಿಗಳಾಗಿದ್ದ ಅವರ ಗೆಳೆಯರಲ್ಲಿ ಕೆಲವರು ಅವರ ಬಗ್ಗೆ ವ್ಯವಹರಿಸುತ್ತಿದ್ದ ರೀತಿ, ಹೊರಗೊಂದು ಒಳಗೊಂದು ಎಂಬಂತೆ ವರ್ತಿಸುತ್ತಿದ್ದ ಬಗೆ ಅಷ್ಟು ಸಾಚಾ ಆಗಿರಲಿಲ್ಲ. ಹೀಗಿದ್ದೂ ನಿಸಾರರು ಅವರ ಸ್ನೇಹವನ್ನು ಕಳೆದುಕೊಳ್ಳಲಿಲ್ಲ. ಅವರ ಬಗೆಗೆ ಕುಹಕ, ಕುಚೋದ್ಯ, ಲೇವಡಿಗಳಲ್ಲಿ ತೊಡಗಲಿಲ್ಲ. ಅಂಥ ಕಷ್ಟವಾದ ಇಕ್ಕಟ್ಟಿನ, ಇಕ್ಕುಳದ ಬಾಳನ್ನು ಅವರು ಹೇಗೆ ನಿಭಾಯಿಸಿದರೆಂಬುದನ್ನು ಸೂಚಿಸುವ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂಬ ಒಂದು ವಿಶಿಷ್ಟ ಕವನವಿದೆ. ನಿಸಾರರ ಅಂತರಂಗದಲ್ಲಿ ಕುದಿಯುವ ವೇದನೆ, ತಳಮಳಗಳೇ ಘನೀಕೃತವಾಗಿ ಹರಳುಗಟ್ಟಿದಂತೆ ಭಾವಗಳು ಇದರಲ್ಲಿವೆ. ಅತ್ಯಂತ ಸರಳ, ನೇರ ಮಾತುಗಳಲ್ಲಿ ಸಾಧಿಸಿರುವ ಸಂವೇದನಾತ್ಮಕ ಪರಿಣಾಮ ಸೋಜಿಗ ಮೂಡಿಸುತ್ತದೆ. ನಿಸಾರರಿಗೆ ಅತ್ಯಂತ ಉತ್ಕಟವಾಗಿ ಅನುಭವಿಸುವ ಸಹಜ ಶಕ್ತಿಯ ಜೊತೆಗೆ, ಅದನ್ನು ತದ್ವತ್ತಾಗಿ ಇತರರಿಗೂ ಮನೋವೇದ್ಯ ಮಾಡಿಕೊಡುವ ಮಾತುಗಾರಿಕೆಯ ಪರಿಶ್ರಮಪೂರ್ಣ ಕೌಶಲವೂ ಕರಗತವಾಗಿದೆ. ಅದರಲ್ಲಿರುವ ವ್ಯಂಗ್ಯದ ಗಾಢ ಗುಣವನ್ನು ನಾವು ಮೆಚ್ಚಬೇಕು. ಇದನ್ನು ನಿಸಾರರು ಬರೆದಿದ್ದು ಕಳೆದ ಶತಕದ ಅರವತ್ತನೆಯ ದಶಮಾನದ ಕೊನೆಯ ಭಾಗದಲ್ಲಿ, ನವ್ಯಕಾವ್ಯದ ಉಚ್ಛ್ರಾಯಾವಸ್ಥೆಯಲ್ಲಿ. ಅದರ ಕೆಲವು ಭಾವಸೂಕ್ಷ್ಮ ಸಾಲುಗಳು ಹೀಗಿವೆ :

'ಒಳಗೊಳಗೇ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿ ಹೀರಿ ಪೇಪರೋದಿ ಹರಟ

ಬಾಳ ತಳ್ಳುವುದಿದೆ ನೋಡಿ—
ಅದು ಬಲು ಕಷ್ಟದ ಕೆಲಸ.

'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು, ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ,
ನೋವಿಗೆ ಕಣ್ಣು ತುಂಬಿದ್ದರೂ—
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣಗಳನ್ನು
ಹುಸಿನಗುತ್ತ ಎದುರಿಸುವುದಿದೆಯಲ್ಲ—
ಅದು ಬಲು ಕಷ್ಟದ ಕೆಲಸ.'

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

ಪ್ರತಿ ಪದ್ಯಭಾಗದ ಕೊನೆಯಲ್ಲಿ ಬರುವ 'ಅದು ಬಲು ಕಷ್ಟದ ಕೆಲಸ' ಎಂಬ ನುಡಿಯ ಪುನರುಚ್ಚಾರದಲ್ಲಿ ಅಡಗಿರುವ ನಿರ್ಧಾರವನ್ನು ಅರ್ಥಮಾಡಿಕೊಂಡರೆ ಗೆಳೆತನದ ಸೋಗು ಹಾಕಿದ್ದ ಅನೇಕ ಆಷಾಢಭೂತಿಗಳ ಹೀನ ವ್ಯವಹಾರದ ಹೊದಿಕೆ ಕಳಚಿ ಬೀಳುತ್ತದೆ. ಹೀಗೆ ವಿಡಂಬನೆಯಲ್ಲಿಯೂ ನಿಸಾರ್ ಅವರು ತುಂಬ ಸಮರ್ಥವಾಗಿ ಕಾಣುತ್ತಾರೆ.

ಇಲ್ಲಿನ ಮತ್ತೊಂದು ಸ್ವಾರಸ್ಯವನ್ನು ಗಮನಿಸಬೇಕು. ಒಂದು ಸ್ತರದಲ್ಲಿ ಈ ಪದ್ಯವನ್ನು ನಿಸಾರರು ಮಾತ್ರ ಬರೆಯಬಲ್ಲರು ಎನ್ನಿಸಿದರೆ, ಅಂದರೆ ಅಲ್ಪಸಂಖ್ಯಾತ ಪ್ರಜ್ಞೆಯುಳ್ಳ ಸಮರ್ಥ ಕವಿ ಬರೆಯಬಲ್ಲರು ಎನ್ನಿಸಿದರೆ, ಇನ್ನೊಂದು ಸ್ತರದಲ್ಲಿ ಇದೊಂದು ಸಾರ್ವತ್ರಿಕ ಹಾಗೂ ಸರ್ವಮಾನವ ಸಮಾನವಾದ ಅನುಭವವನ್ನೂ ದ್ಯೋತಿಸುತ್ತದೆ. ಸನ್ನಿವೇಶವಶಾತ್ ವ್ಯಕ್ತಿಗಳಿಗೆ ಆಗುವ ಅನುಭವದ ರೀತಿ ಬೇರೆಯದಿರಬಹುದು. ಆದರೆ ಅಗ್ನಿಪರೀಕ್ಷೆಯ, ಸತ್ಯಾನ್ವೇಷಣೆಯ ಕಾರಣದಿಂದ ಅನುಭವಿಸುವ ನೋವು, ಅಪಮಾನ, ನಿಸ್ಸಹಾಯಕ ಭಾವದ ತೀವ್ರತೆ ಏಕ ಬಗೆಯದು, ಎಲ್ಲರಿಗೂ ಸಮಸ್ಪಂದಿಯಾದದ್ದು. ತೀರಾ ವೈಯಕ್ತಿಕವಾದ ಅನುಭವ, ಸಾರ್ವತ್ರಿಕತೆಯ ವ್ಯಾಪಕತೆಯನ್ನು ಪಡೆಯುವಂತೆ ಮಾಡುವ ನಿಸಾರರ ಸಾಮರ್ಥ್ಯವನ್ನು ಮೆಚ್ಚಬೇಕು.

ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಮಹಾ ಪಿಡುಗಿನಂತೆ ಹರಡಿರುವ ಜಾತಿ ಮತಗಳ, ವಶೀಲಿಬಾಜಿ ಕಾಂಚಾಣದ ಪ್ರಭಾವಗಳ, ಸ್ವಾಭಿಮಾನಶೂನ್ಯ ಲಾಂಗೂಲ ಪ್ರದರ್ಶಕ ನೀಚಮತಿಗಳ ಹುನ್ನಾರುಗಳನ್ನು ಹಲವು ದಶಕಗಳ ಹಿಂದೆಯೇ ನಿಸಾರರು ತಮ್ಮ ಒಂದು ವಿಡಂಬನಾತ್ಮಕ ಕವನದಲ್ಲಿ ಬಿಚ್ಚಿಟ್ಟಿದ್ದಾರೆ. ಸತ್ಯಸ್ಥಿತಿಯಲ್ಲಿ ಇಂದಿಗೂ ಬದಲಾವಣೆಯಾಗದಿರುವುದರಿಂದ, ಈ ಕವಿತೆ ಇಂದಿಗೂ ಪ್ರಸ್ತುತವಾಗಿದೆ; ಮುಂದೆಯೂ ಪ್ರಸ್ತುತವೆನ್ನಿಸಿದರೆ ವಿಸ್ಮಯಪಡಬೇಕಾದ್ದಿಲ್ಲ.

ಪಿ.ಎಚ್‌ಡಿ., ಪದವಿಯ ಕಥೆಯನ್ನು 'ನಗ್ತೀರ ನನ್ ಹಿಂದೆ' ಎಂಬ ನಿಸಾರರ ಕವಿತೆ, ಯಾರ ದಾಕ್ಷಿಣ್ಯವೂ ಇಲ್ಲದೆ ಅಂಥ ಪದವಿಯನ್ನು ಪಡೆಯುವ ರೀತಿಯನ್ನು ನೇರವಾಗಿ, ಸಂಬಂಧಪಟ್ಟವರು ಮುಟ್ಟಿ ನೋಡುಕೊಳ್ಳುವಂತೆ ನಿರೂಪಿಸುತ್ತದೆ. ಈ ವ್ಯಂಗ್ಯದ ಸಾಲು

ಗಳಲ್ಲಿನ ಮುಟ್ಟಿದರೆ ಚುರ್ರೆನ್ನುವ ಬಿಸುಪನ್ನು, ಬಿತ್ತಿದರೆ ನೆತ್ತರೊಗೆವ ಹರಿತವನ್ನು ಗಮನಿಸಿ:

'ಮೂರ್‌ವರ್ಷ ಪ್ರೊಫೆಸರ್ರ ನಾಯಿಗೆ ಸ್ನಾನ,
ಹಿರೀ ಮಗನ ಚೌಲಕ್ಕೆ ಮಖ್ಮಲ್ ಜಮ್ಖಾನ
ಇನ್ನವರ ಮೈದುನನ್ಗೆ ಸಿನಿಮಾ ಗಾನ
ಪ್ರತಿದಿನ ಒಪ್ಸಿದೀನಿ ಅಮ್ಮಾವ್ರಿಗೆ ಸ್ತೋನ.
....
'ಹಿಡಿದಿದ್ದೀನಿ ಎಂ.ಎಲ್.ಎ. ರಾಮಪ್ನ ಕಾಲ್ನ
ಕೊಡ್ಸಿದೀನಿ ಕೊಡಗಟ್ಲೆ ಖೋಡೇಸ್ ಹಾಲ್ನ.
....
'ನೀಟಾಗಿ ಡ್ರೆಸ್ ಮಾಡಿ ಮುಚ್ಚು ಹಳ್ಳ ತಿಟ್ಟು
ನಾಚ್ಕೆ ಬಿಟ್ಟು ಅರ್ಪಿಸಿಬಿಡು ಅಧಿಕಾರಿಗೆ ಜುಟ್ಟು.
ಆಗ್ಹೋದೀರ್ ಮೇಲೆ ಹಿಸು ನುಡಿಯಲ್ಲೆ ಕೆಟ್‌ಕೆಟ್ ಕಥೆ ಕಟ್ಟು
ಇದೇ ಕಣೋ ಬಕ್ರ ನಾನ್ ಮೇಲ್ಬಂದ್ ಗುಟ್ಟು.' (ನಗ್ತೀರ ನನ್ ಹಿಂದೆ)

'ಇದೇ ಕಣೋ ಬಕ್ರ ನಾನ್ ಮೇಲ್ಬಂದ್ ಗುಟ್ಟು' ಎಂಬ ವಿವರ ಸ್ವಾರಸ್ಯವಾಗಿದೆ. ಓದಿಯೇ ಸವಿಯಬೇಕು, ಆ ಕವನದ ಅಂತರಾರ್ಥವನ್ನು.

ಕನ್ನಡ ನಾಡು, ಭಾಷೆ, ಸಂಸ್ಕೃತಿ ಇವುಗಳ ಮೇಲೆ ನಿಸಾರರಿಗೆ ತುಂಬ ಅಭಿಮಾನ. 'ನಿತ್ಯೋತ್ಸವ' ಒಂದೇ ಸಾಕು ಅವರ ಹೃದಯದ ಭಾವಗಳನ್ನು ಅಳೆಯಲು. ಆದರೆ ಆ ಕವನವನ್ನು ಅರ್ಥಮಾಡಿಕೊಳ್ಳಲು ಸ್ವಲ್ಪ ಕಲ್ಪನಾವಿಲಾಸ ಬೇಕು. ಆ ಕವನದ ಮಾತುಗಾರಿಕೆಯ ಪರಿಯೂ ಬೇರೆಯದೇ. ಕನ್ನಡ ಮತ್ತು ಸಂಸ್ಕೃತದ ಅನುರೂಪದ ದಾಂಪತ್ಯವನ್ನು 'ನಿತ್ಯೋತ್ಸವ' ಕವಿತೆ ಅನುಭವಕ್ಕೆ ತರುತ್ತದೆ. ಅದರ ಭಾವನೆಗಳ ವಿವಿಧತೆ, ಔನ್ನತ್ಯ, ಪಾವಿತ್ರ್ಯ ಹಾಗೂ ಸ್ತುತ್ಯರ್ಹ ನಿಲವು ನಮ್ಮ ಗ್ರಹಿಕೆಯ ತೆಕ್ಕೆಗೆ ಒದಗಿದರೂ ಅದರ ಒಟ್ಟಾರೆ ರಸಾನುಭೂತಿಯ ಸ್ವಾರಸ್ಯ ಪ್ರಾಪ್ತವಾಗಲು ಶಿಷ್ಟ ಹಾಗೂ ಸಂಸ್ಕರಿತ ಅಭಿರುಚಿಯ ಪೂರ್ವಭಾವಿ ಸಹಾಯ ಅಗತ್ಯ. ಸಾಧಾರಣ ಆಸಕ್ತಿಯ ಕಾವ್ಯಪ್ರೇಮಿಗಳಿಗೆ ಆ ಕವಿತೆಗೆ ಹಾಕಿರುವ ರಾಗ, ಸಂಗೀತ ಮತ್ತು ಹಾಡುವಿಕೆಗಳಿಂದ ದೊರಕುವ ಮೇಲು ಮೇಲಿನ ಸುಖಾನುಭವವಷ್ಟೇ ಲಭ್ಯ, ಲಾಭಪ್ರದ.

ಜನ ಸಾಮಾನ್ಯರಿಗೂ ಕನ್ನಡದ ಮೇಲಿನ ಪ್ರೀತಿ ಹೆಚ್ಚುವಂತೆ ಮಾಡುವ ಒಂದು ಕಿರು ಕವನವನ್ನು ನಿಸಾರ್ ರಚಿಸಿದ್ದಾರೆ. ಇದು ಸುಲಭವಾಗಿರುವುದರಿಂದ ಗ್ರಾಮೀಣ ಪ್ರದೇಶ ಗಳಲ್ಲಿ ಶಾಲೆಯ ಹುಡುಗರ ಬಾಯಿಯಲ್ಲೂ ಅದು ನಲಿದಾಡುತ್ತಿದೆ. ಆ ಕವನದ ಎರಡು ನುಡಿಗಳನ್ನು ಉದಾಹರಿಸುತ್ತೇನೆ:

'ಕನ್ನಡವೆಂದರೆ ಬರಿ ನುಡಿಯಲ್ಲ
ಹಿರಿದಿದೆ ಅದರರ್ಥ;
ಜಲವೆಂದರೆ ಕೇವಲ ನೀರಲ್ಲ

ಅದು ಪಾವನ ತೀರ್ಥ.

....

'ಕನ್ನಡವೆಂದರೆ ಜನ ಜಂಗುಳಿಯಲ್ಲ
ಜೀವನ ಶೈಲಿ, ವಿಧಾನ;
ವಾಯುವೆಂದರೆ ಬರಿ ಹವೆಯೇ ಅಲ್ಲ
ಉಸಿರದು ಪಂಚ ಪ್ರಾಣ.' (ಕನ್ನಡವೆಂದರೆ)

ಈ ಕವನ 'ನಿತ್ಯೋತ್ಸವ'ದ ಹಾಗೆ ಪ್ರಾದೇಶಿಕ ವಿವರಗಳನ್ನು ಕಟ್ಟಿಕೊಡುವುದಿಲ್ಲ. ಬದಲಿಗೆ ಇದು ಒಂದು ದೊಡ್ಡ ಹಸೆಯ ಮೇಲೆ ಕುಂಚಿತವಾದ ವರ್ಣರಂಜಿತ ಬೃಹತ್ ಕಲಾಕೃತಿಯನ್ನು ನೆನಪಿಸುತ್ತದೆ. ಎಲ್ಲ ಹೋಲಿಕೆ, ರೂಪಕಗಳೂ ಯಾವುದೇ ಒಂದು ಸ್ಥಳೀಯ ಹಿರಿಮೆಯನ್ನು ಅನುಭವಕ್ಕೆ ತಾರದೆ, ನಾಡು ನುಡಿಗಳ ಒಟ್ಟಾರೆಯಾದ ವ್ಯಾಪ್ತ ವಾದ ಸಾಮಾನ್ಯೀಕರಿಸಿದ (Generalised) ಚಿತ್ರಾವಳಿಯನ್ನು ಮನವರಿಕೆ ಮಾಡುತ್ತದೆ. ಈ ಕವನ ಹಾಡಲು, ನೆನಪಿಸಿಕೊಳ್ಳಲು ಸರಳ. ಅದಕ್ಕೇ ಅದು ಜನಪ್ರಿಯವಾಗಿದೆ.

ನಿಸಾರರು ತಮ್ಮ ಮೊದಲನೆಯ ಕವನ ಸಂಗ್ರಹದಿಂದ ಹಿಡಿದು ಇತ್ತೀಚಿನ ಸಂಕಲನದ ವರೆಗೆ ಲೆಕ್ಕವಿಲ್ಲದಷ್ಟು ಪ್ರೀತಿಯ (ಪ್ರಣಯದ) ವಿರಹದ (ವಿರಸದ) ಕವನ ಗಳನ್ನು ರಚಿಸಿದ್ದಾರೆ. ಅವುಗಳಲ್ಲಿನ ಆತ್ಮೀಯ ಗುಣ ಮತ್ತು ಕಾಡುವ ಅಂಶದ ಹಿನ್ನೆಲೆ ಯಲ್ಲಿ ಕೆಲಸ ಮಾಡಿರುವುದು ಬಹುತರ ನೆನಪು. ಈ ನೆನಪು ಕೇವಲ ಯುವಕರನ್ನೇ ಕಾಡುತ್ತದೆ ಎನ್ನುವಂತಿಲ್ಲ; ಯುವತಿಯರನ್ನೂ ಸಂವೇದನೆಗೆ ಒಳಪಡಿಸುತ್ತದೆ. ಮಧುರ ವಾದ ನೋವಿಗೆ ನಿಮಿತ್ತವಾಗುತ್ತದೆ. ಕೆಲವೊಮ್ಮೆ, ಮತ್ತೆ ಅಂತಹ ಸಮಯ ವ್ಯಕ್ತಿ ಬದುಕಿಗೆ ಬಾರದಲ್ಲ ಎಂಬ ತಹತಹವನ್ನೂ ಹುಟ್ಟು ಹಾಕುವುದುಂಟು.

'ಎಲ್ಲಿದ್ದೀಯೋ ಹುಡುಗ?' ಎಂಬ ಒಂದು ಸುಂದರ ಕವನದಲ್ಲಿ ವಿರಹದ ಸ್ಥಿತಿಯಲ್ಲಿ ಹಾಡಿಕೊಳ್ಳುವ ಒಬ್ಬ ಯುವತಿಯ ಚಿತ್ರವಿದೆ. ಅವಳು ಆ ಹುಡುಗನ ಬಗ್ಗೆ ಬೆಳಸಿಕೊಂಡಿರುವ ಭಾವೋತ್ಕಟ ಸಂಬಂಧದ ಕಾರಣ, ಅದಮ್ಯವಾದ ಅಭಿಲಾಷೆಗಳು ಯಾವ ಭಿಡೆಯೂ ಇಲ್ಲದೆ ಅನಿಯಂತ್ರಿತವಾಗಿ ಪ್ರವಾಹದಂತೆ ಹೊಮ್ಮುತ್ತವೆ. ಅವಳ ಮನಸ್ಸಿನ ಸ್ವಾಸ್ಥ್ಯ, ಸ್ತಿಮಿತಗಳನ್ನು ಕೊಚ್ಚಿ ಅವಳಲ್ಲಿ ವಿಚಲತೆ, ವಿಹ್ವಲತೆಗಳ ಬಿರುಗಾಳಿಯನ್ನು ಎಬ್ಬಿಸುತ್ತವೆ. ಅದರ ಸಾಲುಗಳನ್ನು ಉದಾಹರಣಾರ್ಥವಾಗಿ ಅವಲೋಕಿಸಬಹುದು:

'ನಾಜೂಕು ನಯಗಳ ಮರವಟ್ಟ ರೂಢಿಗೆ
ಗಡುಸಿನ ಹೊಸ ರುಚಿ ಎರೆದ;
ನನ್ನೊಳಗ ಅಳೆದ, ನನ್ನೊಳಗೆ ಬೆಳೆದ,
ಮುಂಬೆಳಗ ಬಾಳಲ್ಲಿ ತೆರೆದ.

'ಹಸಿಯಾದ ಇಟ್ಟಿಗೆ ಒಳ ನೀರು ಕಳೆಯುತ
ಬೆಂಕಿಗೆ ಸೆಟೆಯುವ ಹಾಗೆ—
ಅವನೊರಟು ತುಟಿ, ಬೆರಳ ಒತ್ತಿಗೆ ಹದವಾದೆ,
ಬಳಿಕೆಲ್ಲ ಜೀವಕ್ಕೆ ಬೆರಗೆ!

'ನವಿರೆದೆಯೊತ್ತಿಗೆ, ಬಿಗಿ ಹಿಡಿದ ನೆತ್ತಿಗೆ
ಮರೆಮುಚ್ಚು ಬಿಚ್ಚಿಸುವ ಹುಡುಗ;
ಕವಿ ತುದಿಯ ಮೀನಂತೆ ಮೆಲ್ಲನೆ ಕಚ್ಚುತ್ತ
ಕಿಚ್ಚನ್ನ ಥಂಡಿಸುವ ಬೆಡಗ.' (ಎಲ್ಲಿದ್ದೀಯೋ ಹುಡುಗ)

ಬಾಲ್ಯದಲ್ಲಿ ಶಾಲೆಯಲ್ಲಿ ಜೊತೆಯಾಗಿ ಓಡಾಡಿದ ಒಂದು ಕಿಶೋರಿ ಬೆಳೆದು ಸುಂದರಿ ಯಾಗಿ, ಎದುರಿಗೆ ಬಂದರೂ ಕಂಡೂ ಕಾಣದಂತೆ ಗುರುತು ಮರೆವಳಂತೆ ಮುನ್ನಡೆಯುತ್ತಾಳೆ. ಅವಳನ್ನು ಕುರಿತು ಕವಿ ರಚಿಸಿರುವ ಈ ನಾಲ್ಕು ಪದ್ಯಗಳ ಭಾವ ಸಾಂದ್ರತೆಯನ್ನು ಪರಿಚಯಿಸಬೇಕು ಎನ್ನಿಸುತ್ತದೆ :

'ನಾನೆ ಮಾತಾಡಿಸಲೆ? ಮನವ ಶ್ರುತಿಗೂಡಿಸಲೆ,
ಭಾವತಂತ್ರಿಯ ಮೀಟಿ ಇಂಪಿನಿಂದ?
ಅವಳೀಗ ಮರೆತಿರುವ ಘಟನೆಗಳ ಬಣ್ಣಿಸುತ,
ಎಬ್ಬಿಸಲೆ ಮರವೆಯನು ಜೋಂಪಿನಿಂದ?

'ಬೇಡವೆಂದಿದೆ ಮನಸು; ಮುಗ್ಧ ಬಾಲ್ಯದ ಕನಸು
ಹೊಲೆಗೆಡದೆ ಮಲಗಿರಲಿ ಮೌನದಲ್ಲಿ;
ಜೇನುಗೂಡನು ಕಲಕದಿರು ಕಾಮದುರಿಯಿಂದ;
ವಿಹರಿಸಲಿ ಬಿಡು, ಹಕ್ಕಿ ಬಾನಿನಲ್ಲಿ.

'ಯಾರ ತೆನೆಗಳ ತೊಟ್ಟು ತೊನೆವ ಪಯರಿನ ಹೊಲವೊ!
ಯಾರ ಸೊಗದಾಲಯಕೆ ಮುಡಿಪು ನೆಲವೊ!
ಯಾರ ಬಾಳ್ ಹಂಬಲದ ತಾಂಬೂಲವೋ ಈ ಹೆಣ್ಣು?
ಯಾರ ವಂಶದ ಹಣತೆ ಕುಡಿಯು ಗೆಲವೊ!

'ಕಳೆದೆನ್ನ ಶೈಶವದ ಹುಣ್ಣಿಮೆಯ ಹೂವೇ,
ಕರಿ ಮುಗಿಲ ವಿಷ ಕೀಟ ಮುತ್ತದಿರಲಿ;
ಹೊಸ ಹರಯದಾಸೆಗಳ ನಾವೆ ನೆರೆದಿಹ ರೇವೇ,
ತಂಬೆಲರಿನೊಡನಾಟ ನಿತ್ಯವಿರಲಿ.' (ಬಾಲ್ಯದ ಗೆಳತಿ)

ಇಲ್ಲಿನ ಸುಕುಮಾರವಾದ ಬಣ್ಣನೆ, ಅಚ್ಚ ಪ್ರೇಮದ ಪಾವನತೆ, ನಿಃಸ್ವಾರ್ಥಪರವಾದ ನಿಷ್ಕಾಮವೂ ನಿಷ್ಕಲಂಕವೂ ಆದ ಉದಾತ್ತ ಹೃದಯಸಂಬಂಧ—ಶ್ಲಾಘ್ಯವೆನ್ನಿಸುತ್ತವೆ. ಕೊಂಚ ಎಚ್ಚರ ತಪ್ಪಿದರೆ, ಇಂದು ಧಂಡಿಯಾಗಿ ತಯಾರಾಗುತ್ತಿರುವ ಕಾಮಾಭಿಲಾಷೆಯ ಚಿತ್ರಣದ ಮಾಮೂಲು ಪದ್ಯಗಳಲ್ಲಿ ಒಂದಾಗಿ ಬಿಡಬಹುದಾಗಿದ್ದ ಈ ಕಲಾತ್ಮಕ ರಚನೆ ತನ್ನ ಸಂಯಮದಿಂದ, ಸಂಸ್ಕಾರಯುತ ಸದಭಿರುಚಿಯ ಸ್ಪರ್ಶದಿಂದ ಒಂದು ಅನೂನವೂ, ಚೆನ್ನವೂ ಆದ ಭಾವಶಿಲ್ಪವಾಗಿ ಕಂಗೊಳಿಸುತ್ತದೆ.

ನಿಸಾರರ ಭಾಷೆಯ ಸ್ವಂತಿಕೆಯ ಬಗ್ಗೆ ಒಂದು ವಿವರವನ್ನು ನೀಡಬೇಕು. ಅವರ ಒಂದು ಕವನವನ್ನು ಆರಿಸಿ ಬೇರೆ ತೆಗೆದು ಇಟ್ಟರೂ, ಅದನ್ನು ಓದಿದ ಕೂಡಲೆ ಅದು ನಿಸಾರರದೆಂದು ಹೇಳಿಬಿಡಬಹುದು. ಅಷ್ಟು ಅದು ತನ್ನ ಅನನ್ಯತೆಯನ್ನು

ಕಾಪಾಡಿಕೊಂಡಿರುತ್ತದೆ; ಇತರರ ಕಾವ್ಯದಿಂದ ಬೇರೆಯಾಗಿ ನಿಲ್ಲುತ್ತದೆ. ಇದಕ್ಕೆ ಅವರ ಭಾಷೆಯ ಸ್ವೋಪಜ್ಞತೆಯ, ಬೇರೆತನದ ಸೊಗಸೇ ಕಾರಣ. ಅವರು ಅರಬ್ಬಿ, ಫಾರಸಿ ಶಬ್ದಗಳನ್ನು ಕನ್ನಡದೊಳಕ್ಕೆ ಹೇಗೋ ಹೊಂದಿಸಿಬಿಡುತ್ತಾರೆ. ಅವು ನಮ್ಮದೇ ಎನ್ನುವಷ್ಟು ಸಹಜವಾಗಿ ಕನ್ನಡದೊಂದಿಗೆ ಸಂಲಗ್ನಗೊಂಡಿರುತ್ತವೆ. ಅಷ್ಟೇ ಅಲ್ಲದೆ, ಅವುಗಳ ಬಳಕೆಯಿಂದ ವ್ಯಕ್ತಪಡಿಸುವ ಭಾವ ವಿಚಾರಗಳಿಗೆ ಒಂದು ಅತಿಶಯತೆ, ನವ್ಯತೆ ಪ್ರಾಪ್ತವಾಗಿ ಬಿಡುತ್ತದೆ. ಕೇವಲ ವ್ಯಂಗ್ಯ, ವಿಡಂಬನೆಗಳಿಗಲ್ಲದೆ ಗಂಭೀರ ವಿಷಯಗಳ ಪ್ರತಿಪಾದನೆ ಯಲ್ಲೂ ಇಂತಹ ಅನ್ಯಭಾಷಿಕ ಶಬ್ದಗಳು ಉಚಿತವಾಗಿ ಉಪಯೋಗವಾಗುವುದು ನಿಸಾರ ರಲ್ಲಿನ ಒಂದು ಅದ್ಭುತ ಗುಣ. ಇದನ್ನು ಅವರ ಗದ್ಯಸಾಹಿತ್ಯದಲ್ಲೂ ನಾವು ಕಾಣಬಹುದು.

ಕನ್ನಡದ 'ಇಸು' ಎಂಬ ಪ್ರತ್ಯಯ ಅವರಿಗೆ ಚಿಂತಾಮಣಿಯಾಗಿದೆ. ಯಾವ ಶಬ್ದವನ್ನೇ ಬೇಕಾದರೆ, ಅದು ನಾಮಪದವಾಗಿದ್ದರೆ ಅದಕ್ಕೆ 'ಇಸು' ಸೇರಿಸಿ ಅವರು ಕ್ರಿಯಾಪದವಾಗಿಸುತ್ತಾರೆ. ಕೆಲವು ಶಬ್ದಗಳನ್ನು ನೋಡಿ : ಆವೇಗಿಸು, ಕುಚಾಯಿಸು, ಇಂಚರಿಸು, ಕಮಲಿಸು, ಜವಾಬಿಸು, ಗಲಿಬಿಲಿಸು, ಮುಷ್ಕರಿಸು, ಬಯಾನಿಸು, ವಸಂತಿಸು, ಕಹಿಸು, ಹನುಮಿಸು, ಭರ್ತಿಸು, ಝಡತಿಸು, ಚಿತಾವಣಿಸು, ರಸಾನಂದಿಸು, ಸುವ್ವಯಿಸು—ಹೀಗೆ. ಕ್ರಿಯಾಪದಗಳಲ್ಲದೆ ನಾಮಪದಗಳನ್ನು ಕೂಡ ಹೊಸದಾಗಿ ಸೃಷ್ಟಿಸುತ್ತಾರೆ: ಅವಿನೋದ, ಅವಿನಾದ, ಅನಶ್ವರಿ, ತಿಮಿಂಗಿಲಿ, ಮೋಜಿಗ, ಪೊಗರಿಗ, ಬ್ರಹ್ಮಾಂಡಿಗ, ಕಲ್ಲಿದ್ದಲಿಗ, ದಾಡಿಗ, ನುಡಿಗ, ಮಿಂಚಿಕೆ, ವಾರಾನ್ನಿಗ, ಅಪಜ, ಜಿರಾಫಿಣಿ, ಪ್ರವಾಸಿಣಿ, ಸಿತಾರಿಣಿ, ಕರ್ಣಗ್ಯೆ, ಆರ್ಯಾವರ್ತತೆ, ಸ್ತ್ರೀಮಂತ, ದುಡ್ಡಸ್ತಿಕೆಯ ದಾಸಯ್ಯ, ಧನೇಂದ್ರಿಯರು, ನಾಣ್ಯತೆ, ದರಬಾರಿ, ನಾಯಲೆತ, ಬೀರಾಲಯ, ಹೊಂಬಣ್ಣಿಗ ನೇಸರ, ನಿಜಾಮಿಕೆ, ಕಾಲ್ಗೆಟಿಸಿದ ನಗೆಯವಳು—ಇತ್ಯಾದಿ, ಇತ್ಯಾದಿ.

ನಿಸಾರರ ಈ ಪದ ಟಂಕನ ಸಾಮರ್ಥ್ಯವನ್ನು ಅವರ 'ಸಮಗ್ರ ಗದ್ಯ ಬರಹಗಳು' ಹೆಸರಿನ ಹೆಬ್ಬೊತ್ತಿಗೆಯ ಅಸಂಖ್ಯ ಲೇಖನಗಳಲ್ಲಿ ಅವಲೋಕಿಸಬಹುದು. ಈ ಕಲೆ ಅವರಿಗೆ ಅನಾಯಾಸವಾಗಿ ಹಸ್ತಗತವಾಗಿದೆ.

ಅನುವಾದದಲ್ಲಿಯೂ ನಿಸಾರರಲ್ಲಿ ಸಮರ್ಥರು. ಪಾಬ್ಲೊ ನೆರುಡನ ಕವನಗಳನ್ನು 'ಬರೀ ಮರ್ಯಾದಸ್ಥರೆ' ಹೆಸರಿನಲ್ಲಿ ಅನುವಾದಿಸಿದ್ದಾರೆ. ಅಲ್ಲದೆ ಇಂಗ್ಲೆಂಡಿನ ಬ್ರೌನಿಂಗ್, ಆಡೆನ್, ರಷ್ಯದ ಮಾಯಕೋವಸ್ಕಿ, ಅಮೇರಿಕದ ಕಾರ್ಸೊ, ಎಜ್ರಾ ಪೌಂಡ್, ಜರ್ಮನಿಯ ಬ್ರೆಕ್ಟ್, ಫ್ರಾನ್ಸ್‌ನ ಬಾದಿಲೇರ್, ರಿಂಬೋ ಮುಂತಾದ ಐರೋಪ್ಯ ಕವಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅನುವಾದ ಯಾವಾಗಲೂ ಕಷ್ಟದ ಕೆಲಸವೇ. ಆದರೂ ನಿಸಾರರ ಅನುವಾದ ಗಳು ಅವರ ಕವಿತಾ ಸಾಮರ್ಥ್ಯದಿಂದ ವಾಚನಯೋಗ್ಯವಾಗಿ ಮೂಡಿವೆ.

ಗದ್ಯ ಅನುವಾದದಲ್ಲೂ ಅವರು ತಮ್ಮ ಪರಿಣತಿಯನ್ನು ಸಾರಿದ್ದಾರೆ. ಸಮಯದ ಮಿತಿಯಿಂದ ಅವರ ಸಮರ್ಥ ಅನುವಾದದ ಕೃತಿಗಳನ್ನು ಮಾತ್ರ ಉಲ್ಲೇಖಿಸುತ್ತೇನೆ: ಷೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ' ಮತ್ತು 'ಒಥೆಲೊ', ರಷ್ಯನ್ ಕಥೆಗಳ ಅನುವಾದವಾದ 'ಹೆಜ್ಜೆಗುರುತು'. ಹಲವು ಕಡೆಗಳಲ್ಲಿ ಇದು ಅನುವಾದವೋ

ಅಥವಾ ಸ್ವಂತದ ಬರಹವೋ ಗೊತ್ತಾಗುವುದಿಲ್ಲ.

ಅವರು ಪದಕ್ಕೆ ಪದ, ವಾಕ್ಯಕ್ಕೆ ವಾಕ್ಯವೆಂಬ ಸೂತ್ರವನ್ನು ಅನ್ವಯಿಸಿ ತರ್ಜುಮೆ ಮಾಡಿದ್ದರೆ ಅವರ ಭಾಷಾಂತರ ಕೃತಕ ಮತ್ತು ಅಗ್ರಾಹ್ಯವಾಗುತ್ತಿತ್ತು. ನಮ್ಮ ಭಾಷೆಯ ಸಂಸ್ಕೃತಿಯ ಜಾಯಮಾನಕ್ಕೆ ಅನುಗುಣವಾಗಿ ನಿಸಾರರು ಅನುವಾದಿಸಲು ಪರಿಶ್ರಮಿಸಿದ್ದರಿಂದ ಅಧಿಕೃತವಾದ ಕೃತಿಗಳು ನಮಗೆ ಲಭ್ಯವಾಗಿವೆ. ಮೂಲದ ಸತ್ವವನ್ನು, 'ಸ್ಪಿರಿಟ್'ಅನ್ನು ಅವರು ಹಿಡಿದಿದ್ದು ಅನುವಾದಗಳ ಯಶಸ್ಸಿಗೆ ಕಾರಣವಾಗಿದೆ ಎನ್ನಬಹುದು.

ನಿಸಾರರ ಗದ್ಯದ ಬಗ್ಗೆ ಒಂದು ಮಾತು ಹೇಳಬೇಕು. ಅವರು ಕಥೆಗಳನ್ನು ಬರೆದಿಲ್ಲ. ಆದರೆ ಕುವೆಂಪು, ಮಾಸ್ತಿ ಮುಂತಾದ ಹಿರಿಯರ ಬಗ್ಗೆ ಬರೆದಿರುವ ಗದ್ಯ ಪ್ರಬಂಧಗಳನ್ನು ಕತೆಗಳಂತೆ ಓದಬಹುದು. ಅವರ ಗದ್ಯದ ಸೊಗಸು ಅವರ ಕಾವ್ಯದ ಸೊಗಸಿಗಿಂತ ಕಡಮೆಯೇನೂ ಅಲ್ಲ. ಅವರ 'ಅಚ್ಚುಮೆಚ್ಚು' ಎಂಬ ವೈಚಾರಿಕ ಹಾಗೂ ವಿಮರ್ಶನ ಕೃತಿ ಬಹು ಸುಂದರ ಮತ್ತು ಬೋಧನಪ್ರದವಾದ ಗದ್ಯ ಲೇಖನಗಳಿಂದ ತುಂಬಿದೆ.

ನಿಸಾರರ ಗದ್ಯದ ಹೆಚ್ಚುಗಾರಿಕೆಯನ್ನು, ಹೆಗ್ಗಳಿಕೆಯನ್ನು ಅವರ ಐದು ಸ್ವತಂತ್ರ ಕೃತಿಗಳು ಒಟ್ಟುಗೂಡಿ ಪ್ರಕಟವಾಗಿರುವ 'ಸಮಗ್ರ ಗದ್ಯ ಬರಹಗಳು', (ಪ್ರಕಾಶಕರು: ಸಪ್ನ ಬುಕ್ ಹೌಸ್, ಬೆಂಗಳೂರು) ಎಂಬ ಬೃಹತ್ ಕೃತಿಯನ್ನು ಓದಬೇಕು. ಕೇವಲ ಓದಿ ಬದಿಗಿಡುವ ಜಾಯಮಾನದ ಪುಸ್ತಕವಲ್ಲ ಅದು. ಅದರ ಒಂದೊಂದು ಲೇಖನವೂ ವಸ್ತುವಿನ, ಭಾಷೆಯ, ಅಭಿವ್ಯಕ್ತಿಯ, ಭಾವಾಲೋಚನೆಯ, ಪ್ರಸ್ತುತತೆಯ, ಬದುಕಿನ ಕಾಣ್ಕೆಯ ಹಾಗೂ ಲೇಖಕರ ನಿಲವಿನ ದೃಷ್ಟಿಯಿಂದ ಪರಿಶೀಲನಾರ್ಹವಷ್ಟೇ ಅಲ್ಲ, ಲಾಭದಾಯಕ ಕೂಡ. ನಿಸಾರರ ಲೋಕಜ್ಞಾನ, ಸಂವೇದಕ ಸಾಮರ್ಥ್ಯ, ಭಾಷಾಸಿದ್ಧಿ, ವ್ಯಾಸಂಗದ ವ್ಯಾಪ್ತಿ ಹಾಗೂ ಸ್ವಚಿಂತನ ಶಕ್ತಿಗಳ ದರ್ಶನವಾಗಬೇಕಾದರೆ ಅವರ ಕಾವ್ಯದ ಜೊತೆಗೆ ಅವರ ಗದ್ಯವನ್ನೂ ಅಭ್ಯಸಿಸಬೇಕು. ನಿಸಾರರು ಖ್ಯಾತ ಕವಿಯೆನ್ನುವ ಕಾರಣಕ್ಕೆ ಅವರ ಕವನಗಳಿಗೆ ಅಧಿಕತರ ಗಮನ, ಆಸಕ್ತಿ ಶಿಷ್ಟ ಜನ ವರ್ಗದಲ್ಲಿ ಮತ್ತು ಸಾಹಿತ್ಯದ ವಿದ್ಯಾರ್ಥಿಗಳಲ್ಲಿ ಇರುವುದು ಸ್ವಾಭಾವಿಕವೇ. ಆದರೆ ಅವರ ಗದ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ, ಆ ಕವಿತೆಗಳ ಕೂಲಂಕಷ ವಿವೇಚನೆಗೆ ಮಿಗಿಲಾದ ಸಹಾಯವಾಗುತ್ತದೆ. ಅವುಗಳಲ್ಲಿ ಅತಿಶಯವಾದ ಅರ್ಥ, ಧ್ವನಿ ನಮಗೆ ಹೊಳೆಯುತ್ತವೆ.

ಗದ್ಯ ಬರಹಗಳ ಚಿಂತನಾಂಶವನ್ನು ಬಲಿಗೊಡದೆ ಕಾವ್ಯಾತ್ಮಕತೆಯನ್ನು ಸಾಧಿಸಿರುವುದು ನಿಸಾರರ ಅಗ್ಗಳಿಕೆ. ಇಂದಿನ ವಿಚಾರಪರ ಮತ್ತು ಸಮಾಲೋಚನಾತ್ಮಕ ಬರವಣಿಗೆಗಳಲ್ಲಿ ಸಾಮಾನ್ಯವಾಗಿ ನಾವು ಗಮನಿಸುವುದು ಸುತ್ತೂ ಬಳಸಿ ವಿಷಯವನ್ನು ಪ್ರತಿಪಾದಿಸುವುದು, ಎಲ್ಲೆಲ್ಲಿಂದಲೋ ದೂರಾಂತರದ ಸಂಬಂಧದ ಸಂಗತಿಗಳನ್ನು ಎಳೆದು ತಂದು ತುರುಕಿ ಲೇಖನವನ್ನು ಸಂಕೀರ್ಣ ಮತ್ತು ಅರ್ಥಕ್ಲಿಷ್ಟಗೊಳಿಸುವುದು. ಸಮಂಜಸವಾಗಿ ಉದಾಹರಿಸದೆ ತತ್ತ್ವಗಳಲ್ಲೇ ಬರಹವನ್ನು ತೊಡಕಿಸಿ ದಿಗ್ಗೆಡಿಸುವುದು ಹಾಗೂ ತಮ್ಮ ಕಲಿಕೆ, ತಿಳಿವುಗಳನ್ನು ಅನಾವಶ್ಯಕವಾಗಿ, ಅನುಚಿತವಾಗಿ ಮೆರೆಸುವುದು. ಬಹುಶಃ ಇದಕ್ಕೆ ಮದ್ದಿರುವದು ಕನ್ನಡದ ಹಿರಿಯ ಶ್ರೇಷ್ಠ ಗದ್ಯಕಾರರಲ್ಲಿ. ಅವರನ್ನು ಶ್ರದ್ಧೆಯಿಂದ

ಅಧ್ಯಯನ ಮಾಡಿದರೆ ಎಂತಹ ಕಷ್ಟಕರವಾದ, ಜಟಿಲವಾದ ವಿಚಾರಗಳನ್ನೂ ಸುಲಲಿತವಾಗಿ, ಹೃದ್ಯವಾಗಿ ಬರೆಯಬಹುದೆನ್ನುವ ಒಂದು ಸದಭ್ಯಾಸವಾಗುತ್ತದೆ. ಅಂದರೆ, ಗದ್ಯ ಬರಹಗಾರನಿಗೆ ಅದರಲ್ಲೂ ವೈಚಾರಿಕ, ವಿಮರ್ಶೆಯ ಜಾಯಮಾನದ ಲೇಖಕನಿಗೆ ನಮ್ಮ ಪರಂಪರೆಯ ಸಂಬಂಧ ಗಟ್ಟಿಯಾಗಿ ದಕ್ಕಬೇಕು. ಬರೆಯುವ ಮುಂಚೆ ಪೂರ್ವಾಭ್ಯಾಸದ ಕಡೆ ಅಧಿಕ ಗಮನ ನೀಡಬೇಕು. ಸೂಕ್ಷ್ಮ ಸಂಗತಿಗಳನ್ನು ಗಮನಿಸುವ ಒಳನೋಟವಿರಬೇಕು.

ನಿಸಾರರು ಪರಂಪರೆಯಿಂದ ಕಲಿಯಬಹುದಾದ್ದನ್ನು ಶ್ರದ್ಧಾಸಕ್ತಿಯಿಂದ ಕಲಿತಿದ್ದಾರೆ. ಇತರರ ಭಾಷೆ ವಿಚಾರಗಳನ್ನು ಅಭ್ಯಸಿಸಿ, ಅವರಿಂದ ಬೇರೆಯಾಗಲು ಪ್ರಜ್ಞಾಪೂರ್ವಕವಾಗಿ ಪರಿಶ್ರಮಪೂರ್ಣವಾದ ತಾಲೀಮು ನಡೆಸಿದ್ದಾರೆ. ಹೀಗಾಗಿ ಅವರಿಗೆ ಭಾಷೆ—ಕವಿ ಪು.ತಿ.ನ. ಹೇಳಿರುವಂತೆ—ಜಾತ್ಯಶ್ವದಂತೆ ಒಲಿದಿದೆ. ಅದನ್ನು ಅವರು ಹೇಗೆ ಬೇಕಾದರೂ ಬಳಸಬಲ್ಲರು. ಹಾಗೆಯೇ ಕಾವ್ಯದ ಪರಿಮಿತಿಯಲ್ಲಿ ಹೊರಹೊಮ್ಮಿಸಲಾಗದ, ವಿಶ್ಲೇಷಣೆ ಪೃಥಕ್ಕರಣೆಗಳನ್ನು ಅಪೇಕ್ಷಿಸುವ ಅನೇಕಾನೇಕ ವಸ್ತು ವಿಶೇಷಗಳು, ಆಲೋಚನೆಗಳು ಗದ್ಯದ ವಿಸ್ತಾರವನ್ನು ಬೇಡುತ್ತವೆ. ಅಂಥವುಗಳನ್ನು ಪದ್ಯದ ಚೌಕಟ್ಟಿನಲ್ಲಿ ಅಡಕವಾಗಿ ಹಿಡಿದಿಡಲು ಸಾಧ್ಯವಾಗದು. ಈ ಮರ್ಮ ನಿಸಾರರಿಗೆ ಚೆನ್ನಾಗಿ ಅರ್ಥವಾಗಿದೆ. ಅದರ ಯಾವುದೇ ಗದ್ಯ ಬರಹವನ್ನು ಪರೀಕ್ಷಿಸಿದರೂ ಅಲ್ಲಿ ವಿಚಾರ ಮತ್ತು ಭಾವದ ಔಚಿತ್ಯಪೂರ್ಣವಾದ, ಹದವಾದ ದೋಹದ ನಡೆದಿರುತ್ತದೆ. ಹೀಗಾಗಿ ಗದ್ಯದಲ್ಲೂ ಕಾವ್ಯದ ಪರಿಣಾಮವನ್ನು ತರಬಲ್ಲ ಅಪರೂಪದ ಶಕ್ತಿ ನಿಸಾರರ ಲೇಖನಿಗೆ ಸಿದ್ಧಿಸಿದೆ.

ಅವರ ಗದ್ಯದ ಮತ್ತೊಂದು ವೈಶಿಷ್ಟ್ಯವೆಂದರೆ ಅದು ನಮ್ಮ ಹಸನಾದ ಬದುಕಿಗೆ, ಆಶೋತ್ತರಗಳಿಗೆ, ನವನವೋನ್ಮೇಷದ ದೃಷ್ಟಿಗೆ ಸಹಕಾರಿಯಾಗಿರುವುದು, ಪೋಷಕವಾಗಿರುವುದು. ನಿಸಾರರೇ ಹೇಳುವಂತೆ ತಿಳಿವು ಮತ್ತು ನಲಿವು ಅವರ ಗದ್ಯ ಸಾಹಿತ್ಯದ ಮುಖ್ಯೋದ್ದೇಶ. ಬಾಳನ್ನು ಪರಿಷ್ಕರಿಸುವ; ಅದಕ್ಕೊಂದು ಭರವಸೆಯ, ಮಹೋನ್ನತಿಯ ಗುರಿಯನ್ನು ಕಾಣಿಸುವ; ಮನಸ್ಸನ್ನು ಉದಾತ್ತೀಕರಿಸುವ ಆಶಯವಿಲ್ಲದ ಸಾಹಿತ್ಯ ಸಾಹಿತ್ಯವೇ ಅಲ್ಲ, ಅದೊಂದು ಅಸಂಬದ್ಧ ವಿಪ್ರಲಾಪ ಎಂದು ನಿಸಾರರ ನಂಬಿಕೆ. ಅವರಿಗೆ ದೈನಂದಿನ ತುರ್ತುಗಳನ್ನು, ಸಾಮಯಿಕ ತೆವಲುಗಳನ್ನು ಪೂರೈಸುವ ತಾತ್ಕಾಣಿಕ ಮೋಜು, ಖುಷಿಗಳ ಪತ್ರಿಕಾ ಜಾಯಮಾನದ ಗದ್ಯವೆಂದರೆ ತಾತ್ಸಾರ. ಅದಕ್ಕೂ ಬೆಲೆಯಿಲ್ಲವೆಂದಲ್ಲ, ಇದೆ. ಆದರೆ ಪ್ರಸ್ತುತ ಕಾಲದಲ್ಲಿ ಅದೊಂದೇ ಪರಿಪಾಲನಯೋಗ್ಯವೆಂದೋ, ಶಿಷ್ಟವೆಂದೋ ವಾದಿಸಿದರೆ, ಸಾಹಿತ್ಯ ದಿಕ್ಕು ತಪ್ಪುತ್ತದೆ; ಅದರ ಗಂಭೀರ ಸ್ವರೂಪ ಮುಕ್ಕಾಗುತ್ತದೆ. ಉರುವಲಿಗೆ, ನೀರಿಗೆ ಬೆಲೆ ಇದೆ; ಇದಕ್ಕಿಂತ ಶ್ರೀಗಂಧಕ್ಕೆ, ಪನ್ನೀರಿಗೆ ಅಧಿಕತರ, ಅತಿಶಯ ಮೌಲ್ಯವಿದೆ. ಸಾಹಿತ್ಯಕ್ಕೆ ಹೀಗೆ, ಗದ್ಯದಲ್ಲಿಯೂ ನಿಸಾರರು ಉತ್ತಮ ಕೊಡುಗೆಯನ್ನು ನೀಡಿದ್ದಾರೆ.

ನಿಸಾರ್ ಅಹಮದ್ ಅಸಂಖ್ಯ ಪ್ರಕೃತಿಗೀತಗಳನ್ನು ರಚಿಸಿದ್ದಾರೆ. ಅವುಗಳಲ್ಲೂ ನಿಚ್ಚಳವಾಗಿ ತಮ್ಮತನವನ್ನು ಮೆರೆದಿದ್ದಾರೆ. ಆ ಗೀತಗಳ ತನ್ಮಯಗುಣ, ಹೊಸ ಬಗೆಯ ಹೋಲಿಕೆ, ಮತ್ತು ರೂಪಕಗಳ ವೈಭವ, ಸಾಂತ್ವನಕರ ಸ್ವಭಾವ ಪ್ರಶಂಸನೀಯ. ಹಾಗೆಯೇ

ಅವುಗಳ ವೈವಿಧ್ಯವೂ ಬೆರಗುಗೊಳಿಸುವಂತಹದು. ಜೊತೆಗೇ ಅವುಗಳ ಗೇಯತೆ, ಲಾಲಿತ್ಯ ಹಾಗೂ ಸುಭಗತೆ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರುವಂಥವು. ಅವರ ಅನೇಕಾನೇಕ ಭಾವಗೀತಗಳಲ್ಲಿ ವರ್ಣನಾತ್ಮಕ ಅಂಶ ಪ್ರಧಾನವಾಗಿದ್ದರೆ, ನವ್ಯಕವನಗಳಲ್ಲಿ ಪ್ರಕೃತಿಯನ್ನು ತಮ್ಮ ಆಶಯಗಳ ಪೂರ್ತಿಗಾಗಿ ಸಂಕೇತವಾಗಿ, ಪ್ರತಿಮೆಯಾಗಿ ಉಪಯೋಗಿಸುವುದನ್ನು ಕಾಣುತ್ತೇವೆ. ನಿಸಾರರ ನಿಸರ್ಗ ಕವಿತೆಗಳ ಚೆಲುವಿಗೆ, ಅರ್ಥ ವಂತಿಕೆಗೆ ಹಲವಾರು ಉದಾಹರಣೆಗಳನ್ನು ನೀಡಬಹುದು. ಆದರೆ ನಿದರ್ಶನಪ್ರಾಯವಾಗಿ ಕೆಲವು ಪಂಕ್ತಿಗಳನ್ನು ಮಾತ್ರ ಉಲ್ಲೇಖಿಸುತ್ತೇನೆ. ಇವು ಅವರ 'ನಿತ್ಯೋತ್ಸವ' ಕವನಸಂಗ್ರಹ ದಲ್ಲಿವೆ :

'ಶಶಿ ಜೇಡರ ಬಲೆಯ ನೇಯೆ,
ಧರೆ ಚಂದ್ರಿಕೆಯಲ್ಲಿ ಮೀಯೆ,
ಕಂಗೊಳಿಸಿರೆ ಇರುಳ ಮಾಯೆ,
ಬಿಮ್ಮೆನ್ನುವ ಮೌನ ಮಹಾಶ್ರುತಿಗೆ ಲೋಕ ತುಡಿದಿದೆ;
ಸಿರಿ ಚೈತ್ರನ ರಂಗಿನೊಡವೆ,
ಧರಿಸಿ ಮೆರೆಯೆ ಪ್ರಕೃತಿ ಬಡವೆ—
ಅವರಿಬ್ಬರ ಮದುವೆ ತಡವೆ?
ಘುಮ್ಮೆನ್ನುವ ಗಂಧಾಕ್ಷತೆ ಮಂದಾನಿಲ ಹಿಡಿದಿದೆ.'
(ಯುಗಾದಿ ಬಂದಿದೆ)

ಒಟ್ಟಿನಲ್ಲಿ ಹೇಳಬೇಕಾದರೆ ಕೆ. ಎಸ್. ನಿಸಾರ್ ಅಹಮದ್ ಅವರ ಕಾವ್ಯ ಕನ್ನಡ ನವೋದಯದ ಸಂದರ್ಭದಲ್ಲಿ ಒಂದು ವಿಶಿಷ್ಟ ಅಭಿವ್ಯಕ್ತಿಯಾಗಿ ರೂಪುಗೊಂಡು, ಕ್ರಮವಾಗಿ ಅದು ಸ್ಥಿತ್ಯಂತರಗಳನ್ನು ಸಾಧಿಸಿಕೊಂಡು ಕನ್ನಡದ ಅನೇಕ ಆಂದೋಳನಗಳನ್ನು ದಾಟಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಇಂದಿಗೂ ಹೊಸತನವನ್ನು ಕಾಪಾಡಿಕೊಂಡಿದೆ. ಅದರಲ್ಲಿ ಆಳಾದ ಚಿಂತನೆಯಿದೆ, ಶಾಶ್ವತ ಮೌಲ್ಯಗಳ ಅರಿವಿದೆ, ಪ್ರತಿಮಾಸೌಭಾಗ್ಯವಿದೆ, ನೂತನ ಶಬ್ದ ಸೃಷ್ಟಿಯಿದೆ. ಕವಿತೆಗಳ ಸಂಖ್ಯೆ ಅಪಾರವಾಗಿದ್ದರೂ ಎಲ್ಲಿಯೂ ಪುನರಾವರ್ತನೆ ಕಾಣಬರುವುದಿಲ್ಲ. ಅಗಾಧವಾದ ರಸಾನುಭವವನ್ನು ಉಂಟುಮಾಡುವ ಅವರ ಸೃಷ್ಟಿಯಲ್ಲಿ ತುಂಬು ನದಿಯ ಶಾಂತ ಪ್ರವಾಹದ ಗಾಂಭೀರ್ಯವನ್ನು ನಾನು ಕಂಡಿದ್ದೇನೆ. ಅವರ ಹಾಸ್ಯದಲ್ಲಿ ಸುಧಾರಣೆಯ ಸತ್ವವಿದೆ; ಶೈಲಿಯಲ್ಲಿ ನಾವೀನ್ಯವಿದೆ. ಹೃದಯವನ್ನು ಮುಟ್ಟುವ ಅವರ ಅಂತರ್ಮುಖತೆಗೆ ಎಲ್ಲರೂ ಮನ ಸೋಲುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ನಿಸಾರ್ ಅಹಮದ್ ಅವರ ಬಗ್ಗೆ ಬೇರೊಂದು ಅಧ್ಯಾಯವೇ ರಚಿತವಾಗಬೇಕಾಗುತ್ತದೆ. ಅವರ ಸಾಹಿತ್ಯ ಕೃಷಿ ಅಂಥ ವಿಶೇಷದ್ದು, ವೈವಿಧ್ಯದ್ದು, ಮಹತ್ವದ್ದು.

ಕವಿಗೆ ತೃಪ್ತಿ ಸೃಜನಶೀಲತೆಯ ಸಮಾಪ್ತಿ.

(ಕವಿ ತೃಪ್ತಿ)



ನಿಸಾರರ ಸ್ವೋಪಜ್ಞ ಸಾಹಿತ್ಯ ಸಾಧನೆ

♦ *ಡಾ. ದೇ. ಜವರೇಗೌಡ*

ನಿಸಾರರ ಕಾವ್ಯ

ಜಾಗತಿಕ ಹಾಗೂ ಭಾರತೀಯ ಸಾಹಿತ್ಯವನ್ನು ಕರತಳಾಮಳಕ ಮಾಡಿಕೊಂಡಿದ್ದೇನೆಂಬ ಗರ್ವ ನನಗಿಲ್ಲ. ಆದರೆ ದೂರ ದೂರಕ್ಕೆ ಕಣ್ಣಾಡಿಸಿರುವುದು ದಿಟ. ಆ ಅನುಭವದ ಹಿನ್ನೆಲೆಯಲ್ಲಿ ಯೋಚಿಸಿದಾಗ ಕನ್ನಡ ಸಾಹಿತ್ಯದ ಗುಣ ಗಾತ್ರಗಳ ಬಗೆಗೆ ಅಭಿಮಾನ ಮೂಡದಿರಲಾರದು. ಹಿಂದಿನ ಸಾಹಿತ್ಯ ನಿಂತ ನೀರಾಗದೆ ಸ್ಥಿತ್ಯಂತರ ಪ್ರವಾಹವಾಗಿದ್ದು, ಮಹಾ ಪ್ರತಿಭಾಶಾಲಿಗಳ ಜೀವ ಸಾರದಿಂದ ಅದು ಪರಿಪುಷ್ಟ ಗೊಂಡಿದ್ದರೂ ಕಳೆದ ಒಂದು ಶತಕದ ಸಾಹಿತ್ಯ ನಿರ್ಮಾಣ ಪ್ರಮಾಣ ಹಿಂದಣ ಹತ್ತು ಶತಮಾನಗಳ ಸಾಹಿತ್ಯ ಸಂಪತ್ತಿಗಿಂತ ಮಿಗಿಲಾಗಿದೆ ಎಂದೇ ಹೇಳಬಹುದು. ಇಷ್ಟಕ್ಕೆಲ್ಲ ಕಾರಣ, ಅವರಿಗಿಲ್ಲದ ಸ್ಫೂರ್ತಿ ವಿಶೇಷಗಳು; ಅವರಿಗೆ ಎಟುಕದ ಸಂಪರ್ಕ ಸಾರಿಗೆಗಳ, ವೈಜ್ಞಾನಿಕ ಸಂಶೋಧನೆಗಳ, ಸಮೂಹ ಮಾಧ್ಯಮಗಳ, ಪಾಶ್ಚಾತ್ಯ ಸಂಸ್ಕೃತಿಯ ತಂತ್ರಜ್ಞಾನಾನು ಕೂಲಗಳು ಇವರಿಗೆ ಒದಗಿ ಬಂದದ್ದು. ಪಾಶ್ಚಾತ್ಯ ಸಾಹಿತ್ಯದ ಮಂದಾನಿಲ ಕನ್ನಡ ಸಾಹಿತ್ಯದ ವೃಕ್ಷದಲ್ಲಿ ಹೊಸ ತಳಿರನ್ನು ಮೂಡಿಸುತ್ತದೆ, ಹೊಸ ಮೊಗ್ಗುಗಳನ್ನು ಅರಳಿಸುತ್ತದೆ; ಇಡೀ ಕ್ಷೇತ್ರದಲ್ಲಿ ನವ ಚೈತನ್ಯ ಸಂಚಾರವನ್ನು ಪ್ರೇರಿಸುತ್ತದೆ. ನಮ್ಮ ಕಣ್ಣೆದುರಿಗೆ ಅದೆಷ್ಟು ಸಾಹಿತ್ಯ ಪ್ರಕಾರಗಳು ಹುಟ್ಟಿ ಬೆಳೆದು ಪ್ರಬುದ್ಧಾವಸ್ಥೆಯನ್ನು ಪಡೆದುವು; ಅದೆಷ್ಟು ಚಳುವಳಿಗಳು

ಪರಸ್ಪರ ಪೂರಕವಾಗಿ ಯಶಸ್ವಿಯಾಗಿ ಫಲಪ್ರದವಾಡುವೆಂಬುದನ್ನು ನೆನೆದಾಗ ರೋಮಾಂಚನವಾಗುತ್ತದೆ.

ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಚಳುವಳಿಗಳು ಸ್ಥಿತ್ಯಂತರವನ್ನು, ನಿರಂತರ ಪ್ರಗತಿಯನ್ನು, ಸಮಕಾಲೀನ ಬದ್ಧತೆಯನ್ನು ಸೂಚಿಸುವ ಹೆಸರುಗಳೇ ಹೊರತು, ಅವು ಪರಸ್ಪರ ವಿರೋಧಿಗಳಲ್ಲ. ಹಲವು ಮಂದಿ ನವ್ಯ ಕವಿಗಳ ಕಾವ್ಯ ನವೋದಯಕ್ಕೆ ಕಸಿ ಕಟ್ಟಿದ್ದೇ ಆಗಿದೆ. ನವೋದಯ ಕವಿಗಳೂ ಆಗಾಗ್ಗೆ ನವ್ಯವೆನ್ನಬಹುದಾದ ಕೃತಿಗಳನ್ನು ರಚಿಸಿದ್ದಾರೆ. ಯಾರೇ ಆಗಲಿ, ಯುಗಧರ್ಮಕ್ಕೆ ಹೊಂದಿಕೊಳ್ಳದವರು ಸತ್ತಂತೆಯೇ ಲೆಕ್ಕ. ಕವಿ ಕೆ. ಎಸ್. ನಿಸಾರ್ ಅಹಮದ್‌ರವರು ನವ್ಯದ ಕಡೆಗೆ ಹೆಚ್ಚು ವಾಲಿದ್ದಾರೆನ್ನಬಹುದಾದರೂ ನವೋದಯದ ಮನೋಧರ್ಮದ ಕವಿತೆಗಳನ್ನು ಸಾಕಷ್ಟು ರಚಿಸಿದ್ದಾರೆನ್ನುವುದು, ಅವರು ಯಾವ ಮುದ್ರೆಗೂ ಸೇರಿದವರಲ್ಲವೆನ್ನುವುದು ಗಮನಿಸಬೇಕಾದ ಸಂಗತಿ.

ನವ್ಯವೊ ನವೋದಯವೊ ಬಂಡಾಯವೊ ದಲಿತವೊ ಯಾವುದೇ ಆಗಲಿ, ಅದು ಮೊದಲು ಸಾಹಿತ್ಯವಾಗಬೇಕು, ಸಾಹಿತ್ಯಗುಣಗಳನ್ನು ಪಡೆದಿರಬೇಕೆಂಬ ವಿಷಯದಲ್ಲಿ ಅನುಮಾನವೇ ಇಲ್ಲ. ಅನುಭವ ವೈಭವ, ಆಲೋಚನಾ ಸಂಪನ್ನತೆ, ಸಾಮಾಜಿಕ ಪ್ರಜ್ಞೆ, ಕಲಾವಂತಿಕೆ, ಭಾವತೀವ್ರತೆ ಸಾಹಿತ್ಯದ ಮುಖ್ಯ ಲಕ್ಷಣಗಳಷ್ಟೆ? ಇವು ಕೆ. ಎಸ್. ನಿಸಾರ್ ಅಹಮದ್‌ರ ಸಾಹಿತ್ಯದ ಆಣಿ ಗುಣಗಳು. ನಿಸಾರ್ ಅವರಿಗೆ ಪರಂಪರೆಯ ಬಗ್ಗೆ ದ್ವೇಷವಿಲ್ಲ, ತಮ್ಮದಲ್ಲದ ಸಂಸ್ಕೃತಿಯ ಬಗ್ಗೆ ಮತ್ಸರವಿಲ್ಲ. ಅದು ಪರಕೀಯ, ಇದು ಸ್ವಕೀಯವೆಂಬ ಪ್ರತ್ಯೇಕತಾ ಭಾವನೆಯಾಗಲಿ, ಬುಡಕಟ್ಟು ನೀತಿಯಾಗಲಿ ಅವರಲ್ಲಿ ಎಳ್ಳಷ್ಟೂ ಇಲ್ಲ. ಪೂರ್ವಾಗ್ರಹವಾಗಲಿ, ಗುಂಪುಗಾರಿಕೆಯಾಗಲಿ ಅವರಿಂದ ಮೈಲಿ ಮೈಲಿ ದೂರ. ತಮ್ಮದೇ ಆದ ವಿನೂತನ ಸತ್ವ ಸಂಪತ್ತನ್ನು ಸಾಹಿತ್ಯಕ್ಕೆರೆದ, ಭಾರತೀಯ ಸಂಸ್ಕೃತಿಯ ಆಯಾಮಗಳನ್ನು ಹಿಗ್ಗಿಸಬೇಕೆನ್ನುವ ತೀವ್ರಾಸಕ್ತಿ ಸದಭಿರುಚಿ ನಯವಂತಿಕೆ ಅವರ ಸಹಜ ಗುಣ. ಸಂಸ್ಕೃತಿ ವಾಹಕ ಚೇತನರಲ್ಲಿ ಇವರದು ಗಣ್ಯ ಪಾತ್ರ. ರಾಷ್ಟ್ರಜೀವನದ ಪ್ರಗತಿಗೆ, ಅದರ ಸದೃಢತೆಗೆ, ಅದರ ಬಲ ವರ್ಧನೆಗೆ ಕವಿಯ ಅನುಭವಾಲೋಚನೆಗಳು ವಿಟಮಿನ್ನುಗಳಂತೆ, ಪೋಷಕ ದ್ರವ್ಯಗಳಂತೆ ದುಡಿಯುತ್ತವೆ ಎನ್ನುವ ಇವರ ಚಿಂತನೆ ಇವರ ಸಾಹಿತ್ಯಕ್ಕೇ ಸಮುಚಿತವಾಗಿ ಅನ್ವಯಿಸುತ್ತವೆ. ಎಲ್ಲ ಸಾಹಿತಿಗಳೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಅಷ್ಟೋ ಇಷ್ಟೋ ಸಂಸ್ಕೃತಿ ಸಾಗರಕ್ಕೆ ಸಲಿಲ ದಾನ ಮಾಡುತ್ತಾರೆನ್ನುವ ಔದಾರ್ಯ ಇವರದು. ಹಳೆಯದನ್ನು ನಿಂದಿಸುವ ಮೂಲಕ ಹೊಸತು ಮೇಲೇರಬೇಕಾಗಿಲ್ಲ; ಹಳೆಯ ಎಲೆ ಇದ್ದದ್ದರಿಂದಲೇ ಮರ ಬದುಕಿ ಹೊಸ ಚಿಗುರಿಗೆ ಅವಕಾಶವಾದದ್ದೆಂಬ ವಿಚಾರ ಇವರದು. ಪರಂಪರೆಯನ್ನು ಬಿಡದೆ ಹೊಸತನವನ್ನು ಸಾಧಿಸಿದ್ದು, ಸ್ವಂತಿಕೆಯನ್ನು ಛಾಪಿಸಿದ್ದು ಇವರ ಹಿರಿಮೆ.

ಮುಸ್ಲಿಂ ದಂಪತಿಗಳ ಹೊಟ್ಟೆಯಲ್ಲಿ ಹುಟ್ಟಿ, ಅಪರಂಜಿ ಭಾರತೀಯರಾಗಿ ಬೆಳೆದು, ಬದುಕಿನಲ್ಲಿ ರಾಷ್ಟ್ರೀಯತೆಯನ್ನು ಮೆರೆದ ಪ್ರಾಮಾಣಿಕ ಕವಿ ಕೆ. ಎಸ್. ನಿಸಾರ್ ಅಹಮದ್.

ಅವರೆಂದೂ ಮುಸ್ಲಿಮರೆಂದು ಘೋಷಿಸಿಕೊಳ್ಳಲಿಲ್ಲ; ಹಿಂದುವನ್ನು ದ್ವೇಷಿಸಲಿಲ್ಲ. ಮುಸ್ಲಿಮ್ ಹಿಂದೂ ಸತ್ವಗಳೆರಡೂ ಸಂಗಮಗೊಂಡು ನಿರ್ದ್ವಂದ್ವವಾಗಿ, ನಿರ್ಭೇದವಾಗಿ ಹರಿದ ಜೀವನ ವಾಹಿನಿ ಅವರದು. ಅದು ನಿಜವಾದ ಭಾರತೀಯತ್ವ. ಎರಡು ಸಂಸ್ಕೃತಿಗಳ ಮಧುರ ಸಾಮರಸ್ಯವೇ ಸಾಕಾರವಾದಂತಿದ್ದಾರೆ ಅವರು. ಗಾಂಧಿ, ಅರವಿಂದೊ, ಬಸವೇಶ್ವರ, ಶ್ರೀ ರಾಮಕೃಷ್ಣ ಪರಮಹಂಸ, ಶಾರದಾದೇವಿ ಮೊದಲಾದವರನ್ನು ಕುರಿತು ಹಾಡುವಾಗ ಅವರ ತಾದಾತ್ಮ್ಯ ಗೌರವ ಮತ್ತು ಆರಾಧನಾ ಮನೋಧರ್ಮ ಅಭಿವ್ಯಕ್ತವಾಗುತ್ತದೆ. 'ಮಡುಗಟ್ಟಿ ನಾರಿದ್ದ ಸಂಪ್ರದಾಯಕೆ ನಾಲೆ ಬಿಡಿಸಿ, ಹೊಸ ಹಾದಿಗಳ ರಚಿಸಿದಾತ'ನೆಂದು ಬಸವೇಶ್ವರರನ್ನು ಮೆಚ್ಚುತ್ತಾರೆ. 'ನವಾವತಾರಿಯೆ, ವರ ಸಂಸ್ಕಾರಿಯೆ, ಜಗ ಹಿತಕಾರಿಯೆ, ಗುರುವೆ ನಮೋ' ಎಂದು ಶ್ರೀ ರಾಮಕೃಷ್ಣ ಪರಮಹಂಸರಿಗೆ ನಮಸ್ಕರಿಸುತ್ತಾರೆ.

> **'ಯಾವ ಯುಗದಲೆ, ಯಾವ ನೆಲದಲೆ, ಯಾವ ಧರ್ಮದಲ್ಲೆ,**
> **ಸದ್ವಿಭೂತಿ ತಾನರಳಬಹುದು, ಅದಕಿಲ್ಲ ಎಲ್ಲೆಗಿಲ್ಲೆ;**
> **ವೇದ ಮತ್ತು ಬೈಬಲ್, ಖುರಾನು ಸಾರಿಹವು ಸತ್ಯವನ್ನೆ;**
> **ಇದನರಿಯದಂಥ ಅವಿಚಾರವಂತ ಆಚಾರ ಪಂಥ ಸೊನ್ನೆ.' (ಶ್ರೀ ಶಾರದಾದೇವಿ)**

—ಎಂದು ಕವಿ ನಿಸಾರ್ ಅಹಮದ್ ಶ್ರೀ ಶಾರದಾದೇವಿಯವರನ್ನು ಕುರಿತು ಹಾಡುವಾಗ ಮೂಲಭೂತವಾದಿಗಳು ಮೂಗು ಮುರಿದಾರು. ಈ ಕವಿ ಹಿಂದುಗಳಿಗೆ ಮಾತ್ರವಲ್ಲ, ಮುಸ್ಲಿಮರಿಗೆ ಮಾತ್ರವಲ್ಲ, ಎಲ್ಲರಿಗೂ ಸೇರಿದವರೆಂಬ ಮಾತಂತು ಅವರನ್ನು ಬಲ್ಲವರಿಗೆಲ್ಲ ಗೊತ್ತು. ಮಾಸ್ತಿಯವರಾಗಲಿ, ತೀ.ನಂ.ಶ್ರೀ.ಯವರಾಗಲಿ, ಅವರ ವ್ಯಕ್ತಿ ಚಿತ್ರವನ್ನು ಕುಂಚಿಸುವಲ್ಲಿ, ಅವರ ಹೆಗ್ಗುಣಗಳನ್ನು ಎತ್ತಿ ತೋರುವ ಮೂಲಕ ಅವರ ಸಮಗ್ರ ವ್ಯಕ್ತಿತ್ವವನ್ನೇ ಶಿಲ್ಪಿಸುವಲ್ಲಿ ನಿಸಾರ್ ನಿಸ್ಸೀಮರು :

> **'ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ**
> **ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,**
> **ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ**
> **ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ' (ಮಾಸ್ತಿ)**

—ಮಾಸ್ತಿಯವರನ್ನು ನೋಡಿದಾಗಲೆಲ್ಲಾ ಯಾರಿಗಾದರೂ ಹೀಗೆಯೇ ಅನ್ನಿಸುತ್ತಿತ್ತು.

> **'ಹೋಗುನೆನೆಂದು ಹೋಗದೆಯೆ ಒದ್ದಾಡಿಸುವುದು**
> **ಇಲ್ಲಿ ಹಲವರ ರೀತಿ;**
> **ಹೇಳದೆಯೆ ಹೊರಟೇ ಹೋಗಿ ಒದ್ದಾಡಿಸುವುದು**
> **ಎಲ್ಲೋ ಕೆಲವರ ರೀತಿ.' (ತೀ.ನಂ.ಶ್ರೀ)**

—ತೀ.ನಂ.ಶ್ರೀ.ಯವರ ಹಿರಿಮೆಯನ್ನು ಇದಕ್ಕಿಂತ ಮಿಗಿಲಾಗಿ ಚಿತ್ರಿಸಬಲ್ಲವರು ಯಾರು? ಇಲ್ಲಿ ಅಡಗಿರುವ ಅನುಭವವಂತು ಸಾರ್ವಲೌಕಿಕ, ಸಾರ್ವತ್ರಿಕ.

ಎರಡೂ ಸಂಸ್ಕೃತಿಗಳ ಸತ್ವ ಅವರ ರಕ್ತದಲ್ಲಿ ಹರಿಯುತ್ತಿರುವುದರಿಂದಲೇ ಅವರು 'ರಂಗೋಲಿ ಮತ್ತು ಮಗ' ಎಂಬ ಕವಿತೆಯನ್ನು ರಚಿಸುವ ಸಾಮರ್ಥ್ಯವನ್ನು ಪಡೆದಿದ್ದಾರೆ. ಹಿಂದೂ ಸಂಪ್ರದಾಯದ ರಂಗವಲ್ಲಿಯ ಬಗ್ಗೆ ಅವರಿಗೆ ಗೌರವವಿದೆ; ಅದರ ಸೌಂದರ್ಯದ

ಬಗ್ಗೆ ಬೆರಗಿದೆ; ಕಾಲೇಜು ಕಲಿಯದ ಸುಮಂಗಲೆ ಮಹಾ ಕಲಾವಿದೆಯೆಂಬ ಆಶ್ಚರ್ಯವೂ ಇದೆ. ಅದರ ಗೂಢಾರ್ಥ ಏನೇ ಇರಲಿ, ಅದೊಂದು ಮೂಲ ಸ್ವರೂಪದ ಪ್ರತಿಮಾ ವಿಧಾನದ ಸಾಮುದಾಯಕ ಕಲೆಯೆಂಬ ಆನಂದ ಅವರಿಗಿದೆ:

'ಚಿತ್ತಾಪಹಾರಿ ಚಿತ್ತಾರ
ಖಾಲಿ ಮನಸಿನ ಖೋಲಿ ಖೋಲಿಗಳ ಬೀಗ
ತೆರೆದು, ತುಂಬುವುದೆಂಥ ಭಾವಾವೇಗ!' **(ರಂಗೋಲಿ ಮತ್ತು ಮಗ)**

ರಂಗೋಲಿಯನ್ನು ನೋಡಿದಾಗ ನಿಸಾರರ ಮನಸ್ಸು ತುಂಬಿ ಬರುತ್ತದೆ. 'ಯಾವುದೋ ಆರ್ಷ ಮಂತ್ರಕ್ಕೆ ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ' ಎಂದು, ಅದನ್ನು ಅನುಸರಿಸಲು ಹೋಗಿ ಕವಿ ಕಾಫರನೆಂದು ತಾಯಿಯಿಂದ ಕರೆಸಿಕೊಂಡದ್ದೂ ಉಂಟು. ರಂಗೋಲಿಯ ಮೇಲೆ ಕಾಣದೆ ಅಡಿಯಿಟ್ಟಾಗ ಕೆಂಡ ತುಳಿದವನಂತೆ ಕಾಲೆಳೆದುಕೊಂಡಿದ್ದೂ ಉಂಟು. 'ಜೊತೆಗೆ ಆ ಮನೆಯವರು ಕಂಡರೋ ಎಂಬ ಚಿಂತೆ' ಎಂಬ ಸಾಲಿಲ್ಲದಿದ್ದರೆ ಕವಿಯ ಸೌಂದರ್ಯಾಭಿರುಚಿಗೆ ಮತ್ತಷ್ಟು ರಂಗು ಬರುತ್ತಿತ್ತೇನೋ.

ಇಂಥ ಸುಂದರವಾದ ಚಿತ್ರ ನಮ್ಮ ಮನೆಯ ಮುಂದಿಲ್ಲವಲ್ಲ ಎಂಬ ಬೇನೆ ಅವರೆದೆಯಲ್ಲಿ ಬೇಯುತ್ತಿರಬೇಕು. ಜತೆಯಲ್ಲಿದ್ದ ಮಗ ಕೇಳುತ್ತಾನೆ 'ಯಾಕೆ ಬಿಡಿಸುತ್ತಾರೆ ಇವರು ಹೀಗೆ ದಿನಾ ಚಕ್ರ ಬಂಧ?' ಎಂದು. ಮಗನ ಮನದ ಗೊಂದಲ ಪ್ರಶ್ನೆಯ ರೂಪದಲ್ಲಿ ಚಿಮ್ಮುವ ಮುನ್ನ ತಂದೆ ಅವನ ಪ್ರಶ್ನೆಯನ್ನು ಊಹಿಸಿಕೊಂಡೇ 'ನಮ್ಮ ಪದ್ಧತಿಗೆ ಅದು ಸಲ್ಲ' ಎಂದು ಉತ್ತರ ಕೊಡುತ್ತಾರೆ. ಕವಿಯ ಸೂಕ್ಷ್ಮ ಸಂವೇದನೆ ಈ ಸನ್ನಿವೇಶದಲ್ಲಿ ಸುವ್ಯಕ್ತವಾಗು ತ್ತದೆ. 'ಪ್ರಾಚೀನ ಕಾಲದ ಪವಿತ್ರ ಗ್ರಂಥದಲ್ಲಿ ಉಕ್ತಗೊಳ್ಳದ ಆಚರಣೆಗಳೆಲ್ಲ ನಿಷಿದ್ಧವೆ?' ಎಂಬ ಪ್ರಶ್ನೆ ತಲೆಯೆತ್ತುತ್ತದೆ. ಇದು ಖುರಾನಿಗೆ ಮಾತ್ರವಲ್ಲ, ಹಿಂದೂ, ಕ್ರಿಶ್ಚಿಯನ್ ಧರ್ಮದ ಪವಿತ್ರ ಗ್ರಂಥಗಳಿಗೂ ಅನ್ವಯಿಸುತ್ತದೆ. 'ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ' ಎಂಬ ತಂದೆಯ ಉತ್ತರಕ್ಕೆ 'ಅಲ್ಲಿ ಹೇಳಿದ ಹಾಗೆ ಆಚರಿಸಬೇಕೆ?' ಎಂಬ ಮಗನ ಪ್ರಶ್ನೆ ಬಾಣದಂತೆ ತೂರುತ್ತದೆ. ನಿರಸ್ತ್ರನಾಗಿ ತಂದೆ ಹೌದೆನ್ನುತ್ತಾನೆ. ವಿಶ್ವ ಮಾನವತ್ವವೇ ಮೈವೆತ್ತಿದಂತಿರುವ ಆ ಮಗು ಹಣ್ಣಾದವನಂತೆ ಪ್ರಶ್ನಿಸುತ್ತಾನೆ :

'ಮನೆಯ ಕಟ್ಟಿದ ಇಸ್ಸಿ,
ನಿನ್ನ ಹೆಸರು ಮನೆಯೆದುರಲ್ಲಿ
ಬರೆಸಿರುವೆಯಲ್ಲ, ಹೇಳಿದೆಯೆ ಖುರಾನಿನಲ್ಲಿ?' **(ಅದೇ)**

—ಆ ನಿಷ್ಕಲ್ಮಷ ಮನಸ್ಸಿನ ಪ್ರಶ್ನೆ, ಜಗದ ಜಂಜಡದ ಮಧ್ಯೆ ಬೆಳೆದ ಪ್ರಬುದ್ಧ ಕವಿಯ ಮನಸ್ಸಿನ ತುಂಬ ಚಿಂತನೆಯ ಸಂತೆಯನ್ನು ನೆರೆಸುತ್ತದೆ. ಋಷಿಕಲ್ಪನಾದ ಕವಿಯ ಮನಸ್ಸು ಯಾವಾಗಲೂ ಕ್ರಾಂತಿಕಾರಕ ವಿವೇಚನೆಯ ಕಡೆಗೆ ವಾಲುತ್ತದೆ.

ಎರಡು ಮತೀಯ ಸಂಸ್ಕೃತಿಗಳ ಸಮನ್ವಯವನ್ನು ಸಾಧಿಸುವಲ್ಲಿ ಯಶಸ್ವಿಯಾದ ನಿಸಾರರು ವಿದ್ಯಾ ಮತ್ತು ಅವಿದ್ಯಾ ಸಂಸ್ಕೃತಿಗಳ ನಡುವಣ ಕಂದಕದ ವಸ್ತುಸ್ಥಿತಿಯನ್ನೂ, ತಾರತಮ್ಯ ಸ್ವರೂಪವನ್ನೂ 'ಅಮ್ಮ, ಆಚಾರ, ನಾನು' ಎಂಬ ಕವಿತೆಯಲ್ಲಿ

ಹೃದಯಂಗಮವಾಗಿ ಚಿತ್ರಿಸಿದ್ದಾರೆ. ವೈಯಕ್ತಿಕ ಅನುಭವದಲ್ಲಿ ಜಾತಿ, ಮತ, ಕಾಲದೇಶ ಭೇದರಹಿತ ಸಮಷ್ಟಿ ಸಂಪ್ರದಾಯ ಹೆಪ್ಪುಗಟ್ಟಿದೆ. ಇದರಲ್ಲಿ ತಿಳಿ ಹಾಸ್ಯವಿದೆ, ಮೃದು ವಿಡಂಬನೆಯಿದೆ, ಸಹಜಾನುಕಂಪೆಯಿದೆ, ಮಾತೃ ವಾತ್ಸಲ್ಯವೂ ಇದೆ; ಜತೆಗೆ ನಗು ಬರಿಸುವ ಹಲವು ಹೆಣ್ಣುಗಳ ವರ್ಣನೆಯೂ ಇದೆ. ವಿದ್ಯಾವತಿಯನ್ನು ಮದುವೆಯಾದರೆ ಪ್ರಾಣ ಹತ್ಯೆ ಮಾಡಿಕೊಳ್ಳುತ್ತೇನೆಂದು ಚಲ ತೊಟ್ಟ ತಾಯಿ ಮಗನ ಮೇಲಣ ವಾತ್ಸಲ್ಯದಿಂದ ಅವನು ನೋಡಿದ ಹುಡುಗಿಯ ನ್ನೊಪ್ಪಿಕೊಳ್ಳುತ್ತಾಳೆ. ಕೊನೆಗೆ ಸೊಸೆ, ಹಿರಿಯಕ್ಕನ ಚಾಳಿಗೆ ಅಂಟಿ ಕೊಳ್ಳಬೇಕಾಗುತ್ತದೆ. ಡಬಲ್ ಪದವೀಧರೆಯಾದ ಆಕೆ ತಿರುಗಾಟಕ್ಕೆ ಹೊರಟು ಆಧುನಿಕ ವೇಷವನ್ನು ಧರಿಸಿದಾಗ ಗಂಡನಿಗೆ ಸಂತೋಷವಾಗುತ್ತದೆ. ಆದರೆ ಅವಳು ಅಮ್ಮನ ಬುರ್ಖಾ ವನ್ನು ಹೊದ್ದಾಗ ಅವನ ನಾಲಗೆ ಬತ್ತಿ ಮೂಕನಾಗುತ್ತಾನೆ. 'ಉಟ್ಟಿದ್ದಳು ನಮ್ಮಮ್ಮನ ಬುರ್ಖಾ' ಎಂಬ ಕೊನೆಯ ಸಾಲು ಇಡೀ ಕವಿತೆಯ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ಹಳತು ಹೊಸತರ ಕೂಡಿಕೆಯ ಸಂದರ್ಭ ಇಲ್ಲಿ ಯಥಾವತ್ತಾಗಿ ಚಿತ್ರಿತವಾಗಿದೆ.

'ನೈಜ ಕವಿಗೆ ಕಮಿಟ್‌ಮೆಂಟೆ ಮೂಲ ಧನ' ಎಂಬ ಕವಿಯ ಮಾತು ಸರಿಯೇ ಸರಿ. ಬದ್ಧತೆಯಿಲ್ಲದೆ, ಗುರಿಯಿಲ್ಲದೆ, ಚಲವಿಲ್ಲದೆ ಕವಿಯಿರಲಿ, ಸಾಮಾನ್ಯನ ಬದುಕೂ ಜಡವಾಗುತ್ತದೆ, ಮಡುವಾಗುತ್ತದೆ, ತಿಪ್ಪೆಯಾಗುತ್ತದೆ; ಪ್ರಗತಿಯಿರಲಿ, ದುರ್ಗತಿಯೇ ಅವನ ಸ್ಥಿತಿಯಾಗುತ್ತದೆ. 'ಹತ್ತು ಕಡೆ ಅಗೆದರೆ ಗೋರಿ; ಒಂದೆಡೆ ತೋಡುತ್ತಾ ಹೋದರೆ ಬಾವಿ'— ಇದು ಮನುಷ್ಯ ಜೀವನದಲ್ಲಿ ಕಾಣಬೇಕಾದ ಶಿಸ್ತು. ಶಿಸ್ತಿಲ್ಲದಾಗ ಜೀವನವೆಲ್ಲ ಸುಸ್ತು. 'ಕಮಿಟ್‌ಮೆಂಟ್ ಇಲ್ಲದವನ ಬರಹ ಕಲಗಚ್ಚಿಗೆ ಒಗ್ಗರಣೆ ಹಾಕಿದಂತೆ' ಎಂಬ ಶಪಥವೇ ಕವಿಯ ಪಥವಾಗಿದೆ. 'ಸಮಾಜದ ಜ್ವಲಂತ ತೊಡಕುಗಳ ದರ್ಶನ; ಕೃತಿಯಲ್ಲಿ ಅದರ ಪ್ರದರ್ಶನ'—ಈ ಮಾತಿನಲ್ಲಿ ವ್ಯಂಗ್ಯವಿದ್ದರೂ, ಕವಿಯ ಕಾವ್ಯೋದ್ದೇಶ ಅದೇ ಇರುವಂತೆ ಅವರ ಕವಿತೆಗಳ ಮೆರವಣಿಗೆಯನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಸಮಾಜದ ಕೈಗನ್ನಡಿ ಯಾಗದ, ಅದರ ಓರೆಕೋರೆಗಳನ್ನು ತಿದ್ದಲಾರದ ಕಾವ್ಯದಿಂದ ಲೋಕಕ್ಕೆ ಏನಾಗ ಬೇಕಾಗಿದೆ? ಕೆಳಗೆ ಬಿದ್ದವರ ಬಗ್ಗೆ, ಬೆಂದು ನೊಂದವರ ಬಗ್ಗೆ ಸಹಾನುಭೂತಿಯಿಲ್ಲ; ವರ್ಣ ವರ್ಗ ವೈಭವ ದಲ್ಲಿಯೇ ಸದಾ ಮುಳುಗಿರುವ, ಶ್ರೀಸಾಮಾನ್ಯನ ಕ್ಷೇಮವನ್ನು ನಿರ್ಲಕ್ಷಿಸುವ ಕಾವ್ಯ ಇದ್ದರೇನು? ಇಲ್ಲದಿದ್ದರೇನು? ಕಾವ್ಯ ರಚನೆಯ ಪ್ರಾರಂಭದಲ್ಲಿಯೇ ನಿಸಾರ್ ಅಹಮದ್ ತಮ್ಮ ಕಾವ್ಯೋದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ:

'ಮಾನವ ಕೋಟಿಯ ಮೂಕ ಸಂಕಟಕೆ
ಮಾತಿನ ಪ್ರತಿನಿಧಿ ನನ್ನ ನುಡಿ;
ನಿರ್ಬಲ ಸಾಹಸವಿಹೀನ ಬದುಕಿಗೆ
ಅಭಯದ ಗುಡಿ ಈ ನನ್ನ ನುಡಿ!' **(ನನ್ನ ನುಡಿ)**

ಜಗದ ಒಳ್ಳಿಗಾಗಿ, ಜನತೆಯ ತಣ್ಪಿಗಾಗಿ ಕವಿಯ ಸಾಮಾಜಿಕ ಬದ್ಧತೆ ಅನಿವಾರ್ಯ ವೆಂಬುದು ಈ ಸಾಲುಗಳಿಂದ ಸುಸ್ಪಷ್ಟವಾಗುತ್ತದೆ. ಈ ಕವಿಯ ಹಲವು ಕವಿತೆಗಳಲ್ಲಿ ಸಾಮಾಜಿಕ ಕಾತರ ಹಾಸುಹೊಕ್ಕಾಗಿ ಹರಿದಿದೆ. ಇದು ಅವರ ವ್ರತವಾಗಿರುವಂತೆ ತೋರುತ್ತದೆ. 'ಸಿಡಿದ ಸದ್ದು', 'ಅನಾಥರು', 'ಗೃಹಕೃತ್ಯ', 'ಪರ್ಣಾಶ್ರಮ', 'ವೈಜಯಂತಿ',

`ನಮ್ಮ ಬಡಾವಣೆಯ ಕತೆ`, `ಖಾಲಿ ಸೈಟುಗಳು`. `ಸ್ವಜನೋದ್ಧಾರಕರು`. `ನಗರನಿವಾಸಿಗಳು`. `ಸೇಬುಗಳು`. `ಓ ನನ್ನ ಹೀರೋಗಳೇ`. `ವರ್ತಮಾನ ಭಾರತ`—ಇವೇ ಮೊದಲಾದ ಹಲವು ಕವಿತೆಗಳಲ್ಲಿ ಸಾಮಾಜಿಕ ಸಂದರ್ಭಗಳನ್ನು ಅಗೆದು ಬಗಿದು ಸೋಸಿ ಗೋರಿದ ಲೋಪದೋಷಗಳ, ಗೋಜುಗೊಂದಲಗಳ, ತೊಳಸು ಹೊಲಸುಗಳ ಚಕ್ಕೆ ತೆಕ್ಕೆಗಳಿವೆ. ಪಾಬ್ಲೊ ನೆರುಡನ (`ಬರೀ ಮರ್ಯಾದಸ್ಥರೆ`) ಕವನಗಳ ಭಾಷಾಂತರ ದಲ್ಲಿಯೇ ನಿಸಾರರ ಮನೋಧರ್ಮವೆಂಥ ದೆಂಬುದನ್ನು ಗುರುತಿಸಬಹುದು. ದಕ್ಷಿಣ ಅಮೆರಿಕೆಯಾಗಲಿ, ಭಾರತವಾಗಲಿ, ಎಲ್ಲ ಕಡೆಯೂ ಎಲ್ಲ ಕಾಲಗಳಲ್ಲಿಯೂ ಸಾಮಾಜಿಕ ಸಮಸ್ಯೆಗಳು ಇದ್ದದ್ದೇ. ರೂಪ ಸ್ವರೂಪಗಳಲ್ಲಿ ಅಂತರವಿರಬಹುದಾದರೂ ಅವುಗಳ ಮೂಲಚೂಲಗಳಲ್ಲಿ, ಆಂತರ್ಯದಲ್ಲಿ ಅವೆಲ್ಲ ಒಂದೆ : ಗಿಣಿಗಳು ಗಿಡುಗಗಳ ಕೊಕ್ಕುಗಳಿಗೆ ಸಿಕ್ಕಿ ಮೆಕ್ಕಲಾಗುವಂತೆ, ಬಡವರು ಶ್ರೀಮಂತ ಪುರೋಹಿತ ವಾತಾಪಿಗಳ ಥಳುಕಿಗೆ ಸೋತು ಮತ್ತು ಪ್ರಬಲ ರಾಜಕಾರಣಿಗಳ ಇಲ್ವಲ ಕುಕ್ಷಿಯಲ್ಲಿ ಜೀರ್ಣವಾಗುತ್ತಾರೆ. ಅಂಥ ಸಮಯದಲ್ಲಿ ಕವಿ ಅಗಸ್ತ್ಯನ ಆಗಮನ ಅನಿವಾರ್ಯವಾಗುತ್ತದೆ. `ಪ್ರಜಾಪ್ರಭುತ್ವದೊಳೆಲ್ಲ ಜನರಿಗೊಂದೇ ನ್ಯಾಯ: `ಸರ್ವರಿಗು ಸಮಗೋಳು ಎಂಬ ಗೀತ` (ಯುಗಾದಿ: 1990).

ಹಕ್ಕಿಗಳನ್ನು ನೋಡಿದಾಗ ಅವುಗಳಲ್ಲಿ ಕಾಣೆಯಾದ, ಮನುಕುಲದಲ್ಲಿ ಮಾತ್ರ ಕಾಣ ಬಹುದಾದ ಕೊರತೆಗಳನ್ನು ಅನುಭವಿಸಿದ ಕವಿಯ ಮನಸ್ಸು ನೋವಿನ ಆವಿಗೆಯಾಗುತ್ತದೆ, ಚಿಂತೆಯ ಚಿತೆಯಾಗುತ್ತದೆ. ಹಕ್ಕಿಗಳಿಗಾದರೊ—

‘ವರ್ಗಭೇದಗಳ ಯೋಚನೆಯಿಲ್ಲ,
ಅಧಿಕಾರಿಗಳೆಡೆ ಯಾಚನೆಯಿಲ್ಲ,
ಕಿರಿಯರೊ, ಹಿರಿಯರೊ, ಯಾರೋ
ನಿಮ್ಮ ಸಹಾಯಕೆ ಬಂದಾರು.’ (ಹಕ್ಕಿಗಳಿಗೆ)

ಮನುಷ್ಯ ಸಮಾಜದಲ್ಲೋ ಆ ಸೌಲಭ್ಯಗಳಿಲ್ಲ; ಸ್ವಾತಂತ್ರ್ಯವಂತೂ ಇಲ್ಲವೇ ಇಲ್ಲ. ಹಕ್ಕಿಗಳಿಗಾದರೆ ಬಾನಿನ ಮಾಳದ ಹರಹು ತೆರೆದಿದೆ. ನಿರಾಶೆ ಮುಸುಕಿ ಮನುಷ್ಯ ಸಮಾಜದ ಬಗ್ಗೆ ಅಸಹನೆ ಮೂಡಿದಾಗ, ನಿಸರ್ಗ ವ್ಯಾಪಾರ ವೀಕ್ಷಣೆಯ ಮೂಲಕ ಮನಸ್ಸಿನ ರಿಕ್ತತೆಯನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ.

ಕನ್ನಡ ವಿಡಂಬನಕಾರರಲ್ಲಿ ನಿಸಾರ್ ಅಹಮದ್ ಅಗ್ರ ವೀಳ್ಯಕ್ಕೆ ಅರ್ಹರು. ವಿಡಂಬನೆ ಅವರ ಕಾವ್ಯಶಕ್ತಿಯ ಪ್ರಮುಖ ಗುಣ. ಪದ, ಪದಪುಂಜ ಮತ್ತು ವಾಕ್ಯಗಳಲ್ಲಿ ವಿಡಂಬನಾತ್ಮಕ ವಾದ ಹಾಸ್ಯ ರಸ ಸೆಲೆಯೊಡೆಯಲು ಕಾದಿರುತ್ತದೆ. ಸಮಾಜದ ಹುಸಿ ಕಸ ಕೊಳಕುಗಳನ್ನು ಹೊರ ಹಾಕಲು ಅವರು ಯಾವಾಗಲೂ ವಿಡಂಬನೆಯ ದೀಪವನ್ನೆತ್ತಿ ಹಿಡಿಯುತ್ತಾರೆ. ಅವರ ಪ್ರತಿಭಾಪ್ರಖರತೆಗೆ ಇದೇ ಸಾಕ್ಷಿ. ಸೂರ್ಯಚಂದ್ರರಿಗೆ ಬೆಳಕು, ಸಾಗರದ ನೀರಿಗೆ ಉಪ್ಪು, ಬೆಂಕಿಗೆ ಕಾವು, ಬೆಣ್ಣೆಗೆ ಬಿಳುಪು, ಸೋಪಿಗೆ ಧೌತಗುಣ ಹೇಗೆ ಸಹಜವೋ ಹಾಗೆ ಈ ಕವಿಯ ಕಾವ್ಯಕ್ಕೆ ವಿಡಂಬನೆ ಸಹಜ ಜೀವಧಾತುವಾಗಿದೆ. `ಅಮೇರಿಕ, ಅಮೇರಿಕ` ಎಂಬ ಕವಿತೆಯಲ್ಲಿ ಪರಸ್ಪರ ವಿರೋಧಾತ್ಮಕ ಸಂಗತಿಗಳನ್ನು ಎದುರು

ಬದುರಾಗಿರಿಸಿ, ಅವುಗಳ ಹಿರಿಮೆ ಕೀಳ್ಮೆಗಳನ್ನೂ, ಜತೆಗೆ ಇಂಡಿಯಾದ ನಾಚಿಕೆಗೇಡಿನ ಅವಮಾನಕರ ಪರಿಸ್ಥಿತಿಯನ್ನೂ ಸಾರ್ಥಕವಾಗಿ ವಿಡಂಬಿಸುವಲ್ಲಿ ಕವಿ ಮನಸ್ಸಿನ ಆಳದಲ್ಲಿ ನಡೆಯುವ ಸಂಘರ್ಷವೂ ನಿಷ್ಕಪಟ ಸತ್ಯಾಭಿವ್ಯಕ್ತಿಯೂ ಪ್ರಸ್ಫುಟವಾಗುತ್ತವೆ:

'ನಿನ್ನ ಸಂಸ್ಕೃತಿಯನಾಗಸಕ್ಕೆತ್ತಿದಾಗೆಲ್ಲ
ನಿನ್ನವರ ಟೈ ಸೂಟು ಸ್ಕರ್ಟುಗಳನೊಂದೊಂದೆ ಕಳಚಿ, ನೆತ್ತರಿನಿಂದ
ಸ್ಪ್ಯಾನಿಷರ ಜರ್ಮನರ ಪೋರ್ಚುಗೀಸಾಂಗ್ಲನೀಗ್ರೋಗಳ,
ಕಡಲ್ಗಳ್ಳ ಹಂತಕ ಹಾದರಗಿತ್ತಿಯರನೆತ್ತೆತ್ತಿ
ನಿನ್ನೆದುರು ನೂಕಿ ಪಕಪಕನೆ ನಗಬೇಕೆಂದಾಗ—
ಲಿಂಕನ್ ಕೆನಡಿ ಕಿಂಗರ ಚಹರೆಗಳ ಕಂಡು
ನುಡಿ ಎಡವಿ ಕೈ ಮುಗಿದು ಬೆಪ್ಪಗಾಗುತ್ತೇನೆ.' (ಅಮೇರಿಕ, ಅಮೇರಿಕ)

—ಹೀಗೆಯೇ ಅಮೆರಿಕೆಯ ಹಮ್ಮು ಬಿಮ್ಮುಗಳ, ಅನ್ಯಾಯ ಅಧರ್ಮಗಳ, ಮಹಾ ಸಾಧನೆ ಸಿದ್ಧಿಗಳ ಕತೆ ಸಾಗುತ್ತದೆ. ನಿಂದಾಸ್ತುತಿಯ ಮೂಲಕ ಅಮೆರಿಕಾ ಸಂಸ್ಕೃತಿಯ ಇಬ್ಬಂದಿತನವನ್ನು ಅವರು ಬಯಲಿಸುತ್ತಾರೆ. ಅಮೆರಿಕೆಯ ಉತ್ಕರ್ಷವನ್ನು ಕಂಡು ಕರುಬಿ ಕವಿ ಜಿಹ್ವೆ ಹಳಿದರೂ ತನ್ನ ದಾರಿದ್ರ್ಯ ಜನಸಂಖ್ಯೆ ಭೂಗೋಳಗಳು ಅದಕ್ಕೆ ಬಿರಿ ಹಾಕುತ್ತವೆ.

ಇಂಥ ನಿಂದಾಸ್ತುತಿಗೆ ಅಮೆರಿಕಾವೊಂದೆ ಗುರಿಯಾಗಬೇಕಿಲ್ಲ. ಯುರೋಪೀಯ ರಾಷ್ಟ್ರಗಳೂ ಹೀಗೆಯೇ ಇವೆ. ಇಂಡಿಯಾವೋ? ಸುಳ್ಳು, ತಟವಟ, ವಂಚನೆ, ಗೂಂಡಾಗಿರಿ, ಭ್ರಷ್ಟಾಚಾರಗಳಲ್ಲಿ ದಿನದಿನವೂ ಮುಳುಗೇಳುತ್ತಿದೆ. ಈ ವಿಷಯದಲ್ಲಿ ಅದು ಜಗತ್ತಿನ ಎಲ್ಲ ರಾಷ್ಟ್ರಗಳಿಗಿಂತಲೂ ಒಂದು ಕೈ ಮೇಲೇನೋ ಎನಿಸುತ್ತದೆ. ಬುದ್ಧ, ಮಹಾವೀರ, ಠಾಕೂರ್, ವಿವೇಕಾನಂದ, ಶ್ರೀರಾಮಕೃಷ್ಣ, ಅರವಿಂದ, ಗಾಂಧಿ, ರಮಣ ಮಹರ್ಷಿಯರ ನಾಡೆಂದು ಅದರ ಗೌರವ ಅಷ್ಟೊ ಇಷ್ಟೊ ಉಳಿದಿದೆ. ಅಮೆರಿಕೆಯಲ್ಲಿ ಪಾಪಕ್ಕೆ ಶಿಕ್ಷೆಯಿದೆ. ಅಲ್ಲಿ ದುಡಿಮೆಯಿದೆ, ಸಂಪತ್ತಿದೆ, ಸತ್ಯ ಪ್ರಾಮಾಣಿಕತೆಗಳೂ ಇವೆ. ಇಲ್ಲೋ! ಇವಾವುವೂ ಇಲ್ಲ. ಇದ್ದರೆ ದಟ್ಟಕಾಡುಗಳಲ್ಲಿಯೋ, ಹಿಮಾಲಯದ ಹಿಮ ಗುಹೆಗಳಲ್ಲಿಯೋ, ಹಳ್ಳಿಗಳ ಬಡ ಗುಡಿಸಲುಗಳಲ್ಲಿಯೋ ಅವಿತುಕೊಂಡಿರಬೇಕು. 'ಅರಬಿಂದೊ' ಅಂಥವರನ್ನು ಕುರಿತು ಕವಿ ಸಂಬೋಧಿಸು ತ್ತಾರೆ:

'ವಿದೇಶಿ ವಿಸ್ಕಿ ಗುಟುಕರಿಸಿದರೂ
ಗಂಗಾಜಲ ಮಿಲಾಯಿಸಿ
ಪಾವಿತ್ರ್ಯವುಳಿಸಿಕೊಂಡಿರುವ
ಸದ್ಧರ್ಮಿಗಳ
ಈ ನನ್ನ ನಾಡಿನಲ್ಲಿ
ಹುಟ್ಟಬಾರದಿತ್ತು ನೀವು' (ಅರಬಿಂದೊ)

ಎಂದು. ಅವರಂಥವರು ಒಬ್ಬಿಬ್ಬರಾದರೂ ಹುಟ್ಟದಿದ್ದರೆ ಈ ದೇಶ ಪೂರ್ತಿ ರಾವಣೇಶ್ವರರ ನಾಡಾಗುತ್ತಿತ್ತು. 'ನಗರನಿವಾಸಿ'ಗಳೆಲ್ಲರನ್ನು ಒಟ್ಟಿಗೆ ಸೇರಿಸಿ ನರಕವಾಸಿಗಳೆಂದೇಕೆ ಕರೆದಿದ್ದಾರೊ ಕಾಣೆ? 'ಫುಟ್‌ಪಾತುಗಳು' ನರಕ ಪಥಗಳೆಂಬುದು ಕಾಲು ಬಳಸುವವರಿಗೆ

ಮಾತ್ರ ಗೊತ್ತು. ಇಂಥ ಹಲವು ಕವಿತೆಗಳಲ್ಲಿ ವಾಸ್ತವತೆಯೇ ಹರಳುಗಟ್ಟಿದಂತಿದೆ.

'ಕುರಿಗಳು, ಸಾರ್ ಕುರಿಗಳು' ಎಂಬ ಕವಿತೆಯಲ್ಲಿ, ಅದು ನಿಸಾರ್ ಅವರ ಅನನ್ಯ ವಿಡಂಬನೆಯೆಂದು ಮುದ್ರೆಯೊತ್ತುವಷ್ಟರ ಮಟ್ಟಿಗೆ ಅದರ ವೈಭವ ಪರಾಕಾಷ್ಠೆಯನ್ನು ಮುಟ್ಟಿದೆ; ಮಾತಿನ ಮೋಡಿಯೂ ಮುಗಿಲು ಮುಟ್ಟಿದೆ. ಭರತಖಂಡದ ರಾಜಕಾರಣಿಗಳ ಅಟ್ಟಹಾಸವನ್ನು, ಕ್ರೌರ್ಯವನ್ನು, ಶೋಷಕ ಪ್ರವೃತ್ತಿಯನ್ನು, ಅಂತೆಯೇ ಜನತೆಯ ಹಾಸ್ಯವನ್ನು, ಕೀಳರಿಮೆಯನ್ನು, ಬೆಪ್ಪುತನವನ್ನು ಇಷ್ಟೊಂದು ಉಗ್ರವಾಗಿ, ಮಾರ್ಮಿಕವಾಗಿ, ಗಂಭೀರವಾಗಿ ವ್ಯಂಗ್ಯವಾಡಿರುವ ಕವಿಗಳೇ ಅಪರೂಪ. ನಾಡಿನ ಇಂದಿನ ಅಸ್ವಸ್ಥ ದುಃಸ್ಥಿತಿಗೆ, ಅವಹೇಳನಕರ ವಾದ ಅಪಮಾನಕ್ಕೆ, ಸ್ವಾರ್ಥಪರ ದುರ್ಜನರ ದೌರಾತ್ಮ್ಯಕ್ಕೆ; ತಲೆಯಲ್ಲಿ ಮೆದುಳಿಲ್ಲದ, ಮೈಯಲ್ಲಿ ಕಸುವಿಲ್ಲದ, ನಡೆವೆಣಗಳಂತಿರುವ ಮುಗ್ಧ ಜನರ ಅನಾಥ ಸ್ಥಿತಿಗೆ ಇದು ಕನ್ನಡಿ ಹಿಡಿಯುತ್ತದೆ. 'ನಾವು ನೀವು' ಎಂಬ ಉತ್ತಮ, ಮಧ್ಯಮ ಪುರುಷ ಪ್ರಯೋಗವೂ 'ಸಾರ್' ಎಂಬ ಪರ ಭಾಷೆಯ ಸಂಬೋಧನಾತ್ಮಕ ಪದವೂ ವಿಡಂಬನೆಯ ಪ್ರಖರತೆಯ ದೃಷ್ಟಿಯಿಂದ ಉಚಿತವಾಗಿದೆ. ಸಾಮಾನ್ಯ ಮುಗ್ಧ ಜನರನ್ನು ಕುರಿ ಮಂದೆಗೂ ಶೋಷಕರನ್ನು ಕುರುಬರಿಗೂ ಹೋಲಿಸುವಲ್ಲಿಯೂ ವ್ಯಂಗ್ಯ ಸಾಂಗವಾಗುತ್ತದೆ, ಸಾಂಕೇತಿಕ ಸಾಂಗತ್ಯವನ್ನು ಪಡೆಯುತ್ತದೆ:

'ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,
ಕುರಿಗಳು, ಸಾರ್ ಕುರಿಗಳು.' (ಕುರಿಗಳು, ಸಾರ್, ಕುರಿಗಳು)

ಕವಿಯ ಎಕ್ಸ್‌ರೆ ಸ್ವರೂಪದ ತೀಕ್ಷ್ಣ ವೀಕ್ಷಣ ಸಾಮರ್ಥ್ಯವೂ ಸೂಕ್ಷ್ಮ ತಲಸ್ಪರ್ಶಿ ಲೋಕ ವ್ಯವಹಾರ ಜ್ಞಾನವೂ ಇಲ್ಲಿ ಚಿತ್ರವತ್ತಾಗಿ, ರಂಗುರಂಗಾಗಿ, ಯಥಾವತ್ತಾಗಿ ಸುಳಿ ಸುಳಿಯಾಗಿ ಬಿಚ್ಚಿಕೊಳ್ಳುತ್ತದೆ :

'ನಮ್ಮ ಕಾಯ್ವ ಕುರುಬರು:
ಪುಟಗೋಸಿಯ ಮೊನ್ನೆ ತಾನೆ ಕಿತ್ತು ಪಂಚೆಯುಟ್ಟವರು,
ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟನು ಒತ್ತುವವರು,
ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬನನ್ನ
ಮೆಚ್ಚಿ, ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ
ಕಿಸೆಗೆ ಹಸಿರು ನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು.' (ಅದೇ)

ನಮ್ಮ ನಾಯಕರ ಮೂಲ, ಚೂಲ, ಚರ್ಯೆ, ಚರಿತೆ, ಚರಬಿ, ಚದುರು, ಹದಿರುಗಳನ್ನೊಳಗೊಂಡ ರಾಜಕೀಯ ಸಂಸ್ಕೃತಿ; ನಮ್ಮ ದೇಶಕ್ಕೆ ವಿಶಿಷ್ಟವಾದ ವ್ಯಾವಹಾರಿಕ ನಾಗರಿಕತೆ ಮಾಲೆಮಾಲೆಯಾಗಿ ಸಚಿತ್ರವಾಗಿ ರೆಕ್ಕೆ ಬಿಚ್ಚಿಕೊಳ್ಳುತ್ತದೆ. ಓದುಗರ ಕಲ್ಪನೆಯ ಮೊಗ್ಗನ್ನು ಅರಳಿಸುತ್ತದೆ. ನಾಡಿನ ಸದ್ಯದ ಸ್ಥಿತಿಗತಿಗಳನ್ನು ಕನ್ನಡಿಸುತ್ತದೆ. ಝುಳಪು

ಹೊಳಪುಗಳುಳ್ಳ ಈ ಅಭಿಜಾತ ಕವಿತೆ ಬಹುಜನಪ್ರಿಯವಾಗಿದೆಯೆಂದರೆ, ಜನ ಮನಸ್ಸಿನ ಮೇಲೆ ಜಾದುಗಾರಿಕೆಯನ್ನು ನಡೆಸಿದೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. 'ಕವಿಗೆ ಪದ ಪ್ರಯೋಗ ಕುಶಲತೆ, ವ್ಯುತ್ಪತ್ತಿ, ಸೌಂದರ್ಯ ಗ್ರಹಣ ಸಾಮರ್ಥ್ಯ, ಮೋಹಕ ಮಾತುಗಾರಿಕೆ, ಛಂದಃಪ್ರಜ್ಞೆ, ಅನನ್ಯ ವಿಭಾವನಾ ಸಂಪತ್ತು ಸಮನ್ವಿತವಾಗಿರಬೇಕು' ಎಂಬ ನಿಸಾರರ ಕಾವ್ಯ ಚಿಂತನೆಗೆ ಈ ಕವಿತೆ ಉತ್ತಮ ನಿದರ್ಶನವಾಗಿದೆ.

ಕವಿ ನಿಸಾರರ ದೇಶಪ್ರೇಮ ಮತ್ತು ಭಾಷಾಪ್ರೇಮಗಳು ಅಸೀಮ ಹಾಗೂ ಅನವದ್ಯ. ಮಹಿಮವಂತೆ ಭಾರತಿಯ ಬಸಿರಲ್ಲಿ ಬಂದದ್ದೇ ಪುಣ್ಯವೆಂದು ಅವರು ಹಿಗ್ಗುತ್ತಾರೆ. ಭೌಗೋಳಿಕ ಸಂಪತ್ತಿನ ಮಧ್ಯೆಯೂ ಅವಳು ಅನಂತೆಯಾಗಿದ್ದಾಳೆ. ಆಕೆ 'ಪುನಃ ಪುನರ್ಜಾಯಮಾನೆ, ನಿತ್ಯೆ, ಪುರಾಣಿ; ನವ್ಯ ಜೀವಜಾತರಾತ್ಮೆ, ಆರ್ಷೇಯ ವಾಣಿ; ಗತೇತಿಹಾಸ ಸಾಹಸ ಯಶ ಸಂಕೀರ್ತಿತ ರಾಣಿ, ಯೋಗ ಭೋಗ ಸಮನ್ವಯದಿ ಸಂಗಮಿಸಿದ ವೇಣಿ.'

ಸಾಮರಸ್ಯ, ಸಮನ್ವಯ, ಸೌಹಾರ್ದಗಳ ಸಾಕಾರಗಳಾದ ದೇಶ ದೇವಿಗೆ,

'ಗುಡಿ ಮಸೀದಿ ಚರ್ಚು ಗುರುದ್ವಾರ ಸಮಾರಾಧನ;
ಸದಯೆ, ಅಭಯದಾಯೆ, ನಿನ್ನ ಸಹಿಷ್ಣುತೆಯ ಲಾಂಛನ.'

ಮತ ಮೌಢ್ಯದ ಕಗ್ಗತ್ತಲಲ್ಲಿ ಒದ್ದಾಡುತ್ತಿರುವ ಬೆಪ್ಪರು ಈ ಕವಿಯ ವಾಣಿಗೆ ಕಿವಿಗೊಡಬೇಕು; ಮನಗೊಡಬೇಕು. ನಿಜವಾದ ದೇಶಪ್ರೇಮಿಯ ಕರ್ತವ್ಯನಿಷ್ಠೆಗೆ ಜಾತಿ ಮತಗಳು ಅಡ್ಡ ಬರಲಾರವು. 'ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ' ಎಂದು ನಿಸಾರರು ಕೊರಗುತ್ತಾರೆ. ನೋವು ನಗೆ, ಸಿರಿತನ ಬಡತನ, ಸ್ವಹಿತ ಪರಹಿತ—ಇವೇ ಮೊದಲಾದ ಹಲವು ದ್ವಂದ್ವಗಳಿಂದ ತಾಯಿಯೆದೆ ಬೆಂದಿದ್ದರೂ 'ನಿನ್ನೊಲವ ತೈಲ ನನ್ನೆದೆಯೊಳಿರಲಿ, ಬೆಳಗಿರಲಿ ಬಾಳ ಬತ್ತಿ' ('ನಾಡ ದೇವಿ') ಎಂದು ಅವರು ಕಾತರಿಸುತ್ತಾರೆ.

ಅವರ ಜನ್ಮ ಭಾಷೆ ಹಾಗೂ ಮನೆ ಮಾತು ಉರ್ದುವಾದರೂ ಕನ್ನಡವನ್ನು ಮಾತೃಭಾಷೆಯೆಂದೇ ಪ್ರೀತಿಸುತ್ತಾರೆ, ಗೌರವಿಸುತ್ತಾರೆ, ಆರಾಧಿಸುತ್ತಾರೆ; ಆದ್ದರಿಂದಲೇ ಕನ್ನಡ ಶ್ರೀ ಕಾವ್ಯಶ್ರೀಗಳೆರಡೂ ಅವರಿಗೆ ಒಲಿದಿವೆ, ವಶವಾಗಿವೆ. ಕನ್ನಡಕ್ಕೆ ಎಡವಟ್ಟಾದಾಗ, ಬಿಕ್ಕಟ್ಟೊದಗಿದಾದ ಅವರು ತಹತಹಿಸುತ್ತಾರೆ, ಉದ್ವೇಗಗೊಳ್ಳುತ್ತಾರೆ. 'ಪರಭಾಷಾ ಜನರ ನಡುವೆ ಪ್ರಾಗ್ವೈಭವ ರತ್ನದೊಡವೆಯನ್ನು ಕಳೆದುಕೊಂಡು ಬಡವೆಯಾದ ಅವಿನಾಶಿ ಅನಶ್ವರಿ, ಕರ್ನಾಟಕ ಅಧೀಶ್ವರಿ'ಯ ಬಗೆಗಿನ ಅವರ ಅಭಿಮಾನ ಅಪಾರ. ರಾಷ್ಟ್ರಭಾಷೆ, ವಿಶ್ವ ಭಾಷೆಯ ಔದ್ಧತ್ಯದಿಂದ ಕನ್ನಡಕ್ಕೆ ಕುತ್ತೊದಗಿದೆಯೆಂದು, ಕನ್ನಡ ತಾಯಿಯ ಔದಾರ್ಯವೇ ಅವಳಿಗೆ ಪಾಶವಾಗಿದೆಯೆಂದು ಅವರು ಚಡಪಡಿಸುತ್ತಾರೆ. 'ಎಲ್ಲ ಪಾಡು ಕೇಡುಗಳು ಮುಗಿದು, ಮತ್ತೆ ಎಂದು ಮೆರೆಯುವೆ ತಾಯಿ?' ಎಂದು ಹಂಬಲಿಸುತ್ತಾರೆ.

ಆ ಹಂಬಲದಲ್ಲಿ ಶ್ರದ್ಧೆಯಿದೆ, ಪ್ರಾಮಾಣಿಕತೆಯಿದೆ, ಭಾವುಕತೆಯೂ ಇದೆ. ರಾಜ್ಯೋತ್ಸವದ ಸ್ವರೂಪ ಸತ್ಯೋದ್ದೇಶಗಳನ್ನು ಕಳೆದುಕೊಂಡಿದೆ ಎಂಬ ಅವರ ಸಾತ್ವಿಕ

ಕ್ರೋಧ, ವ್ಯಗ್ರತೆಗಳು ಸಹಜವೇ. ಅದೀಗ ಪೀಡೋತ್ಸವವೋ, ಚೈತ್ರೋತ್ಸವವೋ, ಕಮಾವಣೋತ್ಸವವೋ, ಬೂಟಾಟಿಕೆಯೋ ಆಗಿದೆ ಎಂಬುದಂತು ಸತ್ಯ. ಗಂಟುಗಳ್ಳರಿಗೆ, ಸ್ವಾರ್ಥಪರರಿಗೆ, ಪ್ರದರ್ಶನೋತ್ಸವ ಪ್ರಿಯರಿಗೆ ಅದೊಂದು ನಿಮಿತ್ತೋತ್ಸವವಾಗಿದೆಯೇ ಹೊರತು ಅದರಿಂದ ನಾಡುನುಡಿಗಳಿಗೆ ಸಂಬಂಧಿಸಿದ ಯಾವೊಂದು ಸಮಸ್ಯೆಯೂ ಬಗೆಹರಿದಿಲ್ಲವೆಂಬುದು ದಿಟ. ನಿಸಾರರು 'ಮಳೆಗಾಲದ ಕಪ್ಪೆಯಂತೆ ರಾಜ್ಯೋತ್ಸವ ಸದ್ದು ಸಂತೆ'ಯೆಂದು ಸತ್ಯವನ್ನೇ ನುಡಿದಿದ್ದಾರೆ.

> **'ಗಾಢನಿದ್ದೆಯೊಳೆಮ್ಮ ಕಣ್ತೆರೆದು ಕೂತವನು**
> **ಮರು ಗಳಿಗೆ ಮುಸುಕೆಳೆದು ಮಲಗಿದಂತೆ**
> **ಇಂದಿನುತ್ಸವ, ಹಬ್ಬ, ಸಡಗರದ ಸಂತೆ'**
> **(ರಾಜ್ಯೋತ್ಸವ)**

ಎಂದು ಕವಿ ಹಾಸ್ಯ ಮಾಡಿದ್ದಾರೆ. ಅದೇನೇ ಆಗಿರಲಿ, ರಾಜ್ಯೋತ್ಸವ ಕನ್ನಡಿಗರನ್ನು ಒಂದು ಮಾಡುವ ಹಬ್ಬವಾಗಿದೆಯೆ? ಕನ್ನಡದ ದಿಟದ ಹಬ್ಬವಾಗಿದೆಯೆ? ವಿಧಾನಸೌಧದಲ್ಲಿ ಅದು ಸಿಂಹಾಸನಸ್ಥವಾಗಿದೆಯೆ? ರಾಷ್ಟ್ರ ಹಾಗೂ ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಅದಕ್ಕೆ ಮನ್ನಣೆ ದೊರೆತಿದೆಯೆ? ವಿಧಾನಸೌಧದ ಕಣಕಣಗಳಲ್ಲಿ ವಿರಾಜಮಾನವಾಗುವ ತನಕ, ಅದಕ್ಕೆ ಅಂತರ್ರಾಷ್ಟ್ರೀಯ ಖ್ಯಾತಿ ದೊರಕುವುದಿಲ್ಲವೆಂಬುದನ್ನು ಅಲ್ಲಿಯ ಭೂತಪ್ರೇತಾಧಿ ದೇವತೆಗಳು ಅರಿಯಬೇಕು.

ಹಾಗಾದಾಗ ಮಾತ್ರ ಕನ್ನಡ ತಾಯಿಗೆ 'ನಿತ್ಯೋತ್ಸವ'ವಾಗುತ್ತದೆ. ಯುಗಾದಿ ಎಂದೋ ಒಂದು ದಿನ ಬಂದು ವಿಸ್ಮೃತಿಯ ಗರ್ಭದಲ್ಲಿ ಹೂತುಹೋಗುವ ಹಬ್ಬವಾಗದೆ, ದಿನದಿನವೂ ಅರುಣೋದಯದೊಡನೆ ಅವತರಿಸುವುದಾದರೆ, ಬದುಕಿನ ಒಂದು ಭಾಗ ವಾಗುವುದಾದರೆ ಅದು ಸಾರ್ಥಕವಾಗುತ್ತದೆ. ಅಂತೆಯೇ ರಾಜ್ಯೋತ್ಸವ ನಿತ್ಯೋತ್ಸವವಾದಾಗ ಕನ್ನಡಕ್ಕೆ ಕನ್ನಡ ನಾಡಿಗೆ ಶ್ರೇಯಸ್ಸಾಗುತ್ತದೆ. ಏಕೀಕರಣವಾಗಲಿ ಆಗದಿರಲಿ, ರಾಜ್ಯೋತ್ಸವ ನಡೆಯಲಿ ನಡೆಯದಿರಲಿ, ಅನಾದಿ ಕಾಲದಿಂದ ಅಂತ್ಯವಿಲ್ಲದ ನಿತ್ಯೋತ್ಸವ ಈ ನಾಡಿನಲ್ಲಿ ನಡೆಯುತ್ತಿದೆ ಎನ್ನುವ ಕವಿ ಕಲ್ಪನೆ ಹುಸಿಯಲ್ಲ :

> **'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ,**
> **ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ,**
> **ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ**
> **ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ.' (ನಿತ್ಯೋತ್ಸವ)**

—ಕವಿ ಹೇಗೆ ಈ ನಾಡಿನ ನಿತ್ಯ ಜೀವನದಲ್ಲಿ ಒಂದಾಗಿದ್ದಾರೆಂಬುದು ಈ ಕವಿತೆಯಿಂದ ವ್ಯಕ್ತವಾಗುತ್ತದೆ.

ವಿದ್ಯುದ್ವೇಗದಲ್ಲಿ ಚಲಿಸುತ್ತಿರುವ ವೈಜ್ಞಾನಿಕ ಯುಗದ ಜಗತ್ತಿನಲ್ಲಿ ನಿತ್ಯಪರಿವರ್ತನ ಶೀಲೆಯಾದ ನಿಸರ್ಗದಲ್ಲಿ, ಸ್ವಯಂಚಾಲಿತ ಚಕ್ರರೀತಿಯಲ್ಲಿ ಸುತ್ತುತ್ತಿರುವ ಜೀವನದಲ್ಲಿ ವಸ್ತುವಿಗೆ ಕೊರತೆಯಿಲ್ಲ. ನಿಸಾರ್‌ರ ಕಾವ್ಯರಾಶಿಯಲ್ಲಿ ವಸ್ತುವೈವಿಧ್ಯವಿದೆ; ಆಲೋಚನಾ

ಖನಿಯಿದೆ, ಅನುಭವ ಸಂಪತ್ತಿದೆ. ಲೋಕಾನುಭವವನ್ನು ಬುದ್ಧಿಯ ಮೂಷೆಯಲ್ಲಿ ಕರಗಿಸಿ, ಭಾವ ಗಂಗೆಯಲ್ಲಿ ಮೀಯಿಸಿ, ಕಲಾನುಭವವನ್ನಾಗಿ ಮಾರ್ಪಡಿಸುವ ಶಕ್ತಿ ನೈಪುಣ್ಯವೂ ಅವರಿಗಿದೆ. 'ಹೃದಯ ರಸದಲ್ಲಿ ಬುದ್ಧಿ ಪಲ್ಲವಿಸುವ ಒಂದು ಬಗೆಯನ್ನಿಲ್ಲಿ ಕಂಡೆ'ನೆಂಬ ಹಿರಿಯ ಕವಿ ಪು.ತಿ.ನ. ಅವರ ದಿಟದ ನುಡಿಯೂ ಇದೆ. ಕೆಲವೊಮ್ಮೆ ಕಠೋರ ವಾಸ್ತವತೆಗೆ ಶರಣಾಗಿ, ಭಾವದ ಹೊಕ್ಕನ್ನು ಮರೆತು, ಬುದ್ಧಿಯ ಹಾಸನ್ನೇ ನೆಮ್ಮಿ ಹೆಣೆದ ವಸ್ತ್ರದಂತೆ, ಉಪ್ಪಿಲ್ಲದ ಸಾರಿನಂತೆ ಕವಿತೆ ಶುಷ್ಕವಾಗುವುದೂ ಉಂಟು. ಅಂಥ ಕಡೆ ನವ್ಯತೆಯ ಬೆಡಗೊ, ವಾಸ್ತವತೆಯ ಬೆರಗೊ ಅವರನ್ನೂ ಓದುಗರನ್ನೂ ಕಾಡುವಂತೆ ಕಾಣುತ್ತದೆ. ಆದರೆ ಅವರ ಬಕ್ಕಣದಲ್ಲಿರುವ ಉಪಮೆ ರೂಪಕ ಪ್ರತಿಮೆಗಳಿಗೆ ಲೆಕ್ಕವಿಲ್ಲ. ಲೆಕ್ಕಣಿಕೆಯ ಮೊನೆಯಲ್ಲಿ ಅವು ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುವಂತೆ ತೋರುತ್ತದೆ. 'ಒಬ್ಬ ಲೇಖಕನ ನಿಡಿದಾದ ಸಾಹಿತ್ಯ ಕೃಷಿಯಲ್ಲಿ ಬರೀ ತೆಂಗಿನ ತೋಟಗಳನ್ನೇ ನಿರೀಕ್ಷಿಸುವುದು ಸಾಧುವಾಗದು' ('ಸಮಗ್ರ ಕವಿತೆಗಳು' ಮುನ್ನುಡಿ) ಎಂಬ ಅವರ ಮಾತನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ದೀಪಗಳನ್ನು 'ಕುರುಡು ತಮವ ಕೊರೆಯುವಂಥ ಬಾಣ ಬಿಟ್ಟ ಚಾಪಗಳೆ', 'ಕನಸಿನ ಗೊನೆ, ಮಿಂಚಿನ ತೆನೆ, ಕಂಚಿನ ಬಿಳಿ ದನಿಗಳೆ', 'ಹೂವು ಗರಿಯ ಹುಡಿಗಳೆ', 'ಕಿಡಿಯ ತೊದಲು ನುಡಿಗಳೆ, ಬೆಳ್ದಿಂಗಳ ಮರಿಗಳೆ' ಎಂದು ಕವಿ ಕರೆಯುತ್ತಾರೆ. 'ಮನಸು ರೇಸಿನ ಕುದುರೆಯೆಂದು, ಗಾಂಧಿ ಬಜಾರೆಂ'ದು ಸೊಲ್ಲುತ್ತಾರೆ. ಜೋಗದ ಜಲದ ಗಲಭೆಯಲ್ಲಿ ಮೂಡಿ ಮುಳುಗಿ ಆಡುತ್ತಿರುವ ಹತ್ತು ಜಾತಿಯ ಹಕ್ಕಿಗಳನ್ನು ಮೊದಲ ಕ್ಲಾಸಿನ ಮಗುವಿನ ಅಂಕಿ ಬರಹದೊಡನೆ ಹೋಲಿಸುತ್ತಾರೆ. 'ಇರುಳು' ('ಬಹಿರಂತರ') ಕವಿತೆ ಉಪಮೆಗಳ ತಾರಾಮಂಡಲವಾಗಿದೆ: 'ಇರುಳು ಕಪಿಲೆಯ ಹಾಲು ಕರೆದಿದೆ ಋತು ಶರತ್ ಪರಿಚಾರಿಕೆ: ಕ್ಷೀರ ಪಥ ಕೊಡ ತುಳುಕಿ ಚಿಮ್ಮಿದ ಹನಿಗಳಾಗಿವೆ ತಾರಕೆ'. ನಿಸರ್ಗ ಸೌಂದರ್ಯವೇ ಈ ಕವಿತೆಯಲ್ಲಿ ಮೈವೆತ್ತಿದಂತಿದೆ. 'ಬದುಕು ಹೂವಿನ ಹಾಸು, ಪಂಜರದ ಬಾಗಿಲನು ತೆರೆದಿದ್ದರೆ' ('ಪಂಜರದ ಗಿಣಿ'). 'ಸ್ವಾರ್ಥಸೂರ್ಯಾತಪಕೆ ಹಿರಿಯಾದರ್ಶಜಲ ಆವಿ' ('ವರ್ತಮಾನ ಭಾರತ'). ವಿನೂತನವೂ ಸಮುಚಿತವೂ ಕೌತುಕಮಯವೂ ಭಾವಸಿಕ್ತವೂ ಅರ್ಥದೀಪ್ತವೂ ಆದ ಉಪಮಾರೂಪಕಾದಿ ಸೌಂದರ್ಯಸಂಪತ್ತು ನಿಸಾರ್ ಅಹಮದ್ ಅವರ ಸುಂದರ ಸುಸ್ನಿಗ್ಧ ಶೈಲಿಯ ಲಕ್ಷಣಗಳಾಗಿವೆ. ಗಾದೆಯಂಥ ಪದಗುಂಫನ; ಮೋಡಿ ಹಾಕಿದಂತಿರುವ, ಬುದ್ಧಿಭಾವಗಳ ರಸಪಾಕದಂತಿರುವ ನುಡಿಮುತ್ತಿನ ಹಾರಗಳು ಅವರು ಕನ್ನಡಕ್ಕೆ ನೀಡಿರುವ ವಿಶಿಷ್ಟ ಕಾಣಿಕೆಗಳು—'ನೆತ್ತರು ತೊಳೆವುದೆ ನೆತ್ತರನು?', 'ಹರಿಸುತ್ತೀರಿ ಹೆಗ್ಗಂಟಲಿನನಲ್ಲಿ', 'ಬೀದಿಗೂ ಪೊರಕೆಗೂ ಮೊಖಾಬಿಲೆಯಾಗಿ ಎಷ್ಟು ದಿನವೊ?'. 'ಕಂಡ ಕಂಡ ಕಡೆ ಸ್ತನಿತೆಯರನು ಕಣ್ಣಿಂಜಲುಗೊಳಿಸುವ ಹಿಂಡುಗಳು', 'ನಿನ್ನ ಮಾತನ್ನಗೆದು ನೋಡಲೇನೆ?', 'ಕಣ್ಣು ಆಸೆಯ ಬೊಗಸೆ'—ಹೀಗೆಯೇ ಮಹಾ ಪ್ರಬಂಧವೊಂದಕ್ಕೆ ವಸ್ತುವಾಗುವ ಇವನ್ನು ಪುಟಗಟ್ಟಲೆ ಲಂಬಿಸಬಹುದು. ಇಂಥ ಭಾಷಾ ಪ್ರಯೋಗಗಳು ಅವರ ಭಾವಾಲೋಚನೆಗಳ ಸುಲಭ ಸಹಜ ಅಭಿವ್ಯಕ್ತಿ ಮಾಧ್ಯಮಗಳೆಂದು ಹೇಳಬಹುದು.

ಕವಿ ನಿಸಾರರ ಭಾಷಾ ಶೈಲಿಯಲ್ಲಿ ವೈಶಿಷ್ಟ್ಯವಿದೆ, ವಿನೂತನತೆ ಇದೆ, ವೈಚಿತ್ರ್ಯವೂ

ಇದೆ. ಕೆಲವೊಮ್ಮೆ ಮಾತನಾಡುವಂತೆ, ಆಪ್ತತ್ವ ಮೊಗದೋರುವಂತೆ ಬರೆಯುತ್ತಾರೆ, ನಿಜ. ಸಂಸ್ಕೃತ ಪದಗಳ ದುಂದಿಲ್ಲ; ಅವು ಕಡಮೆ ಎಂದರೆ ಕಡಮೆ. ಅವು ಕನ್ನಡ ಪದಗಳೊಡನೆ ಹಾಸು ಹೊಕ್ಕಾಗಿ ಬರುತ್ತವೆ. ಕನ್ನಡ ಪದಗಳಿಗೆ ಹೊಸ ಭಾವಾರ್ಥಗಳನ್ನು ತುಂಬುತ್ತಾರೆ. ಕನ್ನಡ ಮಾತುಗಳನ್ನು ಬಿಲ್ಲಿನಂತೆ ಬಗ್ಗಿಸುವ, ಮೇಣದಂತೆ ರೂಪಿಸುವ, ಅಂಬಿನಂತೆ ನಾಟುವ, ಮೊಗ್ಗಿನಂತೆ ಅರಳಿಸುವ, ಮದ್ದಿನಂತೆ ಸಿಡಿಸುವ, ಬಲೂನಿನಂತೆ ಹಿಗ್ಗಿಸುವ ಸಾಮರ್ಥ್ಯ ಅವರಿಗಿದೆ. ರೇಸಿನ ಕುದುರೆಯಂತೆ ಭಾಷೆಯನ್ನು ಆಡಿಸಬಲ್ಲರು. ಪದಗಳ ಅಡೆಯಲ್ಲಿ ಕಾವು ಕೂತಿರುವ ವಿಡಂಬನೆಯನ್ನು, ಹಾಸ್ಯವನ್ನು ಬಗೆಯ ಜಾಣ್ಮೆಯಿಂದ ಅಗೆದು ಬಗೆದು ಅರಿತು ಓದುಗ ಖುಷಿಪಡುತ್ತಾನೆಂಬುದರಲ್ಲಿ ಸಂಶಯವಿಲ್ಲ. ಹೊಸ ಪದಗಳನ್ನು ಟಂಕಿಸುವಲ್ಲಿ, ಅವುಗಳಿಗೆ ನೂತನ ಚೈತನ್ಯವನ್ನು ತುಂಬುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ವ್ಯಾಕರಣ ನಿಯಮಗಳನ್ನು ಉಲ್ಲಂಘಿಸಿದರೂ ಓದುಗನ ಶ್ರಮ ಪರಿಶ್ರಮವನ್ನು ಅಪೇಕ್ಷಿಸದ 'ಮಾತಿಗ'. 'ಕಂತ್ರಾಟಿಗ'. 'ಕರ್ತವ್ಯಗೇಡಿ'. 'ಸ್ತನಿತೆ'. 'ಭಾವಾಡಿಗ'. 'ಶರೀರಿಸಿಕೊಳ್ಳುವಂತೆ', 'ಸೈಕಲಿಗ', 'ಕುಚಾಯಿಸು'. 'ಮೈ ಕೆಸರಿಸಿಕೊಂಡು'. 'ವಸಂತಿಸು', 'ಸೀರಿಯಸ್ ಧ್ವಾನಿ'—ಇವೇ ಮೊದಲಾದ ಪದಗಳು, ಪದಗುಚ್ಛಗಳು ಎದುರಾದಾಗ, ಕವಿಯ ಸೃಜನಶೀಲ ಸಾಮರ್ಥ್ಯವನ್ನು ಮೆಚ್ಚುವಂತಾದರೂ ಆಸ್ಥಾನ ವಿದ್ವಾಂಸರ ಪಂಡಿತತನ ಕಣೆಗೆದರುತ್ತದೆ. ಸಾಮಾನ್ಯವಾಗಿ ಪಂಡಿತರಿಗೆ ಸವಾಲಿಗೆಯೇ ಭಾಷೆ ಬೆಳೆಯಬೇಕಾಗುತ್ತದೆ.

ಅಷ್ಟೇ ಅಲ್ಲ, ಭಾಷೆ ಗತಿಶೀಲವಾಗಬೇಕಾದರೆ, ಪ್ರಬುದ್ಧವಾಗಬೇಕಾದರೆ ಹೊಸ ಯುಗದ, ಯುಗ ಧರ್ಮದ ಆವಶ್ಯಕತೆಗಳಿಗೆ ತಕ್ಕಂತೆ ಪದಗಳನ್ನು ಎರಕ ಹೊಯ್ಯಬೇಕಾಗುತ್ತದೆ. ಇಲ್ಲವೇ ಸಂಪರ್ಕ ಭಾಷೆಯೊಡನೆ ಮಧುಪರ್ಕವನ್ನು ಆಚರಿಸಬೇಕಾಗುತ್ತದೆ. ಆದರೆ ನಮ್ಮ ಭಾಷೆಯ ಜಾಯಮಾನವನ್ನೇ ನಿರ್ನಾಮಿಸುವಂಥ, ಒಕ್ಕಲೆಬ್ಬಿಸುವಂಥ ರೀತಿಯಲ್ಲಿ ಅನ್ಯ ಭಾಷಾ ಪದಗಳು ಸಂದಣಿಸದಂತೆ ಕವಿ ಜಾಗರೂಕನಾಗಿರಬೇಕು. ನಿಸಾರರು ಕೆಲವು ಕಡೆ ಕನ್ನಡಾಂಗ್ಲ ಎನ್ನುವಷ್ಟರಮಟ್ಟಿಗೆ ಆಂಗ್ಲಪದಗಳನ್ನು ದುಂದಾಗಿ ಬಳಸುತ್ತಾರೆ. ಶ್ರೀಸಾಮಾನ್ಯರು ಇಂಗ್ಲಿಷ್ ಪದಗಳನ್ನು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಬಳಸುತ್ತಾರೆ ನಿಜ. ತಮ್ಮ ಭಾಷೆಯೊಂದಿಗೆ ಒಗ್ಗಿಕೊಳ್ಳುವ ರೀತಿಯಲ್ಲಿ ಅವನ್ನು ಬಳಸುತ್ತಾರೆಂಬುದನ್ನು ಮರೆಯಬಾರದು. ಅವರ ಭಾಷೆಯಲ್ಲಿ ಹಿಯರಿಂಗ್ ಇರಂಗಾಗುತ್ತದೆ. ಜಡ್ಜ್‌ಮೆಂಟ್ ಜಜ್‌ಮೆಂಟ್ ಆಗುತ್ತದೆ, ಬೈಸಿಕಲ್ ಬೀಸೆಕಲ್ಲಾಗುತ್ತದೆ: ಬಸ್ಸು, ರೈಲು, ಬುಕ್ಕು, ಬೆಂಚು, ಬೇಂಕು, ಬಾಂಬು ಮೊದಲಾದ ಪದಗಳು ಅಲ್ಪಸ್ವಲ್ಪ ಮೂಲ ಸ್ವರೂಪಗಳನ್ನು ಬದಲಿಸಿ ಕೊಂಡು ತಮ್ಮ ಭಾಷೆಯ ಧ್ವನಿತತ್ವ ವನ್ನು ಅಪ್ಪಿ ಒಪ್ಪಿಕೊಳ್ಳುವುದರಿಂದ ಅವು ಕನ್ನಡ ಪದಗಳೇ ಆಗಿವೆ. ನಿತ್ಯಬಳಕೆಯ ಇಂಗ್ಲೀಷ್ ಪದಗಳನ್ನು (ಕೈಲಾಸಂ ಕನ್ನಡವನ್ನು) ಬಳಸ ಬಾರದೆಂದಲ್ಲ. ಪದ ಮೈತ್ರಿ, ಪದಶಯ್ಯೆಯ ಜೊತೆಗೆ ಭಾಷೆಯ ವ್ಯಕ್ತಿತ್ವವನ್ನು ಕಾಪಾಡಿ ಕೊಳ್ಳಬೇಕಾಗುತ್ತದೆ. ಮೆಟರ್ನಿಟಿ ವಾರ್ಡ್, ಮೈನಾರಿಟಿ, ಸೀರಿಯಸ್‌ನೆಸ್, ಈಸ್ಟ್‌ವೆಸ್ಟ್, ಕಾಂಪ್ಲಿಮೆಂಟರಿ, ನೈಟ್‌ಕ್ಲಬ್ಬು, ಅಬೊರಿಜಿನಲ್, ಟೈಧಾರಿ, ಹೈಹೀಲ್ಸು, ಏರ್‌ಕಂಡಿಶನ್ಡ್, ಪಿಂಪಿಸಿ ಬಿಡು, ಆರ್ಗನ್ನಿಸಿಬಿಡುವ, ಸೈಲೆನ್ಸರ್, ಬೆಡ್‌ಶೀಟ್, ಕಾಲಿಂಗ್‌ಬೆಲ್, ಕೌಂಟರು,

ಬ್ಯಾಂಕ್ ಬ್ಯಾಲೆನ್ಸು, ಸ್ಲೋಗನ್ನಿಗೆ—ಇಂಥ ನೂರಾರು ಪದಗಳು ನನ್ನಂಥವನ ಕಿವಿಗೆ ಹಿಡಿಸಲಾರವು. `ಎಕ್ಸಿಬಿಷನ್ನಿನ ಮೆರಿಗೋರೌಂಡಿನ ಐಸ್‌ಕ್ಯಾಂಡಿ / ಸೆಕ್ಸಿ ಕುಷನ್ನಿನ ಬ್ಯಾಂಗೋ ಸೌಂಡಿನ ಮಿಸ್ ಸ್ಯಾಂಡಿ`—ಇಂಥ ವಾಕ್ಯಗಳಿಂದ ಏನಾದರೂ ಪುರುಷಾರ್ಥ ವುಂಟೆ? ಹೀಗೆ ಓದುಗರು ತಿಣುಕಬೇಕಾದ ಸಂದರ್ಭಗಳು ಸವಾಲಾಗುತ್ತವೆ; ವ್ಯಾಖ್ಯಾನ ವನ್ನು ಅಪೇಕ್ಷಿಸುತ್ತವೆ. ದೀರ್ಘಕಾಲದ ಸಾಹಚರ್ಯ ದಿಂದಲೋ ಏನೋ ಉರ್ದು-ಅರೇಬಿಕ್ ಪದಗಳು—ಅಲಾಬಿ, ಫಸಲು, ಕಛೇರಿ, ನಮಾಜು, ಖಿಲ್ಲತ್ತು, ಬಿರಿಯಾನಿ, ಬಿಲ್‌ಕುಲ್— ಮೊದಲಾದವುಗಳು ಇಂಗ್ಲಿಷ್‌ಗಿಂತ ಕನ್ನಡದೊಡನೆ ಚೆನ್ನಾಗಿ ಹೊಂದಿಕೊಳ್ಳುತ್ತವೆ.

ಇಂಥ ಸಂದರ್ಭಗಳು ಕೆಲವೇ ಕೆಲವು. ನಿಸಾರ್ ಅವರ ವರ್ಣಮಯ ಸುಪುಷ್ಪಿತ, ಸುಗಂಧಿತ ಕಾವ್ಯೋದ್ಯಾನದಲ್ಲಿ ತಿರುಗಾಡುವಾಗ ಇವು ಸಾಮಾನ್ಯವಾಗಿ ಕಣ್ಣಿಗೆ ಬೀಳು ವುದಿಲ್ಲ. ದಸರಾ ಮೆರವಣಿಗೆಯಲ್ಲಿ ಮೊದಲು ಕಣ್ಣಿಗೆ ಬೀಳುವುದು ಅಂಬಾರಿ, ಅನಂತರ ಆನೆ ಕುದುರೆಗಳು ತಾನೆ? ಆ ಮೆರವಣಿಗೆಯ ಅನೇಕ ದೃಶ್ಯಗಳ ಕಡೆಗೆ ಗಮನವೇ ಹರಿಯುವುದಿಲ್ಲ; ಹರಿದರೂ ನೆನಪಿನಲ್ಲಿ ನಿಲ್ಲುವುದಿಲ್ಲ. 5.2.1936ರಲ್ಲಿ ಯೋಗಾಯೋಗ ವೆನ್ನುವಂತೆ ಟಿಪ್ಪು ಸುಲ್ತಾನ್ ಹುಟ್ಟಿದ ದೇವನಹಳ್ಳಿಯಲ್ಲಿಯೇ, ಅವನ ಜನ್ಮಸ್ಥಾನದ ಅತಿ ಸಮೀಪದಲ್ಲೇ ಜನ್ಮವೆತ್ತಿದ ಕವಿ ನಿಸಾರ್ ಅಹಮದ್ ವ್ಯಾಸಂಗ ಮಾಡಿದ್ದು ಭೂವಿಜ್ಞಾನ. ವಿಜ್ಞಾನದ ವಿದ್ಯಾರ್ಥಿಯಾದದ್ದರಿಂದಲೇ ಕಾವ್ಯ ಧರ್ಮದೊಡನೆ ವೈಜ್ಞಾನಿಕ ಮನೋ ಧರ್ಮವೂ, ವೈಚಾರಿಕ ಪ್ರಜ್ಞೆಯೂ ಸಂಲಗ್ನಗೊಂಡಿವೆ. ಈ ಸಂಲಗ್ನತೆಯ ಪ್ರಭಾವವನ್ನು ಅವರ ವ್ಯಂಗ್ಯ ವಿಡಂಬನೆಗಳಲ್ಲಿ, ಅವರ ವಾಸ್ತವ ಪ್ರಜ್ಞೆಯಲ್ಲಿ ಗುರುತಿಸಬಹುದು. ಗುಂಪುಗಾರಿಕೆಗೂ ಅವರಿಗೂ ಮೈಲಿ ಮೈಲಿ ದೂರ. 'ಮೊದಲಿನಿಂದಲೂ ಗುಂಪುಗಳಿಂದ ಸಿಡಿದು ನಿಂತು ಮುಂದುವರಿದಿರುವ ನನಗೆ ಹಲವು ಬಾರಿ ನಿಸ್ಸಂಗ ಭಾವ, ತಬ್ಬಲಿತನಗಳು ಅಮರಿದ್ದುಂಟು. ನಾನು ಅಂತರ್‌ಮುಖಿಯಾಗುವಂತೆ; ಕವನ ರಚನೆ, ಅಧ್ಯಯನ, ಚಿಂತನೆ ಗಳಲ್ಲಿ ತೊಡಗುವಂತೆ ಈ ಏಕಾಕಿತನದ ಬದುಕು ನನ್ನನ್ನು ಪ್ರೇರೇಪಿಸಿದೆ' ಎಂದು ಅವರೇ ಹೇಳಿಕೊಂಡಿದ್ದಾರೆ. ಅವರ ಜೀವನ ವಿಧಾನ, ಮನೋಧರ್ಮಗಳು ಈ ಹೇಳಿಕೆಯಿಂದ ಸುಸ್ಪಷ್ಟವಾಗುತ್ತವೆ. 'ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯಬೇಕಾದ ನನ್ನಂತಹ ಕೃತಿಕರ್ತನಿಗೆ ಅನುಕೂಲಗಳೂ ಇವೆ, ಅಡಚಣೆಗಳೂ ಇವೆ... ಎಂದೇ ಸಂಸ್ಕೃತಿ ವಿಭಿನ್ನತೆಯ ಆಶಯವುಳ್ಳ ಕವನಗಳ ಜೊತೆಜೊತೆಯಲ್ಲೇ ಸರ್ವ ಮಾನವರಿಗೂ ಸಮನಾದ ಅನುಭವ ವನ್ನು ತೋಡಿಕೊಳ್ಳುವ ರಚನೆಗಳೂ ನನ್ನ ಕೃತಿಗಳಲ್ಲಿ ಧಂಡಿಯಾಗಿವೆ'—('ಸಮಗ್ರ ಕವಿತೆಗಳು': ಮುನ್ನುಡಿ) ಎಂಬುದು ಖಂಡಿತ ನಿಜ. ಎರಡು ಸಂಸ್ಕೃತಿಗಳ ನಡುವಿನಲ್ಲಿ ಇರುವುದಾಗಿ ಅವರು ಹೇಳಿಕೊಂಡಿದ್ದರೂ ಅವು ಒಂದೇ ನೆಲದಲ್ಲಿ ಬೆಳೆದ ಗಿಡದಲ್ಲಿ ಕುಸುಮಿಸಿದ ಸಂಪತ್ತೆಂದೇ ಸ್ಪಷ್ಟಪಡಿಸಬಹುದಾಗಿದೆ. ಬೇರೆ ಕವಿಗಳಿಗಿಲ್ಲದ ಅಪೂರ್ವ ಭಾಗ್ಯ ದೊರೆತದ್ದೇ ಅವರ ಪುಣ್ಯ. ಆದ್ದರಿಂದಲೇ ಕವಿ ನಿಸಾರರು ಕನ್ನಡಕ್ಕೆ ವಿಶಿಷ್ಟರಾಗಿದ್ದಾರೆ, ಸಾರಸತ್ವವಾಗಿದ್ದಾರೆ, ಭಾಗ್ಯದಾತರಾಗಿದ್ದಾರೆ. ಕನ್ನಡಿಗರು ಹೆಮ್ಮೆಪಡಬಹುದಾದ ಆಸ್ತಿ ಆಗಿದ್ದಾರೆ.

ನಿಸಾರರು ತಮ್ಮ 'ಸಮಗ್ರ ಗದ್ಯ ಬರಹಗಳು' ಬೃಹತ್ಸಂಪುಟದಲ್ಲಿ ಒಂದು ಕಡೆ

ಹೀಗೆ ಹೇಳುತ್ತಾರೆ: `ವಿಭಿನ್ನ ಸಂಸ್ಕೃತಿ ಧರ್ಮಗಳ ಪರಿಮಂಡಲದಲ್ಲಿ ಉಸಿರಾಡಿ ಏಗಾಡಿ ಸಾಹಿತ್ಯ ರಚಿಸಬೇಕಾಗಿರುವ ನನ್ನಂಥವನ ಇಕ್ಕಟ್ಟು, ಅಡಿಗಡಿಗೆ ಅಲ್ಪಸಂಖ್ಯಾತತೆಯ ಅಸಹಾಯ ಅರಿವನ್ನು ಹೊತ್ತು ಹುಷಾರಿನಿಂದ ಹೆಜ್ಜೆ ಇಡಬೇಕಾದ ಅನಿವಾರ್ಯ: ಪರಿಸರದ ಅಪನಂಬಿಕೆ ಗುಮಾನಿಗಳ ಸುಳಿಗಳಲ್ಲಿ ಮುಳುಗೇಳುತ್ತಾ, ಕೈ ಬಡಿಯುತ್ತಾ ಸ್ವಶ್ರದ್ಧೆಯ ದೂರ ತೀರವನ್ನು ಸೇರಬೇಕಾದ ಅಗಾಧತರ ಮನಸ್ಸಂಕಲ್ಪ ನನ್ನ ವ್ಯಕ್ತಿತ್ವವನ್ನು ಬಳಲಿಸಿ ಬೆಂಡಾಗಿಸಿವೆ, ನಿಜ` (ಪುಟ: 734). ನಿಟ್ಟುಸಿರು ಬಿಡುವ, ನಿರಾಶೆಯನ್ನು ಹೊಗೆಯುವ ಈ ವಾಕ್ಯಗಳಲ್ಲಿ `ಅನಾಥ ಪ್ರಜ್ಞೆ' ಚಿಮ್ಮಲು ಕನ್ನಡ ಸಾಹಿತಿಗಳು ಅಥವಾ ಕನ್ನಡಿಗರು ಕಾರಣರಾಗಿದ್ದರೆ, ಅವರು ಅಕ್ಷಮ್ಯರಾಗುತ್ತಾರೆ. ಗುಂಪುಗಾರಿಕೆಯಿಂದಾಗಿ ಕೆಲವು ಸಾಹಿತಿಗಳು ವಿಜೃಂಭಿಸುತ್ತಾ ಇತರರನ್ನು ಮರೆಗೆ ಒತ್ತರಿಸುವ ನಿದರ್ಶನಗಳು ಸಾಕಷ್ಟಿವೆ. ನಿಸಾರ್ ಅವರ ಉತ್ಕೃಷ್ಟತೆಯೇ ಗಣ್ಯ ಸಾಹಿತಿಗಳ ಮಾತ್ಸರ್ಯಕ್ಕೆ ಕಾರಣ ಹೊರತು ಅಲ್ಪಸಂಖ್ಯಾತತೆಯಲ್ಲ. ಅದೇನೇ ಇರಲಿ, ನಿಸಾರ್‌ರಂತಹ ಶ್ರೇಷ್ಠ ಲೇಖಕರನ್ನು ಯಥೋಚಿತವಾಗಿ ಗೌರವಿಸ ಬೇಕಾದದ್ದು ಸರಕಾರಗಳ, ಸಮಾಜದ ಕರ್ತವ್ಯ. ಎಂಥ ಉನ್ನತ ಪ್ರಶಸ್ತಿಗಾದರೂ ಅವರು ಅರ್ಹರೆಂಬುದರಲ್ಲಿ ಸಂದೇಹವಿಲ್ಲ. ಅವರು ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗದಿರು ವುದೇ, ಅವರನ್ನು ಕನ್ನಡಿಗರು ನಿರ್ಲಕ್ಷಿಸಿದ್ದಾರೆನ್ನುವುದಕ್ಕೆ ಸಾಕ್ಷಿ. ಏನೇ ಆಗಲಿ, ನಿಸಾರರು ನಿರಾಶರಾಗದೆ ತಮ್ಮ ಸೃಜನಶೀಲ ಪ್ರತಿಭೆಯನ್ನು ಕನ್ನಡ ನಾಡಿಗೆ, ವಿಶ್ವಚಿತ್ ಶಕ್ತಿಗೆ ಧಾರೆಯೆರೆಯುತ್ತಾರೆಂಬ ವಿಶ್ವಾಸ ಅವರ ಮಿತ್ರರಿಗಿದೆ. `ಬರೆಯುವುದಷ್ಟೇ ತನ್ನ ಕೆಲಸ, ಫಲಾಫಲಗಳ ಎಣಿಕೆ, ಪ್ರಶಸ್ತಿ ಪದವಿಗಳ ಗೊಡವೆ ತನ್ನ ತಲೆನೋವಲ್ಲ, ಅದು ಭಾಗ್ಯಾನುಸಾರಿ—ಎಂದು ಸಾಗದಿದ್ದರೆ ಆಶಾಭಂಗ ಕಟ್ಟಿಟ್ಟ ಬುತ್ತಿ` ಎಂಬ ಅವರ ಮಾತು ಸರ್ವರಿಗೂ ಮಾರ್ಗದರ್ಶಿಯಾಗಬೇಕು (ಪುಟ: 837).

ನಿಸಾರ್ ಅಹಮದ್ ಕರ್ನಾಟಕದ ಮಾತ್ರವಲ್ಲ, ಇಡೀ ಭಾರತದ ಹೆಮ್ಮೆಯ ಕವಿಯೆನಿಸಿ ಕೊಳ್ಳಬಲ್ಲ ಪ್ರತಿಭಾವಂತ ಸತ್ವಶಾಲಿಗಳು, ಹಾಗೂ ಪುಣ್ಯವಂತರು. ಅಭಿನ್ನ ವೆಂಬಂತೆ, ಅನನ್ಯ ವೆಂಬಂತೆ, ಅವಿನಾಭಾವದಿಂದ ಎರಡು ಸಂಸ್ಕೃತಿಗಳು ಅವರ ಜೀವನ ದಲ್ಲಿ ಸಂಗಮಿಸಿರಲಾಗಿ, ಅವರ ಕಾವ್ಯಕ್ಕೆ ವಿಶಿಷ್ಟ ವಿನೂತನ ಅಪೂರ್ವ ಕಾಂತಿಯೊದಗಿದೆ. ಭಾರತೀಯತ್ವ ಅವರ ಕವಿತೆಗಳಲ್ಲಿ ಕೊಳಗೊಂಡಿರುವಾಗ, ಅವರು ಭಾವೈಕ್ಯತೆಯ ಸಂಕೇತವಾಗಿ ಪ್ರಜ್ವಲಿಸುತ್ತಾರೆ. ಕುರ್‌ಆನ್ ಮತ್ತು ಅಲ್ಲಾ ತತ್ವದಲ್ಲಿ ಪ್ರಾಮಾಣಿಕ ನಂಬಿಕೆಯಿದ್ದು, ಗಾಂಧಿ, ಅರವಿಂದೊ, ಪರಮಹಂಸರ ಬಗ್ಗೆ ಕವಿತೆ ರಚಿಸುವಾಗ ಅವರು ಪರಕೀಯರಂತೆ ಕಾಣುವುದಿಲ್ಲ. ಎಲ್ಲೆಲ್ಲಿ ವಿಭೂತಿತ್ವವಿದೆಯೋ ಅದನ್ನೆಲ್ಲ ಗೌರವದಿಂದ ಕಾಣುವ ಔದಾರ್ಯ ಅವರಲ್ಲಿದೆ. ವೇದ, ಬೈಬಲ್ಲು, ಕುರಾನ್‌ಗಳೆಲ್ಲವೂ ಸತ್ಯವೆನ್ನುವ ವಿಶ್ವಮಾನವ ಪ್ರಜ್ಞೆ ಅವರಲ್ಲಿ ಸದಾ ಜಾಗರೂಕ ವಾಗಿದೆ.

ಕಾಲ ಧರ್ಮಕ್ಕೆ ಅನುಗುಣವಾಗಿ ನವೋದಯ, ನವ್ಯ, ಬಂಡಾಯ ಧೋರಣೆಗಳನ್ನು ಸ್ವಂತ ಚಿಂತನೆ ಪ್ರತಿಭೆ ಬುದ್ಧಿವಂತಿಕೆ ಹೃದಯವಂತಿಕೆಯ ಪ್ರಣಾಳಿಕೆಗಳ ಮೂಲಕ ಹಾಯಿಸುತ್ತ, ಕಾವ್ಯರಚನೆ ಮಾಡುತ್ತ ಇದೀಗ ವೈಚಾರಿಕತೆಯ ನೆಲೆಗೆ ಬಂದು ನಿಂತಿರುವುದು ಪರಿಣತ ವಯಸ್ಸಿನ ನಿಸಾರರ ಜೀವಂತಿಕೆಗೂ ಸೃಜನಶೀಲ ಚೈತನ್ಯಕ್ಕೂ ಸದಾ

ಪಲ್ಲವಿಸುತ್ತಿರುವ ಅಂತಃಶಕ್ತಿಗೂ ಸಾಕ್ಷಿಯಾಗಿದೆ. 'ಇವೊತ್ತು ನಮ್ಮ ಕಾವ್ಯ ಹೆಚ್ಚು ಬಹಿರ್ಮುಖವಾಗಿ, ಗುಂಪಿನ ಚಟುವಟಿಕೆಯಾಗಿ ಪರಿಣಮಿಸಿದೆ. ಒಂದು ಕಾಲಕ್ಕೆ ಅದು ಹಾಯಬಾರದೆಂದು ವಿಧಿಸಿದ್ದ ಕಾವ್ಯೇತರ ನೆಲೆಗಳಲ್ಲಿ ಈಗ ನಿರ್ಭಯವಾಗಿ ವಿಹರಿಸುತ್ತಿದೆ. ಅದರ ಮೈಗೆ ಒಗ್ಗದೆಂದು, ಜಾಯಮಾನಕ್ಕೆ ಅಪಥ್ಯವೆಂದು ಎಚ್ಚರಿಸಿದ್ದ ಗ್ರಾಸವನ್ನು ಧಾರಾಳವಾಗಿ ಮೆಲ್ಲುತ್ತಿದೆ. ಇದರ ದೆಸೆಯಿಂದ ಒಂದು ಕಡೆ ಮಾತುಗಾರಿಕೆ ಮತ್ತು ವಸ್ತುವಿನಲ್ಲಿ ಹೊಸತನ ಮತ್ತು ಅಪೂರ್ವತೆ ಗಳನ್ನು ಕೂಡಿಸಿಕೊಳ್ಳುತ್ತ, ಮತ್ತೊಂದು ಕಡೆ ಹಿಂದಿನ ಕಾಲದ ಕಾವ್ಯ ರಚನೆಗಳಿಗಿಂತ ಅಧಿಕತರವಾಗಿ ಸಾಮಾಜಿಕ ಸಮಸ್ಯೆಗಳ ಮತ್ತು ರಾಜಕೀಯ ವಿದ್ಯಮಾನಗಳ ಪ್ರಖರ ಅರಿವನ್ನು ಅರಗಿಸಿಕೊಳ್ಳುತ್ತ ಜನಪರವಾಗಲು ಹವಣಿಸುತ್ತಿದೆ... ಕವಿತಾ ಶರೀರದಲ್ಲಿ ಶ್ವಾಸಕೋಶ ಗಳಂತಿರುವ ಚಿಂತನಾಂಶ ಮತ್ತು ಭಾವಾಂಶಗಳ ನಡುವೆ ಒಂದು ವಿಹಿತವೂ, ಒಂದೊಂದು ಕವನಕ್ಕೂ ವಿಶಿಷ್ಟವೂ ಆದ ಪ್ರಮಾಣೌಚಿತ್ಯವಿರಬೇಕೆಂಬುದೂ ಅಷ್ಟೇ ನಿಜ. ಅಂತೂ ಒಟ್ಟಿನಲ್ಲಿ ಇಂದಿನ ಕವಿತೆಗಳು ವ್ಯಕ್ತಿಗತ ನೆಲೆಯ ಚಿಂತನ ಮಂಥನಗಳಿಗಿಂತ ಸಾಮೂಹಿಕ ಹಸೆಯ ಸಾರ್ವಜನಿಕ ಸಂಗತಿ ಗಳಿಗೆ ಹೆಚ್ಚಿನ ಮಾನ್ಯತೆ, ಪ್ರಾಮುಖ್ಯ ನೀಡುತ್ತಿರುವುದು ಕಾವ್ಯಾಸಕ್ತರಿಗೆ ಸುವಿದಿತವಾಗಿರುವ ವಿಚಾರವಾಗಿದೆ'. (ಅರಿಕೆಯ ನಾಲ್ಕು ನುಡಿ—'ಅರವತ್ತೈದರ ಐಸಿರಿ') ಈ ವಾಕ್ಯಗಳಲ್ಲಿ ಕವಿ ನಿಸಾರರೇ ತಮ್ಮ ಕಾವ್ಯದ ಸ್ವರೂಪ ಲಕ್ಷಣಗಳನ್ನೂ ಬದಲಾದ ಕಾಲದ ಕವಿಗಳು ಅನುಸರಿಸಬೇಕಾದ ಕಾವ್ಯ ಸೂತ್ರಗಳನ್ನೂ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಸಾಮಾಜಿಕ ಬದ್ಧತೆಯೇ ಅವರ ಕಾವ್ಯ ಸೂತ್ರದ ತಿರುಳೆಂದು ಭಾವಿಸಬಹುದಾಗಿದೆ.

'ಅರವತ್ತೈದರ ಐಸಿರಿ' ಸಂಕಲನದ ಹಲವು ಕವಿತೆಗಳು ಈ ಕಾವ್ಯ ಸೂತ್ರಕ್ಕೆ ಲಕ್ಷ್ಯಗಳಾಗಿವೆ. ಅನುಭವದ ಸಾಂದ್ರತೆ, ಚಿಂತನ ಸಂಪತ್ತು ಮತ್ತು ತಾವು ಕಂಡ ತತ್ತ್ವದ ಅಭಿವ್ಯಕ್ತಿ ಅವರ ಕವಿತೆಗಳಲ್ಲಿ ಯಥೇಷ್ಟವಾಗಿ ಕಾಣಸಿಗುತ್ತವೆ. 'ಮರಳು ದಿಬ್ಬಗಳು' ಕವಿತೆಯಲ್ಲಿ ಅವರ ಚಿತ್ರಕ ಶಕ್ತಿಯ ಅಪೂರ್ವ ಪರಿಯನ್ನು ಗಮನಿಸಿ:

'ಮರುಧರೆಯ ಬಿಮ್ಮನಿಸುವಾಟದಂಗಣದಲ್ಲಿ
ಸಂತತ ಕ್ರಿಯಾನಿರತ ಅಸ್ವತಂತ್ರ ಬುಗುರಿಗಳು;
ಬೀಸುಗಾಳಿಯ ಮರ್ಜಿಗನುಸಾರ ತಲೆ ಬಾಗಿ
ದಿಕ್ಕಿಲ್ಲದಲೆದಿರುವ ಲಾಚಾರು ಕುರಿ ಮರಿಗಳು' (ಮರಳು ದಿಬ್ಬಗಳು)

—ಕಣ್ಣಿಗೆ ಕಾಣುವ ಈ ಸುಂದರ ನೈಸರ್ಗಿಕ ಚಿತ್ರಗಳು ಮಾನವನ ಅನುಕೂಲ ಸಿಂಧುತ್ವಕ್ಕೆ, ಸಮಯ ವರ್ತನೆಗೆ ಹಾಗೂ ಅಸ್ಮಿಮಿತತೆಗೆ ಸಂಕೇತಗಳಾಗಿವೆ, ಸಾಕ್ಷಿಗುಡ್ಡೆಗಳಾಗಿವೆ.

'ಇವುಗಳ ಸಮೀಕ್ಷಿಸಿದಾಗ ನನಗನ್ನಿಸಿತು:
ಬಹು ಜನರ ಅನುಕೂಲ ಸಿಂಧು ವಿಶ್ವಾಸ ಸಹ ಇಂತೆಯೆ,
ಯಾರೊಬ್ಬರಿಗೂ ಬದ್ಧ ಯಾ ವಿಧೇಯವಾಗಿರದೆ
ಸಮಯದಾಜ್ಞಾನುವರ್ತಿ ಮರಳು ದಿಬ್ಬಗಳಂತೆಯೆ,
ಚಾಂಚಲ್ಯ ಚಾಪಲ್ಯಗಳ ಚರ ಸಂತೆಯೆ.' (ಅದೇ)

—ಮರಳು ದಿಬ್ಬಗಳ ಜೀವನವೆಂತು ಅಸಾರ್ಥಕವೊ, ವ್ಯರ್ಥವೊ ಅಂತೆಯೇ

ಸಮಯ ವರ್ತಿ ಮಾನವರ ಜೀವನವೂ ವ್ಯರ್ಥವೆನ್ನುವುದು ಆ ದಿಬ್ಬಗಳ ಒಂದೊಂದು ದೃಶ್ಯದಲ್ಲಿಯೂ ಮನವರಿಕೆಯಾಗುತ್ತದೆ.

'ಸುದ್ದಿ ಮಾಧ್ಯಮಗಳು' ಇಂದಿನ ಪತ್ರಿಕೆಗಳ ಹಣೆ ಬರಹವನ್ನು ನಿಚ್ಚಳವಾಗಿ ನೇರವಾಗಿ ನಿರ್ದಾಕ್ಷಿಣ್ಯದಿಂದ ಚಿತ್ರಿಸುತ್ತದೆ. 'ಬೆಟ್ಟ ಮಾಡಿ ರವೆಯಷ್ಟನ್ನು, ಎತ್ತಿ ಮೆರೆಸುತ್ತವೆ ಬರೀ ಗಷ್ಟನ್ನು', 'ಶಾಶ್ವತದ ಹೂರಣಕ್ಕೆ ಮಾಡಿ ದಖಲ್‌ಪಟ್ಟಿ, ಮುಜುರೆ ಸಲ್ಲಿಸುತ್ತವೆ, ಸಾಮಯಿಕ ಕಣಕಕ್ಕೆ ಪಟ್ಟ ಕಟ್ಟಿ' ಎನ್ನುವ ಅವರ ಟೀಕೆ ಅಪ್ಪಟ ಸತ್ಯ. ಸತ್ಯ ಕಟುವಾದರೂ ಕಹಿಯಾದರೂ ನಿರ್ಭಿಡೆಯಿಂದ ಹೇಳಿಬಿಡುವ ನಿರ್ಭೀತಿ ನಿಸಾರ್ ಅವರ ಜಾಯಮಾನಕ್ಕೆ ಸಾಮಾನ್ಯವಾದದ್ದು :

'ಯೋಗಿ ಸಂತ ದಾರ್ಶನಿಕ ಮಹಾಕವಿ ಸತ್ವಗಳ
ತೇಜೋಜ್ವಲ ಚಿರ ಚೇತನ ಮಹತ್ವಗಳ
ಅರಿವು ಬಾರದು ಸಮೂಹ ಮಾಧ್ಯಮಗಳಿಗೆ
ದಿನನಿತ್ಯದಾಗುಹೋಗುಗಳ ಬಾಲವನು
ನೇರ್ಪಡಿಸುವುದರಲ್ಲಿ ನಿಮಗ್ನವಾದ ನಘೆಯ ನಳಿಗೆಗಳಿಗೆ' (ಸುದ್ದಿ ಮಾಧ್ಯಮಗಳು)

ಈ ಗುಣ ಸಮೂಹ ಮಾಧ್ಯಮಗಳಿಗೆ ಮಾತ್ರವೇ ಸೀಮಿತವಾದದ್ದಲ್ಲ, 'ಲೋಕದ ಜಾಯಮಾನವೇ ಹೀಗೆ' ಎಂದು ಸ್ಪಷ್ಟಪಡಿಸುತ್ತಾರೆ.

ಕ್ಷುದ್ರ ವಸ್ತುಗಳಲ್ಲಿಯೂ ಮೌಲಿಕತೆಯನ್ನು, ವಿಶೇಷಾರ್ಥವನ್ನು ಕಾಣುವ ದಾರ್ಶನಿಕ ದೃಷ್ಟಿ ನಿಸಾರರದು. 'ಬಂಡೆ ಮತ್ತು ಕಲ್ಲಿನ ಚೂರುಗಳು' ಎಂಬ ಕವಿತೆ ಶ್ರೀಮಂತರ ಅಟ್ಟಹಾಸ ಮತ್ತು ಬಡವರ ದೈನ್ಯವನ್ನು ಸಂಕೇತಿಸುವ ಸಾಮತಿಸದೃಶ ರಚನೆಯಾಗಿದೆ. ಅನಭಿಷಿಕ್ತ ಸಾರ್ವಭೌಮ ಹೆಬ್ಬಂಡೆಯಡಿಯ ಬಳಿ ಬಾಯ್ತೆರೆದು ಕೊರಕಲಿನಲ್ಲಿ ಅಸಂಖ್ಯ ಕಲ್ಲು ಚೂರುಗಳು ಅಳಲುತ್ತಿವೆ. ಸ್ವಘೋಷಿತ ಮಹನ್ಮಹನೀಯನಿಗೂ ಸ್ವಗೋತ್ರೀಯ ಚೂರುಗಳಿಗೂ ತಂತಮ್ಮ ಜೀವನ ಸಾರ್ಥಕ್ಯದ ಬಗ್ಗೆ ವಾಗ್ವಾದ ನಡೆಯುತ್ತದೆ. ಹೆಬ್ಬಂಡೆಯ ನಿಂದೆಗೆ ಚೂರುಗಳು ನೋಯುತ್ತವೆ. ಅವುಗಳ ನೊಂದ ದನಿಯನ್ನು ಕೇಳಿ ಕಿರು ಹಕ್ಕಿಯೊಂದು ಅನುಕಂಪೆ ತಾಳಿ, 'ಸರ್ವಂ ಸಹೆ ಪ್ರಕೃತಿಯ ದೃಷ್ಟಿಯಲ್ಲಿ, ನೀವು ಸಹ ನಿರತಿಶಯ ಸನ್ಮಾನ್ಯ' ಎಂದು ಅವುಗಳನ್ನು ಸಾಂತ್ವನಿಸುತ್ತದೆ.

'ಸತ್ಯಾಂಶಗಳ ಕತ್ತನ್ನು ಪೂರ್ತಿ ತಿರುಚಿ, ಅವಾಸ್ತವತೆ ಮಂಜನ್ನು ಮೇಲೆ ಎರಚಿ, ಅರಸುಗಳ ಸುತ್ತ ರಂಜಿತ ಕಟ್ಟುಕತೆ ಹಂದರಗಳೆಬ್ಬಿಸಿ, ಒಬ್ಬೊಬ್ಬರನೂ ಪೌರಾಣಿಕತೆಯ ಗಾತ್ರಕ್ಕೆ ಕೊಬ್ಬಿಸಿ' ಸುಳ್ಳು ಕತೆಗಳನ್ನು ಸೃಷ್ಟಿಸುವ ಇತಿಹಾಸಕಾರನ ಅಪ್ರಾಮಾಣಿಕತೆಯನ್ನು ಪ್ರಶ್ನಿಸುವ, ಅವನ ಮಾನವನ್ನು ವಿಡಂಬನೆಯ ಮೂಲಕ ಹರಾಜು ಮಾಡುವ ಕವಿತೆ 'ಇತಿಹಾಸದ ಇತಿಮಿತಿ':

'ಇತಿಹಾಸವೆನ್ನುವುದು ಕಾಲರಾಯನ ಗುಜರಿ;
ಬಹು ಬಳಸಿ ಹಳಸಿ ಒಗಾಯಿಸಿದ ಸರಕುಗಳ
ನಮ ನಮೂನೆಯ ಹರಕು ಮುರುಕುಗಳ
ಅವ್ಯವಸ್ಥಿತ ಅಧ್ವಾನಗಳ ಬೃಹದಾಗರ;

ಎಲ್ಲ ಚೆಲ್ಲಾಪಿಲ್ಲಿ ಅಲ್ಲಿ, ಕಲಸು ಮೇಲೋಗರ.' (ಇತಿಹಾಸದ ಇತಿಮಿತಿ)

ಇದೇ ಧಾಟಿಯಲ್ಲಿ ಈ ಕವಿತೆ ಮುಂದುವರಿಯುತ್ತದೆ. ಇತಿಹಾಸವನ್ನು ಗೇಲಿಮಾಡಲು 'ಗುಜರಿ' ಪದವೊಂದೆ ಸಾಕು. ನಿಘಂಟಿನಲ್ಲಿ ಹಾಗೂ ನಿತ್ಯದ ಬಳಕೆಯಲ್ಲಿ ಅದೊಂದು ಸಾಮಾನ್ಯ ಪದ; ಮೂರಕ್ಷರದ ಈ ಪದ ವಾಮನ; ಈ ಸಂದರ್ಭದಲ್ಲಿ ತ್ರಿವಿಕ್ರಮ ಭಾವ ಶಕ್ತಿಯನ್ನು ಪ್ರದರ್ಶಿಸುತ್ತದೆ. ಚಿಂತಿಸಿದಷ್ಟೂ ಕಲ್ಪಿಸಿಕೊಂಡಷ್ಟೂ ಆ ಪದದ ಅರ್ಥ ತರಂಗಗಳು ವಿಸ್ತಾರಗೊಳ್ಳುತ್ತವೆ.

'ಆಡಳಿತಗಾರ, ಬೇಪಾರಿ, ಪುರೋಹಿತಷಾಹಿ ತದಿತರ
ಹಸು ಮೊಗದ ಹುಲಿಯ ಮೊಗವಾಡ ಹೊದ್ದವನ,
ಸವಲತ್ತುಗಳ ಹಾಡು ಹಗಲೇ ಕದ್ದು ಮೆದ್ದವನ,
ಗೆದ್ದವನ ಉತ್ಸವಿಸಿ ಮೆರೆಸಿದೆ ಚರಿತ್ರೆ ಕಿರುಚಿ ಭೋ ಪರಾಕು.' (ಅದೇ)

ಈ ಕವಿಯ ಉಚಿತ ಖಚಿತ ನಿರ್ಝರಸಮ ಪದ ಪ್ರವಾಹ ಆಶ್ಚರ್ಯಕರ, ಸಮ್ಮೋಹನಕರ. ಚಿತ್ರೀಕೃತ ಭಾವಾನುಭವ, ಕಲ್ಪನೆಗಳು ಶಬ್ದರಾಶಿಯೊಡನೆ ಸ್ಪರ್ಧೆ ಹೂಡಿದಂತೆ, ಸರಸವಾಡು ವಂತೆ ಸಹೃದಯನ ಮನಸ್ಸನ್ನು ಸೂರೆಗೊಳ್ಳುತ್ತವೆ. ಅವರ ಅನುಭವದ ಖಜಾನೆ ಅಕ್ಷಯ ವಾದದ್ದು; ಶಬ್ದ ಶ್ರೀಮಂತತೆ ಕೊನೆಗಾಣದ ನಿಕ್ಷೇಪ ಸ್ವರೂಪದ್ದು.

ಸರಳವಾದರೂ ಅರ್ಥಗರ್ಭಿತ ಅನುಭವದ ಸಮೃದ್ಧ ಅಭಿವ್ಯಕ್ತಿಯಿಂದಾಗಿ, ಲಯ ವೈವಿಧ್ಯದಿಂದಾಗಿ, ನಿರಂತರ ನಿರಾಯಾಸದ ಸರಸ ಸದರ ಧಾಟಿಯಿಂದಾಗಿ, ಉಪಮಾರೂಪಕ ಪ್ರತಿಮೆಗಳ ಸೌಭಾಗ್ಯದಿಂದಾಗಿ ನಿಸಾರರ ಶೈಲಿ ಸುಲಭವಾಗಿದೆ, ವಿಶಿಷ್ಟವಾಗಿದೆ, ಅನನ್ಯ ವಾಗಿದೆ. 'ಮನಸ್ಸೊಂದು ರೆಫ್ರಿಜರೇಟರ್', 'ಬಟ್ಟಂಬಯಲಿನ ರಸ್ತೆ, ಗುಟ್ಟಿರದಪ್ರಾಯಸ್ಥೆ', 'ಕೆರೆ ಗ್ರಾಮ ಗರತಿಯ ಹಣೆಯ ತಿಲಕ', 'ಸ್ವಂತ ಸಂಸ್ಕೃತಿ, ಅಡುಗೆ ಮನೆಯ ಗರತಿ'—ಇಂಥ ರೂಪಕ, ಪ್ರತಿಮೆಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತವೆ. ಆಂಗ್ಲ ಪದಗಳ ಬಳಕೆ ಅವರ ಶೈಲಿಗೆ ರಮ್ಯತೆ ಯನ್ನೊದಗಿಸಿದ್ದರೂ ಗ್ಲಾಮರ್, ಗಾಸಿಪ್ಪು, ಸ್ಟ್ರೈಕರ್ ಮೊದಲಾದ ಪದಗಳು ಅನಾವಶ್ಯಕ ಹೊರೆ, ಕಿವಿಗೆ ಕರ್ಕಶ ಎನಿಸುತ್ತವೆ. 'ಕೋಲ್ಮಿಂಚಿಸುತ್ತಿತ್ತು', 'ದಾಸ್ತಾನಿಸಬಹುದು', 'ಸಾಂತ್ವನಿಸು', 'ಕೆಚ್ಚಲಿಸು', 'ಭೂತಗನ್ನಡಿಸುವ', 'ಕಿಮ್ಮತಿಸುವ', 'ವಿಕಟಾಟ್ಟಹಾಸಿಸು', 'ದುರ್ನಾತಿಸು', 'ಶರೀರಿಸಿಕೊಳ್ಳು'—ಇತ್ಯಾದಿ ವಾಕ್‌ಪ್ರಯೋಗಗಳು ಸಹಜ ಕವಿಗೆ ಮಾತ್ರ ಸಾಧ್ಯ. ಇಂಥ ಕಡೆಗಳಲ್ಲಿ ನಿಸಾರ್ ಅವರ ಛಾಪು ಎದ್ದು ಕಾಣುತ್ತದೆ. ಭಾಷೆ ಅವರಿಚ್ಛೆಯಂತೆ ಬಾಗುತ್ತ, ಬಳುಕುತ್ತ, ಸೆಟೆಯುತ್ತ, ನಿಮಿರುತ್ತ ವರ್ತಿಸುತ್ತದೆ.

ಕೆ. ಎಸ್. ನಿಸಾರ್ ಅಹಮದ್ ಇಪ್ಪತ್ತನೆಯ ಶತಮಾನದ ಅಪರೂಪದ ಕವಿ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಶಿಶುನಾಳ ಶರೀಫರನ್ನು ಬಿಟ್ಟರೆ ಇಂಥ ಕವಿ ದೊರಕ ಲಾರರು. ಇವರು ಭಾವೈಕ್ಯದ ಸಂಕೇತ. ಎರಡು ಶ್ರೇಷ್ಠತಮ ಸಂಸ್ಕೃತಿಗಳ ಸೇತುವೆ ವಿಲೀನತೆಯ, ಅವುಗಳ ಸಮನ್ವಯದ ಪ್ರತಿನಿಧಿ. 'ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯಬೇಕಾದ ನನ್ನಂಥ ಕೃತಿಕರ್ತನಿಗೆ ಅನುಕೂಲಗಳೂ ಇವೆ, ಅಡಚಣೆಗಳೂ ಇವೆ' ಎಂಬ ಅವರ ಮಾತಿನಲ್ಲಿ ಆತ್ಮಪ್ರತ್ಯಯದ ಜತೆಗೆ, ನಿರಾಶೆಯೂ ಇಣುಕುವಂತೆ ತೋರುತ್ತದೆ.

ಕನ್ನಡದ ಮೂಲಕ ಇವರು ರಾಷ್ಟ್ರಮಟ್ಟದ ಕವಿಯಾಗಿದ್ದಾರೆ. ಇವರು ತಮ್ಮ ಮಾತೃಭಾಷೆ ಉರ್ದುವಿನಲ್ಲಿ ಕಾವ್ಯ ರಚಿಸಿದ್ದರೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿ ಇವರಿಗೊದಗುತ್ತಿತ್ತು. ಈಗಲೂ ಇವರ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸುವ ವ್ಯವಸ್ಥೆ ಅತ್ಯಾವಶ್ಯಕ. ಅಂಥ ಕಾಲ ಬೇಗ ಬರಲಿ ಎಂದು ಹಾರೈಸುತ್ತೇನೆ.

೨. ನಿಸಾರರ ಗದ್ಯ ಸಾಹಿತ್ಯ

'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬುದು ಗದ್ಯಲೇಖಕರ ಪರವಾದ ಸೂಕ್ತಿ. ಅದು ಕವಿಗಳಿಗೆ ಸವಾಲಿನಂತೆಯೂ ಇದೆ. ತಮ್ಮನ್ನು ಕೀಳಾಗಿ ಕಂಡ ಪ್ರತಿಷ್ಠಿತ ಕವಿಗಳ ಮೂದಲಿಕೆಗಾಗಿ ಗದ್ಯಕಾರರು ಈ ಸೂಕ್ತಿಯನ್ನು ಸೃಷ್ಟಿಸಿರಬಹುದು. ಸಾಮಾನ್ಯವಾಗಿ ಗದ್ಯ ಭಾವ ರಮ್ಯವಲ್ಲ. ಆಭರಣಾತ್ಮಕವಾದದ್ದಲ್ಲ. ಅದು ಆಡು ಮಾತಿಗೆ ಹತ್ತಿರವಾದ ಶುಷ್ಕ ರಚನೆಯೂ ಆಗಿರಬಹುದು. ಬಹು ಜನಪ್ರಿಯವಾದ, ಆಕರ್ಷಕವಾದ ಕಾವ್ಯಕ್ಕೆ ಸಮನಾದ ಗದ್ಯಸೃಷ್ಟಿ ಸುಲಭವಲ್ಲವೆಂಬ ಅನಾವಶ್ಯಕವಾದ ಅಳುಕು ನಿಷ್ಕಾರಣವಾಗಿ, ಗತಾನುಗತಿಕವಾಗಿ ಚಾಲ್ತಿಯಲ್ಲಿ ಬಂದಿರಬೇಕೆಂದು ತೋರುತ್ತದೆ. ಬಸವಾದಿ ಶರಣರ ವಚನಗಳಂತೆ ವಚನ ರಚನೆ ಮಾಡು ವುದಾಗಲಿ, ಅವುಗಳನ್ನು ಕಲಿಸುವುದಾಗಲಿ ಉತ್ತಮ ಕವಿಗೂ ಸುಲಭವಲ್ಲ. ಯಾವ ಉತ್ತಮ ಕಾವ್ಯಕ್ಕೂ ಅವು ಕಡಮೆಯಲ್ಲ. ಅವು ಒಂದೊಂದೂ ಶ್ರೇಷ್ಠ ಭಾವಗೀತೆಗೆ ಸಮಾನ. ಮಾನವನ ಸಕಲ ವ್ಯವಹಾರಗಳಿಗೂ ಗದ್ಯವೇ ಆದಿ; ಅವನ ಬದುಕಿನಲ್ಲಿ ನೂರಕ್ಕೆ ೯೯ ಭಾಗವನ್ನು ಅದೇ ಆಕ್ರಮಿಸಿಕೊಳ್ಳುತ್ತದೆ. ಅಂದಮೇಲೆ ಸರ್ವಾಂಗ ಸುಂದರವಾದ ಭಾಷೆಯ ಬೆಳವಣಿಗೆ ಪ್ರತಿಭಾವಂತ ಗದ್ಯಕಾರನನ್ನು ಅವಲಂಬಿಸಿದೆ. ಗದ್ಯದ ಬಂಧ ಬನಿ ಚೇಗು ಸೌಷ್ಠವ, ಸುಭಗತೆಗಳಿಗೆ ಅವನ ಚಿಂತನೆ, ವಿಚಾರಶಕ್ತಿ ಹಾಗೂ ಲೋಕಾನುಭವದ ಸಂಪತ್ತು ಕಾರಣವಾಗುತ್ತವೆ. ಇಲ್ಲಿಯೂ ಬುದ್ಧಿಯ ವಿಲಾಸದ ಜತೆಗೆ ಅಂತಃಸ್ಫೂರ್ತಿಯ ಪ್ರಭಾವ ಇದ್ದೇ ಇದೆ.

ಜಾಗತಿಕ ಸಾಹಿತ್ಯ ಚರಿತ್ರೆಯಲ್ಲಿ ಉತ್ತಮ ಕವಿಗಳು ಉತ್ತಮ ಗದ್ಯಕಾರರಾದ ನಿದರ್ಶನಗಳು ವಿರಳ. ಆಧುನಿಕ ಕನ್ನಡ ಚರಿತ್ರೆಯ ಕಡೆಗೆ ಗಮನ ಹರಿಸಿದಾಗ ಡಿವಿಜಿ, ಕುವೆಂಪು, ಮಾಸ್ತಿ, ಶಿವರುದ್ರಪ್ಪ ಮುಂತಾದ ಕೆಲವೇ ಕೆಲವು ಕವಿಗಳು ಉತ್ತಮ ಗದ್ಯ ಲೇಖಕರೂ ಆಗಿರುವುದನ್ನು ಕಾಣಬಹುದು. ಅಂಥವರಲ್ಲಿ ಕವಿ ಕೆ. ಎಸ್. ನಿಸಾರ್ ಅಹಮದ್ ಅವರೂ ಒಬ್ಬರು. ಅವರ ಮನೆ ಮಾತು ಕನ್ನಡವಲ್ಲ; ಜ್ಞಾತಿ ಭಾಷೆಗಳಾದ ತೆಲುಗು, ತಮಿಳು, ಮಲೆಯಾಳಿಗಳಲ್ಲಿ ಒಂದೂ ಅಲ್ಲ; ಉರ್ದು. ಆದರೂ ಕನ್ನಡ ಮನೆಮಾತಾದವರಿಗಿಂತ ಚೆನ್ನಾಗಿ ಬರೆಯುತ್ತಾರೆ. ಉರ್ದು, ಇಂಗ್ಲಿಷ್, ಕನ್ನಡದ ಜತೆಗೆ ಅವರ ವಿಜ್ಞಾನ ಪಾಂಡಿತ್ಯ ಸೇರಿಕೊಂಡು ಅವರ ಸಾಹಿತ್ಯ ಭಾಷೆಗೆ ಮೆರುಗು ಕೊಟ್ಟಿವೆ. 'ಎರಡು ವಿಭಿನ್ನ ಸಂಸ್ಕೃತಿಗಳ ನಡುವೆ ಯಾವ ಎಚ್ಚರಗೇಡಿತನಕ್ಕೂ ವಿಕೃತಿಗೂ ಒಳಗಾಗದೆ ರೋಪ್‌ವಾಕ್ ಮಾಡಬೇಕಾಗಿರುವ ನನ್ನ ಮನಸ್ಸಿನ ಒಳತೋಟಿ, ಸತತ ಜಾಗೃತಿ ಹಾಗೂ ಭಯಗಳು ನನ್ನ ಸಂಗಡಿಗ ಕವಿಗಳಿಗೆ ಇಲ್ಲ' ಎನ್ನುವ ಅಳುಕಿನಿಂದಾಗಿ ಅವರ ಗದ್ಯ ಭಾಷೆ ಒಮ್ಮೊಮ್ಮೆ ಕೃತಕತೆಯಿಂದ ಪೆಡಸಾಗುವ ಸಂಭವವುಂಟು. ಆದರೂ ಭಾಷೆಯಲ್ಲಿ

ಬದಲಾವಣೆಯುಂಟುಮಾಡುವ ಕೆಚ್ಚು ನೆಚ್ಚು ಅವರದು. ಆ ಕೆಚ್ಚು ನೆಚ್ಚುಗಳಿಗೆ ಎರಡು—ಅಲ್ಲ ಮೂರು (ವಿಜ್ಞಾನ) ಸಂಸ್ಕೃತಿಗಳ ಐಸಿರಿಯ ನಡುವೆ ಬೆಳೆದದ್ದೇ, ಬದುಕಿದ್ದೇ ಕಾರಣವಿರಬೇಕು. 'ನನ್ನ ಕವನಗಳ ಭಾಷೆಯನ್ನು ನಾನು ಬೆವರು ಸುರಿಸಿ ಸಂಪಾದಿಸಿ ಕೊಂಡಿದ್ದೇನೆ. ಕನ್ನಡ ನನಗೆ ಕಲಿಕೆಯ ಭಾಷೆಯಾದುದರಿಂದ ಅದನ್ನು ಎಡವಟ್ಟಾಗಿ, ನಗೆಗೀಡಾಗಿ ಬಳಸಬಾರದೆಂಬ ಅಳುಕು, ಎಚ್ಚರ ಕಾವ್ಯಾರಂಭದ ಕಾಲದಿಂದಲೂ ನನ್ನ ಬೆನ್ನಂಟಿ ಬಂದಿದೆ. ಕೆಲವು ಡಿಗ್ರಿಗಳಷ್ಟಾದರೂ ನಮ್ಮ ಕನ್ನಡ ಕಾವ್ಯದ ಒಟ್ಟಾರೆ ಭಾಷೆಯ ಸ್ವರೂಪವನ್ನು ಬದಲಿಸಬೇಕೆಂಬ ಹೆಬ್ಬಯಕೆ ನನ್ನಲ್ಲಿ ಮನೆ ಮಾಡಿದೆ' (ಪುಟ: 13).* ಅವರ ಕವಿತಾ ಸಂತತಿಯನ್ನು ನೋಡಿದಾಗ ಈ 'ಅಳುಕು' ಅನಾವಶ್ಯಕವೆಂಬುದು ಸ್ಪಷ್ಟವಾಗುತ್ತದೆ.

ಮೇಲ್ಕಾಣಿಸಿರುವ ಅವರ ಮಾತು ಈ ಗದ್ಯ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಉತ್ತಮ ಗದ್ಯವನ್ನು ಸೃಷ್ಟಿಸಬೇಕೆಂಬ ಹಂಬಲ ಅವರಿಗಿದೆ. 'ನಮ್ಮ ಹಿರಿಯ ತಲೆಮಾರಿನ ಗದ್ಯಕರ್ತರಲ್ಲಿ ಅಪ್ರತಿಮರೆನ್ನಿಸಿಕೊಂಡಿರುವ ಡಿ.ವಿ.ಜಿ., ಮಾಸ್ತಿ, ಎ.ಆರ್.ಕೃ., ವಿ.ಸೀ., ಎಸ್. ವಿ. ರಂಗಣ್ಣ, ಕುವೆಂಪು, ಪು.ತಿ.ನ., ರಾಜರತ್ನಂ, ದೇಜಗೌ ಅವರ ಬರಹಗಳಲ್ಲಿನ ಭಾವ-ವಿಚಾರಗಳ ಏರುಪೇರಿಲ್ಲದ ಏಕಾತ್ಮಕ ಸಮನ್ವಯ ನಮಗೆ ತೋರುಗಂಬವಾಗಬೇಕು. ಇವರ ಗದ್ಯದ ಸ್ವವಿಶೇಷತೆಯನ್ನು ಗುರುತಿಸುವ ಸಲುವಾಗಿ ಆಸ್ಥೆಯಿಂದ ದೀರ್ಘಾವಧಿಯ ತನಕ ಪ್ರಯತ್ನಿಸಿರುವ ನನಗೆ ಆಗಿರುವ ಉಪಕಾರ ಅಮಿತ. ಇದಲ್ಲದೆ ಭಾಷೆಯ ಬಿಗಿ ಬನಿ, ಅಡಕತೆ, ಗಾಂಭೀರ್ಯ, ಲವಲವಿಕೆ, ಪ್ರಯೋಗಶೀಲತೆ, ಉಪಮೆ ರೂಪಕ ದೃಷ್ಟಾಂತಾದಿ ಅಲಂಕಾರಗಳ ಬಳಕೆಯಲ್ಲಿನ ಔಚಿತ್ಯ ಮತ್ತು ಹೃದಯಂಗಮ ವಾಕ್ಯಗಳ ಸೂತ್ರಪ್ರಾಯತೆ ಮೊದಲಾದ ಅಂಶಗಳನ್ನು ಕಲಿಯಲು ಸಹ ಈ ಗದ್ಯಕಾರರ ರಚನೆಗಳು ಸಹಕಾರಿಯಾಗಿವೆ' (ಪುಟ: 535). ವೃತ್ತಿ, ವಿದ್ಯೆ, ಭೂವಿಜ್ಞಾನದ ಜತೆಗೆ ಕನ್ನಡದಲ್ಲಿ ಪ್ರೌಢಿಮೆಯನ್ನು ಸಂಪಾದಿಸಲು ಅವರು ಪಟ್ಟ ಶ್ರಮ ಅಸದಳವಾದದ್ದೆಂಬುದು ಮೇಲಿನ ಮಾತುಗಳಿಂದ ವ್ಯಕ್ತವಾಗುತ್ತದೆ. 'ಕಲಿಸಿದೊಡೇಂ ಬರ್ಕುಮೆಂ ಸಲ್ಲಲಿತ ಕವಿತ್ವಂ ನಿಸರ್ಗ ಸುಭಗಂ' ಎಂಬ ಕವಿ ವಾಣಿಯಂತೆ, ನಿಸಾರರಿಗೆ ಕಾವ್ಯಕನ್ನಿಕೆ ತಾನಾಗಿಯೇ ಒಲಿದಿದ್ದಾಳೆ.

'ನೈಜ ಕವಿಗೆ ಕಮಿಟ್‌ಮೆಂಟ್ ಮೂಲಧನ. ಕಮಿಟ್‌ಮೆಂಟ್ ಇಲ್ಲದವನ ಬರಹ ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ' ಎನ್ನುವ ಕವಿ ನನಗೆ ಯಾವಾಗಲೂ ಮಾನ್ಯ. ಕವಿಯಾಗಿ ಕವಿತೆಯನ್ನು ರಚಿಸಿ, ಲಕ್ಷಣಕಾರರಾಗಿ ತಮ್ಮ ಕವಿತೆಯ ಲಕ್ಷಣಗಳನ್ನು ಸೂತ್ರೀಕರಿಸಿ, ಅವನ್ನು ಗ್ರಹಿಸಿಕೊಳ್ಳಬೇಕಾದ ವಿಧಾನವನ್ನು ಅವರೇ ಸಹೃದಯ ವಾಚಕರಿಗೆ ಮಾರ್ಗದರ್ಶನ ಮಾಡಿದ್ದಾರೆ. ಅಂತೆಯೇ ಅವರು 'ನನ್ನ ಗದ್ಯದ ಒಲವು ಓಲುವೆಗಳು' ಎಂಬ ಲೇಖನದಲ್ಲಿ ತಮ್ಮ ಗದ್ಯದ ಬೆಳವಣಿಗೆ, ಸ್ವರೂಪ ಲಕ್ಷಣಗಳನ್ನು ವಿವರಿಸಿ, ತಮ್ಮ ದೃಷ್ಟಿಧ್ಯೇಯಗಳನ್ನು ಓದುಗರಿಗೆ ಪರಿಚಯಿಸಿಕೊಟ್ಟಿದ್ದಾರೆ. 'ಅವುಗಳನ್ನು (ವಿಚಾರಗಳನ್ನು) ನಿದರ್ಶನ, ಹೋಲಿಕೆ, ಮತ್ತಿತರ ಆಲಂಕಾರಿಕ ಕೌಶಲಗಳ ಮುಖೇನವೋ; ವಿದಗ್ಧ ನುಡಿಮೆ, ಚಮತ್ಕಾರಿ ಪದ ಟಂಕಣೆ, ತಿಳಿ ಹಾಸ್ಯ ಇಲ್ಲವೆ ವ್ಯಂಗ್ಯದ ಬಳಕೆಯ ನೆರವಿನಿಂದಲೊ,

* ಈ ಸಂಖ್ಯೆಗಳು ಕೆ. ಎಸ್. ನಿಸಾರ್ ಅಹಮದ್ ಅವರ 'ಸಮಗ್ರ ಗದ್ಯ ಬರಹಗಳು' ಗ್ರಂಥದ ಪುಟಗಳನ್ನು ಸೂಚಿಸುತ್ತವೆ.

ಸ್ಪೃಹ್ಯಗೊಳಿಸಲು ಪ್ರಯತ್ನಿಸಿದ್ದೇನೆ. ಹೀಗಾಗಿ ನನ್ನ ಯಾವುದೇ ಬರವಣಿಗೆ, ಪದವಿಟ್ಟಳುಪದೊಂದಗ್ಗಳಿಕೆ ಮಾದರಿಯದಲ್ಲ, ತಿದ್ದಾಣಿಕೆ, ದುರಸ್ತಿಯ ರೀತಿಯದು' (ಪುಟ: 535). ವಿಡಂಬನೆ ಮತ್ತು ವ್ಯಂಗ್ಯ ನಿಸಾರರ ಹುಟ್ಟುಗುಣ, ನಿಜ. ಮಾನಸ ಸರೋವರದಿಂದ ಸಹಜವಾಗಿ ನಿರ್ಝರಿಸುವ ವಾಕ್‌ಸ್ರೋತವನ್ನು ತಿದ್ದುವಾಗ ಶ್ರವಣ ಸುಭಗತೆಯನ್ನು, ಉಚ್ಚಾರಣಾ ಸೌಲಭ್ಯವನ್ನು ಕನ್ನಡದ ಜಾಯಮಾನಕ್ಕೆ ಹೊಂದುವ ಶಬ್ದ ಸಾಮರಸ್ಯವನ್ನು ಗಮನದಲ್ಲಿರಿಸಿಕೊಳ್ಳಬೇಕಾದದ್ದು ಗದ್ಯಕಾರನ ಕರ್ತವ್ಯ.

ತಮ್ಮ ಗದ್ಯಕೃತಿಗಳ ಭಾಷೆ ಅಧಿಕತರ ಜನಾಕರ್ಷಣೆಗೆ ಪಾತ್ರವಾಗದೇನೋ ಎಂಬ ಅಳುಕು ನಿಸಾರರಿಗಿದೆ. ಈ ಅಳುಕು ಆಧಾರವಿಲ್ಲದ್ದೆಂದು ನನ್ನ ಭಾವನೆ. 'ಸಂಸ್ಕೃತ ಸಂಪನ್ನ, ಕೆಲವೊಮ್ಮೆ ಅಲಂಕಾರ ನಿಬಿಡ ಮಾತುಗಾರಿಕೆ ನನ್ನ ಬರವಣಿಗೆಯ ವೈಶಿಷ್ಟ್ಯವೇನೋ? ಎನ್ನುವಷ್ಟರ ಮಟ್ಟಿಗೆ ಭಾರವಾದೀತು; ಗ್ರಹಿಸಿ ಅರಗಿಸಿಕೊಳ್ಳುವುದು ಕಷ್ಟಕರವೆನಿಸೀತು' (ಪುಟ: 537) ಎಂಬ ಅವರ ಶಂಕೆಗೆ ಕಾರಣವಿಲ್ಲವೆಂದು ಹೇಳಬೇಕಾಗುತ್ತದೆ. 'ವಿಚಾರ ಸರಣಿಯ ಸುಗಮ ಸಂಚಾರ ಪುನಃಸ್ಥಾಪಿತವಾಗಬೇಕಾದರೆ ಅಂತರಂಗ ತೀವ್ರತರ ಘನಾವಸ್ಥೆಯಿಂದ ದ್ರಾವಣಸ್ಥಿತಿಗೆ, ಭಾವಭಾರದ ನೆಲಸಿನಿಂದ ವಿಚಾರದ ಮುಕ್ತ ಹಸರದ ಕಡೆಗೆ ಹೊರಳಿಕೊಳ್ಳ ಬೇಕಿತ್ತು' (ಪುಟ: 534). 'ಬಹಿರ್ ವಾಸ್ತವಿಕತೆಯನ್ನು ಸಾಹಿತ್ಯಕರ್ತನ ಮನೋಹೃದಯಗಳು ಸ್ವಂತವಾಗಿ, ಸ್ವತಂತ್ರವಾಗಿ ಭಾವೋತ್ಕಟ ಅವಸ್ಥೆಯಲ್ಲಿ ಗ್ರಹಿಸಿದ್ದರ ಫಲಿತ ಅವನ ಕೃತಿಯಷ್ಟೇ' (ಪುಟ: 756). ತುಸು ಕಠಿಣವೆನ್ನಬಹುದಾದ ಇಂಥ ವಾಕ್ಯಗಳು ವಿರಳವೆಂದೇ ಹೇಳಬೇಕು. ಇಂಥ ಸಂಸ್ಕೃತಮಯ ವಾಕ್ಯಗಳನ್ನು ಸಹ ಅವರೇ ಸಮರ್ಥಿಸಿ ಕೊಳ್ಳುತ್ತಾರೆ: 'ದೇವೇಂದ್ರ ಸದೃಶ ವಸ್ತುವಿಗೆ ಒಪ್ಪಿತವಾಗುವುದು ಉಚ್ಚೈಶ್ರವಸ್ಸು, ಐರಾವತದಂಥ ವೈಭವಯುಕ್ತ ಮಾತು ಗಾರಿಕೆಯೇ ಹೊರತು ಟಾಂಗಾ ಕುದುರೆ, ಸರ್ಕಸ್ ಆನೆಯಂಥ ಬಡಕಲು ನಾಡಾಡಿ ನುಡಿಮೆಯಲ್ಲ' (ಪುಟ: 537). ಔಚಿತ್ಯವರುತು ಸಂಸ್ಕೃತ ವನ್ನೋ, ಇಂಗ್ಲಿಷನ್ನೋ, ಉರ್ದುವನ್ನೋ ಬಳಸುವುದಾದರೆ ಏನೂ ಅನಾಹುತವಾಗು ವುದಿಲ್ಲ. ದುರ್ದೈವವೆಂದರೆ ಶಬ್ದದರಿದ್ರರು ಮಾತ್ಸರ್ಯದಿಂದ ಸಂಸ್ಕೃತದ ಬಳಕೆಯನ್ನು ತೆಗಳುತ್ತಾರೆ, ಸಿಹಿಮೂತ್ರ ರೋಗಿಗಳು ಸಕ್ಕರೆಯನ್ನು, ಕ್ಷಯ ರೋಗಿಗಳು ಹಾಲನ್ನು ತಿರಸ್ಕರಿಸುವಂತೆ. 'ಪೃಥಗಂಗ ಚೆಲ್ವಿಕೆ'ಯಂಥ ಅರಿ ಸಮಾಸಗಳು ಮಾತ್ರ ಬಾಸ್ಮತಿ ಅಕ್ಕಿಯಲ್ಲಿ ಮಣ್ಣೋ, ಕಲ್ಲೋ ಬೆರೆಸಿದಂತೆ, ಅನೌಚಿತ್ಯಕ್ಕೆ ಬಾಗಿಲು ತೆರೆದಂತೆ ಮನಕ್ಕೆ ಮುಜುಗರವಾಗುತ್ತದೆ. ಹಲವು ಕಡೆ ಕನ್ನಡ-ಸಂಸ್ಕೃತಗಳ, ಕನ್ನಡ-ಉರ್ದುಗಳ ಸುಮಧುರ ಸಂಗಮವನ್ನು ಕಾಣಬಹುದು.

ನಿಸಾರರು ಅಚ್ಚಗನ್ನಡದ ಸರಣಿ ವಾಕ್ಯಗಳನ್ನು ಸಲೀಲವಾಗಿ ನೇಯಬಲ್ಲರು. ಒಂದು ಜಲಾಕರದ ವರ್ಣನೆಯಿದು:

'ಅದು ಪುಟ್ಟಹಕ್ಕಿಗಳ ಸ್ನಾನಗೃಹ. ಅದರಲ್ಲಿ ಒಂದೆರಡು ಮುಳುಗು ಹಾಕಿ, ದನಿ ರಾಡಿಯನ್ನೆಬ್ಬಿಸುತ್ತ ಅವು ಪುರ್ರೆಂದು ಚಾಚಿದ ಹರೆಗೆ ಪುಟಿಯುತ್ತವೆ. ಅಲ್ಲಿ ಕೂತು ತಮ್ಮ ಚಿಲ್ಪಾರಿ ರೆಕ್ಕೆಗಳನ್ನು ಹರಡಿ ಕೊಕ್ಕಿನಿಂದ ಒಳ ಭಾಗವನ್ನು ಕೆರೆದುಕೊಳ್ಳುತ್ತವೆ. ಈ ಕಿರು

ನೀರ್ದಾಣ ಕೆಲವೆಡೆಯಲ್ಲಿ ಆಕಾಶ ನೀಲಿಯ ದೃಷ್ಟಿಗೆ ಬಾಹಿರ. ಅಲ್ಲೆಲ್ಲ ಅಷ್ಟು ದಟ್ಟವಾಗಿದೆ ಎಲೆ, ಕಾಯಿ, ಹಣ್ಣುಗಳ ಗುಂಪು ಗೊಂಚಲು. ಮತ್ತೆ ಕೆಲವೆಡೆ ಈ ನೀರಿನಾಸರೆ, ಪರ್ಣ ವಿರಳವಾದ ಕೊಂಬೆ ರೆಂಬೆಗಳ ಮೂಲಕ ಆಗಸ ಹಾಗೂ ಅಲ್ಲಿ ಕೆನೆಗೊಳ್ಳುವ ಮುಗಿಲಿನ ತುಣುಕುಗಳನ್ನು ಪಡಿಮೂಡಿಸುವ ಕೈಗನ್ನಡಿಯಂತಿದೆ. ಬೀಸುವೆಲರಿಗೆ ಕಪ್ಪನೆ ನೇರಳೆ ಹಣ್ಣು ಆಗೊಂದು ಈಗೊಂದು 'ತಳಕ್ ಪಳಕ್' ಎಂದು ತೊಟ್ಟು ಕಳಚಿ ಈ ಮರಿ ಕೊಳಕ್ಕೆ ಬೀಳುತ್ತಿವೆ' (ಪುಟ: 677) ಹೀಗೆಯೇ ಈ ವರ್ಣನೆ ಮುಂದುವರಿಯುತ್ತದೆ. 'ಯೌವನ ದಿಂದ ವಾರ್ಧಿಕ್ಯಕ್ಕೆ ಮಗುಚಿಕೊಳ್ಳುವ ಜೀವನದ ಅವಸ್ಥೆಯ ಪಾಡನ್ನು' ಈ ಮಹೋಪಮೆ ಸಂಕೇತಿಸುತ್ತದೆ.

'ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದ ರೀತಿಯಲ್ಲಿ ಕೂಡಿದ ಮಟ್ಟಿಗೆ ಅನನ್ಯತೆಯಿರಬೇಕೆಂಬ ತುಡಿತ' (ಪುಟ: 4) ಅವರ ಗದ್ಯಕ್ಕಿಂತ ಅವರ ಪದ್ಯದಲ್ಲಿ ಹೆಚ್ಚು ಸಾರ್ಥಕವಾಗಿದೆ. ಅಂದರೆ ಅವರ ಗದ್ಯ ಕಡಿಮೆ ಎಂದು ಹೇಳುವಂತಿಲ್ಲ. ತಮ್ಮ ಭಾಷೆ ಅಂಗಿಯಲ್ಲ, ಚರ್ಮ ಎಂದು ಹೇಳಿದ್ದರಲ್ಲಿ ತಥ್ಯಾಂಶವಿದೆ. ಅದರಿಂದಾಗಿ ಅವರ ಗದ್ಯ ವಿಶಿಷ್ಟವಾಗಿದೆ ಎಂದು ನಿರ್ಣಯಿಸಬಹುದು. ಗದ್ಯವೂ ಸೃಜನ ಕ್ರಿಯೆಯ ಪರಿಣಾಮ ಎನ್ನುವ ಅವರ ಮಾತು ದಿಟಕ್ಕೂ ದಿಟ. 'ನನ್ನ ಸೃಜನಪ್ರಕ್ರಿಯೆಯ ನೇಪಥ್ಯದಲ್ಲಿ ಕ್ರಿಯಾಶೀಲವಾಗಿ ತೊಡಗಿರುವುದು ಅಂತರ್ಮುಖೀ ಸ್ವಭಾವ. ಎಂದೇ ನನ್ನ ಬರವಣಿಗೆ ವಿಚಾರಪರ ಮತ್ತು ವಿಮರ್ಶಾತ್ಮಕ ಆಗಿರುವ ಜೊತೆಗೆ ಭಾವ ತನ್ಮಯ ಗುಣವನ್ನು ಆರ್ಜಿಸಿಕೊಂಡಿದೆ. ಬೌದ್ಧಿಕ ಗ್ರಾಸದೊಡನೆ ಹೃದ್ಯತೆಯ ಅಂಶವೂ ಸಂಲಗ್ನಗೊಂಡಿದೆ' (ಪುಟ: 4). ಗದ್ಯರಚನೆ ವೈಚಾರಿಕ ಹಾಗೂ ವಿಮರ್ಶಾತ್ಮಕವಾಗಿರುವುದರ ಜತೆಗೆ ಭಾವ ತನ್ಮಯವಾಗಿಯೂ ಇರಬೇಕೆಂಬ ಅವರ ಅಭಿಪ್ರಾಯ ಉಪಾದೇಯವಾದದ್ದೇ.

'ಮಾನವ ಕೋಟಿಯ ಮೂಕ ಸಂಕಟಕೆ ಮಾತಿನ ಪ್ರತಿನಿಧಿ ನನ್ನ ನುಡಿ' ಎಂಬುದಾಗಿ ತಮ್ಮ ಕವಿತೆಯ ಬಗ್ಗೆ ಅವರು ಹೇಳಿಕೊಂಡಿರುವ ಮಾತು ಅವರ ಗದ್ಯ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಮಾನವ ಹಿತ, ಸಮಾಜಪ್ರಜ್ಞೆ ಅಥವಾ ಸಾಮಾಜಿಕ ಬದ್ಧತೆ ತಮ್ಮೆಲ್ಲ ಬರಹಗಳ ಧ್ಯೇಯವೆಂಬುದನ್ನು ಅವರ ಮಾತುಗಳಿಂದಲೇ ಅರಿಯಬಹುದು:

'ನನ್ನ ಗದ್ಯ ಬರಹಗಳು, ಲೇಖನಗಳು ಪ್ರಮುಖತಃ ವಿಮರ್ಶಾತ್ಮಕ, ವಿಚಾರಾನ್ವೇಷಕ ಸ್ವರೂಪದ್ದೆಂದು ಮುಂಚೆ ತಿಳಿಸಿದ್ದೇನೆ. ಸಾಹಿತ್ಯ ವಿಮರ್ಶೆ, ಕಲೆ, ಸಂಸ್ಕೃತಿ, ನಾಗರಿಕತೆ, ರಾಜಕೀಯ, ಧರ್ಮ, ಪುರುಷಾರ್ಥ, ಪ್ರಕೃತಿ, ರಾಷ್ಟ್ರ (ಜತೆಗೆ ವ್ಯಕ್ತಿ ಚಿತ್ರಗಳು) ಮತ್ತಿತರ ಸಂಗತಿಗಳ ಸುತ್ತ ಇಲ್ಲಿನ ಬರಹಗಳು ಪರಿಭ್ರಮಿಸಿದರೂ ಸ್ಥಾಯಿಕೇಂದ್ರ ಮಾತ್ರ ಮನುಷ್ಯ ಜೀವಿತದ ಸಮಷ್ಟಿ ಒಳಿತಿನ ಹಾರೈಕೆಯೇ ಆಗಿದೆ. ದೇಶ, ಭಾಷೆ, ಪ್ರಾಂತ್ಯ, ಜಾತಿ, ಮತ, ಧರ್ಮ, ಪಕ್ಷ ವಿಪಕ್ಷವೆಂದು ಒಡೆದು ಸಿಡಿದಿರುವ ಮಾನವ ಕುಲದ ನಡುವೆ ಭಾವಾತ್ಮಕ ಸಾಮರಸ್ಯವನ್ನು ಏರ್ಪಡಿಸಲು ಶ್ರಮಿಸಬೇಕಾದ ಕಾಳಜಿ ಪ್ರಸಕ್ತ ಸಂದರ್ಭ ಗಳಲ್ಲಿ ರಾಷ್ಟ್ರಾದ್ಯಂತ ತೀವ್ರಗೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಬೇಕಾಗಿಲ್ಲ' (ಪುಟ : 540).

ನಿಸಾರರ ಸಾವಿರಕ್ಕೂ ಮಿಕ್ಕ ಪುಟಗಳ ಬೃಹತ್ ಗದ್ಯಗ್ರಂಥವಾದ 'ಸಮಗ್ರ ಗದ್ಯ ಬರಹಗಳು'ವಿನ ಲೇಖನಗಳಲ್ಲಿ ಅಡಕಗೊಂಡಿರುವ ಹೂರಣದ ಸ್ವರೂಪವನ್ನು ಪ್ರತಿ ಬಿಂಬಿಸುವುದರ ಜತೆಗೆ ಮೇಲೆ ಉದ್ಧರಿಸಿದ ವಾಕ್ಯಗಳು ಅವರ ಸಮಷ್ಟಿ ಸುಖಕಾತರತೆ ಯನ್ನೂ ರಾಷ್ಟ್ರಾಭಿಮಾನವನ್ನೂ ಮಾನವೀಯತೆಯನ್ನೂ ಧರ್ಮಸಮನ್ವಯ ಮನೋಭಾವ ವನ್ನೂ ನಿಸ್ಸಂದೇಹವಾಗಿ ಅಭಿವ್ಯಕ್ತಗೊಳಿಸುತ್ತವೆ.

ಸುಮಾರು ೧೯೪ ಲೇಖನಗಳನ್ನೊಳಗೊಂಡಿರುವ ಈ ಹೆಬ್ಬೊತ್ತಗೆಯ ಗದ್ಯಾಧ್ಯಯನ ಈ ಕಿರು ಲೇಖನದ ಉದ್ದೇಶವಲ್ಲ. ಅನ್ನ-ಅಗುಳು ನ್ಯಾಯದ ಪ್ರಕಾರ ಒಂದೆರಡು ಲೇಖನಗಳ ಬಗ್ಗೆ ಹೇಳಬಹುದಾದ ಎರಡು ಮಾತು ಅವರ ಎಲ್ಲ ಪ್ರಬಂಧಗಳಿಗೆ ಅನ್ವಯಿಸುತ್ತವೆಂದು ಭಾವಿಸಲಾಗಿದೆ. 'ತಪಕೊಲ್ಲದುದು ತಾಯ್ತನಕೆ ಸಾಧ್ಯವೆನಿಸಿದ ಮದರ್ ತೆರೆಸ' (ಪುಟ: 300-313) ಲೇಖನದ ವ್ಯಕ್ತಿ ಚಿತ್ರದಲ್ಲಿ ಆ ತಾಯಿ ಜಾಹ್ನವಿಯಾಗಿ, ಭಾಗೀರಥಿಯಾಗಿ, ಪವಿತ್ರ ಗಂಗೆಯಾಗಿ ವಿಕಾಸಗೊಂಡ ಪವಾಡಸದೃಶ ವ್ಯಕ್ತಿತ್ವವನ್ನು ಕಾಣಬಹುದಾಗಿದೆ. ಅದನ್ನೋದಿದ ಅನಂತರ ಸರ್ವರೂ ಆ ವ್ಯಕ್ತಿ ಚಿತ್ರಕ್ಕೆ ಭಾವಭಾರದಿಂದ ಮಣಿಯಬಹುದಲ್ಲದೆ, ಅವರ ಜೀವನದಲ್ಲಿ ಪರಿವರ್ತನೆಯ ತುಡಿತವನ್ನು ಕಾಣಬಹುದೆಂದು ತೋರುತ್ತದೆ. ಕೊಲ್ಕತ್ತದ ಮಾಲಿನ್ಯ ವರ್ಣನೆ ಹಾಗೂ ಅಂಗವಿಕಲರ, ಅನಾಥ ಶಿಶುಗಳ ಹೃದಯ ವಿದ್ರಾವಕ ದೃಶ್ಯಗಳ ವಾಸ್ತವ ಚಿತ್ರವನ್ನು ಓದಿಯೇ ಅರಿಯಬೇಕು. ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ನರು ಸೌಹಾರ್ದದಿಂದ ಸಹಬಾಳ್ವೆ ನಡೆಸಬೇಕಾಗಿದ್ದರೆ, ಪ್ರತಿಯೊಬ್ಬರೂ ಈ ನಾಲ್ಕು ಧರ್ಮಗಳ ಉಪದೇಶ ಸಾರವನ್ನು ಸಂಕ್ಷೇಪವಾಗಿಯಾದರೂ ಅರಿತಿರಬೇಕು. ಈ ಗ್ರಂಥದಲ್ಲಿ ಸುಮಾರು 70 ಪುಟಗಳಷ್ಟು ಜಾಗ ಇಸ್ಲಾಂ ಧರ್ಮದ ವಿವರಣೆಗೆ ಮೀಸಲಾಗಿದೆ. 'ಕನ್ನಡದ ನುಡಿ ಮುಡಿಗೆ ಕುರ್-ಆನ್‌ನ ಸಿರಿಕೊಡುಗೆ' ಎನ್ನುವುದು ಈ ಧರ್ಮದ ಬಗೆಗಿನ ಮೂರು ಪ್ರಬಂಧಗಳಲ್ಲೊಂದು. ಲೇಖನದ ತಲೆ ಹೆಸರನಲ್ಲಿಯೇ ಕನ್ನಡ, ಕುರ್-ಆನ್‌ಗಳ ಬಗ್ಗೆ ನಿಸಾರರಿಗಿರುವ ಭಾವುಕತೆ, ವಿಶ್ವಾಸ, ಗೌರವಗಳು ವ್ಯಕ್ತವಾಗುತ್ತವೆ. ಇಲ್ಲಿ ಭಾಷೆ ಸರಳ, ಸ್ಪಷ್ಟ, ಅಲಂಕಾರ ಮುಕ್ತ; ಸಾಮಾನ್ಯರಿಗೂ ಎಟಕುವಂಥದು; ತಾರ್ಕಿಕ ಕಸರತ್ತಂತು ಇಲ್ಲ. 'ಇಸ್ಲಾಮೀ ಅಧ್ಯಾತ್ಮದ ಸೀಮಾ ಸಾಧಕರು ಸೂಫಿಗಳು': ಸೂಫಿ ಹಾಗೂ ಭರತ ಖಂಡದ ಭಕ್ತಿ ಪಂಥಗಳ ನಡುವಣ ಕೊಳು ಕೊಡೆಯನ್ನು ಅವರು ತೌಲನಿಕ ವಿಧಾನದಲ್ಲಿ ವಿವರಿಸಿದ್ದರೆ ಎರಡೂ ಪಂಥಗಳ ಅನುಯಾಯಿಗಳಿಗೆ ತುಂಬ ಪ್ರಯೋಜನವಾಗುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ. 'ಪ್ರವಾದಿವರ್ಯರ ಪ್ರವಚನದ ಪ್ರಜ್ವಲ ವಜ್ರಗಳು: ಹದೀಸ್' ಎನ್ನುವುದು ಇಸ್ಲಾಂ ಧರ್ಮದವರ ಪಾಲಿಗೆ ಶ್ವಾಸಕೋಶಪ್ರಾಯವಾಗಿರುವ ಮತ್ತೊಂದು ಗ್ರಂಥ ಸಮುಚ್ಚಯ. ಪವಿತ್ರ ಕುರ್‌ಆನ್‌ನ ಚಿಂತನಯೋಗ್ಯ, ಸಾರೋಕ್ತಿಗಳ ಮತ್ತು ಪರಿಪಾಲನಾರ್ಹ ನೀತಿ ನಿಯಮಗಳ ವ್ಯಾಖ್ಯೆಯಿದು, ಕೃತಾರ್ಥ ನಡೆನುಡಿ ಆಚಾರಗಳ ಸೌಧವಿದು ಎಂದು ನಿಸಾರರು 'ಹದೀಸ್' ಅನ್ನು ಕುರಿತು ವಿವರಣೆ ನೀಡಿದ್ದಾರೆ. ಕನ್ನಡಿಗರೆಲ್ಲರೂ ಇವನ್ನು ಅತ್ಯಾವಶ್ಯಕ ವಾಗಿ ಓದಿ ಮನನ ಮಾಡಿಕೊಳ್ಳುವುದಾದರೆ ಜ್ಞಾನ ಕ್ಷಿತಿಜ ವಿಸ್ತಾರವಾಗುತ್ತದೆ, ಮತೀಯ ಸಾಮರಸ್ಯ ಕುದುರುತ್ತದೆ.

ನಿಸಾರರ ತಾರ್ಕಿಕ ವಿಚಾರಸರಣಿಯ ಹಾಗೂ ಅವರ ಹೃದ್ಯಗದ್ಯದ ಬೆಡಗು ಬಿನ್ನಾಣಗಳ ಕಡೆಗೆ ವಿಚಾರವಂತರ ಗಮನ ಸೆಳೆಯುವ ಸಲುವಾಗಿ 'ಆಸೆ-ಸಂಕಲ್ಪಗಳ ಅನ್ಯೋನ್ಯತೆ' ಎಂಬ ಪ್ರಬಂಧದ ಕೆಲವು ವಾಕ್ಯಗಳನ್ನು ಉದ್ಧರಿಸಬಹುದಾಗಿದೆ:

'ಆಸೆ ದುಃಖಕ್ಕೆ ಮೂಲ, ನಿಜವೇ. ಹಿರಿಯರ ಅನುಭವ-ಪರೀಕ್ಷಿತ ಭಾಷಿತ. ಆಸೆ ಅನರ್ಥಕ್ಕೆ ಆಹ್ವಾನಪತ್ರ. ಅಧ್ವಾನ ಅನಾಹುತಗಳಿಗೆ ಅಹವಾಲು. ಆದರೆ ಯಾವಾಗ? ಆಸೆ ಔಚಿತ್ಯದ ಲಕ್ಷ್ಮಣ ಗೆರೆಯನ್ನು ಹಾಯ್ದಾಗ; ಅರಾಜಕ, ಅನಂಕುಶವಾದಾಗ. ಆಗ ಗತಿಗೇಡು ಕಟ್ಟಿಟ್ಟ ಬುತ್ತಿ. ಆದರೆ ಆಸೆಯಿಲ್ಲದ ಮನುಷ್ಯ ಅರೆ ಚಣವಾದರೂ ಉಸಿರಾಡಲು ಶಕ್ಯವೆ? ಕೊನೆಗಾಲದ ತನಕ ಜೀವಿತದ ಆಸಕ್ತಿ, ಪ್ರೀತಿಗಳಿಗೆ ಆಸೆಯೇ ಆಮ್ಲಜನಕ. ಬಾಳ್ವೆಯ ಹಸುಳೆಗೆ ಆಸೆ ಎದೆ ಹಾಲು. ಕಣ್ಣಿಗೆ ರೆಪ್ಪೆ, ನದಿಗೆ ನೆರೆ, ಕಡಲಿಗೆ ತೆರೆ ಹೇಗೋ ಹಾಗೆ ಜೀವನಕ್ಕೆ ಆಸೆ... ಕೈಗೂಡದ ಆಸೆಗಳು ಮನಸ್ಸಿನ ಗುಹ್ಯ ಗುಹಾಂತರದಲ್ಲಿ ಇಲ್ಲಣ, ಬಾವಲಿಗಳಂತೆ ಅನುಗಾಲ ಜೋತುಬಿದ್ದಿರುತ್ತವೆ—ಪ್ರಾರಬ್ಧದಂತೆ' (ಪುಟ: 545-546).

—ಇಲ್ಲಿಯ ಒಂದೊಂದು ವಾಕ್ಯವೂ ಭಾವದೀಪ್ತ, ಅರ್ಥಯುಕ್ತ, ತರ್ಕಬದ್ಧ, ಉಪಮಾನ ರೂಪಕ ಸಂಪತ್ ಸಮೃದ್ಧ. ಅವುಗಳ ಮೈಕಟ್ಟಿನಲ್ಲಿ ಸುಷ್ಮತೆಯಿದೆ, ಸಮತೋಲನ ವಿದೆ, ಲಯವಿದೆ. 'ಭಾವಾಲೋಚನೆಗೆ ಮಾತುಗಾರಿಕೆಯ ವರಸಾಮ್ಯವಿದೆ' (ಪುಟ: 591). ಇದನ್ನು ಭಾವ ಪ್ರಬಂಧವೆಂದರೂ ಸಲ್ಲುತ್ತದೆ.

ಪ್ರಬುದ್ಧ ಸಾಹಿತಿಗೆ ತಕ್ಕಂತೆ ಸಹಜವಾಗಿಯೇ ಈ ಗ್ರಂಥದ ಮೂರನೆಯ ಒಂದು ಭಾಗಕ್ಕಿಂತಲೂ ಹೆಚ್ಚು ಭಾಗ ಸಾಹಿತ್ಯ ವಿಮರ್ಶೆ, ಮೀಮಾಂಸೆಗಳಿಗೆ ಮೀಸಲಾಗಿದೆ. ಕುವೆಂಪು, ಬೇಂದ್ರೆ, ಎಂ.ಆರ್.ಶ್ರೀ., ಅಡಿಗ ಮೊದಲಾದ ಹತ್ತಾರು ಕವಿಗಳ ಮೌಲಿಕ ಕಾವ್ಯ ವಿಮರ್ಶೆಯ ಮೂಲಕ ನಿಸಾರರು ಶ್ರೇಷ್ಠ ವಿಮರ್ಶಕರ ಪಂಕ್ತಿಗೆ ಸೇರಿದ್ದಾರೆ. ಅವರದು 'ಬೈ ವಿಮರ್ಶೆಯೂ ಅಲ್ಲ, ಜೈ ವಿಮರ್ಶೆಯೂ ಅಲ್ಲ' (ಪುಟ: 965) ಸೈ ವಿಮರ್ಶೆ. ಪೂರ್ವಾಗ್ರಹ ದುರಾಗ್ರಹ ದೂರವಾದ ಸಮತೂಕದ ವಿಮರ್ಶೆ. 'ಅಡಿಗರೊಡನೆ ಸಂವಾದ, ಚರ್ಚೆ ನಮ್ಮ ಪಾಲಿಗೆ ಅದೊಂದು ವಿದ್ಯಾಭ್ಯಾಸವಾಗಿರುತ್ತಿತ್ತು. ಅರಿವಿನ ಪರಿಧಿಯನ್ನು ಹಿಗ್ಗಲಿಸುವ ಉಪಯುಕ್ತ ಸಂಗತಿಗಳ ಸುಗ್ಗಿ ಅಲ್ಲಿ ಮೆರೆದಿರುತ್ತಿತ್ತು. ಇದರ ನಡುವೆ ತುಂಬು ಚಂದ್ರನಿಗೆ ಅಡ್ಡ ಹಾಯುವ ಕಾರ್ಮುಗಿಲಿನ ತೇಪೆಯಂತೆ, ಕೆಲವೊಮ್ಮೆ ಅದು ಏಕಪಕ್ಷೀಯವೋ, ನವ್ಯ ಕಾವ್ಯ ವಿರೋಧಿಗಳ ಬಗ್ಗೆ ಅನುದಾರವೋ ಆದ ಟೀಕೆ ವ್ಯಕ್ತಿ ನಿಂದನೆಗಳಿಂದ ದಿಕ್ಕು ತಪ್ಪುತ್ತಿದ್ದುದು ನನ್ನ ವಿಷಾದಕ್ಕೆ ಕಾರಣವೊದಗಿಸುತ್ತಿತ್ತು. ಎಷ್ಟಾದರೂ ನಮ್ಮೆಲ್ಲರದು ಉಪ್ಪುಖಾರ ತಿಂದ ದೇಹವಲ್ಲವೆ?' (ಪುಟ: 603). ಹೀಗೆ ತಮ್ಮ ಮೆಚ್ಚಿನ ಕವಿ ಕಾವ್ಯರೂಪಿ ಅಡಿಗರ ಬಗೆಗೆ ಅವರು ಆಡಿರುವ ಮಾತುಗಳಲ್ಲಿ ಸತ್ಯನಿಷ್ಠೆಯ ಸುಳುಹಿದೆ. ಉತ್ತಮ ವಿಮರ್ಶಕರಾಗಬಯಸುವವರಿಗೆ ನಿಸಾರರ ವಿಮರ್ಶೆಗಳು ಮಾರ್ಗದರ್ಶಿಯಾಗಬೇಕಾಗಿದೆ. ಸ್ವಕಾವ್ಯ ಸಾಹಿತ್ಯವನ್ನು ಕುರಿತ ವಿಶ್ಲೇಷಣೆಯಲ್ಲಿ, ಇತರರ ಕವಿಕಾವ್ಯ ವಿಮರ್ಶೆಯಲ್ಲಿ, ಸಭೆ ಸಮ್ಮೇಳನಗಳಲ್ಲಿ ಮಾಡಿದ ಅವರ ಉಪನ್ಯಾಸಗಳಲ್ಲಿ ಅವರೇ ರೂಪಿಸಿಕೊಂಡ ಕಾವ್ಯತತ್ವ ಸಾಹಿತ್ಯ ಲಕ್ಷಣಗಳು ವ್ಯಕ್ತಗೊಂಡಿವೆ. 'ಸಾತ್ವಿಕ ದೈವೀಸ್ವರೂಪಿ ಸರಸ್ವತೀ' ಪ್ರಬಂಧದಲ್ಲಿ

(ಪುಟ: 271-280) ನಿರೂಪಣೆಗೊಂಡಿರುವ ಸರಸ್ವತಿ ತತ್ವ ಹಿಂದೂ ಆಸ್ತಿಕ ವಿದ್ವಾಂಸನನ್ನು ನೆನಪಿಗೆ ತರುತ್ತದೆ. ಇವರು ನಿಜವಾಗಿಯೂ ಇಸ್ಲಾಂ-ಹಿಂದೂ ಧರ್ಮಗಳ ರಸ ಸೇತುವೆ ಯಾಗಿದ್ದಾರೆ. ಭರತಖಂಡದ ಏಕತೆ, ಭದ್ರತೆ, ಭವಿಷ್ಯಗಳು ಇಂಥವರಿಂದ ದೃಢಗೊಳ್ಳ ಬೇಕಾಗಿದೆ.

ಕವಿ ನಿಸಾರರು ಗದ್ಯ ರಚನೆಯಲ್ಲಿಯೂ ಬಲಿಷ್ಠರು. ವಿಚಾರ, ವಿಮರ್ಶೆ, ಭಾವುಕತೆ, ಉಪಮಾರೂಪಕಾದ್ಯಲಂಕಾರಗಳು ಸೇರಿ ಪರಿಪಾಕಗೊಂಡ ರಸಾಯನ ಅವರ ಗದ್ಯ. ಕೆಲವೊಮ್ಮೆ ಅದು ಸೂತ್ರದ, ಗಾದೆಯ, ಸೂಕ್ತಿಯ, ಸುಭಾಷಿತದ ದಾರಿ ಹಿಡಿದು ಮನ ಹೃದಯಗಳಿಗೆ ಆಪ್ಯಾಯಮಾನವಾಗುತ್ತದೆ. ಸಂಸದರೂ ಶಾಸಕರೂ ಮತದಾರರೂ ಅತ್ಯಾವಶ್ಯಕವಾಗಿ ಓದಬೇಕಾದ ಲೋಕಾನುಭವ ಸಮೃದ್ಧವೂ ವಿಡಂಬನಾತ್ಮಕವೂ ವಾಸ್ತವವೂ ಆದ 'ಪ್ರಜಾಪ್ರಭುತ್ವದ ಸುತ್ತಮುತ್ತ' (ಪುಟ: 558) ಎಂಬ ಪ್ರಬಂಧದಲ್ಲಿ ಬರುವ 'ಪ್ರಜಾತಂತ್ರದ ಹೆಸರಿನಲ್ಲಿ ಸರಸ್ವತಿಯನ್ನು ಹರಾಜು ಹಾಕಿ, ಲಕ್ಷ್ಮಿಯನ್ನು ಖರೀದಿಸುತ್ತಿದ್ದಾರೆ' ಎಂಬ ವಾಕ್ಯವೊಂದೇ ಇಂದಿನ ಅವಹೇಳನಕರವಾದ ರಾಜಕೀಯ ಸ್ಥಿತಿಯನ್ನು ಹಾಗೂ ರಾಜಕಾರಣಿಗಳ ದುಶ್ಚಾರಿತ್ಯವನ್ನು ಹಂಗಿಸುತ್ತದೆ. 'ವೃತ್ತಿಪರ ಪಾಕಡಾಗಳ ಕುತ್ಸಿತಯುಕ್ತಿ, ಗಿಟ್ಟಿದಷ್ಟನ್ನು ಗೆಬರಿಕೊಳ್ಳುವ ಲೂಟಿಕೋರ ಪ್ರವೃತ್ತಿ ಇವೊತ್ತಿನ ದರ್ಬಾರಿಗರಲ್ಲಿ ಚಾಲೂ ಇರುವಂತೆ, ಅವರ ಹುನ್ನರುಗಳನ್ನು ಡಾಣಾಡಂಗುರ ಟೀಕಿಸುವ ಇಂದಿನ ಪ್ರತಿಪಕ್ಷೀಯ ಪುಡಾರಿಗಳು ನಾಳೆ ನಾಡಿನ ಕಡಿವಾಣಗಳನ್ನು ಹಿಡಿದಾಗ, ಮಾಜಿ ಮಹೋದಯರ ಸ್ಪರ್ಧಾರ್ಥಿಗಳೋ ಎನ್ನುವಂತೆ ಅವರಿಗಿಂತ ನಾಲ್ಕಡಿಯಷ್ಟಾದರೂ ತಿಜೋರಿ ತುಂಬಿಕೆಯಲ್ಲಿ ತೊಡಗದಿದ್ದರೆ ಅವರು ದುರುದುಂಬಿತನದಿಂದ ಕೂಡಿದ ರಾಜಕೀಯಕ್ಕೆ ಧುಮುಕಿದ್ದು ಬೇಕಾರೆನಿಸೀತು!' (ಪುಟ: 565). ಸ್ವಾತಂತ್ರ್ಯಾನಂತರದ ಪ್ರಜಾಪ್ರಭುತ್ವದ ಇತಿಹಾಸವೇ ಈ ವಾಕ್ಯದಲ್ಲಿ ಅನುರಣಿಸುವಂತಿದೆ. ಇಲ್ಲಿಯ ಒಂದೊಂದು ಪದದ ಆಂತರ್ಯವನ್ನು ಹೊಕ್ಕು, ಅಲ್ಲಿ ಪಕಪಕನೆ ಕುದಿಯುತ್ತಿರುವ ಲಾವಾ ರಸದ ಕಡೆಗೆ ದೃಷ್ಟಿ ಹೊರಳಿಸಿದಾಗ, ಒಂದೊಂದು ಪದವೂ ರಾಜಕೀಯ ಸೈತಾನರ ಮೇಲೆ ಹಾರಿಸಿದ ಬಾಂಬು ಎಂದು ಮನವರಿಕೆಯಾಗದಿರದು. ಒಂದು ಪದವನ್ನು ಕೂಡದಂಥ, ಒಂದು ಪದವನ್ನು ಕಳೆಯದಂಥ ಸುಸಂಬದ್ಧ ಖಚಿತ ನಿಖರತೆಯನ್ನು ಇಲ್ಲಿ ಕಾಣಬಹುದು. ಇಂಥದೇ ವಿಷಯವನ್ನೊಳಗೊಂಡ 'ಹೋದೆಯಾ ಅಂದರೆ, ಬಂತು ಗವಾಕ್ಷಿಯಲ್ಲಿ' (ಪುಟ: 384-390) ಎಂಬ ಪ್ರಬಂಧವನ್ನು ಇದರ ಜತೆಗೆ ಅಧ್ಯಯನ ಮಾಡಬಹುದು.

ನಿಸಾರರ ಸೂತ್ರ ಪ್ರಾಯದ ಸುಭಾಷಿತ ಸದೃಶ ಗದ್ಯಕ್ಕೆ ಕೇವಲ ಕೆಲವು ನಿದರ್ಶನಗಳನ್ನು ಮಾತ್ರ ಉದ್ಧರಿಸುತ್ತೇನೆ. ಅದರ ಸೊಗಡನ್ನು ಅನುಭವಿಸುವುದರ ಜತೆಗೆ ಚಪ್ಪರಿಸಬಹುದು: 'ಸಾಹಿತ್ಯ ಬಾಳಿನ ಮತಿಬಿಂಬ' (ಪುಟ: 830). 'ವ್ಯಕ್ತಿಯ ಮನೋವಿಚಾರ ಬಗ್ಗಡವಾಗಿದ್ದರೆ ಅವನ ಶೈಲಿಯಲ್ಲಿಯೂ ರಾಡಿಯಾಗಿರುವುದು ಸುವೇದ್ಯ ಸಂಗತಿ' (ಪುಟ: 593). 'ರಾಷ್ಟ್ರಜೀವನ ನಖಶಿಖಾಂತ ದುರ್ಗಂಧಮಯವಾಗಿ ಗಟಾರಿಸತೊಡಗಿದೆ' (ಪುಟ: 533). 'ಸಂಸ್ಕೃತಿಯ ಚಲನವಲನಕ್ಕೆ ನಡೆ ಮಡಿಯಾಗಬೇಕಾದ ಅಂತರಂಗ, ಬಿಡಾಡಿ

ಭಾವನೆಗಳ ಕಾಲೊರಸಿಯಾಗಿದೆ' (ಪುಟ: 166). 'ಸಮವಸ್ತ್ರಧಾರಿ ಕವಾಯತಿನ ಯಾಂತ್ರಿಕ ಶಿಕ್ಷೆಯಾಗಿದೆ ಶಿಕ್ಷಣ ಕ್ಷೇತ್ರ' (ಪುಟ: 168). 'ಮಾನವತೆಯನ್ನು ಮರೆತ ಮತೋದ್ಧಾರ ಹೆಣದ ಸಿಂಗಾರ' (ಪುಟ: 175). 'ಪ್ರಾದೇಶಿಕ ಭಾಷೆಗಳ ಗೋರಿಗಳ ಮೇಲೆ ಅದರ (ರಾಷ್ಟ್ರಭಾಷೆಯ) ಅರ್ಚನಾಲಯ ನಿರ್ಮಿಸಬಹುದೆ?' (ಪುಟ: 180). 'ಕನ್ನಡ ಮಾಧ್ಯಮಕ್ಕೆ ತೊಡಕಾಗಿರುವುದು ಇಂಗ್ಲಿಷ್ ಮಾಧ್ಯಮ ಮಾತ್ರವಲ್ಲ, ಆ ಶಾಲೆಗಳ ಶೋಚನೀಯ ಅವಸ್ಥೆ ಕೂಡ ಅದರ ಮುನ್ನಡೆಗೆ ಮುಳುವಾಗಿದೆ' (ಪುಟ: 376). 'ಚಿರಪರಿಚಿತವಾದದ್ದರಲ್ಲಿ ಅತಿ ಅಪರಿಚಿತವಾದದ್ದನ್ನು ದರ್ಶನ ಮಾಡಿಸಿ, ತನ್ಮೂಲಕ ಭಾವೋದ್ದೀಪನಗೊಳಿಸುವುದೇ ಸಕಲ ಕಾವ್ಯಕಲೆಗಳ ಚರಮೋದ್ದೇಶ' (ಪುಟ: 835). 'ತತ್ಕಾಲದ್ದನ್ನು ಯಾವತ್ಕಾಲವೂ ಯುಕ್ತ ವಾದದ್ದನ್ನಾಗಿ, ಸಕಾಲದ್ದನ್ನು ಸಕಲ ಕಾಲದ್ದನ್ನಾಗಿ ಸ್ವಪ್ರತಿಭೆಯ ಸ್ಪರ್ಶಶಿಲೆಯಿಂದ ಸುವರ್ಣಿಸುವಾತನೇ ಸರ್ವೋದ್ದಾಮ ಸೃಜನಶಾಲಿ' (ಪುಟ: 857). ಹೊಸ ವಿಚಾರಗಳ ಅಭಿವ್ಯಕ್ತಿಗೆ ಹೊಸ ಭಾಷೆಯ ನಿರ್ಮಾಣ ಅನಿವಾರ್ಯ. ಅದರಲ್ಲಿಯೂ ಎರಡು ಸಂಸ್ಕೃತಿಗಳ ತೊಟ್ಟಿಲಲ್ಲಿ ಬೆಳೆದು, ಮೂರು ನಾಲ್ಕು ಭಾಷೆಗಳಲ್ಲಿ ಪರಿಶ್ರಮವಿರುವ, ಇಂಗ್ಲಿಷ್ ಭಾಷೆಯ ಬಾಗು, ಬಳುಕು, ನಮ್ರತೆಯನ್ನು ಬಲ್ಲ ನಿಸಾರರು ತಾವು ಕಲಿತ ಎಲ್ಲ ಭಾಷೆಗಳಿಂದ ಧಾರಾಳವಾಗಿ ಪದಗಳನ್ನು ಲೂಟಿ ಹೊಡೆಯುವುದಲ್ಲದೆ, ಕನ್ನಡ ಹಾಗೂ ಸಂಸ್ಕೃತ ಭಾಷೆಗಳ ಪದಗಳನ್ನು ರೂಪಾಂತರಗೊಳಿಸುವ ನಾನಾ ಪ್ರಯೋಗಗಳ ಮೂಲಕ ವಿನೂತನ ಗದ್ಯವನ್ನು (ಪದ್ಯ ಸಹ) ಸೃಜಿಸಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆಂದೇ ಅಭಿಮಾನಪಟ್ಟುಕೊಳ್ಳ ಬಹುದು. ಅಸಾಂಪ್ರದಾಯಿಕ ಪದ ಸಿದ್ಧಿಯಿಂದಾಗಿ ಮೊದಮೊದಲು ಶೈಲಿ ತುಸು ವಿಚಿತ್ರವಾಗಿ, ಪೆಡಸಾಗಿ ತೋರಬಹುದಾದರೂ ವಿದೇಶದಿಂದ ಬಂದ ಜನ ಕಾಲಕ್ರಮೇಣ ಸ್ಥಳೀಯ ಜೀವನದಲ್ಲಿ ಬೆರೆಯುವಂತೆ, ಬರಬರುತ್ತಾ ಅದು ಕನ್ನಡದ ಜಾಯಮಾನದೊಡನೆ ಹೊಂದಿಕೊಳ್ಳುತ್ತದೆ ಎಂಬುದನ್ನು ಮರೆಯಲಾಗದು. ಭಾಷೆ ಹೊರವಾಗಿ ಬೆಳೆಯು ವುದಾಗಲಿ, ಉತ್ತಮ ಶೈಲಿ ನಿರ್ಮಾಣಗೊಳ್ಳುವುದಾಗಲಿ ಇದೇ ಮಾರ್ಗದಿಂದ ಎಂಬುದನ್ನು ವಿದ್ವಾಂಸರಿಗೆ ಹೇಳಿಕೊಡಬೇಕಾಗಿಲ್ಲ.

೩. ಪ್ರಸ್ತುತಿ

'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ, ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ' ಎಂಬ ಹಾಡನ್ನು ಕೇಳಿ ನಲಿಯದ, ಭಾವುಕರಾಗದ, ನಮ್ಮ ನಾಡಿನ ಹಿರಿಮೆಯನ್ನು ನೆನೆದು ಪುಳಕಿತರಾಗದ ಕನ್ನಡಿಗರಿಲ್ಲ. ಇಂದಿನ ಭಾರತೀಯರ ದುಃಸ್ಥಿತಿ ಯನ್ನು ಉಗ್ರವಾಗಿ ವಿಡಂಬಿಸುವ 'ಕುರಿಗಳು, ಸಾರ್ ಕುರಿಗಳು' ಕವಿತೆಯನ್ನು ಕೇಳಿ ನಗದ ಸಜ್ಜನರಾರು? ಹೆಗಲು ಮುಟ್ಟಿಕೊಳ್ಳದ ರಾಜಕಾರಣಿ ಯಾರು? 'ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ' ಎಂಬುದಾಗಿ ಹೃದಯ ತುಂಬಿ ಬಂದ ಭಾವಾಸ್ಫೋಟನೆಗೆ ಸ್ಪಂದಿಸದವರಾರು? 'ರಂಗೋಲಿ ಮತ್ತು ಮಗ' ಕವಿತೆಯನ್ನು ರಚಿಸಿದ ಕವಿ ಜಾತಿಮತ ದೇಶಭಾಷಾ ಭೇದಗಳನ್ನು ಮೀರಿದ ವಿಶ್ವಮಾನವನಾಗಲಾರನೆ? ವಸ್ತು ವೈವಿಧ್ಯದಿಂದ, ಬೆಡಗಿನ ಕಲೆಗಾರಿಕೆಯಿಂದ, ಮಸೆದಲಗಿನ ಕುಡಿಮಿಂಚಿನ ಹೊಳಪಿನ

ಭಾಷೆಯಿಂದ, ವಿನೂತನ ಭಾವಾನುಭವಗಳಿಂದ ಕನ್ನಡಕ್ಕೆ ಹೃದಯಂಗಮವಾದ, ಅಪೂರ್ವವಾದ ಹೊಸತನವನ್ನು ನೀಡಿರುವ ಈ ಪ್ರತಿಭಾವಂತ ಕವಿ ಕನ್ನಡವಿರುವೆಡೆಯಲ್ಲೆಲ್ಲ ವಿರಾಜಮಾನರಾಗಿದ್ದಾರೆ. `ಮನಸು ಗಾಂಧಿ ಬಜಾರು` ಎಂಬ ಕವಿತಾ ಸಂಕಲನದಿಂದ ಪ್ರಾರಂಭವಾದ ಅವರ ಪ್ರತಿಭಾಲಹರಿ ಸದ್ಯಕ್ಕೆ `ಆಕಾಶಕ್ಕೆ ಸರಹದ್ದುಗಳಿಲ್ಲ` ಎಂಬ ಸಂಕಲನವನ್ನು ದಾಟಿ 12ನೆಯ ಸಂಕಲನ `ಅರವತ್ತೈದರ ಐಸಿರಿ`ಯನ್ನು ತಲಪಿದೆ. ಒಂದೊಂದು ಕವನ ಸಂಗ್ರಹದಲ್ಲೂ ಹಲವಾರು ಸುಸ್ಮರಣೀಯ ಹಾಗೂ ಕನ್ನಡಕ್ಕೆ ಅಮೂಲ್ಯವೆನ್ನಿಸುವಂತಹ ದೀರ್ಘ ಬಾಳಿಕೆಯ ರಚನೆಗಳನ್ನು ನಿಸಾರರು ನೀಡಿದ್ದಾರೆ. ಅವರ `ನಿತ್ಯೋತ್ಸವ` ಕನ್ನಡ ಕ್ಯಾಸೆಟ್‌ಗಳ ಇತಿಹಾದಲ್ಲಿ ಮೊದಲನೆಯದಾಗಿ, ಮುಂದಿನವುಗಳಿಗೆ ಮಾರ್ಗದರ್ಶಕವಾಗಿ, ಕನ್ನಡ ನಾಡಿನಲ್ಲಿ ಮಾತ್ರವಲ್ಲ, ಕನ್ನಡ ಜನರಿರುವೆಡೆ ಜಗತ್ತಿನಲ್ಲೆಲ್ಲ ಜನಪ್ರಿಯವಾಗಿ, ಲಕ್ಷಾಂತರ ಜನರಿಗೆ ಮನರಂಜನೆಯನ್ನು ಒದಗಿಸುತ್ತಿದೆ.

'ನೈಜ ಕವಿಗೆ ಕಮಿಟ್‌ಮೆಂಟ್ ಅಂದರೆ ಸಾಮಾಜಿಕ ಬದ್ಧತೆ ಮೂಲಧನ`ವೆನ್ನುವ ಈ ಕವಿ 'ಕಮಿಟ್‌ಮೆಂಟ್ ಇಲ್ಲದವನ ಬರಹ ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ` ಎಂದು ಘೋಷಿಸುತ್ತಾರೆ. ಸಮಾಜದ ಕೈಗನ್ನಡಿಯಾಗದ, ಅದರ ಓರೆಕೋರೆಗಳನ್ನು ತಿದ್ದಲಾರದ ಸಾಹಿತ್ಯದಿಂದ ಏನಾಗಬೇಕಾಗಿದೆ? ಕೆಳಗೆ ಬಿದ್ದವರ ಬಗ್ಗೆ, ಬೆಂದುನೊಂದವರ ಬಗ್ಗೆ ಸಹಾನುಭೂತಿಯಿಲ್ಲದ, ವರ್ಣ ವರ್ಗ ವೈಭವದಲ್ಲಿಯೇ ಸದಾ ಮುಳುಗಿರುವ, ಶ್ರೀಸಾಮಾನ್ಯನ ಕ್ಷೇಮವನ್ನು ಲಕ್ಷಿಸದ ಕಾವ್ಯ ಇದ್ದರೇನು? ಇಲ್ಲದಿದ್ದರೇನು? ನಿಸಾರರ ಕವಿತೆಗಳ ಮೇಲೆ ಕಣ್ಣು ಹಾಯಿಸಿದಾಗ ಸಾಮಾಜಿಕ ಕಾತರತೆಯೇ ಅವರ ವ್ರತ, ಪಥ, ಶಪಥವಾಗಿರುವಂತೆ ಕಾಣುತ್ತದೆ.

ವಿಡಂಬನೆ ವಿನೋದಗಳು ಸಮಾಜದ ಆರೋಗ್ಯರಕ್ಷಣೆಗೆ ಅನಿವಾರ್ಯ. ಸಾಮಾಜಿಕ ರೋಗ ರುಜಿನಗಳ ಚಿಕಿತ್ಸೆಗೆ ಅವರು ಅವುಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಾರೆ. ನನ್ನ ಮಿತಾನುಭವದ ದೃಷ್ಟಿಯಿಂದ, ಸಮಕಾಲೀನ ಕವಿಗಳಲ್ಲಿ ಇಷ್ಟೊಂದು ಸಾರ್ಥಕವಾಗಿ, ಪರಿಣಾಮಕಾರಿಯಾಗಿ ಅದನ್ನು ಬಳಸಿಕೊಂಡವರು ಕುವೆಂಪು ಅವರನ್ನು ಬಿಟ್ಟರೆ ವಿರಳ. ನಿಸಾರರ ವೈಶಿಷ್ಟ್ಯವಿರುವುದೇ ಇಲ್ಲಿ. ಅವರನ್ನು `ವಿಡಂಬನ ಸಾಮ್ರಾಟ`ರೆಂದು ಕರೆದರೆ ಅತಿಶಯೋಕ್ತಿ ಯಾಗಲಾರದು. ತಮ್ಮ ನೂರಾರು ಕವಿತೆಗಳಲ್ಲಿ ದ್ವೇಷ ಮಾತ್ಸರ್ಯರಹಿತವಾದ ವಿನೋದ ಸಹಾನುಭೂತಿ ಕನಿಕರ ಅನುಕಂಪೆಗಳ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದಲು, ಅಂತರಾತ್ಮನ ಅನುಭವಗಳಿಗೆ ಅಭಿವ್ಯಕ್ತಿ ನೀಡಲು ಅವರು ತಮ್ಮ ಸಾಹಿತ್ಯವನ್ನು ಮೀಸಲಿಟ್ಟಿದ್ದಾರೆ; ಆ ಸಾರ್ಥಕ ಆಶಯದಲ್ಲಿ ಯಶಸ್ವಿಯಾಗಿದ್ದಾರೆ.

ಸ್ವಂತ ರಚನೆಗಳ ಜತೆಗೆ ನಿಸಾರರು ರಂಗಸ್ಥಳದಲ್ಲಿ ಯಶಸ್ವಿಯಾದ ಶೇಕ್ಸ್‌ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್` ಹಾಗೂ `ಒಥೆಲೊ` ಎಂಬೆರಡು ನಾಟಕಗಳನ್ನೂ ಕೆಲವು ರಷ್ಯನ್ ಕಥೆಗಳನ್ನೂ `ಬರೀ ಮರ್ಯಾದಸ್ಥರೆ` ಎಂಬ ಹೆಸರಿನ ದಕ್ಷಿಣ ಅಮೆರಿಕೆಯ ಪಾಬ್ಲೋ ನೆರುಡನ ಹಲವು ಕವಿತೆಗಳನ್ನೂ, ಅವು ಪರಕೀಯವಲ್ಲವೆನ್ನುವಂತೆ, ಕನ್ನಡ ಜಾಯಮಾನಕ್ಕೆ ಒಗ್ಗುವ ರೀತಿಯಲ್ಲಿ ಅಭಿಜಾತ ಶೈಲಿಯಲ್ಲಿ ಭಾಷಾಂತರಿಸಿದ್ದಾರೆ.

ನಿಸಾರರು ಸಹಜ ಸಂಪನ್ನ ಕವಿಯೆಂದೇ ಕನ್ನಡ ನಾಡಿನಲ್ಲಿ ಪ್ರಸಿದ್ಧರಾಗಿದ್ದಾರೆ. ಪಂಡಿತ ಪಾಮರರಿಂದ, ಬಾಲವೃದ್ಧರಿಂದ ಏಕ ರೀತಿಯ ಗೌರವಾದರಗಳಿಗೆ ಪಾತ್ರರಾದ ಪುಣ್ಯ ಕವಿ ಅವರು. ಮೊದಲೇ ತಿಳಿಸಿದಂತೆ ಕವಿತಾ ರಚನೆಯಲ್ಲೆಂತೋ, ಗದ್ಯ ರಚನೆಯಲ್ಲಿಯೂ ಅವರು ಉದ್ದಾಮರು. ಈವರೆಗೆ ಅವರ ಲೇಖನಿಯಿಂದ ಐದು ವೈಚಾರಿಕ ನೆಲೆಯ ಸುಪುಷ್ಟ, ವಿಶಿಷ್ಟ, ವೈವಿಧ್ಯಮಯ, ಉತ್ಕೃಷ್ಟ ಗದ್ಯ ಸಂಕಲನಗಳು ಹೊರಬಂದಿವೆ. ವಿಚಾರ ಸಮೃದ್ಧಿ, ಅನುಭವ ಸಂಪನ್ನತೆ, ಹಿತಮಿತ ಕಾವ್ಯಮಯತೆ, ವಸ್ತು ವೈವಿಧ್ಯ, ಪಾರದರ್ಶಕ ಅರ್ಥವಂತಿಕೆ; ವರ್ಣಮಯ ಪುಷ್ಪಹಾರವನ್ನೋ ಸ್ಫಟಿಕ ಮಣಿಗಳ ಸರವನ್ನೋ ಹೋಲುವ ವಾಕ್ಯರಚನೆ; ಭಾವಾಲೋಚನೆಗಳಿಗೆ ಅನುಗುಣವಾಗಿ ಹರಿಯುವ, ಜಿಗಿಯುವ, ಬಾಗುವ, ಬಳುಕುವ, ನಳನಳಿಸುವ ಚೈತನ್ಯಾತ್ಮಕ ಸುಂದರ ಶೈಲಿ—ಇವರ ಗದ್ಯದ ಹೆಗ್ಗಳಿಕೆ. 'ಇದು ಬರಿ ಬೆಡಗಲ್ಲೋ ಅಣ್ಣ', 'ಮನದೊಂದಿಗೆ ಮಾತುಕತೆ', 'ಹಿರಿಯರು ಹರಸಿದ ಹೆದ್ದಾರಿ', 'ಅಚ್ಚುಮೆಚ್ಚು', 'ವಿಚಾರ ವಿಹಾರ'—ಹೀಗೆ ಇವರು ತಮ್ಮ ಗ್ರಂಥಗಳಿಗೆ ನಾಮಕರಣ ಮಾಡುವಲ್ಲಿಯೇ ಅವುಗಳ ವಿನೂತನತೆ ವೈಶಿಷ್ಟ್ಯಗಳನ್ನು ಸೂಚಿಸಿದ್ದಾರೆ. ಮಕ್ಕಳಿಗಾಗಿ ಬರೆದ ಅವರ ಗದ್ಯ ಕೃತಿಗಳು ಬಹುಮಾನ್ಯವಾಗಿವೆ ಎಂಬುದನ್ನೂ ಮರೆಯುವಂತಿಲ್ಲ.

ಈ ಮುಂಚೆ ತಿಳಿಸಿದಂತೆ, ನಿಸಾರ್ ಅಹಮದರ ಮನೆ ಮಾತು ಉರ್ದು: ಅವರು ಓದಿದ್ದು ಮತ್ತು ಜೀವನಕ್ಕೆ ಬಳಸಿಕೊಂಡದ್ದು ವಿಜ್ಞಾನ. ನಿಸಾರ್ ಆತ್ಮಸಾಧನೆಗೆ ಹಿಡಿದಿದ್ದು ಕಾವ್ಯಪಥ. ವಿಜ್ಞಾನ, ಇಸ್ಲಾಂ ಮತ್ತು ಹಿಂದೂ ಧರ್ಮಗಳ ಅಖಂಡ ಅಭೇದ್ಯ ತ್ರಿವೇಣಿ ಸಂಗಮದಿಂದಾಗಿ, ಉರ್ದು, ಕನ್ನಡ, ಇಂಗ್ಲಿಷ್ ಭಾಷೆಗಳ ಸಮರತಿ ಸಮರಸಗಳಿಂದಾಗಿ ಇವರ ಭಾವಶ್ರೀಗೆ, ಚಿಂತನಶ್ರೀಗೆ, ಕಾವ್ಯಶ್ರೀಗೆ ಹಾಗೂ ಗದ್ಯಶ್ರೀಗೆ ಹೊಚ್ಚ ಹೊಸತಾದ ಜೇನ್ನೊಬಗುಗಳು ಸಮನಿಸಿವೆ; ಕನ್ನಡ ಸಾಹಿತ್ಯ ಕ್ಷೇತ್ರದ ನಂದನದ ಮೇಲೆ ಹೊಸ ನಾಲೆ ಹರಿದಂತಾಗಿದೆ. ಅವರ ದೇಶಪ್ರೇಮ, ಭಾಷಾಪ್ರೇಮಗಳು ಅವರ ವಿಶ್ವಪ್ರೇಮಕ್ಕೆ ಅಡ್ಡಿಯಾಗಿಲ್ಲ. ರಾಷ್ಟ್ರೀಯ ಭಾವೈಕ್ಯ ಸಾಧನೆಗೆ ನಿಸಾರರಂತಹ ಜನ ಹೃದಯವನ್ನು ಮಿಡಿಯಬಲ್ಲ ಜನಪ್ರಿಯ ಶಕ್ತಿ ಕವಿಗಳು ಈಗ ಬೇಕಾಗಿದೆಯೇ ಹೊರತು, ಪರಿಣಾಮಕಾರಿಯಲ್ಲದ ನಿಷ್ಪ್ರಯೋಜಕ ಸರ್ಕಾರಿ ಸಂಸ್ಥೆಗಳೂ ಅಲ್ಲ, ಏಜೆಂಟರೂ ಅಲ್ಲ.

ಕನ್ನಡ ಜನ ಮನೋಮಂದಿರದಲ್ಲಿ ಚಿರ ನಿವಾಸಿಗಳಾಗಿರುವ ಕವಿ ಕೆ. ಎಸ್. ನಿಸಾರ್ ಅಹಮದರನ್ನು ಕೃತಾರ್ಥವಾಗಿ ಎಪ್ಪತ್ತು ವರ್ಷಗಳನ್ನು ಮುಗಿಸಿದ್ದಕ್ಕಾಗಿ ಅಭಿನಂದಿಸುತ್ತ, ಇನ್ನೂ ಹಲವಾರು ವರ್ಷ ಅವರ ಸಾಹಿತ್ಯ ಸೌರಭ ನಾಡಿನಲ್ಲಿ ಪಸರಿಸಲಿ, ಅನೇಕ ಸಂಮಾನ, ಪ್ರಶಸ್ತಿಗಳು ಲಭಿಸಲಿ ಎಂದು ಹಾರೈಸುತ್ತೇನೆ.

ನಮಗಿಂತ ನೂರು ಪಾಲು ಮಿಗಿಲಾದದ್ದನ್ನು ಅನುಭವಕ್ಕೆ ತಂದುಕೊಂಡಾಗ ನಮ್ಮ ಅಹಂಭಾವ ಬಿಸಿಗಿಟ್ಟ ಬೆಣ್ಣೆಯಂತೆ ದ್ರವಿಸಿ, ವಿನಯ ಸೌಜನ್ಯಗಳು ನಮ್ಮ ವ್ಯಕ್ತಿಮೆಯನ್ನು ಪರಿಮಳಿಸುತ್ತವೆ.

(ಮಹತ್ತರ ಅನುಭವ)

ಕವಿ ಮಿತ್ರರ ಅಚ್ಚುಮೆಚ್ಚಿನ ಕಾವ್ಯ



♦ ಪ್ರೊ. ಎಚ್ಚೆಸ್ಕೆ

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಎಂದೊಡನೆ ನನ್ನ ಮನಸ್ಸು ಸುಮಾರು ಐದು ದಶಕಗಳ ಹಿಂದಕ್ಕೆ ಜಾರಿಕೊಳ್ಳುತ್ತದೆ. ಅಂದಿನ ಬದುಕಿನ ಹಸುರು-ಹೊನ್ನುಗಳನ್ನು ಬೆದಕುತ್ತದೆ. ನಿಸಾರ್ ಅಹಮದ್ ಕವಿಯಾಗಿ, ಚಿಂತನಶೀಲರಾಗಿ, ಗದ್ಯಶಿಲ್ಪಿಯಾಗಿ, ಚತುರ ಮಾತುಗಾರರಾಗಿ, ಸ್ನೇಹಜೀವಿಯಾಗಿ, ಸಂಘಟನಾ ಕುಶಲರಾಗಿ ನಿರಂತರವಾಗಿ ವಿಕಾಸಗೊಳ್ಳುತ್ತಲೇ ಬಂದಿದ್ದಾರೆ, ಹೊಸತನ ಮೆರೆಯುತ್ತಲೇ ಇದ್ದಾರೆ. ಹೊಸತನವೇ ಇವರ ಪ್ರತಿಭೆಯ ಬೀಸು. ಪ್ರತಿಭೆಯೆಂಬುದು ಯಾವಾಗಲೂ ನವ ನವೋಲ್ಲೇಖಶಾಲಿನಿಯಾದದ್ದು ಎಂಬ ಮಾತು ಇವರ ವಿಷಯಕ್ಕಂತೂ ಪೂರ್ತಿ ನಿಜ.

ಐದು ದಶಕಗಳ ಹಿಂದಿನ ಆ ವರ್ಷ (೧೯೫೬) ಮಹತ್ತ್ವಪೂರ್ಣ. ಕರ್ನಾಟಕ ಏಕೀಕರಣವಾದದ್ದು ಆ ವರ್ಷ. ಆಧುನಿಕ ಕನ್ನಡ ಕಾವ್ಯದ ದೃಷ್ಟಿಯಿಂದಲೂ ಆ ವರ್ಷಕ್ಕೆ ಮಹತ್ತ್ವವುಂಟು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಜಿ. ಪಿ. ರಾಜರತ್ನಂ ಅವರು ಆ ದಿನಗಳಲ್ಲಿ ಹೊಸ ಹೊಸ ಪ್ರತಿಭೆಯನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದರು. ವಿದ್ಯಾರ್ಥಿಗಳಲ್ಲಿ ಸುಪ್ತವಾಗಿದ್ದ ಸಾಮರ್ಥ್ಯ ವನ್ನು ಹೊರಗೆಳೆದು ಬೆಳಕಿಗೆ ತರುತ್ತಿದ್ದರು. `ಕಾಲೇಜ್ ಬರವಣಿಗೆ' ಎಂಬ ಮಾಲೆಯಲ್ಲಿ ಅನೇಕ ಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಬರಹಗಳನ್ನು ಪ್ರಕಟಿಸುತ್ತಿದ್ದರು. ಆ ವರ್ಷ

ಪ್ರಕಟವಾದ ಒಂದು ಕಿರು ಹೊತ್ತಗೆ 'ಪದ್ಯಾಂಜಲಿ'. ಇಂದು ವಿಶೇಷ ಖ್ಯಾತಿ ಗಳಿಸಿರುವ ಕವಿಗಳು ಆಗ ಇನ್ನೂ ವಿದ್ಯಾರ್ಥಿ ವಿದ್ಯಾರ್ಥಿನಿಯರು. ಲಂಕೇಶ ಇವರಲ್ಲೊಬ್ಬರು. ಸುಮತೀಂದ್ರ ನಾಡಿಗ ಇನ್ನೊಬ್ಬರು. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಮತ್ತೊಬ್ಬರು. ನಿಸಾರ್ ಅಹಮದ್ ಆಗ ಉದಿತೋದಿತ ಭೂ ವಿಜ್ಞಾನಿ :

'ನಿಮಿಷವೈದು ಕಳೆಯಲಿಲ್ಲ
ಬಂದು ನಾನು ಇಲ್ಲಿಗೆ;
ಕೊಡುತಲಿಹೆನೆ ಮಾರ್ದನಿಯನು
ನೈಸರ್ಗಿಕ ಸೊಲ್ಲಿಗೆ!
ಕಳೆದ ಕೋಟಿ ಕೋಟಿ ವರುಷ
ನನ್ನ ಚುರುಕು ಕಣ್ಣಿಗೆ
ತೋರುತಿಹವು ಒಂದು ದಿವಸ-
ವಾಗಿ ಬಹಳ ಸಣ್ಣಗೆ!
ನನ್ನ ಭಾವದೊಳಗೆ ಅವಿತು
ಕುಣಿಯುತಿಹುದು ನಂದನ;
ಎಲ್ಲೆ ಇರದ ಮಹಾ ವಿಶ್ವ-
ವೆಲ್ಲ ಇಲ್ಲಿ ಬಂಧನ!' (ಭೂ ವಿಜ್ಞಾನಿ)

ಭೂ ವಿಜ್ಞಾನಿಗೆ ಸಹಜವೆನಿಸುವ ಚಿಂತನ. 'ಕಲ್ಪಕಲ್ಪವಳಿವ ಮುನ್ನ ಲೋಹ, ನೀರು, ಕಲ್ಲು, ಚಿನ್ನ—ಆಗ ಬರಿಯ ಧೂಮ, ಧೂಮ!' ಆದರೆ ಈ ಧೂಮದ ಮರೆಯಲ್ಲಿ ಅಡಗಿದ್ದ ಭೂಮ. 'ಜಡದ ಮಣ್ಣುಕಲ್ಲು 'ಲಾವ', ಸ್ಪರ್ಶ ತಾಗಲೆಲ್ಲ ಜೀವ!' ಎಂಬುದನ್ನು ಕಂಡು ಬೆರಗು! ಆದರೆ ಇದು ಬರಿ ಬೆಡಗಲ್ಲೋ ಅಣ್ಣಾ! ಎಂಬ ಎಚ್ಚರ. ಹೊಸ ಹೊಸ ಭಾವಗಳನ್ನು ಸದಾ ಕಾಣುವ, ಕಟ್ಟುವ ಪ್ರಜ್ಞೆಯೂ ಇದ್ದಾಗ ಮಾತ್ರ ಪ್ರತಿಭೆ ಸಾರ್ಥಕವಾಗುತ್ತದೆ. ಅದು ಮೂಲ ದ್ರವ್ಯ, ಶಕ್ತಿ. ಅದರ ಜೊತೆಗೆ ನಿಪುಣತೆಯನ್ನೂ ಸಂಪಾದಿಸಿಕೊಳ್ಳಬೇಕು. ಲೋಕದ ನಡೆವಳಿಕೆಯನ್ನು ಅರಿಯುವುದರ ಮೂಲಕ, ಗ್ರಂಥ ವ್ಯಾಸಂಗ ಮಾಡುವುದರ ಮೂಲಕ ಬರುವಂಥದು ವ್ಯುತ್ಪತ್ತಿ. ಇವೆರಡಕ್ಕೂ ಕೂಡಿದಂತೆ ಸತತ ಅಭ್ಯಾಸ. ತಮ್ಮ ಪ್ರಾಚೀನ ಮೀಮಾಂಸಕಾರರ ವಿಚಾರಗಳು ಇವು. ಇವಕ್ಕೆ ನಿಸಾರ್ ಅಹಮದ್ ಅವರ ಸಾಹಿತ್ಯ ಒಂದು ನಿದರ್ಶನ. ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸಗಳ ಹಿನ್ನೆಲೆಯಲ್ಲಿ ಪ್ರಜ್ಞೆಯೂ ಕೆಲಸ ಮಾಡುತ್ತಿರುತ್ತದೆ. ಹಿಂದೆ ಆದದ್ದರ ನೆನಪು, ಈಗ ನಡೆಯುತ್ತಿರುವುದರ ಪರಿಶೀಲನೆ, ಮುಂದೆ ಆಗಬಹುದಾದ್ದನ್ನು ಕುರಿತ ಊಹೆ—ಇವೆಲ್ಲವನ್ನೂ ಒಳಗೊಂಡಂತೆ ಕಾವ್ಯಸೃಷ್ಟಿಯ ಕಾರ್ಯದಲ್ಲಿ ತೊಡಗಿದ ಕವಿಯ ಕೃತಿ ಸಾರ್ಥಕವೆನಿಸುತ್ತದೆ. ಇವೆಲ್ಲ ಲಕ್ಷಣಗಳಿಂದ ಕೂಡಿದ್ದು ನಿಸಾರ್ ಅಹಮದ್ ಅವರ ಕಾವ್ಯಸೌಧ.

೧೯೫೦ರಷ್ಟು ಹಿಂದೆ, ಜಿ. ಪಿ. ರಾಜರತ್ನಂ ಅವರು ಹೊರತಂದ 'ಪದ್ಯಾಂಜಲಿ'ಯಲ್ಲಿ ಪ್ರಕಟವಾದ ನಿಸಾರ್ ಅಹಮದ್ ಅವರ ಮೊದ ಮೊದಲ ಕವಿತೆಗಳಿಂದ ಹಿಡಿದು

ಇಂದಿನವರೆಗೂ ಅವರ ಎಲ್ಲ ಕೃತಿಗಳಲ್ಲೂ ಮೇಲೆ ಹೇಳಿದ ಎಲ್ಲ ಎಳೆಗಳೂ ಅನುಸ್ಯೂತವಾಗಿ ಹರಿದುಬಂದಿರುವುದನ್ನು ಕಾಣಬಹುದು. ಕಾವ್ಯರಚನೆಯ ಹಿಂದೆ ವಿಮರ್ಶನಪ್ರಜ್ಞೆಯೂ ಇದ್ದಾಗಲೇ ಕವನದ ಸಾರ್ಥಕತೆ. ಸಂಕೀರ್ಣ ಸಮಾಜವನ್ನು ಕಂಡು ಕಂಡರಿಸುವ ನವ್ಯಕವಿಗಳಲ್ಲೂ ಇವೆರಡರ ಅವಿನಾಭಾವ ಸಂಬಂಧವನ್ನು ಕಾಣಬಹುದು. ಇದಿಲ್ಲದಿದ್ದರೆ ಕವಿತೆ ಕಾಲು ಮುರಿದುಕೊಳ್ಳುತ್ತದೆ, ಕೇವಲ ಭಾವಾವೇಶದ ಬುರುಗಾಗುತ್ತದೆ. ತಮ್ಮಲ್ಲಿ ಈ ಪ್ರಜ್ಞೆ ಹೇಗೆ ಕೆಲಸ ಮಾಡುತ್ತಿದೆಯೆಂಬುದರ ಸೂಚಿಯಾಗಿ ಇವರು ಕಾವ್ಯರಚನೆಯ ಜೊತೆಗೆ ತಮ್ಮ ತರ್ಕಬದ್ಧ ವಿಚಾರಗಳನ್ನು ಅಭಿವ್ಯಕ್ತಿಸುವ ಸಲುವಾಗಿ ಗದ್ಯಲೇಖನದಲ್ಲೂ ತೊಡಗಿರುವುದು ಗಮನಾರ್ಹ. ಟಿ. ಎಸ್. ಇಲಿಯಟ್ ಅವರ ಗದ್ಯ ಕೂಡ ಆ ಕವಿಯ ಕಾವ್ಯದಷ್ಟೇ ಮುಖ್ಯವಾದ್ದು. ಅಡಿಗರ ಸಮಗ್ರ ಗದ್ಯ ಅವರ ಕಾವ್ಯವನ್ನು ಅರಿಯಲು, ಅವರ ಮನಸ್ಸಿನ ವ್ಯಾಪಾರವನ್ನು ತಿಳಿಯಲು ಒಂದು ಮುಖ್ಯ ಸಾಧನ. ಸದಾ ಬೆಳೆಯುತ್ತಲೇ ಇರುವ, ಹಚ್ಚ ಹಸುರಿನ ಗುಣವನ್ನು ಉಳಿಸಿಕೊಂಡಿರುವ ಕವಿ ನಿಸಾರ್ ಅಹಮದ್ ಅವರು ಕೂಡ ವಿಪುಲವಾಗಿ ಕಾವ್ಯ ರಚಿಸುವುದರ ಜೊತೆಗೆ ಗದ್ಯವನ್ನೂ ಯಥೇಚ್ಛವಾಗಿ ಬರೆಯುತ್ತ ಬಂದಿದ್ದಾರೆಂಬುದು ಗಮನಿಸಬೇಕಾದ ಸಂಗತಿ.

'ಬಿತ್ತಿ ಬಿಸಿ ನೆತ್ತರನು ಕಾಗದದ ಭೂಮಿಯಲಿ ಸೃಷ್ಟಿಸಿದೆನಕ್ಷರಗಳೆಂಬ ನರರನ್ನು! ನಿಲ್ಲಿಸಿದೆನಲ್ಲಲ್ಲಿ ಒಟ್ಟುಗೂಡಿಸಿ ಕೆಲರ, ಕರೆದೆ 'ಪದ'ವೆನ್ನುತಾ ಗುಂಪಿನವರನ್ನು! ಕೂಡಿಸೀ ಗುಂಪುಗಳ ಕವಿತೆಯೆಂದಿದ ಕರೆದು ಹಲರನಿಳಿಸಿದೆನಣ್ಣ ರಸವುಳ್ಳ ಹಣ್ಣ! ಬೇರೆ ಜನರದು ಬೇರೆ ಗಟ್ಟಿ ಗುಂಪಿರಬಹುದು; ಅವರ ಜೊತೆಗಿವರೂನೆ ಇರಲಿ, ಬಿಡಿರಣ್ಣ!' ಎನ್ನುತ್ತ ಕಾವ್ಯಕ್ಷೇತ್ರವನ್ನು ಪ್ರವೇಶಿಸಿದ ನಿಸಾರ್ ಅಹಮದ್ ನಡೆದು ಬಂದ ದಾರಿಯತ್ತ ಎಂದೂ ಕಣ್ಣು ಹೊರಳಿಸಿದವರಲ್ಲ. ಅವರ ದೃಷ್ಟಿ ಯಾವಾಗಲೂ ಮುಂದೆ ಮುಂದೆ. ಅಂತೆಯೇ ಇವರೆಂದೂ ಅಪ್ರಸ್ತುತರೆನಿಸಿಲ್ಲ. ಯಾವುದೇ ಪಂಥಕ್ಕೆ ಇವರು ತಮ್ಮನ್ನು ಕಟ್ಟಿಕೊಂಡವರಲ್ಲ. ನವ್ಯವೋ, ನವೋದಯವೋ, ನವ್ಯೋತ್ತರವೋ, ಯಾರು ಏನೇ ಹೇಳಲಿ, ಅಂತೂ ಬರೆದದ್ದು ಅಪ್ಪಟ ಕಾವ್ಯವಾಗಿರಬೇಕು. ವಸ್ತುವಿನ ಸಂಕೀರ್ಣತೆಗೆ ಅನುಗುಣವಾಗಿ ಕಾವ್ಯತಂತ್ರ, ತಂತ್ರಕ್ಕೆ ಅಧೀನವಾಗಿ ಕಾವ್ಯವಲ್ಲ—ಎಂಬುದನ್ನು ಅರಿತಿರುವುದರಿಂದಲೇ ನಿಸಾರ್ ಅಹಮದರ ಕಾವ್ಯದ್ದು ಸರ್ವದಾ ಹೊಚ್ಚಹೊಸತನ, ಜೀವಂತಿಕೆಯ ಲಕ್ಷಣ.

ನಿಸಾರ್ ಅಹಮದ್ ಕಾವ್ಯರಚನೆಯಲ್ಲಿ ತೊಡಗಿದಾಗ ಕನ್ನಡದಲ್ಲಿ ನವ್ಯಕಾವ್ಯ ಪ್ರಕಾರ ಆರಂಭವಾಗಿತ್ತು. ಅಡಿಗರ 'ಹಿಮಗಿರಿಯ ಕಂದರ', 'ಗೊಂದಲಪುರ' ಎಲ್ಲರ ಕಣ್ಣು ಸೆಳೆದಿದ್ದವು. ರಾಮಚಂದ್ರ ಶರ್ಮರು 'ಏಳು ಸುತ್ತಿನ ಕೋಟೆ' ಕಟ್ಟುವುದರಲ್ಲಿ ನಿರತರಾಗಿದ್ದರು. ಅತ್ತ ಧಾರಾಡದಲ್ಲಿ ಗೋಕಾಕರ 'ನವ್ಯಧ್ವನಿ' ಕೇಳಿಸತೊಡಗಿತ್ತು. ಆರಂಭದಲ್ಲೇ ಇವರೆಡೂ ಧಾರೆಗಳು ಬೇರೆಬೇರೆಯಾಗಿ ಹೊರಟಿದ್ದವು. ಇವೆರಡರಲ್ಲಿ ಯಾವುದು ನವ್ಯ, ಯಾವುದು ನವ್ಯವಲ್ಲ ಎಂಬ ಜಿಜ್ಞಾಸೆಯೂ ಆರಂಭವಾಗಿತ್ತು. ಅಡಿಗರು ಮೈಸೂರಿನಲ್ಲಿ ಅನೇಕ ಸಮಾನ ಮನೋಧರ್ಮದ ಲೇಖಕರ ಆಕರ್ಷಣೆಯ ಕೇಂದ್ರವಾಗಿದ್ದರು. ಸಂಜೆಯಾದರೆ ಅಲ್ಲಿಯ 'ಕಾಫಿ ಹೌಸಿ'ನಲ್ಲಿ ಕೂಡುತ್ತಿದ್ದ ಸಭೆ. ಕಾಫಿಯ ಸಮಾರಾಧನೆಯ (ಅವರವರ ಖರ್ಚಿನಲ್ಲಿ) ಜೊತೆಗೆ ನವ್ಯ ದಿವ್ಯದ ಧೂಮಲೀಲೆ. ಆ

ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಾಗಿದ್ದ ನಿಸಾರ್ ಅಹಮದ್, ಲಂಕೇಶ, ಸುಮತೀಂದ್ರ ನಾಡಿಗ ಇವರೆಲ್ಲ ಆಗಾಗ ಮೈಸೂರಿಗೆ—ಕಾಫಿ ಹೌಸಿಗೆ—ಬರುತ್ತಿದ್ದರು. ನನಗೆ ನಿಸಾರ್ ಅಹಮದ್ ಪರಿಚಯ ಆದದ್ದು ಆಗ. ಇತರ ನವ್ಯ ಕವಿಗಳಲ್ಲಿ ಇರದಿದ್ದ ಒಂದು ಬಗೆಯ ಸರಳತೆ, 'ಏಳು ಸುತ್ತಿನ ಕೋಟೆ'ಯಲ್ಲಿ ಹುದುಗಿಕೊಳ್ಳದ ಪ್ರವೃತ್ತಿ, ಸ್ನೇಹಪ್ರಿಯತೆ, ವಯಸ್ಸಿಗೆ ಮೀರಿದ ಆತ್ಮವಿಶ್ವಾಸ, ಆದರೂ ಎಲ್ಲ ಅನುಭವಗಳಿಗೂ ತಮ್ಮನ್ನು ತೆರೆದುಕೊಳ್ಳುವ ಗುಣ—ಇವುಗಳಿಂದ ನಿಸಾರ್ ಅಹಮದ್ ಆಗಿನಿಂದಲೂ ನನಗೆ ಬಲು ಹತ್ತಿರ, ಅಷ್ಟೇ ಪ್ರಿಯ.

ನಿಸಾರ್ ಅಹಮದರನ್ನು ಮೆಚ್ಚಿಕೊಂಡಿದ್ದ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಒಮ್ಮೆ ಸಭೆಯಲ್ಲಿ ಹೇಳಿದ ಮಾತು ನನಗೆ ನೆನಪಾಗುತ್ತದೆ. 'ಅಹಂ' ಎಂಬುವ ಮದ 'ನಿಸ್ಸಾರ'— ಎಂಬುದನ್ನು ಸಾರುವುದು ನಿಸಾರ್ ಅಹಮದರ ವ್ಯಕ್ತಿತ್ವ ಎಂದು ಭಟ್ಟರು ನಿಸಾರರನ್ನು ಬಣ್ಣಿಸಿದ್ದರು. ಈ ಮಾತನ್ನು ಮೊದಲು ಬೇಂದ್ರೆಯವರು ಹೇಳಿದರೆಂದು ನಿಸಾರ್ ಅಹಮದರೇ ಆಮೇಲೆ ಒಮ್ಮೆ ನನಗೆ ಹೇಳಿದರು. ಅಂತೂ ಈ ಮಾತು ನಿಸಾರ್ ಅಹಮದರ ವ್ಯಕ್ತಿತ್ವಕ್ಕೊಂದು ಬೆಳಕಿಂಡಿ ಎನ್ನಬಹುದು. ನಿಸಾರ್ ಅಹಮದರದು ಪಾರದರ್ಶಕ ಮಾತು, ಬದುಕು. ಅನಿಸಿದ್ದನ್ನು ನೇರವಾಗಿ ಅಂದುಬಿಡುವ ಗುಣ. ಒಮ್ಮೊಮ್ಮೆ ತೀವ್ರ ಎನ್ನಿಸಿದರೂ ಗಾಯಗೊಳಿಸದ ಸ್ವಭಾವ. ಅವರ ಕಾವ್ಯದಲ್ಲೂ ಒಂದು ರೀತಿಯಲ್ಲಿ ಬೆಚ್ಚಿಬೀಳಿಸುವ, ಆದರೆ ಹೊಚ್ಚ ಹೊಸದಾದ ಚಿತ್ರವೊಂದನ್ನು ಕಟ್ಟಿಕೊಡುವ ಸಾಮರ್ಥ್ಯ. ಉರ್ದು ಮನೆ ಮಾತಾದ ನಿಸಾರ್ ಅಹಮದರಿಗೆ ಉರ್ದು, ಕನ್ನಡ ಎರಡೂ ನಡುಮನೆ-ಅಡಿಗೆಮನೆ ಇದ್ದ ಹಾಗೆ. ಮನೆ ಮಾತು ಕನ್ನಡ ಅಲ್ಲದವರ ಎಲ್ಲ ಅನುಭವವೂ ಹೀಗೆಯೇ. ಇದು ಒಂದು ರೀತಿಯಲ್ಲಿ ಅನುಕೂಲ, ಇನ್ನೊಂದು ರೀತಿಯಲ್ಲಿ ತೊಡಕು. ಅವರ ವ್ಯಕ್ತಿತ್ವ ಎರಡು ಸಂಸ್ಕೃತಿಗಳ ಸಂಗಮ. ಎಂದರೆ ಈ ಎರಡು ಸಂಸ್ಕೃತಿಗಳೂ ಇವರಲ್ಲಿ ಹದವಾಗಿ ಬೆರೆತುಕೊಂಡಿರುವ ರೀತಿ ಅನನ್ಯ. ಅಂತೆಯೇ 'ಸಂಗಮ' ಎಂಬ ಮಾತು ಇಲ್ಲಿ ಅನ್ವರ್ಥ. ತಮ್ಮದಲ್ಲದ್ದು ಎನ್ನಬಹುದಾದ ಸಂಸ್ಕೃತಿಯನ್ನು ಅದ್ಭುತ ಎನ್ನಿಸುವಂತೆ ಇವರು ಅರಗಿಸಿಕೊಂಡಿದ್ದಾರೆ. ಸೌಹಾರ್ದವಿದ್ದಲ್ಲಿ ಯಾವುದೇ ವಿರೋಧ ವಿರದು, ಅಪಸ್ವರ ಮಿಡಿಯದು. ಎರಡರ ಸಮನ್ವಯವನ್ನು ಸಾಧಿಸಿರುವ ಈ ಕವಿಯ ಕಾವ್ಯ ಈ ಕಾರಣದಿಂದಲೂ ವಿಶಿಷ್ಟ ಎನಿಸುತ್ತದೆ. ಅನ್ಯ ಸಂಸ್ಕೃತಿಯ, ಅನ್ಯ ಭಾಷೆಯ ಪದವನ್ನು ಇನ್ನೊಂದು ಸಂಸ್ಕೃತಿಯ ಅನುಭವದ ಅಭಿವ್ಯಕ್ತಿಗೆ ಅವರು ದುಡಿಸಿಕೊಂಡಿದ್ದಾರೆ; ಇದರಿಂದ ಅಸಾಧಾರಣವಾದ ಪರಿಣಾಮ ಸಾಧಿಸುತ್ತಾರೆ. ಮನೆ ಮಾತಾದ ಉರ್ದುವಿನ ಜೊತೆಗೆ ಇಂಗ್ಲಿಷು, ಸಂಸ್ಕೃತ ಮುಂತಾದ ಇತರ ಭಾಷೆಗಳ ಪದಗಳನ್ನೂ ಬೆರಸಿ, ಆಡುಮಾತಿನ ಪ್ರಸಾಧನ ಸಂಸ್ಕಾರಕ್ಕೆ ಒಳಪಡಿಸಿ, ತೀರ ಸಲೀಸು ಎಂಬ ರೀತಿಯಲ್ಲಿ ಅವರು ಕಾವ್ಯವನ್ನು ನೇದಿದ್ದಾರೆ. ಈ ಅಭಿವ್ಯಕ್ತಿ ವಿಧಾನವೇ ಅಪೂರ್ವವಾದ ಹೊಸತನದ ಶೋಭೆಯಿಂದ ಕಂಗೊಳಿಸುತ್ತದೆ. 'ಖಾಲಿ ಸೈಟುಗಳು' ಎಂಬ ಕವನದ ಪೂರ ಈ ಲಕ್ಷಣ ಮಿನುಗುತ್ತದೆ. ಸಾಮಾನ್ಯವಾಗಿ ಬಳಸುವ ಮಾತುಗಳ ಬೆಂಗಡೆಯಲ್ಲಿ ಅವಿತು ಕುಳಿತ ಸತ್ಯ ಈ ಮಾತುಗಳ ಸಂದಿನಿಂದ ಹೊರಬಿದ್ದು ಓದುಗರ ಕಣ್ಣನ್ನು ಕೋರೈಸುತ್ತದೆ. ಈ ಸಾಲುಗಳನ್ನು ನೋಡಿ:

'ನಮ್ಮಂತರಾಳಗಳ ಲೇಔಟುಗಳಲ್ಲು ಇವೆ
ಖಾಲಿ ಸೈಟುಗಳು;
ಅಲ್ಲಿ ಅಕ್ರಮವಾಗಿ ತಳವೂರಿವೆ:
ಅಟ್ಟಲಾಗದ ಕಠೋರ ನೆನಹುಗಳು
ಗಿಜಿಗುಡುವ ಬಡ ಕುಟೀರಗಳು,
ಹಳೆ ಹತಾಶೆಗಳ ಗಟಾರದಂಚಿನ ನಾರುವ ಒಠಾರಗಳು
ವಿಷಾದದ ಆಗುಹೋಗುಗಳು;
ಮಾ ನಿಷಾದದ ವ್ಯರ್ಥ ಕೂಗುಗಳು' (ಖಾಲಿ ಸೈಟುಗಳು)

ನಗರಗಳ ನಡುವಿನ ಖಾಲಿ ಸೈಟುಗಳ ವರ್ಣನೆಯಿಂದ ಆರಂಭವಾಗುವ ಈ ಕವನ ಕ್ರಮೇಣ ಅಸಾಧಾರಣವಾದ ಶಕ್ತಿ ತುಂಬಿಕೊಂಡು ಸಂಕೀರ್ಣವಾಗಿ ಬೆಳೆದು, ಪ್ರತಿಮೆಯಾಗಿ ಪರಿಣಮಿಸಿ, ಹಲವು ಮುಖಿಯಾಗಿ, ಅಕರಾಳವಿಕರಾಳವೂ ಆಗಿ ಘೂರ್ಣಿಸುತ್ತದೆ. ಹೊರ ಮನೆ-ಒಳಮನೆಗಳ ಭಾಷೆ, ಸಂಸ್ಕೃತಿಗಳ ಜೊತೆಗೆ ಇಂಗ್ಲಿಷಿನ ಪ್ರಜ್ಞೆಯನ್ನು ಕೂಡಿಸಿಕೊಂಡು ಸಾಗುವ ಈ ಕವಿತೆ ಇಂದಿನ ಜೀವನದ ಸಂಕೀರ್ಣತೆಯನ್ನು ಸರಳವಾದ ರೀತಿಯಲ್ಲೇ ಅತ್ಯಂತ ಯಶಸ್ವಿಯಾಗಿ ಅಭಿವ್ಯಕ್ತಿಸುತ್ತದೆ. ಸಂಕೀರ್ಣ ಅನುಭವದ ಅಭಿವ್ಯಕ್ತಿಗೆ ಸಂಕೀರ್ಣ ವಾದ, ಕ್ಲಿಷ್ಟವೆನಿಸುವ ತಂತ್ರವೇ ಬೇಕೆಂಬ ನವ್ಯರ ಹಠವಿಲ್ಲದೆ ಆ ಪರಿಣಾಮವನ್ನು ಸಾಧಿಸುತ್ತದೆ. ಸರಳವಾಗಿ, ಸಾಧಾರಣವೆನಿಸುವಂತೆ ಆರಂಭವಾದ ಪದ್ಯ ಕ್ರಮೇಣ ವಾಚ್ಯ ಗುಣವನ್ನು ಮೀರಿ ಸಂಕೀರ್ಣವಾಗಿ ಬೆಳೆದು, ಹೆಚ್ಚು ಹೆಚ್ಚು ಅರ್ಥವನ್ನು ದೊರಕಿಸಿ ಕೊಳ್ಳುತ್ತ, ಹೊಸಹೊಸ ಆಯಾಮಗಳನ್ನು ಬೆಳಸಿಕೊಳ್ಳುತ್ತ ಸಾಗುತ್ತದೆ. ಕವನದ ಶಿಲ್ಪದ ಜೊತೆಜೊತೆಗೇ ಪ್ರತಿಮೆಗಳು ನೇಯ್ದು ಕೊಳ್ಳುತ್ತವೆ. ಮಣಿಗಳನ್ನು ಕೋದ ಹಾರದಂತೆ ಇವೆಲ್ಲವೂ ಸೇರಿ ಅಸಾಧಾರಣವಾದ ಸಮಗ್ರ ಪರಿಣಾಮ ಉಂಟುಮಾಡುತ್ತವೆ. ಇದೇ ಕವನ ಒಂದು ಸಾವಯವ ಸೃಷ್ಟಿಯಾಗಿ ಮೈತಳೆದು ಮತ್ತಾವುದೋ ಮಹತ್ತ್ವದ ಸಂಗತಿಯೊಂದರ ಸಂಕೇತವಾಗಿ ಬಾನೆತ್ತರಕ್ಕೆ ಬೆಳೆಯುತ್ತದೆ. ಎರಡು ಜಗತ್ತುಗಳನ್ನು ಜಂಟಿ ಮಾಡಿ ಕಸಿ ಮಾಡಿದಂತಿರುವ ಅವರ ವಿಶಿಷ್ಟ ಶೈಲಿಯ ಮೋಡಿ ಓದುಗರ ಮೈ ಮರೆಸುತ್ತದೆ, ಮನಸ್ಸನ್ನು ಬೇರಾವುದೋ ಲೋಕಕ್ಕೆ ಕರೆದೊಯ್ಯುತ್ತದೆ. ಈ ದೃಷ್ಟಿಯಿಂದ ನಿಸಾರರ ಕವಿತೆ ಅನನ್ಯ ಗುಣಲಕ್ಷಣವುಳ್ಳದ್ದು ಎನಿಸುತ್ತದೆ.

ವ್ಯಂಗ್ಯ, ವಿಡಂಬನೆ, ನಗೆ, ಸಲಿಗೆಗಳು ನಿಸಾರ್ ಅಹಮದರ ಅನೇಕ ಕವನಗಳಲ್ಲಿ ಲೀಲಾಜಾಲವಾಗಿ ಲಾಸ್ಯವಾಡುತ್ತವೆ. ನಗೆಗಡಲಿನಲ್ಲಿ ತೇಲಾಡಿಸುತ್ತ ಥಟ್ಟನೆ ಸಾಗರದ ಆಳಕ್ಕೆ ಸಲೀಸಾಗಿ ಸಾಗಿಬಿಡುತ್ತವೆ. ಸಂಪ್ರದಾಯವನ್ನು ಸರಿಸಿ ಸ್ವಲ್ಪ ಸ್ವಾತಂತ್ರ್ಯವಹಿಸುವ ಪ್ರಯತ್ನವೂ ಸಾಮಾನ್ಯ. ಇದು ಭಾಷೆಗೆ ಸಂಬಂಧಿಸಿದ್ದಾಗಿರಬಹುದು, ಕಟ್ಟು ಕಂದಾಚಾರ ಗಳಿಗೆ ಸಂಬಂಧಪಟ್ಟದ್ದಾಗಿರಬಹುದು. ಕನ್ನಡ, ಸಂಸ್ಕೃತ ಪದಗಳೇ ಅಲ್ಲದೆ ಉರ್ದು ಮತ್ತು ಇತರ ಭಾಷೆಗಳ ಪದಗಳನ್ನು ಸೇರಿಸುವುದು, ನಾಮಪದಗಳಿಗೆ ಇಸು ಪ್ರತ್ಯಯವನ್ನು ಕೂಡಿಸುವುದು, ಪದಗಳನ್ನು ತಿರಿಚುವುದು, ಸಾಮಾನ್ಯವೆನ್ನಿಸುವಂಥ ಪದಗಳಿಗೆ ಕಾವ್ಯಗುಣ ವನ್ನು ತುಂಬಿ, ಅವು ರೆಕ್ಕೆ ಬಿಚ್ಚಿ ಹಾರುವಂತೆ ಜಾದೂ ಮಾಡುವುದು, ವಿಶಿಷ್ಟವಾದ

ಲಯಗಾರಿಕೆ ಮರೆಯುವುದು—ಇದು ನಿಸಾರ್ ಕವಿತೆಯ ಕೆಲವು ಲಕ್ಷಣಗಳು. ಪ್ರತ್ಯೇಕವಾಗಿಯೇ ನೋಡಿದಾಗ ಕ್ಷುಲ್ಲಕವೆನ್ನಿಸಿದರೂ, ದಿವ್ಯಶಿಲ್ಪದ ಒಡಲಲ್ಲಿ ಅವು ನೀಡುವ ರಂಜನೆ ಅದ್ಭುತವಾದದ್ದು. 'ಜಾದೂಗಾರ, ಚಾಲಾಕಿ, ಕಮಾಲು, ಖೋತ, ನಸರಾಣಿ'ಗಳಲ್ಲಿ ಕಾವ್ಯಗುಣವೇನಿದ್ದೀತು? ಎನಿಸಬಹುದು. ಆದರೆ ನಿಸಾರರ ಕಾವ್ಯಬಂಧದಲ್ಲಿ ಅವು ಮಿಂಚುಹುಳುಗಳಂತೆ ಕಂಗೊಳಿಸುತ್ತವೆ. 'ಸಫಲಿಸು, ಸ್ವಪ್ನಿಸು' ಮುಂತಾದ ಪದಪ್ರಯೋಗ ಗಳನ್ನು ನೋಡಿದಾಗ ವೈಯಾಕರಣರು ಕನಲಿಯಾರು. ಆದರೆ ಕವಣೆಯಿಂದ ಬೀರಿದ ಕಲ್ಲಿನಂತೆ ಅವು ನಭೋಮಂಡಲದಲ್ಲಿ ಮೇಲೇರಿದಾಗ ಸಹೃದಯರು ಮೂಕ ಪ್ರೇಕ್ಷಕರಾಗಿ ಮೈ ಮರೆತಾರು. ನಿಸಾರ್ ಅಹಮದರ ಕುಶಲ ಹಸ್ತದಲ್ಲಿ ಕಲಕಂಠರು ಖಳಕಂಠರಾಗುತ್ತಾರೆ, ವಾನಪ್ರಸ್ಥಾಶ್ರಮಕ್ಕೆ ಹೊರಟವರು ಪಾನಪ್ರಸ್ಥಾಶ್ರಮಕ್ಕೆ ಒಲಿಯುತ್ತಾರೆ, ಅಶ್ವತ್ಥವೃಕ್ಷ ಕೂಡ ಅಸ್ವಸ್ಥ ವೃಕ್ಷವೇ ಆಗಬಹುದು. ಯಾರು ಬಲ್ಲರು? ಇದರ ಜೊತೆಜೊತೆಗೇ ಕಾವ್ಯದಲ್ಲಿ ಲಯಗಾರಿಕೆಯನ್ನು ಸಾಧಿಸುವುದೂ ಸಾಮಾನ್ಯ.

ನಿಸಾರ್ ಅಹಮದರ ಕವನಗಳಲ್ಲಿ ಇಂದಿನ ಸಾಮಾಜಿಕ ನೆಲೆಬೆಲೆಗಳ ಸ್ವರೂಪವನ್ನು ಧಾರಾಳವಾಗಿ ಅರಿಯಬಹುದು. ಧರ್ಮ ನಿರಪೇಕ್ಷತೆಯನ್ನು ಸ್ವೀಕರಿಸಿದ ನಮ್ಮ ಸಂವಿಧಾನದ ಅಡಿಯಲ್ಲಿ ವಿವಿಧ ಭಾಷೆ ಸಂಸ್ಕೃತಿಗಳು ಸಮಾನಾಂತರದಲ್ಲಿ ಸಾಗುವಂಥ ವಾತಾವರಣದ ನಿರ್ಮಾಣ ಅನಿವಾರ್ಯ. ಆದರೂ ಅನಾದಿ ಕಾಲದಿಂದ ಬಂದ ವಿವಿಧ ಚಿಂತನ ವಿಧಾನಗಳೂ ನಂಬಿಕೆಗಳೂ ಬಾಹ್ಯ ಪ್ರಭಾವಗಳೂ ಆಂತರಿಕ ಕ್ಷೋಭೆಗಳೂ ಬಹಳಷ್ಟು ಕಿರುಕುಳ ನೀಡುತ್ತಲೇ ಬರುತ್ತವೆ. ಆದರೆ ಇವನ್ನೆಲ್ಲ ಮೀರಿ ನಿಲ್ಲಬಲ್ಲ ಅಂತಃಸತ್ತ್ವವೂ ನಮ್ಮ ರಾಷ್ಟ್ರ ಕಾರಣದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಇಲ್ಲದಿಲ್ಲ. ಆದರೆ ವಿವಿಧ ಧರ್ಮಸಂಸ್ಕೃತಿಗಳನ್ನು ಅನುಸರಿಸುವ ಜನ ವರ್ಗಗಳಲ್ಲಿ ಪರಸ್ಪರ ಅರಿವಿನ ಅಭಾವ, ಸಹನೆಯ ಕೊರತೆ, ಅಜ್ಞಾನ ಮೂಲದಿಂದಾಗಿ ಬೆಳೆದ ಭಯ, ಈ ಅಂಜಿಕೆಯ ಫಲವಾದ ದ್ವೇಷದ ಮನೋಭಾವ—ಇವೆಲ್ಲವೂ ವಾತಾವರಣವನ್ನು ಕಲಕುತ್ತವೆ. ಸೂಕ್ಷ್ಮವೇದಿ ಯಾದ, ಸಂವೇದನಶೀಲನಾದ, ಉದಾರ ದೃಷ್ಟಿ ಉಳ್ಳ ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಹೊಂದಿದ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿಗೆ ಆಗುವ ತಳಮಳ ಅಷ್ಟಿಷ್ಟಲ್ಲ. ಭಾರತೀಯ ಸಸ್ಕೃತಿಯನ್ನು, ಕನ್ನಡತನವನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡ ನಿಸಾರ್ ಅಹಮದರಂಥವರು ಅದನ್ನು ಕವನದಲ್ಲೂ ಇತರ ಬಗೆಯ ಬರವಣಿಗೆಯಲ್ಲೂ ಅಭಿವ್ಯಕ್ತಿಸುವುದು ಸಹಜ ಹಾಗೂ ಅನಿವಾರ್ಯ. ಇದು ಅವರ ಪ್ರಾಮಾಣಿಕತೆಯ ಪ್ರತೀಕ. ಪುರಂದರದಾಸರನ್ನು ಕುರಿತು ಕಾವ್ಯ ರಚಿಸಿದ ಕವಿ, ಮಾಸ್ತಿಯವರ ಮನೋಜ್ಞ ಚಿತ್ರಣ ನೀಡಿದ ಕವಿ, ಕನ್ನಡ ತಾಯಿಯ ನಿತ್ಯೋತ್ಸವದ ವೈಭವವನ್ನು ಅಮೋಘವಾಗಿ ಬಣ್ಣಿಸಿ, ಕನ್ನಡದ ಭಾವಗೀತೆಗಳ ಧ್ವನಿ ಮುದ್ರಣದ ಜಗತ್ತಿನಲ್ಲಿ ಶೋಭಿಸಿ ಈ ಹೊಸ ಪರಂಪರೆಗೆ ನಾಂದಿ ಹಾಡಿದ ಕವಿ, ತಮ್ಮ ಈ ಮುಜುಗರವನ್ನೂ ತೋಡಿಕೊಳ್ಳದೆ ಇಲ್ಲ. 'ನಾನೆಂಬ ಪರಕೀಯ' ಇದಕ್ಕೆ ಉದಾಹರಣೆ. 'ನಿಮ್ಮೊಡನಿದ್ದೂ ನಿಮ್ಮಂತಾಗದ' ಸ್ಥಿತಿಗಾಗಿ ಕಸಿವಿಸಿ. 'ವಾಮಕ್ಕೆ ಸಂಸ್ಕೃತ, ಬಲಕ್ಕರಬ್ಬೀ—ಸಮನ್ವಯಿ ನಾನೆತ್ತ? ನಿರ್ಧರಿಸುವೆನೀಗ ರಂಜಾನಿನ ಬ್ರಾಹ್ಮೀ ಮುಹೂರ್ತದಲ್ಲಿ: ಹಸುರು ಬಾವುಟವತ್ತ, ಭಗವಾಧ್ವಜವಿತ್ತ; ಇಲ್ಲಿ ಕದಂಬವಲ್ಲಿ

ಖರ್ಜೂರ—ಒಂದೆ ಭೂಖಂಡದ ಪಿಂಡವೆರಡು` ಎಂಬ ತಾಜಾ ಉಭಯ ಸಂಕಟ.

ಆದರೆ ಕೊನೆಯಲ್ಲಿ ಮನಸ್ಸು ಸ್ತಿಮಿತ. ನೆಮ್ಮದಿಯ ಹಾದಿ ನಿಚ್ಚಳ. ಇದನ್ನು ಸಾಧಿಸುವುದು ಅವವುಗಳ ವೈಶಿಷ್ಟ್ಯಗಳ ನಾಶದಿಂದಲ್ಲ. ವಸ್ತು ಸ್ಥಿತಿಯನ್ನೊಪ್ಪಿ ನಡೆದು ಕೊಳ್ಳುವುದರ ಮೂಲಕ: `ನಿರ್ಧರಿಸುವೆನೀಗ ಬ್ರಾಹ್ಮೀ ಮುಹೂರ್ತದ ರಂಜಾನಿನಲ್ಲಿ: ಎದೆ ನೋಯುವಾತಂಕದಲ್ಲಿ: ಸಮಜಾಯಿಷಿಯ ಸುಲಭೋಪಾಯದಲ್ಲಿ ಕೊರಗುವುದಲ್ಲ: ವಿರೋಧಗಳನೊಪ್ಪುವೆ, ಆದರೆ—ಕೂಡಿಸದೆ, ಭಿನ್ನತೆಯನರಿಯುವೆ, ಆದರೆ—ತಿಕ್ಕಾಡಿಸದೆ.`

ಆದರೆ ಎಲ್ಲರೂ ಈ ಬಗೆಯ ಸಮಾಧಾನದ ಚಿತ್ತ ಬೆಳಸಿಕೊಳ್ಳಲಾರರಲ್ಲ! ಅದನ್ನು ಕಂಡಾಗ, ಮನಸ್ಸು ತಡೆಯಲಾರದೆ ಹೋದಾಗ, ಅದನ್ನು ಕಾವ್ಯದಲ್ಲಿ ತೋಡಿಕೊಳ್ಳದೆ ಇರುವುದಾದರೂ ಹೇಗೆ? `ಸ್ಪಷ್ಟನೆ` ನೀಡುವುದು ಅನಿವಾರ್ಯ: `ಸಮಾನಧರ್ಮಿಗಳೇ, ಅಥವಾ ಹಾಗೆಂದು ನಟಿಸುತ್ತ—ಬೆಳೆದಿದ್ದರೂ ಮನ ಮನದಲ್ಲಿ ಹುತ್ತ, ಬಹಿರಂಗದಲ್ಲಿ ಪರಸ್ಪರ ಮುತ್ತಿಡುತ್ತ, ವಾರ್ತಾಪತ್ರಿಕೆಯ ಪೂರ್ತಾ ಪಾರ್ಥೇನಿಯಮ್ಮಿನ ಥರ ಹಬ್ಬಿದವರೇ—ಗುಪ್ತ ಪತ್ರ ವ್ಯವಹಾರ, ಖಾಸಗಿ ಬೈಠಕ್ಕುಗಳಲ್ಲಿ: ಸೆಮಿನಾರು, ರಿವ್ಯೂ, ಮುನ್ನುಡಿಗಳಲ್ಲಿ ಸ್ವಪ್ರವರಕ್ಕೊಬ್ಬರನ್ನೊಬ್ಬರು ಹುಟ್ಟಾ ಭಂಗಿಗಳಲ್ಲಿ ತಬ್ಬಿದವರೇ—ಬಿಗಿ ಬೇಲಿ ಬಿಗಿದು ನಾಯಿಕೊಡೆಗಳ ಸುತ್ತ, ಅಮರಗೊಳಿಸುವ ಧಂದೆಯಲ್ಲಿ ಬೀಗಿ ಹೆಗ್ಗತ್ತ, ಹೀಗೇ ನನ್ನ ಪೂರ್ತಿ ಮರೆಯಿರೋ ಅಣ್ಣಗಳಿರಾ, ನಿಮ್ಮ ಈ ಬೇಹುಷಾರಿಯಲ್ಲಿ—ಅಡಿಯಿಡುತ್ತ ನನ್ನದೇ ದಾರಿಯಲ್ಲಿ, ಬದುಕಿನ ಮೆಳೆ, ಬಿಳಿಲುಗಳ ನಡುವೆ ಒಬ್ಬಂಟಿ ಮೈ ಪರಚಿಕೊಳ್ಳುತ್ತ ಭವಿಷ್ಯಕ್ಕೆ ಬೀಜವಾರಿಸುವಲ್ಲಿ ಸದಾ ಅತೃಪ್ತನಾಗಲು ಅಭ್ಯಸಿಸುತ್ತೇನೆ: ಆ ರೀತಿ ನಿಮ್ಮಿಂದ ಅನ್ಯನಾಗುತ್ತೇನೆ.'

ಭಾರತದ್ದು ಸರ್ವಧರ್ಮಗಳನ್ನು, ಸಂಸ್ಕೃತಿಗಳನ್ನು ಸಮಾನವಾಗಿ ಕಾಣುವ, ಪೋಷಿಸುವ ಆದರ್ಶ: ಎಲ್ಲ ಒಳ್ಳೆಯ ಭಾವನೆಗಳ ತೊಟ್ಟಿಲು. ಇಲ್ಲೇ ಬಾಳುವೆ ಮಾಡುತ್ತೇನೆ. ಯಾರೂ ನಮ್ಮನ್ನು ಸವತಿ ಮಕ್ಕಳಂತೆ ಕಾಣಬಾರದು ಎಂಬುದನ್ನು ಅಭಿವ್ಯಕ್ತಿಸುವ `ಸವತಿ ಮಕ್ಕಳ ಹಾಗೆ` ಕವನ ಗಮನಾರ್ಹ:

'ಬೆಳಕ ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ,
ಏನಾಟ ನಡೆದರೂ ನಿನ್ನಡಿಯ ಗಡಿಯಲ್ಲೆ.
ಮರಳಂತೆ ಸಣ್ಣಾಗಿ ಬಾಳ್ದೊರೆಯ ತಡಿಯಲ್ಲೆ
ಸುಡು ಬಿಸಿಲನುಂಡರೂ, ಕೈನೀಡಿನೆಡೆಯಲ್ಲೆ
ಹರಿದ ನೀರನು ಕಂಡು, ನೀರಡಿಕೆ ಉಲ್ಬಣಿಸಿ,
ನಿನ್ನ ಹಳಿಯುವ ಖೋಡಿ ತಿಳಿಗೇಡಿಗಳ ಹರಸಿ—
ತೆಗೆದುಕೋ ಇವರನ್ನೂ ಲೆಕ್ಕಕ್ಕೆ ತಾಯೆ,
ಪರದೆಯೆಳಿ, ಇವರೆದೆಯ ದುಃಖಕ್ಕೆ ತಾಯೆ,
ಸವತಿ ಮಕ್ಕಳ ಹಾಗೆ ಕಾಣಬೇಡವ್ವ,
ಸವತಿ ಮಕ್ಕಳ ಹಾಗೆ ಕಾಡಬೇಡ.' **(ಸವತಿ ಮಕ್ಕಳ ಹಾಗೆ)**

ಈ ಕವನದ ಆರ್ತತೆ, ತಾಯಿನಾಡಲ್ಲದೆ ಅನ್ಯಥಾ ಶರಣಂ ನಾಸ್ತಿ ಎಂಬ ಭಾವ ಇಲ್ಲಿ

ಕೋಡಿವರಿದಿದೆ. 'ತಂದೆ ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರು ಇಲ್ಲವಯ್ಯಾ, ಕೂಡಲಸಂಗಮದೇವಾ, ಹಾಲಲ್ಲದ್ದು, ನೀರಲ್ಲದ್ದು' ಎಂಬ ಬಸವಣ್ಣನವರ ವಚನದ ನೆನಪಾಗುತ್ತದೆ. ಕವಿ ಎಲ್ಲ ಕಳವಳವನ್ನೂ ಕಳೆದುಕೊಂಡು, ಉಭಯ ಸಂಕಟದಿಂದ ಪಾರಾಗಿ ಸಮಾಧಾನಚಿತ್ತವನ್ನು ತಳೆಯುತ್ತಾರೆ. ಎಲ್ಲ ತರತಮಗಳಿಂದ, ಭಿನ್ನ ಭೇದಗಳಿಂದ ಮೇಲೆದ್ದು ನಿಲ್ಲುತ್ತಾರೆ.

'ಕುರಿಗಳು, ಸಾರ್ ಕುರಿಗಳು' ಎಂಬ ಸಮಾಜ ವಿಡಂಬನೆ, 'ಅಮ್ಮ, ಆಚಾರ, ನಾನು' ಎಂಬ ಕಂದಾಚಾರದ ಲೇವಡಿ, ಇವೆಲ್ಲ ಮಜಲುಗಳನ್ನೂ ದಾಟಿ ನಡೆದ ಕವಿ, 'ವಾಸ್ತವಿಕ' ದೃಷ್ಟಿಯನ್ನು ತಳೆಯುವ ಮಟ್ಟಿಗೆ ಬೆಳೆದುಬಿಟ್ಟಿದ್ದಾರೆ :

'ಕಳಚಿ ಒಂದೊಂದೇ: ಕನ್ನಡಕ, ಗಡಿಯಾರ,
ಚೈನು, ಕೆರ, ಪೋಷಾಕು—
ದಿಗಂಬರತೆ ವಾಸ್ತವಿಕ.
ಕಳಚಿ ದೇಶ, ಸಮಾಜ, ಧರ್ಮ, ಮತವರ್ಗಗಳ,
ನಿರ್ಮಮತೆ ವಾಸ್ತವಿಕ.
ನಿಲ್ಲಿ, ಹುಟ್ಟಿದ ಹಾಗೆ ಗೊಮ್ಮಟನನನುಕರಿಸಿ,
ನೋಡಿ ಕನ್ನಡಿಯಲ್ಲಿ ನಿಮ್ಮ ಮುಖ :
ಚರ್ಮ ಚಕ್ಕಳ ಮಾಂಸದಾಚೆ ಕಾಣದ
ಪ್ರಾಣ
ಅದರರಿವೆ ವಾಸ್ತವಿಕ.' (ವಾಸ್ತವಿಕ)

ಸಾಹಿತ್ಯದಿಂದ ಸುಸಂಸ್ಕೃತ ವಾಚಕನಿಗೆ ಆದ್ಯತಃ ಲಭ್ಯವಾಗಬೇಕಾದ್ದು ಏನೆಂದರೆ ಮನೋರಂಜನೆಯ ನಲಿವು, ಬುದ್ಧಿ ಪ್ರಚೋದನೆಯ ತಿಳಿವು. ಮಿಕ್ಕಿದ್ದೇನಿದ್ದರೂ ಆಮೇಲೆ ಎಂದು ನಂಬಿರುವ, ಅಂತೆಯೇ ನಲಿವು ತಿಳಿವುಗಳನ್ನು ಹಾಳತವಾಗಿ ಬೆರಸಿ ಸಾದರ ಪಡಿಸುತ್ತಿರುವ ಈ ಕವಿಯ ಕಾವ್ಯವೂ ಗದ್ಯವೂ ಹೃದ್ಯವೂ ಮಾನವೀಯವೂ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ವಯಸ್ಸಿನಿಂದಾಗಿ ಹಿಮ್ಮೆಟ್ಟದ ಉತ್ಸಾಹ, ಅನಾರೋಗ್ಯದಿಂದಾಗಿ ಕಂಗೆಡದ ವರ್ಚಸ್ಸು, ಜೀವನದಲ್ಲಿ ಅಪಾರವಾದ ಪ್ರೀತಿ, ಕಾವ್ಯಶಾಸ್ತ್ರ ವಿನೋದಗಳಲ್ಲೂ ಸಮಾಜ ಪರಿಷ್ಕರಣ ಕಾರ್ಯದಲ್ಲೂ ಸಂಸ್ಕೃತಿ ಸಹೃದಯತೆಗಳನ್ನು ಹಂಚುವ ಕಾರ್ಯದಲ್ಲೂ ನಿರತವಾದ ಮನಸ್ಸು—ಈ ಗುಣಗಳಿಂದಾಗಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ನನಗೆ ತುಂಬಾ ಅಚ್ಚುಮೆಚ್ಚು.

ಬಲೂನಿನಂತಹ ಬಾಹ್ಯ ತೋರುಗಾಣಿಕೆಯ ಸಭ್ಯತೆ ಘನತೆಗಳು ಒಳಗಿನ ಟೊಳ್ಳನ್ನು ವರ್ಣರಂಜಿತವಾಗಿ ಮುಚ್ಚಿವೆ. ಸಂಸ್ಕೃತಿಯ ಚಲನ ವಲನಕ್ಕೆ ನಡೆಮಡಿಯಾಗಬೇಕಾದ ಅಂತರಂಗ ಬಿಡಾಡಿ ಭಾವನೆಗಳ ಕಾಲೊರಸಿಯಾಗಿದೆ. 'ನಾಗರಿಕ ಅಸಂಸ್ಕೃತ' ಎಂಬ ವಿಶೇಷಣಕ್ಕೆ ದಿವಿನಾಗಿ ಹೊಂದಿಕೊಳ್ಳಬಲ್ಲ ಇಂದಿನ ಮನುಷ್ಯ.

(ಆಧುನಿಕ ಮನುಷ್ಯ)



ನಿಸಾರ್ ಅವರ ಸ್ಥಳ ಸಂಬಂಧಿ ಕವಿತೆಗಳು : ಒಂದು ವಿವೇಚನೆ

◆ ವ್ಯಾಸರಾಯ ಬಲ್ಲಾಳ

ನವೋದಯ, ನವ್ಯ, ನವ್ಯೋತ್ತರ—ಕನ್ನಡ ಸಾಹಿತ್ಯದ ಎಲ್ಲ ಕಾಲ ಘಟ್ಟಗಳನ್ನು ಹಾದು ಬಂದಿರುವ ನಿಸಾರ್ ಅವರ ಕಾವ್ಯ ರಚನೆಯ ಹಿಂದಿರುವ ಪ್ರೇರಕ ಶಕ್ತಿ ಮೂಲತಃ ಸೌಂದರ್ಯ ಪ್ರಜ್ಞೆ ಹಾಗೂ ಜೀವನೋತ್ಸಾಹ. ಕನ್ನಡದ ಅತ್ಯಂತ ಪ್ರಮುಖ ಕವಿಗಳ ಪಂಕ್ತಿಯಲ್ಲಿರುವ ನಿಸಾರ್ ಅವರು ತನ್ನ ಕಾವ್ಯ ಕೃಷಿಯಲ್ಲಿ ಬದುಕನ್ನು ಅದರ ಸಮಗ್ರತೆಯಲ್ಲಿ ನಿರೀಕ್ಷಿಸುವ ಕುತೂಹಲವಿದೆ; ಪರಿಸರ ಪ್ರಜ್ಞೆಯಿದೆ; ಬದುಕನ್ನು ನಿಯಂತ್ರಿಸುವ ಶಕ್ತಿಗಳ ತಿಳಿವಳಿಕೆಯ ಆಸಕ್ತಿಯಿದೆ; ಇತಿಹಾಸ ವನ್ನು ಕೆದಕುವ, ವ್ಯಂಗ್ಯಗಳನ್ನು ಗುರುತಿಸುವ ತುಡಿತವಿದೆ; ಮಣ್ಣಿನ ಋಣವನ್ನು ನೆಚ್ಚಿಕೊಳ್ಳುವ ಪ್ರವೃತ್ತಿಯಿದೆ; ಎಲ್ಲಕ್ಕೂ ಹೆಚ್ಚಾಗಿ ಅವರ ಕಾವ್ಯ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಲು ನೆರವಾದ ಸರಳತೆ, ಪದ ಲಾಲಿತ್ಯ, ಗೇಯತೆ, ನಾದದ ತರಂಗಿತತೆ ಎಲ್ಲ ಸೇರಿಕೊಂಡು ಕನ್ನಡ ಕಾವ್ಯ ರಸಿಕರಿಗೆ ಒಂದು ಮಾಂತ್ರಿಕವೆನಿಸಬಹುದಾದ ಆಕರ್ಷಣೆಯ ಮೆರುಗನ್ನು ನೀಡಿದೆ. ಅವರ ಧ್ವನಿ ಸುರುಳಿಗಳ ಬಿಡುಗಡೆಯ ಕಾರ್ಯಕ್ರಮಗಳಿಗೆ ಕಿಕ್ಕಿರಿದು ನೆರೆಯುವ ಜನಸ್ತೋಮ ಇದಕ್ಕೆ ಸಾಕ್ಷಿ.

ನಿಸಾರ್ ಅವರ ಸ್ಥಳ ಸಂಬಂಧಿ ಕವಿತೆಗಳೂ ಅವರ ನಿರೀಕ್ಷಣೆಯ ಪರಿಧಿಯಲ್ಲಿ ಬರುವ ಸೌಂದರ್ಯ ಮೀಮಾಂಸೆ ಯನ್ನೂ ಹೊರ ನೋಟಕ್ಕೆ ತೋರುವ, ತೋರದಿರುವ, ಕುಟುಕುವ ವ್ಯಂಗ್ಯಗಳನ್ನೂ ವೈಚಾರಿಕ ಜಿಜ್ಞಾಸೆಯಲ್ಲಿ ಕಂಡು

ಬರುವ ಸಾಮಾಜಿಕ ತಲ್ಲಣಗಳನ್ನೂ ಬಿಂಬಿಸುತ್ತವೆ.

ಆರಂಭದಲ್ಲಿ ಅವರ ಅತ್ಯಂತ ಜನಪ್ರಿಯವಾದ 'ನಿತ್ಯೋತ್ಸವ' ಕವಿತೆಯನ್ನು ಮಾದರಿಯಾಗಿ ಆರಿಸಿಕೊಂಡರೆ ನಮಗೆ ಕವಿಯ ಭಾವ ಪ್ರಪಂಚದ ಸ್ಪರ್ಶ ಸಾಧ್ಯವಾಗುತ್ತದೆ. 'ಜೋಗದ ಸಿರಿ ಬೆಳಕಿನಲ್ಲಿ' ಎಂದು ಆರಂಭವಾಗುವ ಕವಿತೆಯ ಸಾಲುಗಳಲ್ಲಿ ನಮಗೆ ಕಾಣುವುದು ಕನ್ನಡ ತಾಯಿಯ ಬೆಳಕೆ:

'ಹಲವೆನ್ನದ ಹಿರಿಮೆಯೆ ಕುಲವೆನ್ನದ ಗರಿಮೆಯೆ,
ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ
ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ—
ನಿತ್ಯೋತ್ಸವ ತಾಯೆ, ನಿತ್ಯೋತ್ಸವ...' (ನಿತ್ಯೋತ್ಸವ)

ಅಮೆರಿಕದ ದೂರದ ನೆಲದಲ್ಲಿ ಈ ಹಾಡಿನ ಧ್ವನಿ ಸುರುಳಿಯನ್ನು ಕೇಳಿ ತಾಯ ನಾಡು ನುಡಿಗಳ ನೆನಪು ತಂದುಕೊಂಡು ಪರಕೀಯತೆಯ ಪ್ರಜ್ಞೆಯನ್ನು ಅನುಭವಿಸಿದವರಿದ್ದಾರೆಂದು ಕೇಳಿದ್ದೇನೆ. ಕವನದ ನಾದ ಶ್ರೀಮಂತಿಕೆ ಅಂತರಾಳದ ಭಾವನೆಗಳನ್ನು ತಟ್ಟುವಾಗ, ಹುಟ್ಟಿ ಬೆಳೆದ ಪರಿಸರದ ಮಣ್ಣಿನ ನೆನಪನ್ನು ತರುವಾಗ ಇದು ಸಹಜ ಪ್ರತಿಕ್ರಿಯೆ:

ತಾಯ್ನಾಡಿನ ಋಣವನ್ನು ನೆನಪಿಸಿಕೊಂಡು—

'ಗಿರಿನೆತ್ತಿಯ ಎತ್ತರದಲಿ
ಅಲ್ಲಿ ನಾಡಿನುತ್ತರದಲಿ
ನೀಫಾದಲ್ಲಿ, ಲಡಖಿನಲ್ಲಿ, ಹಿಮದ ಚಿರ ವಿಲಾಪದಲ್ಲಿ
ತಾಯ ಮಾನ ಉಳಿಸಲೆಂದು,
ಕಾಳ್ಗಿಚ್ಚಿನ ಕಿಡಿಯಾದರು
ನಮ್ಮ ಗಂಡುಗಲಿಗಳು' (ಅಭಿವಂದನೆ ನಿಮಗೆ)

ಎನ್ನುವ 'ಅಭಿನಂದನೆ ನಿಮಗೆ' ಕವನದಲ್ಲಿ ದೇಶದ ಅಖಂಡತೆಯನ್ನು, ಸ್ವಾತಂತ್ರ್ಯವನ್ನು ಕಾಯುವ ಹೋರಾಟದಲ್ಲಿ ನಿರತರಾಗಿರುವ ಸೈನಿಕರ ನೆನಪನ್ನು ತಂದುಕೊಳ್ಳುವಾಗ, ಅವರ ಪರಾಕ್ರಮವನ್ನು ಮೆಚ್ಚಿಕೊಳ್ಳುವಾಗ ಕವಿಯ ಭಾವತೀವ್ರತೆಯ ಹಿನ್ನೆಲೆಯಲ್ಲಿ ನಾಡಿನ ಮಣ್ಣಿನ ಋಣಭಾರ ಎಷ್ಟಿದೆಯೆಂದು ತಿಳಿಯಬಹುದು. 'ನಿತ್ಯೋತ್ಸವ' ಕವಿತೆಯಲ್ಲಿರುವ ಆರಾಧನಾಭಾವ, 'ಅಭಿವಂದನೆ ನಿಮಗೆ' ಕವಿತೆಯಲ್ಲಿ ಪ್ರಕಟವಾಗುವ ಆತ್ಮವಿಶ್ವಾಸದಿಂದ ಪ್ರೇರಿತವಾದ ಆಭಾರ ಮನ್ನಣೆಯನ್ನು ತುಲನಾತ್ಮಕವಾಗಿ ವಿವೇಚಿಸಿದಾಗ ಕವಿಯ ಅಂತರಂಗದಲ್ಲಿ ಹುದುಗಿರುವ ತಾಯ್ನಾಡನ್ನು ಕುರಿತ ಸಮರ್ಪಣಾ ಭಾವ ವೇದ್ಯವಾಗುವಂತಿದೆ.

ಪ್ರಕೃತಿ, ಕವಿಗೆ ಸಹಜ ಸ್ಫೂರ್ತಿಯ ಸೆಲೆ; ಸೌಂದರ್ಯ ಪ್ರಜ್ಞೆಯ ಕ್ಷಿತಿಜ. ನಿಸಾರ್ ಅವರ 'ಕಾರವಾರದ ಕಡಲ ದಂಡೆಯಲ್ಲಿ' ಕವಿತೆ, ಅವರು ಸೃಷ್ಟಿಸಿರುವ ಪ್ರತಿಮೆಗಳಿಂದಾಗಿ ಅವರ ಸೌಂದರ್ಯ ಪ್ರಜ್ಞೆಯ ಉತ್ತಮ ಉದಾಹರಣೆಯಾಗಿದೆ. ಅವರು ಕಂಡ ಕಾರವಾರದ ಕಡಲು ಇಂದಿನ ಸೀಬರ್ಡ್ ನೌಕಾನೆಲೆಯ ಕಡಲಲ್ಲ. ಬ್ರಿಟಿಷರ ಆಡಳಿತೆಯ ಕಾಲದ ನಿರಾಭರಣ ಸುಂದರಿಯಾದ ಕಡಲು. ಮುಂಬಯಿಯ ವ್ಯಾಪಾರಿಗಳ ಸ್ವಾರ್ಥಪ್ರೇರಿತ

ನೀತಿಯಿಂದಾಗಿ ಆಧುನಿಕತೆಯ ಸ್ಪರ್ಶ ಕಾಣದ, ಆದರೆ ಅತ್ಯಂತ ಸುಭದ್ರ ಬಂದರವಾಗಲು ಎಲ್ಲ ಅನುಕೂಲತೆಗಳಿದ್ದ ಕಡಲು. ರವೀಂದ್ರನಾಥ ಠಾಕೂರರು ತುಂಬ ಮೆಚ್ಚಿಕೊಂಡಿದ್ದ ಕಡಲ ತೀರ.

ಕವನದ ಆರಂಭವೇ—

'ಅಮೃತ ಮಂಥನ ಮುಗಿಯೆ ಆಯಾಸ ಪರಿಹಾರಕೆಂದು ಶರಧಿಯನುಳಿದು
ಮಿಲುಗಾಡದೊರಗಿರುವ ವಾಸುಕಿಯ ತೆರದೊಳಿದೆ ದಡದ ಮೇಲಿನ ರಸ್ತೆ.
....ಸಾಗರದ ಅಂಚಿನಲಿ ನಿಂತು ಸೀರೆಯನೆತ್ತಿ ಕೈಯಲ್ಲಿ ಹಿಡಿದಿರುವ ಚೆಲುವೆ
ಕೊಂಕಣ ಹೆಣ್ಣ ನುಡ್ಡೊಡೆಯ ಬಣ್ಣವಿದೆ, ಉಪಯೋಗಿಸದೆ ಕೆಡೆದ ಮುರುಕು
ದೋಣಿಯ ತಳದ ಹಾಗೆ, ಮೀನನಾಯುತಲಿರುವ ಬೆಸ್ತ ಹೆಣ್ಣಿನ ಕಿವಿಯ ಓಲೆ
ಹಾಗೆ, ಕೈಯ ಕುಕ್ಕೆಯ ಬಿದಿರ ಕಪ್ಪು ಬೆತ್ತದ ಹಾಗೆ, ಮರಳಿಹುದು ಸಮೆ ಸಮೆದು
ನುಣುಪಾಗಿ.' (ಕಾರವಾರದ ಕಡಲದಂಡೆಯಲ್ಲಿ)

ಬೆಸ್ತರ ಹೆಂಗಸರಿಗೂ ಸಾಗರಕ್ಕೂ ಇರುವ ಆತ್ಮೀಯತೆಯ ಸಂಬಂಧವನ್ನು ಗಮನಿಸಿಯೇ ಎಂಬಂತೆ ನಿಸಾರ್ ಅವರು ಕವನದುದ್ದಕ್ಕೂ ಬೆಸ್ತರ ಬದುಕಿನ ಪ್ರತಿಮೆಗಳನ್ನು ಉಪಯೋಗಿಸಿದ್ದಾರೆ:

'...ರಾಜಘುಡದ ದ್ವೀಪ
ಆಳದಿಂದೆದ್ದಿರುವ ಜಲಕನ್ಯೆಯಂತಿಹುದು;
ಅಲ್ಲಿ ಬೆಳೆದಿಹ ವೃಕ್ಷದಸ್ಪಷ್ಟ ರೇಖೆಗಳು
ಬಾಸೆಯಂತಿವೆ; ಮೇಲೆ ನೆಟ್ಟ ದೀಪಸ್ತಂಭ
ಹದಿಬದೆಯ ಹಣೆಯಲ್ಲಿ ನೆಲಸಿ ಶೀಲವ ಕಾಯ್ದು
ತಿಲಕದೆಚ್ಚರಿನಂತೆ ಸುತ್ತಲೂ ನಿಟ್ಟಿಸಿದೆ
ತನ್ನ ಬೆಳಕಿನ ದಿಟ್ಟಿಯಿಂದ...'

'ಹೆದ್ದೆರೆಯನೇರೇರಿ ತೂಗಿ ಬರುತಿವೆ ದೋಣಿ / ಬೆಸ್ತ ಹೆಣ್ಣಿನ ಬತ್ತಲೆದೆಯ ಬಳುಕಿನ ತೆರದಿ.'
'...ಮೇಲೆ ನೀಲಾಕಾಶ, ಬಲಕೆ ಮಲಯಾವೇಶ, ಬದಿಗೆ ಅದ್ಭುತ ರಮ್ಯ
ಪ್ರಕೃತಿ ಮಾತೆಯ ಹಚ್ಚ ಹಸಿರು ವೇಷ.'

(ಅದೇ)

ಹಸಿರು ಬದುಕಿನ ಸಂಕೇತವೆಂಬುದು ಗಮನಾರ್ಹ.

ಕಾವ್ಯದ ಬಂಧ, ಪೌರಾಣಿಕ ಪ್ರತಿಮೆಗಳು, ಕಡಲನ್ನೇ ಬದುಕಿನ ಅವಿಭಾಜ್ಯ ಅಂಗ ವೆಂಬಂತೆ ಜೀವನ ನಡೆಸುವ ಬೆಸ್ತರ ಸುಂದರ ಪ್ರತಿಮೆಗಳು, ಇವುಗಳಿಂದಾಗಿ 'ಕಾರವಾರದ ಕಡಲ ದಂಡೆಯಲ್ಲಿ' ಕವನ, ನಿಸಾರ್ ಅವರ ಕಾವ್ಯ ಪ್ರತಿಭೆಗೆ ಒಂದು ಸುಂದರ ಉದಾಹರಣೆ ಯಾಗಿದೆ.

ಇನ್ನು 'ಸಂಜೆ ಐದರ ಮಳೆ' ಸಂಗ್ರಹದಲ್ಲಿ ಅಡಕವಾಗಿರುವ 'ಸಂಜೆ ಐದರ ಮಳೆ' ಕವನವೂ ಮಲೆನಾಡಿನ ಸಂಜೆಯ ಮಳೆಯ ಪ್ರತಾಪದ ಪ್ರಕೃತಿ ರಮ್ಯ ದೃಶ್ಯವನ್ನು ಕವಿ ಆಧುನಿಕವೆನಿಸುವ ದೃಷ್ಟಿಯಿಂದ ನೋಡುವ ಪರಿ ಕುತೂಹಲಕಾರಿ :

'ಸಹ್ಯಾದ್ರಿ ಕಾಲೇಜಿನ
ಆಗಸ್ಟ್ ತಿಂಗಳಿನ ಒಂದೇ ಥರದ ಸಂಜೆ ಐದರ ಮಳೆ
ಕೆಮಿಸ್ಟ್ರಿ ಅಟೆಂಡರನ ಮಾಸಲು ಪೇಟ;
ಬೈಗಲ್ಲಿ ನವಿಲು ಗಿಳಿ ಮೈನಾ ಹೆಸರಿರದ ಕಾಡು ಹಕ್ಕಿಗಳ
ಹೊರದೂಡುವ ಪಶ್ಚಿಮ ಕ್ಷಿತಿಜದ ರಗ್ಗು ಮುಸುಕಿನ ನೋಟ'

'ದನ ಕತ್ತೆ ಎಮ್ಮೆ ಕೊಡೆ ಮಳೆಯಂಗಿ
ಸ್ಕೂಟರು ಸೈಕಲ್ಲುಗಳ ಗುಮ್ಮ.
ಬೇಗ ಊರು ಸೇರುವಾತುರದ ಹುಡುಗಿಯರ ಕಣ್ಣಾಲ್ಲಿ ಭಯೋದ್ವೇಗದ ಲಂಗರೆತ್ತಿಸಿ,
ಕ್ಲಾರ್ಕು ರಾಜಣ್ಣನ ಮೂಗಿಗೆ ಗೋಪಿ ಹೋಟೆಲಿನ
ಒಗ್ಗರಣೆಯ ಚುರುಕು ಹೊತ್ತಿಸಿ—
ಯಾರಿಗೂ ಬೇಡದ ಬಿಕನಾಶಿ.'

'...ಹೀಗೇ ಹಿಡಿದರೆ ಮಳೆ ಚಂಡಾಲ
ಕಟ್ಟುವುದೆಲ್ಲಿ ಮಾರಾಯರೆ ಪೆಂಡಾಲ
ಯೂನಿಯನ್ನಿನ ಉದ್ಘಾಟನೆಗೆ?
—ಪ್ರಿನ್ಸಿಪಾಲರಿಗೆ ನಿದ್ದೆ ಬರಿಸದ;' (ಸಂಜೆ ಐದರ ಮಳೆ)

ಈ ಕಾವ್ಯದಲ್ಲಿ ವ್ಯಕ್ತವಾಗುವ ವ್ಯಂಗ್ಯದ ಸೆಳಕು ಸಂಜೆ ಮಳೆಯ ಆರ್ಭಟವನ್ನು ಮೊನಚಾಗಿಸಿ ಕಾವ್ಯದಲ್ಲಿ ಅಸಂಗತವೆಂದು ತೋರುವ ವ್ಯಂಗ್ಯವನ್ನು ಗುರುತಿಸುವ ಕಾವ್ಯದ ವಿನ್ಯಾಸವನ್ನು ನಿತ್ಯ ಜೀವನದ ವಿನ್ಯಾಸಕ್ಕೆ ಹೊಂದಿಸುವ ಅರ್ಥ ಸಾಧ್ಯತೆಯನ್ನು ಮನಗಾಣಿಸುವ ರೀತಿ ವಿಶಿಷ್ಟವಾದುದು.

ಬೆಂಗಳೂರಿನ 'ಗಾಂಧಿ ಬಜಾರ್' ನಿಸಾರ್ ಅವರ ನೆನಪುಗಳ ಹಾಗೂ ಅವರ ಕಾವ್ಯ ಕೃಷಿಯ ಪ್ರೀತಿಯ ಕೇಂದ್ರವೆಂದರೂ ಸರಿಯೆ. ಗಾಂಧಿ ಬಜಾರ್ ವಿಭಾಗದಲ್ಲಿ ಅವರು ಓಡಾಡಿದ ದಿನಗಳ ಮೆಲುಕು ಹಾಕುವ ನೆನಪುಗಳು ಅವರನ್ನು ತೀವ್ರವಾಗಿ ಕಾಡುತ್ತಿವೆ ಎಂಬುದಾಗಿ ಹಿಂದೆ ಅವರ ಒಂದು ಭಾಷಣದಲ್ಲಿ ಆಡಿದ್ದ ಮಾತನ್ನು ನೆನಪಿಸಬಯಸುತ್ತೇನೆ. 'ಇನ್ನೊಮ್ಮೆ ಹುಟ್ಟಿ ಬರುವಂತಿದ್ದರೆ ಗಾಂಧಿ ಬಜಾರದಲ್ಲಿ ಓಡಾಡುವಂತಾಗಬೇಕು; ಮಾಸ್ತಿಯವರು ಬಂದು ನನ್ನ ಬೆನ್ನು ತಟ್ಟಬೇಕು' ಎಂದಿದ್ದರವರು. ಅವರ ಆರಂಭದ ಕವನ ಸಂಗ್ರಹದ ಹೆಸರೇ 'ಮನಸು ಗಾಂಧಿ ಬಜಾರು'.

'ಗಾಂಧಿ ಬಜಾರಿನ ಬೆಳಗು' ಕವಿತೆಯಲ್ಲಿ ನಗರೀಕರಣದ ಧಾವಂತವನ್ನು ಚಿತ್ರಿಸುತ್ತ ಹಳ್ಳಿಯ ಜೀವನದ ಜಾನಪದ ಸರಕಿನ ಪರಿಚಯ ಇಲ್ಲಿ ಮರೆಯಾಗುತ್ತಿದೆಯೆನ್ನುತ್ತ, ನಗರದ ಜೀವನದಲ್ಲಿ ಅಡಕವಾಗಿರಲೇಬೇಕಾದ ಅವಸರದಲ್ಲಿ ಮರೆಯಾಗುತ್ತಿರುವ ಜಾನಪದ ಜೀವನದ ಸತ್ವದ ಕಡೆ ಗಮನ ಸೆಳೆಯುವ ಆಸಕ್ತಿ ಇದೆ. ಹಾಗೆಂದೇ ಶಹರದ ಧಡಪಡಿಸುವ ಜೀವನದ ಎಲ್ಲ ವೈಶಿಷ್ಟ್ಯಗಳೂ ಬಾರಿಸುವ ಗಂಟೆ '...ಅಥವಾ ಇಂಥವೇ ಇನ್ನೆಷ್ಟೋ ಪೌರ ವೈಶಿಷ್ಟ್ಯಗಳ ಪ್ರತಿನಿತ್ಯದಲರಾಂ' ಎಂದು ಕವನ ಮುಗಿಯುವಾಗ, ಹಳ್ಳಿಯ ಜೀವನದ ಜಾನಪದ ಸೊಗಡನ್ನು ಆಧುನಿಕ ಜೀವನದ ಅಲರಾಂ ಗಂಟೆ

ಬಾರಿಸುತ್ತಿರುವಾಗ ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬ ಚಿಂತನೆಯಿದೆ.

'ಗಾಂಧಿ ಬಜಾರಿನ ಸಂಜೆ' ಕವನದಲ್ಲಿ ಸಂಜೆಯ ನಾಲ್ಕು ಚಿತ್ರಗಳಿವೆ. ಮೊದಲನೆಯ ಚಿತ್ರದಲ್ಲಿ 'ಹೊಲ ಗದ್ದೆ ಕಾಡು ಗ್ರಾಮ್ಯ' ಎಲ್ಲಿದೆ?; 'ವಾಹನ ಜನ ದನ ಗಲಿಬಿಲಿ ಹೋಟಲಿನ ಗಮಗಮ ಚೌ ಚೌ ಚಿಲಿಪಿಲಿ; ಒಂದು ಸಾವಿನ ಸುದ್ದಿ ಹುಟ್ಟಿಸುವ ಕಿತಾಪತಿ, ಊಹಾಪೋಹ; 'ಕಣ್ಣಾಡಿಸಿದರೆ ಕ್ರಾಪು ಜಡೆ ಪ್ಯಾಂಟು ಸೀರೆ, ಬೋರಿಡುವ ವಿದ್ಯಾರ್ಥಿಯ ನಾಟಕಕಾರನ ಮೋರೆ.' ಎಲ್ಲ ನಗರ ಜೀವನಕ್ಕೆ ಸಂಕೇತದಂತಿರುವ 'ಗಾಂಧಿ ಬಜಾರಿ'ನ ಸಂಜೆಯ ನಾಟಕೀಯ ಸ್ವರೂಪವನ್ನು ಕವಿ ವಿಡಂಬಿಸಿರುವುದು ಹೀಗೆ.

ಎರಡನೆಯ ಚಿತ್ರದಲ್ಲಿ ಶಹರದ ನಾಗರಿಕರ ಆಧುನಿಕತೆಯ ಸ್ವಾತಂತ್ರ್ಯದ ಚಿತ್ರ ಮೂಡಿಸುತ್ತ 'ಹೂವಾಡಿಗನ ಪೇಪರಿನವನ ಭಿಕಾರಿಯ ನನ್ನ ನಿಮ್ಮ ತಳ್ಳಿಕೊಂಡೇ ನಡೆವ ಬಜಾರಿ'; 'ಇರುಳು ಜೈಲಿನ ತಾರೆ ಸರಳು—ಫುಟ್ ಪಾತಿನ ನಿಂತ ನೀರಲ್ಲಿ ವರ್ಣಚಿತ್ರ: ಹಸುಳೆ ಚೊಳ್ಳನೆ ಒಂದಾ ಮಾಡಿದಾಗ ಆಬ್‌ಸ್ಟ್ರಾಕ್ಟು ಕಲೆ'. ಇಲ್ಲೂ ಎಷ್ಟೊಂದು ನಾಟಕೀಯವಾಗಿ ಸಾಗುತ್ತಿದೆ ನಗರ ಜೀವನ ಎಂಬ ಧ್ವನಿಯಿದೆ.

ಮೂರನೆಯ ಚಿತ್ರದ್ದೂ ಅದೇ ರೀತಿ 'ಪೇಟೆ ಬದುಕಿನ ದ್ರೌಪದಿಯ ಘೇರಾಯಿಸಿದ ದುಶ್ಯಾಸನ: ಫ್ಯಾಶನ್ನುಗಳ ಮೂಕ ಮಾಪನ.' ಆಧುನಿಕತೆಗೆ ಹೊಂದಿಕೊಳ್ಳಬೇಕು ಎಂಬ ಅವಸರವೇ ಬದುಕಿನ ಅಲರಾಂ ಗಂಟೆಯಾಗುತ್ತದೆ.

ನಾಲ್ಕನೆಯ ಚಿತ್ರ 'ಗಾಂಧಿ ಬಜಾರಿ'ನದ್ದು, ಆಧುನಿಕತೆಗೆ ಅಷ್ಟಾಗಿ ಮುಖ ಮಾಡದ ಶಿವಮೊಗ್ಗೆಯ ನೆನಪು ತರುತ್ತದೆ. ಶಿವಮೊಗ್ಗೆಯ ನೆನಪುಗಳಲ್ಲಿ ಕವನ ಕೊನೆಗೊಳ್ಳುತ್ತದೆ : 'ಶಿವಮೊಗ್ಗೆಯಲ್ಲಿದ್ದಾಗ ಮೈ ಮರೆವು; ಇಲ್ಲಿ ಇದ್ದಾಗ ಉದಾಸೀನ ಮರೆವು.'

ಗಾಂಧಿ ಬಜಾರ್ ಆಧುನಿಕತೆಯ ಸಂಕೇತವೆನ್ನುವಾಗ ನಗರೀಕರಣ ಪ್ರಕ್ರಿಯೆ ತರುವ ಜೀವನದ ಅಸಂಗತತೆಗೆ ಹೊಂದಿಕೊಳ್ಳಲು ಸಾಧ್ಯವಾಗದ ಧಾವಂತ, ಗ್ರಾಮ್ಯ ಜೀವನದಿಂದ ದೂರ ಸರಿಯಲೇಬೇಕಾದ ಕಸಿವಿಸಿಯಲ್ಲಿ ನಷ್ಟವಾಗುವ ಧಾವಂತವಿರದ ಜೀವನ ಮೌಲ್ಯಗಳು—ಇವು ಓದುಗರನ್ನು ಕಾಡುತ್ತವೆ.

'ಅಮೇರಿಕ ಅಮೇರಿಕ'—ಈ ಕವನದಲ್ಲಿ ಬಂಡವಾಳಶಾಹಿ ರೂಪಿಸಿರುವ ಆಧುನಿಕತೆಯನ್ನೂ ಅದರಲ್ಲಿ ಕಂಡು ಬರುವ ವಿರೋಧಾಭಾಸಗಳನ್ನೂ ಸರಳವೆನಿಸುವ ಪದ ಜೋಡಣೆಯಲ್ಲಿ ಕವಿ ವಿಡಂಬಿಸಿದ್ದಾರೆ.

'ಕಡಲ್ಗಳ್ಳ ಹಂತಕ ಹಾದರಗಿತ್ತಿಯರನೆತ್ತಿ
ನಿನ್ನೆದುರು ನೂಕಿ ಪಕಪಕನೆ ನಗಬೇಕೆಂದಾಗ—
ಲಿಂಕನ್ ಕೆನೆಡಿ ಕಿಂಗರ ಚಹರೆಗಳ ಕಂಡು
ನುಡಿ ಎಡವಿ ಕೈ ಮುಗಿದು ಬೆಪ್ಪಾಗುತ್ತೇನೆ.' (ಅಮೇರಿಕ, ಅಮೇರಿಕ)

ಹಾಗೆಯೇ,

'ಚೀಣ ಪಾಕ್ ದಾಳಿಗಳ ಚೂರಿ ಸ್ಮೃತಿಯನು ತಿವಿದು

ಆರು ಸಾವಿರ ಮೈಲಿಯುದ್ದದಭಯದ ನಿನ್ನ
ಸ್ನೇಹ ಹಸ್ತವ ಕಂಡು ತೆಪ್ಪಗಾಗುತ್ತೇನೆ.' (ಅದೇ)

ಇನ್ನು,

'ಹುಟ್ಟುಹಬ್ಬಕೆ ಹಸುಳೆಗೆಂದು ನಿನ್ನವರೀವ
ಟಾಮಿಗನ್ನಿನ ಕೊಡಿಗೆಗಳ ಬಿಸುಟು, ಬೈಬಲ್ಲು
ಗೀತೆ ಖುರ್ ಆನುಗಳ ನೀಡುವಾಸೆ.'

'ನಿನ್ನ ಸಮಕಿನ್ನೊಂದು ರಾಷ್ಟ್ರವಿಲ್ಲದ್ದನ್ನು
ಆನೆ ಬಿದ್ದರೂ ಕುದುರೆಯಷ್ಟು ಅನ್ನುವುದನ್ನು
ನುಂಗಿ ತುಟಿಗಳ ಹೊಲಿದು ಸುಮ್ಮನಾಗುತ್ತೇನೆ.' (ಅದೇ)

ಕೊನೆಗೆ ಕವಿ ಹೇಳುವುದು '...ನನ್ನ ಕಡು ದಾರಿದ್ರ್ಯ ಜನಸಂಖ್ಯೆ ಭೂಗೋಳ ನಾಲಗೆಯ ನಿಲಿಸುತ್ತವೆ, ತಾಳ್ಮೆ ಪಾಠವನೆನಗೆ ಕಲಿಸುತ್ತವೆ.' ರಾಕ್ಷಸ ಶಕ್ತಿಯ ಅಮೇರಿಕವನ್ನು ಆಶ್ರಯಿಸಿ ಬದುಕಬೇಕಾದ ಅನಿವಾರ್ಯತೆ ವಿಶ್ವದ ಬಡ ರಾಷ್ಟ್ರಗಳಿಗಿದೆ. ಅಮೇರಿಕದ ವಿಶ್ವ ವ್ಯಾಪಿಯಾದ ಶಕ್ತಿಗೆ ತಾಳ್ಮೆಯಿಂದ ತಲೆ ಬಾಗುವುದಷ್ಟೆ ದರಿದ್ರ ರಾಷ್ಟ್ರಗಳ ಒತ್ತಾಯದ ನಿಲವು ಎಂಬುದು ಕವಿಯ ತೀರ್ಮಾನ.

'ನಾನೆಂಬ ಪರಕೀಯ'—ಈ ಕವನದಲ್ಲಿ 'ನಾನು' ಎಂಬ ಶಬ್ದಕ್ಕೆ ಸಂಬಂಧಿಸಿದ ತಾತ್ವಿಕ ಚಿಂತನೆಯ ಎಳೆ ಪರಕೀಯ ಪ್ರಜ್ಞೆಯನ್ನು ಉಂಟುಮಾಡುವ ಸಂದರ್ಭಗಳನ್ನು ಯಶಸ್ವಿಯಾಗಿ ಬಿಂಬಿಸಿದೆ. 'ಮಡದಿಯೆದುರು ಪರ ಹೆಣ್ಣ ದಿಟ್ಟಿಸಿದ ಕಸಿವಿಸಿ' ಉಂಟುಮಾಡುವ ಪರಕೀಯ ಪ್ರಜ್ಞೆ—ಮನಶ್ಶಾಸ್ತ್ರೀಯ ಒಳನೋಟ ಕೂಡ—'ದೇವರ ಶಂಕಿಸಿದರೆಂತೊ ಎನುವ ದಿಗಿಲು.' ಹೀಗೆ, ಸುಪ್ತ ಚಿತ್ತದ ಓಡಾಟದ ದ್ವಂದ್ವ—ಇವೆಲ್ಲ ಉಂಟುಮಾಡುವ ಮಾನಸಿಕ ತಳಮಳವನ್ನು ಅರ್ಥೈಸುವುದು ಹೇಗೆ ಎಂಬ ಚಿಂತೆ. ಕವಿತೆಯ ಕೊನೆಗೆ ಕವಿ ವಿಡಂಬಿಸಿದ್ದ ನಾವು ಯಾವಾಗಲೂ ನಂಬಿಕೆಗೆ ತೆರೆದುಕೊಳ್ಳುವುದು, ಎಂದಿಗೂ ನಿಜವಾದ ಹವಾಮಾನ ಇಲಾಖೆಯ ವರದಿಗಳಂತೆ.

'ಅನಾಮಿಕ ಆಂಗ್ಲರು' ಕವನ—ನಿಸಾರ್ ಅವರು ಇತಿಹಾಸಕ್ಕೆ ಸ್ಪಂದಿಸುವವರು; ಅದರ ಗತಿಯನ್ನು ಗಮನಿಸುತ್ತಿರುವವರು ಎಂಬುದನ್ನು ವಿದಿತಗೊಳಿಸುತ್ತದೆ. ಅವರ ಅಮೇರಿಕ ಪ್ರವಾಸ ಕಾಲದಲ್ಲಿ ಅವರು ಕಾಣ ಬಯಸಿದ್ದು, ಕಂಡದ್ದು ಹಲವಾರು ಆಂಗ್ಲ ಕವಿಗಳು ಹುಟ್ಟಿ ಬೆಳೆದ ಪರಿಸರವನ್ನು; ಆ ಪ್ರದೇಶಗಳ ಇತಿಹಾಸವನ್ನು. ಈ ಲೇಖಕ ಅವರನ್ನು ಒಮ್ಮೆ ಆಕಸ್ಮಿಕವಾಗಿ ಕಂಡದ್ದು ಅವರು ಪಟ್ಟದಕಲ್ಲು ಪ್ರದೇಶದ ಶಿಲ್ಪ ಸೌಂದರ್ಯದ ಅಧ್ಯಯನ ನಡೆಸಲೆಂದು ಅಲ್ಲಿದ್ದಾಗ: 'ಅನಾಮಿಕ ಆಂಗ್ಲರು' ಕವಿತೆಯಲ್ಲಿ ಬ್ರಿಟಿಷರು ಭಾರತವನ್ನು ಆಳಲು ಬಂದು ಇನ್ನೂರು ವರ್ಷ ಕಾಲ ಈ ದೇಶದ ಆಡಳಿತ ನಡೆಸಿದ ಸಂದರ್ಭದಲ್ಲಿ ಶ್ರೀರಂಗ ಪಟ್ಟಣದ ಯುದ್ಧಕ್ಕಾಗಿ ಟಿಪ್ಪುವಿನೊಡನೆ ಹೋರಾಡಲು ಬಂದು ಅಲ್ಲಿ ಮಡಿದ ಸೈನಿಕರು ಶ್ರೀರಂಗಪಟ್ಟಣದ ಅವಶೇಷಗಳಂತೆ—

'ಕಾವೇರಿ ನದಿಗೆ ಕರೆದೊಯ್ಯು ಕಾಲು ಹಾದಿಯು ತುದಿಗೆ
ಥುತ್ತೆಂದು ಕಂಡಿದೆ ನನಗೆ
ಇತಿಹಾಸದಪಹಾಸ್ಯದಂತೆ
ಆಂಗ್ಲರ ಶ್ಮಶಾನ;
ಅರೆ ಎಕರೆ ಖುಷ್ಕಿ ನೆಲ ಕವುಚಿ ಹಿಡಿದಿರುವೆರಡು
ಶುಷ್ಕ ಶತಮಾನ.' (ಅನಾಮಿಕ ಆಂಗ್ಲರು)

ಹಾಗೆಯೇ,

'ಮೈ ಮೇಲೆ ಹೇರಿರಲು ವರ್ತಮಾನದ ವಜನ
ಒಳಗೆ ಒರಗಿದ್ದಾರೆ ತರಾವರಿ ಬಿಳಿಯ ಜನ:
ಪಿಡುಗಿಂದ ಪೌರರನು ಪಾರುಗೊಳಿಸಲು ನುಗ್ಗಿ
ಪಿಡುಗಿಗಾಹುತಿಯಾಗಿ ಕಂತೆಯೊಗೆದವರು;
ಸಾಮ್ರಾಜ್ಞಿ ಸೇವೆಯಲಿ ಸರ್ವತ್ರ ಸವೆ ಸವೆದು
ತಾಯ್ನೆಲಕೆ ಹಿಂದಿರುಗಿ ಭೇಟಿಯಾಗದೆ ಅವಳ,
ಸ್ವರ್ಗದ ಮುಲಾಖಾತಿಗಾಗಿ ಹಾತೊರೆದವರು.' (ಅದೇ)

ಈ ಕವಿತೆಯ ಸೌಂದರ್ಯ ತಾಯ್ನೆಲವನ್ನು ಬಿಟ್ಟು ಬಂದ ಅನಾಮಿಕ ಆಂಗ್ಲರ ದುಃಸ್ಥಿತಿಯನ್ನು ವಿಡಂಬಿಸುವುದರಲ್ಲಿ ಇದೆ.

'ಇಂಡಿಯಾದಲ್ಲೊಂದು ಇಂಗ್ಲೆಂಡು ಸ್ಥಾಪಿಸಲು
ಹೆಣಗಿ, ಹುಟ್ಟು ನೆಲಕ್ಕೆ ಹೊರತಾಗಿ ಉಳಿದವರ;
ಕಾಲದೇಶದುಪೇಕ್ಷೆಗೊಳಗಾದ ಪ್ರೇಕ್ಷಕರ—
ಅವರ ಪಾಲಿಗೆ ಬಿಟ್ಟು, ಗೋಡೆ ದಾಟುತ್ತೇನೆ:
ಕರವಸ್ತ್ರಕಾಗಿ ಕಿಸೆಯ ಹುಡುಕುತ್ತೇನೆ.' (ಅದೇ)

ಕವಿಯ ಅನುಕಂಪ ಪ್ರೇರಿತ ದೃಷ್ಟಿ ಕಾಣುವುದು ಕವಿತೆಯ ಕೊನೆಯ ಸಾಲಿನಲ್ಲಿ.

'ನವೋಲ್ಲಾಸ'—ಕವಿ ನೆಚ್ಚಿಕೊಂಡ ನೈತಿಕ ಪ್ರಜ್ಞೆಯನ್ನೂ ಕವಿಯ ಮಾನವೀಯ ದೃಷ್ಟಿಕೋನವನ್ನೂ ಪದ ಲಾಲಿತ್ಯದ ಬಂಧದಲ್ಲಿ ಬೆಸೆದ ಸುಂದರ ಕವಿತೆ. ನಿಜವಾದ ನವೋಲ್ಲಾಸವನ್ನು ಎತ್ತಿ ತೋರಿಸುತ್ತ—

'ಭೂಮಿಯು ಬಾಯಾರಿದಾಗ
ಜೀವನ ಹೌಹಾರಿದಾಗ
ನೆಮ್ಮದಿ ಮೊಗದಿರುಹಿದಾಗ
ಗಗನದಿಂದ ಧಾರೆಯಿಳಿದ
ಧೈರ್ಯ ನವೋಲ್ಲಾಸವೇ;
ಹಗೆ ಮನಗಳ ಕುಣಿಸಿದಾಗ
ವಿಷ ಜೀವಕೆ ಉಣಿಸಿದಾಗ
ನೆರವಿಲ್ಲದೆ ಭಣಭಣಿಸಿದಾಗ
ಭಯ ದೂಡುವ ದಯೆ ತೋರುವ

ಸೌಹಾರ್ದ ಸುಹಾಸವೇ;...
ಹೃದಯೈಕ್ಯದ ಮೇಳ ಗೀತ
ಸೊಗಸಿರೆ ಸುಶ್ರಾವ್ಯ ಸ್ರೋತ
ಒಡಕು ದನಿಯ ಬೊಬ್ಬೆ ಮಾತ
ಬೆರೆಸಿದಾಗ ಸಮಶ್ರುತಿಯನು
ಬೆಸೆಯುವ ನಿಸ್ಸೀಮವೆ...
...ಕರುಣಾಪ್ರದ ಅಭಯಾಸ್ಪದ ನಿನಗಾವುದು ಹೋಲುವೆ?
ನಮೋ ಎನುವೆ ಸಕಲ ಕಾರ್ಯಕಾರಣಗಳ ಮೂಲವೇ!' (ನವೋಲ್ಲಾಸ)

ಮನುಷ್ಯನ ವಿವೇಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಅರ್ಥ, ಭಾವ ಹೊಂದಿಕೊಂಡ ಕವಿಯ ನೈತಿಕ ಮನೋಭೂಮಿಕೆಯನ್ನು ಅಭಿವ್ಯಕ್ತಿಸುವ ಸುಂದರ ಕವನ ಇದು.

ನಿಸಾರ್ ಅವರ ಸ್ಥಳ ಸಂಬಂಧಿ ಕವಿತೆಗಳಲ್ಲಿ ಅಮೇರಿಕದ ಕುರಿತು ಬರೆದ ಹಲವು ಕವಿತೆಗಳಿವೆ.

'ಅಮೇರಿಕದಲ್ಲಿ'—ಈ ಕವಿತೆ ಅಲ್ಲಿನ ಸರಕು ಸಂಸ್ಕೃತಿಯನ್ನು ವಿಡಂಬಿಸುತ್ತದೆ. ಒಂದೇ ರೀತಿಯ ದೊಡ್ಡ ದೊಡ್ಡ ವ್ಯಾಪಾರದ 'ಮೂಲೆ'ಗಳು ಎಲ್ಲ ಪಟ್ಟಣಗಳಲ್ಲೂ, ಒಂದೇ ರೀತಿಯ ಸರಕುಗಳ ಬೆಲೆ, ಬಂಡವಾಳಶಾಹಿ ರಾಷ್ಟ್ರ ತಾನು ವಿರೋಧಿಸುತ್ತಿರುವ ಸಮತಾವಾದವನ್ನು ಸಾಮಗ್ರಿಯ ಸಮತಾವಾದದಲ್ಲಿ ತೋರಿಸಿಕೊಟ್ಟಿದೆ ಎಂಬ ವಿಡಂಬನೆ ಇಲ್ಲಿದೆ.

'ಪ್ರೇಮಿಗಳಿಗೆ ಕಡು ವೈರಿ ಈ ನಗರ'—ನಗರ ಕೇಂದ್ರಿತ ಜೀವನದಲ್ಲಿ ಏಕಾಂತತೆ ಸಾಧ್ಯವೇ? ಪರಸ್ಪರ ಸಾಮೀಪ್ಯ ಸುಖವನ್ನು ಬಯಸುವ ಯುವ ಪ್ರೇಮಿಗಳಿಗೆ ನಗರದಲ್ಲಿ ದೊರಕುವ ಏಕಾಂತ ಎಂಥದು? 'ಜನ ಉಪವನಗಳಲ್ಲೂ ಬರಿ ಮಂದಿಯ ಗುಲ್ಲು, ಸಿನಿಮಾದ ಅರೆಗತ್ತಲೆಯಲ್ಲೂ ಸಿಳ್ಳು ಕುಹಕ, ನಗರದ ಹೊರ ಬಯಲಲ್ಲೂ ಕೊಲೆ ಕೊಳ್ಳೆಯ ಗಂಡಾಂತರ, ಇನ್ನು ಇರುಳಿಗೂ ಬೀದಿ ದೀಪಗಳ ಬೆಳಕು, ಮುತ್ತಿಡಲೂ ಶನಿ ಕಾಟ; ನಮಗೆಲ್ಲಿದೆ ಬೇಟ?' ಎಂದು ಸಾರುವ ಈ ಕವನದಲ್ಲಿ ಏಕಾಂತತೆಯನ್ನು ಬಯಸುವ ಪ್ರೇಮಿಗಳ ಅಳಲು ಅಭಿವ್ಯಕ್ತವಾಗಿದೆ.

'ಲಾಲ್‌ಬಾಗ್‌ನಲ್ಲಿ ಪ್ರಣಯಿಗಳು'—ಬೆಂಗಳೂರಿನ ಪ್ರಸಿದ್ಧ ಲಾಲ್‌ಬಾಗ್ ತೋಟ ಪ್ರಣಯಿಗಳೂ ಸೇರಿದಂತೆ ಎಲ್ಲ ನಾಗರಿಕರ ಆಕರ್ಷಣೆಯ ಕೇಂದ್ರ. ನಿಸರ್ಗವೇ ಪ್ರಣಯಿಗಳಿಗಾಗಿ ಸೃಷ್ಟಿಸಿರುವಂತಹ ಸುಂದರ ಪರಿಸರದಲ್ಲಿ ಪ್ರಣಯಿಗಳು ಮಾತ್ರ ಇರಲು ಸಾಧ್ಯವೆ? ಎಲ್ಲ ವನ ವಿಹಾರಿಗಳನ್ನು ಸಂಧಿಸಲೇಬೇಕಾದ ಜೋಡಿಗಳಿಗೆ ಏಕಾಂತದ ಸುಖ ಸಾಧ್ಯವೆ? ನಡು ವಯಸ್ಸಿನ ಮುತ್ತೈದೆ ಇವರ ಕಡೆ ದೃಷ್ಟಿ ಹರಿಸಿ, 'ಚೂರಾದರೂ ಇವರಿಗಿದೆಯ ಮಾನ ಮರ್ಯಾದೆ, ಎಂಥ ಲಜ್ಜೆಗೆಟ್ಟವರಪ್ಪ?' ಎನ್ನುತ್ತಲೇ ಅವರತ್ತ ಕದ್ದು ನೋಟ ಹರಿಸುವ ರೀತಿ, ಕವಿಯ ಸ್ವಭಾವ ನಿರೀಕ್ಷಣೆಗೆ ಸಾಕ್ಷಿ. ಇನ್ನು ಪಡ್ಡೆ ಹುಡುಗರದು ಬೇರೆಯೇ ಕಾಟ. ಇದನ್ನೆಲ್ಲ ಕವನದಲ್ಲಿ ದಾಖಲಿಸುವ ಕವಿಯ ಕುತೂಹಲಿತ ನೇತ್ರಗಳು.

ಲಾಲ್‌ಬಾಗ್‌ಅನ್ನು ಪ್ರಿಯವಾದ ಪರಿಸರವೆಂದು ಏಕಾಂತತೆಗಾಗಿ ಆಯ್ದುಕೊಳ್ಳುವ ಯುವ ಜೋಡಿಗಳು ಬಯಸಿದ ಏಕಾಂತತೆ ದೊರಕಲು ಪಡಬೇಕಾದ ಕಷ್ಟ ಕೀಟಲೆಗಳನ್ನು, ಇದಿರಿಸಬೇಕಾದ ಪರಿಸ್ಥಿತಿಯನ್ನು ವಿಡಂಬಿಸುವುದರಲ್ಲಿ ಕವನ ಯಶಸ್ವಿಯಾಗಿದೆ.

'ದುಬೈನ ಜುಮೈರ ಬೀಚಿನಲ್ಲಿ'—ದುಬೈನ ಜುಮೈರ ಬೀಚಿನ ವರ್ಣನೆಯಲ್ಲಿ ಆ ಮುಕ್ತ ಶಹರದ ಸ್ವಚ್ಛಂದ ಪರಿಸರದಲ್ಲಿ ಕಾಮ ಹೆಡೆಯಾಡುವ ಸಂದರ್ಭಗಳ ಚಿತ್ರಣವನ್ನು ಸರಳವಾಗಿ ಕಾವ್ಯ ಮಾಧ್ಯಮದಲ್ಲಿ ಕವಿ ಚಿತ್ರಿಸಿದ್ದಾರೆ. 'ಇಂದ್ರಿಯ ತೃಷೆಗಷ್ಟೆ ಅರಸುಪಟ್ಟ, ಮನದ ಹಸಿವಿಗೆ ಇಲ್ಲಿ ಎತ್ತಂಗಡಿ.' '...ನೋಡು ಈ ಬಿಳಿ ದಾಡಿ ಬಿಟ್ಟಿರುವ ನಾಚಿಕೆಗೇಡಿ ಪಾಕಿಸ್ತಾನಿ ಮುದಿಯ, ತವಿಸಿಕೊಳ್ಳಲು ಸೊಕ್ಕಿರುವ ಮೈ ಕುದಿಯ, ಅಂಗಾತ ಅಡ್ಡಾದ ನಡುವಯಸ್ಕೆ ಜಪಾನಿಗಳ ಎದೆ ಯುಗಳದಲ್ಲಿ ಕಣ್ಣಾಲಿ ನೆಟ್ಟಿರುವ, ಅವಳಿಗರಿವಿಲ್ಲದೆಯೆ ಕಾಮ ಕದ ತಟ್ಟಿರುವ.'

ಹಾಗೆಯೇ, ಕವಿ ಗಮನಿಸಿರುವ 'ಈ ಆಫ್ರಿಕನ್ ಸಲಗ — ಮೊಣಕಾಲಮಟ ಪ್ಯಾಂಟ್ ಮಡಿಸಿರುವ ಕಲ್ಲಿದ್ದಲಿಗ—ಶತಮಾನಗಳ ಅಪಮಾನ ಕೀಳರಿಮೆ ಕೇಡು ಕೊಡಹಿ ಒಮ್ಮೆಗೇ ಮುಗಿಸಿಕೊಳುವಂತೆ ಸೇಡು—ಆ ಅಮೇರಿಕನ್ ಮಹಾಶ್ವೇತೆಯನು ಕೆಕ್ಕರಿಸಿ, ಇವನಂತಸ್ಥ ಚೂರಿಗಾಗಿರಲು ಆಕೆ ಹೊಳಪಿನ ಸಾಣೆ, ಹೇಗೆ ಕಣ್ ಕೊಸೆತ ಚಾಲುಗೊಳಿಸಿದ್ದಾನೆ.' ಇನ್ನು 'ಕೇರಳದ ಗತಿಗೆಟ್ಟ ಕುಗ್ರಾಮದಲಿ ಕೈ ಹಿಡಿದವಳ ಬಿಟ್ಟು' ದುಬೈಗೆ ಹಣದಾಸೆಗಾಗಿ ಬಂದ ಮಲೆಯಾಳಿ, ದೃಷ್ಟಿಯಲ್ಲೇ ಏಕಾಂತತೆಯ ಹಸಿವನ್ನು ತುಂಬಿಕೊಳ್ಳುವಾತ. 'ಮಿನಿ ಜಗತ್ತೇ ಜಾತ್ರೆಗೂಡಿರುವ ಉದ್ವಿಗ್ನ ದಂಡೆಯಲ್ಲಿ ಹೆಸರ ಕೊರೆಯತ್ತ, ಮನೆ ಕಟ್ಟಿ ಒಡೆಯುತ್ತ ಮರಳಲ್ಲಿ ಕಿಚಪಿಚನೆ ಗಳಪಿರುವ ಈ ಪುಟಾಣಿಗಳಷ್ಟೆ ನಿಷ್ಕಾಮಿಗಳು' ಎಂದು ಕಾಮದ ವಾಸನೆಯಿರದ ಚಿಣ್ಣರು ಮಾತ್ರ ನಿಷ್ಕಲಂಕರು ಎನ್ನುವ ಕವಿ, ದುಬೈಗೆ ಹೋಗಿಯೂ ಜುಮೈರ ನೋಡದೆ ಮರಳುವವ ನಿಜಕ್ಕೂ ಗಮಾರ' ಎಂದು ಮುಗಿಸುತ್ತಾರೆ.

'ಗರ ಬಡಿದ ನಗರ'—ಇಂದು ಆಧುನಿಕತೆಯ ಕವಚವನ್ನು ಧರಿಸಿದ ಬೆಂಗಳೂರು ತನ್ನ ಸಹಜ ಸೌಂದರ್ಯವನ್ನು, ನಿರ್ಮಲ ಪರಿಸರವನ್ನು, ನಿರ್ಮಲ ರೋಗಾಣುರಹಿತ ಜಲ ಸೌಕರ್ಯವನ್ನು ಕಳೆದುಕೊಂಡು ಏನಾಗಿದೆ? ಹಳೆಯ ಸೈಕಲ್ಲು ಅಥವಾ ಜಟಕಾ ಬಂಡಿಯ ವಾಹನ ಸೌಕರ್ಯಗಳಲ್ಲ ಮರೆಯಾಗಿ ಈಗ ಸಿರಿವಂತಿಕೆಯ ಗರ ಬಡಿದು ಸಹಜ ಸುಖ ಮರೆಯಾಗಿದೆ ಎನ್ನುವ ಕವಿಯ ಆತಂಕ ಇಲ್ಲಿ ವ್ಯಕ್ತವಾಗಿದೆ. 'ಹಿಂದೊಮ್ಮೆ ಸಭ್ಯವಾಗಿತ್ತು ಈ ನಗರ ಮಧ್ಯಮ ವರ್ಗೀಯ ಮಾಮೂಲಿ ಸಂಸಾರಿಯಂತೆ, ಇರದೆ ಆಸರೆ ಅರಿವೆಗಳ ಚಿಂತೆ'. ಇಂದು 'ತನ್ನತನದರಿವನ್ನೆ ದೂರ ಮಾಡಿ, ಲಪಟಾಯಿಸುತ ಪರದೇಶದವರೆಸೆವ ದುರ್ಲಾಭದೆಲುವನ್ನು ತಣಿಸಿಕೊಂಡಿದೆ ತನ್ನ ಲೋಭಿತನದ ಹುಲು ತಲಬನ್ನು, ಡಾಂಭಿಕತೆಗೆ ಮುಖ ಮಾಡಿದ ಈ ಶರಹದಲ್ಲಿ 'ಅನ್ಯಾಯ ಅಕ್ರಮಗಳಡವಿಯಲಿ ಹಾದಿ ತಪ್ಪಿದೆ ಈ ಮೆಗಾ ನಗರ' ಎನ್ನುವ ಕವಿಯ ದೃಷ್ಟಿಯಲ್ಲಿ ಆಧುನಿಕತೆಯ ಸೋಂಕು ಅಷ್ಟಾಗಿ ಇರದ ಹಿಂದಿನ ದಿನಗಳನ್ನು ನೆನೆದು ಅವುಗಳಿಗಾಗಿ ಹಂಬಲಿಸುವ (nostalgia) ಭಾವವಿದೆ.

ಇತ್ತೀಚೆಗೆ ಪ್ರಕಟವಾದ, ಇನ್ನೂ ಸಂಗ್ರಹಗಳಲ್ಲಿ ಸೇರಿಕೊಳ್ಳದ ಮೂರು ಸ್ಥಳ ಸಂಬಂಧಿ ಕವಿತೆಗಳು ಅಮೇರಿಕವನ್ನೇ ಕುರಿತಂಥವು. ಅವುಗಳಲ್ಲಿ ಮೊದಲನೆಯದು ನ್ಯೂಯಾರ್ಕ್ ನಗರದಲ್ಲಿ ವಿಶ್ವದ ಪ್ರವಾಸಿಗಳೆಲ್ಲರನ್ನು ಸೆಳೆಯುತ್ತಿರುವ 'ಎಂಪೈರ್ ಸ್ಟೇಟ್ ಕಟ್ಟಡ'. ಅದರ ಭವ್ಯತೆಯನ್ನು ಕಂಡ ಕವಿ 'ತಲೆ ಸುತ್ತುವೆತ್ತರದ ತಲೆ ಭಾಗದಂತಸ್ತಿನಲಿ ಪ್ರವಾಸಿ ನೋಟಕರು ನಲಿದಾಡಿ ನಕ್ಕು—ನಿದ್ರಾವಿಹೀನ ಷಹರಿನ ಆದಿಶೇಷದಗಾಧ ವಿಸ್ತಾರ, ಅದು ಹೊತ್ತಿರುವ ಕಾಂಕ್ರೀಟು ಕಬ್ಬಿಣದ ಭಾರ...'ದ ಆ ಕಟ್ಟಡದ ಕೊನೆಯ ಅಂತಸ್ತಿನಲ್ಲಿ ನಿಂತು ನೋಡುವಾಗ ಕಾಣುವ ಷಹರದ ಅದ್ಭುತ ನೋಟಗಳ ಸೌಂದರ್ಯವನ್ನು ವಿವರಿಸುವ ಕವಿ ತನ್ನನ್ನು ಆಗ ಗುರುತಿಸಿಕೊಳ್ಳುವುದು—

'ನಿಂತಿದ್ದೇನೆ ನಾನೂ ಎಲ್ಲರೊಡಗೂಡಿ
ದೃಶ್ಯಾವಳಿಯ ಶಿಕಾರಿಗೆ ದಿಟ್ಟಿಯನು ಹೂಡಿ.'

ಅದ್ಭುತವನ್ನು ಕಂಡು ಆನಂದಿಸುವ ಕವಿ ದೃಷ್ಟಿ ಇಲ್ಲಿ ಮುಖ್ಯವಾಗುತ್ತದೆ.

ಈ ಕವಿತೆ '9/11'—ಎಂದೇ ಈಚೆಗೆ ಖ್ಯಾತವಾದ ಘಟನೆಯನ್ನು ವಿಷಾದದಿಂದ ನೆನೆಯುತ್ತದೆ.

ಇದು ವಿಶ್ವದ ಇತಿಹಾಸವನ್ನೇ ಬದಲಿಸಿದ ಸೆಪ್ಟೆಂಬರ್ 11, 2001ರ ನ್ಯೂಯಾರ್ಕ್ ಷಹರದ ಎರಡು ವಾಣಿಜ್ಯ ಕೇಂದ್ರಗಳು ಧ್ವಂಸವಾದ ಸನ್ನಿವೇಶವನ್ನು ಕುರಿತದ್ದು.

ಈ ಕವನ ಒಂದು ಮಾನವೀಯ ಅನುಕಂಪದ ಕಥನ ಕಾವ್ಯದಂತಿದೆ. ಆ ಪರಿಸರದಲ್ಲಿ ನಿಂತಿದ್ದ ಒಬ್ಬಾಕೆ ಮುದುಕಿಯನ್ನು ಉದ್ದೇಶಿಸಿ ಕವಿ ಮಾತನಾಡಿದಾಗ ಆಕೆ ಹೇಳಿದ್ದು ಕರುಳು ಹಿಂಡುವ ಎರಡು ಕಟ್ಟಡಗಳ ಧ್ವಂಸದ ಕತೆ. 'ನಿಮಿರಿದ್ದವಲ್ಲಿ ಎರಡು ಗರ್ವೋನ್ನತ ಬೆಳ್ಗೊಡೆಗಳು, ವಿಶ್ವಕೇ ಸವಾಲೆಸೆವಂತೆ ಸಾರಿ ತಟ್ಟಿದ್ದ ಕ್ಯಾಪಿಟಲಿಸಮ್ಮಿನ ಸುಬಲಿಷ್ಠ ತೊಡೆಗಳು... ವರ್ಷವೆರಡರ ಹಿಂದೆ ಬಂದಪ್ಪಳಿಸಿದ ಕೇಡಿಗರ ಉಕ್ಕಿನ ತಿಮಿಂಗಿಲಗಳ ಜೋಡಿ ದಾಳಿಗೆ ಅಮೇರಿಕದ ಸ್ವಪ್ರತಿಷ್ಠೆ ನೆಲ ಕಚ್ಚಿದಂತೆ ಎದೆ ಬಿರಿದು ಕುಸಿದದ್ದು ಸೀದು ಸುಟ್ಟುರಿದು.' ಮಾನವ ಕೋಟಿಯೇ ದುಃಖಿಸಿದ ಈ ಭಯೋತ್ಪಾದಕರ ವಿಮಾನಗಳು (ತಿಮಿಂಗಿಲಗಳು) ಈ ಕಟ್ಟಡಗಳನ್ನು ನೆಲ ಸಮ ಮಾಡಿದ ದುರಂತದ ಚಿತ್ರ ಈ ಕವನದ ಸಾಲುಗಳಲ್ಲಿದೆ. ಈ ಕಥನ ಕಾವ್ಯದಲ್ಲಿ ಕವಿಯ ಮಾನವೀಯ ದೃಷ್ಟಿ ಪ್ರಕಟವಾಗಿರುವುದು ಕವಿ ಮಾತನಾಡಿಸಿದ ಮುದುಕಿಯ ಕೊನೆಯ ವಾಕ್ಯದಲ್ಲಿ: 'ಐವತ್ತೊಂದನೆಯಂತಸ್ತಿನಾಫೀಸಿನಲಿ ಕರಕಲಾದ ನನ್ನ ಹರಯದ ಮಗಳ ತಬ್ಬಲಿ ಮೊರೆ; ಆಜೀವಪರ್ಯಂತ ನಾನಳಲುವಂತೆಸಗಿರುವ ಕಾಲ ಕಮ್ಮಾರನ ನಿಷ್ಕರುಣ ಬರೆ.'

'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಸಹ ಒಂದು ಅರ್ಥಪೂರ್ಣ ಕವಿತೆ.


ಅಮೇರಿಕದ ಪ್ರಾಕೃತಿಕ ಸಂಪತ್ತಿನ ಭವ್ಯ ನೋಟಗಳಲ್ಲಿ ಪ್ರಮುಖವೆನಿಸಿದ ಮಹಾ ಕಂದರ 'ಗ್ರಾಂಡ್ ಕಾನ್ಯನ್'ಅನ್ನು ಕವಿ ಕಂಡ ದಿನ, ಅದು ಅದ್ಭುತವೆನಿಸುವ ದೃಶ್ಯವನ್ನು ಕಂಡಾಗ ಆದ ಸಂತೋಷದಲ್ಲಿ ಮೈಮರವು ಬರುವಂತೆ ಸಂತೋಷ ತುಂಬಿ ತುಳುಕಿದಾಗ, ಅವರು ಕೇಳಿದ್ದ ಕನ್ನಡದ ನುಡಿ 'ನೀವು ಕವಿಯಲ್ಲವೆ?' ಎಂದು. ಅಮೇರಿಕದ ನೆಲದಲ್ಲಿ

ನಿಸಾರ್ ಅವರನ್ನು ಒಬ್ಬಾಕೆ ಮಹಿಳೆ ಗುರುತಿಸಿದ್ದು ಆಶ್ಚರ್ಯವೇನಲ್ಲ. ನ್ಯೂ ಜೆರ್ಸಿಯಲ್ಲಿ ಒಬ್ಬ ಸಾಫ್ಟ್‌ವೇರ್ ಇಂಜಿನಿಯರನ್ನು ಮದುವೆಯಾಗಿದ್ದ ಮಹಿಳೆ, ಗಂಡ ಹಾಗೂ ತಂದೆಯವರ ಜತೆಗೆ 'ಗ್ರಾಂಡ್ ಕಾನ್ಯನ್' ಹೆಸರಿನ ಅದ್ಭುತವನ್ನು ದರ್ಶಿಸಲು ಬಂದಿದ್ದಳು. ಈ ಕನ್ನಡಿಗ ಕುಟುಂಬ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ವಿದಾಯ ಹೇಳಿದ ಗಳಿಗೆಯಲ್ಲಿ, ಆ ಗರ್ಭಿಣಿ ಹೆಣ್ಣು ನಿಸಾರ್ ಅವರೊಡನೆ ನಾಚಿಕೆಯ ತಗ್ಗು ದನಿಯಲ್ಲಿ, 'ಗಂಡು ಹೆಣ್ಣು ಮಕ್ಕಳಿಗಿಡುವ ಮುದ್ದಾದ ಒಂದೆರಡು ಹೆಸರು ಸೂಚಿಸುವಿರಾ?' ಎಂದು ಒಂದು ಕಾಗದದ ತುಣುಕಿನಲ್ಲಿ ತನ್ನ ದೂರವಾಣಿಯ ಸಂಖ್ಯೆಯನ್ನು ಬರೆದು ತನ್ನವರನ್ನು ಸೇರಿಕೊಂಡಳು. 'ಆಗಲಿ' ಎಂದು ಕವಿ ಹೇಳಿದಾಗ ಆಕೆಯ ಮುಖದ ತುಂಬ ಕೃತಜ್ಞತೆಯ ಭಾವ. ಅವರ ಹೆಸರು, ವಿಳಾಸಗಳನ್ನು ಪಡೆಯಲಿಲ್ಲವೆನ್ನುವ ಕೊರಗು ಕವಿಯನ್ನು ಬಾಧಿಸುತ್ತಿದ್ದಾಗ ಅಲ್ಲಿನ ಸೌಂದರ್ಯವನ್ನು ತುಸು ಹೊತ್ತು ಸವಿದು ಹೊರಡುವ ಹೊತ್ತಿಗೆ ಬಿಚ್ಚಿದ್ದ ಶೂ ಲೇಸನ್ನು ಕಟ್ಟಲೆಂದು ಬಗ್ಗಿದಾಗ ಆಕೆ ಬರೆದಿದ್ದ ದೂರವಾಣಿಯ ಸಂಖ್ಯೆಯ ಕಾಗದದ ಚೂರು ಕೆಳಗೆ ಗಾಳಿಯ ರಭಸಕ್ಕೆ ಕೊಚ್ಚಿ ತೇಲುತ್ತ ಕಂದರದ ಆಳಕ್ಕಿಳಿಯಿತು. ಅದನ್ನು ರಕ್ಷಿಸಲಾಗದ ಅಸಹಾಯಕತೆ 'ಗ್ರಾಂಡ್ ಕಾನ್ಯನ್' ಸೌಂದರ್ಯವನ್ನೇ ಮರೆಸಿದಂತಹ ನೋವು: ಆ ಗರ್ಭವತಿ ಹೆಣ್ಣು ಇಂದೋ ನಾಳೆಯೋ ನಿಸಾರ್ ಅವರ ದೂರವಾಣಿ ಕರೆ ಬರಬಹುದು ಎಂದು ಕಾಯುವ ಸಂದರ್ಭದ ನೆನಪಾಗಿ ಮನಸ್ಸಿನ ತುಂಬ ವಿಷಾದ ಭಾವ. ಕವಿತೆ ಕೊನೆಗೊಳ್ಳುವುದೇ 'ಜೀವನವೆ ಹಾಗೆ, ವ್ಯಕ್ತಿ ಸಂಕಲ್ಪವನು ಲೆಕ್ಕಿಸದ ಘಟಿತಗಳ ಅನೂಹ್ಯ ಸರ ಮಾಲೆ. ಒಂದೊಂದು ಅನುಭವವೂ ಮಾನವನಿಗೊಂದೊಂದು ಪಾಠಶಾಲೆ. ಎಷ್ಟು ಚಿಂತಿಸಿದರೂ ಕೊನೆಗೆ ಬಿಚ್ಚದೇ ಉಳಿವ ಕಗ್ಗಂಟು—ಜೀವಿಗಳ ಬಾಳಿನೊಳನಂಟು.'

ನಿಸಾರ್ ಅಹಮದ್ ಅವರ ಸ್ಥಳ ಸಂಬಂಧಿ ಕವಿತೆಗಳು ಶಬ್ದ-ಭಾವಗಳು ಹೊಂದಿಕೊಂಡು ಬದುಕನ್ನು ಅರ್ಥೈಸುವುದರಲ್ಲಿ ಅನನ್ಯ ಯಶಸ್ಸನ್ನು ಗಳಿಸಿವೆ. ಸರಳ ಶಬ್ದಗಳ ಸೃಜನಶೀಲ ಆಕಾರದಲ್ಲಿ ಬದುಕನ್ನು ಅದರ ಸಮಗ್ರತೆಯಲ್ಲಿ ಗ್ರಹಿಸುವ ಲವಲವಿಕೆಯನ್ನು ನಾವು ಅವರ ಕವನಗಳಲ್ಲಿ ಗುರುತಿಸಬಹುದು. ಸ್ಥಳ ಸಂಬಂಧಿ ಕವನಗಳಲ್ಲಂತೂ ಇತಿಹಾಸ ಪ್ರಜ್ಞೆ, ಸಾಮಾಜಿಕ ಕಳಕಳಿ, ಮನಃಶ್ಶಾಸ್ತ್ರೀಯ ಒಳನೋಟಗಳು, ಅರ್ಥವಾಗುವ ವೈಚಾರಿಕತೆ, ಮಾನವೀಯ ಅನುಕಂಪ—ಇವೆಲ್ಲ ಅತ್ಯಂತ ಸರಳವೆನಿಸುವ ಕಾವ್ಯ ಕ್ರಿಯೆಯಲ್ಲಿ ಮೂಡಿ ಬಂದಿವೆ.

ಪ್ರಾದೇಶಿಕತೆ ಒಂದು ವಿಶೇಷ ಪರಿಸರವುಳ್ಳ ನೆಲದ ಆತ್ಮ. ಸಾಮಾನ್ಯ ಬರಹಗಾರನಿಗೆ ಆ ಆತ್ಮದ ಸ್ಥೂಲ ತಿಳಿವಳಿಕೆ ಸಾಧ್ಯ. ಅಗಾಧ ಪ್ರತಿಭಾ ತೇಜಸ್ಸಿರುವ ಲೇಖಕನಿಗೆ ಅದು ಪ್ರಖರ ಪ್ರಜ್ಞೆಯಾಗಿ ಹೃದಯವೇದ್ಯ. ಆ ನೆಲದ ಪ್ರತಿಯೊಂದಕ್ಕೂ ಆತ ಸ್ಪಂದಿಸಬಲ್ಲ. ಅವನ ಮಾಂತ್ರಿಕ ಪ್ರತಿಭಾ ಸ್ಪರ್ಶಕ್ಕೆ ಆ ಕನ್ನೆ ನೆಲ ಹಾತೊರೆದು ಕಾದಿದೆ ಎನ್ನುವಂತೆ ಸಮಸ್ತ ಸಾರವಂತಿಕೆಯನ್ನು ಅವನಿಗೆ ಸೂರೆ ಚೆಲ್ಲಿಕೊಳ್ಳುತ್ತದೆ.

(ಸಾಹಿತ್ಯದಲ್ಲಿ ಪ್ರಾದೇಶಿಕತೆ)



ದೇವರು, ಧರ್ಮ ಕುರಿತಂತೆ ನಿಸಾರರ ಕೆಲವು ಕವನಗಳ ವಿಶ್ಲೇಷಣೆ

♦ *ಡಾ. ಪ್ರಭುಶಂಕರ*

ಕೆ.ಎಸ್. ನಿಸಾರ್ ಅಹಮದ್ ಅವರ ಕಾವ್ಯಗಳಲ್ಲಿ ಬಹುಭಾಗವನ್ನು, ಅವರ ಬರವಣಿಗೆಯ ಮೊದಲ ದಿನಗಳಿಂದಲೂ ನಾನು ಇಷ್ಟಪಟ್ಟಿದ್ದೇನೆ. ಹಾಗೆಂದು ನಾನು ಕೆಲವು ಸಭೆಗಳಲ್ಲಿ ಹೇಳಿಯೂ ಇದ್ದೇನೆ. ಶ್ರೀ ರಾಮಕೃಷ್ಣಾಶ್ರಮಕ್ಕೆ ನಾನು ಹತ್ತಿರದವನಾಗಿರುವುದರಿಂದಲೂ ನನ್ನ ಬರವಣಿಗೆಗಳಲ್ಲಿ ಕೆಲವು ಅಧ್ಯಾತ್ಮದ ವಲಯವನ್ನು ಸ್ಪರ್ಶಿಸುತ್ತಿರುವುದರಿಂದಲೂ ಶ್ರೀ ನಿಸಾರ್ ಅಹಮದ್‌ರವರ ಅತಿ ಲೌಕಿಕ ಕವನಗಳನ್ನು ಕುರಿತು ಬರೆಯುವಂತೆ ನನ್ನನ್ನು ಕೇಳಲಾಗಿದೆ. ಅದರಂತೆ ಮಾಡಲು ಪ್ರಯತ್ನಿಸುತ್ತಿದ್ದೇನೆ. ನಿಸಾರ್ ಅವರ 'ಸಮಗ್ರ ಕವಿತೆಗಳು' ಗ್ರಂಥದಲ್ಲಿನ ಕೆಲವು ಕವನಗಳನ್ನು ಆರಿಸಿಕೊಂಡು ಅವನ್ನು ವಿಶ್ಲೇಷಿಸುವುದು ನನ್ನ ಉದ್ದೇಶವಾಗಿದೆ.

ನಿಸಾರ್ ಅಹಮದ್ ಅವರು ನಮ್ಮ ಈ ಭೂಮಿ, ಅದರ ಮೇಲೆ ನಡೆದಾಡಿದ, ನಡೆದಾಡುತ್ತಿರುವ ಜನರನ್ನು ಕುರಿತು, ನಿಸರ್ಗವನ್ನು ಕುರಿತು, ಮಾನವ ಸಂಬಂಧಗಳನ್ನು ಕುರಿತು, ನಮ್ಮ ಹೃದಯಗಳಲ್ಲಿ ನೆಲಸಿದ್ದು ನಾನಾ ಪ್ರಮಾಣಗಳಲ್ಲಿ ಉಕ್ಕಿ ಹರಿಯುವ ರಾಗದ್ವೇಷಗಳನ್ನು ಕುರಿತು ನೂರಾರು ಕವನಗಳನ್ನು ರಚಿಸಿದ್ದಾರೆ. ಕನ್ನಡ ನಾಡಿನಾದ್ಯಂತ ಕೋಟ್ಯಂತರ ಜನರ ಕಿವಿಗಳಲ್ಲಿ ಅವರ 'ಕುರಿಗಳು, ಸಾರ್ ಕುರಿಗಳು', 'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ' ಕವನಗಳು ರಿಂಗಣಗುಣಿಯುತ್ತಿವೆ. ಅವರು ನಮ್ಮ ಮಣ್ಣಿನಿಂದ

ಮೂಡಿದ, ನಮ್ಮ ಜನರ ಹೃದಯವನ್ನು ಸೂರೆಗೊಂಡ ನಮ್ಮ ಮಣ್ಣಿನ ಕವಿ. ಇಂಥವರು ಆಕಾಶದ ಕಡೆಗೆ, ಅಲ್ಲಿ ಮೆರವಣಿಗೆ ನಡೆಯುವ ಬಹುವರ್ಣಮಯ ಮೋಡಗಳನ್ನು ನೋಡಲು, ತಮ್ಮ ದೃಷ್ಟಿಯನ್ನು ಹರಿಸಿರುವುದು ಸಹಜವಾಗಿಯೇ ಇದೆ. ಆದರೆ ಅದರಾಚೆಗೂ ತಮ್ಮ ಕುತೂಹಲವನ್ನು ಯಾತ್ರೆ ಕಳುಹಿಸಿ, ಅದು ಅಲ್ಲಿಂದ ಹಿಂದಿರುಗಿ ಬಂದು ನೀಡಿರುವ ವಿಚಾರ ಮಿಶ್ರಿತ ಅನುಭವವನ್ನು ಕಾವ್ಯಗೊಳಿಸಿರುವುದು ಸಹೃದಯರಿಗೆ ಸಂತೋಷವನ್ನು ನೀಡಿರುವ ಸಂಗತಿಯಾಗಿದೆ.

ಈ ಲೋಕದ ಬದುಕಿಗೆ ಅಂಟಿಕೊಂಡು, ಅದಕ್ಕೆ ಹೊಂದಿಕೊಂಡು, ಅಥವಾ ಹೊಂದಿಕೊಳ್ಳಲಾರದೆ ಒದ್ದಾಡಿಕೊಂಡು, ಮನೆಯವರು, ನೆರೆಹೊರೆಯವರು ಶಾಸ್ತ್ರಗಳೆಂದು ತಿಳಿದಿರುವ ಗ್ರಂಥಗಳನ್ನು ನಂಬಿಕೊಂಡು, ಅವರ ದೇವರು ಅಥವಾ ದೇವರುಗಳನ್ನು ಹೊಗಳಿಕೊಂಡು, ಅವರ ಕೃಪೆಗೆ ಅಥವಾ ಅವರು ನೀಡಬಹುದಾದ ವರಗಳಿಗಾಗಿ ಹಂಬಲಿಸುತ್ತಾ, ಸುಖದುಃಖಗಳನ್ನು ಅನುಭವಿಸುತ್ತಾ ಬದುಕುವುದು ಒಂದು ದಾರಿ. ಅಂತಹವರಿಗೂ ತಾವು ನಡೆಯುತ್ತಿರುವ ದಾರಿ ಸರಿಯಾದದ್ದು ಹೌದೇ ಅಲ್ಲವೇ ಎಂಬ ಸಂದೇಹಗಳು ಕಾಡುತ್ತಲೇ ಇರುತ್ತವೆ. ತಮ್ಮ ನಂಬಿಕೆಗಳು ನಿಜವಾದವೇ, ಹುಸಿಯಾದವೇ ಎಂಬ ಜಿಜ್ಞಾಸೆ, ದೇವರು ಒಬ್ಬನೇ, ಮೂವತ್ತು ಮೂರು ಕೋಟಿಯೇ ಎಂಬ ಬುದ್ಧಿ ಕೋಲಾಹಲ, ದೇವರಿದ್ದರೆ ಈ ಜಗತ್ತಿನಲ್ಲಿ ಏಕೆ ಇಷ್ಟು ಕಷ್ಟ ಕಾರ್ಪಣ್ಯಗಳಿವೆ ಎಂಬ ಪ್ರಶ್ನೆಗಳು ಮಾನವತೆಯನ್ನು ಕಾಡುತ್ತಲೇ ಇವೆ. ಇಂತಹ ಸಂದೇಹಗಳು, ದುಃಖ ದಾರಿದ್ರ್ಯಗಳು ನೂರಾರು ದೇವ ಮಾನವರು, ವಿವಿಧ ಮತಾಚಾರ್ಯರು, ಸಾವಿರಾರು ಶಾಸ್ತ್ರಗಳು ಉದಿಸುವುದಕ್ಕೆ ಕಾರಣವಾಗಿವೆ. ತಾನು ನಂಬಿದ ದೇವರು ಅಥವಾ ಪ್ರವಾದಿ, ತನ್ನ ಮತದವರು ಸೃಷ್ಟಿಸಿದ ಶಾಸ್ತ್ರಗಳ ಉಕ್ತಿಗಳು ಮಾತ್ರವೇ ಸತ್ಯ ಎಂಬ ನಂಬಿಕೆ ಇಂದಿಗೂ ನಿಲ್ಲದ ರಕ್ತಪಾತಕ್ಕೆ ಕಾರಣವಾಗಿದೆ. ಅಂತಹ ಪ್ರಶ್ನೆಗಳು, ಅವುಗಳಿಗೆ ತತ್ಕಾಲಕ್ಕಾದರೂ ಸರಿ ಎಂದು ತೋರುವ ಉತ್ತರಗಳು ಸೂಕ್ಷ್ಮಮನಸ್ಸಿನ ನಿಸಾರರು ಅವುಗಳ ಬಗ್ಗೆ ಚಿಂತಿಸುವಂತೆ ಮಾಡಿವೆ, ಅನಂತರ ಕವನಗಳಾಗಿ ಮೂಡಿದೆ. ಅವುಗಳಲ್ಲಿ ಒಂದು 'ಯಾತ್ರಿಕ'.[1]

ನಮ್ಮ ಬದುಕಿನ ಗುರಿ ದೂರದಲ್ಲಿ ಎಲ್ಲೋ ಇದೆ; ಇಲ್ಲವೇ, ಮೇಲೆ ಎಲ್ಲೋ ಇದೆ. ಅದು ಎಲ್ಲಿದ್ದರೂ ನಾವು ಇರುವಲ್ಲಿಂದ ಅಲ್ಲಿಗೆ ಹತ್ತಾರು ಲಕ್ಷ ಮೈಲುಗಳ ಅಂತರ ವಿದೆ ಎಂಬುದನ್ನು ಜೀವಿ ಯಾವಾಗಲೂ ಕಲ್ಪಿಸಿಕೊಂಡಿರುತ್ತಾನೆ. ಅಲ್ಲಿಗೆ ತಾನೊಬ್ಬನೇ ಹೋಗಬೇಕು, ಜೊತೆಗೆ ಯಾರನ್ನೂ ಕರೆದುಕೊಂಡು ಹೋಗುವಂತಿಲ್ಲ. ಜೀವಿ ಆ 'ದೂರ ದೂರಿನ ನೇರ ದಾರಿ'ಯನ್ನು ಹಿಡಿದ ಪಥಿಕನೇನೋ ಆಗುತ್ತಾನೆ. ಯಾವುದೇ ಧರ್ಮವಾಗಲಿ ಅದನ್ನು ಸ್ವರ್ಗ ಎಂದು ಬಣ್ಣಿಸುತ್ತದೆ. ಇಲ್ಲ, ತಾನು ಅಂತಿಮವಾಗಿ ಐಕ್ಯವಾಗಬೇಕಾದ ಬ್ರಹ್ಮ ಎಂದೋ ಏನೋ ತಿಳಿಸುತ್ತದೆ. ಅದರಿಂದಲೇ ಸಿಡಿದು ಬಂದಿರಬಹುದಾದ ಈ ಜೀವಿಗೆ ಅಲ್ಲಿಗೇ ತಲಪುವ ಅದಮ್ಯವಾದ ಬಯಕೆ ಇದ್ದೇ ಇರುತ್ತದೆ. ಅಲ್ಲಿಗೆ ಯಾತ್ರೆ

---

1. ಸಮಗ್ರ ಕವನಗಳು, (ಪು. ೪-೫) ಇದು ಮತ್ತು ಮುಂದೆ ಹೆಸರಿಸುವ ಕವನಗಳು ಈ ಸಂಕಲನವಿಂದ ಆಯ್ದುವೇ. ಮುಂದೆಲ್ಲ ಪುಟ ಸಂಖ್ಯೆಗಳನ್ನು ಮಾತ್ರ ಕೊಡಲಾಗಿದೆ.

ಹೊರಟ ಜೀವಿ ನೇರವಾಗಿ, ಅತ್ತ ಇತ್ತ ನೋಡದೆ ಹೋಗುತ್ತಲೇ ಇದ್ದರೆ, ಇಂದಲ್ಲ ನಾಳೆ, ಜನ್ಮಾಂತರಗಳನ್ನು ಒಪ್ಪುವುದಾದರೆ ಅನೇಕ ಜನ್ಮಗಳ ಬಳಿಕ, ಅಲ್ಲಿಗೆ ತಲಪಬಹುದು.

ಆದರೆ ಈ ಲೋಕ, ಈ ಸೃಷ್ಟಿ, ಅಗಣಿತವಾದ ವೈವಿಧ್ಯಗಳನ್ನು, ಚೆಲುವಿನ ಕಣಿಗಳನ್ನೂ ತನ್ನ ಮೈ ಮೇಲೆ ಅರಳಿಸಿಕೊಂಡಿರುವ ಈ ಭೂಮಿ, ಪಥಿಕನು, ಕಣ್ಣು ಕಟ್ಟಿದ ಕುದುರೆಯಂತೆ ಹಾಗೆ ಹೋಗಲು ಬಿಡುವುದಿಲ್ಲ. ಕವಿ ಕೇಳುತ್ತಾರೆ:

'ನಡುವೆ ಮೂಡಿದ ಇಂದ್ರಜಾಲದ
ಬಣ್ಣವಾಯಿತೆ ಮೆಚ್ಚುಗೆ?'

ಜೀವಮಾನವೆಲ್ಲ ತಪಸ್ಸು ಮಾಡಿ ಅರ್ಧ ದಾರಿಯನ್ನೋ ಮುಕ್ಕಾಲು ದಾರಿಯನ್ನೋ ಸವೆಸಿದ್ದಾರೆ ಎಂದು ನಾವು ಭಾವಿಸುವ ವ್ಯಾಸ, ವಿಶ್ವಾಮಿತ್ರರೇ ಆ 'ಇಂದ್ರಜಾಲದ ಬಣ್ಣ'ದಿಂದ ಮೋಹಿತರಾಗಿ ಮಾರ್ಗ ಮಧ್ಯೆ ತಂಗಿದರು ಎಂದರೆ, ಸಾಮಾನ್ಯರ ಪಾಡು ಊಹಾತೀತ.

ಹೀಗೇಕಾಗುತ್ತದೆ? ಬಹುಶಃ ಇದರ ವಿವರಗಳನ್ನು ತಾವು ಚಿಂತಿಸಿದ್ದರೂ ತತ್ವ ಪರಿಭಾಷೆಯಲ್ಲಿ ಹೇಳಲು ಒಪ್ಪದ ಕವಿ ಚೇತನ ಅವನ್ನು ಸಂಕ್ಷೇಪವಾದ ಆದರೆ ಸುಂದರವಾದ ಕಾವ್ಯ ಭಾಷೆಯಲ್ಲಿ ನಿರೂಪಿಸುತ್ತದೆ. ಇದು ಕವಿಯ ನಿಜವಾದ ಕಾವ್ಯಶಕ್ತಿಯ ಸ್ವರೂಪವನ್ನು ಸಹೃದಯರಿಗೆ ಪರಿಚಯಿಸುವ ಅನೇಕಾನೇಕ ರಸ ಸ್ಥಳಗಳಲ್ಲಿ ಒಂದು:

'ಒಳಗೆ ನೆಲದೀ ಸ್ವಪ್ನ ಮಧುವನು
ಕುಡಿದ ಹಕ್ಕಿಯ ಜಾಗರ;
ಕಾದು ಕುಳಿತಿದೆ ರಾಗ ತಲ್ಪದ
ಮೇಲೆ ಅಲ್ಲೇ ನಾಗರ.' (ಯಾತ್ರಿಕ)

ಜೀವ, ಈ ಜಗತ್ತಿನ ಸುಖ ದುಃಖಗಳನ್ನು ಸ್ವಪ್ನದಂತೆ ಭಾವಿಸುವ ಒಂದು ಸ್ಥಿತಿ ಉಂಟು. ನಿಸಾರರು ಚಿಂತನೆಯಲ್ಲಿ ಸೆರೆ ಹಿಡಿದಿರುವ ಜೀವ, ಸ್ವಪ್ನದ ಮಧುವನ್ನು ಕುಡಿದು ನರ್ತಿಸುತ್ತಿರುವ ಹಕ್ಕಿ. ಅದು ನಮ್ಮ ಈ ನೆಲಕ್ಕೆ ಸಂಬಂಧಿಸಿದ, ಆದರೂ ಸ್ವಪ್ನದಂತಿರುವ ಸುಖವನ್ನು ಅನುಭವಿಸುತ್ತಿರುವ ಹಕ್ಕಿ. ಆದರೆ ಅಮಿಶ್ರಿತವಾದ ಸುಖ ಎಂಬುದಿಲ್ಲ. ಖಲೀಲ್ ಜಿಬ್ರಾನನ ಹೇಳಿಕೆ ಇದು: 'ಕೆಲವರು ಸುಖ ದೊಡ್ಡದು ಎನ್ನುತ್ತಾರೆ; ಮತ್ತೆ ಕೆಲವರು ದುಃಖ ದೊಡ್ಡದು ಎನ್ನುತ್ತಾರೆ. ಆದರೆ, ವಾಸ್ತವವಾಗಿ ಸುಖವು ನಿಮ್ಮೊಡನೆ ಊಟಕ್ಕೆ ಕುಳಿತಿರುವಾಗ ದುಃಖವು ನಿಮ್ಮ ಹಾಸಿಗೆಯ ಮೇಲೆ ಮಲಗಿರುತ್ತದೆ!' ನಿಸಾರರ ಈ ಕವನ ಭಾಗವೂ ಅದನ್ನೇ ಹೇಳುತ್ತದೆ. ಇಲ್ಲಿ ಸ್ವಪ್ನ ಮಧುವನ್ನು ಕುಡಿದ ಜೀವವೆಂಬ ನವಿಲು ನರ್ತಿಸುತ್ತಿದ್ದರೆ, ಅಲ್ಲಿ, ಅತ್ತ, ಪ್ರೇಮದ ಹಾಸಿಗೆಯ ಮೇಲಿದೆ ನಾಗರ—ನಾಗರ ಹಾವು!

ಇಂಥ ಭಾವನೆಯನ್ನು ಬೆಳೆಸುತ್ತಲೇ ಹೋಗುತ್ತಿರುವ ಈ ಕವಿ, ಮುಂದೆ ಓದುಗ ಇವನ್ನೆಲ್ಲ ಗ್ರಹಿಸುತ್ತಾನೆಯೋ ಇಲ್ಲವೋ ಎಂಬುದನ್ನು ಸಂದೇಹಿಸಿ ತಮ್ಮ ತಾತ್ವಿಕ ತೀರ್ಪನ್ನು ವಾಚ್ಯಗೊಳಿಸುತ್ತಾರೆ:

'ಪಟ್ಟ ಅನುಭವ ಹೆಣೆದ ನೆನಪಿನ
ತೊಟ್ಟಿಲೋ ಈ ಬಾಳುವೆ!
ಇಲ್ಲಿ ನಿಟ್ಟುಸಿರಳಲ ಜೊತೆಯಲೆ
ಗೆಲವು ಸಂತಸ ತೂಗಿವೆ.' (ಅದೇ)

'ಅಪಾರ ಪ್ರಭು, ನಿನ್ನ ಕರುಣೆ' ಎಂಬ ಕವನದ ತಲೆಬರಹವನ್ನು ನೋಡಿ ಆಸ್ತಿಕ ಮಹಾಶಯರು ಹಿಗ್ಗಿ ಅದನ್ನು ಓದತೊಡಗಿದರೆ ಅವರಿಗೆ ಕಾದಿದೆ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸುವ ಪಂಕ್ತಿಗಳು, ಸಾಲು ಸಾಲು. ಬದುಕಿನ ಜಾಡ್ಯ ಜಾಪತ್ತುಗಳು, ನೋವು ನಿರಾಶೆಗಳು, ದಿನದಿನದ ಘಟನೆಗಳು ಎತ್ತಿ ತೋರಿಸುತ್ತಿರುವ ಕ್ರೌರ್ಯ, ನಿಷ್ಕರುಣೆಗಳು ಸೂಕ್ಷ್ಮ ಹೃದಯದ ಕವಿಯಲ್ಲಿ ಜ್ವಾಲಾಮುಖಿಗಳನ್ನು ಸೃಷ್ಟಿಸುತ್ತವೆ, ರಾಶಿ ರಾಶಿ ವ್ಯಂಗ್ಯ ಪಂಕ್ತಿಗಳು ಅವನ ಲೇಖನಿಯಿಂದ ಹೊಮ್ಮುವಂತೆ ಮಾಡುತ್ತವೆ. ಕವನ ಆರಭವಾಗುವುದು ಹೀಗೆ :

'ಅಪಾರವೊ ಪ್ರಭು ನಿನ್ನ ಕರುಣೆ:
ಮಸೀದಿಗೆ ಹೋಗದ ನನಗೆ ರೇಜರ್ ಕೊಟ್ಟಂತೆ
ದಡ್ಡ ಮೌಲ್ವಿಗೆ ಕಿರಾತ ಗಡ್ಡ ಕೊಟ್ಟೆ. ಅಲ್ಲೇಕೆ, ಇಲ್ಲೇ
ತೀರಿಸುತ್ತೇನೆ ತಾಳಿ, ನಿಮ್ಮ ಗೊಡ್ಡಾಚಾರಗಳ ಸಾಲವನೆಂದು
ರಕ್ತದೊತ್ತಡದ ಜೊತೆ ನನ್ನಂಥ ಅವಿಧೇಯ ಸುಪುತ್ರರ ಕೊಟ್ಟೆ
ನಿನ್ನ ನಾಮವನೊದರುವ ಆಸ್ತಿಕ ಮುಂಡೇವಕ್ಕೆ.' (ಅಪಾರ ಪ್ರಭು ನಿನ್ನ ಕರುಣೆ)

ಕಷ್ಟಗಳು ಕವಿದಾಗ, ದುಃಖ ಒತ್ತಿ ಬಂದಾಗ, ಭಕ್ತಿಯಿಂದ ಪ್ರಾರ್ಥಿಸಿದರೂ ನರಳುವುದನ್ನು ನೋಡಿದಾಗ ಸಾಮಾನ್ಯವಾಗಿ ನಾವು ಕೆರಳುತ್ತೇವಷ್ಟೆ? ಅಂಥದೇ ಮನಃಸ್ಥಿತಿಯಲ್ಲಿದ್ದಾರೆ ಕವಿ. ಅವರ ಈ ಮನಃಸ್ಥಿತಿ ಸ್ವಲ್ಪ ಹೊತ್ತಾದರೂ ಸ್ಥಾಯಿಯಾಗಿ ನಿಂತಿದೆ. ಭಗವಂತನ ಕರುಣೆ ಎಷ್ಟು ಸಮತಾವಾದಿಯಾದದ್ದು ಎಂಬುದನ್ನು ಹೇಳುತ್ತವೆ, ಮುಂದಿನ ಪಂಕ್ತಿಗಳು:

'ಎಮ್ಮೆಯೊ, ಎರೆಹುಳುವೊ ಭೇದವೆ ನಿನಗೆ?
ಒಂದೇ ಟೈರಿಗೆ ಸಿಕ್ಕಿಸಿ ಬರಸೆಳೆದುಕೊಳುವೆ.
ಒಂದಕ್ಕೆ ಹಲ್ಲು, ಮತ್ತೊಂದಕ್ಕೆ ಕೊಕ್ಕು ಕೊಟ್ಟರೂ
ಪಕ್ಷಪಾತವಿಲ್ಲ, ವೈವಿಧ್ಯವೆನಿಸಿದೆ; ಸಾಕ್ಷಿಗೆಂಬಂತೆ
ಎರಡಕ್ಕೂ ತೋರಿಸಿದೆ ಸಮಾನತ್ವ—ಮಾಂಸಾಹಾರಿತ್ವದಲ್ಲಿ.
ಹಾಗೆಯೇ, ಯೋಗ್ಯತಾನುಸಾರ ಇಲಿಗೆ ಬೋನಂತೆ
ಹುಲಿಗೆ ಜೋಡಿ ನಳಿಗೆಯ ದಯಪಾಲಿಸಿ ನ್ಯಾಯ
ಸಾರಿದವ' (ಅದೇ)

ಇಲ್ಲಿಯವರೆಗೂ ವ್ಯಂಗ್ಯಮಿಶ್ರಿತ ಕ್ರೋಧವಾದದ್ದು ಈಗ ಶುದ್ಧ ಕ್ರೋಧ ವ್ಯಂಜಕವಾಗುತ್ತದೆ:

'ತಪ್ಪಿದ್ದು ಇಲ್ಲಷ್ಟೆ: ನೀಡಿ
ಹೇಡಿಗೆ ಗ್ರನೇಡು, ಧೀರನಿಗೆ ಬರೀ ದುರಭಿಮಾನ.'

ಎಲ್ಲವನ್ನೂ ಕೊಡುವವನು, ಎಲ್ಲ ಪರಮಾತ್ಮನ ಇಚ್ಛೆ ಎನ್ನುವವರ ಪ್ರಕಾರ ಭಗವಂತನಷ್ಟೆ. ಅವನು ಎಲ್ಲ ಕಡೆಯೂ ಸಮಾನತೆ ಸಾಧಿಸಿದವನು ಇಲ್ಲಿ ಎಡವಿದ್ದಾನೆ, ತಪ್ಪಿದ್ದಾನೆ. ಹೇಡಿಯ ಕೈಗೆ, (ಉಗ್ರನು ಯಾವಾಗಲೂ ಹೇಡಿ ಎಂಬುದನ್ನು ಮರೆಯ ಬಾರದು.) ದಯಾಮಯನಾದ ಭಗವಂತ ಗ್ರನೇಡು ಕೊಟ್ಟಿದ್ದಾನೆ; ಆದರೆ ಧೀರನಿಗೆ ಮಾತ್ರ ಬರೀ ದುರಭಿಮಾನವನ್ನು ಕೊಟ್ಟಿದ್ದಾನೆ!

ಮುಂದಿನ ಭಾಗದಲ್ಲಿ ಭಗವಂತನ 'ಕರುಣೆ'ಯನ್ನು ವಿಶ್ಲೇಷಿಸಲಾಗಿದೆ. 'ನಿನ್ನ ಕರುಣೆ 'ನೈತಿಕ'ವಾದದ್ದು' ಎನ್ನುತ್ತಾರೆ ಕವಿ. ಅದಕ್ಕೆ ಅವರು ಸಾಲು ಸಾಲು ಉದಾಹರಣೆ ಗಳನ್ನು ನೀಡುತ್ತಾರೆ. ಭೂಕಂಪವೋ, ಪ್ರವಾಹವೋ, ಇಲ್ಲವೇ ಧಾರ್ಮಿಕ ಕ್ರೌರ್ಯವೋ ಅನೇಕರನ್ನು ನಿರಾಶ್ರಿತರನ್ನಾಗಿಸುತ್ತದೆ. ಅವರು ಒಂದು ಕಡೆ ಬೀಡು ಬಿಡುತ್ತಾರೆ. ದೇಶ ವಿದೇಶಗಳಲ್ಲಿ ಕರುಣಾಳುಗಳು ಅವರಿಗಾಗಿ ಧಾನ್ಯ, ರಗ್ಗು, ಬಟ್ಟೆ ಬರೆ, ಪಾತ್ರೆ ಪಡಗ ಎಲ್ಲವನ್ನು ಕಳುಹಿಸುತ್ತಾರೆ. ಅವು ಹೆಲಿಕಾಪ್ಟರ್ ತುಂಬ ಚೀಲಗಳಲ್ಲಿ ಬರುತ್ತವೆ. ಅವೇ, ಅವಘಡದಿಂದಲೋ ಏನೋ ಆ ಹಸಿದವರ ಮೇಲೆ ಬೀಳುತ್ತವೆ. ಅವರೆಲ್ಲ ಹೆಣಗಳಾಗು ತ್ತಾರೆ. ಭಗವಂತನ ಕರುಣೆ ಎಂಥದು ಎನ್ನುತ್ತಾರೆ, ಕವಿ: 'ಸಾರಿದೆ, ಹಸಿವಿನಲ್ಲೂ ಅತ್ಯಾಸೆ ಬೇಡವೆಂಬ ಉದಾತ್ತ ತತ್ತ್ವ.'

ಇನ್ನು ದ್ರೌಪದಿಯ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಅವಳ ಪಾತಿವ್ರತ್ಯದ ಮಹಿಮೆಯನ್ನು ಸಾರುವುದು ಹೀಗೆ :

> **'ದ್ರೌಪದಿಗೆ ಐವರ ನೀಡಿಯೂ ಆರನೆಯವನ ಆಸೆ**
> **ತೀಡಿಯೂ ಪಾತಿವ್ರತ್ಯವುಳಿಸಿದೆ; ಇಲ್ಲಿ, ಬೊಂಬಾಯಲ್ಲಿ**
> **ಸಿನಿಮಾ ನಟನ ಚಿತ್ರಕ್ಕೆ ಕದ್ದು ಮುದ್ದಿಡುವವಳ**
> **ಕೊರಳ ಹಿಚುಕಿಸಿದೆ ಪತಿಯ ಕೈಯಲ್ಲಿ.'**

ಭಗವಂತನ ಲೀಲೆ ಹೀಗೇ ಎಂದು ಪತ್ತೆ ಹಚ್ಚಲು ಸಾಧ್ಯವೇ? ಎಂಬುದು ಕವಿಯ ಮುಂದಿನ ಪ್ರಶ್ನೆ. ಏಕೆಂದರೆ ಹೀಗೆ ಪ್ರಶ್ನಿಸುವ ನಾವೂ ಅವನಿಂದ, ಎಂದರೆ ಭಗವಂತನಿಂದ ಸೃಷ್ಟಿಯಾದವರು ತಾನೆ? ನಾವಾದರೂ ಎಂಥವರು? ಸರಿ ರಾತ್ರಿ ಭಗವಂತನೇ ಬಂದು ಕದ ತಟ್ಟಿದರೂ ಹಾಗೆ ತಟ್ಟಿದವರು ನೆರೆಮನೆಯಾಕೆಯೇ ಎಂದು ಹಿಗ್ಗಿ, ಅರಿಷಡ್ವೈರಿಗಳಿಂದ ಚಾಲಿತರಾಗಿ ಕುಪ್ಪಳಿಸುವ ಕಪ್ಪೆಗಳು!

ಇನ್ನು ಈ ಕವನ ಮುಕ್ತಾಯವಾಗುವುದು ವ್ಯಂಗ್ಯದ ಪರಮಾವಧಿಯ ಪರಮಾಶ್ಚರ್ಯದಲ್ಲಿ :

> **'ನನ್ನ ಸತತ ಎಚ್ಚರದಲ್ಲಿ ಕಣ್ಣಿಗೆ ಬಿದ್ದು**
> **ನೀನು ಬದಲಾಗಬಹುದೆಂದು ಬೆದರಿ**
> **ಅಂಟಿಸಿರುವೆ ನಿಶ್ಚಯಾನಿಶ್ಚಯದ ಜೋಡಿ ರೆಪ್ಪೆ.**
> **ಅಪಾರವಯ್ಯಾ ಪ್ರಭೋ, ನಿನ್ನ ಕಿಲಾಡಿ ಕರುಣೆ...'**

ಕವಿ ವ್ಯಕ್ತಿ ಸದಾ ಎಚ್ಚರದಲ್ಲಿರುವುದರಿಂದ ಅವನ ಕಣ್ಣಿಗೆ ಬಿದ್ದು ತಾನು

ಬದಲಾಗಬಹುದು ಎಂದು ಹೆದರಿ ದೇವರು ಇವನಿಗೆ ಎರಡು ರೆಪ್ಪೆಗಳನ್ನು ಅಂಟಿಸಿದ್ದಾನೆ. ಅವು ನಿಶ್ಚಯ ಅನಿಶ್ಚಯ ಎಂಬ ಎರಡು! ಆದ್ದರಿಂದ ಕವಿ, ಭಗವಂತನದು 'ಕಿಲಾಡಿ ಕರುಣೆ' ಎನ್ನುತ್ತಾನೆ!

ಮೇಲಿನ ರೀತಿಯ ವೈಚಾರಿಕತೆ ಗತಾನುಗತಿಕವಾಗಿ ಬಂದದ್ದೇ. ತಾತ್ವಿಕರು ತತ್ವದ ಚೌಕಟ್ಟಿನಲ್ಲಿ ಇಂಥವನೆಲ್ಲ ವಿಶ್ಲೇಷಿಸಿ ತತ್ವಸೌಧಗಳನ್ನು ಕಟ್ಟಿದ್ದಾರಲ್ಲವೆ?

ದೈವವನ್ನು, ಜೀವಾತ್ಮ-ಪರಮಾತ್ಮರ ಸಂಬಂಧವನ್ನು, ದೇವರು ನೀಡಬಹುದಾದ ವರಗಳನ್ನು, ವ್ಯಕ್ತಿ-ದೈವಗಳ ಸಂಬಂಧವನ್ನು ಬಿಟ್ಟು ತಾತ್ವಿಕ ಚಿಂತನೆಗೆ ಅವಲಂಬನವಾಗುವವರು ದೇವಮಾನವರು. ಅಂತಹವರನ್ನು ಕುರಿತೂ ಚಿಂತಿಸಿದ್ದಾರೆ ನಿಸಾರ್ ಅಹಮದ್ ಅವರು. ಅಂತಹವರಲ್ಲಿ ಏಸುಕ್ರಿಸ್ತ, ಬಸವೇಶ್ವರರು, ಶ್ರೀ ರಾಮಕೃಷ್ಣ ಪರಮಹಂಸರು, ಶ್ರೀ ಶಾರದಾದೇವಿ ಎಂಬ ನಾಲ್ಕು ಕವನಗಳನ್ನು ಪರಿಚಯಿಸಿಕೊಳ್ಳಬಹುದು.

ಏಸುಕ್ರಿಸ್ತನನ್ನು ಕುರಿತ ಕವನದ ಶೀರ್ಷಿಕೆ 'ಶಿಲುಬೆ ಏರಿದ್ದಾನೆ'.[1] ಏಸು ತಾನೇ ನೊಂದವನು. ತಾನು ನಂಬಿದ ಶಿಷ್ಯನಿಂದ ನಂಬಿಕೆಯ ದ್ರೋಹವನ್ನು ಅನುಭವಿಸಿದವನು. ನೂರಾರು, ಸಾವಿರಾರು, ಏಕೆ ಲಕ್ಷಾಂತರ ಜೀವಿಗಳಿಗೆ ಎರಡು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಸಂತೈಕೆ ನೀಡಿದವನು. ಆದರೂ ಅವನ ನೆನಪು ಬಂದಾಗಲೆಲ್ಲ, ಅಥವಾ ಅವನನ್ನು ಕುರಿತು ಪ್ರಾರ್ಥನೆ ಸಲ್ಲಿಸುವಾಗಲೂ ನಾವು ಕಲ್ಪಿಸಿಕೊಳ್ಳುವುದು ಶಿಲುಬೆ ಏರಿದ ಏಸುವನ್ನು. ಉದ್ದನೆಯ, ಬಲವಾದ ಮೊಳೆಗಳನ್ನು ಜಡಿಸಿಕೊಂಡ ಏಸು ಸ್ವಾಮಿಯ ಮುಖದಲ್ಲಿ ಯಾತನೆಯನ್ನಲ್ಲದೆ ಪ್ರಸನ್ನತೆಯನ್ನು, ಮಂದಹಾಸವನ್ನು ಕಾಣುವುದು ಸಾಧ್ಯವೆ? ಅಸಂಖ್ಯಾತ ಜನರ ಪ್ರಾರ್ಥನೆಯನ್ನು ಸ್ವೀಕರಿಸುತ್ತಿರುವ ಏಸು ಸ್ವಾಮಿ, ತಾನೇ ನಿರಂತರವಾಗಿ ದುಃಖದಲ್ಲಿ ಇರುವಂತಹ ಮುಖಭಾವವನ್ನು ತಾಳಿದವನು. ಆದರೆ ಆ ಮುಖದಲ್ಲಿ ಈ ಕವಿ ಕಾಣುವುದು ಬೇರೆಯದೇ ನೋಟ :

'ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ;
ಬಾಗಿದ ಶಿರ
ಕುತ್ತಿಗೆಯಲಿ ಉಬ್ಬಿದೊಂದು ನರ,
ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ;
ತೆರೆದೆದೆ
ಎನ್ನುವಂತಿದೆ:
ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ,
ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ,
ಮನ್ನಿಸಲಿ ನಿಮ್ಮನ್ನ—ಆ ದೇವರೆ!' **(ಶಿಲುಬೆ ಏರಿದ್ದಾನೆ)**

ಏಸುವನ್ನು ಶಿಲುಬೆಗೇರಿಸಿದಾಗ ಬಳಸಿದ ಹಿಂಸಾ ಸಾಧನಗಳು, ರೋಮನರು ಬಡಿದ ಸುತ್ತಿಗೆಗಳು, ಮೊಳೆಗಳು, ಅವನ ತಲೆಗೇರಿಸಿದ ಕಿರೀಟದ ಮುಳ್ಳುಗಳು, ಅವರು ಹಬ್ಬಿಸಿದ

1. ಪು. ೩೪೭.

ಸುಳ್ಳುಗಳು ಮತ್ತು—

'ರೋಮನರ ಕಿವಿಡೆಬ್ಬಿಸುವ ಕೊಂಬುಗಳು
ಕಾಲರಾಯನ ಗುಜರಿ ಸೇರಿಲ್ಲ—
ವೇಷ ಮರೆಸಿವೆ ಅಷ್ಟೆ, ಈ ಎಲ್ಲ ಕೇಡುಗಳು;
ರೈಫಲ್ಲು, ಟ್ಯಾಂಕು, ಬಾಂಬು, ಗ್ರೆನೇಡುಗಳು,
—ಅವಕ್ಕೆ ಚಲನೆಯೊದಗಿಸಿವೆ.' (ಅದೇ)

ಆದರೇನು, 'ಬಂದೇ ತೀರುತ್ತದೆ ದೈವೀರಾಜ್ಯ ಎನ್ನುವಂತೆ ಏರಿದ್ದಾನೆ ಶಿಲುಬೆ'. ಅತ್ಯಂತ ಆಶಾವಾದಿಯಾದ ಈ ಕವಿ ತಮ್ಮ ಈ ಕವನವನ್ನು ಕೊನೆಗಾಣಿಸಿರುವುದು ಹೀಗೆ :

'ದಿನನಿತ್ಯ ಶಿಲುಬೆಯೇರಿದ್ದಾನೆ ಜೀಸಸ್;
ಅಸಂಖ್ಯ ಕ್ರಿಸ್ಮಸ್ಸುಗಳ ಹರಸಿ,
ಶೋಷಿತರ ಕಂಬನಿಯನೊರಸಿ
ಸತ್ಯಕ್ಕೆ ಹೊಸ ಕವಲುಗಳ ತೆರೆಸಿ.' (ಅದೇ)

ನಿಸಾರರ 'ಬಸವೇಶ್ವರ'[1], ಕನ್ನಡದಲ್ಲಿ ಬಸವಣ್ಣನವರನ್ನು ಕುರಿತಂತೆ ಪ್ರಕಟವಾಗಿರುವ ಕವನಗಳಲ್ಲಿ ಅತ್ಯುತ್ತಮ ಎಂದು ಹೇಳಬಹುದಾದದ್ದು. ಬಸವಣ್ಣನವರ ಸಾಧನೆ-ಸಿದ್ಧಿಗಳನ್ನು ಅತ್ಯಂತ ಕಾವ್ಯಮಯವಾಗಿ ಶಿಲ್ಪಗೊಳಿಸಿದ್ದಾರೆ ಕವಿ ನಿಸಾರರು. ಈ ಪಂಕ್ತಿಗಳನ್ನು ಗಮನಿಸಿ :

'ಮಡುಗಟ್ಟಿ ಸಾರಿದ್ದ ಸಂಪ್ರದಾಯಕೆ ನಾಲೆ
ಬಿಡಿಸಿ, ಹೊಸ ಹಾದಿಗಳ ರಚಿಸಿದಾತ
ಈ ನಾಡ ಹಿರಿ ಬದುಕಿಗಂಟಿದ್ದ ಕಿಲುಬನ್ನು
ಉಜ್ಜುಜ್ಜಿ ಮತ್ತೊಮ್ಮೆ ಹೊಳೆಸಿದಾತ.
ಹತ್ತು ಮರ ಗಿಡದ ಒಕ್ಕೂಟವೀ ತೋಟ;
ಸರಿ ಸಮದ ಆರೈಕೆ ಮಾಡಿದಾತ;
ಜೀವನವನಡಿಗಡಿಗೆ ಸೋಸಿ, ಅರಿವನ್ನರಸಿ
ಭಕ್ತಿಯನೆ ಬೆಂಬತ್ತಿ ಸಾಗಿದಾತ....
ಅಶ್ವತ್ಥ ಮರದಂತೆ ನೆರೆಹೊರೆಯ ಶರಣರಿಗೆ
ತಂಪಾಗಿ ಕೊಡೆ ಹಿಡಿದು ನಿಂತ ಅಣ್ಣ.' (ಬಸವೇಶ್ವರರು)

ಅವರ ಅನುಭಾವವನ್ನಾಗಲಿ—ಏಕೆಂದರೆ ಅನುಭಾವ ಎನ್ನುವುದು ಶಿಶು ಕಂಡ ಕನಸಿನಂತೆ—ಸಾಧನೆ, ಅನುಕಂಪ ಒಲವುಗಳನ್ನಾಗಲಿ ಬಡ ನುಡಿಯಲ್ಲಿ ಬಣ್ಣಿಸಲಾದೀತೆ ?

'ಬೆಳಗಿನೊಳಗಿನ ಬೆಳಗ ನಿಬ್ಬೆರಗಿನಾನಂದ
ದಕ್ಕುವುದೆ ಬಡನುಡಿಯ ತೆಕ್ಕೆಯಲ್ಲಿ?' (ಅದೇ)

ಇನ್ನು ಸರ್ವಧರ್ಮ ಸಮನ್ವಯಾಚಾರ್ಯ ಶ್ರೀ ರಾಮಕೃಷ್ಣ ಪರಮಹಂಸರನ್ನೂ ಅವರೇ ದೇವಿಯೆಂದು ಆರಾಧಿಸಿದ ಅವರ ಪತ್ನಿ ಶಾರದಾದೇವಿಯವರನ್ನು ನಿಸಾರರು ಮುಕ್ತ ಹೃದಯದಿಂದ ಸಹೃದಯರಿಗೆ ನಿವೇದಿಸಿದ್ದಾರೆ.

1. ಪು. ೪೦೪.

ಪರಮಹಂಸರನ್ನು ಆರಂಭದಲ್ಲೇ 'ಸಕಲ ಧರ್ಮ ಸುಮ ವನ ಸಂಚಾರಿಯೆ' ಎಂದು ಸಂಬೋಧಿಸಿದ್ದಾರೆ. ಕ್ಷಣಮಾತ್ರದಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಅನುಭವಿಸುತ್ತಿದ್ದ ಅವರನ್ನೂ, ಸರಳ ಸುಂದರ ಸಾಮ್ಯಗಳಿಂದ ಕೇಳುವವರ ಹೃದಯಗಳನ್ನು ಬೆಳಗುತ್ತಿದ್ದ ಅವರ ಉಪದೇಶ ವಿಧಾನವನ್ನೂ ನಾಲ್ಕು ಪುಟ್ಟ ಪಂಕ್ತಿಗಳಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ವರ್ಣಿಸಿದ್ದಾರೆ:

'ಬಯಸಿದ ಚಣ ಅವಿಕಲ್ಪ ಸಮಾಧಿ
ನೀರಲಿ ಮುಳುಗುವ ತೆರ ಹಂಸ.
ಸಾಮತಿ ಸಾಮ್ಯದ ಸೂರ್ಯನ ಎದುರಲಿ
ಶಂಕಾ ತಿಮಿರವೋ ವಿಧ್ವಂಸ.' (ಶ್ರೀ ರಾಮಕೃಷ್ಣ ಪರಮಹಂಸ)

ಅವರ ಸೂಕ್ತಿ ಸೌರಭವನ್ನು ಸೊಗಸಾಗಿ ನಿರೂಪಿಸಿದ್ದಾರೆ :

'ಬಾಳ್ವೆಯ ಹಲಸನು ಬಿಡಿಸಲು ಬೇಕು
ಧರ್ಮದ ಕೌಶಲ್ಯದ ತೈಲ.
ಇನ್ನೆನಿತೋ ನುಡಿ ನಾಣ್ಯಗಳಿವೆ, ಗುರು;
ಅಕ್ಷಯ ಸೂಕ್ತಿಯ ಕೈಚೀಲ.' (ಅದೇ)

ಪರಮಹಂಸರ ತುಂಬ ಸುಂದರವಾದ ಹೇಳಿಕೆಯೊಂದುಂಟು—'ನಾನು, ನನ್ನದು, ನಾನು ಮಾಡುತ್ತೇನೆ' ಎನ್ನುವ ಅಹಂಕಾರ ಮಮಕಾರಗಳ ಟೊಳ್ಳುತನವನ್ನು ಸಾರುವ ಸಂದರ್ಭದಲ್ಲಿ ಅವರು ಹೇಳಿದ್ದು ಅದು. ನಿಸಾರರು ಅದಕ್ಕೆ ಕಾವ್ಯ ರೂಪವನ್ನು ಕೊಟ್ಟಿದ್ದಾರೆ:

'ದೇವರು ನಗುವುದು ಎರಡೆ ಸಲ:
ಇದು ನನ್ನ ನೆಲ, ಅದು ನಿನ್ನ ನೆಲ
ಎನ್ನುತ ಸೋದರರರಳೆಯುತ ಹೊಲಗಳ
ಗೆರೆಗಳನೆಳೆಯುವ ಪರಿಯಲ್ಲಿ.
ಸಾವಿಗು ರೋಗಿಗು ನಡೆದಿರೆ ಯುದ್ಧ
'ಬದುಕಿಸುವೆನು ನಾ' ಎನ್ನುತ ವೈದ್ಯ
ಸಂತೈಸುತಲಿರೆ ಮಡಿವನ ಮನವ—
ದೇವರು ನಗುವನು ಮರೆಯಲ್ಲಿ.' (ದೇವರ ನಗು)

ಶ್ರೀಮಾತೆ ಶಾರದಾದೇವಿಯವರನ್ನು ಕುರಿತ ಕವನವೂ ಒಂದು ಸಾಣೆ ಹಿಡಿದ ರತ್ನ. ಅಲ್ಲಿನ ಕೆಲವು ಪಂಕ್ತಿಗಳನ್ನು ನೋಡಿ :

'ವಾರಣಾಸಿ ಜೊತೆ ಗಂಗೆ ಕೂಡ ಮನಸಲ್ಲಿ ಹೊಳೆಯುವಂತೆ
ದೇವರನ್ನು ಸ್ಮರಿಸಿರಲು ದೇಗುಲದ ಶುಭಚಿತ್ರ ಬೆಳೆಯುವಂತೆ
ಪರಮಹಂಸರನು ಮಹದ್ ಭಕ್ತಿಯಲಿ ನೆನೆವ ಎಲ್ಲ ಸುಜನ
ತಮಗರಿಯದಂತೆ ಸಲ್ಲಿಸುತಲಿಹರು ನಿಮಗೂನು ದಿವ್ಯ ನಮನ.
ಕೃಷ್ಣರಾಜ ಸಾಗರಕೆ ಎಂತೊ ಬೃಂದಾವನವು ಅಂತೆ
ಅನವರತ ಗುರುವಿಗನ್ಯೋನ್ಯ ನೀವು, ರವೆಯಷ್ಟು ಇರದಹಂತೆ.

ಸಂಸಾರ ಕೂಪ ಮಂಡೂಕವಲ್ಲ, ಪತಿಯಲ್ಲ ಪರಕೆ ಕುರುಡ
ಹುಟ್ಟಿನಿಂದಲೇ ಬಾನ ಬಯಲ ಹೊಂಬೆಳಕಿಗೊಲಿದ ಗರುಡ.' (ಶ್ರೀ ಶಾರದಾದೇವಿ)

ನಿಸಾರ್ ಅಹಮದರ ಅತ್ಯುತ್ತಮ ರಚನೆ ಎಂದು ನಾನು ಭಾವಿಸಿ, ಪ್ರೀತಿಸುವ ಕವನ 'ಪುರಂದರದಾಸರು'. ಚಿಂತನೆ, ಕಲ್ಪನೆ ಆರಾಧನೆಯಾದದ್ದು, ಅದು ನಮ್ಮ ಮನಸ್ಸನ್ನು ಸೆಳೆದದ್ದು, ತನ್ನನ್ನು ಮತ್ತೆ ಮತ್ತೆ ಪುನರುಚ್ಚಾರಗೊಳಿಸಿಕೊಳ್ಳಲು ಆಹ್ವಾನಿಸಿದ್ದು ಈ ಕವನ. ಇದರ ಆರಂಭ ಹೀಗೆ :

'ದಾಸರೆಂದರೆ ನಮ್ಮ ವರ ಪುರಂದರರಯ್ಯ;
ಇದ್ದು ಇಲ್ಲೇ ಅಲ್ಲಿಗೇರಿದವರು.
ಸಹಜ ಮುಕ್ತಿಯ ನೌಕೆ ಬರುವವರೆಗೂ ಇಲ್ಲೆ
ಈಸಿದವರು, ಇದ್ದು ಜೈಸಿದವರು.' (ಪುರಂದರ ದಾಸರು)

ನಾವು ಈ ಜಗತ್ತಿನಲ್ಲಿ ಬಾಳಬೇಕಾದದ್ದು ಹೇಗೆ ಎಂಬುವುದು ಎಲ್ಲ ಪ್ರಜ್ಞಾವಂತರನ್ನೂ ಶತಮಾನಗಳಿಂದಲೂ ಕಾಡುತ್ತ ಬಂದಿರುವ, ಇಂದಿಗೂ ಕಾಡುತ್ತಲೇ ಇರುವ ಪ್ರಶ್ನೆ. ಪುರಂದರದಾಸರು ಈ ಪ್ರಶ್ನೆಗೆ ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರುವ ಉತ್ತರ ಒಂದಲ್ಲ, ಹಲವಾರು, ಅವರ ಅಂದಂದಿಗೆ ಮನಃಸ್ಥಿತಿಗೆ ಸಂಬಂಧಿಸಿದಂತೆ. 'ಈಸಬೇಕು, ಇದ್ದು ಜೈಸಬೇಕು' ಎಂದು ಒಂದು ಸಲ ಹೇಳಿದರೆ, ಮತ್ತೊಂದು ಮನಃಸ್ಥಿತಿಯಲ್ಲಿ, 'ಹೇಸಿಗೆ ಸಂಸಾರವಿದು' ಎನ್ನುತ್ತಾರೆ. ಆದ್ದರಿಂದ ನಿಖರವಾದ ಉತ್ತರ ಯಾವುದು? ಅದನ್ನು ಒಂದೊಂದು ಜೀವಿಯೂ ತಾನೇ ಕಂಡುಕೊಳ್ಳಬೇಕು. ನಿಸಾರರು ಮೆಚ್ಚಿರುವುದು ಇಹ ಜೀವನವನ್ನು ಕಡೆಗಣಿಸದೆ ಇಹದಾಚೆಯ ಬದುಕಿಗೆ ತುಡಿದವರನ್ನು, ಹಾಗೆ ತುಡಿದು ಉನ್ನತಿಯನ್ನು ಸಾಧಿಸಿದವರನ್ನು. ಆದ್ದರಿಂದಲೇ ಅವರು 'ದಾಸರೆಂದರೆ ನಮ್ಮ ವರ ಪುರಂದರರಯ್ಯ' ಎನ್ನುತ್ತಾರೆ. ಏಕೆಂದರೆ ಪುರಂದರರು ಇಲ್ಲೇ ಇದ್ದು, ಅಲ್ಲಿಗೆ ಎಂದರೆ ನಾವು ಅತ್ಯಂತ ಆನಂದಮಯವಾದದ್ದು ಎಂದು ಭಾವಿಸಿರುವ ಲೋಕಕ್ಕೆ ಏರಿದವರು. ಈ ಲೋಕ ಬೇಸರವಾಯಿತು ಎಂದು—ಮನುಜ ಶರೀರವಿದೇನು ಸುಖ ಎಂದು ಒಂದು ಮನಃಸ್ಥಿತಿಯಲ್ಲಿ ಹೇಳಿದ್ದಾರೆ ಎಂದಾದರೂ—ದೇಹತ್ಯಾಗದ ಮಾತನ್ನಾಡ ಲಿಲ್ಲ. ಬದಲಿಗೆ, ಸಹಜವಾಗಿ ಸಾವು ಬರುವವರೆಗೆ, ನಿಸಾರರು ಅದನ್ನು 'ಸಹಜ ಮುಕ್ತಿಯ ನೌಕೆ' ಎಂದಿದ್ದಾರೆ—ಇಲ್ಲೇ ಇದ್ದವರು, ಸಂಸಾರವೆಂಬ ಸಾಗರದಲ್ಲಿ ಈಸಿದವರು, ಇದ್ದೂ ಜೈಸಿದವರು.

ನಮ್ಮೆಲ್ಲರ ಸಾಮಾನ್ಯತೆಯನ್ನು ಮೀರಿ ನಿಂತವರನ್ನು, 'The choosen ones' ಎನ್ನುತ್ತೇವೆ—ಎಂದರೆ ಆರಿಸಲ್ಪಟ್ಟವರು ಎಂದು—ಅವರು ದೈವದಿಂದ ಆರಿಸಲ್ಪಟ್ಟವರು. ಶ್ರೀ ಅರವಿಂದ ಮಹರ್ಷಿಗಳ ಒಂದು ಮಾತಿದೆ: 'He who chooses the Divine, is choosen by the Divine.' 'ದಿವ್ಯತೆಯನ್ನು ಅರಸುತ್ತಿರುವವನು ದಿವ್ಯತೆಯಿಂದ ಆರಿಸಲ್ಪಟ್ಟಿದ್ದಾನೆ.' ಜಗತ್ತಿನ ಐದು ನೂರು ಚಿಲ್ಲರೆ ಕೋಟಿ ಜನರೂ ದಿವ್ಯತೆಯನ್ನು, ಎಂದರೆ ಲೌಕಿಕವನ್ನು ಮೀರಿದ ಅಧ್ಯಾತ್ಮವನ್ನು ಆರಿಸಿಕೊಳ್ಳುತ್ತಿಲ್ಲ. ಅವರಲ್ಲಿ ಎಲ್ಲೋ ಕೆಲವರು ಕಾಮ, ಕಾಂಚನ, ಸಿದ್ಧಿ ಪ್ರಸಿದ್ಧಿಗಳಾಚೆಯ ಜೀವನವನ್ನು ಆರಿಸಿಕೊಳ್ಳುತ್ತಾರೆ.

ಏಕೆಂದರೆ ದೈವ ಅಥವಾ ಅತೀತ ಶಕ್ತಿ ಅಂಥವರನ್ನು ಗುರುತಿಸಿ, ತನ್ನ ಕೃಪೆಯ ಮಳೆಗರೆಯಲು ಆರಿಸಿಕೊಳ್ಳುತ್ತದೆ. ಕವಿ ಅದನ್ನು ಸೊಗಸಾಗಿ ಹೇಳಿದ್ದಾರೆ:

'ಬೀದಿ ತಿರುಕನ ಹಾಗೆ ದೈವ ಬಂದಾರಿಸಿತು;
ಸಾರಿಸಿತು ಇವರೆದೆಯ, ಹಾರಿಸಿತ್ತು;
ಒದ್ದೆ ಅರಿವೆಯ ಹಿಂಡಿ ರಾಗವನು ಆರಿವಿಂದ
ಆರಿಸಿತು; ದಾಸತ್ವಕೇರಿಸಿತ್ತು.' (ಅದೇ)

ಪುರಂದರದಾಸರ ಪೂರ್ವಾಶ್ರಮದ ಮಾತು. ಇಹಲೋಕದ ಜೀವನ ಬೇಸರವಾಗಿ, ಪರವನ್ನು ಹುಡುಕಿಕೊಂಡು, ದೇವರ ಮಹಿಮೆಯನ್ನು ಹಾಡುತ್ತಾ ಬೀದಿಗುಂಟ ಹೊರಟವರಲ್ಲ ಪುರಂದರರು. ಬದಲಿಗೆ ದೈವವೇ, ಬೀದಿ ತಿರುಕನಂತೆ ಹುಡುಕುತ್ತಾ ಹುಡುಕುತ್ತಾ ಬಂದು ಇವರನ್ನು ಕಂಡು ನಿಂತಿತು. ಇವರ ಎದೆಯನ್ನು ಸಾರಿಸಿ ಸಂಪೂರ್ಣವಾಗಿ ಶುದ್ಧಗೊಳಿಸಿತು. ಲೌಕಿಕವಾದ ಬದುಕಿನಿಂದ ಇವರನ್ನು ಅಧ್ಯಾತ್ಮಲೋಕಕ್ಕೆ ಹಾರಿಸಿಕೊಂಡು ಹೋಯಿತು. ಇವರ ದೇಹದ ಹಸಿತನವನ್ನು ಹಿಂಡಿ ತೆಗೆದು ರಾಗವನ್ನು ಆರಿಸಿ ದಾಸತ್ವಕ್ಕೆ ಏರಿಸಿತು.

ಇವರು ದಾಸತ್ವಕ್ಕೆ ಏರಿದ್ದರಲ್ಲಿ ಇವರ ಹೆಂಡತಿಯ ಪಾತ್ರವೇನು?

'ನತ್ತು ಕೊಟ್ಟಳು ಹರಿಗೆ, ಅತ್ತುಬಿಟ್ಟಳು ಮರೆಗೆ
ಪತಿಯನಿತ್ತಳು ಕೊಡುಗೆ ದೇವನಡಿಗೆ.' (ಅದೇ)

ಎಂಥ ಪಂಕ್ತಿಗಳು! ಎಷ್ಟು ಸಂಕ್ಷೇಪವಾಗಿ ಇಡೀ ಕ್ರಿಯೆಯನ್ನು ವರ್ಣಿಸಿದ್ದಾರೆ, ಕವಿ. ಮಾರುವೇಷದಲ್ಲಿ ಬಂದ ಹರಿಗೆ ಸತಿಯಾದವಳು ಮೂಗುತಿಯನ್ನು ಬಿಚ್ಚಿ ದಾನ ಮಾಡಿದರು. ತನ್ನ ಪತಿಯನ್ನು ದಾಸ್ಯತ್ವಕ್ಕಾಗಿ ಬೇಡ ಬಂದವನು ಹರಿ. ಇನ್ನು ಇವರಿಗೆ ಸಂಸಾರದಲ್ಲಿ ಆಸಕ್ತಿಯಿರುವುದಿಲ್ಲ ಎಂದು ತಿಳಿದ ಆ ಮಹಾ ಮಹಿಳೆ ತನ್ನ ಪತಿಯನ್ನೇ ದೇವರ ಅಡಿಗೆ ಕೊಡುಗೆಯಾಗಿ ಕೊಟ್ಟುಬಿಟ್ಟಳು!

ಈಗ ಹೇಳಿ, 'ಹೆಣ್ಣು ಮಾಯೆಯ ನೆರಳೆ? ಹೆಣ್ಣು ಗಂಡಿನ ಮರುಳೆ? ಹೇಳಲೆದೆ ಉಂಟೇನು ಹಾಗಿವಳಿಗೆ?' ಹೊನ್ನು, ಮಣ್ಣುಗಳ ಜೊತೆಗೆ ಹೆಣ್ಣನ್ನೂ ಮಾಯೆ ಎಂದು ಕರೆದವರುಂಟು; ಗಂಡನ್ನು ಮರುಳು ಮಾಡುವವಳು ಎಂದೂ ಹೇಳಿದವರುಂಟು. ಕವಿ ಹೇಳುತ್ತಾರೆ—ಈ ಮಹಿಳೆಯನ್ನು ಹಾಗೆ ಕರೆಯಲು ಯಾರಿಗಾದರೂ ಎದೆ, ಧೈರ್ಯ ಉಂಟೇನು?

ಪುರಂದರರು ಮುಂದೇನು ಮಾಡಿದರು?

'ಮೈಮರೆತು ಹರಿಸ್ಮರಣೆ ಮಾಡಿದರು, ಹಾಡಿದರು;
ಹತ್ತು ಜನ ಕೂಡಿದರು ಹರಿಭಕ್ತರು.
ಈವೊತ್ತು ಈ ಕೊಂಪೆ, ನಾಳೆ ದೂರದ ಹಂಪೆ—
ಹರಿಯಿಂಪ, ನರುಗಂಪ ಹರಸಿದ್ದರು.' (ಅದೇ)

ಅವರು ಕವಿಯಂತೆ ಮಾತನಾಡಿದರೆ, ಇಲ್ಲ. 'ತಮ್ಮನ್ನೆ ಮಿಡಿಸಿದರು, ನುಡಿಸಿವರು

ಪ್ರಾಣ ದುಡುಕಿ;' ಹಾಡಿದರೆ? 'ಅಲ್ಲಲ್ಲ ಭಕ್ತಿಯನೇ ಕಾಡಿದರು, ಮನವ ಜಾಲಾಡಿದರು ಹರಿಯ ಹುಡುಕಿ.'

ದೈವವನ್ನು, ಧರ್ಮವನ್ನು, ದೇವತಾಪುರುಷರನ್ನು ಕುರಿತು ನಿಸಾರ್ ಅಹಮದ್ ಅವರು ನಡೆಸಿದ ಚಿಂತನೆಗಳನ್ನು ಕಾವ್ಯಾತ್ಮಕವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ ಎಂದು ನನಗೆ ತೋರಿದ ಕೆಲವು ಕವನಗಳನ್ನು ಇಲ್ಲಿ ಸಹೃದಯರಿಗೆ ಪರಿಚಯಿಸಿದ್ದೇನೆ. ಅವರು ನಮ್ಮ ಕವಿ, ಅತ್ಯಂತ ಶಕ್ತಿಪೂರ್ಣವಾಗಿ ಭಾವ ಭಾವನೆಗಳಿಗೆ ಮಾತುಕೊಡಬಲ್ಲ ಕವಿ. ಕನ್ನಡ ಕಾವ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ಕವಿ. ಕನ್ನಡಿಗರು ಸದಾ ಕೃತಜ್ಞತೆಯಿಂದ ನೆನೆಯಬೇಕಾದ ಕವಿ. ಅವರಿಗೆ ಶುಭ ಕೋರುತ್ತೇನೆ.

ತನ್ನ ಪ್ರಕೃತಿ, ಜಾಯಮಾನಗಳಿಗೆ ಯಾವುದು ಪಥ್ಯ, ಹಿತಕಾರಿ ಎಂಬ ಪರಿವೆಯಿರದ ಓದು ಮರುಳ್ಗಾಡಿನ ಮಳೆ. ಪುಟಗಳಿಗೆ ಅಂಟಿಕೊಂಡ ಈ ಕೀಟಗಳಿಗೆ ತಮ್ಮ ಜ್ಞಾನಾಸಕ್ತಿಗೆ ಮೇರೆಗಳನ್ನು ಗೊತ್ತುಪಡಿಸಿಕೊಳ್ಳುವುದು ತಿಳಿಯುವುದಿಲ್ಲ. ಅರಿವೋ ಅಪಾರ, ಮಾನವ ಗ್ರಹಿಕೆ ಒಂದು ತಂಬಿಗೆ. ಮನೋಸಾಮರ್ಥ್ಯಕ್ಕೆ ಬೇಲಿಯಿದೆ ಎಂದು ಅವರಿಗೆ ತಿಳಿಯ ಹೇಳುವವರು ಯಾರು? ಸೃಷ್ಟಿಯ ಸಸ್ಯ ಸಂಪತ್ತು ಅಗಣಿತ, ವೈವಿಧ್ಯತರ: ಸೊಪ್ಪು ಸೆದೆಗಳಲ್ಲೇ ಸಹಸ್ರ ಬಗೆ. ಅವನ್ನು ಅಲ್ಲಿಷ್ಟು ಇಲ್ಲಿಷ್ಟು ಮೇದರೂ ಜೀವಮಾನ ಪೂರ್ತಿ ಮುಗಿಸಲಾಗದು. ಲೆಕ್ಕವಿರದಷ್ಟು ಇರುವ ಈ ಸೊಪ್ಪು ಸೆದೆಯಲ್ಲಿ ಆಹಾರದ ರೀತಿಯಲ್ಲಿ ತಿನ್ನಲು ಅರ್ಹವಾದದ್ದು ಸಾವಿರದಲ್ಲಿ ಒಂದು ಭಾಗವಿದ್ದರೆ ಅದೇ ಒಂದು ಭಾಗ್ಯ. ಮತ್ತೆ ಈ ಅಲ್ಪದರಲ್ಲಿ ನಮಗೆ ವೈಯಕ್ತಿಕವಾಗಿ ಮೈ ಹಿಡಿಸುವುವು, ಇಷ್ಟಾಭಿರುಚಿಗಳಿಗೆ ಮೆಚ್ಚಾಗಿರುವುವು ಇನ್ನೆಷ್ಟು ಸ್ವಲ್ಪದ್ದಾಗಿರಬೇಡ? ಅದನ್ನೇ ಸಾವಕಾಶವಾಗಿ ಬಳಸುತ್ತ ಹೋದರೆ ದೇಹ ದಾರ್ಢ್ಯ ವರ್ಧಿಸುವುದರಲ್ಲಿ ಆಶ್ಚರ್ಯವಿಲ್ಲ. ಓದಿನ ಕತೆಯೂ ಇಷ್ಟೇ: ನಮ್ಮ ಅಳವಿಗೆ, ಗ್ರಹಿಕೆಗೆ ಕೈವಶವಾಗುವುದೆಷ್ಟೋ ಅಷ್ಟೆ. ಉಳಿದದ್ದನ್ನು ಮನಸ್ಸು ಮುಲಾಜಿಲ್ಲದೆ ಹೊರಗೆಸೆಯುತ್ತದೆ— ಅಜೀರ್ಣವಾದದ್ದನ್ನು ಒಡಲು ಹೇಗೋ ಹಾಗೆ.

(ಮನುಷ್ಯನ ಅಳವು)



ನಿಸಾರ್ ಅವರ ಕಾವ್ಯದಲ್ಲಿ ವಿಭೂತಿ ಪೂಜೆ

♦ *ಡಾ. ಜಿ. ಎಸ್. ಆಮೂರ*

ಕನ್ನಡದ ಅತ್ಯಂತ ಸುಸಂಸ್ಕೃತ ಕವಿಗಳಲ್ಲೊಬ್ಬರಾದ ಕೆ. ಎಸ್. ನಿಸಾರ್ ಅಹಮದ್‌ರ ಕಾವ್ಯ ಅನೇಕ ಆಯಾಮಗಳನ್ನು ಹೊಂದಿದ ಕಾವ್ಯ. ಅದರ ಒಂದು ಎದ್ದು ಕಾಣುವ ವೈಶಿಷ್ಟ್ಯವೆಂದರೆ ಅಂತರ್ಮುಖತೆಯೊಂದಿಗೆ ಬಹಿರ್ಮುಖತೆಯನ್ನೂ ಸಮ ಪ್ರಮಾಣದಲ್ಲಿ ಸಾಧಿಸಿದುದು. ಆತ್ಮಶೋಧದಲ್ಲಿ ತಮ್ಮನ್ನು ತೊಡಗಿಸಿಕೊಂಡಂತೆ ಅವರು ತಮ್ಮ ಸಾಂಸ್ಕೃತಿಕ ಪರಿಸರಕ್ಕೂ ನಿರಂತರವಾಗಿ ಸ್ಪಂದಿಸಿದ್ದಾರೆ. ನಿಸಾರ್ ಅಹಮದ್ ಕಾವ್ಯರಚನೆಯನ್ನು ಪ್ರಾರಂಭಿಸಿದುದು ನವ್ಯರ ಸಂದರ್ಭದಲ್ಲಾದರೂ ನವೋದಯದ ಹಲವಾರು ಮೌಲ್ಯಗಳನ್ನು ಅವರು ಪ್ರಾಮಾಣಿಕವಾಗಿ ಸ್ವೀಕರಿಸಿದರು. ಇವುಗಳಲ್ಲಿ ಮುಖ್ಯವಾದುದು ವಿಭೂತಿ ಪೂಜೆ. ಈ ವಿಷಯದಲ್ಲಿ ಅವರಿಗೆ ಮಾದರಿಯಾದವರು ಬೇಂದ್ರೆ, ಕುವೆಂಪು, ಪುತಿನರಂಥ ಹಿರಿಯರು. ನವ್ಯ ಕವಿಗಳೂ ವ್ಯಕ್ತಿಗಳನ್ನು ಕುರಿತು ಕವಿತೆಗಳನ್ನು ಬರೆದರು. ಆದರೆ ಇವು ಗೋಪಾಲಕೃಷ್ಣ ಅಡಿಗರ 'ನೆಹರೂ ನಿವೃತ್ತರಾಗುವುದಿಲ್ಲ'ದಂಥ ಭ್ರಮ ನಿರಸನದ ಕವಿತೆಗಳು. ನವ್ಯತೆಯ ಹಲವಾರು ಅಂಶಗಳನ್ನು ಸ್ವೀಕರಿಸಿದರೂ ನಿಸಾರ್ ಅಹಮದ್‌ರು ಈ ವಿಷಯದಲ್ಲಿ ನವ್ಯಕವಿಗಳಿಗಿಂತ ಭಿನ್ನರಾದರು.

> 'ಯಾವ ಯುಗದಲೆ, ಯಾವ ನೆಲದಲೆ, ಯಾವ ಧರ್ಮದಲ್ಲೆ
> ಸದ್ವಿಭೂತಿ ತಾನರಳಬಹುದು, ಅದಕಿಲ್ಲ ಎಲ್ಲೆಗಿಲ್ಲೆ'

ಎಂದು ನಂಬಿದ ನಿಸಾರ್ ಅಹಮದ್ ವಿಭೂತಿತತ್ವದ ತಮ್ಮ

ಅನ್ವೇಷಣೆಯಲ್ಲಿ ದೇಶ, ಕಾಲ, ಮತ, ಧರ್ಮಗಳ ಮೇರೆಗಳನ್ನು ದಾಟಿ ನಡೆದಿದ್ದಾರೆ. ಧರ್ಮಗುರುಗಳು, ಸಂತರು, ರಾಷ್ಟ್ರಪುರುಷರು, ಸಾಹಿತಿಗಳು ಹಾಗೂ ಸಾಮಾನ್ಯ ಜನರಲ್ಲಿಯೂ ಕೂಡ ಅವರು ವಿಭೂತಿತತ್ವದ ಆವಿಷ್ಕಾರಗಳನ್ನು ಗುರುತಿಸಿ, ಈ ತತ್ವ ತಮ್ಮನ್ನು ತಟ್ಟಿದ ರೀತಿ ಸಂದರ್ಭಗಳನ್ನು ಕುರಿತು ಕವಿತೆಗಳನ್ನು ಬರೆದಿದ್ದಾರೆ. ಇದು ಅವರ ಸತ್ಯನಿಷ್ಠೆಯ ದ್ಯೋತಕವಾಗಿದ್ದಂತೆ, ವಿಶಾಲ ಮನೋಧರ್ಮದ ಸೂಚಕವೂ ಆಗಿದೆ. ಜಾತಿ, ಮತಗಳ ದ್ವೇಷದಿಂದ ಕಲುಷಿತವಾದ ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ನಿಸಾರ್ ಅಹಮದ್‌ರಂಥ ಕವಿಗಳ ಆವಶ್ಯಕತೆ ಎಷ್ಟಿದೆಯೆನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ. ನಿಸಾರ್ ಅಹಮದ್‌ರು ಮುಸ್ಲಿಂ ಸಮಾಜದಿಂದ ಬಂದವರು. ಪ್ರವಾದಿ ಪೈಗಂಬರರ ಬಗ್ಗೆ ಸಹಜವಾಗಿಯೇ ಅವರಲ್ಲಿ ಅಪಾರ ಗೌರವವಿದೆ. 'ಜನರ ಕನ್ನಡಿ' ಎಂಬ ಕವಿತೆಯಲ್ಲಿ ಸ್ತುತಿ, ನಿಂದೆಗಳನ್ನು ಮೀರಿದ ಅವರ ಶ್ರೇಷ್ಠ ವ್ಯಕ್ತಿತ್ವವನ್ನು ಬಿಂಬಿಸುವ ಘಟನೆಯೊಂದರ ಮಾರ್ಮಿಕ ವರ್ಣನೆಯಿದೆ. 'ಭಕ್ತಿಗೆ ಸಂದವನೊಬ್ಬ' ಅವರ ಬಳಿಗೆ ಬಂದು ಅವರ 'ತೇಜದ ಮೊಗ'ವನ್ನು ಹೊಗಳುತ್ತಾನೆ. 'ಮತಿ ಮಂದ'ನಾದ ಇನ್ನೊಬ್ಬ 'ವದನವೆ ನಿನ್ನದು', 'ಆರಿದ ದೀಪ'ವೆಂದು ತೆಗಳುತ್ತಾನೆ. ಇದಕ್ಕೆ ಪೈಗಂಬರರ ಉತ್ತರ ಒಂದೇ :

'ಕನ್ನಡಿಯಂತಿದು ನನ್ನೀ ಆನನ
ಕಾಣುವರಿದರೊಳು ಪ್ರತಿಬಿಂಬವ, ಜನ.'

ಪೈಗಂಬರರಲ್ಲಿ ಒಂದು ವಿಭೂತಿತತ್ವವನ್ನು ಕಂಡಂತೆ ನಿಸಾರ್ ಅಹಮದ್‌ರು ಬೇರೆ ಧರ್ಮಗಳ ಪ್ರವರ್ತಕರಾದ ಕ್ರೈಸ್ಟ್ ಹಾಗೂ ಬಸವೇಶ್ವರರಲ್ಲಿಯೂ ಈ ತತ್ವವನ್ನು ಕಂಡಿದ್ದಾರೆ. ಕ್ರೈಸ್ಟ್‌ನ ಅದ್ಭುತ ತ್ಯಾಗದಲ್ಲಿ ಅವರು ಸಾರ್ವಕಾಲಿಕವಾದ ಮೌಲ್ಯವನ್ನು ಗುರುತಿಸುತ್ತಾರೆ. ಹಿಂಸೆ, ಅಸತ್ಯಗಳು ಯಾವುದೋ ಒಂದು ಕಾಲಕ್ಕೆ ಸೀಮಿತವಾದವಲ್ಲ ವಾದ್ದರಿಂದ ಜೀಸಸ್ ದಿನನಿತ್ಯ ಶಿಲುಬೆಯೇರುತ್ತಾನೆ ಎಂದು ಅವರು ಅರ್ಥಪೂರ್ಣವಾಗಿ ಹೇಳುತ್ತಾರೆ. 'ಮಡುಗಟ್ಟಿ ನಾರಿದ್ದ ಸಂಪ್ರದಾಯಕೆ ನಾಲೆ ಬಿಡಿಸಿ, ಹೊಸ ಹಾದಿಗಳ ರಚಿಸಿದ' ಬಸವೇಶ್ವರರ ಅಂತರಂಗ-ಬಹಿರಂಗ ಶುದ್ಧಿಯ ಸಂದೇಶವೂ ಅವರಿಗೆ ಪ್ರಿಯ ವಾದುದು.

ಪೈಗಂಬರ, ಕ್ರೈಸ್ಟ್, ಬಸವೇಶ್ವರರಂತೆ ರಾಮಕೃಷ್ಣ ಪರಮಹಂಸರು, ಶ್ರೀ ಶಾರದಾ ದೇವಿ, ಶ್ರೀ ಅರಬಿಂದೋ, ಪುರಂದರದಾಸರು, ಮದರ್ ತೆರೇಸಾರಂಥ ಮಹಾತ್ಮರೂ ನಿಸಾರ್ ಅಹಮದ್‌ರನ್ನು ಪ್ರಭಾವಿಸಿದ್ದರು. ಸಕಲ ಜೀವಿಗಳಲ್ಲಿ ದಿವ್ಯಾಂಶವನ್ನೇ ಕಂಡ ರಾಮಕೃಷ್ಣರು, 'ನಾಡ ನಾರಿಯರ ಬಾಳ ಗುರಿಗೆ ಧ್ರುವತಾರೆಯಾದ ಶ್ರೀ ಶಾರದಾದೇವಿ ಯವರೂ 'ಖಸಾಯಿಗಳ ಗ್ಯಾಂಗಿನಲ್ಲಿ'ಯ ಪುಣ್ಯಕೋಟಿಯಂತೆ 'ಬೆರಕೆ ಸಂಸ್ಕೃತಿ', ಭಿನ್ನರಾಗಿ ಕಾಣುವ ಶ್ರೀ ಅರಬಿಂದೋ, 'ದಿಕ್ಕಿರದ ದುಃಖಾರ್ತ ಜನದ ಹಣೆಬರಹವನು ಹೊಸದಾಗಿ ತಿದ್ದಿರುವ ಅಭಯಂಕರಿ' ಮದರ್ ತೆರೇಸಾರಲ್ಲಿಯೂ ಅವರಿಗೆ ವಿಭೂತಿತತ್ವದ ದರ್ಶನವಾಗಿದೆ. ಈ ಎಲ್ಲ ಮಹಾತ್ಮರನ್ನೂ ವಿಶಿಷ್ಟ ಹಾಗೂ ವಾಸ್ತವ ಸಂದರ್ಭಗಳಲ್ಲಿ ಕಲ್ಪಿಸಿಕೊಂಡುದುದು ಈ ಕವಿತೆಗಳ ವಿಶಿಷ್ಟ ಗುಣ.

ನಿಸಾರ್ ಅಹಮದ್‌ರ ಧ್ಯಾನವನ್ನು ಆಕರ್ಷಿಸಿದ ರಾಷ್ಟ್ರಪುರುಷರಲ್ಲಿ ಬಾಪೂ, ನೆಹರೂರಲ್ಲದೆ ಪ್ಯಾಲಸ್ಟೈನ್‌ದ ನಾಯಕ ಯಾಸೀರ್ ಅರಾಫತರೂ ಇದ್ದಾರೆ.

'ನಿನಗಿಂತ ಹಿರಿಯರನು ಕಾಣೆ ಮಹಾತ್ಮ
ಮಿತಿಮೀರಿ ಏರಿರುವೆ, ಬಾಳಿಗೆ ದಕ್ಕದೆ ಮೀರಿರುವೆ—
ವಾಸ್ತವತೆ ನಾನು, ಆದರ್ಶ ನೀನು.'

ಎಂದು ಹೇಳಿ ಅವರು ಮಹಾತ್ಮರ ಎತ್ತರವನ್ನು ಸೂಚಿಸಿದ್ದಾರೆ. ಮಹಾತ್ಮರ ಸಾವಿನಲ್ಲಿ ಅವರು ಅನುಭವಿಸಿರುವ ಹುದುಗಲಾರದ ದುಃಖ 'ಎಲ್ಲಿ ಹುಡುಕಲಿ ಮಹಾತ್ಮ, ಎಲ್ಲಿ ಹುಡುಕಲಿ ನಿನ್ನ?' ಎಂಬ ಆರ್ತ ಕರೆಯಲ್ಲಿ ಮೂಡಿಬಂದಿದೆ. ನೆಹರೂರವರಲ್ಲಿ ಅವರು ಬಾಪೂನ ಪರಿಪೂರ್ಣತೆಯನ್ನು ಕಂಡಿಲ್ಲ. ಆದರೆ, ಅವರ ಸಾಧನೆಯ ಹಿನ್ನೆಲೆಯಲ್ಲಿ ಸೋಲುಗಳು ಅವರಿಗೆ ಗೌಣವೆನಿಸಿವೆ.

'ನಿನ್ನ ಘನವ್ಯಕ್ತಿತ್ವದಾನೆಕಿವಿಯೊಳಗಾಗ
ಅಪವಾದದತಿ ಕ್ಷುದ್ರ ಇರುವೆ ಹೊಕ್ಕಿತ್ತು'

ಎಂಬ ಅವರ ಮಾತಿನಲ್ಲಿ ವಾಸ್ತವದ ಅರಿವಿದ್ದರೂ ಅದು ನೆಹರೂರ ವ್ಯಕ್ತಿತ್ವದ ಘನತೆಯನ್ನು ಮರೆಸುವಷ್ಟು ಪ್ರಖರವಾಗಿಲ್ಲ. 'ಫಿಲಿಸ್ತೀನಿ ವಿಮುಕ್ತಿಯ ಓಂಕಾರ'ನಾದ ಅರಾಫತ್‌ರಲ್ಲಿ ಅವರು ಮೆಚ್ಚಿಕೊಳ್ಳುವ ಗುಣ ಅವರ ಛಲ ಮತ್ತು ದೇಶ ಪ್ರೇಮ. 'ನೆತ್ತರಿಗುತ್ತರ ನೆತ್ತರ?'ವೇ ಎಂಬ ಸಂಶಯ, ಗಾಂಧೀ ನಾಡಿನವನಾದ ಕವಿಗೆ ಸಹಜವಾದುದು. ಆದರೆ ಫಿಲಿಸ್ತೀನೀ ಸಂಬಂಧದಲ್ಲಿ ಅದೂ ಕೂಡ ಅವರಿಗೆ ಸಮರ್ಥನೀಯವೆನಿಸುತ್ತದೆ.

ನಿಸಾರ್ ಅಹಮದ್‌ರ ವಿಭೂತಿತತ್ವದ ಅನ್ವೇಷಣೆ ಸಾಹಿತ್ಯದ ಕ್ಷೇತ್ರದಲ್ಲಿಯೂ ಮುಂದುವರಿದಿದೆ. ರವೀಂದ್ರನಾಥ ಠಾಕೂರ, ಮಾಸ್ತಿ, ತೀ.ನಂ.ಶ್ರೀ., ಕೆ.ಎಸ್.ನ.—ಇವರೆಲ್ಲರ ಬಗ್ಗೆ ನಿಸಾರರು ಕವಿತೆಗಳನ್ನು ಬರೆದಿದ್ದಾರೆ. ಉಳಿದ ವಿಭೂತಿಗಳನ್ನು ಅವರು ದೂರದಿಂದ ಕಂಡಿದ್ದರೆ, ಇವರನ್ನು ಅವರು ಬಹಳ ಸಮೀಪದಿಂದ ಕಂಡಿದ್ದಾರೆ. ಹೀಗಾಗಿ, ಈ ಕವಿತೆಗಳಲ್ಲಿ ಹೆಚ್ಚಿನ ಆಪ್ತತೆ ತೋರಿಸಿಕೊಂಡಿದೆ.

'ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ
ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ'

ಎಂದು ಮಾಸ್ತಿಯವರನ್ನು ಕುರಿತು ಬರೆದರೆ,

'ಜೊಳ್ಳ ಕೇರುವ ಜರಡಿ, ಪಾತಾಳಗರುಡಿ,
ಹಂಸದಂತೊಮ್ಮೆ, ಇನ್ನೊಮ್ಮೆ ಗಡಿಯಾರ.
ನೀ ಚಿಕಿತ್ಸಕ, ಗ್ರಾಮಫೋನು, ಬಾತ್ಮೀದಾರ'

ಎಂದು ತೀನಂಶ್ರೀಯವರ ಬಹುಮುಖ ಸಾಧನೆಯನ್ನು ಗುರುತಿಸಿದ್ದಾರೆ. ತೀನಂಶ್ರೀಯವರ

ಬದುಕಿನ ತುಮುಲಗಳ ಬಗೆಗಿರುವ ಸಹಾನುಭೂತಿ ಈ ಕವಿತೆಯ ವಿಶೇಷ. ಕೆ.ಎಸ್.ನ. ಅವರಲ್ಲಿ ಕವಿಗೆ ವಿಶೇಷ ಪ್ರೀತಿ ಹಾಗೂ ಮೆಚ್ಚುಗೆ.

> 'ಯಾರೆ ಬಂದರು ಮುಂದೆ ಕನ್ನಡಿಗರೆದೆಯೊಳಿಹ
> ಪ್ರೇಮಗೀತದ ಪೀಠ ಬಿಟ್ಟುಕೊಡರು.
> ಕುವೆಂಪು, ಬೇಂದ್ರೆ, ಪುತಿನ, ಅಡಿಗ ಜೊತೆ ಕೆಎಸ್‌ನ
> ನುಡಿಯ ನಿತ್ಯೋತ್ಸವದೊಳೊಂದು ಸೊಡರು'

ಎಂದು ಹೇಳಿ ಕನ್ನಡ ಕಾವ್ಯಪರಂಪರೆಯಲ್ಲಿ ಕೆ.ಎಸ್.ನ.ರಿಗಿರುವ ಶಾಶ್ವತ ಸ್ಥಾನವನ್ನು ಅವರು ನಿರ್ದೇಶಿಸಿದ್ದಾರೆ. ಈ ಕವಿತೆಗಳ ಆಪ್ತತೆ 'ರವೀಂದ್ರನಾಥ ಠಾಕೂರರು' ಕವಿತೆಯಲ್ಲಿ ಇಲ್ಲವಾದರೂ ನಿಸಾರರು 'ವಿಯದ್ವಿಹಾರ'ವನ್ನು ಕಲಿಸಿದ ಗುರುವನ್ನು ತುಂಬ ಕೃತಜ್ಞತೆಯಿಂದಲೇ ನೆನೆದಿದ್ದಾರೆ. ಇಂಥ ಶ್ರೇಷ್ಠ ಕವಿಗಳ ಜೊತೆಗೆ 'ಸಾಹಿತಿ ಭೀಮಪ್ಪ'ನೆಂದು ಗುರ್ಗುತಿಸಿಕೊಳ್ಳಲು ಬಯಸಿದ ಮಿತ್ರ ಭಿಮಪ್ಪ ಮಾಸ್ತರರನ್ನೂ ನಿಸಾರ್ ಅಹಮದ್‌ರು ನೆನೆದುಕೊಂಡಿರುವುದು ಅವರ ಹೃದಯ ವೈಶಾಲ್ಯದ ಕುರುಹಾಗಿದೆ.

ಸಾಹಿತ್ಯಕ ಸಾಂಸ್ಕೃತಿಕ ಧಾರ್ಮಿಕ ಹಸೆಯಲ್ಲಿ ಸನ್ಮಾನ್ಯಗೊಳ್ಳುವ ಧರ್ಮ ಗ್ರಂಥದ ಪ್ರಭಾವ ಒಂದೋ ಎರಡೋ ಓದಿಗೆ ಸ್ಖಲಿಸಿಹೋಗುವ ಅಲ್ಪಾಯು ಸ್ವರೂಪದ್ದಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಮನಃಸ್ಥಿತಿಯಲ್ಲಿ ಓದಿದಷ್ಟೂ ಅರ್ಥವಂತಿಕೆ, ಗಹನತೆಗಳನ್ನು ಕೆಚ್ಚಲಿಸುವ ಅಕ್ಷಯ ಜಾಯಮಾನಿ ಆ ಕೃತಿ. ಧರ್ಮಾಭಿಮಾನಿಗಳ ಪಾಲಿಗೆ ಅದು—ಒಡಲಿಗೆ ಗಾಳಿ ನೀರು ಹೇಗೋ ಹಾಗೆ—ಆತ್ಮ ತೇಜೋವರ್ಧಕ, ಚೈತನ್ಯ ಪೋಷಕ. ಅದರ ಅಧ್ಯಯನ, ಪಾರಾಯಣಗಳಿಂದ ವ್ಯಕ್ತಿಯ ನೈತಿಕ ಸ್ಥೈರ್ಯ ಮಜಬೂತುಗೊಳ್ಳಬಹುದು. ಎಂಥ ವಿಷಮ ಸಂದರ್ಭದಲ್ಲೂ ನ್ಯಾಯಾನ್ಯಾಯ ಬುದ್ಧಿಯಿಂದ, ಸದಸದ್ವಿವೇಕ ಮತಿಯಿಂದ ಮುಂದುವರಿಯಲು ಪ್ರೇರಣೆ ದಕ್ಕಬಹುದು. ಧರ್ಮದ ಮೂಲ, ಬೇರು ದಯೆಯಾದರೆ ಅದರ ಸತ್ಫಲ ಸರ್ವಭ್ರಾತೃತ್ವ. ಈ ತತ್ತ್ವದ ಪರಿಗಣನೆ ಇಲ್ಲವೇ ತಿಳಿವಳಿಕೆ ಇಲ್ಲದವರು ಆಚರಣೆಗಳ ಕಟ್ಟುನಿಟ್ಟಾದ ಪರಿಪಾಲನೆ, ಗ್ರಂಥ ಪಾರಾಯಣ, ವ್ಯಕ್ತಿಪೂಜೆಗಳನ್ನು ಮಾತ್ರ ಧರ್ಮವೆಂದು ಬಗೆದರೆ ಅಂಥವರ ಪಾಲಿಗೆ ಸಿಪ್ಪೆಯ ಸವಿಯೇ ಸರ್ವಸ್ವ; ಕರಟವೇ ಕೈವಲ್ಯ. ಹಿಮಾಲಯಕ್ಕೆ ಮಂಜುಗಡ್ಡೆಗಳನ್ನು ಹೊರುವ ಗೆಯ್ಮೆ ಅವರದು.

(ಧರ್ಮ ಗ್ರಂಥದ ಉಪಕಾರ)



ನವ್ಯರ ನಡುವೆಯಿದ್ದೂ ಭಿನ್ನವಾಗಿ ಬರೆದ ನಿಸಾರ್

♦ ಡಾ. ಗಿರಡ್ಡಿ ಗೋವಿಂದರಾಜ

ಕನ್ನಡದಲ್ಲಿ ನವ್ಯಕಾವ್ಯದ ಎರಡನೆಯ ಪೀಳಿಗೆಯ ಪ್ರಮುಖ ಕವಿಗಳಲ್ಲಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಒಬ್ಬರು. ೧೯೪೯ರಷ್ಟು ಹಿಂದೆಯೇ, ಇನ್ನೂ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿಯೇ ಕವಿತೆಗಳನ್ನು ಬರೆಯಲು ಆರಂಭಿಸಿದ ಅವರು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಬರೆದ ಕವಿತೆಗಳಿಂದ ಜಿ. ಪಿ. ರಾಜರತ್ನಂ ಅವರ ಗಮನವನ್ನು ಸೆಳೆದರು. ರಾಜರತ್ನಂ ಅವರು ಕಾಲೇಜಿನ ವಿದ್ಯಾರ್ಥಿ ಕವಿಗಳನ್ನು ಪ್ರೋತ್ಸಾಹಿಸಲೆಂದು ೧೯೫೭ರಲ್ಲಿ ಪ್ರಕಟಿಸಿದ ಐವರು ಕವಿಗಳ ಕವನ ಸಂಕಲನ `ಪದ್ಯಾಂಜಲಿ`ಯಲ್ಲಿ ಅವರ ಐದು ಕವಿತೆಗಳು ಒಟ್ಟಿಗೆ ಪ್ರಕಟವಾದವು. ಅವರ ಮೊದಲ ಸಂಕಲನ `ಮನಸು ಗಾಂಧಿಬಜಾರು` ಪ್ರಕಟವಾದದ್ದು ೧೯೬೦ರಲ್ಲಿ. ಅಲ್ಲಿಂದ ಅವರ ಒಟ್ಟು ಹನ್ನೆರಡು ಕವನ ಸಂಕಲನಗಳು ಹೊರಬಂದಿವೆ. ಇವುಗಳಲ್ಲಿ ಮೊದಲ ಒಂಬತ್ತು ಸಂಕಲನಗಳ ಎಲ್ಲ ಕವಿತೆಗಳ ಜೊತೆಗೆ, ಈವರೆಗೆ ಯಾವ ಸಂಕಲನದಲ್ಲೂ ಸೇರಿರದ ಕೆಲವು ಕವಿತೆಗಳು ಮತ್ತು ಅನುವಾದಿತ ಕವಿತೆಗಳು ಒಟ್ಟಿಗೆ ಸೇರಿ ನಿಸಾರ್ ಅಹಮದ್‌ರ `ಸಮಗ್ರ ಕವಿತೆಗಳು` (೧೯೯೧: ಪ್ರಥಮ ಮುದ್ರಣ) ಪ್ರಕಟವಾಗಿದೆ. ಇಲ್ಲಿ ಮುಖ್ಯವಾಗಿ ನನ್ನ ಪರಿಶೀಲನೆಗೆ ಈ ಗ್ರಂಥವನ್ನು ಆಧರಿಸಿದ್ದೇನೆ.

ನಿಸಾರ್ ಅವರು ಬರೆಯಲು ಆರಂಭಿಸಿದ್ದು ನವ್ಯ ಕಾವ್ಯದ ಉತ್ಕರ್ಷದ ಕಾಲದಲ್ಲಿ. ಗೋಪಾಲಕೃಷ್ಣ ಅಡಿಗ, ಬಿ.

ಸಿ. ರಾಮಚಂದ್ರ ಶರ್ಮ ಮೊದಲಾದ ಆ ಕಾಲದ ಹಿರಿಯ ತಲೆಮಾರಿನ ಕವಿಗಳು ಆಗಲೇ ನವ್ಯಕಾವ್ಯದ ಮಾರ್ಗವನ್ನು ಹಾಕಿಕೊಟ್ಟಿದ್ದರು. ಅದರಲ್ಲೂ ಅಡಿಗರ ಕಾವ್ಯವೆಂದರೇ ನವ್ಯಕಾವ್ಯ ಎನ್ನುವಷ್ಟು ಅಡಿಗರ ಪ್ರಭಾವ ದಟ್ಟವಾಗಿತ್ತು. ಎರಡನೆಯ ತಲೆಮಾರಿನ ತರುಣ ಕವಿಗಳಿಗೆ, ಅಡಿಗರ ಕಾವ್ಯದಿಂದ ಕಲಿಯುವದನ್ನು ಕಲಿತು, ಅವರ ಪ್ರಭಾವದಿಂದ ಹೇಗೆ ಹೊರಬರಬೇಕೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ನಿಸಾರರೂ ಈ ಸಮಸ್ಯೆಯನ್ನು ಅನುಭವಿಸಿದವರೇ :

‘ನನ್ನ ದನಿ, ನನ್ನದೇ ಆದ ದನಿ, ನನ್ನೆದೆಯ ಜೀವ ಮಣಿ
ಎಲ್ಲಿರುವುದೊ! ಹೃದಯ ಗಹ್ವರದಾವ ಹಳಸುಗತ್ತಲೆಯಲ್ಲಿ
ಕೆಡೆಯುತಿಹುದೊ!

....

‘ಒಳ ಗುಹೆಯ ಕಮ್ಮಾರ ಶಾಲೆಯಲಿ ಕುಲುಮೆಗಳ ಕಾವು, ಕದಿರುಗಳುಂಟು
ಕಂಡಿದ್ದು ಕೇಳಿದ್ದು ಮುಟ್ಟಿದ್ದು ತಟ್ಟಿದ್ದು—ಈ ಎಲ್ಲ ಅದಿರುಂಟು.
ಆದರೂ,
‘ಲೋಹ ದ್ರವಗಳ ಬೆರೆಸಿ ಹದದ ಸರಿತೂಕಕ್ಕೆ
ಬಣ್ಣಿಸುವ ಸಮರಸದ ಮರ್ಮ ತಿಳಿಯೆ
ಪರಿಕರದನೇಕಗಳ ಪರಿಪಾಕದೇಕಕ್ಕೆ
ಹೊಸೆವ ಕಲೆಗಾರಿಕೆಯ ಸೂಕ್ಷ್ಮವರಿಯೆ!’
(ಆತ್ಮಶೋಧ)

ಸ್ವಂತದ ದನಿಯನ್ನು ಕಂಡುಕೊಳ್ಳಬೇಕೆಂಬ ಈ ತೊಳಲಾಟದಲ್ಲಿಯೂ ಅಡಿಗರ ಕಾವ್ಯದ ದಟ್ಟ ಪ್ರಭಾವವಿರುವದನ್ನು ಕಾಣಬಹುದಾಗಿದೆ.

ಆದರೆ ನಿಸಾರ್, ಈ ಪ್ರಭಾವದ ಸಮಸ್ಯೆಗೆ ತಮ್ಮದೇ ಆದ ರೀತಿಯ ಉತ್ತರ ಕಂಡುಕೊಂಡರು. ಮುಖ್ಯವಾಗಿ ಅವರು ನವ್ಯಕಾವ್ಯದ ಕ್ಲಿಷ್ಟತೆಯನ್ನು, ಕೊಂಡಿ ಕಳಚಿದ ದಟ್ಟ ಪ್ರತಿಮೆಗಳ ನೆಯ್ಗೆಯನ್ನು ಒಪ್ಪಲಿಲ್ಲ. ಆರಂಭದಲ್ಲಿ ಕೈ ವಶವಾಗಿದ್ದ ಮಾತ್ರಾಲಯದ ಮೇಲಿನ ಹಿಡಿತವನ್ನು ಮುಂದಿನ ತಮ್ಮ ಮುಕ್ತ ಛಂದದಲ್ಲೂ ಉಳಿಸಿಕೊಂಡರು. ಪ್ರತಿಮೆಗಳನ್ನು ಬಳಸುವಾಗ ಅವುಗಳನ್ನು ನಿಗೂಢಗೊಳಿಸದೆ ಅರ್ಥ ಸ್ಪಷ್ಟವಾಗುವಂತೆ, ಹಿಂದು-ಮುಂದಿನ ಕೊಂಡಿಗಳನ್ನು ಉಳಿಸಿಕೊಂಡರು. ಹಿಂದೆ ನುಡಿಗಳಲ್ಲಿ ಅಳವಡಿಸಿಕೊಳ್ಳುತ್ತಿದ್ದ ಪ್ರಾಸಗಳನ್ನು ನಿಯತವಾಗಿ, ಅನಿಯತವಾಗಿ ಉಳಿಸಿಕೊಂಡರು. ಗೇಯತೆಯನ್ನು ಅಳವಡಿಸಿಕೊಂಡರು. ಭಾವನಾತ್ಮಕತೆಯ ಅಂಶವನ್ನೂ ಹೆಚ್ಚಾಗಿಯೇ ದುಡಿಸಿಕೊಂಡರು. ಉದಾಹರಣೆಗೆ, ‘ಮನೋರಮಾ’ ಎಂಬ ಪದ್ಯವನ್ನು ನೋಡಬಹುದು:

‘ಮನೋರಮಾ, ಮನೋರಮಾ:
ಸಾಲದೇನೆ ನಿನ್ನ ಹೆಸರೆ? ಮಲಗೋಬದ ಗಮಗಮ,
ತುಟಿಯಗಲಿಸಿ ನಕ್ಕೆ:
ಮುಂಜಾವದ ಐದಕ್ಕೆ
ಮಿಂಚಾದವೆ ಕೆರೆಯಂಚಿಗೆ ಹಾಲಕ್ಕಿಯ ರೆಕ್ಕೆ?

ತೂಗಿದವೇ, ಬೀಗಿದವೇ
ಪೊದೆ, ಬಳ್ಳಿ, ಮರಕ್ಕೆ
ಚಿಲಿಪಿಲಿ ಚಿಲಿ, ಕೂಹೂಗಳ ದನಿ ಹೂಗಳ ಕುಕ್ಕೆ?
ಅಂಗಳದಲಿ ಬೆಳುದಿಂಗಳೆ ರಂಗೋಲಿಯ ಚುಕ್ಕೆ!'
(ಮನೋರಮಾ)

ಇಂಥ ಕವಿತೆಗಳಲ್ಲಿ ನಿಸಾರರು ಭಾವಗೀತೆಯ ಸ್ವರೂಪವನ್ನೇ ನವ್ಯಕಾವ್ಯಕ್ಕೆ ಕಸಿ ಮಾಡುತ್ತಿರುವಂತೆ ಕಾಣುತ್ತದೆ. ಇದರ ಜೊತೆಗೆ ಚುರುಕಾದ ವ್ಯಂಗ್ಯ-ವಿಡಂಬನೆಗಳನ್ನೂ ಅವರು ಸಲೀಸಾಗಿ ಬಳಸಿಕೊಳ್ಳಬಲ್ಲರು. 'ಕುರಿಗಳು, ಸಾರ್ ಕುರಿಗಳು'ದಂಥ ಜನಪ್ರಿಯ ಕವಿತೆಗಳೇ ಇದಕ್ಕೆ ಸಾಕ್ಷಿ :

'ಕುರಿಗಳು, ಸಾರ್, ಕುರಿಗಳು :
ಸಾಗಿದ್ದೇ
ಗುರಿಗಳು.
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು
ಕುರಿಗಳು, ಸಾರ್, ಕುರಿಗಳು:
ನಮಗೊ ನೂರು ಗುರಿಗಳು —
ಎಡ ದಿಕ್ಕಿಗೆ, ಬಲ ದಿಕ್ಕಿಗೆ, ಒಮ್ಮೆ ದಿಕ್ಕುಪಾಲಾಗಿ
ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತಿರುವ
....
ಅವರು, ಇವರು, ನಾವುಗಳು
ಕುರಿಗಳು, ಸಾರ್, ಕುರಿಗಳು.'
(ಕುರಿಗಳು, ಸಾರ್, ಕುರಿಗಳು)

ಮುಕ್ತ ಛಂದದಲ್ಲಿರುವ ಇಂಥ ಕವಿತೆಗಳನ್ನು ಕೂಡ ಗಾಯಕರು ಹಾಡಿ ಜನಪ್ರಿಯಗೊಳಿಸಲು ಸಾಧ್ಯವಾಗಿರುವುದಕ್ಕೆ ಅವುಗಳ ಗೇಯ ಗುಣ, ಲಯ ಶುದ್ಧತೆಗಳೇ ಕಾರಣ.

ಕವಿತೆ ಅರ್ಥದ ಗೊಂದಲ, ಸಂದಿಗ್ಧತೆಗಳಿಗೆ ಎಡೆ ಕೊಡಬಾರದೆಂದೇ ನಿಸಾರರ ನಿರ್ಧಾರ. 'ತಂತ್ರಾಭಿವ್ಯಕ್ತಿ ಮತ್ತು ಪ್ರಯೋಗಶೀಲತೆ ಕವನದ ಸಂವಹನ ಗುಣಕ್ಕೆ ಎದುರು ಹಾಯದೆ, ವಿಧೇಯವಾಗಿರುವ ಎಚ್ಚರ ನನ್ನ ಸೃಜನ ಕರ್ಮದ ಹಿನ್ನೆಲೆಗಿದೆ' ಎಂದು ಅವರೇ ಹೇಳಿಕೊಂಡಿದ್ದಾರೆ. ಈ ಉದ್ದೇಶದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅಂತೆಯೇ ತಮ್ಮ ಪೀಳಿಗೆಯ ಯಾವುದೇ ಕವಿಗಿಂತ ಅವರು ಅತ್ಯಂತ ಹೆಚ್ಚಿನ ಜನಪ್ರಿಯತೆ ಗಳಿಸುವುದು ಸಾಧ್ಯವಾಗಿದೆ.

ಈ ಸಂವಹನದ ಸಮಸ್ಯೆಯ ಕೊನೆ ಮುಟ್ಟಿಸುವುದಕ್ಕೆಂದೋ ಏನೋ, ಅವರು

ಹಾಡುಗಳನ್ನು ಕೂಡ ದೊಡ್ಡ ಸಂಖ್ಯೆಯಲ್ಲಿ ಬರೆದರು. ನವೋದಯದ ಕವಿಗಳು ಹಾಡುಗಳನ್ನು ಕೂಡ ಕಾವ್ಯಲೀಲೆಯ ಒಂದು ಭಾಗವೆಂದೇ ಗ್ರಹಿಸಿ ಅನೇಕ ಹಾಡುಗಳನ್ನು ಬರೆದರು. ಆದರೆ ನವ್ಯಕಾವ್ಯ ಹಾಡನ್ನು ತಿರಸ್ಕಾರದಿಂದ ಕಂಡು ದೂರವಿಟ್ಟಿತು. ನಿಸಾರರು ಅಂಥ ತೀವ್ರ ತಿರಸ್ಕಾರದ ವಾತಾವರಣದಲ್ಲಿಯೇ 'ನಿತ್ಯೋತ್ಸವ'ದಂಥ ಹಾಡುಗಳನ್ನು ರಚಿಸಿದರು. ಕಾವ್ಯಕ್ಕೂ ಹಾಡಿಗೂ ಇರುವ ಅಂತರವನ್ನು ನವೋದಯದ ಕವಿಗಳೇ ಸ್ಪಷ್ಟಪಡಿಸಿಕೊಂಡಿದ್ದರು. ಆದರೂ ಕೆಲವು ಅಗತ್ಯಗಳನ್ನು ಪೂರೈಸಿಕೊಳ್ಳಲು ಹಾಡು ಕೂಡ ಬೇಕೆಂದು ಕಂಡುಕೊಂಡಿದ್ದರು. ನವ್ಯಕಾವ್ಯದ ಸಂದರ್ಭದಲ್ಲಿ ಸಂವಹನದ ಸಮಸ್ಯೆ ತೀವ್ರವಾದಾಗ ಹಾಡುಗಳ ಅಗತ್ಯ ಮತ್ತೆ ಅರಿವಿಗೆ ಬಂತು. 'ನಿತ್ಯೋತ್ಸವ' ಧ್ವನಿ ಸುರುಳಿಯನ್ನು ಬಿಡುಗಡೆ ಮಾಡುವ ಮೂಲಕ ನಿಸಾರ್ ಈ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಟ್ಟರು. ಇಂದಿಗೂ ಇಂತಹ ಹಾಡುಗಳ ಬಗೆಗಿನ ವಿರೋಧ ಕಡಿಮೆಯಾಗಿಲ್ಲ. ಆದರೆ ಹಾಡುಗಳನ್ನು ಹಾಡುಗಳೆಂದೇ ನೋಡುವ ಬೇರೊಂದು ದೃಷ್ಟಿಕೋನ ಇಲ್ಲಿ ಬೇಕಾಗಿದೆ.

ವ್ಯಂಗ್ಯ, ವಿಡಂಬನೆ, ನಾಟಕೀಯತೆಗಳನ್ನು ಯಥೇಚ್ಛವಾಗಿ ಬಳಸಿಕೊಂಡರೂ ನವ್ಯಕಾವ್ಯ ಹಾಸ್ಯವನ್ನು ದೂರವೇ ಇಟ್ಟಿತ್ತು. ನವ್ಯಕವಿಗಳ ವ್ಯಂಗ್ಯ-ವಿಡಂಬನೆಗಳು ಚುರುಕು ಮುಟ್ಟಿಸುವಂತೆ, ಇರಿಯುವಂತೆ ಅಥವಾ ಸ್ವತಃ ಇರಿದುಕೊಳ್ಳುವಂತೆ ತೀಕ್ಷ್ಣವಾಗಿದ್ದರೂ ಅವು ನಗೆ ಹುಟ್ಟಿಸುವುದಿಲ್ಲ. ನಿಸಾರರು ತಮ್ಮ ತಿಳಿಯಾದ ಹಾಸ್ಯಪ್ರಜ್ಞೆಯ ಮೂಲಕ ನವ್ಯಕಾವ್ಯಕ್ಕೆ ಲವಲವಿಕೆಯನ್ನು ತಂದರು. 'ಅಮ್ಮ, ಆಚಾರ, ನಾನು' ಎಂಬ ಕವಿತೆಯನ್ನು ಉದಾಹರಣೆಗೆ ನೋಡಬಹುದು:

'ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು,
ಭಾರೀ ಸೀರೆಯನ್ನು ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ,
ಕಾಲಿಗೆ ಹೈಹೀಲ್ಡು ಕೆರ
ಕೊರಳಿಗೆ ಚಿನ್ನದ ಸರ
ಕಿವಿಗೆ ಬೆರಳಿಗೆ ಉಂಗುರ ತೊಟ್ಟು
ಲಿಪ್‌ಸ್ಟಿಕ್ಕು ಪೌಡರು ರೂಜು ಬಳಿದು ದೃಷ್ಟಿ ಬೊಟ್ಟಿಟ್ಟು
ಹೆರಳ ಗೋಪುರದಲ್ಲಿ ಕೂದಲ ಬಗಿದು
ಎಡ ಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು—ಆಗ
'ಬಂದೆ ತಡಿಯಿರಿ' ಎಂದು ಒಳಗೋಡಿ
ಬಂದು 'ನಡೆಯಿರಿ' ಎಂದಾಗ
ತಲೆ ಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ

(ಅಮ್ಮ, ಆಚಾರ, ನಾನು)

ಎಲ್ಲ ಆಧುನಿಕತೆಯ ಅಲಂಕಾರದ ನಡುವೆಯೂ ಅದನ್ನೆಲ್ಲ ಮುಚ್ಚಿಹಾಕಿಬಿಡುವ ಸಾಂಪ್ರದಾಯಿಕತೆಯನ್ನು ಕವಿತೆ ಲಘುವಾಗಿ, ನಗೆ ಹುಟ್ಟಿಸುವಂತೆ ವಿಡಂಬಿಸುತ್ತದೆ.

ಇಂಥವೇ ಕವಿತೆಗಳು ಸ್ಪಷ್ಟಪಡಿಸುವ ಇನ್ನೊಂದು ಗುಣವೆಂದರೆ, ಸಂವಹನವನ್ನು ಸುಲಭಗೊಳಿಸುವ ನಾಟಕೀಯ ಸನ್ನಿವೇಶದ ನಿರ್ಮಾಣ, ಕವಿತೆಯನ್ನು ಕಥನದ ರೂಪದಲ್ಲಿ ಕಟ್ಟುವ ತಂತ್ರ. 'ರಂಗೋಲಿ ಮತ್ತು ಮಗ'. 'ರಾಮನ್ ಸತ್ತ ಸುದ್ದಿ'. 'ಅನಾಥರು'. 'ಕರ್ಚೀಫು'. 'ಬೀದಿಯ ಮಾರಿ' ಮೊದಲಾದ ಕವಿತೆಗಳು ಹೀಗೆ ಸನ್ನಿವೇಶವೊಂದನ್ನು ಕಥನಾತ್ಮಕವಾಗಿ, ವಿಸ್ತೃತ ಪ್ರತಿಮೆಯಂತೆ ಬಳಸಿಕೊಳ್ಳುತ್ತವೆ. ಇಂಥ ಕವಿತೆಗಳಲ್ಲಿ ವಿವರಗಳು ಜಾಸ್ತಿ. ವಿವರಣೆಗಳೂ ಜಾಸ್ತಿ. ಆದರೂ ಕವಿತೆ ಜಾಳಾಗದಂತೆ ನಿಸಾರ್ ನಿರ್ವಹಿಸಬಲ್ಲರು. ಇದೂ ಕೂಡ ನವ್ಯಕಾವ್ಯದಲ್ಲಿ ಕಾಣದ ಅಂಶ. ಆದರೆ ಅರ್ಥವ್ಯಕ್ತಿಯನ್ನು ಸ್ಪಷ್ಟವಾಗಿಸಲು ಸಹಾಯಕವಾಗಿರುವ ಅಂಶ.

ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ದ್ವಂದ್ವಗಳನ್ನು ನಿಸಾರರ ಕಾವ್ಯ ಅನೇಕ ನೆಲೆಗಳಲ್ಲಿ ಹಿಡಿಯಲು ಪ್ರಯತ್ನಿಸುತ್ತದೆ. ಇಂಥ ಒಂದು ನೆಲೆಯನ್ನು ಅವರ ಆಧುನಿಕ ನಿಸರ್ಗ ಕವಿತೆಗಳಲ್ಲಿ ಕಾಣಬಹುದು. ಅವರಲ್ಲಿ 'ಕಾರವಾರದ ಕಡಲ ದಂಡೆಯಲ್ಲಿ'. 'ಜೋಗ ದಲ್ಲಿ ಅನಿಸಿದ್ದು' ಮೊದಲಾದ ಸಾಂಪ್ರದಾಯಿಕ ಪ್ರಕೃತಿ ವರ್ಣನೆಯ ಕವಿತೆಗಳಿರುವಂತೆಯೇ 'ಸಂಜೆ ಐದರ ಮಳೆ'. 'ಗಾಂಧಿಬಜಾರಿನ ಬೆಳಗು'ದಂಥ ಕವಿತೆಗಳೂ ಇವೆ.

'ನಮ್ಮ ಗಾಂಧಿಬಜಾರಿನ ಬೆಳಗಿಗೆ
ನಿಮ್ಮ
ಹುಂಜ ಗುಡಿಗಂಟೆ ಮಸೀದಿಯ ಸ್ತೋತ್ರ
ರಂಗವಲ್ಲಿ ಮಲ್ಲಿಗೆಬಳ್ಳಿ ಸುಲಿಯುವ ಹುಡುಗಿ ಬೆಳ್ಳಿನಕ್ಷತ್ರ
ಎತ್ತಿನ ಕತ್ತಿನ ಹೆಜ್ಜೆ ನೇಗಿಲ ಭೋಗಿ
ಯ ಎಕ್ಕಡವಿಲ್ಲದ ಗಡಸು ಹೆಜ್ಜೆ
ರಾಗಿ ಬೀಸುವ ಪದ
ಅಗ್ಗಿಷ್ಟಿಕೆ ಮುದುಕಿಯ ಗುಡಿಸಲ ಕದ
ಇತ್ಯಾದಿ ಜಾನಪದ
ಸರಕಿನ ಪರಿಚಯ ಎಳ್ಳಷ್ಟೂ ಇಲ್ಲ;
ಮೊದಲ ಷಿಫ್ಟಿನ ಫ್ಯಾಕ್ಟರಿ ಬಸ್ಸೊ
ಇಲ್ಲವೆ ಆಟೊ
ಹಲ್ಕಿರಿವ Esso
ಹಲಗೆ ಕೆಳಗಿನ ಕತ್ತೆ ಕಂಠದ ಒರಟೊ;
ಹೋಟಲಿನ ಕುರ್ಚಿಗಳ ಧಡಭಡ
ಹಾಡಿಯ ಪರಿಷ್ಕೃತ ಪಕ್ಷಿಗಳ ದನಿ ಬಗ್ಗಡ
ಡ್ಯೂಟಿ ಮುಗಿಸಿದ ಭಾರ ರೆಪ್ಪೆಯ ಬೀಟಿ
ನ ಪೋಲೀಸಿನ ಲಾಠಿ ಇಲ್ಲವೆ ಬೂಟೊ
ಝಾಡಮಾಲಿಯ ಹರಕಲು ಪರಟೊ

ಅಥವಾ ಇಂಥವೇ ಇನ್ನೆಷ್ಟೊ
ಪೌರ ವೈಶಿಷ್ಟ್ಯಗಳ ಪ್ರತಿನಿತ್ಯದಲಾರಂ...
(ಗಾಂಧಿ ಬಜಾರಿನ ಬೆಳಗು)

ಸಾಂಪ್ರದಾಯಿಕತೆಯ ಬಗೆಗೆ ಗೌರವವಿಟ್ಟುಕೊಂಡೂ ಆಧುನಿಕತೆಯನ್ನು ಒಪ್ಪುವ ಮನಸ್ಸು ಇಲ್ಲಿ ಕಾಣುತ್ತದೆ. ಆಧುನಿಕ ಯುಗದಲ್ಲಿಯೂ ಸಾಂಪ್ರದಾಯಿಕತೆಗೆ ಗೌರವ ತಂದ ಮಾಸ್ತಿ ನಿಸಾರರಿಗೆ ಪ್ರಿಯರಾಗಿ ಕಾಣುವುದು ಈ ಕಾರಣಕ್ಕಾಗಿ:

'ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ,
ಸರಳ ಸದಭಿರುಚಿಯ ಖ್ಯಾತಿಯಂತೆ.
(ಮಾಸ್ತಿ)

ಆದರೂ ನಿಸಾರ್ ಅವರ ಕಾವ್ಯದಲ್ಲಿ ಸಂದ ಜೀವನದ ಬಗೆಗೆ ಹಳಹಳಿಕೆಯಾಗಲಿ, ಬಂದ ಆಧುನಿಕತೆಯ ಬಗೆಗೆ ತಿರಸ್ಕಾರವಾಗಲಿ ಕಾಣುವುದಿಲ್ಲ ಎಂಬುದು ವಿಶೇಷ ಸಂಗತಿಯಾಗಿದೆ. ಇಂಥ ಒಂದು ಆರೋಗ್ಯಕರ ಸ್ವೀಕೃತಿಯ ಸ್ವಭಾವವೇ ಅವರ ಕಾವ್ಯಕ್ಕೆ ವಿಶೇಷ ಸಮಾಧಾನ ಚಿತ್ತತೆಯನ್ನು ತಂದಿದೆ.

ಹಾಗೆಂದು ಅವರ ಕಾವ್ಯದಲ್ಲಿ ಗಾಂಭೀರ್ಯ, ತಳಮಳ, ದ್ವಂದ್ವಗಳು ಇಲ್ಲವೆಂದಲ್ಲ. 'ರಾಮನ್‌ಸತ್ತ ಸುದ್ದಿ'ಯಂಥ ಪದ್ಯ ಇಂಥ ತಳಮಳವನ್ನು ಗಂಭೀರವಾಗಿಯೇ ಚಿತ್ರಿಸುತ್ತದೆ. ರಾಮನ್‌ರಂಥ ದೊಡ್ಡ ವ್ಯಕ್ತಿಯ ಸಾವಿನಿಂದ ಜಗತ್ತು ಒಂದಿಷ್ಟೂ ವಿಚಲಿತವಾಗುವುದಿಲ್ಲ. ಆ ಸಾವಿನಿಂದ ಕವಿಯ ಮನಸ್ಸು ಕಳವಳಗೊಂಡಿದೆ. ಇಂಥ ಸ್ಥಿತಿಯಲ್ಲಿ ಕವಿಗೆ ಎದುರಾಗುವವನು ಗದ್ದೆಯಲ್ಲಿ ಕೆಲಸ ಮಾಡುವ ಹನುಮ. ಅವನಿಗೆ ರಾಮನ್ ಏನೂ ಅಲ್ಲ. ಕವಿ, ಕವಿಯೆಂದೂ ಅವನಿಗೆ ತಿಳಿಯದು. ಅವನಿಗೆ ಅವನದೇ ತಾಪತ್ರಯಗಳು.

'ಇಲ್ಲಿಂದ ನನಗೆ ವರ್ಗವಾಗುತ್ತೆ—ಒಂದು ದಿನ
ಹನುಮ ಸಾಯುತ್ತಾನೆ—ತಿಳಿಯುವುದಿಲ್ಲ.
ಇಲ್ಲಿನ ಹಳಬ ಅಲ್ಲಿ ಹೊಸಬನಾಗುತ್ತೇನೆ,
ಎಲ್ಲೋ ಹೇಗೋ ಸಾಯುತ್ತೇನೆ—ತಿಳಿಯುವುದಿಲ್ಲ.
ನನ್ನ ಹೆಸರು, ಹುದ್ದೆ, ಪದ್ಯ, ತಳಮಳ, ಬದುಕು—ತಿಳಿಯುವುದಿಲ್ಲ.
ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು—
ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವಸಂಚಾರ—ತಿಳಿಯುವುದಿಲ್ಲ.
ಕೊರಲು ಬಿಗಿದು ಒಬ್ಬಂಟಿ ನಿಧಾನ ನಡೆದಂತೆ
ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು.'
(ರಾಮನ್ ಸತ್ತ ಸುದ್ದಿ)

ಇದೊಂದು ಶೋಕಗೀತೆ(elegy). ವಿಶಿಷ್ಟ ಶೋಕಗೀತೆಯಂತೆ ತನ್ನೆಲ್ಲ ಕಳವಳವನ್ನು ತೋಡಿಕೊಂಡರೂ ಕೊನೆಗೆ ಬದುಕಿನ ರೀತಿಯೊಂದಿಗೆ ಒಪ್ಪಂದಕ್ಕೆ ಬರುವ ಮೂಲಕ

ಸಮಾಧಾನ ತಳೆಯುತ್ತದೆ. ಇಂಥ ಸಮಾಧಾನ ನಿಸಾರರ ಜೀವನ ದೃಷ್ಟಿಯ ಮುಖ್ಯ ಅಂಶ. ತಳಮಳವನ್ನೇ ಸ್ಥಾಯಿಯಾಗುಳ್ಳ ನವ್ಯಕಾವ್ಯಕ್ಕೆ ಇದು ಹೊರತಾದದ್ದು.

ಹೀಗೆ ನವ್ಯರ ನಡುವೆಯೇ ಬರೆಯುತ್ತ ನವ್ಯರಿಗಿಂತ ಭಿನ್ನವಾಗಿ ನಿಲ್ಲುವ ಕಷ್ಟ ನಿಸಾರರಿಗೆ ಗೊತ್ತಿದೆ:

'ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೇ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.' (ನಿಮ್ಮೊಡನಿದ್ದೂ ನಿಮ್ಮಂತಾಗದೆ)

ಇದು ನಿಸಾರ್ ಅವರ ಕಾವ್ಯಜೀವನಕ್ಕೆ ಸಂಬಂಧಿಸಿದ ಕಷ್ಟವಷ್ಟೇ ಅಲ್ಲ. ಬಹುಸಂಖ್ಯಾತ ಹಿಂದೂ ಸಮಾಜದ ನಡುವೆ ಸಂಶಯಕ್ಕೀಡಾದ ಅಲ್ಪಸಂಖ್ಯಾತ ಮುಸ್ಲಿಂ ಜನಾಂಗಕ್ಕೆ ಸೇರಿದ ವ್ಯಕ್ತಿಯಾಗಿ ಅನುಭವಿಸಿದ ಕಷ್ಟವೂ ಆಗಿದೆ:

'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನ
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.' (ಅದೇ)

'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ನಾನೆಂಬ ಪರಕೀಯ', 'ಅಮ್ಮ, ಆಚಾರ, ನಾನು', 'ರಂಗೋಲಿ ಮತ್ತು ಮಗ' ಇಂಥ ಕವಿತೆಗಳಲ್ಲಿ ನಿಸಾರ್ ಎರಡು ಭಿನ್ನ ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಗುರುತಿಸುತ್ತಾರಾದರೂ ಅದು ಅವರ ಕಾವ್ಯದ ಮೂಲ ಧಾತು ವಾಗಿಲ್ಲ. ಅವರ ಕಾವ್ಯದ ಸಂವೇದನೆ ಆಕಾರ ಪಡೆದದ್ದು ವಿಶಾಲ ಭಾರತೀಯ ಸಂಸ್ಕೃತಿಯ ಮತ್ತು ಕನ್ನಡ ಸಾಹಿತ್ಯ ಪರಂಪರೆಯ ಆಧಾರದಲ್ಲಿ. ತಮ್ಮ ಕಾವ್ಯದ ಪೌರಾಣಿಕ ಪರಾಮರ್ಶನಗಳನ್ನೂ ಪ್ರತಿಮೆ-ಸಂಕೇತಗಳನ್ನೂ ಕಾವ್ಯಭಾಷೆಯನ್ನೂ ಅವರು ಈ ಗಣಿಗಳಿಂದಲೇ ಅಗೆದುಕೊಂಡಿದ್ದಾರೆ. ತಮ್ಮ ಕಾವ್ಯಭಾಷೆಯಲ್ಲಿ ಉರ್ದು, ಪರ್ಷಿಯನ್, ಇಂಗ್ಲಿಷ್ ಶಬ್ದಗಳನ್ನು ಅವರು ಧಾರಾಳವಾಗಿ ಬಳಸಿಕೊಂಡಿದ್ದರೂ ಕನ್ನಡ ಮತ್ತು ಸಂಸ್ಕೃತ ಶಬ್ದಗಳ ಜೊತೆಗೆ ಅವುಗಳನ್ನು ಹೊಂದಿಸಿಕೊಳ್ಳುತ್ತಾರೆ. ಆ ಮೂಲಕ ಸಾಂಸ್ಕೃತಿಕ ಸಮನ್ವಯ ಸಾಧಿಸುತ್ತಾರೆ. ಪದ್ಯ ರಚನೆಯ ಮೇಲೆ, ಲಯ ವಿನ್ಯಾಸದ ಮೇಲೆ ಅವರಿಗಿರುವ ಅಸಾಧಾರಣ ಹಿಡಿತದಿಂದಾಗಿ ಅದು ಸುಲಭಸಾಧ್ಯವಾಗಿದೆ.



ನಿಸಾರರ ನಿಸರ್ಗ ಕವಿತೆಗಳ ಹೆಚ್ಚುಗಾರಿಕೆ

♦ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ

ನಿಸಾರ್ ಅಹಮದರ ಕವಿತೆಗಳ ಭಾಷೆಯದೇ ಒಂದು ವೈಶಿಷ್ಟ್ಯ. ಅವರು ಉರ್ದು ಪದಗಳನ್ನು ತಮ್ಮ ಕವಿತೆಗಳಲ್ಲಿ ಬಳಸುವ ರೀತಿ ಮೋಜಿನದು. ಅದಕ್ಕೆ ಅವರದ್ದೇ ಆದ ವಿಶಿಷ್ಟತೆ ಇದೆ. ನಿಸರ್ಗವನ್ನು ಕುರಿತ ಅವರ ಕವಿತೆಗಳು ಕೂಡ ಹಾಗೆಯೇ, ಕುತೂಹಲ ಹುಟ್ಟಿಸುವಂಥವು. ಮೊದಲನೆಯದಾಗಿ ಗಮನ ಸೆಳೆಯುವುದು ನಿಸರ್ಗವನ್ನು ಕುರಿತ ಅವರ ಧೋರಣೆ.

'ನೆಲದ ಸಿರಿಯ ಸವಿಯದವನ
ಬಾಳು ಬಾಳೇ ಅಲ್ಲ; ಗೋಳು'
(ನೆಲದ ಸಿರಿ)

ಎಂದೇ ಅವರು ಘೋಷಿಸುತ್ತಾರೆ.

ಸೂರ್ಯೋದಯ, ಸೂರ್ಯಾಸ್ತ, ಸಂಜೆ, ಕೆರೆ, ಋತು ವಿಲಾಸ, ಬೆಳುದಿಂಗಳು, ಗುಲ್‌ಮೊಹರ್, ಜಲಪಾತ, ಮರಳು ದಿಣ್ಣೆಗಳು; ಕಡಲ ತೀರ, ಕಾನ್ಯನ್—ಎಲ್ಲಾ ಅವರ ಗಮನವನ್ನು ಸೆಳೆಯುತ್ತವೆ. ಚಂದ್ರ, ಅವರ ಕಣ್ಣಿಗೆ 'ಉಟ್ಟ ನೀಲಿ ನಿಲುವಂಗಿಯ ಬೆಳ್ಳಿ ಗುಂಡಿ ಚಂದಿರ'ನಾಗಿ ಕಾಣಿಸುತ್ತಾನೆ. 'ಭೂಮಿತಾಯಿಯ ಸಿರಿಗೆ ಚೆಲ್ವಿಕೆಗೆ ಕೊರೆಯುಂಟೆ? ಕಲ್ಲು ಜಲ ಮಣ್ಣಲ್ಲಿ ಹಸುರಿನಲ್ಲಿ—ಹೊದಿಕೆ ಬಣ್ಣಗಳೇನು! ಒಳ ತಿರುಳ ರುಚಿಯೇನು? ಎಷ್ಟು ಬಗೆ ಗ್ರಂಥವಿದೆ ಬೀರುವಲ್ಲಿ' ಎಂಬ ವಿಸ್ಮಯ ಮೂಡುವುದೂ ಉಂಟು. ಆ ವಿಸ್ಮಯದಲ್ಲಿ ನಿಸರ್ಗದ ಚಿತ್ರಗಳು ಒಂದೊಂದಾಗಿ ಬಿಚ್ಚಿಕೊಳ್ಳುವುದುಂಟು.

ಉದಾಹರಣೆಗೆ ಈ ಕೆಲವು ಚಿತ್ರಗಳನ್ನು ಗಮನಿಸಿ:

1) **'ತೆರೆದಿದೆ ಅಲಕೆಯ ದ್ವಾರ, ರಸಿಕನೆ ಆಗು ಕುಬೇರ!**
ಏನೀ ಸಂಭ್ರಮ ಉಷೆಯ, ಹಂಚಿದೆ ಲೋಕಕೆ ಖುಷಿಯ!
....
ಮೇಘಕ್ಕಿದೆ ಹೊನ್ನಂಚು, ಸೂರ್ಯನದೀ ಒಳಸಂಚು
....
ದಿಬ್ಬಣ ಹೊರಟಿವೆ ಚಿಟ್ಟೆ, ಹೂ ಗುಟ್ಟೆಲ್ಲವು ರಟ್ಟೆ!
ಐಕಿಲ ಹನಿಗಳ ಸಾಲು, ಬೇಲಿಗೆ ಹೊದಿಸಿದ ಶಾಲು!
(ಮುಂಜಾವಿನ ಮಾಯೆ)

ಇದು ಸೂರ್ಯೋದಯ ಕಾಲದ ಕೆಲವು ಚಿತ್ರಗಳನ್ನು ಒಳಗೊಂಡ ರೀತಿಗೆ ಉದಾಹರಣೆ.

ಸಂಜೆಯ ವೈಭವವನ್ನು ಅವರು ವರ್ಣಿಸಿರುವ ರೀತಿಯೇ ಬೇರೆಯಾಗಿದೆ.

'ನೀರವತೆಯುತ್ಸವದ ನಿಶೆ ತೇರ ಯಾತ್ರೆ
ನೆರವೇರಲಿದೆ ಮುಗಿದು ಹಗಲೆಂಬ ಜಾತ್ರೆ'
(ಸಂಧ್ಯಾ ವೈಭವ)

ಎಂದು ಆರಂಭಗೊಂಡು ಅದರ ಪರಿಣಾಮವನ್ನು ಕವಿ ಹೀಗೆ ಚಿತ್ರಿಸುತ್ತಾರೆ:

'ಅಳಿದಿಹುದು ಚೇತನಾಚೇತನದ ಎಲ್ಲೆ
ಕಲ್ಲೇನು ಮಣ್ಣೇನು, ಹುಲ್ಲೆಸಳು ಹುಲ್ಲೆ!'
(ಅದೇ)

ಮತ್ತೆ ಇಲ್ಲಿನ ಚೆಲುವಿನ ಪರಿಣಾಮ ಎಂಥದ್ದು ಎಂಬುದನ್ನು ವರ್ಣಿಸುವ ಈ ನಾಲ್ಕು ಸಾಲುಗಳನ್ನು ಗಮನಿಸಿ:

'ತೆಂಗು ಗರಿ ಕಳಚಿದರು ಕಚ್ಚುಳಿಸುವಂತೆ
ಅನುಭವವು ಸವಿ ನೆನಹಿನಚ್ಚುಳಿಸುವಂತೆ
ಮುಳುಗಿಹನು ರವಿ ತನ್ನ ಹಿಂಬೆಳಕನುಳಿಸಿ
ಸೃಷ್ಟಿಯನು ಚೆಲ್ವಿಕೆಯ ಪುಷ್ಟಿಯಲಿ ಬಲಿಸಿ'
(ಅದೇ)

ಮಲೆನಾಡಿನ ಆಕರ್ಷಣೆ ಒಂದೆರಡು ರೀತಿಯದಲ್ಲ ಈ ಕವಿಗೆ. ಜೋಗದ ಜಲಪಾತವಂತು 'ಬರಿ ನೀರ ನುಗ್ಗಾಟವಷ್ಟೇ ಅಲ್ಲ, ನನ್ನ ನಾಡಿನ ಬದುಕಿನಪ್ರತಿಮ ಸುಪ್ರತಿಮೆ'ಯೂ 'ನನ್ನ ಜೀವದ ಭಾಗ'ವೂ ಆಗಿದೆ ಅನ್ನಿಸಿದರೆ ಮಲೆನಾಡಿನ 'ಆ ನಾಗರ ಸಂಜೆಗಳ ಅಜಗರ ಮೌನಗಳು'. 'ಬೆಟ್ಟಕ್ಕೊಂದು ಚಹರೆ, ಹೊಳೆಗೊಂದು ವ್ಯಕ್ತಿತ್ವ' ನೀಡುವುದಷ್ಟೇ ಅಲ್ಲ 'ಸವರಿದಷ್ಟೂ ಪಚ್ಚೆ, ಚೆಲ್ಲಿದಷ್ಟೂ ಮೋಡ, ಬಿಡಿಸಿದಷ್ಟೂ ವಿವಿಧ ವರ್ಣಗಳನುಕ್ಕಿಸಿಕೊಂಡ ಅಕ್ಷತ ಶಕ್ತಿ'ಯಾಗಿ ಕಾಡುತ್ತವೆ. ಆದ್ದರಿಂದಲೆ ಕವಿ ನಿಸರ್ಗ ಸಮೃದ್ಧಿಯನ್ನು ಕುರಿತು 'ಈ ದಾರಿಯ ನಾ ಮರೆಯುವೆನೆ? ಮನಸಿಂದಿದ ತೊರೆಯುವೆನೆ?'

ಎಂದು ಉದ್ಗರಿಸುತ್ತಾರೆ.

ಆದರೆ ನಿಸಾರರ ನಿಸರ್ಗ ಕವಿತೆಗಳ ವಿಶಿಷ್ಟತೆ ನಿಸರ್ಗದ ಚೆಲುವನ್ನು, ಚೆಲುವಿನ ಹಿಂದಿನ ರುದ್ರ ರಮಣೀಯತೆಯನ್ನು ಗಮನಿಸಿದ ಹಾಗೆಯೇ ನಿಸರ್ಗ ಅವರ ಕವಿತೆಗೆ ಒಂದು ಚೋದಕ ಶಕ್ತಿಯೂ ಆಗಿದೆ. ಉದಾಹರಣೆಗೆ, 'ಸಂಜೆ ಐದರ ಮಳೆ', 'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಎಂಬ ಎರಡು ಕವಿತೆಗಳನ್ನು ಗಮನಿಸಬಹುದು. ಒಂದು ರೀತಿಯಲ್ಲಿ 'ರಾಮನ್ ಸತ್ತ ಸುದ್ದಿ' ಕವಿತೆಯಂತೆಯೇ ಈ ಎರಡೂ ಕವಿತೆಗಳೂ ಕೂಡ. ನಿಸರ್ಗದ ಚಿತ್ರದಿಂದ ಆರಂಭವಾಗಿ ಕವಿ ಎತ್ತಿಕೊಳ್ಳುವ ಘಟನೆಯೊಂದಿಗೆ ಮುಗಿಯುತ್ತದೆ. ಇಂಥ ಕಡೆ ನಿಸರ್ಗ, ಇವರ ಪ್ರತಿಭೆಯ 'take off' ಕ್ರಮವನ್ನು ಸೂಚಿಸುತ್ತದೆ.

'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಕವಿತೆ ಆರಂಭವಾಗುವುದು ಅದರ ಭೌತಿಕ ವರ್ಣನೆಯ ಚಿತ್ರದೊಂದಿಗೆ:

'ಆರಿಜೋನ ಪ್ರಾಂತದ ಬೃಹದ್ಭವ್ಯ ಮಹಾ ಕಂದರ
ಗ್ರಾಂಡ್ ಕಾನ್ಯನ್‌ನ ಭೇಟಿ ಪ್ರಾಪ್ತವಾದ ದಿನ, ನನ್ನ ಮನ
ದೈನಂದಿನ ಪಡುಹಗಳ ಮಾಮೂಲುತನ ದಾಟಿ ಪರವಶತೆಯಲಿ
ಅನುಭವಿಸಿದಾನಂದ ಸಂಭ್ರಮಾಶ್ಚರ್ಯಗಳಿಗಿಲ್ಲ ಸರಿಸಾಟಿ.
ಮೈ ನೆತ್ತರನು ಹೆಪ್ಪಾಗಿಸುವ ಚಳಿಯುಡುಪು ಧರಿಸಿ
ಎದುರಾದ ಮುಂಜಾನೆಯಲಿ ದರ್ಶಿಸಿದ ಆ ಭೂಮಾದ್ಭುತ
ವಿರಾಟ್ ದೃಶ್ಯದ ಅಪಾರ ವಿಸ್ತಾರ, ಮೈಲಿಯಾಳದ ತನಕ
ಬಾಯ್ತೆರೆದ ಕರಾಳ ಪಾತಾಳ, ತಿಳಿಗೆಂಪು ಕಂದು ಬಿಳಿ ಹಳದಿ
ಮರಳುಗಲ್ಲಿನಗಾಧ ಆಕಾರಗಳ ಹಲವು ಯೋಜನೆಗಟ್ಟಲೆಯ
ವೈವಿಧ್ಯಮಯ ಹರವು, ಹುಬ್ಬುಗಂಟಿಕ್ಕಿ ದುರುಗುಟ್ಟಿರುವ
ಭಯೋದ್ವೇಗಕರ ಮಹನ್ಮೌನ, ಕೋಟ್ಯಂತರ ವರುಷ
ಜಲ ಚಾಣದಿಂದಖಂಡ ಬಂಡೆಗಳ ಕೊರೆದು ಕೆತ್ತುತ್ತ ಈ
ಬೃಹನ್ನಿರ್ಮಿತಿಗಳ ರೂವಾರಿಸಿದ ಕೊಲರೆಡೊ ನದಿ ಜಕಣಾರ್ಯನ
ಆಳದಲಿ ಮೈತಳೆದ ಮಿಂಚು ನೂಲಿನ ಹರಿವು—ಇತ್ಯಾದಿ ನೋಟ
ಅದೆಷ್ಟು ಸಮಯದ ತನಕ ಹೃದಯ ತನ್ಮಯಗೊಳಿಸಿ
ಬರಿಸಿತ್ತೊ ಮೈಮರೆವು; ನಿಸರ್ಗದಾಕಳು ದೃಶ್ಯಸುಧೆ
ಮನದಣಿಯೆ ಕೆಚ್ಚಲಿಸಿದುದಕೆ ಮುಡಿ ಮಣಿದು
ಭಾವಾತಿಶಯತೆಯಲಿ ಧನ್ಯವೆನಿಸಿತ್ತೊ ನನ್ನಿರವು.

(ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ)

ಇದು ಕವಿತೆಯ ಆರಂಭ. ಕಾನ್ಯನ್ನಿನ ಭವ್ಯ ದೃಶ್ಯದಲ್ಲಿ ಕವಿ ಮಗ್ನವಾಗಿದ್ದಾಗ ಒಬ್ಬ ಗರ್ಭಿಣಿ—ಕನ್ನಡಿಗಳು—ಹುಟ್ಟುವ ತನ್ನ ಕೂಸಿಗೆ ಹೆಸರು ಸೂಚಿಸಿ ಎಂದು ಚೀಟಿಯೊಂದ ರಲ್ಲಿ ತನ್ನ ದೂರವಾಣಿ ಸಂಖ್ಯೆ ಕೊಟ್ಟದ್ದು; ತನ್ನನ್ನು ಕವಿಯೆಂದು ಗುರುತಿಸಿದಾಕೆಯ ಹೆಸರು ಕೇಳದೇಹೋದದ್ದು, ಹಾಗೆಯೇ ಆ ಕಾನ್ಯನ್ನಿನ ಚೆಲುವಿಗೆ ಮಾರುಹೋದ ಘಳಿಗೆಯಲ್ಲಿ, ಬೀಸಿದ ಗಾಳಿಗೆ ಆಕೆ ಕೊಟ್ಟಿದ್ದ ಪುಟ್ಟ ಚೀಟಿ ಹಾರಿಹೋದದ್ದು—ಇವುಗಳೆಲ್ಲ ಬದುಕಿನ

ಆಕಸ್ಮಿಕಗಳನ್ನು ಧ್ಯಾನಿಸುವಂತೆ ಮಾಡಿದ್ದು—ಕವಿತೆಯ ಮುಗಿತಾಯವಾಗುತ್ತದೆ. ಅಂದರೆ, ನಿಸರ್ಗದ ಒಂದು ಚಿತ್ರದ ಮೋಹಕ ಅನುಭವದ ವೇದಿಕೆಯ ಮೇಲೆ ಬದುಕಿನ ಕೆಲವು ಘಟನೆಗಳು ಮೂಡಿಬರುತ್ತವೆ.

ಆದರೆ 'ಸಂಜೆ ಐದರ ಮಳೆ' ಇದಕ್ಕಿಂತ ಭಿನ್ನವಾದದ್ದು. ಅಲ್ಲಿ ಮಳೆ ಸುರಿದಾಗ, ಅದು ಶಿವಮೊಗ್ಗೆಯ ಮಳೆ—ಹಿಂದಿನ ಶಿವಮೊಗ್ಗೆಯ, ಅಂದರೆ ಮಲೆನಾಡಿನ ಮಳೆ. ಅದು ಸುರಿಯತೊಡಗಿದರೆ ನಿಲ್ಲುವುದು ಸಾಧ್ಯವೆ? ಆ ಅನುಭವದ ಹಿನ್ನೆಲೆಯಲ್ಲಿ ಕವಿ ತನ್ನ ಸಹ್ಯಾದ್ರಿ ಕಾಲೇಜಿನ ಒಂದು ಅನುಭವವನ್ನು ಅನಾವರಣ ಮಾಡಿಬಿಡುತ್ತಾರೆ.

ಕವಿತೆ ಆರಂಭವಾಗುವುದು ಹೀಗೆ:

'ಸಹ್ಯಾದ್ರಿ ಕಾಲೇಜಿನ
ಆಗಸ್ಟ್ ತಿಂಗಳಿನ ಒಂದೇ ಥರದ ಸಂಜೆ ಐದರ ಮಳೆ
ಕೆಮಿಸ್ಟ್ರಿ ಅಟೆಂಡರನ ಮಾಸಲು ಪೇಟ;
ಬೈಗಲ್ಲಿ ನವಿಲು ಗಿಳಿ ಮೈನಾ ಹೆಸರಿರದ ಕಾಡು ಹಕ್ಕಿಗಳ
ಹೊರದೂಡುವ ಪಶ್ಚಿಮ ಕ್ಷಿತಿಜದ ರಗ್ಗು ಮುಸುಕಿನ ನೋಟ
ತೀರ್ಥಹಳ್ಳಿ ಗೌಡ, ಭಟ್ಟರ ಅಡಿಕೆ ತೋಟಗಳ ಬೇಲಿ ತಡಿಕೆ
ದಾಟಿ ಬುಡದಡಿಯ ಮೌನದ ಮಡಿಕೆ-
ಗಳ ಮಡಿಗೊಳಿಸಿ ಶಬ್ದದಿಂದ
ಕಬ್ಬು ಭತ್ತವ ಥಳಿಸಿ
ಬೆಟ್ಟಗಳನಳಿಸಿ
ಸೋಂಭೇರಿ ಬಿಸಿಲ ಹೊಡೆದಟ್ಟಿ
ಬಾನಗಲ ಬಿಡಾರಗಳ ಕಟ್ಟಿ
ಜಿಯಾಲಜಿ ಲ್ಯಾಬೊರೇಟರಿಯ ಹಿಂಬದಿಯಲ್ಲಿ ಹೆಗ್ಗಡಿತಿ
ಬಟ್ಟೆಗಲ ಪಟಪಟ ಕಪ್ಪು ಭೀತಿ-
ಯಾಗುವ ಗಾಳಿ—
ಹರಟುತ್ತ ಸಂಬಳ ಬಡತಿ
ಕಾರಿಡಾರಿಗೆ ಬಂದ ಮೇಷ್ಟರಿಗೆ
ಇರಿಚಲಾಗಿ ತಾಗಿ
ಶಾಪಕ್ಕೆ ಭಾಗಿ.'

(ಸಂಜೆ ಐದರ ಮಳೆ)

ಈವರೆಗಿನ ಚಿತ್ರ ಮಲೆನಾಡಿನ ಮಳೆ, ಊರನ್ನು—ಶಿವಮೊಗ್ಗೆಯನ್ನು ಪ್ರವೇಶಿಸಿದ ಚಿತ್ರ—ಇಲ್ಲಿಂದ ಮುಂದೆ ಈ ಚಿತ್ರ ಕಾಲೇಜಿನ ಘಟನೆಗಳೊಂದಿಗೆ ಪಡೆದುಕೊಳ್ಳುವ ಸಂಬಂಧಗಳನ್ನು ಗಮನಿಸಿ :

'ದನ ಕತ್ತೆ ಎಮ್ಮೆ ಕೊಡೆ ಮಳೆಯುಂಗಿ
ಸ್ಕೂಟರು ಸೈಕಲ್ಲುಗಳ ಗುಮ್ಮ.'

(ಅದೇ)

—ಆಗುತ್ತದೆ. ಮತ್ತದೇ ಮಳೆ ಕಾಲೇಜಿನಿಂದ ಬೇಗ ಊರು ಸೇರುವಾತುರದ ಹುಡುಗಿಯರ ಕಣ್ಣಲ್ಲಿ ಭಯೋದ್ವೇಗ ಹುಟ್ಟಿಸುತ್ತದೆ, ಕ್ಲಾರ್ಕು ರಾಜಣ್ಣನ ಮೂಗಿಗೆ ಗೋಪಿ ಹೋಟಲಿನ ಒಗ್ಗರಣೆಯ ಚುರುಕು ಹೊತ್ತಿಸುತ್ತದೆ. ಹೊಸದಾಗಿ ಶಾಲೆ ಸೇರಿದ ಹಸುಳೆಯ ಹಾಗೆ ಚಂಡಿ ಹಿಡಿಯುತ್ತದೆ. ಇನ್ನು ಈ ಮಳೆ ಪ್ರಿನ್ಸಿಪಾಲರ ನಿದ್ದೆಗೆಡಿಸುತ್ತದೆ—ಯೂನಿಯನ್ನಿನ ಉದ್ಘಾಟನೆಗೆ ಚಪ್ಪರ ಹಾಕಿಸುವುದು ಹೇಗೆ ಎಂಬ ಚಿಂತೆ ಹೊತ್ತಿಸಿ. ಅಷ್ಟು ಸಾಲದು ಎಂದು ಅನ್ಯಾಯದ ಚುನಾವಣೆಯನ್ನು ನಡೆಸಿ ಗೆದ್ದವನನ್ನು ಒದ್ದೋಡಿಸಬೇಕೆಂದು ತೀರ್ಮಾನಿಸಿ ಸಿದ್ಧನಾದ ಕೊಟ್ರೇಶಿಯ ಪ್ರಯತ್ನಕ್ಕೆ ಕಲ್ಲು ಹಾಕಿಬಿಟ್ಟಿತು ಈ ಮಳೆ—ಅಂದರೆ, ಶಿವಮೊಗ್ಗೆಯ ಧಾರಾಕಾರ ಮಳೆಯಲ್ಲಿ ಕಾಲೇಜೊಂದರ ಚುನಾವಣೆ, ಉದ್ಘಾಟನೆ, ಪ್ರತಿಭಟನೆ ಈ ಸಂಗತಿಗಳೂ ಸೇರಿಕೊಳ್ಳುತ್ತವೆ. ನಿಸರ್ಗದ ವರ್ಣನೆಯೊಂದಿಗೆ ಕಾಲೇಜಿನ ವ್ಯವಹಾರಗಳನ್ನು ತೆಕ್ಕೆ ಹಾಕಿಕೊಂಡು ಕವಿತೆ ಬೆಳೆಯುತ್ತದೆ.

ಇದೇ ರೀತಿ ನಿಸರ್ಗವನ್ನು ಕುರಿತು ಬರೆದ ಕವಿತೆಗಳಲ್ಲಿ ಗಮನಾರ್ಹವಾದದ್ದು—'ಕೆರೆ' ಎಂಬ ಕವಿತೆ.

'ಕೇವಲ ದಾಹಕ್ಕೆ, ಮೀಹಕ್ಕೆ
ಬಟ್ಟೆ ಬರೆಗಳ ಮಡಿಗೆ; ಬೇಯಿಸಲು ಅಡಿಗೆ,
ತೀರ್ಥಕ್ಕಾಗಿ ಗುಡಿಗೆ, ಮೀನು ಸೀಗಡಿಗೆ,
ಬೇಸಾಯಕ್ಕೆ ನೀರಾವರಿ,
ಅಚ್ಚುಕಟ್ಟಿನ ಹಸುರಿನೈಸಿರಿ' (ಕೆರೆ)

ಎಂದು ಆರಂಭವಾಗುವ ಈ ಕವಿತೆ 'ಸುತ್ತಮುತ್ತಲಿನ ಭಣಗುಡುವ ಬೆತ್ತಲಿನ ಭೂದೃಶ್ಯಕ್ಕೆ ಉಡಿಸಿ ಸೀರೆ, ಸಿಂಗರಿಸಿ ನೆತ್ತಿ, ಮೈಮರೆಯುತ್ತದೆ ಕೆರೆ; ಹೆತ್ತೊಡಲಿನಂತೆ ಸಾದಾತನವ ಧರಿಸಿ, ಸ್ವಂತ ನೋವನು ಮರೆಸಿ' ಎಂದು ನಾಲ್ಕು ಭಾಗಗಳಲ್ಲಿ ಬೆಳೆದು ಕೆರೆಗೂ ಗ್ರಾಮಕ್ಕೂ ಇರುವ ರಕ್ತಸಂಬಂಧವನ್ನು ತಿಳಿಸಿ ಕೆರೆ, ಬರಿಯ ನೀರೆ? ಎಂದು ಪ್ರಶ್ನಿಸುತ್ತಾರೆ. 'ಸಕಲ ಜೀವಜಾತರ-ಕ್ಷೇಮಾಭ್ಯುದಯದಾಧಾರೆ' ಎಂದು ಅಭಿವ್ಯಂಜಿಸಿ, 'ನಿತ್ಯ ನಡೆಯುವುದಿಲ್ಲಿ ಮನವಾರೆ, ರವಿ ಶಶಿ ತಾರೆಗಳ ಜಳಕ' ಎಂದು ತಿಳಿಸಿ, ಅದು 'ಗ್ರಾಮ ಗರತಿಯ ಹಣೆಯ ತಿಲಕ' ಎಂದು ಕೈವಾರಿಸುತ್ತಾರೆ.

ನಿಸಾರರು ನಿಸರ್ಗದ ಚೆಲುವನ್ನು ಕಂಡಂತೆ, ನಿಸರ್ಗಕ್ಕೂ ಬದುಕಿಗೂ ಇರುವ ಬಿಡಿಸಲಾಗದ ಬಂಧವನ್ನು ಚಿತ್ರಿಸುತ್ತಾರೆ. ಅಷ್ಟೇ ಆಶ್ಚರ್ಯಚಕಿತರಾಗಿ ನಿಸರ್ಗದ ವರ್ಣನೆಯಿಂದ ಆರಂಭಿಸಿ ಬದುಕಿನ ಸಂಗತಿಗಳಿಗೆ ಇಳಿದು ಕವಿತೆಗಳ ಹೊಸ ಆಯಾಮವೊಂದನ್ನು ಕಂಡುಕೊಳ್ಳುತ್ತಾರೆ. 'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ', 'ಸಂಜೆ ಐದರ ಮಳೆ' ಎಂಬಂಥ ಕವಿತೆಗಳಲ್ಲಿ.

ಕವನಗಳು ಕವಿಯ ಅಂತಃಸ್ವರೂಪದ ಸೂಕ್ಷ್ಮ ಅವಸ್ಥಾಂತರಗಳ ರಸಾನ್ವಿತ ಡೈರಿಗಳು.



ಮುಕ್ತ ಮನಸ್ಸಿನ ಸಶಕ್ತ ಕವಿಯ ಅಪೂರ್ವ ಕಾವ್ಯ

♦ *ಪ್ರೊ. ಎಂ. ಎಚ್. ಕೃಷ್ಣಯ್ಯ*

೧

ಸುಮಾರು ಐವತ್ತು ವರ್ಷಗಳೇ ಕಳೆದಿವೆ, ಕೆ. ಎಸ್. ನಿಸಾರ್ ಅಹಮದ್ ಅವರು ಕವನಗಳ ರಚನೆಗೆ ತೊಡಗಿ. ಆದರೆ ಇಂದಿಗೂ ಅವರು ಸೃಜನಶೀಲತೆಯನ್ನು, ಅಭಿವ್ಯಕ್ತಿ ಧ್ವನಿಯ ತಾಜಾತನವನ್ನು, ಪರಿಸರದ ದಿನನಿತ್ಯದ ಆಗುಹೋಗುಗಳಿಗೆ ಸ್ಪಂದಿಸುವ ಮುಕ್ತ ಮನಸ್ಸನ್ನು ಉಳಿಸಿಕೊಂಡು ಕವಿತೆ-ಹಾಡುಗಳನ್ನು ರಚಿಸುತ್ತಿದ್ದಾರೆ. ಅವರ ರಚನೆಗಳ ಜೀವದ್ರವ್ಯ ಏಕ ವರ್ಣದ್ದಲ್ಲ. ಅವರು ಯಾವುದೇ ಚಳವಳಿ, ಗುಂಪಿನೊಡನೆ ಗುರುತಿಸಿಕೊಂಡವರಲ್ಲ. ಹಾಗೆಂದು ಕಾವ್ಯದ ನಡೆಗಳ ವಿಭಿನ್ನತೆಗೆ, ತಿರುವುಗಳಿಗೆ ಮನ ಮುಚ್ಚಿದವರೂ ಅಲ್ಲ. ಕಾಲಗತಿಯ ಅವರ ರಚನೆಗಳನ್ನು ಇಂಥದೇ ಬಗೆ, ವಿಧಾನ, ರೀತಿಯವು ಎಂದು ಹಣೆಪಟ್ಟಿ ಹಚ್ಚಿ ಹೇಳಲಾಗದಿದ್ದರೂ ಹಾಗೆ ವರ್ಗೀಕರಿಸಲಾಗದಿದ್ದರೂ ಕವಿತೆ-ಹಾಡು ಎಂದು ಸ್ವತಃ ಅವರೇ ಬೇರ್ಪಡಿಸುವ ಬಗೆಯನ್ನು ಹೊರತುಪಡಿಸಿದರೆ, ಇವು ನಿಸಾರರ ರಚನೆಗಳು ಎಂದು ಗುರುತಿಸಬಹುದಾದ ಅನನ್ಯತೆ ಅವರದು. `ಮನಸು ಗಾಂಧಿ ಬಜಾರು` ಸಂಕಲನದಿಂದ `ಅರವತ್ತೈದರ ಐಸಿರಿ` ಸಂಕಲನದವರೆಗೆ ಅವರ ರಚನೆಗಳನ್ನು ಓದುತ್ತ ಬಂದಿರುವ ನನಗೆ ಅವರ ಕವಿತೆಗಳ ಓದಿನಿಂದಾದ ಸಂತೋಷವನ್ನು ಹಂಚಿಕೊಳ್ಳುವುದಕ್ಕಿಂತ ಬೇರೇನು ಬೇಕು ಎನಿಸುತ್ತದೆ.

ನಿಸಾರ್ ಅಹಮದ್ ಅವರ ಕವನಗಳ ವಿಶಿಷ್ಟತೆಯನ್ನು

ಗುರುತಿಸುವ ಪ್ರಯತ್ನ ಮಾಡುತ್ತ ಒಮ್ಮೆ ಒಬ್ಬ ವಿಮರ್ಶಕರು ಕವಿತೆಗಳಲ್ಲಿ ರಂಜಕ ಗುಣವನ್ನೆ ಪ್ರಧಾನವಾಗಿ ಕಂಡರು. ಅದರಿಂದಾಗಿ ಗಂಭೀರವಾಗಿ ಚಿಂತನೆಗೆ ಹಚ್ಚಬಹುದಾಗಿದ್ದ ಅವಕಾಶಗಳನ್ನು ಕಳೆದುಕೊಂಡರು ಎಂದರು. ಭಾಷೆ ಮತ್ತು ಶೈಲಿಯಲ್ಲಿ ರಂಜಕತೆ, ಮೋಡಿಯ ಗುಣ ಅವರಲ್ಲಿದೆ. ಹಾಗೆಯೇ ನೋವೂ ತಳಮಳಗಳೂ ಇವೆ. ಈ ಬಗೆಯ ಅಭಿಪ್ರಾಯ ಮೂಡಲು ಹಲವಾರು ಕಾರಣಗಳಿವೆ. ನಿಸಾರ್ ನವ್ಯ ಕಾವ್ಯ ಉತ್ಕರ್ಷ ಸ್ಥಿತಿ ಯಲ್ಲಿದ್ದಾಗ ಕವಿತೆ ಬರೆಯಲು ತೊಡಗಿದರೂ ನವೋದಯದ ಕವಿಗಳ ಪ್ರಭಾವ ಸುಪ್ತವಾಗಿ ಅವರಲ್ಲಿ ಇದ್ದೇ ಇತ್ತು. ಪ್ರಾರಂಭದ ಕವಿತೆಗಳಲ್ಲೆ ಅದು ಕಂಡುಬರುತ್ತದೆ. ನವ್ಯ ಕಾವ್ಯದ ಅಭಿವ್ಯಕ್ತಿ ವಿಧಾನ ಅವರಿಗೆ ಮೆಚ್ಚುಗೆಯಾಗಿತ್ತೇ ಹೊರತು ಆ ಮನೋಧರ್ಮವಿತ್ತು ಎನಿಸು ವುದಿಲ್ಲ. 'ಇದು ಸಿಡಿಲಿನ ನುಡಿ; ಇದು ಮಡಿಯದ ನುಡಿ. ಎಂದೆಂದಿಗು ಇದು ಮೊಳಗು ವುದು' ಎಂದು ಹೊರಟ ಕವಿ ತನ್ನ ಮಾರ್ಗವನ್ನು ಗುರುತಿಸಿಕೊಳ್ಳುವಂತೆ ತೋರುತ್ತಾರೆ :

'ಒಂದರೆ ನಿಮಿಷದ ತಾಪ ಪ್ರತಾಪದ
ಕೆಂಗಿಡಿಯಲ್ಲವೊ ನನ್ನ ನುಡಿ;
ಮುಗಿಲುದ್ದಕೂ ಭುಗಿಭುಗಿಲೆಂದೇರುವ
ದಿಕ್ಕು ದಿಕ್ಕುಗಳ ಮೇರೆಯ ಮೀರುವ
ನಿತ್ಯ ಜ್ವಾಲೆಯೊ ನನ್ನ ನುಡಿ.' (ನನ್ನ ನುಡಿ)

ಆಗಿನ ಸಂದರ್ಭಕ್ಕೆ ಈ ಬಗೆಯ ದನಿ ಉಚಿತ ಎನಿಸಿರಬಹುದು. ಆದರೆ ಆ 'ನನ್ನ ನುಡಿ' ಕವನದಲ್ಲೆ—

'ಮಾನವ ಕೋಟಿಯ ಮೂಕ ಸಂಕಟಕೆ
ಮಾತಿನ ಪ್ರತಿನಿಧಿ ನನ್ನ ನುಡಿ;
ನಿರ್ಬಲ ಸಾಹಸವಿಹೀನ ಬದುಕಿಗೆ
ಅಭಯದ ಗುಡಿ ಈ ನನ್ನ ನುಡಿ.' (ಅದೇ)

ಮೂಕ ಸಂಕಟಗಳಿಗೆ ದನಿಯಾಗುವ ಬಗೆ ಅಬ್ಬರ ಆರ್ಭಟವೇ ಆಗಬೇಕಿಲ್ಲ ಎಂಬ ಅನುಭವವೂ ಆಳದಲ್ಲಿತ್ತು ಎನಿಸುತ್ತದೆ. ಅದಷ್ಟೇ ಕವಿತೆಯ ಗುರಿಯಲ್ಲ ಎಂಬ ಪ್ರಜ್ಞೆಯೂ ಇಲ್ಲದಿಲ್ಲ. ಬದುಕಿನಲ್ಲಿ ನೋವು ಸಂಕಟ ತಳಮಳಗಳ ನಡುವೆ ಚೆಲುವೂ ಇದೆ, ಪ್ರೀತಿ ಮಾರ್ದವಗಳೂ ಇವೆ. ಎಲ್ಲವನ್ನು ಸಮಷ್ಟಿ ದೃಷ್ಟಿಯಿಂದ ಗ್ರಹಿಸುವ ಕವಿ ಮನಸ್ಸು ಯಾವುದೇ ಒಂದು ಬಗೆಗೆ ತೆಕ್ಕೆ ಬೀಳುವುದಿಲ್ಲ. ಜೀವನದಲ್ಲಿ ಸೌಂದರ್ಯವೂ ಇದೆ. ಸೌಂದರ್ಯ ಎಂದಾಗ ನಿಸರ್ಗ ಸೌಂದರ್ಯ ಒಂದೇ ಅಲ್ಲ. ಬದುಕನ್ನು ಆವರಿಸಿರುವ ಮಾನವ ಸಂಬಂಧಗಳ, ವರ್ತನೆಯ ಬೆರಗುಗಳ ಸೌಂದರ್ಯವಿದೆ. ನಿಸಾರ್ ಶಿವಮೊಗ್ಗೆಯಲ್ಲಿದ್ದು 'ನಿತ್ಯೋತ್ಸವ' ಬರೆದರು. ಅಲ್ಲಿನ ಸೌಂದರ್ಯದ ಲಯ ಒಂದು ಬಗೆಯದು.

'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ...' (ನಿತ್ಯೋತ್ಸವ)

ಅದರಂತೆ ಬದುಕಿನ ಸೌಂದರ್ಯ ಸಹ. ಸಂಸ್ಕೃತಿಯ ಲಯ, ಸಾಂಗತ್ಯಗಳೂ ಸಹ. ನಿಸಾರ್ ನಗರದ ಕವಿ. ಅವರ ಅಭಿವ್ಯಕ್ತಿ ಭಾಷೆಯ ಸೂಕ್ಷ್ಮ ನವಿರುಗಳೆಲ್ಲ ನಗರ ಜೀವನಾನುಭವದಿಂದ ಬಂದುವು. ಇಲ್ಲೂ ಒಂದು ಸೌಂದರ್ಯವನ್ನು ಕಾಣುತ್ತಾರೆ, ಎಲ್ಲ ದ್ವಂದ್ವ ಮತ್ತು ವೈರುಧ್ಯಗಳ ಜೊತೆಗೆ. `ಮಾಸ್ತಿ` ಕವನದಲ್ಲಿ ನಗರದ ಬದುಕಿನ ಗಾಂಧಿ ಬಜಾರು ಒಂದು ಪ್ರತೀಕ, ಚಿತ್ರಗಳನ್ನು ಕೊಡುತ್ತ, ಸಂಸ್ಕೃತಿಯ ಸೂಕ್ಷ್ಮವನ್ನೂ ಅರಳಿಸುತ್ತಾರೆ, ಹಾಗೆ ಒಂದು ವೈದೃಶ್ಯ ಸೃಷ್ಟಿಸುತ್ತಾರೆ.

ನಿಸರ್ಗ ಮತ್ತು ಬದುಕುಗಳ ಬಗೆಗಿನ ಅವರ ಮನೋಧರ್ಮದ ಒಂದು ಎಳೆಯಾದ ಈ ಸೌಂದರ್ಯಪ್ರಜ್ಞೆಯೇ ಅವರು ನಮ್ಮ ಪರಂಪರೆಯತ್ತ ಕಣ್ಣು ಹಾಯಿಸುವಂತೆ ಮಾಡಿದೆ. ನವೋದಯದ ಭಾವಗೀತೆಯ ಮನೋಧರ್ಮ ಎಂದರೂ ಆ ಪರಂಪರೆ, ಗೀತೆ ಹಾಡುಗಳ ಪರಂಪರೆ ತುಂಬ ಹಿಂದಿನದು. ನಮ್ಮಲ್ಲಿ ವಚನಕಾರರು, ದಾಸರು, ತತ್ತ್ವಪದಕಾರರ, ಜನಪದ ಹಾಡುಗಳ ಪರಂಪರೆ ಇದೆ. ಜನಮನವನ್ನು ನೇರವಾಗಿ ತಾಗಬಲ್ಲ ಗುಣ ಅವುಗಳಿಗೆ ಇದೆ. ಅವುಗಳಿಗೇ ವಿಶಿಷ್ಟವಾದ ಸಂರಚನೆ ಇದೆ. ನಿಸಾರ್ ಗಂಭೀರವಾದ ಕವಿತೆ, ಹೃದ್ಯವಾದ ಭಾವಗೀತೆ ಅಥವಾ ಹಾಡುಗಳೆಂದು ಎರಡನ್ನೂ ಬೇರೆ ಬೇರೆ ಎಂದು ಭಾವಿಸುವಂತೆ ತೋರುತ್ತದೆ. ಭಾರವಾದ ಭಾಷೆ ಇಲ್ಲಿರದು. ಭಾವಾಲೋಚನೆಗಳ ನೇರ ನಿರಾಡಂಬರ ಅಭಿವ್ಯಕ್ತಿ, ಛಂದೋಲಯದಲ್ಲಿ ವೈವಿಧ್ಯ, ಹಾಡಿಗೆ ಅಳವಡುವ ಅನುಕೂಲ್ಯ ಇವುಗಳ ಸ್ಥಾಯೀ ಲಕ್ಷಣ ಎನ್ನುತ್ತಾರೆ. ಆದರೆ ಕೆ. ಎಸ್. ನರಸಿಂಹಸ್ವಾಮಿ ಅವರು ಹಾಡು ಬರೆಯುವುದೇ ಕಷ್ಟ ಎನ್ನುತ್ತಾರೆ. ಬಂಧ ಮತ್ತು ಶಬ್ದಗಳ ಮಿತಿ, ಹದ ಕೂಡಿಸುವುದು ಸುಲಭವಲ್ಲ ಎಂದು ಅವರ ಅನಿಸಿಕೆ. ನಿಸಾರ್ ಪ್ರಪ್ರಥಮವಾಗಿ `ನಿತ್ಯೋತ್ಸವ`ವನ್ನು ಧ್ವನಿ ಸುರುಳಿಯಾಗಿ ಹೊರ ತಂದು ಒಂದು ಬಗೆಯ ಕ್ರಾಂತಿಯನ್ನೇ ಉಂಟು ಮಾಡಿದರು. ಬಹುಶಃ ಇವೆಲ್ಲ ಕೂಡಿ ನಿಸಾರರ ರಚನೆಗಳಲ್ಲಿ ರಂಜಕ ಗುಣವೇ ಪ್ರಧಾನ ಎಂಬ ಭಾವನೆ ವಿಮರ್ಶಕರಲ್ಲಿ ಮೂಡಿರಲು ಸಾಧ್ಯ. ನವ್ಯ ಕಾವ್ಯದ ವ್ಯಕ್ತಿಕೇಂದ್ರಿತ ಸಂಕೀರ್ಣತೆಗಿಂತ ಹಾಡುಗಳು ಗೀತೆಗಳು ಭಿನ್ನವಾಗಿರಬಹುದು. ಸುಗಮ ಸಂಗೀತದ ಸಾಧ್ಯತೆಗಳೂ ಕಾರಣವಾಗಿರಬಹುದು. ಆದರೆ ಇವಿಷ್ಟೇ ಕಾರಣವಿರಲಾರದು. ಇತರ ಭಾಷೆಗಳಲ್ಲೂ ಈ ಬಗೆಯ ಒಲವು ಕಾಣಬರುತ್ತದೆ.

ವಸಾಹತೀಕರಣ ಪ್ರಭಾವಗಳಿಂದಾದ `ಪರಕೀಯ` ಪ್ರಜ್ಞೆ ಕಾವ್ಯದಲ್ಲೂ ಕಾಣಿಸಿ ಕೊಂಡಿತು. ನವ್ಯ ಕಾವ್ಯದಲ್ಲಿ ಅದೇ ಮುಖ್ಯವಾಯಿತು. ಭಾರತ ಸ್ವತಂತ್ರವಾದರೂ ಮಾನಸಿಕ ಸ್ಥಿತಿ ದ್ವಂದ್ವಗಳಿಗೆ ಎಡೆಗೊಟ್ಟಿತು. ಅದನ್ನು ಬದಲಿಸುವ ಸುಪ್ತ ಬಯಕೆ ಇದ್ದದ್ದೆ. ಬದಲಿಸುವುದೆಂದರೆ ಮಾನಸಿಕ ಅವಸಾಹತೀಕರಣ (mental decolonization). ಅದರ ನಿರೋಧ ಪ್ರಜ್ಞಾಪೂರ್ವಕ ಚಳವಳಿ ರೂಪದಲ್ಲೆ ಕಾಣಿಸಿಕೊಳ್ಳಬೇಕಿಲ್ಲ. ಪರಂಪರೆಯ ಪ್ರಜ್ಞೆಯನ್ನು, ನಮ್ಮ ಅನನ್ಯತೆಯನ್ನು ಉಳಿಸಿ ಬೆಳೆಸಿಕೊಳ್ಳುವ ಬಗೆಯಲ್ಲೂ ಪ್ರಯತ್ನ ದಲ್ಲೂ ಅದು ವ್ಯಕ್ತವಾಗಬಹುದು. ದೇಶೀಯ ಪರಂಪರೆಗೆ ಮರಳುವುದೂ ಅಂಥ ಒಂದು ಪ್ರಯತ್ನ. ಹಾಡು, ಪದಗಳ ಬಗೆ ನಮ್ಮ ಪರಂಪರೆಯದು. ಏಕೆ ಅದು ವಿಶ್ವಸಾಮಾನ್ಯ

ವಾದುದು. ಪಾಶ್ಚಾತ್ಯ ಕಾವ್ಯ ವಿಮರ್ಶಕ ದೃಷ್ಟಿಗೆ ಅದು ಅನ್ಯವಾಯಿತು. ನವ್ಯ ಸಂದರ್ಭದಲ್ಲಿ ಆ ವಿಚಾರಗಳು ನಮ್ಮಲ್ಲೂ ಹರಡಿದುವು, ಪರಂಪರೆಯ ಕೊಂಡಿ ಕಳಚುವಂತಾಯಿತು. ಅರ್ಲ್ ಮೈನರ್ ಎಂಬಾತ 'Lyric is the foundation genre for poetics or systematic literary assumptions of cultures throughout the world. Only western poetics differs' ಎನ್ನುತ್ತಾರೆ. ಮುಂದುವರೆದು, 'All are moved to song. It is in our nature, in the nature of us living things, to be affected by what we experience and to express ourselves about the experience. In other words, this is an affective-expressive poetics, a lyric understanding of literature that characterises the various poetics of the whole world, apart from the European outpost' ಎಂದಿದ್ದಾರೆ. ಭಾರತೀಯ ಮತ್ತು ಪೂರ್ವದೇಶಗಳ ದೃಷ್ಟಿ ಹಾಡುಗಳ ಬಗ್ಗೆ ಬೇರೆಯಾದದ್ದು. ದೇಶೀಯತೆಗೆ ಮರಳುವುದು ಸಾತತ್ಯವನ್ನು ಕಂಡು ಕೊಳ್ಳುವ ಒಂದು ಬಗೆ. ಕೆ. ಎಸ್. ನರಸಿಂಹಸ್ವಾಮಿಯವರು ಉದ್ದಕ್ಕೂ ಹಾಡುಗಳನ್ನು ಬರೆಯುತ್ತಲೇ ಬಂದರು, ನವ್ಯರಿಗೆ ಸವಾಲಾದ ಕವನಗಳನ್ನು ರಚಿಸಿಯೂ ಸಹ. ಆದರೆ ಹಾಡಿನ ವಿಶಿಷ್ಟತೆಯ ಅರಿವು ಹರಡಲಿಲ್ಲ; ಅದರ ಮಹತ್ವದ ಅರಿವು ಆಗಲಿಲ್ಲ. 'In my view, the distinguishing features of lyric are a presence and intensity that make it, in a double sense, literature of moment.' (Miner, 1990. Qtd. in 'The Renewal of Song', 2000.) ಹಾಡಿನ ರಚನೆಯ ದೃಷ್ಟಿಯಿಂದ ಆ ಮಾತು, ಪರಿಣಾಮದ ದೃಷ್ಟಿ ಅಗಾಧ. ಹಾಡನ್ನು ಜನಪ್ರಿಯ ಎಂದು ಕರೆದು, ಕವಿತೆಗಿಂತ ಭಿನ್ನ ಎಂಬ ದೃಷ್ಟಿಯಲ್ಲಿ ಅದನ್ನು ಕೆಳಗಣ್ಣಿನಿಂದ ನೋಡುವುದೂ ಸೇರಿದೆ. ಆದರೆ ನಿಸಾರ್ ಮೊದಲಾದವರು ಗೀತೆಗಳತ್ತ ಹೊರಳಿದುದರಲ್ಲಿ ಪಾಶ್ಚಾತ್ಯ ಪ್ರಭಾವದಿಂದ ಉಂಟಾಗಿದ್ದ ಬಿರುಕನ್ನು ಕೂಡಿಸಿ, ವಸಾಹತು ಪೂರ್ವಕಾಲದ ಪರಂಪರೆಯನ್ನು ಮುಂದುವರಿಸುವ ಹಾಗೇ ಕಾವ್ಯದ ಆಸಕ್ತಿ ಕೇಂದ್ರವನ್ನು ಸ್ಥಳಾಂತರಗೊಳಿಸುವ ಉದ್ದೇಶವೂ ಗೀತೆಗಳ ರಚನೆಯಲ್ಲಿ ಇರುವಂತಿದೆ. ನಿಸಾರರ ಒಂದು ಗೀತೆ—

'ಬೆಣ್ಣೆ ಕದ್ದ ನಮ್ಮ ಕೃಷ್ಣ
ಬೆಣ್ಣೆ ಕದ್ದನಮ್ಮ
ಬೆಣ್ಣೆಯ ಕದ್ದು ಜಾರುತ ಬಿದ್ದು
ಮೊಳಕಾಲೂದಿಸಿಕೊಂಡ;
ಬಿಂದಿಗೆ ಬಿದ್ದು ಸಿಡಿಯಲು ಸದ್ದು
ಬೆಚ್ಚಿದ ರಾಧೆಯ ಗಂಡ.
ಬೆಣ್ಣೆ ಕದ್ದ...' **(ಬೆಣ್ಣೆಗಳ್ಳ)**

ಇದನ್ನು ನಿಸಾರ್ ಅವರ ರಚನೆ ಎಂದು ಹೇಳದೆ, ಯಾರನ್ನಾದರೂ ಪ್ರಶ್ನೆ ಕೇಳಿದರೆ ದಾಸರ ಪದ ಎನ್ನುತ್ತಾರೆ. ಪರಂಪರೆಯ ಸಾತತ್ಯ ಎಂದಲ್ಲ, ಇತರ ನಿಸಾರರ ಹಾಡುಗಳಲ್ಲೂ

ಇಲ್ಲಿಯಂತೆ ಶಬ್ದದ ಮಾಂತ್ರಿಕತೆ ಅಥವಾ ನಾದಮಂತ್ರ ಎನ್ನಿ, word spell charm ಇದೆ. ಇದು ವಚನಗಳಲ್ಲಿ, ಕೀರ್ತನೆ ತತ್ತ್ವಪದಗಳಲ್ಲಿ ಕಾಣಬರುವ ನಾದ ಮತ್ತು ಅರ್ಥಗಳ ಅವಿನಾಸಂಬಂಧ. 'Words and music held in wedlock' ಎಂಬಂತೆ. ನಿಸಾರರ 'ನಿತ್ಯೋತ್ಸವ' ಹೊಸ ಆಸಕ್ತಿ ಮೂಡಿಸಿತು. ಹಾಡುಗಳನ್ನು ಜನಪ್ರಿಯಗೊಳಿಸುವಲ್ಲಿ ಕಾರಣವಾಯಿತು ಎಂದಾಗ, ಹಿಂದೆ ಇರಲಿಲ್ಲ ಎಂದಲ್ಲ, ನವ್ಯತೆಯ ಪ್ರಭಾವ ಇದ್ದಾಗಲೂ ಆಸಕ್ತಿ ಕೇಂದ್ರವನ್ನು ಹೊರಳಿಸುವಲ್ಲಿ ಕಾರಣವಾಯಿತು ಎಂದರ್ಥ.

೨

ಸಮಾಜದ ಬದುಕಿನ ಅನುಭವಗಳ ಇನ್ನೊಂದು ಎಳೆ ಅವರ ಹಲವು ಕವನಗಳಲ್ಲಿ ಕಾಣಬರುತ್ತದೆ. ಸಾಮಾಜಿಕತೆ ಮತ್ತು ವೈಚಾರಿಕತೆಗಳು ಕವನದಲ್ಲಿ ಮೂಡಿ ಬರುವ ಬಗೆಯನ್ನು ಕುರಿತು ನಿಸಾರರ ಅಭಿಪ್ರಾಯವೂ ಇದೆ. 'ಬಾಳಿನ ಅತ್ಯಂತ ಪ್ರಾಥಮಿಕ ಸತ್ಯಗಳ, ದ್ವಂದ್ವಗಳ ಜ್ವಲಂತ ಅರಿವಿರುವ ಕವಿ ಸಾಮಯಿಕ ಸ್ಫೂರ್ತಿಯಿಂದ ಪಡೆದ ಇಂದ್ರಿಯಾನುಭವದ ತಾತ್ಕಾಲಿಕತೆಯನ್ನು ನಿವಾರಿಸಿ ನಮ್ಮಲ್ಲಿ ಗಟ್ಟಿಯಾಗಿ ನೆಲೆಗೊಳ್ಳುವ, ಕಾಡುವ ಚಿರಕಾಲಿಕ ಅನುಭೂತಿಯಾಗಿ ಮಾರ್ಪಡಿಸಲು ಸಮರ್ಥನಾಗುವುದು ವೈಚಾರಿಕತೆಯಿಂದ.' ನಿಸಾರರಲ್ಲಿ ದಿನನಿತ್ಯದ ಎಂಬಂತಹ ಅತಿ ಸಾಮಾನ್ಯ ಘಟನೆಯೂ ಬದುಕಿನ ಬಗೆಗಿನ ಮನನಕ್ಕೆ ಕಾರಣವಾಗುವುದನ್ನು ಕಾಣಬಹುದು. ತಾತ್ಕಾಲಿಕತೆಯನ್ನು ನಿವಾರಿಸಿಕೊಳ್ಳದೆಯೂ ಅದು ಕಲಕುವ ಮನಸ್ಸಿನಾಳದ ಚಿಂತನೆಯನ್ನು ವ್ಯಕ್ತಪಡಿಸಬಹುದು. ಅವರು ಇದು ತತ್ತ್ವ, ಇದು ಬದುಕಿನ ಬಗೆಗಿನ ಚಿಂತನೆ ಎಂದು ಹೇಳುವ ಕವನಗಳು ಬಹಳ ಅಪರೂಪ. ಸಾಂದರ್ಭಿಕ ಅನುಭೂತಿಯೇ ಅಂಥ ಚಿಂತನೆ, ವಿಚಾರಗಳನ್ನು ಧ್ವನಿಸಬಲ್ಲುದು. ಮುಂದುವರೆದು ಹೇಳುವ ಅವರ ಮಾತುಗಳು: 'ವೈಚಾರಿಕತೆಯ ಸ್ವರೂಪ—ಕಾವ್ಯಕ್ಕೆ ಅನ್ವಯಿಸುವಂತೆ—ಇದೇ ಬಗೆಯದೆಂದು ಹೇಳುವುದು ಸಾಧ್ಯವಿಲ್ಲ... ಅದು ಕವಿಯ ಸದ್ಯದ ಸಮಾಜದಲ್ಲಿ ಮಾನ್ಯತೆ ಪಡೆದ ಆಚಾರ-ವಿಚಾರ, ನಂಬಿಕೆ, ಶ್ರದ್ಧೆಗಳಿಂದ ರೂಪಿತವಾಗಿರಬಹುದು. ಅಥವಾ ಅವುಗಳನ್ನು ಪ್ರಶ್ನಿಸುವ, ಸ್ವಾನುಭವ ಸ್ವವಿವೇಕಗಳ ಒರೆಯಲ್ಲಿ ತಿಕ್ಕಿ ನೋಡುವ ವ್ಯಕ್ತಿಗತ ದೃಷ್ಟಿಯಿಂದ ಹೊಮ್ಮಿರಬಹುದು. ಒಂದು ಸಮಾಜದಲ್ಲಿ ರೂಢಿಗತವಾದ, ಪ್ರಶ್ನಾತೀತವೆಂದು ಸಮುದಾಯ ಪ್ರಜ್ಞೆಯಲ್ಲಿ ಬೇರೂರಿದ, ಜನಾಂಗದಿಂದ ಜನಾಂಗಕ್ಕೆ ವರ್ಗಾಯಿಸಲ್ಪಡುವ ಆಚಾರ ನಂಬಿಕೆಗಳು ಕವಿಯ ಸದ್ಯದ ಪರಿಸ್ಥಿತಿಯಲ್ಲಿ ಅಂಧಶ್ರದ್ಧೆಗಳಾಗಿ ಅಪಮೌಲ್ಯ ಹೊಂದಿ ಅರ್ಥಹೀನವಾದಂತೆ ಕಂಡು ಬಂದಿರಬಹುದು.' 'ಇಂಥ ಜನಶೋಷಕ ಸಾಮಾಜಿಕ ಅವಿಚಾರಗಳನ್ನು ಧಿಕ್ಕರಿಸಿದ ಕವಿ ಬೌದ್ಧಿಕ ಚಿಂತನೆಯಿಂದ (rational thinking) ಸ್ಫೂರ್ತಿಗೊಂಡು ಮಾನವೀಯ ಮೌಲ್ಯಗಳ ಪ್ರತಿಪಾದಕನಾಗಬಹುದು. ಅಥವಾ ಮತೀಯ ಮೌಢ್ಯಗಳಿಗೆ ಒಪ್ಪಿಸಿಕೊಂಡ ಸಮಾಜದ ವರ್ಗವೊಂದು ತನ್ನ ನಡೆನುಡಿಗಳಲ್ಲಿ, ಜೀವನ ವಿಧಾನದಲ್ಲಿ ವೈಜ್ಞಾನಿಕ ಧೋರಣೆ(scientific attitude)ಯಿಂದ ಪ್ರಜ್ಞಾವಂತನಾಗಿ ಚಿಕಿತ್ಸಕ ದೃಷ್ಟಿಯನ್ನು ಬೆಳೆಸಲು ಸಹಾಯಕನಾಗಬಹುದು.' ('ಕುವೆಂಪು ಕಾವ್ಯದಲ್ಲಿ ವೈಚಾರಿಕತೆ'). ನಿಸಾರರು ಕುವೆಂಪು ಅವರ ವೈಚಾರಿಕ ದೃಷ್ಟಿ ಬಗ್ಗೆ ಹೇಳುವಾಗಿನ ಈ ಮಾತುಗಳು ಅವರಿಗೂ ಅನ್ವಯಿಸುತ್ತವೆ. ಹಾಸ್ಯದೊಂದಿಗೆ ಮುಕ್ತಾಯಗೊಳ್ಳುವ

'ಅಮ್ಮ, ಆಚಾರ, ನಾನು' ಕವನವಾಗಲಿ, 'ರಂಗೋಲಿ ಮತ್ತು ಮಗ'ದಂತಹ ಕವನಗಳಾಗಲಿ ಆಳದಲ್ಲಿ ಕಾಡುತ್ತಿರುವ ದ್ವಂದ್ವ ಮತ್ತು ಚಿಂತನೆಗಳ ಫಲವೇ ಆಗಿರುತ್ತವೆ.

ನಿಸಾರ್ ಅವರು ಈ ಬಗೆಯ ತಮ್ಮ ವಿಚಾರಗಳನ್ನು ಬರೆಹಕ್ಕೆ ಇಳಿಸುವ ಮೊದಲೇ ಕಾವ್ಯದಲ್ಲಿ ಹಲವು ಬಗೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದರು. ಅವರ ಅತ್ಯಂತ ಜನಪ್ರಿಯವಾದ, ಅವರ ಹೆಸರಿನೊಡನೆ ಸಮೀಕರಣಗೊಂಡಿರುವ ಒಂದು ಕವನವನ್ನೇ ನೋಡಿ. ಹಲವಾರು ಕಾರಣಗಳಿಂದ ಇದು ಮಹತ್ವದ ಕವನವಾಗುತ್ತದೆ. 'ಕುರಿಗಳು, ಸಾರ್, ಕುರಿಗಳು' ಕವನ ನಿಸಾರರ ಎರಡನೆಯ ಕವನ ಸಂಗ್ರಹ 'ನೆನೆದವರ ಮನದಲ್ಲಿ'ಯಲ್ಲಿ ೧೯೬೪ರಷ್ಟು ಹಿಂದೆಯೇ ಸೇರಿದೆ. ಮುಕ್ತ ಛಂದಸ್ಸಿನ, ಯಾವುದೇ ಬದ್ಧ ತಾಳ ಲಯಕ್ಕೆ ಸಿಗದ ಅದನ್ನು ಮೈಸೂರು ಅನಂತಸ್ವಾಮಿ, ಒಂದು ಬಗೆಯಲ್ಲಿ ಜಾಜ್ (Jazz) ಸಂಗೀತದಂತೆ ಸದ್ಯಃಸ್ಫೂರ್ತಿಯ ರಾಗ ಲಯಗಳಿಗೆ ಹೊಂದಿಸಿ ಅತ್ಯಂತ ಜನಪ್ರಿಯ ಹಾಡಾಗಿಸಿದ್ದು ತಿಳಿದ ವಿಷಯವೆ. ಇಡೀ ಕವನವೆ ಭ್ರಷ್ಟ, ಕಲುಷಿತ, ರೋಗಪೀಡಿತ ವ್ಯವಸ್ಥೆಗೆ, ಅದರೆದುರು ನಿಸ್ಸಹಾಯಕ ಸಾಮಾನ್ಯ ಮನುಷ್ಯನಿಗೆ ಒಡ್ಡಿದ ಕಾವ್ಯ ಪ್ರತಿಮೆಯಾಗಿದೆ. ಆದರೂ ಅಲ್ಲಿ ವ್ಯಗ್ರತೆ, ಆಕ್ರೋಶ, ಅಬ್ಬರಗಳಿಗೆ ಬದಲು ವ್ಯಂಗ್ಯ, ವಿಡಂಬನೆಗಳೊಡನೆ ಕೂಡಿದ, ಆಡುನುಡಿಯ ಅನುಪ್ರಾಸಗಳ ನಾದ ಮತ್ತು ಶಬ್ದಾರ್ಥಗಳ ಮೊನಚು ಸಹ ಒಂದು ಮಾದಕತೆ ಯನ್ನು ತಂದು ಸಾಮಾನ್ಯರ ಮನಸ್ಸನ್ನೂ ತಾಗುತ್ತದೆ. ನಿಸಾರರ ಕವಿತೆಗಳು ಬಹುಪಾಲು ಮನೋರಂಜಕ ಎನ್ನುವವರು ದಾರಿ ತಪ್ಪಲು, ಅವರು ಬಳಸುವ ಭಾಷೆಯ ಮೋಡಿ, ಮಾದಕ ಗುಣಗಳು ಕಾರಣ ಎನಿಸುತ್ತದೆ. ಕುರಿಯ ರೂಪಕವೇ ತಟಕ್ಕನೆ ಎಲ್ಲರನ್ನೂ ತಾಗುವಂಥದು.

ರೂಪಕವೆನ್ನುವುದು ವಿಷಯ ಅಥವಾ ವಸ್ತುವಿಗೆ ಒಂದು ವಿಶೇಷ ಬೆಳಕನ್ನು ಚೆಲ್ಲುತ್ತದೆ, ನೋಟಕ್ಕೆ ಒಂದು ವಿನೂತನ ದೃಷ್ಟಿ ಕೇಂದ್ರವನ್ನು ಒದಗಿಸುತ್ತದೆ. ಕವಿ ಏನು ಹೇಳಬೇಕೆಂದು ಹೊರಟಿರುವನೋ ವಿಷಯದ ಚಿಂತನೆಯನ್ನು ಉಳಿಸಿಕೊಂಡೂ ರೂಪಕದ ಸಂರಚನೆ (metaphoric structure) ಒಂದು ರೂಪಾಂತರಕ್ಕೆ ಕಾರಣವಾಗುತ್ತದೆ. ತಟಕ್ಕನೆ ಒಂದು ಕ್ಷಣದ ಹೊಳಹು ಬೆಳಕು ಹರಡಿದಂತೆ ವಿಸ್ತರಿಸುತ್ತಾ ಅನುಭವಗಳ ವಿಶೇಷಕ್ಕೆ ದಾರಿ ಮಾಡಿಕೊಡುತ್ತದೆ. ಸಾಮಾನ್ಯ ಮನುಷ್ಯ ಮತ್ತು ಕುರಿಯ ನಡುವಿನ ಕೊಂಡಿ ಹೇಳಲಾಗದ ಲುಪ್ತತೆಯಲ್ಲೇ ಧ್ವನಿಪೂರ್ಣವಾಗುತ್ತದೆ, ಮಹತ್ವ ಪಡೆಯುತ್ತದೆ. ಆರ್ಥರ್ ಸಿ. ಡಾಂಟೊ ದೃಶ್ಯಕಲೆಗಳ ಬಗ್ಗೆ ಚರ್ಚಿಸುತ್ತ ಹೇಳುವ ಮಾತು ಕಾವ್ಯಕ್ಕೂ ಅನ್ವಯಿಸುತ್ತದೆ. 'But the greatest metaphors of art I beleive to be those in which the spectator identifies himself with the attributes of the represented character: and sees his or her life in terms of the life depicted.' (A.C. Danto, 1981). ಕೊನೆಯ ಸಾಲು 'ಕುರಿಗಳು, ಸಾರ್, ಕುರಿಗಳು' ಕವನಕ್ಕೆ ಚೆನ್ನಾಗಿ ಅನ್ವಯಿಸುತ್ತದೆ.

'ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ತಗ್ಗಿಸಿ, ತಲೆ ತಗ್ಗಿಸಿ,
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,

ಕುರಿಗಳು, ಸಾರ್, ಕುರಿಗಳು;
ನಮಗೊ ನೂರು ಗುರಿಗಳು.' (ಕುರಿಗಳು, ಸಾರ್, ಕುರಿಗಳು)

ನಾವು ನೀವು ಎನ್ನುವ ಕೊಂಡಿಯಿಲ್ಲದಿದ್ದರೂ ಮುಂದೆ ಬಿಚ್ಚಿಕೊಳ್ಳುವ ಅನುಭವಗಳು, ಆ ಸಂವೇದನೆ ಎಲ್ಲರೂ ಗುರುತಿಸಿಕೊಳ್ಳುವಂಥದೆ. 'ಹೇಗೆ ಹೇಗೊ ಏಗುತಿರುವ' ಸಾಲು ಭ್ರಷ್ಟ ವ್ಯವಸ್ಥೆಯ ನಡುವಿನ ಸಾಮಾನ್ಯ ಬದುಕಿನ ಬಗೆಯನ್ನೆ ಧ್ವನಿಸುತ್ತದೆ. ಅದರಲ್ಲಿ ಏನೆಲ್ಲ ಅರ್ಥ, ಅನುಭವಗಳು ಅಲೆ ಅಲೆಯಾಗಿ ಮೂಡುತ್ತವೆ. ಏಗುವುದರ ರೂಪಗಳು ಮುಂದೆ ವಿಸ್ತರಿಸುತ್ತವೆ.

'ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬನನ್ನ
ಮೆಚ್ಚಿ, ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ...' (ಅದೇ)

ದೇಭಗಳ ಬಗ್ಗೆ ನಿಸಾರ್ ಬೇರೆ ಕವನ ಬರೆದಿದ್ದಾರೆ. ಆದರೆ ಇಲ್ಲಿ ವ್ಯವಸ್ಥೆಯ ಕೂರಲಗು ಬಗೆ ಬೇರೆ.

'ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.' (ಅದೇ)

ಮಾತುಗಳ ಮಾದಕತೆಯಲ್ಲಿ ಆಳದ ನೋವಿನ ಕೂಗು ಮರೆಯಾದಂತೆ ಎನಿಸಿದರೂ ಹಾಗಾಗುವುದಿಲ್ಲ. ಏಕೆಂದರೆ ಮಬ್ಬು ಕೊಬ್ಬಿರುವಾಗ ದಾರಿ ಕಾಣುವುದು ಹೇಗೆ ಸಾಧ್ಯ? ನಿಸ್ಸಹಾಯಕತೆಯೇ ಅನುಭವವಾಗಿ ಇಲ್ಲಿ ಹೆಪ್ಪುಗಟ್ಟುತ್ತದೆ, ಕೋಪ ಕ್ರೋಧ ಆಕ್ರೋಶಗಳಲ್ಲ. ಹಾಗಿದ್ದದ್ದರೆ ಈ ಪರಿಣಾಮವಾಗುತ್ತಿರಲಿಲ್ಲ. ಕೋಪ ಆಡಿ ಶಮನವಾಗಬಹುದು. ಆದರೆ ಒಳಗುದಿ ಹಾಗಲ್ಲ. ನಿಸಾರರ ಸಾಮಾಜಿಕ, ವೈಚಾರಿಕ ಎನ್ನುವಂತಹ ಕವನಗಳಲ್ಲೆಲ್ಲ ಈ ಬಗೆ, ವಿಧಾನವನ್ನು ಕಾಣಬಹುದು. ಆಳ ಚಿಂತನೆಗಳೂ ಒಳಗುದಿಗಳೂ ರೂಪ ತಳೆಯುವ ಬಗೆಯಿಂದಾಗಿ ಮಾತುಗಳ ಆಕರ್ಷಣೆ ಎನಿಸಿದರೂ ಅವು ಪೊಳ್ಳಾಗದೆ, ಅರ್ಥಹೀನವಾಗದೆ, ಬದುಕನ್ನು ಇಂತಹ ವಿಷ ವರ್ತುಲದಲ್ಲೂ ಬದುಕಬೇಕಾದ, ಅಥವಾ ಬದುಕುತ್ತಿರುವ ರೀತಿಗೇ ರೂಪಕವಾಗುತ್ತದೆ. ದಿನನಿತ್ಯದಲ್ಲಿ ಜನ ರೇಗಿಸಲು, ಆಡಿಕೊಳ್ಳಲು ಬಳಸುವ ಒಂದು ರೂಪಕ ಕವಿಯ ಕಲ್ಪನೆಯಲ್ಲಿ, ಸೂಕ್ಷ್ಮ ಸಂವೇದನೆಯಿಂದಾಗಿ ರೂಪಾಂತರಗೊಂಡು ವಿಶಿಷ್ಟ ಅನುಭವವಾಗುವ ಬಗೆ ಇಲ್ಲಿದೆ.

'ಶ್ರೀ ಸಾಮಾನ್ಯನ ಪ್ರತಿನಿಧಿ' ಕವನ ದೇಭಗಳನ್ನು ಕುರಿತದ್ದಾದರೂ ಅದರ ಸಂರಚನೆಯ ರೀತಿ ಬೇರೆಯದು. ಸರಳ ಮಾತುಗಳಲ್ಲೆ ಹಲವು ಚಿತ್ರಗಳು ತೆರೆಯುತ್ತವೆ.

'ಎಷ್ಟು ಚಕ್ರ ಭಾರತಾಂಬೆ ನಿನ್ನ ಹಿರಿಯ ತೇರಿಗೆ;
ಪಾವಿನಷ್ಟು ಗಟ್ಟಿ ಹಾಲು ಎರಡು ಸೇರು ನೀರಿಗೆ.' (ಶ್ರೀ ಸಾಮಾನ್ಯನ ಪ್ರತಿನಿಧಿ)

'ರಾಮನ್ ಸತ್ತ ಸುದ್ದಿ' ಕವನದಲ್ಲಿ ಏನೆಲ್ಲ ನಡೆದಿದ್ದರೂ ಬದುಕು ಬದುಕಿಯೇ

ಬದುಕುತ್ತದೆ ಎಂಬ ಹೊಳವು ಹರಡಿರುವುದನ್ನು ಕಾಣಬಹುದು. ರಾಮನ್ ಸಾವು ಕೇಂದ್ರ ವಿಷಯ ಎನಿಸಿ ಸಾಗಿದರೂ, ಹನುಮ ಅವನ ಬದುಕಿನ ಜಂಜಾಟ, ಕವಿ ಮನಸ್ಸಿನ ವಿಚಾರಗಳು ಇತ್ಯಾದಿ ಹಿನ್ನೆಲೆಯೆನಿಸಿ, ಹಿನ್ನೆಲೆಯೇ ಮುನ್ನೆಲೆಗೆ ಬಂದು ಸತ್ಯವಾಗಿ, ಸಾವೇ ಹಿನ್ನೆಲೆಗೆ ಸರಿಯುವ ಸಂರಚನೆ ಆ ಕವನದಲ್ಲಿದೆ. 'ಅನಾಥರು' ಕವನದಲ್ಲಿ ಅನಾಥ ಮಕ್ಕಳ ಮತ್ತು ಮನೆಯ ಮಕ್ಕಳ ವೈದೃಶ್ಯ ನಿರೂಪಣೆ ಸರಳವಾಗಿಯೇ ಇದೆ. ಸ್ವಲ್ಪ ಭಾವುಕತೆಯೂ ಸೇರಿದೆ. 'ಅಳುವುದು, ಅದೂ ದೇಶಕ್ಕಾಗಿ ಅಳುವುದು ಬರೀ ನಿನ್ನ, ನಿನ್ನಂಥವರ ಹಕ್ಕೆಂದು ನಂಬಿರುವ ನೀನು ನಾನತ್ತೆನೆಂದರೆ ನಂಬಲಾರೆ' ದೇಭಗಳ ಅಳು ಇಂದಿಗೂ ನಿಂತಿಲ್ಲ, ಹಾಗೇ ಜನಗಳ ಅನಾಥರ ಅಳುವೂ ನಿಂತಿಲ್ಲ. ಆದರೆ ಎರಡು ಅಳುಗಳ ನಡುವಿನ ಅಂತರ? ಜಾತಿ ಮತ್ತು ಮತಗಳ ಅವಾಂತರ ಏನೆಲ್ಲ ವಿಜ್ಞಾನ, ವಿದ್ಯೆ, ವೈಚಾರಿಕತೆ ಹರಡಿದರೂ ತಪ್ಪಿಲ್ಲ, ಕೊನೆ ಕಂಡಿಲ್ಲ. ಭಾರತದ ಮೂಲಭೂತ ಅನಿಷ್ಟ ಯಾವುದು ಎಂದು ಕೇಳಿದರೆ ಜಾತಿ ಎನ್ನಬಹು ದೇನೋ—ಏಕೆಂದರೆ ಅದರ ಹಿಂದೆಯೇ ಇನ್ನೆಲ್ಲ ಕರ್ಮಗಳೂ ನಂಬಿಕೆಗಳೂ ಆಚಾರಗಳೂ ಅಹಂಗಳೂ ಅನುಸರಿಸಿ ಬರುತ್ತವೆ. 'ಎಲ್ಲೆಲ್ಲಿಯು ಬರಿಯ ಚಿಹ್ನೆ' ವ್ಯಂಗ್ಯ ವಿಡಂಬನೆ ಯಿಂದ ಕೂಡಿದೆ.

> **'ಎಲ್ಲೆಲ್ಲಿಯು ಬರಿಯ ಚಿಹ್ನೆ, ಬರಿಯ ಗುರುತು ಲಾಂಛನ,**
> **ಹೊಟ್ಟೆ ಮೇಲೆ, ರೆಟ್ಟೆ ಮೇಲೆ, ಬಟ್ಟೆ ಮೇಲೆ, ಹಣೆಯ ಮೇಲೆ**
> **ಗುರುತುಗಳ ಗುಲಾಮರಯ್ಯ ಇಡಿ ಜಗತ್ತಿನ ಜನ—**
> **ಇವುಗಳೊಲವಿನೆದುರು ಸಪ್ಪೆ ಕಾಮಿನೀ ಕಾಂಚನ.**
>
> **'ನಾಮ, ಬೊಟ್ಟು, ದಾಡಿ, ಮುದ್ರೆ, ಪೇಟ, ರುದ್ರಾಕ್ಷಿಯೊ,**
> **ನರರ ನಡುವೆ ಭೇದ ಗೋಡೆ ನಿಮಿರಿಸಿರುವ ಸಾಕ್ಷಿಯೊ,**
> **ಬಾಲಚುಕ್ಕಿಯಾದ ಚುಕ್ಕೆ, ಉದ್ದಗಲದ ಗೆರೆಗಳೊ,**
> **ಮನುಜ ಕುಲದ ಭವಿತವ್ಯಕೆ ಶಾಪವಾದ ಬರೆಗಳೊ.'**
>
> **(ಎಲ್ಲೆಲ್ಲಿಯು ಬರಿಯ ಚಿಹ್ನೆ)**

ಆದರೆ ಸಾಮಾನ್ಯವಾಗಿ ನಿಸಾರರ ಕವಿತೆಗಳಲ್ಲಿ ಕಾಣಬಾರದ, ಆದರೆ ಹಾಡುಗಳಲ್ಲಿ ಸಹಜವಾಗಿ ಮೂಡಿ ಬರುವ, ಹಾರೈಕೆ ಸಂದೇಶ ಈ ಕವನದಲ್ಲಿ ಕೊನೆಯ ಪದ್ಯದಲ್ಲಿದೆ: 'ಕಿತ್ತೆಸೆಯುತ ಕೃತಕ ಸನ್ನೆ ಸಂಕೇತದ ಸಂಕಲೆ / ಚಾಣಾಕ್ಷರ ಪಟ್ಟಭದ್ರ ಹಿತಕೆ ಹೆಣೆದ ಹೆಬ್ಬಲೆ / ಭೇದವುಳಿದು ಮಾನವತೆಯ ಮೇಲಕೆತ್ತಿ ಮೆರೆಸಿರಿ / ವಿಶ್ವಭಾವ ಮಹಾಪೂರ ಮನ ಮನದಲಿ ಹರಿಸಿರಿ.' 'ನಿತ್ಯೋತ್ಸವ' ಸಂಗ್ರಹದ ಈ ಕವಿತೆ ಹಾಡಾಗಿಯೇ ರಚಿತವಾಗಿರಬಹುದೇನೊ.

'ನಾನೆಂಬ ಪರಕೀಯ' ಸಂಗ್ರಹದ 'ವರ್ಣಾಶ್ರಮ' ಸಾಮಾಜಿಕ ಅನಿಷ್ಟಗಳ ವಿಭಿನ್ನ ರೂಪಗಳ ಚಿತ್ರ ನೀಡುತ್ತದೆ. ಇಲ್ಲಿ ಬರುವ ರೂಪಕ, ಪ್ರತಿಮೆಗಳೂ ವಿಭಿನ್ನ. ಬರಿ ಮತ, ಜಾತಿಗೆ ಸೀಮಿತವಲ್ಲ, ಇಲ್ಲಿ ಅಭಿವ್ಯಕ್ತಿಗೊಂಡಿರುವ ಅನುಭವಗಳು. ಕೆಲವು ಸಾಲುಗಳಲ್ಲಿನ ರೂಪಕಗಳು ಹಲವು ಅರ್ಥಛಾಯೆಗಳಿಗೆ ಎಡೆಗೊಡುತ್ತವೆ. ನಗರ ಕೇಂದ್ರಿತವಾಗಿಯೇ ಕೃತಕ ವೇಷಗಳ ಚಾಚು ಕಾಣಬರುತ್ತದೆ, ಮೊಗವಾಡಗಳ ಅಣಕ ಸಾಗುತ್ತದೆ. ಇಲ್ಲಿಯ ಶಬ್ದಗಳು,

ಅವುಗಳನ್ನು ಬಳಸುವ ವಿಧಾನ, ಅರ್ಥದ ಆಟಗಳು, ವಿಡಂಬನೆ—ಇವು ನಿಸಾರರಿಗೆ ಮಾತ್ರ ಸಾಧ್ಯ. ಇಂತಹ ಕವನಗಳು ಸಾಕಷ್ಟಿವೆ.

'ಅಗ್ರಹಾರಯ್ಯನವರ ಶಹರು ಮಧ್ಯದ ಮಾರ್ಕೆಟ್ ಬದಿಯ
ಪ್ರಶಾಂತ, ಸರಳ, ಏರ್‌ಕಂಡಿಷನ್ಡ್ ಪರ್ಣಕುಟಿಗೊಮ್ಮೆ ಹೋಗಿ ಬನ್ನಿ:
ಆ ಕಡೆಯಿಂದ ನೋಡಿದಿರೊ ದೇಗುಲ, ಈ ಕಡೆಯಿಂದ ಇಗರ್ಜಿ,
ಊ ಕಡೆಯಿಂದ ಮಸೀದಿ.' (ಪರ್ಣಾಶ್ರಮ)

ಕೊನೆಯಲ್ಲಿ ಬರುವ ಒಂದು ದೃಶ್ಯ, ಮಾತುಗಳ ಅನೇಕಾರ್ಥಗಳ ಸಾರ್ಥಕತೆಗೆ ಗಮನಾರ್ಹ—

'ಕತ್ತಲೊಂದಿಗೇ ಚಟುವಟಿಕೆ ಗಲಿಬಿಲಿ ಚಿತ್ರಸ್ಥ:
ಆಗಿದು ಪಾನಪ್ರಸ್ಥಾಶ್ರಮ. ಟ್ರೇಡ್ ಯೂನಿಯನ್ ಶುರುವಾಗುತ್ತೆ;
ಒಳಗೆ ಹಂಗಾಮವೋ ಹಂಗಾಮ. ಮಹಾರಾಯ, ಯಾರಿದು?
ಮಡದನೊ? ಗಂಡತಿಯೊ? ಎಂದು ಗುರುತಿಸದಂಥ ಬೈಡ್‌ಲೈಟಿನ
ಮೈಲಿಗೆ ಬೆಳಕಿನಲ್ಲಿ ನೀತಿ ಭಾವನೆ ಮಾನಿನಿಯ ಮಾಂಗಲ್ಯ
ದಷ್ಟೇ ತೆಳುವಾಗುತ್ತೆ. ಹಗಲ ತಿಜೋರಿಯ ಕಪ್ಪುಹಣ
ಕತ್ತಲಲ್ಲಿ ಬೆಳ್ಳಗಾಗುತ್ತೆ...
ಈ ಸನಾತನ ಅಸ್ಪಷ್ಟ ವೃಕ್ಷದಡಿಯಲ್ಲಿ ಶಬ್ದವಾಗದಂತೆ
ಅರ್ಚಕರು, ಮೌಲ್ವಿಗಳು, ಪ್ರೀಸ್ಟರು ಗುಣಿ ತೋಡುತ್ತಾರೆ...
ಆಶ್ರಮ—ಇತ್ತ ಕತ್ತಲೂ ಅಲ್ಲದ, ಅತ್ತ ಬೆಳಕೂ ಅಲ್ಲದ
ಮುಹೂರ್ತದಲ್ಲಿ ಸಾತ್ವಿಕ ತಟಸ್ಥತೆಯಿಂದ ಮಿಕಿ ಮಿಕಿ ನೋಡುತ್ತದೆ.' (ಅದೇ)

ಇಲ್ಲಿ ನಿಸಾರರ ಶೈಲಿಯ ಶಬ್ದ ಚಮತ್ಕಾರವಿದೆ. ಆದರೆ ಏನೆಲ್ಲ ಅರ್ಥ-ಅನರ್ಥಗಳ, ಅನೇಕಾರ್ಥಗಳ ಅನುಭವವನ್ನು ಕಲ್ಪಿಸಿಕೊಡುತ್ತವೆ. ಪಾನಪ್ರಸ್ಥಾಶ್ರಮ, ಟ್ರೇಡ್-ಯೂನಿಯನ್, ಹಂಗಾಮ, ಮಡದ-ಗಂಡತಿ, ಬೆಡ್‌ಲೈಟ್, ಹಗಲ ಕಪ್ಪುಹಣ-ಕತ್ತಲಲ್ಲಿ ಬೆಳ್ಳಗಾಗುತ್ತೆ—ಇವು ಕಟ್ಟಿಕೊಡುವ ಅನುಭವ, ರೂಢಿಯ ಶಬ್ದಾರ್ಥವನ್ನು ನೆನಪಿಸುತ್ತ, ಮತ್ತೆ ವರ್ತಮಾನಕ್ಕೆ ಸರಿದು ತಿರುವಿನ ವ್ಯಂಗ್ಯಾರ್ಥವನ್ನು ಹುರಿಗೊಳಿಸುತ್ತವೆ. ಇದು ನಿಸಾರ್ ಛಾಪು. ಅಬ್ಬರವಿಲ್ಲದೆ ನಗೆ ಮೂಡಿಸಿ ವಿಡಂಬಿಸುತ್ತ ಆತ್ಮಚಿಂತನೆಗೆ ದಾರಿ ಮಾಡಿ ಕೊಡುತ್ತವೆ.

ಸರಳವೂ ನೇರ ಮುಟ್ಟುವವೂ ಅಲಂಕಾರಗಳ ವಿಜೃಂಭಣೆಯಿಲ್ಲದ ಕಾರಣ ಹೇಳಿಕೆಗಳೆಂಬ ಕೆಳ ನೋಟಕ್ಕೂ ಒಳಗಾಗುವ ಕವನಗಳಿವೆ. ಆದರೆ ನೇರ ನಿರೂಪಣೆಯೂ ಅನುಭವದ ಗಟ್ಟಿತನದಿಂದ ಅನುಭೂತಿಯ ತೀವ್ರತೆಯಿಂದಾಗಿ ಮನ ತಾಗುತ್ತವೆ. ಚರ್ವಿತಚರ್ವಣ, ಕ್ಲೀಷೆಯಾದಾಗ ನೆನಪಿನಲ್ಲಿ ಉಳಿಯದಿರಬಹುದು—ನಡು ನಡುವಿನ ಸಾಲುಗಳು ಅನುಭವವನ್ನು ಕಟ್ಟಿಕೊಡುತ್ತವೆ. 'ನಾಡವರ ನಾಯಿಪಾಡು' ನಿರೂಪಣೆಯ ಸರಳತೆಯಿಂದಲೇ ಮನ ಮುಟ್ಟುತ್ತದೆ. ನಾಯಿಪಾಡು ಶಬ್ದ ರೂಪಕ ಸತ್ವವನ್ನು ಕಳೆದು ಕೊಂಡಿದ್ದರೂ ಕವನದ ಚಿತ್ರಗಳು ಹಾಗಾಗಿಲ್ಲ; ರೂಪಕದ ವಿಸ್ತರಣೆಯಾಗುತ್ತವೆ.

'ದಾಸ್ಯ ಕೋಳವ ಕಳಚಿ ಮುಕ್ತರಾದರು ಕೂಡ
ಭೇದದೆಣಿಕೆಯ ಮೂಢ ಕೊರಳ ಪಟ್ಟಿಯ ತೊಟ್ಟು
ಅಸಮಾನತೆಯ ಸಂದಿಗೊಂದಿಯಲ್ಲಿ ದೆಸೆಗೆಟ್ಟು
ಅಂಡಲೆಯುವ ಈ ನನ್ನ ನಾಡಿಗಾಗಿ.' (ನಾಡವರ ಸಾಯಿಪಾಡು)

ಮರುಗುವುದು ನನ್ನ ಮನ ಎಂಬುದಕ್ಕೆ ಮೂಲವಾದ ಅನುಭವ ಮತ್ತು ಸಂವೇದನೆಗಳು ಸ್ಥಾಯಿಯಾಗಿ ವರ್ಣನೆ, ವಿವರಗಳು ಬರುತ್ತವೆ. 'ಬತ್ತಿದೆದೆಗಂಟಿರುವ ಕರುಳ ಕುಡಿ ಚೀರಿಕೆಗೆ' 'ಅಳೆಯಲಾಗದ ಅಳಲ ಆಳ ಬಚ್ಚಿಟ್ಟಿರುವ, ನೆಮ್ಮದಿ ನಿರಾಳಗಳ ಬುಡಕೆ ಕಿಚ್ಚಿಟ್ಟಿರುವ, ಬೆರಣಿಯಂತೊಳಗೊಳಗೆ ಹೊಗೆದುರಿವ ಸಂತ್ರಸ್ತ ಕಣ್ಣು', 'ಮರಳು ಗಾಡಿಗೆ ಉರುಳಿದೊಂಟಿ ಮಳೆ ಹನಿಯಂತೆ' 'ಮುದ್ದು ಟಾಮಿಯ ಹುಟ್ಟುಹಬ್ಬದಲಿ ತಲ್ಲೀನೆ, ಆಗರ್ಭ ಬಂಜೆ ಈ ನಮ್ಮ ಸಾಹುಕಾರಿ' ಇಂತಹ ಸಾಲುಗಳು ಮನವನ್ನು ಕಲಕುತ್ತವೆ. ದೇಶದ ಸ್ಥಿತಿಗೆ ನಿಸ್ಸಹಾಯಕವಾಗಿರುವ ಸೂಕ್ಷ್ಮ ಸಂವೇದನಾಶೀಲರನ್ನು ಚಿಂತನೆ ಗೀಡುಮಾಡುತ್ತವೆ. ಈ ಬಗೆಯ ಕೆಲವು ಕವನಗಳಿಂದ ಸಾಮಾಜಿಕ, ವೈಚಾರಿಕ ಚಿಂತನೆ ತಳೆಯುವ ರೂಪಗಳ ಮಾದರಿಯನ್ನು ಇಲ್ಲಿ ಸೂಚಿಸಿದೆ.

೩

ನಿಸಾರ್ ಅಹಮದ್ ಅವರು ಬಳಗ ಪ್ರೇಮಿ. ಬೆಂಗಳೂರು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ, ಜಿಯಾಲಜಿ ಅಧ್ಯಾಪಕರಾಗಿ ಸ್ನೇಹಿತರೊಡನೆ, ವಿದ್ಯಾರ್ಥಿಗಳೊಡನೆ ಮಿಂಚಿದವರು. ವಿಜ್ಞಾನದ ಅಧ್ಯಯನ ಮತ್ತು ಬೋಧನೆ ಅವರ ಕಾವ್ಯ ರಚನೆಗೆ ಬೇರೊಂದು ಆಯಾಮವನ್ನೇ ಒದಗಿಸಿತು. ಕೆಲವು ಕವನಗಳ ಉಪಮೆ, ರೂಪಕ, ದೃಷ್ಟಾಂತ ಗಳಲ್ಲಿ ಆ ಜ್ಞಾನಾನುಭವವನ್ನು ಗುರುತಿಸಬಹುದು. ನಿಸಾರ್ ಅವರ ಬೇರುಗಳು ಇರುವುದು ಬಸವನ ಗುಡಿಯಲ್ಲಿ. ಗಾಂಧಿ ಬಜಾರನ್ನು ಕುರಿತ ಕೆಲವು ಕವನಗಳಿವೆ. ಮುಖ್ಯವಾದದ್ದೆಂದರೆ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಅವರಿಗೆ ರಕ್ತಗತ ಮನೋಗತವಾಗಿರುವುದು. ಹಾಗೆ ನೋಡಿದರೆ ಮನೆಯ, ಬಂಧು ಬಳಗದ ಒಡನಾಟಗಳ ಪ್ರಭಾವ ಕಡಿಮೆ. ಅವರೊಡನೆಯ ಒಡನಾಟ ಕವಿತೆಗೆ ಶಬ್ದಸಂಪತ್ತನ್ನು ಒದಗಿಸಿದೆ. ವಿಭಿನ್ನ ಪರಿಸರದ ಅನುಭವಗಳೂ ಕೂಡಿ ವಿಶಿಷ್ಟ ಶೈಲಿ ರೂಪುಗೊಳ್ಳಲು ಕಾರಣವಾಗಿದೆ. ಗೆಳೆಯರೊಡನೆ ಆತ್ಮೀಯ, ಉತ್ಸಾಹ, ಸಂಭ್ರಮಗಳ, ಚರ್ಚೆ ವಾದ ವಿವಾದಗಳ ಮಂಟಪೋತ್ಸವಗಳು. ಮಾಸ್ತಿ, ವಿ.ಸೀ., ಕೆ.ಎಸ್.ನ., ಅ.ನ.ಸುಬ್ಬರಾವ್‌ರಂತಹ ಹಿರಿಯ ತಲೆಮಾರಿನವರ ವಾತ್ಸಲ್ಯಪೂರ್ಣ ಮೆಚ್ಚುಗೆಗಳು, ಸರ್ಕಲ್ ಲಂಚ್ ಹೋಮ್, ವಿದ್ಯಾರ್ಥಿ ಭವನ, ಕಲಾ ಮಂದಿರಗಳಲ್ಲಿ ಓಡಾಟಗಳು, ಈ ಎಲ್ಲ ಗೆಳೆಯರು ಆತ್ಮೀಯರು ಅವರ ಅನುಭವದ ಸಂಪತ್ತನ್ನು ಹೆಚ್ಚಿಸಿದ್ದಾರೆ, ವಿವೇಚನೆಯನ್ನು ರೂಪಿಸಿದ್ದಾರೆ.

—ಹೀಗಿದ್ದ ನಿಸಾರ್ ಶಿವಮೊಗ್ಗೆಯ ಕಾಲೇಜಿಗೆ ವರ್ಗವಾದರು. ಹಿಂದಕ್ಕೆ ಬರುವ ವೇಳೆಗೆ ಬದಲಾದಂತೆ ತೋರುತ್ತದೆ. ಇದ್ದಕ್ಕಿದ್ದಂತೆ ಒಳ ಸೆಳೆದುಕೊಂಡು ಒಂಟಿಯಾದರು. ಏಕಾಂತ ಪ್ರೇಮಿಯಾದರು. ಶಿವಮೊಗ್ಗೆ ಅವರ ಹಲವು ಶ್ರೇಷ್ಠ ಹಾಗೂ ಜನಪ್ರಿಯ

ಕವನಗಳಿಗೆ ಕಾರಣವಾಗಿದೆ. ಆದರೆ ಅದುವರೆಗೆ ಕಾಣಬರದಿದ್ದ, ವೈಯಕ್ತಿಕ ನೆಲೆಯ ಕವನಗಳೂ ಆಗಲೇ ಬಂದುವು. ಕವನ ರಚನೆಯೆಂಬುದು ವ್ಯಕ್ತಿಗತ ಅನುಭವ, ಅನುಭೂತಿ, ಸಂವೇದನೆಗಳು ಸಾರ್ವತ್ರಿಕ ರೂಪ ತಳೆದು ಅಭಿವ್ಯಕ್ತಿ ಕಂಡಾಗಲೇ ಸಹೃದಯರ ಆಸ್ವಾದನೆಗೆ ಸಾಧ್ಯವಾಗುವುದು. ಅನುಭವ ದ್ರವ್ಯ ಏನೆಲ್ಲ ರೂಪಾಂತರ ತಳೆದು, ಸಂಯೋಜನೆಗೊಂಡು ಕಲಾತ್ಮಕತೆಯಿಂದ ಮನಸೆಳೆಯುವುದು. ನಿಸಾರ್ ಎಂದೂ ಹಾಗೆ ಹಸಿಯಾದ ಭಾವನೆಗಳನ್ನು ವ್ಯಕ್ತಪಡಿಸಿದವರಲ್ಲ. ಈ ಸಂದರ್ಭದಲ್ಲೇ ಅವರ ಕೆಲವು ಕವನಗಳು ತೀರಾ ವೈಯಕ್ತಿಕ ಎನಿಸಿದುವು ಮೂಡಿ ಬಂದಿವೆ. ಅವುಗಳಲ್ಲಿ ಮಾನಸಿಕ ತಳಮಳವಿದೆ, ದ್ವಂದ್ವವಿದೆ, ಒಂದು ಬಗೆಯ ಒಂಟಿತನದ, ಪರಕೀಯ ಪ್ರಜ್ಞೆಯ ದನಿಯ ತುಯ್ದಾಟವಿದೆ. ಹೀಗಾಗಲು ಕಾರಣ ತಿಳಿಯದು. ಊಹೆ ಮಾತ್ರ ಸಾಧ್ಯ. ನಗೆ, ಹಾಸ್ಯ, ಛೇಡಿಸಿ ಆತ್ಮೀಯತೆ ತೋರುತ್ತಿದ್ದ ನಿರಂತರ ಚಟುವಟಿಕೆಯ ನಿಸಾರ್ ಬಗ್ಗೆ ಒಂದು ಗೆಳೆಯರ ವಲಯ ಅಥವಾ ಕೆಲವರು ಕುಹಕವಾಡಿರಬಹುದು ಎನಿಸುತ್ತದೆ. ನಿಸಾರರ ಜೀವನ ದೃಷ್ಟಿ, ಅವರ ಕಾವ್ಯ ವಿಧಾನ, ಆ ಆಕರ್ಷಕ ವಿಶಿಷ್ಟ ಶೈಲಿ ಜನಪ್ರಿಯತೆಗಳು ಆಕ್ರೋಶ, ಪ್ರತಿಭಟನೆಯ ಸಾಹಿತ್ಯ-ಕಾವ್ಯ ಮಾರ್ಗದ ಕವಿಗಳಿಗೆ ಹಿಡಿಸದೆ ಇರಬಹುದು. ಅದರಿಂದಾಗಿ ಕಟಕಿ, ವ್ಯಂಗ್ಯ, ಹರಿತವಾದ ಟೀಕೆಗಳೂ ಬಂದಿರಬಹುದು. ಆ ಸಮಕಾಲೀನರಲ್ಲಿ ಕೆಲವರು ಗುಂಪು ಕಟ್ಟಿ ಪ್ರಸಿದ್ಧರಾಗಿದ್ದಾರೆ, ಕೆಲವರು ಹೆಸರಿಲ್ಲದವರೂ ಆಗಿದ್ದಾರೆ. ಯಾವ ಗುಂಪಿನೊಡನೆಯೂ ಗುರುತಿಸಿಕೊಳ್ಳದ ನಿಸಾರ್ ಅವರಿಗೆ ಇದು ಒಳ ಸೆಳೆದುಕೊಳ್ಳಲು ಕಾರಣವಾಗಿರಬೇಕು. ನವೋದಯ, ನವ್ಯ, ಮುಂದೆ ಪ್ರತಿಭಟನೆಯ ಕಾವ್ಯ, ಬಂಡಾಯಗಳೆಲ್ಲದರ ಉತ್ತಮ ಸತ್ವವನ್ನು ಜೀರ್ಣಿಸಿಕೊಂಡು ಬೆಳೆದ ಕವಿ ವಿಚಲಿತರಾದದ್ದು ವಿಚಿತ್ರವೆನ್ನಿಸುತ್ತದೆ. ಸಂದರ್ಭ, ಸನ್ನಿವೇಶ, ಪರಿಸರ ಕಾರಣವಾಗಿ ಎಲ್ಲೋ ಒಳಗೆ ಅವರು ಸೆಟೆದಂತೆ ಕಾಣುತ್ತದೆ. ಐಡೆಂಟಿಟಿಯ ತಳಮಳ ತಡಕಾಟಗಳೂ ಆದಂತೆ ಕಾಣುತ್ತದೆ. ಕೆ.ಎಸ್.ನ. ಇಂತಹ ಟೀಕೆಗಳು ಬಂದಾಗ ತಂಪಾಗಿ ಸ್ವೀಕರಿಸಿ ಕಾವ್ಯದಿಂದಲೇ ಉತ್ತರಿಸಿದರು, ಬಾಯಿ ಮುಚ್ಚಿಸಿದರು. ನಿಸಾರ್ ಸ್ವಭಾವದ ಕಾರಣವಾಗಿ ಒಳ ಸರಿದರು. ಪ್ರತಿಷ್ಠೆಯೂ ಗರಿ ಕೆದರಿದಂತೆ ಕಾಣುತ್ತದೆ. ಆಗ ಕೆಲವು ಕವನಗಳಲ್ಲಿ ಮಾನಸಿಕ ತಳಮಳ ವ್ಯಕ್ತವಾಗಿದೆ. ಆದರೆ ಇಲ್ಲೂ ಸ್ವಾರಸ್ಯವೆಂದರೆ ಅದು ಸಂದಿಗ್ಧ-ದ್ವಂದ್ವಗಳಿಗೆ ಸಿಕ್ಕಿದ ವ್ಯಕ್ತಿಗಳ ತೀವ್ರ ಭಾವನೆಗಳಾಗಿ ಸಾರ್ವತ್ರೀಕರಣಗೊಂಡಿವೆ. ಆ ತೀರ ವೈಯಕ್ತಿಕ ನೆಲೆಯ ಭಾವನೆಗಳೇ ಬದುಕಿನ ಬಗೆಗೆ ಚಿಂತನೆಯಾಗುತ್ತವೆ. ಅದರ ಛಾಯೆ `ಸುಮುಹೂರ್ತ` ಸಂಕಲನದ `ಉಭಯ ಕಷ್ಟ' ಕವನದಲ್ಲೇ ಕಾಣಬರುತ್ತದೆ. ಬಾಯಿ ಬಾನುಲಿಯಿಂದ ಆಗುವ ಪ್ರಸಾರದ ಬಗೆಯಿದು: `ಮೊಗವೊ ಮೊಗವಾಡವೊ, ಕುರಿ ತೊಗಲ ತೋಳವೊ: ಬದುಕು ಬುರುಕಿಯ ಝಡತಿ:/ ಹತ್ತು ವ್ಯವಹಾರಗಳ ತಿಕ್ಕಿ ನಕಲಿಯೊ ನಿಜವೊ ಗುರುತು ಹಚ್ಚುವ ಅಕ್ಕಸಾಲಿಗತನ/`.

'ಮಾತು ಮಾತಿನ ಹೆಜ್ಜೆ ಮೂಸಿ
ಪತ್ತೆ ಹಿಡಿವ ಮರ್ಮಭೇದಕ ಸಾಕು-ಜಾತಿನಾಯಿ.' (ಉಭಯ ಕಷ್ಟ)

ಬಾಯಿ ಚಪಲ, ತೀಟೆಯ ಮಾತುಗಳಾದರೂ ವ್ಯಕ್ತಿತ್ವದ ಪ್ರಶ್ನೆಯಾಗಿ ಸವಾಲೊಡ್ಡುತ್ತವೆ. ಅದಕ್ಕೆ ಪ್ರತಿಕ್ರಿಯೆ ಏನು ಸಾಧ್ಯ?

'ರಾಷ್ಟ್ರದ ಕವಾಯ್ತಿನಲಿ ತಪ್ಪುಗಾಲನು ಹಾಕಿ
ಸತ್ಯವನು ಮಂಡಿಸಲೆ?
ಗಲ್ಲು; ದೇಶದ್ರೋಹಿ.
ನರಿ ತೋಳಗಳ ಜೊತೆಯಲ್ಲೆ ಆಡು, ಆಕಳ ಬಲಿಯ
ಅನ್ಯಾಯ ಖಂಡಿಸಲೆ?
ಲೇಬಲ್ಲು: ಸ್ವಧರ್ಮದ್ರೋಹಿ!' (ಅದೇ)

ಈ ಉಭಯ ಸಂಕಟ ವ್ಯಕ್ತಿ, ಸಮಾಜ, ರಾಷ್ಟ್ರವನ್ನೇ ಆವರಿಸಿರುವಂಥದು. ನಿಸಾರ್ ಎನ್.ಸಿ.ಸಿ.ಅಧಿಕಾರಿಯೂ ಆಗಿದ್ದವರು. ಅಲ್ಲಿನ ಅನುಭವಗಳೂ ಶಬ್ದಗಳಲ್ಲಿ, ಅನುಭವಾಭಿವ್ಯಕ್ತಿಯಲ್ಲಿ ರೂಪಾಂತರಗೊಳ್ಳುತ್ತವೆ. 'ಮರ್ಮಭೇದಕ ಸಾಕು-ಜಾತಿನಾಯಿ' ಶಬ್ದಗಳ ಜೋಡಣೆಯನ್ನು ಬದಲಾಯಿಸಿ ನೋಡಿದರೆ ಇತರ ಅರ್ಥಗಳೂ ಬಿಚ್ಚಿಕೊಳ್ಳುತ್ತವೆ.

ಇನ್ನೊಂದು ಕವನ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ನಿಸಾರರ 'ಸಂಜೆ ಐದರ ಮಳೆ' ಸಂಕಲನದಲ್ಲಿದೆ. ಹೆಚ್ಚೂ ಕಡಿಮೆ ನಾಲ್ಕೈದು ವರ್ಷಗಳ ಅಂತರದ ರಚನೆ. ಉಭಯ ಸಂಕಟದಿಂದ ಒದ್ದಾಡಿ ಸೆಟೆದೆದ್ದು ಮನಸ್ಸಿಗೆ ತನ್ನತನವನ್ನು ಗುರುತಿಸಿಕೊಳ್ಳುವ, ಆ ಮೂಲಕ ತಾನು ತಾನಾಗಿ ಬೆಳೆದು ತನ್ನ ವ್ಯಕ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಹಂಬಲವೂ ಸಹಜವಾದದ್ದೆ.

'ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೆ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.' (ನಿಮ್ಮೊಡನಿದ್ದೂ ನಿಮ್ಮಂತಾಗದೆ)

ಇಲ್ಲಿನ ನೆಲ ಬಸವನಗುಡಿಯಾಗಬಹುದು, ಭಾರತವಾಗಬಹುದು. ಒಂಟಿತನ, ಪರಕೀಯ ಭಾವ ಕಾಡುವ ಬಗೆ, ಪ್ರತಿಯಾಗಿ ತನ್ನತನ ಉಳಿಸಿಕೊಂಡು ತಲೆಯೆತ್ತಿ ನಿಲ್ಲುವ ಛಲಗಳು. ಇದಕ್ಕೆ ಮೂಲವಾದ ಕಾರಣಗಳನ್ನು ಊಹಿಸುವುದು ಕಷ್ಟವಲ್ಲ.

'ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೆ ಪೋಷಿಸಿ ಸಾಕುತ್ತ
ರೇಖೆಯಲ್ಲೆ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.' (ಅದೇ)

ಸಂಯಮದಲ್ಲಿ ಒಂದು ಗುಣಾತ್ಮಕ ಮನೋಧರ್ಮ ಇರುತ್ತದೆ. ಆದರೆ ಒಂಟಿತನ? ಇನ್ನೂ ಮುಂದುವರಿದರೆ ಒಂದು ವಲಯದ ಬಗೆ ಖಚಿತವಾಗುತ್ತ ಹೋಗುತ್ತದೆ.

`ಒಳಗೊಳಗೇ ಬೇರು ಕೊಯ್ದು, / ಲೋಕದೆದುರಲ್ಲಿ ನೀರು ಹೊಯ್ದು, / ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ, ಗೊತ್ತಿಲ್ಲದಂತೆ ನಟಿಸಿ, / ಚಕಾರವೆತ್ತಿದೆ ನಿಮ್ಮೊಡನೆ ಕಾಫಿ ಹೀರಿ ಪೇಪರೋದಿ ಹರಟಿ/` ಆಶ್ರಯದಾತ ಗುಂಡು ದೋಸ್ತಿಗಳ ಬಗೆ ಇದು. ಇದು ಹೀಗೇ ಇರಲಾರದು, ಮದ ಮಸ್ತಿಯಲ್ಲಿ ಪರಸ್ಪರ ಪರಚಿಕೊಳ್ಳುವುದೂ ಸಾಧ್ಯ. ಆದರೆ ಆ ಸಂದರ್ಭ, ಆ ಕಟಕಿಗಳು ಅಸಹನೀಯವೇ. `ನೋವಿಗೆ ಕಣ್ಣು ತುಂಬಿದ್ದರೂ, ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ` ತನಿಖೆ ಮಾಡುವುದು ಚರ್ಮ ಸುಲಿದು ನಿಲ್ಲಿಸಿದಂತೆ.

ತನ್ನತನದ, ಐಡೆಂಟಿಟಿಯ ಹುಡುಕಾಟ ಗಟ್ಟಿ ನೆಲೆಗೆ ಒಯ್ಯಬಹುದು, ಕೆಲವೊಮ್ಮೆ ತುಯ್ದಾಟದಲ್ಲೆ ಉಳಿಸಬಹುದು. `ದ್ವಂದ್ವ` ಕವನದ ರೂಪಕಗಳು ವ್ಯಕ್ತಿ ನೆಲೆಯಿಂದ ತಾತ್ವಿಕ ನೆಲೆಗೆ ಒಯ್ಯುತ್ತವೆ. 'ಯಾವುದೋ ಮಗು ಸ್ವಂತ? ಯಾವುದೋ ಪರಕೀಯ?` ಎಂಬ ಪ್ರಶ್ನೆಗೆ ಉತ್ತರವಾಗಿ ಬೇರು-ವೃಕ್ಷಗಳ ರೂಪಕ ಹರಡಿಕೊಳ್ಳುತ್ತದೆ.

'ರಫ್ತಾದ ಬೀಜವೀ ಅಪರಿಚಿತ ಪರಿಸರದ
ಗಾಳಿ ಜಲ ಬೆಳಕುಗಳ ಹೀರಿ ಬೆಳದಿಹ ಪರಿಯ
ನೂರಾರು ಚದರಡಿಯ ಸುವಿಶಾಲ ಪರಿಧಿಯಲಿ
ಸೊಕ್ಕಿರುವ ಹೊರೆ ಹೊರೆಯ
ಋತು ಋತುಗೆ ಹೊಸ ದಿರಿಸು ತೊಟ್ಟು ಮೆರೆಯುವ ದೊರೆಯ,
ಕಣ್ಮನದ ವರವ—ಈ ಹೆಮ್ಮರವ ನೋಡು.' (ದ್ವಂದ್ವ)

ವ್ಯಕ್ತಿ, ಸಮಾಜ, ರಾಷ್ಟ್ರದ ಸಂಕೇತವಾಗಿ ಬೆಳೆಯುವ ಹೆಮ್ಮರದ ರೂಪಕ ಇದು. ಮುಕ್ತಾಯದ ಮಾತುಗಳಲ್ಲಿ ಸಮಾಧಾನ ಚಿತ್ತವಿದೆ:

'ಸ್ವಂತ ಯಾವುದೊ ಕಂದ? ಯಾವುದೊ ಬಂದಳಿಕೆ?
ಸಹಜ ಸಂತತ ಜೊತೆಗೆ ಇರಲಿ ಬಿಡು ಇವು ಕೂಡ
ಇದೇ ನಿನ್ನ ಅಗ್ಗಳಿಕೆ.' (ಅದೇ)

ಹೊರಗಿನ ಟೀಕೆ ಕಟಕಿಗಳಿರಲಿ. `ನಾನೆಂಬ ಪರಕೀಯ` ಕವನದಲ್ಲಿ ಅಂತರಂಗದಲ್ಲಿ ಒಮ್ಮೊಮ್ಮೆ ಒಮ್ಮೆಗೇ ಕಾಣಿಸುವ ಭೂತ ಸಂದೇಹಗಳ ಚಿತ್ರವಿದೆ. ಒಂದು ನೆಲೆಯಿಂದ ಪಂಚಭೂತಗಳ ಕುಣಿದಾಟದ ದ್ವಂದ್ವದ ನೆಲೆ ತಲಪುವ ದನಿಯೂ ಇದೆ. ಕೊನೆಯ ಅನಿಸಿಕೆ ಸಾರ್ವತ್ರಿಕವಾದದ್ದು, ವಿಶ್ವವ್ಯಾಪಿಯಾದದ್ದು:

'ಸ್ವಾಮಿ, ಈ ನಾನೆನ್ನುವ ಅಸ್ತಿತ್ವದ ಚೂರಿನಸ್ಪಷ್ಟ,
ಅರ್ಥೈಸುವುದು ದೇಶದ ಹವಾಮಾನದಂತೆಯೇ ಕಷ್ಟ.'

(ನಾನೆಂಬ ಪರಕೀಯ)

ಈ ಒಂದು ಕಾಲಾವಧಿಯಲ್ಲಿ ಅಹಂ ಸೆಟೆದು ನಿಂತು ನಿಸಾರರ ಸ್ವಭಾವದ ಮೇಲೆ ಪರಿಣಾಮ ಬೀರಿರಬಹುದು. ಗೆಳೆಯರಿಗೂ ಬೇಸರವಾಗಿರಬಹುದು, ಕೆಲವರು ದೂರ ಸರಿದಿರಬಹುದು ಎನಿಸುತ್ತದೆ. ಉಲ್ಲಾಸ, ಉತ್ಸಾಹಗಳ ವ್ಯಕ್ತಿ ಮನೆಯಲ್ಲೂ ಈ ಬದಲಾವಣೆ ಯಿಂದ ಕಿರಿಕಿರಿಗೆ ಕಾರಣವಾಗಿರಬಹುದು ಎನಿಸುತ್ತದೆ. ಆದರೆ ನಿಸಾರ್ ಆ

ಎಲ್ಲ ಸಂಚಾರಿ ವೈಪರೀತ್ಯಗಳಿಂದ ಸಾಗಿ ಬಂದಿದ್ದಾರೆಂಬುದನ್ನು ಅವರ ಕೊನೆಯ ಎರಡು ಕವನ ಸಂಗ್ರಹಗಳಿಂದ ಗುರುತಿಸಬಹುದು.

೪

ತಮ್ಮ ಹನ್ನೊಂದನೆಯ ಕವನ ಸಂಗ್ರಹ 'ಆಕಾಶಕ್ಕೆ ಸರಹದ್ದುಗಳಿಲ್ಲ' ಮತ್ತು ಹನ್ನೆರಡನೆಯ ಸಂಗ್ರಹ 'ಅರವತ್ತೈದರ ಐಸಿರಿ'ಯಲ್ಲಿನ ಕವನಗಳನ್ನು ಗಮನಿಸಿದಾಗ ನಿಸಾರರು ಬಹು ದೂರ ಸಾಗಿ ಬಂದಿದ್ದಾರೆ ಎನಿಸುತ್ತದೆ. 'ಆಕಾಶಕ್ಕೆ...' ಸಂಗ್ರಹದ 'ಲೇಖಕರ ನುಡಿ'ಯಲ್ಲಿ 'ಗುಂಪುಗಳಿಂದ ದೂರವಾಗಿ, ಸ್ವಭಾವತಃ ದ್ವೀಪಜೀವಿಯಂತಿದ್ದು ಏಕಾಂತತೆಯನ್ನು ಹೆಚ್ಚು ಪ್ರೀತಿಸಿ ಒಗ್ಗಿಸಿಕೊಂಡಿರುವ, ಕಾಲಕಾಲಕ್ಕೆ ಸುತ್ತಮುತ್ತಲಿನ ಆಗುಹೋಗುಗಳಿಗೆ ಸ್ಪಂದಿಸಿ ಪ್ರತಿಕ್ರಿಯಿಸುತ್ತ ಬಂದಿರುವ ನನಗೆ ತತ್ಫಲವಾದ ನಿರಾಳ, ಕೃತಕೃತ್ಯತೆ ಹೇಗೋ ಹಾಗೆಯೆ ತಹತಹ, ಅಸ್ಥಿರತೆ, ಅಸಹಾಯಕತೆ ಅನುಭವಕ್ಕೆ ಬಂದಿದೆ' ಎಂದಿದ್ದಾರೆ. ಬದಲಾದ ಸಮಾಜ, ವ್ಯವಸ್ಥೆಗಳ ಮತ್ತು ಮಾನವ ಸಂಬಂಧಗಳ ದೃಷ್ಟಿಯ ಮಾತುಗಳೂ ಅಲ್ಲಿವೆ. 'ಕೆಲವು ವರ್ಷಗಳಿಂದ ನಮ್ಮ ನಾಡಿನಲ್ಲಿ ನಡೆದಿರುವ ಸಾರ್ವತ್ರಿಕ ಸ್ವರೂಪದ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳು ನನ್ನನ್ನು ಹಿಂದಿಲ್ಲದ ಆತಂಕಕ್ಕೆ ಈಡುಮಾಡಿವೆ. ಮನುಷ್ಯ ಸಂಬಂಧಗಳ ಬಗ್ಗೆ ನಾನು ವರ್ಷಾನುಗಟ್ಟಲೆ ರೂಪಿಸಿಕೊಂಡಿದ್ದ ಸುಕುಮಾರ ಗುಲಾಬೀಯ ಚಿತ್ರವನ್ನು ಅಂದಗೆಡಿಸಿ ಅಪನಂಬಿಕೆ ಹತಾಶೆಗಳ ಕಸದ ಬುಟ್ಟಿಗೆ ಎಸೆಯುವಂತೆ ಎಸಗಿವೆ.' ಮುಂದುವರಿದು, 'ಸೌಹಾರ್ದ, ಸ್ನೇಹಪರತೆ, ಹೃದಯಾನುಕಂಪೆಗಳಂತಹ ಮಾನವೀಯ ಗುಣಗಳು ವೇದಿಕೆ, ಪತ್ರಿಕೆ, ಟಿ.ವಿ. ಮತ್ತು ಪುಸ್ತಕಗಳ ಸಸ್ತಾ ಸರಕುಗಳಾಗಿ, ಸಾಮುದಾಯಿಕ ಜೀವನದಿಂದ ಕ್ಷಣೇಕ್ಷಣೇ ಕಾಲ್ತೆಗೆಯುತ್ತಿರುವ ತಥ್ಯ, ನನ್ನ ಸೂಕ್ಷ್ಮಸಂವೇದಿ ಮನಸ್ಸನ್ನು ಅತೀವ ವೇದನೆಗೆ ಒಳಪಡಿಸಿದೆ. 'ಇಂತಹ ವಾತಾವರಣದಲ್ಲೂ ಆಗಿ ಹೋದ ಮಹದ್ವ್ಯಕ್ತಿಗಳ ಮಾರ್ಗ, ಸನ್ಮೌಲ್ಯಗಳು ಬದುಕಿನಲ್ಲಿ ನಿಧಾನವಾಗಿಯಾದರೂ ನೆಲೆಗಾಣಬಹುದೆಂಬ ನಂಬಿಕೆ ಕಾವ್ಯರಚನೆಯ ಮೂಲ ಪ್ರೇರಣೆ' ಎನ್ನುತ್ತಾರೆ. ಕವನಗಳ ಓದಿಗೆ ಇದೊಂದು ಹಿನ್ನೆಲೆಯಾಗುತ್ತದೆ.

ಹಿಂದಿನ ಕವನಗಳ ಬಗೆಗಿಂತ ಪೂರ್ಣ ಭಿನ್ನ ಎನ್ನುವಂತಿಲ್ಲ ಇಲ್ಲಿನ ಕವನಗಳು. ರೂಪಕಗಳ ಮೆರವಣಿಗೆಯಾಗದೆ ಮೊಸಾಯಿಕ್‌ನಂತೆ ಕೂಡುವ ಬಗೆ ಇದೆ. ಆದರೂ ಕೆಲವು ಕವನಗಳು 'ಅರ್ಥಗರ್ಭಿಣಿ'ಯರಂತೆ ಒಂದೇ ಓದಿಗೆ ಅರ್ಥ ಬಿಚ್ಚಿಕೊಳ್ಳುವುದಿಲ್ಲ. ಕವಿತೆಯನ್ನು ಕುರಿತೇ ಕವನಗಳಿವೆ. ಸಂಕಲನದ ಶೀರ್ಷಿಕೆಯ ಕವನವೇ 'ಆಕಾಶಕ್ಕೆ ಸರಹದ್ದುಗಳಿಲ್ಲ' ಕವಿತೆಯನ್ನು ಕುರಿತದ್ದು. ಆಕಾಶದ ವರ್ಣನೆಯೊಂದಿಗೆ ಪ್ರಾರಂಭ. ಆದರೆ ಸರಹದ್ದುಗಳ, ಬಾಂದುಗಲ್ಲುಗಳ ಬಗೆ, ದೇಶ ಪ್ರಾಂತಗಳ ಜನಾಂಗ ಭೇದದ ಗಲಭೆ ಗದ್ದಲಗಳ ವರ್ತಮಾನವನ್ನೂ ನೆನಪಿಸುತ್ತವೆ. ಕವಿತೆ ಸಹ ಆಕಾಶದಂತೆ ಧರ್ಮಗಿರ್ಮ ಜಾತಿಕುಲಗಳ ಗಡಿಗೆರೆಗಳನ್ನು ಹೊಂದಿಲ್ಲ. ಹೀಗೆ ಆಕಾಶದಿಂದ ಕವಿತೆಗೆ ಅನಂತರ ಕೊನೆಯಲ್ಲಿ ಕವಿತೆಯಿಂದ ಮನಸ್ಸಿಗೆ ಹೊರಳುತ್ತವೆ ಹೋಲಿಕೆಗಳು. ಮನಸ್ಸು, ಮನಸ್ಸು ಜನ್ಮ ನೀಡುವ ಕವಿತೆ ಎಲ್ಲ ಸ್ವಚ್ಛಂದಿ—ಹಾಗೆಯೇ ಕವಿತೆಯಂತೆ ಆಕಾಶ ಎಂಬ ಚಿಂತನ ವರ್ತುಲ ಕವನದಲ್ಲಿ 'ಸೃಷ್ಟಿಯಾಗುತ್ತದೆ'. 'ಚಿದಂಬರಂ' ಶಬ್ದ ನೆನಪಾಗುತ್ತದೆ. ಅಂಬರ

ಮ್ಯಾಕ್ರೊ ಆದರೆ, ಚಿತ್ ಮೈಕ್ರೊ; ಸ್ಥೂಲ-ಸೂಕ್ಷ್ಮಗಳೆರಡೂ ಅನಂತ, ನಿಗೂಢ. ಹಾಗೆಯೇ ಕವಿತೆ ಸಹ ನಿಗೂಢವೇ.

ಇಂಗ್ಲಿಷ್‌ನಲ್ಲಿ ಎರಡು ಶಬ್ದಗಳಿವೆ: house ಮತ್ತು home. ಕನ್ನಡದಲ್ಲಿ ಒಂದೇ ಶಬ್ದ—ಮನೆ. ಆದ್ದರಿಂದಲೆ ಕವಿ 'ಮನೆ' ಕವನದಲ್ಲಿ ಮನೆಯೆಂದರೆ ಏನಲ್ಲ ಎಂದು ತೊಡಗಿ, ನಿಜವಾಗಿ ಅದೇನು ಎನ್ನುವುದನ್ನು ವಿವರ ವಿವರವಾಗಿ ಬಿಡಿಸುತ್ತಾರೆ. ಇಟ್ಟಿಗೆ ಗಾರೆ ಗೋಡೆಗಳ ಕಟ್ಟಡ house. ಇರುವಂಥದು, ನೆಲೆ, ಆಶ್ರಯ. ಭಾವ ಸಂಬಂಧಗಳಿಂದಾದದ್ದು home. ಅದು ಬದುಕಿನ ನೆಲೆ, ಅರ್ಥ. 'ಕವಿಯಿಲ್ಲದಿದ್ದರೆ' ಕವನದ ಸ್ವಾರಸ್ಯ ಬೇರೆ ಬಗೆಯದು, ಆತ್ಮಾವಲೋಕನ ಎನ್ನೋಣವೆ.? 'ಕವಿ—ಜಗದ ಕೆನ್ನೆಯ ಮೇಲಿನೊಂದು ತೇವ; ನೊಂದೆದೆಯ ನಿಟ್ಟುಸಿರ ನಿಸ್ಸಹಾಯಕ ಭಾವ' ಅರ್ಥವತ್ತಾದ ಮಾತುಗಳು. ಕವಿ-ಕಾವ್ಯ ಇಲ್ಲದಿದ್ದರೂ ಲೋಕ ಸಾಗುತ್ತದೆ. ಆದರೆ 'ಒಂದಿಷ್ಟು ಸೊರಗಿ ಬರಡಾಗಿ; ಕೊಂಚ ಕೊರಗಿ ಕುರುಡಾಗಿ'.

'ಅಂಚೆ ಪೆಟ್ಟಿಗೆ', 'ಮುಚ್ಚು ಅಂಗಡಿಯನ್ನು'—ಇಂತಹ ಕವನಗಳು ಇಡಿಯಾದ ಪ್ರತಿಮೆಯಾಗಿ ಅರ್ಥಸಂದಿಗ್ಧತೆಯನ್ನು ತಂದು, ಅರ್ಥ ಸಾಧ್ಯತೆಗಳನ್ನು ವಿಸ್ತರಿಸುತ್ತವೆ. 'ಅಂಚೆ ಪೆಟ್ಟಿಗೆ'ಯ ಕೊನೆ ಸಾಲುಗಳು ರೂಪಕಾರ್ಥವನ್ನು ಸ್ಫುಟಗೊಳಿಸುತ್ತವೆ. ಆದರೆ 'ಮುಚ್ಚು ಅಂಗಡಿಯನ್ನು' ಹಾಗಲ್ಲ. 'ಯಾಕಿಷ್ಟು ದೇವರುಗಳು?' ಕವನ ತರ್ಕ ಹಾಗೂ ಕಲ್ಪನೆಗಳೆರಡರ ನೆಲೆಯಲ್ಲೂ ಸಾಗುತ್ತದೆ. ಸಾಲುಗಳ ಸೊಬಗು ಮನ ಸೆಳೆಯುತ್ತದೆ. ಒಂದು ಪ್ರಶ್ನೆಯಲ್ಲೆ ವೈರುಧ್ಯದ ಅನುಭವವಿದೆ. 'ಯಾಕಿಷ್ಟು ದೇವದಿಂಡರಿದ್ದಾರೆ, ಕಡು ಬಡವರಿರುವ ಈ ಸಿರಿವಂತ ದೇಶದಲ್ಲಿ?' ತರ್ಕ ಎಲ್ಲಕ್ಕೂ ಉತ್ತರವಾಗದಿದ್ದರೂ ಅದೂ ಒಂದು ಬಗೆಯ ಉತ್ತರ; ವ್ಯಂಗ್ಯ ಬೆರೆತ ಉತ್ತರ:

'ಪೊಲೀಸು ಠಾಣೆಗಳ ಸಂಖ್ಯೆ ಹೆಚ್ಚಿರುವುದೆಂದರೆ,
ಇದರರ್ಥ ಜನತೆಯನುಭವಿಸುತಿದೆ ಅಧಿಕತರ ತೊಂದರೆ:
ಕಳವು ರೌಡೀಕಾಟ ಖೂನಿಗಳೇರುತಿವೆ ನಾಡ...
ಆರಾಧನಾಲಯಗಳು ಬೇಕಾಬಿಟ್ಟಿ ವರ್ಧಿಸಿವೆ ಎಂದಾಗ
ಅಂದಾಜಿಸಬಹುದು ದೇಶಕ್ಕೆ ತಟ್ಟಿರುವುದೆಂಥ ಪಾಪ ರೋಗ.'

(ಯಾಕಿಷ್ಟು ದೇವರುಗಳು)

ಆಧುನಿಕ ಸಂವೇದನೆಯ ಕೆಲವು ಸಾಲುಗಳು ಎಷ್ಟು ಅರ್ಥಗರ್ಭಿತವಾಗುತ್ತವೆ ಎನ್ನುವುದಕ್ಕೆ: 'ಜಗದ ಗತಿಶೀಲ ಗ್ರಾಮಫೋನಿನ ರಿಕಾರ್ಡಿನ ಮೇಲೆ, ಸೋಕಿಯೂ ಸೋಕದ ತಾಕಿ ಸಂಗೀತ ಹೊಮ್ಮಿಸುವ ಸೂಜಿ:' ಕವಿ.

ನಿಸಾರರ ಕವಿತೆಗಳ ರಚನೆಯಲ್ಲಿನ ಬದಲಾವಣೆಯನ್ನು ಸ್ಪಷ್ಟವಾಗಿ 'ಅರವತ್ತೈದರ ಐಸಿರಿ'ಯಲ್ಲಿ ಗುರುತಿಸಬಹುದು. ಶಿರ್ಷಿಕೆಯೇ ಅರ್ಥಪೂರ್ಣ. ಲಾಭೈಕ ದೃಷ್ಟಿಯ ಲೌಕಿಕ ಶ್ರೀಮಂತಿಕೆ ಒಂದು ಬಗೆಯಾದರೆ, ಬದುಕಿನ ಪರಿಪಕ್ವತೆಯ ಫಲವಾದ ಅನುಭವ ಶ್ರೀಮಂತಿಕೆ ಇನ್ನೊಂದು ಬಗೆಯದು.

ನನ್ನೊಬ್ಬ ಗೆಳೆಯ, ನವ್ಯತೆ ಪ್ರತಿಭಟನೆಗಳ ಪ್ರತಿಪಾದಕ, ನಾವು ಎಂ.ಎ. ಓದುತ್ತಿದ್ದಾಗ ಭಾರತೀಯ ಕಾವ್ಯಮೀಮಾಂಸೆಯಲ್ಲಿನ 'ನಾನೃಷಿ: ಕುರುತೇ ಕಾವ್ಯಂ' ಎಂಬುದನ್ನು ಟೀಕಿಸಿ, ಹಾಸ್ಯ ಗೇಲಿ ಮಾಡಿ ನಿರಾಕರಿಸುತ್ತಿದ್ದ. ಪಶ್ಚಿಮಕ್ಕೆ ಮುಖ ಮಾಡಿದ್ದ ಆತ ನಲವತ್ತು ವರ್ಷಗಳ ಅನಂತರ ಕವನ ಸಂಗ್ರಹವೊಂದರ ಬಿಡುಗಡೆಯಲ್ಲಿ philosopher ಆಗದೆ poetry ರಚನೆ ಸಾಧ್ಯವಿಲ್ಲವೆಂದಾಗ ಬೆಚ್ಚಿ ಬಿದ್ದೆ. ಆತನಿಗೂ ವಯಸ್ಸಾಯಿತು ಎನಿಸಿತು. ಆಗಿನ ಕಾಲ, ಸಂದರ್ಭದಲ್ಲಿ ಋಷಿ, ತಪಸ್ಸು ಶಬ್ದಗಳು ಕಾವ್ಯಮೀಮಾಂಸೆಯಲ್ಲಿ ಪ್ರಯೋಗವಾದುವು. ಯಾವುದೇ ಸಿದ್ಧಾಂತ, ಪರಿಕಲ್ಪನೆ ಇತಿಹಾಸ ಕಾಲ ಸಂದರ್ಭದ ಹಿನ್ನೆಲೆಯಲ್ಲೇ ಮೂಡಿಬರುವುದು. ಕಾಲ ಉರುಳಿದಂತೆ ಪರ್ಯಾಯ ಶಬ್ದಗಳೊ, ಬೇರೆ ಪರಿಕಲ್ಪನೆಗಳೊ ಬರುತ್ತವೆ. 'ತಪಿಸಿದ' ಎಂದರೆ 'ಬೆಂದ' ಎಂದಾಗ ಬಹುದು. ಮನಸ್ಸಿನ ತಪನಕ್ರಿಯೆ. ಬೆಂದ ಮನಸ್ಸು. ಆಕ್ರೋಶ ವಿರಹಿತನಾಗಿ ಬದುಕನ್ನು ಕಾಣುವ ನಿರ್ಲಿಪ್ತಸ್ಥಿತಿ. 'ಅರವತ್ತೈದರ ಐಸಿರಿ'ಯ ಕವನಗಳನ್ನು ಓದುವಾಗ ಆ ಘಟನೆ ನೆನಪಾಯಿತು. ನಿಸಾರರಿಗೆ ಮನಸ್ಸಿನ ಆ ಹದ, ಭಾಷೆಯ ಸರಳತೆ ಸಾಧಿಸಿದೆ. ಸರಳತೆ ಪರಿಪಕ್ವತೆಯ ಸಂಕೇತವಾಗಬಹುದು. ಆ ಪರಿಪಕ್ವತೆ ಬರುವುದೂ ಸಹ ನಿರುದ್ವಿಗ್ನವಾಗಿ ನಡೆಸುವ ಬದುಕಿನ ಅನುಭವಗಳ reflectionನಿಂದ, ಮೌನದ ಮೆಲುಕಿನಿಂದ, ಚಿಂತನಗುಣದಿಂದ. ಇಲ್ಲಿನ ಒಂದು ಕವನ—'ಬಾಳಿನ ಕ್ರೀಡಾಂಗಣ'. ಅದರಲ್ಲಿ ನಿಸಾರರೇ ಹೀಗೆ ಹೇಳುತ್ತಾರೆ:

'ಬೌಂಡರಿ ಸಿಕ್ಸರನ್ನೆತ್ತುವೆನೆಂಬ ತುಡಿತಕ್ಕೆ
ಈಡಾಗಿರುವ ಅತ್ಯುತ್ಸಾಹಿ ಕ್ರೀಡಾಕುಶಲಿ ಕಲಿ
ವಿವೇಚಿಸು ಸಮಾಧಾನ ಚಿತ್ತದಲಿ:
ನಿನಗಾಗುವುದು ಆಗ ತಿಳಿವಿನೆಚ್ಚರದ ಮನವರಿಕೆ
ಜೀವಕೆ ಹಿತವೆಸಗುವ ಸುವಿವೇಕದ ನೇವರಿಕೆ.'

(ಬಾಳಿನ ಕ್ರೀಡಾಂಗಣ)

ನಿಸಾರರ ರೀತಿಯೇ ಹೀಗೆ. ಯಾವ ವಿಷಯಕ್ಕೆ ಎಂಥ ರೂಪಕ, ಸಾಮಾನ್ಯರಿಗೂ ಗ್ರಹಿಕೆಗೆ ನಿಲುಕುವಂಥವು. ಹಿಂದಿನ ರಚನೆಗಳಲ್ಲಿ ಈ ಬಗೆ ಅಪರೂಪ ಎಂಬುದೂ ವಾಸ್ತವವೇ.

'ಬದುಕು ಬರೀ ಬಿರುಸು, ರಭಸ, ವೇಗಗಳ ಕಣವಲ್ಲ...
ಸೆಕೆಂಡಿನಲಿ ಆಗದಿದ್ದರೆ ಚೆಂಡು-ಬ್ಯಾಟಿನ ಮೊಖಾಬಿಲೆ
ತೆರಬೇಕಾದೀತು ಬಾಳ್ವೆಯಲ್ಲಿ ದುಬಾರಿ ಬೆಲೆ.' **(ಅದೇ)**

—ಇಲ್ಲಿನ ಕವನಗಳಲ್ಲಿ ಕೆಲವನ್ನು ನೋಡಿ: 'ಫ್ರಿಜ್ಜು' 'ಕೊಳವೆ ಬಾವಿಗಳು', 'ನೀರಿನ ಟ್ಯಾಂಕ್', 'ರ್‍ಯಾಲಿ-ಗೇಲಿ' ಇತ್ಯಾದಿ. ಬದುಕಿನ ದಿನನಿತ್ಯದ ಸಣ್ಣ ವಿಷಯಗಳು; ಅಗಣ್ಯ, ಗಮನಕ್ಕೆ ಬಾರದಂಥವು ಕವಿ ಮನಸ್ಸಿನ ಚಿಂತನೆಗೆ ಚಿಮ್ಮುಹಲಗೆಯಾಗುತ್ತವೆ. ಫ್ರಿಜ್ಜು:

'ಮನೆಯ ಕೆಲಸದ ಮುದುಕಿ
ಶುದ್ಧಗೊಳಿಸಲಿಕೆಂದು ತೆಗೆದಾಗ ಫ್ರಿಜ್ಜನ್ನು

ದುಸ್ಸಹನೀಯ ದುರ್ನಾತ ಅಮರಿಕೊಂಡಿತು
ಇಡೀ ಅಡುಗೆ ಮನೆಯನ್ನು' (ಫ್ರಿಜ್ಜು)

ಮುಂದೆ ಚಿಂತನೆ ಹರಿಯುವ ಬಗೆಯೆಂದರೆ 'ಮನವರಿಕೆಯಾಯಿತು ಸಾರ್ವತ್ರಿಕ ತಥ್ಯ: ಮನುಸ್ಸೊಂದು ರೆಫ್ರಿಜಿರೇಟರು.' ಅನಂತರದ ವಿವರಗಳು ಇದರ ಜೆನ್ನ ಹಿಂದೆ ಸಾಗುತ್ತವೆ. 'ತಥ್ಯ ಮತ್ತು ನೇಪಥ್ಯ' ವಿಜ್ಞಾನ ಬೋಧಕ ಮತ್ತು ಕವಿ ಮನಸ್ಸುಗಳು ಒಂದಾಗಿ ಚಿಂತಿಸುವ ಪರಿ, ವಿಜ್ಞಾನ ಮತ್ತು ತತ್ತ್ವಜ್ಞಾನಗಳ ಸಾಮರಸ್ಯವನ್ನು ಸಾಧಿಸುತ್ತವೆ. ಸೃಷ್ಟಿಯ ಅಂತಸ್ಸಂಬಂಧ ಅತ್ತ ವಿಜ್ಞಾನದ ದೃಷ್ಟಿಗೂ, ಇತ್ತ ತಾತ್ವಿಕಾಲೋಚನೆಗೂ ನಿಗೂಢ, ರಹಸ್ಯವೇ. ಕವಿತೆ ಬರೆಯುವ ಲೇಖನಿ, ಬೆರಳುಗಳು, ಹೀಗೆ ಸಂಬಂಧ ಸರಪಳಿ ಸಾಗಿ ವಿಶ್ವ ಸೃಷ್ಟಿಯ ಬೆರಗಿನಲ್ಲೇ ಮುಕ್ತಾಯ.

ಇಲ್ಲಿನ ಕವನಗಳಲ್ಲಿ ಹಿಂದಿನ ಕವನಗಳಂತೆ ವಿಡಂಬನೆಯ ಹರಿತಕ್ಕಿಂತ—ಅದು ಇದೆ, ಇಲ್ಲವೆಂದಲ್ಲ—ವಿಷಾದದ ನಗೆ ಇದೆ, ಚುಚ್ಚುಮಾತಲ್ಲ. ಅದೇ ವಯಸ್ಸಿನ ಹದ, ಮನಸ್ಸಿನ ಹದ.

೫

ನಿಸಾರ್ ಅಹಮದ್ ಅವರ ಮುಕ್ತ ಮನಸ್ಸು ಮತ್ತು ಅನನ್ಯತೆ ಅವರ ಕವನಗಳ ವಿಷಯ, ರಚನಾವಿಧಾನ, ಭಾಷೆ ಮತ್ತು ಶೈಲಿಗಳಲ್ಲೂ ವ್ಯಕ್ತವಾಗುತ್ತದೆ. ದಶಕಗಳ ಹಿಂದೆ ನಾವು ಒಡನಾಡಿದ್ದು ಮಾತುಗಾರ, ಮಾತಿನ ಜಾದೂಗಾರ ನಿಸಾರರನ್ನು. ಈಗ ಬದಲಾಗಿದ್ದಾರೆ. ಮಾತು ಕಡಮೆ, ವ್ಯಕ್ತಿಯಲ್ಲಿ ಕವಿಯ ಕವಿತೆಯಲ್ಲಿ. ಕವಿ ಕಲ್ಪನೆ, ಪ್ರತಿಭೆ ಕುರಿತದ್ದೆ ಆ ಹಿಂದಿನ 'ಮನೋರಮಾ' ಕವನ. 'ನೆನೆದವರ ಮನದಲ್ಲಿ' ಸಂಗ್ರಹದ್ದು: ಎರಡನೆಯ ಕವನ ಸಂಕಲನ. 'ಮನೋರಮಾ, ಮನೋರಮಾ: ಸಾಲದೇನೆ ನಿನ್ನ ಹೆಸರೆ? ಮಲಗೋಬದ ಗಮಗಮ' ಎಂದು ಪ್ರಾರಂಭ. ನಡುವೆ ಮಾತಿನ ಆಕರ್ಷಣೆ ಹೆಲೆನ್ನಳ ಸೌಂದರ್ಯವನ್ನೂ ಮೀರಿದ್ದು ಎಂಬ ಭಾವ, ಜೊತೆಗೆ:

'ನೀನಾಡುವ ಮಾತು:
ಬಾಯಿಯಿಂದ ದೊಂಬ ತೆಗೆವ ತರಾವರಿಯ ಟೇಪು
ಬಾರಿನೆದುರು ಮೆರೆವ ನಿಯಾನ್ ಗೆರೆಯ ಜಾಹೀರಾತು.'
(ಮನೋರಮಾ)

ಇದನ್ನು 'ವಿಕೃತಿ ಚಿತ್ರ' ಎಂದು ಕರೆಯುತ್ತಾರೆ. ಮಾತು ಮಾತು ಮಾತಿನ ಸೆಳೆತ ಒಂದಿಷ್ಟು ಸಕ್ಕರೆಯ ಪಾಕ ಷುಗರ್ ಕ್ಯಾಂಡಿಯಾಗಿ ಉಬ್ಬಿದಂತೆ. ಈ ಎಚ್ಚರ ನಿಸಾರರಿಗೆ ಆಗಲೇ ಇತ್ತು: 'ಈ ಮಾತಿನ ಥಾನು ಥಾನು, ಬಟ್ಟೆಯಾಗಲಾರದು.' ಆದರೆ ಆ ಸೆಳೆತದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಮಾತು ಸರಳವಾಗಿ, ಅಣು ಸಾಂದ್ರತೆಯನ್ನು ಪಡೆದಾಗ ಕವಿತೆಯ ಅರ್ಥಸಾಧ್ಯತೆಗಳೂ ಹೆಚ್ಚುತ್ತವೆ.

ಭಾಷೆ ಕೇವಲ ಮಾಧ್ಯಮವಲ್ಲ, ಕವಿಯ ಮನಸ್ಸಾಗುತ್ತದೆ. ಸುತ್ತಲ ಜಗತ್ತನ್ನು ನೋಡುವ, ಸಂವೇದಿಸುವ, ಅನುಭವಿಸುವ, ಅಂತಿಮವಾಗಿ ಆಲೋಚಿಸುವ, ಚಿಂತಿಸುವ

ವಿಶಿಷ್ಟ ವಿಧಾನವೇ ಆಗುತ್ತದೆ. ಬಳಸುವ ಶಬ್ದ, ರಚನೆ, ವಾಕ್ಯಗಳಲ್ಲೆ ಚಿಂತನೆ ರೂಪುಗೊಳ್ಳುತ್ತದೆ. ಇಡೀ ಸಮಾಜಕ್ಕೆ, ಹಾಗೆಯೇ ವ್ಯಕ್ತಿಗೂ ಇದು ಅನ್ವಯಿಸುತ್ತದೆ. ನಿಸಾರರ ಹೆಸರು ಹೇಳದೇ ಕವನ ಓದಿದರೂ ಅದು ಅವರ ಕವನ ಎಂದು ಗುರುತಿಸಬಹುದು. ಇದು ಎಲ್ಲ ಕವಿಗಳಿಗೂ ಅನ್ವಯಿಸುತ್ತದೆ, ಆದರೆ ಹುರಿಗೊಳ್ಳುವ ಪ್ರಮಾಣದಲ್ಲಿ ವ್ಯತ್ಯಾಸವಷ್ಟೆ. ನಿಸಾರರು ಶಬ್ದಗಳ ಆಯ್ಕೆಯಲ್ಲಿ ಸಹಜವೆಂಬಂತೆ ಸೇರಿಸುವ ಆಡುನುಡಿಯ ಉರ್ದು ಶಬ್ದಗಳು, ಸಂವೇದನೆಯ ವಿಶಿಷ್ಟತೆಗೂ ಬೆಳಕಾಗುತ್ತವೆ. ಶಬ್ದಗಳ ಜೊತೆಯಾಡುವ ಆಟಗಳು ತಟಕ್ಕನೆ ಇನ್ನೊಂದು ಮಗ್ಗಲು, ಇನ್ನೊಂದು ಆಯಾಮ ಒದಗಿಸುತ್ತವೆ. ಉದಾ: ಸ್ತ್ರೀಮಂತರು, ದುಡ್ಡಸ್ತಿಕೆ ಇತ್ಯಾದಿ. ನಾಮಪದಗಳನ್ನು ಕ್ರಿಯಾ ಪದವಾಗಿಸುವ, ಪ್ರತ್ಯಯಗಳ ಜೋಡಣೆಯಿಂದ ಭಾವನಾಮ ರೂಢಿನಾಮ ತದ್ಧಿತಗಳಾಗುವ ಬಗೆಯೂ ವಿಶಿಷ್ಟ. ಕೆಲವು ಉದಾ: 'ಸುರಾಪಾನರನ್ನ', 'ಅಡಗೂಲಜ್ಜಿಯ ಕತೆ ಹೇಳುವ ಅಜ್ಜಿ', 'ಶೃಂಖಲಿಸಲೊಪ್ಪದ ಸ್ವಚ್ಛಂದ ಸಂಚಾರಿ', 'ಗಾದಿಗೆಂದೂ ತಾನೆ ಮುಂದಾಗಿ ಚಿತಾವಣಿಸದ ಗಾಂಧಿಯನು ಮೋದಿ; ಷಾದಿಯಾಗದ ಈ ವಿಚಾರಪೂಜಕ ನಿರೀಶ್ವರವಾದಿ', 'ಷಹರಿಗರ ಅಸ್ತಿತ್ವ ತೊಡೆಯ ಮೇಲಿನ ಹುಣ್ಣು', 'ನರನ ಅಲ್ಪತನಕ್ಕೆ ಮೋಜಿನಾಡಂಬಯಲು', 'ಪಿಕ್ನಿಕ್ಕಿಗರ ಸಮ್ಮೇಲ', 'ನಾರಿಕೇ(ರ)ಳೀ ಪಾಕಕಿರದೆ ರಹದಾರಿ', 'ಆಗರ್ಭ ಬಂಜೆ ಈ ನಮ್ಮ ಸಾಹುಕಾರಿ', 'ಕವಿ ಜವಾಬಿಸಿದ', 'ಬಣ್ಣನೆಯಿಂದ ಭೂತಗನ್ನಡಿಸುತ್ತ'—ಇತ್ಯಾದಿ. 'ಕುರಿಗಳು, ಸಾರ್...' ಕವನವನ್ನು ಶಬ್ದ ಪ್ರಯೋಗ ದೃಷ್ಟಿಯಿಂದಲೇ ವಿಶ್ಲೇಷಿಸಲು ಸಾಧ್ಯ.

ಇವರೇ ಕಟ್ಟುವ ನುಡಿಗಟ್ಟುಗಳು ಸಮಾಸಗಳು ವಿಶಿಷ್ಟ ದೃಷ್ಟಿಯನ್ನು ವ್ಯಕ್ತಪಡಿಸುತ್ತವೆ. ರೂಪಕಗಳ ರಚನೆಯೂ ಕಾಲ-ದೇಶ-ಭಾವ-ವಿಚಾರಗಳನ್ನು ಬೆಸೆಯುವ ಬಗೆಯವು. 'ಜ್ಞಾನ ವಿಶ್ವಾಮಿತ್ರ ಧನದ ಮೇನಕೆ ಪಾದ ಒತ್ತಿರುವ ಗೌರವವಿಟ್ಟು ಒತ್ತೆ', 'ಅಪ್ಪಿತಪ್ಪಿಯೂ ಕೂಡ ಸಕ್ಕರೆಯ ಮೂಸದಿದೆ, ಕಲಬೆರಕೆ ಪ್ರಾಣ ಭಯದಿಂದ ಇರುವೆ', 'ನೆಚ್ಚು ನಂಬಿಕೆ ಹರಳು ಕಳಚಿದುಂಗುರ ಬಾಳ್ವೆ, ಗರಗಸದ ಮಸೆಹಲ್ಲು ನಿತ್ಯ ನಡಿಗೆ', 'ಪಹರೆ ತಿರುಗುವ ಬಿಸಿಲು ಇರುಳು' ಅಥವಾ ಈ ಚಿತ್ರಗಳನ್ನು ಪರಿಭಾವಿಸಿ:

> **'ಬೀಸುಗಾಳಿಯ ಮರ್ಜಿಗನುಸಾರವಾಗಿ ತಲೆ ಬಾಗಿ**
> **ದಿಕ್ಕಿಲ್ಲದಲೆದಿರುವ ಲಾಚಾರು ಕುರಿ ಮರಿಗಳು.'** (ಮರಳು ದಿಬ್ಬಗಳು)
>
> **'ರಾಜಕಾರಣ ಶಕುನಿ, ಸಿನಿಮಾ ಮೊದ್ದು ಕಣ್ಮಣಿ,**
> **ಕ್ರಿಕೆಟ್ ಶಿಖಾಮಣಿಗಳದೇ ಕೈಫಿಯತ್ತು;**
> **ಅವರದೇ ದೇಖಾವೆಯ ದೊಂಬರಾಟದ ಗರ್ದಿ ಗಮ್ಮತ್ತು.'**
> (ಸುದ್ದಿ ಮಾಧ್ಯಮಗಳು)

ಇವುಗಳ ಜೊತೆಗೇ, ನಿಸಾರರಿಗೆ ಅನುಪ್ರಾಸಗಳ ಒಲವು ಬಹಳ. ಹಿಂದೆಯೇ ಹೇಳಿದಂತೆ ಅವು ನಾದ ಮೌಲ್ಯಕ್ಕೂ ಕಾರಣವಾಗುತ್ತವೆ.

> **'ಹಚ್ಚನೆಯ ಹೊರೆ ಹೊರೆಯ**
> **ಸಮೃದ್ಧಿಯ ನೆರೆಹೊರೆಯ**
> **ಹರಯವಂತ ಕೆರೆ**

ದಾರಿಗರ ನೋಟದ ಸುರೆ, ಚಿತ್ತದ ಸೆರೆ;
ಬಿಸಿಲಿಗೆ ಫಳಫಳಿಸುವ ಅದರ ಒಂದೊಂದು ತೆರೆ
ಸಾಣೆ ಹಿಡಿದ ಕತ್ತಿ ಕಳಚಿದಂತೆ ಒರೆ.' (ಕೆರೆ)

'ಮನೆ ನಲ್ಲಿಯಲಿ ಜಳಕಿಸದೆ ಮೋರಿಯಲಿ ಮುಳುಗಿದರೆ,
ಮುಚ್ಚದಿದ್ದರೆ ಮೈಯ—ನವತೆ, ಪ್ರಗತಿ;
ವಿಲಾಯತಿ ವಿಲಾಸವತಿ ಹೊರ ಮೆರೆಸಿರಲು ಕುಡಿಸಿ ಸೆರೆ;
ಸ್ವಂತ ಸಂಸ್ಕೃತಿ ಅಡುಗೆ ಮನೆಯ ಗರತಿ.' (ಬದುಕು ಇಷ್ಟೇ)

ನಿಸಾರ್, ಮೇಲಿನ ಸಾಲುಗಳಲ್ಲಿಯಂತೆ ಟೀಕೆಗಳಿಗೆ ಪ್ರತಿಕ್ರಿಯಿಸುವುದು ಬಹು ಕಡಿಮೆ, ಧ್ವನಿ ಗ್ರಹಿಕೆ ಕಷ್ಟವೇನಲ್ಲ. ಇನ್ನೊಂದು ಬಗೆಯನ್ನೂ ಕಾಣಬಹುದು. ನೆನಪನ್ನು ಅತ್ತ ಇತ್ತ ಹಿಂದಕ್ಕೆ ಸರಿಸುವ ಸಾಲುಗಳು, ಹಿಂದಿನ ಪದ್ಯಗಳಿಗೆ ಗಮನ ಹಾಯುವಂತೆ ಮಾಡುವ ಸಾಲುಗಳು. ಡೆರಿಡಾನ ನಿರಚನೆ. deconstruction ನೆನಪಾಗುತ್ತದೆ.

'ಗುರುವಿಲ್ಲ, ಗುರಿಯಿಲ್ಲ. ಸ್ವೈರವೇ ಸರ್ವಸ್ವ.'
(ಕುವೆಂಪು : ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು)

'ಜಗತ್ತೇ ರಂಗಭೂಮಿ. ಬಹಳ ಜನ ಖಳ ನಟರು.'
(ಷೇಕ್ಸ್‌ಪಿಯರ್, ಆದರೆ ತಿರುವು ಬೇರೆ)

'ಮೀನಿನ ಬಲೆಯಲ್ಲೂ ಕಲೆಗಾರಿಕೆಯನ್ನು
ಮನಗಾಣಬಲ್ಲಾತ ರಸಿಕ;
ಜೇನುಗೂಡಿನ ಕಲೆಯಲ್ಲೂ
ರಂಧ್ರಗಳನ್ನೇ ಕಾಣುವಾದ ಸಿನಿಕ.'
('ಆನಂದ'ರ—ಎ. ಸೀತಾರಾಮ್:
'ಹೆಂಡತಿಯ ಕಾಗದ' ಕಥೆಯ ಮುಕ್ತಾಯ)

ಕೆ. ಎಸ್. ನಿಸಾರ್ ಅಹಮದರ ಕಾವ್ಯ ಈ ಹಲವಾರು ದೃಷ್ಟಿಯಿಂದ ಅನನ್ಯವೇ. ಅನುಭವದ ದೃಷ್ಟಿಯಿಂದ ಮುಕ್ತ ಮನಸ್ಸಿನ ಕವಿ, ನಮ್ಮ ನಡುವಿನ ಕವಿ. ಅವರ ಕವನಗಳಿಂದ ಕನ್ನಡ ಶ್ರೀಮಂತವಾಗಿದೆ; ವಿಶಿಷ್ಟ ಸಂವೇದನೆ, ಅನುಭವ ಸಂಪತ್ತು ಲಭಿಸಿದೆ.

ಜ್ಞಾನ ವೈನತೇಯ ಸ್ವದೇಶೀಯ ಸ್ವಾರ್ಥದ ಸಂಕುಚಿತ ಸಂಕೋಲೆಯಿಂದ ಬಂಧಿಸಲ್ಪಟ್ಟು, ಗೋಪ್ಯತೆಯ ಪಂಜರದಲ್ಲಿ ಪದರಾಡುತ್ತಿದೆ. ಸರ್ವರಿಗೆ ಸಮ ಪಾಲೆಂಬ ಸಿದ್ಧಾಂತ ಸಂವಿಧಾನಗತವಾಗಿ ಸೊರಗುತ್ತಿದೆಯೇ ವಿನಾ ಸಾರ್ವತ್ರಿಕ ಸತ್ಯವಾಗಿ ಸಾರ್ಥಕ್ಯ ಸಾಧಿಸಿಲ್ಲ.

(ಜ್ಞಾನ)



ನಿಸಾರ್ ಅವರ ಕವಿತೆಗಳಲ್ಲಿ ಸೃಷ್ಟಿ ರಹಸ್ಯ ಮತ್ತು ಬದುಕಿನ ತಾತ್ವಿಕ ಜಿಜ್ಞಾಸೆ

♦ ಡಾ. ಬಿ. ಎನ್. ಸುಮಿತ್ರಾಬಾಯಿ

ನವೋದಯ ಯುಗದ ಸಿರಿವಂತ ಕಾವ್ಯದಿಂದ ಪೋಷಿತವಾಗಿ ಹೊಮ್ಮಿದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಹೆಸರು ನವ್ಯದ ಉತ್ಕರ್ಷದ ಅವಧಿಯಿಂದ ಹೆಚ್ಚು ಪ್ರಸಿದ್ಧವಾಯಿತು ನಿಜ, ಆದರೆ ಅವರ ಕಾವ್ಯ ನವ್ಯ, ಬಂಡಾಯ, ಬಂಡಾಯದ ಅನಂತರದ ವಿವಿಧ ಕಾವ್ಯ ಪಂಥಗಳನ್ನೂ ಮೀರಿ ತನ್ನದೇ ವಿಶಿಷ್ಟ ಸೊಗಡನ್ನು ಉಳಿಸಿಕೊಂಡು ತಾಳಿ ಬಾಳಿ ಬೆಳೆದು ಬಂದಿದೆ. ಐವತ್ತಕ್ಕಿಂತ ಹೆಚ್ಚು ಸಂವತ್ಸರಗಳಿಂದ ಹರಿದು ಬರುತ್ತಿರುವ ಅವರ ಕಾವ್ಯಧಾರೆಯಲ್ಲಿ ಎಲ್ಲೆಲ್ಲೂ ಬದುಕು, ಕಾವ್ಯ, ಕಲೆ, ಜೀವನ ಮೌಲ್ಯಗಳ ಚಿಂತನೆ ಬೆಸೆದುಕೊಂಡೇ ಕಾವ್ಯ ಸೃಷ್ಟಿಯಾಗಿರುತ್ತದೆ. ಹಾಗಿರುವಾಗ ಕೆಲವೇ ಕವಿತೆಗಳಲ್ಲಿ ಬದುಕಿನ ಬಗೆಗಿನ ತಾತ್ವಿಕ ನಿಲವೇನೆಂದು ಹುಡುಕಲು ಯತ್ನಿಸುವುದೇ ಒಂದು ವಿರೋಧಾಭಾಸ ಎಂದು ತೋರಬಹುದು. ಆದರೂ ಬದುಕಿನ ಬಗೆ ಬಗೆಯ ಅನುಭವಗಳ ಭಾರದಿಂದ ಹೈರಾಣಾದ ಕವಿಯ ಚಿತ್ತ ಯಾವುದೋ ಧ್ಯಾನಸ್ಥ ಗಳಿಗೆಗಳಲ್ಲಿ ಸಂದ ಬಾಳಿನ ಅರ್ಥವೇನೆಂದು ತಾತ್ವಿಕ ಚಿಂತನೆಯಲ್ಲಿ ತೊಡಗುವುದು ಸಹಜ. ಅಂತಹ ಚಿಂತನೆಯಲ್ಲಿ ಹೊಳೆದ ಅರಿವನ್ನು ಕಾವ್ಯವಾಗಿಸುವುದು ಮತ್ತೂ ಸಹಜ ನಿಸಾರರಂಥ ಕವಿಗೆ. ಆ ರೀತಿಯಲ್ಲಿ ಮನಸ್ಸು ಹುತ್ತಗಟ್ಟಿದಾಗ, ತಪ ನಿಂತ ಮನದಿಂದ ಹೊಮ್ಮುವ ವಿಚಾರ ಎಷ್ಟೇ ಬಿಡಿ ಬಿಡಿಯದಾಗಿರಬಹುದು; ತೀರ ಅಲ್ಪ ಸ್ಥಾಯಿಯಾಗಿರಲೂ

ಸಾಧ್ಯ. ಆದರೆ ನಿಸಾರ್ ಅಹಮದ್ ಅವರ ಪ್ರತಿಭೆ ಇಂಥ ಬಿಡಿ ಬಿಡಿಯಾದ ಕಿರು ವಿಚಾರದ ಅಲೆಗಳನ್ನೆಲ್ಲ ಬದುಕಿನ ದಿನನಿತ್ಯದ ದೃಷ್ಟಾಂತಗಳಲ್ಲಿ ಹಿಡಿದು ಸುಂದರ ರೂಪಕಗಳ ಸರಮಾಲೆಯನ್ನು ಸೃಷ್ಟಿಸಿಬಿಡುವ ರೀತಿಯದು. ಸಾಮಾನ್ಯ ಬದುಕಿನ ತೀರ ಪರಿಚಿತವೆನಿಸುವ ವಸ್ತುಗಳು, ಘಟನೆಗಳು, ಸನ್ನಿವೇಶಗಳು, ದೃಶ್ಯಗಳನ್ನೇ ನಯವಾಗಿ ಎತ್ತಿಕೊಂಡು ನಾಜೂಕಾಗಿ ಎಚ್ಚರದಿಂದ ಅದ್ಭುತ ಪ್ರತಿಮೆಗಳನ್ನು ನಿಸಾರರು ನಿರ್ಮಿಸಬಲ್ಲವರು. ಆಧುನಿಕ ಸುಶಿಕ್ಷಿತ ಸಂವೇದನಾಶೀಲ ಮನಸ್ಸುಗಳು ಅಪೇಕ್ಷಿಸುವ ರೀತಿಯಲ್ಲಿ ಚರಿತ್ರೆ, ಜೀವ ವಿಜ್ಞಾನ, ರಾಜಕೀಯ, ಸಾಂಸ್ಕೃತಿಕ ವಿದ್ಯಮಾನಗಳ ಹಲವು ರೀತಿಯ ಅರಿವುಗಳು ನಿಸಾರರ ಕವಿತೆಗಳೊಳಗೆ ಹದವಾಗಿ ಬೆಸೆದುಕೊಂಡು ಕಾಣಿಸಿಕೊಳ್ಳುತ್ತವೆ. ಈ ಯಾವೊಂದು ಅರಿವೂ ತನ್ನಷ್ಟಕ್ಕೇ ಮುಖ್ಯವಾಗಿ ಬಿಡುವ, ಬೌದ್ಧಿಕತೆಯೆಲ್ಲ ಒಂದು ತೋರ್ಕೆಯಾಗಿಬಿಡುವ ಅಪಾಯದಿಂದ ನಿಸಾರರು ಸದಾ ದೂರವಿದ್ದಾರೆ. ಆದ್ದರಿಂದ ಅವರ ಕವಿತೆಗಳಲ್ಲಿ ಮೈ ತಳೆಯುವ ಯಾವುದೇ ಜ್ಞಾನ ಮುಖ್ಯವಾಗಿ ಬದುಕಿನ ವಿವೇಚನೆಯಲ್ಲಿ ಪೂರಕವಾಗಿ ಬರುತ್ತದೆ. ಅಲ್ಲದೆ ಉರ್ದು, ಇಂಗ್ಲಿಷ್, ಪರ್ಷಿಯನ್ ಶಬ್ದಗಳನ್ನು ಸಲೀಸಾಗಿ ಕನ್ನಡ ಪದಗಳ ಜೊತೆ ತಂದು ನಿಲ್ಲಿಸಿ, ಪದಗಳನ್ನು ರೂಢಿಗತ ಮಾರ್ಗದಿಂದ ಭಿನ್ನವಾಗಿ ಕೂಡಿಸಿ, ಕಳೆದು, ಗುಣಿಸಿ, ಭಾಗಿಸಿ, ಹೊಸ ಅರ್ಥ ಪರಂಪರೆಯನ್ನು ನಿರ್ಮಿಸುವ ಶಬ್ದ ಕೌಶಲ ನಿಸಾರರಿಗೆ ಕರಗತವಾದದ್ದು. ಈ ಎಲ್ಲ ಗುಣಗಳ ಹಿನ್ನೆಲೆಯಲ್ಲಿ ನಿಸಾರರ ಬದುಕಿನ ಜಿಜ್ಞಾಸೆ ಹಾಗೂ ಸೃಷ್ಟಿ ರಹಸ್ಯ ಕುರಿತ ಅವರ ಚಿಂತನೆಗಳುಳ್ಳ ಕವಿತೆಗಳನ್ನು ಇಲ್ಲಿ ಮುಖ್ಯವಾಗಿ ಪರಿಶೀಲಿಸಲು ಯತ್ನಿಸಿದ್ದೇನೆ.

(i) ಸೃಷ್ಟಿ ರಹಸ್ಯದ ಜಿಜ್ಞಾಸೆ :

ಆಧುನಿಕ ವೈಜ್ಞಾನಿಕ ಚಿಂತನೆಗಳ ಮೂಲಕವಾಗಿ ಲೋಕ ಸೃಷ್ಟಿಯ ರಹಸ್ಯ ಶೋಧನೆಯನ್ನು, ಆಧ್ಯಾತ್ಮಿಕದ ನೆಲೆಗೆ ಕೊಂಡೊಯ್ಯಲು ನಿಸಾರರ ಕವನಗಳು ಯತ್ನಿಸುತ್ತವೆ. ಹೀಗಾಗಿ ಸತ್ಯ ಶೋಧನೆಯ ಈ ಯತ್ನದಲ್ಲಿ ವಿಜ್ಞಾನಿಯ ವಸ್ತುನಿಷ್ಠ ದೃಷ್ಟಿಕೋನವೂ ದಾರ್ಶನಿಕನ ಸ್ಥಿತಪ್ರಜ್ಞತೆಯೂ ಸಮವಾಗಿ ಕೈ ಜೋಡಿಸುತ್ತವೆಂಬುದನ್ನು ಕಾಣಬಹುದು. ಜೀವಸೃಷ್ಟಿ, ಲೋಕದ ಸೃಷ್ಟಿ ಅಥವಾ ಕಾವ್ಯ ಇಲ್ಲವೆ ಕಲೆಯ ಸೃಷ್ಟಿಯ ಮೂಲದ ರಹಸ್ಯವೇನೆಂದು ಅನ್ವೇಷಿಸಹೊರಡುವ ಮಾನವ ಪ್ರಜ್ಞೆಗೆ ತೊಡರಾಗುವುದು ಸೃಷ್ಟಿಯ ನಿಗೂಢ ಸ್ವರೂಪವೇ. ಸೃಷ್ಟಿ ತನ್ನ ರಹಸ್ಯವನ್ನು ತನ್ನ ಬಿಗಿ ಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡು ಯಾವತ್ತೂ ಯಾರಿಗೂ ಅದನ್ನು ಬೆಳಕಿಗೆ ತರಲು ಸಹಾಯ ಮಾಡುವುದಿಲ್ಲ. ಸೃಷ್ಟಿಯ ಆ ಒಳಗಿನ ನಿಜವೇನೆಂದು ಕಂಡುಕೊಳ್ಳಲು ಹೊರಟ ಮನುಷ್ಯನಿಗೆ ರಹಸ್ಯ ಭೇದನೆಗೆ ಯಾವುದೇ ಮಂತ್ರ/ಕೀಲಿಕೈಯ ನೆರವಿಲ್ಲದೆ ಅವನು ಅಸಹಾಯಕ. ಹೀಗೆ ಆ ಸೃಷ್ಟಿ ಅವನ ಪಾಲಿಗೆ `ಮಂತ್ರ ಮರೆತಲಿಬಾಬನೆದುರು ಮುಚ್ಚಿರುವ ಗವಿ ಬಾಗಿಲು` ಎಂದು ಆರಂಭವಾಗುವ ಕವಿತೆ `ಕಂಡಷ್ಟೆ ಸತ್ಯವಲ್ಲ`.

ಕವಿತೆ ಮುಂದೆ ಸಾಗಿದಂತೆ, ಸೃಷ್ಟಿ ರಹಸ್ಯಮಯವಷ್ಟೇ ಅಲ್ಲ; ಅದರ ರೀತಿ ರಿವಾಜು, ಸ್ವರೂಪ ತುಂಬ ಗೋಜಲು ಗೋಜಲು, ತೀರಾ ಸಂಕೀರ್ಣವೂ ಹೌದೆಂಬುವರತ್ತ

ಗಮನ ಸೆಳೆಯುತ್ತದೆ.

> 'ಜೀವ ಜೀವಾಳಗಳ ಗಡಿ ಗೆರೆಗಳೆಲ್ಲವೂ ಒಂದನೊಂದಾಕ್ರಮಿಸಿ,
> ಒಂದನಳಿಸುತ ಒಂದು, ಹಾದು ಒಂದರ ಮೇಲೆ ಇನ್ನೊಂದು, ಅಂಗೈಯ-
> ರೇಖೆಯಂತೊಳಗಡೆಯೆ ಕಲಸಿ ಆಗಿವೆ ಮೇಳ'

ಈ ಗೊಂದಲದ ಮೇಳದಲ್ಲಿ ದೂಳಲ್ಲಿ ಸಿಕ್ಕಿಕೊಂಡಿದೆ ಜೀವಿಗಳ ಹುಟ್ಟುಸಾವಿನ ಮೊದಲ ಅಳತೆಗೋಲು. ಯುಗಕ್ಕೊಮ್ಮೆ ಯಾರೋ ಮಹಾ ಚತುರ ಈ ಕಷ್ಟಕರ ರಹಸ್ಯವನ್ನು ಅಥವಾ ಅದರ ಯಾವುದೋ ಹೊಳಹನ್ನು ಕಾಣಬಹುದು. ಆದರೆ ಆ ಕಾಣ್ಕೆ ಕೂಡ ಪೂರ್ಣರೂಪದ್ದಲ್ಲ. ಮಾನವರ ಮಾನದಂಡದಲ್ಲಿ ಅವನೆಷ್ಟೇ ದೊಡ್ಡ 'ದರ್ಶನ' ಸಿದ್ಧಿಸಿಕೊಂಡವನು ಎನಿಸಿದರೂ ಸೃಷ್ಟಿಯ ಅಗಾಧದ ಸ್ವಯಂ ನಿಯಾಮಕ ಶಕ್ತಿಯೆದುರಲ್ಲಿ ಅವನು ತೀರಾ ಅಲ್ಪ 'ನರಪಿಳ್ಳೆ':

'ಒಳಗುಟ್ಟನ್ನು/ಹಲ್ಲು ಕಿರಿದುಬ್ಬುತ್ತ ಮುಟ್ಟಲಿಂದಿನ್ನೇನು/ಕೈನೀಡುವಷ್ಟರಲ್ಲೇ ನಮ್ಮ ಈ ನರಪಿಳ್ಳೆ ಗುಳ್ಳೆಯಾಗೊಡೆಯುವನು' ಅವನಿಂದ ರಹಸ್ಯ ಬಯಲಾಗುವ ಬದಲು ಅವನ ರಹಸ್ಯವೇ ಒಡೆದು ಬಯಲಾಗುತ್ತದೆ. ಅವನ ದರ್ಶನ 'ಬರಿ ಮಬ್ಬು ಮಬ್ಬು. ಹೊರ ರಂಗೋ ಚಮಕೋ, ಅಷ್ಟಕ್ಕೆ ತಬ್ಬಿಬ್ಬು. ಅವನಿಗಿಷ್ಟೇ ಕಾಣ್ಕೆ. ಸಿಪ್ಪೆ ತೆಳುವನು ಜಿಬುಕಿ/ ಒಳ ತಿರುಳ ಸವಿದಂಥ ಖುಷಿಯ ಷೋಕಿ.'

ನಿಸರ್ಗ ಅಥವಾ ಸೃಷ್ಟಿ ರಹಸ್ಯ ಶೋಧನೆಯ ಯತ್ನ ಎಷ್ಟೇ ನಿರರ್ಥಕವೆಂಬ ಅರಿವು ಈ ಕವಿಯನ್ನು ವಿಷಾದ, ವ್ಯಂಗ್ಯಗಳಿಂದ ನುಡಿಯುವಂತೆ ಮಾಡಿದ್ದರೂ ನಿಸಾರರದು ಮೂಲಭೂತವಾಗಿ ಆಶಾವಾದಿ ದೃಷ್ಟಿಯಾಗಿಯೇ ಈ ಕವನದಲ್ಲಿ ವ್ಯಕ್ತಗೊಳ್ಳುತ್ತದೆ:— 'ಕಾಣಿಸದ ಕಡೆಗಿರಬೇಕು ಕಾಣುವಾಸೆಯ ನೋಟ| ಮನಸಿನನುಮಾನ.' ಆದರೆ ಹೊಸತನ್ನು ಹುಡುಕುವ ಖಯಾಲಿಗೆಂದೇ ಹೊಸತನ್ನು ಸೃಷ್ಟಿಸಹೊರಟು, ಅದಕ್ಕೇ ಎದೆ, ಮೈ ಮಾರಿಕೊಂಡರೆ ಬುದ್ಧಿ ತೂಕ ತಪ್ಪಿ ಕೊನೆಗೆ ಈ ಯತ್ನದಲ್ಲಿ ಉಳಿಯುವುದು 'ಕುಂಟು ಕಾಲಿನ ಕುದುರೆ, ಬಂಜೆ ಗೋವಿನ' ಸ್ಥಿತಿ ಮಾತ್ರ. ಇಂದಿನ ಯುಗದ ಆವಶ್ಯಕತೆ ಹೀಗೆ ನವ್ಯಾತಿನವ್ಯದ ಹುಡುಕುವ ಷೋಕಿಯದಲ್ಲ. ಬದಲಾಗಿ, 'ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ/ಬೆಸೆದು ಹೊಸೆಯುವ ಕಲೆ' ಎಂಬುದನ್ನು ಕವಿ ಸೂಚಿಸುತ್ತಾರೆ. ಕಳೆದ ಶತಮಾನದಲ್ಲಿ ನಿಸಾರರು ಮೆಚ್ಚುವ ಹಿರಿಯ ಕವಿ ಡಿ.ವಿ.ಜಿ.ಯವರು 'ಮಂಕುತಿಮ್ಮನ ಕಗ್ಗ'ದಲ್ಲಿ ಹೇಳಿದ್ದಾರೆ:

> 'ಹೊಸ ಚಿಗುರು ಹಳೆ ಬೇರು / ಕೂಡಿರಲು ಮರ ಸೊಬಗು
> ಹಳೆ ತತ್ತ್ವದೊಡನೆ ವಿಜ್ಞಾನ ದಿಸೆ ಮೇಳವಿಸೆ ಜಸವು ನಿನಗಾಹುದೆಲೊ ಮಂಕುತಿಮ್ಮ'

ನಿಸಾರರು ಹೇಳುವ ಹೊಸತು ಹಳೆಯದರ ಸಂಯುಕ್ತ ಅರಿವಿನ ತತ್ತ್ವ ಒಂದು ರೀತಿಯಲ್ಲಿ ಡಿ.ವಿ.ಜಿ.ಯವರ ವಿಚಾರದ ಮರುಕಳಿಕೆಯ ಹಾಗೆ ಅನ್ನಿಸಿದರೂ ಡಿವಿಜಿ ಎದುರಿಗೆ ಇದ್ದದ್ದು ನವೋದಯದ ನವೋತ್ಸಾಹದ ಹೊಸತನ್ನು ಸೃಷ್ಟಿಸುವ ಆಶಯ. ಆಂಗ್ಲ ಶಿಕ್ಷಣ ಪಡೆದ ಭಾರತೀಯ ಮನಸ್ಸು ತನ್ನ ದೇಶೀಯ ಸಂಸ್ಕೃತಿಯನ್ನು ಆ ಹೊಸ ಅರಿವಿನ

ನೆರವಿನಿಂದ ಪುನರುಜ್ಜೀವನಗೊಳಿಸುವತ್ತ ಹೊಂದಿದ್ದ ಮಹತ್ವಾಕಾಂಕ್ಷೆ ಅಲ್ಲಿತ್ತು. ಆದರೆ ನಿಸಾರರು ಈಗ ಹೇಳುತ್ತಿರುವ ಹೊಸತೆಂಬುದು ಹಳೆಯ ದರ್ಶನಗಳ ಸಾರವನ್ನು ಅರಗಿಸಿ ಕೊಂಡೇ ಮೈ ತಳೆಯಬೇಕು ಎಂಬ ಮಾತು ಆಧುನಿಕೋತ್ತರ ಸಾಂಸ್ಕೃತಿಕ ಚಿಂತನೆಯತ್ತ ನಮ್ಮನ್ನು ಕರೆದೊಯ್ಯುತ್ತದೆ. ನಿಸಾರರ ನುಡಿಗಳ ಹಿಂದೆ ಶತಮಾನದುದ್ದಕ್ಕೂ ಸಂಸ್ಕೃತಿ ಕಂಡ ಹಲವು ನಿಟ್ಟಿನ ಆಂದೋಲನಗಳ, ಹೊಸ ಉಮೇದುಗಳ ಸಾಧನೆ—ವೈಫಲ್ಯ ಅಥವಾ ಮಿತಿಗಳ ಅರಿವು ಕಣ್ಣೆದುರಿಗಿದೆ ಎಂಬುದನ್ನು ಕಾಣಬೇಕು. ಹೀಗೆ ಒಂದರ್ಥದಲ್ಲಿ ಹಳೆ ತತ್ತ್ವದ ಹೊಸ ರೀತಿಯ ಮರು ಆವಿಷ್ಕಾರದ ಉದಾಹರಣೆ ನಿಸಾರರ ನುಡಿಯಲ್ಲೇ ಇದೆ.

(ii) ಸೃಷ್ಟಿಯ ಪ್ರಕ್ರಿಯೆ ನಿಜವಾಗಿ ಎಷ್ಟು ಹೊಸತನ್ನು ಒಳಗೊಳ್ಳುತ್ತದೆ, ಅದರಲ್ಲಿ ಹಳೆಯದರ ಪಾತ್ರವೇನು ಎಂಬುದನ್ನು ಚಿಂತನೆಗೆ ಒಳಪಡಿಸುವ ಕವನ 'ಅಂತಃಸತ್ವ'. ಸೃಷ್ಟಿಯ ಹೊಸತನವೇನಿದ್ದರೂ ಹೊರಗಿನ ಆಕಾರಕ್ಕೆ ಸಂಬಂಧಿಸಿದ್ದು. ಅದರ ಒಳ ತಿರುಳು ಎಲ್ಲ ಕಾಲದಲ್ಲೂ ಉಳಿದುಬಂದಿರುವುದೇ ಆಗಿರುತ್ತದೆಂಬುದೇ ಕವನದ ಮುಖ್ಯ ವಿಚಾರ. ಸೃಷ್ಟಿಯಲ್ಲಿ ಮೈ ತಳೆಯುವ ಜೀವ ನಿರಂತರವಾಗಿ ತನ್ನ ಗತಿಯನ್ನು ಬದಲಿಸುತ್ತಾ, ತಿರುವು ಮುರಿವಿಗೆ ಒಗ್ಗಿಕೊಳ್ಳುತ್ತ ಕಾಲದ ಎತ್ತರಕ್ಕೆ ಒತ್ತರಿಸಿದ ಹಾಗೆಯೇ ಜೀವದ ಒಳ ತಿರುಳು 'ಆಕೃತಿಸು'ತ್ತಿದ್ದರೂ ಅದರದೇ ನಿಯಮದೊಳಗಿನಿಂದ ಹೊಸತೊಂದು ಇದ್ದಕ್ಕಿದ್ದಂತೆ ಆವಿಷ್ಕರಿಸಿಬಿಡಬಹುದು. ಹೊಸತನದ ಈ ಆವಿಷ್ಕಾರದ ಗಳಿಗೆ ತುಂಬ ವಿಶಿಷ್ಟವಾದ ಅನುಭವ. ಆ ಅನುಭವ 'ಕ್ಷಣದ ಮಿತಿಯಲ್ಲಿ ಶಾಶ್ವತ ಹಾಯುವಂತೆನಿಸುವ' ಈ ಹೊಸತು ಅನುಭವ ವಿಶೇಷ : 'ಸರಕ್ಕನೆ ನಿನ್ನನಾವರಿಸಿ ಹಗುರ ನರಳಿಸುವ, ನೋವೋ ನಲಿವೋ ಅನ್ನಿಸುವ ಧನ್ಯ ಪ್ರಿಯಾಘಾತಗಳಲ್ಲಿ| ಸಾಂತಕಾನಂತ್ಯದ ಬೆಳಕಿಂಡಿ.' ನೋವೂ ನಲಿವೂ ಧನ್ಯವೂ ಪ್ರಿಯವೂ ಆದ, ಅಂತ್ಯವಿದ್ದೂ ಅನಂತರೂಪಿಯಾದರೂ ಆ ಅನುಭವ ತಾನೇ ಬೆಳಕಲ್ಲ; ಅದು ಕೇವಲ 'ಬೆಳಕಿಂಡಿ'ಯಷ್ಟೆ. ಅಲ್ಲದೆ ಎಷ್ಟೆ ಹೊಸತಾಗಿ ತೋರಿದರೂ ಈ ಅನುಭವ ಕೂಡ ಶಾಶ್ವತವಲ್ಲ. ಕಾಲದ ಗತಿಯಲ್ಲಿ ಜೀವ ಗತಿ ಕೂಡ ಹಳತು ಹೊಸತುಗಳಿಗೆ ಆಕಾರ ಕೊಡುತ್ತಲೇ ಸಾಗುತ್ತದೆ. ಹೊರ ಆಕಾರ ಅಂದಂದಿನ ಸ್ಥಿತಿಗೆ ಬದ್ಧವಾಗಿದ್ದರೂ ಪ್ರಾಣಕ್ಕೆ ಪ್ರಾಚ್ಯದಲ್ಲೇ ಪ್ರೀತಿ. 'ಮರೆವಿನಲ್ಲೂ ಅರಿವಿಗೆ ಮೀರಿ ಹರಡಿಕೊಳ್ಳುವ ನೆನಪಿನ ಗಂಧಗಳು, ನಿಶ್ಶಬ್ದದ ಒಳಗಿನ ಬಾವಿಯಾಳದ ಶಬ್ದದಂಥ ಆಕ್ರಂದನಗಳು, ಬೆರಳು ತಾಗಿದರೆ ಮೆತ್ತುಕೊಂಡು ಬಿಡುವ ಚಿಟ್ಟೆ ರೆಕ್ಕೆಯ ಕೋಮಲತೆಗಳು ನಿಧಾನವಾಗಿ ವ್ಯಾಪಿಸಿ ಕಾಡುವ ವನಗಳ ಅನಾಕಾರ ಘನ ಮೌನಗಳು'—ಯಾವುದೂ ಹೊಸತಲ್ಲ. ಅವು ಮನುಷ್ಯನದೇ ಆರ್ಷೇಯ ಅನುಭವಗಳ ಲೋಕಾರೋಪಿತದ ಮರುಕಳಿಕೆ ಗಳು ಮಾತ್ರ. ಅನುಭವದ ಈ ತಿರುಳು ಸದಾ ಕಾಲಕ್ಕೂ ತಾಳಿ ಬಾಳಿ ಬರುತ್ತಿದೆ.

'ಆದಿಯನರಿಯದ ಪಯಣ' ಎಂಬ ಕವನದಲ್ಲಿ ನಿಸಾರರು ಸೃಷ್ಟಿಕ್ರಿಯೆಯಲ್ಲಿನ ಹೊಸತು ಹಳತುಗಳ ಪಾಲೇನು? ಎಂಬ ಜಿಜ್ಞಾಸೆಗಿಂತ ಭಿನ್ನವಾಗಿ ಸೃಷ್ಟಿಯ ಸಮಗ್ರ ಬದುಕಿನ ಚಲನೆಯಲ್ಲಿ ಜೀವಿಗಳೇ ಕೇವಲ ಸಾಪೇಕ್ಷ ಸಾಧನವಾಗಿರುತ್ತವೆ ಎಂಬ ವಿಚಾರವನ್ನು ಶೋಧಿಸುವ ಪ್ರಯತ್ನ ಮಾಡುತ್ತಾರೆ.

ಸೃಷ್ಟಿಯ ಗತಿ, ಆದಿ ಅಂತ್ಯಗಳಿರದ 'ಕತ್ತಲ ಪಯಣ.' ಅದರಲ್ಲಿ ಪ್ರಾಣಗಳು ತೊಡುವ ಕಳಚುವ ದೇಹಗಳಿಗೆ ಯಾವ ಲೆಕ್ಕವೂ ಇಲ್ಲ; ಅವುಗಳಿಗೆ ಜಾಗ ತೆರವೂ ಇಲ್ಲ. ನಿರಂತರ ಹುಟ್ಟುತ್ತ ಸಾಯುತ್ತ ನಾಶವಾಗುತ್ತಾ ಸಾಗುವುದೇ ಜೀವಿಗಳ ವಿಧಿ. ಹೀಗೆ ಪಹರೆ ಹೊರಟ ಜೀವಕ್ಕೆ ಹಾದಿಯಲ್ಲಿ ಸಿಗುವ ತಿರುವೇ ಬದುಕು. ಅದು ಕೂಡ ಮುಂದಿನ ಸರದಿಗೆ ಒಂದು ನಿಲ್ದಾಣ ಮಾತ್ರ. ಇಂಥ ಸೃಷ್ಟಿಯಲ್ಲಿನ ಮಾನವನ ನೆಲೆಯೆಂಬುದು ಬರಿಯ 'ಮಣ್ಣಿನ ಕಣ್ಣಿನ ಬೆರಗು'. ಈ ನಶ್ವರವನ್ನು ಶಾಶ್ವತವಾಗಿ ಉಳಿಸಿಡುವ ಭ್ರಮೆಯಲ್ಲಿ ಮಾನವರು ಮಾಡದೆ ಇರುವ ಯತ್ನಗಳಿಲ್ಲ. 'ಸ್ವರ್ಣಾಕ್ಷರಗಳಲ್ಲಿ ಕೀರ್ತಿ ಕೆತ್ತಿಸುವ', 'ಸ್ಮಾರಕ ನಿಲ್ಲಿಸುವ' ಮಂದಿ ಕೂಡ 'ನಡೆ'ದು 'ಮಡಿದವರೇ.' 'ನೆನಪಿನ ಹಾಯಿ'ಯನ್ನು 'ಕಾಲದ ಕಡಲಲ್ಲಿ' ತೇಲಿಸಿದವರೂ 'ಮಾಯೆಯ ಸೋಲಿಸಿದವರೂ' ಇಲ್ಲಿ ಬೀಗುತ್ತ ಉಳಿಯುವಂತಿಲ್ಲ. ಮನುಷ್ಯ ತನ್ನನ್ನು ಶಾಶ್ವತವಾಗಿ ಬದುಕಿಗೆ ಕಟ್ಟಿಕೊಳ್ಳಲು ಕಂಡುಕೊಂಡ ಬಲವಾದ ನಂಟು ಪ್ರೇಮ. ಆದರೆ ಅದೂ ಸಹ ಪ್ರಕೃತಿ ತನ್ನನ್ನು ಕಾಯ್ದುಕೊಳ್ಳುವ ತಂತ್ರವೇ. ಬದುಕೆನ್ನುವುದು 'ಉಸಿರಿನ ಮೇಳ'ವಾಗಿದ್ದು ಲೋಕ ಅದಕ್ಕೆ ಹಿಮ್ಮೇಳವಾಗಿ ನರರನ್ನು ಕುಣಿಸಿದೆ. ಈ ಕುಣಿತದಲ್ಲಿ ಸಂತಸ, ಕೀರ್ತಿಗಳ ರಾಶಿಯೇ ಎದುರಾದರೂ ಅವು ತೋರುವ ಹಾದಿ 'ಬರಿ ನೆರಳ' ದಾರಿ.

ಬಹುಶಃ ಬದುಕಿನ ಎಲ್ಲಾ ಅಂಶಗಳ ನಶ್ವರತೆಯನ್ನೇ ತೀವ್ರವಾಗಿ ಸಾರಿ ಹೇಳುವಂಥ ಇಂಥ ಧೋರಣೆ ನಿಸಾರರ ಕವನಗಳಲ್ಲಿ ಇದನ್ನು ಬಿಟ್ಟರೆ ಬೇರೆಲ್ಲೂ ಇಲ್ಲ. ಎಲ್ಲ ಬಗೆಯ ನಿರಾಶಾದಾಯಕ ವಾಸ್ತವದೆದುರಲ್ಲೂ ಬದುಕಿನ ಒಟ್ಟಾರೆ ಪ್ರಕ್ರಿಯೆಯೇ ಮುಖ್ಯವೆಂದು, ಬದುಕಿನ ಔತ್ಸುಕ್ಯ ಕಳೆದುಕೊಳ್ಳಬಾರದೆಂಬ ನಿಲವನ್ನೇ ನಿಸಾರರ ಬಹುತೇಕ ಕವನಗಳು ಎತ್ತಿಹಿಡಿಯುತ್ತವೆ. ಈ ಕವನದಲ್ಲಿ ಆತ್ಯಂತಿಕ ನಿರರ್ಥಕತೆಯೇ ಕಾಣಸಿಗುವುದು ಯಾದೃಚ್ಛಿಕ ವಾಗಿ ತಲೆದೋರಿ ಮಾಯವಾಗುವ ಧೋರಣೆಯಾಗಿ ಕಾಣಿಸುವುದಿಲ್ಲ. ಬದಲಾಗಿ ನಿಸಾರರ ಇತ್ತೀಚಿನ ಕವನ ಸಂಕಲನಗಳಲ್ಲಿ ವಿಶೇಷತಃ, 'ಆಕಾಶಕ್ಕೆ ಸರಹದ್ದುಗಳಿಲ್ಲ' ಹಾಗೂ 'ಅರವತ್ತೈದರ ಐಸಿರಿ' ಸಂಕಲನಗಳಲ್ಲಿ ಕಾಣಿಸುವ ಧಾರ್ಮಿಕ-ಆಧ್ಯಾತ್ಮಿಕ ಒಲವುಗಳಿಗೆ ಈ ಕವನ ಮೊದಲ ಪೀಠಿಕೆಯೆನ್ನಬಹುದು.

(iii) ಸೃಷ್ಟಿ ರಹಸ್ಯದ ಕವಿಯ ಶೋಧನೆ ಬ್ರಹ್ಮಾಂಡ, ಪ್ರಕೃತಿಯ ನೆಲೆಯಿಂದ ಕಾವ್ಯ, ಕಲೆಗಳ ಸೃಷ್ಟಿಯತ್ತ ಹೊರಳಿದಾಗ, ನಿಸಾರರು ತಮ್ಮ ಮಗ್ಗುಲಲ್ಲಿ ಆಗಿಹೋದಂಥ ಹಲವು ಸಾಹಿತ್ಯ ಚಳುವಳಿಗಳಿಗೆ ಸೃಜನಶೀಲ ನೆಲೆಯಲ್ಲಿ ತೋರಿರುವ ಪ್ರತಿಕ್ರಿಯೆಗಳು ನಮಗೆ ಎದುರಾಗುತ್ತವೆ. ಕಲಾಸೃಷ್ಟಿ ಅಥವಾ ಕಾವ್ಯಸೃಷ್ಟಿಯ ಪ್ರಕ್ರಿಯೆಯನ್ನು ಕುರಿತಂತೆ ಎರಡು ಬಗೆಯ ನಿಲವುಗಳು ನಿಸಾರರ ಜಿಜ್ಞಾಸೆಗೆ ಒಳಗಾಗುತ್ತವೆ—'ಮರೆಯ ಮುಖ' ಎಂಬ ಕವನದಲ್ಲಿ. ಮೊದಲನೆಯ ನಿಲವು ಸೃಷ್ಟಿಯ ಪ್ರಕ್ರಿಯೆಯೆಂಬುದು ಭೂತಕಾಲದ ಅನುಭವವನ್ನು ಮೀಟಿ ವರ್ತಮಾನಕ್ಕೆ ತರುವ ಯತ್ನವೆಂದು ನಂಬುವ ರೀತಿಯದು. ಎರಡನೆಯ ನಿಲವು ಸದ್ಯದ ಬದುಕಿನ ತುರ್ತಿಗೆ ತುಡಿಯುತ್ತ ಅನುಭವಗಳ ನೇರವೂ ಬಾಹ್ಯರೂಪದ್ದೂ ಆದ ಲಕ್ಷಣಗಳನ್ನು ಹೇಳುವುದೇ ಕಾವ್ಯಸೃಷ್ಟಿಯ ಸತ್ವಯುತ ರೀತಿಯೆನ್ನುವ

ಧೋರಣೆ. ನಿಸಾರರ ದೃಷ್ಟಿಯಲ್ಲಿ ಇವೆರಡೂ ಸತ್ಯದ ಸಾರವಾಗಲಾರವು. ಸತ್ಯಕ್ಕೆ ಕೇವಲ ಗತ ಕಾಲ ಅಥವಾ ಕೇವಲ ವರ್ತಮಾನಗಳಲ್ಲೇ ಉಳಿದಿರದ, ಕಾಲಾತೀತವಾದ, ವ್ಯಕ್ತವಲ್ಲದ, ಇಂದ್ರಿಯ ಹಾಗೂ ಬುದ್ಧಿಗಳಿಂದ ಅರಿಯಲಾಗದ ಇನ್ನೊಂದು ಅವ್ಯಕ್ತ ಮುಖವೂ ಇದೆ ಎಂಬುದನ್ನು ಅವರು ವಿವೇಚಿಸುತ್ತಾರೆ.

ವ್ಯಕ್ತವಾದ ವರ್ತಮಾನದ ಆಗುಹೋಗುಗಳಿಗೆ ಬದುಕಲ್ಲಿ ಪ್ರತಿಕ್ರಿಯಿಸುವುದು ಬೇರೆ. ಸದ್ಯದ ಬದುಕಿನ ಆಗುಹೋಗುಗಳನ್ನು 'ಸೃಷ್ಟಿಯ ನಡುವಿನ ಬಿಡುವು'. 'ಭೂತಕ್ಕೆ ಮಂತು' ಎಂದು ಕಾಣುವವರಿಗೆ 'ಈ ಗಳಿಗೆ ಸೀಳಿ ಸಂದ ಸಮಯವ ಬಿಡಿಸಿ, ಮುಂದಕ್ಕೊರಗಿ ಮೆಲ್ಲುತ್ತ ಕೂರುವುದು' ಸೃಷ್ಟಿಕ್ರಿಯೆಯೆನ್ನಿಸುತ್ತದೆ. ಈ ಕ್ರಿಯೆ ಕಾಲಬದ್ಧ ವಾಗಿದ್ದರೂ 'ಒಳಗಿಂದಲೇ ಕಾಲವನ್ನು ಮೀರಿ ಆವಿ ಸಂವೇದಿಸುವುದು; ಸಂವೇದಿಸುತ್ತಿದ್ದ ಹಾಗೇ ಮೋಡ ಭಾವಿಸುವುದು; ಭಾವಿಸುತ್ತಿದ್ದ ಹಾಗೇ/ಮಳೆ ಹೆರುವುದು' ಎಂಬಷ್ಟು ನಿರಾಳ ವಾದದ್ದು—'ಈಸಿಛೇರಲ್ಲಿ ತೂಕಡಿಸಿದಷ್ಟು ಸುಲಭ' ಈ ಸೃಷ್ಟಿ—ಎಂದು ವ್ಯಂಗ್ಯವಾಡುವ ಕವಿತೆ ಅನುಭವದ ಸ್ಮೃತಿಯಷ್ಟೇ ಸೃಷ್ಟಿಗೆ ಸಾಧನವಾಗಲಾರದೆನ್ನುತ್ತದೆ.

ಬಾಲ್ಯ, ಹರೆಯ, ವಾರ್ಧಕ್ಯದಲ್ಲಿ ವ್ಯಕ್ತಿ ಪಡೆವ ಅನುಭವಗಳು ತೀರಾ ಅಲ್ಪಸ್ಥಾಯಿಯಾಗಿದ್ದು, ಒಂದು ಮತ್ತೊಂದಕ್ಕೆ ಜಾಗ ತೆರವು ಮಾಡುತ್ತ ಸರಿಯಲೇಬೇಕು: ಶೈಶವದ ಮುಗ್ಧ ಬೆರಗು ಹುಟ್ಟಿಸಿದ್ದು 'ಹಗುರ ಹೆಜ್ಜೆ ಒತ್ತುಗಳು/ತೊಟ್ಟಿಲಿಗಿಟ್ಟ ಪುಟ್ಟ ಗಿಲಕಿ/ಹಸುಳೆಗಣ್ಣಿನ ಉರಿಯ ಜೋಡಿಗಂಬ.' ತಾರುಣ್ಯದ ಉಬ್ಬರದ ಪ್ರೇಮ 'ಮೊದಲಿರುಳ ಚಿಲುಕ; ಲೋಲಾಕು ಲಕಲಕಿಸಿ ಸುರಿವ ಮಿಂಚು/ನೀರಲ್ಲಿ ದಾವಣಿಯುಟ್ಟ ಹಸಿರು; ಬಿಸಿಲಲ್ಲಿ ಕನ್ಯೆ—ಗಿರಿಯ ಹುಲ್ಲಿಗೆ ರಾತ್ರಿ ಬೆಂಕಿಯಂಚು'. ಈ ಆವೇಶ ರಭಸ, ಕುದಿತ ಸುಟ್ಟಾದ ಮೇಲೆ ವಾರ್ಧಕ್ಯದಲ್ಲಿ ಶಕ್ತಿ, ಸತ್ವ ಕರಗಿದ ಮೇಲೆ 'ಅಂದು ಎತ್ತಿದ ತೂಬು / ಈಗ ನಾಚುವ ತೋಟ / ಮುಂದೆ ಬಾಡುವ ಸೇಬು / ಇವ ಕಾಯ್ವ ಕೀಟ' ಎಂಬ ಅಣಕದ ಸ್ಥಿತಿ. ಹೀಗೆ ಬದುಕನ್ನು ಕಂಡುಂಡ ಅನುಭವ ತೀರಾ ಸೀಮಿತ, ಮೇಲ್ಪದರದ್ದು, ನಶ್ವರವೂ ಆದದ್ದು. ಇಂಥ ಅನುಭವದ ನೇರ ಅಭಿವ್ಯಕ್ತಿಯೇ ಕಾವ್ಯಸೃಷ್ಟಿ ಎನ್ನುವುದಾದರೆ 'ಹಲ್ಲು ಕಿರಿದೇ ಖುಷಿ|ಕಣ್ಣು ಹಸಿದೇ ಶೋಕ| ಕಾದಾಟಕ್ಕೆ ಬಿದ್ದೇ ರೋಷ| ಹಾಡಾಗುವ ಸಮೀಕರಣ'ವಷ್ಟೇ ಅದು. ಬದುಕುವುದಕ್ಕೂ ಕಲೆಯಾಗಿಸಿ ಅದನ್ನು ಹೇಳುವುದಕ್ಕೂ ಅಂತರವೇ ಕಳೆದುಹೋಗಿ ಬದುಕಿನ ಪ್ರತಿಕ್ರಿಯೆಗಳನ್ನೇ ಹಾಡೆಂದು ಭ್ರಮಿಸಿ ಬಿಡುವ ಅಪಾಯ ಎದುರಾಗುತ್ತದೆ.

ನಿಜವಾದ ಸೃಷ್ಟಿ ಪ್ರಕ್ರಿಯೆಯ ರೀತಿ ಬೇರೆಯದೇ ಆಗಿರುತ್ತದೆ. ಅದು ಸುಲಭವಾಗಿ ಬುದ್ಧಿಗೆ ಎಟುಕಲಾರದ್ದು. ಗಾಢವಾದ ಅನೂಹ್ಯ, ಅವ್ಯಕ್ತ ರೀತಿಗಳಲ್ಲಿ ಅಡಗಿರುವ ಸತ್ಯದ ಮುಖ ಧ್ಯಾನಸ್ಥ ಸ್ಥಿತಿಯಲ್ಲಷ್ಟೇ ಹೊಳೆಯಬಹುದಾದ ವಿಶಿಷ್ಟ ಅರಿವು. ಅದು ಹುದುಗಿರು ವುದು ಅಲೌಕಿಕ ಜಾಗಗಳಲ್ಲಿ—'ಪಲ್ಲಟ ಪ್ರವಾಹಗಳಲ್ಲಿ/ಸಮುದ್ರ ತಳ, ಹಿಮಾಲಯ ಉಬ್ಬುವಲ್ಲಿ/ಗಣಿ ಬಿರಿಸಿ ಬೊಕ್ಕಸ ಬರಿದಾಗುವಲ್ಲಿ/ಬಿಕ್ಕದ, ನಗದ, ರೇಗದ ನೆಲದ / ಯುಗ ಯುಗವ ಟಂಕಿಸುವ ವಾಲ್ಮೀಕಿ ಮೌನ'ದಲ್ಲಿ. ಈ ಸತ್ಯದ ಅರ್ಥ ಅರಿಯಲು

ಸುಲಭವಲ್ಲದ್ದು:

'ಹತ್ತು ಮಕ್ಕಳನೆದುರಿನಲ್ಲೇ ಕೊಂದರೂ | ನಿಟ್ಟುಸಿರಿಡದ ನಿರಾಶ್ರಿತರ ಸ್ಥಿತಿ'ಯಲ್ಲಿ; 'ಭೂಮಂಡಲ ಚೆಂಡಾದರೂ | ಋಷಿ ನಲಿದ ರಾಜರ' ರೀತಿಯಲ್ಲಿ; 'ಗಂಟೆಯಲ್ಲಿ ಕುಚೇಲರಾದ ಕುಬೇರರ' ಕಥೆಯಲ್ಲಿ ಹುದುಗಿರುವ ಸತ್ಯದ ಅಗೋಚರ ಮುಖ 'ಕಣ್ಣು ಕಿವಿ ಮೂಗಿನ ರಂಗದಾಚೆಯ'ದು. ಅದನ್ನು 'ಕಂಡು ಕಂಡರಿಸಲು ಬೇಕು, ಕಾಲ ಮೀರುವ ಸಾರಥ್ಯ'

ಅನುಭವದ ಅನೂಹ್ಯ/ಅಸಾಧಾರಣ ಮಗ್ಗುಲುಗಳ ಸತ್ಯವನ್ನೂ ಸಾಕ್ಷಾತ್ಕಾರಿಸಿ ಅನಾವರಣಗೊಳಿಸಲು ಕವಿಯು ತನ್ನ ಸದ್ಯದ ಎಲ್ಲವನ್ನೂ ಮೀರಿ ಕಾಲಾತೀತವಾದ ನೆಲೆಗೆ ಏರಿದಲ್ಲಿ ಮಾತ್ರ ಸಾಧ್ಯ. ಅದನ್ನು ಸಾಧಿಸದೆ ಕೇವಲ ತಾತ್ಕಾಲಿಕಕ್ಕೆ ಮಾತ್ರ ತೆರೆದುಕೊಂಡರೆ, ಆ ಅಭಿವ್ಯಕ್ತಿ 'ಹಂಗಾಮಿ ನಿಲ್ದಾಣ' ಮಾತ್ರ. ಅನುಭವದ ಹಸಿಯ ಸ್ಥಿತಿಯ ನೆನಪು 'ಕೈಮರದ ಹಸಿರುಗೆಂಪಿನ ಗೋಲಿ'. ಮುಂದಿನ ದಾರಿ ಎನ್ನುವುದು 'ಮಬ್ಬಿನಲಿ ಹಾಸುಗಂಬಿ'. ಸೃಷ್ಟಿಕ್ರಿಯೆಯ ನೈಜ ನೆಲೆ—ದಿವ್ಯತೆಯ ಹೊಳೆಸುವುದಾದರೆ ಅದರ ತೋರ್ಕೆಯ ನೆಲೆ—ಯಾಂತ್ರಿಕ ಅಜ್ಞಾನದ ಚಲನೆಗೆ ಸೀಮಿತವಾಗಬಹುದು.

(iv) ಸೃಷ್ಟಿಯ ಪ್ರಗತಿಯ ಅಥವಾ ಜೀವ ವಿಕಾಸದ ಹಾದಿಯಲ್ಲಿ ಪ್ರಕೃತಿ ಮತ್ತೆ ಮತ್ತೆ ಹೊಸ ಪ್ರಯೋಗ ನಡೆಸಿದೆ. ಲೆಕ್ಕವಿಲ್ಲದಷ್ಟು ಜೀವ ಪ್ರಭೇದಗಳು ಆ ಚರಿತ್ರೆಯ ಗತಿಯಲ್ಲಿ ಅಳಿದು ಹೋಗಿ ಅವು ಈಗ ಪಳೆಯುಳಿಕೆ ಅಥವಾ ಅವಶೇಷ ಮಾದರಿಗಳಾಗಿ ಪ್ರಾಚ್ಯವಸ್ತು ಸಂಗ್ರಹದಲ್ಲಿ ಸೇರಿಹೋಗಿವೆ. ಸೃಷ್ಟಿಯು ಸಾಗಿ ಬಂದ ಜಾಡನ್ನರಿಯಲು ಇವು 'ಮಾದರಿಗಳು'. ಈ ಮಾದರಿಗಳನ್ನು ಕುರಿತು ಹೇಳುವ ಕವನದಲ್ಲಿ ನಿಸಾರರು ಅಸ್ತಿತ್ವದ ಹೋರಾಟದಲ್ಲಿ ತಮ್ಮ ಅರ್ಥ, ಆವಶ್ಯಕತೆಯನ್ನು ಇವು ಕಳೆದುಕೊಂಡದ್ದರ ಕಾರಣ ವೇನೆಂದು ಶೋಧಿಸಲು ಯತ್ನಿಸುತ್ತಾರೆ. ಯಾವುದೇ ಸೃಷ್ಟಿ ಏಕೆ ಕಾಲ ಮುಂದುವರೆದಂತೆ ನಿರುಪಯುಕ್ತವಾಗಿಬಿಡುತ್ತದೆ? ಕವಿತೆಯೊಳಗೆ ಈ ರೀತಿಯ ಸತ್ವಹೀನತೆಗೆ ಅವು ಕೇವಲ ಹೊರಗಿನ ಆಡಂಬರದಲ್ಲಿ ತೊಡಗಿದ್ದೇ ಕಾರಣವೆನ್ನುವ ಒಂದು ಚಿತ್ರ ಕಾಣಿಸುತ್ತದೆ:

'ಅಭಿನಯಕ್ಕಿಂತ ನಾಚಿನಲ್ಲಿ / ಸಂವಾದಕ್ಕಿಂತ ಸರಿಗಮಪದದಲ್ಲಿ / ನೈಜಕ್ಕಿಂತ ಗಾಢ ಮೇಕಪ್ಪುಗಳಲ್ಲಿ / ಸಿಳ್ಳು ಚಪ್ಪಾಳೆಗಳಿಗೆ ತರಬೇತಾಗಿ / ಶಹಬಾಸ್‌ಗಿರಿ ಗಿಟ್ಟಿಸಿ — ಈಗ ತಮ್ಮ / ವಂಶವಾಹಿನಿಗಳ ಮಿತತೆ ಜಟಿಲತೆಗೆ / ಮೂಗು ಮುರಿಯುತ್ತಿದ್ದಾರೆ, ಕಾಲದಿಂದ ಋಷಿ ಪಂಚಮಿ ಮಾಡಿಸಿಕೊಂಡ ಅಭಿನೇತ್ರಿಯರು'

ಬದುಕಿನ ಸಂದರ್ಭವೊಂದನ್ನು ಹೀಗೆ ವಿಸ್ತರಿಸಿ ಚಿತ್ರ ಕಟ್ಟುವ ಕಲೆ ನಿಸಾರರಿಗೆ ತುಂಬ ಇಷ್ಟದ್ದೂ ಅವರ ಪ್ರತಿಭೆಗೆ ಸಲೀಸಾದದ್ದೂ ಹೌದು. ಬಹಿರಂಗದ ಪ್ರದರ್ಶನ ವೈಯಾರಗಳಿಂದ ಜನಪ್ರಿಯತೆ ಗಳಿಸಿ, ಆ ಯಶಸ್ಸಿಗೆ ಮಾರುಹೋದ ಸೃಷ್ಟಿಶೀಲತೆ ಹೇಗೆ ಕಾಲದ ಗತಿಯಲ್ಲಿ ಬಲುಬೇಗ ಅಸ್ತಿತ್ವ ಕಳೆದುಕೊಳ್ಳಬಹುದೆಂದು 'ಕಾಲದಲ್ಲಿದ್ದೂ ಅಕಾಲಿಕವಾಗಿ/ದೇಶದಲ್ಲಿದ್ದೂ ಪರದೇಶಿಯಾಗಿ' ಬಿಡುವ ಅಭಿನೇತ್ರಿಯರ ಪ್ರತಿಮೆಯನ್ನು ಕವಿ ಮುಂದೆ ತಂದು ನಿಲ್ಲಿಸಿದ್ದಾರೆ. ಆದರೆ ಈ ಚಿತ್ರ ಅದ್ಭುತವಿದ್ದರೂ ಇದರಲ್ಲಿ

ವಿಷಾದಕ್ಕಿಂತ ವಿಡಂಬನೆಯೇ ಹೆಚ್ಚಾದಂತೆ ನನಗೆ ತೋರುತ್ತದೆ. ಕುಣಿತದ ಬೆಡಗಿನಿಂದಲೇ ಹೊಟ್ಟೆ ಹೊರೆಯಬೇಕಾದ, ಬೆಡಗನ್ನು ಮಾರುತ್ತಲೇ ಅಸ್ತಿತ್ವಕ್ಕಾಗಿ ತಪಿಸಬೇಕಾದ ನೈಜವಾದ ಹೆಣ್ಣಿನ ನೆಲೆಯನ್ನು ಮನಸ್ಸಿಗೆ ತಂದುಕೊಂಡು ಇಂಥ ಚಿತ್ರವನ್ನು ಕಲ್ಪಿಸಿದ್ದಿದ್ದರೆ ಈ ರೀತಿ ಕಟಕಿಯಷ್ಟೇ ಇದರ ಹಿಂದಿನ ಭಾವವಾಗಲು ಕಷ್ಟವಾಗಿರುತ್ತಿತ್ತೇನೋ. ಆದರೆ ನಿಸಾರರು ಎಲ್ಲೋ ಒಂದುಕಡೆ ತಮ್ಮದೇ ಮಾತು ಕಟ್ಟುವ ಚಮತ್ಕೃತಿಯತ್ತ ಬೆರಗಾದ ಹಾಗೆ ಅನ್ನಿಸಿಬಿಡುತ್ತದೆ. ಏಕೆಂದರೆ ಕವನದ ಮುಂದಿನ ಭಾಗದಲ್ಲೂ ಕಟುವೆನಿಸುವಂತಹ ರೀತಿಯಲ್ಲೇ ಈ ಮಾದರಿಗಳ ನಿರರ್ಥಕತೆಯನ್ನು ಮತ್ತೆ ಮತ್ತೆ ದಟ್ಟವಾಗಿ ಸೂಚಿಸುವ ಯತ್ನವೇ ಎದ್ದುತೋರುತ್ತದೆ:

'ಸಮೆದೆಲುಬಿನಚ್ಚುಗಳ / ಜೀವೇತಿಹಾಸದ ಹರಕು ಹಾಳೆಗಳು / ವಿಕಾಸ ಕಣದಲ್ಲಿ ತೆನೆ ಬಡಿದುಳಿದ ನಿಷ್ಫಲಿತ ಕೂಳೆಗಳು / ಪ್ರಾಣದವಿಚ್ಛಿನ್ನ ಸರಪಳಿಯ/ನಿಸರ್ಗನೇಮಿತ ಕೂಡು ಕೊಂಡಿಗಳು/ ಹೆಗ್ಗಡಲನಳೆವ ಈ ನಗೆಪಾಟಲಿನ / ಇಂಚುಪಟ್ಟಿಗಳಿಂದ / ಬಯಲಲ್ಲಿ ಮುಗಿದ ಪೂರ್ವಜರ / ಕಾಲುದಾರಿಗಳಿಂದ — ಮಾನವ್ಯ ಹಿಗ್ಗೀತು ಹೇಗೆ?—ನಾಗರಿಕತೆ ಹೆದ್ದಾರಿ ಹಿಡಿದೀತು ಹೇಗೆ?'

ಬದುಕಿನ ಹಾಗೂ ಸೃಷ್ಟಿಯ ಅನಂತ ಸಾಧ್ಯತೆಗಳೆದುರಲ್ಲಿ ಎಲ್ಲವೂ ಕಾಲಬದ್ಧವೇ, ಎಲ್ಲದರ ಅರ್ಥವೂ ಪರಿಮಿತವೇ. ಡಿವಿಜಿ ಹೇಳುವಂತೆ 'ಅರ್ಥವುಂಟೇ ಜೀವನಕೆ, ಆದರದು ಮಿತದರ್ಥ'. ನಿಸಾರರ ಈ ಮೇಲಿನ ಕವಿತೆ ಹೊಳೆಯಿಸಲು ಪ್ರಯತ್ನಿಸುವುದೂ ಅಂಥ ಪರಿಮಿತತೆಯನ್ನೇ. ಈ ಬದುಕಿನ ಮಿತಿಯರಿವು ಗಾಢ ವಿಷಾದವಾಗಲು ಏಕೋ ಕವಿ ಆಯ್ದುಕೊಂಡ ತೀವ್ರವಾದ ವ್ಯಂಗ್ಯದ ಚಿತ್ರಕ ದಾರಿಯಲ್ಲೇ ತೊಂದರೆಯಿರುವ ಹಾಗೆನ್ನಿಸುತ್ತದೆ. ಹೀಗಾಗಿ ಕವನದ ಕೊನೆಯಲ್ಲಿ ಸೃಷ್ಟಿರಹಸ್ಯ ಶೋಧನಕ್ಕೆ ಇಂಥ ಪ್ರಾಕ್ತನ ಮಾದರಿಗಳು ಬೇಕೇ ಬೇಕು; ಅಂಥ ಶೋಧನೆಗಳೂ 'ಪರಂಪರೆ ಹೊಳೆಯಿಸಲು ಪ್ರಗತಿಯಲಗು'ಗಳಾಗಿರುತ್ತವೆ ಎನ್ನುವುದು ಬಲವಂತವಾಗಿ ಎಳೆದು ತಂದು ಜೋಡಿಸಿದ ಇತ್ಯಾತ್ಮಕ ಅಂಶವಾಗಿದೆಯೇ ಪಿನಾ ಕವನದ ಒಳಗಿನಿಂದಲೇ ಅದು ಹೊಮ್ಮಿದೆ ಯೆನ್ನಿಸುವುದಿಲ್ಲ.

(v) 'ನಿರಾವರಣ' ಈ ನಿಟ್ಟಿನಲ್ಲಿ 'ಮಾದರಿಗಳು' ಕವನಕ್ಕಿಂತ ಹೆಚ್ಚು ಸಫಲ ಕವನವಾಗಿದೆ. ತುಂಬ ಸೂಕ್ಷ್ಮವಾದ ಕಲಾತ್ಮಕ ಸೌಂದರ್ಯವನ್ನೂ ಅರ್ಥವಂತಿಕೆಯನ್ನೂ ಇದರಲ್ಲಿ ಕಾಣಬಹುದು. ಪ್ರಕೃತಿ ತನ್ನೊಳಗೇ ಒಂದು ಸಮತೋಲನದ ನಿಯಮವನ್ನು ಸಾಧಿಸುತ್ತದೆ. ಜೀವದ ಪರಿಪಕ್ವತೆಯ ಅಸ್ತಿತ್ವಕ್ಕೆ ಅಂತರ್ಬಂಧದ ಅಗಣಿತ ಒಳಾವರಣ, ಮೂಲೆ ಮೊಡಕು/ಹರೆಗೋ ದೇಟು, ದೇಟಿಗೆ ಕಸುಗಾಯಿ ಮೋಟು, ಹೊರ ಹೊದಿಕೆಗೆ ಅಪಕ್ವ ತಿರುಳಿನ ಮೊತ್ತ, ಮತ್ತದಕ್ಕೆ ಎಲುಬಾದ ಬಿತ್ತ—ಎಲ್ಲ ಅಪ್ರತ್ಯೇಕ, ಪ್ರಕೃತಿಯ ಸಮತೂಕ'

ಈ ರೀತಿ ಪ್ರಕೃತಿಯೊಳಗೆ ಎಲ್ಲವೂ ಅಚ್ಚುಕಟ್ಟಾದ ಕಾರ್ಯಪೂರಕತೆಯ ಸಂತುಲನದಲ್ಲಿ ಒಂದರಿಂದೊಂದು ಬೇರೆಯಾಗದಂತೆ ಬೆಸೆದುಕೊಂಡು ಪರಿಪಕ್ವತೆಯನ್ನು ಸಾಧಿಸಿರುವ ಬಗೆಯನ್ನು ಮಾವಿನ ಹಣ್ಣಿನ ರೂಪಕದ ಮೂಲಕ ಕವಿತೆ ಸ್ಥಾಪಿಸಲು

ಹೊರಡುತ್ತದೆ. ಆದರೆ ಕವನದ ಕೇಂದ್ರ ಪ್ರತೀಕ ಆ ಹಣ್ಣಿನದಲ್ಲ, ಅದರೊಳಗಿನ ಓಟೆಯದು. 'ಯಾರೋ ತಿಂದೆಸೆದ/ನೆಲದ ಗಡುಸಿಗೆ ಕುಸಿದ' ಹಣ್ಣಿನ ತಿರುಳಿಗೆ ಎಲುಬಾಗಿ ಆಧಾರ ಭದ್ರತೆ ಒದಗಿಸಿದ್ದ ಓಟೆ 'ತನ್ನೆಲ್ಲ ಹೊರಾವರಣ ಕೋಟೆ-ಸೆರೆಯಿಂದ ಖಲಾಸೆ ಯಾಗಿ ಮಣ್ಣ ತೊಡೆ ಕೂಡಿದ್ದು' ಹೊಸತರ ಸೃಷ್ಟಿಗಾಗಿಯೋ ಅಥವಾ 'ಕತ್ತಲಿನ ಪದರಗಳ ಇನ್ನೊಂದು ಸೆರೆಮನೆಗೆ' ಹೋಗಲಿಕ್ಕೋ ಎಂಬ ಜಿಜ್ಞಾಸೆ ಕೇಂದ್ರಕ್ಕೆ ಬರುತ್ತದೆ.

ಸೃಷ್ಟಿ ಎನ್ನುವುದು ಬಂಧನವೋ ಬಿಡುಗಡೆಯೋ ಎಂಬ ಪ್ರಶ್ನೆ ಎದ್ದೇಳುತ್ತದೆ ಈ ಹಂತದಲ್ಲಿ. ಓಟೆಯ ಸ್ಥಿತಿ 'ಅನಾಥ ನಗ್ನತೆ'ಯದೋ ಅಥವಾ 'ಅಮರಪದದರಮನೆಗೆ ಸೋಪಾನವೋ?'— ಹೀಗೆ ಕವಿಯ ಜಿಜ್ಞಾಸೆಗೆ ಒಂದು ಆಧ್ಯಾತ್ಮಿಕ ಭಾವ ಮೈಗೂಡುತ್ತದೆ. ಓಟೆಯ ಅವಸ್ಥೆಯನ್ನು 'ನಿರ್ಮುಕ್ತತೆ' ಎಂದು ಕಾಣುವುದಾದರೆ ಅದು 'ಮರದ ಲೆಕ್ಕವನ್ನೆಲ್ಲ ಚುಕ್ತಗೊಳಿಸಿ, ವೃಕ್ಷ ನಿಯಮಕ್ಕೆ ಅಸ್ವತಂತ್ರ ಸುತ್ತುವ ರಾಟೆ'ಯ ಸ್ಥಿತಿ ಬಿಟ್ಟು ಜೀವನ್ಮುಕ್ತತೆಯ ಸಂಕೇತವಾಗಿಬಿಡುತ್ತದೆ. ಈ ಸ್ಥಿತಿಯಲ್ಲಿ 'ಹಕ್ಕಿ ಕುಕ್ಕಿದರೂ| ಮೂಡದು ಸೀಳು ಸಿಕ್ಕು | ಗಾಳಿ ತಿರ್‍ರನೆ ತಿರುಚಿ ಅಪ್ಪಳಿಸಿದರೂ ಆಗದು ಮುಕ್ಕು.'

ಇದೇ ಓಟೆಯನ್ನು ಪ್ರಕೃತಿ ತನ್ನ ಪ್ರಗತಿಗೆ ಸಾಧನವನ್ನಾಗಿ ಮಾಡಿಕೊಳ್ಳುತ್ತದೆ. ಆಗ 'ಋತುಗಳಾವರ್ತನದ ಹಾರೈಕೆಗೆ, ವೃಕ್ಷವೊಂದರ ಹೊಸತು ಪೂರೈಕೆಗೆ ಸನ್ನದ್ಧ'ವಾದ ಓಟೆ ಸೃಷ್ಟಿ ಚಕ್ರದ ಚಲನೆಗೆ ಉಪಕರಣ ಬೀಜವಾಗುತ್ತದೆ. ಸೃಷ್ಟಿಯೇ ವಿಮುಕ್ತಿ-ಬಂಧನಗಳೆರಡರ ನಿಯಾಮಕವೂ ಆಗುವುದು ಕವಿತೆ ಸೂಚಿಸುವ ಅರ್ಥವೆನ್ನಬಹುದು.

(vi) ಸೃಷ್ಟಿರಹಸ್ಯವನ್ನು ಅರಸುವ ಕವಿತೆಗಳಲ್ಲೇ ಹೆಚ್ಚು ಸಂಕೀರ್ಣವಾದದ್ದು ನಿಸಾರರ 'ಪ್ರಾಗ್ಬಂಧಗಳು' ಎಂಬ ಕವನ. ಗಾಢವಾದ ಅಮೂರ್ತ ಅರ್ಥಗಳ ಪರಂಪರೆ ಯನ್ನು ಈ ಕವನ ಹೊಮ್ಮಿಸುತ್ತದೆ. ಜೀವ ವಿಕಾಸದ ಗತಿಯಲ್ಲಿ ಆದಿಮ ಪ್ರಾಣಿ ಲಕ್ಷಣಗಳ ಕೆಡುಕಿನ ಅಂಶಗಳು, ಆ ಜೀವವೇ ಸೃಷ್ಟಿಯಿಂದ ನಾಪತ್ತೆಯಾದಾಗಲೂ ತಾವು ಮಾತ್ರ ಹೇಗೋ ಎಲ್ಲೋ ಹುದುಗಿ, ಮುಂದುವರೆಯುತ್ತಲೇ ಮತ್ತೆ ಮತ್ತೆ ಬದುಕಿನೊಳಗೆ ಪ್ರತ್ಯಕ್ಷವಾಗಿ ಬಿಡುತ್ತವೆ ಎಂಬ ಭಯ, ವಿಸ್ಮಯದ ಭಾವದಿಂದ ಇಂಥ ಪ್ರಾಗ್ಬಂಧಗಳ ಸ್ವರೂಪ ಜಿಜ್ಞಾಸೆಗೆ ಪ್ರಯತ್ನಿಸುತ್ತದೆ ಈ ಕವನ.

ಜೀವ ವಿಕಾಸದ ಕ್ರಮದಲ್ಲಿ ಕೆಡುಕಿನ ಅಂಶಗಳೇ ಏಕೆ ಹೀಗೆ ಮರುಕಳಿಸುತ್ತಾ ಹೋಗುತ್ತವೆ? ನೀಚತನ, ಕ್ರೌರ್ಯ, ಹಿಂಸೆಗಳ ವಂಶವಾಹಿನಿಯ ಮೂಲವೆಲ್ಲಿದೆ? 'ಬೆಳಕಲ್ಲಿ ಗುರುತಿಸಿಕೊಳ್ಳದೆ ಭೂಗತವಾಗಿ / ಮಬ್ಬಿನ ಸುಸ್ವಾಗತಕ್ಕೆ ಅಸ್ತಿತ್ವ ತಾಳುವ' ಪ್ರೇತಗಳಂಥ ಈ ಲಕ್ಷಣಗಳು 'ನೆರಳು ಚೆಲ್ಲಿ ಮೂಲ ಸೂಚಿಸುವ', 'ಇಗೋ ಎದ್ದೆವು ಜಾಗ್ರತೆ' ಎಂದು ತಮ್ಮ ಬರವಿನ ಅಪಾಯವನ್ನೂ ಸೂಚಿಸಿ ಎಚ್ಚರಿಸುವ ಇವು ಮನದ ಭೀತಿಯೊಂದಿಗೇ ತಮ್ಮನ್ನು ಸ್ಥಾಪಿಸಿಕೊಂಡುಬಿಡುತ್ತವೆ. ರೂಪ, ಆಕಾರವಿರದ 'ಕಣ್ಣು ಕಾಲು ಕಿವಿ ನಾಲಿಗೆ ಖೋತ' ಆಗಿದ್ದು 'ಅಳು ನಗು ಸುಖ ದುಃಖ'ಗಳ ಸಂವೇದನಗಳೇ ಇರದ ಈ ಲಕ್ಷಣಗಳು 'ಹೊಟ್ಟೆ ಹುಟ್ಟುಗಳ ಊಳಿಗ'ಕ್ಕೆಂದೇ ಹುಟ್ಟಿಕೊಳ್ಳುತ್ತವೆ. ಸತ್ತಾಗ ಸಿಗಬೇಕಾದ ಸಂಸ್ಕಾರ ಕೂಡ ಈ ಪ್ರೇತ ಲಕ್ಷಣಗಳಿಗೆ ದಕ್ಕುವುದಿಲ್ಲ. ಇವಕ್ಕೆ 'ಗೋರಿ, ಪಕ್ಷ,

ನಲವತ್ತನೆಯ ದಿನದ ಪುನಸ್ಕಾರ / ಹೇಗೆ ಸಿಕ್ಕಬೇಕು? ಸ್ಮೃತಿ ಸ್ಮಾರಕಗಳು ಹೇಗೆ ನಿಲ್ಲಬೇಕು?' ಎಂಬ ವ್ಯಂಗ್ಯದ ಪ್ರಶ್ನೆಯೇ ಇವು ಮಾನವರ ಸಹಜ ನೆಲೆಗಳಲ್ಲವೆಂಬುದನ್ನು ಸೂಚಿಸುತ್ತದೆ.

ಯುಗಗಳು ಉರುಳಿವೆ. ಹೊಸ ಕಾಲದ ಪರಿಸ್ಥಿತಿ ಹಾಗೂ ಆವಶ್ಯಕತೆಗಳು ಬೇರೆಯಾಗಿವೆ. ಬೇರೆ ರೀತಿಯ ಸಂಬಂಧ ನಡಾವಳಿಗಳನ್ನು ಈ ಕಾಲವು ಬಯಸುತ್ತದೆ. ಆದರೂ ಮಾನವರ ಆದಿಮ ಲಕ್ಷಣಗಳು ಬಿಟ್ಟುಹೋಗಿಯೇ ಇಲ್ಲ. ಪ್ರಾಕ್ತನ ರೀತಿಗಳಲ್ಲಿಯೇ ಅವು ಮರುಕಳಿಸುತ್ತಿವೆ. ಈ ಪ್ರಾಗ್ಬಂಧಗಳು—

'ಸೃಷ್ಟಿಯ ಅಕ್ಷರಾಭ್ಯಾಸದ ಜೀವದೆರಕಗಳು;
ಆದಿ ಮಾದರಿಗಳು; ಅಮಾನವ ಲೋಕದ ಅರಸರು;
ಪೌರಾಣಿಕ ಗಾತ್ರದಲ್ಲೇ ಧ್ವನ್ಯರ್ಥಿಸಿಕೊಳ್ಳುವಂಥವು
ಪ್ರತಿಮಾ ಮಟ್ಟದಲ್ಲೇ ತರ್ಕಬದ್ಧವಾಗುವಂಥವು.
ವರ್ತಮಾನಕ್ಕೆ ವಾಮನರೂಪಿ ಚಿಲ್ಲರೆ ಪ್ರತಿನಿಧಿಗಳ ಬಿಟ್ಟಂಥವು;
ಬಿಟ್ಟರೂ,
ತಮ್ಮ ಸ್ವರ್ಣಯುಗದ ಪಾಶವೀ ಭಯ, ಕ್ರೌರ್ಯ, ಸಂಖ್ಯೆಯ
ಛಟ್ಟಿಯಿಳಿಸಿಕೊಂಡವು'

(ಪ್ರಾಗ್ಬಂಧಗಳು)

ಎಂಬ ಸಾಲುಗಳಲ್ಲಿ ಜೀವ ಲಕ್ಷಣಗಳನ್ನು ಮೀರಿ, ಸಾಹಿತ್ಯ ಸೃಷ್ಟಿಯ ಪರಿಭಾಷೆ ಬಳಕೆಯಾಗಿರುವುದನ್ನು ಗಮನಿಸಬೇಕು. ಅಮಾನವ ಲೋಕದ ಪುರಾಣ ಶರೀರಿಗಳಾದ ಇವುಗಳ ಧ್ವನಿ, ಅರ್ಥ, ಪ್ರತಿಮೆ, ತರ್ಕ ಎಲ್ಲವೂ ಪಾಶವೀ ಭಯ, ಕ್ರೌರ್ಯದಲ್ಲೂ ಸಂಖ್ಯೆಯ ಬಾಹುಳ್ಯದಲ್ಲೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿಕೊಳ್ಳುವ ಇವುಗಳ ರೂಪದಲ್ಲಿ ಅಷ್ಟಿಷ್ಟು ವ್ಯತ್ಯಾಸವಿದ್ದರೂ ಹೀಚುಬುದ್ಧಿಯನ್ನು ಬಂಧಿಸಿಟ್ಟಿರುವ ನಿರಂಕುಶ ಪ್ರವೃತ್ತಿ ಹಾಗೂ ಅನಿಶ್ಚಿತ ಕ್ರಿಯಾ ವೈಖರಿಗಳನ್ನು ತಮ್ಮ ಮುಂದಿನ ಪೀಳಿಗೆಗಳಲ್ಲೂ ಅವಶೇಷವಾಗಿಸಿ ಉಳಿಸಿಟ್ಟಿವೆ. ಈ ಆದಿಮ ಜೈವಿಕ ಅಸ್ತಿತ್ವ ಹೋರಾಟದೊಳಗಿಂದ ಹುಟ್ಟಿಕೊಂಡ ವಿಕೃತ ಸ್ವಭಾವಗಳು—

'ಜೀವದ ಹೊಸ ನಮೂನೆಗಳಿಗೆ ಸವಾಲಾಗಿ| ಉಳಿವ ಸೃಷ್ಟಿಯೊಕ್ಕಲು ತಾವೇ ಎನಿಸುವಂತೆ| ನಿಗೂಢತೆಯ ದೇಹಿಸಿಕೊಂಡು' ತಮ್ಮ ಪ್ರಯತ್ನವಿಲ್ಲದಿದ್ದರೂ ಕಾಲ, ನಿಸರ್ಗಗಳ ಮರ್ಜಿ ಹಿಡಿದು ಇಷ್ಟಿಷ್ಟೇ ಹತ್ತಲು ಹೆಣಗುತ್ತವೆ. ಜೀವಕ್ಕೆ ಅಂಟಿ ಬಂದ ಈ ಪ್ರಾಚ್ಯ ಲಕ್ಷಣಗಳು 'ಆಕೃತಿಸಿಕೊಳ್ಳುವ ವಿಕೃತಿಗಳು' ಎಂಬಲ್ಲಿಗೆ ಕವನ ಆರಂಭದಲ್ಲಿ ಹೇಳುವ ಅಸ್ಪಷ್ಟ ಭೀತಿ, ಕೊನೆಯಲ್ಲಿ ಖಚಿತ 'ವಿಕೃತಿ'ಯಾಗಿ ಸ್ಪಷ್ಟತೆ ಪಡೆದುಕೊಳ್ಳುತ್ತದೆ.

ಬದುಕಿನ ಜಿಜ್ಞಾಸೆ

ಬದುಕನ್ನು ಕುರಿತಂತೆ ನಿಸಾರರು ನಡೆಸಿರುವ ಚಿಂತನೆ ಕವಿತೆಗಳಾಗಿ ರೂಪು ತಳೆದಿರುವುದನ್ನೂ ಈ ಚಿಂತನೆಯ ಸ್ವರೂಪ ಅವರ ಕಾವ್ಯದೊಂದಿಗೇ ವಿಸ್ತರಿಸುತ್ತಾ

ಆಧ್ಯಾತ್ಮಿಕ ಸ್ತರಕ್ಕೆ ಏರುವುದನ್ನೂ ಕಾಣಬಹುದು. 'ರಾಮನ್ ಸತ್ತ ಸುದ್ದಿ', 'ಯಾತ್ರಿಕ', 'ನೀನೇ ಸರ್ವಸ್ವ', 'ವಾಸ್ತವಿಕ', 'ಚಿಲುಮೆ', 'ಲೋಕ ಹಿತವೆ', 'ಕೊನೆಯ ನಮಸ್ಕಾರ', 'ಕಾಲದ ಮಗ್ಗ', 'ಜೀವನ ಜಿಜ್ಞಾಸೆ', 'ಚೇತನಾಚೇತನದ ತಿರುಳು ನೀನು', 'ಕಳೆದದ್ದಕ್ಕೆ ಕೊರಗಬೇಡ', 'ಜೀವೋನ್ನೋತಿ', 'ಆಸೆ ಜೀವನದುಸಿರು', 'ಬದುಕೇ ಅಷ್ಟು', 'ಬಾಳಿನ ಕ್ರೀಡಾಂಗಣ', 'ತಥ್ಯ ಮತ್ತು ನೇಪಥ್ಯ', 'ಬದುಕು ಇಷ್ಟೇ' ಮೊದಲಾಗಿ ಅನೇಕಾನೇಕ ಕವಿತೆಗಳಲ್ಲಿ ನಿಸಾರರು ಜೀವನದ ಸ್ವರೂಪ, ಅರ್ಥ, ಗೊತ್ತುಗುರಿಗಳನ್ನು ಕುರಿತು ಮತ್ತೆ ಮತ್ತೆ ಚಿಂತನೆ ನಡೆಸಿರುವುದನ್ನು ಕಾಣಬಹುದು.

ಇಷ್ಟು ದೀರ್ಘಕಾಲದ ಕಾವ್ಯಜೀವನದಲ್ಲಿ ಕವಿಯೊಬ್ಬ ಬದುಕಿಗಾಗಿ ತಾನು ಕಂಡು ಕೊಂಡ ನಂಬಿಕೆ, ತತ್ತ್ವಗಳನ್ನು ಬದುಕಿನ ಮೂಲಕವಾಗಿಯೇ ಮತ್ತೆ ಮತ್ತೆ ಒರೆಗೆ ಹಚ್ಚಿ ಪರೀಕ್ಷಿಸುವಾಗ ಆಯಾ ಸಂದರ್ಭಗಳಿಗೆ ತಕ್ಕಂಥ ರೂಪಕ, ಪ್ರತಿಮೆ, ವರ್ಣನೆಗಳೂ ಹೊಸ ಶಬ್ದಗಳೂ ಸೃಷ್ಟಿಗೊಂಡಿರುವುದು ಸಹಜ. ಅದರಲ್ಲೂ ದಿನನಿತ್ಯದ ಸುಪರಿಚಿತ ದೃಶ್ಯ, ಘಟನೆಗಳನ್ನೇ ಅರ್ಥಪೂರ್ಣ ಚಿತ್ರಗಳನ್ನಾಗಿ ಮಾಡಿ, ಒಂದು ಕಾಲಮಾನದ ಇಡೀ ಮೌಲ್ಯ ಲಕ್ಷಣಗಳನ್ನೇ ಹೇಳಿಬಿಡುವ ಚಿತ್ರಕಶಕ್ತಿ ಹೇರಳವಾಗಿರುವ ಕವಿ ನಿಸಾರ್. ಆದ್ದರಿಂದ ಬದುಕನ್ನೇ ಕುರಿತು ಅವರು ಮತ್ತೆ ಮತ್ತೆ ತಾತ್ವಿಕ ನೆಲೆಯಲ್ಲಿ ಚಿಂತಿಸಿದ್ದರೂ ಪ್ರತಿಯೊಂದು ಕವಿತೆಯೂ ಒಂದು ನವೀನ ಅನುಭವವಾಗಿ ನಮ್ಮ ಓದಿಗೆ ಹೊಸ ಅರ್ಥಗಳನ್ನು ಹೊಳೆಯಿಸುತ್ತದೆ.

ಈ ಚಿತ್ರ ಅಥವಾ ರೂಪಕಗಳ ಸರಮಾಲೆಗಳ ಸೃಷ್ಟಿಯಲ್ಲಿ ನಿಸಾರರು ಬಳಸುವ ಪದಗಳಾಗಲೀ, ದೃಷ್ಟಾಂತಗಳಾಗಲೀ ತೀರಾ ಸಾಮಾನ್ಯ ಬದುಕಿನಿಂದ ಎತ್ತಿಕೊಂಡ, ದಿನ ಬಳಕೆಗೆ ಸುಪರಿಚಿತವೇ ಆಗಿರುವ ಲಕ್ಷಣವುಳ್ಳಂಥವು. ಇದರಿಂದ ಹಲವು ಸಲ ಬದುಕಿನ ಅರ್ಥಶೋಧನೆಯಲ್ಲಿ ಆನುಭಾವಿಕ ಸ್ತರದ ಭಾವಾರ್ಥದ ನೆಲೆಗೆ ಏರುವುದಕ್ಕೂ ಕವಿ ಸಂಸ್ಕೃತದ ಪುರಾಣ, ತರ್ಕ, ವೇದಾಂತಾದಿ ಪರಿಭಾಷೆಗಳನ್ನು ಮೊರೆ ಹೋಗುವುದಿಲ್ಲ. ಇಲ್ಲವೇ ಅರಬಿಕ್ ಅಥವಾ ಪರ್ಷಿಯನ್ ತತ್ತ್ವಗಾರಿಕೆಯ ತರ್ಜುಮೆಗೂ ಪ್ರಯತ್ನಿಸು ವುದಿಲ್ಲ. ತೀರ ವಾಸ್ತವವೆನ್ನುವಂಥ, ಅತ್ಯಂತ ಸಮಕಾಲೀನವಾದ ಜೀವನದಿಂದಲೇ ಆಯ್ದು ಕೊಂಡ ಅವರ ನುಡಿ ಗಡಣದಲ್ಲಿ ದೈವಭಕ್ತಿ, ಧಾರ್ಮಿಕ ಶ್ರದ್ಧೆಗಳು ಕೂಡ ಅಮೂರ್ತ ಸರ್ವಾಂತರ್ಯಾಮಿ ನಿರ್ಗುಣ ಪರತತ್ತ್ವದ ಧ್ಯಾನವಾಗುತ್ತದೆಯೇ ಹೊರತು ಸಗುಣ ರೂಪಗಳ ಬಣ್ಣನೆಯಾಗುವುದಿಲ್ಲ. 'ಬೆಣ್ಣೆ ಕದ್ದ ನಮ್ಮ ಕೃಷ್ಣ' ಎಂಬಂಥ ಭಾವಗೀತೆಯಲ್ಲಿ ಅವರು ಎಷ್ಟರಮಟ್ಟಿಗೆ ತಮ್ಮ ಸುತ್ತಲಿನ ಸಾಂಸ್ಕೃತಿಕ ಪರಿಸರದಲ್ಲಿ ಪ್ರವೇಶಿಸಿಬಿಟ್ಟಿದ್ದಾರೆ ಎನ್ನುವುದನ್ನು ಕಾಣಬಹುದು. ಎರಡು ಸಂಸ್ಕೃತಿಗಳಲ್ಲಿ ಬದುಕುವ ಕವಿಯ ಇಬ್ಬಂದಿತನ, ಬೇಗುದಿಗಳನ್ನು 'ನಿಮ್ಮೊಡನಿದ್ದೂ ನಿಮ್ಮಂತಾಗದೆ'ಯಂಥ ಕವನದಲ್ಲಿ ಅವರು ಸಶಕ್ತವಾಗಿ ಹೇಳಿಕೊಂಡಿದ್ದಾರೆ. ಹಾಗಿದ್ದರೂ ಜೀವನ ಮತ್ತು ಅದನ್ನು ನಿಯಮಿಸುವ ಲೋಕಾತೀತ ತತ್ತ್ವಗಳನ್ನು ಕುರಿತ ಅವರ ಜಿಜ್ಞಾಸೆಗಳಲ್ಲಿ ನಿಸಾರರ ಮನದಲ್ಲಿ ಎರಡು ಸಂಸ್ಕೃತಿಗಳ ವಿಶಿಷ್ಟ ಸಂಯುಕ್ತ ರೂಪದ ಆಧ್ಯಾತ್ಮಿಕ ಲಕ್ಷಣಗಳು ಬಿಚ್ಚಿಕೊಳ್ಳುವುದು ಕುತೂಹಲಕರ ವಾಗಿದೆ. ತಮ್ಮ ಕಾವ್ಯದ ಬಹುತೇಕ ಅವಧಿಯಲ್ಲಿ ಯಾವಾಗಲೂ ಧರ್ಮನಿಷ್ಠೆ ಅಥವಾ

ಪಾರಮಾರ್ಥಿಕತೆಗಿಂತ ಇಹದ ಬದುಕಿನ ಎಲ್ಲ ಸತ್ವ, ಸೌಂದರ್ಯ ನಿರ್ಮಿತಿಗೇ ಆಸಕ್ತಿ ತೋರಿದ ನಿಸಾರರು, ವಾರ್ಧಕ್ಯದಲ್ಲಿ ದೇವರು, ಧರ್ಮಗಳ ಬಗ್ಗೆ ಹೆಚ್ಚು ಬರೆಯುತ್ತಿರುವುದನ್ನು ಅವರ ಈಚಿನ ಸಂಕಲನಗಳಾದ `ಆಕಾಶಕ್ಕೆ ಸರಹದ್ದುಗಳಿಲ್ಲ` ಮತ್ತು `ಅರವತ್ತೈದರ ಐಸಿರಿ` ಸಂಕಲನಗಳಲ್ಲಿ ಕಾಣಬಹುದು. ಆದರೆ ಕವಿಯ ವಯೋಮಾನದ ಸಹಜ ಬೆಳವಣಿಗೆ ಈ ಅಧ್ಯಾತ್ಮದ ಒಲವು ಎಂಬುದಕ್ಕಿಂತ, ಆಧುನಿಕೋತ್ತರ ಚಿಂತನೆಯ ನೆಲೆಯಿಂದ ಈ ಬೆಳವಣಿಗೆಯನ್ನು ಗುರುತಿಸುವುದು ಅವರ ಸಾಹಿತ್ಯದ ಅಧ್ಯಯನಕ್ಕೆ ಹೆಚ್ಚು ಉಪಯುಕ್ತವಾಗಬಲ್ಲದು.

ವೈವಿಧ್ಯಮಯವಾದ ರೂಪಕ ಪರಂಪರೆಗಳ ಮೂಲಕ ಬದುಕಿನ ಅರ್ಥವನ್ನು ಹುಡುಕಲು ನಿಸಾರರು ಯತ್ನಿಸಿದ್ದರೂ ಪ್ರತಿಯೊಂದು ಕವಿತೆ ಶೋಧಿಸುವುದೂ ಕವಿಯ ಕೆಲವೇ ಕೆಲವು ಮೂಲ ನಂಬಿಕೆ ಹಾಗೂ ತತ್ತ್ವಗಳನ್ನೇ. ಮಹಾಕವಿಯಾದವನು ತನ್ನ ಎಲ್ಲ ಕಾವ್ಯದಲ್ಲೂ ಜೀವನ ದರ್ಶನದ ತನ್ನ ತತ್ತ್ವವನ್ನೇ ಮತ್ತೆ ಮತ್ತೆ ಶೋಧಿಸುತ್ತಿರುತ್ತಾನೆಂಬ ಮಾತಿಗೆ ನಿಸಾರರೂ ಅಪವಾದವಲ್ಲ. ಬದುಕನ್ನು ಪರತತ್ತ್ವದಿಂದ ಇಂಥಿಂಥವರಿಗೆ ಇಷ್ಟಿಷ್ಟೆಂದು ಸುಖ ದುಃಖಗಳಾಗಿ ವಿಂಗಡಿಸಿ ಹಂಚಲ್ಪಟ್ಟಿದ್ದೆಂದು ನಂಬಬೇಕು. ಬಂದಿದ್ದು ಸುಖವೋ ದುಃಖವೋ ಅವೆಲ್ಲವೂ ದೈವಾನುಗ್ರಹವೆಂದೇ ಸ್ವೀಕರಿಸಿ ಅನುಭವಿಸಬೇಕು. ಅದರಿಂದ ಪಲಾಯನ ಮಾಡುವ ಅಥವಾ ಅದನ್ನೇ ಹಳಹಳಿಸಿ ದುಃಖಿಸುವ ಯತ್ನಗಳು ಅರ್ಥಹೀನ ಎಂಬ ಒಂದು ವಿಚಾರ ಕವಿಯ ಜೀವನ ಶ್ರದ್ಧೆಯ ಫಲವಾಗಿರುವಂಥಾದ್ದು ಅವರ ಮೇಲೆ ಹೇಳಿದ ಕವನಗಳೆಲ್ಲದಕ್ಕೂ ಬೆನ್ನೆಲುಬಾಗಿದೆ. ಆದರೆ ಈ ನಿಲವಿನ ಮೂಲಕ ಸುಖದ ವಿಶ್ಲೇಷಣೆಗಿಂತ ಹೆಚ್ಚಾಗಿ ದುಃಖ, ಸಾವುಗಳು ಬದುಕಿನ ಅರ್ಥವನ್ನು ಹುಡುಕಲು ಮುಖ್ಯ ಒತ್ತಾಯ, ಒತ್ತಾಸೆ ಉಂಟು ಮಾಡುತ್ತವೆ. ಹೀಗೆ 'ರಾಮನ್ ಸತ್ತ ಸುದ್ದಿ' ಎಂಬ ಕವಿತೆ ಸಾವಿನ ಬಿಂದುವಿನಿಂದ ಬದುಕಿನ ವೈವಿಧ್ಯಮಯ ರೀತಿ ನೀತಿಗಳನ್ನೂ ಮಿತಿಯನ್ನೂ ಚಿಂತಿಸುವ ಕವನವಾಗಿದೆ.

ರಾಮನ್ ಸತ್ತುಹೋದರೆಂಬ ಸುದ್ದಿ, ಕವಿಗೆ ವಿಶೇಷ ಕಳವಳ ತಂದಿದೆ. ಆದರೆ ತನ್ನ ಸುತ್ತಲಿನ ಯಾರೊಬ್ಬರೂ ಅದರಿಂದ ವಿಚಲಿತರಾಗಿಲ್ಲ ಎನ್ನುವುದು ದುಗುಡ ಹುಟ್ಟಿಸುತ್ತದೆ. ಅದೇ ಬೇಸರದಲ್ಲಿ ವಾಕಿಂಗ್ ಹೊರಟ ಕವಿಗೆ ನಗರದ ಹೊರ ವಲಯದ ನವುಲೆ ಗ್ರಾಮದ ಹನುಮ ಎದುರಾದಾಗ, ಕವಿ ಮನಸ್ಸು ಸಾವಿನ ಆಘಾತದ ನೆಲೆಯಿಂದ ಬದುಕಿನ ವಾಸ್ತವದತ್ತ ಹೊರಳುತ್ತದೆ. ವಿಜ್ಞಾನಿ ರಾಮನ್ನರ ಸಾಧನೆಯ ನೆಲೆ ಒಂದಾದರೆ ಅದನ್ನು ಗ್ರಹಿಸಿ, ಭಾವಿಸಿ, ಅವರ ಸಾವಿಗೆ ಮರುಗುವ ಲೇಖಕನ ಸುಶಿಕ್ಷಿತ ಮಧ್ಯಮ ವರ್ಗೀಯ ನೆಲೆ ಇನ್ನೊಂದು. ಆದರೆ ನಿರಕ್ಷರಿಯಾದ ಹನುಮನ ದುಡಿಮೆಗಾರ ಬದುಕಿಗೆ ಜೀತದಿಂದ ದಿನ ದಿನವೂ ಕುಟುಂಬ ಚಾಲನೆ ಮಾಡುವುದನ್ನು ಬಿಟ್ಟರೆ ಬೇರೆ ಗೋಜಲುಗಳು ಕಾಡಲಾರವು. ಅವನದೂ ಸಮಸ್ಯೆಗಳಿವೆ. ಆದರೆ ಅದು ಹೆಂಡತಿಗೆ ಚೋಲಿ ಹೊಲಿಸಿಕೊಡಬೇಕು, ಮಕ್ಕಳ ಶಾಲೆಯ ಫೀಸು ಕಟ್ಟಬೇಕೆಂಬ ಮೂಲಭೂತ ಆವಶ್ಯಕತೆಗಳದು. ಅದರ ಆಚೆಗೂ ಅವನನ್ನು ಕಾಡಬಹುದಾದ್ದು `ಗದ್ದೆ, ಧಣಿ, ಹ್ಯಾಪಮೋಲೆಯ ಹೆಂಡಿರು, ಸಿಂಬಳಸುರುಕ ಮಕ್ಕಳು, ದೇವರ ಗ್ರಾಮ್ಯ ಕಲ್ಪನೆ, ಊರಿನ ಮುಂದಾಳು`—ಇಷ್ಟೇ ಹನುಮನ ಪ್ರಪಂಚ. `ಹೊಟ್ಟೆ

ಬಟ್ಟೆಯ ಅಗತ್ಯ ಮೀರಿದ ನನ್ನ ಹಸಿವು, ಅಸ್ವಸ್ಥತೆ' ಹನುಮನಿಗೆ ಅರಿವೂ ಆಗಲಾರದು ಎನ್ನುವ ಕೊರಗೋ, ಮರುಕವೋ ಇಲ್ಲಿ ಚಿಂತನೆಗೆ ಮೀಟುಗೋಲಾಗುತ್ತದೆ.

'ಆ ಕಡೆ ರಾಮನ್, ಈ ಕಡೆ ಹನುಮ
ದಿನವಿಡೀ ಮೈ ಕೆಸರಿಸಿಕೊಂಡು, ನನ್ನಂಥವ ನೆನೆಯಲೂ
ನಿರಾಕರಿಸುವ ತಂಗಳುಂಡು, ರಾತ್ರಿ ಕಳ್ಳಭಟ್ಟಿಯ ಹೊಡೆದು—
ನಾಡಿದ್ದು ನಾಳೆಯ, ನಾಳೆ ಇವೊತ್ತಿನ, ಇಂದು ನಿನ್ನೆಯ
ಪುನರಾವರ್ತನೆಯ ಏಕತಾನತೆಯಲ್ಲಿ—ಲೋಕ ಮರೆಯುವ
ಹನುಮನಿಗೆ ರಾಮನ್ ಹೋದರೆಷ್ಟೋ ರಸೆಲ್ ಹೋದರೂ ಅಷ್ಟೆ.'
(ರಾಮನ್ ಸತ್ತ ಸುದ್ದಿ)

ನಡೆಯುತ್ತಾ ಹನುಮ ಹಿಂದಾಗಿ, ಹನುಮನೂ ತಾನೂ ಒಂದು ದಿನ ಇಲ್ಲವಾಗುವ ಸ್ಥಿತಿಯನ್ನು ಕವಿ ಚಿಂತಿಸತೊಡಗುತ್ತಾನೆ. ತಾನು ಒಂದುದಿನ ಈ ಊರಿನಿಂದ ವರ್ಗವಾಗುತ್ತೇನೆ. ಬೇರೆ ಊರಲ್ಲಿ ಹೊಸಬನಾಗುತ್ತೇನೆ. ಹನುಮ ಸಾಯುತ್ತಾನೆ. ತನಗೆ ತಿಳಿಯುವುದಿಲ್ಲ. ತಾನೂ ಎಲ್ಲೋ ಹೇಗೋ ಸಾಯುತ್ತೇನೆ. ತನ್ನ ಹೆಸರು, ಹುದ್ದೆ, ಪದ್ಯ, ತಳಮಳ, ಬದುಕು ಯಾರಿಗೂ ತಿಳಿಯುವುದಿಲ್ಲ. 'ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು/ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವ ಸಂಚಾರ ತಿಳಿಯುವುದಿಲ್ಲ' ಹೀಗೆ ತಾನು ಮತ್ತು ಹನುಮ ತಾವು ಬದುಕಿದ್ದ ಲೋಕದಲ್ಲೇ ಅಪರಿಚಿತವಾಗಿ ಕಣ್ಮರೆಯಾಗುತ್ತೇವೆಂಬುದರಿಂದ ಕೊರಳು ತುಂಬಿ ಒಂಟಿಯಾಗಿ ಸಾಗುತ್ತಿದ್ದಂತೆ ರಾಮನ್ ಸಾವಿನ ಆಘಾತ ಮನದಿಂದ ಹಿಂದೆ ಸರಿದು ಮನದಲ್ಲಿ ಕಳವಳ ತಣ್ಣಗಾಗುತ್ತದೆ.

ಜೀವನ ಒಂದು ಯಾತ್ರೆ, ಮನುಷ್ಯನೊಬ್ಬ ಯಾತ್ರಿಕನೆಂಬ ಪರಿಗ್ರಹಿಕೆ ಯುಗಾಂತರದಷ್ಟು ಪ್ರಾಚೀನವಾದದ್ದು. ಆದರೆ ನಿಸಾರರು ತಮ್ಮ 'ಯಾತ್ರಿಕ' ಕವನದಲ್ಲಿ ಇಹದ ಇಂದ್ರಜಾಲದ ಮೋಹಕ್ಕೆ ತನ್ನನ್ನು ಮಾರಿಕೊಂಡಿರುವ ಮನುಷ್ಯ ದೂರದೂರಿನ ನೇರ ಹಾದಿಯ ಮುಗ್ಧತೆಯನ್ನು ಕಳೆದುಕೊಂಡು ಮೈ ಮರೆತಿರುವ ಬಗ್ಗೆ ವಿಷಾದದಿಂದ ಚಿಂತಿಸುತ್ತಿರುವುದು ಮನುಷ್ಯನ ಆಧ್ಯಾತ್ಮಿಕ ಯಾತ್ರೆಯ ಬಗ್ಗೆ. ಆರಂಭದಲ್ಲಿ ಈ ಪಥಿಕನು ದೂರದ ಆ ಊರಿನತ್ತ ನೇರ ಹಾದಿಯಲ್ಲಿ ಹೊರಟಿದ್ದವನೆ. ಆದರೆ ನಡು ದಾರಿಯಲ್ಲಿ ಇಂದ್ರಜಾಲದ ಬಣ್ಣಗಳಿಗೆ ಮರುಳಾಗಿದ್ದಾನೆ. ಇಂದ್ರಜಾಲದ ಬಣ್ಣ ತೆರೆದಿಟ್ಟದ್ದು ಸೂರ್ಯ, ಚಂದ್ರ, ಪುಷ್ಪವನಗಳ ಪ್ರಕೃತಿಯ ಒಲವನ್ನು. ಆ ಒಲವಿನಲ್ಲೇ ಮೈ ಮರೆತ ಅವನಿಗೆ ಆ ಮೈ ಮರೆವೆಯೇ 'ಮತಿಗೆ ಬಡಿದ ಸಿಡಿಲಾಗಿ' ದಾರಿ ಕಾಣದಾಗಿದೆ. ಕಣ್ಣಿಗೆ ರಾಚುವ 'ಬಣ್ಣ ಬಣ್ಣದ ಆಗರ' ಅಂತಿಮವಾಗಿ 'ಬರಿಯ ಮಣ್ಣು'; ಈ ಬದುಕು ಸ್ಥಿರವಲ್ಲದಿರುವಾಗಿಲ್ಲದಿರುವಾಗ ಅದರಲ್ಲೇ ಮುಳುಗುವುದೆಂದರೆ 'ಇಹದ ಸಂಮೋಹನಕೆ ಮರುಳಾಗಿರುವ ಸುಂದರ ಹಂದರ'ವಷ್ಟೆ. ನೆಲದ ಈ 'ಸ್ವಪ್ನ ಮಧುವನು ಕುಡಿದ ಹಕ್ಕಿ' ಒಳಗೇ ಜಾಗರವಾಗಿ ಕಾದು ಕುಳಿತಿದೆ 'ರಾಗತಲ್ಪದ' ಮೇಲೆ. ಆದರೆ ಅಲ್ಲೇ ಕಾದಿದೆ 'ನಾಗರ'.

ಒಳಗಿನ ಎಚ್ಚರ, ಇಡೀ ಬದುಕಿಗೆ ಅರ್ಥವನ್ನು ಒದಗಿಸುವ ಶಕ್ತಿ ಆಗದೆ ಉಳಿದಿರುವುದಕ್ಕೆ ಹೊರಗಿನ ಪ್ರಕೃತಿಗೂ ಯಾತ್ರಿಕನ ಚೇತನಕ್ಕೂ ಇರಬೇಕಾದ ಸಂವಾದ

ತಪ್ಪಿಹೋಗಿರುವುದೇ ಕಾರಣ. ಪ್ರಕೃತಿ ಎಂದಿನಂತೆಯೇ ಮಳೆಬಿಲ್ಲಿನ ರಂಗು, ಮಿಂಚಿನ ಗೊಂಚಲು, ಮುಗಿಲ ನೀಲಿಗಳನ್ನು ಹೊರಸೂಸುತ್ತಲೇ ಇದೆ. `ಹೂವು ಗಂಧದ ಲಾಲಿ ಹಾಡಿದೆ:/ ಧೂಪ ಕಿಲಕಿಲ ನಕ್ಕಿದೆ.` ಆದರೆ `ತಿಮಿರದಾಳದ ಕೆಸರೊಳಿಳಿಯುವ ಜೀವ ತನ್ನನೆ ಮರೆತಿದೆ`. ತನ್ನ ಬಗೆಗಿನ ಅರಿವಿಲ್ಲದಿರುವಾಗ `ಮೇಲು ನಾಡಿನ ಬೆಳಕ ಕರೆಯೂ` ರುಚಿಸದೆ ವ್ಯರ್ಥವಾಗಿದೆ. ಪ್ರಕೃತಿಯಿಂದ ದೈವಿಕತೆಯ ಬೆಳಕನ್ನು ಈಗ ಪಡೆಯಲಾರದಷ್ಟು ಇಹದ ಬದುಕಲ್ಲಿ ಮಾನವ ತನ್ನನ್ನೇ ಮರೆತುಕೊಂಡಿರುವ ಈ ಗ್ರಹಿಕೆ ನವ್ಯ ಸಾಹಿತ್ಯದ ಮುಖ್ಯ ಗ್ರಹಿಕೆಗಳಲ್ಲಿ ಒಂದೆಂಬುದನ್ನು ಕಂಡಾಗ ನಿಸಾರರು ಈ ವಿಚಾರಕ್ಕೆ ನೀಡುವ ಅಭಿವ್ಯಕ್ತಿಯ ರೂಪ ನವೋದಯದ ರೀತಿಯದಾಗಿದ್ದರೂ ವಿಷಯವು ನವ್ಯಕ್ಕೆ ನಿಕಟವಾಗಿರುವುದನ್ನು ಕಾಣಬಹುದು. ಒಂದು ಹಂತದಲ್ಲಿ ನವ್ಯಕ್ಕೆ, ನವೋದಯದ ಕವಿಗಳಾದ ಕೆ. ಎಸ್. ನರಸಿಂಹ ಸ್ವಾಮಿ, ಜಿ. ಎಸ್. ಶಿವರುದ್ರಪ್ಪನವರೂ ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸಿ, ಕವಿತೆಗಳನ್ನು ರಚಿಸಿದ್ದಾರೆಂಬುದನ್ನೂ ಇಲ್ಲಿ ನೆನೆಯಬಹುದು.

ಮನುಷ್ಯ ಮತ್ತು ಪ್ರಕೃತಿಯ ನಡುವಿನ ಕಂದರವನ್ನು ನಿಸಾರರ ಈ ಸಾಲುಗಳು ಹಿಡಿದಿಡುತ್ತವೆ:

‘ಮೌನ ನಗುತಿದೆ ಬಿಮ್ಮನೆ
ಸುತ್ತ ಬೆಳಕಿನ ಭಾವನೆ;
ಗಾಳಿಯಾಡದ ಕಪ್ಪು ಗುಹೆಯಲಿ
ದೇಹ ಮೆರೆದಿದೆ ಜುಮ್ಮನೆ,
ದಿವ್ಯ ಕಲ್ಪನೆ ಅರ್ಥವಿಲ್ಲದೆ
ಅಲ್ಲೆ ಬಿದ್ದಿದೆ ಸುಮ್ಮನೆ’

(ಯಾತ್ರಿಕ)

ನಿಸಾರರ ಚಿಂತನೆ, ಕಾವ್ಯದ ತತ್ತ್ವಗಳು ಯಾವತ್ತೂ ನವೋದಯದ ಸೌಂದರ್ಯ ತತ್ತ್ವದಿಂದ ಪೂರ್ತಿ ಕಳಚಿಕೊಂಡದ್ದಲ್ಲ. ನವ್ಯರ ಅಧ್ವರ್ಯು ಅಡಿಗರ `ಭೂಮಿಗೀತ'ದ ಒಂದು ಬಲವಾದ ಚಿತ್ರ, ‘ನೆಲತಾಯಿ ಮಲತಾಯಿ`—ಅವಳ ಮಗ ಮನುಷ್ಯ ದಿಕ್ಕುಗೇಡಿಯಾಗಿ, ಕಳೆದುಕೊಂಡ ತನ್ನ ಅಸ್ತಿತ್ವವನ್ನು ಹುಡುಕುತ್ತಾ ಪ್ರಕೃತಿಗೆ ಪರಕೀಯವಾಗುತ್ತಾ ಅಲೆಯುವುದನ್ನು ಹೇಳುತ್ತದೆ. ಆದರೆ ನಿಸಾರರಲ್ಲಿ ಪ್ರಕೃತಿ ‘ಮಾತೆ`ಯಾಗಿರುವುದಕ್ಕಿಂತ ಪರತತ್ತ್ವದ ಒಲುಮೆಯ ಒಂದು ವ್ಯಕ್ತರೂಪವಾಗುತ್ತದೆ. ಈ ರೀತಿ, ಮಾತೃದೇವೋ ಭವತ್ವವಾಗಲಿ ಅಥವಾ ಈಡಿಪಸ್ಸನ ತಾಯ್ಗಂಡತನದ ಪಾಪದ/ಪ್ರಾಯಶ್ಚಿತ್ತದ ಗೀಳುಗಳಾಗಲೀ ಅವರ ಬದುಕಿನ ಜಿಜ್ಞಾಸೆಯ ಮೂಲ ಪ್ರೇರಕ ಭಾವಗಳಾಗುವುದಿಲ್ಲ. ‘ನಾದವಿರದ ಬದುಕು` ಎಂಬ ಅವರ ಮೊದಲ ಹಂತದ ಒಂದು ಕವನ ದೈವ ಅಥವಾ ಪ್ರಕೃತಿಯು ಅಯಾಚಿತವಾಗಿ ಒಲುಮೆಯಿಂದ ನಮಗೆ ನೀಡಿರುವ ಎಲ್ಲ ಸತ್ವವನ್ನೂ ಎಚ್ಚರದಿಂದ ಸ್ವೀಕರಿಸಿ ಅನುಭವಿಸುವುದೇ ಬದುಕನ್ನು ಅರ್ಥಹೀನವಾಗದ ಹಾಗೆ ಕಾಯ್ದುಕೊಳ್ಳುವ ಹಾದಿಯೆಂಬ ಸರಳ, ನೇರ ದಾರಿಯನ್ನು ಸೂಚಿಸುತ್ತದೆ. ಕಾವ್ಯ ಜೀವನದಲ್ಲಿ ಬಹು ದೂರ ಸಾಗಿಬಂದ ಮೇಲೂ ಕಲೆ, ಚೆಲುವು, ಮನದ ಭಾವನಾತ್ಮಕ ಕಲ್ಪನೆ ಮತ್ತು

ಕನಸುಗಳ ಉದಾತ್ತೀಕರಣದ ಸಾಧನವೆಂಬ ತಮ್ಮ ಮೂಲ ನಿಲವನ್ನು ಅವರು ಬಿಟ್ಟುಕೊಡುವುದಿಲ್ಲ. ಆದ್ದರಿಂದ ಇಂಥ ನಂಬಿಕೆಯ ಮೂಲಕ ಅವರು ತಮ್ಮ ಮಗ್ಗುಲಿನ ಇತರ ಕಾವ್ಯಧೋರಣೆಗಳಿಗೆ ಮತ್ತು ಆ ಪಂಥಗಳು ಜೀವನದತ್ತ ತಳೆದ ಧೋರಣೆಗಳಿಗೆ ತೋರುವ ಪ್ರತಿಕ್ರಿಯೆ ಕುತೂಹಲ ಹುಟ್ಟಿಸುತ್ತದೆ. ನಿದರ್ಶನವಾಗಿ 'ವಾಸ್ತವಿಕ' ಎಂಬ ಅವರ ಕವನವನ್ನು ನೋಡಬಹುದು.

ವ್ಯಕ್ತವಾಗುವ ಸತ್ಯವೇ ಪರಮ ಸತ್ಯವೆಂದು, ಅದನ್ನೇ ಆರಾಧಿಸುವವರ ಧೋರಣೆಯನ್ನು ಪ್ರಶ್ನಿಸುತ್ತಲೇ ಈ ಕವನ ಆರಂಭವಾಗುತ್ತದೆ. 'ಕಣ್ಣು ಕಿವಿಗಳಿಗಷ್ಟೆ ಪಟ್ಟ/ ಉಳಿದದ್ದಕ್ಕೆ ಚಟ್ಟ' ಕಟ್ಟುವ ಧೋರಣೆ 'ವಾಸ್ತವಿಕತೆಯ ಗೋರಿ'ಯೇ ಹೊರತು ಪರಮ ಸತ್ಯದ ಹಾದಿಯಲ್ಲ. ಆ ಸತ್ಯವನ್ನು ಅರಿಯಲು ಬೇಕಾದ ಬುದ್ಧಿ, ರಾಗಭಾವೋದ್ರೇಕ ಮತ್ತು ಮೂಗು ನೇರದ ಮನದ ಪಾರುಪತ್ಯಗಳಿಗೆ ವಶವಾಗಿದೆ. ಆದ್ದರಿಂದಲೇ ಕೇವಲ ಇಂದ್ರಿಯ ಜಾತವಾದ ಅರಿವು ಗೋಸುಂಬೆಯೂ ಆಗಿರಬಹುದು ಎಂಬುದನ್ನು ಆ ಬುದ್ಧಿ ಗ್ರಹಿಸಲಾರದಾಗಿದೆ. ಸತ್ಯ ಅದೃಶ್ಯವೇ ಆಗಿದೆ.

'ಪ್ರಕೃತಿಗೆ ಹತ್ತು ಮುಖ'. ಅವೂ 'ಕಾಣದತಿಗೂಢಗಳು.' ವಾಸ್ತವತೆ ಎಂಬುದು ಆ ನಿಗೂಢತೆಯೇ ಆಗಿರುತ್ತದೆ. ಜ್ಞಾನದ ಎರಡು ಕರಣಗಳಾದ ಕಣ್ಣು ಕಿವಿಗಳು ಗ್ರಹಿಸುವ ವಾಸ್ತವತೆ 'ಫೋಟೋ ಹಿಡಿಯುವ ದೃಶ್ಯ. ಅದಕ್ಕೆ ಎರಡೇ ಆಯಾಮ.' ಬೇರೊಂದು ಆಯಾಮವೂ ಸತ್ಯಕ್ಕಿದೆಯೆಂದು ಕಾಣುವುದೇ ಒಂದು 'ಪವಾಡ' ಸದೃಶ ಅನುಭವ. ಆ ಪವಾಡವನ್ನು ತೋರಿಸಲು ಪ್ರಕೃತಿಯು 'ಕೊಂಬೆ ಎಲೆ ಗುಬ್ಬಚ್ಚಿ ಗೂಡುಗಳು, ಹಾಡುಗಳು/ಋತು ಋತುಗೆ / ಹೂ / ಹಣ್ಣು / ಬಣ್ಣಗಳ ಕೂಡುಗಳು' 'ಸೂರ್ಯ, ಚಂದಿರ ತಾರೆ, ಚಳಿ ಮಳೆಯ ಭೇಟಿಗಳನ್ನು ತನ್ನ ಸಾಧನಗಳನ್ನಾಗಿ ಬಳಸುತ್ತದೆ. ಈ ಅಸಾಧಾರಣ ಸತ್ಯಕ್ಕೆ ಮುಖಾಮುಖಿಯಾಗಲಿಕ್ಕೆ ಹೊರಗಿನ ಎಲ್ಲ ವೇಷಗಳನ್ನು ಕಳಚಿ ಬಿಡಬಲ್ಲ ಅಸಾಧಾರಣ ಧೈರ್ಯವೇ ಬೇಕು. 'ಚರ್ಮ, ಚಕ್ಕಳ, ಮಾಂಸದಾಚೆ'ಯ 'ಕಾಣದ ಪ್ರಾಣ'ದ ಅರಿವು ಪಡೆಯಲು 'ಗೊಮ್ಮಟನನನುಕರಿಸಿ'ನಿಲ್ಲಬೇಕೆಂದು ಸಾರುತ್ತದೆ ಈ ಕವನ.

'ನಾದವಿರದ ಬದುಕು' ಆಗಲಿ, 'ವಾಸ್ತವಿಕ' ಎಂಬ ಕವನವಾಗಲಿ ನಿಸಾರರ ಪ್ರಾತಿನಿಧಿಕ ಕವನಗಳಲ್ಲದಿರಬಹುದು. ಆದರೆ ಇವುಗಳಲ್ಲಿ ಸರಳ ಮಾತುಗಳಲ್ಲಿ ಯಾವ ತತ್ವವನ್ನು ಅವರು ಬೋಧಿಸಿದ್ದಾರೋ ಅದೇ ಹೆಚ್ಚು ಸಂಕೀರ್ಣ ರೀತಿಯಲ್ಲಿ ಅವರ ಕೆಲವು ಪ್ರಮುಖ ಕವನಗಳಲ್ಲೂ ಅನಾವರಣಗೊಳ್ಳುವುದನ್ನು ಕಾಣುತ್ತೇವೆ. ಬದುಕಿನಲ್ಲಿ ಸುಖ-ದುಃಖ, ಪ್ರೀತಿ ಹಾಗೂ ಅದರ ವಿನಾಶ ಯಾವುದೂ ಒಂದೊಂದೇ ಬರುವುದಿಲ್ಲ. ಒಂದು ಮುಗಿದರೆ ಎಲ್ಲ ಮುಗಿದ ಹಾಗೂ ಅಲ್ಲ. ಒಂದರ ಕೊನೆ ಮತ್ತೊಂದರ ಆರಂಭ. ಹಳೆಯದೊಂದರ ಮುಕ್ತಾಯದಲ್ಲೇ ಹೊಸತೊಂದರ ಆಗಮನಕ್ಕೆ ಅವಕಾಶವಿರುತ್ತದೆ ಎಂಬ ವಿಶಿಷ್ಟ ಆಶಾವಾದಿ ನೆಲೆಯೊಂದು ನಿಸಾರರ 'ಚಿಲುಮೆ' ಎಂಬ ಕವನದಲ್ಲಿದೆ. ಮಂಜು-ಹೊಂಬಿಸಿಲು; ಸುಂಟರಗಾಳಿ-ಬೆಟ್ಟ; ತಬ್ಬಲಿ ಬೀಜಕ್ಕೆ ಮಣ್ಣಿನ ಹೊದಿಕೆ—ಹೀಗೆ ಜಗತ್ತಿನಲ್ಲಿ, ಬದುಕಲ್ಲಿ ಪರಸ್ಪರ ವಿರುದ್ಧವಾಗಿ ತೋರುವ ಸಂಗತಿಗಳು ಪೂರಕವಾಗಿ ಕಾಣಿಸಿ

ಕೊಳ್ಳುತ್ತವೆ. ಎಲ್ಲ ಕಷ್ಟಗಳಿಗೂ, ವಿಪರೀತ ಸ್ಥಿತಿಗಳಿಗೂ ಪರ್ಯಾಯವೊಂದನ್ನು ಬದುಕೇ ಕಾಣಿಸುತ್ತಲಿರುತ್ತದೆ. ಬದುಕಿನಲ್ಲಿ ದುಃಖ, ಸಂಕಟ, ಯಾತನೆ, ಅಗಲಿಕೆಗಳು ಎದುರಾದಾಗ ಅವನ್ನೆಲ್ಲ ಅರಗಿಸಿಕೊಂಡೂ ಬದುಕಲು ಹಲವು ವಿಧಗಳಿವೆ. ಪರತತ್ತ್ವವೊಂದು ಅರಿವಿನ ಬೆಳಕನ್ನು ಎಲ್ಲ ಜೀವಗಳ ಮೇಲೂ ಹರಿಸಿದೆ. ಆದರೆ ಆ ಬೆಳಕನ್ನು ಒಪ್ಪಿ, ಸ್ವೀಕರಿಸುವ ರೀತಿ ಮಾತ್ರ ಜೀವ ಜೀವಕ್ಕೂ ಬೇರೆಯದೇ ಆಗಿರುತ್ತದೆ.

'ಬೆಂಕಿಯ ನುಂಗಿಯು ನಕ್ಕರೆ ಒಂದು
'ಹಿಮದಲಿ ಬೆಂದೆ' ಎನ್ನುವುದೊಂದು
ಒಡಲಲಿ ಕಹಿ ವಿಷವಿದ್ದರು ಸಾಯದು
ಇನ್ನೊಂದಮೃತ ಸೋಕಿದರೇಳದು!'

(ಚಿಲುಮೆ)

'ಹಿರಿಯಾಸೆ' ಎಂಬ ಇನ್ನೊಂದು ಕವಿತೆಯಲ್ಲಿ ನಿಸಾರರ ದೈವದ ಬಗೆಗಿನ ನಂಬಿಕೆಯನ್ನು ಕಾಣಲು ಸಾಧ್ಯವಿದೆ. ಅಪರಂಪಾರ ಕರುಣಾಳು ಆ ಸರ್ವಶಕ್ತ. ಆ ಶಕ್ತಿ ಮಾನವರಿಗೆ ಪ್ರತಿಯೊಬ್ಬರ ಬದುಕು, ಸುಖ-ದುಃಖ ಇಷ್ಟೆಂದು ಭಾಗ ಮಾಡಿ ಕೊಟ್ಟು ಕಳುಹಿಸಿರುತ್ತದೆ. ದೈವ ಅಯಾಚಿತವಾಗಿ ತನ್ನ ಒಲುಮೆ, ಕರುಣೆಗಳಿಂದ ಜೀವಗಳನ್ನು ಸದಾ ಕಾಪಾಡುತ್ತಿರುತ್ತದೆ ಎಂಬ ವಿಶ್ವಾಸವೇ ಬದುಕಿನ ಎಡರು ತೊಡರುಗಳನ್ನು, ಸೋಲು, ಅವಮಿತಿಗಳನ್ನು ಸಹಿಸಲು ಶಕ್ತಿ ನೀಡುತ್ತದೆಂದು ನಿಸಾರರ ಈ ಕವಿತೆಯ ವಿಚಾರವಿದೆ.

'ಹೊತ್ತಿ ಉರಿದ ಆಸೆ ನಂದಿತೋ ಹಣತೆ ಹಿಡಿದ ದೀನ
ಸಂಗವಿರದೆ ಕಂಗೆಡುತಲಿರುವೆ, ನಡೆ ಹುಡುಕಿ ನಿಜದ ತಾಣ'

(ಹಿರಿಯಾಸೆ)

ಎಂದು ಆರಂಭವಾಗುವ ಈ ಕವನದಲ್ಲಿ ಕಳೆದುಹೋದ ಅನುಭವಗಳ ನೆನಪುಗಳು ಮುಂದಿನ ಬದುಕಿಗೆ ದಾರಿ ತೋರಬಹುದು ಎಂಬುದನ್ನು ಒಪ್ಪುವುದಿಲ್ಲ ಕವಿ. ಹಗಲು, ಇರುಳು, ಬಿರಿವ ಮೊಗ್ಗೆಯ ಗಂಧ ಎಲ್ಲಾ ಈಗ ಮುಗಿದುಹೋಗಿ ಬರಿಯ ನೆನಪಿನ ಪಾಥೇಯವಾಗಿವೆ. 'ಏರಿದಷ್ಟೂ ಮುಗಿಲು ಮುಂದಿರು'ವಾಗ ಅದನ್ನು ಬಿಟ್ಟು 'ಹೆಗ್ಗಡಲಿ ನಾಳಕ್ಕಿಳಿದವನಿಗೆ' 'ತಿಂದಷ್ಟು ಹಸಿವು' 'ಕುಡಿದಷ್ಟು ದಾಹ'. ಈ ದಾಹ ತೀರದು. ಸುಖವನ್ನೂ ತರದು. ಜೀವ ಜೀವವೂ ಒಳಗೊಳಗೆ ನೋವುಂಡು ಕಾತರಿಸುತ್ತಿದೆ—'ಅರಮನೆಯ ಬಿಟ್ಟು ಸೆರೆಮನೆಯ ಮೆಚ್ಚಿ ನಡೆದನಲ್ಲಾ', ಇವನು ಎಂದು ತಮ್ಮನ್ನು ಮತ್ತೆ ಸೇರಿಯಾನು? ಎಂದು. ದೈವದೊಲುಮೆಯಲ್ಲಿನ ಅಚಲ ಶ್ರದ್ಧೆಗೆ ಮಾತ್ರ ದಾರಿ ತೋರುವ ಶಕ್ತಿಯಿದೆ. ತನ್ನ 'ಪತನ'ಕ್ಕಾಗಿ ಪಶ್ಚಾತ್ತಾಪ ಪಡುತ್ತ, ಆ ದೈವದಲ್ಲಿ ನಂಬಿಕೆಗೆ ತನ್ನನ್ನು ಒಡ್ಡಿಕೊಂಡಾಗ ಬಾಳಲ್ಲಿ ಉತ್ಸಾಹ ಮತ್ತೆ ಮೈಗೂಡಬಹುದೆನ್ನುತ್ತಾರೆ ಕವಿ.

'ಲೋಕ ಹಿತವೆ' ಎಂಬ ಕವನದಲ್ಲಿ ಬದುಕನ್ನು ನಡೆಯಿಸುವ ನಿತ್ಯನಿಯಾಮಕ ಶಕ್ತಿಯ ಕಾರ್ಯವಿಧಾನದಲ್ಲಿರುವ ವೈರುದ್ಧ್ಯಗಳನ್ನೂ ಆ ವೈರುದ್ಧ್ಯದ ಮೂಲದಲ್ಲಿರುವ 'ಲೋಕ ಹಿತ'ದ ಉದ್ದೇಶವನ್ನೂ ಕುರಿತ ಜಿಜ್ಞಾಸೆಯಿದೆ. 'ಉನ್ಮತ್ತ ಜೀವನದಯಸ್ಕಾಂತ' ಶಕ್ತಿ ತಾನೇ ಎತ್ತರಕ್ಕೆ ಏರಿಸಿ 'ತಾನೇ ತಗ್ಗನು ತೋಡಿ' 'ಸುಖದ ಮೂಲವನ್ನೊಡೆದು' ದುಃಖ

ತರುತ್ತದೆ. ಆ ಅಸೀಮ ಬಲ ಕೈಗೊಳ್ಳುವ ಕಾರ್ಯಗಳಿಗೆ ಅದರದೇ ಉದ್ದೇಶವೊಂದು ಇದ್ದೀತು.

'ದಣಿಸಲೆಂದೇ ಕುಣಿಸಿ, ತಣಿಸಲೆಂದೇ ಉಣಿಸಿ
ಶಿಕ್ಷೆಯೊಳು ರಕ್ಷಿಸುವ ಕಾಣದೊಲವೇ
ಸೆಟೆದಿರಲು ಕೆಳಕೆಡವಿ, ಕುಸಿದಿರಲು ಮೈದಡವಿ
ಜಗಕೆ ಸಮತೆಯ ತರುವ ಅಸಮ ಬಲವೇ'

ಹೀಗೆ ದೈವದ ಪರಸ್ಪರ ವಿರುದ್ಧವೆನಿಸುವ ಕ್ರಿಯೆಗಳಿಗೆ ವಿಷಮತೆಯನ್ನೆಲ್ಲಾ ನೀಗಿ ಸಮತ್ವವನ್ನು ಕಾಯ್ದುಕೊಳ್ಳುವ ಉದ್ದೇಶವಿದ್ದರೂ ಸಾಮಾನ್ಯ ಮರ್ತ್ಯತೆಗೆ ಅದು ರಹಸ್ಯವಾಗಿಯೆ ತೋರಬಹುದು; 'ಸುಟ್ಟ ಮನೆ ಬೆಂಕಿಯನ್ನೇ ದಿಟ್ಟಿಸಿ ಅಳುವ ಕಣ್ಣಿನಲ್ಲೇ ಬೆಳಕ'ನ್ನು ತೆರೆಯುವ ದಯೆ ಅದು. 'ಹತ್ತು ಮಕ್ಕಳ ಹೂಳಿ ಬಂದ ಕೈಯಲ್ಲೆ ತುತ್ತನುಣಿಸುವ' ನಿರ್ವಿಕಾರ ವಿಧಿಯೂ ಹೌದು. 'ನಂಬಿದರೆ ಕಂಬವನೆ ಒಡೆದು ಬಂದೇನೆಂದು' ನೊಂದವರಿಗಾಲಂಬವಾದ ಋತವೂ ಅದೇ. 'ಬಿದ್ದ ಬದುಕೂ ಮತ್ತೆ ಎದ್ದು ನಿಂತೀತೆಂದು ಸದ್ದಿರದೆ ಮುದ್ದಿಸುವ' ಲೋಕ ಹಿತವೂ ಅದೇ. ಅಂತಹ ವಿಸ್ಮಯಕರ ಶಕ್ತಿ ನಮ್ಮನ್ನು ಬದುಕಿನಲ್ಲಿ ಆಡಿಸಿ, ದಣಿಸಿ ಸಂತೈಸುತ್ತದೆಂಬ ಅಚಲ ನಂಬಿಕೆಯ ನೆಲೆ ಈ ಕವನದಲ್ಲಿ ಸ್ಫುಟವಾಗುತ್ತದೆ. ಸಾಮಾನ್ಯವಾಗಿ ನಿಸಾರರ ಕವಿತೆಗೊಳಳಗಿನ ಪರತತ್ತ್ವದ ಗ್ರಹಿಕೆ ಮೂರ್ತ ವಾಗುವಂಥದಲ್ಲ. ಅದು ಕರುಣಾಮಯಿ ಪರ ಶಕ್ತಿಯ ಅನುಗ್ರಹದ ಅಭಯಹಸ್ತವಾಗಿರುತ್ತದೆ. ಆದರೆ ಪರಿಸರದ ಸಾಂಸ್ಕೃತಿಕ ಅಂಶಗಳನ್ನು ಅರಿವಿದ್ದೋ, ಇಲ್ಲದೆಯೋ ಕವಿ ನಿಸಾರರು ಕವನ ಸೃಷ್ಟಿಯ ಗಳಿಗೆಯಲ್ಲಿ ಸ್ವೀಕರಿಸುತ್ತಾರೆ—ಆದ್ದರಿಂದ 'ನಂಬಿದರೆ ಕಂಬವನೆ ಒಡೆದು ಬಂದೇನೆಂದು' ಎಂಬಂಥ 'ಅವತಾರಿ'ಯಾದ ದೇವರ ಕಲ್ಪನೆಯಲ್ಲೂ ಅವರು ವಿರೋಧವನ್ನು ಭಾವಿಸದೆ ಅದನ್ನು ಬಳಸಿಕೊಳ್ಳುವ ಕ್ರಮ ಕುತೂಹಲ ಹುಟ್ಟಿಸುತ್ತದೆ.

ಈ ಲೋಕಾತೀತ ಶಕ್ತಿಯೇ 'ತಂದೆ'ಯಾಗಿ, ತನಗೆ ಬದುಕನ್ನು ನೀಡಿದ ಈ ತಂದೆಗೆ, ಮನುಷ್ಯ ಆ ಬದುಕಿನ ಕೊನೆಯಲ್ಲಿ ಕೃತಜ್ಞತಾ ಭಾವದಿಂದ ನಮಿಸುತ್ತಾ ವಿದಾಯ ಹೇಳುವ ಕವನ 'ಕೊನೆಯ ನಮಸ್ಕಾರ'. ನೀರಿನಿಂದ ಚಿಮ್ಮಿದ ಕಾರಂಜಿ ಮತ್ತೆ ನೀರನ್ನೇ ಸೇರುವಂತೆ, 'ಮಳೆ ಆವಿಯಾಗಿ ಮತ್ತೆ ಮುಗಿಲನ್ನೇ ಸೇರುವಂತೆ' ಊರೂರು ಸುತ್ತಿದ ಯಾತ್ರಿಕ ತನ್ನ ಹುಟ್ಟಿಸಿದ ಊರನ್ನು ಪುನಃ ತಲಪುವ ಹಾಗೆ ಸಾವು ಮನುಜನನ್ನು ಆ ಮೂಲಶಕ್ತಿಯ ಕಡೆಗೆ ಹೋಗಿ ಸೇರಿಕೊಳ್ಳುವ ಪಯಣವಾಗುತ್ತದೆ.

ಆ ತಂದೆ ಕೊಟ್ಟ ಬದುಕು. ಆ ಬದುಕಲ್ಲಿ ಅವನು ಕೊಟ್ಟಿರುವುದು ಸೊಗವೋ, ಅಳಲೋ, ಬೆಳಕೋ, ನೆರಳೋ—ಅದನ್ನು ತುಸುವೂ ಚಕಾರವೆತ್ತದೆ, ಅವನು ಇತ್ತುದೆಲ್ಲವೂ ಮಹಾಪ್ರಸಾದ ಎಂದೇ ಇವನು ಸ್ವೀಕರಿಸಿದ್ದಾನೆ. ವಯಸ್ಸು, ದೇಹ ಸಿರಿ, ಅಧಿಕಾರ, ಧನಕನಕ ವಾಹನ ವಸ್ತುವಿದ್ದೂ ಇವನು ಅವೆಲ್ಲವನ್ನೂ ಕಳಚಿ, ಈಗ ಅಹಂಕಾರ ನೀಗಿಕೊಂಡು, ನಿರ್ಧನನಾಗಿ, ವಿನೀತನಾಗಿ, ಬದುಕಿಗೂ ಅದನ್ನು ಇತ್ತವನಿಗೂ ಅಂತಿಮ ನಮಸ್ಕಾರ ಹೇಳುತ್ತಿದ್ದಾನೆ.

ಉಸಿರು ಹೋಗಿ ಮೋಹದ ಒಡಲೀಗ ಕ್ರಿಮಿಗಳ ಇಂಧನವಾಗಿದೆ. ಗ್ರಹ ತಾರಾ ಶಶಿ ಇನ, ಎಲೆಯ ರಾಶಿಯ ದಿನ ದಿನದ ನೋಟಗಳೀಗ ಮೂದಲಿಸಿ ಕ್ರಿಮಿಗಳಿಗೆ ಹೇಳುತ್ತಿವೆ—'ಗೆಳೆಯನ ಸ್ವಾಗತಿಸಿರಿ!' ಎಂದು. ಒಳಿತು-ಕೆಡುಕು, ಸರಿ-ತೊಡಕುಗಳನ್ನೆಲ್ಲ ಒಂದೆ ಬಿಟ್ಟಿದೆ ದೇಹ. ಹೆರವರ ಪಾಲಿಗೆ ಆರ್ಭಟಿಸುವ ಇವನ ದುಶ್ಚಟ ಕೊನೆಗೊಂಡಿದೆ. 'ಬಣ್ಣ ಒರೆಸಿ ನೇಪಥ್ಯವ ಸೇರಲಿರುವ ನಟ' ಸಂದ ಬದುಕಿನ ಗಳಿಕೆ-ಕಳೆದದ್ದು ಪಟ್ಟಿ ಮಾಡಿದರೆ ಪ್ರೇಮದ ಸುಗ್ಗಿ, ವಿದ್ವೇಷದ ಬರ, ಲೋಕ ಕೊಟ್ಟ ವರ-ಉಶ್ಯಾಪಗಳೆಲ್ಲ ಕೊನೆಗೊಂಡಿವೆ. ಈ ಮೋಜಿಗನಿಗೆ ಇನ್ನು ವಿಧಿಯಾಜ್ಞೆ ಮೀರಲು ಸಾಧ್ಯವಿಲ್ಲ. ದೇಹದ ಅಶ್ವವನು ಹೂಡಿ ಪಂಚೇಂದ್ರಿಯಗಳೊಂದಿಗೆ ಇವನಿನ್ನು ಹೋರಾಡಲಾರ. ಇನ್ನೇನಿದ್ದರೂ ಬಿಳಲು ತನ್ನ ತಾಯಿಬೇರನ್ನು ಕೂಡಿಕೊಳ್ಳುವುದೇ ದಾರಿ. ಬಂದಲ್ಲಿಗೇ ಇವನು ಮರಳಬೇಕು.

ಬದುಕಿನ ಅರ್ಥವೇನೆಂದು ಜಿಜ್ಞಾಸಿಸುವಾಗ ಸಾವನ್ನು ಮುಖ್ಯವಾದ ಗಡಿರೇಖೆಯಾಗಿ ಭಾವಿಸುತ್ತಾ ಇಹ-ಪರಗಳತ್ತ ವಿವೇಚನೆ ಹರಿಸುವುದು ನಿಸಾರರ ಒಂದು ವಿಶಿಷ್ಟ ಕ್ರಮ. ಆದರೆ ಈ ಕವನಗಳೊಳಗೆ ಬದುಕನ್ನು ಅವರು ಇಂದ್ರಿಯಗಳ ಭೋಗಗಳ ಮೊತ್ತವೆಂದೇ ಸಾರಾಸಗಟಾಗಿ ಪರಿಗಣಿಸಿ ಒಂದು ಮೂಟೆ ಮಾಡಿ ಅದನ್ನು ಜೀವನದ ಬೆನ್ನಿಗೆ ಏರಿಸಿ ಬಿಡುತ್ತಾರೆ. ಬದುಕಿನ ಒಳ ಲಕ್ಷಣಗಳ ಮುಖಾಂತರವಾಗಿ ಅದನ್ನು ಅನಾವರಣ ಮಾಡುವುದಕ್ಕಿಂತ ಹೆಚ್ಚಾಗಿ, ವಿರಕ್ತರು ಹೇಳುವ ರೀತಿ ಬದುಕನ್ನೂ ಭಾವಿಸುವುದು ಮತ್ತೆ ಮತ್ತೆ ಕಾಣಿಸುತ್ತದೆ. ಉದಾಹರಣೆಗೆ 'ಹುಚ್ಚನಾಗಬೇಡ' 'ಕಳೆದದ್ದಕ್ಕೆ ಕೊರಗಬೇಡ' 'ಜೀವನ ಜಿಜ್ಞಾಸೆ' ಎಂಬ ಕವನಗಳಲ್ಲೂ ಹೀಗೇ ಹುಟ್ಟು-ಸಾವು, ನಡುವಿನ ಬದುಕಿಗೆ ಗಡಿಗಳಾಗಿ ಚರ್ಚೆಗೆ ಒಳಗಾಗುತ್ತವೆ. 'ಬದುಕು ವಿಧಿಯ ಕೊಕ್ಕ ಕುದುಕು', 'ಹುಟ್ಟಳಿವು ಬಲು ನಿಗೂಢ', 'ಬಾಳೊಂದು ತೇಲು ಮೋಡ', 'ಒಯ್ಯಲಿದೆ ಸಂಜೆ ಸಾವು'—ಎಂಬ ಎಚ್ಚರದಲ್ಲಿ ಇರಬೇಕು. ಕನ್ನಡಿಯ ಗಂಟಾಗಿ ಇದ್ದೂ ಇಲ್ಲವಾಗುವ ಬದುಕಿನ ನಂಟನ್ನು ಶಾಶ್ವತವೆಂದು ಮೈಮರೆಯಬಾರದು.

'ಭವ ಹಣ್ಣು ಜಗವೆ ತೋಟ
ನೀ ತಿರುಳ ತಿನುವ ಕೀಟ
ಅರಿವಿಲ್ಲ ಆಚೆ ನೋಟ:
ಮಳೆಗಾಳಿ ಹೆಡೆಗಳಾಟ
ನೀನುಳಿದರೆ ಅದೆ ಪವಾಡ
ಹುಚ್ಚನಾಗಬೇಡ'

(ಹುಚ್ಚನಾಗಬೇಡ)

ಈ ಬದುಕೇ ಪವಾಡ ಎಂದಾಗಲಿ, ಅದು ತನಗಾಗಿ ಕಾಯದೆಂಬ ಅರಿವಾಗಲಿ ಇಲ್ಲದ ಜೀವ ಖಡ್ಗವಾಗಿ ಝಳಪಿಸಿದರೂ ಕೊನೆಗೆ 'ಸೇರಬೇಕು ಒರೆಗೆ'.

'ಈ ವಿಶ್ವ ಚಕ್ರವ್ಯೂಹದೊಳಗೆ
ನರ ಯಾವ ಲೆಕ್ಕ ಇಳೆಗೆ?
ಕಸ ಕಡ್ಡಿ ಜೊಂಡು ಹೊಳೆಗೆ
ಸಲ್ಲುತಿವೆ ಗಳಿಗೆ ಗಳಿಗೆ'—

'ಜೀವನ ಜಿಜ್ಞಾಸೆ' ಕವನ, 'ಹುಟ್ಟಿನೀ ಬದಿ ನೆರಳು | ಸಾವಿನಾಚೆಗೆ ಮರಳು', ಮಧ್ಯದಲ್ಲಿ 'ಗಿರಿ ತುದಿ ಹಿಮಕಣ ಜೀವನ' ಎಂದು ಬದುಕಿನ ನಶ್ವರತೆಯನ್ನು ಪರಿಶೀಲಿಸುತ್ತದೆ. 'ಯಾವ ಚಣ ಜಾರುವುದೋ, ಯಾವ ತಳ ಸೇರುವುದೋ' ಆಗ 'ಭವದ ಬೃಂದಾವನ' ಆಗುವುದು 'ಕೆಸರ ಕಂಬ'. ಬದುಕಿಗೆ ತಾನೇ ಒಡೆಯನೆಂದು ಮೆರೆದ ಮಾನವ ತಲೆ ತಗ್ಗಿಸದೆ ನಡೆದು ಬಾಗಿಲ ಚೌಕಟ್ಟಿನಿಂದ ಬಡಿಸಿಕೊಂಡು ಮಮ್ಮಲ ಮರುಗುವುದೇ ನಿಜ. ಹಾರಲಾರದ ಆಸೆ ಹಕ್ಕಿಯ ಗರಿಪುಕ್ಕಗಳ ಆರಿಸಿ ಮರವೆ ತೊಟ್ಟಿಗೆ ಬಿಸಾಡಿ ನಿಟ್ಟುಸಿರು ಬಿಡುವುದೇ ಅನುದಿನದ ಕತೆ. ಈ ಸ್ಥಿತಿಯ ಹತಾಶೆ, ಅಸಹಾಯಕತೆಯಿಂದ ಅತ್ತು ಹಣೆ ಬರಹವನ್ನು ಕಟುವಾಗಿ ಬೈದುಕೊಳ್ಳುತ್ತಾ ಕೂಡುವ ಬದಲಿಗೆ 'ಎದೆಯ ಬಳ್ಳಿ ತತ್ತರಿಸುವಾಗ' 'ಎತ್ತರದ ನಿಲುಮೆ'ಯನೊಲಿಸಿ ಅಭಯದ ಹಂದರವನ್ನು ಕಲ್ಪಿಸಿ ಬಳ್ಳಿಯನ್ನು ನಿಲ್ಲಿಸಬೇಕು. ಆ ಮೇಲಿನಿಂದ ಬೀಸುವ ತಂಗಾಳಿಯ ಒಲವು ಬೆಂಬಲಗಳೇ ಬದುಕಿಗೆ ಆಸರೆಯೆಂಬ ಶ್ರದ್ಧೆಯಿಂದ ಬದುಕನ್ನು ನಡೆಸಬೇಕು. ಭವ ಎಂಬುದು ನಶ್ವರ ಶುಕ್ತಿ. ಅದರ ಎದೆಯಲ್ಲಿರುವ 'ಪರ'ವೇ 'ಚಿರ ಮುಕ್ತಿಕೆ.'

ದಿವ್ಯಶಕ್ತಿಯು ಇಷ್ಟಿಷ್ಟೆ ಗಾಳಿ, ನೀರು, ಅನ್ನವೆಂದು ಒಂದೊಂದು ಜೀವಕ್ಕೂ ಗೆರೆ ಎಳೆದಿಟ್ಟಿರುತ್ತದೆ. ಆ ದೈವ ನಿಯಮಕ್ಕೆ, ಪ್ರಕೃತಿಗೆ ತನ್ನದೆ ನಿಯತಿಯಿದೆ. ಬದುಕಿನಲ್ಲಿ ನಮ್ಮ ಅಸ್ತಿತ್ವ, ವಿನಾಶಗಳು ಅದರ ಇಚ್ಛೆಗೆ ಅಧೀನವೆನ್ನುವ ವಿಚಾರವನ್ನು 'ಸೀಮಿತ' ಎಂಬ ಕವನದಲ್ಲಿ ನಿಸಾರರು ವಿಸ್ತರಿಸುತ್ತಾರೆ.

> **'ತಿರೆಯ ತರುಣಿ ನಮ್ಮ ಜೀವದೆಳೆಗಳನ್ನು ಆಯ್ದು**
> **ಮೋಹ ಮಗ್ಗದಲ್ಲಿ ನೆಯ್ದು,**
> **ಉಟ್ಟು ಮೆರೆದು ಹಳೆಯದೆನಿಸೆ ಎಸೆದು ನಡೆವಳು'**
>
> **(ಸೀಮಿತ)**

ಎಂಬ ಸುಂದರವೂ ನೈಜವೂ ಆದ ರೂಪಕದ ಮೂಲಕ ಬದುಕಿನ ನಶ್ವರತೆ, ಪ್ರಕೃತಿಯ ಸ್ವತಂತ್ರತೆಗಳೆರಡನ್ನೂ ಕಟ್ಟಿಕೊಡುತ್ತಾರೆ. ಇದೇ ರೀತಿಯ ಹಲವಾರು ಶಬ್ದಚಿತ್ರಗಳಿವೆ ಈ ಕವನದಲ್ಲಿ. ಹುಟ್ಟು-ಸಾವು, ಹೆರಿಗೆ-ಸಿದಿಗೆಗಳು ಜೀವನ ನದಿಯ ಎರಡು ದಂಡೆಗಳು. ತುಂಬು ನೆರೆ ಬಂದಾಗ ನದಿ ತನ್ನೊಳಗೇ ನಿಂತು ನಲಿಯುವಂತಿಲ್ಲ. ಅದು ಕಡಲಿನ ಕರೆಯನ್ನು ಆಲಿಸಲೇಬೇಕು. ಜೀವ ವೃಕ್ಷ ಬಂಧು ಬಳಗವೆಂಬ ಬಿಳಿಲುಗಳನ್ನು ನೆಲದಲ್ಲಿ ಹರಡಿಕೊಂಡು ನೆರಳು, ಗೂಡುಗಳನ್ನು ನೀಡಿದರೂ ಕೊನೆಗೆ ಉರುಳಿಹೋಗುವುದೆಂಬ ಎದೆಯಳಲು ಸಹಿಸಲು ಕಷ್ಟಕರ. ಬೆಳಕಿನ ಬಿತ್ತನ್ನು ಯಾವುದೋ ಕುಂಟು ನೆಪದಿಂದ ಎಣ್ಣೆ ತೀರಿ, ಬತ್ತಿ ಕರಕಾಗಿ ಗಾಳಿ ಕತ್ತಿ ಝಳಪಿಸುತ್ತಾ ಬಂದು ಕೊಂಡೊಯ್ದುಬಿಡುತ್ತದೆ. ನಮ್ಮ ಈ ದೀನಾವಸ್ಥೆಯನ್ನು ಕಂಡು ಸಂತೈಸಬರುವ ಯಾರೂ ತಲೆಯ ಮೇಲಿನ ಅಸಿಧಾರೆಯ ಬೀಳನ್ನು ತಡೆಯುವಂತಿಲ್ಲ ಎಂಬುದೇ ಈ ಬದುಕಿನ ಸೀಮಿತತೆಯನ್ನು ನಮ್ಮ ಅರಿವಿಗೆ ತಂದುಕೊಡಬೇಕು. 'ಹುಚ್ಚನಾಗಬೇಡ' ಎಂಬ ಕವನದಲ್ಲಿ ನಿಸಾರರು ಕಟ್ಟಿಕೊಡುವ ಶಬ್ದಚಿತ್ರ ಮಾಲೆಯೇ ಹೇಳಬೇಕಾದ್ದೆಲ್ಲವನ್ನೂ ಹೇಳುತ್ತದೆ. ಕಡಲನ್ನು ದಾಟಲು ಹೊರಟ ಹಕ್ಕಿ ಶಕ್ತಿಯಿರುವಷ್ಟೂ ಹಾರಿ, ಸುಸ್ತಾಗಿ ಕೊನೆಗೆ ದಣಿವಾರಿಸಿಕೊಳ್ಳಲು ಜಹಜಿನ ಕಂಬದ

ಮೇಲೆ ಕೂಡುತ್ತದೆ. ಮಣ್ಣಿನ ಕತ್ತಲಲ್ಲಿ ಮುಲುಗುವ ಎರೆ ಹುಳದಂತೆ ಐಹಿಕ ಬದುಕಿನ ಆಮೋದದಲ್ಲೇ ಹೂತುಹೋದ ಜೀವ ಮುಂಗಾಣದೆ ಹೋದಾಗ ವರದ ಹಸ್ತವೊಂದು ಆ ಜೀವವನ್ನು ಮೇಲೆತ್ತುತ್ತದೆ. ಜೀವವಿತ್ತೆಂಬ ಗುರುತೂ ಬಿಡದಂತೆ ಅಥವಾ ತನ್ನ ಗುರುತನ್ನು ಬಿಟ್ಟುಕೊಡದೆ. ಅದಕ್ಕಾಗಿ ಜೀವ ಪರ ಶಕ್ತಿಗೆ ತಲೆಬಾಗಬೇಕು.

ಬಾಳೆಂಬುದು ಬಸುರಿ ಹೆಣ್ಣಿನಂತೆ, ಆಕೆ ಗರ್ಭದಲ್ಲಿ ಹೊತ್ತಿರುವುದು ಅಳಲನ್ನು. ಅವಳ ಬೇನೆ ಉಲ್ಬಣಿಸಿ, ಪ್ರಾಣ ಹೊತ್ತಿ ಉರಿವಾಗ ಆ ಶೋಕವನ್ನು ಉಪಶಮನಗೊಳಿಸಲು ಕರುಣೆ ಸೂಲಗಿತ್ತಿ ಎಲ್ಲಿಂದಲೋ ಬರುತ್ತಾಳೆ—ಬಾಳೆಂಬ ಅಡುಗೆಮನೆಯಲ್ಲಿ ದಟ್ಟೈಸಿದ ಉರಿ ಹೊಗೆಯ ಉಸಿರು ಕಟ್ಟಿಸುವಂಥ ಆವರಣದಲ್ಲಿ ದೈವಸ್ಮರಣೆಯ ಚಿಮಣಿ ನಿತ್ಯ ತೆರೆದಿರಬೇಕು. ಇಂದ್ರಿಯ ಗಣ ಓರಣವಾಗಿ ಇರಬೇಕು. ನಮ್ಮ ಈ ಇಳೆಯ ಬದುಕು 'ಪರಮಪದ ಸೋಪಾನ'ದ ಆಟದ ಹಾಗೆ. ಬಯಕೆ ದಾಳ ಉರುಳಿಸಿ ಕ್ಷಣಕ್ಷಣವೂ ಬದುಕನ್ನು ಮುಂದೆ ನಡೆಸುತ್ತೇವೆ. ಸೌಭಾಗ್ಯದ ಏಣಿಯನ್ನು ಏರಲು ನೆರವಾಗುವ ವಿಧಿಯೇ ಕಾಳ ಸರ್ಪದ ಒಡಲ ಪಾತಾಳವನ್ನೂ ತೆರೆಯುವ ಕ್ರೂರಿ. ನಮ್ಮ ಪುರುಷಾರ್ಥ ಮಂದಲಿಗೆಯ ಇಬ್ಬದಿಗಳ ಹಾಗೆ. ಒಂದು ಬದಿ ಸವೆದರೆ ಇನ್ನೊಂದು ಸಿದ್ಧ. ಒಂದು ಮಜಲಿನತನಕ ಕೇವಲ ಅರ್ಥ, ಕಾಮಗಳೇ ಧಗಧಗಿಸಿ, ತಾನೇ ನಾಶವಾಗತೊಡಗಿದಾಗ ವೈರಾಗ್ಯದ ಉಪಶಾಂತ ದೀಪ್ತಿ ಮುಂದೆ ಕರೆದೊಯ್ಯಲು ಮುಂದಾಗುತ್ತದೆ.

'ಚೇತನಾಚೇತನದ ತಿರುಳು ನೀನು' ಕವನ ನವೋದಯದ ಎಲ್ಲ ಲಕ್ಷಣಗಳನ್ನೂ ಒಳಗೊಂಡಂಥ ರಚನೆಯಾಗಿದ್ದು ಅದರ ವಸ್ತು, ಅದನ್ನು ಅಭಿವ್ಯಕ್ತಿಸುವ ವಿಧಾನದಲ್ಲಿ ಆ ಅಂಶಗಳು ಎದ್ದು ತೋರುತ್ತವೆ. ದೈವ-ಪ್ರಕೃತಿಗಳ ಸಮೀಕರಣ, ದೈವ ಕಾರುಣ್ಯದಲ್ಲಿ ಗಾಢವಾದ ಶ್ರದ್ಧೆ, ಬದುಕಿನ ಬಗ್ಗೆ ಭರವಸೆ ಕೆಡದಂಥ ಉತ್ಸಾಹ ಭಾವ ಇಲ್ಲಿ ವಿಶೇಷವಾಗಿ ಕಾಣಿಸುವ ಅಂಶಗಳಾಗಿವೆ. ಎಲ್ಲ ಚೇತನಾಚೇತನಗಳ ಒಳ ತಿರುಳಾದರೂ 'ನೀನು' ಎಂದು ಕವಿತೆಯುದ್ದಕ್ಕೂ ಸಂಬೋಧಿತವಾಗುವ ಆ ಪರತತ್ತ್ವದ ಮಹಿಮೆಗಳು ಮಾತಿನ ಬಣ್ಣನೆಗೆ ಎಟುಕುವಂಥವಲ್ಲ. ಗೋಧೂಳಿ ಮುಸ್ಸಂಜೆ, ಹೊಂಬಾಳೆ ಗೊನೆ, ಬಿರಿವ ಮೊಗ್ಗಿನ ತುದಿಯಲ್ಲಿ ತಾನೇ ಇರುವ ಆ ಶಕ್ತಿಯೇ 'ಕಪ್ಪುರಾತ್ರಿಯ ಕಾರಿರುಳಲ್ಲಿ ಹುದುಗಿರುವ ಮುಂಜಾನೆ ಹೊರಳಲ್ಲಿ' 'ತಂಗೊಳವನು ಮೀಟಿರುವ ಬೆಳಕಿನ ಬೆರಳಲ್ಲೂ' ಹುದುಗಿದೆ, ಅದು ಎಲ್ಲವನ್ನೂ ಅರಿತಿದೆ.

'ಅಣು ಅಣುವಿನಾಳಗಳ ದಿನನಿತ್ಯ ಸಂಚಾರಿ
ಗ್ರಹತಾರೆ ಉಲ್ಕೆಗಳ ಸಿರಿ ಪದಕಧಾರಿ
ಆಲಯದ ಬಯಲೆಂತೋ, ಬಯಲ ಆಲಯ ನೀನು
ಸ್ಥಿತಿ ಪ್ರಲಯ ಜೀವಗಳ ಅಂತ್ಯ ನಿಲಯ'

(ಚೇತನಾಚೇತಾನದ ತಿರುಳು)

ಸೃಷ್ಟಿ 'ಮರಮರಳಿ ಮೈ ತಳೆದು ಅಳಿದಿದೆ' ಪ್ರಕೃತಿಯ ಅಭಿವ್ಯಕ್ತರೂಪಗಳಾದ ಹೂ, ಹಣ್ಣು, ತಳಿರುಗಳು ಲಯಬದ್ಧವಾಗಿ ಪುನರುಕ್ತಿಗೊಳ್ಳುತ್ತವೆ. ಅದಕ್ಕೆ 'ಛಂದ' ಆ ಪರ

ತತ್ತ್ವ. ಋತುಮಾನಗಳ ಆರೈಕೆ ಮಾಡುತ್ತ ಕಾಲ ಬದಲಾದರೂ ಅದು ನಿರ್ಬಾಧಿತವಾಗಿ ಉಳಿದಿದೆ.

ಈ ಅನಂತ ಶಕ್ತಿಯ ಸ್ವರೂಪವನ್ನು ತನ್ನೊಳಗೇ ಮಾನವ ಕಂಡುಕೊಳ್ಳಬೇಕೇ ಹೊರತು ಹೊರಗೆ ಅದಕ್ಕಾಗಿ ಹುಡುಕುವುದು ವ್ಯರ್ಥ. ಅದರ ಇರವನ್ನು ಹುಡುಕುತ್ತ, ಅದನ್ನು ಅರಿಯಲು ಬಯಸುತ್ತಾ, ಕಾಡು ಮೇಡಲೆದು ಬಳಲಿದರೂ, ತಲೆ ನರೆತರೂ ಅರ್ಥಹೀನ. ಏಕೆಂದರೆ 'ಬಿಂಬದ ಆಲಂಬ'ವಾದ ಆ ಸತ್ವವು ಬಿಂಬದ ಪಡಿನೆಳಲು, ನಾಮ ಕೋಟಿಯು ಮರೆಯಲಿರುವ ಹೆಸರಿನ ಉಸಿರು, ತಾನೇ ನಟಿಸುವ ಸಾವಿರಾರು ಪಾತ್ರಗಳ ನೋಡುವ ನೋಟಕನೂ ತಾನೇ ಆದ ಆ ದಿವ್ಯಶಕ್ತಿಯು 'ಅಂತರ್ಯಾಮಿ' ಎಂಬುದನ್ನು ಗುರುತಿಸಿಕೊಳ್ಳುವುದೇ ಬದುಕಿನ ಅರ್ಥ.

ಬದುಕನ್ನು ಅದರ ಸಂಕೀರ್ಣ, ಒಳ ವೈರುದ್ಧ್ಯ ತುಂಬಿರುವ ರೀತಿಯನ್ನು ಪರಿಭಾವಿಸುವ ಮತ್ತೊಂದು ಮಹತ್ವದ ನಿಸಾರ್ ಕವನವೆಂದರೆ 'ಕಾಲದ ಮಗ್ಗ'. ಕಾಲವೆಂಬುದು ನಿರಂತರ ಆಡುತ್ತಿರುವ ಮಗ್ಗ. ಜೀವ ಕೋಟಿಗಳು ಅದರ ನೂಲಿನೆಳೆಗಳು. ಅವುಗಳ ಸ್ವಭಾವ, ಬಣ್ಣ, ಸಂಖ್ಯೆಗಳು ಬಹು ಬಗೆಯವು. ಅವುಗಳನ್ನು ವೈವಿಧ್ಯಮಯ ಅನುಭವಗಳೆಂಬ ಲಾಳಿಗಳು ಬೆಸೆದಿಟ್ಟಿವೆ. ಕಾಲದ ಮಗ್ಗದ ಚಾಲನೆ ಚಿರವಾಗಿರಲು ಋತುಮಾನದ ನಿರಂತರ ಮರುಕಳಿಸುವ ಚಕ್ರ ನೆರವು ನೀಡುತ್ತಿದೆ. ಇವೆಲ್ಲಕ್ಕೂ ಮೂಲವಾದ ಋತು ನಿಯಮವು ಸಂತತವಾಗಿ ಕುಣಿಯುತ್ತ ಜಗತ್ತನ್ನು ಪರಿಪಾಲಿಸುತ್ತಿದೆ.

ಕಾಲದ ಮಗ್ಗ ನೇಯುತ್ತಿರುವ ಎಳೆಗಳ ಲಕ್ಷಣ ಅಗೋಚರ, ವಿಚಿತ್ರ; ಅವು ದಿವ್ಯ, ಮನುಷ್ಯನಿಗೆ ಅತೀವವಾದವು. 'ಯಾವ ಪರಾತ್ಪರ ಭೂಮಿಯ ಬೆಳಸನ/ಫಲಿತವೊ ಎಳೆಗಳ ಮೂಲಗಳು;/ಯಾವ ಅಪಾರ್ಥಿವ ಗಿರಣಿಯ ಕೃತಿಗಳೊ/ರೇಷಿಮೆ ನಯದೀ ಜಾಲಗಳು' ಬಟ್ಟೆ ಗಿರಣಿಯ, ಕೈಗಾರಿಕೆಯ ಪ್ರತೀಕದ ಮೂಲಕವಾಗಿ ಆಧ್ಯಾತ್ಮಿಕವಾದ ಅನೂಹ್ಯ ಅಮೂರ್ತ ಅರ್ಥಗಳನ್ನು ಕವಿ ಇಲ್ಲಿ ಸೃಷ್ಟಿಸುವ ಬಗೆ ಸುಂದರವಾಗಿದೆ.

ವಿಶ್ವವು ಒಂದು ವಿಶಾಲವಾದ ವಸ್ತ್ರವಾಗಿದೆ. ಆದರೆ ಆ ವಸ್ತ್ರದ ಎಳೆಗಳಿಗೆ ಅದರ ವೈಶಾಲ್ಯದ ಅರಿವಿಲ್ಲ. 'ನೀರಿನ ಬಿಡಿ ಹನಿ ಅರಿವುದೆ ತನ್ನೊಳು ಅಡಗಿರುವೆಂತಹ ಪೂರಗಳು.' ವ್ಯಕ್ತಿ ವಿಶ್ವಾತ್ಮಕವಾದ ಸಮಗ್ರ ಲೋಕರೂಪಿ ಉತ್ಪನ್ನದೊಳಗೆ ತನ್ನ ಅಂಶ ಯಾವುದೆಂದು ಅರಿಯಲಾರ. ತಾನು ಅರಿವಿಲ್ಲದೆಯೇ ಯಾವ ವಸ್ತ್ರದ ನೇಯ್ಗೆಯಲ್ಲಿ ಎಳೆ ಸೇರಿದೆಯೋ ಆ ವಸ್ತ್ರವು'ದೇವರ ತೊಡಿಗೆಯೊ, ನರ್ತಕಿಯ ಉಡಿಗೆಯೊ / ಅಥವಾ ಸೈನಿಕ ಸಮವಸ್ತ್ರ./ ಯಾವ ಪತಾಕೆಯೊ ಮೈಲಿಗೆ ಅರಿವೆಯೊ' ಏನಾದರೂ ಆಗಿರಬಹುದು. ಆ ವಿಧಿಸೂತ್ರ ಯಾರ ಅರಿವಿಗೂ ಎಟುಕುವಂಥದ್ದಲ್ಲ. 'ಮಗ್ಗವ ನಡೆಸುವ ಕೈಗಳು ಅಗೋಚರ. ಆದರೆ ಆ ಮಗ್ಗದ ಚಲನೆಯ ಶಬ್ದ ಕೈಗಳ ಇರವಿಗೆ, ಚಲನೆಗೆ ಸಾಕ್ಷಿಯಾಗಿದೆ. ಹೊಮ್ಮಿರುವ ಬದುಕಿನ 'ಬಗೆಬಗೆ ವಿನ್ಯಾಸದ ಒಳ ರಚನೆಗೆ / ಯಾವುದೊ ಅಗಮ್ಯ ಲಕ್ಷ್ಯವಿದೆ' ಎಂಬ ನಂಬಿಕೆಯು ಕವನದ ಒಟ್ಟು ಆಶಯವೆನ್ನಬಹುದು. 'ಮೀನುಗಳು ನಾವು' ಎಂಬ ಕವಿತೆ ಕೂಡ ಬದುಕಿನ ನಿರಂತರ ನಿತ್ಯ ವಾಹಿನಿಯೊಳಗೆ ಮಾನವರ ಇರವನ್ನೂ

ಅವರು ಅನುಭವಿಸುವ ಸುಖ-ದುಃಖದ ಅನುಭವಗಳ ನೆಲೆಯನ್ನೂ ವಿವೇಚಿಸುವ ಕವಿತೆಯಾಗಿದೆ.

ಮಾನವರ ಬದುಕಿನಲ್ಲಿ ಎದುರಾಗುವ ಸುಖ-ದುಃಖಗಳು ದೇವರೇ ಪಾಲು ಮಾಡಿಕೊಟ್ಟಿರುತ್ತಾನೆಂದು ನಿಸಾರರು ಪ್ರತಿಪಾದಿಸುವ ರೀತಿ, ಜೀವವು ತನ್ನ ಕರ್ಮಗಳ ಫಲವಾಗಿ ಮುಂದಿನ ಜನ್ಮಗಳಲ್ಲಿ ಸುಖ-ದುಃಖಗಳನ್ನು ಬುತ್ತಿಯಾಗಿ ಕಟ್ಟಿಕೊಂಡು ಬಂದಿರುತ್ತದೆಂದು ನಂಬುವ ಕರ್ಮ ಸಿದ್ಧಾಂತದ ರೀತಿಯದಲ್ಲ. ಕವಿಯ `ದೈವ ನಿಯಾಮಕತ್ವ`ದ ಪರಿಕಲ್ಪನೆಯಲ್ಲಿ ಪುನರ್ಜನ್ಮದ ಬಂಧನದ ತಾತ್ವಿಕತೆ ಇಲ್ಲ. ಆದರೆ ಅಂತಿಮವಾದ `ನ್ಯಾಯ ನಿರ್ಣಯ`ದ ನಿಷ್ಠಾವಂತ ಇಸ್ಲಾಮಿನ ನಂಬಿಕೆ ಇವರ ಕವಿತೆಗಳಲ್ಲಿ ಇದೆಯೆನ್ನಲೂ ಬರುವುದಿಲ್ಲ. ದುಃಖ, ಬವಣೆ, ಸಂಕಟಗಳು ತಾನೇ ಮಾಡಿದ `ಪಾಪ`ದ ಫಲಶ್ರುತಿಯೆಂದಾಗಲೀ, ಅವುಗಳಿಂದ ವಿಮುಕ್ತಿ ಹೊಂದಲಿಕ್ಕಾಗಿ ಮನುಜ ದೇವರ ಮೊರೆಹೋಗಬೇಕೆಂಬ ನಿಲವಾಗಲೀ ಕಾಣಸುವುದಿಲ್ಲ. ಇಂಥ ತಾತ್ವಿಕ ವಿಚಾರಗಳಿಗಿಂತ ತೀರಾ ಭಿನ್ನವಾಗಿ `ವಿಧಿ`ಯೊಂದು ತನಗೆ ಬೇಕಾದಂತೆ ಜೀವಗಳ ಗತಿ ಕಾಣಿಸುತ್ತದೆ: ಅದರ ಈ ವರ್ತನೆಯ ಹಿಂದಿನ ಉದ್ದೇಶ ಮಾನವನ ಅರಿವಿಗೆ ಮೀರಿದುದು ಎಂಬ ನಂಬಿಕೆ ಮತ್ತೆ ಮತ್ತೆ ನಿಸಾರರ ಕವಿತೆಗಳಲ್ಲಿ ಕಾಣಿಸುತ್ತದೆ. ತನ್ನ ಹಣೆಬರಹ ತಾನೇ ಕರ್ಮಗಳಿಂದ ಬರೆದುಕೊಳ್ಳುವ ಜೀವಕ್ಕೆ ಪ್ರಜ್ಞಾಪೂರ್ವಕವಾದ ಪ್ರಯತ್ನದ ಮೂಲಕ—ಉದಾಹರಣೆಗೆ ಸಧರ್ಮ ಸತ್ಕರ್ಮಗಳ ಮೂಲಕ ಕರ್ಮಾನುಬಂಧವನ್ನು ಕ್ಷಯಿಸಿಕೊಳ್ಳುವ, ಮೇಲಕ್ಕೆ ಸಾಗುವ, ಅಂತಿಮವಾಗಿ ಬಂಧನಮುಕ್ತವೂ ಆಗುವ ಅವಕಾಶವನ್ನು ಹಿಂದೂ ತಾತ್ವಿಕ ನಂಬಿಕೆಗಳು ಹೇಳುತ್ತವೆ. ನಿಸಾರರ ಕವಿತೆಗಳಲ್ಲಿ ಮುಂದಿನ ಬದುಕು ಇರುವುದನ್ನಾಗಲಿ, ಇಲ್ಲಿಂದ, ಈಗಿನಿಂದಲೇ ಅದನ್ನು ಸುಧಾರಿಸಬಹುದೆಂಬುದಾಗಲಿ ಇಲ್ಲ. ಸತ್ತ ಅನಂತರ ಜೀವ ನೇರವಾಗಿ ತನ್ನನ್ನು ಸೃಷ್ಟಿಸಿದ ಮೂಲಶಕ್ತಿಯ ಬಳಿಗೆ ಮರಳುತ್ತದೆನ್ನುವ ಗ್ರಹಿಕೆ ಅವರಿಗೆ ಮುಖ್ಯವಾಗುತ್ತದೆ. ಆ ಯೋಗವು ಒದಗುವವರೆಗು ಬದುಕಬೇಕು, ಆ ಬದುಕಿನ ಸುಖ ದುಃಖವೆರಡನ್ನೂ ದೇವರು ಕೊಟ್ಟದ್ದು, ತನ್ನ ಪಾಲಿಗೆ ಬಂದದ್ದು ಎಂದೇ ಅನುಭವಿಸಬೇಕು, ಅದು ಅನಿವಾರ್ಯ ಎಂಬ ಸ್ಪಷ್ಟ ನಿಲವು ಈ ಕವಿಯದಾಗಿ ತೋರುತ್ತದೆ.

'ಮೇಲಿನ ದಡದಲಿ ಹೊಂಚಿಹ ಬೆಸ್ತ
ನಮ್ಮಯ ಭಾಗದ ಶೂಲ
ಅವನದು ಬಲಯುತ ನಿರ್ದಯ ಹಸ್ತ
ಅದರೊಳಗಾಡಿದ ಗಾಳ'

(ಮೀನುಗಳು ನಾವು)

ಎಂಬಂಥ ಸಾಲುಗಳು ಸಾವು ಕ್ರೂರವಾಗಿ ಮನುಜನ ಬದುಕನ್ನು ಕೊನೆಗೊಳಿಸುವುದೆಂಬುದನ್ನು ಹೇಳುತ್ತವೆಯೇ ಹೊರತು ಇಸ್ಲಾಂ ನಂಬಿಕೆಯ `ಅಂತಿಮ ತೀರ್ಪಿ`ನ ಜನ್ನತ್, ಜಹನ್ನಂಗಳ ಪರಿಕಲ್ಪನೆಗಳನ್ನು ಇವು ಹೊಳೆಯಿಸುವುದಿಲ್ಲ ಎಂಬುದು ಕುತೂಹಲದ ಸಂಗತಿ.

ಒಂದು ಅರ್ಥದಲ್ಲಿ ನಿಸಾರರು ಆಧುನಿಕವಾದಿ ಸೂಫಿಕವಿ ಎನ್ನಬಹುದೇನೋ.

ತುಂಬು ವರ್ತಮಾನದ ನೂರು ಬಗೆಯ ದಿನನಿತ್ಯದ ದೃಷ್ಟಾಂತಗಳ ಮೂಲಕವಾಗಿ ಚಿತ್ರಿಸುವ ಅವರ ತತ್ತ್ವಗಳು ಹೊಸ ಹೊಸ ರೀತಿಗಳಲ್ಲಿ ಮತ್ತೆ ಮತ್ತೆ ಒಂದೇ ವಿಚಾರ ಸರಣಿಯನ್ನು ಹೇಳುವಂತೆ ಅನಿಸುತ್ತದೆ. ಈ ಕವಿಗೆ ಸಿದ್ಧಿಸಿರುವ ಅಪಾರವಾದ ಚಿತ್ರಕ ಶಕ್ತಿ, ಕಲ್ಪನೆಯ ಪ್ರತಿಭೆ, ಅವರಿಗೆ ದಕ್ಕಿರುವ ಶಬ್ದ ಸೃಷ್ಟಿಯ ಮೇಲಿನ ಪ್ರಭುತ್ವದಿಂದಾಗಿ ಪ್ರತಿಯೊಂದು ಕವಿತೆಯೂ ಹೊಸ ಅನುಭವವಾಗಿ ಓದುಗರನ್ನು ಸೆರೆಹಿಡಿಯಬಲ್ಲವು. ಆದರೆ ಮಹಾಕವಿಯೊಬ್ಬನು ತನ್ನ ನಂಬಿಕೆಯ ಜೀವನ ದರ್ಶನವನ್ನೇ ತನ್ನೆಲ್ಲಾ ಬರಹದ ಮೂಲಕ ಹೇಳುತ್ತಿರುತ್ತಾನೆ, ಅದನ್ನೇ ಮತ್ತೆ ಮತ್ತೆ ಒರೆಹಚ್ಚಿ ಶೋಧಿಸುತ್ತಿರುತ್ತಾನೆ, ಅದರ ಅರ್ಥ ಸಾಧ್ಯತೆಗಳನ್ನು ವಿಸ್ತರಿಸುತ್ತಲೇ ಕಾವ್ಯದ ಬದುಕನ್ನು ಬದುಕುತ್ತಾನೆ. ಈ ಮಾತು ನಿಸಾರರ ಕಾವ್ಯಕ್ಕೂ ಅನ್ವಯಿಸುತ್ತದೆ. ಅವರ ಮಾಲಾರೂಪಕ ನಿರ್ಮಾಣ ಶಕ್ತಿಯ ಅಸಾಧಾರಣ ಪ್ರತಿಭೆಗೆ 'ಬದುಕೇ ಅಷ್ಟು' ಎಂಬ ಕವನ ಮತ್ತೊಂದು ಸುಂದರ ಉದಾಹರಣೆ.

ನಮ್ಮ ಬದುಕೇ ತುಂಬ ಸೀಮಿತ. ಯಾವುದಕ್ಕೂ ಹೆಚ್ಚಾಗಿ ಅಂಟಿಕೊಂಡು ನಿಲ್ಲದ ಈ ಬದುಕಿಗೆ ಮೆಚ್ಚಿ ಸಂತೋಷಗೊಳ್ಳುವ ಮೈ ಮರೆಯುವ ಗುಣವಿಲ್ಲ. ಆದ್ದರಿಂದ ಎಲ್ಲಾ ಅನುಭವಗಳೂ ಇದಕ್ಕೆ 'ಹಲವು ಹಂಗಾಮಿ ನಿಲ್ದಾಣಗಳು' ಅಷ್ಟೆ. ಸುಖದಿಂದ ಸುಖಕ್ಕೆ ಕೈ ಬದಲಾಯಿಸುತ್ತ 'ಪಗಡೆಯಾಟದ ನೆತ್ತ' ಉರುಳುತ್ತಿರುತ್ತದೆ.

ಈ ಬದುಕು ಜಿಪ್ಸಿಯ ಹಾಗೆ ಅಲೆಮಾರಿ. ಸಮಯ ಸಂದಂತೆಲ್ಲ ಬೇರೆ ಬೇರೆ ರುಚಿ, ಬೇರೆ ಬೇರೆ ವಲಸೆಗಳನ್ನು ಅದು ಅಪೇಕ್ಷಿಸುತ್ತದೆ. ಅಲಸ ಬಾಳಿನ ಹೊಲಸು ಮಾತ್ರ ಈ ಅಲೆಮಾರಿ ಬದುಕಿಗೆ ಅಂಟಿಕೊಂಡಿರುತ್ತದೆ.

ಹೊಸದರಲ್ಲಿ ಎಲ್ಲವೂ ಸುಖ ಸಂತೃಪ್ತಿಗಳ ತವರು. ಆದರೆ ಕಾಲಕಳೆದಂತೆ 'ನಿಬ್ಬೆರಗಿಗಿಂತ ಹೆಚ್ಚಾಗಿ ಸುರಿದದ್ದು ಬೆವರು' ಎಂಬುದು ಅರಿವಿಗೆ ಬರುತ್ತದೆ. ಇಳಿಜಾರಿನತ್ತ ಸಾಗುವಾಗ ಅದುವರೆಗೆ ಮನಸ್ಸಿಗೆ ಏರಿದ್ದ ಮತ್ತು ಇಳಿದ ಜೀವಕ್ಕೆ ಉಳಿಯುವುದು ಬೇಸರ ಮಾತ್ರ. ಇದುವರೆಗಿನ ಸ್ವಾನುಭವ ಬರೀ ಕಸರತ್ತೆಂಬ ಕೊರತೆಯ ಭಾವವಷ್ಟೆ.

ಬೇರೆಯವರ ಎದುರು ಹೇಳಿಕೊಳ್ಳಲಾಗದಂಥ ಕೊರೆತ, ಹೇವರಿಕೆಗಳನ್ನು ಉಂಡು ಜೀವಕ್ಕೆ ಬದುಕಿನಲ್ಲಿದ್ದ ಹಾತೊರೆಯುವಿಕೆ—ಮೊದಲು 'ಗುತ್ತೆ'ನಾಗಿದ್ದುದು-ನಿಧಾನವಾಗಿ 'ಅಳ್ಳಕಗೊಂಡು' 'ಪಟ್ಟ ಭೋಗದ ನೆನಕೆ ಬರಿಸುವುದು ಬವಳಿ' ಜೀವಕ್ಕೆ ತಳಮಳ ಹುಟ್ಟಿ, ಬೇಗುದಿ ಅದಕ್ಕೆ ಅವಳಿಯಾಗುತ್ತದೆ. ಭೋಗ, ಆ ಗಳಿಗೆಗೆ ಆಹ್ಲಾದದ ಉನ್ಮಾದವನ್ನೇ ಎರೆದಿದ್ದರೂ ಅದೆಲ್ಲ ಸವಿ ಕ್ಷಣಿಕವಾಗಿದ್ದು 'ಆ ಹಿಗ್ಗನೆಂದೋ ನುಂಗಿ ನೀರು ಕುಡಿವುದು ಹೊತ್ತು.' ಅನುಭವದ ವಿವರಗಳು ಅಳಿದು, ಪುಳಕಗಳು ಹಳಸುತ್ತವೆ.

'ದಿನಚರಿಯ ಒಂದು ದಿವಸ' ಹೆಸರಿನ ಕವಿತೆಯಲ್ಲಿ ವಿಳಾಸ ತಿಳಿಯಬಯಸಿದ ವೃದ್ಧೆಯೊಬ್ಬರ ನಡುಗುವ ಕೈಯನ್ನು ಹಿಡಿದು ಜೋಪಾನವಾಗಿ ನಡೆಸಿ, 'ಪರಮಾತ್ಮ ನಪರಾವತಾರದಂತೆ' ತಡವಾಗಿ ಬಂದ ಬಸ್ ಹತ್ತಿಸಿ ಎಷ್ಟೋ ಹೊತ್ತಾಯಿತೆಂದು ಬೇಸತ್ತು, ಅದೃಷ್ಟವನ್ನು ಹಳಿದು ಹೆಜ್ಜೆ ಹಾಕುತ್ತ ಗೂಡಿನತ್ತ ಸಾಗುತ್ತಾರೆ. ಬಂದ ಹಾದಿಯನ್ನೇ ತುಳಿಯುತ್ತ, ಹಿಂದಿನ ಆಲೋಚನೆಗಳ ಗಾಳಿಪಟ ಕಟ್ಟಾಗಿ, ಹೊರಟ ಉದ್ದೇಶ ಸಾರಾಸಗಟು

'ಎಡವಟ್ಟಾಗಿ' ಈ ನಡಿಗೆ ಸಾಗುತ್ತದೆ.

'ಉದ್ದಕ್ಕೂ ಹೊಗೆಯಾಡುತ್ತದೆ ಬಗೆಯಲ್ಲಿ
ಕಸಿವಿಸಿ ಹೊಯ್ದಾಟಗಳ ಸಂತೆ;
ಮಾಸಿಕದ ಮುಂದಿನ ಸಂಚಿಕೆಗೆ ಲೇಖನ
ಇನ್ನೂ ಸಿದ್ಧವಾಗಲಿಲ್ಲವೆನ್ನುವ ಚಿಂತೆ
ಹಾಗೇ ಉಳಿದು ಬಿಡುತ್ತದೆ—ಯೋಗಿನಿಯ ಬಸಿರಂತೆ
ಭಣಗುಡುವ ಮತ್ತೊಂದು ದಿನ
ನೆನಹಿನ ತಿಜೋರಿಯಿಂದ ಕಳೆದುಹೋಗುತ್ತದೆ.'

(ದಿನಚರಿಯ ಒಂದು ದಿವಸ)

ಬದುಕಿನ ವ್ಯರ್ಥತೆಯ ಭಾವ ತೀವ್ರ ವಿಷಾದವಾಗಿ ಪ್ರಕಟವಾಗುವ ಈ ಕವನ, ನಿಸಾರರಿಗೆ ಸಾಮಾನ್ಯವಾದ ಆಶಾವಾದದಲ್ಲಿ ಅಂತ್ಯಗೊಳ್ಳುವುದಿಲ್ಲವೆಂಬುದನ್ನು ಗಮನಿಸಬೇಕು. 'ಕಳೆದದ್ದಕ್ಕೆ ಕೊರಗಬೇಡ' ಎಂಬ ಕವನ ಕೂಡ ಹೊಸ ಭರವಸೆಯ ಸಾಧ್ಯತೆಯನ್ನು ಎತ್ತಿಹಿಡಿಯದಿದ್ದರೂ ಕಳೆದುಹೋದ ಬದುಕಿಗಾಗಿ ದುಃಖಿಸುವುದನ್ನು ಬಿಟ್ಟು ಕ್ಷಣಿಕವೇ ಆಗಿದ್ದರೂ ಪಡೆದ ಬದುಕನ್ನೇ ಮನಸಾರ ನಿಶ್ಚಿಂತೆಯಲ್ಲಿ ಅನುಭವಿಸುವುದೇ ಬದುಕಿನ ದಾರಿಯೆಂಬುದನ್ನು ಸೂಚಿಸುತ್ತದೆ.

ಕಾಲ ದನದ ಹಾಗೆ ಏಕಾಏಕಿ ಬಂದು ಮೇಯ್ದು ಹೋದದ್ದನ್ನು, ಕಳೆದು ಹೋದದ್ದನ್ನೆ ಹಪಹಪಿಸಿ ನೆನೆದು ಪ್ರಲಾಪಿಸಬೇಕಿಲ್ಲ, ಲುಕ್ಸಾನಿಗೆ ಎದೆ ಮರುಗಬೇಕಿಲ್ಲ. ಕಳೆದುಕೊಂಡದ್ದು ತನ್ನೊಡನೆ ಇಷ್ಟು ದಿನ ಇದ್ದು ಹಿಗ್ಗು ನೀಡಿದ್ದನ್ನು ಮರೆಯದೆ ನೆನೆಯಬೇಕು. ಇರುವಾಗ ತನ್ನದೇ ಸ್ವತ್ತು ಎಂಬ ಹೆಮ್ಮೆ ನೀಡಿದ್ದ ವಸ್ತು. ಬಹುಶಃ ಪಡೆಯುವುದೆಲ್ಲ ಕಳೆಯಲಿಕ್ಕೊ, ಪಡೆದದ್ದಕ್ಕಾಗಿಯೇ ಕಳೆದುಕೊಳ್ಳುವುದೋ—ಹೇಗೇ ಆದರೂ ಅದಕ್ಕಾಗಿ ನರಳಿ ಹಳಹಳಿಸಿ ನವೆಯಬಾರದು. ಅಗರುಬತ್ತಿಯ ಹಾಗೆ, ಅಳಿದಿದ್ದರೂ ಸೌಗಂಧವನ್ನು ಅದು ಸ್ಮೃತಿಯಲ್ಲಿ ಉಳಿಸಿ ಕಾಡುತ್ತದೆ—ಅದು ಚಿತ್ತಕ್ಕೆ ನೀಡಿದ್ದ ಸಾತ್ವಿಕಾನಂದ—ಇದೇ ಬದುಕಿನ ನಿಗೂಢ.

ಕಳೆದ ಅನುಭವದ ನೆನಪೊಂದೇ ಬದುಕಿನ ರೀತಿಯಲ್ಲ. ಒಂದು ಕಳೆದರೆ ಇನ್ನೊಂದು ದಕ್ಕುವುದು. ಆ ನೋಟ ಮರೆಯಾಗುವಷ್ಟರಲ್ಲೇ 'ಹೊಸತಾದ ಮತ್ತೊಂದು ಕಣ್ಣು ಕುಕ್ಕುವುದು.' ಬಾಳಿನ ಸಂತೆ ಕೆಲವೇ ತಾಸಿನ ಸಡಗರ; ಅದರಲ್ಲಿ ಪಡೆದದ್ದೂ ತೀರಾ ಕ್ಷಣಿಕವೇ ಆದರೂ ಅದನ್ನೇ ಮನಸಾರ ಒಪ್ಪಿ ನಿಶ್ಚಿಂತವಾಗಿ ಅನುಭವಿಸಿ, ತಾನೇ ಕಳೆಯುವ ಮೊದಲು, ಮೃತ್ಯು ಕೊಂಡೊಯ್ದು ತನ್ನನ್ನು ಬೇರೊಬ್ಬನಿಗೆ ಅರ್ಪಿಸುವ ಮುನ್ನ ತನ್ನ ಬದುಕಿನ ಅನರ್ಘ್ಯ ಅಪರಂಜಿಯನ್ನರಿದು ಸಂತೃಪ್ತಿ ಪಡುವುದೇ ಜೀವನ ಧರ್ಮ. 'ಬಾಳಿನ ಕ್ರೀಡಾಂಗಣ' ಎಂಬ ಕವನದಲ್ಲಿ ನಿಸಾರರು ಬದುಕಿನೆಲ್ಲ ಆಗುಹೋಗುಗಳನ್ನು ಕ್ರಿಕೆಟ್ ಕ್ರೀಡೆಯ ಪರಿಭಾಷೆಯಲ್ಲಿ ಬೆಳೆಸುತ್ತಾ ಅದ್ಭುತವಾದ ರೂಪಕವೊಂದನ್ನು ನಿರ್ಮಿಸಿದ್ದಾರೆ.

'ಬ್ಯಾಟಿನ ಪ್ರತಿ ಬೀಸು ಯಾ ಬಡಿತಕ್ಕೆ/ಚೆಂಡಿನೊಂದೊಂದು ಹೊಡೆತಕ್ಕೆ / ಬೌಂಡರಿ ಸಿಕ್ಸರನ್ನೆತ್ತುತ್ತೇನೆಂಬ ತುಡಿತಕ್ಕೆ' ಈಡಾಗಿರುವ ಅತ್ಯುತ್ಸಾಹಿ 'ಕ್ರೀಡಾಕುಶಲಿ ಕಲಿ'.

ಬದುಕಿನಲ್ಲಿ ವಿಪರೀತ ಮಹತ್ವಾಕಾಂಕ್ಷೆ, ಉತ್ಸುಕತೆಯಿಂದ ತೊಡಗುವ ಮನುಷ್ಯ—ಈ ಹಾರಾಟ ಬಿಟ್ಟು ಸಮಾಧಾನ ಚಿತ್ತದಲಿ ವಿವೇಚಿಸಿದಲ್ಲಿ 'ತಿಳಿವಿನೆಚ್ಚರದ ಮನವರಿಕೆ' ಆಗಬಲ್ಲದು.

'ಬದುಕು ಬರೀ ಬಿರುಸು, ರಭಸ, ವೇಗಗಳ ಕಣವಲ್ಲ; ದುಡುಕು ದುಸ್ಸಾಹಸಗಳ ದುಂದು ದಿಬ್ಬಣವಲ್ಲ; ತುಸುವೆ ಏಮಾರಿದರೂ ಬೇಹುಷಾರಿಗೆ ಮತಿಯ ಮಾರಿದರೂ ತೆರಬೇಕಾದೀತು ದುಬಾರಿ ಬೆಲೆ. ಜಾತ್ರೆ, ಜಲಸ, ತೇರು ಕಳಸಗಳ ಸಮಾವೇಶ ವರ್ಷವಿಡೀ ನಡೆಯದು. ನದಿಗೆ ಬಂದ ಪ್ರವಾಹ ಸದಾ ಉಳಿಯದು. ಮಹತ್ತರತೆಗಿಂತ ಮಾಮೂಲಿತನ, ಪರ್ವತದ ಎತ್ತರಕ್ಕಿಂತ ಸಮತಲದ ಸಾದಾತನವೇ ದೈನಂದಿನ ಬದುಕಿನ ಸೂತ್ರ ನಿಯಮ. ಇದನ್ನು ಅರಿತರೆ, ಸಂಯಮ ಸಮಾಧಾನಗಳೆಂಬ ಸಾಲು ಮರಗಳಿರುವ ಹೆದ್ದಾರಿಯ ಪಯಣ ಮಾತ್ರ ನಿರಾಯಾಸವೂ, ಸುಸೂತ್ರವೂ ಆಗಬಲ್ಲದು.

'ಬಾಳಿನೆಲ್ಲ ಸಂದರ್ಭಗಳು ಕಪಿಲೆ ಗೋವುಗಳಲ್ಲ,
ಅಸಾಮಾನ್ಯ, ಅತಿಶಯದ ಅಮೃತವನೇ
ಅವು ಸದಾ ಕೆಚ್ಚಲಿಸುವುದಿಲ್ಲ.'

(ಬಾಳಿನ ಕ್ರೀಡಾಂಗಣ)

ಆದ್ದರಿಂದಲೆ ಅಪೂರ್ವ ಮುಹೂರ್ತಗಳ ಸಂಯೋಗದ ಫಲವಾಗಿ ದೊರೆಯುವ ಆ ದಿವ್ಯ ಗಳಿಗೆಗಳಿಗಾಗಿ ಕಾಯಬೇಕು. ನಡುವಿನ ದೀರ್ಘಕಾಲದಲ್ಲಿ ಸಣ್ಣಪುಟ್ಟದರಲ್ಲಿ ಸತತ ತೊಡಗಿದ್ದು ದುಡಿತದ ಉತ್ಸಾಹ ಸಡಿಲಗೊಳ್ಳದ ಹಾಗೆ ನಡೆಸುವುದೇ ಬಾಳಿನ ಜಾಣ ಹಾದಿ ಯೆಂಬುದನ್ನು ಸಾರುತ್ತದೆ ಈ ಕವಿತೆ.

'ಬದುಕು ಇಷ್ಟೇ' ಎಂಬ ಕವನ ಜಾಗತೀಕರಣದ ಅನಂತರದ ನಮ್ಮ ಬದುಕಿನ ಪರಿಸ್ಥಿತಿಗಳನ್ನು ವಾಸ್ತವವಾಗಿ ಕಟ್ಟಿಕೊಡುತ್ತದೆ. 'ಸಮಯ ಸಮೆದಂತೊಡವೆ ಕಳೆವಂತೆ ಹೊರ ಮೆರುಗ / ಹಿರಿಮೆ ಸೊರಗಿದ ಬಾಳ್ವೆ ಕೆಟ್ಟಿದೆ ಕಳೆ; / ಅಸ್ತಿತ್ವದೇಗಾಟ ಮುಕ್ಕುತಿದೆ ನಿಬ್ಬೆರಗ / ಭೋಗದುಸುಬಿಗೆ ಹೆಳವ ಸಮಾಜದ ಹೊಳೆ' ಎಂಬ ಸಾಲುಗಳಲ್ಲಿ ಭೋಗ ದಾಹ, ವ್ಯಾಪಾರಿ ಸಂಸ್ಕೃತಿಯ ಫಲವಾದ ಗಳಿಕೆಯ ಏಣಿ ಏರುವ ಧಾವಂತಿಕೆಯ ಸುಸ್ಪಷ್ಟ ಚಿತ್ರವಿದೆ. ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳೇ ಕಳೆದುಹೋಗಿರುವ ಈ ಸಾಂಸ್ಕೃತಿಕ ಹೆಳವತನದಲ್ಲಿ ಆಧ್ಯಾತ್ಮಿಕದ ಪ್ರಭೆ ಕೂಡ ಮಸುಕಾಗುವುದರಲ್ಲಿ ಏನು ಆಶ್ಚರ್ಯ!

'ಸ್ವಹಿತ ಹುತ್ತದ ಮಬ್ಬು ವ್ಯಕ್ತಿ ವ್ಯಕ್ತಿಯು ಕೂಡ,
ಪರ ಹಿತದ ಹೊರ ಬೆಳಕಿನೆದುರು ಪರದೆ;
ಬರಡು ಬಾಳಿನ ಕೊರಡು ಜಂಗಿ ಕುಸ್ತಿಯಖಾಡ,
ರಸವರಸಿ ಕೀಟಗಳ ನಿತ್ಯ ಸ್ಪರ್ಧೆ.'

(ಬದುಕು ಇಷ್ಟೇ)

ಪರ ಸಾಂಸ್ಕೃತಿಕ ದಾಳಿಯ ಅಬ್ಬರದಲ್ಲಿ ಸ್ವಸಂಸ್ಕೃತಿಗೆ ವಿನಾಶ, ಅಧೋಗತಿ

ಒದಗಿದೆ:

'ಮನೆ ನಲ್ಲಿಯಲಿ ಜಳಕಿಸದೆ ಮೋರಿಯಲಿ ಮುಳುಗಿದರೆ
ಮುಚ್ಚದಿದ್ದರೆ ಮೈಯ—ನವತೆ, ಪ್ರಗತಿ;
ವಿಲಾಯತಿ ವಿಲಾಸವತಿ ಹೊರ ಮೆರೆಸಿರಲು, ಕುಡಿಸಿ ಸೆರೆ,
ಸ್ವಂತ ಸಂಸ್ಕೃತಿ ಅಡುಗೆ ಮನೆಯ ಗರತಿ.'

(ಅದೇ)

ಬದುಕಿನ ವ್ಯಾಪಾರೀಕರಣ ವ್ಯವಸ್ಥೆಯಲ್ಲಿನ ಈ ದುರವಸ್ಥೆ ಉಂಟುಮಾಡಿರುವ ವಿದ್ಯಮಾನವೆಂದರೆ "ವಿದ್ಯೆ ಅರುವುಗಳೀಗ ಸೇರು ತಕ್ಕಡಿ ಸರಕು / ರೊಕ್ಕ ಗಳಿಕೆಯದೊಂದೆ ಚರಮ ಧ್ಯೇಯ / ಬುದ್ಧಿ ಕಾಗೆಯ ನೋಟ, ಕೋಳಿ ತಿಪ್ಪೆಯ ಕೆದಕು / ಬದುಕಿಷ್ಟೆ : ಸಿನಿಮ, ಕ್ರಿಕೆಟ್, ರಾಜಕೀಯ"

ಸಾಂಸ್ಕೃತಿಕ ಬದುಕು ಧೂಳೀಪಟವಾಗಿ ಸರಕೀಕರಣಕ್ಕೆ ಒಳಗಾಗಿರುವ ದುರಂತ ಈ ಸಾಲುಗಳಲ್ಲಿ ಹರಳುಗಟ್ಟುತ್ತದೆ. ಅನುಭಾವದ ಅತ್ಯುನ್ನತ ಸ್ತರದಲ್ಲಿ ಬದುಕನ್ನು ಭಾವಿಸಿದ ಕವಿಯ ಮನದ ಅತ್ಯಂತ ಪ್ರಾಮಾಣಿಕವಾದ ನೈತಿಕ ಕಳಕಳಿ ಕವನವಾಗಿ ಅಭಿವ್ಯಕ್ತಗೊಳ್ಳುತ್ತದೆ.

ಸೃಷ್ಟಿ ಮತ್ತು ಬದುಕನ್ನು ಕುರಿತ ನಿಸಾರರ ಜಿಜ್ಞಾಸೆಯನ್ನು ಹೇಳುವ ಈ ಸುದೀರ್ಘ ಅವಲೋಕನದಲ್ಲಿ ಒಂದಂತೂ ಖಚಿತ. ನಿಸಾರರಿಗೆ ಇವು ಎರಡೂ ಬೇರೆ ಬೇರೆ ವಿಷಯಗಳಲ್ಲ. ಒಂದು ಇನ್ನೊಂದಕ್ಕೆ ಪೂರಕವಾಗಿರುವ ಲೋಕದ ಎರಡು ವಿದ್ಯಮಾನಗಳೇ. ಆದ್ದರಿಂದ ಒಂದರ ಚರ್ಚೆಯ ಪದರಗಳು ಇನ್ನೊಂದರ ಮೇಲೂ ಹರಡಿಕೊಂಡಿರುವುದು ಉದ್ದಕ್ಕೂ ಅನುಭವಕ್ಕೆ ಬರುತ್ತದೆ. ಹಾಗೆಯೇ, ಒಂದು ಹಂತದವರೆಗೂ ಬದುಕೇ ಸರ್ವ ವಾಸ್ತವವಾಗಿದ್ದ ನಿಸಾರರ ಕವಿತೆಗಳ ಒಳಗಿನಿಂದ, ಕವಿಯ ಮನದಾಳದ ದೈವಶ್ರದ್ಧೆ, ಆಧ್ಯಾತ್ಮಿಕ ಹಂಬಲಿಕೆ, ತುಡಿತಗಳು ಕವನ ಕವನಗಳಲ್ಲಿ ನಿಧಾನವಾಗಿ ವಿಸ್ತರಿಸಿಕೊಂಡು ಸೂಫಿ ಸಂತರ ಮಾದರಿಯ ಅನುಭಾವದ ವೈಶಾಲ್ಯಕ್ಕೇರುವ "ದಿವ್ಯದ ಕಡೆಗಿನ" ಯಾತ್ರೆಯೆಂದು ಈ ಕವನಗಳನ್ನು ಓದುವುದೂ ಸಾಧ್ಯವಿದೆ.

ತನ್ನ ಬಹುತೇಕ ಬರಹಗಳಲ್ಲಿ ಒಂದು ಜೀವಿತಾವಧಿಯ ಮೊತ್ತದ ಗಟ್ಟಿ ಅನುಭವಗಳ ಭಟ್ಟೀಕರಣವಿಳಿಸಿದ ಒಂದಾದರೂ ಕೃತಿ ರಚನೆ ತನ್ನಿಂದ ಸಾಧ್ಯವಾಗಬೇಕೆಂದು ತವಕಿಸುವ ಕಾವ್ಯ ಕರ್ತನಿಂದ ಜನಾಂಗ ಸಂಸ್ಕೃತಿಗೆ ಆಗುವ ಲಾಭ ಅಷ್ಟಿಷ್ಟಲ್ಲ.

(ಕವಿಯ ಕೃತಾರ್ಥ ಕೃತಿ)



ನಿಸಾರ್ ಅವರ ಕಾವ್ಯ ಕೌಶಲ–ಅನನ್ಯತೆ

♦ *ಜಿ. ಎನ್. ರಂಗನಾಥರಾವ್*

ಕಾವ್ಯ ಮತ್ತು ಭಾಷೆಯ ಸಂಬಂಧವನ್ನು ಕುರಿತ ಜಿಜ್ಞಾಸೆ ಇವತ್ತು, ನಿನ್ನೆಗಳನ್ನು ಮೀರಿ ಪುರಾತನವಾದದ್ದು. ಕಾವ್ಯದ ಭಾಷೆ ಶಿಷ್ಟ ಭಾಷೆಯಾಗಿರಬೇಕೆ ಅಥವಾ ಆಡು ಮಾತಿಗೆ ಸಮೀಪವಾಗಿರಬೇಕೆ? ಅದು ಭಾವೋದ್ದೀಪಕವಾಗಿರಬೇಕೆ, ಅದು ಮಾರ್ಗ-ದೇಸಿಗಳ ಮಿಶ್ರಣವಾಗಿರಬಹುದೆ? ಇತ್ಯಾದಿಗಳೆಲ್ಲ ಹಳೆಯ ವಿಚಾರಗಳೇ. ಕುಂತಕ ಎನ್ನುವ ವಿಮರ್ಶಕ ತನ್ನ 'ವಕ್ರೋಕ್ತಿಜೀವಿತ' ಎನ್ನುವ ಗ್ರಂಥದಲ್ಲಿ ಕಾವ್ಯದ ಜೀವಾಳ ವಕ್ರೋಕ್ತಿ ಎಂದು ಪ್ರತಿಪಾದಿಸಿದ್ದಾನೆ. ವಕ್ರೋಕ್ತಿ ಎಂದರೆ ಕುಟಿಲೋಕ್ತಿಯಲ್ಲ. ಕುಂತಕನ ಪರಿಭಾಷೆಯಲ್ಲಿ ವಕ್ರೋಕ್ತಿ ಎಂದರೆ ಮನೋಹರವಾದ ಉಕ್ತಿ, ವಕ್ರತ್ವ ಎಂದರೆ ವೈಚಿತ್ರ್ಯ, ಕವಿ ಕೌಶಲ. ಕುಂತಕನ ವಕ್ರೋಕ್ತಿ ಕಾವ್ಯವಾಗಬಹುದಾದ ಭಾಷೆಯ ಎಲ್ಲ ಸಾಧ್ಯತೆಗಳನ್ನೂ ಒಳಗೊಳ್ಳಲು ಯತ್ನಿಸುತ್ತದೆ. ಆದರೆ ಆನಂದವರ್ಧನ ಮೊದಲಾದವರ ಪ್ರಕಾರ ಧ್ವನಿ ರಸಾದಿಗಳೇ ಕಾವ್ಯದ ಜೀವಾಳ. ಜಿಜ್ಞಾಸೆ ಏನೇ ಇದ್ದರೂ ಕುಂತಕನ ವಕ್ರೋಕ್ತಿತತ್ತ್ವ ಮತ್ತು ಆನಂದವರ್ಧನನ ಧ್ವನಿ ತತ್ತ್ವಗಳ ಎರಡೂ ತುದಿಗಳ ಮಧ್ಯೆ, ಇವೆರಡಕ್ಕೂ ಸಂವಾದಿಯಾಗಿ ವಿಪುಲವಾದ ಕಾವ್ಯ ಸೃಷ್ಟಿಯಾಗಿರುವುದನ್ನು ನಾವು ಕಾಣುತ್ತೇವೆ. ಶಬ್ದಾಲಂಕಾರ, ಅರ್ಥಾಲಂಕಾರಗಳು ನಮ್ಮ ಕವಿಗಳ ಪ್ರತಿಭೆಯಲ್ಲಿ ವಿಜೃಂಭಿಸಿವೆ. ಭಾಷೆ ಕವಿಗಳ ಕೈಯ್ಯಲ್ಲಿ ಬೆರಗುಗೊಳಿಸುವ ಒಂದು ಸಾಧನವಾಗಿ ವಾಚ್ಯಾರ್ಥ,

ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳಲ್ಲಿ ಮೆರೆದಿರುವುದನ್ನು ನವೋದಯದಿಂದ ನವ್ಯ ಬಂಡಾಯದವರೆಗಿನ ನಮ್ಮ ಕಾವ್ಯದಲ್ಲಿ ಕಂಡಿದ್ದೇವೆ, ಕಾಣುತ್ತಿದ್ದೇವೆ.

ಕಾವ್ಯಭಾಷೆಯನ್ನು ಕುರಿತು ಚರ್ಚಿಸುವಾಗ ಪರಂಪರೆಯನ್ನು ಮರೆಯುವಂತಿಲ್ಲ. ಎಂದೇ, ಇಪ್ಪತ್ತನೆಯ ಶತಮಾನದ ಕೊನೆಯ ಮೂರು ನಾಲ್ಕು ದಶಕಗಳಲ್ಲಿ ಕನ್ನಡದಲ್ಲಿ ಎದ್ದು ಕಂಡ ಮಹತ್ವದ ಕವಿಗಳಲ್ಲಿ ಒಬ್ಬರಾದ ಕೆ.ಎಸ್. ನಿಸಾರ್ ಅಹಮದ್ ಅವರ ಕಾವ್ಯ ಭಾಷೆಗೆ ಹಿನ್ನೆಲೆಯಾಗಿ ಈ ಕೆಲವು ಮಾತುಗಳನ್ನು ಗಮನಿಸಬೇಕಾಯಿತು. ನಿಸಾರ್ ಅಹಮದ್ ಅವರ ಕಾವ್ಯಭಾಷೆ ವಕ್ರೋಕ್ತಿ ಮತ್ತು ಧ್ವನಿತತ್ತ್ವ ಎರಡಕ್ಕೂ ಸಲ್ಲುವ ಒಂದು ವಿಶಿಷ್ಟವಾದ ಹದ. ಅವರ ಕಾವ್ಯಭಾಷೆಯಲ್ಲಿ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳ ಆಯಾಮಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಶಿಷ್ಟಭಾಷೆ, ಆಡುಮಾತು, ಗ್ರಾಮ್ಯಭಾಷೆ ಇವೆಲ್ಲವನ್ನೂ ಒಂದು ವಿಶಿಷ್ಟ ಹದದಲ್ಲಿ ಸಮರ್ಥವಾಗಿ ಬಳಸುವ ಪ್ರತಿಭಾಶಕ್ತಿ, ಕೌಶಲಗಳು ನಿಸಾರ್ ಅಹಮದ್ ಅವರ ಜನ್ಮಜಾತ ಗುಣವೆಂಬಂತೆ ಸಹಜವಾಗಿ ಪ್ರಕಟಗೊಂಡಿವೆ. ನಿಸಾರ್ ಅಹಮದ್ ಅವರ ಕಾವ್ಯಭಾಷೆಯನ್ನು ಕುರಿತು ಕವಿ ಗೋಪಾಲಕೃಷ್ಣ ಅಡಿಗರು ಹೀಗೆ ಅಭಿಪ್ರಾಯಪಟ್ಟಿದ್ದಾರೆ:

> *'ಅಭಿವ್ಯಕ್ತಿಗಾಗಿ ಭಾಷೆಯನ್ನು ಸಂಶೋಧಿಸುವ ಇವರ ರೀತಿ ಇವರ ಕಾವ್ಯಕ್ಕೆ ಸಹಜವಾಗಿಯೇ ಹೊಸ ಆಯಾಮವನ್ನು ಕೊಡುತ್ತದೆ. ಭಾಷಾ ಪ್ರಯೋಗದಲ್ಲಿ ನಿಸಾರರು ತೋರುವ ಎಚ್ಚರ, ತೂಕ, ಶುದ್ಧಿ ಇವು ಅವರ ಕಾವ್ಯದ ವಿಶಿಷ್ಟ ಗುಣ.'*

ಎಲ್ಲ ವಿವರಗಳನ್ನೂ ಸೆರೆ ಹಿಡಿದು ಚಿತ್ರವತ್ತಾಗಿ ಕಟ್ಟಿಕೊಡುವ ಕ್ಯಾಮೆರಾ ಕಣ್ಣಿನ ಭಾಷೆ. ಆಡುಮಾತು, ಶಿಷ್ಟಭಾಷೆ, ಗ್ರಾಮ್ಯದ ಮಾತುಗಳು ಇವೆಲ್ಲವನ್ನೂ ನಿಸಾರ್ ಅಹಮದ್ ಅವರು ಸಮರ್ಥವಾಗಿ ಪ್ರಸ್ತುತತೆಗೆ ವಾಹಕವಾಗಿಸಬಲ್ಲರು. ಇದೇ ಕಾಲಕ್ಕೆ ವಕ್ರೋಕ್ತಿಯಾಗಿ ವಿಶೇಷ ಅರ್ಥ ವ್ಯಾಪಾರಕ್ಕೆ ಚಾಚಿಸಬಲ್ಲರು. ಹಾಗೆಯೇ ಅಡಿಗರು ಹೇಳುವಂತೆ 'ಭಾವ ವ್ಯಂಜನವನ್ನು ವಿಡಂಬನ ಚತುರೋಕ್ತಿಗಳೊಡನೆ ರುಚಿಕರಗೊಳಿಸುವ ಶೈಲಿಯಿಂದ' ವಾಚಕರ ಮನಸ್ಸನ್ನು ತಟ್ಟಿ ಎಬ್ಬಿಸಬಲ್ಲರು.

ಭಾಷೆಯ ಈ ಪರಿ ನಿಸಾರ್ ಅಹಮದ್ ಅವರ ಕಾವ್ಯದ ಒಂದು ವೈಶಿಷ್ಟ್ಯವಾದರೆ, ಇನ್ನೊಂದು ವೈಶಿಷ್ಟ್ಯ ಕಾವ್ಯದಲ್ಲಿ ಅವರು ಸಾಧಿಸಿರುವ 'ಸದೂರ'. ಸದೂರ, ಇದು ಪು.ತಿ.ನ. ಅವರ ಮಾತು.

ಲೋಕಾನುಭವದ ಅಥವಾ ಬದುಕಿನ ಪುನರ್‌ಸೃಷ್ಟಿಯೇ ಕಸುಬು. ಸಾಹಿತ್ಯ, ಕಲೆ, ಕಾವ್ಯಗಳು ಕಸುಬು ಎಂದಾದಲ್ಲಿ, ಇದರಲ್ಲಿ ಕವಿ ಪ್ರತಿಭೆಯ ಪಾತ್ರ ಏನು? ಪು.ತಿ.ನ. 'ಕಾವ್ಯ ಕುತೂಹಲ'ದಲ್ಲಿ ಕಾವ್ಯದ ಜೀವಾಳವನ್ನು ಕುರಿತು ಅನೇಕ ಪ್ರಶ್ನೆಗಳನ್ನು ಎತ್ತುತ್ತಾರೆ. ಒಂದು ಪ್ರಶ್ನೆ ಹೀಗಿದೆ:

> *'ಕಾವ್ಯದ ಜೀವಾಳ ವಸ್ತುವಿನಲ್ಲಿದೆಯೇ, ಸಂವಿಧಾನದಲ್ಲಿದೆಯೇ. ರೂಪದಲ್ಲಿದೆಯೇ, ಪದಪ್ರಯೋಗ ಚಾತುರ್ಯದಲ್ಲಿದೆಯೇ ಅಥವಾ*

ಇವೆಲ್ಲವು ಗಳ ಉಚಿತ ಸಮುದಾಯದಲ್ಲಿಯೆ?'

ಈ ಎಲ್ಲ ಪ್ರಶ್ನೆಗಳಿಗೆ ಪು.ತಿ.ನ. ಹೀಗೆ ಸಮಾಧಾನ ಹೇಳುತ್ತಾರೆ:

'ಇವುಗಳೆಲ್ಲವುಗಳಲ್ಲೂ ಕಾವ್ಯ ರಹಸ್ಯ ಅಡಗಿರುವಂತೆ ನನಗೆ ತೋರುತ್ತಿಲ್ಲ.'

ಪು.ತಿ.ನ. ಅವರ ಪ್ರಕಾರ ಕಾವ್ಯದ ಜೀವಾಳವಿರುವುದು ಕವಿ ಮತ್ತು ಸಹೃದಯರ ಭಾವಭಂಗಿಯಲ್ಲಿ. ಕಾವ್ಯಪ್ರಪಂಚಕ್ಕೆ ಪ್ರವೇಶಿಸಲು ಅಗತ್ಯವಾದ ಬಾಗಿಲು, ಅಲ್ಲಿ ಯಾವ ಭಂಗಿಯಲ್ಲಿ ನಿಂತು ಜೀವನವನ್ನು ಅವಲೋಕಿಸಬೇಕೋ ಅದನ್ನು ಪು.ತಿ.ನ. 'ಸದೂರ' ಎಂದು ಕರೆದಿದ್ದಾರೆ. ಈ 'ಸದೂರ'ವನ್ನು ಪು.ತಿ.ನ. ಹೀಗೆ ಅರ್ಥೈಸುತ್ತಾರೆ—

'...ಕವಿಯು ಕೂಡ ಅನುಭವಗಳನ್ನು ಪಡೆಯುತ್ತಾ, ಸಂಯಮಿಸುತ್ತಾ, ಅವುಗಳಿಂದ ತನ್ನನ್ನು ಬಿಡಿಸಿಕೊಳ್ಳುತ್ತಾ, ಮರಳಿ ಕಾವ್ಯ ಕುಸುಮ ರೂಪದಲ್ಲಿ ಅವನ್ನು ಹೊರತೋರುವಾಗ ಅವಕ್ಕೆ ತಕ್ಕ ರಂಗುರೂಪ ಕಂಪುಗಳು ಪ್ರಾಪ್ತವಾಗುತ್ತವೆ.'

ಈ ಒಂದು ಕಾವ್ಯಕರ್ಮದ ಪ್ರಕ್ರಿಯೆ ನಿಸಾರ್ ಅಹಮದ್ ಅವರ ಕಾವ್ಯದಲ್ಲಿ ಹಾಸುಹೊಕ್ಕಾಗಿರುವುದನ್ನು ನಾವು ಕಾಣುತ್ತೇವೆ. ನಿಸಾರ್ ಅವರ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನ, ಜಿ. ಎಚ್. ನಾಯಕರು ಅಭಿಪ್ರಾಯಪಡುವಂತೆ, ನವ್ಯ ಸಂದರ್ಭದಲ್ಲಿ ವಿಮರ್ಶಕರಿಂದ ಸಿಗದ ಮನ್ನಣೆಗೆ ಪ್ರತಿಕ್ರಿಯೆಯಾಗಿ ಬಂದ ಹತಾಶೆಯಷ್ಟೇ ಅಲ್ಲದೆ, (ಸಕಾಲಿಕ, ಪು. 68) ಈ ಕವನ ಅವರ ಕಾವ್ಯದ 'ಸದೂರ' ಗುಣದ ಧ್ವನಿಯೂ ಆಗಿದೆ. ಆದರೆ ಈ ಸದೂರತೆ ಸುಲಭದ ಕೆಲಸವೇನಲ್ಲ.

'ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನು
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.'

ಕವಿ ಬಯಸುವ ಸದೂರತೆ, ಸಂಶಯಕ್ಕೆ ಎಡೆಕೊಡುವ ನೋವೂ ಇಲ್ಲಿ ಸ್ಪಷ್ಟವಾಗಿ ಧ್ವನಿಸುತ್ತದೆ. 'ರಾಷ್ಟ್ರೀಯ ಧಾತುಗಳ' ಪ್ರಯೋಗ ಧ್ವನಿಸುವ mainstream ಬಾಂಧವ್ಯ ಕವಿಯ ಕಾವ್ಯಕ್ಕೂ ಅನ್ವಯಿಸುತ್ತದೆ. ಹೀಗಾಗಿಯೇ ನಿಸಾರ್ ಅವರ ಕಾವ್ಯದಲ್ಲಿನ 'ಸದೂರತೆ'ಯೂ ಭಾಷೆಯಂತೆಯೇ ಒಂದು ಮುಖ್ಯ ಲಕ್ಷಣ ಅಥವಾ ಗುಣಧರ್ಮ ವೈಶಿಷ್ಟ್ಯ.

ಪು.ತಿ.ನ. ಅವರ 'ಸದೂರ' ಪರಿಕಲ್ಪನೆ ಅವರ ಕೆಳಗಿನ ಮಾತುಗಳಲ್ಲಿ ಇನ್ನಷ್ಟು ಸ್ಪಷ್ಟವಾಗುತ್ತದೆ:

'ವಸ್ತುವಿನಿಂದ ಕಾವ್ಯಕ್ಕೆ ಉನ್ನತಿಯಾಗಲಿ ಅವನತಿಯಾಗಲಿ ಲಭಿಸದು. ಆ ವಸ್ತುವಿನ ವಿಷಯದಲ್ಲಿ ಕವಿಯ ಮನಸ್ಸು ನಿಲ್ಲುವ ನೆಲೆಯ

ಬೆಲೆಯಿಂದ ಆ ಕಾವ್ಯಕ್ಕೆ ಬೆಲೆ. ಕವಿ ತನ್ನ ಅನುಭವಗಳಿಂದ ಪ್ರತ್ಯೇಕಿಸಿ ಕೊಂಡು, ಅದನ್ನು ನಿರುಕಿಸುತ್ತಾ ನಮಗಾಗಿ ಬಣ್ಣಿಸುವ ಜಾಣ್ಮೆಯ ಮೇಲೆ ಅದರ ಬೆಲೆ ನಿಲ್ಲುತ್ತದೆ. ಕವಿಯ ಕೌಶಲವಿರುವುದು ಈ ಎಡೆಯಲ್ಲಿ— ಭಾವದ ಅಲೆಯಂತೆ ಮೈಗರೆದು, ಕಾಣದಂತೆ ಒಂದುಗೂಡಿ, ಸದೂರದಲ್ಲಿ ತೋರಿ, ತಾನೇ ಅದು ಎಂಬಂತೆ ಹಾಗೂ ಅದಲ್ಲವೆಂಬಂತೆ ಯೋಗ್ಯೈಶ್ವರ್ಯ ವನ್ನು ಪ್ರದರ್ಶಿಸುವ ಚಾತುರ್ಯದಲ್ಲಿ.'

(ಕಾವ್ಯ ಕುತೂಹಲ)

'ಮನಸು ಗಾಂಧಿ ಬಜಾರು' (1960) ಮೊದಲ ಕವನ ಸಂಕಲನದಲ್ಲೇ ಮಹತ್ವಾಕಾಂಕ್ಷೆಯ ಕವನಗಳೆನ್ನಬಹುದಾದ 'ಇಪ್ಪತ್ತನೆಯ ಶತಮಾನದ ಕೊಲಂಬಸ್'. 'ಸಮರ ಗೀತೆ'ಗಳಲ್ಲಿ ಸದೂರತೆಯ ಲಕ್ಷಣಗಳನ್ನು, ಕವಿ ಮನಸ್ಸಿನ ನೆಲೆಯ ಬೆಲೆಗಳನ್ನು ಗಮನಿಸಬಹುದು.

'ನಾನಿಷ್ಟೆ ಲೋಕಕ್ಕೆ :
ತೇದಂತೆ ಕರಗುವ ಗಂಧದೊಂದು ಚಕ್ಕೆ!'

(ಇಪ್ಪತ್ತನೆಯ ಶತಮಾನದ ಕೊಲಂಬಸ್)

ವ್ಯಷ್ಟಿ ಮತ್ತು ಸಮಷ್ಟಿ ನೆಲೆಗಳ ಆಳದಿಂದ ಮೊಳೆಯುವ ನಿಸಾರರ ಕಾವ್ಯದಲ್ಲಿ ವಿಷಮತೆ ಹಾಗೂ ವೈರುಧ್ಯಗಳೇ ಮೇಲುಗೈ ಪಡೆದಿವೆ. ಇವುಗಳ ಅಭಿವ್ಯಕ್ತಿಯಲ್ಲಿ ಢಾಳವಾಗಿ ಕಾಣುವುದು ವಕ್ರೋಕ್ತಿ ವೈಶಿಷ್ಟ್ಯ ಮತ್ತು 'ಸದೂರ' ದರ್ಶನ. ನಿಸಾರ್ ಅಹಮದ್ ಅವರ ಕಾವ್ಯದಲ್ಲಿನ ವ್ಯಂಗ್ಯ, ವಿಡಂಬನೆಗಳು ಅನೇಕ ರಚನೆಗಳಲ್ಲಿ ವಾಚ್ಯವನ್ನು ದಾಟಿದ ಕವಿಯ ಭಾಷಾ ವೈಶಿಷ್ಟ್ಯದ ಕೌಶಲ ವ್ಯಾಪಾರಗಳೇ ಆಗಿವೆ. 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ', 'ಸ್ವಯಂ ಸೇವೆಯ ಗಿಳಿಗಳು', 'ಅನಾಮಿಕ ಆಂಗ್ಲರು', 'ಬಹಿರಂತರ' ಸಂಕಲನಗಳ ಹಲವಾರು ಕವನಗಳಲ್ಲಿ ಅವರ ಭಾಷಾವೈಶಿಷ್ಟ್ಯ ಮತ್ತು ಸದೂರತೆಯ ನೆಲೆ-ಬೆಲೆ ಹೆಚ್ಚು ಖಚಿತವಾಗಿ ಹರಳುಗಟ್ಟುವುದನ್ನು ಕಾಣಬಹುದು. ಈ ಮಾತಿಗೆ ನಿದರ್ಶನವಾಗಿ 'ಮಾಸ್ತಿ', 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ', 'ಖಾಲಿ ಸೈಟುಗಳು', 'ಸ್ವಯಂ ಸೇವೆಯ ಗಿಳಿಗಳು', 'ಮೈಲಿ ಮೊಗದ ಮಹಾರಾಯ' ಮೊದಲಾದ ಕವನಗಳನ್ನು ನೋಡಬಹುದು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಕನ್ನಡ ಸಣ್ಣಕತೆಯ ಮಾರ್ಗಪ್ರವರ್ತಕರು, ಕವಿ, ನಾಟಕಕಾರ. ನಿಸಾರ್ ಅವರ ಕವನ ಇದಾವುದರ ಗೊಡವೆಗೆ ಹೋಗುವುದಿಲ್ಲ. ಮಾಸ್ತಿಯವರ ವ್ಯಕ್ತಿತ್ವದ ಬೇರೊಂದು ಮಗ್ಗುಲನ್ನು, ಅವರು ಮನೆಯಿಂದ ಗಾಂಧಿ ಬಜಾರಿನ ಕೊನೆಗೆ ನಡೆದು ಬರುವ ಹಾದಿಯಲ್ಲಿ ಕವಿ ಮೆಟ್ಟಿಲು ಮೆಟ್ಟಿಲಾಗಿ, 'ವಯಸ್ಸು ಅನುಭವ ಹೂಡಿ ಸುಖ ದುಃಖ ಬೆಳೆದ ಮುಖ'ದಿಂದ ಹಿಡಿದು, 'ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು ಸಾಗುವರು ಸದ್ದಿರದೆ ಚಂದ್ರನಂತೆ, ಗಂಭೀರವಾಗಿ ಕರ್ತವ್ಯದೆಚ್ಚರದ ಸನ್ನೆಯಂತೆ' ಸಾಗುವ ಪರಿಯಲ್ಲಿ ಅನಾವರಣಗೊಳಿಸುತ್ತಾರೆ. ಈ ಪರಿಯಲ್ಲಿ ಮಾಸ್ತಿಯವರ

ಸುಪ್ರಸನ್ನತೆ, ವರ್ತಮಾನದ ನೂಕುನುಗ್ಗಲಿನಲ್ಲೂ ನಲುಗದ ಅಚ್ಚುಕಟ್ಟು, ಕ್ಲಬ್ಬಿನಲ್ಲಿ ನಿಶ್ಚಿಂತೆಯಾಗಿ, ಕೂಗು ಹುಸಿ ಮುನಿಸುಗಳ ನಡುವೆ ತುಟಿಗಳ ಮೊಗ್ಗೆ ಬಿಡಿಸಿ ನಕ್ಕಾಗ ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆಯಾಗುವುದು—ಇವೆಲ್ಲ ಸೊಗಸಾಗಿ ಮಾಸ್ತಿಯವರ ನಿರ್ಮಲ ವ್ಯಕ್ತಿತ್ವವನ್ನು ಮಂದ್ರದಲ್ಲಿ ಪಲುಕುತ್ತವೆ.

'ಇವರು ನನ್ನೆದುರಲ್ಲಿ ಹಾದುಹೋದಾಗಲೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ.'

(ಮಾಸ್ತಿ)

ಕವಿ ದೂರದಿಂದ ಕಂಡ ಒಂದು ಮಹೋನ್ನತ ವ್ಯಕ್ತಿತ್ವದ ದರ್ಶನ ಮೇಲಿನ ಸಾಲುಗಳಲ್ಲಿ ನೆಲೆ-ಬೆಲೆಗೆ ಬಂದು ನಿಲ್ಲುತ್ತದೆ. ಸುಪ್ರಸನ್ನತೆ, ಬಿಸಿ ನೀರಿನಲ್ಲಿ ಮಿಂದಂತೆ, ಎದೆ ಸ್ವಚ್ಛಗೊಂಡು ಹಗುರಾಗುವುದು—ಇವೆಲ್ಲ ಕವಿ ಕಂಡ ಮಾಸ್ತಿಯವರ ವ್ಯಕ್ತಿತ್ವವನ್ನು ನಮ್ಮ ಸಂಸ್ಕೃತಿಯ ಶ್ರೇಷ್ಠ ಮೌಲ್ಯಗಳಾದ ಪ್ರೀತಿ, ಅಂತಃಕರಣ ಮತ್ತು ಮಾನವೀಯತೆಗಳ ನೆಲೆಗೆ ತಂದು ನಿಲ್ಲಿಸುತ್ತದೆ. ಕೊನೆಗೆ, ನೋಡುತ್ತಲಿದ್ದಂತೆ—

'ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ'

(ಅದೇ)

ಈ ಮಾತುಗಳಲ್ಲಿ ಕವಿಯ ಭಾಷೆ ಮಾಸ್ತಿಯವರನ್ನು ನಮ್ಮ ಸಂಸ್ಕೃತಿಯ ರೂಪಕವಾಗಿ ಕಡೆದು ನಿಲ್ಲಿಸುತ್ತದೆ. 'ಸಂದ ಜೀವನದೊಂದು ರೀತಿಯಂತೆ' ಎಂಬ ಮಾತುಗಳಲ್ಲಿ ವಕ್ರೋಕ್ತಿಯ ಛಾಯೆ ಸ್ಪಷ್ಟ. ಮೇಲಿನ ಮೂರು ಸಾಲುಗಳಲ್ಲಿ ನಿಸಾರರ ಶಬ್ದಾರ್ಥ ಧ್ವನಿ ಕೌಶಲ ಹಾಗೂ ಸದೂರದಿಂದಲೇ ವ್ಯಕ್ತಿತ್ವವೊಂದನ್ನು ನೋಡು ನೋಡುತ್ತಲೇ ನಮ್ಮ ಸಂಸ್ಕೃತಿಯ ಬೆಲೆ ಕಟ್ಟುವ ಪರಿ ವಿಶೇಷವಾದದ್ದು.

'ರಾಮನ್ ಸತ್ತ ಸುದ್ದಿ' ಕವನದಲ್ಲೂ ಇಂಥದೇ ಇನ್ನೊಂದು ಬಗೆಯನ್ನು ಕಾಣಬಹುದು. ಸಾವೊಂದರ ಮೂಲಕ ಬದುಕನ್ನು ನೋಡುವ ವೈಚಿತ್ರ್ಯ ಹಾಗೂ ಅದರ ಬೆಲೆ ಕಟ್ಟುವ ವಸ್ತುನಿಷ್ಠತೆಯ ಕಾವ್ಯದ ಪರಿ ಇಲ್ಲಿಯದು.

ಬೆಳಿಗ್ಗೆ ಪತ್ರಿಕೆಯಲ್ಲಿ ರಾಮನ್ ಸತ್ತ ಸುದ್ದಿಯನ್ನು ಓದಿ ಕವನದ ನಾಯಕ ವಿಹ್ವಲನಾಗಿದ್ದಾನೆ. ಈ ವಿಹ್ವಲತೆಯಲ್ಲೇ ವಾಕಿಂಗ್ ಹೊರಟಾಗ ಬದುಕು ಮಾಮೂಲಿನಂತಿದೆ. ಯಾರೂ ದುಃಖಿಸುತ್ತಿಲ್ಲವೆನ್ನಿಸಿ ಅವನಿಗೆ ಮತ್ತಷ್ಟು ದುಃಖವಾಗುತ್ತದೆ. ಅನಂತರ ರೈತಾಪಿ ಕುಳ ಹನುಮ ಎದುರಾಗುತ್ತಾನೆ.

'ರಾಮನ್ ಸತ್ತರೋ ಹನುಮ' ಅನ್ನಬೇಕು, ಆಗ ತಡೆದು
ಸುಮ್ಮನಾದೆ. ರಾಮನ್ ಅರ್ಥೈಸಿಕೊಳ್ಳಬಹುದೆ ಇವನ

ಅಶಿಕ್ಷಿತ ಅರಿವಿಗೆ?'

(ರಾಮನ್ ಸತ್ತ ಸುದ್ದಿ)

ಈ ತಾಕಲಾಟದಲ್ಲೇ: ಒಂದು ತಕ್ಕಡಿಯಲ್ಲಿ ರಾಮನ್, ಇನ್ನೊಂದು ತಕ್ಕಡಿಯಲ್ಲಿ ಹನುಮ—

ಆ ಕಡೆ ರಾಮನ್, ಈ ಕಡೆ ಹನುಮ—ಇವರ ನೆಲೆಬೆಲೆಗಳೇನು? ಬದುಕಿನ ನೆಲೆಬೆಲೆಗಳೇನು? ಹನುಮನ ಬದುಕಿನ ಚಿತ್ರ, ಪ್ರತಿನಿತ್ಯದ ಆಗುಹೋಗುಗಳಲ್ಲಿ ತೆರೆದು ಕೊಳ್ಳುತ್ತದೆ. ಕವನದ ನಾಯಕನೊಂದಿಗೆ ತುಲನಾತ್ಮಕವಾಗಿ ನಿಂತಾಗ ಕಾಣುವುದು:

'ಆದರೂ ತೃಪ್ತ...
ಇದ ಮೆಚ್ಚಿ, ಕರುಬಿ, ಪೇಚಾಡಿ ನಡೆದಾಗ
ದೂರದಿಂದ, ಪ್ರಕೃತಿಯ ಅಗಾಧದಲ್ಲಿ ಹಿಮಾಚ್ಛಾದಿತ ಹನುಮ,
ಅವನ ಕೂದಲೆಳೆಯ ಕೂಗು
ಅರ್ಥ ತೋರದ ಚುಕ್ಕಿ.'

(ಅದೇ)

ಮುಗ್ಧ ಹನುಮ ಹಳ್ಳಿಯ ರೈತಾಪಿ ಜನರ ಸಂಕೇತವಾದಂತೆ ನಿಗೂಢ ಬದುಕಿನ ರೂಪಕವೂ ಆಗುತ್ತಾನೆ. ಈ ನಿಗೂಢತೆಯ ಮುಂದೆ ಯಾವುದೂ 'ತಿಳಿಯುವುದಿಲ್ಲ.' ಹನುಮ ತಂದು ಕೊಡುವ ಈ ದರ್ಶನ ಕವಿ ದರ್ಶನದೇ ಆಗಿದ್ದು ಅದರ ಮುಂದೆ 'ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು.' ಈ ದರ್ಶನದಲ್ಲಿ ಪ್ರಕೃತಿಯ ಸಹಜ ವ್ಯಾಪಾರವನ್ನು ಕವಿ ಥಟ್ಟನೆ ಓದುಗರ ಎದೆಗೆ ಮುಟ್ಟಿಸುತ್ತಾರೆ. ಕವನದ ನಾಯಕ, ರಾಮನ್, ಹನುಮ, ಓದುಗರು ಎಲ್ಲರನ್ನೂ ಸದೂರದಿಂದ ನೋಡುವುದರಿಂದ ದಕ್ಕುವ ಜೀವನ ದರ್ಶನ ಇದು. ನಾಯಕನ ಅನೇಕ ಮಟ್ಟದ ಬಾಳುವ ಪ್ರಶ್ನೆಗಳು, ವಿಚಾರಗಳು ಇದಾವುದರ ತೊಡಕಿಲ್ಲದ, ಆದರೆ ಕಷ್ಟನಷ್ಟ, ಮನೆಯ ತಾಪತ್ರಯಗಳ ಮಧ್ಯೆಯೂ 'ತೃಪ್ತ'ನಾದ ಹನುಮನ ಚಿತ್ರವನ್ನು ಕಟ್ಟಿಕೊಡುವುದರಲ್ಲಿ ಕವಿಪ್ರತಿಭೆ ಅನನ್ಯವಾದದ್ದು.

ಮರಣದ ಸುದ್ದಿಯೊಂದನ್ನು ಬಿತ್ತರಿಸುವ ಕ್ರಮದಲ್ಲೇ ಕವಿ, ಹನುಮನ ಬದುಕಿನ ಚಿತ್ರಗಳ ಮೂಲಕವೇ ಸಾವು-ಬದುಕುಗಳ ನೆಲೆ-ಬೆಲೆಗಳನ್ನು ಶೋಧಿಸುವ ವೈಚಿತ್ರ್ಯ ಪರಿಣಾಮಕಾರಿಯಾದದ್ದು. ಸತ್ತವರು ಎಂಥ ಮಹಾನುಭಾವರಾದರೇನು... ರಾಮನ್, ಹನುಮ, ಕೊನೆಗೆ ತಾನು... ಸಾವು ಯಾರದಾದರೇನು ಜಾತಸ್ಯ ಮರಣಂ ಧ್ರುವಂ... ಆದರೆ ಅದರ ಗೂಢ ಮಾತ್ರ ಅರ್ಥವಾಗುವುದಿಲ್ಲ. ಹನುಮನ ತೃಪ್ತ ಬದುಕು, ಜೀವನದ ಸುಖ, ಸಮೃದ್ಧಿ, ಅರ್ಥ, ಭಾವ ಯಾವುದೂ ತಿಳಿಯುವುದಿಲ್ಲ. ಸಾವಿನ ಮುಂದೆ ಯಾವುದೂ ತಿಳಿಯುವುದಿಲ್ಲ. ಕವನದಲ್ಲಿ ಕವಿ ದೂರ ನಿಂತು ಸಾಧಿಸುವ ಅರಿವು ಇದು—ಎಂದೇ ಕ್ಷಣ ಕಾಲ ಕೊರಳು ಬಿಗಿದು ಬಂದರೂ ಕವನದ ನಾಯಕ ದುಃಖದ ತೀವ್ರತೆ ಕಳೆದಂತೆ ಈ ಅರಿವಿನಿಂದ ಶಾಂತನಾಗುತ್ತಾನೆ.

'ರಂಗೋಲಿ ಮತ್ತು ಮಗ' ವಿಶೇಷ ಅರ್ಥ ವೈಚಿತ್ರ್ಯಗಳಿಗೆ ಚಾಚಿಕೊಳ್ಳುವ ಕವನ.

ರಂಗೋಲಿ ಚಿತ್ತಾಕರ್ಷಕ ಕಲೆಯೂ ಹೌದು, ಧಾರ್ಮಿಕವಾಗಿ ಶುಭದ ಸಂಕೇತವೂ ಹೌದು. ತನ್ನ ಧರ್ಮದಲ್ಲಿ ಸಲ್ಲದ ರಂಗೋಲಿಯಲ್ಲಿ ನಿರೂಪಕನಿಗೆ ಈ ಎರಡೂ ದೃಷ್ಟಿಗಳಿಂದಲೂ ಆಸಕ್ತಿ. ಈ ಆಸಕ್ತಿಯೇ ಎರಡು ಸಂಸ್ಕೃತಿಗಳನ್ನು ಇಲ್ಲಿ ಮುಖಾಮುಖಿ ತಂದು ನಿಲ್ಲಿಸುತ್ತದೆ. ಹಲವಾರು ಜಾತಿಮತಗಳು, ಧರ್ಮ-ಸಂಸ್ಕೃತಿಗಳು ತುಂಬಿರುವ ನಾಡಿನಲ್ಲಿ ಇಂಥ ಆಸಕ್ತಿ, ಒಂದು ಸಂಸ್ಕೃತಿಯ ಆಚರಣೆಗಳಿಂದ ಮತ್ತೊಂದು ಸಂಸ್ಕೃತಿಯ ಆಕರ್ಷಣೆಗೊಳಗಾಗುವುದು, ತಿಕ್ಕಾಟಗಳಿಗೆ ಆಸ್ಪದವಾಗುವುದು, ಒಂದು ಮತ್ತೊಂದೆಡೆಗೆ ಕೈ ಚಾಚುವುದು ಸಹಜವೇ. ಧಾರ್ಮಿಕ ಎಂದುಕೊಂಡ ಆಚರಣೆಗಳು ಕಲೆಯ ರೂಪ ತಾಳಿದಾಗ, ಅದಕ್ಕೆ ಒದಗುವ ಸಾರ್ವತ್ರಿಕತೆಯಿಂದಾಗಿ ಇಂಥ ತುಡಿತಗಳು ಇನ್ನೂ ಹೆಚ್ಚಾಗುತ್ತವೆ. ನಿಸಾರ್ ಅಹಮದ್ ಅವರು ಈ ಕವನದಲ್ಲಿ ಅನ್ಯ ಆಚರಣೆಯೊಂದಕ್ಕೆ ಸ್ಪಂದಿಸುವಾಗ, ವಿಭಿನ್ನ ತಲೆಮಾರಿನವರು ಪ್ರತಿಕ್ರಿಯಿಸುವ ರೀತಿ, ತಿಕ್ಕಾಟಗಳನ್ನು ದಾಖಲಿಸುತ್ತಲೇ, ಎಳೆಯ ತಲೆಮಾರಿನ ಸವಾಲಿನೋಪಾದಿಯ ಪ್ರಶ್ನೆಯಲ್ಲಿ ಬೆಳೆದವರಿಗೆ ಎಟುಕದ ವಿಶೇಷಾರ್ಥದ ಹೊಳಹನ್ನು ಕಾಣಿಸುತ್ತಾರೆ.

ಔಟ್‌ಹೌಸಿನ ಜನ ರಂಗೋಲಿ ಹಾಕಿದರೆ ಬಿರು ನುಡಿಯುವ ಅಜ್ಜಿ, ಮಗ ರಂಗೋಲಿ ಯಿಂದ ಆಕರ್ಷಿತನಾಗಿ ಮನೆಯಲ್ಲಿ ರಂಗೋಲಿ ಬಿಡಿಸುವ ಪ್ರಯತ್ನ ಮಾಡಿದಾಗ ಕಾಫಿರನೆಂದು ರೇಗುವ ತಾಯಿ, ರಂಗೋಲಿಯಿಂದ ಆಕರ್ಷಿತನಾಗಿರುವ ನಿರೂಪಕನ ಮನಸ್ಸಿನ ತುಡಿತಗಳು, ನಮ್ಮಲ್ಲೇಕೆ ರಂಗೋಲಿ ಹಾಕುವುದಿಲ್ಲ ಎಂದು ಪ್ರಶ್ನಿಸುವ ನಿರೂಪಕನ ಮಗ—ಹೀಗೆ ಹಲವು ಬಗೆಯ ಪ್ರಶ್ನೆಗಳಿಗೆ, ಪ್ರತಿಕ್ರಿಯೆಗಳಿಗೆ ಪುಟ ಕೊಡುವ ರಂಗೋಲಿ. ಹಾಗೆ ನೋಡಿದರೆ, ಮಗನಂತೆ ನಿರೂಪಕನೂ ರಂಗೋಲಿಯ ಚೆಲುವಿಗೆ ಮಾರು ಹೋಗಿದ್ದಾನೆ. ಆದರೆ ಮಗನ ಮುಗ್ಧತೆ, ಕುತೂಹಲಗಳನ್ನು ಇವನು ದಾಟಿದವನು, ಅಂಕೆಯಲ್ಲಿ ಬೆಳೆದವನು. ಚಿತ್ತಾಕರ್ಷಕವಾದ, ಚೆಲುವಾದ ರಂಗೋಲಿಯನ್ನು ಅಜ್ಜಿ ಟೀಕಿಸಿದಾಗ ನೊಂದುಕೊಳ್ಳುವುದಷ್ಟೆ ಅವನ ಅಸಹಾಯಕತೆ :

‘ನಮ್ಮ ಔಟ್‌ಹೌಸಿನ ಜನ
ಹೊಸ್ತಿಲ ಬಳಿ ರಂಗೋಲಿ ಬಿಡಿಸಿದ ಹೊತ್ತು
ಅಜ್ಜಿ ತೋರಿಸಲು ಬಿರುನುಡಿಯ ದೌಲತ್ತು
ಅಬ್ಬ! ನನಗೆಂಥ ನೋವಾಗಿತ್ತು.’

(ರಂಗೋಲಿ ಮತ್ತು ಮಗ)

ಆದರೆ ಹೊಸ ತಲೆಮಾರಿನ ಮಗನಿಗೆ, ‘ನಮ್ಮ ಪದ್ಧತಿಗೆ ಅದು ಸರಿಯಲ್ಲ, ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ’ ಎಂಬ ಉತ್ತರಗಳಿಂದ ಸಮಾಧಾನವಾಗುವುದಿಲ್ಲ.

‘ಅಲ್ಲಿ ಹೇಳಿದ ಹಾಗೆ ಆಚರಿಸಬೇಕೆ?

....

ಮನೆಯ ಕಟ್ಟಿದ ಇಸ್ವಿ,
ನಿನ್ನ ಹೆಸರು, ಮನೆಯೆದುರಲ್ಲಿ
ಬರೆಸಿರುವೆಯಲ್ಲ, ಹೇಳಿದೆಯೆ ಖುರಾನಿನಲ್ಲಿ?’

(ಅದೇ)

ಮಗನ ಈ ಸವಾಲು ನಂಬಿಕೆ-ಆಚರಣೆಗಳ ನಡುವಣ ವಿರೋಧಾಭಾಸಗಳನ್ನು ಮುಖಕ್ಕೆ ರಾಚುತ್ತದೆ. ಮುಗ್ಧ ಮನಸ್ಸಿನ ಒಂದು ಪ್ರಶ್ನೆ ಆತ್ಮಸಾಕ್ಷಿಯ ಕತ್ತು ಹಿಚುಕುವ ಹಿಡಿತದಂತೆ ತೋರುತ್ತದೆ. ಆದರೆ ನಿರೂಪಕನ ತುಡಿತ ಇಲ್ಲಿಗೆ ಮುಗಿಯುವುದಿಲ್ಲ. 'ಕ್ಲಾಸ್ ಬೆಳೆಯುತ್ತೆ, ಹೆಜ್ಜೆ ಹಾಕೋ ಬೇಗ' ಎಂದು ಮಗನ ಮನಸ್ಸನ್ನು ರಂಗೋಲಿಯಿಂದ ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಾನಾದರೂ ಅವನ ಮನಸ್ಸು ರಂಗೋಲಿಯಲ್ಲೇ ಸಿಲುಕಿಕೊಂಡಿದೆ.:

'ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ:
ಬೆರಗು ಪ್ರಶ್ನೆಗಳವಳಿ ರೆಕ್ಕೆ
ಹರಡಿದ ಪುಟ್ಟ ಹಕ್ಕಿಯಂತೆ;
ಮನದ ತುಂಬಾ ನೆರೆಸಿ ಚಿಂತನೆಯ ಸಂತೆ.'

(ಅದೇ)

ಇಲ್ಲಿ ಅವಳಿ ರೆಕ್ಕೆ ಹರಡಿದ ಹಕ್ಕಿಯ ಪ್ರತಿಮೆ ಧ್ವನಿಸುವ ಸಕಾರಾತ್ಮಕ ಧ್ವನಿಯನ್ನು ಗಮನಿಸಬೇಕು. ತಾನು ಚಿಂತೆಯಲ್ಲಿ ಬಂದಿಯಾದರೂ ಮುಂದಿನ ತಲೆಮಾರು ಜಾತಿ-ಧರ್ಮಗಳ ಅಡ್ಡಗೋಡೆಗಳನ್ನು ದಾಟುವ ಸ್ವತಂತ್ರ, ವಿಶಾಲ ಮನೋಭಾವ ಉಳ್ಳವರೆಂಬ ಆಶಾದಾಯಕ ತೀರ್ಮಾನಕ್ಕೆ ಹಕ್ಕಿ ಪ್ರತಿಮೆ ಕವನವನ್ನು ತಂದು ಮುಟ್ಟಿಸುತ್ತದೆ. ಇದು, ಎರಡು ಧರ್ಮಗಳು, ಎರಡು ತಲೆಮಾರುಗಳು, ಆಚರಣೆಗಳು ಮತ್ತು ಕುತೂಹಲಗಳು, ತಿಕ್ಕಾಟಗಳು, ಪ್ರಶ್ನೆಗಳು ಇವೆಲ್ಲವನ್ನೂ ದೂರದಿಂದಲೇ ಅವಲೋಕಿಸುತ್ತಾ ಬಂದ ಕವಿ ಅಚ್ಚರಿಯಾಗಿ ಕಾಣುವ ಸತ್ಯ; ವಸ್ತುಸ್ಥಿತಿಯನ್ನು ಚಿತ್ರಿಸುತ್ತಲೇ, ತೂಗಿ ನೋಡುತ್ತಲೇ ಬಾಲಕನ ಕುತೂಹಲದ ಕಣ್ಣು, ಪ್ರಶ್ನಿಸುವ ಮನಸ್ಸುಗಳ ಮೂಲಕ ಕವಿ ಪಡೆಯುವ ಕಾಣ್ಕೆ. ಕವನದುದ್ದಕ್ಕೂ ಕುತೂಹಲಿಯಾಗುವ, ಸಿಡುಕುವ, ಮೈ ಪರಚಿಕೊಳ್ಳುವ (ಮಗುವೆನ್ನ ಬಹುದೆ ಇವನನ್ನ?) ಪರಿಗಳಲ್ಲಿ ದುಡಿಯುವ ಭಾಷೆ ಕೊನೆಯಲ್ಲಿ, ಬೆರಗುಗೊಳಿಸುವ ಹಕ್ಕಿ ಪ್ರತಿಮೆಯಲ್ಲಿ ಸೃಜನಶೀಲವೂ ಆಗಿ ಎಲ್ಲ ತುಡಿತಗಳಿಗೂ ನೆಮ್ಮದಿಯ ದಡ ಕಾಣಿಸುತ್ತದೆ. ಸಹೃದಯರನ್ನು ಸೆಳೆಯುವ ಕವಿ ಪ್ರತಿಭೆ ಭಾಷೆಯ ಈ ಪರಿ.

ನಿಸಾರ್ ಅಹಮದ್ ಅವರ ಕಾವ್ಯದ ವಿಸ್ತಾರ, ವ್ಯಾಪಕತೆಯನ್ನು ವಿಮರ್ಶಕರು ಈಗಾಗಲೇ ಗುರುತಿಸಿದ್ದಾರೆ. ದೇಶ ಕುಲಕರ್ಣಿಯವರು ಸರಿಯಾಗಿ ಗ್ರಹಿಸಿರುವಂತೆ ವಸ್ತುವಿನಲ್ಲಿ ವಿಸ್ತಾರ, ನಿರೂಪಣೆಯಲ್ಲಿ ವಿಸ್ತಾರ ನಿಸಾರರ ಕಾವ್ಯದ ಬಹು ಮುಖ್ಯ ಲಕ್ಷಣ. ಜೊತೆಗೆ ಲೋಕಾನುಭವ ವಿಸ್ತಾರವೂ ಸೇರಿ ಅವರ ಕಾವ್ಯಕ್ಕೊಂದು ಜರೂರು ಮತ್ತು ತೀವ್ರತೆ ಪ್ರಾಪ್ತವಾಗುತ್ತದೆ.

ನಿಸಾರ್ ಅಹಮದ್ ಅವರ ಕಾವ್ಯ ಭಾಷೆಯಲ್ಲಿ ವ್ಯಂಜನಾವೃತ್ತಿಯ ವಿಸ್ತಾರ, ಲಕ್ಷಣಗಳನ್ನೂ ಮೇಲುಗೈ ಆಗಿಯೇ ಕಾಣುತ್ತೇವೆ. ಇದಕ್ಕೆ ನಿದರ್ಶನವಾಗಿ ಅವರ ಜನಪ್ರಿಯ ಕವಿತೆ 'ಕುರಿಗಳು ಸಾರ್' ಸೇರಿದಂತೆ 'ಪರ್ಣಾಶ್ರಮ', 'ವಿಮರ್ಶಕ ಅಂದರಿಕಿ ಮಂಚಿವಾಡಯ್ಯ', 'ಸ್ವಯಂಸೇವೆಯ ಗಿಳಿಗಳು', 'ವೈಜಯಂತಿ'—ಹೀಗೆ ಹಲವಾರು

ಕವನಗಳನ್ನು ಹೆಸರಿಸಬಹುದು. ಅಂತೆಯೇ ನಿಸಾರರ ಚಿತ್ರಕ ಶಕ್ತಿ, ವರ್ಣನಾಸಾಮರ್ಥ್ಯಗಳಿಗೂ ಅವರ ಸಮಗ್ರ ಕಾವ್ಯದಲ್ಲಿ ಹೇರಳ ಉದಾಹರಣೆಗಳು ಸಿಗುತ್ತವೆ. ನಿಸಾರರ ಕಾವ್ಯ ವಿಸ್ತಾರದ ಇನ್ನೊಂದು ಮಗ್ಗುಲೆಂದರೆ ವ್ಯಕ್ತಿವಿಶಿಷ್ಟ ಛಾಪೊಂದರ ಮೂಲಕ ಮೂರ್ತವೂ ಅಮೂರ್ತವೂ ಆದ ಜೀವನ ದರ್ಶನವೊಂದನ್ನು ಹೊಳೆಯಿಸುವುದು. 'ಮಾಸ್ತಿ', 'ತೀನಂಶ್ರೀ', 'ರಾಮನ್ ಸತ್ತ ಸುದ್ದಿ', 'ಮೈಲಿ ಮೊಗದ ಮಹಾರಾಯ' ಇಂಥ ಕವನಗಳು. ಮಾಸ್ತಿ, 'ತೀನಂಶ್ರೀ' ಕವನಗಳಲ್ಲಿ ನಮ್ಮ ಸಂಸ್ಕೃತಿಯೇ ಮೈವೆತ್ತಿಬಂದಂಥ ಎತ್ತರ, ವಿಷಾದ-ಧನ್ಯತೆಗಳ ದನಿಯ ವಿಶೇಷವಿದ್ದರೆ 'ಮೈಲಿ ಮೊಗದ ಮಹಾರಾಯ' ಕವಿತೆಯಲ್ಲಿ ನೇಪಥ್ಯಕ್ಕೆ ಸಂದುಹೋಗುತ್ತಿರುವ ಜಾನಪದ ವಿವೇಕದ ಬೀಸನ್ನು ಗಮನಿಸಬಹುದು. 'ರಾಮನ್ ಸತ್ತ ಸುದ್ದಿ'ಯಲ್ಲಿನಂತೆ ಇಲ್ಲಿಯೂ ವಸ್ತು ಅಮೂರ್ತವೇ. ಯಾರೋ ಹನುಮ, ಯಾರೋ ಒಬ್ಬ ಮೈಲಿ ಮೊಗದವ. ಆದರೆ ವ್ಯಕ್ತಿರೂಪಿಯಲ್ಲದ ಜಾನಪದ ವಿವೇಕದ ಸಂಕೇತವಾಗಿ ನೆಟ್ಟು ನಿಲ್ಲುವ ಮೈಲಿ ಮೊಗದವನ ಚಿತ್ರ, ಕೊನೆಯಲ್ಲಿ ನಮಗೆ ದಕ್ಕುವ ಪರಿಸರದ ಚಿತ್ರಗಳಿಂದಾಗಿ ಈ ಕವನ ಮುಖ್ಯವಾಗುತ್ತದೆ.

'ರಾಮನ್ ಸತ್ತ ಸುದ್ದಿ'ಯ ಹನುಮನಂತೆ ಇಲ್ಲಿಯೂ ಕವಿಯ ಪ್ರಜ್ಞೆಗೆ ತಾಕುವವನು ಒಬ್ಬ ಹಳ್ಳಿಗ. ಅಲ್ಲಿ ಅವನಿಗೆ ಹೆಸರಾದರೂ ಇದೆ. ಇಲ್ಲಿ ಈ ಹಳ್ಳಿಗನಿಗೆ ಹೆಸರೂ ಇಲ್ಲ. ಮೈಲಿ ಮುಖದವನು, ಆಕರ್ಷಣೆ ಇಲ್ಲ; ಜೊತೆಗೆ ಹಳ್ಳಿಗ. ನಗರ ಪ್ರಜ್ಞೆಯ ಪ್ರಭಾವಳಿಯೂ ಇಲ್ಲ. ಇಲ್ಲಿಯೂ ಮುಖಾಮುಖಿ ಹಳ್ಳಿ ಮತ್ತು ನಗರ ಪ್ರಜ್ಞೆಯದು. ಮೈಲಿ ಮೊಗದವನು, ನಗರ ಪ್ರಜ್ಞೆ ಅಲಕ್ಷಿಸಲಾರದಷ್ಟು—

'ಅಸ್ತಿತ್ವದಾಳಕ್ಕೆ ಬಿಳಲು ಬಿಟ್ಟಾತ,
ಬಾಳ ನಡೂ ಮಧ್ಯ ಹಾರೆಯ ತೆರ ನೆಟ್ಟಾತ.'

(ಮೈಲಿ ಮೊಗದ ಮಹಾರಾಯ)

ಅವನಿಲ್ಲದ ಹಳ್ಳಿ ಈಗ—ಕವನದ ನಾಯಕನ ಪ್ರಜ್ಞೆಯ ಒಂದು ಭಾಗವಾದ ಅವನಿಲ್ಲವೀಗ—

'ನನ್ನ ಭಾವಾವೇಗದೊಂದು ಭಾಗ'

ಕವನದ ನಾಯಕನ ಮೇಲೆ ಇಂಥ ಗಾಢ ಪ್ರಭಾವ ಬೀರಿರುವ ಮೈಲಿ ಮೊಗದವನೇನೂ ದೇವ ಲೋಕದಿಂದ ಇಳಿದುಬಂದವನಲ್ಲ. ಅವನಿಗೂ ಮನುಷ್ಯ ಸಹಜ ದೌರ್ಬಲ್ಯಗಳಿವೆ. 'ಸೂಳೆ ಸೌಖ್ಯಕೆ ಸತಿಯ ತಾಳಿ ಅಡವಿಟ್ಟರೂ ಹಬ್ಬ ಹುಣ್ಣಿಮೆಗೆ ಗುಳೇದ ಗುಡ್ಡದ ಖಣವ ತಪ್ಪಿಸದ'—ಗೃಹಸ್ಥ. ಅಷ್ಟೇ ಅಲ್ಲ:

'ನೀತಿಗೂ ಅನೀತಿಗೂ ನಡುವೆ ಜಗವೆಳೆದಿರುವ
ಒತ್ತುಗೆರೆಯನ್ನಳಿಸಿ ನನಗೆ ಒಗಟಾಗುಳಿದ
ಮಣ್ಣನಪ್ಪಟ ತಳಿ'
....

(ಅದೇ)

ಮಣ್ಣಿನ ಈ ಅಪ್ಪಟ ತಳಿ, ನಗರ ಪ್ರಜ್ಞೆಯ ಸುಕುಮಾರ ಸಪ್ಪೆತನಕ್ಕೆ ಲವಣಾಂಶ ಕೂಡಿಸುವ ಕುಶಲಿಯಷ್ಟೇ ಅಲ್ಲ, 'ಪ್ರಜ್ಞೆ ಹಾಯಿಸುವ' ಜೀವಪುಷ್ಟಿಯೂ ಹೌದು. ಎಂದೇ: 'ಪರಮ ವೇದದ ಸಾರ.'

ಪರಮ ವೇದಗಳ ಸಾರ ಎಂದಾಗ ಜಾನಪದ ವಿವೇಕದ ಮೂಲಸ್ರೋತಕ್ಕೂ ಬೆಳಕು ಬೀಳುತ್ತದೆ. ನಗರಪ್ರಜ್ಞೆಯ ನಾಯಕ ಹಳ್ಳಿಗೆ ಹಿಂದಿರುಗಿದಾಗ ಕಾಣುವುದು, ಆಕಾಶಕ್ಕೆ ಮುಖ ಮಾಡಿದ ಅದೇ ಹಳ್ಳಿ. ಆದರೆ:

'ಇದ್ದಂತೆ ಇವೆ ಎಲ್ಲ!
ನೀನೊಬ್ಬನಿಲ್ಲ:
ಪಚ್ಚೆ ಉದುರಿದ ಉಂಗುರ
ಸುತ್ತ ಪರಿಸರವೆಲ್ಲ.'

(ಅದೇ)

ಹಳ್ಳಿ ಎಲ್ಲ ಹಾಗೇ ಇದೆ, ಹಿಂದೆ ಇದ್ದಂತೆ. ಆದರೆ ಆ ಪರಿಸರದಲ್ಲಿ ಜಾನಪದ ವಿವೇಕದ ಪ್ರಭೆ ಮಾತ್ರ ಇಲ್ಲ. ಮೂಲ ಸಂಸ್ಕೃತಿ ಮರೆಯಾಗುತ್ತಿರುವುದರ ಕವಿ ಕಾಣ್ಕೆ ಕೊನೆಯ ಸಾಲುಗಳಲ್ಲಿ 'ಪಚ್ಚೆ ಉದುರಿದ ಉಂಗುರವಾಗಿ' ಢಾಳವಾಗುತ್ತದೆ. ಪಚ್ಚೆ ಇಲ್ಲಿ ಹೊಳೆಯುವ ಮಣಿರತ್ನವಷ್ಟೇ ಅಲ್ಲ, ಜೀವಂತ ಹಸಿರೂ ಹೌದು ಎಂಬುದನ್ನು ತಿಳಿದಾಗ ಕಾವ್ಯ ಭಾಷೆಯ ಉಕ್ತಿ ವೈಶಿಷ್ಟ್ಯ ಎದ್ದು ಕಾಣುತ್ತದೆ.

ಉಪಮೆ, ರೂಪಕಗಳು ನಿಸಾರ್ ಅಹಮದ್ ಅವರ ಕಾವ್ಯದಲ್ಲಿ ಯಥೇಚ್ಛವಾಗಿ ಕಾಣಬರುತ್ತವೆ. ಅವು ಅವರ ಕಾವ್ಯಪ್ರತಿಭಾಶಕ್ತಿಯ ದ್ಯೋತಕವೂ ಹೌದು. 'ಗಾಂಧಿ ಬಜಾರಿನ ಸಂಜೆ,' 'ಸಂಜೆ ಐದರ ಮಳೆ', 'ಸಂಕೇತ', 'ನಿತ್ಯೋತ್ಸವ'—ಇಂಥ ವಿಭಿನ್ನ ಕವನಗಳಿರಲಿ, ವ್ಯಂಗ್ಯ-ವಿಡಂಬನಾತ್ಮಕ ಕವನಗಳಿಗೂ ಈ ಮಾತು ಅನ್ವಯಿಸುತ್ತದೆ. 'ಕುರಿಗಳು ಸಾರ್ ಕುರಿಗಳು' ಕವನದ ಕುರಿಮಂದೆಯ ರೂಪಕ ಪ್ರಜಾಸತ್ತೆಯ ಮಾರ್ಮಿಕ ವಿಡಂಬನೆ. 'ವಿಮರ್ಶಕ ಅಂದರಿಕಿ ಮಂಚಿವಾಡಯ್ಯ', 'ಸ್ವಯಂಸೇವೆಯ ಗಿಳಿಗಳು', 'ಪರ್ಣಾಶ್ರಮ', 'ವೈಜಯಂತಿ', 'ನವೋದಯ'—ಮೊದಲಾದ ಕವನಗಳಲ್ಲಿ ವ್ಯಂಗ್ಯ, ವಿಡಂಬನೆಗಳ ಘಾಟು ವಾಚ್ಯವಾಗಿಯೇ ಉಸಿರು ಕಟ್ಟಿಸುವಂತಿದೆ. ನೋಡಿ:

'ಎಡ ದಿಕ್ಕಿಗೆ, ಬಲ ದಿಕ್ಕಿಗೆ, ಒಮ್ಮೆ ದಿಕ್ಕುಪಾಲಾಗಿ,
ಒಮ್ಮೆ ಅದೂ ಕಳೆದು ಕೊಂಡು, ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತಿರುವ,
ಬರೀ ಕಿರುಚಿ ರೇಗುತಿರುವ,
ನೊಣ ಕೂತರೆ ಬಾಗುತಿರುವ
ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ
....
....
....

'ಮಂದೆಯಲ್ಲಿ ಎಲ್ಲವೊಂದೆ ಆದಾಗಲೇ ಸ್ವರ್ಗ ಮುಂದೆ:
ಅದಕಿಲ್ಲವೆ ನಾವುತ್ತರ?
....
....
....
'ನಮ್ಮ ಕಾಯ್ವ ಕುರುಬರು:
ಪುಟಗೋಸಿಯ ಮೊನ್ನೆತಾನೆ ಕಿತ್ತು ಪಂಚೆಯುಟ್ಟವರು.
ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟನು ಒತ್ತುವವರು.
ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬನನ್ನು
ಮೆಚ್ಚಿ, ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
'ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ
ಕಿಸೆಗೆ ಹಸಿರು ನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು.
....
'ಅವರು ಇವರು ನಾವುಗಳು
ಕುರಿಗಳು ಸಾರ್ ಕುರಿಗಳು
ಕುರಿಗಳು ಸಾರ್ ಕುರಿಗಳು...'

(ಕುರಿಗಳು ಸಾರ್ ಕುರಿಗಳು)

'ನನ್ನಂಥ ಬಡಪಾಯಿಗಳ ಭವಿಷ್ಯ ನಿರ್ಣಾಯಕರು
ಇಲ್ಲಿಗವತರಿಸುತ್ತಾರೆಂದರೆ ರೆವರೆಂಡ್ ಶಿಷ್ಟಾಚಾರಯ್ಯ—
ಮೊನ್ನೆ ತೀರ್ಥಪುರದಲ್ಲಿ ಹೇವರ್ಡ್ಸ್ ತೀರ್ಥದ ಪವಿತ್ರ
ಸಾನ್ನಿಧ್ಯದಲ್ಲಿ ಎಸ್ಟೇಟ್ ಒಡೆಯರಿಗೂ, ಮ್ಲೇಚ್ಛ ಮಾರ್ಕ್ಸ್‌ನಿಗು
ರಾಜಿ ಮಾಡಿಸಿ; ನೆನ್ನೆಯಷ್ಟೇ ಪಾಣಿಪಂಚೆಯಲ್ಲಿ
ಪಿತೃಪಕ್ಷ ಮುಗಿಸಿ, ಇಲ್ಲಿಗೆ ಬಿಜಯಂಗೈಯ್ಯುತ್ತಾರೆಂದರೆ—
ಇಡೀ ಊರಿಗೆ ಸೆಕ್ಯುಲರ್, ತಾತ್ವಿಕ ಠೀವಿ ಜಡಿದರೇನಾಶ್ಚರ್ಯ?'

(ವಿಮರ್ಶಕ ಅಂದರಿಕಿ ಮಂಚಿವಾಡಯ್ಯ)

'ಯಕ್ಷಗಾನದ ಹೊಚ್ಚಹೊಸತಾದ ಪೋಷಾಕು ನಿನ್ನ ಕಾವ್ಯಕೆ ಧರಿಸಿ
ಮೆರವಣಿಗೆ ಹೊರಟಾಗ
ಬಿಡಿಸಲಿಲ್ಲವೆ ಭೂತ ಗೊಡ್ಡು ಪಂಡಿತರೆಲ್ಲ ಸೊಕ್ಕಿನಲಿ ನಕ್ಕು?
ಇಂಗ್ಲೀಷಿನಭ್ಯಾಸ ಹೇಗೆ ಸಾಗಿತು ಅಜ್ಜ?
ಎಬಿಸಿಡಿಯ ದಾಟಿ ವೈಜಡ್ಡಿಗೇರಿತೆ?
ಇಲ್ಲ ಬಿಸಿಯುತ್ಸಾಹ ದಾರಿಯಲೆ ಆರಿತೆ?
....
....
'ಕಿಟಲ್ ಡಿಕ್ಷನರಿಯ ಹೊಡೆಯದಿದ್ದರೂ ಕೊಳ್ಳೆ
ನಿನ್ನಂತೆ ಹೊಡೆದಿದ್ದೇವೆ ಹಳಗನ್ನಡದ ಗಂಟುಗಂಟಾದ ಶಬ್ದಗಳ ಸೊಳ್ಳೆ.'

(ನವೋದಯ)

'ಕಾಲ್ಗೆಟಿಸಿದ ನಗೆಯಿಂದ
ಆತ್ಮೀಯರಾಗುತ್ತಾರೆ—
ಸ್ವಯಂಸೇವೆಯ ಸಂವೇದಕ ಗಿಳಿಗಳು
....
'ಪರ ಬೀಜ ಕನಸಿ, ಸಸಿ ನಿಗುರದ ಹತಾಶ ನೆಲಗಳಿವು;
ಫರಂಗಿ ಅಕ್ಷರಾಭ್ಯಾಸಮಾಡಿ ನಾರಂಗಿ ಪಡೆಯಬಯಸುವ
ನಿಷ್ಫಲ ಛಲಗಳಿವು.

(ಸ್ವಯಂಸೇವೆಯ ಗಿಳಿಗಳು)

'ಪ್ರತಿಬಿಂಬಹೀನ, ಫರ್ಮೆಂಟಿಸಿದ ತೀರ್ಥದ
ಮನೋಜ್ಞ ಪುಷ್ಕರಿಣಿ ಹಿಂಬದಿಯ ತಗ್ಗಿನಲ್ಲಿ.
ಇತ್ತ ಸೀಮೆಂಟಿನಗ್ನಿಕುಂಡದಲ್ಲಿ ಪೆಟ್ರೋಲು ಪ್ರಚೋದಿತ,
ಡಾಲ್ಡಾರ್ಪಿತ ಹಸಿಹಸೀ ಎಲುಬಿನ ಬಣ್ಣಾದುರಿಯ ಸುತ್ತ
ಅಖಾದ್ಯಭಕ್ಷಣತೃಪ್ತ ಅಜಪರು; ಚಳಿ ಕಾಯಿಸುವ ವಿಜಾತರು;
ತುಂಡು ಬೀಡಿ ಹೊತ್ತಿಸಿಕೊಳ್ಳುವ ಪರಪೋಷಿಗಳು; ಕೂರೆ ಹೆಕ್ಕುವ
ನಿರಾಶ್ರಿತರು.'

(ಪರ್ಣಾಶ್ರಮ)

'ನಿಜ, ಮೂವತ್ತೆಕರೆ ತೆಂಗು,
ನಾಲ್ಕೈದು ಬಂಗ್ಲೆ, ಬ್ಯಾಂಕು ಬ್ಯಾಲೆನ್ಸು—
ಬೇಡವೆಂದರೂ ಸಮಾಜವಾದಿಯಾಗಿಸುತ್ತೆ;
ಬಡತನದ ಬಗ್ಗೆ ಮಹಾಕಾವ್ಯ ಹಾಡಿಸುತ್ತೆ.'

(ವೈಜಯಂತಿ)

ವ್ಯಕ್ತಿಗಳು ಮತ್ತು ವ್ಯವಸ್ಥೆಯಲ್ಲಿನ ಸ್ವಾರ್ಥ, ಸೋಗಲಾಡಿತನ, ಅಪ್ರಮಾಣಿಕತೆಗಳನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ ಇತ್ಯಾದಿ ಹಿನ್ನೆಲೆಗಳಲ್ಲಿ ಬಯಲುಗೊಳಿಸುವ ರೀತಿ ಮಾತಾಳಿತನದ್ದಾಗಿದ್ದರೂ ನೇರ, ಸುಸಂಬದ್ಧ—ಗುರಿ, ಅರ್ಥ ಎರಡರಲ್ಲೂ. `ತಾಟಸ್ಥ್ಯದಿ ದಿಕ್ಕೆಟ್ಟು', `ಬಿರಿಯಾನಿಯ ಮೆಹರುಬಾನಿ', `ಹೇವರ್ಡ್ಸ್ ತೀರ್ಥದ ಪವಿತ್ರ ಸಾನ್ನಿಧ್ಯ', `ಕಾಲ್ಗೆಟಿಸಿದ ನಗೆ', `ಯಕ್ಷಗಾನದ ಹೊಸ ಪೋಷಾಕು ನಿನ್ನ ಕಾವ್ಯಕೆ ಧರಿಸಿ', `ಅಖಾದ್ಯಭಕ್ಷಣತೃಪ್ತ ಅಜಪರು'—ಈ ಪ್ರಯೋಗಗಳು ಕೇವಲ ವ್ಯಂಗ್ಯ ವಿಡಂಬನೆಗಳ ಮಾತಿನ ಜಾಲವಷ್ಟೇ ಅಲ್ಲ, ಹಣೆಪಟ್ಟಿಗಳೂ ಆಗುತ್ತವೆ.

೨

ನಿಸಾರ್ ಅಹಮದ್ ಅವರ ಕಾವ್ಯ ಭಾಷೆ ವಕ್ರೋಕ್ತಿ ಮೀಮಾಂಸೆಗೆ ಹತ್ತಿರವಾದದ್ದು ಹಾಗೂ ಅವರ ಕಾವ್ಯದಲ್ಲಿ ಪು.ತಿ.ನ. ಅವರ `ಸದೂರ' ಪರಿಕಲ್ಪನೆಯ ಲಕ್ಷಣವನ್ನು ಕಾಣಬಹುದು ಎಂದು ಶುರುವಿಗೇ ಹೇಳಿರುವುದು ಸರಿಯಷ್ಟೆ? ಈ ಬಗ್ಗೆ ಕೊನೆಯೆರಡು ಮಾತುಗಳನ್ನು ಹೇಳುವ ಮೊದಲು ನಿಸಾರ್ ಅಹಮದ್ ಅವರ ಕಾವ್ಯದಲ್ಲಿ ಮುಸ್ಲಿಂ ಸಂವೇದನೆ ಇಲ್ಲ ಎಂದು ಹೊಸ ಪೀಳಿಗೆಯವರು ಅಪಸ್ವರ ಎತ್ತಿರುವುದನ್ನು ಗಮನಿಸುವುದು

ಅಗತ್ಯ. ಮುಸ್ಲಿಂ ಸಂವೇದನೆ ಎನ್ನುವುದು ಬಂಡಾಯ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಹುಟ್ಟಿಕೊಂಡ ಪರಿಭಾಷೆ. ನಮಗೆಲ್ಲ ತಿಳಿದಿರುವಂತೆ ನಿಸಾರ್ ಅಹಮದ್ ಬೆಣ್ಣೆಗಳ್ಳ ಕೃಷ್ಣನನ್ನು ಕುರಿತು ಹಾಡಿರುವಂತೆ ಶ್ರೀ ರಾಮಕೃಷ್ಣ ಪರಮಹಂಸರು, ಶ್ರೀ ಶಾರದಾ ದೇವಿಯವರ ಬಗ್ಗೆಯೂ ಬರೆದಿದ್ದಾರೆ. ದೇಶ ಕುಲಕರ್ಣಿಯವರು ಹೇಳುವಂತೆ, 'ಹಾಗೆಂದು ಭಿನ್ನವಾದ ಧರ್ಮಕ್ಕೆ ಸೇರಿರುವ ಇವರಲ್ಲಿ ಈ ಇಬ್ಬಂದಿಯ ತೊಳಲಾಟ ಇಲ್ಲದಿಲ್ಲ' (ಅಂತರ, ಪುಟ: 44). ನಿಸಾರರ ಸಂವೇದನೆಯದು ಎರಡು ಸಂಸ್ಕೃತಿಗಳ ಹಾಯಿ ದೋಣಿಯಲ್ಲಿ ಸಾಗುವ ಪಯಣ, ಎರಡು ದಂಡೆಗಳನ್ನೂ ತಾಕಿಸಿಕೊಂಡು ಹೋಗುವ ಪಯಣ. ಇಂಥ ಸಂವೇದನೆ ಅವರಿಗೆ ಇಬ್ಬಂದಿತನ ಮತ್ತು ದೂರ ಉಳಿಯುವಿಕೆ (Alienation)—ಎರಡನ್ನೂ ತಂದುಕೊಟ್ಟಿದೆ. ಇದರ ಫಲವೇ, ನಾನೆಂಬ ಪರಕೀಯತ್ವ ಅಥವಾ ನಿಮ್ಮೊಡನಿದ್ದೂ ನಿಮ್ಮಂತಾಗದೆ 'ನಾನು ನಾನೇ ಆಗಿ' ಉಳಿಯುವ ಛಲ.

'ಬರೆಯುವುದೇಕೆಂದರೆ ಒಂಟಿಯಾಗದಿರುವುದಕ್ಕೆ;
....
ಬರೆಯುವುದೇಕೆಂದರೆ : ಹತ್ತರಲ್ಲೊಂದಾಗದಿರುವುದಕ್ಕೆ'
(ವಿವರಣೆ)

'ನನ್ನ ಲೋಕೋದಾರದನ್ಯತೆಯು ಕಾಫರತನಕ್ಕಿದೆ
ಕುಸಿದು ಅತ್ತರೀಗ
ಸಂತೈಸದು ವಿಗ್ರಹ, ಬಾ ಎನ್ನದು ಕಾಬಾ.
ಸತ್ತರಗ್ನಿ ಸಂಸ್ಕಾರವಿತ್ತ; ಗುಣಿ ಮಣ್ಣ ಭಾರವತ್ತ;
ವಾಮಕ್ಕೆ ಸಂಸ್ಕೃತ, ಬಲಕ್ಕರಬ್ಬೀ.'

ಈ ದ್ವಂದ್ವ ಇಬ್ಬಂದಿತನಗಳಲ್ಲೂ ವಿವೇಕ ತಪ್ಪುವುದಿಲ್ಲ—

'ವಿರುದ್ಧಗಳನೊಪ್ಪುವೆ; ಆದರೆ—ಕೂಡಿಸದೆ;
ಭಿನ್ನತೆಯನರಿಯುವೆ, ಆದರೆ—ತಿಕ್ಕಾಡಿಸದೆ'
(ಇಬ್ಬಂದಿ)

ಇಂಥ ಪ್ರಾಮಾಣಿಕವಾದ, ಆರೋಗ್ಯಕರವಾದ ನಿಲವಿನಲ್ಲೂ ಕವಿ ದೂರ alienate ಆಗಿಯೇ ಉಳಿಯುತ್ತಾರೆ. ಈ ಮನೋಧರ್ಮ ಅವರ ಕಾವ್ಯಧರ್ಮವೂ ಆಗಿ ಅವರ ಕಾವ್ಯಕ್ಕೊಂದು ಅನನ್ಯತೆಯ ಆಯಾಮವನ್ನು ತಂದುಕೊಟ್ಟಿದೆ. ಬದುಕನ್ನು 'ಸದೂರ'ದಿಂದ ವೀಕ್ಷಿಸಿ ಕಾಣ್ಕೆಯನ್ನು ಪಡೆಯುವುದೇ ನಿಸಾರರ ಕಾವ್ಯದ ಅನನ್ಯತೆ. ಈ ಸದೂರತೆಯಿಂದಾಗಿಯೇ ನಿಸಾರರ ಕಾವ್ಯಭಾಷೆ ಭಾವೋದ್ಗಾರಗಳ ಅಪಾಯದಿಂದ ಪಾರಾಗಿದೆ.

ನಿಸಾರ್ ಅಹಮದ್ ಅವರ ಕಾವ್ಯ ರಚನೆಯ ವಿನ್ಯಾಸ ಕ್ರಮದಲ್ಲೇ ಇದನ್ನು (ಸದೂರತೆ-Alienation) ಗುರುತಿಸಬಹುದು. ನಿಸಾರರ ಕವನಗಳನ್ನು ಓದುವಾಗ ಇದು ಕವಿವಾಣಿ ಎಂಬ ಗ್ರಹಿಕೆ ನಮಗೆ ಶುರುವಿಗೇ ಎದುರಾಗುವುದಿಲ್ಲ. ಇವರ ಕವನಗಳ ಪಂಕ್ತಿಗಳು, ಬಹುತೇಕ ಆಪ್ತ ಧಾಟಿಯ ಸಂಭಾಷಣೆಯಂತೆ ಎದುರಾಗುತ್ತವೆ. ಕವನದ ನಾಯಕನೋ, ನಿರೂಪಕನೋ—ಹೀಗೊಬ್ಬನ ಜೊತೆ 'ಬದುಕೇ ಬಾಯ್ದೆರೆದು ಮಾತಾಡು

ತ್ತಿರುವಂತೆ, ಪಾತ್ರಗಳು ಸಂಭಾಷಣೆಯಲ್ಲಿ ತೊಡಗಿರುವಂತೆ ಭಾಸವಾಗುತ್ತದೆ. ಕವನಗಳ ಮಧ್ಯೆ ಉಲ್ಲೇಖಿತ ಉಕ್ತಿಗಳೂ ಧಾರಾಳವಾಗಿ ಕಂಡು ಬರುತ್ತದೆ. ಕವಿ, ಲೋಕಾನುಭವಗಳನ್ನು, ಬದುಕಿನ ರೀತಿ-ನೀತಿಗಳನ್ನು ಸಂಭಾಷಣೆ ಧಾಟಿಯ ಮಾತುಗಳಲ್ಲಿ, ಸಂಭಾಷಣೆಗಳಲ್ಲಿ, ಚಿತ್ರಗಳಲ್ಲಿ ಕಟ್ಟಿಕೊಡುವ ಕ್ರಮದಲ್ಲಿ ಬದುಕಿನ ಪುನರ್‌ಸೃಷ್ಟಿಯನ್ನು ನಾವು ಕಾಣುತ್ತೇವೆ. ಇಲ್ಲಿಯವರೆಗೆ ನೇಪಥ್ಯದಲ್ಲಿ ನೋಡುತ್ತಾ ನಿಂತ ಕವಿ ಕೊನೆಯಲ್ಲಿ ಥಟ್ಟನೆ ತನ್ನ ಕಾಣ್ಕೆಗಳ ಧ್ವನಿಯಾಗಿ ಕಾಣಿಸಿಕೊಳ್ಳುತ್ತಾನೆ.

'ಮಾಸ್ತಿ', 'ರಾಮನ್ ಸತ್ತ ಸುದ್ದಿ', 'ತೀನಂಶ್ರೀ', 'ನವೋದಯ', 'ಮೈಲಿ ಮೊಗದ ಮಹಾರಾಯ', 'ಅಮ್ಮ ಆಚಾರ ನಾನು', 'ರಂಗೋಲಿ ಮತ್ತು ಮಗ', 'ಖಾಲಿ ಸೈಟುಗಳು'—ಮೊದಲಾದ ನಿಸಾರ್ ಅಹಮದ್ ಅವರ ಪ್ರಾತಿನಿಧಿಕ ಕವನಗಳ ಮುಕ್ತಾಯದ ಸಾಲುಗಳನ್ನು ಗಮನಿಸಿದಾಗ ಮೇಲಿನ ಮಾತುಗಳು ನಮಗೆ ಅನುಭವ ಗೋಚರವಾಗುತ್ತವೆ. ಈ ಕವನಗಳ ಮುಕ್ತಾಯದ ಮಾತುಗಳು ಕವಿಯೊಬ್ಬನ ತೀರ್ಮಾನವೆನ್ನಿಸದೆ ಅನುಭವ ಜನ್ಯ ಕಾಣ್ಕೆಗಳಂತೆ ತೋರುತ್ತವೆ. ಭಾಷಾ ವೈಶಿಷ್ಟ್ಯವೂ ಅರ್ಥಪೂರ್ಣವಾಗಿ ನಮ್ಮನ್ನು ತಾಕುತ್ತದೆ.

'ಮರೆಯಾಗುವವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ,
ಸರಳ ಸದಭಿರುಚಿಯ ಖ್ಯಾತಿಯಂತೆ.'

(ಮಾಸ್ತಿ)

* * *

'ಋಣ ಹೊತ್ತು ನಿಂತಾಗ, ಋಣ
ತೀರಿತೆನಲಾರೆ.
ಇರದಿದ್ದರೂ, ನನಗೆ ಇರುಳಲ್ಲಿ ಪ್ರತ್ಯಕ್ಷ
ನಿರ್ಭಯದ ಧ್ರುವ ತಾರೆ.'

(ತೀನಂಶ್ರೀ)

* * *

'ಕೊನೆಯ ವಾಕ್ಕು:
ಕಪ್ಪೆಗೆ ಹೊಂಡವೇ ಬ್ರಹ್ಮಾಂಡ:
ಅರಬ್ಬೀ ಸಮುದ್ರ ಬಯಸುವುದು ತಿಮಿಂಗಿಲ, ಷಾರ್ಕು.
ಹೆಂಬೇಡಿಯಲ್ಲ, ಬಹದ್ದೂರ್ ಗಂಡ:
ಅಮರತೆ ನಿನ್ನ ಟ್ರೇಡ್‌ಮಾರ್ಕು.'

(ನವೋದಯ)

* * *

'ಇದ್ದಂತೆ ಇವೆ ಎಲ್ಲ!
ನೀನೊಬ್ಬನಿಲ್ಲ:

ಪಚ್ಚೆ ಉದುರಿದ ಉಂಗುರ
ಸುತ್ತ ಪರಿಸರವೆಲ್ಲ.'

(ಮೈಲಿ ಮೊಗದ ಮಹಾರಾಯ)

'ನಮ್ಮಂತರಾಳಗಳ ಲೇಔಟುಗಳಲ್ಲು ಇವೆ
ಖಾಲಿ ಸೈಟುಗಳು;
ಅಲ್ಲಿ ಅಕ್ರಮವಾಗಿ ತಳವೂರಿವೆ:
ಅಟ್ಟಲಾಗದ ಕಠೋರ ನೆನಹುಗಳು
ಗಿಜಿಗುಡುವ ಬಡ ಕುಟೀರಗಳು,
ಹಳೆ ಹತಾಶೆಗಳ ಗಟಾರದಂಚಿನ ನಾರುವ ವಠಾರಗಳು.
ವಿಷಾದದ ಆಗುಹೋಗುಗಳು;
ಮಾ ನಿಷಾದದ ವ್ಯರ್ಥ ಕೂಗುಗಳು.'

(ಖಾಲಿ ಸೈಟುಗಳು)

ಜಾರುತ್ತಿರುವ ಸಾಂಸ್ಕೃತಿಕ ಪರಂಪರೆ, ಅಪಮೌಲ್ಯಗೊಳ್ಳುತ್ತಿರುವ ಮೌಲ್ಯಗಳು, ಪರಂಪರೆಯ ಬಗ್ಗೆ ಅನಾದರ, ಖಾಲಿಯಾಗುತ್ತಿರುವ ಮಾನವೀಯತೆ—ಕವಿ ಕಾಣಿಸುವ ಜೀವನ ದರ್ಶನವಿದು. ಇದು ನಿಸಾರ್ ಅಹಮದ್ ಅವರ 'ಸದೂರ' ಕಾವ್ಯ ಮನೋಧರ್ಮದ ಫಲ ನಿದರ್ಶನಗಳಷ್ಟೆ. ಈ ನಿಟ್ಟಿನಲ್ಲಿ ಅವರ ಸಮಗ್ರ ಕಾವ್ಯ ವಿಮರ್ಶೆ ಆಗಬೇಕಿದೆ.

ಮಹತ್ವಪೂರ್ಣ ಲೇಖಕರು ನಮ್ಮೊಂದಿಗೆ ಇಲ್ಲದ್ದರಿಂದ ಅವರ ಪ್ರಭಾವವೂ ಮಸುಳಿಸಿ ಬಿಡಬೇಕೆಂಬ ನಿಯಮವೇನೂ ಇಲ್ಲ. ಹಳಬರು ಎನ್ನುವ ಒಂದೇ ಕಾರಣಕ್ಕೆ ಆ ಗಟ್ಟಿ ಕುಳಗಳನ್ನು ಆದರಿಸಿ ಆಧರಿಸದೆ ಪ್ರಸಕ್ತ ಪ್ರಸಿದ್ಧಿಯ ಮರಳುದಿಬ್ಬಗಳನ್ನು ತಕ್ಕೈಸುವುದರಿಂದ ಯಾವ ಪುರುಷಾರ್ಥವೂ ಸಾಧಿತವಾಗದು. out of sight, out of mind ಎನ್ನುವ ನಾಣ್ನುಡಿ ಲೌಕಿಕ ಸಾಧಾರಣರಿಗೆ ಅನ್ವಯಿಸಬಹುದೇ ವಿನಾ ನಡೆ ನುಡಿ ಕೃತಿಗಳ ಉದ್ದಾಮತೆಯ ಮಹಿಮಾವಂತರಿಗಲ್ಲ. ಅಂಥವರು ಸರ್ವಕಾಲ ಪರಿಪುಷ್ಟರು. ಅವರು ಜೀವಿಸಿರಲಿ, ಕಣ್ಮರೆಗೆ ಸಂದಿರಲಿ ಅವರ ಉಪಕಾರ ಒಂದೇ ತೀಕ್ಷ್ಣತೆಯದು. ಅವರು ದ್ರಾಕ್ಷಿ, ಅಂಜೂರಗಳಂತೆ: ಹಸಿಯಾಗಿದ್ದಾಗ ಹೇಗೋ ಹಾಗೆಯೇ ಒಣಗಿದ ಸ್ಥಿತಿಯಲ್ಲೂ ಆಸ್ವಾದ್ಯವೇ, ಪುಷ್ಟಿದಾಯಕವೇ.

(ಹಳಬರ ಪ್ರಸ್ತುತತೆ)



ಎರಡು ಸಂಸ್ಕೃತಿಗಳ ನಡುವಣ ಬಿಕ್ಕಟ್ಟನ್ನು ಸೂಚಿಸುವ ನಿಸಾರರ ಕವಿತೆಗಳು

♦ *ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ*

ಲೇಖನ ಬರೆಯುವಂತೆ ಸೂಚಿಸಿದವರು ಕೊಟ್ಟ ಶೀರ್ಷಿಕೆಯನ್ನೆ ಇಟ್ಟುಕೊಂಡು ಬರೆಯಲು ತೊಡಗಿದ್ದಾಗಿದೆ. ಏಕೆಂದರೆ, 'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದ ಬಯಸುವವರು...' ಎನ್ನುತ್ತಾರಲ್ಲ, ಹಾಗಾಗಬಾರದು ಎಂದು. ಈ ಮಾತುಗಳನ್ನು ಹೇಳಲು ಕಾರಣವಿಷ್ಟೆ: 'ಎರಡು ಸಂಸ್ಕೃತಿಗಳು' ಎಂಬ ಮಾತಿನ ಪ್ರಯೋಗದ ಬಗ್ಗೆ ನನಗೆ ಕೆಲವು ಅನುಮಾನಗಳಿವೆ. 'ಭಾರತೀಯ ಸಂಸ್ಕೃತಿ' ಒಂದೇ ಎನ್ನುವುದಾದರೆ ಆಗ ಎರಡು ಸಂಸ್ಕೃತಿಗಳು, ಅವುಗಳ ನಡುವೆ ಬಿಕ್ಕಟ್ಟು ಎಲ್ಲಿಂದ ಬಂತು? ಅಥವಾ ಭಾರತವು ಬಹು ಸಂಸ್ಕೃತಿಗಳ ನಾಡು ಎನ್ನುವುದಾದರೆ, ಆಗ ಯಾವ ಎರಡು ಸಂಸ್ಕೃತಿಗಳನ್ನು ಕುರಿತು ಇಲ್ಲಿ ನಾವು ಮಾತಾಡುತ್ತಿದ್ದೇವೆ?—ಇಂಥ ಪ್ರಶ್ನೆಗಳು ತಲೆ ಎತ್ತುವುದು ಸಹಜ.

'ಸಂಸ್ಕೃತಿ' ಪದದ ಬಳಕೆ ಈಚಿನದಾದರೂ ಆ ಪರಿಕಲ್ಪನೆಯನ್ನು ಕುರಿತ ಚರ್ಚೆ ವಿಪುಲವಾಗಿಯೆ ನಡೆದಿದೆ; ಇನ್ನೂ ನಡೆಯುತ್ತಿದೆ. 'ಸಂಸ್ಕಾರ' ಎಂಬುದರ ಮೂಲಕ ಸಂಸ್ಕೃತಿಗೆ ವ್ಯುತ್ಪತ್ತಿ ಹೇಳಿ, 'ಸಂಸ್ಕೃತಿಯು ವ್ಯಕ್ತಿಗತ ಮೌಲ್ಯ ಪ್ರಜ್ಞೆ'—ಎಂದು ವಿವರಿಸುವುದು ಒಂದು ಬಗೆ. ದಿನನಿತ್ಯದ ಸಂಭಾಷಣೆಯಲ್ಲಿ 'ಸುಸಂಸ್ಕೃತ', 'ಅಪರಿಷ್ಕೃತ' (ಅಥವಾ ಕುಸಂಸ್ಕೃತ) ಎಂದು ಬಳಸುವುದುಂಟು. ಸಂಸ್ಕೃತಿಯು ವ್ಯಕ್ತಿಗತ ಎಂದು ವಾದಿಸುವವರು ವ್ಯಕ್ತಿಯು ಸುಪರಿಷ್ಕೃತನಾಗಬೇಕಾದರೆ

ಅವನು ಯಾವ ಮಾರ್ಗಗಳನ್ನು ಅನುಸರಿಸಬೇಕು; ಸುಸಂಸ್ಕೃತನ ಲಕ್ಷಣಗಳೇನು ಎಂಬುದನ್ನು ವಿವರಿಸುತ್ತಾರೆ. ಸಭ್ಯತೆ, ನಾಗರಿಕತೆ ಎಂಬರ್ಥದಲ್ಲಿ ಸಂಸ್ಕೃತಿಯನ್ನು ಬಳಸುವುದೂ ಉಂಟು. ರವೀಂದ್ರನಾಥ ಠಾಕೂರರು Civilization ಎಂಬುದನ್ನು ಸಂಸ್ಕೃತಿ ಎಂಬ ಅರ್ಥದಲ್ಲಿ ಬಳಸಿದ್ದಾರೆ.

ಇನ್ನು, ಶಾಸ್ತ್ರೀಯ ದೃಷ್ಟಿಯಿಂದ ಮಾನವ ಕುಲಗಳ ಅಧ್ಯಯನದಲ್ಲಿ ತೊಡಗಿದ ಸಂಸ್ಕೃತಿ ಶಾಸ್ತ್ರಜ್ಞರು (Cultural Anthropologists) ಆದಿ ಮಾನವರ ಕಾಲದಿಂದ ಸಂಸ್ಕೃತಿಗಳು ಬೆಳೆದು ಬಂದ ಬಗೆಯನ್ನು ವಿವರಿಸುತ್ತಾರೆ. ಜಗತ್ತಿನ ಒಂದೊಂದು ಭಾಗದಲ್ಲಿ ನೆಲೆ ನಿಂತ ಗುಂಪಿನ ಜನರ ಜೀವನ ವಿಧಾನವೇ ಅವರ ಸಂಸ್ಕೃತಿಯಾಯಿತು ಎಂಬುದು ಇವರ ನಿಲವು. ಇದರ ಪ್ರಕಾರ ಸಂಸ್ಕೃತಿಯು ಆಯಾ ಜನರ ಗುಂಪಿನ ಸಾಮಾಜಿಕ ವ್ಯವಸ್ಥೆ, ಆಹಾರ ವಿಹಾರ, ಉಡಿಗೆತೊಡಿಗೆಗಳು, ಕಲೆಗಾರಿಕೆ, ಭಾಷೆ, ವ್ಯವಹಾರ ಮತ್ತು 'ಮತಧಾರ್ಮಿಕ ಆಚರಣೆ'ಗಳಲ್ಲಿ ವ್ಯಕ್ತವಾಗುತ್ತದೆ. ಆಯಾ ಗುಂಪಿನಲ್ಲಿ ಸೃಜನಶೀಲರಾದ, ವಿಚಾರವಂತರಾದ ವ್ಯಕ್ತಿಗಳು ತಮ್ಮ ಚಟುವಟಿಕೆಗಳ ಮೂಲಕ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾಗುತ್ತಾರೆ. ವ್ಯಕ್ತಿಗಳು ಸಂಸ್ಕೃತಿಯನ್ನು ತಮ್ಮ ಮುಂದು ಮುಂದಿನ ಜನಾಂಗಕ್ಕೆ ದಾಟಿಸುತ್ತ ಹೋದಂತೆ ಸಂಸ್ಕೃತಿಯ ವಿಕಾಸವಾಗುತ್ತದೆ. ಈ ದೃಷ್ಟಿಯಿಂದ ಶಾಸ್ತ್ರಜ್ಞರು ಗ್ರೀಕ್ ಸಂಸ್ಕೃತಿ, ಈಜಿಪ್ಟ್ ಸಂಸ್ಕೃತಿ, ಆರ್ಯ ಸಂಸ್ಕೃತಿ, ದ್ರಾವಿಡ ಸಂಸ್ಕೃತಿ— ಮೊದಲಾದವುಗಳನ್ನು ಗುರುತಿಸಿ ಅಧ್ಯಯನ ಮಾಡಿದ್ದಾರೆ. ಅಲ್ಲದೆ, ಕೆಲವು ಸಂಸ್ಕೃತಿಗಳನ್ನು ಒಂದೊಂದು ಗುಂಪಾಗಿ ಇಟ್ಟುಕೊಂಡು ಪ್ರಾಚ್ಯ ಸಂಸ್ಕೃತಿ, ಪಾಶ್ಚಾತ್ಯ ಸಂಸ್ಕೃತಿ ಎಂದು ಹೇಳುವುದೂ ಉಂಟು. ಇವುಗಳ ಜೊತೆಗೆ ಯಾವುದೇ ಸಂಸ್ಕೃತಿಯು ಮೂಲ ರೂಪದಲ್ಲಿ ಕ್ರಿಯಾಶೀಲವಾಗಿರುವುದು ಆಯಾ ಗುಂಪಿನ ಜನಪದರ ದೈನಂದಿನ ಬದುಕಿನಲ್ಲಿ ಎಂಬ ಆಧಾರದ ಮೇಲೆ, ಹಲವು ಉಪ ಸಂಸ್ಕೃತಿಗಳು ಸೇರಿ ಒಂದು ಪ್ರಧಾನ ಸಂಸ್ಕೃತಿಯಾಗುತ್ತದೆ ಯೆಂದು ಹೇಳುವುದೂ ಉಂಟು. ಈಚೆಗೆ ಉಪ ಸಂಸ್ಕೃತಿಗಳ ಅಧ್ಯಯನವು ಬಿರುಸಾಗಿ ನಡೆಯುತ್ತಿದೆ.

ಸಂಸ್ಕೃತಿಯು ವ್ಯಕ್ತಿಗತವಾದ ಮೌಲ್ಯಪ್ರಜ್ಞೆಯೆಂದು ಭಾವಿಸುವಾಗ ಕೂಡ ಅದು ಆಯಾ ವ್ಯಕ್ತಿಗಳಿಗೆ ಮಾತ್ರವೇ ಸೀಮಿತವಾದುದಲ್ಲ; ವ್ಯಕ್ತಿಯು ಬದುಕುವ ಸಮಾಜದ ಆಚಾರ ವಿಚಾರಗಳು, ಆಲೋಚನಾ ವಿಧಾನಗಳು, ಪರಂಪರಾಗತ ಸಂಪ್ರದಾಯಗಳು ವ್ಯಕ್ತಿಯ ನಡೆ ನುಡಿಗಳನ್ನು ರೂಪಿಸುತ್ತವೆ, ಮಾರ್ಪಡಿಸುತ್ತವೆ. ವ್ಯಕ್ತಿ ವ್ಯಕ್ತಿಗಳ ನಡುವೆ ಸಂಸ್ಕೃತಿಯು ವ್ಯತ್ಯಾಸಗೊಳ್ಳುವುದಕ್ಕೆ ತಲೆಮಾರುಗಳ ತಾರತಮ್ಯ, ಬದುಕಿನ ಪರಿಸರ ದಲ್ಲಾಗುವ ಬದಲಾವಣೆಗಳು, ವ್ಯಕ್ತಿಯು ಪಡೆದ ಪಾಲನೆ ಪೋಷಣೆ, ಆತನಿಗೆ ದೊರೆತ ಶಿಕ್ಷಣ ಮೊದಲಾದುವೆಲ್ಲ ಕಾರಣವಾಗುತ್ತವೆ. ಬದುಕಿನ ಪರಿಸರ, ಶಿಕ್ಷಣಗಳಲ್ಲಿ ಆಗುವ ಮಾರ್ಪಾಟುಗಳೇ ಸಂಸ್ಕೃತಿಯಲ್ಲಿ ಬದಲಾವಣೆಗಳಾಗಲು ಕಾರಣ ಎಂಬ ಭೌತವಾದಿ ಸಿದ್ಧಾಂತದ ಜೊತೆಗೆ ಪರಿಸರ, ಶಿಕ್ಷಣಗಳಲ್ಲಿ ಮಾರ್ಪಾಡುಗಳನ್ನು ಮಾಡುವವರು ಕೂಡ ಮನುಷ್ಯರೇ ಎಂಬ ಮಾರ್ಕ್ಸೀಯ ಚಿಂತನೆಯನ್ನೂ ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ.

ಸಂಸ್ಕೃತಿಯ ಬಗೆಗೆ ಇಷ್ಟೆಲ್ಲ ಹೇಳಿದರೂ ಈ ಲೇಖನದಲ್ಲಿ ನಾವು ಪ್ರಸ್ತಾಪಿಸ ಬೇಕಾಗಿರುವುದು ಸಂಸ್ಕೃತಿಯ ಹಲವು ಅಂಗಾಂಶಗಳ ಪೈಕಿ ಒಂದಾದ 'ಮತ ಧಾರ್ಮಿಕ ನಂಬಿಕೆ' ಮತ್ತು ಆಚರಣೆಗಳ ಬಗೆಗೆ ಮಾತ್ರ. ಎರಡು ಪ್ರಮುಖ ಮತ ಧರ್ಮಗಳ ಜನರು ಒಂದು ದೇಶದಲ್ಲಿ ಬದುಕುವಾಗ ತಲೆಯೆತ್ತುವ 'ಬಿಕ್ಕಟ್ಟನ್ನು' ಕುರಿತು ಕೆಲವು ಮಾತುಗಳನ್ನು ಹೇಳುವುದಷ್ಟೇ ಪ್ರಸ್ತುತ ಉದ್ದೇಶ. ಈ ಬಿಕ್ಕಟ್ಟಿನ ಕಾಲಾವಧಿಯನ್ನು ಕೂಡ ನಾವು ಬಹು ಹಿಂದಕ್ಕೆ ಒಯ್ಯಬೇಕಾಗಿಲ್ಲ. ಕಳೆದ ಕೆಲವು ದಶಕಗಳ ಅವಧಿಗೆ ಸೀಮಿತಗೊಳಿಸಿಕೊಂಡರೆ ಸಾಕು.

ಚಾರಿತ್ರಿಕ ಕಾಲದ ಹಲವು ಶತಮಾನಗಳಿಂದ ಹಿಂದುಗಳು ಮತ್ತು ಮುಸಲ್ಮಾನರು ಈ ದೇಶದಲ್ಲಿ ನೆಲೆಸಿದ್ದಾರೆ. ರಾಜರು ಮತ್ತು ಸುಲ್ತಾನರುಗಳ ಆಧಿಪತ್ಯದಲ್ಲಿ ಆಯಾ ಪ್ರದೇಶದ ಮತ್ತು ಕಾಲದ ಅಧಿಪತಿಗಳ ಮತ ಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯ ಮತ್ತು ಪ್ರೋತ್ಸಾಹಗಳು ದೊರೆಯುತ್ತಿದ್ದವು. ಇದರಾಚೆಗೆ ರಾಜರು ಅಥವಾ ಸುಲ್ತಾನರು ಅನ್ಯ ಮತೀಯರ ಪೂಜಾಸ್ಥಳಗಳಿಗೆ ದತ್ತಿ, ದಾನ ಧರ್ಮಗಳನ್ನು ಕೊಟ್ಟು ಪ್ರೋತ್ಸಾಹಿಸಿದರೆ ಅದನ್ನು ಅಧಿಪತಿಗಳ ಔದಾರ್ಯವೆಂದೂ ಪರಮತ ಸಹಿಷ್ಣುತೆಯೆಂದೂ ಭಾವಿಸಲಾಗು ತ್ತಿತ್ತು. ಹಲವು ವೇಳೆ ಇಂತಹ ಪ್ರೋತ್ಸಾಹವು ರಾಜ್ಯಾಡಳಿತ ತಂತ್ರ(strategy)ವೂ ಆಗಿರುತ್ತಿತ್ತು ಎಂಬುದು ನಿಜ. ಯಾವ ಮತ ಧರ್ಮೀಯರೂ ಸರ್ಕಾರದ ಸಹಾಯ ಮತ್ತು ಪ್ರೋತ್ಸಾಹಗಳನ್ನು ಪಡೆಯುವುದು ತಮ್ಮ ಹಕ್ಕು ಎಂದು ಪ್ರತಿಪಾದಿಸುತ್ತಿರಲಿಲ್ಲ. ಇನ್ನು ಬ್ರಿಟಿಷ್ ಇಂಡಿಯಾದಲ್ಲಿ ಆಡಳಿತ ವ್ಯವಸ್ಥೆಯು ಪ್ರಮುಖ ಮತ ಧರ್ಮಗಳ ವಿಚಾರಕ್ಕೆ ತಲೆ ಹಾಕುತ್ತಿದ್ದುದು ತೀರ ಅಪರೂಪ. ಹೀಗಾಗಿ ಪ್ರಮುಖ ಮತ ಧರ್ಮಗಳ ನಡುವೆ ಸಂಘರ್ಷಗಳಾಗಲಿ ಬಿಕ್ಕಟ್ಟುಗಳಾಗಲಿ ಗಮನಕ್ಕೆ ಬರುವಷ್ಟು ಪ್ರಮಾಣದಲ್ಲಿ ಇರಲಿಲ್ಲ.

ಐವತ್ತು-ಅರವತ್ತು ವರ್ಷಗಳ ಹಿಂದಿನ ಕರ್ನಾಟಕದ ಒಂದು ಹಳ್ಳಿಗೆ ಹೋಗೋಣ. ಸುಮಾರು 600-700 ಕುಟುಂಬಗಳು ವಾಸಿಸುತ್ತಿದ್ದ ನಮ್ಮೂರಿನಲ್ಲಿ 10-12 ಸಾಬರ ಮನೆಗಳಿದ್ದವು. ಈಗಲೂ ಇವೆ. ನಮ್ಮೂರಲ್ಲಿ ಇವರನ್ನು ಇಸ್ಲಾಂ ಧರ್ಮೀಯರೆಂದಾಗಲಿ, ಮುಸಲ್ಮಾನರೆಂದಾಗಲಿ ಗುರುತಿಸುತ್ತಲೇ ಇರಲಿಲ್ಲ. ಊರಲ್ಲಿ ಬ್ರಾಂಬ್ರ ಜಾತಿ, ಶಿವಾಚಾರ ದವರ ಜಾತಿ, ಅಗಸರ ಜಾತಿ, ಕುರುಬರು, ಕುಂಚಿಟಿಗರು, ಹಾಲು ಮತದವರು—ಇಂಥ ಹತ್ತು ಹಲವು ಜಾತಿಗಳಿದ್ದ ಹಾಗೆ ಸಾಬರದೂ ಒಂದು ಜಾತಿ. ಪ್ರತಿಯೊಂದು ಜಾತಿಯವರಿಗೆ ಅವರದೇ ಆದ ಆಚಾರ ವ್ಯವಹಾರಗಳೂ ಹಬ್ಬ ಹರಿದಿನಗಳೂ ಇದ್ದವು. ನಾಲ್ಕಾರು ದೇವಸ್ಥಾನಗಳು, ಗುಡಿಗಳು ಇದ್ದಹಾಗೆ ಊರಿನ ನಡುವೆ ಒಂದು ಪುಟ್ಟ ಮಸೀದಿಯೂ ಇತ್ತು. ಅಲಾಬಿ ಹಬ್ಬಕ್ಕೆ ಒಂದು ವಾರ ಮುಂಚಿನಿಂದಲೂ ಉದ್ದ ಬಿಳಿ ಗಡ್ಡದ ಮೈದೀನ ಸಾಬರು, ಬ್ರಾಂಬ್ರ ಬೀದಿಯೂ ಸೇರಿದಂತೆ, ಊರಿನ ಕೇರಿಕೇರಿಗಳಲ್ಲಿ, ಸುತ್ತಲಿನ ಎರಡು ಮೂರು ಹಳ್ಳಿಗಳಲ್ಲಿ ಸಂಚರಿಸಿ ಕಾಣಿಕೆ ಸಂಗ್ರಹಿಸುತ್ತಿದ್ದರು. ಕಡ್ಲೆಪುರಿ ತುಂಬಿದ ಹಸಿಬೆ ಚೀಲವನ್ನು ಹೆಗಲಿಗೇರಿಸಿ, ಕೈಲಿ ನವಿಲು ಗರಿ ಕಂತೆಯನ್ನು ಹಿಡಿದು ಮೈದೀನ ಸಾಬರು ಬಂದಾಗ ತಾಯಂದಿರು ತಮ್ಮತಮ್ಮ ಮಕ್ಕಳನ್ನು ಎತ್ತಿಕೊಂಡು ಬಂದು ನವಿಲು ಗರಿ ಕಂತೆಯಿಂದ ನಿವಾಳಿಸುವಂತೆ ಮಾಡುತ್ತಿದ್ದರು: ಆಮೇಲೆ ಕಾಣಿಕೆ ಕೊಡುತ್ತಿದ್ದರು.

ಪ್ರತಿಯಾಗಿ ಅವರು ತಂದು ಹಿಡಿದ ತಟ್ಟೆಗೆ ಸಾಬರು ತಮ್ಮ ದೇವರ ಪ್ರಸಾದ ಕಡ್ಲೆಪುರಿ ಹಾಕುತ್ತಿದ್ದರು.

ಅಲಾಬಿ ಹಬ್ಬದ ಕೆಂಡ ಹಾಯುವುದನ್ನು ನಾವು ಹುಡುಗರೆಲ್ಲ ಗುಂಪಾಗಿ ಕೋಟೆಯ ಮೇಲೆ ಕೂತು ನೋಡುತ್ತಿದ್ದೆವು. ಅಲಾಬಿ ಮೆರವಣಿಗೆಯ ದಿನ ಹುಲಿ ವೇಷ, ಪಾಳೆಗಾರನ ವೇಷಗಳನ್ನು ಹಾಕುವುದರಲ್ಲಿ ಸಾಬರುಗಳ ಜೊತೆಗೆ ರಂಗೇಗೌಡ, ಓಬಳೇಗೌಡ ಎಲ್ಲ ಸೇರುತ್ತಿದ್ದರು. 'ಪಾಂಡವ ವಿಜಯ' ನಾಟಕದಲ್ಲಿ ದ್ರೌಪದಿ ಪಾರ್ಟು ಮಾಡುತ್ತಿದ್ದವನು ದಸ್ತಗೀರ್ ಸಾಬರ ಮಗ ಬುಡನ್‌ಅಣ್ಣ. ಕೆಲವು ಕುಟುಂಬಗಳವರಿಗೆ ಹೆಸರೇ ಇರಲಿಲ್ಲ. ಚಿಲ್ಲರೆ ಅಂಗಡಿಯ ಗಾಣದ ಸಾಬರು, ಸೋಡಾ ಸಾಬರು ಇತ್ಯಾದಿ. ನಮ್ಮೂರ ಸಾಬರ ಹೆಂಗಸರು ಬುರ್ಕಾ ಹಾಕಿದ್ದನ್ನು ನಾನು ನೋಡಿರಲಿಲ್ಲ. ಕರಿಯಮ್ಮ, ಕೆಂಪಮ್ಮರ ಹಾಗೆ ಬೂಬಮ್ಮಗಳೂ ಮನೆ ಕೆಲಸಕ್ಕೆ, ತೋಟ ಹೊಲಗಳ ಕೆಲಸಕ್ಕೆ ಹೋಗುತ್ತಿದ್ದರು. ಹಳೆಯೂರಮ್ಮನ ಜಾತ್ರೆಯಲ್ಲಿ ಕಟ್ಲೇರಿ ಸಾಮಾನು, ಬೆಂಡು ಬತ್ತಾಸು ಅಂಗಡಿ ಇಡುತ್ತಿದ್ದ ಸಾಬರು ಅಮ್ಮನವರಿಗೆ ಹಣ್ಣುಕಾಯಿ ಮಾಡಿಸುತ್ತಿದ್ದರು.

'ಸಾಬರ ಮುಂಜಿ' ಎಂಬುದು ಹುಡುಗರಾದ ನಮಗೆ ಕುತೂಹಲಕರ ಸಂಗತಿ. ನಮ್ಮ ಜೊತೆ ಪ್ರೈಮರಿ ಶಾಲೆಗೆ ಬರುತ್ತಿದ್ದ ಇಮಾಂಸಾಬರ ಮಗ ಖಲಂದರ್‌ನನ್ನು 'ನಿಮ್ಮ ಮುಂಜಿಯಲ್ಲಿ ಏನು ಮಾಡುತ್ತಾರೋ?' ಎಂದು ಕೇಳಿದ್ದಕ್ಕೆ, ಅವನು ಉತ್ತರ ಹೇಳದೆ ನಾಚಿಕೊಂಡಿದ್ದ, ಇಲ್ಲ ನುಣುಚಿಕೊಂಡಿದ್ದ. ಮುಂಜಿ ಮಾಡುವಾಗ ಒಬ್ಬ ಸಾಬರ ಹುಡುಗ ಸತ್ತೇಹೋದ—ಎಂದು ಕೇಳಿದ್ದೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮವು ತೀವ್ರಗೊಂಡು, 'ಇಂಕ್ವಿಲಾಬ್ ಜಿಂದಾಬಾದ್', 'ಭಾರತ ಬಿಟ್ಟು ತೊಲಗಿ', 'ವಂದೇ ಮಾತರಂ' ಘೋಷಣೆಗಳು ಮೊಳಗ ತೊಡಗಿದಾಗ, ಸ್ವಾತಂತ್ರ್ಯ ಪಡೆಯುವ ದಿನಗಳು ಹತ್ತಿರ ಹತ್ತಿರವಾಗುತ್ತಿದ್ದಂತೆ ಹಿಂದು-ಮುಸ್ಲಿಂ ಮುಂದಾಳುಗಳಲ್ಲಿ ವಿಶೇಷವಾಗಿ ಉತ್ತರ ಭಾರತ, ಹೈದರಾಬಾದು ಮೊದಲಾದ ಕಡೆಗಳಲ್ಲಿ—ಸಣ್ಣಗೆ ಆರಂಭವಾದ ಸಂಘರ್ಷವು ಮುಂದೆ ಪರಾಕಾಷ್ಠೆ ತಲಪಿತು. ಗಾಂಧೀಜಿ, ನೆಹರೂ, ಸರ್ದಾರ್ ಪಟೇಲ್ ಮೊದಲಾದವರು ಹಿಂದು-ಮುಸ್ಲಿಮರ ಐಕ್ಯತೆಗಾಗಿ ಶತ ಪ್ರಯತ್ನ ಮಾಡುತ್ತಿರುವಾಗಲೆ ಕಲ್ಕತ್ತಾದಂಥ ದೊಡ್ಡ ನಗರಗಳಲ್ಲಿ ಕೊಲೆ ಸುಲಿಗೆಗಳು ನಡೆದವು; ಮಾರಣ ಹೋಮವಾಯಿತು. ನಗರದ ಬೀದಿಬೀದಿಗಳಲ್ಲಿ ರಕ್ತದ ಕಾಲುವೆ ಹರಿಯಿತಂತೆ! ದೇಶ ವಿಭಜನೆಯ ಆರ್ಭಟವು ಬಲವತ್ತರವಾಯಿತು. ಅಂತಿಮವಾಗಿ ಇಂಡಿಯಾ ದೇಶವನ್ನು ಭಾರತ-ಪಾಕೀಸ್ತಾನಗಳಾಗಿ ವಿಭಜಿಸುವ ದುರಂತವೂ ಸಂಭವಿಸಿತು. ಈ ದುರಂತ ಘಟನೆಯಲ್ಲಿ ವಿದೇಶೀಯರ ಕೈವಾಡವೆಷ್ಟು, ಹಿಂದು-ಮುಸ್ಲಿಂ ಮುಖಂಡರ ಪಾತ್ರವೇನು ಎಂಬೆಲ್ಲ ಚರ್ಚೆಗೆ ಇದು ಸ್ಥಳವಲ್ಲ.

ಅಂತೂ, 1947ರಲ್ಲಿ ಇಂಡಿಯಾ ದೇಶವನ್ನು ಈ ಎರಡು ಪ್ರಮುಖ ಮತಧರ್ಮಗಳ ಜನರು ಬಹು ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಪ್ರದೇಶಗಳ ಆಧಾರದ ಮೇಲೆ ಭಾರತ-ಪಾಕೀಸ್ತಾನಗಳಾಗಿ ವಿಭಾಗಿಸಿದ ಮೇಲಾದರೂ ಆಯಾ ದೇಶಗಳಲ್ಲಿ ಹಿಂದು-ಮುಸಲ್ಮಾನರು

ಸೌಹಾರ್ದದಿಂದ ಬದುಕುವ ಪಾಠ ಕಲಿತಿದ್ದಾರೆಂದು ನಿರೀಕ್ಷಿಸಲಾಗಿತ್ತು. ಮತೀಯ ಸೌಹಾರ್ದವನ್ನು ಪ್ರೋತ್ಸಾಹಿಸುವ ಉದ್ದೇಶದಿಂದಲೆ ಭಾರತವು 'ಮತಧರ್ಮ ನಿರಪೇಕ್ಷ' (Secular) ಸಂವಿಧಾನವನ್ನು ಅಂಗೀಕರಿಸಿತು. ಭಾರತದಲ್ಲಿ ನೆಲೆಸಿರುವ ಎಲ್ಲ ಮತಧರ್ಮ ಗಳನ್ನು, ಅವುಗಳ ಅನುಯಾಯಿಗಳನ್ನು ಸಮಾನ ಗೌರವದಿಂದ ನಡೆಸಿಕೊಳ್ಳಬೇಕೆಂಬುದು ಭಾರತವು ಅಂಗೀಕರಿಸಿದ 'ಮತಧರ್ಮ ನಿರಪೇಕ್ಷತೆ'ಯ ಮೂಲತತ್ತ್ವ. ವಿಚಾರಸಮ್ಮತವೂ ಉತ್ಕೃಷ್ಟವೂ ಆಗಿದ್ದರೂ ಸಹ, ಸಂವಿಧಾನದ ನಿರೀಕ್ಷೆಗೆ ವ್ಯತಿರಿಕ್ತವಾಗಿ ಸಮಕಾಲೀನ ಭಾರತದಲ್ಲಿ ಹಿಂದು-ಮುಸ್ಲಿಂ ಸಂಘರ್ಷಗಳು ಆಗಾಗ ತಲೆಯೆತ್ತುತ್ತಲೇ ಇವೆ. ಕಳೆದೆರಡು ದಶಕಗಳಲ್ಲಿ ಮತೀಯ ಗಲಭೆಗಳು ಹೆಚ್ಚುತ್ತಲೇ ಇವೆ. ಎದ್ದು ಕಾಣುವ ಮತ್ತೊಂದು ಸಂಗತಿಯೆಂದರೆ ನಗರಗಳು ಬೆಳೆದು, ಇಲ್ಲಿನ ಜೀವನ ವಿಧಾನಗಳು ಸಂಕೀರ್ಣಗೊಂಡು, ಜನರಲ್ಲಿ ಅಕ್ಷರ ಜ್ಞಾನ, 'ಶಿಷ್ಟತೆ'ಗಳು ಹೆಚ್ಚಿದಂತೆ ಕೋಮು ಸಂಘರ್ಷಗಳೂ ಹೆಚ್ಚುತ್ತಿರುವುದು. ಸದ್ಯಕ್ಕೆ ನಾವು ಚರ್ಚಿಸಬೇಕಾಗಿರುವ ಕವಿತೆಗಳ ಹಿನ್ನೆಲೆ ಕೂಡ ಬಹುತೇಕ ನಗರ, ನಾಗರಿಕರ ಬದುಕಿನ ಸನ್ನಿವೇಶಗಳನ್ನು ಕುರಿತದ್ದೇ ಆಗಿದೆ. ಈ ಕವಿತೆಗಳು ಶಿಷ್ಟರೂ ನಗರವಾಸಿಗಳೂ ಭೂವಿಜ್ಞಾನ ಪ್ರಾಧ್ಯಾಪಕರೂ ಆದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ರಚನೆಗಳು.

ಪ್ರೊ. ನಿಸಾರರ 'ನಿತ್ಯೋತ್ಸವ', 'ಬೆಣ್ಣೆ ಕದ್ದ ಕೃಷ್ಣ', 'ನಾಡದೇವಿಯೇ', 'ನಾ ನಿನ್ನ ಕಂಡಾಗ' ಮೊದಲಾದವು ಯಾವ ಕವಿಗೂ ಹೆಮ್ಮೆಯೆನಿಸುವ, ಯಾವ ವಿಮರ್ಶಕನಿಗೂ ಸಂತೋಷ ಕೊಡುವ ಕವಿತೆಗಳು. ಆದರೆ ಇಂತಹ ಮನೋಹರ ಭಾವಗೀತಗಳನ್ನಾಗಲಿ, 'ಕುರಿಗಳು ಸಾರ್ ಕುರಿಗಳು' ಅಂಥ ವಿಡಂಬನ ಕವಿತೆಯನ್ನಾಗಲಿ ಕುರಿತು ಬರೆಯುವುದು ನನ್ನ ಪಾಲಿಗೆ ಬರಲಿಲ್ಲ. ನನ್ನದೇನಿದ್ದರೂ 'ಬಿಕ್ಕಟ್ಟು'ಗಳನ್ನು ಚರ್ಚಿಸುವ ಒಂದಷ್ಟು ಬೌದ್ಧಿಕ ಕಸರತ್ತು, ಅಷ್ಟೆ, ಇರಲಿ—

ತುಂಬ ಜನಪ್ರಿಯವಾಗಿರುವ (ಪಠ್ಯಪುಸ್ತಕಗಳಲ್ಲಿಯೂ ಸೇರ್ಪಡೆಯಾಗಿರುವ) ಎರಡು ಕವಿತೆಗಳನ್ನು ಮೊದಲು ಪರಿಶೀಲಿಸಬಹುದು—

ರಂಗೋಲಿ ಮತ್ತು ಮಗ

ತಮ್ಮ ಒಂದು ಮನೆಯ ವಿನಾ ಮಿಕ್ಕೆಲ್ಲ ಮನೆಗಳ ಮುಂದೆ ಬಿಡಿಸಿದ ರಂಗೋಲಿ ಚಿತ್ರಗಳ ಬಗೆಗೆ ಕವಿಗೆ ಕುತೂಹಲ ಮತ್ತು ಆಶ್ಚರ್ಯ. ಚಿಕ್ಕಂದಿನಲ್ಲಿ ತನ್ನ ಎದೆ ಕದ್ದ ರಂಗೋಲಿಯನ್ನು ನೋಡುನೋಡುತ್ತಲೇ ಬೆಳೆದ ಈತ, 'ಇದರ ಶುರು ಮತ್ತು ಕೊನೆಯೆಲ್ಲಿ?' ಎಂದು ಗೊತ್ತಾಗದೆ ತಲೆ ಕೆಡಿಸಿಕೊಂಡಿದ್ದಾನೆ. ಹಲವು ಸಲ ನಕ್ಕು, ಚಾಕ್‌ಪೀಸ್ ಪುಡಿಯಿಂದ ತಮ್ಮ ಪಡಸಾಲೆಯಲ್ಲಿ ರಂಗೋಲಿ ಬಿಡಿಸಲು ಹೋಗಿ ಅಮ್ಮನಿಂದ 'ಕಾಫರ್' ಎಂದು ಬೈಸಿಕೊಂಡಿದ್ದಾನೆ: ಪಕ್ಕದ ಮನೆಯ ಐಯ್ಯಂಗಾರ್ ವೇದವಲ್ಲಿ 'ಸಾಬರು ಯಾಕೊ ರಂಗೋಲಿ ಇಡೋಲ್ಲ'—ಎಂದು ಪ್ರಶ್ನಿಸಿದಾಗ ಉತ್ತರ ಹೊಳೆಯದೆ ನಾಚಿ ನೀರಾಗಿದ್ದಾನೆ. ಇವರ 'ಔಟ್‌ಹೌಸ್'ನಲ್ಲಿ ಇದ್ದವರು ತಮ್ಮ ಹೊಸ್ತಿಲ ಬಳಿ ರಂಗೋಲಿ ಹಾಕುವುದನ್ನು ನೋಡಿ ಅಜ್ಜಿ ದೌಲತ್ತಿನಿಂದ ಬಿರುನುಡಿಯಾಡಿದಾಗ ಈತನ

ಮನಸ್ಸಿಗೆ ನೋವಾಗಿತ್ತು. ಇನ್ನೊಂದು ಸಲ 'ರಂಗೋಲಿಯ ಮೇಲೆ ಹೆಜ್ಜೆಯಿಟ್ಟು ಕೆಂಡ ತುಳಿದವನಂತೆ' ಬೆಚ್ಚಿಬಿದ್ದಿದ್ದ.

ಈಗ, ಆರು ವರ್ಷದ ಹಿರಿಯ ಮಗ ಇವನೊಡನೆ ಹಾಲಿಗೆ ಬರುವಾಗ ಅದೇ ಕುತೂಹಲದಿಂದ ರಂಗೋಲಿಯನ್ನು ಗಮನಿಸುತ್ತಾನೆ. 'ಯಾಕೆ ಬಿಡಿಸುತ್ತಾರೆ ಇವರು ಹೀಗೆ ದಿನಾ ಚಕ್ರಬಂಧ!' ಎಂದು ಪ್ರಶ್ನಿಸುತ್ತಾನೆ. ಉತ್ತರ ಹೊಳೆಯದೆ ಅಪ್ಪನಿಗೆ ಮಾತು ಗಂಟಲಲ್ಲಿ ಸಿಕ್ಕಿಕೊಳ್ಳುತ್ತದೆ. 'ನಮ್ಮ ಪದ್ಧತಿಗೆ ಅದು ಸಲ್ಲ...; ಖುರಾನ್ ಧರ್ಮ ಗ್ರಂಥಗಳಲ್ಲಿ ಹೇಳಿಲ್ಲ'—ಎಂದು ಉತ್ತರ ಕೊಟ್ಟು ತಾತ್ಕಾಲಿಕವಾಗಿ ಹುಡುಗನ ಬಾಯಿ ಮುಚ್ಚಿಸಿ, ಪಾರಾಗುತ್ತಾನೆ. ಆಮೇಲೆ, 'ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿರುವ ಹಾಗೆಯೆ ನಾವು ಆಚರಿಸುತ್ತಿದ್ದೇವೆಯೆ? ಮನೆ ಕಟ್ಟಿದ ಇಸ್ವಿ, ತನ್ನ ಹೆಸರು ಇದನ್ನೆಲ್ಲ ಅಲ್ಲಿ ಬರೆಸಿಲ್ಲವೆ? ಖುರಾನಿನಲ್ಲಿ ಹೇಳಿದೆಯೆ? ಇಂಥ ಪ್ರಶ್ನೆಗಳು ಕೊರೆಯತೊಡಗುತ್ತವೆ. ಅಂತೂ ರಂಗೋಲಿಯ ಚಿತ್ರ, ಮತಧಾರ್ಮಿಕ ನಂಬಿಕೆ, ಆಚರಣೆಗಳ 'ಮಡಿಕೆ ಮಡಿಕೆಗಳನ್ನು ಬಿಚ್ಚುತ್ತ' ಕವಿಯ ಚಿಂತನೆಯನ್ನು ಎಲ್ಲೆಲ್ಲಿಗೊ ಕೊಂಡೊಯ್ಯುತ್ತದೆ.

ಅಮ್ಮ ಆಚಾರ ನಾನು

ಮದುವೆಯ ವಯಸ್ಸಿಗೆ ಬಂದ ಹುಡುಗ ಎಷ್ಟೇ ವಿದ್ಯಾವಂತನಾದರೂ ಅವನಿಗೆ ತಕ್ಕ ಹೆಣ್ಣು ಹುಡುಕುವುದು ತನ್ನದೇ ಜವಾಬ್ದಾರಿ ಎಂದು ಭಾವಿಸಿದ್ದ ಅಮ್ಮ, ಹತ್ತಾರು ಹೆಣ್ಣು ಗಳನ್ನು ನೋಡಿ, ಒಬ್ಬೊಬ್ಬರಲ್ಲೂ ಒಂದೊಂದು ಕೊರತೆಯನ್ನು ಕಂಡು ಬಗೆಬಗೆಯಾಗಿ ಜರಿದು, ಒಪ್ಪದಿದ್ದುದರಿಂದ ಮಗ ಬಹಳ ದಿನ ಅವಿವಾಹಿತನಾಗಿಯೆ ಉಳಿಯ ಬೇಕಾಯ್ತು—

'ಅಮ್ಮ ಕಟ್ಟಾ ಸಂಪ್ರದಾಯಸ್ಥೆ
ಖುರಾನು, ನಮಾಜು, ರಂಜಾನಿನುಪವಾಸ,
ಧಾರ್ಮಿಕಾಚಾರಗಳಲ್ಲಿ ಹೇಳತೀರದ ಆಸ್ಥೆ;
ಬುರ್ಖಾ ತೊಡದೆ ಬೀದಿಯಲಿ ಹಾದುಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ-
ದೇವರು ಧರ್ಮಗಳ ಭಯವಿರದೆ ಎಳ್ಳಷ್ಟು
ಗಂಡಸರೆದುರು ಮೈ ಪ್ರದರ್ಶಿಸುವ ಗಂಡು-
ಬೀರಿಗಳು...'

—ತನ್ನ ಮಗನಿಗೆ ಇಂಥ ಹೆಣ್ಣನ್ನು ಖಂಡಿತ ತರಲಾರೆ—

'ಸದಾ ಬುರ್ಖಾ ತೊಡುವ ಕರಡಿಯನ್ನು
ಆಧುನಿಕ ವಿದ್ಯಮಾನಗಳ ಕಂಡರಿಯದ ಕುರುಡಿಯನ್ನು
ಹಳ್ಳಿ ಮೊದ್ದನ್ನು...'

(ಅಮ್ಮ, ಆಚಾರ, ನಾನು)

ತಂದು ಮದುವೆ ಮಾಡುತ್ತೇನೆಂದು ಹಟ ಹಿಡಿದಂಥವಳು. ಆದರೆ, ಕಡೆಗೆ ಅಮ್ಮ

ಮತ್ತು ಮಗನ ಹಟದಲ್ಲಿ ಅಮ್ಮನೇ ಸೋತು 'ನಿನ್ನಿಷ್ಟದಂತೆ ಓದಿದವಳನೇ ಮದುವೆ ಯಾಗಪ್ಪ' ಎಂದು ಒಪ್ಪಿಗೆ ಕೊಡಬೇಕಾಯಿತು.

ಒಬ್ಬಳು ಡಬಲ್ ಪದವೀಧರೆಯ ಭಾವಚಿತ್ರ ನೋಡಿ, ಅವಳ ವಿಳಾಸ ತಿಳಿದು, ಹತ್ತಿರದಲ್ಲೆ ಕಂಡು ಮೆಚ್ಚಿ, ಹುಡುಗ ಮದುವೆಯಾಗುತ್ತಾನೆ.

ಗಂಡ ಹೆಂಡಿರು ಮೊದಲ ಸಲ ತಿರುಗಾಡಲು ಹೊರಟಾಗ, ಹೊಸ ಹೆಂಡತಿ 'ಅಪ್‌ಟುಡೇಟ್ ಅಮ್ಮಯ್ಯ'ನಂತೆ ಅಲಂಕರಿಸಿಕೊಂಡು, ಎಲ್ಲ ಅಲಂಕಾರಗಳನ್ನೂ ಮೀರಿದ ಮುಗುಳ್ನಗೆಯನ್ನು ಮುಖಕ್ಕೆ ಲೇಪಿಸಿ ಹೊಸಿಲು ದಾಟುತ್ತಾಳೆ. ಅಷ್ಟರಲ್ಲಿ, ಮತ್ತೆ 'ಬಂದೆ ತಡೆಯಿರಿ' ಎಂದು ಗಂಡನನ್ನು ಅಲ್ಲೆ ನಿಲ್ಲಿಸಿ, ಒಳಗೆ ಹೋಗಿ ಬಂದು 'ನಡೆಯಿರಿ' ಎಂದಾಗ—

> **'ತಲೆ ಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;**
> **ನೋಡಿದರೆ**
> **ಉಟ್ಟಿದ್ದಳು ನಮ್ಮಮ್ಮನ ಬುರ್ಖಾ'—**
> **(ಅದೇ)**

ಗೆದ್ದವರು ಯಾರು? ಅಮ್ಮನೊ, ಮಗನೊ? ಸಂಪ್ರದಾಯವೊ, ಆಧುನಿಕತೆಯೊ?

—ಈ ಎರಡು ಕವಿತೆಗಳ ವಸ್ತು ಎರಡು ಬೇರೆ ಬೇರೆ ಮತಧರ್ಮಗಳವರ ಸಾಂಪ್ರದಾಯಿಕ ಆಚರಣೆಗಳು. ಈ ವಸ್ತುವನ್ನು ಕಾವ್ಯವಾಗಿಸುವಲ್ಲಿ ರಂಗೋಲಿ ಕಲೆಯ ಬಗೆಗೆ ಕುತೂಹಲ, ಮೆಚ್ಚುಗೆ, ಮತಧಾರ್ಮಿಕ ಗ್ರಂಥಗಳ ಹೇಳಿಕೆ ಮತ್ತು ಅನುಸರಣೆಗಳ ಬಗೆಗೆ ಚಿಂತನೆ; ಹಿಂದಿನ ತಲೆಮಾರಿನವರಿಗೆ—ಅದರಲ್ಲೂ ಹೆಂಗಸರಿಗೆ—ಆಧುನಿಕರಿಗಿಂತ ಹೆಚ್ಚು ಸಂಪ್ರದಾಯನಿಷ್ಠೆ (ಹುಡುಗಿಯು ಬುರ್ಖಾ ಧರಿಸಿ ಹೊರಡುವುದು ಅತ್ತೆಯ ಉಪದೇಶದ ಪರಿಣಾಮವಿರಬಹುದೆ!)—ಇವೆಲ್ಲ ಸೊಗಸಾಗಿ ಮೂಡಿವೆ. ಕವಿತೆಗಳಲ್ಲಿ ಲವಲವಿಕೆಯಿದೆ. 'ಸಂಸ್ಕೃತಿಗಳ ಬಿಕ್ಕಟ್ಟು' ಎಂದು ಎತ್ತಿ ತೋರಿಸುವಂತಹದೇನೂ ಇಲ್ಲ. ಮುಂದೆ ಪ್ರಸ್ತಾಪಿಸಲಿರುವ ಕವಿತೆಗಳ ವಿಚಾರ ಇಷ್ಟು ಸರಳವಾಗಿಲ್ಲ. ಈ ಕವಿತೆಗಳ ರಚನೆಗೂ ಮುಂದಿನ ಕವಿತೆಗಳ ರಚನೆಗೂ ಇರುವ ಕಾಲದ ಅಂತರ ಮತ್ತು ಈ ಅವಧಿಯಲ್ಲಿ ಈ ದೇಶದ ಬದುಕಿನ ಪರಿಸರದಲ್ಲಿ ಆದ ಮಾರ್ಪಾಟುಗಳು ಈ ವ್ಯತ್ಯಾಸಕ್ಕೆ ಕಾರಣವಾಗಿರಬಹುದೆ?

ನಾನೆಂಬ ಪರಕೀಯ

ಸಾನೆಟ್‌ನಲ್ಲಿ, ತಾನು ಯಾರು? ಅಂದರೆ, ಯಾರಿಗೆ ಹತ್ತಿರವಾದವನು? ಎಂಬ ಪ್ರಶ್ನೆ ಹಠಾತ್ತನೆ ಕವಿಗೆ ಎದುರಾಗುತ್ತದೆ. 'ದಾಡಿ ಗಡ್ಡ ನಮಾಜಿನ ದಿವ್ಯ ಚಹರೆಯ, ತುರ್ಕೀ ಟೋಪಿಯ ಓರೆಯ ಮೋರೆ ತನಗೆ ಪರಿಚಿತ'—ಎಂದು ಒಮ್ಮೆ ಅನಿಸಿದರೆ, ಮತ್ತೊಮ್ಮೆ ತಾನು 'ಟೈ ಸೂಟಿನ ಪರದೇಶಿ ನೆತ್ತರು ತೊಗಲಿನವನು' (ಪರದೇಶಿ ಎಂಬಲ್ಲಿ ನಿಲ್ಲಿಸಿ, ನೆತ್ತರು ತೊಗಲಿನ ಎಂದು ಬಿಡಿಸಬಹುದು ಅಥವಾ ಪರದೇಶಿ ನೆತ್ತರು, ತೊಗಲಿನ ಎಂದು ಬಿಡಿಸಬಹುದು) ಎನಿಸುತ್ತದೆ. ಇಲ್ಲಿ ಬರುವ ಟೈ ಮತ್ತು ಸೂಟಿನ ವೇಷವು ಆಂಗ್ಲೇಯರ

ವೇಷಭೂಷಣಗಳನ್ನು ಸೂಚಿಸುತ್ತಿರಬಹುದು. ಇನ್ನು 'ದೇವರ ಶಂಕಿಸಿ, ಶಂಕಿಸಿದರೆಂತೊ ಎನುವ' ಸಂದೇಹಗ್ರಸ್ತ ವ್ಯಕ್ತಿಗಳು ಎಲ್ಲ ದೇಶ ಕಾಲಗಳಲ್ಲೂ ಇದ್ದಾರು. ಆದರೆ, ಒಟ್ಟಿನಲ್ಲಿ ಸಂದಿಗ್ಧದಲ್ಲಿ ಸಿಕ್ಕಿ ಅಸ್ತಿತ್ವವು ಚೂರು ಚೂರಾಗಿರುವುದನ್ನು, ಪರಕೀಯತೆಯನ್ನು ಸೂಚಿಸಲು ಬಳಸುವ 'ದೇಶದ ಹವಾಮಾನದ' ಸಂಕೇತ ಅಷ್ಟೇನೂ ಸಮರ್ಥವಾಗಿಲ್ಲ ವೆನಿಸುತ್ತದೆ.

ಇನ್ನಷ್ಟು ಕವಿತೆಗಳನ್ನು ಚರ್ಚಿಸುವ ಮುಂಚೆ ಕಳೆದ ಎರಡು ಮೂರು ದಶಕಗಳ ಅವಧಿಯಲ್ಲಿ ಭಾರತದ ಮತಧಾರ್ಮಿಕ ಪರಿಸರದಲ್ಲಿ ಉಂಟಾದ ಗೊಂದಲವನ್ನು ಪ್ರಸ್ತಾಪಿಸುವುದು ಅಗತ್ಯ. ಈ ಮೊದಲೇ ಹೇಳಿದಂತೆ ಭಾರತ ಸಂವಿಧಾನವು 'ಮತಧರ್ಮ ನಿರಪೇಕ್ಷತೆ'ಯನ್ನು ಅಂಗೀಕರಿಸಿತೆಂಬುದೇನೋ ನಿಜ. ವಿಪರ್ಯಾಸವೆಂದರೆ, ಹಿಂದು-ಮುಸಲ್ಮಾನರ ನಡುವೆ ಮೈತ್ರಿ ಬೆಸೆಯಬೇಕಾಗಿದ್ದ ಈ ಪರಿಕಲ್ಪನೆಯು ಎರಡು ಮತಧರ್ಮೀಯರ ನಡುವೆ ಪರಸ್ಪರ ದ್ವೇಷ ಸಾಧನೆಯ ನಿಮಿತ್ತವಾದುದು. ಈ ರೀತಿಯಾಗಲು ಮುಖ್ಯ ಕಾರಣ ಅಧಿಕಾರ ಸ್ಥಾನಗಳನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ರಾಜಕೀಯ ಪಕ್ಷಗಳು ನಡೆಸಿದ ಹುನ್ನಾರಗಳೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಒಂದು ರಾಜಕೀಯ ಪಕ್ಷವು ಒಂದು ಪಂಗಡದವರಿಗೆ ಅಧಿಕಾರದ ಆಮಿಷಗಳನ್ನು ತೋರಿಸಿ ಭಾವೋದ್ವೇಗವನ್ನು ಕೆರಳಿಸಿದರೆ, ಮತ್ತೊಂದು ರಾಜಕೀಯ ಪಕ್ಷವು ಇನ್ನೊಂದು ಪಂಗಡದವರಿಗೆ ಆಮಿಷಗಳನ್ನು ಒಡ್ಡಿ ಭಾವೋದ್ವೇಗವನ್ನು ಕೆರಳಿಸಿತು. ಎರಡೂ ಪಕ್ಷಗಳ ಮುಖಂಡರು ಅವಕಾಶಗಳನ್ನು ಬಳಸಿಕೊಂಡು ಸ್ವಾರ್ಥ ಸಾಧಿಸಿಕೊಂಡರು. ಒಂದು ಪಕ್ಷವು ಮತೀಯ ಅಲ್ಪಸಂಖ್ಯಾತರಿಗೆ ವಿಶೇಷ ಸವಲತ್ತುಗಳ ಆಸೆ ತೋರಿಸಿ ತಮ್ಮ ಕಡೆಗೆ ಎಳೆದುಕೊಳ್ಳಲು ಯತ್ನಿಸಿದರೆ, ಇನ್ನೊಂದು ಪಕ್ಷವು ಇದು 'ಅಲ್ಪಸಂಖ್ಯಾತರ ತುಷ್ಟೀಕರಣ ತಂತ್ರ'ವೆಂದು ಆಪಾದಿಸಿ ಬಹುಸಂಖ್ಯಾತರನ್ನು ಕೆರಳಿಸಿತು. ಪರಿಣಾಮವಾಗಿ ಎರಡೂ ಕೋಮಿನ ಜನರಲ್ಲಿ ಅಸಹನೆ, ಸಂಶಯ, ದ್ವೇಷಗಳು ತಾಂಡವವಾಡತೊಡಗಿದವು. ಮತೀಯ ಗಲಭೆಗಳು, ಹಿಂಸಾಚಾರಗಳು ಹೆಚ್ಚಿ ಜನಸಾಮಾನ್ಯರ ಬದುಕಿನ ಪರಿಸರ ಕದಡಿದ ರಾಡಿಯಾಯಿತು.

ಸ್ವಜನೋದ್ಧಾರಕರು ಕವಿತೆಯ ಕೆಲವು ಸಾಲುಗಳು ಒಂದು 'ಕೋಮಿನ ಕಂತ್ರಾಟುದಾರರಿಗೆ' ಅನ್ವಯಿಸಿದರೆ, ಇನ್ನಷ್ಟು ಸಾಲುಗಳು ಇನ್ನೊಂದು ಕೋಮಿನ ಇಂಥದೇ ಗುತ್ತಿಗೆದಾರರಿಗೆ ಅನ್ವಯಿಸುತ್ತವೆ. ಇಂಥವರನ್ನು ಉದ್ದೇಶಿಸಿ ಕವಿ ಹೇಳುತ್ತಾರೆ—

> **'...ಹೋದಹೋದಲ್ಲಿ**
> **ಸದಸ್ಸು ಸೇರಿಸಿ, ಸರಿಸುತ್ತೀರಿ ಹೆಗ್ಗಂಟಲಿನ ನಲ್ಲಿ;**
> **ಭಯಾಶಂಕೆಗಳ ನೌಬತ್ತು ಮೊಳಗಿ ದೇಶಾದ್ಯಂತ,**
> **ಬಿರಿಸಿ ಎದೆ ಎದೆಯಲ್ಲಿ ರೋಷದೊದಗೆಗಳ,**
> **ಕಟ್ಟಿ ಊರೂರಲ್ಲಿ ಸಾಲಾಗಿ ಸಿದಿಗೆಗಳ**
> **ನೊಚ್ಚನೆಯ ನುಡಿಯಲ್ಲೆ ಕಾಳ್ಗಿಚ್ಚು ಹಚ್ಚುವಿರಿ;**
> **..**

ಮಂದಿ ಮಂಡೆಯ ಕಪಾಟು ತೆರೆದದರ ಮರೆಯಲ್ಲಿ
ಸಪಾಟು ಅಖ್ಖಲಿನ ಮಡಿಕೆ ಮಡಿಕೆಗಳಲ್ಲಿ
ದಿಂಡೆ ದಿಂಡೇ ಚೂರಿ ಚೈನು ಗಿಡಿಯುವಿರಿ.
ಕಂಡಕಂಡಲ್ಲೆಲ್ಲ ಗುಂಡಿಗೆಗೆ ಕೈಹಾಕಿ
ನಂಜು ಹಿಂಡುವ ಗೌಳಿಗರು—ನೀವು'
(ಸ್ವಜನೋದ್ಧಾರಕರು)

—ಹೀಗೆ ಚಾಕು ಚೂರಿ ಚೈನುಗಳನ್ನು ಹಂಚಿ, ಕೊಲೆ ಸುಲಿಗೆಗಳನ್ನು ಪ್ರಚೋದಿಸಿ 'ಖಬರಸ್ತಾನದಲ್ಲಿ ಇನ್ನೂ ಅಗೆತ ನಡೆಯುತ್ತಿದ್ದಂತೆ ಬಸ್ಸೋ ರೈಲೋ ಹತ್ತಿ ಮತ್ತೊಂದು ಊರಿಗೆ ಪರಾರಿಯಾಗುತ್ತಾರೆ, ರಕ್ಕಸ ಗಣದುಸ್ತುವಾರಿಗೆ'

ಈ ಬಗೆಯ ಮತದ ಮೊಖ್ತೇಸರರ, ಕೋಮಿನ ಕಂತ್ರಾಟುದಾರರ, ಭಾವೈಕ್ಯ ಬಧಿರರ, ಸ್ವಜನೋದ್ಧಾರಕರ—ನೀಚ ಕೃತ್ಯಗಳನ್ನು ಕವಿ ಬಗೆಬಗೆಯಾಗಿ ಬಯಲಿಗೆಳೆದು ಖಂಡಿಸಿದ್ದಾರೆ.

ರೋಷದ ಅಭಿವ್ಯಕ್ತಿಗೆ ಹೊಂದುವ ಬೀಸಾದ ಲಯ, ನುಡಿಗಟ್ಟುಗಳ ಬಳಕೆ, ಸಹಜ ಪ್ರಾಸ, ಉಚಿತವಾದ ಬಹು ಬಗೆಯ ನಡಿಗೆಗಳು ಕವಿತೆಯ ಉದ್ದೇಶವನ್ನು ಶ್ರೋತೃಗಳಿಗೆ ಮುಟ್ಟಿಸುವಲ್ಲಿ ಸಾರ್ಥಕವಾಗಿದೆ.

ತುಂಬಿದ ತಪ್ಪಲೆ ಮತ್ತು ತುಂಟ ಪೋರರು

ಕವಿತೆಯಲ್ಲಿ ಮತೀಯ ಸೌಹಾರ್ದವನ್ನು ಕೆಡಿಸುವ, ಕೆಣಕುವ, ಕಲಕುವ ತಂಟೆಕೋರರ ನಡೆನುಡಿಗಳನ್ನೂ ಇವರ ತುಂಟತನದಿಂದ ಆಗುವ ಅನರ್ಥಗಳನ್ನೂ ವರ್ಣಿಸಲಾಗಿದೆ—

'ಮದುವೆ ಛತ್ರದ ನೀರು ತುಂಬಿರುವ ಕೊಳದಪ್ಪಲೆಗೆ
ದೊಡ್ಡವರ ಕಣ್ಣು ತಪ್ಪಿಸಿ
ಗುಂಪುಗೂಡಿದ ಹುಚ್ಚು ಪೋರರು
ಕಲ್ಲು ಚೂರುಗಳನೆಸೆದು ನಡೆಸಿದ್ದಾರೆ
ಮೋಜು, ಕುಚೋದ್ಯಗಾರರು.

ತುಂಟ ಪೋರರ ಕುಚೋದ್ಯದಿಂದ, ಒಂದಷ್ಟು ನೀರು ತುಳುಕಿ ಚೆಲ್ಲಿ, ಬದಿಯ ಮಣ್ಣಿನ ರಾಶಿಯೊಳಗಿಳಿದು ಭೂಮಿಗತವಾಗುತ್ತದೆ ಎಂಬ ಚಿತ್ರದಲ್ಲಿಯೆ 'ಗತಿಗೆಟ್ಟು ಹರಿದು' ಮತ್ತು 'ಭಯಭೀತವಾದಂತೆ' ಎಂಬ ಮಾತುಗಳೂ ಬಂದಿರುವುದು ಮತೀಯ ಗಲಭೆಗಳ ಕಾಲದಲ್ಲಿ ಹಲವರು ನಿಸ್ಸಹಾಯಕರಾಗುತ್ತಾರೆ ಎಂಬುದನ್ನು ಸೂಚಿಸುವ ಸಲುವಾಗಿ. ಗಲಭೆಯಲ್ಲಿ ಭಾಗವಹಿಸಲು ಇಚ್ಛಿಸದ, ಆದರೆ ಪರಿಸ್ಥಿತಿಯಿಂದ ದೂರ ಓಡಿ ಹೋಗಲಾರದವರದು ತ್ರಿಶಂಕು ಸ್ಥಿತಿ—

'ಮಿಕ್ಕ ಹನಿಗಳಂಟಿಕೊಂಡಿವೆ ಒಳಗೆ, ಪಾರ್ಶ್ವಗಳಿಗೆ—
ತಪ್ಪಲೆಗೆ ಹೇಳದೆ ಪೂರ್ತಿ ವಿದಾಯ,
ತ್ರಿಶಂಕುವಿನ ಹಾಗೆ ಸದಾ ನಿಸ್ಸಹಾಯ.'

ಇಂತಹ ಅಸಹಾಯಕರ ಪಾಡು—

‘ಊರುಗೋಲನಾಶ್ರಯಿಸಿರುವ ಕುಂಟರಂತೆ
ಉಳ್ಳವರ ಮನೆಯ ಕಂಗಾಲ ನೆಂಟರಂತೆ’

ಆಗುತ್ತದೆ.

ಇಷ್ಟೇ ಸಾಲದೆಂಬಂತೆ, ಇಂತಹವರ ಬಗೆಗೆ ದುಷ್ಟರು ‘ಇವರು ಪ್ರತ್ಯೇಕತೆಯ ಸಂಚು ಹೂಡುತ್ತಿದ್ದಾರೆ’ ಎಂಬ ಗುಮಾನಿ ಹಬ್ಬಿಸುತ್ತಾರೆ—ಇವರದು,

‘...ಅವಸರದ ಗುಮಾನಿ ಧೂಪವ ಹಚ್ಚಿ
ಕುಪ್ರಚಾರದೂಹಾಪೋಹದ ಪಿಶಾಚವನು ಬಿಚ್ಚಿ,
ಹುಚ್ಚು ಕುಣಿತದುದ್ವೇಗಕ್ಕೆ ಹಚ್ಚಿ
ಸೊಗ ಸವಿವ ಅನ್ಯಾಯ...’

ಇಂಥ ಹೊಲ್ಲತನ ಅಳಿಯಲಿ, ಜನರಿಗೆ ನಿಜಸ್ಥಿತಿಯನ್ನು ಅರಿಯುವ ತಾಳ್ಮೆ ಸಂಯಮಗಳು ಬೆಳೆದು ಮತಿ ಬೆಳಗಲಿ ಎಂಬುದು ಕವಿಯ ಆಶಯ. ಆದ್ದರಿಂದ—

‘ಸಹನೆಯಲಿ ಸಾಗುತ್ತ ಬಾಳಿನೆತ್ತರದ ಹಂತಕ್ಕೆ
ಹಾರೈಸುತಿರಬೇಕು ನಿತ್ಯ ಶುಭೋದಯಕ್ಕೆ’

ಕವಿತೆಯಲ್ಲಿ ಸ್ಪಷ್ಟವಾಗಿ ಹೇಳದಿದ್ದರೂ ಕವಿ ಬಳಸುವ ಮಾತುಗಳಿಂದ ಮತ್ತು ಕೊಡುವ ಹೋಲಿಕೆಗಳಿಂದ ಇದು ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರ ನಡುವಿನ ಪ್ರೀತಿಯ ಸೌಹಾರ್ದವು ಕಲಕುವ ಪರಿಸ್ಥಿತಿಯ ವರ್ಣನೆಯೆಂಬುದು ಸ್ಪಷ್ಟವಿದೆ. ಆದರೆ ಇಷ್ಟೊಂದು ತೀವ್ರವೂ ಗಂಭೀರವೂ ಹಲವೊಮ್ಮೆ ಭೀಕರವೂ ಆಗುವಂಥ ಸಮಸ್ಯೆಯನ್ನು ಮನದಟ್ಟು ಮಾಡಲು ‘‘ಮದುವೆ ಛತ್ರದ ನೀರು ತುಂಬಿಟ್ಟಿರುವ ಕೊಳದಪ್ಪಲೆಗೆ (ಮೊದಲು ‘ಕೊಳದಪ್ಪಲೆ’ಯಾಗಿದ್ದುದು ಆಮೇಲೆ ‘ತಪ್ಪಲೆ’ಯಾಗುತ್ತದೆ. ಎರಡು ಬೇರೆ ಬೇರೆ ಪಾತ್ರೆಯಲ್ಲವೆ?) ತುಂಟ ಪೋರರು ಕಲ್ಲುಚೂರು ಎಸೆಯುವ ಪ್ರತಿಮೆಯ ಗಾತ್ರ ಸಾಲದು; ಸಮರ್ಪಕವಲ್ಲ ಎನಿಸುತ್ತದೆ. (ಇದು ಸಣ್ಣಪುಟ್ಟ ಸ್ಥಳೀಯ ಜಾತಿ ಕಲಹಗಳಿಗೆ ಸಾಕಾಗ ಬಹುದು.)

‘ಇಬ್ಬಂದಿ’ ಮತ್ತು ‘ಉಭಯ ಕಷ್ಟ’ ಕವಿತೆಗಳನ್ನು ಒಟ್ಟಾಗಿ ನೋಡಬಹುದು—ಎರಡು ಕವಿತೆಗಳಲ್ಲೂ ಮತಧಾರ್ಮಿಕ ಶ್ರದ್ಧೆಯುಳ್ಳ ಭಾರತೀಯ ಮುಸಲ್ಮಾನನ ಪರಿಸ್ಥಿತಿಯ ವರ್ಣನೆಯಿದೆ.

‘ಬ್ರಾಹ್ಮೀ ಮುಹೂರ್ತದ ಘಂಟಾನಾದದೆಚ್ಚರದಲ್ಲಿ
ಬೆಳ್ದಿಂಗಳಿನೂರ್ಧ್ವ ಬೆಳಸು—ಮಿನಾರು;
ಕಂದಮ್ಮನ ಕನಸು ಪವಿತ್ರಾತ್ಮರ ಮಜಾರು
ರಂಜಾನಿನಿರುಳ ಚಂದ್ರರೇಖೆ—’

ಎಂದು ಆರಂಭವಾಗುವ ‘ಇಬ್ಬಂದಿ’ಯಲ್ಲಿ ಎರಡು ಮತಧರ್ಮಗಳ ವಿಶಿಷ್ಟ ಪರಿಕಲ್ಪನೆಗಳನ್ನು ಆಯಾ ಮತದ ಪಾರಿಭಾಷಿಕ ಪದಗಳ ಮೂಲಕವೆ ಅಕ್ಕಪಕ್ಕದಲ್ಲಿಟ್ಟು

ಬರೆಯುವುದು...' ಇತ್ಯಾದಿ ಸಾಲುಗಳಲ್ಲಿ ಇದು, ದೂರ ಹತ್ತಿರಗಳಲ್ಲಿ, ಭಾಷೆಯಲ್ಲಿ, ಬದುಕಿನಲ್ಲಿ ಸಮತೋಲನ ತರುವ ಪ್ರಯತ್ನ' ಎಂದಿದ್ದಾರೆ ಕವಿ.

—ಮೇಲಿನ ಎರಡು ಕವಿತೆಗಳು ನೇರವಾಗಿ 'ಮತಧಾರ್ಮಿಕ ಬಿಕ್ಕಟ್ಟಿಗೆ' ಸಂಬಂಧಿಸದಿದ್ದರೂ ಈ ಕವಿ ಹಾಗೂ ಈತನ ಸಹಚರ ಕವಿಗಳು ಮತ್ತು ಸಮಕಾಲೀನ ಪರಿಸರದಲ್ಲಿ ಆಗಾಗ ಉದ್ಭವಿಸುವ ಬಿಕ್ಕಟ್ಟನ್ನು ಸೂಚಿಸುತ್ತದೆಯೆನ್ನಬಹುದು.

'ಸವತಿ ಮಕ್ಕಳ ಹಾಗೆ', 'ಇಲ್ಲಿರುವರು' ಕವಿತೆಗಳನ್ನು ನಾವು ಒಟ್ಟಾಗಿ ನೋಡಬಹುದು. ಮತೀಯ ಗಲಭೆಗಳು ನಡೆದಾಗ ಅಥವಾ ಭಾರತ-ಪಾಕೀಸ್ತಾನಗಳ ನಡುವೆ ಘರ್ಷಣೆಗಳು ಒದಗಿದಾಗ, ಕೆಲವು ಮಂದಿ ಹಿಂದುಗಳಾದರೂ ಎಲ್ಲ ಮುಸಲ್ಮಾನರನ್ನು ದ್ರೋಹಿಗಳಂತೆ ನೋಡುತ್ತಾರೆಂಬುದು ವಿಷಾದಪೂರ್ಣವಾದರೂ ಇದೊಂದು ಸಾಮಾಜಿಕ ವಾಸ್ತವ. ಇಂತಹ ಸಂದರ್ಭಗಳಲ್ಲಿ ಕೆಲವರಾದರೂ ಮುಸ್ಲಿಮರು ಭಾರತಾಂಬೆಯು ತಮ್ಮನ್ನು 'ಸವತಿ ಮಕ್ಕಳ ಹಾಗೆ' ಕಾಣುತ್ತಾಳೆಂದು ಭಾವಿಸಿದರೆ, ಅದು ಅಸಹಜವಲ್ಲ. ಅಂತಹವರ ಪರವಾಗಿ ಕವಿ ಮೊರೆಯಿಡುತ್ತಾರೆ, ತಮ್ಮನ್ನು 'ಸವತಿ ಮಕ್ಕಳ ಹಾಗೆ ಕಾಣಬೇಡ, ಕಾಡಬೇಡ'—ಎಂದು. ಇವರ ಮೇಲೆ ಎಂತೆಂತಹ ಆಪಾದನೆಗಳನ್ನು ಹೊರಿಸಬಹುದೆಂಬುದನ್ನು ನೋಡಿ:

'ಹಾಲನುಣಿಸಿದ ಮೊಲೆಯ ಕೊಯ್ಯುವರು ಎಂಬೆ
ತಾಯ ಲಾಡಿಗೆ ಕಯ್ಯ ಹಚ್ಚುವರು ಎಂಬೆ—
ಮರು ಧರೆಯ ಮರುಳರ ಕಡು ನೆಂಟರೆಂಬೆ
ಪಕ್ಕದ ಖೂಳನ (ಪಾಕೀಸ್ತಾನದ) ಏಜೆಂಟರೆಂಬೆ.
...
'ಧರ್ಮಾಂಧ ಧೂರ್ತರ (ಮೂಲಭೂತವಾದಿಗಳ) ಎಡಗೈಯ ತುತ್ತಿಗೆ
ಕೊಬ್ಬಿರುವ ಮಸೆಮುರುಕ....
ಕೊಯ್ಯಲು ಕುತ್ತಿಗೆ—ಸರಿಯಾದ ಹೊತ್ತಿಗೆ
ಹೊಂಚಿಹರು.......'

(ಸವತಿ ಮಕ್ಕಳ ಹಾಗೆ)

ಎಂಬೆಲ್ಲ ಅಪರಾಧಗಳನ್ನು ಅಂಟಿಸುತ್ತಾರೆ. ಇಂತಹವರ 'ಮುಂದೆ ತಲೆ ಹೊಯ್ದು ಇಟ್ಟರೂ ಸೋರೆ ಬುರುಡೆಯೆ' ಎಂಬಂತಾಗಿದೆ. ಇದರ ಪರಿಣಾಮವಾಗಿ

'ಚಲ್ಲಣರ ಎದೆಯಲ್ಲು ತಲ್ಲಣದ ದೆವ್ವ
ಕುಣಿಸುತ್ತ, ತಿರುಚುವೆ ಹೊಂಗನಸ ಹುವ್ವ.'

(ಅದೇ)

ಭಾರತೀಯ ಮುಸಲ್ಮಾನರಲ್ಲೂ 'ತಾಯೆಂಬ ಬಾಯಲ್ಲೆ ನಾಯಿಣಿಸು ತಿನ್ನುತ್ತಾ, ಮೀರ್‌ಸಾಧಕರು ಮತ್ತೆ ನಮ್ಮಕ್ ಹರಾಮರು, ಮೊಘಲಾಯಿ ದೌಲತ್ತ ಮೆರೆವ ಅನಾಮರು, ಕೋಮಿನ ಕಂತ್ರಾಟುದಾರರು'—ಕೆಲವರಿದ್ದಾರು. 'ಅಂಥವರ ಸುಳಿಯ

ಸಫಾಯಿ ಮಾಡು' ಹಾಗೆಯೆ, 'ನಿಷ್ಪಾಪಿಗಳಿಗಾಗು ನಿರ್ಭಯದಾಯಿ'. ಅಂದರೆ, ಮುಸಲ್ಮಾನರೆಂದ ಮಾತ್ರಕ್ಕೆ ಆ ಮತಧರ್ಮಕ್ಕೆ ಸೇರಿದ ಎಲ್ಲರನ್ನೂ 'ಸವತಿ ಮಕ್ಕಳ ಹಾಗೆ ಕಾಣಬೇಡ' ಎನ್ನುವುದು ಕವಿಯ ಪ್ರಾರ್ಥನೆ.

ಮೇಲಿನ ಅಭಿಪ್ರಾಯವೇ **'ಇಲ್ಲಿರುವವರು ನಾವು'** ಕವಿತೆಯಲ್ಲಿ ಮುಂದುವರಿದಿದೆ.

ಸದ್ಯಕ್ಕೆ ಭಾರತದಲ್ಲಿರುವ ಅಲ್ಪಸಂಖ್ಯಾತ (ಹಿಂದುಗಳಿಗೆ ಹೋಲಿಸಿದರೆ) ಮುಸಲ್ಮಾನರಲ್ಲಿ ಬಹು ಸಂಖ್ಯಾತರು(ಹೆಚ್ಚೂಕಡಮೆ ಎಲ್ಲರೂ) ಹಲವು ತಲೆಮಾರುಗಳ ಹಿಂದೆ ಈ ದೇಶದಲ್ಲಿಯೆ ಹುಟ್ಟಿ, ಬೆಳೆದು ಭಾರತದಲ್ಲಿಯೆ ನೆಲೆಸಿದವರು. ದೇಶ ವಿಭಜನೆಯ ಕಾಲದಲ್ಲಿ ಇದನ್ನೇ ತಮ್ಮ ನಿವಾಸವಾಗಿ ಆರಿಸಿಕೊಂಡವರು. ಮತಧರ್ಮದಲ್ಲಿ ಮುಸಲ್ಮಾನರೆಂಬ ಕಾರಣವನ್ನು ಬಿಟ್ಟರೆ ಅವರು ಭಾರತದ ಇನ್ನಿತರ ಪ್ರಜೆಗಳಿಗಿಂತ ಬೇರೆಯಲ್ಲ. ಇಷ್ಟಾದರೂ ಈ ದೇಶದ ನಾಗರಿಕರಲ್ಲಿ ಕೆಲವರಾದರೂ ಇವರನ್ನು ಪರಕೀಯರಂತೆ ಕಾಣುತ್ತಾರೆಂಬುದು ಸುಳ್ಳಲ್ಲ. ಆದ್ದರಿಂದ ತಾವೂ 'ಇಲ್ಲಿರುವವರೇ' ಎಂಬುದನ್ನು ಸ್ಪಷ್ಟಪಡಿಸಲು ಈ ಮುಸ್ಲಿಂ ಕವಿ ಪ್ರಯತ್ನಿಸಿದ್ದಾರೆ.

ಆಗೀಗ ನೋವು ಬೇವುಗಳನ್ನು ಉಂಡರೂ 'ನಮಗಿಲ್ಲಿಯೆ ತಾವು, ಮತ್ತಿಲ್ಲಿಯೆ ಸಾವು', ನಮ್ಮ ಬೇರುಗಳು ಈ ನೆಲದಲ್ಲಿಯೇ ಆಳಕ್ಕೆ ಇಳಿದಿವೆ; ನಮ್ಮ ಹಿಂದಿನ ತಲೆಮಾರು ಗಳವರು ಇಲ್ಲಿಯೆ ನೆಲೆಸಿ, ಮನೆಮಾರುಗಳನ್ನು ಗಳಿಸಿದ್ದಾರೆ. ಇಲ್ಲಿಯ ಅನ್ನ ನೀರುಗಳನ್ನು ಸೇವಿಸಿದ್ದಾರೆ. ಈ ನಾಡಿನಲ್ಲಿ ಜಿಂಕೆಯ ತೊಗಲಿನ ತೋಳಗಳಿವೆ; ಆಗಾಗ ವೈಷಮ್ಯವು ಭುಗಿಲೆದ್ದು ಇರುಳಲ್ಲಿ ನಡೆಗೆಟ್ಟಿದ್ದೇವೆ. ಹಾಗೆಯೆ, ಅಂಥ ದ್ವೇಷಾಸೂಯೆಗಳ ನಡುವೆಯೆ ನಿನ್ನ ಎಣೆಯಿಲ್ಲದ ಕರುಣೆ, ಪ್ರೇಮಾಂತಃಕರಣಗಳನ್ನೂ ಕಂಡಿದ್ದೇವೆ. ಆದ್ದರಿಂದ—

'ಗತಿ ಸದ್ಗತಿ ನೀನೆ | ನೀನೆ ಚಿತೆ, ಮೇನೆ
ಈ ಜೀವನ ಚಲನೆ | ನಿನ್ನದೆ ಅನುಕರಣೆ'

—ಎಂಬ ನಿರ್ಧಾರದಿಂದ ನಿನ್ನ ಮಡಿಲಲ್ಲಿಯೆ ಬದುಕುವವರು ನಾವು ಎಂದು ಕವಿ ಪ್ರಾಂಜಲ ಚಿತ್ತರಾಗಿ ನುಡಿದಿದ್ದಾರೆ.

'ನೀವು ಬಯಸುವ ಗೀತೆ'; 'ಬೇರೆ ಹಾಡ ಕಲಿಸು'; 'ಹಾಡು ಕವಿಯೆ ಹಾಡು' ಈ ಮೂರು ಪದ್ಯಗಳನ್ನು ಒಟ್ಟಾಗಿ ನೋಡಬಹುದು:

ನೀವು ಬಯಸುವ ಗೀತೆ

ಕವಿ ನಿಸಾರ್ ಅಹಮದ್ ಈ ಹಿಂದೆ, 'ನಾಡದೇವಿಯೆ'; 'ನಿತ್ಯೋತ್ಸವ'; 'ಬೆಣ್ಣೆ ಕದ್ದ ಕೃಷ್ಣ'—ಮೊದಲಾದ ಭಾವಗೀತೆಗಳಲ್ಲಿ ನಾಡು ನುಡಿಗಳ ಪ್ರೇಮ, ದೇಶಭಕ್ತಿ, ಇಲ್ಲಿನ ಪ್ರಕೃತಿ ಸೌಂದರ್ಯದ ವೈಭವ, ಶ್ರೇಷ್ಠ ಐತಿಹಾಸಿಕ ಪರಂಪರೆ, ಶ್ರೀ ಕೃಷ್ಣನ ಬಾಲ ಲೀಲೆಗಳ ಸೊಬಗು—ಮೊದಲಾದವನ್ನು ಹೆಮ್ಮೆಯಿಂದ ಬಣ್ಣಿಸಿ ಅಪಾರ ಜನಪ್ರಿಯತೆಯನ್ನು ತಮ್ಮದಾಗಿಸಿಕೊಂಡವರು. ಈಗಲೂ ರಸಿಕರು ತಮ್ಮಿಂದ ಅದೇ ಬಗೆಯ ಗೀತೆಗಳನ್ನು

ಬಯಸುತ್ತಾರೆಂಬುದು ಕವಿಗೆ ಗೊತ್ತು. ಆದರೆ ಮತೀಯ ಕಲಹಗಳಿಂದ, ಹಿಂಸಾಚಾರಗಳಿಂದ ಕಲುಷಿತಗೊಂಡ ವಾತಾವರಣದಲ್ಲಿ ತಾನು ಅಂತಹ ಕವಿತೆಗಳನ್ನು ರಚಿಸಲಾರೆನೆಂಬುದು ಕವಿಯ ಅಂತರಂಗದ ನೋವು. ಈ ನೋವೇ ಕಾವ್ಯವಾಗಿ ಮೂಡಿರುವುದು ಇಲ್ಲಿನ ವಿಶೇಷ.

'ರಾಷ್ಟ್ರಭಕ್ತಿಯುಕ್ಕಿ ಮೊರೆವ, ನಾಡ ಹಿರಿಮೆ ವೈಭವಗಳನ್ನು ಹೊಗಳುವ' ಕವಿತೆಗಳನ್ನು ನೀವು ನನ್ನಿಂದ ಬಯಸುತ್ತೀರಿ. ಆದರೆ,

'ಒಂದೆ ತಾಯ ಮಕ್ಕಳಲ್ಲಿ ಒಡಕು ಬಿತ್ತುತಿರುವ ವೇಳೆ
ಮಂದೆ ಬೊಬ್ಬೆಯಿಂದ ಸುತ್ತ ಕೆಡಕು ಹಬ್ಬುತಿರುವ ವೇಳೆ
ಸೊಗವನೆಂತು ಹಾಡಲಿ? ಹಿಗ್ಗನೆಂತು ಹರಡಲಿ?'

—ಇದು ಕವಿಯ ಪ್ರಶ್ನೆ. 'ನೀವು ಮೆಚ್ಚಲೆಂದು ನಗೆಯ| ತೊಡಲೆ ಮುಚ್ಚಿ ಬಗೆಯ ಧಗೆಯ?'

'ಬಲವಂತರ ಕುಹಕದಿಕ್ಕುಳಕ್ಕೆ ಸಿಕ್ಕು, ಅಬಲ ಅಲ್ಪಸಂಖ್ಯಾತರುಳಿವು ದಿನೇ ದಿನೇ ಅಭದ್ರವಾಗಿರುವಾಗ'—

'ನವೋತ್ಸಾಹ ಹರ್ಷವುಕ್ಕಿ ಉಲಿವುದೇನು ಎದೆಯ ಹಕ್ಕಿ?' ಎಂದು ಕವಿ ಓದುಗರನ್ನೇ ಪ್ರಶ್ನಿಸಿದ್ದಾರೆ. ಹಾಗೆಂದು, ಇಂತಹ ಸಂದರ್ಭದಲ್ಲಿ ಕವಿಯಾದವನು ಮೌನ ತಾಳುವಂತೆಯೂ ಇಲ್ಲ. ಏಕೆಂದರೆ,

'ಮೌನತಳೆಯಲನುಮಾನದಿ ನನ್ನ ಕಾಣ ಬಯಸುವಿರಿ.'

ಸಂದಿಗ್ಧದಲ್ಲಿ ಸಿಕ್ಕಿದ ಕವಿಯಲ್ಲಿ—

'ಉಲ್ಬಣಿಸಿದೆ ತಹತಹ; ಬದುಕಾಗಿದೆ ದುಸ್ಸಹ.'

ಬೇರೆ ಹಾಡ ಕಲಿಸು

ಮತೀಯ ಗಲಭೆಗಳಿಂದ ಕಲುಷಿತಗೊಂಡ ವಾತಾವರಣದಲ್ಲಿ 'ನೀವು ಬಯಸುವ ಗೀತೆ'ಯನ್ನು ರಚಿಸುವುದು ಸಾಧ್ಯವಾಗುತ್ತಿಲ್ಲವೆಂಬ ನೋವು ವ್ಯಕ್ತವಾಗಿದ್ದರೆ, ಇಲ್ಲಿ ಆ ನೋವನ್ನು ಮೆಟ್ಟಿ ನಿಲ್ಲುವ ಪ್ರಯತ್ನವಿದೆ. ಆದ್ದರಿಂದ ತಮಗೆ 'ಬೇರೆ ಹಾಡ ಕಲಿಸು'ವಂತೆ ಕವಿ, ಕಾವ್ಯದೇವಿಯನ್ನು ಪ್ರಾರ್ಥಿಸುತ್ತಾರೆ.

ಇಲ್ಲಿಯೂ ಸಹ 'ಅಲ್ಪ ಸಂಖ್ಯಾತರಳಲ ಬಾಳಿನ' ಪ್ರಸ್ತಾಪವಿದ್ದರೂ ಕವಿತೆಯ ವಸ್ತು, ಮತೀಯ ಅಲ್ಪ ಸಂಖ್ಯಾತರ ನೋವಿಗೆ ಮಾತ್ರವೇ ಸೀಮಿತವಾಗಿಲ್ಲ.

'ಒಳಗೊಳಗೆ ಬವಣೆಯುಂಡು ಗತಿಗಾಣದೆ ಕೂಳಿಗೆ
ನವೆವ ಸಕಲ ಜೀವ ಕುಲಕೆ ಹಾಡಾಗಲಿ ನಾಲಿಗೆ'

ಎನ್ನುವಷ್ಟು ವಿಶಾಲವಾಗಿದೆ. ಸಂಕಟದಲ್ಲಿ ಸಿಕ್ಕಿ ಪಾಡು ಪಡುತ್ತಿರುವ ಎಲ್ಲರನ್ನೂ ಸಂತೈಸುವ ಶಕ್ತಿ ತಮ್ಮ ಹಾಡಿಗೆ ಬರಲಿ—ಎಂದು ಪ್ರಾರ್ಥಿಸಿದ್ದಾರೆ, ಕವಿ.

ಹಾಡು ಕವಿಯೆ ಹಾಡು

ಮತೀಯ ಸಂಘರ್ಷಗಳ ಬಗೆಗೆ ಉಕ್ಕಿದ ದುಃಖವನ್ನು ವ್ಯಕ್ತಪಡಿಸಿದ್ದಾಯಿತು. ಓದುಗರು ತಮ್ಮಿಂದ ಬೇರೆ ಬಗೆಯ ಹಾಡುಗಳನ್ನು ನಿರೀಕ್ಷಿಸುತ್ತಾರೆಂದೂ ಆದರೆ ತಮ್ಮಿಂದ ಅಂತಹ ಗೀತೆಗಳನ್ನೂ ರಚಿಸಲು ಸಾಧ್ಯವಾಗುತ್ತಿಲ್ಲವೆಂದೂ ವ್ಯಥೆ ಪಟ್ಟಿದ್ದಾಯಿತು; 'ಬೇರೆ ಹಾಡ ಕಲಿಸು' ಎಂದು ಕಾವ್ಯದೇವಿಯನ್ನು ಪ್ರಾರ್ಥಿಸಿದ್ದಾಯಿತು. ಈಗ 'ಹಾಡು ಕವಿಯೆ ಹಾಡು' ಎಂದು ತಮ್ಮಷ್ಟಕ್ಕೇ ಹೇಳಿಕೊಳ್ಳುತ್ತಾರೆ. ಇದೊಂದು ಸ್ವಗತ ಗೀತೆ. ಕವಿ ಹಾಡ ಬೇಕಾದದ್ದು 'ನಾಡ ಜನರ ಪಾಡನ್ನು' ಕುರಿತು. ಅಂತಹ ಹಾಡಿನ ಪೂರ್ವಸಿದ್ಧತೆಯಾಗಿ—

'ಸ್ವಂತ ನೋವು ನಲಿವನುಳಿದು | ಸಾಂತ ಬಯಕೆ ಗೂಡು ತೊರೆದು
ವೈನತೇಯನಂತೆ ಏರಿ | ನಾಡಿನುದ್ದ ಅಗಲ ಹಾರಿ—'

ಸುತ್ತಮುತ್ತ ನೋಡಿದರೆ, ಈ ನಾಡಿನಲ್ಲಿ

'ಹಣದ ಕಣಜ ತುಂಬಲೆಳಸಿ
ಮನುಜ ಮನುಜನನ್ನೆ ಮುಗಿಸು'ವುದು,

ಬಡವರ ಇರವು ಕುದಿವ ಕಡಲಾಗಿರುವುದು, ಜನ ಹಸಿವಿನಿಂದಾಗಿ ನಾಯ ಜೊತೆಗೆ ಹುರುಡು ಕಟ್ಟಿ, ಕಸದ ತೊಟ್ಟಿ ಬೆದಕುತ್ತಿರುವುದು—ಎಲ್ಲ ಕಾಣುತ್ತದೆ. ಇಂಥ 'ವಾಸ್ತವತೆಗೆ ಕಣ್ಣ ತೆರೆ; ತೆರೆಮರೆಯನು ಸರಿಸಿ ಬರೆ.' ಹೆಣ್ಣನ್ನು ಅಬಲೆಯೆಂದು ಹೆಸರಿಸಿ, ಕೀಳರಿಮೆಯ ಕೋಳ ತೊಡಿಸಿ, ಅನುದಿನವೂ ಅವಳ ಸುಡಿಸಿ, ಅವಳ ಬಾಳನ್ನು ಗೋರಿಮಾಡಿದ್ದಾರೆ. ಸತ್ಯದ ಕೊರಳನ್ನು ಹಿಚುಕಿ ಸುಳ್ಳಿನ ಶವವಸ್ತ್ರ ತೊಡಿಸಿ ನಿತ್ಯ ಜಾತ್ರೆ ನಡೆಸಿದ್ದಾರೆ. ಆದ್ದರಿಂದ ತಮ್ಮ ಹಾಡು—ಜಾತಿ, ಮತ, ಧರ್ಮ, ವರ್ಣ, ಭಾಷೆಗಳ ಮಿತಿಯನ್ನು ದಾಟಿದ, ಅನ್ಯಾಯವನ್ನು ಕರದಲ್ಲಿ ಪ್ರತಿಭಟಿಸುವ, ಕ್ರಾಂತಿಯ ನೆರೆಯುಕ್ಕಿಸುವ ಹಾಡಾಗಬೇಕು. ಅದಕ್ಕಾಗಿ—

'ನಿರ್ಭಯದಲಿ ದನಿಯನೆತ್ತು | ಶಾಂತಿ ಬರಲಿ ಧ್ವಜವ ಹೊತ್ತು.
ಹಾಡು, ಕವಿಯೆ, ಹಾಡು;| ನಿನ್ನೊಳಗನೆ ತೋಡು.'

ನಾವು ಕವಿಯಿಂದ ಬಯಸುವುದೂ ಇದನ್ನೇ ತಾನೆ!

'ಎರಡು ಸಂಸ್ಕೃತಿಗಳ ಬಿಕ್ಕಟ್ಟ'ನ್ನು ಮತಧಾರ್ಮಿಕ ನಂಬಿಕೆ, ಆಚಾರ ವಿಚಾರಗಳ ಅಭಿವ್ಯಕ್ತಿ ಎಂಬ ಪರಿಮಿತ ಅರ್ಥದಲ್ಲಿ ಗ್ರಹಿಸಿದಾಗ ಕೂಡ, ಇಂತಹ ಬಿಕ್ಕಟ್ಟುಗಳನ್ನು ಪರಿಹರಿಸಬೇಕಾದ ಅಗತ್ಯವಿದೆಯೆಂದು ಎಲ್ಲರೂ ಒಪ್ಪುತ್ತಾರೆ. ಅಲ್ಲಿದೆ ಈ ಬಗೆಯ ಬಿಕ್ಕಟ್ಟು : ಮತಧಾರ್ಮಿಕ ತತ್ತ್ವಗಳ ಬಗೆಗೆ ಹೆಚ್ಚಿನ ತಿಳಿವಳಿಕೆಯಿಲ್ಲದ ಅವಿದ್ಯಾವಂತರು, ಬಡವರು ಮತ್ತು ಕೆಳ ಮಧ್ಯಮ ವರ್ಗದವರು ವಾಸಿಸುವ ಗ್ರಾಮೀಣ ಪರಿಸರಕ್ಕಿಂತ ಮತಧಾರ್ಮಿಕ ವಿಚಾರಗಳನ್ನು ಬಲ್ಲವರು, ವಿದ್ಯಾವಂತರು, ಶ್ರೀಮಂತರು, ಮೇಲುಮಧ್ಯಮ ವರ್ಗದವರು, ಮಧ್ಯಮ ವರ್ಗದವರು ನೆಲೆಸಿರುವ ನಗರಗಳ ಪರಿಸರದಲ್ಲೆ ಹೆಚ್ಚೆಂಬುದನ್ನು ನೋಡಿದ್ದೇವೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಪರಿಹರಿಸಿ ಆರೋಗ್ಯಪೂರ್ಣ ಸಮುದಾಯವನ್ನು ಕಟ್ಟುವುದಕ್ಕೆ, ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ನಾವು ಯಾವ ಪ್ರಯತ್ನಗಳನ್ನು ಮಾಡಿದ್ದೇವೆ? ಈ ದಿಸೆಯಲ್ಲಿ ನಮ್ಮ ಶಿಕ್ಷಣವು ಎಷ್ಟರಮಟ್ಟಿಗೆ ಸಫಲವಾಗಿದೆ? ಇಂತಹ ಪ್ರಶ್ನೆಗಳನ್ನು ಸುಶಿಕ್ಷಿತರಾದ ನಾವೆಲ್ಲ ನಮ್ಮಷ್ಟಕ್ಕೆ ಕೇಳಿಕೊಳ್ಳು ವಂತಾಗಬೇಕೆಂಬುದು ಕೂಡ ಪ್ರಸ್ತುತ ಲೇಖನದ ಆಶಯಗಳಲ್ಲೊಂದಾಗಿದೆ.

ನಾಡೋಜ ಕವಿ ಕೆ. ಎಸ್. ನಿಸಾರ್ ಅಹಮದ್ ಅವರನ್ನು ಅಭಿನಂದಿಸುವುದರಲ್ಲಿ ತಮ್ಮೊಡನೆ ಸೇರುವ ಅವಕಾಶ ಕೊಟ್ಟಿದ್ದಕ್ಕಾಗಿ 'ಅಭಿನಂದನ ಗ್ರಂಥ' ಸಮಿತಿಗೆ ಕೃತಜ್ಞನಾಗಿದ್ದೇನೆ.

ಭಾರತದ ಇತಿಹಾಸದಲ್ಲಿ ಹಲವು ಅಸಂಗತಗಳನ್ನು, ವೈರುಧ್ಯಗಳನ್ನು ಗುರುತಿಸಬಹುದು. ಪಾಶ್ಚಾತ್ಯರಂತೆ ನಮ್ಮ ದೇಶದ ಚರಿತ್ರೆಯನ್ನು ಕ್ರಮವಾಗಿ, ನಿಯತವಾಗಿ ದಾಖಲಿಸಿದ್ದಿಲ್ಲ. ಶಾಸನಗಳು, ಶಿಲಾಲೇಖ, ಶಾಸ್ತ್ರ ಗ್ರಂಥಗಳು, ಕಾವ್ಯ, ವಂಶಾವಳಿ ಇತ್ಯಾದಿ ಆಕರಗಳನ್ನು ಆಧರಿಸಿ ರಚಿಸಿದ ಗತಕಾಲದ ಚರಿತ್ರೆ ಸತ್ಯಸ್ಥಿತಿಯನ್ನು ಅಪೇಕ್ಷಣೀಯ ಪ್ರಮಾಣದಲ್ಲಿ ಪ್ರತಿಬಿಂಬಿಸುತ್ತದೆ ಎನ್ನುವಂತಿಲ್ಲ. ನಮ್ಮ ಕೆಲ ಐತಿಹಾಸಿಕ ನಾಯಕರು ವಾಸ್ತವತೆಯ ಸರಹದ್ದನ್ನು ಮೀರಿ ತಮ್ಮ ಸುತ್ತ ಅಸ್ಫುಟತೆಯ ಮೋಡವೊಂದನ್ನು ಸುತ್ತಿಕೊಂಡಿರುತ್ತಾರೆ. ಅನಪೇಕ್ಷಿತ ವೈಭವೀಕರಣ ಹಾಗೂ ಆದರ್ಶಪರತೆಯ ದೆಸೆಯಿಂದ ಒಳಿತು ಕೆಡುಕುಗಳನ್ನು ಮೈಗೂಡಿಸಿಕೊಂಡ ರಕ್ತಮಾಂಸಪುಷ್ಟ, ಮನುಷ್ಯರಾಗಿ ಮೂರ್ತಗೊಳ್ಳದೆ ಪೌರಾಣಿಕತೆಯ ಹಂತವನ್ನು ತಲಪಿರುತ್ತಾರೆ.

(ಇತಿಹಾಸದ ನಾಯಕರು)

✧ ✧ ✧

ಚರಿತ್ರೆ ಒಂದು ನಿರ್ದಿಷ್ಟ ಕಾಲದಲ್ಲಿ ಕೆಲವರಿಂದ ರಚಿತವಾಗಿ ಎಲ್ಲ ಕಾಲಕ್ಕೂ ಪರಮ ಪ್ರಮಾಣವಾಗಿ ಸಿಂಧುವಾಗಿ ಉಳಿಯುವ ನಿರ್ದೋಷಪೂರ್ಣ ದಸ್ತಾವೇಜಲ್ಲ. ಹೊಸ ದೃಷ್ಟಿಕೋನ, ರುಜುವಾತುಗಳ ಬೆಳಕಿನಲ್ಲಿ ಪುನಃ ಸಂಶೋಧಿತವಾಗುತ್ತ, ತಿದ್ದುಪಡಿಗಳಿಗೆ ಎಡೆ ಮಾಡಿ ಕೊಡುತ್ತ, ಆಯಾ ಕಾಲದ ಮುಂದಾಳುಗಳಲ್ಲಿ ನಿಃಸ್ವಾರ್ಥ ಧ್ಯೇಯಾದರ್ಶಗಳನ್ನು, ಯುಕ್ತಾಯುಕ್ತ ವಿವೇಕವನ್ನು ಪ್ರೇರಿಸುತ್ತ ರಾಷ್ಟ್ರಜೀವನ ಸೌಹಾರ್ದಶೀಲವೂ ಸಂಸ್ಕೃತಿ ಸಾಧಕವೂ ಆಗುವಂತೆ ರೂಪಿಸುತ್ತ ಸಾಗುವುದು ಚರಿತ್ರೆಯ ಅಗ್ಗಳಿಕೆ.

(ಚರಿತ್ರೆಯ ಕಾಯಕ)



ನಿಸಾರರ ಕವಿತೆಗಳಲ್ಲಿ ಉನ್ನತ ಜೀವನ ಮೌಲ್ಯಗಳ ತುಡಿತದ ಅಭಿವ್ಯಕ್ತಿ

◆ *ಡಾ. ಕೆ. ವಿ. ತಿರುಮಲೇಶ್*

ಕೆ.ಎಸ್. ನಿಸಾರ್ ಅಹಮದ್ ಅವರು ಕನ್ನಡದಲ್ಲೀಗ ಮನೆ ಮಾತು. ನವ್ಯ ಕಾವ್ಯದಲ್ಲಿ ಈ ತರದ ಗೌರವ ಪಡೆದ ಕವಿಗಳು ಹೆಚ್ಚೇನಿಲ್ಲವೆನ್ನುವುದನ್ನು ಗಮನಿಸಿದರೆ ಇದು ಎದ್ದು ನಿಲ್ಲುವ ಸಂಗತಿ. ಮಾತ್ರವಲ್ಲ, ನವ್ಯ ಕವಿಗಳು ಜನಪ್ರಿಯತೆಯ ವಿರುದ್ಧವಾಗಿಯೆ ಬರೆಯುವವರಾದ ಕಾರಣ, ಜನಪ್ರಿಯತೆಯೆನ್ನುವುದು ಈ ಕವಿಗಳಿಗೊಂದು ಮುಜುಗರದ ವಿಷಯ. ಹಾಗೆಂದು ನಿಸಾರರು ಯಾವತ್ತೂ ನವ್ಯ ಕಾವ್ಯದೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡವರೂ ಅಲ್ಲ. ಆದರೂ, ಅವರು ಗಂಭೀರವಾಗಿ ಬರೆಯಲು ಸುರು ಮಾಡಿದ್ದೇ ನವ್ಯದ ಕಾಲಘಟ್ಟದಲ್ಲಿ ಎಂಬುದು ಒಂದು ಕಾರಣ; ಅವರ ರಚನೆಗಳನ್ನು ನವೋದಯ ರೀತಿಯಿಂದ ಗುರುತಿಸುವುದು ಸಾಧ್ಯವಾಗುವುದಿಲ್ಲ ಎಂಬುದು ಇನ್ನೊಂದು ಕಾರಣ; ಅವರ ಕೃತಿಗಳ ಆಶಯ ನವ್ಯದಿಂದ ತುಂಬಿದೆ ಎಂಬುದು ಮಗುದೊಂದು ಕಾರಣ; ಹೀಗಾಗಿ ನಿಸಾರ್ ನವ್ಯದೊಂದಿಗೇ ಗುರುತಿಸಲ್ಪಟ್ಟಿರುವ ಕವಿ. ಅವರು ಸಮನ್ವಯ ಕವಿಯೆನಿಸಲೂ ಇಲ್ಲ ಎನ್ನುವುದು ಒಂದಾದರೆ, ನವ್ಯದಲ್ಲೂ ಅಸಮಸ್ಯಾತ್ಮಕವಾಗಿ ಇದ್ದಂತೆ ಅನಿಸುವುದಿಲ್ಲ ಎನ್ನುವುದು ಇನ್ನೊಂದು ಗಮನಾರ್ಹ ವಿಚಾರ. ಅಂತೂ ನಿಸಾರ್ ಸುಲಭದ ವರ್ಗೀಕರಣಕ್ಕೆ ಸಿಗದಂಥ ಕುತೂಹಲಕರ ಕವಿ.

ನಿಸಾರ್ ಎಂದೊಡನೆ ಬೀಜ ಮಂತ್ರದಂಥ ಅವರ ಕೆಲವೊಂದು ಕವಿತೆಗಳೂ ನೆನಪಾಗುತ್ತವೆ—ಉದಾಹರಣೆಗೆ,

'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ಕುರಿಗಳು, ಸಾರ್, ಕುರಿಗಳು' ಮತ್ತು 'ನಿತ್ಯೋತ್ಸವ' ಎಂಬ ಮೂರು ಕವಿತೆಗಳು. ಇವು ಧರ್ಮಸ್ತಂಭದ ಮೂರು ಮುಖಗಳಂತೆ ನಿಸಾರರ ಮೂರು ಆಯಾಮಗಳನ್ನು ನಮಗೆ ತೋರುತ್ತವೆ.

ಮುಖ ಒಂದು: 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎನ್ನುವುದು ಅರ್ಥಬಾಹುಳ್ಯ ಪಡೆದಂಥ ಕವಿತೆ. ಇಲ್ಲಿ ನೀವು ಎಂದರೆ ಯಾರು, ನಾನು (ಅರ್ಥಾತ್ ಕವಿತೆಯ ಆತ್ಮನೇ ಪದ ಸೂಚಿಸುವಂಥ ವ್ಯಕ್ತಿ) ಯಾರು ಎನ್ನುವುದನ್ನು ಹೊಂದಿಕೊಂಡು ಕವಿತೆ ತನ್ನ ಅರ್ಥವಲಯವನ್ನು ಕಟ್ಟಿಕೊಳ್ಳುತ್ತದೆ. ಬಹಳ ಕಚ್ಚಾ ನೆಲೆಯಲ್ಲಿ ನೀವೆಂದರೆ, ಕವಿಯನ್ನು ಸುತ್ತುವರಿದ ಹಿಂದೂ ಬಹುಜನ, ಹಾಗೂ ನಾನೆಂದರೆ ಮುಸ್ಲಿಮನಾದ ಸ್ವತಃ ನಿಸಾರ್ ಎಂದುಕೊಳ್ಳಬಹುದು. ಇದಕ್ಕಿಂತ ತುಸು ಮುಂದೆ ಹೋದರೆ, ಈ ಘಟಕಗಳನ್ನು ಕನ್ನಡದ ಬಹುಜನ ಹಿಂದೂ ಕವಿಗಳು ಮತ್ತು ಈ ಕವಿತೆಯ ಕರ್ತೃವಾದ ಕನ್ನಡದ ಮುಸ್ಲಿಂ ಕವಿ ನಿಸಾರ್ ಅಂದುಕೊಳ್ಳಬಹುದು. ಇದಕ್ಕಿಂತಲೂ ಆಚೆ, ಇವೇ ಘಟಕಗಳನ್ನು ಸಮಕಾಲೀನ ಬಹುಜನ ನವ್ಯಕವಿಗಳು ಹಾಗೂ ಈ ಕವಿತೆಯ ವಿಶಿಷ್ಟ ಕವಿ ನಿಸಾರ್ (ಅಥವಾ ಅಂಥ ಯಾವನೇ ಕವಿ) ಎಂದೂ ತಿಳಿದುಕೊಳ್ಳ ಬಹುದು. ಇದಕ್ಕೂ ಮುಂದೆ, ಈ ಮುಖಾಮುಖಿ ಯನ್ನು ಪ್ರಚಲಿತ-ಅಪ್ರಚಲಿತ, ಸ್ವೀಕೃತ-ಅಸ್ವೀಕೃತ, ಬಹು-ಅಲ್ಪ ಮುಂತಾದ ಯುಗಳ ಗಳಿಗೂ ಅನ್ವಯಿಸಿಕೊಳ್ಳುವುದು ಸಾಧ್ಯ. ಇಲ್ಲೆಲ್ಲಾ ಮುಖ್ಯವಾಗುವ ಸಂಗತಿಯೆಂದರೆ, ನಿಮ್ಮ ಒಡನೆ ಇದ್ದೂ ನಿಮ್ಮಂತೆ ಆಗದೆ ಎನ್ನುವ ಆಂತರಿಕ ಭಿನ್ನತೆಯ ಅರಿವು, ಅದರ ಗುಪ್ತ ಸಮರ್ಥನೆ ಹಾಗೂ ಈ ದುವಿಧಾವಸ್ಥೆ ತಂದಿರಿಸಬಹುದಾದ ಪರಿಣಾಮಗಳು.

ಮುಖ ಎರಡು: 'ಕುರಿಗಳು ಸಾರ್ ಕುರಿಗಳು' ದಮನಕರನ್ನು ಮತ್ತು ದಮನಿತರನ್ನು ಮುಖಾಮುಖಿಯಾಗಿಸುತ್ತದೆ. ಇಲ್ಲಿ ಕವಿಯದು ಎಲ್ಲ ದಮನಿತರ ಪರವಾಗಿರುವ ಸಮಷ್ಟಿ ದೃಷ್ಟಿಯೆನ್ನುವುದು ಗಮನಾರ್ಹ. ತೌಲನಿಕವಾಗಿ ಹೇಳುವುದಿದ್ದರೆ, ವ್ಯಕ್ತಿಗತವಾದ ಈ ಹಿಂದಣ ಧೋರಣೆಗಿಂತ ಇದು ವ್ಯತ್ಯಸ್ತ—ಯಾಕೆಂದರೆ ಕವಿತೆ ಸಮಸ್ತ ದಮನಿತರ ಪರವಾಗಿ ಮಾತಾಡುತ್ತದೆ. ಇದರ ಸಂಕೀರ್ಣತೆಯಿರುವುದು ಇಲ್ಲಿನ ವ್ಯಂಗ್ಯದ ಧಾಟಿಯಲ್ಲಿ: ವ್ಯಂಗ್ಯಕ್ಕೆ ಯಾವಾಗಲೂ ಎರಡೂ ಕಡೆ ಅಲಗು; ಅದು ಅತ್ತಲೂ ಕಡಿಯುತ್ತದೆ, ಇತ್ತಲೂ ಕಡಿಯುತ್ತದೆ. ಅರ್ಥಾತ್, ಕುರಿಗಳ ಶೋಚನೀಯ ಪರಿಸ್ಥಿತಿಗೆ ಕಟುಕರು ಹೇಗೆ ಕಾರಣರೋ ಹಾಗೇ ಕುರಿಗಳೂ ಸ್ವತಃ ಹೊಣೆಗಾರರು ಎನ್ನುತ್ತದೆ. ಈ ಮಟ್ಟಿಗಿದು ಸಾಧಾರಣವಾಗಿ ನವ್ಯರು, ಹಾಗೂ ಪ್ರಧಾನವಾಗಿ ಅಡಿಗರು, ತೆಗೆದುಕೊಳ್ಳುವ ಧೋರಣೆಗೆ ಸಮೀಪದ್ದು. ನಿಸಾರರ ಸೃಜನಾತ್ಮಕ ಪ್ರತ್ಯೇಕತೆಯೆಂದರೆ, ಅವರಿಲ್ಲಿ ಉಪಯೋಗಿಸುವ 'ಒಕ್ಕೊರಳ' ಹಾಡಿನ ಧಾಟಿ—ಅಡಿಗರಲ್ಲಾದರೆ ನಾವು ಈ ಹಾಡಿನ ಧಾಟಿಯನ್ನು ಇಂಥ ಕವಿತೆಗಳಲ್ಲಿ ಊಹಿಸಲೂ ಸಾಧ್ಯವಿಲ್ಲ. ಆದರೆ, ನಿಸಾರರ ಹಾಡು ಧಾಟಿಯ ಈ ಪ್ರಯೋಗ ಕುರಿಗಳ 'ಕುರ್ಯಾವಸ್ಥೆ'ಗೆ ಸಹಜವೆಂಬಂತೆ ಒಪ್ಪುವುದರಿಂದ ಅದು ಅರ್ಥೋದ್ದೀಪಕವೂ ಆಗಿದೆ.

ಮುಖ ಮೂರು: 'ನಿತ್ಯೋತ್ಸವ'. ಈ ಪದ ಪುರಂದರದಾಸರ ಕೀರ್ತನೆಯೊಂದರಲ್ಲಿ ಬರುತ್ತದಾದರೂ ಸದ್ಯ ಕನ್ನಡದ ಸಂದರ್ಭದಲ್ಲಿ ಇದು ಮನೆ ಮಾತಾದದ್ದು ನಿಸಾರರ ಇದೇ

ಹೆಸರಿನ ಭಾವಗೀತೆಯಿಂದಾಗಿ. ಇಲ್ಲಿ ಈ ಹಿಂದೆ ನಮೂದಿಸಿದಂಥ ಬಿರುಕುಗಳಿಲ್ಲ; ಹೇಳಿ ಕೇಳಿ ಇದು ಕನ್ನಡಿಗರೆಲ್ಲರ ಧ್ವನಿಯಂತಿರುವ ಸಮೂಹ ಗೀತೆ, ಸರಿ ಸುಮಾರು ಕುವೆಂಪು ರವರ ಸುಪ್ರಸಿದ್ಧ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ'ಯ ಸಾಲಿನಲ್ಲಿ ನಿಲ್ಲುವಂಥದು. ಹಾಗೂ ನಿಸಾರರಿಗೆ ಸರ್ವಮ್ಮತ ಜನಪ್ರಿಯತೆಯನ್ನು ಗಳಿಸಿಕೊಟ್ಟುದು ಈ ಭಾವಗೀತೆಯೇ. ಇದರ ಜನಪ್ರಿಯತೆಯ ಕಾರಣವೇ ಅವರ ನವ್ಯಕವಿಯಾಗಿದ್ದುಕೊಂಡೇ ಭಾವಗೀತೆಯ ತಮ್ಮ ಇನ್ನೊಂದು ಆಯಾಮವನ್ನೂ ಬೆಳೆಸಿಕೊಳ್ಳುವುದು ಬಹುಶಃ ಸಾಧ್ಯವಾಯಿತು. ಈಚೆಗೆ, ನಿಸಾರರನ್ನು 'ರಾಷ್ಟ್ರಕವಿ' ಮಾಡಬೇಕೆನ್ನುವ ಒಂದು ಅಭಿಪ್ರಾಯ ಕೆಲವು ಮೂಲಗಳಿಂದ ಕೇಳಿಬರುತ್ತಿರುವುದು ಈ ಹಿನ್ನೆಲೆಯಲ್ಲಿ ಆಕಸ್ಮಿಕವೇನೂ ಅಲ್ಲ. ಯಾಕೆಂದರೆ, ಒಂದರ್ಥದಲ್ಲಿ ನಿಸಾರರು ಇಡಿಯ ಕನ್ನಡ ನಾಡನ್ನು ಪ್ರತಿನಿಧೀಕರಿಸುವ 'ನಾಡ ಕವಿ'.

ನಿಸಾರ್ ಎಂದರೆ ಹೀಗೆ, ವ್ಯಕ್ತಿ-ಪಂಗಡ-ನಾಡು ಎನ್ನುವ ಮೂರು ಮುಖಗಳೇ ನಮಗೆ ತೋರಮಟ್ಟಿಗೆ ವ್ಯಕ್ತವಾಗುವುದು. ಆದರೆ ಕಾಣಿಸದಂಥ ನಾಲ್ಕನೆಯ ಮುಖವೊಂದು ಇವರ ಕವಿತೆಗಳಿಗಿಲ್ಲವೇ ಎಂದು ವಿಚಾರಿಸುವುದು ಅಗತ್ಯ. ಕೆಲವೊಮ್ಮೆ ಸುಲಭವಾಗಿ ಕಾಣಿಸುವುದು ಸುಲಭವಾಗಿ ಕಾಣಿಸದ್ದನ್ನು ಮುಚ್ಚಿಡುತ್ತದೆ; ನಿಸಾರರ ಮಟ್ಟಿಗೂ ಹೀಗೇ ಆಗಿದೆ. ಆದ್ದರಿಂದ ಈ ಪೂರ್ವಭಾವೀ ದೃಕ್ಕೋನಗಳಿಂದ ತುಸು ದೂರ ಸರಿದು, ನಿಸಾರರ ಕವಿತಾಲೋಕವನ್ನು ನೋಡಿದಾಗ ನಮಗೆ ಕಾಣಿಸುವುದು ವಿರಾಟ್ ಸ್ವರೂಪದ ಅವರ ದಾರ್ಶನಿಕ ಹೊಳಹುಗಳು, ವೈಚಾರಿಕ ಸೂಕ್ಷ್ಮತೆಗಳು, ಜೀವನ ದರ್ಶನಗಳು, ತಾತ್ವಿಕ ಕಾಳಜಿಗಳು, ನೈತಿಕ ಒಲವುಗಳು—ಅರ್ಥಾತ್ ಅಭಿಜಾತ ಕಾವ್ಯ ಮಾರ್ಗ ಯಾವ ಮೌಲ್ಯ ಗಳನ್ನು ಎತ್ತಿ ಹಿಡಿಯಿತೋ ಅದೇ ಮೌಲ್ಯಗಳ ಪ್ರತಿಪಾದನೆ. ನಿಸಾರರು ಕನ್ನಡದ ಸಾಹಿತ್ಯ ಪರಂಪರೆಗೆ ತಮ್ಮನ್ನು ತಾವು ಅನುಸಂಧಾನಿಸಿಕೊಳ್ಳುವುದು ಈ ಬಗೆಯಿಂದ. ಪಂಪ ಪೊನ್ನ ರನ್ನ ಬಸವರಿಂದ ಮೊದಲಾಗಿ ಕುವೆಂಪು ಬೇಂದ್ರೆ ಪುತಿನ ಅಡಿಗರ ತನಕದ ದೊಡ್ಡದೊಂದು ಪರಂಪರೆಗೆ ವಾರಸುದಾರರಂತೆ ನಿಸಾರ್ ಅನಿಸುವುದೂ ಈ ತರದ ಮೌಲ್ಯಾಧಾರಿತ ನಿಲವಿನಿಂದಲೇ. ಇದು ತನ್ನ ಹಿಂದಿನ ಕವಿಗಳನ್ನು ಮೀರಬೇಕೆನ್ನುವ ಉದ್ಧಟ ನಿಲವಲ್ಲ, ಅವರ ದಾರಿದೀಪದಲ್ಲಿ ನಡೆಯಬೇಕೆನ್ನುವ ಇರಾದೆ. ಈ ವಿಷಯವನ್ನು ಅವರು ಕವಿತೆಯಲ್ಲಿ ಹೇಗೆ ನಿಭಾಯಿಸುತ್ತಾರೆ ಎನ್ನುವುದಕ್ಕೆ 'ಸುದ್ದಿ ಮಾಧ್ಯಮಗಳು' ಒಂದು ಉದಾಹರಣೆ. 'ಅರವತ್ತೈದರ ಐಸಿರಿ'(2000)ಯಲ್ಲಿ ಪ್ರಕಟವಾದ ಈ ಕವಿತೆಯ ಹೊರ ವಸ್ತು ಅದರ ಶೀರ್ಷಿಕೆಯೇ ಅನ್ನುವಂತೆ ಸುದ್ದಿ ಮಾಧ್ಯಮಗಳಾದರೂ ಅದು ಪ್ರತಿಪಾದಿಸುವ ಮೌಲ್ಯಗಳು ಕಾಲಾತೀತವಾದುವು. ಈ ನಿಟ್ಟಿನಲ್ಲಿ ಇದೊಂದು ಪ್ರಾತಿನಿಧಿಕವಾಗಿ ತೋರುವ ಕವಿತೆಯಾದ್ದ ರಿಂದ ಇದನ್ನು ಪೂರ್ತಿಯಾಗಿ ಉದ್ಧರಿಸುವುದು ಸರಿಯಾಗಬಹುದು:

ಸುದ್ದಿ ಮಾಧ್ಯಮಗಳು

— 1 —

ಸುದ್ದಿ ಮಾಧ್ಯಮಗಳ ಹಣೆಬರಹವೇ ಅಷ್ಟು;
ಬೆಟ್ಟ ಮಾಡಿ ರವೆಯಷ್ಟನ್ನು

ಎತ್ತಿ ಮೆರೆಸುತ್ತವೆ ಗಪ್ಪನ್ನು.
ಅವುಗಳಿಗೆ ಅತಿ ಮುಖ್ಯ
ಮಿಂಚು, ಮಳೆಬಿಲ್ಲು, ಸಂಜೆ ಮುಗಿಲಿನ ಸಖ್ಯ.
ಶಾಶ್ವತದ ಹೂರಣಕ್ಕೆ ಮಾಡಿ ದಖಲ್ ಪಟ್ಟೆ
ಮುಜುರೆ ಸಲ್ಲಿಸುತ್ತವೆ
ಸಾಮಯಿಕ ಕಣಕಕ್ಕೆ ಪಟ್ಟ ಕಟ್ಟೆ.
ತಾರಾಮೌಲ್ಯವಿರದ ಭೂಪ
ಅವುಗಳ ಪಾಲಿಗೆ ಮರೆವಿನ ಕೂಪ;
ಚಾಲ್ತಿಯಿಲ್ಲದ ಭೂಗತ ಸ್ತೂಪ.
ಎಂದೇ, ಆ ಮಾಧ್ಯಮಗಳ ಉದ್ದಗಲ
ಲೌಕಿಕ ಸಾಧಾರಣರದೇ ನಿತ್ಯ ಗದ್ದಲ:
ರಾಜಕಾರಣಿ ಶಕುನಿ, ಸಿನಿಮಾ ಮೊದ್ದು ಕಣ್ಮಣಿ,
ಕ್ರಿಕೆಟ್ ಶಿಖಾಮಣಿಗಳದೇ ಕೈಫಿಯತ್ತು;
ಅವರದೇ ದೇಖಾವೆಯ ದೊಂಬರಾಟದ ಗರ್ದಿ ಗಮ್ಮತ್ತು.

— 2 —

ಸಾಧನಾಸಮರ್ಪಿತ ಅಂತರ್ಮುಖಿಗಳಾಗಿ
ಲೋಕ ಕಲ್ಯಾಣಾರ್ಥ ಜೀವನವನೆ ಚಂದನಗಳಾಗಿ ನೀಗಿ
ದೂರದೇಕಾಂತದಜ್ಞಾತ ಎಡೆಗಳಲ್ಲಿ
ಪರಿಪಕ್ವವಾಗುತ್ತ ಅಧ್ಯಾತ್ಮ ಅನುಭಾವದಡೆಗಳಲ್ಲಿ,
ಕಂಗಾಲರನವರತ ಕೈಂಕರ್ಯದಾರೈಕೆಯಲ್ಲಿ,
ಸಚರಾಚರದ ಶ್ರೇಯಸಿನ ಹಾರ್ದ ಹಾರೈಕೆಯಲ್ಲಿ
ಬದುಕ ಕೃತಕೃತ್ಯತೆಗೆ ಹಾಯಿಸಿದ
ಯೋಗಿ ಸಂತ ದಾರ್ಶನಿಕ ಮಹಾಕವಿ ಸತ್ವಗಳ
ತೇಜೋಜ್ವಲ ಚಿರ ಚೇತನ ಮಹತ್ವಗಳ
ಅರಿವು ಬಾರದು ಸಮೂಹ ಮಾಧ್ಯಮಗಳಿಗೆ
ದಿನನಿತ್ಯದಾಗುಹೋಗುಗಳ ಬಾಲವನು
ನೇರ್ಪಡಿಸುವುದರಲ್ಲಿ ನಿಮಗ್ನವಾದ ನಫೆಯ ನಳಿಗೆಗಳಿಗೆ.

— 3 —

ಲೋಕದ ಜಾಯಮಾನವೇ ಹೀಗೆ:
ಸುಪ್ರಶಸ್ತ ಅದಕ್ಕೆ ಕಾಗೆ, ಡೇಗೆ;
ನೆನಪಾಗುವುದು ಅಪರೂಪ ಸೋಗೆ.
ಅದರ ಸ್ಥೂಲ ದೃಷ್ಟಿಗೆ ಬಿದ್ದು
ಕಾಣಿಸುವುದು ತತ್‌ಕ್ಷಣಕ್ಕೆದ್ದು
ಮೇಲುಗಡೆ ರಾರಾಜಿಸುವ ಹರಳಿನುಂಗುರದ
ನಾಲ್ಕು ಬೆರಳು ಮಾತ್ರ;
ತಗ್ಗಿನ ಹೆಬ್ಬೆಟ್ಟು ಅದರ ಕೃಪಾವಲೋಕನಕ್ಕೆ ಚಿರ ಅಪಾತ್ರ.

ಆದರದು ಕೆಳಗಿರುತ್ತಲೇ,
ಸ್ವಂತ ಮೇಲ್ಮೆಯನು ಮರೆಸುತ್ತಲೇ
ಸಲ್ಲಿಸುತ್ತದೆ ಸತ್ಕಾಯಕವ, ನಿರಾಭರಣ.
ಎಂದೇ, ಎಲ್ಲ ಬೆರಳುಗಳಿಗಿಂತ ಅದು
ಗಣ್ಯ, ಅಸಾಧಾರಣ.
ಅದರ ನೆರವಿರದೆ ಯಾವುದನು ತಾನೆ
ಹಿಡಿಯಲಾದೀತು ಗಟ್ಟಿ?
ಕಾರ್ಯ ನೆರವೇರಿಸಲಾದೀತು ಬೆರಳುಗಳು ಮುಟ್ಟಿ?
ಅದನುಳಿದು ಮುಚ್ಚಿದರೆ
ಅಪೂರ್ಣ, ಅಸಾರ್ಥಕ ಭದ್ರ ಮುಷ್ಟಿ.

ಸುದ್ದಿ ಮಾಧ್ಯಮಗಳ ತತ್ಕಾಲೀನತೆಯನ್ನು 'ಯೋಗಿ ಸಂತ ದಾರ್ಶನಿಕ ಮಹಾಕವಿ ಸತ್ವಗಳ / ತೇಜೋಜ್ವಲ ಚಿರ ಚೇತನ ಮಹತ್ವಗಳ' ಜತೆ ಈ ಕವಿತೆ ಮುಖಾಮುಖಿ ಯಾಗಿಸುತ್ತದೆ. 'ರಾಜಕಾರಣಿ ಶಕುನಿ, ಸಿನಿಮಾ ಮೊದ್ದು ಕಣ್ಮಣಿ, / ಕ್ರಿಕೆಟ್ ಶಿಖಾಮಣಿ' ಗಳು ಈ ತತ್ಕಾಲೀನತೆಯ ಪಾತ್ರಗಳಾದರೆ, ಯೋಗಿ ಸಂತ ದಾರ್ಶನಿಕ ಮಹಾಕವಿಗಳು ಶಾಶ್ವತದ ಪ್ರತಿನಿಧಿಗಳಾಗುತ್ತಾರೆ. ತತ್ಕಾಲೀನತೆಯನ್ನು ಬಣ್ಣಿಸುವಾಗಿನ ಆಡುಮಾತುಗಳನ್ನೂ ಶಾಶ್ವತತೆ ಯನ್ನು ಬಣ್ಣಿಸುವಾಗಿನ ಅಭಿಜಾತ ಪದ ಪ್ರಯೋಗಗಳನ್ನೂ ನೋಡಬೇಕು: ಇವು ಕವಿತೆಯ ಮನೋಧರ್ಮಕ್ಕೆ ಪೂರಕವಾಗಿ ಬಂದಿರುವಂಥವು. ಕೊನೆಯ ಭಾಗದಲ್ಲಿ ಇದೇ ಮುಖಾಮುಖಿಯನ್ನು ಉಂಗುರಾಲಂಕೃತ ಮೇಲಿನ ಬೆರಳುಗಳು ಹಾಗೂ ನಿರಾಭರಣ ಕೆಳಗಿನ ಹೆಬ್ಬೆರಳು ಆಡಿ ತೋರಿಸುತ್ತವೆ. ಈ ಕವಿತೆ ಸುದ್ದಿ ಮಾಧ್ಯಮಗಳನ್ನು ಹಾಗೂ 'ಲೋಕದ ಜಾಯಮಾನ'ವನ್ನು ಟೀಕಿಸಿದರೂ ಇದು ವ್ಯಂಗ್ಯರಹಿತವಾದ ಟೀಕೆ. ಸಾಧಾರಣವಾಗಿ, ನವ್ಯದ ಸಾಮಾಜಿಕ ರೋಷದಲ್ಲಿ ಕಾಣಿಸುವಂಥ ಏರು ದನಿಯ ಬಯ್ಗುಳವೂ ಇದರಲ್ಲಿ ಇಲ್ಲ. ಒಂದು ರೀತಿಯ ಹದ ಹಾಗೂ ಸಮಚಿತ್ತ ಇಲ್ಲಿ ಎದ್ದು ತೋರುತ್ತದೆ; ಆದ್ದರಿಂದಲೇ ಇದು ಓದುಗರ ಜತೆ ಸಂಭಾಷಿಸುವಂತೆ ಅನಿಸುವುದು, ಅವರಿಗೆ ಉಪದೇಶಿಸುವಂತೆ ಅಲ್ಲ. ಹಾಗೂ ಕವಿತೆಯ ಒಟ್ಟಾರೆ ಬಿಗಿತನವೂ ಇಲ್ಲಿನ ಆಶಯದ ಪ್ರತಿರೂಪದಂತಿದೆ: ಇದು ಸ್ವಯಂ ನಿಯಂತ್ರಣದ ಪ್ರತೀಕ, ಸುದ್ದಿ ಮಾಧ್ಯಮಗಳ ಸಡಿಲುತನಕ್ಕೆ ವಿರುದ್ಧವಾದುದು. 'ನಷೆಯ ನಳಿಗೆ', 'ಭದ್ರ ಮುಷ್ಟಿ' ಮುಂತಾದ ಪದ ಪ್ರಯೋಗಗಳ ಹರಿತ ಬಿಗಿತಗಳನ್ನು ಗಮನಿಸಬೇಕು. ಕವಿತೆಯಾಗಿಯೂ ಇದು ಬಿಗಿ ಮುಷ್ಟಿಯಂತೆ ('ಭದ್ರ ಮುಷ್ಟಿ'ಯಂತೆ) ಶಕ್ತಿಯ ಕ್ರೋಡೀಕರಣ—ಭಾಷೆಯ ಮೇಲೆ ಕವಿಗಿರುವ ನಿಯಂತ್ರಣದಿಂದಷ್ಟೆ ಸಾಧ್ಯವಾಗು ವುದು, ಮತ್ತು ತಾತ್ಕಾಲೀನತೆಯ ಆಚೆ ನೋಡುವ ಕವಿಗಷ್ಟೇ ಪ್ರಾಪ್ತವಾಗುವುದು. ಈ ರೀತಿ ಕವಿತೆ ಸುದ್ದಿ ಮಾಧ್ಯಮಕ್ಕೂ ಕಾವ್ಯಕ್ಕೂ ಇರುವ ಭಿನ್ನತೆಯನ್ನು ಸಹ ಅವ್ಯಕ್ತವಾಗಿ ಗುರುತಿಸುತ್ತದೆ. ಸುದ್ದಿ ಮಾಧ್ಯಮ ಎಷ್ಟಾದರೂ ಒಂದು ಮಾಧ್ಯಮ; ಆದರೆ ಕಾವ್ಯವೊಂದು ಸಿದ್ಧಿ.

ಈ ರೀತಿಯ ಸದ್ಯತೆ ಮತ್ತು ಸಾರ್ವಕಾಲೀನತೆಯ ತುಲನೆ ನಿಸಾರರ ಹಲವಾರು

ಕವನಗಳಲ್ಲಿ ಬರುತ್ತದೆ. 'ಆಧುನಿಕ' ಮನೋಧರ್ಮ ಸಾರ್ವಕಾಲೀನತೆಯನ್ನಾಗಲಿ ಸಾರ್ವತ್ರಿಕತೆಯನ್ನಾಗಲಿ ಒಪ್ಪದಿರುತ್ತ, ನಿಸಾರರ ಕವಿತೆಗಳು ಇದಕ್ಕೆ ವಿರುದ್ಧವಾಗಿ ಆರ್ಷೇಯ ಎನ್ನಬಹುದಾದ ಜೀವನ ಮೌಲ್ಯಗಳತ್ತ ತುಡಿಯುತ್ತಿರುವುದು ಅತ್ಯಂತ ಕುತೂಹಲಕಾರಿಯಾದ ಸಂಗತಿ. ಇಂಥ ಕವಿತಾರಚನೆಯೇ ಅವರು ಸದ್ಯತೆಯನ್ನು ಮೀರಿ ನಿಂತಿರುವುದರ ಕುರುಹು. ನವ್ಯವಾಗಿದ್ದೂ ಪೂರ್ವಕಾಲದ ಮೌಲ್ಯಗಳನ್ನು ಪ್ರತಿಪಾದಿಸಿದ ಟಿ. ಎಸ್. ಎಲಿಯಟ್ ಹಾಗೂ ಗೋಪಾಲಕೃಷ್ಣ ಅಡಿಗರ ಸಮೀಪನ ಇದು. ಎಲಿಯಟ್ ಮತ್ತು ಅಡಿಗರು ತಂತಮ್ಮ ಸಮಕಾಲೀನ ಸಂಸ್ಕೃತಿಗಳ ಕಟು ವಿಮರ್ಶಕರಾಗಿದ್ದರು; ಸಮಕಾಲೀನ ಸಂಸ್ಕೃತಿ ಹಿಂದಿನ ಆರ್ಷೇಯ ಸಂಸ್ಕೃತಿಯೊಂದರ ಕೆಟ್ಟುಹೋದ ರೂಪವೆಂದು ತಿಳಿದಿದ್ದರು; ಹಾಗೂ ಸಮಕಾಲೀನರ ಏಳಿಗೆಯಿರುವುದು ಈ ಹಿಂದಿನ ಮೌಲ್ಯಗಳ ಪುನರುತ್ಥಾನದಲ್ಲಿ ಎಂದು ತಿಳಿದು ಕೊಂಡಿದ್ದರು. ಎಲಿಯಟ್‌ನ ಮಟ್ಟಿಗೆ ಈ ದಿಶೆಯಲ್ಲಿ ಎಝ್ರಾ ಪೌಂಡ್ ಗುರುವಾಗಿದ್ದ—ಅಥವಾ ಈ ಎಲ್ಲ ಕವಿಗಳ ಕುರಿತಾದ ಸ್ವೀಕೃತ ಓದುವಿಕೆ ಹೇಳುವುದು ಇದನ್ನೇ. ಇದರರ್ಥ ಈ ಕವಿಗಳು ಸಮಕಾಲೀನತೆಗೆ ವಿಮುಖರಾಗಿದ್ದರು ಎಂದಲ್ಲ; ಬದಲಿಗೆ, ಸಮಕಾಲೀನ ಸಾಂಸ್ಕೃತಿಕ 'ಅಧಃಪತನ'ದ ಬಗ್ಗೆ ಅವರು ಇತರ ಎಲ್ಲರಿಗಿಂತ ನೊಂದಿದ್ದರು ಎಂದರ್ಥ. ನಿಸಾರರ ಹೆಚ್ಚಿನ ಕವಿತೆಗಳಲ್ಲೂ ನಾವು ಕಾಣುವುದು ಈ 'ದುರಂತ'ದ ಅರಿವನ್ನೇ. 'ಕಿಮ್ಮತ್ತು ಮತ್ತು ಮೌಲ್ಯ'ವೆಂಬ (ಅರವತ್ತೈದರ ಐಸಿರಿ) ಕವಿತೆಯೂ ಮಾಧ್ಯಮಗಳ ಟೀಕೆಯೊಂದಿಗೆ ಸುರುವಾಗುತ್ತದೆ:

> **'ವರ್ತಮಾನ ಸಂಭ್ರಮಿಸಿ ಎಡೆಬಿಡದೆ ಭೂತಗನ್ನಡಿಸುವ**
> **ಮಾಧ್ಯಮಗಳಗ್ರಾಸನವನಿತ್ತು ಮುನ್ನುಡಿಸುವ**
> **ಪ್ರಸಕ್ತ ವಿದ್ಯಮಾನಗಳೇ ನರರ ಜೀವಿತದೆಲ್ಲ**
> **ಹಿರಿಮೆ ಉನ್ನತಿಗಳನು ಮೆರೆವ ರೂಪಕವಲ್ಲ;**
> **ಮಾಳ್ಕೆ, ಗೆಯ್ಮೆಯ ಸಮಸ್ತವನೂ ಕಿಮ್ಮತ್ತಿಸುವ**
> **ಗಜ ಸೇರು ಬೊಟ್ಟುಗಳ ನಿತ್ಯ ಮಾಪಕವಲ್ಲ.**
>
> **ಸದ್ಯಕಾಲೀನ ಶೈಲಿ, ಅಭಿರುಚಿಯ ಗೋಸುಂಬೆಗಳ**
> **ಕ್ಷಣದಗತ್ಯದ ಚಿಟ್ಟೆ ಬಲೂನು ಬೊಂಬೆಗಳ**
> **ಸರ್ವಸ್ವವೆಂದುತ್ಸವಿಸಿ ಮೆರಸುವುದೆ ಯುಗಧರ್ಮ;**
> **ಹುಸೇನನಾವುಟದ ಸಂಚಾರಿ ಭಾವವೇ**
> **ಸುದ್ದಿ ಮಾಧ್ಯಮಗಳಯಸ್ಕಾಂತವೀಗ;**
> **ಹಿಡಿದಿದ್ದಾನೆ ಮೂಲೆ ಮರೆ ಜಾಗ**
> **ಶ್ರೇಯೋವಂತ ಸ್ಥಾಯಿ ರವಿವರ್ಮ.'**

ವರ್ತಮಾನಗಳ ಪತ್ರಿಕೆಗಳೆಂದು ಸುದ್ದಿ ಮಾಧ್ಯಮಗಳಿಗೆ ಇನ್ನೊಂದು ಹೆಸರು; ಕಾರಣ, ಅವು ವರ್ತಮಾನವನ್ನೇ ಯಾವತ್ತೂ ಪ್ರತಿಬಿಂಬಿಸುವಂಥವು. ಸದ್ಯತೆಯನ್ನು ವೈಭವಿಸುವ ಸಂಚಾರಿ ಭಾವಗಳು ಅವನ್ನು ಅಯಸ್ಕಾಂತದಂತೆ ಆಕರ್ಷಿಸುತ್ತವೆ. ನಿಸಾರರ ಕೈಯಲ್ಲಿ, ಹುಸೇನರ ಚಿತ್ರಗಳು ಇಂಥ ಯುಗಧರ್ಮವನ್ನು ಮೆರೆಸುವ 'ಸಂಚಾರಿ'

ಭಾವಗಳಿಗೂ ಇದಕ್ಕೆ ವಿರುದ್ಧವಾಗಿ ಸಾರ್ವಕಾಲಿಕ ಮೌಲ್ಯಗಳನ್ನು ಬಿಂಬಿಸುವ ರವಿವರ್ಮನ ಚಿತ್ರಗಳು 'ಸ್ಥಾಯಿ' ಭಾವಗಳಿಗೂ ರೂಪಕವಾಗಿವೆ. ಆದರೂ ಕವಿತೆ ಭರವಸೆರಹಿತವಾಗಿಲ್ಲ :

'ಇರುವಂತೆ ತಾತ್ಕಾಲಿಕಕ್ಕೊಂದು
ಕಣ್‌ಕುಕ್ಕುವ ಬೆಡಗಿನ ಬೆಲೆ,
ಕಾಲ ಸನ್ಮಾನಿತ ಸಂಗತಿಗಳಿಗೂ ಉಂಟು
ಬಾಳಿನಲಿ ಅಸಾಮಾನ್ಯ ಮೌಲ್ಯದ ನಿರಾಡಂಬರ ನೆಲೆ.
ಚಿರ ಅಚಿರ, ಅಲ್ಪ ಮಹತ್ತುಗಳ ವ್ಯತ್ಯಾಸ
ಅರಿಯದ ಸಾಮಾಜಿಕರ ಬಾಳ್ವೆ ಬಾಳ್ವೆಯೇ?
ಅದೊಂದು ಕಲ್ಗತ್ತಲಿನ ಗುಹಾವಾಸ.

ದಕ್ಕದಿರುವ ಮಾತ್ರಕ್ಕೆ ಪ್ರಸ್ತುತ ಜಗದ
ಬಹುಮತೀಯ ಮನ್ನಣೆಯ ಮೊದಲ ಮಣೆ
ಬತ್ತಿ ಹೋಗುವುದಿಲ್ಲ ಸೀಮಾಸಾಧಕರ ಜಸದ,
ಮಹನೀಯತೆಯ ಸವಿ ಸೆಲೆಯ ದೋಣೆ.
ಎಂದೇ, ಪ್ರಚಲಿತತೆಯೆ ಪರಮವೇನಲ್ಲ;
ಹುರುಳನೊಳಮರೆಸಿ ಮೆರೆದಿರುವ ಮರುಳು ಸಿಪ್ಪೆಗೆ
ಮನ ಸೋತು ಸುರಿಸಬಾರದು ಜೊಲ್ಲ.'

ಇಡಿಯ ಕವಿತೆಯಲ್ಲಿ 'ಕಿಮ್ಮತ್ತು' ಹಾಗೂ 'ಮೌಲ್ಯ'ದ ದ್ವಂದ್ವವಿದೆ: ಮಾರ್ಕ್ಸ್ ಅನ್ನುವ 'ಮುಖ ಬೆಲೆ' ಮತ್ತು 'ವಿನಿಮಯ ಬೆಲೆ'ಯ ತರ. ಮುಖ ಬೆಲೆಯೆಂದರೆ ವಸ್ತುಗಳ ಮೇಲೆ ಬರೆದಿರುವ ಕ್ರಯ; ವಿನಿಮಯ ಬೆಲೆಯೆಂದರೆ, ವಸ್ತುಗಳಿಗೆ ನಿಜಕ್ಕೂ ಇರುವ ಮೌಲ್ಯ. ವಸ್ತುಗಳ ನಿಜವಾದ ಮೌಲ್ಯ ಯಾವತ್ತೂ ಮುಖ ಬೆಲೆಗಿಂತ ಜಾಸ್ತಿಯಿರುತ್ತದೆ. ಆದ್ದರಿಂದಲೆ, ಇದನ್ನು ಮೌಲ್ಯ ಅನ್ನುತ್ತೇವೆ—ಕ್ರಯ ಎಂದಲ್ಲ. ನಿಸಾರರು ಹೋಲಿಸುವುದು ಈ ಮಾರ್ಕೆಟ್ ನಿಯಂತ್ರಿತ ಕ್ರಯ (ಕಿಮ್ಮತ್ತು) ಹಾಗೂ ಮಾರ್ಕೆಟ್‌ಗೆ ಅತೀತವಾದ ಮೌಲ್ಯ; ಬಹುಮತೀಯ ಮನ್ನಣೆ ಪ್ರಸ್ತುತಕ್ಕೆ, ಸದ್ಯತೆಗೆ, ವರ್ತಮಾನಕ್ಕೆ ಸೇರಿದ ಸಂಗತಿ; ಹಾಗೂ ಮೌಲ್ಯವೆನ್ನುವುದು ಯಾವುದೇ ಪ್ರಸ್ತುತಕ್ಕೆ ಸೇರಿರದೆ, ಸಾರ್ವಕಾಲಿಕವಾದುದು. ಈ ಅರ್ಥಶಾಸ್ತ್ರದ ಸಾದೃಶ್ಯ ಕವಿತೆಯ ಮುಂದಿನ ಸಾಲುಗಳಲ್ಲಿ ವ್ಯಕ್ತವಾಗಿ ಬರುತ್ತದೆ:

'ಹಾಲಿ ಬದಲಾವಣೆಯ ಅಗಣಿತ ನಾಣ್ಯ—
ಗಳಿಗಿಂತ ಪ್ರಾಚೀನ ಚಿನ್ನದ ವರಹ ಅಧಿಕತರ ಮಾನ್ಯ.
ದೈನಿಕ ವ್ಯವಹಾರಗಳಿಗೊದಗದ ಮಾತ್ರಕ್ಕೆ, ಅಸಡ್ಡೆ ಹೊಂದಿ
ನಿಧಿ ಸಂಗ್ರಹದಿಂದೆತ್ತಿ ಆಚೆಗೆಸೆಯದು ಮಂದಿ.
ಅವುಗಳ ಪ್ರಾಕ್ತನ ಮಹತ್ವ, ಕಾಂಚನಾಂಶದನರ್ಘ್ಯತೆ,
ಸರ್ವಗಣ್ಯತೆಗೆ ತಾಕದು ಕುಂದು
ಇಂದು ಮುಂದು ಎಂದೆಂದೂ.
ನಯೇ ಪೈಸೆಗಳ ಮುಂಚಿನ ಆಣೆ ಕಾಸುಗಳ ಹಾಗೆ,

ತತ್ಕಾಲದಲಿ ಚಲಾವಣೆ ಪಡೆದು
ತಂತಾನೆ ಬೀಗಿ ವಿಜೃಂಭಿಸಿರುವ ಹಣ
ಮುಂದೊಮ್ಮೆ ಆದೀತು ನಿರುಪಯುಕ್ತ ಹೆಣ.
ಪ್ರಾಚ್ಯ ನಾಣ್ಯಗಳಿಗೆ ಆ ಭಯವಿಲ್ಲ.
ಒದಗುವುದು ಅವಕ್ಕೆ ದೇಶವಿದೇಶಗಳಲ್ಲಿ ಮಹತ್ವ,
ಭೇದ ಗಣನೆಯಿಲ್ಲದ ಬಹುಮುಖತ್ವ.
ಕಾಲಪುಷ್ಟಿಯಿಂದಾಗುತ್ತ ಅವು ಅನವರತ ಅರ್ವಾಚೀನ,
ಮುನ್ನಡೆಯುತ್ತ ಪಡೆಯುತ್ತವೆ ಅನ್ಯಾದೃಶ ನಿತ್ಯತ್ವ.'

ಸಂಸ್ಕೃತ ಮೂಲದಿಂದ ಕನ್ನಡಕ್ಕೆ ಬಂದು ಪ್ರಚಲಿತವಿರುವ 'ಅರ್ಥ'ವೆಂಬ ಪದ ಮಾತಿನ ಸಾರವೆಂದೂ ಹಣಕಾಸೆಂದೂ ಎರಡು ರೀತಿಗಳಲ್ಲಿ ಬಳಕೆಯಾಗುತ್ತದೆ. ಹಣ ಕಾಸಿಗೆ ಸಂಬಂಧಿಸಿದಂತೆ, ನಾವು ಹಣದ ಉಬ್ಬರದ ಬಗ್ಗೆ ಮಾತಾಡುತ್ತೇವೆ; ಹಣದ ಚಲಾವಣೆ ಅಧಿಕವಾಗಿ, ವಸ್ತುಗಳ ಬೆಲೆ ಅಧಿಕವಾದಾಗ ಹಣ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತ ಅಗ್ಗವಾಗುತ್ತಿರುತ್ತದೆ. ಅದೇ ವಿದ್ಯಮಾನ ಮಾತಿನ ಅರ್ಥಕ್ಕೆ ಸಂಬಂಧಿಸಿಯೂ ಆಗಬಹುದು. ಪದಗಳನ್ನು ಲಘುವಾಗಿ ತೆಗೆದುಕೊಂಡಾಗ ನಡೆಯುವ ಸಂಗತಿ ಇದು. ನಿಸಾರರ ಕವಿತೆ ಈ ತರದ ಮಾತಿನುಬ್ಬರದ ಪರಿಣಾಮವನ್ನು ಆಣೆ ಕಾಸುಗಳು ಮತ್ತು ಪ್ರಾಚ್ಯ ನಾಣ್ಯಗಳ ನಡುವಣ ವ್ಯತ್ಯಾಸದ ಮೂಲಕ ಚಿತ್ರಿಸುತ್ತದೆ. ಪ್ರಾಚ್ಯ ನಾಣ್ಯಗಳು ಯಾವತ್ತೂ ತಮ್ಮ ಮೌಲ್ಯವನ್ನು ಕಳೆದುಕೊಳ್ಳಲಾರವು, ಯಾಕೆಂದರೆ ಅವು 'ಸ್ವರ್ಣ ಪ್ರಮಾಣ'ಕ್ಕೆ ('ಗೋಲ್ಡ್ ಸ್ಟಾಂಡರ್ಡ್'ಗೆ) ಒಳಗಾದುವು—ಅರ್ಥಾತ್, ಹಣದ ಮೌಲ್ಯವನ್ನು ಸದಾ ಕಾಪಾಡಿಕೊಳ್ಳುವಷ್ಟು ಪ್ರಮಾಣದ ಚಿನ್ನದಿಂದ ಟಂಕಿಸಲ್ಪಟ್ಟ ನಾಣ್ಯಗಳಿವು. ಕಾಲ ಮುಂದುವರಿದಂತೆ, ಅವಕ್ಕೆ ಚಾರಿತ್ರಿಕ ಹಿರಿಮೆ ಮಹಿಮೆಗಳು ಕೂಡಾ ಬರುವುದರಿಂದ ಅವುಗಳ ಬೆಲೆಯೇನಿದ್ದರೂ ಜಾಸ್ತಿಯಾಗುತ್ತ ಹೋಗುತ್ತದೆ. ಆದರೆ ಆಣೆ ಕಾಸುಗಳಲ್ಲಿ ಈ ತರದ ಪದಾರ್ಥಗುಣ ಸಾಕಷ್ಟು ಇಲ್ಲದಿದ್ದು ಅವುಗಳ ಮೊಬಲಗು ಕೇವಲ ಸರಕಾರೀ ಮೊಹರಿನ ಮೇಲೆ ಆಧರಿತವಾಗಿರುವುದರಿಂದ ಅವು ಚಲಾವಣೆಯಲ್ಲಿ ಹೆಚ್ಚಾದಷ್ಟೂ ಅಪಮೌಲ್ಯಗೊಳ್ಳುವುದು ಜಾಸ್ತಿ. ಆದ್ದರಿಂದ :

'ಹಾಲಿ ಬದಲಾವಣೆಯ ಅಗಣಿತ ನಾಣ್ಯ-
ಗಳಿಗಿಂತ ಪ್ರಾಚೀನ ಚಿನ್ನದ ವರಹ ಅಧಿಕತರ ಮಾನ್ಯ.'

ನಿಸಾರರ ಇಡೀ ಕಾವ್ಯದ ಕೊಡುಗೆಯನ್ನು ತೆಗೆದುಕೊಂಡರೆ ಈ ತರದ ಉನ್ನತ ಮೌಲ್ಯ ಪ್ರತಿಪಾದನೆಯ ಕವಿತೆಗಳೇ ಜಾಸ್ತಿ ಮಾತ್ರವೇ ಅಲ್ಲ, ತೂಕದವೂ ಆಗಿರುವುವು. ಇವೆಲ್ಲವೂ ಬೋಧನಾತ್ಮಕ ರೀತಿಯವೆನ್ನುವುದೂ ಗಮನಾರ್ಹ. ಇದರಲ್ಲಿ ಆಶ್ಚರ್ಯವಿಲ್ಲ. ಯಾಕೆಂದರೆ ನೀತ್ಯಾತ್ಮಕ ಕವಿತೆಯ ಮುಖ್ಯ ಗುಣವೇ ಬೋಧನೆ. ಅಡಿಗರ ಇಂಥ ಹಲವು ಕವಿತೆಗಳು—ಉದಾಹರಣೆಗೆ, 'ವರ್ಧಮಾನ'—ಅಬ್ಬರವನ್ನೂ ವ್ಯಂಗ್ಯವನ್ನೂ ಧಾರಾಳವಾಗಿ ಉಪಯೋಗಿಸಿಕೊಳ್ಳುತ್ತವೆ; ಆದ್ದರಿಂದ ಅಡಿಗರಲ್ಲಿ ಸಿಟ್ಟು, ಹತಾಶೆಗಳೇ ಜಾಸ್ತಿಯಾದಂತೆ ಅನಿಸಿಬಿಡುತ್ತದೆ. ಹೀಗಿದ್ದೂ ಅಡಿಗರದು ಬೋಧನಾತ್ಮಕ ಕಾವ್ಯ. ಎಲ್ಲೋ ಏನೋ ದಾರಿ

ತಪ್ಪಿದೆ, ಅದನ್ನು ಸರಿಪಡಿಸಿಕೊಳ್ಳಬೇಕು ಎನ್ನುವ ಹಂಬಲ. ಆದರೆ ಈ 'ಸರಿ'ಯಾದ ದಾರಿಯನ್ನು ಕುರಿತು ಅಡಿಗರಿಗಿರುವಷ್ಟು ಖಚಿತತೆ ಶರ್ಮರಿಗಿಲ್ಲ. ಈಚೆಗೆ ಹಲವು ಉತ್ತಮ ಕವಿತೆಗಳನ್ನು ರಚಿಸಿದ ಅನಂತಮೂರ್ತಿಯವರ ರಚನೆಗಳಲ್ಲಿ ಕೂಡಾ ಈ ಬೋಧನ ಪ್ರಿಯತೆಯನ್ನು ಗಮನಿಸ ಬಹುದು. ಅಡಿಗರ ಕಾಲದಲ್ಲೇ ಕನ್ನಡದಲ್ಲಿ ನವ್ಯ ಕಾವ್ಯರಚನೆಗೆ ಕೈಹಾಕಿದ ಎ. ಕೆ. ರಾಮಾನುಜನ್‌ರದು ಮಾತ್ರ ಭಿನ್ನವಾದ ರೀತಿಯಾಗಿದ್ದಿತು: ಅವರ ಕವಿತೆಗಳು ಚಿತ್ರಿಸುತ್ತವೆ, ಧ್ವನಿಸುತ್ತವೆ ಹೊರತು ಏನನ್ನೂ ಹೇಳುವುದಿಲ್ಲ. ಈ ಕಾರಣಕ್ಕೆ ಈ ಚಿತ್ರಿಸುವ, ಧ್ವನಿಸುವ ಕವಿಗಳು ಯಾರೂ ಗುರು ಸ್ಥಾನದಲ್ಲಿ ನಿಂತುಕೊಳ್ಳುವುದೂ ಇಲ್ಲ. ಅವರೇನಿದ್ದರೂ ಪಾರ್ಶ್ವದಲ್ಲಷ್ಟೇ ಇರುತ್ತಾರೆ. ಪಾರ್ಶ್ವದಲ್ಲಿದ್ದರೆ ಸಿಗುವ ನೋಟವೇ ಬೇರೆಯಾಗಿರುತ್ತದೆ. ನಿಸಾರರು ಈ 'ಪಾರ್ಶ್ವನೋಟ'ದ ಕವಿತೆಗಳನ್ನು ಸಾಕಷ್ಟು ಬರೆದಿದ್ದಾರಾದರೂ ಅವರ ಕೊಡುಗೆಯಲ್ಲಿ ಮುಖ್ಯವೆನಿಸುವುದು ನೇರ ನೋಟದ ಗಂಭೀರ ಕವಿತೆಗಳೇ. ಆದ್ದರಿಂದಲೆ ಅವರು ಅಡಿಗ, ಶರ್ಮ, ಅನಂತಮೂರ್ತಿಯವರ ಹಾದಿಯಲ್ಲೇ ಮುಂದುವರಿಯುವಂತೆ ಅನಿಸುವುದು.

ಆದರೂ ಇವರ ಯಾರ ಶೈಲಿಯನ್ನೂ ಅನುಸರಿಸದೆ, ನಿಸಾರರು ತಮ್ಮ ಅಭಿವ್ಯಕ್ತಿಗೆ ನವೋದಯದ ಹಿರಿಯ ಕವಿಗಳಿಗೆ ಪ್ರಿಯವಾಗಿದ್ದ ಪ್ರಾಸಬದ್ಧತೆಯನ್ನೂ ಬಂಧ ಪ್ರೀತಿ ಯನ್ನೂ ತಮಗೆ ಬೇಕಾದ ಬದಲಾವಣೆಗಳೊಂದಿಗೆ ಸ್ವೀಕರಿಸಿಕೊಳ್ಳುವುದನ್ನು ನೋಡ ಬಹುದು. ಇಂಥ ಸ್ವೀಕಾರವೇ ಒಂದು ಅರ್ಥ ನೀಡುತ್ತದೆ—ಅದು ಈ ಕವಿತೆಗಳ (ವಚನ, ಕೀರ್ತನೆ, ಶತಕ, ತತ್ವಪದಗಳೇ ಮುಂತಾದ) ಹಿಂದಿನ ಕಾವ್ಯ ಪರಂಪರೆಯೊಂದಿಗೆ ನಡೆಸುವ ಅನುಸಂಧಾನದ ಇತ್ಯಾತ್ಮಕತೆ. ಆದ್ದರಿಂದಲೇ ನಿಸಾರರ ಕವಿತೆಗಳು ಅಡಿಗ, ಶರ್ಮ, ಅನಂತಮೂರ್ತಿ ಮುಂತಾದವರ ಕವಿತೆಗಳಿಗಿಂತ ಹೆಚ್ಚಿನ ರೀತಿಯಲ್ಲಿ ಹಿಂದಿನ ಬೋಧನಾತ್ಮಕ ಕಾವ್ಯ ಪರಂಪರೆಯ ಮುಂದುವರಿದ ಭಾಗದಂತೆ ನಮಗೆ ಕಾಣಿಸಲು ಸಾಧ್ಯ ವಾಗುವುದು. ಈ ಕವಿತೆಗಳಿಗೆ ಅಭಿಜಾತ ಗುಣ ತಾನಾಗಿಯೇ ಒದಗಿ ಬಂದಿರುವುದಕ್ಕೆ ಒಂದು ಕಾರಣ ಇದು ಕೂಡಾ.

ಇನ್ನೊಂದು ಕಾರಣ ಇಲ್ಲಿನ ಬಂಧನದಲ್ಲಿ ತೋರುವ ಬಿಗಿ : ಪ್ರಾಸಗಳ ಉಪಯೋಗ ಮಾತ್ರವಲ್ಲದೆ, ಪದವಿನ್ಯಾಸದಲ್ಲಿ ಕಾಣುವ ಸೂಕ್ಷ್ಮಜ್ಞತೆ, ಆಯವ್ಯಯ ಜ್ಞಾನ, ಸಂಸ್ಕೃತ ಭೂಯಿಷ್ಠತೆ, ಹಳೆ ಹೊಸ ಕನ್ನಡ ನುಡಿಕಟ್ಟು—ಇವೆಲ್ಲವೂ ಈ ಬಿಗಿಗೆ ಕಾರಣ ವಾಗುತ್ತವೆ; ಮಾತ್ರವಲ್ಲ, ಕವಿತೆಗಳ ಸಂದಿಗ್ಧರಹಿತವಾದ ತಾತ್ವಿಕ ನಿಲವಿಗೆ ಸಹಾಯಕ ವಾಗುತ್ತವೆ. ಆದರೂ, ನಿಸಾರರ ಶೈಲಿ ವಿಶಿಷ್ಟವಾದ್ದು ಹಾಗೂ ಹೊಸತನದಿಂದ ಕೂಡಿದ್ದು. ಕನ್ನಡ, ಸಂಸ್ಕೃತ ಪದಗಳ ಜತೆ ಜತೆಗೇ ಅವರು ಪರ್ಶಿಯನ್, ಅರೇಬಿಕ್, ಇಂಗ್ಲಿಷ್ ಮೂಲದ ಪದಗಳನ್ನೂ ಆಡುನುಡಿಗಳನ್ನೂ ಉಪಯೋಗಿಸುತ್ತಾರೆ. ಆಪ್ಯಾಯಮಾನವಾದ ವಿನೂತನ ಪದಪ್ರಯೋಗಗಳನ್ನೂ ನಡೆಸುತ್ತಾರೆ. ಸಂಕೀರ್ಣ ಜಗತ್ತಿಗಾಗಲಿ, ಬಹುಳತ್ವ ಕ್ಕಾಗಲಿ ಅವರು ವಿಮುಖರಾಗುವುದಿಲ್ಲ; ಬದಲಿಗೆ ಅವುಗಳ ಉಪಯೋಗ ಪಡೆದುಕೊಳ್ಳು ತ್ತಾರೆ. ಆದ್ದರಿಂದಲೇ ಅವರ ಕವಿತೆಗಳು ಎಝ್ರಾ ಪೌಂಡ್ ಹೇಳಿದ 'ಹೊಸದಾಗಿಸು' ಎಂಬ

ಆದೇಶವನ್ನು ತಾತ್ವಿಕವಾಗಿ ಪಾಲಿಸುವಂತಿವೆ. ಎಲ್ಲೋ ಒಂದೆಡೆ ನಿಸಾರರ ಈ ಅಭಿವ್ಯಕ್ತಿ ವಿಧಾನವೇ ಬದುಕಿನ ಉನ್ನತ ಮೌಲ್ಯಗಳ ಒಂದು ಮಹತ್ವದ ಅನ್ವೇಷಣೆಯಂತೆ ನಮಗನಿಸಿದರೆ ಆಶ್ಚರ್ಯವಿಲ್ಲ. ಆದ ಕಾರಣ ಈ ಕವಿತೆಗಳು ತಾವೇನನ್ನು ಅಭಿವ್ಯಕ್ತಗೊಳಿಸಲು ಪ್ರಯತ್ನಿಸುತ್ತಿವೆಯೋ ಅವೇ ತಾವಾಗಲು ನಡೆಸುವ ಪ್ರಯತ್ನವೂ ಹೌದು. ಕವಿ ಋಷಿಯೆನಿಸುವುದು ಇಂಥ ಕ್ಷಣಗಳಲ್ಲೇ.


ಪ್ರಾಚೀನರೊಂದಿಗೆ ನಮ್ಮ ಬಾಳುವೆಯ ಕೃಪಣತೆ, ಚಪರಾಸಿತನಗಳನ್ನು ಹೋಲಿಸಿಕೊಂಡು ದೈನ್ಯೋದಾಸರಾಗಿ ಹಣೆ ಚಚ್ಚಿಕೊಂಡು ನಿಷ್ಕ್ರಿಯ ಗೊಣಗರಾಗಿ ನಡೆಗೆಡುವುದು ದೇಶದ ಮುನ್ನಡೆಗೆ ಮಾರಕ. ಆಗೆಲ್ಲ ದೇಶಾದ್ಯಂತ ಅಮೃತವಾಹಿನಿಯೇ ಹರಿದು ಬದುಕಿನ ದುಗುಡ ದುಮ್ಮಾನಗಳು ಕೊಚ್ಚಿಹೋಗಿದ್ದವೆಂದೂ ವೈಭವವೇ ಜೀವನದ ಸಾಧಾರಣ ಸ್ಥಿತಿಯಾಗಿತ್ತೆಂದೂ ಕಲ್ಪಿಸಿಕೊಂಡು ಬೀಗುವ ಸ್ವಾತಂತ್ರ್ಯ ಎಲ್ಲರಿಗಿದೆ. ಆದರೆ ಅದಷ್ಟೇ ಸಾಕೆ? ಆ ವೈಭವವನ್ನು ನಿತ್ಯ ಬಾಳ್ವೆಯಲ್ಲಿ ನೆಲೆಯೂರಿಸಿದ ಶಕ್ತಿಗಳು ಯಾವುವು? ಹಳಬರ ಹಲವು ಹಿರಿಮೆಗಳಲ್ಲಿ ನಮ್ಮ ತ್ರಸ್ತ ಬದುಕು ಎಷ್ಟನ್ನು ಸ್ವಯಮಾರ್ಜಿಸಿಕೊಂಡಿದೆ? ಎಂದು ವಿಚಾರಿಸಿ ಆತ್ಮ ಪರೀಕ್ಷೆ ಮಾಡಿಕೊಳ್ಳುವುದು ಬೇಡವೆ? ತರ್ಕಕ್ಕಿಂತ ತಾದಾತ್ಮ್ಯಕ್ಕೆ, ಬುದ್ಧಿಗಿಂತ ಭಾವಾತಿಶಯಕ್ಕೆ ಹೊರಳುವ ಪ್ರವೃತ್ತಿಯೇ ಹೆಚ್ಚಾಗಿರುವ ನಮ್ಮ ಬದುಕುಗಳು ಅನುದ್ವಿಗ್ನ ಆತ್ಮ ಶೋಧದಿಂದ ಭೂತವನ್ನು ಬೋಧಪ್ರದಗೊಳಿಸಿಕೊಳ್ಳುವತ್ತ ಸಜ್ಜಾಗಬೇಕಾದ ಸಮಯ ಇದೀಗ ಸನ್ನಿಹಿತವಾಗಿದೆ.

(ಭೂತ ಕಾಲದ ಸದುಪಯೋಗ)

✧ ✧ ✧

ಮನುಷ್ಯನ ಪಾಲಿಗೆ ಭೂತ ಕಾಲ ಮುಗಿದ ಮಂಡಿಗೆ, ಪ್ರಸ್ತುತವೆನ್ನುವುದು ಬೇವು-ಬೆಲ್ಲದ ಮಿಶ್ರ ಪಾಕ. ಭವಿಷ್ಯವಷ್ಟೇ ಆಶೋತ್ತರ ನೆರವೇರಿಕೆಯ ಸವಿ ತಿನಿಸಿನ ತುಂಬು ಕಪಾಟು. ಹೀಗಾಗಿ ಅವನಿಗೆ ಅಚ್ಚುಮೆಚ್ಚಾಗುವುದು, ಆಗಬೇಕಾದದ್ದು ಭವಿಷ್ಯವೇ. ಏಕೆಂದರೆ ಅದು ಇನ್ನೂ ಘಟಿಸದಿರುವ ಅನುಭೂತಿ. ಎಂದೇ, ವಾಸ್ತವದ ಬಿರು ಬಿಸಿಲಿಗಿಂತ ಕಲ್ಪನಾಂಶದ ಬೆಂಬೆಳಕೇ ಅದರ ಸ್ವಭಾವ, ಸತ್ತ್ವ.

(ಭವಿಷ್ಯವೇ ಆಶಾಸೂಚಿ)



ನಿಸಾರರ ಕವಿತೆಗಳಲ್ಲಿ ಧಾರ್ಮಿಕ ನಿಲವುಗಳು

♦ ಡಾ. ವಿಜಯ ಸುಬ್ಬರಾಜ್

ನಿಸಾರ್ ಅಹಮದ್ ಅವರ ಕಾವ್ಯದಲ್ಲಿ ಧಾರ್ಮಿಕ ಚಿಂತನೆಗಳ ಶೋಧಕ್ಕೆ ಮುನ್ನ ಅವರ ಗದ್ಯ ಲೇಖನಗಳ ಸಂಕಲನವಾದ 'ಹಿರಿಯರು ಹರಸಿದ ಹೆದ್ದಾರಿ'ಯಲ್ಲಿನ 'ಕನ್ನಡದ ನುಡಿ ಮುಡಿಗೆ ಕುರ್‌ಆನ್‌ನ ಸಿರಿ ಕೊಡುಗೆ' 'ಇಸ್ಲಾಮಿ ಅಧ್ಯಾತ್ಮದ ಸೀಮಾಸಾಧಕರು : ಸೂಫಿಗಳು 'ಮುಳ್ಳಿನ ಮಕುಟದ ಮಸೀಹ' —ಎಂಬ ಮೂರು ಲೇಖನಗಳಲ್ಲಿ ವ್ಯಕ್ತವಾಗುವ ಧರ್ಮ, ಅಧ್ಯಾತ್ಮ ಸಂಬಂಧವಾದ ಅವರ ನಿಲವುಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಧರ್ಮ ಎನ್ನುವುದನ್ನು 'ಮತ' ಎಂಬ ಸಂಕುಚಿತ ಅರ್ಥದಲ್ಲಿ ಗಮನಿಸದೆ ದಯೆ, ಕರ್ತವ್ಯ, ಪ್ರೀತಿ, ಕರುಣೆ ಎಂಬೆಲ್ಲ ವ್ಯಾಪಕ ಅರ್ಥದಲ್ಲಿ ಸ್ವೀಕರಿಸಿದ್ದಾರೆ. 'ಧರ್ಮ' ಎಂಬುದನ್ನು ಅಧ್ಯಾತ್ಮ ಸಂಬಂಧವಾದದ್ದು, 'ಪರ' ವಸ್ತುವನ್ನು ಕುರಿತದ್ದು ಎಂದೆಲ್ಲ ಗ್ರಹಿಸುತ್ತಲೇ ಬೇರೆ ಬೇರೆ ಅರ್ಥಗಳೊಂದಿಗೂ ಬದುಕಿನ ವ್ಯವಹಾರದಲ್ಲಿ, ಸಮಾಜದಲ್ಲಿ ಚಲಾವಣೆಯಾಗುತ್ತಿರುವುದೂ ಸ್ವೀಕೃತವಾಗುತ್ತಿರುವುದೂ ಮನುಷ್ಯನ ಗ್ರಹಿಕೆಯ ವೈಶಾಲ್ಯಕ್ಕೆ ನಿದರ್ಶನವಾಗಿದೆ. ದೇವರು, ಅಧ್ಯಾತ್ಮ ಸಂಬಂಧಿ ನಂಬಿಕೆಗಳನ್ನೇ 'ಧರ್ಮ'ವೆಂದು ಒಂದು ಹಂತದಲ್ಲಿ ಭಾವಿಸುವುದಾದರೆ, ಅವುಗಳನ್ನು ಆಧರಿಸಿದ ವಿಧಿ ವಿಧಾನ ಆಚರಣೆಗಳನ್ನು ಸಂಸ್ಕೃತಿ ವಲಯದಲ್ಲಿ ಸ್ವೀಕೃತವಾಗಿಸಬಹುದು. 'ಧರ್ಮ' ವಸ್ತುನಿಷ್ಠವೂ ಹೌದು, ವ್ಯಕ್ತಿನಿಷ್ಠವೂ

ಹೌದು. `ಧರ್ಮ`ದ ಪರಿಕಲ್ಪನೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ಅವರವರ ಭಾವಕ್ಕೆ, ದರ್ಶನಕ್ಕೆ ಅನುಗುಣವಾಗಿ `ಧರ್ಮ` ರೂಪುಗೊಳ್ಳುತ್ತದೆ. ಇಂತಹ ಸ್ಥೂಲ ಚಿಂತನೆಯ ಹಿನ್ನೆಲೆಯಲ್ಲಿ, ನಿಸಾರ್ ಅಹಮದ್ ಅವರ ಧಾರ್ಮಿಕ, ಸಾಂಸ್ಕೃತಿಕ ಚಿಂತನೆಗಳ ಹುಡುಕಾಟ—ಅದು ಭಿನ್ನವಾದ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಲ್ಲಿ ಬೆಳೆದು ಬಂದಿರುವಾಗ, ನಿಜವಾಗಿಯೂ ಒಂದು ಸವಾಲಾಗಬಹುದು; ಕುತೂಹಲಕಾರಿಯೂ ಆಗಬಹುದು. ಕುರ್‌ಆನ್ ಬಗ್ಗೆ, ಅದರ ಅಮೂಲ್ಯ ಕೊಡುಗೆಯ ಬಗ್ಗೆ ಮಾತನಾಡುತ್ತಾ, ದೊಡ್ಡ ಸಂಖ್ಯೆಯ ಇಸ್ಲಾಂವಾದಿಗಳ ಸಂಕುಚಿತ ನಿಲವು ಧೋರಣೆಗಳಿಗಿಂತ ಮತ್ತು ಕಟ್ಟಾ ಸಂಪ್ರದಾಯವಾದಿಗಳಿಗಿಂತ ಭಿನ್ನವಾಗಿ, ಅತ್ಯಂತ ವಿಶಾಲವಾದ ನೆಲೆಯಲ್ಲಿ 'ಧರ್ಮ'ವನ್ನು ವ್ಯಾಖ್ಯಾನಿಸಿರುವುದು, ನಿಸಾರ್‌ರ 'ಧರ್ಮ' ಪರಿಕಲ್ಪನೆಗೆ ಸರ್ವ ವ್ಯಾಪಕತ್ವವನ್ನು ಕಲ್ಪಿಸಿದೆ. ಅವರ ದೃಷ್ಟಿಯಲ್ಲಿ ಧಾರ್ಮಿಕ ಗ್ರಂಥಗಳು ಕೇವಲ ಧರ್ಮಬೋಧೆಗಷ್ಟೇ ಸೀಮಿತಗೊಳ್ಳದೆ ಬೇರೆ ಬೇರೆ ಆಯಾಮಗಳನ್ನೊಳಗೊಂಡಿವೆ. ಅವರ ಮಾತಿನಲ್ಲೇ ಹೇಳುವುದಾದರೆ ಯಾವುದೇ ಧಾರ್ಮಿಕ ಗ್ರಂಥ ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ ದೃಷ್ಟಿಯಲ್ಲಿ ಸನ್ಮಾನ್ಯ. ಹಾಗೆಯೇ `ಬೇರೆ ಬೇರೆ ಸಂದರ್ಭ ಗಳಲ್ಲಿ, ಬೇರೆ ಬೇರೆ ಮನಃಸ್ಥಿತಿಯಲ್ಲಿ ಓದಿದಷ್ಟೂ ಅರ್ಥವಂತಿಕೆ ಗಹನತೆಗಳನ್ನು ಕೆಚ್ಚಲಿಸುವ ಜಾಯಮಾನ', 'ಧರ್ಮಾಭಿಮಾನಿಗಳ ಪಾಲಿಗೆ ಅದು ಒಡಲಿಗೆ ಗಾಳಿ, ನೀರು ಹೇಗೋ ಹಾಗೆ' ತೇಜೋವರ್ಧಕ, ಚೈತನ್ಯ ಪೋಷಕ, ನೈತಿಕ ಸ್ಥೈರ್ಯವರ್ಧಕ.`

—ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿ `ಧರ್ಮ` ಕೇವಲ ಒಂದು ಸಂಕುಚಿತ ನಂಬಿಕೆಯ ಪರಿಧಿಯೊಳಗೇ ಉಳಿಯಲಾರದಾದ್ದರಿಂದ, ದಯೆ, ಸರ್ವಭ್ರಾತೃತ್ವ, ಪ್ರೀತಿ, ಕರ್ತವ್ಯ ಇತ್ಯಾದಿ ಅರ್ಥಗಳಿಗೂ ವಿಸ್ತರಿಸುತ್ತದೆ. ಇಂತಹ ವಿಶಾಲ ಅರ್ಥದಲ್ಲಿ 'ಧರ್ಮ' ವನ್ನು ಗ್ರಹಿಸದೆ, ಕೇವಲ ಕಟ್ಟುನಿಟ್ಟಾಗಿ ಆಚರಣೆಗಳಿಗೆ, ಗ್ರಂಥ ಪಾರಾಯಣಕ್ಕೆ, ವ್ಯಕ್ತಿ ಪೂಜೆಗಳಿಗೆ ಮಾತ್ರ ಕಟ್ಟುಬಿದ್ದವರನ್ನು ನಿಸಾರರು ಎಂದಿಗೂ ಪುರಸ್ಕರಿಸುವುದಿಲ್ಲ. ಧರ್ಮದ ಆಚರಣೆಯ ಭಾಗಕ್ಕಿಂತ ವೈಚಾರಿಕ ಚಿಂತನೆಯ ಭಾಗಕ್ಕೆ ಹೆಚ್ಚು ಒತ್ತು ಕೊಡುತ್ತಾರೆ.

ಒಂದು ನಿರ್ದಿಷ್ಟ ಜಾತಿ, ಮತ, ಕೋಮಿನ ನೆಲೆಯಿಂದ ಮೇಲೇರಿ ಮಾನವ ಧರ್ಮದ ಬಗೆಗಿನ ಅಚಲ ವಿಶ್ವಾಸದೊಂದಿಗೆ ಧರ್ಮ, ಸಮಾಜ, ರಾಷ್ಟ್ರ, ಸಂಸ್ಕೃತಿಗಳ ಚಿಂತನೆಗೆ ಮುಂದಾಗುವುದರಿಂದಲೇ `ಸ್ವಧರ್ಮ`ವನ್ನು ಅನ್ಯಧರ್ಮಗಳ ಅರಿವು, ಅನುಸಂಧಾನಗಳಿಂದ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ತೌಲನಿಕ ಚಿಂತನೆಗಳ ಮೂಲಕ 'ಸ್ವಧರ್ಮ' `ಸಂಸ್ಕೃತಿ`ಗಳ ಸ್ಪಷ್ಟ ಗ್ರಹಿಕೆ, ಅದರಲ್ಲಿನ ಲೋಪದೋಷಗಳು, ಹಿರಿಮೆ ಗರಿಮೆಗಳು, ಹಾಗೆಯೇ ಅನ್ಯಧರ್ಮಗಳಲ್ಲಿನ ಶ್ರೇಷ್ಠ ಮೌಲಿಕ ವಿಚಾರಗಳ ಅರಿವು—ಎಲ್ಲವೂ ಅವರಿಗೆ ಸಾಧ್ಯವಾಗಿದೆ. ಸಂಪ್ರದಾಯವಾದಿ ದೃಷ್ಟಿಗೆ ದಕ್ಕದ ಹೊಸ ಅರ್ಥಗಳು—ಸೂಕ್ಷ್ಮ ಹೊಳಹುಗಳು—ನಿಕ್ಷಿಪ್ತವಾಗಿದ್ದು ಅವು ಹೊರಹೊಮ್ಮಿದಾಗ ಕುರ್‌ಆನ್ ನಂಥ ಕೃತಿಯ ಮೌಲಿಕತೆ ಮತ್ತಷ್ಟು ಹೆಚ್ಚುತ್ತದೆ. ಬಹುಶಃ ಈ ರೀತಿಯಲ್ಲಿಯೇ ಮುಂದುವರಿದ ಸೂಫಿಗಳು, ಬಾಹ್ಯಾಚಾರಗಳಿಗಿಂತ ಚಿತ್ತಶುದ್ಧಿ, ಗಾಢ ಚಿಂತನೆಯೆಡೆಗೆ

ಒಲಿದದ್ದು, ನಿಸಾರ್ ಅಹಮದ್ ಅವರು ಸೂಫಿ ಸಂತ ಸಮುದಾಯದ ಬಗೆಗೆ ತಳೆದ ಒಲವಿಗೆ ಕಾರಣವಾಗಿರಬಹುದು. ಅವರ ಹಲವು ಕವಿತೆಗಳಲ್ಲಿ ಸೂಫಿ ಪಂಥದ ವಿಚಾರಗಳು ಸಾಕಷ್ಟು ಢಾಳಾಗಿ ಕಾಣಸಿಗುತ್ತವೆ. ಇಸ್ಲಾಂಗೆ ಹೊರತಾದ, ಆದರೆ ಗ್ರೀಕ್ ಮತ್ತು ಪೌರಸ್ತ್ಯ ಪ್ರಭಾವದ ಎಳೆಗಳಾಗಿ ಸೂಫಿಪಂಥದಲ್ಲಿ ಕಾಣಿಸಿಕೊಳ್ಳುವ ವಿಶ್ವಾತ್ಮಕತೆ (ವಿಶ್ವವೇ ದೇವರು; ದೇವರೇ ವಿಶ್ವ), (ಹಿಂದೂಗಳಲ್ಲಿರುವ ಸರ್ವಂ ಬ್ರಹ್ಮಮಯಂ ಜಗತ್; ಸರ್ವಂ ಖಲ್ವಿದಂ ಬ್ರಹ್ಮ ಎಂಬುದಕ್ಕೆ ಸಮ), ಆತ್ಮ, ಪರಮಾತ್ಮ ಸಂಯೋಗ (ಮಧುರ ಭಾವದ ಭಕ್ತಿ; ಸತಿಪತಿ ಭಾವ) ಶರಣ ಸತಿ ಲಿಂಗ ಪತಿ ಎಂಬುದಕ್ಕೆ ಸಮಾನವಾಗಿ ಆತ್ಮ-ಪರಮಾತ್ಮ ಸಂಯೋಗಕ್ಕೆ, ಸಮನ್ವಯಕ್ಕೆ, ಪ್ರೇಮ ಭಾವ, ಮಧುರ ಭಕ್ತಿಯೇ ಸಾಧನ ಎಂಬ ವಿಚಾರಗಳು ಹಿಂದೂ-ಸೂಫಿ ತಾತ್ವಿಕ ಚಿಂತನೆಯಲ್ಲಿನ ಸಮಾನ ಅಂಶಗಳು ನಿಸಾರ್ ಅಹಮದ್ ಅವರ ಮೇಲೆ ಸಾಕಷ್ಟು ಪ್ರಭಾವ ಬೀರಿವೆ ಎಂಬುದು ಸ್ಪಷ್ಟ.

ಸಂಕ್ಷೇಪವಾಗಿ, ಸೂಫಿಗಳ ಮುಖ್ಯ ತಾತ್ವಿಕ ವಿಚಾರಗಳಾದ 'ಈ ಜಗತ್ತು ಮಾಯೆ, ಮಿಥ್ಯೆ; ಪರ ವಸ್ತುವೊಂದೇ ಸತ್ಯ, ಅದೇ ದಿಟವಾದ ಜ್ಞಾನ; ಪರಮೋಚ್ಚ ಸೌಂದರ್ಯ ಹಾಗೂ ನಿತ್ಯ ಪ್ರಕಾಶ; ಮಾನುಷ ಬುದ್ಧಿಗೆ ಪರಮಾತ್ಮ ಅತೀತ. ಭಗವಂತನಿಗೆ ವ್ಯಕ್ತ ಮತ್ತು ಅವ್ಯಕ್ತ (ಸಗುಣ, ನಿರ್ಗುಣ, ಅಥವಾ ಸಾಕಾರ, ನಿರಾಕಾರ) ಎಂಬ ಎರಡು ಚಹರೆಗಳು, ಇತ್ಯಾದಿ—'ಇಸ್ಲಾಂ' ದೃಷ್ಟಿಗೆ ಕ್ರಾಂತಿಕಾರಕವಾಗಿ ಕಾಣಿಸಿದರೂ ಕವಿ ನಿಸಾರರು ಈ ಎಲ್ಲ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದಾರೆ. 'ಬಹಿರಂತರ', 'ನವೋಲ್ಲಾಸ' ಇತ್ಯಾದಿ ಸಂಕಲನಗಳಲ್ಲಿನ 'ಚೇತನಾಚೇತನದ ತಿರುಳು ನೀನು' 'ನವೋಲ್ಲಾಸ', 'ಕಾಲದ ಮಗ್ಗ', 'ದೇವರ ಹಾರ', 'ಅಸೀಮ ಶಕ್ತಿ', 'ದೇವ, ನೀನೆ ಎಲ್ಲ', 'ಮೀನುಗಳು ನಾವು', 'ದಯೆಯ ಬಗೆ', 'ಬೇಡಿದರೆ ನಿನ್ನಲ್ಲಿ ನಾ', 'ಅಪಾರ ಪ್ರಭೂ, ನಿನ್ನ ಕರುಣೆ'—ಇತ್ಯಾದಿ ಕವಿತೆಗಳಲ್ಲಿ ಸೂಫಿ ಚಿಂತನೆ, ನಂಬಿಕೆಗಳ ಪ್ರಭಾವವಿರುವುದನ್ನು ಗುರುತಿಸಬಹುದು. ಹಾಗೆಯೇ ಅರ್ಥವಿಲ್ಲದ ಆಚರಣೆಯ ಬಗ್ಗೆ ಅವರು ತೋರುವ ವಿರೋಧ, ಕವಿತೆಗಳಲ್ಲಿ ವ್ಯಂಗ್ಯ, ವಿಡಂಬನೆಯಾಗಿ ಕಾಣಿಸಿಕೊಳ್ಳುತ್ತದೆ. 'ಮಡಿವಂತ', 'ಜನರ ಕನ್ನಡಿ' ಇತ್ಯಾದಿ ಕವಿತೆಗಳು ಇದಕ್ಕೆ ನಿದರ್ಶನವಾಗಿವೆ.

ನಿಸಾರ್ ಅಹಮದ್ ನವೋದಯ, ನವ್ಯಕಾವ್ಯ ಶೈಲಿಗಳೆರಡನ್ನೂ ರೂಢಿಸಿ ಕೊಂಡವರಾದರೂ ಅಚ್ಚ ಅಥವಾ ಅಪ್ಪಟ ನವೋದಯರಲ್ಲಿ ಕಾಣುವ ಭಾವ ತೀವ್ರತೆ, ಅತಿಯಾದ ಭಾವುಕತೆಗಳು ಕಾಣುವುದಿಲ್ಲ. ಕನಸು, ಆದರ್ಶ, ನಿರೀಕ್ಷೆ, ವ್ಯಥೆ ಸಂತೋಷ, ಸಂಭ್ರಮ ಇತ್ಯಾದಿ ಎಲ್ಲ ಬಗೆಯ ನವೋದಯದ ಭಾವ ಲಹರಿ(Mood)ಯ ಸ್ಥಿತಿ ಯಲ್ಲಿದ್ದಾಗಲೂ ವೈಚಾರಿಕ ಪ್ರಜ್ಞೆ ಎಚ್ಚರಗೊಂಡಿರುತ್ತದೆ (ಅಪರೂಪಕ್ಕೆ ಅಲ್ಲಲ್ಲಿ ಕೆಲವು ಭಾವ ತೀವ್ರ, ಸಾಂದ್ರ ಕವಿತೆಗಳು ಹೊರತಾಗಿವೆ!) ಅವರ ಪ್ರೇಮ ಕವಿತೆಗಳು ಕೇವಲ ಲೌಕಿಕ ಪ್ರೇಮವಾಗದೆ ಅವು ಪಾರಮಾರ್ಥಿಕ, ಆನುಭಾವಿಕ ನೆಲೆಯತ್ತ ಮುಖಮಾಡಿವೆ. ವಿರಹ, ತುಡಿತ, ಸಮಾಗಮ, ದರ್ಶನಾಕಾಂಕ್ಷೆಯ ಸ್ಥಿತಿಗಳನ್ನು ಅವು ಬಿಂಬಿಸುತ್ತವೆ.

ಈ ವಿಶ್ವ, ಈ ಜಗತ್ತು ದೇವರ ಅಭಿವ್ಯಕ್ತಿ. ಈ ಅಭಿವ್ಯಕ್ತಿ ವೈವಿಧ್ಯಮಯವೂ

ಹೌದು; ವೈರುದ್ಧ್ಯಮಯವೂ ಹೌದು. ಆದರೆ ಇದರೆಲ್ಲರ ಹಿಂದೆ, ಪ್ರಭುವಿನ ಅಪಾರ ಕರುಣೆಯಿದೆ ಎನ್ನುವ ನಂಬಿಕೆಯ ಹಿಂದೆ ಅಚ್ಚರಿ, ಅನುಮಾನ, ಸಂದಿಗ್ಧ ಮನಃಸ್ಥಿತಿ ಯೊಂದಿಗೆ ಕವಿತೆಯ ಸಾಲುಗಳು ಹೊರಟರೂ ಮೆಚ್ಚುಗೆಯ ಜೊತೆ ವ್ಯಂಗ್ಯವೂ ಸೇರಿದಂತೆ ಭಾಸವಾಗುತ್ತದೆ.

'ಅಪಾರವೋ ಪ್ರಭು ನಿನ್ನ ಕರುಣೆ
ಮಸೀದಿಗೆ ಹೋಗದ ನನಗೆ ರೇಜರ್‌ಕೊಟ್ಟಂತೆ
ದಡ್ಡ ಮೌಲ್ವಿಗೆ ಕಿರಾತ ಗಡ್ಡಕೊಟ್ಟೆ. ಅಲ್ಲೇಕೆ, ಇಲ್ಲೇ
ತೀರಿಸುತ್ತೇನೆ ತಾಳಿ, ನಿಮ್ಮ ಗೊಡ್ಡಾಚಾರಗಳ ಸಾಲವನೆಂದು
ರಕ್ತದೊತ್ತಡದ ಜೊತೆ ನನ್ನಂಥ ಅವಿಧೇಯ ಸುಪುತ್ರರ ಕೊಟ್ಟೆ,
ನಿನ್ನ ನಾಮವನೊದರುವ ಆಸ್ತಿಕ ಮುಂಡೇವಕ್ಕೆ'
(ಅಪಾರವೋ ಪ್ರಭು ನಿನ್ನ ಕರುಣೆ)

—ಎನ್ನುವ ಈ ಸಾಲುಗಳೇ ಅವರ ವಿಡಂಬನೆಯ ಧ್ವನಿಗೆ ಸಾಕ್ಷಿಯಾಗಿದೆ. ಗೊಡ್ಡಾಚಾರಗಳ ಮೂಲಕ ಅತಿಯಾದ ಆಸ್ತಿಕತೆಯನ್ನು ತೋರುವುದನ್ನು ವಿರೋಧಿಸುವ, ಲೇವಡಿ ಮಾಡುವ ರೀತಿಗೆ ಈ ಸಾಲುಗಳಲ್ಲಿ ಬರುವ 'ಅವಿಧೇಯ ಸುಪುತ್ರರು, ಆಸ್ತಿಕ ಮುಂಡೇವು, ದಡ್ಡ ಮೌಲ್ವಿ, ಕಿರಾತ ಗಡ್ಡ' ಇತ್ಯಾದಿ ಪದಗಳೇ ನಿದರ್ಶನವಾಗಿವೆ. ರಕ್ಷಿಸುತ್ತಲೇ ಕೊಲ್ಲುವ, ಕೊಲ್ಲುತ್ತಲೇ ರಕ್ಷಿಸುವ, ಪಾತಿವ್ರತ್ಯ ಭಂಜನೆ ಮಾಡುತ್ತಲೇ ಪತಿವ್ರತೆಯಾಗಿಸುವ ಆ ದೇವರ ದ್ವಂದ್ವನೀತಿ ನಿಜವಾಗಿಯೂ ಗ್ರಹಿಕೆಗೆ ಮೀರಿದ್ದಾಗಿದೆ. ಆದರೂ ಇದೆಲ್ಲವೂ ಪ್ರಭುವಿನ ಕರುಣೆ!? ಎಂದು ಆಶ್ಚರ್ಯ, ಪ್ರಶ್ನೆಗಳ ಮೂಲಕ ಚಿಂತನೆ ನಡೆಸುತ್ತಿರುವ ಕ್ರಮ ಕಾಣಿಸುತ್ತದೆ.

ಮನುಷ್ಯತ್ವವನ್ನು ಮೀರುವ, ಕೊಲ್ಲುವ ಮಡಿವಂತಿಕೆಯ ಆಚರಣೆಯೂ ಕವಿ ಮನಸ್ಸಿಗೆ ಒಪ್ಪಿತವಲ್ಲ. ತಮ್ಮ ನಂಬಿಕೆಯಲ್ಲಿ ಅರ್ಥಹೀನ, ಅವಿಚಾರ-ಎನಿಸುವ ಯಾವ ಆಚಾರ-ಆಚರಣೆಗಳನ್ನೂ ಪುರಸ್ಕರಿಸುವುದಿಲ್ಲ. ಅಂತಹ ಸನ್ನಿವೇಶಗಳು, ವ್ಯಕ್ತಿಗಳು ಎದುರಾದಾಗ ನೇರ ನಿಷ್ಠುರ ಶೈಲಿಗೆ ಬದಲಾಗಿ ವ್ಯಂಗ್ಯದ ಮೊರೆ ಹೋಗುತ್ತಾರೆ.

ನಿಸಾರರ ವಿರೋಧವಿರುವುದು ಧರ್ಮದ ಹೆಸರಿನಲ್ಲಿ ನಡೆಯುವ ಗೊಡ್ಡಾಚಾರದ ಬಗ್ಗೆ. ಪರಮಾತ್ಮ ಅಥವಾ ಭಗವಂತ ತತ್ತ್ವದ ಬಗ್ಗೆ ನಂಬಿಕೆಯಿದೆ. ಆ ಅಮೂರ್ತ ತತ್ತ್ವ ಅಭಿವ್ಯಕ್ತಗೊಳ್ಳುವ ಪರಿಯ ಬಗ್ಗೆ ಬೆರಗು, ಕುತೂಹಲ, ಜಿಜ್ಞಾಸೆಗಳಿವೆ. ಸೂಫಿ ನಂಬಿಕೆಯಲ್ಲಿನ, ಪರಮಾತ್ಮನ ದೃಶ್ಯ ಅದೃಶ್ಯ ಚಹರೆಗಳ ಬಗ್ಗೆ ತಮ್ಮ ಕವಿತೆಗಳಲ್ಲಿ ಚಿಂತನೆ ನಡೆಸುತ್ತಾರೆ. ಪ್ರಕೃತಿಯ ಸೌಂದರ್ಯದಲ್ಲಿ, ಮಣ್ಣಿನ ಕಣಗಳಲ್ಲಿ, ತಾರೆ ನೀಹಾರಿಕೆಗಳಲ್ಲಿ, ಸೃಷ್ಟಿ ಸ್ಥಿತಿ, ಲಯಗಳಲ್ಲಿ, ಸಂಜೆ ಮುಂಜಾವುಗಳಲ್ಲಿ, ಕಾರಿರುಳಿನ ಕತ್ತಲಲ್ಲಿ, ಪಶುಪಕ್ಷಿ, ಕ್ರಿಮಿ ಕೀಟಗಳಲ್ಲಿ, ಸಂಕ್ಷೇಪವಾಗಿ ಹೇಳಬೇಕಾದರೆ ವಿಶ್ವದ ಅಣುರೇಣು ತೃಣ ಕಾಷ್ಠಗಳಲ್ಲಿ; ಚೇತನ ಅಚೇತನ ವಸ್ತುಗಳಲ್ಲಿ ಅವನನ್ನು ಗುರುತಿಸುತ್ತಾರೆ. ವಿಶ್ವವೇ ದೇವರು, ದೇವರೇ ವಿಶ್ವವೆನ್ನುವ ಸೂಫಿ ತಾತ್ವಿಕ ವಿಚಾರದ ಛಾಯೆಯನ್ನು ಈ 'ಚೇತನಾಚೇತನದ ತಿರುಳು' ಕವಿತೆಯಲ್ಲಿ ಗುರುತಿಸಬಹುದು. ಎಲ್ಲೆಲ್ಲೂ, ಎಲ್ಲದರ ಒಳ ಹೊರಗೂ ಆ ಪರಮಾತ್ಮ

ಸ್ಥಿತನಾಗಿದ್ದರೂ ಅರಿವು ನೋಟಗಳ ಗ್ರಹಿಕೆಗೆ ಬಾರದೆ, ತನ್ನ ಶಕ್ತಿಯ ಅಪಾರತೆಯನ್ನೂ ಮನುಷ್ಯನ ಮಿತಿಯನ್ನೂ ಏಕಕಾಲದಲ್ಲಿ ಬೋಧ ಪಡಿಸಿದ್ದಾನೆ.

'ಅಣು ಅಣುವಿನಾಳಗಳ ದಿನ ನಿತ್ಯ ಸಂಚಾರಿ;
ಗ್ರಹತಾರೆ ಉಲ್ಕೆಗಳ ಸಿರಿ ಪದಕಧಾರಿ.
ಆಲಯದ ಬಯಲೆಂತೊ, ಬಯಲ ಆಲಯ ನೀನು;
ಸ್ಥಿತಿ, ಪ್ರಲಯ ಜೀವಿಗಳ ಅಂತ್ಯ ನಿಲಯ'
(ಚೇತನಾಚೇತನದ ತಿರುಳು)

—ವಾಗಿರುವ, ಋತ ಶಕ್ತಿಯಿಂದ ನಿರ್ಬಾಧನಾಗಿರುವ ಚೇತನಾಚೇತನದ ತಿರುಳಾಗಿರುವ ಈ ಪರಮಾತ್ಮ ಕವಿಯ ಕಣ್ಣಿಗೆ

'...ಬಿಂಬದಾಲಂಬ, ಜಗದವರ ಪಡಿ ನೆಳಲು
ನಾಮ ಕೋಟಿಯು ಮರೆಯ ಹೆಸರಿನುಸಿರು;
ಬರಹಗಾರನ ಜೊತೆಗೆ ನೋಟಗಾರ....'
(ಚೇತನಾಚೇತನದ ತಿರುಳು)

ಇವನು ಆಡಿಸುವ ನಾಟಕದಲ್ಲಿ ಸಾವಿರಾರು ಪಾತ್ರಗಳು. ಇಂತಹವನನ್ನು ಕಾಣ ಬಯಸುವ ಕವಿಯ ತುಡಿತಕ್ಕೆ ಸೋಲೆಂಬುದೇ ಗೆಲವು! ಹುಡುಕುವುದು, ಅರಿಯುವುದು, ಅರ್ಥೈಸಿ ಕೊಳ್ಳುವುದು ಹುಲು ಮನುಜನಿಗೆ ಜನ್ಮಾಂತರ ಪ್ರಯತ್ನದಿಂದಲೂ ಸಾಧ್ಯವಾಗುವುದಿಲ್ಲ ವೆಂಬ ಸತ್ಯದ ಅರಿವಿನೊಂದಿಗೆ ಆ 'ಅವನ'! ಅಪಾರತೆ, ಸರ್ವಾಂತರ್ಯಾಮಿತ್ವ, ಪರ್ವವ್ಯಾಪಕತ್ವಗಳು ಮತ್ತಷ್ಟು ಖಚಿತಗೊಳ್ಳುತ್ತವೆ 'ಚೇತನಾಚೇತನದ ತಿರುಳು ನೀನು' ಕವಿತೆಯ ಭಾವದ ಮುಂದುವರಿಕೆಯಾಗಿ 'ಅಸೀಮ ಶಕ್ತಿ' ಕವಿತೆ ಕಾಣಿಸಿಕೊಳ್ಳುತ್ತದೆ. ಅಸೀಮ ಶಕ್ತಿ ರೂಪನಾದ, ತೇಜೋಮಯನಾದ, ಪ್ರಕಾಶಮಾನವಾದ ಆ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿಕೊಂಡ ಮನಸ್ಸಿಗೆ ಅವನ ದಯೆ, ಅನುಗ್ರಹ, ಪೋಷಣೆ, ರಕ್ಷಣೆಗೆ ಒಳಗಾಗಿಯೇ ಈ ಜೀವ ಉಳಿದಿದೆ ಎನ್ನುವ ಅರಿವೂ ಎಚ್ಚೆತ್ತಾಗ ಹೃದಯ ಭಕ್ತಿ, ಕೃತಜ್ಞತೆಗಳಿಂದ ಬಾಗುತ್ತದೆ; ಶರಣಾಗತಿಯ ನಿಲವು ಕವಿಯದಾಗುತ್ತದೆ. ಜಗದ ಸೃಷ್ಟಿಯಲ್ಲಿನ ಸಮಸ್ತ ಜೀವರಾಶಿಗಳು, ನಿರ್ಜೀವ ವಸ್ತುಗಳು, ನಡೆಯುವ ಪ್ರತಿಯೊಂದು ಕ್ರಿಯೆಯೂ ಅವನದೇ ಎಂದು ಒಪ್ಪಿಕೊಳ್ಳುವ ಕೃತಾರ್ಥ ಭಾವವಿದೆ. ಜಗತ್ತಿನ ರಕ್ಷಣೆ, ಪೋಷಣೆಯ ಹೊಣೆ ಹೊತ್ತವನು ಎಂತಹ ಪ್ರಾಕೃತಿಕ ಪ್ರಕೋಪಗಳಿರಲಿ, ಋತುಗಳ ಸ್ಥಿತ್ಯಂತರಗಳ ಅಸಹಕಾರಿ ಪರಿಣಾಮಗಳಿರಲಿ, ವಿಷಮತೆ ಮತ್ತು ಸಮತೆಗಳ ದ್ವಂದ್ವ ಸ್ಥಿತಿ ಗಳಿರಲಿ, ರಕ್ಷಿಸಿ ಕಾಯುವ ಅವನ ಬಗ್ಗೆ ಮೆಚ್ಚುಗೆ ಕೃತಜ್ಞತೆಗಳೊಂದಿಗೆ ಮನಸ್ಸು ಗರಿಗೆದರಿ ಹಾಡುತ್ತದೆ. 'ದೇವ ನೀನೆ ಎಲ್ಲ' 'ಓ! ಅಸೀಮ ಶಕ್ತಿ' 'ನೀನೇ ಸರ್ವಸ್ವ', ನೀನುಳಿದರಿನ್ನಿಲ್ಲ ಬೇರೆ ರಕ್ಷೆ', 'ನಮಿಸು ಚಿತ್ತ' ಮುಂತಾದ ಕವಿತೆಗಳು ಅವರ ಭಕ್ತಿಗೆ, ನಂಬಿಕೆಗೆ ಸಾಕ್ಷಿಯಾಗಿವೆ.

—ಈ ಎಲ್ಲ ಕವಿತೆಗಳೂ ಭಗವಂತನ ಅಪಾರ ಕರುಣೆಯನ್ನು, ಭಕ್ತನು ಭಗವಂತ ನನ್ನು ಕೊಂಡಾಡುವ ಪರಿಯನ್ನು, ಮನುಷ್ಯನ ಅಸಹಾಯಕತೆಯನ್ನು, ಅವನು

ಭಗವಂತನನ್ನು ಎಷ್ಟೊಂದು ರೀತಿಯಲ್ಲಿ ಅವಲಂಬಿಸಿದ್ದಾನೆ ಎನ್ನುವುದನ್ನು ಸಾರಿ ಹೇಳುತ್ತವೆ. ಹರಿದಾಸರ, ವಚನಕಾರರ, ಸಂತರ ರೀತಿಯಲ್ಲಿನ ಭಕ್ತಿ ತಾದಾತ್ಮ್ಯವನ್ನು ಈ ಕವಿತೆಗಳು ಬಿಂಬಿಸುತ್ತವೆ. ಅನೇಕ ಕವಿತೆಗಳಲ್ಲಿ ಆರ್ತತೆ, ಆತ್ಮ ನಿವೇದನೆಯ ಪರಿಯನ್ನು ಕಾಣುತ್ತೇವೆ. ಮನುಷ್ಯನ ಎಲ್ಲ ಸಂಕಟಗಳಿಗೆ, ಅಶಾಂತಿಗೆ, ಗುರಿಯಿಲ್ಲದ ಅಲೆದಾಟಕ್ಕೆ— ಎಲ್ಲಕ್ಕೂ ಅವನ ಕೃಪೆಯೊಂದೇ ಪರಿಹಾರವೆಂದು ನಂಬಿದ ಮನಸ್ಸು

'ನಿನ್ನ ನೆರವಿಲ್ಲದೆಯೆ ತೊಳಲಿರುವೆ ನೆಲದಲ್ಲೆ
ಚೇತನವನುದ್ಧರಿಸೊ ದೇವ, ದೇವ;
ಹಗಲಿರುಳು ನಿನ್ನೊಂದು ಕೃಪೆಗಾಗಿ ಕಾದಿರುವೆ
ನಿನ್ನ ಕಂದನ ಸಲಹೊ ದೇವ ದೇವ.
...
'ತೋರು ಶಾಂತಿಯ ತಂದೆ, ನನ್ನ ಸೋತಿರುವೆದೆಗೆ
ಭಕ್ತಿ ಭಾವವೆ ಉಳಿದ ಶಕ್ತಿ ದೇವ—
ಕಾಡದಿರು ಪ್ರಭುವೆನ್ನ ನೊಂದಿರುವೆ ಸಾಕಷ್ಟು
ನಿನ್ನ ಅಭಯದ ಹಸ್ತ ನೀಡು ದೇವ'
(ನಿನ್ನ ನೆರವಿಲ್ಲದೆಯೆ)

—ಎಂದು ಆರ್ತವಾಗಿ ಪ್ರಾರ್ಥಿಸುತ್ತದೆ.

ಸೂಫಿ ನಂಬಿಕೆಯಂತೆ, 'ದೇವರು' ಮೂರ್ತತ್ವದಲ್ಲಿ, ಸಾಕಾರದಲ್ಲಿ ಸಗುಣ ರೂಪದಲ್ಲಿ ಕಾಣಿಸಿಕೊಳ್ಳುವದಕ್ಕಿಂತ ಸುಪ್ರಭೆಯ ರೂಪದಲ್ಲಿ ಪ್ರಕಟಗೊಳ್ಳುವುದನ್ನು ಒಪ್ಪಿಕೊಂಡು ಆ ಅಮೂರ್ತ ಪ್ರಕಾಶಕ್ಕೇ ಭಕ್ತಿ ಪುರಸ್ಸರವಾಗಿ ನಮಿಸುವಂತೆ ಚಿತ್ತಕ್ಕೆ ನಿರ್ದೇಶಿಸುತ್ತಾರೆ. 'ತೇನವಿನಾ ತೃಣಮಪಿ ನ ಚಲತಿ' ಎನ್ನುವ ಸತ್ಯ ಸಾಕ್ಷಾತ್ಕಾರದೊಂದಿಗೆ, 'ನಮಿಸು ಚಿತ್ತ' ಕವಿತೆಯಲ್ಲಿ ಜಿಜ್ಞಾಸೆ ನಡೆಸುತ್ತಾರೆ.

'ಕಾಣದಿದ್ದರು ಕಾಯುತಿರುವ ಸುಪ್ರಭೆಗೆ ನಮಿಸು ಚಿತ್ತ,
ಹಮ್ಮು ಬಿಮ್ಮು ಮಮತಾ ಅಹಮ್ಮುಗಳ ಹೊಲೆಯ ಕಳಚಿ ನಿತ್ಯ;
ನಿನ್ನದೆನ್ನುವುದು ಯಾವುದಿಲ್ಲಿ? ನೆಲ, ಗಾಳಿ, ಗಗನ, ನೀರು?
ನರನ ಬರವಿಗೂ ಮೊದಲೆ ಚಲಿಸುತಿದೆ ಋತುಗಳೆಳೆವ ತೇರು.'
(ನಮಿಸು ಚಿತ್ತ)

—ಎಂದು ಪ್ರಾರ್ಥಿಸುವಲ್ಲಿ ಸಂಪೂರ್ಣ ಶರಣಾಗತಿಯಿದೆ. ಕೇಳುವ ಪ್ರಶ್ನೆಗಳಲ್ಲಿ ಉತ್ತರವಿದೆ. ಸುಪ್ರಭೆಯ ರೂಪದ ಆ ಪ್ರಭುವೆ ಹಾಡಾಗಿ, ವೃಕ್ಷವಾಗಿ, ಫಲವಾಗಿ ಜೀವ ರಾಶಿಗಳನ್ನು ಕಾಯುತ್ತಾನೆ. ಅವನ ಅಸೀಮತೆ, ಅಪಾರತೆಯೆದುರು ಗೋಕಾಕರು ಹೇಳುವಂತೆ 'ನರನೆಂಬ ಪಿಳ್ಳಿ ನೀರ್ಗುಳ್ಳಿ'. ಜಗವೆಂಬ ನಾಟಕ ನಡೆಸುವವನೆ ಅವನು; ಬದುಕಿನ ಬೊಂಬೆಯಾಟದ ಸೂತ್ರಧಾರನೇ ಅವನು! ಅಗೋಚರ ಕೈಗಳಿಂದ, ನಿರಾಕಾರ ಅಸ್ತಿತ್ವದಿಂದ ವಿಶ್ವವನ್ನೇ ನಿಯಂತ್ರಿಸುತ್ತಾನೆ; ನಡೆಸುತ್ತಾನೆ. ಇಂತಹ ಗಂಭೀರ ಚಿಂತನೆಯೊಂದಿಗೆ ಸಾಗುವ ಕವಿ ಲೋಕದ ಜೀವಿಗಳನ್ನು ಕಾಲದ ಮಗ್ಗದಲ್ಲಿ ಹೆಣೆದುಕೊಳ್ಳುವ ನೂಲೆಳೆಗಳೆಂದು, ಬದುಕಿನ ನಿತ್ಯ ನಿರಂತರ ವಾಹಿನಿಯಲ್ಲಿ ಕಿರು ಮೀನುಗಳೆಂದುಕೊಂಡ ಪರಿ ಸೃಷ್ಟಿಕರ್ತನ

ಎದುರಲ್ಲಿ 'ಸೃಷ್ಟಿ'ಯ ಸೀಮಿತತೆಯನ್ನು ರೂಪಕಾತ್ಮಕವಾಗಿ ಕಟ್ಟಿಕೊಡುತ್ತದೆ.

ಭಕ್ತ, ಭಗವಂತನ ಸಂಬಂಧಗಳು ಹಲವು ರೀತಿಯವು—ಸಖ್ಯ ಭಾವ, ಮಧುರ ಭಾವ, ದೈನ್ಯಭಾವ, ದಾಸ್ಯ ಭಾವ, ಹೀಗೆ ಹಲವಾರು ರೀತಿಗಳಲ್ಲಿ ಸಂಬಂಧಗಳು ಮುಂದುವರೆಯುತ್ತವೆ. ಭಕ್ತಿ ನಿವೇದನೆಯ ಮೂಲಕ ಐಕ್ಯ-ಸಮ್ಮಿಲನಗಳನ್ನು ಸಾಧ್ಯವಾಗಿಸಿಕೊಳ್ಳಬಹುದು. ಭಾರತೀಯ ಪರಂಪರೆಯಲ್ಲಿ ಭಕ್ತ-ಭಗವಂತರದು ಪ್ರೇಯಸಿ-ಪ್ರಿಯ ಅಥವಾ ಸತಿ-ಪತಿ ಸಂಬಂಧವಾದರೆ, ಸೂಫಿ ಸಂಪ್ರದಾಯದಲ್ಲಿ ಇದಕ್ಕೆ ತದ್ವಿರುದ್ಧವಾಗಿದೆ. ಭಗವಂತ ಪ್ರೇಯಸಿ, ಭಕ್ತ-ಪ್ರಿಯ (ಪ್ರಿಯತಮ). ನಿಸಾರರು ಪ್ರಣಯ ಕವಿತೆಗಳನ್ನು ಬರೆದ ಹಿನ್ನೆಲೆಯಲ್ಲಿ ಅನುಭಾವದ ನೆಲೆಯ ಪರಿಕಲ್ಪನೆ ಇದ್ದಿರಲಾರದಾದರೂ ಅವುಗಳನ್ನು ಅವರ ಆಧ್ಯಾತ್ಮಿಕ, ದೈವಿಕ ಚಿಂತನೆಗಳ ಬೆಳಕಲ್ಲಿ ಪರಿಭಾವಿಸಿದಾಗ ಅನುಭಾವದ ಛಾಯೆಯನ್ನು ಗುರುತಿಸುವ ಸಾಧ್ಯತೆಯಿದೆ. 'ಧರ್ಮ'ಕ್ಕೆ ಪ್ರೀತಿ ಎಂಬ ಅರ್ಥವನ್ನು, ಕರ್ತವ್ಯ ಎಂಬ ಅರ್ಥವನ್ನು ಒಪ್ಪುವುದಾದರೆ, ಭಗವಂತ ಭಕ್ತ ಪರಿಭಾಷೆಯಿಂದ ಹೊರಗೆ ನಿಂತು ನೋಡಿದಾಗ ತಂದೆ, ತಾಯಿ, ನಾಡು, ರಾಷ್ಟ್ರ—ಎಲ್ಲವೂ ಧರ್ಮದ ಪರಿಧಿಯೊಳಗೆ, ವ್ಯಾಪ್ತಿಯೊಳಗೆ ನುಸುಳುತ್ತವೆ.

ವ್ಯಕ್ತಿಧರ್ಮ, ಪ್ರಜಾಧರ್ಮ, ರಾಷ್ಟ್ರಧರ್ಮ, ಮಾನವಧರ್ಮ—ಎಂದು ಹತ್ತು ಹಲವಾರು ಮುಖಗಳಲ್ಲಿ 'ಧರ್ಮ' ವ್ಯಾಖ್ಯಾನಿಸಿಕೊಳ್ಳುತ್ತದೆ. ಭಗವಂತನ ಅನಂತರ ನಿಸಾರ್ ಅವರ ಭಕ್ತಿ, ಶ್ರದ್ಧೆ, ಪ್ರೀತಿ, ಕರ್ತವ್ಯಗಳು ನಾಡು, ನುಡಿ, ಸಂಸ್ಕೃತಿ, ಕನ್ನಡ ಮಾತೆ, ಭಾರತ ಮಾತೆ—ಮೊದಲಾದವುಗಳ ಕಡೆ ತಿರುಗುತ್ತವೆ. ಸೃಷ್ಟಿಕರ್ತನ ಋಣ ತೀರಿಸುವಂತೆಯೇ ನಾಡ ಮಾತೆ, ರಾಷ್ಟ್ರಮಾತೆಯರ ಋಣವನ್ನೂ ತೀರಿಸಬೇಕಾಗುತ್ತದೆ. ಅಮೂರ್ತ ದೈವಕ್ಕೆ ಮೂರ್ತ ಅಭಿವ್ಯಕ್ತಿ, ಆಕಾರ, ಗುಣಾರೋಪಣಗಳನ್ನು ನೀಡಿ ಆರಾಧಿಸುವಂತೆಯೇ 'ನಾಡು' ದೇಶ ಅಥವಾ 'ರಾಷ್ಟ್ರ'—ಪರಿಕಲ್ಪನೆಗೆ ಮಾನವಾರೋಪಣದೊಂದಿಗೆ ತಾಯಂದಿರಾಗಿ ಪರಿಭಾವಿಸಿ, ಅವರು ಊಡಿಸಿದ ಪ್ರೀತಿ, ವಾತ್ಸಲ್ಯಗಳಿಗಾಗಿ, ಪೋಷಿಸಿ ರಕ್ಷಿಸಿದ ಹೊಣೆಗಾರಿಕೆಗಾಗಿ ಅವರಿಗೆ ಋಣ ಸಲ್ಲಿಸಬೇಕೆಂಬ ಹಂಬಲ ಉತ್ಕಟವಾಗಿದೆ. ಮತ್ತು ಕನ್ನಡ ಮಾತೆ, ಭಾರತ ಮಾತೆಯರ ಶತ ಶತಮಾನಗಳಿಂದ ರಕ್ಷಿತವಾಗಿ ಸಾಗಿ ಬಂದ ಪ್ರಾಕೃತಿಕ ಸಂಪತ್ತು, ಅಧ್ಯಾತ್ಮ, ಕಲೆ, ಸಂಸ್ಕೃತಿಯ ಬಗೆಗಿನ ಪ್ರೀತಿ, ಹೆಮ್ಮೆ—'ನಾಡ ದೇವಿಯೆ', 'ಕನ್ನಡ ರಾಜೇಶ್ವರಿ', 'ಕನ್ನಡಾಂಬೆಗೆ', 'ಅಭಿಮಾನವತಿ', 'ಮಹಿಮವಂತೆ ಭಾರತಿ', 'ಮಾತೃ ವಂದನೆ', 'ನೆಲ ನಮ್ಮದು ಜಲ ನಮ್ಮದು', 'ರಾಜ್ಯೋತ್ಸವ'—ಇತ್ಯಾದಿ ಕವಿತೆಗಳಲ್ಲಿ ನಿಚ್ಚಳವಾಗಿ ಕಾಣಿಸುತ್ತದೆ.

'ತಾಯ್ನಾಡಿನ ಬಗೆಗಿನ ಅಪಾರ ಪ್ರೀತಿ, 'ಬಾಳಬೇಕು, ಆಳಬೇಕು ತಾಯ್ನಾಡಿಗೆ ವಂದಿಸಿ' ಎನ್ನುವ ನಿರ್ಧಾರಕ್ಕೆ ಪ್ರಚೋದಿಸಿದರೆ, ಆ ತಾಯಿಯ ಋಣವನ್ನು ತೀರಿಸುವುದನ್ನು ಮರೆಯದಿರಲೆಂದು ಆಶಿಸುತ್ತದೆ. ಮೇಲಿಂದ ಮೇಲೆ ಕವಿಯ ಮನಸ್ಸು ಕರ್ನಾಟಕದ, ಭಾರತದ ಪ್ರಾಕೃತಿಕ ಸಂಪದ್ವೈಭವ, ಸಾಂಸ್ಕೃತಿಕ ಸಂಪದ್ವೈಭವ, ವಿದ್ವತ್ಪರಂಪರೆ, ಶೌರ್ಯ ಸಾಹಸಗಳನ್ನು, ಕವಿ ಕಲಾವಿದರನ್ನು, ವಿಭೂತಿ ಪುರುಷರನ್ನು, ಸಾಧು ಸಂತರನ್ನು ಯೋಗಿಗಳನ್ನು, ತ್ಯಾಗಿಗಳನ್ನು ಕವಿತೆಗಳ ಮೂಲಕ ಸ್ಮರಿಸಿಕೊಳ್ಳುತ್ತದೆ. ಪ್ರಜೆಗಳಾಗಿ,

ಮಕ್ಕಳಾಗಿ, ನಾಡಿನ ಸ್ವಾತಂತ್ರ್ಯ ರಾಷ್ಟ್ರದ ಸ್ವಾತಂತ್ರ್ಯ, ರಕ್ಷಣೆಯ ಜವಾಬ್ದಾರಿಯನ್ನು ಹೊರುವ ಕರ್ತವ್ಯ ನಮ್ಮ ಮೇಲಿದೆ ಎನ್ನುವುದು ಕವಿಯ ನಂಬಿಕೆ. ಬಹು ಭಾಷಾ, ಬಹು ಸಂಸ್ಕೃತಿಗಳ ಸಮನ್ವಯದೊಂದಿಗೆ ನಿಂತ ಭಾರತ ವಿಶ್ವದಲ್ಲೇ 'ಮಹಾನ್' ಎನ್ನಿಸಿಕೊಂಡಿದೆ. ಅದಕ್ಕೆಂದೇ ಕವಿ ಭಾರತ ಮಾತೆಯನ್ನು ಅವಳ ಎಲ್ಲ ವಿಭವ, ವಿಲಾಸಗಳೊಂದಿಗೆ ಬಣ್ಣಿಸುತ್ತಾರೆ. ಎಣೆಯಿಲ್ಲದ ವೈಭವ ಮಾತಿಗೆ ಮೀರುವಂತಿದ್ದರೂ

'ಋಷಿ ಮುನಿ ಹೊತ್ತರು ನಿನ್ನಯ ಮೇನೆ
ಸ್ವರಾಜರದೆಯಲಿ ವಿರಾಜಮಾನೆ
ನಿನ್ನ ಯಶಸ್ಸಿಗೆ ಗಡಿ ಗೆರೆ ಬಾನೆ...

....

'ಸೂಫಿ ಸಂತರ, ಯೋಗಿ ಮಹಂತರ
ಮಹಿಮಾ ಸ್ರೋತದಿ ಮಿಂದು ನಿರಂತರ
ಶುಚಿಯಾಗಿಹೆ ನೀನತಿ ಬಹಿರಂತರ

....

'ನಾನಾ ಮತ, ಬಹುಭಾಷಾ ಮಾಲಿನಿ
ವಿವಿಧ ಸುಸಂಸ್ಕೃತಿ ಸುಂಗಧಶಾಲಿನಿ'

(ಮಾತೃ ವಂದನೆ)

—ಎಂದು ಸ್ಥೂಲವಾಗಿಯಾದರೂ ಸಮರ್ಥವಾಗಿ ಕಟ್ಟಿ ಕೊಡುತ್ತಾರೆ.

ಆದರೆ ಇಂದು ಬದಲಾಗುತ್ತಿರುವ ಬದುಕಿನಲ್ಲಿ ಧರ್ಮ, ದೇವರು, ರಾಷ್ಟ್ರ, ಸಂಸ್ಕೃತಿ ಮುಂತಾದ ಪರಿಕಲ್ಪನೆಗಳು ಅರ್ಥಹೀನವಾಗುತ್ತಿವೆ. ಆಧುನಿಕತೆಯ ಹೆಸರಿನಲ್ಲಿ ನಾವು ನಮ್ಮ ಪರಂಪರೆ, ಸಂಪ್ರದಾಯಗಳನ್ನು ಧರ್ಮ, ಸಂಸ್ಕೃತಿಯನ್ನು ಮರೆತು ವಿಮುಖರಾಗಿ ಸಾಗುತ್ತಿದ್ದೇವೆ. ಎಲ್ಲವನ್ನೂ ವ್ಯಾವಹಾರಿಕ ದೃಷ್ಟಿಯಿಂದ, ವ್ಯಾಪಾರಿ ದೃಷ್ಟಿಯಿಂದ ನೋಡುತ್ತಿದ್ದೇವೆ. ಹಬ್ಬ, ಉತ್ಸವಗಳು ಮೊದಲಿನ ಅರ್ಥವಂತಿಕೆಯನ್ನು ಪ್ರಾಮುಖ್ಯವನ್ನು, ಭಾವನಾತ್ಮಕತೆಯನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ, 'ರಾಜ್ಯೋತ್ಸವ' ಕವಿತೆಯಲ್ಲಿ ಬರುವ ಈ ಸಾಲುಗಳನ್ನು ಗಮನಿಸಬಹುದು.

'ಗಾಢ ನಿದ್ದೆಯೊಳೊಮ್ಮೆ ಕಣ್ತೆರೆದು ಕೂತವನು
ಮರು ಗಳಿಗೆ ಮುಸುಕೆಳೆದು ಮಲಗಿದಂತೆ
ಇಂದಿನುತ್ಸವ, ಹಬ್ಬ, ಸಡಗರದ ಸಂತೆ'

(ರಾಜ್ಯೋತ್ಸವ)

—ಎಂದು ನುಡಿದು ಇಂದಿನ ಸ್ಥಿತಿಗಳತ್ತ ಸೂಕ್ಷ್ಮವಾಗಿ ಗಮನ ಸೆಳೆಯುವುದರ ಜೊತೆಗೆ ಇವತ್ತಿನ ಉತ್ಸವದ ಆಚರಣೆಯ ಹಿನ್ನೆಲೆಯ ಮನೋಧರ್ಮದಲ್ಲಿ ಆದ ಬದಲಾವಣೆಯನ್ನು ಅನೇಕ ಚಿತ್ರಗಳ ಮೂಲಕ ಮನವರಿಕೆ ಮಾಡಿಸಿದ್ದಾರೆ.

ಹೃದಯವಂತಿಕೆಯಿಲ್ಲದ, ಸ್ವಂತಿಕೆಯಿಲ್ಲದ ಅನುಭವದಲ್ಲಿ ವಿವೇಕವಿಲ್ಲದೆ, ವಿಪರೀತಗಳ ನಡುವೆ ಬಾಳುವ ಸ್ಥಿತಿಯಲ್ಲಿ, ನಮ್ಮ ಮುಂದಿರುವುದು ಕೇವಲ ಎರಡೇ

ಎರಡು ಉದ್ದೇಶಗಳು—ಒಂದು ಪ್ರಯೋಜಕತೆ; ಮತ್ತೊಂದು ಅತಿಯಾದ ಭಾವುಕತೆ. ಪ್ರತಿಯೊಂದು ವಸ್ತುವೂ ತನ್ನ ಮೂಲೋದ್ದೇಶಕ್ಕಿಂತ ಬೇರೆಯಾಗಿ ಬಳಕೆಯಾಗುತ್ತಿದೆ.

'ಮಲೆನಾಡು ಬರಿ ಕಾಡು, ನಮ್ಮ ಅಗ್ಗಿಷ್ಟಿಕೆಗೆ ಬರಿಯ ಸೌದೆ;
ಕಾವೇರಿ ನೀರಷ್ಟೆ: ಬಚ್ಚಲಿನ ನಲ್ಲಿಯಲಿ
ನಿಲ್ಲದೆಯೆ ಸುರಿಯಲೆಂದಾಶಿಸುವ ಜಲ ಧಾರೆ;
ಬೇಲೂರು ಬಾಲೆಯರು ಕ್ಯಾಲೆಂಡರಿಗೆ ಹೋಲಿಸಲು ಮೂಲ ಮಾನ.
ಪಿಕ್ನಿಕ್ಕು, ಪ್ರೇಮಕ್ಕೆ
ಮೈ ನವೆಯ ಶಮನಕ್ಕೆ
ಜೋಗ ಭೋಗದ ತಾಣ;
ನೆಲವೆನಲು ಖುಷ್ಕಿ, ತರಿ ಸಾಗುವಳಿ,
ಇಲ್ಲವೆ ಮನೆಗೆ ಸೈಟು;
ನಾಡು ನಿರ್ಜೀವತೆಯ ನಕ್ಷೆಯೊಳಗಿನ ಗೀಟು'
(ಅದೇ)

ಮೇಲಿನ ಈ ಸಾಲುಗಳು ನಮ್ಮಲ್ಲಾದ ಭಾವಾಂತರದ ಸ್ಥಿತಿಯನ್ನು ಸಮರ್ಥವಾಗಿ ವಿವರಿಸುತ್ತವೆ. ಮಲೆನಾಡಿನ ನಿಸರ್ಗ ಸೌಂದರ್ಯವಾಗಲಿ, ಕಾವೇರಿ ನೀರಿನ ಪಾವಿತ್ರ್ಯ ವಾಗಲಿ, ಶಿಲಾಬಾಲಿಕೆಯರ ಕಲಾ ಸೌಂದರ್ಯವಾಗಲಿ, ನೆಲ ನಾಡುಗಳ ಬಗ್ಗೆ ಪ್ರೀತಿ ಅಭಿಮಾನವಾಗಲಿ ನಮಗೆ ತಟ್ಟನೆ ಹೊಳೆಯುವುದೇ ಇಲ್ಲ. ಲಾಭಾಂತರಗೊಂಡ ಸೌಂದರ್ಯ ಪ್ರಜ್ಞೆ. ನಾಡ ಪ್ರೀತಿಯ ಬಗ್ಗೆ ನಿಸಾರರಿಗೆ ವಿಷಾದವಿದೆ; ಭ್ರಷ್ಟಗೊಳ್ಳುತ್ತಿರುವ ಸಂಸ್ಕೃತಿ, ಧರ್ಮದ ಬಗ್ಗೆ ನೋವಿದೆ.

'ಧರ್ಮ'ವೆನ್ನುವುದು ಕೇವಲ 'ಮತ' ಎನ್ನುವ ಸಂಕುಚಿತ ಅರ್ಥದ ಗ್ರಹಿಕೆ ಯಿಂದಾಗಿ ಹಿಂಸೆ, ಕ್ರೌರ್ಯ, ರಕ್ತಪಾತದ ನಿತ್ಯದ ರಾಮಾಯಣವಾಗಿದೆ. ವ್ಯಕ್ತಿಗೊಬ್ಬ ದೇವರೆಂಬಂತೆ ಸಾವಿರಾರು ದೇವರುಗಳು ಹುಟ್ಟಿಕೊಂಡು ಮನುಷ್ಯನ ಬುದ್ಧಿ ಭ್ರಷ್ಟಗೊಳ್ಳು ತ್ತಿದೆ. ವಿಶ್ವದ ಐಕ್ಯಕ್ಕೆ ಸೌಹಾರ್ದತೆಗೆ, ಸರ್ವ ಭ್ರಾತೃತ್ವಕ್ಕೆ ಧಕ್ಕೆಯೊದಗುತ್ತಿದೆ. 'ದೇವರುಗಳೂ' ವ್ಯಾಪಾರ ಜಗತ್ತಿನ ವಸ್ತುಗಳಾಗಿ ಚಲಾವಣೆಯಾಗುತ್ತಿವೆ. ಈ ದೇವರುಗಳ ಬಗೆಗಿನ ಭಕ್ತಿಗೆ ಮಾನ ದಂಡ ಹಣ, ಅಂತಸ್ತು. ದೇವರ ಸೇವೆ, ಅರ್ಚನೆ, ದರ್ಶನ, ಪೂಜೆ ಇತ್ಯಾದಿಗಳಿಗೂ ಇಂತಿಷ್ಟು ರೇಟೆಂದು ನಿಗದಿ ಪಡಿಸಿದ ವಿಪರ್ಯಾಸ. ಈ ರೀತಿಯ ವ್ಯಾಪಾರೀಕರಣದ ಪರಿಸರದಲ್ಲಿ 'ಯಾಕಿಷ್ಟು ದೇವರುಗಳು?' ಎಂದು ಬೆರಗು, ನೋವು ವಿಷಾದ ಮಿಶ್ರಿತ ದನಿಯಲ್ಲಿ ಪ್ರಶ್ನಿಸಿಕೊಳ್ಳುವಂತಾಗುತ್ತದೆ. ಇನ್ನಷ್ಟು ಚಿಂತನೆಗೆ ದೂಡುತ್ತದೆ.

'ಈಚೀಚೆ ಈ ಮಹಾನ್ ರಾಷ್ಟ್ರದಲ್ಲಿ
ಹೊಟ್ಟೆ ಬಟ್ಟೆ ವಸತಿಗಾಗಿದ್ದರೂ ತತ್ವಾರ
ದಿನೇ ದಿನೇ ಕುಸಿಯುತ್ತಿದ್ದರೂ ವೇಗದಲ್ಲಿ
ಜೀವಿತ ಗೃಹದ ಅಸ್ತಿಭಾರದಾಧಾರ
ಬೀಗುತ್ತಿದೆ ಉಲ್ಬಣಿಸಿ ದೈವಭಕ್ತಿ' (ಯಾಕಿಷ್ಟು ದೇವರುಗಳು?)

—ಎಂದು ವ್ಯಂಗ್ಯವಾಗಿ ವಿವರಿಸುವುದರ ಜೊತೆಗೆ `ಯಾಕಿಷ್ಟು ದೇವರು ದಿಂಡರಿದ್ದಾರೆಂದರೆ, ಕಡು ಬಡವರಿರುವ ಈ ಸಿರಿವಂತ ದೇಶದಲ್ಲಿ` ಎಂಬ ಪ್ರಶ್ನೆ ಎತ್ತಿ

'ಗಗನ ವಿಸ್ತಾರಕ್ಕೆ ತಕ್ಕಂತೆ ನಕ್ಷತ್ರಗಳಿರುವ ಹಾಗೆ
ಜನಸಂಖ್ಯೆಗನುಗುಣವಾಗಿ ದೇವರುಗಳು.'

(ಅದೇ)

—ಎಂದು ಮೊನಚು ವ್ಯಂಗ್ಯದೊಂದಿಗೆ ಸಮಾಧಾನ ನೀಡುತ್ತಾರೆ.

ನಿಸಾರರಿಗೆ ಧಾರ್ಮಿಕ ಮಡಿವಂತಿಕೆಯಿಲ್ಲ. ಸ್ವಧರ್ಮವನ್ನು ವೈಚಾರಿಕ ಒರೆಗಲ್ಲಿಗೆ ಹಚ್ಚುತ್ತಲೇ ಅದರ ಮೌಲಿಕ ಅಂಶಗಳನ್ನು `ಹಂಸಕ್ಷೀರ ನ್ಯಾಯ`ದಂತೆ ಸ್ವೀಕರಿಸುತ್ತಾರೆ. ಅಲ್ಲಾ, ಪೈಗಂಬರ್, ಸೂಫಿ ಸಂತರನ್ನು ಒಪ್ಪಿಕೊಳ್ಳುವ ಹಾಗೆಯೇ ರಾಮಕೃಷ್ಣ, ಬಸವೇಶ್ವರ, ಪರಮ ಹಂಸ, ವಿವೇಕಾನಂದ, ಶಾರದಾ ಮಾತೆ, ಏಸು ಮುಂತಾದವರನ್ನು ಸ್ವೀಕರಿಸುತ್ತಾರಾದರೂ ಅವರನ್ನು ಮತ ಪ್ರವರ್ತಕರೆಂದಾಗಲೀ ಪವಾಡ ಪುರುಷರೆಂದಾಗಲೀ ಒಪ್ಪಿಕೊಳ್ಳದೆ ಅವರಲ್ಲಿನ ಅನನ್ಯ ವ್ಯಕ್ತಿತ್ವ, ಗುಣಗಳಿಗಾಗಿ ಗೌರವಿಸುತ್ತಾರೆ. ಬಸವೇಶ್ವರರು,

'ಮಡುಗಟ್ಟಿ ನಾರಿದ್ದ ಸಂಪ್ರದಾಯಕೆ ನಾಲೆ
ಬಿಡಿಸಿ, ಹೊಸ ಹಾದಿಗಳ ರಚಿಸಿದಾತ;
ಈ ನಾಡ ಹಿರಿ ಬದುಕಿಗಂಟಿದ್ದ ಕಿಲುಬನ್ನು
ಉಜ್ಜುಜ್ಜಿ ಮತ್ತೊಮ್ಮೆ ಹೊಳೆಸಿದಾತ'

(ಬಸವೇಶ್ವರರು)

—ಎನ್ನುವ ಕಾರಣಕ್ಕೆ, ರಾಮಕೃಷ್ಣ ಪರಮಹಂಸರು, `ಸಕಲ ಧರ್ಮ ಸುಮ ವನ ಸಂಚಾರಿ`ಯಾಗಿ ಕಾಣಿಸಿದ್ದಕ್ಕೆ; ಶ್ರೀ ಶಾರದಾದೇವಿ ಸೇವೆಗೆಂದೇ ದುಡಿದ ಚೇತನವಾಗಿ, ಶಿಷ್ಯ ಜನಕ್ಕೆ ಒಲವಿನ ಮಾತೆಯಾಗಿ, ತಾಯೊಡಲ ತಂಪು ಮಡಿಲಾದುದಕ್ಕಾಗಿ, ಎಲ್ಲೋ ಹಚ್ಚಿಟ್ಟ ಅಗರು ಬತ್ತಿ ಮನೆ ತುಂಬ ಕಂಪು ಸೂಸುವಂತೆ, ಸದ್ದಿರದೆ ಬಾಳಿದ್ದಕ್ಕಾಗಿ ಮುಖ್ಯರೆನಿಸಿದರೆ: ಮದರ್ ತೆರೇಸ ದೀನ ದಲಿತ ಸೇವೆಯಲ್ಲಿ ಸವೆದದ್ದಕ್ಕಾಗಿ ಕವಿಯ ಗೌರವಕ್ಕೆ ಪಾತ್ರರಾಗುತ್ತಾರೆ. ಮದರ್ ತೆರೇಸಾರ ಚಿತ್ರ ಕವಿಯ ಮಾತುಗಳಲ್ಲಿ ಅಭೂತಪೂರ್ವವಾಗಿ ಮೂಡಿ ನಿಂತಿದೆ. ಅವರ ವ್ಯಕ್ತಿತ್ವದ ಒಂದೊಂದು ಮಗ್ಗುಲನ್ನೂ ಅತ್ಯಂತ ಸಮರ್ಥವಾಗಿ ಹರಳುಗಟ್ಟಿಸಿ ಪರಿಚಯಿಸಿರುವ ಪರಿಯನ್ನು ಕೆಳಗಿನ ಸಾಲುಗಳು ಸ್ಪಷ್ಟಗೊಳಿಸುತ್ತವೆ.

'ಜಗದ ಕಡು ಕೃಪಣತೆಯ ಮುಳ್ಳಿಡಿದ ಮರದಲ್ಲಿ
ಕರುಣೆಯೆಲರಿಗೆ ಒಲೆವ ನಲುಮೆ ಗೂಡೆ,
ಬಾಳ ಸ್ವಾರ್ಥದ ಹಲವು ಕುಟಿಲ ಮಾರ್ಗಗಳಲ್ಲಿ
ಸೇವೆಯೆಡೆ ಸಾಗಿರುವ ನೇರ ಜಾಡೆ.

....

'ದಿಕ್ಕಿರದ ದುಃಖಾರ್ತ ಜನದ ಹಣೆ ಬರಹವನು
ಹೊಸದಾಗಿ ತಿದ್ದಿರುವ ಅಭಯಂಕರಿ.

....

'ಮಾನವೀಯತೆ' ಪದಕೆ ಮಿಗಿಲರ್ಥ ಮೂಡಿಸುವ
ಮಾತೃ ಮಮತಾ ವಕ್ಷದಮಲ ಸಂಗ.

....

'ಕ್ರಿಸ್ತದಯೆ ಕಸ್ತೂರಿ ತಾಯ್ತನದ ನೆವದಲ್ಲಿ
ಸೇವೆಯಲಿ ಕಂಪೆಸೆವಭೂತ ಕಾರ್ಯ.'

(ಮದರ್ ತೆರೆಸ)

ಹೀಗೆ ಉದ್ದಕ್ಕೂ ವ್ಯಕ್ತಿತ್ವದ ಶಬ್ದಚಿತ್ರಗಳು ಓದುಗರೆದುರಿಗೆ ಜೀವಂತ ವ್ಯಕ್ತಿಯ ದೃಶ್ಯವನ್ನು ಮೂಡಿಸುವಲ್ಲಿ ಸಾರ್ಥಕವೆನ್ನಿಸಿವೆ.

ತಾತ್ವಿಕ ನಂಬಿಕೆಗಳು 'ಧರ್ಮ'ವೆನ್ನಿಸಿಕೊಂಡರೆ, ಆಚರಣೆ, ಅಭಿವ್ಯಕ್ತಿ ರೀತಿ, ವಿಧಾನಗಳು ಸಂಸ್ಕೃತಿಯ ಭಾಗವಾಗಿ ಸೇರಿಕೊಳ್ಳುತ್ತವೆ. ಈ ಅರ್ಥದ ಹಿನ್ನೆಲೆಯಲ್ಲಿ ನಿಸಾರರು 'ರಂಜಾನ್' ಬಗ್ಗೆ ಬರೆಯುವುದರ ಜೊತೆಗೆ, 'ಕಾಮನ ಹಬ್ಬ'ವನ್ನೂ, ಹಬ್ಬದ ವಾತಾವರಣವನ್ನು ನಿರ್ಮಿಸುವ 'ರಂಗೋಲಿ'ಯನ್ನೂ ಕುತೂಹಲದ ಕಣ್ಣಿನಿಂದ ಗಮನಿಸುತ್ತಾರೆ. ಅನ್ಯ, ಭಿನ್ನ ಧರ್ಮ, ಸಂಸ್ಕೃತಿ ಎಂದುಕೊಳ್ಳದೆ, ತೆರೆದ ಮನಸ್ಸಿನಿಂದ ನೋಡುವ ಅವರಿಗೆ ರಂಗೋಲಿ ಕೇವಲ ಬಿಳಿ ಹುಡಿಯಲ್ಲಿ ಅರಳುವ ರೇಖಾಚಿತ್ರವಾಗಿ ಕಾಣುವುದಕ್ಕಿಂತ, ಧಾರ್ಮಿಕ, ಸಾಂಸ್ಕೃತಿಕ ಆಯಾಮಗಳನ್ನೊಳಗೊಂಡ ಒಂದು ಸಂಕೀರ್ಣ ಅನುಭವವಾಗಿ ಪರಿಣಮಿಸುತ್ತದೆ. ವಿವಿಧ ವಿನ್ಯಾಸಗಳಲ್ಲಿ ಲಕಲಕಿಸುತ್ತಾ ಅರಳಿ ನಿಂತ ರಂಗೋಲಿ ಒಮ್ಮೆ ಬಿಳಿಯ ಕಗ್ಗಾಡಿನ ಅನುಭವವನ್ನು ತಂದುಕೊಟ್ಟರೆ, ಮತ್ತೊಮ್ಮೆ ನಸುಕಿನ ವನಿತೆಯ ಮಂದಸ್ಮಿತದಂತೆ, ಶ್ವೇತೋದ್ಯಾನದಂತೆ ಕಂಡು ಬರುತ್ತದೆ. 'ಧರ್ಮ' ಸಂಸ್ಕೃತಿಗಳನ್ನು ನೆನಪಿಗೆ ತರುತ್ತದೆ.

'ತೋರಣವಾತ್ಮ ರಂಗೋಲಿ ಪ್ರಾಣ;
ಭಾರತ ಸಂಸ್ಕೃತಿ ಅಶಂಕಮಾನ.
ಗೃಹಿಣಿಯರೆತ್ತಿದ ಅತೀತದಾರತಿ
ಮನೆಯನು ರಕ್ಷಿಸುವನಾದಿ ತಾಯಿತಿ.'

'ಮಾನವರಾತ್ಮದ ರಮ್ಯಾರಾಧನೆ
ಪಡೆಯಿತೆ ರಂಗೋಲಿಯ ಅನುಮೋದನೆ!
ಬೀದಿಯ ತೋಳಿನ ಈ ಬಿಳಿ ಹಚ್ಚೆ
ಯಾವ ಸನಾತನ ಋಷಿಯ ಸದಿಚ್ಛೆ?'

(ರಂಗೋಲಿ)

—ಎಂದು ಆಧ್ಯಾತ್ಮಿಕ ಪರಿಭಾಷೆಯಲ್ಲಿ ಮೆಚ್ಚುಗೆ, ಬೆರಗುಗಳು ಕವಿ ಮನದ ಮುದಕ್ಕೆ ದಾರಿ ಮಾಡುತ್ತವೆ. ಅವರು 'ರಂಗೋಲಿ'ಯಂತಹ ದಿನದ ಸಾಮಾನ್ಯ ಚಟುವಟಿಕೆಯನ್ನು, ತಮ್ಮ ಸಂಸ್ಕೃತಿಗೆ, ಧರ್ಮಕ್ಕೆ ಅಪರಿಚಿತವಾದದುದರಿಂದಲೋ ಏನೋ ಇಷ್ಟೊಂದು ಗಾಢವಾಗಿ ಚಿಂತನೆಗೆ ಗುರಿಪಡಿಸುತ್ತಾರೆ.

ಕಲೆ, ಧರ್ಮ, ಸಂಸ್ಕೃತಿಗಳು ಸಾರ್ವತ್ರಿಕವಾದವು. ಮಡಿ, ಮೈಲಿಗೆ, ಜಾತಿ, ಮತ, ವರ್ಗ ನಿರ್ಬಂಧಗಳಿಂದ ಮುಕ್ತವಾದವು. ನಿಸಾರರ ಧಾರ್ಮಿಕ, ಸಾಂಸ್ಕೃತಿಕ ಚಿಂತನೆಗಳು ಇಂತಹ ಒಂದು ತಾತ್ವಿಕ ನಂಬಿಕೆಯ ಮೂಲದಿಂದ ಹೊರಟಂಥವು. ಆದ್ದರಿಂದಲೇ ಹಿಂದೂ ಮುಸ್ಲಿಂ, ಯಾವುದೇ ಪರಿಸರವನ್ನು, ವೈಚಾರಿಕತೆಯನ್ನು ತಮ್ಮದಾಗಿಸಿಕೊಳ್ಳಬಲ್ಲರು; ತಮ್ಮ ವೈಯಕ್ತಿಕ ಸಂವೇದನೆಗಳೊಂದಿಗೆ ಒಗ್ಗೂಡಿಸಿಕೊಳ್ಳಬಲ್ಲರು.

ನವ್ಯ ಕಾವ್ಯ ಪರಂಪರೆಯೊಂದಿಗೆ ಪ್ರಾರಂಭವಾದ ಕಾವ್ಯ ರಚನೆಯ ಸಂದರ್ಭದಲ್ಲಿ ನವೋದಯದ ಎಲ್ಲ ಆಶಯಗಳನ್ನು ಸ್ವೀಕರಿಸುವುದು ಸಾಧ್ಯವಾಗದಿದ್ದರೂ ಭಾವ ತೀವ್ರತೆಯನ್ನು ರೂಢಿಸಿಕೊಳ್ಳಲಾಗದಿದ್ದರೂ ಮಾನವ ಪ್ರೇಮ, ದೇಶ ಪ್ರೇಮ, ಸ್ವಾತಂತ್ರ್ಯ—ಇತ್ಯಾದಿ ಕೆಲವು ಚಿರಂತನ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ನಿಸಾರ್ ಅವರ ಕವಿತೆಗಳಲ್ಲಿ ಕಾಣಬಹುದಾಗಿದೆ. ಧರ್ಮ, ದೇವರು, ಅಧ್ಯಾತ್ಮ, ಅನುಭಾವ ಮುಂತಾದವುಗಳು ಕೂಡಾ ನವೋದಯದ ಚಿಂತನೆಯ ಕೊಡುಗೆಗಳಾದರೂ ಮೊದಲಿನ ಸಂಕಲನಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ನವ್ಯ ಕಾವ್ಯ ಪ್ರತಿಮೆ, ಪ್ರತೀಕಗಳ ಮೂಲಕ ಆಧುನಿಕ ಬದುಕಿನ ಸಂಕೀರ್ಣತೆಯನ್ನು, ವ್ಯಕ್ತಿಯಲ್ಲಿನ ವಿಕ್ಷಿಪ್ತ ಮನಃಸ್ಥಿತಿಯನ್ನು, ಅನಾಥ ಸ್ಥಿತಿಯನ್ನು ಅನಾವರಣಗೊಳಿಸುವ ಪ್ರಕ್ರಿಯೆಗೆ ಬದ್ಧವಾಗಿದ್ದುದರಿಂದ ಅಂತರಂಗದ ಭಾವ ಮೂಲದಿಂದ ಹೊರಡುವ ಆರ್ತತೆ, ದೈನ್ಯ, ಭಕ್ತಿ ತಾದಾತ್ಮ್ಯ, ಸಮರ್ಪಣತೆ, ಶರಣಾಗತಿ ಇತ್ಯಾದಿಗಳಿಗೆ ಅವಕಾಶವಿಲ್ಲವಾಗುತ್ತದೆ. ಧರ್ಮ, ದೇವರುಗಳನ್ನು ದೂರವಿಡುವುದು, ಇಲ್ಲವೇ ವ್ಯಂಗ್ಯ, ವಿಡಂಬನೆಗೆ ಗುರಿಯಾಗಿಸುವುದು ನವ್ಯದ ನಿಲವಾಗಿತ್ತು. ನಿಸಾರ್ ಅಹಮದ್ ಅವರೂ ಕೂಡಾ ಇದಕ್ಕೆ ಹೊರತಾಗಲಿಲ್ಲ. ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ವಿಡಂಬನಾತ್ಮಕ ಶೈಲಿಯಲ್ಲಿನ ದೇವರು, ಮೌಲ್ವಿ, ಆಚಾರಗಳ ಬಗೆಗಿನ ಕೆಲವು ಕವಿತೆಗಳು ಕಂಡುಬಂದಿರಬಹುದಾದರೂ ಹೆಚ್ಚಿನ ಸಂಖ್ಯೆಯಲ್ಲಿ ದೈವಪರ ಕವಿತೆಗಳು ಕಾಣಿಸುವುದು 'ಬಹಿರಂತರ', 'ನವೋಲ್ಲಾಸ' ಮುಂತಾದ ಸಂಕಲನಗಳಲ್ಲಿ ವಯಸ್ಸು ಮಾಗಿದಂತೆ ಮನಸ್ಸು ದೈವಮುಖಿಯಾಗುತ್ತದೆ: ಆಧ್ಯಾತ್ಮಿಕ ಅನುಸಂಧಾನದ ಕಡೆಗೆ ತುಡಿಯುತ್ತದೆ.

ಆಳವಾದ ಜೀವನಾನುಭವ, ಸುತ್ತುವರೆದು ತಳ್ಳಂಕದತ್ತ ದೂಡುವ ಸಮಸ್ಯೆಗಳು, ಕದಡಿ ಹೋಗುತ್ತಿರುವ ಶಾಂತಿ ನೆಮ್ಮದಿಗಳು, ಮನುಷ್ಯರ ನಡುವೆ ಹತ್ತಿ ಉರಿಯುತ್ತಿರುವ ದ್ವೇಷಾಗ್ನಿ, ಕ್ರೌರ್ಯ, ಹಿಂಸೆಗಳ ಅಟ್ಟಹಾಸ, ಭ್ರಷ್ಟವಾಗುತ್ತಿರುವ ಸಾಮಾಜಿಕ ಪರಿಸರ, ಸ್ವಾರ್ಥ, ದುರಾಸೆಗಳಿಂದ ಕಲುಷಿತಗೊಂಡ ನೈತಿಕತೆ—ಇಂಥ ವಾತಾವರಣದಲ್ಲಿ ಸಂವೇದನಾಶೀಲ ಮನಸ್ಸಿಗೆ, ಮೌಲ್ಯಗಳ ಬಗ್ಗೆ ಕಾಳಜಿಯುಳ್ಳ ಚೇತನಕ್ಕೆ ಅಧ್ಯಾತ್ಮ, ಜೀವ ಸಂಬಂಧಿ ಚಿಂತನೆಗಳು ಮಾತ್ರವೆ ಪರಿಹಾರ ಒದಗಿಸಬಲ್ಲವೆಂಬ ನಂಬಿಕೆಯಲ್ಲಿ, ದೈವದ ಅಸ್ತಿತ್ವವನ್ನು, ಅವನ ಅಸೀಮ ಶಕ್ತಿಯನ್ನು, ಅಪಾರ ಕರುಣೆಯನ್ನು ಗುರುತಿಸಲು, ಆರ್ತತೆಯೊಂದಿಗೆ ಪ್ರಾರ್ಥಿಸಲು ಮುಂದಾಗುವ ಅನಿವಾರ್ಯತೆ ಒದಗುವಂತೆ, ಕವಿ ನಿಸಾರರು ಅಧ್ಯಾತ್ಮದ ಕಡೆಗೆ ಒಲಿಯುತ್ತಾರೆ. ಧರ್ಮ ವಿಧಿಸುವ ಬಾಹ್ಯಾಚರಣೆಗಳಿಗಿಂತ ಧರ್ಮದ ತಾತ್ವಿಕ ಅನುಸಂಧಾನಕ್ಕೆ ಅವರು ಹೆಚ್ಚು ಒತ್ತುಕೊಡುತ್ತಾರೆ. ಪರಮಾತ್ಮ ತತ್ತ್ವ ಸ್ವರೂಪವನ್ನು

ಅಂತರ್ದೃಷ್ಟಿಯಿಂದ, ಅನುಭಾವದಿಂದ ಮಾತ್ರವೇ ಗ್ರಹಿಸಲು ಸಾಧ್ಯವೆಂದು ಬಲವಾಗಿ ನಂಬಿರುವ ನಿಸಾರರು ವ್ಯಕ್ತ ಸೃಷ್ಟಿಯ ವೈವಿಧ್ಯ, ವೈರುಧ್ಯಗಳ ಹಿಂದೆ ಅಗೋಚರ ಅದೃಶ್ಯ, ಅಮೂರ್ತ ರೀತಿಯಲ್ಲಿ ಅರಿವಿಗೆ, ನೋಟಕ್ಕೆ ಅತೀತವಾಗಿ ನೆಲೆ ನಿಂತ ಸುಪ್ರಭೆಯನ್ನು ಭಕ್ತಿ ವಿನಮ್ರತೆಗಳಿಂದ, ಮೆಚ್ಚುಗೆ ಬೆರಗುಗಳಿಂದ ಕೊಂಡಾಡುತ್ತಾರೆ. ಧರ್ಮದ ಮೂಲ ಆಧ್ಯಾತ್ಮಿಕ ಚಿಂತನೆಯಾಗಿರುವುದರಿಂದ, ಚಿಂತನೆ ಪ್ರಮುಖವಾಗಿ, ಆಚರಣೆ ಕವಿಯ 'ಧರ್ಮ'ದ ಪರಿಕಲ್ಪನೆಯ ಹೊರಗುಳಿಯುತ್ತದೆ.

ನಿಸಾರರು ನಾಸ್ತಿಕರಾಗಿ ದೈವದ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ. ಆಸ್ತಿಕರಾಗಿ ಅತಿಯಾದ ದೈವ ವ್ಯಸನಿಯಾಗಿ, ಆಧ್ಯಾತ್ಮಿಕ ಚಿಂತಕರಾಗಿ ಭಕ್ತಿ ಪಾರವಶ್ಯದಲ್ಲಿ ಎಲ್ಲಿಯೋ ಕಳೆದು ಹೋಗುವುದಿಲ್ಲ. ವಾಸ್ತವದ ಎಚ್ಚರ, ವೈಚಾರಿಕ ಜಿಜ್ಞಾಸೆಗಳೊಂದಿಗೆ 'ಧರ್ಮ' 'ದೇವರು' ಮುಂತಾದವುಗಳ ಬಗ್ಗೆ ದೃಷ್ಟಿ ವೈಶಾಲ್ಯದೊಂದಿಗೆ, ಹೊಸ ಹೊಳಹುಗಳೊಂದಿಗೆ ಅನುಸಂಧಾನಕ್ಕೆ ತೊಡಗುತ್ತಾರೆ. ಅಧ್ಯಾತ್ಮ ಚಿಂತನೆ ಎಂಬುದರ ಜೊತೆಗೆ ಮನುಷ್ಯ, ರಾಷ್ಟ್ರ, ವಿಶ್ವಕೇಂದ್ರಿತ ನೆಲೆಯಲ್ಲಿ 'ಧರ್ಮ'ವನ್ನು ವ್ಯಾಖ್ಯಾನಿಸತೊಡಗುತ್ತಾರೆ. ಒಟ್ಟಿನಲ್ಲಿ ಸೃಷ್ಟಿ, ಸ್ಥಿತಿ, ಲಯಕಾರಕ 'ಪರ ತತ್ವ'ವೊಂದು ಅಮೂರ್ತ ರೂಪದಲ್ಲಿ ಅಸ್ತಿತ್ವದಲ್ಲಿದೆ. ಆ ಪರ ತತ್ವದ ಕೃಪೆಯ ಬೆಳಕಿನಲ್ಲಿ ಮಾತ್ರವೇ ಹುಲು ಮನುಜನ ಅಸ್ತಿತ್ವಕ್ಕೆ ಬೆಲೆ ಎಂಬುದೇ ನಿಸಾರರ ಧಾರ್ಮಿಕ ಗ್ರಹಿಕೆಯ ಅಂತಿಮ ಸತ್ಯವಾಗಿದೆ.

ವಾಸ್ತವತೆಯ ಹೆಸರಿನಲ್ಲಿ ತಮ್ಮ ಲೋಕಾನುಭವವನ್ನು ಹಾಗೆ ಹಾಗೆ ಕಚ್ಚಾ ಸ್ಥಿತಿಯಲ್ಲಿ ತೋಡಿಕೊಳ್ಳುತ್ತಿರುವ ಲೇಖಕರ ಅಪ್ರಬುದ್ಧ ಹುಂಬ ಹುಮ್ಮಸ್ಸಿಗೆ ಕಡಿವಾಣವನ್ನು ಜಡಿಯಬೇಕಾದದ್ದು ಇಂದಿನ ಸಾಹಿತ್ಯ ದೃಷ್ಟಿಯಿಂದ ಸಮಂಜಸ ಎನ್ನಿಸಬಹುದು. ಲೋಹ ತನ್ನ ಸ್ವಸ್ವರೂಪದ ಶುದ್ಧ ರೂಪದಲ್ಲಿ ನೈಸರ್ಗಿಕವಾಗಿ ದೊರಕುವುದು ಅತಿ ವಿರಳ. ಅದು ಬಹು ಪಾಲು ಲಭ್ಯವಾಗುವುದು ಅದುರಿನ ಸಮ್ಮಿಶ್ರ ಸ್ಥಿತಿಯಲ್ಲಿ; ಬೇರೆ ಬೇರೆ ಧಾತುಗಳ ಜೊತೆ ರಾಸಾಯನಿಕವಾಗಿ ಸೇರ್ಪಡೆಯಾದ ಸಂಯುಕ್ತ ರೂಪದಲ್ಲಿ. ಅದುರನ್ನು ವಿವಿಧೋಪಾಯಗಳಿಂದ ಸಂಸ್ಕರಿಸಿ, ಪರಿಶುದ್ಧಗೊಳಿಸಿ ಲೋಹವನ್ನು ಪ್ರತ್ಯೇಕಿಸಿಕೊಂಡ ಬಳಿಕ ಅದು ಪ್ರಯೋಜನಕ್ಕೆ ತಕ್ಕದ್ದಾಗುತ್ತದೆ, ಉಪಕಾರಕ ವಾಗುತ್ತದೆ. ಇದರಂತೆಯೇ, ಲೋಕಾನುಭವ ಎಂಬುದನ್ನು ಪ್ರತಿಭೆಯ ಕಾವಿನ ಮೂಲಕ ಪರಿಷ್ಕಾರ ಮಾಡಿ ಚೊಕ್ಕಗೊಳಿಸಿದ ಮೇಲಷ್ಟೇ ಅದು ಭಾವೋಪಯೋಗಿಯಾಗಲು ಸಮರ್ಥವಾಗುತ್ತದೆ.

(ಲೋಕಾನುಭವದ ಸಂಸ್ಕರಣ)



ನಿಸಾರ್ ಅವರ ಕಾವ್ಯ ಶೈಲಿಯ ಅನನ್ಯತೆ

♦ ಡಾ. ಎಚ್. ಜೆ. ಲಕ್ಕಪ್ಪಗೌಡ

೧

ಕನ್ನಡ ಕಾವ್ಯಲೋಕ ಭಾರತೀಯ ಕಾವ್ಯ ಪರಂಪರೆಯ ಮಹತ್ವಪೂರ್ಣ ಸಾಧನೆಗಳ ಒಂದು ಅನನ್ಯ ಭಾಗವಾಗಿದೆ. ಹಳೆಗನ್ನಡ, ನಡುಗನ್ನಡ, ಆಧುನಿಕ ಕನ್ನಡಗಳ ಮೂಲಕ ತನ್ನ ಮಹೋನ್ನತ ಪ್ರತಿಭೆಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಲಯದಲ್ಲಿ ವಿಶಿಷ್ಟೋಜ್ವಲವಾಗಿ ಅನಾವರಣ ಮಾಡಿಕೊಡಿರುವ ಕನ್ನಡ ಕಾವ್ಯ ಮಹತ್ತು ಬೃಹತ್ತುಗಳೆರಡರಲ್ಲೂ ಶಿಖರವ್ಯಾಪಿಯಾಗಿದೆ. ಆಧುನಿಕ ಕನ್ನಡ ಕಾವ್ಯವಂತೂ ವಸ್ತು ವ್ಯಾಪಕತೆಯಲ್ಲಿ, ಪ್ರಯೋಗ ವೈವಿಧ್ಯದಲ್ಲಿ, ಕಲ್ಪನೆಯ ಎತ್ತರದಲ್ಲಿ, ಉನ್ನತ ದರ್ಶನದಲ್ಲಿ, ಸರಳತೆ ಮತ್ತು ಸಂಕೀರ್ಣತೆಯಲ್ಲಿ, ವೈಚಾರಿಕ ಸೂಕ್ಷ್ಮತೆ ಹಾಗೂ ಹರಹಿನಲ್ಲಿ, ಮನುಷ್ಯಲೋಕದ ಆಕಾಶ ಪಾತಾಳಗಳ ದಟ್ಟ ಮತ್ತು ವಿಶಿಷ್ಟ ಚಿತ್ರಣದಲ್ಲಿ ಅಪಾರ ಆಯಾಮಗಳ ತವರುಮನೆಯಾಗಿದೆ. ಕಣ್ಣು ಕೋರೈಸುವ ಈ ಕಾವ್ಯಕೃಷಿಯಲ್ಲಿ ಅದರ ಅಭಿವ್ಯಕ್ತಿಯ ಸ್ವೋಪಜ್ಞಶೀಲತೆ ವೈಶಿಷ್ಟ್ಯ, ವೈವಿಧ್ಯ ಮತ್ತು ಪ್ರತಿಭಾದೀಪ್ತಿಗಳು ಅವಿರಾಮವಾದ ಅನುಸಂಧಾನಕ್ಕೆ, ಅನುಶೀಲನಕ್ಕೆ, ಸಂಶೋಧನೆಗೆ ಮತ್ತು ಮೌಲಿಕ ವ್ಯಾಖ್ಯಾನಕ್ಕೆ ಪಾತ್ರವಾಗಿವೆ. ಆಧುನಿಕ ಕನ್ನಡ ಕಾವ್ಯವಂತೂ ನಿತ್ಯ ಪ್ರಯೋಗ ಭೂಮಿಕೆಯಾಗಿದ್ದು, ಸಮಾಜದ ಬಹು ಸ್ತರಗಳಿಂದ, ಬಹು ಸಂಸ್ಕೃತಿಗಳಿಂದ, ಬಹು ಭಾಷಿಕ ವಲಯಗಳಿಂದ ಮೂಡಿಬಂದ ಕವಿಗಳ

ಅನನುಕರಣೀಯ ಅಭಿವ್ಯಕ್ತಿ ಸಿದ್ಧಿಯ ಬಹುತ್ವದ ಪರಮ ಪ್ರತೀಕವಾಗಿ ರೂಪುಗೊಂಡಿದೆ. ಮಿಕ್ಕೆಲ್ಲ ಶಕ್ತಿಯ ಜೊತೆ ಜೊತೆಗೆ, ಕನ್ನಡವನ್ನು ತಾಯಿ ಭಾಷೆಯಾಗಿ ಹುಟ್ಟಿನಿಂದ ಆವಿಷ್ಕರಿಸಿಕೊಳ್ಳದಿದ್ದರೂ ತನ್ನ ಪರಿಸರ ಮತ್ತು ಶಿಕ್ಷಣ ಹಾಗೂ ಸ್ವತಂತ್ರ ಸಾಧನೆಯಿಂದ ಅದನ್ನು ವಾಚೋವಿಧೇಯವಾಗಿ ಅನನ್ಯ ವಿಶಿಷ್ಟವಾಗಿ ದಕ್ಕಿಸಿಕೊಂಡು, ಹತ್ತರೊಡನೆ ಹನ್ನೊಂದನೆಯವರಾಗದೆ, ಪ್ರತ್ಯೇಕತಾ ಪ್ರದೀಪ್ತಿಯನ್ನು ಮೆರೆಸುವ ಮೂಲಕ ಕನ್ನಡ ಕಾವ್ಯಕ್ಕೆ, ಕಾವ್ಯಭಾಷೆಗೆ ವಿಶೇಷವಾದ ಪರಿವೇಷವನ್ನು ಪ್ರಖರತೆಯನ್ನು ಪ್ರಬುದ್ಧತೆಯನ್ನು ತಂದುಕೊಟ್ಟವನು ಪ್ರೊ. ಕೆ. ಎಸ್. ನಿಸಾರ್ ಅಹಮದ್.

೨

ಪರಂಪರೆಯಿಂದ ಸಾಹಿತ್ಯ ವಿದ್ಯಾರ್ಥಿಯಲ್ಲದ, ಭೂವಿಜ್ಞಾನವನ್ನು ಅಧ್ಯಯನ ಮಾಡಿ ಅದರ ವಿಸ್ಮಯಗಳನ್ನು ಮನನ ಮಾಡುವ ಮೂಲಕ ಜಗತ್ತಿನ ಬಗೆಗೆ, ಜನದ ಬಗೆಗೆ ಜನ ಮನೋಭಾವದ ಬಗೆಗೆ ಮೊನಚಾದ ಕುತೂಹಲ ಚಿಂತನ ವಿಶ್ಲೇಷಣೆಗಳನ್ನು ರೂಢಿಸಿಕೊಂಡ, ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಯಾಗಿ ರೂಪುಗೊಂಡ ನಿಸಾರ್, ೧೯೬೦ರಲ್ಲಿ 'ಮನುಸು ಗಾಂಧಿ ಬಜಾರು' ಕವಿತಾ ಸಂಕಲನವನ್ನು ಪ್ರಕಟಿಸುವ ಮೂಲಕ ಕನ್ನಡ ಕಾವ್ಯಲೋಕದಲ್ಲಿ ಹೊಸ ದನಿ ಹೊಸ ಖನಿ ಹೊಸ ಲಯ ಹೊಸ ಆಶಯ ಮತ್ತು ಹೊಸ ಭಾಷೆಗಳ ಆಪ್ಯಾಯಮಾನಕರವಾದ ಸುಳಿಗಾಳಿಯಾಗಿ ಬೀಸಿ ಕಾವ್ಯಪ್ರಿಯರನ್ನು ಪುಳಕಗೊಳಿಸಿಬಿಟ್ಟರು. ನವೋದಯ ಕಾವ್ಯ ಸಂಪ್ರದಾಯದ ಪರಮ ಫಲಗಳು ಕಾವ್ಯ ರಸಿಕರ ಮನಸ್ಸು ಬುದ್ಧಿಗಳನ್ನು ತಣಿಸಿ ಕುಣಿಸುತ್ತಿದ್ದ ಸುಗ್ಗಿ ಸಂಭ್ರಮದಲ್ಲಿ ತಮ್ಮ ಮೊದಲ ಸಂಕಲನದ ಪರಿಪುಷ್ಟ ಪಕ್ಷಿಯನ್ನು ಆತ್ಮವಿಶ್ವಾಸದಿಂದಲೇ ಹಾರಬಿಟ್ಟ ಕವಿ ಅನಂತರ ಹಿಂತಿರುಗಿ ನೋಡಲಿಲ್ಲ. ಪ್ರತಿಮಾ ಪ್ರಧಾನವಾದ, ವಿಚಾರ ಪ್ರಧಾನವಾದ ಸಂಕೀರ್ಣ ಸಂವೇದನೆಯ ನವ್ಯಕಾವ್ಯ; ಪ್ರತಿಷ್ಠಿತ ಲೋಕದ ಅನುಭವಗಳನ್ನು ಉದ್ದೇಶಪೂರ್ವಕವಾಗಿ ಅವಗಣಿಸಿ ಅಪ್ರತಿಷ್ಠಿತ ವರ್ಗದ ಸಶಕ್ತ ರೋಷಯುಕ್ತ ತಾಜಾ ಸಂವೇದನೆಗಳನ್ನು ಮಾಧ್ಯಮವಾಗಿ ಮಾಡಿಕೊಂಡ ಬಂಡಾಯ ಕಾವ್ಯಗಳ ಜೋರುಗಾಳಿಯಲ್ಲೂ ಎದೆಗುಂದದೆ, ಅವುಗಳ ಸಮಕಾಲೀನ ಸಲ್ಲಕ್ಷಣಗಳನ್ನೂ ತಮ್ಮ ಸಂವೇದನೆಯ ಭಾಗವಾಗಿ ಮಾಡಿಕೊಂಡು, ನೆನೆದವರ ಮನದಲ್ಲಿ (೧೯೬೪), ಸುಮುಹೂರ್ತ (೧೯೬೭), ಸಂಜೆ ಐದರ ಮಳೆ (೧೯೭೦), ನಾನೆಂಬ ಪರಕೀಯ (೧೯೭೨), ನಿತ್ಯೋತ್ಸವ (೧೯೭೬), ಸ್ವಯಂ ಸೇವೆಯ ಗಿಳಿಗಳು(೧೯೭೭), ಅನಾಮಿಕ ಆಂಗ್ಲರು (೧೯೮೨), ಬಹಿರಂತರ (೧೯೯೦), ನವೋಲ್ಲಾಸ (೧೯೯೪) ಆಕಾಶಕ್ಕೆ ಸರಹದ್ದುಗಳಿಲ್ಲ (೧೯೯೮), ಅರವತ್ತೈದರ ಐಸಿರಿ (೨೦೦೦) ಸಂಕಲನಗಳನ್ನು ಒಂದೊಂದಾಗಿ ಪ್ರಕಟಿಸುತ್ತ ಕಾವ್ಯಪ್ರೇಮಿಗಳ ಮನದಲ್ಲಿ ಅಚಲವಾಗಿ ಉಳಿದದ್ದು ಕವಿ ನಿಸಾರರ ನಿತ್ಯ ಸಮಕಾಲೀನ ಕಲ್ಪನೆ, ಚಿಂತನೆ ಮತ್ತು ಪ್ರಯೋಗಪ್ರಿಯತೆಗಳ ಅಂತಸ್ಸತ್ವವನ್ನು ರುಜುವಾತುಪಡಿಸುತ್ತದೆ. ಅವರ ಅಖಂಡ ಕಾವ್ಯ ಸಾಧನೆಗಳಲ್ಲಿ, ಕನ್ನಡ ಭಾಷೆಯನ್ನು ಅದರ ಎಲ್ಲ ಸ್ಥಿತ್ಯಂತರಗಳಲ್ಲಿ, ಪ್ರಭಾವಗಳಲ್ಲಿ, ಸಂಪತ್ತು ಸಂಸ್ಕೃತಿಗಳ ನೆಲೆಯಲ್ಲಿ ಕಾಲಕಾಲಕ್ಕೆ ರೂಢಿಸಿಕೊಂಡ, ಪರಿಣಾಮಕಾರಿಯಾಗಿ

ದುಡಿಸಿಕೊಂಡ ಹಳಸಲಾಗದಂತೆ ಎಚ್ಚರದಿಂದ ರೂಪಿಸಿಕೊಂಡ ನಿರಂತರ ಕ್ರಿಯಾತ್ಮಕ ಪ್ರಕ್ರಿಯೆ ಅತ್ಯಂತ ಮಹತ್ವಪೂರ್ಣವಾದದ್ದು, ಅನನ್ಯವಾದದ್ದು. ಅದರ ಸ್ವರೂಪಗಳನ್ನು ಕೆಲವು ಮಟ್ಟಿಗೆ ಇಲ್ಲಿ ಪರಿಶೀಲಿಸಲಾಗಿದೆ.

೩

ಭಾಷೆಯೆಂಬುದು ಮನುಷ್ಯ ತನ್ನ ಮನಸ್ಸಿನ ಅಭಿವ್ಯಕ್ತಿಗಾಗಿ ಸೃಷ್ಟಿಸಿಕೊಂಡ ಅತ್ಯಂತ ಪ್ರಭಾವಶಾಲಿಯಾದ ಮಾಧ್ಯಮಗಳಲ್ಲಿ ಒಂದು. ಮನುಷ್ಯ ಎಷ್ಟೇ ಪ್ರತಿಭಾವಂತನಾದರೂ ವಿಚಾರವಂತನಾದರೂ ಅನುಭವ ಶ್ರೀಮಂತನಾದರೂ ಆ ಪ್ರತಿಭೆ ವಿಚಾರ ಅನುಭವಗಳನ್ನು ಅಷ್ಟೇ ಪ್ರಖರವಾಗಿ ಪರಿಣಾಮಕಾರಿಯಾಗಿ ಅನನ್ಯ ವಿಶಿಷ್ಟವಾಗಿ ಮತ್ತೊಬ್ಬರಿಗೆ ಮನದಟ್ಟು ಮಾಡಿಕೊಡಲು ಸಾಧ್ಯ ಮಾಡುವ ವಿಶೇಷ ಸಾಮರ್ಥ್ಯ ಮನುಷ್ಯನೇ ಸೃಷ್ಟಿಸಿಕೊಂಡ ಭಾಷೆಗಿದೆ. ಸಾಹಿತ್ಯ ಜಗತ್ತಿನಲ್ಲಂತೂ ಇದರ ಪಾತ್ರ ಮಹತ್ತರವಾದುದು. ಏಕೆಂದರೆ ಕವಿ ಬಳಸುವ ಭಾಷೆಯ ಮೂಲಕವೇ ಸಹೃದಯನಾದವನು ಕವಿಯ ಅಂತರಂಗವನ್ನು ಪ್ರವೇಶಿಸಿ ಅವನ ಕಾಣ್ಕೆಗಳನ್ನು, ವೈಶಿಷ್ಟ್ಯಗಳನ್ನು, ಪ್ರತಿಭೆಯ ವಿವಿಧ ಆಯಾಮಗಳನ್ನು ಅನುಸಂಧಾನ ಮಾಡಬೇಕಾಗುತ್ತದೆ.' ಆದ್ದರಿಂದಲೇ 'ರೀತಿರಾತ್ಮಾ ಕಾವ್ಯಸ್ಯ' ಎಂದು ನಮ್ಮ ಮೀಮಾಂಸಕರು ಸಾರಿದರು. ಭಾಷೆಯೇ ಕಾವ್ಯವಲ್ಲ, ನಿಜ; ಆದರೆ ಭಾಷೆಯ ಮೂಲಕವೇ ಕಾವ್ಯವಾಗಬೇಕು ಎಂಬುದೂ ಅಷ್ಟೇ ನಿಜ. ಎಷ್ಟೋಜನ ಶ್ರೇಷ್ಠಕವಿಗಳು ತಮ್ಮ ಭಾವನೆ ಕಲ್ಪನೆ ಆಲೋಚನೆಗಳಿಗೆ ತಕ್ಕ ಭಾಷಿಕ ಆಕಾರವನ್ನು ಕೊಡುವಲ್ಲಿ ಸಮರ್ಥರಾಗ ದಿರುವುದರಿಂದ ಅವರ ಕಾವ್ಯ ಕೂಡ ಸಫಲವಾಗದೆ ಹೆಳವಾಗುತ್ತದೆ. ಕನ್ನಡದ ಕುವೆಂಪು ಬೇಂದ್ರೆ ಅಡಿಗರಂಥ ಕವಿಗಳು ತಮ್ಮ ಪ್ರಥಮ ಶ್ರೇಣಿಯ ಸೃಜನಶೀಲ ಮಹತಿಯನ್ನು ಮೆರೆಯುವುದಕ್ಕೆ ಅವರು ರೂಢಿಸಿಕೊಂಡ, ಸೃಷ್ಟಿಸಿಕೊಂಡ ಅನನ್ಯ ಸಾಧಾರಣವಾದ ಭಾಷೆಯೂ ಮುಖ್ಯ ಕಾರಣವೆಂಬುದನ್ನು ಮರೆಯುವಂತಿಲ್ಲ.

ಕುವೆಂಪು ಬೇಂದ್ರೆ ಪುತಿನ ನರಸಿಂಹಸ್ವಾಮಿ ಅಡಿಗ ಮುಂತಾದ ಕವಿಗಳು ತಮ್ಮ ವಿಶಿಷ್ಟೋಜ್ವಲ ಸೃಜನ ಪ್ರತಿಭೆಯ ಮೂಲಕ ಕನ್ನಡ ಲೋಕವನ್ನು ಮಿಂಚಿನಂತೆ ಆವರಿಸಿದ್ದ ಸಂದರ್ಭದಲ್ಲಿ, ಅವರಿಗಿಂತ ಭಿನ್ನವಾಗಿ ಭಾಷೆಯನ್ನು ಸೃಷ್ಟಿಸಿಕೊಳ್ಳುವ, ಪ್ರಕೃತಿಯ ಬಗ್ಗೆ, ಪರಿಸರದ ಬಗ್ಗೆ, ವಿಭಿನ್ನ ಜನ ಮಾನಸದ ಬಗ್ಗೆ, ಕನ್ನಡ ನಾಡು ನುಡಿ ರಾಷ್ಟ್ರದ ಬಗ್ಗೆ ಹೊಸ ಕಲ್ಪನೆಗಳನ್ನು ಚಿಂತನೆಗಳನ್ನು ಮೂರ್ತಗೊಳಿಸುವ ಮತ್ತು ತನ್ನದೇ ವ್ಯಕ್ತಿತ್ವದ ಛಾಪನ್ನು ಬಿಂಬಿಸುವ ಸವಾಲೆನಿಸುವ ಜವಾಬ್ದಾರಿಯನ್ನು ಹೊತ್ತು ಕಾವ್ಯರಂಗಕ್ಕೆ ಧುಮುಕಿದ ಕವಿ ಕೆ. ಎಸ್. ನಿಸಾರ್ ಅಹಮದ್. ಆ ಸವಾಲನ್ನು ಎದುರಿಸಿದ, ಪರಿಶ್ರಮಿಸಿದ, ಗೆದ್ದ ರೋಚಕ ಇತಿಹಾಸ ನಮ್ಮ ಕಣ್ಣ ಮುಂದೆ ಢಾಳಾಗಿ ಬಿಚ್ಚಿಕೊಂಡಿದೆ. ತಾಯಿ ಭಾಷೆಯಲ್ಲದ ಕನ್ನಡ ಭಾಷೆಯ ಬಾಗು ಬಳುಕು ಬನಿ ದನಿ ಚಿತ್ರಕತೆಗಳನ್ನು ತಮ್ಮ ಮಾತೃಭಾಷೆಯಾದ ಉರ್ದು, ಶಿಕ್ಷಣ ಭಾಷೆಯಾದ ಇಂಗ್ಲಿಷ್, ರೂಢಿಸಿಕೊಂಡ ಸಂಸ್ಕೃತದ ಜೊತೆಯಲ್ಲಿ ಅತ್ಯಂತ ಸಮರ್ಥವಾಗಿ ನಾದಿ ಮಿದ್ದಿಸಿ ಗಟ್ಟಿಸಿ ಅನ್ಯರಿಗೆ ಸುಲಭಸಾಧ್ಯವಲ್ಲದ ಹೊಸ ಪರಿಣಾಮಕಾರಿ ಯಾದ, ರುಚಿಕಟ್ಟಾದ 'ನಿಸಾರ್ ಶೈಲಿ'ಯೊಂದನ್ನು ರೂಪಿಸಿಕೊಂಡು ಕನ್ನಡ ಜನ ಮನದ

ಹೆಮ್ಮೆಯ ಕವಿಯಾದವರು ನಿಸಾರ್ ಅಹಮದ್. ಈ ಮಾತನ್ನು ರುಜುವಾತು ಪಡಿಸುವ ಪುರಾವೆಗಳನ್ನು ಕಷ್ಟಪಟ್ಟು ಹುಡುಕಬೇಕಾಗಿಲ್ಲವೆಂಬುದೇ ಅವರ ಹೆಗ್ಗಳಿಕೆ.

೪

ನಿಸಾರ್ ಅವರು ತಮ್ಮ ಕಾವ್ಯಾಭಿವ್ಯಕ್ತಿಗೆ ಹಲವು ವಸ್ತು ಮೂಲಗಳನ್ನು ಆಧರಿಸಿದ್ದಾರೆ. ನಿಸರ್ಗಾರಾಧನೆ, ಪ್ರೀತಿ-ಪ್ರೇಮ-ಸ್ನೇಹ, ನಾಡು-ನುಡಿ, ಸಮಾಜ ವಿಮರ್ಶೆ, ಅಂತರಂಗ ವಿಶ್ಲೇಷಣೆ, ವ್ಯಕ್ತಿಗೌರವ ಇತ್ಯಾದಿ. ಈ ವಸ್ತು ವೈವಿಧ್ಯದಿಂದಾಗಿ ಮತ್ತು ಕವಿ ಅವುಗಳೊಂದಿಗೆ ಹೊಂದುವ ಸಂಬಂಧ ವೈಶಿಷ್ಟ್ಯದಿಂದಾಗಿ ಹಾಗೂ ದೃಷ್ಟಿಕೋನ ವಿಶೇಷದಿಂದಾಗಿ ಮತ್ತು ಅವುಗಳನ್ನು ಭಾಷೆಯಲ್ಲಿ ಒಡಮೂಡಿಸುವಲ್ಲಿ ತಾನು ಇತರರಿಗಿಂತ ಭಿನ್ನವಾಗಿರಬೇಕೆಂಬ ಸೂಕ್ಷ್ಮ ಪ್ರಜ್ಞೆಯಿಂದಾಗಿ ಅವರ ಅಭಿವ್ಯಕ್ತಿಯಲ್ಲಿ ಹೊಸ ಕ್ರಮ ಹೊಸ ಹೊಳಪು ಹೊಸ ವಿನ್ಯಾಸಗಳು ತಾವೇ ತಾವಾಗಿ ಮೈದೋರುತ್ತವೆ. ನಿಸರ್ಗ ಚಿತ್ರಣಕ್ಕೆ ಸಂಬಂಧಿಸಿದ ಈ ನಿದರ್ಶನಗಳನ್ನು ಪರಿಶೀಲಿಸಿ:

'ಕುರುಡು ತಮವ ಕೊರೆಯುವಂಥ
ಬಾಣ ಬಿಟ್ಟ ಚಾಪಗಳೆ,
ಜಿಂಕೆ ಕಣ್ಣ ತಂಪು
ಕಾಡನೆಲ್ಲ ಬೆಳಗುವಂತೆ,
ಸುಖದ ಸಂತೆ ನೆರೆಯುವಂತೆ
ಕರಗಿ ಎಲ್ಲ ಚಿಂತೆ—
ಮಿನುಗಿ, ಮಿನುಗಿ ದೀಪಗಳೆ.
ಕನಸಿನ ಗೊನೆ, ಮಿಂಚಿನ ತೆನೆ, ಕಂಚಿನ ಬಿಳಿ ದನಿಗಳೆ,
ಪುಟ್ಟ ಹೆಜ್ಜೆಯಿಟ್ಟು ನಡೆವ, ಬೆಳೆವ ಎಳೆಯ ನಗೆಗಳೆ,
ಬೆಳಕ ಸಣ್ಣ ಗೊಂಚಲುಗಳು ತೂಗುತಿರುವ ಬಗೆಗಳೆ;' (ದೀಪಗಳು)

* * *

'ಜೋಗದ ಸಿರಿ ಬೆಳಕಿನಲ್ಲಿ. ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣ ವನದ ತೇಗ, ಗಂಧ ತರುಗಳಲ್ಲಿ—
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ' (ನಿತ್ಯೋತ್ಸವ)

* * *

'ಬರುತ್ತದೆ ಮಳೆ....
ನೇಸರ ತೊಳೆಗೆ ನಿಧಾನ ಕಟ್ಟಿ
ಮೋಡದ ಬೂಜೆ,
ಕತ್ತಲಲ್ಲಾಡಿಸಿ ಮಿಂಚಿನ ಸೂಜಿ
ಮುಟ್ಟಿದ ಹಾಗೆ ಮಣ್ಣಿನ ಹೂಜಿ'
(ಈಗ ಮಳೆಗಾಲವಲ್ಲ)

* * *

'ಕೊಳದೆದೆಯಲಿ ಅಲೆಗಾಗಿದೆ ಹೊಂಬೆಳಕಿನ ಜಳಕ
ಅರವಿಂದಗಳಿವೆ ಬಿಚ್ಚಿವೆ, ರವಿರಶ್ಮಿಗೆ ತುಟಿ ಹಚ್ಚಿವೆ
ನೆಲವೆಣ್ಣಿನ ಮೈ ಗರಿಕೆಗೆ ಇಬ್ಬನಿಗಳ ಪುಳಕ
....
ಮಲೆಬನಗಳ ಕಾನನದಲಿ ಸುಗ್ಗಿಯ ಸಂಚಲನ
ತರು ನಿಶ್ಚಲ ತೇರಂತಿವೆ
ನವಿಲಾಡುವ ಸುರರಂತಿವೆ
ಬಹು ದೂರದ ಕಾಸಾರದ ಬಳಿ ಬಾನ್ನೆಲ ಮಿಲನ.'

(ನಿಸರ್ಗ ವಿಲಾಸ)

—ಮೇಲಿನ ಈ ನಾಲ್ಕೂ ನಿದರ್ಶನಗಳು ಕವಿಯ ನಿಸರ್ಗದ ಬಗೆಗಿನ ವಿಶಿಷ್ಟಾಸ್ವಾದನ ಪರಿಯನ್ನು ಮಾತ್ರವಲ್ಲದೆ, ಆ ಪರಿಯಲ್ಲಿನ ಮೋಹಕ ಕಲ್ಪನೆಗಳನ್ನು ಇಂದ್ರಿಯ ಗಮ್ಯವೂ ಮನೋಗಮ್ಯವೂ ಆದ ವಿನೂತನ ಅನುಭವಗಳ ಅಲೆಗಳ ವಿವಿಧ ಚಲನೆಗಳನ್ನು ಕಣ್ಣಿಗೆ ಕಟ್ಟುವಂಥ ಚಿತ್ರಗಳನ್ನು ಸೃಷ್ಟಿಸುವ ಲಲಿತ ಸುಂದರ ಭಾಷೆಯ ಮಿಂಚಿನ ಸರಣಿಯನ್ನೇ ನಮ್ಮ ಅಂತರಂಗದ ಆಕಾಶದಲ್ಲಿ ಚಿಮ್ಮಿಸಿಬಿಡುತ್ತವೆ. ಮೊದಲಿನ ದೀಪಗಳ ವರ್ಣನೆಯ ಆಯ್ದ ಪದಗಳು ಮಾಮೂಲೀ ಪದಗಳಿಗಿಂತ ಭಿನ್ನವಾಗಿ ಹೊಸ ಭಾವ ಕಾಂತಿಯನ್ನು, ಜೀವ ಕಾಂತಿಯನ್ನು ಸ್ಫುರಿಸುತ್ತ ಅನುಭವದ ಹೊಸ ಆಯಾಮವನ್ನು ಅನಾವರಣಗೊಳಿಸುತ್ತವೆ. ಕನಸಿನ ಗೊನೆ, ಮಿಂಚಿನ ತೆನೆ, ಕಂಚಿನ ಬಿಳಿ ದನಿ ಎಂಬ ಕಲ್ಪನೋಜ್ವಲವಾದ ರೂಪಕ ರತ್ನಗಳು ತಮ್ಮ ಅನನ್ಯ ಧ್ವನಿಪೂರ್ಣತೆಯಿಂದ, ನಿರಾಯಾಸ ಹಾಗೂ ಸಹಜ ಅವತಾರದಿಂದ ಹೃದಯವನ್ನು ಜುಮ್ಮೆನಿಸುತ್ತವೆ.

'ನಿತ್ಯೋತ್ಸವ'ದ ಭಾಷೆ ನಾಲ್ಕು+ಎರಡು, ಮೂರು+ಮೂರು ಮಾತ್ರೆಗಳ ಜೀವ ಲಯದ ಚೌಕಟ್ಟಿನಲ್ಲಿ, ನಾಡಿನ ಬಗೆಗಿನ ಕವಿಯ ಭಕ್ತಿ ಅಭಿಮಾನ ಅನುರಕ್ತಿಗಳ ಉಲ್ಲಾಸ ತರಂಗಗಳನ್ನು ಸಹಜೋದ್ಭೂತವಾದ ಸಂಗೀತ ಲಹರಿಯಲ್ಲಿ ಭೋರ್ಗರೆಸುತ್ತ ಎಂಥ ನಿರಭಿಮಾನಿಯಲ್ಲೂ ನಾಡ ಪ್ರೇಮವನ್ನು ಉಕ್ಕೇರಿಸುವ ಅನನ್ಯತೆಯನ್ನು ಪ್ರಕಟಿಸುತ್ತದೆ. ಭಾವ ಕಲ್ಪನೆ ಭಾಷೆ ನಾದ ಹಾಗೂ ಚಿತ್ರಕ ಶಕ್ತಿಗಳು ಒಂದರೊಡನೊಂದು ಬೆರೆತು ಮೈ ಪಡೆಯುವ ಮುಹೂರ್ತವಿದು.

ಕಾಲವಲ್ಲದ ಕಾಲದಲ್ಲಿ ಮಳೆ ಬಂದಾಗ ಪ್ರಕೃತಿಯ ಮೇಲೆ ಉಂಟಾಗುವ ಪರಿಣಾಮವನ್ನು ಯಾವ ಪೂರ್ವಕೃತ ಕವಿ ಸಮಯದ ಮೊರೆ ಹೋಗದೆ ಸ್ವಾನುಭವಕ್ಕೆ ನಿಷ್ಠವಾಗುವ ಹೊತ್ತಿನಲ್ಲೇ ಯಾರೂ ಊಹಿಸಲಾಗದ ನೇಸರ ತೊಳೆ, ಮೋಡದ ಬೂಜಿ, ಮಿಂಚಿನ ಸೂಜಿ ಮತ್ತು ಮಣ್ಣಿನ ಹೂಜಿಗಳ ರೂಪಕಗಳ ಮೂಲಕ ಸಂವಹನಿಸುವ ಕವಿತೆಯ ನಡೆ ಚೇತೋಹಾರಿಯಾಗಿದೆ.

ಹಾಗೆಯೇ ಕೊಳದಲ್ಲಿ ಮೂಡಿದ ಅಲೆಗಳು ಹೊಂಬೆಳಕಿನ ಸ್ನಾನ ಮಾಡುವ, ಕಮಲಗಳು ಎವೆ ಬಿಚ್ಚಿ ರವಿರಶ್ಮಿಯನ್ನು ಚುಂಬಿಸುವ, ಭೂಮಿ ಎಂಬ ಹೆಣ್ಣಿನ ಗರುಕೆ ಮೈ ಇಬ್ಬನಿಗಳ ಸ್ಪರ್ಶದಿಂದ ಪುಳಕಗೊಳ್ಳುವ ಬೆಳಗಿನ ಸಹಜ ಪ್ರೇಮೋನ್ಮಾದದ ದೃಶ್ಯಗಳು ಕವಿ

ಹೇಗೆ ಭಾವ ಭಾಷೆಗಳನ್ನು ಅರ್ಧನಾರೀಶ್ವರನಂತೆ ಬೆಸೆದುಬಿಡುವ ಅಪೂರ್ವ ಸಾಮರ್ಥ್ಯವನ್ನು ವಶೀಕರಿಸಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿವೆ.

ವಸ್ತು ಯಾವುದೇ ಇರಲಿ, ತಮ್ಮದೇ ಆದ ಸ್ವೋಪಜ್ಞಶೀಲ ಸಂವೇದನೆಯಿಂದ ಸ್ವತಂತ್ರ ದೃಷ್ಟಿಕೋನದಿಂದ ಸಹಜಸ್ಫೂರ್ತವಾಗಿ ಚಿಮ್ಮುವ ಭಾವದ ಬಣ್ಣಗಳಿಂದ, ಚಿಂತನೆಯ ಕಣ್ಣುಗಳಿಂದ ಮತ್ತು ಅವೆಲ್ಲವನ್ನೂ ಹೊಸಯಿಸಿ ಸಾಕ್ಷಾತ್ಕರಿಸಿಕೊಡುವ ಭಾಷೆಯ ಬೆಡಗಿನಿಂದ ನಿಸಾರ್ ಅದಕ್ಕೆ ಆಕರ್ಷಕವಾದ ವಿನೂತನವೆನಿಸುವ ರೂಪಧಾರಣೆ ಮಾಡಿಸಿಬಿಡುತ್ತಾರೆ. ನಾಡು ನುಡಿಗಳ ಬಗ್ಗೆ ಕವಿಯ ಆತ್ಮದ ಹಂಬಲ ಎಷ್ಟು ತೀವ್ರವಾಗಿ, ಭಾವನಾತ್ಮಕವಾಗಿ ಲಯ ಸಮನ್ವಿತವಾಗಿ ಸುಂದರವಾಗಿ ಸ್ಫೋಟಗೊಳ್ಳುತ್ತದೆ ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಗಮನಿಸಬಹುದು:

'ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ
ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ'

(ನಿತ್ಯೋತ್ಸವ)

'ನಾಡ ದೇವಿಯೆ ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ,
ನೋವು ನಗೆಯ ಸಮ್ಮಿಶ್ರದಲ್ಲಿ ಎದೆಯಾಯಿತದಕೆ ವಶ್ಯ,
ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ,
ಒಂದೆ ನೆಲದ ರಸ ಹೀರಲೇನು? ಸಿಹಿ, ಕಹಿಯ ರುಚಿಯ ಕಾಯಿ.'

(ನಾಡದೇವಿಯೆ)

'ಮಲೆನಾಡ ಸೀರೆಗಿದೆ ಪಡುಗಡಲ ಚೆಲು ಸೆರಗು,
ಕೆನ್ನೆಗೋ ಸಂಜೆ ಬಾನ್‌ಗೆಂಪು ಬಣ್ಣ.
ನಿತ್ಯ ದೀಪೋತ್ಸವದ ರತ್ನದೊಡವೆಯ ಮೆರುಗು
ನೀನು ಕೃಪೆ ತೋರಿದಡೆ ಮಣ್ಣು, ಚಿನ್ನ.'

(ಕನ್ನಡಾಂಬೆಯ ಹಿರಿಮೆ)

'ಕನ್ನಡವೆಂದರೆ ಬರಿ ನುಡಿಯಲ್ಲ,
ಹಿರಿದಿದೆ ಅದರರ್ಥ;
ಜಲವೆಂದರೆ ಕೇವಲ ನೀರಲ್ಲ,
ಅದು ಪಾವನ ತೀರ್ಥ.
ಕನ್ನಡವಲ್ಲ ತಿಂಗಳು ನಡೆಸುವ
ಗುಲ್ಲಿನ ಕಾಮನ ಬಿಲ್ಲು;
ರವಿ ಶಶಿ ತಾರೆಯ ನಿತ್ಯೋತ್ಸವವದು
ಸರಸತಿ ವೀಣೆಯ ಸೊಲ್ಲು.'

(ಕನ್ನಡ)

ಕನ್ನಡ ನಾಡಿನ, ಕನ್ನಡ ಭಾಷೆಯ ಸೌಂದರ್ಯದ, ಇತಿಹಾಸದ ಹಿರಿಮೆಯ, ನೋವು

ನಗೆಗಳ ಭೇದ ಭಾವಗಳ ಮನ ಕಲಕುವ, ಮನ ಕುಣಿಸುವ, ಅಭಿಮಾನವನ್ನು ಉಕ್ಕೇರಿಸುವ ಮತ್ತು ಅದೇ ಸಂದರ್ಭದಲ್ಲಿ ನಮ್ಮ ನ್ಯೂನತೆಗಳ, ಸಣ್ಣತನಗಳ ಬಗೆಗೆ ವಿಷಾದದಿಂದ ಚುಚ್ಚುವ ಎಚ್ಚರಿಸುವ ಭಾಷೆಯ ಆರ್ದ್ರತೆ ಆಪ್ತತೆಗಳು ಅತ್ಯಂತ ನವಿರಾಗಿ ಇಲ್ಲಿ ಜೀವ ಪಡೆದಿವೆ. ಸರಳ ಸಾಮಾನ್ಯ ಬಹು ಪರಿಚಿತವೆನ್ನಿಸುವ ಪದಗಳ ಮೂಲಕವೇ ಮುಟ್ಟಿದರೆ ಹನಿಯುವ, ಹೃದಯದಲ್ಲಿ ಹರಡಿಕೊಳ್ಳುವ, ಒಳಕ್ಕಿಳಿದು ಮೈ ನೇವರಿಸುವ ಭಾವಗಳು ಹರಳು ಹರಳಾಗಿ ಇಲ್ಲಿ ಪ್ರೇರಣೆಗೊಂಡಿವೆ. ಭಾವಕ್ಕೆ ತಕ್ಕ ಆಕಾರವನ್ನು ನೀಡಿ ಮುದ ಗೊಳಿಸುವ, ಅರಳಿಸುವ, ವಿಚಾರಮಗ್ನಗೊಳಿಸುವ ಕಲ್ಪನೆಯ ಕನಸುಗಳನ್ನು ಸಜೀವಗೊಳಿಸ ಬಲ್ಲ ಈ ಭಾಷಾ ಸಾಮರ್ಥ್ಯ ಕವಿಗೆ ಸಿದ್ಧಿಸಿರುವ ಸಹಜ ವರ.

ಪ್ರಕೃತ ಸಮಾಜದ ವಿಕೃತಿ ಮತ್ತು ಸುಕೃತಿಯ ವಿಸ್ತಾರ ದರ್ಶನವನ್ನು ಮೂಡಿಸುವ, ಆ ಪ್ರಯತ್ನದಲ್ಲಿ ತಮ್ಮ ಭಾಷೆಯನ್ನು ತಮ್ಮ ಅನಿಸಿಕೆಗಳಿಗೆ ಅನುಸಾರವಾಗಿ ಒಗ್ಗಿಸಿ ಕೊಳ್ಳುವ, ಹಿಗ್ಗಿಸಿಕೊಳ್ಳುವ, ಸಿಂಗರಿಸುವ, ಧ್ವನಿ ತರಂಗಗಳ ತವರು ಮನೆಯನ್ನಾಗಿಸುವ ವೈವಿಧ್ಯಮಯ ಕೌಶಲವನ್ನು ಹಲವು ಕವಿತೆಗಳಲ್ಲಿ ಈ ಕವಿ ತುಂಬ ಯಶಸ್ವಿಯಾಗಿ ಎರಕ ಹೊಯ್ದಿದ್ದಾರೆ:

'ಕುರಿಗಳು, ಸಾರ್ ಕುರಿಗಳು;
ಸಾಗಿದ್ದೇ
ಗುರಿಗಳು.
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು
ಕುರಿಗಳು ಸಾರ್, ಕುರಿಗಳು;
ನಮಗೊ ನೂರು ಗುರಿಗಳು.'

(ಕುರಿಗಳು ಸಾರ್ ಕುರಿಗಳು)

—ಹೀಗೆ ಕುರಿಮಂದೆಯಂತೆಯೇ ಒಂದಕ್ಕೊಂದು ಹೊಂದಿಕೊಂಡು ಅಂಟಿಕೊಂಡು ಬಿಟ್ಟೂಬಿಡದೆ ಸಾಗುವ ಕುರಿಗಳ ಚಿತ್ರ ನಮ್ಮ ವ್ಯಕ್ತಿತ್ವರಹಿತ ಜನತೆಯ ಸಮಾಜದ ಮೂಕ ಅನುಕರಣೆಯ ಅನನುಕರಣೀಯ ಜ್ವಲಂತ ಪ್ರತಿಮೆಯಾಗಿದೆ. ಕವಿ ಪದಗಳನ್ನು ವಾಕ್ಯಗಳನ್ನು ಸಾಲುಗಳನ್ನು ಅರ್ಥವತ್ತಾಗಿ ಲೀಲಾಜಾಲವಾಗಿ ಮುರಿದು ಮುರಿದು ಕಟ್ಟುವ ಬಗೆ ಚೇತೋಹಾರಿಯಾಗಿರುವುದರ ಜೊತೆಗೆ ನಮ್ಮ ನಿರ್ದಿಷ್ಟ ಗುರಿ ರಹಿತವಾದ ಮಹತ್ವಾ ಕಾಂಕ್ಷೆಯ ಸುಳಿವೂ ಸುಳಿಯೂ ಇಲ್ಲದ ನೀರಿನ ಮೇಲಿನ ಕಡ್ಡಿಯಂತಹ ನಿಷ್ಪ್ರಾಣ ಬದುಕಿನ ಸಪ್ರಾಣ ವರ್ಣನೆಯೂ ಆಗಿದೆ. ಇಂತಹ ಜನರನ್ನು ಕಾಯುವ ಮೇಯುವ ನಾಯಕ ಗಣ ಪ್ರಾಣಾಪತ್ತು ಬರುವ ವಿಷಮ ಸಂದರ್ಭದಲ್ಲೂ ಜಾಗೃತರಾಗದೆ ದಿವ್ಯಜಡರಾಗಿ ಯಃಕಶ್ಚಿತ್ ಸ್ವಾರ್ಥ ವಿನೋದಗಳ ಲಘು ಚಕ್ಕಭಾರ ಆಟದಲ್ಲಿ ಮಗ್ನನಾಗಿರುವ ವ್ಯಂಗ್ಯದ

ಹೃದಯವಿದ್ರಾವಕ ಸನ್ನಿವೇಶ ಸೃಷ್ಟಿ ನಮ್ಮ ಮುಖೇಡಿತನವನ್ನು, ಬುದ್ಧಿಮಾಂದ್ಯವನ್ನು, ಭವಿಷ್ಯದ ಬಗೆಗಿನ ಕಾಳಜಿಯೇ ಇಲ್ಲದ ಹೊಣೆಗೇಡಿತನವನ್ನು ರಪರಪನೆ ಮುಖಕ್ಕೆ ರಾಚುವಷ್ಟು ನೈಜವಾಗಿ ಸಮರ್ಥವಾಗಿ ರೂಪುಗೊಂಡಿವೆ. ರಾಷ್ಟ್ರದ ಜನತೆಯ ದಯನೀಯ ರುಗ್ಣ ಸ್ಥಿತಿಯನ್ನು ಇದಕ್ಕಿಂತ ಧ್ವನಿಪೂರ್ಣವಾಗಿ ಚಿತ್ರವತ್ತಾಗಿ ಶಕ್ತಿಪೂರ್ಣವಾಗಿ ಬಣ್ಣಿಸುವುದು ಯಾರಿಗೂ ಅಸಾಧ್ಯವೆಂಬಂತೆ ಇಲ್ಲಿ ಕವಿ ನಿಸಾರ್ ಅವರ ಶೈಲಿ ತನ್ನ ಎಲ್ಲ ವೈವಿಧ್ಯದೊಡನೆ ವಿಜೃಂಭಿಸಿದೆ:

‘ಆ ಹೊಳಪಿಗೆ ದಂಗಾಗಿ, ಕಣ್ಣಿಗದೇ ರಂಗಾಗಿ,
ಒಳಗೊಳಗೇ ಜಂಗಾಗಿ,
ಕಣ್ಣು ಕುಕ್ಕಿ, ಸೊಕ್ಕಿರುವ; ಹೋಗಿ ಹೋಗಿ ನೆಕ್ಕಿರುವ;
ಕತ್ತನದಕೆ ತಿಕ್ಕಿರುವ
ನಾವು, ನೀವು, ಅವರು ಇವರು
ಕುರಿಗಳು, ಸಾರ್ ಕುರಿಗಳು!’

(ಕುರಿಗಳು, ಸಾರ್, ಕುರಿಗಳು)

ಆತ್ಮವಿನಾಶದ ನೋವು ವಿಷಾದ ನಿಸ್ಸಹಾಯಕತೆಗಳು, ಬೆನ್ನೆಲುಬಿಲ್ಲದ ನಿರ್ವೀರ್ಯ ಮನಸ್ಸುಗಳು, ಮಹತ್ವಾಕಾಂಕ್ಷೆಯೇ ಸೊನ್ನೆಯಾಗಿರುವ, ಶೋಷಣೆಯ ದಬ್ಬಾಳಿಕೆಯ ಪ್ರವಾಹದಲ್ಲಿ ಎಂಜಲು ದೊನ್ನೆಗಳಂತೆ ಗುರಿಯಿರದೆ ತೇಲುವ, ವ್ಯಕ್ತಿತ್ವವೇ ಅದೃಶ್ಯವಾಗಿರುವ ಜನ ಸಮುದಾಯವನ್ನು ಒಳಗೊಂಡಿರುವ ದೇಶದ ದುಃಸ್ಥಿತಿಯ ದುರಂತ ಚಿತ್ರಣ ಕವಿಯ ಭಾವ ಶಕ್ತಿಯ, ಚಿಂತನ ಶಕ್ತಿಯ, ಅಪರಿಮಿತ ಭಾಷಾ ಪ್ರಭುತ್ವದ ಅದ್ಭುತ ದ್ಯೋತಕವಾಗಿದೆ ಈ ಕವಿತೆ. ಭಾರವಾಗದ ತೋರವಾಗದ ಸರಳ ಭಾಷೆಯ ಪರಿಚಿತ ಪದರು ಪದರುಗಳನ್ನು ಬಿಚ್ಚುತ್ತ ಪದಗಳನ್ನು ನಿಪುಣ ಪಗಡೆಯಾಟಗಾರನಂತೆ ಲೀಲಾಜಾಲವಾಗಿ ಆಡಿಸುತ್ತ, ನಿಷ್ಣಾತ ಗೊಂಬೆಯಾಟಗಾರನಂತೆ ವರ್ಣರಂಜಿತವಾಗಿ ಜೀವಝುರಿ ಹರಿಯುವಂತೆ ಕುಣಿಸುತ್ತ, ಅತ್ಯಂತ ನಿರಾಯಾಸವಾಗಿ ಚಿಮ್ಮುವ ಹೊಮ್ಮುವ ಪ್ರಾಸ ಅನುಪ್ರಾಸಗಳ ದನಿ ಬನಿಗಳನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳುತ್ತ, ಆಳವಾದ ನೋವು ವ್ಯಂಗ್ಯಗಳೊಡನೆ ಒಂದು ಪರಿಣಾಮಕಾರಿಯಾದ ರೂಪಕ ಲೋಕವನ್ನೇ ನಮ್ಮೆದುರು ತೆರೆದು ಬಿಡುವ ಈ ಶೈಲಿ ಅನನ್ಯ. ಅಲ್ಲಲ್ಲಿ ಪದಗಳ ದುಂದು, ಪ್ರಾಸಗಳ ಹಾವಳಿ ಅತಿಯಾಯಿತೆನ್ನಿಸಿದರೂ ವಸಂತ ಋತುವಿನ ಮರದ ಮೈಯನ್ನು ಸಿಂಗರಿಸಿರುವ ಹೇರಳ ಚಿಗುರುಗಳಂತೆ ನಮ್ಮನ್ನು ಮೋಹಿಸುತ್ತವೆ, ನಿಷ್ಪ್ರಶ್ನರನ್ನಾಗಿ ಮಾಡುತ್ತವೆ.

‘ಇದು ಸೃಷ್ಟಿ, ಕಪಿಮುಷ್ಟಿ;
ಮಂತ್ರ ಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲು.
ಉಸಿರಿನರವತ್ತೆಂಟು ಕೋಟಿ ಬಿಡಿ, ಬಿಡಿ ನೂಲು
ಗಂಟು ಗಂಟಾಗಲ್ಲಿ ಗೋಜು ಗೋಜಲ ಮಜಲು—
ನಡುವೆ ನೇತಾಡುತಿದೆ ನವಿರು ನವಿರಾದೆಳೆಯ
ಒಂಟಿಗೂದಲ ಮೂಲ.’

(ಕಂಡಷ್ಟೇ ಸತ್ಯವಲ್ಲ)

—ಸೃಷ್ಟಿಯ ರಹಸ್ಯದ ಗಂಭೀರ ಶೋಧವನ್ನು ಕೇಂದ್ರವಾಗಿರಿಸಿಕೊಂಡ ಈ ಕವಿತೆಯ ತುಂಬ ಪ್ರತಿಮಾ ಪ್ರಪಂಚ ಕಿಕ್ಕಿರಿದಿದೆ. ಸರಳ ಸುಭಗ ಮಧುರ ಸಹಜ ಶೈಲಿಯ ಮೂಲಕ ಕನ್ನಡಿಗರ ಮನಸ್ಸನ್ನು ಸೂರೆಗೊಂಡ ಈ ಕವಿ, ನವ್ಯಕಾವ್ಯದ ಉಬ್ಬೇರಿಕೆಯ ಕಾಲದಲ್ಲಿ ಆ ಕಾವ್ಯಪಂಥದ ನೇತಾರರ ಹುಬ್ಬೇರುವಂತೆ ಮಾಡುವ ವಿಶಿಷ್ಟ ವಿಧಾನವನ್ನು ಇಲ್ಲಿ ಬಳಸಿ ಕೊಂಡಿದ್ದಾರೆ. ನವೋದಯದ ಸರಳ ಮನೋಹರ ಭಾವಬಂಧುರ ಪಥದಲ್ಲಿ ನಡೆದೋಡಿ ಅಭ್ಯಾಸವಾದವರಿಗೆ ಈ ದಾರಿ ಸುಗಮವಲ್ಲ. ಆದರೆ ಇಲ್ಲಿ ಕವಿ ಆ ನೂತನ ಕಾವ್ಯ ಮಾರ್ಗವೂ ತಮ್ಮ ಸೃಜನಶೀಲ ಪ್ರತಿಭೆಗೆ ಎಟುಕದೇ ಇರುವಂಥದ್ದಲ್ಲ ಎಂಬುದನ್ನು ಸಾಬೀತು ಪಡಿಸಲು ತಮ್ಮನ್ನು ಪ್ರಯೋಗಕ್ಕೆ ಒಡ್ಡಿಕೊಂಡಿದ್ದಾರೆ. ಮಾತುಗಳನ್ನು ಗಿಡಿಗಿಡಿದು ತುಂಬುವ, ಅವುಗಳ ಮೂಲಕ ಹೊಸ ಸಂಯೋಜನೆ ಸಂಕಲನ ವ್ಯವಕಲನ ಗುಣಾಕಾರಗಳ ದಾರಿಯಲ್ಲಿ ಭಾಷೆಯನ್ನು ಮಿದಿಯುವ, ಮಿಡಿಮಿಡಿದು ಹದಗೊಳಿಸಿ ಅರ್ಥಪೂರ್ಣ ಪ್ರತೀಕ ಪ್ರತಿಮೆಗಳನ್ನು ನಿರ್ಮಿಸಿ ನಾನಾರ್ಥಗಳನ್ನು ಹೊಮ್ಮಿಸುವ, ಬುದ್ಧಿಪೂರ್ವಕವೆಂದು ಮೇಲು ನೋಟಕ್ಕೆ ಅನ್ನಿಸದ ರೀತಿಯಲ್ಲಿ ಶೈಲಿಯನ್ನು ಮಾರ್ಪಡಿಸಿಕೊಳ್ಳುವ ಪ್ರಯತ್ನ ಇಲ್ಲಿ ನಿಚ್ಚಳ ವಾಗಿದೆ.

೬

ಕಾವ್ಯರಚನೆಯ ಹಾದಿಯಲ್ಲಿ ಹಲವು ಬಗೆಯ ಮೈಲಿಗಲ್ಲುಗಳನ್ನು ನೆಡುವ ನಿರಂತರ ಕಾಯಕದಲ್ಲಿ ಪ್ರಯೋಗಶೀಲರಾದ ಈ ಕವಿ ತಮ್ಮ ಮನಸ್ಸು ಮೆಚ್ಚಿದ, ನಾಡಿನ ಬದುಕನ್ನು ಹಸನುಗೊಳಿಸಲು ಯತ್ನಿಸಿದ ವ್ಯಕ್ತಿತ್ವಗಳನ್ನು ಕುರಿತೂ ತಮ್ಮ ನುಡಿಯ ಗೌರವವನ್ನು ಅತ್ಯಂತ ಆರ್ದ್ರವಾಗಿ ಆಕರ್ಷಕವಾಗಿ ಮತ್ತು ವಿಶಿಷ್ಟ ಚಿತ್ತವತ್ತಾಗಿ ನಿವೇದಿಸಿದ್ದಾರೆ. ಪುರಂದರ ದಾಸರನ್ನು ಕುರಿತ ಈ ಕವಿತೆಯನ್ನು ನೋಡಿ:

'ದಾಸರೆಂದರೆ ನಮ್ಮ ವರ ಪುರಂದರರಯ್ಯ;
ಇದ್ದು ಇಲ್ಲೇ, ಅಲ್ಲಿಗೇರಿದವರು.
ಸಹಜ ಮುಕ್ತಿಯ ನೌಕೆ ಬರುವವರೆಗೂ ಇಲ್ಲೆ
ಈಸಿದವರು, ಇದ್ದು ಜೈಸಿದವರು.

* * *

'ಕವಿಯಂತೆ ಆಡಿದರೆ? ಇಲ್ಲಿಲ್ಲ, ತಮ್ಮನ್ನೆ
ಮಿಡಿಸಿದರು, ನುಡಿಸಿದರು ಪ್ರಾಣ ದುಡುಕಿ;
ಹಾಡಿದರೆ? ಅಲ್ಲಲ್ಲ, ಭಕ್ತಿಯನೆ ಕಾಡಿದರು
ಮನವ ಜಾಲಾಡಿದರು ಹರಿಯ ಹುಡುಕಿ

* * *

'ಬೇರೆ ಸ್ಮಾರಕ ಬೇಕೆ ಇವರಂಥ ಭಕ್ತರಿಗೆ?
ಎಲ್ಲರನ್ನೂ ಸೇರಿದಂಥವರಿಗೆ?
ಬೇರೆ ಬಣ್ಣನೆ ಯಾಕೆ ಈ ಇಂಥ ಮುಕ್ತರಿಗೆ?
ಎಲ್ಲವನ್ನೂ ಮೀರಿ ನಿಂತವರಿಗೆ?'

(ಪುರಂದರ ದಾಸರು)

ಸರಳತೆಗೆ ಸತ್ವಪೂರ್ಣತೆಗೆ ಊರ್ಧ್ವಮುಖ ಚೇತನಗಳಿಗೆ ಭಾಷೆಯ ಬಣ್ಣನೆಯ ಉಡುಪು ತೊಡಪುಗಳು ಅಗತ್ಯವಿಲ್ಲ. ಅವರ ಬದುಕೇ ಒಂದು ಅನನ್ಯ ಕವಿತೆ. ಅಂತೆಯೇ ಕವಿ ಇಲ್ಲಿ ಸರಳಾತಿಸರಳವಾದ ನಿರಾಡಂಬರವಾದ ಸಹಜ ಸಮರ್ಥ ಪದ ಸಂಯೋಜನೆಯ ಮೂಲಕ, ಜನಪದ ಶಿಲ್ಪಿಯೊಬ್ಬ ತನ್ನ ಮೆಚ್ಚಿನ ದೇವತೆಗೆ ಭಾವಭಕ್ತಿಪೂರ್ಣವಾದ ನಿರಲಂಕಾರವಾದ ಧ್ವನಿರಮ್ಯ ಆಕೃತಿಯನ್ನು ಮನದುಂಬಿ ಕೊಡುವಂತೆ, ಪುರಂದರರ ವ್ಯಕ್ತಿತ್ವವನ್ನು ಕಡೆದುಕೊಟ್ಟಿದ್ದಾರೆ. ಮೇಲಿನ ಸಾಲುಗಳು ಸರಳತೆಯಲ್ಲೂ ಎಂತಹ ಸಹಜ ಸೌಂದರ್ಯ, ಶಕ್ತಿ ಮತ್ತು ವಿರಳ ಆಲೋಚನೆಗಳು ತುಂಬಿಕೊಳ್ಳಬಹುದೆಂಬುದಕ್ಕೆ ನಿದರ್ಶನ ವಾಗಿದೆ.

ಮಾಸ್ತಿಯವರ ಸರಳ ಗಂಭೀರ ಆದರ್ಶಮೂರ್ತಿಯನ್ನು ಕವಿ ಕೆತ್ತಿಡುವ ರೀತಿಯಿದು:

‘ವಯಸು ಅನುಭವ ಹೂಡಿ ಸುಖ ದುಃಖ ಬೆಳೆದ ಮುಖ,
ಹಿಂದೊಮ್ಮೆ ನೆಲೆಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು;
ಸಾಂತ್ವನವ ನುಡಿದಿರುವ ಹಳೆ ನಮೂನೆಯ ಚಶ್ಮ;
ಅದೇ ಕೊಡೆಯು ಗದೆ...
....
‘ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ...
....
‘ಕೂಗು ಹುಸಿ ಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು, ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ:
ಚಣಕ್ಕಷ್ಟು ಚಳಿ ನೂಲು, ಒಂದಿಷ್ಟು ಹೂ ಬಿಸಿಲು,
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.
....
‘ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ’

(ಮಾಸ್ತಿ)

ಈ ಕವಿತೆಯ ಒಂದೊಂದು ಮಾತೂ ಎಚ್ಚರ ಚಚ್ಚರದಿಂದ ಆಯ್ದು ಜೋಡಿಸಿ ಕಟ್ಟಿದ ಆಣಿಮುತ್ತು. ಈ ಕವಿತೆಯಲ್ಲಿ ಎಲ್ಲೂ ಭಾಷೆಯ ಅಬ್ಬರವಿಲ್ಲ, ಉಪಮೆ ರೂಪಕ ಪ್ರತಿಮೆಗಳನ್ನು ತಿಣುಕಿ ಚಿಂತಿಸಿ ಕಸರತ್ತಿಸಿದ ಆಯಾಸ ಕಾಯಕವಿಲ್ಲ, ಒಣ ಪಾಂಡಿತ್ಯದ ಪ್ರದರ್ಶನವಿಲ್ಲ, ನಿಸಾರರ ಕೆಲವು ಕವಿತೆಗಳಲ್ಲಿ ರೂಹುದೋರಿ ಮೆರೆಯುವ ಮೊರೆಯುವ ಪ್ರಾಸ ಚಾಪಲ್ಯ ಪದ ಮೋಹಗಳಿಲ್ಲ. ಭಾಷೆ ಹಿಂದೆ ಸರಿದು ಆ ವ್ಯಕ್ತಿತ್ವದ ಗೌರವಕ್ಕೆ,

ಪ್ರೀತಿಗೆ, ಅಭಿಮಾನಕ್ಕೆ, ಪ್ರಭಾವಕ್ಕೆ, ಸಾಧನೆಗೆ ಅರ್ಹವಾದ ಅರ್ಥಪೂರ್ಣವಾದ, ಧ್ವನಿಗೆ ಧ್ವನಿ ಮರಿ ಹಾಕುವ, ಪದ ವರ್ಣಗಳು, ಆರೋಗ್ಯವಂತ ದೇಹದಲ್ಲಿ ಹರಿಯುವ ರಕ್ತದಂತೆ ಕಣಕಣದಲ್ಲೂ ಚಿಮ್ಮುವ ಜೀವ ಕಾರಂಜಿಯಂತೆ—ತಮಗೆ ತಾವೇ ನೆಯ್ದುಕೊಂಡು ಕನ್ನಡದಲ್ಲಿ ಅನನ್ಯವಾದ ಒಂದು ಭಾವಶಿಲ್ಪವನ್ನು ನಿರ್ಮಿಸಿದೆ. ಇಡೀ ಕವಿತೆ ಅವರ ವ್ಯಕ್ತಿತ್ವದ ಅನೂನ ಜೀವಂತ ಜೀವನ ಚರಿತ್ರೆಯಾಗಿದೆ. ಕನ್ನಡದಲ್ಲಿ ಚಿರ ಶಾಶ್ವತವಾಗಿ ನಿಲ್ಲುವ, ನಿಸಾರರ ಕಾವ್ಯಶಕ್ತಿಯ ಸರಳೋಜ್ವಲ ವ್ಯಾಖ್ಯಾನವೆನ್ನಿಸುವ ಅಪರೂಪದ ಕವಿತೆಯಿದು.

ಗಾಂಧೀಜಿಯವರನ್ನು ಮೂರ್ತಿಸಿದ ಈ ಕವಿತೆಯನ್ನು ಗಮನಿಸಿ:

'ಲೋಕಕೇ ಕಣ್ಣಾದ ಬೆಳುದಿಂಗಳು
ಮನೆಯ ಬೆಳಗಿಲ್ಲೆಂದು ಕೂಗಾಡಲೆ,
ಹೊತ್ತಿಸದೆ ದೀಪ?
ಮೇರೆಯಿಲ್ಲದ ಕಡಲು ನನ್ನ ಬಾಯಾರಿಕೆಯ
ತಣಿಸಲಿಲ್ಲೆಂದು ರೇಗಾಡಲೆ,
ತೋಡದೆಯೆ ಕೂಪ?
....
'ಕೊನೆತನಕ ದೇಶವೇ ನಿನ್ನ ಜೊತೆಯಲ್ಲಿ;
ಬೆಟ್ಟವೇರಿದ ಹಾಗೆ ನಟ್ಟಿರುಳಿನಲ್ಲಿ.

* * *

'ಹೆಳವ ನದಿಗೆಯು ಹೊಳೆಗೆ ಇದ್ದಕಿದ್ದಂತೆ ಮಳೆ ಹೊಯ್ದು
ಮನೆ ಮಠಗಳೆಲ್ಲ ತೆಪ್ಪ ತೇಲುತ್ತವೆ.

* * *

'ಲೋಕವನೆ ದಹಿಸಿರುವ ಸೂರ್ಯನಿಗೆ ತಡೆಯಾಗಿ
ನಿನ್ನ ಕೊಡೆ ನೆತ್ತಿಯನು ಕಾಯುತಿರಲಿ;
ಕಾದ ಹಾದಿಯ ನಡೆಯೆ ಸ್ವಾನುಭವ ಕೆರವಾಗಿ
ಸ್ವಂತ ಜೀವನದೊಡನೆ ತೇಯುತಿರಲಿ.'

(ಬಾಪು)

ಗಾಂಧೀಜಿಯವರ ವ್ಯಕ್ತಿತ್ವದ ಮಹಾ ಸತ್ಯ ಸಾಮರ್ಥ್ಯ ಪ್ರಮಾಣಗಳನ್ನು ವರ್ಣಚಿತ್ರದಂತೆ, ಭವ್ಯ ಶಿಲ್ಪದಂತೆ, ಹರಿಯುವ ಹೊಳೆಯಂತೆ ಮೊರೆಯುವ ಮಹಾ ಸಮುದ್ರದಂತೆ ತೆರೆದುಕೊಂಡ ನೀಲಾಕಾಶದಂತೆ, ಜ್ವಲಿಸುವ ಸೂರ್ಯನಂತೆ, ಮಿನುಗುವ ದೀಪದಂತೆ, ಬಡವರ ಗುಡಿಸಲಿನಂತೆ, ತಣ್ಣನೆಯ ಬೆಳುದಿಂಗಳಿನಂತೆ ವಿವಿಧ ಆಯಾಮಗಳಲ್ಲಿ ಹೃದ್ರಮ್ಯವಾಗಿ ಕೆತ್ತಿ ನಿಲ್ಲಿಸಿದ ಒಂದು ಮಹಾ ರೂಪಕ ಇದು. ಗಾಂಧೀಜಿಯ ವ್ಯಕ್ತಿತ್ವ ನಿಧನಿಧಾನವಾಗಿ ತಡೆಯಿಲ್ಲದೆ ಜಗದಗಲ ವ್ಯಾಪಿಸಿ ಸತ್ಯ ಅಹಿಂಸೆ ವೈಯಕ್ತಿಕ ಚಾರಿತ್ರ್ಯ ಭೂವ್ಯೋಮಸ್ಪರ್ಶಿಯಾಗಿ, ವ್ಯಕ್ತಿಜೀವಗಳ ಜೊತೆಜೊತೆಗೇ ರಾಷ್ಟ್ರಜೀವನವನ್ನೂ ಉದಾತ್ತೋನ್ನತವಾಗಿ

ಎತ್ತಿಹಿಡಿದ ಭೌಮಿಕ ಭವ್ಯಚಿತ್ರ ಇಲ್ಲಿದೆ. ಅವರ ಮಾನವ ಜೀವನದ ಸಿಹಿಕಹಿ ಹುಳಿ ದಾಟು ಮೀಟುಗಳ ಮಹಾ ಮಾಟದ ಮಜಲುಗಳನ್ನು ನಾಲ್ಕು ಪುಟಗಳ ಈ ಕವಿತೆಯಲ್ಲಿ ಭಾಷೆ ಸಂಯಮದ ರಸ ಪರಿಧಿಯನ್ನು ಮೀರಿ ವಾಚಾಳಿಯಾಗದಂತೆ, ಅತಿ ಜಿಪುಣತನದಿಂದ ಅಸ್ಪಷ್ಟವಾಗದಂತೆ ಅಥವಾ ಕ್ಲಿಷ್ಟವಾಗದಂತೆ, ಅತಿ ಆರಾಧನೆಯ ಮೋಹಕ್ಕೆ ಬಿದ್ದು ಜಾಳಾಗದಂತೆ ಅಥವಾ ನೀರಾಗದಂತೆ, ಹಳೆಯ ಪದಗಳಿಗೆ ಹೊಸ ಅರ್ಥವನ್ನು ತುಂಬುತ್ತ ಹೊಸ ಹೊಳಪು ಝುಳಪುಗಳನ್ನು ಆಹ್ವಾನಿಸುತ್ತ ನವ ಪದಗಳನ್ನು ಉತ್ಸಾಹದ ಉದ್ದೀಪನ ದಿಂದ ಉನ್ಮೀಲಿಸುತ್ತ, ಕಲ್ಪನೆಯ ಮಿಂಚಿನೊಳಗೆ ಮಹಾತ್ಮರ ಜೀವನಾನುಸಂಧಾನದ ತಾತ್ವಿಕ ವಿಶಿಷ್ಟತೆಯ ಅಸಾಧಾರಣತೆಯನ್ನು ಸಂಲಗ್ನಗೊಳಿಸುತ್ತ ಅದರ ಜೀವ ರೇಖೆಗಳನ್ನು ಉಜ್ವಲವಾಗಿ ಎತ್ತಿ ಹಿಡಿಯುವಲ್ಲಿ ಕವಿ ಅತ್ಯುತ್ತಮ ಕಲಾಕೌಶಲವನ್ನು, ಭಾಷಿಕ ಪರಿಣತಿ ಯನ್ನು ಯಶಸ್ವಿಯಾಗಿ ಮೆರೆಯುತ್ತ ಕನ್ನಡದ ಗಾಂಧೀ ಸ್ಮರಣೆಗೆ ಒಂದು ಅನುಪಮ ಸ್ಮಾರಕವನ್ನು ಕೆತ್ತಿಬಿಟ್ಟಿದ್ದಾರೆ.

'ಬಸವೇಶ್ವರರು', 'ಶ್ರೀ ಶಾರದಾದೇವಿ', 'ಭೀಮಪ್ಪ ಮಾಸ್ತರರು', 'ರವೀಂದ್ರನಾಥ ಠಾಕೂರರು', 'ಮದರ್ ತೆರೆಸ' ಈ ಕವಿತೆಗಳೂ ಕೂಡ ವ್ಯಕ್ತ್ಯಾಂತರಂಗದ ವಿಶಿಷ್ಟ ಅನಾವರಣದ ಸಾರ್ಥಕ ಸೃಷ್ಟಿಗಳಾಗಿವೆ. ಈ ಎಲ್ಲ ವ್ಯಕ್ತಿಗೀತೆಗಳಲ್ಲಿ ಆಯಾ ವ್ಯಕ್ತಿಗಳ ಅನನ್ಯತೆಯನ್ನು ಬಿಂಬಿಸುವ ಬಹುಮುಖ ಭಾಷಾ ಸಾಮರಸ್ಯ-ಸಮನ್ವಯಗಳು ಕೈಯಿಂದ ಮುಟ್ಟುವಷ್ಟು, ಕಣ್ಣಿಂದ ಕಾಣುವಷ್ಟು ತಾಜಾತನವನ್ನು ಮೈದುಂಬಿಕೊಂಡಿವೆ.

೭

ಕವಿಯ ಆತ್ಮಶೋಧನ ಆತ್ಮವಿಶ್ಲೇಷಣೆಯ ರೇಸಿಮೆಯೆಳೆಗಳಾಗಿ ಮೂಡಿಬಂದ ಕವಿತೆಗಳು ಅವರ ಸ್ವಂತ ಜೀವನಾಲೋಚನೆಗಳ ಆಪ್ತತೆಯನ್ನು ಹತ್ತಿರದಿಂದ, ದೂರದಿಂದ, ಮಧ್ಯಂತರದಿಂದ ಒರೆಗಿಕ್ಕಿಕೊಂಡ ವಿಮರ್ಶೆಯ ಫಲಿತಗಳಾಗಿವೆ. ಕವಿ ತನ್ನ ಹೊರಗಿನ ಜಗತ್ತನ್ನು ತನ್ನ ಕವಿ ನೋಟದ ವಿಶಿಷ್ಟ ಚೌಕಟ್ಟಿನಲ್ಲಿ ಬಂಧಿಸಿಡುವುದು ಒಂದು ಬಗೆಯ ಅಭಿವ್ಯಕ್ತಿಯೊಡನೆ, ತನ್ನನ್ನೇ ನೋಡಿಕೊಂಡ, ಕಂಡುಕೊಂಡ ಒಳಹರಿವು ಮುರಿವುಗಳನ್ನು ಕತ್ತಲು ಬೆಳಕುಗಳನ್ನು ನಿವೇದಿಸಿಕೊಂಡ ಹಾಗೂ ಅವುಗಳ ಒಳಿತು ಕೆಡುಕುಗಳನ್ನು ನಿರ್ಮಮವಾಗಿ ಬೆತ್ತಲಿಸಿದ ಒಳನೋಟಗಳು ಇಲ್ಲಿ ದಾಖಲಾಗಿವೆ:

'ನಾನು
ದಿಗ್ದಿಗಂತದ ಬೆಳ್ಳಿಗೆರೆಗೆ ಆಶಿಸಿದವನು.
ಕಲ್ಲಲ್ಲಿ ಸಿರಿ, ನೆಲದಲ್ಲಿ ಝುರಿ, ಕಾಡೊಳಗು ದಾರಿಯನು ಕನಸಿದವನು,
ನಗುವ ಭಡವರ ನಡುವೆ ಎಡವಿಬಿದ್ದರು, ಎದ್ದು
ಗೆದ್ದು ಬರುವೆನು ಎಂದು ಕಾರವಾನಿನ ಸೇನೆ ಜೊತೆಗೆ ಹೊರಟವನು.

* * *

'ಚೆಲುವು ಮೋಡದ ಮರೆಗೆ ಸಿಡಿಲ ಕಾರ್ಖಾನೆ
ಇರುವುದನು ನಂಬುವುದು ಹೇಗೆ ತಾನೆ?

* * *

'ತೆರೆದ ಬಾಗಿಲು ಬಾಯಿ: ಬೆರಳು ಮೂಗಿನ ಮೇಲೆ, ಮನಸು ಮೂಕ
ದೂರ ದಂಡೆಯ ಮೇಲೆ ಮೂಡು-ಬಣ್ಣದ ಹೆಜ್ಜೆ
ಮಣ್ಣು ಮರ ಗಿಡಕೆಲ್ಲ ಎಂಥದೋ ಲಜ್ಜೆ!

* * *

'ಪಡುವಣದ ಬೆಟ್ಟಗಳ ಮೇಲೆ ನೆಟ್ಟಿತು ಸಂಜೆ ತನ್ನ ವಿಜಯ ಪತಾಕೆ.
ಕಡಲ ಮಡಿಲನು ಹೊಕ್ಕೆ;
ಮನಸಿನಾಸೆಗೆ ಮೂಡಿ ಬಂತು ರೆಕ್ಕೆ;

* * *

'ಗಳಿಗೆ ಗಳಿಗೆಗೂ ನನ್ನ ಬಾಳ ತುಳಿಯುತಲಿರುವ
ನೆರಳ ಸಪ್ಪಳ ಜಗಕೆ ಕೇಳದೇಕೆ?
ನಾನಿಷ್ಟೆ ಲೋಕಕ್ಕೆ:
ತೇದಂತೆ ಕರಗುವ ಗಂಧದೊಂದು ಚಕ್ಕೆ!'

(ಇಪ್ಪತ್ತನೆಯ ಶತಮಾನದ ಕೊಲಂಬಸ್)

ಕವಿಯ ವ್ಯಕ್ತಿತ್ವ, ಅವರ ಕನಸು ಮನಸುಗಳು, ನಿರಾಶೆ ವಿಷಾದಗಳು ಆದರ್ಶದ ಹಂಬಲದೊಡನೆ ಬೆರೆತ ತಣ್ಣನೆಯ ಆಕ್ರೋಶರಹಿತ ನೋವಿನ ಮಂಜು ಎಳೆಗಳು ಇಲ್ಲಿ ತಮ್ಮ ಅಂತರಂಗವನ್ನು ತೆರೆದಿಟ್ಟಿರುವ ರೀತಿ ಸಹೃದಯರ ಮನಸ್ಸಿನಾಳಕ್ಕೆ ನಾಟಿ ಸಮಾಜದ ಬಗೆಗಿನ ನೋಟವನ್ನು ವಿಸ್ತೃತಗೊಳಿಸುತ್ತವೆ, ಗಾಢಗೊಳಿಸುತ್ತವೆ. ದಿಗಂತದ ಬೆಳ್ಳಿಗೆರೆಗಾಗಿ ಆಶಿಸಿ, ಕಲ್ಲಿನಲ್ಲಿ ಸಿರಿಯನ್ನು ನೆಲದಲ್ಲಿ ಝುರಿಯನ್ನು ಬಯಸಿ, ಸೌಂದರ್ಯ ಸಮೃದ್ಧ ಕಾಡು ದಾರಿಯನ್ನು ಬಯಸುವ ಮನಸ್ಸಿಗೆ, ಅದರ ಹಿಂದೆ ಅಡಗಿರುವ ಸಿಡಿಲಿನ ಕಾರ್ಖಾನೆಯ ಅರಿವು ಎಂಥ ಆಘಾತ ಮಾಡಿದೆ! ತಾವೇನೇ ಮಾಡಿದರೂ ಗಂಧದ ಚಕ್ಕೆಯಂತೆ ಬದುಕು ತೇಯುವುದೊಂದೇ ಎಂಬ ವಿಷಣ್ಣತೆಯ ಭಾವ ಕವಿಯನ್ನು ಮಾತ್ರವಲ್ಲ, ಓದುಗರನ್ನೂ ಮುತ್ತುವಂತೆ ಮಾಡಿ ವಿಚಾರದ ಸುಳಿಗೆ ನೂಕುವಲ್ಲಿ ಯಶಸ್ವಿಯಾಗಿದೆ. ಈ ಆಸೆ-ನಿರಾಸೆಗಳನ್ನು ಎಷ್ಟು ಮೋಹಕವಾಗಿ, ಪರಿಣಾಮಕಾರಿಯಾಗಿ ಸಹಜ ಸಮರ್ಥ ಧ್ವನಿಪೂರ್ಣ ರೂಪಕಗಳ ಮೂಲಕ ಈ ಕವಿ ಅಭಿವ್ಯಕ್ತಿಸಬಲ್ಲರು ಎಂಬುದಕ್ಕೆ ಇಂಥ ನೂರು ನೂರು ನಿದರ್ಶನಗಳು ಇವರ ಕಾವ್ಯದಲ್ಲಿ ಕಣ್ಣು ಹಾಯಿಸಿದ ಕಡೆಗಳಲ್ಲಿ ಸೂರೆಯಾಗಿವೆ. ಇಲ್ಲಿ ಭಾಷೆಯ ಆಕೃತಿ ಕರಗಿ ಭಾವಾಲೋಚನೆಗಳ ಆತ್ಮ ದಿಗ್ದರ್ಶನವಾಗುತ್ತದೆ.

'ಸ್ವಾಮಿ, ಈ ನಾನೆನ್ನುವ ಅಸ್ತಿತ್ವದ ಚೂರಿನಸ್ಪಷ್ಟ
ಅರ್ಥೈಸುವುದು ದೇಶದ ಹವಾಮಾನದಂತೆಯೇ, ಕಷ್ಟ.' (ನಾನೆಂಬ ಪರಕೀಯ)

—ಎಂದು ಕೊನೆಯಾಗುವ 'ನಾನೆಂಬ ಪರಕೀಯ' ಕವಿತೆ ತನ್ನ ಸರಳವೆಂದು ಕಾಣುವ ಒಡಲಿನಲ್ಲಿ ಅಡಗಿಸಿಕೊಂಡಿರುವ ವ್ಯಂಗ್ಯ, ವಿಷಾದ, ನಾಸ್ತಿಕತೆಗಳು ಎಂಥ ಮೊನಚು ಮುಳ್ಳಾಗಿ, ರಕ್ತ ಹರಿಸದೆ ಗಾಯ ಮಾಡುವ ಗುಪ್ತ ಚೂರಿಯಾಗಿ, ಜ್ವಾಲೆಯಾಗದ ಒಳ ಉರಿಯಾಗಿ, ಚಿನ್ನದ ಬಟ್ಟಲಿನ ವಿಷವಾಗಿ ಪರಿಣಮಿಸಿ ನಮ್ಮ ಅಂತರಂಗವನ್ನು ಕಲಕಿ

ಬಿಡುತ್ತದೆ. ಕವಿ ತಮ್ಮ ಭಾವಾಲೋಚನೆಗಳನ್ನು ಹೆರಲು, ಹೊರಲು ಸರಳ ಭಾಷೆಯಿಂದಲೇ ಪ್ರತಿಭಾಪೂರ್ಣವಾಗಿ ಸೃಷ್ಟಿಸಿಕೊಂಡ ತಾಯ ಗರ್ಭವಾಗಿದೆ ಇದು.

೮

ಪ್ರೀತಿ ಪ್ರೇಮ ಸ್ನೇಹಗಳನ್ನು ಕುರಿತ ನಿಸಾರರ ಕವಿತೆಗಳು ಅವರ ಭಾವ ಜಗತ್ತಿನ ವಿಶಿಷ್ಟ ಮುಖಗಳನ್ನು ಅತ್ಯಂತ ಹೃದಯಂಗಮವಾದ ಕೋಮಲವಾದ ಚಿತ್ರಪೂರ್ಣ ಶೈಲಿಯಲ್ಲಿ ಕಡೆದು ಮೂಡಿಸಿವೆ :

'ಗದ್ದೆ ನೆಲ್ಲ ಮೆದ್ದ ನವಿಲು ಉದುರಿಸುವ ಗರಿಯು ಪ್ರೀತಿ;
ಕೆರೆಯ ತೆರೆಯ ಪುಟ್ಟ ಬೆರಳ ಕೆಂಪು ಹರಳು ಕಮಲ ಪ್ರೀತಿ.
'ವಿಧಿಯ ಭಾಗ್ಯಲಿಖಿತದಲ್ಲಿ ಮಸಿಯ ಕಿರಿಯ ಚಿತ್ತು ಪ್ರೀತಿ;
ಕದಿಯ ಬಂದ ಬೆಕ್ಕು ಹಾಲ ಪಾತ್ರೆ ಕೆಡವಿದಂದ ಪ್ರೀತಿ.
...
'ನಿನ್ನ ಹಾಲುಗೆನ್ನೆ ತುಂಬ ಕೆನೆಗಟ್ಟಿದ ಮುನಿಸು ಪ್ರೀತಿ;
ನಿನ್ನ ಕಣ್ಣನಾಳದಂಚ ಮೀನ ಮಿಂಚ ಹೊರಳು ಪ್ರೀತಿ.
...
'ಯಾರೊ ಉಡುವ ವಸ್ತ್ರಕಾಗಿ ರೇಷ್ಮೆ ಹುಳದ ತ್ಯಾಗ ಪ್ರೀತಿ;
ಸ್ವಂತ ಅನ್ಯ ಎಣಿಸದೇಕನೀತಿ ಹಕ್ಕಿ ಕಾವ ಪ್ರೀತಿ.'

—ಪ್ರೀತಿಯ ನಾನಾ ರೂಪ ಸ್ವರೂಪಗಳನ್ನು ಅದರ ಗರಿ ಮುದುರಂತೆ, ಹೊಳಪು ಮಾಸದಂತೆ ಮಾರ್ದವತೆ ಮಂಕಾಗದಂತೆ, ಮುಟ್ಟಿದರೆ ಮಲಿನವಾಗಬಹುದಾದ ತಾಜಾತನದಲ್ಲಿ ಹಾಳೆಗಳಲ್ಲಿ ಪಲ್ಲವಿಸುವ ಈ ಶೈಲಿ ಅನನ್ಯವಲ್ಲದಿದ್ದರೆ ಮತ್ತಾವುದು? ನಮ್ಮ ಚಿತ್ತದಲ್ಲಿ ತನ್ನ ಪ್ರತಿ ಚಿತ್ರದ ಸುತ್ತ ಜೀವದುಂಬುವ ಕೋಮಲತೆ, ಅನುಭವ ಸಮೃದ್ಧ ಸೂಕ್ಷ್ಮ ಕುಸುರಿಗೆಲಸದ ನಿಪುಣತೆ, ಮೈದುಂಬಿಕೊಂಡ ಸಾವಿರ ಸಾವಿರ ಮಲ್ಲಿಗೆಗಳನ್ನು ತನ್ನ ದೇಹವನ್ನು ನಸು ನಡುಗಿಸುವ ಮೂಲಕ ನೆಲದ ಮೇಲೆ ಸುರಿಯುವ ಬಳ್ಳಿಯಂತೆ ಪದ ಮಲ್ಲಿಗೆಗಳನ್ನು ಸಹಜವಾಗಿ ಚೆಲ್ಲುವ ಶ್ರೀಮಂತ ಔದಾರ್ಯ; ರಂಗದ ಪಾತ್ರಧಾರಿಗಳು ತಾವು ತಾವೇ ಬಂದು ತಮ್ಮ ವೇಷಭೂಷಣಗಳನ್ನು ಔಚಿತ್ಯಪೂರ್ಣವಾಗಿ ಧರಿಸಿ ವೇದಿಕೆಯ ಮೇಲೆ ಬಂದು ಅಭಿನಯಿಸುವಂತೆ ಭಾವಗಳು ಕಲ್ಪನೆಗಳು ತಮಗೆ ತಾವೇ ಭಾಷಾ ಶರೀರವನ್ನು ಧರಿಸಿ ಧ್ವನಿಪೂರ್ಣವಾಗಿ ಚಲಿಸುವ ಅಭಿನಯ ಕೌಶಲ ಇಂಥ ಕವಿತೆಗಳಲ್ಲಿ ತಾನೇ ತಾನಾಗಿ ಮೆರೆದಿದೆ.

'ಹೊಮ್ಮಿತೇಕೆ ಕಂಬನಿ?
ಹೇಳು ಹೇಳೆ, ಕಮಲಿನಿ?
....
'ಮೂಡಲಿಂದ ಸುರಿದ ಸುಧೆಯ
ಹೀರಿ ಬಿಡುವ ದಾಹವೆ?
ಚೊಕ್ಕ ಬೆಳಕ ಹೊಳೆಯನೆಲ್ಲ
ಸೆರೆ ಹಿಡಿಯುವ ಮೋಹವೆ?

ಹಳೆಯ ನೆನಪ ಮೈಲಿಗೆಯನು
ತೊಳೆದು ಬಿಡುವ ಆಸೆಯೆ?'

(ಹೊಮ್ಮಿತೇಕೆ ಕಂಬನಿ)

* * *

'ಎಳ ನೀರಿನೊಳಗಿರುವ ಮಿದು ತಿರುಳ ಕೆನೆಗೆನ್ನೆ
ಬಲಿತು ಕೊಬ್ಬರಿಯಾಗಿ ಮುದವಾಗಿದೆ.
ಮೈಯುದ್ದ ಚುಮುಚುಮು, ಚುಮುಚುಮು ಎಂದೇನೊ
ಕೊಂಬೆ ರೆಂಬೆಯು ಅಳಿಲಿನಂತಾಡಿದೆ.
ಯೌವನಕೆ ಕೊಂಬೆರಡು ಮೂಡಿದವೊ ಎಂಬಂತೆ
ಸಮ ಭಾಗ ಹಿರಿಹಿಗ್ಗಿ ಹೆದೆಯಾಗಿದೆ.'

(ಪ್ರಾಯ)

* * *

'ಮತ್ತದೇ ಬೇಸರ, ಅದೇ ಸಂಜೆ, ಅದೇ ಏಕಾಂತ—
ನಿನ್ನ ಜೊತೆಯಿಲ್ಲದೆ, ಮಾತಿಲ್ಲದೆ ಮನ ವಿಭ್ರಾಂತ.
....
'ಬಣ್ಣ ಕಳೆದೊಡವೆಯ ತೆರ ಮಾಸತಲಿದೆ ಸೂರ್ಯಾಸ್ತ;
ನೋಡಗೊ! ತಿಮಿರದ ಬಲೆ ಬೀಸಿದ ಇರುಳಿನ ಬೆಸ್ತ...'

(ಮತ್ತದೇ ಬೇಸರ)

ಈ ಮೇಲಿನ ತುಣುಕುಗಳು ಪ್ರಣಯ ಭಾವದ ಬೇರೆ ಬೇರೆ ಕ್ಷಣಗಳಿಗೆ ಚೌಕಟ್ಟು ಹಾಕಿದ ಭಾಷೆಯ ಸುಂದರ ದೀಪಗಳು. ನಯವಾಗಿ ನವುರಾಗಿ ಆತ್ಮದೊಳಗಿನ ಎಳೆಯಾಗಿ ಚೈತ್ರದ ಬೆಳೆಯಾಗಿ ಕನಸಿನ ಕಾಮನಬಿಲ್ಲಿನ ಬಣ್ಣವಾಗಿ ಬಗೆಬಗೆ ರೂಪದ ಪ್ರೇಮ ಭಾವದ ಮೋಹಕ ಪದರುಗಳಾಗಿ ಮಾತುಗಳನ್ನೇ ನಾದಿ ಬಣ್ಣವಾಗಿಸಿ ಬಿಡಿಸಿದ ಬಂಧುರ ಬಿಡಿ ಚಿತ್ರಗಳಾಗಿ ಸಹೃದಯರ ಕಣ್ಮನಸ್ಸುಗಳನ್ನು ಕೋರೈಸುತ್ತವೆ, ಚಿತ್ತದಲ್ಲಿ ನೆಟ್ಟು ಚಿಗುರುತ್ತವೆ.

೬

ವಾಸ್ತವ ಬದುಕಿನ ವಿಸಂಗತಗಳನ್ನು ವಿಡಂಬಿಸುವ, ಸಮಾಜದ ತಾರತಮ್ಯಗಳನ್ನು ಗಮನಿಸುವ ನೋಯುವ ಕಟಕಿಯಾಡುವ, ಆತ್ಮ ವಿಶ್ಲೇಷಣೆ ಮಾಡಿಕೊಳ್ಳುವ ಬಂಡಾಯ ಮನೋಧರ್ಮದ ಕವಿತೆಗಳನ್ನು ನಿಸಾರರು ಬರೆದಿದ್ದಾರೆ. ('ನಾಡವರ ನಾಯಿಪಾಡು', 'ನೆರೆಹೊರೆಯವರು', 'ಮುಚ್ಚು ಅಂಗಡಿಯನ್ನು', 'ಉತ್ಸವಪ್ರಿಯರು...' ಇತ್ಯಾದಿ) ಆದರೆ ಇವುಗಳಲ್ಲಿ ಬಂಡಾಯದ ಪ್ರತಿಭಟನೆಯ ತೀವ್ರ ಗುಣಭಾವಗಳಿಲ್ಲ, ಅದಕ್ಕನುಗುಣವಾದ ಕಚ್ಚುವ ಕೊಚ್ಚುವ ಸಿಡಿಯುವ, ಅಸಮತೆಯ ಬಗೆಗಿನ ರೋಷವನ್ನು ಸುಡುಗಾಡಿನ ಭಾಷೆಯಲ್ಲಿ ಸ್ಫೋಟಿಸುವ, ಅಂತರಂಗದ ವೇದನೆಗಳನ್ನು, ಸಮಾಜದ ಶೋಷಣೆಯನ್ನು ಅದರೆಲ್ಲ ತೀವ್ರತೆ ಮತ್ತು ಶಕ್ತಿಯೊಡನೆ ಅಭಿವ್ಯಕ್ತಿಸುವ ಹರಿತ ಮತ್ತು ಪರಿಣಾಮಕಾರಿತ್ವ

ಇಲ್ಲಿ ಗಣನೀಯ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಆದರೆ ಇವನ್ನು ದೋಷವೆಂದು, ಕೊರತೆಯೆಂದು ಪರಿಗಣಿಸಬೇಕಾದ್ದಿಲ್ಲ. ಏಕೆಂದರೆ ಇದು ಮೂಲತಃ ಮನೋಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆ.

೧೦

ಭಾವಗಳು ಕಲ್ಪನೆಗಳು ಆಲೋಚನೆಗಳು ಅವಕ್ಕೆ ಉಚಿತವಾದ ಭಾಷೆಯಲ್ಲಿ ಮೈ ತಳೆಯದಿದ್ದರೆ, ಕವಚವಿಲ್ಲದ ಕರ್ಣನಂತೆ, ನಿರ್ವೀರ್ಯವಾಗುತ್ತವೆ, ನಿಷ್ಪ್ರಭವಾಗುತ್ತವೆ, ನೀರಸತೆಯನ್ನು ಹೊದ್ದು ಮಲಗಿಬಿಡುತ್ತವೆ. ಆದ್ದರಿಂದ ಕವಿಯ ಸೃಜನಶೀಲ ಪ್ರತಿಭೆಯ ಪ್ರಖರತೆ ಸ್ವೋಪಜ್ಞತೆ ವಿಶಿಷ್ಟತೆಗಳು ಆತನ ಭಾಷಾಸಿದ್ಧಿಯನ್ನು, ಪ್ರಯೋಗ ಪರಿಣತಿಯನ್ನು ಮತ್ತು ಅನುಭವದ ಸೂಕ್ಷ್ಮತೆ ವ್ಯಾಪಕತೆಗಳನ್ನು ಅವಿಚ್ಛಿನ್ನವಾಗಿ ಆಶ್ರಯಿಸಲೇ ಬೇಕಾಗುತ್ತದೆ. ಇವೆರಡರ ಅನ್ಯೋನ್ಯ ದಾಂಪತ್ಯವಿದ್ದಾಗಲೇ ಕಾವ್ಯ ಅನನ್ಯವಾಗುತ್ತದೆ ಮತ್ತು ಅನೂಹ್ಯ ಧ್ವನಿ ಹಾಗೂ ಬೆಳಕುಗಳನ್ನು ಧಾರಣ ಮಾಡುವ, ಸ್ಫುರಿಸುವ ಅಸಾಧಾರಣ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ. ಈ ದೃಷ್ಟಿಯಿಂದ ನಿಸಾರರು ಸಾಧಿಸಿದ ಯಶಸ್ಸು ಅಪರೂಪವಾದದ್ದು, ಅವರೆಂದೂ ತಮ್ಮ ಭಾವನೆಗಳಿಗೆ ತಕ್ಕ ಮತ್ತು ಕಲಾತ್ಮಕವಾದ ಬಣ್ಣ-ಬೆಳಕುಗಳನ್ನು ತುಂಬಲು ತಿಣುಕುವುದಿಲ್ಲ, ಪರದಾಡುವುದಿಲ್ಲ, ಅನುಕರಣ ಮಾಡುವುದಿಲ್ಲ. ತಮ್ಮ ವಿಶಿಷ್ಟ ಕಲ್ಪನೆಗಳ ಅರ್ಥ ಧ್ವನಿಗಳನ್ನು ವಿಸ್ತರಿಸಲೆಂದೇ, ಪರಾನುಕರಣ ಮಾಡದ ಕಠಿಣ ವ್ರತವನ್ನು ತೊಟ್ಟು, ತಮ್ಮ ಅಪಾರ ಪದ ಸಂಪತ್ತಿನ ಬಲದಿಂದ ಹೊಸ ಹೊಸ ಪದಗಳನ್ನು ಟಂಕಿಸಿ ಲೀಲಾಜಾಲವಾಗಿ ಚಲಾವಣೆಗೆ ಬಿಟ್ಟು ಓದುಗರನ್ನು ಹೊಸ ಹೊಸ ನಿರೀಕ್ಷೆಯ, ಸಂತಸದ, ತೃಪ್ತಿಯ ಪಾಲುಗಾರರನ್ನಾಗಿ ಮಾಡಿಬಿಡುತ್ತಾರೆ.

ನೆನಪ ಮೈಲಿಗೆ (ಹೊಮ್ಮಿತೇಕೆ ಕಂಬನಿ?); ಕನಸಿನ ಗೊನೆ, ಮಿಂಚಿನ ತೆನೆ, ಕಂಚಿನ ಬಿಳಿ ದನಿ, ಕುರುಡು ತಮವ ಕೊರೆಯುವಂಥ ಬಾಣ ಬಿಟ್ಟ ಚಾಪಗಳೆ (ದೀಪಗಳು); ಬೇಸಿಗೆಯ ದಾಹಕ್ಕೆ ಬಲಿಯಾದ ಹೊಳೆ ನಾನು, ಹುಲಿಯ ನೋಟದ ಬೆಂಕಿ ಹೊದರಿನಲ್ಲಿ, ನಗುವ ನೀರನು ಬಿತ್ತಿ (ಪಂಜರದ ಗಿಣಿ), ಚೆಲುವು ಮೋಡದ ಮರೆಗೆ ಸಿಡಿಲ ಕಾರ್ಖಾನೆ, ಹದ್ದುಗಣ್ಣಿನ ಹಸಿವು ಕತ್ತಲೊಳಗೆ, ಕೋಳಿ ಕಹಳೆ, ಮೂಡಣದ ಬಾನೊಂದು ಚೆಲುವು ತುಂಬಿದ ಮಂಡಿ (ಇಪ್ಪತ್ತನೆಯ ಶತಮಾನದ ಕೊಲಂಬಸ್); ಬುದ್ಧಿ ಕುಂಟುಗಾಲಿನ ಕುದುರೆ (ಕಂಡಷ್ಟೇ ಸತ್ಯವಲ್ಲ); ಮಿಂಚಾದವೆ ಕೆರೆಯಂಚಿಗೆ ಹಾಲಕ್ಕಿಯ ರೆಕ್ಕೆ, ಮಾತಿನ ಥಾನು ಥಾನು ಬಟ್ಟೆಯಾಗದು, ಕಾಗದದೀ ಕಾಮಧೇನು ಪ್ರೇಮರಸವನೊಸರದು, (ಮನೋರಮಾ); ಮಣ್ಣು ಮುಕ್ಕುತ ಬಿಕ್ಕುತಿರುವ ಹೊಸ ಬೀಜ (ಬೀಜ ಮರ), ಕಣ್ಣಿನಲಿ ಹೆಣ್ಣುತನ ಹದವಾಗಿದೆ (ಪ್ರಾಯ); ಗೇಣಿ ಗುತ್ತಿಗೆಯಲ್ಲ ಪ್ರೀತಿ (ನಕ್ಷತ್ರಿಕ); ಕಣ್ಣಲ್ಲೆ ಹಾಸಿಗೆ ಸರಿಪಡಿಸಿ ಚಿಲಕ ಹಾಕಿ ದೀಪ ಕೆಡಿಸುವ ಸ್ವಪ್ನ ವಲ್ಲಭರ ಸೊತ್ತು, ಆರತಕ್ಷತೆಯಿರುಳು (ಪವಾಡ), ಪೇಟೆ ಬದುಕಿನ ದ್ರೌಪದಿಯ ಘೇರಾಯಿಸಿದ ದುಶ್ಶಾಸನ (ಗಾಂಧಿ ಬಜಾರಿನ ಸಂಜೆ), ಹಳ್ಳಿಯೇ ಹನುಮಿಸಿದಂತೆ (ರಾಮನ್ ಸತ್ತ ಸುದ್ದಿ), ಅಸ್ವತ್ಥ ವೃಕ್ಷ (ಪರ್ಣಾಶ್ರಮ), ಬಯಲು ಗರತಿ (ಮಾರಕ ಪ್ರೀತಿ), ಪರಂಪರೆಯೆ ಹದಿನಾರಾದಂತಿದ್ದ ಈಕೆ, ಪತ್ರಕ್ಕೆ

ಅಂಟಿಸಿದ ಸ್ಟಾಂಪು ಕಿತ್ತಂತೆ ಜೀವಿಗಳ ನಂಟು, ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ (ವೈಜಯಂತಿ), ಬಸುರಿ ಮುಗಿಲಿಗೆ ಗಿರಿ ಸೂಲಗಿತ್ತಿ (ಈಗ ಮಳೆಗಾಲವಲ್ಲ), ಎದೆ ಸುಕ್ಕ ಸರಳಿಸಿದ ಮೈಸೊಕ್ಕ ಮರಳಿಸಿದ, ಸುಡು ಬಿಸಿಲ ನೆರಳಿಸಿದ ಹುಡುಗ (ಎಲ್ಲಿದ್ದೀಯೋ ಹುಡುಗ)—ಇಂಥ ಸಾವಿರಾರು ಪದಗಳನ್ನು, ಪದ ಸಮುಚ್ಚಯಗಳನ್ನು ಉಪಮೆ ರೂಪಕ ಪ್ರತಿಮೆಗಳನ್ನು ನೀರು ಕುಡಿದಷ್ಟು ನಿರಾಯಾಸವಾಗಿ ಸೃಷ್ಟಿಸಿ ಕಾವ್ಯದ ದಾರಿಯಲ್ಲಿ ಮೆರವಣಿಗೆ ಮಾಡುವ ಅಪೂರ್ವ ಕೌಶಲ ಈ ಕವಿಗಿದೆ. ಸಂಸ್ಕೃತದಿಂದ, ಕನ್ನಡದಿಂದ, ಇಂಗ್ಲಿಷಿನಿಂದ, ಉರ್ದುವಿನಿಂದ ಪದ, ಪದ ವೃಂದಗಳನ್ನು ಎಗ್ಗಿಲ್ಲದೆ ತಂದು ಒಂದಕ್ಕೊಂದು ಕಸಿ ಮಾಡಿ, ಬೆಸುಗೆ ಹಾಕಿ ಬಣ್ಣವೆರೆದು ನೂತನಾರ್ಥ ಪ್ರಾಣವನ್ನು ಅವುಗಳೊಳಗೆ ಪ್ರತಿಷ್ಠಾಪನೆ ಮಾಡಿ ಶಬ್ದಕೋಶವನ್ನು ಹಾಳತವರಿತು ತುಂಬುವ, ಆ ಮೂಲಕ ಉದ್ದೇಶಿತ ಅರ್ಥ ಭಾವ ಸೌಂದರ್ಯಗಳಿಗೆ ಜೀವ ಮತ್ತು ಆಕಾರ ಕೊಡುವ ಪದಬ್ರಹ್ಮಶಕ್ತಿ ಇಲ್ಲಿ ಮನೆ ಮಾಡಿದೆ. ಈ ಭಾಷೆ ಶಬ್ದತೀಟೆಗೆ ಬಸುರಿಳಿಸಿದ, ಅರೆ ಜೀವದ ಪದಶಿಶುಗಳ ಸಮೂಹವಲ್ಲ; ಕವಿಯ ಅಂತರಂಗದ ನೂತನ ಭಾವಗಳನ್ನು ಪ್ರೀತಿಯಿಂದ ಹೊತ್ತು ಧರೆಗೆ ತಂದ ಪ್ರತಿಭಾ ವಿಮಾನ.

ಈ ಕವಿತೆಗಳಲ್ಲಿ ಭಾವಕ್ಕೆ ವಸ್ತುವಿಗೆ ತಕ್ಕಂತೆ ಬೇರೆ ಬೇರೆ ಭಾಷೆಗಳಿಂದ, ವಿಜ್ಞಾನ ಚರಿತ್ರೆ ಭಾಷಾವಿಜ್ಞಾನ ತಂತ್ರಜ್ಞಾನ ತತ್ತ್ವಶಾಸ್ತ್ರ ಸಾಹಿತ್ಯ ಮುಂತಾದ ಅನ್ಯಶಿಸ್ತುಗಳ ಜ್ಞಾನದಿಂದ, ಅನುಭವ ಲೋಕದ ಬೇರೆ ಬೇರೆ ಮೂಲ ಮತ್ತು ಮೂಲೆಗಳಿಂದ ಪರಿಕಲ್ಪನೆಗಳನ್ನು ಆರಿಸಿಕೊಂಡು ಔಚಿತ್ಯಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಇದರಿಂದಾಗಿ ಅಭಿವ್ಯಕ್ತಿಗೆ ಹೊಸ ಆಯಾಮ, ಹೊಸ ನುಡಿಗಟ್ಟು, ಹೊಸ ಶಕ್ತಿ ಪ್ರಾಪ್ತವಾಗಿದೆ. ಮುಂಗಾರಿನ ಮಳೆಯುಂಡ ಮರ ಗಿಡಗಳ ಮೈ, ಚಿಗುರು ಹಸುರನ್ನು ಹಡೆಯುವಂತೆ ಇವರ ಕವಿತೆಗಳ ಭಾವಗಳು ಆಶಯಗಳು ಕಲ್ಪನೆಗಳು ಅನಾಯಾಸವಾಗಿ ಅವಿರಾಮವಾಗಿ ಮಾತಿನ ಮಿಂಚುಗಳನ್ನು ಧುತ್ತೆಂದು ಹಡೆದು ಓದುಗರನ್ನು ಸಂಮೋಹನಗೊಳಿಸುತ್ತವೆ. ಯಾವು ಯಾವುದೋ ಪದಗಳ ನಡುವೆ ಸಾಮಾನ್ಯನಿಗೆ ಕಾಣಲಾರದ ಅಂಟು ನಂಟು ಗಂಟುಗಳು, ಪದದ ಮೇಲೆ ಪ್ರಾಸದ ಮೋಜು, ಭಾವಗಳ ನಮಾಜು ಇಲ್ಲಿ ಕಣ್ತೆರೆದುಕೊಂಡಿವೆ. ತನ್ನಿಂದ ಕವಿತೆ ದೂರ ಸರಿಯುತ್ತಿದೆಯೆಂಬ ಆತಂಕದಿಂದ ಹುಟ್ಟಿಕೊಂಡ 'ಎಲ್ಲಿದ್ದೀಯ ನನ್ನ ಕವಿತೆ' ಕೂಡ ಕಾವ್ಯಶಕ್ತಿ ಈ ಕವಿಯೊಳಗೆ ಚೈತನ್ಯಶೀಲ ಹಸಿರಾಗಿಯೇ ಇದೆ, ಒಣಗಿಹೋಗಿಲ್ಲ ಎಂಬುದನ್ನು ಸಾದರ ಪಡಿಸುವ ರೀತಿ ಅನನ್ಯವಾಗಿದೆ. ಜೀವಿತ ಸೌದೆ, ಎದೆಯ ಹುಲ್ಲು ಮೆದೆ, ಹೊರಿಸುತ್ತಿದ್ದಾಳೆ ನೆನಹುಗಳ ಹೇರನ್ನು, ಬಿರುಕಿಸಿದ್ದಾಳೆ ಚಿತ್ತೈಕಾಗ್ರತೆಯ ಸೂರನ್ನು, ಮೆಲಕೇರದು ಮನಸಿನುಷ್ಣಮಾಪಕದ ಪಾದರಸ, ತಂಗಳು ಸೊಲ್ಲು ಇತ್ಯಾದಿ ಮಾತುಗಳು ನವ ನವೀನವಾಗಿ ಸಾಂಪ್ರದಾಯಿಕ ರೂಪಕಗಳ ಗಡಿಯನ್ನು ದಾಟಿ ಹೊಸ ಅನುಭವವನ್ನು, ಹೊಳಹನ್ನು ದಕ್ಕಿಸಿಕೊಡುತ್ತವೆ.

ವಸ್ತು ಭಿನ್ನವಾಗಿದ್ದರೂ ಅದು ಸೂಸುವ ಭಾವ ವಿಭಿನ್ನವಾಗಿದ್ದರೂ ಅದು ನಿರ್ಮಿಸುವ ಅರ್ಥ ಪರಿವೇಷದಲ್ಲಿ ವಿವಿಧ ಮಜಲುಗಳಿದ್ದರೂ ಅವರ ಬಹುಮಟ್ಟಿನ ಎಲ್ಲ

ಕವಿತೆಗಳಲ್ಲಿ ಹೂವು ಕಣ್ಣು ಬಿಟ್ಟಂತೆ, ತುಂತುರು ಮಳೆ ತುಂಟ ನಗೆ ನಕ್ಕಂತೆ, ಕಿರುಗೆಜ್ಜೆಗಳು ಝುಣಝುಣ ಸುರಿದಂತೆ, ಹತ್ತು ಬಗೆಬಗೆಯ ಝರಿಗಳು ವಿವಿಧ ಸಂಗೀತದಲ್ಲಿ ಬೆರೆತು ಹರಿದು ಹಾಡಿದಂತೆ, ಮಣಿಗಲ್ಲುಗಳ ಧಾರೆ ಕುಣಿಕುಣಿದು ಪ್ರವಹಿಸಿದಂತೆ, ಕುಟುಕು ನೋವಿನ ಗುಟುಕು ಊಡಿದಂತೆ, ಮಗುವಿಗೆ ಕಚಗುಳಿಯಿಟ್ಟಂತೆ, ಜಾಣ ಗೆಳೆಯನ ಹಿತ ನುಡಿಯ ಹವೆಯಂತೆ, ಮಕ್ಕಳ ಮುದ್ದು ಕಚ್ಚಿನಂತೆ, ವಿವಿಧ ವರ್ಣದ ಆಕಾರದ ಪದಪಟಗಳು ಭಾವದ ಬಾನಿನಲ್ಲಿ ನಿರಾಯಾಸವಾಗಿ ಹಾರಾಡಿದಂತೆ, ಎಲೆ ಅಡಿಕೆಗೆ ಸುಣ್ಣವಾದಂತೆ, ಮೆದು ದೋಸೆಗೆ ಹದವಾಗಿ ಹೊಸಬೆಣ್ಣೆ ಸವರಿದಂತೆ ಇಲ್ಲಿನ ಭಾಷಾ ವೈವಿಧ್ಯದ ಪರಿ ಅಚ್ಚರಿಗೊಳಿಸುತ್ತದೆ. ಇಲ್ಲಿನ ಭಾಷೆಯ ಕಣ್ಣು ಕೋರೈಸುವ ವಿವಿಧತೆಯಲ್ಲಿ ಮಿಣುಕು ಹುಳು, ದೀವಳಿಗೆಯ ದೀಪ ಎಳೆಮಿಂಚು ಸೆಳೆಮಿಂಚುಗಳು ಹಿತವಾಗಿ ಮಿತವಾಗಿ ಮೇಳೈಸಿವೆ. ಹಕ್ಕಿಗಳ ಹಿಂಡು ಒಂದರ ಹಿಂದೆ ಒಂದು ಮಂದ ಗಮನವಾದರೂ ಏಕಾಗ್ರ ಗಮನದಿಂದ ಮುಂದೆ ಮುಂದೆ ಶ್ರದ್ಧೋತ್ಸಾಹಗಳಿಂದ ಚಿಲಿಪಿಲಿಗುಟ್ಟುತ್ತಾ ಚಲಿಸುವಂತೆ ಪದಗಳು, ಅದರೊಳಗಿನ ಉಪಮೆ ರೂಪಕಗಳು ಸವಿಯಾಗಿ ಸೊಬಗಿನಿಂದ ಚಲಿಸುತ್ತವೆ. ಪದ್ಯಗಳ ಸಾಲುಗಳ ಪದ ಪದಗಳ ವಿವಿಧ ಬಗೆಯ ನಡೆ ಈ ಕವಿಗೆ ಕರತಲಾಮಲಕ. ಲವಲವಿಕೆಯ ನಡೆ, ನಿಧಾನವಾದರೂ ನಿರಾಯಾಸವಾದ ನಡೆ, ಹೆಜ್ಜೆ ಹೆಜ್ಜೆಯನ್ನೂ ಅನುಭವಿಸಿ ಆನಂದಿಸಿ ತೂಕ ಮಾಡಿ ಇಟ್ಟಂತಹ ನಡೆ. ಈ ನಡೆ ಒಮ್ಮೆ ಹೂವಿನ ಹೊಡೆ, ಇನ್ನೊಮ್ಮೆ ಲಾವಣ್ಯವತಿಯ ಹೊರವಾದ ಜಡೆ, ಮತ್ತೊಮ್ಮೆ ತೂಗಾಡಿದಂತೆ ಮರಿ ನಾಗರ ಹೆಡೆ.

ನವೋದಯವಾಗಲಿ ನವ್ಯವಾಗಲಿ ನವ್ಯೋತ್ತರವಾಗಲಿ, ತಮ್ಮ ಸಮಕಾಲೀನ ಸಂವೇದನೆಗಳಿಗೆ ಅಂದಂದಿನ ಭಾಷೆಯನ್ನು—ಮಗು ತಾಯಿಯನ್ನು ಅವುಚಿ ಹಿಡಿಯುವಂತೆ—ತೆಕ್ಕೆ ತಬ್ಬಿಕೊಂಡು, ಅದರೊಳಗೆ ಒಂದಾಗಿ ತನ್ನನ್ನು ವ್ಯಕ್ತಿ ವಿಶಿಷ್ಟವಾಗಿ ಅಭಿವ್ಯಕ್ತಿಸಿಕೊಳ್ಳುವ ರೀತಿ ಅನ್ಯಾದೃಶ. ತನ್ನ ಅಂದಂದಿನ ಅನಿಸಿಕೆಗಳಿಗೆ ಅದೇ ಸರಿ ಎನಿಸುವಂಥ ಅನುರೂಪೀ ಆಕಾರವನ್ನು ಕಾವ್ಯಶಕ್ತಿಯ ಜೀವದ್ರವ್ಯದೊಡನೆ ಶ್ರಮರಹಿತವೆಂಬಂತೆ ಕಟ್ಟಿಕೊಂಡು ಬಿಡುವ, ಭಾಷೆಯ ನಿಪುಣ ವಿಧೇಯತೆಯನ್ನು ಉಸಿರಾಟದಷ್ಟು ಸಹಜವಾಗಿ ಸಾಧಿಸುವ ಹಿರಿಮೆ ಈ ಕವಿಯದು. ಇವರ ಹಲವಾರು ರಚನೆಗಳಲ್ಲಿ ಭಾವ ಭಾಷೆಯಾಗಿ ಮೆರೆದಿದೆಯೋ, ಭಾಷೆ ಭಾವವಾಗಿ ಮೈದಳೆದಿವೆಯೋ ಎಂಬ ವಿಸ್ಮಯವುಂಟಾಗುವ ರೀತಿಯಲ್ಲಿ ಅವು ಮೂಡಿ ಬಂದಿವೆ. ಇನ್ನೂ ಹಲವು ಕವಿತೆಗಳಲ್ಲಿ ಭಾಷೆಯನ್ನು ಹಿಮ್ಮೆಟ್ಟಿಸಿ ಭಾವ, ಭಾವವನ್ನು ಹಿಂದೆ ಹಾಕಿ ಭಾಷೆ, ಇವೆರಡನ್ನೂ ಹಿಂದೆ ಹಾಕಿ ಚಿತ್ರಗಳು, ಪ್ರತೀಕ ಪ್ರತಿಮೆಗಳು ಮತ್ತು ಅವುಗಳನ್ನು ಹಿನ್ನೂಕಿದ ಅನುಭವ, ಪ್ರಭುತ್ವ ಸ್ಪರ್ಧೆ ಹೂಡಿದಂತೆ ಒಟ್ಟು ಅಭಿವ್ಯಕ್ತಿ ಜೀವ ತಳೆದು ನಿಂತಿದೆ.

ಮತ್ತೆ ಹಲವಾರು ಕವಿತೆಗಳು ವಿವಿಧ ಲಯಗಳ, ಛಂದಸ್ಸುಗಳ, ಬಂಧಗಳ ಪದಃ ಮುರಿತಗಳ ಪದಯೆರಕಗಳ ಪದ ಕುಣಿತಗಳ ವೈವಿಧ್ಯಮಯ ಪ್ರಯೋಗರಂಗವಾಗಿವೆ. ಶಾಸ್ತ್ರ ನಿಬದ್ಧವಾದ ಛಂದೋಶಾಸ್ತ್ರ ಕಾವ್ಯಮೀಮಾಂಸೆ ವ್ಯಾಕರಣ ಭಾಷಾವಿಜ್ಞಾನಗಳ ಪಾರಂಪರಿಕ ಶಿಕ್ಷಣವಿಲ್ಲದೆಯೂ 'ಅನುಒಲಿದಂತೆ ಹಾಡುವೆನು' [illegible] ಉಕ್ತಿಗೆ ಸಮರ್ಥ

ನಿದರ್ಶನವಾಗಿ, ಭಾವ ಕುಡಿಯೊಡೆದಂತೆ ಪ್ರತಿಭೆ ಮಿಂಚಿದಂತೆ ಮೋಡ ಮಳೆಗರೆದಂತೆ ಗರುಕೆ ಮೊಳೆತಂತೆ ಗಾಳಿ ಬೀಸಿದಂತೆ ಎಲೆಯೊಲೆದಂತೆ ಸ್ವಚ್ಛಂದ ಬಂಧದಲ್ಲಿ—ಯಾವ ಮುಕ್ಕುರಿತ ಪ್ರಸವ ವೇದನೆ ಬಲವಂತದ ಛಡಿಯೇಟುಗಳಿಂದ ನುಲಿದುಕೊಳ್ಳದ ಸಹಜ ಸ್ವಾಭಾವಿಕ ನೆಲೆಯಲ್ಲಿ ಭಾವವಿಧೇಯವಾಗಿ ವಿಚಾರವಿಧೇಯವಾಗಿ ಕಲ್ಪನಾವಿಧೇಯವಾಗಿ ಅಂತರಂಗ ನಿರ್ದೇಶಿತ ಮಾದರಿಯಲ್ಲಿ ಈ ಕವಿತೆಗಳು ಅವತರಿಸಿವೆ. ಇವು ಸಿಸೇರಿಯನ್ ಕೂಸುಗಳಲ್ಲ, ದಿನ ತುಂಬಿದ ಸಹಜೋದ್ಭವ ಶಿಶುಗಳು.

ಈ ಪರಿಮಿತ ಸಮೀಕ್ಷೆಯಲ್ಲಿ ನಿಸಾರರ ಕವಿತೆಗಳ ಎಲ್ಲ ಬಗೆಯ ಭಾಷಿಕ ಪವಾಡಗಳನ್ನು ಚರ್ಚಿಸಲಾಗಿಲ್ಲ. ಈ ವಸ್ತು ವಿಷಯದ ಸೂಕ್ಷ್ಮತೆ ಬಹುಮುಖತೆ ಮತ್ತು ಎತ್ತರಗಳು ಒಂದು ಸುದೀರ್ಘ ಸಂಶೋಧನಾ ಅಧ್ಯಯನವನ್ನು ಆಹ್ವಾನಿಸುತ್ತವೆ. ಆಗ ಮಾತ್ರ ಈ ವಿಶಿಷ್ಟ ಪ್ರತಿಭಾವಂತ ಕವಿಯ ಮೌಲ್ಯಮಾಪನ ಸಾಧ್ಯವಾಗುತ್ತದೆ.

ಅನ್ಯರ ಮನೆ ನಾಡು ನುಡಿಗಳೊಂದಿಗೆ ನಮ್ಮವನ್ನು ಹೋಲಿಸಿದಾಗ ಅವು ಚಿಕ್ಕವೋ ಅಪ್ರವರ್ಧಮಾನವೋ ಆಗಿರುವಂತೆ ತೋರಿದಾಗ ಅವುಗಳನ್ನು ತ್ಯಜಿಸಲು, ಇಲ್ಲವೆ ಕಡೆಗಣಿಸಲು ಸಾಧ್ಯವೆ? ನಮ್ಮ ಅಸ್ತಿತ್ವಕ್ಕೆ ಸ್ವೋಪಜ್ಞತೆ, ಸಂರಕ್ಷಣೆ ನೀಡುವ ಅವುಗಳೇ ನಮ್ಮ ಬದುಕಿನ ಭದ್ರ ಆಧಾರಗಳು. ಅವಕ್ಕೂ ನಮಗೂ ಇರುವಂಥದ್ದು ಜಾತ್ಯಾ ಸಂಬಂಧ, ಹೊಕ್ಕಳು ಬಳ್ಳಿಯ ಬೆಸೆತ. ಅಂಥದ್ದನ್ನು ದಿಢೀರನೆ ಕಳಚಿ ಅನ್ಯಾಶ್ರಯಿಗಳಾಗಿ, ಅನ್ಯ ಭಾಷಿಕರಾಗಿ ನಾವು ಮೆರೆಯಲು ಶಕ್ಯವೆ? ಸೋರಿದರೂ ನಾರಿದರೂ ನಮ್ಮ ಗೃಹ, ರಾಷ್ಟ್ರ, ಭಾಷಾಶ್ರಯಗಳು ನಮ್ಮವೇ. ನಮ್ಮ ಬಾಳುವೆ, ಪುರುಷಾರ್ಥ, ಮೋಕ್ಷ ಸರ್ವಸ್ವವೂ ಅವುಗಳೆ, ಅವುಗಳಲ್ಲೇ. ಆದ್ದರಿಂದ ನಮ್ಮದೆನ್ನುವುದು ನಮಗೆಷ್ಟೇ ಅಹಿತವಾಗಿದ್ದರೂ ದುರಸ್ತಿಗೊಳಿಸಿ ಭದ್ರಪಡಿಸಿಕೊಳ್ಳುತ್ತ ಏಳಿಗೆಯನ್ನು ಸಾಧಿಸುವುದೇ ನಮ್ಮ ಮುಂದಿರುವ ಉಪಾಯ. ಅನ್ಯ ವೈಭವವೆಲ್ಲ ಹಂಗಿನರಮನೆಯ ಹಂಗಾಮಿ ಲೋಕೋಪಚಾರ ಮಾತ್ರ. ಇಲ್ಲವೇ, ನಮ್ಮ ಕ್ರಿಯಾಶೀಲತೆಯನ್ನು ಕತ್ತು ಹಿಚುಕಿ ಕೊಲ್ಲುವ, ನಿಷ್ಕ್ರಿಯಗೊಳಿಸಿ ಮಾಮೂಲಿತನದ ಹಿಂಡಿಗೆ ದೂಡಿ ನಿರ್ವಿಶಿಷ್ಟಗೊಳಿಸುವ ಸವಿ ಆಮಿಷ ಮಾತ್ರ. ಇದನ್ನು ಆಧ್ಯಾತ್ಮಿಕ, ಧಾರ್ಮಿಕ ಸ್ತರಗಳಲ್ಲಿ ಸಹ ಪರ್ಯಾಲೋಚಿಸುವ ಸಾಧ್ಯತೆಗಳುಂಟು.

(ಸ್ವಧರ್ಮೇ ನಿಧನಂ ಶ್ರೇಯಃ...)



'ಗುಣಕೆ ಕೈ ಮುಗಿದು ಕೊಂಡಾಡಿ' ಹಾಡಿದ ಕವಿ ನಿಸಾರ್

♦ ಪ್ರೊ. ಎಮ್. ರಾಮಚಂದ್ರ

೧

ಇಂದಿಗೆ ಸುಮಾರು ಐದೂವರೆ ದಶಕಗಳ ಹಿಂದೆ, 'ಸುವರ್ಣ ಕರ್ನಾಟಕ'ದ ಹೊಂಗನಸು ಕನ್ನಡಿಗರ ಕಣ್ಣಿನಲ್ಲಿ ಇನ್ನೂ ಕುಣಿಕುಣಿಯುತ್ತ ಇದ್ದ ಕಾಲದಲ್ಲಿ, ನಮ್ಮ 'ನಯದ ಪತಾಕೆ' ವಿ.ಸೀ.ಯವರು 'ದ್ರಾಕ್ಷಿ-ದಾಳಿಂಬೆ'(೧೯೪೮)ಯೆಂಬ ಕವನ ಸಂಕಲನವನ್ನು ಪ್ರಕಟಿಸಿದರು. ಅದರಲ್ಲಿ ಕನ್ನಡ ನಾಡು ನುಡಿ ಜನಪದಗಳ ಹಳಮೆ ಹಿರಿಮೆ ಮೇಲ್ಮೆಗಳನ್ನು ಚಿತ್ರಿಸುವ ಸೊಗಸಿನ ಕವಿತೆಯೊಂದಿದೆ. ಆ ನುಡಿ ಚಿತ್ತಾರದ ಕೆಲವು ಗೆರೆಗಳು ಹೀಗಿವೆ :

'ಕಂಡಲ್ಲಿ ಗುಣಕೆ ಕೈ ಮುಗಿದು ಕೊಂಡಾಡಿ ಕರೆವ,
ಎತ್ತಿ ಮಡಿಲಲಿ ತೂಗಿ ಜಗಕೆಲ್ಲ ತೋರಿ ತಣಿವ,
ಹಾಲ್ ಬೆಣ್ಣೆ ಹೆಜ್ಜೇನು ಕೆನೆ ಮೊಸರನೂಡಿ
ಒಳ್ಪನುಪಚರಿಸಿ ಉಪಚರಿಸಿ ಮಣಿವ...
ಧನ್ಯ ದಾನದ ನೆಲೆಯು ನಮ್ಮ ಹೊನ್ನಾಡು.'

ಸೊಬಗು ಎಲ್ಲಿಯೇ ಇರಲಿ, ಯಾರಲ್ಲೇ ಇರಲಿ ಅದನ್ನು ಕಣ್ತೆರೆದು ನೋಡುವ, ನೋಡಿ ಮೆಚ್ಚುವ, ಮೆಚ್ಚಿದ್ದನ್ನೇ ಬಾಯ್ತುಂಬ ಒರೆದೋ ಕೈಯಾರೆ ಬರೆದೋ ಬಣ್ಣಿಸುವ ಕನ್ನಡಿಗರ ಗುಣ ಪಕ್ಷಪಾತ ಸರ್ವವಿದಿತ. ಕನ್ನಡಿಗರಲ್ಲಿ ಈ ಗುಣ ಗಣ ಹಿಂದೆ ಮಾತ್ರವಲ್ಲ, ಈಗಲೂ ಹೆಚ್ಚುಕಮ್ಮಿ ಇದ್ದೇ ಇದೆ. ಕನ್ನಡಿಗರು ಹೊರಗಿನ ಚೆಲುವನ್ನು

ಮಾತ್ರ ಮೆಚ್ಚುವವರಲ್ಲ, ಒಳಗಿನ ಒಳ್ಪುಗಳಿಗೂ ಕಿವಿದೆರೆಯನ್ನೂ ಎದೆಯ ಕದವನ್ನೂ ಸದಾ ತೆರೆದೇ ಇರಿಸಿಕೊಂಡವರು. ಕನ್ನಡಿಗರು ಎಂದಾಗ ಕವಿ–ಸಾಹಿತಿಗಳೂ ಅವರಲ್ಲಿ ಅಂತರ್ಗತ ಎಂಬುದು ಅಧ್ಯಾಹಾರ. ನಮ್ಮ ಸತ್ಕವಿಗಳು ಮತ್ತು ಸಾಹಿತಿ ಸಜ್ಜನರು ಗುಣಗ್ರಾಹಿಗಳು ಮಾತ್ರವಲ್ಲ, ಗುಣ ವಾಗ್ಮಿಗಳೂ ಆಗಿದ್ದಾರೆ. ಅದನ್ನೇ ಪಿ.ಸೀ.ಯವರು 'ಎತ್ತಿ ಮಡಿಲಲ್ಲಿ ತೂಗಿ... ತೋರಿ ತಣಿವ' ಎಂದು ಒತ್ತಿ ಹೇಳಿದ್ದು.

ಶತಮಾನಗಳ ಹಿಂದೆ ವೈಯಾಕರಣ ಕೇಶಿರಾಜ ತನ್ನ 'ಶಬ್ದಮಣಿ ದರ್ಪಣ'ದ 'ನಾಮ ಪ್ರಕರಣ'ದಲ್ಲಿ ಚತುರ್ಥೀ ವಿಭಕ್ತಿಗೆ ಉದಾಹರಣೆಯಾಗಿ 'ಕವಿಗೆ ಕವಿ ಮುನಿವನ್' ಎಂದು ಹೇಳಿದ್ದುಂಟು. ಆದರೆ ಅದನ್ನು ಸಾರ್ವಕಾಲಿಕವಾದ ಪೂರ್ಣಸತ್ಯ ಎಂದು ಭಾವಿಸಲಾಗದು. ಅದು ಸಾಪೇಕ್ಷ ಮತ್ತು ಆಂಶಿಕ ಸತ್ಯ. ನಮ್ಮಲ್ಲಿ 'ಕುಕವಿ ನಿಂದನೆ'ಗಳಿರುವಂತೆಯೇ 'ಸತ್ಕವಿ ವಂದನೆ'ಗಳೂ ಧಾರಾಳವಾಗಿಯೇ ಇವೆ. ಸಮ ಸಾಮಯಿಕ ಅಥವಾ ಸಮೀಪಪೂರ್ವ ಕವಿ ಸಾಹಿತಿಗಳಲ್ಲಿ ಅನಸೂಯವೂ ಸ್ನೇಹಾರ್ದ್ರವೂ ಗುಣ ಗ್ರಾಹಕವೂ ಆಗಿರುವ ದೃಷ್ಟಿ, ಧೋರಣೆಗಳಿಂದ ನೋಡಿ, ಸದ್ಭಾವ ವ್ಯಂಜಕವಾದ ಅನೇಕ ಸತ್ಕವಿತೆಗಳನ್ನು ಬರೆದಿರುವ, 'ಹೃದಯವಿರುವಂಥ' ಒಬ್ಬ ಕವಿ ಶ್ರೇಷ್ಠರೆಂದರೆ ಕೆ. ಎಸ್. ನಿಸಾರ್ ಅಹಮದ್. ಅವರು ಮಾಡಿರುವ ಕವಿಸ್ತವನ-ವಿಭೂತಿ ಪೂಜನಗಳ ಮೇಲೆ ಮಿಂಚು ನೋಟವನ್ನು ಹಾಯಿಸುವ ಒಂದು ಸಣ್ಣ ಪ್ರಯತ್ನವೇ ಈ ಮುಂದಿನ ಲೇಖನ.

೨

ಪ್ರೊ. ನಿಸಾರ್ ಅಹಮದರ ಕವಿ ವಿಭೂತಿ ಸ್ತವನ, ಗುಣ ವರ್ಣನ ಅಥವಾ ಸಂಸ್ಮರಣಗಳು ಅನೇಕ ಕನ್ನಡ ಕವಿವರರು ಮಾಡಿರುವ ವರ್ಣನೆಗಳಂತೆಯೇ ದೇಶ ಕಾಲಾತೀತವಾಗಿವೆ. ಎಂದರೆ, ಸಮಕಾಲೀನ ಅಥವಾ ಪೂರ್ವಕಾಲೀನ: ಕನ್ನಡದೊಂದಿಗೆ ಭಾರತ ಅಥವಾ ರಾಷ್ಟ್ರಾಂತರೀಯ ಕವಿ-ಸಾಹಿತಿಗಳನ್ನೂ ಅವರು ತಮ್ಮ ಅಕ್ಕರೆಯ ತೆಕ್ಕೆಗಳಲ್ಲಿ ತಕ್ಕೈಸಿಕೊಂಡಿದ್ದಾರೆ. ಇಲ್ಲವೇ ತಲೆ ಬಾಗಿ ಕೈ ಮುಗಿದಿದ್ದಾರೆ. ಅದಕ್ಕೆ ಸಮರ್ಥನೆಯಾಗಿ ಎರಡು ಮೂರು ಕವಿತೆಗಳನ್ನಷ್ಟೇ ಉಲ್ಲೇಖಿಸುತ್ತೇನೆ.

ಪುರಂದರದಾಸರ ಚತುಶ್ಶತಮಾನದ ಸಂದರ್ಭದಲ್ಲಿ ಕನ್ನಡದ ಅನೇಕ ಲೇಖಕರು ಅವರನ್ನು ಪದ್ಯರೂಪದಲ್ಲಿ ಸ್ತುತಿಸಿದ್ದಾರೆ, ಗದ್ಯ ಲೇಖನಗಳಲ್ಲಿ ವರ್ಣಿಸಿದ್ದಾರೆ ಅಥವಾ ನಾಟಕ ರಂಗಗಳಲ್ಲಿ ಸಾಕ್ಷಾತ್ಕರಿಸಿದ್ದಾರೆ. ನಿಸಾರ್ ಅಹಮದ್ ಸಹ ನವಕೋಟಿ ನಾರಾಯಣ ಶ್ರೀನಿವಾಸ ನಾಯಕ ಭಗವತ್ಕೃಪಾವಿಶೇಷದಿಂದ ಲೋಭ ಮೋಹಾದಿಗಳ ಕಾಳಿಮೆಯನ್ನು ಕಳೆದು, ಕೆರೆಯ ನೀರನು ಕೆರೆಗೆ ಚೆಲ್ಲುವಂತೆ ತನ್ನ ಧನ ಕನಕಾದಿ ಸಮಸ್ತವನ್ನೂ ಪರಿಸಮರ್ಪಣ ಮಾಡಿ, ತಕ್ಕಡಿಯನ್ನು ಬಿಟ್ಟು ತಂಬೂರಿ ಹಿಡಿದು, ಹರಿಭಕ್ತ-ವಿರಕ್ತ ಪುರಂದರದಾಸನಾಗಿ 'ಆದಿದ್ದೆಲ್ಲ ಒಳಿತೇ ಆಯಿತೆ'ಂದು ಹಾಡುತ್ತ, ನಾಡಿನ ಉದ್ದಗಲಗಳಲ್ಲಿ, ಊರು ಕೇರಿಗಳಲ್ಲಿ ಸುತ್ತುತ್ತ, ಜನ ಮನದ ಬಿಂದಿಗೆಗಳಲ್ಲಿ ಹರಿನಾಮಾಮೃತವನ್ನು ತುಂಬುತ್ತ, ಅವರೆದೆಗಳ ಹೊಲಗಳನ್ನು ಹದ ಮಾಡಿ, ಹರಿನಾಮ ಸ್ಮರಣೆಯ ಬೀಜವನ್ನು ಬಿತ್ತಿ ಬೆಳೆಯಿಸುತ್ತ, 'ದಾಸರೆಂದರೆ ಪುರಂದರ ದಾಸರಯ್ಯ' ಎಂದು

ಗುರು ವ್ಯಾಸರಾಯ ಸ್ವಾಮಿಗಳಿಂದಲೇ ಪುರಸ್ಕೃತರಾದ ಸೋಜಿಗದ ಪರಿಯನ್ನೇ ಬಗೆಬಗೆಯ ನುಡಿಬಣ್ಣಗಳ ಸೊಗಸಿನ ಚಿತ್ತಾರವಾಗಿ ಮಾಡಿದ್ದಾರೆ. ಓದುಗರ ಎದೆಗಳಲ್ಲಿ ಅದನ್ನು ಮೂಡಿಸಿದ್ದಾರೆ:

'ದಾಸರೆಂದರೆ ನಮ್ಮ ವರ ಪುರಂದರರಯ್ಯ' ಎಂದು ಮೊದಲಾಗುವ ಕವಿತೆ ಹೇಗೆ ದೈವದ ಚದುರಂಗದಾಟದಲ್ಲಿ ಅವರು—ಎಂದರೆ ಪೂರ್ವಾಶ್ರಮದ ಶ್ರೀನಿವಾಸ ನಾಯಕ—ದಾಸರಾದರೆಂಬುದನ್ನು ಹೇಳುತ್ತ, ಕೈಹಿಡಿದ ನಾರಿ ವೈಕುಂಠದ ದಾರಿ ತೋರಿದ ಬಗೆಯನ್ನೆ ತುಂಬ ಸೊಗಸಾಗಿ ಬಣ್ಣಿಸುತ್ತಾರೆ:

'ನತ್ತು ಕೊಟ್ಟಳು ಹರಿಗೆ, ಅತ್ತುಬಿಟ್ಟಳು ಮರೆಗೆ
ಪತಿಯನಿತ್ತಳು ಕೊಡುಗೆ ದೇವನಡಿಗೆ.
ಹೆಣ್ಣು ಮಾಯೆಯ ನೆರಳೆ? ಹೆಣ್ಣು ಗಂಡಿನ ಮರುಳೆ?
ಹೇಳಲೆದೆ ಉಂಟೇನು ಹಾಗಿವಳಿಗೆ?'

(ಪುರಂದರ ದಾಸರು)

ಸರಿ, ನಾಯಕನನ್ನು ಮುಚ್ಚಿದ್ದ ಹೊನ್ನ ಬಟ್ಟೆ ಹರಿಯಿತು. ಕಣ್ಣೊ, ಅದರೊಂದಿಗೆ ಹೊಸ ಬಾಳಬಟ್ಟೆಯೂ ತೆರೆಯಿತು. ಅದರಲ್ಲಿ ಹೆಜ್ಜೆಯೂರಿದರು. 'ದಾರಿ ಯಾವುದಯ್ಯಾ ವೈಕುಂಠಕೆ' ಎಂದು ಮಂದಿಯಲ್ಲಿ ಕೇಳುತ್ತ ಮುಂದುವರಿದರು.

'ಮೈಮರೆತು ಹರಿಸ್ಮರಣೆ ಮಾಡಿದರು, ಹಾಡಿದರು;
ಹತ್ತು ಜನ ಕೂಡಿದರು ಹರಿಭಕ್ತರು.
ಈವೊತ್ತು ಈ ಕೊಂಪೆ, ನಾಳೆ ದೂರದ ಹಂಪೆ
ಹರಿಯಿಂಪ, ನರುಗಂಪ ಹರಡಿದ್ದರು.'

(ಅದೇ)

ಹೀಗೆ ಹರಿಯನ್ನೆ ಅರಸುತ್ತ, ತಮ್ಮ ಒಳಗನ್ನು ಅರಿಯುತ್ತ, ಮನವ ಶೋಧಿಸಿ ಕಸ ಮುಸುರೆಗಳನ್ನು ತೊಳೆಯುತ್ತ, ಅದನ್ನೇ ಬೆಳಗುತ್ತ ಬಂಗಾರದ ಬೇಹಾರಿಯಾಗಿದ್ದವರು ತಾವೇ ಅಚ್ಚ ಬಂಗಾರವಾದರು. ಬದುಕಿಗೆ ನಿಜವಾದ ಕಳೆ ಕೂಡಿಸುವ, ಬೆಲೆ ಬಂತು. ನಿಸಾರ್ ಹಾಡುತ್ತಾರೆ—

'ಬೇರೆ ಸ್ಮಾರಕ ಬೇಕೆ ಇವರಂಥ ಭಕ್ತರಿಗೆ
ಎಲ್ಲರನ್ನೂ ಸೇರಿದಂಥವರಿಗೆ?
ಬೇರೆ ಬಣ್ಣನೆ ಯಾಕೆ ಈ ಇಂಥ ಮುಕ್ತರಿಗೆ
ಎಲ್ಲವನ್ನೂ ಮೀರಿ ನಿಂತವರಿಗೆ?'

(ಅದೇ)

ಇದು ದಾಸಶ್ರೇಷ್ಠರ ನೆನಪಿಗೆ ನಿಸಾರ್ ಅಹಮದರ ನುಡಿ ಕಾಣಿಕೆಯಾದರೆ, ಗುರುದೇವ ಠಾಕೂರರ ಜನ್ಮಶತಾಬ್ದಿ ಸನ್ನಿವೇಶದಲ್ಲಿ ಮಾಡಿರುವ ಸ್ಮರಣಾಂಜಲಿಯ ಸತ್ವ ಬೇರೊಂದು ಬಗೆಯದು. ಸಾಮಾನ್ಯವಾಗಿ ಭಾರತೀಯ ವಾಙ್ಮಯ ಕ್ಷೇತ್ರದಲ್ಲಿ ಕೃತಿ ರಚಿಸಿರುವ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ, ಠಾಕೂರರಿಗೆ ಉಪಕೃತರು ಅಥವಾ

ಅವರಿಂದ ಪ್ರಭಾವಿತರು. ನಿಸಾರ್ ಅಹಮದರು ಅದಕ್ಕೆ ಅಪವಾದವಲ್ಲ. ಅದನ್ನು ಅವರು ತಮ್ಮ ಕವಿತೆಯ ಮೊದಲಲ್ಲೇ ಪ್ರಾಂಜಲವಾಗಿ ಒಪ್ಪಿಕೊಂಡು, ಮುಂದೆ ಠಾಕೂರರ ಪ್ರತಿಭಾವಿಲಾಸ, ಅವರ ಭಾವಲೋಕದ ವಿಸ್ತಾರ, ಬಹುಮುಖವಾದ ಅಭಿರುಚಿ-ಆಸಕ್ತಿ, ನಿರಂತರವಾದ ಪ್ರಯೋಗಶೀಲತೆ ಮತ್ತು ಅದಮ್ಯವಾದ ಕ್ರೀಯಾಶಕ್ತಿಗಳನ್ನು ಸೂಚಿಸಿ, ಮುಂದೆ ಅವರ ವಿಶಾಲ ಹೃದಯ ಉದಾರ ಭಾವಗಳನ್ನು ವರ್ಣಿಸುತ್ತಾರೆ—ಠಾಕೂರರದು:

'ಮತದ ಮಿತಿ ಮೀರಿರುವ ಮಾನವೀ ದೃಷ್ಟಿಯಲಿ
ಮುಪ್ಪುರಿ : ಜೆರೂಸಲಂ, ಕಾಬ, ಕಾಶಿ.'

(ರವೀಂದ್ರನಾಥ ಠಾಕೂರರು)

ಈ ಮುಪ್ಪುರಿಯೊಂದಿಗೆ ಭಾರತದ ನಿಜ ಪರಂಪರೆಯ ಪರಿಜ್ಞಾನ, ರಸಾನುಭೂತಿ, ಸೂಕ್ಷ್ಮಸಂವೇದನೆ ಮತ್ತು ಕೋಮಲ ಮನೋಧರ್ಮಗಳೂ ಅವರಲ್ಲಿ ಸಮ ಭಾಗದಲ್ಲಿ ಸಮ್ಮಿಳಿತವಾಗಿದ್ದವು—ಬೆಳ್ಮುಗಿಲು, ನವಿಲು ಗರಿ, ಜೇಡ ಬಲೆ, ಗುಲ್‌ಮೊಹರ್, ಚಿಟ್ಟೆ ರೆಕ್ಕೆಯೇ ಮೊದಲಾದ ಪದ ಪುಂಜಗಳಿಂದ ಠಾಕೂರರ ಬದುಕಿನ ಹಾಸುಹೊಕ್ಕುಗಳನ್ನು ಗುರುತಿಸಿ ಅಳೆಯುತ್ತಲೇ ನಿಸಾರ್ ಹೇಳುತ್ತಾರೆ—ಠಾಕೂರರ ಕಾಲು ಈ ನೆಲದಿಂದ ಮೇಲಿತ್ತು, ಅವರ ನೆತ್ತಿ ಆಗಸದ ಬಿತ್ತರದಲ್ಲಿ ಸುತ್ತುತ್ತಿತ್ತು ಎಂಬ ಅರ್ಥವಲ್ಲ, ಅವರಿಗೆ ವಾಸ್ತವಿಕತೆಯ ಅರಿವಿತ್ತು. ಪರಾಧೀನ ಭಾರತದ ದುಗುಡ ದುಮ್ಮಾನಗಳ ಹೆದ್ದೆರೆಗಳು ಬಂದು ಅವರ ಎದೆಯನ್ನು ಬಡಿಯುತ್ತಿದ್ದುವು. ಆದುದರಿಂದಲೇ—

'ಪಾರತಂತ್ರ್ಯದತಂತ್ರ ನಾಡವರಿಗತಿ ನೊಂದು
ಬಿರುದು ಮರಳಿಸಿ ಮುಕ್ತಿ ಘೋಷಿಸಿದಿರಿ:
ಅಂತೆಯೇ ದೇಶಮತದತಿರೇಕವನು ಬದಿಗೊತ್ತಿ
ವಿಶ್ವಮಾನವರಾಗಲಾಶಿಸಿದಿರಿ.'

(ಅದೇ)

ಅಂತಹ ವಿಶ್ವಕವಿ ಠಾಕೂರರಿಗೆ—

'ಕಲೆಯೊಂದು ಕರವಸ್ತ್ರ; ಜಗದ ಕೊಳೆ, ಕಂಬನಿಗೆ
ಎಷ್ಟೊಂದು ಹೃದಯಗಳ ಪರಿಚಾರಿಕೆ!'

(ಅದೇ)

ಹೀಗೆ ಅವರ ಗೆಯ್ಮೆ ಹಿರಿಮೆಗಳನ್ನು ತುಂಬು ಮನದಿಂದ ಕೊಂಡಾಡುತ್ತ, ಅವರಿಂದ ತಾನು ಕಲಿತ ಜೀವನ ಪಾಠ ಏನೆಂಬುದನ್ನು ನಿಸಾರ್ ಹೀಗೆ ವಿವರಿಸುತ್ತಾರೆ: ಅದು—

'ಆಟಿಕೆಯ ನಡುವಿರುವ ಶಿಶು ತನ್ಮಯಾನಂದ-
ವೆನಗೆ ದಯಪಾಲಿಸಿದ ಕವಿಕುಲ ಲಲಾಮ.'

(ಅದೇ)

ಭಗವದ್ಗೀತೆ 'ಯೋಗಃ ಕರ್ಮಸು ಕೌಶಲಂ' ಎನ್ನುತ್ತದೆ. ಎಂದರೆ ಸ್ವಕರ್ಮವನ್ನು ಸೊಗಸಾಗಿ ಮಾಡುವುದೇ ಯೋಗ. ಗೀತೆಯ ಉಕ್ತಿ ಪ್ರೌಢ, ಭಾವ ಗಂಭೀರ. ಅದನ್ನೇ ನಿಸಾರ್ ಸುಲಭ ಸುಂದರವಾಗಿ ಹೇಳಿದ್ದಾರೆ. ತನ್ನ ಸುತ್ತ ನೂರಾರು ಗೊಂಬೆಗಳನ್ನೇ ಹರಡಿ

ಆಡುತ್ತಿರುವ ಮಗುವಿಗೆ ಅದರಲ್ಲಿ ಪೂರ್ಣ ತನ್ಮಯತೆ. ಆಟ ಸ್ವಲ್ಪ ಕೆಟ್ಟರೂ ನೋಯುತ್ತದೆ, ಅಳುತ್ತದೆ. ಏನು ಮಾಡಬೇಕೋ ಅದನ್ನು ಮನ ಮುಟ್ಟಿ, ತನು ಮುಟ್ಟಿ ಮಾಡಬೇಕು... ಅದೇ ಯೋಗ. ಅದು ಕರ್ಮ ಮಾತ್ರವಲ್ಲ, ಕಲೆಯೂ ಹೌದು. ಗೀತೆಯ ಶ್ಲೋಕಕ್ಕೆ ಠಾಕೂರರ ಬದುಕು ಒಂದು ಭಾಷ್ಯ. ಆ ಭಾಷ್ಯವೇ ತನ್ನ ಜೀವನ ಪಥಕ್ಕೊಂದು ರಥರೇಖೆ—ಎಷ್ಟು ಸೊಗಸಾಗಿದೆ ನಿಸಾರ್ ಅಹಮದರ ಈ ಅರ್ಥಭಾವ ಸಮನ್ವಯ!

ಕರ್ನಾಟಕದ ಒಬ್ಬ ದಾಸವರೇಣ್ಯ, ಭಾರತದ ಒಬ್ಬ ಕವಿಕುಲ ಲಲಾಮನನ್ನು ಕುರಿತಾದ ಈ ಸಂಸ್ತವನಗಳು ಅವರಿಬ್ಬರ ನಾನ್ನೂರು ಮತ್ತು ನೂರನೆಯ ಹುಟ್ಟುಹಬ್ಬಗಳ ನೆನಪಿನಲ್ಲಿ ಹಚ್ಚಿರಿಸಿದ ದೀಪಗಳಾದರೆ, ಜಗಜ್ಜ್ಯೋತಿ ಬಸವಣ್ಣನ ಕುರಿತಾದ ಕವಿತೆ ಸಂದರ್ಭ ಪ್ರೇರಿತವಲ್ಲ, ಸಹಜಸ್ಫೂರ್ತಿ ಎನ್ನಬಹುದಾದದ್ದು; ಆ ಎರಡಕ್ಕೂ ಸಮತೂಕವಾಗಿಯೇ ಇರತಕ್ಕದ್ದು. ಅವರ ಕ್ರಾಂತಿಕಾರಕವಾದ ಜೀವನ ವಿಧಾನ, ಅಂತರಂಗ ಮತ್ತು ಬಹಿರಂಗ ಶುಚಿತ್ವ, ಸಕಲ ಜೀವಿಗಳಿಗೂ ಲೇಸನ್ನೇ ಬಯಸಿದ ಉದಾರತೆ, ತಮ್ಮ ಅಸಂಖ್ಯ ವಚನ ಜ್ಯೋತಿಗಳಿಂದ ಸಹ ಮಾನವರ ಮನದ ಕತ್ತಲೆಯನ್ನೇ ಕಳೆದು ತೊಳೆದ ಶುದ್ಧೀಕರಣ ಕ್ರಿಯೆ, ಹಾರುವ ಮೊದಲಲ್ಲ, ಅಂತ್ಯಜ ಕಡೆಯಿಲ್ಲ, ಪರಶಿವನ ಕೃಪಾಪಾತ್ರರೇ ಕುಲಜರು ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿ ಸಾಧಿಸಿ ಸ್ಥಾಪಿಸಿದ ಭೂಮ ವ್ಯಕ್ತಿತ್ವಗಳ ಸಮ್ಯಗ್ದರ್ಶನವನ್ನೇ 'ಶ್ರೀ ಬಸವೇಶ್ವರರು' ಎಂಬ ಕವಿತೆಯ ಎಂಟು ಪದ್ಯಗಳಲ್ಲಿ ಸಮರ್ಥವಾಗಿ ಪಡಿಮೂಡಿಸಿದ್ದಾರೆ.

'ಮಡುಗಟ್ಟಿ ನಾರಿದ್ದ ಸಂಪ್ರದಾಯಕೆ ನಾಲೆ
ಬಿಡಿಸಿ, ಹೊಸ ಹಾದಿಗಳ ರಚಿಸಿದಾತ;
ಈ ನಾಡ ಹಿರಿ ಬದುಕಿಗಂಟಿದ್ದ ಕಿಲುಬನ್ನು
ಉಜ್ಜುಜ್ಜಿ ಮತ್ತೊಮ್ಮೆ ಹೊಳೆಸಿದಾತ.'

(ಶ್ರೀ ಬಸವೇಶ್ವರರು)

ಎಂದು ಬಸವಣ್ಣನ ಹಿರಿತನವನ್ನೆ ಎತ್ತಿ ಹೇಳಿ,

'ಸೋಗು ಡಂಭಾಚಾರ ತೋರಿಕೆಗೆ ಧಿಕ್ಕಾರ,
ತೆರೆದ ಪುಸ್ತಕದಂತೆ ಮುಗ್ಧ ಮನಸು.
ಮಾತು ಮುತ್ತಿನ ಹಾರ; ಕೊಂಕಿರದೆ ಗುರಿ ನೇರ
..........................'

(ಅದೇ)

ಎಂದು ಅಣ್ಣನ ಒಳಗನ್ನು ತೆರೆದು ತೋರಿ,

'ಹೊರಗಿನಂತೆಯೆ ಇರಲಿ ಒಳ ಮನೆಯ ಪರಿಶುದ್ಧಿ;
ಪ್ರತಿ ಚಣವು ಕಷ ಹೊಡೆವ ಬುದ್ಧಿಯಿರಲಿ;
ದೇಹ ದೇವರ ನೆಲಸು; ಅಂತರಂಗವೆ ಹಾಸು
ಸುತ್ತ ತಿಳಿವಿನ ಗಂಧ ಸೂಸುತಿರಲಿ.'

(ಅದೇ)

ಎಂಬುದಾಗಿ, 'ಕಾಯಕವೆ ಕೈಲಾಸ'. 'ದೇಹವೇ ದೇವಾಲಯ'ವೆಂಬ ಬಸವಣ್ಣನ ಅಮೃತ ಸಂದೇಶವನ್ನೆ ಮತ್ತೊಮ್ಮೆ ಸಾರವತ್ತಾಗಿ ಸಂಗ್ರಹಿಸಿ, ಕವಿತೆಯನ್ನು ಉಪಸಂಹರಿಸಿದ್ದಾರೆ.

೩

ಈಗ, 'ನವೋದಯ'ವೆಂದು ಸ್ವೀಕೃತವಾಗಿರುವ ಕಾಲ ಘಟ್ಟದ ಕನ್ನಡ ನಾಡಿಗೆ ಬರೋಣ. ಈ ಒಂದು ಕಾಲಾವಧಿಯಲ್ಲಿ ಎಂತೆಂತಹ ಕುಲರಸಿಕರು ಈ ನಾಡಲ್ಲಿ ಇದ್ದರು, ತಮ್ಮ ಹೆಜ್ಜೆ ಗುರುತನ್ನು ಉಳಿಸಿ ಮರೆಯಾದರು ಎಂಬುದನ್ನು ಭಾವಿಸಿದಾಗ ನಿಜವಾಗಿಯೂ ಕನ್ನಡಿಗರ ಹೆಮ್ಮೆಯ ನೆತ್ತಿ ಮುಗಿಲನ್ನು ಮುಟ್ಟಬೇಕು. ಅಂತಹ ಹಲವರ ಕೃತಿ ಆಕೃತಿಗಳನ್ನು ನಿಸಾರ್ ಅಹಮದರು ಕಣ್ಣಾರೆ ಕಂಡವರು, ಮನದೊಳಗೆ ತುಂಬಿಕೊಂಡವರು. ಅಂತಹವರನ್ನು ಮುಂದಿರಿಸಿ ನಿಸಾರ್ ಅಹಮದ್ ತಮ್ಮ ಸರಸ ಲೇಖನಿಯಿಂದ ರಚಿಸಿರುವ ವರ್ಣಚಿತ್ರಗಳಲ್ಲಿ ಕೆಲವನ್ನು ಸಹೃದಯರ ಮುಂದೆ ಅನಾವರಣಗೊಳಿಸುತ್ತಿದ್ದೇನೆ:

ಭಾರತದ ಭೂಶಿರ ಕನ್ಯಾಕುಮಾರಿಯಲ್ಲಿ ನಿಂತ ಪ್ರೇಕ್ಷಣ ಕುತೂಹಲಿಗೆ ಪೂರ್ವಾಕಾಶದಲ್ಲಿ ಪೂರ್ಣಿಮೆಯ ಚಂದ್ರೋದಯವನ್ನೂ ಪಶ್ಚಿಮ ದಿಗಂತದಲ್ಲಿ ಸೂರ್ಯಾಸ್ತವನ್ನೂ ಏಕ ಕಾಲಕ್ಕೆ ದರ್ಶಿಸಿ ಪುಲಕಿತನಾಗುವ ಅವಕಾಶ ಪ್ರಾಪ್ತಿಯಾಗುವುದುಂಟು. ಹತ್ತೊಂಬತ್ತನೆಯ ಶತಕದ ಅಂತ್ಯ ಮತ್ತು ಇಪ್ಪತ್ತನೆಯ ಶತಮಾನದ ಆದಿ ಕನ್ನಡ ಕಾವ್ಯಲೋಕದಲ್ಲಿ ಕನ್ಯಾಕುಮಾರಿ ಸದೃಶವಾದ ಒಂದು ವಿಶಿಷ್ಟ ಘಟ್ಟ. ನಂದಳಿಕೆಯ ಲಕ್ಷ್ಮೀನಾರಾಯಣಪ್ಪ ಅಥವಾ ಮುದ್ದಣ ಅಂತಹ ಭಾಗ್ಯಶಾಲಿ—ಹಳಗನ್ನಡದ ಭರತವಾಕ್ಯವನ್ನು ಆಡುವ, ಹೊಸಗನ್ನಡದ ನಾಂದೀ ಪದ್ಯವನ್ನು ಹಾಡುವ ಅವಕಾಶ ಅವನಿಗೆ ಲಭಿಸಿತು. ಹಾಗಾಗಿಯೇ ಅವನು ಕನ್ನಡ ನವೋದಯದ ಮುಂಗೋಳಿ ಎಂದು ಕರೆಯಿಸಿಕೊಂಡದ್ದು. ಮುದ್ದಣ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜನಿಸಿದವನಾದ್ದರಿಂದ ಷಟ್ಪದಿಯಲ್ಲಿ ಕಾವ್ಯ ಬರೆದು ಆ ಶತಮಾನಕ್ಕೆ ಗೌರವವನ್ನು ಸಲ್ಲಿಸಿದ; ಇಪ್ಪತ್ತನೆಯ ಶತಮಾನವನ್ನು ಕಂಡವನಾದ್ದರಿಂದ 'ಶ್ರೀರಾಮಾಶ್ವಮೇಧ'ವನ್ನು ಗದ್ಯದಲ್ಲಿ ರಚಿಸಿ, ನವೋದಯದ ಹರಿಕಾರನೆನಿಸಿದ. ನಿಸಾರ್ ಅಹಮದರು 'ನವೋದಯ'ವೆಂಬ ಶೀರ್ಷಿಕೆಯಲ್ಲಿ, ಮುದ್ದಣನನ್ನು ಎಲ್ಲೂ ಹೆಸರಿಸದೆ, ಕೆಲವಾರು ಪದಪುಂಜಗಳಿಂದಲೇ, ಅದು ಅವನನ್ನೇ ಕುರಿತಾದ್ದು ಎಂಬುದು ಗೃಹೀತವಾಗುವಂತಹ ಸುಂದರವಾದ ಕವನವನ್ನು ಕೊಟ್ಟಿದ್ದಾರೆ. ಕವಿತೆಯ ಆರಂಭವೇ ವಿನೂತನವಾಗಿದೆ, ಅರ್ಥವತ್ತಾಗಿದೆ.

'ಕೊಕ್ಕೊಕ್ಕೋ: ನವೋದಯ, ಹೊಸ ನಗಾರಿ :
ಕದಲಿತು ಪರಂಪರೆ ಒಂದೆರಡು ಡಿಗ್ರಿ.'

(ನವೋದಯ)

ಆ ನವೋದಯದ ಹಿಂದಿನ ಅಂಧಂತಮಸ್ಸು—ಕಡುಕತ್ತಲೆ—ಹೇಗಿತ್ತು ಎಂಬುದನ್ನು ಕೇಳುತ್ತೀರಾ? ಅದೊಂದು ಕತ್ತಲೇ ಕತ್ತಲಾಗಿರುವ ಮರುಭೂಮಿ! ಅಥವಾ ಗೊಂಡಾರಣ್ಯ; ನಿಸಾರ್ ಅದನ್ನು ವಿವರಿಸುತ್ತಾರೆ:

'ಕಂದ ವಾರ್ಧಕ ರಗಳೆ ವೃತ್ತಗಳ ದಟ್ಟಡವಿ
ನುಗ್ಗಿ ನಡೆದರೆ ಮುಂದೆ ಶತಮಾನಗಳ ಮರುಭೂಮಿ

ಉಸುಬಿನಲಿ ಅಲ್ಲಲ್ಲಿ ಪೊದರು...
ಸುತ್ತ ಮರಳೇ ಮರಳು...'

(ಅದೇ)

ಆದರೇನು?—ಅಂತಹ ಕಗ್ಗತ್ತಲೆಯ ಕಡಲನ್ನೂ ಈಸಿಕೊಂಡು ಬಂದ ಕನ್ನಡ ಸರಸ್ವತಿಯ ತೇರು ಹೊಸಗನ್ನಡದ ಸೊಗಸಿನ ತೀರವನ್ನು ಸೇರುತ್ತದೆ. ಆಗ—

'ಉದಯಾನುಭವದಲ್ಲೆ ಹೊಸ ನೆಲೆಯ ಚೆಲುನೋಟ,
ಸಿಹಿನೀರ ತಿಳಿಬಾವಿ, ತೆಂಗು, ಬಾಳೆಯ ತೋಟ.'

(ಅದೇ)

ಮುದ್ದಣ ಹಳಮೆಯನ್ನು ಅನಾದರಿಸಲಿಲ್ಲ, ಆದರೆ 'ನಿನ್ನ ಅವಧಿ ಮುಗಿಯಿತು, ಇನ್ನು ವಿರಮಿಸು' ಎಂದು ನಯವಾಗಿ ಬದಿಗೆ ಸರಿಸಿದ, ಹೊಸತಕ್ಕೆ ಮಣೆ ಹಾಕಿದ. ಮುದ್ದಣ-ಮನೋರಮೆಯರ ಸಂವಾದ ರೂಪದಲ್ಲೇ 'ಶ್ರೀರಾಮಾಶ್ವಮೇಧ'ದ ಕಥಾವಲ್ಲರಿಯನ್ನು ಹಬ್ಬಿ ಹರಡಿಸಿದ. ನಿಸಾರ್ ಅಹಮದ್ ತಮ್ಮ ಈ ಕವಿತೆಯಲ್ಲೂ ಆ ತಂತ್ರವನ್ನು ಅನುಸರಿಸಿದ್ದಾರೆ. ನುಡಿ ತಾಯ ತೇರಿನೊಂದಿಗೆ ಬಂದಿದ್ದ ಹೊಸ ಕಾಲದ ಹುಡುಗ (ಕವಿಯೆಂಬುದು ಅಧ್ಯಾಹಾರ) ಅಜ್ಜ ಮುದ್ದಣನಲ್ಲಿ ಕತೆ ಹೇಳುವಂತೆ ಕೇಳುವ ನೆವದಲ್ಲಿ ಅವನ ಅಂತಃಕರಣದ ಒಳಕ್ಕೆ ಇಳಿಯುತ್ತಾನೆ: ಅದರ ಆಳ ಅಗಲಗಳನ್ನು ಅಳೆಯುತ್ತಾನೆ. ಅವನ ಕೂಗಿಗೆ ನಾಡಿನ ನಾಲ್ಕು ಮೂಲೆಗಳಿಂದ ಕೇಳಿದ ಮರು ದನಿ, ಅವನು ಕಡಿದ ದಾರಿಯಲ್ಲಿ ಮಿಕ್ಕವರು ಮೂಡಿಸಿದ ಹೆಜ್ಜೆ ಗುರುತುಗಳನ್ನು ಗುರುತಿಸಲು ಪ್ರಯತ್ನಿಸುತ್ತಾನೆ—

'ಅಜ್ಜ, ಅಜ್ಜಾ ಹೇಳು, ರಾಮಾಯಣದ ಕತೆ ಹೇಳು
ಪದ್ಯ ವಧ್ಯವೆ? ಗದ್ಯ ಹೃದ್ಯವೆ ಅಜ್ಜ?
ವ್ಯಾಕರಣದಾರೋಗ್ಯಕಾರಿಯಲ್ಲದ ಬೊಜ್ಜ
ನೀಗಿಸಲು ಕಾವ್ಯದಿಂದೀ ಮಾತು ಪುಟಸಿದೆಯಾ?
ಕಾಲಕ್ಕೆ ತಕ್ಕಂತೆ ನಟಿಸಿದೆಯಾ?
...............................'

(ಅದೇ)

ಹೀಗೆ ಹೇಳುತ್ತ ಹೇಳುತ್ತಲೇ ಹೊಸ ಕಾಲದ ಹುಡುಗ, ಮುದ್ದಣನ ಪ್ರಯೋಗಶೀಲತೆ, ಅದರ ಪರಿಣಾಮ, ಮಿಕ್ಕವರ ಪ್ರತಿಕ್ರಿಯೆ ಅಥವಾ ಅನುಸರಣೆಗಳನ್ನು ವಿಶ್ಲೇಷಿಸುತ್ತಾನೆ.

'ನೀರಿಳಿಯದ ಗಂಟಲಲಿ ಕಡುಬ ತುರುಕಿದ ಹಾಗೆ
ಅನ್ನಿಸಿತು ಬರವಣಿಗೆ ನಿನಗಾಗ, ಬಲು ಬೇಗ—
ನಮಗಿನ್ನು ಹೋಗಿಲ್ಲ ಹಳೆಯ ರೋಗ.
...............................'

(ಅದೇ)

—ಎಂದು ಹೇಳುತ್ತಲೇ ಮುದ್ದಣನ ಹೊಸತನ ಇರುವುದೆಲ್ಲಿ, ಅದರಲ್ಲಿ ಜನ ಒಪ್ಪಿ

ಕೊಂಡದ್ದು ಎಷ್ಟು ಎಂಬುದನ್ನು ನಿಸಾರ್ ಅಹಮದ್ ವಿಶ್ಲೇಷಿಸುತ್ತಾರೆ: `ಹಳೆಯದನ್ನೆ ಸಾಕಷ್ಟು ಕಂಡದ್ದಾಯಿತು, ಉಂಡದ್ದಾಯಿತು: ಇನ್ನು ಏನಾದರೂ ಹೊಸತನ್ನು ಬಿತ್ತಿ ಬೆಳೆಯೋಣ` ಎಂದು ಮುದ್ದಣ ಉಳುಮೆ ಮಾಡುತ್ತಿದ್ದಾಗಲೇ ಅವನನ್ನು ಹಿಂದಿಕ್ಕಿ ಕಾಲ ಹೇಗೆ ಮುಂದಕ್ಕೆ ಹಾರಿತು, ಕನ್ನಡದ ಕಳದಲ್ಲಿ ತಾನು ಬಿತ್ತಿ ಬೆಳೆದದ್ದನ್ನು ಉಣ್ಣುವ ಭಾಗ್ಯ ಅವನಿಗೆ ಹೇಗೆ ಸಿಕ್ಕದೆ ಹೋಯಿತು ಎಂಬುದನ್ನು ತಿಳಿಸಿ, ಮುದ್ದಣನ ಕಾಲದ ಜೀವನ ವಿಧಾನ, ಕಾವ್ಯ ಕರ್ಮಗಳು ಹೇಗಿದ್ದವು, ಅವನನ್ನು ಪ್ರೇರಿಸಿದ ಶಕ್ತಿಪ್ರಭಾವ, ಅವನ ಕಾವ್ಯ ಸಂಸ್ಕಾರ, ಅವನ ಸರಸ ದಾಂಪತ್ಯ, ಅವನನ್ನು ಹಿಂಡಿ ಹಿಳಿದ ಅನಾರೋಗ್ಯ, ಅವನು ಮಾಡಿದ ಭವತಿ ಭಿಕ್ಷಾಂದೇಹಿ ಎಂಬ ಮಂತ್ರಜಪ, ಆದರೂ ಅವನ ತುಟಿಯಂಚಿನಿಂದ ಮಾಸದ ನಗು, ಇವುಗಳನ್ನೆಲ್ಲ ಈ ಕವಿತೆಯ ಪಂಕ್ತಿಗಳು ಅತಿ ಮಾರ್ಮಿಕವಾಗಿ ನಿರೂಪಿಸುತ್ತವೆ. ಕವಿತೆಯ ಸಮಾಪನ ಹೀಗಿದೆ:

‘ನೀನಿಲ್ಲವೀಗ ದೇಹವ ಹೊತ್ತು,
ಬಂದ ನೇಪಥ್ಯಕ್ಕೆ ಸಂದು ಆಗಿದೆ ಬಹಳ ಹೊತ್ತು;
....
ನೀ ನೆಟ್ಟು ಫಲವುಣದೆ ನಡೆದ ಮರ ಮರದಲ್ಲಿ
ನೂರು ಸಿಹಿ ಎಳನೀರು
ದಾರಿಹೋಕರ ತೃಪ್ತಿ, ತಣ್ಣೆಳಲ ಸೂರು.
ಕೇಳು ಒಳಗೊಳಗೆ ನಕ್ಕು,
ಕೊನೆಯ ವಾಕ್ಕು:
....
ಹೆಂಬೇಡಿಯಿಲ್ಲ, ಬಹದ್ದೂರ್ ಗಂಡ
ಅಮರತೆ ನಿನ್ನ ಟ್ರೇಡ್‌ಮಾರ್ಕು.’
(ಅದೇ)

ಮುದ್ದಣನ ಕಾಲಮಿತಿ, ಕಾಲಾತೀತತೆ ಎರಡನ್ನೂ ಸಮನ್ವಯಿಸಿ ವಿಶ್ಲೇಷಿಸುವ ಮುಕ್ತ ಛಂದಸ್ಸಿನ ಈ ಕವಿತೆ, ಪಾಶ್ಚಾತ್ಯ ಸಂಪ್ರದಾಯದಲ್ಲಿರುವ Epitaph—ಸಮಾಧಿ ಲೇಖದ ಹಾಗೆ, ಅವನಿಗೊಂದು ಸೂಕ್ತ ಶ್ರದ್ಧಾಂಜಲಿಯಾಗಿದೆ; ಮಾತ್ರವಲ್ಲ, ಕಣ್ಮರೆಯಲ್ಲಿರುವ ಅಥವಾ ಕಣ್ಮುಂದಿರುವ ಹಿರಿಯರನ್ನು ನಿಸಾರ್ ಅಹಮದ್ ಹೇಗೆ ಕುತೂಹಲ, ಶ್ರದ್ಧೆ, ಆದರ ಮತ್ತು ಅಷ್ಟೇ ಚಿಕಿತ್ಸಕ ಭಾವದಿಂದ ಸಮೀಪಿಸುತ್ತಾರೆ ಎಂಬುದಕ್ಕೂ ನಿದರ್ಶನವಾಗಿದೆ.

ಹೊಸ ಕಾಲದ ಕನ್ನಡ ನಾಡು-ನುಡಿಗಳು ಕಂಡ ಒಬ್ಬ ಆಚಾರ್ಯಶ್ರೇಷ್ಠ, ವಿದ್ವದ್ರಸಿಕರೆಂದರೆ ತೀ.ನಂ. ಶ್ರೀಕಂಠಯ್ಯ. `ಕನ್ನಡದ ಕಣ್ವ` ಬಿ.ಎಂ.ಶ್ರೀ.ಯವರ ಪ್ರಿಯ ಶಿಷ್ಯರಾಗಿ, ಅನೇಕಾಂಶಗಳಲ್ಲಿ ಶ್ರೀಯವರ ಉತ್ತರಾಧಿಕಾರಿಯೆಂದೇ ಮುಖ್ಯರಾದ, ತೀ.ನಂ.ಶ್ರೀ. ಹೆಚ್ಚುಕಾಲ ಬದುಕಲಿಲ್ಲ, ಹೆಚ್ಚು ಬರೆಯಲೂ ಇಲ್ಲ. ಆದರೆ ಅವರ ನೆನಪು ಕನ್ನಡಿಗರ ಮನದಲ್ಲಿ ಅಚ್ಚ ಹಸಿರು. ಅವರು ಬರೆದದ್ದೆಲ್ಲ ಅಚ್ಚ ಬಂಗಾರ. `ತೀ.ನಂ.ಶ್ರೀ.` ಎಂಬುದು ಅವರ ಅಕಾಲಿಕ ಮರಣಕ್ಕಾಗಿ ನಿಸಾರ್ ಸುರಿಸಿದ ಕಂಬನಿಯ ಮಣಿಮಾಲೆ:

'ಹೋಗುವೆನೆಂದು ಹೋಗದೆಯೆ ಒದ್ದಾಡಿಸುವುದು
ಇಲ್ಲಿ ಹಲವರ ನೀತಿ;
ಹೇಳದೆಯೇ ಹೊರಟೇ ಹೋಗಿ ಒದ್ದಾಡಿಸುವುದು
ಎಲ್ಲೋ ಕೆಲವರ ರೀತಿ.
ಇದ್ದಾಗ ಇದ್ದಂತೆ ಕಾಣಿಸದೆ, ಕಾಣಿಸದೆ ಇದ್ದಾಗ ಇದ್ದಂತೆ
ಭಾಸವಾದವ ನೀನು ಇದ್ದಕಿದ್ದಂತೆ...'

(ತೀ.ನಂ.ಶ್ರೀ.)

ತೀ.ನಂ.ಶ್ರೀ. ಹಾಗೆ ಮರೆಯಾದರೂ ಬದುಕಿದ್ದಾಗ—

'ಕೆಲವರಿಗೆ ಉಯ್ಯಾಲೆ, ನೆರಳು, ಸುಸ್ವರ ಜೇನು
ಕೆಲವರಿಗೆ ಭಯಭಕ್ತಿ, ಪೂಜೆ, ವಿಧಿ, ವರ ನೀನು'

(ಅದೇ)

ಎಂದು ಅವರನ್ನು ನೆನೆದು, ಕೈಗಳೆರಡನ್ನು ಜೋಡಿಸಿ ಹಣೆಯ ಮೇಲಿರಿಸಿ 'ಚೊಕ್ಕತನ ಪಡೆದಿರುವ ಮನುಜಾಕೃತಿ'ಗೆ ಮುಗಿಯುತ್ತಾರೆ. ಹಾಗೆ ಕೈ ಮುಗಿದು ತೀ.ನಂ.ಶ್ರೀ.ಯವರ ಕನ್ನಡ ಕಾಯಕದ ಸ್ವರೂಪ ಯಾವುದು ಎಂಬುದನ್ನು ವಿವರಿಸಿ—

'ಜೊಳ್ಳ ಕೇರುವ ಜರಡಿ, ಪಾತಾಳಗರಡಿ,
ಹಂಸದಂತೊಮ್ಮೆ, ಇನ್ನೊಮ್ಮೆ ಗಡಿಯಾರ;
ನೀ ಚಿಕಿತ್ಸಕ, ಗ್ರಾಮಫೋನು, ಬಾತ್ಮೀದಾರ.
ಕಾಣುವುದು ಬೀದಿದಾಸನಿಗೂ ಗೊತ್ತು;
ಕಾಣಿಸಿದ್ದನ್ನು ಮತ್ತೆ ಮನಗಾಣಿಸವುದು ಮಾತ್ರ
ನಿನ್ನಂಥವರ ಸೊತ್ತು'

(ಅದೇ)

ಎಂಬುದಾಗಿ ಅವುಗಳನ್ನು ಸುರಿದು ಅಳೆದು ಬೆಲೆ ಕಟ್ಟುತ್ತಾರೆ. 'ತಾನು ತೀ.ನಂ.ಶ್ರೀ. ಯವರನ್ನು ಕಂಡದ್ದು ಮೂರೇ ಸಲ, ಅವರ ಕಾಲ ಬಳಿ ಕುಳಿತು ಕಲಿತವನಲ್ಲ' ಎಂದು ಹೇಳುತ್ತಲೇ ನಿಸಾರ್ ಅಹಮದ್—

'ದಾರಿ ಕೈಮರ ಊರ ತೋರದಿದ್ದರು ದಾರಿ
ತೋರದಿರುವುದೇ ಹೇಳು?'

(ಅದೇ)

ಎಂದು ಕೇಳುತ್ತಾರೆ—ಹಾಗೆ ದಾರಿ ತೋರಿದ ಪರೋಕ್ಷ ಗುರು ಅವರೆಂದು ಒಪ್ಪಿಕೊಂಡು ಅವರ ಋಣಭಾರವನ್ನು ಹೀಗೆ ನೆನೆಯುತ್ತಾರೆ:

'ಋಣ ಹೊತ್ತು ನಿಂತಾಗ, ಋಣ
ತೀರಿತೆನಲಾರೆ.
ಇರದಿದ್ದರೂ, ನನಗೆ ಇರುಳಲ್ಲಿ ಪ್ರತ್ಯಕ್ಷ
ನಿರ್ಭಯದ ಧ್ರುವತಾರೆ.'

(ಅದೇ)

ಕವಿತೆಯ ಪ್ರತ್ಯೇಕ ಪಂಕ್ತಿಗಳನ್ನು ಇಲ್ಲಿ ಉದ್ಧರಿಸಿಲ್ಲ. ಆದರೆ ಅದನ್ನು ಓದಿ ಮುಗಿಸುತ್ತಿದ್ದಂತೆ ಪಂಕ್ತಿಗಳ ಮಧ್ಯದಿಂದ ಗಂಭೀರ ಸುಂದರವೂ ವಿದ್ವತ್ ಪ್ರಭಾ ಪರಿವೇಷ್ಟಿತವೂ ಆಗಿರುವ ತೀ.ನಂ.ಶ್ರೀ.ಯವರ ಮೂರ್ತಿ ಪ್ರತ್ಯಕ್ಷವಾದಂತೆ ಭಾಸವಾಗುತ್ತದೆ. `ಕಾವ್ಯಾನುಭವ' ಎಂಬುದು ಒಂದಿದ್ದರೆ ಅದು ಹೀಗೆಯೇ ಇರಬಹುದಲ್ಲವೇ?

`ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ' ಎಂಬುದು ಸನಾತನ ಉಕ್ತಿ, ಶಾಶ್ವತ ಸತ್ಯ. ಯಾರೂ ಯಾವುದೂ ಸಾವಿಗೆ ಅತೀತವಲ್ಲ. ಇಂದಲ್ಲ ನಾಳೆ, ನಾಳೆ ಅಲ್ಲ ಅದರಾಚೆ ಜೀವಿಗಳೆಲ್ಲವೂ ಸಾವಿನ ಉರುಳಿಗೆ ಕೊರಳೊಡ್ಡಲೇ ಬೇಕು. ಆದರೆ ಅದು ಬರುವ ರೀತಿ ಮಾತ್ರ ಅನೂಹ್ಯ, ಅತಾರ್ಕಿಕ, ಅವರ್ಣನೀಯ. ಒಮ್ಮೆ ಬೆಕ್ಕಿನಂತೆ ಕಳ್ಳ ಹೆಜ್ಜೆಯಿರಿಸಿ ಬಂದರೆ, ಮತ್ತೊಮ್ಮೆ ಬಿರುಗಾಳಿಯಂತೆ ಅಬ್ಬರಿಸಿ ನುಗ್ಗುತ್ತದೆ. ಬಾಲಕ, ತರುಣ, ವೃದ್ಧ, ರೋಗಿ-ನಿರೋಗಿ-ನಿಶ್ಶಕ್ತ ಎಂಬ ಯಾವುದೇ ತಾರತಮ್ಯವಿಲ್ಲದೆ ಸಾವು ತನ್ನ ನಿರ್ದಯ ಹಸ್ತದಿಂದ ಉಸಿರನ್ನು ಒತ್ತಿ ಹಿಡಿಯುತ್ತದೆ. ನಿಸಾರ್ ಅಹಮದ್‌ರ `ಸಾವಿಗೆ ಅತಿಥಿ ಪರಿಚಯ' ಎಂಬ ಕವಿತೆ ವಿಭಿನ್ನ ಕ್ಷೇತ್ರಗಳಲ್ಲಿ ವಿಖ್ಯಾತರಾಗಿದ್ದ ಇಬ್ಬರು ಮಾನ್ಯರ ಮರಣವನ್ನು ಚಿತ್ರಿಸುತ್ತದೆ—ಅವರೆಂದರೆ ಬಿ.ಜಿ.ಎಲ್. ಸ್ವಾಮಿ ಮತ್ತು ಬಳ್ಳಾರಿ ಬೀಚಿ. ಅವರಿಬ್ಬರೂ ಒಂದೇ ವರ್ಷ—೧೯೮೦ರಲ್ಲಿ—ಒಂದೇ ತಿಂಗಳ ಅಂತರದಲ್ಲಿ, ದೀರ್ಘವಲ್ಲದ ಪ್ರಾಯದಲ್ಲಿ ನಿಧನ ಹೊಂದಿದರು. ಮರಣ ಕಾಲಕ್ಕೆ ಸ್ವಾಮಿಗೆ ಅರುವತ್ತನಾಲ್ಕು ವರ್ಷವಾದರೆ ಬೀಚಿಗೆ ಅರುವತ್ತೇಳು. ಸ್ವಾಮಿಯವರದು ನಿತ್ಯ ಹರಿದ್ವರ್ಣದ ತರುಲತಾಗುಲ್ಮ ಸಮೃದ್ಧವಾದ ಉದ್ಯಾನ ಅಥವಾ ಕಾನನ ಪ್ರದೇಶಗಳಲ್ಲೇ ವಿಹರಣ-ಚಾರಣವಾದರೆ ಬೀಚಿಯವರದು ಬಿತ್ತರದ ನಗೆಯ ಕಡಲಲ್ಲಿ ಹಾಯಿದೋಣಿಯ ವಿಹಾರ. ಸ್ವಾಮಿಯವರ ಅನುಭವ ಸಂಪತ್ತಿನ ವಿತರಣೆಗೂ ಬೀಚಿಯವರ ಹಾಸ್ಯ ರಸಾಯನದ ಸೇವನೆಗೂ ಜನ ನಾ ಮುಂದು, ತಾ ಮುಂದು ಎಂದು ನುಗ್ಗುವ ಕಾಲವೊಂದಿತ್ತು. ಒಂಟಿ ಕಾಲಲ್ಲಿ ಕಾಯುವುದಿತ್ತು. ಆದರೆ ಸಾವು ಅವರಿಗಾಗಿ ಕಾಯಲಿಲ್ಲ. ಇಬ್ಬರನ್ನು ಎತ್ತಿಕೊಂಡೇ ಹೋಯಿತು!

`ಸಾವಿಗೆ ಅತಿಥಿ ಪರಿಚಯ'ವೆಂದ ಕವಿತೆಯಲ್ಲಿ, ನಿಸಾರ್ ಅಹಮ್ಮದರು ಸ್ವಾಮಿ ಮತ್ತು ಬೀಚಿಯವರ ನಿಧನಕ್ಕಾಗಿ ಗಾಢವಾಗಿ ಸಂತಪಿಸುವರಾದರೂ ಅವರ ಸಾವು ಸಾವಲ್ಲ—ಸಾವಿಗೊಡ್ಡಿದ ಸವಾಲು ಎಂಬ ಭಾವವನ್ನೇ ಬಲವಾಗಿ ಸಮರ್ಥಿಸುತ್ತಾರೆ. ಏಕೆಂದರೆ ಅವರಿಬ್ಬರೂ—

'ಪ್ರಯತ್ನವೇ ಪರಮಾತ್ಮವೆಂದ ಶ್ರದ್ಧಾಳುಗಳು,
ಎಲ್ಲ ಮೌಢ್ಯಕೆ ಸೆಟೆದ ಬಲಾಢ್ಯ ತೋಳುಗಳು
ಬದುಕ ಬಿಮ್ಮನೆ ತಬ್ಬಿ ಘುಮ್ಮೆಂದ ಬಾಳುಗಳು.'

(ಸಾವಿಗೆ ಅತಿಥಿ ಪರಿಚಯ)

ಅಂತಹವರನ್ನು ಸಾವು ಗೆಲ್ಲಲಾರದು. ಅವರೇ, `ಸಾವೂ ಒಂದು ವಿಹಾರ, ವಿನೋದ, ಅದನ್ನು ಕೊಂಚ ಸವಿಯೋಣ' ಎಂದು ಅದರ ಕರೆಗೆ ಓಗೊಟ್ಟಿರಬೇಕು—ಹಾಗಾಗಿ ನಿಸಾರ್ ಅಹಮದ್—

'ಸಾವೇ,
ಹರ್ಷಪಡು ಮನವಾರೆ
ಹೊಸ್ತಿಲಿಗೆ ಬಂದು ನಿಂತಿದ್ದಾರೆ
ನಮ್ಮ ವಿ.ಐ.ಪಿ.ಗಳು
....
ಬರಮಾಡಿಕೊ ಬಳಿಗೆ,
ದಿವಾನಖಾನೆಯ ಒಳಗೆ'
(ಅದೇ)

ಎಂದು ಆ ಅಗವ್ಯರನ್ನು ಪರಿಚಯಿಸಿ, ಅವರನ್ನು ಸ್ವಾಗತಿಸಿ, ಉಪಚರಿಸುವಂತೆ ಸಾವಿಗೆ ಸೂಚಿಸುವುದು ಎಷ್ಟು ಮಾರ್ಮಿಕವಾಗಿದೆ! ಈ ಕವಿತೆಯಲ್ಲಿ ಅವರಿಬ್ಬರ ಸಾವಿಗಾಗಿ ನೋವಿದ್ದರೂ, ಆ ವ್ಯಾಜದಲ್ಲಿ ಇಬ್ಬರ ಹಿರಿಮೆ, ಗೇಯ್ಮೆ, ಒಳ ಬಾಳಿನ ಬಗೆಯನ್ನು ಬಿತ್ತರಿಸಿ ಎತ್ತಿ ಹೇಳಿರುವ ರೀತಿಯೂ ಅಷ್ಟೇ ಮನೋಜ್ಞವಾಗಿದೆ. ಜಾನ್ ಡನ್ (John Donne) ಎಂಬ ಆಂಗ್ಲ ಕವಿಯ, 'Death, be not proud, though some have called thee mighty and dreadful, for thou art not so' ಎಂದು ಸಾವನ್ನು ಕೆಣಕಿ ಅಣಕಿಸುವ ರಚನೆಯೊಂದಿದೆ. ನಿಸಾರರ 'ಸಾವಿಗೆ ಅತಿಥಿ ಪರಿಚಯ'ವೂ ಬೇರೊಂದು ನೆಲೆಯಲ್ಲಿ ಅಂತಹದೇ ಕವಿತೆ ಎನ್ನಬಹುದು.

೪

ಈವರೆಗೆ ನಿಸಾರ್ ಅಹಮದ್ ಅವರು ತಮಗೆ ಅತಿ ಸ್ಮರಣೀಯರೋ ಆದರಣೀಯರೋ ಆತ್ಮೀಯರೋ ಆಗಿದ್ದು ಕಣ್ಣ ಮರೆಗೆ ಸರಿದಿರುವ ಮುದ್ದಣ, ತೀ.ನಂ.ಶ್ರೀ., ಬಿ.ಜಿ.ಎಲ್. ಸ್ವಾಮಿ ಮತ್ತು ಬೀಚಿಯವರನ್ನು ವರ್ಣಿಸಿರುವ ವೈಖರಿಯನ್ನು ಭಾಗಶಃ ಕಾಣಿಸಿದ್ದಾಯಿತು. ಇನ್ನು ಮುಂದಿನದು ವಯೋಮಾನದಲ್ಲಿ ತಮಗಿಂತ ಹೆಚ್ಚಿನ ವರಾದರೂ ಸಮಕಾಲೀನರಾಗಿ ಕಣ್ಣ ಮುಂದಿರುವ, ಅಥವಾ ಕವಿತೆ ಬರೆಯುವ ಕಾಲಕ್ಕೆ ಇದ್ದ ಮೂರು ಮಂದಿ ವಿಶಿಷ್ಟರನ್ನು ನಿಸಾರರ ಸರಸ ಲೇಖನಿ ಹೇಗೆ ವರ್ಣಿಸಿದೆ ಎಂಬುದನ್ನು ನೋಡಬಹುದು. ಅವರೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ಎಸ್. ನರಸಿಂಹಸ್ವಾಮಿ ಮತ್ತು ಜಿ.ಟಿ. ನಾರಾಯಣ ರಾವ್. ನನ್ನದೇ ಕಾರಣಕ್ಕಾಗಿ, ಈ ಮೂವರಲ್ಲಿ ಮಾಸ್ತಿ ಯವರನ್ನು ಕುರಿತ ಕವಿತೆಯನ್ನು ಕೊನೆಯಲ್ಲಿ ಎತ್ತಿಕೊಳ್ಳುತ್ತೇನೆ. ಈಗ ಮಾಸ್ತಿ ಮತ್ತು ಕೆ.ಎಸ್.ನ. ಇಬ್ಬರೂ ಕಣ್ಮರೆಯಾಗಿದ್ದಾರೆ. ಅವರಿಬ್ಬರೂ ಹೇಗೆ ಬದುಕಿದರೆ ಅದಕ್ಕೆ ಬೆಲೆ ಬರುತ್ತದೆ, ಹೇಗೆ ಬರೆದರೆ ಅದು ಕಲೆ ಎನಿಸುತ್ತದೆ ಎಂಬುದಕ್ಕೆ ಒರೆಗಲ್ಲಿನಂತೆ ಇದ್ದವರು.

'ಕೆ.ಎಸ್.ನ.-೭೬' ಎಂಬುದು ಶೀರ್ಷಿಕೆಯೇ ಸಾರುವಂತೆ ಒಂದು ಕಾವ್ಯಾಭಿನಂದನ. ೧೯೪೨ರಲ್ಲಿ ಮೊದಲ ಸಲ ಕಟ್ಟುಗೊಂಡು ನಾಡಿನ ನಾಲ್ದೆಸೆಗಳಲ್ಲೂ ಕಂಪು ಹರಡಿದ 'ಮೈಸೂರು ಮಲ್ಲಿಗೆ'ಯಿಂದ ಮೊದಲಾಗಿ, ೨೦೦೩ರಲ್ಲಿ ಅಚ್ಚಾದ 'ದೀಪ ಸಾಲಿನ ನಡುವೆ' ಎಂಬ ಹದಿನಾರನೆಯ ಸಂಕಲನದ ತನಕ ಸುದೀರ್ಘ ಕಾವ್ಯಯಾತ್ರೆ ಮಾಡಿ ಕೃತಾರ್ಥ ರಾದವರು; ಡಿ.ವಿ.ಜಿ., ಡಿ.ಎಲ್.ಎನ್., ವಿ.ಸೀ., ಎಲ್.ಎಸ್.ಎಸ್., ಜಿ.ಎಸ್.ಎಸ್.,

ಕಣವಿ ಮೊದಲಾದವರಿಂದ ಬಗೆಬಗೆಯ ನಲ್ನುಡಿ-ಮುನ್ನುಡಿ-ಹೊನ್ನುಡಿಗಳ ಸುಗಂಧ ಹಾರವನ್ನು ಮುಡಿಗೇರಿಸಿಕೊಂಡವರು ಕೆ.ಎಸ್. ನರಸಿಂಹಸ್ವಾಮಿ. ಅವರು ಎಪ್ಪತ್ತಾರನ್ನು ಪೂರೈಸಿ, ಎಪ್ಪತ್ತೇಳಕ್ಕೆ ಹೆಜ್ಜೆಯಿರಿಸಿದ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ನಿಯೋಜಿತರಾಗಿದ್ದ ಸಡಗರದಲ್ಲಿ ಕೆ.ಎಸ್.ನಿ. ಅವರು ಒಸಗೆ ಒಪ್ಪಿಸುವ ನೆವದಲ್ಲಿ 'ಮಲ್ಲಿಗೆ ಕವಿ'ಯ ಒಂದು ಸಂಕ್ಷಿಪ್ತ—ಆದರೆ ಸಹೃದಯ ಮೌಲ್ಯಾಂಕನವನ್ನೇ ಮಾಡಿದ್ದಾರೆ.

ಒಂದು ನದೀಪಾತ್ರದಲ್ಲಿ ಒಂದೇ ನೀರು ಎರಡು ಸಲ ಹರಿಯುವುದಿಲ್ಲ ಎನ್ನುವುದುಂಟು. ಎಂದರೆ, ನದಿಯ ಹೆಸರು ಎಲ್ಲ ಕಾಲಕ್ಕೂ ಒಂದೇ ಆಗಿದ್ದರೂ ಹರಿಯುವ ನೀರು ಬೇರೆ ಬೇರೆಯಾಗಿರುತ್ತದೆ. ಹಾಗೆಯೇ ಯಾವನೇ ಒಬ್ಬ ಕವಿ ಸಾಹಿತಿ ಅಥವಾ ಕಲಾಕಾರನೂ ಎಲ್ಲ ಕಾಲದಲ್ಲೂ ಒಂದೇ ಚೆಲುವಿನ ಬೆಲೆಯ ಕೃತಿಯನ್ನೆ ಸೃಷ್ಟಿಸಲಾರ; ಕಾಲದಿಂದ ಕಾಲಕ್ಕೆ, ಕೃತಿಯಿಂದ ಕೃತಿಗೆ ತಾರತಮ್ಯ ಇದ್ದೇ ಇರುತ್ತದೆ. ಕಾರಣ ಆತನ ಮನಃಸ್ಥಿತಿ, ದೇಹಸ್ಥಿತಿ ಅಥವಾ ಪರಿಸ್ಥಿತಿ. ಕೆ.ಎಸ್.ನ. ಅವರೂ ಈ ಮಾತಿಗೆ ಅಪವಾದವಲ್ಲ. ಮತ್ತೆ ಮತ್ತೆ ಅವರು 'ಮೈಸೂರು ಮಲ್ಲಿಗೆ'ಯಂತಹ ಮಾಲೆಗಳನ್ನು ಕಟ್ಟಿಲ್ಲವಾದರೂ ಮಲ್ಲಿಗೆಯಂತೆ ಕಾಣುವ—ಆದರೆ ಅದರ ಸುಗಂಧ ಸುಕುಮಾರತೆಗಳಿಲ್ಲದ ಕಾಕಡಗಳ ಚೆಂಡನ್ನು ಹೆಣೆದಿಲ್ಲ. ಕೆ.ಎಸ್.ನ. ಅವರ ಬರೆಹದ ಹೊಗರನ್ನು, ಬದುಕಿನ ಚದುರನ್ನು ಕೆ.ಎಸ್.ನಿ. ಅವರು ಓದುಗನ ಎದೆ ಮುಟ್ಟುವ ಬಗೆಯಲ್ಲಿ ಬಣ್ಣಿಸಿದ್ದಾರೆ—

'ಈಗಿವರ ಸುಪ್ರತಿಭೆ ಬಾನಾಡಿಯಲ್ಲ ದಿಟ,
ಹಾಗೆಂದು ಕೊರಕಲಲಿ ಕುಪ್ಪಳಿಸಿ ಕುಸಿದಿಲ್ಲ;
ಕೊಕ್ಕನ್ನು ಮಸೆ ಮಸೆದು ಬೇರಾಗಗಳ ಹೊಸೆದಿಲ್ಲ.'

(ಕೆ.ಎಸ್.ನ.)

'ಕೆ.ಎಸ್.ನ. ಅವರ ಪದ್ಯದೊಡವೆಗಳಲ್ಲಿ ಚಿನ್ನ ಕಮ್ಮಿಯಿರಬಹುದು. ಆದರೆ, ಹಿತ್ತಾಳೆ ಇಲ್ಲವೇ ಇಲ್ಲ; ಬೆಳ್ಳಿಯೇನೂ ಕಡಿಮೆಯಾಗಿಲ್ಲ'ವೆನ್ನುವ ನಿಸಾರ್ 'ಬರಿಗೊಡಗಳಿಗೆ ಸಮಾಧಾನ ನೀಡುತಿದೆ ಇನ್ನೂ ಹನಿ ತೊಟಕಿರುವ ನಲ್ಲಿ' ಎಂದು ಅವರದೇ ಕವನ ಪಂಕ್ತಿಯನ್ನು ನೆನಪಿಗೆ ತರುತ್ತಾರೆ; ಕಾವ್ಯಪ್ರೇಮಿಗಳ ಎದೆಯ ಗದ್ದುಗೆಗಳಲ್ಲಿ ಕೆ.ಎಸ್.ನ. ಅವರದು ಎಲ್ಲ ಕಾಲದಲ್ಲೂ ಗಟ್ಟಿ ನೆಲೆ ಎಂಬುದನ್ನು ಒತ್ತಿ ಹೇಳಿರುತ್ತಾರೆ!

ಕೆ.ಎಸ್.ನ. ಅವರಿಗೆ ಎಪ್ಪತ್ತಾರು ತುಂಬುವ ಕಾಲಕ್ಕಾಗಲೇ ಅವರು ಮೈಸೂರಿನಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ಅದನ್ನು ನಿಸಾರ್ ಅಹಮದ್ ಹೀಗೆ ಪ್ರಸ್ತಾವಿಸಿದ್ದಾರೆ:

'ಸಮ್ಮೇಳನಾಧ್ಯಕ್ಷ ಈ ಇಳಿ ವಯಸ್ಸಿನಲೆ?
ಕವಿಗಿಲ್ಲ ಇದರಿಂದ ಹಿರಿಮೆ, ಕುಂದು.
'ಕಿರಿಯರಿಗೆ ಬಡಿಸಿದ ಅನಂತರವೆ ಹಿರಿಯರಿಗೆ
ಊಟವಲ್ಲವೆ ಹೇಳಿ ಹಬ್ಬದಂದು?'

(ಅದೇ)

ಉತ್ತರಾರ್ಧದ ಎರಡು ಪಂಕ್ತಿ ಮಾಸ್ತಿಯರಿಂದ ಪ್ರೇರಿತ. ಅವರಿಗೆ ಜ್ಞಾನಪೀಠ ಪ್ರಶಸ್ತಿ ತಡವಾಗಿ ಬಂತು ಎಂದು ಯಾರೋ ನೊಂದು ನುಡಿದಾಗ ಮಾಸ್ತಿ, ಅವರನ್ನು ಸಂತೈಸಿದ ರೀತಿ ಅದಾಗಿತ್ತು! ನಿಸಾರ್ ಅವರ ಭಾವವನ್ನೂ ಆ ಸಾಲುಗಳು ಚೆನ್ನಾಗಿಯೇ ಸಮರ್ಥಿಸುತ್ತವೆ.

ನಮ್ಮ ಜನ ಒಬ್ಬ ವ್ಯಕ್ತಿಯ ಗುಣ ವಿಶೇಷವನ್ನು ಗುರುತಿಸಿ ಗೌರವಿಸುವಲ್ಲಿ ಕಾಲ ವಿಲಂಬವೋ ಸ್ಥಾನಪಲ್ಲಟವೋ ಆಗುವುದುಂಟು. ಕೆ.ಎಸ್.ನ. ಅವರ ವಿಷಯದಲ್ಲಿ ಹೀಗಾದದ್ದಿದೆ. ಅದು ಹೇಗೂ ಇರಲಿ—

'ಯಾರೆ ಬಂದರು ಮುಂದೆ ಕನ್ನಡಿಗರೆದೆಯೊಳಿಹ
ಪ್ರೇಮಗೀತದ ಪೀಠ ಬಿಟ್ಟುಕೊಡರು!
ಕುವೆಂಪು, ಬೇಂದ್ರೆ, ಪುತಿನ, ಅಡಿಗ ಜೊತೆ ಕೆಎಸ್‌ನ
ನುಡಿಯ ನಿತ್ಯೋತ್ಸವದೊಳೊಂದು ಹೆಸರು.'

(ಅದೇ)

—ಕೆ.ಎಸ್.ನ. ಅವರ ಬಾಳಿನ ಬತ್ತಿ (೨೦೦೪ರಲ್ಲಿ) ಈಗ ನಂದಿದೆ. ಆದರೆ ಅವರ ಹೆಸರಿನ ಬೆಳಕು ನಿಚ್ಚಳವಾಗಿಯೇ ಇದೆ. ಅವರು ಬದುಕಿದ್ದಾಗ ನಿಸಾರ್ ಬರೆದ ಈ ಕವನ ಸ್ತವನ ಅವರು ಇಲ್ಲವಾದಾಗಲೂ ಅಷ್ಟೇ ಉಚಿತವಾಗಿ ಅವರಿಗೆ ಸಲ್ಲುತ್ತದೆ.

ಪ್ರಾಯಃ ಕೆ.ಎಸ್.ನಿ. ಅವರ ಕವಿ ವಿಭೂತಿ ಸ್ತವನಗಳಲ್ಲೆ ದೀರ್ಘತಮವಾದದ್ದು 'ಜಿ.ಟಿ.ಎನ್.' ಎಂಬುದು. ಅದಕ್ಕೆ ಒಂದು ಕಾರಣ ವರ್ಣಿತ ಜಿ.ಟಿ.ಎನ್. ಮತ್ತು ವರ್ಣನಕಾರ ಕೆ.ಎಸ್.ನಿ. ಕಾಲೇಜುಗಳಲ್ಲಿ ಸಹೋದ್ಯೋಗಿಗಳಾಗಿದ್ದದ್ದೂ ಇರಬಹುದೋ ಏನೋ? ಆದರೆ ಅದನ್ನೇ ಮುಖ್ಯವೆಂದು ಹೇಳುವಂತಿಲ್ಲ. ಮುಖ್ಯವಾದದ್ದು ವ್ಯಕ್ತಿಗಳ ಮಧ್ಯದಲ್ಲಿ ಭೌತಿಕ-ಭೌಗೋಲಿಕ ಸಾಮೀಪ್ಯವಲ್ಲ, ಮಾನಸಿಕ ಸಾಮರಸ್ಯ ಮತ್ತು ಪಾರಸ್ಪರ್ಯ. 'ಜಿ.ಟಿ.ಎನ್.' ಎಂಬ ಕವಿತೆಯನ್ನು ಓದುತ್ತಿರುವಂತೆಯೇ ಈ ಅಂಶ ಅರಿವಿಗೆ ಬರುತ್ತದೆ. ಈ ಮೊದಲು ಉಲ್ಲೇಖಿಸಿದ ನಿಸಾರ್ ಅವರ ವ್ಯಕ್ತಿಪರ ಕವಿತೆಗಳಲ್ಲಿ ಒಂದೊಂದರ ಆರಂಭದಲ್ಲೂ ಭಾವ ವಿಸ್ತರಣದಲ್ಲೂ ಉಪಸಂಹರಣದಲ್ಲೂ ಒಂದೊಂದು ನಾವೀನ್ಯ, ಸ್ವಾರಸ್ಯ, ವೈಶಿಷ್ಟ್ಯಗಳಿವೆ. ಅದರಂತೆಯೇ 'ಜಿ.ಟಿ.ಎನ್.' ಸಹ—

'ಬದಲಾಗುವುದಿಲ್ಲ ಜಿ.ಟಿ.ಎನ್.—
ಮೊಹಲ್ಲಕ್ಕೆ ಮೊಹಲ್ಲ, ಮೈಸೂರಿಗೆ ಮೈಸೂರು
....
—ಏನೆಲ್ಲ ಬದಲಾದೀತು;
ಜಿ.ಟಿ.ಎನ್. ನಾಮೆಯ ವೇಳಾಪಟ್ಟಿಯ ನರಾಕಾರ
ಮಾತ್ರ ಯಥಾಪ್ರಕಾರ.'

(ಜಿ.ಟಿ.ಎನ್.)

ಓದುಗನಿಗೆ ಹೀಗೆ ಕಚಗುಳಿಯಿಟ್ಟು ಆತನ ಕುತೂಹಲವನ್ನು ಕೆರಳಿಸಿ ತೊಡಗುವ ಈ ಕವಿತೆ ಶ್ರೀ. ಜಿ.ಟಿ. ನಾರಾಯಣ ರಾಯರ ಭೌತವಿಜ್ಞಾನ ಪ್ರೀತಿ, ಸಂಗೀತ ಸಾಹಿತ್ಯಾಸಕ್ತಿ,

ಜೀವನ ಶ್ರದ್ಧೆ ಮತ್ತು ಮೌಲ್ಯನಿಷ್ಠೆಗಳೆಂಬ ಚತುರ್ಮುಖಿಗಳನ್ನು ತುಂಬ ಸೊಗಸಾಗಿ, ಅಷ್ಟೇ ಆತ್ಮೀಯವಾಗಿ ಕಂಡರಿಸಿ ಕಾಣಿಸುತ್ತದೆ.

ಏಕಪ್ರಕಾರವಾದ ಜೀವನ ವಿಧಾನ, ಕ್ರಿಯಾಶೀಲತೆಗಳನ್ನು ಮೈಗೂಡಿಸಿಕೊಂಡಿರುವ ಜಿ.ಟಿ.ಎನ್. ಅವರನ್ನು ವರ್ಣಿಸುತ್ತಾ ನಿಸಾರ್ ಹೇಳುತ್ತಾರೆ:

'........................
ಈ ಭೂಪನನ್ನ ಒಂದಿಷ್ಟು ತಹಬಂದಿಗೆ ತರೋಣ
ಸಕಾಲೀನಗೊಳಿಸೋಣ'ವೆಂದು,
'ಕಾಲಕೋವಿದ ಕುಂಚ ಹಿಡಿದು
ಕಣ್ಣಿನಡಿ ಕಪ್ಪು, ಕೂದಲಿಗೆ ಬಿಳುಪು
ಬಳಿಯಲು ತೊಡಗಿ—
ಕೂತಲ್ಲಿ ಕೂರದ ಈ ನಡು ವಯಸ್ಕನ ಭರಾಟೆಗೆ
ದೈನಂದಿನ ಜೊತೆ ಮಾಡಿರುವ ಕರಾಟೆಗೆ
.... ತಲೆಕೆಟ್ಟು,
ಕೆಲಸವನ್ನರ್ಧಕ್ಕೆ ನಿಲ್ಲಿಸಿ, ಕುಂಚವನ್ನಲ್ಲೆ ಬೀಳಿಸಿ
ಕಿತ್ತಿದ್ದಾನೆ ಕಾಲ, ಬಡಪಾಯಿ ಕಾಲ!

(ಅದೇ)

ಜಿ.ಟಿ.ಎನ್. ಅವರನ್ನು ಹತ್ತಿರದಿಂದ ಕಂಡವರೆಲ್ಲ ನಿಸಾರ್ ಮಾಡಿರುವ ಈ ವರ್ಣನೆ ಪ್ರತಿ ಪದದಲ್ಲೂ ಯರ್ಥಾರ್ಥವೆಂದು ಒಪ್ಪಿಯೇ ಒಪ್ಪುತ್ತಾರೆ!

ಮುಂದಿನ ಪದ್ಯಪಂಕ್ತಿಗಳಲ್ಲಿ ಜಿ.ಟಿ.ಎನ್.ಅವರ ವ್ಯಕ್ತಿತ್ವ, ಅವರ ವೈಶಿಷ್ಟ್ಯ ಮತ್ತು ವೈಚಿತ್ರ್ಯಗಳೆಲ್ಲವನ್ನು ಬಿಡಿಬಿಡಿಯಾಗಿ ತೊಳೆ ಬಿಡಿಸಿ ಓದುಗರ ಮುಂದಿರಿಸಿ, 'ನಿಮಗೆ ಯಾವುದು ಎಷ್ಟು ಬೇಕೋ ಅದನ್ನು ಆರಿಸಿಕೊಳ್ಳಿ' ಎಂಬ ಸ್ವಾತಂತ್ರ್ಯವನ್ನು ನಿಸಾರ್ ನೀಡುತ್ತಾರೆ. ಕವಿತೆಯ ಅಂತಿಮ ಭಾಗದಲ್ಲಿ ಜಿ.ಟಿ.ಎನ್. ಎಂಬ ಮನುಷ್ಯ ವಿಶೇಷವನ್ನು ನಿಸಾರ್ ಚಿತ್ರಿಸಿ ಅದನ್ನು ವರ್ಣಿಸಿರುವ ರೀತಿ ಸ್ನೇಹಸ್ನಿಗ್ಧವೂ ರಸಾರ್ದ್ರವೂ ಆದದ್ದು!

'ಪಂಕ್ತಿ ಭೇದವನೆಣಿಸದವರು;
ಭೂತ ಗಣವನ್ನು ಕುಣಿಸದವರು.
ಹೆರರಲ್ಲಿ ಸಕ್ಕರೆಯ ತುಣುಕು ಕಂಡರೂ
ಕಬ್ಬಿನ ತೋಟ ಪತ್ತೆ ಹಚ್ಚಿ
ಹತ್ತುಕಡೆ ಸುದ್ದಿ ಬಿತ್ತುವವರು;
ಎತ್ತರಕ್ಕೆತ್ತುವವರು.'

(ಅದೇ)

ಇದು ನೋಡಿ ನಿಜವಾದ ಹೃದಯವಂತಿಕೆ, ಗುಣೈಕ ಪಕ್ಷಪಾತ! 'ಪರಗುಣ ಪರಮಾಣೂನ್ ಪರ್ವತೀ ಕೃತ್ಯ ನಿತ್ಯಂ, ನಿಜಹೃದಿವಿತ ಸಂತಃ ಸಂತಿಃ ಸಂತ ಕಿಯಾತಃ' ಎಂಬ ಸುಂದರವಾದ ಒಂದು ಸುಭಾಷಿತ ಸಂಸ್ಕೃತದಲ್ಲಿದೆ. ಅದಕ್ಕೆ ಜೀವಂತ ನಿದರ್ಶನವಾಗ ಬಲ್ಲವರು ಜಿ.ಟಿ.ಎನ್. ಒಂದು ತಲೆಮಾರಿನ ಹಲವಾರು ಹಿರಿಯರೇ ಹೀಗೆ: ಅವರು ಕವಿ-

ಸಾಹಿತ್ಯ-ಕಲಾಕಾರ-ಭೌತವಿಜ್ಞಾನಿ, ರಾಜನೀತಿಜ್ಞ-ಅಧಿಕಾರೀವರಿಷ್ಠ ಯಾರೇ ಇರಲಿ, ಅವರೆಲ್ಲರ ಸಮಾನ ಗುಣ ವಿಶೇಷವೆಂದರೆ ಇನ್ನೊಬ್ಬರ ದೊಡ್ಡತನವನ್ನು, ಒಳ್ಳೆತನವನ್ನು ಗುರುತಿಸುವುದು ಮಾತ್ರವಲ್ಲ, ಆ ಹೆಚ್ಚುಗಾರಿಕೆಗಳನ್ನು ಮೆಚ್ಚಿ ನುಡಿಯುವ, ಬೆನ್ನುತಟ್ಟುವ, ಹುರಿದುಂಬಿಸುವ ಉದಾರತೆ. ಅಂತಹವರು ಈಗಲೂ ಅಲ್ಲಿ ಇಲ್ಲಿ ಇದ್ದಾರೆ: ಇಲ್ಲವೆಂದಲ್ಲ. ಅವರು ಹೆರವರ ಹಿರಿತನವನ್ನೂ ಒಳ್ಳೆಯತನವನ್ನೂ ಒಪ್ಪುತ್ತಾರೆ, ಮೆಚ್ಚುತ್ತಾರೆ. ಆದರೆ ಹತ್ತುಕಡೆ ಆ ಕುರಿತು ಆಡುವುದು, ಬರೆದು ಕೊಂಡಾಡುವುದು ಕಡಮೆ. ಇನ್ನು ಕೆಲವರಿರುತ್ತಾರೆ—ಅಸೂಯೆ, ಅಸಹನೆಗಳೇ ಅವರ ನೆತ್ತಿಯ ಮೇಲಿನ ಮುತ್ತಿನ ಸತ್ತಿಗೆ. ಸಕ್ಕರೆಯ ಹರಳನ್ನೆಲ್ಲ ತಾವೇ ಚಪ್ಪರಿಸುತ್ತ, ಮಿಕ್ಕವರನ್ನು ತಗ್ಗಿನಿಂದ ತಗ್ಗಿಗೆ ತಳ್ಳುವರು. ಅಂತಹವರನ್ನು ಕುರಿತೂ ನಿಸಾರ್ ಅಹಮದ್ ಬರೆದಿದ್ದಾರೆ. `ವಿಮರ್ಶಕ ಅಂದರಿಕಿ ಮಂಚಿವಾಡಯ್ಯ' ಅದಕ್ಕೊಂದು ಉದಾಹರಣೆ. ಅಂತಹವರ ಪ್ರಸ್ತಾವ ಇಲ್ಲಿ ಬೇಡ—ಹೂವಿನ ದಂಡೆಯಲ್ಲಿ ಎಡೆಯಲ್ಲಿ ಹೂವನ್ನು ಬಿಡದ, ನೆರಳನ್ನು ಕೊಡದ ಜಾಲಿಯ ಮುಳ್ಳನ್ನು ತಂದು ತುರುಕುವವರ ಮಾತೂ ಇಲ್ಲಿ ಬೇಡ.

ಜಿ.ಟಿ.ಎನ್. ಅವರ ಬದುಕಿನ ಸೊಗಸಿನ ರಂಗವಲ್ಲಿಯಲ್ಲಿ ಅಲ್ಲಿ ಇಲ್ಲಿ ಸಲ್ಲದ ಬಣ್ಣದ ಹುಡಿ ಸೇರಿದ್ದನ್ನು ನಿಸಾರ್ ಹೇಳದೇ ಬಿಟ್ಟಿಲ್ಲ. 'ಭಾಷೆ ಜೊತೆ ದೊಂಬರಾಟ—ಕೋಣೆಯಲ್ಲಾಡಿದಂತೆ ಕಾಲ್ಚೆಂಡು'. 'ವ್ಯಾಕರಣಾವಲಂಬಿ ಪದಪಂಕ್ತಿ... ಟೇಪಿನಳತೆಯ ಸಾಲುಗಂಬಗಳ ತಾನರಹಿತ ವಿತಾನ...'. `ನಡುವೆ ಹಾರಿಸುವ ಸ್ವಪ್ರತಾಪದ ಪತಾಕೆ...' ಮೊದಲಾದ ಪಂಕ್ತಿಗಳೆಲ್ಲ ಹೆಚ್ಚು ನೋವಾಗದಂತಹ, ಆದರೆ ಆಶಯವನ್ನು ಅರಿವಿಗೆ ತರುವಂತಹ ಚಿವುಟು ನುಡಿಗಳಾಗಿವೆ. ಅದು ಹಾಗಿರಲಿ, ಜಿ.ಟಿ.ಎನ್. ಕುರಿತು ಕೆ.ಎಸ್.ನಿ. ಅವರ ಸ್ಥಾಯಿಭಾವ ಇದು:

> **'ಎಲ್ಲ ಧಾರಾಳ : ಸಜ್ಜನಿಕೆ, ಅಕ್ಕರಾಸ್ಥೆ, ಮೇಜವಾನಿಯಲ್ಲಿ**
> ....
> **ಬದಲಾಗುವುದಿಲ್ಲ ಜಿ.ಟಿ.ಎನ್.'**
>
> **(ಅದೇ)**

ಈ ಕವಿತೆಯನ್ನು ಓದುತ್ತಿರುವಾಗ ರಕ್ತಮಾಂಸಗಳಿಂದ ಸಜೀವವಾದ, ಕ್ರಿಯಾಶೀಲತೆಯಿಂದ ಜಟಿಲವಾದ, ಬಹುಮುಖತೆಯಿಂದ ಸಮೃದ್ಧವಾದ, ಹಾಗೆಯೇ ಮನುಷ್ಯ ಸಾಮಾನ್ಯ ಗುಣಗಳಿಂದ ಸಹಜವಾದ ಒಂದು ಚಿತ್ರ ಪ್ರತ್ಯಕ್ಷವಾಗಿ ಪರಮಾಪ್ತವೆನಿಸುತ್ತದೆ.

ಪ್ರೊ. ನಿಸಾರ್ ಅಹಮದರ ಕವಿಸ್ತವನ ಗೋಪುರದಲ್ಲಿ ಶೃಂಗಸದೃಶವಾಗಿ ಕವಿ ವಂದನಮಾಲಿಕೆಯಲ್ಲಿ ನಾಯಕರತ್ನವಾಗಿ ಕಂಗೊಳಿಸತಕ್ಕ ಕವಿತೆ `ಮಾಸ್ತಿ'. ಕನ್ನಡಿಗರು ಅಕ್ಕರೆಯಿಂದ `ಅಣ್ಣ'ನೆಂದೂ ಹೆಮ್ಮೆಯಿಂದ 'ಆಸ್ತಿ'ಯೆಂದೂ ಕರೆಯುತ್ತಿದ್ದ, ಜೀವಂತ ದಂತಕತೆಯಾಗಿದ್ದ ಮಾಸ್ತಿಯವರು ಬದುಕಿದ್ದಾಗಲೇ ನಿಸಾರ್ ಈ ಕವಿತೆ ಬರೆದದ್ದು. ಈಗ `ಅಣ್ಣ' ಭೌತಿಕವಾಗಿ ನಮ್ಮೊಂದಿಗಿಲ್ಲ: ಆದರೆ ವಾಙ್ಮಯರೂಪದ 'ಆಸ್ತಿ' ಇದೆ. ಮಾಸ್ತಿಯವರನ್ನು ಕುರಿತು ಹಲವರು ಹಲ ಬಗೆಯಲ್ಲಿ ಬರೆದಿದ್ದಾರೆ. ಅವೆಲ್ಲ ಚೆನ್ನಾಗಿಯೇ ಇವೆ. ಆದರೆ ಭಾರತೀಯ ಸಂಸ್ಕೃತಿಯ ಕೇತನವೂ ಸಂಕೇತವೂ ಆಗಿರುವ ಮಾಸ್ತಿಯವರ

ಸಮಗ್ರ ವ್ಯಕ್ತಿತ್ವವನ್ನು ಕೆಲವೇ ಪಂಕ್ತಿಗಳ ಒಂದು ಚೌಕಟ್ಟಿನಲ್ಲಿ ಅಡಕಗೊಳಿಸುವ 'ಮಾಸ್ತಿ'ಯಂತಹ ಕೃತಿ ಬೇರೆ ಇಲ್ಲ. ಕವಿತೆಯ ಆರಂಭವೇ ಆಕರ್ಷಕ, ನಾಟಕೀಯ—

'ಸದಾ ಇವರು ಹೀಗೆಯೇ—
ಇಲ್ಲೆ, ಗಾಂಧಿ ಬಜಾರಿನ ಹಿರಿ ಚೌಕದೆದುರಲ್ಲೇ,
ಸಿಗರೇಟು ಸೇದುತ್ತಲೊ, ಪತ್ರಿಕೆಯನೋದುತ್ತಲೊ,
ಹರಟುತ್ತಲೊ ಇದ್ದಾಗ ಎದುರಾಗುವರು ಇದ್ದಕ್ಕಿದ್ದಂತೆ
ನಿರ್ದಿಷ್ಟ ಸಮಯದಂತೆ.'

(ಮಾಸ್ತಿ)

ಮಾಸ್ತಿಯವರ ಮುಖವನ್ನು ಈ ರೀತಿ ಪರಿಚಯಿಸುವ ನಿಸಾರ್ ಆಮೇಲೆ ಅವರ ಬಹಿರಂಗದ ಚರ್ಯೆಯನ್ನು, ಅಂತರಂಗದ ಆಳವನ್ನು ಅಳೆಯುತ್ತಾರೆ—

'ವಯಸು ಅನುಭವ ಹೂಡಿ ಸುಖದುಃಖ ಬೆಳೆದ ಮುಖ,
ಹಿಂದೊಮ್ಮೆ ನೆಲಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು;
....
ಅದೇ ಕೊಡೆಯ ಗದೆ.'

(ಅದೇ)

ಆಮೇಲೆ ಹೇಳುತ್ತಾರೆ—

'ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ
ಚಳಿಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ, ಹಗುರಕ್ಕೆ ಸಲ್ಲುತ್ತದೆ.' (ಅದೇ)

ಇದು ನಿಸಾರ್ ಅಹಮದರೊಬ್ಬರದೇ ಮಾತಲ್ಲ, ಮಾಸ್ತಿಯವರ ಹತ್ತಿರ ಹೋದವರೆಲ್ಲರಿಗೂ ಆಗುವುದು ಅದೇ ಅನುಭವ, ಅದೇ ಸುಖ.

ಕವಿತೆಯಲ್ಲಿ ನಾಲ್ಕು ಘಟಕಗಳಿವೆ. ಇವು ಮೇಲುನೋಟಕ್ಕೆ ಅನ್ಯಾನ್ಯವಾಗಿ ತೋರಿದರೂ ಅವುಗಳ ಭಾವದಲ್ಲಿ ಅನ್ಯೋನ್ಯತೆ ಇದೆ; ಅವು ಮಾಸ್ತಿ ವ್ಯಕ್ತಿತ್ವದ ಚತುರಸ್ರತೆಯನ್ನು ಸ್ಥಾಪಿಸುತ್ತವೆ. ಈಗಾಗಲೇ ಮೊದಲ ಘಟಕದ ಕೆಲವು ಪಂಕ್ತಿಗಳನ್ನು ಉಲ್ಲೇಖಿಸಿದೆ. ಅದು ಮಾಸ್ತಿ ಅಂತರಂಗಕ್ಕೆ ಪ್ರವೇಶ ದ್ವಾರ. ಎರಡು ಮತ್ತು ಮೂರನೆಯ ಘಟಕದಲ್ಲಿ ಕಾಣುವುದು ಮುಖ್ಯತಃ ಮಾಸ್ತಿಯವರ ದಿನಚರ್ಯೆಯ ವಿವರ. ಅಲ್ಲಿರುವುದೆಲ್ಲ ಅವರ ಬಾಳ ಹೊತ್ತಗೆಯ ಪದಪಂಕ್ತಿಗಳೇ ಆಗಿವೆ. ಆ ಪಂಕ್ತಿಗಳ ಎಡೆಯಲ್ಲೇ ಅವರ ಬದುಕಿನ ಎಳೆಗಳು ಕಾಣಿಸಿಕೊಳ್ಳುತ್ತವೆ.

ಆಧುನಿಕತೆಯ ಅಬ್ಬರ ಆಡಂಬರಗಳಲ್ಲಿ, ವರ್ತಮಾನದ ಉದ್ವೇಗ ಉದ್ರೇಕಗಳಲ್ಲಿ ತಮ್ಮ ದಾರಿಯನ್ನು ಹುಡುಕಿ ನಡೆಯುವ ಮಾಸ್ತಿ—

'ಕಾಲ ಕುಗ್ಗಿಸಿದೊಡಲು ಕಾಲನೆಳೆಯುತ ಬರಲು
ಈ ವೃದ್ಧರನು ಕಂಡು 'ಅಯ್ಯೊ' ಎಂದಿದ್ದೇನೆ;

ಎನ್ನುತ್ತಿರುವಂತೆಯೆ ಕೈಯ ಮುಗಿದಿದ್ದೇನೆ.'

(ಅದೇ)

ಇಲ್ಲಿ ಮತ್ತೆ ಮಾಸ್ತಿಯವರ ಹಿರಿತನವನ್ನು ನಿಸಾರ್ ಓದುಗನಿಗೆ ಮನಗಾಣಿಸುತ್ತಾರೆ. ಏಕಾಂತವಿರಲಿ, ಲೋಕಾಂತವಿರಲಿ ಎಲ್ಲೆಡೆಗಳಲ್ಲೂ ಏಕಪ್ರಕಾರವಾಗಿರುವುದೇ ನಿಜವಾದ ದೊಡ್ಡತನ. ಮಾಸ್ತಿ ಅಂತಹವರು—ಬರವಣಿಗೆಯ ಬಾಹುಳ್ಯದಿಂದಲೇ ಅಲ್ಲ, ಬದುಕಿನ ಸಮೃದ್ಧಿಯಿಂದಲೂ ಕನ್ನಡದ ಆಸ್ತಿ.

ಮಾಸ್ತಿಯವರಿಗಿದ್ದ ಬಹು ಕಾಲದ ಏಕಮಾತ್ರ ಎನ್ನಬಹುದಾದ ಹವ್ಯಾಸ, ಆಕರ್ಷಣೆ ಎಂದರೆ ಗಾಂಧಿಬಜಾರಿನ ಇಸ್ಪೀಟು ಕ್ಲಬ್. ಮಾಸ್ತಿ ಇಸ್ಪೀಟು ಎಲೆಗಳನ್ನು ತೆರೆದು, ಎಣಿಸಿ, ಗುಣಿಸಿ ಆಡುವುದರಲ್ಲೇ ನಿಸಾರ್ ಅಹಮದ್ ಅವರ ರೀತಿ ನೀತಿ, ಶುಚಿರುಚಿ, ದೃಷ್ಟಿ ಧೋರಣೆಗಳನ್ನೂ ಗುರುತಿಸುತ್ತಾರೆ—

'ಕ್ಲಬ್ಬಿನಲ್ಲಿ ನಿಶ್ಚಿಂತೆಯಾಗಿ ಎಲೆ ಕಲಿಸುವುದು
ಇಪ್ಪತ್ತೆಂಟನಾಡುವುದು—ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು
....
ಇನ್ನಿವರ ಜೀವನ? ಅದು ಕೂಡ ಹೀಗೆಯೆ, ಎಲ್ಲ ಖುಲ್ಲ;
ಖುಷಿಗಷ್ಟೆ ನಘೆಗಲ್ಲ.'

(ಅದೇ)

ಇದು ಇನ್ನೊಂದು ಚಿತ್ರ—ನೀರಲ್ಲಿದ್ದೂ ನೀರ ಅಂಟಿಸಿಕೊಳ್ಳದಿರುವ ಕಮಲ ಪತ್ರದ ನಿರ್ಲಿಪ್ತತೆ; ಹಾಗೆಯೇ My life is My message ಎಂಬ ಗಾಂಧಿಜಿಯ ಮುಕ್ತತೆ—'ಎಲ್ಲ ಖುಲ್ಲ, ಮುಚ್ಚು ಮರೆಯಿಲ್ಲ'—ವಾಕ್ಯಕ್ತಿಯೆಂಬುದು ಅನೂಹ್ಯ, ಅವರ್ಣನೀಯ. ವರ್ಣ, ಪದ, ವಾಕ್ಯ ತಾನಾಗಿ ಏನೂ ಹೇಳುವುದಿಲ್ಲ—ಆದರೆ ಸಮರ್ಥ ಲೇಖಕ ಅವುಗಳಿಂದ ಎಂತೆಂತಹ ಅರ್ಥಗಳನ್ನು ಹಿಂಜಿ ಹಿಂಜಿ ಹೊರಡಿಸುತ್ತಾನೆ! ಕೇವಲ ಒಂದೂವರೆ ಪಂಕ್ತಿಯಲ್ಲಿ ನಿಸಾರ್ ಅಹಮದ್ ಮಾಸ್ತಿಯವರ ಒಳ ಬದುಕಿಗೆ ಎಷ್ಟು ಸೊಗಸಾಗಿ ಇಣುಕು ನೋಟ ಹಾಯಿಸಿದ್ದಾರೆ!

ಮುಂದಿನದು ಇನ್ನಷ್ಟು ಹೃದ್ಯವಾದ ಚಿತ್ರ—ಆಟದ ಉತ್ಸಾಹ ಹೆಚ್ಚಿ, ಆವೇಶ ನೆತ್ತಿಗೇರಿದಾಗ ಕೂಗು ಗದ್ದಲ—(ಒಮ್ಮೊಮ್ಮೆ ಜಗಳವೂ ಆಗುವುದುಂಟು!) ಸಹಜ ತಾನೆ? ಆದರೆ ನಮ್ಮ ಮಾಸ್ತಿಯವರದು ಬೇರೆಯೇ ರೀತಿ:

'ಕೂಗು ಹುಸಿ ಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ:
ಚಣಕ್ಕಷ್ಟು ಚಳಿ ನೂಲು, ಒಂದಿಷ್ಟು ಹೂ ಬಿಸಿಲು,
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು'

(ಅದೇ)

ಇಲ್ಲಿಯ ಮಾತುಗಳೆಲ್ಲ ತುಂಬ ಮುಚ್ಚಟೆಯಾಗಿ, ಮನೆಯಲ್ಲೆಲ್ಲ ಓಡಾಡುವ

ಹಸುಗೂಸಿನಂತೆ ಮನಸ್ಸನ್ನೆಲ್ಲ ತುಂಬಿಕೊಳ್ಳುತ್ತವೆ. ಆಲಿವರ್ ಗೋಲ್ಡ್‌ಸ್ಮಿತ್ ಕವಿ ತನ್ನ 'Deserted Village'ನಲ್ಲಿ ಒಬ್ಬ ಉಪದೇಶಿಯನ್ನು ವರ್ಣಿಸುತ್ತ, ಆತನನ್ನು ಮಿಂಚು ಗುಡುಗು ಗಾಳಿ-ಮಳೆ, ಮಂಜು-ಮೋಡಗಳನ್ನೆಲ್ಲ ಮೀರಿ ಎತ್ತರೆತ್ತರಕ್ಕೆ ತಲೆ ಚಾಚಿರುವ ಪರ್ವತ ಶಿಖರಕ್ಕೆ (As some tall cliff lifts its aweful form...') ಹೋಲಿಸುತ್ತಾನೆ. ನಮ್ಮ ಮಾಸ್ತಿಯವರೂ ಹಾಗೆಯೇ: ಜನ ಸಾಮಾನ್ಯರ ನಡುವಿನಲ್ಲೇ ಇದ್ದಾರೆ, ಸರಳಾತಿ ಸರಳವಾಗಿ ತೋರುತ್ತಾರೆ. ಆದರೆ ತುಂಬ ಎತ್ತರದ ಮನುಷ್ಯ! ನಿಸಾರ್ ಅಹಮದ್ ಇದನ್ನು ಗುರುತಿಸಿದ್ದಾರೆ.

ಕವಿತೆಯ ನಾಲ್ಕನೆಯ ಘಟಕ ಉಪಸಂಹರಣ: ಆಟ ಮುಗಿಸಿದ ಮಾಸ್ತಿ ಮತ್ತೆ ಮನೆಗೆ ಹೊರಡುತ್ತಾರೆ, 'ಕೊಡೆ ತೆರೆದು ಏಕಾಕಿ ಮನೆಯತ್ತ...' (ನಾವೆಲ್ಲರೂ ಒಂದಲ್ಲೊಂದು ದಿನ, ಬಾಳ ಬಯಲಿನ ಆಟ ಮುಗಿಸಿ ಎಂದಿಗೂ ಹಿಂದಿರುಗಿ ಬರಲಾರದ ಮನೆಯತ್ತ ಒಂಟಿಯಾಗಿಯೇ ಹೊರಡಬೇಕಾಗುತ್ತದಲ್ಲ?' 'ಏಕಾಕಿ ಮನೆಯತ್ತ ನಡೆಯುವರು' ಎಂಬುದರಲ್ಲಿರುವ ಅರ್ಥ ಧ್ವನಿಯನ್ನು ಹಾಗೆಯೇ ಗ್ರಹಿಸಬೇಕು.) ಹಾಗೆ ಹೊರಡುವ ಮಾಸ್ತಿ ಮಬ್ಬುಗತ್ತಲಲ್ಲಿ ನೋಡಬಾರದ್ದು, ಕೇಳಬಾರದ್ದು ಎಲ್ಲವನ್ನು ನೋಡುತ್ತ ಕೇಳುತ್ತ—

'ಸಾಗುವರು ಸದ್ದಿರದೆ ಚಂದ್ರನಂತೆ
ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.
....
ನೋಡುತ್ತಲಿದ್ದಂತೆ
....
ಮರೆಯಾಗುವರು ಮಾಸ್ತಿ
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ.'

(ಅದೇ)

—'ಮರೆಯಾಗುವರು ಮಾಸ್ತಿ' ಎಂದಿದ್ದಾರೆ ನಿಸಾರ್. ೧೯೮೬ರಲ್ಲಿ ಅವರು ನಿಜಾರ್ಥದಲ್ಲಿ ಮರೆಯಾಗಿಯೇಬಿಟ್ಟರು—ಸಂದ ಜೀವನದೊಂದು ರೀತಿಯೂ ಸರಳ ಸದಭಿರುಚಿಯ ಖ್ಯಾತಿಯೂ ಹೇಗಿರುತ್ತದೆ ಎಂದು ಕೇಳಿದರೆ ಎರಡೇ ಅಕ್ಷರಗಳ ಒಂದೇ ಉತ್ತರ—ಮಾಸ್ತಿ!

ಪ್ರೊ. ನಿಸಾರ್ ಅಹಮದರ ಈ ಕವಿತೆ ಮಾಸ್ತಿ ಎಂಬ ವ್ಯಕ್ತಿವಿಶೇಷದ ಸುಸಂಸ್ಕೃತ ಜೀವನದ ಸಮ್ಯಗ್ದರ್ಶನವನ್ನು ಮಾಡಿಸುತ್ತದೆ ಎಂಬ ಕಾರಣ ಮಾತ್ರಕ್ಕಾಗಿಯೇ ಅಲ್ಲ, ಅದೊಂದು ಸಾರ್ಥಕ ಕಾವ್ಯ ರಹಸ್ಯವನ್ನು ಗರ್ಭೀಕರಿಸಿಕೊಂಡಿದೆ ಎಂಬ ಕಾರಣಕ್ಕಾಗಿಯೂ ಸ್ಮರಣೀಯವಾಗಿದೆ. ಯಾವುದೋ ಒಂದು ಕಾವ್ಯ ಖಂಡದ, ಇನ್ನು ಯಾವುದೋ ಒಂದು ಗದ್ಯ ಕಥನದ, ಮತ್ತಾವುದೋ ಒಂದು ನಾಟಕ ಪ್ರಭೇದದ ಒಂದು ಪದ, ಒಂದು ಪಂಕ್ತಿ ಅಥವಾ ಒಂದು ವಾಕ್ಯಖಂಡವನ್ನು ಯಾವಾಗ ಜನ ಮತ್ತೆ ಮತ್ತೆ ನೆನೆಯುತ್ತಾರೋ ಯುಕ್ತ

ಸಂದರ್ಭಗಳಲ್ಲಿ ಉದ್ಧರಿಸುತ್ತಾರೋ ಅಂತಹ ಕೃತಿಗಳೇ ಕೃತಾರ್ಥ ಮತ್ತು ಚಿರಕಾಲಿಕ. ಈ ಮಾತು ನಿಸಾರರ 'ಮಾಸ್ತಿ'ಗೂ ಸಲ್ಲುತ್ತದೆ. ಕೃತಿಗಳ ಆಕೃತಿ ಮುಖ್ಯವಲ್ಲ, ಅಂತಃಸತ್ವವೇ ಪ್ರಧಾನ. 'ಮಾಸ್ತಿ'ಯಲ್ಲಿ ಅಂತಹ ಸತ್ವವಿದೆ.

೫

ಕಾವ್ಯ ಅಥವಾ ಸಾಹಿತ್ಯೋದ್ಯಾನಗಳಲ್ಲಿ ಮಲ್ಲಿಗೆ ಮಂದಾರಗಳನ್ನೋ ಕಲ್ಪತರು ಶ್ರೀಗಂಧಗಳನ್ನೋ ಬೆಳೆಯಿಸದೇ ಇದ್ದರೂ ವಾಙ್ಮಯದ ಅನ್ಯ ಕ್ಷೇತ್ರಗಳಲ್ಲಿ ಅಥವಾ ಜೀವನದ ಇತರ ರಂಗಗಳಲ್ಲಿ ಕೃಷಿ ಮಾಡಿ ಜೀವನಕ್ಕೆ ಸಾರ್ಥಕತೆಯನ್ನು, ಸೌಂದರ್ಯವನ್ನು ತಂದು ಕೊಂಡವರನ್ನು, ಹಾಗೆಯೇ ಸಮಾಜಕ್ಕೆ ಒಂದಿಲ್ಲೊಂದು ಬಗೆಯ ಕಲ್ಯಾಣ ಮಾಡಿಸಿದವರನ್ನು ಮತ್ತು ಸರಳ ಸುಂದರವಾಗಿ, ನೀತಿನಿಷ್ಠವಾಗಿ ಜೀವಿಸಿದವರನ್ನು ನಿಸಾರ್ ಅಹಮದ್ ಮೆಚ್ಚಿ ಬರೆದಿದ್ದಾರೆ. ಅದಕ್ಕೆ 'ಕೆಂಪು ತೋಟ ಮತ್ತು ಡಾ. ಎಚ್ಚೆನ್' ಹಾಗೂ 'ಭೀಮಪ್ಪ ಮಾಸ್ತರರು' ಎರಡು ಉದಾಹರಣೆ. ಒಬ್ಬರು ನಾಡಿಗೆಲ್ಲ ಸುಪರಿಚಿತರಾದವರು; ಮತ್ತೊಬ್ಬರು ಅಪರಿಚಿತರು—ನಿಸಾರರ ಗೊತ್ತಿನವರು. ಇಬ್ಬರಲ್ಲೂ ಇದ್ದ ಶ್ರೇಷ್ಠ ಮನುಷ್ಯ ಗುಣಗಳ ಎಳೆಗಳನ್ನು ಹಿಡಿದು ಎರಡು ಸುಂದರವಾದ ಕವಿತೆಗಳನ್ನು ನಿಸಾರ್ ನೆಯ್ದಿದ್ದಾರೆ—

'ಮಾನಾಭಿಮಾನಗಳ ಪ್ರಶ್ನೆಯೆದುರಾದಾಗ
ಮಾಡಿಕೊಂಡದ್ದಿಲ್ಲ ಬಿಲ್‌ಕುಲ್ ರಾಜಿ,
ಹಲವು ಪೊಗದಸ್ತು ಹುದ್ದೆಗಳ ಈ ಮಾಜಿ.
ಹಾಗೆಯೇ, ಹಿರಿಯರೊ ಕಿರಿಯರೊ ಭೇದವೆಣಿಸದೆ,
ಅಂತಸ್ತು ಕುಲ ಆಚಾರ ಕಿಂಚಿತ್ತು ಗಣಿಸದೆ
ಕಂಡಿತೇ ಅವರಲ್ಲಿ ಕಣದಷ್ಟು ಗುಣ,
ಹೊಗಳಿಕೆಯ ಹತ್ತು ಮಣ
ಹೊರೆಸಿದಲ್ಲದೆ ತಣಿವ ಕುಳವಲ್ಲ ಈ ಪರ ಹಿತೈಷಿ!
ಅದಕಿಲ್ಲವೇ ನಾನು ಜ್ವಲಂತ ಸಾಕ್ಷಿ?'

(ಕೆಂಪು ತೋಟ ಮತ್ತು ಡಾ. ಎಚ್ಚೆನ್)

ಇದು ಡಾ. ಎಚ್. ನರಸಿಂಹಯ್ಯನವರ ಸರಳ ಸಹಜ ಸ್ವಭಾವ ಚಿತ್ರಣ—ಹಾಗೆ ಸರಳವಾಗಿದ್ದರೂ :

'ಜಂಗುಳಿಯಲ್ಲಿ ಗುರುತಿಸದಷ್ಟು ಸರಳ ಖಾದಿವ್ರತಸ್ಥ ಎಚ್ಚೆನ್
ಮತ್ತವರ ಬದುಕು ಸದಾ ಕಾಲಕ್ಕು ದೊಡ್ಡ ಕ್ವೆಶ್ಚನ್.'

(ಅದೇ)

ಕವಿಗೇ ಕಾಣದಿದ್ದ ಉತ್ತರ ವಾಚಕನಿಗೆ ಸಿಗುವುದಾದರೂ ಎಲ್ಲಿ?

'ಬಳ್ಳಿಗಾವೆಯ ನಿಸ್ಸಹಾಯ ಇತಿಹಾಸವನು ಕಾಲ—ದುಶ್ಶಾಸನನ ಹಿಡಿಯಿಂದ ನಸು ಬಿಡಿಸಿ ಕಂಬನಿಯ ತೊಡೆದಿದ್ದ ಭೀಮಪ್ಪ ಮಾಸ್ತರರು' (ಮಹಾಭಾರತವನ್ನು ನೆನಪಿಗೆ ತರುವ ಈ ರೂಪಕ ಮನೋಜ್ಞವೂ ಮನನೀಯವೂ ಆದದ್ದ: ಬಳ್ಳಿಗಾವೆಯ ಇತಿಹಾಸವೇ ದ್ರೌಪದಿ; ನಿರ್ದಯ ಕಾಲವೇ ದುಶ್ಶಾಸನ, ಕವಿಮಿತ್ರ ಭೀಮಪ್ಪ ಮಾಸ್ತರರೇ ಮಹಾಭಾರತದ ಭೀಮ!)

ಅನಾಯಾಸವಾಗಿ ಮರಣ ಹೊಂದಿದಾಗ ಕವಿ ಕರೆಯುವ ಕಂಬನಿ ಇದು:

'ಕಲಿಕೆ ಕದಡದ ನಿಮ್ಮ ಅಕುಶಲ ಹಳ್ಳಿತನ,
ನಂಟಸ್ತಿಕೆಯ ಅಡೆಯಲ್ಲಿ ಬಗೆ ಪಡೆದ ಹಣ್ಣುತನ,
'ಸಜ್ಜನಿಕೆ' ಶಬ್ದಕ್ಕೆ ರೂಢಿವಾಕ್ಯಕ್ಕಿಂತ
ಮಿಗಿಲರ್ಥ ದಕ್ಕಿಸಿದ ಬಾಳ ದಾರಿ
—ಇವ ನೆನೆದಾಗ ಕಣ್ಣಾಗುವುವು ಜರತಾರಿ.' (ಭೀಮಪ್ಪ ಮಾಸ್ತರರು)


ಇಂಗ್ಲಿಷಿನಲ್ಲಿ `Simple strokes of sublimity` ಎಂಬ ಪ್ರಯೋಗವಿದೆ. ಭವ್ಯತೆಗೆ ಎತ್ತರ-ತೋರ-ತೂಕಗಳೇ ಅಳತೆಯಾಗಬೇಕಿಲ್ಲ. ಸಣ್ಣದರಲ್ಲೂ ದೊಡ್ಡತನ ಇರಬಹುದು. ವನಸುಮ ನಾಡವರ ಕಣ್ಣಿಗೆ ಬಿದ್ದು ಹೆಸರಾಗದಿದ್ದರೂ ಅದರ ಸೊಂಪು ಕಂಪುಗಳಿಗೇನೂ ಕೊರತೆಯಿಲ್ಲ. ಭೀಮಪ್ಪ ಮಾಸ್ತರರಂತಹವರ ಹೆಸರು ದಾಖಲೆಗಳ ಪುಟ ಸೇರದಿರಬಹುದು. ಆದರೇನಂತೆ?—

'ಬಳ್ಳಿಗಾವೆಯ ಸುತ್ತ ಹತ್ತು ಫಾಸಲೆಗೆಲ್ಲ
ಪರಿಮಳಿಸುತಿದೆ ಇನ್ನೂನು ನಿಮ್ಮ ಹೆಸರು.'

ಗುರುದೇವ ಠಾಕೂರರು ಬಣ್ಣಿಸಿದ `ಮಣ್ಣು ಹಣತೆ`ಯಂತಹ ಬದುಕು ಭೀಮಪ್ಪ ಮಾಸ್ತರರದು.

೬

ಈ ವರೆಗೆ ಉಲ್ಲೇಖಿಸಿದ, ಅವಲೋಕಿಸಿದ ನಿಸಾರ್ ಅಹಮದರ ವ್ಯಕ್ತಿವರ್ಣನೆ-ಕವಿಸ್ತವನಗಳಿಂದ ಒಂದು ಮಾತು ಸ್ಪಷ್ಟವಾಗುತ್ತದೆ : ಕಣ್ಣ ಮುಂದಿಲ್ಲದವರನ್ನು ಕುರಿತು ಮಾತಾಡುವಾಗ ಅಥವಾ ಬರೆಯುವಾಗ ನಾವು ತೋರುವ ಧಾರಾಳತನ, ಕಣ್ಣ ಮುಂದಿರುವವರ ಮಾತು ಬಂದಾಗ ಒಮ್ಮೊಮ್ಮೆ ಕಡಮೆಯಾಗುತ್ತದೆ. ಯಾವುದೋ ಲೋಪ ದೋಷ ನ್ಯೂನತೆಯನ್ನು ಎತ್ತಿ, ಇರುವುದಕ್ಕಿಂತ ದೊಡ್ಡದಾಗಿ ಹಿಗ್ಗಿಸಿ ಹೇಳುವುದರಲ್ಲಿ ನೆಮ್ಮದಿ ಕಾಣುವವರೂ ಇರುತ್ತಾರೆ. ಮೆಚ್ಚು ಮಾತು ಹೇಳುವುದಕ್ಕೆ ಹೊರಟು ಅಲ್ಲಲ್ಲಿ ಚುಚ್ಚುವುದೂ ಉಂಟು. ಅತಿ ಪ್ರಶಂಸೆಯತ್ತ ವಾಲದಂತೆ ಪೂರ್ವಾಗ್ರಹವೆಂಬ ಭಾವಕ್ಕೆ ಎಡೆಯಾಗದಂತೆ ವಸ್ತುಸ್ಥಿತಿಯನ್ನು ಹೃದ್ಯವಾಗಿ ಚಿತ್ರಿಸುವುದೇ ಜಾಣ್ಮೆ, ಕಲೆಗಾರಿಕೆ. ಲೇಖನದ ಆರಂಭದಲ್ಲೇ ಹೇಳಿದಂತೆ ಪ್ರೊ. ಕೆ. ಎಸ್. ನಿಸಾರ್ ಅಹಮದರು ತಮಗಿಂತ ಹಿರಿಯರಿರಲಿ, ಕಿರಿಯರಿರಲಿ ಅಥವಾ ತಮ್ಮದೇ ಹರೆಯದವರಿರಲಿ ಅವರೆಲ್ಲರನ್ನು ತೂಕ ತಪ್ಪದಂತೆ ಹದವಾಗಿ, ಹದುಳವಾಗಿ ಚಿತ್ರಿಸಿದ್ದಾರೆಂಬುದನ್ನು ಈವರೆಗೆ ಉದ್ಧರಿಸಿದ ಕವಿತೆಗಳಿಂದ ಸಹೃದಯರು ಮನಗಾಣಬಹುದು—`ವಚನೇ ಕಾ ದರಿದ್ರತಾ` ಎಂಬುದು ಒಂದು ಸುಸಂಸ್ಕೃತ ಸೂಕ್ತಿ. ಒಂದು ಒಳ್ಳೆಯ ಮಾತಿಗೂ ಬರವೇ? ಇನ್ನೊಬ್ಬರನ್ನು ಕುರಿತು ನಾವು ಆಡುವ ಒಳ್ನುಡಿ, ನಮ್ಮ ಅಂತರಂಗಕ್ಕೆ ಹಿಡಿಯುವ ಕನ್ನಡಿಯೂ ಆಗುತ್ತದೆ. ಅಂಗೈಯಲ್ಲಿ ಹೂ ದಂಡೆಯನ್ನು ಮಿದುವಾಗಿ ಹಿಡಿದಾಗ ಅದರ ಸೊಬಗು ಎದ್ದು ಕಾಣುತ್ತದೆ, ಅದರೊಂದಿಗೆ ಅದು ಹಿಡಿದ ಕೈಯನ್ನೂ ಕಮ್ಮಿಸುತ್ತದೆ.



ಹೇಳಿಕೊಳ್ಳದೆ ನಡೆದ ಸೂಫಿ

♦ ಪ್ರೊ. ಎಸ್. ಜಿ. ಸಿದ್ಧರಾಮಯ್ಯ

ಕವಿ ನಿಸಾರ್ ಎಂದ ತಕ್ಷಣ ಎದೆ ತುಂಬಿ ಕಾಡುವ ಹಾಡು ನಿತ್ಯೋತ್ಸವ; ಜೋಗದ ಸಿರಿ ಬೆಳಕಿನಲ್ಲಿ ಮನದುದಾರ ಮಹಿಮೆಯನ್ನು ಅನುಭವಿಸಿ ಹಾಡಿದ ನಿತ್ಯೋತ್ಸವ. ಈ ಹಾಡು ಕನ್ನಡ ಮಣ್ಣಿನ ಅಂತರಂಗದ ಸೌಂದರ್ಯವನ್ನು ಹಾಗೂ ಅದರ ಅನುಭಾವಿಕ ದೀಪ್ತಿಯನ್ನು ಸುಂದರವೂ ಸುಭಗವೂ ಆದ ಶಬ್ದ ಚಿತ್ರಗಳಲ್ಲಿ ಕಟ್ಟಿಕೊಟ್ಟಿದೆ. ಈ ನುಡಿಯ ದೀಪ್ತಿ ನವೋದಯದ ನೆಲದ ಮೂಲದಿಂದ ಒಡಮೂಡಿದ ಭಾವ ವಿಶೇಷವಾಗಿದೆ.

ಇದೇ ಕವಿಯ ಇನ್ನೊಂದು ಜನಪ್ರಿಯ ಹಾಡು 'ಕುರಿಗಳು ಸಾರ್ ಕುರಿಗಳು.' ಭಾರತದ ಪ್ರಜಾಪ್ರಭುತ್ವವನ್ನು ವೈಚಾರಿಕ ಎಚ್ಚರದಲ್ಲಿ ವಿಡಂಬಿಸಿದ ಕವನವಿದು. ನವ್ಯದ ವೈಚಾರಿಕ ಭೂಮಿಕೆಯಲ್ಲಿ ಬೇರು ಬಿಟ್ಟು ಬೆಳೆದ ಕವನವಿದು. ವಿಡಂಬನೆಯ ಮೊನಚಿನಲ್ಲಿ ಬೌದ್ಧಿಕ ಠೇಂಕೃತಿಯನ್ನು ಮೊಳಗಿಸಿದೆ ಇಲ್ಲಿನ ಶಬ್ದಚಿತ್ರ. ಕವಿ ನಿಸಾರರು ಬರೆಯುತ್ತಿದ್ದುದು ನವ್ಯದ ದಟ್ಟ ಪ್ರಭಾವವಿದ್ದ ಕಾಲಮಾನದಲ್ಲಿ. ಹೀಗಾಗಿ ಅವರ ಬಹುತೇಕ ರಚನೆಗಳು ನವ್ಯದ ಒತ್ತಡದಲ್ಲಿ ಹುಟ್ಟಿಕೊಂಡೇ ಉಸಿರಾಡಿದವು. ಈ ರಚನೆಗಳಲ್ಲಿ ವ್ಯಂಗ್ಯ ವಿಡಂಬನೆಯ ತೀಕ್ಷ್ಣತೆಯ ಜೊತೆಗೆ ಮಾತಿನ ದುಂದು ಕೇಳಿ ಬರುತ್ತದೆ. ಆದರೂ ಅವರಿಗೆ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟ ರಚನೆಗಳೆಂದರೆ ಭಾವಸಂಪನ್ನವೂ ಸುಭಗವೂ ಸುಮಧುರವೂ ಆದ ಭಾವಗೀತೆಗಳು. ಬೌದ್ಧಿಕ ವಲಯ

ದಲ್ಲಷ್ಟೇ ಅಲ್ಲದೆ ಜನ ಸಾಮಾನ್ಯರ ನಡುವೆಯೂ ನಿಸಾರ್ ಅವರನ್ನು ಕವಿಯಾಗಿ ಅಭಿಮಾನದಿಂದ ಪ್ರೀತಿಯಿಂದ ಉಳಿಸಿ ಬೆಳೆಸಿದ ರಚನೆಗಳಿವು.

೧೯೬೦ರಲ್ಲಿ ಪ್ರಕಟವಾದ 'ಮನಸು ಗಾಂಧಿ ಬಜಾರು' ನಿಸಾರ್ ಅವರ ಪ್ರಥಮ ಕವನ ಸಂಕಲನ. ಈ ಸಂಕಲನದ ಮೊದಲನೆಯ ಪದ್ಯದ ಕೆಲವು ಸಾಲುಗಳನ್ನು ನೋಡಿ:

'ಇದು ಸಿಡಿಲಿನ ನುಡಿ; ಇದು ಮಡಿಯದ ನುಡಿ
ಎಂದೆಂದಿಗು ಇದು ಮೊಳಗುವುದು.

ಮಾನವ ಕೋಟಿಯ ಮೂಕ ಸಂಕಟಕೆ
ಮಾತಿನ ಪ್ರತಿನಿಧಿ ನನ್ನ ನುಡಿ

ನಿರ್ಬಲ ಸಾಹಸವಿಹೀನ ಬದುಕಿಗೆ
ಅಭಯದ ಗುಡಿ ಈ ನನ್ನ ನುಡಿ.'

(ನನ್ನ ನುಡಿ)

ಈ ಸಾಲುಗಳನ್ನು ಓದುತ್ತಿದ್ದರೆ ೧೯೭೫ರ ಅನಂತರ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಮೊಳಗಿದ ಬಂಡಾಯದ ದನಿಯಂತೆ ಇವು ಕೇಳಿಸುತ್ತವೆ. ಅಂದರೆ, ೧೯೬೦ರ ಸುಮಾರಿನಲ್ಲಿಯೇ ನಿಸಾರರು ಒಬ್ಬ ಬಂಡಾಯ ಕವಿಯಂತೆ ತಮ್ಮ ಕಾವ್ಯದ ಆಶಯವನ್ನು ಹರಿಯಬಿಟ್ಟಿದ್ದಾರೆ.

ಮೇಲಿನ ಮೂರು ಕಾವ್ಯಚರಣಗಳ ಉದಾಹರಣೆಯ ಹಿನ್ನೆಲೆಯಲ್ಲಿ ಸಹಜವಾಗಿ ಒಂದು ಪ್ರಶ್ನೆ ಹುಟ್ಟುತ್ತದೆ. ಹಾಗಿದ್ದರೆ ಈ ಕವಿಯ ನಿಜವಾದ ನೆಲೆ ಯಾವುದು? ಆದರೆ ಪ್ರಶ್ನೆ ಇದಲ್ಲ. ನಿಜವಾದ ಕವಿ ಯಾವುದೇ ಪಂಥದ ಲಕ್ಷ್ಮಣ ರೇಖೆಯ ಪರಿಧಿಯಲ್ಲಿ ಉಸಿರಾಡಲಾರ. ಹಾಗೆ ಉಸಿರಾಡಿದರೆ ಅಂಥ ಕಾವ್ಯ ಬದುಕಿನ ಬಹುಮುಖೀ ಅನುಭವ ಸೂಕ್ಷ್ಮಗಳನ್ನು ತನ್ನ ಸಂವೇದನೆಯ ಜೀವ ದ್ರವ್ಯವಾಗಿ ಗ್ರಹಿಸಲಾರದು. ಅನುಭವ ಸೂಕ್ಷ್ಮಗಳನ್ನು ಬಲಿಗೊಟ್ಟು ಸಿದ್ಧಾಂತವೇ ವಿಜೃಂಭಿಸಿದರೆ ಕಾವ್ಯ ಘೋಷಣೆಯಾಗುತ್ತದೆ, ಗದ್ಯಕಥನ ಭಾಷಣವಾಗುತ್ತದೆ. ಈ ಮಾದರಿಯ ಬರಹಗಳು ಕನ್ನಡದಲ್ಲಿ ಈಗಾಗಲೇ ಸಾಕಷ್ಟು ವಿಜೃಂಭಿಸಿವೆ. ನಿಸಾರರ ಕಾವ್ಯ, ಸಿದ್ಧಾಂತಕ್ಕೆ ಕಟ್ಟುಬಿದ್ದ ರನ್ನಿಂಗ್ ರೇಸಿನ ಕಾವ್ಯವಲ್ಲ. ಸಿದ್ಧಾಂತಗಳನ್ನು ಇತ್ಯಾತ್ಮಕವಾಗಿ ಸ್ವೀಕರಿಸುತ್ತಲೇ ಬದುಕಿನ ಅನುಭವಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಆಲೋಚಿಸುವ ಸಂವೇದನಾಶೀಲತೆ ನಿಸಾರರದು. ಹೀಗಾಗಿಯೇ ಭಾವಗೀತದ ಆರ್ದ್ರತ್ವ, ನವ್ಯದ ವೈಚಾರಿಕ ನಿಶಿತತ್ವ ಹಾಗೂ ಬಂಡಾಯದ ಸಾಮಾಜಿಕ ಹೊಣೆಗಾರಿಕೆ, ಈ ಮೂರೂ ಅಂಶಗಳು ಅವರ ಕಾವ್ಯದಲ್ಲಿ ಅನುಭವ ಸಹಜ ಗುಣಗಳಾಗಿವೆ.

ಸಮುದಾಯ ಮೂಲದ ಸಂವೇದನೆಗಳ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಮಿತಿಗೊಳಿಸಿ ವಿಮರ್ಶಿಸುವ ಕೆಲವರಿಗೆ ನಿಸಾರ್ ಕಾವ್ಯದಲ್ಲಿನ ಮುಸ್ಲಿಂ ಸಂವೇದನೆಯ ಬಗ್ಗೆ ಅನುಮಾನಗಳಿವೆ. ಇಸ್ಲಾಂ ಧರ್ಮದ ಹಾಗೂ ಸಮುದಾಯದ ನಡುವಿನ ಅಭದ್ರತೆ, ತಲ್ಲಣ, ಆತಂಕ, ಆಕ್ಟೋಪಸ್ ಹಿಡಿತ, ಯಾಜಮಾನ್ಯದ ವೈಪರೀತ್ಯ ಇತ್ಯಾದಿಗಳ ಬಗ್ಗೆ

ನಿಸ್ಸಾರರ ಕಾವ್ಯ ಕುರುಡಾಗಿದೆ ಎಂಬುದು ಇಂಥವರ ವಾದ. ಆರೋಪಿಸಿಕೊಂಡು ಅರ್ಥ ಹುಡುಕುವ ಕಣ್ಣಿಗೆ ಈ ವಾದದ ಸತ್ಯಾಸತ್ಯತೆ ಗೋಚರವಾಗುವ ರೀತಿಯೇ ಬೇರೆ. ಆದರೆ ಕವಿ ಮನೋಧರ್ಮವೆಂಬುದು ಸಂವೇದನೆಯ ಸಾಕ್ಷಿಪ್ರಜ್ಞೆಯಾಗಿ ಕ್ರಿಯಾಶೀಲವಾಗಿರುತ್ತದೆ. ಈ ಸಾಕ್ಷಿಪ್ರಜ್ಞೆಗೆ ವ್ಯಕ್ತಿತ್ವದ ಅಸ್ಮಿತೆ ಎಂಬುದು ಕೇಂದ್ರಶಕ್ತಿಯಾಗಿರುತ್ತದೆ. ನಿಸಾರರ ಅಸ್ಮಿತೆಯ ಹಿನ್ನೆಲೆಯಲ್ಲಿ ಅವರ ಕಾವ್ಯಕ್ಕೆ ಅದರದೇ ಆದ ಸಾಮಾಜಿಕ ಆವರಣವಿದೆ. ಇದನ್ನು ಪರಿಭಾವನೆಗೆ ಒಪ್ಪಿಸಿಕೊಳ್ಳುತ್ತಾ ಅವರ ಕಾವ್ಯ ಓದುಗನ ಜೊತೆ ಹೇಗೆ ಅನುಸಂಧಾನಕ್ಕೆ ಒಳಗಾಗುತ್ತದೆ ಎಂಬುದು ಇಲ್ಲಿನ ಮುಖ್ಯ ವಿಚಾರ.

'ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲಿ ಬೇರೂತ್ತಿದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

'ನಿಮ್ಮ ಮಾತುಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯುತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಲ್ಲೆ ತನಿಖೆ ಮಾಡುವ ಕ್ಷಣವನ್ನ
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.'

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

ಬಳಸಿ ಕ್ಲೀಷೆಯಾಗಿದ್ದರೂ ಇಲ್ಲಿ ನನಗೆ ತೀವ್ರವಾಗಿ ನೆನಪಾಗುವ ವಾಕ್ಯ 'ನೊಂದ ನೋವ ನೋಯದವರೆತ್ತ ಬಲ್ಲರು!' ಅಲ್ಪಸಂಖ್ಯಾತವೆನ್ನುವ ಶಬ್ದವೇ ನಮ್ಮ ನಡುವಿನ ನಿರ್ದಿಷ್ಟ ಸಮುದಾಯದ ಸೂಕ್ಷ್ಮ ಮನಸ್ಸುಗಳ ಮೇಲೆ ಎರಗುವ ಬಾಣದಂತಿರುವಾಗ ಅದು ನೀಡುತ್ತಿರುವ ಅವಮಾನ, ನಿತ್ಯ ಸಂಕಟ ಶಬ್ದಾತೀತವಾದುದು. ಈ ನೆಲ ಕೆಲವರಿಗೆ ಮತ್ತೆ ಮತ್ತೆ ಪುನರ್ಜನ್ಮ ಪಡೆದು ಬರಬಹುದಾದ ಕನಸಿನ ಆದರ್ಶದ ಬೀಡಾದರೆ, ಅಸ್ಪೃಶ್ಯರಿಗೆ ಅವಮಾನದ ಬೇಗುದಿಯಲ್ಲಿ ನಿತ್ಯ ಆತ್ಮಸೂಕ್ಷ್ಮವನ್ನು ಕೊಲ್ಲುವ ಕಸಾಯಿ ಭೂಮಿ. ಹಾಗೆಯೇ ಅಲ್ಪಸಂಖ್ಯಾತವೆನ್ನುವ ಅಭದ್ರತೆಯನ್ನು ಅನುಭವಿಸುವ ಅಪನಂಬಿಕೆಯ ಕಿಚ್ಚಿನಲ್ಲಿ ನಿತ್ಯ ಬೇಯುವ ಮನಸ್ಸುಗಳಿಗೆ ಈ ನೆಲ ಅನುಮಾನದ ಅಗ್ನಿ ದಿಬ್ಯ. ನಿಸಾರರು ಈ ಅನುಮಾನದ ಅಗ್ನಿದಿಬ್ಯವನ್ನು ಬೆಕ್ಕಿನ ಪ್ರತಿಮೆಯ ಮೂಲಕ ತೀವ್ರ ನೋವಿನ ವ್ಯಂಗ್ಯ ಧ್ವನಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ನಿಮ್ಮೊಡನಿದ್ದೂ ನಿಮ್ಮಂತಾಗುವ ಈ ಅಗ್ನಿದಿಬ್ಯವೇ ನಿತ್ಯದ ನಡೆಯಾದರೆ ಪ್ರಜಾಪ್ರಭುತ್ವ, ವ್ಯಕ್ತಿಮೌಲ್ಯ, ಬೌದ್ಧಿಕ ಸ್ವಾತಂತ್ರ್ಯ ಇಂಥವುಗಳೆಲ್ಲ ಅರ್ಥ

ಸತ್ತ ಶಬ್ದಗಳಾಗುತ್ತವೆ. ಸಂಶಯದ ಪಂಜಕ್ಕೆ ಬಲಿಯಾದ ಸಾಚಾತನ, ತಾನು ಸುರಿಸಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳನ್ನು ತನಿಖೆ ಮಾಡುವ ಮೂಲಭೂತವಾದಿ ಮನಸ್ಸುಗಳ ಬಗ್ಗೆ ನಿಸಾರರ ನೈತಿಕ ಆಕ್ರೋಶ ಸಂಕಟದಲ್ಲಿ ತಣ್ಣಗೆ ಸಿಡಿದಿದೆ. ಹುಸಿ ನಗುತ್ತ ಎದುರಿಸುವ ಶಬ್ದಚಿತ್ರದಲ್ಲಿ ಮಡುಗಟ್ಟಿದ ಅಸಹಾಯಕತೆ ಅನುರಣಿಸಿದೆ. 'ಒಂದೆದೆಯ ಹಾಲು ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ?'

'ನರಿ ತೋಳಗಳ ಜೊತೆಯಲ್ಲಿ ಆಡು ಆಕಳ ಬಲಿಯ
ಅನ್ಯಾಯ ಖಂಡಿಸಲೆ?
ಲೇಬಲ್ಲು : ಸ್ವಧರ್ಮ ಮೋಹಿ.'

(ಉಭಯ ಕಷ್ಟ)

ನುಂಗಲೂ ಆಗದ, ಉಗುಳಲೂ ಆಗದ ಈ ಇಕ್ಕಟ್ಟಿನ ವೇದನೆ ಕೆಲವೊಮ್ಮೆ ಅಭದ್ರತೆಯ ಭಯದಲ್ಲಿ ನರಳಿಸುವುದು. ಈ ಆತಂಕ ಭಯವನ್ನು ಸೃಷ್ಟಿ ಮಾಡಿರುವ ಗುಮಾನಿ ಕಣ್ಣುಗಳೇ, ಪರೋಕ್ಷವಾಗಿ ಅಭದ್ರತೆಯನ್ನು ಅನುಭವಿಸುವ ಮನಸ್ಸುಗಳು ಅಪಾಯಕಾರಿಗಳಾಗುವ ಅನಿವಾರ್ಯಕ್ಕೆ ಒಳಗಾಗುವಂತೆ ಮಾಡುತ್ತವೆ. ಇದು ಈ ನೆಲದ ದುರಂತ.

ನಿಸಾರರ ಕಾವ್ಯದಲ್ಲಿ ಸಂಶಯ ಪಿಶಾಚಿಗಳ ಬಗ್ಗೆ ನೈತಿಕ ಸಿಟ್ಟು ತಣ್ಣನೆಯ ತೀವ್ರ ಭಾವದ ದನಿಯಾಗಿ ಮೊಳಗಿದೆ. ವಿಶೇಷವೆಂದರೆ ಇದನ್ನೆಲ್ಲ ನುಂಗಿ ನಂಜುಂಡ ಪ್ರಜ್ಞೆಯ ಶಿವ ಭಾವದಲ್ಲಿ ಬೆಳೆದ ವ್ಯಕ್ತಿತ್ವ ನಿಸಾರರದು.

'ಅತಿ ಸನಾತನ ನಿನ್ನ ತಲೆಮಾರ ಚಾರಿತ್ರ್ಯ
ನಿನ್ನಲ್ಲಿ ಜನಿಸಿದುದೆ ನನಗೆ ಮಾನ.
ನಿರ್ಬಲನೆ ಇರಬಹುದು; ಕೇರಿದೊಡನೆಯೆ ತೂರಿ
ಬಿದ್ದ ಜಳ್ಳೇನಲ್ಲ; ಜೀವ, ಧನ್ಯ.

'ಮಣ್ಣಿನಲಿ ಬೇರಿರುವ ಸ್ಮಂತಿಕೆಯೆ ಸಾಕೆನಗೆ
ಹೆಮ್ಮೆಯಲಿ ತುಳಿಯುವೆನು ನನ್ನ ದಾರಿ.

'ನಿನ್ನಮರ ಸಂತಾನದಲ್ಲಿ ದೊರಕಿದೆ ಸ್ಥಾನ;
ಅದಕಿಂತ ಬೇಕಿಲ್ಲ ಬೇರೆ ಮಾನ.'

(ಅತಿ ಸನಾತನ)

ಇದು ಈ ನೆಲದ ಹಾಡು; ನಿತ್ಯೋತ್ಸವದ ಕವಿ ಭಾವ ಧನ್ಯತೆಯಲ್ಲಿ ಹಾಡಿದ ಹಾಡು. ಅವರ ಕಾವ್ಯ ಕನ್ನಡ ಪರಂಪರೆಯಲ್ಲಿ ಬೇರೂರಿ ಬೆಳೆದ ಹೊಂಗೆ, ಮಾವಿನ ಕಾವ್ಯ. ಇಲ್ಲಿ ಹೊಂಗೆಯ ತಣ್ಣೆಳಲ ತಂಪು ಇದೆ. ಮಾವಿನ ಒಗರು ಹುಳಿ ತನಿ ರಸದ ರುಚಿ ವಿಶೇಷತೆಗಳಿವೆ. ಪಂಪ ರನ್ನರ ಚಂಪೂವಿನಿಂದ ಹಿಡಿದು ವಚನಕಾರರ ದಾಸರ ಕುಮಾರವ್ಯಾಸ ಲಕ್ಷ್ಮೀಶರ ಭಾವ ಗಂಧತ್ವವನ್ನು ಅರಗಿಸಿಕೊಂಡ ಇವರ ಭಾಷೆ, ಸಮಕಾಲೀನ ಪ್ರಭಾವಗಳ ಪ್ರಮಾಣತನವನ್ನು ಸದ್ಯವೆನ್ನುವ ಸಮುಚಿತತ್ವದಲ್ಲಿ ದುಡಿಸಿಕೊಂಡಿದೆ. ಇದರಿಂದಾಗಿ

ಇಂಗ್ಲಿಷ್ ಉರ್ದು ಪರ್ಷಿಯನ್ ಪದಗಳು ಕನ್ನಡ ಪದಗಳ ಜೊತೆ ಸಂಲಗ್ನಗೊಂಡ ರೀತಿ ಅಪೂರ್ವವಾಗಿದೆ. ಇದು ಕೇವಲ ಪದ ಮೈತ್ರಿಗಳ ಸಂಲಗ್ನವಾಗದೆ ಎರಡು ಸಂಸ್ಕೃತಿಗಳ ಸಹಜ ಸಂಕರವಾಗಿದೆ.

ಉದಾಹರಣೆಗೆ 'ಸಾವಿಗೆ ಅತಿಥಿ ಪರಿಚಯ' ಎಂಬ ಕವನದ ಈ ಕೆಲವು ಸಾಲುಗಳನ್ನು ಗಮನಿಸಿ.

'ಸಾವೇ,
ನಿನಗೀಗ ಸುಗ್ಗಿಯೋ ಸುಗ್ಗಿ—
ಬಲು ನಿಗುರಿರಬೇಕು ಹಿರಿಹಿರಿ ಹಿಗ್ಗಿ.
ಕಪಿಮುಷ್ಠಿಯಲಿ ಬಾಚಿ
ಬಿ.ಜೆ.ಎಲ್., ಬೀಚಿ
ಪ್ರಾಣದ ಚೆಂದನೆಯ ಹೊಂದೆನೆಗಳ
ಕಟಾವು ಮಾಡಿದ್ದೀಯೆ ಅಲಾಬಿ ಫಸಲನ್ನ.
ಅಪರಾಹ್ನದಲೆ ಹೆಮ್ಮೋಡ ಬಳಿದು
ನಂದಿಸಿದ್ದೀಯೆ ಸಂತೋಷಕರ ಬಿಸಿಲನ್ನ

ಅಳಲ ಮೊನೆ ಮಂಚದಲಿ
ನಮ್ಮೆದೆಯ ಬೆತ್ತಲೆ ಕೆಡವಿ
ಚಾಲುಗೊಳಿಸಿದ್ದೀಯೆ ಪಾಶವೀ ಸುಸಿಲನ್ನ.
ಗೆದ್ದೆ ಇವರನ್ನೆಂದು ಮೆರೆದಿದ್ದೀಯೆ ಪೆದ್ದಾಗಿ—
ಬಲ್ಲೆ ಈ ಇಸಮುಗಳ ಕೆಲ ಕಾಲ ಖುದ್ದಾಗಿ
ಅಡಿಗಡಿಗೆ ನಡೆಗೆಟ್ಟು ರುಸುಮನೊಪ್ಪಿಸಿ ನಿನಗೆ
ಅದಬ್ಬಿನಲಿ ನಿಲುವ ನಗೆಗೇಡಿಗರ
ಬಾಳು
ಇವರಿಗೆ ಕುಶಾಲು
ನೀನು, ನಿನ್ನಧಿಕಾರ ಐಲುತನಕೆ ಮಿಸಾಲು.'

(ಸಾವಿಗೆ ಅತಿಥಿ ಪರಿಚಯ)

ಕಟಾವು, ಅಲಾಬಿ, ಚಾಲು, ಇಸಮು, ಖುದ್ದಾಗಿ, ರುಸುಮು, ಅದಬ್ಬಿನಲಿ, ಕುಶಾಲು, ಐಲುತನ, ಮಿಸಾಲು—ಈ ಎಲ್ಲ ಶಬ್ದಗಳು ಕೇವಲ ಅರ್ಥ ವ್ಯಂಜಕ ಶಬ್ದಗಳಾಗಿ ಇಲ್ಲಿ ಪ್ರಯೋಗವಾಗಿಲ್ಲ. ಸಾವಿನ ಮನೆಯೊಳಗಿನ ಸಂಕಟವನ್ನು ಆತ್ಮಾವಲೋಕನದ ಪರಿಯ ಪಿಸು ಮಾತಿನಲ್ಲಿ ಸ್ವಗತಿಸುತ್ತಲೇ ಸಾವಿನ ಬಗೆಗಿನ ನಂಬಿಕೆಗಳನ್ನು ಎರಡು ಧಾರ್ಮಿಕ ಆವರಣದೊಳಗಿನ ಅನುಸಂಧಾನಿತ ಭಾವಧಾರೆಯಾಗಿಸಿದೆ. ಈ ನೆಲದೊಳಗೆ ಮಾನವೀಯ ಸಂಬಂಧಗಳು ಅರಳಬೇಕಾದ ಪರಿಗೆ ನಿಸಾರರ ಕಾವ್ಯ ತೋರಿದ ದಾರಿದೀವಿಗೆಯ ಬೆಳಕು ಇದು. ಒಂದರ್ಥದೊಳಗೆ ಸೂಫಿ ಪಂಥದೊಳಗಿನ ಸಂತರ ದನಿಯ ಜಾಡಿನಲ್ಲಿ ಹೇಳಿಕೊಳ್ಳದೆ ನಡೆದ ಪಯಣವಿದು. ಇಂಥ ಪಾಂಥ ಮನಸ್ಸಿಗೆ ಮತೀಯತೆಯ ಮೈಲಿಗೆ ತಟ್ಟುವುದಿಲ್ಲ.

'ರಂಗೋಲಿಗೆ ವಶವಾಗದಭಾಗ್ಯ
ರಸಿಕತೆಯಿಲ್ಲದ ಪಶುವೊಲಯೋಗ್ಯ.
ಹೊಸ್ತಿಲಿನೆದುರಿದೆ ಪದಕವ ಹೋಲಿ
ವಿಧವಿಧ ವಿನ್ಯಾಸದ ರಂಗೋಲಿ.

ಬೀದಿಯ ತೋಳಿನ ಈ ಬಿಳಿ ಹಚ್ಚೆ
ಯಾವ ಸನಾತನ ಋಷಿಯ ಸದಿಚ್ಛೆ?' (ರಂಗೋಲಿ)

ಎಂದು ರಂಗೋಲಿಯ ಕಲಾತ್ಮಕತೆಯನ್ನು ಸನಾತನ ಭಾವದೊಳಗಿನ ಸೌಂದರ್ಯೋಪಾಸನೆಯ ದರ್ಶನವಾಗಿ ಅನುಭವಿಸುತ್ತದೆ. ಕನ್ನಡಾಂಬೆಯ ಪರಿಕಲ್ಪನೆಯ ಆಕೃತಿ ರೂಪವನ್ನು ಆರಾಧಿಸುತ್ತಾ—

'ಸಿರಿಗನ್ನಡದಧಿದೇವಿ ನಮಸ್ತೆ
ವಾತ್ಸಲ್ಯಾಭಯ ಅಮೃತ ಹಸ್ತೆ.

ಲಕ್ಷ್ಮೀ ಶಾರದೆ ಜೊತೆಯಲಿ ನೆಲಸಿ
ಹರಸಲಿ ಕನ್ನಡ ಜನತೆಯ ಬಲಿಸಿ.' (ಕನ್ನಡಾಂಬೆಗೆ)

ಎಂದು ನುಡಿದೀವಿಗೆಯನ್ನು ನಾಡದೇವಿಗೆ ಬೆಳಗುತ್ತದೆ.

'ವರುಷವೆಲ್ಲ ಕಂಬನಿಯ ಕುಡಿದ, ಬರಿ ದುಡಿವ ಜನವೆ ಬನ್ನಿ
ಹರುಷವಿರದೆ ನೋವನ್ನೆ ತಿಂದ, ಓ! ನೊಂದ ಜನತೆ ಬನ್ನಿ
ಮುಗಿದ ನಗೆಗಳೇ, ನಗದ ಬಗೆಗಳೇ, ಆಸೆ ಹೊತ್ತು ತನ್ನಿ
ಸೊರಗು ದೇಹಗಳ ಕೊರಗು ಮರುಗುಗಳ ಮುಕ್ತಿಗಾಗಿ ಬನ್ನಿ.'
(ಹುಣ್ಣಿಮೆ ದೀಪ)

ಎಂದು, ದುಡಿಯುವ ಜನರ ಒಳಗಿನ ದನಿಯಾಗಿ ಪಿಸುಗುಡುತ್ತದೆ. ಮಾತಿನ ದುಂದುಗಾರಿಕೆ ಇಲ್ಲದೆ ಭಾವ ನಿವೇದನೆಯಲ್ಲಿ ಆಪ್ತವಾಗಿ ಹರಿಯುವ ಈ ಬೆಳಗು, ಕವಿ ನಿಸಾರರ ಕಾವ್ಯದೊಳಗಿನ ಬಯಲ ಬೆಳಗು.

'ನಮ್ಮ ವಿಸ್ಮೃತ ನಿರ್ಗಂಧ ಮತಿಯ ಸುತ್ತಮುತ್ತ
ಎಚ್ಚರದ ಪಂಜಾಗಿ ನೀವು ಧಗಧಗಿಸಿ;
ಅನಿಂದ್ಯ ಪರಿಮಳವಾಗಿ ನಾಡ ಮಗಮಗಿಸಿ.'
(ಅಜ್ಞಾತರು)

ಒಂದು ಕಾಲಕ್ಕೆ ಲಕ್ಷ್ಮೀ ಕಟಾಕ್ಷಿಗಳಿಗಿಂತ ಸರಸ್ವತಿಯ ಅನುಗ್ರಹಕ್ಕೆ ಒಳಗಾದವರಿಗೆ ಸಮಾಜದಲ್ಲಿ ಮನ್ನಣೆಯ ಮೊದಲ ಮಣೆ ಮೀಸಲಾಗಿರುತ್ತಿತ್ತು. ಈಗ ಸರಸ್ವತಿಗೆ ಲಕ್ಷ್ಮೀ ಸಂಸಾರದಲ್ಲಿ ಬಡ ನಂಟಳ ಸ್ಥಾನ. ಸರಸ್ವತಿಯ ಮೂಲಕ ಲಕ್ಷ್ಮಿಯನ್ನು ಅನುನಯಿಸಿಕೊಳ್ಳುವುದಕ್ಕಿಂತ, ಲಕ್ಷ್ಮಿಯ ಮುಖೇನ ವಿದ್ಯಾಸಂಸ್ಥೆಗಳ ದೊಡ್ಡಿಯಿಂದ ಸರಸ್ವತಿಯನ್ನು ಬಲಾತ್ಕಾರದಿಂದ ಹಿಡಿದೆಳೆದು ತರುವುದು ಸುಲಭವೆನ್ನಿಸುತ್ತಿದೆ.

(ವಿದ್ಯೆ ಮತ್ತು ಹಣದ ಪ್ರಭಾವ)



ನಿಸಾರ್ ಅವರ ಕೆಲವು ಗಣನೀಯ ಕವಿತೆಗಳು

♦ ಡಾ. ಎಸ್. ವಿ. ಪ್ರಭಾವತಿ

ನವೋದಯದಲ್ಲೇ ಪ್ರಾರಂಭಿಸಿ ನವ್ಯ ನವ್ಯೋತ್ತರ ಕಾವ್ಯಮಾರ್ಗಗಳನ್ನೂ ಹಾದು ಬಂದ ನಿಸಾರ್ ಅಹಮದರ ಕಾವ್ಯಕೃಷಿ ಐವತ್ತು ವರ್ಷಗಳಿಗಿಂತ ಹೆಚ್ಚಿನದು. ಕನ್ನಡ ಕಾವ್ಯಕ್ಕೆ ಲವಲವಿಕೆ, ಅನುಭವ ವೈವಿಧ್ಯ, ಪ್ರಯೋಗಶೀಲತೆ, ಮಾತುಗಾರಿಕೆಯ ರೋಚಕತೆಗಳನ್ನು ರೂಢಿಸುತ್ತಾ ಬಂದ ನಿಸಾರರು ಆಧುನಿಕ ಕನ್ನಡ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟ ಪ್ರತಿಭೆ. ಜನಪ್ರಿಯತೆ ಶ್ರೇಷ್ಠತೆ ಎರಡೂ ಒಟ್ಟೊಟ್ಟಿಗೇ ಸಾಗಲಾರವು ಎಂಬ ಮಾತಿಗೆ ನಿಸಾರರು ಅಪವಾದವಾಗಿದ್ದಾರೆ. ಕವಿ ಮಾತ್ರವಲ್ಲದೇ ವಿಮರ್ಶಕರಾಗಿಯೂ ವೈಚಾರಿಕ ಗದ್ಯ ಬರಹಗಾರರಾಗಿಯೂ ತಮ್ಮ ಛಾಪು ಮೂಡಿಸಿರುವ ಅವರ ಕಾವ್ಯದ ಕೆಲವು ಮಗ್ಗುಲುಗಳನ್ನು ಮಾತ್ರ ಸ್ಪರ್ಶಿಸುವ ಆಶಯ ಈ ಪ್ರಬಂಧದ್ದಾಗಿದೆ.

ಒಂದು ಕವನ ಸಂಕಲನದಿಂದ ಇನ್ನೊಂದು ಸಂಕಲನಕ್ಕೆ ಬೆಳೆಯುತ್ತಾ ಬಂದಿರುವ ನಿಸಾರರು ತಮ್ಮ ವಿಭಿನ್ನ ಸಂಸ್ಕೃತಿಯ ಉತ್ಕಟ ಅರಿವು, ವೈಜ್ಞಾನಿಕ ದೃಷ್ಟಿಕೋನ, ತೀವ್ರ ಅನುಭವಜನ್ಯ ನೈಜ ಸುಭಗ ಸಂವಹನತೆಯಿಂದ ಕನ್ನಡದ ಇತರ ಕವಿಗಳಿಂದ ಬೇರೆಯಾಗಿ ನಿಲ್ಲುತ್ತಾರೆ. ಹಾಗಾಗಿಯೇ ಅವರನ್ನು ನವೋದಯ ಪಂಥಕ್ಕಾಗಲೀ, ನವ್ಯ ಮಾರ್ಗಕ್ಕಾಗಲೀ ಸೇರಿಸಿ ಕೈ ತೊಳೆದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಕನ್ನಡ ಕಾವ್ಯದಲ್ಲಿ ಮುಕ್ತ ಛಂದದ ಅತಿಯಾದ ಬಳಕೆಯ ಫಲಿತವಾಗಿರುವ

ಏಕತಾನತೆಯನ್ನು ನೀಗಿಸಿ ಲವಲವಿಕೆ ಮತ್ತು ಗೇಯ ವೈವಿಧ್ಯದ ಹಲವು ಅಪೂರ್ವ ಪ್ರಯೋಗಗಳನ್ನು ಮಾಡಿ, ನವೋದಯ ನವ್ಯ ಸಂಪ್ರದಾಯಗಳಿಗೆ ಅನನ್ಯ ಧಾತುಗಳನ್ನು ಕೂಡಿಸಿದವರು ಅವರು. ಆದ್ದರಿಂದ ಪ್ರಾಸ, ಛಂದಸ್ಸು, ಲಯಗಳಲ್ಲಿ ನವೋದಯಕ್ಕೆ ಸೇರುತ್ತಲೇ ಅಂತಸ್ಸತ್ವದಲ್ಲಿ ನವ್ಯಕ್ಕೆ ಸೇರುವ ಅನೇಕ ಕವಿತೆಗಳನ್ನು ಅವರು ರಚಿಸಿದ್ದಾರೆ. ಅಂತಹ ಐದು ಕವಿತಗಳನ್ನು ತೆಗೆದುಕೊಂಡು ವಿಶ್ಲೇಷಣಾತ್ಮಕ ವಿಮರ್ಶೆಗೆ ಒಳಪಡಿಸುವ ನಮ್ಮ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ನಿಸಾರರ ಗೀತಗಳಲ್ಲಿ ವಸ್ತು ಸಮೃದ್ಧಿಯ ಜೊತೆಗೆ ಸಂವೇದನಾಶೀಲತೆ, ಮಾತುಗಾರಿಕೆಯ ಮೋಹಕತೆ ಮತ್ತು ಸಂವಹನದ ಸುಭಗತೆಗಳು ಒಡಮೂಡಿ ಉತ್ಕಟ ಹೃದಯಾನುಭೂತಿಗೆ ಅವಕಾಶ ಮಾಡಿಕೊಡುತ್ತವೆ' ಎಂಬ ಮಾತಿಗೆ ಅವರ 'ನಗ್ನೀರ ನನ್ನ ಹಿಂದೆ', 'ಹಕ್ಕು' ಮೊದಲಾದ ಕವಿತೆಗಳು ಉದಾಹರಣೆಯಾದರೆ, ಸಂಪ್ರದಾಯವನ್ನು ಉಳಿಸಿಕೊಳ್ಳುತ್ತಲೇ ಹೊಸತನವನ್ನು ಸಾಧಿಸುತ್ತಾ ಹೋದ ಕವಿಗಳಲ್ಲಿ ನಿಸಾರರು ತುಂಬಾ ಗಮನಾರ್ಹರು. ಹಾಗೆಂದೇ ಅವರು ಉತ್ತಮ ಕವಿಗಳಾಗಿಯೂ ಜನಪ್ರಿಯರಾಗಿದ್ದಾರೆ. 'ವ್ಯಂಗ್ಯ ಕೂಡಾ ಅವರಲ್ಲಿ ಸಮಸ್ತವನ್ನು ಹಳಿಯುವ ಧಿಕ್ಕಾರದ ದೃಷ್ಟಿಯಾಗದೇ, ನಮ್ಮ ಮಿತಿಗಳನ್ನು ಕಾಣಿಸಿ ಕೊಡುವ ಆರೋಗ್ಯಕರ ಆತ್ಮ ವ್ಯಂಗ್ಯವಾಗಿ ಪರಿಣಮಿಸಿ ಜೀವನವನ್ನು ಶೋಧಿಸಿ ಸಂಸ್ಕರಿಸುವ ಚಿಕಿತ್ಸಕ ದೃಷ್ಟಿಯಾಗಿದೆ' ಎಂಬ ಮಾತಿಗೆ 'ರಂಗೋಲಿ ಮತ್ತು ಮಗ', 'ರಾಮನ್ ಸತ್ತ ಸುದ್ದಿ' ಮೊದಲಾದವು ಉದಾಹರಣೆಯಾಗುತ್ತವೆ. 'ಭಾಷಾ ಪ್ರಯೋಗದಲ್ಲಿ ನಿಸಾರರು ತೋರುವ ಎಚ್ಚರ, ತೂಕ, ಶುದ್ಧಿ—ಇವು ಅವರ ಕಾವ್ಯದ ವಿಶಿಷ್ಟ ಗುಣಗಳು. ಭಾಷೆಯಲ್ಲಿ ಅವರು ತೋರುವ ಕಾಳಜಿ, ಅನುಭವ, ಬದುಕುಗಳ ಬಗ್ಗೆ ಅವರಿಗಿರುವ ಗಾಂಭೀರ್ಯವನ್ನು ಸೂಚಿಸುತ್ತದೆ' ಎಂಬ ಮಾತಿಗೆ 'ನಿತ್ಯೋತ್ಸವ', 'ಮಾಸ್ತಿ' ಮೊದಲಾದ ಕವಿತೆಗಳು ಉದಾಹರಣೆಯಾಗುತ್ತವೆ.

ಬೇರೆ ಬೇರೆ ಕಾರಣಗಳಿಗಾಗಿ ಮುಖ್ಯ ಎನ್ನಿಸುವ ಅವರ ಐದು ಕವಿತೆಗಳು—'ರಂಗೋಲಿ ಮತ್ತು ಮಗ', 'ಅಮ್ಮ, ಆಚಾರ, ನಾನು', 'ಹಕ್ಕು', 'ರಾಮನ್ ಸತ್ತ ಸುದ್ದಿ' ಮತ್ತು 'ಮಾಸ್ತಿ'ಗಳನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ. ಇವುಗಳಲ್ಲಿ ಮೊದಲಿನೆರಡು ಮುಸ್ಲಿಂ ಸಂವೇದನೆಯ ಹಿನ್ನೆಲೆಯಲ್ಲಿ ಭಾಷೆಯ ಚಾಚು, ಬೀಸು, ಕವಿತೆಯ ಕಟ್ಟುವಿಕೆಯಿಂದ ಗಮನ ಸೆಳೆದರೆ ಅನಂತರದ ಎರಡು, ಸಣ್ಣ ವಿಷಯವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತವೆ. ವ್ಯಕ್ತಿ ಚಿತ್ರದ ಪದರು ಪದರಾದ ನವಿರಾದ ಒಳ ಹೊರಗುಗಳು ಕೊನೆಯ ಕವಿತೆಯಲ್ಲಿ ಬಿಚ್ಚಿಕೊಂಡಿವೆ.

'ರಂಗೋಲಿ' ಹಿಂದೂಗಳ ವಿಶಿಷ್ಟ ಸಂಪ್ರದಾಯ. ಬೆಳಗ್ಗೆ ಎದ್ದು ಮನೆಯ ಬಾಗಿಲಿನ ಎದುರು ಶುಚಿಗೊಳಿಸುವ ಜೊತೆಗೆ ಸುಂದರವಾದ ರಂಗೋಲಿ ಇಡುವ ಪದ್ಧತಿಯು ಶುಭ ಅಶುಭ ಕಾರ್ಯ ಕಾರಣ ಸಂಬಂಧವನ್ನೂ ಹೊಂದಿ (ತಿಥಿ ದಿನ ರಂಗೋಲಿ ಇಡುವುದಿಲ್ಲ) ಪವಿತ್ರವೂ ಆಗಿರುವಂಥದು. ತೀರಾ ವಿಭಿನ್ನವಾದ ಎರಡು ಧರ್ಮಗಳ ವಿಚಿತ್ರ ಸಹಯೋಗ ಈ ದೇಶದಲ್ಲಿ ಒಂದು ಸಾವಿರ ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ. ಹಿಂದೂಗಳಿಗೆ

ಪವಿತ್ರವಾದುದು ಇಸ್ಲಾಂಗೆ ನಿಷಿದ್ಧ. ಅವರಿಗೆ ಮುಖ್ಯವಾದುದು ಇವರಿಗೆ ವಿಷಮ. ಆದರೂ ಇಬ್ಬರೂ ಈ ದೇಶದಲ್ಲಿ ಸಹಬಾಳ್ವೆ ನಡೆಸುತ್ತಾರಲ್ಲಾ ಅದೇ ಆಶ್ಚರ್ಯ. ಇಲ್ಲೇ ಹುಟ್ಟಿ ಬೆಳೆದು ಇಲ್ಲಿಯ ನೆಲ, ಜಲ, ಭಾಷೆ, ಪರಿಸರಗಳಿಗೆ ಹೊಂದಿಕೊಂಡು ಬಾಳಿದರೂ ರಂಗೋಲಿ ಹಾಕುವ ಸಂಪ್ರದಾಯ ಮುಸ್ಲಿಮರಲ್ಲಿಲ್ಲ. ಹೀಗಾಗಿ, ಕವಿ ಬಾಲ್ಯದಿಂದಲೂ ರಂಗೋಲಿಯನ್ನು ಗಮನಿಸುತ್ತಾ ಬಂದವರು. ಈ ಕವಿತೆ ಮೂರು ಭಾಗದಲ್ಲಿದೆ. ಮೊದಲ ಭಾಗದ ಮೂರು ಪ್ಯಾರಾಗಳಲ್ಲಿ ರಂಗೋಲಿ ತನ್ನನ್ನು ಆಕರ್ಷಿಸಿದ ಪರಿಯನ್ನು ಕವಿ ವಿವರಿಸಿದ್ದಾರೆ. ರಂಗೋಲಿಯಿಂದಾಗಿ 'ಇಡೀ ಗಲ್ಲಿ ಕಿಲಕಿಲಸಿದಂತೆ' ಅವರಿಗೆ ಅನ್ನಿಸುತ್ತದೆ. ಅದು 'ಚಿತ್ತಾಪಹಾರಿ ಚಿತ್ತಾರ' ಎಂದೂ, 'ಜ್ಯಾಮಿತಿಯ ಗಡಸು ಜಟಿಲ ಸೂತ್ರಗಳಿಗೆ ಪರಿಹಾರ' ಎಂದೂ, 'ಕೋನ, ರೇಖೆ, ಚೌಕ ಮತ್ತು ಸ್ವಸ್ತಿಕ ಮಂಡಲ ಚುಕ್ಕಿ' ಎಂದೂ ಅನ್ನಿಸಿ ಕೊನೆಗೆ 'ಆರ್ಷ ಮಂತ್ರವೊಂದಕ್ಕೆ ಕಲೆಗಾರಿಕೆಯ ರೆಕ್ಕೆ ಮೂಡಿದಂತೆ' ಕಾಣುತ್ತದೆ ಎಂಬ ಆಧ್ಯಾತ್ಮಿಕ ಅರ್ಥವೂ ಬಂದುಬಿಡುತ್ತದೆ. ಈ ವರ್ಣನೆಯಲ್ಲಿ ರಂಗೋಲಿಯ ಸ್ಥೂಲ ಪರಿಚಯದ ಜೊತೆಗೆ ಅಗಾಧ ಮೆಚ್ಚುಗೆಯೂ ಕಂಡುಬರುತ್ತದೆ. ಕವಿತೆಯ ಎರಡನೆಯ ಭಾಗದಲ್ಲಿ ನಾಲ್ಕು ಚಿತ್ರಗಳಿವೆ. ಅದನ್ನು 'ಬೆಳ್ಳನೆಯ ಕಗ್ಗಾಡು' ಎಂದು ಕರೆದು, ಪಕ್ಕದ ಮನೆಯವರು ರಂಗೋಲಿ ಬಿಡಿಸುವುದನ್ನು ಚಾಕ್‌ಪೀಸಿನ ಪುಡಿಯಿಂದ ನಕಲಿಸಲು ಪ್ರಯತ್ನಿಸಿ ತಾಯಿಯಿಂದ ಬೈಸಿಕೊಂಡದ್ದು, ಪಕ್ಕದ ಮನೆಯ ವೇದವಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ತಿಳಿಯದೇ ನಾಚಿ ನೀರಾದದ್ದು, ಔಟ್‌ಹೌಸಿನವರು ರಂಗೋಲಿ ಬಿಡಿಸಿದಾಗ ಅಜ್ಜಿ ಬಿರು ನುಡಿದು ಅದರಿಂದ ತನಗೆ ನೋವಾದದ್ದು; ಕವಿತೆಯ ಮೂರನೆಯ ಭಾಗದಲ್ಲಿ ಕವಿ ಬೆಳೆದು ದೊಡ್ಡವನಾಗಿದ್ದಾನೆ, ಅವನ ಮಗನಿಗೇ ಈಗ ಹತ್ತು ವರ್ಷ. ರಂಗೋಲಿಯ ಬಗ್ಗೆ ಕವಿಗಿದ್ದ ಪೂಜ್ಯಭಾವ, ಕುತೂಹಲ, ಅಚ್ಚರಿ ಈ ಯಾವುದೂ ಮಗನಿಗಿಲ್ಲ. ಅವನಿಗಿರುವುದು ಸಾಮಾನ್ಯ ದರ್ಜೆಯ ಪ್ರಶ್ನಿಸುವ ಕುತೂಹಲ ಮಾತ್ರ. 'ಏಕೆ ಬಿಡಿಸುತ್ತಾರೆ ಇವರು ಈ ಚಕ್ರಬಂಧ' ಎಂಬ ಪ್ರಶ್ನೆ ಮಾತ್ರ. ಅದಕ್ಕೆ ಸರಿಯಾದ ಉತ್ತರ ಕವಿಗೆ ಗೊತ್ತಿಲ್ಲದಿರುವುದರಿಂದಲೇ 'ಅದು ನಮ್ಮ ಪದ್ಧತಿಗೆ ಸಲ್ಲ' ಎಂಬ ಅಸಂಬದ್ಧ ಉತ್ತರ ಕೊಡುತ್ತಾರೆ. ಮಗನಿಗೆ ಸಮಾಧಾನವಾಗದಿದ್ದರಿಂದ 'ಖುರಾನ್‌ನಲ್ಲಿ ಹೇಳಿಲ್ಲ' ಎಂದು ಸಮಾಧಾನ ನೀಡಿದರೂ ಇನ್ನೊಂದು ಪ್ರಶ್ನೆ ಅವನಿಂದ ಬಂದಿದೆ. 'ಮನೆ ಕಟ್ಟಿಸಿದ ಇಸ್ಪಿ, ಹೆಸರು ಮನೆ ಮುಂದೆ ಬರೆಸಿರುವೆಯಲ್ಲ, ಹೇಳಿದೆಯೆ ಖುರಾನಿನಲ್ಲಿ?' ಈ ಪ್ರಶ್ನೆಗೆ ಉತ್ತರಿಸಲಾಗದ ಕವಿಗೆ ಮಗನು ಆತ್ಮಸಾಕ್ಷಿಯ ಕತ್ತು ಹಿಚುಕ ಬಂದವನಂತೆ ಕಾಣುತ್ತಾನೆ. ಮಗನನ್ನು ಗದರುತ್ತಾರೆ. ಆದರೆ ರಂಗೋಲಿ ಅವರ ಮನಸ್ಸಿನಲ್ಲಿ ಪ್ರಶ್ನೆ ಆಶ್ಚರ್ಯ ಎರಡನ್ನೂ ಉಳಿಸುತ್ತದೆ. ಅಕ್ಷರಗಳ ಮೂಲಕವೇ ಪ್ರಾಸದ ಲಯಗಳ ಕಟ್ಟಡ ಕಟ್ಟಿ ನಿಲ್ಲಿಸಿದ ಒಂದು ಸುಂದರವಾದ ಪ್ರತಿಮೆ ಇದು. ಮುಸ್ಲಿಂ ಸಂವೇದನೆಯ ಸೂಕ್ಷ್ಮ ಕಲೆಗಾರಿಕೆಯ ಅಭಿವ್ಯಕ್ತಿಯೂ ಹೌದು.

'ಅಮ್ಮ ಆಚಾರ ನಾನು' ಎಂಬ ಕವಿತೆಯ ಶೀರ್ಷಿಕೆಯೇ ತನ್ನ ವಸ್ತುವನ್ನು ಸ್ಪಷ್ಟಪಡಿಸುತ್ತದೆ. ಅಮ್ಮ ಸಂಪ್ರದಾಯಸ್ಥೆ. ಖುರಾನು, ನಮಾಜು, ರಂಜಾನುಗಳಲ್ಲಿ ಹೇಳ ತೀರದ ಆಸ್ಥೆ. ಮಗ ಈಗಿನ ಕಾಲದವನು. ವಿದ್ಯಾವಂತೆ ಬುದ್ಧಿವಂತೆ ಹೆಂಡತಿ

ಬೇಕೆನ್ನುವವನು. ಬುರ್ಖಾ ತೊಡದೆ ಬೀದಿಯಲ್ಲಿ ತಿರುಗುವ ಮುಸ್ಲಿಂ ಹೆಂಗಸರನ್ನು ಬಜಾರಿ ಎನ್ನುವ ತಾಯಿ ಮಗನಿಗೆ ವಿದ್ಯಾವಂತ ಹೆಣ್ಣನ್ನು ತಂದಾಳೆ? ತಂದೆ ಬುದ್ಧಿವಾದ ಹೇಳಿದ. ಒಪ್ಪದ ತಾಯಿ ಅನ್ನ ನೀರು ಬಿಟ್ಟಳು. ಕೊನೆಗೊಂದು ದಿನ ತಾಯಿ ರಾಜಿಯಾದಳು. ಡಬಲ್ ಪದವೀಧರೆಯ ಜೊತೆ ಮದುವೆಗೆ ಮುಂಚೆಯೇ ಭೇಟಿ ಮಾಡಿ ಮಾತಾಡಿ ಮದುವೆ ಯಾಯಿತು. ಮೊದಲ ಸಲ ತಿರುಗಾಡಲು ಹೊರಟಾಗ ಅವಳ ವರ್ಣನೆಯನ್ನು ಕವಿಯ ಬಾಯಿಂದಲೇ ಕೇಳಬೇಕು :

> **'ತೋಳಿಲ್ಲದ ರವಿಕೆಯುಟ್ಟು, ಭಾರೀ ಸೀರೆಯನ್ನು ಸೊಂಟದ**
> **ಕೆಳಗೆ ನಾಜೂಕಾಗಿ ಕಟ್ಟಿ, ಕೊರಳಿಗೆ ಚಿನ್ನದ ಸರ,**
> **ಕಾಲಿಗೆ ಹೈಹೀಲ್ಡು ಕೆರ, ಕಿವಿಗೆ ಬೆರಳಿಗೆ ಉಂಗುರ ತೊಟ್ಟು**
> **ಲಿಪ್‌ಸ್ಟಿಕ್ಕು ಪೌಡರು ರೂಜು ಬಳಿದು ದೃಷ್ಟಿ ಬೊಟ್ಟಿಟ್ಟು,**
> **ಹೆರಳ ಗೋಪುರದಲ್ಲಿ ಕೂದಲು ಬಿಗಿದು, ಎಡ ಬೈತಲೆ ತೆಗೆದು'**
>
> **(ಅಮ್ಮ, ಆಹಾರ ನಾನು)**

—ಹೀಗಿದ್ದ ಅವಳು 'ಕೊಂಚ ತಡೆಯಿರಿ' ಎಂದು ಒಳಗೆ ಹೋಗಿ ಬಂದು 'ನಡೆಯಿರಿ' ಎಂದಾಗ ಅವನಮ್ಮನ ಬುರ್ಖಾ ತೊಟ್ಟಿದ್ದಳು. ಕವಿಗೆ ತಲೆ ಸುತ್ತಿ ಬಂದು ಮೂಕನಾದ. ಇಲ್ಲಿ ಇಸ್ಲಾಂ ಧರ್ಮವೇ ಸನಾತನತೆ ಮತ್ತು ನೂತನತೆಗಳ ಘರ್ಷಣೆಯ ಹಿನ್ನೆಲೆಯಲ್ಲಿ ನವಿರಾದ ವ್ಯಂಗ್ಯಕ್ಕೆ ಗುರಿಯಾಗಿದೆ. ಒಂದುಕಾಲದಲ್ಲಿ ವಿದ್ಯಾವಂತರಾದಂತೆ ಹಳೆಯ ಸಂಪ್ರದಾಯಗಳಿಗೆ ವಿದಾಯ ಹೇಳಿ ಮುಸ್ಲಿಮರೂ ಆಧುನಿಕರಾಗುತ್ತಿದ್ದಾರೆ ಎಂಬ ಆಶಾವಾದವುಂಟಾಗಿತ್ತು. ಈ ಕವಿತೆ ಗಂಭೀರ ನೆಲೆಯಲ್ಲೇನೂ ಕೆಲಸ ಮಾಡುತ್ತಿಲ್ಲ. ಆದರೂ ಇಸ್ಲಾಂ ಮೂಲಭೂತವಾದ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ವಿದ್ಯಾವಂತ ಅವಿದ್ಯಾವಂತ ಮುಸ್ಲಿಂ ಹೆಂಗಸರೆಲ್ಲರೂ ಬುರ್ಖಾಗಳಿಗೆ ಶರಣು ಹೋಗುತ್ತಿರುವ ಈ ದಿನಗಳಲ್ಲಿ ನಿಸಾರರ ತಿಳಿ ಹಾಸ್ಯದ ಈ ವ್ಯಂಗ್ಯವೂ ಆಪ್ಯಾಯಮಾನವಾಗಿ ಕಾಣಿಸಿ ಎಲ್ಲಿ ಹೋದವು ಆ ಮುಕ್ತ ದಿನಗಳು ಎಂದು ನಿಟ್ಟುಸಿರು ಬಿಡುವಂತಾಗುತ್ತದೆ.

ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಎಂಬ ಸಂವಿಧಾನದ ಪಾಠವನ್ನು ಪ್ರಾಥಮಿಕ ಹಂತದಲ್ಲಿಯೇ ಎಲ್ಲರೂ ಪಠ್ಯವಾಗಿ ಓದಿದರೂ ಪ್ರೌಢರಾದ ಅನಂತರವೂ ಅದರ ಸರಿಯಾದ ಅರ್ಥ ಎಲ್ಲರಿಗೂ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಅಲ್ಲದೇ, ಎಲ್ಲರೂ ಹಕ್ಕುಗಳನ್ನು ಸ್ಥಾಪಿಸುತ್ತಾರೆಯೇ ಹೊರತು ಕರ್ತವ್ಯಗಳ ಕಡೆ ಗಮನ ಕೊಡುವುದಿಲ್ಲ. ಇಂಥದೊಂದು ವಸ್ತುವನ್ನು ಕೇಂದ್ರವಾಗಿಟ್ಟುಕೊಂಡ ಅತ್ಯಂತ ಸರಳವಾದ, ಭಾಷೆಯಲ್ಲಿ ಹೆಚ್ಚು ತೊಡಕಿಲ್ಲದೆ ಸಂವಹನವಾಗುವ ಚಿಕ್ಕ ಕವಿತೆ 'ಹಕ್ಕು.' ಈ ಕವಿತೆಯ ಮುಖ್ಯ ಪಾತ್ರಧಾರಿ ಕವಿಯೊಬ್ಬನೇ. ಇಲ್ಲಿ ಇನ್ನೊಬ್ಬನಿದ್ದರೂ ಅವನು ಕಾಣುವುದಿಲ್ಲ. ಕವಿ ತನ್ನ ಮನೆಯ ಮುಂದೆ ತಾನೇ ಬೆಳೆಸಿರುವ ತೆಂಗಿನ ಮರ ಎತ್ತರಕ್ಕೆ ಬೆಳೆದದ್ದು, ತನ್ನ ನೆರಳನ್ನು ರಸ್ತೆಗೂ ಚಾಚಿದ್ದು ಕವಿಗೆ ಅರಿವಾಗುವುದು ಆ ನೆರಳಿನಲ್ಲಿ ನಿಂತ ಯಾರದೋ ಕಾರನ್ನು ಕಂಡಾಗಲೇ. ಹೀಗೆ ತನ್ನ ಮರದ ನೆರಳಿನಲ್ಲಿ ನಿಂತ ಕಾರನ್ನು ಕಂಡಾಗ, ಅದು ಹಾಗೆ ನಿಂತಿದೆ ಎನ್ನುವ ಕಾರಣದಿಂದ ಕಾರು ತನ್ನದು ಎನ್ನಬಹುದೇ ಎಂಬ ಕೆಟ್ಟ ಕುತೂಹಲದ

ಪ್ರಶ್ನೆಯೊಂದು ಕವಿಯ ಮನಸ್ಸಿನಲ್ಲಿ ಮೂಡಿದಾಗ, ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವ ಸಲುವಾಗಿ ಅವನು ಮುಂದಿನಂತೆ ಊಹೆ ಮಾಡಿಕೊಳ್ಳುತ್ತಾನೆ. ಆ ಕಾರಿನ ಮಾಲೀಕನ ಮನಃಸ್ಥಿತಿಯ ಊಪೆ ಅದು. ಮರದ ನೆರಳು ಇರುವ ಕಾರಣದಿಂದ ರಸ್ತೆಯಲ್ಲಿ ಕಾರು ನಿಲ್ಲುತ್ತದೆ. ಆಗ ವಾಹನ ಸಂಚಾರಕ್ಕೆ ಅಡಚಣೆ. ಹೀಗಾಗಿ ಕತ್ತರಿಸು ಮರವನ್ನು ಎಂದು ಹೇಳಿದರೆ—ಅಂದರೆ, ತನಗೆ ಹಕ್ಕು ಸ್ಥಾಪಿಸುವ ಹಕ್ಕು ಇರುವಂತೆಯೇ ಬೇರೆಯವರಿಗೂ ಇರುತ್ತದೆ. ತೆಂಗಿನ ಮರ ತನ್ನದು ಎನ್ನುವ ಹಕ್ಕು—ಕಾರು ತನ್ನದು ಎನ್ನುವವರೆಗೆ ಹೋಗಬಾರದು. ಆಗ ಕಾರಿನ ಮಾಲೀಕನೂ ಕಾರು ತನ್ನದು ಎಂಬುದರಿಂದ ಮರ ತನ್ನದು ಎನ್ನುವವರೆಗೆ ಬರಬಹುದು—ಈ ಊಹೆಗೇ ಹೆದರಿದ ಕವಿ ಈಗ ಕಾರಿನ ಅಂದವನ್ನು ಮೆಚ್ಚುತ್ತಾ, (ಇದುವರೆಗೆ ಕಾರಿನ ಅಂದ ಅವನ ಗಮನಕ್ಕೆ ಬಂದಿರುವುದಿಲ್ಲ) ಕಾರಿನಲ್ಲಿ ಯಾರೂ ಇಲ್ಲದ್ದನ್ನು ಕಂಡು ನಿಟ್ಟುಸಿರು ಬಿಡುತ್ತಾ ಬೇಗ ಮನೆಯೊಳಕ್ಕೆ ಹೋಗುತ್ತಾನೆ. ಪ್ರಜಾಪ್ರಭುತ್ವದ ಬಹು ಸೌಮ್ಯ ವಿಡಂಬನೆ ಇದು.

'ರಾಮನ್ ಸತ್ತ ಸುದ್ದಿ' ಹಲವು ಹಂತಗಳಲ್ಲಿ ಕೆಲಸ ಮಾಡುವ ಒಂದು ಮುಖ್ಯ ಕವಿತೆ. ಇಲ್ಲಿ ಸರ್ ಸಿ. ವಿ. ರಾಮನ್ ಅಂತಹ ಜಗತ್ತಿಗೇ ಗೊತ್ತಿರುವ (ಎಂದು ನಾವು ಭಾವಿಸುವ) ಶ್ರೇಷ್ಠ ವಿಜ್ಞಾನಿ ಒಂದು ಕಡೆ. ಯಾರಿಗೂ ಗೊತ್ತಿಲ್ಲದ (ಇದೂ ನಮ್ಮ ಭಾವನೆ) ಹನುಮ ಒಂದು ಕಡೆ. ಸರ್ ಸಿ. ವಿ. ರಾಮನ್ ಪ್ರಸಿದ್ಧ ವಿಜ್ಞಾನಿಯಾಗಿ ಗೊತ್ತಿರುವುದು ದೇಶದ ವಿದ್ಯಾವಂತರಿಗೆ ಮಾತ್ರ. ಹಳ್ಳಿಯ ಅವಿದ್ಯಾವಂತ, ಬೇಸಾಯ ಮಾಡುವ ಹನುಮನಿಗೆ ಅವರು ಯಾರು ಎಂದೂ ಗೊತ್ತಿಲ್ಲ, ಅವರು ಸತ್ತಿರುವುದೂ ಗೊತ್ತಿಲ್ಲ, ಏಕೆಂದರೆ ಅವನು ಪತ್ರಿಕೆ ಓದುವುದಿಲ್ಲ. ಅವನ ಕಾಳಜಿಯೆಲ್ಲ ಮಳೆ, ಬೆಳೆ, ಗೊಬ್ಬರ, ಹಳ್ಳಿಯ ಕ್ಷುಲ್ಲಕ ಕಾದಾಟದ ಬಗ್ಗೆ ಅಷ್ಟೇ. ಹ್ಯಾಪ ಮೋರೆಯ ಹೆಂಡತಿ, ಸಿಂಬಳ ಸುರುಕ ಮಕ್ಕಳು, ಗದ್ದೆ, ಧಣಿ, ದೇವರು, ಗ್ರಾಮದೇವತೆ—ಇಷ್ಟೇ. ಈ ಹಂತದಲ್ಲಿ ರಾಮನ್‌ಗೆ ಸಮಾನಾಂತರವಾಗಿ ಕವಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಏಕೆಂದರೆ ಒಬ್ಬ ಪ್ರಜ್ಞಾವಂತ ಕವಿಯಾಗಿ ತಾನು ಕನ್ನಡ, ಗಡಿ, ನದಿ, ಪದ್ಯ, ಪ್ರತಿಷ್ಠೆ ಇವುಗಳ ಬಗ್ಗೆ ಯೋಚಿಸಿದಂತೆ ಹನುಮ ಯೋಚಿಸುವುದಿಲ್ಲ. ಹೀಗಾಗಿ ಇಲ್ಲಿ ರಾಮನ್ ಮತ್ತು ಕವಿ ಒಂದು ಬದಿಯಲ್ಲಿ ನಿಂತರೆ ಹನುಮ ಮತ್ತು ಇದೇ ಗ್ರಾಮದ ಬದುಕು ಇನ್ನೊಂದು ಬದಿಯಲ್ಲಿ ನಿಲ್ಲುತ್ತದೆ. ಇವೆರಡೂ ಪರಸ್ಪರ ಪರಿಚಯವೇ ಇಲ್ಲದ ಬೇರೆ ಬೇರೆ ಪ್ರಪಂಚಗಳು. ಒಂದರ ವಿಷಯ ಇನ್ನೊಂದಕ್ಕೆ ತಿಳಿಯದು. ಆದ್ದರಿಂದಲೇ ರಾಮನ್ ಸತ್ತ ಸುದ್ದಿ ಕೇಳಿ ಕವಿಗೆ ದುಃಖವಾಗಿದೆ. ಆ ದುಃಖವನ್ನು ಹಂಚಿಕೊಳ್ಳಲೂ ಅವರಿಗೆ ಈ ಜಗತ್ತಿನಲ್ಲಿ ಯಾರೂ ಸಿಗುತ್ತಿಲ್ಲ. ಆದ್ದರಿಂದ ರಾಮನ್ ಸತ್ತರೂ ಇಲ್ಲಿ ಸುದ್ದಿಯಾಗುವುದಿಲ್ಲ. ಹಾಗೆಯೇ ತಾನು ಸತ್ತರೂ ಹನುಮ ಸತ್ತರೂ ಸುದ್ದಿಯಾಗುವುದಿಲ್ಲ ಎನ್ನಿಸಿದಾಗ ಸಾವಿನ ಅಗಾಧತೆ ಇಡಿ ಇಡಿಯಾಗಿ ಕವಿತೆಯ ತುಂಬಾ ಆವರಿಸಿಕೊಳ್ಳುತ್ತದೆ. ಬದುಕು, ಸಾವನ್ನು ಜೀರ್ಣಿಸಿಕೊಂಡು ಬಿಡುವ ಈ ಪ್ರಕ್ರಿಯೆ ಕವಿತೆಯ ಕೇಂದ್ರಬಿಂದು. ಇದು ವಾಸ್ತವವೂ ಹೌದು, ಪ್ರತಿಮೆಯೂ ಹೌದು. ಈ ಎರಡೂ ಕವಿತೆಗಳು ('ಹಕ್ಕು' ಮತ್ತು 'ರಾಮನ್ ಸತ್ತ ಸುದ್ದಿ') ಸಾಮಾಜಿಕ ಕಳಕಳಿಯಿಂದ ಹುಟ್ಟಿದವಾದರೂ ಕೊನೆಯಲ್ಲಿ ಅಂತಃಪ್ರಜ್ಞೆಯಲ್ಲಿ ಲೀನವಾಗುವ ರೀತಿ ಅದ್ಭುತವಾಗಿದೆ.

ವ್ಯಕ್ತಿ ಚಿತ್ರಗಳಿಗೇ ಒಂದು ವಿಶಿಷ್ಟ ಪರಂಪರೆಯಿದೆ. ಅದು ಚಿತ್ರಕಲೆಯಾದರೆ ಅದಕ್ಕೊಂದು ಇತಿಹಾಸ, ಶಿಲ್ಪಕಲೆಯಾದರ ಅದಕ್ಕೊಂದು ಇತಿಹಾಸ, ಸಾಹಿತ್ಯದ ಶಿಲ್ಪವಾದರೆ ಅದಕ್ಕೊಂದು ಇತಿಹಾಸ, ಮತ್ತು ಅದು ಪ್ರಬಂಧವಾದರೆ ಒಂದು ತೆರ, ಜೀವನ ಚರಿತ್ರೆಯಾದರೆ ಒಂದು ತೆರ, ಕಾದಂಬರಿಯಾದರೆ ಒಂದು ತೆರ, ಪದ್ಯದಲ್ಲಿ ಒಡಮೂಡಿದರೆ ಒಂದು ತೆರ. ಈ ಪ್ರತಿಯೊಂದಕ್ಕೂ ದೀರ್ಘ ಇತಿಹಾಸವಿದೆ. ಇವೆಲ್ಲವುಗಳಲ್ಲಿ ತನ್ನ ಕಲೆಗಾರಿಕೆ, ಸಂಯಮ ಮತ್ತು ಸಂಕ್ಷಿಪ್ತತೆಯಿಂದಾಗಿಯೇ ಗಮನ ಸೆಳೆಯುವಂಥದು ಪದ್ಯದಲ್ಲಿ ರಚನೆಯಾಗುವ ವ್ಯಕ್ತಿ ಚಿತ್ರ. ಪಂಪನು ಆಶ್ರಯದಾತನಾದ ಅರಿಕೇಸರಿಯ ಬಗ್ಗೆ, ರನ್ನನು ಇರಿವ ಬೆಡಂಗ ಸತ್ಯಾಶ್ರಯನ ಬಗ್ಗೆ ಬರೆದುದರಿಂದ ಪ್ರಾರಂಭಿಸಿ ಗೋವಿಂದ ವೈದ್ಯನು ಕಂಠೀರವ ನರಸರಾಜ ಒಡೆಯರ ಬಗ್ಗೆ ಬರೆದಲ್ಲಿಯವರೆಗಿನ ದೀರ್ಘ ಇತಿಹಾಸ ಹೊಂದಿರುವ ಪದ್ಯಗಳ ವ್ಯಕ್ತಿಚಿತ್ರದಲ್ಲಿ ನಿಸಾರ್ ಅಹಮದರು ಮಾಸ್ತಿಯವರ ಬಗ್ಗೆ ಬರೆದ ವ್ಯಕ್ತಿಚಿತ್ರಕ್ಕೆ ಇರುವ ಇನ್ನೊಂದು ವಿಶೇಷತೆಯೆಂದರೆ ಒಬ್ಬ ಕವಿಯು ಇನ್ನೊಬ್ಬ ಕವಿಯ ಬಗ್ಗೆ ಬರೆದಿರುವಂಥದು.

ಸರಳತೆ ಸೌಜನ್ಯಗಳಿಗೆ ಹೆಸರಾದ ಮಾಸ್ತಿ ಅವರನ್ನು ನವ್ಯದ ಸಂದರ್ಭದಲ್ಲಿ ಬರೆಯುತ್ತಿದ್ದ ಕವಿಯೊಬ್ಬರು ಹೇಗೆ ಅರ್ಥಮಾಡಿಕೊಂಡಿದ್ದಾರೆ ಎಂಬುದೇ ಈ ಕವಿತೆಯ ಸ್ವಾರಸ್ಯ. ಈ ಕವಿತೆಯೂ ನಾಲ್ಕು ಭಾಗಗಳಲ್ಲಿದೆ. ಮೊದಲ ಭಾಗದಲ್ಲಿ ಗಾಂಧಿ ಬಜಾರಿನ ಹಿರಿ ಚೌಕದಲ್ಲಿ ಪ್ರತಿದಿನ ತಮ್ಮ ಗವಿಪುರದ ಮನೆಯಿಂದ, ಗಾಂಧಿ ಬಜಾರಿನ ಕ್ಲಬ್ಬಿಗೆ ನಡೆದು ಹೋಗುತ್ತಿದ್ದ ಮಾಸ್ತಿಯವರು ಕವಿಗೆ ಎದುರಾಗುತ್ತಾರೆ. `ವಯಸು ಅನುಭವ ಹೂಡಿ ಸುಖದುಃಖ ಬೆಳೆದ ಮುಖ / ಹಿಂದೊಮ್ಮೆ ನೆಲೆಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು / ಸಾಂತ್ವನವ ನುಡಿದಿರುವ ಹಳೆ ನಮೂನೆಯ ಚಷ್ಮ`—ಇದು ಕವಿ ಕೊಡುವ ಅವರ ಒಂದು ಚಿತ್ರ. ಅವರ ಕೈಯಲ್ಲೊಂದು `ಕೊಡೆಯ ಗದೆ` ಇದೆ. ಈಗಿನ ಕಾಲದ ಚಿಕ್ಕ ಮಡಿಸುವ ಕೊಡೆ ಅಲ್ಲ. ಹಿಂದಿನ ಕಾಲದ ಉದ್ದನೆಯ ಕೊಡೆ. ಅದು ಬಿಸಿಲಿಗೂ ಸರಿ ಮಳೆಗೂ ಸರಿ. ಅಷ್ಟೇ ಅಲ್ಲದೆ ಸಾಲು ವೃಕ್ಷದ ಹಕ್ಕಿ ಹಿಕ್ಕೆ, ಬೀದಿಕುನ್ನಿ, ಭಿಕ್ಷುಕ, ಪೋಲಿ ದನ, ಎಲ್ಲಕ್ಕೂ ಅದೇ ರಕ್ಷೆ. ಇಂತಹ ಮಹನೀಯರನ್ನು ಕಂಡುದಷ್ಟರಿಂದಲೇ ಕವಿಯ ಮೇಲೆ ಉಂಟಾಗುವ ಪರಿಣಾಮ ಇದು:— ಬೆಳಗಾಗ ಚಳಿಯಲ್ಲಿ ಬಿಸಿ ನೀರು ಮಿಂದಂತೆ ಎದೆ ಹಗುರಾಗುವುದು, ಸ್ವಚ್ಛವಾಗುವುದು. ಕವಿತೆಯ ಎರಡನೆಯ ಭಾಗದಲ್ಲಿ ಮಾಸ್ತಿಯವರ ಇಂತಹ ಸುಪ್ರಸನ್ನ ವ್ಯಕ್ತಿತ್ವಕ್ಕೆ ಸಮಾನಾಂತರವಾಗಿ ೧೯೭೦ನೆಯ ಇಸವಿಯ ಬೆಂಗಳೂರಿನ ಮಾದರಿ ಚಿತ್ರವೊಂದು ಮೂಡುತ್ತದೆ. ಇದು ಫ್ಯಾಷನ್ನು ಪಹರೆಗಳ, ಕಸಿ ಹಣ್ಣು ಚಹರೆಗಳ ವರ್ತಮಾನದ ನಟ್ಟ ನಡುವಿನ ಹುಚ್ಚು ಹುಮ್ಮಸ್ಸಿನ, ನೂಕು ನುಗ್ಗಲಿನ ಬೆಂಗಳೂರು. ಗಾಂಧಿಬಜಾರಿನ ಕ್ಲಬ್ಬಿನಲ್ಲಿ ಕಿಟ್ಟಿ, ಗುಂಡೂ, ಸುಬ್ಬು ಅವರಿಗಾಗಿ ಕಾಯುತ್ತಾರೆ. ಮೂರನೆಯ ಭಾಗದ ಕವಿತೆಯು ಕ್ಲಬ್ಬಿನಲ್ಲಿ ಇಪ್ಪತ್ತೆಂಟು ಎಂಬ ಇಸ್ಪೀಟಿನ ಆಟದ ಒಂದು ಚಿತ್ರ ಕೊಡುತ್ತದೆ. ಇಪ್ಪತ್ತೆಂಟು ಎನ್ನುವ ಪದಕ್ಕೆ ಅದೂ ಇದೂ ಮಾತನಾಡುವುದು ಎಂಬ ಅರ್ಥವೂ ಇಲ್ಲಿದೆ. ಅವು ಏನೆಂದರೆ `ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ ಟೈಲರನ ಎಡಗಾಲನ್ನು ಉಳುಕಿಸಿದ್ದು`, `ರಾತ್ರಿ ಪುರಭವನದಲಿ ಸಂಗೀತ

ಸಾಮ್ರಾಜ್ಞಿ ಶಂಕರಾಭರಣದಲ್ಲಿ ಪುಲಕಿಸಿದ್ದು', 'ಅಬ್ದುಲ್ಲನ ಹೈ ಕೋರ್ಟು ರಿಟ್ ವಜಾ ಆದದ್ದು' ಖೋಟಾ ನೋಟಿನ ಕೃಷ್ಣನಿಗೆ ಸಜಾ ಆದದ್ದು, ಬದರಿ ಎಂಬುವವನ ನಾದಿನಿಗೆ ಒಳ್ಳೆಯ ವರ ಸಿಕ್ಕಿದ್ದು—ಹೀಗೇ ರಷ್ಯಾ, ಚೀನಾ, ಕ್ಯೂಬಾ, ಅಮೇರಿಕ ದೇಶದ ವಾರ್ತೆಗಳು, ಈ ಮಾತಿನ ಸಡಗರದಲ್ಲಿ ಇಸ್ಪೀಟು ಆಟವನ್ನು ಜೊತೆಯವರು ತಪ್ಪಾಗಿ ಆಡಿ ಜಗಳವಾಡುತ್ತಾರೆ. ಮಾಸ್ತಿಯವರದ್ದು ಸರಳವಾದ ಉತ್ತರ. Let us play the game for game's sake. ಈ ಒಂದೇ ವಾಕ್ಯ ಸಾಕು, ಬದುಕಿನ ವ್ಯಾಖ್ಯೆಯನ್ನೇ ಬರೆದು ಬಿಡುತ್ತದೆ. 'ಕಲೆಗಾಗಿ ಕಲೆ' (Art for Art sake) ಎಂಬ ಮಾತು ಇಂಗ್ಲಿಷಿನಿಂದ ಬಂದು ಕನ್ನಡ ಕಾವ್ಯ ಮೀಮಾಂಸೆಯಲ್ಲಿ ಬಹು ಚರ್ಚೆಯಾದ ಪದ. ಅದೇ ರೀತಿ 'ಆಟಕ್ಕಾಗಿ ಆಟ' ಎಂಬ ನಿಲವು, ಆರೋಗ್ಯಕರ ನಿಲವು, ಅದು ಮಾಸ್ತಿಯವರ ನಿಲವು. ಅದು ಅವರ ಜೀವನದ ರೀತಿಯೂ ಹೌದು. ಅದು ತೆರೆದ ಬದುಕು.

ಮಾಸ್ತಿಯವರ ನಗು ಮುಖದ ಭಾವಚಿತ್ರ ಅತ್ಯಂತ ಪ್ರಸಿದ್ಧ. ಆ ನಗುವನ್ನು ಕವಿ ಜುಲೈ ತಿಂಗಳಿನ ಶಿವಮೊಗ್ಗೆ(ಮಳೆಗಾಲ)ಗೆ ಹೋಲಿಸಿದ್ದಾರೆ. ಅದು 'ಚಣಕ್ಕಷ್ಟು ಚಳಿ ನೂಲು, ಒಂದಿಷ್ಟು ಹೂ ಬಿಸಿಲು, ಹೊರಗೆ ಕಚ ಪಿಚ ಕೆಸರು, ಒಳಗೆ ಬೆಚ್ಚನೆ ಸೂರು.' ನಾಲ್ಕನೆಯ ಭಾಗದ ಕವಿತೆಯಲ್ಲಿ ಮಸಕು ಕತ್ತಲಾಗುತ್ತಲೇ ಮಾಸ್ತಿ ಮನೆಗೆ ಹೊರಟು ನಿಲ್ಲುತ್ತಾರೆ. ಕಾಲಿಗೆ ಒತ್ತಿದ ಗಾಜಿನ ಚೂರನ್ನು (ಬೇರೆಯವರ ಕಾಲಿಗೆ ಚುಚ್ಚದಿರಲೆಂದು) ಪಕ್ಕಕ್ಕೆ ಎಸೆದು ಹೋಗುವ ಅವರು, ಸದ್ದಿರದೇ ಸಾಗುವ ಚಂದ್ರನಂತೆ ತೋರುತ್ತಾರೆ; ಕರ್ತವ್ಯದೆಚ್ಚರಿನ ಸನ್ನೆಯಂತೆ ತೋರುತ್ತಾರೆ. ಇದು ನಿಸಾರರ ಅತ್ಯುತ್ತಮ ಕವಿತೆಗಳಲ್ಲಿ ಒಂದು.

ಸಾಮಯಿಕ ಸಂಗತಿಗಳ ಸಾದರ ಪಡಿಸುವಿಕೆ ಪ್ರಥಮ ಉದ್ದೇಶವಾಗಿರುವ ಪತ್ರಿಕಾ ಮನೋದೃಷ್ಟಿಯ ಇಂದಿನ ಬಹುತರ ಲಿಖಾವಟ್ಟುಗಳಿಗೂ ಗಹನ ಜಾಯಮಾನದ ಮಹತ್ತರ ಸಾಹಿತ್ಯ ರಚನೆಗಳಿಗೂ ಇರುವ ವ್ಯತ್ಯಾಸಗಳಲ್ಲಿ ಗಣ್ಯವೆನ್ನಿಸಬೇಕಾದದ್ದು ಅವು ನೀಡುವ ನಲಿವು ಮತ್ತು ತಿಳಿವುಗಳ ನಡುವಣ ಅಂತಸ್ತಿನ ವಿವೇಚನೆ, ತಾರತಮ್ಯ ವಿವೇಕ. ಈ ಇಬ್ಬಗೆಯ ಲೇಖನ ಪ್ರಕಾರಗಳಲ್ಲಿ ಇವೆರಡು ಅಂಶಗಳು ಅಂತಸ್ಥವಾಗಿದ್ದರೂ ಒಂದರದು ಅಲ್ಪ ಪ್ರಮಾಣದ ತತ್ಕಾಲೀನ ಮಿಂಚಿನ ಅನುಭವ; ಮತ್ತೊಂದರದು ಅಧಿಕ ಪ್ರಮಾಣದ ನಿತ್ಯಸ್ವರೂಪದ ನಕ್ಷತ್ರಾನುಭೂತಿ. ನೀರಿಗೊಂದು ಕರ್ತವ್ಯವಿರುವಂತೆ ಪನ್ನೀರಿಗೊಂದು ಮೌಲ್ಯವಿರುತ್ತದೆ. ಇವೆರಡರ ಕಲಸು ಮೇಲೋಗರ, ಇಲ್ಲವೇ ಸ್ಥಾನಮಾನದ ಅದಲುಬದಲಿಯಾದಾಗ ವಿಮರ್ಶೆ ಜಾಡು ತಪ್ಪಿ ಸಾಹಿತ್ಯದ ಪಥಿಕರನ್ನು ಕಂಗೆಡಿಸುತ್ತದೆ.

(ಪತ್ರಿಕಾ ಲೇಖನಗಳು ಮತ್ತು ಗಂಭೀರ ಸಾಹಿತ್ಯ)



ಪೂಜ್ಯ ವ್ಯಕ್ತಿಗಳನ್ನು ಕುರಿತ ನಿಸಾರರ ಕವಿತೆಗಳು : ಒಂದು ಸಮಾಲೋಚನೆ

♦ *ಡಾ. ಡಿ. ಕೆ. ರಾಜೇಂದ್ರ*

ಪ್ರೊ. ನಿಸಾರ್ ಅಹಮದ್ ಅವರು ಎಪ್ಪತ್ತು ವಸಂತಗಳನ್ನು ಕಳೆದು ಕನ್ನಡ ಕಾವ್ಯದ ಶಿಖರವನ್ನು ಏರಿದಂತೆಯೇ, ಕನ್ನಡಿಗರ ಮನವನ್ನೂ ಹೊಕ್ಕ ಕವಿ. ಅಷ್ಟೇ ಅಲ್ಲ ಒಳ್ಳೆಯ ವಿಮರ್ಶಕ, ಸಮರ್ಥ ಅನುವಾದಕ, ಸಂಪಾದಕ ಹಾಗೂ ಶ್ರೇಷ್ಠ ಚಿಂತಕ. ಮಾನವತಾವಾದಿ ಗುಣಗಳನ್ನು ಮೈಗೂಡಿಸಿಕೊಂಡ, ಅನ್ಯ ಧರ್ಮೀಯ ಮರ್ಮವನ್ನೂ ಭಾವನೆಗಳನ್ನೂ ಅರ್ಥೈಸಿಕೊಂಡ ಸೂಕ್ಷ್ಮಗ್ರಾಹಿ. ಯಾವುದೊಂದಕ್ಕೂ ಕಟ್ಟು ಬೀಳದೆ ಎಲ್ಲವನ್ನೂ ಪಾರದರ್ಶಕವಾಗಿ ನೋಡಿ ಬಿಚ್ಚಿಡುವ ವಿಶಾಲ ಹೃದಯಿ. ದಂತಗೋಪುರದ ಒಳಗೇ ಉಳಿಯದೆ ಮೈ ಚಳಿ ಬಿಟ್ಟು ಹೊರ ಬಂದು ವಾಸ್ತವದ ಬದುಕಿಗೆ ಮೈಯ್ಯೊಡ್ಡಲು ಇಚ್ಛಿಸುವ ಕವಿ. ಬದುಕಿನ ಸಂಗತ-ಅಸಂಗತ ವಿಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಒರೆ ಹಚ್ಚಿ ನೋಡುವ ವಿಮರ್ಶಕ-ಚಿಕಿತ್ಸಕ ಬುದ್ಧಿ. ಸರಳತೆಯಲ್ಲಿಯೇ ಶ್ರೇಷ್ಠತೆಯನ್ನು ಸಾಧಿಸುವ ಹಂಬಲ, ಸೌಜನ್ಯದಿಂದಲೇ ಎಲ್ಲವನ್ನೂ ಹೇಳುವ ಕಲೆಗಾರಿಕೆ, ಅಪ್ಪ ಹಾಕಿದ ಆಲದ ಮರ ಎಂಬ ಕಾರಣಕ್ಕೆ ನೇಣು ಹಾಕಿಕೊಳ್ಳಲು ಇಚ್ಛಿಸದ ಮನಸ್ಸು, ಹಾಗೆಯೇ ಹಳೆಯದೆಂಬ ಕಾರಣಕ್ಕೆ ಅಲ್ಲಗಳೆಯದ ವಿವೇಕ-ವಿವೇಚನೆ, ಪೂಜನೀಯರೆನಿಸಿದವರ ಬಗ್ಗೆ ಯಾವ ನಿಷೇಧ-ನಿರ್ಬಂಧಗಳೂ ಇಲ್ಲದೆ ತಾಳುವ ಗೌರವ ಭಾವನೆ— ಇವು ನಿಸಾರರ ಬರಹಗಳಲ್ಲಿ ಎದ್ದು ಕಾಣುವ ಅಂಶಗಳು. ಅವರ ಕವಿತೆಗಳು ಇದಕ್ಕೆ ಪೂರ್ಣ ಸಾಕ್ಷ್ಯ ಒದಗಿಸುತ್ತವೆ ಎಂದೇ

ಹೇಳಬಹುದು.

ನಿಸಾರರು ಹೆಚ್ಚು ಸ್ಪಂದಿಸುವುದು ವಾಸ್ತವದ ಬದುಕಿಗೆ, ಸಮಾಜಕ್ಕೆ. ಆ ಸ್ಪಂದನದಲ್ಲಿ ಅವರ ವ್ಯಕ್ತಿತ್ವ ಅನಾವರಣಗೊಂಡಿರುವುದನ್ನೂ ಸೂಕ್ಷ್ಮವಾಗಿ ಗಮನಿಸಬಹುದು. ಭೂತದ ವಸ್ತು-ವಿಷಯಗಳನ್ನೂ ಕವಿತೆಯ ಗ್ರಾಸವಾಗಿಸಿಕೊಂಡಾಗಲೂ ವರ್ತಮಾನದ ಆಗುಹೋಗುಗಳ ಹಿನ್ನೆಲೆಯಲ್ಲಿ ತಿಕ್ಕಿ ತೀಡಿ ನೋಡುವ ಮನೋಭಾವ ಅವರ ಕವನಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದು. ಅಂತಹ ಅಭಿವ್ಯಕ್ತಿಯ ಮೂಲಕ ಸಂದೇಶವನ್ನು ಹೊತ್ತ ಭಾವನೆಗಳು ತೂರಿ ಬರುವುದನ್ನೂ ಕಾಣಬಹುದು. ಕವಿ ಸೃಜನಶೀಲ ಪ್ರತಿಭೆಯನ್ನು ಉಳ್ಳವನು ಎಂಬುದು ನಿಜ. ಆದರೆ ಅವನೂ ಸ್ವವಿಮರ್ಶೆಯ ಪ್ರಜ್ಞೆಯುಳ್ಳ ಸಹೃದಯಿಯೂ ಆಗಿರಬೇಕೆಂಬುದೂ ಅಷ್ಟೇ ಸತ್ಯ. ಕವಿತೆ 'ಸ್ಪಾಂಟೇನಿಯಸ್ ಓವರ್ ಫ್ಲೋ'ನಿಂದ ಹೊರ ಚೆಲ್ಲಿ ಬಂದದ್ದಾದರೂ ಕವಿ ಎಲ್ಲಿಯೂ ತನ್ನ ಔಚಿತ್ಯ ಪ್ರಜ್ಞೆಯನ್ನೂ ವಿವೇಕವನ್ನೂ ಕಳೆದುಕೊಂಡಿರುವುದಿಲ್ಲ ಎಂಬುದನ್ನೂ ಅಲ್ಲಗಳೆಯಲಾಗದು. ಅವೆಲ್ಲವೂ ಕವಿಯ ಮನಸ್ಸಿನಲ್ಲಿ ಬೇರೂರಿದ ಸಂಸ್ಕಾರಕ್ಕೆ, ಸಿದ್ಧಾಂತಗಳಿಗೆ, ಉದ್ದೇಶಗಳಿಗೆ ಕಟ್ಟು ಬಿದ್ದೇ ಹೊರಹೊಮ್ಮಿರುತ್ತವೆ.

ಕವಿಗೆ ಯಾವ ನಿರ್ಬಂಧವೂ ಇರುವುದಿಲ್ಲ ಎಂಬುದು ನಿಜ. ಭೂಮ್ಯಾಕಾಶಗಳ ನಡುವಿನ, ನಾಲ್ಕು ದಿಕ್ಕುಗಳ ಮಧ್ಯದ ಯಾವುದೇ ವಸ್ತು ವಿಷಯವನ್ನೂ ತನ್ನ ಕಾವ್ಯದ ವಸ್ತುವಾಗಿ ಬಳಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ಕವಿಗಿದೆ. ಹಾಗೆಯೇ ಅಭಿವ್ಯಕ್ತಿಗೂ ಯಾವುದೇ ಕಡಿವಾಣ ಇರುವುದಿಲ್ಲ. ಅದು ಕವಿ ಪ್ರತಿಭೆಗೆ ಬಿಟ್ಟದ್ದು. ಕವಿ ನಿಸಾರ್ ಅಹಮದ್ ಅವರು ಅದರ ಲಾಭವನ್ನು ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಸಮರ್ಥವಾಗಿ ಸೂರೆಗೊಂಡಿದ್ದಾರೆ. ನವ್ಯದ ನಡುವೆಯೇ ನಿಂತು ಕಾವ್ಯ ರಚಿಸಿದರೂ ನವೋದಯ ಕಾವ್ಯದ ಸೊಗಸನ್ನು ಮೈದುಂಬಿಕೊಂಡು ಮೆರೆಯುವ ನಿಸಾರರ ಕವಿತೆಯಲ್ಲಿ 'ಒಮ್ಮೆ ಪು.ತಿ.ನ. ಅವರನ್ನು, ಒಮ್ಮೆ ವಿ.ಸೀ. ಅವರನ್ನು, ಸದಾ ಕುಮಾರವ್ಯಾಸನನ್ನು ನೆನಪಿಗೆ ತರುತ್ತವೆ' ಎಂಬ ಪ್ರೊ. ಎಚ್ಚೆಸ್ಕೆ ಅವರ ಅಭಿಪ್ರಾಯ ಎಷ್ಟೊಂದು ನಿಜವೆನ್ನಿಸಿ ಬಿಡುತ್ತದೆ. ಹಳತೆಲ್ಲವನ್ನು ಧಿಕ್ಕರಿಸಿ ಬಿಚ್ಚೊಗೆದು ಸೆಟೆದು ನಿಲ್ಲುವುದೇ ನವ್ಯವಾಗದು. ನವ್ಯತೆ ನವ್ಯವೆನ್ನಿಸಿದರೂ ಕವಿಗೆ ಸ್ವಲ್ಪವಾದರೂ ಭೂತ ಕಾಲದ ಅರಿವಿರಬೇಕಾಗುತ್ತದೆ. ಇಲ್ಲವಾದರೆ ಕಾವ್ಯ, ಭೂತವಾಗಿ ವರ್ತಮಾನದವರನ್ನೂ ಕಾಡತೊಡಗುತ್ತದೆ. ಭವಿಷ್ಯಕ್ಕೂ ಪ್ರಶ್ನೆಯಾಗಿಯೇ ಕಾಡತೊಡಗುತ್ತದೆ.

ನಿಸಾರರ ಕವಿತೆಗಳು ಮೆಚ್ಚುಗೆಯಾಗುವುದು ಅವರು ಇಂತಹ ತೊಡಕುಗಳಿಂದ ಬಿಡಿಸಿಕೊಂಡು ಕಾವ್ಯ ಕಟ್ಟಿದ್ದಕ್ಕಾಗಿ. ವಸ್ತುವಿನ ಆಯ್ಕೆಯಾಗಲಿ, ಅಭಿವ್ಯಕ್ತಿಯಾಗಲಿ, ವೈಚಾರಿಕ ನಿಲವಾಗಲಿ, ಭಾಷೆಯ ಬಳಕೆಯಾಗಲಿ—ಎಲ್ಲದರಲ್ಲಿಯೂ ಅವರು ಸ್ವೋಪಜ್ಞತೆಯನ್ನು ತೋರಿದ್ದಾರೆ. ಅವರಿಗೆ ಓದುಗನನ್ನು ತಮ್ಮೊಂದಿಗೆ ಆತ್ಮೀಯತೆಯಿಂದ ಕರೆದುಕೊಂಡು ಹೋಗುವ ತವಕವೇ ಹೊರತು ಎಲ್ಲಿಯೋ ನಡು ದಾರಿಯಲ್ಲಿ ಕೈ ಬಿಟ್ಟು ದಾರಿ ತಪ್ಪಿಸುವ ಉತ್ಸಾಹವಿಲ್ಲ. ಕವನದ ಉದ್ದೇಶ ವ್ಯರ್ಥವಾಗಬಾರದೆಂಬ ಕಾಳಜಿಯೂ ಅವರಿಗೆ

ಬಹಳವಾಗಿ ಇದ್ದಂತೆ ತೋರುತ್ತದೆ. ಅವರ ಬಹುತೇಕ ಕವನಗಳು ಇದಕ್ಕೆ ನಿದರ್ಶನವಾಗಿ ನಿಲ್ಲುತ್ತವೆ. ಎರಡು ಧರ್ಮ ಹಾಗೂ ಸಂಸ್ಕೃತಿಗಳ ನಡುವೆಯೇ ನಿಂತರೂ ಅವುಗಳಲ್ಲಿ ಮಧುರ ಸಾಮರಸ್ಯವನ್ನು ತರಬಯಸುವ ಅವರ ಮನೋಧರ್ಮ ವಿಶಿಷ್ಟವಾದುದು. ಇದಕ್ಕೆ ಆರಂಭದ ಅವರ ಎರಡು ಕವನ ಸಂಕಲನಗಳನ್ನು (`ಮನಸು ಗಾಂಧಿ ಬಜಾರು' ಮತ್ತು `ನೆನೆದವರ ಮನದಲ್ಲಿ') ಉದಾಹರಿಸಬಹುದು. ಮಧ್ಯಂತರದ ಕವಿತೆಗಳು ಸಾಂಸ್ಕೃತಿಕ ವಿಭಿನ್ನತೆಯ ಧ್ವನಿಯನ್ನು ದೋರಿದರೂ ಮತ್ತೆ ಅವರು ಮರಳಿ ಬಂದು ನಿಂತದ್ದು ಮೊದಲನೆಯ ಸ್ಥಾನಕ್ಕೇ (`ರಂಜಾನಿನ ಬ್ರಾಹ್ಮೀ ಮುಹೂರ್ತ' ಹಾಗು `ಸವತಿ ಮಕ್ಕಳ ಹಾಗೆ'). ಹಾಗಾಗಿ ನಿಸಾರರಲ್ಲಿ ಸ್ಥಾಯಿಯಾಗಿ ಗೋಚರಿಸುವುದು ಮಧುರ ಸಾಮರಸ್ಯ ಭಾವವೇ. ಹಿಂದೂ ಧರ್ಮ, ತತ್ತ್ವ, ಪುರಾಣ ಹಾಗೂ ಕಾವ್ಯಗಳ ಸಾರ ಅವರನ್ನು ಪೂರ್ಣ ಸೆರೆ ಹಿಡಿದದ್ದೇ ಈ ಅಭಿಪ್ರಾಯಕ್ಕೆ ಕಾರಣ. ಇದಕ್ಕೆ ನಿದರ್ಶನವಾಗಿ ಪೂಜ್ಯ ವ್ಯಕ್ತಿಗಳನ್ನು ಕುರಿತ ಅವರ ಕವನಗಳನ್ನು ನೋಡಬಹುದು.

— ೨ —

ನಿಸಾರರ ಕವಿತೆಗಳ ವಸ್ತು ವೈವಿಧ್ಯ ಅಪರಿಮಿತ. ಇದಕ್ಕೆ ಬಹು ಮುಖ್ಯ ಕಾರಣ ಅವರ ಜೀವನೋತ್ಸಾಹ ಹಾಗೂ ಬದುಕನ್ನು ಅವರು ಪ್ರೀತಿಸುವ ರೀತಿ. `ಆನಂದಮಯ ಈ ಜಗ ಹೃದಯ' ಎನಿಸುವುದು ನಾವು ನಮ್ಮ ಕಣ್ಣು-ಹೃದಯಗಳೆರಡನ್ನೂ ಪೂರ್ಣವಾಗಿ ತೆರೆದು ಕೊಂಡಾಗ ಮಾತ್ರ. ಕಣ್ಣಿದ್ದೂ ಕುರುಡಾದವರಿಗೆ, ಹೃದಯವಿದ್ದೂ ಬರಡಾಗಿಸಿ ಕೊಂಡವರಿಗೆ ಜಗತ್ತು ಕತ್ತಲಾಗಿಯೇ ಉಳಿಯುತ್ತದೆ. ಕವಿಗೆ ಬೇಕಾದದ್ದು ಮುಕ್ತ ಮನಸ್ಸು, ವಿಶಾಲ ದೃಷ್ಟಿ. ನಿಸಾರರಲ್ಲಿ ಆ ಎರಡೂ ಧಾರಾಳವಾಗಿ ಗೋಚರಿಸುತ್ತವೆ. ಹಾಗಾಗಿ ಅವರ ಕಾವ್ಯದ ಕಣ್ಣಿಗೆ ಎಲ್ಲವೂ ಆಕರವಾಗುತ್ತವೆ. ಧರ್ಮ, ದೇವರು, ಸಮಾಜ ಒಂದು ಕಡೆಯಾದರೆ; ಇತಿಹಾಸ, ರಾಜಕೀಯ, ಪಾಶ್ಚಾತ್ಯ-ಪೌರ್ವಾತ್ಯ ಬದುಕು ಮತ್ತೊಂದು ಕಡೆಯಾಗುತ್ತದೆ. ಕಲೆ, ವಿಜ್ಞಾನ, ಸಂಗೀತ, ಭಾಷೆ, ದೇಶಪ್ರೇಮ ಇನ್ನೊಂದು ಕಡೆ. ಪ್ರೀತಿ, ಪ್ರೇಮ, ಪ್ರಕೃತಿ ಮಗುದೊಂದು ಕಡೆ. ಹೀಗೆ ಇಡೀ ಬದುಕನ್ನೂ, ವಿಶ್ವವನ್ನೂ ಆವರಿಸುವ ಅವರ ಕಾವ್ಯದೃಷ್ಟಿ ಅಷ್ಟೇ ವೈವಿಧ್ಯದ ಸೃಷ್ಟಿಗೂ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ ನಿಸಾರರ `ಪೂಜ್ಯ ವ್ಯಕ್ತಿಗಳನ್ನು ಕುರಿತು' ರಚಿತವಾದ ಕವನಗಳ ಪರಿಶೀಲನೆ ಹೆಚ್ಚು ಮಹತ್ವದ್ದಾಗಿ ತೋರುತ್ತದೆ. ಈ ಕವಿತೆಗಳ ಪರಿಶೀಲನೆಯಲ್ಲಿ ಎರಡು ಅಂಶಗಳು ಪ್ರಧಾನವೆನ್ನಿಸುತ್ತವೆ. ಒಂದು: ಇಲ್ಲಿಯ ಕವನಗಳಲ್ಲಿ ಬರುವ ವ್ಯಕ್ತಿಗಳು ಹಾಗೂ ಎರಡನೆಯದು ಕವಿಯ ಮನೋಧರ್ಮ.

ನವ್ಯದ ಮಡಿಲಲ್ಲಿ ನಿಂತು ನವೋದಯಕ್ಕೂ ಕೈಚಾಚಿದ ನಿಸಾರರ ಕವಿ ಮನೋಧರ್ಮ ಇಲ್ಲಿ ಸ್ಪಷ್ಟಗೊಳ್ಳುತ್ತದೆ. ಕವಿ ಯಾವುದೊಂದಕ್ಕೂ ಕಟ್ಟುಬಿದ್ದವರಲ್ಲ ಎಂಬುದನ್ನು ಇಲ್ಲಿನ ಕವಿತೆಗಳು ನಿರೂಪಿಸುತ್ತವೆ. ಕವಿಯ ಅಂತರಾಳದ ಭಕ್ತಿ ಗೌರವಗಳು, ಹಮ್ಮುಬಿಮ್ಮುಗಳಿಲ್ಲದ ಮುಗ್ಧತೆ, ಧನ್ಯತೆಯ ಭಾವನೆ, ಏನೆಲ್ಲವನ್ನೂ ಪಡೆದ ಕೃತಜ್ಞತಾ ಭಾವದ ಅರ್ಪಣೆ, ಪ್ರೀತಿ-ಪ್ರೇಮ-ವಿಶ್ವಾಸ ಎಲ್ಲವೂ ಸಂಗಮವಾಗಿ ಕವಿತೆಯಾಗಿ

ರೂಪುಗೊಂಡದ್ದನ್ನು ಇಲ್ಲಿಯ ಕವಿತೆಗಳಲ್ಲಿ ಕಾಣುತ್ತೇವೆ.

'ಪೂಜ್ಯ ವ್ಯಕ್ತಿಗಳು'—ಈ ಶೀರ್ಷಿಕೆಯಲ್ಲಿ ಹೆಸರಿಸಬಹುದಾದ ಕವಿತೆಗಳೆಂದರೆ: 'ಎಂಥೆಂಥ ಜೀವಿಗಳು', 'ಪುರಂದರ ದಾಸರು', 'ಬಸವೇಶ್ವರರು', 'ಶ್ರೀರಾಮಕೃಷ್ಣ ಪರಮ ಹಂಸ', 'ಶ್ರೀ ಶಾರದಾದೇವಿ', 'ಶಿಲುಬೆ ಏರಿದ್ದಾನೆ.', 'ಮದರ್ ತೆರೆಸ', 'ಅರಬಿಂದೊ', 'ಹಿರಿಯರು', 'ಬೆಣ್ಣೆ ಕದ್ದ ನಮ್ಮ ಕೃಷ್ಣ'—ಮುಂತಾದುವು. ಎಲ್ಲ ಗಡಿಗಳನ್ನೂ ದಾಟಿ ನಿಲ್ಲುವ ಈ ಕವಿತೆಗಳು ನಿಸಾರರ ವಿಶಿಷ್ಟ ಮನೋವೈಶಾಲ್ಯಕ್ಕೆ ಹಾಗೂ ವಿನಯ ಗುಣಕ್ಕೆ ಸಾಕ್ಷಿ.

ಪೂಜ್ಯ ವ್ಯಕ್ತಿಗಳನ್ನು ಕುರಿತ ಕವಿತೆಗಳಲ್ಲಿ 'ಪುರಂದರ ದಾಸರು' ಕವಿತೆ ನಿಸಾರರ ಉತ್ಕೃಷ್ಟ ಮನೋಸ್ಥಿತಿಗೆ ಒಂದು ಉದಾಹರಣೆ. ಹಿಂದೂ ಧರ್ಮದ ಎಳೆ ಎಳೆಗಳನ್ನು ಅರ್ಥೈಸಿಕೊಂಡದ್ದರ ಫಲಶ್ರುತಿ ಕವನದ ಎಳೆ ಎಳೆಗಳಲ್ಲಿಯೂ ಹಾಸುಹೊಕ್ಕಾಗಿರುವುದನ್ನು ಈ ಕವಿತೆ ಸಾದರಪಡಿಸುತ್ತದೆ. ಪುರಂದರ ದಾಸರ ಬದುಕಿನ ಘಟನೆಗಳನ್ನೂ ಅನಂತರದ ತ್ಯಾಗ-ಭಕ್ತಿಯ ಘಟನಾವಳಿಗಳನ್ನು ನಿಸಾರರು ಕೆಲವೇ ಸಾಲುಗಳಲ್ಲಿ ನಿರೂಪಿಸುವ ರೀತಿಯನ್ನು ಗಮನಿಸಿದಾಗ ಬಹುಶಃ ಯಾವುದೇ ಒಬ್ಬ ಅನ್ಯಧರ್ಮೀಯನಿಂದ ಇದು ಸಾಧ್ಯವಾಗುವಂತಹುದು ಎಂದನಿಸುವುದಿಲ್ಲ. ಆ ತಾದಾತ್ಮ್ಯ ಭಾವನೆ ಕವಿತೆಯಲ್ಲಿ ಮಡುಗಟ್ಟಿದೆ.

'ದಾಸರೆಂದರೆ ನಮ್ಮ ವರ ಪುರಂದರರಯ್ಯ;
ಇದ್ದು ಇಲ್ಲೇ, ಅಲ್ಲಿಗೇರಿದವರು.
ಸಹಜ ಮುಕ್ತಿಯ ನೌಕೆ ಬರುವವರೆಗೂ ಇಲ್ಲೆ
ಈಸಿದವರು, ಇದ್ದು ಜೈಸಿದವರು.'

(ಪುರಂದರ ದಾಸರು)

ಕೊನೆಯ ಮೂರು ಸಾಲುಗಳಲ್ಲಿ ಪುರಂದರದಾಸರ ಬದುಕಿನ ಘಟನಾವಳಿಗಳನ್ನು ಅತ್ಯಂತ ಸರಳವಾಗಿ, ಸಂಕ್ಷಿಪ್ತವಾಗಿ ಅಭಿವ್ಯಕ್ತಿಸಿ ಸಹಜ ಕಾವ್ಯವಾಗಿಸಿದ್ದಾರೆ. ಇಲ್ಲಿ ನಿಸಾರರು ಪದ ಜುಗ್ಗರಾಗಿ, ವಿಷಯದ ಅಂತರಾಳದ ಯಶಸ್ವೀ ಶೋಧಕರಾಗಿ ಗೋಚರಿಸುತ್ತಾರೆ—'ಇದ್ದು ಇಲ್ಲೇ, ಅಲ್ಲಿಗೇರಿದವರು. ಸಹಜ ಮುಕ್ತಿಯ ನೌಕೆ ಬರುವವರೆಗೂ ಇಲ್ಲೇ ಈಸಿದವರು, ಇದ್ದು ಜೈಸಿದವರು.' ಅಧ್ಯಾತ್ಮದ ತತ್ತ್ವಜ್ಞಾನದ ಎಳೆಗಳೂ ಆ ಸಾಲುಗಳಲ್ಲಿ ಅಂತರ್ಗತಗೊಂಡಿವೆಯೆಂಬುದು ಗಮನಾರ್ಹ. ಕವಿತೆ ಹುಟ್ಟುವುದು ಆವೊಂದು ವಸ್ತು-ವಿಷಯದ ಬಗೆಗೆ ಸ್ಪಂದ ಏರ್ಪಟ್ಟಾಗ. ಒಬ್ಬ ವ್ಯಕ್ತಿಯ ಬಗೆಗೆ ಭಕ್ತಿ ಅಥವಾ ಗೌರವ ಉಂಟಾಗುವುದು ಅವರ ವ್ಯಕ್ತಿತ್ವ ನಮ್ಮನ್ನು ಆಕರ್ಷಿಸಿ ನಮ್ಮ ಮೇಲೆ ಪ್ರಭಾವ ಬೀರುವಷ್ಟು ಪರಿಣಾಮಕಾರಿಯಾಗಿದ್ದಾಗ. ಇಲ್ಲವಾದರೆ ಭಾವನೆಗಳು ಹುಟ್ಟುವುದಾದರೂ ಹೇಗೆ? ಅವು ಕೆನೆಗಟ್ಟಿ ಹೊರಹೊಮ್ಮುವುದಾದರೂ ಹೇಗೆ? ಮನ ಮಿಡಿಯದೆ ಕವಿತೆ ಹುಟ್ಟಿಬರುವುದಾದರೂ ಹೇಗೆ? ಈ ಕವಿತೆಯ ಮುಂದಿನ ಸಾಲುಗಳೂ ಅಷ್ಟೇ ಅರ್ಥಪೂರ್ಣವಾಗಿ, ಭಾವಪೂರ್ಣವಾಗಿ, ಪರಿಣಾಮವನ್ನು ಉಂಟುಮಾಡುತ್ತವೆ. ನಿಸಾರರ ತಾದಾತ್ಮ್ಯ ಭಾವನೆಗಳನ್ನು ತೆರೆದಿಡುತ್ತವೆ:

> **'ಬೀದಿ ತಿರುಕನ ಹಾಗೆ ದೈವ ಬಂದಾರಿಸಿತು;**
> **ಸಾರಿಸಿತು ಇವರೆದೆಯ, ಹಾರಿಸಿತ್ತು;**
> **ಒದ್ದೆ ಅರಿವೆಯ ಹಿಂಡಿ ರಾಗವನು ಅರಿವಿಂದ**
> **ಆರಿಸಿತು; ದಾಸತ್ವಕೇರಿಸಿತ್ತು.'**

(ಅದೇ)

ಅನಂತರದ ಘಟನೆಗಳನ್ನೂ ಕೇವಲ ಎರಡೇ ಎರಡು ಸಾಲುಗಳಲ್ಲಿ ನಿಸಾರ್ ಅತ್ಯಂತ ಭಾವಪೂರ್ಣವಾಗಿ ಹೇಳಿ ಮುಂದಾಗುತ್ತಾರೆ. 'ನತ್ತು ಕೊಟ್ಟಳು ಹರಿಗೆ, ಅತ್ತುಬಿಟ್ಟಳು ಮರೆಗೆ, ಪತಿಯನಿತ್ತಳು ಕೊಡುಗೆ ದೇವನಡಿಗೆ.'

ಸರಳ, ಸುಂದರ, ಅದ್ಭುತ. ಸರಳತೆಯಲ್ಲಿ ಸುಂದರಾದ್ಭುತಗಳನ್ನು ಹೊರ ಹೊಮ್ಮಿಸುವುದು ಕೆಲವರಿಂದ ಮಾತ್ರ ಸಾಧ್ಯ. ಅದು ಕವಿಯಿಂದ ಸಾಧ್ಯ. ಅದೂ ಒಳ್ಳೆಯ ಕವಿಯಿಂದ ಮಾತ್ರ ಸಾಧ್ಯ. ನಿಸಾರರು ಮೆಚ್ಚುಗೆಯಾಗುವುದು ಈ ಕಾರಣಕ್ಕಾಗಿ. ತಮ್ಮ ನೇರ ಕಾವ್ಯದ ಮೂಲಕ ಮನ ಸೂರೆಗೊಳ್ಳುವ ಕವಿ ನಿಸಾರ್. ಆದರೆ ಕವಿತೆಗೆ ವಕ್ರತೆಯೇ ಮುಖ್ಯ ಭೂಷಣ ಎಂಬ ವಾದವನ್ನು ಮುಂದಿಡುವವರಿಗೆ ನಿಸಾರರ ಇಂತಹ ಕವಿತೆಗಳನ್ನು ಪ್ರಶ್ನೆಯಾಗಿ ಒಡ್ಡಬೇಕಾಗುತ್ತದೆ.

ಪುರಂದರ ದಾಸರ ಮುಂದಿನ ಘಟನಾವಳಿಗಳನ್ನು ನಿಸಾರರು ಹೀಗೆ ಚಿತ್ರಿಸುತ್ತಾರೆ:

> **'ಮೈಮರೆತು ಹರಿ ಸ್ಮರಣೆ ಮಾಡಿದರು, ಹಾಡಿದರು;**
> **ಹತ್ತು ಜನ ಕೂಡಿದರು ಹರಿಭಕ್ತರು.**
> **ಈವೊತ್ತು ಈ ಕೊಂಪೆ, ನಾಳೆ ದೂರದ ಹಂಪೆ—**
> **ಹರಿಯಿಂಪ, ನರುಗಂಪ ಹರಡಿದ್ದರು.**
>
> **'ಕವಿಯಂತೆ ಹಾಡಿದರೆ? ಇಲ್ಲಿಲ್ಲ, ತಮ್ಮನ್ನೆ**
> **ಮಿಡಿಸಿದರು, ನುಡಿಸಿದರು ಪ್ರಾಣ ದುಡುಕಿ;**
> **ಹಾಡಿದರೆ? ಅಲ್ಲಲ್ಲ, ಭಕ್ತಿಯನೆ ಕಾಡಿದರು**
> **ಮನವ ಜಾಲಾಡಿದರು ಹರಿಯ ಹುಡುಕಿ.'**

(ಅದೇ)

ಇಲ್ಲಿ ವ್ಯಾಖ್ಯಾನ-ವಿವರಣೆ-ವಿಶ್ಲೇಷಣೆ ಅನಗತ್ಯ. ಇಲ್ಲಿ ಬೇಕಾದದ್ದು ಮೆಚ್ಚುಗೆ ಅಷ್ಟೆ. ಕವಿ ಬಿ. ಆರ್. ಲಕ್ಷ್ಮಣರಾವ್ ಅವರು ಅಂತಹ ಮೆಚ್ಚುಗೆಯನ್ನು ಕೊಟ್ಟಿದ್ದಾರೆ: 'ಶ್ರೀ ಪುರಂದರ ದಾಸರು ಎಂಬ ಕವನ ಹಿಂದೂ ಮನೋಧರ್ಮ ಮತ್ತು ಸಂವೇದನೆಗಳಲ್ಲಿ ನಿಸಾರ್ ಎಷ್ಟು ತಾದಾತ್ಮ್ಯ ಸಾಧಿಸಿದ್ದಾರೆಂಬುದಕ್ಕೆ ಸ್ಪಷ್ಟ ನಿದರ್ಶನ. ಪುರಂದರ ದಾಸರ ಬಗ್ಗೆ ಇದಕ್ಕಿಂತ ಹೆಚ್ಚು ಸುಂದರವಾದ, ಭಾವಪೂರ್ಣ ಹಾಗೂ ಅರ್ಥಪೂರ್ಣ ಕವನವೊಂದನ್ನು ಯಾರಾದರೊಬ್ಬ ಕನ್ನಡ ನಾಡಿನ ಹಿಂದೂ ರಚಿಸಬಲ್ಲನೆಂಬ ಬಗ್ಗೆ ನನಗೆ ಅನುಮಾನವಿದೆ' ಎಂಬ ಮಾತಿಗೆ ಧ್ವನಿಗೂಡಿಸಿದರಷ್ಟೇ ಸಾಕೆನಿಸುತ್ತದೆ.

ಕವಿತೆಯ ಕೊನೆಯ ಸಾಲುಗಳು ನಿಸಾರರು ಪುರಂದರ ದಾಸರ ಬಗೆಗೆ ಹೊಂದಿರುವ ಗೌರವ ಭಕ್ತಿ ಭಾವಗಳ ಪರಾಕಾಷ್ಠತೆಯ ಪ್ರತೀಕವಾಗಿ ತೋರುತ್ತವೆ:

‘ಬೇರೆ ಸ್ಮಾರಕ ಬೇಕೆ ಇವರಂಥ ಭಕ್ತರಿಗೆ
ಎಲ್ಲರನ್ನೂ ಸೇರಿದಂಥವರಿಗೆ?
ಬೇರೆ ಬಣ್ಣನೆ ಯಾಕೆ ಈ ಇಂಥ ಮುಕ್ತರಿಗೆ?
ಎಲ್ಲವನ್ನೂ ಮೀರಿ ನಿಂತವರಿಗೆ?’

(ಅದೇ)

ನಿಸಾರರು ಮತ-ಧರ್ಮಗಳ ಕಟ್ಟನ್ನು ಸಡಿಲಿಸಿ ಹೊರ ಬಂದು ಎಲ್ಲರಲ್ಲಿ ಒಂದಾಗಿ ಬದುಕುವ ಇಚ್ಛೆಯನ್ನು ವ್ಯಕ್ತಪಡಿಸುತ್ತ ಬಂದವರು. ಎಲ್ಲವನ್ನೂ ವಿಶಾಲ ದೃಷ್ಟಿಯಿಂದ ನೋಡಿ ಅರ್ಥೈಸಬಯಸಿದವರು. ಹಾಗಾಗಿಯೇ ಅವರು ಯಾವುದೊಂದಕ್ಕೂ ಕಟ್ಟುಬೀಳದೆ ಎಲ್ಲೆಡೆ ಸ್ವಚ್ಛಂದವಾಗಿ ವಿಹರಿಸುವುದನ್ನು ಕಾಣುತ್ತೇವೆ. ಜಾತಿ, ಮತ, ಧರ್ಮ, ಸಮಾಜ, ವ್ಯಕ್ತಿ, ಪ್ರಕೃತಿ, ಭಾಷೆ, ದೇಶ—ಹೀಗೆ ಎಲ್ಲವೂ ಬೇಕು ಕವಿಗೆ. ಅವರಿಗೆ ಹಿಂದೂ ಧರ್ಮದ ವಿಚಾರವೂ ಬೇಕು, ಕ್ರಿಶ್ಚಿಯನ್ ಧರ್ಮದ ಆಚಾರದ ಅರಿವೂ ಬೇಕು, ಇಸ್ಲಾಂ ಧರ್ಮದ ಪರಿವೆಯೂ ಬೇಕು. ಒಂದು ಮತದಲ್ಲಿ ನಿಂತು ಇತರ ಮತಗಳ ಧರ್ಮ ವಿಚಾರಗಳನ್ನು ಗೌರವಿಸುವ ವ್ಯಕ್ತಿ ನಿಜಕ್ಕೂ ಇತರರಿಗಿಂತ ಮೇಲಾಗುತ್ತಾನೆ. ಅಂತಹ ಸಂದರ್ಭಗಳಲ್ಲಿ ಅವನ ಪ್ರಾಮಾಣಿಕತೆಗೆ ಅವನ ಕೃತಿಗಳೇ ಪ್ರಮಾಣವಾಗಿ ನಿಲ್ಲುತ್ತವೆ. ನಿಸಾರರು ಈ ಪರೀಕ್ಷೆಯಲ್ಲಿ ಹಿಂದೆ ಬೀಳುವುದಿಲ್ಲ. (ಅವರು ಹಿಂದೂ ಧರ್ಮದ ವ್ಯಕ್ತಿಗಳನ್ನು ಗೌರವದಿಂದ ಕಾಣುವಂತೆಯೇ ಕ್ರಿಶ್ಚಿಯನ್ ಧರ್ಮದ ವಿಚಾರಗಳನ್ನೂ ಹಾಗೂ ವ್ಯಕ್ತಿಗಳನ್ನೂ ಅಷ್ಟೇ ಗೌರವದಿಂದ ಕಾಣುತ್ತಾರೆ.)

‘ಬೆಣ್ಣೆ ಕದ್ದ ನಮ್ಮ ಕೃಷ್ಣ’ ನಿಸಾರರ ಕವಿತೆ ಎಂದರೆ ಬಹುಶಃ ಎಂತಹವರಿಗೂ ಒಪ್ಪಿಕೊಳ್ಳುವುದು ಕಷ್ಟವಾಗಬಹುದು. ಬೆಣ್ಣೆ ಕದಿಯುವ ಕೃಷ್ಣನ ಬಾಲ ಲೀಲೆಗಳನ್ನು ಅವರು ಸುಂದರವಾಗಿ ಕಣ್ಣಿಗೆ ಕಟ್ಟುವಂತೆ ಕಡೆದು ನಿಲ್ಲಿಸಿರುವುದು ಇದಕ್ಕೆ ಕಾರಣ. ಸಂಪ್ರದಾಯಸ್ಥ ಕೃಷ್ಣಾರಾಧಕರ ಕಲ್ಪನೆಗೂ ನಿಲುಕದ ಚಿತ್ರಣವನ್ನು ನಿಸಾರರು ಈ ಕವಿತೆಯಲ್ಲಿ ಮೂಡಿಸಿದ್ದಾರೆ. ಅದು ಕೇವಲ ಪ್ರಯತ್ನದಿಂದ ಬರುವಂತಹುದಲ್ಲ, ಅದರೊಂದಿಗಿನ ತಾದಾತ್ಮ್ಯ ಭಾವನೆಯಿಂದ ಮಾತ್ರ ಸಾಧ್ಯವಾಗುವಂತಹುದು. ನಿಸಾರರು ಹೆಚ್ಚು ಹೆಚ್ಚು ಭಿನ್ನವಾಗಿ, ಮಹತ್ವದ ಕವಿಯಾಗಿ ಕಂಡು ಬರುವುದು ಇಂತಹ ಕಡೆಗಳಲ್ಲಿಯೇ. ಕೆಲವರು ಇದನ್ನು ಬುದ್ಧಿ ಪ್ರಧಾನವಾದ ಪ್ರಜ್ಞಾಪೂರ್ವಸ್ಥಿತಿಯ ಕಾವ್ಯ ಎಂದು ಕರೆಯ ಬಹುದಾದರೂ ಅದು ಪೂರ್ಣಸತ್ಯವೆನ್ನಿಸದು. ಏಕೆಂದರೆ, ಕಾಗದದ ಹೂವಿನಲ್ಲಿ ಸುಗಂಧದ ವಾಸನೆ ಮೂಡಿ ಬರಲು ಸಾಧ್ಯವಿಲ್ಲ. ಬೆಣ್ಣೆ ಕದ್ದ ಕೃಷ್ಣನ ತುಂಟಾಟಗಳನ್ನು ನಿಸಾರರು ಕೇವಲ ನಾಲ್ಕು ಚರಣಗಳಲ್ಲಿ ಮೈನವಿರೇಳಿಸುವಂತೆ ಚಿತ್ರಿಸಿದ್ದಾರೆ. ಇದೊಂದು ರೀತಿಯ ಚಿತ್ರ ಕವಿತೆ. ಅಂತರಂಗದ ಭಾವ ತುಡಿಯದೆ ರಸವತ್ತಾದ ಕವಿತೆ ಹುಟ್ಟಿಬರಲು ಹೇಗೆ ಸಾಧ್ಯ?

‘ಬೆಣ್ಣೆಯ ಕದ್ದು ಜಾರುತ ಬಿದ್ದು
ಮೊಣಕಾಲೂದಿಸಿ ಕೊಂಡನಮ್ಮ
ಬಂದಿಗೆ ಬಿದ್ದು ಹಿಡಿಯಲು ಸದ್ದು
ಬೆಚ್ಚಿದ ಗೋಪಿಯ ತುಂಟನಮ್ಮ

....

....

ಹಣೆ ತುಟಿ ಕೆನ್ನೆಗೆ ಬೆಣ್ಣೆ ಮೆತ್ತಿದ
ಒರಟನ ನೋಟಕ್ಕೆ
ಇಳಿಯಿತು ಕೋಪ ಅರಳಿತು ಕೆಂದುಟಿ
ತುಂಟನ ಆಟಕ್ಕೆ
ತಪ್ಪಿದ ದಂಡಕೆ ನಿಟ್ಟುಸಿರೆಳೆದ
ಬೆಣ್ಣೆಗಳ್ಳ ನೀಲ
ಥಟ್ಟನೆ ಅಳುವುದು ನಿಲ್ಲಿಸಿ ನಕ್ಕ
ಬಾಯಗಲಿಸಿ ಬಾಲ
ಹರಡಿದ ಬೆಳುದಿಂಗಳ ಜಾಲ.
ಅವನ ಅಕುಟಿಲ ಬೆಣ್ಣೆಯಂಥ ನಗು
ಕಾಯಲಿ ಜಗದವರ
ಸಂತತ ನಗಿಸಲಿ ನಗದವರ.'

(ಬೆಣ್ಣೆ ಕದ್ದ)

ಇಡೀ ಕವಿತೆಯ ಸಾಲುಗಳು ಓದುಗನನ್ನು ಸೆರೆಹಿಡಿಯುತ್ತವೆ. ಈ ಕವಿತೆ ನಿಸಾರರಿಗೆ ಹಿಂದೂ ಧರ್ಮ, ತತ್ತ್ವ, ಪುರಾಣಗಳ ಬಗ್ಗೆ ಇರುವ ಒಲವು-ಎಚ್ಚರಗಳನ್ನು ಅನಾವರಣ ಗೊಳಿಸುತ್ತದೆ. ಅವುಗಳ ಅಂತರಾಳದ ಸ್ಪಂದನಗಳನ್ನು ಗುರುತಿಸುವ, ಅದನ್ನು ಸೆರೆ ಹಿಡಿಯುವ ಸಾಮರ್ಥ್ಯ ಅವರಿಗಿದೆ ಎಂಬುದನ್ನು ಅವರ ಇಂತಹ ಕವಿತೆಗಳು ಬಿಚ್ಚಿಡುತ್ತವೆ. ಇಲ್ಲಿ ಅಕುಟಿಲವಾದ ಅವರ ಭಾರತೀಯ ಪ್ರಜ್ಞೆ ಕೂಡ ವ್ಯಕ್ತವಾಗುತ್ತದೆ.

ನಿಸಾರರ ಕಾವ್ಯವಸ್ತು, ದೃಷ್ಟಿ, ಧೋರಣೆಗಳಿಗೆ ಇದು ಹೆಚ್ಚು ಅರ್ಥವತ್ತಾಗಿ ಅನ್ವಯಿಸುತ್ತದೆ ಅನ್ನಿಸುತ್ತದೆ. ಸ್ವಧರ್ಮದ ಬಗ್ಗೆ ಬರೆಯುವಾಗ ಸಹಜವಾಗಿಯೇ ಕಾಡ ಬಹುದಾದ ಕೆಲವೊಂದು ವಿಚಾರಗಳು ಅದರ ಸಹಜತೆಗೆ ಸ್ವಲ್ಪ ಅಡ್ಡವೆನಿಸಬಹುದಾದರೂ ಅನ್ಯಧರ್ಮ ವಿಚಾರದ ಅಭಿವ್ಯಕ್ತಿಯಲ್ಲಿ ಮುಕ್ತ ಭಾವನೆಗಳು ಗರಿಗೆದರಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 'ರಂಗೋಲಿ ಮತ್ತು ಮಗ' ಕವನದಲ್ಲಿನ ಸ್ವಾತಂತ್ರ್ಯ ಅವರ ಇನ್ನೊಂದು ಕವಿತೆ 'ಅಮ್ಮ, ಆಚಾರ, ನಾನು' ಕವಿತೆಯ ಅಭಿವ್ಯಕ್ತಿಯಲ್ಲಿ ಅಷ್ಟಾಗಿ ಗೋಚರಿಸುವುದಿಲ್ಲ. ಆದರೆ, 'ಬೆಣ್ಣೆ ಕದ್ದ ಕೃಷ್ಣ'ನನ್ನಾಗಲಿ, ಅಂಥ ಕೃಷ್ಣನ ಆರಾಧಕರಾದ 'ಪುರಂದರ ದಾಸ' ರನ್ನಾಗಲಿ ಕುರಿತು ಬರೆದ ಕವಿತೆಗಳು ಭಿನ್ನವಾಗಿಯೇ ತೋರುತ್ತವೆ. ಮುಕ್ತ ಮನಸ್ಸಿನ ಸ್ವಚ್ಛಂದ ಭಾವನೆಗಳನ್ನು ಹೂವಿನ ಸರಮಾಲೆಯಂತೆ ಕಟ್ಟಿಕೊಡುವಲ್ಲಿ ನಿಸಾರರು ಯಶಸ್ವಿಯಾಗುತ್ತಾರೆ.

ನಿಸಾರರ 'ಬಸವೇಶ್ವರರು', 'ಶ್ರೀ ಶಾರದಾದೇವಿ', 'ಶ್ರೀರಾಮಕೃಷ್ಣ ಪರಮಹಂಸ', 'ಅರಬಿಂದೋ' ಕವಿತೆಗಳೂ ಕೂಡ ಇದೇ ಸಾಲಿಗೆ ಸೇರುವಂತಹವು. ಅವರುಗಳ ಸಾಧನೆ-ಸಿದ್ಧಿ, ಧ್ಯೇಯ-ಉದ್ದೇಶ ಇತ್ಯಾದಿಗಳ ಬಗೆಗಿನ ಅರಿವು ನಿಸಾರರಲ್ಲಿ ಮೂಡಿಸಿದ ಪೂಜ್ಯಭಾವನೆ ಎಂತಹುದೆಂಬುದನ್ನು ಈ ಒಂದೊಂದು ಕವಿತೆಯೂ ಸರಳ ಸುಂದರವಾಗಿ

ನಿರೂಪಿಸುತ್ತದೆ. ಇವರು ಯಾರೂ ಎಲ್ಲಿಂದಲೋ ಆವಿರ್ಭವಿಸಿ, ಉದ್ಭವಿಸಿ ಬಂದ ಅಲೌಕಿಕ ವ್ಯಕ್ತಿಗಳಲ್ಲ. ಈ ಭೂಮಿಗೇ ಅಂಟಿದವರು. ಇದರ ನಂಟನ್ನೇ ಹೊಂದಿದವರು. ಆದರೆ ಆ ಅಂಟಿಗೇ ಗಂಟು ಬೀಳದೆ ಅದರಿಂದ ಪಾರಾಗಿ ಮತ್ತೇನೋ ಹಿರಿದಾದದ್ದನ್ನು ಸಾಧಿಸಲು ಹೋರಾಟ ನಡೆಸಿದವರು. ಸಾಧನೆಗೈದು ಸಿದ್ಧಿಪಡೆದವರು. ಆ ಹೋರಾಟವೇ ಕವಿಯ ಕಾವ್ಯಸೃಷ್ಟಿಗೆ ಪ್ರೇರಕವಾದದ್ದು. ಇಲ್ಲಿಯೂ ನಿಸಾರರ ನಿಷ್ಕಲ್ಮಶ ಗುಣ ಹಾಗೂ ತಾದಾತ್ಮ್ಯ ಭಾವನೆ ಗರಿಗೆದರಿರುವುದು ಸುಸ್ಪಷ್ಟ.

'ಬಸವೇಶ್ವರರು' ಕವಿತೆಯ ಒಂದೊಂದು ಸಾಲೂ ಅರ್ಥಪೂರ್ಣ. ಕವಿಯ ಭಾವನೆಯ ಹೊರೆ ಹೊತ್ತ ಅವು ಅರ್ಥ ತುಂಬಿ ಬಾಗುತ್ತವೆ, ಬೀಗುತ್ತವೆ. ಬಸವೇಶ್ವರರ ಸಮಗ್ರ ವ್ಯಕ್ತಿತ್ವದ ಸ್ಥಿತಿಯನ್ನೂ ಸೆರೆ ಹಿಡಿಯುವ ತವಕ ಪ್ರತಿ ಸಾಲಿನಲ್ಲಿಯೂ ತಲೆ ಎತ್ತಿ ನಿಲ್ಲುತ್ತದೆ. ಎಲ್ಲಿಯೂ ಸೋಲಿಲ್ಲ—

'ಮಡುಗಟ್ಟಿ ನಾರಿದ್ದ ಸಂಪ್ರದಾಯಕೆ ನಾಲೆ
ಬಿಡಿಸಿ, ಹೊಸ ಹಾದಿಗಳ ರಚಿಸಿದಾತ;
ಈ ನಾಡ ಹಿರಿ ಬದುಕಿಗಂಟಿದ್ದ ಕಿಲುಬನ್ನು
ಉಜ್ಜುಜ್ಜಿ ಮತ್ತೊಮ್ಮೆ ಹೊಳೆಸಿದಾತ.'

(ಬಸವೇಶ್ವರರು)

ಇಂತಹ ವ್ಯಕ್ತಿಯ ಸಾಧನೆಯನ್ನು ಸೆರೆ ಹಿಡಿಯುವುದಾದರೂ ಎಂತು? ಕವಿಗೆ ಅದು ಸವಾಲಾಗಿಯೇ ತೋರುತ್ತದೆ. ಪ್ರಶ್ನೆಯಾಗಿಯೇ ನಿಲ್ಲುತ್ತದೆ.

'ಬೆಳಗಿನೊಳಗಿನ ಬೆಳಗ ನಿಬ್ಬೆರಗಿನಾನಂದ
ದಕ್ಕುವುದೆ ಬಡ ನುಡಿಯ ತೆಕ್ಕೆಯಲ್ಲಿ?
ಕೊನೆಯಿರದ ಆಗಸದ ನೀಲಿಮೆಯ ಬಿತ್ತರವ
ಗೆಲ್ಲಬಹುದೆ ಕಿರಿಯ ರೆಕ್ಕೆಯಲ್ಲಿ?'

(ಅದೇ)

ಭಾವನೆಗಳಿಗೆ ಮಿತಿ ಇಲ್ಲದಿದ್ದರೂ ಎಲ್ಲೆ ಕಾಣಿಸದಿದ್ದರೂ ಅದನ್ನು ಬಂಧಿಸಿಡುವ ಭಾಷೆಗೆ ಇತಿಮಿತಿ ಇದ್ದೇ ಇದೆ. ಕವಿಯನ್ನು ಬಾಧಿಸುವುದು ಇದೇ. ಬಾನೆತ್ತರದ ಭಾವನೆಗಳಿಗೆ ಭಾಷೆ ತಡೆಯಾಗುತ್ತದೆ. ಆದರೂ 'ಅಶ್ವತ್ಥ ಮರದಂತೆ ನೆರೆಹೊರೆಯ ಶರಣರಿಗೆ ತಂಪಾಗಿ ಕೊಡೆ ಹಿಡಿದು ನಿಂತನಣ್ಣ' ಎಂಬ ಸಾಲಿನಲ್ಲಿ ಅಣ್ಣನ ಸಾಧನೆಯನ್ನು ಸೆರೆಹಿಡಿಯಲು ಯತ್ನಿಸಿದ್ದಾರೆ. ಅಂತ್ಯದಲ್ಲಿ ಬಸವೇಶ್ವರರ ತತ್ತ್ವದ ಸಾರವನ್ನು ನಾಲ್ಕು ಸಾಲುಗಳಲ್ಲಿ ಅಭಿವ್ಯಕ್ತಿಸುವಲ್ಲಿ ನಿಸಾರರು ಯಶಸ್ವಿಯಾಗಿದ್ದಾರೆ:

'ಹೊರಗಿನಂತೆಯೆ ಇರಲಿ ಒಳ ಮನೆಯ ಪರಿಶುದ್ಧಿ;
ಪ್ರತಿ ಚಣವು ಕಸ ಹೊಡೆವ ಬುದ್ಧಿಯಿರಲಿ;
ದೇಹ ದೇವರ ನೆಲಸು; ಅಂತರಂಗವೆ ಹಾಸು—
ಸುತ್ತ ತಿಳಿವಿನ ಗಂಧ ಸೂಸುತಿರಲಿ'

(ಅದೇ)

ಎಂಬ ಸಂದೇಶದ ಸಾರವನ್ನು ನಾಲ್ಕು ಸಾಲುಗಳಲ್ಲಿ ಎರಕ ಹೊಯ್ದಿದ್ದಾರೆ. 'ಬೆಂದ ಬಾಳಿಗೆ ವಚನ ಗಾಳಿ'ಯನ್ನು ಬೀಸಿ ತಂಪನ್ನೆರೆದ ಅಣ್ಣನ ನುಡಿ ಮುತ್ತುಗಳ ಮಾಲೆ ಕಟ್ಟಿದ್ದಾರೆ.

ಮಾತೆ ಶ್ರೀ ಶಾರದಾದೇವಿ ಅವರನ್ನು ಕುರಿತ ನಿಸಾರರ ಕವಿತೆ ಕೂಡ ಭಕ್ತಿಯ, ಅಧ್ಯಾತ್ಮದ ನೆಲೆಯಲ್ಲಿ ಬೇರು ಬಿಟ್ಟ ಕವಿತೆ. ಕವಿತೆಯ ಒಂದೊಂದು ಸಾಲೂ ಶ್ರೀ ಶಾರದಾ ದೇವಿ ಅವರ ಬಗ್ಗೆ ತಮಗಿರುವ ಭಕ್ತಿ, ಗೌರವಗಳನ್ನು ಸೂಸುವ ಸಂಕೇತಗಳಾಗಿವೆ. ಶಾರದಾ ಮಾತೆಯ ಅಮೃತಶಿಲೆಯ ಪುತ್ಥಳಿಯಂತೆ ಆ ಸಾಲುಗಳು ಮೋಹಕವಾಗಿ, ಗೌರವ ಭಾವನೆ ಯಿಂದ ತಲೆ ಬಾಗುವಂತೆ ಮಾಡುತ್ತವೆ. ಮಾತೆಯ ವ್ಯಕ್ತಿತ್ವವನ್ನು ಆ ಕವನದಲ್ಲಿ ಜೀವಂತ ವಾಗಿಸಿದ್ದಾರೆ. ಶ್ರೀರಾಮಕೃಷ್ಣ ಪರಮಹಂಸರ ಜೊತೆ ಜೊತೆಯಲ್ಲಿ ಅವರ ವ್ಯಕ್ತಿತ್ವವನ್ನೂ ತೂಗಿ ನೋಡಿದ್ದಾರೆ. 'ಕೃಷ್ಣರಾಜ ಸಾಗರಕೆ ಎಂತೊ ಬೃಂದಾವನವು ಅಂತೆ, ಅನವರತ ಗುರುವಿಗನ್ಯೋನ್ಯ ನೀವು' ಎಂದು ಹೇಳುತ್ತ—

'ವಾರಣಾಸಿ ಜೊತೆ ಗಂಗೆ ಕೂಡ ಮನಸಲ್ಲಿ ಹೊಳೆಯುವಂತೆ
ದೇವರನ್ನು ಸ್ಮರಿಸಿರಲು ದೇಗುಲದ ಶುಭ ಚಿತ್ರ ಬೆಳೆಯುವಂತೆ
ಪರಮಹಂಸರನು ಮಹದ್‌ಭಕ್ತಿಯಲಿ ನೆನೆವ ಎಲ್ಲ ಸುಜನ
ತಮಗರಿಯದಂತೆ ಸಲ್ಲಿಸುತಲಿಹರು ನಿಮಗೂನು ದಿವ್ಯ ನಮನ.'

(ಶ್ರೀ ಶಾರದಾ ದೇವಿ)

ಅವರೀರ್ವರ ಹೊಂದಾಣಿಕೆಯನ್ನು 'ಏಕಸೂತ್ರದ ಅವಳಿ ಬೊಂಬೆಯಂತಾಯ್ತು ಭವ ಸುಸೂತ್ರ' ಎಂದು ಹೇಳುವಲ್ಲಿ ಶ್ರೀಮಾತೆಯ ಮಹೋನ್ನತಿಯನ್ನು ಎತ್ತಿ ಹಿಡಿದಿದ್ದಾರೆ. ಇಂತಹ ಶ್ರೀಮಾತೆಯ ಬಗೆಗೆ ನಿಸಾರರ ಮನ ಮಿಡಿಯುವುದು ಹೀಗೆ:

'ನಿಮ್ಮ ನೆನೆದು ಸದ್ಭಕ್ತಿಯಲ್ಲಿ ತನು ಮನವ ಹೂಡಿಸಿರುವೆ
ಭವದ ಬುದ್ಧಿ ಚಿಜ್ಜ್ಯೋತಿಯನ್ನು ನಿಮ್ಮಡಿಗೆ ಜೋಡಿಸಿರುವೆ' **(ಅದೇ)**

ಈ ಪೂಜ್ಯಭಾವನೆ ಕವಿಗೆ ಕೇವಲ ಆವೇಶದಿಂದ ಮೂಡಿದ್ದೆನ್ನಿಸುವುದಿಲ್ಲ. ಭಕ್ತಿ ಗೌರವಗಳೂ ಅದರಲ್ಲಿ ಮಿಳಿತಗೊಂಡಿವೆ. ಶ್ರೀಮಾತೆಯ ವ್ಯಕ್ತಿತ್ವ, ಅವರ ಆಧ್ಯಾತ್ಮಿಕ ಎತ್ತರ ಕೂಡ ಅವರನ್ನು ಸೆರೆ ಹಿಡಿದಿದೆ. ಆ ಬಂಧನದಲ್ಲಿಯೇ ಮಿಡಿದ ಸಾಲುಗಳಿವು:

'ಮನೆ ತುಂಬ ಕಂಪನೆಸೆವಂತೆ ಎಲ್ಲೊ ಹಚ್ಚಿಟ್ಟ ಅಗರು ಬತ್ತಿ
ಸದ್ದಿರದೆ ಬಾಳಿ, ಹಬ್ಬಿದಿರಿ ಕೀರ್ತಿ ಯುಗದೆತ್ತರಕ್ಕೆ ಎತ್ತಿ.
ನಾಡ ನಾರಿಯರ ಬಾಳ ಗುರಿಗೆ ಧ್ರುವತಾರೆ ಪುಣ್ಯ ಸ್ಮರಣೆ.
ಪರಮ ಪದಕೆ ಪಾವಟಿಗೆ ನಿಮ್ಮ ಶ್ರೀಮತ್ ಪದಾನುಸರಣೆ.' **(ಅದೇ)**

'ಶ್ರೀರಾಮಕೃಷ್ಣ ಪರಮಹಂಸ', 'ಅರಬಿಂದೋ' ಅವರನ್ನು ಕುರಿತ ನಿಸಾರರ ಕವನಗಳೂ ಅವರ ಅಂತರಂಗದ ಭಾವನೆಗಳಿಗೆ ಹಿಡಿದ ಕನ್ನಡಿಗಳಾಗಿವೆ. ಪರಿಶುದ್ಧ ಸ್ಫಟಿಕ ವ್ಯಕ್ತಿತ್ವದ ಆ ಮಹಾನ್ ವ್ಯಕ್ತಿಗಳ ಪ್ರಭಾವ ಕವಿಯ ಮೇಲೆ ದಟ್ಟವಾಗಿರುವುದು ಅದಕ್ಕೆ ಸಾಕ್ಷಿ ಯಾಗುತ್ತವೆ. ದರ್ಪಣದಲ್ಲಿ ಮುಖ ಶುದ್ಧವಾಗಿ ಸ್ವಚ್ಛವಾಗಿ ಕಾಣಬೇಕಾದರೆ ದರ್ಪಣವೂ ಶುದ್ಧ ಹಾಗೂ ಸ್ವಚ್ಛವಾಗಿರಬೇಕಾಗುತ್ತದೆ. ಇಲ್ಲವಾದರೆ ಎಲ್ಲ ಮಸಕು ಮಸಕಾಗುತ್ತದೆ.

ಅದರ ಸತ್ಯ ನಿಸಾರರ ಇಂತಹ ಕವಿತೆಗಳಲ್ಲಿ ನಿರೂಪಿತವಾಗಿರುವುದನ್ನು ಕಾಣಬಹುದು.

ಹಿಂದೂ ಧರ್ಮದ ಆಚಾರ-ವಿಚಾರ-ಆಚಾರ್ಯರ ಬಗ್ಗೆ ನಿಸಾರರು ಮನ ಸೋತಿರುವಂತೆಯೇ ಕ್ರಿಶ್ಚಿಯನ್ ಧರ್ಮದ ಬಗ್ಗೆಯೂ ಮನ ಸೋತಿರುವುದು ಅವರ 'ಶಿಲುಬೆ ಏರಿದ್ದಾನೆ', 'ಮದರ್ ತೆರೆಸ' ಕವಿತೆಗಳಲ್ಲಿ ವ್ಯಕ್ತಗೊಂಡಿದೆ. ನಿಸಾರರ ಮನೋಧರ್ಮವೇ ವಿಶಿಷ್ಟವಾದುದಾಗಿದೆ. ಎಲ್ಲವನ್ನೂ ಅಪ್ಪಿಕೊಳ್ಳಬೇಕೆಂಬ ಅವರ ಮನಸ್ಸು ಇದಕ್ಕೆ ಮುಖ್ಯ ಕಾರಣ. 'ಶ್ರೀ ಶಾರದಾದೇವಿ' ಕವಿತೆಯಲ್ಲಿನ ಕವಿತೆಯ ಸಾಲುಗಳನ್ನೇ ಇಲ್ಲಿ ಉದಾಹರಿಸಬಹುದು:

'ಯಾವ ಯುಗದಲೆ, ಯಾವ ನೆಲದಲೆ, ಯಾವ ಧರ್ಮದಲ್ಲೆ
ಸದ್ವಿಭೂತಿ ತಾನರಳಬಹುದು, ಅದಕಿಲ್ಲ ಎಲ್ಲೆಗಿಲ್ಲೆ.
—ವೇದ ಮತ್ತು ಬೈಬಲ್, ಖುರಾನು ಸಾರಿಹವು ಸತ್ಯವನ್ನೆ:
ಇದನರಿಯದಂಥ ಅವಿಚಾರವಂತ ಆಚಾರ ಪಂಥ ಸೊನ್ನೆ.' (ಅದೇ)

ಇವು ಕವಿಯ ಹುಸಿ ನುಡಿಗಳೆನಿಸುವುದಿಲ್ಲ. ಕಾಲ, ನೆಲ, ಧರ್ಮಗಳು ಯಾವುದಾದರೇನು, 'ಸದ್ವಿಭೂತಿ' ಸರ್ವಕಾಲಿಕ, ಸಾರ್ವತ್ರಿಕ ಎಂಬ ಸತ್ಯದ ಅರಿವನ್ನು ಇಲ್ಲಿ ಹುದುಗಿಸಿದ್ದಾರೆ.

'ಶಿಲುಬೆ ಏರಿದ್ದಾನೆ' ಕವನದಲ್ಲಿ ಏಸು ಶಿಲುಬೆ ಏರಿದ ಸಂದರ್ಭ ಹಾಗೂ ಆ ಸಂದರ್ಭದ ಚಿತ್ರಣವನ್ನು ಕೊಡುತ್ತ ಕವಿ ಅದನ್ನು ಸಮಕಾಲೀನ ಸ್ಥಿತಿಗೆ ದರ್ಪಣವಾಗಿಸುವುದು ವಿಶೇಷವಾಗಿದೆ. 'ಬಂದೇ ಬರುತ್ತದೆ ದೈವೀರಾಜ್ಯ' ಎಂಬ ಆಶಾ ಭಾವನೆಯನ್ನು ಹೊತ್ತಿದ್ದರೂ ಏಸು ಶಿಲುಬೆ ಏರಿದ ಸಂದರ್ಭದ ಚಿತ್ರ ಕವಿಯನ್ನು ಮತ್ತೆ ಮತ್ತೆ ಬಿಡದೆ ಕಾಡುತ್ತ ಬಂದಿರುವುದು ಅವರ ಹೃದಯಾಂತರಾಳದ ಭಾವನೆಗಳಿಗೆ ಹಿಡಿದ ಕನ್ನಡಿಯಾಗಿದೆ:

'ಇಗರ್ಜಿ ಮಸಜೀದು ದೇವಸ್ಥಾನ ಮಠಗಳಲ್ಲಿ
ಮತ ಮತದ ಮತಿರಹಿತ ಹಟಗಳಲ್ಲಿ;
ಕೋರ್ಟು ಕಾರ್ಖಾನೆ ಠಾಣೆ ಠಾಣೆಗಳಲ್ಲಿ,
ಕಣ್ಬೆಳಕ ಕಿತ್ತೆಸೆದು ಕುರುಡುಗೊಳಿಸುವ
ನಮ್ಮ ಬಂದಿಖಾನೆಗಳಲ್ಲಿ;
ದವಾಖಾನೆಗಳ ಕೋಣೆ ಕೋಣೆಗಳಲಿ;
ಮಾಹೆಗೊಂದಾವರ್ತಿ ಹಣತೆ ಹೊತ್ತಿಸಿಕೊಳದ
ದಲಿತ ವಾಸದ ಸೋಗೆ ಬಿಲಗಳಲ್ಲಿ—

ದಿನನಿತ್ಯ ಶಿಲುಬೆ ಏರಿದ್ದಾನೆ ಜೀಸಸ್;
ಅಸಂಖ್ಯ ಕ್ರಿಸ್ಮಸ್ಸುಗಳ ಹರಸಿ,
ಶೋಷಿತರ ಕಂಬನಿಯನೊರಸಿ,
ಸತ್ಯಕ್ಕೆ ಹೊಸ ಕವಲುಗಳ ತೆರೆಸಿ.' (ಶಿಲುಬೆ ಏರಿದ್ದಾನೆ)

'ದಿನ ನಿತ್ಯ ಶಿಲುಬೆ ಏರಿದ್ದಾನೆ ಜೀಸಸ್; ಅಸಂಖ್ಯ ಕ್ರಿಸ್ಮಸ್ಸುಗಳ ಹರಸಿ' ಎಂಬ ಕವಿವಾಣಿ ಅರ್ಥಪೂರ್ಣವಾಗಿದೆ.

'ಮದರ್ ತೆರೆಸ' ಪದ್ಯ ಕೂಡ 'ಬಸವೇಶ್ವರರು', 'ಶ್ರೀಶಾರದಾದೇವಿ', 'ಶ್ರೀರಾಮ

ಕೃಷ್ಣ ಪರಮಹಂಸ'ರನ್ನು ಹೋಲುವ ಅಷ್ಟೇ ಗೌರವ-ಭಕ್ತಿ ಭಾವನೆಗಳಿಂದ ಪ್ರೇರಿತವಾದ ರಚನೆ.

'ಆಗ ನೈಟಿಂಗೇಲಳೀಗ ತಾಯಿ ತೆರೇಸ
ಸ್ತ್ರೀ ಪವಾಡದಪೂರ್ವ ಯಮಳ ಶೃಂಗ
'ಮಾನವೀಯತೆ' ಪದಕೆ ಮಿಗಿಲರ್ಥ ಮೂಡಿಸುವ
ಮಾತೃ ಮಮತಾವಕ್ಷದಮಲ ಸಂಗ.'

ನಿಸಾರರ 'ಹಿರಿಯರು' ಹಾಗೂ 'ಎಂಥೆಂಥ ಜೀವಿಗಳು' ಕವನಗಳು ಅವರ ಪೂಜ್ಯ ಭಾವನೆಯ ಹಾಗೂ ಕೃತಜ್ಞತಾಭಾವನೆಯ ಪ್ರತೀಕದ ಕವಿತೆಗಳು. ಸದ್ಗುಣಶಾಲಿ ವ್ಯಕ್ತಿಗಳ ಸಂಸ್ಮರಣೆ ಮತ್ತು ಅವರ ವ್ಯಕ್ತಿತ್ವದ ಘನತೆಗೆ ಮಣಿದು ಗೌರವ ಸಲ್ಲಿಸುವುದೇ ಇಲ್ಲಿಯ ಕವಿತೆಗಳ ವಸ್ತು. ಆದರೆ ಅದರ ಹಿಂದಿರುವ ಕವಿಯ ಸದ್ಭಾವನೆಗಳು ಅಸದಳ. ಅವರ ಕವಿತೆಗಳಲ್ಲಿ ಸರ್ವಧರ್ಮ ಸಮನ್ವಯವಾದದ ಅರಿವಾಗುವಂತೆಯೇ, ಇಂತಹ ಪೂಜನೀಯ ವ್ಯಕ್ತಿಗಳನ್ನು ಕುರಿತ ಕವಿತೆಗಳಲ್ಲಿ ಮಹಾನ್ ವ್ಯಕ್ತಿಗಳ ಬಗೆಗಿನ ಭಕ್ತಿ-ಗೌರವ ಭಾವನೆಗಳೂ ವೇದ್ಯವಾಗುತ್ತವೆ. ಇದಕ್ಕೆ ಬೇಕಾದದ್ದು ಮಾನವತಾವಾದ. ಅದು ಜಾತಿ ಮತ ಧರ್ಮದ ಎಲ್ಲೆಗಳನ್ನು ದಾಟಿ ನಿಂತದ್ದು. ನಿಸಾರರ ಕವಿತೆಗಳಲ್ಲಿ ಅದು ವ್ಯಾಪಕವಾಗಿ ಹರಡಿದೆ—

'ಎಂಥೆಂಥ ಜೀವಿಗಳು ಬಾಳಿ ಬೆಳಗಿದವಿಲ್ಲಿ
ಶ್ರೀಗಂಧ ಬೆಳೆವಂಥ ನಾಡಿನಲ್ಲಿ;
ಹೊನ್ನಂಥ ಭಾವಗಳು ಆಳಿ ಮೊಳಗಿದವಿಲ್ಲಿ
ಸಿರಿವಂತ ನೆಲದೊಡಲ ಹಾಡಿನಲ್ಲಿ.'

ಇಲ್ಲಿ ಕವಿಗೆ ಕಾಣುವುದು ಅವೆಲ್ಲವನ್ನೂ ಗರ್ಭೀಕರಿಸಿಕೊಂಡ ನಾಡು ಹಾಗೂ ಅಲ್ಲಿ ಮೂಡಿ ಬಂದ 'ಸಿರಿವಂತ ನೆಲದೊಡಲ ಹಾಡು'. ಎಲ್ಲ ಧರ್ಮಗಳೂ ಒಂದು, ಎಲ್ಲ ಮತಗಳೂ ಒಂದು, ಎಲ್ಲ ಜನರೂ ಒಂದೇ ಎಂಬ ಭಾವನೆಯ ಸಿರಿವಂತ ಭಾವ ಅಲ್ಲಿ ವ್ಯಕ್ತಗೊಂಡಿದೆ. ಹಾಗಾಗಿಯೇ ಕವಿ ಇಲ್ಲಿನ ಕವಿತೆಗಳಲ್ಲಿ ಮಿಕ್ಕೆಲ್ಲವನ್ನೂ ಕಡೆಗಣಿಸಿ ಮಾನವೀಯತೆಯನ್ನು ಮೆರೆದಿರುವುದು ಇಲ್ಲಿನ ವೈಶಿಷ್ಟ್ಯವಾಗಿ ತೋರುತ್ತದೆ.

ಯಾವ ದೃಷ್ಟಿಯಿಂದ ನೋಡಿದರೂ ನಿಸಾರರ ಕಾವ್ಯ, ವಸ್ತು ವೈವಿಧ್ಯ ಹಾಗೂ ಭಾಷಾ ವೈಶಿಷ್ಟ್ಯದಿಂದ ಹಿರಿಮೆಯನ್ನು ಸಾಧಿಸುತ್ತವೆ. ಸಹಜ ಕವಿಗೆ ಇರಬೇಕಾದ ಪ್ರಾಮಾಣಿಕತೆ, ನವಿರಾದ ಸೌಂದರ್ಯದೃಷ್ಟಿ, ನೇರ ಅಭಿವ್ಯಕ್ತಿ ನಿಸಾರರಿಗೆ ದೈವದತ್ತ ವರಗಳಾಗಿ ಲಭ್ಯವಾಗಿವೆ. ಕೊಂಕು ನುಡಿಯ ಆಡಂಬರವಿಲ್ಲದೆ ವಿಜೃಂಭಿಸುವ ಈ ಕವಿ ಪಂಥಾತೀತರಾಗಿ ನಿಲ್ಲುತ್ತಾರೆ. ಸರಳವಾಗಿ ಹೇಳುವುದಾದರೆ ನಿಸಾರರದ್ದು ಸಹಜ ಕವಿತೆ. ಹೃದಯದಿಂದ ಹೊರ ಬಂದ ಕವಿತೆ. ಹೃದಯವನ್ನು ಮುಟ್ಟಬಲ್ಲ, ತಟ್ಟಬಲ್ಲ ಕವಿತೆ. ಆದರೆ ಅದು ಅಷ್ಟಕ್ಕೇ ವಿರಮಿಸುವಂತಹುದಲ್ಲ. ಬುದ್ಧಿಯ ಹಾಗೂ ಹೃದಯದ ವಿಕಾಸಕ್ಕೂ ಎಡೆ ಮಾಡಿಕೊಡುವಂತಹುದು. ಹೃದಯ ಹೃದಯಗಳನ್ನು ಹತ್ತಿರ ತಂದು ಒಂದಾಗಿಸಲು ಕಾರಣ ವಾಗುವಂತಹುದು. ಈ ದೃಷ್ಟಿಯಿಂದ ನಿಸಾರರು ಮಿಕ್ಕ ಕವಿಗಳಿಗಿಂತ ಭಿನ್ನವಾಗಿಯೇ ತೋರುತ್ತಾರೆ.



ಕಾವ್ಯ ಕಾಲ :
ನಿಸಾರರ ಕೆಲವು ಕವಿತೆಗಳ ವಿಶ್ಲೇಷಣೆ

♦ ದೇಶ ಕುಲಕರ್ಣಿ

ಪೀಠಿಕೆ—ನನ್ನ ಸನ್ಮಿತ್ರರೂ ಸಹಕವಿಯೂ ಆದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ನನಗಿಂತ ಸುಮಾರು ಎರಡು ವರ್ಷ ಹಿರಿಯರು. ಅವರನ್ನು ಕಂಡರೆ ನನಗೆ ಅಭಿಮಾನ ಇದ್ದಂತೆ ಗೌರವವೂ ಇದೆ. ಆದುದರಿಂದ ಅವರ ಬಗ್ಗೆಯಾಗಲಿ ಅವರ ಕಾವ್ಯದ ಬಗ್ಗೆಯಾಗಲಿ ನಾನು ಬರೆದಾಗ ಗೌರವಾಭಿಮಾನದಿಂದಲೇ ಬರೆಯುತ್ತೇನೆ. ತರುಣದ ಎರಡು ವಿಷಯಗಳನ್ನು ಹೇಳದೆ ಮುಂದುವರಿಯುವಂತಿಲ್ಲ. ಕಾವ್ಯ ಸೃಷ್ಟಿಯ ಮರ್ಮದ ಅನೇಕ ಒಳ ಸುಳಿಗಳಲ್ಲಿ ಜನಪ್ರಿಯತೆ ಮತ್ತು ಮಾಧ್ಯಮಗಳ ಪಾತ್ರ ಬಹು ಮುಖ್ಯವಾದವು. ವಾಸ್ತವ ವಾಗಿ ಈ ಎರಡೂ ಒಂದಕ್ಕೊಂದು ಕೊಕ್ಕೆ ಹಾಕಿಕೊಂಡಿವೆ. 1962 ಮತ್ತು 1965ರ ಯುದ್ಧದ ದಿನಗಳಲ್ಲಿ ಆಕಾಶ ವಾಣಿಯು ಮುಂಜಾನೆ ಬಿತ್ತರಿಸುತ್ತಿದ್ದ ನಿಸಾರರ—

‘ನೆಲ ನಮ್ಮದು, ಜಲ ನಮ್ಮದು
ನಾವೊಡೆಯರು ನಮಗೆ.
....
....
‘ಭದ್ರ ಗೋಡೆಗಳನು ಕಟ್ಟಿ
ಮರಳಿ ಗೆಲವ ಬಿಂಬಿಸಿ
ನೆಮ್ಮದಿಯನು ತುಂಬಿಸಿ—
ಬಾಳಬೇಕು, ಆಳಬೇಕು
ತಾಯ್ನಾಡಿಗೆ ವಂದಿಸಿ’ (ನೆಲ ನಮ್ಮದು)

ಮತ್ತು—

'ತಾಯ ಮಾನ ಉಳಿಸಲೆಂದು
ಕಳೆದ ನೆಲವ ಗಳಿಸಲೆಂದು
ಶ್ರಮಿಸಿದಸಮ ತೇಜರೆ
ವಿಕ್ರಮ ಗುಣ ಸಹಜರೆ
ಇಗೊ, ವಂದನೆ ನಿಮಗೆ!
ಅಭಿವಂದನೆ ನಿಮಗೆ!'
(ಅದೇ)

ಎಂಬ ವೀರ್ಯವತ್ತಾದ ಗೀತೆಗಳು ಈಗಲೂ ಕಿವಿಯಲ್ಲಿ ಘೋಷವಾಗಿ ಭೋರ್ಗರೆಯುತ್ತಿವೆ. ಆಧುನಿಕ ಭಾವಗೀತೆಗಳ ಮೊದಲ (ಕನ್ನಡ) ಕ್ಯಾಸೆಟ್ ಹೊರತಂದ ಈ ಕವಿಯ,

'ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ
ಓಲೆಗರಿಯ ಸಿರಿಗಳಲ್ಲಿ ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ, ತಾಯಿ ನಿತ್ಯೋತ್ಸವ ನಿನಗೆ' (ನಿತ್ಯೋತ್ಸವ)

—ನುಡಿಗಳನ್ನು ಕೇಳುವಾಗ ಮೈ ಜುಮ್ಮೆನಿಸುತ್ತದೆ. ನೆಲ ನಮ್ಮದು ಜಲ ನಮ್ಮದು ಅನ್ನುವದರಲ್ಲಿನ ಕೆಚ್ಚು ಮತ್ತು ನಿತ್ಯೋತ್ಸವ ಅನ್ನುವದರಲ್ಲಿನ ನೆಚ್ಚು ಇಷ್ಟೊಂದು ಶ್ರದ್ಧೆ ಮತ್ತು ಆತ್ಮವಿಶ್ವಾಸದಲ್ಲಿ ಬಂದಿರುವುದು ಸಮಕಾಲೀನ ಕವಿಗಳಲ್ಲಿ ಅಪರೂಪ.

ಪೂರ್ವಕಾಲದಲ್ಲಿ ನಡೆದ ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ವರಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ' ಕವನವನ್ನು ಸಾಭಿನಯವಾಗಿ ಭಾವಪೂರ್ಣವಾಗಿ ವಾಚನ ಮಾಡಿದ ವೈಖರಿಯನ್ನು ಹಿರಿಯರು ವರ್ಣಿಸಿದ್ದಾರೆ. ಆಧುನಿಕ ಕಾಲದಲ್ಲಿ ಇದಕ್ಕೆ ಸಮಾನಾಂತರವಾಗಿ ನಿಸಾರ್ ತಮ್ಮ 'ಕುರಿಗಳು, ಸಾರ್, ಕುರಿಗಳು' ಕವನವನ್ನು ಕಾರವಾರದಲ್ಲಿ 1965ರಲ್ಲಿ ನಡೆದ 45ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಅಷ್ಟೇ ನಾಟಕೀಯವಾಗಿ ಓದಿ ಜನರ ಮನಸ್ಸನ್ನು ಗೆದ್ದಿದ್ದನ್ನು ನಾನು ಅಲ್ಲಿದ್ದುದರಿಂದ ದಾಖಲಿಸಬಲ್ಲೆ:

'ನಾವು, ನೀವು, ಅವರು ಇವರು
ಕುರಿಗಳು, ಸಾರ್, ಕುರಿಗಳು!'

ಎಂದು ಅವರು ಕೊನೆಯ ಸಾಲುಗಳನ್ನು ಓದುವಾಗ ವೇದಿಕೆಯ ಮೇಲೆ ಇರುವವರನ್ನೂ ಸಭಿಕರನ್ನೂ ತಮ್ಮನ್ನೂ ಕೈಯಲ್ಲಿ ತೋರಿಸುತ್ತ ಅಭಿನಯಿಸಿ, ಈ ಕವನಕ್ಕೆ ನ್ಯಾಯವಾಗಿ ಲಭಿಸಬೇಕಾದ ದೃಶ್ಯರೂಪವನ್ನು ತಂದುಕೊಟ್ಟರು.

ನಿಸಾರ್ ಜನಪ್ರಿಯ ಕವಿ; ಮಾಧ್ಯಮ ಬೆಳೆಸಿದ ಕವಿ.

ಕಾವ್ಯ ಲಕ್ಷಣಗಳು:—ನಿಸಾರರ ಕಾವ್ಯಕಾಲ ನವ್ಯತೆಯು ದಟ್ಟವಾಗಿದ್ದ ಕಾಲ. ಸ್ವಾಭಾವಿಕವಾಗಿಯೇ ಅವರು ನವ್ಯತೆಯ ಪ್ರಭಾವಕ್ಕೆ ಒಳಗಾಗಿದ್ದು ನಿಜ. ಆದರೆ ಅದರ ಪ್ರಭಾವದಲ್ಲಿದ್ದೂ ಅದರಿಂದ ಬೇರೆಯಾಗಿ ಬರೆಯಬೇಕೆಂಬ ಹಂಬಲ ಮತ್ತು ಹವಣಿಕೆ

ಅವರು ಸಂಕಲನದಿಂದ ಸಂಕಲನಕ್ಕೆ ಬೆಳೆದು ಬಂದ ರೀತಿಯಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ನವ್ಯತೆಯಲ್ಲಿ ಕಥನ ಮಾರ್ಗವು ಬಳಕೆಯಾಗುವುದು ತುಸು ವಿರಳವೇ. ಸಂಕೇತ ಮತ್ತು ಪ್ರತಿಮೆಗಳಲ್ಲಿ ಹೊಸ ಕಾವ್ಯವು ತನ್ನ ಶಿಲ್ಪವನ್ನು ಕಡೆದುಕೊಳ್ಳುತ್ತಿದ್ದಾಗ ನಿಸಾರ್ ಕಥನ ಮಾರ್ಗದಲ್ಲಿ ಕಾವ್ಯ ರಚನೆ ಮಾಡಿದರು. 'ಅಮ್ಮ, ಆಚಾರ ಮತ್ತು ನಾನು', 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ' ಮುಂತಾದ ಅನೇಕ ಕವನಗಳು ಕಥನ ಮಾರ್ಗದಲ್ಲಿ ಬರೆದಂಥವೇ. ಕಥನ ಮಾರ್ಗದ ಒಂದು ಮುಖ್ಯ ಲಕ್ಷಣ ಎಂದರೆ ಪರಿಣಾಮ ಮಾತ್ರವಷ್ಟೇ ಮುಖ್ಯವಲ್ಲ ಎಂದು ತೋರಿಸಿ ವಿಸ್ತಾರದ ಕಡೆಗೆ ನಮ್ಮ ಗಮನ ಸೆಳೆಯುವುದು.

ಹೊಸ ಕಾವ್ಯದಲ್ಲಿ ವಿಸ್ತಾರ ಒಂದು ಅವಗುಣವಾಗಿತ್ತು. ಅಲ್ಲಿ ಭಾಷೆಯ ಸಾಂದ್ರತೆ ಮಹತ್ವದ ಅಂಶವಾಗಿ ಸಂಕ್ಷಿಪ್ತತೆ ಅದರ ಜೀವದ್ರವ್ಯವಾಗಿತ್ತು. ಆದರೆ ನಿಸಾರರ ಕಾವ್ಯದ ಬಹು ಮುಖ್ಯ ಲಕ್ಷಣ ಅದರ ವಿಸ್ತಾರ ಗುಣ. ವಸ್ತುವಿನಲ್ಲಿ, ನಿರೂಪಣೆಯಲ್ಲಿ ಮತ್ತು ಭಾಷೆಯಲ್ಲಿ ವಿಸ್ತಾರ. ಯಾವ ವಸ್ತುವನ್ನು ಬೇಕಾದರೂ ಕಾವ್ಯಕ್ಕೆ ಒಗ್ಗಿಸುವ ಇವರು ಕಾವ್ಯವನ್ನು ಅಗಲ ಅಗಲಕ್ಕೆ ವಿಸ್ತರಿಸುವುದರಲ್ಲಿ ಸಹಜವೆಂಬಂತೆ ಜಗತ್ತನ್ನು ತ್ರಿವಿಕ್ರಮನಂತೆ ಬಾಚಿಕೊಳ್ಳುತ್ತಾರೆ. ವಿಸ್ತಾರ ಅಪರೂಪವಾಗಿರುವ ಹೊಸ ಕಾವ್ಯದ ಕಾಲದಲ್ಲಿ ಈ ಕವಿ ಅಗಲವನ್ನು ತುಂಬ ಸಂಭ್ರಮದಿಂದ ಉತ್ಸಾಹದಿಂದ ನುಡಿನುಡಿಯಾಗಿ ಬಿಡಿಸುತ್ತಾ ಹೋಗುತ್ತಾರೆ. ಇಂಥ ವಿಸ್ತಾರವು ಇವರಿಗೆ ದಯಪಾಲಿಸಿರುವ ಅಪೇಕ್ಷಣೀಯ ವರ ಎಂದರೆ ಕಾವ್ಯದ ಸಂವಹನಶೀಲತೆ. ಹೊಸ ಕಾವ್ಯದ ಬಗ್ಗೆ ಬಂದ ಸಮುದಾಯದ ಆಕ್ಷೇಪಣೆ ಅದರ ಅಗಮ್ಯತೆ ಮತ್ತು ಅಸ್ಪಷ್ಟತೆ. ಇದಕ್ಕೆ ಕಾರಣ ಆ ಕಾವ್ಯದ ಸಂಕ್ಷಿಪ್ತತೆ ಮತ್ತು ಪ್ರತಿಮಾನಿಷ್ಠ ಶಿಲ್ಪ. ನಿಸಾರರ ಕಾವ್ಯ ಸಂವಹನಶೀಲವಾದುದರಿಂದ ಯಾವ ಗೂಢವೂ ಇಲ್ಲದೆ ವಾಚ್ಯ ವಾಗಿಯೇ ಸಂದಿಗ್ಧತೆಯನ್ನು ದಾಟಬಲ್ಲುದು. ಅರ್ಥಗೊಂದಲವಿಲ್ಲದ ಈ ಲಕ್ಷಣವನ್ನು ಕುವೆಂಪು ಉಲ್ಲೇಖಿಸಿರುವುದನ್ನು ನಿಸಾರರು ನೆನೆಯುತ್ತಾರೆ. ನಿಸಾರರ ಯಾವ ಕವನವೂ ಸೋದ್ದಿಶ್ಯವಾಗಿ ಅಸ್ಪಷ್ಟವಾಗುವದಿಲ್ಲ. ಸ್ಪಷ್ಟವಾಗುವುದರಿಂದಲೇ ನಿಸಾರರ ಕಾವ್ಯವು ಕವಿಗೋಷ್ಠಿಯಲ್ಲಿ ಸ್ವಾರಸ್ಯವಾಗಿ ವಿಜೃಂಭಿಸುತ್ತದೆ.

ನಿಸಾರರ ಕಾವ್ಯದ ಶ್ರವ್ಯಗುಣಕ್ಕೆ ಇನ್ನೆರಡು ಲಕ್ಷಣಗಳು ನೆರವಾಗುತ್ತವೆ. ಅಂತ್ಯ ಪ್ರಾಸವು ಅನಿವಾರ್ಯವಾಗಿ ಬರುವ ದ್ವಿಪದಿಗಳ ವಿಸ್ತೃತ ರೂಪವಾಗಿ ಇವರ ಕಾವ್ಯ ಹರಡಿ ಕೊಳ್ಳುತ್ತದೆ. ಇಂಥ ಕಾವ್ಯದ ಶಬ್ದಪ್ರಯೋಗವನ್ನು ವಿಶೇಷವಾಗಿಯೇ ನೋಡಬೇಕಾಗಿದೆ. ಮಾತಿಗೆ ಮಾತು ರುಚಿಕರವಾಗಿ ಹೊಂದಾಣಿಕೆಯಾಗುವಾಗಲೇ ಸಹಜವಾಗಿ ಅದರಲ್ಲಿ ಹಾಸ್ಯಲೇಪವೂ ಸೇರಿಕೊಂಡಿರುತ್ತದೆ. ತಿವಿಯುವ ವಿಡಂಬನೆ ಬರದ ಹಾಗೆ ತೂಕವಾಗಿ ಅತೀವ ಎಚ್ಚರದಲ್ಲಿ ಮಾತು ಬಳಕೆಯಾಗುತ್ತದೆ. ಕಾವ್ಯಕ್ಕೆ ಬೇಕಾದ ಗಾಂಭೀರ್ಯವನ್ನು ಈ ಎಚ್ಚರ ತಂದುಕೊಡುತ್ತದೆ.

ಹೊಸ ಕಾವ್ಯದಲ್ಲಿ ಇಲ್ಲದ ಇನ್ನೊಂದು ಪರಿ ಈ ಕವಿಯ ಅನೇಕ ಭಾವಗೀತೆ ಗಳಲ್ಲಿರುವ ಗೇಯತೆ. ಇದನ್ನು ಪೀಠಿಕೆಯಲ್ಲಿ ಪ್ರಸ್ತಾಪಿಸಿದ್ದೇನೆ. ಆದರೆ ಹೇಳಲೇಬೇಕಾದ ಮಾತೆಂದರೆ 'ಕುರಿಗಳು, ಸಾರ್, ಕುರಿಗಳು' ಕವನದಂಥ ಗದ್ಯಲಯದ ರಚನೆಯನ್ನು ಕೂಡ

ಅನಂತಸ್ವಾಮಿಯವರು ಹಾಡಾಗಿ ಹಾಡಿ ಜನಪ್ರಿಯಗೊಳಿಸಿದ್ದು. 'ಸಾರ್' ಎಂಬಲ್ಲಿನ ದೀರ್ಘ ಮತ್ತು 'ಕುರಿಗಳು' ಎನ್ನುವಾಗ ಎಲ್ಲಿಲ್ಲದ ಹ್ರಸ್ವ ಸ್ಥಾಪನೆ ಈ ಗೀತೆಯ ಸಂಯೋಜನೆಯಲ್ಲಿ ವಿಶಿಷ್ಟ ಪಾತ್ರವನ್ನು ವಹಿಸಿವೆ.

ದಲಿತ ಸಂವೇದನೆ, ಸ್ತ್ರೀ ಸಂವೇದನೆ ಎನ್ನುವಂತೆ ಮುಸ್ಲಿಂ ಸಂವೇದನೆಯೂ, ಈಗಿನ ಪರಿಭಾಷೆ. ಈ ಅರ್ಥದ ಸಂವೇದನೆ ನಿಸಾರರ ಕಾವ್ಯದಲ್ಲಿ ಇಲ್ಲದಿರುವುದು ಸೋಜಿಗದ ಮಾತೇನಲ್ಲ. ಅವರದು ಮುಖ್ಯ ಪ್ರವಾಹದ ಕವಿಯಾಗಿಯೇ ಪರಂಪರೆಯಲ್ಲಿ ಉಳಿಯುವ ಅಪರೂಪ ವ್ಯಕ್ತಿತ್ವ. ನಿರ್ಮೋಹದಿಂದ ಬೆಣ್ಣೆ ಕದ್ದ ಕೃಷ್ಣನನ್ನು ಕುರಿತು ಹಾಡಿದ ಹಾಗೆ, ಅವರು ರಾಮಕೃಷ್ಣ ಪರಮಹಂಸ ಇಲ್ಲವೇ ಮದರ್ ತೆರೇಸ ಅವರನ್ನೂ ಕುರಿತು ಬರೆಯಬಲ್ಲರು. ಹಾಗೆಂದು ಭಿನ್ನವಾದ ಧರ್ಮಕ್ಕೆ ಸೇರಿರುವ ಈ ಕವಿಯಲ್ಲಿ ಇಬ್ಬಂದಿತನದ ತೊಳಲಾಟ ಇಲ್ಲದಿಲ್ಲ. ವಿಭಿನ್ನ ಸಂಸ್ಕೃತಿಗಳ ನಡುವೆ ಸಿಕ್ಕಿ ಬಳಲುವ ಏಕಾಕಿತನ ನಿಸಾರರ ಅನೇಕ ಕವನಗಳ ದ್ರವ್ಯವಾಗಿದೆ. ಈ ಸಂಕಟವನ್ನು ನಿವಾರಿಸಿಕೊಳ್ಳಬೇಕಾದ ಅರಿವು ಮೂಡಿಸಿದ ಎಚ್ಚರವು, ಇದನ್ನೇ ಮುಖ್ಯ ಕಾವ್ಯ ವಿಷಯವಾಗದಂತೆ ನೋಡಿಕೊಂಡಿದೆ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ಉಭಯ ಕಷ್ಟ', 'ರಂಗೋಲಿ ಮತ್ತು ಮಗ', 'ಸವತಿ ಮಕ್ಕಳ ಹಾಗೆ'—ಮುಂತಾದ ಕವನಗಳಲ್ಲಿ 'ನಾನೆಂಬ ಪರಕೀಯ'ತೆಯ ಇಬ್ಬಂದಿತನ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ:

'ನನ್ನ ಲೋಕೋದಾರದನ್ಯತೆಯ ಕಾಫರತನಕ್ಕೆದೆ
ಕುಸಿದು ಅತ್ತರೀಗ—
ಸಂತೈಸದು ವಿಗ್ರಹ, ಬಾ ಎನ್ನದು ಕಾಬಾ.
ಸತ್ತರಗ್ನಿಸಂಸ್ಕಾರವಿತ್ತ; ಗುಣಿ ಮಣ್ಣ
ಭಾರವತ್ತ;
ವಾಮಕ್ಕೆ ಸಂಸ್ಕೃತ, ಬಲಕ್ಕರಬ್ಬೀ'
(ಇಬ್ಬಂದಿ)

ಇದು ಜೊತೆಗಾರರಿಗೆ ಇರದ ಒಂದು ರೀತಿಯ ದ್ವಂದ್ವ. ಆದರೆ ಈ ಉದ್ವಿಗ್ನತೆಗೆ ಕವಿ ಸಮಜಾಯಿಷಿಯನ್ನು ಕೊಡದೆ—

'ವಿರುದ್ಧಗಳನೊಪ್ಪುವೆ; ಆದರೆ—ಕೂಡಿಸದೆ
ಭಿನ್ನತೆಯನ್ನರಿಯುವೆ, ಆದರೆ—ತಿಕ್ಕಾಡಿಸದೆ'
(ಅದೇ)

ಅನ್ನುವ ನಿಲವನ್ನು ತಾಳುತ್ತಾರೆ. ಇದರಷ್ಟು ಆರೋಗ್ಯಕರ ನಿಲವು ಇನ್ನೊಂದಿಲ್ಲ.

ಕಾವ್ಯಕಾಲ—ಪ್ರತಿಯೊಬ್ಬ ಕವಿಯ ಕಾವ್ಯ ಜೀವನದಲ್ಲೂ ಬೇರೆ ಬೇರೆ ಹಂತಗಳಿರುತ್ತವೆ. ಅವನು ಬೆಳೆಯುತ್ತ ಹೋದ ಹಾಗೆ ಈ ಹಂತಗಳೂ ಭಿನ್ನರೂಪಗಳನ್ನು ಪಡೆಯುತ್ತ ಹೋಗುತ್ತವೆ. ನಿಸಾರರ ಕಾವ್ಯಕಾಲವನ್ನು ಅವಧಿಗಳಾಗಿ ವಿಂಗಡಿಸಿದಾಗ, ಅವು ಕಾವ್ಯದ ಬೆಳವಣಿಗೆಯನ್ನು ತೀರ ಮುಖ್ಯವಾಗಿ ಹೇಳದೆ ಹೋದರೂ ಆ ಅವಧಿಗಳಲ್ಲಿ ಕೆಲವು ನಿರ್ದಿಷ್ಟ ಕವನಗಳು ಪ್ರಧಾನವಾಗಿ (ಕವಿಗೋಷ್ಠಿಗಳಲ್ಲಿ ವಿಶೇಷವಾಗಿ) ಯಶಸ್ಸು

ಗಳಿಸಿದ್ದನ್ನು ಸಂದಿಗ್ಧವಿಲ್ಲದೆ ಹೇಳುತ್ತವೆ. ಉದಾಹರಣೆಗೆ 'ಕುರಿಗಳು, ಸಾರ್, ಕುರಿಗಳು', 'ಅಮ್ಮ, ಆಚಾರ, ನಾನು', 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ' ಮತ್ತು 'ಖಾಲಿ ಸೈಟುಗಳು' ಮುಂತಾದ ಕವನಗಳು ಪ್ರಾತಿನಿಧಿಕವಾದ ಹಾಗೆಯೇ ಸಾರ್ಥಕವಾದದ್ದೂ ನಿಜ.

ಕುರಿಗಳು, ಸಾರ್ ಕುರಿಗಳು—ಈ ಕವನವನ್ನು ಕವಿ ಓದಿ ಹೇಳುತ್ತಿದ್ದ ವೈಖರಿಯನ್ನೂ ಅನಂತಸ್ವಾಮಿಯವರು ಇದಕ್ಕೆ ರಾಗವನ್ನು ಸಂಯೋಜಿಸಿ ಗೀತೆಯಾಗಿ ಪರಿವರ್ತಿಸಿದ ಸೋಜಿಗವನ್ನೂ ಈಗಾಗಲೇ ಪ್ರಸ್ತಾಪಿಸಿ ಆಗಿದೆ. ನಿಸಾರ್ ಈ ಕವನವನ್ನು ಬರೆದಾಗ ಕಾಲವು ಯೋಜನೆಗಳ ಮಹಾ ಕಾಲವಾಗಿತ್ತು. ಯೋಜನೆಗಳ ಭ್ರಮೆಯಲ್ಲಿ ರಾಜಕೀಯವು ಇಂಡಿಯದ ಮುಗ್ಧ ಪ್ರಜೆಗಳನ್ನು ಕುರಿಗಳಾಗಿಸಿತ್ತು. ಕುರಿ ಎಂಬ ಪ್ರಾಣಿ ಬರೇ ಮುಗ್ಧ ಅಷ್ಟೇ ಅಲ್ಲ, ಬೆಪ್ಪೂ ಹೌದು. ಅಂತಲೇ ಅವು—

'ಸಾಗಿದ್ದೇ ಗುರಿಗಳು'

ಅವಕ್ಕೆ ಸ್ವಂತಿಕೆ ಎಂಬುದಿಲ್ಲ. ಹೆಚ್ಚೆಂದರೆ ಅವು ಮಾಡಬಹುದಾದದ್ದು ಪರಸ್ಪರವಾಗಿ ಬಾಲ ಮೂಸುವ ಕೆಲಸ ಅಷ್ಟೆ. ಅವು ನೊಣ ಕೂತರೆ ಬಾಗುತ್ತವೆ, ತಿನ್ನದಿದ್ದರೂ ತೇಗುತ್ತವೆ. ಈ ಕುರಿಗಳನ್ನು (ಅಂದರೆ ನಮ್ಮನ್ನು) ಕಾಯುವ ಆಡಳಿತದ ಕುರುಬರು ತೀರ ಪರಿಣತರೇನಲ್ಲ. ಅವರೂ ನಿನ್ನೆ ಮೊನ್ನೆಯವರು.

'ಪುಟಗೋಸಿಯ ಮೊನ್ನೆ ತಾನೆ ಕಿತ್ತು ಪಂಚೆಯುಟ್ಟವರು'

ಇಂಥವರ ಭಾಷಣದ ನೆಯ್ಗೆಗೆ ಬಲಿಯಾದ ನಮ್ಮ ಕುರಿತನ ಈಗ ಕ್ಲೀಷೆಯಾಗಿದೆ. ನಮ್ಮ ದಯನೀಯ ಸ್ಥಿತಿಯನ್ನು ನಗೆಪಾಟಲಾಗುವಷ್ಟು ನಾಚಿಕೆಗೇಡಿನದು ಎಂದು ವರ್ಣಿಸಬಹುದು. ಈ ಕುರುಬರು—

'ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದೆ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.'

(ಕುರಿಗಳು, ಸಾರ್, ಕುರಿಗಳು)

ಭಾಷಣ ರಾಜಕೀಯವನ್ನು 'ಮಾತು' ಶಬ್ದದ ಪುನರುಚ್ಚಾರಣೆಯಿಂದ ನಾಟ್ಯೀಕರಿಸಿರುವ ಇಲ್ಲಿನ ರೀತಿ ಕಲಾತ್ಮಕವಾಗುವುದು 'ಕರಾಮತ್ತು' ಎಂಬ ಶಬ್ದದ ಪರಿಣಾಮದಿಂದ. ಅನುಷ್ಠಾನವಿಲ್ಲದ ಈ ಮಾತು ಯೋಜನೆಗಳನ್ನು ನೇಯಬಲ್ಲುದೇ ಹೊರತು ಕ್ರಿಯಾತ್ಮಕವಾಗಲಾರದು. ಮಾತೇ ಜೀವಾಳವಾಗಿರುವ ಕಾಲ ಈಗಲೂ ಮುಂದುವರಿದಿರುವ ಕಾರಣ ಕಾವ್ಯಭಾಗ ಮೆಲ್ಲಗೆ ಪ್ರಸ್ತುತತೆಯಿಂದ ಸಾರ್ವಕಾಲಿಕಕ್ಕೆ ಹೊರಳುವ ಸೂಚನೆಯನ್ನೂ ಕೊಟ್ಟುಬಿಟ್ಟಿದೆ. ಈ ಕುರುಬ ತಾತ್ಕಾಲಿಕನಾದವನಲ್ಲ. ತಳ ಊರಿದವನು. ಕಡೆಗೆ ಕಟುಕನೂ ಆಗಿಬಿಟ್ಟವನು. ಅವನ ಮಚ್ಚಿನ ಜಾದುವಿನಲ್ಲಿ ಹೊಳಪಿನಲ್ಲಿ ಕುರಿಗಳು

ದಂಗಾಗಿವೆ. ಕತ್ತನ್ನು ಅದಕ್ಕೆ ತಿಕ್ಕಿವೆ. ಅದರ ನೆರಳ ಭಯದಲ್ಲಿ ನಮ್ಮೆಲ್ಲರ ಗುರಿಗಳು ಮನೆ ಮಾಡಿವೆ. ಕುರಿ ಕೊಬ್ಬುವದಕ್ಕೂ ಬಿಡದೆ ಈ ಕುರುಬ ಮಂದೆಯು ಬೊಬ್ಬೆ ಹಾಕುತ್ತಿದ್ದರೂ ತನ್ನ ಚಕ್ಕಭಾರ ಆಟದಲ್ಲೆ ಮಗ್ನನಾಗಿರುತ್ತಾನೆ. ಜಾಗರೂಕತೆಯಿಲ್ಲದ ಈ ಉದಾಸೀನ ಆಡಳಿತ ಸ್ಥಿತಿ ತುಂಬ ಸಹಜ ಚಿತ್ರಿಕೆಯಾಗಿ ರೂಪುಗೊಂಡಿದೆ. 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ಅಡಿಗರ ಕವನವೂ ರಾಜಕೀಯ ಕವನವೇ. ಬೇರೆ ಬೇರೆ ಕಾವ್ಯೋಪಾಯಗಳಿಂದ ಅಡಿಗರು ಆ ಕವನದಲ್ಲಿ ನೆಹರೂರ ವ್ಯಕ್ತಿತ್ವವನ್ನು ವಿಡಂಬಿಸಿದ್ದಾರೆ. 'ಕುರಿಗಳು' ಕವನದಲ್ಲಿ ನಿಸಾರ್ ಬೇರೆ ಬೇರೆ ಕಾವ್ಯೋಪಾಯಗಳನ್ನು ಬಳಸುವುದಿಲ್ಲ. ಕುರಿ-ಕುರುಬ ಸಂಬಂಧವನ್ನಷ್ಟೇ ಕೇಂದ್ರೀಕರಿಸಿ ವಿಡಂಬನೆಯನ್ನು ಚೂಪುಗೊಳಿಸಿದ್ದಾರೆ. ಕವಿಯ ಕೈಯನ್ನೂ ಮೀರಿ ಬೆಳೆಯುವ ಕಾವ್ಯದ ಅನೇಕ ನಿದರ್ಶನಗಳು ಪರಂಪರೆಯಲ್ಲುಂಟು. 'ಕುರಿಗಳು' ಅಂಥ ಒಂದು ಕವನ.

ಅಮ್ಮ, ಆಚಾರ, ನಾನು—ಈ ಕವನ ನಿಸಾರರ celebrated ಕವನ. ಇದನ್ನು ಪೂರ್ತಿಯಾಗಿ ಓದಿದ ಮೇಲೆ ಕೊನೆಯ ಒಂದು ಸಾಲಿನ ಪರಿಣಾಮಕ್ಕಾಗಿ ಇಷ್ಟೆಲ್ಲ ಸಾಲುಗಳನ್ನು ಕವಿ ಬರೆಯಬೇಕಾಗಿ ಬಂತೆ ಎಂದು (ಸಹಜವಾಗಿ) ಅನೇಕರಿಗೆ ಅನ್ನಿಸಿದ್ದುಂಟು. ಆದರೆ ಕವಿ ಇದನ್ನು ಕವಿಗೋಷ್ಠಿಗಳಲ್ಲಿ ಓದಿದಾಗ ಈ ಕವನದ ಅರ್ಥ ಆ ಸಾಲಿಗಷ್ಟೇ ಸೀಮಿತವಾಗಿಲ್ಲ, ಎಲ್ಲ ಸಾಲುಗಳನ್ನೂ ಕೇಳುಗರು ಕೇಳಿ ಸವಿಯುತ್ತಿದ್ದಾರೆ ಎಂದು ಅನುಭವಕ್ಕೆ ಬಂದಿತು. ವಾಸ್ತವವಾಗಿ ಅದೊಂದು ಕಥನ ಕವನ. ಕಥೆಯನ್ನು ಮಾತ್ರ ಅದು ಹೇಳದೆ, ಜೊತೆಗೆ ವ್ಯಾಖ್ಯಾನವನ್ನು ಮಂಡಿಸುತ್ತಲೂ ಹೋಗುತ್ತದೆ. ಕವನದ ಶೀರ್ಷಿಕೆಯನ್ನು ಗಮನಿಸಿ: ಅಮ್ಮ (ವಂಶ, ಮನೆತನ); ಆಚಾರ (ನಡವಳಿಕೆ, ಸುಪ್ರದಾಯ); ನಾನು (ನಿರೂಪಕ, ಮುಖಾಮುಖಿಯ ಸಂದರ್ಭ). ಈ ಮೂರು ಅಂಶಗಳು ಕವಿಯ ಮುಖ್ಯ ಕ್ಷೇತ್ರವೇ ಹೊರತು ಕಡೆಯ ಸಾಲಿನ ಪರಿಣಾಮ ಗುಣವಲ್ಲ. ನಿರೂಪಕನ ಮದುವೆಗೆ ವಧುವನ್ನು ಆರಿಸುವುದು ಅವರ ಅಮ್ಮನ ಜವಾಬ್ದಾರಿ.

> **'ಹತ್ತಾರು ಹೆಣ್ಣುಗಳ ನೋಡಿ ನಮ್ಮಮ್ಮ**
> **ಒಬ್ಬೊಬ್ಬರನೂ ತನ್ನ ಒಪ್ಪಿಗೆಯ ಒರೆಯಲ್ಲಿ'**
> **(ಅಮ್ಮ, ಆಚಾರ, ನಾನು)**

ಅರೆಯುತ್ತಾಳೆ. ಆಕೆ ಕಟ್ಟಾ ಸಂಪ್ರದಾಯಸ್ಥೆ. ಧರ್ಮಕ್ಕೆ ತಕ್ಕಂತೆ ನಡೆದುಕೊಳ್ಳುವವಳು. ಬುರ್ಖಾ ತೊಡದೆ ಹೋಗುವ ಅವರ ಹೆಣ್ಣುಗಳನ್ನು ಕಂಡು ಕಿಡಿಕಿಡಿಯಾಗಿ ಅಂಥವರನ್ನು ತನ್ನ ಮಗನಿಗೆಂದೂ ತಾರೆನೆಂದು ಶಪಥ ಮಾಡುತ್ತಾಳೆ. ಬುರ್ಖಾ ತೊಡುವ ಕರಡಿಯನ್ನು ಹಳ್ಳಿಮೊದ್ದನ್ನು ಆಧುನಿಕ ಯುಗದ ಮಗ ಒಪ್ಪದಿದ್ದಾಗ ಮದುವೆಗೆ ಮುಂಚೆ ಹುಡುಗ ಹೆಣ್ಣು ನೋಡುವುದು ನಿಷಿದ್ಧ ಎಂದು ಬಾಯಿ ಮುಚ್ಚಿಸುತ್ತಾಳೆ. ಹುಡುಗನ ಅಪ್ಪ ಉದಾರಿ. ಮಗ ತನ್ನ ಭವಿಷ್ಯದ ದಾರಿಯನ್ನು ತಾನೇ ಆರಿಸಿಕೊಳ್ಳಲಿ ಎಂದು ಆತ ವಾದಿಸಿದರೆ, ಅಮ್ಮ ನಿರಶನ ಮತ್ತು ಆತ್ಮಹತ್ಯೆಯ ಬೆದರಿಕೆ ಹಾಕುತ್ತಾಳೆ. ಕಥೆ ಮುಂದುವರಿದಂತೆ ಅಮ್ಮನೂ ನಿನ್ನಿಷ್ಟದಂತೆ ಮದುವೆಯಾಗು ಎಂದು ಒಪ್ಪಿದಾಗ ಮಗನಿಗೆ ಖುಷಿ ಮತ್ತು ಅಚ್ಚರಿ. ಮಗ

ತನ್ನಿಷ್ಟದಂತೆಯೇ ಡಬಲ್ ಪರವೀಧರೆಯನ್ನು ಮದುವೆಯಾಗಿ ಮೊದಲ ಸಲ ತಿರುಗಾಟಕ್ಕೆ ಹೊರಟಾಗ ಹೆಂಡತಿ ಹೊಸ ಕಾಲಕ್ಕೆ ತಕ್ಕಂತೆ ಉಡಿಗೆ ಉಟ್ಟು, ಅಲಂಕರಿಸಿಕೊಳ್ಳುತ್ತಾಳೆ. ಆದರೆ ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ—

'ಹೊಸಿಲು ಇನ್ನೇನು ದಾಟಬೇಕು—ಆಗ
'ಬಂದೆ ತಡೆಯಿರಿ' ಎಂದು ಒಳಗೋಡಿ
ಬಂದು 'ನಡೆಯಿರಿ' ಎಂದಾಗ
ತಲೆ ಸುತ್ತಿ, ನಾಲಗೆ ಬತ್ತಿ, ನಾನಾದೆ ಮೂಕ.
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ.'

(ಅದೇ)

ಇಲ್ಲಿ ಬರೇ ವಿರೋಧಾಭಾಸ ಮಾತ್ರ ಸೂಚನೆಯಾಗಿದೆ ಎಂದು ನನಗೆ ಅನ್ನಿಸುವುದಿಲ್ಲ. ನಿರೂಪಕನ ಎಣಿಕೆಯನ್ನೂ ಮೀರಿ (ತಾನೇ ಆರಿಸಿದ) ವಿದ್ಯಾವಂತ ಹೆಣ್ಣು (ಒಳಗೆ ಅಲಂಕೃತಳಾಗಿದ್ದರೂ) ಸಂಪ್ರದಾಯದ ಮರೆಗೆ ಹೇಗೆ ಸಹಜವಾಗಿ ಹಿಂತಿರುಗುತ್ತಾಳೆ ಎಂಬ ಸೂಚನೆಯೂ ಇದೆ. ಅಷ್ಟೇ ಅಲ್ಲ, ಅವಳು ತೊಟ್ಟಿದ್ದು ನಿರೂಪಕನ ಅಮ್ಮನ ಬುರ್ಖಾ. ಅಮ್ಮನ ಸಂಪ್ರದಾಯ ಅರ್ಥಪೂರ್ಣವಾಗಿ ಮುಂದುವರಿಯುತ್ತಿದೆ. ಅಷ್ಟೊಂದು ವಿವರಗಳು ಒಂದು ಕಡೆಗಿದ್ದರೆ, ಈ ಒಂದೇ ಧ್ವನಿ ಸಾಕು ಇನ್ನೊಂದು ಕಡೆಯನ್ನು ತೂಗಿಸಿಬಿಡುತ್ತದೆ.

ರಾಮನ್ ಸತ್ತ ಸುದ್ದಿ—ಮೇಲೆ ಪ್ರಸ್ತಾವಿಸಿದ ಎರಡು ಕವನಗಳಿಗಿಂತಲೂ ತೀರ ಭಿನ್ನವಾದ ಕವನ 'ರಾಮನ್ ಸತ್ತ ಸುದ್ದಿ'. ವಿಜ್ಞಾನಿ ಸಿ. ವಿ. ರಾಮನ್ ಸತ್ತ ಸುದ್ದಿಯನ್ನು ಶಿವಮೊಗ್ಗೆಯಲ್ಲಿ ಕವಿ ಓದಿದಾಗ ಬರೆದ ಪ್ರತಿಕ್ರಿಯಾತ್ಮಕ ಕವನ ಇದು. ನಿಜವಾಗಿ ಇಲ್ಲಿ ಮುಖ್ಯವಾಗುವದು ರಾಮನ್ ಅಲ್ಲ, ಹಳ್ಳಿಯ ಹನುಮನೂ ಅಲ್ಲ, ಕವಿಯೂ ಅಲ್ಲ; ಮುಖ್ಯವಾಗುವುದು ಸಾವು. ಆದರೆ ತುಸುವೇ ಆಲೋಚಿಸಿ ನೋಡಿದರೆ ಆ ಸಾವಿನ ತೀವ್ರತೆಯೂ ತಣ್ಣಗಾಗುತ್ತದೆ. ಅನೇಕ ಸತ್ಯಗಳು ಈ ಆಲೋಚನೆಯಲ್ಲಿ ಸೇರಿ ಈ ಕವನದ ಗಾಂಭೀರ್ಯವನ್ನು ವಿಷಾದದ ಹಂತದಿಂದ ಮೇಲಕ್ಕೆ ಏರಿಸಿವೆ. ಈ ಕವನದಲ್ಲಿ ಸಂಗತಿಗಳು ಘಟ್ಟಘಟ್ಟವಾಗಿ ನಿರೂಪಿತವಾಗುತ್ತ ಹೋಗುತ್ತವೆ.

'ರಾಮನ್ ಸತ್ತ ಸುದ್ದಿ ಓದಿದ ಬೆಳಿಗ್ಗೆ ಶಿವಮೊಗ್ಗೆಗೆ
ದರಿದ್ರ ಥಂಡಿ; ಅಸ್ತಿತ್ವದ ಅಸ್ಪಷ್ಟ ಜಿಜ್ಞಾಸೆ, ಗುರುತಿಸಲಾಗದ
ಕಸಿವಿಸಿ, ಮುಜುಗರ ತಾಳದೆ ವಾಕಿಂಗ್ ಹೊರಟೆ; ಬೀದಿ
ಗದೇ ಮಾಮೂಲು ಭಂಗಿ; ಯಾರೂ ದುಃಖಿಸುತ್ತಿಲ್ಲವೆನ್ನಿಸಿ
ದುಃಖವಾಯಿತು.'

(ರಾಮನ್ ಸತ್ತ ಸುದ್ದಿ)

ಸಿ. ವಿ. ರಾಮನ್ ಖ್ಯಾತ ವಿಜ್ಞಾನಿಯಾದರೂ ಸತ್ತ ಮೇಲೆ ರಾಮನ್ ಮಾತ್ರ. ದರಿದ್ರ ಥಂಡಿ ಎಂಬ ಪ್ರಯೋಗವನ್ನು ಗಮನಿಸಿ. ಥಂಡಿ ಅನ್ನುವದು ಸಾವಿನ ತಣುವಿಗೆ, ಶೀತಲಕ್ಕೆ ಹೊಂದುತ್ತದೆ. ಉತ್ತಮ ಕವನದಲ್ಲಿ ಶಬ್ದಗಳು ತಮಗೆ ತಾವೇ ಒಂದು ಕಡೆ ಸೇರಿ ಹೊಂದಿ

ಕೊಂಡು ಬಿಡುತ್ತವೆ. ದರಿದ್ರ ಕೇವಲ ವಿಶೇಷಣವಲ್ಲ. ನಾವೆಲ್ಲ ಆಗಿನ ಕಾಲದಲ್ಲಿ ಖಾಸಗಿಯಾಗಿ ಬಳಸುತ್ತಿದ್ದ ಈಡಿಯಂ. ಇನ್ನು ದಾರಿಯಲ್ಲಿ ಸಿಕ್ಕಿದ ಹಳ್ಳಿಯ ಹನುಮ (ರಾಮ><ಹನುಮ) ಹಳ್ಳಿಯೇ ಹನುಮಿಸಿದಂಥ ಚಿತ್ರ ಕೊಡುತ್ತಾನೆ. ಅವನ ಮಳೆ-ಬೆಳೆ, ಫಸಲು, ಕಾದಾಟ ಇತ್ಯಾದಿ ಜಂಜಡ ಅವನಿಗೆ. `ರಾಮನ್ ಸತ್ತ' ಎಂದು ನಿರೂಪಕ ಹೇಳಿದ ಅಂತ ಇಟ್ಟುಕೊಳ್ಳಿ—

'ರಾಮನ್ ಅರ್ಥೈಸಿಕೊಳ್ಳಬಹುದೆ ಇವನ
ಅಶಿಕ್ಷಿತ ಅರಿವಿಗೆ?'

(ಅದೇ)

ರಾಮನ್ ಶಿಕ್ಷಣ, ಹನುಮನ ಅಶಿಕ್ಷಿತ ಅರಿವು Juxtapose ಆಗಿ, ಕಾಲದ ಪುನರಾವರ್ತನೆಯಲ್ಲಿ ಲೋಕ ಮರೆಯುವ. ಹನುಮನಿಗೆ ರಾಮನ್ ಹೋದರೆಷ್ಟೋ ರಸೆಲ್ ಹೋದರೂ ಅಷ್ಟೆ ಎಂಬ ತೀರ್ಮಾನಕ್ಕೆ ನಿರೂಪಕ ಬರುತ್ತಾನೆ. ಬರಿಯ ರಾಮನ್ ಅಲ್ಲ, ಭೇಟಿಯಾದ ಕವಿಯ ಬಗ್ಗೆಯೂ ಹನುಮನಿಗೆ ಗೊತ್ತಿಲ್ಲ. ಭಾಷೆ, ನಾಡು, ಪ್ರತಿಷ್ಠೆ ಅವನನ್ನು ಕಾಡುವುದಿಲ್ಲ. ಈ ಜಂಜಡ, ಈ ಅಜ್ಞಾನ ಇದ್ದರೂ ಅವನು ತೃಪ್ತ. ಮುಂದೆ ಕವಿಗೆ ವರ್ಗವಾಗಬಹುದು, ಹನುಮ ಸಾಯಬಹುದು ಮತ್ತು ಕವಿಯೇ ಸಾಯಬಹುದು. ಈ ಎಲ್ಲ ಸಾವಿನ ಗೂಢ ಅರಿವಾಗದ ಸ್ಥಿತಿಯನ್ನು ತಲಪಿದಾಗ—

'ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು.'

(ಅದೇ)

ಇಲ್ಲಿ ಸಾವು ವ್ಯಕ್ತಿಗಳನ್ನು ಹೊರತು ಪಡಿಸಿದ ಒಂದು ಅಮೂರ್ತತೆಯನ್ನು ಪಡೆಯುತ್ತದೆ.

ರಂಗೋಲಿ ಮತ್ತು ಮಗ—`ರಾಮನ್ ಸತ್ತ ಸುದ್ದಿ'ಗೆ ಹೋಲಿಸಿದರೆ ಇದು ಇನ್ನೂ ಸರಳವಾದ ಸಂವಹನಶೀಲವಾದ ಕವನ ಎನ್ನಬಹುದು. ಧರ್ಮ ಸಂಘರ್ಷ ಅನ್ನುವ ಮಾತು ಭಾರ ಅನ್ನಿಸಿ ಧರ್ಮ ಸಂವಾದ ಅನ್ನುವ ಮಾತನ್ನು ಈ ಕವನದ ವಿಷಯವಾಗಿ ಬಳಸುವುದು ಉಚಿತ. ನಿತ್ಯ ಜೀವನದಲ್ಲಿ ಎಂದೂ ನಡೆಯಬಹುದಾದ ಸ್ವಾಭಾವಿಕ ಘಟನೆಯನ್ನು ಸನ್ನಿವೇಶ ಚಿತ್ರಣದ ಮೂಲಕ ಇದು ನಿರೂಪಿಸುತ್ತದೆ. ನಿರೂಪಕನ (ಅಥವಾ ಕವಿ) ಗೃಹವೊಂದನ್ನು ಬಿಟ್ಟರೆ ಬೀದಿಯ ಮಿಕ್ಕ ಮನೆ ಮುಂದೆಲ್ಲಾ ಮುಂಜಾನೆ ಬಿಡಿಸಿದ ರಂಗವಲ್ಲಿ—

'ಖಾಲಿ ಮನಸಿನ ಖೋಲಿ ಖೋಲಿಗಳ ಬೀಗ
ತೆರೆದು, ತುಂಬುವುದೆಂಥ ಭಾವಾವೇಗ!'

(ರಂಗೋಲಿ ಮತ್ತು ಮಗ)

ಇದು ಸೂತ್ರದಾಕಾರವಷ್ಟೇ ಅಲ್ಲದೆ, ಯಾವದೋ ಆರ್ಷಮಂತ್ರಕ್ಕೆ ಕಲೆಯ ರೆಕ್ಕೆಯನ್ನು ಮೂಡಿಸಿದ ಹಾಗೂ ಇದೆ. ರಂಗೋಲಿ ಬೆರಗುಗೊಳಿಸುವಂತೆ ದಿಗಿಲನ್ನೂ ಉಂಟುಮಾಡಬಹುದು:

'ಒಮ್ಮೆ ಯಾವುದೋ ಚಿಂತೆಯಲ್ಲಿ ಬಗೆ ನೆಟ್ಟು
ಮನೆಯೊಂದರ ರಂಗೋಲಿ ಮೇಲೆ ಅಡಿಯಿಟ್ಟು

ಸರಕ್ಕನೆಳೆದುಕೊಂಡಿದ್ದ, ಕೆಂಡ ತುಳಿದವನಂತೆ.'
(ಅದೇ)

ಒಮ್ಮೆ ಕವಿ ಆರುವರ್ಷದ ಮಗನೊಂದಿಗೆ ಮುಂಜಾನೆ ಹೊರಟಾಗ—

'ಯಾಕೆ ಬಿಡಿಸುತ್ತಾರೆ ಇವರು
ಹೀಗೆ ದಿನಾ ಚಕ್ರಬಂಧ?'

ಎಂದು ಅವನು ಪ್ರಶ್ನಿಸುತ್ತಾನೆ. ಅದು ನಮ್ಮ ಪದ್ಧತಿಯಲ್ಲಿಲ್ಲ, ಖುರಾನಿನಲ್ಲಿ ಹೇಳಿಲ್ಲ ಎಂದು ಕವಿ ಸಮಜಾಯಿಷಿ ಕೊಟ್ಟರೂ ಮನೆಯ ಮುಂದೆ ಹೆಸರು ಬರೆಸಿದೆಯಲ್ಲ, ಅದನ್ನು ಹೇಳಿದೆಯ ಖುರಾನಿನಲ್ಲಿ? ಎಂದು ಮರು ಪ್ರಶ್ನೆ ಎಸೆಯುತ್ತಾನೆ. ಕವಿ ಪೇಚಿಗೆ ಸಿಕ್ಕು ಹೇಗೋ ಸಂಭಾಳಿಸಿಕೊಂಡು ಮುಂದೆ ನಡೆಯುತ್ತಾನೆ. ಆದರೂ—

'ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ:
ಮನದ ತುಂಬಾ ನೆರೆಸಿ ಚಿಂತನೆಯ ಸಂತೆ.'
(ಅದೇ)

ಉಪಸಂಹಾರ—ಮುಂದೆ 'ಖಾಲಿ ಸೈಟುಗಳು', 'ಉಡುಗೊರೆ' ಮುಂತಾದ ಎಷ್ಟೋ ಕವನಗಳು ಇದೇ ಬಗೆಯ ಜನಪ್ರಿಯತೆಯನ್ನು ಗಳಿಸಿಕೊಂಡವು. ನಿಸಾರರ ಕಾವ್ಯ ಜನ ಮನ್ನಣೆಯನ್ನು ಪಡೆದಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಸಮಕಾಲೀನ ಕಾವ್ಯದಲ್ಲಿ ನಿಸಾರರ ಸ್ಥಾನಮಾನವೇನು? ಅದನ್ನು ಗುರುತಿಸುವುದು ನನ್ನ ಉದ್ದೇಶವಲ್ಲ. ನಿರ್ದಿಷ್ಟವೂ ವಿಶಿಷ್ಟವೂ ಆದ ಕಾವ್ಯಧ್ವನಿ ಅನ್ನುವುದು ಇದ್ದರೆ ಸಾಕು, ಎಂಥ ಗುರುತೂ ಬೇಕಾಗಿಲ್ಲ. ನಮ್ಮ ಅಂಗೀಕಾರ ಇರುವ, ನಮಗೆ ತೃಪ್ತಿ ನೀಡುವ ಕಾವ್ಯದ ಆಕಾರ ಈ ಧ್ವನಿಗೆ ಇರಬೇಕು, ಇದು ಮುಖ್ಯ. ನಿಸಾರ್ ಅವರಿಗೆ ಸಮಕಾಲೀನ ಕಾವ್ಯದಲ್ಲಿ ಈ ಬಗೆಯ ನಿರ್ದಿಷ್ಟವಾದ, ವಿಶಿಷ್ಟವಾದ ಧ್ವನಿ ಇದೆ.

ಕಣಿವೆಯಲ್ಲಿನ ದೊಡ್ಡ ಕಟ್ಟಡಕ್ಕಿಂತ ಗುಡ್ಡದ ಮೇಲಿನ ಜೋಪಡಿ ಎತ್ತರವಾಗಿ ಬೀಗಿ ನಿಂತು ಕಂಗೊಳಿಸುವುದು ಸ್ವಾಭಾವಿಕವೇ. ವಿವೇಕಶಾಲಿಗಳ ಆಂತರ್ಯಕ್ಕೆ ಅವುಗಳ ನಡುವಣ ತರತಮಾಂತರದ ಅರಿವು ತತ್‌ಕ್ಷಣ ಉಂಟಾಗುತ್ತದೆ. ಸಾಧಾರಣರಿಗೆ, ಪರಾಧೀನ ಪ್ರವೃತ್ತಿಯವರಿಗೆ, ಸಾಹಿತ್ಯ ಕಲೆಗಳಲ್ಲಿ ಪರಿಶ್ರಮ ಇರದವರಿಗೆ ಅದು ಹೊಳೆಯದು. ಹೊಳೆದರೂ ತಡವಾಗಿ, ಕಷ್ಟ ಘಟಿಸಿದ ಮೇಲೆಯೇ. ಅವರಿಗೆ ಕಣ್ಣು ಕಂಡರಿಸಿದ್ದೇ ಕೈವಲ್ಯ, ದೃಷ್ಟಿ ದಯಪಾಲಿಸಿದ್ದೇ ದಿವ್ಯ ದೃಶ್ಯ.

(ಔಚಿತ್ಯ ಪ್ರಜ್ಞೆ)



ವ್ಯಕ್ತಿತ್ವ ಚಿತ್ರಣದ ವೈಶಿಷ್ಟ್ಯ ಮೆರೆಯುವ ಕವನಗಳು

♦ *ಡಾ. ಪಿ. ವಿ. ನಾರಾಯಣ*

ಕನ್ನಡ ನವೋದಯ ಆರಂಭಗೊಂಡದ್ದು ಇಂಗ್ಲಿಷ್‌ನ ರೊಮ್ಯಾಂಟಿಕ್ ಕವಿಗಳ ದಟ್ಟ ಪ್ರಭಾವದಲ್ಲಿ; ಹಾಗಾಗಿ ಹೊಸ ಕವಿಯೊಬ್ಬ ಆಗ ರಚನೆಗೆ ತೊಡಗುತ್ತಿದ್ದುದೆಂದರೆ ನವೋದಯ ಮಾರ್ಗದಲ್ಲಿಯೆ: ನವ್ಯಕವಿಗಳೂ ಕಾವ್ಯರಚನೆ ಆರಂಭಿಸಿದ್ದು ಈ ಮಾರ್ಗದಲ್ಲಿಯೇ. ನಿಸಾರರು ತಮ್ಮ ಕವನಗಳನ್ನು ರಚಿಸಲು ತೊಡಗಿದ್ದು ನವ್ಯ ಚಳವಳಿಯ ಭರಾಟೆಯ ಕಾಲದಲ್ಲಿ. ಅವರು ನವೋದಯದ ಅತಿ ಭಾವುಕತೆಯಿಂದ ಪಾರಾದರು, ಆದರೆ ಭಾವನೆಗೆ ಬೆಲೆ ಕೊಟ್ಟರು; ನವ್ಯದ ಮುಕ್ತತೆಗೆ ತೆರೆದು ಕೊಂಡರು, ಆದರೆ ಅದರ ಅತಿ ವ್ಯಕ್ತಿಕೇಂದ್ರಿತ ಗೀಳಿನಿಂದ ನರಳಲಿಲ್ಲ. ನವೋದಯದ ಅತಿ ರಂಜಿತ ಅಧ್ಯಾತ್ಮವಾಗಲೀ, ನವ್ಯದ ಆತ್ಮರತಿಯ ಗುಂಗಾಗಲೀ ಅವರನ್ನು ಆಕರ್ಷಿಸದೆ ಹೋದದ್ದು ಅವರು ತಮ್ಮದೇ ಆದ ಕಾವ್ಯ ಮಾರ್ಗವನ್ನು ಕಂಡುಕೊಳ್ಳಲು ಕಾರಣವಾಯಿತು. ಆದ್ದರಿಂದಲೇ ಅವರ ರಚನೆಗಳಲ್ಲಿ, ನವೋದಯ ಮಾರ್ಗದವನಾಗಲೀ, ನವ್ಯ ದವನಾಗಲೀ, ಯಾವುದೇ ಒಬ್ಬ ಮುಖ್ಯ ಕವಿಯ ಪ್ರಭಾವವನ್ನು ಗುರುತಿಸುವುದು ಸಾಧ್ಯವಿಲ್ಲ.

ಇದರಿಂದಾದ ಒಂದು ಧನಾತ್ಮಕ ಪರಿಣಾಮವೆಂದರೆ ವ್ಯಕ್ತಿಗತ ಭಾವನೆಗಳಿಗೆ ಬೆಲೆಯಿತ್ತರೂ ಎಲ್ಲವನ್ನೂ ಸಾಮುದಾಯಿಕ ನೆಲೆಯಲ್ಲಿ ಪರಿಭಾವಿಸುವ ಮನೋಧರ್ಮ ಈ ಕವಿಗೆ ಪ್ರಾಪ್ತವಾದದ್ದು; ಅಂತರ್ಮುಖತೆಯೊಡನೆಯೇ

ಸಮಾಜಮುಖಿಯಾದ ಅನುಭವ ಪ್ರಾಮಾಣ್ಯ ದಕ್ಕಿದ್ದು. ಅವರು ಬರೆದ ವ್ಯಕ್ತಿತ್ವ ಚಿತ್ರಣದ ಕವನಗಳ ಮಟ್ಟಿಗೆ ಈ ಮಾತು ಮತ್ತಷ್ಟು ನಿಜ. ಅವುಗಳಲ್ಲಿ ವಿವಿಧ ಸ್ತರಗಳಿವೆಯಾದರೂ ಅವುಗಳ ರಚನೆಯ ಹಿಂದೆ ವ್ಯಕ್ತಿವೈಶಿಷ್ಟ್ಯ ಮತ್ತು ಸಾಮುದಾಯಿಕ ಹಿತಗಳ ಸಮ್ಮೇಳವಿದೆ. ನಾನು ಗಮನಿಸಿದ ಇಂತಹ ಕವನಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುತ್ತೇನೆ: ಒಂದು, ಕಾಲದಲ್ಲಿ ಹೇಗೆಯೋ ಕಾರ್ಯಕ್ಷೇತ್ರದಲ್ಲಿಯೂ ಕವಿಗೆ ದೂರವಾದ ವ್ಯಕ್ತಿಗಳನ್ನು ಕುರಿತ ರಚನೆಗಳು; ಎರಡು, ವ್ಯಕ್ತಿಗಳ ಹಿರಿಮೆಯನ್ನು ಒಟ್ಟು ಸಾಮುದಾಯಿಕ ಪರಿಪ್ರೇಕ್ಷ್ಯದಲ್ಲಿ ಪರಿಭಾವಿಸುವಂಥವು; ಮತ್ತು ಮೂರು, ಕವನದ ನಾಯಕ ನೆಪವಾಗಿ ಜೀವನದ ರೀತಿ ನೀತಿಗಳ ಬಗ್ಗೆ ಪರಾಮರ್ಶಿಸುವಂತಹವು. ಮೊದಲನೆಯ ಗುಂಪಿಗೆ 'ಪುರಂದರದಾಸರು', 'ಬಸವೇಶ್ವರರು', 'ಶ್ರೀ ಶಾರದಾದೇವಿ' 'ರವೀಂದ್ರನಾಥ ಠಾಕೂರರು' ಮತ್ತು 'ಮದರ್ ತೆರೇಸ'—ಇವುಗಳು ಸೇರಿದರೆ; 'ಮಾಸ್ತಿ', 'ಬಾಪು', 'ಭೀಮಪ್ಪ ಮಾಸ್ತರರು' ಹಾಗೂ 'ಕೆಂಪು ತೋಟ ಮತ್ತು ಡಾ. ಎಚ್ಚೆನ್' ಇವುಗಳನ್ನು ಎರಡನೆಯ ಗುಂಪಿಗೆ ಸೇರಿಸಬಹುದು; ಇನ್ನು ಮೂರನೆಯ ಪಂಗಡದವು, 'ರಾಮನ್ ಸತ್ತ ಸುದ್ದಿ', 'ಶ್ರೀ ಸಾಮಾನ್ಯನ ಪ್ರತಿನಿಧಿ' ಮತ್ತು 'ಮಾತಿಗ'—ಇವುಗಳು.

ಕನ್ನಡದ ಬಗ್ಗೆ ಅಸೀಮ ಪ್ರೇಮವನ್ನು ವ್ಯಕ್ತಪಡಿಸುವ ಈ ಕವಿ ಸಹಜವಾಗಿಯೇ ಕನ್ನಡ ನಾಡಿನ ಅಪ್ರತಿಮ ಪ್ರತಿಭೆಗಳ ಬಗ್ಗೆ ಮೂಕವಿಸ್ಮಿತನಾಗುತ್ತಾನೆ. 'ಬಸವೇಶ್ವರರು' ಎಲ್ಲ ಕಾಲಕ್ಕೂ ಸಲ್ಲುವ 'ಸಕಲ ಜೀವಿಗಳಿಗೆ ಲೇಸನೇ ಬಯಸಿದ' ಧನ್ಯಜೀವಿ. ಅವರ ವೈಶಿಷ್ಟ್ಯಗಳಾದ ಸಂಪ್ರದಾಯದ ವಿರುದ್ಧದ ಪ್ರತಿಭಟನೆ, ಸಾಮಾಜಿಕ ಸಮಾನತೆಯ ಹರಿಕಾರತನ, ಸಂಸಾರದಲ್ಲಿದ್ದುಕೊಂಡೇ ಅಶ್ವತ್ಥ ಮರದಂತೆ ಬೆಳೆದ ರೀತಿ, ಮುತ್ತಿನ ಹಾರ ದಂತಹ ವಚನ ರಚನೆ, ಅಂತರಂಗ-ಬಹಿರಂಗಗಳ ಶುದ್ಧಿಗೆ ಕೊಟ್ಟ ಪ್ರಾಧಾನ್ಯ—ಇವುಗಳನ್ನೆಲ್ಲ ಕುರಿತು ಈ ರಚನೆ ಮನದುಂಬಿ ಸ್ತುತಿಸುತ್ತದೆ. 'ಪುರಂದರದಾಸರು' ಎಂಬ ಪದ್ಯದಲ್ಲಿ ಪುರಂದರರ ಬಗೆಗಿನ ಪ್ರಸಿದ್ಧ ಐತಿಹ್ಯದ ಹಿನ್ನೆಲೆಯಲ್ಲಿ ಅವರು ರಚಿಸಿದ ಹಾಡುಗಳಲ್ಲಿನ ಭಕ್ತಿಮೌಲ್ಯವನ್ನು ಕುರಿತು ಪ್ರಸ್ತಾಪಿಸಲಾಗಿದೆ. ನಿಸಾರರಿಗೆ ವಿಶಿಷ್ಟವಾದ ಮಾತುಗಾರಿಕೆಗೆ ಇಲ್ಲಿಯೂ ಎಡೆ ಸಿಕ್ಕಿದೆ. 'ಕವಿಯಂತೆ ಆಡಿದರೆ? ಇಲ್ಲಿಲ್ಲ, ತಮ್ಮನ್ನೆ ಮಿಡಿಸಿದರು, ನುಡಿಸಿದರು ಪ್ರಾಣ ದುಡುಕಿ' ಎಂದು ದಾಸರ ಕೀರ್ತನೆಗಳಲ್ಲಿನ ಭಕ್ತಿನಿರ್ಭರತೆ ಮತ್ತು ಪುರಂದರರು ತಮ್ಮ ದೇಹವನ್ನು ಬೀಜವಾಗಿಸಿಕೊಂಡು ಅದನ್ನು ಮೀರಿ ಭಕ್ತಿಯ ಹೆಮ್ಮರವನ್ನು ಬೆಳೆಸಿದ ಪರಿಯ ವರ್ಣನೆ ಮಾತುಗಾರಿಕೆಯಿಂದಾಗಿಯೇ ಮನ ಸೆಳೆಯುತ್ತದೆ. 'ರವೀಂದ್ರನಾಥ ಠಾಕೂರರು' ಆ ಮಹೋನ್ನತ ಕವಿಯ ಬರವಣಿಗೆಯ ಬೀಸನ್ನು, ಆಳವನ್ನು ಕವಿಯೇ ಸೃಷ್ಟಿಸುವ ನಾನಾ ನುಡಿಗಟ್ಟುಗಳ ಮೂಲಕ ಕಟ್ಟಿಕೊಡುವ ಮತ್ತೊಂದು ಚರಣಾತ್ಮಕ (stanzaic) ರಚನೆ. ರವೀಂದ್ರರ ಬರಹಗಳಲ್ಲಿ ಉಪನಿಷತ್ಕಾಲೀನ ತತ್ತ್ವಗಳು ಅಭಿವ್ಯಕ್ತಗೊಳ್ಳುವ ಪರಿ, 'ಪಾರತಂತ್ರ್ಯದತಂತ್ರ ನಾಡವರಿಗತಿ ನೊಂದು' ಅವರು ತಮ್ಮ ಬಿರುದನ್ನು ಹಿಂದಿರುಗಿಸಿದ್ದು, ಸ್ವದೇಶಾಭಿಮಾನವನ್ನು ಪಡೆದೂ ಅದನ್ನು ಮೀರಿದ ವಿಶ್ವ ಮಾನವತ್ವವನ್ನು ಪಡೆಯಲಾಶಿಸಿದ ಮನೋಭಾವ, ಅವರು ನವಯುಗದ ಸಾರಸ್ವತಾ ಚಾರ್ಯರಾದದ್ದು—ಇವುಗಳನ್ನು ಕುರಿತು ಇಲ್ಲಿ ಹಾಡಲಾಗಿದೆ. 'ಸ್ವಲ್ಪದಲೆ ಕಲ್ಪವನು

ಶಿಲ್ಪಿಸುವ ಕಲ್ಪಕತೆ' ಎಂಬಂತಹ, ನಿಸಾರರಿಗೆ ಅನನ್ಯವಾದ ಮಾತಿನ ಧಾಟಿಯನ್ನು ಇಲ್ಲಿಯೂ ಕಾಣಬಹುದು. 'ಶ್ರೀ ಶಾರದಾದೇವಿ' ಅವರ ಬಗ್ಗೆಯ ಕವಿಯ ಗೌರವ ಭಾವ ಕವನ ರೂಪದಲ್ಲಿ ಹೊರಹೊಮ್ಮಿದೆ. ಪರಮಹಂಸರೊಡನೆ ಅವಿನಾಭಾವವನ್ನು ಉಕ್ಕಿಸುವ ಶ್ರೀಮಾತೆ ತಮ್ಮ ದೇಹವನ್ನು 'ಯೌವನದ ಮೋಹ ಕಬಳಿಸುವ ಮುನ್ನ' ಲೋಹದಂತೆ ಘನಿಸಿ ಬಾನು-ಬಯಲುಗಳನ್ನು ಒಲಿದ ಪರಿಯನ್ನು ಗೌರವಪೂರ್ವಕವಾಗಿ ಹೊಗಳುತ್ತದೆ ಈ ಕವನ. ಇಂತಹುದೇ ಮಹತ್‌ಜೀವ ಈಚಿನ 'ಮದರ್ ತೆರೇಸ'. ಕವಿಯ ಮನ ಈ ಚೇತನದ ಬಗ್ಗೆಯೂ ಮೈಮರೆತು ಹಾಡುತ್ತದೆ. ದುಃಖಾರ್ತರ ಹಣೆ ಬರಹವನ್ನು ಹೊಸತಾಗಿ ಬರೆಯ ಹೊರಟ 'ಅಭಯಂಕರಿ'ಯಾಗಿ ಈ ತಾಯಿ ಕಾಣಿಸುತ್ತಾರೆ. 'ಮಾನವೀಯತೆ' ಎಂಬ ಪರಿಕಲ್ಪನೆಗೇ ಹೊಸ ಮೀಮಾಂಸೆ ಬರೆದಂತೆ ದೀನರ ಸೇವೆಗೈದ ತೆರೇಸರದು ಎಲ್ಲ ಧರ್ಮೋಪದೇಶಗಳ ಉತ್ಕೃಷ್ಟ ಸತ್ವದಿಂದ ರೂಪಗೊಂಡ ಚೇತನ.

ಈ ಕವನಗಳ ಮುಖ್ಯ ಪಾತ್ರಗಳೆಂದರೆ ಆಯಾ ಶೀರ್ಷಿಕೆಯಲ್ಲಿ ಸೂಚಿತವಾದ ವ್ಯಕ್ತಿಗಳೆ. ಅವರಲ್ಲಿ ಕೆಲವರು ಕವಿಯಿಂದ ದೇಶಕಾಲಗಳಲ್ಲಿ ದೂರವಾದವರಾದರೆ, ಮತ್ತೆ ಕೆಲವರು ಕನ್ನಡ ನಾಡಿನ ಭವ್ಯ ಚೇತನಗಳೇ: ಆದರೆ ಕಾಲದ ದೃಷ್ಟಿಯಿಂದ ದೂರವಾದವರು. ಮತ್ತೆ ಕೆಲವರ ವೈಯಕ್ತಿಕ ಪರಿಚಯವೂ ಕವಿಗಿಲ್ಲ; ಅವರನ್ನು ತಿಳಿದಿರುವುದು ಅವರ ಬಗೆಗಿನ ಪಾರಂಪರಿಕ ಸಂಗತಿಗಳಿಂದ ಮತ್ತು ಅವರ ಕೃತಿಗಳಿಂದ. ಹಾಗಾಗಿ ಇವೆಲ್ಲ ಸ್ತೋತ್ರಗಳಂತೆ ಕಾಣಿಸಿದರೆ ಅಚ್ಚರಿಯಿಲ್ಲ. ಒಂದು ನೆಲೆಯಲ್ಲಿ ಈ ಪದ್ಯಗಳೂ ಓದುಗರನ್ನು ಆಕರ್ಷಿಸಬಹುದಾದರೂ ಇವು ಯಾವುವೂ ಗಾಢವಾಗಿ ತಟ್ಟುವಂತಹುವಲ್ಲ. ಯಾಕೆಂದರೆ, ಕವಿ ಆಳಕ್ಕೆ ಇಳಿಯಲು ಸಾಧ್ಯವಾಗುವುದು ಅನುಭವದ ವೈಯಕ್ತಿಕತೆ ಇದ್ದಾಗ ಮಾತ್ರ. ವೈಯಕ್ತಿಕ ಪರಿಚಯವಿಲ್ಲದೆಡೆ ಆತ್ಮೀಯತೆಯನ್ನು ಹೇಗೆ ನಿರೀಕ್ಷಿಸಬಹುದು? ಆದ್ದರಿಂದ ಇವೆಲ್ಲ ಕವಿಯ ಪೂರ್ವನಿಶ್ಚಿತ ಪರಿಯಲ್ಲಿಯೇ, ಲೋಕ ನಿರೀಕ್ಷಿತ ಧಾಟಿಯಲ್ಲಿಯೇ ರಚಿತವಾಗಿವೆ.

ಇನ್ನು, ಎರಡನೆಯ ಗುಂಪಿನ ರಚನೆಗಳನ್ನು ಈಗ ನೋಡೋಣ. ಈ ಕವನಗಳ ನಾಯಕರಲ್ಲಿ ಕವಿ ದೂರದಿಂದ ಕಂಡ, ಹತ್ತಿರದಿಂದ ಕಂಡರೂ ಹಿರಿಯರಾದ, ಮತ್ತು ಜೊತೆಗಾರರಾದ ವ್ಯಕ್ತಿಗಳು ಸೇರಿದ್ದಾರೆ. ಈ ಗುಂಪಿನ ರಚನೆಗಳಾವುವೂ ಛಂದೋಬದ್ಧ ರಚನೆಗಳಲ್ಲ; ಸ್ವಚ್ಛಂದದಲ್ಲಿರುವಂತಹವು. ಈ ಹಿಂದೆ ಪ್ರಸ್ತಾಪಿಸಿದ ಕವನಗಳ ನಾಯಕರನ್ನು ಕವಿ ದೂರದಿಂದ ಕಂಡದ್ದರಿಂದಾಗಿ, ಅವುಗಳಲ್ಲಿ ಸಾಂಪ್ರದಾಯಿಕ ಭಾವನೆಗಳು ವ್ಯಕ್ತವಾಗಿವೆ, ಅದೂ ಸಿದ್ಧ ರೂಪಗಳಲ್ಲಿ. ಆದರೆ ಎರಡನೆಯ ಗುಂಪಿನ ರಚನೆಗಳಲ್ಲಿ ಬಹುಪಾಲು ವೈಯಕ್ತಿಕ ನೆಲೆಯಲ್ಲಿ ಕವನ ನಾಯಕರನ್ನು ಕುರಿತು ಪರಿಭಾವಿಸುವಂತಹವು, ಗಾಂಧಿ ಒಬ್ಬರನ್ನು ಬಿಟ್ಟು. 'ಬಾಪು' ದೂರದ ವ್ಯಕ್ತಿಯನ್ನು ಕುರಿತ ಪದ್ಯವಾದರೂ ಮೊದಲ ಗುಂಪಿಗೆ ಸೇರಿಸದಿರಲು ಕಾರಣವೆಂದರೆ, ಅಲ್ಲಿ ಬಾಪುವಿನ ಬಗ್ಗೆ ಪ್ರಸ್ತಾಪವಿದ್ದರೂ ಅದು ಗೌಣವಾಗಿ ಆ ನೆಪದಲ್ಲಿ ಪರಿಸ್ಥಿತಿಯ ವಿಶ್ಲೇಷಣೆ ಮುಖ್ಯವಾಗಿದೆಯಾದ್ದರಿಂದ. ಕವನದ ಮೊದಲನೆಯ ಭಾಗದಲ್ಲಿ ಗಾಂಧಿಯನ್ನು ಲೋಕಕ್ಕೆ ಕಣ್ಣಾದ ಬೆಳುದಿಂಗಳು ಮತ್ತು ಮೇರೆಯಿಲ್ಲದ ಕಡಲುಗಳಿಗೆ ಹೋಲಿಸಲಾಗಿದೆ: ಆದರೆ ಮುಂದಿನ ಮೂರೂ ಭಾಗಗಳಲ್ಲಿ

ಇರುವುದು, ಗಾಂಧಿಯ ಹಿನ್ನೆಲೆಯಲ್ಲಿ, ಲೋಕಸ್ಥಿತಿಯನ್ನು ಕುರಿತ ಪರಿಭಾವನೆ. ಬದುಕಿನಲ್ಲಿರುವ ಸಹಜ ಹಿಂಸೆ, ಸಹಜ ದ್ವಂದ್ವ (ಗಾಂಧಿ ಸತ್ತಾಗ ಕೆಲವರು ಅತ್ತದ್ದು, ಮತ್ತೆ ಕೆಲವರು ಸಕ್ಕರೆ ಹಂಚಿದ್ದು) ಇಂತಹವು, ಲೋಕ ಗಾಂಧಿಯನ್ನು ಅರ್ಥಮಾಡಿಕೊಳ್ಳು ವುದರಲ್ಲಿ ಹೇಗೆ ವಿಫಲವಾಯಿತೋ ಹಾಗೆಯೇ ಗಾಂಧಿ ಲೋಕ ಸ್ವರೂಪವನ್ನು ಯಥಾವತ್ತಾಗಿ ಗ್ರಹಿಸದಿರುವ ಪರಿಯೂ ಸೂಚಿತವಾಗಿದೆ ಇಲ್ಲಿ. ಹೀಗಾಗಿ ಗಾಂಧಿ 'ಮಿತಿಮೀರಿ ಬೆಳೆದಿರುವೆ, ಬಾಳಿಗೆ ದಕ್ಕದೆ ಮೀರಿರುವೆ' ಎಂಬಂತೆ ಕವಿಗೆ ತೋರುತ್ತಾರೆ.

'ಭೀಮಪ್ಪ ಮಾಸ್ತರರು', ಆ ಹೆಸರಿನ ಒಬ್ಬ ಅದ್ವಿತೀಯ ಸ್ವಂತಸ್ಥಳ ಪ್ರೇಮಿಯನ್ನು ದಿಟವಾಗಿ ಚಿತ್ರಿಸುವಂಥದು. ಬಳ್ಳಿಗಾವೆ ಪರಿಸರದ ಇತಿಹಾಸದ ಬಗ್ಗೆ ಅಪ್ರತಿಮ ಒಲವನ್ನು ಸಾಧಿಸಿಕೊಂಡಿದ್ದ ಆ ಮಾಸ್ತರರು ಒಬ್ಬ ಸಾಧಾರಣ ವ್ಯಕ್ತಿ. ಹೇಳಿಕೊಳ್ಳುವಂತಹುದೇನನ್ನೂ ಬರೆಯದೇ ಹೋದರೂ ತಾನು ಸಾಹಿತಿಯೆಂದು ಹೇಳಿಕೊಳ್ಳುವ ಚಪಲದವರು. ಆದರೆ ಇವರ ಹಿರಿತನವಿರುವುದು ತನ್ನ ಊರಿನ ಪರಿಸರದ ಮುಗ್ಧತೆಯನ್ನು ಮೈಗೂಡಿಸಿಕೊಂಡಿದ್ದ ರಲ್ಲಿ ಮತ್ತು ಬಂದವರನ್ನು 'ಕಾಣುವ' ಪರಿಯಲ್ಲಿ. ಸ್ವಂತ ಬದುಕಿನಲ್ಲಿ ಕಷ್ಟ ಅನುಭವಿಸಿದರೂ ಊರಿಗೆ ಹಾಗೂ ಇತರರಿಗೆ ಒಳಿತನ್ನು ಮಾಡಲು ಹೆಣಗಿದ, 'ಸಜ್ಜನಿಕೆ' ಎಂಬ ಶಬ್ದಕ್ಕೆ 'ಮಿಗಿಲರ್ಥ ದಕ್ಕಿಸಿದ', ಆದರೆ ಬಹು ಜನರಿಂದ ಅವಜ್ಞೆಗೊಳಗಾದ ವ್ಯಕ್ತಿ. ಆ ಮಾಸ್ತರರನ್ನು ಬಲ್ಲವರಿಗೆ ಈ ಪದ್ಯ ತಟ್ಟುವಷ್ಟು ಇತರರಿಗೆ ತಾಕಲಾರದೇನೋ.

'ಕೆಂಪು ತೋಟ ಮತ್ತು ಡಾ. ಎಚ್ಚೆನ್' ಹೆಸರೇ ಸೂಚಿಸುವಂತೆ ಆ ಇಬ್ಬರ ನಂಟನ್ನು ಬಣ್ಣಿಸುವುದರ ಜೊತೆಗೆ ಎಚ್ಚೆನ್ ಅವರ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಪರಿಚಯಿಸುತ್ತದೆ. ಅಸ್ವಸ್ಥತೆಯಿಂದ ಸ್ವಲ್ಪಕಾಲ ತಮ್ಮ ನಿಯತವಾದ ವಾಯುವಿಹಾರಕ್ಕೆ ವಿರಾಮವಿತ್ತಿದ್ದ ಎಚ್ಚೆನ್, ಮತ್ತೆ ಬಂದಾಗ ಅವರೇ ಹೇಳಿಕೊಂಡಂತೆ ತಮ್ಮ ಮತ್ತು ಕೆಂಪು ತೋಟದ ಗಿಡ ಮರಗಳ ಆಪ್ತತೆಯನ್ನು ಕವನದ ಮೊದಲನೆಯ ಭಾಗ ವಿವರಿಸುತ್ತದೆ. ಅನೇಕ ಉನ್ನತ ಹುದ್ದೆಗಳನ್ನು ನಿರ್ವಹಿಸಿ 'ಮಾಜಿ'ಯಾದ ಅವರು, ಆ ಬಗೆಗೆ ಕೊಂಚವೂ ಹಮ್ಮು ಇರಿಸಿಕೊಳ್ಳದೆ ಅತ್ಯಂತ ಸರಳವಾಗಿ ನಡೆದುಕೊಳ್ಳುವ ಪರಿಯಿಂದಾಗಿ ಅವರನ್ನು ನಿರೂಪಕ ತನ್ನ ಗುರು ಎಂದೇ ಗೌರವಿಸುವಂತಾಗುವ ಪರಿಯನ್ನು ಎರಡನೆಯ ಭಾಗ ತುಂಬ ಪರಿಣಾಮಕಾರಿಯಾದ ಮಾತುಗಳಲ್ಲಿ ತೆರದಿಡುತ್ತದೆ. ಸಾಂಪ್ರದಾಯಿಕ ಅರ್ಥದಲ್ಲಿ 'ನಿರೀಶ್ವರವಾದಿ'ಯಾದ ಎಚ್ಚೆನ್ ಪ್ರಕೃತಿಯ ಚೆಲುವನ್ನು ಆರಾಧಿಸುವ ಮೂಲಕ ನಿಜವಾದ ಆಸ್ತಿಕರಂತೆ ಕಾಣುವ ಅಚ್ಚರಿ ಮೂರನೆಯ ಭಾಗದ ವಸ್ತು. ಈ ಕವನವೂ ಆಳವಾಗಿ ಏನನ್ನೂ ಹೇಳದೇ ಹೋದರೂ ಎಚ್ಚೆನ್ ಅವರನ್ನು ಬಲ್ಲವರಿಗೆ ಅವರ ನೆನಪು ಗಾಢವಾಗಿ ಕಾಡುವ ಬಗೆಯಲ್ಲಿ ವ್ಯಕ್ತಿ ಚಿತ್ರಣ ಮಾಡಿರುವುದು ಇದರ ವೈಶಿಷ್ಟ್ಯ.

ನಿಸಾರ್ ಅವರ ವ್ಯಕ್ತಿ ಚಿತ್ರಣಗಳಲ್ಲೆಲ್ಲ ಅಪ್ರತಿಮವಾದದ್ದು 'ಮಾಸ್ತಿ'. ಕವಿ ಮತ್ತು ಕವನದ ನಾಯಕ ಪರಸ್ಪರ ಪರಿಚಿತರು; ಆದರೆ ಇಬ್ಬರ ನಡುವೆ ವಯಸ್ಸಿನ ಅಂತರ. ಬದುಕು-ಬರಹಗಳಲ್ಲಿ ವ್ಯಕ್ತವಾಗುವ ಆಶಯಗಳಲ್ಲಿ ದ್ವಂದ್ವವಿಲ್ಲದಂತೆ ಬಾಳಿದವರು ಮಾಸ್ತಿ. ಅವರ ಹಿರಿಮೆ ಇರುವುದು ಸಮಾಜದ ಅತ್ಯುತ್ಕೃಷ್ಟ ಅಂಶಗಳನ್ನು ವೈಯಕ್ತಿಕತೆ

ಯಲ್ಲಿ ಅಳವಡಿಸಿಕೊಂಡದ್ದರಲ್ಲಿ. ಇಡೀ ಕವನ ಮಾಸ್ತಿಯರ ದೈನಂದಿನಗಳ ಮೂಲಕ ಅವರನ್ನು ಕಟ್ಟಿಕೊಡುವುದರ ಜೊತೆಜೊತೆಗೇ ಅವರಲ್ಲಿ ಮೈಗೂಡಿದ್ದ ಸಾಮುದಾಯಿಕ ಆದರ್ಶವನ್ನು ಚಿತ್ರಿಸುತ್ತದೆ. ಮಾಸ್ತಿ ತಮ್ಮ ಬರಹದಲ್ಲಿ ಸಾಮಾನ್ಯರ ಹಿರಿಮೆಯನ್ನು ಗುರುತಿಸುತ್ತಾರೆ; ಹಾಗೆಯೇ ಸ್ವಂತ ಬದುಕಿನಲ್ಲಿ ಹಿರಿಮೆಯನ್ನು ಅಳವಡಿಸಿಕೊಂಡೂ ಸಾಮಾನ್ಯರಾಗಿಯೇ ಬದುಕಿದ್ದಾರೆ. ಇದನ್ನೇ ಈ ಕವನ ಐದು ಭಾಗಗಳಲ್ಲಿ ಹೃದ್ಯವಾಗಿ ಕಟ್ಟಿಕೊಡುತ್ತದೆ. ನಿರೂಪಕ ಸಿಗರೇಟು ಸೇದುತ್ತ ಗಾಂಧಿಬಜಾರ್ ಸರ್ಕಲ್‌ನಲ್ಲಿ ನಿಂತಾಗ ಎಂದಿನಂತೆ ಸಂಜೆ ಮಾಸ್ತಿ ಕ್ಲಬ್ ಕಡೆಗೆ ಹೋಗಿ, ಅಲ್ಲಿ ಸ್ವಲ್ಪ ಹೊತ್ತಿದ್ದು, ಮತ್ತೆ ಮನೆಗೆ ಮರಳುವ ಸಂದರ್ಭದ ನೆಪದಲ್ಲಿ ಕವಿ ತಮ್ಮ ನಾಯಕನ ಗುಣಗಳನ್ನು ಅತ್ಯಂತ ಸೂಕ್ಷ್ಮವಾಗಿ ಬಿಡಿಸಿಡುತ್ತಾರೆ, ಅದೂ ಸಾಮಾನ್ಯ ಮಾತುಗಳಲ್ಲಿ. 'ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ' ಕಾಣಿಸಿಕೊಳ್ಳುವ ಮಾಸ್ತಿ, ಅಭಿವೃದ್ಧಿಯ ಹೆಸರಲ್ಲಿ ಸರಳತೆ ಎದುರಿಸಬೇಕಾದ ಸವಾಲಿಗೊಡ್ಡಿಕೊಳ್ಳುತ್ತ ಸಾಗುತ್ತಾರೆ. ಎಲ್ಲರಂತೆ ಅವರೂ ಕಿರಿ ಜಗಳದಲ್ಲಿ ತೊಡಗಬಹುದು, ಹರಟೆಯ ನಡುವೆ ನಡೆಯುವ ಇಸ್ಪೀಟಾಟದಲ್ಲಿ 'ತಪ್ಪಾಡಿದರೆ' (ದ್ವಂದ್ವಾರ್ಥ ಗಮನಿಸಿ) ಮಾಸ್ತಿ ಗದರುತ್ತಾರೆ. ಆಟ ಲಾಭ ನಷ್ಟಗಳಿಗಲ್ಲ, ಆಟಕ್ಕಾಗಿ ಎಂಬ ನಿಲವು ಅವರದು. ಮನೆಗೆ ಮರಳುವಾಗ 'ಸಾಗುವರು ಸದ್ದಿರದೆ ಚಂದ್ರನಂತೆ!' ನಿರೂಪಕ ನೋಡುನೋಡುತ್ತಿರುವಂತೆಯೇ 'ಮರೆಯಾಗುವರು ಮಾಸ್ತಿ ಸಂದ ಜೀವನದೊಂದು ರೀತಿಯಂತೆ; ಸರಳ ಸದಭಿರುಚಿಯ ಖ್ಯಾತಿಯಂತೆ' 'ಮರೆಯಾಗುವರು' ಎಂಬ ಕ್ರಿಯಾಪದ ಗಮನಾರ್ಹ. ಅದು ವರ್ತಮಾನ ಕಾಲದ್ದು ಹೇಗೋ ಹಾಗೆಯೇ ಭವಿಷ್ಯತ್ತಿನದು ಕೂಡ. ಹೀಗಾಗಿ ಈ ಸಾಲುಗಳ ಅರ್ಥ ನಿಂತ ನಿರೂಪಕನ ಕಣ್ಣಿಂದ ಮಾಸ್ತಿ ಎನ್ನುವ ವ್ಯಕ್ತಿ ಮರೆಯಾಗುವುದನ್ನು ಮಾತ್ರ ಸೂಚಿಸದೆ, ಒಂದು ಸತ್ಪರಂಪರೆ, ಅದರ ಸನ್ಮೌಲ್ಯಗಳು ಸಹ ನಮ್ಮ ಬದುಕಿನಿಂದ ಕಾಣೆಯಾಗುತ್ತಿರುವ ಮಹತ್ವದ ಸಂಗತಿಗೆ ಕೈಮರವಾಗುತ್ತವೆ. ಕವಿಯ ಪರಿಭಾವನೆಯಲ್ಲಿ ಒಬ್ಬ ವ್ಯಕ್ತಿಯ ಹಿರಿಮೆ ಇರುವುದು ತನ್ನದೇ ಎಂಬಂತಹ ಗುಣಗಳನ್ನು ಅವನು ಹೊಂದುವುದರಲ್ಲಲ್ಲ, ಸಮಾಜದ ಉತ್ಕೃಷ್ಟವಾದದ್ದನ್ನು ಮೈಗೂಡಿಸಿಕೊಂಡು ಸಾಮಾನ್ಯನಾಗುವುದರಲ್ಲಿ. ಹೀಗಾಗಿ ಈ ಕವನ ಮಾಸ್ತಿಯವರ ಹಿರಿಮೆಯನ್ನು ಮನಂಬುಗುವಂತೆ ಚಿತ್ರಿಸುವುದರ ಜೊತೆಜೊತೆಗೇ ಕವಿಯ ದೃಷ್ಟಿಯಲ್ಲಿ ವ್ಯಕ್ತಿತ್ವಕ್ಕಿರಬೇಕಾದ ಗುಣವನ್ನೂ ರೇಖಿಸುತ್ತದೆ. ಅಂದರೆ ಈ ಕವನದ ಸಾರ್ಥಕ್ಯವಿರುವುದು ಒಬ್ಬ ವ್ಯಕ್ತಿಯ ಚಿತ್ರವನ್ನು ನೀಡುವುದರಲ್ಲಿ ಮಾತ್ರವಲ್ಲ, ಒಟ್ಟು ಆದರ್ಶ ವ್ಯಕ್ತಿತ್ವದ ಸ್ವರೂಪವನ್ನು ಕುರಿತು ಪರಿಭಾವಿಸುವುದರಲ್ಲಿಯೂ ಕೂಡ.

ಈಗ, ಮೂರನೆಯ ಗುಂಪಿನ ಕವನಗಳ ಪರಿಶೀಲನೆ ಮಾಡೋಣ. 'ರಾಮನ್ ಸತ್ತ ಸುದ್ದಿ' ಎಂಬುದು ವ್ಯಕ್ತಿತ್ವವನ್ನು ಚಿತ್ರಿಸುವ ಕವನವೇನಲ್ಲ. ಆದರೆ ಮೊದಲ ಬಾರಿಗೆ ಅದು ಕಣ್ಣಿಗೆ ಬಿದ್ದಾಗ ಓದುಗರಲ್ಲಿ ಮೂಡುವ ಭಾವನೆಯೆಂದರೆ, ಒಬ್ಬ ಶ್ರೇಷ್ಠ ವ್ಯಕ್ತಿಯ ಸಾವಿನ ಸಂದರ್ಭದಲ್ಲಿ ಅವನ ಬಗೆಗಿನ ಗೌರವ ಹಾಡಾಗಿ ಚರಮಗೀತೆಯಾಗಿ ರೂಪುಗೊಳ್ಳುವ ನೆನಪು ಮೂಡಿಸಿ, ಇದೂ ಅಂತಹುದು ಎಂಬ ಭಾವನೆ ತರಿಸುವುದು. ಆದರೆ ಇಲ್ಲಿ ಅದು ನಡೆಯದೇ ಇರುವುದೇ ಈ ಕವನದ ವೈಶಿಷ್ಟ್ಯ. ಮತ್ತು ರಾಮನ್ ಅವರ ಸಾವಿನ ಸುದ್ದಿಯ

ಹಿನ್ನೆಲೆಯಲ್ಲಿ ಒಟ್ಟು ಬದುಕಿನ ಪರಿಯನ್ನು ಅತ್ಯಂತ ಸೂಕ್ಷ್ಮತೆಯಿಂದ ಒಳಹೊಕ್ಕು ನೋಡುವ ಪರಿ ಓದುಗನನ್ನು ಮೊನಚಾಗಿ ತಟ್ಟುತ್ತದೆ. ಸರ್ ಸಿ. ವಿ. ರಾಮನ್ ಅವರ ಸಾವಿನ ಸುದ್ದಿ, ಅವರ ಕೊಡುಗೆಯನ್ನು ಬಲ್ಲ ನಿರೂಪಕನಲ್ಲಿ ಆಳವಾದ ವಿಷಾದವನ್ನು ತರುತ್ತದೆ; ಗುಂಗು ಹಿಡಿಸುತ್ತದೆ. ಅಂಥ ಸನ್ನಿವೇಶದಲ್ಲಿ ಒಬ್ಬ ಗಮಾರ ಹನುಮ ಬಂದು ಇವರನ್ನು ಮಾತಾಡಿಸುತ್ತಾನೆ. ನಿರೂಪಕನ ಮನಸ್ಸಿನಲ್ಲಿ ಒಂದೆಡೆ ರಾಮನ್, ಮತ್ತೊಂದೆಡೆ ಹನುಮ ನಿಲ್ಲುತ್ತಾರೆ (ಮಾನವ ಬದುಕಿನ ಎರಡು ತುದಿಗಳನ್ನು ಪ್ರತಿನಿಧಿಸುವ ಈ ಹೆಸರುಗಳು ಅದೆಷ್ಟು ಔಚಿತ್ಯಪೂರ್ಣವಾಗಿವೆ!) ಏಕತಾನ ಎಂಬಂತೆ, ನಾನಾ ಸ್ತರಗಳಲ್ಲಿ ಬದುಕಲಾರದ ಹನುಮ ಎದುರು ನಿಂತಾಗ ನಿರೂಪಕನಲ್ಲಿ ಅವನ ಸಾಮಾನ್ಯತೆ, ಆದರೆ ಅವನ ತೃಪ್ತ ಜೀವನ ಮನಸ್ಸನ್ನು ಕೆದಕುತ್ತದೆ; ಆ ಬಗ್ಗೆ ಮೆಚ್ಚಿಕೆಯೂ ಮೂಡುತ್ತದೆ. ಆ ಮುಂದೆ 'ಸಾವು' ವೈಯಕ್ತಿಕತೆಯನ್ನು ಮುಟ್ಟುತ್ತದೆ. ಸಾವಿನ ಅಗಾಧತೆಯ ಅನುಭವ, ಅದರೆದುರಿನ ಒಂಟಿತನದ ಭಾವ ನಿರೂಪಕನಲ್ಲಿ ದಟ್ಟವಾಗಿ ರಾಮನ್ ಅವರ ಸಾವಿನ ಸುದ್ದಿಯ ತಳಮಳದ ತೀವ್ರತೆ ಕಡಿಮೆಯಾಗುತ್ತದೆ. ಕವನ ರಾಮನ್ ಬಗ್ಗೆ ಏನನ್ನೂ ಹೇಳುವುದಿಲ್ಲ; ಆದರೆ ನಮ್ಮನ್ನು ಚಿಂತನೆಗೊಡ್ಡುತ್ತದೆ. ಯಾರದೋ, ಅವರು ಎಷ್ಟೇ ಹಿರಿಯರಾಗಿರಲಿ, ಸಾವಿನ ಸುದ್ದಿ ನಮ್ಮನ್ನು ಏಕೆ ಕಲಕುತ್ತದೆ? ಎಂಬ ಮೂಲ ಪ್ರಶ್ನೆ ನಮ್ಮೆದುರು ನಿಲ್ಲುತ್ತದೆ: ನಮ್ಮ ದುಃಖ ಸತ್ತವ್ಯಕ್ತಿಯ ಕಾರಣಕ್ಕಾಗಿಯೋ? ಅಥವಾ ಆ ನೆಪದಲ್ಲಿ ನಾವೂ ಸಾಯಲೇಬೇಕಾದ ಅನಿವಾರ್ಯತೆಯ ಅರಿವುಂಟಾಗಿ ಆವರಿಸುವ ಆತ್ಮಮರುಕದ ಪರಿಣಾಮವಾಗಿಯೋ?

ದೊಡ್ಡ ದೊಡ್ಡ ಆದರ್ಶಗಳ ನಡುವೆ ಗಟ್ಟಿ ವಾಸ್ತವವಾಗಿ ಹಿರಿದಾದದ್ದು ಏನನ್ನೂ ಮುಂದಿಟ್ಟುಕೊಳ್ಳದೆ ಬಾಳುವ ವ್ಯಕ್ತಿಗಳದೇ ಎಲ್ಲ ಕಾಲಗಳಲ್ಲೂ ದೇಶಗಳಲ್ಲೂ ಬಹು ಸಂಖ್ಯೆ. ಬದುಕು ಎಂದರೆ ಯಾವುದು? ಆದರ್ಶ ಹೊತ್ತವರದೇ ಅಥವಾ ಸಾಮಾನ್ಯನದೇ? ಸಾಮಾನ್ಯರದ್ದು ಬದುಕಲ್ಲ ಎಂದು ನೂಕಿಬಿಡಲು ಸಾಧ್ಯವಿಲ್ಲ. ಒಬ್ಬೊಬ್ಬ ವ್ಯಕ್ತಿಗೂ ಸ್ವತಂತ್ರ ಅಸ್ತಿತ್ವ ಇರುವಾಗ, ಸಾಮಾನ್ಯರೇ ಅತ್ಯಧಿಕವಾಗಿರುವಾಗ, ಬದುಕು ಹೀಗೇ ಇರಬೇಕೆಂದು ನಿರ್ವಚಿಸುವುದು ಹೇಗೆ? ಈ ಪರಿಯ ಯೋಚನಾತರಂಗಗಳನ್ನು ಎಬ್ಬಿಸುವ ಸರಳ ರಚನೆ 'ಶ್ರೀಸಾಮಾನ್ಯನ ಪ್ರತಿನಿಧಿ'. ಅತ್ಯಂತ ಸಾಧಾರಣವಾದರೂ ಬದುಕು ಬದುಕೇ ಎಂಬ ವಾಸ್ತವದ ಕಡೆ ನಮ್ಮ ಗಮನ ಕೊಂಡೊಯ್ಯುವ ಕವನ ಸಾಮಾನ್ಯನ ಸಮರ್ಥ ವ್ಯಕ್ತಿ ಚಿತ್ರಣವಾಗಿದೆ; ಯಾವ ವೈಶಿಷ್ಟ್ಯವೂ ಇರದುದೇ ಇವನ ವೈಶಿಷ್ಟ್ಯ ಎಂಬ ನೋಟ ಇದರದ್ದು. ಹಾಗೆಯೇ ನಾನು ಇಂಥ ಇನ್ನೊಂದು ಚಿತ್ರಣವನ್ನು ಕಾಣುವುದು 'ಮಾತಿಗ' ಎಂಬ ಕವನದಲ್ಲಿ. ಎದುರಿಗೆ ಸಿಕ್ಕಿದಾಗಲೆಲ್ಲ ತನ್ನ ಅವಿರತ ಮಾತಿನಿಂದ ಉಡ ಹಿಡಿಯುವ ಹಾಗೆ ಹಿಡಿದು ಬಿಡುವವನ ವಿಡಂಬನೆ ಇದ್ದಂತಿದೆ ಈ ಕವನ. ಆ ಮಾತು ಕೇವಲ ಚಟವೋ, ಅದರ ಆಳದಲ್ಲೇನಾದರೂ ಉದ್ದೇಶ ಅಡಗಿದೆಯೋ ಎಂಬುದೂ ಅರ್ಥವಾಗದಂತೆ ಸಾಗುವ ಮಾತಿನ ನಿರ್ಭರ ಧಾರೆಯ ಹಿಂದೆ ಕೇಡಿಗತನವಿಲ್ಲದಿದ್ದರೂ ಮತ್ತೊಬ್ಬರಿಗೆ ಕಿರಿಕಿರಿಯುಂಟು ಮಾಡುವ ಪರಿಯೇನೋ ಉಂಟು. ನಾಲಿಗೆ ಹಿತ್ತಾಳೆಯದು ಎಂಬುದನ್ನು ಬಿಟ್ಟರೆ ಇಂಥ ವ್ಯಕ್ತಿ ಅಂತರಂಗದಲ್ಲಿ ಚಿನ್ನ ಎಂಬ ಭರತವಾಕ್ಯವನ್ನು ಬರೆಯುವ ಮೂಲಕ ಕವಿ,

ಶ್ರೀಸಾಮಾನ್ಯ ಎಂಬಂತೆಯೇ ಇರುವ ಮತ್ತೊಂದು ವ್ಯಕ್ತಿತ್ವದ 'ಟೈಪ್'ಅನ್ನು ಸಮರ್ಥವಾಗಿ ಚಿತ್ರಿಸುತ್ತಾರೆ.

ಒಟ್ಟಾರೆ, ನಿಸಾರರು ವ್ಯಕ್ತಿಗಳ ಬಗ್ಗೆ ಬರೆಯುವ ಪರಿಯ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು: ತನ್ನ ಕವನದ ನಾಯಕನೊಡನೆ ನಿರೂಪಕನ ಆಪ್ತತೆ ಹೆಚ್ಚಾದಷ್ಟೂ ಕವನಕ್ಕೇ ಹೆಚ್ಚು ಆಪ್ತತೆ ಬರುತ್ತದೆ; ಅವನು ನಿರೂಪಕನ ವೈಯಕ್ತಿಕ ಪರಿಧಿಯಿಂದ ದೂರಾದಷ್ಟೂ ಸ್ತುತಿಪರತೆ ಹೆಚ್ಚಾಗುತ್ತದೆ. ಹೆಚ್ಚು ಯಶಸ್ವೀ ಕವನಗಳಲ್ಲಿ ಕವನದ ನಾಯಕ ನೆಪವಾಗಿ ಒಟ್ಟು ಬದುಕಿನ ಬಗೆಗಿನ ಪರಿಭಾವನೆಯೇ ಆಳವಾಗುತ್ತ ಹೋಗುತ್ತದೆ. ಕವಿಯ ಅಂತರಂಗವನ್ನು ತಟ್ಟುವುದು ವ್ಯಕ್ತಿಯ ವೈಯಕ್ತಿಕ ಸಾಧನೆಗಿಂತ ಹೆಚ್ಚಾಗಿ ಆತ ಮಾನವೀಯತೆಯನ್ನು ಮೈಗೂಡಿಸಿಕೊಂಡಿರುವ ಪರಿ. ಇಂತಹ ವ್ಯಕ್ತಿಗಳ ಅಪೂರ್ವ ವ್ಯಕ್ತಿತ್ವದ ರೇಖನ ಮಾಡುವುದರಲ್ಲಿ ನಿಸಾರ್ ನಿಪುಣರು. ಆ ಕಾರಣಕ್ಕಾಗಿಯೇ 'ಮಾಸ್ತಿ' ಮತ್ತು 'ರಾಮನ್ ಸತ್ತ ಸುದ್ದಿ' ಕವಿತೆಗಳು ನೇರವಾಗಿ ಓದುಗರ ಹೃದಯದಾಳವನ್ನು ತಾಗುವುದರಲ್ಲಿ ಸಫಲವಾಗುತ್ತವೆ.

ಪ್ರಾಪಂಚಿಕ ವಸ್ತುಗಳಿಗೆ ಎರಡು ಸ್ವರೂಪವಿರುತ್ತದೆ: ಸ್ಥೂಲ, ಸೂಕ್ಷ್ಮ; ಸಾಧಾರಣ, ವಿಶೇಷ. ಸ್ಥೂಲ ಹಾಗೂ ಸಾಮಾನ್ಯ ಸ್ವರೂಪ ಅನೇಕ ವಸ್ತುಗಳ ನಡುವಣ ಸಾಮ್ಯದ ಒಟ್ಟಾರೆ ಲಕ್ಷಣವಾಗಿರುತ್ತದೆ. ಚಾಕು, ಕತ್ತರಿಗಳು ಏಕ ಲೋಹ ನಿರ್ಮಿತವಾಗಿ ಹರಿತವಾಗಿರುವುದು, ಅವು ಛೇದನದ ಹತ್ಯಾರು ಗಳಾಗಿರುವುದು ಅವುಗಳ ಸ್ಥೂಲ ಹಾಗೂ ಸಾಧಾರಣ ಲಕ್ಷಣ. ಆದರೆ ಅವೆರಡಕ್ಕೂ ಸ್ಪಷ್ಟ ಹಾಗೂ ನಿಷ್ಕೃಷ್ಟ ಕಾರ್ಯಗಳಿರುತ್ತವೆ. ಚಾಕುವಿನ ಕೆಲಸವನ್ನು ಕತ್ತರಿ, ಕತ್ತರಿಯದನ್ನು ಚಾಕು ಮಾಡಲಾರದೆಂದಲ್ಲ. ಯಾವುದು ಯಾವ ಕೆಲಸಕ್ಕೆ ತಯಾರಾಗಿ ನಿಯೋಜಿತವಾಗಿರುವುದೊ ಅದರಿಂದ ಆಗುವ ಕೆಲಸದಷ್ಟು ಸುಲಭವಾಗಿ, ಸಮರ್ಪಕವಾಗಿ ಕಡಮೆ ಸಮಯದಲ್ಲಿ ಮತ್ತೊಂದ ರಿಂದ ಆಗುವುದು ಅಶಕ್ಯ. ಈ ಉಚಿತಾನುಚಿತ ಪರಿಜ್ಞಾನವನ್ನು ಗಳಿಸಿಕೊಂಡು ಸಾಹಿತ್ಯ ವಸ್ತುವನ್ನು ಸಂದರ್ಭಾನುಗುಣವಾಗಿ ಬಳಸಿಕೊಳ್ಳುವ ಕೌಶಲವುಳ್ಳಾತ ಮಹತ್ತರವಾದದ್ದನ್ನು ಮೂಡಿಸಬಲ್ಲ.

(ಸಾಹಿತ್ಯ ವಸ್ತುವಿನ ಸರಿಯಾದ ಬಳಕೆ)



ನಿಸಾರ್ ಅವರ ಕಾವ್ಯದಲ್ಲಿ ಹೆಣ್ಣು

♦ *ಡಾ. ಕೆ. ಆರ್. ಸಂಧ್ಯಾರೆಡ್ಡಿ*

ಕೆ.ಎಸ್. ನಿಸಾರ್ ಅಹಮದ್‌ರ ಕಾವ್ಯ ನಿರಂತರವಾಗಿ ನದಿಯಂತೆ ಈ ಐವತ್ತು ವರ್ಷಗಳುದ್ದಕ್ಕೂ ಹರಿದು ಬಂದಿದೆ. ನರಸಿಂಹ ಸ್ವಾಮಿಯವರನ್ನು ಬಿಟ್ಟರೆ ಬಹುಶಃ ನಿಸಾರ್ ಮಾತ್ರ ಬಹಳಷ್ಟು ಭಾವಗೀತೆಗಳನ್ನು ಬರೆದಿದ್ದಾರೆ. ಇವುಗಳಲ್ಲಿ ನಿಸಾರ್ ಅವರ ದನಿಯಂತೆಯೇ ಗದ್ಗದಿಸುವ ಪ್ರಣಯ ರಾಗದ ಗೀತೆಗಳೇ ಹೆಚ್ಚು ಸಂಖ್ಯೆಯಲ್ಲಿವೆ.

ಹೆಣ್ಣಿನ ಬಗ್ಗೆ ತಮ್ಮ ನಿಲವನ್ನು ಕುರಿತು ನಿಸಾರ್ ಹೇಳುವುದೇನೆಂದರೆ ಹೆಣ್ಣನ್ನು ಕುರಿತ ದೃಷ್ಟಿ ಸದಾ ಕಾಲಕ್ಕೂ ಒಂದೇರೀತಿ ಇರುವುದಿಲ್ಲ, ಕಾಲ ಕಾಲಕ್ಕೆ ಅದು ಬದಲಾಗು ತ್ತಿರುತ್ತದೆ. ಯೌವನದ ಕಣ್ಣಿಗೆ ಹೆಣ್ಣು ತನ್ನ ಸಹಜ ಅವಸ್ಥೆ ಯಲ್ಲಿ ಕಾಣುವುದಿಲ್ಲ. ಹೆಣ್ಣೆಂದರೆ ಏನು? ಎಂಬುದು ಅರ್ಥ ವಾಗುವುದು ಮದುವೆಯಾದ ಹಲವು ವರ್ಷಗಳ ಅನಂತರ. ಹೆಂಡತಿಯ ಬಗೆಗಿನ ಪ್ರೀತಿ ಯೌವನದ ಪ್ರೀತಿಗಿಂತ ಭಿನ್ನ. ಮದುವೆಯ ಅನಂತರ ಹೆಣ್ಣಿನ ಸಹನೆ, ದುಡಿಮೆ, ತ್ಯಾಗ, ಪ್ರೇಮ, ವಾತ್ಸಲ್ಯಗಳು ಅರಿವಾದಂತೆ ಅವಳ ಬಗೆಗೆ ಗೌರವ ಹೆಚ್ಚಾಗುತ್ತದೆ. ಹೆಣ್ಣಾದ ಕಾರಣಕ್ಕಾಗಿಯೇ ಅವಳು ಕೌಟುಂಬಿಕ ವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಅನೇಕ ವಿಧದ ಕಟ್ಟುಪಾಡುಗಳಿಗೆ ಒಳಗಾದವಳು. ಅವಳು ತನ್ನ ಸಹಜ ಭಾವನೆ ಆಸೆಗಳನ್ನು ಅದುಮಿಟ್ಟುಕೊಂಡೇ ಬದುಕು ಸವೆಸಬೇಕಾಗುತ್ತದೆ. ಈ ಕಾರಣದಿಂದ ಹೆಣ್ಣಿನ ಬಗ್ಗೆ ಪ್ರೀತಿ ಗೌರವಗಳ ಜೊತೆಗೆ

ಅನುಕಂಪೆ ಹಾಗೂ ಕರುಣೆ ಮೂಡುತ್ತದೆ. ಇನ್ನೂ ಒಂದು ವಿಶೇಷವೆಂದರೆ, ಮದುವೆಯಾದ ಕೆಲ ವರ್ಷಗಳ ಬಳಿಕ ಹೆಂಡತಿಯ ಮೇಲಿನ ಅವಲಂಬನೆ ಇನ್ನೂ ಹೆಚ್ಚಾಗುತ್ತದೆ. ಹೆಣ್ಣಿನ ವಾಸ್ತವ ಸ್ಥಿತಿಗತಿಯನ್ನು ಅರಿತ ಮೇಲೆ ಹುಟ್ಟುವುದೇ ನಿಜವಾದ ಪ್ರೀತಿ. ನಿಸಾರ್ ಅಹಮದ್‌ರು ಹೇಳುವ ಇನ್ನೂ ಒಂದು ಮುಖ್ಯವಾದ ಮಾತೆಂದರೆ ಹೆಣ್ಣಿನ ಆಧಾರ ವಿಲ್ಲದವ ಒಳ್ಳೆಯ ಕವಿಯಾಗಲು ಸಾಧ್ಯವಿಲ್ಲ. ಕುವೆಂಪು, ಬೇಂದ್ರೆ, ಕೆ. ಎಸ್. ನರಸಿಂಹ ಸ್ವಾಮಿ ಮೊದಲಾದ ನಮ್ಮ ಹಿರಿಯ ಕವಿಗಳೆಲ್ಲರೂ ಹೆಣ್ಣಿಗೆ ತಮ್ಮ ಬದುಕಿನಲ್ಲಿ ಬಹು ದೊಡ್ಡ ಗೌರವದ ಸ್ಥಾನ ನೀಡಿದ್ದಾರೆ. ನಿಸಾರ್ ಅವರೂ ಸಹ ವೈಯಕ್ತಿಕವಾಗಿ ಇದೇ ನಿಲವಿನವರು ಎಂಬುದನ್ನು ಅವರು ಕಾವ್ಯ ಹಾಗೂ ಬದುಕು ಸಮರ್ಥಿಸುತ್ತದೆ.

ನಿಸಾರ್ ಕಾವ್ಯದಲ್ಲಿ ಮುಖ್ಯವಾಗಿ ಮೂರು ವಿಧದ ಹೆಣ್ಣುಗಳ ಚಿತ್ರ ಪದೇ ಪದೇ ಕಂಡು ಬರುತ್ತದೆ. ಮೊದಲನೆಯದು ಯೌವನಾವಸ್ಥೆಯಲ್ಲಿ ಕವಿಗೆ ಕಾಣುವ ಹೆಣ್ಣು. ಎರಡನೆಯದು ವಿವಾಹಾನಂತರ ಕಾಣುವ ಹೆಣ್ಣು. ಮೂರನೆಯದು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು.

ಕವಿಯ ಯೌವನಾವಸ್ಥೆಯ ಕಣ್ಣಿಗೆ ಕಾಣುವ ಹೆಣ್ಣುಗಳೆಲ್ಲ ಪ್ರಣಯಿನಿಯರು. ತಮ್ಮ ಹಾವಭಾವ, ಒನಪು, ವೈಯಾರ, ಬಿಂಕ ಬಿಗುಮಾನಗಳಿಂದ ಕವಿಯನ್ನು ಆಕರ್ಷಿಸಿದವರು. ಈ ಹೆಣ್ಣುಗಳ ಚೆಲುವು, ಅವರು ತನ್ನನ್ನು ಕಾಡುವ ರೀತಿ, ಈ ಕಾಡುವಿಕೆಯಿಂದ ಕವಿಯ ಮನದಲ್ಲಿ ಏಳುವ ಗೊಂದಲ, ಆತಂಕ, ಭೀತಿ—ಮೊದಲಾದ ಭಾವಗಳು ಹಲವಾರು ಕವಿತೆಗಳಲ್ಲಿ ಮೈ ತಾಳಿವೆ.

ತಾರುಣ್ಯಾವಸ್ಥೆಯ ಕವಿಯ ಮನೋವ್ಯಾಪಾರಗಳೆಲ್ಲದರ ವಸ್ತು ಹೆಣ್ಣೇ ಆಗಿದ್ದಾಳೆ. ಅವಳ ಪ್ರತಿಯೊಂದು ಭಾವ ಭಂಗಿಯ ಅರ್ಥ ಹುಡುಕುವುದರಲ್ಲಿ ಕವಿ ಮಗ್ನರಾಗುತ್ತಾರೆ. ಮೊದ ಮೊದಲು ಅವಳ ಸೌಂದರ್ಯ ವರ್ಣನೆಯಲ್ಲಿ ಮೈ ಮರೆಯುತ್ತಾರೆ.

'ಬಟ್ಟಲುಗಣ್ಣಿನ ಮುಗಿಲ ಕುಡಿಮಿಂಚು ಸೆಳೆ ನೋಟ
ಹಣೆಗಿಳಿದ ಮುಂಗುರುಳು ಕಾಮನುರುಳು
ಚೆಲುಗೆನ್ನೆ ಹಸೆಯಲ್ಲಿ ನಸು ನಗೆಯ ಸುಳಿದಾಟ
ಚಿತ್ತ ಚಂಚಲಗೊಳಿಪ ಹೊಂದನಿಯ ಹೊರಳು.'

(ಬಾಗಿಲಿಗೆ ಬಂದು)

ಹೆಣ್ಣಿನ ಒಲವಿಗೆ ವಶವಾದ ಕವಿ ಅದರ ನಿಗೂಢತೆಗೆ ದಂಗಾಗಿ ಹೋಗುವ ಪರಿಯನ್ನು 'ಮತ್ತೇನೆ ಕೇಳಿದರು' ಕವನ ಚಿತ್ರಿಸುತ್ತದೆ:

'ಮತ್ತೇನೆ ಕೇಳಿದರು ಇದ ಕೇಳಬೇಡ
ನಿನ್ನನೇತಕೆ ಒಲಿದೆನೆನ್ನುವುದು ಗೂಢ.
ಒಲವೆಂದೆ ಅನ್ನಿಸದು ಓಲೈಸುವಾಗ
ಎದೆಗೆ ಎದೆ ಸಮುಗೂಡಿ ಮೇಳೈಸುವಾಗ
ಒಲಿದಿದ್ದು ತಿಳಿದೀತು ಒಲಿಸಾದ ಮೇಲೆ
ಮೊದಲೆ ಕಾರಣ ತಿಳಿಸಲದಕಿಲ್ಲ ವೇಳೆ' (ಮತ್ತೇನೆ ಕೇಳಿದರು)

ಹೆಣ್ಣಿನ ಸಮಕ್ಷದಲ್ಲಿರುವಾಗ ಉಂಟಾಗುವ ಆಕರ್ಷಣೆ ಗಂಡಿನ ಬಯಕೆ, ತಲ್ಲಣ, ಗಂಡು ತನಗೆ ತಾನೇ ಹೇಳಿಕೊಳ್ಳುವ ಸಮಾಧಾನ—ಇವೆಲ್ಲ ಮುಪ್ಪುರಿಗೊಂಡಿರುವ ಕವಿತೆ 'ಮನೋರಮಾ'. ಈ ಕವಿತೆಯನ್ನು ಸುಕೃತ ಚಿತ್ರ, ವಿಕೃತ ಚಿತ್ರ, ಪ್ರಕೃತ ಚಿತ್ರ ಎಂದು ಮೂರು ಭಾಗ ಮಾಡಿಕೊಳ್ಳಲಾಗಿದೆ. ಮೊದಲನೆಯ ಭಾಗ ಅವಳ ಸೆಳೆತ ಹಾಗೂ ಅವಳಿಗಾಗಿ ತನ್ನ ಬಯಕೆಗಳನ್ನು ಹೇಳಿದರೆ, ಎರಡನೆಯ ಭಾಗ ಅವಳು ತನಗೆ ದಕ್ಕುವುದಿಲ್ಲ, ತನ್ನ ಪಾಲಿಗೆ ಅವಳು ಗಗನ ಕುಸುಮ ಎಂಬ ಆಶಾಭಂಗವನ್ನು ವ್ಯಕ್ತಪಡಿಸುತ್ತದೆ. ಮೂರನೆಯ ಭಾಗದಲ್ಲಿ ಕವಿ ತನಗೆ ತಾನೇ ಹೇಳಿಕೊಳ್ಳುವ ಸಮಾಧಾನದ ಮಾತುಗಳಿವೆ.

'ನನ್ನ ಕೈಗೆ ಸಿಕ್ಕದವಳೆ
ನನ್ನ ಮೈಗೆ ದಕ್ಕದವಳೆ
ಪಕ್ಕದಲ್ಲೆ ನಕ್ಕರೇನು
ಮಿಡಿದರೇನು ಸುಡಿ ಕಮಾನು
ನೀನು ನನಗೆ ದೇಹವಲ್ಲ ಬರೀ ಹೆಸರ ವಿಭ್ರಮ.
ಮನೋರಮಾ ಮನೋರಮಾ
ಬರೀ ಹೆಸರೆ ಸಾಕು ಬಿಡು
ಮಲಗೋಬದ ಗಮಗಮ'
(ಮನೋರಮಾ)

ಗಂಡು ಹೆಣ್ಣಿನ ಆಕರ್ಷಣೆಯನ್ನು ಚಿತ್ರಿಸುವ ಇನ್ನೊಂದು ಕವನ 'ಹೊಳೆ'. ಯೌವನಾವಸ್ಥೆಯಲ್ಲಿ ಹೆಣ್ಣು ಪುರುಷನ ಸಂಯಮವನ್ನು ಕಾಡುವ ಸೆಳೆತವಾಗಿದ್ದಾಳೆ. ಧಗೆಗೆ ಬೆಂದವನನ್ನು ಹೊಳೆಯ ನೀರಿನಂತೆ ಅವಳು ಆಕರ್ಷಿಸುತ್ತಾಳೆ. ಈ ಆಕರ್ಷಣೆಯನ್ನು ಅನುಭವಿಸುತ್ತಲೇ ಅವಳು ತನಗೆ ದಕ್ಕುವಳೋ ಇಲ್ಲವೋ ಎಂಬ ಶಂಕೆ ಹಾಗೂ ನೈತಿಕ ಕಟ್ಟುಪಾಡುಗಳ ಭೀತಿಯೂ ಕವಿಯನ್ನು ಕಾಡತೊಡಗುತ್ತದೆ. ಈ ತೊಳಲಾಟವನ್ನು ಹೊಳೆ ಮತ್ತು ಹಾವಿನ ಪ್ರತೀಕದ ಮೂಲಕ ಕವಿ ಸಮರ್ಥವಾಗಿ ಚಿತ್ರಿಸಿದ್ದಾರೆ.

'ಎಳೆಯುತ್ತಿದೆ, ಎದೆಯ ನಿರ್ಧಾರವನು ಅಳೆಯುತ್ತಿದೆ
ಬಿಸಿಲ ಧಗೆ ಮೈಲಿಗೆ
ಪರಿಹರಿಸುವಾತುರದ ಬಗೆ
ತೆರೆಯ ಕರೆ ಕೂಗಾಗಿ ಚಾಪಲ್ಯ.

'ಇಲ್ಲಿದ್ದು ಮುಳುಗಿ ಮತ್ತೆ ಅಲ್ಲೆದ್ದು
ಹೋಯಿತೋ ಎನುವಲ್ಲಿ ನನ್ನತ್ತಲೇ ಕದ್ದು
ಧಾವಿಸಿದೆ ನೀರ ಹೊಕ್ಕುಳ ಸಾವು
ಹಾವು.'
(ಹೊಳೆ)

ಇಂಥ ಸೆಳೆತಗಳಿಂದ ಪಾರಾಗುವ ಬಗೆ ಕಾಣದೆ ಕವಿ ದೇವರಿಗೇ ಮೊರೆಯಿಡುವ ಕವನ 'ಜಾಗ್ರತೆಯ ಕೊಡು'—

'ಜಾಗ್ರತೆಯ ಕೊಡು ಚಿತ್ತೈಕಾಗ್ರತೆಯ ಕೊಡು
ಕವಲುಗಳ ಕಂಡೊಡನೆ ಪೇಚಾಡುವೀ ನನಗೆ

'ನೇರದಲಿ ನಡೆದಾಗ ತೊಗಲ ತೆರೆ ನೆರಳಲ್ಲಿ
ಸೆಳೆವ ಘಾತಕ ಶಕ್ತಿಗೆದೆ ಮಾರಿ ಹೋದಲ್ಲಿ
ತಡೆದು ನೆಡು ಬಗೆಯಲ್ಲಿ ಸಂಯಮದ ಅರಿವನ್ನು
ತೊಡೆದು ಮೈ ಮರೆವನ್ನು'
(ಜಾಗ್ರತೆಯ ಕೊಡು)

ಸ್ವತಃ ಸಂಯಮಿಯಾದ ಕವಿಗೇ ಗೊತ್ತಿದೆ; ಇದೆಲ್ಲ ಕೇವಲ ಕಾಲದ ಸೆಳೆತ, ಇಂಥ ಸೆಳೆತಗಳಿಗೆ ತಾನು ವಶವಾಗಬಾರದು, ಅದನ್ನು ಮೀರಿ ನಿಲ್ಲಬೇಕು—ಎಂಬ ಸಂಕಲ್ಪವಿದೆ. ಹೆಣ್ಣಿನ ಆಕರ್ಷಣೆಯನ್ನು ಕುರಿತಂತೆ ಸಾಮಾನ್ಯವಾಗಿ ಲೋಕದ ನಿಲವೇನೆಂದರೆ ಹೆಣ್ಣು ಗಂಡಿನ ಚಿತ್ತವನ್ನು ಚಂಚಲಗೊಳಿಸುವ ಕೆಡುಕು. ಆದ್ದರಿಂದ ಅವಳನ್ನು ದೂರವಿಡಬೇಕು. ಇಂತಹ ದೃಷ್ಟಿ ಪರಂಪರಾಗತವಾಗಿ ಬೆಳೆದು ಬಂದಿದೆ. ಹೆಣ್ಣನ್ನು ಆರೋಪಿಯ ಸ್ಥಾನದಲ್ಲಿ ನಿಲ್ಲಿಸುವ ಮಾತುಗಳನ್ನು ದಾರ್ಶನಿಕರೂ ಹೇಳುತ್ತಾರೆ. ಆದರೆ ನಿಸಾರ್ ಅವರ ವ್ಯಕ್ತಿತ್ವದಲ್ಲಿ ಗಮನಾರ್ಹವಾದ ಅಂಶವೆಂದರೆ ಅವರು ಹೆಣ್ಣಿನ ಮೇಲೆ ಇಂಥ ಆರೋಪವನ್ನು ಹೊರಿಸುವುದಿಲ್ಲ. ಇದನ್ನು ತನ್ನ ಸಂಯಮದ ಪ್ರಶ್ನೆ ಎಂದು ಭಾವಿಸುತ್ತಾರೆ.

ಇಷ್ಟು ಮಾತ್ರವಲ್ಲ, ಗಂಡಿನಂತೆಯೇ ಹೆಣ್ಣಿಗೂ ಬಯಕೆಗಳಿರುತ್ತವೆ, ಹೆಣ್ಣಿನ ಸ್ಪರ್ಶಕ್ಕೆ, ಸ್ನೇಹಕ್ಕೆ ಗಂಡು ಹಾತೊರೆಯುವಂತೆ ಹೆಣ್ಣೂ ಕೂಡ ಹಾತೊರೆಯುತ್ತಾಳೆ ಎಂಬುದನ್ನು ಗುರುತಿಸುವುದು ಕವಿಯ ವಿಶೇಷ.

'ಎಲ್ಲಿದ್ದೀಯೋ ನೀನೀಗ ಹುಡುಗ
ಬಂದು ಬಂದರ ಮುಟ್ಟಿಸೊ ಹಡಗ.
ಬಣ್ಣಿಸಿ ಅಂಗಾಂಗ, ಸಣ್ಣಗೆ ಬಿರುಗಾಳಿ
ಎಬ್ಬಿಸುವ ಹದವಂತ ನುಡಿಗ;
ಮೆತ್ತಗೆ ನಂಬಿಸಿ, ಮುತ್ತನ್ನು ಅಚ್ಚಿಸಿ,
ಮುದ್ದಲ್ಲಿ ಅದ್ದುವ ಬೆಡಗ.' (ಎಲ್ಲಿದ್ದೀಯೋ ಹುಡುಗ)

ದಿನಗಳೆದಂತೆ ಕಾಮ, ಮದನ ವಿಲಾಸ, ವಿಭ್ರಮಗಳ ಹೆದ್ದೆರೆಗಳು ತಗ್ಗಿ ಮನಸ್ಸು ಸ್ವಚ್ಛ ತಿಳಿ ನೀರಿನ ಕೊಳದಂತೆ ಶಾಂತವಾಗುತ್ತದೆ. ಆಗ ಹೆಣ್ಣಿನ ಆಕರ್ಷಣೆ, ಸೆಳೆತ, ತಿರಸ್ಕಾರ, ಅಗಲಿಕೆ ಎಲ್ಲವನ್ನೂ ಸಮ ಚಿತ್ತದಿಂದ ನೋಡುವ ಅರಿವು ಮೊಳೆಯುತ್ತದೆ. ಇಂಥ ಒಂದು ಹಂತದಲ್ಲಿ ಕವಿ ಯಾವ ನಿಲವು ತಳೆಯುತ್ತಾರೆ ಎಂಬುದಕ್ಕೆ 'ನೀ ನುಡಿಯದಿರಲೇನು...' ಮೊದಲಾದ ಕವಿತೆಗಳು ಉತ್ತಮ ಉದಾಹರಣೆ.

'ದೇಹವಿಡೀ ಕಣ್ಣಾಗಿ ಕಾದಿರಲು ಹಂಬಲಿಸಿ
ನಲಿವಿರದ ನಗೆಯಿಂದ ಮನವ ಮುರಿದೆ;
ಮಹದಾಸೆಗಳ ತುಳಿದು ವಿಕಟಾಟ್ಟಹಾಸದಲಿ
ಮೆರೆದಿರುವ ನೋಟದಲಿ ನನ್ನನಿರಿದೆ.' (ನೀ ನುಡಿಯದಿರಲೇನು)

ಇಷ್ಟಾಗಿಯೂ ಕವಿ ಹೆಣ್ಣಿನ ಮೇಲೆ ಹಗೆ ಸಾಧಿಸುವುದಿಲ್ಲ, ವ್ಯಂಗ್ಯ ಕಟಕಿಯ

ಮಾತುಗಳಿಂದ ಅವಳನ್ನು ಘಾಸಿಗೊಳಿಸುವುದಿಲ್ಲ.

'ಅರೆ ಗಳಿಗೆ ಸುಖ ಸ್ವಪ್ನ ಬರಲಾರದೆಮ್ಮೊಡನೆ
ವಾಸ್ತವತೆ ಗಹಗಹಿಸಿ ಸೆಳೆಯಲಿಹುದು;
ಮರೆತೆಲ್ಲ ಕೊನೆಗೊಮ್ಮೆ ಮನ ಬಿಚ್ಚಿ ನಕ್ಕು ಬಿಡು,
ಬೇರೆ ಹಾದಿಯ ನಾವು ಹಿಡಿಯಬಹುದು' (ಅದೇ)

ಎಂಬ ಸಂಯಮದ ನಿರ್ಧಾರ ಕೈಗೊಳ್ಳುತ್ತಾರೆ. ಆದರೆ ಹೆಣ್ಣನ್ನು ಮರೆತು ಬಿಡುವುದು, ಅಗಲುವುದು ಇಷ್ಟು ಸರಳವಲ್ಲ. ಎಷ್ಟೇ ಕಾಲ ಸರಿದರೂ ಎಷ್ಟೇ ಅನುಭವಗಳಾದರೂ ಎಷ್ಟೇ ಅರಿವು ಮೂಡಿದರೂ ಹೆಣ್ಣನ್ನು ಮನಸ್ಸಿನಿಂದ ದೂರ ಮಾಡುವುದು ಸಾಧ್ಯವಿಲ್ಲ. ಯೌವನದಲ್ಲಿ ಕವಿಯ ಸಂಯಮಕ್ಕೆ ಸವಾಲಾಗಿದ್ದ ಹೆಣ್ಣು ಈಗ ನೆನಪಾಗಿ ಬಂದು ಮತ್ತೆ ಕಾಡುತ್ತಾಳೆ. ನೆನಪುಗಳ ದಾಳಿಯಲ್ಲಿ ಕವಿ ಒಮ್ಮೊಮ್ಮೆ ಕುಗ್ಗಿ ಹೋಗುತ್ತಾರೆ. ನಿರುತ್ಸಾಹ ದಿಂದ ಮಂಕಾಗುತ್ತಾರೆ, ಹಳೆಯ ಗುಂಗುಗಳು ಅವರನ್ನು ಬದುಕಿನಿಂದ ವಿಮುಖ ಗೊಳಿಸುವಷ್ಟು ತೀವ್ರವಾಗಿ ಕಾಡುತ್ತವೆ. ಆದರೆ ಇಂತಹ ವಿವಶತೆಗೆ ತಾನು ಬಲಿ ಯಾಗಬಾರದು ಎಂಬ ವಿವೇಚನೆ ಕವಿಯನ್ನು ಜೀವನಮುಖಿಯಾಗಿಸುತ್ತದೆ. ಹೆಣ್ಣು ತನ್ನನ್ನು ಇಷ್ಟೊಂದು ಕಾಡಿದಾಗಲೂ ಕೆಟ್ಟ ಮಾತಾಡದಿರುವುದು ಕವಿಯು ಹೆಣ್ಣಿನ ಬಗ್ಗೆ ಸದಾ ಗೌರವ ಭಾವನೆ ಹೊಂದಿರುವುದಕ್ಕೆ ಸಾಕ್ಷಿಯಾಗಿದೆ. 'ಎಲ್ಲ ಮರೆತಿರುವಾಗ', 'ನೆನಪಾಗಿ ಬಾರದಿರು', 'ಮತ್ತದೇ ಬೇಸರ', 'ನಿನ್ನ ನೆನಪು ಕಾಡದಂತೆ'—ಮೊದಲಾದ ಕವನಗಳಲ್ಲಿ ಇದೇ ನಿಲವು ವ್ಯಕ್ತವಾಗಿದೆ.

'ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ
ಹೂಡಿ ಬರದಿರು ಮತ್ತೆ ಹಳೆಯ ನೆನಪೆ.

ಸತ್ತ ಭೂತವನೆತ್ತಿ ಹದ್ದಿನಂದದಿ ತಂದು
ನನ್ನ ಮನದಂಗಳಕೆ ಹಾಕದಿರು ನೆನಪೆ;
ಭವ್ಯ ಭವಿತವ್ಯಕ್ಕೆ ಮೊಗ ಮಾಡಿ ನಿಂತಿರುವೆ
ಬೆನ್ನಲ್ಲೆ ಇರಿಯದಿರು ಓ ಚೆನ್ನ ನೆನಪೆ.' (ಎಲ್ಲ ಮರೆತಿರುವಾಗ)

ಹೆಣ್ಣಿನ ನೆನಪು ಬದುಕಿನ ಆಸಕ್ತಿಯನ್ನು ಕುಗ್ಗಿಸುವ ಬದಲು ಬದುಕಿಗೆ ಆಸರೆಯಾಗಿಯೂ ನಿಲ್ಲಬಹುದು ಎಂಬ ಅರಿವೂ ಕವಿಗಿದೆ.

'ನಿನ್ನ ಅನುರಾಗವೇ ಬೆಳಗಿರುವುದೆನ್ನೆದೆಯ
ಇರುಳು ಬಾನಿನ ತುಂಬು ಬಿಂಬವಾಗಿ.
ನಿಟ್ಟುಸಿರ ಬೆಂಕಿಯಲಿ ಅನುದಿನವು ಬೆಂದರೂ
ಸವಿ ನುಡಿಯ ನರುಗಂಪು ತೇಲಿರುವುದು
ಯಾವ ಋಣವೋ ಏನೋ ನಿನ್ನ ನೆಮ್ಮದಿ ಕರೆಗೆ
ನನ್ನ ಬಾಳಿನ ಹೊರೆಯು ಸರಿಸಿರುವುದು.'
(ನಿನ್ನ ಹಿರಿಮೆ)

ಇದೇ ರೀತಿಯ ಇನ್ನೊಂದು ಕವನ 'ಯಾವುದೂ ಮರೆತಿಲ್ಲ':

'ಹಚ್ಚ ಹಸುರಿದೆ ಎಲ್ಲ—
ಅಳಿಸಬಹುದೆ ಹೇಳು ಮೈಯು ಮಚ್ಚೆ?
ಹಕ್ಕಿ ಹಾರಿದ್ದರೂ ಗೂಡಿನ್ನು ಬೆಚ್ಚಗಿದೆ
ನೆನಪು ಬಿಳಿ ನಳಿದೋಳ ನೀಲಿ ಹಚ್ಚೆ.'

ಕವಿಯ ಮನಸ್ಸನ್ನು ಸೆಳೆದ ಇನ್ನೂ ಅನೇಕ ವಿಧದ ಹೆಣ್ಣುಗಳಿದ್ದಾರೆ. ಕೆಲವರು ಬಾಲ್ಯದ ಗೆಳತಿಯರು, ಕೆಲವರು ಸಹಪಾಠಿಗಳು, ಕವಿಗೆ ಆಕಾಶ ಕುಸುಮವಾದ ಬೆಡಗಿಯರು, ಕವಿಗೆ ಕನಸಾಗಿ ಕಾಡಿದವರು, ನೆನಪಾಗಿ ಕಾಡಿದವರು, ಕವಿಯ ಮನಸ್ಸನ್ನು ಮುರಿದವರು—ಇತ್ಯಾದಿ. ಹೆಣ್ಣನ್ನು ಕುರಿತಂತೆ ಬಹಳ ಮಂದಿ ಸಾಂಪ್ರದಾಯಿಕ ನಿಲವಿನಿಂದ ಲೇವಡಿ ಮಾಡುವಂತಹ ಕವಿತೆಗಳನ್ನೇ ಬರೆದಿರುವುದುಂಟು. ನಿಸಾರ್ ಅಹಮದ್ ಅಂತಹ ಕವಿತೆಗಳನ್ನು ಬರೆದಿರುವುದು ತೀರ ಕಡಿಮೆ. ದಿನಕ್ಕೊಂದು ನಿಲವು ತಳೆಯುತ್ತ, ಚಿತ್ರವಿಚಿತ್ರ ವೇಷಭೂಷಣಗಳಲ್ಲಿ ಮೆರೆಯುತ್ತ, ಡಾಂಭಿಕ ವಿಚಾರಗಳ ಹೆಣ್ಣನ್ನು ವಿಡಂಬಿಸುವ 'ವೈಜಯಂತಿ' ಎಂಬ ಕವನವನ್ನು ಗಮನಿಸಬಹುದು. ಹೆಣ್ಣು ಮಕ್ಕಳ ಬೆಳವಣಿಗೆ ಅವರಲ್ಲಿ ಎಂತಹ ಅದ್ಭುತ ಪರಿವರ್ತನೆಗಳನ್ನು ತರುತ್ತದೆ ಎಂಬುದನ್ನು ಸೋಜಿಗದಿಂದ ಗಮನಿಸುವ ಇನ್ನೊಂದು ವಿಶಿಷ್ಟ ಕವಿತೆ 'ಪವಾಡ'.

'ಬನ್ನಿ ಇಲ್ಲಿ, ಹನ್ನೊಂದನೆಯ ಅದ್ಭುತವಿದೆ
ನಮ್ಮ ಮನೆ ಬೀದಿಯಲ್ಲಿ.

'ಹದಿನೆಂಟು ವಸಂತಿಸಿ ಅಂಗಾಂಗ ಲಲಲಾಲ
ಸರದಿ ಬದಲಾಯಿಸಿದ ಸಂಜೆ ಮುತ್ತು-
ಗ ಹರಯ ಮಾಗಿ ಹುಣ್ಣಿಮೆ ಮೊಲ್ಲೆ;
ಎಲ್ಲಿ ಬಿಗಿ: ಬಳೆ ಜಾಕೀಟು ಸಮಾಜ ನೀತಿ ಕಾಲ.'

(ಪವಾಡ)

ಹೆಣ್ಣನ್ನು ಕುರಿತ ಸೋಜಿಗವನ್ನು ವ್ಯಕ್ತಪಡಿಸುವ ಮತ್ತೊಂದು ಕವನ 'ನಿನ್ನ ಚಿತ್ರವಾದದ್ದು ಹೇಗೆ?' ಒಂದು ಹೆಣ್ಣಿನ ರೂಪದಲ್ಲಿ ಹಲವು ಹೆಣ್ಣಿನ ರೂಪಗಳು ಮೈಗೂಡಿರುತ್ತವೆ. ಅವಳನ್ನು ಕಂಡಾಗ ಯಾವ ಯಾವುದೋ ಹೆಣ್ಣಿನ ನೆನಪಾಗುತ್ತದೆ. ಅವರಲ್ಲಿ ಯಾರೂ ಅವಳಂತಲ್ಲ, ಅವಳೂ ಸಹ ಅವರಲ್ಲಿ ಯಾರಂತೆಯೂ ಅಲ್ಲ ಎಂಬ ವಿಚಿತ್ರ, ಕವಿಯನ್ನು ಕಾಡಿಸುವ ಅನುಭವ ಇಲ್ಲಿದೆ:

'ಕೊಪ್ಪದಾಕೆಯ ಮೈ ಬಣ್ಣದ ಅಪ್ಪಟ
ಹೆಗ್ಗಡಿತಿತನದ ಝುಳಪು;
ಚಿಕ್ಕಂದಿನ ನೆನಪು ದೀಪಾವಳಿಸುವ ಮನೆ ಜವಾನಿ
ಸಕೀನಾಳ ಕಾಲ ಹೊಳಪು;
ಥಟ್ಟನೆ ಕಾಡಿಸಿ,
ಅವನೆಲ್ಲ ಒಟ್ಟುಗೂಡಿಸಿ
ನಾ ಬರೆದ ಚಿತ್ರ
ಜಯ ನಗರದ ಹದಿನಾರನೆಯ ಬೀದಿಯನು ತಿಂಗಳ ಹಿಂದೆ

ಬೆಳುದಿಂಗಳಿಸಿದ ನೀನಾದದ್ದು ಹೇಗೆಂಬುದೇ
ನನ್ನ ತಲೆ ಕೆಡಿಸಿರುವ ವಿಚಿತ್ರ.'
(ನಿನ್ನ ಚಿತ್ರವಾದದ್ದು ಹೇಗೆ?)

ಎಲ್ಲ ವಯಸ್ಸಿನಲ್ಲಿಯೂ ಪುರುಷ, ಹೆಣ್ಣಿನ ಸೌಂದರ್ಯಾರಾಧಕನಾಗಿಯೇ ಇರುತ್ತಾನೆ ಎಂಬುದನ್ನು ಹಾಸ್ಯ ಶೈಲಿಯಲ್ಲಿ ಚಿತ್ರಿಸುವ ಕವನ 'ನಿರೂಪಣೆಯೆಂದರೆ...' ಈ ಕವಿತೆಯಲ್ಲಿ ಅತಿಥಿ ಭಾಷಣಕಾರನಿಗೆ ನಿರೂಪಕಿಯ ನೀಳ ಕುತ್ತಿಗೆಯ ಹಿಂಭಾಗ ಮಾತ್ರ ಕಾಣುತ್ತದೆ. ಆ ಸೌಂದರ್ಯದಲ್ಲಿ ಮೈ ಮರೆಯುವ ಆತ ತನ್ನ ಭಾಷಣದಲ್ಲಿ ಏನು ಹೇಳಬೇಕೆಂಬುದನ್ನು ಮರೆಯುತ್ತಾನೆ.

ವಿವಾಹಕ್ಕೆ ಮೊದಲು ಹೆಣ್ಣನ್ನು ಕುರಿತ ಭಾವನೆಗಳೆಲ್ಲ ಹಸಿ ಹಸಿಯಾಗಿರುತ್ತವೆ. ಭಾವನಾತ್ಮಕ ತುಡಿತಗಳು ಬುದ್ಧಿ ವಿವೇಕಗಳಿಗೆ ಮುಸುಕು ಹಾಕಿರುತ್ತವೆ.

ವಿವಾಹಾನಂತರದಲ್ಲಿ ಕವಿ ಕಾಣುವ ಹೆಣ್ಣಿನ ಚಿತ್ರ ಬೇರೊಂದೇ ರೀತಿಯದು. ಯೌವನದ ಹುಚ್ಚು ಆವೇಶ ಮುಗಿದು ಮದುವೆಯಾದಾಗ ಹೆಣ್ಣನ್ನು ಕವಿ ಗುರುತಿಸುವ ಪ್ರೇಮ ಈ ರೀತಿಯದು :

'ನನ್ನ ಮುಂಗುರುಳಲ್ಲಿ ಚಿನ್ನದುಂಗುರವಲೆದು
ಜೊನ್ನದಿರುಳಲಿ ಜೇನು ಹರಿಸಿರುವುದು;
'ಕಣ್ಣು ಕಣ್ಣನು ಕೂಡಿ ಗುಟ್ಟಿನಲಿ ಮಾತಾಡಿ
ಮಧುಸ್ವಪ್ನದಲಿ ಮರುಹುಟ್ಟು ಪಡೆದೆವೆಂದು.
'ಪ್ರಣಯದಾವೇಶಗಳ ಹುಚ್ಚು ಹೊಳೆ ತಗ್ಗಿಹುದು,
ತಿಳಿ ಶಾಂತ ಒಲವೀಗ ಚೊಕ್ಕ ಹೊನ್ನು.' (ನಿನ್ನ ಬಿಟ್ಟಿರಲಾರೆ)

ಯೌವನದಲ್ಲಿ ಹೆಣ್ಣನ್ನು ಬಿಟ್ಟಿರಲಾರೆ ಎಂಬುದಕ್ಕೂ ದಾಂಪತ್ಯದಲ್ಲಿ ಹೆಣ್ಣನ್ನು ಬಿಟ್ಟಿರಲಾರೆ ಎಂಬುದಕ್ಕೂ ಬಹಳ ವ್ಯತ್ಯಾಸವಿದೆ. ವಿವಾಹಾನಂತರ ಹೆಣ್ಣಿನ ಮೇಲೆ ಗಂಡು ಇನ್ನೂ ಹೆಚ್ಚು ಅವಲಂಬಿತನಾಗುತ್ತಾನೆ. ಸಂಸಾರದಲ್ಲಿ ಆಕೆಯ ಪ್ರಾಮುಖ್ಯ ಎಷ್ಟು ಎಂಬುದನ್ನು 'ಬೇರು-ಹೆಣ್ಣು' ಎಂಬ ಕವನ ಸಮರ್ಥವಾಗಿ ಹೇಳುತ್ತದೆ. ಹೆಣ್ಣನ್ನು ವೃಕ್ಷದ ಬೇರಿಗೆ ಸಮೀಕರಿಸಿ ನೋಡುವ ಈ ಪದ್ಯದಲ್ಲಿ ತನ್ನ ಸ್ವಾತಂತ್ರ್ಯಕ್ಕೆ ಹಾಕಿರುವ ಇತಿಮಿತಿಗಳ ನಡುವೆಯೂ ಹೆಣ್ಣು ಇದೇ ಕುಟುಂಬದ ಪೋಷಣೆಯನ್ನು ವಹಿಸಿಕೊಳ್ಳುವುದನ್ನು ಕವಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ:

'ಸಂಸಾರ ತರುವಿನ ಬೇರು
ಕುಟುಂಬದಭ್ಯುದಯದ ಸಾರಪ್ರದ ಹೊಯ್ನೀರು.
ಅವಳ ಸುಸ್ಥಿರ ಪಾಯದ ಮೇಲೆ
ನಿಮಿರಿ ನಳನಳಿಸಿವೆ ನೂರಾರು
ಮನೆಮಾರು, ತಲೆಮಾರು.'
(ಬೇರು-ಹೆಣ್ಣು)

ಅವಳು ಏನೆಲ್ಲ ಕಟ್ಟುಪಾಡುಗಳಲ್ಲಿ ಬದುಕಬೇಕಾಗಿದೆ.

'ಹೊರಗೆ ಸುಳಿಯುವ ಸ್ವಾತಂತ್ರ್ಯ ಅವಳಿಗುಂಟು ನಿಜ,
ಅಸಂಯಮಿತ ಸ್ವೈರ ಸ್ವೇಚ್ಛಾಚಾರ ಮಾತ್ರ ವಜ.
ಮೈದೋರಿದರೂ ಮೈ ಮುಚ್ಚುವಂತಿರಬೇಕು,
ಮೆರುಗು ಮಾಟಗಳ ನೆಚ್ಚದಂತಿರಬೇಕು,
ಹೆರರ ದಿಟ್ಟಿಸಿ ಸದಾ ಬೆಚ್ಚದಂತಿರಬೇಕು.'

(ಅದೇ)

ಹೆಂಡತಿ ಇರದ ಮನೆ ಮನೆಯೇ ಅಲ್ಲ ಎನ್ನುತ್ತ, 'ಮನೆಯೆಂದರೆ' ಎಂಬ ಕವಿತೆಯೂ ಹೆಣ್ಣಿನ ಮಹತ್ವದ ಕೊಡುಗೆಯನ್ನೇ ನಿರೂಪಿಸುತ್ತದೆ :

'ಮನೆಯೆಂದರೆ ಮಡದಿಯ ಮಮತೆಯ ಸಕ್ಕರೆ
ಹೆತ್ತೊಡಲಿನ ಜೊತೆ ಒಡಹುಟ್ಟಿನ ಎಡಪಟ್ಟಿಲ್ಲದ ಅಕ್ಕರೆ;
'ಒಟ್ಟಾರೆ ಸಜೀವ ಸ್ಪರ್ಶ.
ಇವು ಇಲ್ಲದೆ ಏನೆಲ್ಲವೂ ಇರುವ ಗೃಹ
ಮಂಗಳ ಗ್ರಹ.'

(ಮನೆಯೆಂದರೆ)

'ಅಮ್ಮ ಆಚಾರ ನಾನು' ಎಂಬ ಪ್ರಸಿದ್ಧ ಪದ್ಯ ಕವಿಯ ನವ ವಧುವಿನ ಸಾಂಪ್ರದಾಯಿಕತೆಯನ್ನು ವಿಡಂಬಿಸುವ ಪದ್ಯ ಎಂಬುದೇ ಸಾಮಾನ್ಯ ಗ್ರಹಿಕೆ. ಮೇಲು ನೋಟಕ್ಕೆ ಇದು ಹಾಗಿರುವುದಾದರೂ ಇಲ್ಲಿ ಹೆಣ್ಣು ಒಂದು ಪ್ರತೀಕವಾಗಿದ್ದಾಳೆ, ಅಷ್ಟೆ. ಕವಿ ಹೇಳುವಂತೆ ಇದು ಕೇವಲ ಒಬ್ಬ ಸುಶಿಕ್ಷಿತ ಹೆಣ್ಣು ಪರಂಪರೆಯ ಶ್ರದ್ಧೆ ಹೊಂದಿರುವುದರ ವಿಡಂಬನೆಯಲ್ಲ, ಬದಲಾಗಿ ಇಡೀ ಒಂದು ಸಮುದಾಯ ಹೇಗೆ ಪರಂಪರೆಗೆ ಶರಣಾಗಿರುತ್ತದೆ ಎಂಬುದರ ಅಭಿವ್ಯಕ್ತಿಯಾಗಿದೆ. ಆದರೆ ಈ ವಿಚಾರವನ್ನು ನಿವೇದಿಸಲು ಕವಿಯು ತಾಯಿ ಮತ್ತು ಹೆಂಡತಿ ಎಂಬ ಎರಡು ಹೆಣ್ಣು ಪಾತ್ರಗಳನ್ನೇ ಆಯ್ದುಕೊಂಡಿರುವುದು ಮಾತ್ರ ಕುತೂಹಲಕಾರಿಯಾಗಿದೆ. ಹೆಣ್ಣು, ಸಂಸ್ಕೃತಿಯ ವಾಹಕಳಾಗಿ ಕೆಲಸ ಮಾಡುತ್ತಾಳೆ ಎಂಬ ನಿಲವನ್ನೇ ಇದು ದೃಢ ಪಡಿಸುತ್ತದೆ.

ತಾಯ್ತನದ ಹಿರಿಮೆಯನ್ನು ವರ್ಣಿಸುವ ಪದ್ಯಗಳಲ್ಲಿ 'ಹೆತ್ತಾಕೆ' ಎಂಬ ಪದ್ಯ ಉಲ್ಲೇಖನಾರ್ಹ. ಇದು, ಕವಿಯು ತಮ್ಮ ತಾಯಿಯ ಬಗ್ಗೆ ಬರೆದ ಪದ್ಯವಾದರೂ ಯಾವುದೇ ತಾಯಿಯ ಪದ್ಯವೂ ಆಗಬಹುದು.

'ನಿತ್ಯ ಗೃಹಕೃತ್ಯದಲಿ ತೇಯ್ದು ಬಾಳುವೆ ಸ್ತುತ್ಯ
ಬಯಸದೆಯೆ ಪರರಿಂದ ಸಂಕೀರ್ತನೆ.
'ನನ್ನ ಜೀವದ ಹಾಯಿ ಲೋಕಕಿಳಿಸಿದ ಸದಯಿ;
ತಾಯಿ, ಚಿಂತೆಯ ಚಳಿಗೆ ಚೆಲು ರಜಾಯಿ.
ಸ್ವಂತ ಕಷ್ಟದ ಕೆಸರಿನಲ್ಲಿ ಪತಿ ಸುತರೇಳ್ಗೆ
ಪದ್ಮವರಳಿಸಿದಭಯಿ, ಸೌಖ್ಯದಾಯಿ.
'ತುಷ್ಟಿ ಪುಷ್ಟಿಗಳೆರಕ, ತಾಯೊಲ್ಮೆ ಸಮ ಏಕ,
ಇಹ ಪರದ ನಡುಹಗಲ ತೋರುದೀಪ.' (ಹೆತ್ತಾಕೆ)

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಯಾವ ರೀತಿಯ ಶೋಷಣೆಗೊಳಗಾಗಿದ್ದಾಳೆ ಎಂಬುದನ್ನು ನೇರವಾಗಿ ಮತ್ತು ಪರೋಕ್ಷವಾಗಿ ವ್ಯಕ್ತಪಡಿಸುವ ಅನೇಕ ಕವಿತೆಗಳನ್ನು ನಿಸಾರ್ ಬರೆದಿದ್ದಾರೆ. ಈ ಎಲ್ಲ ಕವಿತೆಗಳಲ್ಲಿ ಹೆಣ್ಣಿನ ಪರಾಧೀನತೆ ಹಾಗೂ ಅಸಹಾಯಕತೆಯ ಬಗ್ಗೆ, ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಕವಿಯ ಮರುಕ ವ್ಯಕ್ತವಾಗಿದೆ.

'ಮರುಗುವೆನು ಎಲೆ ಚೆಲುವೆ' ಎಂಬ ಕವಿತೆ ಕವಿಯ ಆಪ್ತ ಗೆಳತಿಯೊಬ್ಬಳ ಬದುಕಿನ ದುರಂತವನ್ನು ಹೇಳುತ್ತಲೇ ಇಡೀ ಸ್ತ್ರೀ ಸಮುದಾಯದ ಅಸಹಾಯಕತೆಯ ಬಗ್ಗೆ ಅನುಕಂಪದಿಂದ ಮಿಡಿಯುವ ಕವಿತೆಯಾಗಿದೆ. ಹಣದಾಸೆಗಾಗಿ ಕನ್ಯಾಪಿತೃಗಳು ವಯಸ್ಸಾದ ಗಂಡಿಗೆ ಮಗಳನ್ನು ಕೊಟ್ಟು ಅವಳ ಬಾಳನ್ನೇ ಹಾಳುಮಾಡುತ್ತಾರೆ. ಅವಳು ತನ್ನ ದೇಹದ ಬಯಕೆಗಳನ್ನು ಪೂರೈಸಿಕೊಳ್ಳಲು ಅಡ್ಡದಾರಿ ಹಿಡಿಯುತ್ತಾಳೆ.

'ಕರಗುವೆನು ಎಲೆ ಹೆಣ್ಣೆ ನಿನ್ನ ದುರ್ಗತಿಗಾಗಿ,
ಅದಕಿಂತ ಹೆತ್ತವರ ವ್ಯಾಪಾರಿ ಮತಿಗಾಗಿ
ಕಟ್ಟಿದರು ಮುದಿ ಮರಕೆ ನೆರಳೀವುದೆಂದು
ಬೀಳಿಸಿತು ಭೋರೆಂದು ಬಿರುಗಾಳಿ ಬಂದು.
'ಮರುಗುವೆನು ನಾ ನಿನ್ನ ಹಣೆಬರಹಕೆ,
ವಿಧಿ ಮಣ್ಣುಗೂಡಿಸಿದ ಹೊಸ ಹರಯಕೆ.'
(ಮರುಗುವೆನು ಎಲೆ ಚೆಲುವೆ)

'ಇನ್ನೊಂದು ಮುಖ' ಎಂಬ ಕವನ ಗಂಡಿಗಿರುವಂಥ ಅನುಕೂಲಗಳು ಹೆಣ್ಣಿಗಿಲ್ಲ, ಆಕೆಯ ಬದುಕು ಕಟ್ಟುಪಾಡುಗಳ ಇಕ್ಕಟ್ಟಿನಲ್ಲೇ ಸವೆದು ಹೋಗುತ್ತದೆ. ತನ್ನ ಅಳಲನ್ನು ನುಂಗಿಕೊಂಡು ಆಕೆ ಕುಟುಂಬದ ಏಳಿಗೆಗಾಗಿ ಜೀವ ತೇಯುತ್ತಾಳೆ ಎಂಬುದನ್ನು ಚಿತ್ರಿಸುತ್ತಾರೆ.

'ಇಡೀ ಬದುಕು ಮುಚ್ಚಿದ ಕೊಡೆಯಾಗಿ
ಪಾತಿವ್ರತ್ಯದ ಸುತ್ತ ಬಿಚ್ಚಿದ ಹೆಡೆಯಾಗಿ
ಮಾಸಕ್ಕೊಮ್ಮೆ ಹೊಸಿಲ ಬಳಿ ಹಿಡಿಯಾಗಿ
ಈ ದೇಹದೀ ರೂಪ
ಬಂದಿಖಾನೆಯ ದೀಪ;
ಕೊರಳು ತಾಳಿಗೆ
ಇದ್ದೂ ಇಲ್ಲದ ಕಣ್ಣು ಕಿವಿ ನಾಲಿಗೆ' (ಇನ್ನೊಂದು ಮುಖ)

ಆದರೆ ಈ ಕವಿತೆ ಇಷ್ಟಕ್ಕೇ ನಿಲ್ಲುವುದಿಲ್ಲ. ಗಂಡು ಹೆಣ್ಣು ಇಬ್ಬರೂ ಸಮಾನ ಜೀವಿಗಳು. ಗಂಡಿಗಿರುವಂತೆಯೇ ಹೆಣ್ಣಿಗೂ ಆಸೆ ಆಕಾಂಕ್ಷೆಗಳಿರುತ್ತವೆ. ಅವು ಪ್ರಕಟವಾಗದಿರಬಹುದು ಆದರೆ ಗುಟ್ಟಾಗಿ ಅದು ಇದ್ದೇ ಇರುತ್ತವೆ ಎಂಬುದನ್ನೂ ಕವಿ ಗುರುತಿಸುತ್ತಾರೆ:

'ನಿನ್ನಂತೆಯೇ ಈ ದೇಹ ಈ ಉಸಿರು ಈ ಬಯಕೆ
ಪಂಚಭೂತದ ಸರಕೆ.

ಲೋಕಕ್ಕೆ ಸಾರಿ
ನನ್ನ ಗೆಲ್ಲುವ ಮದ ನಿನಗೆ;
ಗುಟ್ಟಾಗಿ ಹೋರಿ
ನಿನ್ನ ಸೋಲಿಸುವ ಛಲ ನನಗೆ.' (ಅದೇ)

ಹೆಣ್ಣಿನ ಕರ ಕುಶಲ ಕಲೆಯಾದ ರಂಗೋಲಿ ಕವಿಯನ್ನು ಮೋಹಿಸಿದಂಥ ಕಲೆ. ರಂಗೋಲಿಯನ್ನು ಕುರಿತಂತೆ ನಿಸಾರ್ 'ರಂಗೋಲಿ ಮತ್ತು ಮಗ' ಹಾಗೂ 'ರಂಗೋಲಿ' ಎಂಬ ಎರಡು ಪದ್ಯಗಳನ್ನು ಬರೆದಿದ್ದಾರೆ. ಈ ಪದ್ಯಗಳಲ್ಲಿ ರಂಗೋಲಿಯ ಸೊಬಗನ್ನು ಮತ್ತು ಹೆಣ್ಣಿನ ಕಲೆಗಾರಿಕೆಯನ್ನು ಮೆಚ್ಚುತ್ತಾರೆ ಮಾತ್ರವಲ್ಲ, ಪುರುಷ ಇಂತಹ ವಿಷಯ ದಲ್ಲಿ ಹೆಣ್ಣಿನೊಂದಿಗೆ ಸ್ಪರ್ಧಿಸಲಾರ ಎಂದು ಹೇಳುತ್ತಾ ಹೆಣ್ಣಿನ ಕೊಡುಗೆಯನ್ನು ಎತ್ತಿ ಹಿಡಿಯುತ್ತಾರೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಕೊಡುಗೆಗಳೆಷ್ಟೋ ಗಮನಕ್ಕೇ ಬರುವುದಿಲ್ಲ. ನಿಸಾರ್ ಅವುಗಳ ಮಹತ್ವವನ್ನು ಎತ್ತಿ ಹಿಡಿಯುವುದು ಗಮನಿಸತಕ್ಕ ಅಂಶ.

'ರಂಗೋಲಿ' ಪದ್ಯದ ಕೆಲವು ಸಾಲುಗಳು ಹೀಗಿವೆ:

'ಗೃಹಿಣಿಯರೆತ್ತಿದ ಅತೀತದಾರತಿ
ಮನೆಯನು ರಕ್ಷಿಸುವನಾದಿ ತಾಯಿತಿ
'ಸಕಲ ಕಲಾಪಾರಂಗತ ಪುರುಷ
ಬಾಗಿಲಿನೆದುರಲಿ ಸಾಗದು ಸರಸ!
ಬಿಳಿ ಚಿತ್ತಾರ ಸ್ತ್ರೀಯರ ಹಕ್ಕು;
ನಿನ್ನ ಪ್ರತಿಷ್ಠೆಗೆ ಹಿಡಿಸಿದೆ ತುಕ್ಕು.' (ರಂಗೋಲಿ)

ಹೆಣ್ಣನ್ನು ಕುರಿತಂತೆ ಕವಿಯ ನಿಲವನ್ನು ಹೀಗೆ ಸಂಕ್ಷೇಪಿಸಿ ಹೇಳಬಹುದು:

1. ಕವಿ ಹೆಣ್ಣಿನಿಂದ ವಿಮುಖರಾದ ವಿರಾಗಿಯಲ್ಲ. ಹೆಣ್ಣಿನ ಸ್ನೇಹವನ್ನು ಕೆಡುಕೆಂದು ಭಾವಿಸಿದವರಲ್ಲ. ಹೆಣ್ಣಿನ ಚೆಲುವು, ನಿಲವುಗಳನ್ನು ಆನಂದಿಸುವ, ಆರಾಧಿಸುವ ವ್ಯಕ್ತಿತ್ವದವರು.
2. ಕವಿ ಚಿತ್ರಿಸುವ ಹೆಣ್ಣು ಯಾವ ಗುಂಪಿಗೇ ಸೇರಿರಲಿ, ಯಾರ ಬಗ್ಗೆಯೂ, ಪುರುಷ ಪ್ರಧಾನ ವ್ಯವಸ್ಥೆಯ ಅಹಂನಿಂದ ಕೀಳಾಗಿ ಕಾಣುವುದಿಲ್ಲ. ಯಾರ ಬಗ್ಗೆಯೂ ಅನುಚಿತವಾದ ವ್ಯಂಗ್ಯ, ಕಟಕಿ, ವೈರ, ದ್ವೇಷದ ಮಾತುಗಳನ್ನು ಹೇಳುವುದಿಲ್ಲ.
3. ಕವಿ ಹೆಣ್ಣಿನ ಸಾಂಪ್ರದಾಯಿಕ ಪಾತ್ರವನ್ನೇ ಮೆಚ್ಚುತ್ತಾರೆ. ತಾಯಿಯಾಗಿ, ಹೆಂಡತಿಯಾಗಿ ಅವಳ ಹಿರಿಮೆಯನ್ನು ಹೇಳುತ್ತಾರೆ. ಮನೆಯೇ ಆಕೆಯ ಸಹಜ ನೆಲೆ, ತಾಯ್ತನ ಆಕೆಗೆ ಸಾರ್ಥಕತೆಯನ್ನು ಕೊಡುತ್ತದೆ ಇತ್ಯಾದಿ.
4. ಕವಿಗೆ ಒಟ್ಟಾರೆ ಜೀವನದ ಬಗ್ಗೆ ಇರುವ ವಿಶಾಲ ದೃಷ್ಟಿಯೇ ಹೆಣ್ಣಿನ ಬಗೆಗೂ ಇದೆ. ಯಾಕೆಂದರೆ ಹೆಣ್ಣು ಜೀವನದ ಒಂದು ಭಾಗ ಮಾತ್ರವಲ್ಲ, ಸೃಷ್ಟಿದಾತೆಯಾದ್ದರಿಂದ ಬಹುಮುಖ್ಯ ಭಾಗ ಎಂಬುದು ಕವಿಯ ನಿಲವು.



ನಿಸಾರರ ಸಾಹಿತ್ಯದಲ್ಲಿ ವೈಜ್ಞಾನಿಕ ಮನೋದೃಷ್ಟಿ

♦ ಟಿ. ಆರ್. ಅನಂತರಾಮು

ನಿಸಾರ್ ಅಹಮದ್ ಅವರಿಗೆ ಅರವತ್ತು ತುಂಬುವ ಮೊದಲೇ ಅವರ ಆಪ್ತರೂ ಅಭಿಮಾನಿಗಳೂ ಅವರ ಹುಟ್ಟುಹಬ್ಬದ ಸಮಾರಂಭವನ್ನು ಬೆಂಗಳೂರಿನ ಯವನಿಕಾದಲ್ಲಿ ಏರ್ಪಡಿಸಿದ್ದರು. ಹೂ ಗುಚ್ಛ, ಶುಭಾಶಯಗಳ ಮಹಾ ಪೂರವೇ ಅಲ್ಲಿ ಹರಿದು ಸಂಭ್ರಮಿಸಿದ ಸಂದರ್ಭ, ನಿಜವಾದ ಹಬ್ಬದ ವಾತಾವರಣವನ್ನು ನಿರ್ಮಿಸಿತ್ತು. ವೇದಿಕೆಯಲ್ಲಿ ನಿಸಾರ್ ಅವರೊಡನೆ ಇದ್ದವರು ಕವಿ ಕೆ. ಎಸ್. ನರಸಿಂಹಸ್ವಾಮಿ. ಆ ಹೊತ್ತಿಗೆ ಅವರನ್ನು ದೃಷ್ಟಿ ಪೂರ್ಣವಾಗಿ ವಂಚಿಸಿತ್ತು. ಇನ್ನೊಬ್ಬ ಅತಿಥಿ ಡಾ. ಯು.ಆರ್. ಅನಂತಮೂರ್ತಿ, ನಿಸಾರರನ್ನು ಅಭಿನಂದಿಸುತ್ತ ಹೇಳಿದ ಮಾತುಗಳು:

'ನಿಸಾರ್ ನನ್ನ ವಾರಿಗೆಯ ಕವಿ. ನಾವೆಲ್ಲ ಪ್ರಾಸ, ಗೇಯತೆಗಳನ್ನು ತೊರೆದು ಕಾವ್ಯ ರಚನೆಗೆ ಹೊರಟವರು. ನಿಸಾರ್ ಮಾತ್ರ ಭಿನ್ನವಾಗಿಯೇ ನಿಂತ. ಕಾವ್ಯದಲ್ಲಿ ರಮ್ಯತೆ, ಗೇಯತೆ ಉಳಿಸಿಕೊಂಡು ಬಂದು ಜನರ ಕವಿಯಾಗಿ ಬೆಳೆದ. ನನಗನ್ನಿಸುತ್ತಿದೆ ಅವನು ಮಾಡಿದ್ದೇ ಸರಿ.' ಈ ಮಾತಿಗೆ ಇನ್ನೊಂದು ಮಾತನ್ನೂ ಅನಂತಮೂರ್ತಿ ಸೇರಿಸಿದರು: 'ಕಾವ್ಯ ಕ್ಷೇತ್ರಕ್ಕೆ ಇಳಿದ ನಿಸಾರ್‌ಗೆ ನಾವು ಸ್ಪಷ್ಟವಾಗಿ ಹೇಳಿದ್ದೆವು, ಈ ಕ್ಷೇತ್ರದಲ್ಲಿ ಬೆಳೆಯಬೇಕಾದರೆ ತಾಕತ್ತಾಗಿ ಬರೆಯಬೇಕೇ ವಿನಾ ಮುಸ್ಲಿಂ ಎಂಬ ರಿಯಾಯಿತಿ ಇರುವುದಿಲ್ಲ'. ಇದು ಅನಂತ ಮೂರ್ತಿಯವರ ವೈಯಕ್ತಿಕ ಅಭಿಪ್ರಾಯವೆನ್ನಿಸಿದರೂ ಅದಕ್ಕೆ

ಸಾರ್ವತ್ರಿಕ ಮಹತ್ವವಿತ್ತೆಂಬುದು ಬಹು ಸ್ಪಷ್ಟ. ಈ ಸಂದರ್ಭವನ್ನು ಪ್ರಸಕ್ತ ಲೇಖನದಲ್ಲಿ ಜ್ಞಾಪಿಸಿಕೊಳ್ಳುವುದಕ್ಕೆ ಕಾರಣವುಂಟು. ಸಮಕಾಲೀನ, ವಾರಿಗೆಯ ಕವಿಗಳಿಗೆ ನಿಸಾರ್ ಅವರ ಕಾವ್ಯಕೃಷಿಯ ಪ್ರವೇಶ ಒಂದು ಬಗೆಯ ಅಚ್ಚರಿ, ಆಕಾಂಕ್ಷೆ, ಅನುಮಾನವನ್ನು ಹುಟ್ಟಿಸಿತ್ತು. ಮುಂದೆ ನಿಸಾರರು ಕಾವ್ಯಕ್ಷೇತ್ರದಲ್ಲಿ ಬೆಳೆದು ಬಂದ ಬಗ್ಗೆ, ಎದುರಿಸಿದ ಸಂದಿಗ್ಧಗಳ ಬಗ್ಗೆ 'ಕವಿಯಾಗಿ ನನ್ನ ಅನುಭವ' ಎಂಬ ಲೇಖನದಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ. ಅದನ್ನು ಲಂಬಿಸುವುದು ಇಲ್ಲಿ ಅಪ್ರಸ್ತುತ. ಆದರೆ ವಿಜ್ಞಾನದ ವಿದ್ಯಾರ್ಥಿಗಳಿಗೆ, ನಿಸಾರರನ್ನು ದೂರದಿಂದಷ್ಟೇ ಬಲ್ಲವರಿಗೆ ಒಂದು ಅಚ್ಚರಿಯಂತೂ ಕಾಡಿದ್ದು ನಿಜ. ಕಾವ್ಯಸೃಷ್ಟಿ ಮತ್ತು ವಿಜ್ಞಾನ ಬೋಧನೆ ಸಂಪೂರ್ಣವಾಗಿ ಭಿನ್ನ ಮನೋಧರ್ಮಕ್ಕೆ ಸೇರಿದ ಪ್ರಕ್ರಿಯೆಗಳು. ಕಾವ್ಯಲೋಕದ ಕೊಲಂಬಸರಾಗಿ, ಅಂತರ್ಲೋಕದ ತಪಾಸಣೆ ಮಾಡುತ್ತಲೇ ಕವನದಿಂದ ಕವನಕ್ಕೆ ಬೆಳೆದು, ದಶಕದಿಂದ ದಶಕಕ್ಕೆ ಅಭಿವರ್ಧಿಸಿ ನಿಸಾರರು ತಮ್ಮ ವಿಜ್ಞಾನ ಬೋಧನೆ ಮತ್ತು ಕಾವ್ಯಾಸಕ್ತಿಯ ನಡುವೆ ಸಮತೋಲನವನ್ನು ಸ್ಥಾಪಿಸಿದ ಬಗೆ—ಇಂದಿಗೂ ವಿಸ್ಮಯವೇ. ಏಕೆಂದರೆ ಕಾವ್ಯ ಮೂಲತಃ ಸೃಜನಶೀಲವೆಂದೂ ವಿಜ್ಞಾನವು ಭಾವವನ್ನು ಹೊರಗಟ್ಟಿ ಬುದ್ಧಿಗಷ್ಟೇ ಪಟ್ಟ ಕಟ್ಟುತ್ತದೆ ಎಂದೂ ದೂಷಣೆಗೆ ತುತ್ತಾಗಿದೆ.

ಸುಮಾರು ಐದು ದಶಕಕ್ಕೂ ಮಿಗಿಲಾಗಿ ನವೋದಯ, ನವ್ಯ ಕಾವ್ಯ ಸಂಪ್ರದಾಯಗಳೆರಡರಲ್ಲೂ ನಿಸಾರರು ಗಟ್ಟಿಯಾಗಿಯೇ ಧ್ವನಿಸಿ, ದೀರ್ಘಕಾಲ ವಿಜ್ಞಾನದ ಬೋಧಕರಾಗಿದ್ದರೆಂಬುದು ಮುಖ್ಯ ಸಂಗತಿಯಾಗುತ್ತದೆ. ವಿಜ್ಞಾನ ಬೋಧನೆ ಅವರ ವೃತ್ತಿಪರ ಬದುಕು. ಈ ದೃಷ್ಟಿಯಲ್ಲೂ ಅವರ ವಾರಿಗೆಯ ಕವಿಗಳಿಗಿಂತ ಇವರದು ಭಿನ್ನವಾದ ನೆಲೆ. ಅತಿ ಬೌದ್ಧಿಕ, ಜಟಿಲ, ಆದರೆ ಐಹಿಕ ಬದುಕಿಗೆ ಅನಿವಾರ್ಯವೆನ್ನಿಸಿರುವ ವಿಜ್ಞಾನವನ್ನು ನಿಸಾರರು ದೂರ ನಿಂತು ದಿಟ್ಟಿಸಬೇಕಾದ, ತಾವು ಅನ್ಯ ಎಂದು ಬಗೆಯಬೇಕಾದ ಪರಿಸ್ಥಿತಿ ಒದಗಲಿಲ್ಲ. ಆದರೆ ಅವರ ಕಾವ್ಯ ಭೂಮಿಕೆಯ ಮೇಲೆ ವಿಜ್ಞಾನ ಅತಿಕ್ರಮಿಸದಂತೆ ಅವರು ಕಟ್ಟೆಚ್ಚರವನ್ನು ವಹಿಸಿದ್ದಾರೆ. ಹಾಗಿದ್ದರೂ ಅವರ ವೈಚಾರಿಕ ನೆಲೆಯ ಬೇರುಗಳಿಗೆ ವಿಜ್ಞಾನ ಒಂದಷ್ಟು ಹೊಸ ಲವಲವಿಕೆ ತಂದಿರುವುದಂತೂ ಸ್ಪಷ್ಟ. ನಿಸಾರರು ಭೂವಿಜ್ಞಾನ ಬೋಧಕರು. 'ತಾಯಿ, ಭೂಮಿ ತಾಯಿ, ಸದಯಿ ಅಭಯದಾಯಿ' ಎನ್ನುತ್ತ ಧರೆಯ ಐಸಿರಿಯನ್ನು ಕೊಂಡಾಡುವಾಗಲೇ ಅವರ ಕಣ್ಣಿನ ಮುಂದೆ ಸುಳಿಯುವುದು—

> **'ಹೃದಯಾಂತರಾಳದಲಿ ಕುದಿಯುವುದು ಉರಿಗಡಲು**
> **ಶತ ಕೋಟಿ ಸಂತತಿಯ ಶಾಲೆ ಮಡಿಲು'**

ಭೂಮಿಯ ಅಂತರಾಳದ ವಾಸ್ತವ ಸ್ಥಿತಿಯನ್ನು ತಾವು ಭೂವಿಜ್ಞಾನ ಬೋಧಿಸುವಾಗ ಅದೆಷ್ಟು ಅಸಂಖ್ಯ ವಿದ್ಯಾರ್ಥಿಗಳಿಗೆ ತಿಳಿಸಿದ್ದಾರೊ! ಕಾವ್ಯದಲ್ಲಿ ಈ ವಾಸ್ತವತೆ ಇಣುಕಿದಾಗ ಅದರ ಚೆಲುವೇ ಬೇರೆ. ಬೇರೆ ಕವಿಗಳು ಪಡೆಯಲಾಗದ ಸಮ್ಯಗ್ ದರ್ಶನ ಇವರಿಗೆ ಲಭ್ಯ. ಅದು ಕಾವ್ಯವಾಗಲಿ, ವಿಜ್ಞಾನವಾಗಲಿ ನಿಸಾರರು ಭೂಮಿಯನ್ನು ಆಪ್ತವಾಗಿ ಆಲಂಗಿಸಿಕೊಂಡವರು. ಇಂದಿಗೂ ಅವರ 'ನಿತ್ಯೋತ್ಸವ' ಕವನ, ನಾಡಗೀತೆಯ ಎತ್ತರಕ್ಕೆ, ಬಿತ್ತರಕ್ಕೆ ಏರಿದ ಕವನ. ಈ ಸಂದರ್ಭದಲ್ಲಿ ಡಾ. ಹಾ.ಮಾ. ನಾಯಕ ಅವರು, ಕವಿ

ಕೆ.ಎಸ್.ನ. ಅವರ ಕಾವ್ಯವನ್ನು ಕುರಿತಂತೆ ಹೇಳಿದ ಮಾತುಗಳು ಉಲ್ಲೇಖನಾರ್ಹ.

'ಬದುಕಿದ್ದಾಗಲೇ ಕವನ, ಜಾನಪದಕ್ಕೆ ಸೇರುವುದೆಂದರೆ ಅದು ಆ ಕವಿಯ ಭಾಗ್ಯ ವಿಶೇಷ. ನರಸಿಂಹಸ್ವಾಮಿ ಅಂಥ ಭಾಗ್ಯವಂತರು' ಎಂದಿದ್ದರು, ಅವರ ಕವನ ಸಂಕಲನ ವೊಂದರ ಬಿಡುಗಡೆಯ ಸಂದರ್ಭದಲ್ಲಿ. ನಿರ್ವಿವಾದವಾಗಿ ನಿಸಾರ್ ಅವರೂ ಈ ಬಗೆಯ ಕವಿ; ಈ ಭಾಗ್ಯಕ್ಕೆ ಭಾಜನರು. 'ನಿತ್ಯೋತ್ಸವ' ಜನಮನದಲ್ಲಿ ಭದ್ರವಾಗಿ ಬೇರುಬಿಟ್ಟಿದೆ; ಅದು ಚಿರಾಯು. 'ನಿತ್ಯೋತ್ಸವ' ಕವನದ ಎರಡನೆಯ ಸಾಲು ಕರ್ನಾಟಕದ ಸಹ್ಯಾದ್ರಿಯ ವೈಭವವನ್ನು ಕುರಿತದ್ದು

'ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ'

ಕರ್ನಾಟಕದ ನಿತ್ಯೋತ್ಸವವನ್ನು ಕವಿ ಕಾಣಬಯಸುವುದು ಇಲ್ಲಿನ ಹಲವು ವಿಶೇಷಣ ಗಳ ಮೂಲಕ. ಇವುಗಳಲ್ಲಿ ಪ್ರಕೃತಿ ನಿರ್ಮಿತ-ಮಾನವ ಕೃತ ಎರಡೂ ಸೇರಿವೆ. ಇಲ್ಲಿನ ಸಹ್ಯಾದ್ರಿ ಕೇವಲ ಮೈ ಮುರಿವ ಬೆಟ್ಟಗಳ ಸಾಲಲ್ಲ. ಅದರ ತುದಿಯಲ್ಲಿ ಲೋಹದ ಅದುರಿದೆ, ಕೆಮ್ಮಣ್ಣುಗುಂಡಿ ಇರಬಹುದು, ಬಾಬಾಬುಡನ್‌ಗಿರಿ ಇರಬಹುದು, ಕುದುರೆ ಮುಖ ಇರಬಹುದು. ಅದುರು ಎನ್ನುವ ವಿಶೇಷಣವನ್ನು ಕವಿ ಇಲ್ಲಿ ತರದಿದ್ದರೂ ಅದು ಕಾವ್ಯದ ನಿಲುಮೆಗೆ ಭಂಗ ತರುತ್ತಿರಲಿಲ್ಲ ನಿಜ. ಆದರೆ ಈ 'ಅದುರು' ಇಲ್ಲಿನ ಒಂದು ವಿಶೇಷಣ ಎನ್ನಿಸುತ್ತದೆ. ಅದಕ್ಕೂ ಒಂದು ಕಾವ್ಯ ಪ್ರವೇಶ ಉಂಟು. ನಿಸಾರ್ ಅಹಮದ್ ಅವರು ಭೂ ವಿಜ್ಞಾನದ ಅಧ್ಯಾಪಕ ಎನ್ನುವುದು ಇಲ್ಲಿ ಉಲ್ಲೇಖನೀಯ.

ವೃತ್ತಿಯಿಂದ ನಿವೃತ್ತರಾದ ಮೇಲೆ ನಿಸಾರರು ಪ್ರಕಟಿಸಿದ 'ಅರವತ್ತೈದರ ಐಸಿರಿ'ಯಲ್ಲಿ ಮತ್ತೆ ಅವರಿಗೆ ಭೂಮಿ ಕಾಡುತ್ತಲೇ ಹೋಗಿದೆ. ಭೂ ವಿಜ್ಞಾನದಲ್ಲಿ ಸಾಮಾನ್ಯವಾಗಿ ಪ್ರಾಥಮಿಕ ಪಾಠ ಕಲಿಯುವುದೇ ಶಿಲೆಗಳ ಶಿಥಿಲೀಕರಣದಂಥ ನೈಸರ್ಗಿಕ ವಿದ್ಯಮಾನಗಳ ವಿವರಣೆಯಿಂದ. ಗಾಳಿ, ನೀರು, ಬಿಸಿಲು, ಹಿಮ ನದಿ, ಈ ಒಂದೊಂದೂ ಭೂಮಿಯ ಚಹರೆಯನ್ನು ಬದಲಾಯಿಸುತ್ತಲೇ ಯುಗಯುಗಾಂತರದಿಂದ ಗುತ್ತಿಗೆದಾರರಾಗಿ ವರ್ತಿಸುತ್ತಿವೆ. ಮರಳು ದಿಬ್ಬಗಳ ನಿರ್ಮಿತಿ ಕೂಡ ಈ ಬಗೆಯ ನೈಸರ್ಗಿಕ ಪ್ರಕ್ರಿಯೆಯ ಒಂದು ಫಲ. ಪಾಠ ಹೇಳುವಾಗ ಮರಳು ದಿಬ್ಬಗಳ ಉಗಮ, ವಿಕಾಸ, ಸರಿತ ಎಲ್ಲವನ್ನೂ ದೃಷ್ಟಾಂತಗಳೊಡನೆ ಹೇಳಬೇಕಾಗುತ್ತದೆ. ಆದರೆ ಪದ್ಯಕ್ಕೆ ಅಂಥ ಬಂಧವಿಲ್ಲ; ಮುಲಾಜು ಗಳೂ ಇಲ್ಲ. ಒಂದೆಡೆ ಭೂ ವಿಜ್ಞಾನದ ಮನೋದೃಷ್ಟಿ, ಮತ್ತೊಂದೆಡೆ ಮರಳು ದಿಬ್ಬಗಳು, ನಿಸಾರರ ಮನೋಭೂಮಿಕೆಯನ್ನು ತಟ್ಟಿ ಅಪರೂಪದ ಕಾವ್ಯಶಿಲ್ಪವನ್ನು ನಮ್ಮೆದುರಿಗೆ ತೆರೆದಿಡುತ್ತದೆ.

'ಇತ್ತ ಗಿರಿಯೂ ಅಲ್ಲ, ಅತ್ತ ಗುಡ್ಡವೂ ಅಲ್ಲ
ಒಂಟೆ ಡುಬ್ಬದಾಕೃತಿಯ ಕಿರು ಮರಳು ದಿಬ್ಬಗಳು—
ಒಂದು ಆಸರೆಯೆ? ಭದ್ರ ತಳಪಾಯವೆ?
ನಿಶ್ಚಿಂತ ನೆಲೆ ನಿಲ್ಲಲು ನೆರೆಹೊರೆಯ ಸಹಾಯವೆ?
ಇಲ್ಲಿದ್ದರಿವು ನಸುಕಿನಲ್ಲಿ,

ಸರಿದಿರುತ್ತವೆ ಗಾವುದ ದೂರ
ಬೈಗಿನ ಮಬ್ಬು ಮುಸುಕಿನಲ್ಲಿ.'
(ಮರಳು ದಿಬ್ಬಗಳು)

ಹತ್ತು ಪುಟಗಳಲ್ಲಿ ಅಧ್ಯಾಪಕರು ವಿವರಿಸುವಂಥ ಈ ವಿದ್ಯಮಾನವನ್ನು ಹತ್ತೇ ಪದಗಳಲ್ಲಿ ಇವರು ಹಿಡಿದಿಡುವ ಪರಿ ಓದುಗರ ಮನದಾಳವನ್ನು ಮತ್ತೆ ಮತ್ತೆ ತಟ್ಟುತ್ತದೆ, ಶಬ್ದದ ಮೋಡಿಯಿಂದಲೂ ಕೂಡ. ಈ ಕವಿಗೆ ಮರಳು ದಿಬ್ಬಗಳೆಂದರೆ ಪ್ರಕೃತಿಯ ಸತತ ಜಂಗಮ ರೂಪಿ ಜಿಪ್ಸಿಗಳು. ಎಂಥ ಸುಂದರ ರೂಪಕ! ಇದರ ಜೊತೆಗೆ ನಿಸಾರರ ಭೂ ವೈಜ್ಞಾನಿಕ ಪ್ರಜ್ಞೆಯೂ ಅಲ್ಲಲ್ಲೇ ಚುರುಕಾಗಿ ಕೆಲಸ ಮಾಡಿದೆ, ವಿಟಮಿನ್ನುಗಳಂತೆ. ಮರಳು ದಿಬ್ಬಗಳತ್ತ ಬೊಟ್ಟು ಮಾಡಿ ಕವಿ ಹತಾಶ ಭಾವದಿಂದ ಕೇಳುತ್ತಾರೆ; ಅವುಗಳ ದಟ್ಟ ದಾರಿದ್ರ್ಯವನ್ನು ಗೇಲಿ ಮಾಡುತ್ತಾರೆ.

'ಒಡಲಾಳದಲ್ಲಿ ಬೆಲೆಯುಳ್ಳ ಖನಿಜಗಳ ಬೈತಿಟ್ಟು
ಬಹುರತ್ನಾ ವಸುಂಧರೆಯ ಚಿರ ಪ್ರಶಸ್ತಿಗೆ ಹುಟ್ಟು
ಕೃತಕೃತ್ಯವೆನ್ನಿಸುತ ಮನದಣಿಯ ನಲಿಯಲಿಲ್ಲ.'
(ಅದೇ)

ನಿಸಾರರ ಕಾವ್ಯದ ವೈಶಿಷ್ಟ್ಯವಿರುವುದೇ, ಯಾವುದೇ ರೂಪಕವನ್ನು ಬಳಸಲಿ ಬದುಕಿನೊಂದಿಗೆ ಅದನ್ನು ಸಮೀಕರಿಸುವ ಕವಿಯ ಜೀವನ ಪ್ರೀತಿಯಲ್ಲಿ. ಜೀವನದಲ್ಲಿ ಅನುಕೂಲ ಸಿಂಧು ಎಂಬ ತತ್ತ್ವವನ್ನು ಪಾಲಿಸುವ ಸಮಾಜವನ್ನು ಕವಿ ಅತ್ಯಂತ ವಿಷಾದದಿಂದಲೇ ದಾಖಲಿಸುತ್ತ ಹೋಗುತ್ತಾರೆ. ಕಾವ್ಯಕ್ಕೆ ಜೀವ ಧಾತುಗಳ ಪೋಷಣೆ ನೀಡುವುದೇ ಈ ಬಗೆಯ ಸಮೀಕರಿಸುವ ಪ್ರಕ್ರಿಯೆ. ನಿಸಾರರದು ಸದಾ ತೆರೆದ ಕಣ್ಣು. ಅಷ್ಟೇ ಅಲ್ಲ, ಅವು ಶೋಧಕ ಕಣ್ಣೂ ಕೂಡ. ಇಂದಿನ ದಿನಗಳಲ್ಲಿ ಬರಿದಾಗುತ್ತಿರುವ ಅಂತರ್ಜಲ, ಎಗ್ಗಿಲ್ಲದ ಅದರ ಬಳಕೆ, ನೆಲದ ಮುನಿಸು—ಇವನ್ನು ಕಾವ್ಯ ಮಾಡುವಾಗ ವೈಜ್ಞಾನಿಕ ಅಂಶಗಳನ್ನು ಖಚಿತವಾಗಿ ಆದರೆ ತಿಳಿಯಾಗಿಸಿ ಹೇಳುವ ಪರಿಯಲ್ಲೂ ಒಂದು ಬಗೆಯ ಸರಸ ಸಲ್ಲಾಪವಿದೆ, ಲೇವಡಿ ಇದೆ, ನವೋಲ್ಲಾಸವಿದೆ. ಜನ ಅಂತರ್ಜಲಕ್ಕಾಗಿ ಏಕೆ ಮುಗಿ ಬೀಳುತ್ತಾರೆಂಬ ವಾಸ್ತವತೆಯ ಬಗ್ಗೆ:

'ಕೊಳವೆ ಬಾವಿ ತೋಡಿಸುವ ಗೀಳು ಜನಕ್ಕೆ
ಕೊರತೆ ಎಷ್ಟಿದ್ದರೂ ಹಣಕ್ಕೆ'
(ಕೊಳವೆ ಬಾವಿಗಳು)

ಈ ಸಾಲುಗಳು ಕೇವಲ ಪ್ರಾಸವಾಗಿರದೆ ಈಗಿನ ಜನರ ಆರ್ಥಿಕ ಪರಿಸ್ಥಿತಿಯ ಬಗ್ಗೆಯೂ ಜೊತೆಗೆ ತೆವಲಿನ ಬಗ್ಗೆಯೂ ನವಿರಾಗಿ ಗೇಲಿಮಾಡುತ್ತವೆ. ಬಾವಿ ತೋಡಿಸಿದವರಿಗೆಲ್ಲ ಜಲದೇವಿ ಕೃಪೆ ತೋರಳು ಎಂಬ ನಿತ್ಯ ಸತ್ಯವನ್ನೂ ಕೃಪೆ ತೋರಿಸಿದರೂ ಅದು ಕರುಣೆ ತೋರಿಸುವ ಉಪ್ಪುನೀರಿನ ಪ್ರಸಂಗವನ್ನೂ ನಿಸಾರರು ಅತ್ಯಂತ ಶಕ್ತವಾಗಿ ಅಭಿವ್ಯಕ್ತಿಸಿದ್ದಾರೆ. ಅವರು ಹೇಳುವ ಕಿವಿಮಾತು ಇಲ್ಲೂ ಉಂಟು :

'ಅಂತರ್ಜಲದ ಮಟ್ಟ,

ಎಲ್ಲೆಡೆ ಒಂದೇ ಸಮವಿರದೆ
ಸಖತ್ ಕೈಕೊಟ್ಟ
ನಿಸರ್ಗದ ವಿರುದ್ಧ ಒತ್ತಾಯಿಸಿ ನ್ಯಾಯ,
ಹೂಡಬಹುದೆ ಬಂಡಾಯ?
ಪ್ರಕೃತಿಗಿದೆ ತನ್ನದೇ ಮರ್ಜಿ
ಕಿವಿಗೆ ಹಾಕಿಕೊಳ್ಳದು ಅದು
ನರರ ಗೋಳಿನ ಅರ್ಜಿ.'
(ಅದೇ)

ಅಂತರ್ಜಲದ ಬಗೆಗಿನ ಈ ಕವನವನ್ನು ಓದುವಾಗ ಅವರದೇ ಮಾತುಗಳು ನೆನಪಾಗುತ್ತವೆ. 'ವಿಜ್ಞಾನದ ವಿಧಾನ ವಸ್ತುಸತ್ಯವನ್ನು ಅವಲಂಬಿಸಿದ್ದು. ಸಾಹಿತ್ಯದ ರೀತಿ ಭಾವಸತ್ಯದ್ದಾಗಿದ್ದರೂ ಅವು ಪರಸ್ಪರ ವಿರೋಧಿಗಳಾಗಬೇಕಿಲ್ಲ. ಅವೆರಡರಿಂದಲೂ ನಮ್ಮ ಜನಜೀವನದ ತಿಳಿವಿನ ಮೇರೆ ವಿಸ್ತರಿಸುತ್ತದೆ. ಸಾಹಿತ್ಯಕಾರರಾಗಲಿ, ಕಲಾಕರ್ತರಾಗಲಿ ತಮ್ಮ ಪರಿಸರದ ವಿದ್ಯಮಾನಗಳನ್ನು ಗ್ರಹಿಸುವ ರೀತಿ ವೈಜ್ಞಾನಿಕನಿಗಿಂತ ಬೇರೆಯಾಗಿದ್ದರೂ ಅವರು ತಮ್ಮ ಗ್ರಹಿಕೆ, ಕಾಣ್ಕೆಗಳಲ್ಲಿ ಸತ್ಯವನ್ನು ತಿರುಚುವಂತಿಲ್ಲ; ಮಿಥ್ಯಾಚಿತ್ರವನ್ನು ನೀಡುವಂತಿಲ್ಲ' (ವಿಜ್ಞಾನ ಮತ್ತು ಸಾಹಿತ್ಯ: 'ಅಚ್ಚುಮೆಚ್ಚು' ಸಂಕಲನದಲ್ಲಿ)

'ಅರವತ್ತೈದರ ಐಸಿರಿ'ಯಲ್ಲಿನ ಇನ್ನೊಂದು ಪದ್ಯ 'ಬಂಡೆ ಮತ್ತು ಕಲ್ಲಿನ ಚೂರುಗಳು' (ನಿಸಾರ್ ಅಹಮದ್ ಅವರು ಕಾಲೇಜು ವಿದ್ಯಾರ್ಥಿಗಳಿಗೆ ಭೂ ವಿಜ್ಞಾನವನ್ನು ಬೋಧಿಸುವಾಗ ಇದೇ ವಿಭಾಗದ ಇನ್ನೊಂದು ಅಂಗವಾದ ಶಿಲಾಶಾಸ್ತ್ರವನ್ನೂ ಬೋಧಿಸುತ್ತಿದ್ದರು, ಅವರ ಸಹೋದ್ಯೋಗಿಯಾಗಿದ್ದ ನನಗೆ ಅದು ಈಗಲೂ ಕಣ್ಣಿನ ಮುಂದೆ ನಿಂತಂತಿದೆ). ಇಲ್ಲಿನ ಬಂಡೆಗಳು ಮತ್ತು ಕಲ್ಲುಚೂರುಗಳ ಸ್ಪರ್ಧೆ, ಮೂದಲಿಕೆ ಒಂದು ಸಂದೇಶವನ್ನು ಸಾರುತ್ತ ಹೋಗುತ್ತವೆ. ಮೇಲರಿಮೆ, ಕೀಳರಿಮೆಗಳ ಸಂಕೇತವಾಗಿ ಬಂಡೆ ಮತ್ತು ಕಲ್ಲಿನ ಚೂರುಗಳು ಇಲ್ಲಿ ಬದುಕಿನ ಅನೇಕರ ಮನೋಸ್ಥಿತಿಯ ದ್ಯೋತಕವಾಗಿ ನಿಲ್ಲುತ್ತವೆ. ಬಂಡೆಗಳನ್ನು ಕಾವ್ಯವಾಗಿಸುವ ಪ್ರಕ್ರಿಯೆಯಲ್ಲಿ ನಿಸಾರರು ಭೂ ವಿಜ್ಞಾನದ ಅಂಶಗಳನ್ನು ಕಾವ್ಯದ ಧ್ವನಿಯಾಗಿಸುತ್ತಾರೆ :

'ನಿಮ್ಮಂಥ ಹುಲು ಕಲ್ಲು ಚೂರುಗಳು
ಚಿನ್ನ ತೆಗೆದಿರುವ ಸುಳಿವು ನೀಡುವ ಹಾಗೆ,
ಅದರ ನಿಚ್ಚಳ ನಿಕ್ಷೇಪದಕ್ಷಯ ಹೆಚ್ಚಳವನು
ಆಸುಪಾಸಿಗೆಲ್ಲ ಕೂಗಿ ಸಾರುವ ಹಾಗೆ,
ಬಂಜೆ ಹೆಬ್ಬಂಡೆ ಸೂಚಿಸುವುದಿಲ್ಲ.'
(ಬಂಡೆ ಮತ್ತು ಕಲ್ಲಿನ ಚೂರುಗಳು)

ಈ ಸಾಲುಗಳ ವಿಶೇಷವೆಂದರೆ ಶಬ್ದಲಾಸ್ಯವಷ್ಟೇ ಅಲ್ಲ, ನಿಸಾರರು ಮಾಡುವ ಶಿಲೆಯೊಂದಿಗಿನ ಮಾತುಕತೆ ಸಹ. ಎಂದಿನಂತೆ ಸಂದೇಶ ನೀಡುವ ಮಟ್ಟದಲ್ಲಷ್ಟೇ ಅವು ಕೃತಾರ್ಥವಾಗುವುದಿಲ್ಲ. ಈ ಸಾಲುಗಳು ಇನ್ನೊಂದು ಸಂಗತಿಯನ್ನೂ ಬಹು ನಿಖರವಾಗಿ

ಸಾರುತ್ತವೆ. ಭೂಮಿಯಲ್ಲಿ ಖನಿಜವನ್ನು ಅರಸಿ ಸಮೀಕ್ಷೆ ಮಾಡುವವರಿಗೆ, ವಿಶೇಷವಾಗಿ ಪುರಾತನ ಚಿನ್ನದ ಗಣಿಗಳಿರುವ ಸ್ಥಳಗಳನ್ನು ಪತ್ತೆ ಹಚ್ಚಲು ಹೊರಟ ಭೂ ವಿಜ್ಞಾನಿಗಳಿಗೆ ಇಂಥ ಕಲ್ಲುಚೂರುಗಳೇ ಮಾರ್ಗದರ್ಶಿಗಳು. ಭೂ ವಿಜ್ಞಾನಿಯು ಶೆರ್ಲಾಕ್ ಹೋಂಸ್ ಆಗಿ ಬಡ್ತಿ ಪಡೆಯುವುದು ಈ ಬಗೆಯ ಕುತೂಹಲದಿಂದಲೇ; ಆಗ ಒದಗಿಬರುವುದು ಇಂಥ ಸಾಕ್ಷಿಗಳೇ.

ನಿಸಾರರ ಎಚ್ಚರವೆಂದರೆ, ಕಂಡದ್ದನ್ನೆಲ್ಲ ಕವಿತೆಯಾಗಿಸದೆ ಸಾಧಿಸುವ ಮನೋ ನಿಯಂತ್ರಣ—

'ಕಂಡದ್ದು ಕೇಳಿದ್ದೆಲ್ಲ ಬಗೆಯಲ್ಲಿ ಬೇರೂರುವಂತಿದ್ದರೆ,
ಬೇರೂರಿದ್ದೆಲ್ಲ ಪದ್ಯವಾಗುವಂತಿದ್ದರೆ,
ಕಪ್ಪೆಚಿಪ್ಪುಗಳೆಲ್ಲ ತಳೆದಿದ್ದರಾಣ ಮುತ್ತು
ಆ ಕಥೆಯೇ ಬೇರೆ ಇತ್ತು'

(ಕವನ ಮತ್ತು ಮಾವಿನ ಹೂವು)

ಭೂ ವಿಜ್ಞಾನದಲ್ಲಂತೂ ದಾರ್ಶನಿಕತೆಯನ್ನು ಹೆಜ್ಜೆಹೆಜ್ಜೆಗೂ ಬಿಚ್ಚಿ ತೋರಿಸುವಂಥ ವಿಜ್ಞಾನಿಯನ್ನು ತತ್ತ್ವಜ್ಞಾನಿಯನ್ನಾಗಿ ಮಾಡುವಂಥ, ಕವಿಯಾದವನಿಗೆ ನವೋಲ್ಲಾಸ ನೀಡುವಂಥ ಪ್ರೇರಣೆಗಳು ನೂರಾರಿವೆ. ಆದರೆ ಕಾವ್ಯವಾಗಿಸುವಲ್ಲಿ ನಿಸಾರರ ಆಯ್ಕೆ ಬಲು ಎಚ್ಚರದಿಂದ ಕೂಡಿದ್ದು. ಇಲ್ಲಿನ ವರ್ಣನೆ ಕೇವಲ ರೂಪ ಸ್ತವವಾಗದೆ ಬದುಕಿನ ಹಸಿ ಹಸಿ ಪುಟದಂತೆ ಕಾಣುತ್ತದೆ.

ಎಲ್ಲ ಕವಿಗಳನ್ನೂ ಜಗತ್ ಸೃಷ್ಟಿ ಒಂದಲ್ಲ ಒಂದು ಬಗೆಯಲ್ಲಿ ಕಾಡುತ್ತಲೇ ಬಂದಿದೆ, ಅದು ನಿಗೂಢ ಎಂಬ ಕಾರಣಕ್ಕಾಗಿ; ಅನುಭವ, ಅನುಭಾವ ಮೀರುವ ಸಂಗತಿಯಿಂದಾಗಿ. ಸೃಷ್ಟಿ ಕಾಡುವ ತೀವ್ರತೆ, ಯಾವ ಎತ್ತರಕ್ಕಾದರೂ ನಮ್ಮನ್ನು ಒಯ್ಯಬಹುದು. ವಿಸ್ಮಯ, ಗೊಂದಲ, ಅಚ್ಚರಿ, ಶರಣಾಗತಿ ಎಲ್ಲವೂ ಮುಪ್ಪುರಿಗೊಂಡು ಕವಿಯನ್ನು ದಾರ್ಶನಿಕನನ್ನಾಗಿ ಮಾಡಬಹುದು. ಸೃಷ್ಟಿಯ ಸೊಬಗೇ ಆ ಬಗೆಯದು. ಯುಗಕ್ಕೊಮ್ಮೆ ಕೋಟಿಗೊಬ್ಬ ನುರಿತ ಉಸ್ತಾದನಷ್ಟೇ ಸೃಷ್ಟಿ ರಹಸ್ಯವನ್ನು ಬಿಚ್ಚಿಡಬಲ್ಲ, ಉಳಿದವರಿಗೆ ಅದು ಎಂದೂ ಗುಹ್ಯವೇ ಎನ್ನುವ ನಿಸಾರ್, 'ಕಂಡಷ್ಟೇ ಸತ್ಯವಲ್ಲ' ಎನ್ನುತ್ತಾರೆ. ಸೃಷ್ಟಿಯನ್ನು ಅರಿಯುವ ಪ್ರಯತ್ನದಲ್ಲಿ ನಮ್ಮ ಸ್ಥಿತಿ 'ಮಂತ್ರ ಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲಂತೆ' ಕಾಣುತ್ತದೆ ಕವಿಗೆ.

'ಸಿಕ್ಕಿಕೊಂಡಿದೆ ಅಲ್ಲಿ, ದೂಳಲ್ಲಿ
ಜೀವಿಗಳ ಹುಟ್ಟು ಸಾವಿನ ಮೊದಲ ಅಳತೆಗೋಲು'

(ಕಂಡಷ್ಟೇ ಸತ್ಯವಲ್ಲ)

ಇಡೀ ಜೀವೋತ್ಪತ್ತಿಯ ಬಗೆಗಿನ ಗೊಂದಲಗಳು, ಅಸ್ಪಷ್ಟತೆಗಳು, ನಮ್ಮ ಗ್ರಹಿಕೆಯ ಮಿತಿ ಎಲ್ಲವನ್ನೂ ಈ ಎರಡು ಸಾಲಿನಲ್ಲಿ ಕವಿ ಹಿಡಿದಿಟ್ಟಿದ್ದಾರೆ, ಕಂಡಷ್ಟೂ ಸತ್ಯವಿರಬಹುದು, 'ಕಂಡಷ್ಟೇ ಸತ್ಯವಲ್ಲ' ಎನ್ನುವ ಕವನದಲ್ಲಿ (ನೆನೆದವರ ಮನದಲ್ಲಿ). ಇಲ್ಲಿನ

ಒಂದೊಂದು ಪದಕ್ಕೂ ವಿಜ್ಞಾನದಲ್ಲಿ ಮಹಾನ್ ಗ್ರಂಥಗಳೇ ಸೃಷ್ಟಿಯಾಗಿವೆ. ಆದಿಮ ವಿಶ್ವದ ಮೂಲ ರೂಪ, ಭೂಮಿಯೊಂದರಲ್ಲೇ ಜೀವ ಮೊಳಕೆಯೊಡೆದ ಪರಿ, ದೂಳಿನ ರೂಪ ದಲ್ಲಿದ್ದ ಮೂಲ ಜೀವದ್ರವ್ಯ—ಈ ಒಂದೊಂದೂ ಅಚ್ಚರಿ, ಗೊಂದಲ, ಅಸ್ಪಷ್ಟತೆಗಳನ್ನು ಇಂದಿಗೂ ಸಾರುತ್ತಿವೆ.

ನಿಸಾರರ ಪ್ರಕೃತಿಯ ಪ್ರೀತಿ ಅವರನ್ನು ಬದುಕಿನ ಅರ್ಥ ಶೋಧಕ್ಕೆ ತೊಡಗುವಂತೆ ಪ್ರೇರೇಪಿಸುತ್ತದೆ. ಪ್ರಕೃತಿಯ ಸೋಜಿಗಕ್ಕೆ ತಾವೂ ವಿಸ್ಮಯಪಟ್ಟು ಅದನ್ನು ಅರ್ಥೈಸಿ ಕೊಳ್ಳಲು ಆಳವಾದ ಹುಡುಕಾಟ ಮಾಡುತ್ತಾರೆ. ಯಾರಿಗೂ ಕಾಣದ ಅರ್ಥ ಇವರಿಗಷ್ಟೇ ಕಾಣುತ್ತದೆಯೇ ಎನ್ನುವಷ್ಟರ ಮಟ್ಟಿಗೆ ಪ್ರಖರ ಇವರ ಒಳನೋಟಗಳು. ಮುಳ್ಳುಗಳಿರುವ ಕ್ಯಾಕ್ಟಸ್ ನಿಸಾರರಿಗೆ ನಿರ್ಗಂಧಿ, ಕಲಾಭಿವ್ಯಕ್ತಿಸಿದ ದಾರಿದ್ರ್ಯ, ನಿರಲಂಕಾರ, ಬಿಕೋತನ ತಾಪವಾಗಿ ಭಾಸವಾಗುತ್ತದೆ. ಬರಿಗಣ್ಣು ದಾಖಲಿಸುವ ಈ ಗುಣಗಳ ಜೊತೆಗೆ ಕ್ಯಾಕ್ಟಸ್ಸಿನ ಮೂಲಭೂತ ಸ್ವಭಾವವನ್ನು ಅಷ್ಟೇ ಸತ್ವಪೂರ್ಣವಾಗಿ ಬಯಲುಮಾಡುತ್ತಾರೆ—ಥೇಟ್ ಸಸ್ಯವಿಜ್ಞಾನಿಯಂತೆ.

'ನಿರ್ವೈವಿಧ್ಯ ಬಹುಗುಣಿಸಿದ, ಮರುಕಳಿಸಿದಾಕಾರ
ಎಲೆಯೆಲ್ಲಿ ಚಿಗುರಿಲ್ಲದಲ್ಲಿ? ಚಿಗುರೆಲ್ಲಿ ಎಲ್ಲೆಯಿಲ್ಲದಲ್ಲಿ?'
(ಕ್ಯಾಕ್ಟಸ್)

ಇದು ಕ್ಯಾಕ್ಟಸ್‌ನ ವೈಶಿಷ್ಟ್ಯ. ಉರಿಬಿಸಿಲಿನ ಬೆಂಗಾಡಿನಲ್ಲಿ, ಶುಷ್ಕ ಪರಿಸರದಲ್ಲಿ ಬೆಳೆಯುವಾಗ ಅದು ಅನಿವಾರ್ಯವಾಗಿ ತನ್ನ ಶರೀರವನ್ನು ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಾಗುತ್ತದೆ, ತನ್ನ ಅಸ್ತಿತ್ವಕ್ಕಾಗಿ. ಅದು ಎಲೆ ಬಿಡಲಾರದು, ಆಹಾರೋತ್ಪಾದನೆಗಾಗಿ ದ್ಯುತಿ ಸಂಶ್ಲೇಷಣೆಗೆ ತೊಡಗಬೇಕಾದ ಎಲೆಗಳು ಇಲ್ಲಿ ಮುಳ್ಳಾಗಿ ಪರಿವರ್ತನೆಯಾಗಿವೆ. ಎಲೆಯ ಕಾಯಕವನ್ನು ಕಾಂಡಕ್ಕೆ ವರ್ಗಾಯಿಸಿವೆ. ಕವಿ ಕ್ಯಾಕ್ಟಸ್‌ನ ರೂಪವನ್ನು ಗೇಲಿ ಮಾಡುತ್ತಲೇ ಅನುಕಂಪಪಡುತ್ತಾರೆ.

'ಜಡತೆಯಲಿ ಜೀವದೇಕಮೇವಾದ್ವಿತೀಯ ನಕಲೇ,
ಚೈತನ್ಯದಪಹಾಸ್ಯವೆ?'
(ಅದೇ)

ಕ್ಯಾಕ್ಟಸ್ ಕವಿಗೆ ಕಾಣುವ ಬಗೆ ಇದು. ಅದು ಜಡ ಸ್ವರೂಪಿ, ಅದಕ್ಕೆ ಹೋಲಿಕೆಯೇ ಇಲ್ಲ. ಹಾಗೆಯೇ ಚೈತನ್ಯಕ್ಕೆ ಅದು ಅಪಹಾಸ್ಯದಂತೆ. ಏಕೆಂದರೆ ಅದರಲ್ಲಿ ಹೂ ಬಿಡುವ ಸಂಭ್ರಮವಿಲ್ಲ, ದುಂಬಿಗಳನ್ನು ಆಕರ್ಷಿಸುವ ಗುಣವಿಲ್ಲ. ಈ ಬಗೆಯ ಪ್ರಕೃತಿಯೊಂದಿಗಿನ ಮಾತುಕತೆ ನಿಸಾರರಿಗೆ ಬಲು ಅಚ್ಚುಮೆಚ್ಚು (ನಾನೆಂಬ ಪರಕೀಯ).

ಕನ್ನಡದ ಯಾವ ಕವಿಯೂ ನಿಸಾರರ ಬಗೆಗಣ್ಣಿನಿಂದ ಪ್ರಕೃತಿಯನ್ನು ಅರ್ಥೈಸಿಕೊಂಡ ಉದಾಹರಣೆಗಳು ನಮ್ಮಲ್ಲಿಲ್ಲ; ವೈವಿಧ್ಯಮಯ ಬಾಹ್ಯಾವರಣವನ್ನು ಕಾವ್ಯಕ್ಕೆ ಒಗ್ಗಿಸಿಕೊಂಡ ದೃಷ್ಟಾಂತಗಳಿಲ್ಲ. ಈ ಅರ್ಥದಲ್ಲಿ ನಿಸಾರರು ಅನನುಕರಣೀಯರು. ಪ್ರಾಣಿ ಇರಲಿ, ಪಕ್ಷಿ ಇರಲಿ ಅವು ಕವಿಯೊಳಗಿನ ಭಾವವನ್ನು ಒಮ್ಮೆ ತಟ್ಟಿದವೆಂದರೆ ಅವುಗಳ ಇಡೀ ಬದುಕನ್ನೇ

ಕಾವ್ಯ ಮಾಡುತ್ತಾರೆ ನಿಸಾರ್ ಅಹಮದ್.

`ಯೂಕಲಿಪ್ಟಸ್ ಮತ್ತು ಗಾಳಿಮರಗಳು` ಕವಿಗೆ ಶ್ರೀಸಾಮಾನ್ಯ ವೃಕ್ಷಗಳಾಗಿ ಕಾಣುತ್ತವೆ. ಅವನ್ನು ಪ್ರಜಾಪ್ರಭುತ್ವವಾದಿ ಸಸ್ಯ ಸಂತತಿಯ ಚಿರಂತನ ಲಕ್ಷಣ ಎನ್ನುತ್ತಾರೆ. ಆದರೆ ಅವುಗಳ ಪೂರ್ವಾಶ್ರಮ? ಈ ನೆಲಕ್ಕೆ ಅವು ಅನ್ಯ.

'ಯಾವುದೋ ವಿಲಾಯಿತಿ ಕಾನನದ, ಓಬೀರಾಯನ
ಅತ್ಯನರ್ಘ್ಯ ವರ.'

ಈ ಮರಗಳು ನಮ್ಮ ದೇಶದವಲ್ಲವೆಂಬ ಸತ್ಯ, ಸಸ್ಯವಿಜ್ಞಾನಿಗಳಿಗೆ ಇಲ್ಲವೇ ಪರಿಸರ ವಾದಿಗಳಿಗಷ್ಟೇ ಗೊತ್ತು. ನಿಸಾರರ ವೈಯಕ್ತಿಕ ಕುತೂಹಲ ಸಾರ್ವತ್ರಿಕ ಮೌಲ್ಯ ಗಳಿಸುವುದು ಇಂಥ ವಸ್ತುವಿನ ಆಯ್ಕೆಯಲ್ಲಿ ಹಾಗೂ ಅದನ್ನು ನೋಡುವ ಅಪೂರ್ವ ಪರಿಯಲ್ಲಿ.

ನಿಸಾರರ ಕಾವ್ಯವನ್ನು ಗಂಭೀರವಾಗಿ ಅಧ್ಯಯನ ಮಾಡಿದವರಿಗೆ ವಿಡಂಬನೆ ಅವರ ಕಾವ್ಯದಲ್ಲಿ ನಿರ್ದಿಷ್ಟ ಆಯಾಮವನ್ನೇ ಪಡೆದಿರುವುದು ಸುವೇದ್ಯ. ಆದರೆ ವ್ಯಂಗ್ಯದ ಧ್ವನಿ ಗೇಲಿಯಾಗದೆ ಅವರು ಆಯ್ದ ವಸ್ತುವನ್ನು ಸಂಪೂರ್ಣವಾಗಿ ಪರಿಚಯಿಸುವುದು ಅವರ ಧಾಟಿ. ಇಂಥ ಸಂದರ್ಭದಲ್ಲಿ ನಿಸಾರರ diction ವಿಸ್ಮಯ ತರುವಷ್ಟು ಧ್ವನಿಪೂರ್ಣವಾಗಿರು ತ್ತದೆ. ಬಿ.ಜಿ.ಎಲ್. ಸ್ವಾಮಿ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕ, ವಿಜ್ಞಾನಿಗಳಿಗೆ ವಿಜ್ಞಾನಿ, ಪ್ರಬಂಧಕಾರರಿಗೆ ಪ್ರಬಂಧಕಾರ, ಹರಟೆಮಲ್ಲರಿಗೆ ಹರಟೆಮಲ್ಲ, ಸಂಶೋಧಕರಿಗೆ ಸಂಶೋಧಕ. ಈ ಬಹುಶ್ರುತ ಲೇಖಕರ ವೈಜ್ಞಾನಿಕ ಸಾಧನೆಯನ್ನು ನಿಸಾರರು ತಮ್ಮ ಅನನ್ಯ ಶೈಲಿಯಲ್ಲಿ ಸೆರೆ ಹಿಡಿದಿದ್ದಾರೆ. ಮಾಸ್ತಿಯವರ ಕೈಯಲ್ಲಿ ಕೊಡೆ, ಸ್ವಾಮಿಯವರ ಬಾಯಲ್ಲಿ ವಿಲ್ಸ್‌ಫ್ಲೇಕ್ ಥಟ್ಟನೆ ಅವರವರ ಇಡೀ ವ್ಯಕ್ತಿತ್ವವನ್ನೇ ದೃಶ್ಯಕಾವ್ಯವನ್ನಾಗಿ ಮಾಡುವ ಲಾಂಛನಗಳು. ನಿಸಾರರು ಈ ಇಬ್ಬರನ್ನೂ ಹತ್ತಿರದಿಂದ ಬಲ್ಲವರು; ದೀರ್ಘ ಕಾಲದ ನಂಟು ಅವರೊಂದಿಗೆ. ಹೀಗಾಗಿ ವ್ಯಕ್ತಿಚಿತ್ರಣಗಳನ್ನು ಈ ಕವಿ ರೇಖಿಸುವಾಗಲೆಲ್ಲ ಅವು ಕ್ಯಾಮೆರಾ ಆಗಿ ರೂಪಾಂತರಗೊಂಡುಬಿಡುತ್ತದೆ. ಸ್ವಾಮಿಯವರ `ಹಸುರು ಹೊನ್ನು` ಕೃತಿಯ ಬಗ್ಗೆಯೂ ನಿಸಾರರು ಸುದೀರ್ಘ ವಿಮರ್ಶೆ ಮಾಡಿದ್ದಾರೆ. ಅಂತೆಯೇ ಕಾವ್ಯದಲ್ಲೂ ಅವರ ವ್ಯಕ್ತಿತ್ವವನ್ನು ಸೆರೆ ಹಿಡಿದಿದ್ದಾರೆ. ಸ್ವಾಮಿಯವರಿಗೆ ನಿಸಾರರು ಸಲ್ಲಿಸಿರುವ ನುಡಿ ನಮನ:

'ವಿಲ್ಸ್ ಫ್ಲೇಕು ಹಚ್ಚಿ, ಕೂತು ಸಲೀಸು
ಬಿ.ಜಿ.ಎಲ್ ಉದುರಿಸುವ ಮುತ್ತುಗಳನಾರಿಸು :
ಗಿಡ ಗಂಟೆ, ದ್ರಾವಿಡರ ಕುಲಗೋತ್ರ
ಮಹದೇವಿಯಕ್ಕನ ಮಂಗಳ ಸೂತ್ರ
ಶ್ರೀತುಳಸಿಯ ಮ್ಲೇಚ್ಛ ಜನನ
ತೊಗರಿಯ ಇಥಿಯೋಪಿಯತನ,
ಇಡ್ಲಿಯ ಪೌರಾಣಿಕತೆ, ಉದ್ದಿನ ಪಾತ್ರ
—ಸಂಶೋಧನೆಯ ಈ ಉದ್ದಗಲ ಗಾತ್ರ

ತಬ್ಬಿಬ್ಬಾಗಿ ಅಬ್ಬಬ್ಬಾ ಅನಿಸದಿದ್ದರೆ ಹೇಳು!'
(ಸಾವಿಗೆ ಅತಿಥಿ ಪರಿಚಯ: 'ಅನಾಮಿಕ ಆಂಗ್ಲರು' ಸಂಕಲನ)

ಇಲ್ಲಿ ಕವಿ ದನಿಸುವುದು ಬಿ.ಜಿ.ಎಲ್. ಸ್ವಾಮಿಯವರು ಕನ್ನಡಿಗರಿಗೆ ಕೊಟ್ಟ ಅವರ ಸಂಶೋಧನೆಯ ಇಡೀ ಬದುಕನ್ನು. ಅಷ್ಟೇ ಅಲ್ಲ, ಸ್ವಾಮಿಯವರ ಬಗ್ಗೆ ಓದುಗ ಹೆಚ್ಚು ಹೆಚ್ಚು ಉತ್ಸುಕನಾಗಲು ಈ ವ್ಯಕ್ತಿ ಚಿತ್ರಣ ಮತ್ತೆ ಮತ್ತೆ ಪ್ರೇರೇಪಿಸುತ್ತದೆ.

'ಬದಲಾಗುವುದಿಲ್ಲ ಜಿ.ಟಿ.ಎನ್.' ಎನ್ನುತ್ತಲೇ ಕನ್ನಡದ ಪ್ರಸಿದ್ಧ ವಿಜ್ಞಾನ ಲೇಖಕ ಮತ್ತು ಸಹೋದ್ಯೋಗಿಗಳಾಗಿದ್ದ ಜಿ. ಟಿ. ನಾರಾಯಣರಾವ್ ಅವರನ್ನು ಆತ್ಮೀಯವಾಗಿ ಲೇವಡಿ ಮಾಡುತ್ತ ಅವರ ಇಡೀ ವ್ಯಕ್ತಿತ್ವವನ್ನು ಅನಾವರಣ ಮಾಡ ಹೊರಡುತ್ತಾರೆ, ನಿಸಾರ್. ಜೊತೆಗೆ ಜಿ.ಟಿ.ಎನ್. ಅವರ ವಿಜ್ಞಾನದ ಕೊಡುಗೆಗಳನ್ನು ಕಣ್ಣಿನ ಮುಂದೆ ನಿಲ್ಲಿಸುವ ಒಂದು ಸಾರ್ಥಕ ಪ್ರಯತ್ನವೂ ಇಲ್ಲಿದೆ. ನಿಸಾರರು ಬದುಕನ್ನು ಗಾಢವಾಗಿ ಪ್ರೀತಿಸುತ್ತಾರೆ. ವಿಮುಖವಾಗಿ ಓಡುವ ಪ್ರವೃತ್ತಿ ಅವರದಲ್ಲ. ಇಲ್ಲಿ ವ್ಯಕ್ತಿ ಚಿತ್ರಣವನ್ನು ನೀಡುವಾಗಲೂ ಕೊಂಚ ಲೇವಡಿ ಎನಿಸಿದರೂ ವಿಜ್ಞಾನವನ್ನು ಜನಪ್ರಿಯಗೊಳಿಸಲು ಜಿ.ಟಿ.ಎನ್. ಸುರಿಸಿದ ಬೆವರ ಹನಿಗಳತ್ತ ನಮ್ಮ ಲಕ್ಷ್ಯ ಹರಿಸುತ್ತಾರೆ.

'ಕನ್ನಡದಲ್ಲಿ ಜನಪ್ರಿಯ ವಿಜ್ಞಾನ
ಬರೆದು ಯಾರಾದರು ಪಾವನ?
ಜಾಳುಜಾಳಾದ ಸೀರೆ,
ಕಣ್ಣಾಪಿರದ ಮರಿಗುದುರೆ
ಎನ್ನುವವರೆ, ಓದಿ ಇವರನ್ನ.
ತಪಶೀಲು ಪೇರಿಕೆಯ, ಹುಮ್ಮಸ್ಸು ಹಾರಿಕೆಯ
ಬಿಗಿ ಮೊಗದ ವಿಜ್ಞಾನಕ್ಕೆ
ಕಾವ್ಯತೆಯ ಕಚಗುಳಿಯಿಟ್ಟು
ನಗೆಯ ಬಿಡಿಸಲು ಅವರು ಸುರಿಸಿರುವ ಬೆವರನ್ನ,
ಏರಿರುವ ತೆವರನ್ನ.'

(ಬದಲಾಗುವುದಿಲ್ಲ ಜಿ.ಟಿ.ಎನ್: 'ಅನಾಮಿಕ ಆಂಗ್ಲರು' ಸಂಕಲನದಿಂದ)

ಇಲ್ಲಿ ವಿಜ್ಞಾನ ಸಾಹಿತ್ಯ ಬಿಗಿ ಮೊಗ ತಳೆದಿದೆ ಎಂಬ ವಾಸ್ತವತೆಯನ್ನು ನಿಸಾರರು ಬೊಟ್ಟು ಮಾಡಿ ತೋರಿಸುತ್ತಾರೆ. ಅದಕ್ಕೆ ಕಾವ್ಯಸ್ಪರ್ಶ ಬೇಕೆಂಬ ದನಿಯೂ ಇವರದು.

ಕಾವ್ಯ ಬದುಕಿನ ಏಕತಾನತೆಯನ್ನು ಭಂಜಿಸಲು ನಿಸಾರರು ಕೆಲವೊಂದು ಪ್ರಯೋಗಗಳನ್ನು ಮಾಡಿರುವುದುಂಟು. ಇವರ 'ನಾನೆಂಬ ಪರಕೀಯ' ಕವನ ಸಂಕಲನದ ಸ್ವರೂಪ ಈ ತೆರನಾದದ್ದು. ಇದು ಹೊರಬಂದದ್ದು ೧೯೭೨ರಲ್ಲಿ; ನವ್ಯ ಸಾಹಿತ್ಯ ಉಚ್ಛ್ರಾಯದಲ್ಲಿದ್ದ ಕಾಲ. ಏಕಾಂತತೆ, ಅಂತರ್ಮುಖತೆ, ವಿವಶತೆ, ಅನಾಥಪ್ರಜ್ಞೆ, ಸ್ವಸಂವಾದ ಕಾವ್ಯದುದ್ದಕ್ಕೂ ಮೆರೆದು ಆಳಿದ, ಅಳೆದ ಕಾಲ. ನಿಸಾರರು ಸಮರ್ಥವಾಗಿ ನವ್ಯದಲ್ಲೂ ಧ್ವನಿಸಿದರು. 'ಸ್ವರೂಪ' ಕವನದಲ್ಲಿ ಅಂತಿಮವಾಗಿ ಕವಿ ಬೇಡುವುದು ದೇವನ ಕರುಣೆಯನ್ನು. ಪಾರದರ್ಶಕತ್ವ, ಗಡಸುತನ, ಅನನ್ಯ ರಾಸಾಯನಿಕ ಗುಣ ಮುಂತಾದ ಶುದ್ಧ ವಿಜ್ಞಾನ

ಪದಗಳನ್ನು ಇಲ್ಲಿ ಬಳಸುತ್ತಾರೆ. 'ನೆನೆದವರ ಮನದಲ್ಲಿ' ಸಂಕಲನದ 'ಆತ್ಮಶೋಧ' ಕವನದಲ್ಲಿ ಕವಿ ತನ್ನ ದನಿಯನ್ನು ಕಾಣದೆ ಪರಿತಪಿಸುತ್ತ 'ಭೂ ತಳದ ಶಿಲೆಯಲ್ಲಿ ಗೆರೆಯಾದ ಜಲದಂತೆ' ಅದು ಗುಹ್ಯ ಎಂದು ಕಂಡುಕೊಳ್ಳುತ್ತಾರೆ.

'ಭೂಮ್ಯಂತರಂಗದೊಳಗಾವ ಸ್ತರ ಶಿಲೆಗಳಲಿ
ನಿಜ ಖನಿಜ ನಿಕ್ಷೇಪ ಹುದುಗಿರುವುದೋ'
(ಆತ್ಮಶೋಧ)

ಎಂದು ಹುಡುಕಾಟ ನಡೆಸುತ್ತಾರೆ.

ಈ ಬಗೆಯ ಪ್ರತಿಮೆಗಳನ್ನು ಬಹುಶಃ ಭೂ ವಿಜ್ಞಾನದ ತಿಳಿವಿಲ್ಲದಿದ್ದರೆ ಬಳಸುವುದು ಅಸಂಭವ. ನಿಸಾರರು ಮೂಲತಃ ಬಯಲು ನಾಡಿನ ಕವಿ. ಮಲೆನಾಡಿನ ವನದ ಐಸಿರಿಗೆ ಮಾರು ಹೋದವರು, ತಮ್ಮ ಅನೇಕ ಕವನಗಳಲ್ಲಿ, ಲೇಖನಗಳಲ್ಲಿ ಇದನ್ನು ಸ್ಪಷ್ಟವಾಗಿ ತೋಡಿಕೊಂಡಿದ್ದಾರೆ. 'ಮಲೆನಾಡೇ, ನಿನ್ನೊಂಟಿ ಮನೆಗಳ, ತೆಳು ನೀಲಿ ಹೊಗೆಗಳ ಆಪ್ತ ದೂತಿಯರನಟ್ಟಿದಿರು, ಕುದುರದಿದ್ದರೆ ವ್ಯಾಪಾರ...' ಎಂದೇ ಮಲೆನಾಡಿನ ಆಪ್ತತೆಯನ್ನು ಆತ್ಮೀಯವಾಗಿ ತಬ್ಬಿಕೊಂಡವರು. ಅದು ಕಾಡುವ ಪರಿ, ಎಬ್ಬಿಸುವ ಭಾವ ಲಹರಿಗಳು ಅವರನ್ನು ಅತಿ ಭಾವುಕರನ್ನಾಗಿ ಮಾಡಿದ್ದೂ ಉಂಟು. ಶಿವಮೊಗ್ಗದ ದರಿದ್ರ ಥಂಡಿಯನ್ನು ಅನುಭವಿಸುತ್ತಲೇ ಅದನ್ನು ಮೆಚ್ಚಿದವರು. ತಾವು ಬೆಳೆದ ಬೆಂಗಳೂರಿನಂಥ ನಗರಕ್ಕೆ ಬಂದು ತಬ್ಬಿಬ್ಬಾದವರು. ನಿಸಾರರ ಈ ಸಂವೇದನಾಶೀಲತೆಯನ್ನು ಇಲ್ಲಿ ಪ್ರಸ್ತಾಪಿಸಲು ಕಾರಣವಿದೆ. ಕಾವ್ಯ ಪರಿಸರದಿಂದ ಭಿನ್ನವಾದ ಭೌತ ಪರಿಸರವನ್ನು ನಗರಗಳಲ್ಲಿ ಅವರು ಕಂಡಿದ್ದಾರೆ. ಇಲ್ಲಿನ ಬಾಹ್ಯಾಡಂಬರ, ಕಾಂಕ್ರೀಟ್ ಕಾಡಿನ ಶುಷ್ಕ ನಗೆಗಳನ್ನು ದಾಖಲಿಸುವಾಗ ನಿಸಾರರು ಗಾಸಿಗೊಳ್ಳುವುದೂ ಉಂಟು.

ವೈಚಾರಿಕ ಲೇಖನಗಳಲ್ಲಿ ಧ್ವನಿಸಿರುವ ನಿಸಾರರ ಮನಸ್ಸನ್ನು ಕುರಿತು ಹೇಳಲೇಬೇಕು. ಏಕೆಂದರೆ, ಗದ್ಯ ಕೃಷಿಯಲ್ಲೂ ಅವರದು ಪಳಗಿದ ಕೈ. ಗದ್ಯದ ಬಗ್ಗೆ ನಿಸಾರರ ಅನಿಸಿಕೆಗಳನ್ನು ಅವರದೇ ಮಾತಿನಲ್ಲಿ ಹೇಳುವುದು ಯುಕ್ತ. (ಕವಿಯಾಗಿ ನನ್ನ ಅನುಭವ: 'ಇದು ಬರಿ ಬೆಡಗಲ್ಲೋ ಅಣ್ಣ' ಕೃತಿಯಿಂದ):

'ಮಾತಿನ ಬಳಕೆಯಲ್ಲಿ ಕವಿ ಗದ್ಯಕರ್ತನಿಗಿಂತ ಹೆಚ್ಚು ಸೃಜನಶೀಲ, ಹೊಣೆಗಾರ, ಸಂವೇದನಾಶಾಲಿ. ಕವಿಗೆ ಮಾತು ತಪಶೀಲು-ಮಾಹಿತಿಗಳನ್ನು ಪೇರಿಸುವ ಅಥವಾ ಅರ್ಥವನ್ನು ಸೂಚಿಸಿ ಪಕ್ಕಕ್ಕೆ ಸರಿದು ನಿಲ್ಲುವ ಸಾಧನವಲ್ಲ. ಅದು ಅರ್ಥವರ್ಧಕ, ಅತಿಶಯಾರ್ಥ ದ್ಯೋತಕ. ಗದ್ಯಕಾರನಿಗೆ, ಅದರಲ್ಲೂ ವಿಚಾರ ಸಾಹಿತ್ಯದ ಲೇಖಕನಿಗೆ ಶಬ್ದಗಳು ಗಣಿತಶಾಸ್ತ್ರದ ಚಿಹ್ನೆಗಳಂತೆ ನಿಶ್ಚಿತಾರ್ಥ ವಿನೀತ.' ಎಂದೇ ಗದ್ಯ ಪದ್ಯಗಳ ನಡುವಿನ ಗಡಿ ರೇಖೆಯನ್ನು ಗುರುತಿಸಿದರೂ ಕವಿ ನಿಸಾರ್, ಗದ್ಯ ಹೃದ್ಯವಾಗುವಂತೆ ಮಾಡಿದವರು. ಕಲಾಭಿವ್ಯಕ್ತಿಗೆ ವಿಚಾರ ಸಾಹಿತ್ಯವೂ ತಕ್ಕ ಮಾಧ್ಯಮವಾಗಬಲ್ಲುದು ಎಂದು ತೋರಿಸಿ ಕೊಟ್ಟವರು. ನಿಸಾರರ ವೈಜ್ಞಾನಿಕ ಮನೋದೃಷ್ಟಿಗೆ ಬಹುಶಃ ಅವರ ವೈಚಾರಿಕ ಲೇಖನಗಳು ಹೆಚ್ಚು ಪ್ರಖರವಾಗಿ ಪಂಜು ಹಿಡಿಯುತ್ತವೆ. ಪರಿಸರದ ಸಮಸ್ಯೆಯೂ

ಸೇರಿದಂತೆ ಅವರು ಎತ್ತಿಕೊಳ್ಳುವ ಸಮಕಾಲೀನ ವಿದ್ಯಮಾನಗಳ ಬಗೆಗಿನ ಚರ್ಚೆಗಳು ಹೆಚ್ಚು ನಿಚ್ಚಳವಾಗಿ ಪ್ರಕಟವಾಗುತ್ತವೆ. ಗದ್ಯಕ್ಕೆ ಸಹಜವಾಗಿಯೇ ಒದಗಿ ಬರುವ ಕ್ಯಾನ್‌ವಾಸ್ ಬಹು ದೊಡ್ಡದು.

'ಮನದೊಂದಿಗೆ ಮಾತುಕತೆ' ಸಂಕಲನದಲ್ಲಿ 'ವಿಜ್ಞಾನ, ವಿಚಾರ ವಿವೇಚನೆ' ಎಂಬ ಲೇಖನ ಇಂದಿನ ವೈಜ್ಞಾನಿಕ ಬದುಕಿನ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ಮುಂದಿಡುತ್ತದೆ. ವಿಜ್ಞಾನದ ಎಲ್ಲ ಪ್ರಗತಿಯು ಇಂದಿನ ಬದುಕನ್ನು ಹೇಗೆ ಧಾವಂತಕ್ಕೆ ಒಡ್ಡಿದೆ ಎಂಬುದನ್ನು ಅತ್ಯಂತ ಶಕ್ತವಾಗಿ ದಾಖಲಿಸುತ್ತಾರೆ. ವಿಜ್ಞಾನಕ್ಕಿರಬೇಕಾದ ಮಹತ್ತರ ಗುರಿ ಏನೆಂಬುದನ್ನು ನಿಸಾರರು ಇಂದಿನ ಯುಗ ಧರ್ಮದ ಹಿನ್ನೆಲೆಯಲ್ಲಿ ವಿಚಾರಿಸಿ ನೋಡುತ್ತಾರೆ. ವಿಜ್ಞಾನದ ಬಹುರೂಪಿ ಬೆಳವಣಿಗೆಯನ್ನು ಕುರಿತು ಅವರ ಅನಿಸಿಕೆಗಳು ಹೀಗಿವೆ :

'ವಿಜ್ಞಾನವನ್ನು ಸೂತ್ರಪ್ರಾಯವಾಗಿ ಸರಳೀಕರಿಸಿ ಹೇಳಲು ಶಕ್ತವಾಗದಷ್ಟು ಅದು ಬಿಳಿಲು, ಶಾಖೋಪಶಾಖೆಗಳಲ್ಲಿ ವಿಸ್ತರಿಸಿ ಬೆಳೆದಿದೆ. ಅದರ ಅನೇಕಮುಖತೆಯ ಕಲ್ಪನೆಯನ್ನು ನಮ್ಮ ಮನೋಬುದ್ಧಿಗಳು ಕ್ಷಣಾರ್ಧದಲ್ಲಿ ಹಿಡಿಯಲಾರವು. ಧರ್ಮ, ದೇವರು, ಸಂಸ್ಕೃತಿ, ರಾಷ್ಟ್ರ ಮತ್ತಿತರ ಪರಿಕಲ್ಪನೆಯಂತೆ ವಿಜ್ಞಾನ ಪದವೂ ಸರ್ವಗ್ರಾಸಿಯಾದ ಗ್ರಹಿಕೆಯನ್ನು ಬೇಡುತ್ತದೆ. ಕೊನೆಗೂ ಅಮೂರ್ತವಾದ ಭಾವನೆಯನ್ನು ಮನಸ್ಸಿನಲ್ಲಿ ಉಳಿಸುತ್ತದೆ. ಒಂದೆರಡು ಶತಮಾನದ ಹಿಂದಿನ ವಿಜ್ಞಾನದ ಸರಳ ಸ್ವರೂಪಕ್ಕೂ ಇಂದಿನ ಸಂಕೀರ್ಣ ಚರ್ಯೆಗೂ ಸಂಬಂಧವಿಲ್ಲವೇನೋ ಅನ್ನುವಷ್ಟು ಅದು ಮುಂದುವರಿದಿದೆ.'

ವಿಜ್ಞಾನ ಮತ್ತು ತಂತ್ರಜ್ಞಾನಗಳ ನಡುವಿನ ಸಂಬಂಧ ಹಾಗೂ ಇವೆರಡರ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವಗಳನ್ನು ಕವಿ ಅತ್ಯಂತ ಮುಕ್ತ ದೃಷ್ಟಿಯಿಂದ ನೋಡುತ್ತಾರೆ. ವಿಜ್ಞಾನದ ಬಗ್ಗೆ ಸಮಾಜಕ್ಕಿರುವ ಮೂಲಭೂತ ಪರಿಕಲ್ಪನೆಗಳ ಬಗ್ಗೆ ನಮ್ಮ ಲಕ್ಷ್ಯವನ್ನು ಸೆಳೆಯುತ್ತಾರೆ.

'ವಿಜ್ಞಾನವೆಂದರೆ ಐಹಿಕ ಸ್ಥಿತಿಗತಿಗಳ ಸುಧಾರಣೆ ಮತ್ತು ದುರಸ್ತಿಗಾಗಿ ಹೊಸ ಯಂತ್ರೋಪಕರಣಗಳನ್ನೋ, ವೈಜ್ಞಾನಿಕ ಸಾಧನಗಳನ್ನೋ ಸಂಶೋಧಿಸುತ್ತ ಹೋಗುವುದು ಅಥವಾ ಆ ನಿಟ್ಟಿನಲ್ಲಿ ಸಹಕಾರಿಯಾಗುವುದು ಎಂಬ ಉಪಯೋಗಾತ್ಮಕತೆಯ ಅಂಶ ಮೇಲ್ಮೈ ಪಡೆದಿದೆ. ಇದು ಸುಳ್ಳಲ್ಲದಿದ್ದರೂ ಪೂರ್ಣ ಸತ್ಯವಲ್ಲ. ಜೊತೆಗೆ ವಿಜ್ಞಾನದ ಮೂಲಭೂತವೂ ಪರಿಶುದ್ಧವೂ ಆದ ತರ್ಕ ವಿಚಾರಗಳ ಕಲ್ಪನೆಗೆ ಅಪಚಾರವೆಸಗುವಂತಹದು. ವಿಜ್ಞಾನದ ಪ್ರಯೋಜಕತೆಯ ಚರ್ಯೆಯಂತೆ ಅದರ ಆಂತರ್ಯದಲ್ಲಿರುವ ಸೈದ್ಧಾಂತಿಕ ಸ್ವರೂಪವೂ ಅತ್ಯಂತ ಆದರಣೀಯವಾದುದು. ಅಷ್ಟೇ ಏಕೆ, ಪರಿಪಾಲನ ಯೋಗ್ಯವಾದುದು. ತರ್ಕ ಬುದ್ಧಿ, ಚಿಂತನಗಳ ವಿಲಾಸವನ್ನೂ ಅನುಮಾನದ ಪ್ರತ್ಯಕ್ಷ ಪ್ರಮಾಣ, ಪ್ರಯೋಗಗಳ ಮುಲಾಜಿಲ್ಲದ ಬಳಕೆಯ ಧಾರಾಳತೆಯನ್ನೂ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಅದರ ಸಾಧನೆ, ಸಿದ್ಧಿಗಳಿಗೆ ಆತ್ಮಪ್ರಾಯವಾಗಿರುವ ವೈಜ್ಞಾನಿಕ ಮನೋಭಾವ, ಪೂರ್ವಾಗ್ರಹ ಪೀಡಿತವಲ್ಲದ ನಿರ್ಮುಕ್ತ ದೃಷ್ಟಿಕೋನವನ್ನು ಗೌರವಿಸಿ, ಅವಕ್ಕೆ ಬದುಕಿನಲ್ಲಿ ಆದ್ಯತೆಯನ್ನು ಕಲ್ಪಿಸುವುದು ಇಂದಿನ ತುರ್ತುಗಳಲ್ಲಿ ಅತಿ ಮುಖ್ಯವಾಗಿದೆ.'

ಎಂದಿಗಿಂತ ಇಂದು ವಿಜ್ಞಾನದ ತಿಳಿವಿನ ಆವಶ್ಯಕತೆ ಸಮಾಜಕ್ಕೆ ಎಷ್ಟಿದೆ ಎಂಬುದನ್ನು ನಿಸಾರರು ಅರ್ಥಪೂರ್ಣವಾಗಿ ಸೂಚಿಸಿದ್ದಾರೆ.

'ವಿಜ್ಞಾನ, ತಂತ್ರಜ್ಞಾನಗಳ ತಕ್ಕಮಟ್ಟಿನ ತಿಳಿವಳಿಕೆ ಇಲ್ಲದೆ ಪ್ರಸಕ್ತ ಕಾಲದಲ್ಲಿ ಬಾಳುವುದೆಂದರೆ ಆಧುನಿಕ ಲೋಕ ಜೀವನವನ್ನು ರೂಪಿಸಿ ಹಸನುಗೊಳಿಸುತ್ತಿರುವ ಸೌಲಭ್ಯಾನುಕೂಲವನ್ನು ವರ್ಧಿಸುತ್ತಿರುವ ಅನೇಕಾನೇಕ ಶಕ್ತಿಗಳನ್ನು ಅರಿಯುವ ಗೋಜಿಗೆ ಹೋಗದಿರುವಂತೆ ನಮ್ಮ ಬುದ್ಧಿಯನ್ನು ನಾವೇ ತಡೆಗಟ್ಟಿ ನಿಲ್ಲಿಸುವಂತೆ ವಿವೇಕಶೂನ್ಯ ವೆನಿಸೀತು.'

ನಿಸಾರ್ ಅವರು ವೈಜ್ಞಾನಿಕ ಮನೋಧರ್ಮಕ್ಕೆ ಬೆಲೆ ಕಟ್ಟುವ ತಕ್ಕಡಿ ಯಾವ ಕಡೆಗೆ ಹೆಚ್ಚು ವಾಲುತ್ತದೆ? ಸಾಹಿತ್ಯದ ಕಡೆಗೋ ಅಥವಾ ವಿಜ್ಞಾನದ ಕಡೆಗೋ? ಕಾವ್ಯಾಸಕ್ತಿಯನ್ನು ಹಲವು ದಶಕಗಳ ಕಾಲ ಪೋಷಿಸಿ, ಬಹು ದೀರ್ಘಕಾಲ ವಿಜ್ಞಾನ ಬೋಧನೆಯಲ್ಲೂ ನಿರತರಾದ ಅವರ ಅನುಭವಜನ್ಯ ಮಾತುಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದು ಅತ್ಯಂತ ಯುಕ್ತ ಎನಿಸುತ್ತದೆ. ವಿಜ್ಞಾನ ಮತ್ತು ಸಾಹಿತ್ಯಗಳನ್ನು ಯಾವ ಸಂದರ್ಭಗಳಲ್ಲಿ ಯಾವ ಬಗೆಯಲ್ಲಿ ಬಳಸಿಕೊಳ್ಳಬೇಕು; ಯಾವುದಕ್ಕೆ ಪ್ರಾಶಸ್ತ್ಯ ಯಾವುದರಿಂದ ಬರುತ್ತದೆ ಎನ್ನುವ ಅವರ ಮಾತುಗಳು ಮುಂದೆಯೂ ಪ್ರಸ್ತುತ:

'ಸಾಹಿತ್ಯದ ಮೇಲೆ ವಿಜ್ಞಾನದ ಪ್ರಭಾವ ನಿಚ್ಚಳವಾಗಿದ್ದರೂ ಅದರಿಂದ ಪ್ರೇರಣೆ, ಪ್ರಚೋದನೆಗಳು ದಕ್ಕಿದ್ದರೂ ಅವುಗಳನ್ನು ಮೀರಿದ ಕೆಲವು ಸಂಗತಿಗಳನ್ನು ಸಾಹಿತ್ಯ ಗರ್ಭಯಿಸಿಕೊಂಡು ಮಾನವನ ಮೇಲ್ಮೆಗೆ ದುಡಿಯಬೇಕಾಗುತ್ತದೆ. ಮನುಷ್ಯನ ಅಂತಿಮ ಭರವಸೆ ನಿಂತಿರುವುದು ಸಾಹಿತ್ಯದ ಮೇಲೆ. ಸಾಹಿತ್ಯಕ್ಕೆ ನಿರ್ದಿಷ್ಟ ಮತ್ತು ಖಚಿತವಾದ ಸಾಮಾಜಿಕ ಕರ್ತವ್ಯವಿದೆ; ರಚನಾತ್ಮಕ ಸ್ವರೂಪದ ಕೈಂಕರ್ಯ ಕರ್ಮವಿದೆ. ವಿಜ್ಞಾನದ ತಿಳಿವನ್ನು, ಅದರ ತಾಂತ್ರಿಕ ಉಪಯೋಗದ ಪ್ರಭಾವವನ್ನು ಸಾಹಿತ್ಯಕಾರ ಸಮಗ್ರ ಮಾನವ ಕಲ್ಯಾಣದ ದೃಷ್ಟಿಯಿಂದ, ಸುಖ ಶಾಂತಿ ಪುರುಷಾರ್ಥ ಸಾಧಕ ನಿಟ್ಟಿನಿಂದ ಸಮೀಕ್ಷಿಸುತ್ತಾನೆ, ಬೆಲೆಗಟ್ಟುತ್ತಾನೆ. ಒಂದು ವೈಜ್ಞಾನಿಕ ವಿಚಾರ ಎಷ್ಟೇ ಅಪೂರ್ವವಾದದ್ದಾಗಿರಲಿ, ಒಂದು ತಾಂತ್ರಿಕ ಸಂಶೋಧನೆ ಎಷ್ಟೇ ಮಹತ್ತರವಾದದ್ದಾಗಿರಲಿ ಅದು ಕೆಲವು ಪಟ್ಟಭದ್ರರ ಸೊತ್ತಾಗಿ, ಇತರೆ ಬಹು ಸಂಖ್ಯಾತ ಅಭಿವೃದ್ಧಿಶೀಲ ಜನಾಂಗ, ರಾಷ್ಟ್ರಗಳ ಮೇಲೆ ಧಣಿತನ ಸಂಪಾದಿಸುವುದಕ್ಕೆ ಬಳಕೆಯಾಗಿದೆಯೋ ಅಥವಾ ಸರ್ವ ಮಾನವರ ಹಿತ ಸಾಧನೆಯ ಸಂಕಲ್ಪಕ್ಕೆ ಬದ್ಧವಾಗಿದೆಯೋ ಎಂದು ವಿವೇಚಿಸಿ ಲೇಖಕ ಬೆಲೆ ಬಟವಾಡೆ ಮಾಡುತ್ತಾನೆ.' (ವಿಜ್ಞಾನ ಮತ್ತು ಸಾಹಿತ್ಯ : 'ಅಚ್ಚುಮೆಚ್ಚು' ಸಂಕಲನದಿಂದ).

ನಿಸಾರರ ಗದ್ಯದಲ್ಲಿ ವೈಚಾರಿಕತೆಯ ಇನ್ನೊಂದು ಮಗ್ಗುಲಾದ ಪರಿಸರ ಸಂವೇದನೆ ಢಾಳಾಗಿ ಕಾಣುತ್ತದೆ. ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಚಲಾವಣೆಯನ್ನು ಕಂಡ 'ಪ್ರಜ್ಞೆ ಮತ್ತು ಪರಿಸರ' ಪದ ಪುಂಜ ಸಾಹಿತ್ಯಕ ದೃಷ್ಟಿಯಿಂದ ಬೇರೆಯ ನೆಲೆಯಲ್ಲೇ ಚರ್ಚೆ ಯಾಯಿತು. ಇಲ್ಲಿನ ಪರಿಸರ, ಭೂಮಿಯ ಜೀವಿ ಗೋಳದ ಭೌತಿಕ ಪರಿಸರಕ್ಕೆ ಸಂಬಂಧಿಸಿದ್ದು. ಬಾಹ್ಯಾವರಣದ ಬಹಿರಂಗ ಅಶುದ್ಧಿ ಹೊಸ ವಿಚಾರ ಮಂಡನೆಗೆ

ಎಡೆಗೊಟ್ಟು ಪ್ರಜ್ಞಾವಂತ ರಾಷ್ಟ್ರಗಳು ಚರ್ಚೆಯಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಿತು. ಸೂಕ್ಷ್ಮ ಸಂವೇದಿ ಕವಿಗೆ ಈ ಬಾಹ್ಯಾವರಣವೂ ಅಷ್ಟೇ ಮುಖ್ಯವಾಗುತ್ತದೆ. ಭೌತ ಜಗತ್ತಿನ ಬದಲಾಗುತ್ತಿರುವ ಸ್ವರೂಪ, ಮಾನವನ ಹೊಣೆಗೇಡಿತನವನ್ನು ನಿಸಾರರು ಚಿತ್ರಿಸುವಾಗ ಪರಿಸರದ ಬಗೆಗಿನ ಅವರ ಕಾಳಜಿಗಳಿಗೆ ನಿರ್ದಿಷ್ಟ ನೆಲೆ ಬೆಲೆಯಿರುವುದು ಸುವೇದ್ಯ.

'ಸರ್ವಂ ಮಾಲಿನ್ಯಮಯಂ ಜಗತ್' (ಮನದೊಂದಿಗೆ ಮಾತುಕತೆ) ಲೇಖನದಲ್ಲಿ ನಿಸಾರರು ನಮಗೆ ಎದುರಾಗಿರುವ ಮಾಲಿನ್ಯದ ಅಪಾಯಗಳ ತಪಾಸಣೆ ಮಾಡುತ್ತಾರೆ. ಪರಿಸರ ಸಮಸ್ಯೆಗಳಿಗೆ ನೂರಾರು ಮುಖಗಳಿವೆ. ಆಧುನಿಕ ಸವಲತ್ತುಗಳು ನಮ್ಮ ಬದುಕಿನ ಮೇಲೆ ಮಾಡಿರುವ ಆಕ್ರಮಣಗಳನ್ನು ಎಳೆಎಳೆಯಾಗಿ ಬಿಡಿಸುತ್ತ ಅದೇ ಧ್ವನಿಯಲ್ಲಿ ನಮ್ಮ ಭೂಮಿ ಕಾವೇರುತ್ತಿರುವುದು, ಅಂತರಂಗದ ನೆಮ್ಮದಿಯನ್ನು ಕೆಡಿಸುತ್ತಿರುವುದು, ಐಹಿಕ ಬದುಕು ಹದಗೆಡುತ್ತಿರುವುದು ಮುಂತಾದ ಪ್ರಸಕ್ತ ವಿದ್ಯಮಾನಗಳನ್ನು ಕುರಿತು 'ಕವಿ ಭಾವವೆಂಬ ಬಡಿಗೆಯಲ್ಲಿ ಬಡಿದು' ಎಚ್ಚರಿಸುತ್ತಾರೆ. ಈ ಕವಿ ಮಿಥೇನಿ(Methane)ನ ಲೆಕ್ಕ ಕೊಡುತ್ತಾರೆ. ಕೈಗಾರಿಕೀಕರಣದ ಪಾಪಶೇಷಗಳನ್ನು ವರದಿ ಮಾಡುತ್ತಾರೆ. ಬೆಂಗಳೂರಿನ ಹೊಗೆ, ಮಲೆನಾಡಿನ ತೆಳು ನೀಲಿ ಹೊಗೆಯಲ್ಲ ಎನ್ನುವುದನ್ನು ವಿಷಾದದಿಂದ ನೆನೆಪಿಸುತ್ತಾರೆ. ಅರಣ್ಯ ನೀತಿಯಿಂದ ಆರಂಭಿಸಿ ಅಪ್ಪಿಕೋ ಚಳವಳಿಯವರೆಗೆ ನಮ್ಮ ಪರಿಸರ ಆಂದೋಲನಗಳು ಬೆಳೆದು ಬಂದ ಪರಿಯನ್ನು ಪರಿಸರವಾದಿಯಾಗಿ ನಮ್ಮ ಮುಂದಿಡುತ್ತಾರೆ. ಜೊತೆಗೆ ಅವರು ನೀಡುವ ಅಂಕಿ ಅಂಶಗಳು ಬೆರಗುಗೊಳಿಸುತ್ತವೆ.

'ಒಂದು ಹೆಕ್ಟೇರು ಅರಣ್ಯಭೂಮಿ ಮೂರು ಮೆಟ್ರಿಕ್ ಟನ್ನುಗಳಷ್ಟು ಕಲುಷಿತ ಗಾಳಿಯನ್ನು ನಿವಾರಿಸಬಲ್ಲದು. ಜೊತೆಗೆ ೨೦ ಲಕ್ಷ ಟನ್ನು ಆಮ್ಲಜನಕವನ್ನು ಬಿಡುಗಡೆ ಮಾಡಬಲ್ಲದು. ಒಂದು ಅರಳಿಯ ಮರ ತನ್ನ ಜೀವಿತಾವಧಿಯಲ್ಲಿ ೧೭೦೦ ಕೆ.ಜಿ.ಯಷ್ಟು ಆಮ್ಲಜನಕವನ್ನು ಬಿಡುಗಡೆ ಮಾಡುವುದರ ಮೂಲಕ ೨೦೦೦ ಕೆ.ಜಿ. ಮಲಿನ ಹವೆಯನ್ನು ತೊಡೆದುಹಾಕಬಲ್ಲದು'.

ನಿಸಾರರ ವಿವೇಚನೆ ಈ ಬಗೆಯದು; ಅದು ಗುಬ್ಬಚ್ಚಿಯ ಸ್ನಾನವಲ್ಲ, ತಲಸ್ಪರ್ಶಿ ತಡಕಾಟ.

ಮನುಷ್ಯ ಹೇಗೆ ಜೀವಿ ಸಂಕುಲದ ಕೊಂಡಿಯನ್ನು ಹೊಸಕಿ ಹಾಕುತ್ತಿದ್ದಾನೆ ಎನ್ನುವುದನ್ನು ಗುಬ್ಬಚ್ಚಿಯ ಕಣ್ಮರೆಯ ಹಿನ್ನೆಲೆಯಲ್ಲಿ ನಿಸಾರರು ವಿವರಿಸುತ್ತಾರೆ (ಕಥೆ ಕೇಳು ಗುಬ್ಬಕ್ಕ, ನಿನ್ನ ವ್ಯಥೆಯ ಕಥೆ ಕೇಳು: 'ವಿಚಾರ ವಿಹಾರ' ಸಂಕಲನ).

ಈ ಕುರಿತು ವಾಚಕರ ವಾಣಿಯ ಪತ್ರವೊಂದು ಅವರನ್ನು ಕಾಡಿದ ಬಗೆಯನ್ನು ಬಗೆಯುತ್ತಲೇ ಬೆಂಗಳೂರು ನಗರದಲ್ಲಿ ಗುಬ್ಬಚ್ಚಿಗಳೇಕೆ ಕಣ್ಮರೆಯಾದುವೆಂದು 'ಇಕಾಲಜಿ'ಯ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಇದರೊಟ್ಟಿಗೆ ಅವರ ಬಾಲ್ಯದ ನೆನಪು ಮತ್ತು ಸಾಹಿತ್ಯದಲ್ಲಿ ಗುಬ್ಬಚ್ಚಿ ಪಡೆದ ಸ್ಥಾನವನ್ನೂ ಸ್ಮರಿಸುತ್ತಾರೆ. ಗುಬ್ಬಚ್ಚಿಯ ಹಿನ್ನೆಲೆಯನ್ನು ಬಳಸಿಕೊಂಡು ಹಕ್ಕಿಗಳ ಉಗಮವನ್ನು ಕುರಿತ ವೈಜ್ಞಾನಿಕ ಮಹತ್ವದ ಕೆಲವು ಅಂಶಗಳನ್ನೂ ನೀಡುತ್ತಾರೆ.

'ಹದಿನಾಲ್ಕು ಕೋಟಿ ವರ್ಷಗಳ ಹಿಂದೆಯೇ, ಮನುಷ್ಯ ಭೂಮಿಯ ಮೇಲೆ ಕಾಲಿಡುವುದಕ್ಕೆ ಮುಂಚೆಯೇ ಹಕ್ಕಿಗಳು ಈ ನೆಲದ ನಿವಾಸಿಗಳಾದವು. ಪ್ರಪಂಚದಲ್ಲಿರುವ ೮೬೦೦ ಪಕ್ಷಿ ವಂಶಗಳ ಪೈಕಿ, ಸುಮಾರು ೧೨೦೦ ಬಗೆಯ ಹಕ್ಕಿಗಳಿವೆ ಎಂದು ಅಂದಾಜಿಸಲಾಗಿದೆ. ಹಕ್ಕಿಗಳ ಹೆಚ್ಚಳ ಹಾಗೂ ಅಸ್ತಿತ್ವಕ್ಕೆ ಪ್ರಾಥಮಿಕ ಆವಶ್ಯಕತೆಗಳಂತಿರುವ ಅನುಕೂಲಕರ ವಾಯುಗುಣ, ಅಡವಿ; ಉಣಿಸು, ನೀರು; ವಾಸಯೋಗ್ಯ ಎಡೆಗಳು ನಮ್ಮ ರಾಷ್ಟ್ರದಲ್ಲಿ ಈಚೀಚಿನವರೆಗೂ ವಿಪುಲವಾಗಿದ್ದವು. ಹೀಗಾಗಿ ನಮ್ಮಲ್ಲಿದ್ದ ಹಕ್ಕಿಗಳ ವೈವಿಧ್ಯ, ಸಂಖ್ಯಾಬಾಹುಳ್ಯ, ಬಣ್ಣ ಹಾಗೂ ಗರಿಗಳ ಕಣ್ಸೆಳೆಯುವ ಬೆಡಗು ಮತ್ತೆಲ್ಲಿಯೂ ಇದ್ದಿರಲಾರದು. ಆದರೆ ಭವಿಷ್ಯದಲ್ಲಿ ಹೀಗೆ ಹೆಮ್ಮೆ ಪಡುವುದು ಅಶಕ್ಯವೆಂದೇ ಕಾಣುತ್ತದೆ.'

ನಗರದಿಂದ ಗಡಿಪಾರಾಗಿರುವ ಗುಬ್ಬಿಯ ವಿವರಣೆಯ ಬೆನ್ನಿನ ಹಿಂದೆಯೇ ಸಾಲು ಮರದ ತಿಮ್ಮಕ್ಕನ ಸಾಧನೆಗಳನ್ನು ಅರ್ಥಪೂರ್ಣವಾಗಿ ಸೆರೆ ಹಿಡಿದಿದ್ದಾರೆ, ಅದೇ ಉತ್ಸುಕತೆಯಲ್ಲಿ. ಅದರ ಜೊತೆ ಜೊತೆಗೆ ತ್ಯಾಜ್ಯ ಕಾಗದದ ಮರು ಬಳಕೆಯನ್ನು ಮಾಡಲು ಸಲಹೆ ನೀಡುತ್ತಾರೆ. ಒಂದು ಟನ್ ಕಾಗದದ ಉತ್ಪಾದನೆಗೆ ಹದಿನೇಳು ವೃಕ್ಷಗಳು ಬಲಿಯಾಗುವುದು ಬೇಡ ಎನ್ನುತ್ತಾರೆ.

ಈ ಕವಿಗೆ ವೃಕ್ಷರಾಶಿ ಕಾಣುವುದು ಹೇಗೆ?

'ಅವು ಭೂ ದೃಶ್ಯಕ್ಕೆ ತುಂಬು ಕಳೆ, ಲವಲವಿಕೆ, ಮೂರ್ತ ಆಕಾರವನ್ನು ನೀಡುವ ಭುವನ ಕವಿಯ ಕಲಾಕೃತಿಗಳು.' (ನಡೀರಾ ಹೋಗಾನ, ಗಿಡ ನೆಡಾನ : 'ವಿಚಾರ ವಿಹಾರ' ಸಂಕಲನ).

ಭೂ ವಿಜ್ಞಾನ ಹಲವು ವಿಜ್ಞಾನ ಶಾಖೆಗಳ ಸಂಗಮ. ಭೂ ಚರಿತ್ರೆ ಮತ್ತು ಅದರೊಂದಿಗೇ ತಳುಕು ಹಾಕಿಕೊಂಡ ಜೀವಿ ಚರಿತ್ರೆ ಒಂದೊಂದೂ ಈ ನೆಲದ ಇತಿಹಾಸವನ್ನು ಕುತೂಹಲಭರಿತವಾಗಿ ದಿಙ್ಮೂಢರಾಗಿ ನೋಡಲು ಪ್ರೇರೇಪಿಸುವ ಅಂಶಗಳು. ಚಾರ್ಲ್ಸ್ ಡಾರ್ವಿನ್ ತನ್ನ 'ಜೀವಿ ವಿಕಾಸ ಸಿದ್ಧಾಂತ'ವನ್ನು ಪ್ರತಿಪಾದಿಸುವ ಮೊದಲು ಭೂವಿಜ್ಞಾನದ ಬಗ್ಗೆ ಪ್ರಾಥಮಿಕ ತಿಳಿವಳಿಕೆಯನ್ನು ಪಡೆದಿದ್ದ. ಈ ಯುಗ ಪ್ರವರ್ತಕ ವಿಜ್ಞಾನಿಯನ್ನು ಕುರಿತು ನಿಸಾರ್ ಅವರ ಮೆಚ್ಚು ನುಡಿ ಹೀಗಿದೆ :

'ಡಾರ್ವಿನ್ ಜೀವಿಗಳ ಹುಟ್ಟು, ವಿಕಾಸಗಳ ಬಗ್ಗೆ ಆವರೆಗಿನ ಕಲ್ಪನೆಗಳನ್ನು ಹಂದಾಡಿಸಿ ಅರ್ಧ ಶತಕಕ್ಕೂ ಹೆಚ್ಚಿನ ಚಿಂತನೆ, ಪ್ರಯೋಗ, ಸಂಶೋಧನೆಗಳಿಂದ ಬಂಡಾಯ ಸ್ವರೂಪದ ನಿರ್ಣಯಗಳನ್ನು ಘೋಷಿಸಿ ವಂದನೀಯನೆನಿಸಿದ್ದಾನೆ. ಜಗಜ್ಜೀವ ಸೃಷ್ಟಿಯ ಬಗ್ಗೆ ಕೇಳರಿಯದ ಸಂಗತಿಯನ್ನು, ಅಚ್ಚರಿಗೊಳಿಸುವ ಮಾಹಿತಿಗಳನ್ನು ನೀಡಿ ಜೀವ-ಭೂವಿದ್ಯೆಗಳನ್ನು ಒಳಗೊಂಡ ಪ್ರಕೃತಿ ವಿಜ್ಞಾನದ ಅತ್ಯುನ್ನತ ಸೀಮೆಗೆ ತಲಪಿದ್ದಾನೆ'. (ಯುಗಪ್ರವರ್ತಕ ವಿಜ್ಞಾನಿಯ ಯಜಮಾನ ಕೃತಿ: 'ಹಿರಿಯರು ಹರಸಿದ ಹೆದ್ದಾರಿ' ಸಂಕಲನದಿಂದ).

ಡಾರ್ವಿನ್‌ನ ಸಾಧನೆಯನ್ನು ಕುರಿತು ಈ ಅಭಿಪ್ರಾಯಗಳನ್ನು ಅವರು ತಳೆದಿದ್ದು 'ಜೀವಿ ಸಂಕುಲಗಳ ಉಗಮ' ಎಂಬ ಕನ್ನಡ ಕೃತಿಯ ಮೌಲ್ಯಮಾಪನ ಮಾಡುವಾಗ. ಈ

ವಿಮರ್ಶೆಯ ಹರವು ಎಷ್ಟಿದೆಯೆಂದರೆ ಅದರಲ್ಲಿ ಡಾರ್ವಿನ್ನನ ಬೀಗಲ್ ಯಾತ್ರೆ, ಅವನು ವಿಕಾಸವಾದದ ಬಗ್ಗೆ ಮಂಡಿಸಿದ ಸಿದ್ಧಾಂತಗಳ ಒಳ ತಿರುಳು ಎಲ್ಲವನ್ನೂ ನಿಸಾರರು ಅತ್ಯಂತ ಶ್ರದ್ಧೆಯಿಂದ ಅಭ್ಯಸಿಸಿ ತಮ್ಮ ಗ್ರಹಿಕೆಯನ್ನು ಸರಳವಾಗಿ ನಮ್ಮ ಮುಂದಿಡುತ್ತಾರೆ. ಅಲ್ಲದೆ, ನವ ಡಾರ್ವಿನ್ ಸಿದ್ಧಾಂತದ ಬಗೆಗೂ ನಮ್ಮ ಗಮನ ಸೆಳೆಯುತ್ತಾರೆ.

ಇಂದಿನ ವಿಜ್ಞಾನ ಸಾಹಿತ್ಯದ ವಿಮರ್ಶೆ ಬಹುತೇಕ ಸಿದ್ಧ ಶೈಲಿಯಲ್ಲೇ ಸಾಗಿದೆ ಎನ್ನಬಹುದು. ಪಾರಿಭಾಷಿಕ ಶಬ್ದಗಳ ಬಳಕೆಯಲ್ಲಿ ಮುಗ್ಗರಿಸುವುದೋ, ಚಿತ್ರ ವಿವರಣೆಯ ಕೊರತೆಯೋ, ನಿರೂಪಣೆಯಲ್ಲಿ ಐಬೋ, ಕೃತಿಯ ಮೌಲ್ಯಮಾಪನದಲ್ಲಿ ಹಲವು ಪುಟಗಳನ್ನು ಗಿಟ್ಟಿಸುವ ಈ ದಿನಗಳಲ್ಲಿ ವಿಜ್ಞಾನ ಕೃತಿಯೊಂದನ್ನು ಹೇಗೆ ಅಭ್ಯಸಿಸಬೇಕು, ಅದರ ಮೌಲ್ಯಮಾಪನ ಹೇಗೆ ಎಂಬುದರ ಒಳನೋಟವನ್ನು ಬಿ.ಜಿ.ಎಲ್. ಸ್ವಾಮಿಯವರ 'ಹಸುರು ಹೊನ್ನು' ಕೃತಿಯ ವಿಮರ್ಶೆಯಲ್ಲಿ ತೋರಿಸಿಕೊಟ್ಟಿದ್ದಾರೆ. ಸ್ವಾಮಿ ಅವರು ಇತರ ವಿಜ್ಞಾನ ಲೇಖಕರಿಗಿಂತ ಹೇಗೆ ಗುಂಪಿನಲ್ಲಿ ಭಿನ್ನರಾಗಿ ಕಾಣುತ್ತಾರೆ ಎಂದು ಹೇಳುವುದರ ಜೊತೆಗೆ ಜನಪ್ರಿಯ ವಿಜ್ಞಾನದ ಇತಿಮಿತಿಗಳನ್ನೂ ಗುರುತಿಸುತ್ತಾರೆ.

'ಬಹುಜನ ವಾಚನೀಯತೆ, ಆಸಕ್ತಿ ನಿರ್ಮಾಣ, ಸುಲಭ ಗ್ರಾಹ್ಯತೆ—ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದ ಜನಪ್ರಿಯ ವಿಜ್ಞಾನದ ಪುಸ್ತಕಗಳು ಪ್ರಮಾಣಭೂತವಾದ ಆಕರ ಗ್ರಂಥಗಳಿಂದ ಹಾಗೂ ಶಿಷ್ಟವಾದ ಪಠ್ಯಪುಸ್ತಕಗಳಿಂದ ಬೇರೆಯಾಗಿರಬೇಕಾದದ್ದು ಅನಿವಾರ್ಯವೇ. ಜನಪ್ರಿಯ ವಿಜ್ಞಾನದ ಪುಸ್ತಕ ಕೆಲವು ಪರಿಮಿತಿಗಳನ್ನು ತನ್ನ ಮೇಲೆ ಹೇರಿಕೊಳ್ಳಬೇಕಾಗುತ್ತದೆ. ಸಂಕೀರ್ಣ ಸಂಗತಿಗಳ ಸರಳೀಕರಣ, ಖಚಿತವೂ ನಿಷ್ಕೃಷ್ಟವೂ ಆದ ವೈಜ್ಞಾನಿಕ ಪರಿಭಾಷೆಯ ಬಳಕೆಯ ನಿಯಂತ್ರಣ—ಈ ಪರಿಮಿತಿಗಳಲ್ಲಿ ಮುಖ್ಯವಾದವು. ಶುದ್ಧ ವಿಜ್ಞಾನದ ವಿಷಯವನ್ನು ಒಂದು ಬಗೆಯ ಸಮಜಾಯಿಷಿಗೆ ಒಗ್ಗಿಸಿಕೊಳ್ಳದಿದ್ದರೆ ಅದು ಚಿತ್ತಾಕರ್ಷಕವೂ ಬಹುಜನ ಪ್ರಸಾರಿತವೂ ಆಗುವುದು ಅಸಂಭವ.'

'ಹಸುರು ಹೊನ್ನಿ'ನ ಬಿ.ಜಿ.ಎಲ್. ಸ್ವಾಮಿ ಅವರ ವೈಶಿಷ್ಟ್ಯವೇನು? ನಿಸಾರರ ನುಡಿಗಳಲ್ಲಿ:

'ಬಿ.ಜಿ.ಎಲ್. ಸ್ವಾಮಿ ಸ್ವತಃ ಸಸ್ಯವಿಜ್ಞಾನಿಗಳಾಗಿ ಗ್ರಂಥ ರಚನೆ ಮಾಡಿರುವುದರಿಂದ 'ಹಸುರು ಹೊನ್ನು' ಪುಸ್ತಕ ಅವರ ಸ್ವಾನುಭವಸಿದ್ಧ ನಿರ್ಧಾರ, ಪ್ರಯೋಗಗಳನ್ನು ನಮಗೆ ಆಪ್ತವಾಗಿ ತಿಳಿಸಿಕೊಡುತ್ತದೆ. ಕುತೂಹಲ, ಸತ್ಯನಿಷ್ಠೆ, ಬಾಹ್ಯಾವರಣ ಪ್ರೀತಿ—ನಿಜವಾದ ಪ್ರಾಧ್ಯಾಪಕನಿಗೆ ಇರಬೇಕಾದ ಈ ಗುಣಗಳ ಪರಿಚಯ ನಮಗೆ ಪುಸ್ತಕದ ಮೊದಲಿನಿಂದ ಕೊನೆಯವರೆಗೆ ಆಗುತ್ತಾ ಹೋಗುತ್ತದೆ. ವಿಷಯದ ಮೇಲೆ ಅಸಾಧಾರಣ ಹಿಡಿತ, ಸಾಹಿತ್ಯದಲ್ಲಿ ದೋಹದಗೊಂಡು ಧನಿಕವಾದ ಮಾತುಗಾರಿಕೆ, ಅನುಭವನಿಷ್ಠತೆ ಹಾಗೂ ಆಳವಾದ ಲೋಕ ಪರಿಜ್ಞಾನ—ಇವು ಸಮುಚಿತವಾಗಿ ಕೂಡಿಕೊಂಡಿರುವ ನಿದರ್ಶನಕ್ಕೆ 'ಹಸುರು ಹೊನ್ನು' ಸಾಕ್ಷಿ.

'ಮನಸ್ಸಿನಲ್ಲಿ ಜಮೆಯಾಗಿ ಚಹರೆ ಕಳೆದುಕೊಂಡ ಹೊರ ಜಗತ್ತಿನ ಅನುಭವಗಳನ್ನು

ಕಲಾನುಭವವನ್ನಾಗಿ ಮಾರ್ಪಡಿಸಿಕೊಳ್ಳಲು, ಅದನ್ನು ಕಾವ್ಯದಲ್ಲಿ ಮೂರ್ತೀಕರಿಸಲು ತಹತಹ ಪಡುವ' ನಿಸಾರ್ ಅಹಮದ್ ಅವರಿಗೆ, ವಿಜ್ಞಾನ ಅವರ ಬದುಕಿನಲ್ಲಿ ಅನಪೇಕ್ಷಿತವಾಗಿ ತೂರಿಕೊಂಡ ಅತಿಥಿಯಲ್ಲ. ಬದಲು ಪ್ರಶಾಂತ ಸರೋವರದಲ್ಲಿ ಏಕಾಂಗಿಯಾಗಿ ಹುಟ್ಟುಹಾಕುತ್ತ ದೋಣಿಯಲ್ಲಿ ಸಾಗುವಾಗ ನಡು ನೀರಿನಲ್ಲಿ ಎದುರಾಗುವ ಅರ್ಥಪೂರ್ಣ ನಡುಗಡ್ಡೆಗಳಾಗಿ ವಿಜ್ಞಾನ ಮೈದೋರಿಸಿಕೊಳ್ಳುತ್ತದೆ. ನಿಸಾರರು ಅದನ್ನು ಆಗಾಗ ವಿರಮಿಸುವ ತಾಣವಾಗಿ ಬಳಸಿಕೊಳ್ಳುತ್ತಾರೆ. ಎಂದಿನಂತೆ ತಮ್ಮ ಸಾಹಿತ್ಯ ಯಾತ್ರೆಯಲ್ಲಿ 'ಲಾಂಚ್'ಅನ್ನು ಮತ್ತೆ ನೀರಿನಲ್ಲಿ ಇಳಿಸುತ್ತಾರೆ.

ಉದ್ದಾಮ ಗದ್ಯಕರ್ತರ ಬರವಣಿಗೆಯ ಐರಾವತ ಗಾಂಭೀರ್ಯದ ಪೂರ್ಣಾನುಭವವನ್ನು ಪಡೆಯಬಲ್ಲ ಭಾಗ್ಯ, ಸುರೇಂದ್ರ ಸಮ ಸಂಪದ್ವೈಭವ ದಿಂದ ಸಮುಜ್ಜ್ವಲಗೊಂಡ ಸಂವೇದನ ಶಕ್ತಿಯಿರುವವರಿಗೆ ಮಾತ್ರ ಶಕ್ಯ. ಇಂದ್ರಿಯ ಪ್ರಚೋದಕ ಬಿಡಾಡಿ ಸಾಹಿತ್ಯದ ನಾಡಾಡಿ ಕುದುರೆಗಳ ತ್ವರೆ ಹಾಗೂ ಆತುರದ ಸವಾರಿಗಾರರಿಗೆ ಆ ಧೀರ ಗಜ ಗಮನವನ್ನು ಮೆಚ್ಚಿ ಆಹ್ಲಾದಿಸುವ ಸದಭಿರುಚಿಯಿರಲಿ, ಅದರ ಕಲ್ಪನೆ ಸಹ ಇರುವುದು ದುಸ್ಸಂಭವ.

(ಬರವಣಿಗೆಯಲ್ಲಿ ತರತಮಾಂತರ)

✧ ✧ ✧

ಮಹಾಕಾವ್ಯ ಮಹಾ ಕಾದಂಬರಿಗಳ ಕಡೆಗೆ, ಗಂಭೀರ ಬರಹಗಳ ಕಡೆಗೆ ಸಾಧಾರಣರ ಮನಸ್ಸು ಸಹಜವಾಗಿಯೇ ಒಲಿಯದು. ಅವರ ಪಾಲಿಗೆ ಅವು ಮಹಾ ಭೈರಿಗೆಗಳು; ತಲೆ ತಿನ್ನುವ ತರಲೆ ತ್ರಾಸಗಳು. ಅವರ ಲಾಘವಾಭಿರುಚಿ ಗಳಿಗೆ ತಕ್ಕದ್ದನ್ನೇ ಬಡಿಸಲು ಕೆಲವು ಪತ್ರಿಕೆಗಳ ಕರ್ತರೂ ಬರಹಗಾರರೂ ಅಣಿಯಾಗಿ ನಿಂತಿರುತ್ತಾರೆ. ಅವರು ನೀಡುವ ಘನತೆಗೇಡಿ ಲಘು ಉಣಿಸಿಗೆ ಪ್ರತ್ಯೇಕ ಪ್ರಚಾರವೇ ಬೇಕಾಗದು. ಅವೇ ಸ್ವಜಾಹೀರಾತು ಮಾಡಿಕೊಳ್ಳುತ್ತವೆ. ಹೆಗ್ಗಣ ಸತ್ತು ಬಿದ್ದಿದೆ ಬಿಜಯಂಗೈಯಿರೆಂದು ಕಾಗೆಗಳಿಗೆ ಕರೆಯೋಲೆ ಕಳಿಸಬೇಕೆ? ನಾತವೇ ನಾಸಿಕಕ್ಕೆ ನಡೆ ಮಡಿ ಹಾಸದೆ?

(ಕೀಳು ಬಗೆಯ ಬರವಣಿಗೆ)



ಕಾಡು ಬಿದಿರಿನಿಂದ ವೇಣುವಾದನವಾದ ನಿಸಾರ್

♦ ಡಾ. ಎಲ್. ಹನುಮಂತಯ್ಯ

'ಬಿಡುವಿರದ ದುಡಿತದಲ್ಲಿ ಬಲಿಯಾಗದಿರಲಿ ಬೆರಗು :
ಸುಡು ಬಾಳಿನಂಚಿನಲ್ಲಿ ಮೆರೆದಿರಲಿ ಕಲೆಯ ಸೆರಗು.'

'ನಾದವಿರದ ಬದುಕು' ಕವಿತೆಯಲ್ಲಿ ಕವಿ ನಿಸಾರ್ ಅಹಮದ್ ಅವರು ಹೇಳುವ ಮಾತು, ಈವತ್ತಿನ ಜಗತ್ತಿಗೆ ಅಕ್ಷರಶಃ ನಿಜವಾಗಿದೆ. 'ಕಳೆ ಎಷ್ಟೆ ಇದ್ದರೇನು ಕನಸಿರದ ಬಾಳು ಬಾಳೆ'? ಎಂದು ಪ್ರಶ್ನಿಸುವ ಕವಿ ಕನಸುಗಳನ್ನು ಕಟ್ಟುತ್ತಲೇ ಅನನ್ಯವಾದ ಕಾವ್ಯವನ್ನು ಕನ್ನಡಕ್ಕೆ ಕೊಟ್ಟಿದ್ದಾರೆ.

ಕೆ.ಎಸ್. ನಿಸಾರ್ ಅಹಮದ್ ಅವರ ಕಾವ್ಯವನ್ನು ಸ್ಥೂಲವಾಗಿ ಎರಡು ಭಾಗ ಮಾಡಬಹುದು. ಗೇಯತೆಯುಳ್ಳ ಭಾವಲೋಕದ ಕವಿತೆಗಳು, ಎರಡನೆಯದು ಗದ್ಯದಂತಹ ಗಟ್ಟಿ ಬರಹದ ದೀರ್ಘ ಕವಿತೆಗಳು. ಭಾವಲೋಕದ ಕವಿತೆಗಳು ಪ್ರೇಮ, ಪ್ರೀತಿ, ಒಂಟಿತನದ ಭಾವನೆಗಳನ್ನು ಬಿತ್ತರಿಸಿದರೆ ಉಳಿದ ಕಾವ್ಯದಲ್ಲಿ ವೈಚಾರಿಕ, ವಿಡಂಬನಾತ್ಮಕ ಹಾಗು ಆಳಕ್ಕಿಳಿದು ವಿವರಿಸುವ ವಿವರಣಾತ್ಮಕ ಅಂಶಗಳಿವೆ. ವ್ಯವಸ್ಥೆಯನ್ನು ಹಿಂಜಿ ಹಿಂಜಿ ತೋರುವ 'ಕುರಿಗಳು, ಸಾರ್, ಕುರಿಗಳು' ಕವಿತೆ ಪ್ರಜಾಪ್ರಭುತ್ವದ ನಾಡಿಮಿಡಿತವನ್ನು ಹಿಡಿದು ಕೇಳುತ್ತದೆ. ಪ್ರಜೆಗಳು ದಿಕ್ಕಾಪಾಲಾಗಿ, ಒಬ್ಬರಿಗೂ ಬದುಕಿನ ಕಲ್ಪನೆಯೇ ಇಲ್ಲದೆ; ಜೀವನವನ್ನು ಬುಗುರಿಯಂತೆ ಆಡಿಸುವ, ಆಡಿಸಿದ್ದನ್ನೇ ಹಾಡಿಸುವ ಮೋಡಿಗಾರರ ಮೋಜನ್ನು ಮಜಲು ಮಜಲುಗಳಲ್ಲಿ ವಿವರಿಸುತ್ತದೆ. ನಾಯಕತ್ವ ಮತ್ತು ಪ್ರಜೆಗಳು ಹೇಗಿದ್ದಾರೆ ಎಂಬ

ದೀರ್ಘವಾದ ವ್ಯಾಖ್ಯಾನ ಈ ಪದ್ಯದಲ್ಲಿದೆ. ಪ್ರಜಾಸತ್ತೆಯ ಗುರಿಗಳು ಮಚ್ಚಿನ ಕಿಚ್ಚಿನಲ್ಲಿ ಮನೆ ಮಾಡಿರುವ ವಿಡಂಬನೆ ತುಂಬಾ ಸಂಕೀರ್ಣವಾಗಿದೆ.

ಕವಿ, ಜನ ಸಾಮಾನ್ಯರ ಪ್ರತಿನಿಧಿಯೆಂದು ಕರೆಯುತ್ತಾರೆ. ಹಾಗೆ ನಿಸಾರರ ಕವಿತೆಗಳಲ್ಲಿ ಜನ ಸಾಮಾನ್ಯರನ್ನು ಕುರಿತ 'ಶ್ರೀಸಾಮಾನ್ಯ ಪ್ರತಿನಿಧಿ'ಯಲ್ಲಿ ಅಕ್ಷರವಿಹೀನ, ಸರಸ್ವತಿಯ ವೈರಿಯಂತೆ ಕಾಣುವ ಇವನು ಭಾರತದ ಎಲ್ಲ ಭಾಗದಲ್ಲೂ ಸಲ್ಲುವವನೇ ಆಗಿದ್ದಾನೆ. ಈ ಶ್ರೀಸಾಮಾನ್ಯ ಭಾಷಣ ಮಾಡುವವರ ಮೊದಲ ಸಾಲಿನ ಕೇಳುಗನಾಗಿ, ಚಪ್ಪಾಳೆ ತಟ್ಟಿ, ಸಭೆಗೆ ಕಳೆ ಕಟ್ಟಿಸಿ ಎಲ್ಲ ಕಡೆ ಇರುವ ಈ ಶ್ರೀಸಾಮಾನ್ಯ, ದೇಶದ ಗಡಿಗಳನ್ನು ಕಾಯ್ದು ಪ್ರಾಣ ತೆತ್ತು ನಮ್ಮನ್ನು ರಕ್ಷಿಸುವಾತ. ಆದರೆ ತಿಳಿವಳಿಕೆಯ ಕೊರತೆಯಿಂದ ಎರಡಂಗುಲ ಭೂಮಿಗಾಗಿ ತಮ್ಮನನ್ನೇ ಕೋರ್ಟಿಗೆಳೆದು ತಾನೂ ಅಲ್ಲಿ ಸುತ್ತುವ ವಿವೇಕಹೀನ ಎಂದು ಬಣ್ಣಿಸುತ್ತಾ ಜನ ಸಾಮಾನ್ಯರನ್ನು ಪ್ರಭುತ್ವ ನಡೆಸಿಕೊಳ್ಳುವ ಪರಿಯನ್ನು ವಿಡಂಬನೆ ಮಾಡುವ ರೀತಿ ಮನ ಮೆಚ್ಚುವಂತಹದ್ದು. ಇಂತಹ ಜನರ ನಡುವೆಯೇ ಬರದ ನಾಡಿನಲ್ಲೂ ಅಜೀರ್ಣದಿಂದ ಅನ್ನ ತೊರೆದ ಮಹಾನುಭಾವರನ್ನು ಚಿತ್ರಿಸುತ್ತಾರೆ!

ಕವಿ ನಿಸಾರ್ ಅಹಮದ್ ಅವರು ಪ್ರಕೃತಿ, ಪ್ರೇಮವನ್ನು ಕುರಿತು ಸಾಕಷ್ಟು ಕವಿತೆಗಳನ್ನು ಬರೆದಿದ್ದಾರೆ. ಇವು ಕಾವ್ಯ ಪ್ರೇಮಿಗಳಿಂದ ಅನೇಕ ಕಾರಣಕ್ಕೆ ಮೆಚ್ಚುಗೆ ಗಳಿಸಿವೆ. ಆದರೆ ಇಂತಹ ಮನೋಲೋಕದ ಕವಿಯೊಬ್ಬರು ಅರವತ್ತರ ದಶಕದಲ್ಲಿ ಅಮೇರಿಕವನ್ನು ಕುರಿತು ಬರೆದಿರುವುದು ಮಾತ್ರ ಆಶ್ಚರ್ಯಕರವಾಗಿದೆ. 'ಅಮೇರಿಕ, ಅಮೇರಿಕ' ಪದ್ಯದಲ್ಲಿ ಸಾಮ್ರಾಜ್ಯಶಾಹಿ ಅಮೇರಿಕವೆಂಬ ರಾಷ್ಟ್ರದ ರಕ್ತ ಪಿಪಾಸುತನವನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಅಮೇರಿಕ ದೇಶ ತನ್ನ ಸಂಸ್ಕೃತಿ ಮತ್ತು ಯಜಮಾನಿಕೆಯನ್ನು ಪ್ರದರ್ಶನ ಮಾಡುವ ಎಲ್ಲ ಸಮಯದಲ್ಲೂ ಸ್ಪಾನಿಶ್, ಜರ್ಮನ್ ಪೋರ್ಚುಗೀಸಾಂಗ್ಲ ನೀಗ್ರೋಗಳ, ಕಡಲ್ಗಳ್ಳ ಹಂತಕ ಹಾದರಗಿತ್ತಿಯರನ್ನು ನಿನ್ನೆದುರು ನಿಲ್ಲಿಸಿ ನಗಬೇಕೆಂದಾಗ ನನಗೆ ಲಿಂಕನ್, ಕೆನಡಿ, ಮಾರ್ಟಿನ್ ಲೂಥರ್ ಕಿಂಗ್‌ರ ನೆನಪಾಗುತ್ತದೆಂಬ ಸಾರ್ಥಕ ನುಡಿಗಳನ್ನಾಡಿದ್ದಾರೆ. ಅಮೇರಿಕದ ಗನ್ ಸಂಸ್ಕೃತಿಗೆ ಬದಲಾಗಿ ಬೈಬಲ್, ಗೀತೆ, ಕುರಾನ್‌ಗಳನ್ನು ನೀಡಬೇಕೆಂದೆನ್ನಿಸುತ್ತದೆ ಕವಿಗಳಿಗೆ. ಅದರ ರಕ್ತದ ತುಟಿಗೆ ನೆಹರು ಗುಲಾಬಿಯನ್ನು ತೀಡುವಾಸೆಯನ್ನು ವ್ಯಕ್ತಪಡಿಸುತ್ತಾರೆ. ಅಮೇರಿಕದ ವಿನಾ ಕಾರಣ ಯುದ್ಧದಾಹಿ ದೌರ್ಜನ್ಯ, ವಿಯೆಟ್ನಾಂನಂತಹ ರಾಷ್ಟ್ರಗಳ ಮೇಲಿನ ಆಕ್ರಮಣವನ್ನು ಕಂಡಾಗ ಮನಸ್ಸು ಕೆಂಡದುಂಡೆಯಾಗುತ್ತದೆ. ಆದರೆ ಭಾರತದ ದೀನ ಸ್ಥಿತಿ ನನ್ನ ಬಾಯಿ ಮುಚ್ಚಿಸುತ್ತದೆ, ಎಂದು ಹೇಳುತ್ತಲೇ, ಬರಗಾಲದಲ್ಲಿ ಭಾರತಕ್ಕೆ ನೀಡಿದ ಗೋಧಿ, ಪಿ.ಎಲ್. 480ರ ಹಣ, ನಮ್ಮ ವಿದೇಶಾಂಗ ನೀತಿ ನನ್ನ ಬಾಯಿ ಮುಚ್ಚಿಸುತ್ತದೆ ಎನ್ನುತ್ತಾರೆ. ಮುಂದುವರಿದು ಅಮೇರಿಕ ಮಾಡುತ್ತಿರುವ ಎಲ್ಲ ಅನೀತಿಗಳನ್ನು ಸಹಿಸಲು ಮುಖ್ಯ ಕಾರಣ ಭಾರತದ ದಾರಿದ್ರ್ಯ, ಜನಸಂಖ್ಯಾಸ್ಫೋಟ, ಈ ಭೂಗೋಳ ನನ್ನ ನಾಲಗೆಯನ್ನು ನಿಲ್ಲಿಸುತ್ತವೆಂಬ ವಾಸ್ತವಿಕ ಚಿತ್ರ ನೀಡುತ್ತಾರೆ. ಕವಿ, ಸಾಮ್ರಾಜ್ಯಶಾಹಿ ಮತ್ತು

ಬಂಡವಾಳವಾದಿ ರಾಷ್ಟ್ರಗಳ ಕಟು ವಿರೋಧಿಯಾಗಿರುವ ಮಾತನ್ನು ನಿಸಾರರು ಸಾಬೀತು ಪಡಿಸಿದ್ದಾರೆ.

ಕನ್ನಡದಲ್ಲಿ ಎಲ್ಲ ಕವಿಗಳ ಸಮಸ್ಯೆಗಳು ಒಂದು ತೆರನಾದರೆ ನಿಸಾರ್ ಅಹಮದ್ ಅವರಂತಹ ಅಥವಾ ಈ ಎತ್ತರದ ಒಬ್ಬರೇ ಕವಿಯಾದ ಇವರ ಸಮಸ್ಯೆ ಇರುವುದೇ 'ನಿಮ್ಮೊಡನಿದ್ದು ನಿಮ್ಮಂತಾಗದೆ' ಬಳಲುವುದು. ಈ ರೀತಿಯ ಕೆಲವು ಕವಿತೆಗಳನ್ನು ತೆಗೆದು ಆಚೆಗಿರಿಸಿ ಇವರ ಕಾವ್ಯವನ್ನು ಇಡಿಯಾಗಿ ಓದಿದರೆ, ನಿಸಾರರು ಭವ್ಯ ಭಾರತ ಸಂಸ್ಕೃತಿಯ ಪ್ರತಿಪಾದಕರಂತೆ ಕಾಣುತ್ತಾರೆ. ನಾಡು-ನುಡಿಯ ಬಗ್ಗೆ ಅತಿ ಎನ್ನುವಷ್ಟರ ಮಟ್ಟಿಗೆ ಬದ್ಧತೆ ತೋರಿದ್ದಾರೆ. ಬಹುಶಃ ಇದಕ್ಕೆ ಕಾರಣ ನಿಮ್ಮೊಡನಿದ್ದೂ ನಿಮ್ಮಂತೆ ಇರಲಾಗದು ಎಂಬ ಸತ್ಯದ ಅರಿವು ಎಂಬುದೇ ನನ್ನ ದೃಢವಾದ ನಂಬಿಕೆ.

ಅಲ್ಪ ಸಂಖ್ಯಾತರ ಬಗ್ಗೆ ಸಂಘ ಪರಿವಾರದವರು, ಅನೇಕ ವರ್ಷಗಳಿಂದ ಹರಡುತ್ತಿರುವ ಸುಳ್ಳಿನ ಸರಮಾಲೆಗಳನ್ನು ತಮ್ಮ ನೆನಪಿನ ಬುತ್ತಿಯಿಂದ ತೆಗೆಯಲಾಗದ ಕವಿ, ಈ ನೆಲದಲ್ಲಿ ಹುಟ್ಟಿ, ಬೇರೊತ್ತಿದರೂ ಬೀಗಿ ಪರಕೀಯನಾಗಿ ತಲೆಯೆತ್ತುವುದಿದೆ ನೋಡಿ ಅದು ಬಲು ಕಷ್ಟದ ಕೆಲಸವೆನ್ನುತ್ತಾರೆ. ಎಲ್ಲ ಭಾರತೀಯರಲ್ಲಿರುವ ಸಂಶಯದ ಬೆಕ್ಕು ಸದಾ ಅಲ್ಪಸಂಖ್ಯಾತರನ್ನು ಪರಚುತ್ತಲೇ ಇರುತ್ತದೆ. ನಂಬಿಕೆ, ನಿಯತ್ತು, ರಾಷ್ಟ್ರಭಕ್ತಿಯನ್ನು ಪದೇ ಪದೇ ಅನುಮಾನ ಪಡುತ್ತಲೇ ಇರುವಾಗ, ಅದನ್ನು ಸಾಬೀತು ಪಡಿಸುವ ಜರೂರತ್ತಿನಲ್ಲೇ ಜೀವನ ಸವೆಸಬೇಕಾದ ಮುಸ್ಲಿಮರ ಬದುಕಿನ ಸೂಕ್ಷ್ಮ, ಆದರೆ ಗಂಭೀರ ಮನಃಸ್ಥಿತಿಯನ್ನು ತುಂಬಾ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಬಹುಶಃ ಈ ಕವಿತೆಯ ರಚನೆಯ ಕಾಲದಲ್ಲಿ ಕವಿಯೆಂಬುದನ್ನು ಮರೆತು ಎಲ್ಲ ಮುಸ್ಲಿಮರ ವಾರಸುದಾರರಾಗಿದ್ದಾರೆ. ಬೇರೆಲ್ಲೂ ನಿಸಾರರು ಹೀಗೆ ಯೋಚಿಸಿರುವುದು ತೀರ ಕಡಿಮೆ. ಇನ್ನು ಇಂತಹ ನೆರೆಮನೆಯ ಅಂಗಳದಲ್ಲೇ ಬೆಳೆಯಬೇಕಾದ ಕವಿಗಳು ಅನೇಕ ದ್ವಂದ್ವಗಳನ್ನು ಎದುರಿಸಬೇಕಾಗುತ್ತದೆ. ಒಂದು ತನ್ನದಲ್ಲದ ಪರಿಸರವನ್ನು ಕುರಿತು ಅದರೊಳಗೊಂದಾಗಿ ಬರೆಯುವುದು; ಮತ್ತೊಂದು ತನ್ನ ಪರಿಸರದ ಅಂಕು-ಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡುವುದು. ಇದು ಬಲು ಕಷ್ಟದ ಕೆಲಸ. ಕತ್ತಿ ಅಲುಗಿನ ನಡಿಗೆ. ಒಂದು ಕಾಲಘಟ್ಟದಲ್ಲಿ ಯಾರೂ ನಂಬದಿರುವ ಸಂದಿಗ್ಧಕ್ಕೇ ಸಿಕ್ಕಿಹಾಕಿಕೊಳ್ಳುವ ಅಪಾಯವನ್ನು ಎದುರಿಸುತ್ತಾರೆ. ಇಂತಹ ಅಪಾಯದಿಂದ ಪಾರಾಗಿರುವ ಏಕೈಕ ಕವಿ ನಿಸಾರ್ ಅಹಮದ್.

'ಸ್ವಜನೋದ್ಧಾರಕರು' ಕವಿತೆಯಲ್ಲಿ ತಮ್ಮ ಬಂಧುಗಳ ಬಗ್ಗೆ ಬರೆಯುತ್ತಾರೆ. ಕವಿಗಳನ್ನು ಹೀಗೆ ಯಾವುದೋ ಜಾತಿಗೋ, ಧರ್ಮಕ್ಕೋ ಕಟ್ಟಿಹಾಕುವುದು ಸಾಧುವಲ್ಲ. ಆದರೆ ಭಾರತದ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭ ನಮ್ಮನ್ನು ಇಂತಹ ದುಃಸ್ಥಿತಿಗೆ ತಳ್ಳುತ್ತದೆ. ನಾನು ಈಗಾಗಲೇ ಹೇಳಿದಂತೆ ಕವಿ ನಿಸಾರರು ಈ ರೀತಿಯ ದ್ವಂದ್ವಕ್ಕೆ ಸಿಕ್ಕಿದ್ದರೂ ತನ್ನ ಸಮುದಾಯದಲ್ಲೇ ನಡೆಯುವ ವಿಧ್ವಂಸಕ ಕೃತ್ಯಗಳನ್ನು ಖಂಡಿಸುತ್ತಾರೆ. ಮಾತ್ರವಲ್ಲದೆ ಆ ಮೂಲಕ ಸಹಬಾಳ್ವೆಗೆ ಬೇಕಾದ ರೀತಿ ರಿವಾಜುಗಳಿಗೆ ನಾಂದಿ ಹಾಡುತ್ತಾರೆ.

ಈ ಕವಿತೆಯಲ್ಲಿನ ಮತ್ತೊಂದು ವಿಶೇಷವೆಂದರೆ ಕನ್ನಡ ಭಾಷೆಗೆ ಹೊಸ ಪದ

ಗುಚ್ಛಗಳ ಸೇರ್ಪಡೆ. ಇವು ಆಕರ್ಷಕವಾಗಿರುವುದರ ಜೊತೆಗೆ ಅರ್ಥಪೂರ್ಣವೂ ಸ್ವಂತಿಕೆಯುಳ್ಳದ್ದೂ ಆಗಿವೆ.

'ವರ್ಷವಿಡೀ ಹಿಂಡುಗೂಡಿ ಇಂಡಿಯಾ ಸುತ್ತುತ್ತೀರಿ
ಲಕ್ನೋ, ಆಗ್ರ, ಅಲೀಘಡದ ಖೋಲಿಖೋಲಿಗಳಿಂದ,
ದೆಹಲಿಯ ಹವೆಯಾಡದ ಹವೇಲಿಗಳಿಂದ,
ಶಹರು ಖೇಡಗಳೆನದೆ ಮಿಡಿತೆ ಮುತ್ತುತ್ತೀರಿ—
ಸ್ವಜನೋದ್ಧಾರಿ ಸದರರು;
ಭಾವೈಕ್ಯ ಬಧಿರರು.
ಮೊಳದುದ್ದ ದಾಡಿ, ದೊಗದೊಗರು ಮೀಸೆ
ತಲೆ ಕಲಾಯಿ, ಹಸಿರು ಮುಡಿಗೆ;
ಕಂಕಳಿಗೆ ಸುರ್ಮ, ಕುಡ್ತಾಕ್ಕೆ ಅತ್ತರು,
ಷೇರ್ವಾನಿ, ಸುರ್ವಾಲು ಅಂದದುಡಿಗೆ.
ಗಿರಕೀ ಚಡಾವೊ, ಮೇಜೋಡಿಲ್ಲದ ಮೆಟ್ಟೊ;
ಗುಬುಟು ದೇಹದ ಸೊಟ್ಟಗಾಲು ನಡಿಗೆ.'
(ಸ್ವಜನೋದ್ಧಾರಕರು)

ಈ ಚಿತ್ರ ಯಾರನ್ನು ಸೂಚಿಸುತ್ತದೆ ಎಂದು ಮತ್ತೆ ವಿವರಿಸಬೇಕಾಗಿಲ್ಲ. ಹೀಗೆ ಹೇಳುತ್ತಲೇ ಮುಂದುವರಿದು—

'ಗಡದ್ದಾದ ದಾವತ್ತು,
ಜೊತೆಗೆ ಖಿಲ್ಲತ್ತು ಹೋದಹೋದಲ್ಲಿ;
ಸದಸ್ಸು ಸೇರಿಸಿ, ಹರಿಸುತ್ತೀರಿ ಹೆಗ್ಗಂಟಲಿನ ನಲ್ಲಿ;
ಭಯಾಶಂಕೆಗಳ ನೌಖತ್ತು ಮೊಳಗಿ ದೇಶಾದ್ಯಂತ
ಬಿರಿಸಿ ಎದೆಎದೆಯಲ್ಲಿ ರೋಷದೊದಗೆಗಳ.... (ಅದೇ)

ಕವಿ ಯಾವಾಗಲೂ ಯಾವ ಸಮುದಾಯದವನಾದರೂ ಅಹಿಂಸೆ ಅವನ ಮೊದಲ ಮಂತ್ರ. ಹಿಂಸೆ ಎಂದಿಗೂ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಯಾವ ಜನಾಂಗವನ್ನೂ ಹಿಂಸೆಯಿಂದ ರಕ್ಷಿಸಿಕೊಳ್ಳಲು ಆಗುವುದಿಲ್ಲವೆಂಬ ಸಾರ್ವತ್ರಿಕ, ಸಾರ್ವಕಾಲಿಕ ಸತ್ಯದ ಪರವಾಗಿ ಕವಿ ನಿಂತಿದ್ದಾರೆ. ಹೊಸ ಗೋರಿಗಳ ತಯಾರಿಸುವಲ್ಲಿ ನಿಪುಣರಾಗಿರುವ ನೀವು ಯಾವ ಪುರುಷಾರ್ಥವನ್ನೂ ಸಾಧಿಸಲಾರಿರಿ ಎಂದು ಹೊಸ ಮಂತ್ರವನ್ನು ಬೋಧಿಸುತ್ತಾರೆ. ನಿಸಾರರಂತಹ ಕವಿಗಳಿಂದ ನನ್ನಂಥವರು ನಿರೀಕ್ಷಿಸುವುದು ಈ ರೀತಿಯ ಕಾವ್ಯವನ್ನು. ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಕೀರ್ತಿ ಅವರಿಗೆ ಸಲ್ಲುವುದು ಇಂತಹ ಹೊಸ ಶಬ್ದಕೋಶವನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿಸುವುದರಿಂದ. ಈ ಕೆಲಸ ಕನ್ನಡದ ಬೇರೆ ಕವಿಗಳು ಮಾಡಲಾಗುವುದಿಲ್ಲ. ಆದರೆ ಕೆಲವೇ ಕೆಲವು ಕವಿತೆಗಳನ್ನು ಬಿಟ್ಟರೆ ಬೇರೆಲ್ಲೂ ಈ ಕವಿಯ ಶಬ್ದ ಭಂಡಾರ ತೆರೆದುಕೊಳ್ಳುವುದಿಲ್ಲ ಈ ಕವಿತೆಯ ಸಾರ್ಥಕತೆ ಇರುವುದು ಭಾರತೀಯರೆಲ್ಲ ಒಂದೆ ಎಂಬ ದಾರ್ಶನಿಕ ಮಾತುಗಳಲ್ಲಿ.

'ಪ್ರತ್ಯೇಕತೆಯ ಹರೆಯಲ್ಲೆ ಕುಳಿತು ಕೊಳೆತೇವು'

ಎಂದು ಎಚ್ಚರಿಸುವಲ್ಲಿ ಇತಿಹಾಸ ಅವರನ್ನು ನೆನೆಸಿಕೊಳ್ಳುತ್ತದೆ.

ಈ ಕವಿ ಎಲ್ಲಿಯೂ ತನ್ನ ಕಣ್ಣಿನ ಮುಂದೆ ನಡೆದ ಅಭಿವೃದ್ಧಿಗೆ, ಪ್ರಗತಿಗೆ ಕಣ್ಣು ಮುಚ್ಚಿಲ್ಲ. ಅಂತೆಯೇ ಆಗಬೇಕಾದದ್ದರ ಬಗ್ಗೆ ಮೌನವನ್ನು ವಹಿಸಿಲ್ಲ. 'ಹಳೆಯ ತಲೆ ಮಾರಿನವರು' ಕವಿತೆಯಲ್ಲಿ ದೇಶ ಕಟ್ಟಿದ ಹಿರಿಯರನ್ನು ಮನದುಂಬಿ ಸ್ಮರಿಸಿದ್ದಾರೆ.

'ಉದ್ಧಟ ನದಿಗಳ ಅಣೆಯಲಿ ಬಂಧಿಸಿ
ಪಚ್ಚೆಯನುದ್ಘಾಟಿಸಿದವರೆ,
ನಾಡೊಳು ಬೆಳಕಿನ ಹಚ್ಚೆಯ, ಅಕ್ಷಯ
ಶಕ್ತಿ ಸಮುಚ್ಚಯ ನೆಟ್ಟವರೆ...'

(ಹಳೆಯ ತಲೆಮಾರಿನವರು)

ಮೇಲಿನ ಪದ್ಯದಲ್ಲಿ ದೇಶ ಕಟ್ಟಿದ ಎಲ್ಲ ವಿಭಾಗಗಳ ಬೆಳವಣಿಗೆಯನ್ನು ಹಿಡಿದಿಟ್ಟು ಸ್ಮರಣೀಯ ಕಾರ್ಯವೆಂದಿದ್ದಾರೆ. ಕವಿ ಸಿನಿಕರಾಗದೆ ವಾಸ್ತವಕ್ಕೆ ಕನ್ನಡಿ ಹಿಡಿಯುವ ಕೆಲಸ ಮಾಡಿದ್ದಾರೆ.

'ಸರ್ವೋದ್ಧಾರ' ಕವಿತೆಯಲ್ಲಿ ದಶಮಾನಗಳ ಕಾಲ ನೀವು ಕಟ್ಟಿದ ನಾಡಿನಲ್ಲಿ ಇನ್ನೇಷ್ಟೋ ಬೆಟ್ಟಗಳಿವೆ. ಅಡ್ಡಗೋಡೆಗಳಿವೆ. ಇವುಗಳನ್ನು ಒಡೆದು ದೀನರ ಬಾಳಿಗೆ ಬಟ್ಟೆಯಾಗಬೇಕಾದ ಅಗತ್ಯವನ್ನೂ ತಿಳಿಸಿದ್ದಾರೆ. ದೇಶದ ಪ್ರತಿಯೊಬ್ಬ ಪ್ರಜೆಗೂ ನೂರಾರು ದುಃಖದ ಕಡಲುಗಳೇ ಇವೆ. ವ್ಯಕ್ತಿಗತವಾಗಿ ದುಃಖಿಗಡಲನ್ನು ಹುಡುಕುವುದು ಸಾಧ್ಯವಿಲ್ಲ. ಅದಕ್ಕಾಗಿ ಸರ್ವರ ಏಳ್ಗೆಯ ಕಡೆ ನಮ್ಮೆಲ್ಲರ ಗಮನವಿರಲಿ ಎಂಬ ಆರ್ತ ದನಿಯಿದೆ.

ಕೊನೆಗೆ ನಿಸಾರರು ಬದುಕಿನ ಅರ್ಥ ಹುಡುಕುತ್ತಾ—

'ಬಾಳುವುದೆ ಬದುಕಲ್ಲ; ಬದುಕಿನರ್ಥವ ತಿಳಿವ
ಚಿಂತನೆಯೆ ನಿಜ ಬದುಕು ನರ ಜೀವಿಗೆ.'

'ಸಾಹಿತ್ಯ ಸಂಸ್ಕೃತಿಯ ಹೂದೋಟ ಬೆಳಸಿಕೊಳೆ
ವೇಣುವಾದಂತೆ ಅಹಾ! ಕಾಡ ಬಿದಿರು.'

(ಜೀವನ ಜಿಜ್ಞಾಸೆ)

ಕಾಡಿನ ಬಿದಿರಿನಂತಹ ಜೀವನವನ್ನು ನಿಸಾರರು ಕಾವ್ಯದ ಮೂಲಕ ವೇಣು ವಾದನದಂತೆ ಮಾಡಿಕೊಂಡಿದ್ದಾರೆ. ಕನ್ನಡವನ್ನು ಸಮೃದ್ಧಗೊಳಿಸಿ, ಕನ್ನಡಿಗರ ಮನೆಮಾತಾಗಿದ್ದಾರೆ. ಇನ್ನಷ್ಟು ವಸಂತಗಳು ಅವರು ನಮ್ಮೊಡನಿದ್ದು ಕರುಣಾಮಯಿಗಳಾದ ಕನ್ನಡಿಗರ ಮನವನ್ನು ಮತ್ತಷ್ಟು ತುಂಬಿಕೊಳ್ಳಲಿ ಎಂದು ಹಾರೈಸುತ್ತೇನೆ.



ರಾಷ್ಟ್ರವನ್ನು ಕುರಿತ ನಿಸಾರರ ಕವನಗಳು ಮತ್ತು ಅವರ ನಿಲವು

♦ *ಡಾ. ನಾ. ದಾಮೋದರ ಶೆಟ್ಟಿ*

ರಾಷ್ಟ್ರವೊಂದನ್ನು ಭದ್ರಗೊಳಿಸುವ ಕಾಯಕ ಯಾವೆಲ್ಲ ಶಕ್ತಿಗಳ ಕೂಡುವಿಕೆಯಿಂದ ಸಾಧ್ಯ? ಪ್ರಜಾಪ್ರಭುತ್ವದಲ್ಲಿ ರಾಷ್ಟ್ರೀಯತೆ ಅರಳುವುದು ಹೇಗೆ? ಅನೇಕ ಧರ್ಮಗಳ ಸಂಗಮ ಕ್ಷೇತ್ರವೊಂದು ರಾಷ್ಟ್ರ ಪ್ರೇಮದ ಕುರಿತು ಏಕ ಸಮಾನವಾಗಿ ಚಿಂತನೆ ನಡೆಸುವುದು ಸಾಧ್ಯವೆ? ಭಾರತ ದೇಶದ ಹಿರಿ ಕಿರಿಯ ಧರ್ಮಗಳು ಒಂದೇ ತೆರನಾಗಿ ದೇಶವನ್ನು ಪ್ರೀತಿಸುತ್ತವೆ ಎಂಬುದಾಗಿ ಯಾರಾದರೂ ಹೇಳಿದರೆ ನಂಬುವುದು ಹೇಗೆ? ನಂಬದಿರುವುದು ಹೇಗೆ?

—ಇತ್ಯಾದಿ ಅನೇಕ ಪ್ರಶ್ನೆಗಳ ನಡುವೆ ನಮ್ಮ ನೆಚ್ಚಿನ ಕವಿ ನಿಸಾರ್ ಅಹಮದರ ಕಾವ್ಯ ಅರೆ ಶತಮಾನಕ್ಕೂ ಅಧಿಕ ಕಾಲ ಹರಿದು ಬಂತು. ಎಲ್ಲ ತೆರನಾದ ಕಾವ್ಯಮಾರ್ಗಗಳನ್ನು ಹಾದು ಬಂದ ಅವರು ಇದೀಗ ಆಧುನಿಕರ ಜೊತೆಗೆ ನಿಂತಿದ್ದಾರೆ.

ರಾಷ್ಟ್ರೀಯತೆ ಅವರ ಕಾವ್ಯಕ್ಷೇತ್ರದ ಪ್ರಮುಖ ವಸ್ತುಗಳಲ್ಲೊಂದು. ಪ್ರಾದೇಶಿಕತೆಗೂ ರಾಷ್ಟ್ರೀಯತೆಗೂ ನಿಸಾರರು ಸಮಾನ ಮನ್ನಣೆ ನೀಡಿದ್ದಾರೆ. ಪ್ರಾದೇಶಿಕತೆಯ ಮೂಲಕ ರಾಷ್ಟ್ರೀಯತೆಯ ಕಡೆಗೆ ಸಾಗುವ ತುಡಿತದ ಕವನಗಳನ್ನೂ ಅವರು ರಚಿಸಿದ್ದಾರೆ.

'ಕನ್ನಡಾಂಬೆಗೆ', 'ಅಭಿಮಾನವತಿ', 'ಕನ್ನಡ ರಾಜೇಶ್ವರಿ', 'ರಾಜ್ಯೋತ್ಸವ' ಇತ್ಯಾದಿ ಕವನಗಳು ಕನ್ನಡ ತಾಯಿ ಭುವನೇಶ್ವರಿಯ ಸೇವೆಗೆ ಮೀಸಲು ಎಂಬಂತೆ

ತೋರುವುದಿದ್ದರೂ ಆಳದಲ್ಲಿ ಭಾರತ ಮಾತೆಯನ್ನು ಬೇರೂರಿಸಿಯೇ ಕನ್ನಡದ ಚಿಗುರು ಹೂ ಹಣ್ಣಿನ ಬಗ್ಗೆ ಮಾತನಾಡುತ್ತಾರೆ.

ಕವಿ ನಿಸಾರ್ ಅಹಮದರು ತಮ್ಮ ಕವನಗಳ ಮೂಲಕ ರಾಷ್ಟ್ರಪ್ರೇಮದ ವಿವಿಧ ಮಜಲುಗಳನ್ನು ಹುಡುಕುತ್ತ ಸಾಗುತ್ತಾರೆ. ರಾಷ್ಟ್ರಪ್ರೇಮದ ನಿಜವಾದ ಕಲ್ಪನೆ ನೀಡಿದ ಗಾಂಧೀಜಿಯವರು ಅವರಿಗೆ ಆದರ್ಶಪ್ರಾಯರು. ಅಂತಹ ಅಗ್ರಮಾನ್ಯ ಪಟ್ಟ ಅವರ ಕವನಗಳಲ್ಲಿ ಇನ್ನಾವ ರಾಜಕೀಯ ಧುರೀಣರಿಗೂ ಸಿಕ್ಕಿದಂತಿಲ್ಲ. ಅಲ್ಪಸಂಖ್ಯಾತ ಮತ ವೊಂದರಲ್ಲಿ ಜನಿಸಿದ ನಿಸಾರರು ಕೃಷ್ಣನ ಬಗ್ಗೆ, ದಾಸರ ಬಗ್ಗೆ ಕವನ ರಚನೆ ಮಾಡಿದ್ದು ಕಂಡಾಗ ಅದು ಅನಿವಾರ್ಯತೆಯೋ ಸರ್ವಧರ್ಮ ಸಮನ್ವಯತೆಯ ಚಿಂತನೆಯೋ ಎಂಬ ಸಂದೇಹಕ್ಕೆ ಎಡೆ ಮಾಡಿಕೊಡುತ್ತದೆ. ರಾಷ್ಟ್ರೀಯತೆಯೆಂಬುದು ನಿಸಾರರ ಬದುಕಿನ ಅನಿವಾರ್ಯ, ಅವಿಭಾಜ್ಯ ಅಂಗ. ಅಲ್ಪಸಂಖ್ಯಾತ ವಲಯದಲ್ಲಿ ಜನಿಸಿ. ಬಹುಸಂಖ್ಯಾತ ಸಾಹಿತ್ಯ ವಕ್ತಾರರ ಮಧ್ಯೆ ಬದುಕುವ, ಅವರ ಕುಹಕಗಳಿಗೆ ಕಿವಿಯಾಗುವ, ಅವರ ಧರ್ಮದ ಪ್ರಮುಖ ವಸ್ತುಗಳನ್ನೆಲ್ಲ ಕರಗತ ಮಾಡಿಕೊಂಡು ಅವರದೇ ನಾಣ್ಯದಲ್ಲಿ ಉತ್ತರಿಸುವ ಸಂಕಷ್ಟಗಳನ್ನೆಲ್ಲ ಅವರು ಎದುರಿಸಿದ್ದಾರೆ.

'ಅಲ್ಪಸಂಖ್ಯಾತರ ನಡುವೆ ಭಾರತೀಯತೆಯ ಬಗೆಗಿನ ನಂಬಿಕೆ ಸಂಶಯಾಸ್ಪದ' ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿ ಇರುವಾಗ ಅದನ್ನು ಮೀರಿ ನಿಲ್ಲಲೇಬೇಕಾದ ಅನಿವಾರ್ಯತೆ ನಿಸಾರರನ್ನು ಕಾಡಿತ್ತು. ರಾಷ್ಟ್ರೀಯತೆಯ ಕಡೆಗಿನ ಅವರ ತುಡಿತವನ್ನೆಲ್ಲ ಸಂದೇಹದಿಂದ ಕಂಡಾಗ ವಿಚಲಿತರಾದ ಕಾರಣ 'ನಿಮ್ಮೊಡನಿದ್ದೂ ನಿಮ್ಮಂತಾಗದೆ'ಯಂತಹ ಕವನವನ್ನು ಅವರು ಬರೆಯಬೇಕಾಯಿತು.

> **'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಚೆಕ್ಕು**
> **ಸಂಶಯದ ಪಂಜವೆತ್ತಿ**
> **ನನ್ನ ನಂಬಿಕೆ ನೀಯತ್ತು ಹಕ್ಕು**
> **ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ**
> **ನೋವಿಗೆ ಕಣ್ಣು ತುಂಬಿದ್ದರೂ,**
> **ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ**
> **ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನು**
> **ಹುಸಿ ನಗುತ್ತ ಎದುರಿಸುವುದಿದೆಯಲ್ಲ**
> **ಅದು ಬಲು ಕಷ್ಟದ ಕೆಲಸ.'** **(ನಿಮ್ಮೊಡನಿದ್ದೂ ನಿಮ್ಮಂತಾಗದೆ)**

ಇಂತಹ ಮಾನಸಿಕ ಆಘಾತಗಳ ಮಧ್ಯದಿಂದಲೇ ನಿಸಾರ್ ಅವರ ಕವನಗಳನ್ನು ಪರಾಂಬರಿಸಬೇಕು. ಎಷ್ಟೇ ಆಘಾತಗಳ ನಡುವೆಯೂ ಮೂಲ ಸಂಸ್ಕೃತಿಯ ಸತ್ವವನ್ನು, ಪುರಾಣದ ಆಣಿಮುತ್ತುಗಳನ್ನು ಉದ್ದಕ್ಕೂ ಪೋಣಿಸಿಕೊಂಡೇ ಸಾಗಿರುವುದರಿಂದ ಅಲ್ಲಿನ ರೂಪಕಗಳು, ದೃಷ್ಟಾಂತಗಳು ಓತಪ್ರೋತಗೊಂಡು ಅವರ ಕವನಗಳಲ್ಲಿ ಹರಿದಿವೆ.

'ಅತಿ ಸನಾತನ' ಎಂಬ ಕವನದಲ್ಲಿ ಕವಿ ತೋರಿಸುವ ವಿನೀತ ಭಾವವನ್ನು ಇಲ್ಲಿ ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು :

'ನಿನ್ನಲ್ಲಿ ಜನಿಸಿದುದೆ ನನಗೆ ಮಾನ'—

ನಿನ್ನನ್ನು ಅಳೆಯಲಾರೆ ಗುಣಗಾನ ಮಾಡಿದರೂ ಸೋಲುವೆ ನಾನು. ಆದ್ದರಿಂದ ನಿನ್ನ ಹಿರಿತನದ ಎದುರಿನಲ್ಲಿ ನನ್ನದು 'ಮೌನ'—ಎಂದು ಅಭಿಮಾನ ಪಟ್ಟುಕೊಳ್ಳುತ್ತ ಮೂಕರಾಗುತ್ತಾರೆ ನಿಸಾರರು.

ರಾಷ್ಟ್ರೀಯತೆಯ ಬಗ್ಗೆ ಮಾತನಾಡುವಾಗಲೆಲ್ಲ ನಿಸಾರರು ಧರ್ಮವನ್ನು ಹೊರತುಪಡಿಸಿ ಮಾತನಾಡುವುದಿಲ್ಲ. ಹಾಗೆ ಮಾತನಾಡುವಾಗ ಒಂದು ಧರ್ಮದ ಬಗ್ಗೆ ಮಾತನಾಡುವಂತೆಯೂ ಇಲ್ಲ. ಕನಿಷ್ಠ ಮೂರು ಧರ್ಮಗಳ ಬಗ್ಗೆಯಾದರೂ ಮಾತನಾಡಬೇಕು. ತಾನು ಹುಟ್ಟಿಬಂದ ಇಸ್ಲಾಂ ಧರ್ಮದ ಬಗ್ಗೆ ಮಾತನ್ನಾಡಿ ಅಲ್ಲಿಗೇ ಬಿಟ್ಟು ಬಿಡುವಂತಿಲ್ಲ. ಅವರ ಕವಿತೆಯ ಹೆಚ್ಚಿನ ಓದುಗರು, ಅದಕ್ಕೆ ವಿಮರ್ಶೆ ಹೇಳುವವರು ಮುಖ್ಯವಾಗಿ ಹಿಂದೂ ಧರ್ಮೀಯರೇ. ಹಾಗಾಗಿ ಈ ಧರ್ಮದ ಬಗ್ಗೆ ಹೇಳಲೇಬೇಕು. ಅಷ್ಟಾದ ಮೇಲೆ ಇನ್ನೊಂದು ಅಲ್ಪಸಂಖ್ಯಾತ ಧರ್ಮ—ಕ್ರೈಸ್ತ ಧರ್ಮ. ಅದರ ಬಗ್ಗೆ ಹೇಳದಿರುವುದು ಪಕ್ಷಪಾತವಾಗುತ್ತದೆ. ಇಂತಹ ಸಂದಿಗ್ಧ ನಿಸಾರರಿಗೆ ಮೇಲಿಂದ ಮೇಲೆ ಎದುರಾಗುತ್ತದೆ.

'ಇದು ಸನಾತನ ವೃಕ್ಷ, ಮೆದುಳಿದರ ಬೇರು, ಇದನೇರು
....
ಜೆರುಸಲೇಮಿನ ಅಂಧಕಾರ ದಮನಕೆ ಬಾನು ದಾನ ಮಾಡಿದ
ಶಸ್ತ್ರವಿದುವೆ ನೋಡು
ಮೆಕ್ಕಾದ ಮರಳು ಧರೆಯಾಳದಲಿ ಜಲವನ್ನು ಪತ್ತೆ
ಹಚ್ಚಿದ ದಿವ್ಯ ಧನುವು ಇದಿಗೋ'

(ಸಮರ ಗೀತೆ)

ಇತರ ಹಿರಿಯ ಕಿರಿಯ ಕವಿಗಳಿಗೆ ಇಂತಹ ಸಂದಿಗ್ಧಗಳಿರಲಿಲ್ಲ; ಎಡಬಿಡಂಗಿತನವೂ ಇರಲಿಲ್ಲ. ಅಲ್ಪ ಸಂಖ್ಯಾತರ ಮತಗಳನ್ನು ಹೆಕ್ಕಿ ತೆಗೆದು ಉದ್ಧರಿಸಬೇಕಾದ ಅನಿವಾರ್ಯತೆ ಅವರಿಗಿಲ್ಲ. ಆದರೂ 'ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ನಾವು ಮನುಜರು' ಎಂಬ ಉದಾರವಾದಿ ಮಾತನ್ನು ಅಡಿಗರಂಥವರು ಹೇಳಿ ಸಮಾನತೆಯನ್ನು ಮೆರೆದಿದ್ದಾರೆಂಬುದು ಸಮಾಧಾನಕರ ಅಂಶ. ಮಿಕ್ಕವರಿಗೆ ಬರಿದೆ ಕವನದ ಸಾಲು ಹಾಳು. ನಿಸಾರರಿಗೆ ಹಾಗಲ್ಲ; ಅವರಿಗದು ಅನಿವಾರ್ಯ. 'ಮಹಿಮವಂತೆ ಭಾರತಿ'ಯ ಈ ಸಾಲು ಗಮನಿಸೋಣ:

'ಗುಡಿ ಮಸೀದಿ ಚರ್ಚು ಗುರುದ್ವಾರ ಸಮಾರಾಧನ
ಸದಯೆ, ಅಭಯದಾಯೆ, ನಿನ್ನ ಸಹಿಷ್ಣುತೆಯ ಲಾಂಛನ
ಸುಭವ್ಯ ಬಸಿರು ನಿನ್ನದಮ್ಮ, ಸದಾ ಹಸಿರು ಶ್ರಾವಣ'

(ಮಹಿಮವಂತೆ ಭಾರತಿ)

'ಕನ್ನಡ ರಾಜೇಶ್ವರಿ' ಎಂಬ ಕವನದ ಮೂಲಕ ಸರ್ವಧರ್ಮ ಸಹ ಮಿಲನವನ್ನು ಸಾಂಕೇತಿಕವಾಗಿ ಹೀಗೆ ಹೇಳುತ್ತಾರೆ :

'ಬಸದಿ ಚರ್ಚು ಗುಡಿ ಮಸೀದಿ
ಅಗ್ಗಳಿಕೆಯ ಕೇತನ

ಬಾಣವೆನಿತೊ ಸತ್ಯದೆಡೆಗೆ
ಬತ್ತಳಿಕೆ ಸಚೇತನ.'
(ಕನ್ನಡ ರಾಜೇಶ್ವರಿ)

ಬಾಣಗಳಂತಹ ಧರ್ಮಗಳು ಅನೇಕ ಇವೆಯಾದರೂ ಆ ಧರ್ಮಗಳು ಹೊಮ್ಮಿಸುವ ಮೂಲ ಆಶಯ ಒಂದೇ ಬತ್ತಳಿಕೆಯಿಂದ ಮೂಡಿಬರುತ್ತವೆ ಎಂಬುದನ್ನು ನಿಸಾರರು ಹೇಳುವ ವಿಧಾನ ಕೂಡ ಅಷ್ಟೇ ಕಾವ್ಯಾತ್ಮಕವಾಗಿದೆ. ಪ್ರಾದೇಶಿಕತೆಯಿಂದ ರಾಷ್ಟ್ರೀಯತೆಯ ಕಡೆಗಿನ ತುಡಿಯುವಿಕೆಯನ್ನೂ ಅವರ ಕವಿತೆಗಳಲ್ಲಿ ಎದುರಾಗಬಹುದು. 'ಮಾತೃವಂದನೆ' ಕವನದಲ್ಲಿ ರಾಷ್ಟ್ರದ ಸಕಲ ಸಂಪತ್ತುಗಳ ಬಗ್ಗೆ ಹೆಮ್ಮೆಪಟ್ಟುಕೊಳ್ಳುತ್ತ,

'ಸೂಫೀ ಸಂತರ, ಯೋಗಿ ಮಹಂತರ
ಮಹಿಮಾ ಸ್ರೋತದಿ ಮಿಂದು ನಿರಂತರ
ಶುಚಿಯಾಗಿಹೆ ನೀನತಿ ಬಹಿರಂತರ'
(ಮಾತೃ ವಂದನೆ)

ಎನ್ನುತ್ತಾರೆ. ನಮ್ಮ ರಾಷ್ಟ್ರಕ್ಕೆ ಕೊಡುಗೆ ಸಲ್ಲಿಸಿದವರಲ್ಲಿ ಎಂಥೆಂಥವರಿದ್ದಾರೆ ಎಂಬುದನ್ನು ನೆನಪಿಸಿಕೊಡುವುದರ ಮೂಲಕ ಯಾವುದೇ ಒಂದು ಪಂಥದ ಹಕ್ಕು ಸ್ಥಾಪನೆಯನ್ನು ಪರೋಕ್ಷವಾಗಿ ಕವಿ ವಿರೋಧಿಸುತ್ತಲೇ ಬರುತ್ತಾರೆ.

ಮನುಷ್ಯರೆಲ್ಲರೂ ಒಂದೇ ಎನ್ನುವುದನ್ನು ದೇವರುಗಳ ಮೂಲಕ ಸಮರ್ಥಿಸಿ ಕೊಳ್ಳಬೇಕಾದ ಪರಿಸ್ಥಿತಿಯಿದೆ.

'ಕೃಷ್ಣ, ಬುದ್ಧ, ಮೊಹಮ್ಮದೇಸು
ಭಗವದಂಶ ಒಂದೆ.
ಚುಕ್ಕಿ ಚಂದ್ರಗ್ರಹ ಸಮೂಹ
ನೀಹಾರಿಕೆ ಒಂದೆ' (ಒಂದೇ)

ಇಂತಹ ಅನೇಕ ದೃಷ್ಟಾಂತಗಳನ್ನು ಕೊಡುತ್ತ ದೇವರೊಂದೆ, ಧರ್ಮವೊಂದೆ—ಆ ಮೂಲಕ ಮನು ಕುಲವೊಂದೇ ಎನ್ನುವುದನ್ನು ಸಾಬೀತುಪಡಿಸುವುದು ಕವಿಯ ಉದ್ದೇಶ. ಮತ್ತದನ್ನು ಪದೇ ಪದೇ ಹೇಳಬೇಕಾಗಿ ಬಂದುದಕ್ಕೆ ನಿಸಾರರೊಳಗಿನ ಅಸಹಾಯಕ ಪ್ರಜ್ಞೆಯೂ ಕಾರಣ.

ರಾಷ್ಟ್ರಾಭಿಮಾನವನ್ನು ಬಿಂಬಿಸುವ ಹಲವಾರು ಕವನಗಳು ನಿಸಾರರ ಲೇಖನಿಯಿಂದ ಹೊಮ್ಮಿವೆ. ಈ ನೆಲ, ಈ ಜಲ, ಬೆಟ್ಟಸಾಲುಗಳು—ಎಲ್ಲವೂ ಅವರ ದೇಶಾಭಿಮಾನದ ಸಂಕೇತವಾದ ಅಂಶಗಳೇ. ಬ್ರಿಟಿಷರ ದಬ್ಬಾಳಿಕೆಗೆ ವಿದಾಯ ಹೇಳಿದ ದೇಶ ಪ್ರೇಮಿಗಳನ್ನು ಅವರು ನೆನೆಸಿಕೊಳ್ಳುವ ಪರಿ ಹೀಗೆ:

'ಶತ್ರು ದಮನ ನಮ್ಮ ಗಾನ;
ಮನೆ ಬಾಗಿಲು ಹೊಗಲು ಬಂದ
ಪರ ದೇಶದ ಹುಲು ಮದಾಂಧ.
ದಿಟ್ಟತನದೊಳವನ ಮೆಟ್ಟಿ
ಭದ್ರಗೋಡೆಗಳನು ಕಟ್ಟಿ

ಮರಳಿ ಗೆಲವ ಬಿಂಬಿಸಿ
ನೆಮ್ಮದಿಯನು ತುಂಬಿಸಿ
ಬಾಳಬೇಕು, ಆಳಬೇಕು
ತಾಯ್ನಾಡಿಗೆ ವಂದಿಸಿ'
(ನೆಲ ನಮ್ಮದು)

'ನೆಲ ನಮ್ಮದು, ಜಲ ನಮ್ಮದು' ಕವನದ ಸರಳ ಸಾಲುಗಳಿವು. ಮಂದಿಯ ಬಾಯಲ್ಲಿ ಸರಾಗವಾಗಿ ಹರಿಯುವ ಈ ಬಗೆಯ ಹಲವು ಕವನಗಳನ್ನು ನಿಸಾರರು ರಚಿಸಿದ್ದಾರೆ. 'ಓ! ಪರ್ವತ ಚಕ್ರವರ್ತಿ' ಎಂಬ ಕವನದ ಮೂಲಕ ಅನಾದಿ ಕಾಲದಿಂದ ನಮ್ಮ ದೇಶಕ್ಕೆ ಸಹಜ ರಕ್ಷಣೆ ನೀಡುತ್ತ ಬಂದ ಹಿಮಾಲಯ ಪರ್ವತ ಸಾಲುಗಳನ್ನು ಅವರು ನೆನೆಯುತ್ತಾರೆ. ಅದರ ಬಹು ಭಾಗ ಇತರ ರಾಷ್ಟ್ರಗಳ ಪಾಲಾದುದನ್ನು ನೆನೆದಾಗ ಕವಿಯ ಮನಸ್ಸು ಆರ್ದ್ರವಾಗುತ್ತದೆ—

'ಕೋಟೆಯಾಗಿ ಕಾದೆ ನಮ್ಮನಾದಿಕಾಲದಿಂದಲು' ಎಂದು ಕೊಂಡಾಡುವುದರ ಜೊತೆಗೆ ಅಂತಹ ಪರ್ವತ ಶ್ರೇಣಿಗೆ 'ಎಂಥ ಕಾಲ ಬಂತೊ ತಂದೆ! ನಾವು ನಿನ್ನ ಪೊರೆವುದೆ?' ಎನ್ನುತ್ತಾರೆ. ನಮ್ಮಿಂದ ದೂರ ಹೋದ, ವಿದೇಶೀ ಆಕ್ರಮಣಕ್ಕೆ ತುತ್ತಾದ ಪರ್ವತ ಶ್ರೇಣಿಯ ಬಗೆಗೆ ಒಂದೆಡೆ ಕಳಕಳಿ ತೋರಿದರೆ, ಇನ್ನೊಂದೆಡೆ 'ನಮ್ಮ ಯೋಧರ ಸಾಮರ್ಥ್ಯರಾಹಿತ್ಯ ವಿದಲ್ಲ' ಎಂದೂ ನುಡಿಯುತ್ತಾರೆ. 'ಕಳೆದ ನೆಲವ ಗಳಿಸಿ ಕೊಡುವ ಕಾಳ್ಗಿಚ್ಚಿನ ಕಿಡಿ ಯಾದರು' ನಮ್ಮ ಯೋಧರು. ಅಂತಹ ಸಹಜ ವಿಕ್ರಮಗುಣವುಳ್ಳ ವೀರರಿಗೆ 'ಅಭಿವಂದನೆ' ಹೇಳುತ್ತ ಹುರಿದುಂಬಿಸುತ್ತಾರೆ. 'ಶ್ರೀ ಸಾಮಾನ್ಯನ ಪ್ರತಿನಿಧಿ' ಕವನದಲ್ಲಿ 'ನಿಜವಾದ ಭಾರತೀಯ ಇರಬೇಕಾದುದು ಹೇಗೆ?' ಎಂಬುದನ್ನು 'ಇರಬಾರದು ಹೇಗೆ? ಎಂದು ತಿಳಿಯಪಡಿಸುವುದರ ಮೂಲಕ ವಿಶದಪಡಿಸುತ್ತಾರೆ.

'ಅಲ್ಲಿ ನಾಡಿನುತ್ತರದಲಿ,
ಲಡಕಿನಲ್ಲಿ, ನೀಫದಲ್ಲಿ
ತಾಯ ನೆಲವ ಕಬಳಿಸುತಿರೆ ನೆರೆಹೊರಕೆಯ ಭೂತ
ಎರಡಂಗುಲ ನೆಲದಂಚಿಗೆ ತಮ್ಮನನ್ನೆ ಕೋರ್ಟಿಗೆಳೆದು
ಊರು ಊರು ಅಲೆಯುವಾತ—
ಇವನೆ ಆ ಮಹಾನುಭಾವ'
(ಶ್ರೀ ಸಾಮಾನ್ಯನ ಪ್ರತಿನಿಧಿ)

ನಿಸಾರರ ಹರಿತ, ವ್ಯಂಗ್ಯ 'ಕುರಿಗಳು, ಸಾರ್, ಕುರಿಗಳು' ಎಂಬ ಅವರ ಪ್ರಸಿದ್ಧ ಕವನದಂತೆ ಇಲ್ಲೂ ಸಕತ್ತಾಗಿ ಹರಿದಿದೆ.

'ಅಜ್ಞಾತರು' ಎಂಬ ಕವನದಲ್ಲಿ ನಿಸಾರರ ವಿಡಂಬನೆಯ ಅಲಗು ಇನ್ನಷ್ಟು ತೀಕ್ಷ್ಣ ವಾಗಿದೆ. ದೇಶಕ್ಕಾಗಿ ಬಲಿದಾನಗೈದ ಹುತಾತ್ಮರನ್ನು ನಾವು ನೆನೆಯುವ ಪರಿ ಹೇಗಿದೆ ಎಂಬುದರ ಬಗ್ಗೆ ಅವರು ಹೇಳುವ ಮಾತಿದು:

'ನಿಮ್ಮ ನೆತ್ತರು ನೆಲವ ಕುಂಕುಮಿಸಿದೆಡೆಯಲ್ಲಿ

ಕೋವಿ, ಗಲ್ಲಿಗೆ ಬೀಗಿ ಉತ್ತರಿಸಿದೆಡೆಯಲ್ಲಿ
ಹೆಡೆ ನಿಮಿರಿ ರಂಜಿಸಿವೆ ಪಂಚತಾರಾ ಹೋಟೆಲು
ರೇಸು ಕಣ, ಕ್ಲಬ್ಬುಗಳ ನಗೆಪಾಟಲು
ಬಹು ಮಹಡಿ ಕಟ್ಟಡದ ಕಪಿಲೆ ಕೆಚ್ಚಲುಗಳು—
ಅಲ್ಲಿ, ಬಡವರ ಮನೆಗು ಹೆಚ್ಚು ವೈಭವಪೂರ್ಣ
ಸಿರಿವಂತ ಜನರ ಶೌಚಾಲಯ, ಬಚ್ಚಲುಗಳು.'

(ಅಜ್ಞಾತರು)

ಪರಿಸ್ಥಿತಿ ಎಲ್ಲಿಂದ ಎಲ್ಲಿಗೆ ಬಂದುಹೋಗಿದೆ ಎಂಬುದನ್ನು ಹೇಳುವ ಕವಿ ಕೊನೆಗೂ ಆಶಾದಾಯಕ ನೆಲೆಯನ್ನು ಬಿಟ್ಟುಕೊಡುವುದಿಲ್ಲ. 'ನಿಮ್ಮ ಆತ್ಮಾರ್ಪಣ, ಸರ್ವಸಾರ್ಥಕ ಸಾವು' ಎಂದು ಆ ಹುತಾತ್ಮರನ್ನು ನಿಷ್ಕಳಂಕವಾಗಿ ಕೊಂಡಾಡುತ್ತಾರೆ. ವಿಡಂಬನೆಯನ್ನು ಅನ್ಯಾಯದ ಸಂಗಾತಿಯಾಗಿಸಿ, ವಾಸ್ತವತೆಯನ್ನು ಫಲಶ್ರುತಿಯ ಕಡೆ ಮುಖ ಮಾಡಿಸುವ ಮೊನಚು ಈ ಸಾಲುಗಳಲ್ಲಿದೆ.

'ಗಾಂಧಿ ಜಯಂತಿ'ಯ ಕುರಿತಾದ ಕವನದಲ್ಲೂ (ಜಯಂತ್ಯುತ್ಸವ) ಇದೇ ಬಗೆಯ ವಿಡಂಬನೆಯಿದೆ.

'ಸಬ್‌ಕೋ ಸನ್ಮತಿ ದೇ ಭಗವಾನ್
ಕಿರುಚಿರೆ ಬಾನುಲಿ ಹಾಡ
ನಿಲ್ಲಿಸಿ, ಕೋಳಿ ಪಲಾವನು ಬಡಿಸಿದ
ಮುದ್ದಿನ ಹೆಣ್ಣಿನ ಕೂಡ :
'ಹಾಗೆ ಕುಡಿಯೋದ್ ಹೇಗೆ ಪೆದ್ದಿ
ತರಿಸು ಬೇಗ ಸೋಡ'

(ಜಯಂತ್ಯುತ್ಸವ)

ಈ ಸಾಲುಗಳ ಜೊತೆಗೆ 'ಶ್ರೀಸಾಮಾನ್ಯನ ಪ್ರತಿನಿಧಿ'ಯ ಸಾಲುಗಳನ್ನು ತುಲನೆ ಮಾಡಿ ನೋಡಬಹುದು:

'ಕುಡಿಯಬೇಡಿ ಸೇಂದಿ
ಅಂದರಂದು ಗಾಂಧಿ
ಒಡನೆ ಬಿಟ್ಟು ಸೇಂದಿ
ಹಿಡಿದನಿವನು ಬ್ರಾಂದಿ.'

(ಶ್ರೀ ಸಾಮಾನ್ಯನ ಪ್ರತಿನಿಧಿ)

ಗಾಂಧಿಯ ನಾಡಿನಲ್ಲಿ ಅವರ ಕಠಿಣಾಧ್ವಾನಗಳೆಲ್ಲ ಹೇಗೆ ಅರ್ಥ ಕಳೆದುಕೊಳ್ಳುತ್ತಿವೆ! ಮದ್ಯಪಾನ ನಿರೋಧ ಚಳವಳಿಗಳೆಲ್ಲ ನಗರೀಕರಣದ ಅಮಲಿನಲ್ಲಿ ಓಲಾಡುವ ದಿನಗಳಿವು. ಯಾರು ನಿಜವಾದ ಶ್ರೀ ಸಾಮಾನ್ಯ? ಅವನಲ್ಲಿರಬೇಕಾದ ಬಾಧ್ಯತೆಗಳೇನು? ಅವನೇನಾಗುತ್ತಿದ್ದಾನೆ?—ಇತ್ಯಾದಿ, ಉತ್ತರವೇ ಇಲ್ಲದ ಪ್ರಶ್ನೆಗಳ ಬಗ್ಗೆ ಕವಿ ಮರುಗುತ್ತಿದ್ದಾರೆ. ಗಾಂಧಿಜಿಯ ಬದುಕಿನ ಆದರ್ಶಗಳನ್ನು, ಬಲಿದಾನಗಳನ್ನು ಅರ್ಥೈಸಿಕೊಳ್ಳದವರನ್ನು ವಿಡಂಬನೆಯ ಚಾಟಿಯೇಟಿನಿಂದ ನಿಸಾರರು ಬಡಿದೆಬ್ಬಿಸಲು ಯತ್ನಿಸುತ್ತಾರೆ. 'ಸಿಡಿದ ಸದ್ದು'

ಕವನದಲ್ಲಿ ಅವರು ಬಳಸುವ ಭಾಷೆಯ ಮೊನಚು ಅವರ ಕಾವ್ಯದ ನೆಲೆಯನ್ನು ಇನ್ನಷ್ಟು ಎತ್ತರಕ್ಕೆ ಏರಿಸುತ್ತದೆ. ತುಸು ಗದ್ಯಾತ್ಮಕವಾಗಿರುವ ಆ ಪದ್ಯದ ವಿಡಂಬನಾತ್ಮಕ ಕೊನೆಯ ಸಾಲುಗಳು ಇಂತಿವೆ:

'ಗುಂಡಿಗಾಹುತಿಯಾದ ಮುದುಕ, ತನ್ನಯ ಅರಳುಮರಳಿನಲಿ
ನುಡಿದಂಥ ತತ್ತ್ವಗಳನನುಸರಿಸಿ ನಡೆಯಬೇಡ.
ಜನರಿಗೆದುರಾದೆಯೋ ಅವನ ಗತಿಯೇ ನಿನಗು ಕೇಳೊ ಮೂಢ!'
(ಸಿಡಿದ ಸದ್ದು)

'ಸವತಿ ಮಕ್ಕಳ ಹಾಗೆ' ಎಂಬ ಕವನದಲ್ಲಿ ತರತಮ ದೃಷ್ಟಿಯಲ್ಲಿ ನೋಡುವ, ಮತೀಯ ಅಂಧತ್ವವನ್ನು ಮೆರೆಯುವ, ದುರ್ಬುದ್ಧಿಯನ್ನು ತೋರುವ ವ್ಯಕ್ತಿಗಳನ್ನು ಕವಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಾ

'ಬೆಳಕು ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ'

—ಎನ್ನುತ್ತಾರೆ. ಕೆಟ್ಟವರು ಇರಬಹುದು. ಎಲ್ಲ ಕೆಟ್ಟವರಲ್ಲ. ನಮ್ಮ ತಾಯಿ ಭಾರತಿ. ನಾವೂನು ಭಾರತಿಯ ಬಸಿರವರೆ—ಎನ್ನುವ ಕವಿಯ ಮಾತನ್ನು ಅರ್ಥೈಸಿಕೊಳ್ಳಬೇಕಲ್ಲ.

ಸೌಹಾರ್ದ ರಾಹಿತ್ಯವನ್ನು ಕಂಡು ಕವಿಯ ಮನಸ್ಸು ಕರಗುವ ಪರಿ ಅವರ ಅನೇಕ ಕವನಗಳಲ್ಲಿ ಬಗೆ ಬಗೆಯಾಗಿ ಹರಿದಿವೆ.

'ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ?
ಒಂದೆ ನೆಲದ ರಸ ಹೀರಲೇನು? ಸಿಹಿ ಕಹಿಯ ರುಚಿಯ ಕಾಯಿ.'

ಎಂಬ 'ನಾಡ ದೇವಿಯೆ' ಕವನದ ಸಾಲುಗಳಲ್ಲಿ ತರತಮಗಳ ಪರಾಕಾಷ್ಠೆಗಳನ್ನು ತೋರಿಸುತ್ತಾರೆ. ಜೊತೆಗೆ ಅವುಗಳಿಂದ ಹೊರ ಬಂದು ಸಮಾನ ಬದುಕನ್ನು ಬದುಕಬೇಕಾದ ಅನಿವಾರ್ಯತೆಯನ್ನೂ ಹೇಳುತ್ತಾರೆ.

'ತಾಯಿ, ಭೂಮಿತಾಯಿ' ಕವನದಲ್ಲಿ ಬೆಂದವರ, ನೊಂದವರ ಕುರಿತಾದ ಸಾಂತ್ವನದ ಮಾತುಗಳೆ ಇವೆ. 'ಹೇಳುವುದು ಬಹಳವಿದೆ' ಎಂಬ ಕವನದಲ್ಲಿ ಕವಿ ಅನುಭವಿಸಿದ ದಟ್ಟ ಅವಮಾನದ ಚಿತ್ರಣವಿದೆ. ಭಾರತೀಯತೆಯಲ್ಲಿ ತನಗೆ ಪಾಲಿಲ್ಲದಂತೆ ಮಾಡಿದವರ ಬಗೆಗಿನ ಆಕ್ರೋಶವಿದೆ. 'ಸುತ್ತಲಿನ ಗೋಸುಂಬೆ ಹವಾಮಾನದ ಬಗ್ಗೆ ನಾ ನುಡಿಯುವುದು ಸಾಕಷ್ಟಿದೆ' ಎನ್ನುತ್ತದೆ ರೋಸಿಹೋದ ಕವಿ ಮನಸ್ಸು.

ಗುರುತಿಸಬೇಕಾದ ಇನ್ನೊಂದು ಅಂಶವೆಂದರೆ ಭಾರತೀಯರಲ್ಲಿ ಹೇಗೆ ಅನಾಥ ಪ್ರಜ್ಞೆಯಿಂದ ನರಳುವವರಿದ್ದಾರೆಯೋ, ಹಾಗೆಯೇ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತಕ್ಕೆ ಬಂದು ಇಲ್ಲೇ ಬೇರು ಬಿಟ್ಟು ಬಳಿಕ ಈ ಮಣ್ಣಿಗೆ ಬೇಡವಾದ ಇತರರೂ ಇದ್ದಾರೆ. ಅವರಲ್ಲಿ ಬ್ರಿಟಿಷರು ಮುಖ್ಯ. ಅವರೆಲ್ಲ ಮುಖ ಕಳೆದುಕೊಂಡು, ಅಲ್ಪ ಸಂಖ್ಯಾತರಾಗಿ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಎಂಬಂತಹ ಬದುಕನ್ನು ಬದುಕುತ್ತಿದ್ದಾರೆ. ಅಂಥವರ ಬಗ್ಗೆ ಕೂಡ ನಿಸಾರ್ ಅವರಿಗೆ—ಅನಾಥ ಪ್ರಜ್ಞೆಯ ಭಾರತೀಯರ ಬಗೆಗೆ ಇರುವಂಥ ಕಾಳಜಿಯೇ ಇದೆ.

'ಅನಾಮಿಕ ಆಂಗ್ಲರು' ಕವನ ಇದನ್ನೇ ಹೇಳುತ್ತದೆ. 'ಸ್ವಜನೋದ್ಧಾರಕರು' ಎಂಬ ಕವನದಲ್ಲಿ ತನ್ನ ಸಮುದಾಯವೇ ಹೇಗೆ 'ನವಾಬರಂತೆ ವರ್ತಿಸುತ್ತ, ಮಾತಿನಲ್ಲೆ ಕಾಡ್ಗಿಚ್ಚು ಹರಡುತ್ತ ಚೂರಿ ಚಾಕು ಸಂಸ್ಕೃತಿಯನ್ನು ಮೆರೆಯುತ್ತದೆ'—ಎಂಬುದನ್ನು ರಾಜಾರೋಷವಾಗಿ ಬಯಲುಗೊಳಿಸುತ್ತಾರೆ. ಎಲ್ಲಿ ಬಹುಧರ್ಮೀಯರ ಜೊತೆಗೆ ತಮ್ಮ ಅಸ್ಮಿತೆಯನ್ನು ಕಂಡುಕೊಂಡು ಹೀಗೆ ನುಡಿಯುವರೋ—ಎಂದು ತೋರಿ ಹೋಗುವ ಹಾಗೆ ಅವರ ಮಾತು. ಜೊತೆಗೆ, ತನ್ನ ಸಮುದಾಯಕ್ಕೆ ಹೇಳಬೇಕಾದ ಎಚ್ಚರಿಕೆಯ ಮಾತುಗಳೂ ಸೇರಿಕೊಂಡಿವೆ. ಎಲ್ಲಿ ಎಡವುತ್ತಾರೆ ಈ ಪಠಾಣರು—

'ಹಗೆಯ ಹೊಗೆ ಎಲ್ಲೆಲ್ಲಿ, ಅಲ್ಲಿ ಶಕ್ತ್ಯನುಸಾರ
ಧಾರಾಳ ಪೆಟ್ರೋಲು ಹೊಯ್ಯುವವರೇ
ಕಠಾರಿಯಂತೆ ಮುರಿದೇವೆ ವಿನಾ
ಬಿಲ್ಲಿನ ಥರ ಬಾಗೆವು.'

(ಸ್ವಜನೋದ್ಧಾರಕರು)

—ಬರಿದೆ ಬಾಗುವ ಮಾತಲ್ಲ ಇದು. ಶರಣಾಗುವ ಮಾತೂ ಅಲ್ಲ. ಬಾಗುವುದಿದ್ದರೂ ತಾಜಾ ಬಿಲ್ಲಿನ ಹಾಗೆ. ಅನಗತ್ಯವಾಗಿ ಮತದ ಮೊಕ್ತೇಸರರ ಹಾಗೆ, ನವಾಬರ ಹಾಗೆ ಪ್ರತ್ಯೇಕತೆಯ ಮಾತನ್ನೆತ್ತುತ್ತ ಎಷ್ಟು ಕಾಲ ತಳ್ಳುವಿರಿ? ಎಷ್ಟು ಕಾಲ ಖೋಟ ಆಗಿ ಬದುಕುವಿರಿ? ಎಂಬುದಾಗಿ ನಿಸಾರರು ಪ್ರಶ್ನಿಸುವಂಥಾದ್ದು ಕೆಲವೊಮ್ಮೆ ಸ್ವಜನರ ಆಕ್ರೋಶಕ್ಕೂ ಎಡೆಗೊಡಬಹುದಾದ ಮಾತುಗಳು. ಎಲ್ಲೋ ಒಂದು ಕಡೆ ಕವಿ ಏಕಪಕ್ಷೀಯವಾದ ಮಾತುಗಳನ್ನು ಆಡುತ್ತಿದ್ದಾರೆಯೇ ಎಂದೂ ಅನ್ನಿಸಬಹುದು. ಮಾತಿನ ತೀವ್ರತೆ ಹಾಗಿದೆ.

'ಖಬರಸ್ಥಾನದಲ್ಲಿನ್ನೂ ಅಗೆತ ನಡೆದಿದ್ದಂತೆ
ಬಸ್ಸೋ ರೈಲೋ ಏರಿ
ಪರಾರಿಯಯ್ಯ ನೀವು ವಾಗ್ವೀರರು,
ಕೋಮಿನ ಕಂತ್ರಾಟುದಾರರು
ಮಗುದೊಂದು ಊರಿಗೆ
ರಕ್ಕಸಗಣದುಸ್ತುವಾರಿಗೆ
ಮತ್ತಷ್ಟು ಹೊಸ ಹೊಸಾ ಗೋರಿಗಳ ತಯಾರಿಗೆ!'

(ಅದೇ)

'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ಸ್ವಜನೋದ್ಧಾರಕರು' ಎಂಬ ಎರಡು ಕವನಗಳ ಮಧ್ಯದಲ್ಲಿ ಓಲಾಡಿದ ನಿಸಾರರು ಬದುಕಿನುದ್ದಕ್ಕೂ ವಿಚಿತ್ರ ಬಗೆಯ ರಾಜಕೀಯ ಸ್ಥಿತ್ಯಂತರಗಳಿಗೆ ಗುರಿಯಾಗಿರಬಹುದು, ಬಲಿಯಾಗಿರಬಹುದು. ಒಂದುಕಡೆ ಮೇಲ್ವರ್ಗದವರಿಂದ, ಬಹುಸಂಖ್ಯಾತರಿಂದ ದೂರವಿರಬೇಕಾದ ನಾಟಕೀಯ ಅನಿವಾರ್ಯತೆ, ಇನ್ನೊಂದೆಡೆ ತಮ್ಮದೇ ಆದ ಅಲ್ಪಸಂಖ್ಯಾತ ಸಮುದಾಯದ ಕೆಲವರು ಮಾಡುವ ದೇಶದ್ರೋಹೀ ಚಟುವಟಿಕೆಗಳಿಂದ ಒದಗಿ ಬರುವ ಅವಮಾನ—ಇವರೆಡು ಧ್ರುವಗಳ

ನಡುವೆ ನಿಸಾರರು ಆಂತರಂಗಿಕ ಯುದ್ಧಗಳನ್ನೇ ನಡೆಸಿರಬಹುದು. ಆದರೆ ಅವರೊಳಗಿನ ರಾಷ್ಟ್ರೀಯ ಪರಿಕಲ್ಪನೆ ಮಾತ್ರ ಇವೆಲ್ಲವನ್ನೂ ಮೀರಿದ್ದು. ಮೇಲ್ವರ್ಗದವರು ಅಹಂಕಾರ ತ್ಯಜಿಸಿದ, ಅಲ್ಪ ಸಂಖ್ಯಾತರು ಕುಚೇಷ್ಟೆಗಳನ್ನು ಬದಿಗಿರಿಸಿದ ಪ್ರಾಮಾಣಿಕ ಬದುಕನ್ನು ಕಂಡುಕೊಳ್ಳಬೇಕೆಂಬುದು ಅವರ ಬಲವಾದ ಬಯಕೆ.

ನಿಸಾರರ ಕವನಗಳಲ್ಲಿ ಒಡೆದ ಮನಸ್ಸುಗಳನ್ನು ಒಂದಾಗಿಸುವ, ಗಾಂಧಿಯ ತತ್ತ್ವಗಳನ್ನು ಪಾಲಿಸುವ, ದೇಶಪ್ರೇಮವನ್ನು ಬಿಂಬಿಸುವ, ನೆಲ ಜಲದ ಬಗ್ಗೆ ಹೆಮ್ಮೆ ಪಡುವ, ತಾಯಿ ಭಾರತಿಯನ್ನು ಗೌರವಿಸುವ, ಕನ್ನಡ ಭುವನೇಶ್ವರಿಯನ್ನು ಕೀರ್ತಿಸುವ, ದೇಶದ್ರೋಹಿಗಳನ್ನು ಮೆಟ್ಟಿ ನಿಲ್ಲುವ ಛಾತಿಯಿದೆ. ಅವರ ಕವನಗಳಲ್ಲಿ ವ್ಯಂಗ್ಯವಿದೆ, ವಿಡಂಬನೆಯಿದೆ, ಮೊನಚಿದೆ, ರೋಷವಿದೆ, ಆವೇಶವಿದೆ, ನನಸಿದೆ, ಕನಸಿದೆ. ಅವರ ಕವನಗಳಲ್ಲಿ ರಾಷ್ಟ್ರೀಯತೆಯ ಕಡೆಗೆ ತುಡಿಯುವುದರ ವಿರಾಟ್ ದರ್ಶನವೇ ಇದೆ.

ತಯಾರಾಗುತ್ತಿರುವ ಭಕ್ಷ್ಯದ ಪಾಕ ಪರಿಣತಿ, ರುಚಿಗಳನ್ನು ನಾವು ಸ್ವತಃ ಅಡುಗೆ ಮನೆಗೇ ಹೋಗಿ ಪರೀಕ್ಷಿಸುವ ಅಗತ್ಯವಿಲ್ಲ. ದೂರದಿಂದಲೇ ಅದರ ಹದ, ಪಕ್ವತೆಗಳ ತಿಳಿವನ್ನು ಒಗ್ಗರಣೆಯ ಮೂಲಕ ಅರಿತುಕೊಳ್ಳಬಹುದು. ಸೂಕ್ಷ್ಮಾಭಿರುಚಿಯುಳ್ಳ ರಸಿಕನಿಗೆ ಭಕ್ಷ್ಯದ ಅಸ್ತಿತ್ವ, ಸ್ವಾದಿಷ್ಟತೆಗಳು ಮನವರಿಕೆಯಾಗುವ ಹಾಗೆ, ಸೃಷ್ಟಿಯ ವೈಶಿಷ್ಟ್ಯ ವೈಭವಗಳಿಂದ ಅದರ ಮರೆಯಲ್ಲಿರುವ ಕರ್ತಾರನ ಇರುವಿಕೆ ಸಹ ಆಸ್ತಿಕ ಮನೋಭಾವವುಳ್ಳವರಿಗೆ ಹೃದಯ ಸಂವೇದ್ಯವಾಗಬಲ್ಲದು.

(ಆಸ್ತಿಕತೆ)

✧ ✧ ✧

ಕಣ್ಣು ಮೂಗು ಕಿವಿ ತಲೆ ಕೈ ಕಾಲು ನಮಗೆ ಕಾಣಸಿಗುತ್ತವೆ. ದೇಹಚ್ಛೇದನ ಮಾಡಿದರೆ ಒಳಗಿನ ಹೃದಯ ಶ್ವಾಸಕೋಶ ಇತ್ಯಾದಿ ಅಂಗಗಳು ತೋರುತ್ತವೆ. ಅವೆಲ್ಲ ಸ್ವಯಮಿಚ್ಛೆಯಿಂದ ಕೆಲಸ ಮಾಡುವುದಿಲ್ಲ. ಅವಕ್ಕೆ ಪ್ರೇರಣೆ, ಪ್ರಚೋದನೆ, ಆಜ್ಞೆ ಬೇಕು. ಇವುಗಳನ್ನು ನೀಡುವ ಮನಃಶಕ್ತಿ ಅಗೋಚರ. ಸರ್ವ ಅವಯವಗಳ ಕ್ರಿಯೆ, ಚಟುವಟಿಕೆ ಅದರ ಇಚ್ಛೆಯಂತೆ. ವಿಶ್ವ ಮತ್ತು ಅದರ ಹಿಂದಿರುವ ಚಾಲನ ಶಕ್ತಿಯ ನಂಟು ಈ ಬಗೆಯದು.

(ವಿಶ್ವ ಮತ್ತು ಅದರ ಚಾಲನ ಶಕ್ತಿ)



ನಿಸಾರರ ರಾಷ್ಟ್ರಪ್ರೇಮ ಕುರಿತ ಕವಿತೆಗಳ ಒಂದು ಪುಟ್ಟ ಯಾನ

◆ *ಸ. ಗಿರಿಜಾಶಂಕರ*

ಸಮಾಜವನ್ನು, ಅದರ ಸ್ಥಿತ್ಯಂತರಗಳನ್ನು ಸದಾ ತೆರೆದ ಕಣ್ಣಿನಿಂದಲೇ ನೋಡುವ ಅನಿವಾರ್ಯತೆ ಕವಿಯದು. ಹಾಗೆ ನೋಡುತ್ತಲೇ, ಅನುಭವಿಸುತ್ತಲೇ ಆ ಅನುಭವದ ಒಂದು ಬೀಸು ಕಾವ್ಯ ಸ್ಪರ್ಶಕ್ಕೆ ಸಿಕ್ಕು, ಪದಗಳಲ್ಲಿ ಅವಿತು ಹೊರ ಹೊಮ್ಮಿ ಹರಿಯುತ್ತದೆ. ಆ ಹರಿವಿನ ಮೊರೆತ ಒಂದು ಗೇಯತೆಯ ಚೌಕಟ್ಟಿಗೆ ಒಳಗಾಗಿ ಅದಕ್ಕೊಂದು ಭಾವ, ಲಯವೂ ಸೇರಿದಾಗ ಅದೊಂದು ಹಾಡಾಗುತ್ತದೆ. ನವೋದಯದ ಕಾಲದಲ್ಲಿ ಈ ರೀತಿಯ ಗೀತೆಗಳ ಧಾರೆ ಧುಮ್ಮಿಕ್ಕಿತು. ಆ ಬೆಟ್ಟ, ನದಿ, ಜಲಪಾತ, ಸೂರ್ಯ, ಚಂದ್ರರೂ ಈ ಇಳೆಯ ಸೌಂದರ್ಯ, ರೌದ್ರತೆಗಳೂ ಸಹ ಹಾಡಾಗಿ ಹರಿದವು. ಪ್ರಕೃತಿಯ ಎಲ್ಲಾ ಸಾಧ್ಯತೆಗಳೂ ಕವನವಾಗಿ ಮೂಡುತ್ತಿರುವಂತೆಯೇ ಮನುಷ್ಯನ ಬದುಕಿನ ಏರಿಳಿತ, ನೋವು, ವಿಷಾದ, ಸಂತಸಗಳೂ ಪದ್ಯವಾಗತೊಡಗಿದವು. ಸಮಾಜವನ್ನು ದಿಟ್ಟಿಸುತ್ತ, ಅದರ ಸೂಕ್ಷ್ಮ ಹೆಣಿಗೆಗಳನ್ನು ಗಮನಿಸುತ್ತ ಸ್ಪಂದಿಸಿದ ಕವಿ ಹೃದಯ ಸಮಾಜದಲ್ಲಾಗುತ್ತಿದ್ದ ಬದಲಾವಣೆ, ಸಾಮಾಜಿಕ ಸ್ಥಿತ್ಯಂತರಗಳತ್ತಲೂ ಮಿಡಿದು, ಅವನ್ನೂ ಕಾವ್ಯವಸ್ತುವಾಗಿಸಿಕೊಳ್ಳುತ್ತಾ ಸಾಗಿದಾಗ, ದೇಶ ಗುಲಾಮಿತನಕ್ಕೆ ಒಳಗಾದುದು, ಆ ಬಲಾಢ್ಯ ಹಿಡಿತದಿಂದ ದೇಶವನ್ನು ಬಿಡಿಸುವ, ಅದಕ್ಕೆ ಅಗತ್ಯವಾದ ಕೆಚ್ಚೆದೆಯನ್ನು ಬೆಳೆಸುವ—ಕಿಡಿಯಾಗಿ ಕೊರಡಿನ ಮೇಲೆ ಬಿದ್ದರೆ ಕಿಡಿಯೇ

ಬೂದಿಯಾಗುತ್ತದೆ, ಕಿಚ್ಚಾಗಿ ಬಿದ್ದಾಗ ಕೊರಡು ಉರಿದು ಭಸ್ಮವಾಗುತ್ತದೆ ಎಂಬಂತೆ— ಭಾರತಾಂಬೆಯ ಶೃಂಖಲೆಗಳನ್ನು ಕಿತ್ತೆಸೆಯುವ ಸ್ವಾತಂತ್ರ್ಯದ ಕಿಡಿ, ಕಿಚ್ಚಾಗಿ ಹಚ್ಚುವಂತೆ ಮಾಡುವಲ್ಲಿ ಕವಿಗಳು ವಹಿಸಿದ ಪಾತ್ರವೂ ಅತ್ಯಂತ ಪ್ರಮುಖವಾದುದು.

ಸ್ವಾತಂತ್ರ್ಯದ ಹಸಿವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅದಕ್ಕೆ ಅಗತ್ಯವಾದ ವೀರೋಚಿತ ಭಾವಗಳನ್ನು ಸ್ವಾತಂತ್ರ್ಯ ಹಾಗೂ ದೇಶಭಕ್ತಿ ಗೀತೆಗಳನ್ನು ನೀಡುವಲ್ಲಿ ಕನ್ನಡ ಕವಿಗಳೂ ಹಿಂದೆ ಬೀಳಲಿಲ್ಲ. ನವೋದಯ ಕಾವ್ಯದ ಬಹುತೇಕ ಕವಿಗಳಲ್ಲಿ ದೇಶಭಕ್ತಿ ಗೀತೆಗಳ ಒಂದು ಪರಂಪರೆಯನ್ನೇ ಕಾಣಬಹುದು. ಅಂದಿನ ಅವರ ಈ ಸ್ವಾತಂತ್ರ್ಯದ ಹಾಡಿನ ಮುಖ್ಯ ಉದ್ದೇಶ ಭಾರತಾಂಬೆಯನ್ನು ಮುಕ್ತಗೊಳಿಸುವ, ಕೋಟ್ಯಂತರ ಜನರ ಹೃದಯದಲ್ಲಿ ದೇಶ ಭಕ್ತಿಯ ಬೀಜ ಬಿತ್ತಿ, ಮುಂದೆ ದಾಸ್ಯರಹಿತ ಬದುಕಿನ ಫಸಲು ಬರುವಂತೆ ಮಾಡುವುದೇ ಆಗಿತ್ತು. ಹಾಗಾಗಿ ಅವರಿಗೆ ಕರ್ನಾಟಕ ಮಾತೆ, ಭಾರತ ಜನನಿಯ ತನುಜಾತೆಯಾದಳು. ಒಂದು ಮಹತ್ತಿನ ಭಾಗವಾಗಿ ಕನ್ನಡನಾಡು ಬೆಳೆಯಬೇಕೆಂಬ, ದೊಡ್ಡದರ ಒಂದಂಶ ವಾದರೂ ತನ್ನತನ ಬಿಡಬಾರದೆಂಬ ಹೆಬ್ಬಯಕೆಯೂ ಒಡಮೂಡಿತ್ತು. ದೇಶ ಸ್ವತಂತ್ರ ವಾದರೆ, ಕನ್ನಡ ನಾಡಿನ ನಿರ್ಮಾಣವಾಗುವುದು ಖಚಿತವೆಂಬ ನಂಬಿಕೆ ಇತ್ತು. ಹಾಗಾಗಿ ಬಹುತೇಕ ನವೋದಯ ಕಾಲದ ಹಿರಿಯ ಕವಿಗಳ ದೇಶಭಕ್ತಿ ಗೀತೆಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸುವ ಮುಖ್ಯ ಆಶಯ ಕಾಣುತ್ತದೆ.

ದೇಶ ಸ್ವಾತಂತ್ರ್ಯ ಪಡೆದು, ಭಾರತಾಂಬೆ ಮುಕ್ತಳಾದ ಅನಂತರದ ಕಾವ್ಯಗಳಲ್ಲಿ ಕನ್ನಡ, ಕನ್ನಡ ನಾಡು ಅದರ ರಕ್ಷಣೆ, ಬೆಳವಣಿಗೆ ಪ್ರಮುಖ ಆಶಯವಾಗಿ ಮೂಡಿಬಂತು. 'ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ, ಬಾಯ್ ಒಲಿಸಾಕಿದ್ರೂನೆ ಮೂಗ್ನಲ್ ಕನ್ನಡ ಪದವಾಡ್ತೀನಿ' ಎಂಬ ಖಚಿತ ಧೋರಣೆಯ ಕನ್ನಡದ ಉತ್ಕಟ ಪ್ರೀತಿಯ ಕವನಗಳು ಮೂಡತೊಡಗಿದವು.

ಈ ಹಿನ್ನಲೆಯಲ್ಲಿ ಕನ್ನಡದ ಹಿರಿಯ ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಕಾವ್ಯಲೋಕವನ್ನು ಪ್ರವೇಶಿಸಿದಾಗ, ಅವರ ದೇಶಭಕ್ತಿ ಗೀತೆಗಳ ಒಳಹೊಕ್ಕು ಓದ ತೊಡಗಿದಾಗ ಸ್ವಾತಂತ್ರ್ಯ ಬಂದ ಅನಂತರವೂ ದೇಶದ ಸ್ಥಿತಿಯ ಬಗ್ಗೆ ಹೊರಹೊಮ್ಮುವ ವಿಷಾದ, ನೋವು, ಸಿಟ್ಟು, ಆಕ್ರೋಶಗಳು ಪ್ರಮುಖವಾಗಿ ಕಾಣುತ್ತವೆ.

> 'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
> ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
> ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ'

ನಿತ್ಯೋತ್ಸವವನ್ನು ಕನ್ನಡ ತಾಯಿಗೆ ಹೇಳುವ ಕವಿ ಶಾಸನ, ಓಲೆಗರಿ, ದೇಗುಲಗಳ ಮೂಲಕ ತಾಯಿನಾಡಿನ ಸಮೃದ್ಧತೆಯನ್ನು ಆಪ್ತವಾಗಿಸುತ್ತಲೇ, 'ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ!' ಎಂದು ವಿಷಾದ, ನೋವಿನಿಂದ ಅವರ ಎದೆಯಾಳದಲ್ಲಿ ಕಾವ್ಯ ಮಡುಗಟ್ಟಿ ಹೊರಬರುತ್ತದೆ. ಪರಿಸ್ಥಿತಿ ತಂದಿರುವ ನಿರಾಸೆ ಈ ರೀತಿ ಕವನಗಳಲ್ಲಿ ದಟ್ಟವಾಗಿದೆ.

'ಅನ್ನವಿರದ ಹಸುಳೆಗಳ ತಬ್ಬಿ ಅಳುತಿರುವ ತಾಯ ಕಂಡೆ
ದುಃಖಪೂರ ಉಕ್ಕುಕ್ಕಿ ಮೊರೆಯೆ, ಕೊಚ್ಚಿತ್ತು ಬಾಳ ದಂಡೆ'
(ನಾಡದೇವಿಯೆ)

ಎಂಬ ಸಂಕಟದ ಸಾಲುಗಳ ಮೂಲಕ ಸ್ವತಂತ್ರ ದೇಶದ ನೋವಿನ ಸ್ಥಿತಿಗೆ ದನಿಗೊಡುತ್ತಾರೆ. ಸಮಾಜದ ಸ್ಥಿತಿಯನ್ನು ಕಂಡು ಮರುಗುತ್ತ, ಮಾರ್ದನಿಸುವ ಕವನದ 'ಕವಿ ಭಾವದ ಬಡಿಗೆ' ಸಮಾಜವನ್ನು ಎಚ್ಚರಿಸುತ್ತದೆ—ಈ ದಯನೀಯ, ಅನಪೇಕ್ಷಿತ ಸ್ಥಿತಿಯತ್ತ.

ನಿಸಾರರ ದೇಶಭಕ್ತಿ ಕವನಗಳು ದೇಶದ ಹಿರಿಮೆ, ಸ್ವಾತಂತ್ರ್ಯ ಪಡೆಯುವಾಗ ಆದ ತ್ಯಾಗ, ಬಲಿದಾನ, ಕಷ್ಟ, ಸಂಕಷ್ಟಗಳನ್ನು ಮೆಲುಕು ಹಾಕುತ್ತಲೇ ಸ್ವಾತಂತ್ರ್ಯಾನಂತರದಲ್ಲಿ ನಮ್ಮವರಿಂದಲೇ ಆಗುತ್ತಿರುವ ಅನ್ಯಾಯ, ನೋವುಗಳನ್ನು ಬಿಚ್ಚಿಡುತ್ತವೆ. ಅಲ್ಲಿ ದುಸ್ಸಹನೀಯ ವಿಷಾದವಿದೆ.

'ಸ್ವಾತಂತ್ರ್ಯದ ಜತೆಗೆ ಬಂದು ಕೂಡಲಿಲ್ಲ ಗಳಿಕೆ
ವ್ಯಕ್ತಿ ವ್ಯಕ್ತಿ ಬೆವರ ಹೀರಿ ಮರವಾಗಿದೆ ಮೊಳಕೆ'
(ಸ್ವಾತಂತ್ರ್ಯದ ಹಣತೆ)

ಎಂದು ಪರಿಸ್ಥಿತಿಯ ಅವಲೋಕನವೂ ಸ್ಪಷ್ಟವಾಗಿದೆ. ನವೋದಯ ಕವಿಗಳ ಸ್ವಾತಂತ್ರ್ಯ ಪಡೆಯುವ ಹಂಬಲದ ಉತ್ಕಟತೆಯಂತೆಯೇ, ಪಡೆದ ಸ್ವಾತಂತ್ರ್ಯ ಸ್ವಚ್ಛಂದವಾಗಬಾರದು ಮತ್ತು 'All are equal but some are more equal' ಎಂಬ ಜಾರ್ಜ್ ಆರ್‌ವೆಲ್‌ನ ಪುಸ್ತಕದ ಮಾತು ಇಲ್ಲಿ ನಿಜವಾಗಬಾರದು ಎಂಬ ತುಡಿತವಿದೆ.

ತಾಯಿ ಭಾರತಿಯನ್ನು ನೆನೆಯುತ್ತ, ಕೊಂಡಾಡುತ್ತ ಭೂಮಿಯ ಬಗೆಗಿನ ಒಲವನ್ನು ಅವರ ದೇಶಭಕ್ತಿಯ ಕವನಗಳು ಹೊರಹಾಕುತ್ತವೆ. ಹಾಗಾಗಿ

'ತಾಯಿ, ಭೂಮಿ ತಾಯಿ
ಸದಯಿ ಅಭಯದಾಯಿ'
(ಭೂಮಿ ತಾಯಿ)

ಯಾಗಿ ಅವರಿಗೆ ತೋರುತ್ತಾಳೆ. ನಿಸಾರರಿಗೆ ಸ್ವಾತಂತ್ರ್ಯಾನಂತರದ ಭಾರತ ಹಾಗೂ ಆಕೆಯ ತನುಜಾತೆ ಕರ್ನಾಟಕದ ಪರಿಸ್ಥಿತಿಯನ್ನು ನೋಡಿ ಮೂಡಿರುವ ಸಿಟ್ಟಿನ ಒಟ್ಟು ರೂಪ ಅವರ 'ಕುರಿಗಳು, ಸಾರ್, ಕುರಿಗಳು' ಕವನದಲ್ಲಿ ಚಿತ್ರಿತವಾಗಿದೆ.

ಕವನದ ಆರಂಭವೇ ಕತ್ತುಬಗ್ಗಿಸಿ ಮಂದೆ ನಡೆದಂತೆ ಮುಂದೆ ಸಾಗುವ ಕುರಿಗಳ ಹಿಂಡಿನಿಂದ ಆಗಿ, ಅನ್ಯಾಯ ನೋಡಿದರೂ ಪ್ರಶ್ನೆ ಮಾಡದ ಸಂತತಿಯೇ ನಿರ್ಮಾಣವಾಗಿ, ಬಲಿಗೆ ಪ್ರಶಸ್ತವಾದ ಕುರಿಯಂತೆಯೇ ಆಗಿ ಬಿಟ್ಟಿರುವ ಸಮೂಹವನ್ನು ಕವಿ ವಿಡಂಬನೆ ಮಾಡುತ್ತಾರೆ.

ಅಧಿಕಾರದ ಚುಕ್ಕಾಣಿ ಹಿಡಿದವರು ಕುರುಬರಾಗಿ, ಅವರ ಹುಕುಂನಂತೆ ಗೋಣಾಡಿಸುವ ಮಂದೆಯಲ್ಲಿ ಒಂದಾಗಿ, ಪ್ರತಿಭಟಿಸದೆ ಪಾಲಿಗೆ ಬಂದದ್ದು ಪಂಚಾಮೃತ ವೆಂಬಂತೆ ಸ್ವೀಕರಿಸುವ ಸ್ಥಿತಿಯ ಚಿತ್ರಣವನ್ನು ಕವಿ ನಿಸಾರ್ ನೀಡುತ್ತಾರೆ.

ಕವನ, ನವ್ಯದ ಧಾಟಿಯಲ್ಲೇ ಮೂಡಿ ಬಂದರೂ ಅದಕ್ಕೊಂದು ಸ್ಪಷ್ಟವಾದ ಬಂಧವಿದೆ. ಜಾಳುಜಾಳಾಗದೆ ಪ್ರತಿ ಪದವನ್ನೂ ಕವಿ ಅರ್ಥವತ್ತಾಗಿ ಬಳಸಿ, ದುಡಿಸಿ ಕೊಳ್ಳುತ್ತಾರೆ. ಕುರಿಯ ಪ್ರತಿಮೆ ಶಕ್ತವಾಗಿ ಮೂಡಿ ಬಂದಿದೆ. ಬುದ್ಧಿವಂತ ಪ್ರಾಣಿಯಾದ ಮನುಷ್ಯನ ಮೊಂಡಾದ ಮನಃಸ್ಥಿತಿಯನ್ನು ಚುಚ್ಚುವ, ಬೆದಕುವ ಪ್ರಸ್ತುತ ರಾಜಕೀಯ, ಸಾಮಾಜಿಕ ಸ್ಥಿತಿಯನ್ನು ಬಿಚ್ಚಿಡುವ ಪ್ರಯತ್ನ ಇಲ್ಲಿದೆ. ಸ್ವತಂತ್ರ ಭಾರತದಲ್ಲಿ ಸ್ವಂತಿಕೆಯಿರದ ಜನಸ್ತೋಮ, ಅಧಿಕವಾಗುತ್ತಿರುವ ವಿಷಾದ ಹಾಗೂ ರೋಷ, ಕೆಚ್ಚುಗಳನ್ನೇ ಮರೆತು 'ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ' ಒಂದು ಮೂಕ ಸಮೂಹದ ಚಿತ್ರಣವನ್ನೂ ನೀಡುತ್ತಾರೆ.

ಸ್ವಾತಂತ್ರ್ಯ ಪಡೆಯಲು ಬೇಕಾದ ಧೀರೋದಾತ್ತತೆಯನ್ನು ಮೆರೆಸುವ ನವೋದಯದ ಕವನಗಳಿಗಿಂತ, ಅನಂತರ ಸ್ವಾತಂತ್ರ್ಯ ಬಂದ ಹಿಗ್ಗಿನ ಹಾಡುಗಳಿಗಿಂತ ಭಿನ್ನವಾಗಿ ರಾಜಕೀಯ, ಸಾಮಾಜಿಕ ಸ್ಥಿತಿಯ ಶೋಚನೀಯ ಚಿತ್ರಣವನ್ನು ಅತ್ಯಂತ ವಿಡಂಬನಾತ್ಮಕ ವಾಗಿ ನಿಸಾರರು ಈ ಕವನದಲ್ಲಿ ಹೇಳುತ್ತಾರೆ.

ಕುರಿ, ಸಹಜವಾಗಿ ಸೊಲ್ಲೆತ್ತದ ಪ್ರಾಣಿ. ಹಾಯುವ, ಒದೆಯುವ ಗೊಡವೆಗೆ ಹೋಗದೆ ಕಟುಕನ ಕತ್ತಿಗೆ ಕತ್ತೊಡ್ಡುವ ಮುಗ್ಧಜೀವಿ. ಇದನ್ನು ಒಂದು ಶಕ್ತ ಪ್ರತಿಮೆ ಯಾಗಿಸಿ ದೇಶದ ಜನರ ಮನಃಸ್ಥಿತಿಯನ್ನು ಅದಕ್ಕೆ ಸಮೀಕರಿಸಿ ನಮ್ಮ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸಲು ಯತ್ನಿಸಿದ್ದಾರೆ. ಪ್ರತಿ ಪ್ರಜೆ ತನ್ನ ಆತ್ಮಾವಲೋಕನ ಮಾಡಿಕೊಳ್ಳಲು ಅನುವು ಮಾಡುವ ಕವನವಾಗಿದೆ, 'ಕುರಿಗಳು, ಸಾರ್, ಕುರಿಗಳು.'

ಕವಿ ನಿಸಾರರ ದೇಶ-ಭಾಷೆಯ ಕವನಗಳಲ್ಲಿ ಪ್ರಮುಖವಾಗಿರುವುದು ಈ ದೇಶದ ಪ್ರಾಕೃತಿಕ ಸಂಪತ್ತಿನ ಬಗ್ಗೆ ಅವರಿಗಿರುವ ಹೆಮ್ಮೆ. ಅದನ್ನು ಎಷ್ಟು ಬಣ್ಣಿಸಿದರೂ ಸಾಲ ದೆನ್ನುವಂತೆ ಅವರು ಅನೇಕ ಕವನಗಳಲ್ಲಿ ತಾಯಿ ಭಾರತಿಯನ್ನು ಕೊಂಡಾಡುತ್ತಾರೆ. ಭಾರತಾಂಬೆಯ ಒಡಲಿನ ಸಮೃದ್ಧತೆಯನ್ನು ಬಣ್ಣಿಸುವಂತೆಯೇ ಕನ್ನಡ ನಾಡಿನ ವೈಭವವೂ ಅವರನ್ನು ಆಕರ್ಷಿಸಿದೆ.

'ನಿತ್ಯೋತ್ಸವ'ದಲ್ಲಿ ತುಂಗೆ, ತೆನೆ, ಅದರ ಬಳುಕು, ಸಹ್ಯಾದ್ರಿಯ ಉತ್ತುಂಗತೆ, ತೇಗ ಗಂಧಗಳ ನಿತ್ಯ ಹರಿದ್ವರ್ಣದ ಕಾನನ, ಶಾಸನ, ಸಿಂಹಾಸನಗಳ ಒಂದು ವೈಭವಪೂರ್ಣ ಹಾಡನ್ನು ನೀಡುವ ಅವರು, 'ರಾಷ್ಟ್ರವಂದನೆ'ಯಲ್ಲಿ

'ಚೆಲು ನಾಡಿಗೆ ಎಲ್ಲಿರುವುದು ಪೃಥ್ವಿಯಲ್ಲಿ ಹೋಲುವೆ?' (ರಾಷ್ಟ್ರ ವಂದನೆ)

ಎಂದು ಕೇಳುತ್ತಲೇ,

'ಹಿಮದ ಜಡೆಯ ಬಿಲ್ಲೆ ತಲೆಗೆ, ಕಡಲ ಕಾಲ ಕಡಗ ಕೆಳಗೆ' (ಅದೇ)

ಎಂದು ದೇಶದ ಸೌಂದರ್ಯವನ್ನು ಹಿಡಿದಿಡುತ್ತಲೇ, 'ಭೇದಭಾವ ನೀಗಬೇಕು, ದುಡಿದು ಹಿರಿಮೆ ಗಳಿಸಬೇಕು' ಎಂದು ನುಡಿಯುತ್ತ, ಸೌಹಾರ್ದತೆ ಇನ್ನೂ ಮೂಡಿಲ್ಲವೆಂಬ ಎಚ್ಚರಿಕೆಯ ಮಾತನ್ನೂ ಸೇರಿಸುತ್ತಾರೆ.

ಕವಿಗೆ ತಾಯಿ ಭಾರತಿಯನ್ನು ಎಷ್ಟು ಹಾಡಿ ಹೊಗಳಿದರೂ ಸಾಲದು. 'ರಾಷ್ಟ್ರವಂದನೆ' ಕವನದಂತೆಯೇ 'ಮಹಿಮವಂತೆ ಭಾರತಿ'ಯಲ್ಲಿ 'ಗಂಗೆ ಯಮುನೆ ಆಕೆಯ ಕಿವಿಯ ಓಲೆಯಾದರೆ, ಗೋದಾವರಿ ಮೇಖಲೆ'ಯಾಗಿಬಿಡುತ್ತಾಳೆ.

ಕವಿ ನಿಸಾರರಿಗೆ ಕನ್ನಡ ಭಾಷೆ ಸಹ ಒಂದು ಆಪ್ತವಾದ ಅನುಭವ. ನಾಡನ್ನು ವಿವರಿಸುವಾಗಲೂ 'ಎಲ್ಲಿ ಎಲ್ಲಿ ರಮ್ಯ ತಾಣ, ಅಲ್ಲಿ ನಿನಗೆ ವಂದನ, ಎಲ್ಲಿ ಎಲ್ಲಿ ಪುಣ್ಯ ಧಾಮ, ಹೂವು ದವನ ಚಂದನ'ವೆಂದು ಭಕ್ತಿಭಾವದಿಂದ ನೆನೆಯುತ್ತಾರೆ. ಅವರಿಗೆ ಈ ನಾಡು 'ಮುಗಿಸಲಾಗದು ಅದನು ಮಾತಿನಲಿ ಒರೆದು' ಎಂಬಂಥ ಸಮೃದ್ಧಿಯನ್ನು ಪಡೆದ ನಾಡು. ಕನ್ನಡತಿ, ಕವಿಗೆ 'ವಾತ್ಸಲ್ಯಾಭಯ ಅಮೃತ ಹಸ್ತೆ'ಯಾಗಿ ತೋರುತ್ತಾಳೆ.

ಕನ್ನಡವೆಂದರೆ ಕವಿಗೆ ಅದೊಂದು ಕೇವಲ ಭಾಷೆಯಾಗದೆ, ಒಂದು ಸೀಮಿತ ಪ್ರದೇಶದ ಆಡು ಮಾತಾಗದೆ, ಅದಕ್ಕೊಂದು ಹಿರಿದಾದ ಅರ್ಥವಿದೆಯೆಂಬ ಖಚಿತ ಧೋರಣೆಯಿದೆ. 'ಅದು ಅಸೀಮ, ಅದು ಅದಿಗಂತ; ಭೂಪಟ, ಗೆರೆ ಚುಕ್ಕೆಯನ್ನು ಮೀರಿದ ವಿಶಾಲವಾದ ಒಂದು ಸಂಸ್ಕೃತಿಯ ಸಾಕಾರ'ವಾಗಿ ಕಂಡಿದೆ.

ನಿಸಾರರ ದೇಶಭಕ್ತಿ ಕವನಗಳ್ನು ಓದುತ್ತಾ ಹೋದಂತೆ ಅವುಗಳಲ್ಲಿ ಹೆಮ್ಮೆಯಿದೆ, ಹೆಗ್ಗಳಿಕೆಯಿದೆ, ನೋವಿದೆ, ವಿಷಾದವಿದೆ, ಸಿಟ್ಟಿದೆ, ವಿಡಂಬನೆಯೂ ಮೈಗೂಡಿದೆ ಎಂಬ ಅಂಶ ವಿದಿತವಾಗುತ್ತದೆ. ದೇಶದ ವೈಭವವನ್ನು ವಿವರಿಸುವ ಆವೇಶದಲ್ಲಿ ಅವರು ಸ್ವತಂತ್ರ ದೇಶದ ಪ್ರಚಲಿತ ಸ್ಥಿತಿಯನ್ನು ಮರೆಮಾಚದೆ ಆ ವ್ಯಥೆಯನ್ನು ಹೊರಹಾಕುತ್ತಾರೆ.

'ರಾಷ್ಟ್ರ ಪ್ರೀತಿಯುಕ್ಕಿ ಮೊರೆವ ಗೀತೆ ಬಯಸುತಿರುವಿರಿ
ನಾಡ ಹಿರಿಮೆ ವೈಭವಗಳ ಹೊಗಳಲಾಶಿಸಿರುವಿರಿ
ಹೇಗೆ ನಾನು ಬರೆಯಲಿ?
ನಿಜವ ಮರೆಸಿ ಒರೆಯಲಿ?'

ಎಂದು 'ನೀವು ಬಯಸುವ ಗೀತೆ'ಯಲ್ಲಿ ವಿಷಾದಿಸುತ್ತಾರೆ.

'ಆಗ ನಾಡ ಸೊಂಪ ಪೆಂಪ ಮನವ ತುಂಬಿ ಹಾಡಿದೆ
ಆದರೀಗ ಖೇದ, ಶೋಕ ದನಿಗೆ ಲಗ್ಗೆ ಹೂಡಿದೆ
ಜೀವ ಮುದವ ಕರೆವುದೆ?
ಬೇವು ಜೇನ ಸುರಿವುದೆ?'

(ಅದೇ)

ಈ ಪ್ರಶ್ನೆಗಳನ್ನು ಕವಿ ಸಹೃದಯರ ಮುಂದಿಡುತ್ತಾ ತಮ್ಮ ನೋವಿಗೆ ದನಿಗೊಡು ತ್ತಾರೆ. ಇಲ್ಲಿ ಸ್ವಾತಂತ್ರ್ಯೋತ್ತರದ ದೇಶಪ್ರೇಮವನ್ನು, ನಾಡಿನ ಪ್ರೀತಿಯನ್ನು ಕವನ ವಾಗಿಸುವ ತವಕದಷ್ಟೇ ನಮ್ಮ ಸಾಮಾಜಿಕ ಬದುಕು ಕಳೆದುಕೊಳ್ಳುತ್ತಿರುವ ಸೊಗಸು, ಸ್ವಾತಂತ್ರ್ಯಪೂರ್ವದಲ್ಲಿದ್ದ ಅಸಮಾನತೆ, ಬಡತನ, ಜಾತಿಯ ಕಂದಕಗಳು ಇನ್ನೂ ಹಿಗ್ಗುತ್ತಿರುವುದನ್ನು ಹೇಳುವ ಅವಸರವೂ ಇದೆ. ರಾಜಕೀಯ ಸ್ಥಿತಿಯ ಅಧೋಗತಿಯ ಚಿತ್ರಣ, ಅದರ ಟೀಕೆ, ವಿಡಂಬನೆಗಳೂ ತುಂಬಿವೆ. ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ

ಸ್ಥಿತಿಗಳೆರಡಕ್ಕೂ ಸಾಕ್ಷಿಯಾಗಿರುವ ನಿಸಾರರು ತಮ್ಮ ಕವನಗಳಲ್ಲಿ ಸ್ವಾತಂತ್ರ್ಯಾನಂತರದ ಸ್ಥಿತಿಯನ್ನು ಚಿತ್ರಿಸಲು ದೇಶದ ನಿಸರ್ಗ ಸಂಪತ್ತು, ಅದರ ಹಿರಿಮೆ ಹಾಗೂ ಪರಂಪರೆಗಳನ್ನು ತೆಗೆದುಕೊಂಡು ಸೌಂದರ್ಯದ ಸೆರಗನ್ನು ಬಣ್ಣಿಸುತ್ತಲೇ, ಅದರ ಒಳ ಹೆಣಿಗೆಯಲ್ಲಿ ದಟ್ಟೈಸಿ ಅವಿತಿರುವ ಎಲ್ಲಾ ವಿಪ್ಲವ, ಜನ ವಿರೋಧಿ ನೀತಿ, ಮರೆತ ಮಾನವೀಯತೆ, ಬಗಲಲ್ಲೆ ಬಿಗಿಯಾಗಿಟ್ಟುಕೊಂಡ ಅಸಮಾನತೆಗಳನ್ನು ಹೊರಗೆಡುವುತ್ತಾರೆ.

ನಿಸಾರರ ರಾಷ್ಟ್ರಭಕ್ತಿ ಮತ್ತು ರಾಷ್ಟ್ರಪ್ರೇಮಗಳನ್ನು ಬಿಂಬಿಸುವ ಕವನಗಳಲ್ಲಿ ಯಾನ ಮಾಡಿದರೆ ದೇಶ-ಭಾಷೆಯ ಬಗ್ಗೆ ಮನ ತುಂಬಿ ಬರುವಂತೆಯೇ, ಸ್ವಾತಂತ್ರ್ಯ ಬಂದು ಐದು ದಶಕ ಮೀರಿದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಉಳಿದಿರುವ ತಾರತಮ್ಯ, ಅಸಮಾನತೆ, ಬಡತನ-ಸಿರಿತನದ ಅಂತರ, ಅನ್ಯಾಯವನ್ನು ಸಹಿಸಿ ಸುಮ್ಮನಾಗುತ್ತಿರುವ ಸಮೂಹ, ಇವೆಲ್ಲವುಗಳ ಜತೆ ಪ್ರಯಾಣಿಸಿದ ಅನುಭವವಾಗುತ್ತದೆ. ರಮ್ಯತೆಯೇ ಕವನದ ಮುಖ್ಯ ಉದ್ದೇಶವಾಗದೆ, ವಿಚಾರಕ್ಕೆ ಹಚ್ಚುವ ಹಾಗೂ ಸಾಮಾಜಿಕ ದೃಷ್ಟಿಕೋನವನ್ನು ಹೊಂದಿದ ಕವಿತೆಗಳಾಗಿಯೂ ನಮ್ಮ ಮುಂದೆ ನಿಲ್ಲುತ್ತಾ ದೇಶದ ಭವ್ಯತೆ-ವಾಸ್ತವತೆಗಳು ಮೇಳೈಸಿದ ಕವನಗಳಾಗಿ ಕಾಣುತ್ತವೆ.

ಈ ಕವಿಗೆ, ಭಾರತೀಯ ರತ್ನಗರ್ಭದಲ್ಲಿ ಜನಿಸಿದ ಮಹಾ ಮಹಿಮರ ಪರಂಪರೆಯಲ್ಲಿ ಬಂದವನೆಂಬ ಹೆಗ್ಗಳಿಕೆಯಿದೆ. ಹಾಗಾಗಿಯೇ—

'ನಿನ್ನಮರ ಸಂತಾನದಲ್ಲಿ ದೊರಕಿದೆ ಸ್ಥಾನ
ಅದಕಿಂತ ಬೇರಿಲ್ಲ ಬೇರೆ ಮಾನ'

(ಅತಿ ಸನಾತನ)

ಎಂಬ ಕೃತಜ್ಞತಾ ಭಾವ ಕವಿಯದು. ಹಾಗಾಗಿ ಸದಾ—


'ಎದೆಯ ಸವಿಯ ಹಾಲ ಕುಡಿಸಿ
ಹಕ್ಕಿಯಿಂಪ ವೀಣೆ ನುಡಿಸಿ
ಸಲಹುತಿರುವ ತಾಯ ಮನದಿ
ನೆನೆಯುತಿರಲಿ ಜನಪದ'

(ರಾಷ್ಟ್ರವಂದನೆ)

ಎಂಬ ಎತ್ತರದ ನಿರೀಕ್ಷೆಯನ್ನು ದೇಶದ ಬಗ್ಗೆ ಕವಿ ವ್ಯಕ್ತಪಡಿಸಿದ್ದಾರೆ.

ಅನುಭವವಿಲ್ಲದೆ ಹಿರಿಯ ಲಾಭದ ಆಸೆಯಿಂದ ದೊಡ್ಡ ಯೋಜನೆಗೆ ಕೈ ಹಾಕಬಾರದು. ಮಾಂಸದ ಚೂರು ದೊಡ್ಡದಾಗಿದೆ ಎಂದು ಬಾಯಿಗೆ ಹಾಕಿ ಕೊಂಡರೆ ಅದರಲ್ಲಿನ ಮೂಳೆಯೂ ದೊಡ್ಡದಾಗಿದ್ದು ಗಂಟಲಲ್ಲಿ ಸಿಕ್ಕಿ ಒದ್ದಾಡಿಸಬಹುದು.

(ಅಳವಿನ ಅರಿವು)



ನಿಸಾರರ
ನಾಡು, ನುಡಿಯ ಕಾಳಜಿ

♦ ಡಾ. ಕಮಲ ಹಮ್ಮಿಗೆ

ತಮ್ಮ ಹನ್ನೆರಡು ಕವನ ಸಂಕಲನಗಳಲ್ಲಿ ಸಾಮಾಜಿಕ ಕಳಕಳಿ, ನಿಸರ್ಗ ಪ್ರೀತಿ, ವಿಡಂಬನೆ, ನಾಡು ನುಡಿಯನ್ನು ಕುರಿತ ಕಾಳಜಿಗಳನ್ನು ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಪ್ರಕಟಿಸಿದ್ದಾರೆ. ಅವರಿಗೆ ಕವಿತೆ ಒಂದು 'ಲಕ್ಷುರಿ'ಯಾಗಿಲ್ಲ. ಅದೊಂದು ನಿತ್ಯ ಮಂಥನ; ಆತ್ಮಶೋಧ; ಅವುಗಳಿಂದ ಫಲಿತವಾದ ಚೈತನ್ಯ.

'ಮನಸು ಗಾಂಧಿ ಬಜಾರು' ಅವರ ಮೊದಲನೆಯ ಕೃತಿ. ೧೯೬೦ರಲ್ಲಿ ಪ್ರಕಟವಾದಾಗಲೇ ಕಾವ್ಯಾಸಕ್ತರನ್ನು ತಲೆದೂಗುವಂತೆ ಮಾಡಿತ್ತು. ನವೋದಯದ ಭಾವ ಪರವಶತೆ ಅದರಲ್ಲಿತ್ತು. ಜತೆಗೆ ಕುವೆಂಪುರವರ ನಿಸರ್ಗ ಪ್ರೇಮ, ವೈಚಾರಿಕತೆ, ನಾಡು ನುಡಿಯ ಕಳಕಳಿಗಳು ಗಾಢ ಪ್ರಭಾವ ಬೀರಿದ್ದವು.

ಬೆಂಗಳೂರಿನಿಂದ ಶಿವಮೊಗ್ಗೆಗೆ ಹೋದಾಗ ಒದಗಿದ ಪ್ರಕೃತಿಯ ಐಸಿರಿ, ಧ್ಯಾನಸ್ಥ ಸ್ಥಿತಿಯನ್ನು ಮತ್ತು ತಾತ್ವಿಕತೆಯನ್ನು ಒದಗಿಸಿತು. ಕವಿ, ಬಿಡುವಿನಲ್ಲಿ ಗದ್ಯ ಬರೆಯುತ್ತಾ ಎರಡು ಪ್ರಶ್ನೆಗಳನ್ನು ತಮಗೇ ಕೇಳಿಕೊಂಡರು.

'ಆತ್ಮ ಕೇಂದ್ರಿತ ಕವಿತೆ ಸರಿಯೆ?' ಮತ್ತು 'ಸಾಂಸ್ಕೃತಿಕವಾಗಿ ಎರಡು ದೋಣಿಗಳಲ್ಲಿ ಏಕ ಕಾಲಕ್ಕೆ ಪಯಣಿಸಬಹುದೆ?' ಎಂದು.

'ನಾನೆಂಬ ಪರಕೀಯ'ದಲ್ಲಿ ಈ ಕುರಿತ ಜಿಜ್ಞಾಸೆಗಳಿವೆ. ಸಾಂಸ್ಕೃತಿಕ ಭಿನ್ನತೆಗೆ ಕವಿಯೇ ಕಂಡುಕೊಂಡ ಉತ್ತರ:

'ವಿರುದ್ಧಗಳನ್ನೊಪ್ಪುವೆ ಆದರೆ, ಕೂಡಿಸದೆ
ಭಿನ್ನತೆಯನರಿಯುವೆ, ಆದರೆ ತಿಕ್ಕಾಡಿಸದೆ...'

(ಇಬ್ಬಂದಿ)

ಅನಂತರ, ಅವರು ಅತ್ತಿತ್ತ ಕತ್ತು ಹೊರಳಿಸದೇ ಕಾವ್ಯಕೃಷಿಯಲ್ಲಿ ತೊಡಗಿದರು. ಎರಡು ಸಂಸ್ಕೃತಿಗಳನ್ನೂ ಸಮಾನವಾಗಿ ಗೌರವಿಸುವ ಪ್ರೌಢತೆ ಮೈಗೂಡಿತು. ಭಾಷಾ ಪ್ರಯೋಗಕ್ಕೂ ಇದು ಸಾಧಕವಾಯಿತು. (ರಿವಾಜು, ದೇಖರೇಖಿ ಶಬ್ದಗಳಂತೆಯೇ ಕಿಷ್ಕಿಂಧೆ, ಯಜ್ಞ ಮುಂತಾದವೂ ಧಾರಾಳವಾಗಿ ಕಾಣಸಿಗುತ್ತವೆ.)

ನಿಸಾರರು, ಯಾವುದೇ ಪಂಥದ ಲೇಬಲ್ಲನ್ನು ಹಚ್ಚಿಕೊಂಡವರಲ್ಲ. ಅವರಿಗೆ ಕೆ.ಎಸ್.ನ., ಕುವೆಂಪುರವರಂತೆಯೇ ಅಡಿಗರೂ ಪ್ರಿಯರು. ತಂತ್ರದ, ವಿಡಂಬನೆಯ ವಿಷಯಕ್ಕೆ ನವ್ಯವೂ ಅವರಿಗೆ ಗ್ರಾಹ್ಯವಾಯಿತು. ಬಂಡಾಯದ ಛಾತಿ ಮತ್ತು ಸವಾಲುಗಳೂ ಕಾವ್ಯದಲ್ಲಿ ಊರಿದವು.

ಆ ಪಂಥದ ಇತ್ಯಾತ್ಮಕ ಅಂಶಗಳನ್ನೂ ನಿಸಾರರು ಗ್ರಹಿಸಿದ್ದಾರೆ. ಆದರೂ ಅವರಿಗೆ ಹಿಂಡನಗಲಿದ ಕುಂಜರದಂತೆ, ತಳಮಳವಿರದೆ, ಒಬ್ಬಂಟಿತನದಲ್ಲಿ ಚಿಂತನಾಮಗ್ನವಾಗು ವುದು ಪ್ರಿಯ. ಬೆಂಗಳೂರಿನಲ್ಲಿ ಇದ್ದಾಗ ಶಿವಮೊಗ್ಗೆ, ಶಿವಮೊಗ್ಗೆಯಲ್ಲಿದ್ದಾಗ ಬೆಂಗಳೂರು ಅವರ ಕನಸಿನ ಭೂಮಿಕೆಗಳು. ಇದು ಅವರ ಕಾವ್ಯದ ಅಂತರ್ಲೋಕ. ಕವಿ ತನ್ನ ಅಂತರ್ವಾಣಿಗೆ ಬದ್ಧನಾಗಿರಬೇಕು. ಇದು ಅವರ ಬದ್ಧತೆ. ಆದರೆ ಕವಿಯನ್ನು ಬಿಟ್ಟು ಸಮಾಜವಿಲ್ಲ.

'ಕವಿ ನಿಸಾರರ ದೇಶಪ್ರೇಮ ಮತ್ತು ಭಾಷಾ ಪ್ರೇಮಗಳು ಅಸೀಮ ಹಾಗೂ ಅನವದ್ಯ. ಮಹಿಮವಂತೆ ಭಾರತಿಯ ಬಸಿರಲ್ಲಿ ಬಂದದ್ದೇ ಪುಣ್ಯವೆಂದು ಅವರು ಹಿಗ್ಗುತ್ತಾರೆ' ಎಂಬುದಾಗಿ ಹಿರಿಯ ಸಾಹಿತಿ ಡಾ. ದೇ.ಜ.ಗೌ. ಒಂದೆಡೆ ನುಡಿದಿದ್ದಾರೆ. ಇದು ಎರಡು ಸಂಸ್ಕೃತಿಗಳನ್ನು ಅರಗಿಸಿಕೊಂಡ ನಿಸಾರರ ಕಾವ್ಯದ ಮಹತಿಯನ್ನು ಸ್ಪಷ್ಟಪಡಿಸು ತ್ತದೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯವರ ಬಗೆಗೆ ಅವರು ಹಲವಾರು ಕವನಗಳನ್ನು ಬರೆದಿರುವುದು, ಕುವೆಂಪು ಅವರಂತೆ ಕರ್ನಾಟಕ ಮೊದಲು ಭಾರತ ಜನನಿಯ ತನುಜಾತೆ, ಅನಂತರ ನಮ್ಮ ಮಾತೆ ಎಂಬ ಆಶಯವನ್ನೇ ಪರೋಕ್ಷವಾಗಿ ಸೂಚಿಸುತ್ತದೆ. ಮೊದಲನೆಯ ಸಂಕಲನದಲ್ಲೇ 'ದಾರಿದೀಪ'ದಂಥ ಪ್ರಬುದ್ಧ ಕವನ, 'ಮಮತೆಯ ತಾತ ಗಾಂಧಿ'ಯ ಚಿತ್ರವನ್ನು ಕಣ್ಣು ಮುಂದಿರಿಸುತ್ತದೆ.

'ಎಲೆಲೆ ತಂದೆ
ನಿನ್ನ ವಿಭಜಿಸಿ, ಸೋಸಿ ಸೋಸಿ ತೆಗೆದರು ಕೂಡ
ಬಂಗಾರವಲ್ಲದೆ, ಕಾಗೆ-ಬಂಗಾರವಲ್ಲ'

(ದಾರಿದೀಪ)

ಎಂದು ಅತ್ಯಂತ ಗೌರವಯುತವಾಗಿ, ನುಡಿ ನಮನ ಸಲ್ಲಿಸುತ್ತಾರೆ, ಕವಿ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಸಂಭ್ರಮ, ಪುಳಕಗೊಳಿಸಿದ್ದಕ್ಕೆ 'ನೆನೆದವರ ಮನದಲ್ಲಿ' ಅಕ್ಷರ ಶಾಸನಗಳಿವೆ. ಕವಿ ಅದುವರೆಗೆ ಗೇಯಗೀತೆಗಳತ್ತ ಗಮನ ಹರಿಸಿರಲಿಲ್ಲ.

'ನೆಲ ನಮ್ಮದು, ಜಲ ನಮ್ಮದು', ಆಕೃತಿಯಲ್ಲಿ ನವ್ಯ ರೀತಿಯಲ್ಲಿದ್ದರೂ ಹಾಡಿಗೆ ದಕ್ಕುತ್ತದೆ.

'ತೆನೆ ಹೊರಳಿತು ನನೆ ಅರಳಿತು
ಮುಂಗಾರಿನ ತೆರೆಗೆ;
ಹಸಿರಾಡಿತು ಉಸಿರಾಡಿತು
ನೆಲ ಮುಕ್ತಿಯ ನೆರೆಗೆ'

(ನೆಲ ನಮ್ಮದು)

ನಮ್ಮ ದಾಸ್ಯ ಕಳೆಯಿತೆಂಬುದನ್ನು ಕವಿ ಉತ್ಸಾಹದ ಲಯದಲ್ಲಿ ಉಲಿದಿದ್ದಾರೆ. ಮುಂದೆ 'ಸೋದರತೆಯ ಬೆಸುಗೆ ಕುಂದದಂತೆ' ಎಂಬ ಮಾತಿನಲ್ಲಿರುವ ಆರ್ದ್ರತೆ ಮನ ಮುಟ್ಟುತ್ತದೆ. ನವೋದಯದ ಕವಿಗಳೆಲ್ಲಾ ಇಂಥ ಕವನಗಳನ್ನು ಒಂದಿಲ್ಲೊಂದು ಸಲ ಬರೆದಿರುವುದನ್ನು ಕಾಣುತ್ತೇವೆ. (ಕುವೆಂಪುರವರ 'ಸ್ವಾತಂತ್ರ್ಯೋದಯ ಮಹಾಪ್ರಗಾಥ' ಇವಕ್ಕೆಲ್ಲ ಕಳಶವಿಟ್ಟಂತಿದೆ). 'ಓ ಪರ್ವತ ಚಕ್ರವರ್ತಿ' ಹಿಮಾಲಯವನ್ನು ಕುರಿತಿದ್ದರೆ, ವೀರ ಯೋಧರನ್ನು 'ಅಭಿವಂದನೆ ನಿಮಗೆ' ಪದ್ಯದಲ್ಲಿ ವಂದಿಸುತ್ತಾರೆ, ನಿಸಾರ್. ಅವರನ್ನು 'ದಿವಗಾಮಿ'ಗಳೆಂದು ಪ್ರಶಂಸಿಸಿದ್ದಾರೆ.

'ಲೇಸೆ ಕೇಳಿಸಲಿ ಕಿವಿಗೆ, ಲೇಸೆ ಕಾಣಿಸಲಿ ಕಣ್ಗೆ' ಎಂಬ ಬೇಂದ್ರೆಯವರ ಆಶಯ ಕವಿಯ ಮೇಲೆ ಗಾಢ ಪ್ರಭಾವ ಬೀರಿದೆ. 'ನಡೆ-ನುಡಿ' ಒಂದೇ ಆಗಿರಬೇಕೆಂಬ ಸಂಕಲ್ಪ ವಚನಕಾರರದ್ದೂ ಕೂಡ. 'ನುಡಿಯೊಳಗಾಗಿ ನಡೆಯದಿರ್ದಡೆ ಕೈಯೊಳಗಿರ್ಪ ಲಿಂಗ, ಘುಟಸರ್ಪವಪ್ಪುದಯ್ಯಾ' ಎಂಬ ಮಾತು ರೋಮಾಂಚನ ಹುಟ್ಟಿಸುವಂಥದ್ದು. ಇವನ್ನು ಗ್ರಹಿಸಿ ತಮ್ಮದೇ ಶೈಲಿಯಲ್ಲಿ ಹೀಗೆನ್ನುತ್ತಾರೆ ಕವಿ:

'ಹಾಡಿದಂತೆ ಮಾತಾಡಿದಂತೆ
ನಾ ಮಾಡಲೆಂದು ಕಲಿಸು
ನುಡಿ, ನಡೆಗೆ ಸೇತು ಕಟ್ಟಿ'

(ನಡೆ-ನುಡಿ)

'ಕಟ್ಟಿ ಸೇತು' ಎಂಬ ಪ್ರಯೋಗ, ಹೆಚ್ಚು ಸೂಕ್ತವಾಗುತ್ತಿತ್ತು; ಇರಲಿ. ಇಲ್ಲಿ ಕವಿತೆಗೆ ಮೂರನೆಯ ಆಯಾಮವೊಂದು ಪ್ರಾಪ್ತವಾಗಿದೆ. ಆದರ್ಶಕ್ಕಿಂತ ವಾಸ್ತವ ಮುಖ್ಯ ಎಂದು ಕವಿ ಸೂಚಿಸಿರುವುದು ಮನವರಿಕೆಯಾಗುತ್ತದೆ. ಹದ್ದು ಏಳುವುದು ನೆಲದಿಂದ, ಮತ್ತು ಅದರ ದೃಷ್ಟಿ ಕೊಳಕಿನತ್ತಲೇ ಎಂಬ ಉಪಮೆ ಅರ್ಥಪೂರ್ಣವಾಗಿದೆ.

೧೯೬೭ರಲ್ಲಿ ಹೊರ ಬಂದ 'ಸುಮುಹೂರ್ತ' ಸ್ವಾತಂತ್ರ್ಯೋತ್ತರ ಭಾರತದ ಗೊಂದಲದ ಸ್ಥಿತಿಯನ್ನು ವಿಡಂಬಿಸುವ ಕವನಗಳನ್ನು ಹೊಂದಿದೆ. ಡಾ. ವಿ. ಕೃ. ಗೋಕಾಕರು

'ಇಂದಿನ ಸಮಾಜದಲ್ಲಿ ಬೇರು ಬಿಟ್ಟ ವಿಷಮತೆಯನ್ನು ಕುರಿತು ಚಿಂತನಪರ ವಿಡಂಬನಾ ಕೃತಿಗಳು ಇಲ್ಲಿವೆ.' ಎಂದು ಅಭಿಪ್ರಾಯ ಪಟ್ಟಿದ್ದಾರೆ. 'ನವ್ಯತೆ'ಯ ಪ್ರಸ್ತಾಪವನ್ನೂ ಮಾಡಿದ್ದಾರೆ ಇಲ್ಲಿ. 'ಶ್ರೀ ಸಾಮಾನ್ಯನ ಪ್ರತಿನಿಧಿ', ಅಚ್ಚ ಭಾರತೀಯ ಎಂದು ಕಟಕಿಯಾಡಿದ್ದಾರೆ ಕವಿ.

'ಎಷ್ಟು ಚಕ್ರ ಭಾರತಾಂಬೆ ನಿನ್ನ ಹಿರಿಯ ತೇರಿಗೆ:
ಪಾವಿನಷ್ಟು ಗಟ್ಟಿ ಹಾಲು ಎರಡು ಸೇರು ನೀರಿಗೆ'
(ಶ್ರೀಸಾಮಾನ್ಯನ ಪ್ರತಿನಿಧಿ)

'ರಾಜ್ಯೋತ್ಸವ' ಎಂಬ ನೀಳ್ಗವನ ಕೂಡಾ ವಿಷಾದ ವ್ಯಂಗ್ಯಗಳಿಂದ ಕೂಡಿದೆ. ಇಲ್ಲಿ ಕವಿ ಬಳಸಿದ ರೂಪಕಗಳು ಅರ್ಥವತ್ತಾಗಿವೆ.

'ಮಲೆನಾಡು ಬರಿ ಕಾಡು, ನಮ್ಮ ಅಗ್ಗಿಷ್ಟಿಕೆಗೆ ಬರಿಯ ಸೌದೆ
ಕಾವೇರಿ ನೀರಷ್ಟೆ: ಬಚ್ಚಲಿನ ನಲ್ಲಿಯಲಿ ನಿಲ್ಲದೆಯೆ
ಸುರಿಯಲೆಂದಾಶಿಸುವ ಜಲಧಾರೆ.
ಬೇಲೂರು ಬಾಲೆಯರು ಕ್ಯಾಲೆಂಡರಿಗೆ ಹೋಲಿಸಲು ಮೂಲಮಾನ!'
(ರಾಜ್ಯೋತ್ಸವ)

ಕನ್ನಡದ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ಮಾಡುತ್ತಿರುವ, ವ್ಯಕ್ತಿ ಸಂಸ್ಥೆಗಳು ಈಗಲೂ ಇವೆ. ಆರು ಕೋಟಿ ಕನ್ನಡಿಗರು ಭದ್ರ ಸರ್ಕಾರವಿಲ್ಲದೆ 'ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್' ಆಗದೆ ಕಕ್ಕಾಬಿಕ್ಕಿಯಾಗಿದ್ದಾರೆ. ಐ.ಟಿ. ಬಿ.ಟಿ.ಗಳತ್ತ ಆಸೆಗಣ್ಣುಗಳಿಂದ ನೋಡುತ್ತಿದ್ದಾರೆ.

ಇನ್ನು 'ನೆಹರು' ಅಂಥ ವ್ಯಕ್ತಿ ಚಿತ್ರಗಳಲ್ಲೂ ನಿಸಾರರು ಮೌಲ್ಯಾಧಾರಿತ ರಾಜಕಾರಣದ ಬಗೆಗೆ ತಮಗಿರುವ ಆಸ್ಥೆಯನ್ನು ಅಭಿವ್ಯಕ್ತಿಸಿದ್ದಾರೆ ಎಂಬುದು ಗಮನಾರ್ಹ. ಜಾತಿ, ಪ್ರಾದೇಶಿಕತೆಗಳಿಂದ ದೇಶ ಹುಡಿಗೊಳ್ಳದಂತೆ ಯುವ ಜನ ನಿಗಾ ವಹಿಸಬೇಕು ಎಂಬ ನೆಹರೂರವರ ವಿಚಾರ ಅಪರೂಪದ್ದೆಂಬುದು ನಿಸಾರ್ ಅವರ ವಿಚಾರ. ಅವರ ಸರಳತೆ, ಬರಹದಲ್ಲೂ ಇತ್ತೆಂಬುದು ಕವಿಯ ಪ್ರೀತಿಗೆ, ಗೌರವಕ್ಕೆ ಇನ್ನೊಂದು ಕಾರಣ. ಆದ್ದರಿಂದಲೇ—

'ನೀನೊಬ್ಬನಿದ್ದಲ್ಲಿ ಇನ್ನೆಲ್ಲರಿದ್ದಂತೆ'
(ನೆಹರು)

ಎಂದು ಕೈವಾರಿಸುತ್ತಾರೆ. ತಮ್ಮ ಲೇಖನವೊಂದರಲ್ಲೂ ಅವರು ನೆಹರೂರವರ 'ಜೀವನ ಹಾಗೂ ಪ್ರಕೃತಿಪ್ರೇಮ ಅಸ್ಪಾದ್ಯಶವಾದವು' ಎಂದಿದ್ದಾರೆ. ಅಪವಾದ ಯಾರಿಗೆ ಬರುವುದಿಲ್ಲ? ಆಗಲೂ ಕೂಡಾ ಇತ್ತು 'ಸಾವಿರದ ಕಿಮ್ಮತ್ತು' ಎಂಬ ಅರ್ಥಸ್ತರಗಳಿಂದ ನೆಹರೂ ಅವರ ಚಿತ್ರವನ್ನು ಹಿಡಿದಿಟ್ಟಿರುವುದು ತುಂಬ ಕಲಾತ್ಮಕವಾಗಿದೆ. ಅವರು ಎಂದಿಗೂ ಪ್ರಸ್ತುತರೇ ಎಂಬುದು ಕವಿಯ ನಂಬಿಕೆ.

ಗಾಂಧಿ ಜಯಂತಿ ಕುರಿತ 'ಜಯಂತ್ಯುತ್ಸವ'ದಲ್ಲೂ ಇದೇ ಭಾವವಿದೆ. ಕವಿತೆ

ಬೆಳೆಯುವ ಪರಿಕ್ರಮ ಅನನ್ಯವಾದದ್ದು. ಗಾಂಧಿ ಹುಟ್ಟಿನ ಬಗೆಗೆ ಹೇಳಿ,

'ಆತನ ತತ್ವದ ಹಳಿಗಳ ಮೇಲೆ
ಸಾಗಲಿ ನಾಡಿನ ಬಂಡಿ'

(ಜಯಂತ್ಯುತ್ಸವ)

ಎಂದು ಆಶಿಸಿ, ಇಂಥ ಉತ್ಸವದ ಆಚರಣೆಯೆಲ್ಲ ಕೇವಲ ಯಾಂತ್ರಿಕ ಮತ್ತು ತೋರಿಕೆಯವೆಂದು ಈ ಸಾಲುಗಳಲ್ಲಿ ವಿಡಂಬಿಸುತ್ತಾರೆ:

'ಸಬ್‌ಕೋ ಸನ್ಮತಿ ದೇ ಭಗವಾನ್
ಕಿರುಚಿರೆ ಬಾನುಲಿ ಹಾಡ—
ನಿಲ್ಲಿಸಿ, ಕೋಳಿ ಪಲಾವನು ಬಡಿಸಿದ
ಮುದ್ದಿನ ಹೆಣ್ಣಿನ ಕೂಡ:
ಹಾಗೇ ಕುಡಿಯೋದ್ ಹೇಗೇ ಪೆದ್ದಿ?
ತರಿಸು ಬೇಗ ಸೋಡ'

(ಅದೇ)

ಹಾಗೆಯೇ, 'ಸಂಜೆ ಐದರ ಮಳೆ'ಯಲ್ಲಿಯ 'ಬಾಪೂ' ಎಂಬ ಕವನ, ಗಾಂಧೀಜಿ ಇಲ್ಲದ ಸಡಿಲಾದ ಆದರ್ಶಗಳ ನಿರ್ವಾತ ಸ್ಥಿತಿಯನ್ನು ಚಿತ್ರಿಸುತ್ತದೆ. ಎಲ್ಲಿ ಹುಡುಕುವುದು ಎಂಬ ಗಲಿಬಿಲಿ ವಿಷಾದ ಇಡೀ ಕವನದಲ್ಲಿ ಹರಿದಾಡಿದೆ. 'ವಾಸ್ತವತೆ ನಾನು, ಆದರ್ಶ ನೀನು' ಎಂದು ಗುರ್ತಿಸುತ್ತಾರೆ. ಪ್ರತಿಮೆಯಲ್ಲಿ ಹುಡುಕಲೇ—ಎಂಬ ಪ್ರಶ್ನೆ ಪ್ರತಿಮಾ ನಿರ್ಮಾಣ ಸಂಸ್ಕೃತಿಯ ವಿರುದ್ಧದ ಧ್ವನಿಯೇ ಆಗಿದೆ. ಈ ಪ್ರತಿಮೆಗಳಿಂದ ಆಗುವ ಅನಾಹುತಗಳಾದರೂ ಎಷ್ಟು? ಒಮ್ಮೆ ಚಷ್ಮಾ ಕಳೆದರೆ, ಒಮ್ಮೆ ಭಗ್ನವಾಗಿರುತ್ತವೆ. ಬಸವಣ್ಣನವರು 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ಮಾತು ಹೇಳಿದ್ದು ಇಂದಿಗೂ ಪ್ರಸ್ತುತ. ಇತ್ತೀಚೆಗಂತೂ ಅಂಬೇಡ್ಕರ್, ಶಿವಾಜಿ ಮುಂತಾದವರ ಪ್ರತಿಮೆಗಳ ಮೇಲೆಲ್ಲಾ ಆಗುತ್ತಿರುವ ಅತ್ಯಾಚಾರ ಹೇಳತೀರದು. ಅಷ್ಟು ವರ್ಷಗಳ ಹಿಂದೆಯೇ ಕವಿಗೆ 'ಗಾಂಧೀಜಿ' ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದರ ಅರಿವಿದೆ. ಪದೇಪದೇ ಉದ್ಗರಿಸುತ್ತಾರೆ:

'ಎಲ್ಲಿ ಹುಡುಕಲಿ ಮಹಾತ್ಮಾ, ಎಲ್ಲಿ ಹುಡುಕಲಿ ನಿನ್ನ?
ಖೋಟನೋಟಿನಲ್ಲೆ?'

(ಬಾಪೂ)

೧೯೭೦ರಲ್ಲಿ ನಿಸಾರರ ಕಾವ್ಯಯಾನದಲ್ಲಿ ಮಹತ್ವದ ಅಂಶವೊಂದು ಸೇರ್ಪಡೆಯಾದದ್ದನ್ನು ನೆನೆಯಲೇಬೇಕು. ದೂರದರ್ಶನಕ್ಕೂ ಮೊದಲು ಜನ ಜೀವನದ ಅವಿಭಾಜ್ಯ ಅಂಗವಾಗಿದ್ದ ಬಾನುಲಿಯಲ್ಲಿ ಬಿತ್ತರವಾಗುತ್ತಿದ್ದ ಕುವೆಂಪು, ಬೇಂದ್ರೆ, ಪು.ತಿ.ನ., ಕೆ.ಎಸ್.ನ. ಅವರ ಭಾವಗೀತೆಗಳು ನಿಸಾರರ ಹೃದಯದಲ್ಲಿ ಹೊಸ ತರಂಗಗಳನ್ನೆಬ್ಬಿಸಿದವು. ಪಿ. ಕಾಳಿಂಗರಾವ್, ಮೈಸೂರು ಅನಂತಸ್ವಾಮಿ ಹಾಗೂ ಬಾನುಲಿಯಲ್ಲಿ ಪದ್ಮಚರಣ್ ಆಗ ತಾರೆಗಳು. ಬಾನುಲಿಯಲ್ಲಿ ತಡವಾಗಿಯಾದರೂ ಉತ್ಕೃಷ್ಟ ಭಾವಗೀತೆಗಳು ಸಂಯೋಜನೆಗೊಂಡು ಬಿತ್ತರವಾದವು. ಕನ್ನಡದ 'ಸುಗಮ ಸಂಗೀತ' ಪರಂಪರೆ ಆರಂಭವಾದದ್ದೇ ಈ

ಅಧ್ವರ್ಯುಗಳಿಂದ.

ಅರುವತ್ತರ ದಶಕದಲ್ಲಿ ಕವಿ ನಿಸಾರರು ನಾಲ್ಕು ನವ್ಯಕಾವ್ಯ ಸಂಕಲನಗಳನ್ನು ಹೊರತಂದಿದ್ದರು. ಅನಂತರ, ಭಾವಗೀತೆಗಳನ್ನು ರಚಿಸಿದರು. ಇದು ಜನಪ್ರಿಯರಾಗುವ ಯತ್ನ ಎಂದು ಅನೇಕರು ಟೀಕಿಸಿದ್ದುಂಟು. ಅದು ಕ್ರಾಂತಿಕಾರಕ ಬದಲಾವಣೆ ಎಂದೂ ಕೆಲವರು ಅಂದಿದ್ದುಂಟು. ಕವಿ, ತಾನೊಲಿದಂತೆ ಬರೆದರು; ಸ್ವರಬದ್ಧಗೊಳಿಸಿದರು.

ಕಾವ್ಯ, ಹೆಚ್ಚು ಜನರನ್ನು ಮುಟ್ಟುವ ಅಗತ್ಯವಿದೆ ಎಂದೂ ವೈಚಾರಿಕತೆಯ ಭಾರದಿಂದ ಕವಿತೆ ಸೊರಗುತ್ತಿರುವಾಗ ಗೇಯತೆಯ ಲೇಪ ಬೇಕೆಂದೂ ಕವಿ ಸಮರ್ಥಿಸಿ ಕೊಂಡಿದ್ದು ಈಗ ಇತಿಹಾಸ. ದೂರದರ್ಶನ ಬಂದ ಅನಂತರ 'ಗೀತಚಿತ್ರ' ಎಂಬ ಪ್ರಕಾರ ಜನಪ್ರಿಯವಾಯಿತು. ನಿಸಾರ್ ಅಹಮದರ 'ನಿತ್ಯೋತ್ಸವ' ೧೯೭೬ರಲ್ಲಿ ಪ್ರಕಟವಾಗಿತ್ತು. ಪ್ರಕಟಣಾ ಪೂರ್ವದಲ್ಲೇ ಮೈಸೂರು ಅಂತಸ್ವಾಮಿಯವರು ಅನೇಕ ಗೀತೆಗಳನ್ನು ಪ್ರಚುರಪಡಿಸಿದ್ದರು. ೧೯೭೮ರಲ್ಲಿ ನಿಸಾರ್ 'ನಿತ್ಯೋತ್ಸವ' ಕ್ಯಾಸೆಟ್ ಹೊರತಂದರು. ಅದು ಕನ್ನಡ ಸುಗಮ ಸಂಗೀತದ ಮೊದಲ ಧ್ವನಿ ಸುರುಳಿ. ದೂರದರ್ಶನದಲ್ಲಿ 'ಜೋಗದ ಸಿರಿ ಬೆಳಕಿನಲ್ಲಿ' ಮುಂತಾದ ಗೀತೆಗಳು ಅದ್ಭುತವಾಗಿ ಮೂಡಿಬಂದವು. ಅನಂತಸ್ವಾಮಿ ತಂದ ನಿಸಾರರ ಮತ್ತೊಂದು ಧ್ವನಿ ಸುರುಳಿ 'ಸುಮಧುರ'. ಅದೇ ಕೊನೆಯದೂ ಆದುದು ದುರ್ದೈವವೆಂದು ಸ್ವತಃ ಕವಿಯೇ ಒಂದೆಡೆ ಉಲ್ಲೇಖಿಸಿದ್ದಾರೆ.

ಈ ಮಧ್ಯೆ ದಿ. ಡಾ. ಬಿ. ಸಿ. ರಾಮಚಂದ್ರ ಶರ್ಮ ಅವರು 'ಕ್ಯಾಸೆಟ್ ಗೀತೆ'ಗಳ ಬಗ್ಗೆ ಅಸಹನೆ ವ್ಯಕ್ತಪಡಿಸುತ್ತಿದ್ದರು. 'ನಿಮ್ಮಂಥವರ ಕವಿತೆಗೂ ರಾಗ ಬೇಕೆ?' ಎಂದ ಅವರೂ ಹಿಂದೆ ಒಂದೆರಡು ಭಾವಗೀತೆಗಳನ್ನು ರಚಿಸಿರುವ ದಾಖಲೆಗಳಿವೆ!

'ನಾಡದೇವಿಯೆ', 'ಸಗ್ಗದ ಸಿರಿ ಬಂತು', ಅತ್ಯುತ್ತಮ ನಾಡಗೀತೆಗಳು. ಜನಪದ ಧಾಟಿಯನ್ನೂ ಶಬ್ದಗಳನ್ನೂ ಒಳಗೊಂಡ ರಚನೆಗಳು.

'ಸ್ವಾತಂತ್ರ್ಯದ ಹಣತೆ' ಇಂದಿಗೂ ಬಾನುಲಿಯ 'ಸಂಗ್ರಹ ಭಾಗ'ದಲ್ಲಿದೆ.

'ಪ್ರಾಣವನ್ನೆ ಪಗಡೆ ಮಾಡಿದವರಿಗೆಮ್ಮ ನಮನ
ತಾಯಿ ಮುಡಿಗೆ ದಿನವೂ ಏರುತಿರಲಿ ಹೂವು, ದವನ'

(ಸ್ವಾತಂತ್ರ್ಯದ ಹಣತೆ)

ಎಂದು ಹುತಾತ್ಮರನ್ನು ನೆನೆಯುವ ದೇಶಭಕ್ತಿ ಗೀತೆಯಾಗಿ ಮತ್ತು ಸ್ವಾತಂತ್ರ್ಯ ಗಳಿಸಿಕೊಟ್ಟವರ ಸ್ಮರಣೆಯಾಗಿ ಸದಾ ಎದೆಯ ಗೋಲಗುಮ್ಮಟದಲ್ಲಿ ಅನುರಣಿಸುತ್ತದೆ.

ಉತ್ಸಾಹದ ಲಯದ 'ಹುಣ್ಣಿಮೆ ದೀಪ' ಸುಗ್ಗಿಯ ಹಾಡು.

'ಕಣ ಕಣ ಗಿರಿಜೆಯ ನತ್ತು
ಮೆದೆ ಮೆದೆ ಮಿರುಗುವ ಮುತ್ತು'

(ಹುಣ್ಣಿಮೆ ದೀಪ)

ಇಲ್ಲಿಯ ಪ್ರಾಸಾನುಪ್ರಾಸ ಒಳ್ಳೆಯ ಪರಿಣಾಮ ರಮಣೀಯತೆಯನ್ನು ಕಲ್ಪಿಸಿದೆ. ದುಡಿಯುವ

ಜನರು 'ವರುಷವೆಲ್ಲ ಕಂಬನಿಯ ಕುಡಿದ'ವರು, ಎನ್ನುವಲ್ಲಿ 'ಆಳು ಧಣಿಯ ವ್ಯತ್ಯಾಸವಿರದೆ ನಲಿದಿರಲಿ ಊರಿಗೂರು' ಎಂಬ ಸಮಷ್ಟಿ ಪ್ರಜ್ಞೆಯಲ್ಲಿ ಉದಾತ್ತತೆ ಹಾರೈಕೆಗಳು ಎದೆಗೆ ಹಾಯುತ್ತವೆ. 'ತಾಯಿ, ಭೂಮಿತಾಯಿ' ನೆಲಕ್ಕೆ ನಾವು ಹೇಗೆ ಋಣಿಗಳಾಗಿರಬೇಕೆಂಬ ಸೂಚನೆ ನೀಡುತ್ತದೆ. ಗೋಷ್ಠಿಗಾನ ಮತ್ತು ನೃತ್ಯಗಳಿಗೆ ಹೊಂದುವ ನಾಲ್ಕು ಸಾಲುಗಳ ಚರಣಗಳು ರಾಗವಿಲ್ಲದೆ ಕೂಡಾ ರಂಜಿಸಬಲ್ಲವು.

'ನೀನೆ ನಮ್ಮ ತಾರಿಣಿ
ಕ್ಷಾಮ ಭಯ ನಿವಾರಿಣಿ
ನೀನೆ ನಮ್ಮ ವಾಣಿ, ನೀ—
ಕ್ಷೇಮ ದಯಾಕಾರಿಣಿ'
(ತಾಯಿ, ಭೂಮಿತಾಯಿ)

೧೯೭೭ರಲ್ಲಿ ಪ್ರಕಟವಾದ ಕೃತಿ 'ಸ್ವಯಂ ಸೇವೆಯ ಗಿಳಿಗಳು'. ಗೇಯತೆಯನ್ನು ಕೈಬಿಟ್ಟು ಬರೆದ ಕವಿತೆಗಳು ಇದರಲ್ಲಿವೆ. ನವ್ಯ ರೀತಿಯ 'ಅಂತರ' ಎಂಬುದು ಅಪ್ಪ, ಮಗ, ಮೊಮ್ಮಗ ಹೀಗೆ ಮೂರೂ ತಲೆಮಾರಿನವರು 'ಗಾಂಧೀಜಿ' ತೀರಿಕೊಂಡಾಗ ತೋರುವ ವಿಭಿನ್ನ ಪ್ರತಿಕ್ರಿಯೆಗಳನ್ನು ಪ್ರಕಟಿಸುವ ಕವನ.

ಅಪ್ಪ, ಬಿಳಿಯರಿದ್ದಾಗಿನ ಸುಭಿಕ್ಷವನ್ನು ಕುರಿತು ಹೊಗಳಿದರೆ, ಅನಂತಯ್ಯ ತನ್ನ ಬಡತನಕ್ಕೆ ಗಾಂಧಿಯೇ ಕಾರಣವೆಂದರೆ, ಕಾವ್ಯ ನಾಯಕನಿಗೆ ಮೀಸಲಾತಿ ಧೋರಣೆಯಿಂದ ತನಗಾದ ನಷ್ಟಕ್ಕೆ ಗಾಂಧಿಯೇ ಕಾರಣ ಎನಿಸುತ್ತದೆ. ಮೊಮ್ಮಗ (ನಾಯಕನ ಮಗ) ಕಳ್ಳೇಕಾಯಿಗೆ 'ಗಾಂಧೀ ಬಾದಾಮಿ', ಕೈ ಕೈ ಮಿಲಾಯಿಸದ ಬಾಯಿ ಜಗಳಕ್ಕೆ 'ಗಾಂಧಿ ಗಲಾಟೆ' ಎನ್ನುತ್ತಾನೆ. ಏಕೆಂದರೆ, ಕಾಲ ಬದಲಾಗಿದೆ.

ಆದರೂ ಗಾಂಧೀಜಿಯವರ ಸಾತ್ವಿಕ ಹಠ, ಸಂಪು, ಜಾತ್ಯತೀತ ಮನೋಭಾವ, ತ್ಯಾಗಶೀಲ ಗುಣಗಳು 'ಮಾದರಿ'ಯಾದವು ಎಂಬುದನ್ನು ಕವಿ ಒಪ್ಪಿರುವುದಕ್ಕೆ ಅವರು ಗಾಂಧಿಯವರನ್ನು ಕುರಿತು ಬರೆದ ಹಲವಾರು ಕವನಗಳೇ ಸಾಕ್ಷಿಯಾಗಿವೆ.

ಅದುವರೆಗೆ ಕೊಂಚ ಗದ್ಯಾತ್ಮಕವಾಗಿದ್ದ ನಿಸಾರರ ಕಾವ್ಯ ೧೯೮೦ರ 'ಬಹಿರಂತರ'ದಲ್ಲಿ, ಗೀತೆಗಳು ಎಂಬ ಶೀರ್ಷಿಕೆ ಹೊತ್ತೇ ಬೆಳಕು ಕಂಡಿತು. 'ಎಂದು ಮರೆಯುವೆ ತಾಯಿ' 'ಮಹಿಮವಂತೆ ಭಾರತಿ', 'ಒಂದೇ', 'ಮಾತೃವಂದನೆ', 'ಕನ್ನಡ ರಾಜೇಶ್ವರಿ', 'ಅಭಿಮಾನವತಿ', 'ಹಿರಿಮೆ', 'ಕನ್ನಡಾಂಬೆಗೆ', 'ಇಲ್ಲಿ ಹುಟ್ಟು ಇಲ್ಲಿ ಬಾಳು', 'ನಮಿಸು ಬಾ', 'ಬಾ ಸಲ್ಲಿಸು ಗೌರವ', ಇವೆಲ್ಲಾ ನಾಡು-ನುಡಿ ಕುರಿತ ರಚನೆಗಳು. 'ಕನ್ನಡ ಕುವರಿ' ಎಂಬ ವಿಡಂಬನಾತ್ಮಕ ಕವಿತೆಯಲ್ಲಿ ಅಳುತ್ತಿರುವ ಮಗುವನ್ನು—

'ನಿಂಗಪ್ಪಾ ಇಲ್ವಾ ಮರಿ
ಅಮ್ಮಾ ಇಲ್ವಾ ಮರಿ'

ಎಂದು ನಾಯಕ ಕೇಳಿದರೆ ಅದು 'ಉಹುಂ' ಎನ್ನುತ್ತದೆ. 'ಮತ್ಯಾರಿದಾರೆ ಪೋರಿ' ಎಂಬ ಪ್ರಶ್ನೆಗೆ ಸರ್ರನೆ ಈ ಉತ್ತರ: 'ಮಮ್ಮಿ ಅಂಡ್ ಡ್ಯಾಡಿ!'

ಈಚೆಗೆ ಹನಿಗವನ, ಇನಿಗವನ ಹೆಚ್ಚಾಗಿವೆ ಕೆಲವು 'ಮಿಂಚಿಕೆ'ಗಳನ್ನು ನಿಸಾರರೂ ರಚಿಸಿದ್ದಾರೆ.

ಅವುಗಳಲ್ಲಿ ಎರಡನ್ನು ಪರಿಭಾವಿಸಬಹುದು:

೧. **ಕನ್ನಡದ ಉದ್ಧಾರ**

'ವರ್ಷವಿಡೀ ಚಾಟಿಯ ಏಟಿನ, ದುಡಿತದ ಎತ್ತಿಗೆ
ಸಂಕ್ರಾಂತಿಯ ದಿನ ಎಂತಹ ಸಿಂಗಾರ!
ಜ್ಞಾಪಿಸುವುದು ನನಗೀ ದೃಶ್ಯ, ನವೆಂಬರ್ ಒಂದರ
ಸರಕಾರದ ಸಿರಿಗನ್ನಡದುದ್ಧಾರ.' **(ನವೋಲ್ಲಾಸ)**

ಮೊದಲೆರಡು ಸಾಲುಗಳು ಬದುಕಿನ ವೈರುಧ್ಯಕ್ಕೆ ಹಿಡಿದ ಕನ್ನಡಿಯಾಗಿವೆ. 'ರಾಜ್ಯೋತ್ಸವ'ದಂದು ಮಾತ್ರ ಕನ್ನಡದ ಬಗೆಗೆ ಅತೀವ ಕಾಳಜಿ, ನಮ್ಮ ಸರ್ಕಾರಕ್ಕೆ. ನಾವೂ ಅಷ್ಟೇ. 'ಅತ್ಯುಗ್ರರ್' ಅಲ್ಲ. 'ಅತಿ ಮೆದುಗರ್!' ಅಥವಾ 'ಅತಿ ನಟುವರ್'

೨. **ಬೋಧನೆ**

'ಸ್ವಂತ ಮನೆಯಲಿ ಸ್ಟೈಯಿನ್‌ಲೆಸ್ ಸ್ಟೀಲಿನ
ಪಾತ್ರೆಯ ಬಳಸುತ ಮನಸಾರ
ಪರರಿಗೆ ಮಡಕೆಯ ಮಹಿಮೆಯ ದಿನವೂ
ಬೋಧಿಸುತಿರುವನು ಕುಂಬಾರ.' **(ಮಿಂಚಿಕೆಗಳು)**

ಇಲ್ಲೂ ಹೇಳುವುದೊಂದು, ಮಾಡುವುದು ಬೇರೊಂದು ಎಂಬುದನ್ನೇ ಕುರಿತು ಕವಿ ವಿಡಂಬಿಸಿದ್ದಾರೆ. ಜಾಗತೀಕರಣದ ಪ್ರಭಾವದಿಂದ ಗೃಹ ಕೈಗಾರಿಕೆಗೆ ಒದಗುತ್ತಿರುವ ದುಃಸ್ಥಿತಿಯನ್ನೂ ಸೂಚಿಸಿದ್ದಾರೆ.

ಕಡೆಯದಾಗಿ 'ಕನ್ನಡ' ಎಂಬ ಕವಿತೆಯನ್ನು ಪರಿಭಾವಿಸಿದರೆ, 'ಕನ್ನಡ'ವೆಂದರೆ ಏನೆಂಬುದನ್ನು ಕವಿ ತಾರ್ಕಿಕವಾಗಿ, ಕಲಾತ್ಮಕವಾಗಿ ಮುಂದಿಟ್ಟ ರೀತಿ ಅಪೂರ್ವ ವಾದದ್ದೆನಿಸುತ್ತದೆ.

ಕನ್ನಡ ಬರಿ ನುಡಿಯಲ್ಲ, ಜನ ಜಂಗುಳಿಯಲ್ಲ, ಬರಿ ನಾಡಲ್ಲ, ಗುಲ್ಲಿನ ಕಾಮನಬಿಲ್ಲಲ್ಲ—ಎಂದು ಮುಂತಾಗಿ 'ಅಲ್ಲ'ಗಳಿಂದ ಪ್ರಾರಂಭಿಸಿ, ಕವಿಯೇ ಉತ್ತರಿಸು ವುದು ಕುತೂಹಲಕಾರಿ. ಅದು ಪಾವನ ತೀರ್ಥ, ಶ್ರೀಗಂಧದ ಚಕ್ಕೆ, ಉಸಿರದು ಪಂಚ ಪ್ರಾಣ—ಎಂದು ಸ್ಪಷ್ಟೀಕರಿಸಿ ತಮಗೆ ಪ್ರಿಯವಾದ 'ನಿತ್ಯೋತ್ಸವ'ಕ್ಕೆ ತಂದು ಹಚ್ಚುತ್ತಾರೆ.

'ರವಿ ಶಶಿ ತಾರೆಯ ನಿತ್ಯೋತ್ಸವವದು
ಸರಸತಿ ವೀಣೆಯ ಸೊಲ್ಲು' **('ಕನ್ನಡವೆಂದರೆ')**

ಒಟ್ಟಾರೆ, ನಿಸಾರರ ಕಾವ್ಯದಲ್ಲಿ ಮೌಢ್ಯ ಶ್ರದ್ಧೆಯನ್ನು ಕುರಿತ ಟೀಕೆ, ನಿಸರ್ಗಾರಾಧನೆ, ಅವಿಚಲ ಕ್ರಾಂತಿಕಾರಕ ನಿಲವುಗಳನ್ನು ಗುರ್ತಿಸಲು, ಈ ಸಂದರ್ಭ ಸಾಧ್ಯವಾಗಿಸಿದೆ. ಮರು ಓದಿನ ಆನಂದವನ್ನು ಹಂಚಿಕೊಂಡಿದ್ದೇನೆ.



ವಿಶಿಷ್ಟ ಪ್ರತಿಭೆಯ ಕವಿ ನಿಸಾರ್

♦ *ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ*

ನಿಸಾರ್ ಅಹಮದ್ ಕನ್ನಡ ಕಾವ್ಯ ರಸಿಕರ ಪ್ರೀತಿ ಗೆದ್ದುಕೊಂಡ ಕವಿ. ಜನಪ್ರಿಯತೆಯನ್ನು ಅನುಮಾನದಿಂದ ನೋಡುತ್ತಿದ್ದ ನವ್ಯ ಸಾಹಿತ್ಯ ಸಂದರ್ಭದಲ್ಲಿ 'ನನ್ನ ಕಾವ್ಯ ಉಸಿರಾಡಿ ಬದುಕುತ್ತಿರುವುದು ಜನತೆಯ ನಡುವೆ. ಅವರ ಪ್ರೀತ್ಯಾದರ ಸಹಾನುಭೂತಿಗಳ ಸವಿಯುಣಿಸಿನಿಂದ' ಎಂಬ ನಂಬಿಕೆಯಿಂದ ಕಾವ್ಯ ರಚನೆ ಮಾಡಿದ ನಿಸಾರ್ ಅಹಮದ್ 'ಕಾವ್ಯ ಕೆಲವರಿಗೆ ಮಾತ್ರ' ಎಂಬ ನಿಲವಿನಿಂದ ಬಲು ದೂರ. ಈ ದೃಷ್ಟಿಯಿಂದ 'ನಾನು ಸಾಮಾನ್ಯ ಜನರ ಕವಿ' ಎಂದು ಹೆಮ್ಮೆಯಿಂದ ಹೇಳುವ ಕೆ.ಎಸ್.ನ ಅವರಿಗೆ ಪ್ರಿಯ ಕವಿ. 'ನನ್ನ ಕವಿತೆ ಸಹೃದಯರಿಗೆ ಉತ್ತಮವೆನ್ನಿಸಲಿ, ಅನ್ನಿಸದಿರಲಿ ಅರ್ಥ ಗೊಂದಲ, ಸಂದಿಗ್ಧತೆಗಳಿಗೆ ಮಾತ್ರ ಎಡೆ ಮಾಡಬಾರದೆಂಬ ದೃಢ ನಿಶ್ಚಯ ನೇಪಥ್ಯದಲ್ಲಿ ಕೆಲಸ ಮಾಡಿದೆ. ತಂತ್ರಾಭಿವ್ಯಕ್ತಿ ಮತ್ತು ಪ್ರಯೋಗಶೀಲತೆ ಕವನದ ಸಂವಹನ ಗುಣಕ್ಕೆ ಎದುರು ಹಾಯದೆ ವಿಧೇಯವಾಗಿರುವ ಎಚ್ಚರ ನನ್ನ ಸೃಜನ ಕರ್ಮದ ಹಿನ್ನೆಲೆಗಿದೆ—ಎಂದು ನಿಸಾರ್ ತಮ್ಮ ಕಾವ್ಯ ರಚನೆಯ ಹಿಂದಿನ ನಿಯೋಗವನ್ನು ಸ್ಪಷ್ಟಪಡಿಸಿದ್ದಾರೆ. ವಿಮರ್ಶೆಯ ಹಂಗಿಲ್ಲದೆ ಜನತೆಯ ಹೃದಯವನ್ನು ತಮ್ಮ ಕಾವ್ಯ ಮುಟ್ಟಬೇಕೆಂಬ ಬಯಕೆಯ ನಿಸಾರ್ ಸಹೃದಯರನ್ನು ಸದಾ ಗೌರವದಿಂದ ಕಂಡವರು. ಕವಿ-ಸಹೃದಯರ ಸಂಬಂಧದ ಬಗೆಗಿನ ನಿಸಾರರ ಈ ನಿಲವೇ ಅವರ ಕಾವ್ಯದ ಸ್ವರೂಪವನ್ನೂ ಬಹುಮಟ್ಟಿಗೆ ನಿರ್ಧರಿಸಿದೆ.

ನಿಸಾರರ ಮೊದಲ ಸಂಕಲನ ಪ್ರಕಟವಾಗುವ ವೇಳೆಗಾಗಲೇ ಗೋಪಾಲಕೃಷ್ಣ ಅಡಿಗರ `ನಡೆದು ಬಂದ ದಾರಿ' (೧೯೫೨). `ಚಂಡೆ ಮದ್ದಳೆ' (೧೯೫೪). `ಭೂಮಿ ಗೀತ' (೧೯೫೯) ಸಂಕಲನಗಳು ಪ್ರಕಟವಾಗಿದ್ದು ಸೃಜನಶೀಲ ತರುಣ ಮನಸ್ಸುಗಳ ಮೇಲೆ ಅಡಿಗರ ಕಾವ್ಯ-ವಿಚಾರಗಳು ಗಾಢ ಪ್ರಭಾವ ಬೀರಿದ್ದವು. ಕನ್ನಡ ಕಾವ್ಯವನ್ನು ನವ್ಯಕಾವ್ಯ ದಟ್ಟವಾಗಿ ಆವರಿಸುತ್ತಿದ್ದ ಸಂದರ್ಭದಲ್ಲಿ ನಿಸಾರ್ ಕಾವ್ಯಕ್ಷೇತ್ರವನ್ನು ಪ್ರವೇಶಿಸಿದರು. ಹೀಗಾಗಿ ಸಹಜವಾಗಿಯೇ ನಿಸಾರರ ಆರಂಭದ ಕಾವ್ಯದ ಮೇಲೆ ನಾವು ಅಡಿಗರ ಕಾವ್ಯದ ಛಾಯೆಯನ್ನು ಕಾಣುತ್ತೇವೆ:

'ನನ್ನೀ ಜೀವನ ಕುಸಿದಿದೆ ಇಂದು
ದುಃಖೋದ್ವೇಗದ ಭಾರಕ್ಕೆ;
ನಿಮ್ಮಯ ಚೆಲುವನು ಮೆಚ್ಚಲು
ನನ್ನಲಿ ಹಿಂದಿನ ನಲವಿಲ್ಲ,
ಅಂದಿನ ಕಾತರ ಗೆಲವಿಲ್ಲ,
ಹಾರಿರಿ ತೊಲಗಿರಿ ದೂರಕ್ಕೆ.'
(ಹಕ್ಕಿಗಳು)

ನಿಸಾರರ ಕಾವ್ಯ ನಾಯಕನ ಈ ಸ್ಥಿತಿ ಅಡಿಗರ ಕಾವ್ಯ ನಾಯಕನಲ್ಲಿ ನಾವು ಕಾಣುವ ಆರಂಭದ ಹತಾಶೆಯ ಸ್ಥಿತಿಯೇ ಆಗಿದೆ. ಅಷ್ಟೇ ಅಲ್ಲ—

'ನನ್ನ ದನಿ, ನನ್ನದೇ ಆದ ದನಿ,
ನನ್ನೆದೆಯು ಜೀವ ಮಣಿ
ಎಲ್ಲಿರುವುದೋ! ಹೃದಯ ಗಹ್ವರದಾವ
ಹಳಸುಗತ್ತಲೆಯಲ್ಲಿ
ಕೆಡೆಯುತಿಹುದೋ!

ಅವರಿವರ ಸೋಂಕಿಂದ ಮಡಿಗೆಡುತಲಿಹುದು ನುಡಿ;
ಕರಕುತಿದೆ ಗೆರೆಯಾಗಿ ನಿತ್ಯ ದೇದಿಪ್ಯ ಕುಡಿ;
ಬೆಂಬತ್ತಿ ತುಡಿಯುತಿವೆ ಪರರ ನೆರಳಿನ ಸೊಳು.
ನನ್ನೆದೆಯು ಭಾವಗಳು
ದೆಸೆಗೆಟ್ಟ ನಾವೆಗಳು.'
(ಆತ್ಮಶೋಧ)

`ತನ್ನತನ'ವನ್ನು ಕಂಡುಕೊಳ್ಳಬೇಕೆನ್ನುವ ಆತ್ಮಶೋಧದ ಬಯಕೆಯ ಈ ನುಡಿಗಳಲ್ಲೂ ನಮಗೆ ಅಡಿಗರ ದನಿಯೇ ಕೇಳುತ್ತದೆ. ಆದರೆ ಈ ಹೋಲಿಕೆ ಇಲ್ಲಿಗೇ ನಿಲ್ಲುತ್ತದೆ. ಮುಂದೆ ನಿಸಾರ್, ಅಡಿಗರ ಪ್ರಭಾವದಿಂದ ತಪ್ಪಿಸಿಕೊಳ್ಳುವ ಎಚ್ಚರದ ಹೋರಾಟ ನಡೆಸುತ್ತಾರೆ. ಈ ಹೋರಾಟ ಒಂದು ರೀತಿಯಲ್ಲಿ ನಿಸಾರ್, ನವ್ಯಕಾವ್ಯ ಮಾರ್ಗದ ವಿರುದ್ಧ ನಡೆಸಿದ ಹೋರಾಟವೇ ಆಗಿದೆ.

ನಿಸಾರರದು ಮೂಲತಃ ರಮ್ಯಪ್ರಜ್ಞೆ. ಈ ಬದುಕಿನ ಚೆಲವು ರಸ-ರುಚಿಗಳ ಬಗ್ಗೆ ಅವರಿಗೆ ಆಸಕ್ತಿಯಿದೆ. ಮಾನವ ಸಂಬಂಧಗಳಲ್ಲಿ ಅವರು ನಂಬಿಕೆ ಕಳೆದುಕೊಂಡವರಲ್ಲ.

ಪರಂಪರೆಯ ಬಗ್ಗೆ, ಸಾಮಾಜಿಕ ಒಪ್ಪಿತ ಬದುಕಿನ ರೀತಿಯ ಬಗ್ಗೆ ಅವರಿಗೆ ಗೌರವ; ಆಧುನಿಕ ನಾಗರಿಕ ಸಂಸ್ಕೃತಿಯ ಬಗ್ಗೆ ಕಸಿವಿಸಿ. ಇಂದಿನ ಯುವ ಜನಾಂಗದ ಸ್ಥಿತಿಯನ್ನು 'ಸ್ವಯಂಸೇವೆಯ ಗಿಳಿಗಳು' ಎಂದು ಕರೆದು ವಿಡಂಬಿಸುವಾಗ, ಗಾಂಧಿಬಜಾರಿನ ಬೆಳಗು, ಸಂಜೆಯ ಬಗ್ಗೆ ಬರೆಯುವಾಗ ಇದನ್ನು ನಾವು ಕಾಣಬಹುದು. ಬದಲಿಗೆ ವಿ.ಸೀ., ಮಾಸ್ತಿ, ಡಿ.ವಿ.ಜಿ., ಕುವೆಂಪು, ಎ.ಆರ್.ಕೃ., ಪುತಿನ ಅವರ ಬದುಕು ಬರಹಗಳಿಗೆ ನಿಸಾರರ ಮನಸ್ಸು ಒಲಿದಿದೆ.

'ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ
ಸರಳ ಸದಭಿರುಚಿಯ ಖ್ಯಾತಿಯಂತೆ.

..

'ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ
ಚಳಿಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ, ಹಗುರಕ್ಕೆ ಸಲ್ಲುತ್ತದೆ.'

(ಮಾಸ್ತಿ)

ಇವರ ಮನಸ್ಸು 'ಅಮ್ಮ, ಆಚಾರ ಮತ್ತು ನಾನು' ಕವಿತೆಯ ಹಿಂದೆಯೂ ಕೆಲಸ ಮಾಡಿರುವಂಥದು. ಎಷ್ಟೇ ಆಧುನಿಕವಾದರೂ ಸಂಪ್ರದಾಯವನ್ನು ಮೀರಲಾಗದ ಸ್ಥಿತಿ ಈ ಕವಿತೆಯ ವಸ್ತು.

ಹೀಗೆ ರಮ್ಯ ಸಂಪ್ರದಾಯದ ನಿಲವುಗಳಿಗೆ ಒಲಿದ ಮನಸ್ಸು ಸಹಜವಾಗಿಯೇ ಬರವಣಿಗೆಯ ಕ್ರಮದಲ್ಲಿ ನವೋದಯ ಮಾರ್ಗಕ್ಕೆ ನಿಕಟವಾಗಿರುವುದನ್ನು ನಾವು ಕಾಣುತ್ತೇವೆ. ನವ್ಯಕಾವ್ಯ ಮಾರ್ಗವನ್ನು ಉದ್ದೇಶಪೂರ್ವಕ ಬಿಟ್ಟುಕೊಟ್ಟು, ಗೇಯತೆಯನ್ನು ನಿಸಾರ್ ನಿಸ್ಸಂಕೋಚವಾಗಿ ಬಳಸಿಕೊಂಡರು. ಉತ್ತಮ ಭಾವಗೀತೆಗಳನ್ನು ರಚಿಸಿದರು. ನಿಸಾರರಲ್ಲಿ ಕಾಣುವ ಹಾಸ್ಯಪ್ರಜ್ಞೆ ಸಹ ನವ್ಯರಲ್ಲಿ ಕಾಣದ ಅಪರೂಪ ಗುಣ. ನವ್ಯ ಕಾವ್ಯದಲ್ಲಿ ಬಹುಶಃ ನಿಸಾರರೊಬ್ಬರಲ್ಲಿಯೇ ನಾವು ಶುದ್ಧ ಹಾಸ್ಯಪ್ರಜ್ಞೆಯ ಸಾರ್ಥಕ ಬಳಕೆಯನ್ನು ಕಾಣುವಂಥದು. ಸರಳತೆ, ಗೇಯತೆ, ಹಾಸ್ಯಪ್ರಜ್ಞೆ, ಭಾಷೆಯ ಜೊತೆ ಆಡುವ ಆಟ—ನವ್ಯಕಾವ್ಯ ಸಂದರ್ಭದಲ್ಲಿ ನಿಸಾರ್ ಅಹಮದ್‌ರನ್ನು ವಿಶಿಷ್ಟರನ್ನಾಗಿಸುವ ಕೆಲವು ಸಂಗತಿಗಳು.

ರಮ್ಯಕ್ಕೆ ಒಲಿದ ನಿಸಾರರು ನವ್ಯದಿಂದಲೂ ಕೆಲವು ಅಂಶಗಳನ್ನು ಪಡೆದುಕೊಂಡರು. ಭಾವಾತಿರೇಕಕ್ಕೆ ಬಲಿಯಾಗದ ವಾಸ್ತವ ಪ್ರಜ್ಞೆ ಹಾಗೂ ವಿಡಂಬನೆ—ನಿಸಾರರ ಕಾವ್ಯಕ್ಕೆ ಹೆಚ್ಚಿನ ಮೊನಚು ತಂದಿದೆ. 'ಕುರಿಗಳು, ಸಾರ್, ಕುರಿಗಳು' ಅಂತಹ ಕವಿತೆಗಳ ಯಶಸ್ಸನ್ನು ನಾವು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಸಂಪ್ರದಾಯವನ್ನು ಸಂಪೂರ್ಣ ತಿರಸ್ಕರಿಸದ, ಆದರೆ ಆಧುನಿಕತೆಯ ಅರಿವು ಪಡೆದ ಮನೋಭಾವ ನಿಸಾರರದು.

'ತಂತಿ ಮೇಲಿನ ನಡಿಗೆ ಪ್ರಾಯದಲಿ ಸಂಸಾರ
ತೂಕ ತಪ್ಪದೆ ಆತು ನಡೆಯಬೇಕು.'

(ಮದುವೆ)

ಸಾಮಾಜಿಕ ಬದುಕಿನಲ್ಲಿ ತೂಕ ತಪ್ಪದಂತೆ ಎಚ್ಚರದಿಂದ ನಡೆಯಬೇಕೆಂಬುದು ನಿಸಾರರ ನಿಲವು. ಅವರ ಜನಪ್ರಿಯತೆಗೆ ಸರಳತೆ, ಗೇಯತೆಗಳ ಜೊತೆಗೆ ಈ ಅಂಶವೂ ಕಾರಣವಾಗಿದೆ ಅನ್ನಿಸುತ್ತದೆ.

ಮೂಲತಃ ರಮ್ಯಪ್ರಜ್ಞೆಯ, ಆದರೆ ನವ್ಯ ಚಳವಳಿಯೊಡನೆ ಬೆಳೆದು ಬಂದು ಆ ಕಾವ್ಯಮಾರ್ಗದೊಂದಿಗೆ ನಿಕಟ ಸಂಬಂಧ ಹೊಂದಿದ ನಿಸಾರರಿಗೆ ಇದೇ ಮುಖ್ಯ ಸಮಸ್ಯೆಯೂ ಆಗಿದೆ:

'ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೇ
ಬೇರೊತ್ತಿದ್ದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.'

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

'ಯಾವುದೋ ಮಗು ಸ್ವಂತ? ಯಾವುದೋ ಪರಕೀಯ?
ಎಲ್ಲಕ್ಕೂ ಒಂದೆ ಪಾಯ.
ನಿನ್ನದೇ ಈ ಜೀತ?
ಸ್ವಂತದ್ದರಲು ಮುಕ್ಕಾಲು ಪಿತ್ರಾರ್ಜಿತ.'

(ದ್ವಂದ್ವ)

'ಹಲವೊಮ್ಮೆ ನಿಮ್ಮಂತೆ
ಬರೆಯುವುದೇಕೆಂದರೆ:
ಒಂಟಿಯಾಗದಿರುವುದಕ್ಕೆ:
ಅನ್ನಿಸುವುದರಿಂದ—ಪ್ರಕಟಿಸದು ಈ ಭೂಗುಣ
ಈಚಲಂತೆ ಉತ್ತುತ್ತೆಯ
ಕತ್ತೆಯಂತೆ ಹೇಸರಗತ್ತೆಯ;
ಅಶ್ವತ್ಥದೆಲೆ ವ್ಯವಹಾರಕ್ಕೆ ಕೌಪೀನ;
ಗುಂಪಲ್ಲಿ ಬಿಡಿ ಪ್ರಾಣ ಜೋಪಾನ.

ಕೆಲವೊಮ್ಮೆ ತೀರಾ ನನ್ನಂತೆ
ಬರೆಯುವುದೇಕೆಂದರೆ:
ಹತ್ತಿರಲ್ಲೊಂದಾಗದಿರುವುದಕ್ಕೆ:
ಅನಿಸುವುದರಿಂದ—ಕಾಯಿ
ಕರ್ಪೂರಕ್ಕೆ ನಿಮ್ಮ ಮೊಹರು;
ನನ್ನ ಅಸ್ತಿತ್ವಕ್ಕೆ ಜೀವ ರಸ ತಾಬೂತು,
ಮಿಡತೆ ತೇರು.
ಕಾಡಲ್ಲಿ ಒಂಟಿ ಅದ್ವಿತೀಯ
ರಿವಾಜಲ್ಲಿ ಅನ್ಯತ್ವ ಶ್ರೇಯ.'
(ವಿವರಣೆ)

'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ದ್ವಂದ್ವ', 'ವಿವರಣೆ', 'ನಾನೆಂಬ ಪರಕೀಯ'—ಮೊದಲಾದ ಕವಿತೆಗಳಲ್ಲಿ ನಿಸಾರರು ಎದುರಿಸಿದ ಸಮಸ್ಯೆಯ ಸ್ವರೂಪ ನಮಗೆ ಸ್ಪಷ್ಟವಾಗುತ್ತದೆ. ಈ ಸಮಸ್ಯೆಯನ್ನು ನಿಸಾರರು ಮುಖಾಮುಖಿಯಾಗಿ ಎದುರಿಸದೆ ತಮ್ಮದೇ ಆದ ವಿಶಿಷ್ಟ ಶೈಲಿಯೊಂದನ್ನು ರೂಪಿಸಿಕೊಳ್ಳುವುದರ ಮೂಲಕ ಸುಲಭವಾಗಿ ಪರಿಹರಿಸಿಕೊಂಡು ಬಿಟ್ಟರು. ನವ್ಯಕಾವ್ಯ ಉಪೇಕ್ಷಿಸಿದ ಕೆಲವು ಅಂಶಗಳನ್ನು ತಮ್ಮ ಕಾವ್ಯ ರಚನೆಯಲ್ಲಿ ಪರಿಣಾಮಕಾರಿಯಾಗಿ ತರುವುದರ ಮೂಲಕ ಗಮನ ಸೆಳೆದರು. ಗೋಪಾಲಕೃಷ್ಣ ಅಡಿಗರು ಹೇಳುವಂತೆ—'ಭಾವ ವ್ಯಂಗ್ಯ ವಿಡಂಬನೆ ಚತುರೋಕ್ತಿಗಳೊಡನೆ ರುಚಿಗೊಳಿಸುವ ಇವರ ಶೈಲಿ ಸಾಮಾನ್ಯ ವಾಚಕರ ಮನಸ್ಸನ್ನೂ ತಟ್ಟಿ ಎಬ್ಬಿಸಬಲ್ಲುದು. ಈ ಮಟ್ಟದಲ್ಲಿ ಇವರಷ್ಟು ಕೃತಾರ್ಥರಾದ ಕವಿಗಳು ಬೇರೆ ಇಲ್ಲ.'

ನಿಸಾರ್ ಸಹಜ ಕವಿ; ಭಾಷೆಯೊಡನೆ ಇವರು ನಿರಾಯಾಸ ಆಡಬಲ್ಲರು; ಈ ಆಟವೇ ಅವರನ್ನು ನಮ್ಮಲ್ಲಿ ವಿಶಿಷ್ಟರನ್ನಾಗಿಸಿರುವುದು. ಆದರೆ ಇದೇ ಅವರ ಸಮಸ್ಯೆಯೂ ಹೌದು. ಧಾರಾಳ ಬಳಕೆಯ ಮೂಲಕವೇ ಅರ್ಥವನ್ನು ಸಾಧಿಸುವ ಪ್ರಯತ್ನವನ್ನು ನಿಸಾರ್ ಮಾಡಿದ್ದಾರೆ ನಿಜ. ಆದರೆ ಅಲ್ಲಿಯೂ ಅವರು ಎದುರಿಸುವ ಗೊಂದಲ ಅವರ ಸಹಜ ಪ್ರತಿಭೆಗೆ ಕಡಿವಾಣ ಹಾಕುತ್ತದೆ. 'ರಾಮನ್ ಸತ್ತ ಸುದ್ದಿ', 'ವೈಜಯಂತಿ', 'ಮೃಗಾಯಣ', 'ಪ್ರಾಗ್ಬಂಧಗಳು', 'ಪರ್ಣಾಶ್ರಮ', 'ಗಾಡಿ ಮತ್ತು ನಾಯಿ', 'ಅನಾಮಿಕ ಆಂಗ್ಲರು'—ಮೊದಲಾದ ಅನೇಕ ಕವಿತೆಗಳಲ್ಲಿ ನಿಸಾರರು ತಮ್ಮ ಈ ಗೊಂದಲವನ್ನು ಮೀರುವ ಪ್ರಯತ್ನವನ್ನು ಮಾಡಿದ್ದಾರೆ; ಉತ್ತಮ ರಚನೆಗಳ ಮೂಲಕ ಗಂಭೀರ ಕಾವ್ಯಾಭ್ಯಾಸಿಗಳ ಗೌರವಕ್ಕೆ ಪಾತ್ರರಾಗಿದ್ದಾರೆ.

ಎರಡು ಕಾವ್ಯ ಮಾರ್ಗಗಳ ತಾಕಲಾಟದ ಈ ಸಮಸ್ಯೆಗಿಂತ ನಿಸಾರರು ಎದುರಿಸಿದ ಹೆಚ್ಚು ಗಂಭೀರವಾದ ಮಹತ್ವದ ಸಮಸ್ಯೆ—ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯಬೇಕಾಗಿ ಬಂದಂತಹ ಸ್ಥಿತಿ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂವೇದನಾಶೀಲ ಮುಸ್ಲಿಂ ವ್ಯಕ್ತಿ ಎದುರಿಸಿದ ಸಮಸ್ಯೆ ಕೇವಲ ಸಾಂಸ್ಕೃತಿಕ ಸಮಸ್ಯೆ ಮಾತ್ರವಲ್ಲ, ಸಾಮಾಜಿಕವೂ ರಾಜಕೀಯವೂ ಆದ ಸಂಕೀರ್ಣ ಸಮಸ್ಯೆ:

'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ, ನೀಯತ್ತು, ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ—
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನ
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.'

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

ಸಂವೇದನಾಶೀಲ ವ್ಯಕ್ತಿಯ ಆತ್ಮವಿಶ್ವಾಸವನ್ನೇ ಧ್ವಂಸ ಮಾಡಿಬಿಡುವ ಸ್ಥಿತಿ ಇದು. ಸದಾ ಸಂಶಯದಿಂದಲೇ ನೋಡುವ, ವ್ಯಕ್ತಿತ್ವದ ಸಾಚಾತನವನ್ನೇ ಅನುಮಾನಿಸುವ ಪರಿಸರದಲ್ಲಿ ಮನಸ್ಸು ಸಹಜವಾಗಿ ಅರಳುವುದು ಸಾಧ್ಯವಿಲ್ಲ; ನಗು ಹುಸಿನಗುವಾಗುತ್ತದೆ. ತನ್ನ ಪ್ರತಿಯೊಂದು ಕ್ರಿಯೆಯಲ್ಲೂ ಪ್ರಾಮಾಣಿಕತೆಯನ್ನು ಪ್ರಕಟಿಸುವ ಮೂಲಕ ತನ್ನ ನಿಷ್ಠೆಯನ್ನು ಸಾಬೀತು ಪಡಿಸಿಕೊಳ್ಳಬೇಕಾದ ಸ್ಥಿತಿಯೇ ಅಸಹನೀಯವಾದಂಥದು. ಇಂಥಲ್ಲಿ ಜಾಣತನ, ಚಮತ್ಕಾರ ಸಹಜವಾಗಿ ಮುಖ್ಯವಾಗಿ ಬಿಡುವ ಅಪಾಯವಿದೆ. ಸೂಕ್ಷ್ಮಪ್ರಜ್ಞೆಯ ಪ್ರತಿಭಾವಂತ ಕವಿಯಾದ ನಿಸಾರ್ ಅಹಮದ್ ಅವರಿಗೆ ಈ ಸ್ಥಿತಿಯ ಅರಿವಿದೆ. ಆದರೆ ಅವರು ಅದನ್ನು ಎದುರಿಸುವ ಪ್ರಯತ್ನ ಮಾಡುವುದಿಲ್ಲ. ವೈಯಕ್ತಿಕವಾಗಿ ತಾನು ಎದುರಿಸಲೇಬೇಕಾದ ಅಸಹನೀಯ ಸ್ಥಿತಿಯನ್ನು ನುಂಗಿಕೊಂಡು ಸರ್ವಮಾನ್ಯ ಅನುಭವಗಳತ್ತ ಹೊರಳಿಬಿಡುವುದರ ಮೂಲಕ ಈ ಸ್ಥಿತಿಯಿಂದ ಪಾರಾಗುತ್ತಾರೆ. `ರಂಗೋಲಿ ಮತ್ತು ಮಗ`ದಂತಹ ಕವಿತೆಯನ್ನೇ ಗಮನಿಸಿ. ಎರಡು ಸಂಸ್ಕೃತಿಗಳ ನಡುವಿನ ಭಿನ್ನತೆಯ ಅಂಶ ಕಡೆಯಲ್ಲಿ `ಆತ್ಮಸಾಕ್ಷಿ`ಯ ಸರ್ವಮಾನ್ಯ ಸಂಗತಿಯನ್ನು ಕೆದಕುವ ಸಂಗತಿಯಾಗಿ ಬಿಡುತ್ತದೆ. ಇದಕ್ಕೆ ನಿಸಾರರ ಎಚ್ಚರವೇ ಕಾರಣ: `ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯಬೇಕಾದ ನನ್ನಂಥ ಕೃತಿಕರ್ತನಿಗೆ ಅನುಕೂಲಗಳೂ ಇವೆ; ಅಡಚಣೆಗಳೂ ಇವೆ. ಇಂಥ ಪರಿಸ್ಥಿತಿಯಲ್ಲಿ ಕಾವ್ಯ ರಚನೆ ಮಾಡಬೇಕಾದ ಲೇಖಕ ಬದುಕಿನ ಸರ್ವಗ್ರಾಹ್ಯವಾದ ಒಟ್ಟಾರೆ ಸಾರ್ವತ್ರಿಕ ಅನುಭವಗಳನ್ನು ಕೈಬಿಟ್ಟು ಬಡವನಾಗುವ ಸಂಭವವೇ ಅಧಿಕ. ಅಂಥ ಅನುಭವಗಳನ್ನು ಉಳಿದು ಸಂಸ್ಕೃತಿ ವಿಭಿನ್ನತೆಯ, ಅಲ್ಪಸಂಖ್ಯಾತತೆಯ ಅರಿವನ್ನು ಮಾತ್ರ ಗಾಢಗೊಳಿಸಿಕೊಂಡು, ಮೂರು ಹೊತ್ತೂ ಅವುಗಳನ್ನೇ ವಿಚಾರ ಮಾಡುತ್ತ ಕಾವ್ಯದಲ್ಲಿ ಅದನ್ನು ಹೇಗಾದರೂ ಎಳೆದು ತರಬೇಕೆಂಬ ಹೂಟ ಹೂಡಿದರೆ ಅಂಥ ಕಾವ್ಯರಚನೆ ಕೃತಕವಾಗುತ್ತದೆ; ಅಸಮಾನವೆನ್ನಿಸುತ್ತದೆ. ಸರ್ವಜನ ಸಮಾನವಾದ ಸರ್ವಾಂಗೀಣ ಜೀವನಾನುಭವದ ಸಂತೋಷ ಸಂಭ್ರಮದ ಬೆರಗುಗಳಿಂದ ವಂಚಿತವಾಗುತ್ತದೆ—ಎಂದರೆ ಸಂಸ್ಕೃತಿ ವಿಭಿನ್ನತೆಯ ಆಶಯವುಳ್ಳ ಕವನಗಳ ಜೊತೆ ಜೊತೆಯಲ್ಲೇ ಸರ್ವಮಾನವರಿಗೂ ಸಮನಾದ ಅನುಭವಗಳನ್ನು ತೋಡಿಕೊಳ್ಳುವ ರಚನೆಗಳೂ ನನ್ನ ಕೃತಿಗಳಲ್ಲಿ ಧಂಡಿ

ಯಾಗಿವೆ.'

ನಿಸಾರರ ಈ ಎಚ್ಚರದ ಸ್ಥಿತಿಯೇ ಅವರ ಸಮಸ್ಯೆಯನ್ನೂ ಸೂಚಿಸುತ್ತದೆ. ಸಹಜ ಪ್ರತಿಭೆಯ ನಿಸಾರ್ ಅಹಮದ್ ಅವರ ಕಾವ್ಯದ ಗಂಭೀರ ಅಭ್ಯಾಸ ನಮಗೆ ಸ್ವಾತಂತ್ರ್ಯೋತ್ತರ ಭಾರತದ ಸಾಂಸ್ಕೃತಿಕ ಸಮಸ್ಯೆಯ ಕೆಲವು ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ.

ಮನುಷ್ಯ ಜನ್ಮತಃ ಪ್ರಯೋಜನಾಪೇಕ್ಷಿ, ಸೌಲಭ್ಯಾಕಾಂಕ್ಷಿ. ಅವನಿಗೆ ಭಾವದ ಆವಾಹನೆಗಿಂತ, ಎಷ್ಟೇ ಅಲ್ಪವಾದರೂ ವಿಚಾರದ ವಿಷಯದಲ್ಲಿ ಹೊಕ್ಕು ಬಳಸು ಹೆಚ್ಚು ಸುಲಭ, ಆಪ್ತ. ವೈಯಕ್ತಿಕ ಬದುಕಿನಲ್ಲಿ ಅವನು ಸುಕ್ಷೇಮ, ಸೌಕರ್ಯಗಳಿಗೆ ಕೊಡುವ ಸ್ಥಾನ ಎತ್ತರದ್ದು, ಮೊದಲನೆಯದು. ಭಾವಲಭ್ಯ ತನ್ಮಯತೆ, ಹಿತಾಭಿಲಾಷೆ, ಸೌಂದರ್ಯಾಸ್ವಾದನೆಗಳಿಗೆ ಅನಂತರದ ಪಂಕ್ತಿ. ಹೀಗಾಗಿ ಭಾವದ ಆರ್ಜನೆಗೋಸ್ಕರ ಅವನ ಮನಸ್ಸು ಪ್ರಥಮದಲ್ಲೇ ಹಾತೊರೆಯದು. ಜೀವನೋಪಾಯಕ್ಕೆ ಹಾದಿ ರಚಿಸಿಕೊಡುವ ವಿಚಾರದ ತರುವಾಯ, ಅದರ ಸಂಗಡ ಭಾವನನ್ನು ಉದ್ಬುದ್ಧಗೊಳಿಸಿ ಜೊತೆಯಾಗಿಸಲು ಅವನು ಹವಣಿಸುತ್ತಾನೆ: ರಮಣೀಯ ನಿಸರ್ಗ ದೃಶ್ಯ, ದೇವರ ಪಠ, ಚಿತ್ರಮಯ ಕ್ಯಾಲೆಂಡರ್‌ಗಳನ್ನು ತೂಗಿ ಹಾಕುವ ಉದ್ದೇಶದಿಂದ ಯಾರೂ ಮನೆಯ ಗೋಡೆಗಳನ್ನು ಎಬ್ಬಿಸುವುದಿಲ್ಲ. ಅವುಗಳನ್ನು ನಿರ್ಮಿಸುವುದು ಭದ್ರತೆಗೋಸ್ಕರ: ತನ್ಮೂಲಕ ತನ್ನ ವಾಸದ ಸಲುವಾಗಿ. ಅವುಗಳ ಮೇಲೆ ಪಠ ಇತ್ಯಾದಿ ಸೊಗಯಿಸುತ್ತಿದ್ದರೆ ಅದೊಂದು ಉಪಾಂಗ ಪ್ರಯೋಜನವಷ್ಟೆ. ಮನುಷ್ಯ ತನ್ನ ಸುರಕ್ಷಿತತೆಯ ಲೌಕಿಕ ಆವಶ್ಯಕತೆಯೊಂದಿಗೆ ಸೌಂದರ್ಯ ಪ್ರಜ್ಞೆಯ ಭಾವಾತ್ಮಕ ಆಶಯವನ್ನೂ ತನ್ನ ಪ್ರಾಣಾಂತ್ಯದವರೆಗೆ ಜೀವಿತದ ಪ್ರತಿಯೊಂದು ವಿಷಯದಲ್ಲೂ ಪ್ರಕಟಗೊಳಿಸುತ್ತ ಮುಂದುವರಿಯುವುದೇ ಇತರೆ ಜೀವಿಗಳಿಂದ ಅವನನ್ನು ಅನ್ಯವಾಗಿಸುವ, ಅನನ್ಯಗೊಳಿಸುವ ಮುಖ್ಯಾಂಶಗಳಲ್ಲಿ ಒಂದು.

(ಸುರಕ್ಷತೆ ಮತ್ತು ಸೌಂದರ್ಯ ಪ್ರಜ್ಞೆ)



ನಿಸಾರರ ಕವಿತೆಗಳಲ್ಲಿ ಕಾವ್ಯಮರ್ಮ ವಿವೇಚನೆ

♦ *ಡಾ. ಚಿಂತಾಮಣಿ ಕೊಡ್ಲೆಕೆರೆ*

ಹಿರಿಯ ಕವಿ ನಿಸಾರರ ಕಾವ್ಯ ವ್ಯವಸಾಯ ಅರ್ಧ ಶತಮಾನಕ್ಕೂ ಅಧಿಕ ಕಾಲದಿಂದ ನಡೆದು ಬಂದಿದೆ. ನಮ್ಮ ಅಗ್ರಗಣ್ಯ ಕವಿಗಳಲ್ಲೊಬ್ಬರಾದ ಅವರು ಬೃಹತ್ ಪ್ರಮಾಣದಲ್ಲಿ ವಿಚಾರಪರ, ವಿಮರ್ಶಾತ್ಮಕ ಗದ್ಯ ಸಾಹಿತ್ಯವನ್ನೂ ಸೃಷ್ಟಿಸಿದ್ದಾರೆ. ಅನುವಾದ, ಮಕ್ಕಳ ಸಾಹಿತ್ಯ ರಚನೆಯಲ್ಲೂ ಅವರದು ದೊಡ್ಡ ಹೆಸರು. ಇಷ್ಟೆಲ್ಲ ಆಗಿಯೂ ಅವರು ಮೂಲತಃ, ಸ್ವಭಾವತಃ ಕವಿ. ಅಡಿಗರು ಅವರನ್ನು 'ಸಹಜ ಕವಿ' ಎಂದು ಕರೆದರು. ಬೇರಾವ ಉಪಾಧಿಗಿಂತಲೂ ಇದು ದೊಡ್ಡ ಗೌರವವೆಂದು ನಾನು ಭಾವಿಸಿದ್ದೇನೆ. ಕವಿತ್ವ ಸಹಜವಾದುದೆಂದ ಮೇಲೆ ಅದು ವ್ಯಕ್ತಿತ್ವದ ಅಡಿ ಮುಡಿಗಳನ್ನೆಲ್ಲ ಆವರಿಸಿದ ಅಂತರ್ಜಲವೆಂದೇ ಅರ್ಥ. ಅದಕ್ಕೆ ತಕ್ಕಂತೆ ನಿಸಾರರು ತಮ್ಮ ಕಾವ್ಯ ಜೀವಿತ ದುದ್ದಕ್ಕೂ ಕಾವ್ಯಕ್ರಿಯೆಯ ಕುರಿತು, ಕಾವ್ಯ ಪ್ರಕ್ರಿಯೆಯ ಕುರಿತು, ಸೃಷ್ಟಿ-ಸೃಷ್ಟಿಶೀಲತೆಗಳ ಕುರಿತು, ಸೃಷ್ಟಿಕ್ರಿಯೆಯ ಅನನ್ಯತೆಯ ಕುರಿತು ತಮ್ಮ ಕವಿತೆಗಳಲ್ಲೂ ಲೇಖನಗಳಲ್ಲೂ ಬಹಿರಂತರವಿಲ್ಲದೆ ಚಿಂತಿಸುತ್ತ ಬಂದಿದ್ದಾರೆ. ಕಾವ್ಯ ಮರ್ಮ ಭೇದನ ಬಹು ಕಾಲದಿಂದಲೂ ಕವಿಗಳ, ಕಾವ್ಯ ಮೀಮಾಂಸಕರ ಆಸಕ್ತಿಯ ವಿಷಯವಾಗಿದೆ. ಅಷ್ಟೊಂದು ವಿವೇಚನೆಗಳ ಬಳಿಕವೂ ಕಾವ್ಯಸೃಷ್ಟಿ ಪ್ರಕ್ರಿಯೆ ಮೊದಲಿನಷ್ಟೇ ನಿಗೂಢ ಕೌತುಕವಾಗಿ ಉಳಿದಿದೆ. ಹಾಗಿದ್ದೂ ಪ್ರತಿಯೊಬ್ಬ ಶ್ರದ್ಧಾಳು ಕವಿಯೂ ಆ ಅನಂತ ಅನಾದಿಯನ್ನು ಕೈಗೆ ಎಟುಕಿಸಿಕೊಳ್ಳಲು

ಯತ್ನಿಸದೆ ವಿಧಿಯಿಲ್ಲ. ಅಂಥ ಪ್ರಯತ್ನಗಳಿಂದ ಅಂತಿಮವಾಗಿ ಕವಿ ತನ್ನ ಕಾವ್ಯವನ್ನು ಭೂಮವಾಗಿಸುತ್ತ ಹೋಗುತ್ತಾನೆ. ಸೃಷ್ಟಿ ರಹಸ್ಯದ ಕೌತುಕವನ್ನು ತನ್ನ ಸೃಷ್ಟಿಯ ಮೂಲಕವೇ ತೋರಲು ಹವಣಿಸುತ್ತಾನೆ. ನಿಸಾರರ ಕವಿತೆಗಳೊಳಗೆ ಮೂಡಿರುವ ಅಂಥ ಉಜ್ವಲ ಕ್ಷಣಗಳನ್ನು ಕಾಣುವ ಮೊದಲು, ಕಾವ್ಯಾಂತರ್ಗತ ಕಾವ್ಯತತ್ತ್ವ ಶೋಧನೆಯನ್ನು ಪರಿಶೀಲಿಸುವ ಮೊದಲು, ಅವರ ಗದ್ಯ ಬರಹಗಳಲ್ಲಿ ವ್ಯಕ್ತಗೊಂಡ ಕಾವ್ಯಮೀಮಾಂಸೆಯ ಮುಖ್ಯಾಂಶಗಳನ್ನು ವಿವರವಾಗಿ ಪರಿಶೀಲಿಸುವುದು ಈ ಅಧ್ಯಯನಕ್ಕೆ ಅತ್ಯಗತ್ಯ ಸಿದ್ಧತೆಯನ್ನೊದಗಿಸುವುದು ಎಂದು ಭಾವಿಸಿದ್ದೇನೆ.

'ಕಾವ್ಯಸೃಷ್ಟಿ ಪ್ರಕ್ರಿಯೆ ಮೂಲತಃ ಅಂತರ್ಲೋಕಕ್ಕೆ ಸಂಬಂಧಿಸಿದ್ದು' ಎಂದು ನಿಸಾರರು ತಿಳಿಯುತ್ತಾರೆ (ಪುಟ: 9, 'ಸಮಗ್ರ ಗದ್ಯ'). ಅವರ ತಿಳಿವಳಿಕೆಗೆ ಕವನಗಳ ಅಧ್ಯಯನ ಒಂದು ಮಾರ್ಗ ಹೌದಾದರೂ ಅದೊಂದೇ ಸಮಗ್ರ ಮಾರ್ಗವಲ್ಲ. 'ಕವನ ಸೃಷ್ಟಿ ಪ್ರಕ್ರಿಯೆಯ ಬೇರುಗಳು ಕಾವ್ಯಕ್ಷೇತ್ರಕ್ಕೇ ಕಚ್ಚಿಕೊಳ್ಳದೆ ಮನೋವಿಜ್ಞಾನದೊಂದಿಗೆ ಅಸಂಖ್ಯ ರೀತಿಗಳಲ್ಲಿ ತಳುಕಿ ಹಾಕಿಕೊಂಡಿವೆ. ಅವು ಮನುಷ್ಯನ ಅಂತರಂಗದಷ್ಟೇ ನಿಗೂಢ, ಅಗ್ರಾಹ್ಯ, ಅಮೇಯ' ಎಂದು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತ, 'ಈ ದೃಷ್ಟಿಯಿಂದ ಅಂತಶ್ಚಿತ್ತ ತನಗೆ ತಾನೆ ಒಂದು ಗಹನವಾದ ನಿತ್ಯ ನಿರನ್ವೇಷಿತ ಲೋಕ' ಎಂದು ವರ್ಣಿಸುತ್ತಾರೆ.

'ಈ ರೀತಿಯಲ್ಲಿ ಪ್ರತಿ ಕವಿಯೂ ಒಬ್ಬೊಬ್ಬ ಕ್ರಿಸ್ಟೋಫರ್ ಕೊಲಂಬಸ್. ಒಂದೊಂದು ವಿಶಿಷ್ಟ ಕವನ ರಚನೆಯೂ ಒಂದೊಂದು ದುರ್ಗಮವಾದ, ಸಾಹಸಮಯವಾದ ನೌಕಾಯಾನ; ಹೊಸ ನೆಲೆಯ ಅನ್ವೇಷಣ. ಆದರೆ ವ್ಯತ್ಯಾಸವಿಷ್ಟೆ: ಕೊಲಂಬಸನಿಗೆ ಪೂರ್ವಸಿದ್ಧವಾದ, ಘನವಾದ ಭೂಖಂಡವುಂಟು. ಕವಿಯ ತಡಕಾಟವೆಲ್ಲ ನಿರಾಕಾರತೆಯ, ಮಬ್ಬು ಮಬ್ಬಿನ ಮೊತ್ತದಲ್ಲಿ' (ಪುಟ: 10, 'ಸಮಗ್ರ ಗದ್ಯ').

ತನ್ನ ಅಂತರಂಗದೊಳಗೆ ಗಾಳಿ ತೆಳುವಿನ ಅಜ್ಞಾತ ಸಂಗತಿಗಳನ್ನು ಗರ್ಭಿಸಿ ಕೊಂಡಿರುವ ಹೊತ್ತಿನಲ್ಲೇ ಕವನವೆಂಬುದು ಅಂಗೋಪಾಂಗ ಸಾಮರಸ್ಯವುಳ್ಳ ಶಿಲ್ಪವೆಂದೂ ಸೂಚಿಸಲು ನಿಸಾರ್ ಮರೆಯುವುದಿಲ್ಲ. 'ಕವಿ ಸೃಷ್ಟಿಕರ್ಮದ ಜೀವಾಳವೆಂದರೆ ಅಸ್ಫುಟ ವಾದ ಮನೋಮುದ್ರೆಗಳಿಗೆ ತಕ್ಕನಾದ ವಸ್ತು ಪ್ರತಿರೂಪಗಳನ್ನು ಶಬ್ದಗಳಲ್ಲಿ ಸೃಷ್ಟಿಸುವಿಕೆ ಮತ್ತು ಅದರ ಫಲವಾಗಿ ಬುದ್ಧಿ, ಭಾವವೇದಿಯಾದ ಪದ ಶಿಲ್ಪವನ್ನು ನಿರ್ಮಿಸುವಿಕೆ' ಎಂದು ಅವರು ತಿಳಿಯುತ್ತಾರೆ. ತಮ್ಮ ಸಮಗ್ರ ಗದ್ಯ ಬರಹಗಳ ಪ್ರವೇಶಿಕೆಯಲ್ಲಿ ಒಂದೆಡೆ ಈ ಕವಿ 'ಭಾಷೆ ಅಂಗಿಯಲ್ಲ, ಚರ್ಮ' ಎಂಬ ಮಹತ್ವದ ಮಾತನ್ನಾಡಿದ್ದಾರೆ. ಸ್ವಾಭಾವಿಕವಾಗಿ ವಸ್ತುವಿನ ಮೂರ್ತತ್ವದೊಂದಿಗೆ ಸಂಭವಿಸುವ ಭಾಷೆ ಸೃಷ್ಟಿಕ್ರಿಯೆಯಲ್ಲಿ ಸಾದ್ಯಂತವಾಗಿ ಭಾಗವಹಿಸಿರುವಂಥದೇ ಹೊರತೂ ಮೇಲಂಗಿಯಾಗಲೀ, ವಾಹಕವಾಗಲೀ ಅಲ್ಲ ಎಂಬುದು ಅವರ ವಾದ. 'ನನ್ನ ಕವನಗಳ ಭಾಷೆಯನ್ನು ನಾನು ಬೆವರು ಸುರಿಸಿ ಸಂಪಾದಿಸಿ ಕೊಂಡಿದ್ದೇನೆ' ಎಂದವರು ನುಡಿದಿದ್ದಾರೆ (ಪುಟ: 13).

ಸೃಷ್ಟಿ ಪ್ರಕ್ರಿಯೆಯ ಸ್ವರೂಪವನ್ನು ಅರಿಯಲು ಮನೋವಿಜ್ಞಾನದ ನೆರವೂ

ಅಗತ್ಯವೆಂದ ಕವಿ ತನ್ನನ್ನು ತಾನು ವಿಶ್ಲೇಷಿಸಿಕೊಳ್ಳುವುದು ಹೀಗೆ:

'ನನ್ನ ದೈನಂದಿನ ವ್ಯವಹಾರಗಳು, ಆವರಿಸಿರುವ ಸಮಾಜ, ನನ್ನನ್ನು ಕ್ಷಣಕ್ಷಣವೂ ಸಮಕಾಲೀನನಾಗಿಸುತ್ತಿದ್ದರೆ, ನನ್ನ ಅಂತರಾಳದಲ್ಲಿ ಶೇಖರವಾಗಿರುವ, ಹುಟ್ಟಿನಿಂದ ಬೆನ್ನಂಟಿ ಬಂದಿರುವ ನಂಬಿಕೆಗಳು: ಅದಕ್ಕೂ ಮುಂಚಿನ ಪಾಶವೀ ಭಯೋದ್ವೇಗಗಳು; ನಿಷ್ಕಾರಣ ನೋವು ನಲಿವು ಇತ್ಯಾದಿ ಸಂಗತಿಗಳು ನನ್ನಲ್ಲಿ ಪ್ರಾಚೀನತೆಯ ಅರಿವನ್ನು ಸದಾ ಜ್ವಲಂತ ವಾಗಿ ನೆಲೆಗೊಳಿಸಲು ದುಡಿದಿರುತ್ತವೆ. ಈ ನನ್ನ ಚೇತನದ ಸಮಕಾಲೀನತೆಯ ಹಾಗೂ ಪ್ರಾಚೀನತ್ವದ ಪ್ರಖರ ತಿಳಿವು ನನಗೆ ಕವನ ಸೃಷ್ಟಿಯ ಕೆಲವು ಅತ್ಯುತ್ಕಟ ಗಳಿಗೆಗಳಲ್ಲಿ ವೇದ್ಯವಾಗಿದೆ... ಇದರಿಂದ ಕಾವ್ಯ ಸೃಷ್ಟಿ ಕ್ರಿಯೆ ಹಿಂದು-ಇಂದುಗಳ, ಮರೆವು-ಎಚ್ಚರಗಳ ಅತ್ಯಪೂರ್ವವಾದ, ದಿಗ್ಭ್ರಮಕಾರಕವಾದ ಸಮರಸ ಸಾಧನೆಯ ಕುಶಲಕರ್ಮ ಎಂಬುದು ಮನವರಿಕೆಯಾಗುತ್ತದೆ' (ಪುಟ: 11).

ಇಂಥ ಸೃಷ್ಟಿ ಪ್ರಕ್ರಿಯೆಯಲ್ಲಿ ತೊಡಗಿಕೊಂಡ ಮನಸ್ಸು ಸಜೀವ ಅನುಭೂತಿಯನ್ನು ಗ್ರಹಿಸುವ ವಿಶಿಷ್ಟ ಪ್ರಜ್ಞೆಯಾಗಿ ಮಾರ್ಪಡುವುದೆಂದು ನಿಸಾರ್ ವ್ಯಾಖ್ಯಾನಿಸುತ್ತ ಹೊಚ್ಚ ಹೊಸವಾಗಿ ವ್ಯಕ್ತಗೊಳ್ಳುವ ಸಾಮರ್ಥ್ಯವನ್ನು ಪಡೆದ ಆ ಸ್ಥಿತಿಯನ್ನು 'ಪ್ರತಿಭೆ' ಎನ್ನ ಬಹುದೇನೋ—ಎಂದು ನುಡಿದು ಪ್ರಾಚೀನ ಕಾವ್ಯ ಮೀಮಾಂಸಕರ ಬಹು ಮುಖ್ಯವಾದ ಪರಿಕಲ್ಪನೆಯೊಂದನ್ನು ಹೊಸ ಬಗೆಯಲ್ಲಿ ಕಾಣಲು ಯತ್ನಿಸುತ್ತಾರೆ.

ವ್ಯಕ್ತಿ ನಿರ್ದಿಷ್ಟವಾದ ವೈಯಕ್ತಿಕ ಅನುಭವಗಳು ತಮ್ಮ ತತ್ಕಾಲೀನ ಸೀಮಿತತೆ ಯನ್ನು ಕಳೆದುಕೊಂಡು ಸಾರ್ವತ್ರಿಕತೆ, ಅತಿಶಯ ಸಾಂಕೇತಿಕತೆಗಳನ್ನು ಸಂಪಾದಿಸಿಕೊಂಡು 'ಕಾಲ, ಮನಸ್ಸುಗಳಲ್ಲಿ ಸಂಚರಿಸುವಂತೆ ಮಾಡುವ' ನಿಗೂಢ ಸೃಷ್ಟಿ ಪ್ರಕ್ರಿಯೆಯು ಈ ಕವಿಗೆ ಕೌತುಕ ಹುಟ್ಟಿಸಿದೆ. ಕಾವ್ಯ ಸೃಷ್ಟಿಯ ತರ್ಕರಹಿತತೆ, ಅನಿಶ್ಚಿತತೆ, ರಹಸ್ಯಗಳು ಸ್ವತಃ ಬರೆಯುವ ಸಂದರ್ಭಗಳಲ್ಲಿ ಪ್ರತ್ಯಕ್ಷ ಅನುಭವಕ್ಕೆ ಬಂದಿವೆ ಎನ್ನುತ್ತಾರೆ. 'ಅನಿರ್ಬದ್ಧ ಕವಿ ಗೋಚರ ಜಗತ್ತಿನ ದೃಶ್ಯಗಳಿಗೆ, ಅನುಭವಗಳ ಆಳದಲ್ಲಿನ ನಿಗೂಢತೆಗಳಿಗೆ ತನ್ನ ಆಂತರ್ಯ ವನ್ನು ಹರವಿ, ಅವುಗಳಿಂದ ನಿರಂತರ ಚಕಿತಗೊಳ್ಳುತ್ತ, ಬಾಳಿನ ವೈಶಾಲ್ಯದಲ್ಲಿ ತನ್ನ ಸ್ಥಾನಮಾನಗಳನ್ನು ಗುರುತಿಸಿಕೊಳ್ಳುತ್ತ ವಿನಯವಂತನಾಗಲು ಅಪಾರ ಸಾಧ್ಯತೆಗಳುಂಟು' ಎಂದು ಅವನ ಪರವಾಗಿ ನಿಸಾರ್ ವಿಚಾರ ಮಂಡಿಸುತ್ತಾರೆ. ಆದರೆ ಸದಾ ಪ್ರೇಮ, ಪ್ರಕೃತಿ, ಪಾರಮಾರ್ಥಗಳಲ್ಲೇ ತೇಲುತ್ತ ಕವಿ ವಾಸ್ತವತೆಯ ತೊಡಕುಗಳನ್ನು ಎದುರಿಸದೆ ಪರಮ ಸ್ವಾರ್ಥಿಯಾದರೆ ತನ್ನ ಎಚ್ಚರಗೇಡಿತನದಿಂದ ಸಮಾಜಕ್ಕೆ ಕಂಟಕಕಾರಿಯಾದಾನೆಂದೂ ಅವರು ಎಚ್ಚರಿಸಿದ್ದಾರೆ (ಪುಟ: 8, 'ಸಮಗ್ರ ಗದ್ಯ'). 'ಸಮಾಜದಲ್ಲಿ ಒಬ್ಬನಾಗಿ ತನ್ನ ಹೊಣೆ ಗಾರಿಕೆಗಳನ್ನು ಸರ್ವದಾ ನೆನೆಯುತ್ತ, ತನ್ನ ಹಾಗೂ ಇತರರ ಹಿತಕ್ಕೆ ಸರ್ವತ್ರ ದುಡಿಯು ವಾಗಲೂ' ಕವಿ ತನ್ನ ಸ್ವಾಭಿಮಾನ, ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳುವುದು ಬಹು ಮುಖ್ಯ ವೆಂದು ಅವರಿಗೆ ತೋರಿದೆ. 'ಸಾಮಾಜಿಕ ಸಮಸ್ಯೆಗಳನ್ನೂ ಒಳಗೊಂಡಂತೆ ಇನ್ನಿತರ ಜೀವನ ಕಲ್ಯಾಣಕಾರಿ ಕಾಳಜಿಗಳನ್ನೂ ಪ್ರೀತಿಸುತ್ತ ತನ್ನಷ್ಟಕ್ಕೆ ತಾನು ಕಾವ್ಯ ರಚನೆ ಮಾಡುತ್ತಾ ಹೋಗುವ' ಕವಿಯ ಸೃಷ್ಟಿಶೀಲತೆಯ ಅಗತ್ಯ, ಅನಿವಾರ್ಯಗಳನ್ನು ಅರ್ಥಮಾಡಿಕೊಳ್ಳ

ಬೇಕೆಂದು ಅವರು ಬಲವಾಗಿ ಪ್ರತಿಪಾದಿಸುತ್ತಾರೆ. 'ಇದು ಅನಿರ್ಬದ್ಧವೆಂದು ಕಂಡರೂ ಅಂತರಂಗದಲ್ಲಿ ಬಹು ಮುಖ ಬದುಕಿನ ಕಾಣ್ಕೆಯಿಂದ ಲಭ್ಯವಾದ ಶಿಸ್ತಿಗೆ ತನ್ನನ್ನು ಬಿಗಿದುಕೊಂಡದ್ದು' (ಪುಟ: 3, 'ಸಮಗ್ರ ಗದ್ಯ'). ನಮ್ಮ ಕಾವ್ಯ ವೀರ್ಯವಂತಿಕೆ, ಮಾಗುವಿಕೆಗಳನ್ನು ಮೈಗೂಡಿಸಿಕೊಂಡು ಜನ ಜೀವನವನ್ನು ಹಸನುಗೊಳಿಸಬೇಕೆಂಬ ಸದಾಶಯವೂ ನಿಸಾರರ ಕಾವ್ಯ ಮೀಮಾಂಸೆಯಲ್ಲಿ ವ್ಯಕ್ತವಾಗಿದೆ.

ಕವಿಯ ಕಾರ್ಯ ವಿಶಿಷ್ಟವಾದುದೆಂಬುದನ್ನು ನಿಸಾರ್ ಮತ್ತೆ ಮತ್ತೆ ಜ್ಞಾಪಿಸುತ್ತಾರೆ. 'ಬದುಕು ಮನುಷ್ಯರಲ್ಲಿ ಅನೇಕರಿಗೆ ರಖಂವಾರು ಅನುಭವಗಳನ್ನು ನಿಚ್ಚಳವಾಗಿ ಹಂಚಿದರೂ ತೀವ್ರ ಪಡುಹ ಶಕ್ತಿಯನ್ನು ದಯಪಾಲಿಸಿದರೂ ಅವರೆಲ್ಲ ಕಾವ್ಯ ರಚಿಸುವುದು ಸಾಧ್ಯವಾಗಿಲ್ಲವೆಂಬುದು ಸರ್ವವೇದ್ಯ. ಅದಕ್ಕೆ ವಿಶಿಷ್ಟ ತರಂಗಾಂತರ, ದ್ಯುತಿಗ್ರಾಹಿ ಸಾಮರ್ಥ್ಯ ಅವಶ್ಯ. ಈ ಗುಣಗಳು ಅಪರೂಪವಾದ್ದರಿಂದ ಅವನ್ನು ಹೊಂದಿದವರ ಜವಾಬ್ದಾರಿ, ಎಚ್ಚರ ಯಾವ ಮಟ್ಟದ್ದಿರಬೇಕು, ಸಮಾಜಕ್ಕೆ ಅವರ ಮಾದರಿ ಎಂಥದ್ದಿರಬೇಕು ಎನ್ನುವುದು ಮನನ ಯೋಗ್ಯ' (ಪುಟ: 28, 'ಸಮಗ್ರ ಗದ್ಯ').

ಪ್ರತಿ ಕವಿಯೂ ಅನನ್ಯತೆಯತ್ತ ತುಡಿಯುತ್ತಿರಬೇಕೆಂಬುದು ಅವರ ಇನ್ನೊಂದು ಮುಖ್ಯ ಅಪೇಕ್ಷೆ. 'ತನ್ನ ಲೋಕ ಸಂದರ್ಭಗಳು, ಕಾಣ್ಕೆ, ಅಭಿವ್ಯಕ್ತಿ ಮಾಧ್ಯಮಗಳ ಮಧ್ಯೆ ಅವಿನಾ ಬಾಂಧವ್ಯ, ಅವಯವ ಸಾರೂಪ್ಯವಿದೆಯೊ ಇಲ್ಲವೊ ಎಂದು ಸ್ವವಿಮರ್ಶಿಸಿಕೊಳ್ಳುತ್ತ, ಹೆಜ್ಜೆ ಹೆಜ್ಜೆಗೂ ಸೃಜನಕ್ರಿಯೆಯ ನಿಗೂಢತೆಯ ಬಗ್ಗೆ ಬೆರಗುಪಡುತ್ತ, ಪ್ರತಿ ರಚನೆಯ ತೊಡಗುವಿಕೆಯಲ್ಲೂ ಅಸಾಧಾರಣ ಏಕಾಗ್ರತೆ, ಪ್ರಜ್ಞೆಯ ಉತ್ಕಟತೆಯನ್ನು ಸಾಧಿಸಿಕೊಳ್ಳುತ್ತ, ಮಾಗುವುದೇ ಪರಮ ಗಂತವ್ಯ (Ripeness is all) ಎಂದು ಹಾದಿ ಸಾಗುವ ಕವಿ ಇತರರ ಆಯ್ಕೆಗಳ ಮೇಲೆ ಬರೆದರೂ ಬೊಟ್ಟುಮಾಡಿ ತೋರಿಸುವಷ್ಟು ಬೇರೆ ನಿಲ್ಲುತ್ತಾನೆ. ಮತ್ತಾರೂ ಫೋರ್ಜರಿ ಮಾಡಲಾಗದಂಥ, ಮಾಡಲು ಪ್ರಯತ್ನಿಸಿದರೆ ಅನಾಯಾಸ ಸಿಕ್ಕಿ ಬೀಳುವಂಥ ಸಹಿಯಂತೆ ಸ್ವೋಪಜ್ಞತೆಯ ಮೊಹರನ್ನು ತನ್ನ ರಚನೆಗಳ ಮೇಲೆ ಒತ್ತಿರುತ್ತಾನೆ' (ಪುಟ: 29, 'ಸಮಗ್ರ ಗದ್ಯ').

'ಸಾಹಿತ್ಯ ಸೃಷ್ಟಿ ಪ್ರಕ್ರಿಯೆ' ಎಂಬ ಲೇಖನದಲ್ಲಿ ಸೃಜನ ಪ್ರಕ್ರಿಯೆಯನ್ನು ಕುರಿತ ವೈಜ್ಞಾನಿಕ, ಶಾಸ್ತ್ರೀಯ ಅಧ್ಯಯನಗಳ ಹಿನ್ನೆಲೆಯಲ್ಲಿ ಅದರ ರಹಸ್ಯಮಯತೆಯ ಕುರಿತು ಜಿಜ್ಞಾಸೆ ನಡೆದಿದೆ. 'ಸೃಷ್ಟಿ ಪ್ರಕ್ರಿಯೆ ನಿಗೂಢ ಹಾಗೂ ಅನಿರ್ವಾಚ್ಯ'ವಾಗಿರುವಾಗಲೂ ಆ ಕುರಿತು ನಡೆದಿರುವ ಮನೋವೈಜ್ಞಾನಿಕ, ತತ್ತ್ವಶಾಸ್ತ್ರೀಯ ಅಧ್ಯಯನಗಳು ಅನೇಕ ಮಾಹಿತಿಗಳನ್ನೊದಗಿಸಿವೆ. ಹೇಗೇ ಇರಲಿ, ಅದೊಂದು ತರ್ಕಾತೀತ ಮನಃಕ್ರಿಯೆ ಎಂಬುದನ್ನು, ಸಂಪೂರ್ಣವಾಗಿ ಅದನ್ನು ಅರ್ಥಮಾಡಿಕೊಳ್ಳಲು ಅಶಕ್ಯವೆಂಬುದನ್ನು, ವ್ಯಾಖ್ಯೆ, ವಿಚಾರಗಳಿಗೆ ಸಮಗ್ರವಾಗಿ ದಕ್ಕದೆಂಬುದನ್ನು ವಿಜ್ಞಾನಿಗಳೂ ಒಪ್ಪಿಕೊಂಡಿದ್ದಾರೆ ಎಂಬ ಮಹತ್ವದ ಅಂಶದತ್ತಲೂ ಲೇಖಕರು ಗಮನ ಸೆಳೆಯುತ್ತಾರೆ. 'ಅದೊಂದು ನವ ನಿರ್ಮಾಣ ಶಕ್ತಿ, ಸಮಸ್ಯಾ ಪರಿಹಾರ ಸಾಮರ್ಥ್ಯ, ನಿರರ್ಗಳವೂ ಬಹುಕೇಂದ್ರಿತವೂ ಆದ ಆಲೋಚನಾಶಕ್ತಿ, ಭಿನ್ನ ಹಾಗೂ ವಿರುದ್ಧ ಸಂಗತಿಗಳನ್ನು ಮೇಳ ಗಾನದಲ್ಲಿ ಎಂಬಂತೆ

ಒಂದು ಸಾಮರಸ್ಯದಲ್ಲಿ 'ಸಂಯೋಜಿಸುವ ಕೌಶಲ, ಸಹಜ ಜೈವಿಕ ಕ್ರಿಯೆ' ಇತ್ಯಾದಿ ನಿರ್ವಚನಗಳನ್ನು ಶಾಸ್ತ್ರೀಯ ಶೋಧಗಳು ಹೊರ ಹೊಮ್ಮಿಸಬಲ್ಲವಾದರೂ ಅದರ ತೆಕ್ಕೆಗೆ ಸಿಕ್ಕಲೊಲ್ಲದ ಗುಹ್ಯತತ್ತ್ವವೊಂದು ಸಾಹಿತ್ಯ, ಕಲೆಗಳಲ್ಲಿದೆ. ಅದು ಬಡ ಪೆಟ್ಟಿಗೆ ಕವಿಯ ಹಿಡಿತಕ್ಕೂ ಸಿಕ್ಕಲೊಲ್ಲದು. ವಾಗತೀತವಾದ ಮನೋವ್ಯಾಪಾರವು 'ಸ್ಥೂಲ ಶಾರೀರಿಕ' ಹಾಗೂ 'ಸೂಕ್ಷ್ಮ ಆತ್ಮಿಕ' ಶಕ್ತಿಗಳು ಒಗ್ಗೂಡಿ ಮೂಡುವ ರಸ ಮುಹೂರ್ತವದು. ಅಲ್ಲಿ ಕವಿಯ ಮತ್ತು ಕೃತಿಯ ಸಂಬಂಧ ಔಪಚಾರಿಕ ಕಾರಣ-ಕಾರ್ಯ ಸ್ವರೂಪದ್ದಲ್ಲ, ಕವಿ ಕೃತಿಗಳ ಸಂಬಂಧ ಜೀವಾತ್ಮ ಸ್ವರೂಪದ್ದು, ಸಾವಯವ ನಿಕಟತೆಯದು ಎಂದು ನಿಸಾರ್ ಅವರು, ಕವಿ ಮತ್ತು ಸೃಷ್ಟಿಶೀಲತೆಯ ಅಂತಸ್ಸಂಬಂಧದ ಸ್ವರೂಪವನ್ನು ಗುರುತಿಸುತ್ತಾರೆ (ಪುಟ: 643).

ಲೋಕ ವಾಸ್ತವವನ್ನು ಕಾವ್ಯ ಗ್ರಹಿಸುವ ಕ್ರಮದ ಕುರಿತು ಪ್ರಾಚೀನ ಕಾಲದಿಂದಲೂ ಕಾವ್ಯಮೀಮಾಂಸಕರು ತಲೆ ಕೆಡಿಸಿಕೊಂಡಿದ್ದಾರೆ. 'ವಾಸ್ತವಾನುಭವ ಸಾಹಿತ್ಯಕಾರನ ಕೃತಿಯಲ್ಲಿ ಮೈತಳೆಯುವ ಸ್ವರೂಪವನ್ನು ಕುರಿತು ವಿಮರ್ಶಕರಲ್ಲಿ ಏಕವಾಕ್ಯತೆ ಇಲ್ಲ' (ಪುಟ: 753). ನಿಸಾರ್‌ರ ವಾಕ್ಯಗಳು ಹೀಗಿವೆ:

'ಸಾಹಿತ್ಯ ಕೃತಿಯಲ್ಲಿ ಹೊರ ವಾಸ್ತವದ ತದ್ವತ್ ಪ್ರತಿಬಿಂಬ ಅಶಕ್ಯ. ಆ ವ್ಯಾವಹಾರಿಕ ವಾಸ್ತವ, ಸಾಹಿತ್ಯದ ಸ್ವಭಾವ ಧರ್ಮ ವಿಧಿಸುವ ಅವಸ್ಥಾಂತರಗಳನ್ನು ಪಡೆದೇ ಅದರಲ್ಲಿ ಎಡೆ ಗಿಟ್ಟಿಸಬೇಕು; ಧನ್ಯವಾಗಬೇಕು. ಹುಲ್ಲಿನ ಅಚ್ಚ ಹಸಿತನ ಅಚ್ಚ ಹಾಲಾಗಿ, ಹೂವಿನ ಅಪರಿಷ್ಕೃತ ರಸ ಜೇನಾಗಿ ಮಾರ್ಪಡುವ ರಾಸಾಯನಿಕ ಪ್ರಕ್ರಿಯೆಗೆ ಸದೃಶವಾದ ರಹಸ್ಯ ಪವಾಡವೇ ಬಾಹ್ಯ ತಥ್ಯವನ್ನು ಸಾಹಿತ್ಯದ ಆಂತರಿಕ ಸತ್ತ್ವವನ್ನಾಗಿ ಮಾರ್ಪಡಿಸುವ ಕಾರ್ಯದ ಆಳದಲ್ಲಿ ದುಡಿದಿರುತ್ತದೆ' (ಪುಟ: 753).

ಸಾಹಿತ್ಯಕ್ಕೂ, 'ವಸ್ತುಲೋಕ'ಕ್ಕೂ ಇರುವ ಸಂಬಂಧ ಅನೇಕ ಪ್ರಕ್ರಿಯೆಗಳನ್ನೊಳಗೊಂಡಿದ್ದಾದ್ದರಿಂದ ಆ ಸಂಬಂಧದ ಕುರಿತು ಸೂಕ್ಷ್ಮವಾಗಿ ವಿವೇಚಿಸಬೇಕಾಗುತ್ತದೆಂದು ನಿಸಾರ್‌ರ ವಾದದ ಪ್ರಮುಖ ಗ್ರಹಿಕೆಯಾಗಿದೆ. '...ವಸ್ತುವಿನ ಬಗೆಗಿನ ಕವಿಯ ನಿಲವು, ಅದರಿಂದ ಅವನು ಹಿಂಡಿ ತೆಗೆಯಬಹುದಾದ ಸ್ವದರ್ಶನ ಪೋಷಕ ರಸಧಾತು—ಇವೇ ಮುಖ್ಯವೆನ್ನಿಸುತ್ತವೆ. ಬರಹಗಾರನ ವಿಭಾವನಾವಿಲಾಸಕ್ಕೋ ವೈಚಾರಿಕ ವಿಹಾರಕ್ಕೋ ವಸ್ತು ಒಂದು ವಾಹನ ಮಾತ್ರವಾದೀತು. ಅಂಥ ಕಡೆ ಕವಿಯ ಧೋರಣೆ, ಮನೋಧರ್ಮಗಳ ಕುಲಾಲ ಚಕ್ರದಲ್ಲಿ ಅಪೇಕ್ಷಿತ ಆಕಾರ ಪಡೆಯಲು ಲೋಕ ವಸ್ತು ಕೇವಲ ಜೇಡಿ ಮಣ್ಣಾಗಬಹುದು' (ಪುಟ: 758).

ಹಾಗೆಂದು ವಸ್ತುವಿನ ಮಹತ್ವ ಕಡಿಮೆಯದೆಂದು ನಿಸಾರ್‌ರ ವಾದವಲ್ಲ. 'ಸಾಹಿತ್ಯ ವಸ್ತು ಸಮಾಲೋಚನೆ' ಎಂಬ ಲೇಖನದಲ್ಲಿ ಈ ಕುರಿತು ಚರ್ಚಿಸುತ್ತ ಕೃತಿಗೆ ವಸ್ತುವೆನ್ನುವುದು ಜೀವಪ್ರಾಯ ಸಂಗತಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ನಿದರ್ಶನವಾಗಿ ಜಗತ್ತಿನ ಅಭಿಜಾತ ಮಹತ್ಕೃತಿಗಳಿವೆ ಎಂದವರು ಉದಾಹರಿಸುತ್ತಾರೆ. ಆದರೆ 'ಒಂದೇ ವಸ್ತುವನ್ನು ತಿರುಳಾಗಿಸಿಕೊಂಡು ವಿವಿಧ ಸಾಹಿತಿಗಳು ರಚಿಸುವ ಕೃತಿಗಳು ಗಣನೀಯವಾಗಿ

ಭಿನ್ನವಾಗಿರುವುಕ್ಕೆ ಮುಖ್ಯ ಕಾರಣ, ಅವರು ಆ ವಸ್ತುವಿನಲ್ಲಿ ಹಾಯಿಸುವ ಸ್ವವಿಶಿಷ್ಟ ವ್ಯಕ್ತಿಗುಣ' (ಪುಟ: 854). ವಸ್ತುವಿನ ಆಂತರ್ಯದ ರಹಸ್ಯ, ಗಹನತೆಗಳನ್ನು ಅರಿಯುವ ಶಕ್ತಿ ಕವಿಯಲ್ಲಿ ವರ್ಧಿಸಿದಂತೆ ಕೃತಿಯೂ ವಿಕಸಿಸೀತು. 'ಬಾಹ್ಯ ಹಾಗೂ ಅಭ್ಯಂತರಗಳ ನಡುವಣ ಮರ್ಮವನ್ನು ಅರಿತು, ಅವುಗಳನ್ನು ಯಾವಾಗ, ಹೇಗೆ ಬಳಸಿಕೊಳ್ಳಬೇಕೆಂಬ ಯುಕ್ತಾಯುಕ್ತ ಪ್ರಜ್ಞೆಯುಳ್ಳಾತ ನಿಜವಾದ ಕಲಾಕಾರ' (ಪುಟ: 854). 'ತತ್ಕಾಲದ್ದನ್ನು ಯಾವತ್ಕಾಲಕ್ಕೂ ಯುಕ್ತವಾದದ್ದನ್ನಾಗಿ, ಸಕಾಲದ್ದನ್ನು ಸಕಲ ಕಾಲದ್ದನ್ನಾಗಿ ಸ್ವಪ್ರತಿಭೆಯ ಸ್ಪರ್ಶಶಿಲೆಯಿಂದ ಸುವರ್ಣಿಸುವಾತನೇ ಸರ್ವೋದ್ದಾಮ ಸೃಜನಶಾಲಿ' (ಪುಟ: 857). ಮಹಾ ದರ್ಶನಕ್ಕೆ ಪ್ರೇರಕವಾಗಬಲ್ಲ 'ಮಹದ್ವಸ್ತು'ವಿನ ಮಹಿಮೆಯನ್ನು ಕವಿ ಎತ್ತಿ ಹಿಡಿಯುತ್ತಾರೆ.

'ಕಾವ್ಯ ಕರ್ಮದ ಪಂಚ 'ಸ' ಕಾರಗಳು' ಲೇಖನದಲ್ಲಿ ಕವನ ಸೃಷ್ಟಿಯ ಹಿನ್ನೆಲೆಯಲ್ಲಿ ದುಡಿಯುವ ಪಂಚ 'ಸ' ಕಾರಗಳ ವಿವೇಚನೆಯಿದೆ: ಸಾಂದ್ರೀಕರಣ, ಸಮಯ ಸ್ಫೂರ್ತಿ, ಸ್ಮೃತಿ ಶಕ್ತಿ, ಸ್ವ ವಿಶ್ವಾಸ ಮತ್ತು ಸಂಗೀತತತ್ವ. ಸ್ಟಿಫೆನ್ ಸ್ಪೆಂಡರ್ ಈ ಕುರಿತು ವ್ಯಕ್ತಪಡಿಸಿದ ಆಲೋಚನೆ ಅನಿಸಿಕೆಗಳನ್ನು ಈ ಲೇಖನ ಹಿನ್ನೆಲೆಯಲ್ಲಿಟ್ಟುಕೊಂಡು ಕಾವ್ಯಕ್ರಿಯೆಯನ್ನು ಕುರಿತು ಚರ್ಚಿಸಿದೆ.

ಸಾಂದ್ರೀಕರಣ : ಕಾವ್ಯ ರಚನೆಯಲ್ಲಿ ಎದುರಾಗುವ ಆದ್ಯ ಸಮಸ್ಯೆ ಮನಸ್ಸಾಂದ್ರತೆಯದು... ಲೋಕ ವ್ಯವಹಾರದ ವಿಷಯಗಳಿಗೆ ಬೇಕಾಗುವುದು, ತೊಡಗಿರುವ ಕೆಲಸದಲ್ಲಿನ ಮಗ್ನತೆಯೇ ವಿನಾ ಮಿಕ್ಕೆಲ್ಲದ್ದರ ಸಂಪೂರ್ಣ ವಿಸ್ಮೃತಿ. ಕಾವ್ಯಸೃಷ್ಟಿ ಕ್ರಿಯೆಯಲ್ಲಿ ತೊಡಗಿದ ಮನಸ್ಸು—ಇದಕ್ಕೆ ಹೊರತು. ಅದು ಏಕಕಾಲದಲ್ಲಿ ಹಲವು ದಿಕ್ಕುಗಳಲ್ಲಿ ಸಮಾನವಾದ ಏಕಾಗ್ರತೆಯನ್ನು ತಾಳಿರುತ್ತದೆ. ಪ್ರಕೃತಿಯ ಯಾವುದೇ ಸೃಷ್ಟಿಶೀಲ ಜೀವಿಯ ಅನನ್ಯತೆಯೇ ಇಂಥದು.

ಸಮಯ ಸ್ಫೂರ್ತಿ : ಕಾವ್ಯ ಸೃಷ್ಟಿಯ ಮೊದಲ ಹೊಳಹು ಹಾಗೂ ಕೊಟ್ಟ ಕೊನೆಯ ಪೂರ್ಣಾಕೃತಿ ಎರಡೂ ಸ್ಫೂರ್ತಿ ವಶವಾದವುಗಳೇ. ಇವೆರಡರ ನಡುವಣದ್ದೆಲ್ಲ ಕವಿಯ ಕಷ್ಟದ ಗೆಯ್ಮೆ, ತೊಳಲಾಟ... ಈ ವಿಶೇಷ ಗುಣ ಜನ್ಮದತ್ತವಾದುದೇ ಸರಿ.

ಸ್ಮೃತಿ ಶಕ್ತಿ : ಅತ್ಯಲ್ಪ ಸಮಯ ಮಾತ್ರ ಬಲು ಹಿಂದೆ ಅನುಭವಿಸಿದ್ದರ ಪ್ರಜ್ಞಾ ಮುದ್ರಿಕೆಗಳನ್ನು, ಸಂವೇದನೆಯ ಅಚ್ಚುಗಳನ್ನು ಕವಿ ಅನವರತ ಜಾಗೃತವಾಗಿರಿಸಿಕೊಳ್ಳಬಲ್ಲ; ಹೊಸ ಜೀವಿತ ಸಂದರ್ಭಗಳೊಡನೆ ಸುಸಂಗತವಾಗಿ ಸಂಯೋಜಿಸಬಲ್ಲ.

ಸ್ವ ವಿಶ್ವಾಸ : ತನ್ನ ಸಾಮರ್ಥ್ಯವನ್ನು ಕುರಿತು, ಸಾರಸ್ವತ ಕರ್ಮವನ್ನು ಕುರಿತು ಕವಿಗಿರಬೇಕಾದ ಗೌರವ, ಅಭಿಮಾನಗಳು 'ಸ್ವವಿಶ್ವಾಸ'ದ ಸಂಕೇತಗಳಾಗಿವೆ.

ಸಂಗೀತತತ್ವ : ಲಯಬದ್ಧ ಸ್ಪಂದನದ ಸುಸೂಕ್ಷ್ಮತೆ ಕವಿಯ ನಿಸರ್ಗದತ್ತ ಲಕ್ಷಣ. ಆದಿಮವೂ ನಿಗೂಢವೂ ಆದ ಜೀವಗತ ಗೇಯಾತ್ಮಕ ಗುಣ, ಆಲೋಚನೆಯ ತೆಕ್ಕೆಗೆ ಸಿಕ್ಕಿದ ಒಂದು ಬಗೆಯ ಅಮೂರ್ತತೆ, ಆಕೃತಿಗಾಗಿ ತುಡಿವ, ತಪಿಸುವ ಸ್ಪಂದನ ಕವಿಯನ್ನು ಪ್ರಚೋದಿಸುವುವು.

ಪಂಚ 'ಸ' ಕಾರಗಳು ಕಾವ್ಯದ, ಕಾವ್ಯ ಸೃಷ್ಟಿಯ ಅತ್ಯಗತ್ಯ ಸಂಗತಿಗಳು, ಆದರೆ ಇವುಗಳಿಷ್ಟರಿಂದಲೇ ಕಾವ್ಯ ಕೃತಿ ಅವತರಿಸದು ಎಂಬ ಮುನ್ನೆಚ್ಚರಿಕೆಯ ಮಾತನ್ನೂ ನಿಸಾರ್ ಹೇಳಿದ್ದಾರೆ. ಈ ನಿಸರ್ಗದತ್ತ ಗುಣಗಳನ್ನು ಪರಿಶ್ರಮದಿಂದ ವಿಕಸಿಸಿಕೊಳ್ಳಬೇಕೆಂದು ಕವಿ ಪ್ರತಿಪಾದಿಸಿದ್ದಾರೆ. 'ನಾನು ಮತ್ತು ನನ್ನ ಕಾವ್ಯ' ಎಂಬ ಲೇಖನವು ಸ್ವತಃ ಈ ಕವಿ ತನ್ನ ಕಾವ್ಯಯಾತ್ರೆಯನ್ನು ಕುರಿತು ಒಂದು ಹಂತದಲ್ಲಿ ಮಾಡಿಕೊಂಡ ಸ್ವಶೋಧ, ವಿಮರ್ಶೆ ಯಾಗಿದೆ. ಹೀಗೆ ನಿಸಾರ್‌ರ ಕಾವ್ಯಮೀಮಾಂಸೆ ಸಮಗ್ರವಾಗಿ ಕಾವ್ಯದ ಕುರಿತು ತಾತ್ತ್ವಿಕ ಚಿಂತನೆಗಳನ್ನೂ ಸ್ವಕೀಯವಾಗಿ ತನ್ನ ಕಾವ್ಯದ, ಸೃಷ್ಟಿಶೀಲತೆಯ ಕುರಿತಾದ ಪ್ರಾಯೋಗಿಕ ಅನುಭವ ಶೋಧನೆಗಳನ್ನೂ ಒಳಗೊಂಡಿರುವುದರಿಂದ ಹೊಸಗನ್ನಡ ಕಾವ್ಯದ ಎಲ್ಲಾ ಕಾಲಘಟ್ಟಗಳ ಪ್ರಮುಖ ಕವಿಗಳು (ಕುವೆಂಪು, ಬೇಂದ್ರೆ, ಪುತಿನ, ಅಡಿಗ, ಜಿಎಸ್‌ಎಸ್...) ಗೈದಿರುವ ಕಾವ್ಯಮೀಮಾಂಸೆಗಳ ಉತ್ತುಂಗದ ನಿಲುಕಿನಲ್ಲಿ ಸಾಮರ್ಥ್ಯದಿಂದ ನಿಲ್ಲಬಲ್ಲು ದಾಗಿದೆ. ಅವರ ಕವಿತೆಗಳ ಅಪಧಮನಿ, ಅಭಿಧಮನಿಗಳಲ್ಲಿ ಪ್ರವಹಿಸುತ್ತಿರುವ ಕಾವ್ಯ ಚಿಂತನೆಯ ಸೂಕ್ಷ್ಮಾಂಶಗಳನ್ನು ಪರಿಶೀಲಿಸಲು ಇದೀಗ ಸುಮುಹೂರ್ತ.

ನಿಸಾರ್‌ರ ಮೊದಲ ಸಂಕಲನ 'ಮನಸು ಗಾಂಧಿ ಬಜಾರು'ದ ಮೊದಲ ಕವಿತೆ 'ನನ್ನ ನುಡಿ'—ಈ ಕವಿ ಆರಂಭದ ದಿನಗಳಿಂದಲೇ ಭಾಷೆಯ ಕುರಿತು, 'ಸ್ವಭಾಷೆ' ಕುರಿತು ಸೂಕ್ಷ್ಮವಾಗಿ ಎಂಥ ಕಾತರ ಎಚ್ಚರಗಳನ್ನು ಪ್ರಕಟಿಸಿದರೆಂಬುದಕ್ಕೆ ಉದಾಹರಣೆಯಾಗ ಬಹುದು. 'ಒಂದರೆ ನಿಮಿಷದ ತಾಪ ಪ್ರತಾಪದ ಕೆಂಗಿಡಿಯಲ್ಲವೊ ನನ್ನ ನುಡಿ' ಎಂಬ ಸಾಲು ಆ ಕವಿತೆಯಲ್ಲಿದೆ. ಮಾನವ ಕೋಟಿಯ ಮೂಕ ಸಂಕಟಕ್ಕೆ ತಾನು ದನಿಯಾಗಬೇಕು ಎಂಬ ಆಸೆಯೂ ಅಲ್ಲಿ ಪ್ರಕಟವಾಗಿದೆ.

'ಬಿತ್ತನೆ' (ಸಂಕಲನ: 'ನೆನೆದವರ ಮನದಲ್ಲಿ') ಕಾವ್ಯ ಸೃಷ್ಟಿಯನ್ನು ಕುರಿತ ಕವಿತೆಗಳಲ್ಲಿ ಮೊದಲನೆಯದೆಂದು ಹೇಳಬಹುದು. ಇಲ್ಲೊಬ್ಬ ಹಸುಳೆ ಹೊಲವನ್ನು ಹಸನುಗೊಳಿಸಿ ಕಾಳುಗಳನ್ನು ಚೆಲ್ಲಿ, 'ಸಸಿ ನೆತ್ತಿ ಎತ್ತರಿಸಿ, ಬೇರುಗಳ ಬಿತ್ತರಿಸಿ'. 'ತೆನೆ ತೊಡುವ ಗಳಿಗೆಯನ್ನು' ಕಾಯುತ್ತ ಕುಳಿತಿದ್ದಾನೆ. ಅವುಗಳ ಆರೋಗ್ಯಪೂರ್ಣ ಬೆಳವಣಿಗೆ ಗಾಗಿ ಎಡಬಿಡದೆ ದುಡಿಯುತ್ತಿದ್ದಾನೆ. ಅವನು ಬಲ್ಲ:

> **'ತಮದ ಪದರಗಳಲ್ಲಿ ತಪಿಸುವಗಣಿತ ಬೀಜ-**
> **ವೆಲ್ಲ ಸಫಲಿಸುವಾಸೆ ಸಟೆ.'**
>
> (ಬಿತ್ತನೆ)

ಆ ಬೀಜಗಳಲ್ಲಿ ಕೆಲವು ಹುಳುಗಳಿಗೆ ಬಲಿಯಾದಾವು, ಮತ್ತೆ ಕೆಲವು ಸತ್ವಹೀನ ರೋಗ ಬಾಧಿಸಿ ನಷ್ಟಗೊಳ್ಳುವ ಬೀಜಗಳೂ ಇದ್ದಾವು. ಆದರೂ ಪ್ರಯತ್ನ, ಕಾಯುವಿಕೆ ವ್ಯರ್ಥವಲ್ಲ.

> **'ಅರಗಿ ಭೂ ರಸ, ಮಾಗಿ, ಹೊತ್ತು ತುಂಬಿದ ತೆನೆಯ**
> **ತಲಪುವಗ್ಗಳ ಬೀಜ ಹಲವೆ ಸಾರ್ಥದ ಕೊನೆಯ**
> **ಪೂರ್ಣದೀ ಸಾಧಿತಕೆ ಉಳಿದೆಲ್ಲ ಕಾಳುಗಳ ಪೋಲು, ದುಂದು:**

ಶುಕ್ಲಾಣು ಕೋಟಿಯಲಿ ಕೋಶಕಂಟುವುದೊಂದೆ ಯೋಗ್ಯ ಬಿಂದು.'
(ಅದೇ)

ಸೃಷ್ಟಿಕ್ರಿಯೆಯ ಪೂರ್ಣತೆಯ ಸಾಧನೆಯಲ್ಲಿ ಪೋಲುಗೊಳ್ಳುವ ಕಾಳುಗಳ ಬಿತ್ತನೆ, ಪೋಷಣೆಯೂ ಅನಿವಾರ್ಯ ಕರ್ಮ. ಇದು ಜೀವವೊಂದರ ಉಗಮದ ಅದಕ್ಕೆ ಅಗತ್ಯವಾದ ಸಮರ್ಪಕ ಸಂಯೋಗದ ಸಂದರ್ಭದಲ್ಲಿ ಭಾಗವಹಿಸುವ ಬಹುಸಂಖ್ಯೆಯ ಇತರ ಶುಕ್ಲಾಣುಗಳ ಸ್ಪರ್ಧೆಯನ್ನು ಕವಿಯ ನೆನಪಿಗೆ ತಂದಿದೆ. ಆ ಯೋಗ್ಯ ಬಿಂದು ತಕ್ಕ ಆರೈಕೆಯಲ್ಲಿ ಘನ ಪಿಂಡವಾಗಿ ವಿಕಸಿತಗೊಂಡು ಜನಿಸುವುದು ಸೃಷ್ಟಿಕ್ರಿಯೆಯ ಮುಂದಿನ ಮಜಲು. 'ಬಿತ್ತನೆ' ಕವಿತೆ, ಕೃಷಿಕ ಮಗುವಿನ ಕಾತರದ ಚಿತ್ರದಿಂದ ಹೆರಿಗೆ ಮನೆ ಹೊರಗೆ ಚಡಪಡಿಸುತ್ತ ಕಾಯುತ್ತಿರುವ ಪ್ರಬುದ್ಧನ ಚಿತ್ರಕ್ಕೆ ಮುಂಬರಿಯುವ ಬಗೆಯನ್ನು ಮುಂದಿನ ಸಾಲುಗಳಲ್ಲಿ ಗಮನಿಸಿ :

'ಇದನರಿತೆ ಈ ಹಸುಳೆ ಕಿತ್ತೆಲ್ಲ ಕಳೆ ಕೂಳೆ
ಹಸನಾಗಿಸೆದೆ ಹೊಲವ ಉತ್ತಿರುವ, ಬಿತ್ತಿರುವ;
ಹೆರಿಗೆ ಮನೆ ಹೊಸ್ತಿಲಲಿ ಶತಪಥಿಸುವುದ್ವೇಗ-
ದಿಂದ ಬಿಸುಸುಯ್ದಿರುವ, ಕಾಯುತಿರುವ.' (ಅದೇ)

ಸೃಷ್ಟಿಯ ತಹತಹದ ಈ ಎರಡೂ ಪ್ರತಿಮೆಗಳು ಒಟ್ಟಾಗಿ ಸೂಚಿಸುವುದು ಕಾವ್ಯಕ್ರಿಯೆಯ ಮರ್ಮವನ್ನು. ನೆಲದ ಕರೆಗೆ ಮುಗಿಲ ಕೃಪೆ ಒದಗದೇ ಸಾರ್ಥಕತೆ ಇಲ್ಲ. ಒಂದು ಸೃಷ್ಟಿಯ ಹಿಂದೆ ಇಡೀ ವಿಶ್ವದ ಶಕ್ತಿಗಳೆಲ್ಲ ಒಟ್ಟಾಗಿ ದುಡಿಯಬೇಕು. ಬಿತ್ತನೆಯ ಸಫಲತೆ ಕ್ಷಣಕ್ಷಣದ ಎಚ್ಚರ, ದುಡಿತಗಳನ್ನು ಬಯಸುವಂಥದು. ಬಿತ್ತಿದವ ಉದ್ವೇಗಗೊಳ್ಳಬಹುದು, ಬಿಸುಸುಯ್ಯಬಹುದು. ಆದರೆ ತಾಳ್ಮೆಗೆಡುವಂತಿಲ್ಲ. ಯೋಗ್ಯ ಕ್ಷಣದವರೆಗೂ ಆತ ಕಾಯಲೇಬೇಕು.

'ಕಂಡಷ್ಟೇ ಸತ್ಯವಲ್ಲ' ಕವಿತೆ ಸೃಷ್ಟಿಯ ನಿಗೂಢತೆಯ ಕುರಿತು, ಬಾಳ ರಹಸ್ಯಮಯತೆಯ ಕುರಿತು ವಿವೇಚಿಸಿದೆ.

'ಇದು ಸೃಷ್ಟಿ
ಕಪಿಮುಷ್ಟಿ
ಮಂತ್ರ ಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲು.'
(ಕಂಡಷ್ಟೇ ಸತ್ಯವಲ್ಲ)

ಸೃಷ್ಟಿಯ ಮುಚ್ಚಿದ ಹಿಡಿಯನ್ನು ಯುಗಕ್ಕೊಮ್ಮೆ ಎಲ್ಲೋ ಕೋಟಿಗೊಬ್ಬ ಉಸ್ತಾದ ಬಿಡಿಸಿ ನೋಡುವನಂತೆ. ಅದರ ಒಳ ಗುಟ್ಟನರಿಯುವ ಯತ್ನದಲ್ಲೇ ಅನೇಕರ ಬಾಳುವೆ ಮುಗಿದಿದೆ. ತಿಳಿದಷ್ಟರಲ್ಲೇ, ಕಂಡಷ್ಟರಲ್ಲೇ ಎಲ್ಲವನ್ನೂ ಅರಿತೆನೆನ್ನುವುದು ಭ್ರಮೆಯಷ್ಟೆ. 'ಕಂಡಷ್ಟೂ ಸತ್ಯವಿರಬಹುದು, / ಕಂಡಷ್ಟೇ ಸತ್ಯವಲ್ಲ.' ಅಷ್ಟೇ ಅಲ್ಲ, ನಾವು ನವೀನವಾಗಿ ತಿಳಿದವೆಂದು ಭಾವಿಸಿದ ಸಂಗತಿಗಳೂ ಹಳೆಯದೇ ಇದ್ದಾವು. ಕವಿತೆ ಎಚ್ಚರಿಸುತ್ತದೆ:

'ಆದರಿದು ಅರಿವಲ್ಲ:
ನೇರ ದಿಟ್ಟಿಯ ದಿಶೆಗೆ ನಿಶೆಯೇರಿಸುವ ಮರೆವು.

ನಮ್ಮ ಕಾಲದ ಗತ್ತು, ನೀಯತ್ತೆ ಬೇರೆ ಥರ—
ಹೊಸತೊಂದೆ ಗುರಿಯಲ್ಲ.
ಹಿಂದೆ ಹೊರ ಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ
ಬೆಸೆದು ಹೊಸೆಯುವ ಕಲೆಯೆ ಈ ಕಾಲ'ದರಿವು'.
ಹೊಸತ ಹುಡುಕಲು ಹೋಗಿ ತೂಕ ತಪ್ಪುವ ಬುದ್ಧಿ
ಕುಂಟು ಕಾಲಿನ ಕುದುರೆ, ಬಂಜೆ ಗೋವು.'

(ಅದೇ)

ಬದುಕಿನ ಕುರಿತ, ಸೃಷ್ಟಿಯ ಕುರಿತ ಮೇಲಿನ ಚಿಂತನೆಗಳು ಒಟ್ಟಾರೆಯಾಗಿ ಸೃಷ್ಟಿಶೀಲತೆಯ ನಿಗೂಢತೆಯ ಕುರಿತ ಮಾತುಗಳಾಗಿಯೂ ಸಲ್ಲಬಹುದಾಗಿವೆ. ಮಂತ್ರ ಮರೆತ ಅಲಿಬಾಬ ಕವಿಯನ್ನು ಜ್ಞಾಪಿಸಿದರೆ ಅವನೆದುರು ಮುಚ್ಚಿರುವ ಗವಿ ಬಾಗಿಲು ಸೃಷ್ಟಿಶೀಲತೆಯ ಪ್ರತಿಮೆಯಾಗಬಹುದು.

'ಆತ್ಮಶೋಧ' ಕವಿತೆ ಕವಿಯ ಚಡಪಡಿಕೆಯನ್ನು, ಸ್ವಂತ ಧ್ವನಿಯ ಹುಡುಕಾಟವನ್ನು, ಆತಂಕ ಉದ್ವೇಗಗಳನ್ನು ಪ್ರಕಟಿಸುವಂತಿದೆ. ಆ ಸ್ವಶೋಧದ ಕೆಲ ಸಾಲುಗಳು:

'ನನ್ನ ದನಿ, ನನ್ನದೇ ಆದ ದನಿ, ನನ್ನೆದೆಯ ಜೀವ ಮಣಿ
ಎಲ್ಲಿರುವುದೊ! ಹೃದಯಗಹ್ವರದಾವ ಹಳಸುಗತ್ತಲೆಯಲ್ಲಿ
ಕೆಡೆಯುತಿಹುದೊ!'

(ಆತ್ಮಶೋಧ)

'ಬೀಜ-ಮರ' ಕವಿತೆಯ ಬೀಜ ಮೊದಲು ಪ್ರಸ್ತಾಪಿಸಿದ 'ಬಿತ್ತನೆ'ಯಲ್ಲೇ ನೆಲ ಸೇರಿದ್ದು. ಅದಕ್ಕೆ 'ಭೂ ತಳದ ಹೊಸಿಲಾಚೆ ನಗುವ ಹೂ ಬಿಸಿಲಲ್ಲಿ | ಟಿಸಿಲೊಡೆದು ಬಳಕುವಾಸೆ'. ಆದರಿಲ್ಲಿ ಮುದಿ ಮರವೊಂದು ಮೂಗು ಮುರಿದಿದೆ, ಬೀಜದ ತವಕ ಕಂಡು.' ಅದಕ್ಕೆ ಕವಿಯ ಕಿವಿ ಮಾತು:

'ಇಂದೊ ನಾಳೆಯೊ ಮಸೆವ ಬೀಸುಗಾಳಿಗೆ ಬಿದ್ದು
ಅಡಗಬಹುದೆಲೆ ಮರವೆ, ನಿನ್ನ ಕುಹಕದ ಸದ್ದು!
ಮುಂದೆ ನಿನ್ನವಶೇಷ ರಾಶಿಯನೆ ತಾನೊದ್ದು
ನಿಲಬಹುದು ಎದೆ ಸೆಟೆದು ಈ ಬೀಜ ಮೇಲೆದ್ದು.'

(ಬೀಜ-ಮರ)

ಆದುದರಿಂದ 'ಬದುಕು ವರ್ಧಿಸಿ ಆಗು ಸರ್ವಮಾನ್ಯ' ಎಂಬುದು ಕವಿತೆ ನೀಡುವ ಹಿತ ವಚನ. 'ಈ ಬೀಜ ತನಗೆ ಅನ್ಯವಲ್ಲ, ತನ್ನಂಥದೇ, ತನ್ನದೇ ಬಗೆಯಲ್ಲಿ ಸೃಷ್ಟಿಕ್ರಿಯೆಯನ್ನು ಮುಂದುವರಿಸುತ್ತಿದೆ' ಎಂಬ ಅರಿವು ಆ ಹಿರಿಯ ಜೀವಕ್ಕೆ ಬೇಕು. ಪುನಃ ಸೃಷ್ಟಿಶೀಲತೆಯ ಕುರಿತು ಅಗಾಧ ಗೌರವ ವ್ಯಕ್ತಪಡಿಸುವ ಕವಿತೆಯಿದು. 'ಕವಿ ಬರೆದ' ಎಂಬ ಇನ್ನೊಂದು ಕವಿತೆಯನ್ನು ಈ ಕವಿತೆಗೆ ಪೂರಕವಾಗಿಯೇ ಓದಿಕೊಳ್ಳಬಹುದಾಗಿದೆ. ಇಲ್ಲಿ ಕವಿಯೊಬ್ಬ ಅವಿರತ ಶ್ರಮಿಸಿ ಕವಿತೆ ಬರೆದ ಚಿತ್ರವಿದೆ. ಅವನ ಯಾತನೆಯನ್ನು ಕವಿತೆ ಕಣ್ಣಿಗೆ ಕಟ್ಟುವಂತೆ ವಿವರಿಸಿದೆ. ಬಳಿಕ ಅವನ ಎದೆಯಾಳದ ಭಾವ ಲಹರಿ:

'ತನ್ನ ಕೃತಿ ಕೀಳಲ್ಲ,
ಬಿತ್ತಿದುದು ಬೀಳಲ್ಲ,
ಕಾವ್ಯಕೂ ಮಿಗಿಲಿಲ್ಲ ಕಲೆಯೊಳಗೆ ಎಂದೆನಿಸಿ—
ತನ್ನ ಸೃಷ್ಟಿಯ ಪದರ ಪದರವನೆ ಅಳೆದರಸಿ
ತಳದಾಣೆಮುತ್ತುಗಳ ಎಳೆ ತರುವ ಭಾವುಕನ
ಬರವನ್ನೆ ತಾ ಕನಸಿ,
ಬರೆದ ಕವಿ
ಲೋಕಾನುಭವಿ.'

(ಕವಿ ಬರೆದ)

ಕವಿಯ ಕಾತರ, ಆಸೆಗಳು ಬೀಜದ (ಬೀಜ-ಮರ) ಉತ್ಸಾಹ, ಉದ್ವೇಗಗಳಿಗೆ ಸಂವಾದಿಯಾಗುವಂಥವು. 'ಕವಿ ಬರೆದ' ಕವಿತೆಯ ಕವಿಯನ್ನು ಕರ್ತೃವೆಂದು ಭಾವಿಸಿ, ಅವನ ಅಂತರ್ಗತ ವಸ್ತುವಾಗಿ 'ಬೀಜ-ಮರ' ಕವಿತೆಯ ಬೀಜವನ್ನು ಗ್ರಹಿಸಿದರೆ ಇವೆರಡೂ ಕವಿತೆಗಳು ಕರ್ತೃ ಮತ್ತು ಫಲಿತವಾಗಬೇಕಾದ ಪಿಂಡಗಳ ಸೃಷ್ಟಿಶೀಲ ತವಕ ತಲ್ಲಣಗಳನ್ನು ಧ್ವನಿಸುತ್ತಿವೆ ಎಂದು ತಿಳಿಯಬಹುದು. ಈಗ ಪರಿಶೀಲಿಸಲಿರುವ 'ಕವಿತೆ' ಎಂಬ ಪದ್ಯ ಬೀಜರೂಪಿಯಾದ ಕವಿಯ ಭಾವ ವಸ್ತುವು ಸಫಲಗೊಳ್ಳುವ ಚಿತ್ರವನ್ನು ನಿರ್ಮಿಸಿದೆ (ಸಂಕಲನ: ಸಂಜೆ ಐದರ ಮಳೆ). ಸಫಲಗೊಳ್ಳುವಿಕೆ ಅಷ್ಟು ಸಲೀಸಾದ ವಿದ್ಯಮಾನವಲ್ಲ.

'ಒಮ್ಮೊಮ್ಮೆ ಏನೂ ಹೊಳೆಯುವುದಿಲ್ಲ
ಸಂಕಲ್ಪವೊಂದೇ ಮೋಡ; ಶಾಖ ಮರೆ.
ಬರೆದರೆ ಬರೀ ಅಕ್ಷರಗಳ ಹೊರೆ
....
.... ಅದೃಢತೆ;
ಹೊರಗಾಗುವುದು ಕವಿತೆ.'

(ಕವಿತೆ)

ಹೆಣ್ಣಿನ ಋತುಚಕ್ರವನ್ನು ನೆನಪಿಸುವ ಈ ಮೊದಲನೆಯ ಭಾಗದ ಬಳಿಕ 'ಒಮ್ಮೊಮ್ಮೆ ಏನೆಲ್ಲಾ ಹೊಳೆಯುವ' ಹಂತ. ಆಗ 'ನೀರೆರೆದುಕೊಂಡು ಸೀರೆಯುಡುವುದು ಕವಿತೆ.' ಹಾಗಲ್ಲದೆ 'ಬರೆಯುವುದೇ ಬೇಡವೆನ್ನಿಸುವ ಅತೃಪ್ತತೆಯ ನಡುವೆಯೂ ಏಕಾಗ್ರ ಕ್ಷಣ ಒದಗಿ ಬರುವುದಿದೆ.'

'ಮೌನವನೆ ಮುತ್ತಿಕ್ಕಿ ಲಜ್ಜೆಗೆಂಪಾದ ಮಾತು
ಔಚಿತ್ಯ ಸೂಚ್ಯತೆ
ಹುಣ್ಣಿಮೆಯ ಅಸ್ಪಷ್ಟತೆಯಲ್ಲಿ ತಾನಾಗಿ
ನಗ್ನ ನಿಲುವುದು ಕವಿತೆ.'

(ಅದೇ)

'ಸೃಷ್ಟಿಕ್ರಿಯೆ' ಎಂಬ ಕವಿತೆಯಲ್ಲಿ (ನಾನೆಂಬ ಪರಕೀಯ) ಆರೋಗ್ಯಪೂರ್ಣ ಸೃಷ್ಟಿಗಾಗಿ ಲೋಕ ಮತ್ತು ಕವಿ ಸಂಬಂಧವನ್ನು ಕುರಿತು ಎಚ್ಚರ ವಹಿಸುವ ನಿಲವು

ಪ್ರಕಟವಾಗಿದೆ.

‘ಎಲೆ ಮನವೇ, ನಿನ್ನತನವೇ ಪದ್ಯವಾಗಿ ಜನಿಸಲು
ಲೋಕವ ಲೆಕ್ಕಾಚಾರವಾಗಿ ಹೊಗಿಸಿಕೊ’
(ಸೃಷ್ಟಿಕ್ರಿಯೆ)

—ಎಂಬುದು ಕವಿಯ ಬಿನ್ನಹ. ದಟ್ಟ ಜಿಜ್ಞಾಸೆಯ, ಮೂರು ಕಾಲ ತಾಳಬಲ್ಲ, ಬಾಳಬಲ್ಲ ಕವಿತೆಗಳನ್ನು ಸೃಷ್ಟಿಸಲು ಲೋಕವನ್ನು ಒಳಬಿಟ್ಟುಕೊಳ್ಳುವಲ್ಲೂ ಒಂದು ಹದವಿರಬೇಕು ಎಂಬುದು ಕವಿತೆಯ ಸೂಚನೆಯಾಗಿದೆ. ‘ತಾತ್ಕಾಲಿಕ ವಶೀಕರಣದ ಕಾಲವಶೀ ಆಶ್ಚರ್ಯಗಳ’ ಕುರಿತು ಅದಕ್ಕೆ ಆಸ್ಥೆಯಿಲ್ಲ. ಲೋಕ ಮತ್ತು ಕವಿಯ ಸಂಬಂಧವನ್ನು ಪರಿಶೀಲಿಸುವ ಪುಟ್ಟ ಕವಿತೆ ‘ಕವಿ’ಯನ್ನು ಇಡಿಯಾಗಿ ಗಮನಿಸಬಹುದು:

‘ಲೋಕವೇ, ನಿನಗಂಟಿಕೊಂಡಿರುವನಕ
ನನ್ನ ಚಟುವಟಿಕೆ. ಬೇರ್ಪಟ್ಟೆನೆ? ನಿರರ್ಥಕ—
ಕೆಟ್ಟು ಹೋದ ಬಲ್ಬಿನ ಥರ.
ನಾನಿರಲಿ, ಇರದಿರಲಿ ನಿನಗಾವ ಬಾಧಕ?
ನಡೆಯುತ್ತಲೇ ಇರುವೆ ನಿನ್ನಷ್ಟಕ್ಕೆ ಸುಮ್ಮನೆ
ಆದರಿಷ್ಟೆ: ನಾನಿದ್ದರೆ ನಿನ್ನೊಂದಿಗೆ, ಮಂದಿಗೆ
ನಿನ್ನ ಚಲನವಲನದ ಸೂಚಕ:
ನೀನು ಗಡಿಯಾರ
ನಾನದರ ಲೋಲಕ.’
(ಕವಿ)

ಕವಿ ಮತ್ತು ಲೋಕದ ಸಂಬಂಧದ ಕುರಿತ ನಿಸಾರ್ ಜಿಜ್ಞಾಸೆ ಮುಂದುವರಿಯುತ್ತಲೇ ಇರುವುದನ್ನು ಅವರು ಇತ್ತೀಚಿನ ವರ್ಷಗಳಲ್ಲಿ ಬರೆದಿರುವ ಕವಿತೆಗಳನ್ನು ಮುಂದೆ ಪರಿಶೀಲಿಸುವಾಗ ಗಮನಿಸಬಹುದು. ಕವಿ ಲೋಕದ ಲೋಲಕವಾಗಿದ್ದೂ ತನ್ನ ಅನನ್ಯ ಸ್ವತಂತ್ರತೆಯನ್ನು ಕಾಪಾಡಿಕೊಳ್ಳಲೂ ಬೇಕು. ಇದು ಹೊರ ನೋಟಕ್ಕೆ ವೈರುಧ್ಯವಾಗಿ ತೋರಬಹುದಾದರೂ ಅವನ ಸೃಷ್ಟಿಶೀಲ ಕ್ಷಣಗಳಲ್ಲಿ ಪಡೆದುಕೊಳ್ಳಲೇಬೇಕಾದ ಬಿಡುಗಡೆ. ನಿಯಂತ್ರಕ ಮತ್ತು ನಿಯಂತ್ರಿತಗಳ ಸ್ಥಾನಗಳು ಪಲ್ಲಟಗೊಳ್ಳುವ ಸನ್ನಿವೇಶವನ್ನೂ ಅದರ ಅಗತ್ಯವನ್ನೂ ಕವಿ ಸ್ಪಷ್ಟವಾಗಿ ಗ್ರಹಿಸಿದ್ದಾರೆ.

ಇಂಥದೇ ಇನ್ನೊಂದು ವಿಶಿಷ್ಟ ಸಮಸ್ಯೆ ಭಾಷೆ ಮತ್ತು ಕವಿಯದು. ಭಾಷೆ ಕವಿಯನ್ನು ಆಡಿಸಿದಂತೆ ಕವಿಯೂ ಭಾಷೆಯನ್ನು ಆಡಿಸುತ್ತಾನೆ. ಭಾಷೆಯ ಪ್ರಾಂಗಣದಲ್ಲೇ ನಿಂತು ಅದರ ದಿಕ್ಕುದೆಸೆಗಳನ್ನು ಬದಲಿಸಲು ಯತ್ನಿಸುವ ಕವಿ ಭಾಷೆಗೊಂದು ಹೊಸ ಕಸುವು, ಹೊಸ ರೂಪ ಕಲ್ಪಿಸುತ್ತಾನೆ. ಅದರ ಸ್ವಾಭಾವಿಕ ಶಕ್ತಿ ಚೈತನ್ಯಗಳು ಕವಿಯ ಕೈವಾಡದಿಂದ ವರ್ಧಿಸಿದಂತೆ ತೋರುತ್ತದೆ. ಭಾಷೆಯ ದೌರ್ಬಲ್ಯವನ್ನು ನಿವಾರಿಸಿ ಅದರ ಸೂಚಕ ಶಕ್ತಿಯನ್ನು ಬಲಗೊಳಿಸುವ ಪ್ರಯೋಗಗಳಲ್ಲೂ ಅವನಿಗೆ ಸರಿಸಾಟಿ ಇಲ್ಲ. ‘ಭಾಷೆಗೆ ಭಾಷೆ ಕೊಡು’ ಮಾತಿನ ಬಳಕೆಯ ಬಗೆಗಿನ ಈ ಕವಿಯ ದೀರ್ಘಕಾಲದ ಪರಿಭಾವನೆಗಳಿಗೆ ನಾಲಗೆ ನೀಡಿದ

ಕವಿತೆ. ನಿಸಾರರದೇ ಈ ಮಾತುಗಳನ್ನು ಮೊದಲು ಗಮನಿಸಿ:

'...ಕವಿ ಭಾಷೆಯ ಜೊತೆ ಚೆಲ್ಲಾಟವಾಡಬೇಕಾಗುತ್ತದೆ, ರಮಿಸಬೇಕಾಗುತ್ತದೆ. ಅದರ ಕಟಾಕ್ಷಕ್ಕೆ ಕಂಬನಿಗರೆಯಬೇಕಾಗುತ್ತದೆ... ಅದರ passivenessಅನ್ನು—ಅಂದರೆ ನಿರಾವೇಶತೆಯನ್ನು—ತನ್ನ passion ಹಾಗೂ ಲಂಪಟತೆಯಿಂದ ಕಾವೇರಿಸಿ ಸುರತಕ್ಕೆ ಸಿದ್ಧಗೊಳಿಸಬೇಕಾಗುತ್ತದೆ. ಆಗಷ್ಟೇ ಅದು ಫಲವಂತವಾಗಲು ಸಾಧ್ಯ. ಆಯಾ ಕವಿಯ ವಿಶಿಷ್ಟ ಧಾತುಗಳನ್ನು, ಸ್ವಂತಿಕೆಯ ಕಣಗಳನ್ನು ಅವನು ಬಳಸುವ ಭಾಷೆ ಹೊಗಿಸಿಕೊಳ್ಳದಿದ್ದರೆ ಅವನಿಗೆ ಮಾನವಿಲ್ಲ; ಅವನ ಅನನ್ಯತೆಯ ಪುರುಷತ್ವ ಸಮರ್ಥನೆಗೆ ಅನ್ಯ ಮಾರ್ಗವಿಲ್ಲ. ಆ ಅರ್ಥದಲ್ಲಿ ಕವಿ ನಿತ್ಯಕಾಮಿ, ಖಾಯಂ ರಖಾವುದಾರ; ಸದಾ ಅಸ್ವಸ್ಥ, ಅನವರತ ಅಸಂತೃಪ್ತ.' (ಪುಟ: 14, 'ಸಮಗ್ರ ಗದ್ಯ'.)

ಭಾಷೆಗೂ ತನಗೂ ಇರುವ ಲೈಂಗಿಕ ಹಾಗೂ ಗೃಹಸ್ಥ ಬಾಂಧವ್ಯವನ್ನು ಕುರಿತು ಈ ಕವಿ ಬಹು ಎಚ್ಚರದ ವಿಮರ್ಶಕ ನಿಲವು ಹೊಂದಿದವರಾಗಿದ್ದಾರೆ. 'ಭಾಷೆಗೆ ಭಾಷೆ ಕೊಡು' ಈ ಚಿಂತನೆಗಳ ಫಲವಾಗಿ ಮೈದಾಳಿದೆ.

ನಾಲ್ಕು ಭಾಗಗಳಲ್ಲಿರುವ ಈ ಕವಿತೆ ಮೊದಲಿಗೆ, ಭಾಷೆಗೆ ಹೊರಾಂಗಣದ ನಿತ್ಯ ವ್ಯಾಯಾಮ ಬೇಕೆಂದು ಹಂಬಲಿಸಿದೆ. 'ಹುಲುಗಬ್ಬಿಗರ ಉಸಿರು ಕಟ್ಟಿಸುವ ಖಾಸಗೀ ಅಗ್ರಹಾರಗಳಿಂದ' ಹೊರ ತಂದು 'ಕ್ಲೀನರ್ ಬಾಷಾ, ಮೆಕ್ಯಾನಿಕ್ ಜೋಸೆಫರ ಬಳಿಗೆ' ನಿಲಿಸಿ, ಓಡಾಡಿಸಿ ಭಾಷೆಯ ಬೊಜ್ಜು ಕರಗಿಸುವ ಅಪೇಕ್ಷೆ ಇಲ್ಲಿ ವ್ಯಕ್ತವಾಗಿದೆ. ಎರಡನೆಯ ಭಾಗದಲ್ಲಿ ಭಾಷೆ ಪಡೆದುಕೊಳ್ಳಬೇಕಾದ ಸ್ವರೂಪದ ಕುರಿತು ಚಿಂತನೆಯಿದೆ. ಭಾವಕ್ಕೆ ಬಾವಿಯಾಗುವ, ಅಗೋಚರ ನಿಕ್ಷೇಪಕ್ಕೆ ಚಾವಿಯಾಗುವ ಶಕ್ತಿಯನ್ನು ಭಾಷೆ ಪಡೆದುಕೊಳ್ಳಬೇಕು. 'ಹಸ್ತಾಕ್ಷರದಂತೆ, ಕೊಟ್ಟ ಭಾಷೆಯಂತೆ' ಭಾಷೆ ಅನನ್ಯವಾಗಬೇಕು. ಮೂರನೆಯ ಭಾಗದಲ್ಲಿ ಭಾಷೆಗೆ ಭಾಷೆ ಕೊಡುವ ಆಸೆ, ಭವಿಷ್ಯ ಕೊಡುವ ಆಸೆಯಾಗಿ ವಿಸ್ತರಿಸಿದೆ. ಹಳಗನ್ನಡದ ಹಳೆಯ ಪಟ್ಟುಗಳು ಸಾಕು, ಗಪದ್ಯಗಳ ಹುಚ್ಚಾಟ ಬೇಡ, ಅಧ್ಯಾತ್ಮದ ಬುರುಗು ನೊರೆ ಕಣ್ಣು ನೋಯಿಸುವುದು ಬೇಡ. ಅಸಲಿ ಭಾಷೆಯಲ್ಲಿ, ಅದರ ಹುಡುಕಾಟದಲ್ಲಿ ಭಾಷೆಯ ಭವಿಷ್ಯ ಬಲಿಸುವ ಸಂಕಲ್ಪಕ್ಕೆ ಇಲ್ಲಿ ದನಿ ಮೂಡಿದೆ.

ಪದ್ಯದ ಕೊನೆಯ ಭಾಗ ಭಾಷೆಯೊಡನೆ ನಡೆವ ಮುದ್ದಾಟ, ಗುದ್ದಾಟ, ಸಂಯೋಗಗಳನ್ನು ಮನ ಮುಟ್ಟುವಂತೆ ಚಿತ್ರಿಸುತ್ತದೆ. ಭಾಷೆ ಮತ್ತು ಕವಿಯ ಸಂಬಂಧ ಹೆಣ್ಣು ಮತ್ತು ಗಂಡಿನ ಸಂಬಂಧದಂತೆ ಅನೇಕ ಮಜಲುಗಳುಳ್ಳ ಸಂಗತಿ. ಭಾಷೆಯೊಡನೆ ಕವಿ ಒಂದಾಗುತ್ತಾನೆ, ಮೈ ತಾಳಿದ ಕವಿತೆಯಲ್ಲಿ ಅವನೇ ಮರುಹುಟ್ಟು ಪಡೆಯುತ್ತಾನೆ. ಭಾಷೆ—ಹೆಣ್ಣು, ತಾಯಿ, ಸಖಿ, ಸವಾಲೊಡ್ಡುವ ಗೆಳತಿ—ಎಲ್ಲವೂ ನಿಜವೇ. ಈ ಭಾಗವನ್ನು ಇಡಿಯಾಗಿ ಗಮನಿಸಿ:

'ವಾಕ್ಕಿಗೆ ವಾಗ್ದಾನ ಕೊಡು: ವರಿಸಿದರೆ ಕಷ್ಟ, ಭರಿಸಿದರೆ
ಸಾಲದು ಹಿತ ಹಾ
ರೈಸಿದರೆ ಹೊತ್ತು ಮೆರೆಸಿದರೆ ಮುದ್ದು ಮಾತಲ್ಲೇ ಮೈ

ದ್ರವಿಸಿದರೆ ಸಾಲದು; ಭಗಿಸುವೆ ನಿನ್ನ ನಗಿಸುವೆ ಸ
ತಾಯಿಸುವೆ ಸಾಕಪ್ಪ ಸಾಕು ನರಳಿಸುವೆ ಗಂಡಾಗಿ ಅಪ್ಪ
ಳಿಸುವೆ ಕಾಡ ಬೇಡ ಎನ್ನಿಸಿ ಮುಗಿಸುವೆನೆಂದು: ಹೊರ
ಲಿ ಬಿಡೊ ಹೊರೆ ಹೆಣ್ಣೆಂದು: ತಾಯೆಂದರೆ ಈಗೊ
ಆಗೋ ಎನದೆ ಇಗೋ ಎಂದು ಬೇಡಿ
ಸಿ ಬೀಗಿಸು ಭದ್ರ ಬಾಹುಗಳಲ್ಲಿ.
ಆನುವಂಶಿಕತನದ ಅನನ್ಯ ವಂಶವಾಹೀ ಜೇನು
ಹೂಡು; ಕುದುರಿಸು ಪ್ರಾಗ್ಭಾವ; ತಟ್ಟು;
ಅವಳಲ್ಲಿ ನೀನೇ ಮರುಹುಟ್ಟು. ಭಾಷೆಗೆ ಕೊಡು ಭಾಷೆಯ—
ವರಿಸಿದರೆ ಕಷ್ಟ ಭರಿಸಿದರೆ ಸಾಲ...'

(ಭಾಷೆಗೆ ಭಾಷೆ ಕೊಡು)

ಭಾಷೆಯಲ್ಲಿ ಕವಿ ಮರುಹುಟ್ಟು ಪಡೆದಂಥ ಅನೇಕ ಸಾರ್ಥಕ ಕವಿತೆಗಳನ್ನು ಬರೆದವರು ನಿಸಾರ್. ಪ್ರಸ್ತುತ ಲೇಖನದ ವ್ಯಾಪ್ತಿಗೆ ಹೊರತಾದ ಅಂಥ ಅನೇಕ ಕವಿತೆಗಳನ್ನು ಒಲವಿನಿಂದ ನೋಡುತ್ತಲೇ ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾದ ಅವರ 'ಆಕಾಶಕ್ಕೆ ಸರಹದ್ದುಗಳಿಲ್ಲ' ಮತ್ತಿತರ ಸಂಕಲನಗಳತ್ತ ಮುನ್ಸಾಗುತ್ತಿದ್ದೇನೆ. ಸ್ವತಃ 'ಆಕಾಶಕ್ಕೆ ಸರಹದ್ದುಗಳಿಲ್ಲ' ಎಂಬ ಶೀರ್ಷಿಕೆಯ ಕವಿತೆಯೇ ಕವನದ ಅಮೇಯ, ಅಗಮ್ಯ, ಅನೌಪಮ್ಯ ಸ್ವರೂಪದ ಕುರಿತು ವಿಸ್ಮಯಪೂರ್ವಕ ನೋಟ ಬೀರುತ್ತಿದೆ. ಕವಿತೆ ಮತ್ತು ಆಕಾಶ—ಎರಡಕ್ಕೂ ಸರಹದ್ದುಗಳಿಲ್ಲ, ಬಲೋದ್ಭಂದಿಯ ಬಾಂದುಗಲ್ಲುಗಳಿಲ್ಲ. ಜೀವೋಲ್ಲಾಸಕರ ಲಾಲಿತ್ಯ ಲಕ್ಷಣಗಳಿಂದೊಡಗೂಡಿದುದು ಅವೆರಡರ ಹೊರ ನೋಟ, ಅಂತಸ್ಸತ್ವ. ದಮನ, ದಬ್ಬಾಳಿಕೆಗಳಿಗೆ ಸೆಟೆದೆದ್ದು ಕವಿತೆ ಕೂಡ ಗುಡುಗು, ಮಿಂಚುಗಳಿಂದ ಅಬ್ಬರಿಸುವುದು ಎನ್ನುತ್ತಾರೆ ಕವಿ. ಕವಿತೆ ಆಕಾಶದಂತೆ, ಆಕಾಶ ಕವಿತೆಯಂತೆ ಎಂದು ನಿರೂಪಿಸುತ್ತ ಹಠಾತ್ತನೆ ಕವಿತೆ ಕಂಡುಕೊಳ್ಳುವುದು:

'ಆಕಾಶದಂತೆಯೇ ಅನಂತಾನಂತ, ನಿಗೂಢ
ಕವಿತೆ ಜನ್ಮ ತಳೆಯುವ ಮನಸು ಕೂಡ.
ವ್ಯತ್ಯಾಸವಿಷ್ಟೆ: ಬಾಹ್ಯಾಕಾಶ ಸ್ಥೂಲ ಕಾಯದ ಭೀಷ್ಮ,
ಮನಸ್ಸು ಕಾಮರೂಪಿ; ಸೂಕ್ಷ್ಮಾತಿಸೂಕ್ಷ್ಮ.'

(ಆಕಾಶಕ್ಕೆ ಸರಹದ್ದುಗಳಿಲ್ಲ)

ಕವಿತೆ ಮತ್ತು ಆಕಾಶಗಳಂತೆ ಕವಿತೆ ಜನ್ಮ ತಳೆಯುವ ಮನಸ್ಸಿಗೆ ಕೂಡ ಸರಹದ್ದು ಗಳಿಲ್ಲ. ಕವಿಯ ಅನಿರ್ಬಧ್ಧತೆಯನ್ನು, ಅದರ ಅನಿವಾರ್ಯತೆಯನ್ನು ಮೊದಲಿನಿಂದಲೂ ಪ್ರತಿಪಾದಿಸುತ್ತ ಬಂದವರು ನಿಸಾರ್. `ಆಕಾಶಕ್ಕೆ ಸರಹದ್ದುಗಳಿಲ್ಲ' ಈ ತತ್ತ್ವ ಚಿಂತನೆ ಯನ್ನು ಸಾರ್ಥಕ ಕವಿತೆಯಾಗಿ ರೂಪಿಸಿದೆ. ಇದೇ ಸಂಕಲನದ `ಕವಿತೆ ಆಗಬೇಕು ಕಾಲಾತೀತ' ಕೂಡ ನಿಸಾರ್‌ರ ಕಾವ್ಯತತ್ತ್ವ ಮಥನವನ್ನು ಕಾವ್ಯರೂಪದಲ್ಲಿ ಕಡೆದಿರಿಸಿದೆ:

'ಕಾಲದ ನ್ಯಾಯ ನಿಷ್ಠುರ ಸೋಸಣಿಗೆಯ ಗಪ್ಪಾಗಿ,
ಜಮೆಯಾಗಿ ಬಿಡುತ್ತವೆ

ಮರೆವು ಮಬ್ಬಿನ ಅನಾಮಿಕ ಸೊತ್ತಿಗೆ
ಲೆಕ್ಕವಿರದಷ್ಟು ನತದೃಷ್ಟ ಕವಿತೆಗಳು
ಸದ್ಯದಾಶಯ ಸಂಪೂರ್ತಿಯ ಹೊನ್ನೆಹುಳ, ಹಾತೆಗಳು.'

(ಕವಿತೆ ಆಗಬೇಕು ಕಾಲಾತೀತ)

ಕಾಲಾತೀತವಾಗಿ ನಿಲ್ಲಬಲ್ಲದ್ದು ನಿಜಕವಿತೆಯ ಸತ್ವ. ಅದು ನಿತ್ಯ ನವೀನ—

'ನಿಜ ಕವಿತೆಯ ಭಾವ, ಚಿಂತನ, ಮಾತು
ಮೆರೆಯಬೇಕು ಆಗಿ ಸಮುದಾಯದ ನೆತ್ತರಿನ ಧಾತು.
ಅದು ಪೋರಿಯ ಥರ, ಪಡೆದು ಸದವಕಾಶ—
ಅಭ್ಯುದಯಿಸುತ್ತ ಸಾಗಿ, ಸತ್ವಯುತವಾಗಿ ಮಾಗಿ,
ಪ್ರತಿ ಕಾಲಘಟ್ಟದಲ್ಲಿ ಒನಪಿನಿಂದ ಬೀಗಿ
ಬಗೆಗೊಳ್ಳುತಿರಬೇಕು ಹೊಸತು ಹೊಸತಾಗಿ.'

(ಅದೇ)

'ಸಮಷ್ಟಿ ಬದುಕಿನ ಖ್ಯಾತ, ಅಖ್ಯಾತ ಪ್ರದೇಶಗಳಲ್ಲಿ', 'ದೇಶ ಕೋಶಗಳಲ್ಲಿ' ನಿಜವಾದ ಕವಿತೆ ತನ್ನ ಪ್ರಭಾವ ಬೀರುತ್ತಲೇ ಇರುತ್ತದೆ. ಅಂಥ ಕವಿತೆಗಳಲ್ಲೂ ಒಂದೆರಡು ಪುಣ್ಯಶಾಲಿ 'ಸಂಸ್ಕಾರವಂತ ರಚನೆಗಳು' ಸಂಸ್ಕೃತಿ ಸಾಗರದ ದೀಪಗೋಪುರವಾಗಿ ಬೆಳಗುತ್ತವೆ. ಸರ್ವಶ್ರೇಷ್ಠ ಕವಿತೆಯೊಂದರ ರಚನೆಯೇ ಎಲ್ಲ ಕಾವ್ಯತತ್ತ್ವ ಶೋಧಗಳ ನಿಜ ಫಲಿತವೆಂಬ ನಿಸಾರ್‌ರ ನಂಬಿಕೆ-ಚಿಂತನೆಗಳು ಈ ಕವಿತೆಯಲ್ಲಿ ವ್ಯಕ್ತಗೊಂಡಿವೆ.

'ಎಲ್ಲಿದ್ದೀಯ ನನ್ನ ಕವಿತೆ?', ಈ ಕವಿ ಪ್ರಾಯಃ ಅನೇಕ ದಿನಗಳಿಂದ ಕೈ ತಪ್ಪಿಸಿ ಕೊಂಡಿದ್ದ ಕವಿತೆಯನ್ನು ಹುಡುಕುತ್ತ ಬರೆದ ಪದ್ಯ. ಕವಿ ಗದ್ಯ ರಚನೆಗೆ ತೊಡಗಿದ್ದರಿಂದ ಕವಿತೆಗೆ ಸವತಿ ಮತ್ಸರ ಉಂಟಾಗಿರಬಹುದೇ ಎಂದವರ ಸಂದೇಹ! ಆದ್ದರಿಂದ ಅವಳಿಗೆ ಭರವಸೆ ನೀಡುತ್ತಿದ್ದಾರೆ: 'ನನ್ನ ಮೊದಲನೆ ಒಲವು ಹೇಗೊ ಹಾಗೇ | ನನ್ನ ಕೊನೆಯುಸಿರು ಸಹ ನೀನೆ— | ನೀ ಬಳಿಯೊಳಿಲ್ಲದಿರೆ ನೆಮ್ಮದಿಯ ನಾ ಕಾಣೆ.' ಈ 'ಕಾಂತ ಸಮ್ಮಿತ'ದ ಕಾಂತಿಗೆ ಆಕೆ ಮನ ಸೋತಿರಲೇಬೇಕು! ಮರು ಕ್ಷಣದಲ್ಲೇ, ಓಲೈಸುತ್ತಲೇ ಛೇಡಿಸು ತ್ತಿದ್ದಾರೆ: 'ಮತಿ ರಹಿತೆ!' ಹಾಗೆಯೇ ಕೊನೆಯಲ್ಲಿ ಗಂಭೀರವಾದ ಘನ ಚಿಂತಕನ ಆಳದ ನುಡಿಗಳು ಕವಿತೆಯನ್ನು ಬಲು ಎತ್ತರಕ್ಕೆ ಕರೆದೊಯ್ಯುತ್ತವೆ:

'ಬಯಲನ್ನು ನೆಚ್ಚಿ ಬಯಲಾಗಿ ಹೋಗದಿರು,
ಸಂಯಮವ ಕಲಿ;
ಯಾರ ಯಾರದೊ ತೆವಲು ತೀಟೆಗಳ ಖಯಾಲಿಗೆ
ಬಲಿಯಾಗಿ ಗಲಿಬಿಲಿಸಿ ಆಗದಿರು ತಬ್ಬಲಿ.
ಆಲಯದ ಇರುಕಟ್ಟು, ಯಾವತ್ತಿಗೂ ಕ್ಷೇಮ.
ಬಾಳ ಸಾಗಣೆಯಿಲ್ಲಿ ಬಲು ಸರಾಗ—
ಎಂದೇ, ಎಲ್ಲಿದ್ದರೂ ಬಂದು ಬಿಡು ನನ್ನೆಡೆಗೆ ಬೇಗ.'

(ಎಲ್ಲಿದ್ದೀಯ ನನ್ನ ಕವಿತೆ)

ಕವಿತೆಯನ್ನು ಒಲಿಸುವ, ಓಲೈಸುವ ಇಂಥ ಸಂದರ್ಭಗಳು ಕಾವ್ಯಪ್ರಕ್ರಿಯೆಯ ಅನಿವಾರ್ಯ ವಿಧಿಗಳೇ ಸರಿ. ಇದೇ ಸಂಕಲನದ 'ಕವಿಯಿಲ್ಲದಿದ್ದರೆ' ಕವಿತೆ ಕವಿಯ ಪ್ರಸ್ತುತತೆಯ ಕುರಿತು ಆಳವಾಗಿ ಶೋಧಿಸಿದೆ. ಕವಿ ಅರೆ ಮರುಳ, ಹೆಂಗರುಳ—ಅದೇ ವೇಳೆ 'ಸಮಾಜದಾಗುಹೋಗುಗಳ ಕೊಂಚ ಕುಲುಕಾಟಕ್ಕೂ ಮಿಡಿದ ತರಂಗರೂಪಿ ಸುವಿಚಾರಿ.' ಅವನ ಮಾತು ಸವಿಯೂ ಹೌದು, ಚುಚ್ಚುಮದ್ದೂ ಹೌದು. ಮಸಜೀದಿನ ಮವಜ್ಜನ್ನಿನ ಬೆಳಗಿನ ಎಚ್ಚರದ ಸದ್ದೂ ಹೌದು. ಅವನು ರಸದರಸ, ರಸದ ರಸ, 'ಜಗದ ಕೆನ್ನೆಯ ಮೇಲಿನೊಂದು ಕಂಬನಿ ತೇವ!'. ಕವಿತೆ ಕೊನೆಯಲ್ಲಿ ಮುಖ್ಯವಾದೊಂದು ಪ್ರಶ್ನೆಯನ್ನು ಎದುರಿಸಿದೆ: ಕವಿಯಿಲ್ಲದಿದ್ದಲ್ಲಿ ಏನಾಗುತ್ತದೆ? ಅದಕ್ಕೆ ಕವಿತೆ ಪಡೆದುಕೊಂಡ ಉತ್ತರವೂ ಮಹತ್ವದ್ದಾಗಿದೆ:

'ಕವಿಯಿಲ್ಲದಿದ್ದಲ್ಲಿ,
ಲೋಕ ಉಡುಗಿ ಹೋಗುವುದಿಲ್ಲ;
ನಡುಗಿ ನಲುಗುವುದಿಲ್ಲ.
ಹಾಗಾದರೇನಾಗುತ್ತದೆ?
ಬದುಕು ತನ್ನ ಪಾಡಿಗೆ
ಯಥಾಪ್ರಕಾರ ಸಾಗುತ್ತದೆ.
ಆದರೊಂದಿಷ್ಟು ಸೊರಗಿ ಬರಡಾಗಿ;
ಕೊಂಚ ಕೊರಗಿ ಕುರುಡಾಗಿ.'

(ಕವಿಯಿಲ್ಲದಿದ್ದರೆ)

ರಸಹೀನತೆಯ 'ಬರಡು', ದೃಷ್ಟಿ ಹೀನತೆಯ 'ಕುರುಡು', ಪ್ರಸನ್ನತೆಯನ್ನು ಕಳಕೊಂಡು ಕೊರಗುವಿಕೆ, ಆರೋಗ್ಯ ಕಳೆದುಕೊಂಡು ಸೊರಗುವಿಕೆ—ಇದು ಕವಿಯಿಲ್ಲದ ಲೋಕದ ಪಾಡು. ಅವನ ಅಸ್ತಿತ್ವದ ಅಗತ್ಯ ಅರಿಯಲಾರದ ಅವಿವೇಕಿಗಳ ಬಾಳು ಒಣ, ಭಣಭಣ. ಲೋಕ ಉಡುಗಿ ಹೋಗುವುದಿಲ್ಲ, ನಡುಗಿ ನಲುಗುವುದಿಲ್ಲ, ನಿಜವೇ. ಆದರೆ ಅದು ತನ್ನ ರಸಾರ್ದ್ರತೆಯನ್ನು ಕಳಕೊಂಡು ತೇಜೋಹೀನವಾಗುತ್ತದೆ.

ನಿಸಾರ್‌ರ ಭಾವಗೀತಗಳಲ್ಲೂ ಕವಿ, ಕಾವ್ಯವನ್ನು ಕುರಿತು ತೊಡಗಿಕೊಂಡ ಅಪರೂಪದ ಸಾಲುಗಳನ್ನು, ಕವಿತೆಗಳನ್ನು ಕಾಣಬಹುದು. ಕೆಲ ಉದಾಹರಣೆಗಳು:

'ರಾಷ್ಟ್ರಪ್ರೀತಿಯುಕ್ಕಿ ಮೊರೆವ ಗೀತೆ ಬಯಸುತಿರುವಿರಿ,
ನಾಡ ಹಿರಿಮೆ ವೈಭವಗಳ ಹೊಗಳಲಾಶಿಸಿರುವಿರಿ.
—ಹೇಗೆ ನಾನು ಬರೆಯಲಿ?
ನಿಜವ ಮರೆಸಿ ಒರೆಯಲಿ?'

(ನೀನು ಬಯಸುವ ಗೀತೆ)

'ಹಾಡು, ಕವಿಯೆ, ಹಾಡು
ನಾಡ ಜನರ ಪಾಡು

'ಸ್ವಂತ ನೋವು ನಲಿವನುಳಿದು
ಸಾಂತ ಬಯಕೆ ಗೂಡು ತೊರೆದು

ವೈನತೇಯನಂತೆ ಏರಿ
ನಾಡಿನುದ್ದ ಅಗಲ ಹಾರಿ
ಸುತ್ತಮುತ್ತ ನೋಡು;
ಸೊಕ್ಕಿ ಬರಲಿ ಹಾಡು.' (ಹಾಡು, ಕವಿಯೆ, ಹಾಡು)

'ನನ್ನ ಹಾಡಿನಲ್ಲಿ ಹಾಯದಿರಲಿ ನೆರಳು ಹೆರವರ;
ಪೊರೆವ ಹಸ್ತವಾಗಿ ಬರಲಿ ಕಂಬನಿಗಳ ಸುರಿವರ.' (ಬೇರೆ ಹಾಡು ಕಲಿಸು)

ಬೇರೆ ಬೇರೆ ಸಂದರ್ಭಗಳಲ್ಲಿ ಬರೆದಿರಬಹುದಾದ ಈ ಹಾಡುಗಳೆಲ್ಲವೂ ಸೃಷ್ಟಿಗೆ ಅಗತ್ಯವಾದ ಮುಕ್ತ, ಅನಿರ್ಬದ್ಧ ಮನಃಸ್ಥಿತಿಯನ್ನು ಕುರಿತು ಲಕ್ಷ್ಯ ಸೆಳೆಯುತ್ತಿವೆ. 'ಒಂದೆ ತಾಯ ಮಕ್ಕಳಲ್ಲಿ ಒಡಕು ಬಿತ್ತುತಿರುವ ವೇಳೆ', ಅನುಮಾನದ ವಿಷ ದೃಷ್ಟಿಯಿಂದ ಸಮಾಜ ಕವಿಯನ್ನೂ ಬೇಯಿಸುತ್ತಿರುವ ವೇಳೆ, ಕವಿಯು ಗೀತೆಯನ್ನು ಬರೆದು ನಾಡ ಸೊಗವನ್ನು ಹಾಡಲಾದರೂ ಸಾಧ್ಯವೆ? ಇಂಥ ವಿಹ್ವಲತೆ ಒಂದು ಸಂದರ್ಭದಲ್ಲಾದರೆ, 'ಕೊನೆಗೊಳ್ಳಲಿ ಮನದ ಸೀಳು—|ನಿರ್ಭಯದಲಿ ದನಿಯನೆತ್ತು; | ಶಾಂತಿ ಬರಲಿ ಧ್ವಜವ ಹೊತ್ತು' ಎಂದು ಹಾಡುವ ವೈನತೇಯ ಸ್ಫೂರ್ತಿ ಇನ್ನೊಮ್ಮೆ. ಚಿದ್ವಿಲಾಸದ ಲಾಸ್ಯಗಳು ಇಲ್ಲಿ ಪ್ರಕಟವಾಗಿವೆ.

ಸಂಗ್ರಹವಾಗಿ ಹೇಳಬೇಕೆಂದರೆ ನಿಸಾರ್‌ರ ಕಾವ್ಯತತ್ತ್ವಚಿಂತನೆ ಸಮಗ್ರವಾದುದು. ಕವಿಯ ಆಶಯ, ಅಭಿವ್ಯಕ್ತಿ, ಭಾಷೆಯ ಶಕ್ತಿ, ಸೃಷ್ಟಿ ಪ್ರಕ್ರಿಯೆಯ ರಹಸ್ಯ, ಸೃಷ್ಟಿಶೀಲತೆಯ ಪಾರಮ್ಯ ಮುಂತಾಗಿ ನಿಸಾರ್‌ರ ಚಿಂತನೆ ಹರಿಯದ ದಿಕ್ಕಿಲ್ಲ, ಶೋಧಿಸದ ಆಳಗಳಿಲ್ಲ ಎನ್ನಬೇಕು. ಅಡಿಗರು ಅಂದಂತೆ ಅವರು ಸಹಜ ಕವಿಯಾಗಿರುವುದರಿಂದ ಅವರ ಅಭಿಪ್ರಾಯಗಳು ಸುಂದರ, ಸಾರ್ಥಕ ಕಾವ್ಯರೂಪಿ ಅಭಿವ್ಯಕ್ತಿ ಪಡೆಯಲೂ ಸಾಧ್ಯವಾಗಿದೆ. ಅವರ 'ಮನಸು ಗಾಂಧಿ ಬಜಾರು', 'ಕುರಿಗಳು, ಸಾರ್ ಕುರಿಗಳು', 'ನಿತ್ಯೋತ್ಸವ', 'ರಾಮನ್ ಸತ್ತ ಸುದ್ದಿ', 'ಅಮ್ಮ, ಆಚಾರ ಮತ್ತು ನಾನು', 'ಎಲ್ಲಿದ್ದೀಯೋ ಹುಡುಗ', 'ಬಾಳಿನ ಕ್ರೀಡಾಂಗಣ', 'ಸಣ್ಣ ತಪ್ಪು' ಮುಂತಾದ ಕವಿತೆಗಳು ಅವರ ಕಾವ್ಯತತ್ತ್ವ ರೂಪಿಸಿದ ಶ್ರೇಷ್ಠ ಸೃಷ್ಟಿಶೀಲ ಸುಕೃತಿಗಳಾಗಿವೆ. ಅಂಥ ಕೆಲವಾದರೂ ಪದ್ಯಗಳನ್ನು ಬರೆಯಲು ಸಾಧ್ಯವಾದರೆ ಕವಿ ಧನ್ಯ ಎಂಬರ್ಥದ ಮಾತುಗಳನ್ನು ಅವರು ಒಂದೆಡೆ ಆಡಿದ್ದಾರೆ. ಆ ದೃಷ್ಟಿಯಿಂದಲೂ ನಿಸಾರ್ ಪುಣ್ಯವಂತರು.

'ನಾವು ನಿಜಕ್ಕೂ ತಿಳಿದಿದ್ದೇವೆಂದು ತಿಳಿಯುವ ನಾವು ನಾವಲ್ಲ' ಎಂಬುದು ಅವರದೇ ಇನ್ನೊಂದು ಮಾತು (ಪುಟ: 31, 'ಸಮಗ್ರ ಗದ್ಯ'). ಹಾಗಾದರೆ ನಾವು ಯಾರು?—ನಾನು ಯಾರು? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಈವರೆಗೆ ಯಾವುದಾದರೂ ಕಲೆ ಪಡೆದುಕೊಂಡಿದೆಯೋ ನನಗೆ ತಿಳಿಯದು. ಆದರೆ ಈ ಪ್ರಶ್ನೆಯನ್ನು ನಿಸಾರ್ ಕೇಳಿಕೊಂಡಿದ್ದಾರೆಂಬುದೇ, ಇದಿರಿಸಿದ್ದಾರೆಂಬುದೇ ನನಗೆ ಮಹತ್ತ್ವದ್ದೆಂದು ತೋರಿದೆ. ಬದುಕಿನಲ್ಲೂ ಸಾಹಿತ್ಯದಲ್ಲೂ ಸೃಷ್ಟಿಯಲ್ಲೂ ಚಿಂತನಶೀಲ ಕ್ಷಣಗಳಲ್ಲೂ ಸುಲಭವಾಗಿ ಭೇದಿಸಲಾಗದ ಪ್ರಶ್ನೆಗಳನ್ನು ಕೇಳಿಕೊಳ್ಳುವ ಸೃಜನಶೀಲತೆಗೆ ಎಲ್ಲ ಗೌರವಗಳು ಸಲ್ಲಬೇಕು. ಅಂಥ ಸೃಜನಶೀಲತೆಗೆ ಸರಹದ್ದುಗಳೇ ಇಲ್ಲ.



ನಿಸಾರರ ಕಾವ್ಯದಲ್ಲಿ ಭಾಷಾ ವೈಶಿಷ್ಟ್ಯ : ಒಂದು ಟಿಪ್ಪಣಿ

♦ *ಡಾ. ಎಚ್. ಎಸ್. ಶಿವಪ್ರಕಾಶ*

ಅರ್ಧ ಶತಮಾನಕ್ಕೂ ಹೆಚ್ಚಿನ ಕಾಲವನ್ನು ಕಾವ್ಯಕ್ಕೇ ಮುಡಿಪಾಗಿಟ್ಟಿರುವ ಕವಿಯ ಭಾಷಾ ವೈಶಿಷ್ಟ್ಯಗಳನ್ನು ಕುರಿತು ಮಾತಾಡುವುದು ಸ್ವಲ್ಪ ತೊಡಕಿನ ಕೆಲಸವೇ. ನಿಸಾರರು ಈ ಬಗೆಯ ಕವಿ. ನಾನು ತಿಳಿದುಕೊಂಡಿರುವಂತೆ ಕವಿಯ ಭಾಷಾ ವೈಶಿಷ್ಟ್ಯಗಳೆಂದರೆ ಅವನ ವ್ಯಕ್ತಿಭಾಷೆಯ ಲಕ್ಷಣಗಳು. ಕಾವ್ಯವು ಭಾಷೆಯ ಅನೇಕ ಬಳಕೆಗಳಲ್ಲಿ ಒಂದು ಮಾತ್ರ. ಬೇರೆಲ್ಲಾ ಬಳಕೆಗಳಿಗಿಂತ ಹೆಚ್ಚಿನ ಅರ್ಥವನ್ನು ಒಳಗೊಂಡಿರುವುದು ಬೇರೆಯ ವಿಷಯ. ಕಾವ್ಯಭಾಷೆಗೆ ವಿಶಿಷ್ಟವಾದ ಕೆಲವು ಲಕ್ಷಣಗಳಿವೆ: ಛಂದಸ್ಸು, ಲಯ, ಅಲಂಕಾರಗಳು, ಭಾವ ಮುಂತಾದವುಗಳು. ಇವು ಒಂದಲ್ಲ ಒಂದು ರೀತಿಯಲ್ಲಿ ಯಾವ ಕವಿಯನ್ನೂ ಬಿಡುವಂಥವಲ್ಲ. ಅಂದರೆ, ಕಾವ್ಯಕ್ಕೆ ವ್ಯಾಕರಣ ನಿಯಮಗಳು ಕೆಲವು ಇವೆ. ಈ ನಿಯಮಗಳಲ್ಲಿ ಯಾವನ್ನು ಕಡಿಮೆ ಬಳಸುತ್ತಾನೆ, ಯಾವನ್ನು ಜಾಸ್ತಿ ಬಳಸುತ್ತಾನೆ—ಇವುಗಳನ್ನು ಪರೀಕ್ಷಿಸಿ ಕವಿಯ ವ್ಯಕ್ತಿ ಭಾಷೆಯ ಬಗ್ಗೆ ನಿಖರವಾದ ಮಾತುಗಳನ್ನು ಹೇಳಬಹುದು.

ಕಾವ್ಯದ ಸಾಮಾನ್ಯ ಭಾಷೆಯ ಮತ್ತು ಕವಿಯ ವ್ಯಕ್ತಿ ಭಾಷೆಯ ಲಕ್ಷಣಗಳನ್ನು ಒರೆ ಹಚ್ಚುವ ಶಿಸ್ತು 'ಶೈಲಿ ವಿಜ್ಞಾನ'ವೆಂಬ ಜ್ಞಾನ ಶಾಖೆಯಾಗಿ ಬೆಳೆದಿದೆ. ಇದರ ಆಧಾರದ ಮೇಲೆ ಕವಿಯ ಶ್ರೇಷ್ಠತೆಯನ್ನು ಅಳೆಯುವ ಪ್ರಯತ್ನಗಳು ಕೂಡ ನಡೆದಿವೆ. ನನಗೆ ಈ ಬಗ್ಗೆ ಅನುಮಾನ. ಬರಿಯ

ಶೈಲಿಯ ವಿವರಗಳು ಏನನ್ನೂ ಹೇಳುವುದಿಲ್ಲ. ಆ ವಿವರಗಳಿಗೆ ಅರ್ಥ ಮೂಡುವುದು ಆಯಾ ಚಾರಿತ್ರಿಕ, ಸಾಂಸ್ಕೃತಿಕ ಸನ್ನಿವೇಶದ ಹಿನ್ನೆಲೆಯಲ್ಲಿ. ಆದರೂ ಭಾಷಾ ವಿಜ್ಞಾನದ ಬೆಳಕಿನಲ್ಲಿ ಕಾವ್ಯದ ವ್ಯಾಖ್ಯೆಯನ್ನು ಮಾಡುವ ಶೈಲಿ ವಿಜ್ಞಾನವು ಉಪಯುಕ್ತವೇ. ಹೀಗೇ ಇತರ ಜ್ಞಾನ ಶಾಖೆಗಳ ಬೆಳಕಿನಲ್ಲಿ ಕಾವ್ಯವನ್ನು ನೋಡುವುದು ಸಾಧ್ಯ. ಕವಿತೆಯೆನ್ನುವುದು ಈ ಯಾವುದೇ ಬೌದ್ಧಿಕ ಚಟುವಟಿಕೆಗಳೂ ನೀಡದ ತಿಳಿವನ್ನು ಕೊಡುತ್ತದೆಂದೂ ಇದೇ ಅದರ ಅಸ್ತಿತ್ವಕ್ಕೆ ಸಮರ್ಥನೆಯೆಂದೂ ನನ್ನ ನಂಬಿಕೆ.

ನವೋದಯ ಕಾವ್ಯವನ್ನು ಕುರಿತು ನಿಸಾರ್ ಈ ರೀತಿ ಆಕ್ಷೇಪಣೆ ಎತ್ತುತ್ತಾರೆ: 'ವೈಚಾರಿಕತೆ ಏನಿದ್ದರೂ ಚಿಂತನದ ಸಂಕುಚಿತಾರ್ಥದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಈ ಚಿಂತನೆ, ಕವಿ ನಿವೇದಿಸಲಿರುವ ವಸ್ತುವಿನಲ್ಲಿ ಎಷ್ಟು ಮಗ್ನನಾಗಿದ್ದಾನೆ, ಅದರ ವಿವರ ಜ್ಞಾನ ಎಷ್ಟು ಲಭ್ಯವಾಗಿದೆ ಎನ್ನುವುದನ್ನು ನಿರ್ಧರಿಸಬಹುದೇ ವಿನಾ ಕವಿಯ ಭಾವಕ್ಕೆ ರೂಪ ರೇಷೆಗಳ ಅರ್ಥವಂತಿಕೆಯನ್ನೂ ಗಟ್ಟಿತನವನ್ನೂ ನೀಡುವುದರಲ್ಲಿ ಸಫಲಗೊಳ್ಳದು.' ಈ ಮಾತುಗಳು ನಿಸಾರರ ಕಾವ್ಯದ ಮುಖ್ಯ ಗುಣವನ್ನು ಗುರುತಿಸಿಕೊಳ್ಳಲು ನೆರವು ನೀಡುತ್ತವೆ. ವೈಚಾರಿಕತೆಯೇ ಕವಿಯ ಭಾವಕ್ಕೆ ರೂಪರೇಷೆಗಳನ್ನು ಕೊಡುವುದು.

ಬುದ್ಧಿಭಾವಗಳ ಸಂಯೋಗದಿಂದ ಕಾವ್ಯ ಹುಟ್ಟುವುದೆಂಬ ಮಾತು ಪ್ರಚಲಿತವಿದೆ. ಆದರೆ ಇವೆರಡರ ಮಿಶ್ರಣದ ಪ್ರಮಾಣ ಕವಿಯಿಂದ ಕವಿಗೆ ಬದಲಾಗುತ್ತಾ ಹೋಗುವಂಥದ್ದು. ಬುದ್ಧಿಯದೇ ಮೇಲುಗೈಯಾದರೆ ಕಾವ್ಯದ ವಾಚ್ಯಾರ್ಥಕ್ಕೆ ಒತ್ತು ಸಿಗುತ್ತದೆ. ಭಾವವೇ ಹೆಚ್ಚಾದರೆ ಸೂಚ್ಯಾರ್ಥವೇ ಮುಖ್ಯವಾಗುತ್ತದೆ. ಶೈಲಿ ವಿಜ್ಞಾನದ ಪರಿಭಾಷೆಯಲ್ಲಿ ಹೇಳುವುದಾದರೆ ವಾಚ್ಯಾರ್ಥ (Literal meaning) ಮತ್ತು ಸೂಚ್ಯಾರ್ಥ (Lateral meaning) ಇವುಗಳಲ್ಲಿ ಒಂದು ಪ್ರಧಾನವಾಗಿಯೂ (dominant) ಇನ್ನೊಂದು ಅಧೀನವಾಗಿಯೂ (subordinate) ಇರಬಹುದು. ವಾಚ್ಯಾರ್ಥದಲ್ಲಿ ಶಬ್ದಗಳು ವಸ್ತು ಪ್ರಪಂಚವನ್ನು ನಿರ್ದೇಶಿಸುವ ಕೆಲಸ ಮಾಡುತ್ತವೆ. ಸೂಚ್ಯಾರ್ಥದಲ್ಲಿ ಶಬ್ದಗಳು ಬೇರೆ ಶಬ್ದಗಳ ಜೊತೆಗೆ ಹೊಂದಿರುವ ಸೂಕ್ಷ್ಮಾತಿಸೂಕ್ಷ್ಮ ಸಂಬಂಧಗಳೇ ಮುಖ್ಯವಾಗಿ ವಸ್ತು ಪ್ರಪಂಚ ಬದಿಗೆ ಸರಿಯುತ್ತದೆ. ಸೂಚ್ಯಾರ್ಥವನ್ನು ಬೀಳ್ಕೊಟ್ಟು, ಕಾವ್ಯ ಕೆಟ್ಟ ಗದ್ಯವಾಗುವ ಅಪಾಯವಿದೆ. ವಾಚ್ಯಾರ್ಥವನ್ನು ಪೂರ್ತಿ ಬಿಟ್ಟಾಗ, ಕಾವ್ಯ ಬೇಂದ್ರೆಯವರ ಕೊನೆಯ ಕೆಲವು ಕವಿತೆಗಳಂತೆ ಬರೀ ಶಬ್ದಜಾಲವಾಗುತ್ತವೆ. ಸೂಚ್ಯಾರ್ಥ ಪ್ರಧಾನವಾದಾಗ ಕಾವ್ಯ ಹೆಚ್ಚು ಹೆಚ್ಚು ನಿಗೂಢವಾಗುತ್ತಾ ಸಾಂಕೇತಿಕತೆಯ ಕಡೆ ವಾಲುತ್ತದೆ. ವಾಚ್ಯಾರ್ಥ ಪ್ರಧಾನವಾದಾಗ ಕಾವ್ಯ ಹೆಚ್ಚು ಹೆಚ್ಚು ನೇರವಾಗುತ್ತಾ ಹೋಗುತ್ತದೆ. ಈ ಎರಡು ಕಾವ್ಯ ಪ್ರಭೇದಗಳನ್ನು ಕ್ರಮವಾಗಿ ಓರೆಗವಿತೆ (oblique poetry) ಮತ್ತು ನೇರಗವಿತೆ (direct poetry) ಎಂದು ಹೆಸರಿಸಬಹುದು. ಈ ಎರಡು ಪ್ರಭೇದಗಳು ಕಾವ್ಯದ ಎರಡು ಮುಖಗಳಾಗಿವೆ.

ನಿಸಾರರ ಕಾವ್ಯ ಪ್ರಧಾನವಾಗಿ ನೇರಗವಿತೆ. ಶಬ್ದಗಳ ಸೂಚ್ಯಾರ್ಥಗಳನ್ನು ಅದು ಬಳಸಿಕೊಂಡರೂ—ಹಾಗೆ ಮಾಡುವುದರಿಂದಲೇ ಅದು ವಾಚ್ಯಾರ್ಥ ಕಾವ್ಯದ ಅಪಾಯಗಳನ್ನು ದಾಟಿದೆ. ಈ ಕವಿಯ ಭಾವಕ್ಕೆ ರೂಪುರೇಷೆಗಳನ್ನು ಕೊಡುವುದು ಆಖೈರಾಗಿ

ಬುದ್ಧಿ ಅಥವಾ ವೈಚಾರಿಕತೆ. ಅಡಿಗರು ನಿಸಾರರ ಕಾವ್ಯದ ಬಹು ಮುಖ್ಯ ಲಕ್ಷಣವನ್ನು ಗುರುತಿಸುತ್ತಾ, 'ಮುಖ್ಯವಾಗಿ ಈ ಕವನಗಳು ಪ್ರಜ್ಞಾಲೋಕಕ್ಕೆ, ಬೆಳಕಿನ ಬಯಲಿಗೆ ಸಂಬಂಧ ಪಟ್ಟಂತೆ ಇವೆ' ಅಂದಿದ್ದಾರೆ. ಹೀಗಾಗಿ, ಬೇಂದ್ರೆಯವರ ಶ್ರೇಷ್ಠ ಕವನಗಳು 'ಮಾತು ಮಾತು ಮಥಿಸಿ ಬಂದ ನವನೀತ'ವಾದರೆ, ನಿಸಾರರ ಶ್ರೇಷ್ಠ ಕವನಗಳು ಬುದ್ಧಿಯ ಪರಿಪಾಕವಾಗಿವೆ. ಇದಕ್ಕೆ ಅಪವಾದವಾಗಿ ನಿಸಾರರ 'ಮನೋರಮಾ', 'ಎಂಥ ದಿನಗಳೇ ಚಿನ್ನ'—ಇಂಥ ಕೆಲವು ಕವನಗಳನ್ನು ಹೆಸರಿಸಬಹುದು. ಆದರೆ ಇಂಥವು ಅವರ ಮಹತ್ವಾಕಾಂಕ್ಷೆಯ ಕವನಗಳಾಗಿಲ್ಲ. ನಿಸಾರರ ಕಾವ್ಯದಲ್ಲಿ ವಿವರಗಳಿಗೆ ಸಿಕ್ಕುವ ಆದ್ಯತೆ ಮೇಲಿನ ತೀರ್ಮಾನದ ಬೆಂಬಲಕ್ಕಿದೆ.

'ಆಗ ಹುಟ್ಟುವ ನೆನಪು: ರೆಕ್ಕೆ ಕತ್ತರಿಸಿದ ಕಾಡು ಹಕ್ಕಿ:
ಹೆಜ್ಜೆಯೊತ್ತಿನ ಹಗುರ ನನ್ನ ತುಂಬ.
ತೊಟ್ಟಿಲಿಗೆ ಇಳಿ ಬಿಟ್ಟ ಪುಟ್ಟ ಗಿಲಕಿ—
ಹಸುಳೆಗಣ್ಣಿನ ಉರಿವ ಜೋಡಿಗಂಬ.'
(ಮರೆಯ ಮುಖ)

'ಮುದುಕ :
ಬಲು ಸಿಡುಕ.
ಬೆಳ್ದಿಂಗಳಿನ ಬೆಳಕಾರಿ, ಹಸಿವೇರಿ
ತಂಗಳನೆ ತಿನುವ ತವಕ.'
(ಮುದುಕ)

ಈ ಸಾಲುಗಳಲ್ಲಿ ನಾಮಪದ ಪುಂಜವೊಂದು ಮೊದಲು ಬಂದು, ಮುಂದೆ ಬರುವ ಸಾಲುಗಳು ಅದರ ಅರ್ಥವನ್ನೇ ಸ್ಪಷ್ಟಗೊಳಿಸುತ್ತಾ ಹೋಗುತ್ತವೆ. ಅಂದರೆ, ಇಲ್ಲಿನ ಎಲ್ಲ ಸಾಲುಗಳನ್ನು ಹಿಡಿದಿಡುವುದು ಮೊದಲ ಸಾಲಿನ ವಾಚ್ಯಾರ್ಥ.

ನಿಸಾರರು ಕವಿತೆಯ ಕಟ್ಟಡದಲ್ಲಿ ಸಾಕಷ್ಟು ವೈವಿಧ್ಯವನ್ನು ತೋರಿಸಿದ್ದಾರೆ. ಅವರ ಕವಿತೆಗಳು ವರ್ಣನಾತ್ಮಕವಾದವು ಆಗಲೀ (ಉದಾ: 'ಸಂಜೆ ಐದರ ಮಳೆ', 'ಖಾಲಿ ಸೈಟುಗಳು') ಕಥನಾತ್ಮಕವಾದವು ಆಗಲೀ (ಉದಾ: 'ಅಮ್ಮ ಆಚಾರ ನಾನು', 'ಮೃಗಾಯಣ') ಸಂವಾದಾತ್ಮಕವಾದವು ಆಗಲೀ (ಉದಾ: 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ಮಾರಾಟಗಾತಿಯ ಮಾತುಕತೆ') ಚಿಂತನಾತ್ಮಕವಾದವು ಆಗಲೀ (ಉದಾ: 'ಅಂತಃಸತ್ವ', 'ಪ್ರಾಗ್ಬಂಧಗಳು) ಅವುಗಳ ವಸ್ತು ಸ್ಪಷ್ಟವಾಗಿ ಕಣ್ಣ ಮುಂದಿರುತ್ತದೆ; ಎಂದೂ ಮಸುಕು ಮಸುಕಾಗುವುದಿಲ್ಲ. ಅವರ ಕವಿತೆಗಳು ಜನ ಸಾಮಾನ್ಯರನ್ನು ಥಟ್ಟನೆ ತಟ್ಟಲು ಇದೂ ಒಂದು ಮುಖ್ಯ ಕಾರಣ ಇರಬಹುದು.

ಇನ್ನು ನಿಸಾರರ ಉಪಮೆ ಮತ್ತು ಪ್ರತಿಮೆಗಳ ಬಳಕೆಯನ್ನು ಅವಲೋಕಿಸೋಣ.

'ಚೆಲುವು ಮೋಡದ ಮರೆಗೆ ಸಿಡಿಲ ಕಾರ್ಖಾನೆ'
(ಕೊಲಂಬಸ್)

'ನನ್ನ ದನಿ, ನನ್ನದೇ ಆದ ದನಿ, ನನ್ನಾಸೆ ಹೊನ್ನ ಗಣಿ
ಎಲ್ಲಿರುವುದೋ!
ಭೂಮ್ಯಂತರಾಳದೊಳಗಾವ ಸ್ತರ ಶಿಲೆಗಳಲಿ
ನಿಜ ಖನಿಜ ನಿಕ್ಷೇಪ ಹುದುಗಿರುವುದೋ.'

(ಆತ್ಮಶೋಧ)

'ಕೊಕ್ಕೊಕ್ಕೋ : ನವೋದಯ, ಹೊಸ ನಗಾರಿ,
ಕದಲಿತು ಪರಂಪರೆ ಒಂದೆರಡು ಡಿಗ್ರಿ.'

(ನವೋದಯ)

'ಗೊತ್ತಿದೆ ದೇವಾ / ಶಿಲೆಯಲ್ಲಿ ವಿಲೀನವಾದ / ಗುಂಪಿನ
ಅಜ—ಈ ಖನಿಜ / ಪ್ರತ್ಯೇಕತೆಯಲ್ಲಿ ಪಾರದರ್ಶಕತೆ
ಗಡಸುತನ, ಅನನ್ಯ ರಾಸಾಯನಿಕತೆ. ಇವೂ ಪ್ರಮಾಣವಲ್ಲ
ವೆಂಬುದೂ ಗೊತ್ತಿದೆ ದೇವಾ.'

(ಸ್ವರೂಪ)

'ಕೆಲವು ಸೈಟು;
ಮದುವೆ ಲೇಟಾದ ಕನ್ಯೆಯರೆ ಥೇಟು.'

(ಖಾಲಿ ಸೈಟುಗಳು)

ಇವರ ಕಾವ್ಯದಲ್ಲಿ ಉಪಮೇಯ ಮತ್ತು ಉಪಮಾನ ಇವು ಪರಸ್ಪರ ಬಹಳ ವಿಭಿನ್ನವಾದ ಅನುಭವದ ವಲಯಗಳಿಂದ ಬಂದು ಸೇರುತ್ತವೆ. ಇಷ್ಟೊಂದು ದೂರದ ವಸ್ತುಗಳನ್ನು ಕವಿ ಎಳೆದು ತಂದು ಅವಕ್ಕೆ ಬಲವಂತದ ಮದುವೆ ಮಾಡಿಸಿದಾಗ ನಮಗೆ ಆಶ್ಚರ್ಯ ಮತ್ತು ಖುಷಿ ಒಟ್ಟಿಗೆ ಉಂಟಾಗುತ್ತದೆ. ಇಂಥ ಹೋಲಿಕೆಗಳು ಇಂಗ್ಲಿಷ್ ಕಾವ್ಯದ 'Metaphysical Conceit' ಅನ್ನು ನೆನಪಿಸುತ್ತವೆ. ಬುದ್ಧಿ ತೀಕ್ಷ್ಣತೆಯಿಂದ ಜೀವಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರದಂಥ ಜ್ಞಾನಶಾಖೆಗಳಿಂದ ಹೋಲಿಕೆಗಳನ್ನು ಕವಿ ಹಿಡಿದು ಕಾವ್ಯಕ್ಕೆ ತರುವಷ್ಟೇ ಸಲೀಸಾಗಿ, ನಗರ ಜೀವನದ ನಿತ್ಯಾನುಭವಗಳ ಸಂದಿಗೊಂದಿಗಳಿಂದಲೂ ತರುತ್ತಾರೆ. ಬದುಕಿನ ಬೇರೆ ಬೇರೆ ಮಗ್ಗುಲುಗಳನ್ನು ಕಾವ್ಯಗೊಳಿಸುವುದರಲ್ಲಿ ಅವರು ಬಸವಣ್ಣನನ್ನು ನೆನಪು ಮಾಡಿಕೊಡುತ್ತಾರೆ. 'ಪದ್ಯದಲ್ಲಿ ಕಾವ್ಯಾತ್ಮಕ, ಕಾವ್ಯೇತರ ಅಂಶಗಳ ಬಗ್ಗೆ ಖಾತರಿಯಾದ ಒಂದು ಪೂರ್ವ ಅಂಗೀಕೃತ ಕಲ್ಪನೆಯಿದ್ದು, ಕಾವ್ಯಾತ್ಮಕವಾಗುವಂಥ ವಸ್ತು ವಿಷಯ, ಪದಗಳ ರಸೋತ್ಪತ್ತಿಗೆ ಸಾಧಕವೆನ್ನುವುದನ್ನು ಅರಿತ ಕವಿವರ್ಗಕ್ಕೆ ಕವಿತೆಯ ಸಾಫಲ್ಯ ಭಾವಾಭಿವ್ಯಕ್ತಿಯನ್ನು ಅವಲಂಬಿಸಿದೆ ಎಂದು ತಮ್ಮ ಶಕ್ತಿ ಸಮಸ್ತವನ್ನು ಅದಕ್ಕೆ ದುಡಿಸಿಕೊಳ್ಳುವ ಜನಕ್ಕೆ ತತ್ತ್ವ, ತಿಳುವಳಿಕೆ, ಜ್ಞಾನ ವ್ಯುತ್ಪತ್ತಿಗಳಿಗೆ ಗದ್ಯವೇ ಸರಿಯಾದ ಮಾಧ್ಯಮ ಎನಿಸಿತ್ತು' ಎಂದು ನವೋದಯ ಕಾವ್ಯವನ್ನು ಟೀಕಿಸುತ್ತಾರೆ. ಇಂದಿನ ಕವಿಗಳ ಬಗ್ಗೆ ತಮ್ಮ 'ಅನಾಮಿಕ ಆಂಗ್ಲರು' ಮುನ್ನುಡಿಯಲ್ಲಿ ಹೀಗೆ ಹಂಗಿಸುತ್ತಾರೆ: 'ಬರೀ ಸಾಹಿತ್ಯ ಓದಿ, ಸಾಹಿತ್ಯ ಕಕ್ಕುವುದಕ್ಕಿಂತ ವಿಜ್ಞಾನ, ಕಲೆ, ಶಿಲ್ಪ, ಸಂಗೀತ ಇತ್ಯಾದಿ ಹಲವು ಇಲಾಖೆಗಳಲ್ಲಿ ಮನಸ್ಸು ಹಾಯಿಸಿ, ಅಲ್ಲಿಂದ ಬೆರಗಿನ, ಪುಷ್ಟಿಯ

ಜಿನಸನ್ನು ದೋಚಿ ತಮ್ಮ ವ್ಯಕ್ತಿತ್ವ ಹಾಗೂ ಬರಹದ ತೂಕವನ್ನು ಹೆಚ್ಚಿಸಿಕೊಳ್ಳಬೇಕೆಂಬ ತುಡಿತ (ಇವರಿಗೆ) ಇರುವುದಕ್ಕೆ ಯಾವ ಪುರಾವೆಗಳೂ ಇಲ್ಲ.' ಹಿಂದಿನ ಮತ್ತು ಇಂದಿನ ಕವಿಗಳನ್ನು ನಿಸಾರರು ಹೀಗೆ ತರಾಟೆಗೆ ತೆಗೆದುಕೊಳ್ಳುತ್ತಿರುವುದು ಅವರಿಗೆ ಐ. ಎ. ರಿಚರ್ಡ್ಸ್ ಹೇಳುವ 'Poetry of Inclusion' ಅಥವಾ ನೆರೂಡ ಹೇಳುವ 'Impure Poerty'ಯಲ್ಲಿನ ನಂಬಿಕೆಯನ್ನು ತೋರಿಸುತ್ತದೆ. ಅವರ ಕಾವ್ಯದ ಉಪಮಾ ತಂತ್ರವೂ ಹಾಗೆ. ಉಪಮೆಗಳಲ್ಲಿ ಬೇರೆ ಬೇರೆ ಅನುಭವ ಪ್ರಪಂಚಗಳನ್ನು ತೆರೆಸುವಂತೆ ಪದಗಳ ಆಯ್ಕೆಯನ್ನು (lexical choice) ನಿಸಾರರು ಮಾಡುತ್ತಾ ಬಂದಿದ್ದಾರೆ. ಅವರ ಕಾವ್ಯ ಕಾಯಕ ಮುಂದುವರಿದ ಹಾಗೆ ವಿದೇಶಿ, ಪರ್ಷಿಯನ್, ಅರಬ್ಬೀ, ಉರ್ದು ಮತ್ತು ಇಂಗ್ಲಿಷು ಶಬ್ದಗಳ ಬಳಕೆ ಹೆಚ್ಚುತ್ತಾ ಹೋಗಿದೆ.

'ಕೆಲವು ಡಿಗ್ರಿಗಳಾದರೂ ನಮ್ಮ ಕನ್ನಡ ಕಾವ್ಯದ ಒಟ್ಟಾರೆ ಭಾಷಾ ಸ್ವರೂಪವನ್ನು ಬದಲಿಸಬೇಕೆಂಬ ಹೆಬ್ಬಯಕೆ ನನ್ನಲ್ಲಿ ಮನೆಮಾಡಿದೆ' ಎಂದು ಹೇಳಿ ಕ್ರಿಯಾಪದಗಳ ಅಸಾಂಪ್ರದಾಯಿಕ ಬಳಕೆಯಲ್ಲಿ, ಉರ್ದು, ಪಾರಸಿ, ಅರಬ್ಬಿ, ಇಂಗ್ಲಿಷು, ಸಂಸ್ಕೃತ ಪದಗಳ ಉದ್ದೇಶಿತ ವಿಲಕ್ಷಣ ಪ್ರಯೋಗದಲ್ಲಿ ತಮ್ಮ ವೈಶಿಷ್ಟ್ಯಗಳನ್ನು ಅವರೇ ಗುರುತಿಸಿ ಕೊಂಡಿದ್ದಾರೆ.

ನಿಸಾರರು ಕೆಲವು ಸಲ '-ಇಸು' ಪ್ರತ್ಯಯವನ್ನು ಅಸಾಂಪ್ರದಾಯಿಕ ರೀತಿಯಲ್ಲಿ ಬಳಸುತ್ತಾರೆ. ಉದಾ: ವೈವಿಧ್ಯಿಸು, ಕಾರಂಜಿಸು. ಇನ್ನೂ ಕೆಲವು ಸಲ ವಿದೇಶಿ ಶಬ್ದಗಳಿಗೆ '-ಇಸು' ಪ್ರತ್ಯಯವನ್ನು ಹಚ್ಚುತ್ತಾರೆ. ಉದಾ: 'ಥಂಡಿಸು', 'ಗುಮಾನಿಸು', 'ಬಯಾನಿಸು', 'ರವಾನಿಸು' ಇತ್ಯಾದಿ. ಇದೇ ಮಾದರಿಯಲ್ಲಿ 'ಇಥಿಯೋಪಿಯತನ', 'ಸ್ಲಮ್ಮಿಗ'ದಂಥ ಶಬ್ದಗಳನ್ನು ಸೃಷ್ಟಿಸುತ್ತಾರೆ. ಕೆಲವು ಸಲ ಕನ್ನಡ ಶಬ್ದಗಳನ್ನು ರೂಪ ಭೇದನಗೊಳಿಸಿ 'ಭಗಿಸುವ', 'ಒಣ ಶ್ರೀ', 'ದುಡ್ಡಸ್ತಿಕೆ' ಮುಂತಾದ ಶಬ್ದಗಳನ್ನು ಹುಟ್ಟುಹಾಕುತ್ತಾರೆ. ಹೀಗೆ ಬೇರೆ ಭಾಷೆಗಳಿಂದ ಕಡತಂದ ಶಬ್ದಗಳನ್ನು, ಶಬ್ದಪುಂಜಗಳನ್ನು ಕನ್ನಡ ಕಾವ್ಯದ ನೇಯ್ಗೆಯೊಳಗೆ ತಂದು ಕನ್ನಡ ಶಬ್ದ ಸಂಪತ್ತನ್ನು ವಿಸ್ತಾರಗೊಳಿಸುವ ಪ್ರಯತ್ನ ಮಾಡಿದ್ದಾರೆ.

'ಒಟ್ಟಿನಲ್ಲಿ ಕವಿ ಭಾಷೆಯ ಜೊತೆ ಚೆಲ್ಲಾಟವಾಡಬೇಕಾಗುತ್ತದೆ, ರಮಿಸಬೇಕಾಗು ತ್ತದೆ, ಅದರ ಕಟಾಕ್ಷಕ್ಕೆ ಕಂಬನಿಗರೆಯಬೇಕಾಗುತ್ತದೆ. ಸಮಯ ಬಂದರೆ ಬಲಪ್ರದರ್ಶನ ಮಾಡಬೇಕಾಗುತ್ತದೆ. ಅದರ Passiveness ಅನ್ನು, ಅಂದರೆ ನಿರಾವೇಶತೆಯನ್ನು—ತನ್ನ ಲಂಪಟತೆಯಿಂದ ಕಾವೇರಿಸಿ ಸುರತಕ್ಕೆ ಸಿದ್ಧಗೊಳಿಸಬೇಕಾಗುತ್ತದೆ. ಆಗಷ್ಟೇ ಅದು ಫಲವತ್ತಾಗಲು ಸಾಧ್ಯ.' ಮೊದಲು ನಮಗೆ ಹೊಳೆಯದೇ ಇದ್ದ ಹೋಲಿಕೆ-ಹೊಂದಿಕೆಗಳನ್ನು ತಂದು ಚುರುಕು ಮುಟ್ಟಿಸುವ ಚಾಕಚಕ್ಯತೆಯಲ್ಲಿ ನಿಸಾರರು ಆಧುನಿಕ ಕವಿಗಳ ಪೈಕಿ ಮುಖ್ಯವಾಗಿ ಅಡಿಗರನ್ನು ನೆನಪಿಸುತ್ತಾರೆ. ಹೀಗೆ ಭಾಷೆಯ ಜೊತೆ ಚೆಲ್ಲಾಟವಾಡುವುದಕ್ಕೆ ಶಬ್ದಗಳ ಮತ್ತು ಶಬ್ದಪುಂಜಗಳ ಸಾಂಪ್ರದಾಯಿಕ ಅರ್ಥಗಳನ್ನು ಅರಗಿಸಿಕೊಂಡಿದ್ದರೆ ಮಾತ್ರ ಸಾಧ್ಯ. ಇದರ ಹೊಳಹುಗಳು ನಮಗೆ ಸಿಕ್ಕುವುದು:

'ಆಸುಪಾಸಿನ ಗಮಾರರಿಗೆ
ನೀನೊಬ್ಬ ಹೊಲೆಗೊಳಕ,
ನೀತಿ ಬಾಹಿರ, ಹರಾಮಕೋರ;
ನನಗೆ ಗುರು, 'ಪರಮ ವೇದದ ಸಾರ.'
(ಮೈಲಿ ಮೊಗದ ಮಹಾರಾಯ)

ನಿಸಾರರ 'ಬಸವೇಶ್ವರರು' 'ಪುರಂದರದಾಸರು' ಪದ್ಯಗಳಲ್ಲಿ ಸಹ ಈ ಹೊಳಹುಗಳು ನಮ್ಮ ಗಮನಕ್ಕೆ ಬರುತ್ತವೆ. ಈ ದೃಷ್ಟಿಯಿಂದ 'ಮೃಗಾಯಣ' ಕವನವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಬಹುದು. 'ಮೃಗಾಯಣ', ರಾಮಾಯಣ ಶಬ್ದದ ಒಂದು ರೂಪಾಂತರ (transformation). 'ರಾಮ'ನಿಗೆ ಬದಲಾಗಿ 'ಮೃಗ' ಬಳಸಿರುವುದರಿಂದ ಆ ಶಬ್ದಕ್ಕೆ ಪಾವಿತ್ರ್ಯ ಭಂಗವಾಗಿದೆ. ಈ ಪದ್ಯದ ಮೊದಲ ಸಾಲಿನಲ್ಲಿ ಬರುವ ಶಿಕಾರಿ ಎಂಬ ಶಬ್ದಕ್ಕೆ ಕನ್ನಡದ ಮಾಮೂಲಿ ಅರ್ಥದ ಜೊತೆಗೆ ಉರ್ದುವಿನ ಬೇಟೆ ಎಂಬ ಅರ್ಥವೂ ಇದೆ.

'ಅರಣ್ಯದಜ್ಞಾತ ವೈಶಾಲ್ಯಗಳ ದರ್ಶನಾತೀತ
ಸಂದಿಗೊಂದಿಗಳಲ್ಲಿ ಜನಿಸಿ, ಕಚ್ಚಾಡಿ, ಸತ್ತು
ಅನಾಮವಾಗಬಹುದಿದ್ದ ಸಸ್ತನಿ, ಸರೀಸೃಪದ
ಈ ತಳಿಗಳು'

ಇಲ್ಲಿನ ಪದಗಳ ಆಯ್ಕೆಯ ವೈವಿಧ್ಯ ಬೆರಗುಗೊಳಿಸುವಂಥದ್ದು. ಕನ್ನಡ ಶಬ್ದಗಳ ಮಾಮೂಲೀ ಅರ್ಥಗಳನ್ನು ಭಗ್ನಗೊಳಿಸುತ್ತಾ ಮುಂದುವರಿದು, ಈ ಕವನ ಕೊನೆಗಾಣುವುದು 'ಆಮೀನ್' ಎಂಬ ಅರಬ್ಬೀ ಶಬ್ದದಿಂದ.

ವ್ಯಾಕರಣ ಘಟಕಗಳು ಮತ್ತು ಛಂದೋಘಟಕಗಳು ನಿಸಾರರಲ್ಲಿ ಬಹುಮಟ್ಟಿಗೆ ಸಮಾನಾಂತರವಾಗಿ ನಡೆಯುತ್ತವೆ. ನಿಸಾರರ ಮೊಟ್ಟಮೊದಲ ಕವನ ಸಂಕಲನದಿಂದ ಇತ್ತೀಚಿಗಿನ ಕವನ ಸಂಕಲನದವರೆಗೂ ಅವರ ಕಾವ್ಯ ಪ್ರಾಸಬದ್ಧ ದ್ವಿಪದಿಯನ್ನೂ ಕೆಲವು ಸಲ ಚೌಪದಿಯನ್ನೂ ಬಳಸಿಕೊಂಡಿದೆ. ತಪ್ಪಿದರೆ 5 ಮಾತ್ರೆಗಳ ಮುಕ್ತ ಛಂದಸ್ಸನ್ನು ಆಶ್ರಯಿಸಿದೆ. ಇವರು ಈ ಛಂದೋಪ್ರಕಾರಗಳನ್ನು ಬಳಸುವಾಗ ಸಾಕಷ್ಟು ವೈವಿಧ್ಯವನ್ನು ತರುತ್ತಾರೆ. ಉದಾಹರಣೆಗೆ:

'ಇದು ಸೃಷ್ಟಿ:
ಕಪಿ ಮುಷ್ಟಿ.
ಮಂತ್ರ ಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲು.
ಉಸಿರಿನರವತ್ತೆಂಟು ಕೋಟಿ ಬಿಡಿ, ಬಿಡಿ ನೂಲು
ಗಂಟು ಗಂಟಾಗಲ್ಲಿ ಗೋಜು ಗೋಜಲ ಮಜಲು.'
(ಕಂಡಷ್ಟೇ ಸತ್ಯವಲ್ಲ)

'ನಮ್ಮ ಗಾಂಧಿ ಬಜಾರಿನ ಬೆಳಗಿಗೆ
ನಿಮ್ಮ
ಹುಂಜ ಗುಡಿ ಗಂಟೆ ಮಸೀದಿಯ ಸ್ತೋತ್ರ
ರಂಗವಲ್ಲಿ ಮಲ್ಲಿಗೆ ಬಳ್ಳಿ ಸುಲಿಯುವ ಹುಡುಗಿ ಬೆಳ್ಳಿ ನಕ್ಷತ್ರ

ಎತ್ತಿನ ಕತ್ತಿನ ಗೆಜ್ಜೆ ನೇಗಿಲ ಭೋಗಿ
ಯ ಎಕ್ಕಡವಿಲ್ಲದ ಗಡಸು ಹೆಜ್ಜೆ
ರಾಗಿ ಬೀಸುವ ಪದ
ಅಗ್ಗಿಷ್ಟಿಕೆ ಮುದುಕಿಯ ಗುಡಿಸಲ ಕದ
ಇತ್ಯಾದಿ ಜಾನಪದ
ಸರಕಿನ ಪರಿಚಯ ಎಳ್ಳಷ್ಟೂ ಇಲ್ಲ.'

(ಗಾಂಧಿ ಬಜಾರಿನ ಬೆಳಗು)

'ಸಾವೇ, ಹರ್ಷಪಡು ಮನವಾರೆ,
ಹೊಸ್ತಿಲಿಗೆ ಬಂದು ನಿಂತಿದ್ದಾರೆ
ನಮ್ಮ ವಿ.ಐ.ಪಿ.ಗಳು
ಈ ಹವೆಯ ಈ ನೆಲದ ಶೀತೋಷ್ಣಮಾಪಿಗಳು.'

(ಸಾವಿಗೆ ಅತಿಥಿ ಪರಿಚಯ)

ಈ ಸಾಲುಗಳ ಅಳತೆಯಲ್ಲಿ ಹೆಚ್ಚು ಕಡಿಮೆ ಮಾಡುವುದರ ಮೂಲಕ, ಒಂದೇ ಅಂತ್ಯ ಪ್ರಾಸವನ್ನು ಮುಂದಿನ ಸಾಲಿಗೂ ವರ್ಗಾಯಿಸುವುದರ ಮೂಲಕ, ಒಳ ಪ್ರಾಸಗಳ ಬಳಕೆಯ ಮೂಲಕ, ಯಾವುದೋ ಒಂದು ಸಾಲಿನಲ್ಲಿ ಪ್ರಾಸವನ್ನು ಕೈಬಿಡುವುದರ ಮೂಲಕ ವೈವಿಧ್ಯ ಉಂಟಾಗುತ್ತದೆ. ಎರಡನೆಯ ಉದಾಹರಣೆಯಲ್ಲಿ 'ನಮ್ಮ ಗಾಂಧಿ ಬಜಾರಿನ ಬೆಳಗಿಗೆ... ಸರಕಿನ ಪರಿಚಯ ಎಳ್ಳಷ್ಟೂ ಇಲ್ಲ' ಎಂಬ ಗದ್ಯ ವಾಕ್ಯ ಘಟಕಗಳೊಳಗೆ ದ್ವಿಪದಿಗಳು ಸ್ಯಾಂಡ್‌ವಿಚ್‌ನಂತೆ ಸೇರಿವೆ. ಜೊತೆಗೆ, ಕವಿ ಬೆಳೆದ ಹಾಗೆ ಮಾತ್ರಾ ಛಂದಸ್ಸಿನಲ್ಲಿ ಸಮಾನ ಶಬ್ದಗಳ ಗಡಸುತನ ಮಾಯವಾಗಿ ಶೈಲಿ ಹೆಚ್ಚು ಹೆಚ್ಚು ಬಾಗು ಬಳುಕುಗಳನ್ನು ಪಡೆದುಕೊಂಡಿರುವುದನ್ನೂ ನೋಡಬಹುದು.

ನಿಸಾರರ ಪ್ರಾಸಗಳ ವಿಶೇಷವೆಂದರೆ ಅವುಗಳ ಅನಿರೀಕ್ಷಿತತೆ. ಹೀಗಾಗಿ ಪ್ರಾಸಗಳಲ್ಲಿ ಕೂಡಿಕೊಳ್ಳುವ ಶಬ್ದಗಳು ಅವರ ಉಪಮೆಗಳ ಹಾಗೆಯೇ ಆಶ್ಚರ್ಯ ಉಂಟು ಮಾಡುವುವು:

'ಚಿಳ್ಳೆಪಿಳ್ಳೆಗಳ ಕ್ರಿಕೆಟ್ ಆಟ
ದನ ಕರುಗಳ ಗೂಟ,
ನೆರೆಮನೆಯ ಒಗೆದರಿವೆಗಳ ತೂಗಾಟ,
ನಾಯಿಗಳ ಕೂಟಗಳಿಗೆ.'

(ಖಾಲಿ ಸೈಟುಗಳು)

'ನೀನಿರಲಿ,
ಆ ಹಲವು ನಾಮಗಳ ಏಕ
ನಿನ್ನನ್ನು ಮೆಟ್ಟಂತೆ ಸವೆಸಿರುವ
ನಾಕ ನರಕಗಳ ಮಾಲೀಕ,
ಜೀವ ಲೋಕದ ಮಗ್ಗುಲಲ್ಲಿ ಆಕಳಿಸಿರುವ
ಸಹರ ಮೌನದ ಶೇಖ—
ಅವನನ್ನೇ ಕ್ಯಾರೆ ಎಂದವರಲ್ಲ.'

(ಸಾವಿಗೆ ಅತಿಥಿ ಪರಿಚಯ)

ಐದು ದಶಕಗಳಿಗೂ ಮಿಕ್ಕು ಕಾವ್ಯ ರಚನೆ ಮಾಡಿರುವ ಕವಿಯೊಬ್ಬರ ವ್ಯಕ್ತಿಭಾಷೆಯ ಮುಖ್ಯ ಲಕ್ಷಣಗಳನ್ನು ಭಾಷಾಶಾಸ್ತ್ರ ಮತ್ತು ಶೈಲಿ ವಿಜ್ಞಾನದ ಬೆಳಕಿನಲ್ಲಿ ಕಂಡುಕೊಳ್ಳುವ ಒಂದು ನಮ್ರ ಪ್ರಯತ್ನ ಈ ಲೇಖನ. ಈ ಲೇಖನದಲ್ಲಿ ನಾನು ನಿಸಾರ್ ಅಹಮದ್ ಅವರ 'ಮನಸು ಗಾಂಧಿ ಬಜಾರು'ನಿಂದ 'ಅನಾಮಿಕ ಆಂಗ್ಲರು' ಕವನ ಸಂಗ್ರಹಗಳವರೆಗಿನ ಕೆಲವೊಂದು ಕವಿತೆಗಳನ್ನು ಮಾತ್ರ ಪರಿಶೀಲಿಸಿದ್ದೇನೆ. ಇವುಗಳಾದ ಅನಂತರ ಪ್ರಕಟವಾಗಿರುವ ನಿಸಾರರ ಮೂರು-ನಾಲ್ಕು ಕವನ ಸಂಗ್ರಹಗಳಲ್ಲಿ ಭಾಷೆಯ ವಿಶಿಷ್ಟ ಹಾಗೂ ಅನನ್ಯ ಬಳಕೆ ಇನ್ನೂ ವ್ಯಾಪಕವಾಗಿ ನಡೆದಿದೆ. ಇದನ್ನು ಕುರಿತೇ ಮತ್ತೊಂದು ದೀರ್ಘ ಲೇಖನವನ್ನು ಬರೆಯಬಹುದಾಗಿದೆ.

ಸುಖ ಸಂತೋಷಗಳ ಪಡುಹಕ್ಕೆ ವಿಷಯಾಸಕ್ತಿ, ಭೋಗ ಸಾಮಗ್ರಿಗಳನ್ನೇ ಅವಲಂಬಿಸಿರುವ ಜನ ಸಾಮಾನ್ಯರ ಸಂಖ್ಯೆ ಜಗತ್ತಿನಲ್ಲಿ ಅತ್ಯಧಿಕ. ಆದರೆ ಈ ವಿಷಯೋಪಭೋಗಗಳ ಮಿತಿಯನ್ನು ಅವರು ಅರಿತಿದ್ದರೆ ಒಳಿತು. ಐಹಿಕ ಸಂಪದ್ವಿಲಾಸಕ್ಕಿಂತ ಮಿಗಿಲಾದ ಅಧಿಕ ಪುಷ್ಟಿಕರವೂ ಸಂತುಷ್ಟಿದಾಯಕವೂ ಆದ ಇತರೇ ದಾರಿಗಳೂ ವಿಧಾನಗಳೂ ಉಂಟೆಂಬ ಎಚ್ಚರ ಅವರಿಗಿರುವುದು ಲೇಸು. ನೀರನ್ನು ಪಡೆಯಲು ಒಂದು ವಿಧಾನವೆ? ಕೆರೆ ಕುಂಟೆಗಳಿಂದಲೂ ಪಡೆಯಬಹುದು, ಹಿತ್ತಲಿನ ಬಾವಿಯಿಂದಲೂ ದಕ್ಕಿಸಿಕೊಳ್ಳಬಹುದು. ದೂರದ ದೈವ ಕ್ಷೇತ್ರಗಳ ಯಾತ್ರೆಗಳಿಂದ, ಅಲ್ಲಿ ಹರಿಯುವ ನದಿಗಳಿಂದಲೂ ದೊರಕಿಸಿಕೊಳ್ಳಬಹುದು. ಎಲ್ಲ ಮೂಲಗಳಲ್ಲಿರುವುದು ನೀರೇ ಆದರೂ ಪವಿತ್ರವೂ ಶ್ರೇಯಸ್ಕರವೂ ಆದ ಕೀರ್ತಿಗೆ ಪಾತ್ರವಾಗುವುದು ಯಾತ್ರಾನುಸಂಧಾನದಿಂದ ಪಡೆದ ತೀರ್ಥವೇ. ಅದನ್ನು ಗಳಿಸಿಕೊಳ್ಳಲು ದೂರ ಪ್ರಯಾಣದ ಪ್ರಯಾಸ ಪಡಬೇಕು, ನಿಜ. ಆದರೆ ಅದರಿಂದ ಲಭ್ಯವಾಗುವ ಆನಂದ, ಪುಣ್ಯ-ಪುರೋಭಾಗ್ಯಗಳು ದೀರ್ಘಕಾಲಿಕವಾದವು; ಜೀವೋತ್ತೇಜಕವಾದವು.

(ಜೀವನೋದ್ಧಾರಕ ಸುಖಗಳು)

ಜಗತ್ತು ಜೀವಾಕರವೆನ್ನಿಸಿಕೊಂಡಿರುವ ತನಕ, ಮನುಕುಲ ಮಣ್ಣುಗೂಡದಿರುವ ತನಕ ಮುನ್ನಡೆಗೆ ಮೂಗುದಾರವಿರದು. ಮಾನವ ಹೊಳೆಯಂತೆ ಮುಮ್ಮುಖವಾಗಿ ಮುಂದುವರಿಯುತ್ತಲೇ ಇರುತ್ತಾನೆ.

(ಮುನ್ನಡೆ)



ನಿಸಾರರ ಕಾವ್ಯದ ಛಂದಸ್ಸು ಮತ್ತು ಅಭಿವ್ಯಕ್ತಿ ವಿನ್ಯಾಸ

♦ *ಡಾ. ಎಚ್. ಎನ್. ಮುರಳೀಧರ*

1960ರಿಂದ 2000ದವರೆಗೆ ಪ್ರೊ. ನಿಸಾರರ ಹನ್ನೆರಡು ಕವನ ಸಂಕಲನಗಳು ಪ್ರಕಟವಾಗಿವೆ. ಈ ನಲವತ್ತು ವರ್ಷಗಳ ಅವಧಿಯಲ್ಲಿ ಕನ್ನಡ ಕಾವ್ಯ ಪ್ರಕಟಿಸಿದ ಧೋರಣೆಗಳು, ಪಡೆದುಕೊಂಡ ಚಹರೆಗಳು ನಮಗೆಲ್ಲ ತಿಳಿದಿರುವಂಥವೇ. ಈ ಸಂದರ್ಭದಲ್ಲಿ ಭಾಷಿಕ ಅಭಿವ್ಯಕ್ತಿ ಹಾಗೂ ಲಯಗಾರಿಕೆಯ ದೃಷ್ಟಿಯಿಂದ ನಿಸಾರರ ಕಾವ್ಯದ ಒಂದು ಸ್ಥೂಲ ವಿವೇಚನೆ ಇಲ್ಲಿದೆ.

ನಿಸಾರರ ಮೊದಲ ಸಂಕಲನ 'ಮನಸು ಗಾಂಧಿ ಬಜಾರು' ಕೃತಿಯ 'ಪರಿಚಯ'ದಲ್ಲಿ ಕವಿ ಕೆ. ಎಸ್. ನರಸಿಂಹಸ್ವಾಮಿ ಒಂದು ಸಂಗತಿಯನ್ನು ಗಮನಿಸಿದ್ದಾರೆ: '...ಇದು ಎರಡು ಪ್ರತ್ಯೇಕ ಸಂಪ್ರದಾಯಗಳ ಕವನ ಸಂಕಲನವೆಂಬುದನ್ನು ಗಮನಿಸಿದ್ದೇನೆ... ಉತ್ತರಾರ್ಧದ ಕವನಗಳ ಅರ್ಥ, ಪೂರ್ವಾರ್ಧದ ಕವನಗಳಷ್ಟು ಸರಳವೂ ಸ್ಪಷ್ಟವೂ ಆಗಿಲ್ಲ. ರೂಪ, ರಚನೆಗಳಲ್ಲಿ ಮತ್ತು ಛಂದಸ್ಸಿನಲ್ಲಿ ಅವು ಹೆಚ್ಚಿನ ಸ್ವಾತಂತ್ರ್ಯವನ್ನು ವಹಿಸಿವೆ...'

ಕೆ.ಎಸ್.ನ. ಅವರು ನಿಸಾರರ ಮೊದಲ ಸಂಕಲನದ ಬಗೆಗೆ ಹೇಳಿದ ಮಾತುಗಳನ್ನು ಸ್ವಲ್ಪ ಸ್ವಾತಂತ್ರ್ಯ ವಹಿಸಿ ಅವರ ಇಡೀ ಕಾವ್ಯಮಾರ್ಗಕ್ಕೂ ಅನ್ವಯಿಸಿಕೊಳ್ಳಬಹುದೆಂದು ತೋರುತ್ತದೆ. ನಮ್ಮಲ್ಲಿ ನಿಯತ ಲಯವನ್ನು ಅರ್ಥದ ವಿರೋಧಿ ಎಂದು ಪರಿಗಣಿಸಿಯೇ ಕಾವ್ಯರಚನೆಯಲ್ಲಿ ತೊಡಗಿದ ಪ್ರಸ್ಥಾನವೊಂದುಂಟು. ಇನ್ನು ಕೆಲವರು ಲಯಗಾರಿಕೆಯನ್ನು ಅದರ

ವಿಶಾಲವಾದ ವ್ಯಾಪ್ತಿಯಲ್ಲಿ ಸ್ವೀಕರಿಸಿದರೂ ವಿಶಿಷ್ಟ ಅಭಿವ್ಯಕ್ತಿಯ ಸಂದರ್ಭಕ್ಕೆ ತಕ್ಕಂತೆ ಅದನ್ನು ಒಡೆಯುತ್ತಲೋ ಬಗ್ಗಿಸುತ್ತಲೋ ಹೋದವರು; ಒಂದು ರೀತಿಯಲ್ಲಿ ಅದರೊಂದಿಗೆ ಸೆಣಸಾಟಕ್ಕೆ ತೊಡಗಿದವರು. ಆದರೆ ನಿಸಾರರ ಕವಿತೆಗಳನ್ನು ಓದುವ ನಮಗೆ ಅವರು ಈ ಎರಡೂ ಗುಂಪುಗಳಿಗೆ ಸೇರುವವರಲ್ಲ ಎನ್ನುವುದು ಮೊದಲಿಗೇ ಸ್ಪಷ್ಟವಾಗುತ್ತದೆ. ಲಯಗಾರಿಕೆ ಹಾಗೂ ಅನಿಯತ ಲಯ ಅಥವಾ ಗದ್ಯತನ ಇವೆರಡನ್ನೂ ಅವರು ಪ್ರತ್ಯೇಕ ಸಾಧ್ಯತೆಗಳಾಗಿ ಮಾತ್ರ ಸ್ವೀಕರಿಸಿದವರು. 'ನಿತ್ಯೋತ್ಸವ' (೧೯೭೬), 'ಬಹಿರಂತರ' (೧೯೯೦) ಮತ್ತು 'ನವೋಲ್ಲಾಸ' (೧೯೯೪) ಎಂಬ ಮೂರು ಗೀತ ಸಂಕಲನ ಗಳನ್ನು ಅವರು ಬೇರೆ ಬೇರೆಯಾಗಿ ತಮ್ಮ ಕಾವ್ಯಮಾರ್ಗದ ಬೇರೆ ಬೇರೆ ಘಟ್ಟಗಳಲ್ಲಿ ಹೊರತಂದಿರುವುದೂ ಈ ಮಾತಿಗೆ ನಿದರ್ಶನ. ಇಷ್ಟಾದರೂ ಅವರ ಕವಿತೆ—ನಮ್ಮ ಪ್ರಾಚೀನರ ಲೌಕಿಕ-ಆಗಮಿಕಗಳಂತೆ—ಯಾವುದೇ ಸೀಳನ್ನು ಪ್ರಕಟಿಸುವುದಿಲ್ಲವೆಂಬ ಮಾತನ್ನೂ ಇಲ್ಲಿಯೇ ಹೇಳಬೇಕಾಗಿದೆ. ಏಕೆಂದರೆ ಇವೆರಡರ ನಡುವಿನ ವೈರುದ್ಧ್ಯವನ್ನು ಅವರ ಕವಿತೆ ಸ್ವೀಕರಿಸುವುದು ಗ್ರಹಿಕೆಯ ನೆಲೆಗಿಂತ ಹೆಚ್ಚಾಗಿ ತಂತ್ರದ ನೆಲೆಯಲ್ಲಿ.

ಗೀತೆಗಳಿಗೆ ಬಂದಾಗ ನಿಸಾರರು ನಿಯತ ಲಯವನ್ನು ಅದರ ಎಲ್ಲ ವೈವಿಧ್ಯ ಗಳೊಂದಿಗೆ ಪ್ರಯೋಗಿಸುವುದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ಇದಕ್ಕೆ ಪೂರಕವಾಗಿ ಅವರ ಪ್ರಾಸಗಾರಿಕೆಯೂ ಸ್ವಲ್ಪ ಹೆಚ್ಚೆನ್ನಿಸುವ ಪ್ರಮಾಣದಲ್ಲಿಯೇ ಕೆಲಸ ಮಾಡುತ್ತದೆ. ಆದರೆ ಬೇಂದ್ರೆ-ಪುತಿನ ಅಂಥವರನ್ನು ಗಮನದಲ್ಲಿರಿಸಿಕೊಂಡು ಒಂದು ಸಂಗತಿಯನ್ನು ನಿಸಾರರ ಲಯಗಾರಿಕೆಯ ಬಗ್ಗೆ ಹೇಳಬೇಕು. ಲಯಗಾರಿಕೆಯೆನ್ನುವುದು 'ಮಾರ್ಗಾಂತರ'ದ ತಂತ್ರಗಳಲ್ಲಿ ಒಂದೆಂದು ಶೈಲಿಶಾಸ್ತ್ರ ಗುರುತಿಸುತ್ತದೆ. ಆದರೆ ಈ ಲಯಗಾರಿಕೆಯ ಸಿದ್ಧಿಗಾಗಿ ರೂಢಿಯ ಗದ್ಯಕ್ಕಿಂತ ಭಿನ್ನವಾದ syntax ಒಂದನ್ನು ಬೇಂದ್ರೆ-ಪುತಿನ ರೂಢಿಸುತ್ತಾರೆ. ಆದರೆ ನಿಸಾರರ ಲಯಗಾರಿಕೆಯ ಆಳದಲ್ಲೂ ಮೂಲಭೂತ ಗದ್ಯದ ವಾಕ್ಯರಚನಾ ಮಾದರಿಗಳೇ ಕೆಲಸ ಮಾಡುತ್ತಿದ್ದು ಇದರ ಹಲವು ವ್ಯತ್ಯಯ ರೂಪಗಳನ್ನು ಮೇಲ್ಪದರದಲ್ಲಿ ಪ್ರಕಟಿಸುತ್ತವೆ. ಇದನ್ನು ತಾಂತ್ರಿಕವಾಗಿ ಒಂದು ಬಗೆಯ 'ಕೊರತೆ' ಎಂದೇನಾದರೂ ಗುರುತಿಸುವುದಾದರೆ, ಇದನ್ನು ಅವರ ಲಯಗಾರಿಕೆ ತುಂಬಿಕೊಳ್ಳುವುದು ಪ್ರಾಸಗಾರಿಕೆಯ ಮೂಲಕ. ಇದಕ್ಕೆ ಹೆಚ್ಚಿನ ನಿದರ್ಶನಗಳನ್ನು ಅವರ ಕಾವ್ಯದಿಂದ ಕೊಡಬಹುದು.

'ಮತ್ತದೇ ಬೇಸರ, ಅದೇ ಸಂಜೆ, ಅದೇ ಏಕಾಂತ—
ನಿನ್ನ ಜೊತೆಯಿಲ್ಲದೆ, ಮಾತಿಲ್ಲದೆ ಮನ ವಿಭ್ರಾಂತ.'

(ಸಂಗ್ರಹ ಕವಿತೆಗಳು, ಪು. ೨೪೫)

'ಗುಡಿ ಮಸೀದಿ ಚರ್ಚು ಗುರುದ್ವಾರ ಸಮಾರಾಧನ,
ಸದಯೆ, ಅಭಯದಾಯೆ, ನಿನ್ನ ಸಹಿಷ್ಣುತೆಯ ಲಾಂಛನ.'

(ಪು. ೩೭೯)

'ಯಾಸಿರ್ ಅರಾಫಾತ್, ಯಾಸಿರ್ ಅರಾಫಾತ್,
ಫಲಿಸ್ತೀನಿಯರ ವರ ನೇತಾರ.

ಅರಿ ಆಕ್ರಮಿತ, ಹತಾಶ ಭ್ರಮಿತ
ಅಪರಿಮಿತಾರ್ತರ ಜಯಕಾರ.'

(ಪು. ೪೫೦)

'ಟಿ.ವಿ., ವೇದಿಕೆ, ವೃತ್ತಪತ್ರಿಕೆಯ ಫೋಟೋ ಚಟ:
ವಿಟ ಸಾರ್ವಭೌಮ ಧೀಮಂತ ಜೀವಿ.
ಇನ್ನು ಸೇವಾಕರ್ತ, ಶೈಕ್ಷಣಿಕ—ಸಚಲ ತಿಜೋರಿ,
ಮಠಪತಿ, ಪುಢಾರಿ ಬಳಿ ಇಹುದು ಚಾವಿ.'

(ಆಕಾಶಕ್ಕೆ ಸರಹದ್ದುಗಳಿಲ್ಲ, ಪು. ೫೦)

'ನಿತ್ಯ ಬಳಕೆಯ ಎಷ್ಟೋ ಹಳೆಯ ಪಳಕೆಯ ಚಹರೆ
ಸೇರಿಹೋಗಿವೆ ಇಂದು ನೇಪಥ್ಯಕೆ;
ಸ್ತುತ್ಯಜೀವರು ಇತಿಶ್ರೀಯ ಹಾಡಿಹರು ಕಣ್ಣೆದುರೆ
ಆಧಿಪತ್ಯದ ತಮ್ಮ ಸಾತತ್ಯಕೆ.'

(ಅರವತ್ತರ ಐಸಿರಿ, ಪು. ೩೭)

ನಿಸಾರರ ಕಾವ್ಯದಲ್ಲಿ ಪ್ರಾಸಗಾರಿಕೆ ಮಾಡುವ ಕೆಲಸದ ಬಗ್ಗೆ ಒಂದು ಸಂಗತಿಯನ್ನು ಗುರುತಿಸಬೇಕು. ನಿಯತ ಲಯದ ಪದ್ಯಗಳಲ್ಲಿ ಅದು ಗದ್ಯದ 'ಕಚ್ಚಾತನ'ವನ್ನು ಸಂಸ್ಕರಿಸುವ ತಂತ್ರವಾಗಿ ಬಳಕೆಯಾದರೆ, ಸಹಜ ಗದ್ಯ ಲಯದ ಕವಿತೆಗಳಲ್ಲಿ ಅದು 'ಮಾರ್ಗಾಂತರ'ದ ಉಪಕರಣವಾಗುತ್ತದೆ. ಗದ್ಯ ಲಯದ ಕವಿತೆಗಳಲ್ಲಿ ಕಂಡುಬರುವ ಕಾಕುಗಳ ವೈವಿಧ್ಯ—ಪ್ರಶ್ನಾರ್ಥಕಗಳು, ಉದ್ಗಾರ ವಾಚಕಗಳು, (ಅಲ್ಪವಿರಾಮಗಳೂ ಕೂಡ) ಈ ಮಾತಿಗೆ ನಿದರ್ಶನವನ್ನೊದಗಿಸುತ್ತವೆ. ಗದ್ಯಲಯಕ್ಕೆ ಹೆಚ್ಚು ಹತ್ತಿರವಾದ ಐದು ಮಾತ್ರೆಗಳ ಲಯವನ್ನು ಒಳಸ್ತರದಲ್ಲಿ ಈ ಕವಿತೆಗಳು ಒಪ್ಪಿಕೊಂಡು, ಮೇಲಿನ ಸ್ತರದಲ್ಲಿ ಅದರ ವಿಭಿನ್ನ ಸಾಧ್ಯತೆಗಳ ಸಂಯೋಗ ಸಂರಚನೆಗಳನ್ನು ಪ್ರಕಟಿಸುತ್ತ ಹೋಗುತ್ತವೆ. ಇದಕ್ಕೆ ಪೂರಕವಾಗಿ ಪ್ರಾಸಗಾರಿಕೆ ಅರ್ಥದ, ಹಾಗೆಯೇ ತರ್ಕದ ಘಟಕಗಳನ್ನು ನಿರ್ಮಿಸುತ್ತ ಹೋಗುತ್ತದೆ. ಇದರ ಪರಿಣಾಮವಾಗಿ ಒಟ್ಟಾರೆಯಾದ ಅಭಿವ್ಯಕ್ತಿ ಕೇವಲ 'ಹೇಳು'ವುದಕ್ಕಿಂತ ಹೆಚ್ಚಾಗಿ 'ಒತ್ತಿ ಹೇಳು'ವುದರ ಕಡೆಗೆ ವಾಲುತ್ತದೆ. ನಿಸಾರರ ಕವಿತೆಗಳಲ್ಲಿ ಕಂಡುಬರುವ ವಸ್ತುವಿನ ತಾರ್ಕಿಕ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಈ ತಂತ್ರ ಬಳಕೆಯಾಗಿರುವುದನ್ನು ಗುರುತಿಸಬಹುದು. ಲಯಗಾರಿಕೆಯಿಂದ ಕವಿತೆಯ ವಸ್ತು ಆಶಯದ ಕಡೆಗೆ ಮುಂದು ಮುಂದಕ್ಕೆ ಚಲಿಸುತ್ತಿದ್ದರೆ, ಅಲ್ಲಲ್ಲಿ ನಿಲುಗಡೆಯನ್ನು ತರುವ ಪ್ರಾಸಗಾರಿಕೆ ಈ ಚಲನೆಯನ್ನು ನಿಯಂತ್ರಿಸುವ, ಆಶಯದ ಆಂತರಿಕ ತರ್ಕವನ್ನು 'ಒಪ್ಪಿಸುವ' ತಂತ್ರವಾಗಿಯೂ ಕೆಲಸ ಮಾಡುತ್ತದೆ. ಇದನ್ನು ನಿಸಾರರ ಕಾವ್ಯಮಾರ್ಗದ ಒಂದು ಪ್ರಧಾನ ಲಕ್ಷಣವಾಗಿಯೂ ಗುರುತಿಸಲು ಸಾಧ್ಯವಿದ್ದು, ಇದು 'ಅಮ್ಮ, ಆಚಾರ, ನಾನು'. 'ರಂಗೋಲಿ ಮತ್ತು ಮಗ' ಮೊದಲಾದ ಕವಿತೆಗಳಲ್ಲಿ ಹೆಚ್ಚಿನ ಯಶಸ್ಸನ್ನೂ ಸಾಧಿಸಿದೆ.

ಈ ಮೇಲಿನ ಅಂಶದ ವಿಸ್ತರಣೆಯಾಗಿ ಇನ್ನೂ ಒಂದು ಸಂಗತಿಯನ್ನು ಇಲ್ಲಿಯೇ ಹೇಳಬೇಕು. ಇದು ನಿಸಾರರ ವಿಡಂಬನಾತ್ಮಕ ಕವಿತೆಗಳಿಗೆ ಸಂಬಂಧಿಸಿದ್ದು. ಲಯ, ಪ್ರಾಸ,

ನಿಲುಗಡೆಗಳನ್ನು ವಿಡಂಬನೆಗೆ ಪೂರಕವಾಗುವಂತೆ, ವಿಡಂಬನೆ ಹೆಚ್ಚು ನಾಟಕೀಯವಾಗಿ ಅಭಿವ್ಯಕ್ತಿಯ ಎಲ್ಲ ಕಾಕುಗಳೊಂದಿಗೆ ಪ್ರಕಟವಾಗುವಂತೆ ಬಳಸಿಕೊಳ್ಳುವ ವಿಧಾನ ಇಲ್ಲಿಯದು. ನಿಸಾರರ ಕವಿತೆಗಳ ಹೆಚ್ಚಿನ ಸಿದ್ಧಿ ಇರುವುದು ಈ ಬಗೆಯ ರಚನೆಗಳಲ್ಲಿ ಎನ್ನುವುದು ಆಕಸ್ಮಿಕವೇನಲ್ಲ. ಕೆಳಗಿನವು ಈ ಬಗೆಯ ಅಭಿವ್ಯಕ್ತಿಯ ಪ್ರಾತಿನಿಧಿಕ ನಿದರ್ಶನ ಗಳೆನ್ನಬಹುದು:

'ಕುರಿಗಳು, ಸಾರ್, ಕುರಿಗಳು :
ಸಾಗಿದ್ದೇ
ಗುರಿಗಳು.
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,
ಕುರಿಗಳು, ಸಾರ್, ಕುರಿಗಳು :
ನಮಗೊ ನೂರು ಗುರಿಗಳು.'

(ಸಮಗ್ರ ಕವಿತೆಗಳು, ಪು. ೪೧)

'ಕೆಂಪೇಗೌಡ, ಬ್ರಿಗೇಡ್ ರೋಡುಗಳ
ಜನ ಪ್ರವಾಹದ ಕಸಕಡ್ಡಿಗಳು;
ಹೊರ ಸಿಂಗಾರದ, ಹೊರೆ ಬಂಗಾರದ
ಹೊಲಸು ನಾರಿರುವ ದೊಡ್ಡಿಗಳು;
ಹೆಗ್ಗುರಿ ಹಾದಿಯ ಬದುಕ ಬುನಾದಿಗೆ
ಸೆಟೆದು ನಿಂತಿರುವ ಅಡ್ಡಿಗಳು.'

(ಸಮಗ್ರ ಕವಿತೆಗಳು, ಪು. ೩೧೩)

ನಿಸಾರರು ನವ್ಯದ ಸಂದರ್ಭದಲ್ಲಿ ಬರೆದೂ ಹಾಡನ್ನು ಮೆಚ್ಚಿದವರು. ಅಂತೆಯೇ ಗೀತೆಗಳಲ್ಲೂ ಆಡುನುಡಿಯ ಲಯಗಳನ್ನು ಹಿಡಿಯಲು ಯತ್ನಿಸಿದವರು; ಸವಾಲುಗಳಿಗಿಂತ ಹೆಚ್ಚಾಗಿ ಸಾಧ್ಯತೆಗಳ ಅನ್ವೇಷಣೆಯ ಕಡೆಗೆ ಹೆಜ್ಜೆ ಹಾಕಿದವರು. ಆಧುನಿಕ ಕನ್ನಡ ಕವಿತೆಯ ಸಂದರ್ಭದಲ್ಲಿ ಆಡುನುಡಿ ಹಾಗೂ ಕಾವ್ಯಭಾಷೆಗಳ ಸಂಬಂಧಾಂತರಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವರ ಕಾವ್ಯ ಕುತೂಹಲದ ಸಾಮಗ್ರಿಯನ್ನು ಒದಗಿಸಬಲ್ಲುದು. ಇದು ಆ ದಿಸೆಯಲ್ಲಿ ಒಂದು ಚಿಕ್ಕ ಪ್ರಯತ್ನ.

ಮತಕ್ಕಾಗಿ ಹಣ ಸುರಿಯುತ್ತಾರೆ: ಮತಕ್ಕಾಗಿ ಹೆರವರನ್ನು ಜರೆಯುತ್ತಾರೆ. ಮತಕ್ಕಾಗಿ ಸಿಡಿಯುತ್ತಾರೆ, ಮತಕ್ಕಾಗಿ ಮಡಿಯುತ್ತಾರೆ. ಆದರೆ ಮತಕ್ಕಾಗಿ ಬಾಳುವವರು? ಮಾನವತೆಯನ್ನು ಮರೆತ ಮತೋದ್ಧಾರ ಹೆಣದ ಸಿಂಗಾರ.

(ಮತ ಮತ್ತು ಮಾನವೀಯತೆ)

ನಿಸಾರರ ಕವಿತೆಗಳಲ್ಲಿ ಕುಟುಂಬದ ಚಿತ್ರಣ



♦ ಡಾ. ಎಚ್. ಎಲ್. ಪುಷ್ಪ

'ಮನೆಯೆಂದರೆ ಮಡದಿಯ ಮಮತೆಯ ಸಕ್ಕರೆ
ಹೆತ್ತೊಡಲಿನ ಜೊತೆ ಒಡಹುಟ್ಟಿನ ಎಡವಟ್ಟಿಲ್ಲದ ಅಕ್ಕರೆ
ಬೈಗೂ ಬೆಳಗೂ ಅಡಗೂ
ಲಜ್ಜೆಯ ಕತೆ ಹೇಳುವ ಅಜ್ಜಿ
ಯ ಗೊಣಗು.'

(ಮನೆಯೆಂದರೆ)

'ಸಂಸಾರ ತರುವಿನ ಬೇರು
ಕುಟುಂಬದಭ್ಯುದಯದ ಸಾರಪ್ರದ ಹೊಯ್ನೀರು.
ಅವಳ ಸುಸ್ಥಿರ ಪಾಯದ ಮೇಲೆ
ನಿಮಿರಿ ನಳನಳಿಸಿವೆ ನೂರಾರು
ಮನೆಮಾರು, ತಲೆಮಾರು.
ಗೃಹ ಅವಳ ಸಹಜ ಸೆಲೆ,
ಅಂತಿಮ ನೆಲೆ ಬೆಲೆ.'

(ಬೇರು-ಹೆಣ್ಣು)

—ಮೇಲಿನ ಎರಡು ಬೇರೆ ಬೇರೆ ಕವನಗಳ ಪದ್ಯ ಭಾಗಗಳು ಮನೆ ಮತ್ತು ಮನೆಯೊಡತಿಯ ಚಿತ್ರವನ್ನು ಕಟ್ಟಿಕೊಡುತ್ತವೆ. ನಮ್ಮ ಪರಂಪರೆಯಿಂದ ನಿರ್ದಿಷ್ಟವಾದುದನ್ನು ಕಟ್ಟುವ, ಪಡೆಯುವ ನಿಲವುಳ್ಳ ಸಂದರ್ಭಗಳಲ್ಲಿ ಇಂತಹ ಚಿತ್ರಗಳು ಅನಿವಾರ್ಯ ಕೂಡ. ನಮ್ಮ ಭಾರತೀಯ ಸಮಾಜ ಶ್ರದ್ಧಾ ಪೂರ್ವಕವಾಗಿ ಒಪ್ಪಿಕೊಂಡ ಒಂದು ವ್ಯವಸ್ಥೆಯೆಂದರೆ ಕುಟುಂಬ. ಈ ಕುಟುಂಬ ಮಾನವನ ಶಾರೀರಿಕ ಹಾಗೂ

ಬೌದ್ಧಿಕ ವಿಕಾಸಕ್ಕೆ ಅತ್ಯಗತ್ಯವಾದದ್ದು. ಯಶಸ್ವಿ ಕಲಾವಿದರ, ಸಾಹಿತಿಗಳ ಅಪೂರ್ವ ಸಾಧನೆಯ ಹಿಂದೆ ಕುಟುಂಬದ ಪಾತ್ರವೇನು ಎಂಬ ಆಲೋಚನೆಗೆ ತೊಡಗಿದಾಗ ಸ್ವಸ್ಥ ಕುಟುಂಬದ ಪಾತ್ರವಿದ್ದಂತೆಯೇ ವೈಫಲ್ಯದ ಮರೆಯಲ್ಲಿ ವಿಘಟನೆಗೆ ಒಳಗಾದ ಕುಟುಂಬವೂ ಅಸ್ಪಷ್ಟವಾಗಿ ನೆರಳಾಡುತ್ತದೆ.

ಮನೆಯೆಂದ ತಕ್ಷಣ ನಮ್ಮ ಕಣ್ಣಿನ ಮುಂದೆ ಮೂಡುವುದು ತಂದೆ, ತಾಯಿ ಮತ್ತು ಕುಟುಂಬದ ಇತರ ಸದಸ್ಯರು ಹಾಗೂ ಅವರ ವಾತ್ಸಲ್ಯಮಯಿ ವ್ಯಕ್ತಿತ್ವಗಳು. ಪ್ರೌಢನಾದರೆ, ವಿವಾಹಿತನಾದರೆ ಅವನ ಕಣ್ಣ ಮುಂದೆ ಮೂಡುವುದು ತನ್ನ ಮನೆ ಮತ್ತು ಮನೆಯ ಒಡತಿ, ಇದರ ಉತ್ಪನ್ನಗಳಾದ ಮಕ್ಕಳು. ಸ್ವಾತಂತ್ರ್ಯ ಪೂರ್ವದ ಕುಟುಂಬ ವ್ಯವಸ್ಥೆಯೀಗ ಸಾಧ್ಯ ವಿಲ್ಲವಾದರೂ ಒಡಕಲು ಬಿಂಬಗಳನ್ನೇ ನಿಜವಾದ ಬಿಂಬಗಳೆಂದು ಒಪ್ಪಿಕೊಳ್ಳುವ, ಅಪ್ಪಿ ಕೊಳ್ಳುವ ವಿಚಿತ್ರ ತಲ್ಲಣಗಳ ಸಂದರ್ಭದಲ್ಲಿ ನಾವಿದ್ದೇವೆ.

ಕೇವಲ ವೃತ್ತಿ ಮತ್ತು ಕುಟುಂಬದ ಬೆಳವಣಿಗೆಯ ಮೇಲೆ ಕಣ್ಣಿಟ್ಟವರಿಗೆ ಯಾವ ಆಂತರಿಕ ಬಿಕ್ಕಟ್ಟುಗಳೂ ಇರುವುದಿಲ್ಲ. ಬೌದ್ಧಿಕ ವಿಕಾಸದ ಕಡೆಗೆ ಮನ ನೆಟ್ಟವರು, ಸಾಹಿತ್ಯವೆಂಬ ಕಡಲಲ್ಲಿ ಈಸ ಹೊರಟವರು ಹಾಲು ಮತ್ತು ಹಾಲಾಹಲ ಎರಡನ್ನೂ ಸಮಚಿತ್ತವಾಗಿ ಸ್ವೀಕರಿಸುತ್ತಾರೆ. ಬೌದ್ಧಿಕ ವಿಕಾಸದ ಹಾದಿಯೇ ಹಾಗೆ. ಅದು ಹೇಳುವುದು ಏನೆಂದರೆ, 'ಇರುವುದೆಲ್ಲವ ಬಿಟ್ಟು ಇರದುದರ ಕಡೆಗೆ ತುಡಿಯುವುದೇ ಜೀವನ' ಎಂದು. ಈ ತುಡಿತಕ್ಕೆ ಒಳಗಾದವನ ಬದುಕಿನ ದಾರಿ ಸಮತಟ್ಟಾದುದಲ್ಲ. ಎಲ್ಲಾ ಜನ ಸಾಮಾನ್ಯರ ದಾರಿಯೂ ಒಂದೇ ಆಗಿರುವುದಿಲ್ಲ. ರವಿ ಕಾಣದ್ದನ್ನು ಕವಿ ಕಾಣ ಹೊರಡುವುದರಿಂದಲೇ ಅವನ ಬದುಕಾಗಲೀ ವ್ಯಕ್ತಿತ್ವವಾಗಲೀ ಯಾವಾಗಲೂ ಇತರರಿಗಿಂತ ಭಿನ್ನವಾಗುತ್ತದೆ, ವಿಶಿಷ್ಟವಾಗುತ್ತದೆ.

ಕಾವ್ಯದಿಂದ ನಾವು ನಿರೀಕ್ಷಿಸುವುದಾದರೂ ಏನು? ಪಂಪ ಈ ಪ್ರಶ್ನೆಯನ್ನು ಹತ್ತನೆಯ ಶತಮಾನದಲ್ಲಿ ಎದುರಿಸಿ 'ಕಾವ್ಯದೊಳ್ ಆಸೆಗೆಯ್ವ ಫಲಮಾವುದೋ?' ಎಂದು ಪ್ರಶ್ನಿಸಿದ್ದ. ಈ ಪ್ರಶ್ನೆ ಇಂದಿಗೂ ಪ್ರಸ್ತುತ ಹಾಗೂ ಮುಂದಿನ ಜನಾಂಗಕ್ಕೂ ಪ್ರಸ್ತುತವೇ. ಎಲ್ಲ ಕವಿಗಳೂ ಕೂಡ ಒಂದಲ್ಲ ಒಂದು ಬಾರಿ ಈ ಪ್ರಶ್ನೆಗೆ ಮುಖಾಮುಖಿಯಾಗುತ್ತಾರೆ, ಉತ್ತರಗಳನ್ನು ಹುಡುಕ ಹೊರಡುತ್ತಾರೆ.

ನವೋದಯ ಸಾಹಿತ್ಯದ ಸಂದರ್ಭದಲ್ಲಿ ನಾಡು, ನುಡಿಯನ್ನು ಕಟ್ಟುವ ಛಲ ವಿದ್ದಂತೆಯೇ ನಾಡಿನ ಸಂಸ್ಕೃತಿಯನ್ನು ಉಳಿಸಿಕೊಳ್ಳುವ, ಎತ್ತಿ ಹಿಡಿಯುವ ತುರ್ತನ್ನು ಸಹ ವ್ಯಕ್ತಪಡಿಸಲಾಯಿತು. ಒಮ್ಮೊಮ್ಮೆ ಈ ಛಲ ಸುಳ್ಳುಪೊಳ್ಳುಗಳ ಅಭಿಮಾನದಿಂದ ಕೂಡಿದ್ದು ಎಂದು ಅನಿಸಿದರೂ, ಅನಿವಾರ್ಯವೂ ಆಗಿತ್ತು. ಈ ಸಂದರ್ಭದಲ್ಲಿ ಜನಿಸಿದ ಕಥೆ ಗಳಾಗಲೀ, ಕಾದಂಬರಿಗಳಾಗಲೀ, ಕವಿತೆಗಳಾಗಲೀ ಅರಳಿ ನಗುವನ್ನು ಸೂಸುವ ಮಲ್ಲಿಗೆ ಯಷ್ಟೇ ಸಹಜವಾಗಿ ಸಂಸಾರ ಸಾರ ಸುಖದ ಮಹತ್ವವನ್ನು ಸಾರಿದವು. ನವೋದಯ, ನವ್ಯ ಸಾಹಿತ್ಯ ಹುಟ್ಟಿಕೊಂಡ ಸಂದರ್ಭದಲ್ಲಿ ಸಂವೇದನೆಗಳಿಂದ ಹಳತಾದಾಗ ಅದುವರೆಗೂ ಒಪ್ಪಿಕೊಂಡಿದ್ದ ಸಮಾಜ ವ್ಯವಸ್ಥೆಗಳ ಬಗೆಗೆ ಅನುಮಾನ ಗೊಂದಲಗಳು ಆರಂಭವಾದವು.

ಈ ಗೊಂದಲಗಳಾದರೂ ಸಹಜವಾಗಿ ನಮ್ಮ ನಡುವಿನಿಂದ ಹುಟ್ಟಿದವಾಗದೆ ಎರವಲು ತಂದ ವಿಚಾರಗಳಾಗಿದ್ದವು. ದೇವರು, ಧರ್ಮ, ನಂಬಿಕೆ ಹೊಸ ಹತಾರಗಳಿಂದ ಪ್ರಶ್ನಿಸಲ್ಪಟ್ಟಂತೆ ದಾಂಪತ್ಯ ವ್ಯವಸ್ಥೆಯೂ ವ್ಯಂಗ್ಯದ, ಕುಹಕದ ಪ್ರಶ್ನೆಗಳಿಗೆ ಒಳಗಾಯಿತು. ವ್ಯಕ್ತಿಯೊಬ್ಬನಿಗೆ ಕುಟುಂಬ ವ್ಯವಸ್ಥೆ ಅನಿವಾರ್ಯವೇ? ಎಂಬ ಪ್ರಶ್ನೆ ಮೂಡಲಾರಂಭಿಸಿದ್ದು ಈ ಸಂದರ್ಭದಲ್ಲಿಯೇ. ಭೋರ್ಗರೆಯುವ ಕಾಮದ ಬಗೆಗಿನ ಅದಮ್ಯ ಕುತೂಹಲ, ಕುಟುಂಬ ವ್ಯವಸ್ಥೆ ಅನಿವಾರ್ಯವಲ್ಲ ಎಂಬ ವಿಚಾರ ಈ ಪಲ್ಲಟದ ಹಿಂದೆ ಕೆಲಸ ಮಾಡಿದವು.

ಸ್ವಸ್ಥ ಕುಟುಂಬದಿಂದ ಆಚೆ ನಿಂತು ಅಸ್ವಸ್ಥರಾಗಿ ಕಾಮಪ್ರೇರಿತ ಅನುಭವಗಳನ್ನು ವ್ಯಕ್ತಿತ್ವದ ಶೋಧನೆಗೆ ಬಳಸ ಹೊರಟವರಿಗೆ ವಿಚಿತ್ರ ದ್ವಂದ್ವಗಳಿದ್ದವು. ನವ್ಯಕಾವ್ಯ ಈ ಗೊಂದಲಗಳಲ್ಲಿ ತನ್ನನ್ನು ತೆರೆದುಕೊಂಡು ಪ್ರತಿಕ್ರಿಯಿಸಿದ ರೀತಿಯೂ ದ್ವಂದ್ವಗಳಿಂದ ಕೂಡಿದ್ದಾಗಿತ್ತು. ಕುಟುಂಬ ವ್ಯವಸ್ಥೆ, ದಾಂಪತ್ಯ ಧರ್ಮದಲ್ಲಿ ನಂಬಿಕೆ ಇಟ್ಟ ಅಭಿವ್ಯಕ್ತಿಯಲ್ಲಿ ಅದನ್ನು ನಿರಾಕರಿಸಹೊರಟ ರೀತಿ ಇದಾಗಿತ್ತು. ಹೀಗಾಗಿಯೇ ಈ ಸಂದರ್ಭದ ಕಾವ್ಯ ಕೇವಲ ಅಭಿವ್ಯಕ್ತಿಯಲ್ಲಿ ಮಾತ್ರ ಪ್ರಯೋಗಶೀಲವಾಗಿತ್ತು, ಆಳದಲ್ಲಿ ಜೀವನ ಧರ್ಮವನ್ನು ಯಥಾವತ್ತಾಗಿ ಒಪ್ಪಿಕೊಂಡಿತ್ತು.

೧೯೫೦ರ ದಶಕದಿಂದ ಇಲ್ಲಿಯವರೆಗೆ ಕನ್ನಡದಲ್ಲಿ ಕವಿತೆ ರಚಿಸುತ್ತಾ ಬಂದ ಕೆ. ಎಸ್. ನಿಸಾರ್ ಅಹಮದ್ ಕಾವ್ಯಕ್ಷೇತ್ರದಲ್ಲಿ ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿಕೊಂಡಿದ್ದಾರೆ. ಶಕ್ತ ಕವಿಗೆ ಮಾತ್ರ ತನ್ನದೇ ಆದ ಮಾರ್ಗವೊಂದನ್ನು ಸೃಷ್ಟಿಸಿಕೊಳ್ಳುವ ಸಾಮರ್ಥ್ಯವಿರುತ್ತದೆ. ಕುವೆಂಪು, ಬೇಂದ್ರೆ, ಅಡಿಗ ಮುಂತಾದವರಂತೆ ನಿಸಾರರೂ ತಮ್ಮದೇ ಆದ ಮಾರ್ಗವೊಂದನ್ನು ಹುಟ್ಟು ಹಾಕಿದ್ದಾರೆ. ಭಿನ್ನ ಧರ್ಮ, ಸಂಸ್ಕೃತಿಯಲ್ಲಿ ಹುಟ್ಟಿದರೂ ಜೀವನ ಧರ್ಮ, ಆಲೋಚನಾ ವಿಧಾನ ಮಾತ್ರ ಕನ್ನಡ ಕಾವ್ಯ ಪರಂಪರೆಗೆ ಸೇರಿದ್ದು, ಕನ್ನಡದ ಬಗ್ಗೆ ನಿಷ್ಠೆಯುಳ್ಳದ್ದು.

ಆಧುನಿಕ ಶಿಕ್ಷಣ ಮಾನವನನ್ನು ಸುಶಿಕ್ಷಿತನನ್ನಾಗಿ ಮಾಡಿದರೂ ಅಂತರಂಗದೊಳಗೆ ನಡೆದು ಬಂದ ದಾರಿಯ ಬಗ್ಗೆ ಸತತವಾಗಿ ಪ್ರಶ್ನೆಗಳನ್ನು ಮೂಡಿಸುತ್ತಿತ್ತು. ಈ ಸಂಗತಿ ನಿಸಾರ್ ಅಹಮದ್ ಅವರ ಕಾವ್ಯದಲ್ಲಿ ಸಂಸ್ಕೃತಿಯ ಬಗ್ಗೆ, ಜೀವನ ವಿಧಾನದ ಬಗ್ಗೆ ಮತ್ತೆ ಮತ್ತೆ ವಿಮರ್ಶಾತ್ಮಕ ಪ್ರಶ್ನೆಗಳನ್ನು ಎತ್ತುತ್ತದೆ. ಹೀಗಾಗಿಯೇ ಕವಿಗೆ ಮನೆಯೆಂದರೆ ಮನೆ ಮಾತ್ರವಲ್ಲ, ಮತ್ತಾವುದೋ ಭಾವನಾತ್ಮಕ ಜೀವಕೋಶವಾಗಿದೆ. ಮನೆಯೆಂದರೆ ಟಿವಿ, ಫ್ಯಾನು, ವಿಡಿಯೋ ಗೇಮ್, ಮಂಚ ಕುರ್ಚಿ ಸೋಫಾ ಅಷ್ಟೇ ಅಲ್ಲ, ಅದು ಮನುಷ್ಯನ ಕೊರತೆಗಳನ್ನು ನೀಗಿಸುವ ಆತ್ಮವಿಶ್ವಾಸ ಕೊಡುವ ರಸಗವಿತೆಯಾಗಿದೆ.

`ಅಮ್ಮ, ಆಚಾರ, ನಾನು` ನಿಸಾರರ ಕೌಟುಂಬಿಕ ಕವಿತೆಗಳಲ್ಲಿ ನಂಬಿಕೆ, ನಿಷೇಧ, ಸಂಸ್ಕೃತಿ ಎಲ್ಲವನ್ನು ಒಟ್ಟೊಟ್ಟಾಗಿ ಹಿಡಿದಿಡುವ ಕವಿತೆ. ಕವಿತೆಯ ನಾಯಕ ಆಧುನಿಕ ಸಂವೇದನೆಯುಳ್ಳವನು. ತನ್ನ ಸಂವೇದನೆಗೆ ತಕ್ಕಂತಹ ಹೆಣ್ಣನ್ನೇ ಮದುವೆಯಾಗಬೇಕೆಂದು ಕನಸು ಕಂಡು, ಕೊನೆಗೂ ತನ್ನ ಹಿರಿಯರಿಂದ ಒಪ್ಪಿಗೆ ಪಡೆಯುತ್ತಾನೆ. ಅಂತಹ ಹೆಣ್ಣನ್ನೇ

ಆರಿಸಿ ಮದುವೆಯಾಗುತ್ತಾನೆ. ಕವಿತೆಯ ಹಾಗೂ ನಾಯಕನ ದುರಂತವೆಂದರೆ ಸಂಪ್ರದಾಯವನ್ನು ಇವನು ಬಿಡಬೇಕೆಂದರೂ ಸಂಪ್ರದಾಯ ಮಾತ್ರ ನಾಯಕನನ್ನು ಬಿಡುವುದಿಲ್ಲವೆನ್ನುತ್ತದೆ. ಡಬಲ್ ಪದವೀಧರೆ ಹೆಂಡತಿ ಅತ್ಯಾಧುನಿಕವಾಗಿ ಅಲಂಕರಿಸಿಕೊಂಡಿದ್ದರೂ ಕೊನೆಗೆ ತೊಡುವುದು ಬುರ್ಖಾವನ್ನೇ. ಈ ವ್ಯಂಗ್ಯ ಇಡೀ ಭಾರತೀಯ ಸಮಾಜ ವ್ಯವಸ್ಥೆಗೆ ಹಿಡಿದ ಕನ್ನಡಿಯೂ ಆಗಿದೆ. ಅಥವಾ ಎಷ್ಟೇ ಮುಕ್ತ ಜೀವನದ ಕನಸನ್ನು ಕಂಡರೂ ಅದರ ಫಲಾಫಲಗಳನ್ನು ನಿರ್ಣಯಿಸುವವನು ಪುರುಷನೇ ಆಗಿರುತ್ತಾನೆ ಮತ್ತು ಅವನ ಅಂತರಂಗದ ಅಭೀಪ್ಸೆಗಳೇ ಅಂತಿಮವೂ ಆಗಿ ಬಿಡುವ ದುರಂತದ ಛಾಯೆ ಇಲ್ಲಿದೆ. ಈ ಕವಿತೆಯಲ್ಲಿ ಹೆಣ್ಣೊಬ್ಬಳು ತನ್ನ ಮುಕ್ತತೆಗಾಗಿ ಆಲೋಚಿಸಿದಂತಹ ಸಾಧ್ಯತೆಗಳಿಲ್ಲದೆ, ಗಂಡೊಬ್ಬನು ತಾನು ಆರಿಸಿದ ಬೊಂಬೆಯಂತಹ ಹೆಣ್ಣು ಹೇಗಿರಬೇಕು ಎಂದು ತರ್ಕಿಸುತ್ತಲೇ ಕೊನೆಗೆ ಅದಕ್ಕೊಂದು ಮುಸುಕನ್ನು ತೊಡಿಸಿ ಹಿಂದಿನ ಸಾಲಿಗೆ ತಳ್ಳಿಬಿಡುತ್ತಾನೆ.

ಇದೇ ರೀತಿಯ ದ್ವಂದ್ವವನ್ನು ಚಿತ್ರಿಸುವ ಇನ್ನೊಂದು ಕವಿತೆ 'ಬೇರು-ಹೆಣ್ಣು.' ಮರಕ್ಕೆ ಮೂಲ ಬೇರು ಹಾಗೂ ಸಂಸಾರಕ್ಕೆ ಮೂಲ ಹೆಣ್ಣು. ಬೇರು ಕಂಡೂ ಕಾಣದಂತೆ ಭೂಮಿಯಲ್ಲಿದ್ದ ಮರವನ್ನು ಹೊರುವ, ಪೊರೆಯುವ ಕೆಲಸ ಮಾಡಬೇಕು. ಬೇರು ಯದ್ವಾತದ್ವಾ ಉಬ್ಬಿ, ಕಣ್ ಕುಕ್ಕಿ ಕಂಗೆಡಿಸದಂತೆ, ಕಂಡೂ ಕಾಣದಂತೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು. ಅದೇನಾದರೂ ಸ್ವಚ್ಛಂದವಾಗಿ ಮಣ್ಣಿನಿಂದ ಮೇಲೆ ಮೆರೆದು ನಿಂತಿತೆಂದರೆ ಅದನ್ನು ಎಡವುತ್ತೇವೆಂದು ಜನ ಕೊಚ್ಚಿ ಎಸೆಯುತ್ತಾರೆ. ಕವಿಗೆ ಈ ಬೇರು ಬೇರೆಯಲ್ಲ, ಕುಟುಂಬದೊಳಗಿನ ಹೆಣ್ಣು ಬೇರೆಯಲ್ಲ. ಅವಳ ಸುಸ್ಥಿರವಾದ ಪಾಯದ ಮೇಲೆ ನೂರಾರು ಮನೆಮಾರುಗಳು ನಿಂತಿವೆ. ಹೀಗಾಗಿ ಮನೆಯೇ ಅವಳ ಅಂತಿಮವಾದ ಸಹಜ ನೆಲೆಯಾಗಿದೆ. ಮನೆಯೊಳಗಿನ ಹೆಣ್ಣನ್ನು ಗಂಡೊಬ್ಬನು 'ಹೀಗೇ' ಇರಬೇಕೆಂದು ಈ ಕೆಳಗಿನಂತೆ ನಿರ್ದೇಶಿಸುತ್ತಾನೆ :

'ಹೊರಗೆ ಸುಳಿಯುವ ಸ್ವಾತಂತ್ರ್ಯ ಅವಳಿಗುಂಟು, ನಿಜ
ಅಸಂಯಮಿತ ಸ್ವೈರ ಸ್ವೇಚ್ಛಾಚಾರ ಮಾತ್ರ ವರ್ಜ.
ಮೈದೋರಿದರು ಮೈ ಮುಚ್ಚುವಂತಿರಬೇಕು,
ಮೆರುಗು ಮಾಟಗಳ ನೆಚ್ಚದಂತಿರಬೇಕು,
ಹೆರರ ದಿಟ್ಟಿಗೆ ಸದಾ ಬೆಚ್ಚದಂತಿರಬೇಕು'
(ಬೇರು-ಹೆಣ್ಣು)

ಇದು ಭಾರತೀಯ ಸಮಾಜದಲ್ಲಿ ಕಟ್ಟಲ್ಪಟ್ಟ ಹೆಣ್ಣಿನ ಚಿತ್ರ. ಹೀಗಾಗಿ ಕವಿ ಎಷ್ಟೇ ಉದಾರವಾದಿಯಾಗಿ ಮಾತನಾಡಿದರೂ ಹೆಣ್ಣಿನ ರಕ್ಷಣೆ ಪುರುಷನ ಕಣ್ಣಳತೆಯಲ್ಲೇ ಆಗಬೇಕಾಗುತ್ತದೆ. 'ಅಮ್ಮ ಆಚಾರ, ನಾನು' ಕವಿತೆಯಲ್ಲೂ ಕೂಡ ಇದೇ ಕಾಯುವ ಕಣ್ಣು ಉದಾರವಾದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತದೆ. ಈ ದ್ವಂದ್ವ ಕವಿ ಪರ ಸಂಸ್ಕೃತಿಗೆ ಸೇರಿದ್ದರಿಂದ ಆದದ್ದಲ್ಲ, ಹೆಣ್ಣನ್ನು ಮನೆಯೊಳಗೆ ದೇವತೆಯನ್ನಾಗಿ ಪ್ರತಿಷ್ಠಾಪಿಸುವ ಮನೋಧರ್ಮದಿಂದ ಆದದ್ದಾಗಿದೆ.

ದಾಂಪತ್ಯವನ್ನು ಕುರಿತಂತೆ ಕವಿ ನಿಸಾರರು ತಮ್ಮ ಕವಿತೆಗಳಲ್ಲಿ ಆಳವಾದ ಚಿಂತನೆ

ನಡೆಸಿದ್ದಾರೆ. ಮದುವೆ ಎನ್ನುವುದು ಒಂದೇ ಗುರಿಗೆ ಎಸೆದ ಎರಡು ಬಾಣಗಳ ಆಟ. ಹೆಣ್ಣನ್ನು ಕೊಟ್ಟು ತಾಯಂದಿರು ಭಾರ ಇಳಿಸಿಕೊಂಡರೆ, ಮುಳುಗುವ ಗಂಡಿಗೆ ಈ ಹೆಣ್ಣು ತೇಲಿಸುವ ಬೆಂಡಾಗುತ್ತದೆ. ಯಾರು, ಯಾರಿಗೆ ಋಣಿಯಾದರೂ ತಂತಿ ಮೇಲಿನ ತೂಕ ತಪ್ಪದ ನಡಿಗೆಯಂತೂ ಆರಂಭವಾಗುತ್ತದೆ. ಬಿದ್ದರೂ ಎದ್ದರೂ ಜೊತೆಯಾಗಿ ಸಾಗಬೇಕಾದ ಆಟ ಇದಾಗಿದೆ. ಇದುವರೆಗೂ ಜೇಡಿ ಮಣ್ಣಿನ ಆಕಾರದಲ್ಲಿದ್ದವರು ಪರಸ್ಪರ ಸಹಕಾರದಲ್ಲಿ ಅಮೃತ ಕುಂಭಗಳಾಗಿ ರೂಪು ತಳೆಯುತ್ತಾರೆ. ಈ ದಾಂಪತ್ಯ ಜೀವನ ಹೊರ ನೋಟಕ್ಕೆ ಫಲಭರಿತ ವೃಕ್ಷವಾದರೂ ಅದರ ಮೈ ತುಂಬಾ ಮುಳ್ಳುಗಳಿವೆ ಎಂಬ ಕಲ್ಪನೆಯೇ ವಿಶಿಷ್ಟವಾದದ್ದು.

'ದಾಂಪತ್ಯ ವೃಕ್ಷ ಫಲಭರಿತ! ಅದರ ಅಡಿಯಿಂದ ಮುಡಿಗೆ ಮುಳ್ಳು;
ಸಂಸಾರವೆಂಬ ಸಂಮಿಶ್ರದಲ್ಲಿ ಸೇರಿಹುದು ಗಟ್ಟಿ ಜೊಳ್ಳು.
ಎಚ್ಚರಿಂದ ಚಣಚಣವು ನೀವು ಏರುತ್ತ ಸಾಗಬೇಕು.
ದಣಿಯದಂತೆ ಪ್ರತಿಕ್ಷಣವೂ ನೀವು ಕೇರುತ್ತ ತೂರಬೇಕು.'
(ಹಸೆಯೇರುವವರಿಗೆ)

'ಸುಮುಹೂರ್ತ' ನಿಸಾರರ ಕವಿತೆಗಳಲ್ಲಿ ದಾಂಪತ್ಯ ಜೀವನದ ಏರಿಳಿತಗಳನ್ನು ತೆರೆದ ಮನಸ್ಸಿನಿಂದ ಚಿತ್ರಿಸಿದ ಕವಿತೆಯಾಗಿದೆ. ಸುಮುಹೂರ್ತ ಎಂಬ ಪದವೇ ಸಂಕೇತವಾಗಿದ್ದು ತನ್ನನ್ನೇ ನಂಬಿ ಬದುಕು ನಡೆಸಿದವಳ ಸುತ್ತ ನಿರಂತರ ಚಲನೆಯಲ್ಲಿರುವ ಗಂಡು ಮನಸ್ಸೊಂದು ತನ್ನ ಹಾಗೂ ತನ್ನ ವರ್ತನೆಗಳನ್ನು ವಿಶ್ಲೇಷಣೆಗೆ ಒಡ್ಡಿಕೊಳ್ಳುವ ಕ್ರಮ ಇಲ್ಲಿದೆ. ಇಲ್ಲಿ ಯಾವುದೋ ಒಂದು ಕ್ರಿಯೆ ಘಟಿಸಲಿದ್ದು ಅದು ಗಂಡು ಹೆಣ್ಣಿನ ಬದುಕಲ್ಲಿ ಪರಿವರ್ತನೆಯನ್ನುಂಟುಮಾಡಲಿದೆ. ಈ ಸಂಕ್ರಮಣ ಅವಸ್ಥೆಯಲ್ಲಿ ನಿಂತ ಗಂಡು, ಅವಳೆದುರು ತನ್ನ ಬಿಡುಬೀಸು ವರ್ತನೆಗಳನ್ನು, ತಪ್ಪು ಒಪ್ಪುಗಳನ್ನು ವಿಶ್ಲೇಷಿಸುತ್ತಿದ್ದಾನೆ. ಆಗಲೋ, ಈಗಲೋ ಹೆರಲಿರುವ ಹೆಣ್ಣು, ಬರಲಿರುವ ಹೊಸ ಜೀವದ ಕ್ಷಣ ಗಣನೆಗಳಲ್ಲಿ ಕವಿ ತನ್ನ ನಿರೀಕ್ಷಣೆಗೆ ತೊಡಗಿಕೊಂಡಿದ್ದಾನೆ. ಈ ದಾಂಪತ್ಯ ಫಲದ ಜನನದ ಕ್ಷಣವನ್ನು ಕವಿ ಎಷ್ಟು ಸಹಜ ಹಾಗೂ ನಿರಾಳವಾಗಿ ವರ್ಣಿಸುತ್ತಾನೆಂದರೆ ಅದು ಸಹಜ ಮತ್ತು ಸಲೀಸು ಎಂಬ ಅರ್ಥದಲ್ಲಿ ಕೊನೆಗೊಳ್ಳುತ್ತದೆ.

'ಕೊನೆಗೆ ಬಿಚ್ಚಿತು ಅಗುಳಿ: ಬಿಳಿದೊಡಿಗೆ, ಬಿಳಿ ಹಲ್ಲು,
ಬಿಳಿ ಮುಗುಳ್ನಗೆ—ಆರು ಕಾಲು ಪೌಂಡು.
ಎಲ್ಲವೂ ಮಾಮೂಲು; ಬೇರೆಯಾಯಿತು ಗಂಜಿಯಿಂದ ಅಗುಳು :
ರೋಜದೆಸಳಿನ ಗಂಡು;
ನಿನ್ನಂತೆ ನನ್ನ ಬಗೆ
ಕಳಚಿ ಬೆಟ್ಟವ, ಚೆಂಡು.'

(ಸುಮುಹೂರ್ತ)

ಬರಿ ಇಷ್ಟಕ್ಕೇ ಈ ಕವಿತೆ ನಿಲ್ಲುವುದಿಲ್ಲ. ಸೃಷ್ಟಿ ನಿರಂತರವಾದದ್ದು ಎಂಬ ಆಶಯವನ್ನು ಮುಂದಿನ ಸಾಲಿನಲ್ಲಿ ವರ್ಣಿಸುತ್ತದೆ. ಮತ್ತೆ ಎಲ್ಲ ಸಹಜ, ಸಲೀಸು ಎಂಬ

ಅರ್ಥ ವರ್ಣನೆಯಲ್ಲಿ ಮುಂದುವರೆಯುತ್ತದೆ. ಗಂಜಿಯಿಂದ ಅಗುಳು ಬೇರ್ಪಡುವ ಪ್ರಕೃತಿಯ ಈ ಕ್ರಿಯೆಯಲ್ಲಿ ಮತ್ತೆ ಋತುಮಾನ ಯಾವುದೋ ಕಾಲ ಗತಿ ಎದುರಿಸಲಿಕ್ಕೆ ಸಿದ್ಧವಾಗುತ್ತಿದೆ. ಈ ಸೃಷ್ಟಿಕ್ರಿಯೆಯಲ್ಲಿ ಹೆಣ್ಣು ಮತ್ತೆ ಮತ್ತೆ ಮರುಹುಟ್ಟು ಪಡೆಯುತ್ತಾಳೆ.

'ನೀನೀಗ ಹೊಸ ಹುಟ್ಟು; ಮಳೆ ಗುಡಿಸಿದಾಕಾಶ;
ಮೊದಲಗಿತ್ತಿಯ ಲಜ್ಜೆ, ನಗೆ ಹಿಲಾಲು.
ಎಲೆ ತೊಗಟೆ ಗರಿ ಜಾರು;
ಕಂಪಿಂಪುಗಳ ತೇರು—
ಋತುಮಾನದಾಟಕ್ಕೆ ಮತ್ತೆ ಬಯಲು. (ಅದೇ)

ಈ ಸಾವು ನೋವುಗಳ ಆಟದಲ್ಲಿಯೇ ದಾಂಪತ್ಯ ಮುಂದುವರೆದಿದೆ. ಎಲ್ಲಾ ದಾಂಪತ್ಯದಲ್ಲಿ ಸರಸ ವಿರಸಗಳಿರುತ್ತವೆ. ಕೆಲವರಿಗೆ ವಿರಸ ದಾಂಪತ್ಯದ ಫಲವಾದರೆ, ಮತ್ತೆ ಕೆಲವರಿಗೆ ಸರಸ ದಾಂಪತ್ಯದ ಫಲವಾಗುತ್ತದೆ. ಇಂತಹ ವಿರಸ, ವಿಷಾದ, ಸುಖಾಂತ್ಯವನ್ನೊಳಗೊಂಡ ಹಲವು ಕವಿತೆಗಳನ್ನು ನಿಸಾರರು ರಚಿಸಿದ್ದಾರೆ. 'ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ' ಎಂಬ ಮಾತನ್ನು ಮೀರಿ ಕೆಲವು ಬಾರಿ ದಾಂಪತ್ಯ ಬೇಸರದ ಕರಿ ನೆರಳಿಗೆ ಜಾರುತ್ತದೆ. ಈ ವಿರಸ ನಾಲ್ಕಾರು ಜನರ ಬಾಯಿಗೆ ಹೋಗಿ ಮರುಕಕ್ಕೆ ಈಡಾಗುತ್ತದೆ. ಇಬ್ಬರ ನಡುವಿನ ಪೊಳ್ಳು ಪ್ರತಿಷ್ಠೆಗಳು ಸಂವಹನ ಸಾಧ್ಯವಾಗ ದಂತೆ ತಡೆದಿವೆ. ಆದರೂ ಒಳ ಮನಸ್ಸು ಪರಸ್ಪರ ಸಖ್ಯಕ್ಕಾಗಿ ಕಾತರಿಸುತ್ತದೆ. ಇಂತಹ ಮಾಗುವ ಹಾದಿಯಲ್ಲಿನ ಹಲವು ದಾಂಪತ್ಯದ ಮುಖಗಳನ್ನು ಕವಿ ಚಿತ್ರಿಸಿದ್ದಾರೆ. 'ಮನೆಗೆ ಮರಳಿದ ಮಮತೆ'ಯಲ್ಲಿ ಇಂತಹ ನೆನಪು, ಹಪಾಹಪಿಗಳು ಎಂದಿನ ಸಹಜ, ಸಲೀಸುತನ ದಲ್ಲಿ ಹಿಡಿಯಲ್ಪಟ್ಟಿವೆ.

'ಹೇಗಿದ್ದವರು ಇವರು ಹೇಗಾದರೆಂದು ಪರಿಚಯದ ಎಷ್ಟೋ ಜನ
ಮರುಕ ಸೂಚಿಸುವಷ್ಟು ಸಂಪರ್ಕ ಕಡಿದು ಸಿಡಿದೆದ್ದವಾಗ;
ಅನುಮಾನದಮಲು ಪೇಯವ ಕುಡಿಸಿ, ಬುದ್ಧಿಯನು ಬಗ್ಗಡಿಸಿ,
ಗಡಿಬಿಡಿಸಿ ಗಿರಿ ಕಂದರವ ನಿರ್ಮಿಸಿರಲೆದೆಯ ಉದ್ವೇಗ.' (ಮನೆಗೆ ಮರಳಿದ ಮಮತೆ)

ಭಾಷೆಯನ್ನು ಹೊಸ ಕ್ರಮಗಳಿಗೆ, ರೂಪಕಗಳಿಗೆ ಒಗ್ಗಿಸುವ ನಿಸಾರರ ಕಾವ್ಯ ಕೌಶಲ ವಿಶಿಷ್ಟವಾದುದು. ಕನ್ನಡ ಕಾವ್ಯದ ಜಾಯಮಾನಕ್ಕೆ ಹೊಸ ಕ್ರಮದ ಈ ಸೇರ್ಪಡೆಗಳು ಮೆಚ್ಚತಕ್ಕವಾಗಿವೆ. ಸಿದ್ಧ ಕಲ್ಪನೆಯೊಂದು ಕವಿತೆಗಳಲ್ಲಿ, ತರ್ಕಬದ್ಧವಾಗಿ ಬೆಳೆಯದೆ ಹಾಗೆಯೇ ಮಂಡಿಸಲ್ಪಡುವ ಕ್ರಮ ಕವಿತೆಯನ್ನು ಬೆಳೆಯದಂತೆ ಕುಂಠಿತಗೊಳಿಸುತ್ತದೆ ಎಂಬುವುದೊಂದು ಆರೋಪದ ನಡುವೆಯೂ ನಿಸಾರರು ತಮ್ಮದೇ ಆದ ಅಭಿವ್ಯಕ್ತಿ ಮಾರ್ಗದಲ್ಲಿ ಸಫಲಗೊಂಡಿದ್ದಾರೆ ಎಂದು ಹೇಳಬಹುದಾಗಿದೆ. ದಾಂಪತ್ಯವಾಗಲೀ, ಹೆಣ್ಣಾಗಲೀ ಭಾರತೀಯ ಮನಸ್ಸೊಂದು ಕಂಡಂತೆಯೇ ನಿಸಾರರು ಕೂಡ ತಮ್ಮ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಮರದ ಬೇರಿನಂತೆ, ಕುಟುಂಬದ ಹೆಣ್ಣಿನಂತೆ ದಾಂಪತ್ಯದ ಮೇಲಿನ ಮುಸುಕನ್ನು ಚಿತ್ರಿಸುವ ಪ್ರಯತ್ನವನ್ನು ಕವಿ ಮಾಡಿದ್ದಾರೆ.



ನಿಸಾರರ ಕಾವ್ಯದಲ್ಲಿ ಪ್ರೀತಿ, ಪ್ರಣಯಗಳು

♦ ಬಿ. ಆರ್. ಲಕ್ಷ್ಮಣರಾವ್

ಆಧುನಿಕ ಕನ್ನಡ ಕಾವ್ಯದ ಅಧ್ಯಯನಕ್ಕೆ ನನ್ನನ್ನು ಅರವತ್ತರ ದಶಕದಲ್ಲೇ ಆಕರ್ಷಿಸಿದ ಹಾಗೂ ಮುಂದೆ ಕಾವ್ಯ ರಚನೆಗೆ ನನ್ನನ್ನು ಪ್ರೇರೇಪಿಸಿದ ಕವಿಗಳಲ್ಲಿ ಕೆ. ಎಸ್. ನಿಸಾರ್ ಅಹಮದ್ ಅವರು ಪ್ರಮುಖರು. ನನಗೆ ಇಂದಿಗೂ ನೆನಪಿದೆ, ೧೯೬೫ರಲ್ಲಿ ದಾವಣಗೆರೆಯ ಒಂದು ವಾಚನಾಲಯದ ಮಾಸಿಕವೊಂದರಲ್ಲಿ ನಿಸಾರರ 'ಮದುವೆ' ಎಂಬ ಕವನ ಪ್ರಕಟವಾಗಿತ್ತು. ಓದಿದೆ. ಆ ಕವನದ ಸರಳ ನೇರ ಶೈಲಿ, ಕಲ್ಪನೆಯ ಹೊಸತನ, ಪದ ಬಂಧುರತೆ, ಅನಿರೀಕ್ಷಿತ ಪ್ರಾಸಗಳು, ಉದಾತ್ತ ಜೀವನ ದೃಷ್ಟಿ ನನ್ನನ್ನು ಮಂತ್ರಮುಗ್ಧನನ್ನಾಗಿಸಿದವು. ನನ್ನ ಕಾಲೇಜಿನ ನೋಟ್ ಬುಕ್ಕಿನಲ್ಲಿ ಆ ಕವನವನ್ನು ಬರೆದುಕೊಂಡೆ. ಬೇಕೆನಿಸಿದಾಗಲೆಲ್ಲ ಓದಿಕೊಳ್ಳುತ್ತಿದ್ದೆ. ಹೀಗೆ ಆ ಕವನ ನನಗೆ ಕಂಠಪಾಠವಾಗಿ ಇಂದಿಗೂ ನನ್ನ ನೆನಪಿನಲ್ಲಿದೆ.

ನಿಸಾರರ ಕಾವ್ಯದ ವೈಶಿಷ್ಟ್ಯವೇ ಅಂಥದು. ಅದು ಭಾವ ಪ್ರಧಾನವಾಗಿರಲೀ, ವೈಚಾರಿಕವಾಗಿರಲೀ, ತಾತ್ವಿಕವಾಗಿರಲೀ ಓದುಗನ ಗಮನವನ್ನು ತಟ್ಟನೆ ತನ್ನೆಡೆಗೆ ಸೆಳೆಯುವ ಸೂಜಿಗಲ್ಲಿನ ಗುಣವೊಂದು ಅದರಲ್ಲಿರುತ್ತದೆ. ಹೊಸ ಕಲ್ಪನೆ, ಹೊಸ ನುಡಿಗಟ್ಟು, ತನ್ನ ಸುತ್ತಲಿನ ದೈನಂದಿನ ಪರಿಸರ ಹಾಗೂ ಜೀವನದಿಂದ ಹೆಕ್ಕಿ ತೆಗೆದ ವಿನೂತನ ಉಪಮೆ, ರೂಪಕಗಳು, ಅನಿರೀಕ್ಷಿತ ಪ್ರಾಸಾನುಪ್ರಾಸಗಳು ಅವರ ಕವನಗಳ ಸಹಜ

ಆಕರ್ಷಣೆಗೆ, ಪರಿಣಾಮಕಾರಿ ನಿರೂಪಣೆಗೆ, ಜನಪ್ರಿಯತೆಗೆ ಕಾರಣಗಳಾಗಿ ಒದಗಿಬಂದಿವೆ.

ನಿಸಾರರ ಕಾವ್ಯದ ಸುವಿಸ್ತಾರ ಹರವಿನಲ್ಲಿ ಗಂಡು ಹೆಣ್ಣಿನ ನಡುವಿನ ಪ್ರೀತಿ ಪ್ರಣಯಗಳು ಒಂದು ಪ್ರಮುಖ ವಸ್ತುವಾಗಿ ತನ್ನೆಲ್ಲ ಭಾವ ವೈವಿಧ್ಯಗಳೊಂದಿಗೆ ನುಡಿಚಿತ್ರಗಳಾಗಿ ಒಡಮೂಡುತ್ತಲೇ ಬಂದಿವೆ. ಅವರ ನವ್ಯ ಪ್ರೇಮ ಕವನಗಳಲ್ಲಿ ಅಂದಿಗೆ ಮತ್ತು ಆ ಶೈಲಿಗೆ ತಕ್ಕಂತೆ ಭಾವುಕತೆಗಿಂತ ಮಿಗಿಲಾಗಿ ವ್ಯಂಗ್ಯ, ವಿಡಂಬನೆ, ವಿಷಾದ ಮೇಲುಗೈ ಪಡೆದಿವೆ. ಆದರೆ ಅವರ ಪ್ರೇಮಗೀತೆಗಳಲ್ಲಿ ಕಟು ವಾಸ್ತವದ ನಡುವೆಯೂ ಕಹಿಯಾಗದ ಸಹನೆ ಮತ್ತು ಅಂತಃಕರಣದ ಸಂವೇದನೆ ಎದ್ದು ತೋರುತ್ತದೆ. ಈ ಎರಡೂ ರೀತಿಯ ರಚನೆಗಳಲ್ಲಿ ನಿಸಾರರು ತಮ್ಮ ಅನನ್ಯತೆಯ ಛಾಪನ್ನು ಒತ್ತಿರುವುದಂತೂ ನಿಜ.

ಗಂಡು ಹೆಣ್ಣಿನ ನಡುವೆ ಆಕರ್ಷಣೆ ಮೊದಲಾಗಿ, ಅನುರಾಗ ಅಂಕುರಿಸುವುದೇ ಹವಿ ಹರೆಯದ ಹೊಸ ನೆಗಸಿನ ಸಂದರ್ಭದಿಂದ. ಇದನ್ನು ತಮ್ಮ 'ಮನ್ಮಥಾಗಮನ' (ಸುಮುಹೂರ್ತ) ಕವನದಲ್ಲಿ ಕವಿ ಅತ್ಯಂತ ನಾಟಕೀಯವಾಗಿ, ಪರಿಣಾಮಕಾರಿಯಾಗಿ ಹೀಗೆ ಚಿತ್ರಿಸಿದ್ದಾರೆ:

'ಹಚ್ಚಿರೆ ಕಣ್ಣಿಗೆ ಕಾಡಿಗೆಯ, ಬೆರಳಿಗೆ ಗೋರಂಟಿ,
ಹಾದಿಬೀದಿಯಲಿ ಹೊಮ್ಮಲಿ ಇನಿದನಿ, ಕೊರಳಿಸೆ ಕಲಕಂಠಿ.
ಒಳಗಡೆ ಅಗರಿನ ಧೂಪವಿಡಿ,
ಹೊಸಲಿಗೆ ದೀಪವಿಡಿ;
ತಲೆ ಬೈತಲೆಗಳ ಸೊಟ್ಟ ಬಿಡಿ,
ರವಿಕೆಯ ನಟ್ಟಿಬಿಡಿ;
ನಮ್ಮನು ನಾವೇ ಮೋಹಿಸುವಳುಕಿಗೆ
ಕೆನ್ನೆಗೆ ದೃಷ್ಟಿಯ ಬೊಟ್ಟನಿಡಿ.

'ಹೆಜ್ಜೆಗೆಜ್ಜೆಗಳ ಝಲ್ಲೆನಿಸಿ—
ಮದನನ ಬಾಣಕೆ
ಇನಿಯನ ಪ್ರಾಣಕೆ
ತೀಡಿ ಹುಬ್ಬುಗಳ ಬಿಲ್ಲೆನಿಸಿ.
ಈ ಅಂಗಾಂಗದ ತುಂಬ ಮಧು:
ರತಿಸುಖ ಸಾರದ ಕುಂಭವಿದು,
ಅನಂಗನಾಟದ ರಂಗವಿದು,
ವೈರಾಗ್ಯದ ಮುಖಭಂಗವಿದು.

'ಬಂದನು ಮದನ
ವಿಲಾಸ ಸದನ
ತನ್ನಿರೆ ಆರತಿ ಚೆಲುವನಿಗೆ.
ಜೈ ಜೈ ಎನ್ನಿ

ಹೊಸಲಿಗೆ ಬನ್ನಿ
ಬಂದಿದೆ ಒಡೆಯನ ಮೆರವಣಿಗೆ.'
(ಮನ್ಮಥಾಗಮನ)

ಇಲ್ಲಿನ `ಕಲಕಂಠಿ` ಎಂಬ ವಿನೂತನ ಪದಪ್ರಯೋಗ, 'ತಲೆಬೈತಲೆಗಳ ಸೊಟ್ಟಿ ಬಿಡಿ` ಎಂಬಲ್ಲಿನ ಸೂಕ್ಷ್ಮಗ್ರಹಿಕೆ, ಕವನದ ಸಂಭ್ರಮೋತ್ಸಾಹದ ನಡೆ, ಚಿತ್ತಾಪಹಾರಿ ಪ್ರಾಸಗಳು— ಇಂಥಲ್ಲಿ ನಿಸಾರರ ಅನನ್ಯ ಛಾಪು ಎದ್ದು ತೋರುತ್ತದೆ.

ಹೆಣ್ಣಿಗೆ ಯೌವನವು ಒದಗಿ ಬಂದಾಗ ಅವಳ ದೇಹ ಮತ್ತು ಮನಸ್ಸಿನಲ್ಲಿ ಸಹಜವಾಗಿ ಒಡಮೂಡುವ ಬದಲಾವಣೆಗಳನ್ನು `ಪ್ರಾಯ` (ಸುಮುಹೂರ್ತ) ಎಂಬ ಕಿರುಗವನದಲ್ಲಿ ಕವಿ ಅತ್ಯಂತ ಸೂಚ್ಯವಾಗಿ, ಕಲಾತ್ಮಕವಾಗಿ ಹೀಗೆ ಹಿಡಿದಿಟ್ಟಿದ್ದಾರೆ:

'ಎಳನೀರಿನೊಳಗಿರುವ ಮಿದು ತಿರುಳ ಕೆನೆಗೆನ್ನೆ
ಬಲಿತು ಕೊಬ್ಬರಿಯಾಗಿ ಮುದವಾಗಿದೆ.
ಮೈಯುದ್ದ ಚುಮುಚುಮು, ಚುಮುಚುಮು ಎಂದೇನೊ
ಕೊಂಬೆ ರೆಂಬೆಯು ಅಳಿಲಿನಂತಾಡಿದೆ.
ಯೌವನಕೆ ಕೊಂಬೆರಡು ಮೂಡಿದವೊ ಎನುವಂತೆ
ಸಮಭಾಗ ಹಿರಿಹಿಗ್ಗಿ ಹದೆಯಾಗಿದೆ.
ಮಾತುಮಾತುಗಳಲ್ಲಿ ಮಾದಕದ ಧಾತುಗಳು
ಕಣ್ಣಿನಲಿ ಹೆಣ್ಣುತನ ಹದವಾಗಿದೆ.

'ಇಕ್ಕಟ್ಟು ಸಂದಿಯಲಿ ದಿಕ್ಕೆಟ್ಟ ಮೊಲ ಹೊಕ್ಕು
ಕಚಕುಳಿಯನಿಟ್ಟಂಥ ಮುಲುಮುಲಾಟ.
ಅಮ್ಮ ಕುಚ್ಚಿಸಿಕೊಂಡ ಕೈಯ ಮೇಲಿನ ಕೆರೆತ,
ಕಾಂಪೌಂಡು ಪಾತಿಯಲಿ ಕೋತಿ ಕಾಟ.'
(ಪ್ರಾಯ)

ಹೀಗೆ ಪ್ರಾಯಕ್ಕೆ ಬಂದ ಹೆಣ್ಣು ತಾನೊಲಿದ ತರುಣನ ಪ್ರೀತಿಗಾಗಿ, ಒಡನಾಟಕ್ಕಾಗಿ ಹಂಬಲಿಸುವ ಪರಿ `ಆಹ್ವಾನ` (ಮನಸು ಗಾಂಧಿ ಬಜಾರು) ಕವನದಲ್ಲಿದೆ. ಇಲ್ಲಿನ ಪ್ರಕೃತಿ ಚಿತ್ರಗಳು ಹೆಣ್ಣಿನ ಮನಃಸ್ಥಿತಿಗೆ ಮನೋಜ್ಞ ಪ್ರತೀಕಗಳಾಗಿ ಮೂಡಿ ಬಂದಿರುವುದು ಈ ಕವನದ ಯಶಸ್ಸಿಗೆ ಕಾರಣವಾಗಿದೆ.

ಹೆಣ್ಣಿನಂತೆ ಗಂಡಿಗೂ ಹೊಸ ಹರೆಯದಲ್ಲಿ ಹೆಣ್ಣು ಹೇಗೆ ಕಾಮನ ಗೊಂಬೆಯಾಗಿ ಕಾಡುತ್ತಾಳೆ ಎಂಬುದನ್ನು `ಮನೋರಮಾ` (ನೆನೆದವರ ಮನದಲ್ಲಿ) ಕವನ ಹೊಚ್ಚ ಹೊಸ ರೂಪಕಗಳಲ್ಲಿ, ಬಿಚ್ಚುಮಾತುಗಳಲ್ಲಿ ಕಟ್ಟಿಕೊಡುತ್ತದೆ. ಉದಾಹರಣೆಗೆ ಕವನದ ಈ ಭಾಗಗಳನ್ನು ಗಮನಿಸಬಹುದು:

'ಮನೋರಮಾ, ಮನೋರಮಾ!
ಹೆಲನ್ನಂತೆ ಹೆಲನ್! ಹೇಗೆ ತಾನೆ ಅವಳು ಸರಿಸಮ?
ನೀನಾಡುವ ಮಾತು:

ಬಾಯಿಯಿಂದ ದೊಂಬ ತೆಗೆವ ತರಾವರಿಯ ಟೇಪು;
ಬಾರಿನೆದುರು ಮೆರೆವ ನಿಯಾನ್ ಗೆರೆಯ ಜಾಹೀರಾತು;
ಜಾದು ಹಾಕಿ ಸೆಳೆದವೇ
ವಿವೇಚನೆಯ ಕಳೆದವು;
ಉಟ್ಟ ನಿನ್ನ ಬಟ್ಟೆಬರೆಯ ಮೇಲು ತೆರೆಯ ಬೆಳ್ನೊರೆ
ಸರಿಸಿ, ಕುಡಿಸು ಸವಿ ಸುರೆ.

'ಅಲೀಬಾಬಾ ನಾನು, ನಿನ್ನ ಗುಹೆಗೊ ಕದದ ಕಾವಲು;
ತೊಗಲ ತುಂಬ ತೆವಲು ನನಗೆ, ತೆಗೆಯೆ ಸೆಸೀಮ್ ಬಾಗಿಲು.
ಬಾಚಬೇಕು, ದೋಚಬೇಕು ವಜ್ರ ವೈಡೂರ್ಯವ,
ಹಗುರಗೊಳಿಸಬೇಕು ಹೊತ್ತು ತಂದ ಬಯಕೆ ಭಾರವ;
ನಿನ್ನ ಮೈ ಮಸೆವ ಕಲ್ಲು;
ಜೊತೆಗೆ ಅದೇ ಮಖಮಲ್ಲು—
ಚೂರಿ ನಾನು ತಿಕ್ಕಬೇಕು, ಮೆತುವಿಗೆ ಮುತ್ತಿಕ್ಕಬೇಕು,
ಸೊಕ್ಕಬೇಕು ತೆಗೆ, ತೆಗೆ
ಬಿಗುಮಾನವ ತೆಗೆದೊಗೆ.'

(ಮನೋರಮಾ)

ಆದರೆ ಇದು ಸಫಲ ಪ್ರೇಮವಲ್ಲ, ಏಕಮುಖೀ ಆಕರ್ಷಣೆ. ಹೀಗಾಗಿ ಕವನ ವಿಷಾದದ ಈ ಸಾಲುಗಳೊಂದಿಗೆ ಕೊನೆಗೊಳ್ಳುತ್ತದೆ:

'ನನ್ನ ಕೈಗೆ ಸಿಕ್ಕದವಳೆ,
ನನ್ನ ಮೈಗೆ ದಕ್ಕದವಳೆ,
ಪಕ್ಕದಲ್ಲೆ ನಕ್ಕರೇನು,
ಮಿಡಿದರೇನು ನುಡಿ ಕಮಾನು!
ನೀನು ನನಗೆ ದೇಹವಲ್ಲ; ಬರೀ ಹೆಸರ ವಿಭ್ರಮ.
ಮನೋರಮಾ, ಮನೋರಮಾ,
ಬರೀ ಹೆಸರೆ ಸಾಕು ಬಿಡು: ಮಲಗೋಬದ ಗಮಗಮ.'

(ಅದೇ)

ಈ ವಿಷಾದವೇ ಸುಡು ಬೆಂಕಿಯಂಥ ಕ್ರೋಧವಾಗಿ, ಸೇಡಿನ ನಂಜಾಗಿ, ಕಟು ವ್ಯಂಗ್ಯ ದೊಂದಿಗೆ 'ನಕ್ಷತ್ರಿಕ' (ಸುಮುಹೂರ್ತ) ಕವನದಲ್ಲಿ ವ್ಯಕ್ತವಾಗಿದೆ. 'ತಿಂಗಳಾರರ ಮೇಲೆ' (ನೆನೆದವರ ಮನದಲ್ಲಿ) ಕವನದಲ್ಲೂ ಪ್ರೇಮ ಪ್ರಕರಣದಲ್ಲಿ ಮೋಸ ಹೋದವನ ನೊಂದ ದನಿಯಿದೆ.

ನಿಸಾರರು ನಗರ ಪ್ರಜ್ಞೆಯ ಕವಿ. ಹೀಗಾಗಿ ಅವರ ಪ್ರೇಮ ಕವನಗಳಲ್ಲೂ ನಾವು ಕಾಣುವುದು ನಗರದ ಪರಿಸರ, ಸಂವೇದನೆ ಮತ್ತು ಚಿತ್ರಗಳನ್ನೇ. ಇದಕ್ಕೆ ಉದಾಹರಣೆಯಾಗಿ ಅವರ 'ಮಾರಾಟಗಾತಿಯ ಮಾತುಕತೆ' (ಸಂಜೆ ಐದರ ಮಳೆ) ಮತ್ತು 'ಎಂಥ ದಿನಗಳೇ' (ನಾನೆಂಬ ಪರಕೀಯ) ಕವನಗಳನ್ನು ನೋಡಬಹುದು.

'ಮಾರಾಟಗಾತಿಯ ಮಾತುಕತೆ' ತನ್ನ ವಿನೂತನ ತಂತ್ರದಿಂದ ಗಮನ ಸೆಳೆಯುತ್ತದೆ. ಮಾರಾಟಗಾತಿಯಾದ ನಿರೂಪಕಿ ಅಂಗಡಿಯಲ್ಲಿ ಸೀರೆಗಳನ್ನು ಗಿರಾಕಿಗಳಿಗೆ ಮಾರಾಟ ಮಾಡುತ್ತಲೇ ತನ್ನ ಗೆಳತಿಗೆ ತನ್ನ ಪ್ರೇಮ ಪ್ರಕರಣದ ಬಗ್ಗೆ ನಿವೇದಿಸಿಕೊಳ್ಳುವ ರೀತಿ ಅತ್ಯಂತ ಆಕರ್ಷಕ ಹಾಗೂ ಪರಿಣಾಮಕಾರಿಯಾಗಿ ಕವನದಲ್ಲಿ ಒಡಮೂಡಿದೆ. ಉದಾಹರಣೆಗೆ ಈ ಭಾಗವನ್ನು ಗಮನಿಸಬಹುದು:

'ಎಲ್ಲ ಸೇರಿಸಿ ಕಟ್ಟಿಕೊಡಲೆ? ಇಲ್ಲ, ಬೇರೆ, ಬೇರೆ? ಏನಂದ್ರಿ ಒಟ್ಟಿಗೇನೆ?...
ಜೋಕ್ ಮಾಡಿ ಪೀಡಿಸ್ತಾನೆ ಕಣೆ. ಹಿತವಾಗಿರತ್ತೆ... ಯಾವುದು? ಅದೇ ತಾನೆ?
ಗಜ ಮೂರೂವರೆ... ತಾಜ್ ಮಹಲಿನ ಮೇಲೆ ಬೆಳ್ದಿಂಗಳು ಇಳಿದ ಹಾಗಿದೀಸಂತೆ...
ಬಿಲ್ ಕೊಟ್ಟೆ... ನಸ್ಕಾಣೆ, ಸುಶೀ... ಕೌಂಟರಿನಲ್ಲಿ ಕೊಡಿ... ಕನಸಲ್ಲೂ ಅವನದೇ ಚಿಂತೆ!'
(ಮಾರಾಟಗಾತಿಯ ಮಾತುಕತೆ)

'ಎಂಥ ದಿನಗಳೇ' ತನ್ನ ಉಕ್ಕುವ ಉತ್ಸಾಹದ ಲಯ, ಚಿತ್ರಗಾರಿಕೆ ಹಾಗೂ ಅನಿರೀಕ್ಷಿತ ಪ್ರಾಸಗಳ ಮೂಲಕ ಮನೋಜ್ಞವಾಗಿ ಮೂಡಿಬಂದಿದೆ:

'ಎಂಥ ದಿನಗಳೇ ಚಿನ್ನ, ಎಂಥ ದಿನಗಳೇ ಚಿನ್ನ
ದಂಥ ದಿನಗಳೇ
ಷೋಕಿದಾರನಂತೆ ಕಾಲ ನಿನ್ನ ಕೆನ್ನೆ ಬಾರಿನಲ್ಲಿ
ಕುಂತ ದಿನಗಳೇ, ಸಾಲ ನಿಂತ ದಿನಗಳೇ.
ಆ ಈ ಸಲೂನಿನಲ್ಲಿ, ರೇಡಿಯೋ ಸಿಲೋನಿನಲ್ಲಿ
ಪೆರೇಡ್ ರೋಡು ಅರಳಿಸುವ ಸಂಜೆಗಳ ಬಲೂನಿನಲ್ಲಿ
ಬದುಕು ಸೋಪುಗುಳ್ಳೆಯಂತೆ ಸರಿದ ದಿನಗಳೇ
ಅಹ, ಸ್ವಂತ ದಿನಗಳೇ, ಶ್ರೀ
ಮಂತ ದಿನಗಳೇ.

'ಎಗ್ಸಿಬಿಷನ್ನಿನ ಮೆರಿಗೋರೌಂಡಿನ ಐಸ್‌ಕ್ಯಾಂಡಿ
ಸೆಕ್ಸಿ ಕ್ಯುಷನ್ನಿನ, ಬ್ಯಾಂಗೂ ಸೌಂಡಿನ ಮಿಸ್‌ಸ್ಯಾಂಡಿ—
ಆಕೆಯೆದೆಯ ಮುಚ್ಚೆಯಂಥ ಚಿಕ್ಕ ದಿನಗಳೇ
ಪ್ರೀತಿ ಮಿಕ್ಕ ದಿನಗಳೇ...
ಎಂಥ ದಿನಗಳೇ ಚಿನ್ನ, ಎಂಥ ದಿನಗಳೇ ಚಿನ್ನ
ದಂಥ ದಿನಗಳೇ.'
(ಎಂಥ ದಿನಗಳೆ)

ಸ್ವಚ್ಛಂದ ಶೈಲಿಯ ನವ್ಯ ಕವನದಂತೆಯೇ, ನಿಯತ ಲಯ ಹಾಗೂ ಛಂದೋಬಂಧದ ಪ್ರೇಮಗೀತೆಯಲ್ಲೂ ನಗರ ಪರಿಸರದ ಪ್ರಣಯ ಪ್ರಕರಣವನ್ನು ಹೇಗೆ ಅಸಹಜವೆನಿಸದ ಹಾಗೆ ಅಭಿವ್ಯಕ್ತಿಸಲು ಸಾಧ್ಯ ಎಂಬುದಕ್ಕೆ 'ಪ್ರೇಮಿಗಳಿಗೆ ಕಡು ವೈರಿ ನಗರ' (ನವೋಲ್ಲಾಸ) ಎಂಬ ಗೀತೆ ಉದಾಹರಣೆಯಾಗಿದೆ. ಅದರ ಕೆಲವು ಭಾಗಗಳು ಹೀಗಿವೆ:

'ಪ್ರೇಮಿಗಳಿಗೆ ಕಡು ವೈರಿ, ಪ್ರಿಯೆ, ನಮ್ಮೀ ಹಿರಿ ನಗರ:
ಅಡಿಗಡಿಗೆ ನೂರು ತಡೆ

ನಮಗಿಲ್ಲ ಎಲ್ಲೂ ಎಡೆ
ಕಸಕಿಂತಲು ನಾವು ಕಡೆ—
ನಮ್ಮಿರವನೆ ನುಂಗುತ್ತಿದೆ ಜನ ವಾಹನ ಸಾಗರ.

'ಸಿನಿಮದ ಅರೆಗತ್ತಲೆಯಲೊ
ನಾಟಕದ ನೇಪಥ್ಯದಲೊ,
ಮೈ ತಾಕಿಸಿದೊಡನೆ, 'ಹಲೋ!'
ಎನ್ನುವ ದನಿ, ಮೂದಲೆ ಜೊತೆ ಕಿರು ಸಿಳ್ಳೆಯ ಕುಹಕ

'ಕೆಫೆ ರೆಸ್ಟುರ ಬಾರೊ
ಮೂಲೆಯ ಮರೆ ಕಾರೊ
ಲಾಡ್ಜಿಂಗಿನ ಸೂರೊ—
ಬಿಡುವಿಲ್ಲದೆ ಭೋರ್ಗರೆಯುವ ಅಬ್ಬರಗಳ ನಯಾಗರ.'

(ಪ್ರೇಮಿಗಳಿಗೆ ಕಡು ವೈರಿ ನಗರ)

ನಿಸಾರರ ಪ್ರೇಮ ಕವನಗಳಲ್ಲಿ 'ಎಲ್ಲಿದ್ದೀಯ ಹುಡುಗ' (ಅನಾಮಿಕ ಆಂಗ್ಲರು) ಒಂದು ವಿಶಿಷ್ಟ ರಚನೆಯಾಗಿ ಎದ್ದು ತೋರುತ್ತದೆ. ಇಲ್ಲಿನ ನಿರೂಪಕಿ ಪ್ರೌಢೆ, ಆಧುನಿಕ ರಾಧೆ. ಇವಳು ಕೃಷ್ಣನಂಥ ಒಬ್ಬ ಹುಡುಗು ಬುದ್ಧಿಯ ತರುಣನ ಮೋಹಕ್ಕೆ ವಶಳಾಗಿದ್ದಾಳೆ. ಅವನ ಒಲವಿಗಾಗಿ, ಅವನೊಂದಿಗೆ ಮಿಲನಕ್ಕಾಗಿ ಅವಳ ಅದಮ್ಯ ಹಂಬಲ ಈ ಕವನದಲ್ಲಿ ಅತ್ಯಂತ ಕಲಾತ್ಮಕ ಹಾಗೂ ನಾಟಕೀಯವಾಗಿ ಪಡಿಮೂಡಿದೆ. ಇದರ ಕೆಲವು ಭಾಗಗಳು:

'ಎಲ್ಲಿದ್ದೀಯ ನೀನೀಗ ಹುಡುಗ?
ಬಂದು—
ಬಂದರ ಮುಟ್ಟಿಸೊ ಹಡಗ.

'ತಂಗಿದ್ದ ನೆಲೆಗಳ, ಅಲೆದಿದ್ದ ಮಲೆಗಳ
ಬಲು ಬೇಗ ಮರೆಯುವ ಹುಡುಗ;
ಅಂದದ ಹೆಂಗಳ ಕಂಗಳ ಭಂಗಿಗೆ
ಸರ್ರೆಂದು ಜಾರುವ ತುಡುಗ.

'ನಾಜೂಕು ನಯಗಳ ಮರವಟ್ಟ ರೂಢಿಗೆ
ಗಡುಸಿನ ಹೊಸ ರುಚಿ ಎರೆದ;
ನನ್ನೊಳಗ ಅಳಿದ, ನನ್ನೊಳಗೆ ಬೆಳೆದ,
ಮುಂಬೆಳಗ ಬಾಳಲ್ಲಿ ತೆರೆದ.

'ಮತ್ತೇರಿ ಮದಿಸುತ್ತ ಸತ್ತೆನೆಂದರು ಬಿಡದ
ಸೆಲೆಯೊಡಿಸಿ ಸೋಲಿಸುವ ಹುಡುಗ;
ಹಣೆ ಹುಬ್ಬು ಎದೆ ಬೆವೆತು—ತಗ್ಗಿದ ನೆರೆಯಾಗಿ—
ಮಗ್ಗಲು ಹೊರಳುವ ಹುಡುಗ.

'ನೀನೊಬ್ಬನೇ ಸಾಕು, ನೀನೊಬ್ಬನೇ ಬೇಕು,
ನೀನೇನೇ ನನ್ನೆಲ್ಲ ಬಳಗ;

ಬಾ ಬಾರೆ ಎಂದೊಡನೆ ಬಂದೇನು ನಿನ್ನೊಡನೆ—
ಈ ಬಾಳಿಗಾಗು ನೀ ಸಲಗ.'
(ಎಲ್ಲಿದ್ದೀಯ ಹುಡುಗ)

—ಹೀಗೆ ಪ್ರೇಮದ ವಿವಿಧ ವಿಭಿನ್ನ ವರ್ಣಛಾಯೆಗಳನ್ನು ನಿಸಾರ್ ತಮ್ಮ ಹಲವು ಯಶಸ್ವಿ ನವ್ಯ ಕವನಗಳಲ್ಲಿ ಹಾಗೂ ಪ್ರೇಮಗೀತೆಗಳಲ್ಲಿ ತಮ್ಮದೇ ಅನನ್ಯ ರೀತಿಯಲ್ಲಿ ಕಂಡರಿಸಿದ್ದಾರೆ. ಹೆಸರಿಸಲೇಬೇಕಾದ ಇಂಥ ಕೆಲವು ರಚನೆಗಳು: 'ನಿಧಿ' (ಸುಮುಹೂರ್ತ)', 'ನೆನಪೆಲ್ಲಿ ಮಾಸುತ್ತೆ, ಪ್ರಿಯೆ' (ಸ್ವಯಂಸೇವೆಯ ಗಿಳಿಗಳು), 'ನಿನ್ನ ಹಿರಿಮೆ', 'ನಾ ನಿನ್ನ ಕಂಡಾಗ' (ನಿತ್ಯೋತ್ಸವ), 'ಮತ್ತೇನೆ ಕೇಳಿದರು' (ಬಹಿರಂತರ), 'ಬರುವನೇನೆ, ಸಖಿ?', 'ಅವಸರ ಏಕೆ?', 'ಸವಿಯ ಸೆಲೆಯಾಗಿ ಬಂದಾತ' (ನವೋಲ್ಲಾಸ).

ಗಂಡು ಹೆಣ್ಣಿನ ನಡುವಿನ ಪ್ರೀತಿ, ಪ್ರಣಯಗಳ ಈ ಪ್ರಕೃತಿ ಸಹಜ ಆಕರ್ಷಣೆ ಸಫಲಗೊಳ್ಳುವುದು ಮದುವೆಯಲ್ಲಿ, ದಾಂಪತ್ಯದಲ್ಲಿ ಹಾಗೂ ಸಂತಾನದಲ್ಲಿ. ಈ ಉದಾತ್ತ ಜೀವನ ತತ್ತ್ವವನ್ನು ನಿಸಾರ್ ತಮ್ಮ 'ಮದುವೆ' (ನೆನೆದವರ ಮನದಲ್ಲಿ) ಕವನದಲ್ಲಿ ಹೀಗೆ ನಿರೂಪಿಸಿದ್ದಾರೆ:

'ಯಾರು ಯಾರಿಗೆ ಋಣಿಯೊ?
ಅವಳಿಗಿವನೊ? ಇಲ್ಲ, ಇವನಿಗವಳೊ?
ಯಾರಾದರೇನಂತೆ! ಒಂದೆ ಗುರಿಗೆಸೆದಂಥ
ಎರಡು ಬಾಣಗಳಂತೆ ತಾಗಬೇಕು.
ಎರಡು ಗಾಲಿಯ ಬಂಡಿ ಸಾಗುತಿದ್ದರೆ ಸಾಕು
ಋಣ ಕಟ್ಟಿಕೊಂಡೇನು ಆಗಬೇಕು?
ತಂತಿ ಮೇಲಿನ ನಡಿಗೆ ಪ್ರಾಯದಲಿ ಸಂಸಾರ,
ತೂಕ ತಪ್ಪದೆ ಆತು ನಡೆಯಬೇಕು.
ಸೋತರೊಬ್ಬರು, ಎದ್ದು ಮತ್ತೊಬ್ಬರರಿವಿಂದ
ಸವ್ಯಸಾಚಿತ್ವದಲಿ ಕಾಯಬೇಕು.
ಬಾಳಿನನುಭವದಡೆಯೊಳಿಟ್ಟು ದೋರೆಗಳಿವರು,
ಕಾವಿನಲಿ ಹುಳಿ ನೀಗಿ ಮಾಗಬೇಕು.
ಅಂಬೆಗಾಲಿನ ಕೇಕೆ, ತೊದಲು ನಗೆಯ ಪತಾಕೆ—
ಕರುಳ ತೆನೆಗಳ ಹೊತ್ತು ಬೀಗಬೇಕು.'
(ಮದುವೆ)

ಕವಿಯು ಜೀವನಾನುಭವದ ಅಡೆಯಲ್ಲಿ ಮಾಗಿದ ಹಾಗೆ, ಅವರ ಪ್ರೇಮತತ್ತ್ವವೂ ಪರಿಪಕ್ವಗೊಂಡಿದೆ, ಉದಾತ್ತವಾಗಿದೆ. ಅದರ ಪರಿಣಾಮವಾಗಿ ಮೂಡಿ ಬಂದಿರುವ 'ನಿನ್ನ ಬಿಟ್ಟಿರಲಾರೆ' (ನವೋಲ್ಲಾಸ) ಎಂಬ ಸುಂದರ ಪ್ರೇಮಗೀತೆಯ ಈ ಕೆಲವು ಭಾಗಗಳೊಂದಿಗೆ ನನ್ನ ಲೇಖನವನ್ನು ಮುಕ್ತಾಯಗೊಳಿಸುತ್ತೇನೆ:

'ನಿನ್ನ ಅರೆ ಗಳಿಗೆಯೂ ನಾನು ಬಿಟ್ಟಿರಲಾರೆ;
ನಿನ್ನ ಪ್ರೇಮಕೆ ಬೆಲೆಯ ಕಟ್ಟಲಾರೆ.

ನೀನು ದೋಣಿಗೆ ಹುಟ್ಟು, ಹಗೆ ವಿರಸವನು ತೊಟ್ಟು
ಭವ ಜಲಾಂಬುಧಿಯಲ್ಲಿ ತೇಲಬಹುದೆ?
ನಿನ್ನ ಕೈ ನೆರವಿರದೆ ಬರಿದೆ ಬಾಳ್ ಮಗ್ಗದಲಿ
ಸುಖ ನೆಮ್ಮದಿಯ ಅರಿವೆ ನೂಲಬಹುದೆ?

'ಪ್ರಣಯದಾವೇಗಗಳ ಹುಚ್ಚು ಹೊಳೆ ತಗ್ಗಿಹುದು
ತಿಳಿ ಶಾಂತ ಒಲವೀಗ ಚೊಕ್ಕ ಹೊನ್ನು;
ಕೆಂಡದುರಿ ಚೆಂಬೆಳಕು; ಬಿರು ಬೇಗೆ ತಣ್ಣೆಳಲು;
ಪರಿಪಕ್ವವಾಗಿಹುದು ಬಾಳ ಹಣ್ಣು.

'ನೀನು ನಿರ್ಬಲೆ, ನಿಸ್ಸಹಾಯೆ ಎನುವುದು ಶಾಸ್ತ್ರ;
ಪುರುಷನೆದುರಲಿ ಮಣಿಯಬೇಕೆನುವುದು;
ಸೋಲನೊಪ್ಪದೆಯೆಂದು, ಅಡಿಗಡಿಗೆ ಕಹಿಯುಂಡು
ಕೊನೆಗೆ ಜಗವನೆ ಗೆಲುವೆ, ಓ ಪ್ರಿಯ ವಧು!'

ಸಾಹಿತ್ಯ ಸಂವಹನ ಕ್ರಿಯೆಯಲ್ಲಿ, ಅದರಲ್ಲೂ ಕಾವ್ಯಾಭಿವ್ಯಕ್ತಿಗೆ ಸಂಬಂಧಿಸಿದಂತೆ ಭಾಷೆಗೆ ವಾಚ್ಯ, ವ್ಯಂಗ್ಯಗಳ ಮಗ್ಗುಲುಗಳಿರುವುದು ಸರ್ವವಿದಿತ ಸಂಗತಿ. ವಾಚ್ಯ, ವ್ಯಂಗ್ಯಗಳಿಗೆ ಸಾಹಿತ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಕರ್ತವ್ಯ, ಸ್ಥಾನಮಾನಗಳಿವೆ. ಅವುಗಳ ತಿಳಿವಳಿಕೆ ಹಾಗೂ ಯುಕ್ತ ಬಳಕೆ ಅತ್ಯಂತ ಲಾಭಪ್ರದ. ಬಾಚಣಿಗೆಯ ತಯಾರಕ ಅದರಲ್ಲಿ ಇಬ್ಬಗೆಯ ಹಲ್ಲುಗಳನ್ನು ಮೂಡಿಸಿರುತ್ತಾನೆ. ಒಂದು: ದಪ್ಪ ಮತ್ತು ವಿರಳ ರಚನೆ ಉಳ್ಳವು. ಮತ್ತೊಂದು: ತೆಳ್ಳನೆಯ, ಒತ್ತೊತ್ತಾದ ರಚನೆ ಉಳ್ಳವು. ಮೊದಲಿಗೆ ಕೂದಲಿನ ಸಿಕ್ಕನ್ನು ಸಲೀಸಾಗಿ ಬಿಡಿಸಲು ಅನುಕೂಲವಾಗುವಂತೆ ಮತ್ತು ಸ್ಥೂಲವಾಗಿ ಮೇಲೆ ಮೇಲೆ ಬಾಚಿಕೊಳ್ಳಲು ಮೊದಲನೆಯ ಬಗೆಯ ಹಲ್ಲುಗಳು ಬಳಕೆಗೆ ಬರುತ್ತವೆ. ಆಮೇಲೆ ಆಳವಾಗಿ, ಸೂಕ್ಷ್ಮವಾಗಿ ಬಾಚಿಕೊಂಡು ಕೂದಲನ್ನು ಸರಿಯಾಗಿ ಕೂರಿಸುವುದಕ್ಕಾಗಿ ಎರಡನೆಯ ರೀತಿಯ ಹಲ್ಲುಗಳು ನೆರವಾಗುತ್ತವೆ. ಎರಡೂ ಅವಕ್ಕೆ ಅನುಗುಣವಾದ ಕೆಲಸವನ್ನು ಸಮಾನೌಚಿತ್ಯದಿಂದ ನಿರ್ವಹಿಸಿ ಸಾರ್ಥಕವಾಗುವಂಥವೇ. ನಮ್ಮ ಅಗತ್ಯವನ್ನು ಅರಿತು ಈ ಎರಡನ್ನೂ ಸಂದರ್ಭಾನುಸಾರವಾಗಿ ಬಳಸಿಕೊಳ್ಳಬೇಕು. ವಾಚ್ಯಾರ್ಥ-ವ್ಯಂಗ್ಯಾರ್ಥಗಳ ವಿಷಯವೂ ಈ ತೆರದ್ದೇ.

(ಸಾಹಿತ್ಯದಲ್ಲಿ ವಾಚ್ಯ-ವ್ಯಂಗ್ಯಾರ್ಥಗಳ ಸಮುಚಿತ ಬಳಕೆ)



ನಿಸಾರರ ಕಾವ್ಯದಲ್ಲಿ ವಿರಹ ವಿರಸಗಳು

♦ ಎಂ. ಆರ್. ಕಮಲ

ಯಾವುದೇ ಭಾಷೆಯ ಸಾಹಿತ್ಯದ ಬಹು ಮುಖ್ಯ ಆಶಯವು ಮನುಷ್ಯನ ಬದುಕಿನ ಒಳಿತು-ಕೆಡಕು, ಮನುಷ್ಯ ಮತ್ತು ಆತನ ಮನಸ್ಸು, ಸಮಾಜ ಮತ್ತದರ ಗತಿಶೀಲತೆ ಹಾಗೂ ಆಶೋತ್ತರಗಳನ್ನು ಅದರೆಲ್ಲ ಸೂಕ್ಷ್ಮತೆಯೊಂದಿಗೆ ದಾಖಲಿಸುವುದೇ ಆಗಿದೆ. ಒಂದರ್ಥದಲ್ಲಿ ನಮ್ಮ ಎಲ್ಲ ಪ್ರಾಚೀನ-ಆಧುನಿಕ ಸಾಹಿತ್ಯ ಪ್ರಕಾರಗಳೂ ಆಯಾ ಕಾಲಘಟ್ಟದ, ಆಯಾ ಜನಾಂಗದ ಭಾವಕೋಶಗಳ ಇತಿಹಾಸವನ್ನು ಮುಂದಿನ ಜನಾಂಗಗಳಿಗಾಗಿ ಕಾಯ್ದಿಡುವ ಪ್ರಯತ್ನಗಳಾಗಿವೆ. ಈ ಬಗೆಯ ಭಾವದಿತಿಹಾಸವು ಮುಂದಿನ ತಲೆಮಾರುಗಳಿಗೆ ಈಗಾಗಲೇ ಪ್ರಸ್ತಾಪಿತವಾಗಿರುವ ಮಹತ್ವದ ವಿಷಯಗಳನ್ನು ಸಾದರಪಡಿಸುತ್ತದೆ. ಹೀಗೆ ಮಾಡುವಾಗ, ಅಂತಹ ವಿಷಯಗಳ ಉನ್ನತ ಚಿಂತನೆಗಳಿಗೂ ಮಿಗಿಲಾದ, ತನ್ನ ಕಾಲಮಾನಕ್ಕೆ ತಕ್ಕುದಾದ ಭಾವಾನ್ವೇಷಣೆಯಲ್ಲಿ ತೊಡಗಲು ಅನುಕೂಲವಾಗುವಂತಹ ಊರುಗೋಲನ್ನು ಒದಗಿಸಿಕೊಡುತ್ತದೆ. ಈ ಅರ್ಥದಲ್ಲಿ ಹೊಸ ತಲೆಮಾರಿನ ಕವಿ ತನ್ನ ಹಿಂದಿನ ಎಲ್ಲ ಲೇಖಕರ ಕರುಣೆಯ ಕೂಸೇ ಸರಿ. ಹಿಂದಿನವರನ್ನು ಅಂತರ್ಗತ ಮಾಡಿಕೊಂಡು ಹೆಜ್ಜೆ ನಡಿಗೆ ಕಲಿತು ಓಟದಲ್ಲಿ ಪರಿಣತಿ ಸಾಧಿಸುತ್ತ ತನ್ನದೇ ಹಾದಿಗಳನ್ನು ಸೃಷ್ಟಿಸಿಕೊಳ್ಳುವುದು ಆತನ ಸೃಜನಶೀಲತೆಯ ಮೇಲೆ ಅವಲಂಬಿತವಾಗಿದೆ. ಹಳೆಯ ಸಾರ ಆತನೊಳಗಿಳಿದಷ್ಟೂ ಅವನ ನೋಟ ಪಕ್ವವಾಗುತ್ತದೆ. ಪಕ್ವತೆ ಅತಿ ಸೂಕ್ತವಾದ

ದಾರಿಯನ್ನು ಹಿಡಿಯಲು ಭಾಷೆಯನ್ನು ಒದಗಿಸುತ್ತದೆ.

ಇಪ್ಪತ್ತನೆಯ ಶತಮಾನದ ಆರಂಭದಿಂದ ಈವರೆಗೆ—ಸುಮಾರು ನೂರಾ ಐದು ವರ್ಷಗಳ ಇತಿಹಾಸವನ್ನು ಹೊಂದಿರುವ—ಆಧುನಿಕ ಕನ್ನಡ ಸಾಹಿತ್ಯವು ಅನೇಕ ಚಳುವಳಿಗಳನ್ನು ಕಂಡಿದೆ. ಆರಂಭ ಕಾಲದ ಒಂದೆರಡು ದಶಕಗಳಲ್ಲಿ ಒಂದು ನಿಶ್ಚಿತ ಆಧುನಿಕ ಸ್ವರೂಪವಾಗಿ ಹೊರಹೊಮ್ಮುವ ಪ್ರಕ್ರಿಯೆಯಲ್ಲಿ ನಿರತವಾಗಿದ್ದ ಭಾಷೆ ತನ್ನ ಕಾಲದ ಸಹಜ ಆಶಯಗಳಾದ ಸ್ವಾತಂತ್ರ್ಯ, ಪರಿವರ್ತನೆ, ನಿಸರ್ಗ, ಪ್ರೇಮ, ಐಕ್ಯತೆ, ಮುಂಬೆಳಗನ್ನು ಮೂಡಿಸುವ ತವಕ, ಅನುರಾಗಗಳಂತಹ ವಿಷಯಗಳನ್ನು ತನ್ನ ಸಾಹಿತ್ಯ ಅಭಿವ್ಯಕ್ತಿಯನ್ನಾಗಿ ಆಯ್ದುಕೊಂಡಿತ್ತು.

ಕೋಶದಿಂದ ಹೊರಬಂದು ಆಕರ್ಷಕ ಚಿಟ್ಟೆಯಾಗಿ ರೂಪಾಂತರಗೊಳ್ಳುವ ಕ್ರಿಯೆಯಲ್ಲಿ ನಿರತವಾಗಿದ್ದ ಭಾಷೆಗೆ ತಾನು ಸ್ಪರ್ಶಿಸಿದ ಮೊಗ್ಗುಗಳನ್ನೆಲ್ಲ ಘಮಿಸುವ ಹೂವಾಗಿಸಿ ಅರಳಿಸುವ ಕಸುವು ಆಗ ತಾನೇ ಪ್ರಾಪ್ತವಾಗತೊಡಗಿತ್ತು. ಅಷ್ಟೇ ಅಲ್ಲದೆ, ಮುಂದಿನ ಎಲ್ಲ ಬಗೆಯ ಚಳುವಳಿಗಳಿಗೂ ತಾನೇ ಆಕರವಾಗುವ ಸಂಭ್ರಮಕ್ಕೆ ಒಳಗಾದಂತೆ ತನ್ನನ್ನು ಮತ್ತಷ್ಟು ಮತ್ತಷ್ಟು ಹರಿತಗೊಳಿಸಿಕೊಳ್ಳುತ್ತಿತ್ತು. ಹೀಗಾಗಿಯೇ, ಅನಂತರದ ಕಾಲಘಟ್ಟದಲ್ಲಿ ತನ್ನ ತಕ್ಷಣದ ಸಾಹಿತ್ಯ ಪ್ರಕಾರಕ್ಕೆ ಪ್ರತಿಯಾಗಿ ಹುಟ್ಟಿವೆ ಎಂದು ಮೇಲುನೋಟಕ್ಕೆ ಅನ್ನಿಸುವ ಎಲ್ಲ ಚಳುವಳಿಗಳೂ ನಿಜವಾದ ಅರ್ಥದಲ್ಲಿ ಮುಂಬೆಳಗಿನ ಬೆಳಕಿನಿಂದಲೇ ಸ್ಫೂರ್ತಿ ಪಡೆದಿವೆ.

ಈ ಮೂಲ ಬೇರನ್ನು ನವೋದಯವೆಂದು ಗುರುತಿಸಬಹುದು. ನವೋದಯದ ಅನಂತರದ ಕಾಲದಲ್ಲಿ ಹುಟ್ಟಿದ ಎಲ್ಲ ಬಗೆಯ ಹೊಸ ಅಭಿವ್ಯಕ್ತಿಗಳ ಆಶಯವೂ ಮೂಲ ಬೇರಿನ ಆಶಯಕ್ಕೆ ಹೊಂದಿಕೊಂಡಂತೆಯೇ ಇರುವುದರಿಂದ ಅವು ಚಳುವಳಿಗಳಾಗಿರದೆ ಆ ಮರದ ಹೊಸ ಟಿಸಿಲುಗಳಾಗಿವೆ ಎನ್ನುವ ಇತ್ತೀಚಿನ ನಿಲವುಗಳು ಈ ಮಾತಿಗೆ ಪುಷ್ಟಿಯಾಗಿವೆ. ಅಭಿಪ್ರಾಯ ಭೇದಗಳೇನೇ ಇದ್ದರೂ ನವೋದಯ ಸಾಹಿತ್ಯವು ಅನಂತರದ ತಲೆಮಾರಿನ ಬರಹಗಾರರ ಮೇಲೆ ಬೀರುತ್ತಿರುವ ಪ್ರಭಾವ ಗಮನಾರ್ಹವಾದುದಾಗಿದೆ.

ನವೋದಯದ ಒಟ್ಟಾರೆ ಸಾಹಿತ್ಯದ ಕುರಿತು ಅನೇಕ ನೆಲೆಯಲ್ಲಿ ಸಂವಾದ, ಚರ್ಚೆಗಳು ನಡೆದಿವೆ. ವಿಸ್ತೃತವಾಗಿ ವಿಮರ್ಶೆಗಳೂ ಪ್ರಕಟಗೊಂಡಿವೆ. ಸಾಹಿತ್ಯ ಪ್ರಕಾರಗಳಲ್ಲಿ ಸಾಮಾನ್ಯವಾಗಿ ಸಹೃದಯ ಮತ್ತು ಮೀಮಾಂಸಕ—ಹೀಗೆ ಇಬ್ಬರಿಗೂ ಆಪ್ಯಾಯಮಾನ ವಾಗುವ ಪ್ರಕಾರವೆಂದರೆ ಕಾವ್ಯವೇ ಆಗಿದೆ. ಅಂತೆಯೇ, ಆ ಕಾಲದ ಕಾವ್ಯ ಎಷ್ಟು ಸೂಕ್ಷ್ಮವಾಗಿದೆ, ಪರಿಪೂರ್ಣವಾಗಿದೆ ಎಂಬ ಆಧಾರದ ಮೇಲೆ ಒಟ್ಟಾರೆ ಸಾಹಿತ್ಯವನ್ನು ಮಾಪನ ಮಾಡುವುದು ವಾಡಿಕೆ. ಈ ಕಾಲಮಾನದ ಬೇಂದ್ರೆ, ಕುವೆಂಪು, ಪುತಿನ, ಮಧುರಚೆನ್ನ, ಕಡೆಂಗೋಡ್ಲು, ಕೆಎಸ್‌ನ ಅಭಿಜಾತ ಪ್ರತಿಭೆಗಳಾಗಿದ್ದಾರೆ.

ನವೋದಯದ ಸೊಬಗಿಗೆ ಮನಸೋತು, ಅನುರಾಗಕ್ಕೆ ಒಳಗಾಗಿ ಅದರ ಬೆರಳನ್ನು ಹಿಡಿದು ನಡೆಯುತ್ತ ಅನಂತರ ತಮ್ಮ ಭಿನ್ನ ದಾರಿಗಳನ್ನು ರೂಪಿಸಿಕೊಂಡವರಲ್ಲಿ ಗೋಪಾಲ ಕೃಷ್ಣ ಅಡಿಗ, ಚೆನ್ನವೀರ ಕಣವಿ, ಜಿಎಸ್‌ಎಸ್, ಕೆ.ಎಸ್. ನಿಸಾರ್ ಅಹಮದ್

ಮುಖ್ಯರಾಗಿದ್ದಾರೆ. ಈ ಎಲ್ಲ ಕವಿಗಳು ಅಭಿವ್ಯಕ್ತಿಯಲ್ಲಿ ತಮ್ಮದೇ ವಿಶಿಷ್ಟತೆಯನ್ನು ಹೊಂದಿದ್ದು, ನಿರಂತರ ಪ್ರಯೋಗಶೀಲತೆ ಅವರನ್ನು ಸದಾ ಕಾಲ ಸಮಕಾಲೀನರನ್ನಾಗಿಸಿದೆ. ಅದರಲ್ಲೂ ಅಡಿಗರ 'ಭಾವ ತರಂಗ' ಮತ್ತು ಅವರ ಕೊನೆಗಾಲದ ಸಂಕಲನಗಳಾದ 'ಚಿಂತಾಮಣಿಯಲ್ಲಿ ಕಂಡ ಮುಖ', 'ಸುವರ್ಣ ಪುತ್ಥಳಿ'ಯ ಕವಿತೆಗಳನ್ನು ಓದಿದರೆ ಈ ತಲೆಮಾರಿನ ಕವಿಗಳು ತಾಯಿಬೇರಿನೊಂದಿಗೆ ಸಂಬಂಧ ಬೆಸೆದೇ ಹೇಗೆ ಹೊಸ ಟಿಸಿಲುಗಳಾಗಿ ಬೆಳೆಯಲು ಪ್ರಯತ್ನಿಸಿದರು ಎಂಬುದು ಅರಿವಾಗುತ್ತದೆ.

ನವೋದಯ ಕವಿಗಳನ್ನು ಮತ್ತೆ ಮತ್ತೆ ದಟ್ಟವಾಗಿ ಕಾಡಿದ, ಅಭಿವ್ಯಕ್ತಿಗಾಗಿ ತಡಕಾಡಿಸಿದ ವಿಷಯಗಳಲ್ಲಿ ಅನುರಾಗ, ವಿರಹ, ವಿರಸ, ದಾಂಪತ್ಯಶೀಲತೆ, ಮಿಲನಗಳಂತಹ ವಿಷಯಗಳು ಅನಂತರದ ಕವಿಗಳಲ್ಲೂ ಕಾಣಿಸುವುದಕ್ಕೆ ಕಾರಣ ಆ ಭಾವಗಳು ಮನುಷ್ಯ ಬದುಕಿನ ಅನಿವಾರ್ಯ ಭಾಗಗಳಾಗಿವೆ ಎನ್ನುವುದು ಒಂದಾದರೆ, ತಮ್ಮ ಭಿನ್ನತೆಯನ್ನು ತೋರಲು ಮತ್ತು ಮನ್ನಣೆಯನ್ನು ಪಡೆಯಲು ಮಾರ್ಗಗಳೂ ಆಗಿವೆ ಎನ್ನುವುದು ಇನ್ನೊಂದು ಅಂಶವಾಗಿದೆ. ಒಂದು ನೆಲೆಯಲ್ಲಿ ಇವನ್ನು ನಲ್ಲ-ನಲ್ಲೆಯರ ಸರಳ ಪ್ರೇಮ-ಕಾಮ, ವಿರಹ-ವಿರಸ, ಅಗಲಿಕೆಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಬಹುದಾದರೆ, ಕವಿಯ ಅನುರಾಗ ಅಧ್ಯಾತ್ಮಕ್ಕೇರಿ ಬಿಡುಗಡೆಗಾಗಿ ತಹತಹಿಸಿದ ನೆಲೆಯಲ್ಲೂ ನಿಷ್ಕರ್ಷೆಗೆ ಒಳಪಡಿಸುವ ನೆಲೆಯಲ್ಲಿಯೂ ವ್ಯಾಖ್ಯಾನಿಸಬಹುದಾಗಿದೆ. ಬೇಂದ್ರೆ ಅವರ 'ದಾಂಪತ್ಯ ಗೀತ', 'ಆಡದಿರು ಮನದನ್ನೆ', 'ಮೇಘದೂತ'ದ ಅನುವಾದಿತ ಕವಿತೆಗಳು ವಿರಸ-ವಿರಹಗಳನ್ನು ವೈಯಕ್ತಿಕ ನೆಲೆಯಲ್ಲಿ ಹೇಳುತ್ತಲೇ ಆಧ್ಯಾತ್ಮಿಕವಾಗುವುದು ಈ ಹಿನ್ನೆಲೆಯಲ್ಲಿಯೇ. ಮಧುರಚೆನ್ನರ 'ನನ್ನ ನಲ್ಲ', ಕಡೆಂಗೋಡ್ಲು ಅವರ 'ಮಾದ್ರಿಯ ಚಿತೆ', ಪುತಿನ ಅವರ ಕೃಷ್ಣನ ತುಡಿತದ ಕವಿತೆಗಳು, ಕುವೆಂಪು ಅವರ ಪ್ರೇಮ ಕವಿತೆಗಳು, ಕೆಎಸ್‌ನ ಅವರ ದಾಂಪತ್ಯ ಶೀಲದ ಕವಿತೆಗಳು, ಅಡಿಗರ 'ಮೋಹನ ಮುರಲಿ', 'ಒಡೆದು ಬಿದ್ದ ಕೊಳಲು' ಕವಿತೆಗಳು ಪ್ರೇಮವನ್ನು ಅಧ್ಯಾತ್ಮದೊಂದಿಗೆ ಸಮೀಕರಿಸಿ ಬಿಡುಗಡೆಯನ್ನು ಮುಖ್ಯ ಆಶಯವಾಗಿ ಹೊಂದಿದ್ದು, ಇಲ್ಲಿನ ಪ್ರೇಮ ಇಹದ ಬೇಗೆಯನ್ನು ಮುಕ್ತಗೊಳಿಸಿ, ಪರವನ್ನು ಪಡೆಯಲು ಮಾರ್ಗವಾಗಿ ಸ್ವೀಕರಿಸಿದಂತೆ ಕಾಣುತ್ತದೆ. ಲೌಕಿಕ ಪ್ರೇಮಕ್ಕೆ ಅಲೌಕಿಕ ಹೊಳಪನ್ನು ನೀಡುವುದು, ಇರುವುದನ್ನು ಬಿಟ್ಟು, ಇರದಿರುವುದನ್ನು ಪಡೆಯುವುದು ಇಂತಹ ಅಭಿವ್ಯಕ್ತಿಯ ಬಹು ಮುಖ್ಯ ಕಾಳಜಿಯಾಗಿದೆ.

ತಮ್ಮ ಭಾವಗೀತೆಗಳಿಗಾಗಿ ಪ್ರಸಿದ್ಧರಾಗಿರುವಂತೆಯೇ ಅತಿ ವಿಶಿಷ್ಟ ಶೈಲಿ, ಭಾಷಾಭಿವ್ಯಕ್ತಿ, ಶಬ್ದಭಂಡಾರ, ಪ್ರತಿಮೆಗಳ ಸೃಷ್ಟಿಗಳಿಗಾಗಿಯೂ ಪರಿಚಿತರಾಗಿರುವ ಕೆ.ಎಸ್. ನಿಸಾರ್ ಅಹಮದ್ ಈ ಎರಡೂ ಪ್ರತ್ಯೇಕ ಭಾವಾಭಿವ್ಯಕ್ತಿಯನ್ನು ಕಾಯ್ದುಕೊಂಡು ಬಂದಿರುವುದು ಅಚ್ಚರಿಯ ವಿಷಯವಾಗಿದೆ. ಅವರು ನಿತ್ಯೋತ್ಸವ ಕವಿಯೆಂದು ಹೇಗೆ ಪರಿಚಿತರೋ ಹಾಗೆಯೇ 'ಅಮ್ಮ, ಆಚಾರ ಮತ್ತು ನಾನು', 'ಕುರಿಗಳು, ಸಾರ್', 'ರಾಮನ್ ಸತ್ತ ಸುದ್ದಿ' ತರಹದ ಕವಿತೆಗಳನ್ನು ಬರೆದಿರುವ ಕವಿಯೆಂದೂ ಪರಿಚಿತರು. ಈ ಎರಡೂ ಬಗೆಯ ಕಾವ್ಯಾಭ್ಯಾಸವನ್ನು ಏಕ ಕಾಲಕ್ಕೆ ನಡೆಸಿಕೊಂಡು ಹೋಗುವ ಪರಿಣತಿಯನ್ನು ನಿಸಾರ್ ಅವರು ಸಾಧಿಸಿದ್ದಾರೆ.

ನವೋದಯ ಕವಿಗಳು ಭಾವಗೀತೆಗಳ ಮುಖ್ಯ ಭಿತ್ತಿಯನ್ನು ನಿರ್ಮಿಸಿ ಕೊಟ್ಟಿದ್ದು ಮುಂದಿನ ತಲೆಮಾರುಗಳ ಕವಿಗಳಿಗೆ ಅನುಕೂಲವೇ ಆಗಿತ್ತು. ಈ ಕವಿಗಳೇನಿದ್ದರೂ ಹೊಸ ಬಗೆಯಲ್ಲಿ, ತಮ್ಮತನವನ್ನು ತೋರಿಸುವ ರೀತಿಯಲ್ಲಿ ಅಭಿವ್ಯಕ್ತಿಸುವ ಪರಿಣತಿಯನ್ನು ಸಾಧಿಸುವ ಅಗತ್ಯ ಮಾತ್ರವಿತ್ತು. ರಾಷ್ಟ್ರೀಯತೆ, ನಾಡು ನುಡಿಯ ಕಳಕಳಿ, ಸ್ವಾತಂತ್ರ್ಯ ಪಡೆದಾದ ಮೇಲೆ ಸಮಾಜ ನಿರ್ಮಿಸಲು ಅಗತ್ಯವಾಗಿ ಗಮನ ನೀಡಬೇಕಾದ ವಿಷಯಗಳು ಹೊಸದಾಗಿ ಸೇರ್ಪಡೆಯಾಗಿದ್ದವು. ಉಳಿದಂತೆ ನಿಸರ್ಗ ಪ್ರೇಮ, ಅನುರಾಗ, ವಿರಹ-ವಿರಸಗಳು ಅಭಿವ್ಯಕ್ತಿಯ ಪ್ರಿಯ ಅಂಶಗಳಾಗಿಯೇ ಉಳಿದುಕೊಂಡಿದ್ದವು.

ಈವರೆಗೆ ಸುಮಾರು ಹನ್ನೆರಡು ಕವಿತಾ ಸಂಕಲನಗಳನ್ನು ಪ್ರಕಟಿಸಿರುವ ನಿಸಾರ್ ಅವರು ಈಗಾಗಲೇ ಪ್ರಸ್ತಾಪಿಸಲಾಗಿರುವ ಲಕ್ಷಣಗಳನ್ನು ಹೊಂದಿರುವ ಭಾವಗೀತೆಗಳನ್ನು ಬರೆಯುತ್ತಲೇ ಬಂದಿದ್ದಾರೆ. ನಿಸರ್ಗಪ್ರಿಯತೆ, ಫಲಿಸದ ಪ್ರೇಮಕ್ಕಾಗಿ ಆವರಿಸುವ ವಿಷಾದ, ಅದರಿಂದ ಉಂಟಾಗುವ ಅನುತಾಪ, ಸಂಚಾರಿಯಾಗಿ ಕಾಣಿಸಿಕೊಳ್ಳುವ ಜುಗುಪ್ಸೆ, ನಿರಂತರವಲ್ಲದ ಅಗಲಿಕೆ, ಹಲವೊಮ್ಮೆ ಸಲ್ಲಾಪ, ಕೋಪ, ಅಸೂಯೆ, ಅನುರಾಗವಿದ್ದೂ ಪಾರತಂತ್ರತೆಯಿಂದ ಬೇರ್ಪಡುವುದು, ಉದ್ವೇಗ, ಉನ್ಮಾದ, ಪ್ರಲಾಪ, ಜಡತೆ, ಯಾವುದು ಸರಿ, ಯಾವುದು ಅಲ್ಲ ಎಂಬ ದ್ವಂದ್ವ ಮತ್ತು ಅದರಿಂದ ಉದ್ಭವಿಸುವ ನೋವು—ಈ ಬಗೆಯ ಎಲ್ಲ ಭಾವಗಳನ್ನೂ ಅವರ ಭಾವಗೀತೆಗಳು ಒಳಗೊಳ್ಳುತ್ತವೆ.

'ಆಹ್ವಾನ' ಕವಿತೆಯನ್ನೇ ಗಮನಿಸಿದರೆ—

**'ಸಿದ್ಧವಿದೆ ಬಾ ಯಾತ್ರಿ, ಎದೆಯು ಗದ್ದುಗೆ ನಿನಗೆ
ರಾತ್ರಿ ಮಾತ್ರವನಿಲ್ಲಿ ಕಳೆದು ಹೋಗು.
ಅಗಣಿತ ವಸಂತಗಳವರೆಗು ಬರಿದಾದ ಬಗೆ
ಕರೆಯುತಿದೆ, ಮರುಗಿಸದೆ ಅದರ ಕೊರಗು?**

**'ಮುಂಗಾರು ಮೋಡಗಳ ಸಿಂಗಾರದಾಭರಣ
ವ್ಯರ್ಥ ಕುಣಿಯುವ ನವಿಲೆ ಇಲ್ಲದಿರಲು;
ಇಬ್ಬನಿಯ ಹನಿಗಳಿಗೆ ಚೆಲುವೆಲ್ಲಿ? ಕಳೆಯೆಲ್ಲಿ?
ರವಿ ಕಿರಣ ಬಣ್ಣಗಳ ಮುಡಿಸದಿರಲು?'**

(ಆಹ್ವಾನ)

ಇಲ್ಲಿ ವಿರಹ ವೇದನೆಯನ್ನು ಬೇರೆ ಬೇರೆ ಪ್ರತಿಮೆಗಳ ಮೂಲಕ ಪರಿಣಾಮಕಾರಿಯಾಗಿ ಹೇಳಲು ಪ್ರಯತ್ನಿಸಿರುವುದು ಕಾಣುತ್ತದೆ.

ಒಂಟಿತನವನ್ನು ಹೋಗಲಾಡಿಸಿ, ಮಿಲನದ ಮೂಲಕ ಮುಕ್ತಿಯನ್ನು ದೊರಕಿಸಿ ಕೊಡಲು ನೀಡುವ ಆಹ್ವಾನವು,

**'ಒಂಟಿತನದೀ ಕೋಳ ಬಿಗಿತ ಬಿಡಿಸು,
ಕಳೆದು ಹಿಂದಿನ ಭಯವ, ಗೆಲವ ತೊಡಿಸು,
ಪ್ರಿಯತಮನೆ ಬೆಳಕಾಗಿ ಅಡಿಯನಿಡಿಸು!'**

(ಅದೇ)

ಕೊನೆಗೆ ಅದು ಆರ್ತ ಪ್ರಾರ್ಥನೆಯಾಗಿ ಮಾರ್ಪಡುತ್ತದೆ.

'ಹಗಲಿರುಳಿನ ಈ ನಿರೀಕ್ಷೆ
ಈ ಯಾಚನೆ ಪ್ರಣಯ ಭಿಕ್ಷೆ
ಮೊರೆಯಾಲಿಸಿ, ಕಳೆಯೆ ಶಿಕ್ಷೆ—'

(ಪ್ರತೀಕ್ಷೆ)

'ಕಾಯುತಿರುವೆ ಪದ್ಮಿನಿ' ಕವಿತೆ ಕೂಡ ಇದೇ ಬಗೆಯ ಅಭಿಸಾರಿಕೆಯನ್ನು ಕುರಿತು ವಿವರಿಸುತ್ತದೆ. ಇಲ್ಲಿ ಬಂಧಮುಕ್ತಿಗಾಗಿ ಕಾಯುತ್ತಿರುವುದು ಹೂವು. ಆಕೆಯು ಪ್ರಿಯಕರ ಎಂದು ಅದು ತಿಳಿದುಕೊಂಡಿರುವುದು ಸೂರ್ಯನನ್ನು. ಪದ್ಮಿನಿ ಕಾಯುತ್ತಿರುವ ಸೂರ್ಯನಾದರೋ ಮುಗಿಲ ಮೈಯ ತೆಕ್ಕೆಯಲ್ಲಿ ಪರವಶನಾಗಿದ್ದಾನೆ. ಹೂವನ್ನು ತಾನೊಮ್ಮೆ ಚುಂಬಿಸಿರುವುದನ್ನೇ ಮರೆತು ಸ್ವಪ್ನಲೋಕ ಮೋಹಿತನಾಗಿದ್ದಾನೆ. ಈಕೆಯಾದರೋ ಲಜ್ಜೆ ಹೊತ್ತು ಕಾಯುತ್ತಿದ್ದಾಳೆ. ಆದರೆ ಅವಳ ಕಾಯುವಿಕೆಗೆ ಮುಕ್ತಿ ದೊರಕಿತೆ? ಇಲ್ಲ. ಕಮಲೆಯ ಗುರುತೇ ಹತ್ತದವನ ಹಾಗೆ ಸೂರ್ಯ ಮುಂದೆ ಹೋಗುತ್ತಾನೆ. ಮಾತ್ರವಲ್ಲ ಇವಳ ವಿರಹವನ್ನು ಹೆಚ್ಚಿಸಲೆಂಬಂತೆ ಇತರ ಹೂಗಳೆದುರು ಬಾಗಿ, ಬೆಳಕಿನಲ್ಲಿ ತೂಗುತ್ತಾನೆ. ನಿಸರ್ಗದ ಈ ವಿಸ್ಮಯವನ್ನು ಗಮನಿಸುತ್ತಿರುವ ದುಂಬಿ, ಹೂವಿಗೆ—

'ನಂಬಿ, ಕಾದು
ಕೆಟ್ಟೆ ಹೆಣ್ಣೆ'

ಎಂದು ಹೇಳುತ್ತದೆ. ಈ ಕವಿತೆಯ ಕಥನ ಮಾದರಿಯ ಅಂಶ ಗಮನ ಸೆಳೆಯುತ್ತದೆ.

ಹಳೆಯ ಮಧುರ ಪ್ರೇಮದ ನೆನಪು ನಿಸಾರರ ಕವಿತೆಗಳಲ್ಲಿ ಮತ್ತೆ ಮತ್ತೆ ಬರುವ ವಿಷಯವಾಗಿದೆ. ಅಗಲಿಕೆ ಅನಿವಾರ್ಯತೆಯಿಂದ ಉಂಟಾಗಿದೆ. ಅಗಲಿಕೆಯ ಅನಂತರವೂ ಮತ್ತೊಂದು ಬದುಕು ತೆರೆದುಕೊಂಡಿದೆ. ಆದರೂ ಇಲ್ಲಸಲ್ಲದ ನೆವವನ್ನು ಹೇಳಿಕೊಂಡು ನೆನಪು ಮರುಕಳಿಸಿ ಬಂದು ಕವಿಯ ಮನಸ್ಸನ್ನು ಉಧ್ವಸ್ತಗೊಳಿಸುತ್ತದೆ. ತಿಳಿಯಾದ ಎದೆಗೊಳಕ್ಕೆ ಕಲ್ಲಿನಂತೆ ಬಂದೆರಗುವ ನೆನಪು ಮನಸ್ಸನ್ನು ರಾಡಿ ಎಬ್ಬಿಸುವುದು ಕವಿಗೆ ಬೇಡವೇ? ಹಾಗೇನಿಲ್ಲ. ಇಂತಹ ಕಳೆದುಹೋದ ಪ್ರೇಮದ ನೆನಪಿನಲ್ಲಿಯೇ ಕವಿಯ ಮನಸ್ಸಿಗೂ ಹಿತವಿದೆ! ಹಾಗೆಂದೇ,

'ಸತ್ತ ಭೂತವನೆತ್ತಿ ಹದ್ದಿನಂದದಿ ತಂದು
ನನ್ನ ಮನದಂಗಳಕೆ ಹಾಕದಿರು ನೆನಪೆ;
ಭವ್ಯ ಭವಿತವ್ಯಕ್ಕೆ ಮೊಗ ಮಾಡಿ ನಿಂತಿರುವೆ'

(ಎಲ್ಲ ಮರೆತಿರುವಾಗ)

ಎಂದು ಒಂದು ಕ್ರೂರ ಪ್ರತಿಮೆಯ ಉದಾಹರಣೆಯನ್ನು ನೀಡಿ ಬೇಡಿಕೊಳ್ಳುತ್ತಿರುವ ಕವಿ, ಕವಿತೆಯನ್ನು ಮುಗಿಸುವ ಮುನ್ನ ಬರೆಯುವ ಕೊನೆಯ ಸಾಲನ್ನು ಗಮನಿಸಬೇಕು—

'ಬೆನ್ನಲ್ಲೆ ಇರಿಯದಿರು, ಓ! ಚೆನ್ನ ನೆನಪೇ'

(ಅದೇ)

ಇಡೀ ಕವಿತೆಯ ಭಾರ 'ಓ! ಚೆನ್ನ ನೆನಪೆ' ಎಂಬ ಸಾಲಿನ ಮೇಲೆ ಬಿದ್ದಾಗ ಕವಿಯ ನಿಜವಾದ ಖುಷಿ ಯಾವುದರಲ್ಲಿದೆ ಎಂದು ಅರಿವಾಗುತ್ತದೆ!

ಕವಿಗೆ ತನ್ನ ಕಳೆದ ಪ್ರೇಮದ ನೆನಪು ಮಧುರ ಯಾತನೆ ಎಂಬುದು ತಿಳಿದಿದೆ. ಇಂತಹುದೇ ಭಾವವನ್ನು ವಿಭಿನ್ನ ಪ್ರತಿಮೆಗಳ ಮೂಲಕ ಹೇಳಲು ಪ್ರಯತ್ನಿಸುವ ಇನ್ನೊಂದು ಕವಿತೆ 'ನೆನಪಾಗಿ ಬಾರದಿರು'. ಕವಿ ಗತಕಾಲದ ಪ್ರೀತಿಯನ್ನು ಮರೆತಿರುವೆನೆಂದು ಇಲ್ಲಿಯೂ ಹೇಳುತ್ತಿದ್ದಾನೆ. ಹೊಸ ಜೀವನವನ್ನು ಕಟ್ಟುವ ವೇಳೆ ನೆನಪು ಮರುಕಳಿಸಿದರೆ ಬದುಕು ಎಷ್ಟು ದುರ್ಭರವಾಗಿರುತ್ತದೆ ಎಂಬುದಕ್ಕೆ ಆತ ಕೊಡುವ ಪ್ರತಿಮೆಗಳೂ ಅಷ್ಟೇ ಭಯಾನಕವಾಗಿವೆ:

'ಮರೆವ ಗೋರಿಯ ಕೆದಕಿ ಹಸಿ ಎಲುಬುಗಳನಾಯ್ದು
ತುಂಬದಿರು ಮುಂಬಾಳ ಮಂಚದಲ್ಲಿ:
ಸಿಂಗರಿಸದಿರು ನನ್ನ ಚಿತೆಯ, ನಗೆಯನು ಹೊಯ್ದು—
ನಾನೆ ಬೆಳೆಸಿದ ಹೂವ ಗೊಂಚಲಲ್ಲಿ.'
(ನೆನಪಾಗಿ ಬಾರದಿರು)

ಕವಿಯ ಪ್ರಿಯತಮೆ ಹಲವೊಮ್ಮೆ ಪರಿಸ್ಥಿಯ ಒತ್ತಡಕ್ಕೆ ಸಿಲುಕಿ ವಿದಾಯ ಹೇಳಿದ್ದಾಳೆ. ಆದರೆ ಆಕೆ ತನ್ನನ್ನು ನೆನೆಯದೆ ಇರಲಾರಳೆಂಬ ಭರವಸೆ ಕವಿಗಿದೆ.

'ನೆನೆದೆ ನೆನೆಯುವೆ ನೀನು
ನನ್ನ—ನೆನೆದೆ ನೆನೆಯುವೆ'
(ನೆನೆದೆ ನೆನೆಯುವೆ)

ಎನ್ನುತ್ತಾನೆ. ಹಲವೊಮ್ಮೆ ಅವಳ ಪ್ರೀತಿಯೇ ಸ್ವಾರ್ಥದಿಂದ ಕೂಡಿದ್ದರಿಂದ ಕವಿ ಅಂಥ ಪ್ರೀತಿಯನ್ನು ತೊರೆದಿದ್ದಾನೆ. ಆದರೂ ಪ್ರೇಮ ಪ್ರೇಮವೇ ಆಗಿದೆ. ಅವಳ ಚೆಲ್ಲಾಟ, ನಯವಂಚಕತನ ಅರಿವಾದಾಗಲೆಲ್ಲ ಕವಿ ಆ ಕುರಿತು ಅವಳಿಗೆ ಮನವರಿಕೆಯನ್ನೂ ಮಾಡಿಕೊಟ್ಟಿದ್ದಾನೆ. ಪ್ರೇಮ ತೋರಿಕೆಯದ್ದಾಗಿರಬಾರದು; ಟೊಳ್ಳು ಭರವಸೆಗಳನ್ನು ನಂಬಿ ಕಟ್ಟಿರುವಂಥದ್ದಾಗಿರಬಾರದು ಎಂಬುದು ಕವಿಯ ಖಚಿತ ನಿಲವಾಗಿದೆ.

ನಗೆಯೆ ಪ್ರೀತಿಯೆಂದು ನಂಬಿದರೆ ಏನಾಗುತ್ತದೆ ಎನುವುದು ಕವಿಗೆ ಅರಿವಿದೆ. ಹಾಗೆಂದೇ ಆತ ಪ್ರಿಯತಮೆಗೆ ಹೇಳುತ್ತಾನೆ:

'ನಂಬಬಹುದೆ ಮರಳು ಭೂಮಿ-
ಯಲ್ಲಿ ಚಿಗಿಯೆ ತೋಟ?
ನಂಬಲಾರೆ ನಗೆಯ ಮರೆಸು,
ವಿಕಟ ಅದರ ನೋಟ!'
(ನಗೆಯೆ ಪ್ರೀತಿಯೆಂದು)

ಎಂದು ಹೇಳುವಷ್ಟು ಆತ ಕಟುವಾಗುತ್ತಾನೆ.

'ಇಂದು ಅಳಲ ಆಳಬಹುದು
ನಿನ್ನ ನಗೆಯ ಹೊಂಚು.

ಬಾಳ ತಮವ ಗೆಲುವುದೇನೆ
ನಿನ್ನ ತುಟಿಯ ಮಿಂಚು?

'ಹುಚ್ಚು ಹುಡುಗಿ, ದುಃಖ ನಮಗೆ
ಬಾಗುತಿದ್ದರಿಂತು,
ಕಲ್ಪತರುವ ಹೂವ ತಿರುಚು-
ತಿದ್ದೆ ವಿಲ್ಲೆ ನಿಂತು.'
(ಅದೇ)

ಬದುಕಿನ ಕತ್ತಲೆಯನ್ನು ನೈಜ ಪ್ರೀತಿಯ ಬೆಳಕು ಮಾತ್ರ ತುಂಬಬಹುದಾಗಿದ್ದು ಕಪಟತನವನ್ನೇ ತನ್ನ ಸತ್ವವನ್ನಾಗಿಸಿಕೊಂಡಿರುವ ಮೇಲ್ಪದರಿನ ಸಂಬಂಧವಲ್ಲ ಎನ್ನುವುದು ಕವಿಯ ನಂಬಿಕೆಯಾಗಿದೆ. ಆದ್ದರಿಂದಲೇ, ತನ್ನ ನಂಬಿಕೆಯ ಸಿದ್ಧಾಂತಕ್ಕೆ ತಕ್ಕುದಾದ ಮಾತನ್ನು ಕಲ್ಪತರು ಹೂವಿನ ಪ್ರತಿಮೆಯ ಮೂಲಕ ಹೇಳುತ್ತಾನೆ. ಇಂಥದ್ದೇ ಆಶಯವನ್ನು 'ಅಂದೇನು ಇಂದೇನು', 'ಮತ್ತದೆ ಬೇಸರ', 'ನೀ ನುಡಿಯದಿರಲೇನು?' ಕವಿತೆಗಳು ವ್ಯಕ್ತಪಡಿಸುತ್ತವೆ.

'ಹತ್ತಿರದೊಳಿದ್ದಾಗ ಎತ್ತರಕೆ ತೂಗಿ,
ದೂರವಾದರೆ ಸಾಕು ನೆಲದೆದೆಗೆ ಬಾಗಿ,
ನನ್ನೊಡನೆ ಚೆಲ್ಲಾಟವಾಡಿರುವ ಜೀವ,
ಮತ್ತಷ್ಟು ಬೆರೆಸದಿರು ನನ್ನೆದೆಗೆ ನೋವ.'
(ಅಂದೇನು ಇಂದೇನು)

'ಆಸೆಗಳ ಹಿಂಡಿನ ತುಳಿತಕ್ಕೆ ಹೊಲ ನನ್ನೀ ದೇಹ;
ಬರುವೆಯೊ, ಬಾರೆಯೊ ನೀನೆನುತಲಿದೆ ಹಾ! ಸಂದೇಹ'
(ಮತ್ತದೇ ಬೇಸರ)

'ನಿನ್ನ ಬಗೆ ಮಸಣದಲಿ ಮುರಿದೊಲವ ಹೆಣವೊಂದು
ವಿರಸತೆಯ ಚಿತೆಯಲ್ಲಿ ಬೇಯುವಾಗ;
ಮಣ್ಣಾದ ನೆನಹೊಂದು ಹಣ್ಣಾದ ಮೈಯೆಳೆದು
ಚಳಿಯ ಕಾಯಿಸಲಲ್ಲಿ ಹಾಯುವಾಗ'
(ನೆನೆದೆ ನೆನೆಯುವೆ)

ಪ್ರಿಯತಮೆಯ ನೆನಪಿನಿಂದ ಮನಸ್ಸು ಘಾಸಿಗೊಳಗಾಗಿದೆ. ವಿರಹ ನೋವನ್ನು ತರುತ್ತದೆ. ಮಿಲನಕ್ಕಾಗಿ ಮನಸ್ಸು ತುಡಿಯುತ್ತದೆ. ಆದರೆ ಆಕೆಯ ಕಪಟ, ಸ್ವಾರ್ಥ, ನೈಜವಲ್ಲದ ಪ್ರೇಮ—ಈ ಬಗೆಯ ನೆನಪನ್ನು ಮತ್ತೆ ಮತ್ತೆ ಕಹಿಯಾಗಿಸುತ್ತದೆ.

'ನಿನ್ನ ನಗೆ ಮಲ್ಲಿಗೆಯ ನನ್ನೊಲವ ರಸದಲ್ಲಿ
ಬೆಳೆಸುವೆನು'

ಎಂದು ಹೇಳಿದ್ದ ಪ್ರಿಯತಮೆ ಬದಲಾಗುತ್ತಾಳೆ. ಅಗಲಿಕೆಗೆ ಕಾರಣವಾದ ಭಿನ್ನಾಭಿಪ್ರಾಯ ಗಳನ್ನು ತೊರೆಯುತ್ತಾಳೆ ಎಂಬುದು ಕವಿಯ ನಿಲವಾಗಿದೆ. ವಿಭ್ರಾಂತಿಗೆ ಒಳಗಾದ ಆತನ

ಮನಸ್ಸು ದ್ವಂದ್ವದಿಂದ ಕೂಡಿದೆ. ಆಕೆ ಬೇಕೆನ್ನಿಸಿದರೂ ಮೇಲೆ ಹೇಳಿದ ಕಾರಣಗಳಿಂದ ಅವಳನ್ನು ಒಪ್ಪಲಾರ. ಮನದ ರೆಂಬೆಯಿಂದ ಪ್ರೀತಿ ಪಾರಿಜಾತ ಕಳಚಿ ಬಿದ್ದಿದೆ.' ಅಡಿಗಡಿಗೂ ಅನುಮಾನದ ಹಾವು ಬಾಳನ್ನು ಹೊಕ್ಕಿದೆ. ಒಡೆದ ಮುತ್ತು ಕೂಡುವುದಿಲ್ಲ ಎಂಬುದು ದೃಢವಾಗಿದೆ. ನೇಹ ಮುಗಿದು ಯಾವುದೋ ಕಾಲವಾಗಿರುವುದರಿಂದ ಜೊತೆಯನ್ನು ಮತ್ತೆ ಬೇಡುವುದು ಅರ್ಥವಿಲ್ಲವೆಂದು ಕವಿಗೆ ತಿಳಿದಿದೆ. ಬೇರೆ ರಾಗಕ್ಕೆ ಹಾಡನ್ನು ಶ್ರುತಿಗೊಳಿಸಲೇಬೇಕಾದ ಅನಿವಾರ್ಯತೆ ಬಂದಿದೆ. ಆದರೆ ಹಿಂದೊಮ್ಮೆ ಪಡೆದ ಸುಖ ಅವನನ್ನು ನೆನಪುಗಳಿಗೆ ಕಟ್ಟಿಹಾಕುತ್ತದೆ.

'ಯಾವುದೂ ಮರೆತಿಲ್ಲ
ಹಚ್ಚ ಹಸುರಿದೆ ಎಲ್ಲ;
ಅಳಿಸಬಹುದೆ ಹೇಳು ಮೈಯ ಮಚ್ಚೆ?
ಹಕ್ಕಿ ಹಾರಿದ್ದರೂ
ಗೂಡಿನ್ನು ಬೆಚ್ಚಗಿದೆ;
ನೆನಪು, ನಳಿದೋಳಿನ ನೀಲಿ ಹಚ್ಚೆ!'
(ಯಾವುದೂ ಮರೆತಿಲ್ಲ)

ಹಾಗೆಂದು ವಾಸ್ತವತೆಯ ಕಹಿಯನ್ನೂ ಆತ ಸಹಿಸಲಾರ. ಅದಕ್ಕೇ 'ನೀ ನುಡಿಯದಿರಲೇನು?' ಕವಿತೆಯಲ್ಲಿ ಆತ ತೆಗೆದುಕೊಳ್ಳುವ ಅಂತಿಮ ತೀರ್ಮಾನ ಹೀಗಿದೆ—

'ಅರೆ ಗಳಿಗೆ ಸುಖ ಸ್ವಪ್ನ ಬರಲಾರದೆಮ್ಮೊಡನೆ,
ವಾಸ್ತವತೆ ಗಹಗಹಿಸಿ ಸೆಳೆಯಲಿಹುದು.
ಮರೆತಲ್ಲ ಕೊನೆಗೊಮ್ಮೆ ಮನ ಬಿಚ್ಚಿ ನಕ್ಕು ಬಿಡು—
ಬೇರೆ ಹಾದಿಯ ನಾವು ಹಿಡಿಯಬಹುದು.'

(ನೀ ನುಡಿಯದಿರಲೇನು?)

ಕಹಿಯಾದ ಸಂಬಂಧವನ್ನು ಮುಗಿಸುವ ಮೊದಲು ದುರಂತದ ಬಿಸಿಯನ್ನು ತಗ್ಗಿಸಲು ಸಂಧಾನದ ಅಂಶವೊಂದನ್ನು ಕವಿಯೇ ಪ್ರಸ್ತಾಪಿಸುತ್ತಾನೆ. ದಾರಿಗಳೇ ಬೇರೆಯಾಗಿ ಕವಲೊಡೆಯುವಾಗ ಬೀಳ್ಕೊಡುವ ಮುಂಚೆ ಮನಸ್ಸನ್ನು ಹಗುರಾಗಿಸಿಕೊಳ್ಳುವ ಆತನ ನಿಲವು, ಸಂಬಂಧಗಳಿಗೆ ಆತ ನೀಡುವ ಮೌಲ್ಯವನ್ನು ಧ್ವನಿಸುತ್ತದೆ.

ವಿರಹ, ಅಗಲಿಕೆಯ ಮತ್ತು ಅದರಿಂದ ಉಂಟಾದ ಯಾತನೆಗಳ ಕುರಿತು ಬರೆದಂತೆಯೇ ವಿರಸ, ತುಂಟಾಟ, ತಮಾಷೆಗಳನ್ನು ಅಭಿವ್ಯಕ್ತಿಸುವ ಕವಿತೆಗಳನ್ನು ಸಹ ನಿಸಾರರು ಬರೆದಿದ್ದಾರೆ. ಹದವರಿತ ಪದಗಳ ಬಳಕೆ, ತಮಾಷೆಯನ್ನು ಹೆಚ್ಚಿಸಲು ತರುವ ಅಂತ್ಯ ಪ್ರಾಸಗಳು, ಘಟನೆಯನ್ನು ರಸವತ್ತಾಗಿ ವಿವರಿಸುವುದು ಇಂತಹ ಕವಿತೆಗಳ ವಿಶೇಷ ವಾಗಿದೆ. ಸರಳ ಓದಿಗೂ ದಕ್ಕುವುದರಿಂದ ಅಧ್ಯಯನಕ್ಕಾಗಿಯಲ್ಲದೆ ಸಹೃದಯರಾಗಿ ಕಾವ್ಯವನ್ನು ಆಸ್ವಾದಿಸುವವರಿಗೆ ಇಂತಹ ಕವಿತೆಗಳು ಸಂತೋಷವನ್ನು ನೀಡಬಲ್ಲವು.

'ಎಲ್ಲಿದ್ದೀಯೋ ನೀನೀಗ ಹುಡುಗ
ಬಂದು—

ಬಂದರ ಮುಟ್ಟಿಸೋ ಹಡಗ'
(ಎಲ್ಲಿದ್ದೀಯ ನೀನೀಗ ಹುಡುಗ!)

ಎನ್ನುವ ಕವಿತೆ ಅದರ ನಾಜೂಕು, ಪೋಲಿತನದಿಂದ ಗಮನ ಸೆಳೆಯುತ್ತದೆ. ನೀರು, ಹಡಗು, ಮೀನು— ಹೀಗೆ ಒಂದೇ ವಲಯದ ಪ್ರತಿಮೆಗಳನ್ನು ಬಳಸಿರುವ ಜಾಣ್ಮೆಯಿಂದ ತಟ್ಟನೆ ಗಮನ ಸೆಳೆಯುತ್ತದೆ.

'ನವಿರೆದೆಯೊತ್ತಿಗೆ, ಬಿಗಿ ಹಿಡಿದ ನೆತ್ತಿಗೆ
ಮರೆ ಮುಚ್ಚು ಬಿಚ್ಚುಸುವ ಹುಡುಗ;
ಕಿವಿ ತುದಿಯ ಮೀನಂತೆ ಮೆಲ್ಲನೆ ಕಚ್ಚುತ್ತ
ಕಿಚ್ಚನ್ನ ಥಂಡಿಸುವ ಹುಡುಗ?'

ಚಮತ್ಕಾರಿಕ ಭಾಷೆಯಿಂದ 'ಪ್ರಮದೆಯ ಪ್ರವೇಶ', 'ಇದೇ ದೇಹವೇ?' 'ಸತಾಯಿಸುವಾಕೆ', 'ಲಾಲ್‌ಬಾಗಿನಲ್ಲಿ ಪ್ರಣಯಿಗಳು' ಗಮನ ಸೆಳೆಯುತ್ತವೆ.

ಚಿರಂತನ ಪ್ರಕ್ರಿಯೆಯಾದ ಪ್ರಣಯ-ಸರಸಗಳನ್ನು ತಟಸ್ಥನಾಗಿ ದಾಖಲಿಸುವ ಕವಿ ಇಲ್ಲಿ ಪಕ್ವವಾಗಿದ್ದಾನೆ. ಪ್ರೀತಿಯಲ್ಲಿ ಮೈ ಮರೆತ ಜೋಡಿಗಳನ್ನು ನೋಡುವಾಗ—

'ಹಿಂದೆಯೂ ಇವರಂತೆ, ಇವರು ಕುಳಿತಿರುವೆಡೆಯೆ
ಹೆಣ್ಣುಗಂಡುಗಳೆಷ್ಟೋ ಹೀಗೆಯೇ ರಮಿಸಿ ಹಿರಿಹಿರಿ ಹಿಗ್ಗಿರಬಹುದು;
ಮುಂದೆಯೂ ಇದೇ ಪುನರಾವರ್ತಿಸಬಹುದು'
(ಲಾಲ್‌ಬಾಗ್‌ನಲ್ಲಿ ಪ್ರಣಯಿಗಳು)

ಎಂಬ ಪಕ್ವ ಅರಿವು ಕವಿಗಿದೆ. ಮುಂದುವರೆದ ಕವಿ, ಈ ಕ್ಷಣದ ಬದುಕು ನಶ್ವರವಾದರೂ ಭಾವಕೋಶ ಚಿರಂತನವಾಗಿದೆ ಎಂಬುದನ್ನು ಸೂಚ್ಯವಾಗಿ ಹೇಳುತ್ತಾನೆ—

'ಆದರೆ ಆಗ ಇಲ್ಲಿರುವುದಿಲ್ಲ
ಈ ಎರಡು ಯೌವನಿಗ ಪಾತ್ರಗಳು;
ಹಾಗೆಯೇ, ಗಮನಿಸುತ ಇದನೆಲ್ಲ
ದಾಖಲಿಸುವ ನನ್ನ ಕುತೂಹಲಿತ ನೇತ್ರಗಳು.'
(ಅದೇ)

ಈ ಬಗೆಯ ನಿರ್ಲಿಪ್ತ ನಿಲವನ್ನು ಸಾಧಿಸಲು ಕವಿ ಹಾದು ಬಂದಿರುವ ದಾರಿ ಕಹಿಯಾಗಿದೆ. ಆತನ ಸಂಬಂಧಗಳು ಮಧುರವಾಗಿ, ಪ್ರೇಮ ಸವಿಯಾಗಿ, ನಲ್ಲೆ ಮಾತು ಲಲ್ಲೆ ಮಾತಾಗಿ ಮಾರ್ಪಟ್ಟಿರುವುದು ಕಡಿಮೆಯೇ. ಪರಿಸ್ಥಿತಿ, ಸ್ವಭಾವದಲ್ಲಿನ ದ್ವಂದ್ವವೂ ಅದಕ್ಕೆ ಕಾರಣವೇ. ಎಲ್ಲ ಉತ್ತಮ ಕಾವ್ಯ ನಾಯಕನಂತೆಯೇ ಈ ಕವಿಗೂ ಬಂಧನವೂ ಬೇಕು, ಬಿಡುಗಡೆಯೂ ಬೇಕು. ಬಿಡುಗಡೆ ಸಾಕ್ಷಾತ್ಕಾರವನ್ನು ದೊರಕಿಸಿಕೊಡುತ್ತದೆ ಎಂಬ ಅಲೌಕಿಕ ಅಂಶದ ಕುರಿತು ಚಿಂತಿಸುತ್ತಲೇ, ಆತ ಯಾವುದು ಸರಿ-ಯಾವುದು ತಪ್ಪು ಎಂಬ ಜಿಜ್ಞಾಸೆಯನ್ನೂ ನಡೆಸುತ್ತಾನೆ. ಮತ್ತು ಈ ದ್ವಂದ್ವದಿಂದಲೇ ಸಂಬಂಧಗಳನ್ನೂ ಕಹಿ ಮಾಡಿಕೊಳ್ಳುತ್ತಾನೆ.

ಸಹೃದಯ ಓದುಗನಿಗೂ ಕವಿ ಹೀಗೆ ವಿಭ್ರಾಂತನಾಗಿರುವುದರಿಂದ, ಉಧ್ವಸ್ತನಾಗಿರುವುದರಿಂದ ಪ್ರಯೋಜನ. ಕವಿ ಅಸ್ವಸ್ಥನಾದಷ್ಟೂ ಸಹೃದಯನಿಗೆ ಕಾವ್ಯ ಪ್ರಯೋಜನ. ಕವಿ ಸಂಭಾವಿತನಾಗಿಬಿಟ್ಟರೆ ಓದುಗನಿಗೆ ಆತನ ತೀವ್ರ ನಿರಾಶೆ, ಯಾತನೆ, ದುಃಖ, ಅಸೂಯೆ, ಈರ್ಷ್ಯೆಗಳು ತಿಳಿಯುವುದಿಲ್ಲ. ಆದ್ದರಿಂದ ವಿರಹದ ನೋವು ಮತ್ತು ಮಿಲನದ ಸುಖವನ್ನು ತಿಳಿಯುವ ಅವಕಾಶಕ್ಕೆ ವಂಚನೆಯಾಗುತ್ತದೆ.

ಆಗ ಉತ್ತಮ ಪ್ರೇಮ-ವಿರಹದ ಕಾವ್ಯ ಯಾವುದು? ಎಂಬ ಅನುಸಂಧಾನಕ್ಕೆ ಆತ ಒಳಗಾಗುವುದಿಲ್ಲ. ಮೇಲಿನ ಈ ಎಲ್ಲ ಅಂಶಗಳನ್ನು ಒಳಗೊಂಡಿರುವುದರಿಂದಲೇ ನಿಸಾರರ ಕಾವ್ಯ ಜನಾನುರಾಗಿ ಕಾವ್ಯವಾಗಿದೆ. ಪ್ರೇಮದ ಆರ್ದ್ರತೆ, ವಿರಹದ ಬಿಸಿ—ಎರಡನ್ನೂ ಸಹೃದಯರ ಅನುಭವಕ್ಕೆ ಬರುವಂತೆ ಮಾಡುತ್ತದೆ.

ರಾಜಕೀಯಸ್ಥರ ಪೆದ್ದುಪೆದ್ದು ಉವಾಚಗಳಿಗೆ, ಅವರ ದಿನಂಪ್ರತಿಯ ಕ್ಷುಲ್ಲಕ ಹಣಾಹಣಿಗೆ ನೀಡುತ್ತಿರುವ ಪ್ರಾಮುಖ್ಯವನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಿ, ರಾಷ್ಟ್ರದ ಪ್ರಸಕ್ತ ಪರಿಸ್ಥಿತಿಗೆ ಅತ್ಯನಿವಾರ್ಯ ಆಗಿರುವ ಸೌಮನಸ್ಯ ಸೌಹಾರ್ದಗಳ ಉದಾಹರಣೆಗಳಿಗೆ ಹೆಚ್ಚು ಪ್ರಚಾರ ನೀಡಲು ಸುದ್ದಿ ಮಾಧ್ಯಮಗಳು ಮುಂದಾಗುವುವೆ? ಇಂಥ ಮನೋಹರವಾದ ಹೆದ್ದಾರಿಗಳಿರುವಾಗ ಜನರ ಮನಸ್ಸು ಅಲ್ಲಿ ವಿಹರಿಸದೆ, ಕುನ್ನಿ ಕಚ್ಚಾಟದ ದುಸ್ಸಹ ದುರ್ಗಂಧದ ಕಿರುಗಲ್ಲಿಗಳಲ್ಲಿ ಅಂಡಲೆಯುವುದು ಯಾವ ಪುರುಷಾರ್ಥಕ್ಕೋ. ಸುಂದರ ಮಗುವಿನ ಜನನಕ್ಕಿಂತ ಜನರಿಗೆ ಕೌತುಕ ಹುಟ್ಟಿಸುವುದು ವಿಕೃತ ಶಿಶು ತಾನೆ?

(ಸುದ್ದಿ ಮಾಧ್ಯಮ)

ಸದಾಚಾರ ಪ್ರೇರಿತ ಪತ್ರಿಕೆ ಒಂದು ಅಘೋಷಿತ ವಿದ್ಯಾಕೇಂದ್ರ. ಸಮಾಜ ಜೀವನವನ್ನು ಮಲ್ಟಿ ವಿಟಮಿನ್ನಿನಂತೆ ಸದ್ದು ಗದ್ದಲವಿಲ್ಲದೆ ಪ್ರಭಾವಿಸುವಲ್ಲಿ, ಸಚೇತನಗೊಳಿಸುವಲ್ಲಿ ಅದರ ಪಾಲು ಹಿರಿದು. ಹೃದಯ, ಮನಸ್ಸುಗಳನ್ನು ಹಸನುಗೊಳಿಸುವ ಕಾಯಕದಲ್ಲಿ ಪತ್ರಿಕೆಯದು ಅನ್ಯಾದೃಶವಾದ ಹಿರಿಮೆ. ಮಾಹಿತಿ, ಲೋಕ ಜ್ಞಾನಗಳನ್ನು ಅದು ನಿಚ್ಚಳವಾಗಿ ಹಾಲ್ಗರೆಯುತ್ತದೆ. ಹಸುಳೆಗಳಿಂದ ಹಿಡಿದು ಹಲ್ಲುಬಿದ್ದ ಅರಳುಮರುಳರವರೆಗೂ ಆಸಕ್ತಿಯನ್ನು ಹಚ್ಚಗಿರುವಂತೆ ನೋಡಿಕೊಳ್ಳುವ, ಅಂತಃಸಂಸ್ಕಾರಕ್ಕೆ ಅನುವಾಗುವ ಸರ್ವೋಪಕಾರಿ ಕೈಂಕರ್ಯ ಅವರದು. ಪ್ರಜಾಭಿಪ್ರಾಯಗಳನ್ನು ಆಡಳಿತಕ್ಕೆ ಅರಿವಾಗಿಸುವ, ರೂಢಿಗತ ಆಚಾರ ವಿಚಾರಗಳ ಕುಂದು ಕರೆಗಳನ್ನು ಎತ್ತಿ ತೋರಿ ವಿವೇಕ ವಿವೇಚನೆಗಳನ್ನು ಸಾಮಾಜಿಕರಲ್ಲಿ ಬಿತ್ತುವ ಕಾರ್ಯದಲ್ಲಿ ಚಲಚ್ಚಿತ್ರ, ಟಿವಿ, ರೇಡಿಯೊಗಳಂಥ ಸಮರ್ಥ ಮಾಧ್ಯಮಗಳಿಗೆ ಸಮ ಸಮವಾಗಿ ಪತ್ರಿಕೆ ಶ್ರಮಿಸುತ್ತದೆ.

(ಪತ್ರಿಕೆಗಳ ಪಾತ್ರ)



ನಿಸಾರರ ಕವಿತೆಗಳಲ್ಲಿ ಸಂಕೇತಗಳು

♦ *ಪ್ರೊ. ಎನ್. ಬಿ. ಚಂದ್ರಮೋಹನ್*

ಕೆ. ಎಸ್. ನಿಸಾರ್ ಅಹಮದ್ ಅವರು ಕವಿಯಾಗಿ ಅರಳುತ್ತಿದ್ದ ಕಳೆದ ಶತಮಾನದ ಐವತ್ತರ ದಶಕ, ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ವಿಶಿಷ್ಟವಾದ ಕಾಲ. ಸ್ವಾತಂತ್ರ್ಯ ಪೂರ್ವದ ಮತ್ತು ಸ್ವಾತಂತ್ರ್ಯೋತ್ತರ ಆರಂಭದ ದಿನಗಳಲ್ಲಿ ತನ್ನ ಉತ್ತುಂಗ ಸ್ಥಿತಿಯಲ್ಲಿದ್ದ ಕನ್ನಡ ನವೋದಯ ಕಾವ್ಯ ಇನ್ನೂ ಜೀವಂತವಾಗಿತ್ತು. ಹಾಗೆಯೇ ಕಾವ್ಯದಲ್ಲಿ ಹೊಸ ವಸ್ತು, ಅಭಿವ್ಯಕ್ತಿ ಮತ್ತು ಸಂವೇದನೆಗಳಿಗಾಗಿ ಅನಂತರದ ತಲೆಮಾರಿನ ಕವಿಗಳು ಕಾತರಿಸುತ್ತಿದ್ದರು. ನವ್ಯ ಕಾವ್ಯ ಪರಂಪರೆ ತನ್ನೆಲ್ಲ ತೀವ್ರತೆಯಿಂದ ಮತ್ತು ಹೊಸತನದಿಂದ ನಳನಳಿಸುತ್ತಿತ್ತು. ಒಂದು ರೀತಿಯಲ್ಲಿ ಇದು ನವೋದಯ ಮತ್ತು ನವ್ಯ ಕಾವ್ಯ ಪರಂಪರೆಯ ಸಂಧಿಕಾಲ. ಈ ಸಂದರ್ಭದಲ್ಲಿ ಸ್ವಂತಿಕೆಯನ್ನು ಮತ್ತು ಹೊಸತನವನ್ನು ರೂಢಿಸಿಕೊಳ್ಳಲು ತರುಣ ಕವಿಗಳು ಹೆಣಗಾಡುತ್ತಿದ್ದರು. ಕವಿ ನಿಸಾರ್ ಅವರು ಇದೇ ತಲೆಮಾರಿನವರು.

ನವೋದಯ ಕವಿಗಳ ಭಾವುಕತೆ, ನಿಸರ್ಗ ಪ್ರೇಮ, ವಾಚಾಳಿತನಗಳನ್ನು ನಿರಾಕರಿಸಿ ವಸ್ತುನಿಷ್ಠತೆ, ವೈಚಾರಿಕತೆಗಳನ್ನು ರೂಢಿಸಿಕೊಂಡು ಹೊಸಕಾವ್ಯ, ತಂತ್ರ, ಸ್ವರೂಪಗಳ ಅನ್ವೇಷಣೆಗೆ ಕಾಲ ಸಜ್ಜಾಗಿತ್ತು. ಇಂಥದೊಂದು ಸಂಧಿ ಕಾಲದಲ್ಲಿ ನಿಸಾರರು ತಮ್ಮ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ನಿಸರ್ಗ ಪ್ರೇಮಕ್ಕೆ ಎರವಾಗದಿದ್ದರೂ ಭಾವುಕತೆ

ಯಿಂದ ಕುರುಡಾಗುವ ದೌರ್ಬಲ್ಯಗಳನ್ನು ಮೀರಬೇಕಾಗಿತ್ತು. ಸಾಮಾಜಿಕ ಸಂದರ್ಭಗಳನ್ನು ಆಧುನಿಕ ಯುಗ ಧರ್ಮದ ಆವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕಾಗಿಯೇ ಬಹುತೇಕ ಇವರ ತಲೆಮಾರಿನ ಕವಿಗಳೆಲ್ಲರೂ ತಮ್ಮ ಕಾವ್ಯಕ್ಕೆ ಹೊಸತನ್ನು ತಂದುಕೊಳ್ಳುವ ಪ್ರಯತ್ನದಲ್ಲಿ ವ್ಯಂಗ್ಯ, ವಿಡಂಬನೆ, ಹಾಸ್ಯ, ಅನ್ಯೋಕ್ತಿ, ಆತ್ಮಶೋಧನೆ, ಅಂತರ್ಮುಖತೆ ಮತ್ತು ತಾತ್ವಿಕ ಚಿಂತನೆಗಳನ್ನು ತಮ್ಮ ಕವನಗಳ ವಸ್ತುವನ್ನಾಗಿಸಿಕೊಂಡರು. ನಿಸಾರರು ಇದೇ ಕೆಲಸವನ್ನು ತಮ್ಮ ಕವಿತೆಗಳಲ್ಲಿ ಮಾಡಿದರೆಂಬುದು ನಿಜವಾದರೂ ತಮ್ಮದೇ ಆದ ವಿಶಿಷ್ಟ ಧಾಟಿಯನ್ನು ರೂಪಿಸಿಕೊಂಡರು. ಭಾವಗೀತಾತ್ಮಕತೆಗೆ ಹೊರತಾಗದೆ, ಗದ್ಯದ ಏಕತಾನತೆಗೆ ಬಲಿಯಾಗದೆ ಕಾವ್ಯ ಪ್ರಪಂಚದ ಅಗಾಧ ಸಾಧ್ಯತೆಗಳನ್ನು ಪ್ರಜ್ಞಾಪೂರ್ವಕವಾಗಿ ಪರಿಭಾವಿಸಿ, ಕವಿತೆಯನ್ನು ಕಟ್ಟುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಸ್ವೀಕರಿಸಿದರು. ಇದರಿಂದಾಗಿಯೇ ಇವರ ಕಾವ್ಯ ನಿರ್ಮಿತಿಯ ಕಸುಬುದಾರಿಕೆ ಅತ್ಯಂತ ಸಹಜವಾಗಿ ರೂಪುಗೊಳ್ಳುತ್ತದೆ. ತೀರ ಸಾಮಾನ್ಯ ಅಥವಾ ಸಾಧಾರಣ ಎನ್ನಿಸಬಹುದಾದ ಒಂದು ಘಟನೆ, ವಿಚಾರವೂ ಕೂಡ ಇವರ ಕಾವ್ಯಕ್ಕೆ ವಸ್ತುವಾದಾಗ ಅಸಾಧಾರಣವೆಂಬಂತೆ ವಿಜೃಂಭಿಸುತ್ತದೆ. ಭಾಷೆಯೊಂದಿಗೆ ಇವರು ಆಟವಾಡುವ ರೀತಿ ಬೆರಗು ಹುಟ್ಟಿಸುತ್ತದೆ. ಆಡುಮಾತಿನ ಲಯ, ಪ್ರಾಸದ ಮೋಡಿ ಆಕರ್ಷಕ ಎನ್ನಿಸುತ್ತದೆ. ಇವರ ಕವನಗಳಲ್ಲಿ ಸಮೃದ್ಧವಾಗಿ ಸುರಿದು ಬರುವ ಸಂಕೇತ, ಪ್ರತೀಕ, ಪ್ರತಿಮೆಗಳು ರಾಶಿ ರಾಶಿಯಾಗಿ ಪೇರಿಸಲ್ಪಟ್ಟು ಕೆಲವೊಮ್ಮೆ ಕವನದ ಓದುಗನನ್ನು ಸಂಮೋಹಕತೆಯಿಂದ ಕಂಗೆಡಿಸಿಬಿಡು ತ್ತವೆ. ದಿಗ್ಭ್ರಮೆಗೊಳಿಸುವಷ್ಟು 'ರೂಪಕ-ಶ್ರೀಮಂತಿಕೆ'ಯಿಂದ ವಿಜೃಂಭಿಸುವ ಇವರ ಕಾವ್ಯ ಭಾಷೆ ಕವಿಯ ಶಕ್ತಿಯಾಗಿರುವಂತೆಯೇ, ದಾರಿ ತಪ್ಪಿಸುವ ದೌರ್ಬಲ್ಯವೂ ಆಗಿ ಬಿಡುತ್ತದೇನೋ ಎನ್ನುವ ಸಂಶಯವೂ ಕೆಲವೊಮ್ಮೆ ನಮ್ಮನ್ನು ಕಾಡುತ್ತದೆ. ಇವರ ಕಾವ್ಯವನ್ನು ಜನಪ್ರಿಯವಾಗಿಸಿರುವ, 'ಸಶಕ್ತ ವಾಗ್ವಿಲಾಸ', ಕೆಲವೊಮ್ಮೆಯಾದರೂ ರೊಮ್ಯಾಂಟಿಕ್ ವಾಚಾಳಿತನವನ್ನು ನೆನಪಿಗೆ ತಂದರೆ ಅಚ್ಚರಿಯೇನಲ್ಲ.

ಹತ್ತುಮಾತುಗಳಲ್ಲಿ ಹೇಳಬಹುದಾದುದನ್ನು ಒಂದು ಸಂಕೇತ ಅಥವಾ ಪ್ರತಿಮೆಗಳಲ್ಲಿ ಹೇಳುವ ಆಶಯವನ್ನು ಹೊತ್ತ ನವ್ಯಕಾವ್ಯ ಪರಂಪರೆಯ ಸಹವಾಸಿಯಾದ ಈ ಕವಿ ಒಂದರಮೇಲೊಂದರಂತೆ ಹತ್ತಾರು ಸಂಕೇತ ಪ್ರತಿಮೆಗಳ ಮೂಲಕ ತನ್ನ ಕವಿತೆಯನ್ನು ಕಟ್ಟುವುದಕ್ಕೆ ಎಂದೂ ಹಿಂಜರಿಯುವುದಿಲ್ಲ. ಕವಿತೆ ತನ್ನ ಅಭಿವ್ಯಕ್ತಿ ಮತ್ತು ಭಾವೋದ್ದೀಪನ ಕಾರ್ಯಕ್ಕೆ ಬದ್ಧವಾಗಿರುವುದರಿಂದ ಅದು ಬಳಸುವ ಭಾಷೆ ಆಲಂಕಾರಿಕವೇ ಆಗಿರಬೇಕಾದ್ದು ಅನಿವಾರ್ಯವೆಂಬ ಸ್ಪಷ್ಟ ನಂಬಿಕೆ ಈ ಕವಿಗೆ ಇದೆ. ಅದರಿಂದಲೇ ಇವರು ಉದಾರ ಶ್ರೀಮಂತಿಕೆಯಿಂದ ಸಂಕೇತಗಳನ್ನು, ಆಲಂಕಾರಿಕ ಭಾಷೆಯನ್ನು ಬಳಸುವ ವಿಷಯದಲ್ಲಿ ಎಂದಿಗೂ ಕೃಪಣತೆ ತೋರುವುದಿಲ್ಲ.

ವ್ಯಾಪಕವಾದ ಅರ್ಥದಲ್ಲಿ ವಿವರಿಸಬಹುದಾದರೆ ಒಂದು ವಸ್ತು, ಗುಣ ಅಥವಾ ಸಂಗತಿಯನ್ನು ನೆನಪಿಗೆ ತರುವ ಪ್ರಾತಿನಿಧಿಕ ಚಿಹ್ನೆಯೊಂದನ್ನು ಸಂಕೇತ ಎಂದು ಗುರುತಿಸಬಹುದಾಗಿದೆ. ಹಾಗೆ ನೋಡಿದರೆ ಇಡೀ ಭಾಷೆಯೇ ಒಂದು ಸಂಕೇತಗಳ ವಿನ್ಯಾಸ.

ಇಲ್ಲಿ ಬಳಕೆಯಾಗುವ ಪ್ರತಿಯೊಂದು ಪದವೂ ಬೇರೆ ಯಾವುದೋ ಮತ್ತೊಂದನ್ನು—ವ್ಯಕ್ತಿ ಮತ್ತು ಸಂದರ್ಭಗಳಿಗೆ ಬದ್ಧವಾಗಿ—ಪ್ರತಿಮಿಸಬಹುದಾದ ಸಂಕೇತವೇ ಆಗಿರುತ್ತದೆ. ಕಾವ್ಯದ ಸಂದರ್ಭದಲ್ಲಿ 'ಸಂಕೇತ' ಶಬ್ದವನ್ನು ಇನ್ನೊಂದಿಷ್ಟು ವಿಶೇಷ ಅರ್ಥದಲ್ಲಿ ಬಳಸಲಾಗುತ್ತದೆ. ಸಂಕೇತವೂ ಕೂಡ ಒಂದು ರೀತಿಯ ಪ್ರತಿಮೆಯೇ. ಉಪಮೆ, ರೂಪಕ, ಸಂಕೇತಗಳೆಲ್ಲವೂ ಪ್ರತಿಮೆಯ ಬೇರೆ ಬೇರೆ ರೂಪಗಳೇ ಆಗಿರುತ್ತವೆ. ಅದರಲ್ಲಿ ಸಂಕೇತದ ಮಹತ್ವವೇ ಬೇರೆ. ಅದು ಉಪಮೆಯಂತೆ ಕೇವಲ ಹೋಲಿಕೆಯ ತಂತ್ರವಾಗಿ ಬಳಕೆಯಾಗುವುದಿಲ್ಲ. ಕವಿತೆಯಲ್ಲಿ ಅದು ಒಂದು ಅನುಭವದ ವಿನ್ಯಾಸವಾಗಿ, ಅರಿಯುವ ವಿಧಾನವಾಗಿ ಬಳಕೆಯಾಗುತ್ತದೆ. ಕಾವ್ಯದಲ್ಲಿ ಪ್ರತಿಮೆ ಸ್ವತಂತ್ರವಾಗಿ ಬಳಕೆಯಾಗುವುದರ ಮೂಲಕ ತನ್ನ ವಿಶಿಷ್ಟತೆಯನ್ನು ಪ್ರಕಟಿಸುತ್ತದೆ. ತನ್ನ ಅರ್ಥದ ವ್ಯಾಪಕತೆಯನ್ನು ಅದು ತನಗೆ ತಾನೇ ನಿರ್ಧರಿಸಿಕೊಳ್ಳುವ ರೀತಿಯಲ್ಲಿ ರೂಪುಗೊಂಡಾಗ ಅದನ್ನ ಸಂಕೇತವನ್ನಾಗಿ ಗುರುತಿಸುತ್ತೇವೆ. ನಿಸಾರರ ಕವನಗಳಲ್ಲಿ ಈ ತೆರನ ಸಂಕೇತಗಳ ಬಳಕೆ ಸಮೃದ್ಧವಾಗಿರುವುದನ್ನು ನಾವು ನೋಡಬಹುದು. ಅಷ್ಟೇ ಅಲ್ಲದೆ, ಅವರು ಕವನಗಳಲ್ಲಿ ಸಮೃದ್ಧ ಸಂಕೇತಗಳ ಬಳಕೆಯ ಶ್ರೀಮಂತಿಕೆಯನ್ನು ತೋರುವುದರೊಟ್ಟಿಗೆ, ಸ್ವತಃ ಕವನವನ್ನೇ ಸಂಕೇತವನ್ನಾಗಿಸಿಬಿಡುವ ಚಾತುರ್ಯವನ್ನು ತೋರುತ್ತಾರೆ. ಅವರ ಕವನಗಳಲ್ಲಿ ಚಿಂತನಾಂಶ, ಭಾವನಾಂಶಗಳೆಲ್ಲವನ್ನೂ ಮೀರಿ—ಇಂಥ ಚತುರತೆ ವಿಜೃಂಭಿಸುವುದನ್ನು ನಾವು ಕಾಣಬಹುದು. ಸಂಕೇತಗಳು ಸಾರ್ವತ್ರಿಕ ಸಂಕೇತಗಳು ಆಗಿರಬಹುದು. ಹಾಗೆಯೇ ವ್ಯಕ್ತಿಯೊಬ್ಬ ವಿಶಿಷ್ಟ ಅನುಭವಗಳಿಂದ ಸಂವಾದಿ ಆಗಿಸುವಂತೆಯೇ, ಸಾರ್ವತ್ರಿಕ ಸಂಕೇತಗಳನ್ನು ವೈಯಕ್ತಿಕ ಅನುಭವಕ್ಕೆ ಸಂವಾದಿಯನ್ನಾಗಿಸಿ ಸಾರ್ಥಕತೆಯನ್ನು ಸಾಧಿಸಬೇಕಾಗುತ್ತದೆ. ಕವಿ ನಿಸಾರರು ಇಂಥ ಸಾಧನೆಯನ್ನು ಅತ್ಯಂತ ಪರಿಶ್ರಮದಿಂದ ತಮ್ಮ ಕಾವ್ಯ ಜೀವನದ ಉದ್ದಕ್ಕೂ ಮಾಡುತ್ತಾ ಬಂದಿದ್ದಾರೆ.

ಅವರ ಆರಂಭಿಕ ಕವನಗಳಲ್ಲಿ ಒಂದಾದ 'ದೀಪಗಳು' ಕವಿತೆಯಿಂದಲೇ ಅವರ ಈ ಸಾಂಕೇತಿಕ ಪ್ರವೃತ್ತಿಯ ಹಂಬಲವನ್ನು ಗುರುತಿಸಬಹುದು. 'ಕುರುಡು ತಮವ ಕೊರೆಯುವಂಥ ಬಾಣ ಬಿಟ್ಟ ಚಾಪ'ಗಳಾಗಿ ದೀಪಗಳು ಕವಿಗೆ ಕಾಣುತ್ತದೆ. ಇಡೀ ಕವನದಲ್ಲಿ ಬೇರೆ ಬೇರೆ ಸಂಕೇತಗಳ ಮೂಲಕ ಕವಿತೆಯ ಆಶಯ ರೂಪುಗೊಳ್ಳುತ್ತವೆ. 'ಕೆಂಗರುವಿನ ಬಣ್ಣದ ಕಣ್ಮಣಿ'ಗಳಾಗಿ, 'ತಾಯ ಕಣ್ಣ ನೆರಳಿನಲ್ಲಿ ತೇಲಿಹೋದ ಕಥೆ'ಗಳಾಗಿ ಸಂಕೇತಿಸಲ್ಪಡುತ್ತವೆ. ಇಂಥ ದೀಪಗಳ ಬೆಳಕಲ್ಲಿ ಬಂಗಲೆ ಕಟ್ಟಲು ಆಶಿಸುವ ಕವಿಗೆ, ಬಾಗಿಲನ್ನೇ ತೆರೆಯದೆ ಅದರೊಳಗೆ ವಿಹರಿಸುವ ಆಸೆ ವ್ಯಕ್ತವಾಗುತ್ತದೆ.

'ಕಂಬ' ಕವಿತೆಯಲ್ಲಿ ಹಣವಂತರ ಓಣಿಯಲ್ಲಿ ಇರುವಂತೆ ಕಡು ಬಡವೆ ಏಕಾಂಗಿಯಾಗಿರುವ ಕಂಬದೊಂದಿಗೆ ಕವಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಹೊರಗೆಲ್ಲಾ ಬೆಳಕು, ನೆಮ್ಮದಿಯ ಹರಕೆ ಸಾರಿದರೂ ತನ್ನದೆ ಮಾತ್ರ ಖಾಲಿ ಕೋಣೆಯಾಗಿ ತನ್ನೊಳಗೆ ಬೆಳಕನ್ನು ಕಾಣದ ವಿಷಾದನೀಯ ಸ್ಥಿತಿಯನ್ನು ಸಾಮಾನ್ಯವೆಂಬಂತೆ ಹೇಳುತ್ತಲೇ ಚುರುಕು ಮುಟ್ಟಿಸುತ್ತಾನೆ. 'ನಮ್ಮ ಬಡಾವಣೆಯ ಕಥೆ' ಕವಿತೆಯಲ್ಲಿ 'ಕಟ್ಟಿದ ಮನೆಯ ದೊರೆ

ಮಗನಂತೆ ಸೇರಿದ ನಿನಗೆ ಪುಟ್ಟ ಕೊರತೆಗಳೂ ಬೆಟ್ಟ—ಆ ಕಷ್ಟಗಳನುಂಡ ನನಗೆ ಈ ಸೌಕರ್ಯಗಳ ಹೋಲಿಸಲು ನೆನಪೇ ತಕ್ಕಡಿ' ಎನ್ನುವ ಮಾತಿನ ಸೆವದಲ್ಲಿ ತೃಪ್ತಿ, ಅತೃಪ್ತಿಗಳ ನಡುವಿನ ವ್ಯತ್ಯಾಸವನ್ನು ಸಂಕೇತಿಸಲಾಗಿದೆ.

'ಇಪ್ಪತ್ತನೆಯ ಶತಮಾನದ ಕೊಲಂಬಸ್' ಇವರ ಪ್ರಮುಖ ಕವನಗಳಲ್ಲಿ ಒಂದು. ವ್ಯಕ್ತಿಯ ಮಹತ್ವಾಕಾಂಕ್ಷೆ ಮತ್ತು ವಾಸ್ತವಿಕತೆಯ ಸಾಕ್ಷಾತ್ಕಾರಗಳೆರಡನ್ನೂ ಈ ಕವನ ಸಮರ್ಥವಾಗಿ ಸಂಕೇತಿಸುತ್ತದೆ. 'ನಾನಿಷ್ಟೇ ಲೋಕಕ್ಕೆ:ತೇದಂತೆ ಕರಗುವ ಗಂಧದೊಂದು ಚಕ್ಕೆ!' ಎನ್ನುವ ಮುಕ್ತಾಯದ ಮಾತು ಧನ್ಯತೆಯ ಭಾವವನ್ನು ಸಂಕೇತಿಸುತ್ತದೆ.

ಅವರ ಯಶಸ್ವೀ ಕವಿತೆಗಳಲ್ಲಿ ಒಂದಾದ 'ಪ್ರಾಗ್ಬಂಧಗಳು'. ಒಂದು ರೀತಿಯಲ್ಲಿ ಎಲ್ಲ ಆಧುನಿಕ ಮನುಷ್ಯರನ್ನು ಕಾಡುವ ಅಮೂರ್ತ ಭಾವಕ್ಕೆ ಮೂರ್ತ ಸಂಕೇತಗಳನ್ನು ಕೊಡುವ ಪ್ರಯತ್ನ. 'ಮೈಸೂರು ಜೂ' ಪದ್ಯದಲ್ಲಿ ಮುಖಾಮುಖಿಯಾಗಿರುವ ಜೂ ಮತ್ತು ಮ್ಯೂಸಿಯಂಗಳು ವರ್ತಮಾನ ಮತ್ತು ಭೂತ ಕಾಲಗಳ ಸಮರ್ಥ ಸಂಕೇತಗಳಾಗಿ ಬೆಳೆಯುತ್ತ ಹೋಗಿ ಅಂತಿಮವಾಗಿ ಸಾವು, ಬದುಕು, ಕಾಲದ ನಿರಂತರತೆ ಹಾಗೂ ನಿಗೂಢತೆ ಮತ್ತು ಅಸಂಗತ ಸಂಗತಿಯನ್ನು ಅನುಭವಕ್ಕೆ ತರುತ್ತವೆ.

ನಮ್ಮೆಲ್ಲರಿಗೆ ಚಿರಪರಿಚಿತವಾದ ಫ್ರಿಜ್ಜು ನಿಸಾರರ ಕವಿತೆಯ ವಸ್ತುವಾದಾಗ ಜೀವಲೋಕದ ಅನಂತ ಸತ್ಯವೊಂದಕ್ಕೆ ಸಂಕೇತವಾಗಿಬಿಡುತ್ತದೆ. 'ಸದ್ವಿಚಾರಗಳ ವಿದ್ಯುತ್ ಶಾಖವಿರುವತನಕ ಶಿಷ್ಟ ಸಭ್ಯತೆಯ ಮೆರೆಯುವ ಹಾಗೆಯೇ, ಕಾವಿನ ಬೆಚ್ಚನೆಯ ಸಂಪರ್ಕ ತಪ್ಪಿದರೆ ಗಲೀಜು ಗಬ್ಬಿನಿಂದ ಅಸಹ್ಯಗೊಳಿಸುವ ಸ್ಥಿತಿಗೆ ಇಳಿಯುವ, ಘೋರ ದರ್ಶನವನ್ನು ಮಾಡಿಸುತ್ತದೆ. ಸಾಮಾನ್ಯ ಸಂಕೇತವೊಂದರ ಮೂಲಕ ಸಕೃತ್-ದರ್ಶನ ಮೂಡಿಸುವ ಪ್ರಯತ್ನ ಇಲ್ಲಿದೆ.

ಬದಲಾವಣೆ ಮತ್ತು ವಿಕಾಸಕ್ಕೆ ಎರವಾಗುವ ಮನಸ್ಸು ಹಾಗೂ ವ್ಯಕ್ತಿತ್ವಗಳನ್ನು ವಿಡಂಬಿಸುವ 'ಮುಚ್ಚು ಅಂಗಡಿಯನ್ನು' ಕವಿತೆಯಲ್ಲಿ ಅತ್ಯಂತ ಸರಳವೆನಿಸುವ ಹಾಗೆ ಬರುವ ಚಿತ್ರ ಸಂಕೇತಗಳು ಸರಳವಾಗಿದ್ದರೂ ಸಮರ್ಥವಾಗಿ ಧ್ವನಿಪೂರ್ಣತೆಯನ್ನು ತಂದು ಕೊಡುತ್ತವೆ :

> 'ಎಂದೋ ಕೆಟ್ಟು ನಿಂತಿರುವ ಅಷ್ಟ ಕೋನಾಕೃತಿಯ
> ಸಮಯದಸ್ವೀಕೃತಿಯ ಗೋಡೆ ಗಡಿಯಾರ,
> ಅದನು ಬೆಂಬಲಿಸಿರುವ ಜೇಡ ಬಲೆಗಳ ಜಾಲ,
> ತುಕ್ಕಿಗಾಹಾರವಾಗಿರುವ ನಾಮಫಲಕದ ಲೋಹ ಭಾರ'
>
> (ಮುಚ್ಚು ಅಂಗಡಿಯನ್ನು)

ಇಂಥ ಸಾಲುಗಳು ಚಿತ್ರವತ್ತಾಗಿ ಮೂಡಿ ಬರುತ್ತದೆ. ಇದೇ ವಸ್ತುವಿಗೆ ಹತ್ತಿರವಾದ ಇವರ ಮತ್ತೊಂದು ಕವಿತೆ 'ಪಳೆಯುಳಿಕೆ'ಯ ಯಜಮಾನರ 'ಗುಂಡಿಗೆ ಬದಲು ಗುಂಡ್‌ಪಿನ್ ಸಿಕ್ಕಿಸುವ' ಪ್ರವೃತ್ತಿ ಅತ್ಯಂತ ಸಮರ್ಥವಾಗಿ ವ್ಯಕ್ತಿತ್ವದ ಟೊಳ್ಳುತನವನ್ನು ಸಂಕೇತಿಸುತ್ತದೆ.

ಭಾವವ್ಯಂಜಕ ಭಾಷೆಯ ಬಳಕೆಯೊಂದಿಗೆ ಸಾಲು ಸಾಲು ಸಂಕೇತಗಳ ಮೂಲಕ ಕವಿತೆ ಕಟ್ಟುವ ಈ ಕವಿಯ ಸಾಮರ್ಥ್ಯಕ್ಕೆ ಅವರ `ಅಮೇರಿಕ, ಅಮೇರಿಕ' ಕವಿತೆ ಒಂದು ಉದಾಹರಣೆ. ಈ ಕವಿತೆ ಇಂದಿಗೂ ಅತ್ಯಂತ ಪ್ರಸ್ತುತವೆನ್ನಿಸುವುದಕ್ಕೆ ಕಾರಣವಿದೆ. ಅಮೇರಿಕೆಯ ಸೊಕ್ಕು, ಢಾಂಬಿಕತೆಯ ಜತೆ ಜತೆಗೇ ನಮ್ಮ ದೈನ್ಯತೆ ಮತ್ತು ಅಸಹಾಯಕತೆಗಳನ್ನೂ ಈ ಕವಿತೆ ಅನಾವರಣಗೊಳಿಸುತ್ತ ಹೋಗುತ್ತದೆ.

ನಿಸಾರರ ಕವಿತೆಗಳಲ್ಲಿ ವ್ಯಕ್ತಿ ಚಿತ್ರಣದ ಕವಿತೆಗಳು ತಮ್ಮದೇ ಆದ ವಿಶಿಷ್ಟತೆಯನ್ನು ಮತ್ತು ಶ್ರೇಷ್ಠತೆಯನ್ನು ಪಡೆದಿದೆ. ಅವರ ಕವಿತೆಗಳ ಯಾವ ಓದುಗನೂ ಈ ಕವಿಯ `ಮಾಸ್ತಿ' ಕವಿತೆಯನ್ನು ಮರೆಯಲಾರ. ಹಾಗೆಯೇ ಇವರ ಕವಿತೆಗಳಲ್ಲಿ ವ್ಯಕ್ತಿತ್ವದ ಸಂಕೇತಗಳಾಗಿ ಬರುವ 'ಮೃಗಾಯಣ'ದ ಹನೀಫ್ ಸಾಹೇಬರು ಮತ್ತು `ರಾಮನ್ ಸತ್ತ ಸುದ್ದಿ`ಯ ಹನುಮನಂತಹವರು ಓದುಗರ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಉಳಿಯುತ್ತಾರೆ.

`ಶಿಕಾರಿ ಹನೀಫ್ ಸಾಹೇಬರು ಮೊನ್ನೆ ಸತ್ತರಂತೆ` ಎನ್ನುವ ಮಾತಿನಿಂದಲೇ ಆರಂಭವಾಗುವ `ಮೃಗಾಯಣ' ಕವಿತೆ, ಮಲೆನಾಡಿನ ಘಾಸಲೆಯಲ್ಲಿ ಪ್ರಸಿದ್ಧರಾಗಿರುವ ತನ್ನ ಕವನದ ನಾಯಕನ ಪರಿಚಯವನ್ನು ನಿಧಾನಕ್ಕೆ ಮಾಡಿಕೊಡುತ್ತದೆ. 'ನಿಕಾ ಕಾಣದ ವಸಾರೆ, ಸೂತಕದ ವಾಸನೆ ಸೂಸದ ಕೋಣೆಗಳ ಬಂಗಲೆ—ತುಂಬು ಗರ್ಭಿಣಿ'. ಈ ಸಾಲು ಮತ್ತೂ ಮುಂದುವರಿಯುತ್ತದೆ. ಹುಟ್ಟು, ಸಾವುಗಳ ಸೂತಕಗಳೆರಡರಿಂದಲೂ ವಂಚಿತವಾದ ಈ ಬಂಗಲೆ ತುಂಬು ಗರ್ಭಿಣಿಯಾಗಿರುವುದು `ದೋಸ್ತಿಗಳ ಕಾಡು ಹರಟೆ, ಪ್ರವಾಸಿಗಳ ಕುತೂಹಲ', ಮತ್ತಿವೆಲ್ಲಕ್ಕೂ ಹೆಚ್ಚಾಗಿ `ಫೈಸಲಾದ ಪಶುಗಳ ಸ್ತಬ್ಧ ಜೀವಂತಿಕೆಯಿಂದ'. ಈ ಮೃತ ಪ್ರಾಣಿಗಳ ಅವಶೇಷಗಳು ಕಾಲ ದೇಶಾತೀತವಾಗಿಯೂ ಕಾಲ ದೇಶಗಳಿಗೆ ಬದ್ಧವಾಗಿ, ಅನೈಸರ್ಗಿಕವಾಗಿ ನೆಲೆಗೊಂಡ ನಿಸರ್ಗದ ಸಾಕ್ಷಿಗಳಾಗುತ್ತವೆ.' 'ಹುಟ್ಟು ಅಸ್ತಿತ್ವವನ್ನು ಮೃತ್ಯುಮುಖೇನ ಗಳಿಸಿಕೊಳ್ಳುವ' ವೈರುಧ್ಯದಿಂದ ಕಂಗೊಳಿಸುತ್ತವೆ. ಆರೂವರಡಿಯ ಕೊತ್ತಿಗಣ್ಣಿನ ಪಠಾಣ ದೈತ್ಯ ಹನೀಫ್ ಸಾಹೇಬರು ತಮ್ಮ ಈ ಸ್ವಯಾರ್ಜಿತ ಸಂಪತ್ತಿನ ನಡುವೆ ತಮ್ಮ ಶಿಕಾರಿಯ ಬಗ್ಗೆ ವಿವರಿಸುವಾಗ ಅವರೇ ಒಂದು ಪ್ರಾಣಿಯಾಗಿ ಭಯ ಹುಟ್ಟಿಸುತ್ತಾರೆ.` ಸಾಹೇಬರ ಭವಿಷ್ಯವಾಣಿಯಂತೆ ಅವರು ಸಾಯುವುದೂ ಪ್ರಾಣಿಯಿಂದಲೇ ಎಂಬ ಸತ್ಯ ನಿಜವಾಗುವುದು ಮಾತ್ರ ದಾರುಣ ವ್ಯಂಗ್ಯದಲ್ಲಿ. ಮುದಿ ಎಮ್ಮೆಯನ್ನು ಕಟ್ಟಲು ಹೋದ ಸಾಹೇಬರು ಅದು ಒದರಿದಾಗ ಏರಿಯಿಂದ ಬಿದ್ದು ಸತ್ತಾಗ. ಇಡೀ ಕವಿತೆ ಬದುಕಿನ `ಟ್ರಾಜಿ ಕಾಮಿಕ್' ಸತ್ವದ ಅದ್ಭುತ ಸಂಕೇತವಾಗಿಬಿಡುತ್ತದೆ.

`ರಾಮನ್ ಸತ್ತ ಸುದ್ದಿ`ಯ ಹನುಮ, ಕವಿಗೆ `ಇಡೀ ಹಳ್ಳಿಗೇ ಹನುಮಿಸಿದಂತೆ' ಭಾಸವಾಗುತ್ತಾನೆ. ರಾಮನ್ ಸತ್ತ ಸುದ್ದಿಗೆ ಯಾರೂ ಕಾತರಿಸದೆ ಇರುವುದನ್ನು ಕಂಡು ಕಸಿವಿಸಿಗೊಳ್ಳುತ್ತಿರುವ ಕವಿಗೆ, ಹನುಮನಿಗೆ ಅದನ್ನು ಹೇಳುವ ಬಯಕೆಯಾದರೂ ಅವನ ಅಶಿಕ್ಷಿತ ಅರಿವು ಇದೆಲ್ಲವನ್ನು ಅರ್ಥೈಸಿಕೊಳ್ಳಲಾರದೆಂಬ ವಿಷಾದ. ಆದರೆ ಕವನದ ಕೊನೆ ಕೊನೆಗೆ 'ಪ್ರಕೃತಿಯ ಅಗಾಧದಲ್ಲಿ' ಅರ್ಥ ತೋರದ ಚುಕ್ಕೆಯಾಗಿ ಮಾರ್ಪಡುವ ಹನುಮನ ಸಂಕೇತ ಬೇರೆಯದೇ ಒಂದು ಮಜಲಿಗೆ ಕವನವನ್ನು ಮುಟ್ಟಿಸುತ್ತದೆ. ನಿಸರ್ಗದ ಧಾರಾಳ

ಅಗಾಧತೆಯ ಅರಿವು ತತ್‌ಕ್ಷಣದ ಯಾವುದೆಲ್ಲವನ್ನೂ ಕ್ಷುದ್ರವೆನ್ನಿಸಬಹುದಾದ ತಾತ್ವಿಕ ನಿರ್ವೇದವನ್ನು ಕಲಿಸುತ್ತದೆ. ಇವರ ಕವಿತೆಗಳಲ್ಲಿ ಗಾಂಧಿ ಬಜಾರು ಒಂದು ವಿಶಿಷ್ಟ ಸಂಕೇತವಾಗಿ ಮೂಡಿ ಬರುತ್ತದೆ. ಅರವತ್ತರಲ್ಲಿ ಪ್ರಕಟವಾದ ಅವರ 'ಮನಸು ಗಾಂಧಿ ಬಜಾರು' ಶೀರ್ಷಿಕೆಯೇ ಸ್ವತಃ ವಿಶಿಷ್ಟ ಅರ್ಥವನ್ನು ಧ್ವನಿಸುತ್ತದೆ. ಇವರ ಅತ್ಯಂತ ಜನಪ್ರಿಯ ಕವಿತೆ 'ಕುರಿಗಳು, ಸಾರ್ ಕುರಿಗಳು' ಹಲವು ಹತ್ತು ಸಂಕೇತಗಳ ಮೂಲಕ ಸಮೃದ್ಧ ಅರ್ಥ ಶ್ರೀಮಂತಿಕೆಯನ್ನು ಹೊಂದಿರುವ ಕವನಗಳಲ್ಲಿ ಒಂದಾಗಿದೆ. ನಮ್ಮ ಸಮುದಾಯದ ಗಾಂಪಕತೆಯನ್ನು ವಿಡಂಬಿಸುವ ಈ ಕವಿತೆ ಕನ್ನಡದ ವಿಶಿಷ್ಟ ಕಾವ್ಯಗಳಲ್ಲಿ ಒಂದು. ಇಲ್ಲಿ ಕುರಿ, ಕುರುಬ, ಎಲ್ಲ ಉಲ್ಲೇಖಗಳು ವ್ಯಂಗ್ಯಾರ್ಥದ ಹಲವು ಮಗ್ಗುಲುಗಳನ್ನು ಧ್ವನಿಪೂರ್ಣವಾಗಿ ನಮ್ಮ ಅನುಭವಕ್ಕೆ ತರುತ್ತವೆ. ನೆನ್ನೆ ಮೊನ್ನೆಯಷ್ಟೇ ಪುಟಗೋಸಿಯನ್ನು ಕಿತ್ತು ಪಂಚೆಯುಟ್ಟ ಕುರುಬರು ತಳವೂರಿದ ಮೇಲೆ ಕಟುಕರಾಗಿರುವ ಪರಿಯನ್ನು ಸಂಕೇತಿಸುವಂತೆಯೇ ಮಚ್ಚಿನ ಮೆಚ್ಚಿನಲ್ಲಿ ದುರಂತಕ್ಕೆ ಜಾರುವ ಕುರಿಗಳ ದೌರ್ಬಲ್ಯವನ್ನೂ ಸಂಕೇತಗಳು ಸಮರ್ಥವಾಗಿ ನಿರೂಪಿಸುತ್ತವೆ.

ಭಾಷೆಯ ಮೋಹಕ ಬಳಕೆ, ಆಕರ್ಷಕ ಪದಗತಿ ಮತ್ತು ಸಮೃದ್ಧವಾದ ಸಾಲುಸಾಲು ಸಂಕೇತಗಳ ಸಂರೂಪಣ ಸಾಮರ್ಥ್ಯ ಈ ಕವಿಯ ನಿಜವಾದ ಶಕ್ತಿ ಆಗಿದೆ. ನಾಲ್ಕೂವರೆ ದಶಕಗಳಷ್ಟು ಹಿಂದೆಯೇ ಕವಿ ಕೆ. ಎಸ್. ನರಸಿಂಹಸ್ವಾಮಿ ಗುರುತಿಸಿದಂತೆ 'ಇವರ ನವಿರಾದ ಸೌಂದರ್ಯ ದೃಷ್ಟಿ ಮತ್ತು ಮಾತಿನ ಕುಂದಣದ ಕೆಲಸದಲ್ಲಿ ಇವರು ತೋರುವ ಜಾಣ್ಮೆ ಇವರ ಕವನಗಳಿಗೆ ನುಣುಪನ್ನು ಮತ್ತು ಸೊಗಸನ್ನು ತಂದು ಕೊಡುತ್ತವೆ.' ಅಡಿಗರು ಇದನ್ನೇ ಭಾಷೆಯ ಯಶಸ್ವೀ ಉಪಯೋಗ ಮತ್ತು ಅದರಲ್ಲಿ ಈ ಕವಿಯ ಬೆರಗುಗೊಳಿಸುವ ಸಿದ್ಧಿ'ಯನ್ನಾಗಿ ಗುರುತಿಸುತ್ತಾರೆ. ಇಂದಿಗೂ ಈ ಮಾತುಗಳು ಪ್ರಸ್ತುತವಾಗುತ್ತವೆ. ಕವಿ ನಿಸಾರ್‌ರವರ ಈ ತೆರನ ಪ್ರತಿಭೆ ಶಕ್ತಿ ಸಾಮರ್ಥ್ಯಗಳು ಅವರನ್ನು ಇಂದಿಗೂ ಕೂಡ ಕನ್ನಡದ ಅತ್ಯಂತ ಸಾರ್ಥಕ ಹಾಗೂ ಸಮರ್ಥ ಕವಿಗಳಲ್ಲಿ ಒಬ್ಬರನ್ನಾಗಿಸಿರುವಂತೆಯೇ, ಇವರನ್ನು ನಮ್ಮ ನಡುವಿನ ಅತ್ಯಂತ ಜನಪ್ರಿಯ ಕವಿಯನ್ನಾಗಿಯೂ ಮಾಡಿವೆ. ಪ್ರಾಯಶಃ ಇವರಿಗೆ ದೊರಕಿರುವ ಉತ್ತುಂಗ ಜನಪ್ರಿಯತೆ, ಯಾರನ್ನಾದರೂ ಕರುಬುವಂತೆ ಮಾಡಬಹುದು. ಆದರೆ ತೀವ್ರ ಚಿಂತನಶೀಲತೆ ಮತ್ತು ಅನಗತ್ಯ ತಾತ್ವಿಕ ವಜ್ಜೆಯನ್ನು ಉದ್ದಿಶ್ಯ ಪೂರ್ವಕವಾಗಿ ತಮ್ಮ ಕವನಗಳಿಂದ ಹೊರಗಿಡುವ ಪ್ರಯತ್ನ ಮಾಡುವ ಈ ಕವಿಗೆ ಅವರ ವಿಶಿಷ್ಟ ಕಾವ್ಯಶಕ್ತಿ ಮತ್ತು ಪ್ರತಿಭೆ ಹಾಗೂ ಜನಪ್ರಿಯತೆಗಳು ಅವರ ನಿರಂತರ ವಿಕಾಸ ಮತ್ತು ಬದಲಾವಣೆ ಹಾಗೂ ಚಲನಶೀಲತೆಗಳಿಗೆ ತಡೆಯಾದುವೇನೋ ಎನ್ನುವ ಆತಂಕಗಳು ಕೆಲವೊಮ್ಮೆ ಕಾಡುತ್ತವೆ. ಅದೇನೇ ಇದ್ದರೂ, ಹೊಸಗನ್ನಡದ ಸಂದರ್ಭದಲ್ಲಿ ಕವಿ ನಿಸಾರರ ಕೋರೈಸುವ ಪ್ರತಿಭೆ ಮತ್ತು ಸ್ಥಾನಮಾನಗಳನ್ನು ಯಾರೂ ನಿರ್ಲಕ್ಷಿಸಲು ಸಾಧ್ಯವಿಲ್ಲ.

ನಿಸಾರರದು ಬಹುಮುಖ ಪ್ರತಿಭೆ. ಕವಿಯಾಗಿ, ಅನುವಾದಕರಾಗಿ, ಗದ್ಯ ಲೇಖಕರಾಗಿ ಅವರದು ಅನನ್ಯ ಸಾಧನೆ. ವಿಜ್ಞಾನ ವಿಷಯದ ಅಧ್ಯಯನ ಮತ್ತು ಬೋಧನ; ಸಾಹಿತ್ಯಸೃಷ್ಟಿ ಮತ್ತು ಕಾವ್ಯಕೃಷಿ—ಇವೆಲ್ಲಕ್ಕೂ ಪೂರಕವಾಗಿ ಅವರ ಅದಮ್ಯವಾದ ಜೀವನ-

ಪ್ರೀತಿ. ಇವೆಲ್ಲವೂ ಸೇರಿ ಅವರನ್ನು ಶ್ರೇಷ್ಠಕವಿಯನ್ನಾಗಿಸಿವೆ. ಅವರು ಕವಿಯಾಗಿ ಎಷ್ಟು ಜನಪ್ರಿಯರೋ, ಅಧ್ಯಾಪಕರಾಗಿಯೂ ಅಷ್ಟೇ ವಿದ್ಯಾರ್ಥಿಪ್ರಿಯರು. ಎಲ್ಲಕ್ಕಿಂತ ಹೆಚ್ಚಾಗಿ ಸ್ನೇಹಿತರು. ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲ ಏಳು-ಬೀಳುಗಳ ನಡುವೆಯೂ ತಾನೇ ತಾನಾಗಿ ಉಳಿದು, ಬೆಳೆದ ಗಾರುಡಿಗ ಕವಿ. ತಮ್ಮ ಕವನಗಳಲ್ಲಿ ಇವರು ಬಳಸುವ ಭಾಷೆ ಪ್ರಾಸೋಚಿತ ವಿಶಿಷ್ಟತೆಯಿಂದ ಮಾತ್ರವಲ್ಲ, ವ್ಯಕ್ತಿವಿಶಿಷ್ಟತೆಯಿಂದಲೂ ಗಮನ ಸೆಳೆಯುತ್ತದೆ. ಹಾಗೆಯೇ ವಸ್ತು ನಿರ್ವಹಣೆಯಲ್ಲೂ ಇವರದು ವಿಶಿಷ್ಟ ಸ್ಪರ್ಶ. ಸರಳತೆಯಿಂದ ಅಗಾಧತೆಯನ್ನು, ಸಾಮಾನ್ಯದಿಂದ ಅದ್ಭುತವನ್ನು, ಸಾಧಾರಣ ಮಾತಿನ ಮೂಲಕ ಗಂಭೀರ ಚಿಂತನೆಯನ್ನ ಸೆರೆ ಹಿಡಿದ ಪ್ರಯತ್ನ ಅವರದು. ಅದರಲ್ಲಿ ಅವರು ಯಶಸ್ಸನ್ನು ಪಡೆದಿದ್ದಾರೆ. ಅದರಿಂದಲೇ ಅವರ ಕಾವ್ಯ ಎಂದಿಗೂ ಹಸಿರಾಗಿ ಉಳಿದು, ಕಾವ್ಯಾಭ್ಯಾಸಿಯ 'ನಿತ್ಯೋತ್ಸವ'ವಾಗುತ್ತದೆ.

ನಮ್ಮ ನಾಡಿನ, ಅಷ್ಟೇ ಏಕೆ ಜಗತ್ತಿನ ಬಹುತರ ರಾಷ್ಟ್ರಗಳ ವ್ಯಕ್ತಿ ಬಾಳುವೆಯ ಹಾಗೂ ಸಮುದಾಯದ ಅಸ್ತವ್ಯಸ್ತತೆಗೆ ಹಾಗೂ ಏರುಪೇರಿನ ಅಧ್ವಾನಗಳಿಗೆ ಮುಖ್ಯ ಕಾರಣಗಳಲ್ಲಿ ಒಂದೆಂದರೆ—ಸ್ವಂತ ಜೀವನ ವಿಧಾನದ ಬಗೆಗಿನ ಜಿಹಾಸೆ, ಪರ ಜೀವನಾನುಸಂಧಾನದ ತೀವ್ರಾಪೇಕ್ಷೆ. ಒಬ್ಬ ತಾನಾಗಿರದೆ, ತಾನಾಗಲು ಪ್ರಯತ್ನಿಸದೆ ಇನ್ನೊಬ್ಬನಾಗಲು ಪರಿತಪಿಸುವುದು, ಗೀಳು ದುರ್ವಾಂಛೆಗಳನ್ನು ಪೋಷಿಸುತ್ತ ಮುಂದುವರಿಯುವುದು ಹಲವು ಸಾಮಾಜಿಕ ಅನರ್ಥ ಅಸಾಂಗತ್ಯಗಳಿಗೆ ಕಾರಣ. ಸ್ವಕ್ಷೇತ್ರದಲ್ಲಿ ಶ್ರದ್ಧಾಪೂರ್ಣ ಉಳುಮೆ ಮಾಡದಿದ್ದಾಗ, ಸೌಬ್ಬಿ ಸ್ವಾಸ್ಥ್ಯಗಳನ್ನು ಬೆಳಸಲು ಮುಂದಾಗದಿದ್ದಾಗ ಅನ್ಯ ಕ್ಷೇತ್ರಗಳು ಫಲವತ್ತು ಗೋಮಾಳಗಳಾಗಿ ಕೈ ಬೀಸಿ ಪ್ರಲೋಭಿಸುವುದು ಸಹಜವಲ್ಲವೆ? ಅಲ್ಲಿ ವಿಫಲರಾಗಿ ಮನ ನೊಂದು ಕುಸಿದಾಗ ಕರುಬು ಈರ್ಷ್ಯೆಗಳು ಹಲ್ಲು ಮಸೆಯುತ್ತ ಎದುರು ಹಾಯುತ್ತವೆ. ಆಶಾಭಂಗ, ಹತಾಶ ಭಾವಗಳು ನೇರವಾಗಿ ಕಾರ್ಯಶೀಲವಾಗದೆ ಮೊಗವಾಡ ಧರಿಸಿ, ವೇಷ ಮರೆಸಿ ತಮ್ಮ ಮಹಿಮೆಯನ್ನು ಪ್ರಚುರಪಡಿಸುತ್ತವೆ. ಅಸಂತುಷ್ಟ, ರಾಷ್ಟ್ರಕರ ಸಮಾಜ ಕಾಲಕ್ರಮೇಣ ವ್ಯಾಧಿಗ್ರಸ್ತವಾಗಿ ಮುಷ್ಕರ, ಪ್ರತಿಭಟನೆ, ಹಿಂಸಾಚಾರ, ಕೊಲೆ ಸುಲಿಗೆ ದರೋಡೆ ಇತರ ಸಾಮೂಹಿಕ ಮಾರಕಗಳಿಗೆ ಆಜ್ಯವೆರೆಯುತ್ತದೆ.

(ಪರಾನುಕರಣೆಯ ಅಪಾಯ)



ಉದಾರವಾದೀ ಮಾನವತೆಯ ಕವಿ

♦ ಡಾ. ಪುರುಷೋತ್ತಮ ಬಿಳಿಮಲೆ

೨೦ನೆಯ ಶತಮಾನದ ಕನ್ನಡ ಸಾಹಿತ್ಯ ಉದಾರವಾದೀ ಮಾನವತೆಯನ್ನು ಒಂದು ತತ್ತ್ವವಾಗಿ ಅಂಗೀಕರಿಸಿ ಕೀರ್ತಿಸಿದೆ. ನವೋದಯ ಮತ್ತು ನವ್ಯ ಸಾಹಿತ್ಯದ ಅನೇಕ ಮುಖ್ಯ ಬರೆಹಗಾರರ ಸಾಹಿತ್ಯದ ವಸ್ತು ಮತ್ತು ಆಕೃತಿಯನ್ನು ಈ ಉದಾರವಾದೀ ಮಾನವತೆಯೇ ನಿರ್ಧರಿಸಿದೆ. ಡಾ. ಡಿ. ಆರ್. ನಾಗರಾಜ್ ಅವರು ಸಮರ್ಪಕವಾಗಿ ಗುರುತಿಸಿರುವಂತೆ— 'ತಾಳ್ಮೆ ಮತ್ತು ಪ್ರಗತಿಯ ಬಗೆಗಿನ ನಿಷ್ಠೆಯು ಸೆಕ್ಯುಲರ್ ಆದ ಪರಿಭಾಷೆಯಲ್ಲಿ ಪ್ರಕಟವಾಗುವುದು' ಇದರ ವೈಶಿಷ್ಟ್ಯ.

ಕೆ. ಎಸ್. ನರಸಿಂಹಸ್ವಾಮಿ, ಗಂಗಾಧರ ಚಿತ್ತಾಲ, ಜಿ. ಎಸ್. ಶಿವರುದ್ರಪ್ಪ ಈ ವರ್ಗದ ಅತ್ಯುತ್ತಮ ಪ್ರತಿನಿಧಿಗಳು. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಈ ವರ್ಗಕ್ಕೆ ಸೇರುವ ಇನ್ನೊಬ್ಬ ಮಹತ್ತ್ವದ ಕವಿ. 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಸ್ವಯಂ ಸೇವೆಯ ಗಿಳಿಗಳು', 'ಅನಾಮಿಕ ಆಂಗ್ಲರು', 'ಆಕಾಶಕ್ಕೆ ಸರಹದ್ದುಗಳಿಲ್ಲ' ಮತ್ತು 'ಅರವತ್ತೈದರ ಐಸಿರಿ' ಕವನ ಸಂಕಲನಗಳ ಅತ್ಯುತ್ತಮ ಕವಿತೆಗಳು ಮೇಲಿನ ಮಾತಿಗೆ ಸಾಕ್ಷಿಗಳಾಗಿವೆ. ಪ್ರಸ್ತುತ ಲೇಖನದಲ್ಲಿ 'ಆಕಾಶಕ್ಕೆ ಸರಹದ್ದುಗಳಿಲ್ಲ' ಮತ್ತು 'ಅರವತ್ತೈದರ ಐಸಿರಿ' ಸಂಕಲನಗಳಲ್ಲಿನ ಕೆಲವು ಮುಖ್ಯ ಕವಿತೆಗಳನ್ನು ಆಧರಿಸಿ ಮೇಲಿನ ಮಾತುಗಳನ್ನು

ಸಮರ್ಥಿಸಲು ಪ್ರಯತ್ನಿಸಲಾಗಿದೆ.

ಮೇಲೆ ಹೇಳಿದ ಎರಡೂ ಕವಿತಾ ಸಂಕಲನಗಳಲ್ಲಿ ಸುಮಾರು 10 ಕವನಗಳು 'ಕವಿತೆ'ಯ ಬಗೆಗೇ ಮಾತಾಡುತ್ತವೆ. ಈ ಕವಿತೆಗಳನ್ನು ಪರಿಶೀಲಿಸುವ ಮುನ್ನ, ಕವಿ ನಿಸಾರರು ಸಮಕಾಲೀನ ಕಾವ್ಯ ಸಂದರ್ಭದ ಬಗ್ಗೆ ಹೇಳುವ ಮಾತುಗಳನ್ನು ಉಲ್ಲೇಖಿಸ ಬಹುದು—'ಕೆಲವು ವರ್ಷಗಳಿಂದ ನಮ್ಮ ನಾಡಿನಲ್ಲಿ ನಡೆದಿರುವ ಸಾರ್ವತ್ರಿಕ ಸ್ವರೂಪದ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳು ನನ್ನನ್ನು ಹಿಂದಿಲ್ಲದ ಆತಂಕಕ್ಕೆ ಈಡುಮಾಡಿವೆ. ಮನುಷ್ಯ ಸಂಬಂಧಗಳ ಬಗ್ಗೆ ನಾನು ವರ್ಷಾನುಗಟ್ಟಲೆ ರೂಪಿಸಿಕೊಂಡಿದ್ದ ಸುಕುಮಾರ ಗುಲಾಬೀಯ ಚಿತ್ರವನ್ನು ಅಂದಗೆಡಿಸಿ ಅಪನಂಬಿಕೆ ಹತಾಶೆಗಳ ಕಸದ ಬುಟ್ಟಿಗೆ ಎಸೆಯುವಂತೆ ಎಸಗಿವೆ. ಸೌಹಾರ್ದ, ಸ್ನೇಹಪರತೆ, ಹೃದಯಾನುಕಂಪೆಗಳಂತಹ ಮಾನವೀಯ ಗುಣಗಳು ವೇದಿಕೆ, ಪತ್ರಿಕೆ, ಟಿ.ವಿ. ಮತ್ತು ಪುಸ್ತಕಗಳ ಸಸ್ತಾ ಸರಕುಗಳಾಗಿ, ಸಾಮುದಾಯಿಕ ಜೀವನದಿಂದ ಕ್ಷಣೇ ಕ್ಷಣೇ ಕಾಲ್ತೆಗೆಯುತ್ತಿರುವ ತಥ್ಯ, ನನ್ನ ಸೂಕ್ಷ್ಮ ಸಂವೇದಿ ಮನಸ್ಸನ್ನು ಅತೀವ ವೇದನೆಗೆ ಒಳಪಡಿಸಿದೆ. ನಾಡು ನುಡಿಗಳ ಒಳಿತಿನ ಬಗೆಗೆ ಲಾಗಾಯ್ತಿನಿಂದ ಆಲೋಚಿಸುತ್ತ ಬಂದಿರುವ ನನಗೆ, ಪರಿಸರವನ್ನು ಗಬ್ಬುಗೆಡಿಸಿರುವ ಅಬ್ಬರ ಆವೇಶಗಳು, ಹದವನ್ನು ಹಾಳ್ಗೆಡಿಸಿರುವ ಅಪನೈತಿಕ ನಿಲವುಗಳು ಕಳವಳ, ಅಸ್ವಾಸ್ಥ್ಯ ಗಳಿಗೆ ಕಾರಣವಾಗಿವೆ. ಇವುಗಳಿಂದ ತಾಡಿತವಾಗಿ ಘಾಸಿಗೊಂಡ ಮನಸ್ಸು ನನ್ನ ಗದ್ಯ ಪದ್ಯಗಳಲ್ಲಿ ತನ್ನ ಪಡುಹ ಪಾಡುಗಳನ್ನು ಆಗೀಗ ತೋಡಿಕೊಳ್ಳಲು, ತನ್ಮೂಲಕ ಹಗುರ ಗೊಳ್ಳಲು ಪ್ರಯತ್ನಿಸಿದೆ.' ('ಆಕಾಶಕ್ಕೆ ಸರಹದ್ದುಗಳಿಲ್ಲ', ಲೇಖಕರ ನುಡಿ, ಪುಟ IV.)

ನಿಸಾರರ ಈ ಮಾತುಗಳಲ್ಲಿ ಕಾವ್ಯದ ಬಗೆಗಿನ ಅವರ ಧೋರಣೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಲೋಕದ ಅಸ್ವಾಸ್ಥ್ಯವನ್ನು ಗುಣಪಡಿಸಿ, ಸ್ವಾಸ್ಥ್ಯವನ್ನು ಕಾಪಾಡಿ ಕೊಳ್ಳಲು ಅವರಿಗೆ ಕಾವ್ಯ ಬೇಕು. ವ್ಯಕ್ತಿತ್ವಗಳೆಲ್ಲ ಛಿದ್ರೀಕರಣಗೊಳ್ಳುತ್ತಿರುವಾಗ ವ್ಯಕ್ತಿತ್ವದ ಅಖಂಡತೆಯನ್ನು ಕಾವ್ಯ ಕಾಪಾಡಬೇಕು. ಸಮಾಜದ ಜಡತೆಯನ್ನು, ದಣಿವನ್ನು, ಸೋಲನ್ನು ಕಾವ್ಯ ಹೋಗಲಾಡಿಸಬೇಕು. ಕಾವ್ಯಕ್ಕೆ ಇಂಥ ಮಂತ್ರಶಕ್ತಿ ಇರಬೇಕೆಂದು ನಿಸಾರರು ಬಯಸುತ್ತಾರೆಯಾದ್ದರಿಂದ ಅವರ ಕವನ ಈ ರೂಪವನ್ನು ಪಡೆದುಕೊಳ್ಳುತ್ತದೆ :

'ನನ್ನ ಮೊದಲನೆ ಒಲವು ಹೇಗೋ ಹಾಗೇ
ನನ್ನ ಕೊನೆಯುಸಿರು ಸಹ ನೀನೆ;
ನೀ ಬಳಿಯೊಳಿಲ್ಲದಿರೆ ನೆಮ್ಮದಿಯ ನಾ ಕಾಣೆ.
ನನ್ನ ಬಾಳ್ವೆಯ ಸಾರ್ಥಕತೆಯನನುದಿನ ಹೊತ್ತು
ಜಗದಲ್ಲಿ ಮೆರೆಸುವ ವೈಭವದ ಮೇನೆ—
ಓ ನನ್ನ ಕವಿತೆ
ಮತಿರಹಿತೆ.

'ಬಯಲನ್ನು ನೆಚ್ಚಿ ಬಯಲಾಗಿ ಹೋಗದಿರು,
ಸಂಯಮವ ಕಲಿ.
ಯಾರ ಯಾರದೋ ತೆವಲು ತೀಟೆಗಳ ಖಯಾಲಿಗೆ

ಬಲಿಯಾಗಿ ಗಲಿಬಿಲಿಸಿ ಆಗದಿರು ತಬ್ಬಲಿ.
ಆಲಯದ ಇರುಕಟ್ಟು ಯಾವತ್ತಿಗೂ ಕ್ಷೇಮ,
ಬಾಳ ಸಾಗಣೆಯಲ್ಲಿ ಬಲು ಸರಾಗ;
ಎಂದೇ, ಎಲ್ಲಿದ್ದರೂ ಬಂದು ಬಿಡು
ನನ್ನೆದೆಗೆ ಬೇಗ.'

(ಎಲ್ಲಿದ್ದೀಯ ನನ್ನ ಕವಿತೆ?)

ಕಾವ್ಯದ ಅನನ್ಯತೆಯನ್ನು ಕಾಪಾಡಿಕೊಳ್ಳುತ್ತ, ಸಂಯಮದಿಂದ ಅದನ್ನು ಬೆಳೆಸಬೇಕೆನ್ನುವ ನಿಸಾರರ ಧೋರಣೆ ಮೃದು ಮಧುರವಾದುದು. 'ಕವಿಯಿಲ್ಲದಿದ್ದರೆ' ಎಂಬ ಕವನದಲ್ಲಿ ಅವರು ಬರೆಯುವುದು ಹೀಗೆ :

'ಕವಿ—
ಜಗದ ಕೆನ್ನೆಯ ಮೇಲಿನೊಂದು ಕಂಬನಿ ತೇವ;
ನೊಂದೆದೆಯ ನಿಟ್ಟುಸಿರ ನಿಸ್ಸಹಾಯಕ ಭಾವ.
ಕವಿಯಿಲ್ಲದಿದ್ದಲ್ಲಿ
ಲೋಕ ಉದುಗಿ ಹೋಗುವುದಿಲ್ಲ,
ನಡುಗಿ ನಲುಗುವುದಿಲ್ಲ.
ಹಾಗಾದರೇನಾಗುತ್ತದೆ?
ಬದುಕು ತನ್ನ ಪಾಡಿಗೆ
ಯಥಾಪ್ರಕಾರ ಸಾಗುತ್ತದೆ:
ಆದರೊಂದಿಷ್ಟು ಸೊರಗಿ ಬರಡಾಗಿ,
ಕೊಂಚ ಕೊರಗಿ ಕುರುಡಾಗಿ.'

(ಕವಿಯಿಲ್ಲದಿದ್ದರೆ)

ಕೊನೆಯ ಎರಡು ಸಾಲುಗಳು ಜಗತ್ತಿಗೆ ಕವಿ ಎಷ್ಟು ಮುಖ್ಯ ಎಂಬುದನ್ನು ವಿವರಿಸುತ್ತವೆ.

ಇದರೊಂದಿಗೆ ಕಾವ್ಯದ ಅನನ್ಯತೆಯ ಬಗೆಗೂ ನಿಸಾರರು ಗಂಭೀರವಾಗಿ ಯೋಚಿಸುತ್ತಾರೆ. 'ಕವಿತೆ ಆಗಬೇಕು ಕಾಲಾತೀತ' ಮತ್ತು 'ಆಕಾಶಕ್ಕೆ ಸರಹದ್ದುಗಳಿಲ್ಲ' ಕವನಗಳಲ್ಲಿ ಅವರು ತಮ್ಮ ಕಲ್ಪನೆಯ ಕವಿತೆ ಹೇಗಿರಬೇಕೆಂಬುದನ್ನು ನೇರವಾಗಿಯೇ ಬರೆಯುತ್ತಾರೆ—

'ಸತ್ಕವಿತೆಗೆ ವಯಸ್ಸಿನ ವ್ಯಸನವಿಲ್ಲ,
ಎಲ್ಲರ ಗಮನದ ಚುಂಬಕ
ಅದರ ಹರೆಯವಂತ ಗಲ್ಲ.
ಶತಕಾರ್ಧದ ಮುನ್ನ ಬರೆದ ಕವನ
ನಿನ್ನೆಯಷ್ಟೇ ಪೂರ್ತಿಗೊಂಡ ಭವನ-
ದ ಹಾಗೆ ಕಣ್ಮನಗಳಿಗೆ ಆಗಬಹುದು
ಆಪ್ಯಾಯಮಾನ,
ತನ್ನಿಮಿತ್ತ ಅದರ ರಚಕನ ಮಾಡಿ ಸುಶ್ಲಾಘ್ಯನ.' (ಕವಿತೆ ಆಗಬೇಕು ಕಾಲಾತೀತ)

ಕಾವ್ಯವು ವಯಸ್ಸಿನ ವ್ಯಸನವಿಲ್ಲದೆ ಕಾಲಾತೀತವಾಗಬೇಕೆಂಬ ಹಂಬಲ ಕವಿಯದು. `ಎಲ್ಲೋ ಒಂದೆರಡು ಸಂಸ್ಕಾರವಂತ ರಚನೆ ಮಾತ್ರ ಆಗುತ್ತವೆ. ಸಂಸ್ಕೃತಿ ಸಾಗರದ ದೀಪ ಗೋಪುರ, ಸುರಕ್ಷಾಪ್ರದ ದಿಕ್ಸೂಚನೆ' ಎಂಬಲ್ಲಿ `ಅಂತಹ ಕಾಲಾತೀತ ಕವನಗಳ ಸಂಖ್ಯೆ ಹೆಚ್ಚಿಗೆ ಇಲ್ಲ' ಎಂಬ ಧ್ವನಿಯೂ ಪ್ರಕಟವಾಗಿದೆ.

ಬಹುಶಃ ಕಾವ್ಯದ ಬಗೆಗೂ ನಿಸಾರರ ನಿಲವು ಅತ್ಯುತ್ತಮವಾಗಿ ಮೂಡಿ ಬಂದಿರುವುದು `ಆಕಾಶಕ್ಕೆ ಸರಹದ್ದುಗಳಿಲ್ಲ' ಎಂಬ ಕವನದಲ್ಲಿ. ಆಕಾಶವನ್ನು ಒಂದು ಪ್ರತಿಮೆಯಾಗಿಸಿ ಅದರ ಗುಣಗಳನ್ನು ವರ್ಣಿಸುತ್ತಾ ಕವಿತೆಯ ಗುಣವನ್ನು ಕಟ್ಟಿಕೊಡುವ ಈ ಕವನವು ವಸ್ತು ಮತ್ತು ತಂತ್ರ—ಎರಡೂ ದೃಷ್ಟಿಯಿಂದ ಅನುಪಮವಾದ ಒಂದು ರಚನೆಯಾಗಿದೆ.

'ಆಕಾಶಕ್ಕೆ ಸರಹದ್ದುಗಳಿಲ್ಲ
ಹಾಗಾಗಿ ಕಾಣಸವು ಅಲ್ಲೆಲ್ಲು
ಬಲೋದ್ಬಂದಿಯ ಬಾಂದುಗಲ್ಲುಗಳು,
ಕಟ್ಟುಪಾಡಿನ ನಿಖರ ಚಕ್ಕುಬಂದಿ.
ದೇಶ ಪ್ರಾಂತಗಳ ಹಣೆ ಚೀಟಿ ಅದಕೆ ಸಲ್ಲ
ಜನಾಂಗ ಭೇದದ ಗಲಭೆ ಗದ್ದಲ
ನದಿ ನುಡಿ ಪೆಟ್ರೋಲು ನೆಲ
ಗಳ ತಗಾದೆಯಿರದ ಅದು ಸ್ವಚ್ಛಂದಿ.'

(ಆಕಾಶಕ್ಕೆ ಸರಹದ್ದುಗಳಿಲ್ಲ)

ಇಷ್ಟೇ ಹೇಳಿದರೂ ಸಾಕಾಗುತ್ತಿತ್ತು. ಕಾವ್ಯದ ಗುಣ ಆಕಾಶದ ಪ್ರತಿಮೆಯ ಮೂಲಕ ಸಂವಹನವಾಗುತ್ತಿತ್ತು. ಆದರೆ ಕವಿಗೆ ಅದರ ಬಗ್ಗೆ ಸ್ವಲ್ಪ ಅಪನಂಬಿಕೆ ಇದ್ದಂತೆ ತೋರುತ್ತದೆ. ಹಾಗಾಗಿ ನೇರವಾಗಿಯೇ ಅದರ ಬಗ್ಗೆ ನಿಸಾರರು ಬರೆಯುತ್ತಾರೆ—

'ಕವಿತೆ ಆಕಾಶದಂತೆ ಸರ್ವಾಧಾರೆ
ಅದಕಿಲ್ಲ ಧರ್ಮಗಿರ್ಮಗಳ ಗಡಿ ಗೆರೆ,
ರಾಜಕೀಯದ ಜಿಮ್ಮಿಗಲ್ಲು, ಫಲಕಗಳ ಹೊರೆ
ಜಾತಿ ಕುಲ ವರ್ಗದ ಟೇಪಿನಳತೆಯ ಮೇರೆ.'

(ಅದೇ)

ಇವು ತೀರ ವಾಚ್ಯವಾದ ಮಾತುಗಳು. ಈ ವಾಚ್ಯತೆ ಇನ್ನಷ್ಟು ಮುಂದೆ ಬೆಳೆಯುತ್ತದೆ:

'ಕವಿತೆಯ ಆಂತರ್ಯದಲ್ಲಿ ಮೊಳಗಿದೆ
ದಮನ ದಬ್ಬಾಳಿಕೆಗಳೆದುರು ಸೆಟೆದೇಳುತ್ತ
ಸೆದ್ದು ಹೊಡೆಯುವ, ಗುಡುಗು ಮಿಂಚು
ಮಳೆಗಳ ಹುತ್ತದಿಂದೆದ್ದು
ಸಂಘಟ್ಟಿಸುವ ಸಿಡಿಲು ಪಡೆಗಳ ಮೊತ್ತ.
ಹಾಗೆಯೇ ದಳ್ಳುರಿದಿದೆ
ನಕ್ಷತ್ರ ಗ್ರಹ ಉಲ್ಕೆಗಳ ತಂಡೋಪತಂಡ,

ಬ್ರಹ್ಮಾಂಡಿಗರ ಬಂಡಾಯದುಧ್ವಸ್ತಕರ
ಭೈರವಾಗ್ನಿಯ ಕುಂಡ.'

(ಅದೇ)

ಕವಿತೆಯ ಕೊನೆಯಲ್ಲಿ ಕವಿ ಮತ್ತೆ ಆಕಾಶವನ್ನೂ ಕವಿತೆಯನ್ನೂ ಜೊತೆಗಿರಿಸಿ ವಿವರಿಸುತ್ತಾರೆ—

'ಆಕಾಶದಂತೆಯೇ ಅನಂತಾನಂತ, ನಿಗೂಢ
ಕವಿತೆ ಜನ್ಮ ತಳೆಯುವ ಮನಸ್ಸು ಕೂಡ.
ವ್ಯತ್ಯಾಸವಿಷ್ಟೆ: ಬಾಹ್ಯಾಕಾಶ
ಸ್ಥೂಲ ಕಾಯದ ಭೀಷ್ಮ.
ಮನಸ್ಸು ಕಾಮರೂಪಿ; ಸೂಕ್ಷ್ಮಾತಿಸೂಕ್ಷ್ಮ.
ಆಕಾಶ ಕವಿತೆಯಂತೆ,
ಅದಕ್ಕೇ ಅದಕ್ಕೆ ಸರಹದ್ದುಗಳಿಲ್ಲ.'

(ಅದೇ)

ಮೇಲಿನ ಕವಿತೆಯನ್ನು ದೀರ್ಘವಾಗಿ ಉದ್ಧರಿಸುವುದಕ್ಕೆ ಕಾರಣಗಳಿವೆ. ಮುಖ್ಯವಾಗಿ ನಿಸಾರರು ಕವಿತೆಯನ್ನು ಗ್ರಹಿಸುವ ವಿಧಾನದ ಬಗ್ಗೆ ಮತ್ತು ಅವರ ಕವಿತೆಯ ವಸ್ತುವಿನ ಬಗ್ಗೆ ಇದು ಸಾಕಷ್ಟು ಒಳ ನೋಟಗಳನ್ನು ನೀಡುತ್ತದೆ. ಇವನ್ನು ಸಂಗ್ರಹಿಸಿ ಹೇಳುವುದಾದರೆ—ಅವರು ಉದಾರವಾದೀ ಮಾನವೀಯ ನೆಲೆಗಳಲ್ಲಿ ಕಾವ್ಯವನ್ನು ಮತ್ತು ಜಗತ್ತನ್ನು ಗ್ರಹಿಸುತ್ತಾರೆ ಮತ್ತು ವಿವರಿಸುತ್ತಾರೆ.

ಈ ನಿಲವಿನ ಕವಿಗಳು ಸಂಸಾರವನ್ನು ಹೆಚ್ಚು ಆಸ್ಥೆಯಿಂದ ನೋಡುತ್ತಾರೆ. ನರಸಿಂಹಸ್ವಾಮಿ ಅವರ ಕವನಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಉದಾರವಾದೀ ಮಾನವತೆಯ ಕವಿಗಳಿಗೆ ಸಂಸಾರವೇ ಆದಿ ಮತ್ತು ಸಂಸಾರವೇ ಅಂತ್ಯ. ಸಾಂಸಾರಿಕ ಪ್ರೇಮವನ್ನು ಕೊಂಡಾಡುವುದು ಮತ್ತು ಸಂಸಾರಕ್ಕೆ ಭಂಗ ತರುವ ಅಂಶಗಳನ್ನು ಖಂಡಿಸುವುದು ಇಲ್ಲಿ ತಾನೇ ತಾನಾಗಿ ಸಂಭವಿಸುವ ಪ್ರಕ್ರಿಯೆ. 'ಮನೆಯೆಂದರೆ' ಕವನದಲ್ಲಿ ನಿಸಾರರು ಬರೆಯುವುದು ಹೀಗೆ—

'ಮನೆಯೆಂದರೆ ಮಡದಿಯ ಮಮತೆಯ ಸಕ್ಕರೆ
ಹೆತ್ತೊಡಲಿನ ಜೊತೆ ಒಡಹುಟ್ಟಿನ ಎಡವಟ್ಟಿಲ್ಲದ ಅಕ್ಕರೆ.
ಬೈಗೂ ಬೆಳಗೂ ಅಡಗೂ
ಲಜ್ಜೆಯ ಕತೆ ಹೇಳುವ ಅಜ್ಜಿಯ ಗೊಣಗು.
ಮನೆಯೊಡತಿ ಮನೆಯೊಳಗಿದ್ದಾಳೋ ಇಲ್ಲವೋ ಎಂದು
ನೆರೆಹೊರಕೆಯ ಗರತಿಯರೈತಂದು
ಯಾರೇ ಬಂದರೂ ಯಾರೇನೆಂದರೂ—
ತುಸು ವೇಳೆ ತಂಗುವ ಪಟ್ಟಾಂಗದ ಬಂದರು.
ಕಂದಮ್ಮಗಳ ಕೇಕೆ ಹರ್ಷ
ಒಟ್ಟಾರೆ ಸಜೀವ ಸ್ಪರ್ಶ

—ಇವು ಇಲ್ಲದೆ ಏನೆಲ್ಲವು ಇರುವ ಗೃಹ
ಮಂಗಳ ಗ್ರಹ.'
(ಮನೆಯೆಂದರೆ)

ಹೀಗೆ ಮನೆಯನ್ನು ಅದರೆಲ್ಲಾ ಮಿತಿಗಳ ನಡುವೆ ಒಪ್ಪಿಕೊಳ್ಳುವ ಕವಿ, ಕವಿತೆಯನ್ನು ಕೊನೆಗಾಣಿಸುವುದು ಹೀಗೆ—

'ಮನೆ ದೈನಿಕ ಕೊರತೆ ಮರೆಸುವ
ನೆಮ್ಮದಿಯೊರತೆ,
ರಸಗವಿತೆ.
ಮನೆಗಿದೆ ತನ್ನದೆ ಸ್ವತ್ತ್ವ
ಭಾವ, ಸ್ವಭಾವ, ವ್ಯಕ್ತಿತ್ವ.
ಅದು ಅದೃಷ್ಟದ ಗರುಡ
ಇಳಿಸಿರುವ ಅಮೃತದ ಭಾಂಡ;
ಬಾಗಿಲಿನೊಳಗಿನ ಬ್ರಹ್ಮಾಂಡ.'
(ಅದೇ)

ಸಂಸಾರವನ್ನು ಮೋಹಕ ಜಗತ್ತಾಗಿ ಪರಿವರ್ತಿಸಿದ ಕವಿಯು ಇದಕ್ಕೆ ಪೂರಕವಾಗಿ 'ನೆರೆಹೊರೆಯವರು', 'ಗೃಹ ಪ್ರವೇಶದ ಉಡುಗೊರೆ', 'ಎಂಥೆಂಥ ಜೀವಗಳು', 'ನಾಡವರ ನಾಯಿಪಾಡು', 'ಬೇರು-ಹೆಣ್ಣು', 'ಉತ್ಸವಪ್ರಿಯರು', 'ಬದುಕೇ ಅಷ್ಟು', 'ಆ ಪ್ರೀತಿ ಈಗೆಲ್ಲಿ?', 'ಮನೆಗೆ ಮರಳಿದ ಮಮತೆ'—ಮತ್ತಿತರ ಕವನಗಳನ್ನು ಬರೆದಿದ್ದಾರೆ. ಪ್ರೀತಿ ಮತ್ತು ಸಹಾನುಭೂತಿಗಳ ಆವರಣದಲ್ಲಿ ಈ ಕವನಗಳು ರೂಪು ತಾಳಿವೆ. ಸಾಮಾಜಿಕವಾಗಿ ಕವಿ ತೋರುವ ತಾಳ್ಮೆಯು ಇಲ್ಲಿನ ಕವನಗಳಲ್ಲಿ ಜೀವನ ಪ್ರೀತಿಯ ಆಕಾರವನ್ನು ಪಡೆಯುತ್ತದೆ. ನಿಸಾರರ ಮನಸ್ಸು ಎಂದೂ ಕಹಿಗೊಳ್ಳುವುದಿಲ್ಲ, ಅವರದು ಸದಾ ಪ್ರಸನ್ನಚಿತ್ತ—

'ಮೊಗದ ಮೌನವೇ ನಿನ್ನ ಪರ ವಹಿಸಿ ಮಾತಾಡಿರಲು ಶುಷ್ಕ
ಶಬ್ದಗಳ ಸಪ್ಪೆ ವಿವರಣೆಯ ದುಂದುಗಾರಿಕೆ ಏತಕಿನ್ನು?
ಗತಕಾಲದೊಗಚು, ಹುಳಿ ಸುಳಿವುದೋರದೆ ಮುಂದೆ ಎಂದೆಂದು
ನಮ್ಮ ಬಾಳಾಗಲಿ ಬಣ್ಣ, ಪಕ್ವತೆ ಪಡೆದ ತುಂಬೊಲವ ಹಣ್ಣು.'
(ಮನೆಗೆ ಮರಳಿದ ಮಮತೆ)

'ಬಾಳಿನ ಕ್ರೀಡಾಂಗಣ' ಕವನದಲ್ಲಿ ಈ ಭಾವವು ಕ್ರಿಕೆಟ್ ಆಟದ ಪ್ರತಿಮೆಯನ್ನು ಕಂಡರಿಸುತ್ತಾ ಒಂದು ಬಗೆಯ ತತ್ತ್ವದ ಮಟ್ಟಕ್ಕೆ ಏರಿಬಿಟ್ಟಿದೆ—

'ಜೀವಿಸಿದ ಚಣ ಚಣವೂ ಮರೆಯುವುದಿಲ್ಲ
ಜಾತ್ರೆ ಜಲಸಗಳ, ತೇರು ಕಳಸಗಳ ಸಮಾವೇಶ.
ಸಂವತ್ಸರವಿಡೀ ನದಿಗೆ ನೆರೆಯುವುದಿಲ್ಲ
ತುಂಬು ಪ್ರವಾಹದ ಭಾವದಾವೇಶ.
ಮಹತ್ತರತೆಗಿಂತ ಮಾಮೂಲಿತನ,

ಪರ್ವತೌನ್ನತ್ಯಕ್ಕಿಂತ ಸಮತಲದ ಸಾದಾತನ
ಅನುದಿನದ ಜೀವನದ ನಿಯಮ ಸೂತ್ರ.
ಇದನರಿತು, ಸಂಯಮ ಸಮಾಧಾನದಿಕ್ಕೆಲದ
ಸಾಲು ಮರಗಳ ತಂಪು ಹೆದ್ದಾರಿ ಹಿಡಿದವನಿಗೆ ಮಾತ್ರ
ಬಾಳ ಪಯಣ ನಿರಪಾಯ, ಸಂತತ ಸುಸೂತ್ರ.'

(ಬಾಳಿನ ಕ್ರೀಡಾಂಗಣ)

ಒಟ್ಟಾರೆಯಾಗಿ 'ಸಾಲು ಮರಗಳ ತಂಪು ಹೆದ್ದಾರಿ ಹಿಡಿದು ನಡೆವ' ಆಸೆ ಕವಿಯದು. 'ತುಂಬಿದ ತಪ್ಪಲೆ ಮತ್ತು ತುಂಟ ಪೋರರು', 'ಜೀವನ ಮತ್ತು ಸೌಂದರ್ಯ', 'ಹಿರಿಯರು', ಮತ್ತಿತರ ಕವನಗಳಲ್ಲಿ ಈ ಭಾವ ಇನ್ನಷ್ಟು ಗಹನವಾಗಿ ಪ್ರಕಟವಾಗಿದೆ.

ಇದನ್ನು ಇನ್ನಷ್ಟು ಬೆಳೆಸದೆ, ನಿಸಾರರ ಕಾವ್ಯದ ಇನ್ನೊಂದು ಆಯಾಮದ ಕಡೆ ಹೊರಳಿಕೊಳ್ಳಬಹುದು. ಅದೆಂದರೆ ಆಧುನಿಕತೆಗೆ ಅವರು ಪ್ರತಿಕ್ರಿಯಿಸುವ ರೀತಿ. ನಾನು ಈಗಾಗಲೇ ಹೇಳಿರುವಂತೆ ನಿಸಾರರು ಮೂಲತಃ ಮಾನವತಾವಾದಿ ಉದಾರ ನೆಲೆಯ ಸಾಂಸಾರಿಕ ಕವಿ. ಆಧುನಿಕತೆಯು ಸಂಸಾರಗಳನ್ನು ಛಿದ್ರಗೊಳಿಸಿಬಿಡುತ್ತದೆ ಎಂಬ ನಂಬಿಕೆ ಅವರಲ್ಲಿ ಗಾಢವಾಗಿದೆ. 'ನಮ್ಮ ನಗರದ ಬದುಕು' ಕವನದಲ್ಲಿ ಅವರು ಹೀಗೆ ಬರೆಯುತ್ತಾರೆ—

'ದಿನಕೆಂಟು ಅಪಘಾತ, ಖೂನಿ, ಚೋರಿ, ದರೋಡೆ—
ಕ್ಷೇಮ ನೆಮ್ಮದಿ ಸ್ವಾಸ್ಥ್ಯ ಕಾಡು ಪಾಲು.
ಇನ್ನು ಮಕ್ಕಳ ಫೀಜು, ತೆರಿಗೆ, ವಿದ್ಯುತ್ ಬಿಲ್ಲು:
ಬೇಸಿಗೆಯಲಿ ಹೊದ್ದಂತೆ ತಾಡಪಾಲು.'

(ನಮ್ಮ ನಗರದ ಬದುಕು)

ಇಂಥ ಕಡೆ ಮನುಷ್ಯನ ಆತ್ಮ ಸೊರಗುತ್ತದೆ, ಕಸಿವಿಸಿಗೊಳ್ಳುತ್ತದೆ. 'ದಿನಚರಿಯ ಒಂದು ದಿವಸ' ಕವಿತೆಯಲ್ಲಿ ಆಧುನಿಕ ಮಾನವನ ಒಂಟಿತನ, ಚಡಪಡಿಕೆಗಳೆಲ್ಲ ಸಾಂದ್ರವಾಗಿ ಗೋಚರಿಸುತ್ತವೆ :

'ದಾರಿಯಲಿ ಹಾಯಾಗಿ ತೇಲುತ್ತೇನೆ,
ಇದ್ದಕಿದ್ದಂತೆ ಹದ್ದೆರಗುತ್ತಾನೆ ಒಬ್ಬ ಗಿರಾಸ್ತ;
ಓಬೀರಾಯನ ಕಾಲದ ಪರಿಚಯಸ್ಥ.
ನಮಸ್ಕರಿಸಿ ಚಾಚುತ್ತ ಹಸ್ತ
ಪ್ರತಿಷ್ಠಾಪಿಸುತ್ತಾನೆ ಎದುರಲ್ಲಿ
ಅದೂ ಇದೂ ವಿಚಾರಿಸುತ್ತ.
ವಿಧಿಯಿರದೆ ಅರ್ಪಿಸಿಕೊಳ್ಳುತ್ತೇನೆ ಬೈರಿಗೆಗೆ
ಒಳಗೆ ತಕಪಕಿಸುತ್ತಿದ್ದರೂ ಹುಸಿ ನಕ್ಕು ಸೈರಿಸುತ್ತ.
ಯುಗ ಕಳೆದ ಬಳಿಕ ಕೊನೆಗೂ ಬಿಡುತ್ತದೆ ಗ್ರಹಣ;
ನಿಟ್ಟುಸಿರಿಟ್ಟು ಮರಳಿ ಕೈಕೊಳ್ಳುತ್ತೇನೆ ಪಯಣ.'

(ದಿನಚರಿಯ ಒಂದು ದಿವಸ)

ಯಾರದೋ ತೆವಲಿಗೆ ಯಾರೋ ಬಲಿಯಾಗುವ ಆಧುನಿಕತೆಯ ಚಿತ್ರವೊಂದು ಇಲ್ಲಿದೆ. 'ಮುಖವಾಡಗಳೆ ಎಲ್ಲೆಲ್ಲು' ಕವನದಲ್ಲಿ ಆಧುನಿಕ ಯುಗದ ಮೌಲ್ಯ ವಿನ್ಯಾಸವನ್ನು ಲೇವಡಿ ಮಾಡಲಾಗಿದೆ.

'ಬಾಹುಳ್ಯಕೇ ಈಗ ರಾಷ್ಟ್ರೀಯ ಹಿರಿ ಪಟ್ಟ
ಶ್ರೀಗಂಧಕಿಂತಲೂ ಸೌದೆ ಧನ್ಯ;
ಕತ್ತಾಳೆ ಎದುರಲ್ಲಿ ತಾಳೆಗೋ ಸುಡು ಚಟ್ಟ
ಹಿತ್ತಾಳೆ, ಹೊನ್ನಿಗೂ ಅಧಿಕ ಮಾನ್ಯ.'
(ಮುಖವಾಡಗಳೆ ಎಲ್ಲೆಲ್ಲು)

'ಸುದ್ದಿ ಮಾಧ್ಯಮಗಳು', 'ಗುಮಾಸ್ತನ ಗೋಳು', 'ಕಿಮ್ಮತ್ತು ಮತ್ತು ಮೌಲ್ಯ', 'ಪೊಗರಿಗ', 'ಫ್ರಿಜ್ಜು', 'ಚಿತಾವಣೆಯ ಚುನಾವಣೆ', 'ಗರ ಬಡಿದ ನಗರ', 'ನಗರೋಪವನ ದಲ್ಲೊಬ್ಬ ನರ ಪ್ರಾಣಿ' ಮೊದಲಾದ ಕವನಗಳಲ್ಲಿ ಆಧುನಿಕತೆಯು ಮಾನವೀಯ ಮೌಲ್ಯ ಗಳ ಮೇಲೆ ತಂದೊಡ್ಡಿದ ಆತಂಕಗಳ ಬಗ್ಗೆ ವಿವರಗಳಿವೆ. ಕವಿ ನಿಸಾರರು ಆಧುನಿಕತೆಗೇ ವಿರೋಧಿಯಲ್ಲ. ಅದು ತಂದೊಡ್ಡುವ ಕೆಲವು ಅನಾಹುತಗಳಿಗೆ ಮಾತ್ರ ವಿರೋಧಿ. 'ಅರವತ್ತೈದರ ಐಸಿರಿ' ಸಂಕಲನದ ಅರಿಕೆಯಲ್ಲಿ ಅವರು ಅದನ್ನು ಸ್ಪಷ್ಟಪಡಿಸುತ್ತಾರೆ—

'ಇವತ್ತು ನಮ್ಮ ಕಾವ್ಯ ಹೆಚ್ಚು ಬಹಿರ್ಮುಖವಾಗಿ, ಗುಂಪಿನ ಚಟುವಟಿಕೆಯಾಗಿ ಪರಿಣಮಿಸಿದೆ. ಒಂದು ಕಾಲಕ್ಕೆ ಅದು ಹಾಯಬಾರದೆಂದು ವಿಧಿಸಿದ್ದ ಕಾವ್ಯೇತರ ನೆಲೆಗಳಲ್ಲಿ ಈಗ ನಿರ್ಭಯವಾಗಿ ವಿಹರಿಸುತ್ತಿದೆ. ಅದರ ಮೈಗೆ ಒಗ್ಗದೆಂದು, ಜಾಯಮಾನಕ್ಕೆ ಅಪಥ್ಯವೆಂದು ಎಚ್ಚರಿಸಿದ್ದ ಗ್ರಾಸವನ್ನು ಧಾರಾಳವಾಗಿ ಮೆಲ್ಲುತ್ತಿದೆ. ಇದರ ದೆಸೆಯಿಂದ ಒಂದುಕಡೆ ಮಾತುಗಾರಿಕೆ ಮತ್ತು ವಸ್ತುವಿನಲ್ಲಿ ಹೊಸತನ ಹಾಗೂ ಅಪೂರ್ವತೆಗಳನ್ನು ಕೂಡಿಸಿಕೊಳ್ಳುತ್ತ, ಮತ್ತೊಂದು ಕಡೆ ಹಿಂದಿನ ಕಾಲದ ಕಾವ್ಯ ರಚನೆಗಳಿಗಿಂತ ಅಧಿಕತರವಾಗಿ ಸಾಮಾಜಿಕ ಸಮಸ್ಯೆಗಳ ಮತ್ತು ರಾಜಕೀಯ ವಿದ್ಯಮಾನಗಳ ಪ್ರಖರ ಅರಿವನ್ನು ಅರಗಿಸಿಕೊಳ್ಳುತ್ತ ಜನಪರವಾಗಲು ಹವಣಿಸುತ್ತಿದೆ... ಈ ವಿಶೇಷಗಳಿಂದ ನಮ್ಮ ಕಾವ್ಯಕ್ಕೆ ದಕ್ಕಿರುವ ತುಂಬು, ಮೆರುಗು, ಉದ್ದಗಲ, ಅಗ್ಗಳಿಕೆಗಳ ಆಯಾಮ ಚಿಂತನಯೋಗ್ಯವಾಗಿದೆ; ಹೆಮ್ಮೆ ಬರಿಸುವಂತಿದೆ.'

ಆಧುನಿಕತೆ ತಂದಿತ್ತ ಸಾಮಾಜಿಕ ಪ್ರಜ್ಞೆಯನ್ನು ಅಂಗೀಕರಿಸುವ ಕವಿ ನಿಸಾರರು ಅದೇ ಪ್ರಜ್ಞೆಯು ತೀರಾ ಬಹಿರ್ಮುಖವಾಗಿ ಅಂತರಂಗದ ಸೂಕ್ಷ್ಮಗಳನ್ನು ಕಳೆದು ಹಾಕಿದರೆ ಅದಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸುತ್ತಾರೆ. 'ಕವಿತಾ ಶರೀರದಲ್ಲಿ ಶ್ವಾಸಕೋಶಗಳಂತಿರುವ ಚಿಂತನಾಂಶ ಮತ್ತು ಭಾವಾಂಶಗಳ ನಡುವೆ ಒಂದು ವಿಹಿತವೂ ಒಂದೊಂದು ಕವನಕ್ಕೂ ವಿಶಿಷ್ಟವೂ ಆದ ಪ್ರಮಾಣೌಚಿತ್ಯವಿರಬೇಕೆಂಬುದೂ ಅಷ್ಟೇ ನಿಜ' (ಅರವತ್ತೈದರ ಐಸಿರಿ).

ಈ ಹಿನ್ನೆಲೆಯಲ್ಲಿ ನಾವು ಕವಿ ನಿಸಾರರ ಸಾಮಾಜಿಕ ಪ್ರಧಾನವಾದ ಕವನಗಳನ್ನು ನೋಡಿದರೆ, ಅವುಗಳಲ್ಲಿ ಚಿಂತನಾಂಶ ಮತ್ತು ಭಾವಾಂಶಗಳು ಸಮಾನವಾಗಿ ಸೇರಿ ಕೊಂಡಿರುವುದನ್ನು ಗಮನಿಸಬಹುದು. ಇದಕ್ಕೆ ಪ್ರಾತಿನಿಧಿಕವಾದ ಉದಾಹರಣೆ ಎಂದರೆ

'ಹಾಲಿ ವಿದ್ಯಮಾನಗಳು' ಎಂಬ ಕವನ. ಕವಿಯ ವೈಚಾರಿಕತೆಯು ಇಲ್ಲಿ ಭಾವುಕತೆಯೊಂದಿಗೆ ಸೇರಿಕೊಂಡು ಹಾಡುಗಬ್ಬವೊಂದನ್ನು ಸಾಧ್ಯವಾಗಿಸಿದೆ—

'ಪುರೋಹಿತನ ಜೊತೆ ಸ್ವಾರ್ಥಿ ಬನಿಯ ಷಾಮೀಲು;
ಮಠಾಧಿಪತಿ, ಪುಢಾರಿಗಳ ಸಂಗ ಸುಖ ಮಾಮೂಲು.
ನಾಯಿ ಹಂದಿಗೂ ಕೀಳು ಕಡು ಘರೀಬರ ಬಾಳು
ಬುದ್ಧಿ ಹಿಂಗಿದೆ, ತುಂಬಿ ಅಜ್ಞಾನಗಳ ಹೂಳು.

'ಭ್ರಷ್ಟತನ, ಬೆಲೆಯೇರು ಮುಟ್ಟಿರುವುದಾಕಾಶ
ಪ್ರಾಮಾಣಿಕತೆ ಕೈಚೆಲ್ಲಿ ಕುಸಿದಿರುವುದು ಹತಾಶ
ಸಾರ್ವಜನಿಕ ಮೂತ್ರಿಯ ಹಾಗೆ ಗಬ್ಬು ನಾರಿದೆ ದೇಶ
ಉಸಿರಾಡುವುದಕಿಲ್ಲ ಸ್ವಚ್ಛ ಹವೆಯವಕಾಶ.'

(ಹಾಲಿ ವಿದ್ಯಮಾನಗಳು)

ಲಯಬದ್ಧವಾದ ರಚನೆಗಳಲ್ಲಿ ಗಾಢವಾದ ಸಾಮಾಜಿಕತೆಯನ್ನು ಪ್ರಕಟಿಸುವುದು ನಿಸಾರರ ಬರೆವಣಿಗೆಯ ರೀತಿಯೂ ಹೌದು. 'ಯಾಕಿಷ್ಟು ದೇವರುಗಳು?', 'ತಲೆಗಳು ಬೇಕಾಗಿವೆ' ಮತ್ತಿತರ ಕವನಗಳು ಇದಕ್ಕೆ ಪುಷ್ಟಿ ನೀಡುವ ರಚನೆಗಳಾಗಿವೆ.

ಕೆ. ಎಸ್. ನರಸಿಂಹಸ್ವಾಮಿ, ಚೆನ್ನವೀರ ಕಣವಿ, ಶಿವರುದ್ರಪ್ಪ ಮೊದಲಾದ ಕವಿಗಳ ಹಾಗೆ ನಿಸಾರರೂ ಅಲ್ಲಲ್ಲಿ ಚರಿತ್ರೆಗೆ ಮುಖಾಮುಖಿಯಾಗುತ್ತಾರೆ. ಈ ಮುಖಾಮುಖಿಯು ಸರಳವಾದ ತರ್ಕಗಳನ್ನು ಒಳಗೊಂಡದ್ದರಿಂದ ಬೇಂದ್ರೆ ಕಾವ್ಯದ ಹಾಗೆ ಶಕ್ತಿಶಾಲಿಯಾದ ಕವಿತೆಗಳನ್ನು ಕೊಡುವಲ್ಲಿ ಯಶಸ್ವಿಯಾಗಿಲ್ಲ. 'ಇತಿಹಾಸದ ಇತಿಮಿತಿ' ಕವನ ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಚರಿತ್ರೆಯ ಗತಿ ತಾರ್ಕಿಕ ದ್ವಂದ್ವಗಳನ್ನೋ ಸಂಘರ್ಷ ಗಳನ್ನೋ ಮುಂದಿಡದ ಈ ಕವಿತೆಯು ಚರಿತ್ರೆಯನ್ನು 'ಕಾಲರಾಯನ ಗುಜರಿ' ಎಂದಷ್ಟೇ ಪರಿಭಾವಿಸುತ್ತದೆ—

'ಇತಿಹಾಸವೆನ್ನುವುದು ಕಾಲರಾಯನ ಗುಜರಿ:
ಬಹು ಬಳಸಿ ಹಳಸಿ ಒಗಾಯಿಸಿದ ಸರಕುಗಳ
ನಮು ನಮೂನೆಯ ಹರಕು ಮುರುಕುಗಳ
ಅವ್ಯವಸ್ಥಿತ ಅಧ್ವಾನಗಳ ಬೃಹದಾಗರ;
ಎಲ್ಲ ಚೆಲ್ಲಾಪಿಲ್ಲಿ ಅಲ್ಲಿ, ಕಲಸು ಮೇಲೋಗರ.
ವರ್ತಮಾನದ ಹೊಸತು ಬಾಳಿಕೆಯ ಮಾಲುಗಳ
ಸುಭವಿಷ್ಯದ ಸುಧಾರಿತ ತುಟ್ಟಿ ಸಾಮಾನುಗಳ
ಖರೀದಿಸುವ ತಾಖತ್ತಿರದವರ ಟ್ರೆಜರಿ
ಗತ ಚರಿತ್ರೆಯ ಗುಜರಿ.'

(ಇತಿಹಾಸದ ಇತಿಮಿತಿ)

ಚರಿತ್ರೆಯ ಏಕಮುಖ ಸಂಕಥನದ ಇಂತಹ ಕವಿತೆಗಳು ಎತ್ತರದ ತಾತ್ತ್ವಿಕ ಕಾಳಜಿಗಳನ್ನು ಪ್ರಕಟಿಸುವಲ್ಲಿ ವಿಫಲವಾಗಿವೆ. ಇಂಥ ಮಹತ್ವಾಕಾಂಕ್ಷೆ ಇಲ್ಲದ, ಚರಿತ್ರೆಯ

ಬಗ್ಗೆ ಅತೀವ ಕಾಳಜಿ ಇಲ್ಲದ 'ಸಣ್ಣ ತಪ್ಪು' ಅಂಥ ಕವನಗಳು ತಮ್ಮ ಪಾಡಿಗೆ ತಾವೇ ಸುಂದರವಾಗಿರುವ ಪುಟ್ಟ ಹೂಗಳ ಹಾಗೆ ಹೃದ್ಯವಾಗಿರುತ್ತವೆ :

'ಅದ ತಿದ್ದುವ ಅವಸರದಲ್ಲಿ ದುಡುಕಿ
ಗುಡ್ಡವಾಗಿಸಬೇಡಿ ಹುಡಿಯನ್ನು.
ತೆಗೆಯಹೋಗಿ ಬಿಡಿಗೂದಲ ಹುಡುಕಿ,
ಕತ್ತರಿಸಬೇಡಿ ಇಡೀ ಮುಡಿಯನ್ನು'

(ಸಣ್ಣ ತಪ್ಪು)

ಎಂಬಂಥ ಸಾಲುಗಳಲ್ಲಿ ಕವಿತೆ ಸಹಜವಾಗಿ ಮೂಡಿ ಬರುವುದನ್ನು ಯಾರಾದರೂ ಗಮನಿಸಬಹುದಾಗಿದೆ. 'ಲಾಲ್‌ಬಾಗಿನಲ್ಲಿ ಪ್ರಣಯಿಗಳು', 'ಒಂದು ಗುಲ್‌ಮೊಹರ್ ಗೀತ', 'ಕವನ ಮತ್ತು ಮಾವಿನ ಹೂವು', 'ಅವನ ಕವನದ ಚೆಲುವೆ', 'ಬಂಡೆ ಮತ್ತು ಕಲ್ಲಿನ ಚೂರುಗಳು', 'ಪೊಗರಿಗ', 'ಬಿದಿರು ಮತ್ತು ಸಾಧಕರು' ಮತ್ತಿತರ ಕವಿತೆಗಳು ಯಾವ ಮಹತ್ವಾಕಾಂಕ್ಷೆಗಳಿಲ್ಲದೆಯೇ ಯಶಸ್ವಿಯಾದ ರಚನೆಗಳಾಗಿವೆ.

ಹೀಗೆ ನಿಸಾರರ ಕವಿತೆಗಳು ಉದಾರವಾದೀ ಮಾನವತೆಯನ್ನು ಎಂದೆಂದಿಗೂ ಬಿಟ್ಟು ಕೊಡದ ಆಪ್ತ ರಚನೆಗಳಾಗಿವೆ. 'ಸಂಸಾರದ ಅಖಂಡತೆಯನ್ನು ಅವು ಪ್ರತಿಪಾದಿಸುತ್ತವೆ. ಸಂಸಾರವನ್ನು ಒಡೆಯುವ ಆಧುನಿಕತೆಯನ್ನು ಅವು ಪ್ರಶ್ನಿಸುತ್ತವೆ; ಆದರೆ ಆಧುನಿಕತೆ ತಂದುಕೊಟ್ಟ ಸಾಮಾಜಿಕ ಪ್ರಜ್ಞೆಯನ್ನು ಅವು ಒಪ್ಪಿಕೊಳ್ಳುತ್ತವೆ. ವೈಚಾರಿಕತೆ ಮತ್ತು ಭಾವುಕತೆಯನ್ನು ಒಟ್ಟು ಸೇರಿಸಬಯಸುವ ಅವರ ಕಾವ್ಯ ಶ್ರದ್ಧೆಯು ಪದ್ಯದೊಳಗಡೆಗೆ ಗದ್ಯವನ್ನೂ ಗದ್ಯದೊಳಗಡೆ ಪದ್ಯವನ್ನೂ ಪ್ರತೀತಗೊಳಿಸುತ್ತದೆ. ನವೋದಯ ಕಾವ್ಯದ ಬಂಧ, ನವ್ಯಕಾವ್ಯದ ಆಕೃತಿ ಸೂಕ್ಷ್ಮತೆ ಮತ್ತು ಬಂಡಾಯ ಸಾಹಿತ್ಯದ ಸಾಮಾಜಿಕ ಕಳಕಳಿ ಯನ್ನು ಜೊತೆ ಸೇರಿಸಿಕೊಂಡು ಮುಂದೆ ಸಾಗುವ ಅವರ ಕವನಗಳು ನಮ್ಮ ಕಾಲಕ್ಕೆ ಅಗತ್ಯವಾದ ಅನೇಕ ವಿಷಯಗಳ ಬಗೆಗೆ ನವುರಾಗಿ ಮಾತಾಡುತ್ತವೆ. ಮಾನವತೆಯ ಬಗೆಗೂ ಅವರ ಅದಮ್ಯ ಪ್ರೀತಿ ಮತ್ತು ಖಂಡಿತ ಅದನ್ನು ಉಳಿಸಿಕೊಳ್ಳಲು ಸಾಧ್ಯ ಎಂಬ ನಂಬಿಕೆ ಅವರ ಕಾವ್ಯಕ್ಕೆ ಒಂದು ಬಗೆಯ ಲವಲವಿಕೆಯನ್ನು ತಂದು ಕೊಟ್ಟಿದೆ. ಅದಕ್ಕೇ ನಿಸಾರರ ಕವಿತೆಗಳೆಂದರೆ ನಮಗೆಲ್ಲ ಇಷ್ಟ.

ತಾರತಮ್ಯ ಜ್ಞಾನದಿಂದ ಜಗದ್ವಸ್ತುಗಳ, ವಿದ್ಯಮಾನಗಳ ನೈಜ ಚರ್ಯೆಯನ್ನು, ಮೌಲ್ಯವನ್ನು ಮನವರಿಕೆ ಮಾಡಿಕೊಳ್ಳಬೇಕಾದದ್ದು ಸಮಾಜದ ಪ್ರತಿ ವ್ಯಕ್ತಿಯ ಪಾಲಿಗೆ ಅತ್ಯುಚಿತ. ಅಶ್ವಾರೋಹಿ ಅರಸನಿಗಿಂತ ಆನೆಯೇರಿದ ಅಂಕುಶಕಾರ ಅಗ್ರಮಾನ್ಯನಲ್ಲ ಎಂಬಂತಹ ಅರಿವು ಸರ್ವರಲ್ಲೂ ಜಾಗೃತಗೊಳ್ಳಬೇಕು. ಸಾಹಿತ್ಯೋಪಾಸನೆಯಿಂದ ಇಂಥ ತಥ್ಯ ಮನವರಿಕೆಯಾಗುವುದು ಮನುಷ್ಯನಿಗೆ ಒಂದು ಮಿಗಿಲಾದ ಲಾಭ.

(ತಾರತಮ್ಯ ವಿವೇಕ)



ನಿಸಾರ್ ಅವರ ಕಾವ್ಯದ ವೈಶಿಷ್ಟ್ಯಪೂರ್ಣ ಅಗ್ಗಳಿಕೆ

◆ *ಪ್ರೊ. ಶಿವರಾಮು ಕಾಡನಕುಪ್ಪೆ*

ನಮ್ಮ ಸಂಸ್ಕೃತಿಯ ಚೌಕಟ್ಟಿನಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಸದಾ ಕಾಯ್ದುಕೊಂಡಿರುವ ಈ ಕವಿ ತಮ್ಮ ಕಾವ್ಯಸೃಷ್ಟಿಯ ಬಗ್ಗೆ ತಳೆದಿರುವ ಎಚ್ಚರ, ಶ್ರದ್ಧೆ, ಶಿಸ್ತುಗಳು ತುಂಬಾ ಮಹತ್ವವಾದವು. ಈ ನಿಟ್ಟಿನಿಂದಲೇ ನಿಸಾರ್ ಸದಾ ಜನತೆಯ ಕವಿಯಾಗಲು ತುಡಿದು, ಸಂವಹನ ಕ್ರಿಯೆಯಲ್ಲಿ ಯಶಸ್ವಿಯಾಗಿದ್ದು. ನವೋದಯದ ಕಾವ್ಯ ಪರಂಪರೆಯ ರಮ್ಯ ಗುಣದಿಂದ ಪ್ರಭಾವಿತರಾಗಿ ಬಂದು, ಅಲ್ಲಿಯೂ ನಿಲ್ಲದೆ ಕಾಲ ಧರ್ಮದಂತೆ ನವ್ಯಕಾವ್ಯ ಪರಂಪರೆಯಲ್ಲೂ ತಮ್ಮ ಯಶಸ್ವಿ ಹೆಜ್ಜೆ ಇಟ್ಟದ್ದು—ನಿಸಾರರ ಬೆಳವಣಿಗೆಯ ದ್ಯೋತಕ. ಆದರೆ ಈ ಕವಿ ಇತರ ನವ್ಯ ಕವಿಗಳಿಗಿಂತ ಭಾಷೆ, ವಸ್ತು, ರೂಪ ಮತ್ತು ಅಭಿವ್ಯಕ್ತಿಗಳಲ್ಲಿ ಭಿನ್ನವಾಗಿರಲು ನಡೆಸುವ ಹೋರಾಟ ಆಶ್ಚರ್ಯ ಹುಟ್ಟಿಸುವಂಥದ್ದು. ನವ್ಯಕಾವ್ಯದ ಗಡಿ ರೇಖೆಗಳನ್ನು ನಿಸಾರ್ ದಾಟಿರುವುದು ಈ ಕಾರಣದಿಂದಲೇ. ಒಂದು ರೀತಿಯಲ್ಲಿ ದೀರ್ಘಕಾಲದ ನಿಸಾರರ ಕಾವ್ಯದ ಅಧ್ಯಯನವೆಂದರೆ, ಕನ್ನಡ ಕಾವ್ಯ ಹಲವು ದಶಕಗಳಿಂದ ಬೆಳೆದು ಬಂದ ಬಗೆ, ಅದರ ಏಳು-ಬೀಳು ಮತ್ತು ಗತಿಯ ಅಧ್ಯಯನವೇ ಆಗುತ್ತದೆ. ಹೀಗೆ, ಕೇವಲ ಒಬ್ಬ ಕವಿಯ ಕಾವ್ಯದ ಆಧಾರದ ಮೇಲೆ ಹಲವು ಶತಕಗಳ ಕನ್ನಡ ಕಾವ್ಯದ ಬಗ್ಗೆ ತೀರ್ಮಾನ ಕೊಡುವುದು ಆತುರದ ಕ್ರಮವಾದರೂ ಇಂದಿನ ನಿಸಾರರ ಕಾವ್ಯ ರಚನೆಗೂ ಇತ್ತೀಚಿನ ಕವಿಗಳ ಕಾವ್ಯ ರಚನೆಗೂ ರೂಪ, ಅಭಿವ್ಯಕ್ತಿಯಲ್ಲಿ

ಅಂತಹ ಅಂತರವೇನೂ ಕಂಡು ಬರದಿರುವ ಅಂಶ ಗಮನಾರ್ಹವಾದ್ದರಿಂದ ನನ್ನ ಮಾತುಗಳಲ್ಲಿ ಸತ್ಯವಿದೆಯೆಂದು ನಂಬಿದ್ದೇನೆ. ಇಂದಿನ ಅನೇಕ ತರುಣ ಕವಿಗಳು ಸಂವಹನದ ದೃಷ್ಟಿಯಿಂದ ನಿಸಾರ್ ಅವರಿಗೆ ಹತ್ತಿರವಿದ್ದಾರೆಂಬುದು ಕೂಡ ಮುಖ್ಯ.

ನನ್ನ ಈ ಲೇಖನ ನಿಸಾರ್ ಅಹಮದ್ ಅವರ ಕಾವ್ಯವನ್ನು ನೇರವಾಗಿ ಕುರಿತು ಅಧ್ಯಯನ ಮಾಡಲು ಪ್ರಯತ್ನಿಸಿದೆ. ನಿಸಾರರ ಮೊದಲನೆಯ ಕವನ ಸಂಗ್ರಹದಿಂದ ಅವರ 'ಸ್ವಯಂ ಸೇವೆಯ ಗಿಳಿಗಳು'ವರೆಗಿನ ಕವಿತೆಗಳನ್ನು ನಾನು ಪರಿಶೀಲನೆಗೆ ಗೊತ್ತುಪಡಿಸಿ ಕೊಂಡಿದ್ದೇನೆ.

— ೧ —

ನಿಸಾರ್ ಅಹಮದ್ ಅವರಿಗೆ ಕಾವ್ಯಸೃಷ್ಟಿ ಸರಳವಲ್ಲ; ಸುಲಭವಲ್ಲ. ಬರೆದದ್ದರ ಬಗ್ಗೆ ಅತಿಯಾದ ವ್ಯಾಮೋಹವಿಲ್ಲ. ಇದು ಒಬ್ಬ ಜೀವಂತ ಕವಿಯಲ್ಲಿರಬೇಕಾದ ಪ್ರಥಮ ಗುಣ. 'ನನ್ನ ಕಾವ್ಯ ರಚನೆಯ ಬಗ್ಗೆ ನಾನು ಸದಾ ಅತೃಪ್ತ. ಹಿಂದಿಗಿಂತ ಚೆನ್ನಾಗಿ, ಅರ್ಥಪೂರ್ಣವಾಗಿ ಬರೆಯಬೇಕೆಂಬ ಸಂಕಲ್ಪ, ಹಟ ನನ್ನ ಕಾವ್ಯಪ್ರಕ್ರಿಯೆಯ ಮುಖ್ಯಾಂಶ. ಜೀವಂತವಿರುವವರೆಗೂ ಹೇಗೆ ವ್ಯಕ್ತಿವಿಕಾಸ ಸಾಧ್ಯವೋ ಹಾಗೆಯೇ ಅದರ ಅಭಿವ್ಯಕ್ತಿಯಾದ ಕಾವ್ಯ ಕೂಡ ಎನ್ನುವ ನಂಬಿಕೆ ಬಲವಾಗಿರುವ ಯಾರಿಗೇ ಆಗಲಿ ತನ್ನ ಕಾವ್ಯ ಪೂರ್ಣ ವೆನ್ನಿಸುವುದು ಅಶಕ್ಯ. ಅಪೂರ್ವವೂ, ಮಹತ್ವಪೂರ್ಣವೂ ಅದ ಅನುಭವಗಳು ಭವಿಷ್ಯ ದಲ್ಲಿರುವುದು ಸಾಧ್ಯವೆನ್ನಿಸುವ ಆಶಾವಾದ ಎಚ್ಚರಿರುವ ತನಕ ಸದ್ಯದ ಕಾವ್ಯರಚನೆಯ ಬಗ್ಗೆ ಭ್ರಮೆ ಬೆಳೆಸಿಕೊಳ್ಳಲಾರೆ'[1] ಎಂದು ತಮ್ಮ ಕಾವ್ಯ ರಚನೆಯ ಬಗ್ಗೆ ನಿಸಾರರು ಹೇಳಿಕೊಳ್ಳು ತ್ತಾರೆ. ನಿಸಾರರು ತಮ್ಮ ಕಾವ್ಯಸೃಷ್ಟಿಯ ಬಗ್ಗೆ ತಳೆದಿರುವ ಈ ಧೋರಣೆ ಮತ್ತು ಎಚ್ಚರಿಕೆ ಇಡೀ ಅವರ ಕಾವ್ಯ ರಚನೆಯ ಉದ್ದಕ್ಕೂ ಬೆಳೆದು ಬಂದಿರುವುದನ್ನು ಗುರುತಿಸಬಹುದು. ಅವರ 'ಮನಸು ಗಾಂಧಿ ಬಜಾರು' ಎಂಬ ಮೊದಲ ಕವನ ಸಂಕಲನದ 'ದೀಪಗಳು' ಎಂಬ ಕವಿತೆಯನ್ನು ಓದಿದಾಗ, ಪ್ರಕೃತಿಯಲ್ಲಿ ಕಂಡಿರುವ ವಿಸ್ಮಯವೇ ಕಾವ್ಯ ಸೃಷ್ಟಿಗೆ ತೊಡಗಿಸಿದ್ದು ಕುತೂಹಲವಾಗಿದೆ. ಅಲ್ಲಿ ಬರುವ 'ಕನಸಿನ ಗೊನೆ, ಮಿಂಚಿನ ತೆನೆ, ಕಂಚಿನ ಬಿಳಿದನಿಗಳು', 'ಮುಗಿಲು ನೆಲದ ಸಭೆ', 'ಬೆಳ್ದಿಂಗಳ ಮರಿ', 'ತಾಯ ಕಣ್ಣ ನೆರಳಿನಲ್ಲಿ ತೇಲಿ ಹೋದ ಕಥೆ / ಆಟದ ಬಯಲಲ್ಲಿ ಚಿಮ್ಮಿ ಮಾಯವಾದ ರಥ'[2]— ಎಲ್ಲವೂ ಕವಿಗೆ ಕುತೂಹಲ ಹುಟ್ಟಿಸಿವೆ; ಬೆಳೆಯಲು ಉದ್ದೀಪನಗೊಳಿಸಿವೆ. ದೀಪ-ಬೆಳಕು ಆದರ್ಶದ, ಜ್ಞಾನದ ಸಂಕೇತ. ಆದರ್ಶದ ತುಡಿತದಲ್ಲೂ ಎಚ್ಚರ ತಪ್ಪದೆ 'ಮಣ್ಣಿನಲಿ ಬೇರಿರುವ ಸ್ವಂತಿಕೆಯೆ ಸಾಕೆನಗೆ / ಹೆಮ್ಮೆಯಲಿ ತುಳಿಯುವೆನು ನನ್ನ ದಾರಿ'[3] ಎಂಬ ಸಂಕಲ್ಪ ಸದಾ ಜಾಗೃತವಾಗಿದೆ.

ಕವಿಗೆ ತಾನು ಬರೆಯುವುದೆಲ್ಲ ಶ್ರೇಷ್ಠವಲ್ಲ ಎಂಬ ಅರಿವಿದೆ. ಅವರ 'ಬಿತ್ತನೆ'[4] ಎಂಬ ಕವನದಲ್ಲಿ ಅದು ವ್ಯಕ್ತ. ಕವಿ ಅನುಭವಕ್ಕಾಗಿ ನಡೆಸುವ ಹೋರಾಟ; ಅನುಭವವನ್ನು

1. 'ನನ್ನ ಮಾತು'—ನಿಸಾರ್ ಅಹಮದ್ ಅವರ ಆಯ್ದ ಕವಿತೆಗಳು.
2. ಅದೇ, ಪು. ೪. 3. ಅದೇ, ಪು. ೫. 4. ಅದೇ, ಪು. ೧೬.

ಕಾವ್ಯವಾಗಿಸುವಲ್ಲಿ ಆತ ಪಡೆಯುವ ಬಾಧೆ; ಇಂದ್ರಿಯಗಳಿಗೆ ಗೋಚರವಾದದ್ದು ಮಾತ್ರ ಸತ್ಯವಲ್ಲ ಎಂಬ ತಿಳಿವು; ಕಾಣದ್ದಕ್ಕಾಗಿ ಹಂಬಲಿಸುವ ಸೃಷ್ಟಿಶೀಲ ಮನಸ್ಸು—ಇವುಗಳ ಪ್ರಬುದ್ಧ ಚಿತ್ರಣ 'ಕಂಡಷ್ಟೇ ಸತ್ಯವಲ್ಲ' ಎಂಬ ಪದ್ಯದಲ್ಲಿ ಅಭಿವ್ಯಕ್ತಗೊಂಡಿದೆ. ಹೊಸತು ಎಂಬುದು ಒಂದು ರೀತಿಯ ಮರೀಚಿಕೆ; ಹಳೆಯದನ್ನು ಕಾಣುವುದರಲ್ಲಿ ಹೊಸತನವಿರಬೇಕು ಎಂಬುದು ಕವಿಯ ಆಶಯ:

> **'ನಮ್ಮ ಕಾಲದ ಗತ್ತು, ನಿಯತ್ತೆ ಬೇರೆ ಥರ**
> **ಹೊಸದೊಂದೆ ಗುರಿಯಲ್ಲ.**
> **ಹಿಂದೆ ಹೊರ ಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ**
> **ಬೆಸೆದು ಹೊಸೆಯುವ ಕಲೆಯೇ ಈ ಕಾಲದರಿವು;**
> **ಹೊಸತ ಹುಡುಕಲು ಹೋಗಿ ತೂಕ ತಪ್ಪುವ ಬುದ್ಧಿ—**
> **ಕುಂಟುಕಾಲಿನ ಕುದುರೆ, ಬಂಜೆ ಗೋವು.'**[5]

ಹಳೆಯ-ಹೊಸತರ ಸಮನ್ವಯತೆಯನ್ನು ಸಾಧಿಸಬೇಕೆಂಬ ಕವಿಯ ಆಶಯವನ್ನು ನಾವಿಲ್ಲಿ ಗುರುತಿಸಬಹುದು. ನಿಸಾರರು ನವೋದಯ-ನವ್ಯಕಾವ್ಯ ಪರಂಪರೆಗಳಲ್ಲಿ ಯಾವುದರ ಪರವಾಗಿಯೂ ವಕಾಲತ್ತು ವಹಿಸಿದವರಲ್ಲ; ತಮ್ಮದೇ ಆದ ಸುವರ್ಣ ಮಧ್ಯಮವನ್ನು ಹುಡುಕಿಕೊಂಡವರು. ಹಳೆಯದನ್ನು ಪ್ರೀತಿಸುತ್ತಲೇ ಹೊಸತನ್ನು ಹುಡುಕಿದ ನಿಸಾರರು ಇಂದಿಗೂ ರಮ್ಯಗುಣವನ್ನು ತಮ್ಮ ಕಾವ್ಯದಲ್ಲಿ ಬಿಟ್ಟಿಲ್ಲದಿರುವುದು ಈ ದೃಷ್ಟಿಯಿಂದಲೇ. ಕಾವ್ಯದ ರಮ್ಯಗುಣದಿಂದಾಗಿ ಓದುಗರನ್ನು ತಮ್ಮೆಡೆಗೆ ಆಕರ್ಷಿಸುವ ಕಲೆ ನಿಸಾರ್ ಅವರಿಗೆ ಸಿದ್ಧಿಸಿತು. ಈ ದೃಷ್ಟಿಯಿಂದ ನಿಸಾರ್, ಕೆ. ಎಸ್. ನರಸಿಂಹಸ್ವಾಮಿಯವರ ಕಾವ್ಯಮಾರ್ಗಕ್ಕೆ ಹತ್ತಿರದವರಾಗುತ್ತಾರೆ.

ನಿಸಾರ್ ಅಹಮದ್ ತಮ್ಮಕಾವ್ಯ ಸೃಷ್ಟಿಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ 'ಆಲಿ ಬಾಬ'ನ ಪ್ರತಿಮೆಯನ್ನು ಪದೇ ಪದೇ ತರುತ್ತಾರೆ 'ಮಂತ್ರ ಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲು'.[6] ಅನುಭವ ಅಭಿವ್ಯಕ್ತಿಗಾಗಿ ಪರದಾಡುವ ಸ್ಥಿತಿಗೆ ಆಲಿಬಾಬ ಒಳ್ಳೆಯ ಉದಾಹರಣೆ. ಆಲಿ ಬಾಬನ ಛಲ, ಶ್ರದ್ಧೆಗಳಿಂದ ನಿಧಿ ಲಭ್ಯ; ಗೆಲವು ಸಾಧ್ಯ. ಹಾಗೆಯೇ ನಿಸಾರ್ ಅಭಿವ್ಯಕ್ತಿಗಾಗಿ ಸದಾ ಅರಿವಿನೊಡನೆ ಸೆಣಸಾಡುತ್ತಾರೆ. ನಿಸಾರ್ ಹೊರಗಣ್ಣಿನ ಅನುಭವಕ್ಕಿಂತ ಒಳಗಣ್ಣಿನ ಅನುಭವಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟ ಕವಿ. ವಾಸ್ತವತೆಯ ಹೆಸರಲ್ಲಿ ಸತ್ಯಕ್ಕೆ ಗೋರಿ ಕಟ್ಟುವುದನ್ನು ನಿಸಾರ್ ತಿರಸ್ಕರಿಸುತ್ತಾರೆ.

> **'ಜ್ಞಾನ ಕರಣಗಳೆರಡು ಫೋಟೊ ಹಿಡಿಯುವ ದೃಶ್ಯದಾಚೆಗಿರುವ ಪವಾಡ:**
> **ಮಲಗಿ ಮರೆಯಲಿ ಮರವ ನಿಲ್ಲಿಸಿದ ಬೀಜಗಳು-**
> **ಕಾಣದತಿಗೂಢಗಳು**
> **ವಾಸ್ತವಿಕ;**
> **ಪ್ರಕೃತಿಗೆ ಹತ್ತು ಮುಖ.'**[7]

---

5. ಆಯ್ದ ಕವಿತೆಗಳು, ಪು. ೨.
6. ಕಂಡಷ್ಟೇ ಸತ್ಯವಲ್ಲ—ಅದೇ, ಪು. ೨೭.
7. ವಾಸ್ತವಿಕ—ಆಯ್ದ ಕವಿತೆಗಳು, ಪು. ೪೭-೪೮.

ನಿಸಾರರ ಪ್ರಕೃತಿ ಕಾವ್ಯ ಬರೀ ನಿಸರ್ಗವನ್ನು ಮಾತ್ರ ಕುರಿತು ಹೇಳುವುದಿಲ್ಲ. ಅದು ಸಮಸ್ತ ಬದುಕಿನ ವ್ಯಾಪಾರ-ಸಂಬಂಧಗಳನ್ನು ಒಳಗೊಳ್ಳುತ್ತದೆ. ಈ ನಿಟ್ಟಿನಲ್ಲೇ ಇವರ ಕಾವ್ಯ ರಚನೆ ಸಾಗುತ್ತದೆ.

ನಿಸಾರ್ ಅಹಮದ್ ಕನ್ನಡದ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಭಿನ್ನಧರ್ಮದಿಂದ ಬಂದವರು. ಹೊರ ಸಂಸ್ಕೃತಿಯೊಂದನ್ನು ಅರಿತು ಕಲಿತು ಒಂದಾಗಲು ಯತ್ನಿಸಿದವರು. ಪ್ರಮುಖ ಸಾಂಸ್ಕೃತಿಕ ಜೀವ ವಾಹಿನಿಯಲ್ಲಿ ಸೇರಿ ಸಮನ್ವಯತೆಯನ್ನು ಸಾಧಿಸಿದ ಕವಿ. ಇಂಥ ಸಂದರ್ಭಗಳಲ್ಲೆಲ್ಲ ಕವಿಗೆ ಅನೇಕ ರೀತಿಯ ನೋವುಗಳು ಆಗಿವೆ—ತನ್ನ ಹುಟ್ಟು ಧರ್ಮದ ಜನರಿಂದ ಹಾಗೂ ಹೊರ ಸಂಸ್ಕೃತಿಯ ಜನರಿಂದ. ಈ ಜನರ ಅನುಮಾನದ ಭೂತ ಬೆನ್ನು ಹತ್ತಿದಾಗ ಕವಿಯನ್ನು ಉಭಯ ಕಷ್ಟಕ್ಕೆ ಸಿಕ್ಕಿಸುತ್ತದೆ:

‘ರಾಷ್ಟ್ರದ ಕವಾಯ್ತಿನಲಿ ತಪ್ಪುಗಾಲನು ಹಾಕಿ
ಸತ್ಯವನು ಮಂಡಿಸಲೆ?
ಗಲ್ಲು: ದೇಶದ್ರೋಹಿ.
ನರಿ ತೋಳಗಳ ಜೊತೆಯಲ್ಲೆ ಆಡು ಆಕಳ ಬಲಿಯ
ಅನ್ಯಾಯ ಖಂಡಿಸಲೆ?
ಲೇಬಲ್ಲು: ಸ್ವಧರ್ಮ ಮೋಹಿ.’[8]

ಈ ಪರಿಸ್ಥಿತಿ ಕವಿಗೆ ಜನ ಸಾಮಾನ್ಯರಿಂದ ಮಾತ್ರವಲ್ಲ, ತನ್ನ ಸರೀಕ ಸ್ನೇಹಿತರಿಂದಲೂ ಉದ್ಭವಿಸಿದಾಗ ಅತ್ಯಂತ ಸಂಕಟದ ಸ್ಥಿತಿ ಉಂಟಾಗುತ್ತದೆ. ಅರ್ಥಮಾಡಿಕೊಳ್ಳುವಂಥ ‘ಧೀಮಂತರೂ’ ಕೂಡ ಅನುಮಾನಿಸಿದಾಗ ಕವಿ ಅಂತರ್ಮುಖಿಯಾಗಿ ಮಾತನಾಡತೊಡಗುತ್ತಾನೆ. ತನ್ನ ಅಸ್ತಿತ್ವವನ್ನು ‘ಪರಕೀಯವಾಗಿಯೇ ಉಳಿಸಿಕೊಂಡು ಕಾವ್ಯಕ್ರಿಯೆಯಲ್ಲಿ ತೊಡಗುವುದು ಅನಿವಾರ್ಯವಾಗಿದೆ’ ಎನಿಸುತ್ತದೆ. ಈ ಪರಕೀಯತೆ ಬೇರೆಲ್ಲೋ ಮೂಡುವ ಭಾವವಾಗದೆ ತನ್ನಲ್ಲೇ ತೋರತೊಡಗುತ್ತದೆ; ‘ನಾನೆಂಬ ಪರಕೀಯ ಹಠಾತ್ತನೆ ಭವಿಸಿ’[9]ದಂತಾಗುತ್ತದೆ. ಅದರ ಮೂರ್ತರೂಪದಲ್ಲಿ ‘ನಾನೆನ್ನುವ ಅಸ್ತಿತ್ವ’ವನ್ನು ಹುಡುಕಲು ಕವಿ ಗೊಂದಲಗೊಳ್ಳುತ್ತಾನೆ; ಪರಿತಪಿಸತೊಡಗುತ್ತಾನೆ. ಈ ಥರದ ಚಿಂತನಾಕ್ರಮ ಕವಿಯನ್ನು ಹೆಚ್ಚು ಸಂಕೀರ್ಣಗೊಳಿಸುತ್ತದೆ. ಈ ಸಂಕೀರ್ಣತೆ ಕವಿಯ ಸ್ವಂತ ವ್ಯಕ್ತಿತ್ವಕ್ಕೆ ಇಳಿಯತೊಡಗಿದಾಗ, ಅವನ ಕಾವ್ಯ ಕೂಡ ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಆಸೆ, ಸಮಕಾಲೀನರೊಡನಿದ್ದೂ ವಿಶೇಷ ವ್ಯಕ್ತಿಯಾಗುವ ಬಯಕೆ ಮೂರ್ತರೂಪದಲ್ಲಿ ನಿಸಾರರ ಅನೇಕ ಕವನಗಳಲ್ಲಿ ವ್ಯಕ್ತವಾಗಿದೆ. ‘ಸಂಜೆ ಐದರ ಮಳೆ’ಯ ‘ನಿಮ್ಮೊಡನಿದ್ದೂ ನಿಮ್ಮಂತಾಗದೆ’ ಎಂಬ ಕವನದಲ್ಲಿ ಕವಿ ಸದಾ ‘ತನಿಖೆ’ಗೆ ಒಳಗಾಗುವ ತನ್ನ ಬದುಕಿನ ಕ್ಷಣಗಳನ್ನು ನೆನೆಯತೊಡಗುತ್ತಾರೆ; ಹೆಚ್ಚು ಹೆಚ್ಚು ಸೂಕ್ಷ್ಮವಾಗತೊಡಗಿ ಅನುಮಾನ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಈ ಪ್ರವೃತ್ತಿ ಕವಿಯನ್ನು ಪ್ರತಿಯೊಂದು ವ್ಯಕ್ತಿತ್ವ-ಸನ್ನಿವೇಶಗಳನ್ನು ಸೂಕ್ಷ್ಮವಾಗಿ

8. ಉಭಯ ಕಷ್ಟ—ಅದೇ, ಪು. ೫೯.
9. ನಾನೆಂಬ ಪರಕೀಯ—ಅದೇ. ಪು. ೧೧೩.

ಅರ್ಥಮಾಡಿಕೊಳ್ಳುವ, ಸಂವೇದಿಸುವ ಪ್ರಕ್ರಿಯೆಗೆ ತೊಡಗಿಸಿದೆ.

ಈ ಪ್ರಕ್ರಿಯೆ ನಿಸಾರರು ಇತರರಿಗಿಂತ ಹೇಗೆ ವಿಭಿನ್ನ ಎಂಬುದನ್ನು ತಿಳಿಸುತ್ತದೆ. ಕವಿ ಮುಂದೆ ತಮ್ಮ ಕಾವ್ಯಮಾರ್ಗ ಎಂಥದೆಂಬುದನ್ನು ನೇರವಾಗಿ ಹೇಳತೊಡಗುತ್ತಾರೆ:

'ಒಮ್ಮೊಮ್ಮೆ ಒಟ್ಟೊಟ್ಟಿಗೆ ನಿಮ್ಮಂತೆ, ನನ್ನಂತೆ
ಬರೆಯುವುದೇಕೆಂದರೆ:
ನಿಮ್ಮ ದಾಕ್ಷಿಣ್ಯಕ್ಕೆ ಆಗಿ ಉತ್ತರ:
ಹೆಬ್ಬಿರುಕಿಗೆ ಎತ್ತರ;
ದೂರಕ್ಕೆ ಹತ್ತಿರ—ಸಮತೋಲ ತರುವುದಕ್ಕೆ ಭಾಷೆಗೆ, ಬದುಕಿಗೆ.'[10]

ನಿಸಾರರು ಈ ರೀತಿ ಭಾಷೆ ಮತ್ತು ಬದುಕಿನ ನಡುವೆ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸುತ್ತಿರುವುದು, ಆ ಸಮನ್ವಯದಲ್ಲೂ ಒಂದು ಆರೋಗ್ಯಕರ ಮನೋಧರ್ಮ ಕೆಲಸ ಮಾಡಿರುವುದು ಬಹು ಮುಖ್ಯ. ಆ ಸಮನ್ವಯವನ್ನು ಸಾಧಿಸ ಹೊರಡುವ ಹಾದಿಯಲ್ಲಿ 'ಹತ್ತರಲ್ಲೊಂದಾಗದಿರುವುದಕ್ಕೆ' ನಡೆಸಿರುವ ಹೋರಾಟ ಜೀವಂತ ಕವಿಯ ಲಕ್ಷಣ

ಸಾಹಿತ್ಯದಲ್ಲಿ ಬದ್ಧತೆಯ ಬಗ್ಗೆ ನಿಸಾರರ ತಕರಾರೇನಿಲ್ಲ. ಆದರೆ ಅದು ಘೋಷಣೆಯ ವಸ್ತುವಾಗುವುದು ಇವರಿಗೆ ಬೇಕಿಲ್ಲ. ಬದ್ಧತೆಯೆನ್ನುವುದು ಬದುಕನ್ನು ನೋಡುವ ದೃಷ್ಟಿಯನ್ನು ಸಂಕುಚಿತಗೊಳಿಸುವುದೆಂದು ಕವಿಯ ನಂಬಿಕೆ. ಅಂದಮಾತ್ರಕ್ಕೆ ಸಾಮಾಜಿಕ ಅರಿವು, ರಾಜಕೀಯ ಪ್ರಜ್ಞೆ ಬೇಡವೆಂದು ಕವಿಯ ಅರ್ಥವಲ್ಲ. ನಿಸಾರರ ಬಹಳಷ್ಟು ಉತ್ತಮ ಕವನಗಳು ಸಾಮಾಜಿಕ ಕಾವಿನಿಂದಲೇ ಮೂಡಿ ಬಂದಿರುವುದನ್ನು ಕಾಣ ಬಹುದು. ಆದರೆ ಘೋಂಗಿತನ ವ್ಯಕ್ತಿತ್ವವನ್ನು ಕಟ್ಟಿ ಹಾಕುತ್ತದೆ. 'ಮನಸ್ಸು ಗೂಟಕ್ಕೆ ಬಿಗಿದ ಆಕಳಲ್ಲ; ಕೊಂಬೆ ರೆಂಬೆಯ ಅಳಿಲು'[11] ಎಂಬ ನಂಬಿಕೆ ಕವಿಯದು. ಅದಕ್ಕೆ ಅನುಗುಣ ವಾಗಿ ಕವಿ, ಕಮಿಟ್‌ಮೆಂಟ್ ಅಷ್ಟೇ ಬದುಕಲ್ಲವೆಂಬುದನ್ನು ಹೀಗೆ ಹೇಳುತ್ತಾರೆ:

'ಇನ್ನೊಂದು ಚಹರೆಯೂ ಉಂಟು—
ಮನುಷ್ಯನಿಗದೇ ಕಗ್ಗಂಟು:
ಬಿಸಿಲಿಗೆ ಬೆಂದು, ಮಳೆಗೆ ನೆಂದು
ಗಾಳಿಗೆ ಸೆರಗೆತ್ತುವ ಮರಕ್ಕೂ ತಲೆ ತುಂಬ ಕನಸು.
ಕೊಂಬೆ ಕೊಂಬೆ ಸಜೀವ—ನೋಟಕ್ಕೆ ತಿನಿಸು.
ಸಂಜೆ ಮುಂಜಾನೆಯಲಿ ಮರಮರವು ಗಿಲಗಿಚ್ಚಿ...'[12]

'ರಕ್ತ ಮಾಂಸದ ಗಾನ ಅವ್ಯಕ್ತಕ್ಕೆ ತೂರಿದ್ದಕ್ಕೊ
ಅತ್ತೊ, ಕಿರುಚಿಯೊ, ಚಪ್ಪಾಳೆ ತಟ್ಟಿಯೊ
ಪ್ರತಿಕ್ರಿಯಿಸುವ ನಿನಗೆ ಹೇಗೋ ಕಾಣೆ. ನನಗಂತು
ಸೃಷ್ಟಿ ನಡುವಿನ ಬಿಡುವು, ಭೂತಕ್ಕೆ ಮಂತು;
ಚುರುಕುಗೊಳಿಸುವ ಸಾಣೆ'[13]

---

10. ವಿವರಣೆ—ಅದೇ. ಪು. ೧೧೨. 11. 'ವೈಜಯಂತಿ'—ಸ್ವಯಂಸೇವೆಯ ಗಿಳಿಗಳು, ಪು. ೩೨.
12. ಅದೇ—ಅದೇ, ಪು. ೩೨. 13. 'ಮರೆಯ ಮುಖ'—ಅದೇ, ಪು. ೫.

ಕಾವ್ಯಸೃಷ್ಟಿಯ ಬಗ್ಗೆ ನಿಸಾರರಿಗಿರುವ ಧೋರಣೆಯನ್ನು ಹಾಗೂ ಸೃಷ್ಟಿಕ್ರಿಯೆ ನಿಸಾರರಲ್ಲಿ ಯಾವ ರೀತಿ ದುಡಿಸಿಕೊಳ್ಳುತ್ತಿದೆಯೆಂಬುದನ್ನು ಮೇಲಿನ ಸಾಲುಗಳು ತಿಳಿಸುತ್ತವೆ. ಕವಿಯ ಕಾವ್ಯಸೃಷ್ಟಿಯ ಹಿಂದಿನ ಧೋರಣೆಯೇ ಸಮನ್ವಯದ್ದು ಹಾಗೂ ತೀರ ಪ್ರಾಕೃತಿಕವಾದದ್ದು. ಅದರ ಮುಂಬೆಳಕಲ್ಲಿ ಕವಿ ಬದುಕನ್ನು ಅನ್ವೇಷಿಸತೊಡಗಿದ್ದಾರೆ. ರಾಗ, ದ್ವೇಷ ಮೊದಲಾದ ಆವೇಗ ಆವೇಶಗಳಿಗೆ ಬಲಿಯಾಗದೆ ನಿಜವಾದ ಕಾವ್ಯವನ್ನು ನೀಡುವುದಕ್ಕೆ ಪ್ರಯತ್ನಿಸಲು ನಿಸಾರರು ತಮ್ಮ ಸಾಹಿತ್ಯಕ ಬದುಕಿನುದ್ದಕ್ಕೂ ಪ್ರಯತ್ನಿಸಿದ್ದಾರೆ. ಹೀಗೆ, ಈ ಕವಿಯ ಅಂತರ್ಮುಖತೆ ತಂದುಕೊಟ್ಟಿರುವ ಎಚ್ಚರ ಮತ್ತು ಅನ್ಯತೆಯ ಫಲವಾಗಿ ಕಾವ್ಯಸೃಷ್ಟಿಯಲ್ಲಿ ಸದಾ ಅತೃಪ್ತರಾಗಿ ತೃಪ್ತತೆಗಾಗಿ ನಡೆಸಿರುವ ಹೋರಾಟವೇ ನಿಸಾರರ ಕಾವ್ಯ.

— ೨ —

ನಿಸಾರರು ಗ್ರಾಮೀಣ ಬದುಕನ್ನು ತಮ್ಮ ಕವನದ ವಸ್ತುವನ್ನಾಗಿಸಿಕೊಂಡಿದ್ದು ತೀರಾ ವಿರಳ. ತಮ್ಮ ಬಹು ಪಾಲು ಜೀವನವನ್ನು ಬೆಂಗಳೂರು-ಶಿವಮೊಗ್ಗೆಗಳಲ್ಲಿ ಕಳೆದ ನಿಸಾರರ ಕಾವ್ಯದಲ್ಲಿ ಈ ಪಟ್ಟಣಗಳ ಬದುಕು ಹಾಸುಹೊಕ್ಕಾಗಿ ಸೇರಿದೆ. ಈ ಎರಡು ಪ್ರದೇಶಗಳ ಪ್ರಕೃತಿ, ಸಂದಿಗೊಂದುಗಳ ಕಾವ್ಯದ ರೂಪವಾಗಿ ಕಾಣಿಸಿಕೊಳ್ಳುತ್ತವೆ. ನಿಸಾರರ ಕಾವ್ಯದ ಆತ್ಮ, ಮಧ್ಯಮ ವರ್ಗದ ಜೀವನ. ಈ ವರ್ಗದ ನೋವು-ನಲಿವು, ಭಾವುಕತೆ, ಆಸೆ-ನಿರಾಸೆ ಮತ್ತು ಸಣ್ಣತನಗಳು ನಿಸಾರರ ಕಾವ್ಯದಲ್ಲಿ ಒಡಮೂಡಿವೆ. ಈ ಅಂಶಗಳನ್ನು ನಿಸಾರರ ಲೇಖನಿ ಲೇವಡಿಯಿಂದ, ಗಾಂಭೀರ್ಯದಿಂದ, ವಿಷಾದದಿಂದ ಅಭಿವ್ಯಕ್ತಿಸಿದೆ. ನಿಸಾರರ ಹಾಗೆ 'ನಗರ ಕಾವ್ಯ'ವನ್ನು ಕೊಟ್ಟವರು ನಮ್ಮಲ್ಲಿ ವಿರಳ. ಮಧ್ಯಮವರ್ಗದ ಹುಂಬತನದ ಪ್ರೀತಿ, ಪಲಾಯನಗಳು 'ಮನೋರಮಾ' ಎಂಬ ಪದ್ಯದಲ್ಲಿ ಅಭಿವ್ಯಕ್ತಿಗೊಂಡಿವೆ. 'ಬರೀ ಹೆಸರೆ ಸಾಕು ಬಿಡು; ಮಲಗೋಬದ ಗಮಗಮ'[14] ಎಂಬಲ್ಲಿನ ತೃಪ್ತಿ, ವಾಸ್ತವಿಕತೆಯನ್ನು ಎದುರಿಸಲಾರದ ಪಲಾಯನವಾದದ್ದು. ಇಲ್ಲಿ ವ್ಯಕ್ತವಾಗುವ ತೃಪ್ತಿಯೆಂಬ ಮಿಥ್ಯೆ ಮಧ್ಯಮ ವರ್ಗದ್ದು ಮಾತ್ರ. ಅದೇರೀತಿ ಮುದುಕನನ್ನು ಮದುವೆಯಾಗಿ ಬಾಳಿನ ಚಿಗುರಲ್ಲೇ ವಿಧವೆಯಾದ ಚೆಲುವೆಯ ಪಾಡಿಗೆ ಮರಗುವ ಮನೋಧರ್ಮ; ಈ ಮನೋಧರ್ಮದ ಹಿಂದಿರುವ ಅನುಕಂಪೆ, ಕರುಣೆ; ಹೀಗಾಯಿತಲ್ಲ ಎಂಬ ನೋವು—ಎಲ್ಲವೂ ಮಧ್ಯಮ ವರ್ಗದ ಮನಃಸ್ಥಿತಿಯ ಪ್ರಾಮಾಣಿಕ ಅಭಿವ್ಯಕ್ತಿಗಳು.[15]

ನಿಸಾರರ ಉತ್ತಮ ಪದ್ಯಗಳಲ್ಲಿ ಒಂದಾದ 'ಸಂಜೆ ಐದರ ಮಳೆ'[16]ಯಲ್ಲಿ ಬರುವ ಸಂಬಳ ಬಡತಿಗಾಗಿ ಹರಟುವ ಮೇಷ್ಟರು, ಕ್ಲಾರ್ಕ್ ರಾಜಣ್ಣ, ಪೆಂಡಾಲ್ ಬಗ್ಗೆ ಚಿಂತಿಸುವ ಪ್ರಿನ್ಸಿಪಾಲ್, ಮುಷ್ಕರಕ್ಕೆ ಹಾತೊರೆಯುವ ವಿದ್ಯಾರ್ಥಿ ಮುಖಂಡ ಕೊಟ್ರೇಶಿ—ಇವರೆಲ್ಲ ಮಧ್ಯಮ ವರ್ಗದ ವಿವಿಧ ಮುಖಗಳು. ಈ ವರ್ಗ ಪ್ರಭಾವದಿಂದ 'ಮಳೆ'ಯಂಥ ಪ್ರಾಕೃತಿಕ ರೋಮಾಂಚಕ ಸನ್ನಿವೇಶವನ್ನು ಅನುಭವಿಸಲು ಅಸಮರ್ಥರಾಗುತ್ತಾರೆ. ಇವರಿಗೆ 'ಮಳೆ

14. ಆಯ್ದ ಕವಿತೆಗಳು, ಪು. ೩೩.
15. 'ಮರಗುವೆನು ಎಲೆ ಚೆಲುವೆ'—ಅದೇ, ಪು. ೩೬.
16. ಆಯ್ದ ಕವಿತೆಗಳು, ಪು. ೯೧.

ಚಂಡಾಲ'ವಾಗಿಬಿಡುತ್ತದೆ, ಅಸ್ಪೃಶ್ಯನಷ್ಟು ದೂರವಾಗಿ ಬಿಡುತ್ತದೆ. ಹಾಗೆಯೇ ಇತ್ತ ಪ್ರಗತಿಶೀಲರೂ ಆಗದೆ, ಅತ್ತ ಮಡಿವಂತರೂ ಆಗದೆ ಬದುಕುವ ಅಬ್ಬೆಪಾರಿತನದ ಅಥವಾ ಹೊರಗೆ ಕ್ರಾಂತಿಯ ಸೋಗು ಹಾಕುತ್ತಾ, ಅಂತರಂಗದಲ್ಲಿ 'ಹಳಸಿದಾಚಾರಗಳ ಹೊಂಡ'ದ ಬದುಕನ್ನೇ ಬದುಕಿ ಅತಂತ್ರರಾಗುವ ಜನರ ಚಿತ್ರಣವನ್ನು 'ವೈಜಯಂತಿ'[17]ಯಲ್ಲಿ ಕಾಣಬಹುದು.

ಬೆಂಗಳೂರು ನಗರದ ಗಾಂಧಿ ಬಜಾರು ನಿಸಾರರಿಗೆ ಮಾನಸಿಕ ಗೊಂದಲದ ಸಂಕೇತ ಮಾತ್ರವಲ್ಲ. ನಿಸಾರ್ ಅದರ ಚಿತ್ರಣವನ್ನು ಎರಡು ಪದ್ಯಗಳಲ್ಲಿ ಕಾವ್ಯವಾಗಿಸಿದ್ದಾರೆ. ಇಲ್ಲಿಯ ಬೆಳಗು-ಸಂಜೆಗಳಿಗೂ ಗ್ರಾಮೀಣ ಬದುಕಿಗೂ ಹೋಲಿಕೆ ಮಾಡುತ್ತಾ ಸಾಗಿ, ನಗರದ ಬದುಕನ್ನು ಹೀಗೆ ಪರಿಚಯಿಸುತ್ತಾರೆ:

'ಗಾಂಧಿ ಬಜಾರಿನ ಸಂಜೆ
ಪರ್ಸಿನ ಸಮಾಚಾರ; ಸ್ಲೇಟು, ಬುಕ್ಕು
ಹೆಂಡತಿಯ ಹಕ್ಕು
ಪೆಚ್ಚು ಮೋರೆಯ ತರಕಾರಿ ಥೈಲಿ
ಶೆಟ್ಟಿಯ ಮೊದಲ ತಾರೀಖಿನ ಬಾಕಿ ವಸೂಲಿ;
ಪೇಟೆ ಬದುಕಿನ ದ್ರೌಪದಿಯ ಘೇರಾಯಿಸಿದ ದುಶ್ಯಾಸನ,
ಫ್ಯಾಶನ್ನುಗಳ ಮೂಕ ಮಾಪನ'[18]

ಇಲ್ಲಿ ರಾಗಿ ಬೀಸುವ ಪದ ಕೇಳಿಸುವುದಿಲ್ಲ. ರೈತನ ಎಕ್ಕಡವಿಲ್ಲದ ಗಡಸು ಹೆಜ್ಜೆಯ ದನಿ ಕೇಳಿಸುವುದಿಲ್ಲ, ರಂಗವಲ್ಲಿ, ಮಲ್ಲಿಗೆ ಬಳ್ಳಿ ಸುಲಿಯುವ ಹುಡುಗಿ ಸಿಗುವುದಿಲ್ಲ.[19] ಇಲ್ಲೆಲ್ಲ ನಿಸಾರರ ಲೇಖನಿ ನಗರ ಬದುಕಿನ ಶುಷ್ಕತೆಯನ್ನು ವಿಷಾದಮಯವಾಗಿ ಅಭಿವ್ಯಕ್ತಿಸಿದೆ.

'ನಮ್ಮ ಬಡಾವಣೆಯ ಕಥೆ'[20] ಎಂಬ ಕವನದಲ್ಲಿ ಹೊಸ ಬಡಾವಣೆಯಲ್ಲಿ ಅನುಭವಿಸಬೇಕಾದ ಪಾಡಿನ ಚಿತ್ರಣವಿದೆ. ವ್ಯಂಗ್ಯದ ಧಾಟಿಯಲ್ಲೇ ಸಾಗುವ ಕವನ, 'ನಗರ ನಿರ್ಮಾಪಕ'ರನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಳ್ಳುತ್ತದೆ. 'ವಾರಕ್ಕೆರಡು ಸಲ ಈ ಬಡಾವಣೆ ಅಂಧಕಾಸುರನ ಗೋಡೌನು'. ಪ್ರಕೃತಿಯನ್ನು ನಾಶ ಮಾಡಿ ನಗರ ನಿರ್ಮಾಣ ಮಾಡಿದಾಗ ಆಗುವ ಪರದಾಟ-ರಂಪಾಟಗಳನ್ನು ಈ ಕವನ ಹಿಡಿದಿಡುತ್ತದೆ. ಈ ಪದ್ಯದ ವಿಡಂಬನೆಯ ಹಿಂದೆ ಪ್ರಕೃತಿ ನಾಶದ ಬಗ್ಗೆ ನೋವಿದೆ.

'ನಮ್ಮ ಬಡಾವಣೆಯ ಕಥೆ'ಯಲ್ಲಿ ಅಡಗಿರುವ ಮಾರ್ಮಿಕಾರ್ಥವನ್ನು ಮರೆತರೆ ಕವನವನ್ನು ಕೇವಲ ವಾಚ್ಯದ ಮೇಲ್ಮೈ ಮಟ್ಟದಲ್ಲೇ ತಿಳಿದಂತೆ ಆಗುತ್ತದೆ. ಪರಂಪರೆಯೊಂದರ ಸತ್ವ ಕ್ಷೀಣಗೊಂಡಾಗ, ಇಲ್ಲವೇ ಅದು ಇನ್ನು ಎಡೆಗೊಡಲಾಗ

17. 'ಸ್ವಯಂಸೇವೆಯ ಗಿಳಿಗಳು', ಪು. ೨೯.
18. 'ಗಾಂಧಿ ಬಜಾರಿನ ಸಂಜೆ'—ಆಯ್ದ ಕವಿತೆಗಳು, ಪು. ೬೨೪.
19. 'ಗಾಂಧಿ ಬಜಾರಿನ ಬೆಳಗು'—ಅದೇ, ಪು. ೬೨.
20. 'ಸ್ವಯಂಸೇವೆಯ ಗಿಳಿಗಳು', ಪು. ೪೭.

ದಷ್ಟು 'ಭರ್ತಿ'ಯಾದಾಗ, ಹೊಸ ಮಾರ್ಗ ಹಾಗೂ ನೆಲೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಸ್ವಾಭಾವಿಕ ಮತ್ತು ಆರೋಗ್ಯಕಾರಿ ಲಕ್ಷಣ. ಪರಂಪರೆಯಲ್ಲಿ ಎಲ್ಲವೂ ಸಿದ್ಧವಾಗಿ, ಅನುಕೂಲಕರವಾಗಿ ಇರುವಂತೆ ಹೊಸದಾಗಿ ನಿರ್ಮಿತವಾದ ನೆಲೆಯಲ್ಲಿ ಇರುವುದಿಲ್ಲ. ಇಂದಿನ ಅಗತ್ಯಗಳಿಗೆ ತಕ್ಕಂತೆ ಮತ್ತೆ ಬದುಕನ್ನು ವ್ಯವಸ್ಥೆ ಮಾಡಿಕೊಳ್ಳಬೇಕು, ಸೌಕರ್ಯ-ಸೌಲಭ್ಯಗಳನ್ನು ಶ್ರಮದಿಂದ ಕೈಗೂಡಿಸಿಕೊಳ್ಳಬೇಕು. ಇದನ್ನು ಹೊಸ ಬಡಾವಣೆಯೊಂದರ ಪ್ರತಿಮೆಯ ಮುಖಾಂತರ ನಿಸಾರರು ಸಮರ್ಥ ಹಾಗೂ ಸಮಂಜಸವಾಗಿ ಅಭಿವ್ಯಂಜಿಸಿದ್ದಾರೆ. ಪರಂಪರೆಯ ಸಿದ್ಧವಾದ ಸುಖ, ಅನುಕೂಲಗಳನ್ನು ಅನುಭವಿಸುವವರಿಗೆ ಹೊಚ್ಚ ಹೊಸದಾಗಿ ರೂಪಿಸಿಕೊಂಡ ಅದರ ವಿಸ್ತರಣ ಸ್ವರೂಪದ ನವ ಪಂಥದ ಪ್ರಾರಂಭಿಕ ದಿವಸಗಳ ಗೊಂದಲ, ಸಂಕಷ್ಟ, ಪರಿಶ್ರಮ, ತ್ಯಾಗಶೀಲತೆ ಅರ್ಥವಾಗದು. ಕವನದಲ್ಲಿ ವರ್ಣಿತವಾದ ಬಡಾವಣೆ ಮುಂದೊಮ್ಮೆ ಪರಂಪರೆಯದೇ ಒಂದು ಅವಿಚ್ಛಿನ್ನ ಭಾಗ ವಾದಾಗ, ಎಲ್ಲವೂ ಅನುಕೂಲಕರ ಸುವ್ಯವಸ್ಥೆಗೆ ಒಳಪಟ್ಟಾಗ ಮತ್ತೆ ಹೊಸನೆಲೆಯ ಹುಡುಕಾಟ ಶುರುವಾಗುತ್ತದೆ. ಮತ್ತೆ ಅದೇ ಹಳೆಯ ಕಷ್ಟ-ನಷ್ಟಗಳ, ಶ್ರಮದ ಬವಣೆ, ಬದುಕನ್ನು ಅಮರಿಕೊಳ್ಳುತ್ತದೆ.

ನಗರ ಜೀವಿಗಳ, ಅದರಲ್ಲೂ ಮಧ್ಯಮ ವರ್ಗದ ಮನಃಸ್ಥಿತಿಯ ನೇರ ಚಿತ್ರಣ 'ಬೀದಿಯ ಮಾರಿ'[21] ಎಂಬ ಕವನದಲ್ಲಿ ಅತ್ಯಂತ ಯಶಸ್ವಿಯಾಗಿ ಬಂದಿದೆ. ಇಲ್ಲಿ ಬರುವ 'ಸಿಮೆಂಟ್ ತೊಟ್ಟಿ' ನಗರ ಜೀವನಕ್ಕೆ ಹಿಡಿದ ಸಮರ್ಥ ಕನ್ನಡಿ; ಅದರ ಕೊಳಕಿನ ಸಂಕೇತ. ಕವಿಯ ಮನೆಯ ಮುಂದೆ 'ಪ್ರತಿಷ್ಠಾಪಿತ'ವಾದ ಸಿಮೆಂಟ್ ತೊಟ್ಟಿ 'ಮನೆಗೆ ಮಾರಿ'ಯಾಗಿ ಪರಿವರ್ತಿತವಾಗುವುದು; ಬೀದಿಯ ಜನ ಹಾಗೂ ನಾಯಿಗಳಿಂದ ನಾಯಕನ ಮನೆ ನರಕವಾಗುವುದು; ಕೊನೆಗೆ ನಾಯಕ 'ತೊಟ್ಟಿಯನ್ನು ಬೀದಿ ತಿರುವಿಗೆ ಗಡಿಪಾರು' ಮಾಡಿಸುವುದು—ಇಲ್ಲೆಲ್ಲ ಕಂಡು ಬರುವ ಚಿತ್ರಣದ ಹಿಂದಿನ ಅನುಭವ ಅತ್ಯಂತ ಗಾಢವಾದದ್ದು. 'ಪ್ರಜ್ಞೆ' ಇರುವ ಇಲ್ಲಿಯ ನಾಯಕನೂ ಕೂಡ ತನ್ನ ವಿಚಾರಕ್ಕಿಂತ ಭಿನ್ನನೇನಲ್ಲ. ಸದ್ಯದ ಆಪತ್ತಿನಿಂದ ಪಾರಾದರೆ ಸಾಕು ಎಂಬ ಮನೋಭಾವದ ಈತ 'ಚೆನ್ನಾಗಿ ನಿದ್ದೆ' ಮಾಡುವುದು ಮಧ್ಯಮ ವರ್ಗದ ಪ್ರಜ್ಞೆಯಿಂದಲೇ. ಆದರೆ ಇನ್ನೊಂದು ಅರ್ಥಚ್ಛಾಯೆಯೂ ನಿಸ್ಸಂದಿಗ್ಧವಾಗಿ ನಮಗೆ ಗೋಚರಿಸಬಹುದು. ಪರೋಪಕಾರ ಮಾಡುವುದಕ್ಕೆ ಮುಂಚೆ ತನ್ನ ಸುಖ, ಸೌಲಭ್ಯಗಳನ್ನು ಗಣನೆಗೆ ತಂದುಕೊಳ್ಳಬೇಕು. ಊರಿಗೆ ಉಪಕಾರ ಮಾಡಬಯಸುವವನು ತನಗೆ ಆಗಬಹುದಾದ ಪಾಡನ್ನು, ಅಪಕಾರವನ್ನು ಮನಗಂಡಿರಬೇಕು. ಉಪಕಾರ ಮಾಡಲು ಹೋಗಿ ತೊಂದರೆಗಳನ್ನು ತಾನಾಗಿ ಮೈಯ ಮೇಲೆ ಎಳೆದುಕೊಳ್ಳಬಾರದು.

ಒಂದೇ ಬದುಕಿನ ಬೇರೆ ಬೇರೆ ಅವಸ್ಥೆಗಳಲ್ಲಿ ಒಂದು ಮೌಲ್ಯದ ಸ್ಥಿತಿಗತಿ ಯಲ್ಲಾಗುವ ಏರುಪೇರುಗಳನ್ನು 'ಅಂತರ'[22] ಎಂಬ ಕವನ ತಿಳಿಸುತ್ತದೆ. ನಿಸಾರರ ಅತ್ಯಂತ

21. ಅದೇ, ಪು. ೧೬.
22. ಅದೇ, ಪು. ೨೨.

ಯಶಸ್ವಿ ಹಾಗೂ ಭಾವಾರ್ಥಗರ್ಭಿತ ಪದ್ಯಗಳಲ್ಲಿ 'ಅಂತರ'ಕ್ಕೆ ಅತಿ ಮುಖ್ಯ ಸ್ಥಾನವಿದೆ. ಗಾಂಧೀಜಿ ಸತ್ತ ಸುದ್ದಿಯಿಂದ ಕವನ ಪ್ರಾರಂಭವಾಗುತ್ತದೆ. ಗಾಂಧಿಯವರ ಸಾವು ಶ್ರೀಸಾಮಾನ್ಯರಿಂದ ಹಿಡಿದು ಎಲ್ಲರನ್ನೂ ಒಳಗು ಮಾಡಿಕೊಳ್ಳುತ್ತದೆ; ದುಃಖಕ್ಕೀಡು ಮಾಡುತ್ತದೆ. ಆಗ ಈ ಕವನದ ನಾಯಕ ವಿದ್ಯಾರ್ಥಿ, ಬಾಲಕ.

> **'ಸಸ್ಯಹಾರಿ ಅನಂತಯ್ಯ—ದಡದಡ ಧಾವಿಸಿ**
> **ಸುದ್ದಿಯ ದುರಂತತೆಯನ್ನು ಗದ್ಗದದಲ್ಲಿ ಅತಿಶಯಿಸಿದಾಗ,**
> **ಗಾಂಧಿವಾದಿ ಅಪ್ಪನ ಚಹರೆ ಹಠಾತ್ತನೆ ಬಣ್ಣಗೆಟ್ಟು—**
> **ಹೊಮ್ಮಿಸಿದ ದುಃಖೋದ್ಗಾರ...'**

ಎನ್ನುವಲ್ಲಿ ಗಾಂಧೀಜಿ ಹೇಗೆ ಆ ಕಾಲದವರ ಬದುಕಿನ ಭಾಗವಾಗಿದ್ದರು ಎನ್ನುವ ಅಂಶ ವಿಶದವಾಗುವುದು.

ಗಾಂಧಿ ಆಗ ಊರೆಲ್ಲ ತುಂಬಿದ್ದ ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಆದರ್ಶಗಳ ಸಂಕೇತ. ಗಾಂಧಿ ಜೊತೆಜೊತೆಯಲ್ಲಿಯೇ ಈ ಕವನದ ನಾಯಕನ ತಂದೆಯ ಚಿತ್ರಣವೂ ಸೇರುವುದರಿಂದ ಕವನಕ್ಕೆ ಮುಂದೆ ಹೊಸ ಆಯಾಮ ದೊರೆಯುತ್ತದೆ. ಕವನ ಬೆಳೆದಂತೆಲ್ಲಾ—ನಾಯಕ ಬೆಳೆದಂತೆಲ್ಲಾ—'ಗಾಂಧಿ' ಸತ್ವ ಕಳೆದುಕೊಂಡ ಸವಕಲು ಕ್ಲೀಷೆಗೆ ಸಂಕೇತವಾಗತೊಡಗುತ್ತಾರೆ. ಅಪ್ಪಟ ಗಾಂಧಿವಾದಿಯಾಗಿದ್ದ ನಾಯಕನ ಅಪ್ಪ 'ಸೀಮೆಎಣ್ಣೆಗೆ ದಿನವಿಡೀ ಕ್ಯೂ ನಿಂತು, ಬಿಳಿಯರ ಸುಭಿಕ್ಷ'ವನ್ನು ವರ್ಣಿಸುವುದು ಮೌಲ್ಯವೊಂದು ಅಪಮೌಲ್ಯವಾದುದರ ಸಂಕೇತ; ಒಂದು ದೇಶದ ಆತ್ಮನಾಶದ ಸಂಕೇತ. ನಂಬಿಕೆ ಕಳೆದುಕೊಂಡ ಜನ ನಾಯಕನ 'ಭಾವ'ವನ್ನು ಆವೇಗಿಸದ್ದು ಅದರ ಮುಂದಿನ ಬೆಳವಣಿಗೆ. ಕವನದ ನಾಯಕ ದೊಡ್ಡವನಾಗುತ್ತಾನೆ; ಸರಕಾರದ ನೌಕರನಾಗುತ್ತಾನೆ. ನಾಯಕನ ಸೇವೆಯನ್ನು ಅಲಕ್ಷಿಸಿ ಮತ್ತೊಬ್ಬನಿಗೆ ಬಡ್ತಿ ದೊರೆತಾಗ ಗಾಂಧಿವಾದಿ ಅಪ್ಪನ ಗಾಂಧಿವಾದಿ ಮಗನಿಗೆ ಗಾಂಧಿ ಹೇಗೆ ಹೇಗೋ ಆಗುವುದು; ಅಪ್ಪ ಹುಸಿ ನಗುವುದು—ಇವೆಲ್ಲಾ ವಿಪರ್ಯಾಸಗಳು ನಿರಾಸೆಯ ಹಂತಗಳಾಗಿ ಬೆಳೆಯತೊಡಗುತ್ತವೆ. ನಾಯಕನ ಮಗ ಕಳ್ಳೇಕಾಯಿಗೆ 'ಗಾಂಧಿ ಬಾದಾಮಿ' ಎನ್ನುತ್ತಾನೆ; ಬೀದಿ ಗಲಾಟೆ 'ಬರೀ ಗಾಂಧಿ ಗಲಾಟೆ' ಯಾಗಿ ಅರ್ಥ ಪಡೆದುಕೊಳ್ಳುತ್ತದೆ. ನಾಯಕ ಮತ್ತು ನಾಯಕನ ಅಪ್ಪ ದಿನೇ ದಿನೇ ಗಾಂಧಿಯನ್ನು ಕಳೆದುಕೊಳ್ಳುತ್ತಾ ಸಾಗುತ್ತಾರೆ:

> **'ಹಿಂದಿನ ಹಾಗೆ ದಪ್ಪ ಧ್ವನಿಯಿಂದ,**
> **ಉಬ್ಬಿದ ನರದಿಂದ ಅಪ್ಪನ ಗುರುತು ಹತ್ತುವುದಿಲ್ಲ;**
> **ನನ್ನ ಚರ್ಚೆ, ಸ್ವಪ್ರತಿಷ್ಠೆಗೆ ಗಾಂಧಿ ವಸ್ತುವಾಗುವುದಿಲ್ಲ.'**

ಕವನದ ಕೊನೆಯ ವಿಷಾದ ಮನ ಕಲಕುತ್ತದೆ. ಕವಿಯ ಜೀವಿತದ ಅನುಭವ ಗಳಿಸಿಕೊಟ್ಟ ಪಾಠ ಗಾಂಧಿಯನ್ನು ಪ್ರೀತಿಸುತ್ತಲೇ ಮರೆಸುವ ಹಾಗೆ ಮಾಡುತ್ತದೆ. ಕೇವಲ ಕಾಲು ಶತಮಾನದ ಅಂತರದಲ್ಲಿ ಗಾಂಧಿ ಮತ್ತು ಜನತೆಯ ನಡುವೆ ಅಂತರವೇರ್ಪಡುತ್ತದೆ. ಸದ್ಯದ ದೇಶದ ಸ್ಥಿತಿಯನ್ನು ಅತ್ಯಂತ ಮಾರ್ಮಿಕವಾಗಿ ಹಿಡಿದಿಟ್ಟಿರುವ ಕವನವಿದು.

— ೩ —

ಆಧುನಿಕ ಕನ್ನಡ ಕಾವ್ಯದಲ್ಲಿ ವ್ಯಕ್ತಿಚಿತ್ರಗಳನ್ನು ಬಿಡಿಸಿದವರಲ್ಲಿ ನಿಸಾರ್ ಕೂಡ ಒಬ್ಬರು. ಇತರರ ಈ ನಮೂನೆಯ ಕವನಗಳನ್ನು ಗಮನದಲ್ಲಿಟ್ಟುಕೊಂಡು ನಿಸಾರರ ವ್ಯಕ್ತಿ ಚಿತ್ರಗಳನ್ನು ತೂಗಿ ನೋಡಿದಾಗ, ಇವರು ಚಿತ್ರಿಸಿರುವ ಕವನಗಳು ತಮ್ಮದೇ ಆದ ವಿಶಿಷ್ಟತೆಯನ್ನು ಕಾಯ್ದುಕೊಂಡಿರುವುದನ್ನು ಗಮನಿಸಬಹುದು.

ಗಾಂಧಿ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಇಂದು ಹೇಗೆ ಅಪಮೌಲ್ಯ ವಾಗಿದ್ದಾರೆಂಬುದನ್ನು 'ಅಂತರ' ಕವನದಲ್ಲಿ ಚಿತ್ರಿಸಿರುವುದನ್ನು ನೋಡಿದ್ದೇವೆ. ೫೦ರ ದಶಕದಲ್ಲಿ ಬರೆದ 'ದಾರಿದೀಪ'[23] ಎಂಬ ಕವನದಲ್ಲಿ ಗಾಂಧಿಯನ್ನು 'ಧೀರ', 'ಜಾದುಗಾರ', 'ಮಾರ್ಗದರ್ಶಕ' ಎಂಬ ಮಾತುಗಳಿಂದ ಕವಿ ಮೆಚ್ಚುತ್ತಾರೆ. ನಿಸಾರರ ಅಂದಿನ ನಂಬಿಕೆಯ ಅಭಿವ್ಯಕ್ತಿಯಿದು. ಭಾರತದ ದಾರಿದೀಪವಾಗಿ ಕವಿಗೆ ಗಾಂಧಿ ಅಂದು ಕಂಡಿದ್ದು ಸತ್ಯ.

> **'ಪರರ ಚಿಂತೆಗೆ ಕರಗಿ ನೀರಾಗಿ ಹೋದೆ,**
> **ವೈಷಮ್ಯದಗ್ನಿಯಲಿ ಹಸಿಯ ಸೌದೆಯ ನೋವ ತಾಳಿ ಸೀದೆ.'**

ಎಂದು ಗಾಂಧಿಯ ದುಡಿಮೆ ಮತ್ತು ತ್ಯಾಗಗಳ ಚಿತ್ರಣವನ್ನು ಮಾಡುತ್ತಾರೆ. ಗಾಂಧಿ ಬಗೆಗಿದ್ದ ಪ್ರತಿಯೊಬ್ಬ ಭಾರತೀಯನ ಪ್ರೀತಿ ಪ್ರೇಮದ ಭಾವಗಳನ್ನು ನಿಸಾರರು ಈ ಪದ್ಯದಲ್ಲಿ ಕೊಡಲು ಯತ್ನಿಸಿದ್ದಾರೆ.

ಕವಿ ನಿಸಾರರಿಗೆ ನವೋದಯದ ಬಗ್ಗೆ ಎಲ್ಲಿಲ್ಲದ ಪ್ರೀತಿ. ನವೋದಯದ ವಕ್ತಾರನಾದ ಮುದ್ದಣ ನಿಸಾರರಿಗೆ ಹೀಗೆ ಕಂಡಿದ್ದಾನೆ:

> **'ಕೊಕ್ಕೊಕ್ಕೋ : ನವೋದಯು, ಹೊಸ ನಗಾರಿ;**
> **ಕದಲಿತು ಪರಂಪರೆ ಒಂದೆರಡು ಡಿಗ್ರಿ.'**

—ಹೀಗೆ ಪರಂಪರೆಯನ್ನು ಒಂದೆರಡು ಡಿಗ್ರಿಗಳಷ್ಟು ಬದಲಿಸಿದ ಮುದ್ದಣನ ಚಿತ್ರವನ್ನು ತಮ್ಮ 'ನವೋದಯ'[24] ಎಂಬ ಕವನದಲ್ಲಿ ಚಿತ್ರಿಸುತ್ತಾರೆ. ಮೊಮ್ಮಗ ತಾತನನ್ನು ಚುಡಾಯಿಸುವಂಥ ಆತ್ಮೀಯ ಧಾಟಿಯಲ್ಲಿ ಸಾಗುವ ಕವನ ಆಕರ್ಷಕವಾಗಿದೆ. ಮುದ್ದಣ ಇಂದು ಬದುಕಿದ್ದರೆ ಹೀಗಿರುತ್ತಿದ್ದನೆಂದು ಕವಿಯ ಚಿತ್ರಣ:

> **'ಹಗಲಲ್ಲಿ ಹಾಸಿಗೆಯನೊರಗಿದ್ದರೂ ರಾತ್ರಿಯೆಲ್ಲ ಕೂತಿರುತಿದ್ದೆ;**
> **ಬೆಳಕು ಇಂಗಿದ ಮಂಜುಗಣ್ಣಿಂದ ಬಾಲಕರ ಜೂಟಾಟ**
> **ನೋಡುತ್ತ, ನಡುನಡುವೆ ಮಾಡುತ್ತ ಸಣ್ಣ ನಿದ್ದೆ,**
> **ಮಧ್ಯಾಹ್ನ ಕಳೆಯುತಿದ್ದೆ.**
> **..**
> **'ನಡೆಗೋಲ ಬಚ್ಚಿಟ್ಟು ನೀನು ತಡವುತ್ತಿರಲು,**

---

23. ಆಯ್ದ ಕವಿತೆಗಳು, ಪು. ೬.
24. ಆಯ್ದ ಕವಿತೆಗಳು, ಪು. ೪೯.

ಚಪ್ಪಾಳೆ ತಟ್ಟಿ ಹೋ, ಅಹಹ ಎಂದರಚಲು, ಹಲ್ಲಿರದ
ಒಸಡುಗಳ ಕಚ್ಚಿ ಕೂಗುತ್ತಿದ್ದೆ:
ಕಾಲ ಕೆಟ್ಟಿತು, ವಯಸ್ಸಿಗಿಲ್ಲ ಗೌರವವೆಂದು ವ್ಯರ್ಥ ರೇಗುತ್ತಿದ್ದೆ.'

ಮುದ್ದಣ ಹಣ್ಣು ಹಣ್ಣು ಅಜ್ಜನಂತೆ ಓದುಗರ ಪ್ರೀತಿಗೆ ಪಾತ್ರನಾಗುತ್ತಾನೆ. ನೆನಪುಗಳನ್ನು ಕಲಕುವಂತೆ ಕೆದಕಿ, ಮುದ್ದಣನನ್ನು ಮರೆತಿರಬಹುದಾದ ಓದುಗರನ್ನು ಎಚ್ಚರಿಸುತ್ತಾರೆ, ನಿಸಾರ್. ಮುದ್ದಣನ ಬಗ್ಗೆ ಅವರು ಅಂತಿಮವಾಗಿ ಹೀಗೆ ಬರೆಯುತ್ತಾರೆ: 'ಕಪ್ಪೆಗೆ ಹೊಂಡವೇ ಬ್ರಹ್ಮಾಂಡ: / ಅರಬ್ಬೀ ಸಮುದ್ರ ಬಯಸುವುದು ತಿಮಿಂಗಿಲ, ಷಾರ್ಕು. / ಹೆಂಬೇಡಿಯಲ್ಲ, ಬಹದ್ದೂರ್ ಗಂಡ; / ಅಮರತೆ ನಿನ್ನ ಟ್ರೇಡ್‌ಮಾರ್ಕು.'

ಕನ್ನಡ ಸಾಹಿತ್ಯದ ಧೀಮಂತ ವ್ಯಕ್ತಿಯಾಗಿ, ತಮ್ಮ ಪಾಂಡಿತ್ಯಪೂರ್ಣ ವಿದ್ವತ್ ಕೃತಿಗಳಿಂದ, ಆಕರ್ಷಕ ವ್ಯಕ್ತಿತ್ವದಿಂದ ಬದುಕಿ ಇಹವನ್ನು ತ್ಯಜಿಸಿ ಹೋದ 'ತೀನಂಶ್ರೀ'[25] ಅವರನ್ನು ಕುರಿತು ನಿಸಾರರು ಕೊಟ್ಟಿರುವ ಚಿತ್ರ ತನ್ನ ರೂಪಾಂಶ ಮತ್ತು ಅಭಿವ್ಯಕ್ತಿಗಳಿಂದ ಅತ್ಯಂತ ಶಕ್ತಿಶಾಲಿ ಪದ್ಯ ಎನ್ನಿಸಿದೆ:

'ಹೋಗುವೆನೆಂದು ಹೋಗದೆಯೆ ಒದ್ದಾಡಿಸುವುದು
ಇಲ್ಲಿ ಹಲವರ ರೀತಿ;
ಹೇಳದೆಯೆ ಹೊರಟು ಹೋಗಿ ಒದ್ದಾಡಿಸುವುದು
ಎಲ್ಲೊ ಕೆಲವರ ರೀತಿ.'

—ತೀನಂಶ್ರೀ ಅವರ ಸಾವಿನ ಮಹತ್ತ್ವವನ್ನು ಹೇಳುವುದರ ಮೂಲಕವೇ ಕವನ ಪ್ರಾರಂಭ ವಾಗುತ್ತದೆ. ಪ್ರಾರಂಭದ ಸಾಲುಗಳೇ ತೀನಂಶ್ರೀ ವ್ಯಕ್ತಿತ್ವಕ್ಕೆ ಹಿಡಿದ ಅಪ್ಪಟ ಕನ್ನಡಿಯಂತಿವೆ. ತೀನಂಶ್ರೀ ಅವರನ್ನು ಕವಿ 'ಊರೆದುರಿನ ಸುವಿಶಾಲ ಆಲ' ಎಂದು ವರ್ಣಿಸುತ್ತಾರೆ. ಕವನ ತನ್ನ ಎರಡನೆಯ ಭಾಗದಲ್ಲಿ ನಿಸಾರ್ ಮತ್ತು ತೀನಂಶ್ರೀ ಅವರ ವೈಯಕ್ತಿಕ ಪರಿಚಯ-ಸಂಬಂಧಗಳ ಕಡೆ ಬೆಳೆಯುತ್ತದೆ. ನಿಸಾರ್ ಮುಂದುವರಿದು ತೀನಂಶ್ರೀ ಅವರನ್ನು 'ನೀ ಚಿಕಿತ್ಸಕ, ಗ್ರಾಮಫೋನು, ಬಾತ್ಮೀದಾರ / ಕಾಣುವುದು ಬೀದಿ ದಾಸನಿಗೂ ಗೊತ್ತು / ಕಾಣಿಸಿದ್ದನ್ನು ಮತ್ತೆ ಮನಗಾಣಿಸುವುದು ಮಾತ್ರ / ನಿನ್ನಂಥವರ ಸೊತ್ತು' ಎಂದು ಹೇಳುತ್ತಾರೆ. ತೀನಂಶ್ರೀ ಅವರ ವಿದ್ವತ್ತಿನ ಬದುಕಿಗೆ ಅವರ ರಸಿಕತೆ ಫ್ಯಾಶನ್ನಿನಂತೆ, ಭಾವುಕತೆಯಂತೆ ಎಂದು ಕವಿ ತಿಳಿಸುತ್ತಾರೆ. ತೀನಂಶ್ರೀ ಕನ್ನಡಕ್ಕೆ ನೀಡಿರುವ ಕಾಣಿಕೆಯ ಅರಿವಿನಿಂದ ಕವಿ ತನಗೂ 'ಋಣ' ಇದೆಯೆನ್ನುತ್ತಾರೆ. ತೀನಂಶ್ರೀ ಅವರ ವಿದ್ವತ್ತಿನ ಬೆಳಕಿನಲ್ಲಿ ನಾವೂ ಬೆಳೆಯಬೇಕೆಂಬ ಆಶಯದಲ್ಲಿ ಕವನ ಮುಗಿಯುತ್ತದೆ.

ಕನ್ನಡದ ಮತ್ತೊಬ್ಬ ಹಿರಿಯ ಸಾಹಿತಿ 'ಮಾಸ್ತಿ'[26]ಯವರ ಬಗ್ಗೆಯೂ ಇದೇ ಕಾಳಜಿ ಯಿಂದ ಬರೆಯುತ್ತಾರೆ. ಅದೇ ಆತ್ಮೀಯ ಧಾಟಿ; ಅದೇ ಚಿಕಿತ್ಸಕ ದೃಷ್ಟಿ. ನಿಸಾರರು ಮಾಸ್ತಿ ಯವರನ್ನು ಸಾಮಾನ್ಯರಂತೆ ಚಿತ್ರಿಸುತ್ತಾರೆ. ಮಾಸ್ತಿಯವರ ದಿನಚರಿಯನ್ನು ಹೇಳುವ ಧರದಲ್ಲಿ ಪ್ರಾರಂಭವಾಗುವ ಈ ಕವನ ತನ್ನ ಧಾಟಿಯಲ್ಲಿಯೇ ಸಾಮಾನ್ಯ

25. ಆಯ್ದ ಕವಿತೆಗಳು, ಪು. ೬೨.
26. 'ಮಾಸ್ತಿ'—ಅದೇ, ಪು. ೮೧.

ಅಸಾಮಾನ್ಯನಾಗುವ ಚಿತ್ರವನ್ನು ನೀಡುತ್ತದೆ. ಗಾಂಧಿ ಬಜಾರಿನಲ್ಲಿ ಪ್ರತ್ಯಕ್ಷವಾಗುವ ಮಾಸ್ತಿ ಕವಿಗೆ 'ನಿರ್ದಿಷ್ಟ ಸಮಯದಂತೆ' ಎದುರಾಗುತ್ತಾರೆ. ಇವರನ್ನು ಕಂಡಾಗ ಕವಿ ಜೀವ ಹೊಸ ಅನುಭವ ಪಡೆದುಕೊಳ್ಳುತ್ತದೆ:

'ಇವರು ನನ್ನೆದುರಲ್ಲಿ ಹಾದುಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ, ಹಗುರಕ್ಕೆ ಸಲ್ಲುತ್ತದೆ.'

ಹಿರಿಯರ ಬಗ್ಗೆ ನಿಸಾರರಿಗೆ ಅತಿಯಾದ ಗೌರವ ಈ ವ್ಯಕ್ತಿಚಿತ್ರದಿಂದ ತಿಳಿದು ಬರುತ್ತದೆ. ಮಾಸ್ತಿಯವರು ಎಲ್ಲವನ್ನು ಮರೆತಂತೆ ಕ್ಲಬ್ಬಿನಲ್ಲಿ 'ಇಪ್ಪತ್ತೆಂಟನಾಡುವುದು'—ಅವರ ಹಿರಿಯ ವಯಸ್ಸಿನ ಕುತೂಹಲ, ರಸಿಕತೆಗಳನ್ನು ತಿಳಿಸುವ, 'ಗಂಟೆಗಟ್ಟಲೆ ಕಲಸಿದರು ಕೈ / ಬಂದರಿಪ್ಪತ್ತು ಹೋದರಿಪ್ಪತ್ತು ನ.ಪೈ.' ಎಂಬ ಮಾತುಗಳಲ್ಲಿ ಅವರ ಜೀವನ ಚಿತ್ರವನ್ನು ಕವಿ ಹಿಡಿದಿಡುತ್ತಾರೆ. 'ಚಣಕ್ಕಿಷ್ಟು ಚಳಿ ನೂಲು, ಒಂದಿಷ್ಟು ಹೂ ಬಿಸಿಲು / ಹೊರಗೆ ಕಚಪಿಚ ಕೆಸರು / ಒಳಗೆ ಬೆಚ್ಚಗೆ ಸೂರು' ಎಂದು ಮಾಸ್ತಿಯವರ ವ್ಯಕ್ತಿತ್ವವನ್ನು ಕಡೆಯುತ್ತಾರೆ. ತಮ್ಮ ಸುತ್ತಲಿನ ಎಲ್ಲ ಗೊಂದಲ ಗಮ್ಮತ್ತುಗಳನ್ನು ನಿರ್ಲಿಪ್ತತೆಯಿಂದಲೇ ನೋಡಿ ಬದುಕುವ ಮಾಸ್ತಿಯವರ ಮನಃಸ್ಥಿತಿಯನ್ನು ಕವಿ ನಿಸಾರರು '...ಕಾಲಿಗೊತ್ತಿದ ಗಾಜ ಚೂರು ದೂರಕೆ ಎಸೆದು / ಸಾಗುವರು ಸದ್ದಿರದೆ ಚಂದ್ರನಂತೆ / ಗಂಭೀರವಾಗಿ ಕರ್ತವ್ಯದೆಚ್ಚರಿನ ಸನ್ನೆಯಂತೆ' ಎಂದು ಚಿತ್ರಿಸುತ್ತಾರೆ.

ನಿಸಾರರು 'ಶ್ರೀ ಪುರಂದರದಾಸರು', 'ನೆಹರೂ' ಮುಂತಾದ ವ್ಯಕ್ತಿಗಳ ಚಿತ್ರವನ್ನು ತಮ್ಮ ಕವನಗಳಲ್ಲಿ ಕೊಟ್ಟಿದ್ದಾರೆ. ಪ್ರತಿಯೊಬ್ಬರ ಜೀವನವನ್ನು ಪ್ರೀತಿಯಿಂದಲೇ ನೋಡುವ ನಿಸಾರರ ಮನಸ್ಸು, ತಾವು ಆರಿಸಿಕೊಂಡ ವ್ಯಕ್ತಿಯ ಬದುಕನ್ನು ಕಾವ್ಯವಾಗಿಸುವಲ್ಲಿ ತಾಳುವ ಆತ್ಮೀಯತೆಯಿಂದಾಗಿಯೇ ಕವನಗಳು ಇಷ್ಟವಾಗುತ್ತವೆ. ಇಂಥ ಕಡೆ ಕವಿ ಭಾವುಕನಾಗುವುದೂ ಉಂಟು.

— ೪ —

ನಿಸಾರರ 'ಕುರಿಗಳು, ಸಾರ್, ಕುರಿಗಳು' ಇಂದು ಕರ್ನಾಟಕದ ಮನೆಮಾತಾಗಿದೆ. ಅದರಲ್ಲಿರುವ ಗೇಯತೆಯ ಅಂಶದ ಜೊತೆಗೆ, ಸದ್ಯದ ಭಾರತೀಯ ಬದುಕನ್ನು ಅದು ವಿಡಂಬಿಸುವ ರೀತಿಯಲ್ಲಿರುವ ಹಾಸ್ಯದಿಂದಾಗಿ ಅತ್ಯಂತ ಪ್ರಸಿದ್ಧವಾಗಿದೆ. ನಿಸಾರರ ಮೊದಲ ಸಂಕಲನದಲ್ಲಿ ವಿಡಂಬನೆಯ ಪ್ರವೃತ್ತಿ ಇಲ್ಲ. ಆದರೆ 'ನೆನೆದವರ ಮನದಲ್ಲಿ' ಸಂಕಲನ ಪ್ರಕಟವಾಗುವ ಹೊತ್ತಿಗೆ ನಿಸಾರರಲ್ಲಿ ವಿಡಂಬನ ಪ್ರವೃತ್ತಿ ಜಾಗೃತವಾಗಿ 'ಸುಮುಹೂರ್ತ'ದಲ್ಲಿ ಅದು ದಟ್ಟವಾಗಿ ವ್ಯಾಪಿಸಿಕೊಂಡಿದೆ. ಮುಂದಿನ ನಿಸಾರರ ಎಲ್ಲ ಸಂಕಲನಗಳಲ್ಲೂ ವಿಡಂಬನ ಕವನಗಳಿದ್ದು, ಅವುಗಳಿಗೆ ತಮ್ಮದೇ ಆದ ವೈಶಿಷ್ಟ್ಯ, ವೈವಿಧ್ಯ ಮತ್ತು ಮಹತ್ವವಿದೆ.

ಒಬ್ಬ ಕವಿಗೆ ವಿಡಂಬನ ಶೈಲಿ ಅನಿವಾರ್ಯವೆ? ಪ್ರತಿಯೊಂದು ವಸ್ತುವನ್ನೂ ವ್ಯಕ್ತಿ

ಯನ್ನೂ ವಿಡಂಬನೆ ಮಾಡಲು ತೊಡಗಿದರೆ ಅದು ಕಾವ್ಯ ರೂಪದಲ್ಲಿ ಹೊರ ಹೊಮ್ಮಿದಾಗ—ಸತ್ಯದ ತೀವ್ರತೆ ಕಡಿಮೆ ಆಗುವುದಿಲ್ಲವೆ? ಓದುಗನಿಗೆ ವಿಡಂಬನೆಯಿಂದ ಸಿಗುವ ಮಾನಸಿಕ ಖುಷಿಯಿಂದ ತೃಪ್ತನಾಗಿ ಅದರಲ್ಲಿ ಇರುವ ಧ್ವನಿಯನ್ನು ಗುರುತಿಸಲು ವಿಫಲನಾಗುವುದಿಲ್ಲವೆ?—ಇಂಥ ಪ್ರಶ್ನೆಗಳು ಏಳುವುದು ಸಹಜ. ಕಾವ್ಯವನ್ನು ರಚಿಸಲು ಆರಂಭಿಸಿದಾಗ ಕವಿಯಲ್ಲಿದ್ದ ಆಸೆ, ಆದರ್ಶ, ಸಮಾಜದಿಂದ ಬಯಸುತ್ತಿದ್ದ ಪ್ರಾಮಾಣಿಕತೆ—ಇವುಗಳಿಗೆ ಪೆಟ್ಟುಬಿದ್ದಾಗ ಕವಿ ಹೃದಯ ಘಾಸಿಗೊಳ್ಳುತ್ತದೆ. ಸಮಾಜವನ್ನು ತಿದ್ದಬೇಕೆಂಬ ಹಾಗೂ ಓದುಗರಿಗೆ ಪರಿಸರದ ಟೊಳ್ಳುತನವನ್ನು ಅರಿವು ಮಾಡಿಕೊಡ ಬೇಕೆಂಬ ಕವಿಯಲ್ಲಿರುವ 'ಸಂತ' ಜಾಗೃತನಾಗುತ್ತಾನೆ. ಈ ವಿಚಾರವಂತ ಮನಸ್ಸಿನ ಅಭಿವ್ಯಕ್ತಿಗಳಲ್ಲಿ ವಿಡಂಬನೆಯೂ ಒಂದು. ಆಚಾರ-ವಿಚಾರಗಳಲ್ಲಿ ಕಂದಕವೇರ್ಪಟ್ಟಾಗ ಆ ಬದುಕು ವಿಡಂಬನೆಗೆ ವಸ್ತುವಾಗುತ್ತದೆ. ನಿಸಾರರ ಎಲ್ಲ ವಿಡಂಬನ ಪದ್ಯಗಳಲ್ಲೂ ಈ ಢೋಂಗಿತನವನ್ನು, ಸ್ವಂತಿಕೆಯಿಲ್ಲದ ಗುಲಾಮ ಬದುಕನ್ನು, ಸ್ವಾರ್ಥ ರಾಜಕಾರಣಿಗಳ ಗೋಮುಖವ್ಯಾಘ್ರತೆಯನ್ನು, ಧೀಮಂತರ ದ್ವಂದ್ವತೆಯನ್ನು, ಪರ ಸಂಸ್ಕೃತಿಯ ವ್ಯಾಮೋಹದಿಂದ ತಮ್ಮತನವನ್ನು ಕಳೆದುಕೊಳ್ಳುತ್ತಿರುವ ಹೊಸ ಜನಾಂಗವನ್ನು ಕುರಿತ ವಿಡಂಬನೆಯಿದೆ. ಈ ವಿಡಂಬನೆಯ ಹಿಂದೆ ಬದುಕನ್ನು ಹಸನಾಗಿಸಬೇಕೆಂಬ ಕಳಕಳಿಯಿದೆ; ಬದುಕು ಹೀಗಾಯಿತಲ್ಲಾ ಎಂಬ ನೋವಿದೆ, ವಿಷಾದವಿದೆ.

ನಮ್ಮ ದೇಶದ ಸ್ವಾತಂತ್ರ್ಯೋತ್ತರದ ರಾಜಕಾರಣಿಗಳನ್ನು ಕುರಿತು ನಿಸಾರರು ಬರೆಯುತ್ತಾರೆ. 'ಕುರಿಗಳು, ಸಾರ್, ಕುರಿಗಳು'[27] ಕವನದ ಪ್ರಾರಂಭದಲ್ಲಿ 'ಅವರು ಇವರು ನಾವುಗಳು' ಹೇಗೆ 'ತಲೆ' ಕಳೆದುಕೊಂಡ ಕುರಿಗಳಾಗಿ ಬಿಟ್ಟಿದ್ದೇವೆಂಬುದನ್ನು ಹೇಳುತ್ತ, ಮುಂದುವರಿದು ನಮ್ಮ 'ಕಾಯ್ವ ಕುರುಬರ' ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. ನಿಸಾರರು ಚಿತ್ರಿಸುವ 'ಅವನ' ವ್ಯಕ್ತಿತ್ವವೇ ತಲೆಯಿಲ್ಲದ್ದು, ಅವನು 'ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟು ಒತ್ತುವ'ಷ್ಟು ಬುದ್ಧಿವಂತ. ಇಂಥವರಿಂದ ನಮ್ಮ ದೇಶದಲ್ಲಿ 'ಕಟುಕ' ತಳವೂರಿದನೆಂದು ಕವಿಯ ವಿಷಾದದ ಹಳಹಳಿಕೆ. ಆ ಕಟುಕನನ್ನು ಗುರುತಿಸಿಕೊಳ್ಳಲಾರದೆ, ಅವನ ಮಚ್ಚನ್ನೇ ನೆಕ್ಕುತ್ತಿರುವ ನಮ್ಮ ತಲೆಯಿಲ್ಲದ 'ಕುರಿ' ಬದುಕನ್ನು ನಿಸಾರರು ಹಿಡಿದಿಡುತ್ತಾರೆ. ಇದೇ ವಿಡಂಬನ ಭಾವ 'ಶ್ರೀ ಸಾಮಾನ್ಯನ ಪ್ರತಿನಿಧಿ'[28]ಯಲ್ಲೂ ಸಾಗುತ್ತದೆ. 'ಮೈಯೆಲ್ಲ ಬರಿ ಹೊಟ್ಟೆಯೆ ತಲೆಯನೆಲ್ಲ ಮೇದು', 'ಇವನೂ ಸಹ ನಮ್ಮವನೇ'—ಎಂಬ ಮಾತುಗಳು ನಮ್ಮ ಪ್ರತಿನಿಧಿಗಳ ಸ್ಪಷ್ಟ ಚಿತ್ರವನ್ನು ತಂದು ಕೊಡುತ್ತವೆ. ಅವರ ಬುದ್ಧಿಗೇಡಿತನವನ್ನು ಸಮರ್ಥವಾಗಿ ವಿಡಂಬಿಸುತ್ತವೆ.

ನಿಸಾರರು 'ಸ್ವಯಂಸೇವೆಯ ಗಿಳಿಗಳು'[29] ಕವನದಲ್ಲಿ ನಗರ ಬದುಕಿನ ಯುವ ಜನಾಂಗದ ಬಗ್ಗೆ ಬರೆಯುತ್ತಾರೆ. ಈ ಯುವ ಜನಾಂಗವನ್ನು ಕವಿ 'ಸ್ವದೇಶಿ ನಾಲಗೆಯ ವಿದೇಶಿ ಉಚ್ಚಾರಣೆಯ / ಸ್ವಾತಂತ್ರ್ಯೋತ್ತರ ವಿಚಿತ್ರ ತಳಿಗಳು' ಎಂದು ಪರಿಚಯಿಸುತ್ತಾರೆ.

27. ಅಯ್ದ ಕವಿತೆಗಳು, ಪು. ೧೯.

28. ಅದೇ, ಪು. ೫೩.

29. 'ಸ್ವಯಂಸೇವೆಯ ಗಿಳಿಗಳು', ಪು. ೪೦.

ಸದಾ ವಿದೇಶಿ ವಸ್ತು, ವಿದ್ಯೆಗಳನ್ನು ಬಯಸಿ ಸ್ವಂತಿಕೆಯನ್ನು ಕಳೆದುಕೊಳ್ಳುವ ಇವರ ತಂದೆ-ತಾಯಿಗಳು ಕೂಡ ಭ್ರಷ್ಟ ವ್ಯವಸ್ಥೆಯ ಸಂಕೇತಗಳಾಗಿ ಚಿತ್ರಿತವಾಗಿದ್ದಾರೆ.

'—ಇಂಥವರ ಅಪರೂಪದ ಫಲಗಳಿವು;
ಪರ ಬೀಜ ಕನಸಿ, ಸಸಿ ನಿಗುರದ ಹತಾಶ ನೆಲಗಳಿವು;
ಪರಂಗಿ ಅಕ್ಷರಾಭ್ಯಾಸ ಮಾಡಿ ನಾರಂಗಿ ಪಡೆಯ ಬಯಸುವ
ನಿಷ್ಫಲ ಛಲಗಳಿವು.'

ಇಲ್ಲಿ ಕವಿ ಹೊಸ ಜನಾಂಗದ ಆಳ-ಅಗಲಗಳನ್ನು ಹಿಡಿದಿಟ್ಟಿದ್ದಾರೆ. ಇತ್ತ ಭಾರತೀಯರೂ ಆಗದೆ, ಅತ್ತ ವಿದೇಶಿಯೂ ಆಗದೆ, ಕೊನೆಗೆ 'ಅನಾಥ ಬಿಲ್ಲಾಗುತ್ತಾರೆ' ಎಂದು ಕವಿ ವಿಷಾದದಿಂದ ನುಡಿಯುತ್ತಾರೆ. 'ವೈಜಯಂತಿ', 'ನಗ್ತೀರ ನನ್ ಹಿಂದೆ?', 'ಧೀಮಂತರು'—ಇವು ನಿಸಾರರ ಪ್ರಮುಖವಾದ ಇನ್ನಿತರ ವಿಡಂಬನ ಕವನಗಳು.

ನಿಸಾರ್ ಅವರ ಶೈಲಿಗೆ ನಯವಿದೆ; ನಾಜೂಕಿದೆ. ಶೈಲಿಯ ನಯದಿಂದಾಗಿ ನಿಸಾರ್ ಆತ್ಮೀಯರಾಗುತ್ತಾರೆ. ನಿಸಾರ್, ವಿಡಂಬನೆಯ ಮೂಲಕ ವ್ಯವಸ್ಥೆಯ ಕೊಳಕು ಹೋಗಿ, ಸಮಾಜ ಪರಿಶುದ್ಧವಾಗಬೇಕೆಂದು ಆಶಿಸುತ್ತಾರೆ.

— ೫ —

ನಿಸಾರ್ 'ನಿತ್ಯೋತ್ಸವ' ಕ್ಯಾಸೆಟ್ ಪ್ರಕಟಿಸುವುದರ ಮೂಲಕ ಕನ್ನಡ ಕೇಳುಗರಲ್ಲಿ ಹೊಸ ಆಯಾಮವೊಂದನ್ನು ತೆರೆದರು. ಕನ್ನಡದಲ್ಲಿ ಸುಗಮ ಸಂಗೀತ ಹೆಚ್ಚು ಪ್ರಚಾರಕ್ಕೆ ಬಂದಿತು. ಕನ್ನಡ ಜನತೆ ಮತ್ತೆ ಭಾವಗೀತೆಗಳತ್ತ ಮನಸ್ಸು ಮಾಡಿದರು. ಭಾವಗೀತೆಯ ಸೊಗಸು, ಸುಕುಮಾರತೆ, ಮಾರ್ದವತೆಗಳಿಗೆ ಮಾರು ಹೋದರು. 'ನಿತ್ಯೋತ್ಸವ'ದ ಅನಂತರ ಅನೇಕ ಹಿರಿ-ಕಿರಿಯ ಕವಿಗಳ ಧ್ವನಿ ಸುರುಳಿಗಳು ಹೊರಬಂದವು. ಕನ್ನಡ ಸಹೃದಯರು ತಮ್ಮ ಮನೆಮನೆಯಲ್ಲಿ ಭಾವಗೀತೆಗಳನ್ನು ಕೇಳತೊಡಗಿದರು. ತಮ್ಮ ಟೇಪ್ ರೆಕಾರ್ಡರ್‌ಗಳಲ್ಲಿ, ರೇಡಿಯೋಗಳಲ್ಲಿ ಬರಿಯ ಚಿತ್ರಗೀತೆ, ಪಾಶ್ಚಾತ್ಯ ಸಂಗೀತವನ್ನು ಮಾತ್ರ ಕೇಳುತ್ತಿದ್ದ ಕನ್ನಡ ಜನತೆ ಸುಗಮ ಸಂಗೀತದ ಕಡೆ ತಿರುಗಿದ್ದು, ಅವರ ಅಭಿರುಚಿಯ ಬೆಳವಣಿಗೆಯ ಸೂಚಕ. ಹೀಗೆ ಕನ್ನಡಿಗರ ಅಭಿರುಚಿಯ ಬೆಳವಣಿಗೆಯ ದಾರಿಯಲ್ಲಿ ನಿಸಾರರ 'ನಿತ್ಯೋತ್ಸವ' ಧ್ವನಿ ಸುರುಳಿಯ ಪಾತ್ರ ದೊಡ್ಡದು. 'ನಿತ್ಯೋತ್ಸವ'ದ ಯಶಸ್ಸಿಗೆ ಕೇವಲ ನಿಸಾರ್ ಕಾರಣರಲ್ಲ. ಅದರ ಗಾಯಕ, ಸಂಗೀತ ನಿರ್ದೇಶಕ ಮೈಸೂರು ಅನಂತಸ್ವಾಮಿಯವರ ನಿರಂತರ ಪರಿಶ್ರಮ, ಪ್ರಚಾರಗಳು ಸಹ ಪ್ರಮುಖ ಪಾತ್ರ ವಹಿಸಿವೆ. ಭಾವಮಯ ಸಾಲು ಸಾಲುಗಳಲ್ಲಿರುವ ಅರ್ಥ ಮಾಧುರ್ಯವನ್ನು ಕೇಳುಗರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಪ್ರತಿಭೆ ಅನಂತಸ್ವಾಮಿಯವರ ಕಂಠದ್ದು.

ನಿಸಾರರ 'ಮನಸು ಗಾಂಧಿ ಬಜಾರು' ಮತ್ತು 'ನೆನೆದವರ ಮನದಲ್ಲಿ' ಕವನ ಸಂಕಲನಗಳಲ್ಲಿ ಅನೇಕ ಭಾವಗೀತೆಗಳಿವೆ. ಅವುಗಳದೇ ಒಂದು ಸೊಗಸು, ರಸಾನುಭವ.

'ಅರಗಿಳಿ, ಕೋಗಿಲೆ, ನವಿಲುಗಳೆ,
ಹೆಸರಿಲ್ಲದ ದನಿ ಗುರುತುಗಳೆ,

ಹಾಡದಿರಿ, ಬಂದಾಡದಿರಿ,
ಎದೆಯೊಳಗಿರುವುದ ತೋಡದಿರಿ.'[30]

'ಹೊಮ್ಮಿತೇಕೆ ಕಂಬನಿ?
ಹೇಳು, ಹೇಳೆ ಕಮಲಿನಿ.'[31]

'ಮರುಗುವೆನು ಎಲೆ ಚೆಲುವೆ, ನಿನ್ನ ದುಃಸ್ಥಿತಿಗಾಗಿ,
ಒದಗಿದೀ ಗತಿಗಾಗಿ,
ನಿನಗಾಗಿ'[32]

—ಇವೇ ಮುಂತಾದ ಸುಂದರ ಭಾವಗೀತೆಗಳನ್ನು ಬರೆದು ಪಳಗಿದ ಕೈ 'ನಿತ್ಯೋತ್ಸವ'ದಲ್ಲಿನ ಹೃದಯಸ್ಪರ್ಶಿ ಕ್ಯಾಸೆಟ್‌ನ ಜನನಕ್ಕೆ ಕಾರಣವಾಯಿತು. ಈ ಪ್ರಭಾವದಿಂದಾಗಿ ಅನೇಕ ತರುಣರು, ನಿಸಾರರ ಸಮಕಾಲೀನರು ಭಾವಗೀತೆಗಳನ್ನು ಬರೆಯಲು ಆರಂಭಿಸಿದರು. ಈ ಬಗೆಯಿಂದ ಕನ್ನಡಕ್ಕೆ ನಿಸಾರ್ ನೀಡಿದ ಚಿರಂತನ ಕೊಡುಗೆಯಿದು. ನಿಸಾರ್ ಒಂದೆಡೆ ಹೀಗೆ ಹೇಳುತ್ತಾರೆ: 'ಭಾವಗೀತೆಯ ಮೂಲಕ ಕವಿ ಜನರಿಗೆ ಹತ್ತಿರದವನಾಗಿ ಅವರ ಗಮನವನ್ನು ತನ್ನ ಗಂಭೀರ ಕಾವ್ಯದ ಕಡೆಗೂ ಸೆಳೆಯುವುದು ಸಾಧ್ಯವಾಗಬಹುದು.'[33] ಮೂಲತಃ ಭಾವಗೀತೆಗಳಲ್ಲಿನ ರಮ್ಯಗುಣ ನಿಸಾರರ ಎಲ್ಲ ಕವನಗಳಲ್ಲಿರುವುದನ್ನು ಕಾಣಬಹುದು. ನವ್ಯದ ಪ್ರಭಾವದಿಂದ ಬರೆದಾಗಲೂ ಪ್ರಕೃತಿಯಲ್ಲಿ ಲೀನವಾಗಿ ಆನಂದಿಸುವ ತನ್ಮಯತೆಯನ್ನು ನಿಸಾರರು ಎಂದೂ ಕಳೆದುಕೊಂಡಿಲ್ಲ. ಈ ಕಾರಣದಿಂದಾಗಿ ನಿಸಾರರ ಕಾವ್ಯ ಜನತೆಗೆ ಎಂದೂ ಶುಷ್ಕವಾಗಿ ಕಂಡಿಲ್ಲ.

— ೬ —

ಕಥನ ಕವನಗಳು ನವ್ಯರಲ್ಲಿ ಬರಲಿಲ್ಲ. ಆದರೆ ಕಥನ ಕವನಗಳ ಧಾಟಿ ಮತ್ತು ರೂಪವನ್ನು ಕೆ. ಎಸ್. ನರಸಿಂಹಸ್ವಾಮಿ ಮತ್ತು ಕೆ. ಎಸ್. ನಿಸಾರ್ ಅಹಮದ್ ಅವರು ಉಳಿಸಿ ಬೆಳೆಸಿದರು. ಇಡೀ ನರಸಿಂಹಸ್ವಾಮಿಯವರ ಕಾವ್ಯ ಸಾಂಸಾರಿಕ ಕಥನ ಕವನಗಳ ರೂಪದಲ್ಲಿ ಅಡಕಗೊಂಡಿದೆ. ನರಸಿಂಹಸ್ವಾಮಿ ತಮ್ಮ ಸುಕುಮಾರ ಶೈಲಿಯಲ್ಲಿ ಬದುಕನ್ನು ಅನ್ವೇಷಣೆ ಮಾಡುವುದು ಇಂಥ ಕವನಗಳಲ್ಲೇ. ಅವರ ಒಂದೊಂದು ಕವನವೂ ಬದುಕಿನ ಒಂದೊಂದು ಘಟನೆಯನ್ನು ಚಿತ್ರಿಸುತ್ತ ಸಾಗುತ್ತದೆ.

ನಿಸಾರ್ ಅವರ ಕಥನ ಕವನ ಶೈಲಿ ಕುವೆಂಪು, ಮಾಸ್ತಿ ಅವರಿಗೆ ಹತ್ತಿರ. ನಿಸಾರರ ಇತ್ತೀಚಿನ ಕವನಗಳ ರೂಪ ಕಥನ ಕವನಗಳದ್ದು. ಅವರ, 'ಅಂತರ', 'ಅಮೇರಿಕ, ಅಮೇರಿಕ', 'ಅಮ್ಮ, ಆಚಾರ, ನಾನು', 'ರಾಮನ್ ಸತ್ತ ಸುದ್ದಿ', 'ಮೃಗಾಯಣ', 'ಪರ್ಣಾಶ್ರಮ', 'ನಮ್ಮ ಬಡಾವಣೆಯ ಕಥೆ', 'ಬೀದಿಯ ಮಾರಿ'—ಈ ಕವನಗಳು ಇದಕ್ಕೆ ಉತ್ತಮ ಉದಾಹರಣೆಗಳು. ಈ ಕಥನ ಕವನದ ತಂತ್ರದಿಂದಾಗಿ ಯಾವುದೋ ಒಂದು

30. 'ಹಕ್ಕಿಗಳಿಗೆ'—ಮನಸು ಗಾಂಧಿ ಬಜಾರು, ಪು. ೬.
31. 'ಹೊಮ್ಮಿತೇಕೆ ಕಂಬನಿ'—ಅದೇ, ಪು. ೧೧.
32. 'ಮರಗುವೆನು ಎಲೆ ಚೆಲುವೆ'—ನೆನೆದವರ ಮನದಲ್ಲಿ, ಪು. ೩೮.
33. ನಿಸಾರ್ ಅಹಮದ್ ಸಂದರ್ಶನ—'ಪ್ರಜಾವಾಣಿ' ಸಾಪ್ತಾಹಿಕ ಪುರವಣಿ, ದಿನಾಂಕ ೧-೪-೧೯೮೪.

ಘಟನೆಯನ್ನೋ ಸಂನಿವೇಶವನ್ನೋ ವಿವರಿಸುತ್ತಾ ವಸ್ತುನಿಷ್ಠವಾಗಿ ಬದುಕನ್ನು ಇಣುಕಿ ನೋಡುವ, ಹುಡುಕುವ ಪ್ರಯತ್ನ ಸಾಧ್ಯವಾಗಿದೆ. `ಅಂತರ' ಕವನ ಪ್ರಾರಂಭವಾಗುವ ಬಗೆಯೇ ಇದಕ್ಕೆ ಸ್ಪಷ್ಟ ನಿದರ್ಶನ:

'ಗಾಂಧೀಜಿ ತೀರಿಕೊಂಡ ದಿನ, ಅಪ್ಪ ಜಮಾಬಂದಿ ಮುಗಿಸಿ
ಮಾರನಹಳ್ಳಿಯಿಂದ ಮರಳಿದಾಗ ನಡು ರಾತ್ರಿ.
ಪಟೇಲರ ಜೊತೆ ಬಂದ ಅವರ ಗುರುತು ಹತ್ತಿದ್ದು
ದಪ್ಪ ಧ್ವನಿಯಿಂದ. ಸಿಂಧೂ ನಾಗರಿಕತೆಯ ಪಾಠ
ಗಟ್ಟಿ ಮಾಡುತ್ತಿದ್ದವ ಎದ್ದು ಕದ ತೆರೆದಾಗ
ಕಣ್ಸೆಳೆದದ್ದು ಪಟ್ಟೆ ಪಟ್ಟೆಯ ಕೋಟು, ಹ್ಯಾಟು:
ಹೊಸಿಲು ದಾಟಿದಾಗ ಹಣೆಯ ಉಬ್ಬಿದ ನರ.'[34]

—ಈ ಪದ್ಯದ ರೂಪ ಮತ್ತು ಕಥನ ಶೈಲಿಗೂ ಕುವೆಂಪು ಅವರ ಕಥನ ಕವನಗಳ ರೂಪ, ಶೈಲಿಗಳಿಗೂ ಅಂಥ ಭಿನ್ನತೆಯಿಲ್ಲ.

ಪದ ಬಳಕೆ, ರಚನೆಯ ಉದ್ದೇಶ ಭಿನ್ನವಾದರೂ ನವೋದಯದ ಕಾಲದ ಈ ಅಪರೂಪವಾದ ಕಾವ್ಯ ರೂಪವೊಂದನ್ನು ನಿಸಾರ್ ರೂಢಿಸಿಕೊಂಡಿದ್ದು ಬಹಳ ಪ್ರಮುಖ ಅಂಶ. ಪದ್ಯಗಳಿಗೆ ಇದರಿಂದ ಗದ್ಯದ ಛಾಯೆ ಬರುವುದು ನಿಜ. ಮಾತುಗಳು ವಾಚ್ಯತೆಯ ಕಡೆ ಹೆಚ್ಚು ವಾಲುವುದು ಕೂಡ ನಿಜ. ಆದರೆ ಸಂವಹನ ಕ್ರಿಯೆಯಲ್ಲಿ ಮಾತ್ರ ಬೇರೆ ಯಾವುದೇ ಕಾವ್ಯ ರೂಪಕ್ಕಿಂತ ಮಿಗಿಲಾಗಿ ಯಶಸ್ವಿಯಾಗುತ್ತದೆ. ಗದ್ಯ ಗುಣದಿಂದಾಗಿ ಬರುವ ಗಾಂಭೀರ್ಯ ಕವನವನ್ನು ಯಶಸ್ವಿಗೊಳಿಸಲು ಸಹಕಾರಿಯಾಗುತ್ತದೆ.

ಭಾರತೀಯ ಸಂದರ್ಭದಲ್ಲಿ ಎರಡು ವಿಭಿನ್ನ ಧರ್ಮಗಳ ಮಧ್ಯೆ ನಿಂತು ಬರೆಯುತ್ತಿರುವ ನಿಸಾರ್ ಅಹಮದ್ ತಮ್ಮ ಕಾವ್ಯ ಜೀವನದುದ್ದಕ್ಕೂ ನಡೆಸಿರುವ ಹೋರಾಟದಲ್ಲಿ ಕನ್ನಡ ಭಾಷೆಗೆ ಹೊಸ ಕಸುವನ್ನು ತಂದುಕೊಟ್ಟರು. ಮೇಲ್ನೋಟಕ್ಕೆ ಅತಿಯಾಗಿ ಮಾತನಾಡುವಂತೆ ಭಾಸವಾಗುವ ಈ ಕವಿ ಭಾಷೆಯನ್ನು ತಮ್ಮ ಅಭಿವ್ಯಕ್ತಿಯಲ್ಲಿ ಬಳಸಿಕೊಳ್ಳುವಾಗ ಅದಕ್ಕೆ ಹೊಸ ಹೊಳಪನ್ನು, ಜೀವವನ್ನು ಕೊಡುತ್ತಾರೆ. ಅನೇಕ ಹಿಡಿತಗಳಲ್ಲಿ ಸಿಲುಕಿ ಕ್ಲೀಷೆಯಾಗಿ ಹೋಗುತ್ತಿರುವ ಬೆಂಗಳೂರು ಕನ್ನಡವನ್ನು ಉರ್ದು, ಪರ್ಶಿಯನ್, ಅರಬ್ಬಿ, ಇಂಗ್ಲಿಷ್ ಪದಗಳಿಂದ ಹೊಸ ಅರ್ಥ ಪಡೆದುಕೊಳ್ಳುವಂತೆ ಅವರು ಮಾಡಿದರು. ಅನೇಕ ಹೊಸ ಪದಗಳನ್ನು ಸೃಷ್ಟಿಸಿದರು. `ಇಸು' ಪ್ರತ್ಯಯ(ಆಖ್ಯಾತ ಪ್ರತ್ಯಯ) ವನ್ನು ಬಳಸಿ ಅನೇಕ ಕ್ರಿಯಾಪದಗಳನ್ನು ಬಳಕೆಗೆ ತಂದರು. ಉದಾಹರಣೆಗೆ ಈ ಪದ ಪುಂಜಗಳನ್ನು ನೋಡಬಹುದು: ಕಾರವಾನ, ಕರಾಮತ್ತು, ಪುಟಗೋಸಿ, ಜಮಾಬಂದಿ, ಬಿರಿಯಾನಿ, ಮೆಹರ್‌ಬಾನಿ, ಖೋತ, ಖೋಜ, ನಸರಾಣಿ, ತರಾವರಿ, ಥಾನು, ಝಡತಿ, ತೂಫಾನು, ಬಿಕನಾಶಿ, ರಿವಾಜು, ನಿಕಾ, ಮಸ್ತು, ಕವಾಯ್ತು ಇತ್ಯಾದಿ: ಕುಚಾಯಿಸು, ವೈವಿಧ್ಯಿಸು, ಕಾರಂಜಿಸು, ಬಯಾನಿಸು, ವಸಂತಿಸು, ಥಂಡಿಸು—ಇತ್ಯಾದಿ ಇತ್ಯಾದಿ. ಇಂಗ್ಲಿಷ್ ಪದಗಳನ್ನು ಉದಾಹರಿಸುವ ಆವಶ್ಯಕತೆಯಿಲ್ಲ.

34. ಸ್ವಯಂಸೇವೆಯ ಗಿಳಿಗಳು, ಪು. ೨೨.

ಸುದೀರ್ಘ ಕಾಲಾವಧಿಯಿಂದ ಕಾವ್ಯರಚನೆ ಮಾಡುತ್ತಿರುವ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಕಾವ್ಯದ ಅಧ್ಯಯನದಲ್ಲಿ ಇದೊಂದು ಪ್ರಯತ್ನ. ಕನ್ನಡದ ಜನ ಮನ್ನಣೆಯ ಕವಿಗಳಲ್ಲಿ ಪ್ರಮುಖರಾದ ನಿಸಾರ್ ಎಂದೂ ಓದುಗರೊಡನೆ ಮಾತನಾಡು ವುದನ್ನು ನಿಲ್ಲಿಸಿಲ್ಲ. ಜನತೆಯಿಂದ ದೂರವಾಗದ ಗುಣದಿಂದಾಗಿ —ಇತರರೊಂದಿಗೆ ಹೋಲಿಸಿದಾಗ—ನಮ್ಮ ಸಾಂಸ್ಕೃತಿಕ ಸಂದರ್ಭದ ಬಹು ಮುಖ್ಯ ಕವಿಯಾಗುತ್ತಾರೆ ಕೆ. ಎಸ್. ನಿಸಾರ್ ಅಹಮದ್.

ಬುದ್ಧಿಯ ಓಟ ವೇಗದ್ದು ನಿಜ, ಆದರೆ ಅದು ಕ್ರಮಿಸುವ ದೂರ ಕಡಮೆ. ಬುದ್ಧಿ ನೂರು ಮೀಟರ್ ಓಟದಂತೆ. ಯುಕ್ತಿ ತರ್ಕ ಉಪಾಯಗಳಿಂದ ಚಮತ್ಕಾರ ಸಾಧ್ಯ, ಸಾಕ್ಷಾತ್ಕಾರವಲ್ಲ. ಅದಕ್ಕೆ ಹೆಚ್ಚಿನ ಹೃದಯವಂತಿಕೆ ಸಂವೇದನೆಗಳು ಅಗತ್ಯ. ಸ್ಥಿರವೂ ನಿರಂತರವೂ ಆದ ಮನೋದಾರ್ಢ್ಯ ಹಾಗೂ ತೀವ್ರತೆಗಳಿಂದ ಆರ್ಜಿಸಿಕೊಳ್ಳಬೇಕಾದ ಶಿಕ್ಷಣ ಸಿದ್ಧಿ ಅದು: ಸಾವಕಾಶ ಸಾವಧಾನಗಳ ಮ್ಯಾರಥಾನ್ ಓಟ. ಅಂತಃಕರಣದ ಈ ದೀರ್ಘ ದೂರ ಕ್ರಮಣ ಸಾಹಸ ಯಾತ್ರೆಗೆ ಸಮ. 'ಯೋ ವೈ ಭೂಮಾ ತತ್ಸುಖಂ, ನಾಲ್ಪೆ ಸುಖಮಸ್ತಿ'. ಬುದ್ಧಿಯ ಗ್ರಹಿಕೆ ನರಹರಿರಾಯನ ದಿಬ್ಬ, ಹೃದಯ ಸಂವೇದನೆ ಹಿಮಾಲಯ ಶಿಖರ.

(ಬುದ್ಧಿ ಮತ್ತು ಹೃದಯ)

ಬುದ್ಧಿ ಕೂದಲು ಸೀಳುವ, ಬಿಡಿಯಾಗಿ ವಿಘಟಿಸಿ ನೋಡುವ ಗುಣವುಳ್ಳದ್ದು. ದ್ವಂದ್ವ ದ್ವೈತಗಳೇ ಅದರ ಜಾಯಮಾನ. ಮರಗಳನ್ನು ಎಣಿಸಹೋಗಿ ಕಾಡಿನ ಸ್ವರೂಪ ಮರೆಯಾಗುವಂತೆ ಅದರ ಕೆಲಸ. ಪರಿಕರದ ಅನೇಕಗಳಿಂದ ಪರಿಪಾಕದ ಏಕವನ್ನು ಸಮಗ್ರವಾಗಿ ದರ್ಶಿಸಿ ಸಂವೇದಿಸುವ ಕೆಲಸ ಹೃದಯದ್ದು. ಜೀವ, ದೇಹಗಳು ಒಂದೇ ಎಂಬ ಅಪ್ರತ್ಯೇಕ ಭಾವ ಅದರದ್ದು. ಮೂಲತಃ ಇಡಿಯಾದ ತಲೆ ಉಪಾಧಿಯ ಬೈತಲೆಯ ದೆಸೆಯಿಂದ ಎರಡಾಗಿ ದ್ವಂದ್ವವಾಗಿ ಕಾಣಿಸುತ್ತದೆ ಎಂಬ ತತ್ತ್ವದ ಗ್ರಹಿಕೆ ಹೃದಯಾನುಭವ ಸಿದ್ಧ; ಭಾವ ಮಾತ್ರ ಸಂವೇದ್ಯ.

(ಬುದ್ಧಿ ಮತ್ತು ಹೃದಯ)



ನಿಸಾರರ ಪ್ರಕೃತಿ ವೈವಿಧ್ಯವನ್ನು ಪ್ರತಿನಿಧಿಸುವ ಕವಿತೆಗಳು

♦ ಪ್ರೊ. ಮಾಲತಿ ಪಟ್ಟಣಶೆಟ್ಟಿ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನವನ್ನು 'ಸುವರ್ಣ ಯುಗ'ವೆಂದು ಕರೆದರೆ ಅತಿಶಯೋಕ್ತಿಯಾಗ ಲಾರದು. ಈ ಯುಗದ ಒಟ್ಟು ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ನಾವು ಕಾಣುವ ವೈವಿಧ್ಯ, ವೈಪುಲ್ಯ, ಪ್ರತಿಭೆ, ಪ್ರೌಢಿಮೆ ಮತ್ತು ಭಾಷಾ ಪ್ರಯೋಗಗಳು ಹಿಂದಿನ ಶತಮಾನಗಳಲ್ಲಿ ಕಾಣ ಸಿಗಲಾರವು. ಕಳೆದ ಶತಮಾನದ ಕಾಲ ವಸುಂಧರೆಯ ಗರ್ಭ ದಿಂದ ಹೊರಹೊಮ್ಮಿದ ರತ್ನಗಳಲ್ಲಿ ಕವಿರತ್ನಗಳ ಕೊಡುಗೆ ವಿಶಿಷ್ಟವೂ, ಸಮೃದ್ಧವೂ, ಅಮೂಲ್ಯವೂ ಆಗಿದೆ. ಬೇಂದ್ರೆ, ಕುವೆಂಪು, ಪುತಿನ, ಕೆ.ಎಸ್.ನ., ಗೋಪಾಲಕೃಷ್ಣ ಅಡಿಗ, ಶಿವರುದ್ರಪ್ಪ, ಕಣವಿ—ಹೀಗೇ ಸಾಗುತ್ತದೆ ಖ್ಯಾತನಾಮ ಕವಿಗಳ ಸಾಲು. ಈ ದಿಗ್ಗಜ ಕವಿಗಳ ಅನಂತರದ ಪೀಳಿಗೆಯ ಕವಿಗಳಲ್ಲಿ ತಮ್ಮ ಅನನ್ಯ ಕಾವ್ಯ ಪ್ರತಿಭೆ, ಸಾಧನೆಗಳಿಂದಾಗಿ ಪ್ರಮುಖವಾಗಿ ಗುರುತಿಸಲ್ಪಡುತ್ತಾರೆ ಪ್ರೊ. ಕೆ. ಎಸ್. ನಿಸಾರ್ ಅಹಮದ್. ಇವರಿಗೆ ಸಂದಿರುವ ಅಗಣಿತ ಪ್ರಶಸ್ತಿಗಳಿಗಿಂತ ಕನ್ನಡಿಗರ ಮನೆ ಮನಗಳನ್ನು ತಲಪಿ ಕಾವ್ಯಪ್ರೀತಿಯನ್ನು ಹೆಚ್ಚಿಸಿದ್ದಕ್ಕೆ ಈ ಕವಿಯನ್ನು ಅಭಿನಂದಿಸಬೇಕು.

ನಿಸಾರರ ಕಾವ್ಯ ನಿರ್ಮಿತಿ ಅದ್ಭುತವೂ ಅನುಪಮವೂ ಅಪಾರವೂ ಆಗಿದೆ. ಒಂದು ಕವಿತಾ ಸಂಗ್ರಹದಿಂದ ಇನ್ನೊಂದು ಸಂಗ್ರಹಕ್ಕೆ ಬೆಳೆದು ಈಗ ಶ್ರೀಗಂಧದ ಮರವಾಗಿ ಕಾವ್ಯ ಪರಿಮಳವನ್ನು ಕನ್ನಡದ ಪರಿಸರದಲ್ಲಿ ಹಬ್ಬಿಸಿದೆ. ನಿಸಾರರನ್ನು

'ನಿತ್ಯೋತ್ಸವದ ಪ್ರಕೃತಿಯ ಕವಿ' ಎಂದು ವಿಮರ್ಶಕರು ಗುರುತಿಸುತ್ತಾರೆ. ಕಾವ್ಯ ಪ್ರೇಮಿಗಳು ಅಭಿನಂದಿಸುತ್ತಾರೆ. ಪ್ರಕೃತಿ ಹಾಗೂ ಕವಿಯ ನಡುವಿನ ಸಂಬಂಧವು ಅನನ್ಯವಾದುದು, ಅಬಾಧಿತವಾದುದು. ಪ್ರಕೃತಿಯನ್ನು ಪ್ರೀತಿಸದ ಕವಿಯೇ ಇಲ್ಲ; ಪ್ರೀತಿಸದವ ಕವಿಯಾಗಲಾರ. ಇದು ಸಾರ್ವಕಾಲಿಕ ಸತ್ಯ ಕೂಡ. ಪ್ರತಿಯೊಬ್ಬ ಕವಿ ಪ್ರಕೃತಿಯನ್ನು ಕಂಡು ತನ್ನ ಅರ್ಹತೆಗೆ ಅನುಸಾರವಾಗಿ ಹೃದಯದಲ್ಲಿ ತುಂಬಿಕೊಂಡು ಸಂವೇದನೆಗಳನ್ನು ಅಭಿವ್ಯಕ್ತಿಸಿದಾಗ ಕವಿಯಿಂದ ಕವಿಗೆ ಅದು ವಿಭಿನ್ನವೂ, ವೈಶಿಷ್ಟ್ಯಪೂರ್ಣವೂ ಆಗಿರುತ್ತದೆ. ಬೇಂದ್ರೆಯವರ ಕವಿಗಣ್ಣು ಕಂಡು ಉಂಡು ಕಾವ್ಯವಾದ ಪ್ರಕೃತಿಯು, ಕುವೆಂಪು ಅವರ ಪ್ರಕೃತಿಗಿಂತ ಭಿನ್ನವಾಗಿರುತ್ತದೆ. ಏಕೆಂದರೆ ಕವಿಯ ವೈಯಕ್ತಿಕತೆಯ ಪಡಿಯಚ್ಚುಗಳು ಭಿನ್ನವಾಗಿರುತ್ತವೆ, ವಿಶಿಷ್ಟವಾಗಿರುತ್ತವೆ. ಇದೇ ರೀತಿ ನಿಸಾರರ ಕಾವ್ಯಾಭಿವ್ಯಕ್ತಿಯಲ್ಲಿ ಮೂಡಿದ ಪ್ರಕೃತಿಯ ಹಲವು ರೂಪ ವಿನ್ಯಾಸಗಳು ಮತ್ತು ಅಭಿವ್ಯಕ್ತಿಸಿದ ಬಗೆಯನ್ನು ಅವಲೋಕಿಸಿದಾಗ ಅವರ ವ್ಯಕ್ತಿವೈಶಿಷ್ಟ್ಯದ ನಿಖರವಾದ ಛಾಪು ಎದ್ದು ಕಾಣುತ್ತದೆ. ಈ ಭಿನ್ನತೆಯಲ್ಲಿಯೇ ಕವಿಯ ಅಸ್ಮಿತೆ ಇರುವುದು. ಇಂಥ ವಿಶಿಷ್ಟ ಅಸ್ಮಿತೆಗಾಗಿಯೇ ನಿಸಾರರು ನಮಗೆ ಪ್ರಿಯ ಕವಿಯಾಗುತ್ತಾರೆ.

ಒಂದು ಸಂವೇದನಶೀಲ ಕವಿ ಮನಸ್ಸನ್ನು ಒಂದು ಮೊಟ್ಟೆಗೆ ಹೋಲಿಸಬಹುದು. ಒಳಗಿರುವ ಸಶಕ್ತ ಪ್ರತಿಭೆಗೆ ಹೊರ ಜಗತ್ತಿನ ಕಾವು, ಪ್ರೇರಣೆಗಳ ಸಂಯೋಗವಾದಾಗ, ಆ ಪ್ರತಿಭೆ ರೆಕ್ಕೆ ಬಿಚ್ಚಿದ ಹಕ್ಕಿಯಂತೆ ಮುಕ್ತ ಕವಿತೆಯಗುತ್ತದೆ. ಕವಿಯ ಸಂವೇದನಶೀಲ ಮಾನಸ ಸರಸ್ಸಿನಲ್ಲಿ ತರಂಗಗಳನ್ನು ನಿರ್ಮಿಸುವ, ಅಂದರೆ ಪ್ರೇರಣೆ ನೀಡುವ ಕೆಲಸವನ್ನು ಬಾಹ್ಯ ಜಗತ್ತಿನ ಪ್ರಕೃತಿಯಾಗಲಿ, ಸಮಾಜ ಸಂಸ್ಕೃತಿ ಇತಿಹಾಸಾದಿ ಮಾನವ ನಿರ್ಮಿತ ವಲಯಗಳಾಗಲಿ ಮಾಡುತ್ತವೆ. ನಿಸಾರರ ಕಾವ್ಯ ಸಂದರ್ಭದಲ್ಲಿ ಇಂಥ ಸ್ಫೂರ್ತಿ, ಪ್ರೇರಣೆಗಳು ದೊರೆತದ್ದು ಪ್ರಕೃತಿಯಿಂದ ಎಂದು ಸ್ವತಃ ಅವರೇ ನನಗೆ ಬರೆದ ಒಂದು ಪತ್ರದಲ್ಲಿ ಹೇಳಿದ್ದಾರೆ: 'ಪ್ರಕೃತಿ ನನ್ನ ಕಾವ್ಯ ರಚನೆಯ ಬಹು ಮುಖ್ಯ ಹಾಗೂ ನಿತ್ಯ ಆಸಕ್ತಿಯ ವಿಷಯವಾಗಿದೆ. ಅಲ್ಲದೆ, ನನ್ನ ರಚನೆಗಳ ಮೌಲ್ಯಮಾಪನದ ವೇಳೆ ಪ್ರಮುಖ ಮಾನದಂಡವೂ ಆಗುತ್ತದೆಂಬ ನಂಬಿಕೆ ನನಗಿದೆ.' ಅವರ ಈ ಸ್ವವಿಮರ್ಶೆ ಶತಸಿದ್ಧವಾಗಿದೆ ಎಂದು ಅನ್ವೇಷಿಸುತ್ತ ಬರೆದ ಪುಟ್ಟ ಲೇಖನವಿದು.

ಬೆಂಗಳೂರು, ಶಿವಮೊಗ್ಗೆಗಳ ನಿಸರ್ಗ ರಮಣೀಯ ತಾಣಗಳಲ್ಲಿ ಯುವ ಕವಿಯ ಮನದ ಮೊಗ್ಗು ಅರಳಿಕೊಂಡಿತು. ಚಂದಿರನ ಬೆಳುದಿಂಗಳು ವಿಶಾಲ ಬಯಲುಗಳಲ್ಲಿ, ಸಮುದ್ರ ಮೇಲ್ಮೈಯ ತುಂಬ ಹರಡುವಂತೆ, ದಟ್ಟ ಕಾಡಿನ ಗಿಡ ಮರ ಬಳ್ಳಿಗಳ ಸಂದಿಗೊಂದಿಗಳಲ್ಲಿ ತೂರಿಕೊಳ್ಳುವಂತೆ ಪ್ರಕೃತಿಯನ್ನು ಕುರಿತ ಇವರ ಕಾವ್ಯವು ಹಲವು ಪದ್ಯಗಳಲ್ಲಿ ನೇರವಾಗಿ ವಿಸ್ತಾರವಾಗಿ ತಾನೇ ತಾನಾಗಿ ಅಭಿವ್ಯಕ್ತಗೊಂಡರೆ, ಉಳಿದ ಬಹುತೇಕ ರಚನೆಗಳಲ್ಲಿ ವಿಭಿನ್ನ ರೂಪಗಳಲ್ಲಿ ಅಲ್ಲಿ ಇಲ್ಲಿ ಇಣುಕಿ ಹೊಮ್ಮಿ ನಿಲ್ಲುತ್ತದೆ. ಇವರ ಕಾವ್ಯದಲ್ಲಿ ಪ್ರಕೃತಿ ಬಹುಮುಖಿ, ಬಹುರೂಪಿ. ಪ್ರಕೃತಿಗೆ ಸಂಬಂಧಪಡದ ಪದ್ಯಗಳಲ್ಲೂ ಕೊನೆಯ ಪಕ್ಷ ಒಂದು ವಿಶೇಷಣ, ಒಂದು ಉಪಮೆ, ಒಂದು ರೂಪಕವಾಗಿಯಾದರೂ ಪ್ರಕೃತಿ ಮೆಲ್ಲಗೆ ಹೆಜ್ಜೆಯನ್ನಿಟ್ಟು ತನ್ನ ಇರವನ್ನು ಸ್ಥಾಪಿಸಿಕೊಳ್ಳುತ್ತದೆ.

ನಿಸಾರರ ಪ್ರಕೃತಿ ವೈವಿಧ್ಯವನ್ನು ಪ್ರತಿನಿಧಿಸುವ ಕವಿತೆಗಳದ್ದು ಒಟ್ಟು ಅವರ ಕಾವ್ಯಾಭಿವ್ಯಕ್ತಿಯಲ್ಲಿ ಸಿಂಹ ಪಾಲು. ಪ್ರಕೃತಿಯನ್ನು ನೇರವಾಗಿ ತುಂಬ ತನ್ಮಯತೆಯಿಂದ ನೋಡಿ ತಮ್ಮ ಸಂವೇದನೆಗಳನ್ನು ಅಭಿವ್ಯಕ್ತಿಸಿದ ಕವಿತೆಗಳನ್ನು ಒಂದು ವರ್ಗಕ್ಕೆ ಸೇರಿಸಿದರೆ, ಸ್ವಕೀಯ ಆಶಯಗಳಿಗಾಗಿ, ವೈಯಕ್ತಿಕ ಬದುಕಿನ ನೋವು ನಲಿವು ನಿರಾಸೆಗಳ ಸಂದರ್ಭಗಳಲ್ಲಿ ಪ್ರಕೃತಿಯೊಂದಿಗೆ ಸಂವಾದಿಸುತ್ತ ಬರೆದ ಪದ್ಯಗಳ ಇನ್ನೊಂದು ವರ್ಗವಿದೆ. ಇನ್ನು ಪ್ರಕೃತಿಯನ್ನು ಅದರ ದೃಶ್ಯ ವಿಶೇಷತೆಗಳೊಂದಿಗೆ ಉಪಮೆ, ರೂಪಕ, ಪ್ರತಿಮೆ, ಪ್ರತೀಕಗಳ ರೂಪದಲ್ಲೂ ಹೇರಳವಾಗಿ ಬಳಸಿರುವುದು ತಿಳಿಯುತ್ತದೆ. ಪ್ರಕೃತಿಯು ಪದಾರ್ಥವಾಗಿ, ಪ್ರೇರಣೆಯಾಗಿ, ಪರಿಕರವಾಗಿ ಪರಿಸರವಾಗಿ, ಪರತತ್ತ್ವದ ತಿರುಳಾಗಿ ಪ್ರಕಟಗೊಂಡ ವಿವಿಧ ನೆಲೆಗಳನ್ನು ಕಾವ್ಯಾಸಕ್ತರು ನಿಸಾರರ ಕವನಗಳಲ್ಲಿ ಗುರುತಿಸಬಹುದು.

ಸುಪ್ರಸಿದ್ಧ ಆಂಗ್ಲ ಪ್ರಕೃತಿ ಕವಿ ವರ್ಡ್ಸ್‌ವರ್ತ್ ತನ್ನ My Heart Leaps up When I Behold' ಎನ್ನುವ ಕವಿತೆಯಲ್ಲಿ, ಪ್ರಕೃತಿ ತನ್ನ ಬಾಲ್ಯ, ಯೌವನ, ಮುಪ್ಪಿನಲ್ಲಿ ಹೇಗೆ ನಿರಂತರವಾಗಿ ಸ್ಫೂರ್ತಿಯ ಚಿಲುಮೆಯಾಗಿತ್ತು ಎನ್ನುವದರ ಬಗ್ಗೆ ಹೇಳಿದಂತೆ, ಕನ್ನಡದ ಕವಿ ನಿಸಾರರ ಬಾಳಿನುದ್ದಕ್ಕೂ ಪ್ರಕೃತಿ ಅವ್ಯಾಹತವಾದ ಪ್ರೇರಣೆ ನೀಡುತ್ತ ಬಂದಿದೆ ಎಂಬುದನ್ನು ಅವರ ಕಾವ್ಯದಲ್ಲಿ ಕಾಣಬಹುದು. ತಮ್ಮ ಮನಸ್ಸಿನ ಭಿನ್ನ ಮನಃಸ್ಥಿತಿಗಳಲ್ಲೂ ಬದುಕಿನ ವಿವಿಧ ಘಟ್ಟಗಳಲ್ಲೂ ಪ್ರಕೃತಿಯನ್ನು ಗೆಳೆಯನಂತೆ, ಪ್ರೇಯಸಿಯಂತೆ, ಗುರುವಿನಂತೆ, ದೇವರಂತೆ ಕಂಡು ಬರೆದಿದ್ದಾರೆ.

ಪ್ರಕೃತಿ ವರ್ಣನೆಯನ್ನೇ ಹಾಸುಹೊಕ್ಕಾಗಿ ನೇಯ್ದಂಥ ರಚನೆಗಳು ಸುಪ್ರಸಿದ್ಧವಾಗಲಿಕ್ಕೆ ಕಾರಣ ಪ್ರಕೃತಿಯ ಬಗೆಗಿನ ಪ್ರೀತಿ, ಭಕ್ತಿ ಮತ್ತು ತನ್ಮಯತೆ ಎಂದೆನ್ನಬಹುದು. 'ಜೋಗದಲ್ಲಿ ಅನಿಸಿದ್ದು' (ಸುಮುಹೂರ್ತ) ಪದ್ಯದಲ್ಲಿ ಜೋಗದ ಜಲಪಾತದ ಅಪೂರ್ವ ವರ್ಣನೆ ಇದ್ದು, ಓದುಗರ ಕಣ್ಣಿನ ಮುಂದೆ ಅದರ ಜೀವಂತ ಚಿತ್ರವಾಗಿ ನಿಲ್ಲುತ್ತದೆ. ಅಲ್ಲಿ ನೀರು ಜಿಗಿದು ಜಲಪಾತವಾದರೆ, ಕವಿಯ ಹೃದಯದಲ್ಲಿ ಬೆರಗಿನ ಜಲಪಾತವಾಗಿ ಧುಮ್ಮಿಕ್ಕುತ್ತದೆ:

'ನೀರು ನೀರು ನೀರು
ಸಾಕೇನು ಕಣ್ಣೆರಡು? ಬೇಕಿದಕೆ ಹಲವಾರು.'

(ಜೋಗದಲ್ಲಿ ಅನಿಸಿದ್ದು)

ಜೋಗದ ಸಿರಿಯನ್ನು ಕಂಡು ಪುಳಕಿತಗೊಂಡು ಅದು ತಮ್ಮ ಪ್ರಕೃತಿ ಕಾವ್ಯದ ಚಿರಕಾಲಿಕ ಪ್ರೇರಣೆಯಾಗಲಿದೆ ಎಂದು ಹೀಗೆ ಉದ್ಗರಿಸುತ್ತಾರೆ:

'ಇನ್ನು ಮೇಲೀ ಜೋಗ, ನನ್ನ ಜೀವದ ಭಾಗ
ಕಾವ್ಯ ಭವನಕೆ ತೇಗ.
ನನ್ನ ಸಿಡಿಲಿನ ನುಡಿಗೆ ಅದುರು ಈ ಗಣಿಯಿಂದ;
ಕುದುರಿತೀ ಗಳಿಗೆಯಲಿ ನಮ್ಮ ಸಂಬಂಧ.'

(ಅದೇ)

ಕನ್ನಡ ನಾಡಿನ ಮನೆ, ಮನಗಳನ್ನು ರಂಜಿಸಿದ ಗೀತೆ 'ನಿತ್ಯೋತ್ಸವ' (ನಿತ್ಯೋತ್ಸವ) ದಲ್ಲಿ ಇದೇ ಜೋಗದ ನಿಸರ್ಗ ವೈಭವದೊಂದಿಗೆ ಶ್ರೀಮಂತವಾದ ಕರ್ನಾಟಕದ ಪ್ರಕೃತಿಯನ್ನು ಕಾವ್ಯವಾಗಿಸಿದ್ದಾರೆ. ಪ್ರಕೃತಿಯ ಸುಂದರ ಚೈತನ್ಯದಾಯಿನಿ ಮುಖ ಭಾವಗಳನ್ನು ನೋಡುತ್ತ ಬೆರಗುಗೊಂಡ ಬಗೆಯನ್ನು ಕಾವ್ಯದುದ್ದಕ್ಕೂ ವಿಸ್ತರಿಸುತ್ತಾರೆ. ಪ್ರಕೃತಿಯ ಗುಣಧರ್ಮವೇ ನಿತ್ಯ ನವೀನತೆ ಎಂದು ಕಂಡುಕೊಂಡ ಸತ್ಯವನ್ನು ಕವಿತೆಯಲ್ಲಿ ಅಳವಡಿಸುತ್ತಾರೆ.

'ನಿತ್ಯಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ.'

(ನಿತ್ಯೋತ್ಸವ)

ರಂಗುರಂಗಿನ ರಂಗಸ್ಥಳಗಳಾದ ಬೈಗು, ಬೆಳಗು, ಇರುಳು, ಬೆಳುದಿಂಗಳನ್ನು ಕುರಿತ ಕವಿತೆಗಳು ತುಂಬ ಪ್ರಭಾವಶಾಲಿ ರಚನೆಗಳು. 'ಆಹಾ! ಪ್ರಾತಃಕಾಲದಿ' (ನಿತ್ಯೋತ್ಸವ) ಪದ್ಯದಲ್ಲಿ ಮುಂಜಾವು ಕವಿಗೆ ನೀಡುವ ಉಲ್ಲಾಸ ನೆಮ್ಮದಿ ಅಪಾರ. ಅದು ಸ್ವರ್ಗೀಯ ಆನಂದವನ್ನು ನೀಡುತ್ತದೆ. ಬೆಳಗಿನ ಆ ಅದ್ಭುತ ಜಗತ್ತು ಭೂಕೈಲಾಸವಾಗಿ ಮಾರ್ಪಡುತ್ತದೆ ಎಂದು ಕವಿ ತಮ್ಮ ಅಚ್ಚರಿ, ಆನಂದಗಳನ್ನು ಇಲ್ಲಿ ದಾಖಲಿಸುತ್ತಾರೆ.

ಬೆಳಗಿನ ಚೆಲುವನ್ನು ಕುರಿತು ಅದೆಷ್ಟು ಬಣ್ಣಿಸಿದರೂ ಕವಿವಾಣಿ ತಣಿಯದೆಂಬಂತೆ 'ಮುಂಜಾವಿನ ಮಾಯೆ' (ಬಹಿರಂತರ), 'ಉದಯಾನುಭವ' (ಸುಮುಹೂರ್ತ) 'ಮುಂಜಾವಿನ ಮೋಡಿ' (ನವೋಲ್ಲಾಸ) ಹಾಗೂ ಅನುವಾದಿತ ಕವಿತೆ 'ನ್ಯೂಯಾರ್ಕಿನಲ್ಲಿ ಮುಂಜಾವು'(ಸುಮುಹೂರ್ತ)ದಂಥ ಪದ್ಯಗಳನ್ನು ರಚಿಸಿದ್ದಾರೆ. ಬೆಳಗಿನ ವರ್ಣನೆಯಲ್ಲಿ ವೈವಿಧ್ಯವಿದೆ; ಒಂದೊಂದರಲ್ಲೂ ಪ್ರಕೃತಿಯ ಹಿರಿಮೆಯನ್ನು ಕುರಿತ ಧನ್ಯತಾ ಭಾವವಿದೆ.

'ಪ್ರಕೃತಿ ಸಿರಿ ಒಯ್ಯಾರ, ನೀಡಿದೆ ನಿಧಿ ಕೈಯ್ಯಾರ;
ತೆರೆದಿದೆ ಅಲಕೆಯ ದ್ವಾರ, ರಸಿಕನೆ ಆಗು ಕುಬೇರ.'

(ಮುಂಜಾನೆಯ ಮಾಯೆ)

ಮುಂಜಾನೆಯ ಅನುಭವದ ಸ್ವರ್ಗೀಯ ಆನಂದವನ್ನು ಉಳಿದ ಪದ್ಯಗಳಲ್ಲಿ ಬಣ್ಣಿಸಿದ್ದರೆ, 'ನ್ಯೂಯಾರ್ಕಿನಲ್ಲಿ ಮುಂಜಾವು'(ಅನುವಾದಿತ)ಪದ್ಯದಲ್ಲಿ, ಆ ಮುಂಜಾವು ರೋಗಗ್ರಸ್ಥವೆಂದು ಹೇಳುತ್ತ ನಾಗರೀಕತೆ ನಿರ್ಮಿಸಿದ ಕೃತ್ರಿಮ ಜಗತ್ತು ಪ್ರಕೃತಿ ವಿರೋಧಿಯಾದುದು ಎಂದು ಕವಿ ತಮ್ಮ ನೋವನ್ನು, ಹಳಹಳಿಕೆಯನ್ನು ತೋಡಿಕೊಳ್ಳುತ್ತಾರೆ. ಕೃತ್ರಿಮ ಬದುಕಿನ ಮುಂಜಾವು ನರಳುತ್ತಿದೆ ಎಂಬ ಅಭಿವ್ಯಕ್ತಿ ತುಂಬ ಪರಿಣಾಮಕಾರಿ ಎನ್ನಿಸುತ್ತದೆ.

ಪ್ರಕೃತಿಯಲ್ಲಾಗುವ ಪರಿವರ್ತನೆಗೆ ಅನುಗುಣವಾಗಿ ಋತುಚಕ್ರದ ಪರಿಕಲ್ಪನೆಯನ್ನು ಮಾಡಲಾಗಿದೆ. ಪ್ರಕೃತಿಯ ಈ ಸ್ಥಿತ್ಯಂತರಗಳನ್ನು ಅನುಸರಿಸಿ ಭಾರತೀಯರು ತಮ್ಮ ಹಬ್ಬ ಹರಿದಿನ ಜಾತ್ರೆ ಉತ್ಸವಗಳ ಪರಂಪರೆಯನ್ನಿಟ್ಟುಕೊಂಡಿದ್ದಾರೆ. ಶಿಶಿರದಲ್ಲಿ ನಿದ್ರಿಸಿದ ಪ್ರಕೃತಿ ಸೂರ್ಯನ ಆಗಮನದಿಂದ ಎಚ್ಚೆತ್ತು ಸೃಜನ ಕಾರ್ಯಕ್ಕೆ ತೊಡಗಿಕೊಳ್ಳುವಳೋ ಏನೋ ಎಂಬಂತೆ ಒಮ್ಮೆಗೇ ಮರ ಮರಗಳ ತುದಿಗೆ ಚಿಗುರಿನ ಜನನ. ಹೀಗೆ ಹೊಸ ಸೃಜನ

ಕಾರ್ಯದ ಆರಂಭಕ್ಕೆ ನಮ್ಮ ಸಂಸ್ಕೃತಿಯಲ್ಲಿ ಸಂಭ್ರಮದ ಯುಗಾದಿ ಆಚರಿಸುವುದುಂಟು. ಯುಗಾದಿಯನ್ನು ಕುರಿತು ನಿಸಾರರು ಧಾರಾಳವಾಗಿ ಪದ್ಯ ರಚನೆ ಮಾಡಿದ್ದಾರೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು: 'ನವಯುಗ ಸಂವತ್ಸರ' (ನಿತ್ಯೋತ್ಸವ), 'ಯುಗಾದಿ ಬಂದಿದೆ' (ನಿತ್ಯೋತ್ಸವ), 'ವರ್ಷಾದಿ' (ಬಹಿರಂತರ), 'ಯುಗಾದಿ 1990' (ಅಸಂಕಲಿತ ಕವಿತೆಗಳು), 'ಬಾ ವಸಂತ ಬಾಳಿಗೆ' (ನವೋಲ್ಲಾಸ) ಮತ್ತು 'ಚೈತ್ರಾಗಮನ' (ಬಹಿರಂತರ). ಶಿಶಿರದ ಶುಷ್ಕತೆಯನ್ನು ನೀಗಿ ಹೊಸ ಬಾಳಿನ ಉತ್ಸಾಹೋಲ್ಲಾಸಗಳ ಪಲ್ಲವವನ್ನು ಸ್ವಾಗತಿಸುವ ಸಡಗರ ಈ ಕವಿತೆಗಳ ಸ್ಥಾಯೀಭಾವ.

ಈ ಬಗೆಯ ಕವಿತೆಗಳಲ್ಲಿ ಒಂದೊಂದರಲ್ಲೂ ಒಂದೊಂದು ತೆರನಾದ ನರ್ತನಶೀಲ ಗೆಲವು ಲವಲವಿಕೆಗಳ ಛಂದೋವಿಲಾಸ ಮನಸ್ಸನ್ನು ಮೋಹಿಸುತ್ತದೆ. ಅಲ್ಲದೆ, ವಸ್ತು ಒಂದೇ ಆಗಿದ್ದರೂ ಭಾವನೆಗಳು ಪುನರುಚ್ಚಾರಗೊಳ್ಳದೆ ಸ್ವಚ್ಛತೆಯಿಂದ ಕಂಗೊಳಿಸುವುದೂ ಸಹ ಮುದ ನೀಡುವ ವಿಚಾರ. ನಿಸಾರರು ಕಟ್ಟುವ ಚಿತ್ರಗಳು, ಬಳಸುವ ಹೋಲಿಕೆಗಳು ಅನನ್ಯವೆನ್ನಿಸುವುದಲ್ಲದೆ ಅತ್ಯಂತ ಚಿತ್ತಾಕರ್ಷಕವೂ ಆಗಿ ಪರಿಣಮಿಸುತ್ತವೆ. ಅವರ 'ಯುಗಾದಿ ಬಂದಿದೆ' (ನಿತ್ಯೋತ್ಸವ) ಕವಿತೆಯ ಈ ಸಾಲುಗಳು ಕವಿಯ ಚಿತ್ರಕ ಶಕ್ತಿಗೆ ಹೇಳಿ ಮಾಡಿಸಿದ ಉದಾಹರಣೆಯಂತಿವೆ:

'ಶಶಿ ಜೇಡರ ಬಲೆಯ ನೇಯೆ,
ಧರೆ ಚಂದ್ರಿಕೆಯಲ್ಲಿ ಮೀಯೆ,
ಕಂಗೊಳಿಸಿರೆ ಇರುಳ ಮಾಯೆ,
ಬಿಮ್ಮೆನ್ನುವ ಮೌನ ಮಹಾಶ್ರುತಿಗೆ ಲೋಕ ತುಡಿದಿದೆ;
ಸಿರಿ ಚೈತ್ರನ ರಂಗಿನೊಡವೆ,
ಧರಿಸಿ ಮೆರೆಯೆ ಪ್ರಕೃತಿ ಬಡವೆ—
ಅವರಿಬ್ಬರ ಮದುವೆ ತಡವೆ?
ಘುಮ್ಮೆನ್ನುವ ಗಂಧಾಕ್ಷತೆ ಮಂದಾನಿಲ ಹಿಡಿದಿದೆ.'

(ಯುಗಾದಿ ಬಂದಿದೆ)

ಇಂತಹ ಮನೋಜ್ಞ ಹಾಗೂ ತನ್ಮಯಕರ ಚಿತ್ರದ ಗುಂಗಿನಲ್ಲಿ ಮೈ ಮರೆತು ಕವಿ ಮೈಗರೆದು ಹೋಗುವುದಿಲ್ಲ. ಪ್ರಕೃತಿಯ ಸುಕುಮಾರ ಮತ್ತು ಕಮನೀಯ ಮುಖದ ದರ್ಶನ ಮಾಡಿಸುವ ವೇಳೆಯಲ್ಲಿಯೇ, ಮಾನವರ ಪಾಡು, ದುಗುಡಗಳ ಮಂಕು ಕವಿದ ಚಹರೆಯನ್ನೂ ತೆರೆ ಸರಿಸಿ ನಮ್ಮೆದುರು ಎತ್ತಿ ಹಿಡಿಯುತ್ತಾರೆ. ಹಾಗೆ ಮಾಡುವಾಗಲೂ ಮಾನವರ ಕಷ್ಟ ಕಾರ್ಪಣ್ಯಗಳನ್ನು ಪ್ರಕೃತಿಯ ಪ್ರತಿನಿಧಿಯಾದ ಯುಗಾದಿ ನೀಗಲಿ ಎಂದು ಹಾರೈಸುತ್ತಾರೆ. ಆಶಾವಾದದ ಸೂಚನೆಯೊಂದರಿಂದ ಸುಭವಿಷ್ಯವನ್ನು ಆಹ್ವಾನಿಸುತ್ತಾರೆ:

'ದಿನ ನಿತ್ಯದ ಬೇಗೆ ಬಾಳು,
ಕೂಳಿಲ್ಲದ ಹಸುಳೆ ಗೋಳು,
ಹೆಂಗಳೆಯರ ಮನದ ಸೀಳು—
ಬಗೆಹರಿಸಲು ಪಣವ ತೊಡಲಿ, ಕೊನೆಗಾಣಲಿ ರೌರವ;

ಬಡ ಗುಡಿಸಲ ನರಕಗಳಲಿ,
ಮೈ ಮುಚ್ಚದ ಹರಕುಗಳಲಿ,
ನವೆವ ಜೀವದುಸಿರು ಅಳಲಿ
ಆಕ್ರಂದಿಸದಂತೆ ಊಡಿಸಿರಲಿ ಹರ್ಷ ಸಾರವ.' (ಅದೇ)

ಹಾಗೆಯೇ, 'ನವ ಯುಗ ಸಂವತ್ಸರ' ಕವಿತೆಯಲ್ಲಿನ ಈ ವಾಸ್ತವ ಚಿತ್ರಣವನ್ನೂ ಕೊನೆಯಲ್ಲಿ ಬರುವ ಸೋದರತೆ, ಸೌಹಾರ್ದಗಳ ಸೂಚನೆಯನ್ನೂ ಗಮನಿಸಬೇಕು:

'ಧರೆ ಎಲ್ಲೆಡೆ ಧಗಧಗಿಸಿದೆ ಹಗೆ ಕ್ರೌರ್ಯದ ಜ್ವಾಲೆಯನು
ವೈಷಮ್ಯದ ವಿಷ ಕಹಿಸಿದೆ ಸೌಹಾರ್ದದ ನಾಲೆಯನು
ಬಿಸಿ ನೆತ್ತರ ಮಸಿ ಕೆಡಿಸಿದೆ ಬಿಳಿ ಬಾಳಿನ ಹಾಳೆಯನು—
ನರರು ಬರಲಿ ಹತ್ತಿರ
ನೀಗಿ ಮನದ ಮತ್ಸರ.'

(ನವಯುಗ ಸಂವತ್ಸರ)

ಈ ಕವಿತೆಗಳಿಗಿಂತ 'ಯುಗಾದಿ 1990'ರಲ್ಲಿ ಯುಗಾದಿಯ ಚಿತ್ರಣವೇ ಭಿನ್ನ. ಹೊಸ ವರುಷ ಹೊಸ ಹರುಷವನ್ನು ತರದೆ ಹಳೆಯ ವರ್ಷದ ಕೊಲೆ, ಸುಲಿಗೆ, ಬಡವರ ಬವಣೆ, ಅವ್ಯವಸ್ಥೆ, ಅನಾಸ್ಥೆಗಳ ಸುತ್ತ ಕವಿಯ ತಳಮಳಗಳು ಪರಿಭ್ರಮಿಸಿದರೂ ಬರಲಿರುವ ವರ್ಷ, ಸೊಗವನ್ನು ನಗೆಯನ್ನು ತರಲಿ ಎಂಬ ಆಶಾಭಾವವನ್ನು ಕವಿತೆ ಕೊನೆಗೆ ಮೂಡಿಸುತ್ತದೆ.

'ನನ್ನ ಕವನದ ತುಂಬ ಕಹಿ ವಿಷಾದದ ಬೇವೆ?
ಕಂತಿಹೋಗಿದೆ ನಗೆಯ ಸರಬರಾಜಿ.
ನನ್ನ ಹೆತ್ತಾಕೆಯನು ಮಣ್ಣುಮಾಡಿದೆ ಮೊನ್ನೆ.
ಯಾವ ಸಾಂತ್ವನ ಈವೆ ನುಡಿ ಯುಗಾದಿ?' (ಯುಗಾದಿ 1990)

ತಾಯಿಯ ಮರಣದ ದುಗುಡದಿಂದ ಕವಿಯ ಮನಸ್ಸು ಕಹಿಯಾಗಿದೆ, ನಗೆ ಸೊರಗಿ ಹೋಗಿದೆ. ಇಂಥ ಸ್ಥಿತಿಯಲ್ಲಿ ಯುಗಾದಿ ಹೇಗೆ ಸಂತಸ ತಂದೀತು? ಎಂದು ಕೇಳುತ್ತಾರೆ ಕವಿ ನಿಸಾರರು.

ಬೆಳಗಿನ ವರ್ಣನೆಯಂತೆ ಸಂಜೆಯ ವರ್ಣನೆಯೂ ತನ್ನ ವಿಶಿಷ್ಟ ಚೆಲುವಿಕೆಯಿಂದ ಮನಕ್ಕೆ ಮುದ ನೀಡುತ್ತದೆ. 'ಸಂಧ್ಯಾ ವೈಭವ'(ಬಹಿರಂತರ)ದಲ್ಲಿ ಬಣ್ಣದೋಕುಳಿಯಿಂದ ತೊಯ್ದು ಹೋದ ಸಂಜೆ ಚೆಲುವಿನ ತವರು. ಜಡ ಚೇತನಗಳ ತಾರತಮ್ಯವನ್ನು ತೋರದೆ ಎಲ್ಲವುಗಳಲ್ಲಿ ಚೈತನ್ಯ ತುಳುಕುತ್ತದೆ. ಸಂಜೆಯ ಸಮತೋಲನದ ಪ್ರಜ್ಞೆಯು ಪ್ರಕೃತಿ ಮನುಷ್ಯ ಕೋಟಿಗೆ ನೀಡುವ ಅಮೌಲ್ಯ ವರದಂತೆ ಎಂಬ ಭಾವ ಈ ಕವಿತೆಯ ಸಾಲುಗಳಲ್ಲಿದೆ :

'ಏನೀ ಪ್ರಶಾಂತಿ! ಅಹಾ ಏನೀ ನಿರಾಳ
ಸಮತೋಲ ಪ್ರಕೃತಿಯ ಬಹಿರಂತರಾಳ.
ಅಳಿದಿಹುದು ಚೇತನಾಚೇತನದ ಎಲ್ಲೆ,
ಕಲ್ಲೇನು, ಮಣ್ಣೇನು, ಹುಲ್ಲೆಸಳು, ಹುಲ್ಲೆ?' (ಸಂಧ್ಯಾ ವೈಭವ)

'ಬೈಗು' (ಬಹಿರಂತರ) ಪದ್ಯವೂ ಸಂಜೆಯ ಆಪ್ಯಾಯಮಾನವಾದ ವರ್ಣನೆಯನ್ನು ಒಳಗೊಂಡಿದೆ. ಇಲ್ಲಿ ಮಲ್ಲಿಗೆಯ ಕಂಪು, ಗಾಳಿಯ ತಂಪಿದೆ. ತೆಳು ಮೋಡಗಳಿವೆ; ಗಿರಿಸಾಲಿನ ಕಾವಲಿದೆ, ಸಂಜೆ, ಹಸುಳೆಯ ತುಟಿಯಲ್ಲಿ ಆಡುವ ಕೆಂಪು ಬಣ್ಣ ತಳೆದಿದೆ— ಹೀಗೆ, ನಿಪುಣ ಚಿತ್ರಕಾರರಂತೆ ಸಂಜೆಯ ವರ್ಣನಾತ್ಮಕ ಚಿತ್ರ ಬರೆದ ಕವಿಯ ರೀತಿ ಮೆಚ್ಚುಗೆ ಪಡೆಯುತ್ತದೆ.

ಬೆಳುದಿಂಗಳನ್ನು ಕುರಿತು ಬರೆಯದ ಕವಿಗಳೇ ಇಲ್ಲವೆನ್ನಬೇಕು. ಪ್ರಕೃತಿಯಾರಾಧಕ ಕವಿಗೆ ನಿಸರ್ಗದ ಒಂದೊಂದು ದೃಶ್ಯ, ಒಂದೊಂದು ಭಂಗಿ ಕೂಡ ಚೇತೋಹಾರಿ, ಉಲ್ಲಾಸಕಾರಿ. 'ಒಂದು ಬೆಳ್ದಿಂಗಳು' (ನವೋಲ್ಲಾಸ) ಕವಿತೆಯಂತೂ ರೂಪಕಗಳ ಚಿತ್ರಶಾಲೆಯಂತಿದೆ. ಪ್ರಕೃತಿಯನ್ನು ಒಬ್ಬ ಸ್ಫುರದ್ರೂಪಿ ಚಿರ ಯೌವನದ ಯುವಕನಿಗೆ ಹೋಲಿಸಲಾಗಿದೆ—ಇದು ಅಪೂರ್ವ ಹಾಗೂ ಸೋಜಿಗದ ಸಂಗತಿ. ಈ ಯುವಕ ತೊಟ್ಟಿರುವ ನೀಲಿ ಬಣ್ಣದ ನಿಲುವಂಗಿ, ಆಕಾಶದ ಬಟ್ಟೆಯಲ್ಲಿ ಸಿದ್ಧವಾದ ನೀಲಿ ಅಂಗಿ. ಇದಕ್ಕೆ ಬೆಳ್ಳಿಯ ಗುಂಡಿಯಂತಿರುವ ಚಂದಿರನಿದ್ದಾನೆ—ಈ ರೂಪಕವೂ ಸಹ ಹೊಸತೆ! ಹಗಲಿನ ವೈರ, ಮೋಸ ಸ್ವಾರ್ಥ ಭಾವಗಳ ವಿಷಮಯ ಪರಿಸರದ ಕೊಳೆಯನ್ನು ಬೆಳುದಿಂಗಳು ತೊಳೆದು ನಿರ್ಮಲಗೊಳಿಸುತ್ತದೆಂಬ ಕಲ್ಪನೆ ತುಂಬ ಮೆಚ್ಚುವಂಥದ್ದು. ಇಂಥ ಅಸಾಧಾರಣ ಕಲ್ಪನಾಪ್ರತಿಭೆಗಾಗಿ ಕವಿ ನಿಸಾರರು ಶ್ರೇಷ್ಠರಾಗುತ್ತಾರೆ:

'ನಡು ಹಗಲಿನ ಇಹದಾವಿಷ
ವಿಷ ಕಿಲ್ಬಿಷ ಮೆತ್ತಿ
ಮಸುಕಾಗಿಹ ಮನ ಮೀಯಲಿ;
ತೊಳ ತೊಳಗಲಿ ಬಾಳ್‌ಬತ್ತಿ.'

(ಒಂದು ಬೆಳ್ದಿಂಗಳು)

ಮಳೆಗಾಲವೂ ಈ ಕವಿಗೆ ಪ್ರಿಯವಾದ ಋತು. ಇವರ ಒಂದು ಕವನ ಸಂಗ್ರಹದ ಹೆಸರೂ 'ಸಂಜೆ ಐದರ ಮಳೆ' ಎಂದಿದೆ. 'ಈಗ ಮಳೆಗಾಲವಲ್ಲ' (ಸ್ವಯಂಸೇವೆಯ ಗಿಳಿಗಳು) ಪದ್ಯದಲ್ಲಿ ಮಳೆಗಾಲವಲ್ಲದಾಗ ಬಂದ ಮಳೆ ಪ್ರಳಯದಂತೆ ಬದುಕನ್ನು ಅಸ್ತವ್ಯಸ್ತಗೊಳಿಸುವ ಅನಾಹುತಕಾರಿ ಎಂದು ಬಣ್ಣಿಸುತ್ತಾರೆ. ಊರಲ್ಲಿ, ಕಾಡಲ್ಲಿ, ದೈನಂದಿನ ಬಾಳಲ್ಲೂ ಅನಿರೀಕ್ಷಿತವಾಗಿ ಬಂದ ಮಳೆ ಎಂಥ ಆತಂಕಕಾರಿ ಎಂಬ ಕಳವಳದ ಭಾವ ಈ ಕವಿತೆಯಲ್ಲಿದೆ. ನಿಸಾರರ ಪ್ರಕೃತಿ ಕವಿತೆಗಳಲ್ಲಿ ಶುದ್ಧ ವರ್ಣನಾತ್ಮಕ ರಚನೆಗಳಿದ್ದಂತೆ, ನಿಸರ್ಗದ ಯಾವುದಾದರೂ ಒಂದು ದೃಶ್ಯವನ್ನೊ, ಕ್ರಿಯೆಯನ್ನೊ ಮನುಷ್ಯನ ಭಾವನೆಯೊಂದಕ್ಕೆ ಸಾಂಕೇತಿಕವಾಗಿ ಬಳಸಿಕೊಳ್ಳುವ ಬಗೆಯ ಪದ್ಯಗಳೂ ಇವೆ. ಬಹುಶಃ ಇಂತಹ ಕಾವ್ಯ ರಚನೆಯ ಅಧ್ಯಯನವೇ ಒಂದು ಪುಸ್ತಕವಾದೀತು. ಉದಾ: ಗಾಂಧಿ ಬಜಾರಿನ ಸಂಜೆ ನಿಸಾರರಿಗೆ ದ್ರೌಪದಿಯನ್ನು ಘೇರಾಯಿಸಿರುವ ದುಶ್ಶಾಸನನಂತೆ ವ್ಯಕ್ತವಾಗುತ್ತದೆ. ಇವರ 'ಆಕಾಶಕ್ಕೆ ಸರಹದ್ದುಗಳಿಲ್ಲ' (೧೯೯೮) ಕವನ ಸಂಗ್ರಹದ 'ಮಳೆ' ಎನ್ನುವ ಪದ್ಯ ನೆನಪುಗಳ ಧಾರಾಕಾರತೆಗೆ ನಿಮಿತ್ತ ಹಾಗೂ ಸುಸಂಗತವಾದ ಪ್ರತಿಮೆಯಾಗುತ್ತದೆ.

'ಯಾವ ಯಾವುದೊ ರೂಪ, ಸುಸ್ವರಾಲಾಪ, ಸವಿ
ಸರಸ ಸಲ್ಲಾಪಗಳ ಮೈ ತಳೆಸಿದೆ ಮಳೆ;
ಜೀವ ಜೀವಾಳವನೆ ಕಲಕಿ ಸುಮಧುರ ನೋವಿ-
ನಿಂದ ಭಾವಾವೇಗ ಬೆಳೆಸಿದೆ ಮಳೆ.'

(ಮಳೆ)

ಜೊತೆಗೇ ಈ ಪಂಕ್ತಿಗಳನ್ನೂ ಪರಾಂಬರಿಸಬಹುದು:

'ಸುಖ ದುಃಖ ಲಾಳಿಗಳ ಬಾಳ ಮಗ್ಗದೊಳಿಳಿಸಿ
ಹಳಹಳಿಕೆ ಅರಿವೆಯನು ನೇಯ್ದಿದೆ ಮಳೆ;
ಎಂದೊ ಭೂಗತಿಸಿರುವ ಕೆಳೆಯ ಪಳೆಯುಳಿಕೆಯನು
ಸಪ್ರಾಣಿಸುತ ಒಂದೆ ಸಮ ಹೊಯ್ದಿದೆ ಮಳೆ.'

(ಮಳೆ)

ಇನ್ನೊಂದು ಋತು ಶರದೃತು. ಸುಗ್ಗಿಯ ಹಿಗ್ಗಿನ ಋತು. ಇದರ ಚಿತ್ರವನ್ನು 'ಸಗ್ಗದ ಸಿರಿ ಬಂತು'(ನಿತ್ಯೋತ್ಸವ)ದಲ್ಲಿ ಕಾಣಬಹುದು. ಸುಗ್ಗಿಯ ಹಿಗ್ಗು ಕೇವಲ ಒಕ್ಕಲು ಮಕ್ಕಳಿಗಷ್ಟೇ ಅಲ್ಲ, ಆ ಕಾಲದ ನೆಲ ಜಲ, ದನಕರುಗಳು, ಪಕ್ಷಿ ಪ್ರಾಣಿಸಂಕುಲಗಳಿಗೂ ಇದು ಹಿಗ್ಗಿನ ಋತು. ಕಾಲವೇ ಬೆರಗಾಗಿ, ಚಲನೆಯುಡುಗಿ ಈ ಋತುವಿನ ವೈಭವವನ್ನು ನೋಡುತ್ತಾ ತಲ್ಲೀನತೆಯಲ್ಲಿ ನಿಂತು ಬಿಟ್ಟಿದೆ ಎನ್ನುವಂತಹ ವರ್ಣಾಕರ್ಷಕ ಋತು. ಸುಗ್ಗಿಯ ಇನ್ನೊಂದು ಮನೋಹರ ಚಿತ್ರ 'ಹುಣ್ಣಿಮೆಯ ದೀಪ'(ನಿತ್ಯೋತ್ಸವ)ದಲ್ಲಿದೆ. ಬೆಳುದಿಂಗಳಿಂದಾಗಿ ಈ ಸುಗ್ಗಿಯ ಚೆಲುವು ದ್ವಿಗುಣಿತವಾಗಿದೆ.

'ಮಣ್ಣಿನ ಹಣತೆ, ಬೆಳ್ಳಿಯ ಲೇಪ
ಸುಗ್ಗಿಯ ಇರುಳಲಿ ಹುಣ್ಣಿಮೆ ದೀಪ
ಗೆಲವು ನಲವು ಬಾಳ ಸಮೀಪ
ಊರಿಗೆ ಮೂಡಿತು ಶಿವನ ಸ್ವರೂಪ'

(ಹುಣ್ಣಿಮೆಯ ದೀಪ)

ಚಂದ್ರನನ್ನು ದೀಪಕ್ಕೂ ಭೂಮಿಯನ್ನು ಮಣ್ಣಿನ ಹಣತೆಗೂ ಹೋಲಿಸಿದ ರೂಪಕ ಖುಷಿ ಕೊಡುತ್ತದೆ. ದುಡಿದ ರೈತರಿಗೆ ಪರಿಶ್ರಮದ ಫಲ ಸಿಕ್ಕಾಗ ಆ ಹಳ್ಳಿಯ ವಾತಾವರಣದಲ್ಲಿ ನಲಿವು ಗೆಲವು ತುಳುಕಾಡುವದು. ಹಳ್ಳಿಗೆ ಹಳ್ಳಿಯೇ ಮಂಗಳಕರ ವಾತಾವರಣದಿಂದಾಗಿ ಅದು ಸಾಕ್ಷಾತ್ ಶಿವನ ರೂಪವೇನೋ ಎಂಬ ಭಾವನೆ ಮೈ ತಾಳುತ್ತದೆ.

ಕನ್ನಡದ ಶ್ರೇಷ್ಠ ಕವಿ ಎಂ. ಗೋಪಾಲಕೃಷ್ಣ ಅಡಿಗರು ಬೆನ್ನುಡಿಯಲ್ಲಿ ಬರೆದಂತೆ, ನಿಸಾರರ ಕಾವ್ಯಶಕ್ತಿಯು ಇವರ ಕೆಲವು ಪದ್ಯಗಳಲ್ಲಿ, ವಿಶೇಷವಾಗಿ ಭಾಷಾಪ್ರಯೋಗದಲ್ಲಿ ಹೆಚ್ಚಿನ ಎಚ್ಚರ, ತೂಕ, ಶುದ್ಧಿಯಂಥ ವಿಶಿಷ್ಟ ಗುಣಗಳನ್ನು ಅಳವಡಿಸಿಕೊಳ್ಳುತ್ತದೆ. ಈ ಅಭಿಪ್ರಾಯ ನಿಸಾರರು ಪ್ರಕೃತಿಯನ್ನು ಕುರಿತು ಬರೆದ ಪದ್ಯಗಳಿಗೂ ಅನ್ವಯಿಸುತ್ತದೆ. 'ಕಾರವಾರದ ದಂಡೆಯಲ್ಲಿ' (ಸುಮುಹೂರ್ತ) ಪದ್ಯದಲ್ಲಿ ಪ್ರಕೃತಿಯ ದೃಶ್ಯಗಳಲ್ಲಿ ಪ್ರತಿಯೊಂದು ಸುಸೂಕ್ಷ್ಮ ಭಾವವನ್ನು, ಚಲನವಲನವನ್ನು ತಮ್ಮ ವಿವರಗ್ರಾಹಿ ಬುದ್ಧಿ

ಯಿಂದಾಗಿ ಆಯ್ಕೆ ಮಾಡಿ ಬರೆದ ಚಿತ್ರ ಪ್ರಶಂಸನೀಯವೆನ್ನಿಸುತ್ತದೆ. ಕಡಲ ತೀರದ ಸ್ವಾನುಭವ ಪ್ರೇರಿತ ಚಿತ್ರ ಈ ಸಾಲುಗಳಲ್ಲಿದೆ:

'ಕಾಳಿ ನದಿ ಸಂಗಮದವರೆಗು ಹಾಸಿದೆ ಮರಳು
ಶಂಖದಾಕಾರದಲಿ, ಸಾಗರದ ಅಂಚಿನಲಿ
ನಿಂತು ಸೀರೆಯನೆತ್ತಿ ಕೈಯಲ್ಲಿ ಹಿಡಿದಿರುವ
ಚೆಲುವೆ ಕೊಂಕಣಿ ಹೆಣ್ಣ ನುಣ್ಪೊಡೆಯ ಬಣ್ಣವಿದೆ.'

(ಕಾರವಾರದ ಕಡಲ ದಂಡೆಯಲ್ಲಿ)

'ಕ್ಯಾಕ್ಟಸ್' (ನಾನೆಂಬ ಪರಕೀಯ) ಒಂದು ವಿಭಿನ್ನ ಬಗೆಯ ಕವಿತೆ. ಸೌಂದರ್ಯಕ್ಕೆ ಇನ್ನೊಂದು ಹೆಸರೇ ಪ್ರಕೃತಿ ಎಂದು ಭಾವಿಸಿಕೊಂಡ ಕವಿಗೆ ಕ್ಯಾಕ್ಟಸ್‌ನ ಕುರೂಪತೆಗೆ ತಿರಸ್ಕಾರ ಉಂಟಾಗುತ್ತದೆ. ಏಕೆಂದರೆ ಅದರ ನಿರ್ಗಂಧ, ನಿರಲಂಕಾರತ್ವ, ಬಿಕೋತನ, ನಿರ್ವೈವಿಧ್ಯ, ಜಡತೆ, ಹಕ್ಕಿಗಳಿಂದ ಧಿಕ್ಕರಿಸಲ್ಪಟ್ಟ ಕ್ಯಾಕ್ಟಸ್ ಎಂದಿಗೂ ಕವಿಗೆ ಸಂತಸ, ಉತ್ಸಾಹ ನೀಡದು. ಸೌಂದರ್ಯೋಪಾಸಕ ಕವಿ ಮನೋಧರ್ಮಕ್ಕೆ ಕ್ಯಾಕ್ಟಸ್‌ನ ಇರವು ರುಚಿಸುವುದಿಲ್ಲ. ಇನ್ನೊಂದು ಕಾರಣವೆಂದರೆ, ಅದು ಎಂಥ ಸ್ಫೂರ್ತಿಯನ್ನೂ ಕವಿಗೆ ಕೊಡುವುದಿಲ್ಲವಾದ್ದರಿಂದ ಕವಿಯ ತಿರಸ್ಕಾರದ ಕ್ಯಾನ್‌ವಾಸ್‌ನ ಮೇಲೆ ಮೂಡಿಸಿದ ಕ್ಯಾಕ್ಟಸ್ ಚಿತ್ರ ಉಳಿದ ಪ್ರಕೃತಿ ಪದ್ಯಗಳಿಗಿಂತ ವಿಭಿನ್ನವಾಗಿದೆ. ಪ್ರೇರಣೆ ನೀಡದ ಪ್ರಕೃತಿಯನ್ನು ಕವಿ ಗೌರವಿಸಲಾರರು ಎಂಬ ವಿಚಾರವು ಇಲ್ಲಿ ಸ್ಪಷ್ಟವಿದೆ:

'ಯಾವ ಉದ್ದೀಪನ, ಆನಂದ ನನಗೆ ನಿನ್ನಿಂದ?
ನಿನ್ನ ಮರುಭೂಮಿತನ, ಬಿಕನಾಸಿತನ, ವಿಗಾನದಲ್ಲೇ ನೀನು ಬಂದಿ;
ನಿನಗೆ ನೀನೇ ವಂದಿ.'

(ಕ್ಯಾಕ್ಟಸ್)

'ಭೂಮಿತಾಯಿ'(ನಿತ್ಯೋತ್ಸವ)ಯಲ್ಲಿ, ತಾಯಿಯ ನಿರ್ವ್ಯಾಜಪ್ರೀತಿ, ಕಷ್ಟ ಸಹಿಷ್ಣುತೆ, ಕ್ಷಮಾಗುಣಗಳು ಭೂಮಿಯಲ್ಲಿ ಇದ್ದದ್ದರಿಂದ ಅತ್ಯಂತ ಕೃತಜ್ಞತಾಭಾವದಿಂದ ಈ ತಾಯಿಯನ್ನು ನೆನೆಯುತ್ತಾರೆ. 'ನಿಸರ್ಗ ವಿಲಾಸ'(ಬಹಿರಂತರ)ದಲ್ಲಿ ನಿಸರ್ಗ ನೀಡುವ ಅನಿರ್ವಚನೀಯ ಆನಂದದ ಒಂದು ಗಳಿಗೆಯಲ್ಲಿ ಕವಿ ಗಂಧರ್ವ ಲೋಕವನ್ನು ಕಾಣುತ್ತಾರೆ. ಪ್ರಕೃತಿಯ ಒಂದೊಂದು ಭಾವಭಂಗಿಯೂ ಹೇಗೆ ಕವಿಗೆ ಪುಳಕ ತರುತ್ತದೆ ಎಂಬ ವರ್ಣನೆಯ ಚಿತ್ರ ಸಮೂಹ ಈ ಕವಿತೆಯ ಒಡಲಲ್ಲಿದೆ.

ನಿಸರ್ಗವನ್ನು ಮನವಿಟ್ಟು ನೋಡದವರು, ಅದರ ಆನಂದವನ್ನು ಸವಿಯದವರು ಅರಸಿಕ ಶಿಖಾಮಣಿಗಳು! ಇಂಥವರ ಬಾಳು ವ್ಯರ್ಥವೆಂದು 'ನೆಲದ ಸಿರಿ' (ನವೋಲ್ಲಾಸ) ಕವಿತೆಯಲ್ಲಿ ನಿಸಾರ್ ಸಂದೇಶಿಸುತ್ತಾರೆ. ತನ್ನ ಕಡುಗೆಂಪು ಬಣ್ಣದಿಂದ ಎಲ್ಲರ ಕಣ್‌ಮನಗಳನ್ನು ಸೆಳೆಯುವ ಗುಲ್‌ಮೊಹರ್ ಕುರಿತ ಎರಡು ಪದ್ಯಗಳಿವೆ 'ಆಕಾಶಕ್ಕೆ ಸರಹದ್ದುಗಳಿಲ್ಲ' ಸಂಗ್ರಹದಲ್ಲಿ. ಗುಲ್‌ಮೊಹರ್, ಧರೆಗೆ ತಂದು ಮೆರೆಸುವ ಬಣ್ಣಗಳ ಸ್ವರ್ಗ ಅವರ್ಣನೀಯ.

'ಮೇ ಮಾಹೆಯ ಬೀದಿ ಬದಿಯ ಕೆಂಗನಸಿನ ಈ ಮರ
ತಿರುಗಿದಂತೆ ತೋರುತಿಹುದು ಬುಗುರಿಯೊಂದು ಗಿರಗಿರ'
(ಮತ್ತೊಂದು ಗುಲ್‌ಮೊಹರ್ ಮರ)

ಪ್ರಕೃತಿಯ ಬಗೆ ಬಗೆಯ ನೋಟಗಳನ್ನು, ಮಾಟಗಳನ್ನು, ಕೂಟಗಳನ್ನು, ಅದರ ಭಾವಭಂಗಿಗಳನ್ನು ಸ್ವಕೀಯ ದೃಷ್ಟಿಧೋರಣೆ ಹಾಗೂ ಆಶಯಗಳ ಕನ್ನಡಕವನ್ನು ಧರಿಸಿ ನೋಡಿ ಬರೆದ ಕವಿತೆಗಳ ಒಂದು ಸಮೂಹವಿದೆ. ಅಲ್ಲಿ ಕವಿ ತಮ್ಮ ಆಂತರಿಕ ಭಾವಗಳ ತಾಕಲಾಟದ ಭಾವಗಳ ಜಗತ್ತನ್ನು ತೆರೆದು ತೋರುತ್ತಾರೆ. ಪ್ರಕೃತಿಯ ಹಾವಭಾವಗಳಿಗಿಂತ ಆ ಕವನದಲ್ಲಿ ತನ್ನ ಅಂತರ್ಜಗತ್ತಿನ ವಿದ್ಯಮಾನಗಳು ಬಹು ಮುಖ್ಯವಾಗುತ್ತವೆ. ಈವರೆಗೆ ನಾವು ಗಮನಿಸಿದ ಪ್ರಕೃತಿಕವಿತೆಗಳಲ್ಲಿ ತದ್ವಿರುದ್ಧವಾಗಿ ಕವಿಯ ಆಂತರಿಕ ಜಗತ್ತಿಗಿಂತ ಬಾಹ್ಯ ಜಗತ್ತು ಮುಖ್ಯವಾದದ್ದರ ಅವಲೋಕನ ಮಾಡಿದ್ದೇವೆ. ಜೊತೆಗೇ 'ಮಳೆ' ಎನ್ನುವ ಪದ್ಯದಲ್ಲಿ ಒಳ ಲೋಕದ ಒಂದು ಹೊಳಹನ್ನೂ ಕಾಣಿಸಲಾಗಿದೆ. ಮೊದಲನೆಯ ಗುಂಪಿನವು ವಸ್ತುನಿಷ್ಠವಾಗಿ ಬರೆದಂಥ ಕವಿತೆಗಳಾದರೆ, ಎರಡನೆಯ ವರ್ಗದ ಕವಿತೆಗಳು ವ್ಯಕ್ತಿನಿಷ್ಠ ವಾದ ಕವಿತೆಗಳೆಂದೆನ್ನಬಹುದು.

'ಮನಸು ಗಾಂಧಿ ಬಜಾರು' ಕವನ ಸಂಗ್ರಹದ 'ಹಕ್ಕಿಗಳು' ಪದ್ಯದಲ್ಲಿ ಕವಿ ಪಕ್ಷಿಸಂಕುಲದಿಂದ ಅಥವಾ ಒಟ್ಟು ಪ್ರಕೃತಿಯಿಂದಲೇ ದೂರವಿರಲು ಬಯಸುತ್ತಾನೆ. ಇಂಥ ಮನಃಸ್ಥಿತಿ ಕವಿಯ ಮೂಲ ಸ್ವಭಾವಕ್ಕೆ ವಿರೋಧಿಯಾದ ಸ್ಥಿತಿ. ಬದುಕಿನ ಹತಾಶೆಗಳ ತುಳಿತಕ್ಕೆ ಒಳಗಾದ ಕವಿ ಮನಸ್ಸು ಪ್ರಕೃತಿಯ ಸಾನ್ನಿಧ್ಯವನ್ನೂ ಸಹಿಸದಿರುವ ಒಂದು ಸಂಕೀರ್ಣ ಸ್ಥಿತಿಯನ್ನು ಪರಿಚಯಿಸುತ್ತದೆ. ಕವಿಯ ಭಾವೋದ್ವೇಗಗಳ ಹರಿತವನ್ನು ತೀರ ಉದ್ವಿಗ್ನವಲ್ಲದ ಅವಸ್ಥೆಯಲ್ಲಿ ಕವಿತೆ ಅಭಿವ್ಯಕ್ತಿಸಿದೆ.

'ಬೀಜ-ಮರ' (ನೆನೆದವರ ಮನದಲ್ಲಿ)—ಒಂದು ವಿಡಂಬನಾತ್ಮಕ ಪದ್ಯ. ನವ ರಸಗಳಿಗೆ ಕಾವ್ಯದಲ್ಲಿ ಸ್ಥಾನವಿದೆ. ಸಮಾಜಮುಖಿಯಾದ ಕವಿಗೆ ಹಾಸ್ಯ, ವಿಡಂಬನೆ, ಕಟಕಿಯಂಥ ಶಸ್ತ್ರಗಳು ಬೇಕು. ರೋಗಗ್ರಸ್ತ ಸಮಾಜದ ಮೇಲೆ ಆತ ಶಸ್ತ್ರಕ್ರಿಯೆ ಮಾಡಬೇಕಾದಾಗ ಶಸ್ತ್ರಗಳು ಬೇಕು. ಪ್ರಸ್ತುತ ಕವಿತೆಯಲ್ಲಿ ಕಿರಿಯರನ್ನು, ಅವಲಂಬಿತರನ್ನು ಶೋಷಿಸುವ ಅಧಿಕಾರಿ ವರ್ಗ ಮತ್ತು ಹಿರಿಯರ ವರ್ಗಗಳ ಬಗೆಗೆ ಇಲ್ಲಿ ಕಟು ಟೀಕೆ ಇದೆ. ಪರಂಪರಾಗತವಾಗಿ ಬಂದ ಈ ಶೋಷಣೆ ಮುಂದುವರಿಯಬಾರದು, ಅದನ್ನು ಕೊನೆಗೊಳಿಸಬೇಕೆಂಬುದೇ ಈ ಕವಿತೆಯ ಹೂರಣ. ಇಂದಿನ ಬೀಜ ಮರವಾಗಿ ತನ್ನ ಮುಂದಿರುವ ಬೀಜಗಳನ್ನು ತುಳಿಯಕೂಡದೆಂಬ ಕಳಕಳಿಯೂ ಕವಿಯನ್ನು ಪ್ರೇರಿಸಿದ್ದು ಇಲ್ಲಿ ಸ್ಪಷ್ಟವಿದೆ.

'ಸಂಜೆ ಐದರ ಮಳೆ'(ಸಂಜೆ ಐದರ ಮಳೆ)ಯಲ್ಲಿ ಮಳೆ ಒಂದು ನೆಪ ಮಾತ್ರ. ಈ ಮಳೆ ಹೇಗೆ ಹಲವು ಬಗೆಯ ವರ್ಗಗಳ ಜನರಿಗೆ ಸಮಸ್ಯೆಗಳನ್ನು ತಂದೊಡ್ಡುತ್ತದೆ ಎಂಬುದರ ಯಥಾರ್ಥ ಚಿತ್ರಣವಿದೆ. ಕೆಲವರಿಗೆ ಅವಸರ, ದಿಗಿಲು, ಆತಂಕಗಳನ್ನು ತಂದರೆ, ಇನ್ನು ಕೆಲವರಿಗೆ ಒತ್ತಡಗಳಿಂದ ಮುಕ್ತಿ ತರುತ್ತದೆ. ವಾಸ್ತವ ಬದುಕನ್ನು ತೆರೆದು

ತೋರಬೇಕೆಂಬ ಕವಿಯ ಆಶಯದ ಅರಿವು ಇಲ್ಲಿ ಆಗುತ್ತದೆ.

ಸಂಜೆ, ಈ ಕವಿತೆಯಲ್ಲಿ 'ರಗ್ಗು ಮುಸುಕಿನ ನೋಟವಾಗುತ್ತದೆ'; 'ಕೆಮಿಸ್ಟ್ರಿ ಅಟೆಂಡರನ ಮಾಸಲು ಪೇಟವಾಗುತ್ತದೆ'; 'ಹೆಗ್ಗಡತಿ ಬಟ್ಟಿಗಲ ಪಟಪಟ, ಕಪ್ಪು ಭೀತಿ' ಯಾಗುತ್ತದೆ', 'ಹಿಟ್ಲರನ ತಮ್ಮ', 'ಸೈಕಲ್ಲು ಸ್ಕೂಟರುಗಳ ಗುಮ್ಮ' ಹಾಗೂ 'ಹಸುಳೆ ಅಳುವಿನ ಬೇಸಗೆಯ ತುಂಗೆಗೆ ಕನ್ಯೆ ಕಾಲಿನ ಕಸುವು ಕೂಡಿಸುವ' ಶಕ್ತಿಯಾಗುತ್ತದೆ!—ಇಲ್ಲಿ ಬರುವ ನುಡಿ ಚಿತ್ತಾರಗಳ ಮಾಲೆಯ ನಾವೀನ್ಯವನ್ನು ಗಮನಿಸಿ. ಇವು ಸಹಜ ಕವಿಯ ಪ್ರತಿಭಾಫಲಗಳು ಎನ್ನಿಸುವುದನ್ನು ಓದುಗರಿಗೆ ಮನದಟ್ಟಾಗಿಸುತ್ತವೆ.

ಕೆಲವು ಕವಿತೆಗಳಲ್ಲಿ ನಿಸಾರರು ಸಂದೇಶಗಳನ್ನು ಕಾವ್ಯದ ಮೂಲಕ ಮುಟ್ಟಿಸಲು ಯತ್ನಿಸಿದ್ದನ್ನೂ ಗಮನಿಸಬಹುದು. 'ಚೈತ್ರಾಗಮನ' (ಬಹಿರಂತರ) ಸೃಷ್ಟಿಯನ್ನು ಕುರಿತು ಬರೆದ ಪದ್ಯವಾಗಿದ್ದರೂ ಇಲ್ಲಿ ಒಂದು ಮುಖ್ಯ ಸಂದೇಶವಿದೆ:

> **'ನೆಲದಿ ಕೀಟ ಕೊಳೆವ ತರಹ**
> **ನಮ್ಮೆಲ್ಲರ ಹಣೆಯ ಬರಹ.**
> **ಒಂದರೆ ಚಣ ಮಣ್ಣ ಹೇಸಿ**
> **ಬಾನಿಗೇರೋಣ ರೆಕ್ಕೆ ಬೀಸಿ.'**

ಆಲಸಿಗಳಾಗಿ, ನಿಷ್ಕ್ರಿಯರಾಗಿ ಕೊಳೆಯದೆ, ಉನ್ನತ ಆದರ್ಶ ಗುರಿಗಳನ್ನು ಹೊಂದಿ ಕ್ರಿಯಾಶೀಲರಾಗೋಣವೆಂಬ ಕವಿಯ ಕರೆ ಇಲ್ಲಿದೆ.

ಬದುಕೆಂಬ ನದಿಯ ಮೀನುಗಳು ನಾವು, ಬದುಕಿನಲ್ಲಿಯ ಮೋಹ ಮಾಯೆಗೆ ಪಕ್ಕಾಗಿ ಅಳಿದು ಹೋಗದೆ, ಬಾಳಿನ ಸಿಹಿ ಕಹಿಗಳನ್ನು ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಸಂದೇಶ 'ಮೀನುಗಳು ನಾವು' (ನವೋಲ್ಲಾಸ) ಪದ್ಯದಲ್ಲಿದೆ. 'ನಗು, ಗುಲಾಬಿ ನಗು ನಗು' (ನವೋಲ್ಲಾಸ), 'ಬಾ ವಸಂತ ಬಾಳಿಗೆ' (ನವೋಲ್ಲಾಸ), 'ಪ್ರಕೃತಿ ಆಚರಿಸಿಹುದು ಹಬ್ಬವ' (ನವೋಲ್ಲಾಸ)ದಂಥ ಕವಿತೆಗಳಲ್ಲೆಲ್ಲಾ ಕವಿಯ ಸಂದೇಶಗಳು ಅಡಕವಾಗಿವೆ.

ಪ್ರಕೃತಿಯನ್ನು ನಿಮಿತ್ತ ಮಾಡಿಕೊಂಡು ಬದುಕನ್ನು ತಾತ್ತ್ವೀಕರಿಸಿ, philosophise ಮಾಡಿ ಒಂದು ಅಪೂರ್ವ ಅರ್ಥವಂತಿಕೆಯನ್ನು ಸಾಧಿಸುವುದು ನಿಸಾರರ ಕಾವ್ಯಪ್ರತಿಭೆಯ ಒಂದು ವಿಶೇಷ ಲಕ್ಷಣ. ಈ 'ರೊಮ್ಯಾಂಟಿಕ್' ಧೋರಣೆಯನ್ನು ನವ್ಯ ಕವನಗಳಲ್ಲೂ ಅಲ್ಲಲ್ಲಿ ಗುರುತಿಸಬಹುದಾದರೂ ಅವರ ಭಾವಗೀತೆಗಳಲ್ಲಿ ಈ ಲಕ್ಷಣ ನಿಚ್ಚಳವಾಗಿ ನೆಲೆಗೊಂಡಿದೆ. ತತ್ಪರಿಣಾಮವಾಗಿ ಕವನಕ್ಕೆ ಒಂದು ಗಂಭೀರತೆ, ಒಂದು ಮೇಲ್ನೆಲೆ ಪ್ರಾಪ್ತವಾಗಿರುತ್ತದೆ.

'ನಿತ್ಯೋತ್ಸವ' ಕವನ ಸಂಗ್ರಹದ ಬಗ್ಗೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿ ದಿ. ಡಾ. ಸಿದ್ಧಯ್ಯ ಪುರಾಣಿಕರು ತಮ್ಮ ಪತ್ರದಲ್ಲಿ ಹೀಗೆ ನುಡಿಯುತ್ತಾರೆ: 'ಕನ್ನಡ ಭಾಷೆಗೆ ಹೊಸ ಕಸುವನ್ನು ಕೊಟ್ಟಿದ್ದೀರಿ ನೀವು. ಈ ಭಾಷೆ ಬೇರೆ ಎಲ್ಲೂ ಸಿಗದ ಭಾಷೆ. ವಸ್ತು ವೈವಿಧ್ಯ ವಿಸ್ಮಯಕರ. ಯಾವ ವಸ್ತುವನ್ನು ಎತ್ತಿಕೊಂಡರೂ ಅದಕ್ಕೆ ಅನಿರೀಕ್ಷಿತ ತಿರುವು ಕೊಟ್ಟು ಬುದ್ಧಿಗೆ ಬೆರಗು ನೀಡುತ್ತಲೇ ಹೃದಯಕ್ಕೆ ಮೆರಗು ನೀಡುವ ನಿಮ್ಮ ಕಲೆಗಾರಿಕೆ

ಪ್ರಶಂಸನೀಯ.' ಕವಿ ನಿಸಾರ್ ಅಹಮದ್ ಅವರದು ಅಂಥ ಶಕ್ತಿಶಾಲಿ ಭಾಷೆ, ಅಂಥ ಪ್ರತಿಭಾಪೂರ್ಣ ಭಾಷೆ ಎನ್ನುವುದರಲ್ಲಿ ಸಂಶಯವಿಲ್ಲ. ತಮ್ಮ ಉಜ್ವಲ ಕಾವ್ಯ ಸಂವೇದನೆಗಳ ಹೊನಲನ್ನು ಶಬ್ದಗಳಲ್ಲಿ, ಭಾಷೆಯಲ್ಲಿ ಹಿಡಿದಿಡುವಾಗ ರಾಶಿ ರಾಶಿ ರೂಪಕ, ಪ್ರತಿಮೆ, ಪ್ರತೀಕ ಉಪಮೆಗಳ ಸಂದರ್ಭೋಚಿತ ಪ್ರಯೋಗವನ್ನು ಮಾಡಿದ್ದಾರೆ. ಇಂಥ ಸತ್ವಯುತ, ಪ್ರಭಾವಶಾಲಿ ಭಾಷೆ, ಶೈಲಿ, ನಿರೂಪಣೆಗಳಿಂದಲೇ ಅವರು ವಿಶಿಷ್ಟ ಕವಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನಿಸಾರರ ರೂಪಕ, ಉಪಮೆ, ಪ್ರತಿಮೆಗಳ ಪ್ರಯೋಗ ಗಳಿರುವ ಕವಿತೆಗಳತ್ತ ಗಮನ ಹರಿಸೋಣ.

ನಿಸಾರರು ರೂಪಕ ಪ್ರಿಯರು ಎಂಬುದನ್ನು ಕಾವ್ಯಾಭ್ಯಾಸಿಗಳು ಸಹಜವಾಗಿ ಒಪ್ಪಿ ಕೊಳ್ಳುತ್ತಾರೆ. ಕೆಲವು ಕವಿತೆಗಳ ಸಾಲುಗಳನ್ನು ಉದಾಹರಿಸಬಹುದು: 'ಮೂರು ಬೆಳುದಿಂಗಳು' (ಮನಸು ಗಾಂಧಿ ಬಜಾರು)ನಲ್ಲಿ ಬೆಳುದಿಂಗಳಿಗೆ ಕವಿ ಕೊಟ್ಟ ರೂಪಕ ಅದ್ಭುತವಾಗಿದೆ:

'ಲಕ್ಷಯುಗಗಳ ಮುರುಕು ನೀಲ ಛತ್ರದ ಮೇಲೆ
ಹೆಣೆಯುತಿದೆ ಕತ್ತಲಲಿ ಬೆಳ್ಳಿಕಣ್ಣಿನ ಕೋಟಿ ಜೇಡ ಬಲೆ.'

ಎಂದಿನಿಂದಲೋ ಬೆಳ್ಳಿಗಣ್ಣಿನ ಕೋಟಿ ಜೇಡ ಬಲೆಯನ್ನು, ಅಂದರೆ ಬೆಳುದಿಂಗಳನ್ನು ಹೆಣೆಯುತ್ತಲೇ ಇದೆ—ಎಂಬ ಕಲ್ಪನೆ ಅಚ್ಚರಿ ಮೂಡಿಸುವಂಥದು. ನೀಲ ಛತ್ರವೋ, ಅಂದರೆ ಆಗಸ, ತಾರೆಗಳಿಂದಾಗಿ ತೂತು ಬಿದ್ದು ಹಳೆಯದಾಗಿದೆ. ಅದನ್ನು ಮುಚ್ಚಲು ಎಂದಿನಿಂದಲೋ ಬೆಳ್ಳಿಗಣ್ಣಿನ ಜೇಡಗಳು ಕೋಟಿ ಬೆಳುದಿಂಗಳನ್ನು ಹೆಣೆಯುತ್ತಿವೆ. ಒಬ್ಬ ಪ್ರತಿಭಾನ್ವಿತ ಕವಿಯೇ ಇಂಥ ಅಸಾಧಾರಣ ರೂಪಕಗಳನ್ನು ಕೊಡಬಲ್ಲ.

ಹಾಗೆಯೇ, ಈ ಮನ ಸೂರೆಗೊಳ್ಳುವ ವಿನೂತನ ರೂಪಕ ಚಿತ್ರವನ್ನು ರಸಾನುಭವಿಸಿ:

'ಚೈನೀ ಕನ್ಯೆಯ ಮಲ್ಲಿಗೆ ಹೂವಿನ ಚಿತ್ರದ ನೀಲಿಮ ಛತ್ರಿ
ಈ ಬೆಳುದಿಂಗಳ ರಾತ್ರಿ' (ಅದೇ)

ಮುಂಜಾವಿನ ಆಗಸ ತೊಟ್ಟಿಲು, ಅದರಲ್ಲಿ ಮಲಗಿದ ಹಸುಳೆಯೆಂದರೆ ಜೀವ ಸಂಕುಲ—ಈ ಜೀವ ಸಂಕುಲವನ್ನು ಪೊರೆಯುವ ತಾಯಿ ಸೂರ್ಯ. ಇದೊಂದು ವಿಶಾಲ ವಾದ ಸುಂದರ ರೂಪಕ. ಇದರ ಪ್ರಯೋಗವು 'ಆಹಾ! ಪ್ರಾತಃಕಾಲದಿ' (ನಿತ್ಯೋತ್ಸವ) ಪದ್ಯ ದಲ್ಲಿದೆ:

'ಮೋಹಕ ವರ್ಣದ ಚೆಲುವಿನ ತೊಟ್ಟಿಲು,
ಲೋಕದ ಹಸುಳೆಯ ತೂಗುತಿದೆ'

(ಆಹಾ! ಪ್ರಾತಃಕಾಲದಿ)

'ಇರುಳು' ಕವಿತೆಯೂ (ಬಹಿರಂತರ) ಹಲವಾರು ಸುಂದರ ರೂಪಕಗಳಿಂದ ಶ್ರೀಮಂತವಾಗಿದೆ:

'ಇರುಳು ಕಪಿಲೆಯ ಹಾಲು ಕರೆದಿದೆ
ಋತು ಶರತ್ ಪರಿಚಾರಿಕೆ' (ಇರುಳು)

ರಾತ್ರಿಯನ್ನು ಕಪಿಲೆಗೆ, ಬೆಳುದಿಂಗಳನ್ನು ಹಾಲಿಗೆ ಹಾಗೂ ಹಾಲು ಕರೆಯುವ ಪರಿಚಾರಿಕೆಯನ್ನು ಶರದೃತುವಿಗೆ ಸಂಲಗ್ನಗೊಳಿಸಿದ್ದಾರೆ. ಇಂಥ ವಿಲಕ್ಷಣವಾದ ರೂಪಕ ಪ್ರಯೋಗಗಳಿಂದ ಕವಿಯ ಕಲ್ಪನೆಯ ಆಳ, ಹರವುಗಳ ಅಂದಾಜು ಕಾವ್ಯ ರಸಿಕರಿಗೆ ಆಗುತ್ತದೆ. ಇಂತಹ ಲೆಕ್ಕವಿರದಷ್ಟು ರೂಪಕಗಳು ಸೃಷ್ಟಿಸಿದ ಕಲ್ಪನಾಲೋಕಕ್ಕೆ ಕವಿ ನಮ್ಮನ್ನು ಕರೆದೊಯ್ದು ಸಂತಸ ನೀಡುತ್ತಾರೆ:

‘ಕತ್ತಲಿನ ಉನ್ಮತ್ತ ಗಜದಂ-
ಕುಶಗಳೀ ಹೊನ್ನೀ ಹುಳ’

(ಇರುಳು)

ಸುತ್ತಲಿನ ಗಾಢ ಅಂಧಕಾರವನ್ನು ಉನ್ಮತ್ತ ಆನೆಗೂ ಆ ಕತ್ತಲಿನ ಸೊಕ್ಕನ್ನು ಅಡಗಿಸಲು ಪ್ರಯೋಗಿಸಲಾಗುವ ಅಂಕುಶಗಳೆಂದರೆ ತಾರೆಗಳು. ತಾರೆಗಳ ಪ್ರಕಾಶವು ಕತ್ತಲೆಂಬ ಮದವನ್ನು ಇರಿಯುತ್ತದೆಂಬ, ಇಳಿಸುತ್ತದೆಂಬ ಒಟ್ಟು ರೂಪಕ ಪ್ರಯೋಗ ಅದ್ಭುತವಾಗಿದೆ.

‘ಒಂದು ಗುಲ್‌ಮೊಹರ್ ಗೀತ’ (ಆಕಾಶಕ್ಕೆ ಸರಹದ್ದುಗಳಿಲ್ಲ)ದಲ್ಲಿ ಬಳಸಲಾದ ಸರಳ ಸುಂದರ ರೂಪಕಗಳು ನೀಡುವ ಅರ್ಥದ ಗಾಢತೆ ಕಾವ್ಯಪ್ರಿಯರನ್ನು ಮೋಹ ಗೊಳಿಸುತ್ತದೆ:

‘ಮರ ಮರ ಉಮರ,
ವಿಚಾರ ಭಾವ ರುಬಾಯಿ;
ನನೆ ನನೆಯೂ ಸಹ ಬಿರ್ಲನ ಭಾಯಿ,
ಎಸಳೆಸಳೆಲ್ಲ ರುಪಾಯಿ.’

(ಒಂದು ಗುಲ್‌ಮೊಹರ್ ಗೀತ)

ಗುಲ್‌ಮೊಹರ್ ಮರಗಳನ್ನು ಉಮರ್ ಖಯ್ಯಾಮರ ರುಬಾಯಿ(ಚತುಷ್ಪದಿ)ಗಳಿಗೆ ಹೋಲಿಸಿ ಭಾವಸಾಂದ್ರತೆಯನ್ನು ತಂದರೆ, ಕೋಟ್ಯಧಿಪತಿ ಹಾಗೂ ಪರೋಪಕಾರಿಯೆಂದೇ ಹೆಸರಾದ ಬಿರ್ಲಾರ ಶ್ರೀಮಂತಿಕೆ, ಅವರ ಔದಾರ್ಯದ ಪ್ರತಿಫಲನವನ್ನು ಈ ಮರಗಳು ಧಾರಾಳವಾಗಿ ಬಿಟ್ಟ ಹೂವು, ಎಲೆಗೆ ಹೋಲಿಸಲಾದ ರೂಪಕದಲ್ಲಿ ಕಾಣಬಹುದು. ಜಗತ್ತಿನ ಶ್ರೇಷ್ಠ ಕವಿ, ತತ್ತ್ವಜ್ಞಾನಿ ಎಂದು ಪ್ರಸಿದ್ಧರಾದ ಉಮರ ಖಯ್ಯಾಮ್ ರಚಿಸಿದ ರುಬಾಯಿ ಗಳಲ್ಲಿ ಅವರು ತೆರೆದ ಬಾಳಿನ ಸತ್ಯಗಳ ದೊಡ್ಡ ನಿಧಿ ಇದೆ. ಹಾಗೆಯೇ, ಗುಲ್‌ಮೊಹರ್ ಮರಗಳಲ್ಲಿರುವುದು ಸೌಂದರ್ಯದ ನಿಧಿ. ಗುಲ್‌ಮೊಹರ್ ಮರಗಳಲ್ಲಿ ಹೊಮ್ಮಿ ನಿಂತ ಮೊಗ್ಗು ಹೂ ಎಲೆಗಳು ಅದೆಷ್ಟು ಸಂಖ್ಯೆಯಲ್ಲಿ ಇದ್ದವೆಂದು ತಿಳಿಸಲು ಕವಿ ಬಿರ್ಲಾ ಅವರು ದಾನಶೂರರಾಗಿ ಧಾರಾಳವಾಗಿ ನೀಡಿದ ಧನ ಸಂಪತ್ತಿನಂತಿದೆ ಎಂಬ ಹೋಲಿಕೆಗಳು ವಿಶಿಷ್ಟವೂ ಅಚ್ಚರಿಯನ್ನು ಉಂಟುಮಾಡುವಂಥವು ಆಗಿದೆ.

ಇದುವರೆಗಿನ ಬಿಡಿ ರೂಪಕಗಳು ಇದ್ದ ಸಾಲುಗಳನ್ನು ಗಮನಿಸಿದ ಅನಂತರ ಇಡೀ ರೂಪಕಗಳಿರುವ ಕೆಲವು ಉದಾಹರಣೆಗಳನ್ನು ಗಮನಿಸುವ ಅಗತ್ಯವಿದೆ. ಒಂದು ಕವಿತೆಯ ಹರಹಿನಲ್ಲಿ ಕೇವಲ ಒಂದೇ ರೂಪಕವನ್ನು ಪ್ರಯೋಗಿಸಿ, ಅದನ್ನು ಹಂತಹಂತವಾಗಿ ಕವಿತೆಯ ವ್ಯಾಪ್ತಿಯಲ್ಲಿ ವಿಸ್ತರಿಸುವುದಕ್ಕೆ ಇಡೀ ರೂಪಕದ ಪ್ರಯೋಗ ಎಂದು ಪರಿಗಣಿಸ

ಬಹುದು. 'ಕುರಿಗಳು, ಸಾರ್, ಕುರಿಗಳು' (ನೆನೆದವರ ಮನದಲ್ಲಿ) ಕವಿತೆ ಇಡೀ ರೂಪಕದ ಒಂದು ಉತ್ತಮ ಉದಾಹರಣೆ. ಇಲ್ಲಿ ಬರುವ ಚಿತ್ರ ಕುರಿಗಳು, ಕುರುಬ, ಕುರಿ ಮಂದೆ, ಕುರಿ ಕಟ್ಟುವ ಸ್ಥಳ ಹಾಗೂ ಅವುಗಳ ನಡವಳಿಕೆ ಮತ್ತು ಕುರುಬನ ಹಾಗು ಕಟುಕನ ನಡವಳಿಕೆಯ ಸಂಪೂರ್ಣ ಚಿತ್ರ ಪದ್ಯವನ್ನು ಆವರಿಸಿ ನಿಲ್ಲುತ್ತದೆ. ಇಂಥ ಒಂದು ಇಡೀ ರೂಪಕದ ಪ್ರಯೋಗದಿಂದ ಇಲ್ಲಿ ವಿಡಂಬನೆಯ ಎಲ್ಲ ಸಾಧ್ಯತೆಗಳನ್ನೂ ಕವಿ ಅತ್ಯಂತ ಸಮರ್ಥವಾಗಿ ಮೊನಚಾದ ಭಾಷಾ ಪ್ರಯೋಗದಿಂದ ಮಾಡಲು ಸಾಧ್ಯವಾಗಿದೆ ಎಂಬುದನ್ನು ನಾವು ಗಮನಿಸಬಹುದು. ರೂಪಕದ ಎಲ್ಲ ವಿವರಗಳೂ ಕೇಂದ್ರದ ಆಶಯಕ್ಕೆ ಪುಷ್ಟಿ ನೀಡಿರುವುದರಿಂದ, ನೇರವಾದ ಹರಿತವಾದ ಪರಿಣಾಮಗಳನ್ನು ಇಡೀ ರೂಪಕ ಪ್ರಯೋಗ ದಿಂದ ಪಡೆಯಬಹುದು.

ಹಾಗೆಯೇ 'ನೆನೆದವರ ಮನದಲ್ಲಿ' ಕವನ ಸಂಗ್ರಹದ 'ಬೀಜ ಮತ್ತು ಮರ'ದಲ್ಲೂ ಒಂದು ಇಡೀ ರೂಪಕವನ್ನು ಬಳಸಲಾಗಿದೆ.

ನಿಸಾರರ ಕೆಲವು ಕವಿತೆಗಳಲ್ಲಿ ಪ್ರಕೃತಿಗೆ, ಅದರ ಅಂಶಗಳಿಗೆ ವ್ಯಕ್ತಿಯ ಗುಣಗಳನ್ನು ನೀಡಿ ಮನುಷ್ಯಗುಣಾರೋಪ (Personification) ಅಲಂಕಾರವನ್ನು ಬಳಸಿದ್ದು ಪರಿಣಾಮಕಾರಿಯಾಗಿದೆ.

'ಕಾಯುತಿರಲು ಪದ್ಮಿನಿ'(ಮನಸು ಗಾಂಧಿ ಬಜಾರು)ಯಲ್ಲಿ ಕಮಲಕ್ಕೆ ವಿರಹಿಣಿ ಪ್ರಿಯತಮೆಯನ್ನಾಗಿ ರೂಪಿಸಿದ್ದು, ಸೂರ್ಯನನ್ನು ಪ್ರಿಯಕರನೆಂದು ಹೋಲಿಸಿ, ಪ್ರಕೃತಿ ಯಲ್ಲಿಯ ನಡವಳಿಕೆಗಳಿಗೆ ಮನುಷ್ಯ ಪ್ರಪಂಚದ ಹೋಲಿಕೆಯನ್ನು ನೀಡಿ ವ್ಯಕ್ತೀಕರಣ ಗೊಳಿಸಿದ್ದರ ಉದಾಹರಣೆಯನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

'ಸಂಜೆ ಐದರ ಮಳೆ'ಯಲ್ಲಿ ಮಳೆ ಸರ್ವಾಧಿಕಾರಿ ಹಿಟ್ಲರನಂತೆ ಎಲ್ಲರನ್ನು ಶೋಷಿಸಿದ ಚಿತ್ರದಲ್ಲೂ ಹಿಟ್ಲರನಂಥ ಕ್ರೂರಿಯಾದ ಮನುಷ್ಯನ ಗುಣಗಳನ್ನು ಸಂಜೆ ಐದರ ಮಳೆಗೆ ನೀಡಿದ್ದಿದೆ. 'ನಗು ಗುಲಾಬಿ, ನಗು ನಗು'(ನವೋಲ್ಲಾಸ)ದಲ್ಲೂ ಗುಲಾಬಿಯನ್ನು ತನ್ನ ಸಖಿಯೋ ಪ್ರಿಯತಮೆಯೋ ಎಂದು ಭಾವಿಸಿ ಕವಿ ಸಂಭಾಷಿಸುತ್ತಾರೆ.

ನಿಸಾರರ ಪ್ರಕೃತಿಯನ್ನು ಪ್ರತಿನಿಧಿಸುವ ಕಾವ್ಯದಲ್ಲಿ ಉಪಮೆಗಳ ಪ್ರಯೋಗ ಅಪರೂಪ. ಕೆಲವು ಸಾಲುಗಳನ್ನು ಉಪಮೆಗಳ ನಿದರ್ಶನಾರ್ಥವಾಗಿ ಉದಹರಿಸಬಹುದು :

> **'ಹದ್ದಿನಂತೆ ಬುವಿಯಿಂದ ಎದ್ದು**
> **ಹಾರಾಡುತಿದ್ದರೇನು**
> **ಕೊಳೆಯುತ್ತ ಕಣ್ಣ ದಿಟ್ಟ'** (ನಡೆನುಡಿ)

ಕನಿಷ್ಠ ಗುರಿ ಇಟ್ಟುಕೊಂಡವರು ಹದ್ದುಗಳಂತೆ ಎಂಬ ಉಪಮೆ ಇಲ್ಲಿದೆ.

> **'ಹೆದ್ದಾರಿ 'ಆ' ಎಂದು ಬಾಯಿ ತೆರೆದಿರುವಲ್ಲಿ**
> **ಇಣುಕು ನಾಲಗೆಯಂತೆ ಒಂದು ಗಲ್ಲಿ'** (ಕಂಬ)

ಹೆದ್ದಾರಿಯ ಪಕ್ಕದಲ್ಲಿಯ ಕಿರಿದಾದ ಗಲ್ಲಿ ನಾಲಗೆಯಂತಿದೆ ಎಂಬ ಅಸಾಧಾರಣ ವಾದ ಉಪಮಾ ಪ್ರಯೋಗ ಇಲ್ಲಿದೆ.

'ನೋಟಕ್ಕೆ ಕಟ್ಟಿಲ್ಲ
ಪ್ರಾಯಕ್ಕೆ ಗುಟ್ಟಿಲ್ಲ
ಬೆಳುದಿಂಗಳಂತೆ ಬಿಚ್ಚು' (ನಿಧಿ)

ಹೇಗೆ ಬೆಳುದಿಂಗಳನ್ನು ಮುಚ್ಚಿಡಲು ಸಾಧ್ಯವಿಲ್ಲವೋ ಹಾಗೆಯೇ ನೋಟವನ್ನು, ಪ್ರಾಯವನ್ನು ಮುಚ್ಚಿಡಲು ಸಾಧ್ಯವಿಲ್ಲ ಎಂಬ ಕವಿಯ ಆಶಯವನ್ನು ಈ ಉಪಮೆ ಬಿಚ್ಚಿಡುತ್ತದೆ. ಇಂಥ ಉಪಮಾ ಹಾಗೂ ರೂಪಕ ಪ್ರಯೋಗಗಳಿಂದ ಚುಟುಕಿನಲ್ಲಿ ಅರ್ಥಗಳ ಜಗತ್ತನ್ನು ತೆರೆದಿಡಲು ಸಾಧ್ಯವಾಗುತ್ತದೆ.

ಅರ್ಧ ಶತಮಾನಕ್ಕೂ ಮಿಕ್ಕು ಕಾವ್ಯರಚನೆಯಲ್ಲಿ ತೊಡಗಿಕೊಂಡ ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ನಡೆದು ಬಂದ ದಾರಿ, ಏರಿದ ಎತ್ತರಗಳಿಗಾಗಿ ಅವರನ್ನು ಹಾರ್ದಿಕವಾಗಿ ಅಭಿನಂದಿಸಬೇಕು. ಅವರ ಮೂಲ ಪ್ರೇರಣೆಯಾದ ಪ್ರಕೃತಿಯನ್ನು ಹಲವು ರೂಪಗಳಲ್ಲಿ, ಹಲವು ದೃಷ್ಟಿಕೋನಗಳಿಂದ ನೋಡಿ ವರ್ಣಿಸಿದ ಕವಿತೆಗಳೆಲ್ಲ ಕೊಡುವ ಅನುಭವ, ಆನಂದ ಅದ್ಭುತವಾದುದು. ಈ ಕಾವ್ಯದ ಒಡಲಲ್ಲಿ ಕವಿ 'ನೇಯ್ದ' ಪ್ರಕೃತಿ ಪ್ರೇಮ, ಮಾನವತಾವಾದ, ಶೋಷಣೆಯ ವಿರುದ್ಧದ ಪ್ರತಿಭಟನೆಯ ದಿಟ್ಟ ಧ್ವನಿ; ದೇವರಂತೆ, ಗುರುವಿನಂತೆ, ತಾಯಿಯಂತೆ ಇರುವ ಪ್ರಕೃತಿಯ ಮಡಿಲಿಗೆ ನಮ್ಮನ್ನು ಕರೆದೊಯ್ಯಬೇಕೆಂಬ ಕಳಕಳಿ—ಇವೆಲ್ಲ ಅವರನ್ನು ಶ್ರೇಷ್ಠ ಕವಿಗಳ ಸಾಲಿನಲ್ಲಿ ನಿಲ್ಲಿಸುತ್ತವೆ.

ಇವೊತ್ತು ನಮ್ಮ ಸಾಮಾಜಿಕ ಬಾಳ್ವೆಯಲ್ಲಿ ಆಗಿರುವ ಮೌಲ್ಯ ಪತನದ ಕತೆಯೇ, ಅದರ ಮತಿಬಿಂಬವೆನ್ನಿಸುವ ಸಾಹಿತ್ಯ ಕ್ಷೇತ್ರದಲ್ಲೂ ಮುಂದು ವರಿದಿದೆ. ಇತ್ತ ಸ್ವ-ಶ್ರೇಯಸ್ಸನ್ನೂ ಹೊಂದದೆ, ಅತ್ತ ಪರಹಿತ ಸಾಧನೆ ಯಿಂದಲೂ ವಂಚಿತವಾಗಿರುವ ವಾಸ್ತವಿಕ ಅಭಿವ್ಯಕ್ತಿಯ ಗ್ರೀಷ್ಮತೆ, ಬೋಳುತನಗಳು ವೈದೃಶ್ಯದಿಂದ ಹಿಂದಿನ ಘನವಾದ ಧ್ಯೇಯೋದ್ದೇಶದ ಹಿರಿಮೆ ಮತ್ತು ಸಮೃದ್ಧಿಯನ್ನು ಮತ್ತಷ್ಟು ಪ್ರಕಾಶಮಾನವಾಗಿ ನೆನಪಿಸಿ ಅವುಗಳ ಪ್ರಸಕ್ತ ಅನಿವಾರ್ಯತೆಯನ್ನು ಸಾರಿವೆ. ಮಿರಿಮಿರಿ ಮಿನುಗಿ ಸ್ವಂತ ಮೊಗದ ಮೋಹಕತೆಯನ್ನು ಮೆರೆಸಿದ್ದಲ್ಲದೆ ಇತರೆಯವರ ಮೆಚ್ಚು, ಸಂತಸಗಳಿಗೆ ಕಾರಣವಾಗಿದ್ದ ಮಾಣಿಕ್ಯದ ನತ್ತು ಮರೆಯಾಗಿದೆ. ಈಗ ಸೂಜಿಯ ತೂತು ಮಾತ್ರ ಮೂಗಿನ ಮೇಲೆ ಭಣಭಣಿಸಿದೆ; ನೋಟಕರ ದೃಷ್ಟಿಗೆ ಅನಾಕರ್ಷಕವಾಗಿ ಕಂಡಿದೆ. ಉಳಿದಿರುವ ಆ ನೆನಹು ಸಹ ಲೋಪವನ್ನು ಮತ್ತಷ್ಟು ಎತ್ತಿ ತೋರಿಸುವ ಕುರುಹಾಗಿ ಕಾಡಿದೆ.

(ಸಾಹಿತ್ಯದ ಮೌಲ್ಯ ಪತನ)



ನಿಸಾರ್ ಅವರ ಕವಿತೆಗಳಲ್ಲಿ ಸಾಹಿತ್ಯೇತರ ವ್ಯಕ್ತಿಗಳು

♦ ಆರ್ಯ

ನವ್ಯ ಸಾಹಿತ್ಯ ವರ್ತುಲದಲ್ಲಿ ನಾಡೋಜ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಒಬ್ಬ ಪ್ರಮುಖ ಕವಿ. ಅವರು ವೈಚಾರಿಕತೆ ಮತ್ತು ಭಾವಗಳನ್ನು ಸಮವಾಗಿ ಮೇಳವಿಸಿ ಕಾವ್ಯ ಪ್ರಕಾರದಲ್ಲಿ ಎರಕ ಇಳಿಸುತ್ತಾರೆ. ನಿಸಾರ್ ಅವರ ಕವನಗಳ ವಿಶೇಷತೆಗಳು ಅನೇಕ. ಕನ್ನಡಕ್ಕೆ ಅತ್ಯಂತ ವಿಶಿಷ್ಟ ಮತ್ತು ಸ್ವಂತತೆಯ ಮೊಹರನ್ನುಳ್ಳ ಅಸಂಖ್ಯ ನವ್ಯ ಕವಿತೆಗಳನ್ನು ಮತ್ತು ಭಾವಗೀತ ಗಳನ್ನು ಅವರು ಬಳುವಳಿ ಕೊಟ್ಟಿದ್ದಾರೆ. ಅವುಗಳನ್ನು ಕವಿ ರಚಿಸಿ ಹಲವಾರು ದಶಕಗಳು ಕಳೆದಿದ್ದರೂ ಬಣ್ಣ ಮಾಸದೆ ಅನುಪಮ ಮೆರುಗಿನಿಂದ ಕಾವ್ಯಪ್ರಿಯರನ್ನಷ್ಟೇ ಅಲ್ಲ, ಜನ ಸಾಮಾನ್ಯರನ್ನೂ ಆಕರ್ಷಿಸಿವೆ.

ನಿಸಾರರಲ್ಲಿ, ಅವರು ಗದ್ಯ ಬರೆಯಲಿ, ಪದ್ಯವನ್ನೇ ರಚಿಸಲಿ, ಎದ್ದು ಕಾಣುವ ಗುಣವೆಂದರೆ ವಸ್ತುವಿನ ವಿವಿಧತೆ ಮತ್ತು ಆ ವಸ್ತು ಎಷ್ಟೇ ಜಟಿಲವಾದದ್ದಾಗಿರಲಿ, ಗಹನ ವಾಗಿರಲಿ, ಬದುಕಿನ ಯಾವುದೇ ಪ್ರಕಾರಕ್ಕೆ ಸೇರಿದ್ದಾಗಿರಲಿ ಅದನ್ನು ಓದುಗ ಗ್ರಹಿಸಿ ಅರ್ಥೈಸಿಕೊಳ್ಳಲು ನೆರವಾಗುವ ಮಾತಿನ ಅಭಿವ್ಯಕ್ತಿ ಕೌಶಲ. ಭಾವಸಮೃದ್ಧವಾಗಿದ್ದೂ ಬುದ್ಧಿ ಗಮ್ಯವಾಗಿ, ಕಾವ್ಯಾತ್ಮಕ ಸೂಕ್ಷ್ಮತೆಗಳನ್ನು ಗರ್ಭಯಿಸಿಕೊಂಡೂ ತರ್ಕ ಸಮ್ಮತವಾಗಿ ಹೃನ್ಮನಗಳನ್ನು ವಶೀಕರಿಸಿಕೊಳ್ಳುವ ಸಾಮರ್ಥ್ಯ ಶ್ರೀಯುತರ ಕವಿತೆಗಳಿಗೆ ಇದೆ.

ನಿಸಾರ್ ಅಹಮದ್ ಸಾಮಾಜಿಕ, ರಾಜಕೀಯ,

ಸಾಂಸ್ಕೃತಿಕ, ತಾತ್ತ್ವಿಕ ಮುಂತಾದ ಸಂಗತಿಗಳ ಜೊತೆಗೆ ನಿಸರ್ಗ, ಪ್ರೇಮ-ವಿರಸ, ಸ್ನೇಹ ಸೌಹಾರ್ದ, ಬದುಕಿನ ಜಿಜ್ಞಾಸೆ ಮತ್ತಿತರ ವಿಷಯಗಳ ಬಗೆಗೆ ಪದ್ಯರಚನೆ ಮಾಡಿದ್ದಾರೆ. ಇವುಗಳೊಂದಿಗೆ ಅವರು ಅಸಂಖ್ಯ ವ್ಯಕ್ತಿ ಕವನಗಳನ್ನೂ ಬರೆದಿದ್ದಾರೆ. ಈ ಬಗೆಯ ಕವಿತೆಗಳ ವ್ಯಾಪ್ತಿ, ವೈವಿಧ್ಯ, ವೈಶಿಷ್ಟ್ಯ ಆಶ್ಚರ್ಯಜನಕ ಎನ್ನಿಸುತ್ತದೆ. ಬಹುಶಃ ಕನ್ನಡದಲ್ಲಿ ಇವರಷ್ಟು ಈ ನಮೂನೆಯ ಪದ್ಯಗಳನ್ನು ಬರೆದು ಯಶಸ್ಸು ಗಳಿಸಿದವರು ಮತ್ತೊಬ್ಬರಿಲ್ಲ ಎಂದರೂ ನಡೆದೀತು.

ಇವರ ಕವಿತೆಗೆ ವಸ್ತುವಾಗುವ ವ್ಯಕ್ತಿಗಳು ಕೇವಲ ಕವಿ-ಸಾಹಿತಿಗಳೇ ಅಲ್ಲ. ಧಾರ್ಮಿಕ ವ್ಯಕ್ತಿಗಳು, ಅನುಭಾವಿಗಳು, ಮಾನವ ಕಲ್ಯಾಣ ಬಯಸುವ ಮಹಾನುಭಾವರು, ರಾಜಕಾರಣಿಗಳು, ದೇಶ ಪ್ರೇಮಿಗಳು, ಸಮಾಜ ಸುಧಾರಕರು ಮೊದಲಾದವರಿದ್ದಾರೆ. ಗಂಡುಗಳಷ್ಟೇ ಅಲ್ಲ, ಸ್ತ್ರೀಯರೂ ಇದ್ದಾರೆ. ಸುಪ್ರಖ್ಯಾತರ ಜೊತೆಗೆ ಅನಾಮಿಕ ಅಜ್ಞಾತರೂ ಇದ್ದಾರೆ. ಸಾರ್ವಜನಿಕ ವ್ಯಕ್ತಿಗಳ ನೆರೆಯಲ್ಲೇ ಖಾಸಗಿ ಬದುಕಿನ ವಿನಾ ಬೇರೆ ಕಾಳಜಿಗಳಿಲ್ಲದ ಶ್ರೀಸಾಮಾನ್ಯರೂ ಇದ್ದಾರೆ. ಬಹುಶಃ, ನಿಸಾರ್ ಅವರ ವ್ಯಕ್ತಿ ಕವನಗಳ ಬಾಹುಳ್ಯ, ವಿವಿಧತೆ ಹಾಗೂ ಸ್ವಭಾವ ಚಿತ್ರಣದ ಅನನ್ಯತೆ ಮತ್ತು ಸೂಕ್ಷ್ಮಗ್ರಾಹಿತ್ವವನ್ನು ಕುರಿತು ವಿಚಾರಶೀಲವಾದ ಒಂದು ಹಿರಿಯ ಹೊತ್ತಗೆಯನ್ನೇ ಬರೆಯಬಹುದು ಎಂದು ತೋರುತ್ತದೆ. ಒಂದೊಂದು ಕವಿತೆಯಲ್ಲೂ ಒಂದೊಂದು ವಿಶಿಷ್ಟತೆ, ಒಂದೊಂದು ಹೊಸ ತಿಳಿವಳಿಕೆ ಮತ್ತು ಪುನರಾವರ್ತಿಸದ ಒಂದು ನಾವೀನ್ಯ ವಾಚಕನಿಗೆ ಮನವರಿಕೆಯಾಗುತ್ತದೆ. ಅವುಗಳಲ್ಲಿ ಬಳಕೆಯಾಗಿರುವ ಹೋಲಿಕೆ, ರೂಪಕ ಮತ್ತು ಪ್ರತಿಮೆಗಳ ಸಮಂಜಸತೆ, ಸ್ವಚ್ಛತೆಗಳು ಮೆಚ್ಚುಗೆಗೆ ಪಾತ್ರವಾಗುತ್ತವೆ.

ವ್ಯಕ್ತಿ ಕವನಗಳಲ್ಲಿ ನಾನು ಪರಿಶೀಲಿಸಲು ಆರಿಸಿಕೊಂಡಿರುವುವು ಸಾಹಿತ್ಯೇತರರನ್ನು ಕುರಿತ ಪದ್ಯಗಳನ್ನು. ಅವರಲ್ಲೂ ನಾನು ಧಾರ್ಮಿಕ, ಆಧ್ಯಾತ್ಮಿಕ ಮತ್ತು ಆ ಪ್ರಭೇದಕ್ಕೆ ಸನಿಹವಿರುವ ಮಹನೀಯರನ್ನು ಕುರಿತ ರಚನೆಗಳನ್ನು ಕೈಬಿಟ್ಟಿದ್ದೇನೆ. ಅವು ಪ್ರತ್ಯೇಕವಾಗಿ ಸಮಾಲೋಕಿಸುವ ಬಾಹುಳ್ಯವಿರುವಂಥವು. ಮುಖ್ಯವಾಗಿ ನಾನು—ನೆಹರು, ಯಾಸಿರ್ ಅರಾಫಾತ್, ನಿಸಾರರ ತಾಯಿ (ಹೆತ್ತಾಕೆ), ಜಿಟಿಎನ್, ಕೆಂಪು ತೋಟ ಮತ್ತು ಎಚ್ಚೆನ್, ಭೀಮಪ್ಪ ಮಾಸ್ತರರು, ರಾಮನ್ ಸತ್ತ ಸುದ್ದಿ, ಹಿಂದೂಡಿದ ಪಯಣ, ಮೃಗಾಯಣ, ಮೈಲಿ ಮೊಗದ ಮಹಾರಾಯ—ಕವನಗಳನ್ನು ನನ್ನ ಅವಗಾಹನೆಗೆ ತೆಗೆದುಕೊಂಡಿದ್ದೇನೆ. ಇವುಗಳಲ್ಲಿ ಕೆಲವು ಸಾಕಷ್ಟು ಜನಾದರಣೀಯವಾಗಿರುವುದರಿಂದ ಮತ್ತು ಈ ಗ್ರಂಥದಲ್ಲಿ ಬೇರೆ ಲೇಖನ ಕರ್ತೃಗಳಿಂದ ಅಲ್ಲಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಸಾಧ್ಯತೆ ಇರಬಹುದಾದ್ದರಿಂದ, ನಾನು ದೀರ್ಘವಾಗಿ ವಿಮರ್ಶಿಸದೆ, ನನ್ನ ಅನ್ನಿಸಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಇದು ಒಬ್ಬ ಕಾವ್ಯ ವಾಚಕ ತಾನು ಕವಿತೆಗಳನ್ನು ಓದಿ ಸಂತೋಷ ಪಟ್ಟಾಗ ಸಹಜವಾಗಿ ಹೊಮ್ಮಿದ ಆಲೋಚನೆಗಳ ಉದ್ಗಾರಗಳು, appreciation ಬಗೆಯ ಮನೋಗತಗಳು, ತಲಸ್ಪರ್ಶಿಯಾದ ವಿಮರ್ಶೆಯ ನುಡಿಗಳಲ್ಲ.

ಮೊದಲಿಗೆ 'ನೆಹರು' ಪದ್ಯವನ್ನು ಪರಿಶೀಲನೆಗೆ ಆಯ್ದುಕೊಳ್ಳುತ್ತೇನೆ.

ನಿಸಾರ್ ಅವರು ನೆಹರೂರಂತಹ ಮಹಾನ್ ವ್ಯಕ್ತಿಗಳ ಕುರಿತು ಬರೆಯುವಾಗಲೂ ವೈಭವೀಕರಣದ ಅಪಾಯವನ್ನು ಕುರಿತು ಎಚ್ಚರಿರುತ್ತಾರೆ. ಸಂವಹನದ ಬಗ್ಗೆಯೂ ಪ್ರಜ್ಞಾಪೂರ್ವಕ ಕಾಳಜಿ ವಹಿಸಿದಂತಿದೆ. ಓದುಗರ ಅಥವಾ ಕೇಳುಗರ ಕುರಿತು ಇಂತಹ ಗೌರವವಿರುವುದು ಕವಿಯ ಸಜ್ಜನಿಕೆಯ ಕುರುಹು.

'ನೆಹರು' ಕವಿತೆ ಒಂದು ವೃತ್ತದ ಎತ್ತರದ ಬಿಂದುವಿನಲ್ಲಿ ನೆಲೆಗೊಂಡು, ವಾಸ್ತವದ ನಡುವಿಗಿಳಿದು, ಮತ್ತೆ ಎತ್ತರಕ್ಕೇರಿ ವೃತ್ತ ಪೂರ್ಣಗೊಳ್ಳುತ್ತದೆ. ಒಂದನೆಯ ಪದ್ಯಭಾಗದಲ್ಲಿ ನೆಹರೂರವರ ಮಹಾನತೆಯನ್ನು ಕವಿ ಬೆಳಗುತ್ತಾರೆ. ನೆಹರೂ ಎಂದೂ ಹಿಂದೆ ಬಿದ್ದವರಲ್ಲ, ಸಲಗದಂತೆ ಮುನ್ನಡೆಯುವ ಮುಂದಾಳು. ಹದ್ದು ಮೀರಿ ಎತ್ತರ ಹಾರುವ ಹದ್ದು. ನಕ್ಷತ್ರ ಪುಂಜಗಳನ್ನೂ ಮೀರುವ ಬೆಳುದಿಂಗಳ ಚಂದಿರ.

ಈ ಉದಾರ ನೋಟ ವೈಭವೀಕರಣವಾಗಬಾರದೆಂದು ಎರಡನೆಯ ಪದ್ಯಭಾಗದಲ್ಲಿ ನೆಹರೂರವರನ್ನು ದೈನಂದಿನ ವಾಸ್ತವಕ್ಕೆ ಇಳಿಸುತ್ತಾರೆ. ದೇಶ ಕಟ್ಟುವ ರಾಜಕಾರಣದ ಕಿರು ಕೊರಕಲು ದಾರಿಗಳಲ್ಲಿ ನಡೆಯುವಾಗ ಒಮ್ಮೊಮ್ಮೆ ತೂಕ ತಪ್ಪುವುದು ಮಾನವ ಸಹಜ. ನೇತಾರರ ಹಿಂದೆ ಆಶ್ರಿತರು, ಹೊಗಳುಭಟ್ಟರೂ ಇರುವುದು ನಮ್ಮ ರಾಜಕೀಯ ಕ್ಷೇತ್ರದ ವಾಸ್ತವ. ಇಂಥವರನ್ನೆಲ್ಲ ಅಸಮಾಧಾನಕ್ಕೆ ಆಸ್ಪದ ಕೊಡದಂತೆ ಸಂಭಾಳಿಸಬೇಕಾದ ನೆಹರೂ ಒಮ್ಮೊಮ್ಮೆ ತೂಕ, ಲೆಕ್ಕಾಚಾರ ತಪ್ಪುವುದು ಸಹಜ. ಆದರ್ಶವಾದಿಗಳ ಕನಸು ಹಲವು ವೇಳೆ ಭಂಗಗೊಳ್ಳುತ್ತದೆ. ಆ ಭಂಗಗೊಳ್ಳುವ ಗುಣವನ್ನು ತೋರಿರುವುದರಿಂದಲೇ ಆದರ್ಶ, ಆದರ್ಶವಾಗುತ್ತದೆ. ಪಾಕೀಸ್ತಾನೀ, ಚೀನಾ ಯುದ್ಧಗಳು ವಿವಿಧ ಐಡಿಯಾಲಜಿಗಳ ಜತೆ ಮುಖಾಮುಖಿಯಾದಾಗ ಒಮ್ಮೊಮ್ಮೆ ಸಂಯಮ ಕಳೆದುಕೊಳ್ಳುವುದೂ ಸಹಜ. ಆದರೆ ಆಗ ಹಿಂದೆ ಆಶ್ರಿತರಾಗಿದ್ದವರು, ಹಿಂಬಾಲಕರು ಹದ್ದು ಮೀರಿ ಟೀಕೆಯ ಅಪಚಾರಕ್ಕಿಳಿಯುವುದು ಅನೈತಿಕವಾಗುತ್ತದೆ.

ಮೂರನೆಯ ಪದ್ಯಖಂಡದಲ್ಲಿ ನಿಸಾರ್ ಅವರು, ನೆಹರೂರವರನ್ನು ಮತ್ತೆ ಘನತೆಯ ಎತ್ತರಕ್ಕೊಯ್ಯುತ್ತಾರೆ. ಚಿಲ್ಲರೆ ಜನರ ಅಪವಾದಗಳ, ಚಿಕ, ಕ್ಷುದ್ರ ಇರುವೆ, ಘನ ನೆಹರೂರವರ ವಿಶಾಲತೆ ಎನ್ನುವ ಆನೆಕಿವಿಯನ್ನು ಹೊಕ್ಕಂತೆ, ಮತ್ತೂ ಕ್ಷುದ್ರವಾಗಿ ಬಿಡುತ್ತದೆ. ಆಗ ನಿರಂತರ ನಿಲ್ಲುವ ನೆಹರೂರವರ ಮಹಾನ್ ಆತ್ಮ ನಕ್ಕುಬಿಡುತ್ತದೆ. ಎಂದೂ ಸಾವಿರದ ನೆಹರೂರವರ ಆತ್ಮ.

'ಹದ್ದು ಮೀರಿ ಹಾರುವ ಹದ್ದು'. 'ಆನೆ ಕಿವಿಯೊಳಗಾಗ ಅಪವಾದದತಿ ಕ್ಷುದ್ರ ಇರುವೆ ಹೊಕ್ಕಿತ್ತು', 'ಧೈರ್ಯದ ಮದ್ದು'—ಇಂತಹ ಪ್ರತಿಮೆ ಉಪಮಾನಗಳು, 'ಹದ್ದು'. 'ಸಾವಿರದ' ಶ್ಲೇಷೆಗಳು ಕವಿತೆಯ ವಸ್ತುವಿಗೆ ಮಹೋನ್ನತಿಯ ಬೆಳಕನ್ನು ಕೂಡಿಸುತ್ತವೆ, ಅತಿಶಯವಾದ ಅರ್ಥವಂತಿಕೆಯನ್ನು ಧ್ವನಿಸುತ್ತವೆ.

ಉದಾರವಾದಿ ನೆಹರೂರಂತೆಯೇ, ಕ್ರಾಂತಿಕಾರಿ-ಆದರ್ಶವಾದಿ ಯಾಸಿರ್ ಅರಾಫತ್ ಅವರೂ ಕವಿಗೆ ಆತ್ಮೀಯರಾಗುತ್ತಾರೆ. ಸ್ವಾತಂತ್ರ್ಯ, ಸಮಾನತೆ, ಆತ್ಮಗೌರವಗಳ ಸಂಕೇತ ವಾಗುತ್ತಾರೆ. ಅರಾಫತ್ 'ಫಲಸ್ತೀನಿಯರ ವರ ನೇತಾರ, ಅಪರಿಮಿತಾರ್ತರ ಜಯಕಾರ'.

'ನೆಹರು' ಕವಿತೆಯಲ್ಲಿ, ಹೊರಗಿನಿಂದ ಕವಿ ನೆಹರೂರವರ ಭವ್ಯತೆಯನ್ನು ಮೆಚ್ಚಿದ್ದರೆ, 'ಯಾಸಿರ್ ಅರಾಫತ್' ಕವಿತೆಯಲ್ಲಿ ಅರಾಫತ್‌ರನ್ನು ಒಳ ಹೊಕ್ಕು ದರ್ಶಿಸಿದ್ದಾರೆ. ಅವರು ಕೌರ್ಯ ಹಿಂಸೆಗಳ ವಿರುದ್ಧ ಸೆಟೆದು ಸೆಣೆಸುವುದನ್ನು ಶ್ಲಾಘಿಸುತ್ತಾರೆ. ಶೋಷಿತರ ಕುರಿತು ನೋವು, ಸ್ವಾತಂತ್ರ್ಯದ ಹಂಬಲ, ಹೋರಾಡುವ ಛಲಗಳನ್ನು ಮಾನವ ಸಾರ್ಥಕ್ಯದ, ಜೀವಿತ ಪುರುಷಾರ್ಥದ ಪರಮ ಗುಣಗಳೆಂದು ಪರಿಭಾವಿಸುತ್ತಾರೆ.

ಅರಾಫತ್ ದಿಕ್ಕೆಟ್ಟ ಅರಬ್ಬರ ಮುನ್ನೋಟದ ದಿಗ್ದರ್ಶಿನಿ, ಮೃಗೀಯರ ಆಳ್ವಿಕೆಯ ನಾಗಕ್ಕೆ ಹದ್ದಾಗುತ್ತಾರೆ. ಅರಬ್ ಜನಾಂಗದ ಸ್ವಾತಂತ್ರ್ಯದ, ಅಪರಾಧೀನತೆಯ ಕಹಳೆ ಧ್ವನಿಯಾಗುತ್ತಾರೆ. ಹವೆಯಾಡದ ನಿರಾಶ್ರಿತರ ಶಿಬಿರಗಳಲ್ಲಿ ಹಸಿವಿನಿಂದ ಸಾಯುತ್ತಿರುವ, ತಮ್ಮದೇ ಮನೆಯಲ್ಲಿ ತಾವೇ ತೊತ್ತಾಗಿರುವ, ಬಂಕರಿನಿಂದ ಬಂಕರಿಗೆ ಓಡಾಡುತ್ತ ದೌರ್ಜನ್ಯ ದಬ್ಬಾಳಿಕೆಯನ್ನು ಪ್ರತಿಭಟಿಸುತ್ತ, ಭಾರತದ ಮಿತ್ರ ಹಾಗೂ ಫಲಸ್ತೀನಿಯರ ಮುಕ್ತಿಯ ಓಂಕಾರರಾಗುತ್ತಾರೆ, ಯಾಸಿರ್ ಅರಾಫತ್. ಫಲಸ್ತೀನಿಯರ ಕುರಿತ ಕವಿಯ ಪ್ರತಿಸ್ಪಂದ ತೀವ್ರ ಹಾಗೂ ಪ್ರಾಮಾಣಿಕವಾಗಿದ್ದರೂ ಕವಿತೆ ಸ್ವಲ್ಪ ವಾಚ್ಯ ಹಂತದಲ್ಲಿ ನಿಂತು ಬಿಡುತ್ತದೆ.

ಅರಾಫತ್ ವ್ಯಕ್ತಿತ್ವವನ್ನು ಹಲವು ಭಾರತೀಯ ಪೌರಾಣಿಕ ಪ್ರತಿಮೆಗಳಿಂದಲೂ ಹೆಣೆಯುವುದು ಕುತೂಹಲಕಾರಿಯಾಗಿದೆ. 'ವೈರಿ ನಾಗರ ಹನನಕ್ಕೆ ನೃತ್ಯೋನ್ಮಾದದೊಳಿರುವ ಶಿಖಿ', 'ಬಕನೆದುರಲ್ಲಿಯ ಉತ್ತರನು? ಭೀಮನ ಬಲಯುತ ಮುಷ್ಟಿಗೆ ಮಾತ್ರ ಯಮಪುರಿಗಸುರನು ಹತ್ತಿರನು!', 'ಆಶಾಗಜ ಘೀಂಕಾರ', 'ಹಿಂಸಾಚಾರೀ ಮರ್ದನ ಚಂಡೀ ನರ ವರ ಅವತಾರ' ಮುಂತಾಗಿ ಅರಾಫತ್‌ರ ವ್ಯಕ್ತಿತ್ವ ಯಹೂದ್ಯ ಅಚ್ಚ ಭಾರತೀಯ ವಿಶೇಷಣಗಳಲ್ಲಿ ಎದ್ದೇಳುತ್ತದೆ.

ನಿಸಾರರ ಕವನಗಳಲ್ಲಿ ಅಲ್ಲಲ್ಲಿ ತೋರಿ ಬರುವ ಜೀವನದ ನಿಜವಾದ ಉದ್ದೇಶದ, ಕೃತಕೃತ್ಯತೆಯ ತುಡಿತ ಹಾಗೂ ಉನ್ನತ ಮೌಲ್ಯಗಳ ಬಗೆಗಿನ ಕಳಕಳಿ ಈ ಪದ್ಯದಲ್ಲೂ ಪರೋಕ್ಷವಾಗಿ ಮೊಗದೋರಿದೆ. ಸ್ವಂತ ಬಾಳಿನ ಸುಖ ಸ್ವಹಿತಗಳಿಗಿಂತ ಸಾಮೂದಾಯಿಕ ಮೇಲ್ಮೆಗಾಗಿ ಜೀವವನ್ನು ತೇಯುವುದರಲ್ಲಿ ಮಾನವ ಜೀವಿತದ ಹಿರಿಮೆ ಅಡಗಿದೆ. ಕೇವಲ ತನಗಾಗಿ, ಆಪ್ತೇಷ್ಟರಿಗಾಗಿ ಬಾಳುವುದು ಕ್ರಿಮಿ ಕೀಟಾದಿಗಳಿಗೆ ಸದೃಶವೆಂದು ಕವಿ ಘೋಷಿಸುತ್ತಾರೆ. ಯಾಸಿರ್ ಅರಾಫತ್‌ರ ಬಾಳ್ವೆಯ ಕೃತಾರ್ಥತೆಯನ್ನು ಅವರು ಮನಗಾಣಿಸುವ ಪರಿ ಇದು:

'ಜನಗಣದೊಳಿತಿನ ತಿಮಿರ ವಿನಾಶಕೆ
ಸ್ವಹಿತದ ದೀಪವ ದಾನಿಸಿದೆ.
ಕ್ರಿಮಿಯೊಲು ಎಂದೋ ಮುಗಿಯುವ ಇರವನು
ಹೆಗ್ಗುರಿಯಲಿ ಸನ್ಮಾನಿಸಿದೆ.' **(ಯಾಸಿರ್ ಅರಾಫತ್)**

ಸಮಾಜದ ಇತರರನ್ನು ಕುರಿತ ಕವಿಯ ನೋಟ ಒಂದು ಬಗೆಯದಾದರೆ, ತಾಯಿಯನ್ನು ಕುರಿತು ನುಡಿಯುವಾಗ, ತನ್ನ ಮತ್ತು ತಾಯಿಯೆಂಬ 'ಇತರ'ಳ ಸಂಬಂಧ, ತನ್ನದೇ

ಆತ್ಮೀಯ ಅಂಗವಾಗಿ ಗಾಢವಾಗುತ್ತದೆ. ಇದನ್ನು 'ಹೆತ್ತಾಕೆ' ಕವಿತೆಯಲ್ಲಿ ಕಾಣಬಹುದು. ಇಲ್ಲೂ, ಇತರ ಹೆಚ್ಚಿನ ಕವಿತೆಗಳಲ್ಲಿ ಕಂಡು ಬರುವ ಇನ್ನೊಂದು ಮುಖ್ಯ ಗುಣವೆಂದರೆ, ಜಟಿಲ ಬೌದ್ಧಿಕ ಪ್ರತಿಮೆಗಳ ಆರ್ಭಟವಿಲ್ಲದ ಪರಿಚಿತ ಸರಳ ಲಯದ ಉಪಮೆಗಳ ಹಾಯೆನಿಸುವ ಪ್ರಸಾದತೆಯ ಸುಗಮ ಗತಿಯ ಪಂಕ್ತಿಗಳು. ಇವು ಕಾವ್ಯವನ್ನು ಚಪ್ಪರಿಸುವ ಸಹೃದಯರಿಗೆ ಆತ್ಮೀಯವಾಗುತ್ತವೆ.

ತಾಯಿ ಮಕ್ಕಳ ಆತ್ಮೀಯ ಸಂಬಂಧ ಎಂದೂ ವಿಶ್ವಾತ್ಮಕ ಹಾಗೂ ಗಾಢ. ಈ ಕವನದ ಹೆಚ್ಚುಗಾರಿಕೆಯೆಂದರೆ, ಆ ಗಾಢ ಸಂಬಂಧವನ್ನು ಪ್ರತಿಮೆ, ಲಯ, ಭಾವಗಳಿಂದ ಪ್ರಸ್ತುತಪಡಿಸುವ ವಿಶಿಷ್ಟವಾದ ರೀತಿ; ಮತ್ತು ಇಲ್ಲಿನ ಪರಿಭಾವನೆ ಕವಿಯ ಕುಟುಂಬ ಹಾಗೂ ಧಾರ್ಮಿಕ ಸಂವೇದನೆಯ ಪಾತಳಿಗಳಲ್ಲಿ ಹೆಣೆದುಕೊಂಡಿರುವ ರೀತಿ.

ಕವಿತೆ ಮಸೀದಿಯ ಶುಕ್ರವಾರದ ಆರಾಧನೆಯ ಅನಂತರ, ಕವಿ ತಾಯಿಯ ಸಮಾಧಿಗೆ ನಡೆಯುವಲ್ಲಿ ಆರಂಭವಾಗುತ್ತದೆ. ತಂದೆಯ ಸಮಾಧಿಯ ಪಕ್ಕದಲ್ಲೇ ತಾಯಿಯ ಕೆಮ್ಮಣ್ಣಿನ ಸಮಾಧಿಯೂ ಇದೆ : ದಿನವೂ ನಮಾಜ್, ಗಂಡ ಮಕ್ಕಳಿಗಾಗಿ ಪ್ರಾರ್ಥನೆ ಮಾಡಿದ ನಿಃಸ್ವಾರ್ಥ ಜೀವಿಯಾದ ತಾಯಿಯ ಗೋರಿ. 'ಸಗ್ಗ ಕಾಲಡಿಯಿಹುದು' ಎನ್ನುವ ಪ್ರವಾದಿ ಪೈಗಂಬರರ ಮಾತು, 'ಇಹ ಪರದ ನಡುಗಡಲ ತೋರುದೀಪ'ವಾದ ತಾಯಿ ಎಂಬ ಮಾತು ಕವಿತೆ ಏರಿರುವ ಉದಾತ್ತ ನೆಲೆಯನ್ನು ದ್ಯೋತಿಸುತ್ತವೆ. ಇದು ತುಂಬ ಉಚಿತವಾದ ಮುಕ್ತಾಯವೆಂದು ವಾಚಕರಿಗೆ ಅನ್ನಿಸದೆ ಇರದು.

ಈ ಕವಿತೆ, ಒಂದು ಮಧ್ಯಮ ವರ್ಗದ ಕುಟುಂಬದ ತಾಯಿ ಮಗನ ಗಾಢ ಸಂಬಂಧ, ಕುಟುಂಬದ ಅನ್ಯೋನ್ಯತೆ, ಅದರ ಹಿನ್ನೆಲೆಯಾದ ಧಾರ್ಮಿಕ ಭರವಸೆ, ವಿಶ್ವಪ್ರಜ್ಞೆ ಇವನ್ನೆಲ್ಲ ಸರಳವಾಗಿ, ಆತ್ಮೀಯವಾಗಿ, ಸುಸಂಬದ್ಧವಾಗಿ ಪೋಣಿಸಿ, ಅವಕ್ಕೊಂದು ಘನವಾದ ಒಟ್ಟಂದವನ್ನು ತರುತ್ತದೆ. 'ನೆನಹ ಗಾಣ', 'ಗೋರಿಯ ಮೇಲಿನ ಮಾಸಿದ ಹೂ ಹೊದಿಕೆ', 'ಹಕ್ಕಿ ವಲಸೆ ತೊರೆದ ಗೂಡು', 'ಬಲು ಸಮಯ ಬಂದಳಿಕೆಯಂತೆ ಹತ್ತಿದ ಬೇನೆ, ಸಾವಿನಲ್ಲಿ ಅಂತ್ಯವಾಗುವುದು' ಮುಂತಾದ ಅಪೂರ್ವ ನುಡಿಚಿತ್ರಗಳು, ಉಪಮೆಗಳು ಕವಿತೆಗೆ ಜೀವಂತ ಧ್ವನಿ ಮತ್ತು ಆತ್ಮೀಯ ಬಗೆಯ ಬಂಧಗಳನ್ನು ನೀಡುತ್ತವೆ. ತಾಯಿಯ ಹಿರಿಮೆಯ ಬಗೆಗಿನ ಒಂದು ಮಾರ್ದವವೂ ಅಂತಃಕರಣಪೂರಿತವೂ ಆದ ಶ್ರದ್ಧಾಂಜಲಿ ಯಂತಿದೆ ನಿಸಾರರ 'ಹೆತ್ತಾಕೆ'. ಹೆತ್ತೊಡಲಿನ ತ್ಯಾಗಶೀಲ ಜೀವಿತದ ಕೃಪಾಪೂರ್ಣ ಉಪಕಾರವನ್ನು ಕವಿ ಸ್ಮರಿಸುವ ರೀತಿ ಅವಿಸ್ಮರಣೀಯ:

'ನನ್ನ ಜೀವದ ಹಾಯಿ ಲೋಕಕಳಿಸಿದ ಸದಯಿ—
ತಾಯಿ: ಚಿಂತೆಯ ಚಳಿಗೆ ಚೆಲು ರಜಾಯಿ;
ಸ್ವಂತ ಕಷ್ಟದ ಕೆಸರಿನಲ್ಲಿ ಸತಿ ಸುತರೇಳ್ಗೆ
ಪದ್ಮವರಳಿಸಿದಭಯಿ, ಸೌಖ್ಯದಾಯಿ.' **(ಹೆತ್ತಾಕೆ)**

ನಿಸಾರರು ತಮ್ಮ ಸಹೋದ್ಯೋಗಿ ಮತ್ತು ಹಿರಿಯ ಮಿತ್ರರಾದ ಜಿ. ಟಿ. ನಾರಾಯಣ ರಾವ್ ಅವರ ಬಗೆಗೆ ಬರೆದ ಹೃದ್ಯವಾದ ಪದ್ಯ 'ಜಿ.ಟಿ.ಎನ್.' ಇದರಲ್ಲಿ ಅವರ

ವೈಲಕ್ಷ್ಯಣ್ಯ, ಸದ್ಗುಣ, ಸ್ನೇಹಶೀಲತೆ, ದೌರ್ಬಲ್ಯ ಮುಂತಾದವು ಸಹಜವಾಗಿ ಚಿತ್ರಿತವಾಗಿವೆ.

'ಜಿ.ಟಿ.ಎನ್.' ಕವಿತೆ ಹೆಚ್ಚಿನ ಸಂಕೀರ್ಣ ಲವಲವಿಕೆ, ಧಾವಂತವುಳ್ಳ ದೊಡ್ಡ ರಚನೆ. ಅಂತ್ಯಪ್ರಾಸ, ಲಯ, ಮಾತುಕತೆ, ಉದ್ಧರಣೆಗಳಲ್ಲಿ ಉತ್ಸಾಹದಿಂದ ನಡೆಗೊಳ್ಳುತ್ತದೆ. 'ಮೊಹಲ್ಲ, ಮೈಸೂರು, ಮಾತಿನ ಚೊಟಿ, ಅಡಿಗೆ ಧಾಟಿ, ಸೈಕಲ್ ಸೀಟು, ತರಕಾರಿ ರೇಟು' ಇವೆಲ್ಲ ಬದಲಾದೀತು. ಆದರೆ ವಿಜ್ಞಾನದ ಅಧ್ಯಾಪಕ ಜಿ.ಟಿ.ಎನ್.ರ ವಿಚಾರ, ವೇಳಾಪಟ್ಟಿಗಳು ಯಥಾಪ್ರಕಾರ ಉಳಿಯುತ್ತವೆ. ಅವರ ಆಯುಸ್ಸಿನ ಓಯಸ್ಸಿಸ್ಸು ಬತ್ತುವುದನ್ನು ಒಂದಿಷ್ಟು ನಿಲ್ಲಿಸಲೆಂದು 'ಕಾಲ' ಅವರ ಚಹರೆಗೆ ಬಣ್ಣ ಬಳಿದು ಒಂದಿಷ್ಟು ಯೌವನವನ್ನು ಮರುಕೊಳಿಸಿ ಸಮಕಾಲೀನಗೊಳಿಸಲು ಪ್ರಯತ್ನಿಸಿ ಸೋತು ಬಣ್ಣ ಕುಂಚ ಬೀಳಿಸಿ ಕಾಲು ಕಿತ್ತು ಹೋಗುತ್ತಾನೆ!

ಕಾಲ ಬದಲಾಗಿ ಕಾರಂತ, ಕಡೆಂಗೋಡ್ಲು ಜಾಗದಲ್ಲಿ ಚಂಬೈ, ಐನ್‌ಸ್ಟೈನ್, ನೀಲ್ಸ್ ಬೋರ್ ಬಂದಾಗಲೂ ಜಿಟಿಎನ್‌ರು ವಿಜ್ಞಾನದ ಸಮೀಕರಣದಂತೆ ಹಾಗೇ ಉಳಿಯುತ್ತಾರೆ. ಮುಂದೊಮ್ಮೆ ಈ ಸಮೀಕರಣಗಳ ಊಹಿತ ನಿರಂತರತೆಯೂ ಬದಲುಗೊಳ್ಳಬಹುದು. ಆದರೆ ಜಿಟಿಎನ್ ಮಾತ್ರ ಪರಿವರ್ತಿತ ಆಗುವುದಿಲ್ಲ. ಹೀಗೆ ನಿತ್ಯ ಜೀವನ, ಸಾಹಿತ್ಯ, ವಿಜ್ಞಾನ ಮುಂತಾದ ವಿಭಿನ್ನ ಉಪಮಾನಗಳ ಹಿನ್ನೆಲೆಯಲ್ಲಿ ಜಿಟಿಎನ್‌ರ ಸಂಕೀರ್ಣ ಸ್ಥಾವರತೆ ಸ್ಫುಟಗೊಳ್ಳುತ್ತದೆ.

ಎರಡನೆಯ ಪದ್ಯಭಾಗದಲ್ಲಿ ಜಿಟಿಎನ್‌ರ ಲವಲವಿಕೆ—ಜಿಗಿಯುವ ಅಳಿಲು, ಗಕ್ಕನೆ ಮುಕ್ಕುವ ಮಿಡತೆ, ಚಿಮಣಿ ಮೇಲಿನ ಕೋಗಿಲೆಗಳಂತೆ—ಚಕ್ಕನೆ ಮಿಂಚುತ್ತದೆ. ಈಜುಗಾರ ಎಡ ಬಲ ಕೈ ಬಡಿದಂತೆ, ಅಂಗಾತ ತೇಲಿದಂತೆ, ಡೈವ್ ಮಾಡಿ ಗುಬ್ಬಿ ಮುಳುಗಿನಂತೆ ತಳ ಮುಟ್ಟುವಂತೆ ಜಿಟಿಎನ್‌ರ ಬರವಣಿಗೆಯ ಚುರುಕು. ಇಂತಹ ಲವಲವಿಕೆಯ ವಿಜ್ಞಾನಿ, ಕನ್ನಡದಲ್ಲಿ ಜನಪ್ರಿಯ ವಿಜ್ಞಾನವನ್ನು ಕುರಿತು ಬರೆದ ಅಪರೂಪದ ವ್ಯಕ್ತಿ. ಬಿಗು ಮೊಗದ ವಿಜ್ಞಾನಕ್ಕೆ ಕಾವ್ಯದ ಕಚಗುಳಿಯಿಟ್ಟು ನಲಿಸಿದ ವ್ಯಕ್ತಿ.

'ಮಾತಿಗೆ ಕೂತರೆ,
ಅಂದಿನ ಅದೇ ಆತುರ, ತ್ವರೆ;
ಬುಡ ಬಿಳಿಲು, ಹರೆ-
ಯಿಂದ ಹರೆಗೆ ಜಿಗಿಯುವ ಅಳಿಲು.
ಇದ್ದಕಿದ್ದಂತೆ ಹೊಂದಳಿರು ನಳನಳಿಸಿ
ಪರವಾಗಿಲ್ಲ ಎಂದವೋ
ಗಕ್ಕನೆ ಹಿಂದುಗೂಡಿ ಮುತ್ತುವ
ಲಾಗಾಯ್ತಿನ ಮಿಡತೆ ದಂಡು;
ಭಾಷೆ ಜೊತೆ ದೊಂಬರಾಟ—
ಕೋಣೆಯಲ್ಲಾಡಿದಂತೆ ಕಾಲ್ಚೆಂಡು.' (ಜಿ.ಟಿ.ಎನ್.)

ಮೇಲಿನ ಕವಿತಾ ಪಂಕ್ತಿಗಳಲ್ಲಿ ಜಿ.ಟಿ.ಎನ್. ಅವರ ಮೂರ್ತಿತ್ವದ ಒಂದು ಅಪರೂಪದ ಹೊಳಹು ನಮಗೆ ಮನೋವೇದ್ಯವಾಗುತ್ತದೆ.

ಯಾರಲ್ಲೂ ಭೇದವೆಣಿಸದ ಜಿಟಿಎನ್, ಇತರರಲ್ಲಿ ಸಕ್ಕರೆ ತುಣುಕು ಕಂಡರೂ ಅದನ್ನು ಕಬ್ಬಿನ ತೋಟ ಎನ್ನುವ ಸಹೃದಯಿ. ಮಕ್ಕಳಿಗೆ ಅನುಭವದ ಪಿಕ್‌ನಿಕ್‌ನಲ್ಲಿ ಅಡವಿ ಬೆಟ್ಟ ಅಡ್ಡಾಡಿಸಿ ಬಳಲಿಸಿ ಕಲಿಸಿದವರು.

ನವ್ಯದಲ್ಲಿ ಹಲವೊಮ್ಮೆ ಹಿಂದಿನ ಸೀಟು ಹಿಡಿದಿರುವ, ಲಿಖಾವಟ್ಟು, ತಳಮುಟ್ಟು, ಪುಸ್ತಕದ ಮಟ್ಟು, ಕಟ್ಟುನಿಟ್ಟು, ವಿಜ್ಞಾನ, ಪಾವನ, ಬಯಾನಿನಲ್ಲಿ, ಪತಾಕೆಯಲ್ಲಿ, ಟೀಕೆಯಲ್ಲಿ ಮುಂತಾದ ಸರಳ ಪ್ರಾಸಗಳ ಪೆಡಲ್‌ನಲ್ಲಿ ಕವಿತೆಯ ಸೈಕಲ್ ಧಾವಿಸುತ್ತದೆ. ಜಿಟಿಎನ್‌ರ ಬದಲಾಗದ ವ್ಯಕ್ತಿತ್ವ, ಜತೆಗೇ ಅವರಲ್ಲಿರುವ ಜೀವನದ ಲವಲವಿಕೆ, ಕವಿತೆಯಲ್ಲಿ ಒಂದು ತಕ್ಕಡಿಯ ತಟ್ಟೆಗಳೆರಡರ ಸಮತೋಲವನ್ನು ಮೂಡಿಸುತ್ತದೆ.

ಹೀಗೆ, ವಿಜ್ಞಾನಿಯೊಬ್ಬರ ವಿಶೇಷ ವ್ಯಕ್ತಿತ್ವ, ಅವರ ಕುರಿತ ಕವಿಯ ಆಡಂಬರವಿಲ್ಲದ ಚುರುಕು ಸೊಗಸು ನೋಟ, ಅದನ್ನು ಕವಿತೆಗೊಳಿಸುವ ಮಾತಿನ ತಂತ್ರ, ಸಲಕರಣೆಗಳು—ಇವೆಲ್ಲಾ ಕೂಡಿ ಇದನ್ನೊಂದು ನಿಸಾರರ ಪ್ರಮುಖ ಕವಿತೆಯಾಗಿಸುತ್ತವೆ.

ನಿಸಾರರ ಈಚಿನ ಕವನ ಸಂಗ್ರಹ 'ಆಕಾಶಕ್ಕೆ ಸರಹದ್ದುಗಳಿಲ್ಲ'(೧೯೭೮)ದಲ್ಲಿ ಸೇರ್ಪಡೆಯಾಗಿರುವ ನಿಸಾರ್ ಅವರು ಡಾ. ಎಚ್. ನರಸಿಂಹಯ್ಯನವರ ಬಗೆಗೆ ಬರೆದ ಕವನ, 'ಮಾಸ್ತಿ'ಯಂತೆಯೇ ಕನ್ನಡ ಕಾವ್ಯದ ಮಕುಟ ರತ್ನದಂತಿದೆ. ಕವಿಯ ಚಿತ್ರಕ ಸಾಮರ್ಥ್ಯಕ್ಕೆ ಇದೊಂದು ಕೈಗನ್ನಡಿ; ನುಡಿಗಾರಿಕೆಯ ವಿದಗ್ಧತೆ ಹೃದ್ಯತೆಗಳಿಗೆ ಉಲ್ಲಾಸಕರ ಪುಷ್ಪೋದ್ಯಾನ.

ಒಂದು ಕವಿತೆಯಲ್ಲೇ ಡಾ. ಎಚ್.ಎನ್.ರ ವ್ಯಕ್ತಿತ್ವದ ಹಲವು ಮಜಲುಗಳನ್ನು ಬಿಡಿಸುತ್ತಾರೆ ನಿಸಾರ್. 'ನೆಹರು' ಕವಿತೆಯಲ್ಲಿ, ಕವಿ ತಾನು ಹೊರಗಿದ್ದುಕೊಂಡು ನೆಹರೂರನ್ನು ನೋಡಿದರೆ, 'ಕೆಂಪು ತೋಟ ಮತ್ತು ಡಾ. ಎಚ್ಚೆನ್' ಕವಿತೆಯಲ್ಲಿ, ವೈಯಕ್ತಿಕ ವಸ್ತುನಿಷ್ಠತೆಯ ನೆಲೆಯಿಂದ ಸಿಂಹಾವಲೋಕಿಸುತ್ತಾರೆ. ಕವಿ ಹಾಗೂ ಎಚ್ಚೆನ್‌ರ ಮುಖಾಮುಖಿ ಕವಿತೆಗೆ ನಾಟಕೀಯತೆಯನ್ನೂ ತರುತ್ತದೆ. ಮಳೆ ಬಂದು ಇಳೆ ಮಿಂದ ಹಸುರಿನ ಪ್ರಕೃತಿ, ಎಚ್ಚೆನ್‌ರ ಸಜ್ಜನಿಕೆಗೆ ಧ್ವನಿಯ ಹಿನ್ನೆಲೆಯ ಪ್ರದರ್ಶಕ ಪರದೆಯಾಗುತ್ತದೆ. ಎಚ್ಚೆನ್‌ರು, ತಾವು ವಿಧಿವಶರಾಗಿರಬಹುದೆಂಬ 'ತರುಲತೆಗಳ ಅನುಮಾನ ನೀಗಲೆಂದು' ಮಳೆಯಿದ್ದರೂ ಅಲ್ಲಿ ವಾಕಿಂಗ್ ಬಂದಾಗ, ಕವಿಗೆ ಅಚಾನಕ ಭೇಟಿಯಗುತ್ತಾರೆ.

ತನಗೆ ಮಾಸ್ತರರಾಗದಿದ್ದರೂ, ಮಾಸ್ತರರೆಂಬ ಅಭಿಮಾನ ಕವಿಗೆ, ಎಚ್ಚೆನ್ ಬಗ್ಗೆ, ಅವರ ಸದ್ಗುಣಗಳಿಂದಾಗಿ. ಎಚ್ಚೆನ್, ಮಾನಾಭಿಮಾನದ ಪ್ರಶ್ನೆ ಬಂದಾಗ ಎಂದೂ ರಾಜಿ ಮಾಡಿಕೊಳ್ಳದವರು. ಹಲವಾರು ಹುದ್ದೆ ಹೊಂದಿದ್ದರೂ ನಿರಭಿಮಾನಿ. ಮೇಲುಕೀಳೆಂಬ ಭೇದವೆಣಿಸದವರು. ಗುಣಗ್ರಾಹೀ, ಪ್ರೋತ್ಸಾಹಕ, ಗಾಂಧೀವಾದಿ, ಪಾದಿಯಾಗದ ಏಕಾಕಿ ಬ್ರಹ್ಮಚಾರಿ, ವಿಚಾರವಾದಿ, ನಿರೀಶ್ವರವಾದಿಯಾಗಿಯೂ ಸೃಷ್ಟಿಯ ಚೆಲುವಿಗೆ ಮೋಹಗೊಂಡವರು—ಮುಂತಾಗಿ ವರ್ಣಿತವಾಗಿ ಅನೇಕ ಪಾತಳಿಯಲ್ಲಿ ತುಂಬು ವ್ಯಕ್ತಿಯಾಗಿ ಎಚ್ಚೆನ್ ಕವಿತೆಯಲ್ಲಿ ಮೂಡಿಬರುತ್ತಾರೆ.

ಎಚ್ಚೆನ್ ಅವರ ವ್ಯಕ್ತಿತ್ವದ ಹಿರಿಮೆಯನ್ನು ನಿಚ್ಚಳವಾಗಿ ಈ ಸಾಲುಗಳು ಎತ್ತಿ ಕಾಣಿಸುವ ಬಗೆಯನ್ನು ಆಸ್ವಾದಿಸಿ:

'ಮಾನಾಭಿಮಾನಗಳ ಪ್ರಶ್ನೆಯೆದುರಾದಾಗ
ಮಾಡಿಕೊಂಡಿದ್ದಿಲ್ಲ ಬಿಲ್‌ಕುಲ್ ರಾಜಿ,
ಹಲವು ಪೊಗದಸ್ತು ಹುದ್ದೆಗಳ ಈ ಮಾಜಿ.
ಹಾಗೆಯೇ, ಹಿರಿಯರೊ ಕಿರಿಯರೊ ಭೇದವೆಣಿಸದೆ
ಅಂತಸ್ತು, ಕುಲ ಆಚಾರ ಕಿಂಚಿತ್ತು ಗಣಿಸದೆ—
ಕಂಡಿತೇ ಅವರಲ್ಲಿ ಕಣದಷ್ಟು ಗುಣ,
ಹೊಗಳಿಕೆಯ ಹತ್ತು ಮಣ
ಹೊರೆಸಿದಲ್ಲದೆ ತಣವ ಕುಳವಲ್ಲ ಈ ಪರ ಹಿತೈಷಿ;
ಅದಕಿಲ್ಲವೆ ನಾನೇ ಜ್ವಲಂತ ಸಾಕ್ಷಿ?'
(ಕೆಂಪು ತೋಟ ಮತ್ತು ಡಾ. ಎಚ್ಚೆನ್)

ಸಹಜ, ಸರಳ ಲಯಗಳಲ್ಲಿ ಕವಿತೆ ಹೆಣೆದುಕೊಂಡಿದೆ. ಲಾಲ್‌ಬಾಗ್‌ನ ವಾಕಿಂಗ್‌ನ ಒಡನೆ ಕವಿತೆಯೂ ನಡೆಗೊಳ್ಳುತ್ತದೆ. 'ಕಕ್ಕುಲತೆ ಕವಿತೆ, ರೂಢಿ ನೋಡಿ, ಎಡೆ ಮೇಲುಗಡೆ, ಮೇಷ್ಟ್ರೇ ಆ್ಯಶ್‌ಟ್ರೇ, ರಾಜಿ ಮಾಜಿ' ಮುಂತಾಗಿ, ನವ್ಯದ ಭಿಡೆಯಿಲ್ಲದೆ ಅಂತ್ಯಪ್ರಾಸಗಳು ಗೆಲವಿನ ಹೆಜ್ಜೆ ಹಾಕುತ್ತವೆ. 'ಮಳೆ ಬಂದು ಇಳೆ ಮಿಂದು ಮಡಿಯಾಗಿ ಮೈಮರೆಸಿತ್ತು' ಮುಂತಾದ ನೇರ ಸಂವಹನಗೊಳ್ಳುವ ಸರಳ ಪ್ರತಿಮೆಗಳು, ನಿರೂಪಣೆಯ ಪ್ರಾಮಾಣಿಕತೆಯನ್ನು ಧ್ವನಿಸುತ್ತವೆ.

'ಭೀಮಪ್ಪ ಮಾಸ್ತರರು' ಕವಿತೆಯ ವಸ್ತು, ಕವಿಯ ಮಿತ್ರರಾದ ಶಿರಾಳಕೊಪ್ಪದ ಮಾಸ್ತರರು. ಅಷ್ಟೇನೂ ಪ್ರಖ್ಯಾತಿ ಪಡೆಯದ, ಸಾಮಾನ್ಯ ಸರಳ ಬದುಕಿನ, ಋಜು ಸ್ವಭಾವದ ಜೀವಿ. ಅವರು ಇತಿಹಾಸವನ್ನು ಭೂತದ ಮರೆವಿನಿಂದ ಎತ್ತಿ ಹೊರ ತೆಗೆಯುವವರು. ಕೇದಾರ, ಕುಸುಮೇಶ ದೇಗುಲ, ಗೊಗ್ಗೇಶ್ವರನ ಹೊಲ, ತ್ರಿಪುರಾಂತಕನ ಮೇಲ್ಛಾವಣಿ, ಮಲ್ಲಪ್ಪನ ಲಾವಣಿ, ಕಮಲ ಗಂಗವ್ವಳಿಗೆ ಅಕ್ಷತೆಯ ಅಕ್ಕಿಯಂತಿದ್ದ ಬೆಳ್ಳಕ್ಕಿಗಳನ್ನು ಅನಾಥವಾಗಿಸುತ್ತಾರೆ—ತಾವು ಸತ್ತಾಗ. ಮಾಸ್ತರರ ಔದಾರ್ಯದ ಬಹುಮುಖಗಳು ಎಂದಿನಂತೆ ಸಹೃದಯಿ ಕವಿಯ ನೆನಹ ಲೇಖನಿಯಲ್ಲಿ ಅರಳುತ್ತವೆ.

ಮಾಸ್ತರರು ಪರವೂರಿನ ಗೆಳೆಯರಿಗೆ ಆದರಾತಿಥ್ಯ, ಮಠದಯ್ಯಗಳಿಗೆ ಬಿನ್ನವತ್ತಳೆ ಮತ್ತು ಬೆಣ್ಣೆ ಗೀತೆಗಳನ್ನು ಹೊಸೆಯುವವರು, ಹಾಗಾಗಿ ಸಾಹಿತಿಯೂ ಆಗುವರು. ಊರಿನ ಒಳಿತಿಗಾಗಿ ಅದರ ತಾಪಕ್ಕೆ ಬಿಸಿಲ ತಡೆಯಾಗಿ ನಡೆದವರು. ಇಂತಹ ಸಜ್ಜನಿಕೆಗೂ ಮರಳಿ ಸಿಗುವುದು ಊರಿನ ಕಡೆಗಣಿಕೆ ಮಾತ್ರ. ಮಂದಿ ಕೆಲವೊಮ್ಮೆ ಅವರ ಉಪಕಾರ ಪಡೆದರೂ ಕಾಲೊರಸಿಗಿಂತ ಕಡೆಯಾಗಿ ಕಾಣುತ್ತಾರೆ. ಆದರೆ ಮಾಸ್ತರರ ಅಕುಶಲ ಶುದ್ಧ ಶುಭ್ರ ಹಳ್ಳಿತನ, ಆ ತಾಪಗಳನ್ನು ತಪಸ್ಸುಗೊಳಿಸಿ ಸಾರ್ಥಕಗೊಳ್ಳುತ್ತವೆ. ಹೃದ್ರೋಗ ಗುಳಿಗೆ ನುಂಗುತ್ತಲೂ ಊರಿನ ಪ್ರಾಚ್ಯಾವಶೇಷಗಳನ್ನು ಉಕ್ಕುವ ಉತ್ಸಾಹ, ಉಲ್ಲಾಸಗಳಿಂದ ಬಣ್ಣಿಸುತ್ತಾರೆ. ಹಾಗಾಗಿ ಅವರು ಇಲ್ಲವಾದಾಗ ಅವರ ಹೆಸರು ಬಳ್ಳಿಗಾವೆ ಸುತ್ತೆಲ್ಲ

ಪರಿಮಳಿಸುತ್ತದೆ. ಆ ಚರಿತ್ರಾರ್ಹ ನೆಲದಲ್ಲಿ ಅವರ ಸಚ್ಚಾರಿತ್ರ್ಯ ಟಂಕಿಸುತ್ತದೆ. ಬೂದಿಯಾದರೂ ಅವರು ಸದ್ವಿಭೂತಿಯಾಗುತ್ತಾರೆ. ಹೀಗೆ, ಕವಿಗಳು ಒಬ್ಬ ಸಜ್ಜನ, ನೋವು ನುಂಗಿಯೂ ನಗುವ ಮಾಸ್ತರರ ನಿಃಸ್ವಾರ್ಥಪರ ವ್ಯಕ್ತಿತ್ವವನ್ನು ಗೌರವಿಸುತ್ತಾರೆ.

ಭೀಮಪ್ಪನವರ ಮರಣದಿಂದ, ಅವರು ರಕ್ತಮಾಂಸ ಸಂಬಂಧ ಹೊಂದಿದ್ದ ಸುತ್ತಮುತ್ತಲಿನ ಐತಿಹಾಸಿಕ ಪರಿಸರ ಭಣಗುಡುತ್ತಿರುವ, ದಿಕ್ಕು ದೆಸೆಯಿಲ್ಲದೆ ಮೌನವಾಗಿಯೇ ಅಳಲುತ್ತಿರುವ ದೃಶ್ಯ ಮನ ಕಲಕುವಂತಿದೆ. ಅವರಿಲ್ಲದೆ—

'...ಅನಾಥವಾಗಿವೆ ಇಂದು: ಗೊಗ್ಗೇಶ್ವರನ ಹೊಲ,
ಕೇದಾರ ಕುಸುಮೇಶ ಪ್ರಣವ ಲಿಂಗೇಶ್ವರರ ದೇಗುಲ,
ಕಮಲ ಗಂಗವ್ವಳಿಗೆ ಸೇಸೆಗಟ್ಟುವ ಸ್ವಚ್ಛ ಬೆಳ್ಳಕ್ಕಿ ಸಂಕುಲ,
ತ್ರಿಪುರಾಂತಕನ ಚಿತ್ರಮಯ ಮೇಲ್ಛಾವಣಿ,
ಗುರು ಮೂಗೂರು ಮಲ್ಲಪ್ಪನ ಲಾವಣಿ'

(ಭೀಮಪ್ಪ ಮಾಸ್ತರರು)

'ಹೂ ಬಿಚ್ಚುತ್ತಿರುವಂತೆ ಪಯಣ ಬೆಳಸಿದರು' 'ನಿಸ್ಸಹಾಯ ಇತಿಹಾಸವನ್ನು ಕಾಲ ದುಶ್ಯಾಸನನ ಹಿಡಿಯಿಂದ ನಸು ಬಿಡಿಸಿದ್ದ ಭೀಮಪ್ಪ ಮಾಸ್ತರರು' 'ಬೆಣ್ಣೆ ಗೀತೆಗಳನ್ನು ಹೊಸೆವ' 'ಸಚ್ಚಾರಿತ್ರ್ಯ ಟಂಕಿಸಿದ ಮೂರ್ತಿತ್ವ' 'ಬೂದಿಯಾದರೆ ನೀವು ಸದ್ವಿಭೂತಿ' ಮುಂತಾದ ಹೃದಯಸ್ಪರ್ಶಿಯಾದ ಅಸಂದಿಗ್ಧ ಪ್ರತಿಮೆ, ಶ್ಲೇಷೆಗಳನ್ನು ತುಂಬು ಧ್ವನಿಯಿಂದ ಶ್ರೋತೃಗಳಿಗೆ ಸಂವಹನಿಸುತ್ತಾರೆ. ಕವಿತೆಯ ಪ್ರಾಮಾಣಿಕತೆ ಕವಿಯ ಸಾಚಾ ಅನುಕಂಪಕ್ಕೂ ಸೂಚಕವಾಗುತ್ತದೆ.

'ರಾಮನ್ ಸತ್ತ ಸುದ್ದಿ' ಕವಿತೆಯಲ್ಲಿ ಪ್ರಸಿದ್ಧ ವ್ಯಕ್ತಿ (ಸಿ. ವಿ. ರಾಮನ್) ಸತ್ತ ಸುದ್ದಿ ಕೇಳಿ ಕವಿಗೆ ದುಗುಡ, ತಳಮಳವಾಗುತ್ತದೆ. ಥಂಡಿಯಲ್ಲೂ ಅಸ್ತಿತ್ವದ ಜಿಜ್ಞಾಸೆಯ ಭಾವನೆ ಮೂಡಿ, ದುಃಖ, ಮುಜುಗರದಲ್ಲಿ ವಾಕಿಂಗ್‌ಗೆ ಹೋಗುತ್ತಾರೆ. ಹಳ್ಳಿಯ ಹಳೆಯ ಪರಿಚಿತ ಹನುಮ ಎದುರಾಗುತ್ತಾನೆ.

ಮುಂದೆಲ್ಲಾ ಹನುಮನ ಜೀವನ ಪರಿ, ಮೌಲ್ಯಗಳ ವಿಶ್ಲೇಷಣೆ ಕವಿತೆಯಾಗಿ ರೂಪುಗೊಳ್ಳುತ್ತದೆ. 'ಗದ್ದೆಯಲ್ಲಿ ಗೇಯುವ, ಮೋಟು ಬೀಡಿಯ ಕಿವಿಗೆ ಸಿಕ್ಕಿಸಿಕೊಳ್ಳುವ, ಕೂಗಿಂದ ಹಕ್ಕಿಗಳ ಅಟ್ಟುವ' ಮುಂತಾಗಿ ಹನುಮ ಮೂಡುತ್ತಾನೆ. ಕವಿಯೊಡನೆ ನಿರೀಹ ಮಾತುಕತೆಯಾಡುತ್ತಾನೆ. 'ಹ್ಯಾಂಗಿದ್ದೀರಿ' 'ಬಡವಾಗಿದ್ದೀರಿ' 'ನೆರೆಯವನೊಡನೆ ಕಾದಾಟ' ಅಂತ ಅನಕ್ಷರಸ್ಥ ಮಾತುಗಳಿಂದ ಕವಿಯ ಒಳ ಹೋಗುತ್ತಾನೆ.

ಕವಿ ಎರಡು ಪಾತಳಿಗಳನ್ನು ಮನಗಾಣಿಸುತ್ತಾರೆ. ಆ ಕಡೆ ಪ್ರಸಿದ್ಧ ವಿಜ್ಞಾನಿ ರಾಮನ್, ಈ ಕಡೆ ಹಳ್ಳಿಯ ಅಶಿಕ್ಷಿತ ಹನುಮ. ಇವೆರಡು ಹಾಸುಹೊಕ್ಕುಗಳಲ್ಲಿ ಕವಿ ತಮ್ಮ ಸ್ವಂತ ಜೀವಿತದ ಕಾಳಜಿಯನ್ನು ರೂಪಿಸಬೇಕಾಗುತ್ತದೆ. ಈ ಎರಡು ದಡಗಳ ನಡುವಿನ ಈಸಿನಲ್ಲಿ ಕವಿ ತನ್ನನ್ನು ಸಾಂತ್ವನಗೊಳಿಸಬೇಕಾಗುತ್ತದೆ. ಆ ಕಡೆ ರಾಮನ್, ಈ ಕಡೆ ಹನುಮ (ಪುರಾಣದಲ್ಲೂ ಆದಂತೆ?) ಪರಸ್ಪರರನ್ನು ನಿರ್ವಚಿಸಲು ಸಾಧನರಾಗುತ್ತಾರೆ.

ಇನ್ನೊಂದು ಹಂತದಲ್ಲಿ ರಾಮನ್ ಹನುಮರಿಬ್ಬರ ಭಿನ್ನ ಜೀವನ ಪ್ರಕ್ರಿಯೆ, ಕವಿಯನ್ನು ಸಾಪೇಕ್ಷವಾಗಿ ಸ್ವಂತ ನಿರ್ವಚಿಸಲೂ ಸಾಧನವಾಗುತ್ತದೆ. ಹನುಮನ ಗದ್ದೆ, ಧಣಿ, ಹೆಂಡಿರು, ಮಕ್ಕಳು, ಸಿಂಬಳದ ಹುಡುಗರು, ದೇವರ ಗ್ರಾಮ್ಯ ಕಲ್ಪನೆ, ಇಂತಹ ಸೀಮಿತ ಜಗತ್ತಿನ ಸಂತುಷ್ಟ, ಸರಳ ಹನುಮ, ಕವಿಗೆ—ಪತ್ರಿಕೆಯೋದುವ ಹೊಟ್ಟೆ ಬಟ್ಟೆಯ ಅಗತ್ಯ ಮೀರಿ ಹಸಿವುಳ್ಳ, ಭಾಷೆ, ಗಡಿ, ನದಿ, ಪದ್ಯ, ಪ್ರತಿಷ್ಠೆಗಳಲ್ಲಿ ಹುಡುಕಾಟಗಳಲ್ಲಿ ಮಗ್ನನಾಗಿರುವ ಕವಿಗೆ—ನಗರದ ಮಧ್ಯಮ ವರ್ಗ ಪ್ರಜ್ಞಾವಂತನಿಗೆ, ಸ್ವನಿರ್ವಚನೆಯ ಕನ್ನಡಿಯಾಗುತ್ತಾನೆ. ಕವಿಯ ಈ ಹೊಸ ನೋಟದಲ್ಲಿ ಹನುಮ, ಕೂದಲೆಳೆಯ ಕೂಗಿನ ಹನುಮ, ಪ್ರಕೃತಿಯ ಅಗಾಧದಲ್ಲಿ ಪ್ರತ್ಯಕ್ಷಿಸಿಕೊಳ್ಳುವ ಹನುಮನಾಗುತ್ತಾನೆ.

ಈ ಹೊಸ ಅರಿವು ಕವಿಗೆ ನಿಧಾನವಾಗಿ ಸಮಾಧಾನ ತರುತ್ತದೆ; ಹುಟ್ಟು ಸಾವಿನ ಹೊಸ ನೋಟದ ತಿಳಿವನ್ನು ನೀಡುತ್ತದೆ. ಆಗ ಕವಿಗೆ 'ಒಬ್ಬಂಟಿ ನಿಧಾನ ನಡೆದಂತೆ' ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಗುತ್ತದೆ.

'ಹಳ್ಳಿಯೇ ಹನುಮಿಸಿದಂತೆ ಭಾಸವಾಗು'ವ ಸಾಮಾನ್ಯ ಮತ್ತು ವಿಚಿತ್ರ ವ್ಯಕ್ತಿ ಹನುಮ ಸಹ, ಸರ್ ಸಿ. ವಿ. ರಾಮನ್‌ರಂಥ ಮಹಾನ್ ಮೇಧಾವಿ ಸತ್ತ್ಹುದ ಹಾಗೆ ಬಾಳಿಗೆ ಅನಿವಾರ್ಯವೆಂಬುದನ್ನು; ವಿದ್ಯಾ-ಅವಿದ್ಯಾಗಳ ಸಮತೋಲನದ ಮೇಳೈಕೆಯಿಂದಲೇ ಮಾನವ ಜೀವನ ಗತಿಶೀಲತೆಯನ್ನು ಪಡೆಯುವುದು ಶಕ್ಯವೆಂಬುದನ್ನು ಈ ಕವಿತೆ ಧ್ವನಿಸುತ್ತಿರುವುದರ ಜೊತೆಗೇ, ಬಾಳು-ಸಾವುಗಳ ನಡುವಣ ಅಸಂಗತತೆ(absurdity) ಯನ್ನೂ ಸೂಕ್ಷ್ಮವಾಗಿ ಸೂಚಿಸುತ್ತದೆ.

'ಹಿಂದೂಡಿದ ಪಯಣ' ತನ್ನ ಅಲ್ಪ ಪರಿಚಯದ ದುಬೈನ ಗೆಳೆಯ ಭಾರತದಿಂದ ಬರುತ್ತಿರುವ ಪತ್ನಿಯನ್ನು ಸ್ವಾಗತಿಸುವ ತವಕದಲ್ಲಿ ಪಯಣಿಸುತ್ತಿದ್ದಾಗ ಕಾರು ಅಪಘಾತದಲ್ಲಿ ಸಾವಿಗೀಡಾಗುತ್ತಾನೆ. ಆತನ ಕುರಿತ ಕನಿಕರ, ವಿಧಿಯ ಕೈವಾಡ ಕುರಿತ ಪ್ರಾಮಾಣಿಕ ಸರಳ ಪ್ರತಿಕ್ರಿಯೆ ಕವಿತೆಯ ವಸ್ತು. ಕವಿತೆ ಹೆಚ್ಚು ಗದ್ಯಾತ್ಮಕ ಕಥನ ಸ್ವರೂಪದಲ್ಲಿದೆ. ಇದು ಕವಿತೆಯ ನೇರ ನಡೆಗೆ ವೇಗ ನೀಡುತ್ತದೆ. ಇದರ ಬಂಧ, ಬಿಗಿ, ಬನಿಗಳು ಪರಿಣತ ಶಬ್ದಕಾರನಿಂದ ಮಾತ್ರ ಸಾಧಿಸಲು ಶಕ್ಯವಾಗುವಂಥದ್ದು.

ಕಥನ ದುಬೈನ ಪಾರ್ಥಸಾರಥಿಯ ವ್ಯಕ್ತಿತ್ವವನ್ನು ಮುಂದಿಡುತ್ತದೆ. ಆತನಲ್ಲಿ ಇರಬಹುದಾದ ಒಂದೆರಡು ದೌರ್ಬಲ್ಯಗಳ ಹೊರತು, ಹಲವು ಸದ್ಗುಣ ಉಳ್ಳ ವ್ಯಕ್ತಿ. ನಿರಾವೇಶಿ, ರುಚಿರ ಸಂಭಾಷಿ, ಆತ್ಮಸಂತೋಷಿ, ಸಾಹಿತ್ಯ ಸಂಸ್ಕೃತಿಯಭಿಮಾನಿ, ಸತ್ಕಾರಿ ಮುಂತಾದ ಗುಣವಂತ. ಭಾರತದಿಂದ ಇಲ್ಲಿಗೆ ಹಾರು ವಾಹನದಲ್ಲಿ ಬರುತ್ತಿರುವ ಮೆಚ್ಚಿನ ಮಡದಿಯ ಮುಲಾಖಾತಿಗೆ ಆತುರನಾಗಿರುವವ. ಆದರೆ ವಿಧಿಯ ಆಟದಲ್ಲಿ, ಪಯಣ ಅರ್ಧದಿನ ಹಿಂದಕ್ಕೆ ದೂಡಿದಾಗ, ಕಾರಿಗೆ ದಿಗ್ಗೇಡಿ ಒಂಟೆಯೊಂದು ಢಿಕ್ಕಿ ಹೊಡೆದಾಗ ಸಾಯುತ್ತಾನೆ. ಇದು ವಿಧಿಯ ವಿಕಟತೆಗೆ, ಮಾನವನ ಪರಾಧೀನತೆಗೆ ಪುರಾವೆಯನ್ನೀಯುತ್ತದೆ, ಎಂದು ಕವಿ ಕನಿಕರಿಸುತ್ತಾರೆ.

'ಅಚ್ಚಕನ್ನಡದ ಬಾಳೆಯೆಲೆ', 'ಸುಭವಿಷ್ಯದ ಶಿಶು ಹಡೆಯುವುದು', 'ಭೂತಕಾಲದ

ಅನಾಥ ನಿಧಿ', 'ಎದೆ ವನದಲ್ಲಿ ನೆನಹಿನ ಕಣ್ಣ ಸೊಬಗಿನ ಸೋಗೆ' ಮುಂತಾದ ಅಕ್ಲಿಷ್ಟ, ಸಾಂದ್ರ ಪ್ರತಿಮೆಗಳಲ್ಲಿ ನಿಸಾರರ ಮಾತಿನ ಅಸಾಧಾರಣ ಶಕ್ತಿಯ ಅರಿವು ವಾಚಕನಿಗೆ ಆಗುತ್ತದೆ.

ಒಬ್ಬ ಅಲ್ಪ ಪರಿಚಯದ ಗೆಳೆಯನಲ್ಲಿರುವ ಅನೇಕ ಸದ್ಗುಣಗಳನ್ನು, ಜೀವನದ ಖುಷಿಯನ್ನು ಕವಿ ಭಾವಪೂರ್ಣವಾಗಿ ಶಿಲ್ಪಿಸುತ್ತಾರೆ. ಇದು ಕವಿಯ ವೈಯಕ್ತಿಕ ಸಜ್ಜನಿಕೆಗೆ, ಇತರರ ಕುರಿತ ಅನುಕಂಪಕ್ಕೆ ಸಾಕ್ಷಿಯಾಗುತ್ತದೆ. ಆದರೆ ಓದುಗನಿಗೆ ಅಂತಹ ಆಳದ ಅನುಭೂತಿ ಕೊಡುವುದಿಲ್ಲ. ಅಥವಾ ಅದು ಬೇಕಾಗಿಲ್ಲವೇನೋ!

ಕೆಲವೊಮ್ಮೆ ನವ್ಯಕಾವ್ಯದಲ್ಲಿ ಕಂಡು ಬರುವ ದುರೂಹ ಪ್ರತಿಮೆ, ಬೌದ್ಧಿಕ ಚಾಕಚಕ್ಯತೆಗಳ ಜಾಗದಲ್ಲಿ, 'ಹಿಂದೂಡಿದ ಪಯಣ' ಸುಲಭ ಸಂವಹನಗೊಂಡು ಸರಳ ಕವಿತೆಯಾಗಿ ನಿಲ್ಲುತ್ತದೆ.

'ಮೃಗಾಯಣ' ಒಂದು ಅಪರೂಪದ ಕವಿತೆ. ಶಿಕಾರಿ ಹನೀಫ್‌ರನ್ನೂ ಅವರಿಂದ ಬಲಿಗೊಂಡು ಒಂದು ಕಾಲದಲ್ಲಿ ಜೀವಂತ ಕಸುವಿದ್ದ, ಇಂದಿನ ಸಂದರ್ಭದಲ್ಲಿ ನಿಶ್ಚಲ ಗೊಂಬೆಗಳಾದ ಅಡವಿಯ ಪ್ರಾಣಿಗಳನ್ನೂ—ಇವೆರಡೊಳಗಿನ ವಿಡಂಬನೆಯನ್ನು ಲವಲವಿಕೆ ಯಿಂದ ಚಿತ್ರಿಸುತ್ತದೆ ಈ ಕವಿತೆ.

ಶಿಕಾರಿಯ ಜೋಡು ನಳಿಗೆ ಬಂದೂಕು, ದೋಸ್ತಿ, ಕಾಡು ಹರಟೆ, ಪ್ರವಾಸಿಗರ ಕುತೂಹಲ, ಶಿಕಾರಿಗೊಂಡ ವನ್ಯಪಶುಗಳ ಸ್ಟಫ್‌ಗೊಂಡ ಗೊಂಬೆಗಳಿಂದ ತುಂಬಿದ ಗರ್ಭಿಣಿಯಂತಹ ತುಂಬುಮನೆ, ಹನೀಫರ ಮಲೆನಾಡಿನ ಕಾಫೀ ಎಸ್ಟೇಟ್‌ನ ಬಂಗಲೆ, ಆ ವನ್ಯ ಪಶುಗಳ ಸಾವಿಗೆ ಸದಾ ಕಾರಣವೂ ಸಂಗಾತಿಯೂ ಆಗಿದ್ದ ಹನೀಫರು ಮುಂದೊಮ್ಮೆ ತಮ್ಮ ಮನೆಯ ಮ್ಯೂಸಿಯಂನ ಗೊಂಬೆಗೊಂಡ ಬಲಿಪಶುಗಳನ್ನೂ ತಬ್ಬಲಿಗೊಳಿಸಿ ತಾವೂ ಸಾಯುತ್ತಾರೆ. ಅದೂ ಕೂಡಾ, ಅವರು ತಮ್ಮದೇ ಸಾಕುಪ್ರಾಣಿಯಾದ ಮನೆಯ ಎಮ್ಮೆಯನ್ನು ಕಟ್ಟಲು ಹೋಗಿ, ಏರಿನಿಂದ ಬಿದ್ದು ಸಾಯುವ ವಿಡಂಬನೆಯಲ್ಲಿ! ಸಾವಿನ ಈ ಅಸಂಗತತೆಯ 'ಐರನಿ'ಯನ್ನು ಗಮನಿಸಿ.

ಹನೀಫರನ್ನು ಕುರಿತ ವಿವರಗಳ ಬ್ರಾಕೆಟ್‌ಗಳ ನಡುವೆ, ವನ್ಯಪ್ರಾಣಿಗಳನ್ನು ಕುರಿತ ಚಿಂತನೆ ಸ್ಫಟಿಕಗೊಳ್ಳುತ್ತದೆ. ಶಿಕಾರಿಗೊಂಡ ವನ್ಯಪಶುಗಳು ಪ್ರಾಣರಹಿತ ಮಾದರಿಗಳಲ್ಲಿ, ಹೊಟ್ಟೆಯಲ್ಲಿ ಹುಲ್ಲು ತುರುಕಿಕೊಂಡು ನಮ ನಮೂನೆಯ ರೆಕ್ಕೆ ಪುಕ್ಕಗಳಲ್ಲಿ ನೈಸರ್ಗಿಕಗಳು ಅನೈಸರ್ಗಿಕಗೊಂಡು, ಜತೆಗೇ ನಿಸರ್ಗದ 'ಖಂಡಿತ' (ಖಚಿತ ಮತ್ತು ಕತ್ತರಿಸಲ್ಪಟ್ಟ) ಸಾಕ್ಷಿಗಳಾಗಿ ಮುಂದೆಯೂ ಉಳಿದುಕೊಳ್ಳುತ್ತವೆ. ಇಲ್ಲಿನ ನೈಸರ್ಗಿಕ-ಅನೈಸರ್ಗಿಕ, ಜೀವಂತತೆ-ಸಾವು, ಅಡವಿ-ಮ್ಯೂಸಿಯಂ ಮುಂತಾದ ದ್ವಂದ್ವಗಳು ಓದುಗನ ಅನುಭವದ ಸ್ಪಂದನೆಯಲ್ಲಿ ಗೂಢಾರ್ಥ ಪಡೆದುಕೊಳ್ಳುತ್ತವೆ. ಅರಣ್ಯದ ಮುಕ್ತ ಅಜ್ಞಾತ ಸಂದುಗೊಂದು ಗಳಲ್ಲಿ ಕಚ್ಚಾಡಿ ಜೀವಿಸಿ ಸತ್ತು ಮರೆತುಹೋಗಬಹುದಾದ ಈ ಪಶುಗಳು, ಇಲ್ಲಿ ಬಂಗಲೆಯ ಸೀಮಿತವಾದ ಮ್ಯೂಸಿಯಂನ ಅವಕಾಶದಲ್ಲಿ ಮತ್ತೆ ತಮ್ಮ ಅಸ್ತಿತ್ವವನ್ನು ಪ್ರಮಾಣಿಸುತ್ತವೆ. ಶಿಕಾರಿಯಲ್ಲಿ ಸತ್ತ ಪಶುಗಳನ್ನು ಮ್ಯೂಸಿಯಂನಲ್ಲಿಟ್ಟು ಅವುಗಳ ಅಸ್ತಿತ್ವವನ್ನು

ಮುಂದೆಯೂ ಪ್ರಮಾಣಿಸಿದ ಹನೀಫರು, ತಮ್ಮದೇ ಸಾವಿನಲ್ಲಿ ತಮ್ಮ ಅಸ್ತಿತ್ವದ ಪ್ರಮಾಣವನ್ನು ಕಳೆದುಕೊಳ್ಳುತ್ತಾರೆಂಬ ವಿಡಂಬನೆಯನ್ನೂ ನಾವು ಊಹಿಸಬಹುದು. ಜೀವನ-ಸಾವು, ಭೂತ-ವರ್ತಮಾನ ಮುಂತಾಗಿ ಶಕ್ತ ಪ್ರತಿಮೆ, ಶ್ಲೇಷೆಗಳಿಂದ ಕವಿತೆ ಮೈದುಂಬಿಗೊಳ್ಳುತ್ತದೆ.

ಶಿಕಾರಿಯ ಬಂಗಲೆಯೊಳಗೆ ವನ್ಯಜೀವಿಗಳು ಮ್ಯೂಸಿಯಂ ಆದಂತೆ ಕವಿತೆಯ ಚೌಕಟ್ಟು ಇದೆ. ಕವಿತೆಯಲ್ಲಿ, ಶಿಕಾರಿ ಹನೀಫರ ಜೀವನ ಕುರಿತು ಆರಂಭ, ಶಿಕಾರಿಯ ಸಾವಿನ ಅಂತ್ಯಗಳ ನಡುವೆ, ವನ್ಯ ಜೀವಿಗಳ ಜೀವನ ಸಾವುಗಳು ನೆಲೆಗೊಳ್ಳುತ್ತವೆ.

'ಯಾವತ್ತೋ ನಾನು ಸಾಯುವುದು ಪ್ರಾಣಿಯಿಂದಲೆ' ಎಂದು ನಗುತ್ತಿದ್ದ ವನ್ಯ ಶಿಕಾರಿ ಹನೀಫರು, ಮನೆಯ ಎಮ್ಮೆ ಕಟ್ಟಲು ಹೋಗಿ ಬಿದ್ದು ಸಾಯುವ ವಿಡಂಬನೆಯಲ್ಲಿ ರೋಷವಿಲ್ಲ. ಅದೂ ಒಂದು ನಗುವಿನ ಸೆಳೆಯಾಗಿ ಮಿಂಚುತ್ತದೆ. ಜೀವನದ ಕೆಲ ನೋವು ವಿಪರ್ಯಾಸಗಳನ್ನು ಒಂದು ವಿಶ್ವಾತ್ಮಕ ಸಂವೇದನೆಯಲ್ಲಿ, ಹಗುರಗೊಳಿಸಿ ನೋಡುವ ಮನೋವೃತ್ತಿ ಕವಿಯಲ್ಲಿದ್ದಂತೆ ಭಾಸವಾಗುತ್ತದೆ.

'ಮೃಗಾಯಣ' ಕವಿತೆ ಕಟ್ಟಿಕೊಡುವ ವಾಸ್ತವ ಮತ್ತು ಭ್ರಾಮಕತೆ(fantasy)ಗಳ ಆತಂಕಕಾರಿ ಪರಿಸರ ಅಪೂರ್ವವಾದದ್ದು. ಕನ್ನಡದ ಕೆಲವೇ ಅತ್ಯುತ್ತಮ ಪರಿಸರ ಕವನಗಳಲ್ಲಿ ಇದೂ ಒಂದು ಎಂದು ಧಾರಾಳವಾಗಿ ಹೇಳಬಹುದು.

'ರಾಮನ್ ಸತ್ತ ಸುದ್ದಿ' ಪದ್ಯದ ಹನುಮನಂತೆ, ಭೀಮಪ್ಪ ಮಾಸ್ತರರಂತೆ 'ಮೈಲಿ ಮೊಗದ ಮಹಾರಾಯ' ಪದ್ಯದ ನಾಯಕ ಸಹ ಅಪ್ಪಟ ಮಣ್ಣಿನ ಮಗ; ಸರಳ, ನೇರ ಜಾಯಮಾನದ ಗ್ರಾಮೀಣ ವ್ಯಕ್ತಿ.

'ಮೈಲಿ ಮೊಗದ ಮಹಾರಾಯ' ಕವನ, 'ಹಣ್ಣಿನೊಳಗಿನ ಹುಳುವಿನಂತೆ ಭೋಗವ ಮೆದ್ದ' ಕೊನೆಗು ಗುಹ್ಯರೋಗದ ಬೀಗ ಬಡಿದು ಇನ್ನಿಲ್ಲವಾದ, ಅಸ್ತಿತ್ವದಾಳಕ್ಕೆ ಬಿಳಲು ಬಿಟ್ಟ, ಕವಿಯ ಆತ್ಮೀಯನೊಬ್ಬನನ್ನು ಕುರಿತು ಕನಿಕರಿಸುವ ಕವನ. ಅಸ್ತಿತ್ವವಾದೀ ಸಂವೇದನೆಯಲ್ಲಿ, ನೀತಿ ಅನೀತಿಗಳ ನಡುವಿನ ಗೆರೆ ಅಳಿಸಿರುವ ಮಣ್ಣಿನ ತಳಿ ಇತರರಿಗೆ ನೀತಿ ಬಾಹಿರವಾದರೆ ಕವಿಗೆ ಒಂದು ನೆಲೆಯಲ್ಲಿ 'ಪರಮ ವೇದದ ಸಾರ'ನಾಗುತ್ತಾನೆ, ಆ ಪರಿಚಿತ. ಇಂಥ ನೆಲೆಯಲ್ಲಿ ನವ್ಯಕಾವ್ಯದಲ್ಲಿ ಕಾಣುವ ಬಗೆಯ ನೋವು, ಸಂಘರ್ಷ, ಪ್ರಶ್ನೆ, ಅರ್ಥಹೀನತೆಗಳು ಇಲ್ಲಿ ಇತರ ಕವಿತೆಗಳಿಗಿಂತ ಹೆಚ್ಚು ಗಾಢಗೊಳ್ಳುತ್ತವೆ. ಕವಿ ಹೆಚ್ಚು ಗಂಭೀರ, ಅಂತರ್ಮುಖಿಯಾಗುತ್ತಾರೆ.

ಈಗ ಇಲ್ಲದಿರುವ ಆ ಗೆಳೆಯ ಆರಾಮೀ, ಹರಾಮೀ ಜೀವನ ನಡೆಸಿದವ. 'ಮಾತುಮಾತಿಗೆ ನೆಲದ ಸೊಗಡು ಕಾರಂಜಿಸಿದವ, ಹೃನ್ಮನವ ರಂಜಿಸಿದವ.' 'ಕವಿಯಂತೆ ಸಂದದ್ದಕ್ಕೆ ಮರುಕ, ವರ್ತಮಾನಕ್ಕೆ ಆತಂಕ, ಭವಿಷ್ಯಕ್ಕೆ ತವಕ ತೋರದೆ ಅಸ್ತಿತ್ವದ ಆಳದಲ್ಲಿ ನಿಂತವ.' ಆತ ತನ್ನ ಹೆಂಡತಿಯನ್ನು ಪಶುವಿನಂತೆ ದುಡಿಸಿ, ಸೂಳೆಗಾಗಿ ಸತಿಯ ತಾಳಿಯನ್ನು ಅಡವಿಟ್ಟರೂ, ಹಬ್ಬ ಹುಣ್ಣಿಮೆಗೆ ಆ ಸತಿಗೇ ಸಂತಸದಿಂದ ಸೀರೆ

ತಂದುಕೊಡುವವ! ಆ ಹಳ್ಳಿಗ ಗ್ರಾಮೀಣತೆಯನ್ನು ಕೆದಕಿ, ನಗರದ ಕವಿಯ ಮನವನ್ನು ಬೇಟೆಯಾಡಿ ಅವನ ಭಾವಾವೇಗದ ಭಾಗವೂ ಆಗುತ್ತಾನೆ; ಅವನ ಸುಕುಮಾರ ವ್ಯಕ್ತಿತ್ವಕ್ಕೆ ತನ್ನ ಗಡಸುತನದ, ಜ್ವಲಂತ ಧಾತುಗಳನ್ನು ಕೂಡಿಸುತ್ತಾನೆ.

ಹೀಗೆ ಮೈಲಿ ಮೊಗದ ಆ ವ್ಯಕ್ತಿ, ನೀತಿ-ಅನೀತಿ, ಇರವು-ಇಲ್ಲದಿರವು, ಭೂತ-ಭವಿಷ್ಯಗಳ, ನೋವು-ಸೊಗಸುಗಳ ಸಂಘರ್ಷಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡ ಸಂಕೀರ್ಣ ವ್ಯಕ್ತಿ. ಅಥವಾ ಅಂತಹ ಮೌಲ್ಯ ಸಂಘರ್ಷಗಳನ್ನು ಕರಗಿಸಿ, ಮೀರಿ ಸಾವನ್ನೊಪ್ಪುವ ನಿರ್ಲಿಪ್ತನೂ ಇರಬಹುದು. 'ಸಂಸ್ಕೃತಿ' ಸೃಷ್ಟಿಸಿರುವ ದ್ವಂದ್ವ ಮೌಲ್ಯಗಳನ್ನು ತಿರಸ್ಕರಿಸಿ 'ಪ್ರಕೃತಿ'ಗೆ ಹಿಂದಿರುಗುವ ಏಕಾಂಗಿ ಇರಬಹುದು. ಇಂತಹವರು, 'ನಾಗರಿಕತೆ'ಯ ಮೌಲ್ಯಗಳು ಸವೆದು ಸುಸ್ತಾದಾಗ, ಅವಕ್ಕೆ ಹೊಸ ಹುಮ್ಮಸ್ಸು ನೀಡುವ 'ಪರಿಧಿ'ಯವರೂ ಇರಬಹುದು.

ಕವಿಗೂ ಸಹ, ಆ ಪರಿಚಿತನ ವ್ಯಕ್ತಿತ್ವ, ಜೀವನವನ್ನು ಒಂದು ಹೊಸ ಪಾತಳಿಯಿಂದ ನೋಡುವ ಸಾಧ್ಯತೆಯನ್ನು ಬೆಳಗಿದ್ದರಿಂದ ಆತ್ಮೀಯವಾಗುತ್ತದೆ. ಸಮಾಜಕ್ಕೆ, ಆಸುಪಾಸಿನ ಗಮಾರರಿಗೆ ಆತ ಹೊಲೆಗೊಳಕನಾದರೂ, ಕವಿಗೆ ಒಂದು ನೆಲೆಯ ಗುರುವಾಗುತ್ತಾನೆ. ಗೃಹೀತ ಮೌಲ್ಯಗಳನ್ನು ವಿಮರ್ಶಿಸುವ ಸಾಧ್ಯತೆಯನ್ನು ತೋರುವ ದರ್ಶಕನಾಗುತ್ತಾನೆ. ಈ ಧನಾತ್ಮಕ ದೃಷ್ಟಿಯಲ್ಲಿ ಆ ಹಳ್ಳಿಗ ಕರಗಿ ಲೀನಗೊಂಡು ಕವಿಯ ಒಂದು ಭಾಗವೇ ಆಗುತ್ತಾನೆ. ಕವಿ, ಪದ್ಯದ ಕೊನೆಯಲ್ಲಿ ಉದ್ಗರಿಸುವ ಹಳವಳಿಕೆ ಹಳವಂಡಗಳು ವಾಚಕರ ಹೃದಯವನ್ನು ಗಾಢವಾಗಿ ಕಾಡುತ್ತವೆ, ಅವ್ಯಕ್ತ ನೋವಿನಿಂದ ಚಡಪಡಿಸುವಂತೆ ಎಸಗುತ್ತವೆ:

'ಇತ್ತೀಚೆ ಹೋಗಿದ್ದಾಗ
ಎಲ್ಲ ಹಾಗೇ ಇತ್ತು,
ಹಳೆಗಾಲ ಮೈವೆತ್ತು.
ಬೈಗು ಬೆಳಕಲ್ಲಿ ಅತಿಶಯೋಕ್ತಿಸಿದ ಗದ್ದೆ ವನ ಹಕ್ಕಲು;
ಮುಂಗಾರಿನ ವಾರ್ಷಿಕ ಸಾಧ್ಯತೆ ಅಳೆಯೆ
ಆಕಾಶಪ್ರಜ್ಞೆಯಾಗಿದ್ದ ಒಕ್ಕಲು,
ಕೆನ್ನೆಲದ ನಡುವೆ ಟಾರು ರಸ್ತೆಯ ಹಚ್ಚೆ,
ಒಂದು ಬದಿ ಸೋಗೆ ಗುಡಿಸಿಲಿನ ಮಚ್ಚೆ,
ಆ ಅದೇ, ಕಮಲಿಸಿದ ಕೆರೆಯ ಸುಪರಿಚಿತ ಕೊಚ್ಚೆ.'

(ಮೈಲಿ ಮೊಗದ ಮಹಾರಾಯ)

ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಕವಿತೆಗಳಾದ ವ್ಯಕ್ತಿಗಳಲ್ಲಿ ವೈವಿಧ್ಯವಿದೆ. ರಾಜಕಾರಣಿ, ಕ್ರಾಂತಿಕಾರ, ವಿಜ್ಞಾನಿ, ನಾಸ್ತಿಕ, ತಾಯಿ, ಮಾಸ್ತರರು, ಶಿಕಾರಿ, ರೈತ, ಐಷಾರಾಮಿ ಎಂದೆಲ್ಲಾ ವಿಸ್ತಾರವಿದೆ; ಅಲ್ಲೆಲ್ಲಾ ಆಳವಾದ ನಾಜೂಕಿನ ಪಾತ್ರ ವಿವರಗಳೂ ಇವೆ.

ಇವನ್ನೆಲ್ಲ ನಿಸಾರರು ತಮ್ಮ ಸಮರ್ಥ ಮಾತುಗಾರಿಕೆಯಲ್ಲಿ ಕವಿತೆಯಾಗಿಸುತ್ತಾರೆ.

ನನಗೆ ಅವುಗಳಲ್ಲಿ ವೈಯಕ್ತಿಕವಾಗಿ ಇಷ್ಟವಾದದ್ದು ಆ ಕವಿತೆಗಳಲ್ಲಿನ ಅರಿವು-ಸಂವೇದನೆಗಳ ಪ್ರಾಮಾಣಿಕತೆ, ಭಾವತೀವ್ರತೆ-ವೈಚಾರಿಕತೆಗಳ ಸಮನ್ವಯ, ನಿರಾಡಂಬರ ಸರಳತೆ, ಪೂರ್ಣ ಹತೋಟಿಯ ಕಾವ್ಯಭಾಷೆಯ ಲಯ, ಪ್ರತಿಮೆ, ಉಪಮಾನಗಳು. ಎಲ್ಲಕ್ಕಿಂತ ಮುಖ್ಯವಾಗಿ ಕಾವ್ಯ, ಓದುಗರಿಗೆ ಸುಗಮವಾಗಿ, ಸುಖವಾಗಿ ಸಂವಹನವಾಗಬೇಕೆನ್ನುವ ಕವಿಯ ಪ್ರಾಮಾಣಿಕ ಕಾಳಜಿ ನನಗೆ ಮೆಚ್ಚಿಗೆಯಾಗಿವೆ. ಇವು, ನಿಸಾರರಿಗೆ ನವ್ಯಕಾವ್ಯದ ಸಂದರ್ಭದಲ್ಲಿ ಒಂದು ಪ್ರಮುಖ ಸ್ಥಾನ ನೀಡಿದಂತೆ, ಅವರ ಕಾವ್ಯಕ್ಕೆ ಒಂದು ಸಾರ್ವಕಾಲಿಕತೆಯನ್ನೂ ನಿಸ್ಸಂಶಯವಾಗಿ ತರುತ್ತವೆ.


ವಿಚಾರದ ಕಿಕ್ಕಿರಿಕೆ ಮನಸ್ಸನ್ನು ಘಾಸಿಗೊಳಿಸುವುದು ಆಗಾಗ್ಗೆ ನಮ್ಮ ಅನುಭವಕ್ಕೆ ಬಂದಿರುವ ವಿಷಯ. ಒಂದು ಬಗೆಯ ಮಧ್ಯಂತರ ತೆರವು, ಬಿಡುತೆ, ಮುಕ್ತತೆ ಅಗತ್ಯವೆನ್ನಿಸುವುದರಿಂದ ಜೀವಕ್ಕೆ ಭಾವ ಸ್ಪಂದನದ ಅನಿವಾರ್ಯತೆ ಹೆಚ್ಚಾಗಿರುತ್ತದೆ. ವಿಚಾರಗಳನ್ನು ನಾವು ಮನಸಾರ ಮೆಚ್ಚುವಂತಹ ಶೋಭೆಯನ್ನು ಭಾವ ಸ್ಪರ್ಶ ಅವಕ್ಕೆ ನೀಡಬಲ್ಲದು. ನಿವೇಶನಪೂರ್ತಿ ದಟ್ಟವಾಗಿ ಮನೆಯನ್ನೇ ಕಟ್ಟಿ ಬಿಟ್ಟರೆ ಅದರಿಂದ ಅನುಕೂಲ, ಅಂದಗಳಿಗೆ ಕುಂದು ತಟ್ಟದೆ ಇರದು. ಹಾಗೆಯೇ ಬರಹವೆಲ್ಲಾ ವೈಚಾರಿಕವಾಗಿ ಬಿಟ್ಟರೆ, ಅದರೊಡನೆ ಭಾವ ವಿಲಾಸೋಲ್ಲಾಸಗಳ ಹುಲ್ಲು, ಹೂವು ಗಿಡಗಳ ಮುಕ್ತಾವರಣ ಜೊತೆಗೂಡದಿದ್ದರೆ ಅಂತಹ ಸಾಹಿತ್ಯ ದುರ್ಭರವೆನ್ನಿಸುತ್ತದೆ.

(ವಿಚಾರ-ಭಾವಗಳ ಅಂತಸ್ಸಂಬಂಧ)

✧ ✧ ✧

ಸಾಹಿತ್ಯದಲ್ಲಿ ವಿಚಾರ-ಭಾವಗಳ ದಾಂಪತ್ಯದ ಚರ್ಚೆ ಅಗ್ರಮಾನ್ಯವಾದದ್ದು. ಅವೆರಡರಲ್ಲಿ ಯಾವುದು ಪ್ರಶಸ್ತವೆಂಬ ಪ್ರಶ್ನೆಯೇ ಉದ್ಭವಿಸದು. ಜೀವನಕ್ಕೆ ಹೇಗೋ ಹಾಗೆಯೇ ಸಾಹಿತ್ಯ-ಕಲೆಗಳೆರಡರಲ್ಲೂ ಅವು ಸರಿ ಸಮಾನ ಪ್ರಾಮುಖ್ಯ ಉಳ್ಳವು: ಗಡಿಯಾರದ ಸಮಯ ಸೂಚಿಸುವ ಎರಡು ಮುಳ್ಳುಗಳಲ್ಲಿ ಯಾವುದು ಹೆಚ್ಚು? ಯಾವುದು ಕಡಮೆ? ಇವುಗಳಲ್ಲಿ ಒಂದು ಉದ್ದ, ಮತ್ತೊಂದು ಮೋಟಕಾಗಿರುವುದರಿಂದ ಒಂದು ಮತ್ತೊಂದಕ್ಕಿಂತ ಉತ್ತಮವೊ, ಅಧಮವೊ ಎನ್ನಿಸದು. ಇವುಗಳಲ್ಲಿ ಯಾವುದೇ ಒಂದು ಮಾತ್ರವಿದ್ದರೆ ಉದ್ದೇಶ ಈಡೇರದು. ಕರ ತಾಡನಕ್ಕೆ ಹಸ್ತ ದ್ವಯದ ಆವಶ್ಯಕತೆಯಂತೆ ಇದೂ ಕೂಡ. ಮನುಷ್ಯನ ಶ್ರೇಯಸ್ಸಾಧನೆಗೆ ಎರಡೂ ಮುಖ್ಯ.

(ವಿಚಾರ-ಭಾವಗಳ ನಂಟು)



ನಮ್ಮೊಡನಿದ್ದೂ ನಮ್ಮಂತಾಗದ ನಾನೆಂಬ ಪರಕೀಯ

◆ ಸ. ಉಷಾ

'ನಾನೆಂಬ ಪರಕೀಯ' ಎಂಬ ಕವಿತೆ ಬರೆದ ಕೆ. ಎಸ್. ನಿಸಾರ್ ಅಹಮದ್ ಅವರ ಸ್ವಕೀಯ ಕವಿತೆಗಳನ್ನು ಕುರಿತು ಬರೆಯುವುದು ಒಂದು ಸ್ವಾರಸ್ಯಕರ ಅಧ್ಯಯನ, ಅದೊಂದು ಛಾಯಾವಾದ.

ಕವಿತೆಗೆ, ಹಾಡಿಗೆ, ವೃಂದಗಾನದ ಶಿಸ್ತಿಗೆ ನಿಸಾರ್ ಅಹಮದ್‌ರವರು ಒಂದು ಕಾಲದಲ್ಲಿ ನನಗೆ ಗುರುಗಳು. ನಾನು ಅವರ ನೇರ ವಿದ್ಯಾರ್ಥಿಯಲ್ಲ. ಅವರು ಕಟ್ಟಿದ ಎರಡು ಹಾಡುಗಳು—ಒಂದು 'ಸಗ್ಗದ ಸಿರಿ ಬಂತು ನಮ್ಮೂರಿಗೆ, ಸುಗ್ಗಿಯ ಸೊಬಗಿಂದ ನಮ್ಮೂರಿಗೆ'; ಇನ್ನೊಂದು,

> 'ನಾವಗಲಿ ಹೋಗುವೆವು ನೇಹಿಗರೆ ಇಂದು
> ಇಲ್ಲವೀ ಸಹವಾಸ ಮುಂದೆ ಇನ್ನೆಂದು
> ಅಗಲಿಕೆಯ ನೆನೆದಾಗ ಕಂಬನಿಯು ಬಂದು
> ಮರುಗುವುದು ಕೊರಗುವುದು ಹೃದಯ ಬಲು ನೊಂದು.'
> (ಕಾಲೇಜನ್ನು ಬಿಡುವಾಗ)

೧೯೬೦ರ ದಶಕದ ಉತ್ತರಾರ್ಧದಲ್ಲಿ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಎಲ್ಲ ತರಗತಿಗಳಲ್ಲೂ ಕ್ಲಾಸ್ ಸೋಶಿಯಲ್‌ಗಳಲ್ಲಿ ಹುಡುಗಿಯರು-ಹುಡುಗರು ಹಾಡುತ್ತಲೇ ಇದ್ದರು. ಈಗಲೂ ಹಾಡುತ್ತಿರಬಹುದೇನೋ.

ತಮ್ಮ 'ಅನಾಮಿಕ ಆಂಗ್ಲರು' ಸಂಕಲನದ ಮುನ್ನುಡಿಯಲ್ಲಿ ಈ ಕವಿ ಹೀಗೆ ಹೇಳಿಕೊಂಡಿದ್ದಾರೆ :

`ನಮಗೆ ಚೆನ್ನಾಗಿ ಗೊತ್ತಿರುವ ನಾವು ನಿಜಕ್ಕೂ ನಾವಲ್ಲ; ನಮ್ಮಲ್ಲಿ ಭಿನ್ನರಾದ, ಕೆಲವೊಮ್ಮೆ ಪರಸ್ಪರ ವಿರುದ್ಧರೂ ಆದ ಹಲವಾರು ಆಸಾಮಿಗಳು ಅಡಗಿ ಕೂತಿದ್ದಾರೆ. ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿ ಇತರರನ್ನು ಪಕ್ಕಕ್ಕೆ ಸರಿಸಿ ಒಬ್ಬ ಆಚೆ ತಲೆ ಹಾಕುತ್ತಾನೆ. ಹೀಗಾಗಿ ಕವಿಯೊಬ್ಬ ತನ್ನನ್ನು ಕುರಿತೋ, ಇತರರ ಬಗ್ಗೆಯೋ, ತನ್ನ ಸುತ್ತಣದ ಬಗ್ಗೆಯೋ ತೀವ್ರವಾಗಿ ಪರ್ಯಾಲೋಚಿಸಿ ತಪ್ತಸ್ಥಿತಿಯಲ್ಲಿ ಲಿಖಿತಕ್ಕಿಳಿಸಿದಾಗ, ಸತ್ಯದ ಒಂದು ಚರ್ಯೆಯನ್ನು, ತೀರಾ ವೈಯಕ್ತಿಕ ದೃಷ್ಟಿಕೋನದಿಂದ ಕಂಡ ಚರ್ಯೆಯನ್ನು, ಮಾತ್ರ ನಮಗೆ ಕಾಣಿಸುತ್ತಿದ್ದಾನೆ ಎಂದೇ ಅರ್ಥ.` ಹಾಗೆ ನಿಸಾರ್ ಅಹಮದ್‌ರ ಕಾವ್ಯದಲ್ಲಿ ಒಬ್ಬ ಪರಕೀಯನಿದ್ದಾನೆ, ಒಬ್ಬ ಸ್ವಕೀಯನೂ ಇದ್ದಾನೆ. ಇದು ಅವರ ಕವಿತೆಯ ಛಾಯಾವಾದ. `ಮನಸು ಗಾಂಧಿ ಬಜಾರು` ಇಂದ ಹಿಡಿದು ಇತ್ತೀಚಿನ ಕವಿತೆಗಳವರೆಗೂ ಈ 'ದ್ವಂದ್ವ.'

'ಬೆರಗು ಪ್ರಶ್ನೆಗಳವಳಿ ರೆಕ್ಕೆ ಹರಡಿದ
ಪುಟ್ಟ ಹಕ್ಕಿಯಂತೆ'

ಯಾವುದೋ 'ಆರ್ಷ ಮಂತ್ರಕ್ಕೆ ಕಲೆಗಾರಿಕೆಯ ರೆಕ್ಕೆ' ಮೂಡಿಸುತ್ತ ನಿಲ್ಲದೆ ಹಾರುತ್ತಲೇ ಇದೆ.

ಕವಿಯ ಮನದೊಳಗೆ ಒಬ್ಬಳು 'ಸುಮಂಗಲೆ' ಸ್ಥಿರವಾಗಿ ಇದ್ದಾಳೆ. ಅವಳು ಗಡಸು ಜಟಿಲ ಸೂತ್ರಗಳಿಗೆಲ್ಲ ಮೃದು ಬೆರಳ ಪರಿಹಾರ ನೀಡುತ್ತ ಇರುತ್ತಾಳೆ.

'ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ
ಬೆಸೆದು ಹೊಸೆಯುವ ಕಲೆಯು'

ಪಡೆಯಬೇಕೆಂಬ ಆಶಯ ಹೊತ್ತ ಅವರ ಕಾವ್ಯದಲ್ಲಿ ಸ್ವಲ್ಪ ಅಡಿಗರಿದ್ದಾರೆ, ಸ್ವಲ್ಪ ಕುವೆಂಪು, ಸ್ವಲ್ಪ ನೆರುಡ, ಸ್ವಲ್ಪ ಡಿವಿಜಿ ಮತ್ತು ಅನೇಕ ನಿಸಾರರು ಇದ್ದಾರೆ. ಹೆಚ್ಚಾಗಿ ಅವರ ಎಲ್ಲ ಸಂಕಲನದ ಮುಖ್ಯ ಕವಿತೆಗಳಲ್ಲಿ ಒಬ್ಬ ನಾನು ಮತ್ತು ಒಬ್ಬ ಪರಕೀಯ ಇದ್ದಾರೆ. ಒಂದು ಸುತ್ತು ಸುತ್ತಿದರೆ ವಿಷ್ಣು ಮೋಹಿನಿಯಾಗುವ ಹಾಗೆ, ಮೋಹಿನಿ ವಿಷ್ಣುವಾಗುವ ಹಾಗೆ. ಅವರಿಬ್ಬರು ತಮ್ಮ ಅದಲು ಬದಲು ರೂಪಗಳನ್ನು ತೋರಿಸುತ್ತ ಇರುತ್ತಾರೆ. ಒಮ್ಮೆ `ಮಾರಾಟಗಾತಿಯ ಮಾತುಕತೆ`ಯ ಹಗುರ ಮನದ ಚೆಲ್ಲಾಟದ ತರುಣಿಯಾಗಿ, ಒಮ್ಮೆ `ರಾಮನ್ ಸತ್ತ ಸುದ್ದಿ`ಯ ತತ್ತ್ವಶಾಸ್ತ್ರಜ್ಞನಾಗಿ, ಒಮ್ಮೆ `ಸವತಿ ಮಕ್ಕಳ ಹಾಗೆ ಕಾಣ ಬೇಡವ್ವ`ದ ನೊಂದ ಕಿರಿಯ ಮಗನಾಗಿ.

`ಮನಸು ಗಾಂಧಿ ಬಜಾರು` ಸಂಕಲನದಲ್ಲಿ ಕವಿಗೆ `ನಾನು`

`ಇಪ್ಪತ್ತನೆಯ ಶತಮಾನದ ಕೊಲಂಬಸ್` ತರಹ ಕಾಣುತ್ತಾನೆ.

'ನಾನು—
ದಿಗ್ದಿಗಂತದ ಬೆಳ್ಳಿ ಗೆರೆಗೆ ಆಶಿಸಿದವನು
ಕಲ್ಲಲ್ಲಿ ಸಿರಿ, ನೆಲದಲ್ಲಿ ಝರಿ, ಕಾಡೊಳಗು ದಾರಿಯನು ಕನಸಿದವನು'

`ಮನಸು ಗಾಂಧಿ ಬಜಾರು` ಸಂಕಲನದ ನಾಯಕ ತನ್ನನ್ನು ತಾನೇ ಹೀಗೆ ವರ್ಣಿಸಿ

ಕೊಳ್ಳುತ್ತಾನೆ

'ಮೆದುಳಿರದ ಮಂಕು ತಲೆ
ಅನಿಲ ತುಂಬಿದ ನೆಬ್ಯುಲ!
ಚಣಕೆ ನೂರಾರು ಸಲ ಗಿರ್ರಗಿರ್ರನೆ ತಿರುಗುತಿರುವ ಬುಗುರಿ,
ಮನಸು ಗಾಂಧಿ ಬಜಾರು'

(ಮನಸು ಗಾಂಧಿ ಬಜಾರು)

'ಮನಸು ಗಾಂಧಿ ಬಜಾರು'ನಲ್ಲಿ ಸ್ವಾತಂತ್ರ್ಯದ ಬಯಕೆ ಇದೆ. ತನ್ನ ಸುತ್ತಲಿನ ಪರಿಸರವನ್ನು ಅಳೆದು ಗುರ್ತಿಸಿಕೊಳ್ಳುವ ಸೂಕ್ಷ್ಮತೆ ಇದೆ. ಇದೆಲ್ಲದರ ನಡುವೆ ತಾನು ತೂಕ ತಪ್ಪದ ಹಾಗೆ ನಡೆಯಬೇಕು ಎನ್ನುವ ಎಚ್ಚರವೂ ಇದೆ.

'ಪಂಜರದ ಗಿಣಿ' ಎಂಬ ಕವಿತೆಯಲ್ಲಿ ಇವೆಲ್ಲವೂ ಒಟ್ಟಾಗಿ ರೂಪು ತಳೆದಿದೆ.

'ಅರಮನೆಯ ಒಳ ಕೋಣೆ
ದೀಪ, ಅಗರಿನ ಧೂಪ, ಹೂವು, ವೀಣೆ—
ಮೈ ಮರೆಸಬಹುದಿಲ್ಲಿ ನಿದ್ರೆ ಹಾಸಿನ ಮೇಲೆ ಒರಗಿದ್ದರೆ;
ಮರಿ ಗಿಳಿಗೆ ಎಲ್ಲವೂ ಬಹಳ ಚೆನ್ನಾಗಿತ್ತು,
ಹೊನ್ನ ಪಂಜರ ಮಾತ್ರ ಇರದಿದ್ದರೆ.'

(ಪು. ೩೦ ಸಮಗ್ರಕವಿತೆಗಳು)

—ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನ್ನು ಒಟ್ಟಾಗಿ ಬೆಸೆದು ಹೊಸೆಯುವ ಕಲೆಗಾರಿಕೆಯ ಆಶಯ ಈ ಪದ್ಯದಲ್ಲಿ ಬಹು ಸಹಜವಾಗಿಯೇ ಸಿದ್ಧಿಸಿದೆ.

'ಬಳಗವಗಲಿದ ತಿರುಕಿ
ಕತ್ತಲಲಿ ಏಕಾಕಿ
ಬಳಕೆಯಿಲ್ಲದ ದಾರಿ ನೂಕಬೇಕು.
ಪ್ರಾಯ ತುಳುಕುವ ಕಾಯ
ತಪ್ಪಿ ನಡೆದರಪಾಯ
ತಲೆಮಾರ ಗೌರವವನುಳಿಸಬೇಕು.'

(ಅದೇ)

ಎನ್ನುವ ಕವಿತೆ ತನ್ನ ಕೊನೆಯಲ್ಲಿ ಒಂದು ತತ್ತ್ವಜ್ಞಾನವನ್ನು ಕೊಡುತ್ತದೆ.

'ನಾನಿಷ್ಟೆ ಲೋಕಕ್ಕೆ: ತೇದಂತೆ ಕರಗುವ
ಗಂಧದೊಂದು ಚಕ್ಕೆ.'

ಲೋಕ ತೋರುವ ಪ್ರಲೋಭನೆಗಳನ್ನು ಗುರುತಿಸಿ, ಅದು ಹಾಕುವ ಮಿತಿಗಳನ್ನು ಗಮನಿಸಿ, ಆರ್ಭಟಿಸದೆ, ಆಕ್ರೋಶಿಸದೆ ಒಳಿತನ್ನು ಬೆಳೆಸುವ, ಪ್ರಸನ್ನತೆಯ ಗಂಧದ ಚಕ್ಕೆಯಾಗಲು ಸಿದ್ಧವಾಗುವ ಸಮರ್ಪಣಾಭಾವ ನವೋದಯ ಪ್ರಜ್ಞೆಯದು, ಭಕ್ತಿ ಪಂಥದ್ದು, ಅನುಭಾವ ಕಾವ್ಯದ್ದು. ಅಚ್ಚರಿಯೆಂದರೆ ಈ ಕವಿತೆ ಹುಟ್ಟಿದ್ದು ನವ್ಯದ ಏರುಗಾಲದಲ್ಲಿ. ಇಂದು ಬರೆಯುತ್ತಿರುವ ಕವಿಗಳಲ್ಲಿ ಕೂಡ ಈ ರೀತಿ, ನವ್ಯದ ರೂಪದಚ್ಚಿನಲ್ಲಿ ನವೋದಯದ ಭಾವ-ಆಲೋಚನೆಗಳನ್ನು ಕಾಣಬಹುದು. ನನ್ನ ಗ್ರಹಿಕೆಯಲ್ಲಿ ಈ ಬೆರಕೆ ಒಂದು

ವಿಚಾರವನ್ನು ಸಾಬೀತು ಪಡಿಸುತ್ತದೆ: ಸಮಾಜ ಮತ್ತು ವೈಯಕ್ತಿಕತೆಯ ನಡುವಿನ ತೊಳಲಾಟ ಮತ್ತು ಅದರ ಅಭಿವ್ಯಕ್ತಿ, ಹನ್ನೆರಡನೆಯ ಶತಮಾನದ ವಚನಕಾರರಿಂದ ಹಿಡಿದು ಇಂದು ಬರೆಯುವ ಕವಿಯವರೆಗೆ ನಿರಂತರವಾಗಿರುವುದು ಎಂದು. ಹಾಗಿರುವುದ ರಿಂದಲೇ ಬೇಂದ್ರೆಯವರಲ್ಲಿ

'ನನ್ನ ಹರಣ ನಿನಗೆ ಶರಣ—'

ಹಾಗಿರುವುದರಿಂದಲೇ ಅಡಿಗರಲ್ಲಿ 'ಆ ಹೆಸರೂ ಸೇರದೇನು ನಿನ್ನ ಯಶೋಮಾಲೆಗೆ' ಎಂಬ ಪ್ರಶ್ನೆ.

ಹಾಗಿರುವುದರಿಂದಲೇ ನಿಸಾರ್ ಅಹಮದ್‌ರಲ್ಲಿ ಮರಿ ಗಿಳಿ

'ತೇದಂತೆ ಕರಗುವ ಗಂಧದ ಚಕ್ಕೆಯಾಗುವುದು.'

ಕನ್ನಡ ಕಾವ್ಯದ ಈ ಹೋರಾಟದ ನಿರಂತರತೆಯಲ್ಲಿ ನಿಸಾರ್ ಅಹಮದ್ 'ನಮ್ಮೊಡನಿದ್ದಾರೆ.'

'ನೆನೆದವರ ಮನದಲ್ಲಿ' ಸಂಕಲನದಲ್ಲಿ ಎರಡು ಸ್ವಕೀಯ ಅನ್ನಬಹುದಾದ ಕವಿತೆಗಳಿವೆ. ಅವು 'ಹುಟ್ಟುಹಬ್ಬದ ಹಾಡು' ಮತ್ತು 'ನಿನ್ನ ದಯೆ ಬೇಡ.'

ಕವಿ ಹುಟ್ಟುಹಬ್ಬದ ಹಾಡಿನಲ್ಲಿ

'ಇಪ್ಪತ್ತಐದಿಂದು ನಾನಿನ್ನೂ ಯುವಕ
ಮಣ್ಣಿನವ ನನಗೇಕೆ ಆಗಸದ ಮರುಕ'

ಎಂದು ಪ್ರಾರಂಭಿಸುತ್ತಾರೆ. ತಾನು ಬಿಲ ಹೊಕ್ಕು ಅವಿತರೆ ತನ್ನನ್ನು ಜಗದ ಗರಡಿಗೆ ನೂಕಬೇಕೆಂದು ಬೇಡುತ್ತಾರೆ. ಅನುಭವದ ಸಾಮಿನಿಂದ ಮನ ಬೆಳೆಯಲಿ ಎಂದು ಆಶಿಸುತ್ತಾರೆ. ಸೋಗಿನ ಬೂದಿಯನ್ನು ಊದಿ ಹಾಕುವುದರ ಕಡೆಗೆ ಅದರ ಗಮನವಿದೆ.

'ನಿನ್ನ ದಯೆ ಬೇಡ' ಕವಿತೆಯಲ್ಲಿ ಸ್ವಾಭಿಮಾನದ ಸಸಿಯನ್ನು ತನ್ನ ಎದೆಯಲ್ಲಿ ನೆಡುವಂತೆ ಕೇಳುತ್ತಲೇ ಋಣಭಾರದ ಅಕ್ಕರೆಯನ್ನು ತಿರಸ್ಕರಿಸುತ್ತಾರೆ.

ಅಡಿಗರಂತೆ ನಿಸಾರ್ ಅಹಮದ್‌ರು ಸಹ ತಮ್ಮದೇ ದನಿಯನ್ನು ಅರಸುತ್ತ ನಡೆದಿದ್ದಾರೆ. 'ಮನಸು ಗಾಂಧಿ ಬಜಾರಿ'ನ 'ನನ್ನ ನುಡಿ', 'ನೆನೆದವರ ಮನದಲ್ಲಿ', 'ನನ್ನದನಿ' ಆಗಿ ಆತ್ಮಶೋಧದಲ್ಲಿ ತೊಡಗಿದೆ. 'ಒಂದರ್ಧ ಚಣವಷ್ಟೇ ಹೊರ ಚಿಮ್ಮಿ ಹೊಳೆಯುವ ದನಿ' ಇಲ್ಲಿ 'ಅಂಬೆಗಾಲಿನ ಹಸುಳೆ ಅಲೆ.'

ಇಲ್ಲಿ ಕವಿ ನಗರವಾಸಿ :

'ದಿನಕೊಂದು ವಿಸ್ತರಣ ಚಿಗುರುವೀ ನಗರದಲಿ
ಗಾರೆ ಕಾಂಕ್ರೀಟುಗಳ ನಿಬಿಡದಿಕ್ಕಟ್ಟಿನಲಿ
ಯಾವ ಮಾಡೊ!
ಕೊನೆಯಿರದ ಗಲ್ಲಿಯಲಿ ಯಾವ ಗೂಡೊ!' **(ಆತ್ಮಶೋಧ)**

ಎಂಬ ತಳಮಳವಿದೆ.

ಭೂವಿಜ್ಞಾನಿಯೂ ಆಗಿರುವ ಕವಿ ಭೂಮ್ಯಂತರಂಗದೊಳಗೆ ಸ್ತರಶಿಲೆಗಳಲ್ಲಿ 'ನಿಜ ಖನಿಜ ನಿಕ್ಷೇಪ' ಹುದುಗಿರುವುದನ್ನು ಹುಡುಕುವ ಪ್ರಯತ್ನದಲ್ಲಿದ್ದಾರೆ.

ಈ ಕವಿ, ಸಭೆ ಸಮಾರಂಭಗಳಲ್ಲಿ ಜನರಿಗೆ ಪರಿಚಯವಾಗಿರುವುದು ತಮ್ಮ 'ಕುರಿಗಳು, ಸಾರ್, ಕುರಿಗಳು' ಕವಿತೆಯಿಂದ. ನಾನು ಗಮನಿಸಿದಂತೆ ಕವಿಗೋಷ್ಠಿಗಳಲ್ಲಿ ಸಹ ಪ್ರೇಕ್ಷಕ/ಕೇಳುಗ ನಿಸಾರ್ ಅಹಮದ್‌ರು ಮೈಕ್ ಮುಂದೆ ಬಂದರೆಂದರೆ, ಅವರು 'ಅಮ್ಮ ಆಚಾರ ಮತ್ತು ನಾನು' ಅಥವಾ 'ರಂಗೋಲಿ ಮತ್ತು ಮಗ' ತರಹದ ಕವಿತೆಗಳನ್ನು ಓದಲೆಂದು ಬಯಸುತ್ತಿರುತ್ತಾರೆ. ನನಗೆ ಈ ಕವಿತೆಗಳಲ್ಲಿ ನಿಸಾರ್ ಅಹಮದ್ ಅವರು ವಿನೋದದ ಮರೆಯಲ್ಲಿ ವಿಚಾರವನ್ನೂ ಕೊಡುತ್ತಾರೆಂದೇ ಅನಿಸುತ್ತದೆ.

'ಮಂದೆಯಲ್ಲಿ ಒಂದಾಗಿ ಸ್ವಂತತೆಯೇ ಬಂದಾಗಿ' ನಡೆಯುವ ಕುರಿಗಳಲ್ಲಿ ನಾವು-ನೀವು, ಸ್ವಕೀಯ ಮತ್ತು ಪರಕೀಯರಿಬ್ಬರೂ ಇದ್ದಾರೆ. ನಾನು ಹಲವು ಪ್ರಾಯೋಗಿಕ ವಿಮರ್ಶೆಯ ಗುಂಪುಗಳಿಗೆ 'ಕುರಿಗಳು' ಕವಿತೆ ಕೊಟ್ಟು ವಿಶ್ಲೇಷಿಸಲು ಕೇಳಿದ್ದೇನೆ. ಕೆಲವರು ವಿನೋದವನ್ನು, ಕೆಲವರು ರಾಜಕೀಯವನ್ನು, ಕೆಲವರು ಸಮೂಹ ಮನೋವಿಜ್ಞಾನವನ್ನು, ಕೆಲವರು ತಮ್ಮ ಸ್ವಂತ ತಳಮಳಗಳ ಕುರುಹನ್ನು ಗ್ರಹಿಸಿ ಬರೆದಿದ್ದಾರೆ. ಹಾಗೆ 'ಕುರಿಗಳು' ವಿನೋದದ ಮರೆಯಲ್ಲಿ ವಿಚಾರವನ್ನು ಗಿಡಿದಿರುವ ಕವಿತೆ—ಉತ್ತಮ ವಜ್ರದ ಹಾಗೆ; ಬೆಳಕು ಅದರೊಳಗೆ ಹಲವು ಬಗೆ ಪ್ರವಹಿಸುತ್ತದೆ. ಓದುಗ ಅರ್ಥೈಸಿಕೊಂಡಷ್ಟೇ ಅದಕ್ಕೆ ಅರ್ಥ. ಅರ್ಥೈಸಿಕೊಂಡಷ್ಟೂ ಅರ್ಥ.

ವಿನೋದ ಮುಖವಾಡದ ವಿಚಾರ ಅಂದೊಡನೆ ನೆನಪಾಗುವುದು 'ಅಮ್ಮ ಆಚಾರ ಮತ್ತು ನಾನು.' ಕವಿಯ ಅತ್ಯಂತ ಖಾಸಗಿ ಅನುಭವವೊಂದನ್ನು ನಿರೂಪಿಸಿದರೂ ಇದರೊಳಗೆ ಸಂಪ್ರದಾಯ ಮತ್ತು ಆಧುನಿಕತೆಗಳ ಸಂಘರ್ಷವನ್ನು, ವೈಯಕ್ತಿಕ ಸಂಬಂಧಗಳ ಪ್ರೀತಿ ಎಂಬ ಮಹಾ ತತ್ತ್ವದ ಘನತೆಯನ್ನು ಬಹು ನವಿರಾಗಿ ಕವಿ ಕೆತ್ತಿದ್ದಾರೆ.

ಅತಿ ಸಾಂಪ್ರದಾಯಿಕಳಾದ, ವಿದ್ಯಾವಂತೆಯರನ್ನು, ಮೈ ಪ್ರದರ್ಶಿಸುವ ಗಂಡು ಬೀರಿಗಳೆಂದು ಹಳಿಯುವ, ಕುರಾನು-ರಂಜಾನಿನ ಉಪವಾಸದ ಸಾಂಪ್ರದಾಯಿಕ ಮುಸ್ಲಿಂ ತಾಯಿ, ತನ್ನ ಆಧುನಿಕ ವಿದ್ಯಾವಂತ ಮಗ ಕಲಿತ ಹೆಣ್ಣನ್ನು ಮದುವೆಯಾಗಲು ಕೊನೆಗೂ ಒಪ್ಪುತ್ತಾಳೆ. ಕನ್ನಡಿಯಲ್ಲಿ ಅವಕುಂಠನ ತೆಗೆದು ವಿವಾಹವಾಗುವ ಮುಸ್ಲಿಂ ಪದ್ಧತಿಯನ್ನು ಮೀರಿ ಹತ್ತಿರದಲ್ಲೇ ವಧುವನ್ನು ಕಂಡು ಮೆಚ್ಚಿ ನಿರೂಪಕನ ವಿವಾಹ ನಡೆಯುತ್ತದೆ.

ತೋಳಿಲ್ಲದ ರವಿಕೆ, ಗೋಪುರದ ಹೆರಳು, ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿದ ಭಾರೀ ಸೀರೆ. ಹೈಹೀಲ್ಡು ಕೆರದ ಸೊಸೆ- ಮೊದಲ ಬಾರಿಗೆ ತಿರುಗಾಡಲು ಹೊರಟು ತನ್ನೆಲ್ಲ ಆಧುನಿಕ ಅಲಂಕಾರಗಳ ಜೊತೆ ಜೊತೆಗೇ ಅತ್ತೆಯ ಬುರ್ಖಾವನ್ನೂ ಅಂದರೆ ಸಾಂಪ್ರದಾಯಿಕತೆಯನ್ನೂ ಒಪ್ಪಿಕೊಳ್ಳುತ್ತಾಳೆ. ಇಲ್ಲಿ ನಿರೂಪಕ, ನಿರೂಪಕನ ತಂದೆ, ತಾಯಿ, ನವ ವಧು ಈ ನಾಲ್ಕು ಜನರ ತಾತ್ವಿಕ ಬದ್ಧತೆಗಳ ಮತ್ತು ವೈಯಕ್ತಿಕ ಒಲವುಗಳ ಈ ಮುಖಾಮುಖಿ ಗಮನಾರ್ಹವಾಗಿದೆ. ಈ ಕವಿತೆಯ ರೀತಿ, ಚಾರ್ಲಿ ಚಾಪ್ಲಿನ್‌ನ ಚಿತ್ರದ ಹಾಗೆ. ನಿಸಾರರ ಕಾವ್ಯ ಸಹ ಇಂಥದ್ದೇ. ಕವಿ ತನ್ನ ಕವಿತೆಯನ್ನು ವೈಚಾರಿಕತೆಯಲ್ಲಿ

ಸಿಂಗರಿಸುತ್ತಾರೆ, ಅದರ ಮೇಲೆ ಹಾಸ್ಯದ ಅವಕುಂಠನ ಎಳೆದು ಬಿಡುತ್ತಾರೆ.

'ರಂಗೋಲಿ ಮತ್ತು ಮಗ' ನಿಸಾರ್ ಅಹಮದ್‌ರ ಇನ್ನೊಂದು ಸ್ವಕೀಯವೂ ಪರಕೀಯವೂ ಆದ ಕವಿತೆ. ಇಲ್ಲಿಯೂ ನಿರೂಪಕ ಸ್ವಕೀಯನೂ ಪರಕೀಯನೂ ಆಗುತ್ತಾನೆ. ನಿರೂಪಕ ರಂಗೋಲಿಯ ಅಂದಚಂದಗಳಿಗೆ, ಅದು ಕಟ್ಟುವ ಕಲ್ಪನಾ ಪ್ರಪಂಚಕ್ಕೆ ಆಕರ್ಷಿತನಾಗಿದ್ದಾನೆ. ಅವನ ಹಿಂದೆ ಒಂದು ಪರಂಪರೆಯಿದೆ. ಆ ಪರಂಪರೆಗೆ ತನ್ನದೇ ನಂಬಿಕೆಗಳು ದಟ್ಟವಾಗಿವೆ. ಅವನ ಸುತ್ತ ಒಂದು ಹೊಸ ಜಗತ್ತಿನ ವೈಶಾಲ್ಯ, ಇನ್ನೊಂದು ಸಂಸ್ಕೃತಿಯ ಸಮೃದ್ಧಿ ಇದೆ. ಆ ಪರಂಪರೆಯ ಪ್ರತಿನಿಧಿಯಾದ ಅಜ್ಜಿ ಔಟ್‌ಹೌಸಿಗೆ ಬಾಡಿಗೆಗೆ ಬಂದ ಜನರಿಗೆ ಮನೆ ತನ್ನದೆಂಬ ದೌಲತ್ತು, ರಂಗೋಲಿ ಹಾಕಬಾರದೆಂಬ ಬಿರು ನುಡಿಯ ಸೂಚ್ಯತೆ ತೋರಿದಾಗ ನಿರೂಪಕನಿಗೆ ನೋವಾಗುತ್ತದೆ. ಅವನಿನ್ನೂ ಹುಡುಗ. ಅವನಿಗೆ ರಂಗೋಲಿ, ಅದರ ಅಂದ ಚಂದ ಮತ್ತು ನೆರೆಮನೆಯ ವೇದವಲ್ಲಿ ರಂಗೋಲಿ ಬರೆದ ಬೀದಿ, ಎಲ್ಲವೂ ತನ್ನ ಸುತ್ತಲಿನ ಹೊಸ ಜಗತ್ತನ್ನು ಪ್ರತಿನಿಧಿಸುವಂಥವು. ಅಜ್ಜಿ, ಕುರಾನು, ಕುರಾನಿನಲ್ಲಿ ಹೇಳಿದ್ದು, ಅವನ ಹಿಂದಿನ ಪರಂಪರೆಯ ಜಗತ್ತು. ಅವನು ಎರಡರಲ್ಲಿಯೂ ಸ್ವಕೀಯ ಮತ್ತು ಪರಕೀಯನೂ ಅಹುದು. ವೇದವಲ್ಲಿ 'ಸಾಬರು ಯಾಕೋ ರಂಗೋಲಿ ಇಡಲ್ಲ' ಎಂದು ಕೇಳಿದಾಗ ನಾಚಿ ನೀರಾಗುತ್ತಾನೆ. ಅದೇ ಪ್ರಶ್ನೆಯನ್ನು ಮಗ ಕೇಳಿದಾಗ 'ಅದು ನಮ್ಮ ಪದ್ಧತಿಗೆ ಸಲ್ಲ' ಎನ್ನುತ್ತಾನೆ. ಕಾಲ ಉರುಳಿದೆ. ಇತಿಹಾಸದ ಚಕ್ರ ಒಂದು ಸುತ್ತು ಸುತ್ತಿದೆ. ನಾಚಿಕೊಳ್ಳುವ ಬಾಲಕ ಈಗ ಅಪ್ಪನಾಗಿದ್ದಾನೆ. ಅವನ ಮಗ ಪ್ರಶ್ನೆ ಕೇಳುವ ಸ್ಥಾನದಲ್ಲಿದ್ದಾನೆ. ಅಪ್ಪನೆದುರು ಪ್ರಶ್ನೆ ಕೇಳುವ ತಲೆಮಾರು ಇದೆ. ಉತ್ತರ ಹೇಳಬೇಕಾದ ಜವಾಬ್ದಾರಿಯೂ ಅವನಿಗಿದೆ. ಹಾರಿಕೆಯ ಉತ್ತರ ಕೊಟ್ಟು ಮಗನನ್ನು ಸುಮ್ಮನಾಗಿಸಿದರೂ ಮನಸ್ಸಿನ ತುಂಬಾ ಚಿಂತನೆಯ ಸಂತೆ ನೆರೆದಿದೆ. ಕವಿ ಮತ್ತೆ ಅಂತರ್ಮುಖಿಯಾಗಿ ಬಿಡುತ್ತಾರೆ.

'ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ;
ಬೆರಗು ಪ್ರಶ್ನೆಗಳವಳಿ ರೆಕ್ಕೆ
ಹರಡಿದ ಪುಟ್ಟ ಹಕ್ಕಿಯಂತೆ;
ಮನದ ತುಂಬಾ ನೆರೆಸಿ ಚಿಂತನೆಯ ಸಂತೆ.'
(ರಂಗೋಲಿ ಮತ್ತು ಮಗ)

ಹೀಗೆ ಮುಗಿಯುವ ಕವಿತೆಯಲ್ಲಿ 'ಬೆರಗು ಪ್ರಶ್ನೆಗಳ ಅವಳಿ ರೆಕ್ಕೆ' ಎಂಬ ಸಾಲು ಬಹುಶಃ ಓದುಗನನ್ನು ಉಪನಿಷತ್ತಿನ ಲೋಕಕ್ಕೆ ಕರೆದೊಯ್ಯುತ್ತದೆ. 'ಆಶ್ಚರ್ಯದಿಂದ ಪ್ರಶ್ನೆಗೆ, ಪ್ರಶ್ನೆಯಿಂದ ಆಶ್ಚರ್ಯಕ್ಕೆ ಉಭಯ ಮಧ್ಯೆ ಚಲಿಸದ ವಿದ್ಯೆ ಪೂರ್ಣಶೂನ್ಯ ಕುಂಡಲಿನಿ' ಎಂಬುದೊಂದು ಆರ್ಷವಾಕ್ಯ. ಇದರ ಸೂಚನೆ 'ಯಾವುದೋ ಆರ್ಷಮಂತ್ರಕ್ಕೆ ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ' ಎಂಬ ವಾಕ್ಯದಲ್ಲಿ ಮೊದಲೇ ಇದೆ. ಇಲ್ಲಿ ಆಶ್ಚರ್ಯ ಮತ್ತು ಪ್ರಶ್ನೆಗಳ ಪಾತ್ರಗಳು ಬದಲಾಗುತ್ತ ಹೋಗುತ್ತವೆ. ಆದರೆ ಆಚರಣೆ ನಂಬಿಕೆಗಳ ಮಡಿಕೆ ಮಡಿಕೆಗಳ ಅಡಿಯಲ್ಲಿ ಬೆರಗು ಪ್ರಶ್ನೆಗಳ ಅವಳಿ ರೆಕ್ಕೆ ಹೊತ್ತ ಹಕ್ಕಿ ತಿಳಿವನ್ನು ಅರಸಿ ಹಾರುತ್ತಲೇ ಇದೆ.

ಇದೇ ರೀತಿಯ ಇನ್ನೊಂದು ಪದ್ಯ ನೆರಳನ್ನು ಕುರಿತದ್ದು. ಕವಿಯ ಮನೆಯ ಕಾಂಪೌಂಡಿನಲ್ಲಿ ಒಂದು ತೆಂಗಿನ ಮರ ಬೆಳೆದಿದೆ. ಅದು ರಸ್ತೆಗೆ ನೆರಳು ಚೆಲ್ಲಿದೆ. ಆ ನೆರಳಲ್ಲಿ ಒಂದು ಕಾರು ನಿಂತಿದೆ. ಅಲ್ಲಿ ಕಾರು ನಿಲ್ಲಿಸಬೇಡ, ಎಂದು ಹೇಳಿದರೆ ಹೇಗೆ? ಎಂದು ಕವಿಯ ಆಲೋಚನೆ. ಕವಿ ಇನ್ನೊಂದು ದಿಕ್ಕಿನಿಂದ ಯೋಚಿಸುತ್ತಾರೆ. ಆಗ ಹೀಗೆ ಕಾಣಿಸುತ್ತದೆ :

'ತೆಂಗು ನಿನ್ನದಿರಬಹುದು, ಅದರ ನೆರಳು ನಿನ್ನದ?
ದಿನ ಬೆಳಗಾದರೆ ಗರಿಗಳಲ್ಲಿ ಅರಳುವ ಹಕ್ಕಿ ನಿನ್ನದ?
ಅದರ ಕಿಚಪಿಚ, ಅಲೆಯುವ ಹವೆ, ಹೊಳೆಯುವ ಕಿರಣ
ತೂಗುವ ಚಂದ್ರ ನಿನ್ನದ?'

(ಹಕ್ಕು)

ಹೀಗೆ, ತಾನು ಯೋಚಿಸುವ ರೀತಿಗಿಂತ ಭಿನ್ನವಾದ ಇನ್ನೊಂದು ದಿಕ್ಕಿನಿಂದಲೂ ಯೋಚಿಸುವ ನಿಸಾರ್ ಅಹಮದ್—ನಮ್ಮೊಡನಿರುವವರು, ನಮ್ಮಂತಾಗರು.

'ನಿನ್ನ ಚಿತ್ರವಾದದ್ದು ಹೇಗೆ?' ಎಂಬ ಪದ್ಯವೊಂದರಲ್ಲಿ ಕವಿ ತಾನು ಕಂಡ, ಮೆಚ್ಚಿದ ಎಲ್ಲ ಬೇರೆ ಬೇರೆ ಚೆಲುವುಗಳು ತನ್ನ ಒಲವಿನ ಚಿತ್ರವಾದದ್ದು ಹೇಗೆ ಎಂದು ಬೆರಗು ಪಡುತ್ತಾರೆ. ಅವರ ಕಾವ್ಯ ಸಹ ಹಾಗೆಯೇ ಭಾರತೀಯ ತತ್ತ್ವಶಾಸ್ತ್ರ, ಅಧ್ಯಾತ್ಮ, ನವ್ಯ ಕವಿಯ ಕಾಮದ ಕುರಿತ ತಲ್ಲಣಗಳು, ನೆರುಡನ ತಾತ್ವಿಕತೆ ಪಾಶ್ಚಾತ್ಯ ಕವಿಗಳ ಬರಹಗಳು—ಇವೆಲ್ಲವನ್ನು ಅರಗಿಸಿಕೊಂಡು ಮೈದಾಳಿದೆ. ಎಲ್ಲ ಒಂದೊಂದು ಗೆರೆಯಾಗಿ. ಅದರೊಳಗೆ ತುಡಿವ ಜೀವ ಅವರದೇ ಆಗಿ ಅವರ ಕಾವ್ಯ ಕನ್ನಿಕೆ ತಿಲೋತ್ತಮೆಯಾಗಿ ಜೀವ ತಾಳಿದ್ದಾಳೆ. ಆದರೆ ಅವಳು ಬುರಖಾದೊಳಗಿದ್ದಾಳೆ. ಅವಳ ಸೌಂದರ್ಯ, ವಿದ್ವತ್ತು, ಜೀವನ ಪ್ರೀತಿ, ಗಹನ ರಾಜಕೀಯ, ತಾತ್ವಿಕತೆಗಳನ್ನು ಬೀದಿಯಲ್ಲಿ ನಡೆಯುವಾಗ ಅರಿಯಲಾಗುವುದಿಲ್ಲ. ಅವಳು ತನ್ನ ಹೈಹೀಲ್ಡ್ ಶೂ ತೆಗೆದು, ವರಾಂಡ ದಾಟಿ ನಡುಮನೆ ಹೊಕ್ಕು, ಕಿಟಕಿ ಪರದೆಗಳನ್ನು ಎಳೆದು, ಸಣ್ಣದೀಪ ಹಚ್ಚಿ ಬುರಖಾ ತೆಗೆಯುತ್ತಾಳೆ. ಆಗ ನಾವು ಅವಳ ಹೆರಳ ಗೋಪುರ, ಬೆರಳಿನುಂಗರ, ಚೆಲುವು, ವಿದ್ಯೆ ಪಾಂಡಿತ್ಯಗಳನ್ನು ಅರಿಯಬಹುದು.

ನಮ್ಮ ಮಾತುಗಳಲ್ಲಿ ಅವಿತಿರುವ ಸಂಶಯದ ಬೆಕ್ಕು ಪರಚಿದರೂ ಆ ನೋವನ್ನು ನುಂಗಿಕೊಂಡು 'ನಾನಿಷ್ಟೆ ಲೋಕಕ್ಕೆ, ತೇದಂತೆ ಕರಗುವ ಗಂಧದೊಂದು ಚಕ್ಕೆ' ಎನ್ನುವಂಥ ಸೂಕ್ಷ್ಮ ಸುಗಂಧದ ಕಾವ್ಯ ಕೊಟ್ಟವರು ನಿಸಾರ್ ಅಹಮದ್.

ಶ್ರೇಯಸ್ಕರವಲ್ಲದ ಲೌಕಿಕ ಯಶಸ್ಸು ಉಡುಗೊರೆಯ ವರ್ಣಾಕರ್ಷಕ ಕಾಗದದಂತೆ ಅಲ್ಪಾಯುಷಿ.



ನಿಸಾರರ ಕಾವ್ಯದಲ್ಲಿ ಗಾಂಧಿ ವಿಚಾರ ಧಾರೆ

♦ *ಪ್ರೊ. ಎಂ. ಎಸ್. ರಘುನಾಥ್*

ಮಹಾತ್ಮ ಗಾಂಧಿಯವರ ವಿಚಾರಗಳನ್ನು ಕುರಿತು ಯಾರು ತಾನೆ ಪ್ರತಿಕ್ರಿಯಿಸಿಲ್ಲ? ಅವರ ವಿಚಾರಗಳನ್ನು ಕುರಿತು ಚರ್ಚಿಸುವವರು ಒಂದೆಡೆಯಾದರೆ, ಅವರ ವಿಚಾರಗಳು ಇಂದಿಗೆ ಪ್ರಸ್ತುತವಲ್ಲ ಎಂದು ನಿರಾಕರಿಸುವವರೂ ಇದ್ದಾರೆ. ಸ್ವಾರಸ್ಯಕರ ಸಂಗತಿಯೆಂದರೆ, ಎರಡೂ ಪಂಥದವರು ಒಂದಲ್ಲ ಒಂದು ರೀತಿಯಲ್ಲಿ ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾದವರೇ. ಗಾಂಧೀಜಿಯವರ ಬಗ್ಗೆ ಆರಾಧನಾ ಮನೋಭಾವವಿರಬಹುದು ಇಲ್ಲವೇ ಅವರ ವಿಚಾರಗಳ ಬಗ್ಗೆ ತೀಕ್ಷ್ಣ ವಿಮರ್ಶೆ, ಅಭಿಪ್ರಾಯಗಳಿರಬಹುದು—ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಕ್ರಿಯೆಗೆ ಒಳಗಾಗುವ ಮೂಲಕ ಗಾಂಧೀಜಿ ಆಧುನಿಕ ಸಂದರ್ಭದಲ್ಲಿ ಚಿಂತನಪ್ರಧಾನ ವ್ಯಕ್ತಿಯಾಗಿರುವುದು ಸರ್ವವಿದಿತ.

ಕನ್ನಡ ಕಾವ್ಯ ಸಂದರ್ಭದಲ್ಲಂತೂ ಗಾಂಧೀಜಿಯವರ ಬಗ್ಗೆ ಕವಿತೆ ಬರೆಯದ ಕವಿಗಳೇ ಇಲ್ಲವೆನ್ನಬಹುದೇನೋ! ಗೋವಿಂದ ಪೈಯವರಿಂದ ಹಿಡಿದು ಇಂದಿನವರೆಗೆ ಕನ್ನಡದ ಪ್ರಮುಖ ಕವಿಗಳೆಲ್ಲರೂ ಗಾಂಧೀಜಿಯವರನ್ನು ತಮ್ಮ ಕವಿತೆಗೆ ಆಯ್ಕೆ ಮಾಡಿಕೊಂಡು, ಅವರ ಬಗ್ಗೆ ಅಭಿವ್ಯಕ್ತಿ ನೀಡಿರುವ ರೀತಿ ಅನನ್ಯ, ವಿಶಿಷ್ಟವಾದುದು. ಅವರನ್ನು ಓರ್ವ ಯುಗಪುರುಷನನ್ನಾಗಿ, ಮಹಾ ಮಾನವತಾವಾದಿಯಾಗಿ, ಆದರ್ಶವಾದಿಯಾಗಿ, ಆಧುನಿಕ ಭಾರತದ ಚಿಂತನೆಯ ವ್ಯಕ್ತಿಯಾಗಿ ಕವಿಗಳು

ಕಂಡಿದ್ದಾರೆ.

ಈ ಹಿನ್ನೆಲೆಯಿಂದ ನೋಡಿದಾಗ ಗಾಂಧೀಜಿಯವರನ್ನು ಕುರಿತ ಕೆ. ಎಸ್. ನಿಸಾರ್ ಅಹಮದರ ಅಭಿವ್ಯಕ್ತಿ ವಿಶಿಷ್ಟವಾಗಿದೆಯೆಂದೇ ಹೇಳಬೇಕು. ಹಾಗೆ ನೋಡಿದರೆ, ವ್ಯಕ್ತಿ ಚಿತ್ರಣ ಮಾಡುವ ಕವಿತೆಗಳಲ್ಲಿ ನಿಸಾರರು ಸಿದ್ಧಹಸ್ತರು. ಗಾಂಧಿಯವರನ್ನು ಕುರಿತು ರಚಿಸಿರುವ ಐದು ಕವಿತೆಗಳಲ್ಲಿ, ಕವಿಯ ಮನೋಧರ್ಮವನ್ನು ಕಾಣುವುದಷ್ಟೇ ಅಲ್ಲ, ಅವರನ್ನು ಅರ್ಥೈಸಿರುವ ಕ್ರಮವೂ ಸ್ವೋಪಜ್ಞತೆಯಿಂದ ಕೂಡಿದೆ.

'ದಾರಿದೀಪ' ಗಾಂಧೀಜಿಯನ್ನು ಕುರಿತಂತೆ ನಿಸಾರರ ಮೊದಲ ಕವನ ಸಂಕಲನ ದಲ್ಲಿರುವ ಕವಿತೆ. ಬ್ರಿಟಿಷರ ವ್ಯಕ್ತಿತ್ವವನ್ನೇ ಬಯಲು ಮಾಡಿ, ಭಾರತೀಯರಿಗೆ ಅವರ ಇತಿಹಾಸ, ಪರಂಪರೆ, 'ಸಂಸ್ಕೃತಿ ಘನತೆಗಳ ಬಗ್ಗೆ ಅರಿವು' ಮೂಡಿಸಿದ್ದು ಈ 'ಬಿಳಿಯ ಹುಂಜ'. ಇದು ಶಿಶುನಾಳ ಷರೀಫರಲ್ಲಿರುವಂತೆ ಆಧ್ಯಾತ್ಮಿಕ ಹುಂಜವೂ ಹೌದು. ಗಾಂಧೀಜಿ ಯವರ ವ್ಯಕ್ತಿತ್ವ ಕೇವಲ 'ಕಾಗದದ ನಿರ್ಜೀವ ವಸ್ತುವಲ್ಲ'. ಆತನ 'ಒಂದೊಂದು ಗುಣದಣುವ ತತ್ತ್ವಗಳ ಜಾಲಾಡಿಸಿದರೂ ಅವು ತಾರೆ ತುಣುಕುಗಳೇ ಹೊರತು ಜೊಳ್ಳು ಕಾಳಿನ ತುಳುಕು ಸಂತೆಯಲ್ಲ.' ಆತನ ವ್ಯಕ್ತಿತ್ವವೋ 'ಸೋಸಿ ಸೋಸಿ ತೆಗೆದರೂ ಕೂಡ ಬಂಗಾರವೇ ಹೊರತು ಕಾಗೆಬಂಗಾರವಲ್ಲ!' ಸ್ವಾತಂತ್ರ್ಯ ಬಂದ ಮೇಲೆ ದೇಶ ರಾಮರಾಜ್ಯ ವಾಗಬೇಕು. ಆದರೆ, ಅಷ್ಟರಲ್ಲಿಯೇ ಎಂಥ ಸಮಯದಲ್ಲಿ ಗಾಂಧಿ ಕಣ್ಮರೆಯಾಗಿದ್ದರು ಎಂಬುದನ್ನು ಅರ್ಥಪೂರ್ಣವಾಗಿ ಚಿತ್ರಿಸುತ್ತದೆ, ಈ ಸಾಲು:

> **'ಗಾಯ ಮಾಯುವ ಹೊತ್ತು, ವೈದ್ಯ ರಾಜನೆ ನೀನು ಮಂಗಮಾಯ!'**
>
> **(ದಾರಿ ದೀಪ)**

ಗಾಂಧಿಜಿಯ ವ್ಯಕ್ತಿತ್ವವನ್ನು ಪರಿಪೂರ್ಣ ಎಂದು ಕರೆಯುವುದರಲ್ಲಿ ಕವಿಯ ಆರಾಧನಾ ಭಾವ ಮಾತ್ರ ಇಲ್ಲಿ ಗೋಚರಿಸುತ್ತದೆ. ಈ ವ್ಯಕ್ತಿತ್ವದ ಇತರ ಮಜಲುಗಳನ್ನು ಕಾಣಬೇಕಾದರೆ, ಕವಿಯ ಮನೋಧರ್ಮದಲ್ಲಿ ಬದಲಾವಣೆಯನ್ನು ಕಾಣಬೇಕಾದರೆ, ಮುಂದಿನ ಕವನಗಳಿಗೆ ಹೋಗಬೇಕು.

ಗಾಂಧಿ ಜಯಂತಿ ಹೇಗೆ ಬರೀ ಯಾಂತ್ರಿಕ ಆಚರಣೆಯಾಗಿದೆ ಎಂಬ ವಿಷಾದ 'ಜಯಂತ್ಯುತ್ಸವ' ಕವಿತೆಯಲ್ಲಿ ಪ್ರತಿಬಿಂಬಿತವಾಗಿದೆ. ಗಾಂಧಿ ಹುಟ್ಟಿನ ಬಗ್ಗೆ ನಿಸಾರರ ದೃಷ್ಟ್ಯಂತರ ಹೀಗಿದೆ:

> **'ಹಿಂಸೆಗಹಿಂಸೆ ಕೆಡುಕಿಗೆ ಒಳಿತು**
> **ಮಾಡದೆ ಹೋದರೆ ಬದುಕೇ ಕೊಳೆತು**
> **ನಾರುವುದೆಂದವ ಹುಟ್ಟಿದ್ದು.'**
>
> **(ಜಯಂತ್ಯುತ್ಸವ)**

ಗಾಂಧೀಜಿ ಒಬ್ಬ ಅವತಾರ ಪುರುಷ ಎಂಬ ನಿಲವು ಕವಿಯದ್ದು. ಅದು ಭಾರತದ ಪುಣ್ಯವೂ ಹೌದು. ಅವರ ಪ್ರಕಾರ ಗಾಂಧಿ ಹೇಗೆ ಪ್ರಸ್ತುತವಾಗಬೇಕೆಂದರೆ—

'ಆತನ ತತ್ತ್ವದ ಹಳಿಗಳ ಮೇಲೆ
ಸಾಗಲಿ ನಾಡಿನ ಬಂಡಿ;
ಅವನಾದರ್ಶದ ಬೆಳಕಿನ ಕಾವಿಗೆ
ನಶಿಸಲಿ ಬದುಕಿನ ಥಂಡಿ.'

(ಅದೇ)

ಆದರೆ ಇಂದು ಗಾಂಧಿ ಮತ್ತು ಗಾಂಧಿ ಜಯಂತಿಯ ಆಚರಣೆ ಯಾವ ನೆಲೆಗೆ ಇಳಿದಿದೆ ಎನ್ನುವ ಬಗ್ಗೆ ವಿಡಂಬನೆ, ವಿಷಾದಗಳಿವೆ:

'ಸಬಕೋ ಸನ್ಮತಿ ದೇ ಭಗವಾನ್
ಕಿರುಚಿದೆ ಬಾನುಲಿ ಹಾಡ—
ನಿಲ್ಲಿಸಿ, ಕೋಳಿ ಪಲಾವನು ಬಡಿಸಿದ
ಮುದ್ದಿನ ಹೆಣ್ಣಿನ ಕೂಡ
ಹಾಗೆ ಕುಡಿಯೋದ್ ಹೇಗೇ ಪೆದ್ದಿ
ತರಿಸು ಬೇಗ ಸೋಡ.'

(ಅದೇ)

ಗಾಂಧೀಜಿ ನಮ್ಮಂತೆ ಸಾಧಾರಣ ವ್ಯಕ್ತಿಯಾಗಿದ್ದರೂ ಆ ವ್ಯಕ್ತಿ ಯಾವ ಎತ್ತರಕ್ಕೇರಿದ ಎಂಬ ವಿಸ್ಮಯ ಹಾಗೂ ಆ ವ್ಯಕ್ತಿ ಹೋರಾಡಿದ ಮೌಲ್ಯಗಳು ಹೀಗೆ ವರ್ಣಿತವಾಗಿವೆ:

'ಸತ್ತು ಬದುಕಿದರವನು, ಬದುಕಿ ಸಾಯುತಲಿಹೆವು
ಪ್ರತಿ ದಿವಸವೂ.'

(ಸಿಡಿದ ಸದ್ದು)

'ಅಂತರ' ಕವಿತೆ ಸ್ವಲ್ಪ ಭಿನ್ನರೀತಿಯದು. ಗಾಂಧೀಜಿ ಬದುಕಿದ್ದಾಗ ಇದ್ದ ಗಾಂಧಿ ಅಲೆ ಮತ್ತು ಅನಂತರದ ಗಾಂಧಿ ಅಲೆ ಹೇಗಿದೆ? ಎಂಬುದರ ತುಲನಾತ್ಮಕ ಚಿತ್ರಣವಿದೆ. ಗಾಂಧಿ ಬದುಕಿದ್ದಾಗ, ಆ ಕವಿತೆಯ ಅನಂತಯ್ಯ ಅವರ ಕಟ್ಟಾ ಅನುಯಾಯಿಯಾಗಿದ್ದ. ಗಾಂಧೀಜಿಯ ದುರಂತಮಯ ಸಾವನ್ನು ಗದ್ಗದಿತನಾಗಿ ಪ್ರಕಟಿಸಿದ್ದ.

ಅದೇ ಅನಂತಯ್ಯ ಅನೇಕ ವರ್ಷಗಳ ಅನಂತರ ಸಿಕ್ಕಾಗ ಭಿನ್ನ ವ್ಯಕ್ತಿಯಾಗಿರುತ್ತಾನೆ. 'ಖಾದಿರಹಿತ' ವ್ಯಕ್ತಿ ನಾಯಕನೊಂದಿಗೆ ಬಾಪೂ ಬಗ್ಗೆ ಮಾತನಾಡುವಾಗ ದುರುಗುಟ್ಟಿ ನೋಡುತ್ತಾನೆ. ಗಾಂಧಿ ಬಗ್ಗೆ ಅವನಿಗೆ ಗೌರವವಿಲ್ಲ, ಬರೀ ಅನಾದರ.

'ಜೊತೆಗಾರ ವೈಕುಂಠಿ ಮಂತ್ರಿಯಾಗಿ, ತಾನು
ಬೀದಿ ಬದಿ ಬೋಂಡ ಕರೆದದ್ದು ಗಾಂಧಿ ದೆಸೆಯಿಂದ.'

(ಅಂತರ)

ಎಂದು ಭಾವಿಸಿ ನಾಯಕನ ಅಪ್ಪನಿಗೆ ವರದಿ ಒಪ್ಪಿಸುತ್ತಾನೆ. ಅವನು ಸೀಮೆಎಣ್ಣೆಗಾಗಿ ಕ್ಯೂ ನಿಂತು ಪರದಾಡಿದ ಬಗ್ಗೆ ಖೇದಗೊಂಡು ಬ್ರಿಟಿಷರ ಆಳ್ವಿಕೆಯಲ್ಲೇ ಎಲ್ಲ ಚೆನ್ನಾಗಿತ್ತು ಎಂಬ ಮೆಚ್ಚುಗೆಯ ನುಡಿಗಳನ್ನಾಡುತ್ತಾನೆ. ಮೌಲ್ಯ ಅಪಮೌಲ್ಯವಾದುದರ ಸಂಕೇತ ಈ ಮೂಲಕ

ವ್ಯಕ್ತವಾಗುತ್ತದೆ. ಅವನ ಈ ರೀತಿಯ ಮಾತು ನಾಯಕನಿಗೆ ಗೊಂದಲವನ್ನುಂಟು ಮಾಡುತ್ತದೆ. ಆದರೆ ಇಂದಿನ ಸ್ಥಿತಿಯಲ್ಲಿ ಗಾಂಧಿ ಹೆಸರು ಅಣಕಗಳಿಗೆ ಸಂಕೇತವಾಗಿದೆ. ಕಡಲೇಕಾಯಿ 'ಗಾಂಧಿ ಬಾದಾಮಿ', ಬರಿಯ ಬಾಯಿ ಬೊಬ್ಬೆ 'ಗಾಂಧಿ ಗಲಾಟೆ'.

ಕವನದ ನಾಯಕನ ತಂದೆ, ನಾಯಕ ಮತ್ತು ಅವನ ಮಗ—ಈ ಮೂರು ತಲೆಮಾರುಗಳ ಅಂತರದಲ್ಲಿ ಗಾಂಧೀಜಿಯವರ ಪ್ರಭಾವದಲ್ಲಿ ಆಗಿರುವ ತಾರತಮ್ಯವನ್ನು ಈ ಕವಿತೆ ಸೂಚಿಸುವುದಲ್ಲದೆ, ಅಪ್ಪಟ ಗಾಂಧಿಭಕ್ತ ಅನಂತಯ್ಯ ಮತ್ತು ಅವನ ಮಗನ ದೃಷ್ಟ್ಯಂತರವನ್ನೂ ಮಾರ್ಮಿಕವಾಗಿ ನಿವೇದಿಸುತ್ತದೆ. ಗಾಂಧೀಜಿಯವರ ಭಾವಚಿತ್ರಕ್ಕೆ ನಮಿಸದೆ ಊಟಕ್ಕೆ ಕೂರದ ಸಸ್ಯಾಹಾರಿ ಅನಂತಯ್ಯ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಹರತಾಳ ಆಚರಿಸಿ, ಬಿಳಿಯರ ಸರಕಾರದ ವಿರುದ್ಧ ಅಹಿಂಸಾತ್ಮಕವಾಗಿ ಪ್ರತಿಭಟಿಸಿ ದೇಶದ ಸಲುವಾಗಿ ಜೈಲಿಗೆ ಹೋದರೆ, ಫ್ಯಾಕ್ಟರಿಯ ಕಾರ್ಮಿಕನಾದ ಅವನ ಮಾಂಸಾಹಾರಿ ಮಗ, ವೇತನ ಹಾಗೂ ಬೋನಸ್‌ಗಳ ಈಡೇರಿಕೆಗಾಗಿ, ಅಂದರೆ ಸ್ವಾರ್ಥ ಸಾಧನೆಗಾಗಿ ಮುಷ್ಕರ ಹೂಡಿ ವಾಹನಗಳನ್ನು ಸುಟ್ಟು ಅಪರಾಧಿಯಾಗಿ ಸೆರೆಮನೆಗೆ ದಾಖಲಾಗುತ್ತಾನೆ. ಈ ವಿಪರ್ಯಾಸ ಕಾಲಧರ್ಮದ ಫಲವಾಗಿದೆ. ಸ್ವಾತಂತ್ರ್ಯಾನಂತರದ ಭ್ರಮ ನಿರಸನದ ದುಷ್ಪರಿಣಾಮವಾಗಿದೆ. ಇಲ್ಲಿ ನಾಯಕನಿಗೆ ಪ್ರಿಯವಾಗಿದ್ದ, ಯಾವಾಗಲೂ ಕಣ್ಣನ್ನು ಸೆಳೆಯುತ್ತಿದ್ದ ತಂದೆಯ ಪಟ್ಟೆ ಪಟ್ಟೆಯ ಕೋಟು, ಹ್ಯಾಟುಗಳು—ತಂದೆಯನ್ನು ಗುರುತಿಸಲು, ಮೆಚ್ಚಲು ಸಾಧನವಾಗಿದ್ದ ಈ ಉಡಿಗೆಗಳು—ನಡುಮನೆಯ ಗೋಡೆಯಲ್ಲಿ ನೇತಾಡುತ್ತಿದ್ದವು. ತಂದೆಯ ವ್ಯಕ್ತಿತ್ವದ ಬೇರ್ಪಡಿಸಲಾರದ ಅಂಗಗಳಂತೆ ಭಾಸವಾಗುತ್ತಿದ್ದವು.

ಅಪ್ಪ ನಿವೃತ್ತನಾದ ಬಳಿಕ ಅವು ಒಳಮನೆಯ ಗೋಡೆ ಮೂಲೆಗೆ ವರ್ಗಾಯಿಸಲ್ಪಟ್ಟು ಉಪೇಕ್ಷೆಗೆ ಒಳಗಾಗಿ ಚಳಿ, ಮಳೆಗಾಲಕ್ಕಷ್ಟೇ ಬಳಕೆಗೆ ಸಲ್ಲುತ್ತವೆ. ಮುಂದೆ, ಅಂದರೆ ನಾಯಕನ ಮಗನ ಕಾಲಕ್ಕೆ, ಕೋಟು ಹರಿದು ಜರ್ಜರಿತ; ಅವನ ಗೋಲಿ, ಬಳಪ, ಬಬಲ್‌ಗಂಗಳನ್ನು ದಾಸ್ತಾನಿಸಿಡುವ ತಿಜೋರಿಯಾಗುತ್ತದೆ. ಹ್ಯಾಟನ್ನು ಇಲಿಗಳು ಕಚ್ಚಿ, ಬಿಲ ಕೊರೆದು ನಿರುಪಯೋಗಿ. ಹೀಗಾಗಿ ಅದೀಗ ಒಳಮನೆಯಿಂದ ಬಚ್ಚಲಿನ ಅಜ್ಞಾತ ಅಟ್ಟಕ್ಕೆ ವರ್ಗಾಯಿಸಲ್ಪಡುತ್ತದೆ. ಈ ಕವನದ ಒಟ್ಟಾರೆ ವಿಷಾದದ ಅನುಭವಕ್ಕೆ ಈ ಕೋಟು, ಹ್ಯಾಟಿನ ಪ್ರತಿಮೆಗಳು ಮತ್ತಷ್ಟು ತೀವ್ರತೆ, ಪರಿಣಾಮಕಾರಿತೆಯನ್ನು ಕೂಡಿಸುತ್ತವೆ. ತುಂಬಾ ಸಂಕೀರ್ಣವಾದ ಭಾವನೆಗಳನ್ನು ಗರ್ಭಯಿಸಿಕೊಂಡಿರುವ ಈ ಕವನ ಚಿಂತಿಸಿದಷ್ಟೂ ಅರ್ಥದ ಪದರಗಳನ್ನು ತೆರೆಯುತ್ತ ಹೋಗುತ್ತದೆ. ಇಷ್ಟು ಸರಳತಮ ಕಥಾನಕ ಅಥವಾ ನಿರೂಪಣಾತ್ಮಕ ಧಾಟಿಯಿಂದ ಇಷ್ಟೆಲ್ಲ ಭಾವಾರ್ಥ ಸಮೃದ್ಧಿಯನ್ನು ಸಾಧಿಸುವುದು, ಸಂವಹನಿಸುವುದು ಸಾಧ್ಯವೇ ಎನ್ನಿಸಿ ವಿಸ್ಮಯ ಮೂಡುತ್ತದೆ. ಕೊನೆಯಲ್ಲಿ ಕವಿ ಹೇಳುವ ಮಾತುಗಳಂತೂ ಅತ್ಯಂತ ಸಮಂಜಸ ಮತ್ತು ಕವನದ ಸಹಜ ಬೆಳವಣಿಗೆಯ ಫಲವಾಗಿ ಮೈ ತಳೆದ ಸಾವಯವ ಸೂಕ್ತಿಗಳಂತೆ ಅನುಭವವಾಗುತ್ತವೆಯೇ ವಿನಾ ಕವಿತೆಯನ್ನು ಮುಗಿಸಲು ತಂದು ಬುದ್ಧಿಪೂರ್ವಕವಾಗಿ ಅಂಟಿಸಿದ ಬಾಲಂಗೋಚಿಯಂತೆ ಭಾಸವಾಗುವುದಿಲ್ಲ :

'ಹಿಂದಿನ ಹಾಗೆ ದಪ್ಪ ಧ್ವನಿಯಿಂದ
ಉಬ್ಬಿದ ನರದಿಂದ ಅಪ್ಪನ ಗುರುತು ಹತ್ತುವುದಿಲ್ಲ
ನನ್ನ ಚರ್ಚೆ, ಪ್ರತಿಷ್ಠೆಗೆ ಗಾಂಧಿ ವಸ್ತುವಾಗುವುದಿಲ್ಲ.'
(ಅದೇ)

ಕೇವಲ ಕಾಲು ಶತಮಾನದ ಅಂತರದಲ್ಲಿ ಗಾಂಧಿ ಮತ್ತು ಜನರ ನಡುವೆ ಏರ್ಪಟ್ಟಿರುವ ಕಂದಕ ಹಿಗ್ಗುತ್ತದೆ. ಇಂದಿಗೂ ಪ್ರಸ್ತುತವಾಗಬೇಕಿದ್ದ ಗಾಂಧಿ, ಬರೀ ವಿಡಂಬನೆಯ ಉದಾಹರಣೆಯಾಗಿರುವ ವಿಷಾದದ ಸ್ಥಿತಿ ಸೂಚಿತವಾಗಿದೆ. ಗಾಂಧೀಜಿಯ ಬಗ್ಗೆ ತಳೆದ ಧೋರಣೆ ಹಾಗೂ ಅವರ ತತ್ತ್ವಗಳಿಗೆ ಒದಗಿದ ಅಧೋಗತಿಯನ್ನು ಕವಿ ವಿಡಂಬಿಸುತ್ತಾರೆ. ಈ ಕವಿತೆ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಸಮಾಜದ ಸ್ಥಿತಿಗಳ ತುಲನಾತ್ಮಕ ಚಿತ್ರ ನೀಡುವ ಪ್ರಾತಿನಿಧಿಕ ಕವನವಾಗಿದೆಯೆನ್ನಬಹುದು.

ಗಾಂಧಿಯವರನ್ನು ಕುರಿತ ನಿಸಾರರ ಕವಿತೆಗಳನ್ನು ಅವಲೋಕಿಸುವ ಸಂದರ್ಭದಲ್ಲಿ ಕೆ. ಎಸ್. ನರಸಿಂಹಸ್ವಾಮಿಯವರ 'ಗಾಂಧೀಸ್ತವನ' ಕವಿತೆ ನೆನಪಿಗೆ ಬಾರದೆ ಇರದು. ಗಾಂಧಿ ಕಣ್ಮರೆಯ ಬಗ್ಗೆ ಈ ಕವಿಯ ಪ್ರತಿಕ್ರಿಯೆ ಹೀಗಿದೆ:—

**'ಲೋಕ ಸೇವೆಗೆ ಮುಡಿಪು ದೇಹವೆಂದರೆ, ಲೋಕ
ನುಡಿದವನ ದೇಹವನೆ ಬಲಿಗೊಂಡಿತು.
ನೆಲದ ನೋವನು ಅರಿತು ಅಮೃತ ಪಾತ್ರೆಯ ತಂದ
ದಾನಿಯನೆ ಕೈಯಾರ ಕೊಂದಿತು.'**

ನಿಸಾರರದು ವಿಡಂಬನೆಯಾದರೆ, ಕೆಎಸ್‌ನರವರ ಸಾಲುಗಳಲ್ಲಿ ದುಃಖ ವಿಷಾದವೆರಡೂ ಮಡುಗಟ್ಟಿದೆ.

ನಿಸಾರರ ಮತ್ತೊಂದು ಕವಿತೆ 'ಬಾಪೂ'. ಅವರ ಗಾಂಧಿಯನ್ನು ಕುರಿತ ಇತರ ಕವಿತೆಗಳಿಗಿಂತ ಭಿನ್ನವಾಗಿದೆ. ಇಲ್ಲಿ ಗಾಂಧಿ ಅಸ್ತಿತ್ವದ ಅನ್ವೇಷಣೆಯನ್ನು ಕಾಣಬಹುದು.

**'ಭವಿಷ್ಯತ್ತಿಗೂ ನಿನಗೂ ಕಟ್ಟಾಗಿ ಹೊಕ್ಕುಳಿಳಿ
ತಲೆ ಕೆರೆಯುತಿರುವಾಗ ಎಲ್ಲಿ ಹುಡುಕಲಿ ನಿನ್ನ?
ಎಲ್ಲಿ ಹುಡುಕಲಿ ಮಹಾತ್ಮ, ಎಲ್ಲಿ?
ಹೆಸರಲ್ಲೆ? ಸಮಾಧಿ, ಪಾರ್ಕಿನ ಪ್ರತಿಮೆಯಲ್ಲೆ?
ಭಕ್ತರಲ್ಲೆ?
....
ಖೋಟಾ ನೋಟಿನಲ್ಲೆ?
—ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ ಹುಡುಕಲಿ ನಿನ್ನ?'**

(ಬಾಪೂ)

ಕಾಲ ನಿಲ್ಲುವುದಿಲ್ಲ; ನಿರಂತರ ಚಲನಶೀಲವಾದುದು. ಈ ಕಾಲಸೃಷ್ಟಿಯ ದೈನಂದಿನ ಸನ್ನಿವೇಶದಲ್ಲಿ ಗಾಂಧಿಜಿಯ ಚಿತ್ರ, 'ಚಲನಚಿತ್ರದಲ್ಲಿಯ ಜಲಪಾತವಾಗಿ, ಕ್ಯಾಲೆಂಡರಿನಲ್ಲಿ ಕಾಣುವ ಸಿಂಹವಾಗಿ, ಸೌಮ್ಯತೆಯನ್ನೇ ಪ್ರತಿಬಿಂಬಿಸುತ್ತದೆ' ಎನ್ನುತ್ತಾರೆ ಕವಿ! 'ಗೊಮ್ಮಟನ

ಠೀವಿಯಲಿ ಮೌನ ಸಾಮ್ರಾಜ್ಯವನ್ನು ಆಳುತ್ತದೆ. ನಿಸಾರರ ಒಂದೊಂದು ರೂಪಕದ ಬಳಕೆಯೂ ಅರ್ಥಪೂರ್ಣವಾಗಿ ಮೂಡಿ ಬಂದಿದೆ.

ಮುಂದುವರಿದು ಕವಿ ಮಹಾತ್ಮನಿಗೆ ಗೌರವಾರ್ಪಣೆ ಸಲ್ಲಿಸುವ ರೀತಿ ಭಾವ ಪರವಶರಾದ ಧಾಟಿಯಲ್ಲಿದೆ.

'ನಿನಗಿಂತ ಹಿರಿಯರನು ಕಾಣೆ ಮಹಾತ್ಮ
ಮಿತಿ ಮೀರಿ ಏರಿರುವೆ, ಬಾಳಿಗೆ ದಕ್ಕದೆ ಮೀರಿರುವೆ.'

'ವಾಸ್ತವತೆ ನಾನು, ಆದರ್ಶ ನೀನು' ಎಂಬಲ್ಲಿ—ಗಾಂಧಿಜಿಗೂ ನಮಗೂ ಇರುವ ಅಂತರ ಮೂಡಿ ಬಂದಿದೆ. ಹತಾಶರಾದರೂ ಕವಿ ಕೊನೆಗೆ ವಾಸ್ತವತೆಯ ನೆಲೆಗಟ್ಟಿನಲ್ಲಿ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾರೆ.:

'ಲೋಕವನೆ ದಹಿಸಿರುವ ಸೂರ್ಯನಿಗೆ ತಡೆಯಾಗಿ
ನಿನ್ನ ಕೊಡೆ ನೆತ್ತಿಯನು ಕಾಯುತಿರಲಿ;
ಕಾದ ಹಾದಿಯ ನಡೆಯೆ ಸ್ವಾನುಭವ ಕೆರವಾಗಿ
ಸ್ವಂತ ಜೀವನದೊಡನೆ ತೇಯುತಿರಲಿ.'

ಹೀಗೆ ಗಾಂಧಿ ಹಾಗೂ ಅವರ ವಿಚಾರಗಳು ಎಲ್ಲ ಕಾಲಕ್ಕೂ ಸಲ್ಲುವಂಥವು. ಆದರೆ ಆ ವಿಚಾರಗಳ ಮಂಥನ ಹಾಗೂ ಮೌಲ್ಯಮಾಪನ ಕಾಲ ಕಾಲಕ್ಕೆ ಮುಂದುವರಿಯುತ್ತಿರ ಬೇಕು. ಕವಿ ವಾಣಿಯೂ ಆಯಾ ಕಾಲಘಟ್ಟಕ್ಕೆ ತಕ್ಕಂತೆ, ಜನತೆ ಸ್ಪಂದಿಸುವ ರೀತಿಯ ಬಗ್ಗೆ, ಒಮ್ಮೊಮ್ಮೆ ವಿಡಂಬನೆ, ವಿಷಾದ, ಒಮ್ಮೊಮ್ಮೆ ವೈಚಾರಿಕತೆಯಿಂದ ಕೂಡಿದ ಮಾತುಗಳಲ್ಲೇ ಮೊಳಗಿದೆಯೆನ್ನಬಹುದು. ನಿಸಾರರ ಕವಿತೆಗಳೂ ಈ ನಿಟ್ಟಿನಲ್ಲಿ ಯಾವುದೇ ಆವೇಶವಿಲ್ಲದೆ, ವಾಸ್ತವತೆಗೇ ಇಂಬುಕೊಟ್ಟಿವೆ. ಆ ಮೂಲಕ ಗಾಂಧಿಜಿಯ ಪ್ರಸ್ತುತತೆ ಹಾಗೂ ವಿಚಾರಗಳ ಮಂಥನವಾಗುತ್ತಿರಲಿ ಎಂಬ ಆಶಯವನ್ನು ಹೊಂದಿದೆ.

ಲೋಕತಥ್ಯ ಭಾವಸತ್ಯವಾಗಿ ಮಾರ್ಪಾಟಾಗುವ ಪ್ರಕ್ರಿಯೆಯ ಅರ್ಥೈಕೆ ನಮಗೆ ಅಗಮ್ಯವಾಗಿದ್ದರೂ ಅದರ ಪರಿಣಾಮವಾಗಿ ಕೃತಿಗೊಂಡ ಕಥೆಯನ್ನು ಯಥಾರ್ಥ ಘಟನೆಗಳ ಜೊತೆಗಿಟ್ಟು ತಾಳೆ ಹಾಕಿದಾಗ ಎಂತಹ ಅಮೋಘ, ಅನಿರೀಕ್ಷ್ಯ ಪವಾಡ ಜರುಗಿದೆಯೆಂದು ತಿಳಿಯುತ್ತದೆ. ಬಾಹ್ಯ ಘಟನೆಯೊಂದು ವೃದ್ಧಿಗೊಂಡು ಕವಲಿಸಿದ ರೀತಿ ಹಾಗೂ ಕಲ್ಪನೆ ಮತ್ತು ಅವು ನುಡಿಗಾರಿಕೆಯ ಮಾಟವನ್ನು ಶರೀರಿಸಿಕೊಂಡ ರೀತಿ—ಕೊರಡು ಕೊನರುವ ಅದ್ಭುತವನ್ನು ಮನದಟ್ಟಾಗಿಸುತ್ತವೆ. ಎತ್ತಣ ವಾಸ್ತವಾನುಭವ, ಎತ್ತಣ ಸಾಹಿತ್ಯ ಸೃಷ್ಟಿ? ಎತ್ತಣ ಕನ್ಯಾಪಾದ, ಎತ್ತಣ ಅಶೋಕ? ಎಂದು ವಿಸ್ಮಿತರಾಗುತ್ತೇವೆ.

(ಲೋಕಾನುಭವ—ಭಾವಾನುಭವ)



ಕಾವ್ಯಸೃಷ್ಟಿ ಪ್ರಕ್ರಿಯೆಯ ಬಗೆಗಿನ ನಿಸಾರರ ಮಹತ್ವದ ವಿಚಾರಗಳು

♦ *ಪ್ರೊ. ಎಚ್. ಪಿ. ರಾಜಶೇಖರ ಶೆಟ್ಟಿ*

ಪೀಠಿಕೆ

— ೧ —

ಸಾಹಿತ್ಯ ಸೃಷ್ಟಿಪ್ರಕ್ರಿಯೆಯ ಬಗೆಗೆ ಕನ್ನಡದಲ್ಲಿ ಬರವಣಿಗೆ ಅತ್ಯಂತ ಕಡಮೆ. ಅಂದರೆ, ಸ್ವತಂತ್ರರೂಪದ ಬರಹಗಳು ಹೆಚ್ಚಿಲ್ಲ. ಅದನ್ನು ಶಾಸ್ತ್ರೀಯವಾಗಿ ಒಂದು ಅಧ್ಯಯನದ ಶಿಸ್ತಿಗೆ ಒಳಪಡಿಸಿ ಬೇರೆ ಬೇರೆ ಆಕರಗಳಿಂದ ಪುಷ್ಟಿದಾಯಕ ಮತ್ತು ಪೋಷಕ ಅಂಶಗಳನ್ನು ಶೇಖರಿಸಿ ಸೃಷ್ಟಿ ಪ್ರಕ್ರಿಯೆಯ ಸ್ವರೂಪದ ಅನ್ವೇಷಣೆಯಲ್ಲಿ ತೊಡಗಿರುವ ಬರಹಗಳ ಕೊರತೆ ಕನ್ನಡದಲ್ಲಿ ಎದ್ದು ಕಾಣುತ್ತದೆ. ಅದು ತನ್ನ ನಿಜ ಚರ್ಯೆಯಲ್ಲಿ ಅಕೆಡೆಮಿಕ್ ತರಹದ ಗಂಭೀರಾಧ್ಯಯನ ವೆಂಬುದು ಅಕ್ಷರಶಃ ದಿಟ. ಅದಕ್ಕೆ ಪೂರ್ವಭಾವಿಯಾಗಿ ಕಾವ್ಯದ ಆಳವಾದ ವ್ಯಾಸಂಗ, ವಿಮರ್ಶೆ ಮತ್ತು ಸೃಜನಶೀಲ ಸಂದರ್ಭಗಳ ಬಗೆಗೆ ಅದರಲ್ಲಿ ನೇರವಾಗಿ ತೊಡಗಿರುವ ವ್ಯಕ್ತಿಗಳ, ಅಂದರೆ ಕವಿ ಸಾಹಿತಿಗಳ ಅನುಭವದ ತಿಳಿವು ಮತ್ತು ಈಗಾಗಲೇ ಪ್ರಾಸಂಗಿಕವಾಗಿ ಅಲ್ಲಲ್ಲಿ ವಿಮರ್ಶಕರೊ, ಮೀಮಾಂಸಕರೊ ವ್ಯಕ್ತಪಡಿಸಿರಬಹುದಾದ ಅಭಿಪ್ರಾಯ— ಇತ್ಯಾದಿಗಳನ್ನು ಪರಾಮರ್ಶಿಸುವುದು ಅತ್ಯಂತ ಅನಿವಾರ್ಯ ವಾಗುತ್ತದೆ.

ಸಾಹಿತ್ಯ ಸೃಷ್ಟಿಕ್ರಿಯೆಯನ್ನು ಕುರಿತು, creative

processನ ಹೆಸರಿನಲ್ಲಿ ಹಲವಾರು ಪುಸ್ತಕಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿವೆ; ಈ ಒಂದು ವಿಷಯದ ಮೇಲೆ ವಿವಿಧ ಪ್ರತಿಭಾವಂತರು ಬರೆದಿರುವ ಲೇಖನಗಳ ಅನೇಕ ಸಂಕಲನಗಳು ಹೊರಬಂದಿವೆ. ಒಂದು ದೃಷ್ಟಿಯಲ್ಲಿ ಈ ವಿಷಯ ಒಟ್ಟಾರೆ ಸಾಹಿತ್ಯದ ಒಂದು ಅತಿ ಮುಖ್ಯವಾದ ಮತ್ತು ಸಾಂಗವಾದ ವಿಭಾಗವೆನ್ನಿಸಿದೆ. ಷೇಕ್ಸ್‌ಪಿಯರ್‌ನಂಥ ಅತ್ಯಗಾಧ ತೇಜಶ್ಶಾಲಿ ಕವಿ-ನಾಟಕಕಾರನ ಮನಸ್ಸು ಸೃಷ್ಟಿಕ್ರಿಯೆಯಲ್ಲಿ ತೊಡಗಿಕೊಂಡಾಗ ಯಾವ ರೀತಿ ವ್ಯವಹರಿಸಿರಬಹುದು ಎನ್ನುವುದನ್ನು ಅವನ ಕೃತಿಗಳಿಂದಲೇ ನಿದರ್ಶನಗಳನ್ನು ಆಯ್ಕೆ ಮಾಡಿ ತಮ್ಮ ಊಹೆ ಮತ್ತು ಅಭಿಮತಗಳನ್ನು ಸಮರ್ಥಿಸಿ ಕೃತಿಗಳನ್ನು ರಚಿಸಿದ ವಿಮರ್ಶಕರಿದ್ದಾರೆ.

ಸೃಜನಶೀಲ ಮನಸ್ಸು ಕ್ರಿಯಾತ್ಮಕವಾಗುವ ಸಮಯದಲ್ಲಿ ಜರುಗುವ ವಿದ್ಯಮಾನಗಳು ಬಹುಪಾಲು ಮನಸ್ಸಿನ ಒಳ ಪದರಕ್ಕೆ ಸಂಬಂಧಿಸಿದವು. ಆದ್ದರಿಂದ ಅವುಗಳ ಪೂರ್ಣ ವ್ಯಾಖ್ಯೆ ಅಸಂಭವವೆನ್ನುವ ತೀರ್ಮಾನ ಹೆಚ್ಚು ಕಡಿಮೆ ಎಲ್ಲ ವಿವೇಚಕರದ್ದೂ ಆಗಿದೆ ಎನ್ನಬಹುದು. ಸುಪ್ತಾಂತರಾಳದ ವಹಿವಾಟುಗಳನ್ನು ವ್ಯವಸ್ಥಿತವಾಗಿ ಅರ್ಥೈಸಿಕೊಳ್ಳುವುದು ಮನುಷ್ಯನ ಅರಿವಿಗೆ ನಿಲುಕದ ವಿಷಯ. ಇಲ್ಲಿ ಪ್ರಯೋಗ, ಪರೀಕ್ಷೆಗಳಿಗಿಂತ ಅಥವಾ ಅವುಗಳಿಂದ ಲಭ್ಯವಾಗಿರುವ ಕೆಲವು ಅಂಕಿ-ಅಂಶಗಳಿಗಿಂತ ಊಹನೆಗೆ, ಅಂದಾಜಿಗೆ ಅಧಿಕ ಪ್ರಾಶಸ್ತ್ಯ. ಅಲ್ಲದೆ, ಕನಸುಗಳ ಬಗೆಗೆ ಫ್ರಾಯ್ಡ್‌ನಂಥ ಮೇಧಾವಿಗಳು ಮತ್ತು ಅನಂತರದವರು ಮನೋವೈಜ್ಞಾನಿಕವಾಗಿ ನಡೆಸಿರುವ ಅಮೋಘ ಪ್ರಯೋಗಗಳಿಂದ ದೊರೆತ ಮಾಹಿತಿಗಳನ್ನು ಸೃಜನ ಪ್ರಕ್ರಿಯೆಯ ಅರ್ಥೈಕೆಗೆ ಬಳಸಿಕೊಂಡಿರುವುದೂ ನಮ್ಮ ತಿಳಿವಳಿಕೆಗೆ ಬರುತ್ತದೆ.

ಹೇಗೇ ಇರಲಿ, ಸಾಹಿತ್ಯ ಸೃಜನಕ್ರಿಯೆಯನ್ನು ಅರಿತುಕೊಳ್ಳುವುದು ಅತ್ಯಂತ ಕಠಿಣವಾದ ಕಾರ್ಯ. ಹಾಗೆಂದು ಅದನ್ನು ಉಪೇಕ್ಷಿಸುವ ಹಾಗಿಲ್ಲ. ಅದರ ಅರ್ಥೈಕೆಯ ಪ್ರಯತ್ನ, ಸಾಹಿತ್ಯಾಧ್ಯಯನಕ್ಕೆ ಲಾಭಕರವೆನ್ನುವುದರಲ್ಲಿ ಎರಡು ಮಾತಿಲ್ಲ. ಇಪ್ಪತ್ತನೆಯ ಶತಮಾನದ ಆಂಗ್ಲ ಸಾಹಿತ್ಯದಲ್ಲಿ ಸೃಷ್ಟಿಪ್ರಕ್ರಿಯೆಗೆ ಹೆಚ್ಚಿನ ಒತ್ತು ಮೂಡಿರುವುದು ಸುವಿದಿತ. ಟಿ. ಎಸ್. ಎಲಿಯೆಟ್‌ನಂಥ ಪ್ರಖರ ಧೀಶಕ್ತಿಯ ಕವಿ-ವಿಮರ್ಶಕನಿಂದ ತೊಡಗಿ ಎಜ್ರಾ ಪೌಂಡ್, ಆಡೆನ್, ಸ್ಟೀಫೆನ್ ಸ್ಪೆಂಡರ್, ಲೂಯಿ ಮೆಕ್ನೀಸ್ ಮೊದಲಾದ ಪ್ರತಿಭಾವಂತ ಬರಹಗಾರರು ತಮ್ಮ ಸ್ವಂತದ ಅನುಭವಗಳನ್ನು ತೋಡಿಕೊಂಡಿದ್ದಾರೆ. ನಮ್ಮ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದ ಪ್ರಾಚೀನ ಮೀಮಾಂಸಕರ ಸೂತ್ರಪ್ರಾಯ ವಾಕ್ಯಗಳನ್ನು ಆಧರಿಸಿ ಈ ವಿಷಯದ ಬಗೆಗೆ ತೀನಂಶ್ರೀ, ಕುವೆಂಪು ಮುಂತಾದವರು ಬರೆದಿರುವರಾದರೂ ಅವು ಒಟ್ಟಾರೆ ಸ್ವರೂಪದ ಗ್ರಹಿಕೆಗಳೇ ಹೊರತು ಕೂಲಂಕಷವಾದ, ವಿಶ್ಲೇಷಣಾತ್ಮಕವಾದ ಸಾಧಾರ ರೀತಿಯ ಲಿಖಿತಗಳಲ್ಲ. ನವ್ಯರಲ್ಲಿ ಆಗೀಗ ಈ ಪ್ರಕ್ರಿಯೆಯ ಪ್ರಸ್ತಾವ ನಡೆದಿದೆ. ಆದರೆ, ಅದನ್ನೇ ಒಂದು ಪ್ರಮುಖ ಕಾಳಜಿಯೆಂಬ ಭಾವನೆಯಿಂದ ಬರೆದವರು ಹೆಚ್ಚಿಗೆ ಇಲ್ಲ. ಈ ದೃಷ್ಟಿಯಿಂದ ಸ್ವತಃ ಕವಿಗಳಾದ ಮತ್ತು ಚಿಂತಕರಾದ ಗೋಪಾಲಕೃಷ್ಣ ಅಡಿಗರು ತಮ್ಮ ಗದ್ಯ ಬರಹಗಳಲ್ಲಿ ಮತ್ತು ಪದ್ಯ ರಚನೆಗಳಲ್ಲಿ ಆಗೀಗ

ಸಾಹಿತ್ಯಸೃಷ್ಟಿ ಪ್ರಕ್ರಿಯೆಯನ್ನು ಕುರಿತು ಕೆಲವು ಸ್ವಕೀಯ ಅನ್ನಿಸಿಕೆಗಳನ್ನು ಮತ್ತು ಆಧುನಿಕ ಆಂಗ್ಲ ವಿಮರ್ಶಕರಿಂದ ಪಡೆದ ಕೆಲವು ಅಭಿಪ್ರಾಯಗಳನ್ನು ತೋಡಿಕೊಂಡಿರುವುದು ನಮ್ಮ ಗಮನಕ್ಕೆ ಬರುತ್ತದೆ.

ಅಡಿಗರ ಬಳಿಕ ಪ್ರಸ್ತುತ ವಿಷಯದ ಬಗೆಗೆ ಅತ್ಯಧಿಕವಾದ ಆಸಕ್ತಿಯನ್ನು ತೋರಿದವರು ಕವಿ ನಿಸಾರ್ ಅಹಮದ್. ಅವರಿಗೆ ಸ್ವಂತವಾಗಿ ಸ್ವಾನುಭವ ಪ್ರೇರಿತವಾಗಿ ಹೊಳೆದ ಕೆಲವು ವಿಚಾರಗಳು ಮತ್ತು ಅವುಗಳನ್ನು ಬೆಂಬಲಿಸುವ ಪಾಶ್ಚಾತ್ಯರ ಚಿಂತನೆಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಇವು, ಅವರು ರಚಿಸಿರುವ ಗದ್ಯ ಪದ್ಯ ಕೃತಿಗಳೆರಡ ರಲ್ಲೂ ಕಾಣಿಸಿಕೊಳ್ಳುತ್ತವೆ. ಅವುಗಳ ವ್ಯಾಸಂಗ ಕುತೂಹಲಕಾರಿಯಾಗಿರುವುದರ ಜೊತೆಗೇ, ನಿಸಾರರ ಸಾಹಿತ್ಯವನ್ನು ಮತ್ತು ಒಟ್ಟಾರೆಯಾಗಿ ಕನ್ನಡದ ಆಧುನಿಕ ವಾಙ್ಮಯವನ್ನು ತಿಳಿಯುವುದಕ್ಕೆ ಸಹಕಾರಿಯಾಗುತ್ತದೆ.

ಆದರೆ ಇಲ್ಲಿ ಒಂದು ಸಂಗತಿಯನ್ನು ವಿಶದಪಡಿಸಿಕೊಳ್ಳುವುದು ಸೂಕ್ತ. ಭಾವಾಲೋಚನೆಗಳ ಅಮೂರ್ತ ಸ್ವರೂಪದ ಪ್ರಕಾರವೆನ್ನಿಸುವ ಸಾಹಿತ್ಯದಲ್ಲಿ 'ಇದಮಿತ್ಥಂ' ಎಂದು ಯಾವುದನ್ನೂ ಠರಾವಿಸುವುದು ಶಕ್ಯವಲ್ಲ. ಇಷ್ಟೇ ಅಲ್ಲದೆ, ಒಬ್ಬ ಕವಿಯಾದವ ವ್ಯಕ್ತಪಡಿಸುವ ಅಭಿಪ್ರಾಯಗಳೆಲ್ಲ ಅವನು ಸ್ವತಂತ್ರವಾಗಿ ಚಿಂತಿಸಿ ಮೂಡಿದ ಫಲಿತವೆಂದು ಭಾವಿಸಬೇಕಾದದ್ದಿಲ್ಲ. ಇತರರು ತೋಡಿಕೊಂಡಿರದ ವಿಚಾರಗಳೆಂದು ಪರಿಗಣಿಸಬೇಕಾಗಿಲ್ಲ. ಅವು ತನ್ನ ಮನೋಧರ್ಮಕ್ಕೆ ಸಂಗತವಾದ ಸಂಗತಿಗಳಾಗಿದ್ದು, ಆಗಾಗ್ಗೆ ತನ್ನ ಬರವಣಿಗೆ ಗಳಲ್ಲಿ ಅಭಿವ್ಯಕ್ತಿ ಪಡೆದಿರಬಹುದು. ಅವನ ಅಂತಹ ವಿಚಾರಗಳಿಗೆ, ಸ್ವಂತ ಬರವಣಿಗೆ ಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ನಿಸ್ಸಂದೇಹವಾದ ಅನೇಕ ನಿದರ್ಶನಗಳು ಸಿಕ್ಕುತ್ತವೆ. ಸಾಹಿತ್ಯ ಸೃಜನ ಕ್ರಿಯೆಯನ್ನು ಕುರಿತು ಬರೆಯುವಾಗ ಈ ಸಂಗತಿಯನ್ನು ನಾವು ಮರೆಯುವಂತಿಲ್ಲ.

— ೨ —

ಕಾವ್ಯದಲ್ಲಿ

ಮೊದಲಿಗೆ ಅವರ ಕೆಲವು ಸ್ವರಚಿತ ಕವನಗಳಲ್ಲಿ ಸೃಷ್ಟಿ ಪ್ರಕ್ರಿಯೆಯ ಬಗೆಗಿನ ಅವರ ಅಭಿಪ್ರಾಯಗಳು ಮೂಡಿರುವ ಪರಿಯನ್ನು ಪರಿಶೀಲಿಸೋಣ:

ನಿಸಾರರ ಕಾವ್ಯಾರಂಭದ ಮೊದ ಮೊದಲ ವರ್ಷಗಳಿಂದಲೇ ಅವರಿಗೆ ಕಾವ್ಯ ಸೃಷ್ಟಿ ಯಾಗುವ ಗೂಢತರ ಪ್ರಕ್ರಿಯೆಯ ಬಗೆಗೆ ಆಸಕ್ತಿ, ಕುತೂಹಲಗಳಿರುವುದು ಅವರ ಎರಡನೆಯ ಸಂಕಲನ 'ನೆನೆದವರ ಮನದಲ್ಲಿ'(೧೯೬೪)ಯೇ ಗೊತ್ತಾಗುತ್ತದೆ. ತನ್ನನ್ನು ಸುತ್ತುವರಿದಿರುವ ಅಗಣಿತ ದನಿಗಳಲ್ಲಿ ತನ್ನ ನಿಜವಾದ ದನಿ ಯಾವುದೆಂಬುದರ ಬಗೆಗೆ ಅವರಿಗೆ ತವಕ ತುಡಿತಗಳಿವೆ. ಅದನ್ನು ಗುರುತಿಸಿಕೊಳ್ಳಲು, ಪ್ರತ್ಯೇಕಿಸಿ ವರ್ಧಿಸಿಕೊಳ್ಳಲು ಅವರ ಅಂತರಂಗ ಮಿಡಿಯುವ, ಕುದಿಯುವ ಪರಿಯನ್ನು 'ಆತ್ಮಶೋಧ' ಕವನ ಚಿತ್ರವತ್ತಾಗಿ ಪರಿಶೀಲಿಸಿ ನಮ್ಮನ್ನು ಸೆಳೆಯುತ್ತದೆ. ತನ್ನ ದನಿ 'ಹೃದಯ ಗಹ್ವರದಾವ ಹಳಸುಗತ್ತಲೆಯಲ್ಲಿ ಕೆಡೆದಿರುವುದೋ?' 'ಭೂ ತಳದ ಶಿಲೆಯಲ್ಲಿ ಗೆರೆಯಾದ ಜಲದಂತೆ

ಯಾವೆಡೆಯ ತಡಿಯಲ್ಲಿ ಸೆಡೆತಿರುವುದೋ?' ಎಂಬ ಪ್ರಶ್ನೆಗಳೊಂದಿಗೆ ಮತ್ತು 'ಕಡಲ ಜೊತೆ ಮೈ ಬೆಸೆದ ನೂರಾರು ಹೊಳೆಗಳಲಿ ಯಾವ ಸೆಲೆಯೊ?' ಎಂಬ ಗೊಂದಲ, ಆತಂಕಗಳೊಡನೆ ಕವಿತೆ ಶುರುವಾಗುತ್ತದೆ. ಇಲ್ಲಿ ಕವನ ಸೃಷ್ಟಿ ಕ್ರಿಯೆಯ ಬಗೆಗೂ ಪರೋಕ್ಷವಾದ ಸನ್ನೆಗಳಿರುವುದನ್ನು ಗಮನಿಸಬಹುದು. 'ಗಹ್ವರ', 'ಹಳಸುಗತ್ತಲೆ', 'ಭೂತಳದ ಶಿಲೆ'ಯೊಳಗೆ ಚಲನಶೀಲವಾದ ಅಂತರ್ಜಲ—ಇವು ಭೂಮಿಯ ಮೇಲ್ಮೈಯ ವಿದ್ಯಮಾನಗಳಲ್ಲ; ಆಂತರ್ಯದವು; ಅಗೋಚರವಾದಂಥವು. ಅವುಗಳ ಸ್ವರೂಪ ಸಹ ಮೇಲ್ಮೈಯ ಮೇಲೆ ಬೆಳಕಿನಲ್ಲಿ ಸ್ಪಷ್ಟವಾಗಿ ಅರಿವಾಗುವಂತೆ ತಿಳಿಯುವಂಥದ್ದಲ್ಲ. ಅಂತೂ, ಕಾವ್ಯರಚನಾಕ್ರಿಯೆ ಹೇಗೆ ಬಹುತೇಕವಾಗಿ ಸುಪ್ತ ಚಿತ್ತದ ಅಂತಸ್ಥವಾದ ನಿಗೂಢ ಚಟುವಟಿಕೆಯೋ ಹಾಗೆಯೇ ಅದರ ಫಲಿತವಾದ ಕವನ ಮತ್ತು ಕವಿಯ ವಿಶಿಷ್ಟವಾದ ಭಾಷೆ, ಶೈಲಿ, ದನಿ ಸಹ ಗುರುತಿಸಿ ಅರ್ಥೈಸಿಕೊಳ್ಳಲು ಕಷ್ಟವೆನ್ನಿಸುವ ಜಾಯಮಾನದವು.

ಕವಿತೆ ಮುಂದುವರಿದ ಮೇಲೆ ನಿಸಾರರು ಸೃಜನಶೀಲತೆಯ ಬಗೆಗೆ ತಾವು ಅನುಭವಿಸಿ ರೂಪಿಸಿಕೊಂಡ ವಿಚಾರಗಳು ಪ್ರತೀಕಾತ್ಮಕವಾಗಿ ಹೊರಹೊಮ್ಮುವುದು ಹೀಗೆ:

'ಒಳ ಗುಹೆಯ ಕಮ್ಮಾರ ಶಾಲೆಯಲಿ ಕುಲುಮೆಗಳ ಕಾವು, ಕದಿರುಗಳುಂಟು,
ಕಂಡಿದ್ದು ಕೇಳಿದ್ದು ಮುಟ್ಟಿದ್ದು ತಟ್ಟಿದ್ದು—ಈ ಎಲ್ಲ ಅದಿರುಂಟು,
ಸೂಟಿ ಮೆದುಳಿನ ಚಮಕು-ಚಮ್ಮಟಿಗೆಯುಂಟು.
ಕರ್ಮಸಾಕ್ಷಿಯ ಸತತ ಶ್ರದ್ಧೆಯುಂಟಾದರೂ,
ಲೋಹ ದ್ರವಗಳ ಬೆರಸಿ ಹದದ ಸಮತೂಕಕ್ಕೆ
ಒಗ್ಗಿಸುವ ಸಮರಸದ ಮರ್ಮ ತಿಳಿಯೆ.
ಪರಿಕರದನೇಕಗಳ ಪರಿಪಾಕದೇಕಕ್ಕೆ
ಹೊಸೆವ ಕಲೆಗಾರಿಕೆಯ ಸೂಕ್ಷ್ಮವರಿಯೆ!'

(ಆತ್ಮಶೋಧ)

ಇಲ್ಲಿ ಮತ್ತೆ 'ಒಳಗುಹೆಯ ಕಮ್ಮಾರ ಶಾಲೆಯ ಕುಲುಮೆ' ಎನ್ನುವುದು ಅಂತಶ್ಚಿತ್ತದ ನಿರಂತರವಾದ ಆದರೆ ಅನೂಹ್ಯವಾದ ಕ್ರಿಯಾಶೀಲತೆಯನ್ನು ದ್ಯೋತಿಸುತ್ತದೆ. ಕವಿತೆಯ ಸೃಷ್ಟಿ—ಅಷ್ಟೇಕೆ, ಯಾವುದೇ ಪ್ರಭೇದದ ಸಾಹಿತ್ಯ, ಕಲೆಗಳ ಸೃಷ್ಟಿ—ಸ್ಪಷ್ಟಾಸ್ಪಷ್ಟತೆಯ, ಬೆಳಕು-ಕತ್ತಲೆಯ, ವಾಸ್ತವ-ಸ್ವಪ್ನಗಳ ಒಂದು ಫಲಶ್ರುತಿ ಎನ್ನುವುದು ಅನೇಕರಂತೆ ನಿಸಾರರ ಅಭಿಮತವೂ ಹೌದು. ಇದನ್ನು ಅವರ ಗದ್ಯದ ಕೆಲವೊಂದು ಬರಹಗಳಲ್ಲಿ ಕೂಡ ಕಾಣಬಹುದು. ಇಲ್ಲಿ ಸ್ಪಷ್ಟ, ಬೆಳಕು, ವಾಸ್ತವವೆಂದು ಬಳಕೆಯಾಗಿರುವುದರಿಂದ ಮನುಷ್ಯನ ಜಾಗೃತ ಮನಸ್ಸಿನ ಬುದ್ಧಿ ತರ್ಕ ಇತ್ಯಾದಿ ಚಟುವಟಿಕೆಗಳ ಸಂದಿಗ್ಧವಲ್ಲದ ಗ್ರಹಿಕೆಯನ್ನು; ಅಸ್ಪಷ್ಟ, ಕತ್ತಲೆ ಮತ್ತು ಸ್ವಪ್ನವೆಂಬುದು ಚಿತ್ತದಾಳದ ಅರ್ಥವಾಗದ ಗುಹ್ಯತರ ಕ್ರಿಯೆಯನ್ನು ಸಂಕೇತಿಸುತ್ತದೆ. ಮೇಲೆ ಉದ್ಧರಿಸಿರುವ ಸಾಲುಗಳು ಕವಿತೆಗೆ ಸಂಬಂಧಿಸಿದ ಇವೆರಡು ಸಂಗತಿಗಳನ್ನು ವಿಶದೀಕರಿಸುತ್ತವೆ. ಕಮ್ಮಾರನ ಕಾರ್ಯಾಗಾರದಲ್ಲಿ ಇಂದ್ರಿಯ ಗೋಚರವಾಗುವ ವಿಷಯಗಳ ಪ್ರಸ್ತಾಪವಿರುವ ಹಾಗೆ (ಕಂಡಿದ್ದು, ಕೇಳಿದ್ದು, ಮುಟ್ಟಿದ್ದು, ತಟ್ಟಿದ್ದು), ಲೋಹ ದ್ರವಗಳನ್ನು ಬೆರಸಿ ಒಂದು ಹದಕ್ಕೆ

ತರುವ ಸಾಮರಸ್ಯದ ಸಂಹಿತೆಯನ್ನು ಗ್ರಹಿಸಿಲ್ಲವೆನ್ನುವುದು ಮತ್ತು ಪರಿಕರದ ಅನೇಕಗಳನ್ನು ಪರಿಪಾಕದ ಐಕ್ಯಸ್ಥಿತಿಗೆ ಹೊಸೆಯುವ ಕಸುಬುಗಾರಿಕೆಯನ್ನು ಅರಿತಿಲ್ಲವೆನ್ನುವುದು—ಕವಿತೆಯ ಗುಹ್ಯತರ ಸ್ವರೂಪವನ್ನು ಸೂಚಿಸುತ್ತದೆ. ಮಾನವನ ಪ್ರಯತ್ನ, ಶ್ರಮಗಳನ್ನು ಮೀರಿದ ಯಾವುದೋ ಅಗೋಚರ ಶಕ್ತಿಯ ನೆರವಿಲ್ಲದೆ, ಕೇವಲ ಅವನ ಬುದ್ಧಿ ಸಾಮರ್ಥ್ಯದಿಂದ ಕವಿತೆಯಾಗಲಿ, ಯಾವುದೇ ಕಲಾ ಪ್ರಕಾರವಾಗಲಿ ಉದ್ಭವಿಸಲು ಸಾಧ್ಯವಿಲ್ಲವೆನ್ನುವುದು ಗೊತ್ತಾಗುತ್ತದೆ. ನಿಸಾರರನ್ನು ತಮ್ಮ ಸ್ವಂತದ ದನಿಯ ಅನ್ವೇಷಣೆಯ ತುಡಿತ, ಪ್ರಾಸಂಗಿಕವಾಗಿ ಸೃಷ್ಟಿಪ್ರಕ್ರಿಯೆಯ ಕಡೆಗೆ ತುಯ್ಯುವಂತೆ ಮಾಡುವುದನ್ನು 'ಆತ್ಮಶೋಧ' ಕವಿತೆಯಲ್ಲಿ ಗುರುತಿಸುತ್ತೇವೆ. ಅವರ ದನಿಯನ್ನು ಅವರು ಸ್ಫುಟವಾಗಿ, ನಿಸ್ಸಂದಿಗ್ಧವಾಗಿ ಕಂಡುಹಿಡಿದುಕೊಳ್ಳಲು ಯಾಕೆ ಸಾಧ್ಯವಾಗಲಿಲ್ಲವೆನ್ನುವುದಕ್ಕೆ ಅದನ್ನು ಒಳಗೊಂಡಿರುವ ಕವಿತೆಗಳ ರಚನೆ ಸಹ ನಿಗೂಢವಾಗಿರುವುದು ಮುಖ್ಯ ಕಾರಣ. ಏಕೆಂದರೆ ಕವಿಯ ದನಿ ಆ ಗುಹ್ಯತರ ಸೃಷ್ಟಿಕ್ರಿಯೆಯ ಫಲಶ್ರುತಿ.

ಕವಿತಾ ಸೃಷ್ಟಿಯ ಬಗೆಗಿನ ವಿಚಾರಗಳನ್ನು ಇದೇ ಸಂಗ್ರಹದ ಇನ್ನೊಂದು ಪದ್ಯದಲ್ಲಿ ಎದುರಾಗುತ್ತೇವೆ. ಅದರ ಹೆಸರು 'ಬಿತ್ತನೆ'. ಫಸಲು ಕೈ ಹತ್ತಬೇಕಾದರೆ, ಬೆವರು ಸುರಿಸಿ ಬಿತ್ತು ಉತ್ತು ಶ್ರಮ ಪಡಬೇಕೇ ಹೊರತು ಕೇವಲ ಅದರ ಸಂಕಲ್ಪ ಮಾಡುವುದರಿಂದಲ್ಲ. ಹೀಗೆ ಮನುಷ್ಯ ಬುದ್ಧಿಪೂರ್ವಕವಾಗಿ ಪ್ರಯತ್ನಿಸುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಅದೃಶ್ಯದ ಕೃಪೆಯಿಂದ ಹುಯ್ಯುವ ಮುಂಗಾರಿನ ಮಳೆಯೂ ಕೈ ಜೋಡಿಸಬೇಕು. ಮಳೆಯನ್ನು ಮನುಷ್ಯ ಸಕಾಲಿಕವಾಗಿ ಬರಿಸುವುದು ಅಸಂಭವ. ಅದು ಮನುಷ್ಯ ಪ್ರಯತ್ನವನ್ನು ಮೀರಿದ ಪ್ರಕೃತಿಯ, ಋತುಮಾನದ ಬಳುವಳಿ. ಹಾಗೆಯೇ ಮನುಷ್ಯನ ಹುಟ್ಟೂ ಸಹ. ಹೆಣ್ಣು-ಗಂಡುಗಳ ಸಹಯೋಗವಷ್ಟೇ ಸಾಲದು. ಅಗೋಚರ ಸತ್ವವೊಂದರ, ಅಲೌಕಿಕ ಕೈವಾಡವೊಂದರ ಸಹಕಾರವೂ ಅಗತ್ಯ. ಮನಸ್ಸಿನ ಭಾವಾಲೋಚನೆಗಳೆಲ್ಲಾ ಕವನ ಅಥವಾ ಗದ್ಯ ಸಾಹಿತ್ಯದ ರೂಪವನ್ನು ಧರಿಸಿ ಒಡಮೂಡುವುದು ಸಂಭವವಲ್ಲದ ಸಂಗತಿ. ಭೂಮಿಯ ಆಳದ ಪದರುಗಳಲ್ಲಿ ಅಸಂಖ್ಯ ಬಿತ್ತಗಳು ಮೈ ಹುದುಗಿಸಿ ತಪಿಸಿದ್ದರೂ 'ಅರಗಿ ಭೂ ರಸ, ಮಾಗಿ, ಹೊತ್ತು ತುಂಬಿದ ತೆನೆಯ / ತಲಪುವಗ್ಗಳ ಬೀಜ ಹಲವೆ ಸಾರ್ಥದ ಕೊನೆಯ'. ಅಂದರೆ, ಅಂತಿಮವಾಗಿ ಬೆಳೆಯಾಗಿ ಕೃತಾರ್ಥವಾಗುವ ಬಿತ್ತಗಳು ಕೇವಲ ಕೆಲವಷ್ಟೆ. ಅಂತಹ ಅದೃಷ್ಟಶಾಲಿ ಬಿತ್ತಗಳನ್ನು, ಅನೇಕಾನೇಕ ಸಂಖ್ಯೆಯ ಬೀಜಗಳಿಂದ ಆಯ್ಕೆ ಮಾಡಿ ಸಫಲಿಸುವುದು ಮನುಷ್ಯನ ಅಳವಿನಲ್ಲಿ ಇಲ್ಲ. ಅದು ಅರ್ಥಾತೀತವಾದ, ಮರ್ತ್ಯಗ್ರಾಹ್ಯವಲ್ಲದ ಶಕ್ತಿಯೊಂದರ ರಹಸ್ಯದ ಕಾರ್ಯ:

> 'ಪೂರ್ಣದೀ ಸಾಧಿತಕೆ ಉಳಿದೆಲ್ಲ ಕಾಳುಗಳ ಪೋಲು, ದುಂದು;
> ಶುಕ್ಲಾಣುಕೋಟಿಯಲಿ ಕೋಶಕಂಟುವುದೊಂದೆ ಯೋಗ್ಯ ಬಿಂದು.'
>
> (ಬಿತ್ತನೆ)

ಸೃಷ್ಟಿಪ್ರಕ್ರಿಯೆಯ ಈ ಅಗ್ರಾಹ್ಯ ವಿಧಾನದಲ್ಲಿ ಒಂದು ಪ್ರರೂಪ (pattern) ಇರುವುದು ಗಮನಾರ್ಹ: ಅದು ಕೃಷಿಗೆ ಸಂಬಂಧಿಸಿರಲಿ, ಮನುಷ್ಯರ ಜನ್ಮದೊಂದಿಗೆ ನಂಟನ್ನು ಹೊಂದಿರಲಿ ಅಥವಾ ಕಾವ್ಯಕಲಾದಿಗಳ ಉಗಮಕ್ಕೆ ಲಗತ್ತಾಗಿರಲಿ ನಿಯಮದಲ್ಲಿ

ಸಾಮ್ಯವಿರುವುದು ಅರಿವಿಗೆ ಬರುತ್ತದೆ.

ಸೃಜನ ವಿಧಾನದ ಈ ನಿಗೂಢತರ ಸ್ವರೂಪವನ್ನು ನಿಸಾರರು ತಮ್ಮ ಮೂರನೆಯ ಕವನ ಸಂಗ್ರಹವಾದ 'ಸುಮುಹೂರ್ತ'(೧೯೬೭)ದ ಅದೇ ತಲೆಬರಹದ ದೀರ್ಘ ಕವನದ ಕೊನೆಯ ಭಾಗದಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿ, ಕಾವ್ಯಾತ್ಮಕವಾಗಿ ಸೂಚಿಸಿದ್ದಾರೆ. ಈ ಪಂಕ್ತಿಗಳು ಹಲವು ವಿಮರ್ಶಕರ ಗಮನ ಸೆಳೆದಿರುವುದನ್ನು ಇಲ್ಲಿ ನೆನೆಯಬೇಕು. ಸೃಷ್ಟಿಕ್ರಿಯೆಯ ಸ್ಫುಟ-ಅಸ್ಫುಟತೆಯ, ಮಾನವಕೃತ-ಮಾನವಾತೀತದ ಸಂಯೋಗವನ್ನು ಮಾರ್ಮಿಕೀಕರಿಸುವ ಇಡೀ ಪದ್ಯಖಂಡ(stanza)ವನ್ನು ಉದ್ಧರಿಸಿದ್ದೇನೆ—ಇಡಿಯಾಗಿ ಓದಿ ಮನನಿಸಿದಾಗ ಮನಸ್ಸಿಗೆ ಹೆಚ್ಚಿನ ಅರ್ಥ ಹೊಳೆಯಬಹುದೆಂಬ ಕಾರಣಕ್ಕಾಗಿ.

'ಎಲ್ಲಿತ್ತು ಕಿರು ಬಳ್ಳಿಗೀ ಪರಿಯ ಸಂಪತ್ತು?
ಮೈ ತುಂಬ ಬಿಸಿ ಮುತ್ತು, ರೋಮಾಂಚ ಈವೊತ್ತು;
ಸೂರ್ಯೋದಯದ ನಭದಂಶ / ಮಗುವಿನಂಗೈ ಮೆತುವು,
ನಸರಿ, ಸಕ್ಕರೆ ಬಳಿತ; ಮೈಗೆ ಅತ್ತರ ಚಿಮುಕು?
ಹಸುರು ಹೊರೆಗೆಲ್ಲಿತ್ತು ಈ ರಖಂವಾರು ರಸ?
ಗಂಧರ್ವ, ಯಕ್ಷಿಣಿಯ ಭುಜದ ಸೋಕು?
ಬಿತ್ತದಲೆ? ಮಣ್ಣಲ್ಲೆ? ಬೆಳಕಿನಲ್ಲೆ?
ಅಥವಾ ಮುಗಿಲಿನ ಕರುಳ ಕರಗಿನಲ್ಲೆ?
ಎಲ್ಲಿತ್ತು ಈ ಕವಿತೆ? / ಕಣ್ಣಲ್ಲೆ, ಎದೆಯಲ್ಲೆ?
ಪ್ರಕೃತಿಯ ಬಸಿರಲ್ಲೆ? ದೃಶ್ಯದಲ್ಲೆ?
—ಪಾತ್ರವಲ್ಲದೆ ಇನ್ನು ನನ್ನದೇನಿದೆ ಇಲ್ಲಿ?
ಅದೃಶ್ಯದೇರಿಳಿವು; ನಾ ಮೆಟ್ಟಿಲು.
ಇಲ್ಲದ್ದು ಸುಮುಹೂರ್ತದಲ್ಲಿ ಮೂರ್ತೀಭವಿಸಿ
ಕೂಡುವುದು; ಆಡುವುದು ಚೆಂದೊಟ್ಟಿಲು.' (ಸುಮುಹೂರ್ತ)

ಮೇಲಿನ ಪಂಕ್ತಿಗಳಲ್ಲಿ ಮೂರ್ತ ಮತ್ತು ಅಮೂರ್ತಗಳ, ಗಮ್ಯ ಮತ್ತು ಅಗಮ್ಯಗಳ ಪ್ರಸ್ತಾಪವಿರುವುದನ್ನು ಕಾಣಬಹುದು. ಕವಿತೆಯ ಸ್ವರೂಪದ, ಸೃಷ್ಟಿಯ ಎರಡು ಚರ್ಯೆಗಳನ್ನು ವೀಕ್ಷಿಸಬಹುದು. 'ಮುಗಿಲಿನ ಕರುಳ ಕರಗು', 'ಪ್ರಕೃತಿಯ ಬಸಿರು', 'ಅದೃಶ್ಯದ ಏರಿಳಿವು' ಎಂಬ ಮಾತುಗಳು ಸೃಷ್ಟಿಶೀಲತೆಯಲ್ಲಿನ ಮಾನುಷಾತೀತ ಕೈವಾಡಕ್ಕೆ ಸಾಕ್ಷಿ ನುಡಿಯುತ್ತವೆ. ಸೃಜನ ಕ್ರಿಯೆಯ ಅನಿರೀಕ್ಷಿತವಾದ ಒಳಿತಿನ ಗಳಿಗೆಯೊಂದರಲ್ಲಿ ಮೂರ್ತೀಕರಿಸುವ ಕವನ ಮತ್ತು ನವಜಾತ ಶಿಶುವನ್ನು, ಕವನವೆಂಬ ನವಜಾತ ಹಸುಳೆಯನ್ನು ಈ ಸಾಲುಗಳು ಸಮರ್ಥವಾಗಿ ಚಿತ್ರಿಸುತ್ತವೆ.

ನಿಸಾರರ 'ಸಂಜೆ ಐದರ ಮಳೆ' (೧೯೭೦) ಸಂಗ್ರಹದಲ್ಲಿ ಸೇರಿರುವ 'ಕವಿತೆ'ಯಲ್ಲಿ ಕವನದ ವಿಲಕ್ಷಣ ಅಂತಃಸ್ವಭಾವದ ಉಲ್ಲೇಖವಿದೆ. ಎಷ್ಟೇ ಪ್ರಯತ್ನಪಟ್ಟರೂ ಕೆಲವೊಮ್ಮೆ ಮನಸ್ಸಿಗೆ ಏನೊಂದೂ ತೋಚುವುದಿಲ್ಲ. ಭಾವಗಳ ಉತ್ಪತ್ತಿಗೆ ಬೇಕಾಗುವ ಉತ್ಕಟತೆಯ ಕಾವು ಮೂಡಿರುವುದಿಲ್ಲ. ಆಗ ಕೇವಲ ಹಂಬಲಿಸುವುದೊಂದೇ ಕವಿಯ ಪಾಲಿನ ಭಾಗ್ಯ. ಬರಿಯ ಹಂಬಲಕ್ಕೆ ಸಾಫಲ್ಯವಿರದು. ಅಕಸ್ಮಾತ್ ಪ್ರಯತ್ನಪೂರ್ವಕವಾಗಿ ಬರೆಯಲು ಪಣ

ತೊಟ್ಟರೆ ಕೇವಲ ಅರ್ಥಹೀನ, ಭಾವಶೂನ್ಯ ಶಬ್ದಾಡಂಬರ ಮಾತ್ರ ವಿಜೃಂಭಿಸೀತು. ಆಗ ಮನಸ್ಸು ಸ್ವಾಸ್ಥ್ಯವನ್ನು ಕಳೆದುಕೊಂಡು ಚಡಪಡಿಸುತ್ತದೆ. ಯಾವುದರ ಮೇಲೂ ಸ್ಥಿರವಾದ ಆಸಕ್ತಿ ಇರದು. ಆ ವೇಳೆಯ ಯಾಂತ್ರಿಕ-ಆಲಸ್ಯ, ಕಾಡಿನಲ್ಲಿ ಅಡ್ಡಾಡುವಾಗ ಮೈಲಿಗಟ್ಟಲೆ ಒಂದೇ ಬಗೆಯ ಹೂವನ್ನು ನೋಡುತ್ತಿದ್ದರೆ ಮನಸ್ಸಿಗೆ ಹೇಗನ್ನಿಸುವುದೋ ಹಾಗೆ ಬೇಸರ ಕವಿಸಿರುತ್ತದೆ.

ಈ ಕವಿತೆಯಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ, ಅದು ತನ್ನ ಹ್ರಸ್ವವಾದ ಸ್ವರೂಪವನ್ನು, ಮಾತುಗಳ ಸರಳತೆಯನ್ನು ಮೀರಿದ ಅರ್ಥ ಪರಂಪರೆಯನ್ನು, ಪ್ರತೀಕತೆಯನ್ನು ತೆರೆಯುವುದು. ಇಲ್ಲಿ ಕವಿತೆಯ ಹುಟ್ಟಿನೊಂದಿಗೆ ಪ್ರಕೃತಿಯ ವಿದ್ಯಮಾನ ಗಳನ್ನು, ಅದರ ಹೋಲಿಕೆಗಾಗಿ ಸಾಂಪ್ರದಾಯಿಕವಾಗಿ ಬಳಕೆಯಾಗುವ ಹೆಣ್ಣಿನ ಋತು ಕಾಲದ ವಿವಿಧಾವಸ್ಥೆಗಳನ್ನು ಕೂಡಿಸಿರುವುದು. ಮೊದಲನೆಯ ಭಾಗದಲ್ಲಿ ಕವಿತೆ 'ಹೊರಗಾಗುವ' ಮಾತಿದೆ. ಇದು ಕವನ ರಚನಾಕ್ರಿಯೆಯ ಪ್ರಾರಂಭಿಕ ಹಂತ.

ಎರಡನೆಯ ಮತ್ತು ಮಧ್ಯದ ಭಾಗದಲ್ಲಿ, ಮೊದಲನೆಯ ಭಾಗದ ಭಾವರಾಹಿತ್ಯದ ಅಸ್ಫೂರ್ತ ಸ್ಥಿತಿಗೆ ವಿರುದ್ಧವಾದ ಅವಸ್ಥೆಯನ್ನು ಕಾಣುತ್ತೇವೆ. ಹಿಂದಿನ ಭಾಗದ ಏನೂ ತೋಚದ ನಿರ್ವಾತ ಸ್ಥಿತಿಗೆ ಬದಲು ಭಾವಗಳಿಂದ ತುಂಬಿ ಹೋಗಿರುವ, ಅದರ ಹೊರೆಯನ್ನು ಮನಸ್ಸು ತಾಳಲಾರದ ಅವಸ್ಥೆಯನ್ನು ಎದುರುಗೊಳ್ಳುತ್ತೇವೆ. ಆ ವೇಳೆಯಲ್ಲಿ ಅಯಾಚಿತವಾಗಿ ಏನೇನೋ ಮನಸ್ಸಿಗೆ ಹೊಳೆಯುತ್ತದೆ. ಆದರೆ, ಅದರಿಂದ ಕವಿಯ ಬುದ್ಧಿ ತರ್ಕಗಳು ಆಚ್ಛಾದಿತವಾಗಿ, ಅವನು ಯಾವುದನ್ನೂ ಪ್ರಜ್ಞಾಪೂರ್ವಕವಾಗಿ ಅನುಭವಿಸಲು, ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದಿಲ್ಲ. ಕವಿಗೆ ಒಂದು ಬಗೆಯ ಅಮಲಿನ—ಭಾವವಶತೆಯ ನಿಶೆಯ—ಸ್ಥಿತಿ ಅಮರುತ್ತದೆ. ಆಗ ಅವನ ವ್ಯಕ್ತಿತ್ವ, ಭಾವಗಳ ಸಮೃದ್ಧಿ ಯಲ್ಲಿ ಮುಚ್ಚಿಹೋಗುತ್ತದೆ—ಬಿತ್ತ ಭೂಮಿಯಲ್ಲಿ ಅಳಿಸಿಹೋದಂತೆ. ಆಗಿನ ಕವಿಯ ಸೃಜನಶೀಲ ಆಂತರ್ಯ, ವಿವಿಧ ಋತುಗಳ ಪ್ರಭಾವಕ್ಕೆ ಸಿಕ್ಕಿರುವ ನದಿಯಂತೆ, ಅದರ ವೈವಿಧ್ಯಮಯ ದೃಶ್ಯದಂತೆ ಕಂಗೊಳಿಸುತ್ತದೆ. ಆದರೆ, ಈಗಲೂ ಸಾವಯವ ಪುಷ್ಟ ಪದ್ಯ ಮೂಡುವ ಸಂಭವ ಅಲ್ಪ. ಭಾವಾವೇಶ ಆವೇಗಗಳೇ ಶಬ್ದಗಳ ತುಂಬ ಉಕ್ಕಿ ಹರಿದಿರುತ್ತವೆ. ಇದು ಕಾವ್ಯಸೃಷ್ಟಿಕ್ರಿಯೆಯ ನಡುವಿನ ಮಜಲು.

ಇಲ್ಲಿ ಗಮನಾರ್ಹವೆನ್ನಿಸುವುದು ಪ್ರಯತ್ನಪೂರ್ವಕವಾಗಿ, ಸಂಕಲ್ಪಪ್ರೇರಿತವಾಗಿ ಪದ್ಯ ರಚನೆಯನ್ನು ನೆರವೇರಿಸುವ ಸಂಭವ ಕಡಮೆ. ಹಾಗೊಂದು ವೇಳೆ ಪದ್ಯ ಮೈತಾಳಿದರೂ ಅದಕ್ಕೆ ಏನಾದರೊಂದು ಲೋಪ—ಭಾವಗಳ ಕೊರತೆಯ ಅಥವಾ ಭಾವಾಧಿಕ್ಯದ— ಇರ ಬಹುದು. ಈ ಹಂತದಲ್ಲಿ, ಹೊರಗಾಗಿದ್ದ ಕವಿತೆ 'ಐನೀರನ್ನು ಎರೆದುಕೊಂಡು ಸೀರೆಯುಟ್ಟು' ಅಲಂಕೃತಗೊಂಡಿರುತ್ತದೆ.

ಮೂರನೆಯ ಮತ್ತು ಕೊನೆಯ ಪದ್ಯಭಾಗದಲ್ಲಿ ಕಾವ್ಯರಚನಾಕ್ರಿಯೆಯ ಅಪ್ರಜ್ಞಾ ಪೂರ್ವಕವಾದ ಮುಹೂರ್ತದ ಪ್ರಸ್ತಾವವಿದೆ. ಇಲ್ಲಿ ಕವಿಯ ನಿರ್ಧಾರಕ್ಕೆ ವ್ಯತಿರಿಕ್ತವಾದ ಸ್ಥಿತಿಯ ಬಣ್ಣನೆಯಿದೆ. ಅವನಿಗೆ ಇಷ್ಟವಿಲ್ಲದ, ಬೇಸರ ಕವಿದಿರುವ, ಅತೃಪ್ತತೆಯ

ಕ್ಷಣಗಳಲ್ಲಿ ಇದ್ದಕ್ಕಿದ್ದಂತೆ ಕವಿತೆ ರೂಪು ತಳೆಯುವ ತುರ್ತು ತಂತಾನೆ ಚಮಕಬಹುದು. ಯಾಂತ್ರಿಕ ಏಕತಾನತೆಯ ಮನಃಸ್ಥಿತಿ ಎಂಬ ಸುದೀರ್ಘಾವಧಿಯ ತಂತಿಗಳಿಂದ ಛಕ್ಕನೆ ಮೂಡುವ ಬೆಳಕೆಂಬ ಏಕಾಗ್ರ ಕ್ಷಣದ ಹಾಗೆ. ಮೊದಲನೆಯ ಭಾಗದ 'ಕಾವು' ನೀಗಿ ಈಗ 'ಬೆಳಕು' ಮೂಡಿದೆ. ಈಗ ಹಿಂದಿನ ಎರಡು ಭಾಗಗಳಲ್ಲಿ ಕ್ರಮವಾಗಿ ಉಲ್ಲೇಖಿತವಾಗಿರುವ ರಿಕ್ತತೆ, ನಿರ್ಭರತೆಗಳಿಲ್ಲ. ಬದಲಿಗೆ ಉಚಿತವೆನ್ನಿಸುವ, ಮರ್ಮಾರ್ಥವನ್ನು ಪ್ರಾಪ್ತಿಸಿಕೊಂಡ ಪ್ರೇರಣೋಜ್ಜ್ವಲ ಸ್ಥಿತಿಯಲ್ಲಿ ಮನಸ್ಸಿದೆ. ಆಡಿದ ಸಾಧಾರಣ ಮಾತುಗಳೂ ಲಜ್ಜೆಗೆಂಪೇರಿ ಪ್ರಣಯಕ್ಕೆ ಅಣಿಯಾಗಿವೆ. ಹೊರಗಾಗಿ, ನೀರೆರೆದುಕೊಂಡ ಕವನ ಈಗ ಸೃಷ್ಟಿಕ್ರಿಯೆಗೆ ತಾನಾಗಿ ಸನ್ನದ್ಧವಾಗಿದೆ. ಕವಿತೆಯ ಸಾರ್ಥಕ್ಯವಿರುವುದು ಈ ಮೂರನೆಯ ಹಂತದಲ್ಲಿ.

'ಕವಿತೆ' ಹೆಸರಿನ ಈ ಪದ್ಯದಲ್ಲಿ ಸೃಷ್ಟಿಕ್ರಿಯೆಯ ತ್ರಿವಿಧಾವಸ್ಥೆಯ ಕಲಾತ್ಮಕ ಅಭಿವ್ಯಕ್ತಿಯಿದ್ದು, ನಿಸಾರರು ಈ ಪ್ರಕ್ರಿಯೆಯ ಬಗೆಗೆ ತಳೆದಿರುವ ಅಭಿಪ್ರಾಯಗಳನ್ನು ಗ್ರಹಿಸಲು ತುಂಬು ಸಹಕಾರಿಯೆನ್ನಿಸುತ್ತದೆ.

ಕವಿಯ 'ನಾನೆಂಬ ಪರಕೀಯ' (೧೯೭೨) ಕವನ ಸಂಗ್ರಹದ 'ವಿವರಣೆ' ಮತ್ತು 'ಸೃಷ್ಟಿಕ್ರಿಯೆ' ಎನ್ನುವ ರಚನೆಗಳಲ್ಲಿ ಸಹ ಕವಿತಾಸೃಷ್ಟಿಯ ವಿಧಾನದ ಬಗೆಗೆ ಒಂದೆರಡು ಸನ್ನೆಗಳಿವೆ. ಆದರೆ ಪ್ರಸ್ತುತ ಪರಿಶೀಲನೆಯ ದೃಷ್ಟಿಯಿಂದ ನೋಡಿದಾಗ, ಅವು ಅಷ್ಟು ವಿಶೇಷದವು ಎನ್ನಿಸುವುದಿಲ್ಲ. 'ಸೃಷ್ಟಿಕ್ರಿಯೆ' ಪದ್ಯದಲ್ಲಿ ಬರುವ 'ತಾತ್ಕಾಲಿಕ ವಶೀಕರಣದ ಕಾಲವಶೀ ಆಶ್ಚರ್ಯಗಳನ್ನು, ಮೂರು ಕಾಲ ಬಾಳುವ ಜಿಜ್ಞಾಸೆಯ ಗಟ್ಟಿ ವಿಚಾರಗಳನ್ನಾಗಿ', 'ಸಾಮಯಿಕ ಸ್ಫುರಿತದ ಸುವರ್ಣ ಕ್ಷಣಿಕೆಗಳನ್ನು ಅಮೂಲ್ಯ ಹರಳುಗಳನ್ನಾಗಿ' ಮತ್ತು 'ಸಾಪ್ತಾಹಿಕ ಬಾಜಾರು ಗಣಿಕೆಯಂತಹ ಭಾವನೆಗಳನ್ನು ಸದ್ಗೃಹಸ್ಥೆಯರಂತೆ ನೀತಿ ಪರಿಪಾಲಕರನ್ನಾಗಿ' ಪರಿವರ್ತಿಸುವುದಕ್ಕೆ ತುಡಿಯುವಂತೆ ಕವಿಗಳಿಗೆ ಸಂದೇಶಿಸುವ ಪರಿಯಿದೆ. ಆದರೆ, ಇದು ಕೇವಲ ವಾಕ್ಚಾತುರ್ಯವಾಗಿ ತೋರಿ ಬರುತ್ತದೆ.

ಇನ್ನುಳಿದಂತೆ, ಸೃಷ್ಟಿ ಪ್ರಕ್ರಿಯೆಯನ್ನು ಕುರಿತು ನಿಸಾರರು 'ಆಕಾಶಕ್ಕೆ ಸರಹದ್ದು ಗಳಿಲ್ಲ' (೧೯೯೮) ಸಂಗ್ರಹದ ಕೆಲವು ಕವಿತೆಗಳಲ್ಲಿ ತಮ್ಮ ಚಿಂತನೆಗಳನ್ನು ತೋಡಿಕೊಂಡಿ ದ್ದಾರೆ. ಅವುಗಳಲ್ಲಿ 'ಕವನ ಮತ್ತು ಮಾವಿನ ಹೂವು' 'ಆಕಾಶಕ್ಕೆ ಸರಹದ್ದುಗಳಿಲ್ಲ' ಕವಿತೆಗಳು ವಿಚಾರಯೋಗ್ಯವೆನ್ನಿಸುತ್ತವೆ. ಮೊದಲನೆಯ ಕವನದಲ್ಲಿ ವ್ಯಕ್ತವಾಗಿರುವ ಭಾವನೆಗಳು ಅವರು ಬಹಳ ಹಿಂದೆ ಬರೆದಿರುವ 'ಬಿತ್ತನೆ' ('ನೆನೆದವರ ಮನದಲ್ಲಿ' [೧೯೬೪]) ಕವಿತೆಯ ಆಲೋಚನೆಗಳ ಮುಂದುವರಿಕೆಯಾಗಿದೆ. ಅಲ್ಲಿ ಹೇಗೆ 'ಶುಕ್ಲಾಣು ಕೋಟಿಯಲ್ಲಿ ಕೋಶಕ್ಕೆ ಅಂಟುವುದು ಕೇವಲ ಯೋಗ್ಯ ಬಿಂದು'ವಷ್ಟೇ ಎನ್ನುವ ಸಾಲುಗಳ ಪುನರಾವರ್ತನೆಯೇ ಬೇರೊಂದು ಬಗೆಯಲ್ಲಿ 'ಕವನ ಮತ್ತು ಮಾವಿನ ಹೂವು' ಕವನದಲ್ಲಿ ವ್ಯಕ್ತವಾಗಿದೆ. ಹಿಂದಿನ ಕವಿತೆಯ 'ಬಿತ್ತ', 'ವೀರ್ಯಬಿಂದು'ಗಳ ಬದಲು ಇಲ್ಲಿ ಹೂವುಗಳ ಪ್ರಸ್ತಾವವಿದೆ:

'ಮಲರಿದ ಮೇಲೆ ಮಣ್ಣೂಡಿಸದೆ,
ತಳೆದ ಕುಸುಮಗಳನೊಂದೂ ಬಿಡದೆ

ತನ್ನಲ್ಲೆ ಉಳಿಸಿ ಸ್ವಾದು ಫಲವಾಗಿಸುವ ವರ
ಪಡೆದು ಬಂದಿಲ್ಲ ಮರ.
ಮತ್ತಿದೇ ತೆರ—
ನೋಟ, ಶ್ರವಣಗಳ ನೀರು ಗೊಬ್ಬರವೆರೆದು
ಪೋಷಿಸಿದಸಂಖ್ಯಾತ ಭಾವಗಳನೆಲ್ಲ ಪೊರೆದು
ಮನಸು ಜೋಪಾನಿಸಿ ಕಮನೀಯ ಕವನವಾಗಿಸುವ
ಯೋಗ್ಯಕ್ಕೆ ಪಾತ್ರನಲ್ಲ ನರ.'
(ಕವನ ಮತ್ತು ಮಾವಿನ ಹೂವು)

ಈ ಕವಿತೆಯಲ್ಲಿ ಗಮನಿಸಬೇಕಾದ ಸದೃಢ ಪಂಕ್ತಿಗಳೆಂದರೆ ಕೊನೆಯ ಭಾಗದವು. ನಿಸಾರರ 'ಸುಮುಹೂರ್ತ' (೧೯೬೭) ಕವಿತಾ ಸಂಗ್ರಹದ ಅದೇ ಹೆಸರಿನ ಕೊನೆಯ ಭಾಗದ ವಿಚಾರಗಳ ಜೊತೆ ಸಾದೃಶ್ಯ ಹೊಂದಿರುವಂತೆ ಭಾಸವಾಗುವ 'ಕವನ ಮತ್ತು ಮಾವಿನ ಹೂವು' ಕವಿತೆಯ ಈ ಸಾಲುಗಳು, ಕವಿಯ ಸೃಷ್ಟಿಕ್ರಿಯೆಯ ಬಗೆಗಿನ ನಿಸ್ಸಂದೇಹವಾದ, ಸುಸ್ಪಷ್ಟವಾದ ಚಿಂತನೆ ಮತ್ತು ನಂಬಿಕೆಗಳನ್ನು ತಿಳಿಸುತ್ತವೆ. ಮನುಷ್ಯ ಪ್ರಯತ್ನವನ್ನು ದಾಟಿದ ಅಪಾರ್ಥಿವ ಶಕ್ತಿಯೊಂದರ ಇಚ್ಛೆ, ಕವಿತೆಯಾಗಲಿ ಸಾಹಿತ್ಯದ ಇತರೇ ಕೃತಿಯಾಗಲಿ ಕಲಾಪ್ರಭೇದವಾಗಲಿ ರೂಪುಗೊಳ್ಳಲು ಅನಿವಾರ್ಯವೆಂಬುದನ್ನು ಸಾರುತ್ತದೆ. ಆ ಶಕ್ತಿಯ ಇರುವಿಕೆಯನ್ನು ಅನುಭವಿಸಬಹುದೇ ವಿನಾ ಅದರ ಸ್ವರೂಪವನ್ನು ತಿಳಿಯಲಾಗದು, ವಿಶ್ಲೇಷಿಸಲಾಗದು. ಅದರ ಪ್ರಸ್ತಾವ ಹೀಗೆ ಮೈತಳೆದಿದೆ:

'ಋತು ನಿಯಮಕಳವಡಿಸಿ ಮರವ
ತೋರದೆಯೆ ತನ್ನಿರವ
ಲೀಲೆ ಮರೆದಿರುವಂತೆ ಯಾವುದೋ ಕೈವಾಡ—
ತಾನು ಮರೆಯಲ್ಲಿ ನಿಂದು
ತನಗೆ ಇಷ್ಟವಾದಂದು
ಕವಿತೆಯನು ಕರುಣಿಸುವುದು ನಿಗೂಢ
ಸೃಷ್ಟಿ ಪ್ರಕ್ರಿಯೆಯ ಅಪಾರ್ಥಿವ ಪವಾಡ.'
(ಅದೇ)

'ಆಕಾಶಕ್ಕೆ ಸರಹದ್ದುಗಳಿಲ್ಲ' ಹೆಸರಿನ ಪದ್ಯದಲ್ಲಿ, ಕವಿತೆಯೂ ಸಹ ಆಕಾಶದಂತೆ ಸೌಮ್ಯ ಸ್ವರೂಪಿಯಾಗಿ ಮೇಲ್ನೋಟಕ್ಕೆ ತೋರಿದರೂ ಅಂತರಂಗದಲ್ಲಿ ಅದರಂತೆ ಅಮೇಯ, ಅಗಮ್ಯ, ಅನೌಪಮ್ಯವೆಂಬ ಭಾವನೆ ವ್ಯಕ್ತವಾಗಿದೆ. ಕವಿತೆಯ ಈ ವಿಶಿಷ್ಟವಾದ ಸ್ವರೂಪಕ್ಕೆ ಮೂಲ ಕಾರಣ, ಅದರ ಜನ್ಮಕ್ಕೆ ನಿಮಿತ್ತವಾದ ಮನಸ್ಸು. ಅದರ ಗುಣಗಳೇ, ಅದರ ಫಲಿತವಾದ ಕಾವ್ಯಕ್ಕೆ ಬರುವುದು ಸ್ವಾಭಾವಿಕ ತಾನೆ?

'ಆಕಾಶದಂತೆಯೇ ಅನಂತಾನಂತ, ನಿಗೂಢ
ಕವಿತೆ ಜನ್ಮ ತಳೆಯುವ ಮನಸು ಕೂಡ.
ವ್ಯತ್ಯಾಸವಿಷ್ಟೆ: ಬಾಹ್ಯಾಕಾಶ ಸ್ಥೂಲ ಕಾಯದ ಭೀಷ್ಮ,
ಮನಸ್ಸು ಕಾಮರೂಪಿ; ಸೂಕ್ಷ್ಮಾತಿಸೂಕ್ಷ್ಮ.' (ಆಕಾಶಕ್ಕೆ ಸಹದ್ದುಗಳಿಲ್ಲ)

ವೈಜ್ಞಾನಿಕವಾಗಿ ಸಹ ಈ ಭಾವನೆ ಸಂಗತವೆನ್ನಿಸುತ್ತದೆ. ಮನೋವಿಜ್ಞಾನಿಗಳು ಮನಸ್ಸನ್ನು ಅರ್ಥಮಾಡಿಕೊಂಡಿರುವುದು ಅಲ್ಪಾತಿಅಲ್ಪ. ಅಸಂಖ್ಯ ಪ್ರಯೋಗಗಳು ನಡೆದಿದ್ದರೂ ಅದರ ಮೇಲ್ಮೈ ಸಹ ಮನುಷ್ಯನ ಮತಿಗೆ ಗ್ರಾಹ್ಯವಾಗಿಲ್ಲ. ಮಾನಸಿಕ ಕ್ರಿಯೆಗಳ ಕ್ರಮ, ಪ್ರೇರಣೆ, ಕಾರ್ಯಕಾರಣ ಸಂಬಂಧಗಳ ಅರಿವು ನರನಿಗಾಗಿರುವುದು ಲವಲೇಶ. ಹೀಗಿರುವಾಗ, ಸೃಜನಶೀಲ ಸ್ಥಿತಿಯ, ಆ ಸಮಯದ ತಿಳಿವಳಿಕೆ ಸಮರ್ಪಕವಾಗಿ ಮೂಡುವುದಾದರೂ ಹೇಗೆ? ಹಾಗೆಂದು ಸುಮ್ಮನಾಗುವುದೂ ಸೂಕ್ತವಲ್ಲ. ಅಜ್ಞಾನಕ್ಕಿಂತ ಅಲ್ಪಜ್ಞಾನವಾದರೂ ಲಭ್ಯವಾದರೆ ಅದೂ ಲಾಭಪ್ರದವಲ್ಲವೆ? ನಿಸಾರರು ತಮ್ಮ ಗದ್ಯ ಲೇಖನವೊಂದರಲ್ಲಿ ಹೇಳುವ ಒಟ್ಟಾರೆ ಸ್ವರೂಪದ ಈ ಮಾತು ಸಮಂಜಸವೆನ್ನಿಸುತ್ತದೆ: 'ಜಾಗೃತ ಮನೋವಸ್ಥೆಗಿಂತ ಸಾಹಿತ್ಯ ಸೃಷ್ಟಿ ಪ್ರಕ್ರಿಯೆ ಸುಪ್ತಾಂತರಾಳಕ್ಕೆ ಹೆಚ್ಚು ನಿಕಟವೆನ್ನಿಸುತ್ತದೆ.'

— ೩ —

ಗದ್ಯ ಸಾಹಿತ್ಯದಲ್ಲಿ

ಇಷ್ಟು ಕವಿತೆಗಳ ವಿಚಾರ. ಇನ್ನು ನಿಸಾರರ ಗದ್ಯ ಸಾಹಿತ್ಯದಲ್ಲಿ ಈ ವಿಷಯ ಹೇಗೆ ಪ್ರಸ್ತಾಪಿತವಾಗಿದೆ ಎಂಬುದನ್ನು ಪರಿಶೀಲಿಸೋಣ. ಅವರ ಕವನಗಳಲ್ಲಿ ಅಡಕ ಮತ್ತು ಸೂಚ್ಯವಾಗಿ ಉಲ್ಲೇಖಿತವಾಗಿರುವ ಸಂಗತಿಗಳೇ ಅಥವಾ ಅವುಗಳಿಗೆ ಹೋಲಿಕೆಯಿರುವಂಥವೇ ಗದ್ಯದಲ್ಲಿ ಪಡಿಮೂಡಿವೆಯೊ? ಇಲ್ಲವೇ, ಬೇರೆ ಬಗೆಯ ಕೆಲವು ಚಿಂತನೆಗಳೂ ಇವೆಯೊ? ಎಂಬ ಅಂಶವನ್ನು ಸಮಾಲೋಚಿಸೋಣ. ನಿಸಾರ್ ಐದು ಗದ್ಯ ಸಂಕಲನಗಳನ್ನು ಹೊರ ತಂದಿದ್ದಾರೆ. ಇವೆಲ್ಲವೂ ಒಟ್ಟುಗೂಡಿ 'ಸಮಗ್ರ ಗದ್ಯ ಬರಹಗಳು' ಹೆಸರಿನ ಬೃಹದ್ಗಾತ್ರದ ಗ್ರಂಥವಾಗಿ ೨೦೦೨ರಲ್ಲಿ ಪ್ರಕಟವಾಗಿದೆ.

ಮೊದಲಿಗೆ ಅವರ 'ಇದು ಬರಿ ಬೆಡಗಲ್ಲೋ ಅಣ್ಣ' ಕೃತಿಯ 'ಕವಿಯಾಗಿ ನನ್ನ ಅನುಭವ' ಎಂಬ ಲೇಖನವನ್ನು ಸಮಾಲೋಚಿಸಬಹುದು. ಅದು ಮೂಡಿದ್ದು ೧೯೭೪ರಲ್ಲಿ. ಅಲ್ಲಿ ಪ್ರಾರಂಭದಲ್ಲೇ ನೇರವಾಗಿ ಅವರು ಕಾವ್ಯಸೃಷ್ಟಿ ಪ್ರಕ್ರಿಯೆಯ ಬಗೆಗೆ ಪ್ರಸ್ತಾಪಿಸುತ್ತಾರೆ. ಅವರ ಪ್ರಕಾರ, ಕಾವ್ಯ ಸೃಷ್ಟಿಯಾಗುವ ವಿಧಾನದಂಥ ಜಟಿಲ ಮತ್ತು ಸೂಕ್ಷ್ಮವಾದ ವಿದ್ಯಮಾನವನ್ನು, ಅದರ ಫಲಿತಾಂಶವಾದ ಪದ್ಯವೊಂದರ ಅಭ್ಯಾಸದಿಂದ ಮಾತ್ರವೇ ತಿಳಿಯುತ್ತೇವೆಂದು ನುಡಿಯುವಂತಿಲ್ಲ. ಅದನ್ನು ಒಂದು ಮಾದರಿಯಾಗುವ ನಿದರ್ಶನದಂತೆ ಪರಿಗಣಿಸುವಂತಿಲ್ಲ. ಆದ್ದರಿಂದ, ಈ ಕ್ರಿಯೆಯ ಪರಿಣಾಮರೂಪಿಯಾದ ಕವಿತೆಯೊಂದರ ವಿವರಗಳನ್ನು ಅದರ ಪರೀಕ್ಷೆಯಿಂದ ತಿಳಿಯಬಹುದಾದರೂ ಆ ವಿವರಗಳಿಗೆ ಕಾರಣವಾದ ಅಂತಃಶಕ್ತಿಗಳ ಸ್ವರೂಪವನ್ನು ಗ್ರಹಿಸುವುದು ಅಸಾಧ್ಯ. ಅದಕ್ಕೋಸ್ಕರ ಕವನ ರಚನಾ ಸಮಯದ ಕವಿಯ ಮನೋವಸ್ಥೆಯನ್ನು ಅರಿಯುವುದು ಸೂಕ್ತ. ಆದರೆ ಇಲ್ಲಿ ಒಂದು ಕಷ್ಟವಿದೆ: ಕವಿತಾ ರಚನೆಯ ವಿವಿಧ ಸಮಯಗಳಲ್ಲಿ ಅವನ ಮನಃಸ್ಥಿತಿ ಒಂದೇ ತೆರನಾಗಿರುವುದೆಂದು ನಿರ್ಧರಿಸುವುದು ತಪ್ಪಾಗಬಹುದು. ಒಟ್ಟಿನಲ್ಲಿ ಕವನ ಸೃಷ್ಟಿ ಕ್ರಿಯೆಯ ಬೇರುಗಳು ಮನೋವಿಜ್ಞಾನದೊಂದಿಗೆ ಸಂಲಗ್ನಗೊಂಡಿರುವಂತೆ

ತೋರುತ್ತದೆ. ಅವುಗಳ ಗ್ರಹಿಕೆ, ಮನುಷ್ಯನ ಅಂತರಂಗದಷ್ಟೇ ರಹಸ್ಯಮಯ, ಅಮೇಯ.

ಮನುಷ್ಯನ ಲೋಕಾನುಭವಗಳು ಅವನ ಅಂತರಾಳದಲ್ಲಿ ತಮ್ಮದೇ ಆದ ವಿನ್ಯಾಸ ಗಳಲ್ಲಿ ಸಂಚಯಿತವಾಗಿರುತ್ತವೆ. ಅಲ್ಲಿ ಮೊದಲೇ ಇರುವ ಅನುಭವಗಳೊಂದಿಗೆ ಕಲ್ಪಿಸಿಕೊಳ್ಳಲು ಸಾಧ್ಯವಾಗದಂತಹ ರೀತಿಯಲ್ಲಿ ತಳುಕೆ ಹಾಕಿಕೊಂಡು ಅಮೂರ್ತ ಹಾಗೂ ಅವ್ಯವಸ್ಥಿತವಾಗಿ ನೆಲೆಗೊಂಡಿರುತ್ತವೆ. ಈ ನಿರಾಕಾರದ ಮೊತ್ತ ಕವಿಯ ಪಾಲಿಗೆ ಕವನದ ಕಚ್ಚಾ ಮಾಲು. ಈ ಬಗೆಯಿಂದ ಆಲೋಚಿಸಿದಾಗ ಮನುಷ್ಯನ ಅಂತರಂಗ ಒಂದು ನಿತ್ಯ ನಿರನ್ವೇಷಿತ ಜಗತ್ತು. ಅದನ್ನು ಪ್ರತಿ ಕವನ ರಚನೆಯ ಸಂದರ್ಭದಲ್ಲಿ ತಲಾಷು ಮಾಡಿ ಕೊಳ್ಳುವ ಅನಿವಾರ್ಯ ಕವಿಗೆ ಒದಗುತ್ತದೆ. ಹೀಗಾಗಿ, ಅವನು ಕೊಲಂಬಸ್‌ನನ್ನು ಹೋಲುತ್ತಾನೆ. ಪ್ರತಿ ಪದ್ಯ ರಚನೆ ಅವನ ಪಾಲಿಗೆ ದುರ್ಗಮ, ಸಾಹಸಪೂರ್ಣ ನೌಕಾಯಾನ, ನವ ನೆಲೆಯ ಅನ್ವೇಷಣ. ಆದರೆ ಕೊಲಂಬಸ್‌ನಿಗೆ ಇದ್ದಂತೆ ಕವಿಗೆ ಪೂರ್ವಸಿದ್ಧವೂ ಘನವೂ ಆದ ಭೂಖಂಡ ಕಾದು ಕುಳಿತಿರುವುದಿಲ್ಲ. ಅವನ ತಡಕಾಟ ನಿರಾಕಾರತೆಯ, ಅಮೂರ್ತವಾದ ಮಬ್ಬಿನ ಮೊತ್ತದಲ್ಲಿ. ಅದಕ್ಕೆ ಸ್ಫುಟತೆ, ಸುವ್ಯವಸ್ಥೆ ಮತ್ತು ಅರ್ಥವಂತಿಕೆಗಳನ್ನು ಕವಿ ತನ್ನ ಮಾತು, ತಂತ್ರಗಳಿಂದ ನೀಡಬೇಕಾಗುತ್ತದೆ.

ಹೀಗೆ, ಅಂತರಾಳದಲ್ಲಿ ಶೇಖರಿತವಾಗಿರುವ ಇಂದ್ರಿಯಾನುಭವಗಳನ್ನು ಭಾವ ಗಳನ್ನಾಗಿ ಪರಿವರ್ತಿಸಿಕೊಳ್ಳುವ ಹಾತೊರೆತವೇ, ಮಾತಿನ ಮೂಲಕ ಮೂರ್ತತ್ವ ನೀಡಲು ತುಡಿಯುವುದೇ ಕವಿತೆಯ ಉಗಮಕ್ಕೆ ನಾಂದಿ ಎನ್ನಬಹುದು. ಭಾವಕ್ಕೆ ತಕ್ಕ ದೇಹ ಲಭ್ಯ ವಾಗುವುದು ಕವಿ ಹೊರಗಿನ ಪರಿಸರದಿಂದ ಆರಿಸಿಕೊಳ್ಳುವ ವಸ್ತು, ಸಂದರ್ಭ, ಚಿತ್ರ ಇತ್ಯಾದಿಗಳಿಂದ. ಇವುಗಳನ್ನು 'ವಸ್ತು ಪ್ರತಿರೂಪ'ಗಳೆಂದು ಕರೆಯಬಹುದು. ನಿಸಾರರು, ಈ ಸಂದರ್ಭದಲ್ಲಿ ಕವನದ ಲಕ್ಷಣವನ್ನು ಹೀಗೆ ಸೂತ್ರೀಕರಿಸುತ್ತಾರೆ: 'ಕವಿಸೃಷ್ಟಿ ಕರ್ಮದ ಜೀವಾಳವೆಂದರೆ ಅಸ್ಫುಟವಾದ ಮನೋಮುದ್ರೆಗಳಿಗೆ ತಕ್ಕನಾದ ವಸ್ತು ಪ್ರತಿರೂಪಗಳನ್ನು ಶಬ್ದಗಳಲ್ಲಿ ಸೃಷ್ಟಿಸುವಿಕೆ ಮತ್ತು ಅದರ ಫಲವಾಗಿ ಬುದ್ಧಿ ಹಾಗೂ ಭಾವವೇದಿಯಾದ ಪದಶಿಲ್ಪವನ್ನು ನಿರ್ಮಿಸುವಿಕೆ. ಅಂಗೋಪಾಂಗ ಸಾಮರಸ್ಯವುಳ್ಳ ಈ ಶಿಲ್ಪವೇ ಕವನ.'

ಮುಂದುವರಿದು, ಅವರು 'ಕಾವ್ಯಸೃಷ್ಟಿಕ್ರಿಯೆ ಹಿಂದು-ಇಂದುಗಳ, ಮರೆವು-ಎಚ್ಚರಗಳ ಅಪೂರ್ವವಾದ ಹಾಗೂ ದಿಗ್ಭ್ರಮಕಾರಕವಾದ ಸಮರಸ ಸಾಧನೆಯ ಕುಶಲ ಕರ್ಮ' ಎನ್ನುತ್ತಾರೆ. ಒಟ್ಟಿನಲ್ಲಿ ಆ ಪ್ರಕ್ರಿಯೆಯ ದುರವಗಾಹತೆ (Ambiguity) ಮತ್ತು ಸಂಕೀರ್ಣತೆ(Complexity)ಗಳತ್ತ ನಮ್ಮ ಗಮನ ಹರಿಯುವಂತೆ ಮಾಡುತ್ತಾರೆ.

ಕಾವ್ಯ ರಚನೆಯ ಸಂದರ್ಭದ ಒಂದು ವಿಶೇಷ ಚಿತ್ತಸ್ಥಿತಿಯನ್ನು ಸ್ವಾನುಭವಿಸಿದ ಕವಿ, ಅದರ ಬಗೆಗೆ ಬರೆಯುವುದು ಹೀಗೆ: 'ಈ ಅವಸ್ಥೆಯಲ್ಲಿ ಕವಿಗೆ ವ್ಯಾವಹಾರಿಕ ಪಾತಳಿಯಲ್ಲಿರುವ ಹಾಗೆ ಅರಿವೆನ್ನುವುದು ಕೇವಲ ಪರಿಜ್ಞಾನವಾಗಿರದೆ 'ವೇದ್ಯ'ವಾಗುತ್ತದೆ. ಅದೊಂದು ಸಜೀವ ಅನುಭೂತಿಯಾಗಿ ಪ್ರಜ್ಞೆಯಾಗಿ ಮಾರ್ಪಡುತ್ತದೆ. ಅರಿವಿನ ಮಟ್ಟಕ್ಕೆ ಅಳವಡದ ಸೂಕ್ಷ್ಮವೇದಿತ್ವ, ಸಮಗ್ರತೆ, ಸಂವೇದನೆಯ ತೀವ್ರತೆಗಳನ್ನು ಅಂಥ ಪ್ರಜ್ಞಾವಂತ ಸ್ಥಿತಿ ಮನಗಾಣಿಸುತ್ತದೆ. ಹೊಚ್ಚ ಹೊಸದಾಗಿ ವ್ಯಕ್ತಗೊಳ್ಳುವ ಸಾಮರ್ಥ್ಯವನ್ನು ಪಡೆದ

ಸ್ಥಿತಿಯನ್ನು ಪ್ರತಿಭೆಯೆನ್ನಬಹುದೇನೋ.'

ಈ ಲೇಖನ ನಿಸಾರರ ಸೃಜನಶೀಲ ಕ್ರಿಯೆಯ ಬಗೆಗಿನ ಅನುಭವ ಸಮರ್ಥಿತ ವಿಚಾರಗಳನ್ನು ಅರಿಯಲು ತುಂಬ ಉಪಯುಕ್ತವೆನ್ನಿಸುತ್ತದೆ. ಅವರು ಕವನ ರಚನೆಯ ವಿವಿಧ ಸಂದರ್ಭಗಳಲ್ಲಿ ಸ್ವಾನುಭವಿಸಿರುವ ವಿವಿಧ ಹಾಗೂ ಅಪೂರ್ವ ಮನೋಭಂಗಿ (Mood)ಗಳನ್ನು ಇದರಲ್ಲಿ ಕಾಣಿಸಿದ್ದಾರೆ. ಕಾವ್ಯಸೃಷ್ಟಿಯ ತರ್ಕರಾಹಿತ್ಯ, ಅನಿಶ್ಚಿತತೆ, ಅಗಮ್ಯವಾದ ಅಂಶಗಳನ್ನು ಚರ್ಚಿಸಿದ್ದಾರೆ. ಕವಿಯ ಪೂರ್ವೋದ್ದೇಶವನ್ನು ಅಲಕ್ಷಿಸಿ ಹೇಗೆ ಕೆಲವು ಕವಿತೆಗಳು ಅಪ್ರಯತ್ನಪೂರ್ವಕವಾಗಿ ಕಿರಿದಾಗಿಯೊ ನೀಳವಾಗಿಯೊ ಸಂಭವಿಸಿರು ವುದನ್ನು ಉದಾಹರಣೆಗಳೊಂದಿಗೆ ಉಲ್ಲೇಖಿಸಿದ್ದಾರೆ. ಹೀಗೆ, 'ಕವಿ ತನ್ನ ಕೃತಿಯ ಬಗ್ಗೆ ಮೊದಲೇ ಚಿಂತಿಸಿ ಭಾವಸ್ಪಷ್ಟವಾಗಿಸಿಕೊಂಡ ಸ್ವರೂಪದ ಲೆಕ್ಕಾಚಾರಗಳೆಲ್ಲ ಕವನ ರಚನೆಯ ಮುಹೂರ್ತದಲ್ಲಿ ತಲೆ ಕೆಳಗಾಗದೆ ಹೋದರೆ ಅವನ ಕಲಾನುಭವ ಚಿಕ್ಕ ಕ್ಯಾನ್ವಾಸ್ ಉಳ್ಳ ಕೃತಕ ನಿರ್ಮಿತಿಯಾಗುತ್ತದೆಯೇ ಹೊರತು ಸ್ವಾಭಾವಿಕ ಸೃಷ್ಟಿಯೆನ್ನಿಸುವುದಿಲ್ಲ; ಸಾಧಾರಣೀಕರಣದ ಅಸ್ಫುಟಾರ್ಥವನ್ನು ಹೊಮ್ಮಿಸಲು ಸಮರ್ಥವಾಗುವುದಿಲ್ಲ' ಎಂದು ತಮ್ಮ ಅನ್ನಿಸಿಕೆಯನ್ನು ಹೊರಹೊಮ್ಮಿಸಿದ್ದಾರೆ. ಇದೇ ವಿಷಯವನ್ನು ನಿಸಾರರು 'ಅಚ್ಚುಮೆಚ್ಚು' (೧೯೯೬) ಸಂಗ್ರಹದ 'ಬರೆಯುವುದರ ಬಗ್ಗೆ ಸ್ವವಿವೇಚನೆ' ಲೇಖನದಲ್ಲೂ ಚರ್ಚಿಸಿದ್ದಾರೆ ('ಸಮಗ್ರ ಗದ್ಯ ಬರಹಗಳು', ಪುಟ: ೭೩೫).

ಇಷ್ಟೇ ಅಲ್ಲದೆ ಕವಿತಾ ನಿರ್ಮಾಣದ ಸಮಯದಲ್ಲಿ ಅವರಿಗಾಗಿರುವ ಚಡಪಡಿಕೆ, ತಹತಹ, ಅಸ್ವಾಸ್ಥ್ಯದ ಮನೋವಸ್ಥೆಯನ್ನೂ; ಮುಜುಗರ ಹಾಗೂ ಸ್ವಾಪ್ನಿಕ ಗುಂಗನ್ನೂ ಉಲ್ಲೇಖಿಸಿರುವುದಲ್ಲದೆ, ಕವಿತೆ ರೂಪುಗೊಂಡ ಬಳಿಕದ ನೆಮ್ಮದಿ, ಸ್ವಸ್ಥತೆಗಳನ್ನು ಸ್ಮರಿಸಿಕೊಂಡಿದ್ದಾರೆ. ಜೊತೆಗೇ ಅಪೂರ್ವವೆನ್ನಿಸುವ ಒಂದು ಅನುಭೂತಿಯನ್ನೂ ಸೂಚಿಸಿದ್ದಾರೆ: ಕವನ ರಚನೆಯ ಅತ್ಯುತ್ಕಟ ಸಮಯದಲ್ಲಿ ಕವಿ ಚೇತನಕ್ಕೆ ಆಗಿರುವ ನಿಗೂಢವಾದ ಪ್ರಾಚೀನತೆಯ ಹಾಗೂ ಸಮಕಾಲೀನತ್ವದ ಸಂಲಗ್ನತೆಯ ವೈಚಿತ್ರ್ಯ. ನಿಸಾರ ರನ್ನು ನೈಸರ್ಗಿಕ ದೃಶ್ಯ, ಬಾಳಿನ ಘಟನೆ, ಓದಿದ ಸಂಗತಿ—ಒಟ್ಟಿನಲ್ಲಿ ಬಾಹ್ಯಾನುಭವ, ಸ್ಮೃತಿಯಲ್ಲಿ ನಾಟಿ ಆಗಾಗ್ಗೆ ತೀವ್ರವಾಗಿ ಕಾಡದಿದ್ದರೆ—haunt ಮಾಡಿ ಹಳವಂಡಿಸದಿದ್ದರೆ, ಭಾವಾವೇಗಿಸದಿದ್ದರೆ ಕವನ ರಚನೆ ಕಷ್ಟವಾಗುತ್ತದೆ ಎಂಬ ಸಂಗತಿಯೂ ಇಲ್ಲಿ ನಿರೂಪಿತವಾಗಿದೆ.

ಕಾವ್ಯಸೃಷ್ಟಿಯ ವೇಳೆ ಭಾಷೆಯ ಮಹತ್ವದ ಪಾತ್ರವನ್ನು ಕವಿ ವಿಶದವಾಗಿ ವಿಶ್ಲೇಷಿಸಿರುವುದೂ ಈ ಲೇಖನದ ಹೆಚ್ಚುಗಾರಿಕೆ ಎನ್ನಬಹುದು. ಕವಿಯ ಆಂತರ್ಯದ ಭಾವಗಳನ್ನು, ಆಲೋಚನೆಗಳನ್ನು ಸುಸೂತ್ರವಾಗಿ ಕ್ರೋಡೀಕರಿಸಿ ಹಂತಹಂತವಾಗಿ ತರ್ಕಸಮ್ಮತವಾಗಿ ಬೆಳಸಿ ಬೇರೆಯವರಿಗೆ ಪರಿಣಾಮ ಉಂಟು ಮಾಡುವುವರಲ್ಲಿ ಮಾತಿಗೆ ಅಮೋಘವಾದ ಪಾತ್ರವಿರುವುದನ್ನೂ ನಿಸಾರರು ಮನವರಿಕೆ ಮಾಡಿಸಿದ್ದಾರೆ. ಉತ್ತಮ ಕವಿ, ಮುಂದೆ ಕವನ ರಚಿಸುವ ಕವಿಗಳಿಗೆ ಸವಾಲಾಗುವುದನ್ನು, ತನ್ನ ಮಾತುಗಾರಿಕೆಯ ವಿಶಿಷ್ಟ ಬಳಕೆಯಿಂದ ಅವರ ಭಾಷೆಯ ಸಾಧ್ಯತೆಗಳನ್ನು ಕಡಮೆಗೊಳಿಸಿ ಅವರನ್ನು ಇಕ್ಕಟ್ಟಿಗೆ

ಸಿಕ್ಕಿಸುವುದನ್ನು ತಿಳಿಸಿದ್ದಾರೆ.

ಈ ವಿಷಯಕ್ಕೆ ಪರೋಕ್ಷವಾಗಿ ಸಂಬಂಧಿಸಿದ ಮತ್ತೊಂದು ವಿಶೇಷ ಸಂಗತಿಯ ಬಗ್ಗೆ ಕವಿ ತಮ್ಮ ದೃಷ್ಟಿಯನ್ನು ಹೊರಳಿಸುತ್ತಾರೆ, ತಮ್ಮ ಇನ್ನೊಂದು ಬರಹದಲ್ಲಿ. ಅದರ ಹೆಸರು: 'ಕಾವ್ಯದ ಬಗೆಗೆ ಕೆಲವು ತಾತ್ವಿಕ ಚಿಂತನೆಗಳು'. ಜೀವನ, ಲೆಕ್ಕವಿಲ್ಲದಷ್ಟು ಜನರಿಗೆ ನಿಚ್ಚಳವಾಗಿ ಹಲವಾರು ಬಗೆಯ ಅನುಭವಗಳನ್ನು ಹಂಚಿದ್ದರೂ ಉತ್ಕಟವಾಗಿ ಅನುಭವ ಪಡುವ ಸಾಮರ್ಥ್ಯವನ್ನು ನೀಡಿದ್ದರೂ ಅವರೆಲ್ಲ ಕವನಗಳನ್ನು ಸೃಷ್ಟಿಸುವುದು ಸಾಧ್ಯವಾಗಿಲ್ಲ ಎನ್ನುವುದು ಚಿಂತನೀಯ ವಿಷಯವಾಗಿದೆ. ಬಹುಶಃ ಅದಕ್ಕೊಂದು ವಿಶಿಷ್ಟವೂ ಅತ್ಯ ಪೂರ್ವವೂ ಆದ ಮಾನಸಿಕ ಸಿದ್ಧತೆ ಆವಶ್ಯಕವೆಂದು ತೋರುತ್ತದೆ. ಇತರರಿಗಿಲ್ಲದ ಒಂದು ವಿಶಿಷ್ಟ ತರಂಗಾಂತರ, ಒಂದು ದ್ಯುತಿಗ್ರಾಹಿ ಶಕ್ತಿ ಕವಿಯಾದವನಿಗೆ ಇರಬೇಕೆಂದು ಕಾಣುತ್ತದೆ. ಈ ವಿಷಯದ ಮತ್ತೊಂದು ಮಗ್ಗುಲನ್ನು ನಿಸಾರರು 'ಅಚ್ಚುಮೆಚ್ಚು' ಸಂಕಲನದ 'ನನ್ನ ಗದ್ಯದ ಒಲವು ಓಲುವೆಗಳು' ಎಂಬ ಲೇಖನದಲ್ಲಿ ಕೊಳವೆ ಬಾವಿಗಳ ಕೊರೆಸುವಿಕೆಯ ಉಪಮಾನದ ಮೂಲಕ ಚಿತ್ರವತ್ತಾಗಿ ವಿವರಿಸಿದ್ದಾರೆ ('ಸಮಗ್ರ ಗದ್ಯ ಬರಹಗಳು', ಪುಟ: 541).

ಈ ವಿಷಯವನ್ನೇ ಮತ್ತಷ್ಟು ಸ್ಫುಟವಾಗಿ, 'ಕಾಂಕ್ರೀಟಾಗಿ' ನಿಸಾರರು ತಮ್ಮ 'ಅಚ್ಚುಮೆಚ್ಚು' ಹೆಸರಿನ ಗದ್ಯ ಸಂಗ್ರಹದ 'ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮನುಷ್ಯನ ಒಳ ಹೊರ ಕಾಳಜಿಗಳು' ಎನ್ನುವ ಲೇಖನದಲ್ಲಿ ವ್ಯಕ್ತಗೊಳಿಸಿದ್ದಾರೆ. ಇದನ್ನು ಅವರ ಮಾತು ಗಳಲ್ಲೇ ಆಲಿಸಿ: 'ಕವಿಯಾಗುವುದಕ್ಕೆ ವ್ಯಕ್ತಿಯ ಅಂತಃಕರಣದಲ್ಲಿ ಹುಟ್ಟಿನಿಂದ ಪಡೆದು ಬಂದ ಒಂದು ಕಿಡಿ ಇರಬೇಕೆಂದು ತೋರುತ್ತದೆ. ಕಾವ್ಯ ರಚನೆಯ ವೇಳೆ ಹಲವೊಮ್ಮೆ ಅದರ ಅರಿವು ನಮ್ಮ ಸ್ಮೃತಿಯಲ್ಲಿ ಸುಳಿಯಬಹುದು. ಅದನ್ನು ನೈಜ ಸ್ಫುರಣಶಕ್ತಿಯೆನ್ನಿ, ಪ್ರತ್ಯುತ್ಪನ್ನ ಮತಿತ್ವವೆನ್ನಿ, ರವಿ ಕಾಣದ್ದನ್ನು ಕವಿ ಕಂಡನೆಂಬ ವಿಶೇಷಣದ ಹಿಂದಿನ ಅಪೂರ್ವತಾಗ್ರಹಣ ವಿಶೇಷತೆಯೆನ್ನಿ—ಹೇಗಾದರೂ ಕರೆಯಿರಿ, ಒಂದು ಸಹಜವಾದ ಕಿಡಿ ಕವಿಯ ಅಂತಶ್ಚೇತನದಲ್ಲಿ ಪ್ರಕೃತಿದತ್ತವಾಗಿ ಇರಬೇಕು. ಕವಿಯಾದವನು ಅದು ನಂದಿ ಹೋಗದಂತೆ ಪರಿಶ್ರಮಪೂರ್ವಕವಾದ ಲೋಕಾನುಭವ, ವ್ಯಾಸಂಗ, ಚಿಂತನ, ಧ್ಯಾನಗಳ ಇಂಧನವನ್ನು ಒಡ್ಡಿ ಅದನ್ನು ಕೆಂಡವಾಗಿಸಿಕೊಳ್ಳಬೇಕು. ಅದರ ಕಾವು ದೀಪ್ತಿಗಳಿಲ್ಲದೆ ಸತ್ಕಾವ್ಯ ಸೃಷ್ಟಿಯಾಗದು.'

ಇದರ ಜೊತೆಗೇ ಮತ್ತೊಂದು ಸಂಗತಿಯೂ ಈ ಬರಹದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ: ಯಾವುದೇ ವಿಷಯವನ್ನು ಕೂಲಂಕಷವಾಗಿ ಅರಿತ ಮಾತ್ರಕ್ಕೆ, ಅದರ ಬಗ್ಗೆ ನಿಷ್ಣಾತತೆ, ಕೌಶಲಗಳನ್ನು ದಕ್ಕಿಸಿಕೊಂಡ ಮಾತ್ರಕ್ಕೆ ಒಬ್ಬ ವ್ಯಕ್ತಿ ಕವಿಯಾಗಿಬಿಡುವುದಿಲ್ಲ. ಅವನ ಸೃಷ್ಟಿ ಕಾರ್ಯಕ್ಕೆ ಇದಿಷ್ಟೇ ಮುಖ್ಯವಾಗುವುದಿಲ್ಲ. ಆ ವಿಷಯವನ್ನು ಬೌದ್ಧಿಕವಾಗಿ ಅರಿತಿರುವ ಹಾಗೆಯೇ ಅದು ಅವನಿಗೆ ಹೃದ್ಗತವಾಗಬೇಕು: ಸ್ವಾನುಭೂತಿಯಾಗಿ ಸಾಕ್ಷಾತ್ಕರಿಸಬೇಕು. ಅವನು ಬರಿಯ ರಸಜ್ಞನಾದರೆ ಸಾಲದು, ರಸಪ್ರಜ್ಞನಾಗಬೇಕು. ಈ ರಸಪ್ರಜ್ಞತೆ ಕವಿಗೆ ಇರದಿದ್ದರೆ ಅವನಿಗೆ ಮಾಮೂಲಾದ ಲೋಕಾನುಭವಗಳಲ್ಲಿ ಮಹತ್ವವಾದದ್ದು ಮನವರಿಕೆ ಯಾಗದು.

ಇದಲ್ಲದೆ, ಕಾವ್ಯವನ್ನು ಸ್ಫೂರ್ತಿಫಲವೆನ್ನುವ ಲೋಕಾಭಿರಾಮದ ಮಾತನ್ನು ನಿಸಾರರು ಈ ಲೇಖನದಲ್ಲಿ ಒಪ್ಪಿ ಪುಷ್ಟೀಕರಿಸುತ್ತಾರೆ. ಇದರೊಂದಿಗೇ, ಲೋಕಾನುಭವವನ್ನು ತನ್ನದನ್ನಾಗಿ ಮಾಡಿಕೊಂಡ ಮೇಲೆ ಅದು ಕವನದ ಆಕೃತಿಯನ್ನು ತಳೆಯಲು ಸಾಕಷ್ಟು ವ್ಯವಧಾನ, ಚಿಂತನ ಅಗತ್ಯವೆನ್ನುತ್ತಾರೆ. ಅದನ್ನು ದಿಢೀರೆಂದು ಆಗಗೊಳಿಸುವ ರಾಸಾಯನಿಕ ಕ್ರಿಯಾವರ್ಧಕ (catalyst) ಸೃಷ್ಟಿಪ್ರಕ್ರಿಯೆಯಲ್ಲಿ ಇರುವುದಿಲ್ಲ. ಆದ್ದರಿಂದ, ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಈ ಸಂಗತಿಯನ್ನು ನಿಸಾರರ ಮಾತುಗಳಲ್ಲೇ ಕೇಳಿ, ಪರ್ಯಾಲೋಚಿಸುವುದು ಚೆನ್ನ: 'ಕವಿಗೆ ಪದ ಪ್ರಯೋಗ ಕುಶಲತೆ, ವ್ಯುತ್ಪತ್ತಿ, ಸೌಂದರ್ಯ ಗ್ರಹಣ ಸಾಮರ್ಥ್ಯ, ಮೋಹಕ ಮಾತುಗಾರಿಕೆ, ಛಂದಃಪ್ರಜ್ಞೆ ಮತ್ತು ಇವೆಲ್ಲಕ್ಕೂ ಕಿರೀಟಪ್ರಾಯವಾದ ಅನನ್ಯ ವಿಭಾವನಾ ಸಂಪತ್ತು ಸಮನ್ವಿತವಾಗಿರಬಹುದು. ಹಾಗೆಂದು ಅವನು ಬಯಸಿದ ತತ್‌ಕ್ಷಣ, ಅಲ್ಲಾವುದ್ದೀನನಿಗೆ ಪ್ರತ್ಯಕ್ಷವಾಗುವ ಭೂತದಂತೆ ಕವಿತೆ ಮೈದೋರಿ ಬಿಡುವುದಿಲ್ಲ. ಮುಹೂರ್ತಕ್ಕೆ ಕವಿ ಕಾಯಬೇಕು. ಸುಸಜ್ಜಿತ ಆಸ್ಪತ್ರೆ, ನಿಪುಣ ವೈದ್ಯ, ಅತ್ಯಾಧುನಿಕ ಪರೀಕ್ಷಣ ಸಲಕರಣೆ, ಔಷಧೋಪಚಾರ, ಆರೈಕೆಗಳಿಗೆ ಹೆಸರಾದ ದಾದಿ—ಏನೆಲ್ಲ ಇರಬಹುದು. ಆದರೂ ಅನೂನವಾದ ಶಿಶು ಜನನಕ್ಕೆ ನವ ಮಾಸ ಬೇಕು.' ಇಷ್ಟು ಸೊಗಸಾಗಿ, ಅರ್ಥವತ್ತಾಗಿ ಈ ವಿಷಯವನ್ನು ಸಹೃದಯ ಗ್ರಾಹ್ಯವಾಗುವಂತೆ ಹೇಳಲು ಬೇರೆಯವರಿಗೆ ಸಾಧ್ಯವಿಲ್ಲವೇನೋ.

ನಿಸಾರ್ ಅಹಮದ್ ಅವರ 'ಅಚ್ಚುಮೆಚ್ಚು' ಗದ್ಯ ಸಂಕಲನದ 'ಬರೆಯುವುದರ ಬಗ್ಗೆ ಸ್ವವಿವೇಚನೆ' ಬರಹದಲ್ಲಿ ಬರುವ ಈ ಮಾತು ನಾನು ವಿವೇಚಿಸಿರುವ ವಿಷಯವನ್ನು ತುಂಬ ಅಡಕವಾಗಿ ಸೂತ್ರೀಕರಿಸುತ್ತದೆ: '...ಸಾಹಿತ್ಯ ಸೃಜನ ಕಾರ್ಯ ಒಂದು ಮಾತಿನಲ್ಲಿ ಲಕ್ಷಣೀಕರಿಸಬಹುದಾದರೆ 'ನಾನು' ಎನ್ನುವುದನ್ನು ತಣಿಸುವುದು ಅಥವಾ ಅಹಂತೃಪ್ತಿ.'

ನೂಲಿನಂತೆ ಮಾಲು. ಒಳ್ಳೆಯ ಬಟ್ಟೆಯ ಥಾನಿನುದ್ದಕ್ಕೂ ತೆಳ್ಳನೆಯ ಎಳೆಗಳ ನಿರ್ದೋಷಯುಕ್ತವಾದ ಅಂತರ್ರಚನೆಯ ಪ್ರಯುಕ್ತ ಒಂದು ನಯಸೂಕ್ಷ್ಮತೆ, ಬೆಲೆಯನ್ನು ನಿರ್ಧರಿಸುವ ಒಂದು ರಮ್ಯಾತಿಶಯತೆ ನಮ್ಮ ನೋಟ ಹಾಗೂ ಸ್ಪರ್ಶಕ್ಕೆ ಥಟ್ಟನೆ ಗೋಚರಿಸುತ್ತವೆ. ಅದೇ, ಚೆನ್ನಲ್ಲದ ಬಟ್ಟೆಯ ಮೇಲೆ ಸಣ್ಣ ಸಿಕ್ಕಿನ ಗಂಟು, ಕಿರು ದಾರದ ಎಳೆ ಗಮನ ಸೆಳೆಯುತ್ತದೆ. ನೇಕಾರನ ಲಾಳಿಯಾಟದ ಹಾಸುಹೊಕ್ಕಿನ ಕ್ರಿಯೆಯಲ್ಲಿ ಲೋಪವಿರದಿದ್ದರೂ ವಸ್ತ್ರದ ಮೂಲದ್ರವ್ಯವಾದ ನೂಲೇ ಕಡಮೆ ಯೋಗ್ಯತೆಯದೂ ಅಶಕ್ತವೂ ಆಗಿದ್ದಲ್ಲಿ ಇಂತಹ ಕಳಪೆ ಮಾಲು ತಯಾರಾಗುತ್ತದೆ. ಇದರಂತೆಯೇ ಸಾಹಿತ್ಯದಲ್ಲಿ ವಸ್ತುವಿನ ಗುಣ ಗಣ್ಯತೆ.

(ವಸ್ತುವಿನ ಮಹತ್ತ್ವ)



ನಿಸಾರ್ ಅವರ ಕಾವ್ಯಜಿಜ್ಞಾಸೆಯ ಅಪೂರ್ವ ಹೊಳಹುಗಳು

♦ ಡಾ. ಶಾಂತಲಕ್ಷ್ಮಿ

'ಕವಿತೆ ಆಗಬೇಕು ಕಾಲಾತೀತ,
ನಿಜ ಕವಿತೆಯ ಭಾವ, ಚಿಂತನ, ಮಾತು
ಮೆರೆಯಬೇಕು ಆಗಿ ಸಮುದಾಯದ ನೆತ್ತರಿನ ಧಾತು.'
(ಸಮಗ್ರ, ಪು. ೮೦)

ಶಾಶ್ವತ ಮೌಲ್ಯಗಳ ಅರಿವು, ಸೌಂದರ್ಯ ದೃಷ್ಟಿ, ಆಳವಾದ ಚಿಂತನ-ಮಂಥನ; ಸಂಸ್ಕಾರ-ಸಭ್ಯತೆಗಳೊಂದಿಗೆ ನಾಡು-ನುಡಿಗಳ ಬಗ್ಗೆ ಸದಭಿಮಾನ, ಸೃಜನಶೀಲ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಕಾವ್ಯ ಜಿಜ್ಞಾಸೆಯ ಮೂಲಭೂತ, ಮೌಲಿಕ ಅಂಶಗಳು. ಕವಿತೆ ಅಜರಾಮರ, ಚಿರಂಜೀವಿ. ಲೋಕ ಸಂದರ್ಭಗಳು, ಕಾಣ್ಕೆ, ಲೋಕದ ನೋವು-ನಲಿವುಗಳು, ರಕ್ತಕಣಗಳು. ಅವು ಜೀವಂತವಾಗಿ ಮೂಡಿ ಬರಬೇಕು ಎಂಬುದೇ ಈ ಆಶಾವಾದಿ ಕವಿಯ ಸದಾಶಯ. ವಸ್ತು, ಭಾಷೆ, ಶೈಲಿ, ಭಾಷೆಯ ಪ್ರಯೋಗದಲ್ಲಿ ಎಚ್ಚರ, ಅನನುಕರಣೀಯವಾದ ಸ್ವಂತ ಛಾಪು, ನಾಡು-ನುಡಿಗಳ ಪ್ರೇಮ, ಮಾನವತಾವಾದ, ಲೋಕಾನುಭವ, ಸರ್ವಧರ್ಮ ಸಹಿಷ್ಣುತೆ, ಯಾವುದೇ ಪಂಥ, ಮತ, ರಿವಾಜುಗಳಿಗೆ ಮೀರಿದ ಹೃದಯ ಸಂಪನ್ನತೆಗಳಿಂದ ಸಮೃದ್ಧವಾದ ಶ್ರೀಮಂತ ವ್ಯಕ್ತಿತ್ವ ನಿಸಾರ್ ಅಹಮದ್ ಅವರದು.

'ಸಂಸ್ಕಾರವಂತ ವಾಗ್ ರಚನೆಗಳು ಸಂಸ್ಕೃತಿ ಸಾಗರದ ದೀಪ ಗೋಪುರಗಳಾಗಿ, ನಾಡಿನ ಭವಿಷ್ಯತ್ ದಿಕ್ಸೂಚನೆಗಳಾಗಿ

ತಲೆಮಾರುಗಳ 'ಸಂರಕ್ಷಕಗಳಾಗುತ್ತವೆ' ಎಂಬ ಸದಾಶಯದ ಕವಿ ಇವರು. ಭಿನ್ನ ಸಂಸ್ಕೃತಿಯಲ್ಲಿ ಬೆಳೆದರೂ ಭಾರತೀಯ ಪರಂಪರೆಯ ಬಗ್ಗೆ ಅಪಾರ ಗೌರವದೊಂದಿಗೆ ಕೃಷ್ಣ, ಬುದ್ಧ, ಮುಹಮ್ಮದ್, ಏಸು ಭಗವದಂಶ ಒಂದೇ ಎಂಬ ನಂಬಿಕೆಯ ವೈಶಿಷ್ಟ್ಯ ಪೂರ್ಣ ಕವಿ; ಕನ್ನಡಿಗರ ಮಾನಸದಲ್ಲಿ ನೆಲೆಯೂರಿರುವ, ಕನ್ನಡಮ್ಮನ ಗುಡಿಯಲ್ಲಿ ನಿತ್ಯೋತ್ಸವದ ದೀಪ.

ನವೋದಯದಲ್ಲಿ ಆರಂಭಿಸಿ ನವ್ಯೋತ್ತರ ಕಾಲದವರೆಗಿನ ಎಲ್ಲ ಕಾವ್ಯಮಾರ್ಗ ಗಳಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿರುವ ಅತ್ಯಂತ ಸೃಜನಶೀಲ ಪ್ರತಿಭೆಯ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್. ಅನನ್ಯವಾದ ವಿಶಿಷ್ಟ ಅಭಿವ್ಯಕ್ತಿಯನ್ನು, ಸಂಕೀರ್ಣತೆಯನ್ನು ತಮ್ಮದಾಗಿಸಿಕೊಂಡಿರುವ ಮಹತ್ವದ ಕವಿಗಳು. ಸೂಕ್ಷ್ಮಜ್ಞರೂ ಸಂವೇದನಾಶೀಲರೂ ಆದ್ದರಿಂದ ಸಮಕಾಲೀನ ಬದುಕಿಗೆ, ವಾಸ್ತವತೆಗೆ ತಕ್ಕಂತೆ ಪ್ರತಿಸ್ಪಂದಿಸುತ್ತಾ ಪ್ರೀತಿ ಕಾಳಜಿಗಳನ್ನು ತೋರಿದ್ದಾರೆ. ಯಾವುದೇ ಮಾರ್ಗಕ್ಕೆ ಕಟ್ಟುಬೀಳದೆ ಹಣೆಪಟ್ಟಿ ಕಟ್ಟಿಕೊಳ್ಳದೆ, ನವೋದಯದ ಭಾವ ತನ್ಮಯತೆ ಹಾಗೂ ನವ್ಯದ ವೈಚಾರಿಕತೆಯ ಮಿಶ್ರಣವನ್ನು ಇಷ್ಟ ಪಡುತ್ತಾರೆ. ಸಮನ್ವಯ ಎಂಬ ಪದಕ್ಕೆ ಬದಲಾಗಿ ಸಮ್ಮಿಶ್ರ, ಸಮ್ಮಿಶ್ರಕ್ಕಿಂತ 'ಸಮನ್ವಿತ' ಪ್ರಿಯವೆಂದು ಹೇಳುತ್ತಾರೆ, ಹೆಚ್ಚು ಅರ್ಥಪೂರ್ಣವೆಂದು ಭಾವಿಸಿದ್ದಾರೆ.

ಸಾಹಿತ್ಯ, ಪ್ರಕೃತಿ, ಪರಿಸರ, ಸಾಮಾಜಿಕ, ರಾಜಕೀಯ ಪ್ರೇಮ, ವ್ಯಕ್ತಿ ವಿಶೇಷತೆ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಕಾಳಜಿ ವಹಿಸಿರುವ ವೈಶಿಷ್ಟ್ಯ ಇವರದು. ನಿಸಾರರ ಮುಖ್ಯ ಲಕ್ಷಣವೆಂದರೆ ಕವಿ-ವಿಮರ್ಶಕ ಮನಸ್ಸು. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಜಿಜ್ಞಾಸೆಯಲ್ಲಿ ತೊಡಗಿದಾಗ, ಆ ವಿವರಣೆಗಳು ಅವರ ಕಾವ್ಯ ರೀತಿಗೆ ಸಮರ್ಥನೆಯನ್ನು ಒದಗಿಸುತ್ತವೆ. ಅವರ ಕಾವ್ಯ ಪ್ರಯೋಗಕ್ಕೆ ವೈಚಾರಿಕ ವಿವರಣೆಯಾಗಿ ಸ್ವವಿಮರ್ಶೆ ಇರುತ್ತದೆ. ಜೀವನಾನುಭವದಿಂದ ಮಾಗಿದ, ಪರಿಪಕ್ವ ಚೇತನದ ವ್ಯಕ್ತಿತ್ವದಲ್ಲಿ ಸರಳತೆ ಹಾಗೂ ಗಂಭೀರ ಚಿಂತನೆ ಎರಡನ್ನೂ ತುಂಬಿಕೊಂಡಿರುವ ಈ ಅಂತರ್ಮುಖಿ ಕವಿ ಬದುಕಿನ ಎಲ್ಲ ಅನುಭವಗಳ ಆನಂದವನ್ನು ಕಂಡರಿಸಿದ್ದಾರೆ.

ಸಾಹಿತ್ಯ ಸೃಷ್ಟಿ ಪ್ರಕ್ರಿಯೆ ನಿಗೂಢ, ಅನಿವಾರ್ಯ ಹಾಗೂ ಅನಿರ್ವಾಚ್ಯ. ಸಾಹಿತ್ಯ-ಕಲೆಗಷ್ಟೇ ಸೀಮಿತವಲ್ಲ; ಜೀವನದ ಎಲ್ಲ ಪ್ರಕಾರಗಳಲ್ಲೂ ಕ್ರಿಯಾಶೀಲವಾಗಿ ಅವ್ಯಾಹತ ವಾಗಿ ಸಾಗಿರುವ ಪ್ರಕ್ರಿಯೆ—ಅದೇ ಸೃಜನಶೀಲತೆ. ನಿಸಾರರ ದೃಷ್ಟಿಯಲ್ಲಿ ಸೃಷ್ಟಿಕ್ರಿಯೆ ವಾಗತೀತ ಮನೋವ್ಯಾಪಾರ, ಕಲೆ-ಸಾಹಿತ್ಯಗಳಿಗೆ ಮಾತ್ರವಲ್ಲ, ಮಾನವನ ಸಕಲ ಚಟುವಟಿಕೆಗಳ, ಕ್ರಿಯೆಗಳ ತವರು ಮನಸ್ಸು. ಸುಪ್ತ ಚೇತನದ ಸಾಮಗ್ರಿಯನ್ನು ಅರಿವಿನ ಹಂತಕ್ಕೆ ದಕ್ಕಿಸುವಲ್ಲಿ ಮಾತು ವಹಿಸುವ ಪಾತ್ರ ಅಸಾಧಾರಣವಾದದ್ದು. ಸ್ವಾನುಭವದಿಂದ ಭಾವಾಲೋಚನೆ, ಭಾಷೆ, ಉಪಮಾಲಂಕಾರ, ರೂಪಕಾಲಂಕಾರ, ಛಂದಸ್ಸುಗಳಿಂದ ಕಾವ್ಯ ಶರೀರ ಪುಷ್ಟಿಗೊಂಡು ಸುದೃಢವಾಗುತ್ತದೆ.

ಶ್ರೇಷ್ಠ ಕೃತಿಕಾರನಲ್ಲಿ ವಿಮರ್ಶಕನ ಪ್ರಜ್ಞೆ-ಅಂತಸ್ಸಾಕ್ಷಿ ಸೃಷ್ಟಿ-ಪರಾಮರ್ಶೆ, ರಚನೆ-

ವಿಶ್ಲೇಷಣೆ, ತನ್ಮಯತೆ-ಎಚ್ಚರಗಳು ಏಕಕಾಲದಲ್ಲಿ ಕ್ರಿಯಾಶೀಲವಾಗಿ ವಾಸ್ತವ ಸೃಷ್ಟಿಗೆ ಪ್ರತಿಯಾದ, ಭಿನ್ನವಾದ, ಸರ್ವತಂತ್ರ ಸ್ವತಂತ್ರ ಸೃಷ್ಟಿ ನಿರ್ಮಾಣಗೊಳ್ಳುತ್ತದೆ. ಬರಹಗಾರನ ಜಾಯಮಾನ, ಸ್ವಭಾವ, ಸಮಾಜದಲ್ಲಿನ ಸ್ಥಾನಮಾನ, ನಂಬಿಕೆ, ಆದರ್ಶ ಅಭಿರುಚಿಗಳಿಗೆ ತಕ್ಕಂತೆ ಕವಿಯ ಬರವಣಿಗೆಗೆ ರೂಪ ದಕ್ಕುತ್ತದೆ; ಕೆಲವೊಮ್ಮೆ ನಿಕ್ಷಿಪ್ತವಾಗಿರುತ್ತದೆ.

ಪ್ರೊ. ನಿಸಾರ್ ಅಹಮದ್‌ರವರ ಕನ್ನಡ ನಾಡು-ನುಡಿಗಳ ಮೇಲಣ ಭಕ್ತಿ-ಗೌರವ-ಪ್ರೇಮ ಅಪಾರವಾದುದು. 'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ' ಕನ್ನಡ ತಾಯಿಗೆ ನಿತ್ಯೋತ್ಸವ ಹಾಡಿದ ಕವಿ ಇವರು.

> **'ಕನ್ನಡವೆಂದರೆ ಬರಿ ನುಡಿಯಲ್ಲ,**
> **ಹಿರಿದಿದೆ ಅದರರ್ಥ.**
> **...............................**
> **ಅಸೀಮ, ಅದಿಗಂತ,**
> **...............................**
> **ರವಿ ಶಶಿ ತಾರೆಯ ನಿತ್ಯೋತ್ಸವವದು**
> **ಸರಸತಿ ವೀಣೆಯ ಸೊಲ್ಲು'**
> **(ಕನ್ನಡವೆಂದರೆ)**

ಎಂದು ಸಹೃದಯರಲ್ಲೂ ಕನ್ನಡಾಭಿಮಾನವನ್ನು ಮೂಡಿಸಿದ ಕನ್ನಡಿಗ ಈ ಕವಿ.

ಈ ನೆಲೆಯಲ್ಲಿ ಸ್ವಂತ ಪರಿಶ್ರಮ, ಮೆಹನತ್ತಿನಿಂದಲೇ ಹಂತ ಹಂತವಾಗಿ ಬೆಳೆದ ಸೃಜನಶೀಲ ಕವಿ ನಿಸಾರ್ ಅಹಮದರನ್ನು ಪ್ರೇರೇಪಿಸಿದ ವ್ಯಕ್ತಿಗಳು, ಪ್ರಭಾವಿಸಿದ ಜೀವನ ಸನ್ನಿವೇಶಗಳು ಅಗಣಿತ, ವೈವಿಧ್ಯತರ.

ಸ್ವಭಾವತಃ ಅಂತರ್ಮುಖಿ, ಕನಸುಗಾರರಾದ ಕವಿ ನಿಸಾರ್ ಅಹಮದ್‌ರಿಗೆ ಒಂದೊಂದು ವಯೋಮಾನದಲ್ಲೂ ಅದಕ್ಕೆ ತಕ್ಕಂತೆ ಹಿರಿಯ ಕನ್ನಡ ಲೇಖಕರು ಎಣೆಯಿಲ್ಲದ ಸ್ಫೂರ್ತಿಶೀಲ ಪ್ರಭಾವ ಬೀರಿರುವರು. ಇದರ ಜೊತೆಯಲ್ಲೇ ರಾಷ್ಟ್ರೀಯ ಲೇಖಕರಾದ ರವೀಂದ್ರನಾಥ ಠಾಕೂರರು ಗದ್ಯದ ಮೇಲೆ ಪ್ರಭಾವ ಬೀರಿದ್ದಾರೆ. ಕುವೆಂಪು ಅವರ ಗದ್ಯ ಕೃತಿಗಳು ಸಂಗಾತಿಗಳಾಗಿ ನಿಸಾರರ ಕಲ್ಪನೆಯನ್ನು ಆ ತನಕ ಕಾಣದಿದ್ದ ಅಪೂರ್ವ ಜಗತ್ತಿಗೆ ಆಹ್ವಾನಿಸಿ, ಅಲ್ಲಿ ಮೈಮರೆಯುವಂತೆ ಪ್ರಚೋದಿಸಿವೆ; ಸಂವೇದನೆಯನ್ನು ಭಾವದೀಪ್ತಗೊಳಿಸಿವೆ.

ಪೂರ್ವ ಹಾಗೂ ಪಶ್ಚಿಮ ಪ್ರಭಾವಗಳಲ್ಲಿನ ಮುಖ್ಯಾಂಶಗಳು ಹೀಗಿವೆ:—

1. ಭಾರತೀಯ ಪ್ರಾಚೀನರ ರಸ-ಧ್ವನಿ ತತ್ತ್ವ, ಭವ್ಯತೆ, ಭೂಮಾನುಭೂತಿ, ಭಾವ ತೀವ್ರತೆ.
2. ಕುರಾನ್, ಬೈಬಲ್, ಭಗವದ್ಗೀತೆಗಳ ವ್ಯಾಸಂಗ ಸರ್ವಧರ್ಮ ಸಹಿಷ್ಣುತೆಯನ್ನು ಕಲಿಸಿ ಬೆಳೆಸಿದುವು.

3. ನವ್ಯರ ಪ್ರತಿಮಾನಿಷ್ಠ ಅಭಿವ್ಯಕ್ತಿ, ವೈಚಾರಿಕತೆ, ಸಾಂಕೇತಿಕತೆ.

4. ಪಾಶ್ಚಿಮಾತ್ಯರಲ್ಲಿ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಷೆಲ್ಲಿ; ನವ್ಯರಲ್ಲಿ ಡಬ್ಲ್ಯು. ಎಚ್. ಆಡೆನ್, ಟಿ. ಎಸ್. ಎಲಿಯೆಟ್.

5. ಆಧ್ಯಾತ್ಮಿಕತೆಯ ಕಡೆಗೆ ಒಲವನ್ನು ಬೆಳೆಸಿದವರು ಖಲೀಲ್ ಗಿಬ್ರಾನ್. ಸೂಫಿ ಸಂತರು, ರಾಮಕೃಷ್ಣ ಪರಮಹಂಸರು ಐಹಿಕವನ್ನು ಮೀರಿದ ಅಲೌಕಿಕತೆಯನ್ನು, ಸ್ವಭಾವತಃ ಅಂತರ್ಮುಖಿಯಾದ ನಿಸಾರರಲ್ಲಿ ಬಹುಮುಖತೆಯನ್ನು ಬೆಳೆಸಿದುವು.

6. ೨೦ನೆಯ ಶತಮಾನದ ಲ್ಯಾಟಿನ್ ಅಮೆರಿಕದ ಸ್ಪ್ಯಾನಿಷ್ ಕವಿ ಪ್ಲಾಬೊ ನೆರುಡ. ಭಾರತೀಯ ಸಂವೇದನೆಗಳನ್ನು ಮೈಗೂಡಿಸಿಕೊಂಡಂತೆ ಕಾಣುವ ಈ ಕವಿಯ ತನ್ಮಯತೆ, ಬಹಿರ್ಮುಖತೆ, ಸಾಮಾಜಿಕ ಕಳಕಳಿಗಳು ಪ್ರಿಯವಾದುವು.

ಈ ಪ್ರಭಾವಗಳು ವಾಗತೀತವಾದುವು, ಮನೋವೇದ್ಯವಾದುವು. ಅರಬ್ಬೀ ಸಮುದ್ರ, ಬಂಗಾಳ ಕೊಲ್ಲಿಗಳು ಹಿಂದೂ ಮಹಾಸಾಗರದಲ್ಲಿ ಬೆರೆತಾಗ ವಿಭಜಿಸಿ ಹೇಳಲು ಸಾಧ್ಯವಿಲ್ಲ. ಹಾಗೆಯೇ ಈ ಪ್ರಭಾವಗಳೂ ಕೂಡಾ. ಈ ಭಿನ್ನ ಪ್ರಭಾವಗಳು ರಕ್ತಗತವಾಗಿ ತೀವ್ರ ಸಂವೇದನೆಯಲ್ಲಿ ಅಭಿವ್ಯಕ್ತಿಗೊಂಡಾಗ ಮಾತ್ರ ಕವಿಯ ಸ್ವಂತ ಸಿದ್ಧಾಂತ, ಸ್ವಕೀಯ ಛಾಪು, ಸ್ವೋಪಜ್ಞತೆ ರೂಪುಗೊಳ್ಳುತ್ತವೆ ಎಂಬುದು ಸೃಷ್ಟಿಶೀಲ ಕವಿ ನಿಸಾರರ ನಿಲವು.

ಈ ಎಲ್ಲ ಪ್ರಭಾವಗಳು, ಅಪಾರ ವ್ಯಾಸಂಗ, ಕವಿ ನಿಸಾರರ ಮನಃಸಂಸ್ಕಾರ, ಲೋಕಾನುಭವ, ಕಲಿವು, ಅಭಿರುಚಿ, ವಿಚಾರಶೀಲತೆಗಳು ಬದುಕಿನ ಸಂದರ್ಭಕ್ಕೆ ಅನುಗುಣವಾಗಿ ಬೆಳೆಯುತ್ತಾ ಹೋಗುತ್ತವೆ. ೧೯೫೯ರಲ್ಲೇ ಮಹಾಕವಿ ಕುವೆಂಪು ನಿಸಾರರ ಕವನಗಳನ್ನು ಮೆಚ್ಚಿ ಹೇಳಿದ ಪ್ರಶಂಸೆಯ ಮಾತುಗಳು—'ನೀವು ಬಳಸಿದ ಉಪಮೆ, ರೂಪಕಗಳು ಹೊಸದಾಗಿವೆ, ಭಾಷೆ ಪರಿಣಾಮಕಾರಿಯಾಗಿದೆ. ಚೆನ್ನಾಗಿ ವಾಚಿಸುತ್ತೀರಿ, ಅರ್ಥವಾಗುವಂತೆ ಚೆನ್ನಾಗಿ ಬರೆಯುತ್ತೀರಿ'—ಕವಿ ನಿಸಾರ್ ಅಹಮದ್‌ರ ಧನ್ಯಭಾವವನ್ನು ಹಿಗ್ಗಿಸಿದೆ. ಮನಸ್ಸಿನಲ್ಲೇ ಗೌರವಪೂರ್ವಕ ಧನ್ಯವಾದಗಳನ್ನು ಸಲ್ಲಿಸಿವೆ.

ಅಂತರಂಗ ಶೋಧನೆಯ ನೀತಿ ಮೂಲವೂ ಜೀವನ ಪರಿಷ್ಕಾರವೂ ಆದ ಒಂದು ಸದಾಶಯ, ಮೇಲ್ಮಟ್ಟದ ಬದುಕು, ಸಾಧನೆ, ಆಲೋಚನೆಗಳು ಸಾರ್ವಕಾಲಿಕವಾದ ಆಶೋತ್ತರಗಳು, ಸನ್ಮೌಲ್ಯಗಳ ಬಗ್ಗೆ ಎಚ್ಚರ ಮತ್ತು ತಿಳಿವಳಿಕೆ, ಸಹಜವೂ ಶಾಶ್ವತವೂ ಆದ ಮೌಲ್ಯಗಳ ಪ್ರತಿಪಾದನೆ ಮಾನವನ ಬದುಕಿಗೆ ಘನತೆ, ಗಾಂಭೀರ್ಯ ತರುವುದೆಂದು ನಂಬಿರುವ ಕವಿ ನಿಸಾರರು, ತಮ್ಮ ಬದುಕಿನಲ್ಲಿ ಹಲವು ಕ್ಷೇತ್ರಗಳಲ್ಲಿ ಹಲವೆಂಟು ಆಸಕ್ತಿಯನ್ನು ರೂಢಿಸಿಕೊಂಡು ಸ್ವಕೀಯ ಅನುಭವ, ಭಾವಾಲೋಚನೆ, ನಂಬಿಕೆ ಶ್ರದ್ಧೆ ವ್ಯಾಸಂಗ ಚಿಂತನಗಳಿಂದ ತಮ್ಮಲ್ಲಿ ಆಳವಾಗಿ ಬೇರೂರಿರುವ convictionಗಳ ದೃಢವಾದ ಮನವರಿಕೆಗೆ ಸಮರ್ಥನೀಯ ಸಾಕ್ಷ್ಯವಾಗಿದ್ದಾರೆ.

ಸಾವು ಬದುಕುಗಳ ಸಂಬಂಧದ ವಿಸಂಗತಿ(Absurdity)ಯನ್ನು ಕುರಿತ ಜಿಜ್ಞಾಸೆ, ಅದೃಶ್ಯ ಶಕ್ತಿಯ ಬಗ್ಗೆ ಮೊಳೆಯುತ್ತಿದ್ದ ಶರಣತಾಭಾವ—ಕವಿ ನಿಸಾರ್ ಅಹಮದ್‌ರ

ತಾತ್ವಿಕತೆಯ ವಿಭಿನ್ನ ಮುಖಗಳು. ಇವರ ವ್ಯಕ್ತಿತ್ವದ ವಿಕಾಸಕ್ಕೆ ನೂತನ ವಿಶಿಷ್ಟಾನುಭವಗಳೂ ಹಾಗೂ ಪುರಾತನ ಸಮಷ್ಟಿ ಅನುಭವಗಳೂ ಕಾರಣವಾಗಿವೆ. ವೈಜ್ಞಾನಿಕ, ಸಾಹಿತ್ಯಕ, ಧಾರ್ಮಿಕ—ಈ ಎಲ್ಲ ಪ್ರಜ್ಞೆಗಳೂ ಕವಿಯ ಅಂತರಾಳದಲ್ಲಿ ಪ್ರಾಚೀನತೆಯೊಡನೆ ಹಾಸುಹೊಕ್ಕನ್ನು ನಿರ್ಮಿಸಿ, ಅರಿವನ್ನು ಘಟ್ಟಿಗೊಳಿಸಿವೆ; ಶ್ರೀಮಂತವಾಗಿಸಿವೆ.

ಈ ಎಲ್ಲಾ ಅನುಭವ ಶ್ರೀಮಂತಿಕೆ ಕವಿಯ ಬಾಹ್ಯ ಹಾಗೂ ಅಂತರಂಗ ನಡೆ-ನುಡಿಗಳಲ್ಲಿ ಅಪಾರ ವರ್ಚಸ್ಸನ್ನು ಬೀರಿದೆ. ಟೈ, ಸೂಟು, ಬೂಟುಧಾರಿ ಕವಿ ನಿಸಾರ್ ಅಹಮದ್‌ರ ಸ್ನೇಹ-ಸರಳತೆ-ಸೌಜನ್ಯಗಳು, ಗೌರವಪೂರ್ವಕ ಪ್ರಸನ್ನತೆ; ಪ್ರಾಮಾಣಿಕ ಅಭಿವ್ಯಕ್ತಿ, ಮಾತು-ಕೃತಿಯಲ್ಲಿ ಖಚಿತತೆ ಇತ್ಯಾದಿಗಳು ಘನತೆವೆತ್ತ ವ್ಯಕ್ತಿತ್ವವನ್ನು ರೂಪಿಸಿವೆ. ಇಕ್ಕಟ್ಟು ಮತ್ತು ಸವಾಲುಗಳನ್ನು ದಿಟ್ಟತನದಿಂದ ಎದುರಿಸಿ, ದ್ವಂದ್ವಗಳನ್ನು ಕಳಚಿದ ಸೂಕ್ಷ್ಮ ಸಂವೇದಿ ಸೃಜನಶೀಲ ಮನಸ್ಸು, ಪ್ರಜ್ಞಾವಂತನ ಭಾವಾಲೋಚನಾ ಸರಳ ಮನಸ್ಸು ಇವರದು. ತರುಣ ಪೀಳಿಗೆಯ ಬರಹಗಾರರ ಮೇಲೆ ಅಪಾರ ಪ್ರಭಾವವನ್ನು ಬೀರಿವೆ.

ನವೋದಯವನ್ನು ಹೊಸ ನಗಾರಿಗೆ ಹೋಲಿಸಿರುವ ಕವಿ ನಿಸಾರ್ ಅಹಮದ್‌ರು ಸ್ವಂತಿಕೆ, ಸ್ವೋಪಜ್ಞತೆಗಾಗಿ ಸದಾ ಹಂಬಲಿಸಿದವರು. 'ನನ್ನ ದನಿ, ನನ್ನದೇ ಆದ ದನಿ, ನನ್ನೆದೆಯ ಜೀವಮಣಿ, ನನ್ನಾಸೆ ಹೊನ್ನ ಗಣಿ ಎಲ್ಲಿರುವುದೋ' ಹುಡುಕಬೇಕು; ಜನ ಸಾಮಾನ್ಯರ ಪ್ರತಿನಿಧಿಯಾಗಿ ಮಾನವ ಕೋಟಿಯ ಮೂಕ ಸಂಕಟಕ್ಕೆ ಮಾತಾಗಬೇಕು; ಸಿಡಿಲಿನ ನುಡಿ, ಮಡಿಯದ ನುಡಿಯಾಗಿ ತಮ್ಮ ನುಡಿ ದುರ್ಬಲರಿಗೆ ಅಭಯದ ನುಡಿಯಾಗಬೇಕು ಎಂಬ ಸದಾಶಯದೊಂದಿಗೆ ತಮ್ಮನ್ನು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡ ಮಹತ್ವದ ಕವಿ.

ಭಾರತೀಯ ಪರಂಪರೆ ಅವಿಚ್ಛಿನ್ನವಾದುದು. ಅದರ ಜಟಿಲ ಸತತ ಪ್ರವಾಹವನ್ನು ಬೇರ್ಪಡಿಸಲು, ಭಿನ್ನವಾಗಿಸಲು ಕಷ್ಟ. ನೀತಿ-ಧರ್ಮ-ಸಂಸ್ಕೃತಿಗಳು ಅತ್ಯಂತ ವ್ಯಾಪಕವಾಗಿದ್ದು ಒಟ್ಟಾರೆ ಸಾಮೂಹಿಕ ಫಲಗಳು-ಮಹಾಭಾವಗಳಲ್ಲಿ ತಮ್ಮಲ್ಲಿ ಗರ್ಭೀಕರಿಸಿಕೊಂಡ ಶ್ರೀಮಂತ ಕಲ್ಪನೆಗಳು, ಪೂರ್ವಾರ್ಜಿತ ಘನ ಆಲೋಚನೆಗಳು—ಇವೆಲ್ಲಾ ನಿಸಾರ್ ಅಹಮದ್‌ರ ದೃಷ್ಟಿಯಲ್ಲಿ ಕವಿಗೆ ಅತ್ಯಂತ ಮುಖ್ಯವಾದುವು.

ಇನ್ನು ಸಂಪ್ರದಾಯಗಳು ಬೇರಿದ್ದಂತೆ. ಅನಾದಿಯಿಂದ ಈ ಆಚರಣೆಗಳು ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ ಪರಿಸರಗಳಲ್ಲಿ ತುಂಬಿದ್ದು ಅತ್ಯುತ್ತಮವಾದ ಅಂಶಗಳನ್ನು ಸ್ವೀಕರಿಸುತ್ತಾನೆ ಕವಿ, 'ಹಂಸಕ್ಷೀರ ನ್ಯಾಯದಂತೆ'. ಅವುಗಳನ್ನು ಸಾರಾಸಗಟಾಗಿ ನಿರಾಕರಿಸುವಂತಿಲ್ಲ. ಅವು ಪ್ರಜ್ಞಾಪೂರ್ವಕವಾಗಿ ರೂಢಿಗತ ವ್ಯಕ್ತಿತ್ವವನ್ನು ಬೆಳೆಸಿ, ಯುಕ್ತಾಯುಕ್ತ ವಿವೇಚನೆಯನ್ನು ಬೆಳೆಸುತ್ತವೆ ಎಂಬುದು ನಿಸಾರರ ಅಭಿಮತ.

ಒಂದು ನಿರ್ದಿಷ್ಟ ಸಮಾಜ-ಜನಾಂಗ, ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿದ್ದು ಸಾಹಿತ್ಯದಲ್ಲಿ ಸ್ಥಳೀಯತೆ, ಸಕಾಲಿಕತೆಗಳ ಜೊತೆಯಲ್ಲಿ ಸಾರ್ವದೇಶೀಯತೆ, ಸಾರ್ವಕಾಲಿಕತೆಗಳು ಸಂಯೋಗಗೊಂಡಿರುತ್ತವೆ. ಅಭಿರುಚಿ, ಸಂಸ್ಕಾರ, ಮನಃಪರಿಣತಿ,

ಜಾಯಮಾನಗಳಿಗೆ ತಕ್ಕಂತೆ ಕವಿಯ ಜೀವಮಾನದ ಬೇರೆ ಬೇರೆ ಘಟ್ಟಗಳಲ್ಲಿ, ವಯಸ್ಸು, ಅನುಭವಗಳು ಮಾಗಿದ ಮೇಲೆ ಕವಿಯ ಸತ್ತ್ವೋತ್ಕರ್ಷ, ಗುಣಾಧಿಕ್ಯಗಳು ಮೂಡಿಬರುತ್ತವೆ. ಪ್ರಾಚೀನ-ನೂತನ, ತಾತ್ವಿಕತೆ, ವೈಜ್ಞಾನಿಕತೆ, ಧಾರ್ಮಿಕತೆಗಳು ಉದಾತ್ತತೆಯ ಜೀವನಾಸಕ್ತಿಯನ್ನು ಹೆಚ್ಚಿಸುತ್ತದೆ.

ಪರಂಪರಾಗತ ಸಚ್ಚಿಂತನ ಸದಾಚಾರಗಳನ್ನು ಅವಿವೇಕಯುತ ಮೌಢ್ಯಾಚರಣೆಗಳಿಂದ ಬೇರ್ಪಡಿಸಿ, ಹೂಳನ್ನು ಎತ್ತಿ ಬಿಸಾಕಿ, ಅಲ್ಲಿ ವೈಚಾರಿಕವೂ ವೈಜ್ಞಾನಿಕವೂ ಆದ ಸುವಿಚಾರದ ತಿಳಿ ಜಲ ಬುಗ್ಗೆಯೊಡೆದು ತುಂಬಿ ತುಳುಕುವಂತೆ ಪ್ರೇರಿಸುವುದು ಬುದ್ಧಿಜೀವಿಗಳ ವರ್ಗದ ಪಾಲಿಗಿದೆ ಎಂದು ಕವಿಗಳನ್ನು ಎಚ್ಚರಿಸುತ್ತಾರೆ ನಿಸಾರ್ ಅಹಮದ್.

ಕವಿಯ ಭಾವಾಲೋಚನೆಗಳು ಆತ ಹೃತ್ಪೂರ್ವಕವಾಗಿ ರೂಢಿಸಿಕೊಂಡಿರುವ ಶ್ರದ್ಧೆ, ನಂಬಿಕೆ, ಆದರಿಸುವ ಮೌಲ್ಯ, ಪಡೆಯುವ ಸ್ವಾನುಭವ ಸಂಸ್ಕಾರ, ಹುಟ್ಟಿನಿಂದ ಹೊತ್ತು ತಂದಿರುವ ಸ್ವಭಾವಗಳಿಂದ ರೂಪಿತ ಹಾಗೂ ಪ್ರಭಾವಿತವಾಗುತ್ತವೆ.

ಸಂಸ್ಕೃತಿ, ಸಂಸ್ಕೃತಿಯ ಹೆಗ್ಗಳಿಕೆಯ ಬಗ್ಗೆ ಅಪಾರ ಗೌರವವಿರುವ ಕವಿ ನಿಸಾರ್ ಅಹಮದ್‌ರು ಸಂಸ್ಕೃತಿಯನ್ನು ಕುರಿತಂತೆ ಕಾಳಜಿ ಹಾಗೂ ಅಭಿಮಾನಗಳಿಂದ ಜಿಜ್ಞಾಸೆ ನಡೆಸಿದ್ದಾರೆ. ನಯವಂತ ನಡವಳಿಕೆಯೇ ಸಂಸ್ಕೃತಿಯ ಹೆಗ್ಗಳಿಕೆ. ವಿದ್ಯಾಪಾರಂಗತೆ, ಮೇಧಾವಿತೆ, ಸಾಹಿತ್ಯಕಲಾದಿ ಪ್ರತಿಭಾ ಸಂಪನ್ನತೆ ತಂತಾನೇ ಮಹತ್ವದ್ದೆನಿಸಿದರೂ ಅವುಗಳಿಗೆ ಕಳೆ ಕಟ್ಟುವುದು, ಹೊಳಪು ಹರಿತ ದಕ್ಕುವುದು ಸಂಸ್ಕೃತಿಯಿಂದ. ಮನುಷ್ಯರನ್ನು ಜಗದ್ವ್ಯಾಪಾರಕ್ಕೆ ಸನ್ನದ್ಧಗೊಳಿಸುವ ಸಾಣೆ ಎಂದರೆ—ಮನೋನಿಗ್ರಹದ ಮನಸ್ಸಂಯಮದ ಶಿಷ್ಟಾಭ್ಯಾಸ.

ಸಂಸ್ಕೃತಿಯದು ಮಿತ್ರ ಸಂಮಿತ ಹಾಗೂ ಕಾಂತಾ ಸಂಮಿತದ ಮೃದುವಾದ ನಯ ವಿಧಾನ. ಮನುಷ್ಯ ತನಗರಿವಿಲ್ಲದೆಯೇ ಪರಿವರ್ತಿತನಾಗುತ್ತಾನೆ—ಸಾಹಿತ್ಯ ಕಲೆಗಳ ಕೆಲಸ ಈ ತೆರದ್ದು. ಇವುಗಳ ಜೊತೆಗೆ ಪೂರ್ವ ಸಂಪ್ರದಾಯ, ಧಾರ್ಮಿಕ ರೀತಿ ರಿವಾಜು, ಶಿಕ್ಷಣ, ಕೌಟುಂಬಿಕ ಜೀವನ ತಕ್ಕಮಟ್ಟಿಗೆ ಸಹಕಾರಿಗಳು. ಆತ್ಮಪ್ರತ್ಯಯ ಹಿತಮಿತದ ವರ್ತನೆ, ಮಾತುಗಳು ಸಂಸ್ಕೃತಿಯಿಂದ ಒದಗುವ ಲಾಭ ಸಹ. ಮನುಷ್ಯರ ಜೊತೆಗಿನ ವ್ಯವಹಾರದಲ್ಲಿ ನ್ಯಾಯೈಕ್ಯ ಪಕ್ಷಪಾತ, ಸಂಯಮ, ಸೌಜನ್ಯ ಸಂಸ್ಕೃತಿಯ ಬಳುವಳಿಗಳು. ಆಕಾಶಕ್ಕೆ ಕಾಮನಬಿಲ್ಲಿನಂತೆ ವ್ಯಕ್ತಿತ್ವಕ್ಕೆ ಸಂಸ್ಕೃತಿ; ವಿದ್ಯೆ, ವಿದ್ವತ್ತು, ವಿನಯಶಾಲೀನತೆ ಭೂಷಣವೆಂದು ನಿಸಾರ್ ನಂಬಿದ್ದಾರೆ. ಸದಾಚಾರ ಸಂಪನ್ನತೆ, ವಿನಯಶಾಲೀನತೆ ಸುಸಂಸ್ಕೃತನ ಉಸಿರು, ವ್ಯಕ್ತಿತ್ವದ ಅಸಲಿ ಗುಣ. ಕವಿಗೆ ಸಂಸ್ಕೃತಿ ವಾಹಕನಾಗಬೇಕಾದ ಜವಾಬ್ದಾರಿಯಿದೆ, ಅನಿವಾರ್ಯತೆ ಇದೆ.

ಸಾಹಿತ್ಯಕ್ಕೆ ಕಾವ್ಯಕ್ಕೆ ವಸ್ತುವಿನ ಬಗೆಗಿನ ಕವಿಯ ನಿಲವು, ಧೋರಣೆ, ಮನೋಧರ್ಮಗಳ ಕುಲಾಲ ಚಕ್ರದಲ್ಲಿ ಅಪೇಕ್ಷಿತ ಆಕಾರವನ್ನು ಪಡೆಯಲು ಲೋಕ ವಸ್ತು ಜೇಡಿ ಮಣ್ಣಾಗಿರುವುದು.

'ಕಾವ್ಯಕೂ ಮಿಗಿಲಿಲ್ಲ ಕಲೆಯೊಳಗೆ ಎಂದೆನಿಸಿ
ತನ್ನ ಸೃಷ್ಟಿಯ ಪದರ ಪದರವನೆ ಅಳೆದರಸಿ
ತಳೆದಾಣಿಮುತ್ತುಗಳ ಎಳೆ ತರುವ ಭಾವುಕನ
ಬರವನ್ನೆ ತಾ ಕನಸಿ
ಬರೆದ ಕವಿ, ಲೋಕಾನುಭವಿ.'

(ಕವಿ ಬರೆದ)

ಈ ಲೋಕಾನುಭವಿ ಕವಿ ಲೋಕ ಸಾಮಗ್ರಿಯನ್ನು ತನ್ನ ವಿಶಿಷ್ಟ ದೃಷ್ಟಿ, ಆಶಯಗಳಿಗೆ, ತತ್ತ್ವಸಿದ್ಧಾಂತಗಳಿಗೆ ಅನುಸಾರವಾಗಿ ಮಾರ್ಪಡಿಸಿಕೊಳ್ಳುತ್ತಾನೆ.

ನಿಸಾರ್ ಅಹಮದ್ ಅವರು ಕವಿಯನ್ನು 20ನೆಯ ಶತಮಾನದ `ಕೊಲಂಬಸ್`ಗೆ ಹೋಲಿಸಿದ್ದಾರೆ. `ದಿಗ್ದಿಗಂತದ ಬೆಳ್ಳಿ ಗೆರೆಗೆ ಆಶಿಸಿದವನು, ಕಲ್ಲಲ್ಲಿ ಸಿರಿ, ನೆಲದಲ್ಲಿ ಝರಿ, ಕಾಡೊಳಗು ದಾರಿಯನು ಕನಸಿದವನು.` `ಕವಿ ಅರೆ ಮರುಳ, ಸಮಾಜದಲ್ಲಿದ್ದರೂ ಸ್ವಾರ್ಥಿಯಲ್ಲದ, ಶೃಂಖಲೆಗೆ ಸಿಲುಕದ ಸ್ವಚ್ಛಂದ ವಿಹಾರಿ, ಸಮಾಜದ ಆಗುಹೋಗುಗಳಿಗೆ ಸ್ಪಂದಿಸುವ ಸುವಿಚಾರಿ. ಸೋಕಿಯೂ ಸೋಕದೆ ಸಂಗೀತ ಹೊಮ್ಮಿಸುವ ಗ್ರಾಮಫೋನಿನ ರೆಕಾರ್ಡಿನ ಸೂಜಿ. ಭವಿ, ನಿತ್ಯ ಮನ ಮೋಜಿ, ಸಂತೋಷಿ.`

ಲೌಕಿಕರ ಸಾವು, ನೋವಿನ ಅಡೆಯ ಅಡಿಯಲ್ಲಿ ಮಾಗುತ್ತಾನೆ. ಕವಿ:

'ಜಗದ ಕೆನ್ನೆಯ ಮೇಲಿನೊಂದು ಕಂಬನಿ ತೇವ,
ನೊಂದೆದೆಯ ನಿಟ್ಟುಸಿರ ನಿಸ್ಸಹಾಯಕ ಭಾವ.'

(ಕವಿಯಿಲ್ಲದಿದ್ದರೆ)

`ಉಸಿರು ಸಿಕ್ಕಿಸುವ ಬಿಸಿಯ ಕಸಿವಿಸಿಗಳೆಡೆಯಲ್ಲಿ, ಒಳಗೊಳಗೆ ಕುದ್ದೂ ಕುದ್ದೂ ಆಗುತ್ತಾನೆ ಅನ್ನದರಳು`. `ಬಾಳಿನುಂಗುರದ ಪಚ್ಚೆ ಹರಳು`. `ಅವನೊಂದು ಚುಚ್ಚು ಮದ್ದು, ಮಸಜೀದಿನ ಮುವಜ್ಜನ್ನಿನ ಎಚ್ಚರದ ಸದ್ದು. ಕುಲದೇಶ ಭಾಷೆಗಳ ಸಂಕುಚಿತ ಸರಹದ್ದು ಅವನರಿಯ.` `ರಸದರಸ`. `ಕಲ್ಪನಾ, ದರಬಾರಿ`. ಸೋಂಭೇರಿಯಾದರೂ ಮೌಢ್ಯ ದಬ್ಬಾಳಿಕೆಯ ವಿರುದ್ಧದ ರಣಭೇರಿ. ಸಕಾಲದಲ್ಲಿ ಸ್ಫೋಟಿಸುವ ಗ್ರೆನೇಡು.

ಕವಿಯಾದವನಿಗೆ ಕಂಡಷ್ಟೇ ಸತ್ಯವಲ್ಲ. ದಕ್ಕಿದಷ್ಟನ್ನೇ ಮೆದ್ದು ಹಿಗ್ಗುವುದೆ ಜಾಯಮಾನವಾಗದೆ ಕಾಣಿಸದ ಕಡೆಗೂ ಕಾಣುವಾಸೆಯ ನೋಟವನ್ನು ಹರಿಸಬೇಕಾದ್ದು ಕವಿಯ ಧರ್ಮ. ಆದರೆ ಹೊಸತನ್ನು ಹುಡುಕಲು ಹೋಗಿ ಬುದ್ಧಿ ತೂಕ ಕಳೆದುಕೊಳ್ಳಬಾರದು. ಹಾಗಾದಲ್ಲಿ ಗುರಿ ಮುಟ್ಟಲು, ಉದ್ದೇಶ ಪೂರ್ಣಗೊಳಿಸಲು ಆಗುವುದಿಲ್ಲ. ಇಂಥವನನ್ನು ನಿಸಾರ್ `ಮಂತ್ರ ಮರೆತ ಅಲಿಬಾಬ`ನಿಗೆ ಹೋಲಿಸುತ್ತಾರೆ.

ಕವಿ ಮತ್ತು ಲೋಕದ ಸಂಬಂಧ ಅವಿನಾಭಾವದ್ದು, ಅನಿವಾರ್ಯವಾದುದು. ಲೋಕಕ್ಕೆ ಅಂಟಿರುವ ತನಕ ಕವಿಯ ಚಟುವಟಿಕೆ. ಬೇರ್ಪಟ್ಟರೆ, `ಕೆಟ್ಟು ಹೋದ ಬಲ್ಬಿನ ಥರ` ನಿರರ್ಥಕ. ಕವಿ ಇರಲಿ, ಇಲ್ಲದಿರಲಿ ಲೋಕಕ್ಕೆ ಬಾಧಕವಿಲ್ಲ.

'ನಾನಿದ್ದರೆ ನಿನ್ನೊಂದಿಗೆ, ಮುಂದಿಗೆ
ನಿನ್ನ ಚಲನ ವಲನದ ಸೂಚಕ.

ನೀನು ಗಡಿಯಾರ
ನಾನದರ ಲೋಲಕ' **(ಕವಿ ಮತ್ತು ಲೋಕ)**

'ಕವಿ ಇಲ್ಲದಿದ್ದಲ್ಲಿ ಲೋಕ ಉಡುಗಿ ಹೋಗುವುದಿಲ್ಲ, ನಡುಗಿ ನಲುಗುವುದಿಲ್ಲ, ಬದುಕು ತನ್ನ ಪಾಡಿಗೆ ಯಥಾಪ್ರಕಾರ ಸಾಗುತ್ತದೆ, ಆದರೊಂದಿಷ್ಟು ಸೊರಗಿ ಬಡವಾಗಿ, ಕೊಂಚ ಕೊರಗಿ ಕುರುಡಾಗಿ' ಎಂಬ ವಾಸ್ತವಿಕತೆಯ ಅರಿವಿನೊಂದಿಗೆ, ಬದುಕಿನ ಸುಖ-ದುಃಖ, ಒಳಿತು-ಕೆಡಕುಗಳ ಹಿನ್ನೆಲೆಯಲ್ಲಿ ಗಾಢ ಸಂವೇದನೆಯ ಮೂಲಕ ಗಂಭೀರ ಆಲೋಚನೆ ವಿಶ್ಲೇಷಣೆ ನಡೆಸುತ್ತಾರೆ.

ಕಾವ್ಯಸೃಷ್ಟಿಗೆ ಒಂದು ರೀತಿಯ ಅಂತರ್ಮುಖತೆ, ಮಾನಸಿಕ ಏಕಾಂತತೆ ಅತ್ಯಾವಶ್ಯಕ. ಬಾಳ ಕುಲುಮೆಯಲ್ಲಿ ಬೆಂದು, ಲೋಕದ ನ್ಯಾಯದಲ್ಲಿ ನೊಂದು, ಜಾತಿ ಮತ ವರ್ಗಗಳ ನಿಷ್ಕರುಣ ತುಳಿತಕ್ಕೆ ನುಜ್ಜಾದ ಕವಿ—

'ಮಾಸ ಮಾಸದವರೆಗು ಭಾರವನು ತಾ ಹೊತ್ತು,
ಹಗಲಿರುಳು ಯಾತನೆಯನನುಭವಿಸಿ, ಅತ್ತು ತನ್ನ
ಜೀವವನೆ ತೆತ್ತು ಕವಿತೆಯನು ಹೆರುವನು.'
(ಕವಿ ಬರೆದ)

ಈ ಸೃಷ್ಟಿಕ್ರಿಯೆ ಸ್ವಂತಿಕೆಯಿಂದ ಕೂಡಿರಬೇಕು, ಅವಸರದ ಪ್ರಕ್ರಿಯೆಯಲ್ಲ. ಇಲ್ಲಿ ತಾಳ್ಮೆ ಅನಿವಾರ್ಯ. ಇದೊಂದು ಪ್ರಕೃತಿ ಸಹಜವಾದ ಪ್ರಕ್ರಿಯೆ. ಅತ್ಯಾಸೆಗೋ, ಚಟಕ್ಕೋ ಮಾರುಹೋಗದೆ ನಿಯಮದಂತೆ ಗರ್ಭ ತಾಳಿ, ರೂಢಿಯಂತೆ ಚಿಂತನೆಯ ಬೇನೆಯಲ್ಲಿ ಉರಿಯಬೇಕಾಗಿದೆ. ಕವಿಯು ಓದು, ಚಿಂತನ, ಮನನ, ಮಂಥನ, ವಿಚಾರ ವಿನಿಮಯ ಮತ್ತು ವಿವಿಧಾನುಭವಗಳ ಅನಂತರವೇ—

'ದಿಟ್ಟ ಜಿಜ್ಞಾಸೆಯ, ಬಾಳಬಲ್ಲ,
ಮೂರು ಕಾಲ ಕಾಲವನಾಳಬಲ್ಲ
ಪದ್ಯಗಳ... ಹೆರುವ'
(ಸೃಷ್ಟಿ ಪ್ರಕ್ರಿಯೆ)

ಈ ಸಾಹಿತ್ಯ ಸೃಷ್ಟಿ ಪ್ರಕ್ರಿಯೆ ಜಾಗೃತ ಮನೋವಸ್ಥೆಗಿಂತ ಸುಪ್ತ ಅಂತರಾಳಕ್ಕೆ ಹೆಚ್ಚು ನಿಕಟವೆನಿಸುವುದು.

ಕವಿತೆಯ ಸೃಷ್ಟಿಗೆ ಹೊರಡುವ ಕವಿಗೆ ಒಮ್ಮೆ ಏನೂ ಹೊಳೆಯುವುದಿಲ್ಲ; ಒಮ್ಮೊಮ್ಮೆ ಏನೆಲ್ಲಾ ಹೊಳೆಯುವುದು. ಈ ಮಾನಸಿಕ ತೊಳಲಾಟ ಎಲ್ಲ ಕವಿಗಳಿಗೂ ಆಗುವಂತಹುದು. ಹಾಗೆ ಹೇಳಿದಾಗ—

'ಋತುಗಳ ನಡುವಿನ ನದಿಯ ವೈವಿಧ್ಯ;
ಕೂತರೆ ಅಲ್ಲಾಡಿಸದ ಬರೀ ಭಾವಗಳ ಅವಶತೆ
ನೀರೆರೆದುಕೊಂಡು ಸೀರೆಯುಡುವುದು ಕವಿತೆ.'
(ಕವಿತೆ)

ಬರೆಯುವುದೇ ಬೇಡವೆನ್ನಿಸಿದಾಗಲೂ ಏಕಾಕಿತನದಲ್ಲಿ, ಆಗೀಗ ದೀಪಗಂಬದ ಬೆಳಕಲ್ಲಿ, ಮೌನ-ಮಾತು-ಔಚಿತ್ಯ-ಸೂಚನೆ... ಹುಣ್ಣಿಮೆಯ ಅಸ್ಪಷ್ಟ ಬೆಳಕಲ್ಲಿ ತಾನೇ ತಾನಾಗಿ ಮೂಡುವುದು ಕವಿತೆ.

ಕವಿಗೆ ಪರಿಸರದ ಬಗ್ಗೆ ಇರುವಷ್ಟೇ ಕಾಳಜಿ ಕಳಕಳಿಗಳು ನಿಯೋಜನೆ, ತಂತ್ರಾಭಿವ್ಯಕ್ತಿಯ ಮೇಲೂ ಇರಬೇಕು. ಕಾವ್ಯ ಮಾಧ್ಯಮದ ಮೇರೆಗಳನ್ನು ವಿಸ್ತರಿಸುವ ನಿರಂತರ ಅರಿವಿನ ಎಚ್ಚರವಿರಬೇಕು; ಸೀರಿಯಸ್ ಆಗಿ ಕಮಿಟೆಡ್ ಆಗಿ ಶುದ್ಧಕಾವ್ಯದ ಪ್ರತಿಪಾದಕರಾಗಬೇಕು ಎಂದು ಆಶಿಸುತ್ತಾರೆ. ಬರೆದ ಕವನಗಳೆಲ್ಲಾ ಶ್ರೇಷ್ಠವಾಗುವುದಿಲ್ಲ; ಕವಿಗೂ ಮೇರೆ ಮಿತಿಗಳಿವೆ. 'ಕವನ ಮತ್ತು ಮಾವಿನ ಹೂವು' ಕವನದಲ್ಲಿ ಮಾವಿನ ಮರವನ್ನು ಋತು ನಿಯಮ ನಿಯಂತ್ರಿಸುವಂತೆ ಕವನದ ಹಿಂದೆ ಯಾವುದೋ ಲೀಲೆಯ ಕೈವಾಡವಿದೆ. ಹೂವೆಲ್ಲ ಮಿಡಿಯಾಗಿ ಮಿಡಿಯಾದದ್ದೆಲ್ಲಾ ಕಾಯಾಗಿ, ಕಾಯೆಲ್ಲಾ ಹಣ್ಣಾಗುವುದು ಕಡು ಕಷ್ಟ. ಹಾಗೇ—

> **'ತಾನು ಮರೆಯಲ್ಲಿ ನಿಂದು**
> **ತನಗೆ ಇಷ್ಟವಾದಂದು**
> **ಕವಿತೆಯನು ಕರುಣಿಸುವುದು ನಿಗೂಢ**
> **ಸೃಷ್ಟಿ ಪ್ರಕ್ರಿಯೆಯ ಅಪಾರ್ಥಿವ ಪವಾಡ.'**
> **(ಕವನ ಮತ್ತು ಮಾವಿನ ಹೂವು)**

ಕಾಣದ ದಿವ್ಯಶಕ್ತಿಯಲ್ಲಿ ನಿಸಾರರಿಗಿರುವ ನಂಬಿಕೆ, ಶ್ರದ್ಧೆಗಳನ್ನು ಈ ಸಾಲುಗಳು ಪ್ರತಿನಿಧಿಸುತ್ತವೆ.

ಕವಿಯಲ್ಲಿ ಅಡಗಿರುವ ಮಹತ್ವಾಕಾಂಕ್ಷೆಯ ಬೀಜಕ್ಕೆ—

> **'ಭೂ ತಳದ ಹೊಸಿಲಾಚೆ ನಗುವ ಹೂ ಬಿಸಿಲಲ್ಲಿ**
> **ಟಿಸಿಲೊಡೆದು ಬಳಕುವಾಸೆ—**
> **ವಾಮನತೆಯಿಂದೊಮ್ಮೆಗೆದ್ದು ವಿಕ್ರಮ ಪದವಿಗೇರುವಾಸೆ'**
> **(ಬೀಜ-ಮರ)**

ಅದು ಪುರುಷಾರ್ಥವನ್ನು ಕಾಣಬೇಕಾದದ್ದು—

> **'ಬೀಜ ಗರ್ಭಿಸಿ ಸಸಿ, ಗಡುಸಾಗಿ ಗಿಡ, ಋತು ತೀಡಿ**
> **ಫಲಭಾರದ ನಿರಾಳದಲ್ಲಿ ಹಗುರವಾಗುವ,**
> **ಕನಸಿಗೆ ಟಿಸಿಲೊಡೆದಂತೆ ನೋಟ**
> **ನೆಲೆಗೊಳ್ಳುವ, ಮಾಮರದ ಸಾರ್ಥ ವಿಕಾಸದಲ್ಲಿ.'**
> **(ಕ್ಯಾಕ್ಟಸ್)**

ಹೀಗಾಗದಿದ್ದರೆ ಮರುಭೂಮಿಯಲಿ ಮುಳ್ಳುಗೆದರಿದ ಕ್ಯಾಕ್ಟಸ್ ಆಗುವುದು.

ಬಾಹ್ಯ ಬದುಕಿಗೆ ತಮ್ಮನ್ನು ಒಪ್ಪಿಸಿಕೊಂಡಂತೆಲ್ಲಾ ಖಾಸಗಿ ಜೀವನದಲ್ಲಿ ಬಹು ಮುಖ್ಯವಾದ ಇಕ್ಕಟ್ಟಿನ ತೀವ್ರ ಅನುಭವದಿಂದ ನೊಂದಿದ್ದಾರೆ. ಆ ಕಾಲದ ರಾಜಕೀಯ

ವಿದ್ಯಮಾನಗಳಿಂದ, ವ್ಯಕ್ತಿ ಸಂಪರ್ಕಗಳಿಂದ, ಸಾಂಸ್ಕೃತಿಕ, ಧಾರ್ಮಿಕ ನೆಲಗಟ್ಟುಗಳ ಅಭದ್ರತೆ ಅನಿವಾರ್ಯವಾಗಿತ್ತು. ಎರಡು ಭಿನ್ನ ಸಂಸ್ಕೃತಿಗಳ ನಡುವೆ ಬದುಕು ತಳ್ಳುತ್ತಿರುವ ಇಬ್ಬಂದಿತನ, ದ್ವಂದ್ವದ ಅಸಹಾಯಕತೆ 'ಇಬ್ಬಂದಿ' ಕವನದಲ್ಲಿ ಮಡುಗಟ್ಟಿದೆ, ಹರಳುಗಟ್ಟಿದೆ.

'ನನ್ನ ಲೋಕೋದಾರದನ್ಯತೆಯ ಕಾಫರತನಕ್ಕೆದೆ ಕುಸಿದು ಅತ್ತರೀಗ
ಸಂತೈಸದು ವಿಗ್ರಹ, ಬಾ ಎನ್ನದು ಕಾಬಾ.
ಸತ್ತರಗ್ನಿಸಂಸ್ಕಾರವಿತ್ತ, ಗುಣಿ ಮಣ್ಣ ಭಾರವತ್ತ;
ವಾಮಕ್ಕೆ ಸಂಸ್ಕೃತ, ಬಲಕ್ಕರಬ್ಬೀ—ಸಮನ್ವಯಿ ನಾನೆತ್ತ?'
(ಇಬ್ಬಂದಿ)

ಅವರೇ ಹೇಳುವಂತೆ ಭಗವಾ ಹಾಗೂ ಹಸಿರು ಧ್ವಜಗಳ, ಗೋಪುರ ಹಾಗೂ ಮಿನಾರುಗಳ, ಕುಂಕುಮ ಮತ್ತು ಗೋರಂಟಿಗಳ ನಡುವೆ ಆಂತರಿಕ ಸಾಮರಸ್ಯದ ಸೂತ್ರ ಕಾಣದೆ, ತಾಳಿದ ನಿಲವು ಮುಂದಿನ ಕವನಗಳ ಪ್ರಧಾನ ಧಾಟಿಯತ್ತ ಬೆರಳು ಮಾಡುತ್ತವೆ.

'ನಿರ್ಧರಿಸುವೆನೀಗ ಬ್ರಾಹ್ಮೀ ಮುಹೂರ್ತದ ರಂಜಾನಿನಲ್ಲಿ
ಎದೆ ಸೀಯುವಾತಂಕದಲ್ಲಿ, ಸಮಜಾಯಿಷಿಯ ಸುಲಭೋ-
ಪಾಯದಲ್ಲಿ ಕೊರಗುವುದಿಲ್ಲ—
ವಿರುದ್ಧಗಳನೊಪ್ಪುವೆ, ಆದರೆ ಕೂಡಿಸದೆ,
ಭಿನ್ನತೆಯನರಿಯುವೆ, ಆದರೆ ತಿಕ್ಕಾಡಿಸದೆ.'
(ಅದೇ)

ಮೌಲ್ಯಗಳ ಗೈರುಹಾಜರಿ, ಸ್ವಲೋಭತತ್ಪರತೆ, ಅಸಮಾನತೆ, ಅನಿಯಂತ್ರಿತ ನಾಲಗೆ, ಸಮಾಜದ ವಿಘಟಕ ಪ್ರವೃತ್ತಿಗಳು, ಅತಿಯಾದ ಸ್ವೇಚ್ಛೆ, ಕೋಮು ಗಲಭೆಯ ದಳ್ಳುರಿ, ಹತ್ಯಾಕಾಂಡ, ವಿಧ್ವಂಸಕ ರಾಷ್ಟ್ರದ್ರೋಹಿ ಕೃತ್ಯಗಳು ಕವಿಯ ಮನಸ್ಸನ್ನು ಕಂಗೆಡಿಸಿವೆ.

'ಜಾತ್ಯತೀತ, ಧರ್ಮ ನಿರಪೇಕ್ಷ ದೇಶ'ದಲ್ಲಿ 'ಸಹಿಷ್ಣುತೆ ಅನುನಯ, ಹೊಂದಾಣಿಕೆ, ವಿಶ್ವಾಸಾರ್ಹತೆಗಳು ಸಹಬಾಳ್ವೆಯ ಕುರ್ಚಿಯ ನಾಲ್ಕು ಕಾಲುಗಳು' ಎಂದು ನಿಸಾರ್ ಅಹಮದ್‌ರ ನಂಬಿಕೆ. 'ಕೃಷ್ಣ, ಬುದ್ಧ, ಮುಹಮ್ಮದ್, ಏಸು, ಭಗವದಂಶ ಒಂದೇ' ಎಂದು ಕಾಣದಿದ್ದರೂ ರಕ್ಷಿಸುವ ನೇತ್ರಕ್ಕೆ, ಸುಪ್ರಭೆಗೆ ನಮಿಸುತ್ತಾರೆ.

'ಈ ನಾನೆನ್ನುವ ಅಸ್ತಿತ್ವದ ಚೂರಿನಸ್ಪಷ್ಟ
ಅರ್ಥೈಸುವುದು ದೇಶದ ಹವಾಮಾನದಂತೆಯೇ ಕಷ್ಟ'
(ನಾನೆಂಬ ಪರಕೀಯ)

ಎಂದು ಹೇಳುತ್ತಾ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ತಮ್ಮ ಸೂಕ್ಷ್ಮ ಆತಂಕವನ್ನು, ಭಿನ್ನ ಸಂಸ್ಕೃತಿಯ ಮನಸ್ಸಿನ ನೋವನ್ನು ಹಂಚಿಕೊಳ್ಳುತ್ತಾರೆ.

'ಮತ ಧರ್ಮ ಭಾಷೆಗಳ ಸಮನ್ವಯದ ಸುಭವ್ಯ ಪರಂಪರೆಯ ಈ ಮಹಾನ್

ರಾಷ್ಟ್ರ, ಪನ್ನೀರಿನ ಪುಷ್ಕರದ ಕಂಪಿನಿಂದ ಕಮನೀಯವಾಗಿ ಕಂಗೊಳಿಸಿರಲಿ'—ಈ ಮಾತುಗಳು ನಿಸಾರರ ರಾಷ್ಟ್ರಪ್ರೇಮವನ್ನು, ನಾಡಿನ ಹಿರಿಮೆ ಗರಿಮೆಗಳು ಉಳಿಯಲೆಂಬ ಹಂಬಲಿಕೆಯನ್ನು ಅದರ ಸಹಬಾಳ್ವೆ ಮಾನವೀಯತೆಗಳನ್ನು ಪ್ರತಿನಿಧಿಸುತ್ತವೆ.

ಸೃಜನಶೀಲ ಕವಿಗೆ ವಿಮರ್ಶಕರು ಮಾರ್ಗದರ್ಶಕರೂ ಆಗಬಹುದು, ಪೂರಕರೂ ಆಗಬಹುದು. ಯಶಸ್ವೀ ಪುರುಷನ ಹಿಂದೆ ಒಬ್ಬ ಸ್ತ್ರೀ ಇರುವಂತೆ ಕವಿಯ ಹಿಂದೆ ವಿಮರ್ಶಕರು ಇದ್ದು ಸತ್ಪಥದಲ್ಲಿ ಬೆಳೆಸುತ್ತಾರೆಂದು ಹೇಳುತ್ತಾರೆ. ವಿಮರ್ಶಕರು ತಮ್ಮ ರಸ ಗ್ರಹಣೀಯ ವಿಮರ್ಶೆಯ ಮೂಲಕ ಒಳ್ಳೆಯದನ್ನು ಮನಗಂಡು ಮಾರ್ಗವನ್ನು ತೋರಿಸಬೇಕು. ವಿಮರ್ಶೆ ತನ್ನಷ್ಟಕ್ಕೆ ತಾನು ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. 'ಯುಕ್ತಾಯುಕ್ತ ವಿವೇಚನೆಯ ಸದ್ವಿಮರ್ಶೆಗೆ' ನಿಸಾರ್ ಅಹಮದ್ ಸದಾ ಸ್ವಾಗತವನ್ನು ಬಯಸುತ್ತಾರೆ.

ಪ್ರಜ್ಞಾಶಾಲಿ ರಸಿಕರೂ ಸಹೃದಯರೂ ಆದ ವಿಮರ್ಶಕರು 'ಜೀವನದ ಅಚ್ಚುಕಟ್ಟಾದ ಸಾರಿನ ಪಾತ್ರೆಯಲ್ಲಿ ಮರವಟ್ಟ ಸೌಟಲ್ಲ; ಪಟುವಾದ ನಾಲಗೆ'. ನಾಡಲ್ಲಿ ಇಂಥ ಪ್ರಜ್ಞಾಶಾಲಿ ವಿಮರ್ಶಕರ ಪೀಳಿಗೆ ವರ್ಧಿಸಲೆಂದು ಆಶಿಸುತ್ತಾ, ಕೃತಿಗಳ ಸಮರ್ಪಕ ಮೌಲ್ಯಮಾಪನ ಮಾಡುವಂತೆ ವಿಮರ್ಶಕರಿಗೆ ಸೂಚಿಸುತ್ತಾರೆ.

'ನನ್ನ ಪದ್ಯಗಳನಾದರೂ ತೂಗಿಸು
ಒಂದಷ್ಟು ಹೊತ್ತು—ಕಾಲದಲ್ಲಿ,
ಮನಸ್ಸುಗಳಲ್ಲಿ.'

(ಗಾಡಿ ಮತ್ತು ನಾಯಿ)

ರಸಾಸ್ವಾದನೆಯ ಹಂತದಲ್ಲಿ ಭಾವವಶತೆ, ತದೇಕತೆ ಆವಶ್ಯಕ ಆಗುವಂತೆ, ಮೌಲ್ಯ ಮಾಪನದ ಮಜಲಲ್ಲಿ ವಿಶ್ಲೇಷಣೆ, ವೈಚಾರಿಕತೆಗಳು ಅನಿವಾರ್ಯವಾಗುತ್ತವೆ. ಓದುಗನ ಅಭಿರುಚಿ, ಮನಃಸಂಸ್ಕಾರ, ವಾಚನಾನುಭವ, ಒಳ ನೋಟಗಳ ಗ್ರಹಿಕೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಹಿತ್ಯ ಗ್ರಂಥ ತನ್ನ ಅಂತರಾರ್ಥ, ಮೇಲ್ಮೆಗಳನ್ನು ಸುಗೋಚರ ಗೊಳಿಸುತ್ತದೆ ಎನ್ನುತ್ತಾರೆ. ತಮ್ಮ ಕವನಗಳು ಸ್ವಲ್ಪ ಕಾಲವಾದರೂ ಬಾಳಲು, ಜನ ಮನದಲ್ಲಿ ಉಳಿಯಲು ವಿಮರ್ಶಕರು ನೆರವಾಗಲೆಂದು ಆಶಿಸುತ್ತಾರೆ.

ಮನುಷ್ಯ ಸಮಾಜಜೀವಿ ಎನ್ನಿಸಿಕೊಂಡಿರುವ ತನಕ, ತನ್ನ ಸುತ್ತ ಉಸಿರಾಡುವ ಸಹ ಮಾನವರಿಂದ ಮೆಚ್ಚುಗೆ, ಪ್ರಶಂಸೆಗಳನ್ನು ಪಡೆಯುವ ಅಭೀಪ್ಸೆಯನ್ನು ಹತ್ತಿಕ್ಕಲಾರ. ಅದು ಅಸ್ವಾಭಾವಿಕವೂ ಅಲ್ಲ. ತಾನು ಆಸ್ಥೆಯಿಟ್ಟು ಮಾಡಿದ, ತನಗೆ ಚೆನ್ನವೆಂದು ತೋರಿದ ಕೆಲಸವನ್ನು ಇತರರು ಕಾಣಬೇಕು. ಅಷ್ಟೇ ಅಲ್ಲ, ಕಂಡದ್ದನ್ನು ಮನಗಾಣಬೇಕು, ಮನಗಂಡಿದ್ದನ್ನು ಹೊಗಳಬೇಕು ಎಂಬ ಅಪೇಕ್ಷೆ ತಾಳಿದ್ದರೆ ತಪ್ಪೇನಿಲ್ಲ. ಇದು ತಾರುಣ್ಯ ಮತ್ತು ತಾರುಣ್ಯಪೂರ್ವ ಕಾಲಕ್ಕೆ ಸಹಜವಾದದ್ದು. ಜೀವನದಲ್ಲಿ ಮೇಲೇರಿದಂತೆ, ಅನುಭವ ವಿಸ್ತರಿಸಿದಂತೆ, ಸಾವಕಾಶವಾಗಿ ಸತ್ಯದರ್ಶನವಾಗುತ್ತದೆ. ಜನಪ್ರಿಯತೆಯ ಇತಿ-ಮಿತಿಯ ಬಗ್ಗೆ ಅತ್ಯುತ್ಸಾಹ ಕಡಮೆಯಾಗುತ್ತದೆ. ಹೆರರ ಕೀರ್ತಿ ಪ್ರಶಂಸೆಗಳು ಸದಾ ಕಾಲಕ್ಕೂ ಸಮಾನ

ತೀವ್ರತೆಯವಲ್ಲ—ಜೊತೆಗೆ ಪರಿವರ್ತನಶೀಲ ಕೂಡ. ಅನ್ಯಾಭಿಪ್ರಾಯ ಅಲ್ಪಾಯು, ಅಲ್ಪಕಾಲಕೃತವಾದದ್ದು ಎಂಬುದರ ಅರಿವಿನಿಂದಲೇ ನಿಸಾರ್ ತಮ್ಮ ವಿನಯವನ್ನು ಪ್ರಕಟಿಸುತ್ತಾರೆ.

'ನಾನಿಷ್ಟೆ ಲೋಕಕ್ಕೆ
ತೇದಂತೆ ಕರಗುವ ಗಂಧದೊಂದು ಚಕ್ಕೆ.'
(ಇಪ್ಪತ್ತನೆಯ ಶತಮಾನದ ಕೊಲಂಬಸ್)

ಸ್ವಂತ ಜೀವನದ ಏರು-ಪೇರುಗಳು, ಕಾಲಾನುಸಾರಿಯಾದ ಸಾಮಾಜಿಕ ಸ್ಥಿತ್ಯಂತರ, ರಾಜಕೀಯ ಮತ್ತು ಮತೀಯ ವಿದ್ಯಮಾನಗಳು, ಸಾಹಿತ್ಯ ಕ್ಷೇತ್ರದ ಹಾದಿ ಹೊರಳು, ಕವಿಯ ಒಲವು-ಓಲುವೆಗಳ ಬದಲಾವಣೆ ಮತ್ತಿತರ ಸಂಗತಿಗಳು ಬರವಣಿಗೆಯ ಮೂಲೋದ್ದೇಶದ ಸ್ವರೂಪವನ್ನು ಮಾರ್ಪಡಿಸುತ್ತವೆ. ಬಾಳು ನಿಂತಲ್ಲೇ ನಿಂತು ಪರಿಪೂರ್ಣ ಘಟಕದಂತೆ ರಾರಾಜಿಸುವ ಚೇತೋಹರ ಪುಷ್ಕರಿಣಿಯಲ್ಲ. ಯಾವುದೇ ಒಂದು ಘಟ್ಟ, ನಿಲ್ದಾಣ ಅದಕ್ಕೆ ಮುಖ್ಯವಲ್ಲ. ಸತತ ಪ್ರವಹಿಸುವುದೇ ಅದರ ಅಂತರ್ಲಕ್ಷಣ. ಸವಾಲುಗಳನ್ನು ಸ್ವೀಕರಿಸುತ್ತಾ, ಎದುರಿಸುತ್ತಾ, ಈ ಪ್ರಕ್ರಿಯೆಯಲ್ಲಿ ಬೆಳೆಯುತ್ತಾ, ಮಾಗುತ್ತಾ, ಗಳಿಕೆ-ನಷ್ಟಗಳೊಂದಿಗೆ ಮುಂದುವರಿಯಬೇಕಾಗುತ್ತದೆ. ಬದುಕೆಂದರೆ ಇಷ್ಟೇ.

ಸಾಹಿತ್ಯದ ಸಾರದಾಯಕ ತಾಯಿಬೇರು ಸ್ವಾನುಭವ, ಸೂಕ್ಷ್ಮಸಂವೇದಿ ಮನಸ್ಸಿನ ಕವಿಯ ಅಧ್ಯಯನ ಚಿಂತನೆಗಳು ಸತ್ವವರ್ಧಕ ವಿಟಮಿನ್ನುಗಳು; ಸ್ವಾನುಭವಕ್ಕೆ ಪರಿಪೋಷಕಗಳು. ಅನುಭವದ ತೀವ್ರತೆ ಉತ್ಕಟತೆಗಳು, ವೈಚಾರಿಕತೆಯ ಸ್ವರೂಪಗಳು, ಸಮಾಜದಲ್ಲಿ ಮಾನ್ಯತೆ ಪಡೆದ ಆಚಾರ-ವಿಚಾರ, ನಂಬಿಕೆ ಶ್ರದ್ಧೆಗಳಿಂದ ಪರಿಪಕ್ವಗೊಳ್ಳುತ್ತವೆ. ಬೌದ್ಧಿಕ ಚಿಂತನೆ, ವೈಜ್ಞಾನಿಕ ಧೋರಣೆಗಳಿಂದ, ಪ್ರಜ್ಞಾವಂತನ ಚಿಕಿತ್ಸಕ ದೃಷ್ಟಿಯಿಂದ ಸಾಹಿತ್ಯ ಅಭಿವ್ಯಕ್ತಗೊಳ್ಳುತ್ತದೆ; ಅರ್ಥವಂತಿಕೆ ಹೆಚ್ಚುತ್ತದೆ.

ಅನುಭವ ಮಾಗಿದಂತೆ ಜೀವನದ ನಿಗೂಢತೆಯ ಹಿಂದಿನ ಅಗೋಚರ ಕೈವಾಡದ ಅರಿವನ್ನು ಗಾಢಗೊಳಿಸುತ್ತಾ ಹೋಗುತ್ತದೆ. ಲೇಖಕನ ಜಾಗೃತ ಅರಿವಿಗೆ ಎಟುಕದ ಯಾವುದೋ ರಹಸ್ಯ ಅವನ ಲೇಖನ ಕ್ರಿಯೆಯನ್ನು ನಿಯಂತ್ರಿಸುತ್ತದೆ.

ಜೀವನ ಪ್ರೀತಿ ಎಂದರೆ ನಮ್ಮ ಗ್ರಹಿಕೆಯ ತೆಕ್ಕೆಗೆ ಬರುವ ಸಕಲ ಸಂಬಂಧಗಳನ್ನೂ ಸಹಾನುಭೂತಿ ಪರವಾಗಿ ಸಮೀಕ್ಷಿಸುವುದು; ಅವುಗಳಲ್ಲಿ ಅದಮ್ಯೋತ್ಸಾಹ, ಮನೋಲ್ಲಾಸ ಪಡೆಯುವುದು. ಗೋಚರ ಜಗತ್ತಿನ ನಾದ, ದೃಶ್ಯ, ಗಂಧಗಳ ಜೀವಂತ ಗ್ರಹಿಕೆ ಕವಿಗೆ ಆವಶ್ಯಕವಾಗಿರುವಂತೆ ಅವುಗಳ ಶಾಬ್ದಿಕ ಪುನಃಸೃಷ್ಟಿಯ ಕೌಶಲವೂ ಮುಖ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ನಿಸಾರ್ ಅಹಮದ್ ಅವರು ಸಾಹಿತಿಗೆ ಅಗತ್ಯವೆಂದು ಭಾವಿಸಿರುವ ಮುಖ್ಯಾಂಶಗಳು ಹೀಗಿವೆ:

1. ಪಾರಂಪರಿಕ ಮೌಲ್ಯಗಳ ಅರಿವು.
2. ಯುಗಧರ್ಮದ ಅರಿವು.

3. ಸಂಸ್ಕೃತಿಯ ಹಿರಿಮೆ ಗರಿಮೆಗಳ ಜ್ಞಾನ.
4. ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸ ಕ್ರಮದ ಗ್ರಹಿಕೆ.
5. ಸಾಹಿತ್ಯ ಮತ್ತು ಜನ ಜೀವನದ ಆತ್ಮೀಯ ಸಂಬಂಧದ ಅರಿವು—ತೀವ್ರವಾದ ಲೋಕಾನುಭವ.
6. ತಾನು ಬಳಸುವ ವಿಷಯ, ವಸ್ತುಗಳ ಬೆಲೆಗಾಣ್ಕೆಯ ಬಗ್ಗೆ ನಿಷ್ಕೃಷ್ಟವಾದ ತಿಳಿವಳಿಕೆ, ವ್ಯುತ್ಪತ್ತಿ—ಲೋಕ ಪರಿಜ್ಞಾನ.
7. ತಂತ್ರ, ಅಭಿವ್ಯಕ್ತಿ, ರೀತಿ, ಪ್ರತಿಮಾ ವಿಧಾನಗಳ ಔಚಿತ್ಯಪೂರ್ಣ ಜ್ಞಾನ ಹಾಗೂ ಬಳಕೆ.
8. ಮಾನವೀಯತೆಯ ಅಂಶ.
9. ವೈಯಕ್ತಿಕವಾದ ವಿಶಿಷ್ಟ ವ್ಯಕ್ತಿತ್ವದ ಛಾಪು—ಸ್ವಂತಿಕೆಯ ಪರಿಮುದ್ರೆ.

ಸೃಜನಶಾಲಿ ಕವಿ ನಿಸಾರ್ ಅಹಮದ್ ಬಹಿರ್ಮುಖ ಹಾಗೂ ಅಂತರ್ಮುಖ–ಈ ಎರಡೂ ವ್ಯಕ್ತಿತ್ವವುಳ್ಳ ಕವಿಯ ಅನುಭವಕ್ಕೆ ನೀಡುವ ಸ್ಥಾನ ಭಿನ್ನವಾದುದು. ವೈಚಾರಿಕತೆ ರೂಪುಗೊಳ್ಳುವುದು ತೀವ್ರವಾದ ಅನುಭವದ ಮೂಲಕ. ಆತ್ಮೀಯತೆ, ಹೃದಯ ಸ್ಪರ್ಶಿತ್ವದ ಕವಿಯ ವ್ಯುತ್ಪತ್ತಿ ಅಥವಾ ಲೋಕ ಪರಿಜ್ಞಾನ, ಅವನ ಸಂವೇದನೆಯ ಮೂಲಕ ಹಾಯ್ದು ವೈಯಕ್ತಿಕಾನುಭವವಾಗಿ ಕಾವ್ಯದಲ್ಲಿ ಅರಳಿದ್ದರೆ ಮಾತ್ರ ಅದಕ್ಕೆ ಮಹತ್ವ ಬರುತ್ತದೆ.

ನಿಸಾರರ ದೃಷ್ಟಿಯಲ್ಲಿ ಕಲೆ ಅತ್ಯಂತ ಶ್ರೇಷ್ಠವಾದುದು ಬಾಳಿನಲ್ಲಿ ಕಲೆ :

'ಗಗನ ಪರಿಚಾರಿಕೆ
ಪ್ರೇಮದಭಿಸಾರಿಕೆಯ ಆತ್ಮೀಯ ಕೋರಿಕೆ.
ಹತ್ತು ಕೈ ಬದಲಿದರು ಮಾಸಿದರು
ಅಷ್ಟಿಷ್ಟು ಹರಿದರೂ ಅದೇ ಬೆಲೆ
—ಕರೆನ್ಸಿ ನೋಟು ಕಲೆ'

(ಕಲೆ)

ಕಾಲಚಕ್ರ ಉರುಳಿದರೂ ಅದು ಸಮತೋಲನ ಸ್ಥಾಪಿಸುತ್ತಾ ಅಮರವಾಗಿರುತ್ತದೆ.

ಗಟ್ಟಿ ಕಾವ್ಯ 'ಅರ್ಥಮುಕ್ತ, ಅನುಭವಬಂಧ'. ಸ್ಮೃತಿಯನ್ನು ಬಿಚ್ಚಿ ಮನಸ್ಸನ್ನು ಸಂವೇದನೆಗೆ ಒಳಪಡಿಸುತ್ತದೆ. 'ಕವಿಯ ಭಾವೋನ್ನತ ಸ್ಥಿತಿಯ ಸೃಷ್ಟಿಶೀಲ ಪ್ರಕ್ರಿಯೆ'—ಅಮೂರ್ತವೂ ಹಂತಹಂತವಾಗಿ ಪವಾಡದಂತೆ ಮೂರ್ತತ್ವ ಗಳಿಸುತ್ತಾ ಸಾಗುತ್ತದೆ.

ಸ್ವಕೀಯ ಅನುಭವ, ಭಾವಾಲೋಚನೆ, ನಂಬಿಕೆ ಶ್ರದ್ಧೆ, ವ್ಯಾಸಂಗ ಚಿಂತನೆ ಮೊದಲಾದ ಆಳವಾಗಿ ಬೇರೂರಿರುವ conviction ಹೊಂದಿರುವ ಲೇಖಕ ಭಾಷೆಯ ಬಗ್ಗೆ ಎಚ್ಚರ ಹಾಗೂ ಕಾಳಜಿಯನ್ನು ವಹಿಸಬೇಕೆಂದು ನಿಸಾರ್ ತಮ್ಮ ಗದ್ಯ ಬರಹಗಳ ಮುನ್ನುಡಿಯಲ್ಲೇ ಸಮರ್ಥಿಸಿಕೊಳ್ಳುತ್ತಾರೆ. 'ವಸ್ತುವಿಗೆ ಭಾಷೆ ಕೇವಲ ವಾಹಕವೆಂದೋ, ಪ್ರಣಾಲಿಯೆಂದೋ ನಾನು ಭಾವಿಸಿರುವ ಸಂದರ್ಭಗಳು ಕಡಮೆ. ಆಯಾ ವಸ್ತು, ವಿಷಯ

ತನ್ನ ಆಂತರಿಕ ಅಗತ್ಯಕ್ಕೆ ತಕ್ಕಂತೆ ತನ್ನದೇ ಭಾಷೆಯನ್ನು ಸೃಷ್ಟಿಸಿಕೊಳ್ಳುತ್ತದೆ. ಹೀಗಾಗಿ ಭಾಷೆ ಅಂಗಿಯಲ್ಲ, ಚರ್ಮ. ತಂದು ಹೇರಿದ್ದಲ್ಲ, ಸ್ವಾಭಾವಿಕವಾಗಿ ವಸ್ತುವಿನ ಮೂರ್ತತ್ವದೊಂದಿಗೆ ಸಂಭವಿಸುವಂಥದ್ದು. ಅದನ್ನು ಬೇರ್ಪಡಿಸಿ, ಅದರ ಬದಲಿಗೆ ಬೇರೆ ಮಾತನ್ನು ಬಳಸಲು ಸಾಧ್ಯವಾಗದಂಥದ್ದು'.

'ಭಾಷೆಗೆ ಭಾಷೆ ಕೊಡು' ಕವನದಲ್ಲಿ ನಿಸಾರ್ ಭಾಷೆಯ ಬಳಕೆಯ ಬಗ್ಗೆ, ಅಭಿವ್ಯಕ್ತಿ ಕ್ರಮದ ಬಗ್ಗೆ ಭಾಷೆ ಹಾಗೂ ಭಾವನೆಗಳ ಬಾಂಧವ್ಯ, ಭಾಷಾ ಪ್ರಯೋಗದಲ್ಲಿ ಇರಬೇಕಾದ ಎಚ್ಚರ ಮತ್ತು ಜವಾಬ್ದಾರಿಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕವಿ ಭಾಷೆಗೆ ಹೊಸ ಹೊಸ ಆಯಾಮವನ್ನು ನೀಡಬೇಕೆಂಬುದು ಅವರ ಆಶಯ.

'ಭಾಷೆಗೆ ಭಾಷೆ ಕೊಡು,
ಕೊಡು ಹೊರಾಂಗಣದ ನಿತ್ಯ ವ್ಯಾಯಾಮ,
ಹೊಸ ಹೊಸ ಆಯಾಮ
ಮಾತಿಗೆ ಮಾತು.'

(ಭಾಷೆಗೆ ಭಾಷೆ ಕೊಡು)

ಭಾವದ ಮಟ್ಟದಲ್ಲೇ ದೇಹ ಪಡೆಯದೆ, ಭಾವಕ್ಕೆ ಸಮಾಧಿ ಮಾಡದಂತೆ ಉಸಿರು ಕಟ್ಟಿಸುವ ಖಾಸಗಿ ಅಗ್ರಹಾರಗಳಿಂದ ಕ್ಲೀನರ್ ಬಾಷಾ, ಮೆಕ್ಯಾನಿಕ್ ಜೋಸೆಫ್, ಕೋರ್ಟು, ಕಚೇರಿ, ಮಿಲ್ಲು, ದವಾಖಾನೆ, ಕಸಾಯಿಖಾನೆ, ತಿಮ್ಮ ಬೊಮ್ಮರ ದೇಸೀ ನೆಲದಲ್ಲಿ ಭಾಷೆ ಸತ್ವ ಪಡೆಯಬೇಕಾಗಿದೆ.

ದೇಹ ಮತ್ತು ಆತ್ಮದ ನಂಟಿನಂತೆ, ಭಾಷೆ, ಭಾವನೆಗಳ ಬಾಂಧವ್ಯ. ಭಾವನೆಗೆ ಅನುಗುಣವಾಗಿ ಭಾಷೆ ಉಸಿರು ತಂತಾನೆ ಶರೀರಿಸಿಕೊಳ್ಳುವಂತೆ, ನದಿ ಸಹಜವಾಗಿ ಹರಿಯುತ್ತಲೇ ತನ್ನ ಬದಿಗಳನ್ನು ಪಡೆಯುವಂತೆ ಅತ್ಯಂತ ಸಹಜವಾಗಿ ಮೂಡಿ ಬರಬೇಕು. ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದಲ್ಲಿ ಅನನ್ಯತೆ ಇರಬೇಕೆಂಬ ತುಡಿತ ಪ್ರತಿಯೊಬ್ಬ ಕವಿಗೂ ಸಹಜವಾಗಿರುತ್ತದೆ. ಹಸ್ತಾಕ್ಷರದಂತೆ, ರುಚಿಯಂತೆ ಭಾಷೆ ವೈಯಕ್ತಿಕ ಛಾಪನ್ನು ಪಡೆದಾಗ ಭಾಷೆಗೆ ಭವಿಷ್ಯ ಕೊಡುವ ಸಾಮರ್ಥ್ಯವೂ ಕವಿಗೆ ಮೂಡಿ ಬರುತ್ತದೆ.

ಪ್ರಾಚೀನ ಕವಿಗಳಾದ ಪಂಪ, ರನ್ನ, ಜನ್ನ, ಹರಿಹರ, ಕುಮಾರವ್ಯಾಸ, ಮುದ್ದಣ ಅವರೆದುರಿಗೆ ಭಾಷೆ ತಲೆಬಾಗಲೆಂದು ಬಯಸುತ್ತಾರೆ. ಭಾಷೆಯ ಬಳಕೆಯಲ್ಲಿ ಅಭಿವ್ಯಕ್ತಿ ಕ್ರಮದಲ್ಲಿ ಅನನ್ಯತೆ ಇರಬೇಕೆಂಬ ನಿಸಾರ್ ಅಹಮದ್‌ರ ತುಡಿತ ಅವರ ಗದ್ಯ ಮತ್ತು ಪದ್ಯ ರಚನೆಗಳ ಹಿನ್ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿವೆ. ನುಡಿಗಾರಿಕೆ ವಸ್ತುವಿಗೆ ಅನುಗುಣವಾಗಿ ಸಮೃದ್ಧವಾಗಿ, ಸರಳವಾಗಿ ಮೈ ತಳೆದು ಬಂದಿದೆ.

ಉರ್ದುವನ್ನು ಮಾತೃಭಾಷೆಯಾಗಿ ಹೊಂದಿರುವುದರಿಂದ ಈ ಭಾಷೆಯ ಪದಗಳ ಬಳಕೆ ನಿಸಾರರ ಸಾಹಿತ್ಯದಲ್ಲಿ ತುಂಬ ಸಹಜವಾಗಿ, ಪೂರಕವಾಗಿ ಜೀವಂತಿಕೆಯಿಂದ ಕೂಡಿದೆ. ಉದಾ.: ಖಯಾಲಿ, ಜಲಸ, ಖಲಾಸೆ, ಅಚಾನಕ್, ಜಮೆ, ಷಹರು, ಬುರ್ಖಾ, ಬಚಾವ್, ಜುಜುಬಿ, ಸಬ್ ಸೋನಾ, ನಾಚ್, ಬಕರಾ, ಬಿಲ್‌ಕುಲ್, ಗೋಲ್‌ಮಾಲ್—ಮುಂತಾದ

ಅನೇಕ ಪದಗಳು ಕವನಗಳ ಸಹಜತೆಯನ್ನು ಇಮ್ಮಡಿಸಿವೆ.

ಕೆ. ಎಸ್. ನಿಸಾರ್ ಅಹಮದ್ ಅವರ ದೃಷ್ಟಿಯಲ್ಲಿ ಸಾಹಿತ್ಯದ ಉದ್ದೇಶದ ಸ್ಥಾಯಿ ಕೇಂದ್ರ ಮಾತ್ರ—ಮಾನವ.

1. ಮನುಷ್ಯ ಜೀವಿತದ ಸಮಷ್ಟಿ ಒಳಿತಿನ ಹಾರೈಕೆ.
2. ದೇಶ-ಭಾಷೆ, ಪ್ರಾಂತ್ಯ, ಜಾತಿ-ಮತ-ಧರ್ಮ, ಪಕ್ಷ-ವಿಪಕ್ಷಗಳೆಂದು ಒಡೆದು ಸಿಡಿದಿರುವ ಮಾನವ ಕುಲದ ನಡುವೆ ಭಾವನಾತ್ಮಕ ಸಾಮರಸ್ಯವನ್ನು ನಿರ್ಮಿಸುವುದು.
3. ಸಮರಸತೆ-ವೈವಿಧ್ಯದ ನಡುವಣ ಈ ಸಮನ್ವಯ ಸಂಪಾದನೆ, ಮನುಷ್ಯ ಸಮುದಾಯದ ಸಮಗ್ರ ಹಿತ ಸಾಧನೆಯ ನಿಟ್ಟಿನಲ್ಲಿ ಜೀವಜಲವಿದ್ದ ಹಾಗೆ.
4. ಮೇಲ್ಮಟ್ಟದ ಬದುಕಿನ ಸಾಧನೆಯ ಆಲೋಚನೆಗಳನ್ನು, ಸಾರ್ವಕಾಲಿಕ ಆಶೋತ್ತರಗಳನ್ನು ನಿದರ್ಶನವಾಗಿ ಸಮರ್ಥಿಸಬೇಕು.
5. ಮೋಜು, ರೋಚಕತೆ, ರಂಜನೆಗಳಿಗಿಂತ ಮಿಗಿಲಾಗಿ ತಣಿವು, ಸಂವೇದನಾ ಸಾಮರ್ಥ್ಯ, ಮನಃಸಂಸ್ಕಾರ, ಆನಂದಗಳನ್ನು ನೀಡಬೇಕು.
6. ಸಾರ್ಥಕ್ಯವನ್ನು ಕರುಣಿಸುವ ಸನ್ಮೌಲ್ಯಗಳ ಬಗ್ಗೆ ಕಳಕಳಿ ಮತ್ತು ತಿಳಿವಳಿಕೆಯನ್ನು ಬಲಿಸಿ ಶ್ರೇಯಸ್ಸಾಧಕ ನಿಟ್ಟಿನಲ್ಲಿ ಜನತೆ ಸಾಗುವಂತೆ ಮಾಡಬೇಕು.
7. ಬದುಕಿಗೆ ಘನತೆ-ಗಾಂಭೀರ್ಯದೊಂದಿಗೆ ಜೀವಿತ ಪುರುಷಾರ್ಥದ ಗಾಢ ಅರಿವು ಮೂಡಿಸಬೇಕು.
8. ಸಾಮಯಿಕತೆಯ ಮಿತಿಯನ್ನು ದಾಟಿ ಮಾನವ ಸಹಜವೂ ಶಾಶ್ವತವೂ ಆದ ಸತ್ಯಗಳನ್ನು, ಮೌಲ್ಯಗಳನ್ನು ಪ್ರತಿಪಾದಿಸಬೇಕು.

ಮೇಲ್ಕಂಡ ಉದ್ದೇಶಗಳು ಈಡೇರಿದಾಗ ಸಹೃದಯನಿಗೆ ಈ ಎಲ್ಲಾ ಪ್ರಯೋಜನಗಳು ಲಭಿಸುತ್ತವೆ. ನೀತಿ ಮೂಲ ಜೀವನದ ಪರಿಷ್ಕಾರ-ಸಂಸ್ಕಾರ; ತಣಿವು, ಸಂವೇದನೆ, ಆನಂದಗಳು ಉಂಟಾಗುತ್ತವೆ.

ಇನ್ನು ಕವಿಗೆ ಉಂಟಾಗುವ ಪ್ರಯೋಜನವನ್ನು ಕುರಿತಂತೆ ವಿಭಿನ್ನವಾದ ನಿಲವು ತಾಳಿದ್ದಾರೆ. ಸಮಗ್ರ ಗದ್ಯ ಸಂಪುಟದ ಬಹುತರ ಬರಹಗಳನ್ನು ಬರೆದಾದ ಮೇಲೆ ನಿಸಾರ್ ಅವರಿಗೆ ಸಿಕ್ಕಿರುವ ಮನಸ್ಸಮಾಧಾನ, ಕೃತಾರ್ಥತೆಯ ಭಾವನೆ ಮತ್ತು ಸಂತೋಷ ಅಷ್ಟಿಷ್ಟಲ್ಲ. ಹೊರೆಯಿಳಿಸಿದಂತೆ ತಮ್ಮ ಚಿತ್ತ ಹಗುರವಾಯಿತೆಂದು ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ.

ಬದುಕು ಎರಡು ಬದಿಗಳ ನಡುವೆ ಹರಿಯುವ ನಿತ್ಯ ನಿರಂತರ ವಾಹಿನಿ. ಪ್ರಯೋಜನಾಪೇಕ್ಷೆ ಮತ್ತು ಸೌಂದರ್ಯಾಸಕ್ತಿ ಈ ಎರಡು ದಡಗಳು. ಔಚಿತ್ಯದ ಪ್ರಜ್ಞೆ ಅಂದರೆ ಹಿತಾಹಿತದ, ಯುಕ್ತಾಯುಕ್ತತೆಯ ಅರಿವು ಅಗ್ರಮಾನ್ಯ. ಈ ಔಚಿತ್ಯ ಪ್ರಜ್ಞೆ

ಜೀವನಕ್ಕೂ ಅನ್ವಯಿತ. ಯಾವುದೇ ಸಾಧನೆಗೆ ಆಶಿಸುವಾತ ನಿರಂತರವಾಗಿ ಅಭ್ಯಾಸ, ಅಧ್ಯಯನ, ಅವಿಚ್ಛಿನ್ನವಾದ ಶ್ರದ್ಧಾಸಕ್ತಿಗಳಿಂದ ತನ್ನ ಮತಿಯನ್ನು ಅನವರತ ಜೀವಂತ ವಾಗಿರಿಸಿಕೊಳ್ಳಬೇಕು. ಸವಾಲುಗಳನ್ನು ಎದುರಿಸುತ್ತಾ ಪ್ರವಹಿಸುವ ಪ್ರಕ್ರಿಯೆಯಲ್ಲಿ ಬೆಳೆಯುತ್ತಾ, ಮಾಗುತ್ತಾ, ಗಳಿಕೆ-ನಷ್ಟಗಳೊಂದಿಗೆ ಮುಂದುವರಿಯಬೇಕೆಂಬ ನಂಬಿಕೆ ಯೊಂದಿಗೆ ನಿಸಾರ್ ಅಹಮದ್ ಅವರ ಬದುಕು ಸಾಗಿ ಬಂದಿದೆ.

ಕವಿ ನಿಸಾರ್ ಅಹಮದ್ ಅವರ ಕಾವ್ಯ ಜಿಜ್ಞಾಸೆಯ ಮುಖ್ಯ ಲಕ್ಷಣಗಳನ್ನು ಒಟ್ಟಾರೆಯಾಗಿ ಹೀಗೆ ಪಟ್ಟಿ ಮಾಡಬಹುದು :

1. ಯಾವುದೇ ಪಂಥ, ಮತ, ರಿವಾಜುಗಳಿಗೆ ಮೀರಿದ ಹೃದಯಸಂಪನ್ನತೆ.
2. ಕೃಷ್ಣ, ಬುದ್ಧ, ಮುಹಮ್ಮದ್, ಏಸು ಭಗವದಂಶ ಒಂದೇ ಎಂಬ ನಂಬಿಕೆ.
3. ಸಹಿಷ್ಣುತೆ, ಅನುನಯ, ಹೊಂದಾಣಿಕೆ, ವಿಶ್ವಾಸಾರ್ಹತೆ—ಸಹಬಾಳ್ವೆ ಎಂಬ ಕುರ್ಚಿಯ ನಾಲ್ಕು ಕಾಲುಗಳು.
4. ವೈಚಾರಿಕತೆ, ಗಾಢ ಚಿಂತನೆ, ಮಂಥನ.
5. ಅಂತರ್ಮುಖಿಯೊಬ್ಬರ ಅಂತರಂಗ ಶೋಧನೆ—ಜೀವನ ಪರಿಷ್ಕಾರ. ಬುದ್ಧಿಗಿಂತ ಭಾವನಾಮಯತೆಗೆ ಪ್ರಾಶಸ್ತ್ಯ.
6. ಕವಿ, ಲೋಕಾನುಭವಿ, ಆಶಾವಾದಿ, ಜೀವನ್ಮುಖಿ; ಉತ್ತರದಾಯಿ.
7. ಕವಿತೆ ಆಗಬೇಕು ಕಾಲಾತೀತ.
8. ಪ್ರಕೃತಿದತ್ತವಾಗಿಯೋ, ದೈವದತ್ತವಾಗಿಯೋ ಕವಿಯ ಅಂತರಂಗದಲ್ಲಿ ಹುಟ್ಟಿನಿಂದ ಇರುವ ಸೃಜನಶೀಲತೆಯ ಕಿಡಿಯನ್ನು ಸ್ವಂತ ಶ್ರಮದ ಉರುವಲಿ ನಿಂದ ಕೆಂಡವಾಗಿಸಿಕೊಳ್ಳಬೇಕು. ಅದರ ಕಾವು, ಬೆಳಕಿನಿಂದ ಕಾವ್ಯೋತ್ಪತ್ತಿ.
9. ಸ್ವೋಪಜ್ಞತೆ—ಅನನುಕರಣೀಯವಾದ ಸ್ವಂತ ಛಾಪಿನ ಹಂಬಲ.
10. ಭಾಷೆ ಅಂಗಿಯಲ್ಲ, ಚರ್ಮ.
11. ಕಲ್ಪನಾವಿಲಾಸಕ್ಕಿಂತ ಮಾನವ್ಯದ ಸಮಷ್ಟಿ ರೂಪದ ವಿಭಾವನೆ ಕವಿಗೆ ಆದೇಯ.
12. ಬದಲಾಗುವುದಲ್ಲ, ಬೆಳೆಯುತ್ತಾ ಹೋಗುವುದು ನಿಜವಾದ ಕಲಾವಿದನ ಪ್ರಕೃತಿ ಧರ್ಮ.
13. ವ್ಯಕ್ತಿವಿಕಾಸದ ಹಾಗೆಯೇ ಕವಿಯ ಅಭಿವ್ಯಕ್ತಿ ವಿಕಾಸ ಸಹ ಅನಿವಾರ್ಯ.
14. ವೈಜ್ಞಾನಿಕ ದೃಷ್ಟಿಕೋನ.
15. ಯಾವ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದರೂ ಭಾರತೀಯ ಪರಂಪರೆಯ ಬಗ್ಗೆ ಆಸ್ಥೆ, ಗೌರವ.

16. ಅರ್ಥಪೂರ್ಣ ಬರವಣಿಗೆಗೆ ಸತತ ಸಂಕಲ್ಪ.
17. ಪುಸ್ತಕಗಳಿಗೆ ಪರ್ಯಾಯವಿಲ್ಲ; ಅವು ಇಹಲೋಕದ ಕಾಮಧೇನುಗಳು.
18. ನಾಡು-ನುಡಿಗಳ ಪ್ರೇಮ; ಜೊತೆಗೆ ಸಾಮಾಜಿಕ ಪರಿಸ್ಥಿತಿಯ ಜ್ವಲಂತ ತಿಳಿವು.
19. ಸಹೃದಯ-ವಿಮರ್ಶಕರು ಸಾರಿನ ಪಾತ್ರೆಯಲ್ಲಿನ ಮರವಟ್ಟ ಸೌಟಾಗ ಬಾರದು,ಪಟುವಾದ ರುಚಿಗ್ರಾಹ್ಯ ನಾಲಗೆಗಳಾಗಬೇಕು.
20. ಪ್ರೇಮ, ವಿರಸ, ನಿಸರ್ಗ, ವ್ಯಕ್ತಿಗಳ ಪ್ರಸ್ತಾವದಿಂದ ಕಾವ್ಯಕ್ಕೆ ಅತಿಶಯ ಅರ್ಥವಂತಿಕೆ.
21. ಸಂಸ್ಕಾರವಂತ ವಾಙ್ಮಯ ರಚನೆಗಳು ಸಂಸ್ಕೃತಿ ಸಾಗರದ ದೀಪಗೋಪುರ ಗಳೆಂಬ ಶ್ರದ್ಧೆ.

'ಆಕಾಶಕ್ಕೆ ಸರಹದ್ದುಗಳಿಲ್ಲ', 'ಆಕಾಶದಂತೆ ಕವಿತೆ' ಸಹ ಅಮೇಯ, ಅಗಮ್ಯ, ಅನೌಪಮ್ಯ. ಮೇಲ್ನೋಟಕ್ಕೆ ಮಾತ್ರ ಬಲು ಸೌಮ್ಯ, ಆಂತರ್ಯದಲ್ಲಿ ಮೊಳೆತು ಹೊರಹೊಮ್ಮುವ ಕವಿತೆ ಕಟ್ಟುಪಾಡಿನ, ಜನಾಂಗ ಭೇದವಿಲ್ಲದ, ದೇಶಕಾಲಾತೀತವಾದ ಸ್ವಚ್ಛಂದ ಛಂದ, ಅನಂತಾನಂತ, ನಿಗೂಢ, ಸೂಕ್ಷ್ಮಾತಿಸೂಕ್ಷ್ಮ.

'ಕವಿತೆ ಆಕಾಶದಂತೆ ಸರ್ವಾಧಾರೆ,
ಅದಕಿಲ್ಲ ಧರ್ಮಗಿರ್ಮಗಳ ಗಡಿ ಗೆರೆ,
ರಾಜಕೀಯದ ಜಿಮ್ಮಿಗಲ್ಲು, ಫಲಕಗಳ ಹೊರೆ,
ಜಾತಿ ಕುಲ ವರ್ಗದ ಟೇಪಿನಳತೆಯ ಮೇರೆ.'

(ಆಕಾಶಕ್ಕೆ ಸರಹದ್ದುಗಳಿಲ್ಲ)

ಈ ಪದ್ಯದಲ್ಲಿ ಯಾವುದೇ ಮತ, ಪಂಥ, ರಿವಾಜುಗಳಿಗೆ ಮೀರಿದ ಹೃದಯಸಂಪನ್ನ ಮಾನವತಾವಾದಿಯ ಸಂವೇದನಾಪೂರ್ಣ ಗಂಭೀರ ವ್ಯಕ್ತಿತ್ವದ ಸುಸಂಸ್ಕೃತ ನಿಸಾರ್ ಅಹಮದ್‌ರವರ ಸರ್ವಧರ್ಮಸಹಿಷ್ಣುತಾ ಭಾವದ ಸಂಸ್ಕಾರವಂತ ಸದಾಶಯ ಮೂಡಿ ಬಂದಿದೆ. ಇದು ಅವರು ನಂಬಿರುವ ತತ್ತ್ವಗಳಲ್ಲೇ ಶಿರೋಮಣಿಪ್ರಾಯವಾದದ್ದು.

ಹೊಗೆ ಮತ್ತು ಧೂಪಗಳೆರಡೂ ಬಾಹ್ಯವಾಗಿ ಒಂದನ್ನೊಂದು ಹೋಲುವುದ ರಿಂದ, ಎರಡೂ ಅನಿಲಗಳಾಗಿರುವುದರಿಂದ ಸಮಾನ ಪ್ರಾಶಸ್ತ್ಯ, ಗೌರವಗಳಿಗೆ ಪಾತ್ರವಾಗುವುದು ಭೇದ ಗ್ರಹಣ ಪ್ರಜ್ಞೆ ಮನುಷ್ಯನಿಗೆ ಇಲ್ಲದಿರುವಾಗ. ಆಗೆಲ್ಲ ಗುಣಾತಿಶಯಕ್ಕಿಂತ, ಸ್ವಸ್ವಭಾವದ ಗಣನೆಗಿಂತ ಮೇಲ್ತೋರಿಕೆಯ ಸ್ವರೂಪವೇ ಎಣಿಕೆಗೆ ತಕ್ಕದ್ದೆನ್ನಿಸುತ್ತದೆ. ತಿರುಳಿನ ಸವಿಗಿಂತ ಸಿಪ್ಪೆಯ ಬಣ್ಣದ ಸೆಳೆತವೇ ಮೋಹಕವೆನ್ನಿಸುತ್ತದೆ.

(ಭೇದ ಗಣನೆಯ ಅರಿವು)



ನಿಸಾರ್ ಅವರ ಕವನಗಳಲ್ಲಿ ಮುಸ್ಲಿಂ ಛಾಪು

♦ ನಳಿನಿ ಮಯ್ಯ
ಡರೀನ (ಇಲಿನಾಯ್)

ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ಕನ್ನಡದ ಇನ್ನಿತರ ಸಮಕಾಲೀನ ಕವಿಗಳು ಒಳಗಾಗದ ಒಂದು ವಿಶಿಷ್ಟ ಅನುಭವವನ್ನು ಪಡೆಯುತ್ತಲೇ ಬದುಕಿದವರು. ಅದೆಂದರೆ ಬಹುಸಂಖ್ಯಾತರಾದ ಹಿಂದೂ ಸಮುದಾಯದ ನಡುವೆ ಅಲ್ಪಸಂಖ್ಯಾತ ಮುಸಲ್ಮಾನರಾಗಿ ಬೆಳೆದದ್ದು, ಬಾಳಿದ್ದು. ಇಂತಹ ವಿಶಿಷ್ಟ ಸನ್ನಿವೇಶದಲ್ಲಿ ಜೀವನವನ್ನು ಸುಲಭ ಮಾಡಿಕೊಳ್ಳಲು ಅವರು ಸಾಧ್ಯವಾದಷ್ಟು ಇತರ ಮುಸ್ಲಿಮರೊಡನೆ ಮಾತ್ರ ಒಡನಾಡುತ್ತಾ ಉಳಿದವರ ಜೊತೆ ವ್ಯಾವಹಾರಿಕ ಸಂಪರ್ಕ ಮಾತ್ರ ಇಟ್ಟುಕೊಂಡಿರಬಹುದಾಗಿತ್ತು. ಆದರೆ ನಿಸಾರ್ ಅಹಮದ್ ಅವರು ಪ್ರಜ್ಞಾಪೂರ್ವಕವಾಗಿ (ಹಾಗೂ ದೂರ ದೃಷ್ಟಿಯುಳ್ಳ ತಂದೆಯವರ ಒತ್ತಾಸೆಯ ಮೇರೆಗೆ) ಕನ್ನಡವನ್ನು ಕಲಿತರು, ಕನ್ನಡದಲ್ಲಿ ಬರೆದರು, ಕನ್ನಡಿಗರೊಡನೆ ಒಡನಾಡಿದರು, ಕನ್ನಡ ನಾಡಿನಲ್ಲಿ ಕನ್ನಡಿಗರಾಗಿ ಬಾಳಿದ್ದೇ ಅಲ್ಲದೆ, ಕನ್ನಡದ ಒಬ್ಬ ಶ್ರೇಷ್ಠಕವಿ ಎಂದು ತಮ್ಮನ್ನು ಗುರುತಿಸಿಕೊಂಡರು. ಇದು ಸಾಮಾನ್ಯ ಸಾಧನೆ ಏನೂ ಅಲ್ಲ! ಈ ಅನ್ಯತೆ, ಅನನ್ಯತೆ ಎಂಬ ವಿಶಿಷ್ಟ ಅನುಭವಗಳ ಹಿನ್ನೆಲೆಯಲ್ಲಿ ಮೂಡಿದ ಭಾವನೆಗಳು ಬಹಳ ಕಲಾತ್ಮಕವಾಗಿ ಅವರ ಕವನಗಳಲ್ಲಿ ಮೂಡಿ ಬಂದಿದ್ದು, ಅವು ಕನ್ನಡ ಸಾಹಿತ್ಯದ ವೈವಿಧ್ಯ ಹಾಗೂ ಶ್ರೀಮಂತಿಕೆಯನ್ನು ಹೆಚ್ಚಿಸಿವೆ ಎಂದರೆ ಖಂಡಿತಾ ಅತಿಶಯೋಕ್ತಿಯಲ್ಲ.

ಹಾಗೆಂದು ನಿಸಾರ್ ಅವರ ಎಲ್ಲಾ ಕವನಗಳಲ್ಲೂ

ಒಂದು ಬಗೆಯ ಮುಸ್ಲಿಂ ಛಾಪು ಇದೆ ಎಂದು ನಾನು ಹೇಳುತ್ತಿಲ್ಲ. ಅವರ 'ಬೆಣ್ಣೆ ಕದ್ದ ನಮ್ಮ ಕೃಷ್ಣ'ದಂತಹ ಕವನಗಳನ್ನು ಓದುವಾಗ 'ಯಾರೋ ಸಂಪ್ರದಾಯಸ್ಥ ಹಿಂದೂ ಮನೆತನದಲ್ಲಿ ಬೆಳೆದವರು ಬರೆದ ಕವನ ಇದು' ಅನ್ನಿಸಿಬಿಡುತ್ತದೆ. ಇನ್ನು 'ಚೇತನಾಚೇತನದ ತಿರುಳು ನೀನಾಗಿರುವೆ' ಎಂದು ಶುರುವಾಗುವ ಕವನವಂತೂ ಭಗವದ್ಗೀತೆಯ ಸಾರವನ್ನೆಲ್ಲಾ ಹಿಡಿದಿಟ್ಟಂತಿದೆ. ಹಿಂದೂ ಸಂಸ್ಕೃತಿಯನ್ನು ಭಾವನಾತ್ಮಕವಾಗಿ ಅನುಭವಿಸಿದ ವ್ಯಕ್ತಿ ಮಾತ್ರ ಹಾಗೆ ಬರೆಯಲು ಸಾಧ್ಯ. ಹಿಂದೂ, ಮುಸ್ಲಿಂ ಎಂಬ ಎರಡು ಭಿನ್ನ ಸಂಸ್ಕೃತಿಗಳನ್ನು ತಮ್ಮ ಕವನಗಳಲ್ಲಿ ದಕ್ಕಿಸಿಕೊಂಡಿದ್ದಾರೆ ಎಂಬುದೇ ನಿಸಾರರ ಬರಹದ ಹೆಚ್ಚುಗಾರಿಕೆ, ಹೆಗ್ಗಳಿಕೆ.

ಪ್ರಸ್ತುತ ಲೇಖನದ ಉದ್ದೇಶ ನಿಸಾರರ ಕವನಗಳಲ್ಲಿನ 'ಮುಸ್ಲಿಂ'ತನವನ್ನು ಕುರಿತದ್ದರಿಂದ ಅವರ 'ರಂಗೋಲಿ ಮತ್ತು ಮಗ' ಹಾಗೂ 'ಸವತಿ ಮಕ್ಕಳ ಹಾಗೆ' ಎಂಬ ಎರಡು ಪ್ರಾತಿನಿಧಿಕ ಕವನಗಳನ್ನು ನಾನಿಲ್ಲಿ ಎತ್ತಿಕೊಂಡಿದ್ದೇನೆ. ಅವರ ಮುಸ್ಲಿಂ ಸಂವೇದನೆಯ, ಅದರ ವಿಶಿಷ್ಟವಾದ ಮುದ್ರೆಯನ್ನು ಅಭಿವ್ಯಂಜಿಸುವ ಹಲವಾರು ಕವಿತೆಗಳಿವೆ. ಅವುಗಳ ವೈವಿಧ್ಯ, ಮಾರ್ಮಿಕತೆ, ಕಲಾತ್ಮಕ ಅಭಿವ್ಯಕ್ತಿ ಹಾಗೂ ಭಾವಾಲೋಚನೆಗಳ ಉದ್ದೀಪನ ಗುಣ ಆಶ್ಚರ್ಯಜನಕವಷ್ಟೇ ಅಲ್ಲ, ಅತ್ಯಂತ ಸ್ವಂತಿಕೆಯ ಮೊಹರನ್ನುಳ್ಳದ್ದು. ಅವುಗಳ ವಿಸ್ತೃತ ಮತ್ತು ತಲಸ್ಪರ್ಶಿ ಅಧ್ಯಯನವೇ ಒಂದು ಪುಸ್ತಕವಾಗುವಷ್ಟು ಮಹತ್ವವನ್ನು ಪಡೆದಿದೆ. ಪುಟಗಳ ಮಿತಿಯ ದೆಸೆಯಿಂದ ಮುಖ್ಯವಾಗಿ ನಿಸಾರರ ಎರಡು ಕವನಗಳನ್ನು ಮಾತ್ರ ಇಲ್ಲಿ ವಿವೇಚಿಸಿದ್ದೇನೆ. ಚಿಕ್ಕವರಾಗಿದ್ದಾಗಿನಿಂದಲೂ ನಿಸಾರರಿಗೆ ರಂಗೋಲಿಯನ್ನು ಕಂಡರೆ ಇನ್ನಿಲ್ಲದ ಬೆರಗು, ಕೌತುಕ, ಗೌರವ ಮುಂತಾದ ಮಿಶ್ರ ಭಾವನೆಗಳು ಇರುವುದು ನಮ್ಮ ಅರಿವಿಗೆ ಬರುತ್ತದೆ:

'ನಮ್ಮದೊಂದು ಮನೆ ವಿನಾ
ಮಿಕ್ಕೆಲ್ಲ ಮನೆಯೆದುರು ಪರಿಶುಭ್ರ ಹಲ್ಲಂತೆ
ಮುಂಜಾನೆ ರಂಗವಲ್ಲಿ,
ಕಿಲಕಿಲಿಸಿದಂತೆ ಇಡೀ ಗಲ್ಲಿ.
ಹಾಲಿಗೆ ಹೊರಟಾಗ ಹೊತ್ತಾರೆ
ಚಿತ್ತಾಪಹಾರಿ ಚಿತ್ತಾರ
ಖಾಲಿ ಮನಸಿನ ಖೋಲಿ ಖೋಲಿಗಳ ಬೀಗ
ತೆರೆದು ತುಂಬುವುದೆಂಥ ಭಾವಾವೇಗ!

ಈ ಡಿಸೈನಿನ ಹಾಗೆ ಅದಿಲ್ಲ,
ಅದರಂತೆ ಇದಿಲ್ಲ,
ಜ್ಯಾಮಿತಿಯ ಗಡಸು, ಜಟಿಲ ಸೂತ್ರಗಳಿಗೆಲ್ಲ
ದಕ್ಕಿರುವುದಿಲ್ಲ ಮಿಗಿಲರ್ಥ,
ಮೃದು ಬೆರಳ ಪರಿಹಾರ;
ಕಾಲೇಜು ಕಲಿಯದ ಸುಮಂಗಲೆ
ರಂಗೋಲಿ ನೆವದಿಂದ ನೀಡಿದ್ದಾಳೆ

ಪ್ರತಿದಿನವು ಸೂತ್ರಗಳಿಗಾಕಾರ.'
(ರಂಗೋಲಿ ಮತ್ತು ಮಗ)

ಅಯ್ಯೊ, ನಮ್ಮ ಮನೆಯ ಮುಂದೆಯೂ ರಂಗೋಲಿ ಇದ್ದಿದ್ದರೆ? ಎಂಬ ಚಿಕ್ಕ ಹುಡುಗನ ಹಂಬಲ ಕಡೆಗೊಮ್ಮೆ ಈಡೇರುತ್ತದೆ. ಅವರ ಮನೆಯ ಔಟ್‌ಹೌಸಿನಲ್ಲಿ ಹೊಸದಾಗಿ ಬಾಡಿಗೆಗೆ ಬಂದಿದ್ದ ಹಿಂದೂ ಮಹಿಳೆ, ಮನೆಯ ಮುಂದೆ ರಂಗೋಲಿ ಬಿಡಿಸುತ್ತಾಳೆ. ಆದರೆ ಕಡೆಗೆ ಆದದ್ದೇನು?

'ನಮ್ಮ ಔಟ್‌ಹೌಸಿನ ಜನ
ಹೊಸ್ತಿಲ ಬಳಿ ರಂಗೋಲಿ ಬಿಡಿಸಿದ ಹೊತ್ತು
ಅಜ್ಜಿ ತೋರಿರಲು ಬಿರು ನುಡಿಯ ದೌಲತ್ತು
ಅಬ್ಬಾ! ನನಗೆಂಥ ನೋವಾಗಿತ್ತು!
ಒಮ್ಮೆ ಯಾವುದೋ ಚಿಂತೆಯಲ್ಲಿ ಬಗೆ ನೆಟ್ಟು
ಮನೆಯೊಂದರ ರಂಗೋಲಿ ಮೇಲೆ ಅಡಿಯಿಟ್ಟು
ಸರಕ್ಕನೆಳೆದುಕೊಂಡಿದ್ದೆ ಕೆಂಡ ತುಳಿದವನಂತೆ,
ಜೊತೆಗೆ ಆ ಮನೆಯವರು ಕಂಡರೋ ಎಂಬ ಚಿಂತೆ.'
(ಅದೇ)

ಇಲ್ಲಿ ಎದ್ದು ಕಾಣುವುದೆಂದರೆ ಹಿಂದೂ ಜನರ ಮಧ್ಯೆ ಬೆಳೆಯುತ್ತಿರುವ ಒಬ್ಬ ಮುಗ್ಧ ಮನಸ್ಸಿನ ಮುಸ್ಲಿಂ ಹುಡುಗ ಎದುರಿಸುತ್ತಿರುವ ಆತಂಕ, ಮುಜುಗರ, ಗೊಂದಲ. ರಂಗೋಲಿ ಒಂದು ಸಂಕೇತವಷ್ಟೆ. ಇನ್ನೆಷ್ಟು ಇಂತಹ ಸಂದರ್ಭಗಳಲ್ಲಿ ಈ ಪಾಪದ ಮುಸ್ಲಿಂ ಹುಡುಗ ತಲ್ಲಣಿಸಿದ್ದಾನೊ?

ಈ ಎಲ್ಲ ಭಾವನೆಗಳಿಗೆ, ಅಮೇರಿಕಾದಲ್ಲಿರುವ ಅಲ್ಪಸಂಖ್ಯಾತ ಇಂಡಿಯನ್ ಮಹಿಳೆ ನಾನಾದದ್ದರಿಂದ ಇದಕ್ಕೆ ಸಂವೇದನಾತ್ಮಕವಾಗಿ ಸ್ಪಂದಿಸಬಲ್ಲೆ, ಅರ್ಥಮಾಡಿಕೊಳ್ಳಬಲ್ಲೆ. ಅಂತಹ ಭಾವನೆಗಳನ್ನು ಹೊಮ್ಮಿಸುವ ಎಷ್ಟೋ ಅನುಭವಗಳಲ್ಲಿ ನನ್ನ ಮಗ ಅರುಣ್ ಪಾಲುದಾರನಾಗಿದ್ದಾನೆ. ಅರುಣ್ ಚಿಕ್ಕವನಾಗಿದ್ದಾಗ ನನ್ನನ್ನು ಯಾವಾಗಲೂ ಕೇಳುತ್ತಿದ್ದ : 'ಅಮ್ಮ, ನೀನು ನನಗೆ 'ಸ್ಕಾಟ್' ಅಥವಾ 'ಜಾನ್' ಅಂತ ಯಾಕೆ ಹೆಸರಿಡಲಿಲ್ಲ? ಯಾರೂ ಕೇಳೇ ಇಲ್ಲದ 'ಅರುಣ್' ಅನ್ನೋ ಹೆಸರು ಯಾಕಿಟ್ಟೆ? ಶಾಲೆಯಲ್ಲಿ ಪ್ರತೀ ಹೊಸ ಕ್ಲಾಸಿನಲ್ಲೂ ಹೊಸ ಟೀಚರ್ ಅಟೆಂಡೆನ್ಸ್ ಕರೆಯುವಾಗ ನನ್ನ ಹೆಸರು ಹೇಗೆ ಹೇಳಬೇಕೋ ಅರ್ಥವಾಗದೆ ಪೇಚಾಡುತ್ತಾರೆ. ಆಗೆಲ್ಲಾ ನನಗೆ ಎಷ್ಟು ಮುಜುಗರವಾಗುತ್ತೆ ಗೊತ್ತಾ? ನನ್ನ ಸ್ನೇಹಿತರು ನನ್ನನ್ನು ನೋಡಿ ಮುಸಿಮುಸಿ ನಗ್ತಾರೆ' ನನ್ನ ಮಗನ ಆತಂಕ, ಗೊಂದಲ ಎಲ್ಲವನ್ನೂ ಅರ್ಥಮಾಡಿಕೊಳ್ಳುವುದಷ್ಟೇ ಅಲ್ಲ, ನಾನೂ ಸಹ ಜೊತೆಯಾಗಿ ಅನುಭವಿಸುತ್ತಿದ್ದೆ. ಆದರೂ ನಮ್ಮ ಸಂಸ್ಕೃತಿಯನ್ನು ಕೈ ಬಿಡಲಾರದ, ಪರರ ಸಂಸ್ಕೃತಿಯನ್ನು ನಮ್ಮದು ಎಂದು ಕರೆಯಲಾಗದ ಅಸಹಾಯಕ ಭಾವ. ಇವೆಲ್ಲ ನಡೆದು ಮೂವತ್ತು ವರ್ಷಗಳೇ ಆದವು. ರಂಗೋಲಿ ಪ್ರಕರಣ ಭಾರತದ್ದು. ಈ ಕಥೆ ಅಮೇರಿಕದ್ದು. ಅದು ನಡೆದ ಕಾಲ ಬೇರೆ, ಇದು ನಡೆದ ಕಾಲ ಬೇರೆ. ದೇಶ, ಕಾಲ, ಸಂದರ್ಭ ಎಲ್ಲವೂ ಬೇರೆ.

ಆದರೇನು? ಭಾವ ಮಾತ್ರ ಒಂದೇ. ಇಂತಹ ಒಂದು ಸಾರ್ವತ್ರಿಕ, ಸಾರ್ವಕಾಲಿಕ ಸತ್ಯವನ್ನು ಹೊರಹೊಮ್ಮಿಸುವುದೇ ನಿಜವಾದ ಶ್ರೇಷ್ಠ ಕಲೆಯ ಸಂಕೇತ.

'ರಂಗೋಲಿ ಮತ್ತು ಮಗ' ಕವನದ ಕೊನೆಯಂತೂ ತುಂಬಾ ಅರ್ಥಗರ್ಭಿತ ಹಾಗೂ ಸರ್ವೋಚಿತವಾಗಿದೆ. ನಿಸಾರ್ ಅವರು ಮಗನ ಜೊತೆಗೆ ಹಾಲು ತರಲು ಹೋದಾಗ ಅವನು 'ನಾವು ಯಾಕೆ ರಂಗೋಲಿ ಇಡುವುದಿಲ್ಲ?' ಅಂತ ಪ್ರಶ್ನಿಸುತ್ತಾನೆ. 'ಕುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ' ಎಂದು ಉತ್ತರಿಸುತ್ತಾರೆ ನಿಸಾರ್ ಅವರು. 'ಮನೆ ಕಟ್ಟಿದ ಇಸ್ವಿ, ನಿನ್ನ ಹೆಸರು ಮನೆ ಎದುರು ಬರೆಸಿದ್ದೀಯಲ್ಲಾ, ಹಾಗಂತ ಹೇಳಿದೆಯಾ ಕುರಾನಿನಲ್ಲಿ!' ಅನ್ನುತ್ತಾನೆ ಮಗ.

'ಆತ್ಮಸಾಕ್ಷಿಯ ಕತ್ತು ಹಿಚುಕ ಬಂದವನನ್ನ,
ಮಗುವೆನ್ನಬಹುದೆ ಇವನನ್ನ?
ಭೋಳೆ ಪ್ರಶ್ನೆ ಎಲ್ಲೆಲ್ಲಿಗೋ ಕೈ ಚಾಚಿ
ಪೇಚಿಗಿಡಿಸಿತು ನನ್ನ
ಆಚರಣೆ, ನಂಬಿಕೆಗಳ ಮಡಿಕೆ ಮಡಿಕೆಯ ರಾಚಿ'
(ಅದೇ)

ಒಟ್ಟಿನಲ್ಲಿ ನಿಸಾರ್ ಅವರಂಥ ಸತ್ತ್ವಶಾಲಿ ಹಾಗೂ ಸೂಕ್ಷ್ಮಸಂವೇದಿ ಕವಿಯಲ್ಲದೆ ಮತ್ತಾರೂ ಬರೆಯಲಾಗದ ಕನ್ನಡದ ಕೆಲವು ಅತ್ಯಂತ ಧ್ವನಿಪೂರ್ಣ ಕವಿತೆಗಳಲ್ಲಿ 'ರಂಗೋಲಿ ಮತ್ತು ಮಗ' ಕವನಕ್ಕೆ ಗಣನೀಯ ಸ್ಥಾನವಿದೆ.

ಇನ್ನು ದಿನ ದಿನದ ಬದುಕಿನಲ್ಲಿ ಮುಸ್ಲಿಮರು ಎದುರಿಸಬೇಕಾದ ಸಂಕಷ್ಟಗಳನ್ನು 'ಸವತಿ ಮಕ್ಕಳ ಹಾಗೆ' ಎಂಬ ಕವನ ಅತ್ಯಂತ ಮಾರ್ಮಿಕವಾಗಿ ಧ್ವನಿಸುತ್ತದೆ. ಎಲ್ಲೋ ಕೆಲವರು ಮಾಡಿದ ಕೃತ್ಯಗಳಿಗಾಗಿ ಇಡೀ ಮುಸ್ಲಿಂ ಜನಾಂಗವನ್ನೇ ದೂಷಿಸುವುದನ್ನು ಮಾಡಬೇಡಿ ಎಂದು ಅವರು ಕಳಕಳಿಯಿಂದ ಹೀಗೆ ಕೇಳಿಕೊಳ್ಳುತ್ತಾರೆ:

'ಸವತಿ ಮಕ್ಕಳ ಹಾಗೆ ಕಾಣಬೇಡವ್ವ
ಸವತಿ ಮಕ್ಕಳ ಹಾಗೆ ಕಾಡಬೇಡ.
ಹಾಲನುಣಿಸಿದ ಮೊಲೆಯ ಕೊಯ್ಯುವರು ಎಂಬೆ,
ತಾಯ ಲಾಡಿಗೆ ಕೈಯ್ಯ ಹಚ್ಚುವರು ಎಂಬೆ,
ಮರುಧರೆಯ ಮರುಳರ ಕಡು ನೆಂಟರೆಂಬೆ,
ಪಕ್ಕದ ಖೂಳನ ಏಜೆಂಟರೆಂಬೆ;
ಹಳೆ ಹೇಳಿಗೆಯ ನಂಜೆದೆಯ ತಳಿಗಳ ಜೊತೆಯಲ್ಲೆ
ಹೊಸ ಪೀಳಿಗೆಯ ನಿರಪಾಯ ಏಳಿಗೆಯ ಸುಳಿಗಳನು
ದೂಡುವೆ ಸಂಶಯದ ಖೆಡ್ಡಕ್ಕೆ ತಾಯಿ,
ಲೇಬಲ್ಲನ್ನಂಟಿಸುವ ಗಡ್ಡಕ್ಕೆ ತಾಯಿ'
(ಸವತಿ ಮಕ್ಕಳ ಹಾಗೆ)

—ಎಷ್ಟು ನೋವು ತುಂಬಿದೆ ಈ ಮಾತುಗಳಲ್ಲಿ! ತಾವು ಎಂದೆಂದಿಗೂ ಮಾಪವ

ಕೆಲಸಗಳಿಗಾಗಿ ತಮ್ಮ ಮೇಲೆ ದೋಷಾರೋಪ ಮಾಡುತ್ತಿರುವ ಜನತೆಗೆ ಕೈ ಮುಗಿದು ವಿನಮ್ರತೆಯಿಂದ ಕೇಳುತ್ತಿದ್ದಾರೆ: 'ಯಾಕೆ ನಮ್ಮನ್ನು ಸಂಶಯದ ಖೆಡ್ಡಾಕ್ಕೆ ತಳ್ಳುತ್ತಿದ್ದೀರಿ? ಗಡ್ಡಕ್ಕೆ ಲೇಬಲ್ಲನ್ನು ಅಂಟಿಸುತ್ತಿದ್ದೀರಿ?' ಎಂದು.

'ಮರುಧರೆಯ ಮರುಳರ ಕಡು ನೆಂಟರೆಂಬೆ' ಎಂಬ ಪದ ಪುಂಜವನ್ನು ಇರಾನ್, ಇರಾಕ್ ಮುಂತಾದ ದೇಶಗಳಲ್ಲಿ ಹುಚ್ಚಾಟ ನಡೆಸುತ್ತಿರುವವರನ್ನು ಇಲ್ಲಿನ ಮುಸ್ಲಿಮರ ನೆಂಟರು ಎನ್ನುತ್ತಾರೆ, ಎಂದು ನಿಸಾರರು ಹೇಳುತ್ತಿದ್ದಾರೆಂದು ನಾನು ಅರ್ಥೈಸಿಕೊಂಡಿದ್ದೇನೆ. ಇಲ್ಲಿ 'ಖೆಡ್ಡಾ' ಎಂಬ ಪದ ಬಹಳ ಸಮರ್ಥವಾಗಿ, ಧ್ವನಿಪೂರ್ಣವಾಗಿ ಹೇಳ ಬೇಕಾದದ್ದನ್ನೆಲ್ಲಾ ಹೇಳುತ್ತಿದೆ. ಕಾಡಿನಲ್ಲಿ ತಮ್ಮ ಪಾಡಿಗೆ ತಾವು ಯಾರಿಗೂ ತೊಂದರೆ ಕೊಡದೆ ಓಡಾಡಿಕೊಂಡಿರುವ ಆನೆಗಳನ್ನು ಸ್ವಾರ್ಥಕ್ಕಾಗಿ ಮನುಷ್ಯ ಖೆಡ್ಡಾದ ಹಳ್ಳದಲ್ಲಿ ಬೀಳಿಸಿ ಚಿತ್ರವಿಚಿತ್ರ ಹಿಂಸೆಗೆ ಒಳ ಮಾಡುವ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಅದೊಂದು ಪದದಲ್ಲೇ ನಿರಪರಾಧಿ ಮುಸ್ಲಿಮರು ಅನಾವಶ್ಯಕವಾಗಿ ಅನುಭವಿಸುತ್ತಿರುವ ನೋವು, ನಷ್ಟಗಳನ್ನು ಶಕ್ತಿಯುತವಾಗಿ ಸೆರೆ ಹಿಡಿದಿದ್ದಾರೆ ಕವಿ ನಿಸಾರರು.

ಲೋಕಕ್ಕೆ ತೋರಿಕೆಗೆ ನಮ್ಮದು ಜಾತ್ಯತೀತ ರಾಷ್ಟ್ರ ಎಂದು ಹೇಳಿಕೊಳ್ಳುತ್ತ, ಒಳಗೊಳಗೇ 'ಡಬಲ್ ಸ್ಟ್ಯಾಂಡರ್ಡ್' ಮೆರೆಸುವುದನ್ನು ಅವರು ಹೀಗೆ ವರ್ಣಿಸುತ್ತಾರೆ:

'ಹೆಚ್ಚು ಕಡಿಮೆಗಳಿಲ್ಲ ಇಂಡಿಯನ್ನರು ಒಂದೆ
ಹಲವು ಬಣ್ಣದ ಕುರಿಗಳಿಂದಾದ ಮಂದೆ—
ಎಂದು ಲೋಕಕೆ ಸಾರಿ, ಪಶ್ಚಿಮರ ಮುಂದೆ
ಮೆರೆಸುವೆ ರಾಷ್ಟ್ರಪತಿ ದಾಡಿಗನ ಮಂಡೆ.
ಬಾಡಿಗೆಯ ಮನೆಗಿಲ್ಲಿ ಅಲೆದಿರಲು, ಮನೆಯೊಡೆಯ
ಹೆಸರಿಂದ ಕುಲವರಿತು ಅಟ್ಟಲು ಕಾರಣ
ಮುದಿ ತಾಯ ಮಡಿತನವನೊಡ್ಡುವೆ ಅಮ್ಮ,
ಬೇವರ್ಸಿಗಳ ಹಾಗೆ ಅಲೆಸುವೆ ಅಮ್ಮ.'

(ಅದೇ)

ದಿನ ದಿನದ ಜೀವನವೇ ಕಷ್ಟವಾಗಿರುವ ಸಮಯದಲ್ಲಿ ದುಡ್ಡು ಕೊಡಲು ತಯಾರಿದ್ದರೂ ಮತದ ಕಾರಣ ಬಾಡಿಗೆ ಮನೆ ಸಿಕ್ಕದೆ 'ಬೇವರ್ಸಿ'ಯ ಹಾಗೆ ಅಲೆಯುತ್ತಿರುವ ಮುಸ್ಲಿಂ ಗೃಹಸ್ಥನ ಬಗ್ಗೆ ನಮಗೆ 'ಅಯ್ಯೋ' ಅನ್ನಿಸಿಬಿಡುತ್ತದೆ. ಹೀಗೆ, ಸಮಾಜದ ಕಣ್ಣು ತೆರೆಸುವುದು ಕವಿಯ ಲೇಖನಿ ಮಾಡುವ ಒಂದು ಮುಖ್ಯವಾದ ಕೆಲಸ. ನಿಸಾರರು ತಮ್ಮ ಅನೇಕ ಕವನಗಳಲ್ಲಿ ಈ ಸಾರ್ಥಕ ಕಾರ್ಯವನ್ನು ಮಾಡಿದ್ದಾರೆ.

ಕೊನೆಗೆ ಏನೇ ಆದರೂ, ಎಷ್ಟೇ ಕಷ್ಟ ಬಂದರೂ 'ಈ ನಾಡೇ ನಮ್ಮ ನಾಡು' ಎಂದು ತಮ್ಮ ನಿಷ್ಠೆಯನ್ನು ಸಾರುತ್ತಾರೆ.

'ಬೆಳಕ ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ,
ಏನಾಟವಾಡಿದರು ನಿನ್ನಡಿಯ ಗಡಿಯಲ್ಲೆ,
ಮರಳಂತೆ ಸಣ್ಣಾಗಿ ಬಾಳ್ದೊರೆಯ ತಡಿಯಲ್ಲೆ

ಸುಡು ಬಿಸಿಲಸುಂಡರೂ, ಕೈ ನೀಡಿನೆಡೆಯಲ್ಲೆ
ಹರಿವ ನೀರನು ಕಂಡು ನೀರಡಿಕೆ ಉಲ್ಬಣಿಸಿ
ನಿನ್ನ ಹಳಿಯುವ ಖೋಡಿ ತಿಳಿಗೇಡಿಗಳ ಹರಸಿ
ತೆಗೆದುಕೋ ಇವರನ್ನು ಲೆಕ್ಕಕ್ಕೆ ತಾಯೆ
ಪರದೆಯೆಳಿ ಇವರೆದೆಯ ದುಃಖಕ್ಕೆ ತಾಯೆ'

(ಅದೇ)

ಮುಸ್ಲಿಂ ಜನತೆ 'ಬಾಳ್ಹೊರೆಯ ತಡಿಯಲ್ಲಿ'ರುವ ಮರಳಂತೆ. ತೊರೆಯಲ್ಲಿ ಎಷ್ಟು ನೀರು ಹರಿದರೇನು? ದಡದಲ್ಲಿರುವ ಮರಳಿಗೆ ಅದು ದಕ್ಕೀತೆ? ಕೊನೆಗೊಮ್ಮೆ 'ನೀರಡಿಕೆ ಉಲ್ಬಣಿಸಿ' ಅವರು ನಿನ್ನನ್ನೇ ಹಳಿಯುತ್ತಿದ್ದಾರೆ. ಆದರೂ ಅವರನ್ನು ಹರಸಿ ಲೆಕ್ಕಕ್ಕೆ ತೆಗೆದುಕೊ ಎಂದು ಮನವಿ ಮಾಡುತ್ತಿದ್ದಾರೆ. ಈ ಹೃದಯಂಗಮವಾದ ಚಿತ್ರವನ್ನು ನೋಡುತ್ತಿದ್ದಂತೆ, 'ನೀರಡಿಕೆ ಉಲ್ಬಣಿಸಿ' ತನ್ನನ್ನು ಹಳಿಯುತ್ತಿರುವ ಆ ಮಕ್ಕಳನ್ನು ತಾಯಿ ಅಪ್ಪಿಕೊಳ್ಳಲೇಬೇಕಲ್ಲವೇ? ಎಂದು ಅನ್ನಿಸುತ್ತದೆ ನಮಗೆ. ಆ 'ತಾಯಿ' ಕನ್ನಡದ ಜನತೆ ಆಗಿರಬಹುದು ಅಥವಾ ಭಾರತ ಮಾತೆ ಆಗಿರಬಹುದು.

ಮುಸ್ಲಿಮರನ್ನು ಸಮಾಜವೇ ಶಂಕಿಸುತ್ತಿರುವಾಗ ಎಷ್ಟು ನೋವಾಗುತ್ತದೆ ಎಂಬುದನ್ನು ಅವರ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನದ ಈ ಸಾಲುಗಳು ಮನ ಕಲಕುವಂತೆ ಹೇಳುತ್ತವೆ:

'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ, ನೀಯತ್ತು, ಹಕ್ಕು,
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನ
ಹುಸಿ ನಗುತ್ತ ಎದುರಿಸುವುದಿದೆಯಲ್ಲ,
ಅದು ಬಲು ಕಷ್ಟದ ಕೆಲಸ.'

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

ಯಾರಿಗೂ ಇಲ್ಲದ 'ಅಗ್ನಿ ಪರೀಕ್ಷೆ' ಮುಸ್ಲಿಮರಿಗೇಕೆ? ಅವರು ತಮ್ಮ ಸಾಚಾತನವನ್ನು, ನಿಷ್ಠೆಯನ್ನು ಮತ್ತೆ ಮತ್ತೆ ಸಾಬೀತು ಪಡಿಸುವಂತೆ ಮಾಡುವುದು ಯಾವ ಸೀಮೆಯ ನ್ಯಾಯ? ಇಂದು ಅಮೇರಿಕಾದ ವಿಮಾನ ನಿಲ್ದಾಣಗಳಲ್ಲಿ ಕಂದು ಬಣ್ಣದ ಯುವಕರನ್ನೆಲ್ಲಾ ಹೆಚ್ಚಿನ ರಕ್ಷಣಾ ತಪಾಸಣೆ (ಸೆಕ್ಯುರಿಟಿ ಚೆಕ್ಕಿಂಗ್)ಗೆ ಒಳಪಡಿಸುವುದನ್ನೂ ಟೀಕಿಸುವ ನಾವು ನಮ್ಮ ನಿಲವನ್ನು ಮತ್ತೊಮ್ಮೆ ಪರೀಕ್ಷಿಸಿಕೊಳ್ಳಬೇಕಾಗಿದೆ. ತಪ್ಪಿತಸ್ಥರೆಂದು ರುಜುವಾತು ಪಡಿಸುವವರೆಗೂ ನಿರಪರಾಧಿಗಳು (innocent until proven guilty) ಎಂಬ ನಾಣ್ಣುಡಿಯನ್ನು ಮುಸ್ಲಿಮರ ಮಟ್ಟಿಗೆ ಉಲ್ಟಾ ಮಾಡಿ ನಿರಪರಾಧಿಗಳೆಂದು ಸಾಬೀತಾಗುವವರೆಗೂ ತಪ್ಪಿತಸ್ಥರು (guilty until proven innocent) ಎನ್ನಬಹುದೆ?

—ಹೀಗೆ ಮುಸ್ಲಿಮರ ವಿಶಿಷ್ಟ ಅನುಭವಗಳನ್ನು ತಮ್ಮ ಕವನಗಳಲ್ಲಿ ಕಡೆದದ್ದೇ ಅಲ್ಲದೆ, ನಿಸಾರರು ಇನ್ನೊಂದು ಬಗೆಯಲ್ಲಿ ನಮ್ಮ ಭಾಷೆಯ ವೈವಿಧ್ಯಮಯವಾದ ಸೊಗಡನ್ನು ಮೆರೆಸಿದ್ದಾರೆ. ಅದೆಂದರೆ ಉರ್ದುವಿನಿಂದ ಕನ್ನಡಕ್ಕೆ ಬಂದಿರುವ ಪದಗಳನ್ನು ರಸವತ್ತಾಗಿ, ಅರ್ಥವತ್ತಾಗಿ, ಸಂದರ್ಭೋಚಿತವಾಗಿ ಬಳಸಿರುವುದು. ಈ ಕೆಳಗಿನ ಸಾಲುಗಳನ್ನು ನೋಡಿ:

1. **'ಮಾತು, ಮಾತು, ಮಾತು, ಮಾತು,**
ಮಾತಿನ ಗೈರತ್ತಿನಲ್ಲಿ ಕರಾಮತ್ತು ನಡೆಸುವವರು'
(ಕುರಿಗಳು, ಸಾರ್, ಕುರಿಗಳು)

2. **'ಮೀರ್ ಸಾಧಕರು ಮತ್ತೆ ನಮ್ಮಕ್ ಹರಾಮರು**
ಮೊಘಲಾಯಿ ದೌಲತ್ತು ಮೆರೆವ ಅನಾಮರು,
ಇದ್ದಾರು ಕೋಮಿನ ಕಂತ್ರಾಟುದಾರರು,
ಮಾಸೂಮು ಮಂದಿಯ ನೆಮ್ಮದಿ ಚೋರರು:
ಮಾಡವ್ವ ಅಂಥವರ ಸುಳಿಯ ಸಫಾಯಿ'
(ಸವತಿ ಮಕ್ಕಳ ಹಾಗೆ)

3 **'ರಾಜಕಾರಣಿ ಶಕುನಿ, ಸಿನಿಮಾ ಮೊದ್ದು ಕಣ್ಮಣಿ,**
ಕ್ರಿಕೆಟ್ ಶಿಖಾಮಣಿಗಳದೇ ಕೈಫಿಯತ್ತು:
ಅವರದೇ ದೇಖಾವೆಯ ದೊಂಬರಾಟದ ಗರ್ದಿ ಗಮ್ಮತ್ತು.'
(ಸಮೂಹ ಮಾಧ್ಯಮಗಳು)

—ಹೀಗೆ ಬರೆಯುತ್ತಿರುವ ನಿಸಾರರು ಅಷ್ಟೇ ಸಮರ್ಥವಾಗಿ ಸಂಸ್ಕೃತ ಮಿಶ್ರಿತ ಕನ್ನಡವನ್ನು ಬರೆಯಬಲ್ಲರು ಎಂಬುದನ್ನೂ ಮರೆಯಬಾರದು. 'ನಿತ್ಯೋತ್ಸವ'ದಿಂದ ಹಿಡಿದು 'ಬೆಣ್ಣೆ ಕದ್ದ ನಮ್ಮ ಕೃಷ್ಣ'ದವರೆಗೆ ಅಂತಹ ಗಂಭೀರ ಬಗೆಯ ಕನ್ನಡವನ್ನು ಯಥೇಚ್ಛವಾಗಿ ಬಳಸಿರುವ ನಿದರ್ಶನಗಳು ಬೇಕಾದಷ್ಟಿವೆ. ಇದು ನಿಸಾರರಿಗೆ ಭಾಷೆಯ ಮೇಲಿರುವ ಪ್ರಭುತ್ವವನ್ನು ವ್ಯಕ್ತಗೊಳಿಸುತ್ತದೆ.

ಪಾಯಸದಲ್ಲಿ ಗೋಡಂಬಿ, ದ್ರಾಕ್ಷಿಗಳಿರುತ್ತವೆ. ಅವು ಎಂದೂ ಪಾಯಸದಲ್ಲಿ ಕರಗಿ ಹೋಗುವುದಿಲ್ಲ. ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡೇ ಅವು ಪಾಯಸಕ್ಕೆ ವಿಶೇಷ ರುಚಿಯನ್ನು ನೀಡುತ್ತವೆ. ನಿಸಾರರೂ ಅದೇ ಕೆಲಸ ಮಾಡುತ್ತಿದ್ದಾರೆ. ತಮ್ಮ ಮುಸ್ಲಿಂ ವೈಶಿಷ್ಟ್ಯವನ್ನು ಉಳಿಸಿಕೊಂಡೇ ಅವರು ಆ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಅವರ ಈ ಘನಕಾರ್ಯ ನಿರಾತಂಕವಾಗಿ ಚಿರ ಕಾಲ ಮುಂದುವರೆಯಲಿ.

ಆಚರಣೆಗೆ ಬಾರದ ವಿಜ್ಞಾನ, ಅಜ್ಞಾನಕ್ಕೊಂದು ಗೌರವಯುತ ಅಭಿಧಾನ.



ಎರಡು ಸಂಸ್ಕೃತಿಗಳ ನಡುವೆ ನಿಸಾರ್ ಅವರ ಕಾವ್ಯ

◆ *ಡಾ. ರಹಮತ್ ತರೀಕೆರೆ*

ನಿಸಾರ್ ಅಹಮದ್ ಅವರಿಗೆ ೭೦ ವರ್ಷ ತುಂಬಿದಾಗ ಒಂದು ಕಾರ್ಯಕ್ರಮ ಬೆಂಗಳೂರಿನಲ್ಲಿ ಏರ್ಪಾಡಾಗಿತ್ತು. ಅದರಲ್ಲಿ ಅವರ ನಿಡುಗಾಲದ ಗೆಳೆಯರೆಲ್ಲ ನಿಸಾರರ ಜತೆಗಿನ ತಮ್ಮ ಗೆಳೆತನದ ಅನುಭವಗಳನ್ನು ಆಪ್ತವಾಗಿ, ತಮಾಷೆಯಾಗಿ ಹಂಚಿಕೊಂಡರು. ಅವರಲ್ಲಿ ಒಬ್ಬರಾದ ಎಚ್ಚೆಸ್ಕೆಯವರು ಮಾತಾಡುತ್ತ ಹೇಳಿದರು: `ನೋಡಿ, ನಿಸಾರ್ ನಮ್ಮ ಧರ್ಮದವರಲ್ಲ. ಆದರೂ ನಮ್ಮ ಸಂಸ್ಕೃತಿಯ ಬಗ್ಗೆ ಚೆನ್ನಾಗಿ ತಿಳಕೊಂಡಿದ್ದಾರೆ. ಎಷ್ಟೊಂದು ಸೊಗಸಾಗಿ ಬರೀತಾರೆ!' ಎಂದು ವಿಸ್ಮಯದಿಂದ ಹೇಳಿದರು. ಹಾಗೆ ಹೇಳುವಾಗ ಅವರ ಮನಸ್ಸಿನಲ್ಲಿ ನಿಸಾರರ 'ಬೆಣ್ಣೆ ಕದ್ದ ಕೃಷ್ಣ' ಮುಂತಾದ ಕವನಗಳಿದ್ದವೊ ಏನೊ? ಅವರು ಈ ಮೆಚ್ಚು ಮಾತುಗಳನ್ನು ಪ್ರಾಮಾಣಿಕವಾಗಿಯೇ ಆಡಿದರು. ಆದರೆ ನಾವು-ಅವರು ನಮ್ಮ-ಅವರ ಎಂಬ ಈ ಪರಿಭಾಷೆಯು, ಅವರಿಗೇ ಅರಿಯದಂತೆ ಅವರ ಜೀವದ ಗೆಳೆಯರನ್ನು ಸಾಂಸ್ಕೃತಿಕವಾಗಿ ಪರಕೀಯರಾದವರು ಎಂಬ ಧ್ವನಿಯನ್ನು ಹೊಮ್ಮಿಸಿತು. (ಆಗ ನಿಸಾರ್ ಸಭೆಯಲ್ಲಿ ಇರಲಿಲ್ಲ.) ತನ್ನನ್ನು ಪ್ರೀತಿಸುವ ಗೆಳೆಯರಲ್ಲೂ ತಮ್ಮನ್ನು ಎಲ್ಲೋ ಒಂದುಕಡೆ ಹೊರಗಿಟ್ಟು ನೋಡುವ ಈ ಮನೋಭಾವವೆ ಅವರ `ನಿಮ್ಮೊಳಗಿದ್ದೂ ನಿಮ್ಮಂತಾಗದೆ`ಯಂತಹ ಕವನಗಳಿಗೆ ಕಾರಣವಾಗಿರಬಹುದು. ಇದನ್ನೇ ಅವರು ತಮ್ಮದೊಂದು ಸಂದರ್ಶನದಲ್ಲಿ `ಎರಡು ಸಂಸ್ಕೃತಿಗಳ ನಡುವೆ

ಇದ್ದುಕೊಂಡು ಬರೆಯುವುದು ಬಹಳ ಕಷ್ಟದ ಕೆಲಸ' ಎಂದು ಹೇಳಿರಬಹುದು ಅನಿಸಿತು.

ಭಾರತದ ಲೇಖಕರು ನಿರ್ದಿಷ್ಟವಾದ ಜಾತಿಗೋ ಧರ್ಮಕ್ಕೋ ಸಂಬಂಧಪಟ್ಟವರಾಗಿರುವುದು, ನಮ್ಮ ಸಾಮಾಜಿಕ ವಾಸ್ತವಗಳಲ್ಲಿ ಒಂದು. ಅವರ ಅನುಭವ ಲೋಕವು ಈ ಸಾಮಾಜಿಕ ವಾಸ್ತವದೊಂದಿಗೆ ಸಹಜವಾಗಿಯೇ ಸಂಬಂಧಪಟ್ಟಿರುತ್ತದೆ. ಆದರೆ ಈ ಅನುಭವ ಲೋಕ ಹಾಗೂ ಸಂವೇದನೆಯಲ್ಲಿ ಅವರದ್ದು ಮಾತ್ರವಲ್ಲದೆ, ಅವರದ್ದಲ್ಲದ ಧರ್ಮಜಾತಿಗಳದ್ದು, ಅಂದರೆ ಅವರು ಬದುಕುತ್ತಿರುವ ಸುತ್ತಲಿನ ಪರಿಸರದ್ದು ಸಹ ಅವರ ಭಾವಕೋಶದಲ್ಲಿ ಸೇರಿಹೋಗಿರುತ್ತದೆ. ಇದರ ಸಂಕರಗೊಂಡ ಅನುಭವವು ಸೃಜನಶೀಲ ಅಭಿವ್ಯಕ್ತಿ ಪಡೆಯುವಾಗ, ಆ ಲೇಖಕರು ಜಾತ್ಯತೀತ ಮನೋಧರ್ಮದವರಾಗಿದ್ದರೆ, ಸಾಧಾರಣೀಕರಣಗೊಂಡು ಮಾನವಾನುಭವವಾಗಿ ಮಂಡನೆಯಾಗುತ್ತದೆ. ಅಲ್ಲಿ ಲೇಖಕರು ತಂತಮ್ಮ ಧರ್ಮ ಜಾತಿಗಳ ಅನುಭವಗಳಲ್ಲಿ ಇರುವ ಸಾಂಸ್ಕೃತಿಕ ಸಂವೇದನೆಯನ್ನು ಬಿಟ್ಟುಕೊಡದೆ, ಅದರ ಭೇದಭಾವಕರವಾದ ಗುಣಗಳನ್ನು ಮೀರುತ್ತಾರೆ. ಇದು ಎಲ್ಲ ಸೃಜನಶೀಲ ಕ್ರಿಯೆಯ ಒಳಗೆ ಸಂಭವಿಸುವ ರೂಪಾಂತರ. ಕುವೆಂಪು ಅವರ ಅನುಭವ ಜಗತ್ತು ಮಲೆನಾಡಿನ ಒಕ್ಕಲಿಗ ಪರಿಸರದ್ದು; ಅದು ಕಾಲದ ದೃಷ್ಟಿಯಿಂದ ೧೯ ಮತ್ತು ೨೦ನೇ ಶತಮಾನಕ್ಕೆ ಸೇರಿದ್ದು. ಅದು ತನ್ನ ಕಾಲ ದೇಶ ಸಾಮಾಜಿಕ ಹಿನ್ನೆಲೆಗಳನ್ನು ಸಂಪೂರ್ಣ ತ್ಯಾಗ ಮಾಡದೆಯೂ ಒಂದು ಬಗೆಯ ಮೀರುವಿಕೆ ಮಾಡುತ್ತಿರುತ್ತದೆ. ಇದನ್ನು ಚರಿತ್ರೆಯ ಮೀರುವಿಕೆ ಎನ್ನಬಹುದು. ಈ ಮೀರುವಿಕೆಯೇ ಅವರನ್ನು ಮನುಕುಲದ ಬರೆಹಗಾರರನ್ನಾಗಿ ಮಾಡುತ್ತದೆ. ಲೇಖಕರು ತಮ್ಮ ಎಲ್ಲ ಧರ್ಮ ಜಾತಿಗಳಲ್ಲಿ ಹರಡಿ ಹೋಗಿರುವ ಓದುಗರಿಗಾಗಿ ಬರೆಯಬೇಕಾಗಿರುವುದು ಕೂಡ ಈ ಸಾರ್ವತ್ರೀಕರಣಕ್ಕೆ ಕಾರಣವಾಗುತ್ತದೆ. ಆಗ ನಮ್ಮ ಅಥವಾ ಅವರ ಧರ್ಮ ಎಂಬ ಪರಿಭಾಷೆಯೆ ಅನುಪಯುಕ್ತ ಮತ್ತು ಸಂಕುಚಿತ.

ಈ ಹಿನ್ನೆಲೆಯಲ್ಲಿ ನೋಡುವಾಗ, ಒಬ್ಬ ಲೇಖಕ ನಮ್ಮ ಧರ್ಮದ ಬಗ್ಗೆ ಬರೆಯುತ್ತಾನೆ ಎಂಬ ಮೆಚ್ಚುಗೆಯಲ್ಲಿ ಎಷ್ಟೇ ಸದಾಶಯವಿದ್ದರೂ ಅದು ಆಳದಲ್ಲಿ 'ಅವನು ನಮ್ಮವನಲ್ಲ' ಎಂಬ ಮೂಲಭೂತ ಗ್ರಹಿಕೆಯ ಆಧಾರದಲ್ಲೇ ಹುಟ್ಟಿರುತ್ತದೆ. ಅದರಲ್ಲೂ ಭಾರತದ ಬಲಪಂಥೀಯ ವಿಚಾರಧಾರೆಗಳು 'ಮುಸ್ಲಿಮರ ನಿಷ್ಠೆ ನಮ್ಮ ದೇಶಕ್ಕೆ, ನಮ್ಮ ಸಂಸ್ಕೃತಿಗೆ ಅಲ್ಲ; ಅವರು ಪರಕೀಯರು' ಎಂಬ ಪ್ರಣಾಳಿಕೆಯನ್ನು ಕಾಮನ್‌ಸೆನ್ಸಿಗೆ ತಲಪಿಸಿಬಿಟ್ಟಿವೆಯಾದ ಕಾರಣ, 'ನಮ್ಮ ಸಂಸ್ಕೃತಿ' 'ಅನ್ಯಭಾಷಿಕ' 'ಅನ್ಯಧರ್ಮ' 'ಅನ್ಯ ಸಂಸ್ಕೃತಿಯವರು' ಎಂಬ ಮಾತುಗಳಿಗೆ ಭೇದಭಾವದ ಆಯಾಮ ಬಂದು ಬಿಡುತ್ತದೆ. ಈ ಬಗೆಯ ನಿಂದಾಸ್ತುತಿಯ ಓದುಗ ಸಮುದಾಯವು, ಲೇಖಕರಿಗೆ ತನಗೆ ನಿಜವಾಗಿಯೂ ಕಾಡದೆ ಇರುವ ವಿಚಾರಗಳನ್ನೂ ಅನುಭವಗಳನ್ನೂ ತನ್ನ ಟೀಕಾಕಾರರಿಗೆ ಉತ್ತರಿಸಲು ಹಾಗೂ ಪ್ರಶಂಸಕರಿಗೆ ಮೆಚ್ಚಿಸಲು ಬರೆಯುವಂತೆ ಒತ್ತಡ ಹಾಕಿಬಿಡುತ್ತದೆ. ಇದು ತನ್ನ ಧರ್ಮದ ಅನುಭವವನ್ನು ಸಹಜವಾಗಿ ಆರಿಸಿಕೊಂಡು ಬರೆಯುವುದಕ್ಕೆ ಹಿಂಜರಿಕೆಯನ್ನು ಉಂಟುಮಾಡುತ್ತದೆ. ಈ ಕೃತಕ ಆವಾಹನೆ ಹಾಗೂ ಕೃತಕ ದೂರೀಕರಣದ ಎರಡೂ

ಒತ್ತಡಗಳು ನಮ್ಮ ಸಮಾಜದಲ್ಲಿ ಅನೇಕ ಲೇಖಕರಿಗೆ ಇವೆ. ಅದರಲ್ಲೂ ಮುಸ್ಲಿಂ, ಕ್ರೈಸ್ತ ಹಾಗೂ ಜೈನ ಧರ್ಮಕ್ಕೆ ಸೇರಿದ ಲೇಖಕರು ಎದುರಿಸುವ ವಿಚಿತ್ರವಾದ ಸಾಂಸ್ಕೃತಿಕ ಹಾಗೂ ಸೃಜನಶೀಲತೆಯ ಕಷ್ಟಗಳಲ್ಲಿ ಒಂದಾಗಿದೆ; ಶಾಂತಿನಾಥ ದೇಸಾಯಿಯವರು ತಮ್ಮ ಧರ್ಮಕ್ಕೆ ಸಂಬಂಧಿಸಿದ ಅನುಭವ ಜಗತ್ತನ್ನು ನೇರವಾಗಿ ಮುಖಾಮುಖಿ ಮಾಡಲು ತಮ್ಮ ಕೊನೆಯ ಕಾದಂಬರಿ 'ಓಂ ಣಮೋ' ತನಕ ಯಾಕೆ ಕಾಯಬೇಕಾಯಿತು ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ಈ ಬಿಕ್ಕಟ್ಟಿನ ಆಳ ಗೊತ್ತಾಗುತ್ತದೆ. ನಿಸಾರ್ ತಮ್ಮ ಸಂದರ್ಶನಗಳಲ್ಲಿ 'ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯುವುದು ಬಹಳ ಕಷ್ಟದ ಕೆಲಸ' ಎಂದು ಹೇಳುವುದು ಇದನ್ನೇ ಕುರಿತಿರಬಹುದು. ಆದರೆ ಈ ಬಿಕ್ಕಟ್ಟನ್ನು ಮುಖಾಮುಖಿ ಮಾಡುವ ಬೇರೆ ಬೇರೆ ಬಗೆಯ ಪ್ರಯತ್ನವನ್ನು ನಿಸಾರರ ಐದು ದಶಕಗಳ ಕಾಲದ ಕಾವ್ಯವು ಮಾಡುತ್ತ ಬಂದಿದೆ. ಈ ಸಾಂಸ್ಕೃತಿಕ ಬಿಕ್ಕಟ್ಟು ಹಾಗೂ ಸಂಘರ್ಷಗಳು ಅವರ ಕಾವ್ಯದಲ್ಲಿ ಹಲವು ವಿನ್ಯಾಸಗಳಲ್ಲಿ ವ್ಯಕ್ತವಾಗುತ್ತ ಬಂದಿವೆ. ಅನೇಕ ಲೇಖಕರ ಸಾಹಿತ್ಯದಲ್ಲಿ ಆಗುವ ಪಲ್ಲಟಗಳು, ಅವರ ವೈಯಕ್ತಿಕ ನಂಬಿಕೆ ನಿಲವುಗಳಿಗೆ ಮಾತ್ರ ಸಂಬಂಧ ಪಟ್ಟಿರುವುದಿಲ್ಲ; ಅವರು ಬದುಕಿದ ರಾಜಕೀಯ ಸಾಮಾಜಿಕ ಪರಿಸರದೊಳಗೆ ಆದ ಪಲ್ಲಟಗಳನ್ನೂ ಪ್ರತಿಬಿಂಬಿಸುತ್ತ ಇರುತ್ತವೆಯಷ್ಟೆ. ಇದಕ್ಕೆ ನಿಸಾರ್ ಕಾವ್ಯ ಕೂಡ ಹೊರತಾಗಿಲ್ಲ.

೨

ನಿಸಾರ್ ಕಾವ್ಯವು ನಿರ್ದಿಷ್ಟ ಧರ್ಮದ ಜೀವನ ದೃಷ್ಟಿಗೆ ಸಿಲುಕುವ ಆತಂಕ ಹಾಗೂ ಸಿಲುಕದೆ ಹೊರಗೆ ನಿಂತು ನಿವಾರಿಸಿಕೊಳ್ಳುವ ಛಲದಿಂದ ಶುರುವಾಗುತ್ತದೆ. ಇದನ್ನು ಧರ್ಮಾತೀತ ಲೌಕಿಕತೆಯ ಸೆಳೆತದ ಘಟ್ಟ ಎನ್ನಬಹುದು. ಇಲ್ಲಿ ಒಂದು ಬಗೆಯ ವ್ಯಕ್ತಿನಿಷ್ಠ ನಿಲವು ಕ್ರಿಯಾಶೀಲವಾಗಿದೆ. ಇದನ್ನು ನಾಸ್ತಿಕ ವಿಚಾರವಾದಿ ಅಥವಾ ಧರ್ಮಾತೀತ ನಿಲವು ಎನ್ನಬಹುದು. ಇದು ಲೋಕದ ಬದುಕನ್ನು ಉತ್ಕಟವಾಗಿ ಪ್ರೀತಿಸುತ್ತದೆ. ಇದಕ್ಕೆ ಅಡ್ಡಿ ಎಂದು ತಾನು ಭಾವಿಸಿರುವ ಧರ್ಮಜಾತಿಗಳನ್ನು 'ಬೈಪಾಸ್' ಮಾಡಲು ಬಯಸುತ್ತದೆ. ತನ್ನ ಇಚ್ಛೆಯಂತೆ ಬಾಳಲು ಬೇಕಾದ ಸ್ವಾತಂತ್ರ್ಯ ಹಾಗೂ ದೃಷ್ಟಿಕೋನವನ್ನು ಪಡೆದುಕೊಳ್ಳುವ ತವಕ ಹಾಗೂ ಹಾಗೆ ಬಾಳುವ ಆತ್ಮವಿಶ್ವಾಸಗಳು ಇಲ್ಲಿ ವ್ಯಕ್ತವಾಗುತ್ತವೆ:

> **'ಇಪ್ಪತ್ತ ಐದರವ ನಾನಿನ್ನೂ ಯುವಕ,**
> **ಗುಡಿ ಮಸೀದಿಗಳಲ್ಲಿ ಬತ್ತಲಾಗಿಸಿ ಬದುಕ**
> **ಭವದ ಬರೆಗಳ ಗುರುತ ಮುಚ್ಚಲಾಗದೆ ನಾಚಿ,**
> **ಅಧ್ಯಾತ್ಮದಿರುಕಿನಲಿ ನುಗ್ಗಿ ಮೈ ಮನ ತರಚಿ**
> **ತಲೆ ನರೆತು ಕುಸಿದವರ ಗುಂಪಿಂದ ನಾ ದೂರ'**
>
> **('ಹುಟ್ಟುಹಬ್ಬದ ಹಾಡು')**

ಇಲ್ಲಿ ಗಮನಿಸಬೇಕಾದುದು ಧರ್ಮವನ್ನು ಕುರಿತು ಕವಿತೆಯ ನಾಯಕನ ನಿಲವು. ಆತನಿಗೆ ಧರ್ಮ ಅಧ್ಯಾತ್ಮಗಳು ತಮ್ಮ ಇರುಕಿನಲ್ಲಿ ಬದುಕನ್ನು ಸಿಕ್ಕಿಹಾಕಿಸುತ್ತವೆ ಎಂಬ ಆತಂಕವಿದೆ. ಇದು ಆಧುನಿಕತೆ ಹಾಗೂ ವಿಚಾರವಾದದಿಂದ ಪ್ರೇರಿತವಾದ ತರುಣರಲ್ಲಿ

ಇರುವ ಸಹಜವಾದ ಅನುಮಾನ. ಈ ಅನುಮಾನಕ್ಕೆ ತನ್ನ ಇಚ್ಛೆಯಂತೆ ಬದುಕುವುದಕ್ಕೆ ಏನಾದರೂ ಅಡ್ಡಿಗಳು ಬಂದರೆ ಎದುರಿಸುವ ಪ್ರತಿರೋಧದ ಗುಣವಿರುತ್ತದೆ. ವ್ಯಕ್ತಿವಾದಿ ಆದರ್ಶವಾದದ ಬಿರುಸಿರುತ್ತದೆ. ಇಲ್ಲಿ ಧರ್ಮ ಮತ್ತು ಅಧ್ಯಾತ್ಮಗಳನ್ನು ಬೇರೆಯಾಗಿ ನೋಡುವ ಹಾಗೂ ಧಾರ್ಮಿಕ ಎನ್ನಲಾಗುವ ಲೋಕದಲ್ಲಿರುವ ಚೈತನ್ಯವನ್ನು ನೋಡುವ ವ್ಯವಧಾನವಿರುವುದಿಲ್ಲ. ಧರ್ಮದಿಂದ ದೂರ ಸರಿಯುವುದು ಎಂದರೆ ವೈಚಾರಿಕವಾದ ವೈಜ್ಞಾನಿಕ ಆಧುನಿಕ ಎನ್ನಲಾಗುವ ಲೌಕಿಕ ಬದುಕನ್ನು ಅಪ್ಪಿಕೊಳ್ಳುವುದು ಎಂದೇ ಅರ್ಥ. ಇಲ್ಲಿನ ಅನುಮಾನ, ಪ್ರತಿರೋಧ, ಆದರ್ಶವಾದ ಆತ್ಮವಿಶ್ವಾಸಗಳಿಗೂ ಕವಿಯ ವಯಸ್ಸಿಗೂ ಸಂಬಂಧವಿದೆ. 'ನಾನಿನ್ನೂ ಯುವಕ' ಎಂಬ ಹೇಳಿಕೆಯ ಅನಂತರ ಈ ಘೋಷಣೆಗಳು ಬರುತ್ತವೆ ಎನ್ನುವುದು ಗಮನಾರ್ಹ.

ಇಲ್ಲಿಯೇ ಕನ್ನಡದಲ್ಲಿ ಸಂವೇದನೆಯ ಕಾರಣಕ್ಕಾಗಿ 'ಮುಸ್ಲಿಂ ಲೇಖಕರು' ಎಂದು ಕರೆಯಲಾಗುವ ಕೆಲವು ಇತರ ಲೇಖಕರಿಗೂ ನಿಸಾರರಿಗೂ ಇರುವ ವ್ಯತ್ಯಾಸವನ್ನು ವಿವರಿಸಬಹುದು. ಈ 'ಮುಸ್ಲಿಂ' ಲೇಖಕರಿಗೆ ಹಾಗೆ ಧಾರ್ಮಿಕ ವಿಶೇಷಣದಲ್ಲಿ ಕರೆಸಿ ಕೊಳ್ಳುವ ಬಗ್ಗೆ ಅಷ್ಟೇನು ಮುಜುಗರವಿಲ್ಲ. ಇದಕ್ಕೆ ಕಾರಣ, ಇವರು ತಂತಮ್ಮ ಸಮುದಾಯಗಳ ಅನುಭವ ಲೋಕವನ್ನು ವಿಮರ್ಶಾತ್ಮಕ ನೆಲೆಯಲ್ಲಿ ಮಂಡಿಸುತ್ತಿರುವ ದಲಿತ ಬಂಡಾಯ ಲೇಖಕರ ಒಡನಾಟದಲ್ಲಿ ಇದ್ದವರು. ಈ ಮಂಡನೆಯನ್ನು 'ಸಂವೇದನೆ' ಎಂದು ಪರಿಭಾವಿಸಿದವರು. ದಲಿತ ಸಂವೇದನೆ ಮಹಿಳಾ ಸಂವೇದನೆಗಳ ಹಾಗೆ ಮುಸ್ಲಿಂ ಸಂವೇದನೆಯೂ ಒಂದು ಎಂದು ಭಾವಿಸಿದವರು. ಧಾರ್ಮಿಕ ಸಾಮಾಜಿಕ ಲೋಕದ ಭಾಗವಾಗಿದ್ದೂ ವಿಮರ್ಶಾತ್ಮಕ ಸಂಬಂಧವುಳ್ಳ ಕಾರಣದಿಂದಲೂ ದಮನಿತ ಸಮುದಾಯದ ಪ್ರಾತಿನಿಧ್ಯ ಪಡೆಯುವುದರಿಂದಲೂ, ಈ ಸಂವೇದನೆಯು ಒಂದು ಸಾಂಸ್ಕೃತಿಕ ಪರಿಭಾಷೆ ಎನಿಸಿಕೊಂಡಿತ್ತು. ಈ 'ಮುಸ್ಲಿಂ' ಲೇಖಕರಲ್ಲಿ ಹೆಚ್ಚಿನವರು 'ಬ್ಯಾರಿ' ಎಂಬ ವಿಶಿಷ್ಟ ಸಮುದಾಯದಿಂದ ಬಂದವರು. ಕರಾವಳಿ ಕರ್ನಾಟಕದಿಂದ ಬಂದವರು. ಸಾಮಾಜಿಕ ಅನುಭವವನ್ನು ಧಾರಣಮಾಡಲು ಅವಕಾಶವಿರುವ ಗದ್ಯ ಬರಹಗಾರರು. ಇವರು ಧಾರ್ಮಿಕ ಪುರೋಹಿತಶಾಹಿ ಹಾಗೂ ಆಕ್ರಮಣಶೀಲ ಕೋಮುವಾದದ ಬಗ್ಗೆ ವಿಮರ್ಶೆ ಉಳ್ಳವರು; ಜತೆಗೆ ಮೂಲಭೂತವಾದಿಗಳೂ ಕೋಮುವಾದಿಗಳೂ ಅಲ್ಲದ, ಧಾರ್ಮಿಕ ನಂಬಿಕೆಯನ್ನು ಇರಿಸಿಕೊಂಡು ಬದುಕುತ್ತಿರುವ ದುಡಿಯುವ ಸಾಮಾನ್ಯ ಸಮುದಾಯಗಳ ಬಗ್ಗೆ ಆಪ್ತವಾದ ಪ್ರೀತಿಯುಳ್ಳವರು. ಸಾಮಾನ್ಯ ಜನ, ಅದರಲ್ಲೂ ಮಹಿಳೆಯರು ನಿತ್ಯ ಬಾಳಿನಲ್ಲಿ ಎದುರಿಸುವ ಕಷ್ಟ, ತೋರುವ ಧೀಮಂತಿಕೆ ಹಾಗೂ ಚೈತನ್ಯವನ್ನು ಶೋಧಿಸುವವರು; ಈ ಸಾಮಾನ್ಯ ಜನರು ಪರಿಸರದ ಸಮುದಾಯಗಳ ಜತೆ ಸಹಜವಾಗಿ ಇರಿಸಿಕೊಂಡಿರುವ ಮಾನವೀಯ ಸಂಬಂಧಗಳನ್ನು ಶೋಧಿಸುವವರು; ಹೀಗೆ ತಮ್ಮ ಸಮುದಾಯವನ್ನು ಪ್ರೀತಿ ಮತ್ತು ವಿಮರ್ಶೆಗಳ ದ್ವಂದ್ವಾತ್ಮಕ ವಿಧಾನದಲ್ಲಿ ಮಂಡಿಸುವುದು ಲೇಖಕರಾಗಿ ತಾವು ನಿರ್ವಹಿಸುವ ಸಾಂಸ್ಕೃತಿಕ ಹೊಣೆಗಾರಿಕೆ ಎಂದು ನಂಬಿದವರು; ಇವರ ಮೊದಲ ಘಟ್ಟದ ಕತೆ-ಕಾದಂಬರಿಗಳಲ್ಲಿ ಧರ್ಮಾತೀತರಾದ ಪ್ರತಿರೋಧ ನಾಯಕರಿದ್ದಾರೆ. ಆದರೆ ಅವರು ನಿಸಾರರ 'ಹುಟ್ಟುಹಬ್ಬದ ಹಾಡು' ಕವಿತೆಯ ನಾಯಕನಷ್ಟು ವ್ಯಕ್ತಿವಾದಿಗಳಲ್ಲ. ಅವರಲ್ಲಿ

ಒಂದು ಬಗೆಯ ಸಮುದಾಯದ ಜತೆ ಸಂಬಂಧ ಸ್ಥಾಪಿಸಿಕೊಳ್ಳುವಿಕೆಯೂ ಇದೆ. ಇವರಿಗೆ ಹೋಲಿಸಿದರೆ ನಿಸಾರ್ ಕಾವ್ಯವು ತನ್ನ ಮೊದಲ ಘಟ್ಟದಲ್ಲಿ ಧರ್ಮಾತೀತವಾದ ವ್ಯಕ್ತಿನಿಷ್ಠ ನೆಲೆಯ ಜೀವನ ದೃಷ್ಟಿಯುಳ್ಳದ್ದಾಗಿತ್ತು. ಇದಕ್ಕೆ ಕಾರಣ ಬಹುಶಃ, ೬೦ ದಶಕದಲ್ಲಿ 'ಮುಸ್ಲಿಂ' ಎಂಬ ಹೆಸರಲ್ಲಿ ಗುರುತಿಸಿಕೊಳ್ಳುವುದು ಮತೀಯ ಲೇಬಲ್ಲಾಗಬಹುದಾದ ಹಿಂಜರಿಕೆಯ ಸನ್ನಿವೇಶವಿದ್ದುದು. ಬ್ರಾಹ್ಮಣ ಮಧ್ಯಮ ವರ್ಗಕ್ಕೆ ಸೇರಿದವರೇ ಹೆಚ್ಚಿರುವ ಓದುಗ ಲೋಕವು ಪರೋಕ್ಷವಾಗಿ ಕವಿಯ ಕಾವ್ಯರಚನೆಯನ್ನು ನಿಯಂತ್ರಿಸುತ್ತಿದ್ದುದು ಇರಬಹುದು. ನಿಸಾರರು ಮುಸ್ಲಿಮರಾಗಿ ಕನ್ನಡದಲ್ಲಿ ಲೇಖಕರಲ್ಲಿ ಮುಸ್ಲಿಮರಾಗಿ ಏಕಾಂಗಿಯಾಗಿದ್ದುದು ಇರಬಹುದು.

೩

ಆದರೆ ನಿಸಾರರ ಎರಡನೆಯ ಘಟ್ಟದ ಕಾವ್ಯದಲ್ಲಿ ಧಾರ್ಮಿಕ ಲೋಕಗಳಿಂದ ದೂರ ಹೋಗುವುದಕ್ಕೆ ಬದಲಾಗಿ, ಅದರ ಜತೆ ವಿಮರ್ಶಾತ್ಮಕವಾದ ನಿಲವಿನಿಂದ ಅನುಸಂಧಾನ ಮಾಡುವ ದನಿ ಸಣ್ಣಗೆ ಗೋಚರವಾಗುತ್ತದೆ. ಇಲ್ಲಿ ಸಮುದಾಯವನ್ನು ಸಾರಾಸಗಟಾಗಿ ದೂರೀಕರಿಸುವ ಒರಟುತನವಿಲ್ಲ. ನಾಸ್ತಿಕವಾದಿ ವಿಚಾರವಾದದ ಬಿರುಸಿಲ್ಲ. ಬದಲಾಗಿ ಗುಣಗ್ರಾಹಿಯಾಗಿ ಧಾರ್ಮಿಕತೆಯ ಒಳಗಿರುವ ಮಾನವೀಯ ಆಯಾಮಗಳನ್ನು ಗುರುತಿಸುವ ಸಹನೆಯಿದೆ. ಒಂದು ಪದ್ಯದಲ್ಲಿ ಕವಿ ಪ್ರವಾದಿಯನ್ನು 'ದೇವರ ಕನ್ನಡಿ' ಎಂದು ಕರೆಯುವುದುಂಟು. ಆದರೆ ಇದೇ ಹೊತ್ತಲ್ಲಿ ಧಾರ್ಮಿಕತೆಯ ಭಾಗವೇ ಆಗಿರುವ ಕಂದಾಚಾರವನ್ನು ಕುರಿತ ಅಸಹನೆಯೂ ಕಾಣಿಸುತ್ತದೆ. ಅದರಲ್ಲೂ ಧರ್ಮದ ಅಪವ್ಯಾಖ್ಯಾನಮಾಡುವ ಹಾಗೂ ಮುಗ್ಧಜನರ ದಾರಿ ತಪ್ಪಿಸುವ ಕೋಮಿನ ಕಂತ್ರಾಟುದಾರರ ಬಗ್ಗೆ ವ್ಯಗ್ರತೆ ಕಾಣಿಸುತ್ತದೆ. 'ಸ್ವಮತ ಬಾಂಧವರು/ ಸೈಜಿನಲಿ ಸೈಂಧವರು: ಮಾತು ಮಾಳ್ಕೆಯ ನಡುವೆ/ ಮೇಳವಣೆ ಇರದವರು' ('ಸ್ವಜನೋದ್ಧಾರಕರು') ಎಂದು ಕವಿತೆ ಅವರನ್ನು ಜರೆಯುತ್ತದೆ. ಈ ಹಂತದಲ್ಲಿಯೇ ನಿಸಾರರ ಜನಪ್ರಿಯವೂ ಬಹು ಉಲ್ಲೇಖಿತವೂ ಆದ 'ಅಮ್ಮ ಆಚಾರ ಮತ್ತು ನಾನು' ಪದ್ಯ ಹುಟ್ಟಿದ್ದು. ಇಲ್ಲಿ ಧರ್ಮದ ಹೆಸರಲ್ಲಿ ಹುಟ್ಟುವ ಸಂಪ್ರದಾಯವನ್ನು ಒಪ್ಪದೆ, ನವಿರಾಗಿ ವಿಡಂಬಿಸುವ ಗುಣವಿದೆ. ಇಡೀ ಕವಿತೆಯಲ್ಲಿ ವೈಚಾರಿಕತೆಯಿಂದ ಹುಟ್ಟಿದ ವ್ಯಂಗ್ಯವಿದೆ; ಉಗ್ರತೆಯಿಲ್ಲ. ಕಾರಣ, ಬುರುಖಾ ಹಾಕುವ ಕಂದಾಚಾರ ಆಚರಿಸುತ್ತಿರುವವಳು ಸ್ವತಃ ತಾಯಿ. ಮುಗ್ಧ ಹೆಂಗಸು. ಕೋಮಿನ ಕಂತ್ರಾಟುದಾರಳಲ್ಲ. ಒಂದೇ ಮೂಲದಿಂದ ಹುಟ್ಟುವ ಎರಡು ಬಗೆಯ ಮತೀಯ ಅಭಿವ್ಯಕ್ತಿಗಳನ್ನು ವಿಂಗಡಿಸಿ ನೋಡುವ, ಅವಕ್ಕೆ ತಕ್ಕನಾದ ಉಗ್ರ ಟೀಕೆ ಮತ್ತು ನವಿರಾದ ವಿಡಂಬನೆ ಮಾಡುವ ತರತಮಗಳನ್ನು ಇಲ್ಲಿನ ಕಾವ್ಯ ತೋರುತ್ತದೆ.

೪

ನಿಸಾರ್ ಕಾವ್ಯದಲ್ಲಿ ೧೯೭೦ರಿಂದ ಮೂರನೆಯ ಆಯಾಮವೊಂದು ಗೋಚರವಾಗುತ್ತದೆ. ಅದುವೆ ಪರಕೀಯ ಪ್ರಜ್ಞೆ. ಇಲ್ಲಿಂದ ಅವರ ಕಾವ್ಯವು ಧಾರ್ಮಿಕ ಪರಾಮರ್ಶೆಗಳಿಂದ ಇನ್ನೂ ಮುಂದೆ ನಡೆದು, ಧಾರ್ಮಿಕ ಸಮುದಾಯಗಳನ್ನು ಭಾರತದ ಬಲಪಂಥೀಯ

ರಾಷ್ಟ್ರೀಯವಾದಿ ಚಿಂತನೆಗಳು ನಡೆಸಿಕೊಳ್ಳುವುದರಿಂದ ಹುಟ್ಟುವ ನೋವುಗಳ ಶೋಧಕ್ಕೆ ತೊಡಗಿಸಿಕೊಂಡಿತು. ಇದು ಕಾವ್ಯಕ್ಕೆ ವಿಷಾದ ಪ್ರಜ್ಞೆಯನ್ನೂ ದಾರ್ಶನಿಕತೆಯನ್ನೂ ರಾಜಕೀಯ ಪ್ರಜ್ಞೆಯನ್ನೂ ತಂದಿತ್ತಿತು. ಕಾವ್ಯದಲ್ಲಿ ನಿಲವುಗಳು ಬದಲಾಗುತ್ತ ಹೋದಂತೆ ಕವಿತೆಯ ಅಭಿವ್ಯಕ್ತಿಯಲ್ಲಿ ಬಳಕೆಯಾಗುವ ಧಾಟಿ ಶೈಲಿಗಳೂ ಕೂಡ ಬದಲಾಗುತ್ತ ಹೋಗುವುದು ಕುತೂಹಲಕರ. ಈ ಪರಕೀಯ ಪ್ರಜ್ಞೆ ಹಾಗೂ ವಿಷಾದಗಳಿಗೆ ಕೆಲ ಮಟ್ಟಿಗೆ ನವ್ಯ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕಾಣಬರುವ ಅನಾಥಪ್ರಜ್ಞೆ, ವ್ಯಕ್ತಿವಾದಿ ಚಿಂತೆ, ಅಸ್ತಿತ್ವವಾದಿ ನಿರಾಶೆಗಳ ಪ್ರೇರಣೆಯೂ ಇರಬಹುದು:

**'ದಾಡಿ ಗಡ್ಡ ನಮಾಜಿನ ದಿವ್ಯ ಚಹರೆಯ,
ತುರ್ಕೀ ಟೋಪಿಯ ಓರೆಯ ಪರಿಚಿತ ಮೋರೆಯ
ಬದಲು ಟೈ ಸೂಟಿನ, ಪರದೇಶಿ ನೆತ್ತರು ತೊಗಲಿನ,
ದೇವರ ಶಂಕಿಸಿ, ಶಂಕಿಸಿದರೆಂತೋ ಎನುವ ದಿಗಿಲಿನ
ಐದು ದೆವ್ವಗಳ—ಹಾಂಗೊಮ್ಮೆ ಹೀಂಗೊಮ್ಮೆ
ಕುಣಿಯೋಣು ಬಾರಾ—ದ ದ್ವಂದ್ವ'**

(ನಾನೆಂಬ ಪರಕೀಯ)

'ನಾನೆಂಬ ಪರಕೀಯ' ಹಾಗೂ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆಗಳು ಒಂದು ಇನ್ನೊಂದರ ಮುನ್ನುಡಿಯಂತೆಯೂ ಕಾಣುತ್ತವೆ: ಆದರೂ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆಯಲ್ಲಿ ಈ ಪರಕೀಯ ಪ್ರಜ್ಞೆಯು ವ್ಯಕ್ತಿ ನಿಷ್ಠತೆಯನ್ನು ದಾಟಿ ಸಾಮುದಾಯಿಕವಾಗುತ್ತದೆ. ಕಾರಣ, ಮುಸ್ಲಿಂ ಧಾರ್ಮಿಕ ಹಿನ್ನೆಲೆಯಿಂದ ಬಂದ ಕಾರಣ ದಿಂದಲೇ ಭಾರತದಲ್ಲಿ ನಗರವಾಸಿ ಮಧ್ಯಮ ವರ್ಗದ ಸಮಾಜದಲ್ಲಿ ಅನುಭವಕ್ಕೆ ಬರುವ ಸಾಂಸ್ಕೃತಿಕ ಪರಕೀಯತೆ ಇದು; ಈ ಕವಿತೆಯಲ್ಲಿ ತನ್ನನ್ನು ಬೆಲೆಗಟ್ಟುವವರನ್ನೂ ಕವಿತೆ 'ನಾನು' 'ನೀವು' ಎಂಬ ಸರ್ವನಾಮಗಳನ್ನು ಬಳಸಿ, ಎರಡು ಬಣಗಳನ್ನಾಗಿ ಮಾಡಿಕೊಂಡು ನೋಡುವ ವಿಧಾನವು ಮೊದಲ ಸಲ ಕಾಣಿಸಿಕೊಳ್ಳುತ್ತದೆ.

**'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು, ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು, ಕೊನೆಗೆ ಸಾಚಾತನವನ್ನೂ ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ,
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನೆನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನ,
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ'**

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

'ಇಲ್ಲಿರುವವರು ನಾವು' ಎಂಬ ಪದ್ಯವು ಇದೇ ಆಶಯದ್ದಾದರೂ ಬೇರೆ ತರಹ. ಅದು ಬಲ ಪಂಥೀಯ ಅನುಮಾನ ಆರೋಪಗಳಿಗೆ ಸಮಜಾಯಿಶಿ ಕೊಡುವ ಕೆಲಸ ಮಾಡುತ್ತದೆ. ಇಲ್ಲೆಲ್ಲ ಬಿಕ್ಕಟ್ಟುಗಳಲ್ಲೂ ಬದುಕುವ ಹಾಗೂ ಚೈತನ್ಯ ಹುಡುಕುವ ಉಲ್ಲಾಸ ಕಾಣದು.

೫

ನಾಲ್ಕನೆಯ ಘಟ್ಟದಲ್ಲಿ ನಿಸಾರ್ ಕಾವ್ಯ ಮತ್ತಷ್ಟು ಗಾಢ ವಿಷಾದದ ಕಡಲಿಗೆ ಇಳಿದು, ತನ್ನನ್ನು ಬಲಿಪಶು ಎಂದು ಭಾವಿಸುತ್ತದೆ. ತನ್ನ ಸ್ಥಿತಿಗೆ ತಾನೇ ರೋದಿಸುತ್ತ, ಸ್ವಮರುಕದತ್ತ ಚಲಿಸುತ್ತದೆ. ಒಂದುಬಗೆಯ ಆತ್ಮರಕ್ಷಣೆಯ ನಿಲವಿಗೆ ಬಂದುಬಿಡುತ್ತದೆ. ಈ ಸನ್ನಿವೇಶದಲ್ಲಿ 'ಸವತಿ ಮಕ್ಕಳ ಹಾಗೆ ಕಾಡಬೇಡವ್ವ', 'ಭಾರತಾಂಬೆಗೆ' ಮುಂತಾದ ಕವನಗಳು ಹುಟ್ಟಿಕೊಂಡವು. ಕೋಮುವಾದಿ ರಾಷ್ಟ್ರೀಯತೆಗೆ ನಿಸಾರ್ ಕಾವ್ಯ ಮಾಡುವ ತೀವ್ರ ಪ್ರತಿಕ್ರಿಯೆಯ ಹಂತವಿದು. ಇಲ್ಲಿ ಕಾವ್ಯವು ಕೋಮುವಾದಿ ವಿಚಾರಧಾರೆಯ ಜತೆಗೆ ಮುಖಾಮುಖಿ ಮಾಡುತ್ತದೆ. ತಾನೇ ಕಟಕಟೆಯಲ್ಲಿ ನಿಂತು ಉತ್ತರಿಸುತ್ತದೆ. ಕುತೂಹಲಕರ ಎಂದರೆ ಕವಿತೆಯ ನಾಯಕರು ತಮ್ಮ ವೇದನೆ ಕೋಪ ಅಹವಾಲುಗಳನ್ನೆಲ್ಲ ವ್ಯಕ್ತ ಮಾಡುವುದು ಭಾರತಾಂಬೆಯ ಮುಂದೆ; ಇದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ನಾಡಿನ ದುರವಸ್ಥೆಯನ್ನು ಚಿತ್ರಿಸಲು ಭರತಮಾತೆಯ ಜತೆಗೆ ಸಂಭಾಷಣೆ ಮಾಡುವ ವಿನ್ಯಾಸದ ಬಿ.ಎಂ. ಶ್ರೀ ('ಭರತಮಾತೆಯ ನುಡಿ'), ಬೇಂದ್ರೆ ('ನರಬಲಿ') ಮುಂತಾದವರ ಕವನಗಳ ಮಾದರಿಯನ್ನು ನೆನಪಿಸುತ್ತದೆ. ಇದು ಕನ್ನಡದಲ್ಲಿ ಬಹಳ ಪ್ರಚಲಿತವಿರುವ ರಾಜಕೀಯ ಕವಿತೆಗಳ ಮಾದರಿ. ಮುಂದೆ ದಲಿತರೂ ಈ ಮಾದರಿಯನ್ನು ಬಳಸಿದರು. ನಿಸಾರರ ಈ ಹಂತದ ಕವಿತೆಗಳಲ್ಲಿ ಎರಡು ತಾತ್ವಿಕ ಸಮಸ್ಯೆಗಳಿವೆ. ಒಂದನೆಯದಾಗಿ ಇವು ಅಂತಿಮವಾಗಿ ಕೋಮುವಾದಿ ರಾಷ್ಟ್ರೀಯತೆಯನ್ನು ನಿರಾಕರಿಸುವುದಿಲ್ಲ. ಅದರ ಆಪಾದನೆಗೆ ಆತ್ಮ ರಕ್ಷಣಾತ್ಮಕವಾಗಿ ಉತ್ತರ ಕೊಡುತ್ತ ಹೋಗುತ್ತವೆ. ಎರಡನೆಯದಾಗಿ ವರ್ತಮಾನದ ವಿಷಮತೆಯನ್ನು ಪ್ರತಿರೋಧಿಸುವುದಕ್ಕಾಗಿ ಗತ ಕಾಲದ ಸೌಹಾರ್ದತೆಯನ್ನು ನೆನೆಯುತ್ತವೆ.

ಸೌಹಾರ್ದ ತೀರ್ಥಕ್ಕೆ ಬೆರೆಸಿ ಒಡಕಿನ ನಂಜು, / ಸುಗಮ ಸತ್ಪಥದೆದುರು ಕವಿಸಿ ವಿರಸದ ಮಂಜು / ಮನದ ಜೇನಿನ ಹುಟ್ಟಿಗಿಟ್ಟು ದ್ವೇಷದ ಪಂಜು, / ಹರಡಿಹರು ಎಲ್ಲೆಡೆ ಬರೀ ಘೋಷಣೆಯ ಗುಂಜು. / (ಹಾಲಿ ವಿದ್ಯಮಾನಗಳು)

ಗತಕಾಲವು ಸೌಹಾರ್ದತೆಯಿಂದ ಕೂಡಿತ್ತು ಎಂಬ ಗ್ರಹಿಕೆಯು ಹಾಗೆ ನಿಜವಲ್ಲ. ಚರಿತ್ರೆಯನ್ನು ವೈರುಧ್ಯವಲ್ಲದ ಅವಸ್ಥೆಯಲ್ಲಿ ಕೇವಲ ಸಾಮರಸ್ಯದಲ್ಲಿ ಕಲ್ಪಿಸಿಕೊಳ್ಳುವ ಈ ನಿಲವು ಅವಿಮರ್ಶಾತ್ಮಕವಾಗಿದೆ. ಈ ಮನೋಭಾವದ ಮುಂದುವರಿಕೆಯಾಗಿಯೇ ಗತಕಾಲದ ಭವ್ಯ ಪರಂಪರೆಯನ್ನು ಕಲ್ಪಿಸಿಕೊಂಡು ಅದನ್ನು ಹಾಡುವ ಭಾವಗೀತೆಗಳನ್ನು ನೋಡ ಬಹುದು. ವರ್ತಮಾನದ ವಿಷಮತೆಯನ್ನು ಗತದ ವೈಭವೀಕರಣದಿಂದ ಮುಖಾಮುಖಿ ಮಾಡಿ ನೋಡುವ ಈ ವಿಧಾನವು ತತ್ಕಾಲೀನ ತಂತ್ರವಾಗಿರಬಹುದು. ಆದರೆ ಅದು ಪರಿಣಾಮದಲ್ಲಿ ಅಚಾರಿತ್ರಿಕವಾದುದು; ಕೃತಕವಾದುದು. ಈ ಕೃತಕತೆಗೆ ಈ ಮಾದರಿಯ ಕವಿತೆಗಳ ಸಂಸ್ಕೃತಮಯತೆ, ಪ್ರಾಸಗಳು, ಭಾಷಾಬಂಧಗಳು ಪೂರಕವಾಗಿವೆ. ಕೋಮುವಾದಿ ವಿಚಾರಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟುವ ಈ ಸಾಮರಸ್ಯ ಮಾದರಿಯು ನಮ್ಮ ಸಂಸ್ಕೃತಿಯ ಸಂಕೀರ್ಣವಾದ ಬಿಕ್ಕಟ್ಟುಗಳನ್ನು ಅನುಸಂಧಾನ ಮಾಡುವಲ್ಲಿ ಬೇಕಾದ ಸೂಕ್ಷ್ಮತೆಗೆ ಎರವಾಗಿಬಿಡುತ್ತದೆ.

ಈ ವಿಮರ್ಶೆಯನ್ನು ಮಾಡುವಾಗ ನಿಸಾರರು ಮೂಲತಃ ಭಾವುಕ ಕವಿ, ಅವರ ನಾಡಗೀತೆಗಳಲ್ಲಿ ಇರುವ ದೇಶಭಕ್ತಿಯು ಕವಿಯ ಪ್ರಾಮಾಣಿಕ ಪರಿಭಾವನೆಯಿಂದ ಬಂದಿದೆ ಎಂಬುದನ್ನು ಮರೆಯುವಂತಿಲ್ಲ. ಚೀನಾ ಆಕ್ರಮಣದ ಹೊತ್ತಿನ ಕವನಗಳಲ್ಲಿ ಇದು ಹೆಚ್ಚಾಗಿ ಕಾಣುವುದು. ಆದರೆ ಇದು ತನ್ನ ಭಾವುಕತೆಯಲ್ಲಿ ಕಟ್ಟಲ್ಪಡುವ ರಾಜಕೀಯ ಗ್ರಹಿಕೆಗಳನ್ನು ಒಡೆದು ನೋಡುವ ವಿಮರ್ಶಕತನವನ್ನು ಬಿಟ್ಟುಕೊಡುವುದು ಸಮಸ್ಯೆ. ಯಾವತ್ತೂ ಎಲ್ಲ ಸಮಾಜಗಳಲ್ಲೂ ಯುದ್ಧರೂಪಿ ದೇಶಭಕ್ತಿ ಪರಿಕಲ್ಪನೆಯ ಗುಣವೆಂದರೆ, ಅದಕ್ಕೆ ಒಂದು ಶತ್ರುವಿನ ಕಲ್ಪನೆ ಇರಲೇಬೇಕು. ಶತ್ರುದೇಶವನ್ನು ಆಕ್ರಮಣಕಾರಿಯೆಂದೂ ತನ್ನನ್ನು ಆಕ್ರಮಣಕ್ಕೆ ಒಳಗಾದ ಮುಗ್ಧವೆಂದೂ ಅದು ನಂಬಬೇಕು. ಶತ್ರುಸೈನಿಕರ ಸಾವನ್ನು ನಮ್ಮ ಸೈನಿಕ ಶೌರ್ಯವೆಂದು ನಂಬಬೇಕು. ಯಾವುದಕ್ಕೂ 'ನನ್ನ' 'ಅನ್ಯ' ಎಂಬ ಭೇದವನ್ನು ಮಾಡಿಕೊಂಡು ನಮ್ಮದರ ಪರವಾಗಿ ನಿಲ್ಲಬೇಕು.

> **'ನಾಡ ಮಾನ ನಮ್ಮ ಮಾನ, ಶತ್ರು ದಮನ ನಮ್ಮ ಗಾನ**
> **ಮನೆ ಬಾಗಿಲು ಹೊಗಲು ಬಂದ ಪರ ದೇಶದ ಹುಲು ಮದಾಂಧ'**
> **(ನೆಲ ನಮ್ಮದು ಜಲ ನಮ್ಮದು)**
>
> **'ತಾಯ ಮಾನ ಉಳಿಸಲೆಂದು ಕಳೆದ ನೆಲವ ಗಳಿಸಲೆಂದು**
> **ಶ್ರಮಿಸಿದಸಮತೇಜರೆ, ಇಗೊ ವಂದನೆ ನಿಮಗೆ'**
> **(ಅಭಿವಂದನೆ ನಿಮಗೆ)**

ಇವೆಲ್ಲ ಬಲಪಂಥೀಯ ರಾಷ್ಟ್ರೀಯತೆಗೆ ಪ್ರಿಯವಾದ ರಚನೆಗಳು. ಕ್ಲೀಷೆಯ ನುಡಿಗಟ್ಟು, ಉದ್ದೇಶಪೂರ್ವಕ ಲಯಗಾರಿಕೆ, ಬಹಿರ್ಮುಖತೆ ಇದಕ್ಕೆ ತಕ್ಕಂತಿವೆ. ನಾಡಗೀತೆಗಳು ಅಥವಾ ದೇಶ ಭಕ್ತಿಯ ಗೀತೆಗಳು, ಅವು ನಿಸಾರರದಿರಲಿ ಕುವೆಂಪು ಅವರದಿರಲಿ, ಯಾವತ್ತೂ ವೈರುಧ್ಯಗಳನ್ನು ನಿರಾಕರಿಸಿ ಒಂದು ಸರಳೀಕರಣಕೃತ ಚಿತ್ರವನ್ನು ಕಟ್ಟಿಕೊಡುತ್ತವೆ. ಇಲ್ಲಿನ ಕವಿತೆಗಳಲ್ಲಿ 'ಯುದ್ಧಸಂಸ್ಕೃತಿ'ಯನ್ನು ಯಾರು ಹುಟ್ಟುಹಾಕುತ್ತಿದ್ದಾರೆ, ಯಾರು ಹೇರುತ್ತಿದ್ದಾರೆ, ಇದಕ್ಕೆ ಬಲಿಯಾಗುತ್ತಿರುವವರು ಯಾರು ಎಂಬ ಮೂಲಭೂತ ಪ್ರಶ್ನೆಗಳನ್ನು ಎತ್ತಲು ಸಾಧ್ಯವಾಗಿಲ್ಲ. ಎಲ್ಲ ದೇಶಗಳಲ್ಲೂ ಬಲಪಂಥೀಯ ರಾಷ್ಟ್ರವಾದಿಗಳು ಕಟ್ಟುವ ಈ ಗುಣಗ್ರಾಹಿ ಗ್ರಹಿಕೆಯನ್ನು ನಮ್ಮ ಲೇಖಕರೂ ವಿಮರ್ಶೆಯಿಲ್ಲದೆ ಕಟ್ಟುವುದು ವಿಸ್ಮಯ ಬರಿಸುತ್ತದೆ. ಕಾರ್ಗಿಲ್ ಸಮಯದಲ್ಲಿ ಕನ್ನಡದ ಕವಿಗಳು ಬರೆದ ಬಹುತೇಕ ಕವನಗಳು ಹೀಗೆ ಒಪ್ಪಿಗೆ ಕೊಟ್ಟಂತಹವೇ ಆಗಿದ್ದವು. ವ್ಯಂಗ್ಯವೆಂದರೆ, ಬಹಳ ಸಲ ನಮ್ಮ ಬದುಕಿನಲ್ಲಿ ಇರುವ ವೈರುಧ್ಯಗಳನ್ನು ಬಿಕ್ಕಟ್ಟುಗಳನ್ನು ಧೇನಿಸುವ ಸಾಂಸ್ಕೃತಿಕ ಮಹತ್ವದ ನಿಸಾರರ ಕವನಗಳಿಗಿಂತ ಕನ್ನಡದ ಓದುಗರು ಈ ಬಗೆಯ ನಾಡಗೀತೆಗಳನ್ನು ಹೆಚ್ಚು ಮಾನ್ಯ ಮಾಡಿರುವುದು. ಅವರ ನಾಡಗೀತೆಗಳು ಬಹಳ ಜನಪ್ರಿಯವಾಗಿವೆ. ಈ ಜನಪ್ರಿಯತೆಗೂ ಅವು ಗತದ ವೈಭವೀಕರಣವನ್ನು ವಿಮರ್ಶೆಯಿಲ್ಲದೆ ಮಾಡುತ್ತವೆ ಎನ್ನುವದಕ್ಕೂ ಸಂಬಂಧ ಇದೆಯೇನು? ಅಥವಾ ಈ ದೇಶಭಕ್ತಿಯ ಗೀತೆಗಳನ್ನು ಬರೆದವನು ಒಬ್ಬ ಮುಸ್ಲಿಂ ಕವಿ ಎನ್ನುವುದಕ್ಕೆ ಸಂಬಂಧ ಇದೆಯೆ?

ಆದರೆ ನಿಸಾರ್ ಕಾವ್ಯಕ್ಕೆ ತನ್ನ ಮಿತಿಗಳ ಚಿಪ್ಪನ್ನು ತಾನೇ ಒಡೆದು ಹೊರಬರುವ

ವಿಚಿತ್ರವಾದ ಗುಣವಿದೆ. ಈ ಗುಣವೇ ಅವರ ಕಾವ್ಯದ ಡೈನಮಿಸಮ್ಮಿಗೆ ಕಾರಣವಾಗಿದೆ. ವರ್ತಮಾನದ ವಿದ್ಯಮಾನಗಳನ್ನು ತೆರೆದ ಕಣ್ಣಿಂದ ನೋಡುವ ಎಲ್ಲಾ ಲೇಖಕರು ಹಾಗೆ ಯಾವುದೆ ಬಹು ಕಾಲ ಹುಸಿ ವಿಚಾರ ಪ್ರಣಾಳಿಕೆಯಲ್ಲಿ ವಿದ್ಯುತ್ ತಂತಿಗೆ ಸಿಲುಕಿಕೊಂಡ ಗಾಳಿಪಟದಂತೆ ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಅವರು ಹಕ್ಕಿಗಳಂತೆ ಬಿಡಿಸಿಕೊಂಡು ಹಾರಬಲ್ಲರು. ಗತದ ವೈಭವೀಕರಣ ಮಾಡಿದ್ದ ಈ ಕವಿಯೆ, ಮಗದೊಮ್ಮೆ ವಿಷಾದದಿಂದ ತೀಕ್ಷ್ಣ ವೈಚಾರಿಕತೆಯಿಂದ ಗಾಢ ವಿಷಾದದಿಂದ ತನ್ನ ದೇಶವನ್ನು ಭಿನ್ನವಾಗಿ ನೋಡುತ್ತಾನೆ. 'ನಾಡದೇವಿಯೇ ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ... ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯೆ' ಎಂಬ ಸಾಲುಗಳು ಹೀಗೆ ತನ್ನ ಕಟ್ಟಡವನ್ನು ತಾನೇ ಮುರಿದ ಕಾರಣದಿಂದ ಹುಟ್ಟಿದವು. ಇವು 'ನಿತ್ಯೋತ್ಸವ'ದ ಪದ್ಯದ 'ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ' ಎಂಬ ಸಾಲುಗಳಿಗೆ ತಿರುಗಿ ತಾವೇ ಟೀಕುವನ್ನು ಬರೆಯುತ್ತಿವೆ. ಯಾವ ನಾಡದೇವಿಯು ಕವಿಯ ಕೀರ್ತನೆಗೆ ಕಾರಣವಾಗಿದ್ದಳೋ, ಅವಳೇ ಕವಿಯಿಂದ ದೂರುಗಳನ್ನು ಕೇಳುವ, 'ಸವತಿ ಮಕ್ಕಳ ಹಾಗೆ ಕಾಡಬೇಡವ್ವ' ಎಂಬ ಕಠೋರ ಉಪದೇಶವನ್ನು ಕೇಳುವ ಪರಿಸ್ಥಿತಿ ಬರುತ್ತದೆ. ಒಬ್ಬನೇ ಕವಿ ಬರೆದ ಕವಿತೆಗಳು ಒಂದಕ್ಕೊಂದು ವಿರುದ್ಧ ನಿಲ್ಲುವ ಮೂಲಕ ಹುಟ್ಟುವ ಈ ವಾಗ್ವಾದದ ಪರಿಯು ವಿಶಿಷ್ಟ ವಾದುದು. ನಿಸಾರರ ರಾಷ್ಟ್ರೀಯವಾದಿ ನಾಡ ಗೀತೆಗಳು ಅರೆ ಸತ್ಯಗಳಿಂದಲೂ ಮುಗ್ಧತೆ ಯಿಂದಲೂ ಕೂಡಿದ್ದರೆ, ಸಾಮಾಜಿಕ ವಾಸ್ತವಕ್ಕೆ ಪ್ರತಿಕ್ರಿಯಿಸುವ ನಾಡಗೀತೆಗಳು ವಿಷಾದ ದಿಂದಲೂ ವಿಚಾರದಿಂದಲೂ ಎಚ್ಚರಿಕೆಯಿಂದಲೂ ಸಾಂಸ್ಕೃತಿಕ ಪ್ರಜ್ಞೆಯಿಂದಲೂ ಕೂಡಿವೆ.

೬

ನಿಸಾರ್ ಕಾವ್ಯದ ನಿಜವಾದ ಸಾಂಸ್ಕೃತಿಕ ಮಹತ್ವ ಇರುವುದು ಅವರ ನಾಡಗೀತೆ ಗಳಲ್ಲೂ ಅಲ್ಲ; ಭಾವುಕವಾಗಿ ನಮ್ಮ ರಾಜಕೀಯ ಸಾಮಾಜಿಕ ವಾಸ್ತವಕ್ಕೆ ಪ್ರತಿಕ್ರಿಯಿಸುವ ವಿಷಾದ ಗೀತೆಗಳಲ್ಲೂ ಅಲ್ಲ. ಬದಲಾಗಿ ಎರಡು ಧಾರ್ಮಿಕ ಸಮುದಾಯಗಳ ನಡುವಣ ಇರುವ ಚಾರಿತ್ರಿಕ ಸಂಘರ್ಷ ಹಾಗೂ ದೈನಿಕ ಬದುಕಿನಲ್ಲಿ ಇರುವ ಸಾಮಾಜಿಕ ಮಾನವೀಯ ಸಂಬಂಧಗಳ ನಡುವಣ ಬಿಕ್ಕಟ್ಟುಗಳನ್ನು ಶೋಧ ಮಾಡುವುದರಲ್ಲಿ. ಇಲ್ಲಿ ಕಾವ್ಯಕ್ಕೆ ಯಾವುದೇ ಹುಸಿ ಸಾಮರಸ್ಯದ ಅಥವಾ ಹುಸಿ ಆಕ್ರೋಶದ ಪೂರ್ವನಿರ್ಧರಿತ ಅಜೆಂಡಾ ಇಲ್ಲ; ಬದಲಾಗಿ ಇರುವ ಸನ್ನಿವೇಶವನ್ನು ತಣ್ಣಗೆ ಸೂಕ್ಷ್ಮವಾಗಿ ವಿಸ್ಮಯದಿಂದ ದುಗುಡದಿಂದ ಪರಿಶೀಲಿಸುವ ಗುಣವಿದೆ. 'ರಂಗೋಲಿ ಮತ್ತು ಮಗ' ಇತ್ಯಾದಿ ಕವನಗಳು ಇಂಥಹವು. ಇವು ಅವರ ಅತ್ಯುತ್ತಮ ಕವನಗಳು ಕೂಡ ಆಗಿವೆ.

'ರಂಗೋಲಿ ಮತ್ತು ಮಗ' ಕವಿತೆಯಲ್ಲಿ ರಂಗೋಲಿಗೆ ನಾಲ್ಕು ತಲೆಮಾರುಗಳ ವಿಭಿನ್ನ ಪ್ರತಿಕ್ರಿಯೆಗಳಿವೆ. ಮೊದಲನೆಯ ತಲೆಮಾರಿಗೆ ಸೇರಿದ ಅಜ್ಜಿ ಔಟ್‌ಹೌಸಿನ ಜನ ರಂಗೋಲಿ ಬಿಡಿಸಿದರೂ ಸಹಿಸದವಳು: ಬಿರು ನುಡಿಯ ದೌಲತ್ತು ತೋರುವವಳು. ಎರಡನೆಯ ತಲೆಮಾರಿನ ತಾಯಿ, ತನ್ನ ಮಗ ಮನೆಯಲ್ಲಿ ರಂಗೋಲಿ ಬಿಡಿಸಿದರೆ 'ಕಾಫರ್' ಎಂದು ಬೈಯುವವಳು. ಮೂರನೆಯ ತಲೆಮಾರಿಗೆ ಸೇರಿದ ಕವಿತೆಯ ನಾಯಕ, ಬಾಲ್ಯ

ದಿಂದಲೂ ರಂಗೋಲಿಗೆ ಆಕರ್ಷಿತನಾದವನು. ಆದರೆ ತನ್ನ ಧರ್ಮಭೀರುತನದ ಕಾರಣ ದಿಂದ, ಈ ಪ್ರೀತಿಯನ್ನು ನಿರಾಳವಾಗಿ ಮುಕ್ತವಾಗಿ ಸಾರ್ವಜನಿಕವಾಗಿ ವ್ಯಕ್ತಮಾಡಲಾಗದ ದ್ವಂದ್ವ ಮತ್ತು ಹಿಂಜರಿಕೆಯುಳ್ಳವನು. ತನ್ನ ಮಗ 'ನಾವು ಯಾಕೆ ರಂಗೋಲಿ ಬಿಡೋಲ್ಲ' ಎಂದು ಕೇಳಿದರೆ, 'ಇದು ನಮ್ಮ ಪದ್ಧತಿಗೆ ಸಲ್ಲ' ಎಂದು ಹುಸಿ ಉತ್ತರ ಕೊಟ್ಟು ಜಾರಿಕೊಳ್ಳುವವನು; ಆದರೆ ನಾಲ್ಕನೆಯ ತಲೆಮಾರಿಗೆ ಸೇರಿದ ಅವನ ಪುಟ್ಟ ಮಗನಿಗೆ ಮತಧರ್ಮದ ಸಂಪ್ರದಾಯಗಳ ಗೊಂದಲಗಳಿಲ್ಲ. ಅವನು ಶಿಶು ಸಹಜ ಮುಗ್ಧತೆ ಯಿಂದಲೂ ಕುತೂಹಲದಿಂದಲೂ ರಂಗೋಲಿಗೆ ಮನ ಸೋತಿರುವವನು. ಅವನು ಸಹಜವಾಗಿ ಹಾಕುವ ಪ್ರಶ್ನೆಗಳು ಅವನ ತಂದೆಯ ಆತ್ಮಸಾಕ್ಷಿಯ ಕತ್ತನ್ನು ಹಿಚುಕುತ್ತವೆ. ಸರಿಯಾದ ಉತ್ತರ ಕೊಡಲಾಗದೆ ಒದ್ದಾಡುತ್ತಾನೆ. ತಾನು ತನ್ನ ಹಿರಿತನದ ಅಧಿಕಾರದಿಂದ ಕೊಡುವ ಉತ್ತರಗಳು ಹುಸಿ ಎಂದು ಅವನಿಗೇ ಅನಿಸುತ್ತಿವೆ. ಮಗುವಿನ ಅಮಾಯಕ ಮಾತಲ್ಲಿ ಇರುವ ಮತಧರ್ಮಗಳಿಂದ ನಿರ್ಬಂಧಕ್ಕೆ ಒಳಗಾಗದ ಸತ್ಯ ಚುಚ್ಚುತ್ತಿದೆ. ಈ ಬಿಕ್ಕಟ್ಟಿನಲ್ಲಿ ಅವನು ಅಂತರ್ಮುಖಿಯಾಗುತ್ತಾನೆ. ಚಿಂತನೆಗೆ ಬೀಳುತ್ತಾನೆ.

ಕವಿತೆ ಏನನ್ನು ಧ್ವನಿಸುತ್ತಿದೆ? ಸತ್ಯವನ್ನು ಹೇಳುವ ಶಕ್ತಿಯು ಮತಧರ್ಮಗಳ ನಿರ್ಬಂಧಗಳನ್ನು ದಾಟಿಕೊಂಡು ಚಿಂತಿಸುವ ಮಕ್ಕಳ ಮುಗ್ಧತೆಗಿದೆ; ಸೌಂದರ್ಯಾತ್ಮಕ ಕಲಾಸಕ್ತಿಗಿದೆ ಹಾಗೂ ವಿಜ್ಞಾನಕ್ಕೆ ಇದೆ ಎಂದೇನು? ಯಾವ ಉತ್ತರವನ್ನೂ ಪರಿಹಾರವನ್ನೂ ಕೊಡುವ ಅವಸರ ಮಾಡದೆ ಕವಿತೆ,

'ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ,
ಬೆರಗು ಪ್ರಶ್ನೆಗಳವಳಿ ರೆಕ್ಕೆ
ಹರಡಿದ ಪುಟ್ಟ ಹಕ್ಕಿಯಂತೆ'
(ರಂಗೋಲಿ ಮತ್ತು ಮಗ)

ಎಂದು ಮುಗಿಯುತ್ತದೆ. ಚಿಂತನೆಯ ಮುಕ್ತ ಸಾಧ್ಯತೆಯನ್ನು ಒಳಗೊಂಡಿರುವ ಈ ಕವಿತೆಯು ಕನ್ನಡದಲ್ಲಿ ಬಹಳ ವಿಶಿಷ್ಟವಾದ ಕವಿತೆ. ಇದನ್ನು ಸಾಂಸ್ಕೃತಿಕ ಬಿಕ್ಕಟ್ಟುಗಳಲ್ಲಿ ಬದುಕಿನ ಅರ್ಥವನ್ನು ಹುಡುಕುವ ಸಂಯಮ ಮತ್ತು ವಿವೇಕ ಎಂದು ಕರೆಯಬಹುದು. 'ಇಬ್ಬಂದಿ' ಕವನವು ಅದರ ಹೆಸರೇ ಹೇಳುವಂತೆ, ಇದೇ ಬಗೆಯ ತೊಳಲಾಟಗಳನ್ನು ತರುತ್ತದೆ. ಗುಡಿ ಮತ್ತು ಮಸೀದಿ ಸಂಸ್ಕೃತಿಗಳು ಕವಿತೆಯ ನಾಯಕನಲ್ಲಿ ಹುಟ್ಟಿಸುವ ಆಕರ್ಷಣೆ ವಿಕರ್ಷಣೆಗಳನ್ನು ಚಿತ್ರಿಸುತ್ತದೆ. ಆದರೆ ಅವನಿಗೆ ಎರಡರಲ್ಲೂ ಪೂರ್ಣ ನಂಬಿಕೆ ಬಂದಿಲ್ಲ; 'ಸಂತೈಸದು ವಿಗ್ರಹ, ಬಾ ಎನ್ನದು ಕಾಬಾ'; ಈ ದ್ವಂದ್ವದಲ್ಲಿ ಕವಿತೆಯ ನಾಯಕನು ಎರಡನ್ನೂ ಸಮನ್ವಯಗೊಳಿಸುವ ಬಗೆಯನ್ನು ಚಿಂತಿಸುತ್ತಾನೆ. ಆದರೂ ಈ ಕವಿತೆಯು 'ರಂಗೋಲಿ ಮತ್ತು ಮಗ' ಕವಿತೆಯ ತಳಮಳಗಳನ್ನು ಸಹಜವಾಗಿ ಒಳಗೊಂಡಿಲ್ಲ.

೭

ಧಾರ್ಮಿಕ ಹಿನ್ನೆಲೆಯ ಅನುಭವ ಲೋಕವನ್ನು ನೋಡುವ ಇನ್ನೊಂದು ವಿನ್ಯಾಸವೂ ನಿಸಾರ್ ಕಾವ್ಯದಲ್ಲಿದೆ. ಅದೆಂದರೆ, ಅನುಭವವನ್ನು ಮಾನವ ಬದುಕಿನ ನಿಗೂಢ ಅರ್ಥಗಳ

ಶೋಧಕ್ಕಾಗಿ ಬಳಸುವುದು; ಇದನ್ನು ಅನುಭವದ ದಾರ್ಶನಿಕ ರೂಪಾಂತರ ಎನ್ನಬಹುದು. 'ರಂಗೋಲಿ ಮತ್ತು ಮಗ' ತರಹದ ಕವಿತೆಗಳು ತಮ್ಮ ಸಾಂಸ್ಕೃತಿಕ ಬಿಕ್ಕಟ್ಟುಗಳ ಶೋಧದ ಮೂಲಕ ವಿಶಿಷ್ಟ ಅರ್ಥಸ್ತರಗಳನ್ನು ಪಡೆದರೂ ಅವುಗಳ ಕೇಂದ್ರ ಒಂದು ಬಗೆಯಲ್ಲಿ ಸಮಾಜೋ-ಧಾರ್ಮಿಕ ಎನ್ನಬಹುದಾದುದು. ಆದರೆ 'ಮೃಗಾಯಣ' ತರಹದ ಕವನಗಳಲ್ಲಿ ನಿಸಾರ್, ಅವರ ದೃಷ್ಟಿ, ಈ ಸಾಮಾಜಿಕ ರಾಜಕೀಯ ಧಾರ್ಮಿಕ ಎನ್ನಬಹುದಾದ ಸ್ತರಗಳಾಚೆ ಹೋಗಿ, ಮತಾತೀತ ಭಿತ್ತಿಯಲ್ಲಿ, ಮನುಷ್ಯ ಬದುಕಿನ ಅರ್ಥವನ್ನು ಶೋಧಿಸುವ ಶುದ್ಧ ದಾರ್ಶನಿಕ ನೆಲೆಯನ್ನು ಪಡೆಯುತ್ತದೆ. ಇದು 'ರಾಮನ್ ಸತ್ತ ಸುದ್ದಿ' 'ಖಾಲಿ ಸೈಟುಗಳು' ಮುಂತಾದ ಕವಿತೆಗಳಲ್ಲಿ ಮೊದಲಿಂದಲೂ ಇತ್ತು ಕೂಡ. ನಿಸಾರ್ ತಮ್ಮ ಚುರುಕಾದ ವಿಡಂಬನೆ, ತಮಾಷೆಯ ಕವನಗಳ ಒಳಗೆ ತಟ್ಟನೆ ಸರಿದು ಇಂತಹ ದಾರ್ಶನಿಕ ಕವಿತೆಗಳಿಗೆ ಹೋಗಿಬಿಡುತ್ತಾರೆ. 'ಮೃಗಾಯಣ' ಕವಿತೆಯ ನಾಯಕ ಒಬ್ಬ ಮುಸ್ಲಿಂ ಆಗಿದ್ದು, ಅದರ ಅನುಭವಕ್ಕೆ ಧಾರ್ಮಿಕ ಭಿತ್ತಿಯೊಂದು ದೊರೆಕೊಳ್ಳುವುದರಿಂದ, ಅದರ ದಾರ್ಶನಿಕತೆಗೆ ಬೇರೆ ಪರಿಯೇ ಸಿಕ್ಕಂತಾಗಿದೆ. ಈ ಕವಿತೆಯಲ್ಲಿ ತಮ್ಮ ಕಾಲದ ಪ್ರಸಿದ್ಧ ಶಿಕಾರಿಗಾರರಾದ ಹನೀಫ್ ಸಾಹೇಬರ ಕಥೆಯಿದೆ. ಅವರು ಸ್ವತಃ 'ಆರೂವರಡಿಯ ಕೊತ್ತಿಗಣ್ಣಿನ ಪಠಾಣ ದೈತ್ಯ' ನಂತಿರುವವರು. ಅವರು ತಾವು ಬೇಟೆಯಾಡಿದ ಪ್ರಾಣಿಗಳ ಚರ್ಮ ತಲೆ ಕೊಂಬುಗಳನ್ನು ಮನೆ ತುಂಬ ತುಂಬಿಕೊಂಡು, ಅದನ್ನೊಂದು ಮ್ಯೂಸಿಯಂ ಮಾಡಿಕೊಂಡು, ತಮ್ಮ ಹೆಮ್ಮೆಯನ್ನು ಸಾರುತ್ತ ಬದುಕುತ್ತಿರುವವರು. ಕವಿತೆ, ಅವರ ಲೌಕಿಕ ಬದುಕಿನ ವಿಲಾಸ ವಿಭ್ರಮವನ್ನು ಉದ್ದೇಶಪೂರ್ವಕವಾಗಿ ವರ್ಣರಂಜಿತವಾದ ಆಡಂಬರದ ಭಾಷೆಯಲ್ಲಿ ಬಣ್ಣಿಸುತ್ತದೆ. ಒಂದು ದಿನ ಇಂತಹ ಹನೀಫ್ ಸಾಹೇಬರಿಗೂ ಸಾವು ಬರುತ್ತದೆ. ಅದು ಬಂದದ್ದಾದರೂ ತಮಾಷೆಯಾಗಿ, ನಾಟಕೀಯವಾಗಿ, ಅಸಂಗತವಾಗಿ. ಕವಿತೆ ಹೀಗೆ ಮುಗಿಯುತ್ತದೆ:

> **'ಸಾವು ಸದಾ ಸಂಗಾತಿಯಾದ ಹನೀಫ್ ಸಾಹೇಬರು,**
> **ತಮ್ಮ ಬಲಿಗಳ ತಬ್ಬಲಿಗೊಳಿಸಿ ಮೊನ್ನೆ ಶುಕ್ರವಾರ ಸತ್ತರಂತೆ,**
> **ಮುದಿ ಎಮ್ಮೆ ಕಟ್ಟಲು ಹೋಗಿ, ಅದು ಒದರಿ, ಏರಿನಿಂದ ಬಿದ್ದು.**
> **ಅವರ ಭವಿಷ್ಯದ್ವಾಚನ ನಿಜವಾಯಿತಲ್ಲ!**
> **'ಪರಮ ದಯಾಳುವಾದ ಅಲ್ಲಾ, ಆ ಸಾಹಸಿಯ ಆತ್ಮಕ್ಕೆ**
> **ಶಾಂತಿ ನೀಡಲಿ, ಆಮೀನ್'** (ಮೃಗಾಯಣ)

ಕವಿತೆ ಉರ್ದು ಶಬ್ದಗಳನ್ನು ಬಳಸುವ ಮೂಲಕ ಹಾಗೂ ಕುರಾನಿನ ಮಂತ್ರದ ವಾಕ್ಯವನ್ನು ತರುವ ಮೂಲಕ ಇಲ್ಲಿನ ಮಾನವಾನುಭವವನ್ನು ಧಾರ್ಮೀಕರಣ ಮಾಡು ವಂತಿದೆ. ಆದರೆ ಅದರ ನಿಜವಾದ ಉದ್ದೇಶ ಮಾತ್ರ ಬೇಟೆ, ಸಾವು. ಮಾನವ ಮತ್ತು ಪ್ರಾಣಿಗಳ ನಡುವಣ ಬೇಟೆ, ಶೌರ್ಯ ಮತ್ತು ಸಾವುಗಳ ನಡುವಣ ಅಂತಃಸಂಬಂಧವನ್ನು ಶೋಧಿಸುವುದೇ ಆಗಿದೆ. ಈ ಕವಿತೆಯು ಬಸವಣ್ಣನವರ ಹಬ್ಬಕ್ಕೆ ತಂದ ಹರಕೆಯ ಕುರಿತ ವಚನವನ್ನು ನೆನಪಿಸುತ್ತದೆ. ಆ ವಚನದಲ್ಲಿ 'ಕೊಂದವರುಳಿದರೆ?' ಎಂಬ ಪ್ರಶ್ನೆ ಬರುತ್ತದೆ. ಇಲ್ಲಿ ಅಂತಹುದೇ ವ್ಯಂಗ್ಯ 'ತಮ್ಮ ಬಲಿಗಳ ತಬ್ಬಲಿಗೊಳಿಸಿ ಮೊನ್ನೆ ಸತ್ತರಂತೆ' ಎಂಬ

ಸುದ್ದಿಯ ಹೇಳಿಕೆಯಲ್ಲಿ ಕಾಣಿಸುತ್ತದೆ. ಶಿಕಾರಿಯ ಮೂಲಕ ಆ ಪ್ರಾಣಿಗಳನ್ನು ತಬ್ಬಲಿಗೊಳಿಸಿದ್ದ ಹನೀಫ್ ಸಾಹೇಬರು, ತಾವೂ ಸಾಯುವ ಮೂಲಕ ಮತ್ತೊಮ್ಮೆ ತಬ್ಬಲಿ ಗೊಳಿಸುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಸಾವಿನ ಮುಂದೆ ಅವರೂ ತಬ್ಬಲಿಯೇ. 'ಮೃಗಾಯಣ' ಎಂಬ ಹೆಸರು 'ರಾಮಾಯಣ' ಎಂಬ ಪದ ಪುಂಜವನ್ನೂ ಮನಸ್ಸಿಗೆ ತರುತ್ತದೆ. ರಾಮಾಯಣ ಕೂಡ ಒಬ್ಬ ಬೇಟೆಗಾರ ಜಾತಿಯವನು ಬರೆದ ಕಥನ. ಅದು ಸಹ ಬೇಟೆಗಾರನೊಬ್ಬ ಮಾಡುವ ಕ್ರೌಂಚವಧೆಯ ಮೂಲಕ ಆರಂಭವಾಗುತ್ತದೆ. ಅಲ್ಲಿ ನಡೆಯುವ ಯುದ್ಧಕ್ಕೆ ಮಾಯಾ ಜಿಂಕೆಯ ಪ್ರಕರಣವು ಕಾರಣವಾಗುವುದರಿಂದ ಅದು ಕೂಡ 'ಮೃಗಾಯಣ'ವೆ. ಹೀಗೆ ಹನೀಫ್ ಸಾಹೇಬರ ಕಥನವು ರಾಮಾಯಣದ ಜತೆಗೆ ಸೂಕ್ಷ್ಮವಾಗಿ ಬೆರೆಯಲು ನೋಡುತ್ತದೆ. ಭಾಷಿಕವಾಗಿ 'ಮೃಗಾಯಣ' ಎಂಬುದು ಅಚ್ಚ ಸಂಸ್ಕೃತದ್ದು. ಇದಕ್ಕೆ ಬೆಂಬಲವಾಗಿ ಕವಿತೆಯಲ್ಲಿ ಸ್ವಯಾರ್ಜಿತ, ಭವಿಷ್ಯದ್ವಾಚನ ಮುಂತಾದ ಸಂಸ್ಕೃತ ಶಬ್ದಗಳು ಬರುತ್ತವೆ; ಕುವೆಂಪು, ಪುತಿನ, ಅಡಿಗರು ಬಿಟ್ಟರೆ ಈ ಬಗೆಯಲ್ಲಿ ತಮ್ಮ ಕಾವ್ಯದಲ್ಲಿ ಸಂಸ್ಕೃತ ತರುವವರಲ್ಲಿ ನಿಸಾರರು ಒಬ್ಬರು. ಅದರಲ್ಲೂ ಅವರ ಕೊನೆಯ ಹಂತದ ಕವಿತೆಗಳಲ್ಲಿ ಸಂಸ್ಕೃತವು ಕಗ್ಗಾಡಿನಂತೆ ಆವರಿಸಿಕೊಳ್ಳುತ್ತದೆ. ತಮ್ಮ ಕಾವ್ಯವನ್ನು ಮತಾತೀತಗೊಳಿಸುವ ಒತ್ತಾಸೆಯಿಂದ ಹೀಗೆ ಸಂಸ್ಕೃತ ಬಳಸುತ್ತಾರೆಯೇ? ಗೊತ್ತಿಲ್ಲ. ಒಂದೊಮ್ಮೆ ಇದು ನಿಜವಿದ್ದರೂ, ಇದನ್ನು ಕವಿ ಪ್ರಜ್ಞಾಪೂರ್ವಕವಾಗಿ ಮಾಡಿದಂತಿಲ್ಲ. ಭಾರತದ ಸಮಾಜದಲ್ಲಿ ವ್ಯಕ್ತಿಗಳಲ್ಲಿ ತಮ್ಮನ್ನು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಸಾಬೀತುಗೊಳಿಸಿಕೊಳ್ಳುವ ಯಾವ ಯಾವುದೊ ಒತ್ತಡಗಳು ಕೆಲಸ ಮಾಡುತ್ತಿರುತ್ತವೆ. ಕಠಿಣ ಸಂಸ್ಕೃತವನ್ನು ಮಾತ್ರವಲ್ಲದೆ, ನಿಸಾರ್ ಕಾವ್ಯವು ಬೇರೆ ಬೇರೆ ಭಾಷೆಯ ಆಡುಮಾತಿನ ಶಬ್ದಗಳನ್ನು ಮಿಲಾಯಿಸಿ ಅದ್ಭುತವಾದ ಸಮಾಸ ಮಾಡುತ್ತದೆ. 'ಮೃಗಾಯಣ' ಕವಿತೆಯಲ್ಲೇ ಬರುವ ಕೊತ್ತಿಗಣ್ಣಿನ ಪಠಾಣ ದೈತ್ಯ ಎಂಬ ವರ್ಣನೆ ಗಮನಿಸಿ. ಕೊತ್ತಿ ಮತ್ತು ಕಣ್ಣು ಎರಡೂ ಕನ್ನಡದವು. ಪಠಾಣ ಮತ್ತು ದೈತ್ಯ ಎರಡೂ ಫಾರಸಿ ಮತ್ತು ಸಂಸ್ಕೃತದವು. ಈ ಬೆರಕೆಯು ಅವರು ಎರಡು ಸಂಸ್ಕೃತಿಗಳ ನಡುವೆ ನಿಂತು ಕೆಲಸ ಮಾಡುವುದರ ಒಂದು ಭಾಗವಾಗಿದ್ದಿರಬಹುದೊ ಏನೊ? ಕುತೂಹಲವೆಂದರೆ, ಸಂಸ್ಕೃತ ಶೀರ್ಷಿಕೆಯುಳ್ಳ ಸದರಿ ಕವಿತೆಯಲ್ಲಿ ಬಳಕೆಯಾಗಿರುವ ಅಪಾರ ಪ್ರಮಾಣದ ಉರ್ದು ಫಾರಸಿ ಶಬ್ದಗಳು. ಮೊಖಾಬಿಲೆ, ಮೊಕ್ಕಾಂ, ಫಲಾನೆ, ಶಿಕಾರಿ, ತಯಾರಿ, ಹುಶಾರಿ, ವಗೈರೆ, ಬಯಾನು ಮುಂತಾದ ಇಂಡೋ ಪರ್ಶಿಯನ್ ಶಬ್ದಗಳಿಂದ ಹನೀಫ್ ಸಾಹೇಬರ 'ಮೃಗಾಯಣ' ತುಂಬಿಹೋಗಿದೆ. ಇವುಗಳಲ್ಲಿ ಕೆಲವು ಶಬ್ದಗಳಿಗೆ ಅವುಗಳ ಮೂಲ ಉಚ್ಚಾರಣೆಯಲ್ಲಿರುವ ಸೌಂಡ್ ಬರಲೆಂದು ವಾಕ್ಯಚಿಹ್ನೆಗಳನ್ನು ಕವಿ ಕೊಡುತ್ತಾರೆ. 'ರಮುಜಾನಿನ' 'ಮಜಾರು' ಪದಗಳ ಜಾ ಅಕ್ಷರದ ಕೆಳಗೆ, ಇಂಗ್ಲಿಷಿನ ಝಡ್ ಅಕ್ಷರದಿಂದ ಹುಟ್ಟುವ ಝ ಉಚ್ಚಾರಣೆಗೆ ಅನುಗುಣವಾಗುವಂತೆ, ಎರಡು ಚುಕ್ಕಿಗಳನ್ನು ಕೊಡುತ್ತಾರೆ. ಇವೆಲ್ಲವೂ ಇಸ್ಲಾಮಿಕ್ ಧರ್ಮದ ಅಥವಾ ಮುಸ್ಲಿಂ ಸಂಸ್ಕೃತಿಯ ಸೊಗಡನ್ನು ಕನ್ನಡದ ಕವಿತೆಗೆ ಹಾಯಿಸುವ ಯತ್ನದ ಭಾಗವಿರಬಹುದು. ಅದರಲ್ಲೂ ಉರ್ದು (ಫಾರಸಿ) ಶಬ್ದಗಳ ಬಳಕೆಗೂ ಇಲ್ಲಿರುವ ಮುಸ್ಲಿಮ್ ವ್ಯಕ್ತಿಯ ಅನುಭವಕ್ಕೂ ಕೊನೆಯಲ್ಲಿ ಬರುವ ಕುರಾನಿನ

ವಾಕ್ಯ ಧ್ವನಿಸುವ ಇಸ್ಲಾಂ ಸಂಸ್ಕೃತಿಯ ನೆನಪಿಗೂ ಅಂತರ್‌ಸಂಬಂಧಗಳಿದ್ದಂತಿವೆ. ಯಾಕೆಂದರೆ, ಕೃಷ್ಣನ ಲೀಲೆಗಳನ್ನು ಬಣ್ಣಿಸುವ ಕವಿತೆಗಳಲ್ಲಿ ಉರ್ದು ಶಬ್ದಗಳ ಬಳಕೆಯಿಲ್ಲ. ಅಲ್ಲಿರುವುದು ಸಂಸ್ಕೃತಮಯ ಕನ್ನಡ.

ನಿಸಾರ್ ಕಾವ್ಯದಲ್ಲಿ ಉರ್ದು ಶಬ್ದಗಳು, ಮುಸ್ಲಿಂ ಸಾಮಾಜಿಕ ಅನುಭವಗಳು ಹಾಗೂ ಇಸ್ಲಾಮಿಕ್ ಎನ್ನಬಹುದಾದ ಧಾರ್ಮಿಕ ನೆನಪುಗಳು ನಿರ್ದಿಷ್ಟ ಘಟ್ಟದಿಂದ ಆರಂಭ ವಾಗುತ್ತವೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಉರ್ದು ಶಬ್ದಗಳ ಬಳಕೆಯು ೧೯೬೦ರಿಂದ ಅದರಲ್ಲೂ 'ಕುರಿಗಳು, ಸಾರ್, ಕುರಿಗಳು' ಕವಿತೆಯಿಂದ ಶುರುವಾಗುತ್ತದೆ. ಇಲ್ಲಿ ಬರುವ 'ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು' ಎಂಬ ಸಾಲನ್ನು ನೆನೆಯಬಹುದು. ಆದರೂ ಇದು ಧಾರ್ಮಿಕ ನೆಲೆಯಲ್ಲೇನು ಬರುವುದಿಲ್ಲ. ಆದರೆ ಅನಂತರ ಉರ್ದು ಶಬ್ದ ಗಳ ಬಳಕೆಯು, ಧಾರ್ಮಿಕ ಸಂಸ್ಕೃತಿಯನ್ನು ತನ್ನ ಕಾವ್ಯದಲ್ಲಿ ಪ್ರವೇಶಗೊಳಿಸುವ ಭಾಗವಾಗಿ ಕಾಣಿಸಿಕೊಳ್ಳುತ್ತದೆ. ನಿಸಾರರ ಕಾವ್ಯದ ಮೊದಲ ಘಟ್ಟದಲ್ಲಿ ಇವು ಬಾರದೆ ಇರುವುದಕ್ಕೆ ಕಾರಣ ಸ್ಪಷ್ಟವಾಗಿದೆ—ಅದೆಂದರೆ ಈ ಹಿಂದೆ ಗುರುತಿಸಿದಂತೆ, ಗುಡಿ ಮಸೀದಿಗಳ ಜತೆ ಗುರುತಿಸಿಕೊಳ್ಳಲಾರೆ ಎಂಬ ಮೊದಲ ಘಟ್ಟದ ಆದರ್ಶವಾದಿ ನಿಲವು; ಪ್ರಶ್ನೆಯೆಂದರೆ, ತನ್ನ ಮಾತೃಭಾಷೆಯನ್ನು ತಾನು ಬರೆಯುತ್ತಿರುವ ಪರಿಸರದ ಭಾಷೆಯ ಒಳಗೆ ತರಬೇಕು ಎಂಬ ನಿರ್ಧಾರವನ್ನು ಅವರ ಕಾವ್ಯ ಯಾಕೆ ಮಾಡಿತು ಎನ್ನುವುದು? ಬಹುಶಃ ಇಲ್ಲೆಲ್ಲೊ ತನ್ನ ಅಸ್ಮಿತೆ ಪ್ರಶ್ನೆ ಕವಿಗೆ ಎದುರಾದಂತೆ ಕಾಣುತ್ತದೆ. ತಾನು ಸೆಕ್ಯುಲರ್ ಆಗುವ ಭರದಲ್ಲಿ, ತನ್ನನ್ನು ಅನುಮಾನಿಸುವವರಿಗೆ ಒಪ್ಪಿಸುವ ಮಾರ್ಗವನ್ನು ಹಿಡಿದು, ತನ್ನ ಬೇರುಗಳಿರುವ ಧಾರ್ಮಿಕ ಸಂಸ್ಕೃತಿ ಮತ್ತು ಸಮುದಾಯಗಳಿಂದ ಬೇರ್ಪಡುತ್ತಿದ್ದೇನೆ ಎಂಬ ಆತಂಕ; ಅದನ್ನು ಬಳಸುವುದು ತನ್ನನ್ನು ಮತೀಯವಾಗಿಸಬಹುದು ಎಂಬ ಹಿಂಜರಿಕೆ ಬಿಟ್ಟು ಕೊಡುವಿಕೆ; ಅದನ್ನು ಮತಾತೀತವಾಗಿಯೂ ಅನುಸಂಧಾನ ಮಾಡಬಹುದು ಎಂಬ ಸಾಧ್ಯತೆಯ ಶೋಧ; ಕಾವ್ಯದೊಳಗೆ ಧಾರ್ಮಿಕ ಹಾಗೂ ಸಾರ್ವಜನಿಕ ಎರಡೂ ಪರಿಸರಗಳ ಅನುಭವ ಲೋಕಗಳನ್ನು ಬೆರೆಸಿ ನೋಡುವ ಪ್ರಯೋಗ; ಈ ಪ್ರಯೋಗವು ಕಾವ್ಯಾನುಭವ ವನ್ನು ಸಮೃದ್ಧಗೊಳಿಸುವುದು ಮಾತ್ರವಲ್ಲದೆ, ಎರಡು ಸಮುದಾಯಗಳ ನಡುವೆ ಸೇತುಬಂಧನದ ಕೆಲಸವೂ ಮಾಡೀತು ಎಂದು ನಂಬಿಕೆ-ಇಂತಹದೊಂದು ಚಿಂತನೆಯ ಸರಪಳಿಯ ಭಾಗವಾಗಿ ಉರ್ದು ಶಬ್ದಗಳನ್ನು ಬೆರೆಸುವ ಪ್ರಕ್ರಿಯೆ ಸಂಭವಿಸಿರಬಹುದು; ಇದೂ ತಾನೇ ತರ್ಕಬದ್ಧವಾಗಿ ಚಿಂತಿಸಿ ತೆಗೆದುಕೊಂಡ ನಿರ್ಧಾರವಾಗಿರದೆ, ಕವಿ ತನ್ನ ಒಳಗಿಂದ ಕಾಡುವ ಅಸ್ಮಿತೆಯ ಪ್ರಶ್ನೆಯನ್ನು ಸೃಜನಶೀಲವಾಗಿ ಬಗೆಹರಿಸಿಕೊಂಡಿರ ಬಹುದಾದ ಸಾಧ್ಯತೆಯಾಗಿರಬಹುದು. ಈ ಬಿಕ್ಕಟ್ಟುಗಳ ಮುಖಾಮುಖಿ ಹಾಗೂ ಪರ್ಯಾಯಗಳ ಹುಡುಕಾಟವು ಹಾಗೆ ಒಬ್ಬ ಕವಿಯ ವೈಯಕ್ತಿಕ ಕಷ್ಟ ಸುಖದ ಮಾತಲ್ಲ; ಇದು ಬಹುಸಂಸ್ಕೃತಿಯುಳ್ಳ ದೇಶದಲ್ಲಿ ಅನೇಕ ಸಮುದಾಯಗಳು ಬಿಕ್ಕಟ್ಟು ಎದುರಿಸುತ್ತ ಹಾಗೂ ಹೊರ ದಾರಿಗಳನ್ನು ಹುಡುಕುತ್ತ ಮಾಡುತ್ತಿರುವ ದೊಡ್ಡ ಯತ್ನಗಳ ಭಾಗವಾಗಿದೆ.

೮

ನಿಸಾರ್ ಕಾವ್ಯದ ಮೇಲ್ಕಾಣಿಸಿದ ಘಟ್ಟಗಳಲ್ಲಿ, 'ರಂಗೋಲಿ ಮತ್ತು ಮಗ'

ಕವಿತೆಯ ನಿಲವು ಸಾಂಸ್ಕೃತಿಕವಾಗಿ ಮುಖ್ಯವಾದುದು. ಯಾಕೆಂದರೆ ಅಲ್ಲಿ ಮತಧರ್ಮದ ಕಾರಣದಿಂದ ಅನುಭವ ಲೋಕವನ್ನು ನಿರಾಕರಿಸುವುದಿಲ್ಲ; ಅದನ್ನು ಸಾಂಸ್ಕೃತಿಕ ವಿಶಿಷ್ಟ ಎಂದು ವೈಭವೀಕರಿಸುವುದೂ ಇಲ್ಲ. ಬದಲಾಗಿ ಅದನ್ನು ಸೌಂದರ್ಯಾತ್ಮಕವಾಗಿ ಧರ್ಮಾತೀತವಾದ ಮಾನವೀಯ ಅನುಭವವಾಗಿ ನೋಡುವುದಕ್ಕೆ ಅದು ಯತ್ನಿಸುತ್ತದೆ. ಈ ಯತ್ನದಲ್ಲಿ ಯಾವುದೊ ಒಂದು ಸರಳೀಕೃತ ಪರಿಹಾರವನ್ನು ಕಂಡುಕೊಳ್ಳುವ ಬದಲು, ('ಇಬ್ಬಂದಿ' ಕವಿತೆಯಲ್ಲಿ ಇಂತಹ ಪರಿಹಾರ ಕಂಡುಕೊಳ್ಳುವ ಅವಸರವಿದೆ) ಉತ್ತರ ಯಾವುದಿರಬಹುದು ಎಂದು ಹುಡುಕುವ ಮುಕ್ತ ಸಾಧ್ಯತೆಗಳನ್ನು ಅದು ಒಳಗೊಂಡಿದೆ. ಈ ಮುಕ್ತತೆಯ ಕಾರಣಕ್ಕಾಗಿಯೇ ಅದು ಒಳ್ಳೆಯ ಕವಿತೆಯಾಗಿದೆ. ಧಾರ್ಮಿಕ ಲೋಕಗಳನ್ನು ಅವುಗಳ ಮೂಲಭೂತವಾದಿ ನೆಲೆಯಿಂದ ಹೊರತುಪಡಿಸಿ ಡೆಮಾಕ್ರಟಿಕ್ಕಾಗಿ ಸೆಕ್ಯುಲರಾಗಿ ಅನುಸಂಧಾನ ಮಾಡುವುದು ಹೇಗೆ? ಎಂಬ ಪ್ರಶ್ನೆಗೆ ಈ ಕವಿತೆ ಮೂರು ದಾರಿಗಳನ್ನು ಸೂಚಿಸುತ್ತಿದೆ. ಅವೆಂದರೆ, ಲೋಕವನ್ನು ಬೆರಗಿನಿಂದ ನೋಡುವ ಮಗುತನ; ತರ್ಕಸತ್ಯವುಳ್ಳ ವೈಜ್ಞಾನಿಕ ಮನೋಧರ್ಮ ಹಾಗೂ ಕಲಾತ್ಮಕವಾದ ಸೌಂದರ್ಯ ಮೀಮಾಂಸೆ. ಮಗು ಚೆಲುವನ್ನು ಅದರ ಧಾರ್ಮಿಕ ಹಿನ್ನೆಲೆಯನ್ನು ವಿಚಾರಿಸದೆ ರಂಗೋಲಿಗೆ ಆಕರ್ಷಿತವಾಗುತ್ತದೆ. ರಂಗೋಲಿ ತಾನೊಂದು ಕಲೆಯಾದ ಕಾರಣದಿಂದಲೇ ಮನಸ್ಸನ್ನು ಧರ್ಮಾತೀತವಾಗಿ ಆಕರ್ಷಿಸುವ ಶಕ್ತಿ ಪಡೆದಿದೆ. ಮತಾತೀತವಾಗಿ ಆಲೋಚಿಸಲು ಹಾಗೂ ಬದುಕಲು ಕಲೆ ಕೊಡುವ ಪ್ರೇರಣೆಯ ಬಗ್ಗೆ ನಿಸಾರ್ ಕಾವ್ಯಕ್ಕೆ ಕೊಂಚ ಹೆಚ್ಚು ಅನ್ನಿಸುವಷ್ಟು ಶ್ರದ್ಧೆಯಿದ್ದಂತಿದೆ.

> **'ಕವಿತೆ ಆಕಾಶದಂತೆ ಸರ್ವಧಾರೆ,**
> **ಅದಕಿಲ್ಲ ಧರ್ಮಗಿರ್ಮಗಳ ಗಡಿ ಗೆರೆ**
> **ರಾಜಕೀಯದ ಜಿಮ್ಮಿಗಲ್ಲು, ಫಲಕಗಳ ಹೊರೆ,**
> **ಜಾತಿ ಕುಲವರ್ಗದ ಟೇಪಿನಳತೆಯ ಮೇರೆ'**
>
> **(ಆಕಾಶಕ್ಕೆ ಸರಹದ್ದುಗಳಿಲ್ಲ)**

ಇಲ್ಲಿ ಕಲೆಯ ಶಕ್ತಿಯ ಬಗ್ಗೆ ಉತ್ಪ್ರೇಕ್ಷೆಯಿದೆ. ಆದರೆ ಕಲೆ ನಮ್ಮ ಸಂಸ್ಕೃತಿಯಲ್ಲಿ 'ಧರ್ಮಗಿರ್ಮ'ಗಳ ಗಡಿ ಗೆರೆಗಳನ್ನು ನಿರಾಕರಿಸಿಬಿಡುತ್ತದೆ ಎಂಬುದು ಅರೆ ಸತ್ಯ. ಇದನ್ನು ಕಾವ್ಯದ ಆದರ್ಶವಾದ ಗ್ರಹಿಕೆ ಎನ್ನಬಹುದು. ಕವಿತೆಗೆ ಅಥವಾ ಯಾವುದೇ ಕಲೆಗೆ ಧರ್ಮಾತೀತವಾಗುವ ಹಾದಿಯಲ್ಲಿ ಕರೆದೊಯ್ಯುವ ಗುಣವಿರುವುದು ನಿಜ. ಆದರೆ ಅದರ ಶಕ್ತಿಸೆಲೆಗಳು ಧರ್ಮದೊಳಗೂ ಇವೆ. ಅದನ್ನು ನಿಯಂತ್ರಿಸುವ ತಡೆಗಳು ಧರ್ಮದೊಳಗಿವೆ. ಆದರೂ ಅದು ಧರ್ಮದ ಗಡಿ ಗೆರೆಗಳನ್ನು ದಾಟಿ ಹೋಗಬಲ್ಲದು. ಇಂತಹದೊಂದು ದ್ವಂದ್ವಾತ್ಮಕ ಸಂಬಂಧವನ್ನು ಕಲೆ ಧರ್ಮದ ಜತೆಗೆ ಇರಿಸಿಕೊಂಡಿದೆ. ಸೋಜಿಗವೆಂದರೆ ಈ ಕವಿತೆಯ ಧೋರಣೆಯು ಆರಂಭದ ಘಟ್ಟದಲ್ಲಿ 'ಹುಟ್ಟುಹಬ್ಬದ ಹಾಡು' ಕವಿತೆಯ ಮುಂದುವರಿಕೆಯೇ ಆಗಿರುವುದು. ಬಹುಶಃ ಇದು ನಿಸಾರ್ ಕಾವ್ಯವು ಇರಿಸಿಕೊಂಡಿರುವ ಆಳದ ಶ್ರದ್ಧೆಯಾಗಿರುವಂತಿದೆ.

೬

ಧರ್ಮ ಅಧ್ಯಾತ್ಮಗಳ ಹಿಡಿತಕ್ಕೆ ಸಿಲುಕದೆ ತಪ್ಪಿಸಿಕೊಂಡು ತನ್ನದೇ ಆದ ಬದುಕನ್ನು ಬದುಕುವ ಸೆಳೆತ; ಜನಸಾಮಾನ್ಯರ ಧಾರ್ಮಿಕತೆಯಲ್ಲಿಯೇ ಅಡಗಿರುವ ಕಂದಾಚಾರಗಳ ವಿಮರ್ಶೆ; ಕೋಮಿನ ಕಂತ್ರಾಟುದಾರರ ತೀವ್ರ ನಿರಾಕರಣೆ; ತಾನು ತನ್ನ ಪರಿಸರದಲ್ಲಿ ಕೊನೆಗೂ ಅನ್ಯನಾಗಿದ್ದೇನೆ ಎಂಬ ಅರಿವಿನಿಂದ ಹುಟ್ಟುವ ಪರಕೀಯ ಪ್ರಜ್ಞೆ ಹಾಗೂ ನೋವು; ತನ್ನ ಬೇರುಗಳು ಇರುವುದು ಈ ಬಗೆಯ ಧಾರ್ಮಿಕ ಲೋಕದಲ್ಲಿಯೇ ಎಂದು ತಿಳಿದು ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಕಂಡುಕೊಳ್ಳುವ ಯತ್ನ; ತನ್ನ ಸಮುದಾಯವನ್ನು ಧರ್ಮದ ಕಾರಣದಿಂದಲೇ ದ್ವೇಷಿಸುವ ಮತೀಯವಾದದ ಬಗೆಗೆ ಆಗ್ರಹ; ಅದರ ಸವಾಲಿಗೆ ಜವಾಬೆಂಬಂತೆ ರಾಷ್ಟ್ರಭಕ್ತಿಯ ನಾಡಗೀತೆಗಳ ಹಾಗೂ ಹಿಂದೂ ದೇವತೆಗಳನ್ನು ಸ್ತುತಿಸುವ ಕವನಗಳ ರಚನೆ; ಈ ಉತ್ತರವು ನಿಜವಾದ ಬಿಡುಗಡೆಯಲ್ಲ ಎಂಬ ಅರಿವಿನಿಂದ ಹುಟ್ಟುವ ನೋವು; ಎರಡೂ ಧರ್ಮ ಹಾಗೂ ಧಾರ್ಮಿಕ ಸಮುದಾಯಗಳ ನಡುವೆ ಇರುವ ಭಿನ್ನತೆಯೊಳಗೂ ದೈನಿಕ ಬದುಕಿನಲ್ಲಿ ನಡೆಯುವ ಕೊಡುಕೊಳೆಗಳ ಶೋಧ; ಮತಧರ್ಮಗಳು ಹಾಕುವ ಲಕ್ಷ್ಮಣರೇಖೆಗಳನ್ನು ಮೀರುವ ಸಾಧನವಾಗಿ ವಿಜ್ಞಾನ ಮತ್ತು ಕಲೆಗಳ ಶಕ್ತಿಯಲ್ಲಿ ನಂಬಿಕೆ—ಹೀಗೆ ಹಲವಾರು ಹೊರಳಿಕೆ ತೊಳಲಿಕೆಗಳಲ್ಲಿ ನಿಸಾರ್ ಕಾವ್ಯವು ಹಾದು ಬರುತ್ತದೆ. ಈ ಕಾರಣಕ್ಕಾಗಿಯೇ ಅದು ಸಾಂಸ್ಕೃತಿಕವಾಗಿ ಅನೇಕ ಸಂಕೀರ್ಣ ಆಯಾಮಗಳನ್ನು ಪಡೆದುಕೊಂಡಿದೆ.

'ಎರಡು ಸಂಸ್ಕೃತಿಗಳ ನಡುವೆ ನಿಂತು ಕಾವ್ಯ ಕಟ್ಟುವ ಕೆಲಸ ಕಷ್ಟದ್ದು' ಎಂಬ ನಿಸಾರ್ ಹೇಳಿಕೆಯು ಕೆಲವು ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಅದೆಂದರೆ, ಹಾಗೆ ನಮ್ಮ ಸಮಾಜದಲ್ಲಿ ಎರಡು ಸಂಸ್ಕೃತಿಗಳು ಹಾಗೆ ಇವೆಯೇ? ಈ ಭೇದ ಇದೆಯೋ ಅಥವಾ ಅದನ್ನು ಹುಟ್ಟಿಸಿಕೊಳ್ಳಲಾಗಿದೆಯೋ? ಕಲೆಯ ದೃಷ್ಟಿಯಿಂದ ಈ ಸಾಮಾಜಿಕ ಸತ್ಯವನ್ನು ಹೇಗೆ ನೋಡಬೇಕು? ಹಿಂದು ಮುಸ್ಲಿಂ ಎಂಬ ಎರಡು ಸಂಸ್ಕೃತಿಗಳ ದ್ವೈತವನ್ನು ಮೊದಲೇ ಕಲ್ಪಿಸಿಕೊಂಡು, ಅವು ಬೇರೆಯಾಗುವುದನ್ನು ಸಂಘರ್ಷ ಮಾಡುವುದನ್ನು ಬೆರೆಯುವುದನ್ನು ವಿಷಾದ ಸಂಭ್ರಮಗಳಲ್ಲಿ ತೋರುವ ಈ ದೃಷ್ಟಿಕೋನದ ಮೂಲವು ಮಹಾ ನಗರದ ಬಾಳಿನಿಂದ ಪ್ರೇರಿತವಾಗಿದ್ದೆ? ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಈ ಎರಡನ್ನು ಬೇರೆ ಬೇರೆ ಎಂದು ತಿಳಿಯದೆ ಇರುವ ವಾಸ್ತವವೂ ಒಂದಿದೆ. ಅಲ್ಲಿ ಅವು ಅದ್ವೈತಿಯಾಗಿವೆ. ಎರಡು 'ಬೇರೆ' ಸಂಗತಿಗಳೂ ಹೌದು; ಅವು ಕೂಡವ ಸಂಗತಿಗಳೂ ಹೌದು. ಹೀಗಾಗಿ ಬೆಂಗಳೂರಿನ ಮಧ್ಯಮವರ್ಗದ ಜನರ ನಡುವಣ ಬದುಕಿನ ಅಪ್ಪಟ ನಾಗರ ಕವಿಯ ಅನುಭವ ಲೋಕವೇ ಈ ಎರಡರ ಸಂಘರ್ಷದ ವೇದನೆ ಹಾಗೂ ಮಿಲನದ ಸಂಭ್ರಮಗಳನ್ನು ಪರಿಭಾವಿಸಿಕೊಂಡಿದೆಯೆ? ಇಷ್ಟಂತೂ ನಿಜ. ನಿಸಾರರು ಧಾರ್ಮಿಕ ಅನುಭವಗಳನ್ನು ಪೂರ್ಣವಾಗಿ ನಿರಾಕರಿಸಿದಾಗ ವ್ಯಕ್ತಿನಿಷ್ಠ ಲೌಕಿಕ ಕವಿತೆಗಳನ್ನು ರಚಿಸಿದ್ದಾರೆ. ಧಾರ್ಮಿಕ ಲೋಕದ ಅನುಭವಗಳನ್ನು ಭಾವುಕವಾಗಿ ಮೈಮೇಲೆ ಎಳೆದುಕೊಂಡಾಗ ಜಡವಾದ ಕವಿತೆಗಳನ್ನು ರಚಿಸುತ್ತಾರೆ. ಎರಡೂ ಸಂಸ್ಕೃತಿಗಳ ಭೇದವನ್ನು ವೈಚಾರಿಕವಾಗಿ ಪರಿಭಾವಿಸಿದಾಗ ವಿಚಾರಗಳ ಕಾವ್ಯ ಹುಟ್ಟಿದೆ. ಭೇದವೇ ಇಲ್ಲವೆಂದು

ನಿರಾಳವಾದಾಗ 'ಬೆಣ್ಣೆಕದ್ದ ಕೃಷ್ಣ'ದಂತಹ ಕೃತಕ ಪದ್ಯಗಳು ಹುಟ್ಟಿವೆ. ಆದರೆ ಭೇದವಿದೆ, ಸಂಘರ್ಷವೂ ಇದೆ, ಆಕರ್ಷಣೆಯೂ ಇದೆ, ವಿಕರ್ಷಣೆಯೂ ಇದೆ ಎಂಬ ದ್ವಂದ್ವಾತ್ಮಕ ಮನೋಭಾವದಲ್ಲಿ ಧಾರ್ಮಿಕ ಅನುಭವವನ್ನು ಎದುರುಗೊಂಡಾಗಲೆಲ್ಲ ಅತ್ಯುತ್ತಮ ಕವಿತೆಗಳನ್ನು ರಚಿಸುತ್ತಾರೆ; ಪ್ರಾಮಾಣಿಕವಾದ ಸಾಂಸ್ಕೃತಿಕ ಆಳದ ಕಾವ್ಯವನ್ನು ರಚಿಸಿದ್ದಾರೆ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ರಂಗೋಲಿ ಮತ್ತು ಮಗ' ಮುಂತಾದ ಕವಿತೆಗಳು ಹುಟ್ಟಿವೆ. ಆದ್ದರಿಂದ ನಿಸಾರ್‌ರ ಕಾವ್ಯದ ಶಕ್ತಿಯಿರುವುದು ಎರಡು ಸಂಸ್ಕೃತಿಗಳ ಆಚೆ ಹೋಗಿ ಬರೆಯುವುದರಲ್ಲಿ ಅಲ್ಲ, ನಡುವೆ ನಿಂತು ಅನುಸಂಧಾನ ಮಾಡುವಲ್ಲಿ. ಎರಡು ಅಥವಾ ಹಲವು ಸಂಸ್ಕೃತಿಗಳಿಗೆ ಸೇರಿದವರಾಗಿರುವುದು ಶಾಪವೂ ಹೌದು, ವರವೂ ಹೌದು. ಎರಡರ ನಡುವೆ ಸದಾ ಕರ್ಷಣೆಯಿರುತ್ತದೆ. ಈ ಕಾರಣಕ್ಕಾಗಿಯೇ ಚಲನಶೀಲತೆ ಇರುತ್ತದೆ; ಸೃಜನಶೀಲ ಜೀವಂತಿಕೆಯು ಯಾವಾಗಲೂ ಎರಡು ಜಗತ್ತುಗಳ ನಡುವಣ ನೋ ಮ್ಯಾನ್ಸ್ ಲ್ಯಾಂಡಿನಲ್ಲಿಯೆ ಶಕ್ತವಾಗಿ ಮೈದಳೆಯುತ್ತದೆ.

ಭಾರತದ ಸಂಸ್ಕೃತಿಗಳಲ್ಲಿ ಬಹಳಷ್ಟು ಸೃಜನಶೀಲವಾದ ಗಳಿಗೆಗಳು ಹುಟ್ಟಿರುವುದು ಇಂತಹ ಎರಡು ದಡಗಳ ಪಯಣದಲ್ಲಿಯೆ. ಆದ್ದರಿಂದ ನಿಸಾರ್ ಯಾವುದನ್ನು ಕಷ್ಟದ ಕೆಲಸ ಎಂದಿದ್ದಾರೋ ಅದು ಕವಿಯಾಗಿ ಅವರ ಪಾಲಿಗೆ ಒದಗಿರುವ ಭಾಗ್ಯವೂ ಹೌದು.

ಗುಹೆಯ ಮೃಗೀಯ ಇರವಿನಿಂದ ಗಗನಚುಂಬಿಗಳ ನಯ ನಾಗರಿಕತೆಯ ಪರಿಷ್ಕೃತ ವಿಲಾಸ ಜೀವನದವರೆಗೆ ಮನುಷ್ಯ ಸಾಗಿ ಬಂದಿರುವ ದೀರ್ಘಾವಧಿಯ ಸಾಹಸ ಯಾತ್ರೆ ರಮ್ಯಾದ್ಭುತ. ಕ್ರಮಿಸಿರುವ ದೂರ, ಎದುರಾಗಿರುವ ಅಡೆತಡೆ, ಉಂಡ ಅವಮಾನ ತಲ್ಲಣ ವೇದನೆಗಳನ್ನು ಚಿತ್ರವತ್ತಾಗಿ ದಾಖಲಿಸುವುದು ಅವನ ಅಳವಿಗೆ ಅತೀತವಾದ ವಿಚಾರ. ಚರಿತ್ರೆ ನಮೂದಿಸುವುದು ಗೀಟು ಚುಕ್ಕಿ ಬಣ್ಣಗಳನ್ನು ಮಾತ್ರ; ಸಾಹಸ ಕಥನದ ಒಡಕಲು ನೀರನ್ನು ಮಾತ್ರ. ಪ್ರಪಂಚದ ಭೂಲಕ್ಷಣದ ಅನೇಕತೆ, ಜನ ಪಕ್ಷಿ ಪ್ರಾಣಿ ಕೀಟಾದಿಗಳ ತಬ್ಬಿಬ್ಬಾಗಿಸುವ ವಿವಿಧತೆ ಹಾಗೂ ಬಹುಳತೆ, ಸಾಗರಾದಿ ಜಲಾಕರಗಳ ಬೃಹದ್ವಿಸ್ತೀರ್ಣ ಮುಂತಾದ ವಿವರಗಳನ್ನು ಮೂರ್ತಿವತ್ತಾಗಿ ಮೂಡಿಸಿರುವುದಿಲ್ಲ. ಅವುಗಳನ್ನು ಕಲ್ಪಿಸಿಕೊಳ್ಳುವಲ್ಲಿ ಮನೋಬುದ್ಧಿಗಳು ತತ್ತರಿಸುತ್ತವೆ, ಸೋತು ಸುಣ್ಣವಾಗುತ್ತವೆ. ಒಟ್ಟಿನಲ್ಲಿ ರಕ್ತಮಾಂಸವಿಹೀನ ಮಾಹಿತಿ, ಅಂಕಿ ಅಂಶಗಳ ಎಲುಬುಗೂಡಿನ ಒಂದೆರಡು ಉಳಿಕೆ ಮಾತ್ರ ಚರಿತ್ರೆ ಎನ್ನಿಸಿಕೊಳ್ಳುತ್ತದೆ.

(ಚರಿತ್ರೆಯ ಮಿತಿ)



ದ್ವಿಸಾಂಸ್ಕೃತಿಕ ನೆಲೆಯಿಂದ ಕವಿಯ ಮೌಲ್ಯಾಂಕನ

♦ ಡಾ. ವಿಜಯಾ ದಬ್ಬೆ

೧೯೫೫ರಿಂದ ನಿಸಾರ್ ಅಹಮದ್ ಅವರು ಬರೆದ, ಅನುವಾದಿಸಿದ ಕವನಗಳು ಹಾಗೂ ಗೀತೆಗಳು ಅವರ 'ಸಮಗ್ರ ಕವಿತೆಗಳು' ಕೃತಿಯಲ್ಲಿ ಒಟ್ಟಿಗೆ ಸಿಗುತ್ತವೆ. ಒಬ್ಬ ಲೇಖಕ ಎಲ್ಲಿಂದ ತೊಡಗಿ ಎಲ್ಲಿಗೆ ತಲಪಿದನೆಂಬುದರಲ್ಲಿಯೂ ಕನ್ನಡ ಕಾವ್ಯ ಸಂದರ್ಭದಲ್ಲಿ ಇಡಿಯಾಗಿ ಒಬ್ಬ ಕವಿಯ ದನಿಯೆಂಥದು ಎಂಬುದರಲ್ಲಿಯೂ ಆಸಕ್ತರಾದವರಿಗೆ ಇಂಥ ಸಮಗ್ರ ಪ್ರಕಟಣೆಗಳು ಉಪಯುಕ್ತ.

ನಿಸಾರರ ಮೊದಲ ಸಂಕಲನವಾದ 'ಮನಸು ಗಾಂಧಿ ಬಜಾರು'(೧೯೬೦)ವಿನ ಮೊದಲಲ್ಲಿನ ಕಾವ್ಯ ಕುರಿತ ಘೋಷಣೆ ಪ್ರಗತಿಶೀಲ—ರಮ್ಯದ್ದಾಗಿದೆ. 'ಇದು ಸಿಡಿಲಿನ ನುಡಿ!' ಇದು ಮಡಿಯದ ನುಡಿ' ಎಂಬ ಉತ್ಸಾಹ, ಭರವಸೆಯಿಂದ ಹೊರಟದ್ದು. 'ಮಾನವ ಕೋಟಿಯ ಮೂಕ ಸಂಕಟಕೆ ಮಾತಿನ ಪ್ರತಿನಿಧಿ'ಯಾಗುವ ಹಂಬಲವನ್ನು ಹೊತ್ತದ್ದು. ಕವಿಗೆ 'ಇಂದ್ರಜಾಲದ ಮೋಹ' ಎಳೆಯುತ್ತದೆ. ನಿರುದ್ಯೋಗ ತಂದ ನಿರುತ್ಸಾಹ ಕುಗ್ಗಿಸುತ್ತದೆ. ಅಷ್ಟರಲ್ಲೇ ಪ್ರೇಮ ಉಕ್ಕುತ್ತದೆ. ಅದರಲ್ಲಿನ ನಿರಾಶೆ ಗುರುವಿನಡಿಗೆ ಒಯ್ಯುತ್ತದೆ—ಹೀಗೆ ಬದುಕಿನ ಬೆಳಗಿನ ಉತ್ಸಾಹ, ಒಲವು, ಸಿಡಿತ, ದಿಗ್ಭ್ರಮೆಗಳೆಲ್ಲ ಅಲ್ಲಿ ಬೆಳಗಿವೆ. ಮುಂದೆ ಈ ಗುಣಗಳು ಮರೆಯಾಗದಿದ್ದರೂ 'ನೆನೆದವರ ಮನದಲ್ಲಿ' (೧೯೬೪), 'ಸುಮುಹೂರ್ತ' (೧೯೬೭) ಸಂಕಲನಗಳಲ್ಲಿ ಕವಿ ನಡೆದಂತೆಲ್ಲ ಅನುಭವದ ಸೀಮೆ ವಿಸ್ತೃತ

ಗೊಂಡಿದೆ. ಆ ಅನುಭವದ ಹಲವು ಮಗ್ಗುಲುಗಳನ್ನು ಕಾಣಲು ಕವಿಯ ಸೂಕ್ಷ್ಮತೆಯೂ ಸನ್ನದ್ಧವಾಗಿದೆ. ಆತ್ಮಸಾಕ್ಷಿ ಮತ್ತು ಶೋಧನೆಗೆ ಒತ್ತು ಬಿದ್ದಿದ್ದ ಆ ಕಾಲದಲ್ಲಿ ನಿಸಾರರು ತಮ್ಮ ಕಾವ್ಯದ ದೃಷ್ಟಿಕೋನ ಮತ್ತು ರೀತಿಗಳಲ್ಲಿ ಅತ್ತ ವಾಲುವುದುಂಟು. ನಿಷ್ಠುರ ಆತ್ಮಾವಲೋಕನ, ವಾಸ್ತವತೆ ಮತ್ತು ಸ್ವಂತಿಕೆಗಾಗಿ ಕವಿ ಯತ್ನಿಸುತ್ತಾನೆ. 'ಭೂಮ್ಯಂತರಾಳದೊಳಗಾವ ಸ್ತರ ಶಿಲೆಗಳಲಿ ನಿಜ ಖನಿಜ ನಿಕ್ಷೇಪ ಹುದುಗಿರುವುದೋ' ಎಂದು ಕವಿ ತಡಕಾಡುತ್ತಾನೆ. ಕವಿಯ ಲೋಕಾನುಭವವು ಲೋಕದ ಕಹಿ, ಡೊಂಕು, ನಿಷ್ಕರುಣೆಗಳ ಅಸ್ತಿತ್ವದ ಅರಿವನ್ನು ಹೆಚ್ಚಿಸುತ್ತದೆ. 'ಆಂತರ್ಯ ಸಂಚಯಿತ ಬಾಧೆಯನೆ ಸುರಿದೆರೆದು' ಕವಿ ಬರೆಯುತ್ತಾನೆ. 'ಸಂಜೆ ಐದರ ಮಳೆ' (೧೯೭೦), 'ನಾನೆಂಬ ಪರಕೀಯ' (೧೯೭೨) ಕವಿತಾ ಸಂಕಲನಗಳು ಕವಿಯ ದ್ವಿಸಾಂಸ್ಕೃತಿಕ ನೆಲೆಯ ಬಿಕ್ಕಟ್ಟನ್ನೂ ತತ್ಕಾಲೀನ ಸಾಮಾಜಿಕ, ರಾಜಕೀಯ ಸಂದರ್ಭದ ಹಲವು ಪ್ರತಿಕ್ರಿಯೆ, ಪ್ರತಿಫಲನಗಳನ್ನೂ ಕಾಣಿಸುತ್ತವೆ. 'ಅಂತರ' 'ಸ್ವಜನೋದ್ಧಾರಕರು' ಮೊದಲಾದ ನಿಸಾರ್ ಕಾವ್ಯದ ಕೆಲವು ಮುಖ್ಯ ಮೈಲಿಗಲ್ಲುಗಳನ್ನು 'ಸ್ವಯಂಸೇವೆಯ ಗಿಳಿಗಳು' (೧೯೭೭) ಹಾಗು 'ಅನಾಮಿಕ ಆಂಗ್ಲರು' (೧೯೮೨) ಸಂಕಲನಗಳಲ್ಲಿ ಗಮನಿಸಬಹುದು. ಅನಂತರದ ಕವನಗಳು ನಿಸಾರ್ ಅವರ ಕಾವ್ಯ ತಲಪಿರುವ ವಿಸ್ತೃತಿ ಮತ್ತು ಹದವನ್ನು ಕಾಣಿಸುತ್ತವೆ.

ವ್ಯಕ್ತಿ ಕೇಂದ್ರೀಕೃತ ಕವನಗಳು ನಿಸಾರ್ ಕಾವ್ಯದ ಎದ್ದು ಕಾಣುವ ಒಂದು ಬಗೆ. ಇಂಥ ಕವನಗಳ ವ್ಯಾಪ್ತಿ ಭೀಮಪ್ಪ ಮಾಸ್ತರರಿಂದ ಅರಾಫತ್‌ವರೆಗೆ ಹರಡಿದೆ. ಪ್ರಾಚೀನರಿಂದ ಈಚಿನವರವರೆಗೂ ಹರಿದಿದೆ. ಈ ಬಗೆಯ ರಚನೆಗಳಲ್ಲಿ ಗಾಂಧೀಜಿ ಯವರನ್ನು ಕುರಿತ ರಚನೆಗಳದು ಸಿಂಹಪಾಲು. ನಿಸಾರರದು ಸ್ವಾತಂತ್ರ್ಯೋತ್ತರ, ಗಾಂಧಿಯೋತ್ತರ ಕಾಲದ ಬರಹಗಳಾದರೂ ಗಾಂಧೀಜಿಯವರ ಬದುಕು, ವ್ಯಕ್ತಿತ್ವ ಮತ್ತು ಮೌಲ್ಯಗಳು ಅವರ ಕಾವ್ಯದ ಜಾಡಿನಲ್ಲಿ ಮರೆಯಾಗದೆ ಉಳಿದಿವೆ. ಭಾರತೀಯ ಕಾವ್ಯ ಸಂದರ್ಭದಲ್ಲಿಯೇ ಕಾಣುವ ಸಂಗತಿ ಇದಾದರೂ ನಿಸಾರರಂಥ ಕವಿಗಳನ್ನು ಗಾಂಧೀಜಿ ಸತತವಾಗಿ ಕಾಡಿದ್ದಾರೆ. ಗಾಂಧೀಜಿಯವರ ಕೊಲೆ ಹಾಗೂ ಅನಂತರದ ಅವರ ಮೌಲ್ಯಗಳ ಕೊಲೆಯನ್ನು ಕವಿ ಮನಸ್ಸು ಆಳವಾದ ವಿಷಾದದಿಂದ ಕಾಣುತ್ತದೆ. ಈ ನೋವು, ಕಹಿ ಮೊನಚಾದ ವ್ಯಂಗ್ಯಕ್ಕೆ ತಿರುಗುವುದೂ ಉಂಟು. ಹಲವು ಓದಿಗೆ ಹಲವು ರೀತಿಯಲ್ಲಿ ತೆರೆದುಕೊಳ್ಳುವ ಕಾವ್ಯದಂತೆ ತಲೆಮಾರಿನಿಂದ ತಲೆಮಾರಿಗೆ, ಅರಿವು ಮತ್ತು ಅನುಭವದ ಹಿಗ್ಗುವಿಕೆಯೊಂದಿಗೆ ಗಾಂಧೀಜಿ ಪಡೆಯುವ ಸಂವಾದ, ಮಾನ್ಯತೆ, ಅರ್ಥವಂತಿಕೆಯೂ ಬದಲಾಗುತ್ತಾ ಹೋಗುವುದನ್ನು ಹಲವು ಕವನಗಳಲ್ಲಿ ನಿಸಾರ್ ಹಿಡಿದಿದ್ದಾರೆ. ರಾಮಕೃಷ್ಣ ಪರಮಹಂಸ, ವಿವೇಕಾನಂದ, ಬಸವಣ್ಣ, ತೀನಂಶ್ರೀ, ತೆರೆಸ, ಅರಬಿಂದೋ, ಏಸು—ಹೀಗೆ ಹಲವು ಕಾಲಘಟ್ಟಗಳ ಹಾಗೂ ಪರಂಪರೆಗಳ ವ್ಯಕ್ತಿಗಳ ಬಗೆಗಿನ ಗೌರವ, ಮೆಚ್ಚುಗೆಗಳ ಅಭಿವ್ಯಕ್ತಿ ಇಲ್ಲಿದೆ. ಈ ವ್ಯಕ್ತಿಗಳು ಪರಂಪರೆಗಳ ಪ್ರಾತಿನಿಧಿಕರೂ ಆಗಿರುವುದರಿಂದ ಈ ಸ್ಪಂದನ, ಚಿಂತನಗಳು ವ್ಯಕ್ತಿಗತ ಸೀಮೆಯನ್ನು ದಾಟಿ ಸಾಂಸ್ಕೃತಿಕ ಸಂವಾದವಾಗುತ್ತವೆ.

ಸಮೂಹ ಬದುಕಿನ ಬಗ್ಗೆ ಆಸ್ಥೆ, ನಾಡು-ನುಡಿಯ ಅಭಿಮಾನ ನಿಸಾರರ ಕಾವ್ಯದ

ಹಾದಿಯುದ್ದಕ್ಕೂ ಕಾಣುವಂಥದು. ಆದರೆ ನಾಡಿನ ಸ್ಥಿತ್ಯಂತರಗಳು, ಕವಿಯ ಅನುಭವದ ಪರಿವರ್ತನೆಗಳು ಈ ದಿಕ್ಕಿನ ಅನುಭವದ ಸೂಕ್ಷ್ಮ ಹಾಗೂ ಸಂಕೀರ್ಣ ಸ್ಥಿತಿಯನ್ನು ಬೆಳೆಸಿವೆ. 'ಸತ್ಯ ಅಹಿಂಸೆಯ ಹಯಗಳ ಜೋಡಿ / ಸರ್ವೋದ್ಧಾರದ ರಥವನು ಹೂಡಿ / ಶುಭ್ರ ತುಷಾರ ಕಿರೀಟಿನಿ ಭಾರತಿ'—ಎಂದು ಮೊದಲಾಗಿ ಶಬ್ದಗಳು ಒಂದರ ಮೇಲೊಂದು ಸುಮ್ಮನೆ ಉರುಳಿದಂಥ ಪದ್ಯಗೀತೆಗಳಿವೆಯಾದರೂ ನಾಡು-ನುಡಿಯ ಬಗ್ಗೆ ತುಂಬಿದ ಅಕ್ಕರೆ, ಕಾಳಜಿಯ ಸಹಜ ಹೊಮ್ಮುವಿಕೆ ಹಾಗೂ ಸುಭಗ ಗತಿಯುಳ್ಳ ಕವನಗಳ ಮೇಳನವೂ ಇಲ್ಲಿದೆ. ಪ್ರಾಯಃ ಇಂಥ ಭಾವತೀವ್ರತೆ ಇರುವುದರಿಂದಲೇ ಆ ಕಾಳಜಿ, ನಿಷ್ಠೆಯನ್ನು ಕುರಿತು ಸಂಶಯ, ಒಡಕು ನುಡಿಗಳು ಎದುರಾದಾಗ, ಕವಿಯನ್ನು ಆಳವಾದ ಗ್ಲಾನಿ, ಹತಾಶೆ ಮುತ್ತುವುದು. ಜಾತಿ ವಿನಾಶ, ಧರ್ಮ ವಿರೋಧಗಳ ಜೊತೆಯಲ್ಲೇ ಬೆಳೆಯುತ್ತಿರುವ ವರ್ತಮಾನದ ಜಾತೀಯತೆ, ಧರ್ಮಾಂಧತೆಗಳು ಬಹುಶಃ ನಮ್ಮ ಘೋಷಿತ ನೆಲೆಗೂ ಪ್ರಜ್ಞೆಯ ಆಳಕ್ಕೂ ಇರುವ ಅಂತರವನ್ನೂ ನಮ್ಮ ಸಮೂಹದ ಉದ್ದಗಲದಲ್ಲಿ ಹರಡಿದ ಜಾಗೃತಿಯನ್ನೂ ತೋರುತ್ತಿವೆ. ಇಂಥ ವೈರುಧ್ಯಗಳ ಕಾಲದಲ್ಲಿ ಸಂಶಯಕ್ಕೆ ಒಳಗಾದ ವ್ಯಕ್ತಿಯ ನೋವು ಅವನ ಅನನ್ಯತೆಯ ಪ್ರಶ್ನೆಯನ್ನೂ ತೀವ್ರವಾಗಿಸಬಹುದು. ಇಂತಹ ಸಂದರ್ಭಗಳಲ್ಲಿ ಸಾಂಸ್ಕೃತಿಕ ವಲಯಗಳ ಅಂತರ್‌ಸಂಬಂಧಗಳ ಪ್ರಶ್ನೆ ಪ್ರಮುಖವಾಗದೆ ಸಾಂಸ್ಕೃತಿಕ ಜಗತ್ತುಗಳು ಪ್ರತ್ಯೇಕವೂ ಸ್ವಾಯತ್ತವೂ ಆಗಿ ಉಳಿದಾಗ ಅನನ್ಯತೆಯ ಪ್ರಶ್ನೆ ಸ್ವಲ್ಪ ದೂರದಲ್ಲಿ ಉಳಿಯಬಹುದಾದರೂ ವಿಭಿನ್ನ ಸಾಂಸ್ಕೃತಿಕ ನೆಲೆಯುಳ್ಳ ಸಮಾಜದಲ್ಲಿ ಸಾಮಾನ್ಯವಾಗಿ ಲೇಖಕ ಈ ಪ್ರಶ್ನೆಯನ್ನು ಎದುರಿಸಲೇಬೇಕಾಗುತ್ತದೆ.

ನಿಸಾರರ ಕಾವ್ಯದ ಜಾಡಿನ ಆರಂಭದಲ್ಲಿ ಇದು ಕಾಡುವ ಅನುಭವವಾಗಿಲ್ಲದಿದ್ದರೂ ಮೂರನೆಯ ಸಂಕಲನದಿಂದ ಈಚೆಗೆ ಈ ಪ್ರಶ್ನೆ ಮತ್ತೆ ಮತ್ತೆ ಅವರನ್ನು ಕಾಡಿದೆ. 'ಮೂರು ಬಣ್ಣದ ಬಟ್ಟೆ ಹಾಕಿ ರಚಿಸಿದ ಖೆಡ್ಡ / ಅಲ್ಲಿ ಒದ್ದಾಡುತಿವೆ ಶೆರವಾನಿ, ಪೈಜಾಮ, ಬೋಳುತಲೆ, ಗಡ್ಡ' ಎಂಬುದು ಆ ದುರಂತವನ್ನು ಸೂಚಿಸಿದರೆ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂಬ ಕವನದಲ್ಲಿ ಆ ಸಂಶಯಕ್ಕೆ ಒಳಗಾದ ಸ್ಥಿತಿ ಜೀವವನ್ನು ಅಲುಗಿಸುವ ಪ್ರಶ್ನೆಯಾಗಿದೆ. ಮಾತುಕತೆಗಳಲ್ಲಿ ಹುದುಗಿದ ಸಂಶಯದ ಬೆಕ್ಕು 'ನಂಬಿಕೆ, ನಿಯತ್ತು, ಹಕ್ಕು, ಸಾಚಾತನ'ಗಳನ್ನು ಪರಚುತ್ತದೆ. 'ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳು' ತನ್ನ ಎದುರಿನಲ್ಲೇ ತನಿಖೆ ಮಾಡುವುದನ್ನು 'ಹುಸಿ ನಗುತ್ತ ಎದುರಿಸ'ಬೇಕಾದ ಸಂಕಟವನ್ನು ಈ ಕವನ ಶಕ್ತವಾಗಿ ಹಿಡಿದಿದೆ. 'ವರ್ತಮಾನ ಭಾರತ'ದಲ್ಲಿ 'ಸುವಿಚಾರ ಸೆಲೆ ಬತ್ತಿ ಸಂಕುಚಿಸಿದೀ ಹೊಂಡಕ್ಕೆ ಘೇರಾಯಿಸಿದವು, ಜಾತಿ ಮತ ಕೋಮು ವಿದ್ವೇಷದೆಮ್ಮೆ'. ಇಂಥ ಸ್ಥಿತಿಯಲ್ಲಿ 'ಸ್ವಜನೋದ್ಧಾರಕರು' ಜೋಪಡಿಗಳ ಉರಿಗೂ ಗಲ್ಲಿ ಬೇವರ್ಸಿಗಳ ಶವಕ್ಕೂ ಕಾರಣವಾಗುವ ಮತಾಂಧತೆಯನ್ನು ನಿಸಾರರು ವಿರೋಧಿಸಿದ್ದಾರೆ. ದೂರದ ಯಾಸಿರ್ ಅರಾಫತ್ ನೆನಕೆಯು 'ಹಿಂಸಾಚಾರಿಗಳಾದ ಯಹೂದ್ಯರ ಮರ್ದನ'ಕ್ಕೆ 'ಚಂಡೀ ನರವರ ಅವತಾರ'ವಾಗಿ ಕಂಡರೂ 'ನೆತ್ತರಿಗುತ್ತರ ನೆತ್ತರೆ ಬಂಧು?' ಎಂಬ ಪ್ರಶ್ನೆಯೂ ಇದೆ.

ಸಮಾಜ-ಸಂಸ್ಕೃತಿಯ ವಿಮರ್ಶೆ, ನಿಸರ್ಗ ಪ್ರೀತಿ, ಪ್ರೇಮ, ಸಾಂಸ್ಕೃತಿಕ ಅನನ್ಯತೆಯ ಪ್ರಶ್ನೆ, ಆರ್ಥಿಕ ಬಿಕ್ಕಟ್ಟು—ಇವೇ ಮೊದಲಾದವು ನಿಸಾರರ ಕಾವ್ಯದ ಕೆಲವು ಸ್ಥಾಯಿಗಳು.

ಬದುಕಿನೊಂದಿಗೂ ಕವಿಯ ಸಂವೇದನೆಯೊಂದಿಗೂ ಹೆಣೆದುಹೋದ ಈ ಹಲವು ಸಂಗತಿಗಳು ಕಾಲ ಸರಿದಂತೆಲ್ಲ ತಮ್ಮ ಬಹುಮುಖತೆ, ಸಂಕೀರ್ಣತೆಯನ್ನು ಗ್ರಹಿಕೆಗೆ, ಅನುಭವಕ್ಕೆ ಬಿಟ್ಟುಕೊಡುವ ಪರಿಯನ್ನು ಈ ಕಾವ್ಯದ ದಾರಿ ನಮಗೆ ಕಾಣಿಸುತ್ತದೆ. ಇದಕ್ಕೆ ನಿದರ್ಶನವಾಗಿ 'ಅಮ್ಮ ಆಚಾರ ನಾನು' ಹಾಗೂ 'ರಂಗೋಲಿ ಮತ್ತು ಮಗ' ಕವನಗಳನ್ನು ಹೋಲಿಸಬಹುದು. ಸಂಪ್ರದಾಯದ ಅಂಧ ಅನುಸರಣೆ ಆಧುನಿಕ ಮನಸ್ಸಿಗೆ ತರುವ ಹತಾಶೆ, ಕಿರಿಕಿರಿಯನ್ನು ಮೊದಲ ಕವನ ಬಿಂಬಿಸಿದರೂ ಕೇಂದ್ರ ಪ್ರಶ್ನೆ ಅಂಚಿನಲ್ಲೇ ಉಳಿದುಬಿಡುತ್ತದೆ. ಆದರೆ 'ರಂಗೋಲಿ ಮತ್ತು ಮಗ'ದಂಥ ಕವನದಲ್ಲಿ ದಿನನಿತ್ಯದ ಬದುಕಿನ ಒಂದು ಸಾಮಾನ್ಯ ಸಂಗತಿಯನ್ನು ಸುತ್ತುವರಿದ ಪ್ರಶ್ನೆಗಳು ಪರಂಪರೆಯ ಮತ್ತು ಕವಿಯ ಸ್ವಕೀಯ ವಿಶ್ಲೇಷಣೆಗೆ ಇಳಿಯುತ್ತವೆ. 'ರಂಗೋಲಿಯನ್ನು ಏಕೆ ಬಿಡಿಸುತ್ತಾರೆ? ತಮ್ಮಲ್ಲೇಕೆ ಅದಿಲ್ಲ' ಎಂಬ ಮಗನ 'ಭೋಳೆ ಪ್ರಶ್ನೆ'ಯು 'ಎಲ್ಲೆಲ್ಲಿಗೋ ಕೈ ಚಾಚಿ, ಪೇಚಾಡಿಸಿತು ನನ್ನ ಆಚರಣೆ ನಂಬಿಕೆಗಳ ಮಡಿಕೆಗಳ ರಾಚಿ'. ಗಂಡು-ಹೆಣ್ಣಿನ ಸಂಬಂಧದ ಉತ್ಸಾಹ, ನಿರಾಸೆ, ನೆಮ್ಮದಿ, ಸಂಶಯದಂಥ ಹಲವು ಎಳೆಗಳು ನಿಸಾರರ ಕಾವ್ಯದ ನೇಯ್ಗೆ ಯಲ್ಲಿವೆ. ತನ್ನನ್ನು ಸೆಳೆದ ಒಲವಿನ ಸಾಮೀಪ್ಯದಲ್ಲಿ 'ಕಣ್ಣರಳಿ ನೋಡಿದರೆ ಸ್ವರ್ಗಸುಂದರ ನಗರಿ' ಎಂಬ ರಮ್ಯತೆಯೂ ಇದೆ. 'ಆತ್ಮದಾಹುತಿಗಾಗಿ ಹೆಣೆದ ಜಾಲವನಂದು ಒಲವೆಂದು ನಂಬಿದೆನು ಅಪ್ರಬುದ್ಧ' ಎಂಬ ಪರಿತಾಪವೂ ಇದೆ. 'ಸಮೆದ ಶಾಸನದಂತೆ ನಿನ್ನ ಕಣ್ಣಿನ ಭಾವ, ಸರಿಯಾಗಿ ಗ್ರಹಿಸದೆಯೆ ತಪ್ಪು ಅರ್ಥಕ್ಕೆಲ್ಲಿ ಬಲಿಯಾಗುವೆನೋ ಎಂಬ ಭಯ' ಎಂಬ ಸೂಕ್ಷ್ಮತೆಯೂ ಇದೆ. ಇದರಂತೆ ದೇಶದ ಹಾಗೂ ಭಾಷೆಯ ಬಗೆಗಿನ ಪ್ರೀತಿಯೂ ಮುಗ್ಧ ಭಾವುಕ ನೆಲೆಯಿಂದ ಹಿಡಿದು ವ್ಯಂಗ್ಯ ವಿಡಂಬನೆಯ ಪ್ರತಿಕ್ರಿಯೆಯೇ ಅಲ್ಲದೆ, ವಿಷಾದ, ಮರು ಚಿಂತನದ ನೆಲೆಯನ್ನೂ ತಲಪಿದೆ.

ಸಾಮಾನ್ಯವಾಗಿ ನಿಸಾರರ ನಿರೂಪಣೆಯು ಭಾಷೆಯ ಧ್ವನಿ ಪೂರ್ಣತೆ, ಪ್ರತಿಮಾತ್ಮಕತೆಯನ್ನು ಸೂರೆಗೊಳ್ಳುವುದಕ್ಕಿಂತಲೂ ಹೆಚ್ಚಾಗಿ ನಿರರ್ಗಳತೆ, ಸ್ಥಿತಿಸ್ಥಾಪಕತೆ ಹಾಗೂ ಗೇಯತೆಯನ್ನು ಒಳಗೊಂಡಿದೆ. ಈ ಗುಣಗಳು ನಿಸಾರರ ನಿರೂಪಣೆಯ ಆಕರ್ಷಣೆ ಮತ್ತು ಜನಪ್ರಿಯತೆಯನ್ನು ಹೆಚ್ಚಿಸಿವೆ. ದ್ವಿಭಾಷಿಕ ಹಿನ್ನೆಲೆಯ ಸತ್ವವೂ ಈ ನಿರೂಪಣೆ ಯಲ್ಲಿ ಗುಣಾತ್ಮಕವಾಗಿ ದುಡಿದಿದೆ. 'ಗಾಡಿ ಮತ್ತು ನಾಯಿ', 'ಹಕ್ಕು', 'ಬೀದಿಯ ಮಾರಿ' ಮೊದಲಾದ ಕವನಗಳಲ್ಲಿ ಕಾಣುವಂತೆ ಸಾಧಾರಣವೆನ್ನಬಹುದಾದ ಸಂದರ್ಭ ಮತ್ತು ಭಾಷೆಯಲ್ಲೂ ತೆರೆಯುವ ಅರ್ಥವಿನ್ಯಾಸ ಕುತೂಹಲಕಾರಿಯಾದದ್ದು. ಒಟ್ಟಿನಲ್ಲಿ ಬದುಕಿನ ವೈವಿಧ್ಯ, ಬಹುಮುಖತೆಗೆ ತೆರೆದುಕೊಂಡ ಕಾವ್ಯದ್ರವ್ಯ; ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಸ್ಪಂದಿಸುವ ಭಾವ, ಚಿಂತನಶೀಲತೆ; ದ್ವಿಸಾಂಸ್ಕೃತಿಕ ನೆಲೆಯ ಸಮೃದ್ಧಿ ಮತ್ತು ಇಕ್ಕಟ್ಟುಗಳು; ವಿಡಂಬನೆಯ ಮೊನಚು, ಚುರುಕು—ಇಂಥ ಹಲವು ಗುಣಗಳು ನಿಸಾರರ ಕಾವ್ಯದ ಯಾನಕ್ಕೆ ಅರ್ಥವಂತಿಕೆಯನ್ನೂ ಸೊಗಸನ್ನೂ ತಂದುಕೊಟ್ಟಿವೆ.

ನಿಸಾರರ ಕವಿತೆಗಳಲ್ಲಿ ಕಾಲ ಘಟ್ಟದ ತಲ್ಲಣಗಳು



◆ ಡಾ. ಚಿಂತಾಮಣಿ ಕೊಡ್ಲೆಕೆರೆ

ಗಣ್ಯಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಅರ್ಧ ಶತಮಾನದ ಕಾವ್ಯಸೃಷ್ಟಿಯ, ಪ್ರಕಟಿತ ಹನ್ನೆರಡು ಕವನ ಸಂಕಲನಗಳಿಂದಾಯ್ದು ಸುಮಾರು ನೂರಿಪ್ಪತ್ತೈದು ಕವನಗಳು ಮತ್ತು ಅವರು ಅನುವಾದಿಸಿದ ಹದಿನಾರು ಕವನಗಳು 'ಪ್ರಾತಿನಿಧಿಕ ಕವನಗಳು' ಸಂಕಲನ(೨೦೦೨)ದಲ್ಲಿ ಸೇರಿವೆ. ಇದು ಕವಿಯೇ ಆರಿಸಿ ಕೊಟ್ಟ ಕವನಗಳ ಸಂಗ್ರಹ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಆಕೃತಿ ತಳೆದ ಈ ಕವಿತೆಗಳು ಆ ಕಾಲ ಘಟ್ಟದ ತಲ್ಲಣಗಳನ್ನು, ಕಂಪನಗಳನ್ನು ಹಿಡಿದಿಟ್ಟಿರುವ ಬಗೆ ವಿಶಿಷ್ಟವಾದುದು. 'ತಾತ್ಕಾಲಿಕವ ದಾಟಿ ಚಿರಂತನತೆ ಮೆರೆಯುವುದು' ಮೊದಲಿನಿಂದಲೂ ನಿಸಾರ್ ಅವರ ಕಾವ್ಯದ ಮುಖ್ಯ ಆಶಯಗಳಲ್ಲಿ ಒಂದಾಗಿದೆ. ಹಾಗೆಂದು ಈ ಕವಿ ತಾತ್ಕಾಲಿಕವನ್ನು, ತತ್ಕಾಲೀನವಾದುದನ್ನು ಮರೆಯುವುದಿಲ್ಲ, ನಿರ್ಲಕ್ಷಿಸುವುದೂ ಇಲ್ಲ. ಆದರೆ ಅವರಿಗೆ ಅದು ಚಿರಂತನತೆಯನ್ನು ತಲಪುವ ಮಾರ್ಗ. ಆ ಪಥ ಕ್ರಮಣಕ್ಕೆ ಕವಿಯದು ಶಬ್ದಮಾರ್ಗದ ಚಲನೆ. ಹಿರಿಯ ಕವಿ ಡಾ. ಪುತಿನ ಈ ಹುಟ್ಟು ಕವಿಯ 'ಅಸಾಧಾರಣವಾದ ಸ್ವೋಪಜ್ಞ ವಾಣಿ'ಯನ್ನು ಮೆಚ್ಚುತ್ತ, ಇವರ ಕಾವ್ಯದಲ್ಲಿ ಬಳಕೆಯಾಗುವ ಶಬ್ದಗಳನ್ನು 'ಜಾತ್ಯತ್ವ'ಗಳೆಂದು ಕರೆದರು. ಜಾತ್ಯತ್ವಗಳನ್ನೇರಿದ ಈ ಕವಿ ಕಾವ್ಯಲೋಕದಲ್ಲಿ ಈಗಾಗಲೇ ಐವತ್ತು ವರ್ಷಗಳ ಸುದೀರ್ಘ ಪ್ರಯಾಣ ಮಾಡಿದ್ದಾರೆ. ಮತ್ತು ಆಧುನಿಕ ಕನ್ನಡ ಕಾವ್ಯದ

ಪ್ರಮುಖ ಪ್ರಾತಿನಿಧಿಕ ಕವಿಗಳಲ್ಲೊಬ್ಬರಾಗಿದ್ದಾರೆ.

ನಿಸಾರ್ ಅವರ ಕಾವ್ಯ ಮೊದಲಿನಿಂದಲೂ ವ್ಯಕ್ತಿ ವಿಶಿಷ್ಟವಾಗುವ ಹಂಬಲವನ್ನು ಪ್ರಕಟಿಸಿದೆ ಮತ್ತು ಸಾಮಾನ್ಯತೆಯನ್ನು, ಸಾಧಾರಣೀಕರಣವನ್ನು ನಿರಾಕರಿಸುತ್ತ ಬಂದಿದೆ. ಈ ನಿರಾಕರಣೆ ಎರಡು ಹಂತಗಳಲ್ಲಿ ಜರುಗುತ್ತದೆ : ಅಸಾಧಾರಣವಾದುದರ ಸ್ತುತಿ, ಬದುಕಿಗೆ ಬೆಳಕು ತರುವ ಸಂಗತಿಗಳು, ವ್ಯಕ್ತಿಗಳು, ತತ್ತ್ವಗಳನ್ನು ಕುರಿತ ಮೆಚ್ಚುಗೆ ಒಂದು ಹಂತವಾದರೆ, 'ಸಾಧಾರಣ', 'ಸಾಮಾನ್ಯ'ಗೊಳಿಸುವ ಸಂದರ್ಭಗಳ ಗೇಲಿ, ವಿಮರ್ಶೆ ಮತ್ತು ತಿರಸ್ಕಾರ ಎರಡನೆಯ ಹಂತ. ಮೊದಲನೆಯ ಹಂತದ ಒಂದು ಆರಂಭ ಕಾಲದ ಉದಾಹರಣೆಯಾಗಿ ಅವರ 'ದೀಪಗಳು' ಕವಿತೆಯನ್ನು ಓದಬಹುದು. ಬೆಳಗುವ ಪುಟ್ಟ ದೀಪಗಳು ಈ ಕವಿಯ ಕಣ್ಣಿಗೆ 'ಬೆಳೆವ ಎಳೆಯ ನಗೆಗಳಾಗಿ' ತೋರುತ್ತವೆ. ಅವುಗಳು ಜನ್ಮ ತಳೆದುದಾದರೂ ಹೇಗೆ?

'ಎಂದೊ ಒಮ್ಮೆ ಅನಿರೀಕ್ಷಿತ ಮುಗಿಲು ನೆಲದ ಸಭೆ
ಅಂಥ ಒಂದು ದಿವ್ಯ ಗಳಿಗೆ ಫಲವೆ ನಿಮ್ಮ ಪ್ರಭೆ'
(ದೀಪಗಳು)

ದೀಪಗಳು ಮುಂದೆ ಬರಿಯ ದೀಪಗಳಾಗಿ ಉಳಿಯುವುದಿಲ್ಲ, ಅವು 'ಕಿಡಿಯ ತೊದಲು ನುಡಿ'ಗಳಾಗುತ್ತವೆ. 'ಬೆಳುದಿಂಗಳ ಮರಿ'ಗಳಾಗುತ್ತವೆ, 'ನಗುವ ಸಣ್ಣ ಕೆಂಗರುವಿನ ಬಣ್ಣದ ಕಣ್ಮಣಿ'ಗಳಾಗುತ್ತವೆ. ಬೆಳಕನ್ನು ಕುರಿತ, ಮಹತ್ತನ್ನು ಕುರಿತ ಈ ಮೆಚ್ಚುಗೆ, ಒಲವು ಇಂದಿಗೂ ಮುಂದುವರಿದಿದೆ. ಇತ್ತೀಚಿನ 'ಹಿರಿಮೆಯ ಹೆಚ್ಚಳ' ಕೂಡ 'ಹಿರಿದಾದದ್ದರ ಸಾಮರ್ಥ್ಯ ಅಸೀಮ, ಅಲ್ಪದಲ್ಲಿ ಸುಖವಿಲ್ಲ' (ನಾಲ್ಪೇ ಸುಖಮಸ್ತಿ) ಎಂದು ಪ್ರತಿಪಾದಿಸಿದೆ.

ಈ ಕವಿಯ ಮೊದಲ ಸುಪ್ರಸಿದ್ಧ ಕವಿತೆ 'ಕುರಿಗಳು ಸಾರ್ ಕುರಿಗಳು' ಸ್ವಂತಿಕೆಯನ್ನು ಕಳೆದುಕೊಂಡ ಸಾಮಾನ್ಯೀಕರಣ ರಾಜಕೀಯದ ಬಹು ದೊಡ್ಡ ವಿಡಂಬನೆಯಾಗಿದೆ.

'ಎಡ ದಿಕ್ಕಿಗೆ, ಬಲ ದಿಕ್ಕಿಗೆ, ಒಮ್ಮೆ ದಿಕ್ಕು ಪಾಲಾಗಿ
ಒಮ್ಮೆ ಅದೂ ಕಳೆದುಕೊಂಡು, ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೊ ಏಗುತಿರುವ,
ಬರೀ ಕಿರುಚಿ ರೇಗುತಿರುವ,
ನೊಣ ಕೂತರೆ ಬಾಗುತಿರುವ,
ತಿನದಿದ್ದರು ತೇಗುತಿರುವ,
ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ
ಅವರು, ಇವರು, ನಾವುಗಳು
ಕುರಿಗಳು, ಸಾರ್, ಕುರಿಗಳು'
(ಕುರಿಗಳು, ಸಾರ್, ಕುರಿಗಳು)

—ಇಂಥ ಮಂದೆಗೆ 'ಹೊಟ್ಟೆ ಬಟ್ಟೆಗೊಗ್ಗದ ಕಲೆ' ಅರ್ಥವಾಗುವುದಿಲ್ಲ. ಕಾಯುವ ಕುರುಬನೇ ಕೊಲ್ಲುವ ಕಟುಕನಾದರೂ ಅವನ ಮಚ್ಚಿನ ಹೊಳಪಿಗೆ ಮಾರುಹೋಗಿ ಅದನ್ನು

ನೆಕ್ಕುವುದು ಈ ಕುರಿಗಳ ಸ್ಥಿತಿ. ಇನ್ನು ಕುರುಬರಾದರೂ ಎಂಥವರು? 'ಪುಟಗೋಸಿಯ ಮೊನ್ನೆ ತಾನೆ ಕಿತ್ತು ಪಂಚೆಯುಟ್ಟವರು, / ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟನು ಒತ್ತುವವರು.' ಕುರಿ-ಕುರುಬ ಇಬ್ಬರೂ ಅಷ್ಟೇ ಕ್ಷುದ್ರರಾಗಿರುವ ಈ ಸನ್ನಿವೇಶವನ್ನು ಚಿತ್ರವತ್ತಾಗಿ ವಿಡಂಬಿಸುವ 'ಕುರಿಗಳು, ಸಾರ್, ಕುರಿಗಳು' ಕವಿತೆ ನಿಸಾರ್ ಅವರ ಕಾವ್ಯ ಕಾಲ ಘಟ್ಟದ ರಾಜಕೀಯದ ಸೂಕ್ತ ವ್ಯಾಖ್ಯಾನವಾಗಿ ಪರಿಣಮಿಸಿದೆ. ಸಾಮಾನ್ಯೀಕರಣ, ಕ್ಷುದ್ರದ ಆರಾಧನೆ—ಇಂಥವುಗಳನ್ನು ಇವತ್ತಿಗೂ ಅವರ ಕಾವ್ಯ ವಿರೋಧಿಸುತ್ತಲೇ ಬಂದಿದೆ. ಜನಪ್ರಿಯ ಸುದ್ದಿಗಳನ್ನು ಪ್ರಕಟಿಸುತ್ತ 'ಸಾಧನಾ ಸಮರ್ಪಿತ ಅಂತರ್ಮುಖಿಗಳನ್ನು ಮರೆಯುವ' ಸಮೂಹ ಮಾಧ್ಯಮಗಳ ಪ್ರವೃತ್ತಿಯನ್ನು ಅವರು ಬಣ್ಣಿಸುವುದು ಹೀಗೆ:

'...ಆ ಮಾಧ್ಯಮಗಳ ಉದ್ದಗಲ
ಲೌಕಿಕ ಸಾಧಾರಣರದೇ ನಿತ್ಯ ಗದ್ದಲ;
ರಾಜಕಾರಣ ಶಕುನಿ, ಸಿನಿಮಾ ಮೊದ್ದು ಕಣ್ಮಣಿ,
ಕ್ರಿಕೆಟ್ ಶಿಖಾಮಣಿಗಳದೇ ಕೈಫಿಯತ್ತು,
ಅವರದೇ ದೇಖಾವೆಯ ದೊಂಬರಾಟದ ಗರ್ದಿ ಗಮ್ಮತ್ತು.'
(ಸುದ್ದಿ ಮಾಧ್ಯಮಗಳು)

ಲೌಕಿಕ ಸಾಧಾರಣತೆಯನ್ನು ಮೀರುವುದೇ ನಿಸಾರ್ ಅವರ ಕಾವ್ಯದ ಮುಖ್ಯ ತುಡಿತವಾಗಿದೆ. ಅದು ತನ್ನ ಅಸ್ತಿತ್ವದ ಶೋಧನೆಯಿಂದಲೇ, 'ನಾನೆನ್ನುವ ಅಸ್ತಿತ್ವದ ಚೂರಿನಸ್ಪಷ್ಟವನ್ನು' ಅರ್ಥೈಸಿಕೊಳ್ಳಬೇಕೆಂಬ ಚಿಂತನೆಯಿಂದಲೇ ಮೊದಲಾಗುತ್ತದೆ. 'ರಾಮನ್ ಸತ್ತ ಸುದ್ದಿ' ಪದ್ಯದಲ್ಲಿ ಇಂಥದೊಂದು 'ಅಸ್ತಿತ್ವದ ಅಸ್ಪಷ್ಟ ಜಿಜ್ಞಾಸೆ' ರಾಮನ್ ಸತ್ತ ಸುದ್ದಿ ಓದಿದ ಬೆಳಿಗ್ಗೆ ಆರಂಭಗೊಳ್ಳುತ್ತದೆ. ಮಲೆನಾಡಿನ ಮೂಲೆಯ ಹಳ್ಳಿಯ 'ಹನುಮ'ನಿಗೆ 'ರಾಮನ್' ಸತ್ತ ಸುದ್ದಿ ತಿಳಿಯದು—ಅವನ 'ಅಶಿಕ್ಷಿತ ಅರಿವಿ'ಗೆ ಅದರ ಅಗತ್ಯವೂ ಇಲ್ಲ! ಕವಿ ಮತ್ತು ಹನುಮ ಅದೇ ಊರಲ್ಲಿ, ಅದೇ ಕಾಲದಲ್ಲಿ ವಾಸವಾಗಿದ್ದರೂ ಅವರ ಬದುಕಿನ ನೆಲೆಗಳೂ ಅಗತ್ಯಗಳೂ ಬೇರೆಯೇ ಆಗಿವೆ. ಬದುಕಿನ ಈ ಕ್ಷಣದಲ್ಲಿ ಅವರು ಸಂಧಿಸಿರುವುದು ಎಷ್ಟು ನಿಜವೋ, ಕೆಲವು ಕಾಲಾನಂತರ ಅಗಲುವುದೂ ಅಷ್ಟೇ ನಿಜ. ಹನುಮ ಸತ್ತರೂ ಕವಿಗೆ ತಿಳಿಯಲಾರದು ಅಥವಾ ಕವಿಯ ಸಾವೂ ಹನುಮನಿಗೆ ಗೊತ್ತಾಗಲಾರದು ಎಂಬ ಭಾವನೆಯಲ್ಲಿ ಕವಿ ವಿಹ್ವಲಗೊಳ್ಳುತ್ತಾರೆ. ಎಂಥ ವಿಶಿಷ್ಟತೆಯನ್ನು ಪ್ರತಿಪಾದಿಸಿದರೂ ಕವಿಯೂ ಒಂದು ನೆಲೆಯಲ್ಲಿ 'ಸಾಧಾರಣ'ನೇ! ಹಾಗಾದರೆ 'ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು—ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವ ಸಂಚಾರ'—ಇವೆಲ್ಲವುಗಳ ಅರ್ಥವಾದರೂ ಏನೆಂದು ಯೋಚಿಸುತ್ತ ಕವಿಯ ಕೊರಳು ಬಿಗಿಯುತ್ತದೆ. ಈ ಸಾಮಾನ್ಯತೆಯನ್ನು ಒಪ್ಪಿಯೂ ಅದನ್ನು ಮೀರಬೇಕು, 'ನಿಮ್ಮೊಡನಿದ್ದೂ ನಿಮ್ಮಂತೆ' ಆಗದಿರಲು ಹೋರಾಡಬೇಕು. ಅದು ಕಷ್ಟದ ಕೆಲಸವಿದ್ದೀತು, ಆದರೆ 'ಸಾಧ್ಯ' ಎಂದು ಕವಿ ನಂಬಿದ್ದಾರೆ. 'ಅಮೇರಿಕ, ಅಮೇರಿಕ' ಕವಿತೆಯಲ್ಲಿ ಒಬ್ಬ ಸ್ವಾಭಿಮಾನಿ 'ಸಾಮಾನ್ಯ' (ಅಥವಾ ಒಂದು ಸ್ವಾಭಿಮಾನಿ ರಾಷ್ಟ್ರ)—ಪ್ರಭುತ್ವ ಶಕ್ತಿಯೆದುರು, ತನ್ನ ಅಸಹಾಯಕತೆಯ ನಡುವೆಯೂ ಬಂಡೆದ್ದು ನಿಲ್ಲುವ ಚಿತ್ರವಿದೆ. 'ಸ್ವಪ್ರತಿಷ್ಠೆಯ ನೀನು'

ಎನ್ನುತ್ತ ಅಮೇರಿಕವನ್ನು ಕೆಣಕುವ ಈ ಕವಿತೆ ಆ ದೇಶದ ವಿರೋಧಾಭಾಸಕರ ನಿಲವುಗಳನ್ನು ಹೀಗಳೆಯುತ್ತದೆ. ಆ ದೇಶದ ಸ್ಲಂ, ನೀಗ್ರೋಗಳ ಅವನತ ಸ್ಥಿತಿಯತ್ತ ದೇವಿ ಲಿಬರ್ಟಿ ಒಮ್ಮೆ ಹಿಂತಿರುಗಿ ನೋಡಲಿ ಎಂದು ಸವಾಲೊಡ್ಡುತ್ತದೆ. ಆದರೂ 'ಗೋಧಿಯ ಋಣ' ತನ್ನ ಬಾಯನ್ನು ಕಟ್ಟುತ್ತದೆ, ತಾಳ್ಮೆ ಪಾಠವನ್ನು ಕಲಿಸುತ್ತದೆ ಎಂದು ಅಸಹಾಯಕತೆಯನ್ನೂ ವ್ಯಕ್ತಪಡಿಸುತ್ತದೆ. ತನ್ನ ಮಿತಿಗಳನ್ನು ಗುರುತಿಸಿಕೊಳ್ಳುತ್ತಲೇ, ಆ ಕುರಿತು ಆತಂಕ ಗೊಳ್ಳುತ್ತಲೇ ಪ್ರತಿಭಟನೆಯ ನೆಲೆಗಳನ್ನೂ ಸ್ಥಾಪಿಸಿಕೊಳ್ಳುವುದು ಈ ಕವಿತೆಯ ಹೆಚ್ಚುಗಾರಿಕೆ ಯಾಗಿದೆ.

ಈ ಕವಿ ಬೇರೆ ಬೇರೆ ಕಾಲ ಘಟ್ಟಗಳಲ್ಲಿ ಬರೆದ ಮೂರು ವ್ಯಕ್ತಿಚಿತ್ರಗಳೂ ಮೌಲ್ಯಾರಾಧನೆಯ ಅಪರೂಪದ ಅಭಿವ್ಯಕ್ತಿಗಳೇ ಆಗಿವೆ. 'ಮಾಸ್ತಿ'—ಕವಿಯ ಕಣ್ಣಿಗೆ 'ಸಂದ ಜೀವನದೊಂದು ರೀತಿ'. 'ಕರ್ತವ್ಯದೆಚ್ಚರಿನ ಸನ್ನೆ'. ಅವರ ಇರುವಿಕೆಯೆಂದರೆ— 'ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ'. ಅವರ ನೆನಪಿನಿಂದಲೇ ಕವಿಯ ಎದೆ ಸ್ವಚ್ಛಗೊಳ್ಳುತ್ತದೆ, ಹಗುರಾಗುತ್ತದೆ. ಇತ್ತೀಚೆಗೆ ಬರೆದ 'ಕೆಂಪು ತೋಟ ಮತ್ತು ಡಾ. ಎಚ್ಚೆನ್' ಕೂಡ ಇಂಥದೇ ಕೃತಕೃತ್ಯ ಭಾವವನ್ನು ಉನ್ನತ ವ್ಯಕ್ತಿತ್ವದೆದುರು ವ್ಯಕ್ತಪಡಿಸಿ ಗೌರವ ಸಲ್ಲಿಸುತ್ತದೆ. ನಡುವಿನ ಯಾವುದೋ ಅವಧಿಯಲ್ಲಿ ಬರೆದಿರ ಬಹುದಾದ 'ಭೀಮಪ್ಪ ಮಾಸ್ತರರು' (೧೯೮೦) ಕವಿತೆ ಕರ್ನಾಟಕದ ಗ್ರಾಮವೊಂದರಲ್ಲಿ ಬದುಕಿಹೋದ ಒಬ್ಬ ಸರಳ ಸಜ್ಜನನ ಬದುಕನ್ನು ಅಮರಗೊಳಿಸಿದೆ. ಅವರ ವ್ಯಕ್ತಿತ್ವದ ಉದಾತ್ತ ಗುಣಗಳನ್ನು ಸ್ತುತಿಸುತ್ತ, ಲಘು ಅಂಶಗಳನ್ನು ಮೃದುವಾಗಿ ಗೇಲಿ ಮಾಡುತ್ತ, ಅವರ ಅಂತ್ಯಕ್ರಿಯೆ ಹೇಗೆ ಜರುಗಿರಬಹುದು ಎಂದು ಯೋಚಿಸತೊಡಗುತ್ತಾರೆ. 'ಮೈ ಕೊಡವಿದಾತ್ಮಕ್ಕೆ ಯಾವ ಜಾತಿ?' ಎಂತಲೂ ಅವರಿಗೆ ಅನ್ನಿಸುತ್ತದೆ.

> **'ನಿಮ್ಮ ಅಂತ್ಯಕ್ರಿಯೆಯ ಪರಿ ನನಗೆ ತಿಳಿದಿಲ್ಲ;**
> **ಮೈ ಕೊಡವಿದಾತ್ಮಕ್ಕೆ ಯಾವ ಜಾತಿ?**
> **ನಿಮ್ಮ ರೀತಿಯೆ ಬೇರೆ:**
> **'ಮಣ್ಣಾದರೋ ಮೃತ್ತಿಕೆ,**
> **ಬೂದಿಯಾದರೆ ನೀವು ಸದ್ವಿಭೂತಿ.'**
> **(ಭೀಮಪ್ಪ ಮಾಸ್ತರರು)**

ಅಂತ್ಯ ಸಂಸ್ಕಾರದ ಪರಿ ಏನೇ ಇರಲಿ, ಬಾಳು ಸಾರ್ಥಕವಾದದ್ದು, ಆದ್ದರಿಂದ ಮಣ್ಣೇ ಆಗಲಿ, ಬೂದಿಯೇ ಆಗಲಿ—ಧನ್ಯತೆಯಂತೂ ಇದ್ದೇ ಇದೆ ಎಂಬ ಉದಾತ್ತ ಭಾವನೆಗೆ ಕವಿತೆ ಬಂದು ತಲಪುತ್ತದೆ. ಖ್ಯಾತನಾಮರಾದ ಮಾಸ್ತಿ, ಎಚ್ಚೆನ್‌ರಂತೆಯೇ ಭೀಮಪ್ಪ ಮಾಸ್ತರರಂಥ ಸಾಮಾನ್ಯ ವ್ಯಕ್ತಿಗಳು ಕೂಡ ಬಾಳಿಗೆ ಅನನ್ಯತೆಯನ್ನು ತರಬಲ್ಲರೆಂಬುದನ್ನು ನಿಸಾರ್ ಮರೆಯುವುದಿಲ್ಲ.

ನಿಸಾರ್ ಅವರ ಕಾವ್ಯದ ತಾತ್ತ್ವಿಕತೆ ಕೂಡ ವಿಶಿಷ್ಟವಾಗಿದೆ. 'ಕಂಡಷ್ಟೂ ಸತ್ಯವಿರ ಬಹುದು, ಆದರೆ ಕಂಡಷ್ಟೇ ಸತ್ಯವಲ್ಲ' ಎಂದು ಅವರು ತಿಳಿದಿದ್ದಾರೆ. ತೀರ ಹೊಸದಾದ ತಿಳಿವಳಿಕೆಯನ್ನು ಪಡೆಯುವುದೇ ಗುರಿ ಎಂದೂ ಅವರು ಭಾವಿಸಿಲ್ಲ.

'ನಮ್ಮ ಕಾಲದ ಗತ್ತು, ನಿಯತ್ತೆ ಬೇರೆ ಥರ—
ಹೊಸತೊಂದೆ ಗುರಿಯಲ್ಲ.
ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ
ಬೆಸೆದು ಹೊಸೆಯುವ ಕಲೆಯೆ ಈ ಕಾಲದರಿವು;
ಹೊಸತ ಹುಡುಕಲು ಹೋಗಿ ತೂಕ ತಪ್ಪುವ ಬುದ್ಧಿ
ಕುಂಟು ಕಾಲಿನ ಕುದುರೆ, ಬಂಜೆ ಗೋವು.'
(ಕಂಡಷ್ಟೇ ಸತ್ಯವಲ್ಲ)

ಬಾಳಿನ ನಿಗೂಢ ಸತ್ಯಗಳನ್ನು ಅವರ ಕಾವ್ಯ ಎದುರಿಸಿದೆ. ಅಷ್ಟೇ ಅಲ್ಲ, ಅದನ್ನೇ 'ವಾಸ್ತವಿಕ' ಎಂತಲೂ ಅವರು ಕರೆಯುತ್ತಾರೆ (ಕವಿತೆ: 'ವಾಸ್ತವಿಕ').

'ಜೀವವೇ, ನಿನ್ನ ಗತಿ
ಸಮಯಾನುಸಾರಿಯಾದರೂ
ಅಂತಃಸತ್ವ ಕಾಲಾತೀತ'

—ಎಂಬುದು ಅವರು 'ಅಂತಃಸತ್ವ' ಕವಿತೆಯಲ್ಲಿ ಪ್ರಕಟಿಸಿರುವ ನಿಲವು.

'ಬಾಳಿನ ಕ್ರೀಡಾಂಗಣ' ಎಂಬ ಅವರ ಇತ್ತೀಚಿನ ಪದ್ಯ ಬದುಕನ್ನು ಕುರಿತ ಅವರ ಹರಳುಗಟ್ಟಿದ ಚಿಂತನೆಗಳನ್ನು ಪ್ರತಿಫಲಿಸುತ್ತದೆ. ಪ್ರತಿ ಚೆಂಡಿಗೂ ನಾಲ್ಕು, ಆರು ರನ್‌ಗಳನ್ನು ಸಂಪಾದಿಸುವೆನೆನ್ನುವ ಅತ್ಯುತ್ಸಾಹಿ ಕ್ರೀಡಾಕುಶಲಿಗೆ ಅವರು ವಿಕೆಟ್ಟು ನೀಗದೆ ಬಲು ಹೊತ್ತು ಕ್ರೀಡಾಂಗಣದಲ್ಲಿ ನೆಲೆ ನಿಲ್ಲುವುದೂ ಮುಖ್ಯವೆಂಬ ಬುದ್ಧಿವಾದವನ್ನು ಹೇಳುತ್ತಾರೆ. 'ಬದುಕು ಬರೀ ಬಿರುಸು, ರಭಸ, ವೇಗಗಳ ಕಣವಲ್ಲ' ಎಂಬುದು ಕವಿತೆಯ ಧ್ವನಿ. 'ಬಾಳಿನೆಲ್ಲ ಸಂದರ್ಭಗಳೂ ಅಸಾಮಾನ್ಯ, ಅತಿಶಯವನ್ನೇ ನೀಡುವುದಿಲ್ಲ. ಅಂಥ ಗಳಿಗೆಗಳು ಮರಳಿ ಘಟಿಸುವ ತನಕ ದುಡಿತದ ಉತ್ಸಾಹ ಸಡಿಲಗೊಳಿಸದೆ ಕಾಯಕದಲ್ಲಿ ತೊಡಗಿರಬೇಕು' ಎಂಬ ನಿಲವಿಗೆ ಕವಿ ಬಂದು ತಲಪಿದ್ದಾರೆ. ಬದುಕಿನಲ್ಲಿ ಮಹತ್ತರತೆಯಂತೆಯೇ ಮಾಮೂಲಿತನವೂ ಇರುತ್ತದೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಕಾವ್ಯ ಯಾತ್ರೆಯುದ್ದಕ್ಕೂ ಅನನ್ಯತೆಯತ್ತ ಲಕ್ಷ್ಯವನ್ನಿಟ್ಟುಕೊಂಡೇ ಸಾಗಿರುವ ಈ ಕವಿ ಅಂಥ ಕ್ಷಣಗಳಿಗೆ ತಾಳ್ಮೆಯಿಂದ ಕಾಯಲೂ ಬೇಕಾಗುತ್ತದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಈ ಕವಿಯ ತಾತ್ವಿಕತೆಯನ್ನು ಕುರಿತು ಯೋಚಿಸುವಾಗ ಅವರ 'ಸಣ್ಣ ತಪ್ಪು' ಕವಿತೆ ಕೂಡ ಕುತೂಹಲಕರವೆನ್ನಿಸುತ್ತದೆ. ಬದುಕಿನಲ್ಲಿ ಸಣ್ಣ ತಪ್ಪುಗಳನ್ನು ಅವುಗಳಷ್ಟಕ್ಕೆ ಬಿಟ್ಟುಬಿಡಿ. ಅವುಗಳನ್ನು ಸರಿಪಡಿಸಲು ಹೋಗಿ ಅವಾಂತರ ಮಾಡಿಕೊಳ್ಳುವುದು ಬೇಡ. ಆದ ತಪ್ಪು ಮರುಕಳಿಸದಿದ್ದರೆ ಸಾಕು—ಎಂಬುದು ಕವಿತೆಯ ಸೂಚನೆ. 'ಸಣ್ಣ ತಪ್ಪೂ ಕೂಡ ತಪ್ಪೇ' ಎಂಬ ಗಟ್ಟಿ ತಾತ್ವಿಕ ನೆಲೆಯಿಂದ ನೋಡಿದರೆ ಈ ಸೂಚನೆ ಅಸಮರ್ಪಕವಾದುದಾಗಿ ತೋರಬಹುದು. ಆದರೆ ಪ್ರತ್ಯಕ್ಷಾನುಭವವುಳ್ಳ ಪಕ್ವ ಜೀವಿಯೊಬ್ಬ ತಲಪಬಹುದಾದ ತೀರ್ಮಾನ 'ಸಣ್ಣ ತಪ್ಪು' ಕವಿತೆಯಲ್ಲಿದೆ. ಇಂಥದ್ದೊಂದು ನಿಲವನ್ನು ಪ್ರಕಟಿಸುವ ವಿಧಾನ ಕೂಡ ಆಕರ್ಷಕವಾಗಿದೆ. 'ಕಳೆದದ್ದಕ್ಕೆ ಕೊರಗಬೇಡ' ಇನ್ನೊಂದು ಮುಖ್ಯ ಕವಿತೆ. ಇದರಲ್ಲಿ ತಾತ್ವಿಕ ಚಿಂತನದ ತರ್ಕಬದ್ಧ ವಿಧಾನ ವಿಸ್ಮಯಕರವಾಗಿ ಮೈ ತಾಳಿದೆ.

ಮುಸ್ಲಿಂ ಧರ್ಮದ ಮೂಲದಿಂದ ಬಂದ ಈ ಕವಿ ಸಂಸ್ಕೃತಿಗಳ ವೈರುಧ್ಯ, ಸಹಬಾಳ್ವೆಗಳ ಕುರಿತು ಮನೋಹರ ಅಭಿವ್ಯಕ್ತಿಗಳನ್ನು ನೀಡಿದ್ದಾರೆ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ರಂಗೋಲಿ ಮತ್ತು ಮಗ', 'ಅಮ್ಮ, ಆಚಾರ, ನಾನು', 'ಸವತಿ ಮಕ್ಕಳ ಹಾಗೆ' ಮುಂತಾದ ಪದ್ಯಗಳು ಈ ಪ್ರಶ್ನೆಗಳನ್ನು ಸಮರ್ಥವಾಗಿ ಎದುರಿಸುತ್ತವೆ. ರಂಗೋಲಿ ಅವರ ಕಣ್ಣಿಗೆ 'ಯಾವುದೋ ಆರ್ಷ ಮಂತ್ರಕ್ಕೆ ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ' ಎಂಬಂತಿದೆ. 'ನಮ್ಮ ಮನೆ ಮುಂದೆ ಏಕೆ ರಂಗೋಲಿ ಇಲ್ಲ?' ಎಂಬ ಮಗನ ಪ್ರಶ್ನೆಗೆ ಕವಿಯ ಉತ್ತರ: 'ಖುರಾನ್‌ನಲ್ಲಿ ಹೇಳಿಲ್ಲ'. 'ಖುರಾನ್‌ನಲ್ಲಿ ಹೇಳಿರದ ಸಂಗತಿಗಳನ್ನು ನೀನು ಮಾಡುತ್ತಲೇ ಇರುವಿಯಲ್ಲ!' ಎಂದು ಕವಿಯ ಮಗ, ಮನೆಯ ಮುಂದೆ ಹೆಸರು ಹಾಗೂ ಇಸವಿಯನ್ನು ಬರೆಸಿದ್ದು ಜ್ಞಾಪಿಸುತ್ತಾನೆ. ಕವಿಯ ಬಳಿ ಉತ್ತರವಿಲ್ಲ. ಗೆಳೆಯರದೇ ಮಾತುಗಳಲ್ಲಿ ಸಂಶಯದ ಬೆಕ್ಕು ಪಂಜವೆತ್ತಿ ಕವಿಯ ರಾಷ್ಟ್ರ ಪ್ರೇಮವನ್ನು ಪರಚಲು ಯತ್ನಿಸುತ್ತದೆ. ಆಗ ಕವಿ ಅಸಹಾಯಕ. ಆದುದರಿಂದ 'ಸವತಿ ಮಕ್ಕಳ ಹಾಗೆ ಕಾಣಬೇಡವ್ವ' ಎಂದು ತಾಯಿಯನ್ನೇ ಪ್ರಾರ್ಥಿಸುತ್ತಾರೆ. ತಾವು ಅನುಭವಿಸಿದ ಹಿಂಸೆ ನೋವುಗಳನ್ನು ಇಷ್ಟು ಸಂಯಮಪೂರ್ವಕವಾಗಿ ನಿವೇದಿಸುವ ಮನಸ್ಸು ಉದಾತ್ತವಾದದ್ದು. 'ನಿತ್ಯೋತ್ಸವ' ಹೆಸರಿನ ಸುಪ್ರಸಿದ್ಧ ಗೀತದಲ್ಲಿ ಕೂಡ ಅವರು ಕನ್ನಡದ 'ಹಲವೆನ್ನದ ಹಿರಿಮೆ, ಕುಲವೆನ್ನದ ಗರಿಮೆ'ಗಳನ್ನು ಗೌರವ ಪೂರ್ವಕ ನೆನೆದಿದ್ದಾರೆ. ಕನ್ನಡ ನವ್ಯಕಾವ್ಯದ ವಿಭಿನ್ನ ಮತ್ತು ಜನಪ್ರಿಯ ಮಾದರಿಯೊಂದನ್ನು ನಿರ್ಮಿಸಿದ ನಿಸಾರರು, ಅಷ್ಟೇ ವಿಶಿಷ್ಟ ಗೀತರಚನಕಾರರೂ ಆಗಿ ಮನ್ನಣೆಯನ್ನು ಗಳಿಸಿದ್ದಾರೆ.

ಅವರ 'ಅನಾಮಿಕ ಆಂಗ್ಲರು' ಮತ್ತು 'ಸ್ವಯಂ ಸೇವೆಯ ಗಿಳಿಗಳು' ಪದ್ಯಗಳನ್ನು ಗಮನಿಸದೆ ಈ ಲೇಖನ ಸಮಗ್ರವಾಗಲಾರದು. ಶ್ರೀರಂಗಪಟ್ಟಣದ ಭಗ್ನಾವಶೇಷಗಳ ಪಕ್ಕದಲ್ಲಿ ಆಂಗ್ಲರ ಶ್ಮಶಾನವೊಂದಿದೆಯಂತೆ. ಅದು ಕವಿಯ ಕಣ್ಣಿಗೆ 'ಇತಿಹಾಸದ ಅಪಹಾಸ್ಯ'ದಂತೆ ಕಂಡಿದೆ. ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಗಾಗಿ ಈ ನಾಡಿಗೆ ಬಂದು ಇಲ್ಲೇ ಸಮಾಧಿಯಾದ ಈ ಜನ ಸಾವಿನಲ್ಲೂ ಈಗ 'ಹುಟ್ಟು ನೆಲಕ್ಕೆ ಹೊರತಾಗಿ ಉಳಿದವರು, ಕಾಲ ದೇಶದ ಉಪೇಕ್ಷೆಗೊಳಗಾದ ಪ್ರೇಕ್ಷಕರು'—ಎಂದು ಕವಿಗೆ ಭಾಸವಾಗುತ್ತದೆ. ಎಲ್ಲ ಸಾಹಸಗಳನ್ನೂ ಸುಳ್ಳಾಗಿಸಿಬಿಡುವ ವಿಚಿತ್ರ ನಿರರ್ಥಕತೆಯ ನಡುವೆಯೇ ಮಾನವ ತನ್ನ ಬದುಕನ್ನು ರೂಪಿಸಿಕೊಳ್ಳಬೇಕಾಗಿದೆ.

'ಸ್ವಯಂ ಸೇವೆಯ ಗಿಳಿಗಳು' ಸ್ವಾತಂತ್ರ್ಯೋತ್ತರದ ವಿಚಿತ್ರ ತಳಿಗಳನ್ನು ಕುರಿತ ಕವಿತೆ. ಸ್ವದೇಶೀ ನಾಲಗೆಯ ವಿದೇಶೀ ಉಚ್ಚಾರಣೆಯ ಈ ಜೀವಗಳು ಎಲ್ಲೂ ಸಲ್ಲಲಾರವು. ಈ ಕವಿತೆ, ಜೀವನ ಮೌಲ್ಯಗಳನ್ನು ಕಳೆದುಕೊಂಡ ಬೇರಿಲ್ಲದ ಇಂಥ ಪೀಳಿಗೆಯ ಕ್ಷುದ್ರ ಚಟುವಟಿಕೆಗಳನ್ನು ಕಣ್ಣೆದುರು ತಂದು ವಿಷಾದ ಹುಟ್ಟಿಸುತ್ತದೆ. ನಾಡಿನ ಭವಿಷ್ಯವನ್ನು ಕುರಿತು ಕಳವಳ ಹುಟ್ಟಿಸುತ್ತದೆ.

ಆದರೂ, ಕವಿ ನಿಸಾರ್ ಎದೆಗುಂದುವುದಿಲ್ಲ. ಆಕಾಶದಂತೆ ಕವಿತೆಗೂ ಸರಹದ್ದು ಗಳಿಲ್ಲ ಎಂದು ಅವರು ಭಾವಿಸಿದ್ದಾರೆ. 'ಆಕಾಶದಂತೆ ಕವಿತೆ ಸಹ ಅಮೇಯ, ಅಗಮ್ಯ,

ಅನೌಪಮ್ಯ' ಎಂದೂ ನಿಸಾರ್ ವರ್ಣಿಸಿದ್ದಾರೆ. ಕವಿಯದು 'ಮಸಜೀದಿನ ಮುವಜ್ಜನ್ನಿನ ಎಚ್ಚರದ ಸದ್ದು'. ಕವಿಯಿಲ್ಲದಿದ್ದರೆ ಏನಾದೀತೆಂಬ ಪ್ರಶ್ನೆಗೆ ಅವರು ಕಂಡುಕೊಳ್ಳುವ ಉತ್ತರ:

'ಕವಿಯಿಲ್ಲದಿದ್ದಲ್ಲಿ,
ಲೋಕ ಉಡುಗಿ ಹೋಗುವುದಿಲ್ಲ;
ನಡುಗಿ ನಲುಗುವುದಿಲ್ಲ
ಹಾಗಾದರೇನಾಗುತ್ತದೆ?
ಬದುಕು ತನ್ನ ಪಾಡಿಗೆ
ಯಥಾಪ್ರಕಾರ ಸಾಗುತ್ತದೆ—
ಆದರೊಂದಿಷ್ಟು ಸೊರಗಿ ಬರಡಾಗಿ;
ಕೊಂಚ ಕೊರಗಿ ಕುರುಡಾಗಿ.'

(ಕವಿಯಿಲ್ಲದಿದ್ದರೆ)

ಸಮಾಜದ ಹಿತಚಿಂತನೆ, ಸ್ವಂತ ವ್ಯಕ್ತಿತ್ವದ ವಿಶಿಷ್ಟತೆಯ ಸಾಧನೆ, ಬಾಳಿಗೆ ಸಾರ್ಥಕತೆಯನ್ನು ತಂದುಕೊಡುವ ಮೌಲ್ಯಗಳ ಶೋಧನೆ, ಆರಾಧನೆ—ಕವಿ ಕೆ. ಎಸ್. ನಿಸಾರ್ ಅಹಮದ್‌ರ ಕಾವ್ಯದ ಪ್ರಧಾನ ಆಸಕ್ತಿಗಳಾಗಿವೆ. ಅವರ ಶೈಲಿಯಲ್ಲಾಗಲೀ, ಚಿಂತನೆಗಳಲ್ಲಾಗಲೀ—ಈ ಐವತ್ತು ವರ್ಷಗಳಲ್ಲಿ—ಪ್ರಧಾನ ಬದಲಾವಣೆಗಳು ಕಾಣಿಸುವುದಿಲ್ಲ. 'ಹೃದಯ ರಸದಲ್ಲಿ ಬುದ್ಧಿ ಪಲ್ಲವಿಸುವ' ಒಂದು ಬಗೆಯನ್ನು ಅವರು ಸತತವಾಗಿ ಶೋಧಿಸುತ್ತ ಬಂದಿದ್ದಾರೆ. ಅದಕ್ಕೆ ಅಗತ್ಯವಾದ ಪ್ರತಿಭೆ, ಸಂವೇದಕತೆ, ಸ್ವಂತಿಕೆಗಳನ್ನೂ ಅವರು ಪ್ರಯೋಗಶೀಲತೆಯಿಂದ ವೃದ್ಧಿಸಿಕೊಳ್ಳುತ್ತ ಬಂದಿದ್ದಾರೆ. ಕಾವ್ಯದ ಕ್ರೀಡಾಂಗಣದಲ್ಲಿ ಸಡಿಲುಗೊಳ್ಳದ ದುಡಿತದ ಉತ್ಸಾಹದಿಂದ ಕ್ರಿಯಾಶೀಲರಾಗಿ ಅಸಾಮಾನ್ಯ, ಅತಿಶಯ ಕ್ಷಣಗಳನ್ನು ಮತ್ತೆ ಮತ್ತೆ ಎದುರುಗೊಳ್ಳಲು ನಿಸಾರ್ ಅವರು ತವಕಿಸುತ್ತಿದ್ದಾರೆ ಎಂಬುದು ನಿಜಕ್ಕೂ ಅಭಿಮಾನದ ಸಂಗತಿಯಾಗಿದೆ.

ಕವಿಯಾಗುವುದಕ್ಕೆ ವ್ಯಕ್ತಿಯ ಅಂತಃಕರಣದಲ್ಲಿ ಹುಟ್ಟಿನಿಂದ ಪಡೆದು ಬಂದ ಒಂದು ಕಿಡಿ ಇರಬೇಕೆಂದು ತೋರುತ್ತದೆ. ಕಾವ್ಯ ರಚನೆಯ ವೇಳೆ ಹಲವೊಮ್ಮೆ ಅದರ ಅರಿವು ನಮ್ಮ ಸ್ಮೃತಿಯಲ್ಲಿ ಸುಳಿಯಬಹುದು. ಕವಿಯಾದವನು ಅದು ನಂದಿಹೋಗದಂತೆ ಪರಿಶ್ರಮಪೂರ್ವಕವಾದ ಲೋಕಾನುಭವ, ವ್ಯಾಸಂಗ, ಚಿಂತನ, ಧ್ಯಾನಗಳ ಇಂಧನವನ್ನೊಡ್ಡಿ ಅದನ್ನು ಕೆಂಡವಾಗಿಸಿಕೊಳ್ಳಬೇಕು. ಅದರ ಕಾವು ದೀಪ್ತಿಗಳಿಲ್ಲದೆ ಸತ್ಕಾವ್ಯ ಸೃಷ್ಟಿಯಾಗದು.

(ಕವಿಯಾಗಲು ಬೇಕಾದ ಅಗತ್ಯಗಳು)



ನಿಸಾರರ ವ್ಯಕ್ತಿ ಕವಿತೆಗಳ ಪ್ರಾತಿನಿಧಿಕ ಪರಿಶೀಲನೆ

♦ ಬಿ. ಎಸ್. ವೆಂಕಟಲಕ್ಷ್ಮಿ

ಒಬ್ಬ ಉನ್ನತ ಕವಿ ಹಿತಮಿತವಾದ ಹಾವಭಾವದೊಂದಿಗೆ ತಮ್ಮ ಅರ್ಥಪೂರ್ಣ ಕವನವೊಂದನ್ನು ಆಕರ್ಷಕ ರೀತಿಯಲ್ಲಿ ಓದಿದಾಗ ಅದರ ಸಾರ, ಅದರಲ್ಲಿ ಅಡಗಿರುವ ಸಂಗತಿಗಳು, ಅದು ಓದುಗರ ಮುಂದೆ ಬಿಚ್ಚಿಡುವ ಮಹತ್ವದ ಆಲೋಚನೆಗಳು ಇತರ ಕಾವ್ಯ ರಸಿಕರಂತೆ ನನ್ನ ಮನಸ್ಸನ್ನೂ ತಟ್ಟುತ್ತವೆ: ಅದರಲ್ಲೂ ಆ ಕವಿ ನನಗೆ ಹತ್ತಿರದವರೆನ್ನಿಸಿದ್ದಾಗ; ಅವರ ಯಾವುದೇ ಕವನದಲ್ಲಾಗಲೀ ಅದ್ಭುತವಾದ ವಿಚಾರ ಧಾರೆಯೊಂದು ಅಡಕವಾಗಿದ್ದು, ಅಂಥ ವಿಚಾರ ಧಾರೆ ವಿಸ್ತಾರವಾದ ಆಯಾಮವೊಂದಕ್ಕೆ ವಿಸ್ತರಿಸಿಕೊಳ್ಳುವ ಸಾಧ್ಯತೆಯನ್ನು ಸಹಜವಾಗಿಯೇ ಪಡೆದುಕೊಂಡಿರುತ್ತದೆ ಎಂದು ಖಾತ್ರಿಯಾಗಿದ್ದಾಗ. ಇಂಥ ಕವನಗಳು ಮನಸ್ಸಿನ ಆಳಕ್ಕೆ ಇಳಿಯುತ್ತವೆ. ಕೆಲವೊಮ್ಮೆ ಕಾಡುತ್ತವೆ. ಕವಿಯ ಬಗ್ಗೆ ಹೆಮ್ಮೆಯನ್ನು ಮತ್ತೆ ನವೀಕರಿಸಿಕೊಳ್ಳುವ ಕಾತರ ಕಾಣಿಸಿಕೊಳ್ಳುತ್ತದೆ.

ಕೆ. ಎಸ್. ನಿಸಾರ್ ಅಹಮದ್ ನಾನು ತುಂಬಾ ಮೆಚ್ಚಿಕೊಂಡಿರುವ ಇಂಥ ಒಬ್ಬ ಕವಿ. ಇವರ ಕವನಗಳಿಗೆ ನನ್ನಂಥವಳ ವಿಮರ್ಶೆಯಾಗಲೀ, ಹೊಗಳಿಕೆಯಾಗಲೀ ಅಥವಾ ಅಭಿಪ್ರಾಯವಾಗಲೀ ಅಗತ್ಯವಿಲ್ಲ. ಏಕೆಂದರೆ ಬಹಳ ಹಿಂದೆಯೆ, ತುಂಬಾ ಚಿಕ್ಕ ವಯಸ್ಸಿನಲ್ಲೇ ಕಾವ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ ಇವರ ಕೃತಿಗಳೆಲ್ಲವೂ ಈಗಾಗಲೇ ಸಹಸ್ರಾರು ಜನರಿಂದ ಓದಿಸಿಕೊಂಡಿರುವಂಥವು. ಕೆಲವಂತೂ ಜನಪ್ರಿಯ

ಗಾಯಕರ ಮೂಲಕ ಕನ್ನಡದ ಜನರ ಮನೆಗಳೆಲ್ಲವನ್ನೂ ತಲಪಿರುವಂಥವು. ತಮ್ಮಲ್ಲಿ ಅಡಗಿರುವ ದನಿ, ಭಾವನೆ, ಮಾಧುರ್ಯ ಹಾಗೂ ಕೀಟಲೆಗಳಿಂದ ಸಮಾಜದಲ್ಲಿನ ಕೊಳಕುಗಳನ್ನು ಬಹಿರಂಗವಾಗಿ ಎತ್ತಿ ತೋರುವ ರೀತಿಯಿಂದಾಗಿ ಈಗಾಗಲೇ ಚರ್ಚೆಗಳಿಗೆ ಒಳಪಟ್ಟಿರುವಂಥವು.

ವ್ಯಕ್ತಿ ಚಿತ್ರಣ ನನಗೆ ಅತ್ಯಂತ ಪ್ರಿಯವಾದ ಆಯಾಮವಾದ್ದರಿಂದ ನನ್ನ ಗಮನ ಮಾಸ್ತಿ, ರಾಮನ್, ಎಚ್ಚೆನ್ ಹಾಗೂ ದುಬೈನ ಪಾರ್ಥಸಾರಥಿಯವರನ್ನು ಕುರಿತಂತೆ ನಿಸಾರ್ ತಮ್ಮ ಕವನಗಳ ರೂಪದಲ್ಲಿ ನೀಡಿರುವ ನುಡಿಚಿತ್ರಗಳ ಮೇಲೆ ಹೆಚ್ಚು. ಮೇಲುನೋಟಕ್ಕೆ ಸಾಮಾನ್ಯ ಜನರಿಗೆ ವ್ಯಕ್ತಿಗಳನ್ನು ಪರಿಚಯಿಸಿಕೊಡುವ ಒಂದು ಸರಳ ಪ್ರಯತ್ನದಂತಿದ್ದರೂ ಓದಿಕೊಳ್ಳುತ್ತ ಹೋದಂತೆಲ್ಲ ಸಂಕ್ಷಿಪ್ತ ಜೀವನ ಚರಿತ್ರೆಯೊಂದರಂತೆ ರೂಪಾಂತರಗೊಳ್ಳುವ ಈ ಕವನಗಳು ನನ್ನನ್ನು ಬೆರಗುಗೊಳಿಸುತ್ತಲೇ ಇರುವುದರಿಂದ ಇವುಗಳತ್ತ ನನ್ನ ವಿಶೇಷ ಲಕ್ಷ್ಯ. ತಮ್ಮ ಸಂಪರ್ಕಕ್ಕೆ ಬಂದಂಥ ವ್ಯಕ್ತಿಗಳನ್ನು ದಾರಿಹೋಕನೊಬ್ಬನ ದೃಷ್ಟಿಯಿಂದ ಗಮನಿಸಿ, ಸಾಮಾನ್ಯ ಪ್ರಜೆ ಇಲ್ಲವೇ ನಾಗರಿಕನಂತೆ ಅವರ ಬಗ್ಗೆ ಕುತೂಹಲವನ್ನು ಬೆಳೆಸಿಕೊಂಡು ಆತ್ಮೀಯತೆಯಿಂದಲೇ ಇವರನ್ನು ಬಣ್ಣಿಸುವ ನಿಸಾರ್ ನನಗೆ ಅನೇಕ ಸಂದರ್ಭಗಳಲ್ಲಿ ಚರಿತ್ರೆಕಾರರಂತೆ ಕಾಣುತ್ತಾರೆ. ಕುಂಚ ವರ್ಣಗಳ ಮೂಲಕ ವ್ಯಕ್ತಿಯೊಬ್ಬನನ್ನು ಚಿತ್ರಿಸುವ ಕಲಾಕಾರನನ್ನೂ ಮೀರಿಸುವ ಕಲಾವಿದರಂತೆ ತೋರುತ್ತಾರೆ. ತಾವು ಕಂಡಿರುವಂಥ ವ್ಯಕ್ತಿಗಳ ಗುಣಗಳನ್ನು, ಆ ಗುಣಗಳ ಮೂಲಕ ತಾವು ಮನಗಂಡಿರುವಂತಹ ಸತ್ಯಗಳನ್ನು, ಆ ಗುಣಗಳ ಮೂಲಕವೇ ಈ ವ್ಯಕ್ತಿಗಳು ಬದುಕಿನಲ್ಲಿ ಸಾಧಿಸಿದ್ದನ್ನು, ಏರಿದ ಎತ್ತರವನ್ನು, ಸಮಾಜಕ್ಕೆ ಬಿಟ್ಟು ಹೋದ ಮೌಲ್ಯಗಳನ್ನು ವಿವರಿಸುವ ಮೂಲಕ ಸಮಾಜ ಶಾಸ್ತ್ರವೊಂದರಲ್ಲಿ ಸೇರಲು ಅರ್ಹವೆನ್ನಿಸಬಲ್ಲ ಅಧ್ಯಾಯವೊಂದನ್ನು ಸೃಷ್ಟಿಸುತ್ತಾರೆ. ಸುತ್ತಮುತ್ತಲಿನ ಆಗುಹೋಗುಗಳ ಹಿನ್ನೆಲೆಯಲ್ಲಿ ವ್ಯಕ್ತಿಗಳನ್ನು ನಿಲ್ಲಿಸಿ ಅವರ ಸ್ಥಾನ ವೆಂಥದ್ದು ಎಂಬುದನ್ನು ವೀಕ್ಷಕನಂತೆ ನಮಗೆ ಮನವರಿಕೆ ಮಾಡಿಕೊಡುತ್ತಾರೆ. ನಿಸಾರ್, ವ್ಯಕ್ತಿಗಳ ಹಿನ್ನೆಲೆಯನ್ನು ಸೂಚ್ಯವಾಗಿ, ಹೃದಯಂಗಮವಾಗಿ, ಪ್ರತಿಮೆಗಳು ಮತ್ತು ಸಂಕೇತಗಳನ್ನೊಳಗೊಂಡ ಭಾಷೆಯ ಮೂಲಕ ತಿಳಿಸಿಕೊಡುವುದರಿಂದಲೇ ಈ ವ್ಯಕ್ತಿಗಳನ್ನು ಅಲ್ಪಸ್ವಲ್ಪ ಬಲ್ಲವರಿಗೂ ಅವರು ನಿಕಟರೆನ್ನಿಸಿಬಿಡುತ್ತಾರೆ. ಮತ್ತೊಂದು ಕೋನದಿಂದ ಅವರನ್ನು ನೋಡುವ ಸಾಮರ್ಥ್ಯವನ್ನು ಓದುಗರು ಪಡೆದುಕೊಳ್ಳುತ್ತಾರೆ. ಈ ವ್ಯಕ್ತಿಗಳ ಪರಿಚಯವಿಲ್ಲದವರೂ ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ, ನಿಜವಾದ ರೀತಿಯಲ್ಲಿ ಭವ್ಯವೆನಿಸಬಲ್ಲ ಮಾದರಿ ಜೀವನವನ್ನು ನಡೆಸಿದ ಹಿರಿಯರ ಬಗ್ಗೆ ಗೌರವವನ್ನು ಮೂಡಿಸಿಕೊಳ್ಳುತ್ತಾರೆ.

ನಿಸಾರ್ ಅಹಮದ್ ಅವರ 'ಮಾಸ್ತಿ' ಹಲವಾರು ಸಂದರ್ಭಗಳಲ್ಲಿ ನಿಸಾರ್ ಅವರಿಂದಲೇ ಪರಿಣಾಮಕಾರಿಯಾಗಿ ವಾಚನ ಮಾಡಿಸಿಕೊಳ್ಳಲ್ಪಟ್ಟಿರುವ ಕವನ. ಸಭೆಗಳಲ್ಲಿ ಇದರ ವಾಚನಕ್ಕಾಗಿ ಬರುತ್ತಲೇ ಇರುವ ಬೇಡಿಕೆ ಕವಿಗಷ್ಟೇ ಅಲ್ಲ, ಕನ್ನಡಕ್ಕೆ, ಮಾಸ್ತಿಯವರಿಗೆ ಹೊಸ ಗೌರವವನ್ನು ತಂದುಕೊಂಡುವಂಥದ್ದು. ಕನ್ನಡದ ಮೇರು ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಖಾಸಗಿ ಮಗ್ಗುಲೊಂದನ್ನು ಬೆರಗುಗೊಳಿಸುವ

ರೀತಿಯಲ್ಲಿ ಅನಾವರಣಗೊಳಿಸುತ್ತದೆ ಈ ಕವನ. ಇದರಲ್ಲಿ ನಿಸಾರ್, ಮಾಸ್ತಿಯವರನ್ನು ಅವರ ದಿನನಿತ್ಯದ ಎಲ್ಲ ಚಟುವಟಿಕೆಗಳ ಕಾರ್ಯಕ್ಷೇತ್ರವಾಗಿದ್ದ ಬೆಂಗಳೂರಿನ ಗಾಂಧಿ ಬಜಾರ್ ಹಾಗೂ ಗವೀಪುರ ಬಡಾವಣೆಯ ಹಿನ್ನೆಲೆಯಲ್ಲೇ ಸುತ್ತಿಸುತ್ತಾರೆ. ದಿನವೊಂದರಲ್ಲಿ ಮಾಸ್ತಿ ನಡೆಸುವ ಕಾರ್ಯಕಲಾಪಗಳ ಮೂಲಕ ಅವರ ಇಡೀ ವ್ಯಕ್ತಿತ್ವವನ್ನೇ ವಿವರಿಸುತ್ತಾರೆ. ಇಳಿ ವಯಸ್ಸಿನವರೆಗೂ ಸಾಕಷ್ಟು ಸಕ್ರಿಯವಾಗಿದ್ದು ಕನ್ನಡ ಸಾಹಿತ್ಯವನ್ನು ತಮ್ಮ ವಿಪುಲ ಬರವಣಿಗೆಯ ಮೂಲಕ ಶ್ರೀಮಂತಗೊಳಿಸಿದವರು ಮಾಸ್ತಿ. ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಆಸಕ್ತಿ ಇರುವವರಿಗೆಲ್ಲ ಸಾಮಾನ್ಯವಾಗಿ ಪರಿಚಿತರಾಗಿದ್ದ ಮಾಸ್ತಿಯವರ ವ್ಯಕ್ತಿತ್ವವನ್ನು ಹೆಣೆಯುತ್ತ ನಿಸಾರ್ 'ವಯಸು ಅನುಭವ ಹೂಡಿ ಸುಖ ದುಃಖ ಬೆಳೆದ ಮುಖ/ ಹಿಂದೊಮ್ಮೆ ನೆಲಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು; / ಸಾಂತ್ವನವ ನುಡಿದಿರುವ ಹಳೆ ನಮೂನೆಯ ಚಶ್ಮ / ಅದೇ ಕೊಡೆಯ ಗದೆ' ಎಂದು ಹೇಳಿ ಈ ಹಿರಿಯರ ರೂಪವನ್ನು, ಅವರು ಬಳಸುವ ಪರಿಕರಗಳನ್ನು ಛಾಯಾಚಿತ್ರವೊಂದರಂತೆ ನಮ್ಮ ಕಣ್ಣಿನ ಮುಂದೆ ನಿಲ್ಲಿಸುತ್ತಾರೆ. ಮಾಸ್ತಿಯವರು ಸುಖವನ್ನು ಮಾತ್ರವಲ್ಲ, ದುಃಖಗಳನ್ನೂ ಕಂಡಿದ್ದರು ಎಂಬುದನ್ನು ತಿಳಿಸುತ್ತಾರೆ. ಅಂಥ ಅನುಭಾವಿಯಲ್ಲೂ ವಯಸ್ಸೆಂಬುದು ತಂದಿದ್ದ ಬದಲಾವಣೆಯನ್ನು, ಹೊಸದೊಂದು ಜಗತ್ತಿನಲ್ಲಿ ಬದುಕಿದ್ದರೂ ತಮ್ಮ ಹಳೆಯ ಕನ್ನಡಕ ಹಾಗೂ ಪೂರ್ವಿಕರ ಅವಿಭಾಜ್ಯ ವಸ್ತುವೆನ್ನಿಸಿದ್ದ ಛತ್ರಿಯನ್ನು ನಿಕಟವಾಗಿಸಿಕೊಂಡಿದ್ದ ಮಾಸ್ತಿ ಹಳೆಯ ಹಾಗೂ ಹೊಸತರ ಮಧ್ಯದಲ್ಲಿನ ಸಂಪರ್ಕ ಸೇತುವಾಗಿದ್ದರು ಎನ್ನುವುದನ್ನು ತೋರಿಸಿಕೊಡುತ್ತಾರೆ. ಮಾಸ್ತಿ ತಮ್ಮ ಕೊಡೆಯನ್ನು ನಾನಾ ಕಾರಣಗಳಿಗಾಗಿ ಹೇಗೆ ಬಳಸಿ ಕೊಳ್ಳುತ್ತಿದ್ದರು, ಎನ್ನುವುದನ್ನು ತೋರಿಸುತ್ತಲೇ ಬೆಂಗಳೂರಿನ ರಸ್ತೆಗಳು ಹೇಗೆ ಭಿಕ್ಷುಕರ ಪಾಳಯವಾಗಿದೆ, ಬೀದಿಕುನ್ನಿಗಳ ಮತ್ತು ಪೋಲಿದನಗಳ ವಾಸಸ್ಥಾನವಾಗಿದೆ ಎನ್ನುವುದನ್ನು ಸೂಚಿಸಿ ನಾಗರಿಕ ಸಮಸ್ಯೆಗಳನ್ನೂ ಕೈಗೆತ್ತಿಕೊಳ್ಳುತ್ತಾರೆ. 'ಒಂ ಮಾದರಿಯ ಬೆಂಗಳೂರಿನ' ಪ್ರತೀಕವೆನ್ನಿಸುವ 'ವೃದ್ಧ' ಮಾಸ್ತಿಯವರು ಗವೀಪುರದಿಂದ ಗಾಂಧಿಬಜಾರಿನ ಕೊನೆಯಲ್ಲಿರುವ ಕ್ಲಬ್ಬಿಗೆ 'ಪ್ರಕೃತಿಯ ಕರೆಗೆ ಎಳೆಯಲ್ಪಟ್ಟವರಂತೆ' ಪ್ರತಿ ಸಂಜೆಯೂ ನಡೆದು ಬರುವುದನ್ನು ಕಂಡಾಗ ತಮಗೆ ಅಚ್ಚರಿಯ ಜತೆಗೇ ಉಂಟಾಗುವ ಅನುಕಂಪವನ್ನೂ ತೋರಿಸಿಕೊಳ್ಳುತ್ತಾರೆ. 'ಪ್ರತಿ ಕ್ಷಣವೂ ಸರಳ ವೃದ್ಧಾಪ್ಯಕ್ಕೆ ಹಿರಿ ಸವಾಲಿನಂತೆ' ಬೆಂಗಳೂರು ನಗರವೆಂಬುದು ಹೇಗೆ ಬದಲಾಗುತ್ತಲೇ ಹೋಗಿದೆ ಎಂಬ ಕ್ಷೋಭೆಯನ್ನೂ ವ್ಯಕ್ತಪಡಿಸು ತ್ತಾರೆ. 'ರಸ್ತೆ ಹಿರಿದಾಗಿ ಫುಟ್‌ಪಾತು ಕಿರಿದಾಗಿ, ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ, ಲೋಕ ಕಂಪ್ಯೂಟರಿನ ಸ್ವಿಚ್ಚು ತಂತಿಗಳಂತೆ ಸಂದಿಗ್ಧವಾಗಿ, ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು ಎಸೆಯುತಿವೆ' ಎಂಬ ನೋವನ್ನು ವ್ಯಕ್ತಪಡಿಸುತ್ತಲೇ 'ಪರಿವರ್ತನಶೀಲ' ಬೆಂಗಳೂರಿಗೆ ತಮ್ಮದೇ ರೀತಿಯ ವಿವರಣೆಯನ್ನು ನೀಡುತ್ತಾರೆ.

ಕ್ಲಬ್ಬಿನಲ್ಲಿ ಕೂತ ಮಾಸ್ತಿ, ನಿಸಾರ್ ಅವರಿಗೆ ಒಬ್ಬ ಮೋಜಿನ ವ್ಯಕ್ತಿಯಾಗಿ ಕಾಣುತ್ತಾರೆ. ಉದ್ದಾಮ ಸಾಹಿತಿಯಾಗಿದ್ದರೂ ಸಾಮಾನ್ಯನಂತೆ ಸಹಜವಾಗಿ ಸಂಭಾಷಿಸಬಲ್ಲ ಸರಳ ಸ್ವಭಾವದ ಮಾಸ್ತಿಯವರನ್ನು ಆಶ್ಚರ್ಯಗೊಳಿಸುವ ರೀತಿಯಲ್ಲಿ ಪರಿಚಯಿಸಿ ಕೊಡುತ್ತಾರೆ:

'ಕ್ಲಬ್ಬಿನಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು,
ಇಪ್ಪತ್ತೆಂಟನಾಡುವುದು—
ನಡುವೆ, ಅದೂ ಇದೂ ಇಪ್ಪತ್ತೆಂಟನಾಡುವುದು:
ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ / ಟೈಲರನ ಎಡಗಾಲನುಳುಕಿಸಿದ್ದು;
ರಾತ್ರಿ ಪುರಭವನದಲಿ ಸಂಗೀತ ಸಾಮ್ರಾಜ್ಞೆ / ಶಂಕರಾಭರಣದಲಿ ಪುಲಕಿಸಿದ್ದು;
ಅಬ್ದುಲನ ಹೈಕೋರ್ಟು ರಿಟ್ಟು ವಜಾ ಆದದ್ದು;
ಖೋಟ ನೋಟ್ ಕೃಷ್ಣನಿಗೆ ಕಠಿಣ ಸಜ ಆದದ್ದು;
ಬದರಿ ನಾದಿನಿಗೊಬ್ಬ ಒಳ್ಳೆ ವರ ಸಿಕ್ಕಿದ್ದು;
ರಷ್ಯ ಚೀನಾ ಕ್ಯೂಬಾ ಅಮೇರಿಕ ವಾರ್ತೆ ಮಿಕ್ಕಿದ್ದು—
ಅದೂ ಇದೂ ಇಪ್ಪತ್ತೆಂಟನಾಟುವುದು....'

(ಮಾಸ್ತಿ)

ಸಹ ಆಟಗಾರರೊಂದಿಗೆ ಮಾಸ್ತಿಯವರು ನಡೆಸುತ್ತಿದ್ದ ಸಂಭಾಷಣೆಯಲ್ಲಿ ಬಂದು ಹೋಗುತ್ತಿದ್ದ ವಿಷಯಗಳನ್ನು ಕುರಿತು ಪ್ರಸ್ತಾಪಿಸುವ ಸಂದರ್ಭದಲ್ಲಿ ನಿಸಾರ್ ಕೆಲವೇ ವಾಕ್ಯಗಳಲ್ಲಿ ಮಾಸ್ತಿಯವರ ಮನಸ್ಸಿನಲ್ಲಿ ಮೂಡುತ್ತಿದ್ದ ವಿಷಯ ವೈವಿಧ್ಯ ಎಂಥದ್ದಾಗಿತ್ತು ಎನ್ನುವುದನ್ನು ತಿಳಿಸಿಕೊಡುತ್ತಾರೆ. ಚಿಂತನಶೀಲ ಮಾಸ್ತಿಯವರಿಗಿದ್ದ ಅಪಾರ ತಿಳುವಳಿಕೆಗೆ ಸಾಕ್ಷಿಯಾಗುತ್ತಾರೆ. ಹಾಗೆಯೇ ಇಳಿ ವಯಸ್ಸಿನಲ್ಲೂ ಜ್ವಲಂತ ಜೀವನಾಸಕ್ತಿ ಮತ್ತು ಸೂಕ್ಷ್ಮ ವಿವರಪ್ರಿಯತೆಯನ್ನು ಕಾಪಾಡಿಕೊಂಡಿದ್ದರು ಎಂಬುದನ್ನು ಮನೋವೇದ್ಯವಾಗಿಸುತ್ತಾರೆ.

ಮಾಸ್ತಿಯವರಂತೆಯೇ ನಿಸಾರ್‌ರಿಗೂ ಗಾಂಧಿಬಜಾರ್ ನಿಕಟವಾದದ್ದು ಎನ್ನುವುದು ಈಗಾಗಲೇ ನಮಗೆಲ್ಲರಿಗೂ ತಿಳಿದಿರುವಂಥದ್ದೇ. ಅದಕ್ಕೇ ಅವರಿಗೆ ಈ ಜಾಗಗಳಲ್ಲಿನ ಆಗುಹೋಗುಗಳ ಬಗ್ಗೆ ತೀವ್ರ ಕಳಕಳಿ. ಜತೆಗೇ ಬೆಂಗಳೂರಿನ ಒಂದು ಕೇಂದ್ರಸ್ಥಳವಾದ ಇಲ್ಲಿ ಸಂಜೆಯಾಗುತ್ತಿದ್ದಂತೆಯೇ ಸಂಭವಿಸುವ ಘಟನೆಗಳು ಎಂಥವು ಎನ್ನುವುದನ್ನು ಓದುಗರೊಂದಿಗೆ ಹಂಚಿಕೊಳ್ಳುವ ಆಸೆ. ಕ್ಲಬ್ಬಿನಲ್ಲಿನ ತಮ್ಮ ಎಂದಿನ ಇಸ್ಪೀಟ್ ಆಟ ಮುಗಿಸಿ, ಕೊಡೆ ತೆರೆದು ಏಕಾಕಿಯಾಗಿ ಮನೆಯತ್ತ ನಡೆಯುವ ಮಾಸ್ತಿಯವರನ್ನು ಕುರಿತು ಹೇಳುತ್ತಲೇ ನಿಸಾರ್ ಗಾಂಧಿಬಜಾರಿನ ರಾಜಕೀಯ ಪ್ರದೂಷಿತ ಚಹರೆಯನ್ನು, ಅದರ ಕೃತಕ, ವಿದ್ಯುದ್ವಿಲಾಸವನ್ನು, ಚಂದ್ರನಂತೆ ಚಿರ ಕೀರ್ತಿಯುಳ್ಳ ಮಾಸ್ತಿಯವರನ್ನು ಮುಖಾಮುಖಿಯಾಗಿಸಿ ಮರೆಯಾದ ಒಂದು ಬಾಳಿನ ವಿಧಾನವನ್ನು ಹಾಗೂ ಮಾನವ ಜೀವಿತಕ್ಕೆ ಕೃತಕೃತ್ಯತೆಯನ್ನು ನೀಡುವ ಉತ್ತಮ ಅಭಿರುಚಿಯೊಂದರ ಅಸ್ತಂಗತತೆಯನ್ನು ಸೂಚಿಸುತ್ತಾರೆ :

'ಗಾಂಧಿಬಜಾರೀಗ ತಿಳಿಯಾಗಿ ಫರ್ಲಾಂಗು ಬೆಳಕ ಹಬ್ಬ—
ಚೌಕದೆಡೆ ಆಗೀಗ ಪ್ರತಿಪಕ್ಷದವನೊಬ್ಬ
ಎಲುಬಿರದ ನಾಲಗೆಯ ನಾಚು ನಡೆಸುತ್ತಿರಲು
ಸರ್ಕಾರದಸಫಲತೆಯ ಹುಣ್ಣು ನೋಣ-ಸುತ್ತಿರಲು
ದೀಪಗಳ ಝಗಮಗದಿ ಕಣ್ಸೋತು ನಿಂತಿರಲು
ಮನೆ ಮಠವ ಮರೆತಿರುವ ಮಂದಿ ಸಂತೆ,

ಬೊಬ್ಬೆ ಅಬ್ಬರದೆದುರು ಗುರುತು ಹತ್ತದ ಹಾಗೆ
ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ;
ಗಂಭೀರವಾಗಿ ಕರ್ತವ್ಯದೆಚ್ಚರಿನ ಸನ್ನೆಯಂತೆ.
ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ:
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ'

(ಅದೇ)

ತಮ್ಮ ನಡೆವಳಿಕೆಯಿಂದ, ಸರಳ ಜೀವನದಿಂದ ಮಾಸ್ತಿಯವರು ನಿಸಾರ್‌ರನ್ನು ಹೀಗೆ ಚಕಿತಗೊಳಿಸಿದರೆ, 'ರಾಮನ್ ಸತ್ತ ಸುದ್ದಿ' ಕವನದಲ್ಲಿನ ಸಾಮಾನ್ಯ ರೈತನಾದ ಹಳ್ಳಿಯ ಹನುಮ ಇವರ ಗಮನ ಸೆಳೆಯುವುದು ತನ್ನ ಅಮಾಯಕತೆಯಿಂದ, ಮುಗ್ಧತೆಯಿಂದ. ಶಿವಮೊಗ್ಗೆಯಲ್ಲಿ ನಿಸಾರ್ ನಿವಾಸಿಯಾಗಿದ್ದಾಗ ಸಂಭವಿಸಿದ ಪ್ರಸಂಗವೊಂದು ಈ ಕವನಕ್ಕೆ ಪ್ರೇರಣೆ. ಸರ್. ಸಿ. ವಿ. ರಾಮನ್ ತೀರಿಕೊಂಡಿದ್ದಾರೆ. ಆ ಬೆಳಿಗ್ಗೆ ಪತ್ರಿಕೆಗಳಲ್ಲಿ ಈ ಸುದ್ದಿ ಪ್ರಕಟವಾಗಿದೆ. ನಾವೇ ಸ್ವಾತಂತ್ರ್ಯ ವಹಿಸಿ ಊಹಿಸಿಕೊಳ್ಳಬಹುದಾದರೆ ಈ ಘಟನೆ ಮಿಕ್ಕೆಲ್ಲರಿಗಿಂತಲೂ ಹೆಚ್ಚಾಗಿ ನಿಸಾರ್‌ರನ್ನು ಕಾಡಿರುವುದಕ್ಕೆ ಕಾರಣ, ಇವರು ವೃತ್ತಿಯಿಂದ ವಿಜ್ಞಾನದ ಬೋಧಕರಾಗಿರುವುದು ಮತ್ತು ದೇಶಕ್ಕೆ ತಮ್ಮ ಪ್ರಯೋಗದ ಮೂಲಕ ಪ್ರತಿಷ್ಠೆಯನ್ನು ತಂದುಕೊಟ್ಟಿರುವಂಥ ಅಪೂರ್ವ ವಿಜ್ಞಾನಿಯೊಬ್ಬರ ಮರಣ ಇವರಿಗೆ ಗಾಢವಾದ ದುಃಖವನ್ನು ತಂದುಕೊಟ್ಟಿರುವುದು. ಈ ಹಂತದಲ್ಲಿ ಕವಿಗೆ ತಮಗಾದ ಸಂಕಟ ಹಾಗೂ ಶೋಕವನ್ನು ಯಾರೊಂದಿಗಾದರೂ ಹಂಚಿಕೊಂಡು ಹೃದಯವನ್ನು ಹಗುರಗೊಳಿಸಿಕೊಳ್ಳುವ ಹಂಬಲ. ಆದರೆ ಸಮಾನ ಮನಸ್ಕರಾರೂ ದೊರೆಯದೆ ಪರಿತಪಿಸುವ ಸಂದರ್ಭ. ದೇಶವೇ ಅಭಿಮಾನಪಟ್ಟುಕೊಳ್ಳಬಹುದಾದ ವಿಜ್ಞಾನಿಯೊಬ್ಬರು ತೀರಿಕೊಂಡಿರುವಾಗಲೂ ಅದರ ಪರಿವೆಯೇ ಇಲ್ಲದಂತೆ ದುಃಖಕ್ಕೆ ದೂರವಾಗಿರುವಂತೆ ಕಾಣುತ್ತಿರುವ ಊರು ಇವರ ಮನಸ್ಸಿನ ತಳಮಳವನ್ನು ಕುದಿಸಲು ತೊಡಗಿದಾಗ, ಇವರ ದೃಷ್ಟಿಗೆ ಗೋಚರಿಸುವವನು ತನ್ನ ಇಡೀ ದಿನವನ್ನು ಹೊಲದಲ್ಲೇ ಕಳೆಯುತ್ತಿರುವ, ಜೀವನೋಪಾಯಕ್ಕಾಗಿ ವ್ಯವಸಾಯವನ್ನೇ ಅವಲಂಬಿಸಿರುವ ಹನುಮ. ಕವಿಯನ್ನು ತಮ್ಮ ಸಾವಿನ ಮೂಲಕ ಕಳವಳಕ್ಕೆ ಈಡು ಮಾಡಿರುವ ರಾಮನ್ ಹಾಗೂ ಇವರು ಪ್ರತಿದಿನ ಸಾಗುತ್ತಿದ್ದ ಹಾದಿಯಲ್ಲೇ ಬೇಸಾಯದಲ್ಲಿ ತೊಡಗಿರುವ ಹನುಮ—ಇಬ್ಬರೂ ರಾಮಾಯಣದಂಥ ಮಹಾನ್ ಗ್ರಂಥದಲ್ಲಿ ಪರಸ್ಪರರಿಗೆ ತೀರಾ ನಿಕಟರಾದವರು. ಆದರೆ ಶಿವಮೊಗ್ಗೆಯ ಲೌಕಿಕ ಜೀವನದಲ್ಲಿನ ಈ ಮುಗ್ಧ ಹನುಮನಿಗೆ ರಾಮನ್‌ರೂ ಗೊತ್ತಿಲ್ಲ; ಅವರ ಸಾಧನೆಯ ಪರಿಚಯವೂ ಇಲ್ಲ! ಇವರಿಬ್ಬರೂ ಇಲ್ಲಿ ಪರಸ್ಪರರಿಗೆ ಆಗಂತುಕರು :

'ಆ ಕಡೆ ರಾಮನ್, ಈ ಕಡೆ ಹನುಮ :
ದಿನವಿಡೀ ಮೈ ಕೆಸರಿಸಿಕೊಂಡು,

ನನ್ನಂಥವ ನೆನೆಯಲೂ ನಿರಾಕರಿಸುವ ತಂಗಳುಂಡು,
ರಾತ್ರಿ ಕಳ್ಳಭಟ್ಟಿಯ ಹೊಡೆದು
ನಾಡಿದ್ದು ನಾಳೆಯ, ನಾಳೆ ಇವೊತ್ತಿನ,
ಇಂದು ನೆನ್ನೆಯ ಪುನರಾವರ್ತನೆಯ ಏಕತಾನತೆಯಲ್ಲಿ—
ಲೋಕ ಮರೆಯುವ ಹನುಮನಿಗೆ
ರಾಮನ್ ಹೋದರೆಷ್ಟೋ ರಸೆಲ್ ಹೋದರೂ ಅಷ್ಟೆ.
ಪತ್ರಿಕೆಯೋದುವುದಿಲ್ಲ; ನಾನು ಕವಿಯೆಂಬುದು ಗೊತ್ತಿಲ್ಲ;
ಹೊಟ್ಟೆಬಟ್ಟೆಯ ಅಗತ್ಯ ಮೀರಿದ ನನ್ನ ಹಸಿವು, ಅಸ್ಪಸ್ಥತೆ ಅರಿತಿಲ್ಲ;
ಲೋಕದ ಪ್ರತಿನಿತ್ಯದ ಆಗುಹೋಗುಗಳಿಗೆ ಪ್ರತಿಕ್ರಿಯಿಸುವ ಸೂಕ್ಷ್ಮತೆ ಕಂಡಿಲ್ಲ'.
(ರಾಮನ್ ಸತ್ತ ಸುದ್ದಿ)

ಹೀಗೆ ತಮಗೆ ಪರಿಚಿತವಿರುವ ಹನುಮನಿಗೆ, ತಮಗೆ ಮಾತ್ರ ಪರಿಚಿತರಾಗಿದ್ದ ರಾಮನ್ ಅವರ ಸಾವಿನ ಸುದ್ದಿಯನ್ನು ಬಿತ್ತರಿಸುವುದು, ಅವನಿಂದ ಪ್ರತಿಕ್ರಿಯೆಯನ್ನು ಅಪೇಕ್ಷಿಸುವುದು ವ್ಯರ್ಥ ಎಂದು ನಿಸಾರ್ ಅಂದುಕೊಳ್ಳುತ್ತಿರುವಾಗಲೇ—ಇವರಿಗೆ, ಬುದ್ಧಿವಂತನಾಗಿ ಲೋಕದಲ್ಲಿ ಸಂಭವಿಸುತ್ತಿರುವ ಘಟನೆಗಳೆಲ್ಲವನ್ನೂ ತಿಳಿದುಕೊಳ್ಳಬಲ್ಲ ಸವಲತ್ತಿರುವ ತನಗಿಂತಲೂ ಈ ಹನುಮನೇ ಹೆಚ್ಚು ತೃಪ್ತ ಎನ್ನಿಸುವುದು ಕುತೂಹಲದ ವಿಷಯ. Ignorance is bliss ಎನ್ನುವ ಹಾಗೆ!

'ನನ್ನಂತೆ ಕನ್ನಡ, ಗಡಿ, ನದಿ, ಪದ್ಯ, ಪ್ರತಿಷ್ಠೆ ಕಾಡುವುದಿಲ್ಲ—
ಹೆಂಡತಿಗೆ ಚೋಲಿ, ಹಿರಿ ಮಗನ ಶಾಲೆ
ಹೊತ್ತು ಹೊತ್ತಿಗೆ ರುಚಿ ಗೌಣ ಅರಸಿಕ ಕೂಳು-
ಚಿಂತೆಯಿಲ್ಲವೆಂದಲ್ಲ, ಆದರೂ ತೃಪ್ತ'
(ಅದೇ)

ಮೇರು ಸದೃಶ ವಿಜ್ಞಾನಿಯೊಬ್ಬನ ಸಾವನ್ನು ನೆಪವನ್ನಾಗಿಟ್ಟುಕೊಂಡೇ ನಿಸಾರ್ ತೀರಾ ದಲಿತನೆನ್ನಿಸಿದ ಹನುಮನಂಥವನ ಬದುಕನ್ನು, ಬಡತನವನ್ನು, ಅವನ ಜೀವನದ ಏಕಾತಾನತೆಯನ್ನು, ಅವನ ಮುಗ್ಧತೆಯನ್ನು, ಅವಿವೇಕವನ್ನು ಅತ್ಯಂತ ಮಾರ್ಮಿಕವಾಗಿ ಈ ಕವನದಲ್ಲಿ ತೋರಿಸುತ್ತಾರೆ. ಹಳ್ಳಿಗಾಡಿನ ಬದುಕು ಈ ಕವನದಲ್ಲಿ ಕವಿಯ ಆಶಯಕ್ಕೆ ಸಮರ್ಥವಾದ, ಪೋಷಕವಾದ ಹಿನ್ನೆಲೆಯಾಗಿ ಚಿತ್ರಿತಗೊಳ್ಳುತ್ತದೆ. ಹಾಗೆಯೇ ವಿದ್ಯಾವಂತ ಹಾಗೂ ಅವಿದ್ಯಾವಂತರ ಮಧ್ಯದಲ್ಲಿನ ಅಂತರ ಎದ್ದು ಕಾಣುತ್ತದೆ. ಸುಶಿಕ್ಷಿತರು ಹಾಗೂ ಅಶಿಕ್ಷಿತರು ಒಂದೆಡೆ ಬದುಕಬೇಕಾದಾಗ ಪರಸ್ಪರರ ಮಧ್ಯೆ ಸಂಪರ್ಕವೆನ್ನುವುದು ಹೇಗೆ ಸೋಲುತ್ತದೆ ಎನ್ನುವುದನ್ನೂ ಈ ಕವನ ತೋರಿಸಿಕೊಡುತ್ತದೆ. ಕವನದ ಕೊನೆಯಲ್ಲಿ ನಿಸಾರ್ ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುತ್ತಾರೆ. ತಾವು ಗಗನದಲ್ಲೇ ಉಳಿಯದೆ ನೆಲಕ್ಕೆ ಇಳಿದು ನಿರ್ಲಿಪ್ತ ಭಾವನೆಯಿಂದ ವೇದಾಂತಿಯಂತೆ ಬದುಕು ಒಡ್ಡುವಂಥ ಸತ್ಯವನ್ನು ಪ್ರಕಟಿಸುತ್ತಾರೆ:

'ಇಲ್ಲಿಂದ ನನಗೆ ವರ್ಗವಾಗುತ್ತೆ
ಒಂದು ದಿನ ಹನುಮ ಸಾಯುತ್ತಾನೆ

ತಿಳಿಯುವುದಿಲ್ಲ.
ಇಲ್ಲಿನ ಹಳಬ ಅಲ್ಲಿ ಹೊಸಬನಾಗುತ್ತೇನೆ,
ಎಲ್ಲೋ ಹೇಗೋ ಸಾಯುತ್ತೇನೆ,
ತಿಳಿಯುವುದಿಲ್ಲ. ನನ್ನ ಹೆಸರು, ಹುದ್ದೆ, ತಳಮಳ, ಬದುಕು
ತಿಳಿಯುವುದಿಲ್ಲ. ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು
ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವ ಸಂಚಾರ
ತಿಳಿಯುವುದಿಲ್ಲ'.

(ಅದೇ)

ಹೀಗೆಂದುಕೊಂಡಾಗ ಕವಿಗೆ 'ರಾಮನ್ ಸತ್ತ ತೀವ್ರತೆ, ಕಳವಳ' ತಣ್ಣಗಾಗುತ್ತದೆ. ಒಂದಾದ ಮೇಲೊಂದರಂತೆ ಬರುವ ಹೇಳಿಕೆಗಳು, ಮೂರ್ತಚಿತ್ರಗಳು ಹಾಗೂ ಸಾವು-ಬದುಕಿನ ನಡುವಣ ಅಸಾಂಗತ್ಯದ ಸೂಚನೆಯಿಂದ, ನಾಟಕೀಯ ಮಾತುಗಾರಿಕೆಯಿಂದ ಈ ಕವಿತೆಯ ತಾತ್ತ್ವಿಕ ಗಹನತೆ ನಮ್ಮನ್ನು 'ಹಾಂಟ್' ಮಾಡುತ್ತದೆ.

ನಿಸಾರ್ ಜನರಲ್ಲಿನ ಮೇಧಾವಿತನವನ್ನು ಗುರುತಿಸುವಂತೆಯೇ ವ್ಯಕ್ತಿಗಳ ಸರಳತೆಗೂ ಮಾರು ಹೋಗುತ್ತಾರೆ ಎನ್ನುವುದು ಇವರನ್ನು ಕಂಡವರೆಲ್ಲರಿಗೂ ಗೊತ್ತಿರುವಂಥದ್ದೇ. ಅದಕ್ಕೆಂದೇ ಇವರು ತಮ್ಮ ಕವನಗಳಿಗಾಗಿ ಆರಿಸಿಕೊಂಡಿರುವ ವ್ಯಕ್ತಿಗಳೂ ಒಂದು ಹಂತದಲ್ಲಿ ಜನ ಸಮುದಾಯಕ್ಕೇ ಮಾದರಿಯಾಗಬಲ್ಲವರು. ಸ್ವಭಾವದ ಹಿರಿಮೆಯಿಂದಾಗಿ ಸಮಾಜದ ಗೌರವಕ್ಕೆ ಪಾತ್ರರಾಗಿರುವವರು. ಇದಕ್ಕೆ ಉದಾಹರಣೆಯಾಗಿ ಇವರ ಕವನ, 'ಕೆಂಪು ತೋಟ ಮತ್ತು ಡಾ|| ಎಚ್ಚೆನ್.' ನಿಸಾರ್ ಇದರಲ್ಲಿ ತಾವೇ ಹೇಳಿಕೊಂಡಿರುವ ಹಾಗೆ ಸಾವಿರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿರುವ ಎಚ್ಚೆನ್ ಇವರಿಗೆ ಪಾಠ ಹೇಳದಿದ್ದರೂ ಇವರ ಪಾಲಿಗೂ ಒಂದು ರೀತಿಯಲ್ಲಿ ಮೇಷ್ಟ್ರೇ! ಇವರನ್ನು ನಿಸಾರ್ ಭೇಟಿಯಾಗುವುದು ಹಿಂದೊಮ್ಮೆ ತಮ್ಮ ಜೀವನಕ್ಕೂ ಅವಿಭಾಜ್ಯ ತಾಣವೆನ್ನಿಸಿದ್ದ ಬೆಂಗಳೂರಿನ ಕೆಂಪು ತೋಟ ಅಥವಾ ಲಾಲ್‌ಬಾಗ್‌ನಲ್ಲಿ. ಇವರ ಬಗ್ಗೆ 'ಲಾಗಾಯ್ತಿನಿಂದಲೂ ಅಮಿತ ಕಕ್ಕುಲತೆ' ಯನ್ನಿಟ್ಟುಕೊಂಡು 'ಬೆಳಗ್ಗೆಯಷ್ಟೇ ಭಾಷಣದಲ್ಲಿ ಉದ್ಧರಿಸಿದೆ ನಿಮ್ಮ ಕವಿತೆ' ಎಂದು ಇವರನ್ನು ಕುರಿತ ತಮ್ಮ ಅಭಿಮಾನವನ್ನು ತೋಡಿಕೊಳ್ಳುವ ಎಚ್ಚೆನ್, ವಾಯು ವಿಹಾರಿ ಎಚ್ಚೆನ್ ಅವರ ಶಿಸ್ತು, ಸಮಯ ಪರಿಪಾಲನೆ ಇವುಗಳೊಂದಿಗೇ ಇವರ ಹಾಸ್ಯ ಪ್ರವೃತ್ತಿ ಯನ್ನೂ ಕವನದ ಮೂಲಕ ತೋರಿಸುವುದು ಇಲ್ಲಿ ನಿಸಾರ್ ಅವರ ಉದ್ದೇಶ.

'ಇಲ್ಲಿನೊಂದೊಂದು ಮರ ಗಿಡ ಬಳ್ಳಿ ನನಗೆ ಪರಿಚಯವುಂಟು.
ಇವಕು ನನಗು ಮೂವತ್ತೆಂಟು ವರ್ಷಗಳ ದೀರ್ಘ ನಂಟು.
ಮುಂಜಾನೆ ಪ್ರತಿನಿತ್ಯ ಇಲ್ಲಿ ವಾಕಿಂಗ್ ಬರುತ್ತಿದ್ದ ರೂಢಿ,
ಅಸ್ವಸ್ಥತೆಯ ನಿಮಿತ್ತ ಕೆಲ ಸಮಯದಿಂದ ತಪ್ಪಿತ್ತು ನೋಡಿ,
ಆದರಿಂದ: 'ಈಚೆಗೇಕೋ ಮುದುಕ ಪಾದ ಬೆಳೆಸಿಲ್ಲವೀ ಎಡೆಗೆ,
ಗೊಟಕ್ಕೆಂದು ಪಯಣಿಸಿದನೋ ಹೇಗೆ ಮೇಲುಗಡೆಗೆ?'
ಎನುವ ಈ ತರುಲತೆಗಳನುಮಾನ ನೀಗಲಿಕೆಂದೇ,

ಮಳೆಯಿದ್ದರೂ ಈ ಸಂಜೆ ಇಲ್ಲಿಗೆ ಬಂದೆ'
(ಕೆಂಪು ತೋಟ ಮತ್ತು ಡಾ. ಎಚ್ಚೆನ್)

ಎನ್ನುವ ಎಚ್ಚೆನ್. ನಿಸಾರ್‌ರಿಗೆ ಡಾ. ಎಚ್ಚೆನ್ ವನ ಸಿರಿಯ ಪ್ರೇಮಿಯಂತೆ ಮಾತ್ರ ಕಾಣಿಸುವುದಿಲ್ಲ. ಅವರ ದೃಷ್ಟಿ ಇದಕ್ಕಿಂತಲೂ ಮುಂದೆ ಸಾಗಿ 'ನಿರೀಶ್ವರವಾದಿಯಾದ', `ಷಾದಿಯಾಗದ' ಈ 'ವಿಚಾರಪೂಜಕ' `ಗಾಂಧಿಯನುಮೋದಿ'ಯನ್ನು ಸರಳತೆಯ ವೇದಿಕೆಯ ಮೇಲೆ ನಿಲ್ಲಿಸುತ್ತದೆ. ಅಂತಸ್ತು, ಕುಲ ಆಚಾರವನ್ನು ಕಿಂಚಿತ್ತೂ ಗಣಿಸದೆ ಮಾನವತೆಯನ್ನು, ಸದ್ಗುಣಗಳನ್ನು ಪ್ರೀತಿಸುವ ಇವರನ್ನು ಅಪಾರವಾಗಿ ಮೆಚ್ಚಿಕೊಳ್ಳುತ್ತದೆ. 'ದೈವಸೃಷ್ಟಿಯ ವಿವಿಧ ತರು ಸಂತತಿಯ ಚೆಲ್ವಿಕೆಗೆ / ಮನಸೋತು ಮೋಹಗೊಂಡಿರು ವಮೋಘ ಪರಿ / ಬರಿಸುವುದು ಸಂಸಾರಿ ಆಸ್ತಿಕರಿಗೂ ಮಹದಚ್ಚರಿ' ಎಂಬ ಮಾತನ್ನು ಇವರಿಂದ ಹೊರಡಿಸುತ್ತದೆ.

ದುಬೈನ ಅಕ್ಷಯ ಹೋಟಲಿನ ದಿವಂಗತ ಪಾರ್ಥಸಾರಥಿಯವರ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲದಿರುವಂತೆಯೇ ಪ್ರಾಯಶಃ ಇನ್ನೂ ಅನೇಕರಿಗೆ ಇವರು ಅಪರಿಚಿತರು. ಇವರ ಬಗ್ಗೆ ನಮಗೆ ಗೊತ್ತಾಗುವುದು ನಿಸಾರ್ ಅವರ 'ಹಿಂದೂಡಿದ ಪಯಣ' ಕವನದ ಮೂಲಕ. ಪಾರ್ಥಸಾರಥಿ ದುಬೈನಲ್ಲಿ ನಿಸಾರ್ ಅವರನ್ನು ಸತ್ಕರಿಸಿದ್ದವರು. ಅಲ್ಪ ಪರಿಚಯವಿದ್ದರೂ ತಮ್ಮನ್ನು ಆದರದಿಂದ ಬರಮಾಡಿಕೊಂಡಿದ್ದ ಈ ಸಜ್ಜನನ ಬಗ್ಗೆ ನಿಸಾರ್‌ರಿಗೆ ಕೃತಜ್ಞತೆ. ಇಂಥ ಒಂದು ಭಾವನೆಯೇ ನಿಸಾರ್ ಅವರನ್ನು ಈ ಕವನ ಬರೆಯುವಂತೆ ಪ್ರೇರೇಪಿಸಿದ್ದು.

'ಷವರ್‌ಮಾ, ಖಬೂಸ್, ಜೈತುನ್, ಪಿಸ್ತಗಳ
ಮೊದ್ದು ಅರಬ್ಬೀ ಶೈಲಿಯ ಒಗ್ಗದನೇಕ ಉಣಿಸುಗಳ
ಮೆದ್ದು ಮರಗಟ್ಟು ಹೋಗಿದ್ದ ನಾಲಗೆಗೆ,
ಗೆಳೆಯರೊಡಗೂಡಿ ಬಡಿಸಿದ್ದ
ಅಚ್ಚಕನ್ನಡ ಬಗೆಯ ಬಾಳೆಯೆಲೆ ಸವಿ ಭುಕ್ತಿ'
(ಹಿಂದೂಡಿದ ಪಯಣ)

ಅದನ್ನು ನಿಸಾರ್‌ರಿಗೆ ಒದಗಿಸಿದ್ದ ಪಾರ್ಥಸಾರಥಿಯವರ ಉದಾರ ಗುಣ ನಮಗೂ ಕವನದ ಓದಿನಿಂದ ಪ್ರಿಯವಾಗುತ್ತದೆ. ಪಾರ್ಥಸಾರಥಿಯವರ ಆತಿಥೇಯ ಧಾರಾಳತನವನ್ನು ಪುನರ್‌ಸ್ಮರಿಸಿಕೊಂಡು ಅವರನ್ನು ಕುರಿತು ಕವನದ ಮೂಲಕ ಒಳ್ಳೆಯ ಮಾತುಗಳನ್ನು ಅಭಿವ್ಯಕ್ತಿಸಲು ನಿಸಾರ್ ಅವರಿಗೆ ಇರುವ ಕಾರಣ, ತನ್ನ ಬಗ್ಗೆ ಇಂಥ ಔದಾರ್ಯವನ್ನು ತೋರಿಸಿದ್ದ ಪಾರ್ಥಸಾರಥಿ ದಿಢೀರನೇ ಅಚಾನಕವಾಗಿ ಸಾವನ್ನಪ್ಪಿದಾಗ ಉಂಟಾದ ಶೋಕ. ಪಾರ್ಥಸಾರಥಿಯವರು ಕಾರು ಅಪಘಾತದಲ್ಲಿ ಮರಣ ಹೊಂದುವುದಕ್ಕೆ ಮುಂಚಿನ ಅವರ ಹಿನ್ನೆಲೆಯನ್ನು ನಿಸಾರ್ ಈ ಕವನದಲ್ಲಿ ನಮಗೆ ತಿಳಿಸಿಕೊಡುತ್ತಾರೆ:

'ಮೊದಲು ಅಂದುಕೊಂಡಂತೆ ಹೊರಡಬಹುದಿತ್ತವನು
ಮರು ದಿವಸ ಮುಂಜಾನೆ ತಿಂಡಿ ಕಾಫಿಯ ಮುಗಿಸಿ ನಿಶ್ಚಿಂತೆಯಿಂದ.
ಆದರೇಕೋ ಸಂಜೆ ಹೊತ್ತಿಗೆ ತಾನೇ ಹಠಾತ್ತನೆ ನಿರ್ಧಾರ ಬದಲಿ,

ನಡುರಾತ್ರಿ ಪಯಣಿಸಿದ ಒಯ್ಯದಾರನೂ ಜೊತೆಗೆ—
ಅರೆಹೊಟ್ಟೆಯುಂಡು, ಹೋಟೆಲಿನ ಚಾವಿ
ಗೊಂಚಲಿತ್ತು ಕೈ ಕೆಳಗಿನುದ್ಯೋಗಿ ಕೈಗೆ'
(ಅದೇ)

ಹೊಸದಾಗಿ ಕೊಂಡಿದ್ದ ಟೊಯೊಟಾದಲ್ಲಿ ದುಬೈನಿಂದ ನೂರಾರು ಮೈಲಿ ದೂರವಿದ್ದ ಮಸ್ಕತಿಗೆ, ವಿಮಾನದ ಮೂಲಕ ಬೆಂಗಳೂರಿನಿಂದ ಆಗಮಿಸಲಿದ್ದ ಮೆಚ್ಚಿನ ಮಡದಿಯನ್ನು ಭೇಟಿಯಾಗುವ ಆತುರದಲ್ಲಿದ್ದ ಪಾರ್ಥಸಾರಥಿಯವರ ವಾಹನಕ್ಕೆ ಅಡ್ಡಲಾಗಿ ಬಂದ ಒಂಟೆ ಇವರ ವಾಹನವನ್ನು ಉರುಳಿಸಿ, ಇವರು ಸತ್ತ ಸುದ್ದಿ ಕೇಳಿದಾಗ ನಿಸಾರ್ ಅವರ ಅಂತರಂಗ ಮರುಗುತ್ತದೆ. ಕೇವಲ ಕೆಲವೇ ಗಂಟೆಗಳ ಕಾಲದಲ್ಲೇ ತಮಗೆ ಎಷ್ಟೋ ವರ್ಷಗಳ ಗೆಳೆಯನಷ್ಟೇ ನಿಕಟರಾದ ಪಾರ್ಥಸಾರಥಿಯವರನ್ನು ಕುರಿತು ಕವನವೊಂದನ್ನು ರಚಿಸುವಂತೆ ಮನಸ್ಸನ್ನು ಮೀಟುತ್ತದೆ.

ಇಲ್ಲೂ ನಿಸಾರ್ 'ರಾಮನ್ ಸತ್ತ ಸುದ್ದಿ'ಯಲ್ಲಿ ಒಂದು ಬಗೆಯ ನಿರ್ಲಿಪ್ತತೆಗೆ, ವಸ್ತುನಿಷ್ಠತೆಗೆ, ವೇದಾಂತಕ್ಕೆ ಮೊರೆ ಹೋಗುವಂತೆಯೇ ದೈವದ ನಿಯಮಕ್ಕೆ ತಲೆ ಬಾಗುವಂತೆ ತೋರುತ್ತಾರೆ:

'ಪಯಣವನ್ನರ್ಧ ದಿನ ಹಿಂದೂಡುವೇಕಾಏಕಿ ಸಂಕಲ್ಪ ತಳೆದದ್ದು ಅವನೊ?
ಸರ್ವತ್ರ ಸೂತ್ರಧಾರ ಗೂಢ ವಿಧಿಯ ಅನೂಹ್ಯ ಹವಣೊ?
ಅಂತೂ ಮಾನವನ ಜನಜನಿತ ಪರಾಧೀನತೆಗೆ
ನಿಚ್ಚಳ ಪುರಾವೆಯನ್ನೊಡ್ಡಿತ್ತು ವಿಧಿ,
ಅಂತೆಯೇ ಅಸಹಾಯ ದೀನತೆಗೆ...' (ಅದೇ)

ದುಬೈನಿಂದ ಮುಂದೊಮ್ಮೆ ಭಾರತಕ್ಕೆ ಹಿಂತಿರುಗಿ ಸಂಸಾರ ಸುಖವನ್ನು ಅನುಭವಿಸ ಬೇಕೆಂಬ ಇಚ್ಛೆಯಿದ್ದ ಪಾರ್ಥಸಾರಥಿಯವರ ಈ ಅಕಾಲಿಕ ಸಾವು ನಿಸಾರ್ ಅವರನ್ನು ದಿಗ್ಭ್ರಮೆಗೊಳಿಸುತ್ತದೆ, ವಿಹ್ವಲಗೊಳಿಸುತ್ತದೆ.

ಒಟ್ಟಿನಲ್ಲಿ ನಾನು ಓದಿಕೊಂಡಿರುವ ಈ ನಾಲ್ಕು ಕವನಗಳಲ್ಲಿ ನನಗೆ ಕಂಡು ಬಂದಿರುವುದು, ತಾವೆಷ್ಟೇ ಅಪ್ರತಿಮ ಕವಿಯಾಗಿದ್ದರೂ ತಮ್ಮ ಸರಳ ಸ್ವಭಾವದ ಮೂಲಕ ಸಾಮಾನ್ಯರಿಗೂ ಹತ್ತಿರವಾಗಿರುವ ನಿಸಾರ್ ಅಹಮದ್‌ರಂತೆಯೇ, ಇವರು ಕವನಗಳಿಗಾಗಿ ಆಯ್ದುಕೊಂಡಿರುವ ವ್ಯಕ್ತಿಗಳೂ ಸಹ ತಮ್ಮ ಪಾಂಡಿತ್ಯ, ಸ್ನೇಹಪರತೆ, ಧಾರಾಳತನಗಳ ಮೂಲಕ ನಮಗೆ ಹತ್ತಿರವೆನ್ನಿಸಬಲ್ಲವರು. ವ್ಯಕ್ತಿಗಳಲ್ಲಿ ಒಳಿತನ್ನೇ ಕಾಣುವ ನಿಸಾರ್‌ರ ಹೃದಯ ವೈಶಾಲ್ಯಕ್ಕೆ ಇವು ಅತ್ಯುತ್ತಮ ಉದಾಹರಣೆಗಳು. ಇಂತಹವೇ ಅನೇಕ ವ್ಯಕ್ತಿಯಾಧಾರಿತ ಕವಿತೆಗಳನ್ನು ನಿಸಾರರು ಕಾಲ ಕಾಲಕ್ಕೆ ರಚಿಸಿರುವುದನ್ನು ಅವರ ಕವನ ಸಂಗ್ರಹಗಳ ಪರಿವಿಡಿಯನ್ನು ನೋಡಿದರೆ ತಿಳಿಯುತ್ತದೆ. ಕನ್ನಡದಲ್ಲಿ ಇಷ್ಟು ಹೇರಳ ಸಂಖ್ಯೆಯ ವೈವಿಧ್ಯಪೂರ್ಣ ಮತ್ತು ಧ್ವನ್ಯರ್ಥನಿಬಿಡ ಉತ್ತಮ ವ್ಯಕ್ತಿಕಾವ್ಯವನ್ನು ರಚಿಸಿದವರು ಮತ್ತೊಬ್ಬರಿಲ್ಲ.



ಕನ್ನಡದ ಆಯಾಮಗಳನ್ನು ಹಿಗ್ಗಿಸಿದ ಸ್ವೋಪಜ್ಞ ಕವಿ ನಿಸಾರ್

♦ ಡಾ. ದೊಡ್ಡರಂಗೇಗೌಡ

೧೯೨೦ರ ಕಾಲಕ್ಕೆ ಕನ್ನಡ ನಾಡಿನಲ್ಲಿ ಚಿಲುಮೆಯಂತೆ ಉಕ್ಕಿದ ಕಾವ್ಯಗಂಗೆ ಒಂದು ಮಹಾ ಪ್ರವಾಹವಾಗಿ ಹರಿದು ಬಗೆ ಬಗೆಯ ವಿನ್ಯಾಸಗಳಲ್ಲಿ ಸಹೃದಯರ ಮನವನ್ನು ತಣಿಸಿ ತನ್ನೆಲ್ಲಾ ಅಬ್ಬರವನ್ನು ಕಳೆದುಕೊಂಡ ಮೇಲೆ, ೫೦ರ ದಶಕದಲ್ಲಿ ನವ್ಯ ಕಾವ್ಯ ಮಾರ್ಗ ಅಂಕುರಿಸಲು ಮೊದಲಾಯಿತು. ಆದರೂ ಕೆಲವು ಕನ್ನಡ ಕವಿಗಳು ನವ್ಯ ಮಾರ್ಗದಲ್ಲಿ ಬರೆಯುತ್ತಲೂ ಸಮಾನಾಂತರವಾಗಿ ನವೋದಯದಲ್ಲೂ ಸಹ ಕಾಣಿಕೆಗಳನ್ನು ನೀಡುತ್ತಲೂ ಮುನ್ನಡೆದರು. ಅಂತಹವರಲ್ಲಿ ಮುಖ್ಯರಾದವರು ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು. ಅವರ ಕೆಲವು ಕಾವ್ಯ ರಚನೆಗಳನ್ನು ಇಲ್ಲಿ ಪರಿಶೀಲಿಸುವ, ತನ್ಮೂಲಕ ಸಂಪೂರ್ಣವಾಗಿ ಬತ್ತಿಹೋಗದ ನವೋದಯದ ಸೆಲೆಯನ್ನು ಗುರುತಿಸುವ ಪ್ರಯತ್ನ ಇಲ್ಲಿದೆ. 'ನವ್ಯ ಕಾವ್ಯ' ಕನ್ನಡ ನಾಡಿನಲ್ಲಿ ಒಂದು ಹೊಸ ಕಾವ್ಯ ಪಂಥವಾಗಿ ವಿಜೃಂಭಿಸುವಾಗಲೂ ಸಹ, 'ರಮ್ಯ ಕಾವ್ಯ' ಅಳಿಯದೆ ಉಳಿದ ಆಹ್ಲಾದಕರವಾದ ಗೀತ ಗಾಥೆ ಇದಾಗಿದೆ.

ಸಾಂಪ್ರದಾಯಿಕ ಕನ್ನಡ ಭಾಷಾ ಶೈಲಿಗೆ ಹೊಸ ಹೊಸ ಅಂಶಗಳನ್ನು ಸೇರಿಸಿ ಕಸಿ ಮಾಡಿ ಖುಷಿಯ ಹಾಗೂ ಅರ್ಥವಂತಿಕೆಯ ಗೀತೆಗಳನ್ನು ಕನ್ನಡಕ್ಕೆ ನೀಡಿದವರು ಪ್ರೊ. ಕೆ. ಎಸ್. ನಿಸಾರ್ ಅಹಮದ್. ದೀಪ್ತವಾದ ಭಾವದ ಔನ್ನತ್ಯಗಳ ಜೊತೆಗೆ, ಅಭಿಜಾತ ಕಾವ್ಯ ಶೈಲಿಯಿಂದ ಹೆಕ್ಕಿಕೊಂಡ

ಇತ್ಯಾತ್ಮಕ ಕಾವ್ಯದ ಕೋಲ್ಮಿಂಚುಗಳನ್ನೂ ನುಡಿಗಟ್ಟುಗಳನ್ನೂ ಸಮೃದ್ಧವಾಗಿ ಉರ್ದು ಪದಗಳ ಜೊತೆಗೆ ಸಮ್ಮಿಶ್ರ ಮಾಡಿ ಹೊಸ ಕನ್ನಡದ ಎರಕವನ್ನು ತಯಾರು ಮಾಡಿ ಭಾವಗೀತೆಗಳ ಅಭಿವ್ಯಕ್ತಿಗೆ ಹೊಳಪು ನೀಡಿದ, ವಾಗರ್ಥಗಳ ಆಚೆಯ ಧ್ವನಿ ತರಂಗಗಳನ್ನು ಮೀಟಿದ ನವ್ಯ ಕವಿ ನಿಸಾರರ ಕೆಲವು ಪ್ರಾತಿನಿಧಿಕ ಭಾವಗೀತೆಗಳ ಆಂತರ್ಯವನ್ನು ಅರಿಯುವ ನಿಷ್ಠೆಯನ್ನು ಇಲ್ಲಿ ತೋರಿದೆ.

ಆಡುವ ಮಾತಿನಲ್ಲಿ ಮೋಡಿ ಮಾಡುವ, ವಾಗರ್ಥ ವೈಭವವನ್ನು ದೀಪ್ತಗೊಳಿಸುವ, ನವ್ಯ ಕವಿಯಾಗಿಯೂ ರಮ್ಯವಾದ ರಚನೆಗಳನ್ನು ಮತ್ತೆ ಮತ್ತೆ ಪಲ್ಲವಿಸುವ, ಬೆಡಗಿನ ಪ್ರತಿಮೆ ರೂಪಕಗಳನ್ನು ಅನಾಯಾಸವಾಗಿ ಸೃಜಿಸುವ 'ನಿತ್ಯೋತ್ಸವ'ದ ನಲ್ಮೆಯ ಕವಿ, ನಮ್ಮ ನಿಮ್ಮ ನಡುವೆ ವಿನಯವಂತಿಕೆಯ, ಸಜ್ಜನಿಕೆಯ ಬದುಕಿಗೆ ಅಳವಡಿಸಿಕೊಂಡ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು. ಅವರ ಸೌಂದರ್ಯಾಭಿರುಚಿ ಸುಂದರ; ಮಾತು ಭಾವ ಬಂಧುರ; ಕುಂದಣದ ಕುಸುರಿ ಕಾರ್ಯವನ್ನು ನಿರ್ವಹಿಸುವ ಕಲೆಗಾರರಂತೆ ಅವರ ನವಿರಾದ ಭಾವಗೀತೆಗಳು ಕಾವ್ಯದ ಮನೋಹರ ಕಾಸಾರ!

ಸಹೃದಯರ ಮನಸ್ಸಿಗೆ ಮುದ ಕೊಡುವ ಬರವಣಿಗೆ ಅವರ ಅಯಾಚಿತ ಕಾವ್ಯದ ಅನುಪಮ ಹೆಣಿಗೆ. 'ನಮ್ಮ ಹೃನ್ಮನಗಳನ್ನು ಮುಟ್ಟುವ, ಪ್ರಜ್ಞಾವಂತ ಪರಿಧಿಯನ್ನು ಆರ್ದ್ರವಾಗಿ ತಟ್ಟುವ ಅವರ ಭಾವಗೀತೆಗಳು ಕಾನನದ ಚೆಲುವಾದ ಚಿಗರೆಗಳ ಹಾಗೆ ಅತ್ಯಂತ ಸುಂದರ, ಭಾವುಕ, ದೀಪಕ, ರಮ್ಯ ರಾಗಾಭಿಮುಖ.' ಅವರ ಭಾವಗೀತೆಗಳಿಗೆ ರಸಿಕ ಹೃದಯವನ್ನು ಮಿಡಿಯುವ ಮೃದುತ್ವವಿದೆ; ವಿಚಾರಗಳನ್ನು ಪ್ರಚೋದಿಸುವ ಧೀಮಂತಿಕೆ ಇದೆ.

ಕವಿ ಕೊಡುವ ಶಬ್ದ ಚಿತ್ರಗಳಿಗಂತೂ ಶಕ್ತಿ ಶಾರದೆಯ ಮೋಹಕ ವಾಗರ್ಥಗಳ ಸಂಪದವಿದೆ; ಪದ ಪದಗಳ ಸಾಮರಸ್ಯದ ಹೊಂದಾಣಿಕೆಯಲ್ಲಿ ಮುತ್ತು ಹವಳವನ್ನು ಕೋದಂತೆ ಕಲಾತ್ಮಕತೆಯೂ ತಾನಾಗಿ ತಾನು ಮೂಡಿರುತ್ತದೆ. ಉದಾಹರಣೆಗೆ:

'ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,
ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ'

(ನಿತ್ಯೋತ್ಸವ)

ಐದು ಕೋಟಿ ಕನ್ನಡಿಗರ ಕಿವಿಯಲ್ಲಿ ನಿತ್ಯ ನಿತ್ಯ ನಿನದಿಸಿರುತ್ತಿರುವ ಮಹತ್ವದ ಭಾವಗೀತೆ ಇದು.

ಈ ಕವಿ ತಮ್ಮ ನವ್ಯ ಕವಿತೆಗಳಲ್ಲಿ ಗೋಸುಂಬೆ ವ್ಯಕ್ತಿತ್ವಗಳನ್ನು ಹೊಂದಿದ ಗೋಮುಖ ವ್ಯಾಘ್ರರ ವಿಡಂಬನೆಯನ್ನು ತೀವ್ರವಾಗಿ ಮಾಡುತ್ತಲೇ, ಅವರ ಮೂಲ ಬಣ್ಣಗಳನ್ನು ಚೆನ್ನಾಗಿ ಬಯಲಿಗೆಳೆದಿದ್ದಾರೆ. ತಮ್ಮ ಅರ್ಥಗರ್ಭಿತ ಭಾವಗೀತೆಗಳಲ್ಲಿ ಕವಿ ವಿಷಾದನೀಯ ಸಂಗತಿಗಳನ್ನೂ ಸಹ ಕಣ್ಣಿಗೆ ಕಟ್ಟುವ ಹಾಗೆ ಚೆನ್ನಾಗಿಯೇ ಅನಾವರಣ ಮಾಡುತ್ತಾರೆ. ನಿದರ್ಶನಕ್ಕೆ ಈ ಪಂಕ್ತಿಗಳನ್ನು ಅವಲೋಕಿಸಬಹುದು:

‘ಹಾಡು ಕವಿಯೆ ಹಾಡು
ನಾಡ ಜನರ ಪಾಡು;
ಹಣದ ಕಣಜ ತುಂಬಲೆಳಸಿ
ಮನುಜ ಮನುಜನನ್ನೆ ಮುಗಿಸಿ
ಮರೆಯುತಿರುವ ಪರಿಯ ಹಾಡು;
ನಾಡಾಗಿರುವುದೆಂಥ ಕಾಡು!’

(ನವೋಲ್ಲಾಸ)

ಕವಿ ಇಲ್ಲಿ ವಾಸ್ತವ ಸ್ಥಿತಿಯ ನುಡಿ ಚಿತ್ರವನ್ನು ನೀಡುತ್ತಾರೆ. ಲಯಬದ್ಧವಾಗಿ ಬರೆಯುವುದು ನಿಸಾರ್ ಅವರ ಜಾಯಮಾನ. ತೆರೆಮರೆಯನ್ನು ಸರಿಸಿ ಬರೆವುದು ಕೂಡ ಅವರ ಗುಣ! ಡಾ. ದೇಜಗೌ ಅವರು ಅಭಿಪ್ರಾಯ ಪಟ್ಟಿರುವ ಹಾಗೆ (ಕೆ.ಎಸ್.ನಿ. ಪ್ರಾತಿನಿಧಿಕ ಕವನಗಳು: ಪುಸ್ತಕ ಪ್ರಾಧಿಕಾರ: ೨೦೦೧, ಪು. ೩೪೩). ‘ಕವಿ ನಿಸಾರ್ ಅವರ ಭಾಷಾ ಶೈಲಿಯಲ್ಲಿ ವೈಶಿಷ್ಟ್ಯವಿದೆ; ವಿನೂತನತೆಯಿದೆ; ವೈಚಿತ್ರ್ಯವೂ ಇದೆ; ಅವರು ಕನ್ನಡ ಪದಗಳಿಗೆ ಹೊಸ ಭಾವಾರ್ಥವನ್ನು ತುಂಬುತ್ತಾರೆ; ಕನ್ನಡ ಮಾತುಗಳನ್ನು ಬಿಲ್ಲಿನಂತೆ ಬಗ್ಗಿಸುವ, ಮೇಣದಂತೆ ರೂಪಿಸುವ, ಅಂಬಿನಂತೆ ನಾಟಿಸುವ, ಮೊಗ್ಗಿನಂತೆ ಅರಳಿಸುವ, ಮದ್ದಿನಂತೆ ಸ್ಫೋಟಿಸುವ ಸಾಮರ್ಥ್ಯ ಅವರಿಗಿದೆ.’

ಉದಾಹರಣೆಗೆ:

‘ಎಂಥೆಂಥ ಜೀವಗಳು ಬಾಳಿ ಬೆಳಗಿದವಿಲ್ಲಿ
ಶ್ರೀಗಂಧ ಬೆಳೆವಂಥ ನಾಡಿನಲ್ಲಿ;
ಹೊನ್ನಂಥ ಭಾವಗಳು ಅರಳಿ ಮೊಳಗಿದವಿಲ್ಲಿ
ಸಿರಿವಂತ ನೆಲದೊಡಲ ಹಾಡಿನಲ್ಲಿ!’

(ಎಂಥೆಂಥ ಜೀವಗಳು)

‘ಮಣ್ಣಿನ ಹುಡಿಯಲ್ಲಿ, ಹಣ್ಣಿನ ಮಿಡಿಯಲ್ಲಿ, ಹುಲ್ಲೆಸಳಲ್ಲಿ, ಮಳೆ ಬಿಸಿಲಲ್ಲಿ’ ನಲ್ಮೆ ಬುಗ್ಗೆ ಚಿಮ್ಮುವ ಪರಿಯನ್ನು ಕವಿ ವೈಭವೀಕರಿಸುತ್ತಾರೆ. ಎಲ್ಲಿ ಗುಣದ ಗಣೆಯಿದೆ, ಅಲ್ಲಿ ಕವಿಯ ಮೆಚ್ಚುಗೆಯ ತನಿ ಭಾವದ ಹನಿ ಹನಿಯೂ ಇದೆ.

ಈ ಕವಿಯ ಕವಿತೆಗಳು ಹುಸಿಯೇ ಆಗುವುದಿಲ್ಲವೇನೋ ಎಂಬಂತೆ ಖುಷಿ ಕೊಡುವಂಥ ಬರಹವೇ ಇವರಲ್ಲಿ ಹೆಚ್ಚು. ಇದು ಇವರ ಸಮೃದ್ಧ ಹಾಗೂ ಸತ್ವಪೂರ್ಣ ಸೃಜನಶೀಲತೆಯನ್ನು ಸೂಚಿಸುತ್ತದೆ. ಇವರು ವಿಡಂಬನಾತ್ಮಕ ನವ್ಯ ಕವನವನ್ನೇ ಬರೆಯಲಿ, ಗೀತಾತ್ಮಕ ಭಾವಗೀತೆಯನ್ನೇ ಬರೆಯಲಿ ಅಲ್ಲಿ ಕಾಣುವ ಕವಿ ಕೌಶಲ ಕಿರಿಯ ಲೇಖಕರಿಗೆ ಮಾರ್ಗದರ್ಶಿಯಾಗಿದೆ; ಪರಿಪಾಲನಾರ್ಹವಾಗಿದೆ.

ಅವರ ಕಾವ್ಯವನ್ನು ಬಹುವಾಗಿ ಮೆಚ್ಚಿಕೊಂಡ ಚಿಂತನಶೀಲ ಕವಿ ಪು.ತಿ.ನ. ಆ ಬಗ್ಗೆ ಹೀಗೆ ಬರೆದಿದ್ದಾರೆ: ‘ಹೃದಯ ರಸದಲ್ಲಿ ಬುದ್ಧಿ ಪಲ್ಲವಿಸುವ ಒಂದು ಬಗೆಯ ಸಿದ್ಧಿಯನ್ನು ಕವಿ ನಿಸಾರ್ ಅಹಮದ್ ಅವರ ಕವಿತೆಗಳಲ್ಲಿ ಕಂಡು ಹರ್ಷಿಸಿದ್ದೇನೆ. ಅವರದು ಕನ್ನಡ ಕಾವ್ಯದಲ್ಲಿ ಅಸಾಧಾರಣವಾದ ಸ್ವೋಪಜ್ಞ ವಾಣಿ.’ ಹೀಗೆ ಹಿರಿಯ ಕವಿ ಮನದುಂಬಿ ತಮ್ಮ

ಅಭಿಪ್ರಾಯವನ್ನು ಮುಕ್ತವಾಗಿ ಬರೆದಿದ್ದಾರೆ.

ಇನ್ನು ಕವಿಯ ಭಾಷೆಯ ಬಳಕೆಯನ್ನು ಕುರಿತು ಹೇಳಿರುವ ಮಾತು ಮತ್ತೆ ಮತ್ತೆ ನಿಸಾರ್ ಅಭಿಮಾನಿಗಳು ಮೆಲುಕು ಹಾಕುವಂತಿದೆ. 'ಅವರ ಪದಗಳು ಜಾತ್ಯಶ್ವಗಳಂತೆ. ಅರ್ಥಕ್ಕೂ ಭಾವಕ್ಕೂ ನಮ್ಮ ಮನಸ್ಸನ್ನು ಸರಾಗವಾಗಿ ಹಾಯಿಸುವ ವಿನೀತ ಕಲೆಗಾರಿಕೆಯನ್ನು ತೋರುತ್ತವೆ.' ಮೇಲಿನ ಈ ಮಾತಿಗೆ ಉದಾಹರಣೆಯಾಗಿ 'ಹೊಮ್ಮಿತೇಕೆ ಕಂಬನಿ' ಎಂಬ 'ಮನಸು ಗಾಂಧಿ ಬಜಾರು' ಸಂಕಲನದ ಪದ್ಯವನ್ನು ನಾವು ಓದಿ ನೋಡಿ ಪರಿಶೀಲಿಸಬಹುದಾಗಿದೆ. ಅದರ ಕೆಲವು ಅವಿಸ್ಮರಣೀಯ ಪಂಕ್ತಿಗಳು ಕವಿಯ ಚಿತ್ರಕ ಸಾಮರ್ಥ್ಯವನ್ನು ಸೊಗಸಾಗಿ ಮನವರಿಕೆ ಮಾಡಿಸುತ್ತವೆ. ಪ್ರಾರಂಭದಿಂದಲೇ ನಿಸಾರರು ಸಾಂಕೇತಿಕತೆಗೆ, ಮಾರ್ಮಿಕತೆಗೆ ಮನವೊಲಿದರೆಂಬುದನ್ನು ರುಜುವಾತುಪಡಿಸುತ್ತವೆ.

ನಿದರ್ಶನಕ್ಕಾಗಿ ಈ ಪಂಕ್ತಿಗಳನ್ನು ನೋಡಿ:

'ಹೊಮ್ಮಿತೇಕೆ ಕಂಬನಿ?
ಹೇಳು, ಹೇಳೆ ಕಮಲಿನಿ?
ನಿಸ್ತರಂಗ ಕೊಳದೆದೆ; ಅಭಾವ ಹಾವಭಾವ!
ಬಣ್ಣ ಮಾಸಿ ಹೋಗಿದೆ; ಕದ್ದರಾರು ಹಾಸವ?
ಬೀಗರಿಲ್ಲ; ತೊರೆದೆಯೇನು ಎಲ್ಲ ಸಂಬಂಧವ?
ಹೇಳಿದೇಕೆ ಎಂದೂ ಇರದ ಇಂಥ ಬರಿಯ ನೀರವ!'

(ಮನಸು ಗಾಂಧಿ ಬಜಾರು)

ಪ್ರಕೃತಿ ಚಿತ್ರವೊಂದಕ್ಕೆ ಮಾನವಾರೋಪಣೆ ಮಾಡಿರುವ ಪರಿ ವಾಚಕರಿಗೆ ಮುದ ನೀಡುವುದರಲ್ಲಿ ಅಚ್ಚರಿಯಿಲ್ಲ.

—ಹೀಗೆ ತಮ್ಮ ಸಮರ್ಥ ಭಾವಾಭಿವ್ಯಕ್ತಿಗಾಗಿ ಭಾಷೆಯನ್ನು ಶೋಧಿಸಲು ಹೊಸ ಹೊಸದಾಗಿ ವಾಗರ್ಥಗಳನ್ನು ಚಿಮ್ಮಿಸುವ ರೀತಿಯಿಂದಲೇ ಅವರ ಕಾವ್ಯಕ್ಕೆ ಅತ್ಯಂತ ಸಹಜವಾಗಿ ಬಗೆ ಬಗೆಯ ಆಯಾಮಗಳು ಪ್ರಾಪ್ತವಾಗುತ್ತವೆ; ಅತಿಶಯಾರ್ಥದ ಹಿರಿಮೆ ಲಭಿಸುತ್ತದೆ.

ಕನ್ನಡದ ಹಿರಿಯ ಕವಿ ಪ್ರೊ. ಎಂ. ಗೋಪಾಲಕೃಷ್ಣ ಅಡಿಗ ಅವರು ೧೯೭೪ರಲ್ಲೇ ಕವಿ ನಿಸಾರ್ ಬಗ್ಗೆ ಆಪ್ಯಾಯಮಾನವಾಗಿ ಬರೆದಿದ್ದಾರೆ: 'ವಿಡಂಬನ ಚತುರೋಕ್ತಿಗಳಿಂದ ಭಾವ ವ್ಯಂಜನವನ್ನು ರುಚಿಕರಗೊಳಿಸುವ ಇವರ ಶೈಲಿ ಸಾಮಾನ್ಯ ವಾಚಕರ ಮನಸ್ಸನ್ನೂ ತಟ್ಟಿ ಎಬ್ಬಿಸಬಲ್ಲದು; ಈ ಮಟ್ಟದಲ್ಲಿ ಇವರಷ್ಟು ಕೃತಾರ್ಥರಾದ ಕವಿಗಳು ಬೇರೆ ಇಲ್ಲ' ಎಂದು ಸೂಕ್ತ ಹಾಗೂ ಸಮರ್ಥ ಅರ್ಹತಾ ಪತ್ರವನ್ನೇ ಇತ್ತಿದ್ದಾರೆ—ನಾಡಿನ ಎಲ್ಲ ಜನತೆಯ ಪರವಾಗಿ. ಎಲ್ಲ ನವ್ಯ ಕವಿಗಳೂ ತಮ್ಮ ಕಾವ್ಯವನ್ನು ಸಂಗೀತದ ಸಾಹಚರ್ಯದಿಂದ ದೂರ ಇರಿಸಲು ಬಲವಂತವಾಗಿ ಹೆಣಗುತ್ತಿದ್ದಾಗ, ಕವಿ ನಿಸಾರ್, ಸ್ವತಃ ತಾವೂ ಸಹ ಸಾರ್ಥಕವಾದ ನವ್ಯ ಕವಿತೆಗಳನ್ನು ಬರೆಯುತ್ತಿದ್ದರೂ ನವೋದಯ ಕಾವ್ಯದ ಅತ್ಯಂತ ಒಳ್ಳೆಯ ಇತ್ಯಾತ್ಮಕ ನಿಲವುಗಳಿಗೆ ಬೆನ್ನು ತಿರುಗಿಸದೆ ಭಾವನಾತ್ಮಕ ತಂತುಗಳನ್ನು ಮೀಟಿ

ಮೀಟಿ ಗೀತಾತ್ಮಕ ರಚನೆಗಳನ್ನು ಸಮೃದ್ಧವಾಗಿಯೇ ನೀಡಿದರು. ಅಂದಿನ ಸವಾಲನ್ನು ಎದುರಿಸಿ ಜಯಿಸಿದರು. ಕವಿ ನಿಸಾರ್ ಅಹಮದ್ ಅವರು ಈ ಬಗೆಯಲ್ಲಿ ಕನ್ನಡ ಕಾವ್ಯಕ್ಕೆ ಒಂದು ಹೊಸ ಸಂವೇದನಾತ್ಮಕ ಲವಲವಿಕೆ, ಲಗುಬಗೆಯನ್ನು ಮರುಕಳಿಸಿದರು. ವಾಸ್ತವವಾಗಿ ಅವರಿಂದ 'ನವೋದಯ ತನ್ನ ಪುನರುತ್ಥಾನವನ್ನು ಕಾಣುವಂತಾಯಿತು' ಎಂಬುದು ಐತಿಹಾಸಿಕ ಸಂಗತಿಯಾಗಿದೆ.

೧೯೬೦ರಲ್ಲಿ ಅವರು ಹೊರ ತಂದ 'ಬಹಿರಂತರ' ಸಂಗ್ರಹ ಸುಗಮ ಸಂಗೀತ ಪ್ರಪಂಚಕ್ಕೆ ಕಾಯಕಲ್ಪ ನೀಡುವಂಥ ಭಾವಗೀತೆಗಳ ಹಬ್ಬದೌತಣವನ್ನೇ ಬಡಿಸಿದೆ. ೧೯೬೮ರಲ್ಲಿ ಅವರು ಮತ್ತೊಮ್ಮೆ ಉತ್ಸಾಹದಿಂದ ರಮ್ಯ ಗೀತೆಗಳ 'ನವೋಲ್ಲಾಸ'ವನ್ನೇ ನಾಡಿಗೆ ನೀಡಿದ್ದಾರೆ. 'ನವೋಲ್ಲಾಸ' ಸಂಗ್ರಹದಲ್ಲಿ ಕಂಡುಬರುವ ಛಂದಸ್ಸಿನ ವೈವಿಧ್ಯದ ನಾಟ್ಯಶೀಲ ವಿಲಾಸ; ಹೋಲಿಕೆ, ಸಾಮತಿಗಳ ಸಮೃದ್ಧಿಯ ವೈಭವ; ಶಬ್ದಸಂಗೀತದ ತರಂಗ ಲೀಲೆ ಮತ್ತು ಕವನದ ಶಿಲ್ಪದಲ್ಲಿ ವ್ಯಕ್ತವಾಗುವ ಸಾವಯವ ಬಾಂಧವ್ಯ ನಿಜಕ್ಕೂ ನಿಸಾರರ ಕವನ ರಚನಾ ನೈಪುಣ್ಯಕ್ಕೆ ಉತ್ತಮ ಉದಾಹರಣೆ ಎನ್ನಿಸುತ್ತವೆ.

ಪ್ರೊ. ನಿಸಾರ್ ಅಹಮದ್ ಕನ್ನಡದ ವೈಶಿಷ್ಟ್ಯಪೂರ್ಣ ಕವಿ ಎಂದು ಎತ್ತಿ ತೋರಿಸಲು ಅವರ 'ಮುದುಕಿಯರು' (ಅನುವಾದ); 'ಜೀವೋನ್ನತಿ' ('ಅರವತ್ತೈದರ ಐಸಿರಿ'); 'ಎಲ್ಲಿದ್ದೀಯ ನನ್ನ ಕವಿತೆ?', 'ಒಂದು ಗುಲ್‌ಮೊಹರ್ ಗೀತ', 'ಅರಿವು', 'ಎಂಥೆಂಥ ಜೀವಿಗಳು' ('ಆಕಾಶಕ್ಕೆ ಸರಹದ್ದುಗಳಿಲ್ಲ'); 'ಕನ್ನಡವೆಂದರೆ' ('ನವೋಲ್ಲಾಸ'); 'ಜೀವನ ಜಿಜ್ಞಾಸೆ', 'ಮದರ್ ತೆರೆಸ' ('ಬಹಿರಂತರ'), ಹಾಗೂ 'ನಿತ್ಯೋತ್ಸವ' ಸಂಗ್ರಹದ ಸರಿ ಸುಮಾರು ಎಲ್ಲ ಗೀತೆಗಳು ಅತ್ಯಂತ ಶಕ್ತಿಯುತ, ಸೂಕ್ತ ಹಾಗೂ ಪ್ರಾತಿನಿಧಿಕ ನಿದರ್ಶನ ಗಳೆನ್ನಿಸುತ್ತವೆ. ಪ್ರೊ. ನಿಸಾರ್ ಅಹಮದ್ ಅವರು 'ಕನ್ನಡದ ಚಿರಂತನ ಕವಿ' ಎಂಬುದನ್ನು ರುಜುವಾತು ಪಡಿಸುತ್ತವೆ. ಈ ಹಿರಿಯ ಕವಿಗಳ ಕಾವ್ಯದ ಅಧ್ಯಯನದಿಂದ ಉದಯೋನ್ಮುಖ ಬರಹಗಾರರಿಗೆ ಆಗುವ ಲಾಭ, ಮನಸ್ಸಂತೋಷ ಅಷ್ಟಿಷ್ಟಲ್ಲ.

ಕೆದರಿದ ತಲೆಯಂತಿರುವ ಬಾಳುವೆಯಲ್ಲಿ ಕಲೆ ಎನ್ನುವುದು ನೀಟಾದ ಬೈತಲೆ. ಸಾಮಾನ್ಯ ಸಾಮಾಜಿಕರ ಬದುಕು ಪೇಟದಂತಿದ್ದರೆ, ಕಲಾಸಕ್ತರ ಜೀವಿತ ಕಿರೀಟದ ಹಾಗೆ. ಪೇಟಕ್ಕೂ ಒಂದು ಬೆಲೆ, ಕರ್ತವ್ಯ ನಿರ್ವಹಣೆಯ ಮಾನ್ಯತೆ ಇದೆ. ತಲೆಯನ್ನು ಬೆಚ್ಚಗಿಡುವುದಕ್ಕೂ, ಅದರ ಬೋಳುತನವನ್ನು ಮರೆ ಗೊಳಿಸುವುದಕ್ಕೂ ಪೇಟ ತುಂಬ ಸಹಕಾರಿ. ಕಿರೀಟಕ್ಕಾದರೋ ಬೆಲೆಯನ್ನು ಮೀರಿಸಿದ ಮೌಲ್ಯ, ಕರ್ತವ್ಯಕ್ಕೆ ಅತೀತವಾದ ಸರ್ವಮಾನ್ಯ ಸನ್ಮಾನ್ಯತೆ ಪ್ರಾಪ್ತವಾಗಿರುತ್ತದೆ.

(ಕಲಾಮೌಲ್ಯದ ಅತಿಶಯತೆ)



ನಿಸಾರರ ಅನುವಾದಿತ ಬಿಡಿಗವಿತೆಗಳ ಅನನ್ಯತೆ

♦ ಎಸ್. ದಿವಾಕರ್

ನಮ್ಮದಲ್ಲದ ಭಾಷೆಯಿಂದ ನಮ್ಮ ಭಾಷೆಗೆ ಬರುವ ಕವನ, ಮೂಲ ಕವನವನ್ನು ಬದಲಾಯಿಸುವುದಷ್ಟೇ ಅಲ್ಲ, ಬಹು ಮಟ್ಟಿಗೆ ಅದನ್ನು ಕೆಡಿಸಿಯೂ ಬಿಡುವ ಸಂಭವವುಂಟು. ಕೆಲವು ಸಂದರ್ಭಗಳನ್ನು ಹೊರತು ಪಡಿಸಿದರೆ, ಸುಂದರವಾದೊಂದು ಕವನ ಭಾಷಾಂತರದಲ್ಲಿ ಸ್ವತಃ ಸುಂದರವಾಗಿ ರೂಪುಗೊಂಡಿರ ಬಹುದು, ಇಲ್ಲವೇ ಅಕ್ಷರಶಃ ಮೂಲಕ್ಕೆ ವಿಧೇಯನಾಗಿರ ಬಹುದು. ಎರಡೂ ಆಗಿರಲಿಕ್ಕೆ ಸಾಧ್ಯವೇ ಇಲ್ಲ.

ಕಾವ್ಯವೆನ್ನುವುದು ಮುಖ್ಯವಾಗಿ ಅದರದೇ ಆದ ಭಾಷೆಗೆ ಅಂಟಿಕೊಂಡಿರುವಂಥದು. ಅಂದರೆ ಆ ಭಾಷೆಗೆ ಸಂಬಂಧಿಸಿದ ಅನನ್ಯ ಅರ್ಥ, ನುಡಿಗಟ್ಟು, ಸಂಸ್ಕೃತಿ, ಪ್ರಾಸ, ಧ್ವನಿ, ಲಯ, ಸಂವೇದನೆ, ಅಷ್ಟೇಕೆ ಅದರ ಹ್ರಸ್ವ, ದೀರ್ಘ ಶಬ್ದ—ಹೀಗೆ ಎಲ್ಲವೂ ಒಂದು ಕಾವ್ಯದ ಭಾಷೆಯಲ್ಲಿರುತ್ತವೆ. ವಿಭಿನ್ನ ಭಾಷೆಗಳ ನಡುವೆ ಇರುವ ಶಬ್ದಗಳ ಹಾಗೂ ಧ್ವನಿಗಳ ವ್ಯತ್ಯಾಸ ಗಳಿಂದಾಗಿ ಭಾಷೆಯೊಂದರಲ್ಲಿ ಒಡಮೂಡಿರುವ ಕವನ, ಮೂಲ ಕವನದ ಶಬ್ದಗಳನ್ನಷ್ಟೇ ಅಲ್ಲ, ಇಡೀ ಕವನದ ಆಕೃತಿಯನ್ನೇ ಬದಲಾಯಿಸಿಬಿಟ್ಟಿರುತ್ತದೆ. ಭಾಷೆಯನ್ನು ಬದಲಾಯಿಸದೆ ಮೂಲ ಕವನವನ್ನು ಇನ್ನೊಂದು ಭಾಷೆಯಲ್ಲಿ ಹಿಡಿದಿರುವುದಾದರೂ ಹೇಗೆ?

ಈಗ ತೀರ ಸರಳ ಎನ್ನಿಸಬಹುದಾದ ಪ್ರಾಸವನ್ನೇ ತೆಗೆದುಕೊಳ್ಳಿ. ಇಂಗ್ಲಿಷಿನ smile ಮತ್ತು mile ಎಂಬ

ಶಬ್ದಗಳು ಒಂದೊಂದು ಪಂಕ್ತಿಯ ಕೊನೆಗೆ ಬಂದರೆ ಸಹಜ ಪ್ರಾಸವಾಗುತ್ತವೆಯಷ್ಟೆ? ಆದರೆ ಇದೇ ಶಬ್ದಗಳು ಕನ್ನಡಕ್ಕೆ ಬಂದಾಗ ಅರ್ಥ ಉಳಿಸಿಕೊಂಡರೂ ಪರಸ್ಪರ ಪ್ರಾಸ ಕೂಡುವಂತಾಗುವುದಿಲ್ಲ. 'ನಗೆ' ಅಥವಾ 'ಮಂದಹಾಸ' ಎಂಬ ಶಬ್ದ 'ಮೈಲಿ' ಎಂಬ ಶಬ್ದದ ಜೊತೆ ನಮ್ಮ ಕಿವಿಗೆ ಹೇಗೆ ತಾನೆ ಒಂದೇ ರೀತಿ ಕೇಳಿಸೀತು? ಆದ್ದರಿಂದಲೇ ಅನುವಾದಕನಾದವನು ಪ್ರಾಸ ಬೇಕೇ ಬೇಕೆಂದು ಅನ್ನಿಸಿದಾಗ, ಮೂಲ ಕವನದ ಪದಶಃ ಅರ್ಥಕ್ಕೆ ಸಂಬಂಧಿಸಿದಂತೆ ಅಗತ್ಯವಿದ್ದಷ್ಟು ಸ್ವಾತಂತ್ರ್ಯ ವಹಿಸಲೇಬೇಕು. ಮೂಲ ಕವನದ ಕಲಾತ್ಮಕ ಸಂವೇದನೆಯನ್ನೂ ಅರ್ಥವನ್ನೂ ಉಳಿಸಿಕೊಳ್ಳಬೇಕೆನಿಸಿದಾಗಲೆಲ್ಲ ಒಳ್ಳೆಯ ಅನುವಾದಕ ಪದಶಃ ಅನುವಾದಕ್ಕೆ ಪಕ್ಕಾಗದೆ ಸ್ವತಂತ್ರ ಅಭಿವ್ಯಕ್ತಿಯನ್ನು ಕಂಡುಕೊಳ್ಳು ತ್ತಾನೆ. ಬಹುಶಃ ಇದೇ ಕಾರಣದಿಂದಲೇ ಉತ್ತಮ ಕಾವ್ಯಾನುವಾದವೊಂದು ಮೂಲ ಕವನದಷ್ಟೇ ಕಲಾತ್ಮಕ ಸೃಷ್ಟಿಯಾಗಿರುತ್ತದೆ; ಅನುಸೃಷ್ಟಿಯಾಗಿರುತ್ತದೆ.

ಇಷ್ಟಕ್ಕೂ ಅನುವಾದಿತ ಕವಿತೆಯನ್ನು ಓದುವವನು ಬಹಳ ಸಲ ಮೂಲ ಕವಿತೆ ಯನ್ನು ಓದುತ್ತಿಲ್ಲ, ಅಲ್ಲವೆ? ಅವನು ಓದುವ ಅನುವಾದ ಮೂಲಕ್ಕೆ ಹತ್ತಿರವಾಗಿರ ಬಹುದು, ಸ್ವತಃ ಸುಂದರವಾಗಿರಬಹುದು, ತೀರ ಗಾಢವಾಗಿಯೂ ಇರಬಹುದು. ಆದರೂ ಅದೊಂದು ಬೇರೆಯದೇ ಆದ ಮರು ಸೃಷ್ಟಿ ಎಂಬುದನ್ನು ಮರೆಯುವಂತಿಲ್ಲ. ಕನ್ನಡದಲ್ಲಿ, ನನಗೆ ತೋರುವ ಮಟ್ಟಿಗೆ ಬಿ.ಎಂ.ಶ್ರೀ. ಅವರ 'ಇಂಗ್ಲಿಷ್ ಗೀತಗಳು', ಬೇಂದ್ರೆಯವರ 'ಮೇಘದೂತ' ಇಂಥ ಯಶಸ್ವೀ ಮರು ಸೃಷ್ಟಿಗಳು; ಬೇರೆ ಭಾಷೆಗಳಿಂದ ಬಂದು 'ಕನ್ನಡವನ್ನೇ ಕನ್ನಡಿಸಿದ' ಸಾರ್ಥಕ ಕೃತಿಗಳು.

ಕೆ. ಎಸ್. ನಿಸಾರ್ ಅಹಮದ್ ಅವರ 'ಸುಮುಹೂರ್ತ' ಕವನ ಸಂಕಲನದ ಎರಡನೆಯ ಭಾಗದಲ್ಲಿ ೨೪ ಕವನಗಳ ಭಾಷಾಂತರವಿದೆ. ಇವು ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಪೋಲಿಷ್, ಇಂಗ್ಲಿಷ್ ಮೊದಲಾದ ಭಾಷೆಗಳ ಕವನಗಳು. ಕೆಲವು ನೇರವಾಗಿ ಇಂಗ್ಲಿಷಿನಿಂದಲೂ ಇನ್ನು ಕೆಲವು ಇಂಗ್ಲಿಷಿನ ಮೂಲಕವಾಗಿಯೂ ಕನ್ನಡಕ್ಕೆ ಬಂದಿದೆ. ನಿಸಾರ್ ಅಹಮದ್ ಅವರ ಹಲವಾರು ಉತ್ತಮ ಕವನಗಳು ಬಾಯಿ ಪಾಠವಾಗಿರು ವಂತೆಯೇ ಈ ಕೆಲವು ಅನವಾದಿತ ಕವನಗಳು ಕೂಡ ನನಗೆ ಬಾಯಿ ಪಾಠವಾಗಿವೆ. ಹಾಗೆ ನೋಡಿದರೆ, ಈ ಕವನಗಳನ್ನು ನಾನು ಪ್ರಯತ್ನಪೂರ್ವಕವಾಗಿ ಉರು ಹೊಡೆದದ್ದಲ್ಲ; ಓದಿದಂತೆಲ್ಲ ತಾವಾಗಿಯೇ ನನ್ನ ನೆನಪಿನ ಉಗ್ರಾಣದಲ್ಲಿ ಉಳಿದುಬಿಟ್ಟಿರುವಂಥವು. ಹೀಗೆ ಉಳಿಯುವುದಕ್ಕೆ ಕಾರಣ, ಬಹುಶಃ ಅವರ ಅನುವಾದ ಅನುವಾದವೆನ್ನಿಸದೆ ಕನ್ನಡದ ಜಾಯಮಾನಕ್ಕೆ ಅನುಸಾರವಾಗಿ ವರ್ತಿಸುತ್ತಿದೆ ಎನ್ನುವುದು. ಭಾವ ವಾಹಕವಾದ ಶಬ್ದ, ಕವನದ ಆಶಯಕ್ಕೆ ತಕ್ಕ ಧಾಟಿ, ಧ್ವನಿಯ ಏರಿಳಿತಗಳನ್ನು ಅಭಿನಯಿಸುವ ಲಯ, ಕಿವಿಗೆ ಹಿತವಾಗುವಂಥ ಗೇಯ ಗುಣ, ಇವೆಲ್ಲವುಗಳಿಂದಾಗಿ ಅವರ ಅನುವಾದಗಳು ಸ್ವತಂತ್ರ ಕವನಗಳಂತೆ ಮನ ಮುಟ್ಟುತ್ತವೆ.

'ಕಣಿವೆಯಲ್ಲಿ ಮಲಗಿದಾತ' ಎಂಬ ಶೀರ್ಷಿಕೆಯಲ್ಲಿ ಅನುವಾದಗೊಂಡಿರುವ ಫ್ರೆಂಚ್ ಕವಿ ಆರ್ಥರ್ ರಿಂಬೋನ ಕವಿತೆಯ ಈ ಸಾಲುಗಳನ್ನು ನೋಡಿ:

'ಪಾಚಿ, ಜೊಂಡುಗಳ ಶಯ್ಯೆಯಲ್ಲಿ ಮಲಗಿರುವನೀ ಸಿಪಾಯಿ
ಎದೆ ಕತ್ತು ಬರಿದು, ತೊಟ್ಟಂಗಿ ಹರಿದು; ಹಳೆ ಬಾವಿ ತೆರೆದ ಬಾಯಿ.
ದೇಹ ಭಾರವನು ಮುಟ್ಟಿ ತಟ್ಟಿ ಸಂತೈಸುತಿಹುದು ಹಗಲು.
ತರಚು, ಗಾಯಗಳ ಮಾಗಿಸಿಹುದು; ಬೆಳಕಲ್ಲಿ ನೆನೆದ ತೊಗಲು.'

3, 5, 3, 5, 3, 5, 3—ಹೀಗೆ ಲಘು, ಗುರು ಮಾತ್ರಾಗಣಗಳ ಸಮ್ಮಿಳನವಾಗಿರುವ ಈ ಸಾಲುಗಳು ನಮ್ಮ ಬೇಂದ್ರೆಯಂಥ ಕವಿಗಳು ಪಳಗಿಸಿದ ಛಂದಸ್ಸನ್ನು ನೆನಪಿಸುತ್ತವೆಯಲ್ಲವೆ? ಮೂಲ ಕವನದಲ್ಲಾಗಲೀ ಅದರ ಇಂಗ್ಲಿಷ್ ಅವತರಣಿಕೆಯಲ್ಲಾಗಲೀ ಇದಕ್ಕೆ ಹತ್ತಿರ ಬರುವ ಛಂದಸ್ಸಿಲ್ಲ. ಆರ್ಥರ್ ರಿಂಬೋನ ಮೂಲ ಕವನದ ಅಂತರಾರ್ಥವನ್ನೂ ಒಟ್ಟು ಆಶಯವನ್ನೂ ಗ್ರಹಿಸಿದ ನಿಸಾರ್ ಅವನ್ನೆಲ್ಲ ಕನ್ನಡದಲ್ಲಿ ಪಡಿಮೂಡಿಸುವುದಕ್ಕಾಗಿ ಬೇರೆಯದೇ ಛಂದಸ್ಸನ್ನು ಹುಡುಕಿಕೊಳ್ಳಬೇಕಾಯಿತು. ಹೀಗೆ ಹುಡುಕಿಕೊಂಡದ್ದು ಕನ್ನಡದಲ್ಲಿ ಮೊದಲೇ ಬಳಕೆಯಲ್ಲಿದ್ದ ಛಂದಸ್ಸಾದ್ದರಿಂದಲೇ ರಿಂಬೋನ ಕವನ ಓದುಗರಿಗೆ ಅಪರಿಚಿತವೆನಿಸದೆ ಸಹಜ ಧಾಟಿಯನ್ನು ಪಡೆಯುವಂತಾಯಿತು.

ಸುಮಾರು 30 ವರ್ಷಗಳ ಹಿಂದೆ ಅಮೆರಿಕನ್ ಕವಿ ರಾಬರ್ಟ್ ಲವೆಲ್, ಇದೇ ಆರ್ಥರ್ ರಿಂಬೋನ 10-12 ಕವನಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದ. ಆ ಸಂದರ್ಭದಲ್ಲಿ ಆ ಅನುವಾದಗಳು ಮೂಲಕ್ಕೆ ಏನೇನೂ ಹತ್ತಿರದಲ್ಲಿಲ್ಲವೆಂದು ಕೆಲವರು ಬೊಬ್ಬೆ ಹಾಕಿದ್ದೂ ಉಂಟು. ಆಗ ರಾಬರ್ಟ್ ಲವೆಲ್ ಹೇಳಿದ ಈ ಮಾತುಗಳು ತೀರ ಅರ್ಥಪೂರ್ಣ: 'ಆರ್ಥರ್ ರಿಂಬೋನ ಇವೇ ಕವನಗಳನ್ನು ಈ ಮೊದಲೇ ಸುಮಾರು ಹತ್ತು ಮಂದಿ ತಮ್ಮದೇ ರೀತಿಯಲ್ಲಿ ಇಂಗ್ಲಿಷಿಗೆ ಅನುವಾದಿಸಿದ್ದರು. ನಾನು ಮಾಡಿದ್ದೆಂದರೆ ಆ ಅನುವಾದಗಳನ್ನೆಲ್ಲ ಇಟ್ಟುಕೊಂಡು ಅವುಗಳಿಂದ ಕಾವ್ಯವನ್ನು ಸೃಷ್ಟಿಸಿದ್ದು.'

ಕಾವ್ಯಸೃಷ್ಟಿ ಎನ್ನುವುದು ಬಹು ಮುಖ್ಯವಾದ ಮಾತು. ಒಂದು ಅನುವಾದದಲ್ಲಿ ಮೂಲ ಕವನಕ್ಕೆ ವಾಹಕಗಳಾಗಿರಬಹುದಾದ ಪರಿಕರಗಳೆಲ್ಲವೂ ಇರಬಹುದು; ಆ ಕವನದ ಪಿಸುಮಾತೋ ಏರುದನಿಯೋ ನೀರವವೋ ಅಬ್ಬರವೋ ನಿರಾಯಾಸವಾಗಿ ಪಡಿಮೂಡಿರಬಹುದು. ಆದರೂ ಅದು ಕಾವ್ಯವಾಗದೆ ಕಾವ್ಯಾಭಾಸವಷ್ಟೇ ಆದರೆ ಏನು ಪ್ರಯೋಜನ? ಕಾವ್ಯ, ತತ್ತ್ವಶಾಸ್ತ್ರವಲ್ಲ. ಅದು ಶಬ್ದಗಳ ರಿಂಗಣಗುಣಿತ. ಆ ಕುಣಿತದ ಮೂಲಕ ಕವಿ ಓದುಗನಲ್ಲೊಂದು ಧ್ವನಿಯ ಅಲೆ ಎಬ್ಬಿಸುತ್ತಾನೆ. ಇದನ್ನು ಆಗಮಾಡಿಸುವುದಕ್ಕಾಗಿ ಕವಿತೆ ತನ್ನ ವಸ್ತುವನ್ನು ಹೇಗೋ ಹಾಗೆ ತನ್ನ ಆಕೃತಿಯನ್ನೂ ಆಶ್ರಯಿಸುತ್ತದೆ.

'ಗೀರಿರುವೆ ಕತ್ತಲಲಿ ಮೂರು ಕಡ್ಡಿಗಳನ್ನು ಒಂದಾದ-
ಮೇಲೊಂದು ಹೇಳಿದೇಕೆ?
ಒಂದು ದುಂಡನೆ ಮೊಗವ ಗ್ರಹಿಸುವುದಕೆ
ಎರಡು ಕಣ್ಣಿನ ಆಳ ಕೆದಕುವುದಕೆ
ಮೂರು ತುಟಿಗಳ ಚೆಲುವ ಬೆದಕುವುದಕೆ
ಕೊನೆಗೆ ಬರಿ ಕಾರಿರುಳ ಮೊತ್ತ—ಎಲ್ಲವ ನಾನು ನೆನೆಯಲಿಕ್ಕೆ
ನಿನ್ನ ಬಂಧಿಸಿದಾಗ ನನ್ನ ತೆಕ್ಕೆ.'

—ಇದು ಫ್ರೆಂಚ್ ಕವಿ ಜಾಕ್ ಪ್ರೇವೆ ಬರೆದಿರುವ ಕವನವೊಂದರ ಅನುವಾದ. 'ಗೀರಿರುವೆ ಕತ್ತಲಲಿ...' ಎಂಬ ಸಾಲನ್ನೂ 'ಕೊನೆಗೆ ಬರಿ ಕಾರಿರುಳ...' ಎಂಬ ಸಾಲನ್ನೂ ಗಮನಿಸಿ. ಮೊದಲು ಕತ್ತಲಿದೆ. ಬೆಂಕಿಕಡ್ಡಿ ಗೀರಿದ ಮೇಲೆ ಅದು ಉರಿಯುವಷ್ಟು ಹೊತ್ತು ಮಾತ್ರ ಬೆಳಕು ಚಿಮ್ಮಿ ಮಾಯವಾಗುತ್ತದೆ. 'ಕಾರಿರುಳ ಮೊತ್ತ', ಹೊತ್ತಿ ಉರಿದ ಮೂರು ಕಡ್ಡಿಗಳ ಬೆಳಕನ್ನು ಸಂದಿಸಿದ್ದರೂ ಅದು ಹೊಳೆಯಿಸಿದ ಚಿತ್ರವನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ. 'ಕಾರಿರುಳು' ಎಂಬ ಶಬ್ದದ ಉಚ್ಚಾರಣೆಯಲ್ಲಿಯೇ ಪಾರವಿಲ್ಲದ ಅದರ ಸ್ವರೂಪ ಕಣ್ಣಿಗೆ ಕಟ್ಟುವುದಿಲ್ಲವೆ? ಹೀಗೆ ಈ ಕವನದ ಭಾವವನ್ನು ದೃಶ್ಯೀಕರಿಸುವುದಕ್ಕಾಗಿ ಒದಗಿ ಬಂದಿರುವ ಕೆಲವು ಶಬ್ದಗಳು ಅದರ ಆಕೃತಿಯನ್ನು ನಿರ್ಧರಿಸಿಬಿಟ್ಟಿವೆ.

ನಿಸಾರ್ ಅಹಮದ್ ಅವರು ನಮ್ಮ ಸಂಸ್ಕೃತಿಗೆ ತುಸು ದೂರವೆನಿಸುವ ಕವನವೊಂದನ್ನು ಅನುವಾದಿಸುವಾಗ ಅನುಸರಿಸುವ ವಿಧಾನವೂ ಕುತೂಹಲಕರ. ಕವನದ ಕೆಲವು ವಿವರಗಳಿಗೆ ಹೋಲುವಂಥ ನಮ್ಮದೇ ಸಾಂಸ್ಕೃತಿಕ ವಿವರಗಳನ್ನು ಕಂಡುಕೊಳ್ಳುವುದರಲ್ಲಿ ಅವರ ಕವಿ ಸಹಜ ಪ್ರತಿಭೆ ಎದ್ದು ಕಾಣುತ್ತದೆ. ನಿದರ್ಶನಕ್ಕಾಗಿ ಅಮೆರಿಕದ ಬೀಟ್ನಿಕ್ ಪಂಥದ ಕವಿ ಗ್ರಿಗೊರಿ ಕಾರ್ಸೋನ 'Marriage' ಎಂಬ ದೀರ್ಘ ಕವನದ ಅನುವಾದವನ್ನು ನೋಡಬಹುದು. ಇದರಲ್ಲಿನ ಕೆಲವು ಸಾಲುಗಳಂತೂ ಕನ್ನಡದ್ದೇ ಸಮರ್ಥ ಕವಿಯೊಬ್ಬನ ಸಾಲುಗಳಂತೆ ಕೇಳಿಸುತ್ತವೆ:

'ಇನ್ನು ಏನೇನೊ ಇವೆ ಮಾಡಬೇಕಾದದ್ದು :
ಪತ್ತೆಯಿಲ್ಲದ ಹಾಗೆ ಸರಿ ರಾತ್ರಿ, ಹೊತ್ತಿನಲಿ
ಸುಬ್ಬರಾಯರ ಮನೆಗೆ ಕದ್ದು ಹೊಕ್ಕು
ಗಳಗನಾಥರ ಕೃತಿಗಳಿಂದ ವೃದ್ಧರ ಊರೆಗೋಲನ್ನು
ಬಚ್ಚಿಟ್ಟು ಬರುವುದಕ್ಕೆ,
ಅವರ ಗೋಡೆಯ ಮೇಲೆ ನನ್ನ ಹೊಸ ಕವನಗಳ
ಗೀಚಲಿಕ್ಕೆ.'
..
ಸೊಟ್ಟ ಬೈತಲೆ ಬಿಟ್ಟ ನಡು ವಯಸ್ಸಿನ ಲಕ್ಷ್ಮಿ
ಅನಾಥಾಶ್ರಮಕ್ಕೆಂದು ಚಂದಾಕ್ಕೆ ಬಂದಾಗ
ಬಗಿದಪ್ಪಿ—ಈವೊತ್ತು ಆಕಾಶದಲ್ಲೆಲ್ಲ
ದುಶ್ಶಕುನ, ದಿಗಿಲುಗಳೆ ಹಿಂದುಗೂಡಿವೆ ಚಿನ್ನ—
ಎಂದು ಆಕೆಯ ದಂಗು ಬಡಿಸಲಿಕ್ಕೆ;
ನೋಟು ತೋರಿಸಿ ವೋಟು ಯಾಚಿಸಲು ಮುತ್ಯಾಳ
ಕತ್ತೆ ಹಸು ಆಡುಗಳ ಬೇಟೆ ಮೈಸೂರಲ್ಲಿ
ನಿಲ್ಲುವುದೆ ಮಹಾಸ್ವಾಮಿ?—ಎನ್ನಲಿಕ್ಕೆ.'

ನನ್ನ ದೃಷ್ಟಿಯಲ್ಲಿ ಕವಿತೆಯೊಂದರ ಸಾಲುಗಳ ಸುತ್ತ ಹಬ್ಬಿಕೊಂಡಿರುವ ಪದ-ಅರ್ಥಗಳ ಪ್ರಭೆಯಿದೆಯಲ್ಲ, ಅದನ್ನು ಇನ್ನೊಂದು ಭಾಷೆಯಲ್ಲಿ ತರ್ಜುಮೆ ಮಾಡುವುದು ನಿಜಕ್ಕೂ ಕಷ್ಟ ಸಾಧ್ಯ. ಮೇಲೆ ಉದಾಹರಿಸಿರುವ ಸಾಲುಗಳಲ್ಲಿ ನಾನು ಓದಿಕೊಂಡಿರುವ

ಮೂಲ ಕವನದ ಒಟ್ಟು ಧಾಟಿಯನ್ನು ಬಿಟ್ಟುಕೊಡದೆ ಅದನ್ನು ಕನ್ನಡದ್ದೇ ನುಡಿಗಟ್ಟಿನಲ್ಲಿ, ವಿವರಗಳಲ್ಲಿ ಸಾಧ್ಯವಾದಷ್ಟೂ ಇಡಿಯಾಗಿ ಕಟ್ಟಿಕೊಡುವ ಪ್ರಯತ್ನವಿದೆ. ನಿಸಾರ್ ಈ ಪ್ರಯತ್ನದಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆಂದೇ ಹೇಳಬೇಕು.

ಅನುವಾದಿತ ಕವನವೊಂದರ ಯಶಸ್ಸು ಅಥವಾ ಅಪ ಯಶಸ್ಸು, ಅದು ಹೇಗೆ ಕನ್ನಡದಲ್ಲಿ ಉಸಿರಾಡುತ್ತಿದೆ ಎಂಬುದನ್ನು ಅವಲಂಬಿಸಿರುತ್ತದೆ. ಓದುಗನೊಬ್ಬನಿಗೆ ಅನುವಾದಗೊಂಡ ಕವನವೊಂದರ ಮೂಲ ಯಾವುದೆಂದು ತಿಳಿಯದಿದ್ದ ಸಂದರ್ಭದಲ್ಲಿ ಕೂಡ ಅವನಿಗೆ ಅನುವಾದಗೊಂಡದ್ದು ಚೆನ್ನಾಗಿದೆಯೋ ಇಲ್ಲವೋ ಎಂದು ತಿಳಿಯುವುದು ಸುಲಭ. ಜರ್ಮನ್ ಕವಿ, ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ 'ನ್ಯಾಯ' ಎಂಬ ಕವನ ನಿಸಾರರ ಕೈಯಲ್ಲಿ ಮೂಲದ ನಾಟಕೀಯ ಧಾಟಿಯನ್ನು ಒಳಗೊಂಡು ಎಷ್ಟು ಸಶಕ್ತವಾಗಿ ಮರುಜೀವ ಪಡೆದಿದೆಯೆಂಬುದಕ್ಕೆ ಕೆಳಗಿನ ಈ ಸಾಲುಗಳೇ ಸಾಕ್ಷಿ :

**'ಡೇಗೆ ರಣಹದ್ದುಗಳು, ಮೇಲೆ ನೋಡು:
ಇವು ಹೆಜ್ಜೆಯಿಟ್ಟ ಕಡೆ ಕಾಡು, ಸುಡುಗಾಡು!
ಪಯಣವೆಲ್ಲಿಗೆ ಈಗ?
ಯಾವುದಿದೆ ಹೊಸ ಜಾಗ?
ಕೋರ್ಟಿಗಿಂತಲು ಬೇಕೆ ಬೇರೆ ರಕ್ಷೆ?
ಗೌರವದ ಮೊಗವಾಡ ಹೊತ್ತ ಕೊಲೆಪಾತಕರು—
ನೀಡುವರು ಇತರರಿಗೆ ನ್ಯಾಯ, ಶಿಕ್ಷೆ.'**

—ಇಂಥ ಸಾಲುಗಳಲ್ಲಿ ಉಪಯೋಗವಾಗಿರುವ ಭಾಷೆ, ಲಯ, ಧ್ವನಿ ಮುಂತಾದುವೆಲ್ಲವೂ ಮೂಲ ಕವಿತೆಯ ಅಂತಃಸತ್ವವನ್ನು ಹೀರಿಕೊಂಡಿರುವುದಷ್ಟೇ ಅಲ್ಲ, ಆಧುನಿಕ ಕನ್ನಡ ಕಾವ್ಯ ಪರಂಪರೆಯೊಡನೆ ತಮಗಿರುವ ಸಂಬಂಧವನ್ನು ಪುನರುಚ್ಚರಿಸುವಂತಿವೆ. ಸ್ವತಃ ಕವಿ ಯಾಗಿರುವ ಅನುವಾದಕನಿಗೆ ತಾನು ಭಾಷಾಂತರಕ್ಕಾಗಿ ಆಯ್ದುಕೊಳ್ಳುವ ಒಂದೊಂದು ಕವನವೂ ಒಂದು ಸವಾಲು. ಅದು ಮೂಲ ಕವನದ ಬಂಧವನ್ನು, ಧ್ವನಿಯನ್ನು, ಲಯವನ್ನು ತನ್ನ ಭಾಷೆಯಲ್ಲಿ ಹಿಡಿದು ಕೊಡಬೇಕಾಗಿರುವ ಸವಾಲು. ಈ ಸವಾಲಿನಲ್ಲಿ ಯಶಸ್ಸು ಕಂಡಾಗ ಅವನು ಅನುವಾದಿಸಿದ ಕವನ ಅವನ ಭಾಷೆಯ ಕಾವ್ಯದ ಜೊತೆ, ಅವನದೇ ಕಾವ್ಯದ ಜೊತೆ ಯಾವ ತಕರಾರೂ ಇಲ್ಲದೆ ಬೆರೆತು ಕೊಂಡುಬಿಡುತ್ತದೆ. ನಿಸಾರ್ ಅನುವಾದಿಸಿರುವ ಫ್ರೆಂಚ್ ಕವಿ ಗಿಲಾಮ್ ಅಪೊಲಿನೇರ್‌ನ 'ಲಂಗ' ಎಂಬ ಕವಿತೆಯ ಈ ಸಾಲುಗಳು ಕೇವಲ ಅನುವಾದವಾಗಿ ಉಳಿದಂತಿವೆಯೆ?—

**'ನೀನು ನಡೆದಾಗೆಲ್ಲ ಲಂಗ ಚಿನ್ನದ ಗಂಟೆ
ಅದರ ನಾಲಗೆ ನಿನ್ನ ಹೂವುಗಾಲು:
ಬಡಿಬಡಿದು ಧ್ವನಿಯಿಂದ ಜಾರುತಿರುವಾನಂದ
ಹಿಗ್ಗುಗಳ ಕಡೆ ಕಣ್ಣು ಹರಿಸದೇನೆ?
ಏದುಸಿರಿನಿಂದದನು ಬಿಗಿದಪ್ಪಿ ಕೈಯಲ್ಲಿ
ನಾನೊಮ್ಮೆ ಬಾರಿಸಲೆ ಜರ್ಮೇನೆ?'**

ಒಂದು ಕವನವನ್ನು ಅನುವಾದಿಸುವಾಗ ಏನೇನು ಕಳೆದುಹೋಗುತ್ತದೋ ಅದೇ

ಕಾವ್ಯ ಎಂದ ಅಮೇರಿಕನ್ ಕವಿ ರಾಬರ್ಟ್ ಫ್ರಾಸ್ಟ್. ನಿಸಾರರ ಬಿಡಿ ಬಿಡಿ ಕವನಗಳ ಅನುವಾದಗಳನ್ನು ಓದುವ ಯಾರಿಗೂ ಹಾಗೆ ಅನ್ನಿಸುವುದಿಲ್ಲ. ಅವರು ಸ್ವತಃ ಕವಿಗಳು; ನಮ್ಮ ಅತ್ಯುತ್ತಮ ಕಾವ್ಯದಲ್ಲಿ ಗಣನೀಯವಾದೊಂದು ಭಾಗವನ್ನು ಸೃಷ್ಟಿಸಿದವರು. ಸಾಹಿತ್ಯ ಚಳವಳಿ/ಸಿದ್ಧಾಂತಗಳನ್ನು ಮೀರಿ ನಿಂತಿರುವ ಅವರ ಕಾವ್ಯ ಆಧುನಿಕ ಕನ್ನಡ ಕಾವ್ಯ ಪರಂಪರೆಯೊಡನೆ ಸಹಬಾಳ್ವೆ ನಡೆಸುತ್ತಲೇ ಅದಕ್ಕೆ ಮುಖಾಮುಖಿಯಾಗಿಯೂ ತನ್ನ ಅನನ್ಯತೆಯನ್ನು ಸಾಧಿಸಿಕೊಂಡಿದೆ. ಆ ಅನನ್ಯತೆಯನ್ನು ವಿಶ್ಲೇಷಿಸುವಾಗ ಅವರು ಅನುವಾದಿಸಿರುವ ಕವನಗಳನ್ನು ಕಡೆಗಣಿಸುವಂತಿಲ್ಲ. ನನ್ನ ದೃಷ್ಟಿಯಲ್ಲಿ ನಿಸಾರರ ಕಾವ್ಯ ಹಾಗೂ ಅವರು ಅನುವಾದಿಸಿರುವ ಕಾವ್ಯ, ಇವು ಬೇರೆ ಬೇರೆಯಲ್ಲ. ಒಂದು ಇನ್ನೊಂದಕ್ಕೆ ಪೂರಕವಷ್ಟೇ ಅಲ್ಲ, ಸರಿ ಸಾಟಿಯೂ ಹೌದು. ಅನುವಾದಗಳಿಗೇ ಒತ್ತು ಕೊಟ್ಟು ಹೇಳುವುದಾದರೆ ಅವರದು ಬಿ.ಎಂ.ಶ್ರೀ.ಯವರು ಪ್ರಾರಂಭಿಸಿದ ಕಾವ್ಯಾನುವಾದ ಪರಂಪರೆಯಲ್ಲಿ ಅತ್ಯಂತ ಎತ್ತರದ ಸ್ಥಾನ.

'ನಾಗರಿಕತೆ' ಎಂದಾಕ್ಷಣ ಅದರಲ್ಲಿ ಉತ್ತಮತೆ, ಉನ್ನತಿ, ಪರಿಷ್ಕಾರ ಗುಣಗಳು ಮೇಳವಿಸಿರುವ ಭಾವನೆ ನಮಗೆ ಹೊಳೆಯುವುದುಂಟು. ಈ ಗುರಿಯ ಸಾಧನೆಗೆ ಯುಕ್ತವಾದ ಮಾರ್ಗವನ್ನೇ ಹಿಡಿದು ಮನುಷ್ಯ ಮುಂದುವರಿದಿದ್ದಾನೆ ಎನ್ನಲಾಗದು. ಋಜುವೆನ್ನಿಸುವ ಉದ್ದೇಶಪೂರ್ತಿಯ ಮಾಧ್ಯಮ ಹಾಗೂ ಸಾಧನಗಳು ಅವಿವೇಕದ, ಕಠೋರ ಶೋಷಣೆಯ ಧಾತುಗಳಿಂದ ಆಗಿರುವುದು ಗತ ಚರಿತ್ರೆ ಮತ್ತು ವರ್ತಮಾನಕಾಲೀನ ವಿದ್ಯಮಾನಗಳಿಂದ ಸಾಬೀತಾಗುತ್ತದೆ. ಕಮಲದ ಅರಳಿಕೆಗೆ ಕೆಸರು ಬಗ್ಗಡದ, ದವನ ಮರುಗಗಳ ಹುಲುಸು ಫಸಲಿಗೆ ಮಲಮೂತ್ರಾದಿಗಳ ಹೊಲಸು ಗೊಬ್ಬರದ ಪೋಷಣೆ ಅನಿವಾರ್ಯವೇನೊ! ಪಿರಮಿಡ್, ಪಾರ್ಥೆನಾನ್, ಚೀಣದ ಹೆಗ್ಗೋಡೆ, ತಾಜಮಹಲ್ ಇತ್ಯಾದಿ ಭವ್ಯಾದ್ಭುತ ನಿರ್ಮಿತಿಗಳ ನೇಪಥ್ಯದಲ್ಲಿ ಚಾವಟಿಯ ಚೆಲ್ಲಾಟ, ಕೋಳಗಳ ಝಣತ್ಕಾರ, ರಕ್ತದೋಕುಳಿ, ಚೀತ್ಕಾರಗಳ ಎಷ್ಟು ನಿರ್ದಯ ರಂಗ ತಾಲೀಮು ನಡೆದಿದೆಯೊ ಯಾರು ಬಲ್ಲರು?

(ನಾಗರಿಕತೆಯ ಕರಾಳ ಮುಖ)



ನಿಸಾರ್ ಅವರ ನೆರುಡನ ಕವನಾನುವಾದ
(ಕನ್ನಡಕ್ಕೆ ಮಹತ್ವದ ಕೊಡುಗೆ)

♦ *ಪ್ರೊ. ಚಂದ್ರಶೇಖರ ಪಾಟೀಲ*

ಗೆಳೆಯ ನಿಸಾರ್ ಅಹಮದ್‌ರ ಯಾವುದೇ ಪದ್ಯವನ್ನು ಓದಲೆಂದು ಕೈಗೆತ್ತಿಕೊಂಡಾಗ ನನಗೆ ತಟ್ಟನೆ ಅನುಭವಕ್ಕೆ ಬರುವುದು: ಅವರ ಅಭಿವ್ಯಕ್ತಿಯ ಸಹಜತೆ. ಶಬ್ದ ಪ್ರಯೋಗ, ವಾಕ್ಯ ರಚನೆ, ಭಾವಗಳ ಹೊಂದಾಣಿಕೆ—ಇಂಥ ಯಾವ ಹಂತದಲ್ಲೂ ಅನಾವಶ್ಯಕ ಅಡೆ ತಡೆ ಎಂಬುದು ಯಾವುದೂ ಇಲ್ಲ. ಕನ್ನಡ ನುಡಿ 'ಸುಲಿದ ಬಾಳೆಯ ಹಣ್ಣಿನಂದದಿ' ಅಂತ ಕವಿಯೊಬ್ಬ ಹೇಳಿದ ಮಾತು ನಿಸಾರ್ ಅವರ ಕಾವ್ಯದ ಮಟ್ಟಿಗಂತೂ ನೂರಕ್ಕೆ ನೂರರಷ್ಟು ಸತ್ಯ.

ಈ ಮಾತು ಬರೆಯುವಾಗ ನನ್ನೆದುರು ಎರಡು ಪದ್ಯಗಳಿವೆ. ಒಂದು, ಜಗತ್‌ಪ್ರಸಿದ್ಧ ಲ್ಯಾಟಿನ್ ಅಮೆರಿಕನ್ ಕವಿ ಪಾಬ್ಲೊ ನೆರುಡನ 'Too Many Names' ಎಂಬ (ಇಂಗ್ಲಿಷ್) ಶೀರ್ಷಿಕೆಯ ಪದ್ಯ; ಇನ್ನೊಂದು, 'ಲೆಕ್ಕವಿರದಷ್ಟು ಹೆಸರುಗಳು' ಎಂಬ ಶೀರ್ಷಿಕೆಯಲ್ಲಿ ನಿಸಾರರು ಅನುವಾದಿಸಿದ ಪದ್ಯ. ೧೯೫೮ರಲ್ಲಿ ಪ್ರಕಟವಾದ ಮೂಲ ಸ್ಪ್ಯಾನಿಶ್ ಸಂಕಲನ Estravagario; ಅದರ ಇಂಗ್ಲಿಷ್ ಹೆಸರು Vagaries. ನಿಸಾರ್ ಅಹಮದ್‌ರ 'ಬರೀ ಮರ್ಯಾದಸ್ಥರೆ' ಎಂಬುದು ಪಾಬ್ಲೊ ನೆರುಡನ ಕವನಗಳ ಅನುವಾದ ಸಂಕಲನ. (ಇದಕ್ಕೆ ಅವರೇ ಬರೆದ ಅತ್ಯುಪಯುಕ್ತವಾದ ಸುದೀರ್ಘ ಮುನ್ನುಡಿ ಇದೆ.)

* * *

ಮೂಲ ಸ್ಪ್ಯಾನಿಶ್ ಭಾಷೆಯ ಇಂಗ್ಲಿಷ್ ಅನುವಾದವನ್ನು ನಿಸಾರ್ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಅವರು ಹೇಳುತ್ತಾರೆ: 'ನೆರುಡನ ಒಂದೇ ಪದ್ಯವನ್ನು ಬೇರೆ ಬೇರೆಯವರು ಬೇರೆ ಬೇರೆ ಬಗೆಯಲ್ಲಿ ಕೆಲವೊಮ್ಮೆ ಅರ್ಥಾಂತರವಾಗುವಂತೆ ಭಾಷಾಂತರಿಸಿದ್ದಾರೆ. ಹೀಗಾಗಿ ನಮಗೆ ಯಾವುದು ಅಧಿಕೃತವೆನ್ನುವುದೇ ತಿಳಿಯುವುದು ಕಷ್ಟ. ನಾನು ಅನುವಾದಕ್ಕೆ ತೆಗೆದುಕೊಂಡ ಪದ್ಯಗಳು ಹಲವಾರು ಮೂಲದವು. ಅವುಗಳಿಗೆ ನಿಕಟವಾಗಿ ತರ್ಜುಮೆ ಮಾಡಲು ಪ್ರಯತ್ನಿಸಿರುವೆ.'

ಯಾವುದೇ ಅನುವಾದಕನಿಗೂ ಎದುರಾಗುವ ತೊಡಕುಗಳಿವು. 'ಭಾಷಾಂತರ' ಅಂದೊಡನೆ ಅಲ್ಲಿ ಭಾವಾಂತರ, ಅರ್ಥಾಂತರ ಎಲ್ಲವೂ ಇದೆ. ಕೃತಿಯ ಹಿನ್ನೆಲೆಗಿರುವ 'ಸಂಸ್ಕೃತಿ'ಗಳಲ್ಲಿ ವ್ಯತ್ಯಾಸವಿದ್ದರಂತೂ ಈ ಪ್ರಕ್ರಿಯೆ ಇನ್ನೂ ಸಂಕೀರ್ಣ. ಅನುವಾದಕನ ಮುಖ್ಯ ಜವಾಬ್ದಾರಿ: ಮೂಲ ಕೃತಿಯ ನುಡಿಗಟ್ಟಿಗೆ ಆದಷ್ಟು ಹತ್ತಿರವಾಗುವಂತೆ ತನ್ನ ಭಾಷೆಯ ನುಡಿಗಟ್ಟನ್ನು ಆಯ್ಕೆ ಮಾಡಿಕೊಳ್ಳುವುದು.

ಸದ್ಯ, ನೆರುಡನ ಪದ್ಯದ ಇಂಗ್ಲಿಷ್ ಅನುವಾದವೇ 'ಮೂಲ'ವೆಂದು ಗ್ರಹಿಸಿ, ನಿಸಾರರ ಕನ್ನಡ ಅನುವಾದವನ್ನು ಅದರ ಮಗ್ಗುಲಲ್ಲಿಯೇ ಇರಿಸಿಕೊಳ್ಳೋಣ.

Too Many Names

(43 Lines)

Mondays are meshed with Tuesdays
and the week with the whole year:
time can not be cut
with your weary scissors,
and all the names of the day
are washed out by the waters of night.

No one can claim the name of Pedro,
nobody is Rosa or Maria,
all of us are dust or sand,
all of us are rain under rain.
They have spoken to me of Venezuelas,
of Chiles and of Paraguays.
I have no idea what they are saying:
I know only the skin of the earth
and I know it is without a name.

When I lived amongst the roots,
they pleased me more than flowers did,
and when I spoke with a stone,
it rang like a bell.

It is so long, the spring
which goes on all winter:
time lost its shoes:
a year is four centuries.

When I sleep every night,
what am I called or not called?
And when I wake, who am I
if I was not I while I slept?

This means to say that scarcely
have we landed into life
than we come as if new-born;
let us not fill our mouths
with so many faltering names,

with so many sad formalities,
with so many pompous letters,
with so much of yours and mine,
with so much signing of papers.

I have a mind to confuse things,
unite them, bring them to birth,
mix them up, undress them,
until the light of the world
has the oneness of the ocean,
a generous, vast wholeness,
a crepitant fragrance.

*   *   *

ಲೆಕ್ಕವಿರದಷ್ಟು ಹೆಸರುಗಳು

(೪೬ ಸಾಲುಗಳು)

ಸೋಮವಾರ ಮಂಗಳವಾರದೊಡನೆ,
ವಾರ ಇಡೀ ವರ್ಷದೊಡನೆ
ಹೆಣೆಯಲ್ಪಟ್ಟಿದೆ.
ಕಾಲವನ್ನ ನಿಮ್ಮ ತ್ರಾಣರಹಿತ ಕತ್ತರಿಯಿಂದ
ತುಂಡರಿಸಲಾಗದು.
ಹಾಗೆಯೇ ಹಗಲಿನೆಲ್ಲ ಹೆಸರುಗಳನ್ನ
ಇರುಳ ನೆರೆ ಕೊಚ್ಚಿ ಒಯ್ಯುತ್ತದೆ.

ಪೆಡ್ರೊ ಎನ್ನುವ ಹೆಸರನ್ನ
ಯಾರೂ ತನ್ನದೆಂದು ಸಾಧಿಸುವ ಹಾಗಿಲ್ಲ.
ರೋಜ ಅಥವಾ ಮರೀಯಾ ಯಾರೂ ಅಲ್ಲ.
ನಾವೆಲ್ಲ ದೂಳು ಅಥವಾ ಮರಳು
ನಾವೆಲ್ಲ ಮಳೆಯೊಳಗಿನ ಮಳೆ ಅಷ್ಟೆ.
ವೆನಿಜುಲಗಳ, ಚಿಲಿಗಳ, ಪರಗ್ವೆಗಳ ಕುರಿತು
ಅವರು ನನಗೆ ನುಡಿದಿದ್ದಾರೆ;
ಅವರೇನು ಹೇಳುತ್ತಾರೊ ನನಗೆ ತಿಳಿಯುವುದಿಲ್ಲ.
ನನಗೆ ತಿಳಿಯುವುದೆಲ್ಲ ಭೂಮಿಯ ಹೊರ ತೊಗಟೆಯಷ್ಟೆ;
ನನಗೆ ಗೊತ್ತಿದೆ ಅದಕ್ಕೆ ಹೆಸರಿಲ್ಲವೆಂದು.

ಬೇರುಗಳ ನಡುವೆ ನಾನು ವಾಸಿಸಿದ್ದಾಗ
ಪುಷ್ಪಗಳಿಗಿಂತ ಅವು ನನಗೆ ಹೆಚ್ಚು ಖುಷಿಕೊಟ್ಟವು,
ಕಲ್ಲನ್ನ ನಾನು ಮಾತನಾಡಿಸಿದಾಗ
ಅದು ಘಂಟೆಯಂತೆ ನಿನದಿಸಿತು.

ಚಳಿಗಾಲದ ತನಕ ಚಾಚುವ ವಸಂತ ಋತು
ಸುದೀರ್ಘ.
ಕಾಲ ತನ್ನ ಷೂಗಳನ್ನು ಕಳೆದುಕೊಂಡಿತು.
ನಾಲ್ಕು ಶತಮಾನಗಳ ಬಾಳಿಕೆ ವರ್ಷವೊಂದಕ್ಕೆ.

ಪ್ರತಿ ರಾತ್ರಿ ನಾನು ನಿದ್ರಿಸಿದಾಗ
ನನ್ನ ಹೆಸರೇನು? ನನ್ನ ಹೆಸರೇನಲ್ಲ?
ನನ್ನ ನಿದ್ದೆಯ ವೇಳೆ ನಾನು ನಾನಲ್ಲದಿರುವಾಗ;
ಎಚ್ಚೆತ್ತಾಗ ನಾನು ಯಾರು?

ಇದರ ತಾತ್ಪರ್ಯವಿಷ್ಟೆ;
ನಾವು ಬದುಕಿನ ದಡ ಮುಟ್ಟಿದೆವು ಎನ್ನುವಷ್ಟರಲ್ಲೆ
ಹೊಸ ಹುಟ್ಟು ಪಡೆದಿರುತ್ತೇವೆ;
ಅಷ್ಟೆಲ್ಲ ತಡವರಿಸುವ ಹೆಸರುಗಳಿಂದ,
ಅಷ್ಟೆಲ್ಲ ಶೋಚನೀಯ ಲೋಕರೂಢಿಗಳಿಂದ,
ಅಷ್ಟೆಲ್ಲ ಆಡಂಬರಪೂರ್ಣ ಓಲೆಗಳಿಂದ,
ಅಷ್ಟೊಂದು ನಮ್ಮದು, ನಿಮ್ಮದು ಎನ್ನುವುದರಿಂದ
ಅಷ್ಟೆಲ್ಲ ಕಾಗದ ಪತ್ರಗಳಿಗೆ ರುಜು ಗೀಚುವುದರಿಂದ
ನಮ್ಮ ನಾಲಗೆಯನ್ನ ಗಿಡಿಯುವುದು ಬೇಡ.

ಲೋಕದಲ್ಲಿನ ಎಲ್ಲ ಬೆಳಕೂ
ಸಾಗರದ ಏಕರೂಪತೆಯನ್ನ
ಉದಾರ ವಿಸ್ತೃತ ಸಂಪೂರ್ಣತೆಯನ್ನ,
ಒಂದು ಚಟಚಟಿಸುವ ಸಜೀವ ಸುಗಂಧವನ್ನ

ಹೊಂದುವವರೆಗೆ—
ಸಂಗತಿಗಳನ್ನ ಒಗ್ಗೂಡಿಸಿ ಹೊಸ ಹುಟ್ಟು ಪಡೆದಂತೆ ಮಾಡಿ,
ಅವುಗಳನ್ನ ಬೆರೆಸಿ ಬತ್ತಲಾಗಿಸಿ
ಗೊಂದಲಗೆಡಿಸುವ ಮನಸ್ಸಾಗಿದೆ ನನಗೆ.

* * *

ಮುಕ್ತ ಛಂದ(Free Verse)ದ ಈ ಕವನದಲ್ಲಿ ಆರು ಪದಗುಚ್ಛ(Stanza)ಗಳಿವೆ. ಉದ್ದಕ್ಕೂ ಒಂದು ಭಾವಲಹರಿ ಇದೆ: ಒಂದು ವಾದದ ಎಳೆ ಇದೆ. ಇಂಥ ತರ್ಕಬದ್ಧತೆಯಿಂದಾಗಿ ಓದುಗನಿಗೆ ಗ್ರಹಿಕೆ ಸುಲಭವಾಗಿದೆ. 'ನಾನು' ಎಂಬ ನಿರೂಪಕನಿರುವುದರಿಂದ ಹಲವು ಧ್ವನಿಗಳ ಗೊಂದಲಕ್ಕೆ ಅವಕಾಶವಿಲ್ಲ. ವ್ಯತ್ಯಾಸ ಬರುವುದು ವಾಕ್ಯ ರಚನೆ(syntax)ಯ ಹಂತದಲ್ಲಿ. ಆಯಾ ಭಾಷೆಯ ಜಾಯಮಾನ ಇಲ್ಲಿ ಮುಖ್ಯವಾಗುತ್ತದೆ.

ಮೊದಲ ಗುಚ್ಛದಲ್ಲಿ—

> **'ಸೋಮವಾರ ಮಂಗಳವಾರದೊಡನೆ**
> **ವಾರ ಇಡೀ ವರ್ಷದೊಡನೆ**
> **ಹೆಣೆಯಲ್ಪಟ್ಟಿದೆ.'**

ಮೊದಲ ಎರಡು ಸಾಲುಗಳು ಕೊನೆಗೆ ಬರುವ 'ಒಡನೆ' ಎಂಬ ಪುನರುಕ್ತಿ, ಮೂಲದಲ್ಲಿಲ್ಲದ ಹೊಸ ಅರ್ಥವನ್ನು ಧ್ವನಿಸುತ್ತದೆ.

'weary' ಎಂಬ ವಿಶೇಷಣ ಕನ್ನಡದಲ್ಲಿ 'ತ್ರಾಣರಹಿತ' ಎಂದಾಗಿದೆ.

'Washed out by the waters of night' ಎಂಬುದು 'ಇರುಳ ನೆರೆ ಕೊಚ್ಚಿ ಒಯ್ಯುತ್ತದೆ' ಎಂದು ಸಮರ್ಥವಾಗಿ ಅನುವಾದಿತವಾಗಿದೆ.

ಎರಡನೆಯ ಗುಚ್ಛದ ಪೆಡ್ರೊ, ರೋಜಾ, ಮರೀಯಾ, ವೆನಿಜುಲ, ಚಿಲಿ, ಪರಗ್ವೆ ಅಂಕಿತನಾಮಗಳು ಕನ್ನಡದ ಕಿವಿಗಳಿಗೆ ಹೊಸ ಶಬ್ದಗಳೇ. (ಕನ್ನಡ ಹೆಸರುಗಳನ್ನೇ ಬಳಸಬಹುದಿತ್ತೇನೋ!) They have spoken to me 'ಅವರು ನನಗೆ ನುಡಿದಿದ್ದಾರೆ' ಎಂದಾಗಿದೆ. (ಈ ಪದ ಪ್ರಯೋಗ ಸ್ವಲ್ಪ ಅಸಹಜ.) Skin ಎಂಬುದಕ್ಕೆ 'ಹೊರ ತೊಗಟೆ'ಗಿಂತ 'ಚರ್ಮ'ವೇ ವಾಸಿ.

ಮೂರನೆಯ ಗುಚ್ಛದಲ್ಲಿ—

> **'Time lost its shoes:**
> **a year is four centuries.'**

ಎಂಬುದು,

> **'ಕಾಲ ತನ್ನ ಷೂಗಳನ್ನು ಕಳೆದುಕೊಂಡಿತು**
> **ನಾಲ್ಕು ಶತಮಾನಗಳ ಬಾಳಿಕೆ ವರ್ಷವೊಂದಕ್ಕೆ'**

ಎಂದಾಗಿದೆ. ಇಲ್ಲಿ ಅನುವಾದಕ ತನ್ನ ಸ್ವಾತಂತ್ರ್ಯವನ್ನು ಬಳಸಿಕೊಂಡು ಕನ್ನಡ ಓದುಗರಿಗೆ

ಅನುಭವವೇದ್ಯವಾದ ರೀತಿಯಲ್ಲಿ ಮಾರ್ಪಾಡು ಮಾಡಿಕೊಳ್ಳಬಹುದಿತ್ತು. ಆದರೆ—

'ಕಲ್ಲನ್ನ ನಾನು ಮಾತನಾಡಿಸಿದಾಗ
ಅದು ಘಂಟೆಯಂತೆ ನಿನದಿಸಿತು'

ಎಂದಾಗ, ಇಂಗ್ಲಿಷ್ bellಗಿಂತ ಕನ್ನಡದ ಘಂಟೆ ಧ್ವನಿಪೂರ್ಣವೆನಿಸುತ್ತದೆ.

ನಾಲ್ಕನೆಯ ಗುಚ್ಛದ ಈ ನಾಲ್ಕು ಸಾಲುಗಳು ಅನುವಾದ ಕ್ರಿಯೆಗೊಂದು 'ಮಾದರಿ'ಯಂತಿವೆ.

'ಪ್ರತಿ ರಾತ್ರಿ ನಾನು ನಿದ್ರಿಸಿದಾಗ
ನನ್ನ ಹೆಸರೇನು? ನನ್ನ ಹೆಸರೇನಲ್ಲ?
ನನ್ನ ನಿದ್ದೆಯ ವೇಳೆ ನಾನು ನಾನಲ್ಲದಿರುವಾಗ;
ಎಚ್ಚೆತ್ತಾಗ ನಾನು ಯಾರು?'

ಐದನೆಯ ಗುಚ್ಛದಲ್ಲಿ ಗಮನಿಸಿರಿ: Let us not fill our mouths ಎಂಬುದು 'ಪ್ರಾರಂಭ'ದಲ್ಲಿಯೇ ಬಂದಿದ್ದರೆ, ಅದು ಕನ್ನಡದಲ್ಲಿ 'ನಮ್ಮ ನಾಲಗೆಯನ್ನು ಗಿಡಿಯುವುದು ಬೇಡ' ಎಂದು ಅನುವಾದಿತಗೊಂಡು ವಾಕ್ಯದ 'ಅಂತ್ಯ'ದಲ್ಲಿ ಬಂದಿದೆ. ಇದು ಎರಡು ಭಾಷೆಗಳ ವಾಕ್ಯಬಂಧ(Syntax)ಕ್ಕೆ ಸಂಬಂಧಿಸಿದ ವಿಷಯವಾಗಿದ್ದರೂ ಅರ್ಥ ಲಕ್ಷ್ಯ (Semantic focus)ದ ದೃಷ್ಟಿಯಿಂದ ಮೂಲದಲ್ಲಿದ್ದ ಹಾಗೆಯೇ ಇದ್ದರೆ ಹೆಚ್ಚು ಒಳ್ಳೆಯದಿತ್ತು ಅನ್ನಿಸುತ್ತದೆ.

ಕೊನೆಯ ಗುಚ್ಛಕ್ಕೂ ಇದೇ ಮಾತು ಹೇಳಬಹುದು—

'I have a mind to...'

ಎಂದು ಕವಿ ಮೊದಲೇ ತಾನು ನಿಂತ 'ನೆಲೆ' ಯಾವುದೆಂದು ಘೋಷಿಸಿ, ಅನಂತರ ಪರೆ ಪರೆಯಾಗಿ ಬಿಚ್ಚಿಕೊಳ್ಳುತ್ತ ಶಬ್ದದಿಂದ ಶಬ್ದಕ್ಕೆ ನಮ್ಮನ್ನು ಸೆಳೆದೊಯ್ಯುತ್ತಾನೆ. ಆದರೆ ಕನ್ನಡ ಅನುವಾದದಲ್ಲಿ—

'...ಮನಸ್ಸಾಗಿದೆ ನನಗೆ'

ಎಂಬುದು 'ಕೊನೆಗೆ' ಬರುವುದರಿಂದ ಅಷ್ಟರಮಟ್ಟಿಗೆ ಅದು ಆಯಾಸಗೊಂಡಂತೆ ಭಾಸವಾಗುತ್ತದೆ.

* * *

ಮೂಲವನ್ನೂ ಅನುವಾದವನ್ನೂ ಒಂದರ ಬದಿಗೆ ಇನ್ನೊಂದನ್ನು ಇಟ್ಟುಕೊಂಡಾಗ ತೌಲನಿಕ ನೆಲೆಯಲ್ಲಿ ಗಮನಕ್ಕೆ ಬರುವ ಅಂಶಗಳಿವು. ಅಕೆಡಮಿಕ್ ರೀತಿಯ ಓದಿಗೆ ಇವು ಪ್ರಸ್ತುತ, ಅಷ್ಟೆ. ಆದರೆ ಒಂದು ಕವನದ ಇಡಿಯಾದ ಗ್ರಹಿಕೆ ಯಾವ ರೀತಿಯದು, ಅದು ತನ್ನ ಭಾಷಿಕ ರೂಪದಲ್ಲಿ ಓದುಗನ 'ಅನುಭವ'ವಾಗುವ ಸಾಮರ್ಥ್ಯ ಹೊಂದಿದೆಯೇ— ಎಂಬುದು ಮುಖ್ಯ.

ಈ ನೆಲೆಯಲ್ಲಿ ಕೆ. ಎಸ್. ನಿಸಾರ್ ಅಹಮದ್‌ರ 'ಬರೀ ಮರ್ಯಾದಸ್ಥರೆ'

ಅನುವಾದ ಸಂಕಲನ ಕನ್ನಡ ಕಾವ್ಯಲೋಕಕ್ಕೆ ಅವರಿತ್ತ ಮಹತ್ವದ ಕೊಡುಗೆಯೇ ಆಗಿದೆ. ನೆರುಡ ಕಾವ್ಯಕ್ಕೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಆಯಾಮಗಳಿವೆ. ಆ ಕಾವ್ಯವನ್ನು ಪ್ರೀತಿಯಿಂದ, ಶ್ರದ್ಧೆಯಿಂದ, ಕಠಿಣ ಪರಿಶ್ರಮದಿಂದ ಕನ್ನಡಕ್ಕೆ ತಂದವರು ನಿಸಾರ್ ಅಹಮದ್. ನಿಸಾರರ ಕಾವ್ಯವನ್ನು ಓದುವಷ್ಟೇ ಸಹಜವಾಗಿ, ಸುಲಭವಾಗಿ ನೆರುಡ ಕಾವ್ಯವನ್ನೂ ನಾವು ಓದಿ ಆಸ್ವಾದಿಸಬಹುದು.

ಇವೊತ್ತು ಮೆರೆದಾಡಿ ನಾಳೆ ಬಾಡಿ ಮೂಲೆಗೆ ಸಂದುಹೋಗುವ ತನ್ನ ಕಾಲದ ಫ್ಯಾಷನ್ನಿನ ಸಾಹಿತ್ಯ ರಚನೆ ಮತ್ತು ಪ್ರಾಯೋಗಿಕತೆಗಷ್ಟೇ ತುತ್ತೂರಿ ಯೂದುತ್ತ, ಅಣಬೆಗಳಿಗೆ ಉಕ್ಕಿನ ಚೌಕಟ್ಟನ್ನು ತೊಡಿಸುವ ಕಸುಬಿನಲ್ಲಿ ಮೈ ಮರೆತಿರುವ ಸಮಕಾಲೀನ ವಿಮರ್ಶೆ, ದೀರ್ಘಾಯುಷಿಗಳಾದ ಕೃತಿಗಳಿಗೆ ಬೆನ್ನಿರುಹಿದ ಮಾತ್ರಕ್ಕೆ ಅವುಗಳ ಕಾಂತಿ ಮಸುಳಿ ಬಿಡುವುದಿಲ್ಲ; ಪ್ರಚಲಿತತೆ ಪದರಿ ಹೋಗುವುದಿಲ್ಲ. ಮುಂದೊಮ್ಮೆ ಅವು ತಮ್ಮ ನೈಜ ಮಹಿಮೆಯಿಂದ ಮೇಲೆದ್ದು ನವೋತ್ಸಾಹದಿಂದ ಮೆರೆದೇ ಮೆರೆಯುತ್ತವೆ. ಸದ್ವಿಚಾರ, ಮಹದಾಲೋಚನೆಗಳಿಗೆ ಫೀನಿಕ್ಸ್‌ನಂತೆ ಸ್ವಭಾವಗತವಾದ ಚಿರಂಜೀವತ್ವ ಪ್ರಾಪ್ತವಾಗಿರುತ್ತದೆ. ಅವುಗಳ ಪರವಾಗಿ ಕಾಲವೇ ಸಾಕ್ಷ್ಯ ಹೇಳುತ್ತದೆ. ಕಾಲದ ವಕಾಲತ್ತಿನೆದುರು ವಿಮರ್ಶಕರ ತಾಕತ್ತು ಏನೇನೂ ಅಲ್ಲ.

(ಸಮಕಾಲೀನ ವಿಮರ್ಶೆಯ ತಪ್ಪು ಹಾದಿ)

✧ ✧ ✧

ನಮಗೆ ಚೆನ್ನಾಗಿ ಗೊತ್ತಿರುವ ನಾವು ನಿಜಕ್ಕೂ ನಾವಲ್ಲ: ನಮ್ಮಲ್ಲಿ ಭಿನ್ನರಾದ, ಪರಸ್ಪರ ವಿರುದ್ಧರೂ ಆದ ಹಲವಾರು ಆಸಾಮಿಗಳು ಅಡಗಿ ಕೂತಿದ್ದಾರೆ. ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿ ಇತರರನ್ನು ಪಕ್ಕಕ್ಕೆ ಸರಿಸಿ ಒಬ್ಬ ಆಚೆ ತಲೆ ಹಾಕುತ್ತಾನೆ. ಹೀಗಾಗಿ ಕವಿ ಸತ್ಯದ ಒಂದು ಚರ್ಯೆಯನ್ನು—ತೀರಾ ವೈಯಕ್ತಿಕ ದೃಷ್ಟಿಕೋನದಿಂದ ಕಂಡ ಚರ್ಯೆಯನ್ನು ಮಾತ್ರ—ನಮಗೆ ಕಾಣಿಸುತ್ತಿದ್ದಾನೆ ಎಂದೇ ಅರ್ಥ.

(ಕವಿಕಾಣ್ಕೆಯ ಇತಿಮಿತಿ)



ನಿಸಾರರ ಹನಿಗವಿತೆಗಳ ಹಾಸುಬೀಸು

♦ ಎಂ. ಎನ್. ವ್ಯಾಸರಾವ್

ಪ್ರೊ. ನಿಸಾರ್ ಅಹಮದ್ ನಮ್ಮ ನಾಡಿನ ಅಪರೂಪ ವ್ಯಕ್ತಿತ್ವ ಉಳ್ಳ ಕವಿ. ನಾನು ಮೆಚ್ಚಿಕೊಂಡ ಕೆಲವೇ ಕವಿಗಳಲ್ಲಿ ನಿಸಾರ್ ಅಗ್ರಪಂಕ್ತಿಯಲ್ಲಿದ್ದಾರೆ. ದೈನಂದಿನ ಬದುಕಿನಲ್ಲಿ ನಮ್ಮ ಕಣ್ಣಿಗೆ ಬೀಳುವ ವಸ್ತುಗಳನ್ನು ಬಳಸಿಕೊಂಡು, ತಮ್ಮ ಮಾಂತ್ರಿಕ ಶಬ್ದ ಜಾಲದಲ್ಲಿ ಅದಕ್ಕೊಂದು ವಿಶೇಷ ಆಯಾಮ ಸೃಷ್ಟಿಸುವ, ಹೊಸ ಅರ್ಥ ಸ್ಫುರಿಸುವ ಶಕ್ತಿವಂತ ಕಾವ್ಯ ನಿಸಾರ್ ಅವರದು. ಸರಳವಾದ ಭಾಷೆ, ಸರಳವಾದ ನುಡಿಗಟ್ಟು ನಿಜ. ಅದು ನಿರ್ಮಿಸುವ ಚಿತ್ರ ಬೆರಗುಗೊಳಿಸುವಂಥದು. ಎರಡು ಧರ್ಮಗಳ, ಆಚಾರ ವಿಚಾರಗಳನ್ನು ಅತಿ ಹತ್ತಿರದಿಂದ ಬದುಕಿನುದ್ದಕ್ಕೂ ಅನುಭವಿಸುತ್ತಾ ಅದರ ಜೊತೆ ಜೊತೆಗೆ ನೆಂಟಸ್ತಿಕೆಯನ್ನು ಉಳಿಸಿಕೊಂಡಿರುವ, ಇವರ ಕಾವ್ಯ ಧರ್ಮ ವಿಭಿನ್ನವಾದದ್ದು. 'ಅಮ್ಮ ಆಚಾರ, ನಾನು,' 'ಮಾಸ್ತಿ' 'ರಾಮನ್ ಸತ್ತ ಸುದ್ದಿ'—ಇವು ಯಾವುವೂ ನಮಗೆ ಹೊರತಾಗಿ ಕಾಣಿಸುವುದಿಲ್ಲ. ನಿಸಾರ್ ಅವರ ಶಕ್ತಿ ಇರುವುದು ಇಲ್ಲೇ. ತಮ್ಮ ಅಂತರಂಗ ಜಗತ್ತು ಮತ್ತು ಹೊರ ಜಗತ್ತು, ಬದುಕು ಮತ್ತು ಕಾವ್ಯಗಳ ನಡುವೆ ಬೇರೆ ಬೇರೆಯಾಗಿ ನಿಲ್ಲಲೇ ಇಲ್ಲ. 'ಬುರ್ಕಾ' ಮತ್ತು 'ಪೀತಾಂಬರ' ಮೇಲ್ನೋಟಕ್ಕೆ ಎರಡೂ ವಸ್ತ್ರಗಳಾಗಿ ಕಾಣಿಸುತ್ತವಷ್ಟೆ. ಆದರೆ ಈ ಉಡುಗೆಗಳು ತಮ್ಮ ಭಾವಶಿಲ್ಪದಲ್ಲಿ ಆಯಾ ಧರ್ಮದ ಆಚಾರ ವಿಚಾರಗಳನ್ನು ಸೂಚಿಸುತ್ತಾ ಹೋಗುತ್ತವೆ. ತಿಳಿ ಹಾಸ್ಯದ ಒಳಗೆ ಚಿಂತನೆಗೆ ಹಚ್ಚುವ ಕಸುಬು

ನಿಸಾರ್ ಕಾವ್ಯದ ಗುಣ.

ನಿಸಾರ್ ನೀಳವಾದ ಕಾವ್ಯವನ್ನು ಗಂಭೀರವಾಗಿ ತೆಗೆದುಕೊಂಡ ಹಾಗೆ ಹನಿಗವನಗಳ ಕಡೆಗೆ ಗಮನ ಹರಿಸಿಲ್ಲ. ಇದಕ್ಕೆ ಕಾರಣ, ದೀರ್ಘ ಕವನಗಳಿಗಿರುವ ಧಾರಣ ಶಕ್ತಿ ಮಿನಿಗವನಗಳಿಗೆ ಇಲ್ಲದಿರುವುದು. ಸಮುದ್ರದ ವೈಶಾಲ್ಯ, ಆಳ, ರೌದ್ರತೆ, ಗಂಭೀರತೆ ಕೆರೆ ಅಥವಾ ಕುಂಟೆಯಲ್ಲಿ ಸಿಕ್ಕುವುದೆ? ಮಿನಿಗವನಗಳಿಗೆ ಒಂದು ಸಲ ಮಾರು ಹೋದರೆ ಮನಸ್ಸು ಅಲ್ಲೇ ಠಳಾಯಿಸುತ್ತಿರುತ್ತದೆ. ನಮ್ಮ ಯೋಚನೆ, ಭಾವ ಲಹರಿ ಎಲ್ಲವೂ ಮಿನಿಗವನದ ಚೌಕಟ್ಟಿನಲ್ಲೇ ಕೆಲಸ ಮಾಡುತ್ತಿರುತ್ತದೆ ಎನ್ನುವುದನ್ನು ನಿಸಾರ್ ಮುಂಚಿನಿಂದಲೂ ಹೇಳುತ್ತಾ ಬಂದಿದ್ದಾರೆ. ಹೀಗಾಗಿ ನಿಸಾರ್ ಅವರು ಮಿನಿಗವನಗಳ ಕಡೆಗೆ ಆಸಕ್ತಿ ವಹಿಸಲಿಲ್ಲ ಎಂದು ತೋರುತ್ತದೆ.

ಆದರೆ ಕಳೆದ ಒಂದು, ಒಂದೂವರೆ ದಶಕಗಳಿಂದ 'ಮಿನಿಗವನಗಳ ಕಾಲ' ಎನ್ನುವಷ್ಟರ ಮಟ್ಟಿಗೆ ಮಿನಿಗವನಗಳು ಸೃಷ್ಟಿಯಾಗುತ್ತಿವೆ. ಒಂದುಕಾಲದಲ್ಲಿ ಜಿ. ಪಿ. ರಾಜರತ್ನಂ, ರಾಶಿ, ದಿನಕರ ದೇಸಾಯಿ, ವಿಜಿ ಭಟ್ಟ, ಅಕಬರ ಅಲಿ ಮೊದಲಾದವರಿಂದ ಹೆಚ್ಚು ಆಡಂಬರ ಇಲ್ಲದೆ ಚುಟುಕುಗಳು ಅಲ್ಲಲ್ಲಿ ಕಾಣಸಿಕೊಳ್ಳುತ್ತಿದ್ದವು. ಅವು ವಾರ, ಮಾಸಪತ್ರಿಕೆ ಹಾಗೂ ವಿಶೇಷಾಂಕಗಳ ಪುಟಗಳಲ್ಲಿ ಫಿಲ್ಲರ್ಸ್‌ಗಳಾಗಿ ಮೂಡಿಬರುತ್ತಿದ್ದವು. ಈಗ ಇದೊಂದು ಉದ್ದಿಮೆ ಎನ್ನುವ ರೀತಿಯಲ್ಲಿ ಪುಂಖಾನುಪುಂಖವಾಗಿ ಅನೇಕರು ಬರೆಯುತ್ತಿದ್ದಾರೆ. ದೀರ್ಘ ಕವನಗಳನ್ನು ಬರೆಯುತ್ತಿದ್ದವರೂ ಸಹ ಮಿನಿ ಕವನಕ್ಕೆ ಇಳಿದಿದ್ದಾರೆ. ಅಷ್ಟೊಂದು ಪ್ರಬಲವಾಗಿ ಈ ಪ್ರಕಾರ ಬೆಳೆದಿದೆ ಎಂದರೆ ಆಶ್ಚರ್ಯವಲ್ಲ. ಕೆಲವರ ಕವಿತೆಗಳಲ್ಲಿ ಮಿಂಚಿನ ಬೆಳಕಿನ ಜೊತೆಗೆ ಚಿಂತನೆಯ ಬೆಳಕು ಇದೆ. ಇದರಿಂದಾಗಿ ಇವತ್ತು ಅವಕ್ಕೆ ಕಾಲಪುಷ್ಟಿ, ಪೋಷಣೆ, ಮನ್ನಣೆ ದೊರಕಿದೆ. ಆಕಾಶವಾಣಿ, ದೂರದರ್ಶನ ಮುಂತಾದ ಮಾಧ್ಯಮಗಳಲ್ಲೂ ಸಹ ಸ್ವತಂತ್ರವಾಗಿ ಹನಿಗವನ ಗೋಷ್ಠಿ ನಡೆಸುವಷ್ಟು ಅವುಗಳ ಘನತೆ ಏರಿದೆ. ಇಂದು ಹನಿಗವಿತೆಗಳನ್ನು ಬರೆಯುತ್ತಿರುವ ಅನೇಕ ಪ್ರತಿಭಾವಂತರಲ್ಲಿ ಮುಂಚೂಣಿಯಲ್ಲಿರುವ ಡುಂಡಿರಾಜ್, ಜರಗನಹಳ್ಳಿ ಶಿವಶಂಕರ್, ಲಕ್ಷ್ಮಣರಾವ್ ಮುಂತಾದವರ ಕವಿತೆಗಳಲ್ಲಿ ಮಿಂಚಿನ ಸೆಳಕಿನ ಜೊತೆಗೆ ಚಿಂತನೆಯ ಬೆಳಕಿದೆ.

ಹನಿಗವನಗಳ ಉದ್ದೇಶ ಮುಖ್ಯವಾಗಿ ತತ್‌ಕ್ಷಣದ ಮಿಂಚು ಹಾಗೂ ಬುದ್ಧಿಗೆ ಒಂದು ಸಣ್ಣ ಕಸರತ್ತು, ಅಷ್ಟೆ ಎನ್ನಬಹುದು. ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಈ ವರ್ಗಕ್ಕೆ ಸೇರುವುದಿಲ್ಲ.

ಹನಿಗವನಗಳನ್ನು ಕುರಿತು ನಿಸಾರ್ ತಮ್ಮ ಲೇಖನ ಒಂದರಲ್ಲಿ ಹೀಗೆ ಹೇಳುತ್ತಾರೆ: 'ಮೂರು ನಾಲ್ಕು ದಶಕಗಳ ಹಿಂದೆ ಕವಿ ಸಮ್ಮೇಳನಗಳಲ್ಲಿ ಇಂಥ ವಾಮನಗವನಗಳನ್ನು ಓದಲು ಕವಿಗೆ ಹದಿನೆಂಟೆರ್ದೆ ಬೇಕಾಗುತ್ತಿತ್ತು. ಆಗ ಅವು ಕವಿಯ ಅಭಿರುಚಿಯ ಅಪಮೌಲ್ಯಕ್ಕೆ, ಅಗಂಭೀರ ಲಘು ಮನೋವೃತ್ತಿಗೆ ಸೂಚಕವಾಗಿದ್ದವು. ಅಗ್ಗದ ಜನಪ್ರಿಯತೆಯ ಹಾತೊರೆತಕ್ಕೆ ದ್ಯೋತಕವೆನ್ನಿಸುತ್ತಿದ್ದವು. ಈಗಿನ ಕಾಲದಲ್ಲಿ ಜರುಗುವ ಕವಿ ಸಮ್ಮೇಳನಗಳಲ್ಲಿ ಹತ್ತರಲ್ಲಿ ಕನಿಷ್ಠ ಐದಾರು ಪದ್ಯಕರ್ತರಾದರೂ ಮಿನಿಗವನಗಳನ್ನು

ವಾಚಿಸಿ ಶ್ರೋತೃಗಳ ಮುಖೋಲ್ಲಾಸ ಮಾಡಿ, ಚಪ್ಪಾಳೆ ಗಿಟ್ಟಿಸದಿರುವುದೇ ಅಪರೂಪ. ದೀರ್ಘ ಪದ್ಯ ಭೋಜನ, ಮಿನಿಗವನ ವ್ಯಂಜನ. ನೆಂಜಿಕೊಳ್ಳುವ ಪರಿಕರ ರುಚಿಕರ ನಿಜ. ಆದರೆ ಅನ್ನ ಸಾರಿನ ಹಾಗೆ ತಟ್ಟೆಯ ಪೂರ್ತಿ ಅದರ ಬಡಸಾಣಿಕೆಯಾಗದು.'

ನಿಸಾರ್ ಹಾಗೆ ಹೇಳಿದರೂ ಅಪರೂಪಕ್ಕೆ ಎನ್ನುವಂತೆ ಹಲವಾರು `ಲಿಲಿಪುಟ್' ಕವನಗಳನ್ನು ೧೯೬೦ರ ದಶಕದಿಂದಲೇ ಬರೆದಿದ್ದಾರೆ. ಈ ಕವನಗಳಲ್ಲಿ ಕೆಲವು ನಿಯತಕಾಲಿಕಗಳಲ್ಲಿ ಏಕಾಕ್ಷರದ ಬೇರೆ ಹೆಸರಿನಲ್ಲಿ ಪ್ರಕಟವಾದವು. ಉಳಿದವು ಅಪ್ರಕಟಿತ ವಾದವು.

ಬಿಡಿ ದಾಳಿಂಬೆ ಬೀಜಗಳಂತಿರುವ ಕಿರುಪದ್ಯಗಳಿಗೆ ಉಪ್ಪು ಖಾರವನ್ನು ಹಚ್ಚಿ ರುಚಿಯನ್ನು ಅಧಿಕಗೊಳಿಸುವುದು ಇವುಗಳ ಉದ್ದೇಶವಾಗಿದೆ. ತಮಾಷೆ, ತಿಳಿಹಾಸ್ಯ, ತುಂಟತನ, ಲವಲವಿಕೆ, ಸಾಲುಗಳನ್ನು ಬೇಕು ಬೇಕಾದಲ್ಲಿ ಪದಚ್ಛೇದ ಮಾಡಿ, ವಿಲಕ್ಷಣ ವಾದ ಅರ್ಥ ಒಂದನ್ನು ಹಠಾತ್ತನೆ ಚಿಮ್ಮಿಸುವ ಕೌಶಲ ಹಾಗೂ ಕೊನೆಯ ಸಾಲಿನ ಅಂತ್ಯ ಪ್ರಾಸದಲ್ಲಿ ಫಕ್ಕನೆ ಉಂಟಾಗುವ ಅರ್ಥಸ್ಫೋಟ—ಇವುಗಳೇ ಮುಖ್ಯ ಸಂಗತಿಗಳು. ಅದರ ಗುರಿಯೂ ಅಷ್ಟೆ. ಅದರ ಪರಿಣಾಮ ಅಗಾಧ!

ವೈ.ಎನ್. ಕೆ.ಯವರ ಸಾಧನೆ ಈ ಪ್ರಕಾರದಲ್ಲಿ ಗಣನೀಯ. ಕವಿತೆಗಳಿಗೂ ನಿಸಾರ್ ಅವರ ಕಿರು ಕವಿತೆಗಳಿಗೂ ವ್ಯತ್ಯಾಸವಿದೆ. ವೈ.ಎನ್.ಕೆ. Pun Maker. ನಿಸಾರ್ 'ಪಾನ್' ಮೇಕರ್. ಇಲ್ಲಿ ಪಾನ್ ಎನ್ನುವುದು ಊಟದ ಅನಂತರ ತಿನ್ನುವ ರಸವತ್ತಾದ ಕವಳ! (ವೀಳೆಯದೆಲೆಯ ಬೀಡ) ಪಾನ್ ಎಂದಾದರೂ ಅನ್ನಿ 'ಪಾನ' ಎಂದಾದರೂ ಅನ್ನಿ. ಎರಡೂ ಪರಸ್ಪರ ಪೂರಕವಾಗುವುದು. 'ಪಾನ'ದ ಅನಂತರ ಅದರ ವಾಸನೆಯನ್ನು ಮುಚ್ಚಿಕೊಳ್ಳುವುದಕ್ಕೆ `ಪಾನ್' ತಿನ್ನುತ್ತಾರೆ.

ನಿಸಾರ್ ಅವರದು ಪಾನ್ ಅಥವಾ ಬೀಡಾ ರೀತಿಯ ನಾಲಗೆಯನ್ನು ಶುಚಿತ್ವ ದಲ್ಲಿಡುವ ಪದ್ಯಗಳು! ಈ ಕೆಲವು ಕವನಗಳನ್ನು ಗಮನಿಸಿ:

ಹಿತೋಪದೇಶ

'ರಸ್ತೆಯಲ್ಲಿ ನಡೆಯುವಾಗ
ಮುಂದೆ ನೋಡಿಕೊಂಡು ಹೋಗು
ಎನ್ನುತ್ತಾರೆ ತಿಳಿದವರು.
ಕೆಳಗೂ ಕಣ್ಣು ಹಾಯಿಸಬೇಡವೆ?
ಅಲ್ಲಿ ಬಿದ್ದಿರಬಹುದಲ್ಲ
ಲೈವ್ ವೈರು!'

ಇಲ್ಲಿ ಪ್ರಾಸ ಹೆಚ್ಚಿಲ್ಲ. ಬಳಸಿಕೊಂಡಿರುವ ಪದಗಳಿಗಿಂತ ಒಟ್ಟು ಅರ್ಥದ ಕಡೆಗೆ ಹೆಚ್ಚು ಒತ್ತುಕೊಡಲಾಗಿದೆ. ಬುದ್ಧಿವಾದದ ಹಿರಿಯರ ಮಾತಿದೆ. ಜೊತೆಗೆ ಎಚ್ಚರಿಕೆಯನ್ನು ನೀಡುವ ಧ್ವನಿಯೂ ಸೇರಿದೆ.

ಅನಿವಾರ್ಯ
'ಫ್ಯಾಷನ್ನೂ ಅಲ್ಲ ಮಣ್ಣು ಅಲ್ಲ
ಗೊತ್ತಿಲ್ವೆ ನಿಮ್ಗೆ ಈ ಗುಟ್ಟು?
ಜಡೆಗೆ ಕೂದ್ಲು ಕಡಿಮೆಯಾಗಿ
ಮಾಡಿಸ್ಕೊಳ್ತಾರೆ ಬಾಬ್‌ಕಟ್ಟು!'

ಇದಕ್ಕೆ ವಿವರಣೆ ಬೇಕಿಲ್ಲ. ತನ್ನಷ್ಟಕ್ಕೇ ಅರ್ಥವನ್ನು ಹೇಳಿಕೊಂಡಿದೆ!

ಹುಲಿ-ಇಲಿ
'ಕಛೇರಿಯಲ್ಲಿ ಏನಿವನ ದರ್ಪ!
ಸದಾ ಬುಸ್ಸೆನ್ನುವ ಕಾಳಿಂಗ ಸರ್ಪ;
ಬಾಯಿ ತೆರೆದನೋ ಬೈಗುಳ, ಉಗಿತ;
ಗಂಟು ಮುಸುಡಿಯ ರಕ್ತಾಕ್ಷಿ;

ಮನೆಯಲ್ಲಿ ಉಡುಗಿ ಜಂಘಾಬಲವೆ,
ಮಡದಿಯ ಕೈಯಲಿ ಊದುಗೊಳುವೆ.
ಅವಳೆದುರಾದರೆ ಗಂಡತಿಯಾಗುತ
ಹಲ್ಕಿರಿಯುವ ಸೀಡ್‌ಲೆಸ್ ದ್ರಾಕ್ಷಿ!'

ಗಂಡ ಹೆಂಡತಿಯ ವ್ಯಕ್ತಿತ್ವದ ದರ್ಶನ ಮಾಡಿಸುತ್ತದೆ ಈ ಕವನ. ಆಫೀಸಿನಲ್ಲಿ ಗಂಡ ಹೇಗಿರುತ್ತಾನೆ! ದರ್ಪ, ಕಾಳಿಂಗ ಸರ್ಪ, ಗಂಟು ಮುಸುಡಿಯ ರಕ್ತಾಕ್ಷಿ! ಅಂದರೆ ಹುಲಿ! ಮನೆಯಲ್ಲಿ ಹೆಂಡತಿಯ ಮುಂದೆ 'ಗಂಡತಿ'ಯಾಗುವ ಸೀಡ್‌ಲೆಸ್ ದ್ರಾಕ್ಷಿ! ಸೀಡ್‌ಲೆಸ್ ದ್ರಾಕ್ಷಿ, ಆಫೀಸಿನ ಗಂಟು ಮುಸುಡಿಯ ರಕ್ತಾಕ್ಷಿಗೆ ವಿರುದ್ಧ ಅರ್ಥ ಕೊಡುತ್ತದೆ. ಬೀಜವಿಲ್ಲದ ದ್ರಾಕ್ಷಿ ಮೆತ್ತಗಿರುತ್ತದೆ. ಹಲ್ಲಿರದವರೂ ಚಪ್ಪರಿಸಬಹುದಾದಷ್ಟು ಮೆತು. ನಿಸಾರ್ 'ಗಂಡತಿ' ಎನ್ನುವ ಶಬ್ದ ಪ್ರಯೋಗ ಮಾಡಿದ್ದಾರೆ. ಗಂಡನಲ್ಲಿ ಹೆಂಡತಿಯ (ಹೆಣ್ಣಿನ) ಅಂಶ ಬೆರೆತಿರುವ ಗುಣ ಸ್ವಭಾವವನ್ನು 'ಗಂಡತಿ' ಎನ್ನುವ ಪ್ರಯೋಗದಲ್ಲಿ ಕಾಣಬಹುದು. ಇದು ಇಲ್ಲಿ ವಿಶೇಷವಾದ ಅರ್ಥ ಪಡೆದಿದೆ.

ನಿಸಾರ್ ಅವರ ಕೆಲವು ಹನಿಗವನಗಳಲ್ಲಿ ವಾಸ್ತವತೆಯ ಮೂಲಕ ಚರಿತ್ರೆಯನ್ನು ನೆನಪು ಮಾಡುವ ಪ್ರಸಂಗಗಳಿವೆ. ಅದಕ್ಕೆ ಉದಾಹರಣೆಯಾಗಿ ಈ ಕವನವನ್ನು ನೋಡಬಹುದು.

ಮುಯ್ಯಿ
'ಬಾಪೂಜಿಯನ್ನು ಮುಗಿಸಿ ವರ್ಷಗಳು ಗತಿಸಿದ್ದರೂ
ಇನ್ನೂ ಮುಗಿದಿಲ್ಲ ಕೇಡು, ಕ್ರೋಧದ 'ಮೂಡು'
ಬೇಕಾದರೆ ನೀವೇ ಹೋಗಿ ಪ್ರತ್ಯಕ್ಷ ಪರೀಕ್ಷಿಸಿ
ಅಂಚೆ ಕಛೇರಿಯಲ್ಲಿ ದಿನವೂ ತೀರಿಸಿಕೊಳ್ಳುವ ಸೇಡು.'

ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಮಹಾತ್ಮ ಗಾಂಧೀಜಿಯವರ ಹತ್ಯೆಯನ್ನು

ಪರೋಕ್ಷವಾಗಿ ಅಂಚೆ ಕಛೇರಿಯ ಮೂಲಕ ನೆನಪಿಸುವ ಪ್ರಸಂಗವಿದು. ಗಾಂಧೀಜಿಯವರ ಸ್ಟಾಂಪ್ ಮೇಲೆ ದಿನವೂ ಅಂಚೆ ಕಛೇರಿಯಲ್ಲಿ ಮುದ್ರೆ ಒತ್ತುವ ರೀತಿಯನ್ನು ಕವನ ಹೇಳುತ್ತಾ ಹಳೆಯದನ್ನು ಕೆದಕುತ್ತದೆ.

'ಮಣ್ಣಿನ ಮಗನ ಆಡಳಿತ ಬಲು ಭರ್ಜರಿ
ನಾಡಿನ ಇತಿಹಾಸದಲ್ಲೇ ಗೋಲ್ಡನ್ ಛಾಪ್ಟರ್;
ಚಿರ ವಿನೂತನ ರೈತರುದ್ಧಾರದ ವೈಖರಿ;
ಪ್ರತಿ ನಿತ್ಯವೇರಿ ಕಾಂಟೆಸ, ವಿಮಾನ, ಹೆಲಿಕಾಪ್ಟರ್!'

ಈ ನಾಲ್ಕು ಸಾಲುಗಳಲ್ಲಿ ಹಿಂದೊಮ್ಮೆ ಪ್ರಧಾನಿಯಾಗಿದ್ದ ಮಣ್ಣಿನ ಮಗನ ಆಡಳಿತದ ವೈಖರಿಯನ್ನು ಕರಾರುವಾಕ್ಕಾಗಿ ಹೇಳಿಬಿಡುತ್ತಾರೆ ನಿಸಾರ್.

ನಿಸಾರ್ ವಿಮರ್ಶಕರನ್ನೂ ಬಿಡುವುದಿಲ್ಲ. ವಿಮರ್ಶಕರ ಕಣ್ಣಿಗೆ ಒಳ್ಳೆಯದು ಕಾಣಿಸು ವುದಿಲ್ಲ ಎನ್ನುವುದನ್ನು 'ಸುತ್ತಿಗೆ, ಮೊಳೆ' ಪದಗಳನ್ನು ಬಳಸಿಕೊಂಡು ವಿಮರ್ಶಕರನ್ನು ಬಣ್ಣಿಸುತ್ತಾರೆ.

'ಸುತ್ತಿಗೆ ಕೈಯ್ಯಲ್ಲಿರುವವನಿಗೆ
ಎಲ್ಲೆಲ್ಲೂ ಕಾಣಿಸುತ್ತವೆ ಭರ್ಜರಿ ಮೊಳೆ.
ವಿಮರ್ಶೆ ಕೈಗೆತ್ತಿಕೊಂಡವನಿಗೆ
ಗೋಚರಿಸುತ್ತವೆ ಬರೀ ದೋಷಪೂರ್ಣ ಕೃತಿಗಳೆ!'

ಸಾಮಾನ್ಯವಾಗಿ ಚುಟುಕುಗಳಲ್ಲಿ ವ್ಯಂಗ್ಯ ಇರುವುದು ಸಹಜ. ಅದರ ಜೊತೆಗೆ ಚಾಟಿ ಏಟಿನ ಸೆಳಕೂ ಸೇರಿದರೆ?

'ವರ್ಷವಿಡೀ ಚಾಟಿಯ ಏಟಿನ, ದುಡಿತದ ಎತ್ತಿಗೆ
ಸಂಕ್ರಾಂತಿಯ ದಿನ, ಅಹ! ಎಂತಹ ಸಿಂಗಾರ;
ಜ್ಞಾಪಿಸುವುದು ನನಗೀ ದೃಶ್ಯ ನವೆಂಬರ್ ಒಂದರ
ಸರಕಾರದ ಸಿರಿಗನ್ನಡದುದ್ಧಾರ!'
(ಉದ್ಧಾರ)

ಹಾಗೆಯೆ,

'ಅಬಕಾರಿಯಂಥ ಇಲಾಖೆಯಲ್ಲಿದ್ರೂ
ಅಳಿಯನ ಕೈ ಬಾಯಿ ಶುದ್ಧ;
ಯಾವ ಆಮಿಷಕ್ಕೂ ಮಾರು ಹೋಗೋಲ್ಲ
ಥೇಟ್ ಅಭಿನವ ಬುದ್ಧ.
—ಗುಣಗಾನ ಮಾಡ್ತಿದ್ದ ಮಾವನ ಮಾತಿಗೆ
ಮುಗುಳ್ನಕ್ಕು ಅಂದ್ಕೊಂಡೆ ನಾನು:
ಕುಡಿದೇ ಇರೋಕೆ ಹೇಗೆ ತಾನೆ ಸಾಧ್ಯ
ನೀರ್ನಲ್ಲಾಡೋ ಮೀನು!'

(ಗುಣಗಾನ)

ನಗೆಯ ಚಟಾಕಿಯಲ್ಲಿ ನೋವಿನ ದರ್ಶನವಾದರೆ?

'ಕಾಸಿದ್ದರೆ ಕೈಲಾಸ
ಇರದಿದ್ದರೆ ಕೈಲಾಸಂ.'

ಸೃಜನಶೀಲತೆಗೆ ಬಹಳಷ್ಟು ಸಹಾಯಕಾರಿ ಬಡತನ!

ಮನುಷ್ಯನ ಸ್ವಭಾವ, ಆಸೆ, ಆಮಿಷ, ಕನಸುಗಳು; ಸಣ್ಣತನ ಢೋಂಗಿತನ, ಮೋಸಗಾರಿಕೆ ಎಲ್ಲವೂ ಹನಿಗವನದ ವಸ್ತುಗಳು.

'ಕಾರ್ಯ ಸಾಧನೆಯಾದ ಮೇಲೆ
ಚಾಚಿದ ಹಸ್ತ
ಗಾಢನಿದ್ದೆಯೊಳಗಿರುವವನನೆಬ್ಬಿಸಿ
ನಿದ್ದೆ ಗುಳಿಗೆ ನೀಡಿದ ಹಾಗೆ ವ್ಯರ್ಥ!'

ಇಲ್ಲಿ 'ಹಸ್ತ'ಕ್ಕೆ ಇರುವ ಅರ್ಥ ವಿಶೇಷವಾದದ್ದು, ಒಂದು ಪಾರ್ಟಿಯ ಚಿಹ್ನೆಯಾಗ ಬಹುದು, ಇಲ್ಲವೇ ಕಾಪಾಡುವ ಚಿಹ್ನೆಯಾಗಿರಬಹುದು. ಆದರೆ ಇಲ್ಲಿ ಹೆಚ್ಚು ಸೂಕ್ತ ವಾಗುವುದು ಪಾರ್ಟಿಯ ಚಿಹ್ನೆಗೆ!

ಯೋಗ ಬಂದರೆ, ಹೀಗೆ ಬರಬೇಕು. ಇಂದಿನ ರಾಜಕಾರಣಿಗಳ ಕುರಿತು ಅತ್ಯಂತ ಮಾರ್ಮಿಕವಾಗಿ ನಿಸಾರ್ ಹೀಗೆ ಹೇಳುತ್ತಾರೆ—

'ಕಿಸೆಗೆ ಕತ್ತರಿ
ಹಾಕುತ್ತಿದ್ದ ಖದೀಮರೀಗ
ಟೇಪ್ ಕತ್ತರಿ
ಸುವ ಬಡತಿ ಪಡೆದಿದ್ದಾರೆ ಬೇಗ!'

ಏಕೆಂದರೆ ಅವರೆಲ್ಲ—

'ಕೀರ್ತಿ ನಿಮಿತ್ತಂ
ಬಹುಕೃತ ಶೇಷನ್!'

ಇಲ್ಲಿ ಶೇಷನ್—ಚುನಾವಣೆಯ ಕಮಿಷನರ್ ಹೌದು. ಹಾಗೆಯೆ ಕೀರ್ತಿ ಉಳಿಸಿ ಕೊಂಡಿರುವುದೆಂಬ ಅರ್ಥವೂ ಹೌದು.

ಕೆಲವರು ಎಲ್ಲೆಂದರಲ್ಲಿ ಅಂಟಿಕೊಳ್ಳುತ್ತಾರೆ. ಈ 'ಅಂಟಿಗ'ನನ್ನು ನೋಡಿ:

'ಬಾಲು ಬೀದಿಲಿ ಸಿಕ್ಕಾಗ
ಬೀಳ್ತಾನೆ ದುಂ
ಬಾಲು
ಮಾಡ್ತಾನೆ ಚಾಲು
ಕೊರೆಯೋಕೆ
ಸೊಲ್ಲಿನ ಜೊತೆ
ಜೊಲ್ಲು ಎರೆಯೋಕೆ

ಕಳಚಿಕೊಳ್ಳೋಕೆ ಬಿಡ
ಈ ನರರೂಪಿ ಉಡ—
ಅದಕ್ಕೇ ಅವನಿಗನ್ನೋದು
        ನಾವೆಲ್ಲ:
        ಬಾಲು
ನೀನು ಮನುಷ್ಯ
        ಅಲ್ಲ
        ಫೆವಿ-
        ಕಾಲು'

ಇದು ಹೆಚ್ಚು ಕಡಿಮೆ ಎಲ್ಲರಿಗೂ ಆಗುವ ಅನುಭವ. ನನಗೆ ಇಷ್ಟವಾಗಿದ್ದು 'ನರರೂಪಿ ಉಡ' ಹಾಗೂ 'ಫೆವಿಕಾಲು' ಪದಗಳು. ಉಡ ಕಚ್ಚಿಕೊಳ್ಳುವ ಬಿಗಿಯಷ್ಟೇ ಫೆವಿಕಾಲೂ ಕಚ್ಚಿಕೊಳ್ಳುತ್ತದೆ!

ಅಪ್ಪಟ ಸತ್ಯ ಯಾವುದು? ಇದಿರಬಹುದಾ?

'ಉಪದೇಶಿಸುವ ರವೆಯಷ್ಟಾದರೂ
ಪರಿಪಾಲಿಸದವರು ಮೂವರು:
ಪ್ರೀಸ್ಟ್, ಮಠೇಶ, ಮುಲ್ಲ
ಬುಕ್ ಬ್ರಂಜಾಲುಗಳೇ ಎಲ್ಲ!'

ನಿಸಾರರ ಹನಿಗವನಗಳು ಮುದ ನೀಡುತ್ತವೆ, ಯೋಚಿಸುವಂತೆ ಮಾಡುತ್ತವೆ, ಕಚಗುಳಿ ಇಡುತ್ತವೆ, ಗಟ್ಟಿಯಾಗಿ ನಕ್ಕು ಸುತ್ತಲೂ ಗಾಬರಿಯಿಂದ ನೋಡುವಂತೆ ಮೈ ಮರೆಸುತ್ತವೆ. ಈ ಕವನಗಳನ್ನು ನೋಡಿ:

1) 'ನೋಡ್ತಾ ಅವಳ್ನ ನಿಂತ್ಕೋ ಬ್ಯಾಡ
ಸುರಿಸ್ತಾ ಬಾಯಲ್ಲಿ ಜೊಲ್ಲು.
ತಿಳೀದ್ಹಂಗ್ ನಿನ್ನನ್ನೇ ನೋಡ್ತಾ ಔನೆ
ಪೋಲಿಸ್ ಕಾನ್ಸ್‌ಟೇಬಲ್ಲು!'
(ಎಚ್ಚರಿಕೆ)

2) 'ಬಿಟ್ಟಿದ್ದ ಭರ್ಜರಿ ಮೀಸೆ
ಮುಚ್ಚಿ ಹೋಗೋ ಹಾಗೆ ಮುಖ.
ಎಲ್ಲಾ ಅನ್ನೋರು 'ಉಗ್ರಪ್ಪ, ಉಗ್ರಪ್ಪ'
ಈಗ ಬೇರೇನೇ ವರಸೆ:
ಬೆಳೆಸಿದ್ದಾನೆ ನಖ
ಜನ ಕರೀತಾರೆ 'ಉಗುರಪ್ಪ, ಉಗುರಪ್ಪ.'
(ಬದಲಾವಣೆ)

3) 'ಸ್ಕೂಲಲಿ ಎಲ್ಲರಿಗಿಂತಲೂ ಮುಂದೆ
ಥೇಟ್ ಅಭಿನವ ಚಾಣಕ್ಯ.

ಕುಲ, ಶಿಫಾರಸು—ಎರಡಿರಲಿಲ್ಲ
ಎಂದೇ ಹೋಟೆಲಲ್ಲಿ ಮಾಣಿಕ್ಯ!'
(ಆಗ-ಈಗ)

ಹೀಗೆ, ಅನೇಕ ಹನಿಗವನಗಳು ನಿಸಾರ್ ಅವರಿಂದ ರಚಿತವಾಗಿವೆ. ಅವರ ದೀರ್ಘ ಕಾವ್ಯದ ಹಿರಿಮೆಯಷ್ಟೆ ಈ ಲಿಲಿಪುಟ್ ಕವನಗಳು ಅರ್ಥದಲ್ಲಿ ಹಿರಿದಾಗಿವೆ. ಮಾತುಗಾರಿಕೆಯ ಮಹತ್ವವನ್ನು ಅರಿತು, ತುಂಟಾಟಿಕೆಯ ಹುಡುಗುತನವನ್ನು ಮೆರೆದು ಮಾಮೂಲಿ ಪ್ರಾಸಗಳನ್ನು ಹೊರತು ಪಡಿಸಿ ಅರ್ಥದ ಉದ್ದೀಪನಗೊಳಿಸುವ ಈ ಹನಿಮಿನಿ ಗವಿತೆಗಳು ವಿಶೇಷವಾಗಿವೆ. ತಿಣುಕದೆ, ಅತಿಯಾಗಿ ತಲೆ ತಿನ್ನದೆ ಸಾಧಾರಣ ಸ್ಥಿತಿಯಲ್ಲೇ ಅನುಭವಿಸಿ ಆನಂದಿಸಬಹುದಾದ ಕವಿತೆಗಳು ಇವು. ಕೆಲವನ್ನು ಮಾತ್ರ ನಾನು ಇಲ್ಲಿ ಹೇಳಿದ್ದೇನೆ. ಇಲ್ಲಿ ಸಾಕಷ್ಟು ಕವಿತೆಗಳಿವೆ. ಕೊನೆಯದಾಗಿ 'ಕವಿ-ಲೋಕ' ಪದ್ಯವನ್ನು ಹೇಳಿ ಲೇಖನ ಮುಗಿಸುತ್ತೇನೆ. ಇಲ್ಲಿ ಹಾಸ್ಯದ ನೆರವಿಲ್ಲದೆ ಗಂಭೀರವಾಗಿ ನಿರೂಪಿಸುತ್ತ ಒಂದು ಅತಿಶಯಾರ್ಥವನ್ನು ಕನಿಷ್ಠತಮ ಮಾತುಗಳಲ್ಲಿ ಹೇಳುವ ಕಲೆಗಾರಿಕೆಯನ್ನು ಗಮನಿಸಿ :

'ಲೋಕವೇ, ನಿನಗಂಟಿಕೊಂಡಿರುವನಕ
ನನ್ನ ಚಟುವಟಿಕೆ. ಬೇರ್ಪಟ್ಟೆನೆ? ನಿರರ್ಥಕ.
ಕೆಟ್ಟು ಹೋದ ಬಲ್ಬಿನ ಥರ.
ನಾನಿರಲಿ ಇರದಿರಲಿ, ನಿನಗಾವ ಬಾಧಕ?
ನಡೆಯುತ್ತಲೇ ಇರುವೆ ನಿನ್ನಷ್ಟಕ್ಕೆ ಸುಮ್ಮನೆ.
ಆದರಿಷ್ಟೆ: ನಾನಿದ್ದರೆ ನಿನ್ನೊಂದಿಗೆ
ಮುಂದಿಗೆ ನಿನ್ನ ಚಲನ ವಲನದ ಸೂಚಕ:
ನೀನು ಗಡಿಯಾರ
ನಾನದರ ಲೋಲಕ.'

ಕವಿ ಸಾಹಿತಿಗಳ ಪಾಲಿಗೆ ವೈವಿಧ್ಯಮಯ ಜೀವನಾನುಭವ ನಾವೆಗೆ ನೀರಿದ್ದಂತೆ. ಅದನ್ನು ಆರ್ಜಿಸಿಕೊಂಡಷ್ಟೂ, ಅವರ ಕಾವ್ಯದ ವರ್ಚಸ್ಸು, ಕಳೆ ವರ್ಧಿಸುತ್ತದೆ. ಅನೇಕಾನೇಕ ಆಕರಗಳಿಂದ ತಿಳಿವನ್ನು ಆಪೋಷಿಸಿ ಮನಸ್ಸನ್ನು ಮೋಪಾಗಿಸಿ ಕೊಳ್ಳಬೇಕು; ಹೃದಯವನ್ನು ಹೃಷ್ಟಗೊಳಿಸಿಕೊಳ್ಳಬೇಕು. ಹಲವು ಸತ್ವಭಾವ ಗಳನ್ನು ವಾತಾಪಿಸಿಕೊಂಡು ಅವು ಸ್ವಚೇತನಕ್ಕೆ ಹಿತ ಧಾತುಗಳಾಗುವಂತೆ ಪರಿವರ್ತಿಸಿ ಸುವಿಚಾರ, ಸ್ವಸಂವೇದನೆಗಳಾಗಿಸಿಕೊಳ್ಳಬೇಕು. ಹಾಲನ್ನು ಅಮೃತ ವಾಗಿಸಿಕೊಳ್ಳುವ, ನೀರನ್ನು ಗಂಗಾ ತೀರ್ಥವನ್ನಾಗಿ ಮಾರ್ಪಡಿಸಿಕೊಳ್ಳುವ ತನ್ನತೆ ಲೇಖಕನಿಗೆ ಇರಬೇಕು.

(ಸಾಹಿತಿಯ ಸ್ವಾನುಭವದ ಮಹತ್ವ)



ನಿಸಾರರ ಹನಿಗವಿತೆಗಳ ಅತಿಶಯತೆ

♦ ಎಚ್. ಡುಂಡಿರಾಜ್

ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿರುವ ನಾಡೋಜ ಕೆ.ಎಸ್. ನಿಸಾರ್ ಅಹಮದ್ ಅವರು ಹನಿಗವನಗಳನ್ನೂ ಬರೆದಿದ್ದಾರೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಹನಿಗವನ, ಚುಟುಕುಗಳನ್ನು ಓದಿ ಆನಂದಿಸುವವರು, ಕೇಳಿ ಖುಷಿ ಪಡುವವರು ಈಗ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೂ ಗಂಭೀರ ವಿಮರ್ಶೆಯ ವ್ಯಾಪ್ತಿಯಿಂದ ಕಿರುಗವನಗಳು ಹೊರಗುಳಿದಿರುವುದು ವಿಚಿತ್ರ ಅನ್ನಿಸುತ್ತದೆ. ಖಾಸಗಿ ಕೂಟಗಳಲ್ಲಿ ಹನಿಗವನಗಳನ್ನು ಮೆಚ್ಚುವ ವಿಮರ್ಶಕರು ಬರವಣಿಗೆಯಲ್ಲಿ ಅದನ್ನು ದಾಖಲಿಸಲು ಹಿಂದೆ ಮುಂದೆ ನೋಡುತ್ತಾರೆ. ಕೆಲವು ಕವಿಗಳಿಗೂ ಅಷ್ಟೆ. ಸಣ್ಣ ಕವನಗಳನ್ನು ಬರೆದರೆ ತಾವೆಲ್ಲಿ ಸಣ್ಣ ಕವಿಗಳಾಗಿ ಬಿಡುತ್ತೇವೋ ಎಂಬ ಭಯ! ವಿಮರ್ಶಕರು ಏನೆಂದಾರು ಎಂಬ ಹಿಂಜರಿಕೆ. ಮಹಾ ಕಾವ್ಯವನ್ನು ಬರೆದ ರಾಷ್ಟ್ರಕವಿ ಕುವೆಂಪು ಅವರು, ಶ್ರೇಷ್ಠ ಕಾದಂಬರಿಗಳನ್ನು ರಚಿಸಿದ ಚದುರಂಗರಂಥವರು, ಜಿ.ಎಸ್.ಎಸ್, ಕಣವಿಯವರಂಥ ಹಿರಿಯ ಕವಿಗಳು ಕಿರುಗವನಗಳನ್ನು ಬರೆದಿರುವುದು ಬಹುಶಃ ಅವರಿಗೆ ಗೊತ್ತಿಲ್ಲ.

ಸಹಜ ಕವಿಗಳಾದ ನಿಸಾರ್ ಅವರು ವಿಮರ್ಶೆಗೆ ಅಂಜಿದವರಲ್ಲ. `ವಿಮರ್ಶಕ ಅಂದರಿಕಿ ಮಂಚಿವಾಡಯ್ಯ' ಎಂಬ ಕವಿತೆಯಲ್ಲಿ ಅವರು ಕೆಲವು ವಿಮರ್ಶಕರ ಮುಖವಾಡಗಳನ್ನು, ಸೋಗುಗಳನ್ನು, ಹುಸಿ ಪೋಸುಗಳನ್ನು ಬಹಳ ಚೆನ್ನಾಗಿ

ವಿಡಂಬಿಸಿದ್ದಾರೆ. ನವ್ಯದ ಸಂದರ್ಭದಲ್ಲಿ ಬೇರೆಲ್ಲ ಕವಿಗಳು ವಿಮರ್ಶಕರನ್ನು ಮೆಚ್ಚಿಸಲೋ ಎಂಬಂತೆ ಬುದ್ಧಿಪೂರ್ವಕವಾಗಿ ಸಂಕೀರ್ಣ ಕವನಗಳನ್ನು ರಚಿಸುತ್ತಿದ್ದಾಗ ನಿಸಾರರು 'ಮನೋರಮಾ, ಮನೋರಮಾ, ಮಲಗೋಬದ ಗಮಗಮ' ಎಂಬಂಥ ಸರಳವಾದ ಸಾಲುಗಳೂ ಕಾವ್ಯಾನುಭವ ನೀಡುತ್ತವೆ ಎಂಬುದನ್ನು ತೋರಿಸಿ ಕೊಟ್ಟವರು. ಕಾವ್ಯದ ಎಲ್ಲ ಸಾಧ್ಯತೆಗಳನ್ನು ಶೋಧಿಸುತ್ತ ಓದುಗರಿಗೆ ವೈವಿಧ್ಯಮಯವಾದ ಕವಿತೆಗಳನ್ನು ನೀಡುತ್ತ ಬಂದಿರುವ ನಿಸಾರ್ ಹನಿಗವನಗಳ ಬಗ್ಗೆ ಅನಾವಶ್ಯಕ ಮಡಿವಂತಿಕೆ ತೋರಿದವರಲ್ಲ. ಕಿರುಗವನಗಳ ಶಕ್ತಿ ಹಾಗೂ ಮಿತಿಗಳನ್ನು ಅರಿತ ಅವರು ಆಗಾಗ ಅವುಗಳನ್ನು ಬರೆಯುತ್ತಾ ಬಂದಿದ್ದಾರೆ. ಅವರ ಬಹಳಷ್ಟು ಕಿರುಗವನಗಳು 'ನಿ' ಎಂಬ ಒಂದಕ್ಷರದ ಹೆಸರಲ್ಲಿ ವಿಶೇಷಾಂಕಗಳಲ್ಲಿ ಪ್ರಕಟವಾಗಿವೆ. ಹೀಗಾಗಿ ಅನೇಕರಿಗೆ ಅವು ನಿಸಾರರವು ಎಂದು ಗೊತ್ತಾಗಲಿಲ್ಲ. ಅವರು ಬರೆದ ಎಲ್ಲ ಕಿರುಗವನಗಳು 'ಮಿಂಚಿಕೆಗಳು' ಎಂಬ ಶೀರ್ಷಿಕೆಯಲ್ಲಿ ಮುಂದೆ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ.

ನಿಸಾರರು ಕಿರುಗವನಗಳನ್ನೂ ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂಬುದು ಈ ಸಂಕಲನ ಓದಿದಾಗ ಸ್ಪಷ್ಟವಾಗುತ್ತವೆ. ಚುಟುಕ ಹಾಗೂ ದೀರ್ಘ ಕವನಗಳ ನಡುವಣ ವ್ಯತ್ಯಾಸವನ್ನು ಅವರು ಹೀಗೆ ಕಂಡರಿಸಿದ್ದಾರೆ :

'ಚುಟುಕ ಚಿಲ್ಲರೆ
ಕವನ ನೋಟು
ಕವನ ನೌಕೆ
ಚುಟುಕ ಬೋಟು'

ಬರೇ ನೌಕೆ ಇದ್ದರೆ ದಡ ಸೇರಲು ಆಗುವುದಿಲ್ಲ. ಹಾಗೆಯೇ ಬರೇ ನೋಟುಗಳಿದ್ದರೆ ವ್ಯವಹಾರ ನಡೆಯುವುದಿಲ್ಲ. ಈ ರೀತಿಯಾಗಿ ಅತ್ಯಂತ ಸಮರ್ಪಕವಾದ ರೂಪಕಗಳ ಮೂಲಕ ನಿಸಾರರು ಚುಟುಕುಗಳ ಅಗತ್ಯವನ್ನು ತೋರಿಸಿಕೊಟ್ಟಿದ್ದಾರೆ.

ಹನಿಗವನ, ಚುಟುಕುಗಳು, ಹಾಸ್ಯಕವನ ಮುಂತಾದ ಆಕರ್ಷಣೆಗಳನ್ನು ಮರೆತು, ಜನಪ್ರಿಯತೆಗೆ ಮಾರುಹೋಗದೆ ಶ್ರೇಷ್ಠ ಸಾಹಿತ್ಯವನ್ನು ಮಾತ್ರ ರಚಿಸಬೇಕು ಎನ್ನುವ ವಾದವನ್ನು ನಿಸಾರ್ ಅವರು ಒಪ್ಪುವುದಿಲ್ಲ. 'ತ್ಯಜಿಸಿದರೆ' ಎಂಬ ಕಿರುಗವನದಲ್ಲಿ ಅವರು ಹೀಗೆ ಹೇಳಿದ್ದಾರೆ:

'ಬೆಸ್ಟ್ ಅಲ್ಲದ್ದನ್ನು ಡಸ್ಟ್‌ಗೆ
ಬೆಟರ್ ಅಲ್ಲದ್ದನ್ನು ಗಟರ್‌ಗೆ
ಬಿಸಾಡಿದರೆ, ಸ್ವಾಮಿ—
ಬಾಳಿನಲ್ಲಿ ಬಳಸುವುದಕ್ಕೆ
ಬರುವುದು ಬಹಳ ಕಮ್ಮಿ.'

ಕಾವ್ಯ ಇರುವುದು ಕವನದ ಗಾತ್ರದಲ್ಲಲ್ಲ. ಮಹಾಕಾವ್ಯವೆಂಬ ಹೆಸರಿನಲ್ಲಿ ಪ್ರಕಟವಾದ ಎಷ್ಟೋ ಕೃತಿಗಳು ಆಕಾರದಲ್ಲಿ ಪದ್ಯಗಳಂತೆ ಕಂಡರೂ ಕಾವ್ಯಾಂಶದ ಕೊರತೆಯಿಂದಾಗಿ ಕೆಟ್ಟ ಗದ್ಯದ ಅನುಭವವನ್ನು ನೀಡುವುದುಂಟು. ಅದೇ ರೀತಿ ಕಾವ್ಯದ

ಮಾಂತ್ರಿಕ ಸ್ಪರ್ಶವಿದ್ದರೆ ಮೂರು ಸಾಲಿನ ರಚನೆಯೂ ಗಾಢ ಪರಿಣಾಮವನ್ನು ಬೀರಬಹುದು. `ಗುಣದ ಗರಿಮೆ` ಎಂಬ ಹನಿಗವನದಲ್ಲಿ—

'ಹಂಡೆ ಹಾಲಿಗೆ ತೊಟ್ಟು ಹುಳಿ,
ಬಂಡೆಗೆ ಉಳಿ;
ಭಾರೀ ಬಂಗಲೆಗೆ ಹಿಡಿಯಷ್ಟು ಬೀಗ;
ಅಂಕುಶದೆದುರು ಜೀತದಾಳು ಸಲಗ.
ಪಟ್ಟಣಗಳ ಹುಟ್ಟಳಿಸುವ ತಾಕತ್ತಿದೆ
ಪರಮಾಣು ಕಣದಲ್ಲಿ;
ಹೆಚ್ಚಳ ಇರುವುದು ಆಕಾರ, ಗಾತ್ರದಲ್ಲಿ ಅಲ್ಲ—
ಆಂತರಿಕ ಗುಣದಲ್ಲಿ.'

ಅನ್ನುವ ಮೂಲಕ ಕವಿ ನಿಸಾರರು ಕಿರುಗವನಗಳ ಶಕ್ತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

'ಮಿಂಚಿಕೆಗಳು' ಸಂಕಲನದ ಕಿರುಗವನಗಳನ್ನು ಓದುತ್ತಾ ಹೋದರೆ ವಸ್ತು ಹಾಗೂ ಶೈಲಿಯಲ್ಲಿ ನಿಸಾರರು ತೋರಿರುವ ವೈವಿಧ್ಯವನ್ನು ಕಂಡು ಅಚ್ಚರಿಯಾಗುತ್ತದೆ. ಒಂದೇ ರೀತಿಯ ನೀರಸವಾದ ಚುಟುಕುಗಳನ್ನು ಬರೆಯುತ್ತ ಈ ಕಾವ್ಯ ಪ್ರಕಾರದ ಹೆಸರನ್ನು ಕೆಡಿಸುತ್ತಿರುವ ಉದಯೋನ್ಮುಖ ಕವಿಗಳು (ಕೆಲವು ಅಸ್ತೋನ್ಮುಖರು ಕೂಡಾ) ನಿಸಾರರ ಕಿರುಗುವನಗಳನ್ನು ಓದಬೇಕು. ಇಲ್ಲಿ ಖುಷಿ ಕೊಡುವ ಚುಟುಕಗಳಿವೆ, ಚಿಂತನ ಪರವಾದ ಕಿರುಗವನಗಳಿವೆ. ರಂಜನೆಯೊಂದಿಗೆ ಚಿಂತನೆಯನ್ನು ಪ್ರಚೋದಿಸುವ ಹನಿಗವನಗಳೂ ಇವೆ.

ಒಳ್ಳೆಯ ಕಿರುಗವನಗಳಲ್ಲಿ ಯಾವ ಯಾವ ಅಂಶಗಳು ಇರಬೇಕೆಂಬುದು ನಿಸಾರರಿಗೆ ಚೆನ್ನಾಗಿ ತಿಳಿದಿರುವಂತಿದೆ. ಅಥವಾ ಅವರ ಲೇಖನಿಯಲ್ಲಿ ಅವು ಸಹಜವಾಗಿ ಹರಿದು ಬರುತ್ತವೆಯೋ ಏನೋ. ಒಟ್ಟಿನಲ್ಲಿ ಹನಿಗವನಗಳಿಗೆ ಅಗತ್ಯವಾದ ಲಯ, ಅನಿರೀಕ್ಷಿತ ಪ್ರಾಸಗಳು, ಚಾಟೂಕ್ತಿಗಳು, ಪದಗಳ ಆಟ, ಶ್ಲೇಷೆ, ವಿಡಂಬನೆ, ಧ್ವನಿ ರಮ್ಯತೆ, ರೂಪಕ ಶಕ್ತಿ, ಅಪರೂಪದ ಹೋಲಿಕೆಗಳು, ತಿಳಿ ಹಾಸ್ಯ ಎಲ್ಲವೂ ನಿಸಾರರ ಹನಿಗವನಗಳಲ್ಲಿವೆ.

ಪದಗಳ ಆಟದ ಮೂಲಕ ಓದುಗರಿಗೆ ಮುದ ನೀಡುವ ಹನಿಗವನಗಳಿಗೆ ಉದಾಹರಣೆಯಾಗಿ ಇವುಗಳನ್ನು ಗಮನಿಸಬಹುದು.

'ಶಿಲ್ಪಿಯೋಗಿಯ ಕೈಗೆ
ಸಿಕ್ಕಿದ ಒರಟು ಕಲ್ಲು
ಕೇವಲ ಕಲೆಯಲ್ಲ
ಅತ್ಯದ್ಭುತ ಮಿರಾಕಲ್ಲು.' (ಪವಾಡ)

miracle ಎಂಬ ಇಂಗ್ಲಿಷ್ ಶಬ್ದದಲ್ಲಿ ಕನ್ನಡದ ಕಲ್ಲನ್ನು ಕವಿ ಹುಡುಕಿದ್ದಾರೆ.

ಶಬ್ದಗಳನ್ನು ಕತ್ತರಿಸುವ ಮೂಲಕ ವಿಶೇಷ ಅರ್ಥಗಳನ್ನು ಸ್ಫುರಿಸುವ ಕ್ರಮವನ್ನು ಹನಿಗವನಗಳಲ್ಲಿ ಅನೇಕರು ಮಾಡಿದ್ದಾರೆ. ಇಂಥ ಹನಿಗವನಗಳಲ್ಲಿ ಸಾಮಾನ್ಯವಾಗಿ

ವಿಡಂಬನೆ, ತಮಾಷೆ ಇರುತ್ತದೆ. ಗಂಭೀರವಾದ ಉದ್ದೇಶವನ್ನು ಹೊಂದಿದ ಕವನಗಳಲ್ಲಿ ಕವಿಗಳು ಪದಗಳ ಜೊತೆ ಆಡುವುದು ಕಡಿಮೆ. ಆದರೆ ನಿಸಾರರು 'ಅಸ್ತಮಾನ' ಎಂಬ ಕವನದಲ್ಲಿ 'ಹರವಿ' ಎಂಬ ಪದವನ್ನು ಒಡೆದು ಪನ್ ಮಾಡುವ ಮೂಲಕ ಸೂರ್ಯಾಸ್ತದ ಸುಂದರ ದೃಶ್ಯವನ್ನು ಕಟ್ಟಿಕೊಡುತ್ತಾರೆ. ಆ ಹನಿಗವನ ಹೀಗಿದೆ:

'ರವಿ
ಕೂತಿದ್ದಾನೆ
ಪಡುವಣದ ಅಂಗಡಿಯಲ್ಲಿ
ಸೀರೆಗಳ
ಹ
ರವಿ.' (ಅಸ್ತಮಾನ)

ಇದೇ ರೀತಿ—

Ramzan**ನಲ್ಲಿ**
ಇದ್ದಾನೆ ರಾಮು
Deepavaliಯಲ್ಲಿ
ಇದ್ದಾನೆ ಅಲಿ,

ಅನ್ನುವದಲ್ಲಿ ಕೂಡಾ ಪದಗಳೊಂದಿಗಿನ ಆಟ, ಭಾವೈಕ್ಯದಂಥ ಗಂಭೀರ ಕಾಳಜಿಯನ್ನು ವ್ಯಕ್ತಪಡಿಸಲು ಬಳಕೆಯಾಗಿದೆ.

ಲಯಗಾರಿಕೆ ಹಾಗೂ ಪ್ರಾಸ ಚುಟುಕುಗಳಿಗೆ ಅಗತ್ಯ. ಆದರೆ ಪ್ರಾಸಗಳು ಹೊಸದಾಗಿರಬೇಕು. ನಿಸಾರರ ಚುಟುಕುಗಳಲ್ಲಿ ಹೊಸದೆನ್ನಿಸುವ ಪ್ರಾಸಗಳು ಧಾರಾಳವಾಗಿ ಸಿಗುತ್ತವೆ. ಉದಾಹರಣೆಗೆ:

'ಬಾಲು
ಬೀದೀಲಿ ಸಿಕ್ಕಾಗ
ಬೀಳ್ತಾನೆ ದುಂ-
ಬಾಲು.........
ಮನುಷ್ಯ ಅಲ್ಲ
ಛೇವಿ-
ಕಾಲು.'

ಈ ಹನಿಗವನವನ್ನು ಓದಿ. ಇಲ್ಲಿ ಚುರುಕಾದ ಪ್ರಾಸಗಳ ಜೊತೆಗೆ ಅನಿರೀಕ್ಷಿತ ಅಂತ್ಯವೂ ಇರುವುದರಿಂದ ಕವನ ಪಂಚ್ ಆಗುತ್ತದೆ.

'ಮಯೂರ'ಕ್ಕಿಂತ 'ಸುಧಾ' ವಾಸಿ
ಅಂದ್ರೊಮ್ಮೆ ಗುಂಡಯ್ಯ ಶೆಟ್ಟಿ.
ಸಾಹಿತ್ಯ ಪ್ರೇಮಕ್ಕೆ ಅಚ್ಚರಿಪಟ್ಟು
ಅಂದ್ಕೊಂಡೆ : ಆಸಾಮಿ ಗಟ್ಟಿ.

ಆಮೇಲೆ ಅರಿತೆ ಶೆಟ್ರು ಆ ದಿವ್ಸ
ಆಡಿದ ಮಾತಿನ ಗುಟ್ನ—
'ಅನುಭವದ ಮಾತು ನಾನಂದದ್ದು
ಕಟ್‌ಬಹುದು ದೊಡ್ಡ್ ದೊಡ್ಡ್ ಪೊಟ್ನ!'

`ಅನಿವಾರ್ಯ` ಎಂಬ `ಚುಟುಕ`ದಲ್ಲೂ ಕೊನೆಯಲ್ಲಿ ಹಾಸ್ಯ ಸ್ಫೋಟಗೊಳ್ಳುತ್ತದೆ. ಆ ಚುಟುಕ ಹೀಗುಂಟು:

'ಫ್ಯಾಷನ್ನು ಅಲ್ಲ ಮಣ್ಣು ಅಲ್ಲ,
ಗೊತ್ತಿಲ್ವೆ ನಿಮ್ಗೆ ಈ ಗುಟ್ಟು?
ಜಡೆಗೆ ಕೂದ್ಲು ಕಡಿಮೆಯಾಗಿ
ಮಾಡಿಸಿಕೊಳ್ತಾರೆ ಬಾಬ್‌ಕಟ್ಟು.' **(ಅನಿವಾರ್ಯ)**

ನಾ. ಕಸ್ತೂರಿ ಮತ್ತು ಬೀchiಯವರು ಗದ್ಯದಲ್ಲಿ ಹೊಸ ಹೊಸ ಪದಗಳನ್ನು ಸೃಷ್ಟಿಸಿದ್ದರೆ ನಿಸಾರರು ಕಾವ್ಯದಲ್ಲಿ ಆ ಕೆಲಸ ಮಾಡಿದ್ದಾರೆ. 'ಇಸು' ಪ್ರತ್ಯಯದ ಮೂಲಕ ಹೊಸ ಶಬ್ದಗಳನ್ನು ಟಂಕಿಸುವುದು ಅವರಿಗೆ ಪ್ರಿಯವಾದದ್ದು ಎಂಬುದು ಅವರ ಇಡಿಗವನಗಳನ್ನು ಓದಿದವರಿಗೆ ಗೊತ್ತು. `ಮಿಂಚಿಕೆ'ಗಳಲ್ಲೂ ನಿಸಾರ್ ಅನೇಕ ಹೊಸ ಪದಗಳನ್ನು ಹೊಸೆದಿದ್ದಾರೆ. `ತಪ್ಪೇನು?' ಎಂಬ ಹನಿಗವನದಲ್ಲಿ ಅವರು—

'ಅಸೂಯೆ ಬಂದ್ರೆ
ಆಕಳಿಗೆ
'ಹಸೂಯೆ'
ಅಂದ್ರೆ
ಏನ್ ತೊಂದ್ರೆ?' (ತಪ್ಪೇನು?)

ಎಂದು ಕೇಳುತ್ತಾರೆ. ತೊಂದರೆ ಏನೂ ಇಲ್ಲ. ಕವಿಯ ತುಂಟಾಟದಿಂದ ಓದುಗರಿಗೆ ಖುಷಿಯಾಗುತ್ತೆ. ಅಕ್ಷರಗಳನ್ನು ಅಷ್ಟಿಷ್ಟು ತಿರುಚಿ ಹೊಸ ಶಬ್ದಗಳನ್ನು ಸೃಷ್ಟಿಸುವ ಕಲೆ ನಿಸಾರರಿಗೆ ಸಿದ್ಧಿಸಿದೆ ಎಂಬುದಕ್ಕೆ 'ಖಳಾವಿದ'. 'ದುರ್ಬದ್ಧಿ ಜೀವಿ', 'ಹಾರಾಧ್ಯ'ರು, 'ಶೌಚನೀಯ'. 'ಇಲಿಕಾಪ್ಟರ್' ಮುಂತಾದ ಅನೇಕ ಉದಾಹರಣೆಗಳನ್ನು ಕೊಡಬಹುದು. ಟ್ಯೂನ್ ಕದ್ದ ಸಂಗೀತ ನಿರ್ದೇಶಕ ಅನು ಮಲಿಕ್‌ನನ್ನು 'ಸ್ವರಗಳ್ಳ' ಅನ್ನುವುದು, ರಂಗೋಲಿ ತಪ್ಪಾದಾಗ 'ರಾಂಗೋಲಿ' ಆಗುವುದು, ಸೋರುವ ಮನೆಯನ್ನು 'ನಯಾ ಘರ' ಎಂದು ಕರೆದದ್ದು ನಗು ಉಕ್ಕಿಸುತ್ತವೆ.

ಶಬ್ದವಿಲಾಸದ ತಮಾಷೆಯ ಕಿರುಗವನಗಳ ನಡುವೆ ಪರಿಣಾಮಕಾರಿಯಾದ ಹೋಲಿಕೆಗಳು, ರೂಪಕಗಳು, ಧ್ವನಿರಮ್ಯತೆ ಮತ್ತು ಚಿತ್ರಕ ಶಕ್ತಿಯ ಮೂಲಕ ಗಾಢವಾದ ಕಾವ್ಯಾನುಭವ ನೀಡುವ ಹನಿಗವನಗಳೂ ಈ ಸಂಕಲನದಲ್ಲಿವೆ. ಉದಾಹರಣೆಗೆ 'ದೂರದಿಂದ' ಎಂಬ ಈ ಹನಿಗವನದಲ್ಲಿ ಕಾಣುವ ಪ್ರತಿಮೆ ಎಷ್ಟು ಚೆನ್ನಾಗಿದೆ ನೋಡಿ.

'ಶಿಕಾರಿ
ಪುರದ ದಾರಿಯ

ಬಿಳಿ ಮನೆಯ ಹೆಂಚಿನ ಮೇಲೆ
ರಾಶಿ ರಾಶಿ ಕೆಂಪು ಮೆಣಸಿನಕಾಯಿ:
ಮೊಲ ಕಚ್ಚಿದ ನಾಯಿ ಬಾಯಿ.' (ದೂರದಿಂದ)

ಇಲ್ಲಿ 'ಶಿಕಾರಿಪುರ' ಎಂಬುದನ್ನು ಕತ್ತರಿಸಿದ್ದೂ ಅರ್ಥಪೂರ್ಣವಾಗಿದೆ.

ನಿಸಾರ್ ಅಹಮದ್ ಅವರು ಹನಿಗವನಗಳನ್ನು ಬರೆದಿರುವುದು ಮತ್ತು ಅವುಗಳು ತುಂಬಾ ಕಲಾತ್ಮಕವಾಗಿರುವುದು ಅಚ್ಚರಿ ಪಡುವ ಸಂಗತಿಯಲ್ಲ. ಅವರು ಈವರೆಗೆ ಬರೆದ ಅನೇಕ ದೀರ್ಘ ಕವನಗಳಲ್ಲಿ ಅಲ್ಲಲ್ಲಿ ಮಿಂಚುವ ಸಾಲುಗಳು ಪ್ರತ್ಯೇಕವಾಗಿ ಓದಿಕೊಂಡರೆ ಹನಿಗವನಗಳು ಅನ್ನಿಸುತ್ತವೆ. ಉದಾಹರಣೆಗೆ 'ಇಪ್ಪತ್ತನೆಯ ಶತಮಾನದ ಕೊಲಂಬಸ್' ಎಂಬ ಅವರ ದೀರ್ಘವಾದ ಕವಿತೆಯ ಕೊನೆಯಲ್ಲಿರುವ—

'ನಾನಿಷ್ಟೆ ಲೋಕಕ್ಕೆ:
ತೇದಂತೆ ಕರಗುವ ಗಂಧದೊಂದು ಚಕ್ಕೆ!'

ಎಂಬ ಸಾಲುಗಳನ್ನು ನೆನಪು ಮಾಡಿಕೊಳ್ಳಬಹುದು.

ಹಾಗೆಯೇ, 'ಶ್ರೀ ಸಾಮಾನ್ಯನ ಪ್ರತಿನಿಧಿ'ಯ ಈ ಸಾಲುಗಳನ್ನು ಚಪ್ಪರಿಸಿ—

'ಎಷ್ಟು ಚಕ್ರ ಭಾರತಾಂಬೆ ನಿನ್ನ ಹಿರಿಯ ತೇರಿಗೆ
ಪಾವಿನಷ್ಟು ಗಟ್ಟಿ ಹಾಲು ಎರಡು ಸೇರು ನೀರಿಗೆ.'

ಅಂತೆಯೇ, ಅದೇ ಪದ್ಯದ ಈ ಪಂಕ್ತಿಗಳ ಪಂಚ್ ಸಹ ಖುಷಿ ನೀಡಬಲ್ಲದು :

'ಕುಡಿಯಬೇಡಿ ಸೇಂದಿ
ಅಂದರಂದು ಗಾಂಧಿ
ಒಡನೆ ಬಿಟ್ಟು ಸೇಂದಿ
ಹಿಡಿದವನಿವನು ಬ್ರಾಂದಿ'

ಈ ಬಗೆಯ ಅಸಂಖ್ಯ ಸಾಲುಗಳು ಅವರ ನಿಡುಗವನಗಳಲ್ಲಿ ಇವೆ.

ನಿಸಾರರ 'ಮಿಂಚಿಕೆಗಳು' ಎಂಬ ಕಿರುಗವನಗಳನ್ನು ಓದಿದ ಬಳಿಕ ಅವರ ಕಾವ್ಯದ ಬಗ್ಗೆಯೇ ಹೀಗೊಂದು ಹನಿಗವನ ಬರೆಯಬೇಕು ಅನ್ನಿಸಿತು—

'ಪೆನ್ನು ಹಿಡಿದರೆ ನಿಸಾರ್
ಧುಮ್ಮಿಕ್ಕುವವು ಪದಗಳು
ರಾಜ, ರಾಣಿ, ರಾಕೆಟ್, ರೋರರ್
ಹರಿಯುತ್ತದೆ ಸರಾಗವಾಗಿ
ಕಾವ್ಯಧಾರೆ
ಕಣ್ಣು ಕುಕ್ಕುತ್ತದೆ ಥಳಕು
ಜೋಗದ ಸಿರಿ ಬೆಳಕು.'

ನಿಸಾರರ 'ಮಿಂಚಿಕೆಗಳು' ಕಿರುಗವನಗಳು ಕಾವ್ಯ ಪ್ರಕಾರದ ಗೌರವವನ್ನು ಹೆಚ್ಚಿಸುವಂತಿವೆ. ಅದಕ್ಕಾಗಿ ಅವರಿಗೆ ವಂದನೆಗಳು, ಅಭಿನಂದನೆಗಳು.



ಸುಗಮ ಸಂಗೀತದ ಜನಾದರಣೀಯತೆಗೆ ನಿಸಾರ್ ಕೊಡುಗೆ

♦ ಎಚ್. ಆರ್. ಲೀಲಾವತಿ

ಉತ್ಸವ ಎಂದರೆ ಹಬ್ಬ, ಸಂತೋಷ, ಸಡಗರ ಎಲ್ಲಾ. ಅಂತಲೇ ರಾಮೋತ್ಸವ, ಗಣೇಶೋತ್ಸವ ಎಂಬೆಲ್ಲ ಪದ ಪ್ರಯೋಗಗಳು ಹಬ್ಬದ ಸಡಗರವನ್ನು ವ್ಯಕ್ತಗೊಳಿಸುವ ಸಂಭ್ರಮದ ಸಂಕೇತಗಳಾಗಿವೆ. ಈ ಉತ್ಸವದ ಪದ ಪ್ರಯೋಗ ಹಬ್ಬಗಳ ಸಡಗರಕ್ಕಷ್ಟೇ ಸೀಮಿತವಲ್ಲ. ಆನಂದ, ಸಂತಸವನ್ನು ತರುವಂಥ ಯಾವುದೇ ಸಂದರ್ಭವೂ ಉತ್ಸವವೇ. ಸುಖದ ಕ್ಷಣಗಳನ್ನು ಹಂಚಿಕೊಂಡು ಸಂಭ್ರಮಿಸುವ ಘಳಿಗೆಗಳು. ಹಾಗಾಗಿ ಅದು ಕಾವ್ಯೋತ್ಸವವೂ ಆಗಬಹುದು, ಗೀತೋತ್ಸವವೂ ಆಗಬಹುದು, ನೃತ್ಯೋತ್ಸವವೂ ಆಗಬಹುದು. ಕಲೆಯ ಯಾವ ರಸ ಘಳಿಗೆಯೂ ಆನಂದದ ಉತ್ಸವವೇ. ಇಂಥ ಆ ರಸ ಘಳಿಗೆಗಳ ಆನಂದ, ನಿತ್ಯೋತ್ಸವವೂ ಆದರೆ ಎಂಥ ಚೆಂದ. ಇಂಥ ಆನಂದದ ಕ್ಷಣಗಳಿಗಾಗಿ ಮಾನವನ ಜೀವ ತುಡಿಯುತ್ತಲೇ ಇರುತ್ತದೆ.

ಇದಕ್ಕೆ ಕಾರಣ, ಮಾನವ ಬುದ್ಧಿಜೀವಿ ಹಾಗೂ ಭಾವಜೀವಿ, ಕಲ್ಪನಾಜೀವಿ. ಮಾನವನ ಬುದ್ಧಿ ಭಾವಗಳಿಗೆ ಹಲವಾರು ರೆಕ್ಕೆಗಳು. ಬಿಡಿಸಿದಷ್ಟೂ ಹೆಚ್ಚು ಹೆಚ್ಚು ತೆರೆದುಕೊಳ್ಳುವಂಥವು. ಅವನ ಬುದ್ಧಿ ಭಾವಗಳು ನಿರಂತರ ಅರಳುತ್ತಲೇ ಇರುತ್ತವೆ. ಅವು ಬತ್ತದ ಕಾರಂಜಿ. ಹೊಸ ಹೊಸ ಪ್ರಯೋಗಗಳಿಗೆ ನಾಂದಿ ಹಾಡುತ್ತಲೇ ಇರುತ್ತಾನೆ. ಅಂಥ ಆವಿಷ್ಕಾರಗಳ ಪರಿಣಾಮವಾಗಿ ಇಂದು ನಾವು ಕಲೆಗಳಲ್ಲಿ

ಯಾಗದಲೀ, ಸಾಹಿತ್ಯದಲ್ಲಿಯೇ ಆಗಲೀ, ಹೊಸ ಹೊಸ ಪ್ರಕಾರಗಳನ್ನು ಹುಟ್ಟುಹಾಕುತ್ತ, ಬೆಳೆಸುತ್ತ ಬಂದಿದ್ದೇವೆ. ಸಾಹಿತ್ಯ, ಕಲೆ ಯಾವುದೇ ಆಗಲೀ, ಅವು ಬುದ್ಧಿಗಮ್ಯವೂ ಹೌದು; ಭಾವಗಮ್ಯವೂ ಹೌದು. ಬುದ್ಧಿ ಭಾವಗಳ ಸಂಗಮದಿಂದ ಸೌಂದರ್ಯಾನುಭೂತಿಯ ಆನಂದ.

ಈ ನಿಟ್ಟಿನಲ್ಲಿ ಭಾವಗೀತೆಯ ಸ್ವರೂಪವನ್ನು ನೋಡಬಹುದು. ಕಾವ್ಯಗಾಯನ ವೆಂದರೆ ಅರ್ಥಪೂರ್ಣವಾದ ಸುಂದರ ಸಾರಾಂಶದ ಮಧುರ ಕವಿತೆಗಳನ್ನು, ಅವುಗಳ ಕಾವ್ಯ ಭಾವವನ್ನು ಅರಿತು ಅತ್ಯಂತ ಮನೋಹರವಾದ ರಮ್ಯಶೈಲಿಯಲ್ಲಿ ಹಾಡುವುದು.

'ಸಾಹಿತ್ಯಂ ಚ ಸಂಗೀತಂ ಚ ಸರಸ್ವತ್ಯಾಂ ಸ್ತನ ದ್ವಯಂ
ಏಕಮಾಪಾತ ಮಧುರಂ ಅನ್ಯದಾಲೋಢನಾಮೃತಂ'

ಎನ್ನುವ ಮಾತು ಸಂಗೀತಕ್ಕೂ ಸಾಹಿತ್ಯಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಇದು ಭಾವಗೀತೆಯ ಹಾಡಿಕೆಯ ಸ್ವರೂಪವನ್ನೂ ಸ್ಫುಟವಾಗಿ ಅರ್ಥೈಸುತ್ತದೆ. ಭಾವಗೀತಾ ಗಾಯನದಲ್ಲಿ ಕಾವ್ಯವೇ ಪ್ರಧಾನ. ಕವಿತೆಗಳಿಲ್ಲದೆ ಭಾವಗೀತಾ ಗಾಯಕರಿಗೆ, ಅಂದರೆ ಸುಗಮ ಸಂಗೀತಗಾರರಿಗೆ ಅಸ್ತಿತ್ವವೇ ಇಲ್ಲ.

ಈ ಕಾವ್ಯದ ಸ್ವರೂಪ ಹಾಗೂ ಗಾಯನದ ಸ್ವರೂಪ ಕೂಡ ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿದೆ. ಇಂದು ನಾವು ಆಧುನಿಕ ಕನ್ನಡ ಕಾವ್ಯದ ಯುಗದಲ್ಲಿದ್ದೇವೆ. ಮಾನವನ ಸಹಜವಾದ ನವ ರಸ ಕಲ್ಪನೆಯ ಭಾವಗಳನ್ನು ಕಾವ್ಯದ ಮೂಲಕ ಹೊರಹೊಮ್ಮಿಸುವ ಕವಿಗಳು ನಿಜಕ್ಕೂ ಸಾಹಿತ್ಯ ರತ್ನಗಳೇ. ಅವರ ಒಂದೊಂದು ಕಾವ್ಯ ಸೃಷ್ಟಿಯೂ ಒಂದೊಂದು ಆಣಿ ಮುತ್ತು. ಇಂಥ ಈ ರಸಭರಿತ ಕಾವ್ಯವನ್ನು ರಾಗದ ಉಡಿಗೆ ತೊಡಿಗೆಗಳಿಂದ ಶೃಂಗರಿಸಿ ಹಾಡುವವರೇ ಭಾವಗೀತಾ ಗಾಯಕರು ಅಥವಾ ಸುಗಮ ಸಂಗೀತಗಾರರು. ಹೀಗಾಗಿ ಕವಿ ಹಾಗೂ ಗಾಯಕರ ನಡುವೆ ಒಂದು ಮಧುರ ಬಾಂಧವ್ಯವಿದೆ. ಕಾವ್ಯಗಂಗೆಯಲ್ಲಿ ತೇಲಿಬಿಟ್ಟ ಬೆಳಕಿನ ಕುಡಿಗಳಂತೆ ಈವೊಂದು ಬಾಂಧವ್ಯ ಪರಸ್ಪರ ಪೂರಕ. ಈ ಸುಗಮ ಸಂಗೀತ ಕ್ಷೇತ್ರವೇ ಅಂತಹುದು. ಇವರಿಲ್ಲದೆ ಅವರಿಲ್ಲ; ಅವರಿಲ್ಲದೆ ಇವರಿಲ್ಲ.

ನಿತ್ಯೋತ್ಸವವೆನ್ನುತ್ತಿದ್ದ ಹಾಗೆಯೇ ತಪ್ಪದೆ ಕೆ. ಎಸ್. ನಿಸಾರ್ ಅಹಮದ್‌ರವರ ನೆನಪು ತಂತಾನೆ ಮಿಂಚಿ ಬಿಡುತ್ತದೆ. 'ನಿತ್ಯೋತ್ಸವ' ಕವನ ಸಂಕಲನದ ಕವಿಯೇ ನಮ್ಮೆಲ್ಲರ ಪ್ರೀತಿಯ ನಿಸಾರ್ ಅಹಮದ್‌ರವರು. ಇವರು ನಿತ್ಯೋತ್ಸವದ ಹೆಸರಿನಲ್ಲಿಯೇ ಕನ್ನಡಿಗರ ಮನೆ ಮನೆಯ ಬಾಗಿಲನ್ನು ತಟ್ಟಿದವರು. ಮನಮನದ ಆಳದಲ್ಲಿ ನೆಲೆಯಾಗಿ ನಿಂತವರು. ಕವಿಯಾಗಿ ಸುಂದರ ಕವಿತೆಗಳನ್ನು ಭಾವಗೀತಾಗಾಯಕರಿಗೆ ಇತ್ತವರು.

'ಬಿತ್ತಿ ಮಸಿ ನೆತ್ತರನು
ಕಾಗದದ ಭೂಮಿಯಲಿ,
ಸೃಷ್ಟಿಸಿದೆನಕ್ಷರಗಳೆಂಬ ನರರನ್ನು.
ನಿಲ್ಲಿಸಿದೆನಲ್ಲಲ್ಲಿ

ಒಟ್ಟುಗೂಡಿಸಿ ಕೆಲರ;
ಕರೆದೆ 'ಪದ'ವೆನ್ನುತಾ ಗುಂಪಿನವರನ್ನು.
ಕೂಡಿಸೀ ಗುಂಪುಗಳ
'ಕವಿತೆ'ಯೆಂದಿದ ಕರೆದು
ಹಲರನಿಳಿಸಿಹೆನಣ್ಣಾ ರಸವುಳ್ಳ ಹಣ್ಣು!'

ಎಂದು ಕಾಲೇಜು ದಿನಗಳಲ್ಲೇ (೧೯೫೪) ಕವನಿಸಿದ ಕವಿ ನಿಜಕ್ಕೂ ಜನತೆಗೆ ರಸವುಳ್ಳ ಕವಿತಾ ಫಲಗಳನ್ನು ಯಥೇಚ್ಛವಾಗಿ ನೀಡಿದ ಸಾರ್ಥಕ ಕವಿಯೂ ಹೌದು. ಕವಿಯಾಗಿ ಅವರು ಬರಿಯ ಓದಿಕೊಳ್ಳುವಂಥ ಕವಿತೆಗಳನ್ನಷ್ಟೇ ನೀಡಲಿಲ್ಲ. ನನ್ನಂತಹ ಭಾವಗೀತಾ ಗಾಯಕ/ ಗಾಯಕಿಯರಿಗೆ ಹಾಡುವಂಥ ಮತ್ತು ಭಾವೋನ್ನತಿಯಲ್ಲಿ ಉನ್ನತ ಮಟ್ಟದ ಅಸಂಖ್ಯಾತ ಕವಿತೆಗಳನ್ನು ನೀಡಿದ ಕವಿ, ನಿಸಾರರು. ಈ ದೃಷ್ಟಿಯಿಂದ ನಿಸಾರ್ ಅಹಮದ್‌ರವರು ಸುಗಮ ಸಂಗೀತಗಾರರಿಗೂ ಅತ್ಯಂತ ಹತ್ತಿರದವರು.

ಒಂದು ಕವಿತೆ ಸಂಗೀತ ರೂಪದಲ್ಲಿ ಸಾರ್ಥಕತೆಯನ್ನು ಪಡೆಯಬೇಕಾದರೆ ಕೆಲವು ನಿಯಮಗಳು ಅನಿವಾರ್ಯವಾಗುತ್ತವೆ. ಸುಂದರ ಕವಿತೆಗೆ ಮೋಹಕ ರಾಗದ ಬಂಧ ಕೂಡಿ ಬಂದಾಗ ಬಂಗಾರಕ್ಕೆ ಪರಿಮಳ ಬಂದಂತೆ. ನಿಸಾರ್ ಅಹಮದ್‌ರವರ ಈ ಅರ್ಥಪೂರ್ಣ ಮಧುರ ಕವಿತೆಯನ್ನು ನೋಡಬಹುದು:

'ಹೊತ್ತಿ ಉರಿದ ಹಿರಿಯಾಸೆ ನಂದಿತೋ ಹಣತೆ ಹಿಡಿದ ದೀನ
ಸಂಗವಿರದೆ ಕಂಗೆಡುತಲಿರುವೆ, ನಡೆ ಹುಡುಕಿ ನಿಜದ ತಾಣ.

....
'ಜ್ಯೋತಿಯಾಗಿ ಪ್ರಜ್ವಲಿಸುತಿಹುದು ತಾನೊಂದನಾದಿ ಪ್ರೀತಿ;
ಸಲಹಲೆಂದು ಮನು ಕುಲವ ನೋನುತಿದೆ ಮರೆಯ ದೈವ ಜಾತಿ.
ನಂಬಿ ಏಳು ಮೈದುಂಬಿ ಏಳು, ಆ ತುಂಬು ಬಾಳಿಗಾಗಿ
ಕೊನೆಗೊಮ್ಮೆ ಕರೆದು ಕಂಬನಿಯನೆರಡು ನಿನ್ನೆದೆಯ ಬೀಳಿಗಾಗಿ.'

ಎಂಥ ಅರ್ಥಪೂರ್ಣ ಕವನ ಪಂಕ್ತಿಗಳು! ಪದ ಪದಗಳ ಸಾಂಗತ್ಯದಲ್ಲಿ ಎಂಥ ಅರ್ಥವತ್ತಾದ ಸಾಮರಸ್ಯವಿದೆ. ಹೂವು ಅರಳಿದಂತೆ, ಗಂಗೆಯುಕ್ಕಿ ಬಂದಂತೆ, ಯಾವುದೋ ಒಂದು ರಸ ಘಳಿಗೆಯಲ್ಲಿ ಕವಿಯ ಮನದ ಮೂಸೆಯಿಂದ ಅರಳಿ ಬಂದ ಕವನವಿದು. ಇದರ ಭಾವ ಲಹರಿಯನ್ನು ೧೯೬೦ರ ದಶಕದಲ್ಲಿ ಆಕಾಶವಾಣಿಯಲ್ಲಿ ನಾನು ಅನುಭವಿಸಿ ಹಾಡಿದ್ದೆ. ಹಾಡಿ ಕಣ್ಣೀರನ್ನೂ ಮಿಡಿದಿದ್ದೆ. 'ಪದ್ಮಚರಣ'ರ ಮಧುರ ರಾಗ ಸಂಯೋಜನೆಯಲ್ಲಿ ಸುಗಮ ಸಂಗೀತ ಕ್ಷೇತ್ರದಲ್ಲಿ ಚಿರಂತನ ಸ್ಥಾನ ಪಡೆದ ಗೀತೆ ಇದು. ಏಕೋ ಗೊತ್ತಿಲ್ಲ, ನಾನೇ ಹಾಡಿದ ಈ ಹಾಡನ್ನು ಈಗ ಕೇಳಿದರೂ ರೋಮಾಂಚನ ವಾಗುತ್ತದೆ. ಈಗಲೂ ಕಣ್ಣಲ್ಲಿ ನೀರು ತುಂಬುತ್ತದೆ. ಪ್ರಾಯಶಃ ಇದೇ ನಿಜವಾದ ಭಾವಗೀತೆಯ ಲಕ್ಷಣವಿರಬೇಕು. ಮನ ಮನದ ಬಾಗಿಲನ್ನು ನಿರಂತರ ತಟ್ಟುವ ಸತ್ವಯುತ ಕವನವಿದು.

ನಿಸಾರರು ಭಾವಗೀತೆಯೆಂದು ಬರೆದಿರುವ ಎಲ್ಲ ಕವಿತೆಗಳೂ ಸಾಮಾನ್ಯವಾಗಿ ಸಂಗೀತವನ್ನು ಅಪೇಕ್ಷಿಸುವ ಗೀತೆಗಳೇ. ಹಾಗಾಗಿ ಸುಗಮ ಸಂಗೀತಗಾರರಿಗೆ ನಿಸಾರರ

ಕವಿತೆಗಳೆಂದರೆ ಹಬ್ಬ. ಆ ಗೀತೆಗಳಲ್ಲಿ ಪದಗಳ ಕ್ಲಿಷ್ಟತೆ ಇಲ್ಲ. ಸರಳ ಸುಂದರ, ಅರ್ಥಪೂರ್ಣ ಪದಗಳ ಹೂ ಮಾಲೆಯಂತೆ ಅವುಗಳ ಹೆಗ್ಗಳಿಕೆ. ಅವರ ಯಾವ ಗೀತೆಯನ್ನಾದರೂ ನೋಡಬಹುದು. ಅದೇ, ಅದೇ ವೈಶಿಷ್ಟ್ಯ ಇದೆ.

'ಬರುವನೇನೆ ಸಖಿ ಚೆಲುವ?
ಬಂದುಕ್ಕಿಸುವನೆ ನಲವ?
ಒಲವಿನ ತಿಳಿ ಜಲವೆರೆದು ಫಲಿಸುವನೆ
ಸೊರಗಿರುವೀ ಬಾಳ್ನೆಲವ?'

• • •

'ಬಾ ವಸಂತ ಬಾಳಿಗೆ
ತಾ ಸಂತಸ ಏಳಿಗೆ'

• • •

'ನಿನ್ನ ಅನುರಾಗವೆ ಬೆಳಗಿರುವುದೆನ್ನೆದೆಯ
ಇರುಳು ಬಾನಿನ ತುಂಬು ಬಿಂಬವಾಗಿ.'

• • •

'ಸಿದ್ಧವಿದೆ ಬಾ ಯಾತ್ರಿ, ಎದೆಯ ಗದ್ದುಗೆ ನಿನಗೆ
ರಾತ್ರಿ ಮಾತ್ರವನಿಲ್ಲಿ ಕಳೆದು ಹೋಗು.'

• • •

ಮೇಲೆ ಹೇಳಿದ ಯಾವ ಕವನವೇ ಆಗಲಿ ಎಷ್ಟೊಂದು ಸರಳ, ಸುಂದರವಾಗಿದೆ. ನುಡಿಯಲು ಕಷ್ಟವಾಗದ ಲಲಿತ ಪದಬಂಧಗಳ ಮೋಡಿ. ಹಾಡಿಕೆಗೆ ಒಗ್ಗುವ ನಿಸಾರರ ಕವನಗಳಲ್ಲಿ ಶೃಂಗಾರ ಭಾವವೇ ಪ್ರಧಾನವಾದದ್ದು. ಆ ಶೃಂಗಾರ ಭಾವಕ್ಕೆ ತಕ್ಕಂತಹ ನವಿರು ಪದಬಂಧಗಳ ಲಾಲಿತ್ಯ; ಹಾಡಲು ನಾಲಗೆಗೆ ಎಲ್ಲಿಯೂ ತೊಡಕಾಗುವುದಿಲ್ಲ. ಇದರಿಂದ ಕವಿ ಗಾಯಕರಿಗೆ ಹತ್ತಿರವಾಗುತ್ತಾರೆ. ನಿಸಾರರ ಕವನಗಳಲ್ಲಿ ಸುಗಮ ಸಂಗೀತಗಾರರಿಗೆ ಪ್ರಿಯವಾಗುವ ಇನ್ನೊಂದು ಅಂಶವೂ ಇದೆ. ಇವರ ಕಾವ್ಯದೊಂದಿಗೆ ಮೂಡಿ ಬಂದಿರುವ ಭಾವ, ನಾದ, ಲಯಗಳ ಓಘ ಹಾಡಿಕೆಗೆ ಹೇಳಿ ಮಾಡಿಸಿದಂತಿದೆ. ಇವರ ಈ ಕವನಗಳು ಎದೆಯೊಳಕ್ಕೆ ಇಳಿಯುತ್ತಿದ್ದಂತೆಯೇ ರಾಗ ಮಾಧುರ್ಯದ ಕವಚ ತಂತಾನೆ ಸ್ಫುರಿಸುತ್ತದೆ. ಆವೊಂದು ಗುಣ ಇವರ ಕಾವ್ಯದಲ್ಲಿದೆ. ಉದಾಹರಣೆಗಾಗಿ ಈ ಕವಿತೆಗಳ ಸಾಲುಗಳನ್ನು ನೋಡಬಹುದು:

'ಮತ್ತದೇ ಬೇಸರ, ಅದೇ ಸಂಜೆ, ಅದೇ ಏಕಾಂತ
ನಿನ್ನ ಜೊತೆಯಿಲ್ಲದೆ, ಮಾತಿಲ್ಲದೆ ಮನ ವಿಭ್ರಾಂತ.'

• • •

'ನಾ ನಿನ್ನ ಕಂಡಾಗ ಎಷ್ಟೊಂದು ನಲವಿತ್ತು,
ಎಷ್ಟೊಂದು ಗೆಲವಿತ್ತು. ಅಷ್ಟೊಂದು ನಗುವಿತ್ತು.'

• • •

‘ದೀಪಗಳೆ,
ಕುರುಡು ತಮವ ಕೊರೆಯುವಂಥ
ಬಾಣ ಬಿಟ್ಟ ಚಾಪಗಳೆ.’

• • •

ಮೇಲಿನ ಯಾವ ಕವಿತೆಯನ್ನು ನೋಡಿದರೂ `ಸುಲಿದ ಬಾಳೆಯ ಹಣ್ಣಿನಂದದಿ' ಎಂಬ ಮಾತು ನೆನಪಾಗದಿರದು. ಇಲ್ಲಿ ಎಂಥ ಪದ ಲಾಲಿತ್ಯವಿದೆ! ಈ ಎಲ್ಲ ಕವನಗಳೂ ತಂತಾನೆ ಹಾಡಿಸಿಕೊಂಡು ಹೋಗುವಂಥ ಗುಣವನ್ನು ಪಡೆದಿವೆ.

ನಿಸಾರ್ ಅವರ ಕವನಗಳು ಯಾವೊಂದು ರಸಕ್ಕೇ ಸೀಮಿತವೂ ಅಲ್ಲ. ಅವರ ಕವನಗಳಲ್ಲಿ ದೇಶಪ್ರೇಮವೂ ಇದೆ, ನಾಡಗೀತೆಯೂ ಇದೆ, ಪ್ರಾತಃಕಾಲದ ವರ್ಣನೆಯೂ ಇದೆ. ದೈವವಿದೆ, ತತ್ತ್ವವಿದೆ, ಜೀವನ, ರಾಜಕೀಯ, ಹಬ್ಬ ಹರಿದಿನ ಎಲ್ಲವೂ ಇದೆ ಇಲ್ಲಿ. ‘ನೂರು ಮರ, ನೂರು ಸ್ವರ, ಒಂದೊಂದು ಅತಿ ಮಧುರ' ಎಂಬ ಬೇಂದ್ರೆಯವರ ಕವಿವಾಣಿಯಂತೆ ನಿಸಾರರ ಕವನಗಳಲ್ಲಿ ವಿಷಯಗಳ ಹರಹೂ ಇದೆ. ಇವೆಲ್ಲವೂ ರಮ್ಯಶೈಲಿಯ ಲಲಿತ ಪದಬಂಧ ಕವನಗಳು.

ಸುಗಮ ಸಂಗೀತ ಕ್ಷೇತ್ರದಲ್ಲೇ ಒಂದು ಪವಾಡವನ್ನು ಮಾಡಿದೆ ‘ನಿತ್ಯೋತ್ಸವ' ಧ್ವನಿ ಸುರುಳಿ. ಯಾವವೊಂದು ಭಾವಗೀತೆಯ ಸ್ಪರ್ಧೆಗೆ ಹೋಗಲಿ `ಜೋಗದ ಸಿರಿ ಬೆಳಕಿನಲ್ಲಿ'. ‘ಬೆಣ್ಣೆ ಕದ್ದ ನಮ್ಮ ಕೃಷ್ಣ' ಇದ್ದೇ ಇರುತ್ತವೆ. ಅಂಥವೊಂದು ಸ್ಥಾನವನ್ನು ಗಳಿಸಿಕೊಂಡಿವೆ ನಿಸಾರರ ಈ ಕವನಗಳು. ‘ನಿತ್ಯೋತ್ಸವ' ಕವನ ಸಂಕಲನದ ಗೀತೆಗಳು ಸುಗಮ ಸಂಗೀತ ಕ್ಷೇತ್ರದ ಕಲಾವಿದರಿಗೆ ಹೂರಣವಿದ್ದಂತೆ. ಸುಗಮ ಸಂಗೀತಗಾರರಿಗೆ ಬೇಕಾದ ಎಲ್ಲ ಗುಣಗಳೂ ನಿಸಾರರ ಕವನಗಳಲ್ಲಿದೆ. ಹಾಗೆಂದೇ ಅವರು ಆ ಕ್ಷೇತ್ರದ ಕಲಾವಿದರಿಗೆ ತೀರಾ ಸನಿಹದವರು.

ಅರವತ್ತರ ದಶಕದಲ್ಲಿ ದೆಹಲಿಯ ಆಕಾಶವಾಣಿಯ ಕೇಂದ್ರ ಭಾರತದ ಎಲ್ಲ ಆಕಾಶವಾಣಿ ಕೇಂದ್ರಗಳಿಂದ `ದೇಶಭಕ್ತಿ'ಯ ಗೀತೆಯನ್ನು ತರಿಸಿಕೊಂಡು ಬಿತ್ತರಿಸಿತು. ಬೆಂಗಳೂರು ಆಕಾಶವಾಣಿ ಕಳುಹಿಸಿದ್ದ ನಿಸಾರರ ಕವನ ಸಾಹಿತ್ಯ ಹಾಗೂ ಸಂಗೀತದ ದೃಷ್ಟಿಯಿಂದ ಮೊದಲ ಸ್ಥಾನ ಗಳಿಸಿತು. ಅದರ ಹೆಸರು ‘ಸ್ವಾತಂತ್ರ್ಯದ ಹಣತೆ.'

‘ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದೆ ಜನತೆ
ಎಂತು ಕುಂದಬಹುದು ನಮ್ಮ ತಾಯ್ನಾಡಿನ ಘನತೆ.

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರ ಶಕ್ತಿ
ಪಡೆಯಿತಿದನು ಜನತೆ—ಬಾಳ ಬೆಸೆಯೆ ನಾಡ ಭಕ್ತಿ.

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ,
ವ್ಯಕ್ತಿ ವ್ಯಕ್ತಿ ಬೆವರ ಹೀರಿ, ಮರವಾಗಿದೆ ಮೊಳಕೆ;

ಮೇಲೇರಿದ ಹಾಗೆ ಭದ್ರ ಪಾಯವುಂಟು ಗೃಹಕೆ.

ಸಾಗಿದಂತೆ ಸಲ್ಲುತಿರಲಿ ಸಾಧನೆಯೆಡೆ ಗಮನ
ಪ್ರಾಣವನ್ನೆ ಪಗಡೆಯಾಡಿದವರಿಗೆಮ್ಮ ನಮನ
ತಾಯ ಮುಡಿಗೆ ದಿನವು ಏರುತಿರಲಿ ಹೂವು, ದವನ.'

ಆರಿಸಿಟ್ಟ ಆಣಿಮುತ್ತಿನಂಥ ಪದಗಳು. ಒಡಲಾಳದಿಂದ ಬಂದಂತಹ ಸುಂದರ ಕವಿ ಕಲ್ಪನೆ. ನಿಸಾರ್ ಅಹಮದ್‌ರವರು ಇಂಥ ಸುಂದರ ಭಾವಲೋಕವನ್ನು ಸೃಷ್ಟಿಸಿ ಜನತೆಗೆ ಹತ್ತಿರವಾಗಿರುವುದು ಆಶ್ಚರ್ಯವಲ್ಲ. ಹಾಗಾಗಿ, 'ನಿತ್ಯೋತ್ಸವ' ಕವನ ಸಂಗ್ರಹ ಇಷ್ಟು ಬೇಗ ಹದಿನಾಲ್ಕು ಮುದ್ರಣಗಳನ್ನು ಕಂಡಿರುವುದೂ ಈ ಕಾರಣಕ್ಕಾಗಿಯೇ. 'ತುಷಾರ' ಮಾಸಪತ್ರಿಕೆ ೨೦ರ ಸಂಭ್ರಮದ ಪ್ರಕಟಣೆಯಾಗಿ ಹೊರಬಂದ ನಿಸಾರ್ ಅಹಮದ್‌ರವರ 'ನವೋಲ್ಲಾಸ' ಎಂಬ ಭಾವಗೀತೆಗಳ ಸಂಕಲನದ ಎಲ್ಲ ಕವಿತೆಗಳೂ ಹಾಡಿಕೆಗೆ ಒಗ್ಗು ವಂಥವುಗಳೇ.

ಇವರಿಗೆ ಅನೇಕ ಪ್ರಶಸ್ತಿಗಳು ಸಂದಿರಬಹುದಾದರೂ ಜನ ಮನದಲ್ಲಿ ನೆಲೆ ನಿಂತಿರುವ ಪ್ರಶಸ್ತಿ ಅತ್ಯಂತ ಪ್ರಶಸ್ತವಾದದ್ದೆಂದು ನನ್ನ ಅನಿಸಿಕೆ. ಮುಖ್ಯವಾಗಿ ಇವರೊಬ್ಬ ನೇರ, ಸರಳ ವ್ಯಕ್ತಿಯೆನ್ನುವುದು ನನ್ನ ಅನುಭವ. ನಾನು ಆಕಾಶವಾಣಿಯಲ್ಲಿ ಹಾಡುವಾಗಿ ನಿಂದಲೂ ಐವತ್ತರ ದಶಕದಿಂದಲೂ ನನಗೆ ಇವರ ಪರಿಚಯ. ಇವರು ಧ್ವನಿ ಸುರುಳಿಗಾಗಿಯೇ ಹಾಡನ್ನು ಹೊಸೆಯುವ ಕವಿಯಲ್ಲ. ಇವರು ಹಾಡಿನ ಮೋಡಿಗೆ ಮರುಳಾದ ಕವಿ ಕೂಡ. ಇವರ ಕವನಗಳಲ್ಲಿ ಹಾಡಿನ ಬಗ್ಗೆ ಅನೇಕ ಮುದ್ದಾದ ಸಾಲುಗಳಿವೆ.

'ಈ ನಿನ್ನ ಹಾಡು ನಿನ್ನೆದೆಯ ಪಾಡೆ?'

● ● ●

'ಸೊಗವನೆಂತು ಹಾಡಲಿ
ಹಿಗ್ಗನೆಂತು ಹರಡಲಿ?'

● ● ●

'ಬೇರೆ ಹಾಡ ಕಲಿಸು ತಾಯೆ
ಬೇರೆ ತೆರನ ರಾಗವ
ಸೂರೆಗೊಳಲಿ ತುಂಬು ಭಾವ
ತೆಗೆದು ಬಗೆಯ ಬೀಗವ'

● ● ●

'ನನ್ನ ಹಾಡಿನಲ್ಲಿ ಹಾಯದಿರಲಿ
ನೆರಳು ಹೆರವರ'

● ● ●

'ಮನದ ದುಗುಡ ಮರೆಗೆ ಸರಿಸಿ
ನಲ್ಮೆ ಗಾನ ಹಾಡಿದೆ'

● ● ●

'ಹಾರಿ ಹಾಡುತ್ತ ಮುದ ಸೂಸಿವೆ'

● ● ●

'ಹಾಡು, ಕವಿಯೆ ಹಾಡು'

• • •

ನಿಜ, ಈ ಕವಿಗೆ ಹಾಡಿನ ಗುಂಗಿದೆ. ಅವರೇ ಹೇಳುವಂತೆ ಅವರ ಕವನಗಳಲ್ಲಿ ಹೆರವರ ನೆರಳು ಹಾಯುತ್ತಿಲ್ಲ. ತನ್ನತನವನ್ನು ಉಳಿಸಿ ಬೆಳಸಿಕೊಳ್ಳುತ್ತಿರುವ ಕವಿ.

ಧ್ವನಿ ಸುರುಳಿಗಾಗಿ ಅವರ ಹಾಡನ್ನು ಉಪಯೋಗಿಸಿಕೊಳ್ಳಲು ಕವಿಯ ಒಪ್ಪಿಗೆಯನ್ನು ನಾನು ಯಾವಾಗ ಕೇಳಿದರೂ ಒಮ್ಮನಸ್ಸಿನಿಂದ ಕೂಡಲೆ ಒಪ್ಪಿಗೆಯನ್ನು ಕೊಡುತ್ತಲೇ ಬಂದಿದ್ದಾರೆ. ಇವರ ಹೆಸರಿನ ಅರ್ಥದಂತೆಯೇ ಇವರ ವ್ಯಕ್ತಿತ್ವ ಕೂಡ. ನಿಸಾರ್ ಎಂದರೆ ತ್ಯಾಗಬುದ್ಧಿಯವ; ಒಳ್ಳೆಯ ಕೆಲಸಕ್ಕಾಗಿ ಸಹಾಯ ಮಾಡುವವ ಎಂದೇ ಅರ್ಥ. ಅಹಮದ್‌ಯೆಂದರೆ ಒಳ್ಳೆಯ ಗುಣ, ಒಳ್ಳೆಯ ಸ್ನೇಹಿತ, ಸಜ್ಜನ ಎಂದೇ ಆಗುತ್ತದೆ. ಈ ಎಲ್ಲ ಗುಣಗಳ ಸಮ್ಮೇಳನ ಒಂದು ವ್ಯಕ್ತಿಯಲ್ಲಿ ಸಮ್ಮಿಳಿತವಾಗಿದೆ.

ಪದ್ಯ ಪರಿಣಾಮರೂಪಿ ಹೂವು. ಅದರ ಚಂದಗಾರಿಕೆಗೆ, ವರ್ಣ ಸೌಭಾಗ್ಯಕ್ಕೆ, ಸಮಾಂಗಪೂರ್ಣತೆಗೆ ದುಡಿಯುವ ಶಕ್ತಿಗಳು ಕಗ್ಗತ್ತಲಿನ ಮಣ್ಣಿನ ಪದರಗಳಲ್ಲಿ ಪ್ರಚ್ಛನ್ನ. ಅವುಗಳ ಗುಹ್ಯಕ್ರಿಯೆಯನ್ನು ಬಾಹ್ಯ ಮಾದರಿಯೊಂದರಿಂದ, ಫಲಿತವೊಂದರಿಂದ ತಿಳಿಯುವುದು ಅಶಕ್ಯ. ಹೀಗಾಗಿ, ಕಾವ್ಯ ಪ್ರಕ್ರಿಯೆಯ ಪರಿಜ್ಞಾನಕ್ಕೆ ಪದ್ಯ ರಚನಾಸಮಯದ ಕವಿ ಮನಸ್ಸಿನ ಸ್ಥಿತಿಗೇ ಶರಣು ಹೋಗಬೇಕು. ಇದನ್ನೇ ಸಾಮಾನ್ಯೀಕರಿಸಿ ಹೇಳುವುದಾದರೆ—ಕವನ ಸೃಷ್ಟಿ ಪ್ರಕ್ರಿಯೆಯ ಬೇರುಗಳು ಕಾವ್ಯ ಕ್ಷೇತ್ರಕ್ಕೇ ಕಚ್ಚಿಕೊಳ್ಳದೆ ಮನೋವಿಜ್ಞಾನದೊಂದಿಗೆ ಅಸಂಖ್ಯ ರೀತಿಯಲ್ಲಿ ತಳುಕೆ ಹಾಕಿಕೊಂಡಿವೆ. ಅವು ಮನುಷ್ಯನ ಅಂತರಂಗದಷ್ಟೇ ನಿಗೂಢ, ಅಗ್ರಾಹ್ಯ, ಅಮೇಯ.

(ಸೃಷ್ಟಿಕ್ರಿಯೆ)

✧ ✧ ✧

ಹನಿಗವನ ಬಹುಮಟ್ಟಿಗೆ ಏಕ ಭಾವ ಪರಿಪೋಷಕ. ಅಗೇಟಿಯಲ್ಲಿ ಮುದ್ದಿನಿಂದ ಸಲಹಿದ ಚೆಂದುಳ್ಳ ಹೂ ಗಿಡ. ದಾನಶೂರತ್ವಕ್ಕಿಂತ ಮೈದಾಸತನವೇ, ನಿಬಿಡಾಲಂಕಾರಕ್ಕಿಂತ ನಿರಾಭರಣ ಸೌಮ್ಯತೆಯೇ, ಸ್ವಚ್ಛಂದ ವಿಹಾರಕ್ಕಿಂತ ಸಂಯಮದ ಕಟ್ಟುಪಾಡೇ ಇದಕ್ಕೆ ಹೆಚ್ಚು ಇಷ್ಟ, ಒಪ್ಪು.

(ಹನಿಗವನ)



‘ನಿತ್ಯೋತ್ಸವ’: ಸುಗಮ ಸಂಗೀತದ ಮಹತ್ತರ ಮೈಲಿಗಲ್ಲು

◆ *ಶಿವಮೊಗ್ಗ ಸುಬ್ಬಣ್ಣ*

ನಾಡಿನ ಹೆಸರಾಂತ ಕವಿಗಳಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನು ನಾನು ಮೊದಲನೆಯ ಸಲ ಭೇಟಿ ಮಾಡಿದ್ದು ೧೯೬೨ರಲ್ಲಿ. ಅವರೂ ಸುಗಮ ಸಂಗೀತದ ಮಹಾನ್ ಗಾಯಕರೂ ಆದ ಶ್ರೀ ಪಿ. ಕಾಳಿಂಗರಾಯರೂ ಬೆಂಗಳೂರು ಆಕಾಶವಾಣಿ ಕೇಂದ್ರದ ಹತ್ತಿರವಿರುವ ಶಾಸಕರ ಭವನದ ಕ್ಯಾಂಟಿನ್‌ಗೆ ಮಧ್ಯಾಹ್ನದ ಊಟಕ್ಕೆಂದು ಬಂದಿದ್ದರು. ಭಾರತದ ಮೇಲೆ ಆಗಷ್ಟೇ ಚೀಣಿಯರ ಆಕ್ರಮಣವಾಗಿತ್ತು. ಯುದ್ಧದ ವಸ್ತುವನ್ನು ಆಧರಿಸಿದ ನಿಸಾರ್ ಅಹಮದ್ ಅವರ ಒಂದೂವರೆ ಗಂಟೆಯ ಸಂಗೀತ ರೂಪಕ ‘ಆತ್ಮಾರ್ಪಣ’ವನ್ನು ಆಕಾಶವಾಣಿ ಪ್ರಸಾರ ಮಾಡುವುದಿತ್ತು. ಕಾಳಿಂಗರಾವ್ ಅದರ ಮುಖ್ಯ ಹೀರೋ. ಸಂಗೀತ ರೂಪಕದ ಅಭ್ಯಾಸದ ದಿನಗಳವು. ಹೀಗಾಗಿ ನಿಸಾರ್ ಮತ್ತು ಕಾಳಿಂಗರಾವ್ ಶಾಸಕರ ಭವನದ ಕ್ಯಾಂಟೀನಿಗೆ ಬಂದಿದ್ದರು. ಕಾಳಿಂಗರಾಯರು ನನ್ನನ್ನು ಮೈಸೂರಿನ ವಿದ್ಯಾರ್ಥಿ ದೆಸೆಯಿಂದ ಬಲ್ಲವರಾದ್ದರಿಂದ, ‘ನಿಸಾರ್, ಈತ ಸುಬ್ಬಣ್ಣ ಅಂತ. ಚೆನ್ನಾಗಿ ಹಾಡ್ತಾನೆ. ಶಿವಮೊಗ್ಗದವ’ ಎಂದು ಪರಿಚಯಿಸಿದರು. ನಿಸಾರ್ ಅವರ ದೃಷ್ಟಿ ನಾನು ಹಿಡಿದಿದ್ದ ಪುಸ್ತಕದ ಮೇಲೆ ನೆಟ್ಟಿತ್ತು. ‘ಏನ್ ಇವರೆ, ಧಾರ್ಮಿಕ ಪುಸ್ತಕ ಹಿಡಿದಿದ್ದೀರಿ. ಹಾಡುಗಾರನಿಗೂ ವೈರಾಗ್ಯಕ್ಕೂ ಎಲ್ಲಿಯ ಸಂಬಂಧ?’ ಎಂದು ತಮಾಷೆಗೆ ನುಡಿದರೂ ‘ಹಾಗೆ ನೋಡಿದರೆ ನಮ್ಮ ನಾಡಿನ ಹಿಂದಿನ

ಮಹಾನ್ ಗಾಯಕರಲ್ಲಿ ಮುಂಚೂಣಿಯಲ್ಲಿರುವವರು ವಿರಕ್ತರೇ' ಎಂದು ನಿದರ್ಶನ ಪೂರ್ವಕವಾಗಿ ಸಮರ್ಥಿಸಿದರು. ನಮ್ಮ ಊರಿನ ಒಬ್ಬ ಆಸ್ತಿಕರಿಗಾಗಿ ಕೊಂಡುಕೊಂಡಿದ್ದ, ಅಲ್ಲಿ ಅಲಭ್ಯವಾಗಿದ್ದ ಶ್ರೀ ಸತ್ಯಸಾಯಿ ಬಾಬಾ ಅವರ 'ಸತ್ಯಂ ಶಿವಂ ಸುಂದರಂ' ಪುಸ್ತಕವನ್ನು ಕೈಯ್ಯಲ್ಲಿ ಹಿಡಿದಿದ್ದೆ. ಅವರ ಜೊತೆಗಿನ ಪ್ರಥಮ ಮುಲಾಖಾತಿನಲ್ಲಿಯೇ ಅವರ ಆತ್ಮೀಯ ಮತ್ತು ಸರಳ ನಡೆ-ನುಡಿಗಳ ಪರಿಚಯ ನನಗಾಗಿತ್ತು.

ಆಮೇಲೆ ನಾನು ಆಕಾಶವಾಣಿಯಲ್ಲಿ ಭಾವಗೀತೆಗಳನ್ನು ಹಾಡಲು ಬೆಂಗಳೂರಿಗೆ ಬಂದಾಗ ಅಲ್ಲಿನ ನಿಲಯದಲ್ಲಿ ನಿಸಾರರ ಭೇಟಿ ಅಪರೂಪಕ್ಕೆ ಆಗುತ್ತಿತ್ತು. ಆ ಹೊತ್ತಿಗಾಗಲೇ ಅವರು ಕವಿಯೆಂದು ಸಾಕಷ್ಟು ಹೆಸರನ್ನು ಗಳಿಸಿದ್ದರು.

ಆಮೇಲೆ ಅವರು ೧೯೬೭ರ ಜೂನ್ ತಿಂಗಳಲ್ಲಿ ಬೆಂಗಳೂರಿನಿಂದ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿಗೆ ವರ್ಗವಾಗಿ ಬಂದರು. ಈ ಊರು ಅವರಿಗೆ ಹೊಸದು. ಬಸ್ಸಿನಿಂದ ಇಳಿದವರೇ 'ಗೋಪಿ ಹೋಟೆಲ್' ಕಡೆಗೆ ಹೆಜ್ಜೆ ಹಾಕುತ್ತ ನೆಹರೂ ರಸ್ತೆಯಲ್ಲಿ ನಡೆದು ಬರುತ್ತಿದ್ದರು. ನಾನು ಸೈಕಲ್ ತಳ್ಳುತ್ತ, ಯಾವುದೋ ಹಾಡು ಗುನುಗುತ್ತ ಅವರಿಗೆ ಎದುರಾದೆ. 'ವೆಲ್‌ಕಂ ಟು ಅವರ್ ಟೌನ್, ಸಾರ್!' ಎಂದೆ. 'Oh! What a surprise! ನೀವು ಸಿಕ್ಕಿದ್ದು ಒಳ್ಳೆಯದಾಯಿತು. ಏನ್ರಿ, ನಿಮ್ಮೂರಿನಲ್ಲಿ ಒಂದು ಆಟೋರಿಕ್ಷಾನೂ ಇಲ್ವಲ್ರಿ' ಎಂದರು. 'ಆ ನಾಗರಿಕತೆಯ ಶಾಪ ನಮ್ಮ ಊರಿಗೆ ಇನ್ನೂ ತಟ್ಟಿಲ್ಲ ಮೇಸ್ಟ್ರೆ' ಎಂದು, ಅವರಿಗೆ ಗೋಪಿ ಹೋಟೆಲಿನ ದಾರಿ ತೋರಿದೆ. 'ಕಡೆಗೆ ಸಿಕ್ತೀನಿ ಸಾರ್!' ಎಂದೆ. ಅವರು ಮುಗುಳ್ನಗುತ್ತ 'ಇದೇನ್ರಿ ಸುಬ್ಬಣ್ಣ, ದೇವ್ರೇ ಅಂತ ಈಗ ತಾನೆ ನಿಮ್ಮೂರಿಗೆ ಕಾಲಿಟ್ಟಿದ್ದೀನಿ, ಆಗಲೇ 'ಕಡೆಗೆ ಸಿಕ್ತೀನಿ' ಅಂತೀರಾ?' ಎಂದರು. 'ನಮ್ಮ ಕಡೆ 'ಕಡೆಗೆ ಸಿಕ್ತೀನಿ' ಅಂದ್ರೆ, 'ಆಮೇಲೆ ಸಿಕ್ತೀನಿ' ಅಂತ' ಎಂದು ಸಮಜಾಯಿಷಿ ನೀಡಿದೆ.

ಆಮೇಲೆ ಅವರನ್ನು ಆಗಾಗ್ಗೆ ಗೋಪಿ ಹೋಟೆಲಿನಲ್ಲಿ, ಅನಂತರ ಜಯನಗರದ ಶಿವಮೂರ್ತಿ ವೃತ್ತದ ಬಳಿಯಲ್ಲಿದ್ದ ನಿವಾಸದಲ್ಲಿ ಭೇಟಿಯಾಗುತ್ತಿದ್ದೆ. ಹಾಗೆ ಸಂಧಿಸಿ ದಾಗೆಲ್ಲ 'ಒಂದು ಹಾಡು ಹೇಳ್ರಿ ಸುಬ್ಬಣ್ಣ, ಯಾಕೋ ತುಂಬಾ 'ಬೋರ್' ಆಗ್ತಿದೆ' ಎಂದು ನನ್ನಿಂದ ಕುವೆಂಪು, ಬೇಂದ್ರೆ ಅವರ ಭಾವಗೀತೆಗಳನ್ನು ಹಾಡಿಸಿ ಸಂತೋಷ ಪಡು ತ್ತಿದ್ದುದಲ್ಲದೆ, 'ಎಂಥ ರಿಚ್ ವಾಯ್ಸ್ ಇದೇರಿ ನಿಮಗೆ. ಪ್ರತಿ ದಿನಾ ತಪ್ಪದೇ ಅಭ್ಯಾಸ ಮಾಡಿ' ಎಂದು ಬೆನ್ನು ತಟ್ಟುತ್ತಿದ್ದರು.

ಸಂಕೋಚದ ಸ್ವಭಾವದವರಾದ ನಿಸಾರರಿಗೆ ನಮ್ಮ ಊರಿನ ಹಲವು ಪ್ರತಿಷ್ಠಿತರನ್ನು ಪರಿಚಯ ಮಾಡಿಸಿದ ಹೆಮ್ಮೆ ನನ್ನದು. ಆಗ ಅವರಿಗೆ ಅತ್ಯಂತ ಆಪ್ತರಾಗಿದ್ದವರೆಂದರೆ ಎಸ್. ರಾಮಸ್ವಾಮಿ, ಸಹೋದ್ಯೋಗಿಗಳಾದ ಎಸ್. ಶ್ರೀನಿವಾಸ್, ಲೀಲಾ ಬೆನ್ನೂರ್, ಕೆ. ಜಿ. ಸುಬ್ರಹ್ಮಣ್ಯ, ಎಲ್ಲೈಸಿಯ ಎಚ್. ಶಿವರಾಂ ಭಟ್ (ಎಚ್. ಡುಂಡಿರಾಜ್ ಅವರ ಅಣ್ಣ) ಮತ್ತು ನಾನು. ನಿಸಾರರು ನಮ್ಮೂರಿನಲ್ಲಿ ಒಂಟಿಯಾಗಿದ್ದರು. ಅವರ ಕುಟುಂಬ ಬೆಂಗಳೂರಿನಲ್ಲಿತ್ತು. ಅವರ ನಿವಾಸದಿಂದ ಒಂದೂವರೆ-ಎರಡು ಫರ್ಲಾಂಗ್ ದಾಟಿದರೆ ಗದ್ದೆ, ತೋಟ, ಕಾಲುವೆ ಇತ್ಯಾದಿ ಪ್ರಕೃತಿಯ ನೋಟಗಳು ಕಣ್ಸೆಳೆಯುತ್ತಿದ್ದವು.

ಸಂಜೆಯಾದರೆ ಸಾಕು, ಒಬ್ಬರೇ ಊರಾಚೆಗೆ ವಾಕಿಂಗ್ ಹೋಗಿ ನಿಸರ್ಗದ ಸಾನ್ನಿಧ್ಯದಲ್ಲಿ ಅವರು ಕಾಲ ಕಳೆಯುತ್ತಿದ್ದುದೇ ಹೆಚ್ಚು.

ನಾನು ಕೆಲ ಸಮಯ ಅವರು ಮಾಡಿದ್ದ ರೂಮಿನ ಬಳಿಯಲ್ಲೇ ವಾಸಿಸುತ್ತಿದ್ದುದರಿಂದ ಅವರನ್ನು ಪದೇ ಪದೇ ನೋಡುವ ಅದೃಷ್ಟ ಒದಗುತ್ತಿತ್ತು. ಆಕಾಶವಾಣಿಯ ಕಾರ್ಯಕ್ರಮಕ್ಕೆ ಅವರಿಂದ ಹಾಡುಗಳನ್ನು ಕೋರುತ್ತಿದ್ದೆ. ಇವೊತ್ತಿಗೂ ಅತ್ಯಂತ ಜನಪ್ರಿಯವಾಗಿರುವ 'ಎಲ್ಲ ಮರೆತಿರುವಾಗ' ಭಾವಗೀತೆಯನ್ನೂ 'ನಿನ್ನ ಅನುರಾಗವೇ' ಎಂಬುದನ್ನೂ ನಿಸಾರರು ಬರೆದದ್ದು ನನಗಾಗಿ ಎಂಬ ಹೆಮ್ಮೆ ನನಗುಂಟು.

ನಿಸಾರರು ಭೂವಿಜ್ಞಾನವನ್ನು ಬೋಧಿಸುತ್ತಿದ್ದ ಸಹ್ಯಾದ್ರಿ ಕಾಲೇಜಿನಲ್ಲಿ ನನ್ನ ಭಾವೀ ಪತ್ನಿ ಶಾಂತಾ ಬಿ.ಎಸ್ಸಿ. ಓದುತ್ತಿದ್ದಳು. ಆಕೆ ನಿಸಾರರ ನೇರ ವಿದ್ಯಾರ್ಥಿನಿಯಲ್ಲ. ಆಕೆಯ ವ್ಯಾಸಂಗದ ವಿಷಯ ಸಿ.ಬಿ.ಜಡ್. ಆಗಿತ್ತು. ಹೀಗಿದ್ದೂ, ನನ್ನಾಕೆಗೆ ಹಾಗೂ ಇತರ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನಿಸಾರರನ್ನು ಕಂಡರೆ ಅಕ್ಕರೆ, ಗೌರವ. ಏಕೆಂದರೆ, ಅವರು ಬೋಧಕರಷ್ಟೇ ಆಗಿರದೆ ಕವಿಯೂ ಆಗಿದ್ದರು. ಶಾಂತಾಳನ್ನು ಆಗಾಗ ಭೇಟಿ ಮಾಡಿ ಮಾತನಾಡಿ ಬರುವ ತುಡಿತ ತೀವ್ರವಾಗಿದ್ದರೂ ಶಿವಮೊಗ್ಗೆಯ ಅಂದಿನ ವಾತಾವರಣ ಅಷ್ಟು ಅನುಕೂಲಕರ ಆಗಿರಲಿಲ್ಲ. ನಿಸಾರರನ್ನು ನೋಡುವ ನೆಪದಿಂದ ಸಹ್ಯಾದ್ರಿ ಕಾಲೇಜಿಗೆ ಆಗೀಗ ಹೋಗಿ ಬರುತ್ತಿದ್ದೆ. ಇದರ ಜೊತೆಗೇ ನನ್ನ ಇನ್ನೊಂದು ಪ್ರಚ್ಛನ್ನ ಬಯಕೆ ಅವರಿಗೆ ತಿಳಿದಿರಲಿಲ್ಲ. 'ಸುಬ್ಬಣ್ಣ, ಬಹಳ ದೂರದಿಂದ ಸೈಕಲ್ ಮೇಲೆ ಬಂದಿದ್ದೀರಿ, ಸುಧಾರಿಸಿಕೊಳ್ಳಿ. ಒಳ್ಳೇ ಕಾಫಿ ತರಿಸುತ್ತೇನೆ' ಎನ್ನುತ್ತಿದ್ದರು. ಒಂದುಸಲ, 'ಮೇಸ್ಟ್ರೆ, ಪ್ರತಿ ಸಲ ಕಾಫಿ-ತಿಂಡಿಗೆ ನೀವೇ ದುಡ್ಡು ಕೊಡ್ತೀರಿ, ನನಗೂ ಒಂದು ಅವಕಾಶ ಕೊಡಿ' ಎಂದು ಪರ್ಸ್ ತೆಗೆದೆ. ಒಳಗೆ ಇಟ್ಟಿದ್ದ ನನ್ನ ಪ್ರೇಯಸಿಯ ಫೋಟೊ ಅಕಸ್ಮಾತ್ ಕೆಳಗೆ ಬಿತ್ತು! ಅದನ್ನು ಎತ್ತಿಕೊಂಡು 'ಯಾರದ್ರೀ ಈ ಫೋಟೊ? ಈಕೇನ ಎಲ್ಲೋ ನೋಡಿದ ಹಾಗಿದೆಯಲ್ಲ' ಎಂದರು. ಮಾಲು ಸಮೇತ ಸಿಕ್ಕಿ ಬಿದ್ದ ಕಳ್ಳನಂತೆ ನಾನು ನಗುತ್ತ, 'ಸಾರ್! ಅವಳು ನನ್ನ ಭಾವೀ ಮಡದಿ. ನಿಮ್ಮ ಕಾಲೇಜಿನ ವಿದ್ಯಾರ್ಥಿನಿ' ಅಂದೆ. 'ಓಹೋ! ಈಗ ನನಗೆ ಅರ್ಥ ಆಯ್ತು, ನೀವು ಯಾಕೆ ಇಲ್ಲಿಗೆ ಆಗಿಂದಾಗ್ಗೆ ಬರ್ತಿರಿ ಅಂತ' ಎಂದು ಅವರೂ ಜೋರಾಗಿ ನಗುತ್ತ, 'ಈವರೆಗೂ ನನ್ನನ್ನ ನೋಡೋಕೆ ಬರ್ತೀರಿ ಅನ್ನೋ ಭ್ರಮೆಯಲ್ಲಿದ್ದೆ' ಎಂದರು.

ಆಮೇಲೆ ಮೇಸ್ಟ್ರರ ಹತ್ತಿರ ನನ್ನ ಪ್ರಿಯತಮೆಯನ್ನು ಮುಕ್ತವಾಗಿ ಭೇಟಿ ಮಾಡಿ ಮಾತಾಡಲು ಇದ್ದ ಅಡಚಣೆಗಳನ್ನು ತೋಡಿಕೊಂಡು ಹಪಹಪಿಸುತ್ತಿದ್ದೆ. ಅವರು ನನ್ನ ಬಗ್ಗೆ ಅತ್ಯಂತ ಅಂತಃಕರಣಪೂರ್ವಕವಾದ ಅನುಕಂಪವನ್ನು ವ್ಯಕ್ತಪಡಿಸುತ್ತಿದ್ದರು. ದೂರದಿಂದಷ್ಟೇ ಅವಳನ್ನು ನೋಡಿ ಕಣ್ಣಿನ ಮೂಲಕ ಸಂವಾದ ನಡೆಸುತ್ತಿದ್ದ ನನ್ನನ್ನು ಕುರಿತು ನಿಸಾರರಿಗೆ ನಿಜಕ್ಕೂ 'ಅಯ್ಯೋ' ಎನ್ನಿಸುತ್ತಿತ್ತು. ಆ ಭಾವನಾತ್ಮಕ ಸ್ವಪ್ನಸದೃಶ ದಿವಸಗಳಲ್ಲಿ ಮೇಸ್ಟ್ರು ನನ್ನ ಬಗೆಗೆ ತೋರಿದ ಕಕ್ಕುಲಾತಿಯನ್ನು ನಾನು ಇಂದಿಗೂ ತುಂಬು ಕೃತಜ್ಞತೆಯಿಂದ ನೆನೆಯುತ್ತೇನೆ.

ನಿಸಾರ್ ಅಹಮದ್ ಅವರು 'ಎಲ್ಲ ಮರೆತಿರುವಾಗ' ಕವನವನ್ನು ನನಗೋಸ್ಕರ

ಬರೆದರು ಎಂದು ಹೇಳಿದೆನಲ್ಲ. ಆಗಿನ ನನ್ನ ಸಂಗೀತ ಜ್ಞಾನದ ಮಿತಿಯಲ್ಲೇ, ಅದಕ್ಕೆ ಯಮನ್ ರಾಗವನ್ನು ಅಳವಡಿಸಿ ರೇಡಿಯೋದಲ್ಲಿ ಹಾಡಿದ್ದಲ್ಲದೆ ಶಿವಮೊಗ್ಗ ಮತ್ತು ಸುತ್ತಮುತ್ತಲಿನ ಊರುಗಳ ಕಾಲೇಜುಗಳಲ್ಲಿ, ಸಾರ್ವಜನಿಕ ಸಮಾರಂಭಗಳಲ್ಲಿ ಗಾಯನ ಮಾಡಿದೆ. ಅದಕ್ಕೆ ದೊರೆತ ಮನ್ನಣೆ ನನಗೆ ವಿಸ್ಮಯ ಮೂಡಿಸಿತ್ತು. ಮೇಸ್ಟ್ರ ಮುಂದೆಯೂ ಅದನ್ನು ಹಾಡಿದಾಗ, 'ಭೇಷ್, ಭಾವಕ್ಕೆ ತಕ್ಕ ರಾಗ ಹಾಕಿದ್ದೀಯಪ್ಪ ಸುಬ್ಬಣ್ಣ' ಎಂದು ಹುರಿದುಂಬಿಸಿದ್ದರು.

ಆಗ ಶಿವಮೊಗ್ಗೆಯ ವಿದ್ಯಾ ಗಣಪತಿ ಸಂಸ್ಥೆಯ ಸಂಗೀತ ಕಾರ್ಯಕ್ರಮವೆಂದರೆ ಆ ಘಾಸಲೆಗೇ ಹೆಸರುವಾಸಿ. ದೇಶದ ಅನೇಕ ಭಾಗಗಳಿಂದ ಮಹಾನ್ ಶಾಸ್ತ್ರೀಯ ಗಾಯಕರು ನಮ್ಮ ಊರಿಗೆ ಸಂತೋಷದಿಂದ ಬಂದು ಹಾಡಿ, ನೆರೆದಿರುತ್ತಿದ್ದ ಸಹಸ್ರಾರು ಸಂಗೀತ ಶ್ರೋತೃಗಳನ್ನು ತಣಿಸುತ್ತಿದ್ದರು. ಒಮ್ಮೆ, ನಮ್ಮ ರಾಷ್ಟ್ರದ ಬಹು ದೊಡ್ಡ ಪಿಟೀಲು ಕಲಾವಿದರಾದ ಶ್ರೀ ಎಂ. ಎಸ್. ಗೋಪಾಲಕೃಷ್ಣನ್ (ಎಂ.ಎಸ್.ಜಿ.) ನಮ್ಮೂರಿನ ಈ ಕಾರ್ಯಕ್ರಮಕ್ಕೆ ಬಂದಿದ್ದರು. ಅವರು ತಂಗಿದ್ದ ಹೋಟೆಲಿನ ಕೋಣೆಗೆ ಹೋಗಿ ಅವರಿಗೆ ನನ್ನ ಪ್ರೀತಿ-ಗೌರವಗಳನ್ನು ಸಲ್ಲಿಸಿ ಬಂದೆ. ಆಗ ಅವರು ನನ್ನಿಂದ ಒಂದು ಹಾಡನ್ನು ಕೇಳಲು ಅಪೇಕ್ಷಿಪಟ್ಟರು. ಆಗಷ್ಟೇ ರಾಗ ಅಳವಡಿಸಿ ಬಾನುಲಿಯಲ್ಲಿ ಪ್ರಸಾರಮಾಡಿದ್ದ 'ಎಲ್ಲ ಮರೆತಿರುವಾಗ'ವನ್ನು ಹಾಡಿದೆ. ಗೋಪಾಲಕೃಷ್ಣನ್ ಅವರಿಗೆ ನಿಜಕ್ಕೂ ಸಂತಸವಾಗಿತ್ತು. ಅವರು ತಮಿಳರು, ಕನ್ನಡ ಬಾರದು. ಆದರೂ ನನ್ನ ಹಾಡನ್ನು ಮೆಚ್ಚಿದರು. ಇದನ್ನು ಹೇಳಿದಾಗ ಅವರು, 'Poerty communicates before it is understood' ಎಂದರು.

'ಎಲ್ಲ ಮರೆತಿರುವಾಗ' ಭಾವಗೀತೆಯನ್ನು ಆಮೇಲಿನ ವರ್ಷಗಳಲ್ಲಿ ಕನ್ನಡದ ಅದ್ವಿತೀಯ ಸಂಗೀತ ಸಂಯೋಜಕ-ಗಾಯಕ ಶ್ರೀ ಮೈಸೂರು ಅನಂತಸ್ವಾಮಿ ಅವರು ಚಂದ್ರ ಕೌಂಸ್ ರಾಗಕ್ಕೆ ಅಳವಡಿಸಿ ಸಾರ್ವಜನಿಕ ಸಭೆಗಳಲ್ಲಿ ಪ್ರಸಿದ್ಧಿ ಗಳಿಸಿದ್ದಲ್ಲದೆ, ಕನ್ನಡದ ಮೊಟ್ಟಮೊದಲನೆಯ ಭಾವಗೀತಗಳ ಕ್ಯಾಸೆಟ್ 'ನಿತ್ಯೋತ್ಸವ'ದಲ್ಲೂ ಅದನ್ನು ಸೇರಿಸಿ ಇಂದಿಗೂ ಅದರ ಜನಾದರಣೀಯತೆ ಹೆಚ್ಚಲು ಕಾರಣವಾಗಿದ್ದಾರೆ. ಆದರೆ ನಿಸಾರ್ ಅವರು ಒಂದು ಸಂದರ್ಭದಲ್ಲಿ ನನ್ನ ಬಳಿ 'ಸುಬ್ಬಣ್ಣ, ಅನಂತಸ್ವಾಮಿ 'ಎಲ್ಲ ಮರೆತಿರುವಾಗ'ಕ್ಕೆ ಒಳ್ಳೆಯ ಟ್ಯೂನ್ ಹಾಕಿದ್ದಾರೆ, ತುಂಬಾ ಲೋಕಪ್ರಿಯಗೊಳಿಸಿದ್ದಾರೆ. ನನಗೂ ಅದು ಮೆಚ್ಚಿಕೆಯಾಗಿದೆ. ಆದರೆ, ನೀವು ಆ ಕಾಲದಲ್ಲಿ ಈ ಪದ್ಯಕ್ಕೆ ಹಾಕಿದ್ದ ಯಮನ್ ರಾಗ ನನಗೆ ಹೆಚ್ಚು ಆಪ್ತ ಹಾಗೂ ಹೃದಯಸ್ಪರ್ಶಿ ಎನ್ನಿಸುತ್ತದೆ' ಎಂದರು. ಯಾವುದನ್ನೂ ಮರೆಮಾಚದೆ ಬಿಚ್ಚುಮಾತಿನಿಂದ ವ್ಯಕ್ತಗೊಳಿಸುವ ನಿಸಾರರಂಥ ದೊಡ್ಡ ಕವಿ ನನಗೆ ನೀಡಿರುವ ಪ್ರಶಂಸೆಯ ಈ ಸರ್ಟಿಫಿಕೆಟ್ ನನ್ನ ಬಾಳಿನ ಭಾಗ್ಯಗಳಲ್ಲಿ ಒಂದು ಎಂದು ನಾನು ಭಾವಿಸಿದ್ದೇನೆ.

ಕರ್ನಾಟಕದಲ್ಲಿ ಸುಗಮ ಸಂಗೀತ ಕ್ಷೇತ್ರ (ಹಿಂದೆ ಇದಕ್ಕೆ 'ಲಘುಸಂಗೀತ'ವೆಂಬ ಹೆಸರಿತ್ತು)ಕ್ಕೆ ಭದ್ರವಾದ ಬುನಾದಿಯನ್ನು ಹಾಕಿದವರು ಪಿ. ಕಾಳಿಂಗರಾವ್ ಮತ್ತು ಬಾಳಪ್ಪ ಹುಕ್ಕೇರಿ. ಕಾಳಿಂಗರಾಯರ ಅನಂತರ, ಅವರ ಶಿಷ್ಯರಾದ ಶ್ರೀ ಮೈಸೂರು ಅನಂತಸ್ವಾಮಿ ಅವರು ಸುಗಮ ಸಂಗೀತಕ್ಕೆ ನಾಲ್ಕು ದಶಕಗಳಿಗೂ ಹೆಚ್ಚು ಶ್ರಮಿಸಿದವರು. ಸುಗಮ

ಸಂಗೀತಕ್ಕೆ ಅವರು ದಕ್ಕಿಸಿರುವ ಆಳ, ಅಗಲ ಹಾಗೂ ಎತ್ತರ ಅಭೂತಪೂರ್ವವಾದವು. ಅವರಷ್ಟು ಕನ್ನಡದ ಭಾವಗೀತೆಗಳನ್ನು ಪ್ರಚುರ ಪಡಿಸಿ ಮನೆಮನೆಯಲ್ಲೂ ಮೆಚ್ಚುವಂತೆ ಮಾಡಿದವರು ಅತ್ಯಂತ ವಿರಳರೆಂದು ಹೇಳಿದರೆ ಅತ್ಯುಕ್ತಿ ಎನ್ನಿಸದು. ಬಹುಶಃ ಅತ್ಯಂತ ಹೃನ್ಮನ ಸೆಳೆಯುವ ಮೋಡಿಗಾರಿಕೆಯ ರಾಗಗಳನ್ನು ವೈವಿಧ್ಯಮಯವಾಗಿ ಹಾಕಿ, ನಾಡಿನಾದ್ಯಂತ ಅಸಂಖ್ಯಾತ ಸಾರ್ವಜನಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಮಾರಂಭ ಗಳಲ್ಲಿ ಹಾಡಿ, ಹಾಡಿಸಿ ಇಂದಿಗೂ ಆ ಗೀತೆಗಳು ಶೋಭಾಯಮಾನವಾಗಿರುವಂತೆ ಎಸಗಿದವರು ಶ್ರೀ ಮೈಸೂರು ಅನಂತಸ್ವಾಮಿ. ಅವರು ತಯಾರು ಮಾಡಿದ ಶಿಷ್ಯ-ಶಿಷ್ಯೆಯರಿರಲಿ, ಅವರ ಹಾಡುಗಳಿಂದ ಸ್ಫೂರ್ತರಾಗಿ ಖ್ಯಾತರಾದ ಗಾಯಕ-ಗಾಯಕಿಯರ ಲೆಕ್ಕಕ್ಕೆ ಮಿತಿಯಿಲ್ಲ. ಅಸದೃಶ ಪ್ರತಿಭೆಯ ಅನಂತಸ್ವಾಮಿ ಅವರಿಗೆ ನಿಸಾರರಂಥ ಪ್ರಖರ ಪ್ರತಿಭಾವಂತ ಕವಿಯ ಸಖ್ಯ ದೊರಕಿದ್ದು ನಮ್ಮ ಸುಗಮ ಸಂಗೀತ ಲೋಕದ ಒಂದು ಅಪರೂಪದ ಸೌಭಾಗ್ಯ ಎನ್ನಬೇಕು.

ಪ್ರೊ. ನಿಸಾರ್ ಅಹಮದ್ ಅವರು ಅರವತ್ತರ ದಶಕದ ಕೊನೆಯ ಭಾಗದ ಹೊತ್ತಿಗೇ ಕನ್ನಡದಲ್ಲಿ ದನಿ ಸುರುಳಿಯನ್ನು ಹೊರ ತರಬೇಕೆಂಬ ಸಂಕಲ್ಪ ಮಾಡಿದ್ದರೆಂದು ತೋರುತ್ತದೆ. ಈ ಬಗ್ಗೆ ನನಗೂ ಒಂದೆರಡು ಸಲ ಹೇಳಿದಂತೆ ಜ್ಞಾಪಕ. ಅನಂತಸ್ವಾಮಿ ಅವರು ನಿಸಾರರ ಭಾವಗೀತೆಗಳಿಗೆ ರಾಗ ಸಂಯೋಜಿಸಿ ಸ್ವತಃ ಹಾಡಿಯೋ, ಬೇರೆ ಗಾಯಕ-ಗಾಯಕಿಯರಿಂದ ಹಾಡಿಸಿಯೋ ನಾಲ್ಕು ದಶಕಗಳಿಗೂ ಮಿಕ್ಕು ಸಮಯ ಸಂದಿದೆ. 'ನಿತ್ಯೋತ್ಸವ' ಕ್ಯಾಸೆಟ್ ಬರುವುದಕ್ಕೂ ಮುಂಚೆಯೇ, ೧೯೭೦ರ ಹೊತ್ತಿಗೇ, ನಾನು ತಿಳಿದ ಮಟ್ಟಿಗೆ ಅನಂತಸ್ವಾಮಿ, ನಿಸಾರರ 'ಕುರಿಗಳು, ಸಾರ್ ಕುರಿಗಳು', 'ಬೆಣ್ಣೆ ಕದ್ದ ನಮ್ಮ ಕೃಷ್ಣ', 'ಎಲ್ಲ ಮರೆತಿರುವಾಗ', 'ನಿತ್ಯೋತ್ಸವ', 'ನಾಡ ದೇವಿಯೆ' ಮೊದಲಾದ ಕವನಗಳನ್ನು ನಾಡಿನಾದ್ಯಂತ ಪ್ರಚುರ ಪಡಿಸಿದ್ದರು. ಇದನ್ನು ಮನಗಂಡ ನಿಸಾರರು, ಕನ್ನಡದಲ್ಲಿ ಮೊಟ್ಟ ಮೊದಲನೆಯದಾಗಿ ಭಾವಗೀತೆಗಳ ದನಿ ಸುರುಳಿಯನ್ನು ತಂದು ಮನೆಮನೆಯಲ್ಲೂ ಅದು ನೆಲೆಯೂರುವಂತೆ ಮತ್ತು ಭಾವೀ ಕ್ಯಾಸೆಟ್ ಸಂಸ್ಕೃತಿಗೆ ನಾಂದಿಯಾಗುವಂತೆ ಯೋಜನೆಯನ್ನು ರೂಪಿಸಿದರು. ಆ ಕಾಲಕ್ಕೆ ಇದೊಂದು ಹೊಚ್ಚ ಹೊಸ ಕಲ್ಪನೆ ಮತ್ತು ಖಾಸಗಿಯಾಗಿ ಹಣ ತೊಡಗಿಸಬೇಕಾದ ಸಾಹಸದ ಹವ್ಯಾಸ. ಇದನ್ನು ಅನಂತಸ್ವಾಮಿಯವರಿಗೆ ತಿಳಿಸಿದಾಗ ಅವರು ಮೊದಮೊದಲು ಹಿಮ್ಮೆಟ್ಟಿದರೂ ನಿಸಾರರ ಸತತವಾದ ಆಗ್ರಹಪೂರ್ವಕ ಒತ್ತಾಯಕ್ಕೆ ಮಣಿದು 'ಅಸ್ತು' ಎಂದರು. ಆದರೆ, ಯಾವುದೇ ಆರ್ಥಿಕ ನಿರ್ಬಂಧಕ್ಕೂ ಸಿದ್ಧರಿಲ್ಲ ಎಂದಿದ್ದರು. ಹೀಗಾಗಿ ನಿಸಾರರು ಒಬ್ಬರೇ, ಒಂದಿಬ್ಬರು ಸ್ನೇಹಿತರ ಒತ್ತಾಸೆಯಿಂದ (ಎಸ್. ರಾಮಸ್ವಾಮಿ, ಬಿ.ಕೆ. ಪಾರ್ಥಸಾರಥಿ) ಬ್ಯಾಂಕಿನಲ್ಲಿ ಸಾಲ ಎತ್ತಿ ಕನ್ನಡದ ಪ್ರಪ್ರಥಮ ಗೀತೆಗಳ ದನಿ ಸುರುಳಿಯನ್ನು—ಸುಗಮ ಸಂಗೀತದ ಮಹತ್ತರ ಮೈಲಿಗಲ್ಲಾದ 'ನಿತ್ಯೋತ್ಸವ'ವನ್ನು—ಹೊರತಂದರು. ಹೀಗಾಗಿ, ನಾಡಿನ ಧ್ವನಿ ಸುರುಳಿಯ ಸಂಸ್ಕೃತಿಯನ್ನು ಉದ್ಘಾಟಿಸಿದ ಚೊಚ್ಚಲ ಕ್ಯಾಸೆಟ್ಟನ್ನು; ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ, ಸ್ಥಾನಮಾನವಿರುವ ಹಾಡುಗಳ ಸುರುಳಿಯನ್ನು ನಿಸಾರ್ ಅಹಮದ್ ಅವರು ೧೯೭೮ರಲ್ಲಿ ಸಂಗೀತ ಸಹೃದಯರಿಗೆ ಅರ್ಪಿಸಿದರು. ಆ ಹೊತ್ತಿಗಾಗಲೇ ನಿಸಾರರು

ಬೆಂಗಳೂರನ್ನು ಸೇರಿದ್ದರು. ನಾನು ಆಡಿಟರ್ ಆಗಿ ಇನ್ನೂ ಶಿವಮೊಗ್ಗೆಯಲ್ಲಿಯೇ ಇದ್ದೆ. `ನಿತ್ಯೋತ್ಸವ' ಕ್ಯಾಸೆಟ್‌ನಲ್ಲಿ ಯಾರು ಯಾರು ಹಾಡಬೇಕೆಂಬುದನ್ನು ಅನಂತಸ್ವಾಮಿ ನಿರ್ಧರಿಸಿದ್ದರು. ಈ ವಿಷಯವನ್ನು ಅನಂತಸ್ವಾಮಿಯವರು ನಿಸಾರರಿಗೆ ತಿಳಿಸಿದಾಗ, ಅವರು, `ನಮ್ಮ ಸುಬ್ಬಣ್ಣನಿಂದ ಒಂದು ಗೀತೆಯನ್ನು ಹಾಡಿಸಿ' ಅಂದರು. ಆಗ ಅನಂತಸ್ವಾಮಿ, `ಅವರ ಕಂಠಕ್ಕೆ ಸರಿಹೋಗುವ ಹಾಡಿಲ್ಲವಲ್ಲ' ಎಂದಾಗ, 'ನೀವು ಪಹಾಡಿ ರಾಗ ಹಾಕಿರುವ `ನಾನಿನ್ನ ಕಂಡಾಗ' ಗೀತೆಯನ್ನು ಹಾಡಿಸಬಹುದಲ್ಲ, ಅವರ ಧ್ವನಿಗೆ ಚೆನ್ನಾಗಿ ಹೊಂದುತ್ತದೆ'—ನಿಸಾರರು ಹೇಳಿದಾಗ, `ಹಾಗೆಯೇ ಆಗಲಿ' ಎಂದರಂತೆ.

ಹೀಗಾಗಿ, ನಿಸಾರ್ ಅಹಮದ್ ಅವರ ಮೊದಲನೆಯ ಕ್ಯಾಸೆಟ್‌ನ ಮೂಲಕ ಸುಗಮ ಸಂಗೀತ ದನಿ ಸುರುಳಿಯ ಕ್ಷೇತ್ರಕ್ಕೆ ನನ್ನ ಪಾದಾರ್ಪಣವೂ ಆಯಿತು. ಅದು ನೆರವೇರಿದ ಮುಹೂರ್ತ ಪ್ರಶಸ್ತವಾಗಿದ್ದಿರಬೇಕು. ಅಂದಿನಿಂದ ಇಂದಿನವರೆಗೆ ನಾನು ಮುಂದಡಿಯಿಟ್ಟು ಸಾಗುತ್ತಲೇ ಇದ್ದೇನೆ. ದೇವರ ಕೃಪೆಯಿಂದ, ಕನ್ನಡಿಗರ ಔದಾರ್ಯದಿಂದ ಯಶಸ್ಸಿನ ಸೋಪಾನಗಳನ್ನು ಏರುತ್ತ ಬಂದಿದ್ದೇನೆ.

'ನಿತ್ಯೋತ್ಸವ' ದನಿ ಸುರುಳಿಯ ಲೋಕಾರ್ಪಣೆಯ ಸಮಾರಂಭ ೧೯೭೮ರಲ್ಲಿ ಅತ್ಯಂತ ವೈಭವ ಮತ್ತು ಕಲಾಪೂರ್ಣವಾಗಿ ಕ.ಸಾ.ಪ. ಸಭಾಂಗಣದಲ್ಲಿ ನಡೆದದ್ದು ಇನ್ನೂ ಮನಸ್ಸಿನಲ್ಲಿ ಹಸಿರಾಗಿದೆ. ಡಾ. ವಿ. ಕೃ. ಗೋಕಾಕ್, ಡಾ. ಕೆ. ಎಸ್. ನರಸಿಂಹಸ್ವಾಮಿ, ಸಚಿವ ಕೆ. ಎಚ್. ಶ್ರೀನಿವಾಸ್ ಅವರು ಪಾಲ್ಗೊಂಡ ಆ ಚಾರಿತ್ರಿಕ ಸಮಾರಂಭದ ಮತ್ತೊಂದು ವೈಶಿಷ್ಟ್ಯವೆಂದರೆ, ನಿಸಾರರ ತಂದೆ ದಿವಂಗತ ಕೆ. ಎಸ್. ಹೈದರ್ ಅವರು ತಾವಾಗಿ ವೇದಿಕೆಯ ಬಳಿ ಬಂದು ಮಗನನ್ನು ಹರಸಿದ್ದಲ್ಲದೆ, ಮೊಟ್ಟಮೊದಲನೆಯ ದನಿ ಸುರುಳಿಯನ್ನು ಕೊಂಡುಕೊಂಡಿದ್ದು! ಅನಂತರ, ನಾನು ಶಿವಮೊಗ್ಗೆಯ ಕರ್ನಾಟಕ ಸಂಘದಲ್ಲಿ 'ನಿತ್ಯೋತ್ಸವ' ಕ್ಯಾಸೆಟ್‌ನ ಬಿಡುಗಡೆ ಕಾರ್ಯಕ್ರಮವನ್ನು ಏರ್ಪಡಿಸಿದ್ದೆ. ಶ್ರೀಯುತರಾದ ಮಹಿಷಿ ನರಸಿಂಹಮೂರ್ತಿ, ಹಸೂಡಿ ದತ್ತಾತ್ರೇಯ ಶಾಸ್ತ್ರಿ, ಕೆ. ಜಿ. ಸುಬ್ರಹ್ಮಣ್ಯ, ವೆಂಕಟರಾಮಶಾಸ್ತ್ರಿ ಮೊದಲಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಹಾರೈಸಿದ್ದರು.

ಮತ್ತೊಂದು ಹೃದ್ಯವಾದ ಸಂಗತಿಯೆಂದರೆ, ಮೂಲತಃ ಬೆಂಗಳೂರಿನವರಾದ ನಿಸಾರರು ನಮ್ಮ ಊರಿನಲ್ಲಿದ್ದಾಗ ಬರೆದ ಹಲವು ಕವಿತೆಗಳನ್ನು ಒಳಗೊಂಡ ಈ ದನಿ ಸುರುಳಿಯನ್ನು ನಮ್ಮೂರಿನ ಪ್ರತಿಷ್ಠಿತ ಕರ್ನಾಟಕ ಸಂಘದಲ್ಲಿ ಬಿಡುಗಡೆ ಮಾಡಿದ್ದು. ಆ ಕಾಲಕ್ಕೆ ಈ ಸಂಘ, ನಾಡಿನ ಕೆಲವೇ ಅತ್ಯಂತ ಗೌರವಯುತ ಸಂಘಗಳಲ್ಲಿ— ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಮೈಸೂರಿನ ಮಹಾರಾಜ ಕಾಲೇಜಿನ ಕನ್ನಡ ಸಂಘ, ಧಾರವಾಡ ವಿದ್ಯಾವರ್ಧಕ ಸಂಘ—ಒಂದಾಗಿತ್ತು. ಸಾರಸ್ವತ ಹಾಗೂ ಸಾಂಸ್ಕೃತಿಕ ಆಗು ಹೋಗುಗಳಲ್ಲಿ ಶಿವಮೊಗ್ಗೆಯ ಈ ಸಂಘಕ್ಕೆ ವಿಶಿಷ್ಟ ಸ್ಥಾನವಿದೆ. ಆರಂಭದ ದಿಸೆಯಲ್ಲಿ ಈ ಸಂಘದ ಮೂಲಕ ಕುವೆಂಪು ಅವರ ಭಾವಗೀತೆಗಳ ಸಂಕಲನದ ಪ್ರಕಟನೆ ಮತ್ತು ಬಿಡುಗಡೆ ಆಗಿತ್ತು. ಇದೀಗ ಕನ್ನಡದ ಮಹತ್ವದ ದನಿ ಸುರುಳಿ `ನಿತ್ಯೋತ್ಸವ' ಬಿಡುಗಡೆ

ಯಾಗಿರುವುದು ಮರೆಯಲಾರದ ಘಟನೆಯಾಗಿದೆ. ನಿಸಾರ್ ಮೇಸ್ಟ್ರು ಅಂದಿನಿಂದ ಇಂದಿನ ತನಕ ನನ್ನ ಬಗೆಗೆ ವಿಶೇಷ ಕಳಕಳಿಯನ್ನು ತೋರಿಸುತ್ತ ಬಂದಿದ್ದಾರೆ. ಅವರು ೧೯೮೪-೮೭ರ ವರೆಗೆ ಕರ್ನಾಟಕ ಸಾಹಿತ್ಯ ಅಕೆಡೆಮಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನನ್ನನ್ನು ಅನೇಕ ಕಾರ್ಯಕ್ರಮಗಳಿಗೆ ಕರೆದು ಹಾಡಿಸಿದ್ದಾರೆ. ಅದರಲ್ಲೂ, ಮಾಸ್ತಿ ಅವರಿಗೆ ಜ್ಞಾನಪೀಠ ಬಂದ ಸಂದರ್ಭದಲ್ಲಿ ನಿಸಾರರು ಬೆಂಗಳೂರಿನ 'ಯವನಿಕಾ'ದಲ್ಲಿ ಏರ್ಪಡಿಸಿದ್ದ ಅದ್ದೂರಿಯಾದ ಸಮಾರಂಭದಲ್ಲಿ ಮತ್ತು ೧೯೮೫ರಲ್ಲಿ ಮೈಸೂರಿನ 'ಕಲಾ ಮಂದಿರ'ದಲ್ಲಿ ನಡೆದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ ಅಧ್ಯಕ್ಷರಾಗಿದ್ದ ಮಹಾಕವಿ ಕುವೆಂಪು ಅವರ ಸಮ್ಮುಖದಲ್ಲಿ ನನಗೆ ಹಾಡುವ ಅವಕಾಶವನ್ನು ನೀಡಿದ್ದು ನನ್ನ ಬದುಕಿನಲ್ಲೇ ಚಿರಸ್ಮರಣೀಯ ಘಟನೆಗಳಾಗಿವೆ. ಇದಕ್ಕಾಗಿ ಕೂಡ ನಾನು ನಿಸಾರ್ ಅಹಮದ್ ಅವರಿಗೆ ಆಭಾರಿ.

ತಮ್ಮ ಕಾವ್ಯ ಮತ್ತು ಅಂತಃಕರಣಪೂರ್ಣ ವ್ಯಕ್ತಿತ್ವದಿಂದ ಕನ್ನಡದ ಜನಮನವನ್ನು ಗೆದ್ದು, ಆನಂದ ಮತ್ತು ಸಂತುಷ್ಟಿಯನ್ನು ಹಂಚುತ್ತಿರುವ ನಮ್ಮ ಅಪೂರ್ವ ಕವಿ ಮತ್ತು ವಿಮರ್ಶಕರಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ಇನ್ನೂ ಹಲವಾರು ವಸಂತ ಗಳನ್ನು ಕಳೆಯುವ ಸೌಭಾಗ್ಯವನ್ನು ಭಗವಂತ ಕರುಣಿಸಲೆಂದು ಮನಃಪೂರ್ವಕವಾಗಿ ಆಶಿಸುತ್ತೇನೆ.

ಕಾವ್ಯ ಕನ್ನಿಕೆ ಸಾಮಾನ್ಯ ಅನುನಯ ಅನುರಾಗಗಳಿಗೆ ಮಾರುಹೋಗುವ ಸುಲಭ ಜಾಯಮಾನಿಯಲ್ಲ. ಅವಳನ್ನು ಗೆಲ್ಲುವುದರ ಮೂಲಕ, ಗೆದ್ದೆನೆಂದು ಸಾರ್ವಜನಿಕವಾಗಿ ಸ್ಥಾಪಿಸುವ ಮೂಲಕವಷ್ಟೇ ಅವಳ ಚಿತ್ತವನ್ನು ವಶಪಡಿಸಿ ಕೊಳ್ಳಲು ಶಕ್ಯ. 'ವರ' ಕವಿಯೆಂದು ಅವಳು ಆದರಿಸಿ ಸ್ವಯಂವರಿಸುವುದು ಸಮರ್ಥರಲ್ಲಿ ಅತ್ಯಂತ ಸಮರ್ಥನನ್ನು ಮಾತ್ರ. ಅಂಥವ ಯುಗ ವಿರಳ. ಮಿಕ್ಕೆಲ್ಲ ಕವನಕಾರರು ಸ್ವತ ಏವ ಶಕ್ತಿಶಾಲಿಗಳೇ ಆಗಿದ್ದರೂ ಆಕೆಯ ದೃಷ್ಟಿಯಲ್ಲಿ ಕೇವಲ ಸಭಾಸದರು ಮಾತ್ರ. ಕಾವ್ಯಕನ್ನಿಕೆಯ ಹೃದಯ ಮರ್ಮದ ಮತ್ಸ್ಯಯಂತ್ರಭೇದನವನ್ನು ರಾಜಸ, ತಾಮಸ ರೂಪದ ಪ್ರದರ್ಶನ ಕಾತರ ಡಿಖಾವುಗಾರರಿಗಿಂತ ಸಾತ್ತ್ವಿಕ ಸೌಮ್ಯನಂತೆ ಮೇಲ್ಕಾಣಿಸುವ ಕ್ಷಾತ್ರ ಅರ್ಜುನ ಪ್ರತಿಭೆಗಷ್ಟೇ ಮಾಡಲು ಸಾಧ್ಯ.

(ಕಾವ್ಯ ಅರ್ಪಿಸಿಕೊಳ್ಳುವುದು ಸಾಮರ್ಥ್ಯವಂತರಿಗೆ ಮಾತ್ರ)



ಸುಗಮ ಸಂಗೀತ ದನಿಸುರುಳಿ ಪರಂಪರೆಯ ಹರಿಕಾರ ನಿಸಾರ್

◆ ಡಾ. ಜಯಶ್ರೀ ಅರವಿಂದ್

ಇಂದು ಸುಗಮ ಸಂಗೀತ ತನ್ನ ಹೆಸರಿನಲ್ಲಿಯೇ ಹೇಳುವಂತೆ ಸುಗಮವಾಗಿ ಹರಿಯುವಂತಹ ಒಂದು ಗಾಯನ ಶೈಲಿ. ಆದರೆ ಈ ಸಂಗೀತ ಹುಟ್ಟುವುದೇ ಕವಿತೆಯ ದರ್ಶನದಿಂದ. ಕವಿತೆಯ ಅಂತರಾಳವನ್ನು, ಎದೆ ಮಿಡಿತವನ್ನು ಸಂಗೀತದ ಮೂಲಕ ಪ್ರಕಾಶಪಡಿಸುವುದೇ ಇದರ ಮೂಲ ಗುರಿ. ಈ ಗಾಯನ ಪ್ರಕಾರದಲ್ಲಿ ಸಂಗೀತಕ್ಕಾಗಿ ಸಾಹಿತ್ಯವಿಲ್ಲ. ಸಾಹಿತ್ಯಕ್ಕಾಗಿ ಸಂಗೀತವಿರುತ್ತದೆ. ಸಾಹಿತ್ಯವನ್ನು ತನ್ನ ಗಾಯನ ನಿರೂಪಣೆ ಯಿಂದ ವ್ಯಾಖ್ಯಾನಿಸಿ, ಅದರ ಅರ್ಥದ ಎತ್ತರ ಬಿತ್ತರಗಳನ್ನು ವಿಸ್ತರಿಸುವುದೇ ಇದರ ವಿಶೇಷತೆ. ಸುಗಮ ಸಂಗೀತವೆಂದರೆ ಸುಮಧುರವೂ ಅರ್ಥಪೂರ್ಣವೂ ಆದ ಒಂದು ಬಗೆಯ ಕವಿತಾ ಸಂಗೀತ. ಸಪ್ತಸ್ವರಗಳ ತರತರದ ಬಣ್ಣಗಳಲ್ಲಿ ಕಾವ್ಯದ ಚಿತ್ರವನ್ನು ಸುಂದರವಾಗಿ, ಅರ್ಥಪೂರ್ಣವಾಗಿ ಬಿಡಿಸುವುದೇ ಇದರ ಸಂಕಲ್ಪ.

'ಸುಗಮ ಸಂಗೀತ' ಎಂಬ ಹೆಸರು ತೀರ ಇತ್ತೀಚಿನದು. ಇದಕ್ಕೂ ಮೊದಲು 'ಕವಿತಾ ಗಾಯನ', 'ಭಾವಗೀತಾ ಗಾಯನ', 'ಲಘು ಸಂಗೀತ' ಎನ್ನುವ ಹೆಸರಿನಿಂದ ಕರೆಯಿಸಿ ಕೊಳ್ಳುತ್ತಿದ್ದು, ೧೯೮೬ರಿಂದ 'ಸುಗಮ ಸಂಗೀತ'ವೆಂಬ ಸುಮಧುರ ಹೆಸರು ಪಡೆಯಿತು. ಈ ಹೆಸರಿನ ಋಣ ಆಕಾಶ ವಾಣಿಗೆ ಸಲ್ಲಬೇಕು. ಏಕೆಂದರೆ ನಮ್ಮ ಇಂದಿನ ಸುಗಮ ಸಂಗೀತಕ್ಕೆ ಭದ್ರವಾದ ಬುನಾದಿ ಹಾಕಿಕೊಟ್ಟ ಮಾಧ್ಯಮಗಳಲ್ಲಿ

ಮೊದಲನೆಯ ಸ್ಥಾನದಲ್ಲಿ ನಿಲ್ಲುವುದು ಆಕಾಶವಾಣಿ.

೧೯೩೫ರಲ್ಲಿ ಆಕಾಶವಾಣಿ ಪ್ರಾರಂಭವಾದಾಗ ಸಂಗೀತ ಕಾರ್ಯಕ್ರಮಗಳನ್ನು ಶಾಸ್ತ್ರೀಯ ಸಂಗೀತ, ಲಘು ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಚಲನಚಿತ್ರ ಸಂಗೀತ— ಹೀಗೆ ನಾಲ್ಕು ಭಾಗಗಳಾಗಿ ವರ್ಗೀಕರಿಸಲಾಗಿತ್ತು. ಶಾಸ್ತ್ರೀಯ ಸಂಗೀತದ ನಿಯಮಗಳನ್ನೆಲ್ಲ ಅನುಸರಿಸುತ್ತ ಶ್ರುತಿ, ರಾಗ, ತಾಳ, ಲಯ ಇತ್ಯಾದಿ ನಿಯಮಗಳೊಂದಿಗೆ, ಹಾಡಿನ ಸಾಹಿತ್ಯದ ಭಾವಾರ್ಥ, ಪದ ಲಾಲಿತ್ಯಗಳಿಗೆ ಹೆಚ್ಚಿನ ಒತ್ತುಕೊಡುವ ನವಜಾತ ಲಘು ಸಂಗೀತ, ಶಾಸ್ತ್ರೀಯ ಸಂಗೀತದ ಜತೆ ಜತೆಗೆ ಆಕಾಶವಾಣಿಯಲ್ಲಿ ಬೆಳೆದು ಬಂದಿತು. ೧೯೪೦ರ ಅನಂತರ ಲಘು ಸಂಗೀತ, ಶಾಸ್ತ್ರೀಯ ಸಂಗೀತದ ನೆರಳಿನಲ್ಲಿ ಹುಟ್ಟಿಕೊಂಡಿತು. ಕುವೆಂಪು, ಬೇಂದ್ರೆ, ಪು.ತಿ.ನ. ಮುಂತಾದ ಎಲ್ಲ ಮಹನೀಯ ಕವಿಗಳ ಕವಿತೆಯನ್ನು ಹಾಡುವುದಕ್ಕೆ ತೋರಿಸಿಕೊಟ್ಟ ಪ್ರಸಿದ್ಧ ಹಿಂದೂಸ್ತಾನಿ ವಿದ್ವಾಂಸರುಗಳಾದ ಭೀಮಸೇನ ಜೋಶಿ (ಆ ವೇಳೆಗಾಗಲೇ ಅವರು ಹಾಡಿದ ಹೆಚ್.ಎಂ.ವಿ. ದನಿ ತಟ್ಟೆಗಳು ಧ್ವನಿಮುದ್ರಿತ ವಾಗಿ ಜನಪ್ರಿಯತೆ ಗಳಿಸಿದ್ದವು), ಜಯವಂತಿ ದೇವಿ ಹಿರೇಭಟ್, ಬಿ. ಜಿ. ರಾಮನಾಥ್, ಭಾಗವತ್, ಎಂ. ಎಲ್. ವಸಂತಕುಮಾರಿ, ಕುಮಾರ ಗಂಧರ್ವ ಮುಂತಾದವರ ಗೀತೆಗಳು ಪ್ರಸಾರವಾದವು. ಕವಿಗಳಿಗೆ ಒಮ್ಮೆ ನೂರು ರೂಪಾಯಿ ಕೊಟ್ಟರೆ ಅವರ ಎಲ್ಲ ಹಾಡುಗಳೂ ಆಕಾಶವಾಣಿಯ ಪ್ರಸಾರಕ್ಕೆ ಒಳಪಡುವ ಗುತ್ತಿಗೆ ಕ್ರಮವಿದ್ದು, ಅನಂತರ ಅದು ಬದಲಾಯಿತು. ಆಕಾಶವಾಣಿ ಸ್ವಾಯತ್ತತೆಯನ್ನು ಪಡೆಯದ ಮುನ್ನ ಹಾಡುವ ಕಲಾವಿದರಿಗೆ ಯಾವ ಸಂಭಾವನೆ ಕೊಡುವ ಕ್ರಮವೂ ಇರಲಿಲ್ಲ. ಮಹಿಳೆಯರಿಗಂತೂ ಅರಿಶಿನ, ಕುಂಕುಮ, ತೆಂಗಿನಕಾಯಿ ತಾಂಬೂಲದ ಮರ್ಯಾದೆ ಮಾಡಲಾಗುತ್ತಿತ್ತು. ಎ. ಎನ್. ಮೂರ್ತಿರಾವ್, ನಾ. ಕಸ್ತೂರಿ ಮುಂತಾದವರು ನಿಲಯಕ್ಕೆ ಬಂದು ಸೇರಿದ ಮೇಲೆ ನಿಲಯದ ಕಾರ್ಯಕ್ರಮಗಳು ಮತ್ತಷ್ಟು ಚುರುಕಾದವು.

೧೯೪೫ರ ಪ್ರಾರಂಭದ ಹೊತ್ತಿಗೆ ಕಾಳಿಂಗರಾಯರು ಮೈಸೂರು ಆಕಾಶವಾಣಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದ್ದರು. ಆಗಲೇ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಧ್ವನಿಮುದ್ರಿತವಾಗಿ ಜನಪ್ರಿಯವಾಗಿತ್ತು. ಪ್ರತಿದಿನ ಮುಂಜಾನೆ ರಾಯರ ಹಾಡಿನಿಂದಲೇ ಆಕಾಶವಾಣಿಯು ಪ್ರಾರಂಭವಾಗಿ ರಾಯರ 'ಉದಯವಾಗಲಿ' ಹಾಡು ಆಕಾಶವಾಣಿಯ ಸಿಗ್ನೇಚರ್ ಟ್ಯೂನ್ ಆಗಿತ್ತು.

೧೯೫೫ರ ಅನಂತರ ಮೈಸೂರು ಆಕಾಶವಾಣಿ ಬೆಂಗಳೂರಿಗೆ ಬಂದು ನೆಲೆಸಿತು. ಆಗ ಕೇಂದ್ರ ವಾರ್ತಾಮಂತ್ರಿಯಾಗಿದ್ದ ಡಾ. ಬಿ. ವಿ. ಕೆಸ್ಕರ್ ಅವರು ಆಕಾಶವಾಣಿಯಲ್ಲಿ ಈ ಮುಂಚೆ ಪ್ರಸಾರವಾಗುತ್ತಿದ್ದ ಹಿಂದಿ ಭಾಷೆಯ ಚಲನಚಿತ್ರ ಗೀತೆಗಳನ್ನು ನಿಲ್ಲಿಸಿ, ಅವುಗಳ ಜಾಗಕ್ಕೆ ಭಾವಗೀತೆಗಳನ್ನು ಪ್ರಸಾರ ಮಾಡಬೇಕೆಂಬ ಆದೇಶ ಕಳಿಸಿದರು. ಅವಕ್ಕೆ ಪರ್ಯಾಯವಾಗಿ ಅಷ್ಟೇ ಜನಪ್ರಿಯತೆಯ ಹಾಡುಗಳ ಪ್ರಸರಣ ಅತ್ಯಗತ್ಯವಾಯಿತು. ಇವುಗಳ ಜನಪ್ರಿಯತೆಯನ್ನು ಕವಿತಾ ಗಾಯನ ತುಂಬಬೇಕಾಗಿ ಬಂದಿತು. ಆ ಕೆಲಸವನ್ನು ಬೆಂಗಳೂರು ಆಕಾಶವಾಣಿ ಅತ್ಯಂತ ಹುರುಪಿನಿಂದ ಪ್ರಾರಂಭಿಸಿತು. ಉತ್ಕೃಷ್ಟವಾದ

ಕವಿತೆಗಳನ್ನು ಆರಿಸಿ ಅಂದು ಜನಪ್ರಿಯತೆಯ ಉತ್ತುಂಗ ಶೃಂಗದಲ್ಲಿದ್ದ ಗಾಯಕರಿಂದ ಹಾಡಿಸಿ ಪ್ರಸಾರ ಮಾಡಲು ತೊಡಗಿತು. ಬೆಂಗಳೂರು ಆಕಾಶವಾಣಿ ವಿವಿಧ ಭಾರತಿ ಎಂಬ ವಾಣಿಜ್ಯೋದ್ಯಮದ ಪ್ರಣಾಳಿಕೆಯನ್ನು ಹೊಸದಾಗಿ ತೆರೆದು ಮತ್ತೆ ಹಿಂದಿ ಹಾಡುಗಳನ್ನು ಆಮೇಲಿನ ದಿನಗಳಲ್ಲಿ ಪ್ರಸಾರ ಮಾಡಲು ತೊಡಗಿತು. ಹೆಚ್.ಎಂ.ವಿ.ಯಲ್ಲಿ ಕೆಲಸ ಮಾಡುತ್ತಿದ್ದ ಪ್ರಸಿದ್ಧ ಸಂಗೀತ ನಿರ್ದೇಶಕರಾಗಿದ್ದ ಎಂ.ಡಿ. ಪಾರ್ಥಸಾರಥಿ ಎನ್ನುವವರು ಬೆಂಗಳೂರು ಆಕಾಶವಾಣಿಗೆ ಬಂದು ಸೇರಿದರು. ೧೯೫೭ರಲ್ಲಿ ವಿವಿಧ ಭಾರತಿ ಪ್ರಾರಂಭವಾಗಿ ಶಾಸ್ತ್ರೀಯ ಸಂಗೀತವಲ್ಲದ ಸಂಗೀತ ಪ್ರಕಾರಗಳನ್ನು 'ಸುಗಮ ಸಂಗೀತ' ಎಂದು ಕರೆದು ವಿಂಗಡಿಸಿಕೊಂಡಿತು.

ಕನ್ನಡದ ದೇವರ ನಾಮಗಳು, ವಚನ, ನಾಡ ಪದಗಳು, ಅನುಭಾವ ಗೀತೆಗಳು, ಸುಗಮ ಸಂಗೀತದ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಫಲಕಾರಿಯಾದವು. ಸುಗಮ ಸಂಗೀತಕ್ಕೆ ವಿವಿಧ ಬಣ್ಣದ ರೆಕ್ಕೆ ಮೂಡಿದವು. ಮನೋರಂಜನೆಯ ಮಾಧ್ಯಮವಾಗಿದ್ದ ಸುಗಮ ಸಂಗೀತ ಲೋಕಪ್ರಿಯವಾಗಿ ಜನರ ಮನವನ್ನು ಗೆದ್ದದ್ದಲ್ಲದೆ ಚಿಂತನಶೀಲತೆ ಯನ್ನೂ ದಕ್ಕಿಸಿಕೊಂಡಿತ್ತು. ಹಳ್ಳಿ ಹಳ್ಳಿಗೆ ಸಂಸ್ಕೃತಿಯನ್ನು ಪಸರಿಸಿ ಉತ್ತಮ ಅಭಿರುಚಿಯನ್ನು ರೂಢಿಸಿತು.

ಕರ್ಣ ರಂಜನೆಯ ಏಕೈಕ ಮಾಧ್ಯಮವಾಗಿದ್ದ ಆಕಾಶವಾಣಿ ಹಬ್ಬ ಹರಿದಿನ, ನಾಡ ದಿನ ಮುಂತಾದ ಸಂದರ್ಭಗಳಲ್ಲಿ ಕವಿಗಳಿಂದ ಸಾಂದರ್ಭಿಕ ಗೀತೆಗಳನ್ನು ಬರೆಸಿ, ಪ್ರಸಿದ್ಧ ಸಂಗೀತಗಾರರಿಂದ ಹಾಡಿಸಿ ಪ್ರಸಾರ ಮಾಡಿತು. ಅನೇಕ ಗೀತರೂಪಕಗಳು ಸಾಂದರ್ಭಿಕ ಸಂದೇಶವನ್ನು ಹೊತ್ತುಕೊಂಡು ಬಂದವು. ಅವುಗಳಿಗೆಲ್ಲ ಜೀವ ಕೊಟ್ಟವರು ಗಾಯಕರಾದ ಪಿ. ಕಾಳಿಂಗರಾವ್, ಹೆಚ್. ಆರ್. ಲೀಲಾವತಿ, ಎಸ್. ಕೆ. ವಸುಮತಿ, ಸಿ. ಕೆ. ತಾರಾ, ಎನ್. ಎಸ್. ರಾಮನ್, ಹೆಚ್. ಕೆ. ನಾರಾಯಣ್, ಎಂ. ಎನ್. ರತ್ನ, ಎಂ. ವಿ. ಮಾಲತಿ ಮುಂತಾದವರು. ಆ ಒಂದು ಕಾಲದಲ್ಲಿ ಗೀತರೂಪಕಗಳು ಹುಚ್ಚೆಬ್ಬಿಸುವಷ್ಟು ಪ್ರಸಿದ್ಧಿ ಗಳಿಸಿದ್ದವು. ಆಕಾಶವಾಣಿಯ ಎಂ. ಡಿ. ಪಾರ್ಥಸಾರಥಿ, ವಿ. ದೊರೆಸ್ವಾಮಿ ಐಯ್ಯಂಗಾರ್, ಎಸ್. ಕೃಷ್ಣಮೂರ್ತಿ, ಪದ್ಮಚರಣ್, ಮುಂತಾದ ಪ್ರಸಿದ್ಧ ಸಂಗೀತ ನಿರ್ದೇಶಕರು ಕಾರಂತರ 'ಕಿಸಾ ಗೌತಮಿ' ಮತ್ತಿತರ ರೂಪಕಗಳನ್ನು, ಪು.ತಿ.ನ. ಅವರ ಎಲ್ಲ ಗೀತ ರೂಪಕಗಳನ್ನು ಡಾ. ಸಿದ್ಧಯ್ಯ ಪುರಾಣಿಕರ 'ಗಿರಿಜಾ ಕಲ್ಯಾಣ' ಸಂಗೀತಕವನ್ನು ರಾಗಗಳಿಗೆ ಅಳವಡಿಸಿ ಪ್ರಸಾರ ಮಾಡಿದರು. ೧೯೬೩ರಲ್ಲಿ ಭಾರತದ ಮೇಲೆ ಚೀನಾದ ಆಕ್ರಮಣವಾದಾಗ ಆಕಾಶವಾಣಿಯ ನಿರ್ದೇಶಕರು ದೇಶಭಕ್ತಿ ಪ್ರಚೋದಕವೂ, ಪ್ರಕೃತವೂ ಆದ ಅಂದಿನ ಸಂದರ್ಭಕ್ಕೆ ಸರಿಯಾದಂತಹ ಗೀತರೂಪಕವನ್ನು ಆಕಾಶವಾಣಿ ಬಿತ್ತರಿಸುವುದಕ್ಕೆ ಕವಿ ಕೆ. ಎಸ್. ನಿಸಾರ್ ಅಹಮದ್‌ರ 'ಆತ್ಮಾರ್ಪಣ' ಎಂಬ ಗೀತರೂಪಕವನ್ನು ಆಯ್ಕೆ ಮಾಡಿಕೊಂಡಿತು. ಪದ್ಮಚರಣ್ ಸಂಗೀತ ನಿರ್ದೇಶನ ಮಾಡಿದ್ದ ಆ ಸಂಗೀತ ರೂಪಕದಲ್ಲಿ ಅಂದಿನ ಪ್ರಸಿದ್ಧ ಗಾಯಕರಾಗಿದ್ದ ಪಿ. ಕಾಳಿಂಗರಾವ್, ಶ್ರೀಮತಿ ಎಂ. ಎನ್. ರತ್ನ ಪ್ರಧಾನ ಪಾತ್ರಗಳಿಗೆ ತಮ್ಮ ದನಿಗೂಡಿಸಿದ್ದರು. ನಿಸಾರ್‌ರು ಈ ರೂಪಕಕ್ಕಾಗಿ ಬರೆದ ಅನೇಕ ಹಾಡುಗಳು ಅತ್ಯಂತ ಜನಪ್ರಿಯವಾಗಿ ಮನೆ ಮನೆಯ ಮಾತಾದವು. ಸುಮಾರು ಐದಾರು

ವರುಷಗಳವರೆಗೆ ನಿಸಾರರ ಈ ಗೀತರೂಪಕದ ಹಾಡುಗಳು ಬಾನುಲಿಯಲ್ಲಿ ಪ್ರತಿ ದಿನ ಉಲಿಯತೊಡಗಿದವು. 'ಜಲ ನಮ್ಮದು, ನೆಲ ನಮ್ಮದು', 'ನಾಡ ದೇವಿಯೆ', 'ನುಗ್ಗಿ ನಡೆ', 'ಗಿರಿ ನೆತ್ತಿಯ ಎತ್ತರದಲಿ', 'ಸದಾ ಉರಿಯುತಿರುವ ಹಾಗೆ' ಮುಂತಾದ ಹಾಡುಗಳು ಜನಪ್ರಿಯತೆಯ ತುತ್ತತುದಿಗೇರಿದವು. ಆಕಾಶವಾಣಿಯಿಂದ ಏರ್ಪಡುತ್ತಿದ್ದ ಸಾರ್ವಜನಿಕ ಸಮಾರಂಭಗಳಲ್ಲಿ ಕೂಡ ಈ ಹಾಡುಗಳು ಗಾಯಕರ ಕೊರಳಿನಿಂದ ಪ್ರಸರಣಗೊಂಡವು.

ಈ ಮಧ್ಯೆ ಪ್ರಭಾತ್ ಕಲಾವಿದರು ತಮ್ಮ ನೃತ್ಯ ನಾಟಕಗಳ ಮೂಲಕ ಶ್ರಾವ್ಯವೂ ನಯನ ಮನೋಹರವೂ ಆದ ಹೊಸ ಪ್ರಯೋಗಗಳಿಂದ ಗಮನಾರ್ಹವಾದ ಬೆಳವಣಿಗೆಯನ್ನು ತಂದರು. ಪ್ರಭಾತ್ ಕಲಾವಿದರ ಗೀತರೂಪಕಗಳಿಗೆ ಸಂಗೀತ ನೀಡುವ ಮೂಲಕ ಮೈಸೂರು ಮತ್ತು ಆಸುಪಾಸಿನಲ್ಲಿ ಖ್ಯಾತರಾಗಿದ್ದ ಮೈಸೂರು ಅನಂತಸ್ವಾಮಿ ಕರ್ನಾಟಕದ ಇತರ ಭಾಗಗಳಲ್ಲೂ ಪರಿಚಿತರಾದರು. ಅವರ ಸುಮಾರು ಮೂವತ್ತೆಂಟು ರೂಪಕಗಳನ್ನು ಪ್ರಭಾತ್ ಸಂಸ್ಥೆ ರಂಗಕ್ಕೇರಿಸಿತು. ಆ ಕಾಲದಲ್ಲಿ ಹೊಸ ಹೊಸ ಸುಗಮ ಸಂಗೀತ ಗಾಯಕರು ಉದಿಸಿದರು. ಎಂ. ಕೆ. ಜಯಶ್ರೀ, ಪುಷ್ಪ ಜಗದೀಶ್, ಸುಲೋಚನ ವೆಂಕಟೇಶ್, ರತ್ನಮಾಲಾ ಪ್ರಕಾಶ್ ಮುಂತಾದ ಗಾಯಕಿಯರು, ಅನಂತಸ್ವಾಮಿಯವರ ಸಂಯೋಜನೆಗಳ ಮೂಲಕ ಬೆಳಕಿಗೆ ಬಂದರು.

೧೯೭೦ರ ಅನಂತರ ನವೋದಯದ ಸಂಭ್ರಮ ಎಲ್ಲಾ ಗಾಯಕರ ಕೊರಳಲ್ಲೂ ಝೇಂಕರಿಸುತ್ತಿತ್ತು. ಹಳೆಯ ಮೈಸೂರಿನಲ್ಲಿ ಹೆಚ್. ಆರ್. ಲೀಲಾವತಿ, ವಸುಮತಿ, ಪಿ. ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಎಂ. ಕೆ. ಜಯಶ್ರೀ ಅವರುಗಳಿದ್ದರೆ, ಧಾರವಾಡದತ್ತ ಬಾಳಪ್ಪ ಹುಕ್ಕೇರಿ, ಭಾಗವತ್, ಅನುರಾಧ ಧಾರೇಶ್ವರ್ ಮುಂತಾದವರು ರಸಿಕರ ಹೃದಯದಲ್ಲಿ ಸ್ಥಾಪಿತರಾಗಿದ್ದರು.

ಹೀಗೆ ಭರಾಟೆಯಿಂದ ಹಬ್ಬುತ್ತಿದ್ದ ಈ ಭಾವಗೀತೆಯ ಬಳ್ಳಿಗೆ ಬಂದು ಆಧಾರವಾಗಿ ಒದಗಿ ಅದನ್ನು ನಾಡಿನ ಎಲ್ಲ ದಿಕ್ಕಿಗೆ ಹಬ್ಬಿಸಿದ ಕೀರ್ತಿ ಎಂ.ಎಸ್.ಐ.ಎಲ್. ಸಂಸ್ಥೆಗೆ ಸೇರಿತು. ಈ ಸಂಸ್ಥೆ ಬೆಂಗಳೂರು ಮತ್ತು ಧಾರವಾಡ ಆಕಾಶವಾಣಿ ವಾಣಿಜ್ಯ ಕೇಂದ್ರಗಳಿಂದ ಸುಮಾರು ಮೂರು ವರ್ಷ ಪ್ರತಿ ಬುಧವಾರ ಮೂರು ಮೂರು ಭಾವಗೀತೆಗಳನ್ನು 'ಎಂ.ಎಸ್.ಐ.ಎಲ್. ಗೀತೆಗಳು' ಎಂಬ ಹೆಸರಿನಲ್ಲಿ ಪ್ರಸಾರ ಮಾಡಿತು. ಇವುಗಳಿಗೆ ಸಂಗೀತ ಸಂಯೋಜನೆ ಮಾಡಿದ ಮತ್ತು ಹಾಡಿದ ಪ್ರತಿಭೆಗಳು ಎಷ್ಟು ಉತ್ತಮ ಮಟ್ಟದಲ್ಲಿದ್ದವೆಂದರೆ ಒಂದು ವರ್ಷ ಕಳೆಯುವುದರೊಳಗಾಗಿ ಹಿಂದಿ ಚಿತ್ರಗೀತೆಗಳ ದಾಸರಾಗಿದ್ದ ಸಾವಿರಾರು ಕನ್ನಡ ರಸಿಕರು ಕನ್ನಡದ ಕವಿಶ್ರೇಷ್ಠರ ಭಾವಗೀತೆಗಳನ್ನು ಗುಣುಗುಣಿಸಲಾರಂಭಿಸಿದರು.

ಎಂ.ಎಸ್.ಐ.ಎಲ್. ಗೀತೆಗಳ ಸಂಗೀತ ಸಂಯೋಜನೆಯ ಸಿಂಹ ಪಾಲು ಮೈಸೂರು ಅನಂತಸ್ವಾಮಿಯವರದ್ದಾಯಿತು. ೧೯೫೮ರಿಂದ ಭಾವಗೀತೆಗಳಿಗೆ ರಾಗ ಸಂಯೋಜನೆ ಮಾಡಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಾಡಿ ಅವುಗಳ ಜನಪ್ರಿಯತೆಯನ್ನು ಗುರುತಿಸಿದ ಮೈಸೂರು ಅನಂತಸ್ವಾಮಿ ಅವರು, ತಾವು ಕಾರ್ಯಕ್ರಮಗಳಲ್ಲಿ ಹಾಡಿದ್ದ ಆ ಗೀತೆಗಳನ್ನೇ

ಎಂ.ಎಸ್.ಐ.ಎಲ್. (M.S.I.L.) ಗೀತೆಗಳ ಪ್ರಸರಣದಲ್ಲಿ ಆರಿಸಿಕೊಂಡಿದ್ದರು. ಆ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗುತ್ತಿದ್ದಂತೆ, ಹೊಸ ಹೊಸ ಗಾಯಕರ ಸೇರ್ಪಡೆಯಾಗುತ್ತಿತ್ತು. ಕುವೆಂಪು, ಬೇಂದ್ರೆ, ಪು.ತಿ.ನ., ಕೆ.ಎಸ್.ನ., ಗೋಪಾಲಕೃಷ್ಣ ಅಡಿಗ, ಕೆ. ಎಸ್. ನಿಸಾರ್ ಅಹಮದ್, ಲಕ್ಷ್ಮೀನಾರಾಯಣ ಭಟ್ಟ ಮುಂತಾದ ಕವಿಗಳ ಹಾಡುಗಳು ಧ್ವನಿ ಮುದ್ರಿತವಾದವು. ಎಂ.ಎಸ್.ಐ.ಎಲ್. ಕಾರ್ಯಕ್ರಮದ ಮೂಲಕ ಹತ್ತಾರು ಮಂದಿ ಹೊಸ ಗಾಯಕರು ಪ್ರಕಾಶಕ್ಕೆ ಬಂದರು. ರತ್ನಮಾಲಾ ಪ್ರಕಾಶ್, ಬಿ. ಕೆ. ಸುಮಿತ್ರ, ಕಸ್ತೂರಿ ಶಂಕರ್, ಶಿವಮೊಗ್ಗ ಸುಬ್ಬಣ್ಣ, ಮಾಲತಿ, ಪುಷ್ಪ ಜಗದೀಶ್, ಟಿ. ಆರ್. ಶ್ರೀನಿವಾಸನ್, ಜಯಪಾಲ್, ಸಿ. ಅಶ್ವತ್ಥ್ ಮುಂತಾದವರು ಅಂಥವರಲ್ಲಿ ಮುಖ್ಯರು.

ಎಂ.ಎಸ್.ಐ.ಎಲ್.ನಿಂದ ಭಾವಗೀತೆಗಳ ಬೆಳೆ ಹುಲುಸಾಯಿತು. ಎಂ.ಎಸ್.ಐ.ಎಲ್.ಗಾಗಿ ಧ್ವನಿಮುದ್ರಿಸಿದ ಗೀತೆಗಳಲ್ಲಿ ನಿಸಾರರ 'ಕುರಿಗಳು ಸಾರ್ ಕುರಿಗಳು', 'ಬೆಣ್ಣೆಕದ್ದ ನಮ್ಮ ಕೃಷ್ಣ', 'ಎಲ್ಲ ಮರೆತಿರುವಾಗ', 'ಮತ್ತದೇ ಬೇಸರ' ಮುಂತಾದ ಗೀತೆಗಳು ಜನಪ್ರಿಯ ವಾಗಿದ್ದವು. ಇವುಗಳನ್ನು ಹಾಗೂ ಮತ್ತೆ ಕೆಲವು ಹೊಸ ರಚನೆಗಳನ್ನು ಧ್ವನಿ ಸುರುಳಿಯಲ್ಲಿ ಹಿಡಿದಿಟ್ಟುಕೊಳ್ಳುವ ಕೆಲಸವನ್ನು ಪ್ರಪ್ರಥಮವಾಗಿ ಮಾಡಿದವರು ಕವಿ ಕೆ. ಎಸ್. ನಿಸಾರ್ ಅಹಮದ್ ಮತ್ತು ಸಂಗೀತ ಸಂಯೋಜಕ ಮೈಸೂರು ಅನಂತಸ್ವಾಮಿ.

ಅರವತ್ತರ ದಶಕದ ಕೊನೆಯಲ್ಲಿ ನಾಲ್ಕು ನವ್ಯಕಾವ್ಯ ಸಂಕಲನಗಳನ್ನು ಹೊರ ತಂದು ಕೆಲವು ಪ್ರಯೋಗಶೀಲ ಪ್ರಯತ್ನಗಳನ್ನು ಮಾಡಿದ ನಿಸಾರರು, ಬಳಿಕ ಭಾವಗೀತೆಗಳ ರಚನೆಗೆ ಕೈ ಹಾಕಿದರು. ಅವರೇ ಹೇಳಿರುವಂತೆ, ಇದು ಕನ್ನಡ ಕಾವ್ಯ ಜಗತ್ತಿನ ಮೋಜುಗಳಲ್ಲಿ ಒಂದು. ವೈಚಾರಿಕತೆಯ ದೊಂಬರಾಟ, ಪೆಡಸುಗಳಿಂದ ಗತಿಗೇಡಿಯಾಗುತ್ತಿದ್ದ ಕಾವ್ಯಕ್ಕೆ ಮತ್ತೊಮ್ಮೆ ಗೇಯತೆ, ಭಾವಗೀತಾತ್ಮಕತೆಯ ಮಂತ್ರಸ್ಪರ್ಶ ಅಗತ್ಯವೆಂಬ ಅರಿವು ಅವರಲ್ಲಿ ಉಂಟಾಗಿ ಉತ್ಕಟಗೊಂಡಿತು. ಜನಪದದಿಂದ ಗಾವುದ ದೂರ ಸಿಡಿದು ಯೂನಿವರ್ಸಿಟಿ ಕಾಲೇಜು ವಲಯಗಳಲ್ಲಿ ತೊಂಡಲೆಯುವ ಕಾವ್ಯ ಮರಳಿ ಜನಪದ ಧೋರಣೆಯನ್ನು ಮೈಗೂಡಿಸಿಕೊಂಡು ಸಮಾಜದ ಬೇರೆ ಬೇರೆ ಪದರುಗಳತನಕ ವ್ಯಾಪಿಸಬೇಕಾದ ಅಗತ್ಯ ನಿಸಾರರಿಗೆ ಆಗ ತೋರಿಬಂದಿತ್ತು. ನಾಟಕೀಯತೆ, ವೈಯಕ್ತಿಕ ಸಂಕೇತ ಪ್ರತಿಮೆಗಳ ಭಾರದಿಂದ ಬಿಡುಗಡೆಗೊಂಡು ಮುಕ್ತ ವಿಲಾಸದಲ್ಲಿ ನಲಿಯುವ, ಅರ್ಥ ಸಮೃದ್ಧ ಸಾಂದ್ರ ಗೇಯ ಕವಿತಾ ರಚನೆ ಮತ್ತೊಮ್ಮೆ ಮೆರೆಯಬೇಕಿತ್ತು. ಈ ಕಾರಣಕ್ಕಾಗಿ 'ನಿತ್ಯೋತ್ಸವ' ಗೀತ ಸಂಕಲನವನ್ನು (೧೯೭೬) ಪ್ರಕಟಿಸಿದರು. 'ನಿತ್ಯೋತ್ಸವ' ಗೀತ ಸಂಕಲನ ಹೀಗೆ ನವ್ಯ ಮಾರ್ಗದಿಂದ ಗೇಯ ಮಾರ್ಗಕ್ಕೆ ಸಾಹಿತ್ಯವನ್ನು ಹೊರಳಿಸಿತು. ಮಾರ್ಗಸ್ಥಾಪನೆಯ ದಾಖಲೆ ನಿರ್ಮಿಸಿತು. ನಿಸಾರರು ಕೈಗೊಂಡ ಈ ದಿಟ್ಟ ಕ್ರಮವನ್ನು ಅನಂತರ ಅನುಸರಿಸಿದ ಕವಿಗಳ ಸಂಖ್ಯೆ ಅಸಂಖ್ಯ.

ಏಕತಾನತೆಯಿಂದ ಸೊರಗುತ್ತಿದ್ದ ನವ್ಯಕಾವ್ಯಕ್ಕೆ ಹೊಸ ದಿಂಗತವನ್ನು ತೋರಿಸಿ ಗೇಯತೆಯ ಸ್ಪರ್ಶವನ್ನು ಮಾಡಿಸಿದ ಕೀರ್ತಿ ನಿಸಾರರಿಗೆ ಸಲ್ಲುತ್ತದೆ. ಸಾಹಿತ್ಯ ವಲಯದಲ್ಲಿ ಕವಿತೆಯ ಶೈಲಿ ಸರಳವೂ ಮನೋಹರವೂ ಆದಂತೆ, ಸಂಗೀತ ಪದ್ಧತಿಯಲ್ಲೂ ಕವಿತಾ

ಗಾಯನ, ಸರಳ ಸುಂದರವಾದ ಸಂಗೀತ ಶೈಲಿಯಾಗಲು ನಿಸಾರರಿಗಿದ್ದ ಘಜಲ್ ಸಂಗೀತದ ತುಡಿತವೇ ಕಾರಣವಾಯಿತು. ಮೆಹದಿ ಹಸನ್, ತಲತ್ ಮಹಮೂದ್, ಜಗಜೀತ್ ಸಿಂಗ್, ಚಿತ್ರಾಸಿಂಗ್ ಮುಂತಾದವರ ಘಜಲ್ ಗಾಯನದಿಂದ ಪ್ರಭಾವಿತರಾಗಿದ್ದ ನಿಸಾರರಿಗೆ ಕನ್ನಡದಲ್ಲಿ ಈ ತೆರನಾದ ಕವಿತೆ ಏಕೆ ಬರೆಯಬಾರದು? ಎಂಬ ಹಠ ಮೂಡಿತು. ತಲತ್ ಮಹಮೂದ್ ಹಾಡಿದ 'ಫಿರ್‌ವಹೀ ಶ್ಯಾಮ್' ಘಜಲ್ ನಿಸಾರ್‌ರ ಪ್ರಿಯಗೀತೆಯಾಗಿತ್ತು. ಆ ಘಜಲ್‌ನ ಮೊದಲನೆಯ ಸಾಲನ್ನಿಟ್ಟುಕೊಂಡು 'ಮತ್ತದೇ ಬೇಸರ ಅದೇ ಸಂಜೆ ಅದೇ ಏಕಾಂತ' ಎಂದು ಕನ್ನಡದಲ್ಲಿ ಆ ಪ್ರಕಾರದ ಕವನ ಬರೆದರು. ಆಗಷ್ಟೇ ಎಲ್.ಪಿ.ಗಳ ಭರಾಟೆ ಹುಚ್ಚು ಹೊಳೆಯಂತೆ ಹರಿಯುತ್ತಿತ್ತು. ಹಿಂದಿ ಚಲಚ್ಚಿತ್ರಗಳ ಮತ್ತು ಭಜನ್‌ಗಳ ಕ್ಯಾಸೆಟ್‌ಗಳು ಪ್ರಾರಂಭವಾಗಿ ಮಾರಾಟವಾಗುತ್ತಿದ್ದವು. ಘಜಲ್ ಗಾಯಕರ ದನಿ ಸುರುಳಿಗಳಿಂದ ಪ್ರಭಾವಿತರಾದ ನಿಸಾರ್ ಅವರಿಗೆ ಕನ್ನಡದಲ್ಲೂ ಅದನ್ನು ತರಬಾರದೇಕೆ? ಎಂಬ ಮನಸ್ಸಾಯಿತು. ಆಗ ಈಗಿನಂತೆ ಕ್ಯಾಸೆಟ್ ತಯಾರಿಕೆಯ ಸಂಸ್ಥೆಗಳಾಗಲಿ, ಅದನ್ನು ಧ್ವನಿ ಮುದ್ರಿಸುವ ಸ್ಟುಡಿಯೋಗಳಾಗಲಿ ಇರಲಿಲ್ಲ. ಬೆಂಗಳೂರಿನಲ್ಲಿದ್ದ 'ಪ್ರಭಾತ್ ಕಲಾವಿದರು' ತಮ್ಮ ಸ್ವಂತ ಅಗತ್ಯ ಕೆಲಸಗಳಿಗಾಗಿ ರೇಡಿಯೋಗೆ ಮಾಡಿಕೊಡುತ್ತಿದ್ದ ಸಣ್ಣಪುಟ್ಟ ಧ್ವನಿಮುದ್ರಣ ಕಾರ್ಯಕ್ರಮಗಳಿಗಾಗಿ ಕೇವಲ ಪ್ರಾರಂಭಿಕ ಸೌಲಭ್ಯಗಳನ್ನು ಒಳಗೊಂಡ ಸ್ಟುಡಿಯೋ ಒಂದನ್ನು ಹೊಂದಿದ್ದರು. ಧ್ವನಿಮುದ್ರಣದ ಜವಾಬ್ದಾರಿ ಪ್ರಭಾತ್ ಸಂಸ್ಥೆಯ ಜಗನ್ನಾಥ್ ಅವರದ್ದಾಗಿತ್ತು. ನಿಸಾರರು ಕನ್ನಡದ ಕವಿತೆಗಳನ್ನೊಳಗೊಂಡ ಧ್ವನಿ ಸುರುಳಿಯನ್ನು ತಯಾರಿಸುವ ಕನಸು ಹೊತ್ತು ಶಿವಮೊಗ್ಗದಿಂದ ಬೆಂಗಳೂರಿಗೆ ಬಂದು ಹೋಗುತ್ತಾ, ಕಡೆಗೂ ಧ್ವನಿ ಸುರುಳಿಯನ್ನು ತಯಾರು ಮಾಡುವ ನಿರ್ಧಾರ ತೆಗೆದು ಕೊಂಡರು. ಆಗ ಅವರು ಅದನ್ನು ಸ್ವಂತವಾಗಿ ಮಾಡಿ, ತಾವೇ ವಿತರಿಸಬೇಕಾಗಿತ್ತು. ಸಾಹಿತ್ಯದ, ಸಂಗೀತದ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿದ್ದ ನಿಸಾರರು ಮೊದಲು ತಮ್ಮ ಧ್ವನಿ ಸುರುಳಿ ಹೇಗಿರಬೇಕೆಂದು ರೂಪುರೇಖೆಯನ್ನು ಹಾಕಿಕೊಂಡರು. ಮೊದಲನೆಯ ದಾಗಿ ಸಿನಿಮಾದ ದಾಂಧಲೆಗಳಿಂದ ವಿಮುಕ್ತವಾಗಿದ್ದು, ಒಳ್ಳೆಯ ಸಾಹಿತ್ಯಗುಣದಿಂದ ಕೂಡಿದ್ದು, ಮನೆಮಂದಿಯೆಲ್ಲಾ ಕುಳಿತು ಕೇಳುವಂತಹ ಸಾಹಿತ್ಯ ಶಕ್ತಿಯುಳ್ಳದ್ದಾಗಿರಬೇಕು; ಶಾಸ್ತ್ರೀಯ ಸಂಗೀತದ ಆಲಾಪಗಳು ಸಂಗೀತದ ಜಿಗುಟು, ಪೆಡಸುಗಳಿಂದ ದೂರವಿರಬೇಕು ಎಂದು ತೀರ್ಮಾನಿಸಿದರು. ತಮ್ಮ ಸುಮಾರು ಇಪ್ಪತ್ತೈದು ಹಾಡುಗಳನ್ನು ಆರಿಸಿಕೊಂಡು ಅವುಗಳಿಂದ ಮೈಸೂರು ಅನಂತಸ್ವಾಮಿಯವರ ಸಂಯೋಜನೆಯ ೧೪ ಉತ್ಕೃಷ್ಟ ಕವಿತೆಗಳನ್ನು ಆಯ್ಕೆ ಮಾಡಿಕೊಂಡರು. ಈ ಬಗ್ಗೆ ತಮ್ಮ ಗೆಳೆಯರಾದ ಎಸ್. ರಾಮಸ್ವಾಮಿ ಮತ್ತು ಬಿ. ಕೆ. ಪಾರ್ಥಸಾರಥಿಯವರೊಂದಿಗೆ ಸಮಾಲೋಚಿಸಿದರು. ಬ್ಯಾಂಕಿನಿಂದ ಸಾಲ ತೆಗೆದು ನಿತ್ಯೋತ್ಸವ ಕ್ಯಾಸೆಟ್‌ನ ಧ್ವನಿಮುದ್ರಣಕ್ಕೆ ಅನಂತಸ್ವಾಮಿಯವರನ್ನು ಒಪ್ಪಿಸಿದರು. ಎ. ಎಸ್. ಮೂರ್ತಿ ಮತ್ತು ವಿಜಯಾ ಅವರ ಪರಿಚಯದಿಂದ ಬ್ಯಾಂಕಿನಲ್ಲಿ ಸಾಲ ದೊರೆತು ಕ್ಯಾಸೆಟ್ ತಯಾರಾಯಿತು. ೧೯೭೮ರ ನವೆಂಬರ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವೇದಿಕೆಯಲ್ಲಿ ಕವಿ ಕೆ. ಎಸ್. ನರಸಿಂಹಸ್ವಾಮಿಯವರಿಂದ 'ನಿತ್ಯೋತ್ಸವ' ಧ್ವನಿ ಸುರುಳಿ ಬಿಡುಗಡೆಗೊಂಡಿತು. ಅಂದು ಮಂತ್ರಿಯಾಗಿದ್ದ ಕೆ. ಎಚ್. ಶ್ರೀನಿವಾಸ್ ಅವರು ಮುಖ್ಯ

ಅತಿಥಿಯಾಗಿ ಬಂದಿದ್ದು, ಕವಿ ಡಾ. ವಿ. ಕೃ. ಗೋಕಾಕ ಧ್ವನಿ ಸುರುಳಿ ಬಿಡುಗಡೆಯ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಕನ್ನಡದ ಮೊದಲನೆಯ ಸುಗಮ ಸಂಗೀತದ, ಪ್ರಾಯಶಃ ಭಾರತೀಯ ಭಾಷೆಯಲ್ಲೇ, ಕವಿತಾ ಸಂಗ್ರಹವೊಂದರಿಂದ ಆರಿಸಿದ ರಚನೆಗಳನ್ನೊಳಗೊಂಡ ಚೊಚ್ಚಲು ದನಿ ಸುರುಳಿ ಬಿಡುಗಡೆಯಾಯಿತು. ಹೀಗೆ, ಸುಗಮ ಸಂಗೀತದ ಶುಭ ನಾಂದಿಯಾಯಿತು. ರಚನಾ ರಾವ್ ಎಂಬುವರು ಮುಂಬಯಿಯಿಂದ ಬೆಂಗಳೂರಿಗೆ ಬಂದು ಜಾಹೀರಾತು ಕಂಪನಿಯನ್ನು ನಡೆಸುತ್ತಿದ್ದರು. 'ನಿತ್ಯೋತ್ಸವ' ಧ್ವನಿ ಸುರುಳಿಯ ಬಗೆಗೆ 'ಪ್ರಜಾವಾಣಿ' ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟು ನಿತ್ಯೋತ್ಸವ ಧ್ವನಿ ಸುರುಳಿಯ ಪ್ರಸರಣಕ್ಕೆ ರಾವ್ ನೆರವಾದರು. ಅದು ದೊಡ್ಡ ಉಪಕಾರವಾಯಿತು. ಆಗ ಸ್ಪೂಲ್ ಟೇಪ್ ರೆಕಾರ್ಡಿಂಗ್‌ನಲ್ಲಿ ಧ್ವನಿಮುದ್ರಣದ 'ನಿತ್ಯೋತ್ಸವ' ಧ್ವನಿ ಸುರುಳಿ ಡಬ್ ಆಗಬೇಕಾದರೆ ಮೂಲದಲ್ಲಿದ್ದ ಸಮಯವೇ ಬೇಕಾಗುತ್ತಿತ್ತು. ದಿವಸಕ್ಕೆ ೧೦ರಿಂದ ೧೫ ಧ್ವನಿ ಸುರುಳಿಗಳನ್ನು ಬಹಳ ಕಷ್ಟದಿಂದ ಡಬ್ ಮಾಡಬಹುದಿತ್ತು. ಅದರ ಬೆಲೆಯೂ ೭೫ ರೂ.ಗಳಷ್ಟು ತೆರಬೇಕಾಗಿತ್ತು. ಕೊಂಡುಕೊಳ್ಳುವ ಜನರಿಗೆ ಕ್ಯಾಸೆಟ್ ಎನ್ನಲು ತಿಳಿಯದೆ, 'ಕ್ಯಾಸೆಟ್' ಇದೆಯೇ ಎಂದು ಕೇಳತೊಡಗಿದ್ದರು. ಧ್ವನಿ ಸುರುಳಿಗಾಗಿ ಹೆಸರನ್ನು ಮುಂಗಡ ವಾಗಿ ಸಾಲಿನಲ್ಲಿ ನಿಂತು ಕಾದು ಬರೆಯಿಸುವವರೂ ಇದ್ದರು. ಗಾಂಧಿ ಬಜಾರ್‌ನಲ್ಲಿದ್ದ ರವೀಂದ್ರ ಸ್ಟೋರ್ಸ್‌ನ ಎ. ಪ್ರಕಾಶ್ ಬಳಿ ಧ್ವನಿ ಸುರುಳಿಗಾಗಿ ಜನ ಮುಗಿ ಬೀಳುತ್ತಿದ್ದರು. 'ನಿತ್ಯೋತ್ಸವ ಕ್ಯಾಸೆಟ್ ಇದೆಯೇ, ಸಾರ್?' ಎಂದು ಜನ ಬಂದು ಕೇಳಿ ಮುಂಗಡವಾಗಿ ಕಾದಿರಿಸಿ ತೆಗೆದುಕೊಂಡು ಹೋಗುತ್ತಿದ್ದರು. ಎಡೆಬಿಡದ ಒತ್ತಡದಿಂದ ಬೇಸತ್ತ ನಿಸಾರರಿಗೆ ಈ ಕೆಲಸದಿಂದ ವಿಮುಕ್ತಿ ನೀಡಿದವರು, ಆಗ ಐ.ಬಿ.ಎಚ್.ನಲ್ಲಿದ್ದ ಜಿ. ಕೆ. ಅನಂತರಾಮ್ ಅವರು. ಮುಂಬಯಿಯ 'ಅಮರ್‌ನಾದ್' ಸಂಸ್ಥೆಗೆ ಈ ಧ್ವನಿ ಸುರುಳಿಯ ಮಾರಾಟದ ಹಕ್ಕನ್ನು ನೀಡಲು ಸಲಹೆ ಕೊಟ್ಟರು. ಅಮರನಾದ್ ಮಾರಾಟದ ಹಕ್ಕನ್ನು ತೆಗೆದುಕೊಂಡ ಮೇಲೆ ನಿಸಾರರು ನೆಮ್ಮದಿಯಿಂದ ಉಸಿರಾಡುವಂತಾಯಿತು. ಅಲ್ಲಿಯವರೆಗೆ ಅವರೇ ಕ್ಯಾಸೆಟ್ ಡಬ್ ಮಾಡಲು ಶ್ರಮಿಸಿ, ಶ್ರಮಿಸಿ ಸೊರಗಿ ಹೋಗಿದ್ದರು.. ಅಮರ್‌ನಾದ್ ಸಂಸ್ಥೆ ಸಾವಿರಾರು ಕ್ಯಾಸೆಟ್‌ಗಳ ಮಾರಾಟ ಮಾಡಿ ಹೊಸ ದಾಖಲೆಯನ್ನು ನಿರ್ಮಿಸಿತು. 'ನಿತ್ಯೋತ್ಸವ' ಕ್ಯಾಸೆಟ್ ಬಿಡುಗಡೆಯಾಗುತ್ತಲೇ ಹಲವು ಹೊಸ ಕಲಾವಿದರನ್ನು, ಸಾಹಿತ್ಯದ ಹೊಸ ಮಾರ್ಗವನ್ನು ಒಮ್ಮೆಲೇ ಸೃಷ್ಟಿ ಮಾಡಿತು. ಕವಿ, ಸಂಯೋಜಕ, ಗಾಯಕರ ತ್ರಿವೇಣಿ ಸಂಗಮದ ನವ ಪರಂಪರೆಯ ಸಂಸ್ಕೃತಿಯ ನಿರ್ಮಾಣಕ್ಕೆ ಅಡಿಪಾಯ ಹಾಕಿಕೊಟ್ಟಿತು. ಆನಂತರ 'ಸಂಗೀತ' 'ನಾದಲಹರಿ' 'ಲಹರಿ' ಮುಂತಾದ ಅನೇಕ ಕ್ಯಾಸೆಟ್ ಸಂಸ್ಥೆಗಳು ಪ್ರಾರಂಭವಾಗಿ ಧ್ವನಿ ಸುರುಳಿಗಳು ವರ್ಷಧಾರೆಯಾಗಿ ಸುರಿದು ಹರಿದವು.

'ನಿತ್ಯೋತ್ಸವ' ಕ್ಯಾಸೆಟ್ ಬಂದ ಮೇಲೆ ಸುಗಮ ಸಂಗೀತದ ದಾರಿ ಸುಗಮವಾಗಿ ಹಲವಾರು ದಾರಿಗಳಾಗಿ ಸಾಗಿ ತನ್ನ ವಿಸ್ತೀರ್ಣವನ್ನು ಹತ್ತುಪಟ್ಟು, ನೂರುಪಟ್ಟು ಹೆಚ್ಚಿಸಿ ಕೊಂಡಿತು. ಹತ್ತಾರು ಗಾಯಕರು ದಿನ ಬೆಳಗಾಗುವುದರಲ್ಲಿ ಕೇಳುಗರ ಕಣ್ಮಣಿಗಳಾದರು. 'ಜೋಗದ ಸಿರಿ ಬೆಳಕಿನಲ್ಲಿ', 'ಬೆಣ್ಣೆ ಕದ್ದ', 'ಕುರಿಗಳು ಸಾರ್', 'ಎಲ್ಲ ಮರೆತಿರುವಾಗ', 'ನನ್ನ ನಲವಿನ ಬಳ್ಳಿ', 'ಮತ್ತದೇ ಸಂಜೆ ಅದೇ ಬೇಸರ', 'ನೀ ನುಡಿಯದಿರಲೇನು', 'ನಾದ

ದೇವಿಯೆ' ಒಂದೊಂದು ಹಾಡೂ ಅನಂತಸ್ವಾಮಿಯವರ ಸಂಯೋಜನೆಗೆ ಸವಾಲಿನಂತೆ ಇದ್ದವು. ಭಾವಕ್ಕೆ ಪ್ರಾಶಸ್ತ್ಯ ಕೊಟ್ಟು ಕನ್ನಡಕ್ಕೆ ತಂದಿದ್ದ ಘಜಲ್ ಶೈಲಿಯ 'ಮತ್ತದೇ ಸಂಜೆ ಅದೇ ಬೇಸರ' ಗೀತೆಯಂತೂ ಕೇಳುಗರ ಕಣ್ಮಣಿಯಾಗಿ ಎಲ್ಲರ ಕಿವಿಯಲ್ಲಿ ರಿಂಗಣಿಸಿತು. ಕ್ಯಾಸೆಟ್ ಲೋಕ ಕಣ್ತೆರೆಯಿತು. ಸುಗಮ ಸಂಗೀತಕ್ಕೆ ಬೆಳಕಾಯಿತು. ಒಬ್ಬ ಪ್ರಜ್ಞಾವಂತ ಕವಿ ಮತ್ತು ಒಬ್ಬ ಭಾವುಕ ಸಂಗೀತ ಸಂಯೋಜಕನ ಅಪೂರ್ವ ಸಾಹಸದಿಂದ ಒಂದು ಹೊಸ ದಿಗಂತದ ಸೃಷ್ಟಿಯಾಯಿತು.

ಈ ಧ್ವನಿ ಸುರುಳಿಯ ಜನಪ್ರಿಯತೆ ಎಷ್ಟು ಏರಿತೆಂದರೆ ಇದಕ್ಕೆ ಸಮನಾದ ಅಥವಾ ಇದನ್ನು ಮೀರಿಸುವಂತಹ ಎರಡನೆಯ ಧ್ವನಿ ಸುರುಳಿಯನ್ನು ತರುವುದು ನಿಸಾರರಿಗೆ ಸಾಧ್ಯವಾಗಲಿಲ್ಲ. ಕಾರಣ, ಇಷ್ಟು ವೈವಿಧ್ಯವನ್ನು ಬೇರೊಂದು ಧ್ವನಿ ಸುರುಳಿ ನೀಡಲು ಸಾಧ್ಯವಾಗುತ್ತದೆ ಎಂಬ ಭರವಸೆ ಅವರಿಗೆ ಇರಲಿಲ್ಲ. 'ನಿತ್ಯೋತ್ಸವ ಕವಿ' ಎಂದೇ ನಿಸಾರರು ಜನಪ್ರಿಯರಾದರು. ಕೆ. ಎಸ್. ನರಸಿಂಹಸ್ವಾಮಿಯವರು 'ಮೈಸೂರು ಮಲ್ಲಿಗೆ' ಕವಿ ಯಾದಂತೆ, ನಿಸಾರರು ನಿತ್ಯೋತ್ಸವ ಕವಿತೆಗಿಂತ ಉತ್ತಮ ಕವಿತೆಗಳನ್ನು ಬರೆದರೂ ಅವರಿಗೆ 'ನಿತ್ಯೋತ್ಸವ ಕವಿ' ಎಂದೇ ಜನರು ಕರೆಯತೊಡಗಿದರು. ಕನ್ನಡ ಕವಿತೆಗಳ ಧ್ವನಿ ಸುರುಳಿಯ ಹರಿಕಾರರಾದ ನಿಸಾರ್ ಅವರು ೧೯೭೭ರಲ್ಲಿ ತಮ್ಮ ಮೊದಲ ಧ್ವನಿ ಸುರುಳಿಯನ್ನು ತಯಾರಿಸುವುದರ ಮೂಲಕ ನವ ಪರಂಪರೆಯ ನಿರ್ಮಾಣ ಮಾಡಿದರಷ್ಟೆ? ಅವರು ತಮ್ಮ ಎರಡನೆಯ ಧ್ವನಿ ಸುರುಳಿಯ ಅವತರಣಿಕೆ ತರಲು ಸುಮಾರು ೧೪ ವರುಷಗಳನ್ನು ತೆಗೆದುಕೊಂಡರು. 'ಸುಶ್ರಾವ್ಯ' ಎಂಬ ಧ್ವನಿ ಸುರುಳಿಯನ್ನು ಆಕಾಶ್ ಆಡಿಯೋ ಸಂಸ್ಥೆ, ಎನ್. ಎಸ್. ಪ್ರಸಾದ್ ಅವರ ಸಂಗೀತ ಸಂಯೋಜನೆಯಲ್ಲಿ ನಿಸಾರರ ಶಿಷ್ಯರಾಗಿದ್ದ ನಗರದ ಶ್ರೀನಿವಾಸ ಉಡುಪರ ಒತ್ತಾಯದ ಮೇರೆಗೆ ಬಿಡುಗಡೆ ಮಾಡಿತು. ಇದಾದ ಅನಂತರ 'ಅಪೂರ್ವ' ಎಂಬ ಧ್ವನಿ ಸುರುಳಿ ಬಿ. ವಿ. ಶ್ರೀನಿವಾಸ್ ಮತ್ತು ಅನಂತಸ್ವಾಮಿಯವರ ಜಂಟಿ ರಾಗ ಸಂಯೋಜನೆಯಲ್ಲಿ ಹೊರಬಂದಿತು. ಈ ಧ್ವನಿ ಸುರುಳಿಯಲ್ಲಿ ಶ್ರೀನಿವಾಸ ಉಡುಪ, ಮೈಸೂರು ಅನಂತಸ್ವಾಮಿ, ರತ್ನಮಾಲಾ ಪ್ರಕಾಶ್, ಬಿ. ಆರ್. ಛಾಯಾ, ಕಸ್ತೂರಿ ಶಂಕರ್, ನರಸಿಂಹ ನಾಯಕ್, ಜಿ. ವಿ. ಅತ್ರಿ ಮುಂತಾದವರು ಹಾಡಿದರು. ಮೈಸೂರು ಅನಂತಸ್ವಾಮಿಯವರೇ ಸಂಗೀತ ನಿರ್ದೇಶನ ಮಾಡಿದ 'ಸುಮಧುರ' ಧ್ವನಿ ಸುರುಳಿಯೂ ಹೆಸರು ಮಾಡಿತು. 'ಸುಮಧುರ' ಅನಂತಸ್ವಾಮಿಯವರ ಸಂಗೀತ ನಿರ್ದೇಶನದ ಕಡೆಯ ಕ್ಯಾಸೆಟ್ಟಾಯಿತು. ವಿಶೇಷವೆಂದರೆ ಅನಂತಸ್ವಾಮಿಯವರ ಮೊದಲ ಹಾಗೂ ಕಡೆಯ ಕ್ಯಾಸೆಟ್ ನಿಸಾರರದ್ದೇ ಆಗಿರುವುದು. ಮಂಜುಳಾ ಗುರುರಾಜ್, ಕಸ್ತೂರಿ ಶಂಕರ್, ಮಾಲತಿ ಶರ್ಮ, ರಾಜು ಅನಂತಸ್ವಾಮಿ, ಅನಿತ ಅನಂತಸ್ವಾಮಿ, ರತ್ನಮಾಲಾ ಪ್ರಕಾಶ್, ಶ್ರೀಲಕ್ಷ್ಮಿ, ಪುತ್ತೂರು ನರಸಿಂಹ ನಾಯಕ್ ಅವರುಗಳು ಹಾಡಿದ ಈ ಧ್ವನಿ ಸುರುಳಿಯನ್ನು 'ಮಾಧುರಿ ಆಡಿಯೋ ಸಂಸ್ಥೆ' ತಯಾರಿಸಿ ಬಿಡುಗಡೆ ಮಾಡಿತು. ಪದ್ಮಚರಣ್‌ರವರ ಸಂಗೀತ ನಿರ್ದೇಶನದಲ್ಲಿ 'ನವೋಲ್ಲಾಸ' ಎಂಬ ಪ್ರಥಮ ಜೋಡಿ ಧ್ವನಿ ಸುರುಳಿಯನ್ನೂ 'ಮಾಧುರಿ ಆಡಿಯೋ ಸಂಸ್ಥೆ' ತಯಾರಿಸಿತು. ಇದು ಕನ್ನಡ ಭಾವಗೀತೆಗಳ ಪ್ರಥಮ ಜೋಡಿ ಧ್ವನಿ ಸುರುಳಿ ಎಂಬ ಕೀರ್ತಿ ಗಳಿಸಿತು. ಈ ಧ್ವನಿ ಸುರುಳಿಯಲ್ಲಿ

ರಾಜಕುಮಾರ್ ಭಾರತಿ, ಸುರೇಖ, ರತ್ನಮಾಲಾ ಪ್ರಕಾಶ್, ನರಸಿಂಹ ನಾಯಕ್ ಹಾಡಿದರು. ನಿಸಾರರ ಕಾವ್ಯವನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಪದ್ಮಚರಣರ ಸಂಯೋಜನೆ ವಿಶೇಷವಾಗಿತ್ತು. ನಿಸಾರರ ಅನೇಕ ಕವಿತೆಗಳಿಗೆ ಪದ್ಮಚರಣ್ ಬಹಳ ಹಿಂದೆಯೇ, ಅಂದರೆ ೧೯೬೦ರ ದಶಕದ ಪ್ರಾರಂಭದಿಂದಲೇ ಆಕಾಶವಾಣಿಯಲ್ಲಿ ಸಂಗೀತ ಸಂಯೋಜನೆ ಮಾಡಿದ್ದರು. ನಿಸಾರರ ಕಾವ್ಯಶಕ್ತಿಯಲ್ಲಿ ಅವರಿಗೆ ಅಪಾರ ಪ್ರೀತಿ ಇತ್ತು. ಇಬ್ಬರು ಪ್ರತಿಭಾ ಸಂಪನ್ನರ ಮಿಲನ ಈ ಧ್ವನಿ ಸುರುಳಿಯಲ್ಲಿ ಆಯಿತಾದರೂ, ಶಾಸ್ತ್ರೀಯ ಸಂಗೀತದ ಶೈಲಿಯ ದೆಸೆಯಿಂದ ಸಾಮಾನ್ಯರಿಗೆ ಮನ ರಂಜನೆ ತುಸು ದೂರವಾಯಿತು. ಪದ್ಮಚರಣರು ನಿಸಾರರ ಕವಿತೆಗಳಿಗೆ ತೊಡಿಸಿದ ಉಡುಗೆ ತುಸು ಭಾರವಾಯಿತು ಎನ್ನಿಸುತ್ತದೆ. ಕನ್ನಡದ ಪ್ರಪ್ರಥಮ ಸುಗಮ ಸಂಗೀತದ ಕ್ಯಾಸೆಟ್ ಅನ್ನು ತಂದ ನಿಸಾರರೇ, ಮೊದಲನೆಯ ಜೋಡಿ ಕ್ಯಾಸೆಟ್ (ನವೋಲ್ಲಾಸ) ಮತ್ತು ವಿದೇಶದಲ್ಲಿ ಬಿಡುಗಡೆಯಾದ ಪ್ರಥಮ ದನಿ ಸುರುಳಿ (ಸುಮಧುರ)ಗೂ ನಾಂದಿ ಹಾಡಿದ್ದು ಶ್ಲಾಘ್ಯವೆನ್ನಿಸುತ್ತದೆ.

ಮೈಸೂರು ಅನಂತಸ್ವಾಮಿಯವರ ಶಿಷ್ಯೆಯಾಗಿದ್ದ ಎಂ. ಕೆ. ಜಯಶ್ರೀಯವರು ಹಾಡಿರುವ 'ಅಭಿಷೇಕ' ಧ್ವನಿ ಸುರುಳಿ ಅನಂತಸ್ವಾಮಿಯವರ ನಿಧನದ ಅನಂತರ ತಯಾರಾಗಿ ಬಿಡುಗಡೆಯಾಯಿತು. ನಗರ ಶ್ರೀನಿವಾಸ ಉಡುಪರವರು ಈ ಧ್ವನಿ ಸುರುಳಿಯಲ್ಲಿ ಜೊತೆಗೆ ಹಾಡಿದ್ದು, ಬಿ. ವಿ. ಶ್ರೀನಿವಾಸ್ ವಾದ್ಯ ಸಂಯೋಜನೆ ಮಾಡಿದರು. 'ಹೊಂಬಾಳೆ'ಯ ಫಲ್ಗುಣ ಸಂಗೀತ ಸಂಯೋಜಿಸಿದ 'ಹೊಂಬೆಳಗು' ನಿಸಾರರ ೭೦ ವರ್ಷದ ನೆನಪಿನ ಧ್ವನಿ ಸುರುಳಿಯಾಗಿ ೨೦೦೫ರಲ್ಲಿ ಹೊರ ಬಂದಿದ್ದು 'ಲಹರಿ' ಸಂಸ್ಥೆ ಇದರ ವಿತರಣೆಯ ವ್ಯವಸ್ಥೆಯನ್ನು ಮಾಡಿದೆ. ಶ್ರೇಷ್ಠ ಸಾಹಿತ್ಯ ಗುಣವುಳ್ಳ ಕೆಲವು ಹಾಡುಗಳು ಈ ದನಿ ಸುರುಳಿಯ ವಿಶೇಷ.

ನಿಸಾರರ ಸುಮಾರು ಎಂಟು ಧ್ವನಿ ಸುರುಳಿಗಳು ಇದುವರೆಗೂ ಬಿಡುಗಡೆ ಯಾಗಿವೆಯಾದರೂ ಅವರಿಗೆ ನೆಮ್ಮದಿ ಮತ್ತು ಜನಪ್ರಿಯತೆಯನ್ನು ಕೊಟ್ಟು ಅವರ ಹೆಸರನ್ನು ಚಿರಸ್ಥಾಯಿಯಾಗಿಸಿರುವುದು 'ನಿತ್ಯೋತ್ಸವ' ಧ್ವನಿ ಸುರುಳಿ. ಗಾಯಕರ ಕಂಠ ಸಿರಿಯನ್ನು, ಕವಿಗಳ ಕಾವ್ಯ ಸಿರಿಯನ್ನು ಹಿಡಿದಿಟ್ಟುಕೊಂಡು ಮತ್ತೆ ಮತ್ತೆ ಆಸ್ವಾದಿಸುತ್ತಾ, ಮತ್ತೆ ಮತ್ತೆ ಅದರೊಳಗೆ ಇಳಿಯುತ್ತ ಭಾವ ಮಂಥನ ಮಾಡುವ ಸದವಕಾಶ ಲಭಿಸಿದ್ದು ಇಂತಹ ಧ್ವನಿ ಸುರುಳಿಗಳು ರಸಿಕರ ಕೈ ಸೇರಿದ ಮೇಲೆ. ಸುಗಮ ಸಂಗೀತ ಎರಡು ಕಲೆಗಳನ್ನು ಮೆರೆಸುವ ಏಕೈಕ ಗಾಯನ ವಿಧಾನ. ಸಂಗೀತದ ಮೂಲಕ ಜನರ ಮನಸ್ಸನ್ನು ಆಕರ್ಷಿಸಿ ಸೆಳೆದು ಕಾವ್ಯದ ರುಚಿಯನ್ನು ತೋರುವ ಬಗೆ ಅನನ್ಯ. ಬೇಂದ್ರೆ, ಕುವೆಂಪು, ರಾಜರತ್ನಂ, ಪು.ತಿ.ನ., ಕೆ. ಎಸ್. ನರಸಿಂಹಸ್ವಾಮಿ, ಕೆ. ಎಸ್. ನಿಸಾರ್ ಅಹಮದ್, ಲಕ್ಷ್ಮೀನಾರಾಯಣ ಭಟ್ಟ, ಹೆಚ್. ಎಸ್. ವೆಂಕಟೇಶಮೂರ್ತಿ, ಬಿ. ಆರ್. ಲಕ್ಷ್ಮಣರಾವ್ ಮುಂತಾದ ಕವಿಗಳು ವಿದ್ವಾಂಸರ ಮನದೊಳಗೆ ಇಳಿದಂತೆ ಪಾಮರರ ಹಾಗೂ ಸಾಮಾನ್ಯರ ಗುಡಿಸಿಲಿನಲ್ಲಿಯೂ ಮನೆಯಲ್ಲಿಯೂ ಪ್ರೀತಿಯಿಂದ ನೆಲೆಸಿದ್ದಾರೆ. ಕವಿತೆ ಯಾವಾಗ ತನ್ನ ಮಿತಿಗಳಿಂದ ಪಾರಾಗಿ, ಪುಸ್ತಕದ ಪುಟಗಳಿಂದ ಜಾರಿ ಗೇಯತೆಯೊಡನೆ ಹೊಂದಿಕೊಂಡು ನೆಲದಿಂದ ಮೇಲೆ ಹಾರುತ್ತದೋ ಆಗ ಅದರ ಎತ್ತರ ಬಿತ್ತರಗಳು ವರ್ಣನಾತೀತವಾಗುತ್ತವೆ.


ಅಕ್ಷರಸ್ಥರಿಗೂ ಅನಕ್ಷರಸ್ಥರಿಗೂ, ಅಂದರೆ ಓದಿ ಬರೆಯಲು ಬಾರದ, ಆದರೆ ಭಾಷೆಯನ್ನು ಚೆನ್ನಾಗಿ ಬಲ್ಲ ಅನೇಕ ರಸಿಕರ ಮನಸ್ಸಿನಲ್ಲೇ ಚಿರ ಕಾಲ ನೆಲೆಯೂರುತ್ತಾ ಉಳಿದುಬಿಡುತ್ತದೆ. ಇದು ಉತ್ತಮ ಕವಿತೆಗಿರುವ ಮಹತ್ವದ ಗುಣ. ಹೀಗೆ, ಶ್ರೀ ಸಾಮಾನ್ಯ ರಸಿಕರಿಗೂ ಕವಿತೆಗಳು ಎಟುಕುವಂತೆ ಮಾಡಿದ ಮೊದಲ ಕೀರ್ತಿ ನಮ್ಮ ನಿಸಾರರಿಗೆ ಸಲ್ಲುತ್ತದೆ. ಅವರು ಆರಿಸಿ ತೆಗೆದ ಕವಿತೆಗಳು ಧ್ವನಿ ಸುರುಳಿ ಪರಂಪರೆಯ ಮೊದಲ ನಾಂದಿಗೀತೆಗಳಾಗಲು ಕಾರಣ, ಅವುಗಳ ವಸ್ತು ವೈವಿಧ್ಯ, ಶಾಂತವೂ ಸ್ನಿಗ್ಧವೂ ಆದ ಪ್ರೇಮ, ಪ್ರಕೃತಿಯ ಚೆಲುವು, ಕೃಷ್ಣನ ಬೆರಗು, ಕರಿ ನೆರಳಾದ ನೆನಪುಗಳ ಸಹಜ ತಲ್ಲಣ, ಕನ್ನಡ ನಾಡಿನ ಭವ್ಯ ಚಿತ್ರಣ— ಒಂದೇ ಎರಡೇ! ಹತ್ತಾರು ಬಗೆಯ, ಹತ್ತಾರು ಭಾವಗಳ ಸಮ್ಮಿಶ್ರಣವೇ 'ನಿತ್ಯೋತ್ಸವ'ದ ಕಾವ್ಯ ಮತ್ತು ಗೇಯ ಗುಣವಾಯಿತು. ಮೈಸೂರು ಅನಂತಸ್ವಾಮಿಯವರು ತಮ್ಮ ಸ್ವರ ಸಂಯೋಜನೆಯಲ್ಲಿ ಅಪೂರ್ವವಾದ ರಾಗಗಳನ್ನು ಅನಾವರಣಗೊಳಿಸುವ ಬಗೆ ಅನನ್ಯವಾಯಿತು. ನಿಸಾರರು ತಮ್ಮ ಪ್ರಥಮ ಧ್ವನಿಸುರುಳಿ 'ನಿತ್ಯೋತ್ಸವ'ದಿಂದ ಧ್ವನಿಸುರುಳಿ ಪರಂಪರೆಯ ಉದ್ಘಾಟಕರಾದದ್ದಲ್ಲದೆ, ಕವಿತೆ ಜನ ಸಾಮಾನ್ಯರಿಗೆ ಎಟುಕುವಂತೆ ಮಾಡಿದರು. ಜೀವನವನ್ನು ಪ್ರಾಮಾಣಿಕವಾಗಿ ಹತ್ತಿರದಿಂದ ಎತ್ತಿ ತೋರಿಸಿದರು. ಭಾಷೆ ಮನಸ್ಸಿಗೆ ಅರ್ಥವಾಗುವಂತೆ ಹುಟ್ಟಿಬಂದಿತು; ಯಾವ ಆಡಂಬರದ ಮೆರವಣಿಗೆಯಿಂದಲೂ ಬರದೆ ಎದೆಯಾಳದಿಂದ ಹುಟ್ಟಿ ಬಂದ ಮಾತಿನಂತಾಗಿ ಸಹಜವಾಯಿತು. ನಿಸಾರರು ತಮ್ಮ ಪುಸ್ತಕದಲ್ಲಿ ಬೆಚ್ಚಗೆ ಮಲಗಿದ್ದ ಕವಿತಾ ಪಕ್ಷಿಯನ್ನು ಬಾನಿನಂಗಳದಲ್ಲಿ ಹಾರಲು ಬಿಟ್ಟರು. ಆದರೆ ಆ ಕವಿತಾ ಪಕ್ಷಿಗೆ ಸಂಗೀತದ ರೆಕ್ಕೆ ಪುಕ್ಕ ಕೊಟ್ಟವರು ಮೈಸೂರು ಅನಂತಸ್ವಾಮಿ. ಇವರಿಬ್ಬರ ಸ್ನೇಹದಿಂದ ಒಂದು ಹೊಸ ಪರಂಪರೆ ಸೃಷ್ಟಿಯಾಯಿತು. ನಿಸಾರರು ಅದರ ಮುಂಬೆಳಗುಕಾರರಾಗಿ ತಮ್ಮ ಹೆಸರನ್ನು ಬರೆದರು; ಸುಗಮಸಂಗೀತ ಕ್ಷೇತ್ರದ ಧ್ರುವತಾರೆಯಾಗಿ ಮೆರೆದರು.

ಘಟನೆಗಳ ಒಳ ಮರ್ಮವನ್ನು ಸಕಾರಣವಾಗಿ, ಅನುದ್ವೇಗಕರ ತತ್ತ್ವಶೋಧಕ ದೃಷ್ಟಿಯಿಂದ ಅರ್ಥೈಸಿಕೊಳ್ಳುವ ಸತ್ಪ್ರಯತ್ನದಿಂದ ನಮ್ಮ ನಾಡಿನ ಬದುಕಿನ ದಿನನಿತ್ಯದ ಕೆಲವೊಂದು ಜನಾಂಗೀಯ ಅಸಾಂಗತ್ಯದ ಗೋಜಲುಗಳು, ಮತೀಯ ರಾದ್ಧಾಂತಗಳು ತಗ್ಗಿಯಾವು. ಯಾವ ಮಾನವ ವರ್ಗದ ಚರಿತ್ರೆಯೂ ಅಚ್ಚ ಬಿಳಿಯ ಹಾಳೆಯಲ್ಲ, ಸಾರಿಸಿಟ್ಟ ಅಂಗಳವಲ್ಲ. ಗುಲಗಂಜಿಗೆ ಕಪ್ಪು ಚುಕ್ಕೆ ಹುಟ್ಟಿನಿಂದ ಬೆನ್ನು ಬಿದ್ದದ್ದೆ. ಅದನ್ನು ಪೂರ್ವಭಾವಿಯಾಗಿ ಒಪ್ಪಿಕೊಂಡೇ ಇತಿಹಾಸವನ್ನು ಓದಬೇಕು. ಹೀಗೆ ಮಾಡಿದಾಗ ಸೈರಣೆ, ಅನುಕಂಪೆ, ಅಂತಃಕರಣಗಳ ಪಾಠ ಸುಲಭಸಾಧ್ಯವಾಗಬಲ್ಲದು.

(ಜನಾಂಗೀಯ ಇತಿಹಾಸ ಪರಿಶುಭ್ರವಲ್ಲ)

ಭಾಗ–೨

ಗದ್ಯವನ್ನು ಕುರಿತ ಲೇಖನಗಳು





ನಿಸಾರರ ಗದ್ಯದಲ್ಲಿ ಕಾವ್ಯಗುಣ

♦ ಡಾ. ಪಿ. ಎಸ್. ರಾಮಾನುಜಂ

ಭಾರತೀಯ ಕಾವ್ಯಮೀಮಾಂಸೆಯ ಪ್ರಕಾರ ಕಾವ್ಯವು ಗದ್ಯರೂಪದಲ್ಲಿ ಇರಬಹುದು. ಅವರು ಕಾವ್ಯವನ್ನು ವಿಭಾಗಿಸುವಾಗ ಗದ್ಯಕಾವ್ಯ, ಪದ್ಯಕಾವ್ಯ ಹಾಗೂ ಚಂಪೂಕಾವ್ಯ ಎಂದು ಮೂರು ರೀತಿಯಾಗಿ ವಿಂಗಡಿಸಿದರು. ಪ್ರಾಚೀನ ಕನ್ನಡ ಸಾಹಿತ್ಯದಲ್ಲೂ ಇದೇ ವಿಂಗಡನೆಯನ್ನು ಅನುಸರಿಸಲಾಗುತ್ತಿದ್ದು ಅನಂತರ ಛಂದೋಬದ್ಧವಾದದ್ದು ಮಾತ್ರ ಪದ್ಯವೆಂದೂ ಛಂದಸ್ಸಿಲ್ಲದ ಬರವಣಿಗೆ ಗದ್ಯವೆಂದೂ ವಿಭಕ್ತವಾಗಿ, ಅನಂತರ ಹೊಸ ಪ್ರಯೋಗಗಳು ಹೆಚ್ಚಿದಂತೆ ಪದ್ಯಕಾವ್ಯದಲ್ಲೂ ಛಂದಸ್ಸು ನೇಪಥ್ಯಕ್ಕೆ ಸರಿದು, ಒಂದು ರೀತಿಯ ಲಯವು ಕಾವ್ಯತ್ವದ ದ್ಯೋತಕವಾಗಿ ಛಂದೋರಹಿತವಾದದ್ದೂ ಪದ್ಯವಾಗಲು ಸಾಧ್ಯ ಎಂಬ ಹೊಸ ಸಾಧ್ಯತೆಯಲ್ಲಿ ಕಾವ್ಯವು ತನ್ನ ಅಸ್ತಿತ್ವವನ್ನು ಅನನ್ಯತೆಯನ್ನು ಉಳಿಸಿಕೊಂಡಿತು. ಪದ್ಯ, ಈಗ ಹೊಸ ರೂಪವನ್ನು ಪಡೆದುಕೊಂಡು ಗದ್ಯ ಭಿನ್ನವಾಗಿ ಉಳಿದುಕೊಂಡು ಕಾವ್ಯದ ಲಕ್ಷಣವನ್ನು ತನಗೆ ಮಾತ್ರ ಅನ್ವಯಿಸಿಕೊಂಡು ವಿಜೃಂಭಿಸುತ್ತಿದೆ. ಗದ್ಯವಂತೂ ಪದ್ಯ ಭಿನ್ನವಾಗಿ, ಅಂದರೆ ಇಂದಿನ ಲಕ್ಷಣದಲ್ಲಿ ಕಾವ್ಯ ಭಿನ್ನವಾಗಿ ತನ್ನ ಅಸ್ತಿತ್ವವನ್ನು ಪಾರಿಭಾಷಿಕವಾಗಿ ತೋರ್ಪಡಿಸಿಕೊಂಡಿದೆ.

ಇಂತಹ ಪರಿಸ್ಥಿತಿಯಲ್ಲಿ ಇಂದು ಸೃಜನಶೀಲ ಗದ್ಯವೂ ಕಾವ್ಯವಾಗಬಹುದೇ ಎಂಬ ಪ್ರಶ್ನೆ ಎದ್ದಾಗ, ಪಾರಿಭಾಷಿಕವಾಗಿ ಗದ್ಯದ ಲಕ್ಷಣವು ಏನೇ ಇರಲಿ, ಅದು ಸೃಜನಶೀಲ ಮನಸ್ಸಿನ

ಸೃಷ್ಟಿಯಾದಾಗ ಕಾವ್ಯ ಗುಣವನ್ನು ಹೊಂದುತ್ತದೆ ಎಂದು ನಿಸ್ಸಂದಿಗ್ಧವಾಗಿ ಹೇಳಬಹುದು.

ಗದ್ಯವು ವೈಚಾರಿಕ ಗದ್ಯವಾಗಿ, ಶುಷ್ಕವಾಗಿ, ಆದರೆ ಅರ್ಥಪುಷ್ಟಿಯಿಂದ ಕೂಡಿರುವ ಶಾಸ್ತ್ರ ಪಂಕ್ತಿಯಾಗಬಹುದು. ಆದರೆ ಅದು ಸೃಜನಶೀಲ ಸೃಷ್ಟಿಯಾದಾಗ ಕಾವ್ಯಗುಣವನ್ನು ಹೊಂದಿ ಹೃದ್ಯವಾಗುತ್ತದೆ. ವಾಗರ್ಥಗಳೆರಡರಲ್ಲೂ, ಅಂದರೆ ವಾಕ್ಯರಚನಾಶೈಲಿ, ಮಧುರ ಪದ ವಿನ್ಯಾಸ ಹಾಗೂ ಅರ್ಥ ನಿರೂಪಣೆಯ ರೀತಿಗಳಲ್ಲಿ, ರಸಮಯವಾಗಿ ಗದ್ಯವು ಕಾವ್ಯದ ಅನುಭವವನ್ನೇ ಕೊಟ್ಟಾಗ ಅದು ಗದ್ಯಕಾವ್ಯವೆನಿಸುತ್ತದೆ. ಸೃಜನಶೀಲತೆಯ ವೈಭವವನ್ನು ಗರ್ಭೀಕರಿಸಿಕೊಂಡು ಬರುವ ಗದ್ಯವು ಪದ್ಯವಾಗದೆಯೂ ಹೃದ್ಯವಾಗಿ ಕಾವ್ಯವಾಗಬಹುದು. ಮುದ್ದಣನ 'ರಾಮಾಶ್ವಮೇಧ'ವು ಎಲ್ಲ ಲಕ್ಷಣಗಳ ದೃಷ್ಟಿಯಿಂದಲೂ ಗದ್ಯಕಾವ್ಯವೇ ಆಗಿರುವುದು ಇದಕ್ಕೊಂದು ನಿದರ್ಶನ. ವರ್ಣನೆಯಲ್ಲಿ ಕವಿಶ್ರೇಷ್ಠನಾಗಿ ಬಿಡುವ ಮುದ್ದಣ, ಮಧು ಮಧುರ ವಚನ ರಚನಾ ಚಾತುರ್ಯದಲ್ಲಿ ಕಾವ್ಯಸರಸ್ವತಿಯೆನಿಸಿಬಿಡುತ್ತಾನೆ. ಯಾರೂ ಹೆಚ್ಚು ವರ್ಣಿಸದ ಮಳೆಗಾಲವನ್ನು ಅವನು ವರ್ಣಿಸುವುದನ್ನು ಒಂದು ನಿದರ್ಶನವಾಗಿ ತೆಗೆದುಕೊಂಡು ನೋಡಿದಾಗ ಈ ವಿಷಯ ಸ್ಪಷ್ಟವಾಗುತ್ತದೆ.

'ಸಗ್ಗಿಗರಾಣ್ಮನ ಘನ ಕರಿಘಟಗಳ್ ಬೇಸಿಗೆಯ ಬೀಸರಕ್ಕೆ ಬಸವಳಿದು ಬಾಯಾರಿ, ಮುನ್ನೀರ ನೀರಂ ಕಂಡು, ಪಿಂಡುಗೊಂಡು, ಬಂದು ನಿಂದು ಮನದಣಿವನ್ನಮೋಲಾಡಿ, ಪೊದೆಕೋಡುವನ್ನಂಬರೆ ಪೀರ್ದು ಸೊರ್ಕಿ ಪೋಪೆಡೆಯೊಳ್ ಮೈವಿಟ್ಟು ಗೀಳಿಟ್ಟು, ಪೆಟ್ಟುವೆರ್ಚಿ ನಿಮಿರ್ದು ನಿಡುವಲ್ ಬೆಳಗೆ, ತುಂಬಿಲೊಳಿಂಬುಗೊಂಡ ತುಂಬು ನೀರಂ ಪೂತ್ಕರಿಸಿದವುವೆಂಬಂತಿರೆ ಎಡೆವಿಡದೆ ಬಲ್ಸಿರಿ ಸುರಿಯ ಮಳೆಗಾಲಂ ಚೆಲ್ವಾಯ್ತು.'

ಮತ್ತೆ 'ಇಂತು ಮುಂಗಾರ್ ತಲೆದೋರೆ ತಿರೆವೆಣ್ಣೆ ಮುಗಿಲ್ವೊಂದಿಯೊಳ್, ಬಳ್ವಿವರಿದ ನೇಹದಿಂ ಬೆಳ್ಳಂಗೆಡೆವ ಸೊಗದಾಲಿ ನೀರೆನೆ ಪೊಚ್ಚಂ ಪೆರ್ಚಿ ಪರಿದುದು.'

ಪ್ರತಿ ಪಂಕ್ತಿಯೂ ಮುದ್ದಣನಲ್ಲಿ ಇಂತಹುದೇ. ಅಂತೆಯೇ 'ರಾಮಾಶ್ವಮೇಧ'ವು ಅಮೋಘವಾದ ಗದ್ಯಕಾವ್ಯ. ಅದರಲ್ಲಿ ಕವಿಯ ಕಲ್ಪನೆಯ ಶಕ್ತಿಯಿಂದ ಹೊರಬಂದ ಅರ್ಥಕ್ಕೆ ಅವನು ತೊಡಿಸಿರುವ ಮಾಧುರ್ಯಯುಕ್ತ, ರಸಾನುಗುಣವಾದ ಓಜೋಯುಕ್ತ, ಪ್ರಸಾದಯುಕ್ತ ಪದಗಳ ವೈಭವದ ಮೆರವಣಿಗೆಯನ್ನು ನೋಡಿದಾಗ ಮುದ್ದಣನ ಗದ್ಯವು ಹೃದ್ಯವಾಗಿ ಕಾವ್ಯವಾಗುತ್ತದೆ. ಗದ್ಯಂ ಹೃದ್ಯಂ, ಪದ್ಯಂ ವಧ್ಯಂ ಎಂದು ಮನೋರಮೆಯ ಮೂಲಕ ಹೇಳಿಸಿದವನಲ್ಲವೇ ಅವನು?

ನಮ್ಮಲ್ಲಿರುವ ಗದ್ಯ ಸಾಹಿತ್ಯವನ್ನು ಪರಿವೀಕ್ಷಿಸಿದಾಗ ಎಲ್ಲ ಗದ್ಯವು ಕಾವ್ಯವೆನಿಸಿರುವ ಅನೇಕ ನಿದರ್ಶನಗಳು ಸಿಗುತ್ತವೆ. ಕುವೆಂಪುರವರ ಗದ್ಯ ಪ್ರತಿವಾಕ್ಯದಲ್ಲೂ ಕಾವ್ಯತ್ವವನ್ನು ಸಿದ್ಧಿಸಿಕೊಡಿರುವ ಕವಿ ಸೃಷ್ಟಿ. ಕವಿಯೇ ಗದ್ಯವನ್ನು ಬರೆದಾಗ ಅವನೊಳಗಿರುವ ಕಾವ್ಯ ಪ್ರತಿಭೆ ಪ್ರತಿ ಪದದಲ್ಲೂ ಇಣಕಿ ನೋಡುತ್ತಿರುತ್ತದೆ.

ಪ್ರಕೃತ, ನಿಸಾರ್ ಅಹಮದ್ ಅವರ ಗದ್ಯ ಬರಹಗಳನ್ನು ಪರಿಭಾವಿಸಿದಾಗ ಅವರೂ ಕವಿಯಾಗಿಯೇ ಗದ್ಯವನ್ನು ಬರೆಯುವವರು ಎಂಬ ಅಂಶ ನಿಸ್ಸಂದಿಗ್ಧವಾಗಿ ಗೋಚರವಾಗುತ್ತದೆ. ಅವರ ಗದ್ಯಗಳು ಅಡಿಗಡಿಗೆ ಕಾವ್ಯವಾಗಿ ರಸ ಭಾವಗಳಿಂದ ತುಂಬಿಕೊಂಡು

ರಸಾನುಭವವನ್ನು ಕೊಡುತ್ತವೆ. ಕ್ಲಿಷ್ಟ ಪದಗಳ ಪ್ರಯೋಗಗಳ ಸಂದರ್ಭಗಳಲ್ಲಿ ಗದ್ಯವಾಗಿ ಉಳಿಯುವ ಭಾಗಗಳೂ ಇದ್ದು ಅವು 'ಕಾವ್ಯ'ವಾದ ಗದ್ಯಭಾಗಗಳಿಗೆ ಸೇತುವೆಗಳಾಗಿ ಗದ್ಯವನ್ನು ಮುನ್ನಡೆಸಿಕೊಂಡು ಹೋಗುತ್ತವೆ.

ನಿಸಾರರ ಗದ್ಯಗಳಲ್ಲಿ ಕಾವ್ಯಗುಣಗಳನ್ನು ನೋಡುವ ಪ್ರಕೃತ ಪ್ರಯತ್ನದಲ್ಲಿ ಗುಣಗಳ ಬಗ್ಗೆ ಸರಿಯಾದ ದೃಷ್ಟಿಯನ್ನು ಇರಿಸಿಕೊಳ್ಳಬೇಕಾಗುತ್ತದೆ. ಗುಣಗಳೆಂದರೆ ಕಾವ್ಯ ಮೀಮಾಂಸೆಯ ಪ್ರಕಾರ, ಸರ್ವಮಾನ್ಯವಾದ ಓಜಸ್, ಪ್ರಸಾದ, ಮಾಧುರ್ಯಗಳೆಂಬ ಮೂರು ಗುಣಗಳು—ಇವು ಮೂರು ಮಹಾ ಆಲಂಕಾರಿಕನಾದ ಕಾವ್ಯಪ್ರಕಾಶಕಾರ ಮಮ್ಮಟಾ ಚಾರ್ಯನು ಪ್ರತಿಪಾದಿಸಿರುವ ಗುಣಗಳು. 'ಪ್ರತಾಪರುದ್ರೀಯ'ದ ವಿದ್ಯಾನಾಥನು ಇಪ್ಪತ್ತ ನಾಲ್ಕು ಗುಣಗಳನ್ನು ಹೇಳಿದ್ದಾನೆ. ವಾಮನನು ಇಪ್ಪತ್ತು ಗುಣಗಳನ್ನು ಹೇಳಿದ್ದಾನೆ. ಇವೆಲ್ಲವನ್ನೂ ಪರಿಭಾವಿಸಿ ತಿರುಮಲಾರ್ಯನು ತನ್ನ 'ಅಪ್ರತಿಮ ವೀರಚರಿತ'ದಲ್ಲಿ 'ಶಬ್ದಗುಣಂಗಳ್ ಪತ್ತು, ಅರ್ಥಗುಣಂಗಳ್ ಪತ್ತು ಎಂಬ ಪಕ್ಷಮೆ ಲೇಸು' ಎಂದು ಹೇಳಿ, 'ಓಜಸ್, ಪ್ರಸಾದ, ಶ್ಲೇಷ, ಸಮತೆ, ಸಮಾಧಿ, ಮಾಧುರ್ಯ, ಸೌಕುಮಾರ್ಯ, ಉದಾರತೆ, ಅರ್ಥಪುಷ್ಟಿ, ಕಾಂತಿಗಳೆಂಬ ಬಂಧ ಗುಣಗಳು ಶಬ್ದ ಗುಣಗಳೆಂಬ ಹಾಗೂ ಅದೇ ಓಜಸ್ ಮುಂತಾದ ಹತ್ತು ಅರ್ಥಗುಣಗಳು ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ.

ಮೇಲಿನ ಪ್ರಭೇದಗಳನ್ನು ನೋಡಿದಾಗ, ಶಬ್ದಗಳ ಹಾಗೂ ಅರ್ಥದ ಗುಣ ಗಳೆಲ್ಲವೂ ಸೇರಿ ಕಾವ್ಯತ್ವವನ್ನು ಕೊಡುತ್ತವೆ ಎಂಬುದು ಸ್ಪಷ್ಟ. ಒಟ್ಟಿನಲ್ಲಿ ಶಬ್ದಸಂಪತ್ತು ಅರ್ಥ ಗೌರವಗಳೆರಡೂ ಕಾವ್ಯದಲ್ಲಿರಬೇಕು ಎಂಬ ಸಾಧಾರಣ ಲಕ್ಷಣವನ್ನು ಈ ಪ್ರಭೇದಗಳ ಲಕ್ಷಣಗಳಿಂದ ಮಾಡಬಹುದಾಗಿದೆ. ಈ ಲಕ್ಷಣದ ದೃಷ್ಟಿಯಿಂದ ನಿಸಾರರ ಕಾವ್ಯವನ್ನು ನೋಡಿ ಅವುಗಳಲ್ಲಿ ಕಾವ್ಯ ಗುಣಗಳನ್ನು ಗಮನಿಸಬೇಕೇ ವಿನಾ ಪ್ರತಿಯೊಂದು ಗುಣದ ವಿಶಿಷ್ಟ ಲಕ್ಷಣವನ್ನು ಅಲ್ಲಿ ಅನ್ವಯಿಸುವ ಬೌದ್ಧಿಕ ವ್ಯಾಯಾಮವನ್ನು ಮಾಡುವುದು ಉಚಿತವಲ್ಲ. ವಚನ ಮಾಧುರ್ಯ, ಭಾವೋಚಿತವಾದ ಓಜೋಮಯ, ಪ್ರಸನ್ನ, ಮಧುರ ರಚನಾ ವಿನ್ಯಾಸ ಹಾಗೂ ಸೃಜನಶೀಲತೆಯಿಂದ ಮನಸ್ಸನ್ನು ವಿಸ್ತಾರಗೊಳಿಸುವ, ಚಿಂತನಕ್ಕೆ ಒಡ್ಡುವ ಅರ್ಥ ಸೌಂದರ್ಯ ಹಾಗೂ ಪುಷ್ಟಿ—ಇವುಗಳೇ ನಮ್ಮ ಈ ಪರೀಕ್ಷೆಯ ಮಾನದಂಡವಾಗಿರಬೇಕು. ವಾಸ್ತವವಾಗಿ ಗುಣಗಳ ಅಂತಿಮವಾದ ಸ್ವರೂಪವೇ ವಾಗರ್ಥಗಳ ಸೌಂದರ್ಯ ತಾನೆ?

ಈ ದೃಷ್ಟಿಯಿಂದ ನಿಸಾರರ ಗದ್ಯವನ್ನು ನೋಡಿದಾಗ ಅದರಲ್ಲಿರುವ ಕಾವ್ಯಗುಣವನ್ನು ಗುರುತಿಸುವುದು ಕಷ್ಟವಾಗುವುದಿಲ್ಲ. ಅವರ ಗದ್ಯಗಳಲ್ಲಿ ಕಾವ್ಯಗುಣದ ಆವೇಶವಾಗುವುದು ನಿಸಾರರಿಗೆ ಮನಸ್ಸು ರಸಾರ್ದ್ರವಾದಾಗ ಭಾವೋತ್ಕಟತೆಯಿಂದ ಬರೆಯುವ ಕೆಲವು ವಿಷಯಗಳಲ್ಲಿ ಮಾತ್ರ ಎಂದು ಹೇಳಲಾಗುವುದಿಲ್ಲ. ಕಾವ್ಯವಿಮರ್ಶೆಯ ಸಂದರ್ಭಗಳು, ಪ್ರಕೃತಿಯ ಸೌಂದರ್ಯ ಆಸ್ವಾದನೆಯಲ್ಲಿ, ಎಂದಲ್ಲದೆ ಪರಿಸರ ಮಾಲಿನ್ಯ ದಂತಹ ಶುಷ್ಕ ಸನ್ನಿವೇಶಗಳಲ್ಲೂ ಅವರ ಹೃದಯವು ಕಾರ್ಯಪ್ರವೃತ್ತವಾಗಿ ಕಾವ್ಯಶೀಲ ವಾಗುತ್ತದೆ. ಶುಷ್ಕ ವಿಷಯವು ಅದರಿಂದ ರಸಾರ್ದ್ರವಾಗುತ್ತದೆ.

ಪರಿಸರದ ಹಾನಿಯ ಬಗ್ಗೆ ನಿಸಾರರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುವ ರೀತಿಯೂ ಕಾವ್ಯಮಯವಾಗಿರುವುದನ್ನು ಈ ಸಾಲುಗಳಲ್ಲಿ ನೋಡಬಹುದು.

'ಮರಗಳು, ನಮ್ಮ ಭೂಮಿ ಆಕಾಶದಲ್ಲಿ ಬರೆಯುವ ಕವಿತೆಗಳು. ನಾವು ಅವುಗಳನ್ನು ಕತ್ತರಿಸಿ ಕಾಗದವಾಗಿ ಮಾರ್ಪಡಿಸುತ್ತೇವೆ, ನಮ್ಮ ಪೊಳ್ಳುತನವನ್ನು ದಾಖಲೆ ಮಾಡುವುದಕ್ಕೆ' ಎನ್ನುತ್ತಾನೆ ದಾರ್ಶನಿಕ ಕವಿ ಖಲೀಲ್ ಜಿಬ್ರಾನ್. ಮನುಷ್ಯನ ಮರಗಡುಕ ಬುದ್ಧಿಗೆ ಮಾತ್ರ ಈ ವಾಕ್ಯ ಅನ್ವಯಿಸುವುದಿಲ್ಲ. ಬೆಟ್ಟ, ಗುಡ್ಡ, ಮಣ್ಣು, ಹೊಳೆ, ಹಕ್ಕಿ ಮುಂತಾದ ಚೇತನಾಚೇತನವೆಲ್ಲದಕ್ಕೂ ಇದು ಅತ್ಯುಚಿತವಾಗಿದೆ. ಮಾನವ ಇವುಗಳಿಂದ ಬಹು ಸಮಯದ ಶಾಂತಿ ಸಮಾಧಾನ, ಆತ್ಮ ಸಂತುಷ್ಟಿಯನ್ನು ಹೊಂದುವ ಬದಲು ತನ್ನ ತಾತ್ಕಾಲಿಕ ಅಗತ್ಯಗಳಿಗಾಗಿ, ಸುಖಕ್ಕಾಗಿ ಇವೆಲ್ಲವನ್ನೂ ಎಡೆಬಿಡದೆ ನಿರ್ನಾಮಗೊಳಿಸು ತ್ತಿದ್ದಾನೆ. ಈ ಕಾರಣಕ್ಕೆ ಪರಿಸರ ಹುಚ್ಚು ಕುದುರೆಯಂತೆ ಅಂಕೆ ತಪ್ಪುತ್ತಿದೆ. ಏರುಪೇರಿನ ಅಪಶ್ರುತಿಗೆ ನಮ್ಮ ಬದುಕಿನ ಹೆಜ್ಜೆ ಬೇತಾಳ ಕುಣಿಯತೊಡಗಿದೆ. ಹೀಗೇ ಮುಂದುವರಿದರೆ ಮಾಲಿನ್ಯದ ಮಾರಕತೆ ಮೃಗೀಯವಾಗಿ ಮನು ಕುಲದ ಮೇಲೆ ಮುಯ್ಯಿ ತೀರಿಸಿಕೊಳ್ಳುತ್ತದೆ. ಈ ಮಾರಣ ಮುಹೂರ್ತ ಮಾರು ದೂರ ಮಾತ್ರವಿದೆ.'

ಬೆಂಗಳೂರಿನ ವಾತಾವರಣದ ಬಗ್ಗೆ ನಿಸಾರರು ಹೇಳುವ ಮಾತುಗಳು ಬೆಂಗಳೂರಿನ ಪ್ರತಿಯೊಬ್ಬ ನಾಗರಿಕನ ಅನುಮೋದನೆಯನ್ನು ಪಡೆಯುವಂತಹವು. ಆದರೆ ಅವು ಕಾವ್ಯ ಮಯವಾಗಿ ಹೊರ ಹೊಮ್ಮುವ ಮಾತುಗಳು. ಅವರ ನಿರಾಸೆ, ಕೋಪಗಳು ಅದರಲ್ಲಿ ಮೈದಳೆದು ಬರುತ್ತವೆ. ನಿಸಾರರು ಪ್ರಯೋಗಿಸುವ ವಾಕ್ಯಾಂಶಗಳ ಪದ ವಿನ್ಯಾಸವೂ ಸ್ವಾರಸ್ಯಕರ. ಬೆಂಗಳೂರು 'ಸುಮಂಗಲಿತನದ ಲಕ್ಷಣವನ್ನು ನೀಗಿ ಕೊಳ್ಳುತ್ತಿದೆ' ಎಂಬ ಅಭಿವ್ಯಕ್ತಿ, ಅರ್ಥವನ್ನು ತನ್ನ ಒಡಲಲ್ಲಿ ತುಂಬಿ ಇಟ್ಟುಕೊಂಡಿರುವ ಔಚಿತ್ಯಪೂರ್ಣವಾದ ಮಾತು.

'ಜನ ವಾಹನದ ದಟ್ಟಣೆ ಮತ್ತು ಧೂಳಿ ಧೂಸರ ಮಲಿನಯುಕ್ತ ಪರಿಸರದ ಶಾಪದಿಂದ ಅದು ತತ್ತರಗೊಂಡಿದೆ. ಗದ್ದಲದ ಜಾಡ್ಯಪೀಡಿತವಾಗಿ ಸಂಕಟದಿಂದ ನರಳಿ ಕಿರುಚುತ್ತಿದೆ. ಇಪ್ಪತ್ತು ನಾಲ್ಕು ಗಂಟೆಯೂ ಎಡೆಬಿಡದೆ ರಟ್ಟೆ ಬೀಳುವವರೆಗೆ ದುಡಿಯುವ ಕೂಲಿಕಾರನಂತೆ ಅದರ ವದನ ಮ್ಲಾನಗೊಂಡಿದೆ; ತೇಜೋವಿಹೀನವಾಗಿದೆ. ಜನರೊಂದಿಗೆ ಅದರ ನಂಟು ಲೇವಾದೇವಿಯ ಮಾರ್ವಾಡಿಯ ಸಂಬಂಧವಾಗಿ ಮಾರ್ಪಡುತ್ತಿದೆ. ಅದಕ್ಕೆ ಆಪ್ತತೆಯ, ಬೆಚ್ಚನೆಯ ವಾತ್ಸಲ್ಯ ಮಮತೆಗಳ ಸ್ಪರ್ಶವಿಲ್ಲ.'

ಇದು ಕವಿ ನಿಸಾರರಿಗೆ ಬೆಂಗಳೂರು ಕಾಣುವ ರೀತಿ. ಸೃಜನಶೀಲ ಮನಸ್ಸುಗಳ ಸೃಷ್ಟಿಯ ಬಗ್ಗೆ ಹೇಳುವಾಗ ನಿಸಾರರ ಮನಸ್ಸು ಆ ಸೃಷ್ಟಿಗಳ ಎತ್ತರ ವಿಸ್ತಾರಗಳಷ್ಟೇ ತನ್ನ ಪರಿಮಾಣವನ್ನು ಬೆಳೆಸಿಕೊಂಡು ಶಬ್ದಗಳ ಶಿಲ್ಪವನ್ನು ನಿರ್ಮಿಸುತ್ತದೆ. ಇಂತಹ ಕೃತಿಗಳು ನಿಸಾರರ ಮಾತಿನಲ್ಲೇ ಹೇಳುವುದಾದರೆ, 'ಕಾರ್ಯನಿರ್ವಾಹಕವೂ ಸುಸ್ಥಿರವೂ ಆದ ಪ್ರತಿಭಾಸಂಕಲ್ಪದ ಮೇರುಸಮ ಸಿದ್ಧಿಗಳು. ಇಂಥ ಸುದೀರ್ಘಕಾಲಿಕ, ದರ್ಶನದೀಪ್ತ, ವ್ರತರೂಪದ ಸಂಕಲ್ಪ 'ತಪಸ್ಯೆ' ಎನ್ನಿಸಿಕೊಳ್ಳುತ್ತದೆ. ಲೌಕಿಕ ಸಾಧಾರಣವಾದ, ಬಹುಜನ

ಸಾಧ್ಯವಾದ, ಸದ್ಯಃವ್ಯವಹಾರಮಾನ್ಯವಾದ ದಿನಂಪ್ರತಿಯ ಸಂಕಲ್ಪ ಕಾಲೊರಸಾದರೆ, ತಪಸ್ಯೆಯ ಸ್ವರೂಪದ ಸಂಕಲ್ಪ ಮಡಿ ಗದ್ಬುಗೆ: ಒಂದು ಮಿಂಚಿನ ಚಮಕು, ಇನ್ನೊಂದು ತಾರಾ ಪ್ರದೀಪ್ತಿ.'

ಮಹಾ ಸಂಗೀತಜ್ಞರಲ್ಲಿರುವ ಪ್ರತಿಭೆಯ ಮಹತ್ವವನ್ನು ನಾವು ನಿಷ್ಕರ್ಷಿಸ ಬೇಕಾದದ್ದು ಹೇಗೆ ಎಂಬುದರ ಬಗ್ಗೆ ನಿಸಾರರು ಹೇಳುವಾಗ ಸಂಗೀತದ ಮನೋಧರ್ಮದ ಬಗ್ಗೆ, ಅದನ್ನು ಗ್ರಹಿಸಬೇಕಾದ ಪರಿಯ ಬಗ್ಗೆ ಅವರಿಗಿರುವ ದೃಷ್ಟಿ, ಭಾವದೀಪ್ತತೆಯಿಂದ ಪ್ರಕಟಗೊಳ್ಳುತ್ತದೆ.

'ಪ್ರತಿಭೆಯ ಮಹತಿಯನ್ನು, ಕಲೌನ್ನತ್ಯವನ್ನು ನಾವು ನಿಷ್ಕರ್ಷಿಸಬೇಕಾದದ್ದು ಮಾರ್ಗಾನುಸರಣೆಯ ಮೇಲಲ್ಲ; ಪರಿಣಾಮರೂಪೀ ಸಿದ್ಧಿಯ ಪರಿಪೂರ್ಣತೆಯನ್ನು ಪರಿಗಣಿಸಿ. ಸ್ವೋಪಜ್ಞ ಪ್ರತಿಭಾಚೇತನವೊಂದರ ಅಂತರ್ದರ್ಶನದ ಪ್ರಾರಂಭಿಕ ಹೊಳಹು ಗಳು ಸಾಂಗವಾಗಿ ಬೆಸೆದು ಸಂಪೂರ್ಣಾವತಾರಿ ಸೌಂದರ್ಯಕೃತಿಯಾಗಿ ಹೇಗೆ ಘಟಿಸುತ್ತದೆ ಎನ್ನುವುದು ಕಾವ್ಯಕಲೆಗಳ ವಿಷಯದಲ್ಲಿ ಗಣನೆಗೆ ಬರಬೇಕಾದ ಆದ್ಯ ವಿಷಯ.'

ನಿಸಾರರ ಸ್ಫೂರ್ತಿಗೆ ಇಂತಹುದೇ ವಿಷಯ ಇರಬೇಕೆಂಬ ನಿಯಮವಿಲ್ಲ. 'ಸ್ಫೂರ್ತಿ' ಎಂಬುದು ಅವರಿಗೆ ಕವನ ರಚನಕ್ರಿಯೆಯ ಪ್ರಪ್ರಥಮ ಬೀಜಪ್ರಾಯವಾದ ಮಿಂಚಿಕೆ. ಅದು ರಚನೆಯೊಂದನ್ನು ಫಲರೂಪಿಯಾಗಿ ಮಾಗಿಸುವ ಅಂತಿಮ ನಿಗೂಢ ಪ್ರಕ್ರಿಯೆಯೂ ಹೌದು. ಈ ತೆರನಾದ ಸ್ಫೂರ್ತಿ ಗದ್ಯ ಬರೆಯುವಾಗಲೂ ಅವರಲ್ಲಿ ಮಿಂಚುತ್ತದೆ.

ಸಾಹಿತ್ಯದ ಬಗ್ಗೆ, ಕವಿ ಮನಸ್ಸಿನ ಬಗ್ಗೆ, ಪ್ರತಿಭೆಯ ಬಗ್ಗೆ ನಿಸಾರರು ಬರೆಯುವಾಗ, ಅವರ ಸ್ಫೂರ್ತಿ ಮುಗಿಲೇರಿಬಿಡುತ್ತದೆ. ನಿರಂತರವಾದ ಗಿರಿ ನದಿಯಂತೆ ಅವರ ವಿಮರ್ಶೆ ಹರಿಯುತ್ತದೆ. ಇದು ಕೇವಲ ವೈಚಾರಿಕ ಗದ್ಯ ಬರೆಯುವಾಗಲೂ ಕಂಡು ಬಂದು, ಅಲ್ಲಿ ನಿರೀಕ್ಷಿಸುವ ಶಾಸ್ತ್ರ ಗಾಂಭೀರ್ಯಕ್ಕೆ ಕುಂದು ಬರುವ ಅಪಾಯವುಂಟಾದರೂ, ಆ ಪ್ರಬಂಧವನ್ನು ಓದಿಸಿಕೊಂಡು ಹೋಗುವ ಶಕ್ತಿಯನ್ನು ಪಡೆಯುತ್ತದೆ. ಅಲ್ಲಿ ಕಾವ್ಯಗುಣವು ಓದುಗನನ್ನು ಆಕರ್ಷಿಸುವ ಸಾಧನವಾಗುತ್ತದೆ.

ಶಾಸ್ತ್ರ ಪಂಕ್ತಿಗಳು ಕಾವ್ಯ ಪಂಕ್ತಿಗಳು ಆಗುವುದನ್ನು ಶೈಲಿಯ ನಿಮಿತ್ತದಿಂದ ನಿಸಾರರು ಹೇಳುತ್ತಾ ಶಬ್ದಗಳ ಪಾತ್ರವನ್ನು ವಿಮರ್ಶಿಸುವ ಬಗೆಯನ್ನು ಗಮನಿಸಬಹುದು. 'ಶಬ್ದಗಳು ಆಲೋಚನೆಗಳನ್ನು ತಿಳಿಯಾಗಿ, ತೇಜಿಯಾಗಿ ಸಾದರಗೊಳಿಸುವ ಬದಲು ಅವುಗಳನ್ನು ಮಸುಕಾಗಿಸುತ್ತದೆ. ಹಿಮಗೋಚರ ಭೂದೃಶ್ಯದಂತೆ ಅಸ್ಫುಟಗೊಳಿಸುತ್ತವೆ. ವಿಚಾರದ ಬದಲು ಪದಾಟೋಪ ದಾಂಧಲೆ ನಡೆಸಿದಾಗ ಶೈಲಿ ಪೆಡಸೋ, ದುರವಗಾಹವೋ ಆಗುತ್ತದೆ.'

ಕುವೆಂಪುರವರ ಬಗ್ಗೆ ಹೇಳುವಾಗ ನಿಸಾರರು ಭಾವಾವಿಷ್ಟರಾಗುತ್ತಾರೆ. ಅದರಲ್ಲಿ ಕವಿಯದೇ ವಿಜೃಂಭಣೆ. ಕಾವ್ಯಾವೇಶದಿಂದ ಪದಗಳು ಹೊರ ಬಂದು ಭಾವಗಳನ್ನು ಹೊತ್ತು ಕುಣಿಯುತ್ತವೆ. ಮಲೆನಾಡಿನ ಸೌಂದರ್ಯವನ್ನು ಕುವೆಂಪುರವರು ಅಭಿವ್ಯಕ್ತಗೊಳಿಸುವ ಬಗ್ಗೆ

ಹೇಳುವಾಗ ಗದ್ಯಕಾವ್ಯಧಾರೆ ಹೊರ ಬರುತ್ತದೆ. 'ಅವರ ಪಂಚಕೋಶಗಳಲ್ಲಿ ಸಹ್ಯಾದ್ರಿಯ ಋಣ ತುಂಬಿ ತುಳುಕಿದೆ. ಆ ಅದ್ರಿಶಕ್ತಿಯೇ ಮೈವೆತ್ತಂತಿದೆ, ಅವರ ಮಹಾಕಾವ್ಯ ನಿರ್ಮಿತಿ. ಜಡವೆಂಬುದು ಚೇತನದ ಲೀಲೆಯೆನ್ನುವುದನ್ನು ರುಜುವಾತು ಪಡಿಸಿದವರು ಕುವೆಂಪು.' 'ಅವರಿಗೆ ಪ್ರಕೃತಿ ಬಹಿರಂಗದಲ್ಲಿ ತೇಜಸ್ವಿನಿ, ಅಂತರಂಗದಲ್ಲಿ ತಪಸ್ವಿನಿ—ಅವರಿಗೆ ಜೀವನ ರಥೋತ್ಸವದಂತೆ ಸಂಭ್ರಮಯುಕ್ತ, ಪಾವನ, ಆಕರ್ಷಣೀಯ.'

ನಿಸಾರರ ಗದ್ಯ ವಿಶೇಷವಾಗಿ ಮಿಂಚುವುದು ಇಂತಹ ಸ್ಥಳಗಳಲ್ಲೇ. ಅಲ್ಲಿ ಕಾವ್ಯ ಭಾಗಗಳು ಗದ್ಯಭಾಗಗಳೊಡನೆ ಓತಪ್ರೋತವಾಗಿ ಹೊಮ್ಮುತ್ತಿದ್ದು ಒಟ್ಟು ಪ್ರಬಂಧಕ್ಕೆ ಕಾವ್ಯ ಸ್ವರೂಪವನ್ನು ಕೊಡುತ್ತವೆ.

ಆದರೆ ನಿಸಾರರ ಗದ್ಯವು ಕಾವ್ಯವಾಗಿರುವ ಸಂದರ್ಭಗಳನ್ನು ಗುರುತಿಸುವಾಗ ಅವುಗಳ ಸಾಧಾರಣೀಕರಣವನ್ನು ಮಾಡಲು ಬರುವುದಿಲ್ಲ ಎಂಬುದು ಗಮನಿಸಬೇಕಾದ ಒಂದು ವಿಶೇಷ. ಕವಿಯ ಮನಸ್ಸು ನವ ರಸಗಳ ನಡುವೆ, ವಿವಿಧ ಭಾವ ವಿಭಾವಗಳ ನಡುವೆ ಹಾದು ಹೋಗುತ್ತಲೇ ಇರುವುದರಿಂದ ಆಯಾಯಾ ಭಾಗಗಳಿಗೆ ಅನುಗುಣವಾಗಿ ಸ್ಪಂದಿಸುತ್ತಾ ಸಾಗುತ್ತದೆ. ಇವುಗಳ ನಡುವೆ ಕವಿಯ ಮನಸ್ಸು ಕೇವಲ ಗದ್ಯ ಸ್ಥಿತಿಯಲ್ಲಿ ಇರಬೇಕಾದ ಅನಿವಾರ್ಯತೆಯೂ ಉಂಟು. ಅಂತಹ ಸಂದರ್ಭಗಳಲ್ಲಿ ಅವರ ಮನಸ್ಸು ನಿರಾವರಣದ ಚೆಲುವನ್ನು ಉತ್ಪಾದಿಸುತ್ತ ಸಾಗುತ್ತದೆ. ನಡು ನಡುವೆ ಅಡ್ಡಬರುವ ಬಂಡೆಗಳ ಮೇಲೆ ಅಪ್ಪಳಿಸಿ ಮುಂದೆ ಸಾಗುವ ನದಿಯಂತೆ ಪ್ರವಹಿಸುವ ಗದ್ಯವಾಹಿನಿಯು ಹಠಾತ್ತನೆ ಹೊರಬರುವ ಕವಿಯ ಭಾವ ಪ್ರಪಂಚದಲ್ಲಿ ಒಂದಾಗಿ ವೈವಿಧ್ಯವನ್ನು ಉಳಿಸಿಕೊಂಡು ಇಂದ್ರಚಾಪದ ವರ್ಣಜಾಲವನ್ನು ಹರಡುತ್ತದೆ.

ಇದೇನೇ ಇದ್ದರೂ ನಿಸಾರರ ಭಾವ ಪ್ರಯಾಣವು ಅಪ್ರತಿಹತವಾಗಿ ಸಾಗುವುದನ್ನು, ಅವರು ಕಾವ್ಯದ ನೆಲೆ ಬೆಲೆಗಳನ್ನು ಶೋಧಿಸುವಾಗ, ಕಾವ್ಯದ ಬಗ್ಗೆ ಪ್ರತಿಭೆಯ ಬಗ್ಗೆ ಹೇಳುವಾಗ ಅರ್ಥಾತ್ ಭಾವ ಪ್ರಪಂಚದ ಸಂಸ್ಪರ್ಶವಿರುವ ವಿಷಯಗಳ ಬಗ್ಗೆ ಬರೆಯುವಾಗ ನೋಡಬಹುದು.

ಇಂದಿನ ಬರವಣಿಗೆಯ ಬಗ್ಗೆಯೇ ಅವರು ಹೇಳುವ ಮಾತು, ವಿಮರ್ಶೆಯ ಭರತ ವಾಕ್ಯದಂತಿದೆ. ಪತ್ರಿಕೆಯ ಬರವಣಿಗೆಯ ಮತ್ತು ಸಾಹಿತ್ಯದ ಬರವಣಿಗೆಯ ಬಗ್ಗೆ 'ಒಂದರದು ಅಲ್ಪಪ್ರಮಾಣದ ತತ್ಕಾಲೀನ ಮಿಂಚಿನ ಅನುಭವ; ಮತ್ತೊಂದರದು ಅಧಿಕ ಪ್ರಮಾಣದ ನಿತ್ಯಸ್ವರೂಪದ ನಕ್ಷತ್ರಾನುಭೂತಿ' ಎನ್ನುವ ಅವರು ವಿಷಾದದ ಭಾವದಲ್ಲಿ ಇಂದಿನ ಪ್ರವೃತ್ತಿಗಳ ಬಗ್ಗೆ ಈ ರೀತಿ ಹೇಳುತ್ತಾರೆ :

'ಸದ್ಯದ ತುರ್ತುಗಳನ್ನು ಪೂರೈಸುವ ಧಾವತಿಯಲ್ಲಿ ವೈಯಕ್ತಿಕ ವಿಕ್ಷಿಪ್ತತೆ, ಸ್ವಂತದ ಖಾಯಿಷು ಖಯಾಲಿಗಳನ್ನು ಹರಡುತ್ತಿರುವ ಯುಕ್ತಿಪ್ರಧಾನ ಬರವಣಿಗೆ ಪ್ರಸ್ತುತ ಯುಗ ಧರ್ಮವೆನಿಸುತ್ತಿದೆ. ರೋಚಕತೆ, ಚಮತ್ಕಾರಗಳ ಪಕ್ಕವಾದ್ಯಗಳ ಬೊಬ್ಬೆಯಲ್ಲಿ ಜೀವಶೋಧಕ ಗುಣದ ಹಾಡಿಕೆ ಸೊರಗಿ ಹೋಗುತ್ತಿದೆ.'

'ಸ್ವಂತ ರೂಹಿಲ್ಲದ ಮಂದೆತನದ ಬ್ಯಾಬ್ಯಾಗಳಾಗಿರುವ, ಸಮಯದ ಸಮಾರಾಧನೆ

ಮಾಡುವ ತರಾತುರಿಯಲ್ಲಿರುವ ಬದ್ಧ ಬರಹಗಾರರ ದೆಸೆಯಿಂದ ಲೇಖನ ಕಲೆ, ಸಾಮಾಜಿಕ ಮತ್ತು ರಾಜಕೀಯ ಯಥಾರ್ಥತೆಯ ಊಳಿಗದಲ್ಲಿ ತೊಡಗಿಕೊಂಡು ಏಕತಾನತೆಯಿಂದ ಸೊರಗಿ ಹೋಗಿದೆ.'

ಇದು ಗದ್ಯವನ್ನು ಕಾವ್ಯವಾಗಿಸಿರುವ ಕವಿಯು, ಕಾವ್ಯದಲ್ಲೂ ಕಾವ್ಯಗುಣ ತೋರದ ತಥಾಕಥಿತ ಕವಿಗಳ ಬಗ್ಗೆ ಹೇಳುವ ಮಾತು.

ಒಟ್ಟಿನಲ್ಲಿ ನಿಸಾರರ ಗದ್ಯಗಳನ್ನು ಓದಿದಾಗ ಆಗುವ ಅನುಭವ ವಿಶಿಷ್ಟವಾದದ್ದು. ಅದು ಕಾವ್ಯವನ್ನು ಗದ್ಯರೂಪದಲ್ಲಿ ಓದಿದ ಅನುಭವ. ತೊಡಕುಗಳಿದ್ದರೂ ಭಾವ ಪ್ರಪಂಚ ದಲ್ಲಿ ಮಿಂಚಿಸುವ ರಚನಾಶೈಲಿಯ ಅನುಭವ ಅದು. ಛಂದಸ್ಸಿಲ್ಲದಿದ್ದರೂ ಗದ್ಯಶೈಲಿಯನ್ನೇ ಛಂದಸ್ಸಾಗಿಸಿಕೊಂಡಿರುವ ಅನುಭವ ಅದು.

ನಿಸಾರರ ಗದ್ಯದಲ್ಲಿ ವಿಚಾರವಿದೆ, ಭಾವಾನುಗುಣ ಶಾಬ್ದಿಕ ಅಭಿವ್ಯಕ್ತಿಯಿದೆ, ಅದು ಸೃಜನಶೀಲ ಮನಸ್ಸಿನ ಸೃಷ್ಟಿಯೆಂಬುದನ್ನು ಅವರ ಪ್ರಬಂಧಗಳು ಸಾರುತ್ತವೆ. ಅದರಲ್ಲಿ ಗದ್ಯವಾಗಿಬಿಡಬಹುದಾದ ವಿಚಾರ ವಾಹಿನಿಗೆ ಕಾವ್ಯದ ರಸ ಪಾಕವನ್ನು ಸೇರಿಸಲು ತನ್ನೊಳಗಿರುವ ಕವಿಯನ್ನು ಆಹ್ವಾನಿಸುವ ಅಂತಃಪ್ರಕ್ರಿಯೆಯ ಅಗತ್ಯವಿಲ್ಲ. ಕವಿಯೇ ಗದ್ಯವನ್ನು ಬರೆಯುವುದರಿಂದ ಕವಿಗೆ ಪದ್ಯದಂತೆ ತನ್ನ ಕಾವ್ಯಕ್ಕೆ ಗದ್ಯವೂ ಒಂದು ಮಾಧ್ಯಮವೇ. ಈ ಭಾವ ವಿಲಾಸವು ವಿಚಾರಧಾರೆಯ ಗಾಂಭೀರ್ಯವನ್ನು ಹಗುರವಾಗಿಸಿಲ್ಲ ಎಂಬುದನ್ನೂ ಗಮನಿಸಬೇಕು. ಕಾವ್ಯಗುಣವು ಕಾವ್ಯತ್ವದ ಜೊತೆಗೆ ಅರ್ಥಗೌರವವನ್ನು ಕಾಪಾಡಿಕೊಂಡಿರುವುದು ಇಲ್ಲಿಯ ಅನನ್ಯತೆ.

ಒಟ್ಟಿನಲ್ಲಿ ನಿಸಾರರ ಗದ್ಯದಲ್ಲಿ ಕಾವ್ಯಗುಣಗಳು ಪ್ರಧಾನವಾಗಿ ಎದ್ದು ಕಾಣುವ ಅಂಶಗಳು. ಅವರ ಗದ್ಯವು ಕಾವ್ಯ ದುಕೂಲವನ್ನು ಹೊದ್ದು ಬಿಡುತ್ತದೆ. ಅವರ ಗದ್ಯಗಳು ಮನ ಮುಟ್ಟುವುದು ಅವುಗಳಲ್ಲಿರುವ ಈ ಕಾವ್ಯಗುಣಗಳಿಂದಲೇ. ಆದ್ದರಿಂದಲೇ ಅವುಗಳನ್ನು ಓದಿದಾಗ ಬುದ್ಧಿ ಸಂವಾದವಲ್ಲದೆ ಹೃದಯ ಸಂವಾದ ಕೂಡ ಆಗುವುದು.

ಯಶಸ್ಸು ಮತ್ತು ಶ್ರೇಯಸ್ಸು ಬೇರೆ, ಬೇರೆ. ಯಶಸ್ಸು ಎಲ್ಲ ಕಾಲಕ್ಕೂ ಸತ್ತ್ವಾಧಾರಿಯಲ್ಲ, ರಾಜಮಾರ್ಗನುಸಾರಿಯಲ್ಲ. ಅದು ರಾಜಕಾರಣ, ಜಾತಿ, ಅಂತಸ್ತು ಹಣ ತದಿತರ ಗಲ್ಲಿಯಲೆತಗಳ ಮೂಲಕವೂ ಗಿಟ್ಟಿಸಿಕೊಳ್ಳಬಲ್ಲ ಹವಣುಳ್ಳದ್ದು. ಶ್ರೇಯಸ್ಸು ಹಾಗಲ್ಲ. ಬಹುಕಾಲದ ಅಂತಃತಪಸ್ಸಿಲ್ಲದೆ ಅದನ್ನು ಸಿದ್ಧಿಸಿಕೊಳ್ಳುವುದು ಅಸಂಭವ. ಶ್ರೇಯಸ್ಸನ್ನು ನಿರ್ಧರಿಸುವುದು ಸಾಂಪ್ರತ ವಿಮರ್ಶಕ ಬುದ್ಧಿಜೀವಿ ವರ್ಗವಲ್ಲ, ಜರಡಿ ರೂಪದ ನಿಷ್ಪಾಕ್ಷಿಕ ಕಾಲ.

(ಯಶಸ್ಸು ಮತ್ತು ಶ್ರೇಯಸ್ಸು)



ಸಾಂಸ್ಕೃತಿಕ ಸಂಘರ್ಷದಲ್ಲಿ ಸ್ವಂತಿಕೆಯ ಹುಡುಕಾಟ

◆ *ಡಾ. ಎಸ್. ವಿದ್ಯಾಶಂಕರ*

ಪ್ರೊ ನಿಸಾರ್ ಅಹಮದ್‌ರವರ ಕಾವ್ಯದಷ್ಟೇ ಅವರ ಗದ್ಯ ಬರಹಗಳೂ ಮುಖ್ಯವಾಗಿವೆ. 'ಇದು ಬರಿ ಬೆಡಗಲ್ಲೋ ಅಣ್ಣ' (೧೯೮೦), 'ಮನದೊಂದಿಗೆ ಮಾತುಕತೆ' (೧೯೯೧), 'ಹಿರಿಯರು ಹರಸಿದ ಹೆದ್ದಾರಿ' (೧೯೯೨), 'ಅಚ್ಚುಮೆಚ್ಚು' (೧೯೯೬) ಮತ್ತು 'ವಿಚಾರ ವಿಹಾರ' (೧೯೯೮) ಎಂಬ ಐದು ಗದ್ಯ ಕೃತಿಗಳು ಈಗಾಗಲೇ ಬೆಳಕು ಕಂಡಿವೆ. ಈ ಐದೂ ಕೃತಿಗಳು 'ಸಮಗ್ರ ಗದ್ಯ ಬರಹಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿವೆ (೨೦೦೨). ಈ ಗ್ರಂಥದ ಕೊನೆಯಲ್ಲಿ ಅನುಬಂಧ ರೂಪದಲ್ಲಿ ಗದ್ಯ ಲೇಖನಗಳ ಪ್ರಮುಖ ವಿಷಯ ಹಾಗೂ ಅದಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತ ವರ್ಗೀಕರಣದ ಪಟ್ಟಿಯೊಂದನ್ನು ಪ್ರೊ. ನಿಸಾರ್ ಅಹಮದ್‌ರವರು ಕೊಟ್ಟಿರುವರು. 'ಇದೊಂದು ಸ್ಥೂಲವಾದ ವಿಂಗಡಣೆ. ವಾಚಕರು ಸಮಗ್ರವಾಗಿ ವಿಷಯವನ್ನು ಗ್ರಹಿಸುವುದಕ್ಕೆ ಮತ್ತು ಹೆಚ್ಚು ತ್ರಾಸವಿಲ್ಲದೆ, ಸಾಕಲ್ಯದಿಂದ ಅರ್ಥೈಸಿಕೊಳ್ಳುವುದಕ್ಕೆ ಇದು ನೆರವಾಗಬಹುದೆಂದು ಭಾವಿಸಿದ್ದೇನೆ' ಎಂದು ಅವರು 'ಬರಹಗಾರನ ಬಿನ್ನಹ'ದಲ್ಲಿ ಹೇಳಿಕೊಂಡಿರುವರು. ಬರಹಗಾರನೊಬ್ಬ ತನ್ನ ಎರಡೂವರೆ—ಮೂರು ದಶಕಗಳ ಗದ್ಯ ಬರಹಗಳ ವೈಪುಲ್ಯ ಹಾಗೂ ವೈಶಾಲ್ಯಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ವಸ್ತುವೈವಿಧ್ಯ ಹಾಗೂ ವಿಷಯ ವೈವಿಧ್ಯಗಳ ಹಿನ್ನೆಲೆಯಲ್ಲಿ ತನ್ನ ಬರಹಗಳ ವಿಮರ್ಶಾತ್ಮಕ

ಹಾಗೂ ವೈಚಾರಿಕ ಗುಣವನ್ನು; ತನ್ನ ಮನೋಗತ, ಒಲವು ಓಲುವೆ ಅಭಿರುಚಿ, ನಂಬಿಕೆ ಶ್ರದ್ಧೆ, ಓದು ಚಿಂತನೆಗಳ ದಿಕ್ಕುದೆಸೆಯನ್ನು ತಾನೇ ಸ್ಪಷ್ಟಪಡಿಸಿರುವುದು ಈ ಗದ್ಯಬರಹಗಳ ಅಂತರಂಗವನ್ನು ಹೊಗಲು ಒಂದು ಪುಟ್ಟ ಪ್ರವೇಶಿಕೆಯನ್ನು ಕೊಟ್ಟಂತಾಗಿದೆ. ಜೊತೆಗೇ ಅವರ ಅನೇಕ ಲೇಖನಗಳಲ್ಲಿ, ಉದಾಹರಣೆಗೆ —ನನ್ನ ಗದ್ಯದ ಒಲವು ಓಲುವೆಗಳು, ಶೈಲಿ: ವ್ಯಕ್ತಿತ್ವದ ಕೀಲಿ, ಸಾಹಿತ್ಯ ಸೃಷ್ಟಿ ಪ್ರಕ್ರಿಯೆ, ವಿಜ್ಞಾನ ಮತ್ತು ಸಾಹಿತ್ಯ, ಬರೆಯುವುದರ ಬಗ್ಗೆ ಸ್ವವಿವೇಚನೆ, ಸಾಹಿತ್ಯ ಮತ್ತು ಲೋಕ ವಾಸ್ತವ, ಸಾಹಿತ್ಯದ ಎರಡು ಸಮಸ್ಯೆಗಳು, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮನುಷ್ಯನ ಒಳ ಹೊರ ಕಾಳಜಿಗಳು, ಸಾಹಿತ್ಯ ಸಮಾಲೋಚನೆ, ಕಾವ್ಯಕರ್ಮದ ಪಂಚ 'ಸ' ಕಾರಗಳು, ವಿಚಾರ ಮತ್ತು ಭಾವದ ಬಾಂಧವ್ಯ, ಬೈ ವಿಮರ್ಶೆ ಜೈ ವಿಮರ್ಶೆ, ಸಾಹಿತ್ಯದ ಸತ್ವವರ್ಧಕಗಳು, ಆಶಯ ಮತ್ತು ಅಭಿವ್ಯಕ್ತಿ, ಸಾಹಿತ್ಯದ ನೆಲೆ-ಬೆಲೆ—ಹೀಗೆ ಬೇರೆ ಬೇರೆ ಲೇಖನಗಳಲ್ಲಿ ಪ್ರೊ. ನಿಸಾರ್ ಅವರ ಸಾಹಿತ್ಯ ಸಂಬಂಧೀ ಚಿಂತನೆಗಳು ಅನಾವರಣಗೊಂಡಿವೆ. ಅವರ ಚಿಂತನೆ/ಆಲೋಚನೆಗಳು ಅವರ ಬರವಣಿಗೆಗೆ ಪ್ರವೇಶ ನೀಡುವ ತೆರೆದ ಬಾಗಿಲು ಕಿಟಕಿಗಳು. ಅವುಗಳ ಮೂಲಕ ಪ್ರೊ. ನಿಸಾರ್ ಅವರನ್ನು ಹೆಚ್ಚು ಗ್ರಹಿಸಲು ಸಾಧ್ಯವಾಗುತ್ತದೆ.

'ಸಮಗ್ರ ಗದ್ಯ ಬರಹಗಳು' ಕೃತಿಯ ಪ್ರಾರಂಭದಲ್ಲಿ ಪ್ರೊ. ನಿಸಾರ್‌ರವರು 'ಬರಹಗಾರನ ಬಿನ್ನಹ' ಎಂಬ ಶೀರ್ಷಿಕೆಯಲ್ಲಿ ತಮ್ಮ ಗದ್ಯ ಬರವಣಿಗೆಯ ಬಗೆಗೆ ಕೆಲವು ಮಹತ್ವದ ಮಾತುಗಳನ್ನು ಆಡಿರುವರು:

'ಬಹಳ ಸಮಯದಿಂದ ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿಯೋ ಅಮೂರ್ತವಾಗಿಯೋ ಮನೆ ಮಾಡಿದ್ದ ಅನೇಕಾನೇಕ ಭಾವನೆಗಳು, ವಿಚಾರಗಳು—ನನ್ನ ಕವಿತೆಗಳ ಇತಿಮಿತಿಯ ಚೌಕಟ್ಟಿಗೆ ಮೀರಿದಂಥವು—ಇಲ್ಲಿನ ಲೇಖನಗಳಲ್ಲಿ ಆಕಾರ ತಳೆದಿವೆ. ವಿಶ್ಲೇಷಕ ಹಾಗೂ ವಿವರಣಾತ್ಮಕ ಅಗತ್ಯಗಳಿಗೆ ತಕ್ಕಂತೆ ತಮ್ಮ ಬೆಳವಣಿಗೆಯನ್ನು ಕಂಡಿವೆ.

'ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದ ರೀತಿಯಲ್ಲಿ ಕೂಡಿದ ಮಟ್ಟಿಗೆ ಅನನ್ಯತೆಯಿರಬೇಕೆಂಬ ತುಡಿತ ನನ್ನ ಗದ್ಯ ಮತ್ತು ಕವನ ರಚನೆಗಳ ಹಿನ್ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ.

'ನನ್ನ ಸೃಜನ ಪ್ರಕ್ರಿಯೆಯ ನೇಪಥ್ಯದಲ್ಲಿ ಕ್ರಿಯಾಶೀಲವಾಗಿ ತೊಡಗಿರುವುದು ಅಂತರ್ಮುಖೀ ಸ್ವಭಾವ. ಎಂದೇ ನನ್ನ ಬರವಣಿಗೆ ವಿಚಾರಪರ ಮತ್ತು ವಿಮರ್ಶಾತ್ಮಕ ಆಗಿರುವ ಜೊತೆಗೇ ಭಾವ ತನ್ಮಯ ಗುಣವನ್ನು ಆರ್ಜಿಸಿಕೊಂಡಿದೆ. ಬೌದ್ಧಿಕ ಗ್ರಾಸದೊಡನೆ ಹೃದ್ಯತೆಯ ಅಂಶವೂ ಸಂಲಗ್ನಗೊಂಡಿದೆ. ಹಾಗೆಯೇ ನುಡಿಗಾರಿಕೆಯೂ ವಿಷಯಕ್ಕೆ ಅನುಗುಣವಾಗಿ ನಿರೂಪಣಾತ್ಮಕವೋ, ಸೂಚ್ಯವೋ, ಸಮೃದ್ಧವೋ, ಸರಳವೋ ಆಗಿರುವುದು ಸ್ವಾಭಾವಿಕವಾಗಿದೆ.

'ಇನ್ನೊಂದು ಮಾತು: ವಸ್ತುವಿಗೆ ಭಾಷೆ ಕೇವಲ ವಾಹಕವೆಂದೋ ಪ್ರಣಾಲಿ ಯೆಂದೋ ನಾನು ಭಾವಿಸಿರುವ ಸಂದರ್ಭಗಳು ಕಡಮೆ. ಆಯಾ ವಸ್ತು, ವಿಷಯ ತನ್ನ ಆಂತರಿಕ ಅಗತ್ಯಕ್ಕೆ ತಕ್ಕಂತೆ ತನ್ನದೇ ಭಾಷೆಯನ್ನು ಸೃಷ್ಟಿಸಿಕೊಳ್ಳುತ್ತದೆ. ಹೀಗಾಗಿ ಭಾಷೆ

ಅಂಗಿಯಲ್ಲ, ಚರ್ಮ: ತಂದು ಹೇರಿದ್ದಲ್ಲ, ಸ್ವಾಭಾವಿಕವಾಗಿ ವಸ್ತುವಿನ ಮೂರ್ತತ್ವ ದೊಂದಿಗೆ ಸಂಭವಿಸುವಂಥದ್ದು. ಅದನ್ನು ಬೇರ್ಪಡಿಸಿ, ಅದರ ಬದಲಿಗೆ ಬೇರೆ ಮಾತನ್ನು ಬಳಸಲು ಸಾಧ್ಯವಾಗದಂಥದ್ದು.

'ಇಲ್ಲಿನ ಬಹುತರ ಲೇಖನಗಳಿಗೆ ಬಾಹ್ಯವಾದ ನಿಮಿತ್ತವೊಂದು ಪ್ರೇರಕವಾಗಿ ದ್ದರೂ, ಒಂದೆರಡನ್ನು ಉಳಿದರೆ ಮಿಕ್ಕವು ಸಾಮಯಿಕತೆಯ ಮಿತಿಯನ್ನು ದಾಟಿ ಮಾನವ ಸಹಜವೂ ಶಾಶ್ವತವೂ ಆದ ಮೌಲ್ಯಗಳನ್ನು ಪ್ರತಿಪಾದಿಸುವಂಥವು. ಮೇಲ್ಮಟ್ಟದ ಬದುಕು, ಸಾಧನೆ, ಆಲೋಚನೆಗಳನ್ನೂ ಸಾರ್ವಕಾಲಿಕವಾದ ಆಶೋತ್ತರಗಳನ್ನೂ ನಿದರ್ಶನಾರ್ಥವಾಗಿ ಸಮರ್ಥಿಸುವಂಥವು.

'ಹೀಗಾಗಿ ನೀತಿ ಮೂಲವೂ, ಜೀವನ ಪರಿಷ್ಕಾರಕವೂ ಆದ ಒಂದು ಸದಾಶಯ ಇಲ್ಲಿನ ವಿಭಿನ್ನ ಬರಹಗಳ ಅಂತರ್ಯದಲ್ಲಿ ಒಳ ಸೆಲೆಯಾಗಿ ಪ್ರವಹಿಸುವುದನ್ನು ಶಿಷ್ಟ ವಾಚಕ ವರ್ಗ ಮನಗಾಣಬಹುದು.'

ಮೇಲಿನ ವಿಚಾರಣೆ ಇನ್ನಷ್ಟು ವಿವರಣೆ, ಸ್ಪಷ್ಟೀಕರಣ ಪಡೆಯುವುದನ್ನು 'ನನ್ನ ಗದ್ಯದ ಒಲವು ಓಲುವೆಗಳು' ಎಂಬ ಲೇಖನದಲ್ಲಿ ನಾವು ನೋಡಬಹುದು.

ಪ್ರೊ. ನಿಸಾರ್‌ರವರ ಗದ್ಯ ಬೌದ್ಧಿಕತೆ ಹಾಗೂ ಭಾವನಾತ್ಮಕತೆಗಳ ಸಮ್ಮಿಶ್ರ ಪಾಕ. ಬೌದ್ಧಿಕತೆಯು ವೈಚಾರಿಕ ನೆಲೆಯಲ್ಲಿ ಪ್ರಕಟಗೊಳ್ಳುತ್ತದೆ. ವೈಚಾರಿಕ ನೆಲೆಯಲ್ಲಿ ಪ್ರಧಾನ ವಾದುದು ಸಾರಾಸಾರ ವಿವೇಚನೆ. ಸಾಮಾನ್ಯನು ಚಿಂತಿಸುವುದಕ್ಕೂ ಓರ್ವ ವಿವೇಕಿ ಚಿಂತಿಸು ವುದಕ್ಕೂ ವ್ಯತ್ಯಾಸವಿರುತ್ತದೆ. ಹಾಗೆಂದಾಗ ಬುದ್ಧಿವಂತರಾದವರು ಮಾತ್ರ ವಿವೇಚಿಸಬಲ್ಲರು ಎಂದರ್ಥವಲ್ಲ. ಗಟ್ಟಿಯಾದ ವ್ಯಕ್ತಿಮೆಯ ಒಂದೊಂದು ಮನಸ್ಸೂ ಒಂದೊಂದು ಪ್ರಜ್ಞಾ ಪ್ರವಾಹವಾಗಿ ಹರಿಯಬಲ್ಲುದು. ತಮ್ಮ ವ್ಯಕ್ತಿತ್ವದ ಒಂದು ಭಾಗವಾಗಿ ವೈಜ್ಞಾನಿಕ/ ತಾರ್ಕಿಕ/ವಿಶ್ಲೇಷಣಾತ್ಮಕ ಮನೋಭಾವವನ್ನು, ಅಂದರೆ ಸತ್ಯದ ಶೋಧದ ನೆಲೆಯಲ್ಲಿ ಪ್ರಶ್ನಿಸುವ ಮನೋಭಾವವನ್ನು ವಿದ್ಯಾವಂತರಷ್ಟೇ ಅಲ್ಲ, ಅವಿದ್ಯಾವಂತರೂ ಬೆಳೆಸಿ ಕೊಂಡಿರುವರು. ವೈಜ್ಞಾನಿಕ ಮನೋಭಾವ ಅತಿಯಾದ ವೈಚಾರಿಕತೆಯಿಂದ ನರಳಿದಾಗ ಅದರ ಪರಿಣಾಮ negative approach ಕಡೆ ಹೊರಳಬಹುದು; positive approach ರಚನಾತ್ಮಕ ತೀರ್ಮಾನಗಳನ್ನು ಮುಂದಿಡಬಹುದು. ಅತಿಯಾದ ಬೌದ್ಧಿಕತೆ ಭಾವನಾತ್ಮಕತೆ ಯನ್ನು ನಾಶ ಮಾಡಿಬಿಡುತ್ತದೆ; ಅವು ಪರಸ್ಪರ ವಿರೋಧಿ ಭಾವಗಳು ಎಂದು ಕೆಲವರು ವಾದಿಸುವರು. ಇದು ಸತ್ಯದ ಒಂದು ಮುಖವಷ್ಟೆ, ಪೂರ್ಣಸತ್ಯವಲ್ಲ. ಭಾವನೆಗಳೇ ಇಲ್ಲದ ಬೌದ್ಧಿಕತೆಯಲ್ಲಿ ತರ್ಕ ಪ್ರಧಾನವಾಗಿಬಿಟ್ಟಾಗ ನಮ್ಮ ವಿಚಾರ ಸರಣಿಯ ಸುಗಮ ಸಂಚಾರ ಒಂದು ಖಚಿತ ರೂಪ ಪಡೆದುಕೊಳ್ಳುವುದಿಲ್ಲ; ಮೇಲಾಗಿ, ಅದು ಸಂವಹನ ಸಾಧ್ಯತೆಯಲ್ಲಿ ಹೆಚ್ಚಿನ ಯಶಸ್ಸನ್ನು ಸಾಧಿಸುವುದಿಲ್ಲ. ಪ್ರೊ. ನಿಸಾರ್‌ರವರು ತಮ್ಮ ಗದ್ಯಬರವಣಿಗೆಯಲ್ಲಿನ ಕಾವ್ಯಾತ್ಮಕ ಗುಣ ಹಾಗೂ ಭಾವ ತನ್ಮಯತೆಗೆ ಕಾರಣವನ್ನು ಒಂದೆಡೆ ಹೀಗೆ ಗುರುತಿಸಿರು ವರು: '...ಲೇಖನಗಳನ್ನು ಬರೆಯುತ್ತಿದ್ದ ವೇಳೆ ನನ್ನ ಚಿತ್ತ ಆಗಿಂದಾಗ್ಗೆ ಕಾವ್ಯಾತ್ಮಕ ತೀವ್ರತೆಯಲ್ಲಿ ಬಿಗಿಗೊಳ್ಳುತ್ತಿದ್ದುದನ್ನು, ನನ್ನ ಮೈ ಮನವಿಡೀ ಭಾವ ತನ್ಮಯವಾಗಿ

ಹೆದೆಗೊಳ್ಳುತ್ತಿದ್ದುದನ್ನು ಇಲ್ಲಿ ನೆನೆಯಬೇಕು. ವಿಚಾರಗಳನ್ನು ತರ್ಕ ಸಂಗತವಾಗಿ ಒಪ್ಪ ಓರಣಗಳಿಂದ ಸುವ್ಯವಸ್ಥಿತಗೊಳಿಸಿ ಬೆಳೆಸುವ ಸಂದರ್ಭಗಳ ಸಲೀಲ ಗತಿಯ ಆಲೋಚನಾ ಪ್ರವಾಹ, ಭಾವ ನಿರ್ಭರತೆಯ ಮಡುಗಳನ್ನು ವಿರಚಿಸಿಕೊಂಡು ಸುಳಿ ಸುತ್ತುತ್ತಿದ್ದ ಪರಿಯನ್ನು ಸ್ಮರಿಸಬೇಕು. ವಿಚಾರ ಸರಣಿಯ ಸುಗಮ ಸಂಚಾರ ಪುನಃಸ್ಥಾಪಿತ ವಾಗಬೇಕಾದರೆ ಅಂತರಂಗ ತೀವ್ರತರ ಘನಾವಸ್ಥೆಯಿಂದ ದ್ರಾವಣ ಸ್ಥಿತಿಗೆ, ಭಾವ ಭಾರದ ನೆಲಸಿನಿಂದ ವಿಚಾರದ ಮುಕ್ತ ಹಸರದ ಕಡೆಗೆ ಹೊರಳಿಕೊಳ್ಳಬೇಕಿತ್ತು. ಸೃಜನಶೀಲ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಎಲ್ಲರಿಗೂ ಅನುಭವವೇದ್ಯವಾಗುವ ಸಂಗತಿ ಇದು; ಹಾಗೆಯೇ ಆ ಪ್ರಕ್ರಿಯೆ ಪ್ರಯಾಸದಾಯಕ ಕೂಡ.

'ಹೀಗಿದ್ದರೂ ಬರವಣಿಗೆಗೆ ಅತಿಶಯ ಮಾಂತ್ರಿಕ ಸಂಸ್ಪರ್ಶ ಪ್ರಾಪ್ತವಾಗುವುದು ವಿಚಾರಮಗ್ನ ಮನಸ್ಸಿನ ಇಂತಹ ಹಂಗಾಮಿ ಭಾವಾವಸ್ಥೆಯ ಸಂಭವದ ಮೂಲಕವೇ. ಚಿಂತನಗಳ ಬೆಳವಣಿಗೆಯಲ್ಲಿನ ಏಕತಾನತೆಯನ್ನು ಮುರಿಯುವ, ಅವುಗಳ ಬುದ್ಧಿಶ್ರಮದ ಘಾಟನ್ನು ಕುಗ್ಗಿಸಿ ಸಹ್ಯಗೊಳಿಸುವ ಗುಣ ಲಭಿಸುವುದು ಆಗಾಗ ಅಂತರಂಗ ತಾಳುವ ಈ ಬಗೆಯ ಬಿಗಿಯಾದ ಭಾವಭಂಗಿಯ ದ್ವಾರವೇ...'

('ನನ್ನ ಗದ್ಯದ ಒಲವು ಓಲುವೆಗಳು'—ಸಮಗ್ರ ಗದ್ಯ ಬರಹಗಳು, ಪು. 534)

ಪ್ರೊ. ನಿಸಾರ್‌ರವರು ತಮ್ಮನ್ನು ತೆರೆದುಕೊಂಡಿರುವುದು 'ಕವಿಯಾಗಿ ನನ್ನ ಅನುಭವ', 'ನಾನು ಮತ್ತು ನನ್ನ ಕಾವ್ಯ' ಮೊದಲಾದ ಲೇಖನಗಳಲ್ಲಿ. ಎರಡು ಸಂಸ್ಕೃತಿಗಳ ನಡುವೆ ಬದುಕು ತಳ್ಳುತ್ತಿರುವ ತಮ್ಮ ಇಬ್ಬಂದಿತನದ ಬಗೆಗೆ ಪ್ರೊ. ನಿಸಾರ್‌ರವರೇ ಹೀಗೆ ಹೇಳಿಕೊಂಡಿರುವರು (ಹಿಂದೂ-ಮುಸ್ಲಿಂ ಸಂಸ್ಕೃತಿ ದ್ವಂದ್ವ): 'ಎರಡೂ ನನ್ನದೆನ್ನುವ ಸುಂದರ ಭ್ರಮೆ ಒಂದು ಕಡೆ; ಎರಡಕ್ಕೂ ಹೊರಗಾದ ಅನಾಥ ಅನಿಸಿಕೆ ಇನ್ನೊಂದು ಕಡೆ. ಅತ್ತ ಹುಟ್ಟಿನಿಂದ ಹೊತ್ತು ತಂದ ಧರ್ಮ ಮತ್ತು ಜೀವನ ವಿಧಾನಗಳಿಗೂ ಪೂರ್ತಾ ತೆರೆದುಕೊಳ್ಳದೆ, ಇತ್ತ ನನ್ನ ಪರಿಸರದ ಸಂಸ್ಕೃತಿ ಹಾಗೂ ಜೀವನ ವಿಧಾನಗಳಿಗೂ ಹಾಯಿಸಿಕೊಳ್ಳದೆ, ಒಮ್ಮೆ 'ಸ್ವಧರ್ಮೇ ನಿಧನಂ ಶ್ರೇಯಃ' ಎಂದು, ಮತ್ತೊಮ್ಮೆ 'ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲ'ವೆಂದು ಡೋಲಾಯಮಾನವಾಗಿ ಒದ್ದಾಡುವ ತ್ರಿಶಂಕು ಸ್ಥಿತಿ.'

'ಸಂಸ್ಕೃತಿ ವಿಭಿನ್ನತೆಯನ್ನು ನಾನೊಮ್ಮೆ ಹೇಗೋ ಸಮಜಾಯಿಷಿ ಮಾಡಿ ಕೈ ಬೀಸಿ ಕೊಂಡು ನಡೆಯಬಹುದೆಂಬ ಹೊಂಗನಸು ಕಟ್ಟಿದೆ. ಆದರೆ ಅದು ಎಷ್ಟೇ ಅಪೇಕ್ಷಣೀಯ ವೆನ್ನಿಸಿದರೂ ಅಪ್ರಾಪ್ಯವೆಂದು, ಆದರ್ಶವಲ್ಲದೆ ವಾಸ್ತವ ಸ್ಥಿತಿಯಾಗದೆಂದು ದೃಢವಾಯಿತು. ನನ್ನ ಅಸಹಾಯಕತೆಯನ್ನು, ಗುಂಪಿನ ಗುಲ್ಲಿನಲ್ಲಿ ನನ್ನ ಧ್ವನಿಯ ನರಪೇತಲತೆಯನ್ನು ಮನದಟ್ಟಾಗಿಸಿತು. ಆ ತೀವ್ರ ಅಸಹಾಯಕತೆ 'ಇಬ್ಬಂದಿ' ಪದ್ಯದಲ್ಲಿ ಹರಳುಗಟ್ಟಿದೆ.'

ಪ್ರೊ. ನಿಸಾರರ ಈ ಹೇಳಿಕೆ ಕನ್ನಡ ಕಾವ್ಯ ಸಂದರ್ಭದಲ್ಲಿ ಬಹಳ ಗಮನಾರ್ಹ ವಾದುದು. ತಮ್ಮ ಹುಟ್ಟಿನೊಂದಿಗೆ ಬಂದ ಮುಸ್ಲಿಂ ಸಂವೇದನೆಯನ್ನೂ ಉಳಿಸಿಕೊಂಡು, ತಾವು ಉಸಿರಾಡುತ್ತಿರುವ ಸಾಮಾಜಿಕ ಬದುಕಿನ ಅವಿಭಾಜ್ಯ ಭಾಗವಾದ ಹಿಂದೂ

ಸಂಸ್ಕೃತಿಯೊಂದಿಗೂ ರಾಜಿ ಮಾಡಿಕೊಂಡು ವಿಚಾರ ಮಾಡಬೇಕಾದ, ಬರೆಯಬೇಕಾದ ಅನಿವಾರ್ಯತೆಯನ್ನು ಪ್ರೊ. ನಿಸಾರ್‌ರವರು ಚೆನ್ನಾಗಿ ಹೇಳಿರುವರು. ಎರಡು ವಿಭಿನ್ನ ಸಂಸ್ಕೃತಿಗಳನ್ನು ಅರಗಿಸಿಕೊಂಡು, ಸಂಸ್ಕೃತಿ ಸಂಘರ್ಷಗಳಿಂದ ಉದ್ಭವಿಸುವ ಇಕ್ಕಟ್ಟು ಬಿಕ್ಕಟ್ಟುಗಳನ್ನು ನಿರಾಯಾಸವಾಗಿ ಜೀರ್ಣಿಸಿಕೊಂಡು ಸಾಮರಸ್ಯದ ಬದುಕು ನಡೆಸಿದ ವಿಶಿಷ್ಟ, ಅಷ್ಟೇ ಅಪರೂಪದ ವ್ಯಕ್ತಿತ್ವ ಪ್ರೊ. ನಿಸಾರರದು. ಸಾಂಸ್ಕೃತಿಕ ಲೋಕದ ಈ ಇಕ್ಕಟ್ಟು-ಬಿಕ್ಕಟ್ಟುಗಳು ಪ್ರೊ. ನಿಸಾರರನ್ನು ಕಾಡಿವೆ; ಅಂತರ್ಮುಖಿಯಾಗಿ ಯೋಚಿಸುವಂತೆ ಮಾಡಿವೆ. ಈ ದ್ವಂದ್ವ ಸಂಸ್ಕೃತಿಯ ನಡುವೆ ಸುಮಧುರ ಸಂಬಂಧವನ್ನು ಕಲ್ಪಿಸಿದ ಪ್ರೊ. ನಿಸಾರ್‌ರವರು ಕನ್ನಡ ಕಾವ್ಯಲೋಕದಲ್ಲಿ ಸಾಂಸ್ಕೃತಿಕ ಸಾಮರಸ್ಯದ ಹೊಸ ಲೋಕವನ್ನೇ ಕಾಣಿಸಲು ಹವಣಿಸಿದ್ದನ್ನು ಸಹೃದಯಿಗಳು ಗುರುತಿಸಬಹುದಾಗಿದೆ.

ಪ್ರೊ. ನಿಸಾರರ ಬದುಕಿನಲ್ಲಿ ಇನ್ನೊಂದು ಮಹತ್ತರ ಪಾತ್ರ ವಹಿಸಿದ್ದು ಮಲೆನಾಡಿನ ಚೆಲುವು. ಅವರೇ ಹೇಳಿಕೊಂಡಿರುವಂತೆ ಬೆಂಗಳೂರಿನಿಂದ ಶಿವಮೊಗ್ಗೆಗೆ ವರ್ಗವಾದಾಗ ಅವರ ವ್ಯಕ್ತಿತ್ವಕ್ಕೆ ಮಜಬೂತಾದ ಊರುಗೋಲು ಸಿಕ್ಕಂತಾಯಿತು. 'ಬದುಕೇ ಭಾವಗೀತವಾದ ಮೊದಲ ಕೆಲವು ವರ್ಷಗಳು ನನ್ನ ಸೃಜನಾತ್ಮಕತೆಯ ಮಧುಗಾಲ. ಸ್ಫೂರ್ತ ಕ್ಷಣಗಳ, ಅಪೂರ್ವಾನುಭವಗಳ ರಸೋದ್ದೀಪನದ ಕಾಲ. ಪುಸ್ತಕಗಳ ಇಲ್ಲವೇ, ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳ ಮುಖೇನ ಅತಿಥಿಯಂತಿದ್ದ ನಿಸರ್ಗ, ಶಿವಮೊಗ್ಗೆಯ ತನ್ನೆಲ್ಲ ಸಿರಿವಂತ ವೈವಿಧ್ಯಗಳೊಂದಿಗೆ ಕಾಣಿಸಿಕೊಂಡು ನನ್ನ ಸಂಬಂಧಿಯಾಯಿತು. ಮನುಷ್ಯ ಪ್ರಕೃತಿಗೂ ಹೊರಗಿನದಕ್ಕೂ ಇರುವ ಆದಿಮ ಆಪ್ತತೆ ನನಗೆ ಮನವರಿಕೆಯಾದದ್ದು ಆಗಲೇ.'

('ನಾನು ಮತ್ತು ನನ್ನ ಕಾವ್ಯ'—ಸಮಗ್ರ ಗದ್ಯ ಬರಹಗಳು, ಪು. ೧೮)

ವೈಚಾರಿಕತೆ ಪ್ರೊ. ನಿಸಾರ್‌ರವರಿಗೆ ಬಹಳ ಪ್ರಿಯವಾದ ಚಿಂತನೆಯ ವಸ್ತು. ಹೀಗಾಗಿ ಅವರು, ಇಬ್ಬರು ಜ್ಯೇಷ್ಠ ಕವಿಗಳ ಕಾವ್ಯಗಳಲ್ಲಿ—ಕುವೆಂಪು, ಬೇಂದ್ರೆ—ವೈಚಾರಿಕತೆ ಹೇಗೆ ಪ್ರಕಟಗೊಂಡಿದೆ ಎಂಬ ಅವರ ವಿವೇಚನೆ ಇಬ್ಬರು ಕವಿಗಳನ್ನು ವಿಭಿನ್ನ ನೆಲೆಗಳಲ್ಲಿ ಗುರುತಿಸುತ್ತದೆ. ಪಂಜೆ ಮಂಗೇಶರಾಯರ ಕವಿತೆಗಳ ಹಾಗೂ ಜಿ. ಪಿ. ರಾಜರತ್ನಂರವರ ಪದ್ಯಗಳ ಬಗೆಗಿನ ಸೂಕ್ಷ್ಮವಾದ ಅಧ್ಯಯನದಲ್ಲಿ ಅವರ ವಿಶಿಷ್ಟ ಸೃಜನ ಪ್ರತಿಭೆಯ ಸುಕೃದ್ದರ್ಶನವಾಗುತ್ತದೆ. ಬಿ.ಜಿ.ಎಲ್. ಸ್ವಾಮಿಯವರ 'ಹಸಿರು ಹೊನ್ನು,' ಕೆ.ಎಸ್. ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ಕವನ ಸಂಕಲನ, ಬೇಂದ್ರೆಯವರ 'ನಾದಲೀಲೆ' ಕವನ ಸಂಕಲನದಲ್ಲಿ ಬರುವ 'ಮನದನ್ನೆ' ಎನ್ನುವ ಸ್ವತಂತ್ರ ಕವನ, ಕಡೆಂಗೋಡ್ಲು ಶಂಕರಭಟ್ಟರ 'ನಲ್ಮೆ' ಸಂಗ್ರಹದಲ್ಲಿನ 'ಮಾದ್ರಿಯ ಚಿತೆ' ಎಂಬ ಖಂಡ ಕಾವ್ಯ—ಇವುಗಳ ವಿಶ್ಲೇಷಣೆ, ಪರಿಚಯಾತ್ಮಕ ನೆಲೆಯಲ್ಲಿದ್ದರೂ ಇವುಗಳ ಮಹತ್ವವನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನವಾಗಿ ತೋರುತ್ತದೆ.

ಪ್ರೊ. ನಿಸಾರ್‌ರವರು ಚಿತ್ರಿಸಿರುವ ವ್ಯಕ್ತಿಚಿತ್ರಗಳು ತೀರಾ ಆತ್ಮೀಯವಾಗಿವೆ. ವಿ.ಸೀ., ಎಂ.ಆರ್.ಶ್ರೀ., ಗೋಪಾಲಕೃಷ್ಣ ಅಡಿಗ, ಲೋಹಿಯಾ, ಎ.ಆರ್.ಕೃ., ಕುವೆಂಪು,

ಮಾಸ್ತಿ, ಗೋಕಾಕ್, ಸರ್ ಮಿರ್ಜಾ, ಪದ್ಮಚರಣ್, ಅನಂತಸ್ವಾಮಿ, ಮದರ್ ತೆರೆಸ—ಹೀಗೆ ವಿಶಿಷ್ಟ ವ್ಯಕ್ತಿತ್ವಗಳು ಸಾಲುಗಟ್ಟಿ ನಿಂತಿವೆ. ಒಂದೊಂದರಲ್ಲೂ ವಿಭಿನ್ನ ಸ್ವಭಾವಗಳ ವ್ಯಕ್ತಿಮತ್ತೆಯನ್ನು ಚಿತ್ರಿಸಿರುವ ಸೊಗಸು ಪ್ರಶಂಸನೀಯವಾದುದು. ಉದಾಹರಣೆಗೆ, ವಿ.ಸೀ. ಅವರನ್ನು ಕುರಿತ ಲೇಖನವನ್ನು ನೋಡಬಹುದು. ವಿ.ಸೀ. ಅವರ ಮನೆಯಲ್ಲಿ ನವ್ಯ ಕಾವ್ಯದ ಬಗ್ಗೆ ಚರ್ಚೆ ನಡೆದಿದ್ದಾಗ ವಿ.ಸೀ. ಮಾತುಗಳ ಮಧ್ಯೆ ಫೇಬರ್ ಪ್ರಕಾಶನದ ಟಿ. ಎಸ್. ಎಲಿಯಟ್‌ನ 'ವೇಸ್ಟ್ ಲ್ಯಾಂಡ್', 'ಆ್ಯಶ್ ವೆಡ್ನಸ್‌ಡೇ' ಮುಂತಾದ ಪದ್ಯಗಳನ್ನು ಓದಿ ವಿವರಿಸಿದರು. ಆ ಪುಸ್ತಕದ ಅಂಚಿನಲ್ಲಿ ಅವರು ತುಂಬಾ ಹಿಂದೆ ಮಾಡಿಕೊಂಡಿದ್ದ ಟಿಪ್ಪಣಿಗಳನ್ನು ತೋರಿಸುತ್ತಾ 'ನಮ್ಮ ಇವೊತ್ತಿನ ಕನ್ನಡ ಕವಿಗಳು ಎಲಿಯಟ್‌ನನ್ನು ಈಗ ಓದಿದ್ದಾರೆ. ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಏನೇನೋ ಹೇಳ್ತಾರೆ, ಬರೀತಾರೆ. ನೋಡಿ, ನಾನು ೧೯೩೬ರಲ್ಲೇ ಅವನ ಕವನಗಳನ್ನು ಓದಿಕೊಂಡಿದ್ದೆ. ಇಂಗ್ಲಿಷ್ ನವ್ಯ ವಿಮರ್ಶಕರು ಆತನ ಬಗ್ಗೆ ಹೇಳಿದ್ದನ್ನು ತಿಳಿದುಕೊಂಡು, ಅವನ ಕವನಗಳನ್ನು ಅರ್ಥೈಸಲು ಪ್ರಯತ್ನಿಸಿದ್ದೆ. ಈಗಿನವರು ಅವನ ಹೆಸರನ್ನು ಪ್ರತಿಷ್ಠೆಗಾಗಿ ಬಳಸುತ್ತಾರೆಯೇ ವಿನಾ ಅವನ ಕೃತಿಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲ' ಎಂದು ನುಡಿದು, ತಮ್ಮ ಅಸಮಾಧಾನವನ್ನು ಕೇಳಿಯೂ ಕೇಳಿಸದ ತಗ್ಗಿದ ದನಿಯಲ್ಲಿ 'ಈದೋವಲ್ಲ, ನೆಕ್ದೋವಲ್ಲ' ಎಂದದ್ದು ಈಗಲೂ ಚೆನ್ನಾಗಿ ನನ್ನ ಸ್ಮೃತಿಯಲ್ಲಿ ನಾಟಿದೆ' ಎಂಬ ಪ್ರೊ. ನಿಸಾರ್‌ರವರ ನೆನಪಿನ ದಾಖಲೆ ಮಹತ್ವದ್ದಾಗುತ್ತದೆ. ಆಕಾಶವಾಣಿಯವರು ಇಬ್ಸನ್ ಬಗ್ಗೆ ಹದಿನೈದು ನಿಮಿಷಗಳ ಉಪನ್ಯಾಸ ನೀಡಲು ಆಹ್ವಾನಿಸಿದಾಗ ವಿ.ಸೀ. ಅವರು ಇಬ್ಸನ್ ಕುರಿತು ಒಂದು ಪುಸ್ತಕ ಬರೆಯುವಷ್ಟು ಕೃತಿಗಳನ್ನು ಓದಿ.ಮಾಹಿತಿ ಕಲೆ ಹಾಕಿದ್ದರ ಸ್ವಾರಸ್ಯಕರ ಘಟನೆಯನ್ನು ಪ್ರೊ. ನಿಸಾರ್‌ರವರು ಉಲ್ಲೇಖಿಸಿರುವರು.

('ಸಮಗ್ರ ಗದ್ಯ ಬರಹಗಳು', ಪು. ೧೫೬-೧೫೭).

'ಪಾಬ್ಲೊ ನೆರುಡ: ವ್ಯಕ್ತಿ ಮತ್ತು ಕಾವ್ಯ' ಅಭ್ಯಾಸಪೂರ್ಣ ಲೇಖನ. ನೆರುಡ, ಕಾವ್ಯವನ್ನು ರಚಿಸಲು ಒದಗಿ ಬಂದ ಹಿನ್ನೆಲೆ, ಅವನ ಬದುಕು ಹಾಗೂ ಅವನ ಕಾವ್ಯದ ಸತ್ವವನ್ನು ವಿಮರ್ಶಾತ್ಮಕವಾಗಿ ವಿವೇಚಿಸಿರುವುದು ಬಹುಶಃ ಕನ್ನಡಕ್ಕೆ ಇದೇ ಮೊದಲೆಂದು ತೋರುತ್ತದೆ. 'ಬರೀ ಮರ್ಯಾದಸ್ಥರೆ' ಎಂಬ ಶೀರ್ಷಿಕೆಯಲ್ಲಿ ಪ್ರೊ. ನಿಸಾರ್‌ರವರು ನೆರುಡನ ಕವಿತೆಗಳನ್ನು ೧೯೮೨ರಲ್ಲಿಯೇ ಕನ್ನಡಕ್ಕೆ ಅನುವಾದಿಸಿದ್ದರು. ಆ ಕೃತಿಗೆ ಬರೆದ ದೀರ್ಘವಾದ ಪ್ರಸ್ತಾವನೆ ಬೋಧಪ್ರದ ಮತ್ತುಆಸಕ್ತಿದಾಯಕವಾಗಿದೆ.

'ಮನದೊಂದಿಗೆ ಮಾತುಕತೆ' ಕೃತಿಯಲ್ಲಿ ಅನೇಕ ಪ್ರಬಂಧಗಳು ಗಂಭೀರ ಚಿಂತನೆಗೆ ಅರ್ಹವಾಗಿವೆ. ಸಾರೊಳಗಿನ ಸೌಟು, ನೀನಾರಿಗಾದೆಯೊ ಎಲೆ ಮಾನವ?, ಪನ್ನೀರಿನ ಕೊಳ ಮತ್ತು ನಾಯಿ, ದೇವರು ದೀಪ ಸಿಗರೇಟ್ ಸಿನಿಮ..., ಮೀನು ಕೊಳೆಯುವುದು ಇತ್ಯಾದಿ, ಫಿರಂಗಿ ಬಾಯಿಯ ಗುಬ್ಬಚ್ಚಿಗೂಡು, ನಾಯಿಯನ್ನು ಹಿಂದೆ ಹಾಕುವ ಬಾಲ, ನಿಸರ್ಗದ ನೋಟ ಕಲಿಸುವ ಪಾಠ, ಸಾತ್ವಿಕ ದೈವೀ ಸ್ವರೂಪಿ ಸರಸ್ವತಿ, ಮಠಾಧೀಶರ ಮನೋಗತಗಳಿಗೆ ಸ್ವಾನುಭವದ ಸಿಂಧುತ್ವ, ವಿಜ್ಞಾನ ವಿಚಾರ ವಿವೇಚನೆ—ಹೀಗೆ ಉತ್ಕೃಷ್ಟ ಪ್ರಬಂಧಗಳು

ಇಲ್ಲಿನ ವಿಶೇಷ. ಈ ಪ್ರಬಂಧಗಳಲ್ಲಿನ ಗಂಭೀರ ಚಿಂತನೆ, ವಿಚಾರ ಮಂಡನೆಯಲ್ಲಿನ ಒಂದು ಬಗೆಯ ಶಿಸ್ತು, ವೈಚಾರಿಕತೆಯನ್ನು ಉದ್ದೀಪಿಸುವಲ್ಲಿನ ವೈಗುಣ್ಯಗಳು ಸಹಜವಾಗಿ ಕೃತಿಯ ಮೌಲಿಕತೆಯನ್ನು ಹೆಚ್ಚಿಸುತ್ತವೆ.

ಈ ಸಂಕಲನದಲ್ಲಿ ಪ್ರಬಂಧಗಳಷ್ಟೇ ಅಲ್ಲ, ವ್ಯಕ್ತಿಚಿತ್ರಗಳಿವೆ. ಮಾಸ್ತಿಯವರ 'ಮಾತುಗಾರ ರಾಮಣ್ಣ' ಕೃತಿ ಪರಿಚಯವಿದೆ. 'ನೆಹರು ಅಲ್ಲದಿದ್ದರೆ ಯಾರು ಪ್ರಸ್ತುತ?' ಎಂಬ ಚಿಂತನೆಗೆ ಮೀಟುಗೋಲು ಹಾಕುವ ಪ್ರಬಂಧವಿದೆ. ವಿಶ್ವಮಾನ್ಯಳಾದ, ಸಮಾಜ ಸೇವೆಯೇ ತನ್ನ ಜೀವನದುಸಿರು ಎಂಬ ಧ್ಯೇಯವಾಕ್ಯವನ್ನು ನೆಮ್ಮಿ ನಡೆದ ಮದರ್ ತೆರೆಸರವರ ಭವ್ಯ ವ್ಯಕ್ತಿಚಿತ್ರವಿದೆ. ಭಗವಾನ್ ಶಾಮದಾಸ್ ಗಿದ್ವಾನಿಯವರ ಐತಿಹಾಸಿಕ ಕಾದಂಬರಿಯ (ಕನ್ನಡಾನುವಾದ ಎಸ್. ಬಿ. ರಂಗನಾಥ್) ವಿವೇಚನಾಪೂರ್ಣ ವಿಮರ್ಶೆಯಿದೆ. 'ಸರ್ವಂ ಮಾಲಿನ್ಯಮಯಂ ಜಗತ್' ಎಂಬ ಲೇಖನದಲ್ಲಿ ನಮ್ಮ ಪರಿಸರದ ಬಗೆಗಿನ ಗಂಭೀರ ಚಿಂತನೆಯಿದೆ; ಪರಿಸರ ಸಂರಕ್ಷಣೆಯ ಮಹತ್ವದ ಬಗೆಗೆ ತಿಳಿವಳಿಕೆಯಿದೆ.

ಪ್ರೊ. ನಿಸಾರರ ಪ್ರಬಂಧಗಳಲ್ಲಿ ವಿಚಾರದ ಅಲೆಯಿದೆ. ಹಾಗೆಯೇ ವಿಚಾರವೊಂದರ ಪ್ರತಿಪಾದನೆಗೆ ಕೊಡುವ ದೃಷ್ಟಾಂತಗಳು ವ್ಯಂಗ್ಯದ, ಮೂದಲಿಕೆಯ ಧಾಟಿಯಲ್ಲಿರುತ್ತವೆ. ಒಂದು ಕಡೆ ಕಿತ್ತು ತಿನ್ನುವ ಬಡತನ, ಮತ್ತೊಂದು ಕಡೆ ಇದಕ್ಕೆ ತದ್ವಿರುದ್ಧವಾದ ಐಷಾರಾಮಿ ಜೀವನದ ಪರಿಣಾಮಕಾರಿ ಚಿತ್ರವನ್ನು ಪ್ರೊ. ನಿಸಾರರು ಕೊಟ್ಟಿರುವರು (ನೋಡಿ 'ಸಮಗ್ರ ಗದ್ಯ ಬರಹಗಳು', ಪು. ೯೩೦-೯೩೩). ಐಷಾರಾಮಿ ಜೀವನ ವಿಧಾನಕ್ಕೆ ತಮಿಳುನಾಡಿನ ಮುಖ್ಯಮಂತ್ರಿ ಜಯ ಲಲಿತಾಳ ಸಾಕು ಮಗನ ವಿವಾಹದ ಅದ್ದೂರಿತನದ ಚಿತ್ರ ಹೀಗೆ ಮೂಡಿಬಂದಿದೆ: '...ಒಂದು ತಾಳಿ ಬಿಗಿಯಲು ತಗುಲಿದ ಒಟ್ಟು ಖರ್ಚು ಕೇವಲ ೧೧೭ ಕೋಟಿ. ಒಂದು ಸಾವಿರ ಕರ್ಮಿಗಳು ಹಗಲಿರುಳು ಬೆವರು ಸುರಿಸಿ ಕಟ್ಟಿದ ಐವತ್ತು ಎಕರೆ ವಿಸ್ತಾರದ ಚಪ್ಪರ. ನಾಲ್ಕು ಐನಾತಿ ಕುದುರೆಗಳು ಎಳೆಯುವ ಶ್ರೀಗಂಧದ ಭಾರಿ ರಥದಲ್ಲಿ ವರನ ಮೆರವಣಿಗೆ.' ಈ ಇಂದ್ರನ ವೈಭವವನ್ನೂ ಮೀರುವ ವರ್ಣನೆ ಇನ್ನೂ ಇದೆ—ನಿಸಾರ್‌ರವರ ಬರವಣಿಗೆಯಲ್ಲಿ!

ಪ್ರೊ. ನಿಸಾರ್‌ರವರ ಗದ್ಯದ ಶೈಲಿಯ ಬಗೆಗೆ ಒಂದು ಮಾತು ಪ್ರಸ್ತಾಪಿಸಲೇಬೇಕಿದೆ. ಏಕೆಂದರೆ, ಅವರು ನೇರವಾಗಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಯಲ್ಲ, ಭೂವಿಜ್ಞಾನದ ಪ್ರಾಧ್ಯಾಪಕರು. ಪ್ರೊ. ನಿಸಾರ್ ಎದುರಿಸಿದ ಸಾಂಸ್ಕೃತಿಕ ಸಂಘರ್ಷದಲ್ಲಿ ಭಾಷೆಯದೂ ಒಂದು ಮಹತ್ವದ ಪಾತ್ರವಿದೆ. ಮುಸ್ಲಿಂ ಸಂಸ್ಕೃತಿಯ ಪರಿಸರದಲ್ಲಿ ಬೆಳೆದ ಪ್ರೊ. ನಿಸಾರ್‌ರವರು ಕನ್ನಡವನ್ನು ಬಲವಂತವಾಗಿ ರೂಢಿಸಿಕೊಂಡವರು. ಎಷ್ಟರಮಟ್ಟಿಗೆ ಎಂದರೆ, ಅವರು ತಮ್ಮ ಕನ್ನಡದ ಗದ್ಯ ಬರವಣಿಗೆಯಲ್ಲಿ ಅನೇಕ ಹೊಸ ನುಡಿಗಟ್ಟುಗಳನ್ನು ಟಂಕಿಸಿದರು. ಉದಾಹರಣೆಗೆ ಗಾಳಿ ಮಾತು (=ಆಕಾಶವಾಣಿ). ಒಗಾಯಿಸು, ಬೆರ್ಮ್ಯ, ನೆಗಸುಕ್ಕಿ ನುಗ್ಗು, ಒಲವು ಓಲುವೆ, ಗಟಾರಿಸು, ಸಂಸ್ಕೃತಿಯ ಸೌದಾಗರರು, ಅಲಾಯಿದಗೊಳಿಸು, ಝುಡತಿ ಮಾಡು, ತಲಾಷು ಮಾಡು, ಮಿದುಳನ್ನು ಮಾರ್ಜನಿಸು, ಬಲೋದ್ಭಂದಿಯಿಂದ ಕರೆದೊಯ್ಯು, ನಿಸ್ಸಭ್ಯ ನಗ್ನತೆ, ಆವರಣದ ವಿಕಾರಗಳನ್ನು

ಬಯಾನಿಸು, ವಿಕ್ಷಿಪ್ತ ರಾಗ ಭಾವಗಳ ಕೊಳೆಗೇರಿ, ಜಿನಸನ್ನೊದಗಿಸು, ಪೈಸಾಕಾಮಿ ಐಷಾರಾಮಿ—ಹೀಗೆ, ಅವರ ಟಂಕಸಾಲೆಯಲ್ಲಿ ರೂಪುಗೊಂಡ ಶಬ್ದಗಳ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಪ್ರೊ. ನಿಸಾರರು ಪ್ರಥಮತಃ ಕವಿಗಳು. ಅವರ ಮೊದಲ ಒಲವು ಕಾವ್ಯ. ಅವರು ಕವಿಗಳಾಗಿರುವುದರಿಂದ ಅವರ ಗದ್ಯಕ್ಕೆ ಕವಿತ್ವದ ಭಾವಗಂಧಿತ್ವ ಪ್ರಾಪ್ತವಾಗಿದೆ. ಅವರ ಗದ್ಯಶೈಲಿ ವ್ಯಕ್ತಿ ವಿಶಿಷ್ಟವಾದುದು; ಶಾಬ್ದಿಕ ಚಮತ್ಕಾರ ಅಲ್ಲಿನ ವಿಶೇಷ; ಬರವಣಿಗೆಯಲ್ಲಿ ಸಂಸ್ಕೃತಸಂಪನ್ನ, ಅಲಂಕಾರ ನಿಬಿಡ ಮಾತುಗಾರಿಕೆ. ಅದಕ್ಕೊಂದು ನಿಖರ ಉದ್ದೇಶ ವಿದೆಯೆಂದು ನಿಸಾರ್‌ರವರೇ ಹೇಳುವರು: 'ನಾನು ಪ್ರಸ್ತಾಪಿಸುವ ವಿಷಯಕ್ಕೆ ಕಾವ್ಯಗುಣ ಸಮೃದ್ಧವಾದ ಈ ಬಗೆಯ ಗುರುತರವೆನ್ನಿಸುವ ಮಾತುಗಾರಿಕೆ ತುಂಬ ಸೂಕ್ತ ಮತ್ತು ಸ್ಪೃಹಣೀಯವೆಂಬುದನ್ನು ಅನುಭವದಿಂದ ಅರಿತಿದ್ದೇನೆ' ಎಂದು ಸಮರ್ಥಿಸಿಕೊಂಡಿರುವರು. 'ಕವಿ ಮನೋಭಾವದ ನನ್ನಿಂದ ಇಂಥ ವಿಜೃಂಭಣೆಯ ಭಾಷೆಯನ್ನಲ್ಲದೆ ಗ್ರೀಷ್ಮರಿಕ್ತವೂ ಅಪಲ್ಲವವೂ ಆದ ಸಾಧಾರಣ ನೇರ ನುಡಿತವನ್ನು ನಿರೀಕ್ಷಿಸಲಾಗದು. ದೇವೇಂದ್ರಸದೃಶ ವಸ್ತುವಿಗೆ ಒಪ್ಪಿತವಾಗುವುದು ಉಚ್ಚೈಶ್ರವಸ್ಸು, ಐರಾವತದಂತಹ ವೈಭವಯುಕ್ತ ಮಾತುಗಾರಿಕೆಯೇ ಹೊರತು ಟಾಂಗಾ ಕುದುರೆ, ಸರ್ಕಸ್ ಆನೆಯಂಥ ಬಡಕಲು ನಾಡಾಡಿ ನುಡಿಮೆಯಲ್ಲ. ಗುರು ಗ್ರಹಕ್ಕೆ ಸಹಜವಾಗಿ ಮತ್ತು ತಕ್ಕನಾಗಿ ಅದರ ಚಂದ್ರ ಪರಿವಾರವೂ ಭರ್ಜರಿಯದೇ, ದೊಡ್ಡದೇ' ಎಂಬ ಮಾತುಗಳಲ್ಲೂ ಈ ಸಮರ್ಥನೆಯನ್ನು ಗುರುತಿಸಬಹುದು ('ನನ್ನ ಗದ್ಯದ ಒಲವು ಓಲುವೆಗಳು', ಸಮಗ್ರ ಗದ್ಯ ಬರಹಗಳು, ಪು. ೫೩೭).

ತಮ್ಮ ಬರವಣಿಗೆಯ ಬಗೆಗೆ ಅಭಿಮಾನವಿರುವಂತೆ ತಮ್ಮ ಬರವಣಿಗೆಯ ಕೊರತೆ ಯನ್ನೂ ಪ್ರೊ. ನಿಸಾರರು ತಿಳಿದಿರುವರು. '...ನನ್ನ ಭಾವನೆಗಳನ್ನು—ಅವು ಖಚಿತವೋ ಅಖಚಿತವೋ ಹೇಗಾದರೂ ಸರಿ—ತೊಡಕಿಲ್ಲದೆ ಅನುರೂಪವಾದ ಮಾತುಗಳಲ್ಲಿ ಸಂವಹನಿಸಲು ಅಭ್ಯಾಸ ನಡೆಸಿದ್ದೇನೆ. ಬರಹದ ಹಲವಾರು ವಾಕ್ಯಗಳನ್ನು ಅವು ಅರ್ಥ ಸ್ಫುಟವಾಗಿವೆಯೆಂದು ನನಗೆ ಮನದಟ್ಟಾಗುವ ತನಕ ಪರಿಷ್ಕರಿಸಲು ಪ್ರಯತ್ನಿಸಿದ್ದೇನೆ. ಪಾಂಡಿತ್ಯಪೂರ್ಣ ವಿಚಾರಗಳ ದಟ್ಟಣೆಯ ದೆಸೆಯಿಂದ ಮನೋಗ್ರಹಿಕೆ ದುಷ್ಕರವಾಗ ಬಹುದೆಂಬ ಸಂದೇಹ ಬಾಧಿಸಿದಾಗ, ಅವುಗಳನ್ನು ನಿದರ್ಶನ, ಹೋಲಿಕೆ ಮತ್ತಿತರ ಆಲಂಕಾರಿಕ ಕೌಶಲಗಳ ಮುಖೇನವೋ; ವಿದಗ್ಧ ನುಡಿಮೆ, ಚಮತ್ಕಾರಿಕ ಪದ ಟಂಕಣೆ, ತಿಳಿ ಹಾಸ್ಯ ಇಲ್ಲವೇ ವ್ಯಂಗ್ಯದ ಬಳಕೆಯ ನೆರವಿನಿಂದಲೋ ಸ್ಪೃಹ್ಯಗೊಳಿಸಲು ಪ್ರಯತ್ನಿಸಿ ದ್ದೇನೆ. ಹೀಗಾಗಿ ನನ್ನ ಯಾವುದೇ ಬರವಣಿಗೆ, ಪದವಿಟ್ಟಳುಪದೊಂದು ಅಗ್ಗಳಿಕೆಯ ಮಾದರಿಯದಲ್ಲ; ತಿದ್ದಾಣಿಕೆ, ದುರಸ್ತಿಯ ರೀತಿಯದು...' (ಅದೇ, ಪು. ೫೩೫).

ಪ್ರೊ. ನಿಸಾರರ ಗದ್ಯದ ಸೊಗಸನ್ನು ಗ್ರಹಿಸಲು ಪೂರ್ವಸಿದ್ಧತೆಯಿಂದ ಕೂಡಿದ ಹದವಾದ ಸಾಹಿತ್ಯ ಸಂಪ್ರೀತಿಯ ಮನಸ್ಸು ಬೇಕು. ಸಾಹಿತ್ಯವನ್ನು ಗ್ರಹಿಸುವ ಮನೋಭೂಮಿಕೆಯಲ್ಲಿ ಪ್ರೊ. ನಿಸಾರರ ಗದ್ಯವು ಬುದ್ಧಿ ಭಾವಗಳ ಸಂಲಗ್ನವನ್ನು

ಪ್ರದರ್ಶಿಸುತ್ತದೆ ಅಥವಾ ಮೆರೆಸುತ್ತದೆ. ಡಿ.ವಿ.ಜಿ.ಯವರ `ಜ್ಞಾಪಕ ಚಿತ್ರಶಾಲೆ' ನನ್ನ ಗದ್ಯದ ಬರವಣಿಗೆಗೆ ಪ್ರೇರಣೆ ನೀಡಿದೆ ಎಂದು ಪ್ರೊ. ನಿಸಾರ್‌ರವರು ಹೇಳುವರಾದರೂ ಅದು ಸಂಭಾವ್ಯವೇನಲ್ಲ. ಕುವೆಂಪು ತಮ್ಮ ಶೂದ್ರತ್ವದಿಂದ ಮೀರಿ ನಿಲ್ಲುವ ಸಂದರ್ಭದಲ್ಲಿ ಸಂಸ್ಕೃತದ ಬಲವಾದ ಆಕರ್ಷಣೆಗೆ ಸಿಕ್ಕಿಬಿದ್ದರು. ಅವರ ಗದ್ಯಬರಹದಲ್ಲಿ ಸಂಸ್ಕೃತ ಪದಗಳ ವಿಜೃಂಭಣೆ ಎದ್ದು ಕಾಣುವಂತಿದ್ದು ಅದು ಶೂದ್ರನೊಬ್ಬನ ಬಲವಾದ ಅಂತರಂಗದ ಅಭೀಪ್ಸೆ ಕೀಳರಿಮೆಯನ್ನು ಹತ್ತಿಕ್ಕುವ ಉಜ್ವಲ ಪ್ರಯತ್ನವಾಗಿ ಕಾಣಿಸಿಕೊಳ್ಳುತ್ತದೆ. ದ್ವಂದ್ವ ಸಂಸ್ಕೃತಿಯ ತುಯ್ದಾಟದಲ್ಲಿ ಬಹುಶಃ ಪ್ರೊ. ನಿಸಾರರೂ ಸಂಸ್ಕೃತೀಕರಣದ ವಿವಶತೆಗೆ ಒಳಗಾದರೇನೋ ಎನ್ನುವ ಸಂದೇಹ ನನ್ನನ್ನು ಕಾಡುತ್ತದೆ. ಏನೇ ಇರಲಿ, ಮುಸ್ಲಿಮ್ ಸಂವೇದನೆಯ ಪರಿಸರದಲ್ಲಿ ಅನಿವಾರ್ಯವಾಗಿ ಬದುಕು ಸವೆಸಬೇಕಾದ ಪರಿಸ್ಥಿತಿಯಲ್ಲಿ ಪ್ರೊ. ನಿಸಾರರು ತಮ್ಮ ಸ್ವಂತ ಪರಿಶ್ರಮದಿಂದ ಕನ್ನಡ ಸಾಹಿತ್ಯದಲ್ಲಿ ತಮ್ಮ ಸ್ಥಾನವನ್ನು ನಿರ್ದೇಶಿಸಿಕೊಳ್ಳುವಲ್ಲಿ ಸಫಲರಾದರು. ಇದು ಸಾಮಾನ್ಯ ಸಾಧನೆಯಾಗಿ ನನಗೆ ಕಾಣುವುದಿಲ್ಲ. ನಿರಂತರ ಪರಿಶ್ರಮದಿಂದ ದತ್ತವಾದ ಅಪೂರ್ವಸಿದ್ಧಿಯೆಂದು ನನಗೆ ತೋರುತ್ತದೆ. ಅವರ ಗದ್ಯ ಬರವಣಿಗೆ ಕನ್ನಡಕ್ಕೊಂದು ವಿಶಿಷ್ಟ ಕೊಡುಗೆಯಾಗಿದ್ದು ಅದನ್ನು ಸಾಹಿತ್ಯಾಭಿಮಾನಿಗಳು ಗುರುತಿಸಬಲ್ಲರು.

ಸಾವೆಂದರೆ ಅಶುಭ ಸ್ವರೂಪದ, ಅನಿಷ್ಟ ಮೊಗವಾಡದ ಗೋಳು ಕರೆಯ ಗದ್ದಲವಲ್ಲ. ಸಂತಾಪ ಸೂಚಕ ಪ್ರಾಕೃತಿಕ ಘಟನೆಯಲ್ಲ. ಜೀವದ ಅಮರತ್ವಕ್ಕೆ ಕರೆಯೋಲೆ. ನೂತನಾನುಭವದತ್ತ ಜೀವದ ಹೊರಳು. ಸಾರ್ಥಕ್ಯದ ಸಂಪೂರ್ತಿಗೆ ಹಾರುಮಣೆ. ಹೊಸ ವೇಷ ಹಾಕಲು ಹಂಗಾಮಿ ನೇಪಥ್ಯ. ಚೇತನದ ಚಿರ ಯಾತ್ರೆಯಲ್ಲಿ ಮೃತ್ಯು ಒಂದು ಮೆಟ್ಟಿಲೇರುವ: ಹೊಸಿಲು ದಾಟು—ಲೋಕದ ಸಕಲ ಧರ್ಮಗ್ರಂಥಗಳ ಅಧ್ಯಾತ್ಮ ಚಿಂತನೆಯ ಫಲ ಸಾರವೂ ಇದೇ. ಚೈತನ್ಯದ ಪರಿಪೂರ್ಣ ದಶೆಗೆ ಇಹದಂತೆಯೇ ಮರಣೋತ್ತರ ಜೀವನದ ಅಸ್ತಿತ್ವದ ಆವಶ್ಯಕತೆಯನ್ನು ಮನಗಂಡ ಅಚಲ ಶ್ರದ್ಧೆ ಇವುಗಳ ಅಸ್ತಿವಾರ. ಆ ಶ್ರದ್ಧೆಯ ತಾಯಿ ಬೇರಿನಿಂದ ಚಿಗಿತು ಹರಡಿಕೊಂಡಿರುವಂಥವು—ಸ್ವರ್ಗ ನರಕಗಳ ಕಲ್ಪನೆ, ಪುನರುತ್ಥಾನದ ದಿನದ ಎಣಿಕೆ, ಜನ್ಮಾಂತರ-ಪ್ರಕ್ರಿಯೆ ಮತ್ತಂಥವೇ ಪಾರಲೌಕಿಕ ವಟ ವೃಕ್ಷದ ರೆಂಬೆ ಟಿಸಿಲು ಬಿಳಲುಗಳು.

(ಸಾವಿನ ಇನ್ನೊಂದು ಮುಖ)



ಸ್ವ-ಸಂವೀಕ್ಷಕ ಆಖ್ಯಾನಗಳ ಅದ್ಭುತ ಲೋಕ

♦ ಸುಬ್ರಾಯ ಚೊಕ್ಕಾಡಿ

'ಮನೋರಮಾ ಮನೋರಮಾ, ಹೆಸರು ಸಾಲದೇನೆ ಹುಡುಗಿ, ಮಲಗೋಬದ ಗಮಗಮ' ಎಂದು ರೊಮ್ಯಾಂಟಿಕ್ ಆಗಿ ಹಾಡಿದ; ಜೋಗದ ಸಿರಿ ಬೆಳಕಿನ ಕನ್ನಡ ನಾಡನ್ನು ಮನದುಂಬಿ ಕೀರ್ತಿಸಿದ, 'ಕುರಿಗಳು, ಸಾರ್, ಕುರಿಗಳು' ಎಂದು ಇಂದಿನ ರಾಜಕೀಯವನ್ನು ಕಟುವಾಗಿ ವಿಡಂಬಿಸಿದ; 'ತೊಟ್ಟಿದ್ದಳು ನಮ್ಮಮ್ಮನ ಬುರ್ಖಾ' ಎಂದು ಆಧುನಿಕಳಾಗಿಯೂ ಸಂಪ್ರದಾಯವನ್ನು ಮೀರಲಾಗದ ಸದ್ಯಸ್ಥಿತಿಯನ್ನು ಸೂಚ್ಯವಾಗಿ ಹೇಳಿದ; 'ಸ್ವಯಂ ಸೇವೆಯ ಗಿಳಿಗಳ'ನ್ನು ವ್ಯಂಗ್ಯವಾಡಿದ; 'ರಾಮನ್ ಸತ್ತ ಸುದ್ದಿ'ಯ ತಳಮಳವನ್ನು ಪದವಿಲ್ಲದೆ ಅನುಭವಿಸಿದ ಕನ್ನಡದ ಹಿರಿಯ ಕವಿ, ಕೆ. ಎಸ್. ನಿಸಾರ್ ಅಹಮದ್ ಅವರು ಬಹಿರಂಗಕ್ಕೆ ಬೆನ್ನು ಹಾಕಿ, ಬಹಿರಂತರ ವನ್ನು ಹಾದು ತಮ್ಮ ಅಂತರಂಗಕ್ಕೆ ಇಳಿದಿದ್ದಾರೆ. ಮಾಗಿದ ದೇಹ ಹಾಗೂ ಮನಸ್ಸು ಸ್ವಚಿಂತನೆಗೆ ಇಳಿದು, ಬಂದ ಹಾದಿಯಲ್ಲಿ ಗಳಿಸಿದ ಅನುಭವಗಳ ಮೌಲ್ಯಮಾಪನದಲ್ಲಿ ತೊಡಗಿರುವುದನ್ನು ಅವರ, (೧) ಪ್ರಿಯ ಬೆಂಗಳೂರು: ಆಪ್ತ ಅನಿಸಿಕೆಗಳು, (೨) ನಿವೃತ್ತರಾದಮೇಲೆ ಏನು ಮಾಡುತ್ತೀರಿ?, (೩) ಅರುವತ್ತರ ಅನಿಸಿಕೆಗಳು, (೪) ಅನಿರೀಕ್ಷಿತ ಪತ್ರ: ಫಲಿಸದ ಪ್ರೇಮ ಮತ್ತು ಸ್ನೇಹ; ಹಾಗೂ (೫) ವಯಸ್ಸೆಂಬ ಶಿಕ್ಷಕ— ಎಂಬ ಐದು ಬರೆಹಗಳಲ್ಲಿ ಕಾಣಬಹುದು.

ನಿಸಾರ್ ಅವರು ತಮ್ಮ ಅರುವತ್ತನೆಯ ವಯಸ್ಸಿನ

ಆಸುಪಾಸಿನಲ್ಲಿ ಬರೆದ ಲೇಖನಗಳಿವು—ಈ ಅವಧಿಯಲ್ಲಿ ನಿಸಾರ್ ಅವರು ಅಂತರ್ಮುಖಿಯಾಗಿದ್ದಾರೆ. ಬಾಳಿನಲ್ಲಿ ತಾವು ಗಳಿಸಿದ್ದೇನು, ಗಳಿಸಿದ ಅನುಭವಗಳ ಸ್ವರೂಪ ಏನು ಎಂಬುದರ ಕುರಿತು ಚಿಂತನೆ ನಡೆಸಿದ್ದಾರೆ. ಇದುವರೆಗೆ ತಾವು ನಿರ್ವಹಿಸಿಕೊಂಡಿದ್ದ ವೃತ್ತಿ ಹಾಗೂ ಮುಂದೆ ಎದುರಿಸಬೇಕಾಗಿರುವ ನಿವೃತ್ತಿಯ ದಿನಗಳ ಬಗ್ಗೆ ಅವರ ಚಿಂತನೆ ಈ ರೀತಿ ಹರಿದಿದೆ:

'ವೃತ್ತಿ ಪದದ ನಿಷ್ಪತ್ತಿ, ವ್ಯುತ್ಪತ್ತಿಗಳೇನೇ ಇರಲಿ, ಅದು ನನಗೆ ಪ್ರಸ್ತುತವಲ್ಲ. ವೃತ್ತಿಯೆಂದರೆ ಇದು: ಅಬಾಧಿತ ಮತ್ತು ಸುರಕ್ಷಿತ ಜೀವನ ನಿರ್ವಹಣೆಯ ಸಲುವಾಗಿ ದಿನ ನಿತ್ಯದ ವೃತ್ತವನ್ನು ಎಡೆಬಿಡದೆ ಸುತ್ತುವ ದಂಧೆ. ಅಂದರೆ, ಪುನರಾವರ್ತನೆಯ ವೃತ್ತವನ್ನು ಪ್ರದಕ್ಷಿಸುವ ಮನುಷ್ಯ ಕರ್ಮ ಅಥವಾ ಲೌಕಿಕ ಧರ್ಮವೇ ವೃತ್ತಿ. ನಿಯತ ಮತ್ತು ನಿರಂತರವಾದ ಇಂತಹ ಕರ್ತವ್ಯಪಾಲನೆಯ ಹೊರೆ ಕಳಚಿಕೊಂಡ ನಿರಾಳ ಭಾವವನ್ನು, ಮನುಷ್ಯನ ಮನಸ್ಸು ಪಡೆಯುವ ಸಿದ್ಧಿ ಸ್ಥಿತಿಯನ್ನು 'ನಿವೃತ್ತಿ' ಎನ್ನೋಣವೇ? ಜನನ ಮರಣಗಳ ಮಹಾಚಕ್ರದೊಳಗಿನ ಉಪಚಕ್ರದಂತೆ ವೃತ್ತಿ-ನಿವೃತ್ತಿಗಳ ಸಂಬಂಧ. ಬಾಳೆಯ ಗಿಡ ಗೊನೆ ತಳೆದು ಮಾಗುವ ಕಾಯಕ ವೃತ್ತಿ; ಅದು ಹಣ್ಣೊಂಡು ಭಾರವಿಳಿಸಿಕೊಂಡ ಬಳಿಕದ ಅವಸ್ಥೆ ನಿವೃತ್ತಿ' ('ನಿವೃತ್ತರಾದ ಮೇಲೆ ಏನು ಮಾಡುತ್ತೀರಿ?', ಪು. ೭೨೭).

ನಿಸಾರ್ ಅವರು ಈ 'ಹೊರೆ ಕಳಚಿ ಕೊಂಡ ನಿರಾಳ ಭಾವ'ವನ್ನು ಅನುಭವಿಸುತ್ತಿರುವ, ಆ ನಿರಾಳ ಭಾವದಲ್ಲೇ ಹೊಸ ಬಗೆಯಲ್ಲಿ ಉಸಿರಾಡುತ್ತಾ, ಹಸಿರಾಡಿಸುತ್ತಾ ತಮ್ಮ ಇರುವಿಕೆಯನ್ನು ಪ್ರತ್ಯಕ್ಷ ಪಡಿಸಿಕೊಳ್ಳುವ ತವಕವನ್ನು ಇಲ್ಲಿನ ಬರೆಹಗಳು ವ್ಯಕ್ತಪಡಿಸುತ್ತವೆ. 'ಸೂಕ್ಷ್ಮ ಸಂವೇದಕ ಸ್ವಭಾವದ ಸಾಮಾಜಿಕನಿಗೆ ನಿವೃತ್ತಿ ಒಂದು ಫಲವತ್ ಕ್ಷೇತ್ರ; ಬಾಳೊಡಲಿಗೆ ಹೊಸದಾಗಿ ದಕ್ಕಿಸಿಕೊಂಡ ಪಾಟವ ನೇತ್ರ; ಇರುಳಿನ ಕರಿ ನೆರಳೇ ಮುಂಬೆಳಕಿನ ಮಾಯೆಯಾಗಿ ಮಾರ್ಪಡುವ ವಿಚಿತ್ರ' ಎಂದು ಹೇಳುವ ನಿಸಾರ್, 'ಕ್ರಿಯಾಶೀಲ ವ್ಯಕ್ತಿಯ ಪಾಲಿಗೆ ನಿವೃತ್ತಿಯೆಂಬುದೇ ಇಲ್ಲ. ವಿಶ್ರಾಂತ ಜೀವನವೆಂದರೆ, ಪುನಶ್ಚೇತನಗೊಳಿಸಿಕೊಂಡು ಮುಂದುವರಿಸುವ ಪಯಣ' (ಪು. ೭೨೮) ಎಂದು ಹೇಳುತ್ತಾರೆ. ನಿಸಾರ್ ಅಂಥ ಪಯಣದಲ್ಲಿ ತೊಡಗಿಕೊಂಡು ಪುನಶ್ಚೇತನಗೊಳಿಸಿಕೊಳ್ಳುವ ಕಾಯಕದಲ್ಲಿ ತೊಡಗಿರುವುದನ್ನು; ಅಂಥ ಪ್ರಯತ್ನದಲ್ಲಿ ಅವರು ಪಡೆದ ಅನುಭವಗಳನ್ನು, ಕ್ರಿಯಾಶೀಲ ಮನಸ್ಸಿನ ಸ್ಪಂದನಗಳನ್ನು ಈ ಲೇಖನಗಳು ಕಾವ್ಯಾತ್ಮಕ ಭಾಷೆಯಲ್ಲಿ ಕಟ್ಟಿಕೊಡುತ್ತವೆ.

ವಯಸ್ಸೆನ್ನುವುದು ಮನುಷ್ಯನ ಖಾಸಗಿ ಸಮಸ್ಯೆ ಎಂದು ನಿಸಾರ್ ಹೇಳುತ್ತಾರೆ. ಆ ಸಮಸ್ಯೆಯನ್ನು ಹೇಗೆ ಎದುರಿಸಬಹುದೆಂಬುದನ್ನು ಅವರು 'ವಯಸ್ಸೆಂಬ ಶಿಕ್ಷಕ' ಎನ್ನುವ ಬರೆಹದಲ್ಲಿ ವಿವೇಚಿಸಿದ್ದಾರೆ. ಈ ಸಮಸ್ಯೆಯನ್ನು ಎದುರಿಸುವ ವಯಸ್ಸಾದ ಮಂದಿಯನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ಅವರು ನೋಡುತ್ತಾರೆ. ಮೊದಲನೆಯ ಗುಂಪಿನವರು ಶಾರೀರಿಕ ರೋಗ ರುಜಿನಗಳಿಲ್ಲದೆಯೂ ಮೂವತ್ತಕ್ಕೆಲ್ಲ ಮುಪ್ಪೇರಿದಂತೆ ಹೊಳಪಳಿದು ಹೋಗಿರುವವರು. ಇಂಥವರನ್ನು ಅವರು 'ನೊರೆ ಬಾಳಿಗರು' ಎಂದು ಕರೆಯುತ್ತಾರೆ. ಇವರು ತಮ್ಮ ಸಂಪರ್ಕಕ್ಕೆ ಬಂದವರಿಗೂ ತಮಗೆ ಅಂಟಿದ ಆಲಸ್ಯ-ಜಡತೆಯ ನಿಶ್ಶಕ್ತಿ-

ನಿರ್ಜೀವಿಕೆಗಳ ಸೋಂಕನ್ನು ಧಾರಾಳವಾಗಿ ಅಂಟಿಸಿ ಬಿಡುತ್ತಾರೆ. ಇಂಥವರಿಂದ ಲೋಕದ ಬಾಳ್ವೆಗೆ ಯಾವ ಘನತೆ, ಹೆಚ್ಚುಗಾರಿಕೆಯೂ ಲಭಿಸುವುದಿಲ್ಲ ಎಂದು ನಿಸಾರ್ ಹೇಳುತ್ತಾರೆ. ಎರಡನೆಯ ಗುಂಪಿಗೆ ಸೇರಿದವರ ಮುಖ್ಯ ಗುಣವೆಂದರೆ, ವಯಸ್ಸು ಎಪ್ಪತ್ತು ಎಂಭತ್ತಾದರೂ ಕುಂದದ ಕ್ರಿಯಾಶೀಲತೆ, ದೇಹ ಮನಸ್ಸುಗಳ ಎಡೆಬಿಡದ ಗೆಯ್ಮೆಯೇ ಜೀವನ ಎಂದು ಭಾವಿಸುವವರು ಇವರು. ಇವರಿಗೆ ಯಾಂತ್ರಿಕ ಪುನಶ್ಚರಣೆಯ ಅನುಭವ ತಟ್ಟುವುದೇ ಇಲ್ಲ. ಏಕತಾನತೆಯನ್ನು ಮುರಿದು ಅನ್ಯ ಶ್ರುತಿಗೆ ಬದುಕನ್ನು ಅಳವಡಿಸಿಕೊಂಡು ಹೊಸದಾಗಿಸಿಕೊಳ್ಳಬೇಕೆಂಬ ಹಂಬಲವೇ ಇವರಿಗಿಲ್ಲ. ಇಂಥವರು ಬಹಿರಂಗ ಸ್ವರೂಪಿಗಳಾಗಿ ಬಲಿತು ಕೊಬ್ಬಿದರೂ ಖಾಸಗಿ ಬದುಕಿನಲ್ಲಿ ಮಾತ್ರ ದೊಡ್ಡ ಸೊನ್ನೆಗಳಾಗಿ, ಕಿಷ್ಕಿಂಧೆಗಳಾಗಿ ಸೊರಗಿ ಹೋಗುತ್ತಾರೆ ಎಂದು ನಿಸಾರ್ ಗುರುತಿಸುತ್ತಾರೆ. ಈ ಎರಡೂ ಗುಂಪುಗಳು ಬಾಳಿನ ಅರ್ಥವಂತಿಕೆ, ಅನಂತ ವೈವಿಧ್ಯ ಹಾಗೂ ಸಮಗ್ರತೆಯ ಕಾಣ್ಕೆಯ ಪ್ರತಿನಿಧಿಗಳಾಗಲು ಸಾಧ್ಯವೇ ಇಲ್ಲ ಎನ್ನುವ ಅವರು ಮೂರನೆಯ ವಿರಳ ಗುಂಪಿನ ಬಗ್ಗೆ ಪ್ರಸ್ತಾಪಿಸುತ್ತಾರೆ. ಆ ಮೂರನೆಯ ಗುಂಪಿನವರು, 'ವಯಸ್ಸಿನ ಎತ್ತರದ ನೆಲೆಯಲ್ಲಿ ನಿಂತು', ವಿಚಾರದ ಕಡೆಗೋಲಿನಿಂದ ಬದುಕಿನ ಮಂಥನದಲ್ಲಿ ತೊಡಗಿ ಅಮೃತವನ್ನು ಕಾಣಬಯಸುವವರು; ಅದರ ಸವಿಯನ್ನು ಅನುಭವಿಸುವ ಪಟುತ್ವವನ್ನು ಬೆಳೆಸಿಕೊಂಡ ಮರ್ಮಸೂಕ್ಷ್ಮಜ್ಞರು. ಅವರು ಮಾತ್ರ ನಿಜವಾಗಿ ಕೃತಕೃತ್ಯರು ಎಂದು ನಿಸಾರ್ ಹೇಳುತ್ತಾರೆ.

ನಿಸಾರ್ ಈ ಮೂರನೆಯ ಗುಂಪಿಗೆ ಸೇರಿದವರು. ತಮ್ಮ ಸುದೀರ್ಘ ಬಾಳಿನಲ್ಲಿ ಪಡೆದ ಅನುಭವಗಳನ್ನು ಕಡೆದು ಅಮೃತವನ್ನು ಕಾಣಲು ಯತ್ನಿಸಿದವರು. ಆ ಮೂಲಕವೇ ಆ ಅಮೃತದ ಸವಿಯನ್ನು ಅನುಭವಿಸುವ ಪಟುತ್ವವನ್ನು ಬೆಳೆಸಿಕೊಂಡ ಸೂಕ್ಷ್ಮಜ್ಞರು. ಅವರ ಮಂಥನದ ಹಾಗೂ ಪಡೆದ ಅಮೃತದ ವಿವರಗಳು ಈ ಲೇಖನಗಳಲ್ಲಿವೆ.

'ಜೀವನವೆನ್ನುವುದು ಆಶ್ಚರ್ಯಕರ ಅನಿರೀಕ್ಷಿತಗಳ, ಅಘಟಿತವೆನ್ನಿಸುವ ಆಗುಹೋಗುಗಳ, ವಿಚಾರಾತೀತ ಆಕಸ್ಮಿಕಗಳ, ಸಿಹಿ-ಕಹಿಗಳ ಅಕ್ಷಯ ಆಗರ' ಎಂದು ನಿಸಾರ್ ಹೇಳುತ್ತಾರೆ. ಅದಕ್ಕಾಗಿ ಅವರು, ಮರೆತಿದೆ ಎಂದರೂ ಮರೆಯದೇ ಉಳಿದು ಹೋಗಿರುವ ತಮ್ಮ ಹಳೆಯ ಘಟನೆಯೊಂದನ್ನು 'ಅನಿರೀಕ್ಷಿತ ಪತ್ರ: ಫಲಿಸದ ಪ್ರೇಮ ಮತ್ತು ಸ್ನೇಹ' ಎನ್ನುವ ಲೇಖನದಲ್ಲಿ ನೆನಪಿಸಿಕೊಳ್ಳುತ್ತಾರೆ. ಯಾವುದೋ ದಾಖಲೆ ಪತ್ರಕ್ಕಾಗಿ ಮನೆಯನ್ನೆಲ್ಲ ಜಾಲಾಡುತ್ತಿದ್ದಾಗ ೧೯೭೦ನೆಯ ಇಸವಿಯಲ್ಲಿ ಬಂದ ಒಂದು ಪತ್ರ ಅವರ ಕಣ್ಣಿಗೆ ಬೀಳುತ್ತದೆ. ಹಾಗೆ ಸಿಕ್ಕಿದ ಪತ್ರ ಕಾಲದ ಬೂದಿಯನ್ನು ಕೆದಕಿ ಮಧುರ ಸ್ಮೃತಿಗಳ ಕಿಡಿಗಳನ್ನು ಅವರ ಮನದಲ್ಲಿ ಹೊಮ್ಮಿಸಿ ಬೆಳಗಿಸುತ್ತದೆ. ಅದು, ಪ್ರೇಮ ಮತ್ತು ಸ್ನೇಹದ ಕುರಿತಾಗಿ ಲೇಖನವೊಂದನ್ನು ಆಹ್ವಾನಿಸಿ, ಪ್ರತಿಷ್ಠಿತ ಆಂಗ್ಲ ಪತ್ರಿಕೆಯೊಂದರಿಂದ ಬಂದ ಪತ್ರ. ಬರೆದವರು ಭಾರತದ ಖ್ಯಾತ ಪತ್ರಕರ್ತ ಖುಶ್‌ವಂತ್ ಸಿಂಗ್. ಆಗ ಇನ್ನೂ ಎಳೆಯ ಬರೆಹಗಾರರಾಗಿದ್ದ ನಿಸಾರ್, ಇಂಥ ಆಹ್ವಾನದಿಂದ ಸಹಜವಾಗಿಯೇ ರೋಮಾಂಚನಗೊಂಡು, ಒಂದು ವಾರ ಪಟ್ಟು ಹಿಡಿದು ಕುಳಿತು ಬರೆದು, ಮಿತ್ರರೊಂದಿಗೆ ಸಮಾಲೋಚಿಸಿ, ತಿದ್ದಿ ತೀಡಿ ಲೇಖನವನ್ನು ಪೂರ್ತಿಗೊಳಿಸುತ್ತಾರೆ. ಅದೇ ಸಮಯಕ್ಕೆ ಅನಿರೀಕ್ಷಿತವಾಗಿ,

ತುರ್ತಾಗಿ ಬೆಂಗಳೂರಿಗೆ ಹೋಗಬೇಕಾಗಿ ಬಂದದ್ದರಿಂದ ನಂಬಿಗಸ್ಥ ಗುಮಾಸ್ತೆಯಾದ ರಾಮಣ್ಣನಲ್ಲಿ ಅದನ್ನು ಅಂಚೆಗೆ ಹಾಕುವ ವ್ಯವಸ್ಥೆ ಮಾಡಿ ಹೋಗುತ್ತಾರೆ.

ಆದರೆ ಆಮೇಲೆ ಆದದ್ದೇ ಬೇರೆ. ಎಷ್ಟು ದಿನಗಳು ಕಳೆದರೂ ಪ್ರತಿ ದಿನ ಪತ್ರಿಕೆಯನ್ನು ಹದ್ದುಗಣ್ಣಾಗಿ ನೋಡಿದರೂ ಲೇಖನ ಪ್ರಕಟವಾಗಲೇ ಇಲ್ಲ. ಇದರಿಂದಾಗಿ ನಿಸಾರ್ ಮಿತ್ರರೆದುರು ತೀರಾ ಮುಜುಗರ ಪಡಬೇಕಾಗಿ ಬಂತು. ಅತೀವ ಖೇದ, ಹತಾಶ ಭಾವ ಅವರನ್ನು ಆವರಿಸಿಕೊಳ್ಳುವಂತಾಯಿತು. ಆಮೇಲೆ ಆರೇಳು ತಿಂಗಳುಗಳ ಅನಂತರ ಅವರಿಗೆ ತಿಳಿಯಿತು: ರಾಮಣ್ಣ ಆ ಲೇಖನವನ್ನು ಅಂಚೆಗೆ ಹಾಕದೆ, ಎಲ್ಲೋ ಕಳೆದುಕೊಂಡು ಬಿಟ್ಟಿದ್ದ! ನಿಸಾರ್‌ರವರಿಗೆ ಅದನ್ನು ತಿಳಿಸಲು ಧೈರ್ಯವಾಗದೆ, ಅಂಚೆಗೆ ಹಾಕಿದೆ ಎಂದು ಸುಳ್ಳು ಹೇಳಿದ್ದ! ಹೀಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗುತ್ತದೆ. ಆ ಸಂದರ್ಭದ ಅವರ ಮನಃಸ್ಥಿತಿಯನ್ನು ಈ ಸಾಲುಗಳು ಸೂಕ್ಷ್ಮವಾಗಿ ಚಿತ್ರಿಸುತ್ತವೆ:

'ರಾಮಣ್ಣನ ಉಪಕಾರಕ್ಕೆ ಕ್ಷಮಿಸದೆ ಏನು ತಾನೇ ಮಾಡುವ ಹಾಗಿದೆ. ನನಗೆ ನಗಬೇಕೋ, ಅಳಬೇಕೋ ತೋಚಲಿಲ್ಲ. ಪಾಪದ ರಾಮಣ್ಣ ಆಗಲೇ ಸತ್ಯ ಹೇಳಿಬಿಟ್ಟಿದ್ದರೆ, ನನ್ನಲ್ಲಿದ್ದ ಆ ಲೇಖನದ ಇನ್ನೊಂದು ಬೆರಳಚ್ಚಿನ ಪ್ರತಿಯನ್ನು ಕಳಿಸಬಹುದಿತ್ತು. ಅಂತೂ ಕೈಗೆ ಬಂದ ತುತ್ತು ಬಾಯಿಗೆ ಎಟುಕಿರಲಿಲ್ಲ. 'ಯಾವುದಕ್ಕೂ ಯೋಗವಿರಬೇಕು' ಎಂಬ ಸುಲಭ ಲಭ್ಯ ಸಂತೈಕೆಯ ಮಾತನ್ನು ನೆನೆದು ರಾಮಣ್ಣನ ಕಾಗದವನ್ನು ನಿಧಾನವಾಗಿ ಹರಿದೆಸೆದು ನಿಟ್ಟುಸಿರು ಬಿಟ್ಟೆ' (ಪು. ೯೪೦). ಅವರಿಗಾದ ನಿರಾಸೆ ಹಾಗೂ ಅದನ್ನು ಮೀರಿ ನಿಂತ ಸಮಚಿತ್ತತೆ ಈ ಸಾಲುಗಳಲ್ಲಿ ಸೊಗಸಾಗಿ ವ್ಯಕ್ತವಾಗುತ್ತದೆ.

ನನ್ನ ದೃಷ್ಟಿಯಿಂದ, ಈ ಲೇಖನಗಳ ಪೈಕಿ ಅತ್ಯಂತ ಮುಖ್ಯ ಅನ್ನಿಸುವುದು 'ಪ್ರಿಯ ಬೆಂಗಳೂರು: ಆಪ್ತ ಅನಿಸಿಕೆಗಳು' ಎನ್ನುವ ಲೇಖನ. ತಾವು ಅನೇಕ ವರ್ಷಗಳ ಕಾಲ ಬದುಕಿ ಬಾಳಿದ ಒಂದು ಊರಿನ ಜತೆಗೆ ಬೆಳೆಸಿಕೊಂಡಿರುವ ಬಾಂಧವ್ಯದ ಕುರಿತಾದ, ಅಲ್ಲಿನ ಪಲ್ಲಟಗಳ ಕುರಿತಾದ ಆಪ್ತ ಅನಿಸಿಕೆಗಳು ಈ ಲೇಖನದಲ್ಲಿವೆ. ಒಂದು ಊರು ಹೊಟ್ಟೆ ಹೊರೆಯುವ ಉದ್ದೇಶಕ್ಕಾಗಿ ಮಾತ್ರ ಇರುವುದಿಲ್ಲ. ಅದು 'ನಮ್ಮ ಚೇತನದ ಆಳವೂ ನಿಗೂಢವೂ ಆದ ಹಸಿವು ದಾಹಗಳನ್ನು ತಣಿಸುತ್ತಲೂ ತುಡಿಯುತ್ತಿರಬೇಕು; ಆಂತರಿಕ ಅಭಿಲಾಷೆ, ಆದರ್ಶ ಕನಸುಗಾರಿಕೆಗಳ ಸ್ಫೂರ್ತಿಯ ಸೆಲೆಯತ್ತಲೂ ಕಣ್ಣು ಹಾಯಿಸಬೇಕು' ಎನ್ನುವ ನಿಸಾರ್, ವ್ಯಕ್ತಿ ಮತ್ತು ಊರಿನ ಸಂಬಂಧವು ಆಜೀವಪರ್ಯಂತ ನಮ್ಮ ಸಂಗಾತಿಯಾಗಿ, ನಮ್ಮ ಅಳಿವು–ಉಳಿವುಗಳೊಂದಿಗೆ ತಕ್ಕೈಸಿ ಕೊಂಡಿರುವಂಥದು—ಶಿಶುವಿಗೆ ತಾಯಿಯ ವಾತ್ಸಲ್ಯಮಯ ಪೋಷಣೆಯಾಗಿ, ಯೌವನಿಗನಿಗೆ ಮಮತೆಯ ಮಡದಿಯಾಗಿ, ವೃದ್ಧಾಪ್ಯದಲ್ಲಿ ಕೈ ನೆರವಾಗುವ ಮಕ್ಕಳ ಪ್ರೀತಿಯಾಗಿ ಜೊತೆಗೂಡಿ ಬರುವಂಥದ್ದು. ಮನುಷ್ಯ ಮತ್ತು ಅವನ ಪರಿಸರದ ಅಂತಸ್ಸಂಬಂಧ—ಅದು ಕೊಡು–ಕೊಳ್ಳುವ ಲೆಕ್ಕಾಚಾರವನ್ನು ಮೀರಿದ್ದು; ಆಡಂಬರ, ತೋರುಗಾಣಿಕೆ, ಪ್ರದರ್ಶನ ಕಾತರಗಳಂಥ ಕ್ಷುಲ್ಲಕ ಆಮಿಷಗಳನ್ನು ಕಡೆಗಣಿಸಿದ್ದು. ವನಸ್ಪತಿಗಳಂತೆ, ಮೇಘಗಳಂತೆ, ಸಂಧ್ಯಾರಾಗಗಳಂತೆ ನಿಶ್ಶಬ್ದವಾಗಿ ಮೂಡಿ, ವರ್ಧಿಸಿ, ನಿಬಿಡಗೊಂಡು ಪರಿಣಾಮ ಬೀರುವಂಥದ್ದು' (ಪು. ೭೧೧)

ಎಂದು ಮಾರ್ಮಿಕವಾಗಿ ವಿವೇಚಿಸುತ್ತಾರೆ.

ಪ್ರತಿಯೊಂದು ಊರಿಗೂ ಅದರದೇ ಆದ ವ್ಯಕ್ತಿತ್ವ ಇರುತ್ತದೆ. ತೋರಿಕೆಗೆ ಎಲ್ಲ ಊರುಗಳೂ ಒಂದೇ ಅಂತ ಅನ್ನಿಸಿದರೂ ಪ್ರತಿಯೊಂದಕ್ಕೂ ಅದರದೇ ಆದ ವೈಶಿಷ್ಟ್ಯ ಇರುತ್ತದೆ. ನಿಸಾರ್ ಬಾಳಿದ ಬೆಂಗಳೂರು ಕೂಡಾ ಅಂಥ ವ್ಯಕ್ತಿತ್ವವಿರುವ, ತನ್ನದೇ ವೈಶಿಷ್ಟ್ಯ ಹೊಂದಿರುವ; ತನ್ನೊಳಗೆ ನಿಗೂಢಗಳನ್ನು ನಿಕ್ಷೇಪಿಸಿಕೊಂಡು ತನ್ನ ಬೆಳಗನ್ನು ಸುಲಭದಲ್ಲಿ ಬಿಟ್ಟುಕೊಡದ ಊರು. ವೃತ್ತಿಪರವಾದ ಕಾಳಜಿಗಳಿರುವ ಧನ ಪಿಶಾಚಿಗಳಿಂದ ಬೆಂಗಳೂರಿನ ಮೇಲಾಗುವ ಆಘಾತಗಳನ್ನು ಅತ್ಯಂತ ನೋವು ಹಾಗು ವಿಷಾದಗಳಿಂದ ಗಮನಿಸುವ ನಿಸಾರ್, ಮ್ಲಾನಗೊಂಡಿರುವ, ತೇಜೋಹೀನವಾಗಿರುವ; ಆಪ್ತತೆಯ ಬೆಚ್ಚನೆಯ ವಾತ್ಸಲ್ಯ ಮಮತೆಗಳಿಲ್ಲದೆ ತತ್ತರಗೊಂಡಿರುವ ಬೆಂಗಳೂರಿನ ಸದ್ಯಃಸ್ಥಿತಿಯನ್ನು ಅತ್ಯಂತ ಆತಂಕದಿಂದ ವೀಕ್ಷಿಸುತ್ತಾರೆ. ಮೈಸೂರಿಗೆ ಚಾಮುಂಡಿ ಬೆಟ್ಟವಿರುವಂತೆ, ಶಿವಮೊಗ್ಗೆಗೆ ತುಂಗೆ ಇರುವಂತೆ, ಮಂಗಳೂರಿಗೆ ಕಡಲು ಇರುವಂತೆ ಬೆಂಗಳೂರಿಗೆ ಯಾವುದೇ ಸಹಜ ಭವ್ಯೋನ್ನತಿ ಸೂಚಕ ವರಗಳಿಲ್ಲವೆಂಬುದನ್ನು ಗುರುತಿಸುತ್ತಾರೆ. ಅವರವರ ಭಕುತಿಗೆ ಅವರವರ ಭಾವಕ್ಕೆ ತಕ್ಕಂತೆ ಕಾಣಿಸುತ್ತಿರುವ, ಅಖಂಡವಾಗಿದ್ದೂ ಅನೇಕವಾಗಿರುವ ಬೆಂಗಳೂರಿನ ಈಗಿನ ವಿಶ್ವರೂಪ ವನ್ನು ನಿಸಾರ್ ಅನನ್ಯವಾಗಿ ಬಣ್ಣಿಸುವ ಬಗೆ ಹೀಗಿದೆ—'ಕೆಲವರಿಗೆ ಬೆಂಗಳೂರು ಎಂದರೆ ಮೋಜುಗಾರಿಕೆಯ ಕೆಂಪೇಗೌಡ ರಸ್ತೆಯ ಸಿನೆಮಾ ಜಾಹೀರಾತುಗಳ ಬೆಲೆವೆಣ್ಣಿನ ಗಾಢ ಪ್ರಸಾಧನ. ಮತ್ತೆ ಕೆಲವರಿಗೆ ಎಂ.ಜಿ. ರೋಡ್, ಬ್ರಿಗೇಡ್ ರೋಡುಗಳ ವಿಕೃತ ವೈಭವ; ಸ್ವದೇಶೀ ಸಂಸ್ಕೃತಿಯನ್ನು ದಿನೇ ದಿನೇ ಅತ್ಯಾಚಾರಕ್ಕೊಳಗಾಗಿಸಿ ಕ್ಷಯಿಸಿ, ಮೀಸೆ ತಿರುವುತ್ತಿರುವ ವಿದೇಶೀಯ ವಿಟನ ವಿಕಟಾಟ್ಟಹಾಸ. ಬೆಂಗಳೂರೆಂದರೆ ಇನ್ನು ಕೆಲವರಿಗೆ ಸದಾಶಿವ ನಗರ, ಜೆ. ಪಿ. ನಗರಗಳ ಹಾಗೆ ಭ್ರಷ್ಟತೆ, ಅಕ್ರಮ ದಾಸ್ತಾನು, ಕಾಳ ಸಂತೆಗಳ ಅಡ್ಡಹಾದಿಗಳನ್ನು ಬಚ್ಚಿಟ್ಟುಕೊಂಡು ಸಂತನಂತೆ ಹಸನ್ಮುಖ ಮೆರೆಸುವ ಧವಳೋನ್ನತ ನಿರ್ಮಿತಿಗಳು. ಹಾಗೆಯೇ, ಬಿಸಿ ನೆತ್ತರಿನ ಗಡ್ಡ ಹೊತ್ತ ಜುಬ್ಬಾಧಾರಿಗೆ ಈ ಪಟ್ಟಣವೆಂದರೆ ಹೆಜ್ಜೆಯಿಟ್ಟಲ್ಲಿ ಹೆಡೆಯೆತ್ತಿರುವ ಗಗನ ಚುಂಬಿಗಳು ಮತ್ತು ಅವುಗಳ ನೆರೆಯಲ್ಲಿ ನಂಜೇರಿ ಕೆಡೆದಿರುವ ನತದೃಷ್ಟ ಕೊಳೆಗೇರಿಗಳು' (ಪು. ೭೧೬).

ಒಂದೆಡೆಯಲ್ಲಿ ಮನಸ್ಸಿನಲ್ಲಿ ಮೂಡಿಕೊಳ್ಳುವ ಇಂತಹ ಭಯಾವಹ ಚಿತ್ರಗಳಿದ್ದರೆ, ಇನ್ನೊಂದೆಡೆಯಲ್ಲಿ ಅರುವತ್ತು ಮೀರಿದ ನಿಸಾರ್‌ರಂಥವರಿಗೆ ಬೆಂಗಳೂರು ಕಾಣಿಸುವ ಬಗೆಯೇ ಬೇರೆ. ಅವರಿಗೆ ಬೆಂಗಳೂರಿನ ನೆನಪೆಂದರೆ ಕಾಲದ ಹಿನ್ನಡೆ, ಗಡಿಯಾರದ ಹಿಂತಿರುಗು; ಮೈಮರೆತದ ಮಂತ್ರಗಂಬಳಿ. ಆ ಮಂತ್ರಗಂಬಳಿಯಲ್ಲಿ ಕುಳಿತು, ತಾನು ಕಳೆದ ಅನೇಕ ವರ್ಷಗಳ ನಡುವೆ ಹಿಮ್ಮುಖವಾಗಿ ಚಲಿಸುತ್ತಾ ಹೋದರೆ, ಮುತ್ತಿಗೆ ಹಾಕುವ ಅನೇಕಾನೇಕ ಹಳೆಯ, ಆದರೆ ಇನ್ನೂ ಜೀವಂತವಾಗಿ ಉಳಿದ ನೆನಪುಗಳು. ಆ ನೆನಪುಗಳಲ್ಲಿ ಕಂಪ್ಯೂಟರ್ ಇಲ್ಲದ ವಿಶ್ರಾಂತರ ನಾಕವಿದೆ; ಬಣ್ಣ ಬಣ್ಣದ ಹೂಗಳ ಸಾಲು ಮರಗಳ ಕನವರಿಕೆಗಳಿವೆ; ಬಿಳಿ ದೊರೆಗಳ, ಅವರ ಮಡದಿಯರ ಠಾಕುಠೀಕುಗಳಿವೆ; ಟಕಟಕನೆ ಸದ್ದು ಮಾಡುತ್ತಾ ಚಲಿಸುವ ಜಟಕಾಗಳಿವೆ; ಬಾಲ್ಯದ ತುಂಟತನದ ಅಲೆಮಾರಿ ಕನಸುಗಳಿವೆ. ಇಂಥ ಹಲವಾರು ಸಣ್ಣ ಸಣ್ಣ ಸಂಗತಿಗಳೇ, ವರ್ತಮಾನದ ಬಗೆಗಿನ ಅವರ ಸಿಟ್ಟು ಸೆಡವನ್ನು,

ಜುಗುಪ್ಸೆ ಜಿಹಾಸೆಯನ್ನು ತಮ್ಮ ಬಾಲ್ಯದ ನೆನಹುಗಳೆನ್ನುವ ಸುಕೋಮಲ ಹಸ್ತದ ಮೂಲಕ ತೊಡೆದು ಹಾಕಿ, ಮನಸ್ಸು ಮುದಗೊಳ್ಳುವಂತೆ ಪ್ರೇರೇಪಿಸುತ್ತವೆ ಎಂದು ನಿಸಾರ್ ಹೇಳುತ್ತಾರೆ. ಒಂದು ಧ್ಯಾನಸ್ಥ ಕವಿ ಮನಸ್ಸು ಮಾತ್ರ ಇಂಥದೊಂದು ಅದ್ಭುತ ಚಿತ್ರವನ್ನು ನೀಡಬಲ್ಲದು; ಆ ಮೂಲಕ ತನ್ನದೇ ಆದ ಲೋಕವೊಂದನ್ನು ಸೃಷ್ಟಿಸಿಕೊಳ್ಳಬಲ್ಲದು.

ಮನುಷ್ಯ ಜೀವನದ ಅತ್ಯಂತ ಖಾಸಗಿ ಎನ್ನಿಸುವ ಸ್ವವೀಕ್ಷಣೆಯುಳ್ಳ ಈ ಬರೆಹಗಳು ನಿಜಕ್ಕೂ ಕವಿ ನಿಸಾರ್ ಗದ್ಯರೂಪದಲ್ಲಿ ಬರೆದ ಕಾವ್ಯಗಳಾಗಿವೆ. ಯಾವುದೇ ಸಿದ್ಧಾಂತಗಳೂ ಒಣ ಬೌದ್ಧಿಕತೆಯ ಹಂಗಿಲ್ಲದ ಭಾವನಿಷ್ಠ ಬರೆಹಗಳಿವು. ತನ್ನ ಅನಿಸಿಕೆಗಳನ್ನು ಗದ್ಯದ ತರ್ಕಕ್ಕೆ ಒಗ್ಗಿಸುವ ಹಠವಿಲ್ಲ. ತರ್ಕದಿಂದಾಚೆಗಿನ ತರ್ಕಾತೀತ ಜಗತ್ತನ್ನು ಕಾಣುವ ಹಂಬಲವಿದೆ. ನಿಸಾರ್ ಅವರು ಹಳೆಯ ರೊಮ್ಯಾಂಟಿಕ್ ತುಂಟತನವನ್ನೂ ಯೌವನದ ಸಿಟ್ಟು ಸೆಡವುಗಳನ್ನೂ ಕಳೆದುಕೊಂಡು, ಸ್ವಚಿಂತನೆಯ ಹುತ್ತದೊಳಗೆ ಸೇರಿಕೊಂಡು ಧ್ಯಾನಸ್ಥರಾಗುವ ಪರಿ ಇಲ್ಲಿದೆ. ಕಳೆದ ದಿನಗಳ ಬದುಕನ್ನು ಮತ್ತೆ ಸಾಕ್ಷಾತ್ಕರಿಸಿಕೊಳ್ಳುತ್ತ, ಅದನ್ನು ಪರಿಷ್ಕರಿಸಿ, ಇಂದಿಗೆ ಹೊಂದಿಕೊಳ್ಳುವಂತೆ ಮಾಡುವ ಮೂಲಕ ನಿವೃತ್ತಿಯ ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳುತ್ತಿದ್ದಾರೆ; ಮತ್ತೆ ಕ್ರಿಯಾಶೀಲವಾಗುತ್ತ ಬಾಳಿಗೆ ಹೊಸ ಚೈತನ್ಯ ಹಾಗೂ ಹೊಳಪನ್ನು ತಂದುಕೊಳ್ಳುತ್ತಿದ್ದಾರೆ; ನಿವೃತ್ತಿಯನ್ನು ತಲಪುವ ಮೂಲಕವೇ ವೃತ್ತಿಗೆ ಅರ್ಥವನ್ನು, ಜೀವಕ್ಕೆ ಸಾರ್ಥಕ್ಯವನ್ನು ತಂದುಕೊಳ್ಳುತ್ತಿದ್ದಾರೆ. ವ್ಯಕ್ತಿಯ ಬಾಳು ನವ ಚೈತನ್ಯವನ್ನು ಪಡೆಯುವುದು ಹೀಗೆಯೇ ಅಲ್ಲವೆ? ನಿಸಾರ್ ಮಾಗಿದ ರೀತಿಯನ್ನು, ಜೀವನ್ಮುಕ್ತವಾಗುತ್ತಾ ಹಿಂಡು ಹಿಳ್ಳುಗಳಲ್ಲಿ ಪ್ರಾಣವೂರುವ ಬಗೆಯನ್ನು ಈ ಲೇಖನಗಳು ಅದ್ಭುತವಾಗಿ ನಿರೂಪಿಸುತ್ತವೆ.

ನಿಸಾರರ ಗದ್ಯ ಸಂಸ್ಕೃತ ಭೂಯಿಷ್ಠವಾದುದು; ಕುವೆಂಪು ಗದ್ಯವನ್ನು ನೆನಪಿಸು ವಂಥದ್ದು. ಉರ್ದು, ಹಿಂದಿ, ಸಂಸ್ಕೃತ ಮೊದಲಾದ ಭಾಷೆಗಳನ್ನು ಬರಮಾಡಿಕೊಳ್ಳುತ್ತ ಹೊಸ ಹೊಸ ಪದಗಳನ್ನು ಸೃಷ್ಟಿಸಿಕೊಳ್ಳುತ್ತಾ, ಹೇಳಬೇಕಾದದ್ದನ್ನು ಖಚಿತವಾಗಿ ಚಿತ್ರಿಸುತ್ತಾ ಹೋಗುವ ಅವರ ಗದ್ಯ ಅಪರೂಪದ್ದು; ಅವರ ಓರಗೆಯ ಯಾವ ಬರೆಹಗಾರರಲ್ಲೂ ಕಾಣಿಸದೆ, ಈ ಬಗೆ ನಿಸಾರರದ್ದೇ ಛಾಪನ್ನು ಸ್ಪಷ್ಟವಾಗಿ ಹೊಂದಿರುವಂಥದ್ದು. ಆದ್ದರಿಂದ ಈ ಬರೆಹಗಳನ್ನು ಓದುವುದೇ ಒಂದು ಖುಶಿಯ ಸಂಗತಿಯಾಗಿದೆ.

ನಿಸಾರರ ಬಾಳ ಸಂಜೆಯ ದುಗುಡಗಳನ್ನು ಮರೆಸುವ ಹಾಗೆ, ಹಸಿರು ನಳನಳಿಸುವ ಹೊಂಗೆಯ ಚಿತ್ರವೊಂದು 'ಬೆಂಗಳೂರು: ಆಪ್ತ ಅನಿಸಿಕೆಗಳು' ಲೇಖನದಲ್ಲಿರುತ್ತದೆ. ನಿಸರ್ಗದ ಈ ಅನುಪಮ ಸೃಷ್ಟಿಯು ಭವಿಷ್ಯದಾಸೆಯ ಮಾನವೀ ದ್ವೀಪದ ಹಾಗೆ ನಿಸಾರರಿಗೆ ಕಾಣಿಸುತ್ತದೆ. ಬದುಕಿಗೆ ಬಾಲ್ಯದ ಅಮೃತ ಸಿಂಚನವೆರೆಯುವ ಮೂಲಕ ಆ ಹೊಂಗೆ ತಮ್ಮ ಬಾಳನ್ನು ನವೀಕೃತಗೊಳಿಸುತ್ತದೆ ಎನ್ನುವ ನಿಸಾರ್ ಅವರು ಸ್ವತಃ ತಾವೇ ಆ ಹೊಂಗೆಯಾಗಿಬಿಟ್ಟಂತೆ ತೋರುವ ಕೌತುಕವನ್ನು ಈ ಬರೆಹಗಳು ಕಟ್ಟಿಕೊಡುತ್ತವೆ.

ನಿಸಾರ್ ಎನ್ನುವ ನಳನಳಿಸುವ ಹೊಂಗೆಯೇ, ನಿಮಗೆ ನಮಸ್ಕಾರ!



ನಿಸಾರರ ವೈಚಾರಿಕ ವ್ಯಕ್ತಿತ್ವದ ಕೆಲವು ಮುಖಗಳು

♦ ಡಾ. ಸಿ. ಎನ್. ರಾಮಚಂದ್ರನ್

ಕಳೆದ ನಾಲ್ಕೂವರೆ ದಶಕಗಳಿಂದ ಗದ್ಯ-ಪದ್ಯಗಳೆರಡೂ ಮಾಧ್ಯಮಗಳಲ್ಲಿ ಸಾರ್ಥಕ ಸಾಹಿತ್ಯಕ ಕೃಷಿ ಮಾಡುತ್ತಿರುವ ನಿಸಾರ್ ಅಹಮದ್ ಅವರ 'ಸಮಗ್ರ ಗದ್ಯ ಬರಹಗಳು' ೨೦೦೨ರಲ್ಲಿ ಪ್ರಕಟವಾಯಿತು. ಇದರಲ್ಲಿ ಅವರ ಸಾಂದರ್ಭಿಕ ಭಾಷಣಗಳು, ಅಂಕಣ ಲೇಖನಗಳು ಮತ್ತು ಸ್ವತಂತ್ರವಾಗಿ ಹೊರ ಬಂದ ಕೃತಿಗಳೂ ಸೇರಿವೆ. ಒಂದು ಸಾವಿರಕ್ಕಿಂತಲೂ ಹೆಚ್ಚು ಪುಟಗಳಷ್ಟು ದೀರ್ಘವಾಗಿರುವ ಮತ್ತು ೧೦೪ ಲೇಖನಗಳನ್ನು ಒಳಗೊಂಡಿರುವ ಈ ಬೃಹತ್ ಸಂಕಲನದಲ್ಲಿ ವಿಷಯಗಳೂ ಅಷ್ಟೇ ವೈವಿಧ್ಯಪೂರ್ಣವಾಗಿವೆ: ಕಾವ್ಯ ಚಿಂತನೆ, ಸಾಹಿತ್ಯ ವಿಮರ್ಶೆ, ಸಾಮಾಜಿಕ-ಸಾಂಸ್ಕೃತಿಕ ಚಿಂತನೆ, ವ್ಯಕ್ತಿಚಿತ್ರಗಳು, ವಿದ್ವತ್‌ಪೂರ್ಣ ಪ್ರಬಂಧಗಳು—ಇವೆಲ್ಲವೂ ಈ ಸಂಪುಟವನ್ನು ಶ್ರೀಮಂತವಾಗಿಸಿವೆ.

ಆದರೆ, ಈ ಕಾರಣದಿಂದಲೇ ಈ ಸಂಪುಟದ ಸಮೀಕ್ಷೆ ಮಾಡುವುದು ಒಂದು ಸವಾಲಾಗುತ್ತದೆ; ಎಲ್ಲಾ ೧೦೪ ಲೇಖನಗಳನ್ನೂ ಪರಿಶೀಲಿಸುವುದು ಅಸಾಧ್ಯ ಮತ್ತು ಅನಪೇಕ್ಷಿತವಾದುದರಿಂದ, ಯಾವ ಲೇಖನಗಳಿಗೆ ಎಷ್ಟು ಒತ್ತು ಕೊಡಬೇಕೆನ್ನುವ ಪ್ರಶ್ನೆ ಎದುರಾಗುತ್ತದೆ. 'ಕಾವ್ಯದ ಬಗೆಗೆ ಕೆಲವು ತಾತ್ವಿಕ ಚಿಂತನೆಗಳು' ಎಂಬ ಲೇಖನದಲ್ಲಿ ನಿಸಾರ್ ಹೀಗೆ ಹೇಳುತ್ತಾರೆ: 'ನಮಗೆ ಚೆನ್ನಾಗಿ ಗೊತ್ತಿರುವ ನಾವು, ನಿಜಕ್ಕೂ ನಾವಲ್ಲ; ನಮಗೆ ಭಿನ್ನರಾದ, ಕೆಲವೊಮ್ಮೆ ಪರಸ್ಪರ ವಿರುದ್ಧರೂ

ಆದ ಹಲವಾರು ಆಸಾಮಿಗಳು ಅಡಗಿ ಕೂತಿದ್ದಾರೆ. ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿ ಇತರರನ್ನು ಪಕ್ಕಕ್ಕೆ ಸರಿಸಿ, ಒಬ್ಬ ಆಚೆ ತಲೆ ಹಾಕುತ್ತಾನೆ' (ಪು. ೩೧). ಈ ಮಾತುಗಳು ಆಧುನಿಕ ಸಮಾಜದಲ್ಲಿ ಅನಿವಾರ್ಯವಾಗುವ ಸಾಹಿತಿಯ ಸಂಕೀರ್ಣ ವ್ಯಕ್ತಿತ್ವದ ಬಗ್ಗೆ ಅರ್ಥಪೂರ್ಣ ಒಳ ನೋಟಗಳನ್ನು ಕೊಡುತ್ತವೆ. ಈ ಒಳ ನೋಟವನ್ನೇ ಆಧರಿಸಿ, ನಿಸಾರರ 'ಸಮಗ್ರ ಗದ್ಯ ಬರಹ'ಗಳಲ್ಲಿ 'ಅಡಗಿ ಕುಳಿತಿರುವ', ನಿಸಾರರ ವ್ಯಕ್ತಿತ್ವದ ಭಾಗಗಳೇ ಆದ ಕೆಲವು 'ಆಸಾಮಿ'ಗಳನ್ನು ಗುರುತಿಸಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ. (ಆದರೆ, ನಿಸಾರರ ಸಮಗ್ರ ಗದ್ಯ ಲೇಖನಗಳ 'ಸಮಗ್ರ' ಸಮೀಕ್ಷೆ ಈ ಲೇಖನದಲ್ಲಿಲ್ಲ. ನನ್ನ ಉದ್ದೇಶ ಈ ಲೇಖನಗಳಲ್ಲಿ ಕಂಡು ಬರುವ ನಿಸಾರರ ವೈಚಾರಿಕ-ವ್ಯಕ್ತಿತ್ವದ ಕೆಲವು ಮುಖಗಳನ್ನು ವಿಮರ್ಶಾತ್ಮಕವಾಗಿ ಗುರುತಿಸುವುದು ಮಾತ್ರ.)

ಹನ್ನೆರಡು ಕವನ ಸಂಕಲನಗಳನ್ನು ಪ್ರಕಟಿಸಿ, ಸ್ವಾತಂತ್ರ್ಯಾನಂತರದ ಕನ್ನಡ ಕವಿಗಳಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿರುವ ವ್ಯಕ್ತಿಯ ಬರಹಗಳಲ್ಲಿ ನಾವು ನಿರೀಕ್ಷಿಸುವಂತೆಯೇ ಎದ್ದು ಕಾಣುವ ಮೊದಲ 'ಆಸಾಮಿ'ಯೆಂದರೆ ಕವಿ-ಕಾವ್ಯಚಿಂತಕ. ಕಾವ್ಯಸೃಷ್ಟಿಯ ಪ್ರಕ್ರಿಯೆ, ಕಾವ್ಯದ ಸ್ವರೂಪ, ಇಂದಿನ ಸಮಾಜದಲ್ಲಿ ಕಾವ್ಯಕ್ಕಿರುವ—ಅಥವಾ ಇರಬೇಕಾದ—ಸ್ಥಾನ-ಮಾನಗಳು, ಕೃತಿ ವಿಮರ್ಶೆ, ಸಾಹಿತ್ಯಕ ಚಳವಳಿಗಳು—ಇತ್ಯಾದಿಗಳ ಬಗ್ಗೆ ಈ ಸಂಪುಟದಲ್ಲಿ ಅನೇಕ ಉತ್ತಮ ಲೇಖನಗಳಿವೆ. ಇವುಗಳಲ್ಲಿ ನಿಸಾರರು ಮಂಡಿಸುವ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದು:

ಈ ಕವಿಗೆ ಕಾವ್ಯಸೃಷ್ಟಿ ಒಂದು ಚತುರ ಆಟವಲ್ಲ; ಮೋಜಿನ, ಮನ ರಂಜನೆಯ ಸಾಧನವೂ ಅಲ್ಲ. ಮನುಷ್ಯನನ್ನು ತಿದ್ದುವ, ತಿದ್ದಿ ಸುಸಂಸ್ಕೃತನನ್ನಾಗಿ ಮಾಡುವ, ಬೌದ್ಧಿಕ-ಭಾವುಕ ಸಾಧನ ಕಾವ್ಯ (ಸಾಹಿತ್ಯ). 'ಪಿತ್ತೋದ್ರೇಕವಿಲ್ಲದ ರಾಷ್ಟ್ರಪ್ರೇಮ, ಪರಾಕ್ರಮಣ ಶೀಲವಲ್ಲದ ಸ್ವಭಾಷೆ-ಸ್ವಸಂಸ್ಕೃತಿಗಳ ಸದಭಿಮಾನ, ಹೊರ ನಾಗರಿಕತೆಯ ಮೆರೆತಕ್ಕೆ ತಕ್ಕನಾದ ಅಂತಃಸಂಸ್ಕೃತಿಯ ಶಿಕ್ಷಣ—ಒಟ್ಟಿನಲ್ಲಿ ಸಹಬಾಳ್ವೆಯ ಬಗೆಗೆ ಯುಕ್ತ ತಿಳುವಳಿಕೆಯನ್ನು ನೀಡಿ ಜನತೆಯ 'ಮಂದಿತನ'ವನ್ನು ನೀಗಿ, ಅವರನ್ನು ಪೌರ ಪ್ರಜ್ಞರನ್ನಾಗಿ ಮಾಡುವ ಸತ್ಕಾಯಕದಲ್ಲಿ ಸಾಹಿತ್ಯ ಅಪ್ರತಿಮವಾದ ಪಾತ್ರ ವಹಿಸಬಹುದು' ('ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮನುಷ್ಯನ ಒಳ ಹೊರ ಕಾಳಜಿಗಳು,' ಪು. ೮೩೮).

ಈ ಸಾಧಾರಣೀಕೃತ ಹೇಳಿಕೆಯಲ್ಲಿ ಅನೇಕ ಗಮನೀಯ ಅಂಶಗಳಿವೆ. ಮೊದಲನೆಯದಾಗಿ, ನಿಸಾರ್ ಸಾಹಿತ್ಯದ ನಿಯೋಗಗಳನ್ನು ವೈಯಕ್ತಿಕ ಹಾಗೂ ಸಾಮಾಜಿಕ ಎರಡೂ ನೆಲೆಗಳಲ್ಲಿ ಸಮಾನವಾಗಿ ಗ್ರಹಿಸುತ್ತಾರೆ. ಎಂದರೆ, ಆಧುನಿಕ ಕಾಲದಲ್ಲಿ ಸಾಹಿತ್ಯವು ನೀತಿಶಾಸ್ತ್ರ, ಸಮಾಜಶಾಸ್ತ್ರ, ಚರಿತ್ರೆ, ಇವೇ ಮುಂತಾದ ಜ್ಞಾನಶಾಖೆಗಳ ನಿಯೋಗಗಳನ್ನು ಒಟ್ಟಿಗೇ ನಿರ್ವಹಿಸಬೇಕು ಎಂಬ ಮ್ಯಾಥ್ಯೂ ಆರ್ನಲ್ಡ್‌ನ ನಿಲವನ್ನು ಇವರು ಒಪ್ಪುತ್ತಾರೆ. ಈ 'ಒಳ ಹೊರ' ಕಾಳಜಿಗಳಲ್ಲಿ ಯಾವುದೇ ಒಂದಕ್ಕೆ ಒತ್ತು ಕೊಟ್ಟರೂ ಸಾಹಿತ್ಯವು ಸೋಲುತ್ತದೆ; ಸಾಹಿತ್ಯದ ಶ್ರೇಷ್ಠ ಉದ್ದೇಶವೇ ಭಗ್ನವಾಗುತ್ತದೆ ಎಂಬ ಎಚ್ಚರಿಕೆಯನ್ನು ಅವರು ತಮ್ಮ ಅನೇಕ ಲೇಖನಗಳಲ್ಲಿ ವಿಶದಪಡಿಸುತ್ತಾರೆ. ಉದಾಹರಣೆಗೆ: '(ಬದ್ಧ ಹಾಗೂ

ಅನಿರ್ಬದ್ಧ) ಇವೆರಡರ ಪ್ರತ್ಯೇಕ ಹಾಗೂ ಯಾವುದೇ ಒಂದು ಹಂತದಲ್ಲಿ ಸಮಜಾಯಿಷಿ ಮಾಡಿಕೊಂಡ ಸಾಧನೆ-ಸಿದ್ಧಿಗಳ ಮೇಲೆ ಕನ್ನಡ ಕಾವ್ಯದ ಭವಿಷ್ಯ ನಿಂತಿದೆಯೆಂದು ನನಗನ್ನಿಸುತ್ತದೆ`. (`ಕನ್ನಡ ಕಾವ್ಯದ ಭವಿಷ್ಯ,` ಪು. ೩); `ಭಾವ ಸ್ಪಂದನವನ್ನು, ರಸೋತ್ಪತ್ತಿಯನ್ನು ಮಾಡುವುದಷ್ಟೇ ಅದರ (ಸಾಹಿತ್ಯದ) ಕೆಲಸವಲ್ಲ. ಸಾಮೂಹಿಕ ಕಸಬುಗಾರಿಕೆಯ ಹೆಸರಿನಲ್ಲಿ ಅದು ಸಮಾಜೋಪಕಾರಿಯಾಗಿ, ಸಕಲ ಜನ ಪ್ರಯೋಜನಕರ ವಾಗಿ ಕಾರ್ಯಪ್ರವೃತ್ತವಾಗಿದೆ`. (`ಸಾಹಿತ್ಯ ಸೃಷ್ಟಿ ಪ್ರಕ್ರಿಯೆ,` ಪು. ೬೩೭); ಇತ್ಯಾದಿ.

ಹಾಗೆಯೇ, ಮೊದಲಿಗೆ ಗಮನಿಸಿದ ಉದ್ಧರಣದಲ್ಲಿ ನಿಸಾರರು ಉಪಯೋಗಿಸುವ 'ಮಂದಿತನವನ್ನು ನೀಗಿ' ಎಂಬ ಪದಗಳನ್ನು ನಾವು ಲಕ್ಷಿಸಬೇಕು. ಕೂಡಲೇ ಅಡಿಗರ `ಶೇಕಡಾ ಏಳರ ಖೂಳರು` ಮತ್ತು 'ಮೂಲಕ ಮಹಾಶಯರು' ಎಂಬ ಕವನ ನೆನಪಿಗೆ ಬರುತ್ತವೆ. ಎಂದರೆ, ಹತ್ತರಲ್ಲಿ ಒಬ್ಬನಾಗಲು ಇಚ್ಛಿಸದಿರುವ, 'ಮಂದಿ'ಯನ್ನು (ಸಾಮಾನ್ಯ ಜನತೆಯನ್ನು) ಸಂದೇಹಿಸುವ, ನಿಜ ಚಹರೆ ಪಟ್ಟಿಯನ್ನು ಉಳಿಸಿಕೊಳ್ಳಲು ಸದಾ ಹೆಣಗುವ, ಪ್ರಾತಿನಿಧಿಕ ನವ್ಯ ಸಾಹಿತಿಗಳ ಸಾಲಿನಲ್ಲಿ ನಿಸಾರರೂ ಬರುತ್ತಾರೆ. ೭೦ರ ದಶಕದಲ್ಲಿ 'ನಿತ್ಯೋತ್ಸವ'ವನ್ನು ಹಾಡಿದಾಗಲೂ ಅದರ ಕವಿ ವೈಚಾರಿಕತೆಯ ನೆಲೆಯಲ್ಲಿ ನವ್ಯರ ವ್ಯಕ್ತಿನಿಷ್ಠೆಯನ್ನು ಸಂಪೂರ್ಣವಾಗಿ ತ್ಯಜಿಸಿರಲಿಲ್ಲ ಎಂಬುದು ನಮಗೆ ಅರಿವಾಗುತ್ತದೆ. ಪರಿಣಾಮತಃ, ಕವಿ-ಚಿಂತಕ ನಿಸಾರರನ್ನು ನವ್ಯ ಹಾಗೂ ಬಂಡಾಯ ಚಳವಳಿಗಳ ನಡುವೆ ನಿಂತ ಸೇತುವೆಯಂತೆ ಕಾಣಬಹುದೆಂದು ತೋರುತ್ತದೆ.

ನಿಸಾರರು ಮತ್ತೊಂದು ನೆಲೆಯಲ್ಲಿಯೂ ಸೇತುವೆಯ ಕೆಲಸವನ್ನು ನಿರ್ವಹಿಸು ತ್ತಾರೆ—ಕನ್ನಡದ ಹಿರಿಯ ಲೇಖಕರನ್ನು ಹತ್ತಿರದಿಂದ ಕಂಡ ಮತ್ತು ಅವರನ್ನು ಇತರರಿಗೆ ಪರಿಚಯಿಸುವ ಕಾರ್ಯ. ಈ 'ಆಸಾಮಿ' ಕುವೆಂಪು, ವಿ.ಸೀ, ಮಾಸ್ತಿ, ಗೋಕಾಕ್, ಅಡಿಗ ಇತ್ಯಾದಿ ಕನ್ನಡದ ಹಿರಿಯ ಲೇಖಕರ ಬಗ್ಗೆ ಪ್ರೀತ್ಯಾದರಗಳಿಂದ ಕಟ್ಟಿಕೊಡುವ ವ್ಯಕ್ತಿಚಿತ್ರ ಗಳು ಅನೇಕ ಸಂದರ್ಭಗಳಲ್ಲಿ ಡಿವಿಜಿ ಅವರ 'ಜ್ಞಾಪಕ ಚಿತ್ರಶಾಲೆ'ಯನ್ನು ನೆನಪಿಸುತ್ತವೆ. ಈ ವರ್ಗದಲ್ಲಿ ಬರುವ ಒಂದೆರಡು ಅಪರೂಪದ ಪ್ರಸಂಗಗಳು ಹೀಗಿವೆ:

'ಕುವೆಂಪು: ವ್ಯಕ್ತಿ-ಕೃತಿ ಅವಲೋಕನ' ಎಂಬ ಲೇಖನ ಕುವೆಂಪು ಅವರ ಪ್ರಕೃತಿ-ಪ್ರೇಮದ ಬಗ್ಗೆ, ತರುಣ ಕವಿಗಳನ್ನು ಅವರು ಪ್ರೋತ್ಸಾಹಿಸುತ್ತಿದ್ದುದರ ಬಗ್ಗೆ, ನಿಸಾರರ ಅನುಭವಗಳನ್ನು ನೈಜವಾಗಿ ದಾಖಲಿಸುತ್ತದೆ. ಮುಖ್ಯವಾಗಿ ಈ ಲೇಖನದಲ್ಲಿ ನಮ್ಮ ಗಮನ ಸೆಳೆಯುವ ಪ್ರಸಂಗವೆಂದರೆ ೧೯೮೫ರಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನಕ್ಕೆ ಬರಲು ಆಗ ಅಕಾಡೆಮಿಯ ಅಧ್ಯಕ್ಷರಾಗಿದ್ದ ನಿಸಾರರು ಕುವೆಂಪು ಅವರ ಮನವೊಲಿಸಿದ್ದು. ಮೊದಲು ಬರುವುದೇ ಇಲ್ಲ ಎಂದು ಹಠ ಹಿಡಿದಿದ್ದ ಕುವೆಂಪು ಅನಂತರ `ಐದು ನಿಮಿಷಕ್ಕಿಂತ ಹೆಚ್ಚು ಕೂತಿರುವುದಿಲ್ಲ' ಎಂಬ ನಿರ್ಧಾರವನ್ನು ನಿಸಾರರಿಗೆ ತಿಳಿಸಿ, ಅನಂತರ ಕವಿ ಸಮ್ಮೇಳನವು ಮುಗಿಯುವವರೆಗೂ ಇದ್ದು ತಾವೂ ಅನಂತರ ಕಾವ್ಯವಾಚನ ಮಾಡಿದ್ದನ್ನು ನಿಸಾರರು ಇಲ್ಲಿ ಹೃದಯಂಗಮವಾಗಿ ವರ್ಣಿಸುತ್ತಾರೆ. ಈ ಪ್ರಸಂಗದ ಹೆಚ್ಚಳವೆಂದರೆ ಆ ಸಮ್ಮೇಳನದ ಮರು ದಿನವೇ ಅಂದಿನ ಪ್ರಧಾನ ಮಂತ್ರಿಗಳಾದ ರಾಜೀವ್

ಗಾಂಧಿಯವರು ಉದ್ದೇಶಿಸಿದ್ದ ಕುವೆಂಪು-ಕಾರಂತರ ಸನ್ಮಾನ ಸಮಾರಂಭಕ್ಕೆ ಬರಲು ಮಂತ್ರಿಗಳಾಗಿದ್ದ ನಜೀರ್ ಸಾಬ್ ಎಷ್ಟು ಬೇಡಿಕೊಂಡರೂ ಕುವೆಂಪು ಸಮ್ಮತಿಸಲಿಲ್ಲ. ಕಾವ್ಯಪ್ರೇಮ ಮತ್ತು ಕವಿಯ ಸ್ವಾಭಿಮಾನ ಇವೆರಡಕ್ಕೂ ಕನ್ನಡಿ ಹಿಡಿಯುವ ಇಂತಹ ಘಟನೆಗಳು ದಾಖಲಾಗುವುದೂ ಆಗಾಮೀ ಪೀಳಿಗೆಗಳ ದೃಷ್ಟಿಯಿಂದ ಮುಖ್ಯ.

ಹಾಗೆಯೇ, ೧೫ ನಿಮಿಷಗಳ ಅವಧಿಯ ಆಕಾಶವಾಣಿಯ ಭಾಷಣಕ್ಕೆ ೩-೪ ವಾರಗಳ ಕಾಲ ತಯಾರಿ ಮಾಡಿಕೊಳ್ಳುತ್ತಿದ್ದ ವಿಸೀ; 'ಸಂಧ್ಯಾವಂದನೆಯನ್ನು ಬೇಕಾದರೆ ಬಿಟ್ಟೇನು, ಕ್ಲಬ್ಬಿಗೆ ಹೋಗೋದನ್ನ ನಿಲ್ಲಿಸೋದಿಲ್ಲ' ಎಂದ ಇಳಿವಯಸ್ಸಿನ ಮಾಸ್ತಿ; ತಾಯಿಯ ಭಾವನೆಗಳಿಗೆ ಬೆಲೆ ಕೊಟ್ಟು ಕಿವಿಯಿಂದ ಬಾಲ್ಯದಲ್ಲಿ ಹಾಕಿದ್ದ ಹತ್ತಕಡಕುಗಳನ್ನು ಎಂದೂ ತೆಗೆಯದ ಎಂ.ಆರ್.ಶ್ರೀ; ಕಾಳಿಂಗರಾವ್ ಹಾಡಿದ ಒಂದು ಸಾಲಿಗೆ ಅವರು ಹಿಂದೆ ಹಾಡಿದ್ದ ಹಾಡನ್ನು ಸೇರಿಸಿ ಪ್ರಸಾರ ಮಾಡಿದ ಆಕಾಶವಾಣಿ—ಹೀಗೆ ಹತ್ತು-ಹನ್ನೆರಡು ಗಂಭೀರ-ವೈನೋದಿಕ ಪ್ರಸಂಗಗಳು ಈ ಸಂಪುಟದುದ್ದಕ್ಕೂ ಸಿಗುತ್ತವೆ. ಇವೆಲ್ಲಾ ವ್ಯಕ್ತಿಚಿತ್ರಗಳ ಹಿಂದಿರುವುದು ಲೇಖಕರ ಸುಸಂಸ್ಕೃತ ಮನಸ್ಸು—ಹಿರಿಯರ ಬಗ್ಗೆ ಪ್ರೀತಿ-ಗೌರವಗಳುಳ್ಳ ಮತ್ತು ಹಿರಿಯರ ಮಾನವ ಸಹಜ ದೌರ್ಬಲ್ಯಗಳನ್ನು ದಾಖಲಿಸುವಾಗಲೂ ಅದೇ ಬಗೆಯ ಪ್ರೀತಿ-ಗೌರವಗಳನ್ನು ಉಳಿಸಿಕೊಳ್ಳುವ ಮನಸ್ಸು.

ಇಂತಹ ಸುಸಂಸ್ಕೃತ ಮನಸ್ಸಿನಲ್ಲಿ ಸಮಕಾಲೀನ ವಿಮರ್ಶೆಯ ಹಾಗೂ ವಿಮರ್ಶಕರ ಬಗ್ಗೆ ಏಕೆ ಜುಗುಪ್ಸೆ-ಕ್ರೋಧಗಳು ತುಂಬಿವೆಯೋ ಅರ್ಥವಾಗುವುದಿಲ್ಲ. ಈ ಸಂಪುಟದಲ್ಲಿ ಸಾಧಾರಣವಾಗಿ ಹತ್ತು ಲೇಖನಗಳಲ್ಲಿ ಒಂದು ಸಂಪೂರ್ಣವಾಗಿ ಸಮಕಾಲೀನ ವಿಮರ್ಶೆಯನ್ನು ವಿಡಂಬಿಸಲೆಂದೇ, ವಿಮರ್ಶಕರನ್ನು ಲೇವಡಿ ಮಾಡಲೆಂದೇ ಬರೆಯಲ್ಪಟ್ಟಿದೆಯೆಂದು ಕಾಣುತ್ತದೆ. ಸಮಕಾಲೀನ ವಿಮರ್ಶೆಯ ಬಗ್ಗೆ ನಿಸಾರರ ಪ್ರಾತಿನಿಧಿಕ ಪ್ರತಿಕ್ರಿಯೆಯೆಂದು ಈ ಮಾತುಗಳನ್ನು ನೋಡಬಹುದು: 'ವಿಮರ್ಶಕರೆನ್ನಿಸಿಕೊಳ್ಳುವವರಲ್ಲಿ ಮಾನಸಿಕ ಸಮತ್ವ, ಅವಿಕಾರ ದೃಷ್ಟಿ, ನಿಷ್ಪಾಕ್ಷಿಕತೆಗಳು ತಗ್ಗುತ್ತಿವೆ. ಲೇಖಕನ ಪೂರ್ವೋತ್ತರ, ಸ್ಥಾನಮಾನ, ತನಗೆ ಲಭಿಸಬಹುದಾದ ಲಾಭಾಲಾಭಗಳ ಲೆಕ್ಕಾಚಾರ ತದಿತರ ಸಂಗತಿಗಳನ್ನು ಅನುಸರಿಸಿ ಬಹುತೇಕ ವಿಮರ್ಶೆ, ಪತ್ರಿಕೆಗಳ ರಿವ್ಯೂಗಳು ತಯಾರಾಗುತ್ತಿವೆ' ('ವಿನಯವಂತ ವಿಸೀ,' ಪು. ೨೧೯). ಕೆಲ ಸಂದರ್ಭಗಳಲ್ಲಿ ಈ ಪ್ರತಿಕ್ರಿಯೆ ಒಂದು ಅತಿರೇಕಕ್ಕೆ ಹೋಗುವುದೂ ಉಂಟು: '....ಸ್ವೈರ ಅಳ್ಳಕತೆ ಮತ್ತು ಅಮೂರ್ತ ಅವ್ಯವಸ್ಥೆಗಳು ವಿಮರ್ಶೆಯ ಹೆಸರಿನ ಮರೆಯಲ್ಲಿ ವಿಕಟಾಟ್ಟಹಾಸಗೈಯುತ್ತಿವೆ.....ಆಗ ಅದು ಬೈ ವಿಮರ್ಶೆ, ಜೈ ವಿಮರ್ಶೆಗಳ ಅತಿರೇಕಾವಸ್ಥೆಯನ್ನು ತಲಪಿಬಿಡುತ್ತದೆ' ('ಬೈ ವಿಮರ್ಶೆ, ಜೈ ವಿಮರ್ಶೆ, ಪು. ೯೬೫).

ವಿಮರ್ಶೆಯನ್ನು ಕುರಿತ ನಿಸಾರರ ಈ ಕಟು ನಿಲವಿಗೆ ಕಾರಣಗಳೇನು? ಪ್ರಾಚೀನ ಮಹಾಕಾವ್ಯಗಳಲ್ಲಿ 'ಕುಕವಿ ನಿಂದೆ' ಒಂದು ಕಾವ್ಯ ಪದ್ಧತಿಯಾಗಿದ್ದಂತೆ ಆಧುನಿಕ ಕಾಲದಲ್ಲಿ 'ಕುವಿಮರ್ಶೆಯ ನಿಂದೆ' ಒಂದು ಪದ್ಧತಿಯಾಗಿದೆಯೆ? ನಿಸಾರರ ಇತರ ಲೇಖನ-ಕಾವ್ಯಗಳನ್ನು ನೋಡಿದರೆ ಅವರು ಇಂತಹ ರೂಢಿಗತ ಸಂಪ್ರದಾಯಗಳಿಗೆ ಸೊಪ್ಪು ಹಾಕುವವರಲ್ಲ ಎಂದು ತೋರುತ್ತದೆ. ಅವರ ಕಹಿ ಸ್ವಾನುಭವವೇ ಕಾರಣ ಎಂದು ಹೇಳಲೂ

ಸಾಧ್ಯವಿಲ್ಲ. ಏಕೆಂದರೆ ಅವರ ಸಮಕಾಲೀನ ಲೇಖಕರ ಹೋಲಿಕೆಯಲ್ಲಿ ನಿಸಾರರ ವಾಙ್ಮಯಕ್ಕೆ ಸಾಕಷ್ಟು ಪ್ರತಿಷ್ಠೆ-ಪ್ರಶಂಸೆಗಳು ಲಭಿಸಿವೆ. ಈ ಸಂಪುಟದ ಲೇಖನಗಳಲ್ಲಿಯೇ ನಿಸಾರರು ದಾಖಲಿಸುವಂತೆ, ಕುವೆಂಪು-ಮಾಸ್ತಿಯವರಂತಹ ಹಿರಿಯರಿಂದ ಹಿಡಿದು ಇಂದಿನ ಸಾಕಷ್ಟು ಲೇಖಕ-ವಿಮರ್ಶಕ-ಪತ್ರಿಕಾ ಸಂಪಾದಕರು ಅವರಿಗೆ ಪ್ರೋತ್ಸಾಹ-ಮನ್ನಣೆಗಳನ್ನು ಕೊಟ್ಟಿದ್ದಾರೆ. ಹಾಗಿದ್ದಾಗ, ಯಾವ ಸಂದರ್ಭದಲ್ಲಿ 'ವಿಮರ್ಶೆ ತಲೆ ಕೆಟ್ಟು ಹುಚ್ಚಾಪಟ್ಟೆ ವರ್ತಿಸತೊಡಗುತ್ತದೆ?' (ಪು. ೯೬೫)

ಎಲ್ಲಾ ಕಾಲ ಘಟ್ಟಗಳಲ್ಲಿಯೂ ಹೆಚ್ಚಿನ ಲೇಖಕರ ಕಟು ಟೀಕೆಗೆ ಗುರಿಯಾಗಿರುವ ವಿಮರ್ಶಕರ ಬಗ್ಗೆ, ಪ್ರಾಯಃ, ಇಷ್ಟೇ ಹೇಳಬಹುದೇನೋ: ಸಾಹಿತಿಗಳು, ಅಧಿಕಾರಿಗಳು, ರಾಜಕಾರಣಿಗಳು, ವೈದ್ಯರು ಮುಂತಾದವರು ಇರುವ ಸಮಾಜದಲ್ಲಿಯೇ ವಿಮರ್ಶಕರೂ ಇರುತ್ತಾರೆ. ಅವರಾರಿಂದಲೂ ಆದರ್ಶ ವರ್ತನೆಯನ್ನು ನಿರೀಕ್ಷಿಸದ, ಅವರೆಲ್ಲರ ದೌರ್ಬಲ್ಯ ಗಳನ್ನೂ ಮಾನವ ಸಹಜವೆಂದು ಒಪ್ಪಿಕೊಳ್ಳುವ ನಾವು ವಿಮರ್ಶಕರನ್ನು ಮಾತ್ರ ಆದರ್ಶಗಳ 'ಮಾದರಿ'ಗಳಾಗಿರಬೇಕೆಂದು ಅಪೇಕ್ಷಿಸುವುದು ಎಷ್ಟು ಸರಿ? ಆಧುನಿಕ ಲೇಖಕರಲ್ಲಿ ಅಡಿಗರೊಬ್ಬರೇ ವಿಮರ್ಶಕನನ್ನು 'ಜನ್ಮ ಶನಿಯೇ, ಜಿಗಣೆ ಗೆಳೆಯ, ಗುರುವೇ' ಎಂದು ಪ್ರಾಮಾಣಿಕವಾಗಿ ಗುರುತಿಸಿದವರೆಂದು ಕಾಣುತ್ತದೆ.

ಕುತೂಹಲದ ಸಂಗತಿಯೆಂದರೆ, ನಿಸಾರರೂ ವಿಮರ್ಶೆಯ ಕಾರ್ಯವನ್ನು ಆಗಾಗ ಕೈಗೊಂಡಿದ್ದಾರೆ; ಈ ಸಂಪುಟದಲ್ಲಿ ಸರ್ವಶ್ರೀ ಕುವೆಂಪು, ಬೇಂದ್ರೆ, ಪಂಜೆ, ಗೋಕಾಕ್, ಕೆ.ಎಸ್.ನ, ಕಡೆಂಗೋಡ್ಲು, ರಾಜರತ್ನಂ, ಅಡಿಗ, ನೆರುಡ, ಇತ್ಯಾದಿ ಅನೇಕ ಮಹತ್ವದ ಲೇಖಕರ ಕೃತಿಗಳನ್ನು ಕುರಿತ ಗಂಭೀರ ವಿಮರ್ಶಾ ಲೇಖನಗಳಿವೆ. ಬಹುತೇಕ ಲೇಖನಗಳು ವಿವರಣಾತ್ಮಕವಾಗಿದ್ದು, ಆಳವಾದ ವಿಶ್ಲೇಷಣೆಯ ಕೊರತೆ ಅಲ್ಲಲ್ಲಿ ಕಾಣುತ್ತದೆ ಎಂದೆನಿಸಿದರೂ ಅವುಗಳಲ್ಲಿ ಯಾವುದೂ 'ಬೈ ವಿಮರ್ಶೆ, ಜೈ ವಿಮರ್ಶೆ'ಯ ಜಾತಿಗೆ ಸೇರಿದವುಗಳಲ್ಲ; ಮತ್ತು ಎಲ್ಲವೂ ಕೃತಿನಿಷ್ಠವಾಗಿವೆ. ನಿದರ್ಶನಾರ್ಥವಾಗಿ, ಈ ವರ್ಗದ ಕೆಲವು ಲೇಖನಗಳನ್ನು ಗಮನಿಸಬಹುದು.

'ಕುವೆಂಪು ಕಾವ್ಯದಲ್ಲಿ ವೈಚಾರಿಕತೆ' ಎಂಬ ೨೬ ಪುಟಗಳ ದೀರ್ಘ ಲೇಖನದಲ್ಲಿ ಅನೇಕ ಬಗೆಯ ಒಳ ನೋಟಗಳಿವೆ. ಇವುಗಳಲ್ಲಿ ಮುಖ್ಯವಾದುದೆಂದರೆ 'ಕುವೆಂಪು ಅವರ ಕಾವ್ಯದಲ್ಲಿ... ಪ್ರಕೃತಿಯ ಈ ತನ್ಮಯತೆ ಕವಿಪ್ರಜ್ಞೆ ಬೆಳೆದಂತೆ ಸಡಿಲಗೊಳ್ಳುವುದನ್ನು ಗಮನಿಸಬಹುದು' (ಪು. ೩೮) ಎಂಬ ತೀರ್ಮಾನ. ಪಂಜೆಯವರ ಶಿಶುಗೀತೆಯೆಂದೇ ಪರಿಗಣಿಸಲ್ಪಟ್ಟಿರುವ 'ಹಾವಿನ ಹಾಡು' ಕವಿತೆಯಲ್ಲಿ ಬ್ರಿಟಿಷ್ ಸರಕಾರದ ವಿರುದ್ಧ ಪ್ರತಿಭಟನೆಯಿದೆ, ನಾಗರ ಹಾವು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಧ್ವನಿಸುತ್ತದೆ ಎಂಬ ಸೂಚನೆ ಮೌಲಿಕವಾಗಿದ್ದು, ಸರಿ ಸುಮಾರು ನವೋದಯದ ಎಲ್ಲಾ ಲೇಖಕರಿಗೂ ವಸಾಹತುಶಾಹಿಯ ಸರಿಯಾದ ಗ್ರಹಿಕೆಯಿತ್ತು ಎಂಬ ಬಹು ಮುಖ್ಯ ಅಂಶವನ್ನು ನಮ್ಮ ಗಮನಕ್ಕೆ ತರುತ್ತದೆ. ಕುವೆಂಪು ಕಾದಂಬರಿಗಳು 'ಕನ್ನಡದಲ್ಲಿ ಗದ್ಯ ಮಹಾಕಾವ್ಯದ ಮೊದಲ ಮಾದರಿಗಳಾಗಿ ಪರಿಗಣಿತವಾಗುವುದು ಅವು ಪ್ರಾದೇಶಿಕ ಸತ್ವವನ್ನು ವಿಪುಲವಾಗಿ

ಬಳಸಿಕೊಂಡೂ ಅದನ್ನು ವಿಜೃಂಭಿಸಲು ಬಿಡದಿರುವುದರಿಂದ' (ಪು. ೯೪), ಎಂಬ ತೀರ್ಮಾನ ಪ್ರಾದೇಶಿಕ ಕಾದಂಬರಿಗಳನ್ನು ಹೊಸದಾಗಿ ನಿರ್ವಚಿಸುವುದರ ಆವಶ್ಯಕತೆಯನ್ನು ಎತ್ತಿ ತೋರಿಸುತ್ತದೆ.

ಈ ವರ್ಗದ ಎರಡು ಲೇಖನಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸಬೇಕು. ಒಂದು ಲೇಖನ ಅವರ ಮೆಚ್ಚುಗೆಯ ಕವಿ ಅಡಿಗರ ಬಗ್ಗೆ ಇರುವ ಲೇಖನ: 'ಕಾವ್ಯರೂಪಿ ಅಡಿಗರಿಗೆ ಅಳಿವಿಲ್ಲ.' ಈ ಲೇಖನದ ಹೆಸರೂ (ನಾನು ಮುಂದೆ ಹೇಳುವಂತೆ) ಅರ್ಥಪೂರ್ಣವಾಗಿದೆ. ಈ ಲೇಖನದ ಮೊದಲನೆಯ ಭಾಗದಲ್ಲಿ 'ವ್ಯಕ್ತಿ ಸಂಬಂಧಿತ' ವಿವರಗಳಿವೆ. 'ದ್ವಂದ್ವಗಳ ಜೊತೆ, ದ್ವಂದ್ವಗಳ ನಡುವೆ ಹೋರಾಡುತ್ತಾ ಹೋದವರು: ದ್ವಂದ್ವವೇ ಆದವರು' ಎಂದು ಪ್ರಾರಂಭವಾಗುವ ಲೇಖನ, ಅಡಿಗರ ಜಂಗಮ ಬದುಕಿಗೆ ಕಾರಣವಾದ ಅವರ ನಿಷ್ಠುರ ಸ್ವಾಭಿಮಾನ, ಪ್ರಾಮಾಣಿಕತೆ ಇತ್ಯಾದಿಗಳನ್ನು ದಾಖಲಿಸುತ್ತಾ, ಕೊನೆಗೆ ಹೀಗೆ (ಈ ಭಾಗ) ಮುಗಿಯುತ್ತದೆ: '...ಯಾವ ವ್ಯಕ್ತಿಪೂಜೆಯನ್ನು ಅಡಿಗ ವೀರ ನಿಷ್ಠೆಯಿಂದ ಖಂಡಿಸುತ್ತಿದ್ದರೋ ಅದು ಅರಿವಿಲ್ಲದಂತೆ ಅವರನ್ನೇ ಪಾಶ ಸದೃಶವಾಗಿ ಬಿಗಿಯುತ್ತಿದ್ದುದು ನನಗೆ ಸಖೇದಾಶ್ಚರ್ಯವನ್ನುಂಟುಮಾಡಿತ್ತು.' (ಪು. ೬೦೩). ಈ ಉದ್ಗಾರ ಅಡಿಗರ ಬಗ್ಗೆ ನಿಜವಾಗಿದ್ದಂತೆಯೇ (ಒಂದೆರಡು ಅಪವಾದಗಳನ್ನು ಬಿಟ್ಟರೆ) ಇತರ ಎಲ್ಲಾ ಪ್ರಸಿದ್ಧ ಲೇಖಕರಿಗೂ ಅನ್ವಯಿಸುತ್ತದೆ. ಉಗ್ರ ವಿಗ್ರಹ ಭಂಜಕರು ಕಾಲ ಗತಿಯಲ್ಲಿ ನಿಷ್ಠ ವಿಗ್ರಹಾರಾಧಕರಾಗುವುದು, ಕೊನೆಗೆ ತಾವೇ ವಿಗ್ರಹವಾಗುವುದು ಮಾನವ ಬದುಕಿನ ಅನಿವಾರ್ಯ ವ್ಯಂಗ್ಯವೆಂದು ನನಗೆ ತೋರುತ್ತದೆ.

ಪಾಬ್ಲೊ ನೆರುಡನ ಬಗ್ಗೆ ಇರುವ ಮತ್ತೊಂದು ಲೇಖನ ೨೨ ಪುಟಗಳಷ್ಟು ದೀರ್ಘವಾಗಿದೆ. ಎಡ ಪಂಥೀಯ ಹೋರಾಟಗಾರನಾದ ಮತ್ತು ಬದುಕಿನುದ್ದಕ್ಕೂ ತಾನು ನಂಬಿದ ತತ್ತ್ವಗಳಿಗೆ ನಿಷ್ಠನಾಗಿ ನಡೆದು ಕೊನೆಗೆ ಆ ಕಾರಣದಿಂದಲೇ ಪ್ರಾಯಃ ಕೊಲೆಗೊಳಗಾದ ನೆರುಡ ತನ್ನ ಕಾವ್ಯದಲ್ಲಿಯೂ 'ವ್ಯವಸ್ಥೆ'ಯ ವಿರುದ್ಧ ಬದುಕಿನುದ್ದಕ್ಕೂ ಬಂಡು ಸಾರಿದವನೇ. ಕಾವ್ಯದ ಸಿದ್ಧ ವಸ್ತು-ಭಾಷೆಗಳನ್ನು ಪ್ರಜ್ಞಾಪೂರ್ವಕವಾಗಿ ತಿರಸ್ಕರಿಸಿ, ಕವಿಗಳ ಅಲಕ್ಷ್ಯಕ್ಕೆ ಪಾತ್ರವಾಗಿದ್ದ ದೈನಂದಿನ ಬದುಕಿನ ತುಡಿತಗಳ ಹಾಗೂ ತನ್ನ ಅನುಭವಗಳ ಬಗ್ಗೆ ಪ್ರತಿಮಾತ್ಮಕ ಕಾವ್ಯವನ್ನು ಬರೆದವ ನೆರುಡ. ಇವನ ಬದುಕು ಮತ್ತು ಸಾಹಿತ್ಯ ಇವೆರಡರ ಬಗ್ಗೆಯೂ ಅಪಾರ ಮೆಚ್ಚುಗೆಯಿರುವ ನಿಸಾರರು ನೆರುಡನನ್ನು 'ಬದ್ಧ ಕವಿ'ಯ ಮಾದರಿಯೆಂದು ಕಾಣುತ್ತಾರೆ. ಅವನ ಬದುಕಿನ ಹೋರಾಟ ಮತ್ತು ಅವನ ಕಾವ್ಯದ ಪ್ರಸ್ತುತತೆ—ಇವೆರಡನ್ನೂ ಈ ಲೇಖನದಲ್ಲಿ ಆಪ್ತವಾಗಿ, ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ. ಈ ಲೇಖನದ ಮತ್ತೊಂದು ವಿಶೇಷವೆಂದರೆ, ನೆರುಡನ ಅನೇಕ ಪ್ರಮುಖ ಕವನಗಳ ಮುಖ್ಯ ಭಾಗಗಳು ಇಲ್ಲಿ ಅನುವಾದಿತವಾಗಿವೆ. (ಈ ಲೇಖನ ನಿಸಾರರು ನೆರುಡನ ಕವನಗಳ ಅನುವಾದದ ಸಂಕಲನಕ್ಕೆ ಬರೆದ ಪ್ರಸ್ತಾವನೆ.) ಈ ಲೇಖನದಿಂದ ಓದುಗರಿಗೆ ನೆರುಡನ ಕಾವ್ಯ ಪ್ರವೇಶ ಸುಲಭವಾಗುತ್ತದೆ.

ಕೊನೆಯದಾಗಿ, ಪ್ರಾಯಃ ನಿಸಾರರೇ ಗಮನಿಸದಿರುವಂತಹ ಸ್ವಲ್ಪ ಭೋಳೆ

ಎನ್ನಬಹುದಾದ ಮತ್ತೊಬ್ಬ ಆಸಾಮಿಯನ್ನು ಗುರುತಿಸಿ ಈ ಲೇಖನವನ್ನು ಮುಗಿಸಬಹುದು. ಚುನಾವಣೆಗಳು, ಗಿದ್ವಾನಿ, ಜೆಹಾದ್, ಇತ್ಯಾದಿ ವಿಷಯಗಳನ್ನು ಕುರಿತ ಲೇಖನಗಳಲ್ಲಿ ಈ ಆಸಾಮಿ ಮತ್ತೆ ಮತ್ತೆ ಇಣಿಕಿ ನೋಡುತ್ತಾನೆ; ಅನೇಕ ಸರಳೀಕೃತ ಮತ್ತು ಏಕಪಕ್ಷೀಯ ತೀರ್ಮಾನಗಳನ್ನು ಕೊಟ್ಟು ಮಾಯವಾಗುತ್ತಾನೆ.

'ಹೋದೆಯಾ ಅಂದರೆ, ಬಂತು ಗವಾಕ್ಷಿಯಲ್ಲಿ' ಎಂಬ ಲೇಖನ ನಮ್ಮ ದೇಶದ ಚುನಾವಣೆಗಳಲ್ಲಿ ಸಾರ್ವತ್ರಿಕವಾಗಿ ನಡೆಯುವ ಅನೀತಿ-ಅನ್ಯಾಯಗಳನ್ನು ಅತ್ಯಂತ ತೀವ್ರವಾಗಿ ಖಂಡಿಸುತ್ತದೆ, ನಿಜ. ಇನ್ನೂ ಶೇಕಡಾ ೫೦ರಷ್ಟು ಪ್ರಜೆಗಳು ಅನಕ್ಷರಸ್ಥರು ಮತ್ತು ಬಡವರಾಗಿರುವುದರಿಂದ ನಮ್ಮ ದೇಶದಲ್ಲಿ ಚುನಾವಣೆಗಳು ಸಂಪೂರ್ಣವಾಗಿ ನ್ಯಾಯಯುತವಾಗಿರಲು ಸಾಧ್ಯವಿಲ್ಲ. ಅನೇಕ ಅಕ್ರಮಗಳು ನಡೆಯುತ್ತವೆ. ಆದರೆ, ೧೦೦ ಕೋಟಿ ಜನರಿರುವ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವುದೇ ಒಂದು ಮಹತ್ಸಾಧನೆಯಲ್ಲವೆ? (ಶ್ರೀಮಂತ ಹಾಗೂ ಅಕ್ಷರಸ್ಥ ದೇಶವಾದ ಅಮೆರಿಕಾದಲ್ಲಿ ಐದು ವರ್ಷಗಳ ಹಿಂದೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತಿದ್ದರೂ 'ಗೆದ್ದ' ಬುಷ್ ಅಧಿಕಾರಕ್ಕೆ ಬಂದುದನ್ನು ನೋಡಿದ ಅನಂತರವಂತೂ ನಮ್ಮ ದೇಶದ ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ಅಭಿಮಾನವಾಗುತ್ತದೆ.) ಟಿ. ಎನ್. ಶೇಷನ್ ಅನಂತರವಂತೂ ಚುನಾವಣಾ ಆಯೋಗಕ್ಕೆ ಬೆನ್ನೆಲುಬು ಬಂದು ಅದು ಸಾಕಷ್ಟು ನ್ಯಾಯಯುತವಾದ ಚುನಾವಣೆಗಳನ್ನು ನಡೆಸುತ್ತಿದೆ. ಯಾರನ್ನು 'ಮೂದೇವಿ'ಗಳೆಂದು ನಿಸಾರರು ಹೀಗಳೆಯುತ್ತಾರೋ ಅವರೇ, ಎಂದರೆ ಗ್ರಾಮವಾಸಿಗಳೇ ತಮಗೆ ಬೇಡವಾದ ಸರಕಾರ ಗಳನ್ನು ಉರುಳಿಸುತ್ತಿದ್ದಾರೆ, ಹೊಸ ಮುಖಗಳನ್ನು, ಪಕ್ಷಗಳನ್ನು ಅಧಿಕಾರಕ್ಕೆ ತರುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಉದ್ದಕ್ಕೂ ಕಟು ವ್ಯಂಗ್ಯ-ವಿಡಂಬನೆಗಳಿಂದ ಕೂಡಿದ ಈ ಲೇಖನದಲ್ಲಿ 'ಈ ಚುನಾವಣೆಯ ವೈಖರಿ, ಹಳ್ಳಿಗರ ಮೂದೇವಿತನ ಆ ಕಾಲಕ್ಕೇ ಪ್ರಜಾತಂತ್ರ ನಮ್ಮ ದೇಶಕ್ಕೆ ಮಾಡಿಸಿದ್ದಲ್ಲ ಎಂಬ ಭಾವನೆಯನ್ನು ನನ್ನಲ್ಲಿ ಮಜಬೂತು ಗೊಳಿಸಿತ್ತು' (ಪು. ೩೮೭) ಎಂಬಂತಹ ಏರು ಹುಬ್ಬಿನ ತೀರ್ಮಾನವನ್ನು ಕೊಟ್ಟರೆ ಅದು ಆ ಹಳ್ಳಿಗರ ರಾಜಕೀಯ ಪ್ರಜ್ಞೆಗೂ ಭಾರತದ ಪ್ರಜಾತಂತ್ರ ವ್ಯವಸ್ಥೆಗೂ ಕೂಡಿಯೇ ಮಾಡಿದ ಅಪಚಾರವೆಂದು ನನಗೆ ತೋರುತ್ತದೆ. ಇದೂ 'ಸುಸಂಸ್ಕೃತ ಅಲ್ಪ ಸಂಖ್ಯಾತರು' ಎಂಬ ಪರಿಕಲ್ಪನೆಯಲ್ಲಿ ನಂಬಿಕೆಯಿರುವ ನವ್ಯರ ವೈಚಾರಿಕ ದುರಭಿಮಾನದ ಕುರುಹು.

ಅದೇ ಭೋಳೆತನದ ನೆಲೆಯಲ್ಲಿ, ಎಂದರೆ ಒಂದು ವಿಷಯದ ಎಲ್ಲಾ ಮುಖ ಗಳನ್ನೂ ಪರಿಗಣಿಸದೆ, ನಿಸಾರರು ಕೊಡುವ ದುಡುಕಿನ ತೀರ್ಮಾನಗಳ ಮತ್ತೊಂದು ನಿದರ್ಶನವೆಂದರೆ 'ಸರ್ವಗುಣ ಸಂಪನ್ನ, ಏಕಗುಣಹೀನ' (ಪು. ೩೪೭-೩೬೨) ಎಂಬ ಲೇಖನ. ಇದು ಭಗವಾನ್ ಎಸ್. ಗಿದ್ವಾನಿಯವರು ಇಂಗ್ಲಿಷ್‌ನಲ್ಲಿ ಬರೆದ 'ದ ಸ್ವೋರ್ಡ್ ಆಫ್ ಟೀಪೂ ಸುಲ್ತಾನ್' ಎಂಬ ಕಾದಂಬರಿಯ ಕನ್ನಡ ಅನುವಾದವನ್ನು ಕುರಿತ ಲೇಖನ. ಸರಳೀಕೃತ ತೀರ್ಮಾನಗಳು ಮತ್ತು ಬಾಲಿಶ ನಿಲವುಗಳು ಈ ಲೇಖನದುದ್ದಕ್ಕೂ ಕಂಡು ಬರುತ್ತವೆ. ಮೊದಲು ಗಿದ್ವಾನಿಯ ಬಗ್ಗೆ. 'ಹದಿಮೂರು ವರ್ಷಗಳ ದೀರ್ಘ

ಸಂಶೋಧನೆಯ ತಪಃಫಲ' ಎಂದು ಈ ಕೃತಿಯನ್ನು ನಿಸಾರರು ವರ್ಣಿಸುವುದಕ್ಕೆ ಯಾವ ಆಧಾರವೂ ನನಗೆ ಕಾಣುವುದಿಲ್ಲ. ಏಕೆಂದರೆ, ತಮ್ಮ ದೀರ್ಘ ಸಂಶೋಧನೆಯಲ್ಲಿ ತಾವು ಓದಿದ, ನೋಡಿದ, ಅನ್ವೇಷಿಸಿದ ಒಂದೇ ಒಂದು ಕೃತಿಯನ್ನಾಗಲೀ, ಲೇಖನವನ್ನಾಗಲೀ, ದಾಖಲೆಯನ್ನಾಗಲೀ ಗಿದ್ವಾನಿ ಹೆಸರಿಸುವುದಿಲ್ಲ; ಮತ್ತು ಅವರೇ ಇದನ್ನು `ಕಾದಂಬರಿ' ಯೆಂದು ಕರೆಯುತ್ತಾರೆ. ಎರಡನೆಯದಾಗಿ, ಟೀಪೂವಿನ ಬಗ್ಗೆ ನಿಸಾರರಿಗೆ ಇರುವ ಆರಾಧನಾ ಭಾವ. ಶೇಖ್ ಆಲಿ ಮತ್ತು ಮೊಹಿಬ್ಬುಲ್ ಹಸನ್ ಅಲ್ಲದೆ ಇನ್ನೂ ಅನೇಕರು—ಮೇಜರ್ ಡಿರೋಮ್, ಮಿಷೋ, ಭಾರತೀಯ ಇತಿಹಾಸಜ್ಞರಾದ ಕಿರಮಾನಿ, ಸತ್ಯನಾತಿಯರ್ ಹಯವದನರಾವ್, ಇತ್ಯಾದಿ—ಟೀಪೂವಿನ ಬಗ್ಗೆ ದಾಖಲೆಗಳನ್ನಾಧರಿಸಿ (ಕಾದಂಬರಿ ಯನ್ನಲ್ಲ) ಇತಿಹಾಸ ರಚನೆಗೆ ಪ್ರಯತ್ನಿಸಿದ್ದಾರೆ. ಇವರೆಲ್ಲರ ಒಟ್ಟಾರೆ ಅಭಿಪ್ರಾಯದಂತೆ, ಟೀಪೂ ಅನೇಕಾನೇಕ ದ್ವಂದ್ವಗಳಿಂದ ಕೂಡಿದ ಅತ್ಯಂತ ಸಂಕೀರ್ಣ ವ್ಯಕ್ತಿ: `ಆತನಲ್ಲಿ ಅದಮ್ಯ ಜ್ಞಾನಾಪೇಕ್ಷೆಯಿತ್ತು,' ನಿಜ; ಆದರೆ `ಶರಣಾದವರನ್ನು ಮನ್ನಿಸುವ ಮನೋ ವೈಶಾಲ್ಯ' ಇರಲಿಲ್ಲ. ತನ್ನ ಸ್ವರಾಜ್ಯವಾದ ಮೈಸೂರು ಪ್ರಾಂತ್ಯದಲ್ಲಿ ಅವನು ಸರ್ವಧರ್ಮ ಸಹಿಷ್ಣುವಾಗಿದ್ದ ನಿಜ; ಆದರೆ `ಪರ' ರಾಜ್ಯಗಳಾದ ಮಲಬಾರ್, ಇಂಗ್ಲಿಷರ ವಶದಲ್ಲಿದ್ದ ಮಂಗಳೂರು, ಮುಂತಾದೆಡೆಗಳಲ್ಲಿ ಬಲಾತ್ಕಾರದ ಮತಾಂತರ ಅಥವಾ ಮರಣ ದಂಡನೆ ಮುಂತಾದ ಉಗ್ರ ಹಿಂಸೆಯ ಅನೇಕ ಮಾರ್ಗಗಳನ್ನು ಅವನು ಅನುಸರಿಸುತ್ತಿದ್ದುದೂ ನಿಜ. ಗೆದ್ದವರ ಇತಿಹಾಸ ಒಂದು ನೆಲೆಯಲ್ಲಿ ಸತ್ಯದೂರವಾಗಿದ್ದರೆ, ಸೋತವರ ಇತಿಹಾಸವೂ ಮತ್ತೊಂದು ನೆಲೆಯಲ್ಲಿ ಸತ್ಯದೂರವಾಗಿರುತ್ತದೆ—ಸ್ವವೈಭವೀಕರಣ ಅಥವಾ ಸ್ವಸಮರ್ಥನೆ ಗಳ ನೆಲೆಗಳಲ್ಲಿ.

ಹೀಗೆಯೇ, ನಿಸಾರರು ಹೇಳುವಂತೆ 'ಜೆಹಾದ್'ನ ವ್ಯಾಖ್ಯಾನ ಅಷ್ಟು ಸರಳವಲ್ಲ: `ಅಲ್ಲಾಹ್‌ನ ಮಾರ್ಗದ ವಿರುದ್ಧ ಸೆಟೆದೆದ್ದ, ಧರ್ಮಾನುಷ್ಠಾನಕ್ಕೆ ಬಾಧಕವಾಗಿ ತಲೆದೋರಿದ್ದ ದುಶ್ಶಕ್ತಿಗಳ ದಮನಕ್ಕಾಗಿ ಮತ್ತು ಸತ್ಯವಿಶ್ವಾಸದ ಸತ್ಪಥಾನುಸರಣೆಯಿಂದ ಆ ಸರ್ವೇಶನನ್ನು ಒಲಿಸಿಕೊಳ್ಳುವುದಕ್ಕಾಗಿ ತನ್ನ ಕೈಲಾದದ್ದನ್ನೆಲ್ಲಾ ಮಾಡುವ ದೃಢ ಸಂಕಲ್ಪವನ್ನು 'ಜೆಹಾದ್' ಎನ್ನಬಹುದು' (ಪು. ೮೯). ಈ ನಿರ್ವಚನದಲ್ಲಿರುವ ಪ್ರತಿಯೊಂದು ಗೃಹೀತವೂ ಪ್ರಶ್ನಾರ್ಹವೆ: `ಅಲ್ಲಾಹ್‌ನ ಮಾರ್ಗ' ಯಾವುದು ಎಂದು ತಿಳಿಯುವುದು ಹೇಗೆ? 'ದುಶ್ಶಕ್ತಿಗಳು' ಯಾರು ಎಂದು ತಿಳಿಯುವುದು ಹೇಗೆ? ಯಾವುದು `ಸತ್ಯ'. ಯಾವುದು 'ಸತ್ಪಥ'?—ಈ ಪ್ರಶ್ನೆಗಳ ಉತ್ತರಗಳು ಸಾಪೇಕ್ಷ; ಕಾಲಕಾಲಕ್ಕೆ, ಮತ್ತು ಸಮುದಾಯದಿಂದ ಸಮುದಾಯಕ್ಕೆ ಇವು ಬದಲಾಗುತ್ತಾ ಹೋಗುತ್ತವೆ.

ನಿಸಾರ್ ಅಹಮದ್ ಕವಿ, ವಿಜ್ಞಾನಿ, ಚಿಂತಕ. ತಮ್ಮ ಮೊದಲ ಘಟ್ಟದ ಪ್ರಸಿದ್ಧ ಕವನದಲ್ಲಿ (`ನಿಮ್ಮೊಡನಿದ್ದೂ......') ಗುರುತಿಸಿಕೊಂಡಂತೆ ಇವರು ಎರಡು ಧರ್ಮಗಳ ನಡುವೆ, ಎರಡು ಭಾಷೆಗಳ ನಡುವೆ (`ವಾಮಕ್ಕೆ ಸಂಸ್ಕೃತ, ಬಲಕ್ಕರಬ್ಬಿ'), ಎರಡು ಜ್ಞಾನ ಶಾಖೆಗಳ ನಡುವೆ ಸದಾ ಉಸಿರಾಡುತ್ತಿರುವವರು. ಇದೇನೂ ಸುಲಭವಲ್ಲ ಎಂಬುದು ಈ ಸಂಪುಟದಲ್ಲಿರುವ ಅನೇಕ ಲೇಖನಗಳಿಂದ ಗೊತ್ತಾಗುತ್ತದೆ. ಹಾಗೆಯೇ, ಈ `ರೋಜ್

ವಾಕ್ ಅನ್ನು ಸಮರ್ಥವಾಗಿ, ಅರ್ಥಪೂರ್ಣವಾಗಿ ಇಲ್ಲಿಯವರೆಗೂ ನಿಸಾರ್ ಮಾಡಿದ್ದಾರೆಂಬುದೂ ಈ ಸಂಪುಟದ ಲೇಖನಗಳಿಂದ ಸ್ಪಷ್ಟವಾಗುತ್ತದೆ. ಈ ಲೇಖನಗಳಲ್ಲಿ ಗಂಭೀರ ಚಿಂತನೆಯಿದೆ; ಸಾಹಿತ್ಯ-ಭಾಷೆ-ಸಂಸ್ಕೃತಿಗಳ ಬಗ್ಗೆ ಮೌಲಿಕ ಒಳ ನೋಟಗಳಿವೆ; ಇಂದಿನ ಉಪಭೋಕ್ತಾ ಸಂಸ್ಕೃತಿಯ ನಿಷ್ಠುರ ವಿಮರ್ಶೆಯಿದೆ; ಮತ್ತು ತೀಕ್ಷ್ಣವಾದ-ವಿವಾದಗಳಿಗೆ ಆಸ್ಪದ ಕೊಡುವ ವಿಚಾರಗಳಿವೆ. ಎಂದರೆ, ಈ ಲೇಖನಗಳು ತುಂಬಾ ಉಪಯುಕ್ತ ಹಾಗೂ ಪ್ರಸ್ತುತ ಎಂದು ಬೇರೆ ಹೇಳಬೇಕಾಗಿಲ್ಲ, ಅಲ್ಲವೆ!

ಭೂತ ಕಾಲದಿಂದ ಪಾಠ ಕಲಿಯುವುದು ವರ್ತಮಾನಸ್ಥರಿಗೆ ಭವಿಷ್ಯೋನ್ಮುಖರಾಗುವ ದಿಸೆಯಲ್ಲಿ ಲಾಭದಾಯಕವಾಗಬೇಕು. ಭೂತವೆಂದರೆ ಇತಿಹಾಸದ ನಿರ್ಜೀವ ದಾಖಲೆಯಲ್ಲ. ಜನಾಂಗಗಳ ಏಳುಬೀಳಿನ ಜ್ವಲಂತ ಅನುಭವಗಳ ಅಮೂಲ್ಯ ನಿಕ್ಷೇಪ. ಆದರಿಂದ ನಮ್ಮ ಜೀವಿತಗಳನ್ನು ಸಮಗ್ರವಾಗಿ ರೂಪಿಸುವ ಸಿದ್ಧ ಧಾತುಗಳನ್ನು ಚೂರೂ ಬಿಡದೆ ಅನಾಮತ್ತಾಗಿ ಎತ್ತಿಕೊಳ್ಳಬಹುದೆಂದು ಇದರ ಅರ್ಥವಲ್ಲ. ಗತಕಾಲೀನ ಖನಿಯಿಂದ ನಮಗೆ ದಕ್ಕುವುದು ಅದುರು ರೂಪದ ಅಸಂಸ್ಕೃತ ಸಾಮಗ್ರಿ. ಅದನ್ನು ಅಗೆದು ಬಗೆದು ಅತ್ಯಧಿಕ ಲೋಹಾಂಶವಿರುವುದನ್ನು ಆರಿಸಿಕೊಂಡು ನಮ್ಮ ಯುಗಧರ್ಮದ ಆಧುನಿಕ ಅಗತ್ಯಗಳ ಹತ್ಯಾರುಗಳ ನಿರ್ಮಾಣಕ್ಕೆ ಬಳಸಿಕೊಳ್ಳುವುದರಲ್ಲಿ ರಾಷ್ಟ್ರದ ವಿವೇಕ ಅಡಗಿದೆ. ಅಂದಿನ ಆಶಯಪೂರ್ತಿಗೆ ಮೀಸಲಾಗಿದ್ದವುಗಳಿಂದ ಇಂದು ಮತ್ತು ಮುಂದಿನ ಜೀವ ಸಂಜೀವಕ ಜಿನಿಸಾಗುವಂಥವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಮಗಿರಬೇಕು. ಇದರೊಂದಿಗೆ ಗತ ಕಾಲದ ಏನೆಲ್ಲವೂ ಚೆನ್ನು, ಪೂರ್ವಿಕರ ಬದುಕೆಲ್ಲ ಹೊನ್ನು ಎಂಬ ಅವಾಸ್ತವ ಭ್ರಮೆ ನಮ್ಮ ಮನಸ್ಸಿಗೆ ಹತ್ತದೆ ಇದ್ದ ಹಾಗೆ ಎಚ್ಚರ ವಹಿಸುವುದೂ ಅಗತ್ಯ.

(ಭೂತ ಕಾಲದ ಪಾಠ)

✧ ✧ ✧

ನಡೆಯುವಾಗ ಎರಡು ಕಾಲುಗಳನ್ನೂ ಏಕ ಕಾಲಕ್ಕೆ ಎತ್ತಿಡುವುದಿಲ್ಲ. ಒಂದು ಮುಂದಾದರೆ ಮತ್ತೊಂದು ಹಿಂದೆ. ನಾಗರಿಕತೆ ಸಂಸ್ಕೃತಿಗಳ ಮುನ್ನಡೆಯೂ ಈ ಥರದ್ದೇ.

(ಸಂಸ್ಕೃತಿ, ನಾಗರಿಕತೆ)



ನಿಸಾರರ ಸಾಹಿತ್ಯ ಸಂಬಂಧಿ ಗದ್ಯ ಬರಹಗಳಲ್ಲಿನ ಪ್ರಮುಖ ಚಿಂತನೆಗಳು

♦ ಡಾ. ಎಲ್. ಜಿ. ಮೀರಾ

ಶ್ರೀ ನಿಸಾರ್ ಅಹಮದ್ ಅವರು ಬರೆದಿರುವ ಸಾಹಿತ್ಯ ಸಂಬಂಧಿ ಗದ್ಯ ಬರಹಗಳನ್ನು ಗಮನಿಸಿದಾಗ, ಅವರು ಮೂರು ಮುಖ್ಯ ವಿಚಾರಗಳ ಬಗ್ಗೆ ತಮ್ಮ ಮನಸ್ಸನ್ನು ಕೇಂದ್ರೀಕರಿಸಿರುವುದು ಕಾಣಿಸುತ್ತದೆ. ಆ ಮೂರು ವಿಷಯಗಳೆಂದರೆ:

1. ಸಾಹಿತ್ಯ ಸೃಷ್ಟಿಯ ಸೂಕ್ಷ್ಮಗಳು
2. ಸಾಹಿತ್ಯ ಮತ್ತು ಸಮಾಜದ ಸಂಬಂಧ
3. ವಿಮರ್ಶೆಯ ನಿಲವು ನೋಟಗಳು.

ಇವುಗಳನ್ನು ಒಂದೊಂದಾಗಿ ವಿವರಿಸಿಕೊಳ್ಳಬಹುದು.

ಭಾಗ-1

ಸಾಹಿತ್ಯ ಸೃಷ್ಟಿಯ ಸೂಕ್ಷ್ಮಗಳು : ಈ ವಿಚಾರವು ನಿಸಾರರ ಮನಸ್ಸನ್ನು ಬಹುವಾಗಿ ಕಾಡಿದೆ. 'ಸಾಹಿತ್ಯ ಸೃಷ್ಟಿ ಕಾರ್ಯ ಬರಿಯ ಚಕ್ಕಂದವಲ್ಲ, ಬೇಕಾದಂತೆ ಮೋಜು ಮಾಡುವ ಪ್ರವಾಸಿ ಮಂದಿರವಲ್ಲ, ಅದೊಂದು ಗರ್ಭಗುಡಿ. ನಿರ್ಬಂಧದ ನಡಾವಳಿ, ಶ್ರದ್ಧಾನ್ವಿತ ಗಾಂಭೀರ್ಯ ಅಲ್ಲಿ ಭೂಷಣಪ್ರಾಯ'[1] ಎಂಬ ವಿಚಾರದಿಂದ ನಿಸಾರರು ಹೊರಟಿದ್ದಾರೆ. ಆದ್ದರಿಂದಲೇ ಸಾಹಿತ್ಯ ಸೃಷ್ಟಿಯಲ್ಲಿನ ಸಂತೋಷ, ಸಮಸ್ಯೆ, ಸವಾಲುಗಳನ್ನು ಗಂಭೀರ ಅವಗಾಹನೆಗೆ ಒಳಪಡಿಸಿದ್ದಾರೆ. ಮೊದಲಿಗೆ, ಸಾಹಿತ್ಯ ಸೃಷ್ಟಿಯಂಥ ಗಂಭೀರ ಕಾರ್ಯವನ್ನು ಮಾಡುವ ಕವಿಯ ಪಾತ್ರವು ಸಮಾಜದಲ್ಲಿ ಎಷ್ಟು

ವಿಶಿಷ್ಟವಾದುದು ಎಂದು ಚಿಂತಿಸಿದ್ದಾರೆ.

> '...ಹೊಟ್ಟೆ, ಬಟ್ಟೆ, ವೈಭವ ವಸ್ತುಗಳ ಲೋಕಾರೂಢಿಯ ಮಶಾಲು ಬೆಳಕಿನ ವರಾತದಲ್ಲಿ ಕವಿಯ ಅಸ್ತಿತ್ವ ಮೂಲೆಗುಂಪಾಗಿ ಅಗಣ್ಯವಾಗಿ ಕಂಡರೂ ಸಂಸ್ಕೃತಿ ವಾಹಕರಲ್ಲಿ ಅವನೂ ಒಂದು ಮುಖ್ಯ ಪಾತ್ರವಾಗಿರುತ್ತಾನೆ. ಗಲಿಬಿಲಿ ಮಾಡದೆ, ಏಕ ಪ್ರಕಾರದ ಪ್ರಭೆಯಿಂದ ರೂಮಿನ ಮೂಲೆ ಮೊಡಕುಗಳನ್ನು ಬೆಳಗುವ ಹಣತೆಯಂತೆ ಸಾರ್ಥಕ ಕಾರ್ಯಶೀಲನಾಗಿರುತ್ತಾನೆ.'[2]

ಇಂತಹ ಕವಿಗಳ ವೈಶಿಷ್ಟ್ಯವನ್ನು ನಿಸಾರರು ಇನ್ನೂ ಕೆಲವು ಮಾತುಗಳಲ್ಲಿ ಸ್ಪಷ್ಟಗೊಳಿಸಿದ್ದಾರೆ.

> 'ಹಿಂದಿನದರ ಕನವರಿಕೆ, ಮುಂದಿನದರ ಕನಸಿಕೆಯನ್ನು ಇಂದಿನ ವಾಸ್ತವದೊಡನೆ ಕೂಡಿಸಿ, ತಾಳೆಯಾಗಿಸಿ, ಮನುಷ್ಯ ಜೀವನದ ಸಮಗ್ರತೆ, ಗುರಿ, ಅರ್ಥವಂತಿಕೆಗಳ ಕಿಂಚಿತ್ ತಿಳಿವನ್ನಾದರೂ ಪಡೆಯುವವರ ಪೈಕಿ, ಯಃಕಶ್ಚಿತ್ ವಿದ್ಯಮಾನಕ್ಕೂ ನವಿಲು ಗರಿಯಂತೆ ಪರಿಸ್ಪಂದಿಸುವವರ ಪೈಕಿ ಕವಿ ವರ್ಗವೂ ಒಂದು. ಹಿಂಡಿನ ಕೂಗಿನ ಏಕತೆಯಿಂದ ಪ್ರತ್ಯೇಕಿಸಿ ಕೊಳ್ಳಬಲ್ಲ ಏರು, ವೈವಿಧ್ಯ ಅವರ ಧ್ವನಿಗೆ ಇರಬಹುದು.'[3]

ಕವಿಗೆ ಈ ವಿಶಿಷ್ಟ ದನಿಯನ್ನು ನೀಡುವ ಸೃಷ್ಟಿ ಕಾರ್ಯದ ಬಗೆಗೆ ನಿಸಾರರಿಗೆ ತಣಿಯದ ಕುತೂಹಲವಿದೆ.

> '...ಯಾವುದೇ ಸೃಜನಶೀಲ ಕರ್ಮದ ನೇಪಥ್ಯದಲ್ಲಿ ಒಂದು ನಿಗೂಢ, ತರ್ಕಾಗಮ್ಯ ಅಂಶವಿದ್ದೇ ತೀರುತ್ತದೆ; ಜೀವ ಕ್ರಿಯೆಯನ್ನು ಡಿ.ಎನ್.ಎ., ಆರ್.ಎನ್.ಎ.ಗಳಿಂದ ವಿಶ್ಲೇಷಿಸಿದರೂ ಕೊನೆಗೆ ಏನೋ ಒಂದು ರಹಸ್ಯ ಉಳಿಯುವ ಹಾಗೆ... ಸಾಹಿತ್ಯಕ್ಕೆ ಅನ್ವಯಿಸಿದಂತೆ ಸೃಷ್ಟಿಕ್ರಿಯೆ ವಾಗತೀತ ಮನೋವ್ಯಾಪಾರ. ಹಾಗಿದ್ದೂ, ಫಲ ಸ್ವರೂಪದಲ್ಲಿ ಅದು ವಾಗಧೀನವಾಗದೆ ಅದಕ್ಕೆ ಸಾರ್ಥಕ್ಯವಿಲ್ಲ...'[4]

—ಹೀಗೆ ಕಾವ್ಯಸೃಷ್ಟಿಯ ಬಗೆಗೆ ತಲ್ಲೀನವಾಗಿ ಯೋಚಿಸುವ ನಿಸಾರರು ಬಹಳಷ್ಟು ಚಿಂತನ ಮಂಥನಗಳ ಅನಂತರ, ಸ್ಟಿಫನ್ ಸ್ಪೆಂಡರ್ ಎಂಬ ನವ್ಯಕವಿ ಹಾಗೂ ವಿಮರ್ಶಕ, ಕವನ ಸೃಷ್ಟಿಯ ಹಿನ್ನೆಲೆಗೆ ದುಡಿಯುವ ಮುಖ್ಯ ಸಂಗತಿಗಳೆಂದರೆ ಸಾಂದ್ರೀಕರಣ, ಸಮಯ ಸ್ಫೂರ್ತಿ, ಸ್ಮೃತಿಶಕ್ತಿ, ಸ್ವವಿಶ್ವಾಸ ಮತ್ತು ಸಂಗೀತತ್ವ ಎಂದು ಹೇಳಿದ್ದನ್ನು ಉಲ್ಲೇಖಿಸುತ್ತಾ ಇವು ಸರಿ ಎಂದು ಒಪ್ಪಿಕೊಳ್ಳುತ್ತಾರೆ; ಹಾಗೂ ಇವುಗಳನ್ನು 'ಕಾವ್ಯ ಕರ್ಮದ ಪಂಚ 'ಸ' ಕಾರಗಳು' ಅನ್ನುತ್ತಾರೆ.[5]

ಸಾಹಿತ್ಯ ಸೃಷ್ಟಿಯ ಸೂಕ್ಷ್ಮಗಳ ಬಗ್ಗೆ ಹೀಗೆ ಮುಂದುವರಿಯುವ ನಿಸಾರರ ಚಿಂತನೆ ವಸ್ತುವಿನ ಆಯ್ಕೆಯ ಕಡೆಗೆ ಹೊರಳುತ್ತದೆ. ಚಲಾವಣೆಯಲ್ಲಿರುವ ಸಂಗತಿಗಳನ್ನು

ಸಾಹಿತ್ಯಕ್ಕೆ ವಸ್ತುವನ್ನಾಗಿ ಮಾಡಿಕೊಳ್ಳಬೇಕೋ ಅಥವಾ ಸಾರ್ವಕಾಲಿಕವಾದ ವಸ್ತುವನ್ನೋ ಎಂಬ ಪ್ರಶ್ನೆಯನ್ನು ನಿಸಾರರು ಕೇಳಿಕೊಳ್ಳುತ್ತಾರೆ. ಕಾವ್ಯಕರ್ಮದ ಕಸಬುಗಾರಿಕೆಯಲ್ಲಿ ವಸ್ತು ತುಂಬ ಪ್ರಮುಖ ಪಾತ್ರವನ್ನು ವಹಿಸುವುದರಿಂದ ಸಾರ್ವಕಾಲಿಕ ಭಾವವನ್ನು ಬೇರೂರಿಸುವ ವಸ್ತುವನ್ನು ಆಯ್ದುಕೊಳ್ಳುವುದು ಅಪೇಕ್ಷಣೀಯ ಎಂಬ ಅಭಿಪ್ರಾಯವನ್ನು ಇವರು ವ್ಯಕ್ತ ಪಡಿಸುತ್ತಾರೆ. ಈ ಸಂಬಂಧದಲ್ಲಿ ಅವರು ಹೇಳುವ ಒಂದು ಮಾತು ಸ್ವಾರಸ್ಯಕರವಾಗಿದೆ.

> 'ಸದ್ವಿಚಾರ, ಮಹದಾಲೋಚನೆಗಳಿಗೆ ಫೀನಿಕ್ಸ್‌ನಂತೆ ಸ್ವಭಾವಗತ ವಾದ ಚಿರಂಜೀವತ್ವ ಪ್ರಾಪ್ತವಾಗಿರುತ್ತದೆ. ಅವುಗಳ ಪರವಾಗಿ ಕಾಲವೇ ಸಾಕ್ಷ್ಯ ನೀಡುತ್ತದೆ.'[6]

ಮಹದ್ವಸ್ತುವನ್ನು ಆಯ್ಕೆ ಮಾಡಿಕೊಂಡ ಮಾತ್ರಕ್ಕೆ ಕವಿಯ ಕೆಲಸ ಮುಗಿಯಲಿಲ್ಲ. ಬದಲಾಗಿ ಅದನ್ನು ತಕ್ಕ ರೀತಿಯಲ್ಲಿ ಅಭಿವ್ಯಕ್ತಿಸುವ ಜವಾಬ್ದಾರಿ ಅವನ ತಲೆಯ ಮೇಲಿರುತ್ತದೆ. ಕವಿಯ ಅಭಿವ್ಯಕ್ತಿ ಮಾಧ್ಯಮವಾದ ಭಾಷೆಯ ಬಗೆಗೆ ನಿಸಾರರು ಬಹಳವಾಗಿ ಆಲೋಚಿಸಿದ್ದಾರೆ. ಲೋಕಭಾಷೆಗೂ ಸಾಹಿತ್ಯಭಾಷೆಗೂ ಇರುವ ವ್ಯತ್ಯಾಸವನ್ನು ಇವರು ಒಂದು ಸ್ವಾರಸ್ಯಕರ ವಿವರಣೆಯೊಂದಿಗೆ ನಿರೂಪಿಸುತ್ತಾರೆ.

> 'ಸಾಮಾಜಿಕ, ವ್ಯಾವಹಾರಿಕ ನೆಲೆಯಲ್ಲಿ ಮಾತಿನ ಕೊರತೆಯನ್ನು ತುಂಬಲು ಉಪಾಯಗಳುಂಟು; ಅವೆಂದರೆ ಆಂಗಿಕ ಚಲನವಲನದ ಸ್ವರೂಪದ ಅಭಿನಯ, ಸಂಜ್ಞೆಗಳು, ಧ್ವನಿಯ ಏರುತಗ್ಗು, ಉದ್ಗಾರ ಇತ್ಯಾದಿ... ಭಾಷೆಯ ಅಸಾಮರ್ಥ್ಯ, ಅರೆಕೊರೆಗಳನ್ನು ವ್ಯವಹಾರ ಕ್ಷೇತ್ರದಲ್ಲಿ ನೀಗಿಕೊಂಡ ಹಾಗೆ ಸಾಹಿತ್ಯದಲ್ಲಿ ಮಾಡಲಾಗದು. ಅಲ್ಲಿ ಅಂಗ ಕ್ರಿಯಾದಿಗಳ ಒತ್ತಾಸೆಯಿಲ್ಲ...'[7]

ಸಾಹಿತ್ಯದ ಭಾಷೆಯು ಈ ಕೊರತೆಯನ್ನು ಉಪಮೆ, ರೂಪಕಾಲಂಕಾರಗಳು, ಛಂದೋಲಾಸ್ಯ ಮುಂತಾದವುಗಳಿಂದ ತುಂಬಿಕೊಳ್ಳಬೇಕಾಗುತ್ತದೆ ಎಂಬುದು ನಿಸಾರರ ಅಭಿಪ್ರಾಯವಾಗಿದೆ. ಹೀಗೆ ಆಂಗಿಕಾಭಿನಯವನ್ನು ಮತ್ತು ಉಪಮೆ ರೂಪಕಗಳನ್ನು ಒಟ್ಟಿಗೆ ಇಟ್ಟು ನೋಡಿರುವುದು ತುಂಬ ಆಸಕ್ತಿದಾಯಕ ವಿಚಾರವಾಗಿದೆ.

ಹೀಗಿದ್ದರೂ, ಸಾಹಿತ್ಯವನ್ನು ರಚಿಸುವಾಗ ಉಂಟಾಗುವ ಅಭಿವ್ಯಕ್ತಿಯ ತೊಡಕುಗಳು ಸಾಕಷ್ಟು ಗಂಭೀರ ಸ್ವರೂಪದವು. ಈ ತೊಡಕುಗಳಿಗೆ ನಿಸಾರರು ಎರಡು ಕಾರಣಗಳನ್ನು ಗುರುತಿಸಿದ್ದಾರೆ. ಒಂದು ವ್ಯಕ್ತಿಯ ಅಸಾಮರ್ಥ್ಯ, ಇನ್ನೊಂದು ಮಾಧ್ಯಮಕ್ಕೆ ಸಹಜ ವಾಗಿರುವ ಮಿತಿ. ಇದನ್ನು ಪರಿಹರಿಸಿಕೊಳ್ಳುವುದು ಹೇಗೆ? ನಿಸಾರರು ಹೀಗೆನ್ನುತ್ತಾರೆ:

> 'ಈ ಇಬ್ಬಗೆಯ ಕುಂದುಗಳನ್ನು ಅವನು (ಸಾಹಿತಿ) ಸತತಾಭ್ಯಾಸ ದಿಂದ ಪರಿಶ್ರಮಪೂರ್ವಕವಾಗಿ ಬಗೆಹರಿಸಿಕೊಳ್ಳಬಹುದು. ತಾನು ಇತರರಿಗೆ ಸಂವಹನಿಸಲು ಇಚ್ಛಿಸುವ ವಿಷಯಗಳನ್ನು ಅಭಿವ್ಯಕ್ತಿಗೊಳಿಸುವ ಸಲುವಾಗಿ ಸೃಜನ ಪ್ರಕ್ರಿಯೆಯಲ್ಲಿ ತೊಡಗಿಕೊಂಡ ವೇಳೆ, ಸ್ವವಿಮರ್ಶನ

ಬುದ್ಧಿಯನ್ನೂ ತೊಡಗಿಸುವುದರ ಮೂಲಕ ಈ ಎರಡು ಕೊರತೆಗಳನ್ನು ನಿವಾರಿಸುವುದಕ್ಕೆ ಅವಕಾಶವುಂಟು.'[8]

ಅಂದರೆ, ಸಾಹಿತ್ಯ ರಚನೆಯಲ್ಲಿ ಅಗತ್ಯವಾಗಿರುವ ಪರಿಶ್ರಮದ ಅರಿವು ನಿಸಾರರಿಗೆ ಚೆನ್ನಾಗಿದೆ. ಸಾಹಿತಿಯ ತೊಳಲಾಟವನ್ನು ಸ್ವಾನುಭವದಿಂದ ಅರ್ಥಮಾಡಿಕೊಂಡಿರುವ ಅವರು ತುಂಬ ಸ್ಫುಟವಾದ ಶಬ್ದಗಳಲ್ಲಿ ಅದನ್ನು ವಿವರಿಸಿದ್ದಾರೆ.

> '...ಸ್ಫೂರ್ತಿಯನ್ನು ಕವನ ರಚನ ಕ್ರಿಯೆಯ ಪ್ರಪ್ರಥಮ ಬೀಜ ಪ್ರಾಯವಾದ ಮಿಂಚಿಕೆಯೆಂದೇ ಭಾವಿಸುತ್ತಾರೆ. ಆದರೆ ಅದು, ರಚನೆಯೊಂದನ್ನು ಫಲರೂಪಿಯಾಗಿ ಮಾಗಿಸುವ ಅಂತಿಮ ನಿಗೂಢ ಕ್ರಿಯೆಯೂ ಹೌದು. ಅಂದರೆ, ಮೊದಲ ಹೊಳಹು ಹಾಗೂ ಕೊಟ್ಟ ಕೊನೆಯ ಪೂರ್ಣಾಕೃತಿ ಎರಡೂ ಸ್ಫೂರ್ತಿವರವಾದವುಗಳೇ. ಇವೆರಡರ ನಡುವಣದ್ದೆಲ್ಲ ಕವಿಯ ಕಷ್ಟದ ಗೆಯ್ಮೆ, ತೊಳಲಾಟ, ಮಾನಸಿಕ ಮೆಹನತ್ತು; ಬಹುಪಾಲು ತರ್ಕ ಬುದ್ಧಿಗಳ ಕೆಲಸ. ಭಾವಗಳನ್ನು ಕ್ರೋಡೀಕರಿಸುವ, ಮಾತಿಗೆ ಒಗ್ಗಿಸುವ, ಚಮತ್ಕಾರ ಸಾಧಿಸುವ ತಲೆಯ ದುಡಿತ...'[9]

ಅಂದರೆ, ಸಾಹಿತ್ಯಸೃಷ್ಟಿಯ ಬಗೆಗೆ ಆಳವಾಗಿ ಯೋಚಿಸಿರುವ ನಿಸಾರರಿಗೆ ಅದರಲ್ಲಿ ಸ್ಫೂರ್ತಿಯ ಅಂಶವೆಷ್ಟು, ಪರಿಶ್ರಮದ ಅಂಶವೆಷ್ಟು, ವಸ್ತುವಿನ ಆಯ್ಕೆ ಮತ್ತು ಅಭಿವ್ಯಕ್ತಿಯಲ್ಲಿ ಉಂಟಾಗುವ ತೊಡಕುಗಳೇನು? ಚಾಕಚಕ್ಯತೆಗಿಂತ ಭಾವಾನುಭವ ಮುಖ್ಯವಾಗುವುದು ಹೇಗೆ, ಕವಿಗಿರಬೇಕಾದ ಉಚಿತಾನುಚಿತ ಪ್ರಜ್ಞೆ ಎಂಥದ್ದು—ಇವೆಲ್ಲವುಗಳ ಬಗ್ಗೆ ತುಂಬ ಖಚಿತವಾದ ನಿಲವುಗಳಿವೆ. ಸಾಹಿತ್ಯಸೃಷ್ಟಿಯನ್ನು ಕುರಿತು ಆಲೋಚಿಸುವಾಗ ಅವರು ತೋರುವ ಶ್ರದ್ಧೆ, ಗಾಂಭೀರ್ಯ ಹಾಗೂ ಈ ನಿಗೂಢ ಕ್ರಿಯೆಯ ಬಗ್ಗೆ ಆದಷ್ಟೂ ವಿಷಯಗಳನ್ನು ಅರಿತುಕೊಳ್ಳಬೇಕೆಂಬ ಅವರ ಹಂಬಲ ಆದರಣೀಯವಾಗಿದೆ. ಕವಿಗಳು, ವಿಮರ್ಶಕರು ಇಬ್ಬರಿಗೂ ಅಷ್ಟೇ ಅಲ್ಲ, ಕಲಾಭ್ಯಾಸಿಗಳೂ ಒಮ್ಮೆ ಯೋಚಿಸಲೇಬೇಕಾದ ಕಲಾಸೃಷ್ಟಿಯ ನಿಗೂಢಗಳ ಬಗ್ಗೆ ನಿಸಾರರು ತಲಸ್ಪರ್ಶಿಯಾಗಿ ಆಲೋಚಿಸಿ ಬರೆದಿದ್ದಾರೆ.

ಭಾಗ-2

ಸಾಹಿತ್ಯ ಮತ್ತು ಸಮಾಜದ ಸಂಬಂಧ : ಸಾಹಿತ್ಯ ಸೃಷ್ಟಿಯ ಬಗೆಗೆ ಇಷ್ಟು ಆಳವಾಗಿ ಯೋಚಿಸಿರುವ ನಿಸಾರರು ಸಾಹಿತ್ಯ ಮತ್ತು ಸಮಾಜದ ಸಂಬಂಧದ ಬಗ್ಗೆಯೂ ಆಲೋಚಿಸುವುದು ಸಹಜ. ಈ ವಿಚಾರದಲ್ಲಿ ಅವರ ನಿಲವೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಭಾರತೀಯ ಕಾವ್ಯ ಮೀಮಾಂಸೆಯ ಅಭ್ಯಾಸ, ಪಾಶ್ಚಾತ್ಯ ಕಾವ್ಯ ಮೀಮಾಂಸೆಗಳ ಅಧ್ಯಯನ ಮತ್ತು ಸಾಹಿತ್ಯ ರಚನೆಯ ಸ್ವಾನುಭವ ಈ ಮೂರರ ತ್ರಿವೇಣಿ ಸಂಗಮ ನಿಸಾರರು. ಮೊದಲಿಗೆ ಅವರು ಸಾಹಿತ್ಯ ಮತ್ತು ಲೋಕ ವಾಸ್ತವಗಳಿಗಿರುವ ಸಂಬಂಧ ಏನು? ಹಾಗೂ ಸಾಹಿತ್ಯದಿಂದ ಜನರ ಮನಸ್ಸಿಗೆ ದೊರೆಯುವ ಶಿಕ್ಷಣ ಯಾವ ಸ್ವರೂಪದ್ದು ಎಂಬುದರ ಬಗೆಗೆ ಆಲೋಚಿಸಿದ್ದಾರೆ.

'...ವಾಸ್ತವ ಲೋಕದಲ್ಲಿ ನಾವು ಭಾವ ವಶರಾಗಿ ಉದ್ರಿಕ್ತತೆಯಿಂದ ವ್ಯಕ್ತಪಡಿಸುವ ಪ್ರತಿಕ್ರಿಯೆಗಳು, ನಮ್ಮನ್ನು ಕ್ರಿಯೋನ್ಮುಖರಾಗಿಸುವ ಸಂಗತಿಗಳು ಸಾಹಿತ್ಯ ಕಲೆಗಳಲ್ಲಿನ ಹಾಗೆ ನೇರ ಹಾಗೂ ತಾತ್‌ಕ್ಷಣಿಕ ಸ್ವರೂಪದ್ದಾಗಿರುವುದಿಲ್ಲ. ಇಲ್ಲಿನ ನಮ್ಮ ವರ್ತನೆ ಸೌಮ್ಯ ರೂಪದ್ದಾಗಿರುತ್ತದೆ. ವಾಸ್ತವ ಲೋಕದ ಕಹಿ, ಒಗರು, ಖಾರ, ಒರಟುಗಳು ಇಲ್ಲಿರವು... ಅವುಗಳ ದಳ್ಳುರಿ ತಂಬೆಳಕಾಗಿ, ಉದ್ವೇಗಾವೇಶ ತಂಪುಗೊಂಡು ಪ್ರತಿಬಿಂಬಿತ ಸೂರ್ಯ ದರ್ಶನದಂತೆ ಸಹ್ಯವಾಗಿ ಆಸ್ವಾದಯೋಗ್ಯವಾಗುತ್ತದೆ... ಈ ವಿಶೇಷ ಸಾಹಿತ್ಯಾನುಭವವೇ ರಸಾವಸ್ಥೆ... ಒಂದು ಬಗೆಯ ಶಾಂತೋದಾತ್ತ ಸ್ಥಿತಿ... ಆಗಾಗ್ಗೆ ಈ ಸ್ಥಿತಿಯ ಪಡುಹದಿಂದ ಸಂಸ್ಕರಣಗೊಂಡ ಮನುಷ್ಯ ಚೇತನ ಸ್ವಂತ ಬದುಕನ್ನು ಹೆಚ್ಚು ಸಂವೇದನಯುಕ್ತವಾಗಿ, ನವೋನವವಾಗಿ ಅನುಭವಿಸುವ ಪರಿಣತಿಯನ್ನು ಪಡೆಯುತ್ತದೆ. ಇದಕ್ಕೂ ಮೇಲಾಗಿ, ಸಹ–ಸಮಾಜ ಜೀವಿಗಳ ವ್ಯಾವಹಾರಿಕ ಸಂಬಂಧಗಳಲ್ಲಿ ಅತಿಶಯದ ನಯ, ಕೌಶಲ, ಸಂಯಮ, ಸಮತ್ವವನ್ನು ರೂಢಿಸಿಕೊಳ್ಳುವಂಥ ಶಿಕ್ಷಣ ಮನಸ್ಸಿಗೆ ಪ್ರಾಪ್ತಿಸುತ್ತದೆ...'[10]

ಸಾಹಿತ್ಯದಿಂದ ಮನುಷ್ಯನ ಮನಸ್ಸು ಪರಿಷ್ಕೃತಗೊಳ್ಳುತ್ತದೆ ಎಂಬುದನ್ನು ಕುರಿತು ನಿಸಾರರಿಗೆ ಅನುಮಾನವಿಲ್ಲ. ಆದುದರಿಂದಲೇ ಅವರು ಸಮಾಜದ ಮೇಲೆ ಸಾಹಿತ್ಯ ಬೀರಬೇಕಾದ ಸತ್ಪರಿಣಾಮ, ಇಂಥ ಪರಿಣಾಮವನ್ನುಂಟುಮಾಡಬೇಕಾಗಿರುವ ಸಾಹಿತಿಗಳ ಜವಾಬ್ದಾರಿಯ ಬಗ್ಗೆ ಆಮೂಲಾಗ್ರವಾಗಿ ಯೋಚಿಸಿದ್ದಾರೆ. 'ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ' ಎಂಬ ತಮ್ಮ ಲೇಖನದಲ್ಲಿ ನಿಸಾರರು ಈ ವಿಷಯವನ್ನು ನಿರ್ವಹಿಸಿರುವ ರೀತಿ ಗಮನಾರ್ಹವಾಗಿದೆ. ಶ್ರೀಸಾಮಾನ್ಯ ಅಂದರೆ ಯಾರು ಎಂಬುದರ ಬಗ್ಗೆಯೇ ಅನೇಕ ವಾಕ್ಯಗಳನ್ನು ಬರೆದಿಡುವ ಅವರು, ಜನರಲ್ಲಿನ ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ಗುರುತಿಸಿ 'ಶ್ರೀಸಾಮಾನ್ಯ ಎನ್ನುವುದು ಅನೇಕ ಮೆಟ್ಟಿಲುಗಳ ಒಂದು ಬೃಹತ್ ವರ್ಗ; ಬಹುಶ್ರೇಣೀಕೃತ ಎನ್ನಬಹುದು'[11] ಅನ್ನುತ್ತಾರೆ. ಇಂತಹ ಶ್ರೀಸಾಮಾನ್ಯ, ಬದುಕಿನ ಜಂಜಡಗಳಲ್ಲಿ ಮುಳುಗಿರುವಾಗ '(ಅವನ) ತಲೆ ಮತ್ತು ಹೊಟ್ಟೆಯ ಗುರುತ್ವಾಕರ್ಷಣ ಶಕ್ತಿಯನ್ನೂ ಮೀರಿ ಹೊಸ ನಲವಿನ, ತಿಳಿವಿನ ನೆಲೆಗಳನ್ನು ಶೋಧಿಸಲು ಸಾಹಿತ್ಯ ಉಪಗ್ರಹ ಸದೃಶ ಸಾಧನವಾಗಬಲ್ಲುದು. ಜ್ಞಾನ ಪಿಪಾಸೆಯೊಂದಿಗೆ ರಸ ವಾಣಿಜ್ಯಕ್ಕೂ ಏಕ ಕಾಲದಲ್ಲಿ ಪರಿಸ್ಪಂದಿಸುವಂತೆ ಅವನ ಹೃನ್ಮನಗಳನ್ನು ತರಪೇತುಗೊಳಿಬಲ್ಲುದು'[12] ಎಂಬ ವಿಚಾರ ನಿಸಾರರದು.

ವಿಷಯ ಹೀಗಿರುವಾಗ, ಸಾಹಿತ್ಯವನ್ನು ಕೆಲವೇ ವಿಶಿಷ್ಟ ಜನರ ಸ್ವತ್ತು ಎಂದು ಭಾವಿಸುವವರ ಬಗ್ಗೆ ನಿಸಾರರಿಗೆ ಕೋಪ ಬರುವುದು ಸಹಜ. ಜನರಿಂದ ಸಾಹಿತ್ಯವನ್ನು ದೂರ ಕೊಂಡೊಯ್ದ ಒಂದು ಪಂಥದ ಬಗ್ಗೆ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದು ಹೀಗೆ:

'...ಜನರಿಗೆ ಅರ್ಥವಾಗುವಂತೆ ಬರೆಯುವುದೇ ಮಹಾಪರಾಧ

ವೆನ್ನುವ, ಜನಾದರಣೆ ಮತ್ತು ಜನ ಪೂಜ್ಯತೆಯನ್ನು ಗಳಿಸುವುದನ್ನು ಸಸ್ತಾ ಮಾಲಿನ ಜಾಹೀರಾತಿನಂತೆ ಕೀಳಾಗಿ ಎಣಿಸುವ ಮಹಾನುಭಾವರದು ಒಂದು ನಮೂನೆಯ ಸಾರಸ್ವತ ಅಪಾರ್ಥೈಡ್ ಧೋರಣೆ. ಬಾರು, ಸೆಮಿನಾರು, ಸಣ್ಣ ಪತ್ರಿಕೆಗಳಲ್ಲಿ ಮಾತ್ರ ಈಗ ಇದರ ಸಾಣ್ಯತೆ, ಪ್ರತಾಪ. ಖಾಸಗಿ ಅನುಭವ, ಸಾರ್ವಜನಿಕ ಅನುಭವವಾಗಬಾರದೆಂಬ ಕಾಯ್ದೆ ಎಲ್ಲಿದೆ? ಅದು ಲೇಖಕನ, ಕಲೆಗಾರನ ಅಭಿವ್ಯಕ್ತಿ ಮತ್ತು ಸಂವಹನತೆಯ ಸಾಮರ್ಥ್ಯ, ಅಸಾಮರ್ಥ್ಯಕ್ಕೆ ಸಂಬಂಧಿಸಿದ ಪ್ರಶ್ನೆ. ಅಭಿಪ್ರಾಯಗಳಲ್ಲಿ ಸಂಯಮರಹಿತ ಸ್ವೇಚ್ಛಾಚಾರ, ದಬಾವಣೆಯ ಏಕಪಕ್ಷೀಯ ಧಾಟಿ, ಸಾಹಿತ್ಯಕ್ಷೇತ್ರವನ್ನು ವಸಾಹತುಶಾಹಿ ಆಸ್ತಿಯಾಗಿ ಪರಿವರ್ತಿಸುವ ಅಕ್ಷರ ಆಕ್ರಮಣಗಳ ಹುನ್ನಾರ. ಈ ಒಂಟಿ ಸಲಗತನ, ಸ್ವಲೀನನ ಗುಪ್ತಕ್ರಿಯೆ ಯಂತೆ ಸಮಾಜ ಕಂಟಕ ವಿಕೃತಿಗಳನ್ನು ಮಾತ್ರ ಹೊಸೆಯಬಲ್ಲುದು...'[13]

ಒಟ್ಟಿನಲ್ಲಿ, ಸಾಹಿತ್ಯಕ್ಕೆ ಸಮಾಜದಲ್ಲಿ ಮುಖ್ಯಪಾತ್ರವಿದೆ: 'ಸಮುದಾಯದ ಸಮಗ್ರ ಹಿತಕ್ಕೆ ಹಾದಿ ರಚಿಸುವಲ್ಲಿ ಸಾಹಿತಿ, ಕಲೆಗಾರರ ಕಾಯಕ ಅಲ್ಪವೇನಲ್ಲ'[14] ಎಂಬ ಸ್ಪಷ್ಟ ಅಭಿಪ್ರಾಯವನ್ನು ನಿಸಾರ್ ಹೊಂದಿದ್ದಾರೆ.

ಸಾಹಿತ್ಯದ ಇಷ್ಟೂ ಪ್ರಯೋಜನ ಓದುಗರಿಗೆ ಸಿಕ್ಕುವುದು ವಾಚನಾಭಿರುಚಿ ಇದ್ದಾಗ ಮಾತ್ರ. ಆದರೆ ಈಗ, ವಿದ್ಯುನ್ಮಾನ ಮಾಧ್ಯಮಗಳ ಭರಾಟೆಯಿಂದ ಅದಕ್ಕೆ ಸಂಚಕಾರ ಒದಗುತ್ತಿರುವುದು ನಿಸಾರರಿಗೆ ಗೊತ್ತಿದೆ. ತಮ್ಮ ಆತಂಕವನ್ನು ಅವರು ಹೀಗೆ ವ್ಯಕ್ತಪಡಿಸಿದ್ದಾರೆ:

'ವಿದ್ಯುನ್ಮಾನದ ಕಣ್ಣು ಕುಕ್ಕುವ ಉನ್ಮಾದದ ಉತ್ಸವದಲ್ಲಿ ಸಾಹಿತ್ಯ ಕಲೆಗಳ ಬಡ ಹಣತೆ ಮುಖ ಮರೆಸಿದೆ. ತನ್ನ ಅಳಿವು ಉಳಿವಿನ ಪ್ರಶ್ನೆ ಇನ್ನು ವೈಜ್ಞಾನಿಕ ಸಲಕರಣೆಗಳ ಮರ್ಜಿಗೆ ಒಳಪಟ್ಟಿದ್ದೆಂದು ಅದಕ್ಕೆ ನಿಸ್ಸಂಶಯವಾಗಿ ಮನವರಿಕೆಯಾಗಿದೆ... ಪುಸ್ತಕಗಳ ವಾಚನಕ್ಕಿಂತ ಕಡಮೆ ಸಮಯ, ಶ್ರಮ, ಹೆಚ್ಚು ಏಕಾಗ್ರತೆ, ಕುತೂಹಲಗಳನ್ನು ಆಗಗೊಳಿಸಿ ಸಾಹಿತ್ಯ ಕಲೆಗಳ ಜ್ಞಾನವನ್ನು ಹತ್ತು ದಿಕ್ಕಿಗೆ ಬಿತ್ತರಿಸಲು ಪಣ ತೊಟ್ಟಿರುವ ಈ ವೈಜ್ಞಾನಿಕ ಅದ್ಭುತಗಳ ಎದುರು ಅಕ್ಷರ ಜಗತ್ತಿನ ಭವಿಷ್ಯ ನಡುಕ ಹುಟ್ಟಿಸುತ್ತದೆ.'[15]

ವಿದ್ಯುನ್ಮಾನ ಮಾಧ್ಯಮಗಳ ಭರಾಟೆಯಷ್ಟೇ ಇನ್ನೊಂದು ವಿಚಾರವೂ ನಿಸಾರರನ್ನು ಕಾಡಿದೆ. ಅದು ಮೌಲ್ಯಗಳ ಪತನದ ವಿಚಾರ. ಮೌಲ್ಯಗಳ ಪತನವು ಸಾಹಿತ್ಯ ಕ್ಷೇತ್ರವನ್ನು ಪ್ರಭಾವಿಸುತ್ತಿರುವುದನ್ನು ಅವರು ಆತಂಕದಿಂದ ಗಮನಿಸಿದ್ದಾರೆ.

'ಇವೊತ್ತು ನಮ್ಮ ಸಾಮಾಜಿಕ ಬಾಳ್ವೆಯಲ್ಲಿ ಆಗಿರುವ ಮೌಲ್ಯ ಪತನದ ಕತೆಯೇ, ಅದರ ಮತಿಬಿಂಬವೆನ್ನಿಸುವ ಸಾಹಿತ್ಯಕ್ಷೇತ್ರದಲ್ಲೂ ಮುಂದುವರಿದಿದೆ... ಸದ್ಯದ ತುರ್ತುಗಳನ್ನು ಪೂರೈಸುವ ಧಾವತಿಯಲ್ಲಿ

> ವೈಯಕ್ತಿಕ ವಿಕ್ಷಿಪ್ತತೆ, ಸ್ವಂತದ ಖಾಯೀಷು ಖಯಾಲಿಗಳನ್ನು ಹರವಿಡುತ್ತಿರುವ ಯುಕ್ತಿ ಪ್ರಧಾನ ಬರವಣಿಗೆ ಪ್ರಸ್ತುತ ಯುಗ ಧರ್ಮವೆನ್ನಿಸುತ್ತಿದೆ. ರೋಚಕತೆ, ಚಮತ್ಕಾರಗಳ ಪಕ್ಕ ವಾದ್ಯಗಳ ಬೊಬ್ಬೆಯಲ್ಲಿ ಜೀವಶೋಧಕ ಗುಣದ ಹಾಡಿಕೆ ಸೊರಗಿ ಹೋಗುತ್ತಿದೆ. ರುಚಿರವೆನ್ನುವುದು ಸಕಲ ಕಾಲಕ್ಕೂ ಸುರುಚಿ ಸೂಚಕವಲ್ಲವೆಂಬ ತಥ್ಯ ನೇಪಥ್ಯ ಹಿಡಿದಿದೆ.'[16]

ಈ ರೀತಿಯ ಲೇಖನಗಳಲ್ಲಿ ನಿಸಾರರ ಸಾಹಿತ್ಯ ಪ್ರೇಮ ಹಾಗೂ ಅವರಲ್ಲಿನ ವರ್ತಮಾನದ ಅರಿವು ಎರಡೂ ತಿಳಿಯುತ್ತದೆ. ಸಾಹಿತ್ಯದ ಜೀವದಾಯಕ ಗುಣದ ಬಗ್ಗೆ ಅಪಾರ ನಂಬಿಕೆ ಇರುವ, ಸಾಹಿತ್ಯದ ಹೆಸರಿನಲ್ಲಿ ಹಸಿ ಬಿಸಿ ಭಾವಗಳನ್ನು ಓದುಗರ ಮೇಲೆ ಹೇರುವ ಬರಹಗಾರರ ಬಗ್ಗೆ ಬೇಸರ ಹೊಂದಿರುವ, ಇಂದಿನ ಹೈಟೆಕ್ ಯುಗ ಸಾಹಿತ್ಯವನ್ನೆಲ್ಲಿ ಮೂಲೆಗೆ ತಳ್ಳಿ ಬಿಡುತ್ತದೋ ಎಂದು ಭಯ ಪಡುವ ಸೂಕ್ಷ್ಮ ಮನಸ್ಸು ಅವರದು.

ಇಂತಹ ಸೂಕ್ಷ್ಮ ಮನಸ್ಸು ನಿಸಾರರನ್ನು ಸಾಹಿತ್ಯ ವಿಮರ್ಶೆಯ ಬಗೆಗೂ ಆಲೋಚಿಸುವಂತೆ ಮಾಡಿದೆ. ವಿಮರ್ಶೆಯ ಸಾಧಕ ಬಾಧಕಗಳೂ ಆ ಕ್ಷೇತ್ರದಲ್ಲಿರುವವರ ರಾಜಕಾರಣ, ಅವರ ಹುನ್ನಾರಗಳು ಎಲ್ಲವೂ ನಿಸಾರರ ಎಚ್ಚರಗಣ್ಣಿಗೆ ಬಿದ್ದು ಗಮನವನ್ನು ಸೆಳೆದಿವೆ. ವಿಮರ್ಶೆಯ ಬಗೆಗೆ ಅವರ ವಿಚಾರಗಳೇನು? ಎಂಬುದನ್ನು ಈಗ ಅರಿತು ಕೊಳ್ಳೋಣ.

ಭಾಗ-3

ವಿಮರ್ಶೆಯ ನಿಲುವು : ನಿಸಾರರ ವಿಮರ್ಶನ ಪ್ರಜ್ಞೆ ಒಂದು ರೀತಿಯಲ್ಲಿ ವಿಶಿಷ್ಟವಾದದ್ದು. ಅವರು ಬೇರೆ ಕವಿಗಳ ಕಾವ್ಯ ತಮಗೆ ನೀಡುವ ಅನುಭವದ ಬಗೆಗೆ ಮಾತಾಡುವುದಕ್ಕಿಂತ, ವರ್ತಮಾನದ ಸಾಹಿತ್ಯ ಸಂಸ್ಕೃತಿಯ ಬಗ್ಗೆ, ಅದು ಕವಿಗೆ ಉಂಟುಮಾಡುವ ಇರಿಸುಮುರಿಸುಗಳ ಬಗ್ಗೆ ಹೆಚ್ಚು ಮಾತಾಡುತ್ತಾರೆ. ನವೋದಯ, ನವ್ಯ, ಬಂಡಾಯ—ಮುಂತಾದ ಕನ್ನಡದ ಕಾವ್ಯ ಚಳವಳಿಗಳ ನಿಲವುಗಳನ್ನು ತುಂಬ ವಿಮರ್ಶಾತ್ಮಕವಾಗಿ ಸಮೀಕ್ಷಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಅವರ ಕೆಲವು ಮಾತುಗಳನ್ನು ಗಮನಿಸಬಹುದು.

> 'ಅಸಂಖ್ಯ ನಾದೋಪವನಗಳನ್ನು ನಿರ್ಮಿಸಿದ ನಮ್ಮ ಹಿಂದಿನ ತಲೆಮಾರಿನ ಕವನ ರಚನೆಗಳನ್ನು ಢೋಂಗಿ ಅಧ್ಯಾತ್ಮದ, ಸ್ವಂತವಿಲ್ಲದ ಅನುಭವದ ತಳಹದಿಯ ಮೇಲೆ ತುದಿಗಾಣದೆ ನಿಗುರಿ ನಿಂತ ಭ್ರಮೆಗಳ ದಂತ ಗೋಪುರಗಳೆಂದು ಹಣೆ ಚೀಟಿ ಹಚ್ಚಿದೆವು. ಕಾವ್ಯವನ್ನು ಕೆಳಗಿಳಿಸಿ ಗಾರುವೊಡೆದ ಗಟ್ಟಿ ನೆಲದ ಮೇಲೆ ಅಡ್ಡಾಡಿಸಲು ಪಣ ತೊಟ್ಟು ಸಡಗರಿಸಿದೆವು. ತಕ್ಕಮಟ್ಟಿಗೆ ಕೃತಕೃತ್ಯರೂ ಆದೆವು...
>
> 'ಇವತ್ತು ಇನ್ನಷ್ಟು ಪ್ರಗತಿ ಸಾಧಿಸುವಂತೆ ಮುಂಬರಿದು ಕಾವ್ಯವನ್ನು

> ನೆಲದ ತಳಕ್ಕೂ ಒಯ್ದು, ಅಲ್ಲಿ ಅದು ಹಾಯಾಗಿ ಒರಗುವಂತೆ ಸಾಮೂಹಿಕವಾಗಿ ನಾ ಮುಂದು ತಾ ಮುಂದೆ ಎಂದು ಸಂಭ್ರಮಗೊಳ್ಳುತ್ತಿರುವ ನೋಟ ಕಾವ್ಯಾಸಕ್ತರಿಗೆ ಸಂತೋಷ, ಹೆಮ್ಮೆ ಬರಿಸುವಂಥದ್ದೆ! ಹಳೆಯದರ ಹಳಸಿಕೆಗೆ ಹೇಸಿ, ಹೊಸದರ ಹೆಬ್ಬಯಲಿನಲ್ಲಿ ಸಮವಸ್ತ್ರಧಾರಿ ಮುಖಹೀನರಾಗಿ, ಏಕತಾನತೆಯಲ್ಲಿ ಸಮಾನತೆಯನ್ನು ಸಾಧಿಸಲು ಸ್ಪರ್ಧೆ ನಡೆಸಿರುವ ದೃಶ್ಯ ಎಂಥ ಸಮಾಜವಾದಿಯನ್ನೂ ಅವಾಕ್ಕಾಗಿಸುವಂಥದ್ದೆ!'[17]

ಈ ಮಾತುಗಳಲ್ಲಿ, ತಮ್ಮ ಹಿಂದಿನ ಸಾಹಿತ್ಯ ಚಳವಳಿಯ ಬಗ್ಗೆ ಅನಗತ್ಯ ತಿರಸ್ಕಾರ ತೋರಿ, ಏಕತಾನತೆಯ ಜಾಡಿಗೆ ಬಿದ್ದ ನವ್ಯ, ಬಂಡಾಯ ಚಳವಳಿಗಳನ್ನು ಕುರಿತು ಟೀಕೆ ಮಾಡಲಾಗಿದೆ.

'ಕನ್ನಡ ಕಾವ್ಯದ ಭವಿಷ್ಯ' ಎಂಬ ಲೇಖನದಲ್ಲಿ ನಿಸಾರರು ನವ್ಯ ಹಾಗೂ ಬಂಡಾಯ ಚಳವಳಿಗಳನ್ನು ನೇರವಾಗಿಯೇ ವಿಮರ್ಶಿಸಿದ್ದಾರೆ. 'ಅಡಿಗರ ಜೊತೆ ಹಲವರು ಸಾರ್ಥಕ ಕವನಗಳನ್ನು ಬರೆಯುತ್ತಿದ್ದರೂ ಅವರ ಸಾಧನೆಯನ್ನು ವಿಮರ್ಶಕರು ಅಷ್ಟಾಗಿ ಗುರುತಿಸದೆ ಅಡಿಗರ ಕಾವ್ಯಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದು ಕನ್ನಡ ಕಾವ್ಯವನ್ನು ತನ್ನ ಮುಕ್ತ ಹಾಗೂ ಯುಕ್ತ ಮಾರ್ಗದಿಂದ ಬೇರೊಂದು ಕಡೆಗೆ ವಾಲಿಸದಂತಾಯ್ತು; ಅದರ ಸಮತೂಕವನ್ನು ಕೆಡಿಸಿದಂತಾಯ್ತು'[18] ಎಂಬ ಗಂಭೀರ ಆರೋಪವೊಂದನ್ನು ನಿಸಾರ್ ಮಾಡುತ್ತಾರೆ. ಹಾಗೆಯೇ, ಬಂಡಾಯ ಮತ್ತು ದಲಿತ ಪಂಥಗಳ (ಕಾವ್ಯವನ್ನು ಜನರ ಹತ್ತಿರ ತರುವ) ಉದ್ದೇಶಗಳನ್ನು ಮೆಚ್ಚಿಕೊಳ್ಳುತ್ತಲೇ:

> '...ಆದರೆ ಈ ಧಾವಂತದಲ್ಲೇ ಕಾವ್ಯ ಬಹಿರಂಗ ಚಹರೆಯನ್ನು ಧರಿಸಿ, ತೀರಾ ಸರಳಗೊಳ್ಳುತ್ತಾ ಸಾಗುವ, ಮತೀಯ ಭಾವನೆಗಳನ್ನು ಅತಾತ್ತ್ವಿಕವಾಗಿ ಕಾರುತ್ತಾ ಹೋಗುವ, ಸಾಮಾಜಿಕ ಕಳಕಳಿಯೇ ಒಂದು ಪ್ಯಾಶನ್ ಇಲ್ಲವೇ ಫ್ಯಾಶನ್ ಆಗಿ ಬದುಕಿನ ಇತರ ಇಲಾಖೆಗಳಿಗೆ ಬೆನ್ನು ತೋರಿಸಿ ನಿಲ್ಲುವ ಅಪಾಯ ಉಂಟು. ಪದ್ಯಗಳೆಂದರೆ ಬರೀ ಪ್ರತಿಕ್ರಿಯೆಗಳಾಗಿ, ಈ ನಮೂನೆಯ ಕವಿಗಳೆಂದರೆ ಕೇವಲ ಕಂಪ್ಲೇಂಟ್ ಬಾಕ್ಸುಗಳೋ ಮನಶ್ಶಾಸ್ತ್ರೀಯ ಕೌತುಕಗಳೋ ಆಗಿ ಪರಿಣಮಿಸುವ ಗಂಡಾಂತರವೂ ಉಂಟು.'[19]

ಜತೆಗೆ ಯಾವ ಪಂಥಕ್ಕೂ ಸೇರದೆ ಬರೆಯುವ 'ಅನಿರ್ಬದ್ಧ' ಕವಿಗಳೂ ಕೂಡ ಬದ್ಧಕವಿಗಳ ಧ್ಯೇಯ ಧೋರಣೆಗಳ ಬೆಳಕಿನಲ್ಲಿ ತಮ್ಮ ನಿಲವನ್ನು ಪರಿಷ್ಕೃತಗೊಳಿಸಿಕೊಳ್ಳಬೇಕಾದ ಅನಿವಾರ್ಯ ಈಗ ಎದುರಾಗಿದೆ... ಆದರೆ ಇಂತಹ ಕವಿಗಳ 'ವಿನೀತ ವಾಣಿ ದೊಡ್ಡ ಗಂಟಲಿನವರ ಅಬ್ಬರ ಕಿರುಚುಗಳ ನಡುವೆ ಸದ್ಯಕ್ಕೆ ಮರೆಯಾಗಿದ್ದರೂ ಕಾಲಕ್ರಮೇಣ ಸಮಾಜಕ್ಕೆ ಸಾಂತ್ವನ ನುಡಿಯುವುದರಲ್ಲಿ, ಮೆಲು ಮಾತಿನಿಂದಲೇ ಮಹಾ ಪವಾಡಗಳನ್ನು ಸೃಷ್ಟಿಸುವುದರಲ್ಲಿ ಯಶಸ್ವಿಯಾಗಬಹುದು'[20] ಎಂಬ ಅಭಿಪ್ರಾಯವನ್ನೂ

ನಿಸಾರರು ವ್ಯಕ್ತಪಡಿಸುತ್ತಾರೆ.

ಒಟ್ಟಿನಲ್ಲಿ ಯಾವುದೋ ತತ್ತ್ವಕ್ಕೆ ಗಂಟು ಬಿದ್ದು ವಾಚ್ಯ ವರದಿಯಂಥ ಕಾವ್ಯ ಸೃಷ್ಟಿಸುವುದಕ್ಕಿಂತ, ಅನಿರ್ಬದ್ಧವಾಗಿದ್ದು, ಎಚ್ಚರಗಣ್ಣಿನಿಂದ ಭಾವಾನುಭವದ ಕಾವ್ಯ ರಚಿಸುವುದು ಮೇಲು ಎಂಬ ಧೋರಣೆ ನಿಸಾರರಿಗಿದೆ.

ಭಾವಾನುಭವದ ಮಾತು ಬಂದಾಗ, ಈ ಎಲ್ಲಕ್ಕೆ ಸಂಬಂಧಪಟ್ಟಂತೆ ನಿಸಾರರ ಒಂದು ಮಾತು ಸ್ವಾರಸ್ಯಕರವಾಗಿದೆ.

> 'ಬೆಂಕಿಯಿಂದ ಕೈ ಸುಟ್ಟುಕೊಂಡೇ, ಯಾತನೆಯನ್ನು ಅನುಭವಿಸಿಯೇ ಅದರ ಬಗೆಗೆ ಬರೆಯಬೇಕೆನ್ನುವ ವಿಚಾರ ಬಾಲಿಶವಾದದ್ದು. ನಿಮ್ಮ ಅನುಭವದ ಬಗ್ಗೆ ಮಾತ್ರ ಬರೆಯಿರಿ, ಅನುಭವಗಳಿಸಿಯೇ ಸಾಹಿತ್ಯ ರಚಿಸಿ ಎಂದು ವಿಮರ್ಶಕ, ಲೇಖಕಿಯರಿಗೆ ಹುಕುಂ ಚಲಾವಣೆ ಮಾಡಿದರೆ, ಈಗ ತಯಾರಾಗುತ್ತಿರುವ ಶೇಕಡ ಎಂಬತ್ತಕ್ಕೂ ಹೆಚ್ಚು ಕಾದಂಬರಿ, ಕತೆ, ಕವನಗಳಿಗೆ ಖೋತಾ ಬೀಳಬಹುದು! ಈ ವಿಧಿಯ ಅನ್ವಯ, ಲೇಖಕ ಸತ್ತಲ್ಲದೆ ಸಾವಿನ ಮೇಲೆ ಬರೆಯುವುದು ಅಸಾಧ್ಯ...'[21]

—ಹೀಗೆ ನಿಸಾರರು, ಯಾವ ಪಂಥ ಹೇಳುವ ವೈದ್ಯ ವಾಣಿಯನ್ನೂ ಕಣ್ಣು ಮುಚ್ಚಿ ಒಪ್ಪಿಕೊಳ್ಳದೆ, ಅದನ್ನು ವಿಮರ್ಶಾತ್ಮಕವಾಗಿ ನೋಡುತ್ತಾರೆ. ಕವಿಯೊಬ್ಬ ಎಲ್ಲ ಚಳವಳಿಗಳ ಉತ್ತಮಾಂಶಗಳನ್ನು ಅರ್ಥಮಾಡಿಕೊಳ್ಳಬೇಕು. ಆದರೆ ಸ್ವಂತಿಕೆಯನ್ನು ಕಳೆದುಕೊಳ್ಳಬಾರದು ಎಂಬ ನಿಲವು ಅವರಿಗಿರುವಂತಿದೆ.

ಕನ್ನಡ ಕಾವ್ಯ ಚಳವಳಿಗಳ ಬಗ್ಗೆ ವಿಮರ್ಶೆ ಮಾಡಿದಂತೆಯೇ ನಿಸಾರರು ಉತ್ತಮ ವಿಮರ್ಶೆ ಹೇಗಿರಬೇಕು ಎಂಬ ಚತುರೋಕ್ತಿಯ ಮೂಲಕ (ಅದು ಆ ಲೇಖನದ ಹೆಸರು ಕೂಡ ಆಗಿದೆ) ವಿಮರ್ಶೆ ತಲಪಬಾರದ ಎರಡು ತುದಿಗಳ ಬಗೆಗೆ ಬರೆಯುತ್ತಾರೆ.

> 'ಓದಿನಿಂದ ಬರಿಯ ರಂಜನೆ, ಖುಷಿಗಳನ್ನಷ್ಟೆ ಬಯಸುವ ಸಾಧಾರಣ ಓದುಗ ವಿಲಾಸಿಯದು ಒಂದು ತುದಿಯಾದರೆ, ವಿಮರ್ಶನ ಧರ್ಮವನ್ನು ಯಾವುದೋ ಸ್ವಾರ್ಥೋದ್ದೇಶಕ್ಕಾಗಿ ಕಡೆಗಣಿಸಿದ ಕೃತಿ ವಿಶ್ಲೇಷಕನದು ಇನ್ನೊಂದು ಅತಿಯ ತುದಿಯಾಗಬಹುದು. ಇಂಥವನ ಪಾಲಿಗೆ ಸಾಹಿತ್ಯ ಗ್ರಂಥವೊಂದರ ಒಡಲು ಶೋಧಕ ಕ್ರಿಯೆಯ, ವಿಚಾರವಂತಿಕೆಯ ಕೇಂದ್ರವಾಗುವುದಿಲ್ಲ... ಅದು ಅವನ ವಿದ್ವತ್ತು, ವಿದಗ್ಧತೆ, ಕಲಿಕೆ, ಜಾಣ್ಮೆಗಳ ಪ್ರದರ್ಶನಕ್ಕೆ ರಜತ ಪರದೆಯಾಗಿರುತ್ತದೆ: ನೆವ ಮಾತ್ರದ ಮಾಧ್ಯಮವಾಗಿರುತ್ತದೆ...
>
> 'ಇದರೊಂದಿಗೆ ಬರಹಗಾರರ ಬಗೆಗೆ ಯಾವುದಾದರೂ ಕಾರಣಕ್ಕೆ ಅಸಹನೀಯ ಅನಾದರವೋ, ಇಲ್ಲವೇ ಪ್ರೀತಿ ಪಕ್ಷಪಾತವೋ ವಿಮರ್ಶಕನ ಆಂತರ್ಯದಲ್ಲಿ ಪೂರ್ವಾಗ್ರಹ ಪೀಡೆಯಂತೆ ಬೀಡು ಬಿಟ್ಟಿತೋ ಮುಗಿದೇ

> ಹೋಯಿತು. ವಿಮರ್ಶೆ ತಲೆ ಕೆಟ್ಟು ಹುಚ್ಚಾಪಟ್ಟೆ ವರ್ತಿಸತೊಡಗುತ್ತದೆ. ಆಗ ಅದು ಬೈ ವಿಮರ್ಶೆ, ಜೈ ವಿಮರ್ಶೆಗಳ ಅತಿರೇಕಾವಸ್ಥೆಯನ್ನು ತಲಪಿ ಬಿಡುತ್ತದೆ.[22]

ನವೋದಯ ಸಂದರ್ಭದ ವಿಮರ್ಶೆಯನ್ನು ನಿಸಾರರು ಜೈ ವಿಮರ್ಶೆ ಮತ್ತು ನವ್ಯ ಸಂದರ್ಭದ್ದನ್ನು ಬೈ ವಿಮರ್ಶೆಯೆಂದು ಗುರುತಿಸಿರುವುದು ತುಂಬ ಸ್ವಾರಸ್ಯಕರವಾಗಿದೆ.

ವಿಮರ್ಶೆ ಸಮತೂಕವಾಗಿರಬೇಕು ಎಂಬ ತಮ್ಮ ಮಾತಿಗೆ ತಾವೇ ನಿದರ್ಶನ ನೀಡಲು ಬಯಸಿದ್ದಾರೇನೋ ಎಂಬಂತೆ ನಿಸಾರರು ಹನಿಗವನವೆಂಬ ಪ್ರಕಾರದ ಬಗೆಗೆ ಬರೆದಿರುವ 'ಮೂರ್ತಿ ಚಿಕ್ಕದಾದರೂ...' ಎಂಬ ಲೇಖನವನ್ನು ನೋಡಬೇಕು. ಹನಿಗವನವು ಹೇಗಿರಬೇಕು, ಹೇಗಿರಬಾರದು ಎಂದು ಬರೆಯುತ್ತಾ, ಕುಬ್ಜಿಕೆ, ವಾಮನಗವನ, ಲಿಲಿಪುಟ್ ಕವನವೆಂಬ ಅನೇಕ ಹೆಸರುಗಳಿಂದ ಅದನ್ನು ಮುದ್ದಾಗಿ ಕರೆಯುತ್ತಾರೆ. ನಿಸಾರರು ಹೀಗೆ ಬರೆಯುತ್ತಾರೆ:

> 'ನದಿಯನ್ನು ದಾಟಲು ಜಹಜು ಅಪ್ರಯೋಜಕ; ದೋಣಿ ತೆಪ್ಪಗಳೇ ಸರ್ವೋಚಿತ. ಹಾಗೆಯೇ ಒಂದು ಮಿತ ಸ್ವರೂಪದ, ಆದರೆ ಸ್ವಸಂಪೂರ್ಣವಾದ ಭಾವದ ಅಭಿವ್ಯಂಜನೆಗೆ ಹನಿಗವಿತೆಯೇ ತಕ್ಕ ಸಾಧನ...
>
> 'ದೀರ್ಘಪದ್ಯ ಭೋಜನ, ಮಿನಿಗವನ ವ್ಯಂಜನ. ನೆಂಜಿಕೊಳ್ಳುವ ಪರಿಕರ ರುಚಿಕರ ನಿಜ. ಆದರೆ ಅನ್ನ ಸಾರಿನ ಹಾಗೆ ತಟ್ಟೆಯ ಪೂರ್ತಿ ಅಗರ ಬಡಸಾಣಿಕೆಯಾಗದು.'[23]

ಹೀಗೆ ಉಚಿತ ಉಪಮೆಗಳೊಡನೆ ಹನಿಗವನದ ಶಕ್ತಿ ಮತ್ತು ಮಿತಿಗಳನ್ನು ನಿಸಾರರು ತುಂಬ ಸೂಕ್ತವಾಗಿ ವಿಶ್ಲೇಷಿಸಿದ್ದಾರೆ. ವಿಮರ್ಶೆ ಹೇಗಿರಬೇಕು, ಹೇಗಿರಬಾರದು ಎಂಬುದರ ಬಗೆಗೆ ನಿಸಾರರಿಗೆ ಖಚಿತ ನಿಲವುಗಳಿರುವುದು ಸುವೇದ್ಯ.

—ಹೀಗೆ, ಮೂರು ಮುಖ್ಯ ಉಪಶೀರ್ಷಿಕೆಗಳ ಅಡಿಯಲ್ಲಿ ನಿಸಾರರ ಸಾಹಿತ್ಯ ಸಂಬಂಧೀ ವಿಚಾರಗಳು ಅರಳಿರುವುದನ್ನು ಗಮನಿಸಿದ್ದೇವೆ. ಸಾಹಿತ್ಯದ ಬಗೆಗಿನ (ಅದರಲ್ಲೂ ಕಾವ್ಯದ ಬಗ್ಗೆ) ಅಪಾರ ಪ್ರೀತಿ, ವರ್ತಮಾನದ ಅರಿವು ಮತ್ತು ಉಚಿತಾನುಚಿತ ಪ್ರಜ್ಞೆಗಳು ಇಲ್ಲಿ ಕಾಣುತ್ತವೆ. ವೃತ್ತಿಯಿಂದ ವಿಜ್ಞಾನದ ಅಧ್ಯಾಪಕರಾಗಿದ್ದುದರಿಂದ ಅನೇಕ ವೈಜ್ಞಾನಿಕ ಹೋಲಿಕೆಗಳನ್ನು ನೀಡಿದ್ದಾರೆ. ವಿಜ್ಞಾನ ನಿರೂಪಣೆಯ ಖಚಿತತೆ ಮತ್ತು ಅಡಕ ಗುಣ ಅವರ ಬರಹಕ್ಕಿದೆ.

ಇನ್ನು ಅವರ ಗದ್ಯ ಭಾಷೆ. ಅವರ ಗದ್ಯ ಇಂಗ್ಲಿಷ್, ಸಂಸ್ಕೃತ, ಉರ್ದು ಪದಗಳನ್ನು ಸೂಕ್ತವಾಗಿ ಬಳಸುವ ಜಾಣ್ಮೆ, ಅಪರಿಮಿತ ಪದ ಸಂಪತ್ತು ಇವುಗಳ ಬಗೆಗೆ ಬರೆದರೆ ಅದೇ ಒಂದು ಲೇಖನವಾದೀತು. ದಿನನಿತ್ಯದ ನೋಟಗಳಿಂದಲೇ ಅವರು ಕೊಡುವ ಉಪಮೆಗಳು ವಿಷಯವನ್ನು ಚೆನ್ನಾಗಿ ಮನಗಾಣಿಸುವಲ್ಲಿ ಸಫಲವಾಗುತ್ತವೆ.

ಹೀಗೆ, ಕವಿತೆ ಬರೆಯುವುದಷ್ಟೇ ಅಲ್ಲದೆ ಅದರ ಸೃಷ್ಟಿಯ ಬಗೆಗೆ ಚಿಂತಿಸುವ, ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ಅಪಾರ ಓದು, ವಿದ್ವತ್ತಿನೊಂದಿಗೆ ಅಧಿಕೃತವಾಗಿ ಮಾತಾಡ ಬಲ್ಲ ನಿಸಾರರ ಬರಹಗಳು ನಮ್ಮ ಸಂಸ್ಕೃತಿಯ ಅಮೂಲ್ಯ ಆಸ್ತಿ. ಅವರ ವಿಚಾರಗಳನ್ನು ನಾವು ಒಪ್ಪುತ್ತೇವೋ, ಬಿಡುತ್ತೇವೋ ಅದು ಬೇರೆಯ ವಿಚಾರ—ಆದರೆ ಒಂದು ಆರೋಗ್ಯ ಕರ ಚರ್ಚೆ ಹಾಗು ಮಾತುಕತೆಗಳನ್ನಂತೂ ಅವರ ಲೇಖನಗಳು ಹುಟ್ಟು ಹಾಕುತ್ತವೆ.

ಹೀಗೆ ಬರೆದಿದ್ದಕ್ಕೆ ಇದೋ ನಿಸಾರ್ ಸಾರ್ ನಿಮಗೆ ಅಭಿನಂದನೆ!

ಉಲ್ಲೇಖಗಳು

(ಕೆ. ಎಸ್. ನಿಸಾರ್ ಅಹಮದ್ ಅವರ 'ಸಮಗ್ರ ಗದ್ಯ ಬರಹಗಳು' ಪುಸ್ತಕದಿಂದ ಉದಾಹರಿಸಿರುವ ಲೇಖನಗಳ ಶೀರ್ಷಿಕೆ)

1. ಸಾಹಿತ್ಯದ ಸತ್ವವರ್ಧಕಗಳು ಪು. 971.
2. ಕಾವ್ಯದ ಬಗೆಗೆ ಕೆಲವು ತಾತ್ತ್ವಿಕ ಚಿಂತನೆಗಳು, ಪು. 24-25.
3. ಕಾವ್ಯದ ಬಗೆಗೆ ಕೆಲವು ತಾತ್ತ್ವಿಕ ಚಿಂತನೆಗಳು, ಪು. 24.
4. ಸಾಹಿತ್ಯ ಸೃಷ್ಟಿ ಪ್ರಕ್ರಿಯೆ, ಪು. 638.
5. ಕಾವ್ಯ ಕರ್ಮದ ಪಂಚ 'ಸ' ಕಾರಗಳು, ಪು. 867-874.
6. ಸಾಹಿತ್ಯ ವಸ್ತು ಸಮಾಲೋಚನೆ, ಪು. 858.
7. ಸಾಹಿತ್ಯ ಸೃಷ್ಟಿ ಪ್ರಕ್ರಿಯೆ, ಪು. 639.
8. ಆಶಯ ಮತ್ತು ಅಭಿವ್ಯಕ್ತಿ, ಪು. 976.
9. ಕಾವ್ಯ ಕರ್ಮದ ಪಂಚ 'ಸ' ಕಾರಗಳು, ಪು. 870.
10. ಸಾಹಿತ್ಯ ಮತ್ತು ಲೋಕ ವಾಸ್ತವ, ಪು. 754-755.
11. ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ, ಪು. 260.
12. ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ, ಪು. 264.
13. ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ, ಪು. 263.
14. ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ, ಪು. 263.
15. ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ, ಪು. 261.
16. ಸಾಹಿತ್ಯದ ನೆಲೆ ಬೆಲೆ, ಪು. 980.
17. ಕಾವ್ಯದ ಬಗೆಗೆ ಕೆಲವು ತಾತ್ತ್ವಿಕ ಚಿಂತನೆಗಳು, ಪು. 25.
18. ಕನ್ನಡ ಕಾವ್ಯದ ಭವಿಷ್ಯ, ಪು. 4.
19. ಕನ್ನಡ ಕಾವ್ಯದ ಭವಿಷ್ಯ, ಪು. 6.
20. ಕನ್ನಡ ಕಾವ್ಯದ ಭವಿಷ್ಯ, ಪು. 7.
21. ಸಾಹಿತ್ಯದ ನೆಲೆ ಬೆಲೆ, ಪು. 982.
22. ಬೈ ವಿಮರ್ಶೆ, ಜೈ ವಿಮರ್ಶೆ, ಪು. 965.
23. ಮೂರ್ತಿ ಚಿಕ್ಕದಾದರೂ... ಪು. 906.



ನಿಸಾರರ ಗದ್ಯದಲ್ಲಿ ಸಾಮ್ಯ ಸಾಮತಿಗಳ ಸೊಗಸುಗಾರಿಕೆ

♦ ಪ್ರೊ. ಡಿ. ಲಿಂಗಯ್ಯ

ಕನ್ನಡದ ಸಂದರ್ಭದಲ್ಲಿ ನಾಡೋಜ ಕವಿ ಕೆ.ಎಸ್. ನಿಸಾರ್ ಅಹಮದ್ ವಿಶೇಷ ಹೆಸರು. ಆಧುನಿಕ ಕನ್ನಡ ಕಾವ್ಯದಲ್ಲಿ ಗಣ್ಯಸ್ಥಾನ ಗಳಿಸಲು ಅವರು ಸಾಕಷ್ಟು ಬೆವರು ಸುರಿಸಿದ್ದಾರೆ. ವಸ್ತುವಿನ ಆಯ್ಕೆ, ವಿನೂತನ ಅಭಿವ್ಯಕ್ತಿ, ವಿಶಿಷ್ಟ ರೂಪಕ ಸೃಷ್ಟಿ, ಭಿನ್ನ ಶೈಲಿಯ ಭಾಷೆಯ ಬಳಕೆ, ಆಕರ್ಷಕ ನುಡಿಗಟ್ಟಿನ ರಚನೆ, ಲವಲವಿಕೆಯ ನಾಟಕೀಯತೆಯಲ್ಲಿ ನಿಸಾರ್ ಅಹಮದ್ ತಮ್ಮದೇ ಆದ ಛಾಪನ್ನು ಮೊಹರಿಸಲು ಪ್ರಯತ್ನಿಸುತ್ತಾರೆ.

ಕೆ.ಎಸ್. ನಿಸಾರ್ ಅಹಮದರಿಗೆ ಕನ್ನಡ ಭಾಷೆ, ಕರ್ನಾಟಕ ನೆಲದ ಬಗೆಗೆ ವಿಶೇಷ ಗೌರವ.

ಗೋಕಾಕ್ ಚಳವಳಿಯ ಸಂದರ್ಭದಲ್ಲಿ 'ಕನ್ನಡ ಸೇನೆ' ಯೊಡನೆ ಗುರುತಿಸಿಕೊಂಡವರು; ಕನ್ನಡದ ಮಾತು ಬಂದಾಗ ಕನ್ನಡ ಪರವಾಗಿ ದನಿಯೆತ್ತಿ ಮಾತಾಡಿದವರು; ಕನ್ನಡ, ಕನ್ನಡಿಗ ರೊಡನೆ ಹಾಲು ಸಕ್ಕರೆಯಂತೆ ಬೆರೆತುಕೊಂಡವರು; ಗದ್ಯ ಪದ್ಯ ಸಾಹಿತಿಯಾಗಿ ಗತ್ತಿನಿಂದ ಬೀಗಿದವರು; ಕನ್ನಡಿಗರ ಮನದಾಳ ದಲ್ಲಿ ತಂಪಾಗಿ ನಿಂತವರು; ಅನನ್ಯ ಸಾಹಿತ್ಯ ಕೃಷಿಯಿಂದ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದವರು; ಮಾತುಕತೆ ಯಲ್ಲಿ, ವೇಷಭೂಷಣದಲ್ಲಿ, ಆಡಳಿತ ವಿಧಾನದಲ್ಲಿ ಶಿಸ್ತಿಗೆ ಬದ್ಧರಾದವರು; ಗುಂಪಿನಲ್ಲಿದ್ದರೂ ಎದ್ದು ಕಾಣುವಂಥವರು. ಒಟ್ಟಿನಲ್ಲಿ ಅವರದೇ ದಾರಿ, ಅವರದೇ ರೀತಿ, ಅವರದೇ ಶೈಲಿ. ಅದು ನಿಸಾರ್ ಶೈಲಿ.

ನಿಸಾರ್ ಅಹಮದ್ ಪ್ರಥಮತಃ ಕವಿಯಾದರೂ ಗದ್ಯಬರಹದಲ್ಲೂ ಸಾಕಷ್ಟು ಕೃಷಿ ಮಾಡಿದ್ದಾರೆ.

ನಿಸಾರರ ಗದ್ಯ ಬರಹಗಳಲ್ಲಿ ಸಾಹಿತ್ಯಕ, ಸಾಮಾಜಿಕ, ಧಾರ್ಮಿಕ, ಪೌರಾಣಿಕ, ತಾತ್ತ್ವಿಕ, ವೈಯಕ್ತಿಕ, ರಾಜಕೀಯ, ಇತಿಹಾಸ, ಪ್ರಕೃತಿ ಪರಿಸರ, ವಿಜ್ಞಾನ, ಶಿಕ್ಷಣ, ವ್ಯಕ್ತಿಚಿತ್ರ—ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಒಳ ನೋಟಗಳಿವೆ. ಕೆಲವು ಹ್ರಸ್ವವಾಗಿವೆ; ಕೆಲವು ದೀರ್ಘವಾಗಿವೆ; ಕೆಲವು ಸಮತೋಲನವನ್ನು ಸಾಧಿಸಿವೆ. ದೀರ್ಘ ಲೇಖನಗಳಲ್ಲಿ ವಾಚಾಳಿತನವೂ ತಲೆ ಹಾಕಿದೆ. ಎಲ್ಲಾ ಬರಹಗಳಲ್ಲೂ ಸ್ವಂತ ನಿಲವಿನ ಅನ್ವೇಷಣೆಯಿದೆ. ನಿಸಾರ್ ತಮ್ಮ ಪದ್ಯರಚನೆಯಲ್ಲಿ ತೋರುವ ಏಕಾಗ್ರತೆಯನ್ನು ಗದ್ಯರಚನೆಯಲ್ಲೂ ತೋರುವುದು ಅನನ್ಯವಾಗಿದೆ.

ಸಹಜ ಕವಿಯಾದ ನಿಸಾರ್ ಅಹಮದ್ ಗದ್ಯ ಬರಹಕ್ಕೆ ಹೊರಳಿದ್ದೇಕೆ? ಪದ್ಯ ಬರಹಕ್ಕಿಂತ ಗದ್ಯ ಬರಹದಲ್ಲಿ ಅವರು ಸಾಧಿಸಿದ್ದಾದರೂ ಏನು? ಪದ್ಯ ಕೃಷಿಯ ಏಕತಾನತೆಯನ್ನು ನಿವಾರಿಸಿಕೊಳ್ಳಲು ಗದ್ಯ ಕೃಷಿಗೆ ತೊಡಗಿದರೆ? ಸಾಮಾನ್ಯವಾಗಿ ಕವಿಗಳು ಪ್ರಧಾನ ಸಾಹಿತ್ಯ ಪ್ರಕಾರದ ಜೊತೆಗೆ ಮತ್ತೊಂದು ಅಭಿವ್ಯಕ್ತಿ ಪ್ರಕಾರವನ್ನು ಆರಿಸಿಕೊಳ್ಳುವಂತೆ ನಿಸಾರರೂ ಗದ್ಯ ಪ್ರಕಾರವನ್ನು—ಅದರಲ್ಲೂ ವಿಮರ್ಶೆಯನ್ನು—ಆರಿಸಿಕೊಂಡರೆ? ವೈಚಾರಿಕ ಪರಿಕಲ್ಪನೆಗೆ ಗದ್ಯ ಮಾಧ್ಯಮ ಸಮುಚಿತ ಸಂವಾದಿ ಸಂವಹನವೆನಿಸಿತೆ? ಇದಕ್ಕೆ ಕವಿಯೇ ತಮ್ಮ 'ಸಮಗ್ರ ಗದ್ಯ ಬರಹಗಳು' ಗ್ರಂಥದ 'ಬಿನ್ನಹ'ದಲ್ಲಿ ಹೀಗೆ ಸಮಜಾಯಿಷಿ ನೀಡಿದ್ದಾರೆ: 'ಬಹಳ ಸಮಯದಿಂದ ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿಯೋ ಅಮೂರ್ತವಾಗಿಯೋ ಮನೆ ಮಾಡಿದ್ದ ಅನೇಕಾನೇಕ ಭಾವನೆಗಳು, ವಿಚಾರಗಳು—ನನ್ನ ಕವಿತೆಗಳ ಇತಿಮಿತಿಯ ಚೌಕಟ್ಟಿಗೆ ಮೀರಿದಂಥವು—ಇಲ್ಲಿನ ಲೇಖನಗಳಲ್ಲಿ ಆಕಾರ ತಳೆದಿವೆ.' ಉದ್ದೇಶ ಏನಾದರಾಗಿರಲಿ, ಇದರಿಂದ ಕವಿ ನಿಸಾರರಿಗೂ ಲಾಭವಾಗಿದೆ; ಕನ್ನಡ ಸಾಹಿತ್ಯಕ್ಕೂ ಲಾಭವಾಗಿದೆ.

ಗದ್ಯ ಬರಹದ ಬಗೆಗೆ ನಿಸಾರರಿಗೆ ಅವರದೇ ಅಭಿಪ್ರಾಯವಿದೆ. 'ಗದ್ಯಕಾರನಿಗೆ ಅದರಲ್ಲೂ ವಿಚಾರ ಸಾಹಿತ್ಯದ ಲೇಖಕನಿಗೆ ಶಬ್ದಗಳು ಗಣಿತಶಾಸ್ತ್ರದ ಚಿಹ್ನೆಗಳಂತೆ ನಿಶ್ಚಿತಾರ್ಥ ವಿನೀತ' ಎಂಬುದೊಂದು ಅವರ ಹೇಳಿಕೆ. 'ಗದ್ಯದಲ್ಲಿ ವ್ಯಕ್ತವಾಗುವ ವೈಚಾರಿಕತೆ ವೈಯಕ್ತಿಕವಾಗಬೇಕಿಲ್ಲ' ಎಂಬುದೂ ಅವರ ಅಭಿಪ್ರಾಯವೇ. ಒಟ್ಟಿನಲ್ಲಿ ನಿಸಾರರ ಗದ್ಯ ಬರಹಗಳಲ್ಲಿ ಆಧುನಿಕ ಮನೋಧರ್ಮದ ವೈಚಾರಿಕತೆಗೆ ಆದ್ಯತೆ ದೊರಕಿದೆ.

ನಿಸಾರ್ ಅಹಮದರ ಗದ್ಯ ಬರಹಗಳಲ್ಲಿ ನಗೆಯಿದೆ, ಹೊಗೆಯಿದೆ; ಕಿಡಿಯಿದೆ, ಕಿಚ್ಚಿದೆ; ಜ್ಞಾನ ವಿಜ್ಞಾನದ ತಾಕಲಾಟವಿದೆ; ವಿಚಾರ ವಿಹಾರದ ಬೆಳಕಿದೆ; ಮಾನವೀಯ ಸಂಬಂಧದ ಸಂವಾದವಿದೆ; ಬೌದ್ಧಿಕ ಕಸರತ್ತಿದೆ; ರಸವಂತಿಕೆಯ ರುಚಿಯಿದೆ; ತುಪ್ಪದ ದೀಪದ ಕಾಂತಿಯಿದೆ; ಲೋಕ ಜ್ಞಾನದ ವಿಹಂಗಮ ನೋಟವಿದೆ; ಸಾಹಿತ್ಯ ಹಾಗೂ ಬದುಕಿನ ಅವಿನಾ ಸಂಬಂಧದ ತುಡಿತವಿದೆ; ಸಾಮಾನ್ಯದಿಂದ ಅಸಾಮಾನ್ಯಕ್ಕೆ ಚಿಮ್ಮುವ ಚೇತನದ ಆಶಯವಿದೆ. ನಿಸಾರ್ ಅಹಮದರ ಸಮಗ್ರ ಪ್ರತಿಭೆಯ ಗ್ರಹಿಕೆಗೆ ಅವರ ಕವಿತೆಗಳಂತೆ

ಲೇಖನಗಳೂ ಸಹಕಾರಿಯಾಗಿವೆ. ಕನ್ನಡ ಸಾರಸ್ವತ ಲೋಕದಲ್ಲಿ ನಿಸಾರರ ಸ್ಥಾನ ನಿರ್ದೇಶನದ ಸಂದರ್ಭದಲ್ಲಿ ಅವರ ಪದ್ಯ, ಗದ್ಯ ಬರಹಗಳೆರಡನ್ನೂ ಸಮ ಪ್ರಮಾಣದಲ್ಲಿ ಸಮದರ್ಶಿತ್ವದಲ್ಲಿ ಪರಿಶೀಲಿಸಬೇಕಾಗುತ್ತದೆ.

ನಿಸಾರ್ ಅಹಮದರ ಗದ್ಯ ಬರಹಗಳಲ್ಲಿ ವಿಮರ್ಶೆಯ ಮಾದರಿಯವು ಹೆಚ್ಚು. ವಿಶ್ವದ ಶ್ರೇಷ್ಠ ವಿಮರ್ಶಾಧೋರಣೆಯನ್ನು ಒಪ್ಪಿಕೊಂಡು ತಮ್ಮ ಆಲೋಚನೆಗಳನ್ನು ಮಂಡಿಸುವುದು ಅವರ ಲೇಖನಗಳಲ್ಲಿ ಎದ್ದುಕಾಣುತ್ತದೆ. ಕವಿ, ವಿಮರ್ಶಕನಾದಾಗ ಒಡಮೂಡುವ ಅಭಿವ್ಯಕ್ತಿಗೆ ಅಧಿಕ ಒತ್ತುಕೊಟ್ಟಿದೆ. ನಿಸಾರರ 'ಇದು ಬರಿ ಬೆಡಗಲ್ಲೋ ಅಣ್ಣ' ಮತ್ತು 'ಅಚ್ಚುಮೆಚ್ಚು' ಸಂಕಲನಗಳಲ್ಲಿ ಮಂಥನ, ಅವಲೋಕನ, ವಿವೇಚನ ಹಿನ್ನೆಲೆಯ ವಿಮರ್ಶಾಲೇಖನಗಳು ಸೇರಿವೆ. ಸಾಹಿತ್ಯವನ್ನು ಕುರಿತ ವಿಶ್ವದ ಶ್ರೇಷ್ಠ ವಿಮರ್ಶಕರ ಮಾನದಂಡದ ಪ್ರತಿಧ್ವನಿಯನ್ನು ಈ ಲೇಖನಗಳಲ್ಲಿ ಗುರುತಿಸಬಹುದು.

ನಿಸಾರ್ ಅಹಮದರ ವ್ಯಕ್ತಿಚಿತ್ರಗಳಲ್ಲಿ ಆತ್ಮೀಯತೆ ತುಂಬಿ ತುಳುಕುತ್ತದೆ. ಇಲ್ಲೆಲ್ಲಾ ಗುಣಗ್ರಾಹಿ ಸ್ವಭಾವಕ್ಕೇ ಅಗ್ರಸ್ಥಾನ. ಕುವೆಂಪು, ಮಾಸ್ತಿ, ವಿ.ಸೀ. ಜಿ.ಪಿ ರಾಜರತ್ನಂ, ಎಂ.ಆರ್.ಶ್ರೀ, ವಿ.ಕೃ. ಗೋಕಾಕ್, ಎ.ಆರ್. ಕೃಷ್ಣಶಾಸ್ತ್ರೀ, ಪುತಿನ, ಸರ್ ಮಿರ್ಜಾ ಮೊದಲಾದವರ ಬದುಕು ಸಾಧನೆಗಳನ್ನು ಕುರಿತು ನಿಸಾರ್ ಬರೆದಿದ್ದಾರೆ. ನಿಸಾರರ ವ್ಯಕ್ತಿಗಳ ಬಗೆಗಿನ ಡಿವಿಜಿ ಹಾಗೂ ವಿ.ಸೀ ಯವರ ವ್ಯಕ್ತಿಚಿತ್ರಗಳನ್ನು ನೆನಪಿಸುತ್ತವೆ.

ನಿಸಾರರ ಅಂಕಣ ಬರಹಗಳು ಹೆಚ್ಚು ಸಂಕೀರ್ಣವಾಗಿವೆ; ಸಮೃದ್ಧವಾದ ಲೋಕ ಜ್ಞಾನದಿಂದ ಪರಿಪುಷ್ಟವಾಗಿವೆ. ಇವು ಕನ್ನಡದ ಅಂಕಣ ಬರಹಗಳ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿವೆ. ಇವು ಸರ್ವಾಂಗ ಸುಂದರವಾಗಿ ಮೂಡಲು ನಿಸಾರ್ ನಾನಾ ರೀತಿಯ ಭಾಷಾ ಪ್ರಯೋಗಗಳನ್ನು ಮಾಡಿದ್ದಾರೆ. ಸಕಾಲಿಕವಾದ ಅಂಕಣ ಬರಹಗಳು ಸಾರ್ವಕಾಲಿಕ ಅರ್ಥವ್ಯಾಪ್ತಿಗೆ ಪ್ರವೇಶಿಸುವುದು ಹೆಚ್ಚುಗಾರಿಕೆಯಾಗಿದೆ.

ಇಸ್ಲಾಂ ಸಂಸ್ಕೃತಿ, ಧರ್ಮ, ವ್ಯಕ್ತಿ ವಿಷಯಗಳನ್ನು ಕುರಿತ ಲೇಖನಗಳು ನಿಸಾರರಂತಹವರು ಮಾತ್ರ ಬರೆಯಬಲ್ಲರೆಂಬುದಕ್ಕೆ ಸಾಕ್ಷಿಯಾಗಿವೆ. ಇವು ಕನ್ನಡ ಸಾರಸ್ವತ ಲೋಕಕ್ಕೆ ಸಾರ್ಥಕ ಸೇರ್ಪಡೆ. ನಿಸಾರ್ ಪರಿಚಯಿಸಿರುವ ಕುರ್‌ಆನ್, ಹದೀಸ್, ಸೂಫಿಗಳು, ಟಿಪ್ಪುಸುಲ್ತಾನ್, ಖಾನ್ ಅಬ್ದುಲ್ ಗಫಾರ್‌ಖಾನ್, ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದ ಲೇಖನಗಳಲ್ಲಿ ಭರ್ತಿ ಮಾಹಿತಿಗಳಿವೆ.

ನಿಸಾರ್ ಅಹಮದರ ಗದ್ಯ ಬರಹಗಳಲ್ಲಿ ಬೋಧಕನ ಗತ್ತಿದೆ, ಸೈನಿಕನ ಶಿಸ್ತಿದೆ, ಲೋಕಾನುಭವದ ದೌಲತ್ತಿದೆ, ಅನನ್ಯತೆಯನ್ನು ಛಾಪಿಸುವ ಸ್ವೋಪಜ್ಞತೆಯಿದೆ. ಭಾವ ಸಂವೇದಿಯಾದ ಕವಿ ನಿಸಾರ್ ಅಹಮದ್, ವೈಚಾರಿಕ ವಿಹಾರದ ತಮ್ಮ ಗದ್ಯ ಬರಹಗಳಲ್ಲಿ ಅರ್ಥಪೂರ್ಣತೆಯನ್ನು ಧ್ವನಿಸಲು ನಾನಾ ರೀತಿಯ ಸಾಹಿತ್ಯಕ ಕಸರತ್ತು ಮಾಡಿದ್ದಾರೆ. ನಿಸಾರರ ಗದ್ಯಬರಹಗಳು ಸಹೃದಯ ಸಂವಾದಿಗೆ, ಗಂಭೀರ ಚಿಂತಕನಿಗೆ ನಿರಾಶೆ ಉಂಟುಮಾಡುವುದಿಲ್ಲ. ನಿಸಾರರು ತಮ್ಮ ಪದ್ಯ ಸೃಷ್ಟಿಯಂತೆ ಗದ್ಯಬರಹದಲ್ಲೂ ತಮ್ಮತನವನ್ನು ಸ್ಥಾಪಿಸಲು ಹೆಣಗುತ್ತಾರೆ. ತಮ್ಮ ಸಾಹಿತ್ಯ ಕೃಷಿಯ ಬಗೆಗೆ ನಿಸಾರ್ ಹೀಗೆ ಹೇಳಿಕೊಂಡಿ

ದ್ದಾರೆ: 'ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದ ರೀತಿಯಲ್ಲಿ ಕೂಡಿದ ಮಟ್ಟಿಗೆ ಅನನ್ಯತೆಯಿರಬೇಕೆಂಬ ತುಡಿತ ನನ್ನ ಗದ್ಯ ಮತ್ತು ಕವನ ರಚನೆಗಳ ಹಿನ್ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ.' ನಿಸಾರರ ಸಾಹಿತ್ಯ ಓದುವ ಯಾರಿಗಾದರೂ ಈ ಮಾತು ಉತ್ಪ್ರೇಕ್ಷೆಯೆನಿಸುವುದಿಲ್ಲ

ನಿಸಾರ್ ಅಹಮದರ ಗದ್ಯ ಬರಹಗಳಲ್ಲಿ ಅವರ ಲೋಕ ಜ್ಞಾನದ ಹರಹು, ಉದಾತ್ತ ಬದುಕಿನ ಕಾಳಜಿ, ಅಸಾಧಾರಣ ಸಾಧನೆಯ ಹಂಬಲ, ಸ್ವಾಸ್ಥ್ಯಮುಖಿಯಾದ ಸಾಮಾಜಿಕ ಬಯಕೆ, ಸದಭಿರುಚಿಯ ಚಿಂತನೆ, ಉತ್ತಮೋತ್ತಮ ಸಂದೇಶ, ಜಾತಿ ಮತ ಪಂಥಗಳನ್ನು ಮೀರಿದ ಮಾನವೀಯತೆ, ಸಾಹಿತ್ಯ ಕೃಷಿಯ ಬದ್ಧತೆ ನಿಚ್ಚಳವಾಗಿ ಕಾಣುತ್ತದೆ. ಅವರ ಪದ್ಯಗದ್ಯ ಬರಹಗಳಲ್ಲಿ ಏಕಪ್ರಕಾರವಾದ ಸೃಜನಶೀಲ ಶಕ್ತಿ ಸಂವಹಿಸುತ್ತದೆ. ನಿಸಾರರ ಗದ್ಯ ಬರಹಗಳಲ್ಲಿ ಬಿಗಿಯಿದೆ, ಬನಿಯಿದೆ; ಬುದ್ಧಿ ಭಾವಗಳ ವಿದ್ಯುದಾಲಿಂಗನವಿದೆ; ವೈಚಾರಿಕ ವಿಹಾರದ ಲಹರಿಯಿದೆ; ಮಿಶ್ರ ಮಾಧುರ್ಯವಿದೆ; ಒಳಿತಿನ ತುಡಿತದ ಒರತೆಯಿದೆ; ಮನು ಕುಲದ ಹಿತಾಕಾಂಕ್ಷಿಯಾದ ಹಿತ ವಚನವಿದೆ. ಕನ್ನಡದ ಅತ್ಯುತ್ತಮ ಲೇಖಕರ ಅತ್ಯುತ್ಕೃಷ್ಟ ಗದ್ಯ ಬರಹಗಳ ಸಾಲಿಗೆ ನಿಸಾರರ ಗದ್ಯ ಬರಹಗಳು ನಿಸ್ಸಂಶಯವಾಗಿ ಸೇರುತ್ತವೆ.

ನಿಸಾರ್ ಅಹಮದ್ ಉದ್ದೇಶಪೂರ್ವಕವಾಗಿ, ಕನ್ನಡ ಸಾಹಿತಿಗಳ ಸಾಲಿನಲ್ಲಿ ಪ್ರತ್ಯೇಕತೆಯನ್ನು ಪಡೆದುಕೊಳ್ಳಲು ಸಾಹಿತ್ಯ ಕೃಷಿಯ ಪ್ರಾರಂಭದಿಂದಲೂ ಹೆಣಗಿದ್ದಾರೆ. ಅವರೇ ತಮ್ಮ ಬರವಣಿಗೆಯ ಬಗೆಗೆ ಹೀಗೆ ದಾಖಲಿಸಿದ್ದಾರೆ: 'ಕ್ರಿಯಾಪದಗಳ ಅಸಾಂಪ್ರದಾಯಿಕ ಬಳಕೆಯಲ್ಲಿ; ಉರ್ದು, ಫಾರಸಿ, ಅರಬ್ಬಿ, ಇಂಗ್ಲಿಷ್, ಸಂಸ್ಕೃತ ಪದಗಳ ಉದ್ದೇಶಿತ ವಿಲಕ್ಷಣ ಪ್ರಯೋಗದಲ್ಲಿ; ಭಾವನೆ ಸಂಕೀರ್ಣವಾಗಿದ್ದರೂ ಸಂವಹನತೆಯಲ್ಲಿ ರಾಜಿ ಮಾಡಿಕೊಳ್ಳಬಾರದೆಂಬ ನನ್ನ ಲಾಗಾಯ್ತಿನ ತುರ್ತಿನಲ್ಲಿ—ನಾನು ನನ್ನ ಓರಗೆಯವರಿಗಿಂತ ಹೇಗೆ ಬೇರೆ? ಎನ್ನುವ ತೀರ್ಪಿನ ಮೇಲೆ ನನ್ನ ಮಾತುಗಾರಿಕೆಯ ಸಿಂಧುತ್ವ, ಸ್ವೋಪಜ್ಞತೆಗಳು ನಿಂತಿವೆ.' ಈ ಹೇಳಿಕೆಯ ಹಿನ್ನೆಲೆಯಲ್ಲಿಯೇ ಅವರ ಕೃತಿಗಳನ್ನು ಸಮೀಕ್ಷಿಸುವುದು ಸೂಕ್ತ. ನಿಸಾರರ ಪದ್ಯಕೃತಿಯಲ್ಲಾಗಲೀ ಗದ್ಯಕೃತಿಯಲ್ಲಾಗಲೀ ಅವರ ಸ್ವಂತಿಕೆ ಸ್ಪಷ್ಟವಾಗಿ ಸಾಬೀತಾಗುತ್ತದೆ.

ನಿಸಾರ್ ಅಹಮದರ ಗದ್ಯ ಬರಹಗಳಲ್ಲಿ ಹಲವು ರೀತಿಯ ಸಾಹಿತ್ಯಕ ಪ್ರಯೋಗಗಳಿವೆ. ಅವುಗಳಲ್ಲಿ ಸಾಮ್ಯ ಸಾಮತಿಗಳ ಪ್ರಯೋಗ ಕುತೂಹಲಕಾರಿಯಾಗಿದೆ. ಅವರ ಗದ್ಯ ಬರಹಗಳಲ್ಲಿ ಸಾಮ್ಯ ಸಾಮತಿಗಳ ಸರಮಾಲೆಯೇ ತುಂಬಿದೆ. ನಿಸಾರ್ ಸಾಮತಿ ಪ್ರಿಯರು. ತಾವು ಆರಿಸಿಕೊಂಡ ವಸ್ತು ವಿಷಯದ ಪುಷ್ಟತೆಗೆ ಸ್ಪಷ್ಟತೆಗೆ ರೂಪಕಾಂಶದ ಸಾಮತಿಗಳನ್ನು ಧಂಡಿಯಾಗಿ ಬಳಸುವುದು ನಿಸಾರರ ಜಾಯಮಾನ. ಸಾಮತಿಗಳು ಅವರ ಗದ್ಯ ಬರವಣಿಗೆಯ ಬೆಳವಣಿಗೆಗೂ ಸಹಕಾರಿಯಾಗಿವೆ. ನಿಸಾರ್ ತಮ್ಮ ದಟ್ಟ ಜೀವನಾನುಭವದ ಗಟ್ಟಿ ಅಭಿವ್ಯಕ್ತಿಗೆ ಸಾಮತಿಗಳನ್ನು ಧಾರಾಳವಾಗಿ ಬಳಸಿದ್ದಾರೆ. ನಿಸಾರರ ಸಾಮತಿಗಳಲ್ಲಿ ನಾಟಕೀಯತೆ, ವೈಚಾರಿಕತೆ, ಚಿಂತನಶೀಲತೆ, ಸುಭಾಷಿತ ಸೂಕ್ಷ್ಮತೆ, ವಿವೇಕ ವಿಶಾಲತೆ,

ಖಚಿತತೆ ಢಾಳಾಗಿದೆ.

ನಿಸಾರ್ ಅಹಮದ್ ತಮ್ಮ ಲೇಖನಗಳ ವಿನ್ಯಾಸದಲ್ಲಿ ಒಟ್ಟಂದವನ್ನು ಸ್ಥಾಪಿಸಲು ಸಾಮ್ಯ ಸಾಮತಿ, ಸೂತ್ರ ಸೂಕ್ತಿ, ನುಡಿ ನುಡಿಗಟ್ಟು, ಲೋಕೋಕ್ತಿ ಗಾದೆ, ರೂಪಕ ಶಬ್ದ ಚಿತ್ರ, ವಿವಿಧ ಉದ್ಧೃತ ಉದಾಹರಣೆಗಳನ್ನು ಹೇರಳವಾಗಿ ನಮೂದಿಸುತ್ತಾರೆ. ಕನ್ನಡದ ಜೊತೆಗೆ ಅನ್ಯ ಭಾಷಾ ಸಾಹಿತ್ಯದ ಮಾಹಿತಿಗಳನ್ನು ಗಿಡಿಯುತ್ತಾರೆ. ಭಾಷಾಮಿಶ್ರಣವನ್ನು ಲೀಲಾಜಾಲ ವಾಗಿ ನಿರ್ವಹಿಸುತ್ತಾರೆ. ಇದರಲ್ಲಿ ಮೈಲಿಗೆಯ ನುಡಿಯಿಲ್ಲ. ಎಲ್ಲವನ್ನೂ ಕನ್ನಡದ ಜಾಯಮಾನಕ್ಕೆ ಒಗ್ಗಿಸಲು ಕಸರತ್ತು ಮಾಡುತ್ತಾರೆ. ಬುದ್ಧಿಪೂರ್ವಕವಾದ ಈ ಗೆಯ್ಮೆಯಿಂದ ರಸವತ್ತಾದ ಸಾಹಿತ್ಯವಾಗಿಸಿ ಅನನ್ಯರಾಗುತ್ತಾರೆ.

ನಿಸಾರರು ತಮ್ಮ ಗದ್ಯ ಬರಹಗಳಿಗೆ ಆರಿಸಿಕೊಂಡಿರುವ ವಸ್ತು ವಿಷಯಗಳ ಸಂಖ್ಯೆ ಅಸಂಖ್ಯವಾಗೇನೂ ಇಲ್ಲ. ಆದರೆ ಆರಿಸಿಕೊಂಡಿರುವ ವಿಷಯಗಳ ಅರ್ಥಪೂರ್ಣ ಅಭಿವ್ಯಕ್ತಿ ಆಕರ್ಷಕವಾಗಿದೆ; ಅನುಸರಣೀಯವಾಗಿದೆ. ಎಷ್ಟೋ ಸಾಮತಿಗಳು ಆಯಾ ಸಂದರ್ಭದ ಹೊರಗಿಟ್ಟು ಪರಿಶೀಲಿಸಿದರೂ ಮನನೀಯವಾಗಿವೆ. ಕೆಲವು ಕಡೆ ಸಾಮ್ಯ ಸಾಮತಿಗಳೇ ಪ್ರಬಂಧದ ಜೀವ ಜೀವಾಳವಾಗಿರುವುದುಂಟು. ಕೆಲವು ಸಾಮ್ಯ ಸಾಮತಿಗಳನ್ನು ಸೋದಾಹರಣವಾಗಿ ಸಮೀಕ್ಷಿಸಬಹುದು:

ಕಾವ್ಯಕರ್ಮಿ ನಿಸಾರ್ ಅಹಮದ್ ಅವರು, ಕವಿ-ಕಾವ್ಯದ ಬಗೆಗೆ; ಕಾವ್ಯಕ್ಷೇತ್ರದಲ್ಲಿ ತಮ್ಮತನದ ಬಗೆಗೆ, ಪೂರ್ವಸೂರಿಗಳ ಚಿಂತನೆಯ ಜೊತೆಗೆ ತಮ್ಮ ಅನುಭವವನ್ನೂ ಮೇಳವಿಸಿ, ವಿವರವಾಗಿ ಚರ್ಚಿಸಿದ್ದಾರೆ. ಅದಕ್ಕಾಗಿ ಹಲವು ಸಂದರ್ಭಗಳನ್ನು ಬಳಸಿ ಕೊಂಡಿದ್ದಾರೆ. ವರ ಕವಿಯ ಶಾಶ್ವತ ಕೃತಿಯ ಮೌಲ್ಯದ ಬಗೆಗಿನ ತಾತ್ವಿಕ ಚಿಂತನೆಗೆ ನಿಸಾರರು ಸಾಮತಿಯ ಮೂಲಕ ಹೀಗೆ ಪ್ರತಿಕ್ರಿಯಿಸಿದ್ದಾರೆ:

> 'ರಾಷ್ಟ್ರ ಜೀವನದ ದೃಢಾಂಗತೆಗೆ ವರ ಕವಿಯೊಬ್ಬ ಗ್ರಹಿಸಿದ ತಥ್ಯಗಳು ತತ್‌ಕ್ಷಣ ಮೇಲು ನೋಟಕ್ಕೆ ಎದ್ದು ಕಾಣದಿದ್ದರೂ ಸಾವಕಾಶವಾಗಿ ಒಳಗೊಳಗೇ ವಿಟಮಿನ್ನುಗಳಂತೆ ದುಡಿದಿರುತ್ತವೆ.*' (೨೫).

ವರ ಕವಿಯ ಗ್ರಹಿಕೆಯ ತಥ್ಯಗಳಿಗೆ ವಿಟಮಿನ್ನುಗಳನ್ನು ಸಾಮತಿಸಿರುವುದು ನವೀನವಾಗಿದೆ. ವಿಷಯ ಪ್ರತಿಪಾದನೆಗೆ ಸಾಂಪ್ರದಾಯಿಕ ಉಪಮಾನಗಳನ್ನು ಬಿಟ್ಟು ಹೊಸ ವಸ್ತು ವಿಷಯಗಳನ್ನು ಆರಿಸಿಕೊಳ್ಳುವುದು ನಿಸಾರರಿಗೆ ಹೆಚ್ಚು ಖುಷಿ ಕೊಡುತ್ತದೆ. ಕವಿ ಕೃತಿಗೆ ವಿಟಮಿನ್ನನ್ನು ಹೋಲಿಸಿರುವುದು ಬಹುಶಃ ಇದೇ ಮೊದಲು. ಕಾವ್ಯದ ಪರಿಣಾಮ ವಿಟಮಿನ್ನಿನ ಪರಿಣಾಮದಂತೆ ದುಡಿಯುವುದು ಧ್ವನಿಪೂರ್ಣವಾಗಿದೆ.

ಉತ್ತಮ ಕಾವ್ಯದ ಅಂತಿಮ ಗುರಿಯೇನು? 'ಉತ್ಕೃಷ್ಟ ಕಾವ್ಯ ಸಾಹಿತ್ಯಗಳ ಚರಮ ಗುರಿ ಲೌಕಿಕತೆಯ ಹೆಚ್ಚಳವಲ್ಲ, ಅದರ ತಗ್ಗುವಿಕೆ; ಐಹಿಕೋದ್ವೇಗದ ಉಲ್ಬಣವಲ್ಲ, ಅದರ

---

* ಪ್ರಸ್ತುತ ಲೇಖನದಲ್ಲಿ ಬಳಸಿರುವ ಉದ್ಧೃತ ಸಾಲುಗಳನ್ನು ಕೆ.ಎಸ್. ನಿಸಾರ್ ಅಹಮದರ 'ಸಮಗ್ರ ಗದ್ಯ ಬರಹಗಳು' (2002) ಬೃಹತ್ ಸಂಪುಟದಿಂದ ಆರಿಸಿದೆ. ಅಂಕಿಗಳು ಆ ಗ್ರಂಥದ ಪುಟ ಸಂಖ್ಯೆಯನ್ನು ಸೂಚಿಸುತ್ತವೆ.

ತಣಿವು, ಶಮನ' (೬೫೧). ಅಂತಹ ಸಾಹಿತ್ಯವನ್ನು ಸೃಷ್ಟಿಸುವ ಸೃಜನಶೀಲ ಕವಿ ಸಾಹಸಿಯಾಗಿರಬೇಕು. ಕವಿ ಕರ್ಮ ಸಾಹಸಮಯವಾಗಿರಬೇಕು. ಸತ್ಫಲ ದಕ್ಕಿದರೆ ಧನ್ಯತೆ ಪ್ರಾಪ್ತವಾಗುತ್ತದೆ. ನಿಸಾರರ ಪ್ರಕಾರ—

> 'ಪ್ರತಿ ಕವಿಯೂ ಒಬ್ಬೊಬ್ಬ ಕ್ರಿಸ್ಟೋಫರ್ ಕೊಲಂಬಸ್. ಒಂದೊಂದು ವಿಶಿಷ್ಟ ಕವನ ರಚನೆಯೂ ಒಂದೊಂದು ದುರ್ಗಮವಾದ, ಸಾಹಸಮಯವಾದ ನೌಕಾಯಾನ; ಹೊಸ ನೆಲೆಯ ಅನ್ವೇಷಣ' (೧೦)

ಇಲ್ಲಿ ಕವಿಗೂ ಇತಿಹಾಸ ಪುರುಷನಿಗೂ ಸಂಬಂಧ ಕಲ್ಪಿಸಿದೆ. ಸಂಪ್ರದಾಯಸ್ಥ ಆಲಂಕಾರಿಕರಾಗಿದ್ದರೆ ಇಂಥ ಉಪಮಾನವನ್ನು ಬಳಸುತ್ತಿರಲಿಲ್ಲ. ನಿಸಾರರ ಸಾಮತಿಗಳು ಸಂಪ್ರದಾಯದ ಗಡಿಯನ್ನು ದಾಟುತ್ತವೆ.

ಕವನಗಳಿಗೆ ನಿಸಾರ್ ಕಲ್ಪಿಸಿರುವ ನವೀನ ಹೋಲಿಕೆ ಇಂತಿದೆ:

> 'ಕವನಗಳಾದರೋ ಅಂತಃಸ್ವರೂಪದ ರಸಾನ್ವಿತ ಡೈರಿಗಳು' (೧೬)

ಮಾಹಿತಿ ನಿಬಿಡ ಡೈರಿಯಲ್ಲಿ ರಸ ಹುಡುಕುವುದು ವ್ಯರ್ಥ. ರಸವಿದ್ದರೆ ಸಾರ್ಥಕ. ಕವನವಾಗಲೀ ಡೈರಿಯಾಗಲೀ ರಸಮಯವಾಗಿದ್ದರೆ ಚೆಂದ.

ಬದುಕಿನ ಅನಿವಾರ್ಯ ಅಂಗವಾದ, ಸುಶಿಕ್ಷಿತ ಸುಸಂಸ್ಕೃತ, ಮನುಕುಲದ ಸುರಕ್ಷಿತ ಸಂಜೀವಿನಿಯಾದ ಸಾಹಿತ್ಯದ ಬಗೆಗೆ ಸಾಹಿತಿಗಳು, ಚಿಂತಕರು ನಾನಾ ರೀತಿಯಲ್ಲಿ ನಿರ್ವಚಿಸಿದ್ದಾರೆ. ಸಾಹಿತ್ಯ ಸೃಷ್ಟಿ, ಸಾಹಿತ್ಯ ವಾಚನ, ಸಾಹಿತ್ಯ ಮನನ, ಸಾಹಿತ್ಯ ಸರ್ವೋಪಯೋಗವನ್ನು ಕುರಿತು ಪ್ರಾಚೀನ ಕಾಲದಿಂದ ಕಾಲಧರ್ಮಕ್ಕೆ ಅನುಸಾರವಾದ ವ್ಯಾಖ್ಯಾನಗಳು ಹೊರಹೊಮ್ಮಿವೆ. ಈ ಬಗೆಗೆ ನಿಸಾರರ ನಿರೂಪಣೆಗಳು, ಸಾಮ್ಯ ಸಾಮತಿಗಳು ಹೀಗೆ ಮೂಡಿವೆ :

> 'ಸಾಹಿತ್ಯ ಸೃಷ್ಟಿಕಾರ್ಯ ಬರಿಯ ಚಕ್ಕಂದವಲ್ಲ. ಬೇಕಾದಂತೆ ಮೋಜು ಮಾಡುವ ಪ್ರವಾಸಿ ಮಂದಿರವಲ್ಲ. ಅದೊಂದು ಗರ್ಭಗುಡಿ; ನಿರ್ಬಂಧದ ನಡಾವಳಿ, ಶ್ರದ್ಧಾನ್ವಿತ ಗಾಂಭೀರ್ಯ ಅಲ್ಲಿ ಭೂಷಣಪ್ರಾಯ' (೧೯೭೧).

ನಿಸಾರ್ ಅಹಮದರು ಸಾಹಿತ್ಯದ ಗಂಭೀರ ವಿದ್ಯಾರ್ಥಿ. ಸಾಹಿತ್ಯ ನಿರ್ಮಿತಿ ಪವಿತ್ರ ಕಾರ್ಯ. ಅದು ಸರಸ್ವತಿಯ ಗರ್ಭಗುಡಿ. ಪ್ರವಾಸಿ ಮಂದಿರದಂತೆ ವಿಲಾಸದ ಲಘು ನೆಲೆಯಲ್ಲ. ನಿಸಾರರ ಸಾಮತಿಗಳಲ್ಲಿ ಏನೆಲ್ಲ ವಸ್ತು ವಿಷಯಗಳು ಪ್ರವೇಶಿಸುತ್ತವೆ ಎನ್ನುವುದು ಕುತೂಹಲಕಾರಿಯಾಗಿದೆ. ಸಾಹಿತ್ಯ ನಿರ್ಮಿತಿಯ ಇನ್ನಷ್ಟು ವಿವರಗಳು ಹೀಗಿವೆ :

> 'ಇಂದ್ರಿಯಗಳ ಮೂಲಕ ಲೇಖಕನ ಸೂಕ್ಷ್ಮಸಂವೇದಿ ಮನಸ್ಸು ಲೋಕ ಸಂಗತಿಗಳನ್ನು ಸ್ವಕೀಯ ರಸ ಸಾಮಗ್ರಿಯಾಗಿ ರೂಪಾಂತರಿಸಿಕೊಳ್ಳುವುದೇ ಸೃಷ್ಟಿಕ್ರಿಯೆಗೆ ಇಂಧನಪ್ರಾಯ. ಅಧ್ಯಯನ ಚಿಂತನ ಇತ್ಯಾದಿಗಳೇನಿದ್ದರೂ ಸ್ವಾನುಭವಕ್ಕೆ ಪರಿಪೋಷಕ, ಪರ್ಯಾಯವಲ್ಲ. ಅವು ಸತ್ವವರ್ಧಕ ವಿಟಮಿನ್ನುಗಳೇ ವಿನಾ ದಿನ ನಿತ್ಯದ ಉಣಿಸಲ್ಲ' (೯೭೩)

ಬರೆಯುವವರೆಲ್ಲ ಉತ್ತಮ ಸಾಹಿತಿಗಳಲ್ಲ. ಬರೆದದ್ದೆಲ್ಲಾ ಉತ್ತಮ ಸಾಹಿತ್ಯವಲ್ಲ.

ಅದನ್ನು ನಿಸಾರ್ ರೂಪಕವಾಗಿ ತಿಳಿಸುವ ಪರಿಯಿದು:

> 'ಮಲೆನಾಡಿನ ಮಹಾರಣ್ಯದಲ್ಲಿ ಶ್ರೀಗಂಧವಾಗುವ ನಸೀಬು ಎಲ್ಲೋ ಕೆಲವಕ್ಕಷ್ಟೆ. ಉಳಿದವು ಸೌದೆ, ಮರಮುಟ್ಟುಗಳಿಗೇ ಮೀಸಲು' (೮೫೮)

ಉತ್ತಮ ಸಾಹಿತ್ಯ ಕೃತಿಗೆ ಶ್ರೀಗಂಧ ಸಾದೃಶ್ಯ. ಸಾಧಾರಣ ಕೃತಿಗಳು ಕೇವಲ ಮರ ಮುಟ್ಟು ಅಷ್ಟೆ.

ಸಾಹಿತ್ಯ ವಿಮರ್ಶೆಗಳ ಫಲಾಫಲಗಳನ್ನು ನಿಸಾರರ ನವೀನ ಸಾಮತಿಗಳು ಹೀಗೆ ಪರಿಚಯಿಸುತ್ತವೆ:

> 'ಸಾಹಿತ್ಯ ವಾಚನ ಅವನವನ ಸ್ವಾಭಿರುಚಿ, ಮನಃಪರಿಪಕ್ವತೆಗಳಿಂದ ಫಲಸಿದ್ಧಿ ಕಾಣಿಸುವ ಜಾಯಮಾನದ್ದು. ವಿಮರ್ಶಕನ ಸೂತ್ರಗಳೇನಿದ್ದರೂ ಆಂಟೆನಾದಂತೆ ದೃಶ್ಯ ಸ್ಪಷ್ಟತೆಗೆ ಸಹಾಯಕವಾಗಬಲ್ಲವೇ ವಿನಾ ದೃಶ್ಯದ ಮೂಡುವಿಕೆಗಲ್ಲ. ದೃಶ್ಯದ ಪ್ರತ್ಯಕ್ಷತೆಗೆ ಟಿವಿ ಸೆಟ್ ಸದೃಶವಾದ ವಾಚಕನ ಮನೋಬುದ್ಧಿಗಳೇ ಚರಮ ನಿರ್ಣಾಯಕಗಳು' (೭೬೩)

ನಿಸಾರರ ಸಾಮತಿಗಳ ಕ್ಷೇತ್ರ ದೊಡ್ಡದು. ಏನೆಲ್ಲ ವಸ್ತು ವಿಷಯಗಳು ಅವರ ಅಭಿವ್ಯಕ್ತಿಗೆ ಇಂಬಾಗುತ್ತವೆ!

ಭಾಷೆ ಮನುಷ್ಯ ಸೃಷ್ಟಿಯ ಅದ್ಭುತಗಳಲ್ಲೊಂದು. ಭಾಷೆಯಿಂದ ಮನುಕುಲದ ಬದುಕು ಸಂಸ್ಕೃತಮಯವಾಯಿತು. ಭಾಷೆ ಹೇಗಿರಬೇಕು? ಹೇಗಿದ್ದರೆ ಚೆಂದ? ಭಾಷೆಗೂ ಶೈಲಿಗೂ ಭಾಷೆಗೂ ಭಾವಕ್ಕೂ ಸಂಬಂಧವಿದೆಯೆ? ಇದ್ದರೆ ಅದು ಹೇಗಿರಬೇಕು? ಎಂಬ ಬಗೆಗೂ ಪ್ರಾಜ್ಞರು ವಿವೇಚಿಸಿದ್ದಾರೆ. ನಿಸಾರರ ಸಾಮತಿಗಳು ಭಾಷೆಯ ಬಗೆಗೆ ಹೀಗೆ ಒಕ್ಕಣಿಸಿವೆ:

> 'ಭಾಷೆ ಬಿಗಿಯಾದ ಹಗ್ಗದಂತಿರಬೇಕಾದರೆ ಕಸುವಾದ ಪದಗಳು ಚೆನ್ನಾಗಿ ಹುರಿಗೊಂಡಿರಬೇಕು. ಮಧ್ಯೆ ಅಸ್ಪಷ್ಟತೆಯ ಮಡಿಕೆಗಳೊ, ವಂಕಿಗಳೊ, ಸಡಿಲ ಕುಣಿಕೆಗಳೊ ಇರಬಾರದು' (೫೯೩).

ಭಾಷೆಯ ಮೇಲೆ ಹಿಡಿತವನ್ನು ಸಾಧಿಸಲು ನಿಸಾರ್ ಸಾಕಷ್ಟು ಶ್ರಮಿಸಿದ್ದಾರೆ. ಭಾಷೆ ಬಂಧುರ ವಾಗಿರಲು ಪದಗಳು ಹೇಗೆ ಕೋದುಕೊಳ್ಳಬೇಕು ಎಂಬುದರ ವಿವರ ಇಲ್ಲಿದೆ.

ಭಾಷೆಗೂ ಭಾವಕ್ಕೂ ಇರುವ ಅವಿನಾಸಂಬಂಧ ಮತ್ತು ಅವುಗಳ ಹೊಂದಾಣಿಕೆ ಯನ್ನು ನಿಸಾರ್ ಬೆಂಕಿ-ಬೆಳಕಿನ ಉಪಮಾನದಿಂದ ದೃಢೀಕರಿಸುತ್ತಾರೆ:

> 'ಭಾವ ಭಾಷೆಗಳು ಬೇರೆಬೇರೆಯಾಗಿ ಭಿನ್ನ ಅವಧಿಗಳಲ್ಲಿ ಒಂದು ಕ್ರಮಾಗತ ಸೂತ್ರಕ್ಕೆ ಅನುಸಾರವಾಗಿ ಅಸ್ತಿತ್ವ ತಳೆದಂಥವಲ್ಲ, ಒಂದೇ ಸಮಯಕ್ಕೆ ಏಕೀಭವಿಸಿ ಮೂಡಿದಂಥವು: ಬೆಂಕಿಯಲ್ಲಿನ ಬೆಳಕು ಕಾವುಗಳಂತೆ.'

ಮನು ಕುಲದ ಸಮಸ್ತ ಜೀವನ ವಿಧಾನದ ಸಾರ : ಸಂಸ್ಕೃತಿ. ಸಂಸ್ಕೃತಿಯಿಲ್ಲದ

ಜನಾಂಗ ಸುಸಂಸ್ಕೃತವಾಗಲಾರದು. ಸಂಸ್ಕೃತಿಯ ಆದ್ಯತೆ ಯಾವುದಕ್ಕೆ? ಸುಸಂಸ್ಕೃತ ಕಾರ್ಯತತ್ಪರತೆ ಯಾವುದಕ್ಕೆ? ನಿಸಾರರ ದೃಷ್ಟಿ ಹೀಗಿದೆ:

> 'ಪರಾನುಕಂಪ, ಹಾರ್ದಿಕವಾದ ಸಾಮಾಜಿಕ ಸೌಹಾರ್ದ ಸಂಸ್ಕೃತಿಯ ದ್ಯೋತನ. ಇತರರ ಕಷ್ಟ ನಷ್ಟಗಳ ಬಗ್ಗೆ ಕನಿಕರಿಸದವ, ನೆರವಾಗದವ ಉಸಿರಾಡುತ್ತಿದ್ದರೂ ಜೀವಚ್ಛವದಂತೆ' (೧೬೭).

ನಿಸಾರರ ವೈಚಾರಿಕತೆ ಸಮಾಜ ಮುಖಿಯಾದದ್ದು; ಮಾನವೀಯವಾದದ್ದು. ಸಂಚಲನಲ ಸಂಸ್ಕತಿ ಅರ್ಥಪೂರ್ಣ. ಮೃತ ಸಂಸ್ಕೃತಿ ಅರ್ಥಹೀನ.

> 'ಮಾನವತೆಯನ್ನು ಮರೆತ ಮತೋದ್ಧಾರ ಹೆಣದ ಸಿಂಗಾರ' (೧೭೫)

ಮತೋದ್ಧಾರಕರು ಮನನ ಮಾಡಬೇಕಾದ ಸಾಮತಿ ಇದು. ಮಾನವತೆಯ ಸ್ಪರ್ಶವಿಲ್ಲ ದಿದ್ದರೆ ಮತ ಚಿಂತನೆ ಹೆಣದ ಸಿಂಗಾರದಂತೆ ನಿಷ್ಪ್ರಯೋಜಕವಾಗುತ್ತದೆ.

ಆಸೆಯಿಲ್ಲದ ಮನುಷ್ಯನಿಲ್ಲ. ಆಸೆಯ ಪೂರೈಕೆಗೆ ವೀರ ಸಂಕಲ್ಪ ಕೈಗೊಳ್ಳುವವರಿಗೂ ಕೊರತೆಯಿಲ್ಲ. ಆಸೆ ಒಳಿತಿನ ಹೆದ್ದಾರಿಯೂ ಹೌದು; ಕೆಡುಕಿನ ಕಂದರವೂ ಹೌದು. ಎರಡರ ಸಮತೋಲನ ಮುಖ್ಯ. ಆಸೆ ಸಂಕಲ್ಪಗಳ ಇತಿಮಿತಿಯನ್ನು ನಿಸಾರರ ಮಂಥನ ಶಕ್ತಿ ಹೀಗೆ ಕಂಡರಿಸಿದೆ:

> 'ಕೊನೆಗಾಲದ ತನಕ ಜೀವಿತದ ಆಸಕ್ತಿ, ಪ್ರೀತಿಗಳಿಗೆ ಆಸೆಯೇ ಆಮ್ಲಜನಕ. ಬಾಳ್ವೆಯ ಹಸುಳೆಗೆ ಆಸೆ ಎದೆಹಾಲು; ಕಣ್ಣಿಗೆ ರೆಪ್ಪೆ, ನದಿಗೆ ನೆರೆ, ಕಡಲಿಗೆ ತೆರೆ ಹೇಗೋ ಹಾಗೆ—ಜೀವನಕ್ಕೆ ಆಸೆ' (೫೮೬)
>
> 'ಆಸೆ ಕವನದ ಬಿಡಿ ಸಾಲಿನ ಹಾಗೆ; ತನಗೆ ತಾನೇ ಅಸಂಪೂರ್ಣ, ಅರ್ಥಹೀನ' (೫೮೬)

ಈ ಸಾಮತಿಗಳು ಸರಳವಾಗಿವೆ; ಸುಂದರವಾಗಿವೆ; ಮನನೀಯವಾಗಿವೆ.

ಆಸೆಗೆ ಪೂರಕವಾದ ಸಂಕಲ್ಪವನ್ನು ನಿಸಾರ್ ವಿವರಿಸುವುದು ಹೀಗೆ:

> 'ತತ್ತಿಗೆ ತಾಯಿ ಹಕ್ಕಿಯ ಕಾವಿನ ಥರ, ಬಿತ್ತಕ್ಕೆ ಮಣ್ಣಿನ ಸಾರದ ಥರ—ಆಸೆಗೆ ಸಂಕಲ್ಪ ಬಲ. ಆಸೆಗೆ ರೆಕ್ಕೆ ಹೊಮ್ಮಿಸಿ ಚಿತ್ತದ ನಿಗೂಢ ಗೂಡಿನಾಚೆಯ ವಿಹಾರಕ್ಕೆ ಸಜ್ಜಾಗಿಸುವುದು ಸಂಕಲ್ಪ' (೫೮೬)

ಆಸೆ ಮತ್ತು ಸಂಕಲ್ಪದ ಸಂಯೋಗ ಹೀಗಂತೆ:

> 'ಅದೃಶ್ಯದ ಕೈವಾಡವಿಲ್ಲದೆ ಸಚಂಚಲ ಆಸೆಯ ಮತ್ತು ಅವಿಚಲ ಸಂಕಲ್ಪದ ಸಂಯೋಗ ಘಟಿಸದು; ದಾಂಪತ್ಯ ಏರ್ಪಡದು. ವಿದ್ಯುತ್ತು ಮತ್ತು ತಂತಿಗಳ ಸಾಹಚರ್ಯದಂತೆ ಅವುಗಳ ನಡುವಣ ನಂಟಸ್ತಿಕೆ. ಸಂಕಲ್ಪ ಕೋಣೆಯ ಸ್ವಿಚ್ಚಿನಂತೆ; ಅದಿಲ್ಲದಿದ್ದರೆ ಆಶಾದೀಪ್ತಿಯ ಕಾಂತಿ, ಕಣ್ ಕೋರೈಕೆಯಿಲ್ಲ'(೫೮೭)

ಸಂಕಲ್ಪದ ಮತ್ತಷ್ಟು ಜಿಜ್ಞಾಸೆ ಹೀಗಿದೆ:

'ಸಂಕಲ್ಪದ ಆನೆಗೆ ಬುದ್ಧಿ ಅಂಕುಶ. ಮನುಷ್ಯನ ಅನುಭವ, ಅಭೀಪ್ಸೆಗಳು ಪರೀಕ್ಷೆಗೊಳಗಾಗುವ ಪರಿಕರಗಳಾದರೆ, ಸಂಕಲ್ಪ ಪ್ರಯೋಗಶಾಲೆ, ಬುದ್ಧಿ ವಿಜ್ಞಾನಿ' (೫೪೭)

ಒಂದಲ್ಲ ಹತ್ತು ಸಾಮತಿಗಳ ಮೂಲಕ ವಿಷಯವನ್ನು ಮನದಟ್ಟು ಮಾಡುವುದು ನಿಸಾರರ ಸ್ವಭಾವ. ಉದಾಹರಣೆಗೆ:

'ಲೌಕಿಕ ಸಾಧಾರಣವಾದ, ಬಹುಜನ ಸಾಧ್ಯವಾದ, ಸದ್ಯ:ವ್ಯವಹಾರ ಮಾನ್ಯವಾದ ದಿನಂಪ್ರತಿಯ ಸಂಕಲ್ಪ ಕಾಲೊರಸಾದರೆ, ತಪಸ್ಸೆಯ ಸ್ವರೂಪದ ಸಂಕಲ್ಪ ಮಡಿ ಗದ್ದುಗೆ. ಒಂದು ಮಿಂಚಿನ ಚಮಕು; ಇನ್ನೊಂದು ತಾರಾಪ್ರದೀಪ್ತಿ'. (೫೪೮)

ಮಹಾತ್ಮ ಗಾಂಧೀಜಿಯವರ ನಿರಂತರ ಹೋರಾಟದ ಫಲವಾಗಿ, ದಾಸ್ಯದ ಶೃಂಖಲೆ ಹರಿದು, ಸ್ವಾತಂತ್ರ್ಯ ಗಳಿಸಿದ ಭಾರತ, ಪ್ರಜಾಪ್ರಭುತ್ವದ ದೇಶವಾಗಿ ರೂಪುಗೊಂಡಿತು. ಜಗತ್ತಿನಲ್ಲಿ ಬೃಹತ್ ಪ್ರಜಾಪ್ರಭುತ್ವದ ದೇಶಗಳಲ್ಲಿ ಒಂದೆಂಬ ಹೆಗ್ಗಳಿಕೆ ನಮ್ಮದು. ಪ್ರಜಾಪ್ರಭುತ್ವದ ಬಗೆಗೆ, ಪ್ರಜಾಪ್ರಭುತ್ವದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ನೇತಾರರ ಬಗೆಗೆ ನಿಸಾರರ ಪ್ರತಿಕ್ರಿಯೆ ಹೀಗಿದೆ:

'ಪ್ರಜಾಪ್ರಭುತ್ವವೆಂದರೆ ಜನರ, ಜನರಿಂದ, ಜನಕ್ಕಾಗಿ ಆದ ವ್ಯವಸ್ಥೆ ಯೆಂಬ ಹಳೆಯ ಸರಳ ಸೂತ್ರಗಳು ಕೈಮರಗಳೇ ಹೊರತು ಊರುಗಳಲ್ಲ. ವಿವರಣಾತ್ಮಕ ವಿಧಾನವೇ ವಿವಿಧಾಂಗ ವಿಚಾರಕ್ಕೆ ವಿಹಿತ' (೫೬೯)

ಪ್ರಜಾಪ್ರಭುತ್ವವನ್ನು ಕುರಿತ ಅಬ್ರಹಾಂ ಲಿಂಕನ್ನರ ನಿರೂಪಣೆಗೆ ನಿಸಾರರು ನೀಡಿರುವ ಪ್ರತಿಕ್ರಿಯೆ ಇದು.

'ಅಧಿಕಾರಕ್ಕೂ ಸ್ವಾರ್ಥ ಸಾಧನಾವಕಾಶಗಳಿಗೂ ಕಳ್ಳಿ, ಸೊಳ್ಳೆಯ ನಂಟು. ಮಳೆಯನ್ನು ಅಪೇಕ್ಷಿಸುವಾಗ, ಕೊಂಚ ಮಟ್ಟಿನ ಕೊಚ್ಚೆ ಕೆಸರನ್ನು ತಾಳಿ ಕೊಳ್ಳಬೇಕು' (೫೬೯)

ಪ್ರಜಾಪ್ರಭುತ್ವದ ಪ್ರಜೆಗಳಿಗೆ ಕಿವಿ ಮಾತು ಹೇಳಿದಂತಿದೆ ಈ ಸಾಮತಿ. ನಮ್ಮ ರಾಜಕಾರಣಿಗಳ ವಾಸ್ತವ ಸ್ಥಿತಿಯನ್ನು ನಿಸಾರ್ ಹೀಗೆ ಬಟಾಬಯಲು ಮಾಡಿದ್ದಾರೆ:

'ಇವೊತ್ತು ಪತ್ರಿಕೆ, ಟಿ.ವಿ, ಬಾನುಲಿಗಳ ದ್ವಾರಾ ನಮಗೆ ಢಾಳಾಗಿ ಕಂಗೊಳಿಸಿರುವ ರಾಜಕಾರಣಿ ಶಿಖಾಮಣಿಗಳು ಸಿಂಗಾರದ ಸರಣಿ ಬಲ್ಬು ಗಳಂತೆ' (೩೭೦)

ಜೀವನ ಜಿಜ್ಞಾಸೆ ಇಂದಿನದಲ್ಲ; ನೆನ್ನೆ ಮೊನ್ನೆಯದಲ್ಲ; ಲಾಗಾಯ್ತಿನಿಂದ ಬಂದಿದ್ದು. ನಾಳೆಯೂ ಇರುವಂಥದ್ದು. ಜೀವನವನ್ನು ಕುರಿತ ನಿಸಾರರ ಸಾಮತಿಗಳು ವೈಚಾರಿಕವಾಗಿದ್ದು ಅನೇಕ ಒಳ ನೋಟಗಳನ್ನು ನೀಡುತ್ತವೆ:

> 'ಹಸುಳೆ ತನ್ನ ಅಚ್ಚುಮೆಚ್ಚಿನ ಆಟಿಕೆಗಳನ್ನು, ಲಲನೆ ಆತ್ಮೀಯ ಒಡವೆಗಳನ್ನು ಸರ್ವಸ್ವವೆಂದು ಭಾವಿಸಿ ತುಂಬು ಹುಷಾರಿಯಿಂದ ನೋಡಿ ಕೊಳ್ಳುವಂತೆ, ಮನುಷ್ಯ ಬಾಳ್ವೆಯನ್ನು ಅಷ್ಟೇ ಕಾಳಜಿಯಿಂದ ತನ್ನದಾಗಿಸಿ ಕೊಳ್ಳಲು ಬಯಸುತ್ತಾನೆ' (೫೫೧)

ಇಲ್ಲಿ ಹಸುಳೆ-ಆಟಿಕೆ, ಲಲನೆ-ಒಡವೆಗಳನ್ನು ಮನುಷ್ಯ-ಬಾಳ್ವೆಗೆ ಹೋಲಿಸಿರುವುದು ಆಕರ್ಷಕವಾಗಿದೆ. ಬದುಕಿನ ಕಾಳಜಿ ಉಳಿದೆಲ್ಲ ಕಾಳಜಿಗಳಿಗಿಂತ ಮಿಗಿಲಾದದ್ದು ಎಂಬ ಹಿತ ವಚನವಿದೆ.

> 'ದೈನಂದಿನ ದರ್ಶನದ ಸಾಧಾರಣ ವಸ್ತ್ರ ಧರಿಸಿ ದೈವೀಕೃತ ಅದ್ಭುತಗಳು ನಮ್ಮ ನಡುವೆ ಅಡ್ಡಾಡಿವೆ. ಆದರೆ ಅವುಗಳನ್ನು ಕಾಣುವ ದಿವ್ಯಚಕ್ಷು ನಮಗಿಲ್ಲವಾಗಿದೆ. ಪೌರನ ವೇಷ ತೊಟ್ಟು ದೊರೆ ಜನಪದದ ನಡುವೆ ಅಡ್ಡಾಡಿದರೂ ರಾಜ ತೇಜವನ್ನು ಗುರುತಿಸುವ, ಗೌರವಿಸುವ, ಕಂಡು ಹಿಗ್ಗುವ ಭಾಗ್ಯ ನಮ್ಮ ಪಾಲಿಗಿಲ್ಲ' (೫೫೨)

ಅನಿಶ್ಚಿತ ಬದುಕಿನಲ್ಲಿ ಅಮರತ್ವವನ್ನು ಅರಸುವುದು ಮನುಷ್ಯನ ಸ್ವಭಾವ. ಅದಕ್ಕೆ ತಕ್ಕ ಸಂಸ್ಕಾರ ಬೇಕು. ಎಚ್ಚರ ತಪ್ಪಿದರೆ ಸಿಗಬೇಕಾದುದೂ ಸಿಗದೇ ಹೋಗಬಹುದು. ಅಂಥ ದಿವ್ಯ ದೃಷ್ಟಿಯ ಹಂಬಲ ಇಲ್ಲಿದೆ.

ಜೀವನವನ್ನು ಕ್ರೀಡೆಗೆ ಹೋಲಿಸಿರುವ ಹೇಳಿಕೆಯೊಂದು ಹೀಗಿದೆ:

> 'ಜೀವನವೊಂದು ರಿಲೇ ರೇಸ್; ಒಬ್ಬೊಬ್ಬನೂ ಸಂತತಿ ಸರಪಣಿಯ ಸುಸಾರ್ಥಕ ಕೊಂಡಿ' (೫೫೬)

ನಿರಂತರ ಕ್ರೀಡೆಯಲ್ಲಿ ಮನುಷ್ಯನ ಸ್ಥಾನವೂ ನಿರ್ದೇಶಿತವಾಗಿದೆ.

> 'ಜೀವನವೆಂಬುದು ಹಳೆಯದರ ಹಸೆಯ ಮೇಲೆ ಅವ್ಯಾಹತವಾಗಿ ಹೊಚ್ಚ ಹೊಸದಾಗುತ್ತ ಹೋಗುವ ಪ್ರಕ್ರಿಯೆ. ಕಲ್ಯಾಣ ಮಂಟಪ ಹಳೆಯದು; ವಧೂವರರು ಹೊಸಬರು. ಮಸಜೀದ್ ಎಂದಿನದೇ; ಪ್ರಾರ್ಥನಕಾರರು ಇಂದಿನವರು. ಹೊಸದಾಗುತ್ತಿರುವುದೇ ಅದರ ಅಖಂಡ ಭವಿಷ್ಯತ್ ಪ್ರಚಲನೆಗೆ ಕುರುಹು' (೫೫೬)

ಹೊಸದಾಗುತ್ತಾ ಸಾಗುವ ಜೀವನದ ಪರಿಚಯಕ್ಕೆ ಕಲ್ಯಾಣ ಮಂಟಪ, ಮಸಜೀದ್ ಗಳನ್ನು ಬಳಸಿದೆ. ಜೀವನದ ಪ್ರಕ್ರಿಯೆಗೆ ವಧೂವರರನ್ನು, ಪ್ರಾರ್ಥನಾಕಾರರನ್ನು ಹೋಲಿಸಿದೆ. ವಿಷಯ ಪ್ರತಿಪಾದನೆ ಕಾಲಾತೀತವಾಗಿದೆ. ನಿಸಾರರ ಸಾಮತಿಗಳ ನವೀನ ಜಾಡನ್ನು ಇಲ್ಲೂ ಗುರುತಿಸಬಹುದು.

> 'ಉದರೇತರ ಕಾಳಜಿಗಳಿಲ್ಲದವನನ್ನು, ಕಲೆ ಸಾಹಿತ್ಯಾದಿ ರಸ ವ್ಯಾಪಾರ ಗಳಲ್ಲಿ ತೊಡಗದವನನ್ನು ನಾಗರಿಕ ಜಂತುವೆಂದು ಹೆಸರಿಸಬಹುದು' (೭೨೯)

ಇದು ಸುಲಭವಾಗಿ ಮನದಟ್ಟಾಗುವ ಸರಳವಾದ ಸಾಮತಿ.

> 'ಪಶು ಸಮಾನ ಮನುಷ್ಯನ ಬಾಳ್ವೆ ಬಿದಿರಿಗೆ ಸಮನಾದರೆ, ಅದನ್ನು ಉತ್ತರಿಸಿದ ಕಲಾಸಕ್ತ ಮಾನವನ ಜೀವಿತ ಕೊಳಲಿಗೆ ಸದೃಶ. ಬಾಳಿನ ಅವಿಶ್ರಾಂತ ಕರ್ಮವಸ್ತ್ರಕ್ಕೆ ಸಾರ್ಥಕ ರೂಪದ ವಿರಾಮ ಆಕರ್ಷಕ ಅಂಚಿದ್ದಂತೆ' (೭೯)

ಉತ್ತಮ ಜೀವನದ ಬಗೆಗೆ ಸಂವಾದಿಸುವ ಸಂದರ್ಭದಲ್ಲಿ ಮೂಡಿರುವ ಶಬ್ದಚಿತ್ರವಿದು. ಸಾಧಾರಣ ಮನುಷ್ಯನನ್ನು ಬಿದಿರಿಗೆ, ಕಲಾಸಕ್ತ ಮನುಷ್ಯನನ್ನು ಕೊಳಲಿಗೆ ಸಾಮತಿಸಿದೆ. ಬಾಳಿನ ಸಾರ್ಥಕತೆಯ ಸೂಚನೆಯೂ ಇದೆ.

ಯಾವುದಕ್ಕೂ ಮನುಷ್ಯನಲ್ಲಿ ಔಚಿತ್ಯ ಪ್ರಜ್ಞೆಯಿರಬೇಕು. ಇಲ್ಲದಿದ್ದರೆ ಆಭಾಸ ವಾಗುತ್ತದೆ:

> 'ಜಾರೋ ಬಂಡೆಯ ಮೇಲೆ ಪೋರ ಪೋರಿಯರು ಆಡಿ ನಲಿದರೆ ಅದು ಉಚಿತ; ಮುದುಕ ಮುದುಕಿಯರು ಜಾರಿದರೆ ನಗೆಪಾಟಲು; ನೋಡಲು ಅಹಿತ' (೭೯)

ನಿಸಾರರ ಗದ್ಯ ಬರಹಗಳಲ್ಲಿ ಸಂಕೀರ್ಣ ಸಾಮ್ಯ ಸಾಮತಿಗಳೂ ಉಂಟು. ಮನುಷ್ಯನಲ್ಲಿ ರಕ್ತಗತವಾಗಿರುವ ರಾಗ ವೈಪರೀತ್ಯಗಳನ್ನು ಮೂಲೋತ್ಪಾಟನೆ ಮಾಡುವ ಕಷ್ಟದ ಬಗೆಗೆ ಚರ್ಚಿಸುತ್ತಾ ಹೀಗೆ ನುಡಿದ್ದಾರೆ:

> 'ಸಮುದ್ರ ಜಲದ ಅಪರಂಪಾರದಿಂದ ಲವಣಾಂಶವನ್ನು ಉಚ್ಚಾಟಿಸುವ ಹುಚ್ಚಾಟದಂತೆಯೇ ನಮ್ಮ ಆಂತರ್ಯದ ಗುಹ್ಯ ಆಳಗಳಿಂದ ಯುಗ ಸಂಚಯಿತ ಮೂಲಭೂತ ರಾಗ ಭಾವಗಳನ್ನು ಹೊಡೆದಟ್ಟುವ ಕಾಯಕ ಕೂಡ.' (೮೪೨)

ಸಮುದ್ರ—ಮನುಷ್ಯನ ಅಂತರಂಗ, ಲವಣಾಂಶ—ರಾಗ ಭಾವದ ಹೋಲಿಕೆಗಳು; ಪರಿಭಾವಿಸಿದಷ್ಟೂ ಗಂಭೀರವಾಗುತ್ತವೆ.

ಶಿಕ್ಷಣದ ಅಗತ್ಯವನ್ನು ಮೊದಲು ಕಂಡುಕೊಂಡ ಭೂಗ್ರಹದ ಪ್ರಾಣಿಗಳಲ್ಲಿ ಮನುಷ್ಯ ಮೊದಲಿಗ. ಶಿಕ್ಷಣವಿಲ್ಲದಿದ್ದರೆ ಮನುಷ್ಯನಾಗಲೀ ಮನುಷ್ಯನಿರುವ ದೇಶವಾಗಲೀ ಪ್ರಗತಿ ಸಾಧಿಸಲಾರದೆಂಬುದು ಸ್ಪಷ್ಟ. ಸಮಾಜದ ಸರ್ವತೋಮುಖ ಏಳಿಗೆಗೆ ಬೆಳಕಾಗ ಬೇಕಾಗಿದ್ದ ಶಿಕ್ಷಣ ಇಂದು ಏನಾಗಿದೆ? ಶಿಕ್ಷಣ ಸಂಸ್ಥೆಗಳ ಉದ್ದೇಶ ಎತ್ತ ಸಾಗಿದೆ? ಶಿಕ್ಷಣ ಕ್ಷೇತ್ರದ ಒಳ ಹೊರಗುಗಳನ್ನು ಬಲ್ಲ ನಿಸಾರರ ತೀಕ್ಷ್ಣ ವಿಚಾರಮತಿ ಹೀಗೆ ನುಡಿದಿದೆ:

> 'ಸಮವಸ್ತ್ರಧಾರಿ ಕವಾಯತಿನ ಯಾಂತ್ರಿಕ ಶಿಕ್ಷೆಯಾಗಿದೆ ಶಿಕ್ಷಣ ಕ್ಷೇತ್ರ'(೧೬೮)

ವ್ಯಕ್ತಿ ವಿಕಾಸಕ್ಕೆ ಸಹಾಯಕವಾಗದಿದ್ದರೆ, ವ್ಯಕ್ತಿಯ ಸಾಮರ್ಥ್ಯ ಶ್ರದ್ಧೆಗೆ ಅನುವು ಮಾಡಿಕೊಡದಿದ್ದರೆ ಅಂತಹ ಶಿಕ್ಷಣ ವ್ಯರ್ಥ. `ಶಿಕ್ಷಣ'ದಲ್ಲಿ 'ಶಿಕ್ಷೆ' ಎಂಬ ಶಬ್ದವಿರು

ವುದನ್ನು ಪರಿಭಾವಿಸಿ. ಸಾಮತಿಯಲ್ಲಿ ಶಬ್ದ ಚಮತ್ಕಾರದ ಛಾಯೆಯೂ ಇದೆ.

'ಮತಿಯ ಮಟ್ಟದ ತಿಳಿವು ಏನಿದ್ದರೂ ಸ್ವಂತ ಬದುಕಿನ ಹೊಸ್ತಿಲು ಮಾತ್ರ;
ಖಾಸಗಿ ಕೋಣೆಗೆ ಸಮನಾಗದು' (೧೬೯)

ಬಹುಶ್ರುತತೆ ಬೇಕು. ಆದರೆ ಅದೇ ಸರ್ವಸ್ವವಲ್ಲ. ಅದರಿಂದ ಸ್ವಂತಿಕೆ ಹೊರಹೊಮ್ಮುವುದಿಲ್ಲ. ಸ್ವೋಪಜ್ಞತೆಯ ಕಡೆಗೆ ಗಮನ ಸೆಳೆಯುವುದು ಈ ಹೇಳಿಕೆಯ ಉದ್ದೇಶ. ಹೊಸ್ತಿಲು, ಖಾಸಗಿ ಕೋಣೆಯನ್ನು ವಿಶಿಷ್ಟಾರ್ಥಕ್ಕೆ ದುಡಿಸಿಕೊಂಡಿದೆ.

ಎಲ್ಲಾ ಗೊತ್ತು. ಆದರೆ ಯಾವುದರಲ್ಲೂ ಪರಿಣತನಲ್ಲ ಎಂದರೆ ಶೋಭೆಯಲ್ಲ. ಅಂಥವರು ಸಾರೊಳಗಿನ ಸೌಟಿನಂತೆ:

'ಸೌಟು ಸಾರಿನಲ್ಲೇ ತೇಲಿ ಮುಳುಗುತ್ತಿದ್ದರೂ ಅದನ್ನು ಸವಿದು ಚಪ್ಪರಿಸ
ಲಾರದು' (೧೬೯)

ಸೌಟನ್ನು ಸಾಮತಿಗೆ ಬಳಸಿರುವುದು ವಿಶೇಷವಾಗಿದೆ.

ವ್ಯಷ್ಟಿ ಹಾಗೂ ಸಮಷ್ಟಿ ಬದುಕಿನ ಆಗುಹೋಗುಗಳಿಗೆ, ಮನುಷ್ಯನಲ್ಲಿ ದೈವದತ್ತವಾಗಿರುವ ಬುದ್ಧಿ ಮತ್ತು ಮನಸ್ಸು ಪ್ರಧಾನ ಕಾರಣ. ಇವೆರಡರ ಸಮಯೋಚಿತ ಸ್ಪಂದನಕ್ಕೆ 'ಮನಸ್ಸಾಕ್ಷಿ' ಎಂಬ ಸದ್ವಿವೇಕ ಬೇಕು. ಆ ಬಗೆಗೆ ನಿಸಾರರ ನಿರ್ವಚನ ಹೀಗೆ ಸಾಮತಿಯಾಗಿದೆ:

'ಮನುಷ್ಯನ ಪಾಲಿಗೆ ಸಾಕ್ಷೀಪ್ರಜ್ಞೆ, ಕೆಲವು ಅತ್ಯಾಧುನಿಕ ವ್ಯಾಪಾರದ
ಮಳಿಗೆಗಳಲ್ಲಿ ಹುದುಗಿಸಿಟ್ಟಿರುವ ಸುಸೂಕ್ಷ್ಮ ವಿದ್ಯುನ್ಮಾನ ಕ್ಯಾಮರದಂತೆ.
ಅದರ ಹದ್ದುಗಣ್ಣಿನಿಂದ ತಪ್ಪಿಸಿಕೊಳ್ಳಲು ಯಾವ ಕಳ್ಳನಿಗೂ
ದುರ್ವ್ಯವಹಾರಕ್ಕೂ ಸಾಧ್ಯವಿಲ್ಲ.' (೬೬೦)

ಮನೋವ್ಯಾಪಾರದ ಸಾಕ್ಷೀಪ್ರಜ್ಞೆಯನ್ನು ವಿದ್ಯುನ್ಮಾನದ ಕ್ಯಾಮರಕ್ಕೆ ಹೋಲಿಸಿರುವುದು ಸೊಗಸಾಗಿದೆ. ವೈಜ್ಞಾನಿಕ ವಸ್ತು ವಿಷಯಗಳನ್ನು ಸಾಮತಿಗಳಿಗೆ ಬಳಸುವುದು ನಿಸಾರರಿಗೆ ಮೆಚ್ಚು. ಇಂಥದೇ ವೈಜ್ಞಾನಿಕ ಚಿಂತನೆ ಮುಂದಿನ ಸಾಮತಿಯಲ್ಲೂ ಪ್ರಯೋಗವಾಗಿದೆ:

'ಬುದ್ಧಿ ಮತ್ತು ಮನಸ್ಸಿನ ಒಡಂಬಡಿಕೆ, ಲೋಕ ವ್ಯವಹಾರವೆಂಬ ಹಲಸಿನ
ಹಣ್ಣಿಗೆ ಎಣ್ಣೆಯಿದ್ದಂತೆ. ಮನುಷ್ಯನ ಬುದ್ಧಿ ಯುಕ್ತಿಗೆ ಮನಸ್ಸಾಕ್ಷಿಯ
ಇಂಬು ಹಾಗೂ ಪ್ರಮಾಣ ದೊರೆತರೆ, ಗ್ರಹ ವೀಕ್ಷಣೆಯಲ್ಲಿ ದೂರ
ದರ್ಶಕದೊಂದಿಗೆ ಬಾಹ್ಯಾಕಾಶ ನೌಕೆಯ ಬೆಂಬಲವೂ ಲಭ್ಯ
ವಾದಂತೆ' (೬೬೧)

ಉನ್ನತ ಬಾಳುವೆಗೆ ಬುದ್ಧಿ ಮತ್ತು ಮನಸ್ಸು ಒಡಂಬಡಬೇಕು. ಬುದ್ಧಿಯುಕ್ತಿಗೆ ಮನಸ್ಸಾಕ್ಷಿ ಇಂಬಾಗಬೇಕು. ಲೋಕ ವ್ಯವಹಾರದ ಅರಿವಿರಬೇಕು. ಅದನ್ನು ಗಳಿಸಿಕೊಂಡ ಮನುಷ್ಯನಿಂದ ಸುಸಮಾಜ ಸ್ಥಾಪನೆ ಸಾಧ್ಯ. ಹಲಸಿನ ಅಂಟು ಕೈಗೆ ಅಂಟಿಕೊಳ್ಳದಂತೆ

ಸಿಹಿಯಾದ ತೊಳೆಗಳನ್ನು ಬಿಡಿಸಿಕೊಳ್ಳಲು ಎಣ್ಣೆ ಅಗತ್ಯ. ಲೋಕ ವ್ಯವಹಾರಕ್ಕೆ ಎಣ್ಣೆಯನ್ನು ಹೋಲಿಕೆಯಾಗಿ ಬಳಸಿದೆ. ಲೋಕಜ್ಞಾನದ ಗಳಿಕೆಗೆ ಮನಸ್ಸಾಕ್ಷಿ ಸಹಕರಿಸಿದರೆ, ಬಾಹ್ಯಾಕಾಶ ನೌಕೆಯಲ್ಲಿ ದೂರದರ್ಶಕದ ಮುಖೇನ ಗ್ರಹವೀಕ್ಷಣೆ ಮಾಡುವಂತೆ ಉಪಯುಕ್ತವಾಗುತ್ತದೆ. ವೈಜ್ಞಾನಿಕ ಪ್ರಜ್ಞೆ ಜಾಗೃತವಾಗಿರುವ ಪ್ರಸ್ತುತ ಕಾಲದಲ್ಲಿ ವಿಚಾರ ಮಂಡನೆಗೆ ವೈಜ್ಞಾನಿಕ ಅಂಶಗಳು ಉಪಮಾನವಾಗುವುದು ಸಹಜವಾಗಿದೆ.

> 'ಸಾಧಾರಣವಾಗಿ ಜನ ಸಾಮಾನ್ಯರು ಆಜ್ಞಾಧಾರಿಗಳೇ ಹೊರತು ಆಜ್ಞಾ ಪ್ರಯೋಗಿಗಳಲ್ಲ; ಆಂಜನೇಯರೇ ವಿನಾ ರಾಮಚಂದ್ರರಲ್ಲ. ಅವರು ಸ್ವತಃ ಆಲೋಚಿಸಿ ಕಾರ್ಯಪ್ರವೃತ್ತರಾಗುವುದಕ್ಕಿಂತ ಹಿರಿಯರು ಹಾಕಿದ ಮೇಲ್ಪಂಕ್ತಿಯನ್ನು ವಿಧೇಯವಾಗಿ ಅನುಸರಿಸುವ ಪೈಕಿ. ' (೮೬೩)

ಅಸಾಮಾನ್ಯರಿಗೂ ಸಾಮಾನ್ಯರಿಗೂ ಇರುವ ವ್ಯತ್ಯಾಸವನ್ನು ಈ ಸಾಮತಿ ವ್ಯಾಖ್ಯಾನಿಸುತ್ತದೆ. ಮನಸ್ಸಾಕ್ಷಿಯ ಮಾರ್ಗ ನಿರ್ಮಾಪಕರು ಸದಾ ನಾಯಕ ಸ್ಥಾನದಲ್ಲಿರುತ್ತಾರೆ. ಮಹಾ ಪುರುಷರ ಬದುಕು ಉಳಿದವರಿಗೆ ಆದರ್ಶವಾಗುತ್ತದೆ. ಮಹಾತ್ಮರ ಮುಂದೆ ಸಾಮಾನ್ಯರ ಅರೆಕೊರೆಗಳು ನಿಚ್ಚಳವಾಗುತ್ತವೆ. ಶ್ರೀರಾಮಚಂದ್ರ ಮಹಾ ಪುರುಷರ ಸಂಕೇತ. ಆಂಜನೇಯ ಸಾಮಾನ್ಯರ ಸಂಕೇತ. ಶ್ರೀರಾಮನ ಆಜ್ಞೆಯನ್ನು ವಿಧೇಯನಾಗಿ ಅನುಸರಿಸುವುದು ಹನುಮಂತನ ಕಾಯಕ. ಪುರಾಣದ ವ್ಯಕ್ತಿಗಳನ್ನು ಈ ಸಾಮತಿಗೆ ದುಡಿಸಿಕೊಂಡಿದೆ.

ಈ ರೂಪಕ ಚಿತ್ರ ಮತ್ತೊಂದು ರೀತಿಯಲ್ಲಿ ಮೂಡಿರುವುದೂ ಉಂಟು. ಅದು ಹೀಗಿದೆ:

> 'ರೈಲ್ವೆ ಬೋಗಿಗಳು ಹಳಿಗಳ ಮೇಲೆ ನಿಂತಿದ್ದರೂ ಸ್ವಯಂ ಚಲಿಸುವ ಶಕ್ತಿ ಅವಕ್ಕಿರುವುದಿಲ್ಲ. ಹತ್ತಾರು ಬೋಗಿಗಳನ್ನು ಮುನ್ನಡೆಸುವ ಬಲ, ಸಾಮರ್ಥ್ಯ ಇರುವುದು ಇಂಜಿನ್ನಿಗೆ ಮಾತ್ರ. ಬಹುಮತೀಯ ಶ್ರೀ ಸಾಮಾನ್ಯರು ಅಂಥ ಬೋಗಿಗಳು, ಅಲ್ಪಸಂಖ್ಯೆಯ ಪ್ರಾಜ್ಞರು ಇಂಜಿನ್ನು.' (೮೬೬)

ಈ ಸಾಮತಿ ಸುಲಭಗ್ರಾಹ್ಯವಾಗಿದೆ. ಯಂತ್ರಗಳು ಉಪಮಾನಕ್ಕೆ ಒಗ್ಗಿರುವುದು ಇಲ್ಲಿನ ವಿಶೇಷ.

ಮನುಷ್ಯನಿಂದ ಪ್ರಕಟವಾಗುವ ವಿಚಾರ ಮತ್ತು ಭಾವಗಳ ಹೊಂದಾಣಿಕೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾಗಿರಬೇಕು. ಇಲ್ಲದಿದ್ದರೆ ಒಳಿತಿಗಿಂತ ಕೆಡುಕೇ ಅಧಿಕವಾಗುತ್ತದೆ. ಸಮಾಜಮುಖಿ ವಿಚಾರವಂತ ನಿಸಾರ್ ವಿಚಾರ ಭಾವಗಳನ್ನು ಹೀಗೆ ಕಂಡರಿಸಿದ್ದಾರೆ:

> 'ಮನುಷ್ಯರ ಹೃನ್ಮನಸ್ಸುಗಳು ಬರಿಯ ಬುದ್ಧಿಜನ್ಯವಾದ ಅಂಕಿ ಅಂಶಗಳನ್ನು ದಾಸ್ತಾನಿಸಿ ಇಡುವ ಕಗ್ಗತ್ತಲ ಗೋದಾಮುಗಳಲ್ಲ; ಸಮ್ಮೋಹಕ ಸಂವೇದನೆಗಳ ಸ್ವಯಂದೀಪ್ತ ಸಂಗ್ರಹಾಲಯಗಳು' (೮೭೬).

ಸೃಜನಶೀಲ ವ್ಯಕ್ತಿಗಳಿರಲಿ ಅಥವಾ ಸಾಮಾನ್ಯ ವ್ಯಕ್ತಿಗಳಿರಲಿ ಅವರ ವಿಚಾರ ಮತ್ತು ಭಾವದ ಬಾಂಧವ್ಯ ಪರಸ್ಪರ ಸ್ಪಂದಿಸಬೇಕು; ಚೇತನದಾಯಕವಾಗಿರಬೇಕು. ಬುದ್ಧಿಜನ್ಯ ಶುಷ್ಕ ಮಾಹಿತಿ ಅರ್ಥಹೀನ; ಸಮ್ಮೋಹಕ ಸಂವೇದನೆ ಪ್ರಯೋಜನಕಾರಿ. ಕೇವಲ ವಿಚಾರಕ್ಕಿಂತ ಭಾವದೀಪ್ತತೆ ಹೆಚ್ಚು ಮೌಲಿಕವಾದದ್ದು. ಸಾಧಾರಣವಾದ ಬುದ್ಧಿ ಪ್ರಧಾನ ಅಂಕಿ ಅಂಶಕ್ಕೆ ಕಗ್ಗತ್ತಲ ಗೋದಾಮನ್ನೂ ಸಮ್ಮೋಹಕ ಭಾವಕ್ಕೆ ಸ್ವಯಂದೀಪ್ತ ಸಂಗ್ರಹಾಲಯವನ್ನೂ ಸಾಮತಿಸಿರುವುದು ಮನನೀಯವಾಗಿದೆ.

ಸಾಮಾನ್ಯ ಬದುಕಿನಂತೆ ಸೃಜನಶೀಲ ಸಾಹಿತ್ಯ ಸೃಷ್ಟಿಯಲ್ಲೂ ವಿಚಾರ ಮತ್ತು ಭಾವಗಳ ಅವಿನಾ ಸಂಬಂಧವಿದೆ:

> 'ಜೀವನದಲ್ಲಿ ಎಂತೋ ಅಂತೆಯೇ ಸಾಹಿತ್ಯದಲ್ಲೂ ವಿಚಾರ ಭಾವಗಳದು ಕಾಯ–ಆತ್ಮಗಳ ಸಂಬಂಧ. ಒಂದನ್ನುಳಿದು ಮತ್ತೊಂದರ ಲೌಕಿಕಾಸ್ತಿತ್ವ ವಿರಲು ಸಾಧ್ಯವಲ್ಲ. ಒಡಲಿನಿಂದ ಬೇರ್ಪಟ್ಟ ಆತ್ಮದ ಅರಿವು ಅಶಕ್ಯ: ಅದು ಹೆಬ್ಬಯಲಲ್ಲಿ ಊಳಿಡುವ ನಿರಾಕಾರ ವಾಯು. ಆತ್ಮವಿಹೀನ ಶರೀರದ ಕಲ್ಪನೆ ಛಾಯಾಚಿತ್ರವಿಲ್ಲದ ಕಟ್ಟಿನಂತೆ ಅಪ್ರಯೋಜಕ' (೮೭೬)

ದೇಹ ಮತ್ತ ಆತ್ಮ ಪ್ರತ್ಯೇಕಿಸಲು ಆಗದಂತೆ ಬೆರೆತುಕೊಂಡಿವೆ. ದೇಹವಿಲ್ಲದೆ ಆತ್ಮದ ಅರಿವು ಅಸಾಧ್ಯ. ಹೆಬ್ಬಯಲಿನಲ್ಲಿ ಶಬ್ದ ಮಾಡುವ ಆಕಾರರಹಿತ ಗಾಳಿಯ ಗ್ರಹಿಕೆ ಕಷ್ಟ. ಆತ್ಮವಿಲ್ಲದ ದೇಹದ ಕಲ್ಪನೆಯೂ ಅಸಾಧ್ಯ. ಅದು ಛಾಯಾಚಿತ್ರವಿಲ್ಲದ ಚೌಕಟ್ಟಿನಂತೆ ನಿಷ್ಪ್ರಯೋಜಕ. ದೇಹಕ್ಕೆ ನಿರಾಕಾರ ವಾಯುವನ್ನೂ ಆತ್ಮಕ್ಕೆ ಛಾಯಾಚಿತ್ರವಿಲ್ಲದ ಚೌಕಟ್ಟನ್ನು ಹೋಲಿಸಿದೆ. ಸಮಗ್ರ ಜೀವನವನ್ನು ಸೃಜನಶೀಲ ಸಾಹಿತ್ಯಕ್ಕೆ ಸಾಮತಿಸಿದೆ. ಸಾಹಿತ್ಯದಲ್ಲೂ ವಿಚಾರ ಮತ್ತು ಭಾವಗಳು ಸಾಮರಸ್ಯದಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಾಹಿತ್ಯದ ದೇಹ ವಿಚಾರಕ್ಕೂ ಸಾಹಿತ್ಯದ ಆತ್ಮ ಭಾವಕ್ಕೂ ಸಮನ್ವಯವಾಗುತ್ತದೆ.

ಭಾವದ ಸ್ಪರ್ಶದಿಂದ ಮನಸ್ಸು ಸೃಜನ ಕಾರ್ಯಕ್ಕೆ ಅಣಿಯಾಗುವುದು ಹೆಚ್ಚು ಪ್ರಯೋಜನಕಾರಿ:

> 'ಆಲೋಚನೆಗಳಿಗೆ ಭಾವದ ದೋಹದ ಆದೇಯ—ಹೊಲಕ್ಕೆ ನೇಗಿಲಿನ ಹಾಗೆ' (೮೭೭)

ಮರ ಗಿಡ ಲತೆಗಳು ಪುಷ್ಪಿತವಾಗಲು ದೋಹದ ಸಂಸ್ಕಾರ ಮಾಡಲಾಗುವುದು. ಬೀಜ ಬಿತ್ತಲು ಹೊಲವನ್ನು ಉತ್ತು ಹದ ಮಾಡಲು ನೇಗಿಲನ್ನು ಬಳಸಲಾಗುವುದು. ಹಾಗೇ ಸೃಜನಕ್ರಿಯೆಯ ಆಲೋಚನೆಗಳಿಗೆ ಭಾವದ ಸಂಸ್ಕಾರವಾಗಬೇಕು. ಆಗ ಹದವಾದ ಸಾಹಿತ್ಯ ಸೃಷ್ಟಿಯಾಗುತ್ತದೆ. ಇಲ್ಲಿ ಕೃಷಿ ಕ್ರಿಯೆಯನ್ನು ಸಾಹಿತ್ಯ ಕೃಷಿಗೆ ಅನ್ವಯಿಸಿದೆ.

ಮಾನವ ಸಾಧನೆಗೆ ನಿರಂತರ ಶ್ರಮ ಅಗತ್ಯ. ಅದಕ್ಕೆ ಕೊನೆ ಮೊದಲಿಲ್ಲ. ಮನುಕುಲದ ಇತಿಹಾಸವೆಂದರೆ ಮಾನವನ ಇತಿಹಾಸವಲ್ಲದೆ ಬೇರೆಯಲ್ಲ. ಈ ಕುರಿತು ನಿಸಾರರ ಚಿಂತನೆ ಹೀಗೆ ಹರಿದಿದೆ:

'ಮನುಷ್ಯನ ಅಂತರಂಗ ಕಟ್ಟೆಚ್ಚರದಲ್ಲಿರುವ ತನಕ, ನವೋನವತೆಗೆ ತುಡಿಯುತ್ತಿರುವ ತನಕ ಮಾನವ ಸಾಧನೆಗಳಿಗೆ ಪೂರ್ಣ ವಿರಾಮವಿರದು. ಅವು ಪರಿಷ್ಕರಣೆ, ಸುಧಾರಣೆ, ಉತ್ತಮತೆಗಳೆಂಬ ಹುರಿಯಾಳುಗಳಿಂದ ಜೀವನ ಪಥವನ್ನು ಕ್ರಮಿಸುತ್ತ ಮುನ್ಸಾಗುವ ಅನುಸ್ಯೂತ ರಿಲೇ ಪಂದ್ಯ'(೮೦೦)

ಮನುಷ್ಯ ಸಾಧನೆಯ ನಿರಂತರತೆಯನ್ನು ಈ ಸಾಮತಿ ದೃಢೀಕರಿಸುತ್ತದೆ. ದಾಖಲೆಯನ್ನು ಮುರಿಯುವ, ಪ್ರಥಮವನ್ನು ಸಾಧಿಸುವ ತೆವಲು ಇರುವವರೆಗೆ ಸಾಧನೆಯ ಪೈಪೋಟಿ ನಡೆಯುತ್ತಲೇ ಇರುತ್ತದೆ. ಅದಕ್ಕೆ ಕ್ರೀಡಾ ಪರಿಭಾಷೆಯನ್ನು ಬಳಸಿದೆ. ಕ್ರೀಡೆಗಳನ್ನು ಉಪಮಾನಗಳನ್ನಾಗಿ ನಿಸಾರ್ ಅಲ್ಲಲ್ಲಿ ಉಪಯೋಗಿಸಿದ್ದಾರೆ.

'ಬಾಹ್ಯವಾಗಿ ಮನುಷ್ಯರು ಇವೊತ್ತು ನಿಕಟವಾಗಿರುವಷ್ಟು ಹಿಂದೆಂದೂ ಆಗಿರಲಿಲ್ಲ. ಆದರೆ ಆಂತರಿಕವಾಗಿ ಇನ್ನೂ ಹೆಚ್ಚು ದೂರ ಹೋಗಿದ್ದಾರೆ— ಇಡಿಗಾಯಿಯ ಹೋಳುಗಳಂತೆ' (೮೦೪)

ಮನುಷ್ಯ ಸಂಬಂಧವನ್ನು ಕುರಿತು ನಿಸಾರ್ ಗಂಭೀರವಾಗಿ ಚಿಂತಿಸಿದ್ದಾರೆ. ವಿಜ್ಞಾನ ತಂತ್ರಜ್ಞಾನಗಳ ಪ್ರಗತಿಯಿಂದ ಲೌಕಿಕ ಜೀವನ ಸುಧಾರಿಸಿದೆ. ಆದರೆ ಮನುಷ್ಯ ಸಂಬಂಧ ಹಳಸಿದೆ. ಹತ್ತಿರವಿದ್ದೂ ದೂರವಾಗುವ ಪರಿಸ್ಥಿತಿ ಉಂಟಾಗಿದೆ. ಇಡಿಯಾಗಿದ್ದರೆ ತೆಂಗಿನ ಕಾಯಿ; ಹೋಳಾದರೆ ಸೀಳುಕಾಯಿ ಅಷ್ಟೆ. ಒಡೆದ ತೆಂಗಿನಕಾಯಿಯ ಹೋಳುಗಳನ್ನು ಮನುಷ್ಯ ಸಂಬಂಧಕ್ಕೆ ಹೋಲಿಸಿರುವುದು ಅರ್ಥಪೂರ್ಣವಾಗಿದೆ.

ಯಲಹಂಕ ನಾಡ ಪ್ರಭು ಕೆಂಪೇಗೌಡ ನಿರ್ಮಿಸಿದ ರಾಜಧಾನಿ ಬೆಂಗಳೂರು, ಕವಿ ಸಾಹಿತಿಗಳ ವಿವಿಧ ರೀತಿಯ ಅಭಿವ್ಯಕ್ತಿಗೆ ಸ್ಫೂರ್ತಿಯಾಗಿದೆ. ದೀರ್ಘ ಕಾಲದ ಒಡನಾಟ ವಿರುವ ಬೆಂಗಳೂರಿನ ಬಗೆಗೆ ನಿಸಾರರ ಉಪಮೆ ಉಪಮಾನಗಳು ಹೀಗೆ ಹುಟ್ಟಿಕೊಂಡಿವೆ:

'ಬಹುಕಾಲದ ಬಳಿಕ ಹೆಣ್ಣೊಬ್ಬಳು ಗಂಡ, ಅತ್ತೆ, ನಾದಿನಿಯರ ಉಸಿರು ಕಟ್ಟಿಸುವ ಪರಿಸರದಿಂದ ಪಾರಾಗಿ ತವರಿನ ತಾಯಿ ಮಡಿಲಿಗೆ ಮರಳಿದಂತೆ, ಆಚೆ ನೆಲಸಿರುವ ಜನಕ್ಕೆ ಬೆಂಗಳೂರು ನಿರಾಳ ನೀಡುವ ನಿಮಿತ್ತವಾಗ ಬಹುದು' (೬೧೨).

ಬೆಂಗಳೂರನ್ನು ತಾಯಿಯ ಮಡಿಲಿಗೆ ಹೋಲಿಸಿರುವುದು ಆಪ್ಯಾಯಮಾನವಾಗಿದೆ. ಇಷ್ಟ ಪಟ್ಟಾಗ ಬಯಸಿದ ಊರಿನ ಅರೆಕೊರೆಗಳು ಗೌಣವಾಗುತ್ತವೆ. ಬೆಂಗಳೂರಿನ ಆಕರ್ಷಣೆಗೆ ನಾನಾ ಕಾರಣಗಳಿರಬಹುದು. ಅವುಗಳಲ್ಲಿ ಇದೂ ಒಂದು, ಅಷ್ಟೆ.

'ಬೆಂಗಳೂರು ಈಗ ಒಂದು ಬೃಹತ್ಗಾತ್ರದ ಆಕ್ಟೋಪಸ್' (೨೧೦) ಬಸವಣ್ಣನವರ ವಚನಗಳಲ್ಲಿ ಪ್ರಾಣಿ ರೂಪಕಗಳು ಹೆಚ್ಚು. ಅವು ಸಾಮಾನ್ಯ ಪ್ರಾಣಿಗಳು. ನಿಸಾರ್ ಆಕ್ಟೋಪಸ್ ಬಳಸಿದ್ದಾರೆ. ಬೃಹತ್ ಬೆಂಗಳೂರಿಗೆ ಅರ್ಥಪೂರ್ಣ ಹೋಲಿಕೆ. ಆಕ್ಟೋಪಸ್ ಕೇವಲ ಪ್ರಾಣಿಯಲ್ಲ; ಅಪಾಯದ ಪ್ರಾಣಿಯೂ ಹೌದು! '

ನಿಸಾರರ ಸಾಮತಿಗಳು ನಿವೃತ್ತಿಯನ್ನು ಹೀಗೆ ವ್ಯಾಖ್ಯಾನಿಸುತ್ತವೆ: 'ಮನುಷ್ಯನ ದೃಷ್ಟಿಯಲ್ಲಿ ಭೂತ ಕಾಲ ಮುಗಿದ ಮಂಡಿಗೆ, ಪ್ರಸ್ತುತವೆನ್ನುವುದು ಬೇವು ಬೆಲ್ಲದ ಮಿಶ್ರ ಪಾಕ. ಭವಿಷ್ಯವಷ್ಟೇ ಆಶೋತ್ತರ ನೆರವೇರಿಕೆಯ ಸವಿ ತಿನಿಸಿನ ತುಂಬು ಕಪಾಟು' (೭೯)

ಭವಿಷ್ಯದ ಕಲ್ಪನೆ ಆಶಾದಾಯಕ ಎಂಬುದನ್ನು ಈ ಸಾಮತಿ ಸಶಕ್ತವಾಗಿ ನಿರೂಪಿಸುತ್ತದೆ.

'ಜನನ-ಮರಣಗಳ ಮಹಾ ಚಕ್ರದೊಳಗಿನ ಉಪ ಚಕ್ರದಂತೆ ವೃತ್ತಿ-ನಿವೃತ್ತಿಗಳ ಸಂಬಂಧ. ಬಾಳೆ ಗಿಡ ಗೊನೆ ತಳೆದು ಮಾಗುವ ಕಾಯಕ: ವೃತ್ತಿ; ಅದು ಹಣ್ಣೊಂಡು ಭಾರವಿಳಿಸಿಕೊಂಡ ಬಳಿಕದ ಅವಸ್ಥೆ : ನಿವೃತ್ತಿ'. (೭೨)

ಜನನ-ಮರಣ ಮಹಾ ಚಕ್ರ. ವೃತ್ತಿ-ನಿವೃತ್ತಿ ಉಪ ಚಕ್ರ. ಎರಡರ ಸಂಬಂಧ ಒಂದರೊಳಗೊಂದು ಹೆಣೆದುಕೊಂಡಂತಿದೆ. ಬಾಳೆ ಗಿಡ ಮತ್ತು ಅದರ ಗೊನೆ ಹಣ್ಣಿನ ಸಂಕೇತದಲ್ಲಿ ವೃತ್ತಿ ನಿವೃತ್ತಿಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದೆ. ಗೊನೆ ಬಿಟ್ಟ ಮೇಲೂ ಬಾಳೆಯ ಗಿಡ ಸಾಯುವುದಿಲ್ಲ; ದಸಿಯ ರೂಪದಲ್ಲಿ ಮುಂದುವರಿಯುತ್ತದೆ. ಹಾಗೆಯೇ ನಿವೃತ್ತಿಯೇ ಜೀವಿತದ ಕೊನೆಯಲ್ಲ. ಅದೊಂದು ಸಿದ್ಧಿ ಸ್ಥಿತಿಯ ಅವಸ್ಥೆ ಅಷ್ಟೆ.

ಸಾಮಾಜಿಕ ಕಳಕಳಿ ಇರುವ, ವೈಚಾರಿಕತೆಗೆ ತೆರೆದುಕೊಳ್ಳುವ ಪ್ರತಿಯೊಬ್ಬ ಸಾಹಿತಿಯ ಮನಸ್ಸು ಪಟ್ಟಭದ್ರ ಹಿತಾಸಕ್ತಿಯ ಹುನ್ನಾರನ್ನು ಟೀಕಿಸದೆ ಬಿಡದು. ನಿಸಾರರೂ ಇದಕ್ಕೆ ಹೊರತಲ್ಲ. ಅವರ ಒಂದು ಸಾಮತಿ ಹೀಗಿದೆ:

'ಪುರೋಹಿತಷಾಹಿ ಪುಢಾರಿಗಿಂತ ಹೆಚ್ಚು ಸೂಕ್ಷ್ಮ, ಅಧಿಕ ಚಾಣಾಕ್ಷ.'(೭೩೮).

ಶ್ರೇಣೀಕೃತ ಸಮಾಜದಲ್ಲಿ ಪುರೋಹಿತಷಾಹಿಯೂ ಅಪಾಯವೇ; ಪುಢಾರಿಯೂ ಅಪಾಯವೇ. ಅಪಾಯದ ಪ್ರಮಾಣದಲ್ಲಿ ಹೆಚ್ಚು ಕಡಮೆಯಿರಬಹುದು, ಅಷ್ಟೆ. ಇಂಥ ಹುನ್ನಾರುಗಾರರ ಬಗೆಗೆ ಶ್ರೀಸಾಮಾನ್ಯರು ಎಚ್ಚರವಾಗಿರಬೇಕು.

ಅರ್ಥಾಲಂಕಾರಗಳಲ್ಲಿ ಒಂದಾದ ಉಪಮಾಲಂಕಾರವನ್ನು ಬಳಸುವುದು ಕವಿಗಳಿಗೆ ಪ್ರಿಯವಾದ ವಿಷಯ. ಕಾವ್ಯಸೃಷ್ಟಿಯಲ್ಲಂತೂ ಅನಿವಾರ್ಯ ಅಂಗವಾಗಿ ರೂಢಿಯಲ್ಲಿದೆ. ಉಪಮೆಗಳನ್ನು ರೂಪಕಮಯ ಮಾಡುವುದು ಉತ್ತಮ ಕವಿಗಳ ಲಕ್ಷಣ. ಹೋಲಿಕೆಗೆ ಒಳಗಾಗುವ ವಸ್ತು ವಿಷಯ, ಹೋಲಿಸುವ ವಸ್ತು ವಿಷಯ ಎರಡೂ ರೂಪಕವಾಗಲು, ನವೀನವಾಗಲು, ಅನನ್ಯವಾಗಲು ಕವಿಗಳು ಎಚ್ಚರ ವಹಿಸುತ್ತಾರೆ. ಗದ್ಯ ಬರಹಗಳಲ್ಲಿ ಉಪಮೆ ಉಪಮಾನಗಳನ್ನೊಳಗೊಂಡ ರೂಪಕಾಂಶಗಳನ್ನು ಪ್ರಯೋಗಿಸುವುದು ಕಡಮೆ. ನೇರವಾದ ಅಭಿವ್ಯಕ್ತಿಯೇ ಅಲ್ಲಿ ಅಧಿಕ. ಆದರೆ ನಿಸಾರ್ ಅಹಮದ್ ಪದ್ಯದಲ್ಲಿ ಎಂತೋ ಅಂತೆ ಗದ್ಯ ಬರಹಗಳಲ್ಲೂ ಸಾಮ್ಯ ಸಾಮತಿಗಳನ್ನು ಹೇರಳವಾಗಿ ಪೋಣಿಸಿರುವುದು ವಿಶೇಷ. ಪದ್ಯರಚನೆ ಹಾಗೂ ಗದ್ಯರಚನೆ ಎರಡು ಸಂದರ್ಭಗಳಲ್ಲೂ ಕವಿ ಪ್ರಜ್ಞೆಯೇ

ಏಕಪ್ರಕಾರವಾಗಿ ದುಡಿದಿರುವುದು ಇದಕ್ಕೆ ಕಾರಣವೆನ್ನಬಹುದು. ಇದರಿಂದ ಗದ್ಯ ಬರಹಗಳ ಮೌಲ್ಯ ಹೆಚ್ಚಾಗಿದೆ; ಉತ್ತಮ ಲೇಖನಗಳು ಹುಟ್ಟಲು ಸಾಧ್ಯವಾಗಿದೆ.

ಸಮೃದ್ಧವಾದ ಸಾಮ್ಯ ಸಾಮತಿ ಪ್ರಯೋಗಗಳನ್ನು ಒಳಗೊಂಡ ನಿಸಾರರ ಗದ್ಯ ಬರಹಗಳು ಅನುಕರಣೀಯವಾಗಿವೆ; ಅಭ್ಯಾಸಕ್ಕೆ ಅರ್ಹವಾಗಿವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ಉತ್ತಮ ಪದ್ಯ ಸಾಹಿತ್ಯದಂತೆ, ಉತ್ತಮ ಗದ್ಯ ಸಾಹಿತ್ಯವನ್ನೂ ನೀಡಿ ಅನನ್ಯರಾಗಿರುವ ನಿಸಾರ್ ಅಹಮದ್ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ರಾಷ್ಟ್ರೀಯ ಭಾವನೆ ಒಂದು ಹದದಲ್ಲಿರಬೇಕಾದ ಎಚ್ಚರವನ್ನು ಎರಡನೆಯ ಮಹಾಯುದ್ಧ ಮನದಟ್ಟು ಮಾಡಿದೆ. ಅಂಕೆ ಮೀರಿತೋ ಅನಾಹುತಕ್ಕೆ ಅಗ್ರಾಸನ ಅರ್ಪಿಸಿದಂತೆ. ರಾಷ್ಟ್ರೀಯತೆಯ ಭಾವೋನ್ಮಾದ ಸಾಮಾಜಿಕ ಬದುಕನ್ನು ಬೇತಾಳ, ಬೇನಾದಗೊಳಿಸುವುದನ್ನು ನೆತ್ತರಲ್ಲಿ ನೆನೆದ ನಮ್ಮ ದೇಶದ ಈಚಿನ ವರ್ಷಗಳು ಮೊಗವೆತ್ತಿ ಸಾರಿವೆ. ಅದು ವ್ಯಕ್ತಿಗಳನ್ನು ಸಂಕುಚಿತತೆಯ ಬಿಲಗಳಿಗೆ ದೂಡಿ, ಜಗತ್ತಿನ ವಿವಿಧ ವೈಭವ ವಿಲಾಸಗಳನ್ನು ಮರೆಯಾಗಿಸುತ್ತದೆ. ತನ್ನ ನೆಲ ಜಲವಷ್ಟೇ ಅಮಲ, ಉಚ್ಚ; ಮಿಕ್ಕಿದ್ದು ಮಣ್ಣಾಂಗಟ್ಟಿ ಎನ್ನುವ, ಆಬಾಲವೃದ್ಧರ ಅಸಹನೆ ನಸನಸೆಯನ್ನು ನೆಲೆಯೂರಿಸುವ ಮಾರಕ ಪರಿಣಾಮವನ್ನು ಅತಿರೇಕಕ್ಕೇರಿದ ರಾಷ್ಟ್ರಾಭಿಮಾನ ಹುಟ್ಟು ಹಾಕುತ್ತದೆ.

(ರಾಷ್ಟ್ರೀಯ ಭಾವನೆಯ ಅತಿರೇಕ)

✧ ✧ ✧

ಒಂದು ರಾಷ್ಟ್ರದ ವಿವಿಧ ಎಡೆಗಳಲ್ಲಿ ಹಲವು ಮಟ್ಟದ ಜೀವಿತ ವಿಧಾನ ಗಳಿದ್ದರೆ, ಅದು ಗೌರವದ ಸಂಗತಿ ಎನ್ನಿಸುವುದಿಲ್ಲ; ಪಡೆದ ಸ್ವಾತಂತ್ರ್ಯಕ್ಕೆ ಅರ್ಥವೂ ಉಳಿಯುವುದಿಲ್ಲ. ಹಲವಾರು ಆಳಗಳ ದಾರಿದ್ರ್ಯದ ಸಮುದ್ರದಲ್ಲಿ ಅನುಕೂಲವಂತಿಕೆಯ, ಸಿರಿತನದ ಕೆಲವು ದ್ವೀಪಗಳು ತೇಲಿವೆ—ವಾಸ್ತವತೆಯ ಅಣಕದಂತೆ. ಇದರ ಪರಿಣಾಮವಾಗಿ ಸಮಗ್ರ ಎಚ್ಚರವಾಗಲಿ, ಏಕೋದೃಢ ವಾದ ರಾಷ್ಟ್ರೀಯ ಭಾವನೆಯಾಗಲಿ ಜನಪದದಲ್ಲಿ ಕಾಣೆಯಾಗಿವೆ. ತಿಳಿವು ಅವಿವೇಕದೊಂದಿಗೆ, ಸಾಹಸ ಪ್ರವೃತ್ತಿ ಜೋಬದ್ರ ಜಡತೆಯೊದಿಗೆ ಕೈ ಮಿಲಾಯಿಸಿ ಹೆಜ್ಜೆ ಹಾಕಿವೆ.

(ಭಿನ್ನ ಸ್ತರದ ಸಮಾಜ)



ಕವಿ ನಿಸಾರರ ಗದ್ಯದ ಗಮ್ಮತ್ತು

◆ *ಚಂದ್ರಶೇಖರ ಆಲೂರು*

'ಅ ಪ್ರಥಮ ಭೇಟಿಯಲ್ಲೇ ಅವರು ನನ್ನ ಬಗ್ಗೆ ತೋರಿಸಿದ ವಿಶ್ವಾಸಾದರ ಅನೇಕ ವರ್ಷಗಳ ಪರಿಚಯದ್ದು ಎಂಬಂತೆ ಹಿತವಾಗಿತ್ತು; ಸುಖೋಷ್ಣಕರವಾಗಿತ್ತು. ಅವರು ತೋರಿದ ಅವ್ಯಾಜ ಆಪ್ತತೆ, ನಗು ಮೊಗದ ಸನಿಹತೆಗಳಿಂದ ಅವರ ಬಗೆಗಿನ ನನ್ನ ಗೌರವ ಇಮ್ಮಡಿಸಿತು. ಹೆಸರಾಂತ ಹಿರಿಯ ಸಾಹಿತಿಯ ಮತ್ತು ಪಡ್ಡೆ ಕವಿಯ ನಡುವಣ ಮಾತುಕತೆ, ನಡಾವಳಿಗಳಲ್ಲಿ ಒಂದು ಕ್ಷೇಮಂಕರ ದೂರ, ದಾನಿ—ನಾನು, ದೀನ–ನೀನು ಭಾವನೆ ಇರುತ್ತಿದ್ದುದೇ ನಿಯಮವೆನ್ನಿಸಿದ್ದ ಕಾಲದಲ್ಲಿ ಅಡಿಗರ ಸಮಾನಸ್ಕಂಧ ವರ್ತನೆ, ಬಿಗುಮಾನವರಿಯದ ತಿಳಿ ವಿನೋದಭರಿತ ಸಲ್ಲಾಪ, ಸಿಗರೇಟ್ ನೀಡಿಕೆ—ಈ ಮನುಷ್ಯ ಅನ್ಯಧಾತು ನಿರ್ಮಿತ ಎಂದು ನನಗೆ, ಅಷ್ಟೇಕೇ ಯಾರಿಗಾದರೂ ಅನ್ನಿಸುತ್ತಿತ್ತು. ಸ್ವನಿರ್ಮಿತ ಕಂದರದ ಆಚೆ ಈಚೆ ಕುಳಿತು ಶಿಷ್ಟಾಚಾರಪೂರ್ಣ ಉಭಯಕುಶಲೋಪರಿಯಂಥ ಅದಬ್ಬಿನ ಔಪಚಾರಿಕ ವ್ಯವಹಾರ ನಡೆಸುತ್ತಿದ್ದ ಗುರು ಪರಂಪರೆಯ ನನ್ನ ಸ್ವಾನುಭವಕ್ಕೂ ಈ ಸುವಿಖ್ಯಾತ ಸತ್ವಶಾಲಿ ಹಿರಿಯನ ಸಾದಾಸೀದತನಕ್ಕೂ ಹೋಲಿಕೆಯಿರಲಿಲ್ಲ.'

—ಇದು ಕನ್ನಡದ ಹಿರಿಯ ಕವಿ ಕೆ. ಎಸ್. ನಿಸಾರ್ ಅಹಮದ್ ಮತ್ತೊಬ್ಬ ಹಿರಿಯ ಕವಿ ದಿವಂಗತ ಎಂ. ಗೋಪಾಲಕೃಷ್ಣ ಅಡಿಗರ ಬಗ್ಗೆ ಬರೆದಿರುವ ಮಾತುಗಳು. ಸ್ವಯಂ ಪ್ರತಿಭಾವಂತ ಕವಿಯಾದ ನಿಸಾರ್ ಅವರು ಕುವೆಂಪು,

ಬೇಂದ್ರೆ, ಮಾಸ್ತಿ, ವಿ. ಕೃ. ಗೋಕಾಕ್, ಪಂಜೆ, ಜಿ.ಪಿ. ರಾಜರತ್ನಂ, ಕೆ.ಎಸ್.ನ., ಕಡೆಂಗೋಡ್ಲು ಶಂಕರ ಭಟ್ಟ ಮುಂತಾದ ಹಿರಿಯ ಕವಿಗಳ ಕಾವ್ಯವನ್ನು ಕುರಿತು ಮನೋಜ್ಞವಾಗಿ ಬರೆದಿದ್ದಾರೆ. ಇದು ಕವಿಯೊಬ್ಬ ತನ್ನ ಪರಂಪರೆಯನ್ನು ಅರ್ಥ ಮಾಡಿ ಕೊಂಡು, ಅರಗಿಸಿಕೊಂಡು ಮುಂದೆ ಬೆಳೆಯುವ ಪರಿ ಕೂಡ. ಇಂಥ ಕಡೆ ನಿಸಾರರು ತಮ್ಮ ಹಿಂದಿನ ಕನ್ನಡ ಕಾವ್ಯ ಪರಂಪರೆಯ ಮಹತ್ತನ್ನು ಮಿಂಚಿನೋಪಾದಿಯಲ್ಲಿ ಹಿಡಿದಿಡಲು ಯತ್ನಿಸಿದ್ದಾರೆ.

ಇಲ್ಲಿ ನಾನು ನಿಸಾರರು ಅಡಿಗರ ಬಗ್ಗೆ ಬರೆದ ಸಾಲುಗಳನ್ನು ನೀಡಿದ್ದು ಅವನ್ನು ವಿಮರ್ಶೆ ಮಾಡುವ ಉದ್ದೇಶದಿಂದಲ್ಲ. ಇದೊಂದೇ ಪ್ಯಾರಾದಲ್ಲಿರುವ ವಿವಿಧ ಶಬ್ದಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು. ಹಿತಾವಹವಾಗಿತ್ತು, ಸುಖೋಷ್ಣಕರವಾಗಿತ್ತು, ಕ್ಷೇಮಂಕರ ದೂರ, ಅನ್ಯಧಾತು ನಿರ್ಮಿತ, ಅದಬ್ಬಿನ ಔಪಚಾರಿಕ ವ್ಯವಹಾರ—ಮುಂತಾದ ಶಬ್ದಗಳು ಕನ್ನಡ ಗದ್ಯದಲ್ಲಿ ಹೊಸತು ಎನ್ನಿಸಬಹುದಾದ ಪದಗಳು. Safe distance ಎನ್ನುವುದು 'ಕ್ಷೇಮಂಕರ ದೂರ'ವಾಗಿ; man of different mental make up ಎನ್ನುವುದು 'ಅನ್ಯಧಾತು ನಿರ್ಮಿತ'ವಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು. ಇಂಥ ಪದಗಳನ್ನು ಎಳೆದು ತಂದಂತೆ ಕಾಣುತ್ತದೆ. ಆದರೆ ಒಂದು ಭಾಷೆ ಸಮೃದ್ಧವಾಗಬೇಕಾದರೆ ಇಂಥ ಪದಗಳ ಸೃಷ್ಟಿ ನಿರಂತರವಾಗಿ ಆಗುತ್ತಲೇ ಇರಬೇಕು.

ನಿಸಾರರು ಗದ್ಯದಲ್ಲಿ ಮಾಡಿರುವ ಇಂಥ ಪದ ಪ್ರಯೋಗಗಳನ್ನು ಕಂಡಾಗ ನನಗೆ ಯಾವುದೋ ಇಂಗ್ಲಿಷ್ ವಾರ ಪತ್ರಿಕೆಯಲ್ಲಿ ಓದಿದ್ದ ಅಮೆರಿಕದ ಪ್ರಸಿದ್ಧ ಕಾದಂಬರಿಕಾರನ ಸಂದರ್ಶನ ನೆನಪಿಗೆ ಬಂದಿತು. 'ನೀವು ಹೊಸ ಕಾದಂಬರಿಯೊಂದನ್ನು ಬರೆಯುವಾಗ ಹೇಗೆ ಸಿದ್ಧತೆ ಮಾಡಿಕೊಳ್ಳುತ್ತೀರಿ?' ಎಂಬ ಪ್ರಶ್ನೆಗೆ ಆತ ಒಂದು ಸೋಜಿಗದ ಉತ್ತರ ನೀಡಿದ್ದ. 'ನಾನು ಕಥಾವಸ್ತು, plot ನಿರ್ಧರಿಸುವುದರೊಂದಿಗೆ ಭಾಷೆಯ ಬಗ್ಗೆಯೂ ಗಮನ ಕೊಡುತ್ತೇನೆ. ಕನಿಷ್ಠ ಒಂದರಿಂದ ೨೫೦ ಹೊಸ ಪದಗಳನ್ನು, ನುಡಿಗಟ್ಟುಗಳನ್ನು ಹುಡುಕಿ ಅವನ್ನು ಪ್ರಯತ್ನಪೂರ್ವಕವಾಗಿಯೇ ಕಾದಂಬರಿಯಲ್ಲಿ ಬಳಸುತ್ತೇನೆ' ಎಂದು ಆತ ಹೇಳಿದ್ದ. ಮುಂದುವರಿಸಿ 'ಪ್ರಯತ್ನಪೂರ್ವಕ ಎಂದರೆ ಕೃತಕವಾಗಿ ಅಲ್ಲ. ಅವು ಕಾದಂಬರಿ ಯಲ್ಲಿ ಸಹಜವಾಗಿ ಒಡಮೂಡುವಂತೆ ಮಾಡುತ್ತೇನೆ' ಎಂದೂ ಹೇಳಿದ್ದ.

ಕಾದಂಬರಿಯೊಂದು ಸೃಜನಶೀಲ ಮಾಧ್ಯಮ, ದಿಟ. ಯಾವುದೇ ಸೃಜನಶೀಲ ಅಭಿವ್ಯಕ್ತಿಗೆ ಇಂಥದೊಂದು ಪೂರ್ವ ಸಿದ್ಧತೆ ಅಗತ್ಯವೇನೋ ಅನ್ನಿಸುತ್ತದೆ. ನಿಸಾರರ ಕಾವ್ಯ ಹಾಗೂ ಗದ್ಯವನ್ನು ಓದಿದಾಗಲೆಲ್ಲ ನನಗೆ ನಿಸಾರರೂ ಇಂಥ ಪ್ರಯತ್ನವನ್ನು ಮಾಡಿರ ಬಹುದೇ ಅನ್ನಿಸುತ್ತದೆ. ನಿಸಾರರ ಗದ್ಯದ ವೈಶಿಷ್ಟ್ಯದಲ್ಲಿ ಇದೊಂದು ಬಗೆಯಾದರೆ, ಮತ್ತೊಂದು ಅಪೂರ್ವತೆಯನ್ನೂ ನಾನು ಕಂಡಿದ್ದೇನೆ. ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಹೇರಳವಾಗಿ ಬಳಕೆಯಲ್ಲಿದ್ದ, ಆದರೆ ಕ್ರಮೇಣ ಜನರ ಆಡು ಮಾತಿನಿಂದ ಮಾಯವಾಗುತ್ತಿರುವ ನೂರಾರು ಪದಗಳನ್ನು ನಿಸಾರರ ಗದ್ಯ ಬರಹಗಳಲ್ಲಿ ಕಾಣಬಹುದು. ನಿಸಾರರ ಗದ್ಯದಲ್ಲಿ ಬಳಕೆಯಾಗಿರುವ ಹಲವಾರು ವಾಕ್ಯಗಳನ್ನು ಕಂಡಾಗ ನನಗೆ ನನ್ನ

ಹಂಚಿಸುವವರೊಂದಿಗೆ ಮಾತಾಡುತ್ತಿದ್ದೇನೆ ಅನ್ನಿಸಿತು.

ಭಾರತ-ಪಾಕ್ ಅಥವಾ ಆಸ್ಟ್ರೇಲಿಯಾ ಕ್ರಿಕೆಟ್ ಪಂದ್ಯವನ್ನು ನೋಡುತ್ತ ಕುಳಿತಾಗ ಅಂಪೈರ್ ಭಾರತೀಯ ಆಟಗಾರನಿಗೆ ಔಟ್ ನೀಡಿದರೆ ನನ್ನ ತಂದೆ 'ಅಂಪೈರ್, ಅವರ ಜತೆ ಪರೀಕಾಗಿ ಬಿಟ್ಟಿದ್ದಾನೆ ಕಣೋ' ಅನ್ನುತ್ತಿದ್ದರು. ಯಾರಾದರೂ ನೇರವಾಗಿ ಮಾತಾಡದೆ ಮೌನವಾಗಿ ಕುಳಿತರೆ 'ಹೀಗೆ 'ಮೊಗುಂ' ಆಗಿ ಕುಳಿತರೆ ನನಗೆ ಹೆಂಗೆ ಅರ್ಥ ಆಗಬೇಕು' ಎಂದು ರೇಗುತ್ತಿದ್ದರು. 'ಇಷ್ಟೇ ಮೈಲು ಅಂತ ಬೇಡ, 'ಅಜಮಾಸು' ಎಷ್ಟು ದೂರ ಆಗುತ್ತೆ ಹೇಳು ಸಾಕು' ಎನ್ನುವುದು ದೂರವನ್ನು ಕುರಿತು ಗೊಣಗುತ್ತಿದ್ದವರ ಬಗ್ಗೆ ಬೈಗುಳ. 'ನೋಡು, ಆ ಪುಸ್ತಕ 'ಅಲಾಯದ' ತೆಗೆದಿಡು.' ಅವರಿಗೆ ಇಷ್ಟವಾದ ಪುಸ್ತಕವನ್ನು ಗುಂಪಿನಿಂದ ಬೇರೆ ಕಡೆ ಇಡಲು ಕೊಡುತ್ತಿದ್ದ ಸೂಚನೆ.

ಹೀಗೆ—ಪರೀಕಾಗಿ, ಅಲಾಯದ, ಮೊಗುಂ, ಅಜಮಾಯಿಷಿ—ನಮ್ಮ ತಂದೆಯವರು ಮಾಮೂಲು ಆಗಿ ಬಳಸುತ್ತಿದ್ದ, ಆದರೆ ಈಗ ನಮ್ಮ ಮಾತುಕತೆಯಲ್ಲಿ ಮಾಯವಾಗಿರುವ ಇಂತ ನೂರಾರು ಪದಗಳನ್ನು ನಿಸಾರರ ಗದ್ಯ ಬರಹಗಳಲ್ಲಿ ಕಂಡು ನನ್ನ ಎದೆ ಆರ್ದ್ರ ವಾಯಿತು. ಕನ್ನಡ ಭಾಷೆಯನ್ನು ಸಮೃದ್ಧಗೊಳಿಸುವ, ಶ್ರೀಮಂತಗೊಳಿಸುವ ಛಲವನ್ನು ನಾನು ನಿಸಾರರಲ್ಲಿ ಕಂಡಿದ್ದೇನೆ. 'ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದ ರೀತಿಯಲ್ಲಿ ಸಾಧ್ಯವ ಮಟ್ಟಿಗೆ ಅನನ್ಯತೆ ಇರಬೇಕೆಂಬ ತುಡಿತ ನನ್ನ ಗದ್ಯ ಮತ್ತು ಪದ್ಯ ರಚನೆಗಳ ಓಣಿಯಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ' ಎಂದು 'ನಿಸಾರ್ ಸಮಗ್ರ ಗದ್ಯ ಬರಹಗಳು' ಸಂಪುಟಕ್ಕೆ ಬರೆದ ಮುನ್ನುಡಿಯಲ್ಲಿ ನೇರವಾಗಿಯೇ ಹೇಳಿದ್ದಾರೆ. ಹೀಗಾಗಿಯೇ ಜಾರಾಸಿತನ, ಸಂಸ್ಕೃತಿಯ ಅಲರುವಿಕೆಯಿಂದ, ಬೇಕಾರು ರಿವಾಜುಗಳು, ಮಲಾಮತ್ತಿನ ಧಾರಣೆಗಳು, ಗಟಾರಿಸತೊಡಗಿದೆ, ಬಲೂನಿಸುವುದು, ರೇಖಿಸುವುದು, ಟಂಕಿಸುವುದು, ಮುಗ್ಗಲುಗಳು, ಕಡಿವಾಣಿಗರು, ಲಿಖಾವಟ್ಟುಗಳು ಮುಂತಾಗಿ ನೂರಾರು ಪದಗಳು ನಿಸಾರರ ಗದ್ಯದಲ್ಲಿ ಕಾಣಿಸಿಕೊಂಡು ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಇಲ್ಲೇ ಒಂದು ಮಾತು ಹೇಳಿಬಿಡಬೇಕು. ನಾನೊಬ್ಬ ಓದುಗನಾದ್ದರಿಂದ ಅಕಾಡೆಮಿಷಿಯನ್‌ಗಳ ಥರ ನಿಸಾರರ ಗದ್ಯದಲ್ಲಿ ಸಾಮಾಜಿಕತೆ, ವೈಚಾರಿಕತೆ, ಧಾರ್ಮಿಕತೆ ಕುರಿತಾಗಿ ಚರ್ಚಿಸುವ ಶಕ್ತಿ ನನಗಿಲ್ಲ. ಕಳೆದ ಮೂರು ದಿನಗಳು ಸುಮಾರು ಒಂದು ಸಾವಿರ ಪುಟಗಳ ನಿಸಾರರ 'ಸಮಗ್ರ ಗದ್ಯ ಬರಹಗಳು' ಉದ್ಗ್ರಂಥವನ್ನು ಒಂದೇ ಏಟಿಗೆ ಓದಿ ಮುಗಿಸಿದೆ. ಅದನ್ನು ಓದಿದಾಗ ನನಗೆ ಅನ್ನಿಸಿದ ಒಂದೆರಡು ಅನ್ನಿಸಿಕೆಗಳನ್ನು, ಅದು ನನ್ನಲ್ಲಿ ಕೆರಳಿಸಿದ ನೆನಪುಗಳನ್ನು ಇಲ್ಲಿ ದಾಖಲು ಮಾಡಲು ಪ್ರಯತ್ನಿಸುತ್ತಿದ್ದೇನೆ. ನಿಸಾರರ ಬರಹಗಳಲ್ಲಿ ನನ್ನನ್ನು ಬಹುವಾಗಿ ಆಕರ್ಷಿಸಿದ್ದು ಅವರ ಭಾಷೆ ತೆಗೆದುಕೊಂಡ ವಸ್ತುವನ್ನು ವಿವರವಾಗಿ, ವಿಶದವಾಗಿ ಹೇಳುವ ಗುಣ, ವರ್ತಮಾನಕ್ಕೆ ಸ್ಪಂದಿಸುವ ಚೈತನ್ಯ, ಪರಂಪರೆಯನ್ನು ಅರಗಿಸಿಕೊಳ್ಳುವ ಬಗೆ. ಏಸುಕ್ರಿಸ್ತನ ಬಗ್ಗೆ, ಕುರ್‌ಆನ್, ಸೂಫಿಗಳ ಬಗೆಗಿನ ಅವರ ಬರಹಗಳು ಅನನ್ಯವಾದವು. ಅವರ ಕೃತಿಗಳ ಬಗ್ಗೆ ಬಹು ದೊಡ್ಡ ಚರ್ಚೆಯೇ ಈ ಗ್ರಂಥದಲ್ಲಿ ಆಗುತ್ತಿದೆ ಎಂಬುದನ್ನು ನಾನು ಬಲ್ಲೆ. ಹೀಗಾಗಿ ವಿವರಗಳಿಗೆ

ಹೋಗದೆ ನನ್ನ ಹೃದಯವನ್ನು ತಟ್ಟಿದ ಒಂದೆರಡು ಸಂಗತಿಗಳನ್ನು ನೆನಪಿಸಿಕೊಳ್ಳುತ್ತಿದ್ದೇನೆ.

ಕನ್ನಡ ಭಾಷೆಯ ಬಗ್ಗೆ, ಕನ್ನಡ ಕಾವ್ಯವನ್ನು ಮತ್ತು ಕನ್ನಡ ನಾಡನ್ನು ಕಟ್ಟಿದವರ ಬಗ್ಗೆ ಅವರು ಹೃದಯ ತುಂಬಿ ಬರೆದಿದ್ದಾರೆ. ಈಗಿನವರ ಅಭಿಮಾನಶೂನ್ಯತೆ ಅವರನ್ನು ಕಾಡಿದೆ. ಹಲವು ಕಡೆ ಅಂಥದ್ದನ್ನು ಸೂಚ್ಯವಾಗಿ ತಿಳಿಸಿದ್ದಾರೆ. ರಾಜಸ್ಥಾನದ ಜಯಪುರದಲ್ಲಿ ಓಡಾಡುತ್ತಿರುವಾಗ ಅವರಿಗೆ `ಎಂ.ಐ.ರಸ್ತೆ' ಕಾಣುತ್ತದೆ. ಬೆಂಗಳೂರಿನ ಎಂ. ಜಿ ರಸ್ತೆಯನ್ನು ಕಂಡಿದ್ದ ಅವರಿಗೆ ಎಂ.ಐ. ರಸ್ತೆ ಎಂದರೆ ಏನಿರಬಹುದೆಂಬ ಕುತೂಹಲ. ಅರಸಿದಾಗ, 'ಮಿರ್ಜಾ ಇಸ್ಮಾಯಿಲ್ ರಸ್ತೆ' ಎಂಬುದು ಕಣ್ಣಿಗೆ ಬೀಳುತ್ತದೆ. ದೂರದ ರಾಜ್ಯವೊಂದರ ರಾಜಧಾನಿಯಲ್ಲಿ ಮುಖ್ಯರಸ್ತೆಗೆ ಮಿರ್ಜಾರ ಹೆಸರಿದೆ. ಆದರೆ 'ಮಾದರಿ ಮೈಸೂರಿ'ನ ನಿರ್ಮಾತೃಗಳಲ್ಲಿ ಅಗ್ರೇಸರರಾದ ಸರ್. ಎಂ. ವಿ. ಮತ್ತು ಮಿರ್ಜಾರ ಹೆಸರಲ್ಲಿ ಯಾವ ಮುಖ್ಯ ರಸ್ತೆಯೂ ಇಲ್ಲವಲ್ಲ ಎಂಬ ಕೊರಗು ಅವರನ್ನು ಕಾಡುತ್ತದೆ. ಇಲ್ಲಿ ಸುಬ್ರತೊ ಮುಖರ್ಜಿ ರಸ್ತೆಯಿದೆ, ಕಾಮರಾಜ ನಾಡಾರ್ ರಸ್ತೆಯಿದೆ, ಇನ್ನೆಷ್ಟೋ ಕೇಳರಿಯದ ಹೆಸರಿನವರ ರಸ್ತೆ, ಬಡಾವಣೆಗಳಿವೆ. ಸಾರ್ವಜನಿಕ ಜೀವನದ ಉತ್ತಮೀಕರಣಕ್ಕಾಗಿ; ಸೌಲಭ್ಯಾನುಕೂಲಗಳೊಂದಿಗೆ, ಸೌಂದರ್ಯ ಸಂಸ್ಕೃತಿಯ ಅಗತ್ಯವನ್ನೂ ಮನಗಂಡು, ಅದನ್ನು ರೂಢಿಸಲು ಪಣ ತೊಟ್ಟ ಅಪ್ರತಿಮ ಆಡಳಿತಗಾರನೊಬ್ಬನಿಗೆ ನಾವು ತೋರಿರುವ ಅನಾದರ ನಮ್ಮ ಅಭಿಮಾನದ ಕೃಪಣತೆ, ಕಾರ್ಪಣ್ಯಗಳಿಗೆ ದ್ಯೋತಕ. ಪರರಿಗೆ ಪಲ್ಲಂಗ ನೀಡಿ ಪಡಸಾಲೆಯಲ್ಲಿ ಪವಡಿಸುವ ಪರಮೋಪಕಾರಿಗಳು ನಮ್ಮ ನಾಡವರು. ಅತಿಥಿ ದೇವೋಭವದ ಆಚರಣೆಗೆ ಹೇಳಿ ಮಾಡಿಸಿದ ಉದಾಹರಣೆಗಳಾಗಿದ್ದೇವೆ, ನಾವು ಕನ್ನಡ ಜನ ಎಂದು ನೊಂದು ನುಡಿಯುತ್ತಾರೆ.

ಇದನ್ನು ಓದಿದಾಗ ನನಗೆ ಥಟ್ಟನೆ ರಾಷ್ಟ್ರಪತಿ ಎ.ಪಿ.ಜೆ ಅಬ್ದುಲ್ ಕಲಾಂರ wings of fireನಲ್ಲಿ ಬರುವ ಪ್ರಸಂಗವೊಂದು ನೆನಪಿಗೆ ಬಂತು. ಯುವ ವಿಜ್ಞಾನಿ ಕಲಾಂ ಒಮ್ಮೆ ವರ್ಜಿನಿಯಾದ ವಾಲಪ್ಸ್‌ನಲ್ಲಿರುವ NASAದ ರಾಕೆಟ್ ಉಡ್ಡಯಣ ತಾಣಕ್ಕೆ ಭೇಟಿ ನೀಡುತ್ತಾರೆ. ಅಲ್ಲಿನ NASA ಕಚೇರಿಯ receptionನಲ್ಲಿ ಎದ್ದು ಕಾಣುತ್ತಿದ್ದ ಒಂದು ಪೇಂಟಿಂಗ್ ಅವರ ಗಮನ ಸೆಳೆಯುತ್ತದೆ. ಅದೊಂದು ಯುದ್ಧದ ದೃಶ್ಯ. ಹಿನ್ನೆಲೆಯಲ್ಲಿ ರಾಕೆಟ್‌ಗಳು ಕಾಣುತ್ತಿವೆ. ಇಂಥ ಜಾಗದಲ್ಲಿ ಅಂಥ ಪೇಂಟಿಂಗ್ ಇರುವುದು ಅಚ್ಚರಿಯ ವಿಷಯವೇನಲ್ಲ ಅನ್ನಿಸುತ್ತದೆ. ಆದರೂ ಆ ಪೇಂಟಿಂಗ್‌ನಲ್ಲಿ ರಾಕೆಟ್ ಉಡಾಯಿಸುತ್ತಿದ್ದವರು ಬಿಳಿಯ ಬ್ರಿಟಿಷ್ ಸೈನಿಕರಲ್ಲ. ಕಂದು ಬಣ್ಣದ ಸೈನಿಕರು. ಅವರು ಕುತೂಹಲದಿಂದ ಆ ಪೇಂಟಿಂಗ್ ಬಳಿ ಹೋಗಿ ವೀಕ್ಷಿಸುತ್ತಾರೆ. ಅದು ನಮ್ಮ ಟೀಪುವಿನ ಸೈನ್ಯ ಬ್ರಿಟಿಷರ ವಿರುದ್ಧ ಕಾದಾಡುತ್ತಿರುವ ದೃಶ್ಯ. ಟೀಪುವಿನ ನಾಡು ಮರೆತ ಒಂದು ಪ್ರಮುಖ ಅಂಶವನ್ನು ಆ ಚಿತ್ರ ಬಿಂಬಿಸುತ್ತಿತ್ತು. ರಾಕೆಟ್ಟನ್ನು ಯುದ್ಧದಲ್ಲಿ ಬಳಸಿಕೊಂಡ ಹೀರೋ ಆಗಿ ಒಬ್ಬ ಭಾರತೀಯನನ್ನು NASA ಚಿತ್ರಿಸಿದ್ದನ್ನು ಕಂಡು ಕಲಾಂ ಬೆರಗಾಗುತ್ತಾರೆ, ಹರ್ಷಚಿತ್ತರಾಗುತ್ತಾರೆ. Warfare Rocketryಯಲ್ಲಿ ಹೆಮ್ಮೆಯಿಂದ ಸ್ಮರಿಸಬಹುದಾದ ಭಾರತೀಯನನ್ನು ನಾವು ಮರೆತಿದ್ದೇವೆ. ಆದರೆ NASA ಗುರುತಿಸಿದೆ. ನಮ್ಮ

ಅಭಿಮಾನ ಶೂನ್ಯತೆಯ ಬಗ್ಗೆ ಕಲಾಂ ಅವರಿಗೆ ಪಿಚ್ಚೆನಿಸುತ್ತದೆ.

ಇಂಥ ಹಲವಾರು ಅಪೂರ್ವವಾದ ಪ್ರಸಂಗಗಳನ್ನು ನಾವು ನಿಸಾರರ ಗದ್ಯ ಬರಹ ಗಳಲ್ಲಿಯೂ ಕಾಣಬಹುದು.

ಈ ಎಚ್ಚರಿಕೆಯ ಚಾಟಿ ಏಟನ್ನು ನಿಸಾರರು ಅಲ್ಲಲ್ಲಿ ನೀಡಿದ್ದಾರೆ. ನೂರು ವರ್ಷ ತುಂಬಿದ ಕನ್ನಡ ಗೆಜೆಟಿಯರನ್ನು ಮತ್ತು ಅದರ ಮಹತ್ವವನ್ನು ಹೇಳುತ್ತಾ 'ಇಂದಿನದು ಬಾಜಾರು ರಚನೆಗಳ ಜನಪ್ರಿಯ ಮಷಾಲು ಬೆಳಕಿನ ಕಣ್ ಕೋರೈಕೆ. ಇದರೆದುರಿನಲ್ಲಿ ಈ ಗೆಜೆಟಿಯರ್‌ನಂಥ ಇನ್ನೆಷ್ಟು ಉದ್ಗ್ರಂಥಗಳ ಮಹಿಮೆ ಮಸುಳಿದೆಯೊ! ಅಂಥವುಗಳನ್ನು ಆಗಾಗ್ಗೆ ನಾಡವರ ಗಮನಕ್ಕೆ ತಂದುಕೊಡುವ ಕಾಯಕ ಸಾಹಿತ್ಯ, ಸಂಸ್ಕೃತಿಗಳಲ್ಲಿ ಆಸಕ್ತರಾದ ದಾಸೋಹಿಗಳಿಂದ ಆಗುತ್ತಿರಬೇಕು' ಎನ್ನುತ್ತಾರೆ.

ನಿಸಾರರ ಬರಹ ಕನ್ನಡಕ್ಕೆ ಸಂಬಂಧಪಟ್ಟ ಯಾವುದನ್ನೂ ಅಲ್ಪ, ಗೌಣ ಎಂದು ಪರಿಗಣಿಸಿಲ್ಲ.

ನಿಸಾರರ 'ಸಮಗ್ರ ಗದ್ಯ ಬರಹಗಳು' ಸಂಪುಟದಲ್ಲಿ ನನಗೆ ಅತ್ಯಂತ ಪ್ರಿಯವಾದ ಎರಡು ಲೇಖನಗಳಿವೆ. ಮೊದಲನೆಯದು, 'ಮುಳ್ಳಿನ ಮಕುಟದ ಮಸೀಹ'—ಏಸು ಕ್ರಿಸ್ತನನ್ನು ಕುರಿತ ಬರಹ. ಮತ್ತೊಂದು 'ಸಾತ್ವಿಕ ಸ್ವರೂಪಿ ಸರಸ್ವತಿ'—ದೇವಿ ಸರಸ್ವತಿ ಯನ್ನು ಕುರಿತ ಬರಹ. ಎರಡೂ ವಿರುದ್ಧ ದಿಕ್ಕಿನವು, ಎಲ್ಲ ಅರ್ಥದಲ್ಲಿಯೂ. ಆದರೆ ನಿಸಾರರ ಬರವಣಿಗೆಯ ಶಕ್ತಿಯೇ ಅದು: ವಿರುದ್ಧ ಧ್ರುವಗಳನ್ನು ಸನಿಹಕ್ಕೆ ತರುವ ಸಾಮರ್ಥ್ಯ.

ಮನುಷ್ಯನ ನಾಗರಿಕತೆಯ ಹಿತೋತ್ಸಾಹಕರ ತೆರೆಯ ಹಿಂದೆ ಅವಿತಿರುವ ಕರಾಳ ಬೀಭತ್ಸಕರ ನೋಟಕ್ಕೆ ಇತಿಹಾಸ ವರ್ತಮಾನಗಳೆರಡೂ ಮರವಟ್ಟ ಸಾಕ್ಷಿ ಯಾಗಿವೆ. ಇನ್ನು ಭವಿಷ್ಯದ ಪಾಡೂ ಇದೇ ಎಂದು ನಿಸ್ಸಂಕೋಚವಾಗಿ ನುಡಿಯಬಹುದು. ಈ ದಮನ ಪ್ರವೃತ್ತಿ, ಹತ್ತಿಕ್ಕಿ ಆಳುವ ದಾನವೀಯ ಗುಣ ಪ್ರಕೃತಿಯ ಅನುಲ್ಲಂಘನೀಯ ನಿಯಮವೆಂದೊ, ಬಾಳಿನ ನಗ್ನ ವಾಸ್ತವ ವೆಂದೊ ಒಪ್ಪಿಕೊಂಡು ತೆಪ್ಪಗಾಗುವುದೊಂದೇ ನಮ್ಮಂಥವರ ಗತಿಯೇನೋ!

(ನಾಗರಿಕತೆಯ ನೇಪಥ್ಯದಲ್ಲಿ)

✧ ✧ ✧

ಕಾವ್ಯದ ಸಾರ್ಥಕತೆಯನ್ನು ಪರಿಗಣಿಸುವಾಗ ಕವಿ-ವಾಚಕ ಸಹೃದಯರಿಬ್ಬರ ಸಮಾನ ಸಹಯೋಗ ಮುಖ್ಯವಾಗುತ್ತದೆ. ಬೀಸುವ ಕಲ್ಲು ಒಂದೇ ಆದರೆ ಕಾಳು ಹಿಟ್ಟಾಗುವುದೆ?

(ಸಮಾನ ಸ್ಪಂದನ)



ನಿಸಾರ್ ಅವರ ಗದ್ಯಬರಹಗಳಲ್ಲಿ ವ್ಯಕ್ತಿ-ಕೃತಿ ಚಿಂತನೆ

♦ ಕೆ. ಎಂ. ವಿಜಯಲಕ್ಷ್ಮಿ

ಕವಿತ್ವ, ಸಾಹಿತ್ಯ ಸೇವೆ, ಸಾಧನೆ, ಸ್ಥಾನ, ಕೀರ್ತಿ ಸಂಪಾದನೆ, ಮುಂತಾದ ಹಲವು ವಿಚಾರಗಳಲ್ಲಿ ಮಾನ್ಯ ಕೆ. ಎಸ್. ನಿಸಾರ್ ಅಹಮದ್ ಅವರು ಮತ್ತು ಅವರ ಗದ್ಯ ಬರಹಗಳಲ್ಲಿ ಕಾಣಿಸಿರುವ ಕೃತಿಕಾರರು, ವ್ಯಕ್ತಿಗಳು ಬಹು ಎತ್ತರದಲ್ಲಿರುವವರು. ನನಗೆ ನಿಸಾರ್‌ರವರ ಬಹುತೇಕ ಕವನಗಳು ಮೆಚ್ಚು. ಭಾವುಕತೆಯಲ್ಲಿ ಅಥವಾ ವಿಚಾರದಲ್ಲಿ ಓದುಗರ ಮನಸ್ಸನ್ನು ತೇಲಾಡಿಸುವ ಅವರ ಕಾವ್ಯ ಕೃತಿಗಳ ಬಗೆಗಿನ ನನ್ನ ಅಭಿಮಾನ ಅತಿಶಯವಾದದ್ದು. ಎಷ್ಟು ಬಾರಿ ಕೇಳಿದರೂ ಬೇಸರ ತಾರದ ಮತ್ತೆ ಮತ್ತೆ ಕೇಳಬೇಕೆನಿಸುವ 'ಜೋಗದ ಸಿರಿ ಬೆಳಕಿನಲ್ಲಿ', ಸರ್ವ ಕಾಲಕ್ಕೂ ಪ್ರಸ್ತುತವೆನಿಸುವ 'ಕುರಿಗಳು, ಸಾರ್, ಕುರಿಗಳು', ಯಾವುದೇ ಒಂಟಿ ಮನಸ್ಸಿಗೆ ತಾಗುವ 'ಮತ್ತದೇ ಬೇಸರ, ಅದೇ ಸಂಜೆ, ಅದೇ ಏಕಾಂತ/ ನಿನ್ನ ಜೊತೆಯಿಲ್ಲದೆ, ಮಾತಿಲ್ಲದೆ ಮನ ವಿಭ್ರಾಂತ...', ಮುಂತಾದ ಕವನಗಳು; ಅವುಗಳಲ್ಲಿನ ಗೇಯ ಗುಣ, ಲಯ, ವಿಚಾರ ಎಲ್ಲವೂ ನನಗೆ ಪ್ರಿಯ.

ಸಾಹಿತ್ಯದ ಮೇರುವ್ಯಕ್ತಿಗಳಾದ ವಿ. ಸೀತಾರಾಮಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಎಂ. ಆರ್. ಶ್ರೀನಿವಾಸಮೂರ್ತಿ, ಡಾ. ವಿ.ಕೃ. ಗೋಕಾಕ್, ರಾಷ್ಟ್ರಕವಿ ಕುವೆಂಪು ಮತ್ತು ರವೀಂದ್ರನಾಥ ಠಾಕೂರರು ಮುಂತಾದವರ ಬದುಕು ಬರಹಗಳ ಬಗ್ಗೆ ನಿಸಾರ್‌ರವರು ಬರೆದಿರುವ

ಲೇಖನಗಳ ಶೀರ್ಷಿಕೆಗಳು ಇಂತಿವೆ: ೧) ವಿನಯವಂತ ವಿ.ಸೀ ೨) ಸರಳ, ಸದಭಿರುಚಿಯ ಸಾಹಿತ್ಯಕಾರ ಮಾಸ್ತಿ ೩) ಸರಸತೆ ಸಂಶೋಧನೆಗಳ ಸಂಗಮ: ಎಂ.ಆರ್.ಶ್ರೀ ೪) ಪೂರ್ಣ ಸಂಕೀರ್ಣತೆಯ ಉಪಾಸಕ ಡಾ. ವಿ. ಕೃ. ಗೋಕಾಕ್ ೫) ಮಾನವ ಮನೋಗತಿಯ ಮಹಾ ದಾಖಲೆಗಾರ: ಷೇಕ್ಸ್‌ಪಿಯರ್ ೬) ಕುವೆಂಪು: ವ್ಯಕ್ತಿ—ಕೃತಿ ಅವಲೋಕನ ೭) ರವೀಂದ್ರರ ಸಾಹಿತ್ಯ ವಿಚಾರಗಳು ೮) ಗದ್ಯ ರೂವಾರಿ ಡಾ. ಎ.ಆರ್.ಕೃಷ್ಣಶಾಸ್ತ್ರೀ ೯) ಮಾಸ್ತಿಯವರನ್ನು ನೆನೆದು ೧೦) ಮಹಾ ಕವಿಗೆ ನೆನಪಿನ ನಮನ ೧೧) ಲಾರ್ಕನ ಅತೃಪ್ತ ಹೆಣ್ಣುಗಳು ೧೨) ಬದುಕು, ಸಾಹಿತ್ಯವನ್ನು ಕುರಿತಂತೆ ಡಾ. ಪು.ತಿ.ನ.ಅವರ ವಿಚಾರಗಳು ೧೩) ಡಿ.ವಿ.ಜಿ. ಚಿತ್ರಿಸಿದ ಹಾಸ್ಯ ಪ್ರಸಂಗಗಳು.

ಸಾಮಾನ್ಯ ಸಾಹಿತ್ಯಾಸಕ್ತರಿಗೂ ತಾವು ಪರಿಚಯಿಸಬಯಸುವ ಮುಖವನ್ನು, ವ್ಯಕ್ತಿ ವಿಚಾರವನ್ನು ಮತ್ತು ಕೃತಿಗಳ ಒಳ ತಿರುಳನ್ನು, ಸ್ವಚಿಂತನೆಯನ್ನು ತದ್ವತ್ತಾಗಿ ತಂದು ತಲೆಯೊಳಗೆ ತೂರಿಸುವುದರಲ್ಲಿ ಯಶಸ್ವಿಯಾಗುತ್ತವೆ, ನಿಸಾರರು ಬರೆದಿರುವ ಈ ಲೇಖನ ಗಳು. ಒಬ್ಬೊಬ್ಬ ಸಾಹಿತಿಯದೂ ವ್ಯಕ್ತಿತ್ವ, ವಿಚಾರ, ಕೃತಿ ಶ್ರೇಷ್ಠತೆ, ಪರಿಸರ, ಅವರವರ ಸ್ವಭಾವ, ಒಲವುಗಳ ಸಾರವನ್ನು ಸಂಗ್ರಹಿಸಿ ಕೊಟ್ಟಿರುವ ಶುಚಿ ರುಚಿಯಾದ ಬುತ್ತಿ, ಈ ಗದ್ಯ ಬರಹಗಳು.

ನಿಸಾರರ ಯಾವುದೇ ಲೇಖನಗಳಲ್ಲಿ ಮೊದಲು ಮನಸ್ಸಿಗೆ ಮುದ ನೀಡುವುದು ಅವರ ಭಾಷೆ. ಹೇರಳ ಸಂಸ್ಕೃತ, ಉತ್ತಮವಾದ ಕನ್ನಡ ಮತ್ತು ಅಲ್ಲೊಂದು ಇಲ್ಲೊಂದು ಹಿಂದಿ ಭಾಷಾ ಪದ ಬಳಕೆಗಳಿಂದ, ಅರ್ಥಬದ್ಧವಾದ, ಕೆಲವೊಮ್ಮೆ ಪ್ರಾಸಬದ್ಧವೂ ಆದ ಲಯ ತಾನವುಳ್ಳ ವಾಕ್ಯಗಳನ್ನು ಕಟ್ಟುವುದು ಅವರ ವಾಕ್ಯಶಿಲ್ಪದ ಛಾಪು. ವ್ಯಕ್ತಿ ಪರಿಚಯವನ್ನೇ ಮಾಡಲಿ, ಸ್ವಂತ ಅಭಿಪ್ರಾಯಗಳನ್ನೇ ಹೇಳಲಿ, ಕೃತಿಗಳ ಕುರಿತಾದ ವಿಮರ್ಶೆಯೇ ಇರಲಿ ಅವರು ಬಳಸುವ ಭಾಷೆ ಆಕರ್ಷಕ ಮತ್ತು ಅರ್ಥಪೂರ್ಣ. ಉದಾಹರಣೆಗೆ ವ್ಯಕ್ತಿ/ಕೃತಿಗಳ ಮೇರು ಗುಣವನ್ನು ಭಾಷೆಯಲ್ಲಿ ಹಿಡಿದೆತ್ತಿ ಕೊಡುವ ಕೆಲವು ಕಂಡಿಕೆಗಳ ಸ್ಯಾಂಪಲ್ ಇಲ್ಲಿವೆ: ೧) 'ಜ್ಞಾಪಕ ಚಿತ್ರಶಾಲೆ'ಯ ಎಂಟು ಸಂಪುಟಗಳು ಡಿ.ವಿ.ಜಿಯವರ ವ್ಯಾಪಕ ಜೀವನಾನುಭವಕ್ಕೆ ಕೈಗನ್ನಡಿ. ಅದೊಂದು ವಿವಿಧ ಜನ ಸಂದೇಶದ ಚಿತ್ತಾಕರ್ಷಕ, ವರ್ಣರಂಜಿತ ಪರಿಷೆ: ವಿಭಿನ್ನ ಸ್ವಭಾವ ನಡೆನುಡಿ ವ್ಯಕ್ತಿ ವೈಲಕ್ಷ್ಯಣಗಳ ರಂಗ ಮಂಚ. ನಮ್ಮ ನಾಡಿನ ಸಂದು ಹೋದ, 'ಮರಳಿ ಬರಬಾರದೆ?' ಎಂದು ಹಪಹಪಿಸುವಂತೆ ಎಸಗುವ ಬದುಕಿನ ರೀತಿ ರಿವಾಜುಗಳ ಅತ್ಯಪೂರ್ವ ಕಲಾಗೃಹ. ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಪರಮ ಬೆಲೆಯುಳ್ಳ ದಾಖಲೆಗಳ ಗ್ರಂಥ ಸಮುಚ್ಚಯ 'ಜ್ಞಾಪಕ ಚಿತ್ರಶಾಲೆ' ೨) (ಎಂ. ಆರ್. ಶ್ರೀ. ಯವರ 'ರಂಗಣ್ಣನ ಕನಸಿನ ದಿನಗಳು') ಪುಸ್ತಕದ ಕುರಿತಾದ ಒಂದು ವಾಕ್ಯ: 'ಕಾದಂಬರಿ, ಪ್ರಬಂಧ, ಶಿಕ್ಷಣ ವಿಷಯಕ ಚರ್ಚೆ ಮೊದಲಾದವು ಗಳ ಕೆಲವು ಗಣನೀಯ ಲಕ್ಷಣಗಳನ್ನೊಳಗೊಂಡ ಈ ಪುಸ್ತಕ ಅಪ್ಪಟವೂ ಸುರಸವೂ ಆದ ಶಿಕ್ಷಣಾನುಭವಗಳ ರಸಘಟ್ಟಿ. ಲೇಖಕರ ವೃತ್ತಿ ಜೀವನದ ಪರೋಕ್ಷ ಕೈಫಿಯತ್ತು.' ೩) ಕುವೆಂಪು ಕವಿತೆಗಳ ವಿಶೇಷವನ್ನು ಕುರಿತಾಗಿ, 'ಸಂತತ ಚಲನಶೀಲತೆ ಅದರ ಉಸಿರು. ಪೆಡಸುತನ, ಕುಂಟು ಓಟ ಅದಕ್ಕೆ ಹೊರತು. ಅವರ ಭಾವಗೀತಗಳಲ್ಲಿ ನಿಸರ್ಗ ಗೀತೆಗಳಿಗೆ

ಮೊದಲ ಮಣೆ. ಅವರ ಪ್ರತಿಭೆಯ ಪೂರ್ಣ ಪ್ರಕಾಶನಕ್ಕೆ ಅವುಗಳಲ್ಲಿ ಅನುವು ಜಾಸ್ತಿ. ತನ್ಮಯತೆ, ಧ್ಯಾನಪರತೆಗಳಿಗೆ ಅಲ್ಲಿ ಮುಕ್ತ ಅವಕಾಶ. ಹಾಗೆಂದು ಜೀವನ ವಿಮುಖ ಧೋರಣೆಯಿಲ್ಲ. ಅವರಿಗೆ ಪ್ರಕೃತಿ, ಬಹಿರಂಗದಲ್ಲಿ ತೇಜಸ್ವಿನಿ, ಅಂತರಂಗದಲ್ಲಿ ತಪಸ್ವಿನಿ' ೪) 'ಭಾವವನ್ನು ವಿಷಯಗಳಿಂದ, ಜ್ಞಾನವನ್ನು ಭ್ರಮೆಯಿಂದ ಬಿಡಿಸಿಕೊಂಡು ತನ್ಮೂಲಕ ರಸಪುಷ್ಪರಾಗುವುದೊಂದೇ ನಮ್ಮ ಉದ್ಧಾರದ ಮಾರ್ಗ. ಸಾಹಿತ್ಯ, ಕಲೆ ಇತ್ಯಾದಿಗಳು ಈ ನಿಟ್ಟಿನಲ್ಲಿ ಆಧುನಿಕ ಮನುಷ್ಯನಿಗೆ ತುಂಬ ಉಪಕಾರಿಗಳು.' (ಲೇಖಕರ ಅಭಿಪ್ರಾಯ)— ಇವೆಲ್ಲವೂ ಭಾಷೆಯ ಬಳಕೆಗೆ ಕೆಲ ಉದಾಹರಣೆಗಳು. ಇವರ ಎಲ್ಲ ಲೇಖನಗಳೂ ಇದೇ ಸೊಗಸನ್ನುಳ್ಳ ಹಲವಾರು ಅರ್ಥಬದ್ಧ ಆಲಂಕಾರಿಕ ಪದಗುಚ್ಛ.

ವಿಮರ್ಶೆಯ ಸಂಬಂಧವಾಗಿ ಕೆಲವು ಮುಖ್ಯ ಅಂಶಗಳನ್ನು ವಿ.ಸೀ., ಗೋಕಾಕರ ಕುರಿತಾದ ಲೇಖನಗಳಲ್ಲಿ ಕಾಣಿಸಲಾಗಿದೆ. ಹಿರಿಯ ಸಾಹಿತಿಗಳಿರಲಿ, ಕಿರಿಯರಿರಲಿ ಹೃದಯ ಪೂರ್ವಕವಾಗಿ ಓದದೇ ತಮಗೆ ದಕ್ಕುವ ಲಾಭ, ಸ್ಥಾನಮಾನ, ಲೇಖಕರ ಪೂರ್ವೋತ್ತರ ಇತ್ಯಾದಿಗಳ ಹಿನ್ನೆಲೆಯಲ್ಲಿ ವಿಮರ್ಶಿಸುವವರ ಬಗ್ಗೆ ನಿಸಾರರಿಗೆ ಸಹಜವಾಗಿಯೇ ನೋವಿದೆ, ಬೇಸರವಿದೆ, ಸ್ವಲ್ಪ ಸಿಟ್ಟೂ ಇದೆ. 'ವಿನಯವಂತ ವಿ.ಸೀ' ಎಂಬ ಲೇಖನದಲ್ಲಿ ಅವರು ತಿಳಿಸುವ ಈ ಮಾತುಗಳು—'ಸಾಮಾನ್ಯವಾಗಿ ನಮ್ಮ ಸಾಹಿತ್ಯ ಸಮೀಕ್ಷಕರು ಎರಡು ವಿಧಾನ ಗಳನ್ನು ಅನುಸರಿಸುತ್ತಾರೆ. ಒಂದು, ಆಂಗ್ಲ ಲೇಖಕನೊಬ್ಬನ ವಿಚಾರ ಸರಣಿಗೆ ಕನ್ನಡ ಬರಹಗಾರನ ಗ್ರಂಥವನ್ನು ಒಗ್ಗಿಸಿ ತೀರ್ಮಾನಕ್ಕೆ ಬರುವುದು; ಇಲ್ಲವೇ, ಕನ್ನಡದಲ್ಲೇ ಯಾರಾದರೊಬ್ಬ ಕವಿ ಅಥವಾ ಸಾಹಿತಿಯ ಮಾರ್ಗವನ್ನು ಮನಃಪೂರ್ವಕವಾಗಿ ಒಪ್ಪಿಕೊಂಡು, ಇತರರನ್ನು ಅವನೊಂದಿಗೆ ಹೋಲಿಸಿ ಮೂಗು ನೇರದ ಬೆಲೆಯನ್ನು ಕಟ್ಟುವುದು ಇನ್ನೊಂದು' ಎಂಬ ಮಾತಿನಲ್ಲಿ ಮತ್ತು 'ಬೈ ವಿಮರ್ಶೆ ಅಥವಾ ಜೈ ವಿಮರ್ಶೆ' ಎಂಬ ಎರಡೇ ಪ್ರಧಾನ ಬಗೆಯ ವಿಮರ್ಶೆಯಷ್ಟೇ ಇರುವುದು ಎಂದು ಹೇಳುವುದರಲ್ಲಿ, ಅವರ ಈ ಭಾವನೆ ಸುವ್ಯಕ್ತ. 'ಇವೆರಡು ವಿಧಾನಗಳನ್ನೂ ಅನುಸರಿಸದೇ ಕೃತಿಯ ಅರ್ಥವನ್ನು ಶೋಧಿಸಿ, ಆಶಯವನ್ನು ಗುರುತಿಸಿ ಆಯಾ ಕೃತಿಗೆ ಸಲ್ಲಬೇಕಾದ ಮೌಲ್ಯಾಂಕನ ಮರ್ಯಾದೆಯನ್ನು ಒಪ್ಪಿಸುವ ರೀತಿ ವಿ.ಸೀ.ಯವರದು' ಎಂದು ಹೇಳುವುದರಲ್ಲಿ ವಿಮರ್ಶೆಯ ಸರಿಯಾದ ವಿಧಾನ ಯಾವುದೆಂಬುದನ್ನು ಸ್ಪಷ್ಟ ಪಡಿಸುತ್ತಾರೆ. ವಿ.ಸೀ.ಯವರ ಪ್ರಕಾರ ವಿಮರ್ಶೆ 'ಒಂದು ಪಂಜು, ರಾಜ ದಂಡವಲ್ಲ' ಎಂದು ಹೇಳುತ್ತ, 'ಸಾಹಿತ್ಯ ಸಾಹಸದಲ್ಲಿ ಜೊತೆ ನಡೆಯುವ ಸಂಗಡಿಗ, ಒಡನಾಡಿ. ಆಲೋಚನಾ ಕ್ರಮದಲ್ಲಿ ಏಕಮುಖತೆ ಸಲ್ಲದು. ಸಾಕಲ್ಯ ಸಮೀಕ್ಷೆ ವಿಮರ್ಶಕನ ಧ್ಯೇಯವಾಗಬೇಕು' ಎಂಬ ನಿಸಾರರ ಹೇಳಿಕೆ ಇಂದಿಗೂ ಸಮ್ಮತವಾಗುವಂಥ ಅಭಿಪ್ರಾಯ.

ಕಟು ವಿಮರ್ಶೆಯ ಬಗ್ಗೆ ತುಂಬ ನಿಜವೆನಿಸುವಂಥದ್ದು, 'ಪುಷ್ಪಾಪಚಯದಲ್ಲಿ ಹೂವನ್ನು ಆಯುವವರುಂಟು; ತಿರಿಯುವವರು, ಬಿಡಿಸುವವರು ಉಂಟು; ಕುಯ್ಯುವವ ರುಂಟು. ಈ ಕಾರ್ಯದಲ್ಲಿ ಗಿಡ ಕೆಟ್ಟು ಹೂ ನಲುಗಿದರೆ ಕಟುಕತನವಾದೀತು' ಎಂಬ ವಿ.ಸೀಯವರ ಮಾತು ಮತ್ತು ಗೋಕಾಕರು ವಿಮರ್ಶೆಯನ್ನು ಕುರಿತು, 'ಇಂದಿನ ವಿಮರ್ಶೆ ಯಲ್ಲಿ ಅಹಂಮನ್ಯತೆಯ ದಂಡವಿದೆಯೇ ಹೊರತು ಮಾನದಂಡವಿಲ್ಲ. ಯಾವುದೇ ಕೃತಿಯ

ನಿರ್ವಿಕಾರವಾದ ವಿವೇಚನೆ, ತುಲನೆ ನಡೆದಿದೆ ಎನ್ನಿಸದು. ಅದರಲ್ಲಿ ಗುಂಪುಗಾರಿಕೆಯ, ಬಲಾಬಲಗಳ ಸುಳಿವು ಇದ್ದೇ ಇರುತ್ತದೆ. ಅಲ್ಲದೆ, ವಿಮರ್ಶಕರಿಗೆ ವಿಮರ್ಶೆ ಮಾಡುವ ಪೂರ್ವ ಸಿದ್ಧತೆಗಳಾದ ಅಧ್ಯಯನ, ವಿಚಾರಶೀಲತೆ ಸ್ವನಿರ್ಧಾರ ಬುದ್ಧಿಗಳು ಸಿದ್ಧಿಸಿರುವ ನಿದರ್ಶನಗಳು ವಿರಳ. ಅವರಿಗೆ ಮೌಲ್ಯಗಳೇ ನಿಶ್ಚಿತವಿರುವುದಿಲ್ಲ. ತನ್ನದೆನ್ನುವ ಅಥವಾ ತಾನು ಎರವಲು ಪಡೆದ ತತ್ತ್ವವನ್ನು ಸಮಸ್ತರ ಮೇಲೂ ಹೇರಲು ಹೋಗುತ್ತಾರೆ. ತಮ್ಮ ರುಚಿಯೇ ಸಾಹಿತ್ಯದ ನೈಜ ಹಾಗೂ ಯುಕ್ತ ರುಚಿಯೆಂಬ ಭ್ರಮೆಯನ್ನು ತಳೆದಿರುತ್ತಾರೆ. ರುಚಿಗಳಲ್ಲಿನ ತರಮಾಂತರದ, ವೈವಿಧ್ಯದ ಅರಿವಿಲ್ಲ' ಎಂಬ ಅಭಿಪ್ರಾಯವನ್ನು ಸಂಗ್ರಹಿಸಿ ಕೊಟ್ಟಿದ್ದು, ಇವು ಇಂದಿನ ವಿಮರ್ಶಕರೂ ಆಲೋಚಿಸಿ ಸೂಕ್ತವಾಗಿ ತಮ್ಮನ್ನು ತಾವು ತಿದ್ದಿಕೊಳ್ಳಲು ಕೈಗೆತ್ತಿಕೊಳ್ಳಬೇಕಾದಂತಹ ಅಂಶಗಳು.

ಮೇಲಿನ ಲೇಖನಗಳ ಮೂಲಕ ಹೆಸರಾಂತ ಲೇಖಕರ ಬಗ್ಗೆ ಕಲೆ ಹಾಕಿದ ಅಥವಾ ಅರಿತುಕೊಂಡ ಕೆಲವು ಕುತೂಹಲಕರ ಅಂಶಗಳನ್ನೂ ಓದುಗನ ಅರಿವಿನ ಅಂಗೈಯಲ್ಲಿಡುತ್ತಾರೆ. ಅವುಗಳಲ್ಲಿ ಕೆಲವು ಇಂತಿವೆ: 'ಈ ಅರ್ಥದಲ್ಲಿ ಅವನೊಬ್ಬ ದರೋಡೆಗಾರ. ಕಥೆ, ಉಪಕಥೆ, ಸಂವಾದ, ಪಾತ್ರ, ತಂತ್ರಗಳನ್ನು ಅನಾಮತ್ತಾಗಿ ಲಪಟಾಯಿಸಿದ್ದಾನೆ. ಆದರೆ ಅದೊಂದು ಸಾರ್ಥಕ ದರೋಡೆ: ಎಲ್ಲ ಸ್ವಂತದ್ದೇ ಎನ್ನುವಷ್ಟು ಕಾಯಕಲ್ಪ ಮಾಡಿ ಮೂಲವನ್ನೇ ಮರೆಸುವ ಮಹಾ ಪ್ರತಿಭೆ ಅದು. ಜೇಡಿ ಮಣ್ಣು, ಪಾತ್ರೆಯ ಸಂಬಂಧ' ಎಂದು ಹೇಳಿ, ಷೇಕ್ಸ್‌ಪಿಯರ್ ತನ್ನದೆಂದು ಹೇಳುವ ೩೭ ನಾಟಕ ಕೃತಿಗಳ ರಚನೆಗೂ ಆಯ್ಕೆ ಮಾಡಿದ್ದು ಇತರ ಸಾಹಿತಿಗಳಿಂದ ಕಡ ಪಡೆದ ವಸ್ತುಗಳು ಎಂಬಂತಹ ವಿಷಯಗಳನ್ನು ತಿಳಿಸಿರುವುದು ಕುತೂಹಲ, ವಿಸ್ಮಯಗಳನ್ನು ಹುಟ್ಟಿಸುತ್ತವೆ. ಷೇಕ್ಸ್‌ಪಿಯರ್ ತನ್ನ ಅಭಿಪ್ರಾಯ, ಇಷ್ಟಾನಿಷ್ಟ, ಒಲವು ನಿಲವು, ತತ್ತ್ವ ಇಂಥದು ಎಂಬ ಬಗ್ಗೆ ಎಲ್ಲೂ ಸುಳಿವು ಬಿಟ್ಟಿಲ್ಲ ಎಂಬ ಅಂಶವೂ; ದೇಶಗಳು ತಮ್ಮನ್ನು ಕೈ ಬಿಟ್ಟು ಹೋದರೂ ಚಿಂತೆ ಇಲ್ಲ, ಆದರೆ ಪ್ರಿಯ ಷೇಕ್ಸ್‌ಪಿಯರ್ ಮಾತ್ರ ತಮ್ಮ ಆಸ್ತಿಯಾಗಿ ಉಳಿಯಬೇಕು ಎಂದು ಆಶಿಸುವ ಆಂಗ್ಲ ಜನರ ಅಭಿಮಾನದ ಮಾತುಗಳನ್ನು ಅರಿವಿಗೆ ತಂದಿರುವುದೂ ಅಷ್ಟೇ ಕುತೂಹಲಕಾರಿಯಾದ ಅಂಶವೇ. ಆ ಜನರ ಅಭಿಮಾನ ಎಂಥದು, ಹೀಗೆ ಹೇಳಿಸಿಕೊಳ್ಳುವ ಆ ಷೇಕ್ಸ್‌ಪಿಯರ್‌ನ ಕಲಾ ಮಹತ್ವವಾದರೂ ಎಂಥ ಉನ್ನತ ಮಟ್ಟದ್ದು, ಯಾರೇ ಆದರೂ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕಾದದ್ದು ಹೀಗಲ್ಲವೇ? ಎನ್ನಿಸದೇ ಇರದು.

ಸದಭಿರುಚಿಯ ಸಾಹಿತ್ಯಕಾರ ಮಾಸ್ತಿಯವರ ಕುರಿತಾದ ಲೇಖನದಲ್ಲಿ ಶೃಂಗೇರಿ ಸ್ವಾಮಿಗಳ ಉದಾತ್ತ ನಡವಳಿಕೆಯ ಬಗ್ಗೆ ನೀಡಿರುವ ನಿದರ್ಶನವೂ ಮನಸ್ಸಿನೊಳಗೆ ಉಳಿಯುವಂಥದ್ದು. ಹಿಂದಿನ ಶೃಂಗೇರಿ ಸ್ವಾಮಿಗಳು ಯಾವುದೋ ಊರಿನಲ್ಲಿ ತಂಗಿದ್ದಾಗ ಮಸೀದಿಯನ್ನು ದಾಟುವ ಸಮಯದಲ್ಲಿ ಮೇನೆಯಲ್ಲಿ ಕುಳಿತು ಓಲಗ ಬಾರಿಸಿಕೊಂಡು ಹೋಗಬಾರದೆಂಬುದು ಅನ್ಯ ಮತೀಯರ ಭಾವನೆಯಾಗಿದೆ ಎಂಬುದನ್ನು ತಿಳಿದುಕೊಂಡು ಅವರು ಮೇನೆಯಿಂದ ಇಳಿದು ಮಸೀದಿಯ ಎದುರಿಗೆ ನಿಂತು ಮಸೀದಿಯಲ್ಲಿ ಇವರ ಪ್ರಾರ್ಥನೆಯನ್ನು ಕೇಳುವ ದೇವರು, ಮಠದಲ್ಲಿ ತಾವು ಪೂಜೆ ಮಾಡುವ ದೇವರೇ

ಆಗಿರುವುದರಿಂದ ಆ ಸನ್ನಿಧಿಯಲ್ಲಿ ಓಲಗ ಕೂಡದು ಎಂದೂ ಆ ಸನ್ನಿಧಿಯಲ್ಲಿ ತಾವು ಮೇನೆಯಲ್ಲಿ ಕೂಡ ಕುಳಿತುಕೊಳ್ಳುವುದಿಲ್ಲವೆಂದೂ ಹೇಳಿದ್ದರೆಂಬುದು ಒಂದು ಸ್ತುತ್ಯವಾದ ಕುತೂಹಲಕಾರಿ ಸಂಗತಿಯೇ.

ರವೀಂದ್ರರಿರಲಿ, ಪು.ತಿ.ನ ಇರಲಿ, ಲಾರ್ಕ ಇರಲಿ ಈ ಎಲ್ಲರ ಕೃತಿಗಳಲ್ಲಿನ ಉತ್ತಮ ಅಂಶಗಳನ್ನೇ ಹೆಚ್ಚಿನ ಪ್ರಮಾಣದಲ್ಲಿ ಗಮನಿಸಿ ಗ್ರಹಿಸುವ ಉದಾರ ಗುಣ ನಿಸಾರರಿಗಿದೆ. (ಇದು ನನ್ನ ಸ್ವಭಾವವೂ ಹೌದು). ಹಾಗೆಂದು ಅವರಿಗೆ ಕೊರತೆಗಳು, ನ್ಯೂನತೆಗಳು ಅಥವಾ ಅನಿಷ್ಟ ಅಂಶಗಳು ದೃಷ್ಟಿಗೋಚರವಾಗುವುದಿಲ್ಲ ಎಂದಲ್ಲ. ಅದನ್ನು ಹೇಳುವುದಕ್ಕೂ ಅವರು ಬಳಸುವುದು ಅತ್ಯಂತ ಸೌಜನ್ಯದ ವಿಧಾನ. ಕಿರಿಯರೂ ತಿಳಿದು ತಿದ್ದಿಕೊಳ್ಳಲು ಆ ವಿಧಾನ ಸಾಕು. ಈ ಮಾತಿಗೆ ಕೆಲವು ಉದಾಹರಣೆಗಳನ್ನು ಇಲ್ಲಿ ನೀಡಲಾಗಿದೆ; ೧) ಎಂ.ಆರ್. ಶ್ರೀಯವರ 'ಸಾವಿತ್ರಿ' ಪುಸ್ತಕದ ಬಗ್ಗೆ ಬರೆದ ಈ ಸಾಲುಗಳು: 'ಸಾವಿತ್ರಿ' ಅವರ ಚೊಚ್ಚಲು ಕಾದಂಬರಿ. ಅವರು ವಿದ್ಯಾರ್ಥಿಯಾಗಿದ್ದಾಗ ೧೯೧೪ರಲ್ಲಿ ಬರೆದದ್ದು. ಆಗ ಅವರ ವಯಸ್ಸು ಇಪ್ಪತ್ತು. ಎಂದೇ ಈ ಕಾದಂಬರಿ ಒಂದು ಬಗೆಯ ಅಭ್ಯಾಸದ ಬರವಣಿಗೆಯಂತೆ ತೋರುತ್ತದೆ. ಮಾಮೂಲು ಕಥೆ ಮತ್ತು ನೀತಿಪರ ಧೋರಣೆ ಆ ಕಾಲದ ರಚನೆಗಳ ಲಕ್ಷಣವಾಗಿದ್ದಂತೆ, 'ಸಾವಿತ್ರಿ' ಕೂಡ ಅದನ್ನು ವಿಧೇಯವಾಗಿ ಕಾಣಿಸುತ್ತದೆ' ಎಂದು ಯಾರಿಗೇ ಆದರೂ ಆರಂಭದಲ್ಲಿ ಅಥವಾ ವಿದ್ಯಾರ್ಥಿ ದೆಸೆಯಲ್ಲಿ ಬಾಲಿಶವಾದ ಬರವಣಿಗೆ ಇರುತ್ತದೆ ಎಂಬರ್ಥದಲ್ಲಿ ಹೇಳಿ, ಇದೂ ಹಾಗೇ ಎಂಬ ಅಂಶವನ್ನು, 'ಬರವಣಿಗೆ ಅಷ್ಟೇನೂ ಸೊಗಸಿಲ್ಲ' ಎಂದು ನೇರವಾಗಿ ಹೇಳದೆಯೇ ಓದುಗರ ಗಮನಕ್ಕೆ ತರುತ್ತಾರೆ. ನಿಸಾರರೇ, ಕುವೆಂಪು ಕುರಿತ ಲೇಖನದಲ್ಲಿ ಹೇಳಿರುವಂತೆ ವಿಮರ್ಶಕರು ಇಂದಿನ ಸಾಹಿತ್ಯಕ್ಕೆ ಆ ಕಾಲದ ಕೃತಿಯನ್ನು ಹೋಲಿಸದೇ ಅಂದಿನ ಮೌಲ್ಯ ನಿರ್ಧಾರಿತ ಮಾನ ದಂಡದ ಪರಿವೆಯನ್ನು ಹೊಂದಿರಬೇಕಾಗುತ್ತದೆ. ಅಂಥ ಮಾನದಂಡವನ್ನು ಇವರು ಸಮಯೋಚಿತವಾಗಿ ಬಳಸಿಕೊಳ್ಳುತ್ತಾರೆ. ಮುಂದಿನ ಸಾಲುಗಳಲ್ಲಿ ಲೇಖಕರ ಘನ ಉದ್ದೇಶ ಮತ್ತು ಪಾತ್ರಗಳ ಸೃಷ್ಟಿಯ ಬಗ್ಗೆ ಹೇಳಿ ಬಿಟ್ಟು ಈ ನ್ಯೂನತೆಯನ್ನೂ ಮನದಲ್ಲಿ ಉಳಿಯ ದಂತೆ ತೇಲಿಸಿ ಮರೆಸಿ ಬಿಡುತ್ತಾರೆ. ಕುವೆಂಪುರವರು ಸತ್ವವಿರದ ಬಿಡಿಗವನಗಳನ್ನೂ ಬರೆದಿರುವುದರ ಕುರಿತಾಗಿ ನಿಸಾರರು ಹೇಳಿರುವ ರೀತಿಯೂ ಹೀಗೆಯೇ: 'ಅವರ ಬಿಡಿಗವನಗಳನ್ನು ವಿವೇಚಿಸಿದಾಗ ಆ ಕವಿತೆಗಳಲ್ಲಿ ಕನ್ನಡಕ್ಕೆ ಅತ್ಯಪೂರ್ವ ಹಾಗೂ ಮೌಲಿಕ ಮಾದರಿಗಳಿರುವಂತೆ, ಗಟ್ಟಿ ಕಾಳುಗಳಿರುವಂತೆ, ಹುರುಳು ಬಲಿಯದ ಅರೆಗಾಳಿನ ಸಮೃದ್ಧಿಗೂ ಕಡಿಮೆ ಇಲ್ಲ' ಎನ್ನುತ್ತಲೇ, ಇದಕ್ಕೆ ಮುಂದಿನ ಕಾರಣಗಳನ್ನು ತಾವೇ ಕೊಡುತ್ತಾರೆ. 'ಜೀವನವಿಡೀ ಸಾಹಿತ್ಯ ಸೃಷ್ಟಿಗೆ ಮುಡಿಪಾದ ಜೀವ ಎಲ್ಲ ವಯಸ್ಸು, ಕಾಲಾವಧಿ, ಸಂದರ್ಭಗಳಲ್ಲಿ ಒಂದೇ ಏರಿನ ಮನಃಸ್ಥಿತಿ, ಸೃಜನಾತ್ಮಕ ತೀವ್ರತೆಗಳನ್ನು ಕಾಪಾಡಿಕೊಳ್ಳುವುದು ಅಶಕ್ಯ. ಏರು-ತಗ್ಗು, ಪ್ರಕಾಶ-ಮಂದತೆ, ಬನಿ-ಸಡಿಲತೆಗಳು ಪ್ರತಿಭೆಯನ್ನು ಆವರ್ತಿಸಿದರೆ ಆಶ್ಚರ್ಯ ಪಡಬೇಕಿಲ್ಲ. ಕುವೆಂಪು ಕಂಡದ್ದನ್ನು ಕವನಿಸಲು ಪ್ರಯತ್ನಿಸಿದ್ದು ಅವರ ಹಲವು ಬಿಡಿಗವಿತೆಗಳ ಅಯಶಸ್ಸಿಗೆ ಕಾರಣವೆನ್ನಿಸುತ್ತದೆ. ಅವರ ನಿತ್ಯಸ್ಫೂರ್ತ ಸೃಜನಕಾತರ ಮನಸ್ಸು ಆಯ್ಕೆಯ ವಿಷಯದಲ್ಲಿ ಅವಜ್ಞೆಯನ್ನು ತೋರಿದ್ದು

ಅಸಹಜವೇನಲ್ಲ' ಎಂದು ಈ ಬಗ್ಗೆ ಹೇಳುತ್ತ, ಮರು ಕ್ಷಣವೇ ಮರೆಸಿ ಬಿಡುವಂತೆ ಇಂಥ ಮಾತಿನಲ್ಲಿ ಕೊನೆಗೊಳಿಸುತ್ತಾರೆ. ಅಷ್ಟೇ ಅಲ್ಲ, 'ಈ ದೃಷ್ಟಿಯಿಂದ ಆ ಜಾಡಿನ ಯಾವ ಕವಿಯೂ ಹೊರತಲ್ಲ. ಮೊದಲೋದಿಗೆ ಹೀರೆಯ ಹೂವಿನಂತೆ ತಟಕ್ಕನೆ ಮನ ಸೆಳೆಯುವ ಈ ಬಗೆಯ ಪದ್ಯಗಳು ಆಮೇಲಿನ ಆಲೋಚನೆ, ಅನುಭವಗಳಿಗೆ ಎರವಾಗಿ ನಿರ್ಗಂಧವಾಗಿ ಉಳಿದು ಬಿಡುತ್ತವೆ: ಗ್ರಾಸವೊದಗಿಸುವುದರಲ್ಲಿ ಸೋಲುತ್ತವೆ. ರಮ್ಯ ಕಾವ್ಯ ಮಾರ್ಗದ ಕವಿಗಳು ಸಾಮಯಿಕ ಆವೇಶ, ಸ್ಫೂರ್ತಿಗಳಿಗೆ ಹೆಚ್ಚು ಒತ್ತು ನೀಡಿದ್ದು, ಇದಕ್ಕೆ ಕಾರಣವಿದ್ದೀತು. ಮಾತಿನ ಭರಾಟೆಯಲ್ಲಿ ಇಂಗಿತ ಮುಚ್ಚಿ ಹೋಗುವುದು, ಕಾವ್ಯತೆ ಸೊರಗಿ ನೀತಿಬೋಧಕ ಬೊಜ್ಜಿನಿಂದ ಪದ್ಯ ನಡೆಗೇಡಿಯಾಗುವುದು ಇಂಥಲ್ಲಿ ಅಪ್ರಕೃತವಲ್ಲ. ಆ ಮಾರ್ಗದ ತಲೆಯಾಳಾದ ವರ್ಡ್ಸ್‌ವರ್ತ್‌ನಂಥ ಪ್ರಖರ ತೇಜೋವಂತ ಕವಿಗೂ ಹೀಗಾದದ್ದನ್ನು ವಿಮರ್ಶಕರು ಗುರುತಿಸುತ್ತಾರೆ' ಎಂದು ಯಾರೂ ತಪ್ಪು ಮಾಡುವುದರಿಂದ ಹೊರತಲ್ಲ ಎಂಬ ಸತ್ಯವನ್ನು ಅರುಹಿ ಸಮಾಧಾನಿಸಿ, ತಪ್ಪುಗಳನ್ನು ಸಹ ಸರಿಗಳೊಂದಿಗೆ ಗಮನಕ್ಕೆ ತರುತ್ತಾರೆ. ಇದು ಯಾರನ್ನೂ ನೋಯಿಸದೇ ಸೂಕ್ಷ್ಮಗ್ರಾಹಿಗಳಿಗೆ ಹೇಳಬೇಕಾದು ದನ್ನು ಹೇಳುವ ಹೃದಯವಂತರ ಆತ್ಮೀಯ ರೀತಿ.

ಯಾವುದೇ ರೀತಿಯ ಉತ್ತಮ ಕೃತಿಗಳಿಗೆ ಓದುಗರ ಒಂದು ಸಮೂಹವಿರುತ್ತವೆ. ಸಾಮಾನ್ಯರಿಗೆ ಅರ್ಥೈಸುವಂತೆ ಬರೆಯುವ ಸಾಹಿತಿಗಳ ಗುಂಪು ಒಂದಾದರೆ, ಇನ್ನೊಂದು ಪಾಂಡಿತ್ಯವಿರುವವರಿಗೆ ಮಾತ್ರ ಅರ್ಥವಾಗುವಂತೆ ಬರೆಯುವ ಸಾಹಿತಿಗಳ ಗುಂಪು. ಜಗತ್ತಿನಲ್ಲಿ ಎರಡು ಗುಂಪೂ ಮುಖ್ಯವೇ. ಒಂದು ದೊಡ್ಡದಿರಬಹುದು. ಇನ್ನೊಂದು ಚಿಕ್ಕದಿರಬಹುದು. ಎರಡು ಗುಂಪುಗಳ ಮನ ಮತ್ತು ಮಿದುಳುಗಳಿಗೆ ಸಮಾಧಾನ ನೀಡುವ ಕೃತಿಗಳು ಹೊರಬರಬೇಕಾದುದು ಅಗತ್ಯ. ಸಮಾಜ ಮತ್ತು ಸಾಹಿತ್ಯದ ಬೆಳವಣಿಗೆಗೆ ಎರಡೂ ಆವಶ್ಯಕ. ಅದರಿಂದಲೇ, ಅಡಿಗರ ಕಾವ್ಯ ಕೃತಿಗಳು ಸಾಮಾನ್ಯರಿಗೆ ಎಟುಕು ವಂತಹದಲ್ಲ ಎಂಬುದನ್ನೂ; ಅವರ ಕಾವ್ಯದ ಸಿಹಿಯನ್ನು ಸವಿಯುವವರು ಶೈಕ್ಷಣಿಕ ಆಸಕ್ತರು ಮಾತ್ರವೇ ಎಂಬುದನ್ನೂ ತಮ್ಮ ಸಹಜ ಛಾಪಿನ ವರ್ಣರಂಜಿತ ಭಾಷೆಯಲ್ಲಿ ಹೇಳುವ ಸೊಗಸು ನೋಡಿ—'ಅದು (ಅಡಿಗರ ಕಾವ್ಯ) ಮಲ್ಲಿಗೆ, ರೋಜ, ಜಾಜಿ, ಸಂಪಿಗೆ ಗಳಂತೆ ಬಹುಜನ ಲಭ್ಯವಲ್ಲ, ಸುಲಭ ಪ್ರಾಪ್ಯವಲ್ಲ; ಸೀತಾಳೆ ಹೂವಿನಂತೆ ವರ್ಣೋಜ್ವಲ, ವಿರಳ, ವನಾಂತರ ಸಾಹಸ ಸಾಧ್ಯ. ಕನ್ನಡದ ವಚನಗಳು, ದಾಸ ಸಾಹಿತ್ಯ, ಸರ್ವಜ್ಞನ ಪದಗಳು, ಅಷ್ಟೇ ಏಕೆ ಬೇಂದ್ರೆ, ಕೆ.ಎಸ್.ನ ಕಾವ್ಯ ನಾಡಿನ ಸಂಸ್ಕೃತಿಯಲ್ಲಿ ಒಂದಾಗಿ, ಅದರ ಒಂದು ಅವಿಭಾಜ್ಯ ಅಂಗವಾಗಿ ಬೆಸೆದು ಹೋಗಿರುವಂತೆ ಅಡಿಗರ ಕಾವ್ಯ ಪೂರ್ತಾ ಬೆರೆಯುವುದಿಲ್ಲ. ಜನಪದಕ್ಕಿಂತ, ಸಮೂಹಕ್ಕಿಂತ ಅಕೆಡೆಮಿಕ್ ಆಸಕ್ತರನ್ನು, ವೈಚಾರಿಕ ಸಾಹಿತ್ಯ ಸಮಾಲೋಚಕರನ್ನು, ವ್ಯಷ್ಟಿ ಚೇತನವನ್ನು ತಣಿಸುವ ಸೃಷ್ಟಿ ಅವರದು. ಪುಷ್ಟಿಗಿಂತ ಪ್ರಚೋದನೆ, ಸಮಾಧಾನಕ್ಕಿಂತ ಸ್ಫೋದ್ವಿಗ್ನತೆ ಅದರ ಜಾಯಮಾನ' ಎಂದು.

ನಿಸಾರರ ವಿಚಾರಧಾರೆ ನಿಂತ ನೀರಲ್ಲ. ಅವರದು ಹಳೆಯದನ್ನೇ ಒಪ್ಪಿಕೊಂಡು, ಅದೇ ಚೌಕಟ್ಟಿನಲ್ಲಿರಬೇಕೆಂದು ಒತ್ತಾಯಿಸುವ ಕಿಷ್ಕಿಂಧ ಮನವಲ್ಲ. ಸಾಹಿತ್ಯದ ಝರಿಯನ್ನು ಹೊಸ ಹಾದಿಯಲ್ಲಿ ಹರಿಸಬಯಸುವ ಮನೋಧರ್ಮ ಉಳ್ಳದ್ದು. ಯಾವುದೇ

ಹೊಸ ಪ್ರಯೋಗವೂ ಸಾಹಿತ್ಯದ ಗತಿಯನ್ನು ಬದಲಿಸಲು ಅಗತ್ಯ ಎಂಬುದು ಅವರ ಧೋರಣೆಯೂ ಕೂಡ. ಹಾಗೆಂದೇ ವಿ.ಸೀ.ಯವರ 'ಸಾಹಿತ್ಯ: ಸಂಪ್ರದಾಯ ಮತ್ತು ಹೊಸ ಮಾರ್ಗ' ಕೃತಿಯ ಅಂತರಂಗದೊಂದಿಗೆ ಸಹಮತಿಸುತ್ತ, 'ಸಂಪ್ರದಾಯದ ಯಾವುದಾದರೊಂದು ಪ್ರಕೃತ ಪ್ರತಿನಿಧಿಯೋ ಮಾದರಿಯೋ ಆಧುನಿಕರ ದೃಷ್ಟಿಯಲ್ಲಿ ಒಂದು ಮಠ. ಸಂಪ್ರದಾಯವನ್ನು ಮೀರಿದ ಹೊಸ ಪ್ರಯೋಗ ಯಾವತ್ತೂ ಹಳಬರಿಗೆ ದಂಗೆಕಾರಿ, ವಿದ್ರೋಹಿ... ಪ್ರಗತಿ, ಕಾಲ ಧರ್ಮದ ಶಿಶು. ಆಗಾಗ್ಗೆ ಅದರ ಸಂಭವ ಅನಿವಾರ್ಯ. ಬಹುಕಾಲದ ಪುನರಾವರ್ತನೆ, ಅನುಕರಣೆಯಿಂದ ಹಾಲಿ ಸಂಪ್ರದಾಯ ವೀರ್ಯಗೆಡುತ್ತದೆ; ಕರ್ಮಠವಾಗುತ್ತದೆ. ಇಂಥ ರೂಢಿಗತ ಜಡತೆಗೆ ನವ ಚಿಂತನೆಯ ರಕ್ತದಾನ ಆಗಿಂದಾಗ್ಗೆ ಆದಾಗ ಸಾಹಿತ್ಯ ಸಜೀವಗೊಳ್ಳುತ್ತದೆ. ಹಳೆಯ, ಹೊಸದರ ಹೊಂದಾಣಿಕೆ ಒಂದು ನೆಲೆಗೆ ಮುಟ್ಟಿ, ಎರಡರ ವಿವೇಕವನ್ನೂ ಮೈಗೂಡಿಸಿಕೊಂಡಾಗ ಸಾಹಿತ್ಯ ಮುನ್ನಡೆಯ ಹೊರಳು ದಾರಿಗೆ ತಲಪುತ್ತದೆ' ಎಂಬ ತಮ್ಮ ಸ್ವಾಭಿಪ್ರಾಯವನ್ನೂ ಬಹಿರಂಗಗೊಳಿಸುತ್ತಾರೆ.

ಕೆಲವು ಲೇಖಕರು ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಚಿಂತನ ಮತ್ತು ವಿಚಾರಗಳನ್ನು ಮಾನ್ಯ ನಿಸಾರರು ನಮ್ಮ ಮುಂದಿಟ್ಟು, ಆಯಾ ಲೇಖಕರ ವೈಚಾರಿಕ ವಿಧಾನವನ್ನು ವ್ಯಾಪಕ ಮನಸ್ಸನ್ನು, ದೊಡ್ಡತನವನ್ನು ತಿಳಿಸಿಕೊಡುತ್ತಾರೆ. ಮನುಷ್ಯನಿಗೆ ಪ್ರಾಣಿ, ಪಕ್ಷಿ, ಕೀಟಗಳಿಗೆ ಇಲ್ಲದಂತಹ ರುಚಿಯ ಆಯ್ಕೆ, ಮುಂದಾಲೋಚನೆ, ಬುದ್ಧಿ, ವಿಚಾರ ಇತ್ಯಾದಿಗಳು ಇರುವ ಬಗ್ಗೆ ಪು.ತಿ.ನರವರ 'ಅಮೂರ್ತ ಕಲ್ಪನೆಗಳಾದ ದೇವರು, ಸ್ವರ್ಗ, ನರಕ, ದೇವಲೋಕಗಳನ್ನೂ ಅವುಗಳು ಶಾಶ್ವತವಾಗಿ ನಮ್ಮ ಬದುಕಿನಲ್ಲಿ ಬೆಲೆಗೊಳ್ಳಲು ನೆರವಾಗುವ ಹಲವು ಬಗೆಯ ಪುರಾಣ ಕತೆಗಳನ್ನೂ ಸೃಷ್ಟಿಸಿಕೊಂಡಿರುವುದು ನಮ್ಮ ಈ ಮನಸ್ಸಿನ ವಿಕಾಸದ ಕಾರಣದಿಂದಲೇ' ಎನ್ನುವಂಥ ವಿಚಾರ; ಮನುಷ್ಯ ಹಲವಾರು ಎಡರು ತೊಡರುಗಳನ್ನು ದಾಟಿದ ಮೇಲೆ ಇಂದಿನ ಪ್ರಗತಿಯನ್ನು ಸಾಧಿಸಿದ್ದಾನೆ ಎನ್ನುವ ಬಗ್ಗೆ ಹೇಳುತ್ತ, 'ಜ್ಞಾನ ತಿಳಿವಳಿಕೆಗಳ ಸಂಪಾದನೆಯಲ್ಲಿ ಅವನ ತಾಳ್ಮೆ, ಶ್ರಮ, ಕಾಲ ಎಷ್ಟೊಂದು ವ್ಯಯವಾಗಿದೆಯೋ! ಜಡದ ಮೇಲೆ ಜೀವದ ಆಧಿಪತ್ಯವನ್ನು ಸ್ಥಾಪಿಸಲು ಎಷ್ಟೊಂದು ಯುಗಗಳು ಬೇಕಾದವೋ ಅದಕ್ಕಿಂತ ಹೆಚ್ಚು ಸಮಯ ಜೀವದಿಂದ ಮನೋದೇಹಿಯಾದ ಮಾನವ ಹೊರಹೊಮ್ಮಲು ಬೇಕಾಗಿದೆ. ಮುಂದೆ ಜೀವದ ಮೇಲೆ ಆತ್ಮದ ಯಜಮಾನಿಕೆ ನಡೆಯಬೇಕಿದೆ' ಎಂಬ ವಿಚಾರ; ಪಾಪ-ಪುಣ್ಯ ಮತ್ತು ಒಳಿತು-ಕೆಡಕುಗಳ ಕುರಿತಾದ 'ಶುದ್ಧ ಪುಣ್ಯವೆಂದೂ; ಅಪ್ಪಟ ಒಳಿತು, ಅಪ್ಪಟ ಕೆಡುಕೆಂದೂ ಪ್ರಪಂಚದಲ್ಲಿ ಯಾವುದೂ ಇಲ್ಲ. ಹಾಗಿರಲು ಅವಕ್ಕೆ ಸಾಧ್ಯವಿಲ್ಲ. ದೇಹವನ್ನುಳಿದು ಜೀವದ ಅಸ್ತಿತ್ವವನ್ನು ಕಲ್ಪಿಸಿಕೊಳ್ಳುವುದು ದುಸ್ತರ. ಅವು ನಮ್ಮ ಬಾಳ್ವೆಯ ಅಂಗೀಕೃತ ವಾಸ್ತವಗಳು, ಮೌಲ್ಯಗಳು. ಅವನ ವರ್ಣನೆಯಲ್ಲೇ ಶುಭ ಅಶುಭ, ಹಿತ ಅಹಿತಗಳು ಸೇರಿಕೊಂಡಿವೆ' ಎಂಬಂತಹ ವ್ಯಾಖ್ಯೆ; ಎ. ಆರ್. ಕೃಷ್ಣಶಾಸ್ತ್ರೀಯವರ ಕನ್ನಡಾಭಿಮಾನವನ್ನು ಮತ್ತು ಮುಂದಾಲೋಚನೆಯನ್ನು ಸೂಚಿಸುವಂಥ 'ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟು ಮತ್ತಿನ್ನೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು' ಎಂಬ

ಕಳಕಳಿಯ ಉದ್ಗಾರಗಳು; ಮತ್ತು ಇಂಥವೇ ಇತರ ಹಲವು ಉತ್ತಮ ಚಿಂತನೆಗಳು, ಈ ಹಿರಿಯ ಸಾಹಿತಿಗಳ ವೈಚಾರಿಕ ಮನೋಧರ್ಮ, ಆಲೋಚನೆಯ ವಿಧಾನ, ಆ ಮೂಲಕ ಅವರ ಘನ ವ್ಯಕ್ತಿತ್ವಗಳನ್ನು ಸ್ಪಷ್ಟವಾಗಿ ಕಣ್ಣಿನ ಮುಂದೆ ಕಟ್ಟಿ ಕೊಡುತ್ತವೆ.

ನಿಸಾರರು ಅಲ್ಲಲ್ಲಿ ಬಳಸಿರುವ ಉಪಮೆಗಳೂ ಸಂದರ್ಭೋಚಿತ, ಮನಸ್ಸಿಗೆ ಹಿತ, ಮತ್ತು ಓದಿಗೆ ಚೇತೋಹಾರಿ. ಸಾಹಿತ್ಯ ಮತ್ತು ವಿಮರ್ಶೆಯ ಕುರಿತಾಗಿ ಹೇಳಿರುವ ಈ ಸಾಲುಗಳನ್ನು ನೋಡಿ, 'ಕಾಲಾನುಸಾರಿಯಾದ ಫ್ಯಾಷನ್ನಿನ ದೆಸೆಯಿಂದ ಅವರ (ರವೀಂದ್ರ ರಂಥವರ) ಪ್ರಾಶಸ್ತ್ಯ ತತ್ಕಾಲಕ್ಕೆ ಕಾರ್ಮೋಡದಿಂದ ಆವರಿಸಿದಂತೆ ತೋರುತ್ತದೆ. ಆಗ ಮಿಂಚು ಹುಳುಗಳದೇ, ಜೊಗಟೆ ಗಿಡಗಳದೇ ವಿಜಯಾಟ್ಟಹಾಸ. ತಕ್ಕಡಿಯ ತುಂಬ ಗುಲಗಂಜಿಗಳದೇ ಗೌಜು ಗದ್ದಲ. ಗಲ್ಲಿಗಳ ಕಿಕ್ಕಿರಿಕೆ ರಾಜಾರಸ್ತೆಯನ್ನು ಕಣ್ಮರೆಗೊಳಿಸ ಬಹುದು. ಆದರೆ ತುಂಬು ಚಂದ್ರನ ಕಾಂತಿ ಕಾರ್ಮುಗಿಲಿನ ದೆಸೆಯಿಂದ ಮರೆಗೊಳ್ಳುವುದು ಸ್ವಲ್ಪ ಸಮಯದ ವರಸೆಯಷ್ಟೆ' ಎಂದು ದೊಡ್ಡವರನ್ನು ಮುಚ್ಚಿ ಹಾಕಿ, ತಮ್ಮ ಅಸ್ತಿತ್ವ ವನ್ನು ಮೆರೆಸಲು ಪ್ರಯತ್ನಿಸುವ ಸಣ್ಣ ವ್ಯಕ್ತಿಗಳ ಕಿರು ಅವಧಿಯ ಹಾರಾಟವು ದೀರ್ಘ ಕಾಲ ಉಳಿಯುವುದಿಲ್ಲ ಎಂಬ ಸತ್ಯವನ್ನು ಉತ್ತಮ ಉಪಮೆಗಳ ಮೂಲಕ ವ್ಯಕ್ತಪಡಿಸಿರುವುದನ್ನು ಇಲ್ಲಿ ಗಮನಿಸಬಹುದು. 'ಕಾಳಜಿಯಿಂದ ಕಾಳಜಿಗೆ ಜಿಗಿಯುವ ಚಿಟ್ಟೆಯಲ್ಲ ಷೇಕ್ಸ್‌ಪಿಯರ್. ಇಷ್ಟವಾದ ತಿರುವು, ಅಡ್ಡ ಹಾದಿಗಳಲ್ಲಿ ಅಲೆಯುವ ರಸ್ತೆಯ ಕಾರಲ್ಲ ಷೇಕ್ಸ್‌ಪಿಯರ್. ಆಂತರಂಗಿಕವಾಗಿ ತುಂಬು ಸಾರವಂತಿಕೆ, ಲವಲವಿಕೆ, ಆರೋಗ್ಯ, ಖುಷಿಗಳನ್ನು ಹೀರಿಕೊಳ್ಳುತ್ತ ತನ್ನ ಕಾಂಡ, ಕೊಂಬೆ, ಟಿಸಿಲುಗಳನ್ನು ಮಜಬೂತುಗೊಳಿಸಿ ಕೊಳ್ಳುತ್ತ ತತ್ಪರಿಣಾಮವಾಗಿ ಬೆಳವಣಿಗೆಯ ಉಂಗುರಗಳನ್ನು ಹೆಚ್ಚಿಸಿಕೊಳ್ಳುತ್ತ, ಅದರರಿವು ನಮ್ಮ ಅನುಭವಕ್ಕೆ ತಾಕುವಂತೆ ವಿಕಾಸ ಸೂಚಿಸುತ್ತ ಹೋಗುವ ಕಲಾವಿದ ಷೇಕ್ಸ್‌ಪೀರುರ್' ಎಂಬ ಈ ಉಪಮೆಯ ಅರ್ಥ-ವ್ಯಾಖ್ಯೆ, ಯಾವುದೇ ಓದುಗನ ಮನದೊಳಗೆ ಸಾರವತ್ತಾಗಿ ಇಳಿಯುವಂತಿದೆ. ಇದೇ ರೀತಿ ಕುವೆಂಪುರವರನ್ನು ಮೊಟ್ಟ ಮೊದಲ ಬಾರಿಗೆ ಕಂಡಾಗ, ತಮ್ಮ ಕಣ್ಣಿಗೆ ಅವರು ಹೇಗೆ ಕಂಡರು ಎಂಬುದನ್ನು 'ಮೊದಲ ನೋಟಕ್ಕೆ ಅವರು ನಕ್ಷತ್ರ ಪರಿವೃತ ತುಂಬು ಚಂದ್ರನಂತೆ ಭಾಸವಾದದ್ದು ಈಗಲೂ ನೆನಪಿದೆ' ಎಂದು ಹೇಳಿರು ವುದರಲ್ಲೇ ಕುವೆಂಪುರವರ ಚೆಲುವು ಹಾಗೂ ಪ್ರಖರ ತೇಜಸ್ಸಿನ ಅಂಶಗಳು ಓದುಗರ ಅರಿವಿಗೆ ಬರುವಂತಾಗುತ್ತದೆ, ಮನದಲ್ಲೂ ಮಾಸದೆ ಉಳಿಯುತ್ತದೆ. 'ಆನೆಗಳ ನಡುವಣ ಆಡಿನಂತೆ ಎನ್ನಲೇ'? ಎಂದು ಹಿರಿಯ ಸಾಹಿತಿಗಳ ನಡುವೆ ತಮ್ಮನ್ನು ಹೋಲಿಸಿ ಹೇಳಿರು ವುದು; ಎ.ಆರ್.ಕೃಷ್ಣಶಾಸ್ತ್ರೀಯವರ ಬಗ್ಗೆ ಬರೆಯುವುದೆಂದರೆ, 'ಕನ್ನಡಿಯಲ್ಲಿ ಕರಿಯನ್ನು ಕಾಣಿಸುವ ಕಾಯಕವಾದೀತು' ಎಂದಿರುವುದು; 'ತಮ್ಮ ಅಭಿಪ್ರಾಯ ನಿಲುಮೆಗಳಲ್ಲಿ ಅವರದು ಉಡದ ಹಿಡಿತ; ಪೈಲ್ವಾನನ ಪಟ್ಟು' ಎಂಬ ಹೋಲಿಕೆ ನೀಡಿರುವುದು, ಮತ್ತು ತಮ್ಮ ಸಣ್ಣ ಲೇಖನಕ್ಕೂ ಸಾಹಿತಿಗಳ ಅಭಿಪ್ರಾಯ ಅಥವಾ ಹೇಳಿಕೆಗಳನ್ನು ಸಂಗ್ರಹಿಸಿ ಉಲ್ಲೇಖಿಸಿರುವುದು ಅವರ ಲೇಖನಗಳ ಅರ್ಥವನ್ನೂ ತೂಕವನ್ನೂ ಹೆಚ್ಚಿಸಿವೆ. ಕೆಲವೆಡೆ ಕೆಲವಾರು ವಾಕ್ಯಗಳಲ್ಲಿಯೇ ಒಂದು ಇಡೀ ಕೃತಿ ಅಥವಾ ಎಲ್ಲಾ ಕೃತಿಗಳ, ಇಲ್ಲವೇ ವ್ಯಕ್ತಿಯ ಮಹತ್ವದ ಕುರಿತಾಗಿ ಸಾರಾಸಗಟಾದ ಮತ್ತು ಅಚ್ಚುಕಟ್ಟಾದ ಕಲ್ಪನೆಯನ್ನು ಕಟ್ಟಿಕೊಡು

ವುದೂ ಉಲ್ಲೇಖನೀಯ ವಿಷಯ. 'ಆರಣ್ಯಕಗಳಲ್ಲಿ ಉಪನಿಷದ್ದರ್ಶನವಿದ್ದಂತೆ ಕನ್ನಡ ಸಾರಸ್ವತ ಜಗತ್ತಿನಲ್ಲಿ ವಚನ ಧರ್ಮವೆಂದು ಅವರಿಗೆ ತೋರಿತು. ಗುಹ್ಯಾತ್‌ಗುಹ್ಯತರ ರಹಸ್ಯಗಳೊ ವರ್ಣ ವ್ಯತ್ಯಾಸಗಳೊ ಲಿಂಗ ಭೇದಗಳೊ, ಅಧಿಕಾರ-ಅನಧಿಕಾರವೆಂಬ ಭಾವವೊ, ವೇದ ಹೆಚ್ಚೋ ಆಗಮ ಹೆಚ್ಚೋ ಎಂಬ ತರ್ಕವೊ ಇಲ್ಲಿಲ್ಲ. ಸತ್ಯದ ಹಂಬಲಿಕೆಯೇ ಸಾಹಿತ್ಯವಾಗಿ, ಸತ್ಯಾನ್ವೇಷಣೆಯೇ ಸಿದ್ಧಾಂತವಾಗಿ, ಸ್ವಸಾಕ್ಷಾತ್ಕಾರವೇ ಸಮ್ಯಗ್ದರ್ಶನವಾಗಿ ವಚನ ಪ್ರಕಾರ ನಮ್ಮೆದುರು ಕಳಕಳಿಸುತ್ತದೆ' ಎಂದು ಎಂ.ಆರ್.ಶ್ರೀ.ಯವರ 'ವಚನಧರ್ಮಸಾರ' ಕೃತಿಯ ಕುರಿತು ವಾಕ್ಯ; ಷೇಕ್ಸ್‌ಪಿಯರನ ನಾಟಕಗಳೆಂದರೆ, 'ಮಾನವನ ಮನಸ್ಸಿನ ಮಹಾ ದಾಖಲೆಗಳು. ಅದರ ಮನಸ್ಸಿನ ಅತಿ ಕೋಮಲ ಕಂಪನ ಒಲೆತಗಳನ್ನು, ಬಾಗು ಬಳುಕುಗಳನ್ನು, ಹಾವಭಾವಗಳನ್ನು, ಹುತ್ತ ಗುಹೆಗಳನ್ನು, ಕಗ್ಗತ್ತಲ ಕೂಪಗಳ ಮೂಲೆ ಮೊಡಕುಗಳನ್ನು ಪತ್ತೆ ಹಚ್ಚಿ, ಸಂದರ್ಭಗಳೊಂದಿಗೆ ಅವುಗಳಿಗೆ ಇರುವ ಸಂಬಂಧ, ಅರ್ಥವಂತಿಕೆಯನ್ನು ಧ್ವನಿಸುವುದರಲ್ಲಿ ಮಿಕ್ಕೆಲ್ಲ ಕವಿಗಳಿಗಿಂತ ಅವನು ಹೆಚ್ಚು ಜಾಣ. ಅವನ ಸಾರಸ್ವತ ಸೀಮೆ ಇತರ ಮಹಾ ಕವಿಗಳಿಗಿಂತ ವಿಸ್ತೀರ್ಣ, ಪ್ರತ್ಯೇಕ. ಅದೊಂದು ವಿಶಿಷ್ಟ ಭೌಗೋಳಿಕ ಎಲ್ಲೆ; ಷೇಕ್ಸ್‌ಪಿಯರ್ ಲ್ಯಾಂಡ್' ಎಂಬ ವಾಕ್ಯಗಳು ಈ ಮಾತಿಗೆ ಎರಡು ಉದಾಹರಣೆಗಳು.

ಕುವೆಂಪುರವರ ಬೋಧನೆಯ ವಿಧಾನ, ವಿಮರ್ಶೆಯನ್ನು ಸ್ವೀಕರಿಸುವ ರೀತಿ, ವೈಚಾರಿಕ ಆಲೋಚನೆಗಳು, ಸಾಹಿತ್ಯದ ಬಗೆಗಿನ ನಿಲವು, ಕನ್ನಡದ ಬಗೆಗಿನ ಕಟ್ಟಾಭಿಮಾನ, ಅವರ ಸಾಧನೆಗಳು, ಪಾಠ ಪ್ರವಚನ ಮತ್ತು ಪರೀಕ್ಷಾ ವಿಧಾನವನ್ನು ಕುರಿತು ಅವರ ಅಸಮಾಧಾನ, ಜಾತಿ ನಿರ್ಮೋಹ, ನಿರ್ಮತ್ಸರ ಗುಣ, ರಚಿಸಿದ ಕೃತಿಗಳು, ಕೃತಿಗಳಲ್ಲಿನ ವಿಶಿಷ್ಟತೆ; ಗೋಕಾಕರ ಕಾವ್ಯ ಕೃತಿಗಳಾದ 'ಸಮುದ್ರ ಗೀತೆಗಳು', 'ದ್ಯಾವಾ ಪೃಥಿವಿ'—ಇವುಗಳ ಆಂತರಿಕ ಶಿಲ್ಪವನ್ನು ಕುರಿತಾದ ವಿವರಗಳು ಹಾಗೂ ಹಿಂದಿನ ತಲೆಮಾರಿನ ಬೇಂದ್ರೆ, ಕುವೆಂಪು, ಪು.ತಿ.ನ.ರವರ ಕಾವ್ಯಕ್ಕೂ ಅಡಿಗರ ಮತ್ತು ಗೋಕಾಕರ ಕಾವ್ಯ ರಚನಾ ರೀತಿಗೂ ಇರುವ ವ್ಯತ್ಯಾಸಗಳು; ಸಂಪ್ರದಾಯ ಮಾರ್ಗ, ಸಾಹಿತ್ಯ ವಿಮರ್ಶೆ, ನವ್ಯ ಕಾವ್ಯ ಮುಂತಾದವುಗಳ ಕುರಿತು ಗೋಕಾಕರ ಅಭಿಪ್ರಾಯ; ಸಾಹಿತ್ಯ ನಿರ್ಮಾಣ ಮಾಡುವವರಿಗೆ ಸಮಾಜದ ಅವ್ಯವಸ್ಥೆಗಳು ಕೃತಿ ರಚನೆಗೆ ಹೇಗೆ ಅಡ್ಡಿ ಒಡ್ಡುತ್ತವೆ ಎಂಬ ಅಂಶದ ಬಗ್ಗೆ ಪು.ತಿ.ನ.ರವರ ಅಭಿಪ್ರಾಯ ಸಂಗ್ರಹಣೆ—ಈ ಎಲ್ಲವನ್ನೂ ತಮ್ಮದೇ ಆದ ಉತ್ತಮ ಭಾಷೆಯ ಬಳಸುವಿಕೆಯಿಂದ ವಿವೇಚಿಸಿರುವುದೂ ಓದುಗರ ಮನಸ್ಸಿಗೆ ಮುದ, ಮಿದುಳಿಗೆ ಕಸರತ್ತು. ಇವೆಲ್ಲವೂ ಸಾಹಿತ್ಯಾಸಕ್ತರ ಅರಿವಿಗೆ ತರಬೇಕಾದ ಮತ್ತು ಯಾರೇ ಆದರೂ ಅರಿಯಬೇಕಾದ ಅಗತ್ಯ ಅಂಶಗಳೂ ಹೌದು.

ನಿಸಾರ್‌ರವರಿಗೆ ಕುವೆಂಪು, ಮಾಸ್ತಿ, ಅಡಿಗ, ಗೋಕಾಕ, ಎಂ.ಆರ್.ಶ್ರೀ, ಎ. ಆರ್. ಕೃಷ್ಣಶಾಸ್ತ್ರೀ, ರವೀಂದ್ರನಾಥ ಠಾಕೂರರು—ಇವರುಗಳ ಕುರಿತಾಗಿ ಮಾತಾಡುವುದೇ ಒಂದು ರೀತಿಯ ಪೂಜೆ, ಮನಃಪೂರ್ವಕ ಆರಾಧನೆ. ಕುವೆಂಪುರವರ ಕುಪ್ಪಳಿ, ಅಲ್ಲಿಯ ಕಾಡು-ಕಂದರಗಳ ನಡುವಿನ ನಿಸರ್ಗ, ಅಲ್ಲಿಯ ಜನರ ಆತಿಥ್ಯ, ಅವರೊಡನೆ ಅಲ್ಲಿಯ ತಿರುಗಾಟದಲ್ಲಿ ಸಿಕ್ಕ ನಲಿವು, ಅವರ್ಣನೀಯ ಅನುಭವ, ಕುವೆಂಪುರವರ ಕೃತಿಗಳು, ಅವರ

ವಿಚಾರಗಳು—ಇವುಗಳ ಕುರಿತು ಬರೆಯತೊಡಗಿದರೆ ಸಂಪೂರ್ಣ ಭಾವೈಕ್ಯರಾಗಿ ಬಿಡುತ್ತಾರೆ ಎನಿಸುತ್ತದೆ ನಿಸಾರ್ ಅವರು. ಅವರ ವ್ಯಕ್ತಿತ್ವ, ವಿಶ್ವವಿಶಾಲ ವಿಚಾರಧಾರೆ, ಬರವಣಿಗೆಯ ಶೈಲಿ, ಧ್ಯೇಯ, ಪಾತ್ರ ರಚನೆ ಸರ್ವಸ್ವವೂ ಯಾರಿಗೇ ಆದರೂ ಆಗುವಂತೆ, ಅವರಿಗೂ ಅಚ್ಚು ಮೆಚ್ಚು. ಹಲವು ರೀತಿಯಲ್ಲಿ, ವಿವಿಧ ತೆರದಲ್ಲಿ, ಹಿತಕರ ಶಬ್ದಗಳಲ್ಲಿ ಪುನಃ ಪುನಃ ಅಭಿವ್ಯಕ್ತಿಗೊಳ್ಳುತ್ತವೆ, ಕುವೆಂಪುರವರ ಬಗೆಗಿನ ಅವರ ಈ ಆರಾಧನಾ ಮನೋಭಾವ. ಬಲು ಬಿಗುಮಾನದ ವ್ಯಕ್ತಿ, ಅಂತರ್ಮುಖಿ, ಯಾರಿಗೂ ಹತ್ತಿರ ಬರಗೊಡದವರು ಎಂಬೆಲ್ಲ ಅನಿಸಿಕೆಗಳಿಗೆ ನಿದರ್ಶನವಾಗಿದ್ದ ಕುವೆಂಪುರವರೂ ಕೂಡ, ಈ ಲೇಖಕರ ಕುರಿತು ಅಷ್ಟೇ ಪ್ರೀತಿ, ಆತ್ಮೀಯತೆಯನ್ನು ಇಟ್ಟುಕೊಂಡಿದ್ದರೆಂಬುದೂ ಅವರು ವಿಶ್ವ ಕನ್ನಡ ಸಮ್ಮೇಳನಕ್ಕೆ ಇವರ ಆಹ್ವಾನವನ್ನು ಬಲವಂತಕ್ಕಾದರೂ ಒಪ್ಪಿ ಬಂದುದರಲ್ಲಿ; ಐದು ನಿಮಿಷಕ್ಕಿಂತ ಹೆಚ್ಚು ಕೂತಿರುವುದಿಲ್ಲ ಎಂದವರು ಕಾರ್ಯಕ್ರಮ ಮುಗಿಯುವವರೆಗಿದ್ದು ಈ ಲೇಖಕರ ಕೋರಿಕೆಯ ಅನ್ವಯ 'ಓ ನನ್ನ ಚೇತನ'ವನ್ನು ವಾಚಿಸಿದುದರಲ್ಲಿ; ಮತ್ತು ಕವಿ ಸಮ್ಮೇಳನ ವೊಂದರಲ್ಲಿ ಆದ ಮೊದಲ ಭೇಟಿಯ ಅನಂತರದಲ್ಲೇ ದಸರಾ ಕವಿ ಸಮ್ಮೇಳನಕ್ಕೆ ಕುವೆಂಪುರವರೇ ನಿಸಾರರನ್ನು ಆಹ್ವಾನಿಸಲು ಹೆಸರು ಸೂಚಿಸಿದುದರಲ್ಲಿ; 'ಇವರು ಚೆನ್ನಾಗಿ ಅರ್ಥವಾಗುವಂತೆ ಬರೆಯುತ್ತಾರೆ' ಎಂದು ಇತರ ಗಣ್ಯರ ಮುಂದೆ ನಿಸಾರರನ್ನು ಪರಿಚಯಿಸುವುದರಲ್ಲಿ—ಸ್ಪಷ್ಟವಾಗುತ್ತದೆ. ಇವರಿಬ್ಬರ ಪರಸ್ಪರ ಆತ್ಮೀಯತೆ, ಆಹ್ವಾನ, ಭೇಟಿಗಳ ವಿಷಯಗಳು ಓದುಗರ ಮನಸ್ಸನ್ನೂ ಆರ್ದ್ರಗೊಳಿಸುತ್ತವೆ. ನಿಸಾರರ ಪ್ರೀತಿಗೆ ಬಾಗಿದ ಅದೇ ವಿಶ್ವಕವಿ, ಮಂತ್ರಿ ಮಹೋದಯರು ಸನ್ಮಾನ ಮಾಡುತ್ತೇವೆಂದು ಗೋಗರೆದರೂ ಹೋಗಲೊಪ್ಪದೆ ನಿರಾಕರಿಸುವ ವಿಷಯ ಓದಿದಾಗ, 'ವಸಂತನ ಬನದಲಿ ಕೂಗುವ ಕೋಗಿಲೆ ರಾಜನ ಬಿರುದನು ಬಯಸುವುದಿಲ್ಲ' ಎಂಬ ಕುವೆಂಪುರವರದೇ ಕವನ ನೆನಪಾಗಿ ಪ್ರಶಸ್ತಿ, ಬಿರುದುಗಳಿಗಿಂತ ಪ್ರೀತಿ ವಿಶ್ವಾಸಕ್ಕೆ ಹೆಚ್ಚಿನ ಮಹತ್ವ ನೀಡುವ ಅವರ ದೊಡ್ಡ ಗುಣಕ್ಕೆ ಮಣಿಯುವಂತಾಗುತ್ತದೆ.

ರವೀಂದ್ರನಾಥ ಠಾಕೂರರನ್ನು ಚೆನ್ನಾಗಿ ಓದಿಕೊಳ್ಳದೆಯೇ, ಅವರ ವಿಶ್ವೋದಾರ ನಿಲವುಗಳನ್ನು, ರಾಷ್ಟ್ರೀಯತೆಯ ಬಗೆಗಿನ ಸಮಚಿತ್ತದ ಉಚಿತ ಸಮಯೋಕ್ತಿಗಳನ್ನು ತಿಳಿಯದೆಯೇ ಬಾಯಿಗೆ ಬಂದಹಾಗೆ ಗಳಪುವವರ ಬಗ್ಗೆ ನಿಸಾರರಿಗೆ ಕೋಪವಿದೆ. ಸರಿಯಾಗಿ ಅರ್ಥವೂ ಮಾಡಿಕೊಳ್ಳದ ಕುರಿತು ವಿಷಾದವೂ ಇದೆ. ಠಾಕೂರರ ನೈಜ ಅಂತಃಸತ್ವ, ಪ್ರಸ್ತುತತೆಗಳನ್ನು ಮನದಟ್ಟಾಗಿಸುವ ಕೆಲಸ ನಡೆಯಬೇಕಾದದ್ದು ಅಗತ್ಯವೆಂದೂ: ಅಂಥವರಿಗೆ ರವೀಂದ್ರರ 'ಸಮಕಾಲೀನವೂ ಸರ್ವ ಮಾನವ ಸಾಧಾರಣವೂ ಮೂಲಭೂತವೂ ಆದ ಮನುಷ್ಯ ಸ್ವಭಾವದ ರಾಗಭಾವಗಳ ಅಮೋಘ ಚಿತ್ರಣ, ಚಿರಂತನವಾದದ್ದರ ಬಗೆಗಿನ ಅದಮ್ಯ ಕಳಕಳಿ, ಅವುಗಳ ಅಭಿವ್ಯಕ್ತಿಯಲ್ಲಿ ಸಮತೂಕದ ನಿಷ್ಪಾಕ್ಷಿಕ ದೃಷ್ಟಿ, ಅನುಭವ ಪ್ರಮಾಣಿತ ಅನಿಸಿಕೆಗಳು ಶಿಕ್ಷಣ ಯೋಗ್ಯ ಎನಿಸಿಯಾವು' ಎಂದು ರವೀಂದ್ರರ ಸಾಹಿತ್ಯದ ವಿಚಾರ ಕುರಿತಾದ ಲೇಖನದಲ್ಲಿ ಹೇಳಿರುವುದು, ಈ ಬಗ್ಗೆ ನಿಸಾರರಿಗಿರುವ ಅಪಾರ ಕಳಕಳಿಯ ದ್ಯೋತಕ. 'ಅಂತಃಸಾಮಂಜಸ್ಯ, ಬಾಹ್ಯ ಸೌಂದರ್ಯ ಗಳು ಪರಮ ಪ್ರಮಾಣದಲ್ಲಿ, ಪೂರ್ಣ ಹದದಲ್ಲಿ, ಪರಸ್ಪರ ಏಕಾತ್ಮತೆಯಲ್ಲಿ ದಾಂಪತ್ಯ

ಗೊಂಡಿರುವ ವೈಖರಿಯನ್ನು ಮನಗಾಣಬೇಕೆ? ಹಾಗಾದರೆ ಠಾಕೂರರ ಸಾಹಿತ್ಯದ ಅಧ್ಯಯನವನ್ನು ಕೈಗೊಳ್ಳಿ' ಎಂದು ಅತಿ ವಿಶ್ವಾಸದಿಂದ ಆಹ್ವಾನ ನೀಡುತ್ತಾರೆ. 'ಮನವಿಟ್ಟು ಮನನ ಮಾಡಿ. ಅವರ ಬಹುಮುಖಿ ವಿರಾಟ್ ಪ್ರತಿಭೆಯ ವೈವಿಧ್ಯ ವಿಲಾಸ ಬೆರಗಾಗಿಸದಿದ್ದರೆ ಹೇಳಿ' ಎಂದು ಗಟ್ಟಿ ಸವಾಲು ಹಾಕುತ್ತಾರೆ. ಸರಿಯಾಗಿ ತಿಳಿದುಕೊಳ್ಳದೆಯೇ ಹಗುರವಾಗಿ ಮಾತಾಡುವವರಿಗೆ, ಬಾಯಿಮುಚ್ಚಿಸುವಂತೆ ಹೇಳುವ, 'ಮನೋಗ್ರಾಹ್ಯವಾಗಲು ತೊಡಕೆನ್ನಿಸುವ, ಅಷ್ಟೇ ಏಕೆ, ಕೆಲವೊಮ್ಮೆ ಸಾಧ್ಯವಾಗದೆನ್ನುವ ಗುರುತರವೂ ಗಹನವೂ ಆದ ಚಿಂತನಗಳನ್ನು ಅವರು ತಮ್ಮ ಮಾತಿನ ಜಾಣೆನಿಂದ, ವಿದಗ್ಧ ಹಾಸ್ಯತೆಯ ಚಳಕದಿಂದ ಹೂವೆತ್ತಿದಂತೆ ಸುಲಭವಾಗಿಸಬಲ್ಲರು'... 'ಅನೇಕ ವರ್ಷಗಳ ಗಂಭೀರಾಧ್ಯಯನ, ಚಿಂತನಗಳನ್ನು ನಡೆಸಿದವರೂ ಸಹ ಠಾಕೂರರ ಸೃಜನಶಕ್ತಿಯ ಅಮೇಯತೆ, ಗೂಢತೆಗಳನ್ನು ಪೂರ್ತಿ ಅರ್ಥಮಾಡಿಕೊಂಡಿಲ್ಲವೆಂಬ ವಿನಯೋಕ್ತಿಯನ್ನು ವ್ಯಕ್ತಪಡಿಸಿದ್ದಾರೆ' ಎಂಬ ದೃಢಾಭಿಪ್ರಾಯವು ಎಂಥವರ ಮನಸ್ಸಿನಲ್ಲೂ ರವೀಂದ್ರರ ಕೃತಿಗಳ ಕುರಿತು ಕುತೂಹಲ ಕೆರಳಿಸುತ್ತದೆ. ಅವುಗಳೆಲ್ಲವನ್ನು ಓದಲೇಬೇಕೆಂಬ ತುಡಿತವನ್ನು ಹುಟ್ಟಿಸುತ್ತದೆ.

ಮಾಸ್ತಿಯವರ ಧಾರಾಳತನ, ಹಾಸ್ಯ ಪ್ರವೃತ್ತಿ, ಎಳೆಯರ ಪ್ರತಿಭೆಯನ್ನು ಮೆಚ್ಚುವ ಗುಣಗ್ರಾಹಿ ಸ್ವಭಾವ, ಅವರ ಗುರುತಿನ ಚಿಹ್ನೆಗಳಾಗಿ ಹೇಳಬಹುದಾದ ಟೊಪ್ಪಿ, ಕೋಟು ಮತ್ತು ನಿತ್ಯ ಸಂಗಾತಿ ಛತ್ರಿ, ಬಿರುದು ಬಾವಲಿಗಳನ್ನು ಬಯಸದ ಗುಣ—ಎಲ್ಲವನ್ನೊಳಗೊಂಡ ಮಾಸ್ತಿಯವರ ವ್ಯಕ್ತಿತ್ವವನ್ನು 'ಮಾಸ್ತಿಯವರನ್ನು ನೆನೆದು' ಎಂಬ ಲೇಖನ ಓದುಗರ ಮುಂದಿರಿಸುತ್ತದೆ. ಎಂ.ಆರ್.ಶ್ರೀಯವರ ತಾಯಿ, ಇವರ ಕಿವಿಗೆ ಹಾಕಿದ್ದ ಹತ್ತ ಕಡಕವನ್ನು ಕೆಲ ಸಮಯದ ಅನಂತರ ತೆಗೆದು ಹಾಕಿದಾಗ, ಅದೆಷ್ಟು, ಪ್ರೀತಿ-ವಿಶ್ವಾಸದಿಂದ, ಹಾರೈಕೆಯಿಂದ ಹಾಕಿದ್ದರೋ ಆ ತಾಯಿ, ತುಂಬ ಅತ್ತು ಬಿಟ್ಟರಂತೆ. ಅದನ್ನು ಕಂಡು ಮನ ಕಲಕಿಸಿಕೊಂಡ ಈ ಮಗ ಮುಂದೆ ತಾವು ಸಾಯುವ ತನಕವೂ ಅದನ್ನು ತಮ್ಮ ಕಿವಿಯಿಂದ ತೆಗೆಯದೆ ಹಾಕಿಯೇ ಇದ್ದರು ಎಂಬಂತಹ ವಿಷಯಗಳು. ಎಂ.ಆರ್.ಶ್ರೀ.ಯವರಿಗೆ ತಾಯಿಯ ಬಗೆಗಿದ್ದ ಪ್ರೀತಿ ಮಾತ್ರವಲ್ಲದೆ ಇನ್ನೊಬ್ಬರಿಗೆ ನೋಯಿಸಬಾರದೆಂಬ ಮನಸ್ಸನ್ನೂ ಅವರ ಒಳ್ಳೆಯತನವನ್ನೂ ಹಿರಿಯರಲ್ಲಿ ಅವರಿಗಿದ್ದ ಗೌರವವನ್ನೂ ಪರಿಚಯಿಸಿ ಕೊಟ್ಟು ಮರೆವಿಗೆ ಸರಿಯದೇ ಓದುಗನ ಎದೆಯಲ್ಲಿ ಉಳಿಯುತ್ತದೆ.

ಪ್ರತಿಭಾವಂತರನ್ನು ಮತ್ತು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವವರನ್ನು ಪ್ರೋತ್ಸಾಹಿಸುವುದರಲ್ಲಿ ನಿಸಾರರಿಗೆ ಚಿಕ್ಕವರು ಅಥವಾ ದೊಡ್ಡವರು ಎಂಬ ಭೇದಭಾವ ವಿಲ್ಲ. ಬೆಂಗಳೂರಿನ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಅದರ ವಿದ್ಯಾರ್ಥಿನಿಯರು ಆಡಿದ ಸ್ಪ್ಯಾನಿಷ್ ಕವಿ ಫೆಡರಿಕೊ ಗಾರ್ಷಿಯ ಲಾರ್ಕನ 'ದಿ ಹೌಸ್ ಆಫ್ ಬರ್ನಾರ್ಡ ಆಲ್ಬ' ಎಂಬ ನಾಟಕವನ್ನು 'ಮನೆಯೊಡತಿ' ಎಂಬುದಾಗಿ ಕನ್ನಡಿಸಿ ಪ್ರದರ್ಶಿಸಿದ್ದನ್ನು ವೀಕ್ಷಿಸಿದ ನಿಸಾರರು, ನಾಟಕದ ನಿರ್ದೇಶಕಿ ಕುಮಾರಿ ಸೌಮ್ಯ ವರ್ಮ ವಯಸ್ಸಿಗೆ ಮೀರಿದ ಪರಿಣತಿ, ಪ್ರತಿಭೆಗಳನ್ನು ವ್ಯಕ್ತಪಡಿಸಿದ್ದು ಆಶ್ಚರ್ಯದ ಅಂಶ ಎಂದು ಅವಳ ಬೆನ್ನು ತಟ್ಟಿದ್ದಾರೆ. ರಾಗ ಸಂಯೋಜನೆ, ಸಜ್ಜಿಕೆಗಳನ್ನು ನಿಯೋಜಿಸಿದ ಲೂರ್ಡ್ ವೀಣಾರವರ ಕಲೆ

ಕಲಿಕೆಗಳು ಸದುಪಯೋಗಗೊಂಡವೆಂದೂ; ಚಿಕ್ಕದೋ ದೊಡ್ಡದೋ ತಮ್ಮ ಪಾಲಿಗೆ ವಹಿಸಿದ ಪಾತ್ರಗಳನ್ನು ಗೆಲವಾಗಿ, ಪರಿಣಾಮಕಾರಿಯಾಗಿ ಎಲ್ಲ ವಿದ್ಯಾರ್ಥಿನಿಯರೂ ಅಭಿನಯಿಸಿದ್ದು ಒಂದು ಅಪರೂಪದ ಸಂಗತಿ ಎಂಬುದನ್ನು ತಿಳಿಸಿ, ಅದರಲ್ಲೂ ಪೌಸ್ಸಿಯ ಪಾತ್ರಧಾರಿ ಮೀತಾ ಮಿಶ್ರ ಮತ್ತು ಬರ್ನಾಡಳಾಗಿ ಮಂಜುಳ, ಹುಚ್ಚಿ ಮರಿಯ ಜೋಸೆಫ್‌ಳಾಗಿ ಹರಿಣಿ ಮತ್ತು ಅಡೆಲಾ ಪಾತ್ರದ ಕುಮಾರಿ ರೂಪ ಕಾಮತ್ ಇವರುಗಳೆಲ್ಲ ಅಭಿನಂದನೆಗೆ ಅರ್ಹರು ಎಂದು 'ಲಾರ್ಕನ ಅತೃಪ್ತ ಹೆಣ್ಣುಗಳು' ಎಂಬ ಲೇಖನದಲ್ಲಿ ಮನಃಪೂರ್ವಕವಾಗಿ ಪ್ರಶಂಸಿಸಿ ಪ್ರೋತ್ಸಾಹಿಸಿರುವುದೂ ಸ್ವಾಗತಾರ್ಹ. ಇದು ನಿಸಾರರ ನಿರ್ಮಲ ಮನಸ್ಸಿನ ಪರಿಚಯದ ಚಿಹ್ನೆ.

ತಾಬೆ, ಬಯಾನಿಸು, ಫಾಸಲೆ, ಸೆಳೆಖಾನೆ ಮುಂತಾದ ಹಿಂದಿ ಶಬ್ದಗಳು ಕನ್ನಡೀಕೃತ ಗೊಂಡು, ಆದರೆ ತೀರ ಕಡಿಮೆ ಸಂಖ್ಯೆಯಲ್ಲಿ ಬಳಕೆಯಾಗಿದ್ದು, ಹಿಂದಿ ತಿಳಿಯದವರಿಗೆ ಇವು ಅರ್ಥವಾಗದಿರಬಹುದು. ಆದರೆ ಇವನ್ನೂ ಸಂದರ್ಭೋಚಿತವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿದೆ. ಸಮಾಜದ ಅವ್ಯವಸ್ಥೆಗಳು ಕೃತಿ ರಚನೆಗೆ ಹೇಗೆ ಅಡ್ಡಿ ಒಡ್ಡುತ್ತವೆ ಎಂಬ ಅಂಶದ ಬಗ್ಗೆ ಪು.ತಿ.ನ ಅವರಿಂದ ಸಂಗ್ರಹಿಸಿದ ಅಭಿಪ್ರಾಯಗಳು, ಪು.ತಿ.ನ ಅವರ ಅತ್ಯಂತ ಸೂಕ್ಷ್ಮ ಮತ್ತು ಸಜ್ಜನ ಸ್ವಭಾವದ ವ್ಯಕ್ತಿತ್ವವನ್ನು ಕಣ್ಣಿನ ಮುಂದೆ ತಂದಿಡುವುದಲ್ಲದೇ ಈ ವರೆಗೂ ದಿನ ದಿನಕ್ಕೂ ಕುಸಿಯುತ್ತಲೇ ಇರುವ ಸರ್ಕಾರದ ಆಡಳಿತ ವ್ಯವಸ್ಥೆಯ ಮೇಲೂ ಬೆಳಕು ಚೆಲ್ಲುತ್ತದೆ. ಪು.ತಿ.ನ ಅವರಿಗೆ ಬ್ರಿಟಿಷರ ಆಡಳಿತದ ದಿನಗಳು 'ಎಷ್ಟು ಒಳ್ಳೆಯ ದಿನಗಳವು?' ಎನ್ನಿಸಿದರೆ, ಸರ್ಕಾರದ ಸೇವೆಯಲ್ಲಿದ್ದೇ ಕೆಡಕಿನೆಡೆಗೆ ತ್ವರಿತವಾಗಿ ಬದಲಾಗು ತ್ತಿರುವ ದಿನಗಳನ್ನು ಕಾಣುತ್ತಿರುವ ನಮಗೆ, ನಾವು ಈ ಕೆಲಸಕ್ಕೆ ಸೇರಿದ ದಿನಗಳನ್ನು ನೆನೆಸಿಕೊಂಡು ಎಂಥ ಒಳ್ಳೆಯ ದಿನಗಳಾಗಿದ್ದವಲ್ಲ ಅವು? ಆಗ ಪ್ರಾಮಾಣಿಕತೆಗೆ, ಶ್ರದ್ಧಾ ಸೇವೆಗೆ, ಪ್ರತಿಭೆಗೆ, ನಿಸ್ಪೃಹ ಸೇವೆಗೆ, ಮೌಲ್ಯವನ್ನು ನಿರ್ಧರಿಸಿ ಅಂಥವರನ್ನು ಮೇಲೆತ್ತುವ ಅಧಿಕಾರಿಗಳಿದ್ದರು, ಬೆಂಬಲಿಸುವ ಸರ್ಕಾರವಿತ್ತು. ಈಗ ಈ ಎಲ್ಲವನ್ನೂ ಮೂಲೆಗೆ ತಳ್ಳಿ ಕೇವಲ ಹಣಕ್ಕೆ ಹುದ್ದೆಗಳನ್ನು, ಅರ್ಹತೆಯನ್ನು, ಪ್ರತಿಭೆಯನ್ನೇ ಮುಂತಾಗಿ ಎಲ್ಲವನ್ನೂ ಮಾರುವ, ವಿನಿಮಯ ಮಾಡಿಕೊಳ್ಳುವ ಕಾಲ ಬಂದಿದೆಯಲ್ಲ, ಪು.ತಿ.ನ ಅವರಾಗಲೀ ಅಥವಾ ಅವರ ಸಮಕಾಲೀನರಾಗಲೀ ಈಗ ಸರ್ಕಾರಿ ಸೇವೆಯಲ್ಲಿದ್ದಿದ್ದರೆ ಎಷ್ಟು ನಲುಗಿ ಹೋಗುತ್ತಿದ್ದರೋ ಎಂಬ ಭಾವನೆ ಇಡಿಯಾಗಿ ಆವರಿಸಿ, ನೋವು ಮೇಲೆದ್ದು ನಿಲ್ಲುತ್ತದೆ. ಪು.ತಿ.ನ. ಅವರ ಕೆಳಗಿನ ಮಾತುಗಳು ಮತ್ತೆ ಮತ್ತೆ ಮನಸ್ಸಿಗೆ ಬರುತ್ತವೆ. 'ಆಗ ಮನಸ್ಸಿಗೆ ಚಿಂತನೆ, ಏಕಾಗ್ರತೆ ಸುಲಭಸಾಧ್ಯವಾಗಿತ್ತು. ಈಗ ಆ ಯೋಗವಿಲ್ಲ. ದಿನನಿತ್ಯದ ತರಲೆ ತಾಪತ್ರಯಗಳಿಂದ ನಮ್ಮ ಬದುಕು ಮತ್ತು ಮನಸ್ಸುಗಳು ಜರ್ಝರಿತವಾಗುತ್ತಲೇ ಇರುವಾಗ ಕ್ರಿಯಾಶೀಲತೆ ಅಲ್ಲಿ ಗೂಡು ಕಟ್ಟಿ ಹಾಡುವುದಾದರೂ ಹೇಗೆ? ಒಳಿತನ್ನು ಸಾಧಿಸುವ, ಸಮಾಜ ಹಿತೋತ್ಸಾಹವನ್ನು ತಳೆಯುವ ಅವಕಾಶವಾದರೂ ಎಲ್ಲಿದೆ?' ಸರ್ಕಾರ ಮಾತ್ರವಲ್ಲದೆ ಎಲ್ಲ ಕ್ಷೇತ್ರಗಳಲ್ಲೂ ಅಧೋಗತಿಗಿಳಿಯುತ್ತಿರುವ ಇಂದಿನ ವ್ಯವಸ್ಥೆಯಲ್ಲಿ ಈ ಮಾತು ಎಷ್ಟೊಂದು ನಿಜ ಅಲ್ಲವೆ?

ಮಹಾನ್ ವ್ಯಕ್ತಿಗಳ, ಅವರ ಸಾಧನೆಗಳ ಮತ್ತು ಮಹತ್ವದ ಕೃತಿಗಳ ವಿಮರ್ಶೆ

ಮಾಡುವ ನಿಸಾರರ ಗದ್ಯ ಬರಹಗಳನ್ನು ಅವಸರದಲ್ಲಿ ಓದಿ ಮುಗಿಸಲಾಗದು ಅಥವಾ ಎಲ್ಲವನ್ನೂ ಒಂದೇ ಓದಿಗೆ ಅರ್ಥ ಮಾಡಿಕೊಳ್ಳಲಾಗದು ಎಂಬುದೂ ಮತ್ತು ಮತ್ತೆ ಮತ್ತೆ ಓದಿದಂತೆ ಇವು ಬೇರೆ ಬೇರೆ ಅರ್ಥ ಆಲೋಚನೆಗಳನ್ನು ಹೊರಹೊಮ್ಮಿಸುತ್ತವೆ ಎಂಬುದೂ ನನ್ನ ನಿಜವಾದ ಅನಿಸಿಕೆ.

ಎಷ್ಟೇ ಅಗಚಾಟಲುಗಳು ಅಡ್ಡಿಪಡಿಸಿದರೂ ಭೂತ ಕಾಲದಂತೆಯೇ ಪ್ರಪಂಚ ಈಗಲೂ ಸಹ ಒಳಿತಿನೊಡನೆ ಸಂಲಗ್ನಗೊಳ್ಳುತ್ತದೆ, ಭವಿಷ್ಯತ್ತು ಸುವ್ಯವಸ್ಥೆಯೊಂದನ್ನು ಬಳುವಳಿಯಾಗಿ ಬದುಕಿಗೆ ಒದಗಿಸುತ್ತದೆ ಎಂಬ ಆಶಾವಾದವನ್ನು ಗತ ಕಾಲ ನಮಗೆ ಕಲಿಸುತ್ತದೆ. ಹಿಂದಿನದರ ಅರ್ಥವಂತ ಅಂತಸ್ಸಾರವನ್ನು ಆರ್ಜಿಸಿ ಆಚರಣೆಗೆ ಹಾಯಿಸುವುದು ಭವಿಷ್ಯತ್ ಫಲಕ್ಕೆ ನೇಗಿಲಾಡಿಸಿದಂತೆ. ಚರಿತ್ರೆಯ ತದ್ವತ್ ಮರುಕಳಿಕೆಯ, ಪುನರಾವೃತ್ತಿಯ ಕನಸು ತಾಯಿಯ ಗರ್ಭದಲ್ಲಿ ಮತ್ತೊಮ್ಮೆ ಬೆಚ್ಚಗೆ ಪವಡಿಸುವ ಹಂಬಲಿಕೆಯಂತೆ ಅವಾಸ್ತವವಾಗಿಯೇ ಉಳಿಯುತ್ತದೆ. ಚರಿತ್ರೆಯನ್ನು ಅರ್ಥೈಸಿಕೊಳ್ಳದ, ಅರಿಯದ ಮನಸ್ಸುಗಳಲ್ಲಿ ವಿನಾ ಚರಿತ್ರೆ ದಿಟವಾಗಿ ಪುನರಾವರ್ತಿಸದು ಎಂಬುದನ್ನು ಚರಿತ್ರೆಯ ಪುನಃಸ್ಥಾಪನೆಗೆ ಪ್ರಯತ್ನಿಸುವ ಮಹಾನುಭಾವರು ಬೇಗ ತಿಳಿದುಕೊಳ್ಳುವುದು ಕ್ಷೇಮಂಕರ.

(ಗತ ಕಾಲದ ಮರುಕಳಿಕೆ ಅಸಾಧ್ಯ)

✧ ✧ ✧

ಹೂವೆಂದರೆ ತಟಕ್ಕನೆ ಮೇಲ್ನೋಟಕ್ಕೆ ಕಾಣಿಸುವ ಬರಿಯ ದಳಗಳ ಜೋಡಣೆ, ರಂಗು ಇಷ್ಟೇನೆ? ಒಳಗಡೆ ಹುದುಗಿರುವ ಪರಾಗ, ಮಧು ಮತ್ತು ಅಗೋಚರವಾದ ನರುಗಂಪು ಇವೆಲ್ಲ ಹೂವಿನ ಅವಿಭಾಜ್ಯಗಳಲ್ಲವೆ? ಹಾಗೆಯೇ, ಸದ್ಯದ ಜೀವನದ ಜೊತೆಗೆ ಕಣ್ಮರೆಗಿರುವ ಭೂತ ಮತ್ತು ಭವಿತವ್ಯಗಳು. ಸ್ಥೂಲ ದೇಹ, ಸೂಕ್ಷ್ಮ ಅಂತರಂಗ, ಅದೃಶ್ಯ ಆತ್ಮ—ಇವುಗಳನ್ನು ಒಟ್ಟಾರೆಯಾಗಿ ಗ್ರಹಿಸಿ ಬಾಳದ ಬದುಕು ಏತರ ಬದುಕು?

(ಕಾಲದ ಸಮಗ್ರ ದರ್ಶನ)



ನಿಸಾರರ ಸಾಂದರ್ಭಿಕ ಗದ್ಯ ಲೇಖನಗಳು : ಒಂದು ಪರಿಶೀಲನೆ

♦ *ಬಾಬು ಕೃಷ್ಣಮೂರ್ತಿ*

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಹೆಚ್ಚಿನ ಕನ್ನಡಿಗರಿಗೆ ಒಬ್ಬ ಉತ್ತಮ ಕವಿ ಎಂದೇ ಚಿರಪರಿಚಿತರು. ಕ್ಯಾಸೆಟ್‌ಗಳ ಯುಗ ಬಂದ ಮೇಲಂತೂ ಅವರ 'ನಿತ್ಯೋತ್ಸವ' ಭಾವಗೀತೆಗಳ ಕ್ಯಾಸೆಟ್ ಅವರನ್ನು ಇನ್ನಷ್ಟು ಕನ್ನಡಿಗರಿಗೆ ಆತ್ಮೀಯರನ್ನಾಗಿ ಮಾಡಿತು. ಭಾರತೀಯ ಭಾಷೆಗಳಲ್ಲಿ ಮೊಟ್ಟ ಮೊದಲನೆಯ ಭಾವಗೀತೆಗಳ ಕ್ಯಾಸೆಟ್ ಎಂಬ ಕೀರ್ತಿಯನ್ನೂ ಅದು ಗಳಿಸಿತು. ಕವಿ ಮಾತ್ರವಲ್ಲದೆ ಅವರು ಚಿಂತಕರೂ ಅಂಕಣ ಬರಹಗಾರರೂ ಎಂಬ ಸಂಗತಿ ಪತ್ರಿಕಾ ಓದುಗರಿಗಷ್ಟೇ ಪರಿಚಿತ.

೧೯೮೦ರಿಂದ ೨೦೦೪ರವರೆಗೆ ನಿಸಾರ್‌ರ ಐದು ಗದ್ಯ ಬರಹಗಳ ಸಂಕಲನಗಳು ಪ್ರಕಟವಾಗಿವೆ. ಅವು ವಿಮರ್ಶೆ ಮತ್ತು ವಿಚಾರ ಸಾಹಿತ್ಯಗಳಿಗೆ ಸಂಬಂಧಿಸಿದವು. ಈ ಸಂಕಲನಗಳಲ್ಲಿ ಜೀವನ, ಸಮಾಜ, ರಾಷ್ಟ್ರ, ಮತ ಧರ್ಮ, ರಾಜಕೀಯ, ಇತಿಹಾಸ, ಸಾಹಿತ್ಯ, ಕಲೆ, ಸಂಸ್ಕೃತಿ, ನಾಗರಿಕತೆ, ಶಿಕ್ಷಣ, ವಿಜ್ಞಾನ, ಪ್ರಕೃತಿ, ಕನ್ನಡ ನಾಡು-ನುಡಿ, ಪತ್ರಿಕೋದ್ಯಮ ಮೊದಲಾದ ಹಲವು ಹತ್ತು ವಿಷಯಗಳ ಬಗ್ಗೆ ತಮ್ಮ ಅನುಭವಪೂರ್ಣವಾದ ಲೇಖನಗಳನ್ನು ಬರೆದು ಅವರು ಕನ್ನಡದ ಒಬ್ಬ ಶ್ರೇಷ್ಠ ಚಿಂತಕರೂ .ವಿಮರ್ಶಕರೂ ಸಾಮಾಜಿಕ ಕಳಕಳಿಯುಳ್ಳ ವಿಚಾರ ಶೀಲರೂ ಎಂಬುದನ್ನು ರುಜುವಾತು ಪಡಿಸಿದ್ದಾರೆ.

ಪ್ರಸ್ತುತ ಲೇಖನದಲ್ಲಿ ಅವರು ಆಗಾಗ ಬರೆದ ನಾಲ್ಕು

ಸಾಂದರ್ಭಿಕ ಬರಹಗಳ ಪರಿಶೀಲನೆಯ ಪ್ರಯತ್ನ ನಡೆದಿದೆ. ಮೊದಲನೆಯ ಬರಹ ಕೇಂದ್ರ ಸರ್ಕಾರದ ಆರ್ಥಿಕ ನೆರವು ಪಡೆದು ಪುಸ್ತಕ ಪ್ರಕಾಶನ ಕಾರ್ಯದಲ್ಲಿ ತೊಡಗಿರುವ ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾದ ೧೫ನೆಯ ರಾಷ್ಟ್ರೀಯ ಪುಸ್ತಕ ಮೇಳದ ಸಂದರ್ಭದಲ್ಲಿ ಬರೆದ ಲೇಖನ. ಆ ಸಂದರ್ಭವನ್ನು ನೆಪವಾಗಿಟ್ಟುಕೊಂಡು ನಮ್ಮ ಪುಸ್ತಕ ಸಂಸ್ಕೃತಿ, ಓದುವ ಹವ್ಯಾಸಗಳ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ ನಿಸಾರ್ ಅಹಮದ್. ಲೇಖನದ ಶೀರ್ಷಿಕೆ 'ಪುಸ್ತಕಗಳಿಗೆ ಪರ್ಯಾಯವಿಲ್ಲ.'

ಭಾರತದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ ನೆಹರುರವರ ಮೆದುಳಿನ ಕೂಸು ಈ ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ. ಅವರ ಕನಸುಗಾರಿಕೆ ಮತ್ತು ವ್ಯವಹಾರ ಪ್ರಜ್ಞೆಗಳ ಅಪೂರ್ವ ಸಮ್ಮಿಲನ. ಭಾರತೀಯ ವಾಙ್ಮಯಗಳ ವೈವಿಧ್ಯದ ಪರಿಚಯ, ಅವುಗಳ ನಡುವಿನ ಪರಸ್ಪರ ಬಾಂಧವ್ಯದ ವರ್ಧನೆ ಹಾಗೂ ಉತ್ಕೃಷ್ಟ ಅಭಿರುಚಿಯ ನಿರ್ಮಾಣಕ್ಕೆ ಸಹಾಯಕವಾಗುವಂತೆ ಹುಟ್ಟು ಹಾಕಲಾದ ಸಂಸ್ಥೆ ಇದು. ಟ್ರಸ್ಟ್‌ನ ಸ್ಥೂಲ ಪರಿಚಯ ನೀಡುವ ನಿಸಾರರು ಅದರ ಕೆಲವು ಅನುವಾದಗಳ ಬಗ್ಗೆ ಹೀಗೆ ಟೀಕಾ ಪ್ರಹಾರ ಮಾಡುತ್ತಾರೆ: 'ಟ್ರಸ್ಟ್ ಈ ತನಕ ಸಾವಿರಾರು ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಹಲವು ಕೃತಿಗಳು ಉಪಯುಕ್ತವಾಗಿವೆ. ವಸ್ತು ನಿರೂಪಣೆ ಮತ್ತು ಭಾಷೆಯ ಬಳಕೆಯಲ್ಲಿ ಸಮಾನ ಲಕ್ಷಣದ ಕೃತಿಗಳನ್ನು ನಿರೀಕ್ಷಿಸುವುದು ಸಾಧ್ಯವಾಗುವುದಿಲ್ಲ ನಿಜ. ಆದರೆ ಅನುವಾದಕ್ಕೆ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ಹೆಚ್ಚಿನ ಎಚ್ಚರ ವಹಿಸಬೇಕಾದದ್ದು ಅಗತ್ಯವಾಗಿದೆ. ಒಂದು ಭಾಷೆಯನ್ನು ತಿಳಿದ ಮಾತ್ರಕ್ಕೆ ಒಬ್ಬ ಒಳ್ಳೆಯ ಅನುವಾದಕ ದಕ್ಕುತ್ತಾನೆಂಬ ಭ್ರಮೆ ಟ್ರಸ್ಟಿಗೆ ಇರದಿದ್ದರೆ ವಾಸಿ. ಆ ಭಾಷೆಯ ನಯ ಸೂಕ್ಷ್ಮತೆಗಳನ್ನು, ಜಾಯಮಾನವನ್ನು ಅರಿಯದಿದ್ದರೆ ಅನುವಾದ ಯಾಂತ್ರಿಕ ಕವಾಯತ್ತಿನಂತೆ ತಲೆ ಚಿಟ್ಟು ಹಿಡಿಸುತ್ತದೆ. ಮೂಲ ಲೇಖಕನ ಕೀರ್ತಿಗೂ ಇದರಿಂದ ಕಳಂಕ ತಟ್ಟುತ್ತದೆ. ಟ್ರಸ್ಟ್‌ನ ಅನೇಕ ಪ್ರಕಟಣೆಗಳು ಹೃದ್ಯವಾಗಿದ್ದರೂ ಕೆಲವು ತಾಳ್ಮೆಗೇಡಿ ತರ್ಜುಮೆಗಳು ತಲೆ ಎತ್ತಿ ಮೆರೆದಿವೆ.'

ಜಯಪುರದಲ್ಲಿ ಜರುಗಿದ ೧೫ನೆಯ ರಾಷ್ಟ್ರೀಯ ಪುಸ್ತಕ ಮೇಳದ ವಿಸ್ತೃತ ವಿವರಣೆಯನ್ನು ನೀಡುವ ಈ ಲೇಖನದಲ್ಲಿ ನಮ್ಮ ಪುಸ್ತಕ ಸಂಸ್ಕೃತಿಯ ಬಗ್ಗೆ ನಿಸಾರರು ಮಾಡಿರುವ ಕೆಲವು ಟಿಪ್ಪಣಿಗಳು ಗಮನಾರ್ಹ: 'ಲಿಪಿಯ ಬಳಕೆ, ಮುದ್ರಣ ಸೌಕರ್ಯಗಳು ನರನ ವಿಚಾರ ವಿಭಾವನೆಗಳ ಪಾಲಿಗೆ ಮಾಯಾಗವಾಕ್ಷವನ್ನೇ ತೆರೆದವು. ನಾಗರಿಕತೆ ಸಂಸ್ಕೃತಿ ವಿಜ್ಞಾನ ಸಾಹಿತ್ಯ ಕಲೆಗಳಲ್ಲದೆ, ಮನುಷ್ಯನ ಆಂತರಂಗಿಕ ಜೀವನದ ಸೂಕ್ಷ್ಮಾನುಭೂತಿಗಳಿಗೂ ಪೋಷಣೆ ರಕ್ಷಣೆ ವಿತರಣೆಗಳು ದೊರಕಿರುವುದು ಅಚ್ಚಿನ ಮೂಲಕ, ಪುಸ್ತಕ ರೂಪದಲ್ಲಿ. ಪುಸ್ತಕ, ಪತ್ರಿಕೆ ತದಿತರ ಅಕ್ಷರಾವಕಾಶದಿಂದ ಎಷ್ಟೊಂದು ಚೇತನಗಳ ಸಾರೋದ್ಧಾರವಾಗಿದೆಯೋ ಲೆಕ್ಕವಿಟ್ಟವರಾರು?

'ಪುಸ್ತಕಗಳ ಹಿರಿಮೆ ಗರಿಮೆಗಳನ್ನು ಮಣ್ಣು ಮುಕ್ಕಿಸಲು, ಅವುಗಳ ಸಾರ್ವಭೌಮಿಕ ಅಂತಸ್ತನ್ನು ಆಕ್ರಮಿಸಿಕೊಳ್ಳಲು ವೈಜ್ಞಾನಿಕ ಉಪಕರಣಗಳು ಹಗಲಿರುಳು ಹೋರಾಡಿವೆ. ಇನ್ನೂ ಅವಕ್ಕೆ ಪೂರ್ಣ ಯಶಸ್ಸು ಲಭಿಸಿಲ್ಲ. ಪುಸ್ತಕಗಳನ್ನು ಓದಲು ಬೇಕಾಗಿರುವ ಬಿಡುವು,

ಏಕಾಗ್ರತೆ ಆಧುನಿಕ ಮನುಷ್ಯನಿಗೆ ಎಲ್ಲಿವೆ? ಬದುಕಿನ ನಿಷ್ಠುರ ವಾಸ್ತವಿಕತೆಯ ಎದುರು ವಿಶ್ರಾಂತಿಗೆ ಸೇವಕನ ಸ್ಥಾನ. ಎಲ್ಲದರಲ್ಲೂ ತ್ವರೆ, ಆತುರ, ಸ್ಪರ್ಧೆ; ಕಾಲುದಾರಿಯಲ್ಲಿ ಶೀಘ್ರವಾಗಿ ಗುರಿ ಮುಟ್ಟುವುದು ಮುಖ್ಯ. ಸಕಲವೂ ಸುಲಭದಲ್ಲಿ ಸಲ್ಲಬೇಕು. ಅದರ ನೆರವೇರಿಕೆಗೆ ಕಟಿಬದ್ಧವಾಗಿ ನಿಂತಿವೆ ಟಿ.ವಿ., ವಿಡಿಯೋ, ಮೈಕ್ರೋಫಿಲ್ಮ್, ಕಂಪ್ಯೂಟರ್ ಇತ್ಯಾದಿಗಳು. ಗ್ರಂಥಗಳ ಭವಿಷ್ಯ ಡೋಲಾಯಮಾನವೆನ್ನದಿರಲು ಸಾಧ್ಯವೇ ಇಲ್ಲ.'

ಜನರ ಓದುವ ಪ್ರವೃತ್ತಿ ಉತ್ತೇಜನಕರವಾಗಿಲ್ಲದಿರುವುದರ ಬಗ್ಗೆ ನಿಸಾರರು ಚಿಂತೆ ವ್ಯಕ್ತಪಡಿಸಿದ್ದಾರೆ. ಇದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯೇ. ಕರ್ನಾಟಕದಲ್ಲಿ ಜನಸಂಖ್ಯೆ ಬೆಳೆದಿದೆ. ಮುದ್ರಣಾಲಯಗಳೂ ಅತ್ಯಾಧುನಿಕಗೊಂಡಿವೆ. ಪುಸ್ತಕಗಳ ಸಂಖ್ಯೆಯೂ ಹೆಚ್ಚಿದೆ. ಅವು ಹೆಚ್ಚು ಸುಂದರವಾಗಿಯೂ ಹೊರಬರುತ್ತಿವೆ. ಆದರೆ ನಲವತ್ತು ಐವತ್ತು ವರ್ಷಗಳ ಕೆಳಗೆ ಮುದ್ರಣವಾಗುತ್ತಿದ್ದಷ್ಟೇ ಪ್ರತಿಗಳು ಈಗಲೂ ಮುದ್ರಣವಾಗು ತ್ತಿವೆ ಎಂದರೆ ಆ ನಿಟ್ಟಿನಲ್ಲಿ ನಮ್ಮ ಪ್ರಗತಿ ಏನೇನೂ ಸಾಲದು ಎಂಬುದು ಚಿಂತನೀಯ ಸಂಗತಿ.

ನಿಸಾರರ ಇನ್ನೊಂದು ಲೇಖನ ನಮ್ಮ ದೇಶದ ಚುನಾವಣೆಗಳಿಗೆ ಸಂಬಂಧಿಸಿದ್ದು. 'ಹೋದೆಯಾ ಅಂದರೆ, ಬಂತು ಗವಾಕ್ಷಿಯಲ್ಲಿ' ಎಂಬ ಶೀರ್ಷಿಕೆಯ ಈ ಲೇಖನದಲ್ಲಿ ನಮ್ಮ ಚುನಾವಣಾ ಪದ್ಧತಿ ಮತ್ತು ಅದರ ಸಾಧಕ ಬಾಧಕಗಳ ಬಗ್ಗೆ ಅವರು ತಮ್ಮ ಚಿಂತನೆ ಯನ್ನು ಹರಿಸಿದ್ದಾರೆ. ನಮ್ಮ ದೇಶ ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ವೀಕರಿಸಿರುವುದರಿಂದ ಆ ಜಾಡಿನಲ್ಲೇ ಸಾಗಬೇಕಾದದ್ದು ನಮಗೆ ಅನಿವಾರ್ಯ. ಆದರೆ ಅದರ ಬಗ್ಗೆ ಜನರಲ್ಲಿ ಮಿಶ್ರ ಅಭಿಪ್ರಾಯಗಳಿವೆ. ಕೆಲವರಿಗೆ ಭ್ರಮ ನಿರಸನ. ಇನ್ನು ಕೆಲವರು ಆಶಾವಾದಿಗಳಿಗೆ ಅದು ಯಶಸ್ವಿಯಾಗುವುದೆಂಬ ನಿರೀಕ್ಷೆ. ಒಟ್ಟಾರೆ ರಾಜಕಾರಣಿಗಳಿಗೆ ಮಾತ್ರ ಇದೊಂದು ಆಡುಂಬೊಲ. ನಿಸಾರರು ತಮ್ಮ ಈ ಲೇಖನದಲ್ಲಿ ಹಲವು ಹತ್ತು ಸತ್ಯಾಂಶಗಳನ್ನು ವಿವೇಚಿಸಿದ್ದಾರೆ.

'ಯಾರಿಗೆ ಬೇಕು ಈ ಚುನಾವಣೆ ಎಂಬುದೇ ಎಲ್ಲೆಲ್ಲೂ ಕೇಳಿ ಬರುವ ಪಲ್ಲವಿ. ಬದುಕು ನೀಸುವುದೇ ಬೆಟ್ಟ ಹೊತ್ತಂತಾಗಿ ಕುಸಿದು ಬಿದ್ದಿರುವ ತೆರಿಗೆದಾರ ಪೌರನ ಮೇಲೆ ಈ ಚುನಾವಣೆಯ ಹುಚ್ಚು ಪ್ರವಾಹ ಬೇರೆ ಘಾಸಿಗೊಳಿಸಲಿದೆ. ತನ್ನ ಪಾಡಿಗೆ ತನ್ನನ್ನು ಬಿಟ್ಟು ಬಿಟ್ಟರೆ ಅದೇ ತನಗೆ ಸಲ್ಲಿಸುವ ಸೇವೆಯೆಂದು ದೇಶ ಸೇವಕರಲ್ಲಿ ಅವನ ಕಳಕಳಿಯ ಮನವಿ. ಆದರೆ ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವವೆಂಬ ಅಗ್ಗಳಿಕೆಗೆ ಪಾತ್ರವಾದ ಈ ಮಹಾನ್ ರಾಷ್ಟ್ರದ ಜನತೆಯನ್ನು ಅಷ್ಟು ಸುಲಭವಾಗಿ ಬಿಟ್ಟು ಕೊಡಲಾದೀತೆ? ಆ ಪ್ರಥಮ ಸ್ಥಾನದ ರಕ್ಷಣೆಯ ಹೊಣೆ ಇರುವುದು ಪ್ರಜೆಗಳ ಹೆಗಲಿನ ಮೇಲಲ್ಲವೆ? ಈ ಮಹೋದ್ದೇಶಕ್ಕಾಗಿ ಚುನಾವಣೆ ಬೇಡವೆಂದರೆ ಕರ್ತವ್ಯಚ್ಯುತಿಯಾಗದೆ?' ಎಂದು ವ್ಯಂಗ್ಯ ಧ್ವನಿಯೊಂದಿಗೆ ಲೇಖನವನ್ನು ಆರಂಭಿಸುವ ಲೇಖಕರು, ಈ ಚುನಾವಣೆ ತೆರಿಗೆದಾರನ ಪಾಲಿಗೆ ಎಂತಹ ದುಬಾರಿಯ ಸಂಗತಿಯಾಗಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಸಾದರ ಪಡಿಸುತ್ತಾರೆ. 1952ರಿಂದ ಆರಂಭಿಸಿ ಈ ಲೇಖನ ಬರೆದವರೆಗೂ ಬಂದ ಒಂಬತ್ತು ಚುನಾವಣೆಗಳ

ಖರ್ಚು ವೆಚ್ಚಗಳ ಸ್ಥೂಲ ವಿವರಗಳನ್ನು ನೀಡಿ ಇಷ್ಟು ಖರ್ಚಾದ ಮೇಲೆ ಅದರಿಂದಾದ ಉಪಯೋಗವೆಂತಹುದು ಎಂದು ವಿಶ್ಲೇಷಿಸುತ್ತಾರೆ.

ಜೊತೆಗೆ ಚುನಾವಣೆಗಳು ದೋಷಮುಕ್ತವಾಗಿ ನಡೆಯಲು ದುಸ್ಸಾಧ್ಯ. ಏಕೆಂದರೆ ಸಾಮಾಜಿಕ ಜೀವನದಲ್ಲಿರುವ ಲಂಚ ರುಷುವತ್ತು, ಅಧಿಕಾರ ದುರುಪಯೋಗ, ಸ್ವಜನ ಪಕ್ಷಪಾತ ಹಾಗೂ ನಾನಾ ನಮೂನೆಯ 'ದಗಲ್ಬಾಜಿ'ಗಳು ಚುನಾವಣೆಗಳಲ್ಲು ತಲೆ ಹಾಕುತ್ತವೆ. ಅದನ್ನು ನಿಯಂತ್ರಿಸಬೇಕು. ಅದಕ್ಕಾಗಿ ಚುನಾವಣಾ ಆಯೋಗ ತಾನು ತಯಾರಿಸಿದ ಆದರ್ಶನೀಯ ನೀತಿ ನಿಯಮ ಸಂಹಿತೆಯನ್ನು ಪಾಲಿಸುವಂತೆ ವಿವಿಧ ಪಕ್ಷಗಳಿಗೆ ಹಾಗೂ ಅಭ್ಯರ್ಥಿಗಳಿಗೆ ಆದೇಶ ನೀಡುತ್ತದೆ. ಆದರೆ ಅದರ ಪಾಲನೆ ಎಷ್ಟು ಮಾತ್ರ? ಇದು ನಿಸಾರರ ಪ್ರಶ್ನೆ.

'ಇವುಗಳನ್ನು ಶೇಖಡ ಅರ್ಧದಷ್ಟಾದರೂ ಪರಿಪಾಲಿಸಿದರೆ ಚುನಾವಣೆಗಳು ಪಾವಿತ್ರ್ಯದ ಪರಮಾವಧಿಯನ್ನು ಮುಟ್ಟಿವೆಯೆಂದು ನಾವು ಹೆಮ್ಮೆಯಿಂದ ಬೀಗಬಹುದು! ವಾಸ್ತವವಾಗಿ ಮೇಲೆ ಒಕ್ಕಾಣಿಸಿದ ವಿಷಯಗಳಲ್ಲದೆ ಮತ್ತೆಷ್ಟೋ ಐಟಂಗಳು ಶಾಸಕರ ಆಯ್ಕೆಯ ಕಾಲದಲ್ಲಿ ತಮ್ಮ ದೇಣಿಗೆಯನ್ನು ಸಲ್ಲಿಸಿ ಜನರ ಜುಗುಪ್ಸೆ, ಶಾಪಗಳಿಗೆ ಕಾರಣ ಒದಗಿಸುವುದು ಸರ್ವಾನುಭವದ ಸಿದ್ಧ ಸಂಗತಿ. ಪ್ರೇಮ, ಯುದ್ಧಗಳಲ್ಲಿ ಎಲ್ಲವೂ ನ್ಯಾಯ ಸಮ್ಮತ, ಸಮಂಜಸವೆನ್ನುವ ಹಾಗೆ ಚುನಾವಣೆಗಳಿಗೂ ಈ ನಾಣ್ಣುಡಿಯನ್ನು ವಿಸ್ತರಿಸಿಕೊಂಡು ಅಂಗೀಕರಿಸುವುದೇ ನಮ್ಮಂಥ ಬಡ ಪ್ರಜೆಗಳಿಗೆ ಉಳಿದಿರುವ ದಾರಿ.'

ಚುನಾವಣಾ ಆಯೋಗದ ಧ್ಯೇಯಾದರ್ಶಗಳ ಪಾತಿವ್ರತ್ಯವನ್ನು ಹೊಲಗೆಡಿಸುವ ವಶೀಲಿ ತಂತ್ರಗಳು ವರಿಷ್ಠ ವಲಯಗಳದು. ಚಾಪೆ-ರಂಗೋಲಿ ಕೆಳಗೆ ನುಗ್ಗುವ ಡಿಂಗ್-ಡಾಂಗ್ ಆಟಗಳು. ಇಷ್ಟೆಲ್ಲ ಹರ ಸಾಹಸದ ಅನಂತರ ಪ್ರತಿನಿಧಿಗಳು ಆಯ್ಕೆಗೊಂಡು ಮೇಲಕ್ಕೆ ಹೋಗುತ್ತಾರೆ. ಆದರೆ ಆಮೇಲೆ?

'ನಾವು ನಮ್ಮ ಘನಂದಾರಿ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸುತ್ತೇವಲ್ಲ. ಆ ಮಹಾನುಭಾವರೆಲ್ಲ ಒಗ್ಗೂಡಿ ಕಡಿದು ಕಟ್ಟೆ ಹಾಕಿದ್ದಾದರೂ ಏನು? ಅವರಿಂದ ರಚಿತವಾಗಿ ಈಗಷ್ಟೇ ಬರ್ತರ್ಫಾದ ಲೋಕಸಭೆಯ ಕಾರ್ಯಾವಳಿಯ ವೈಖರಿ, ಹೆಗ್ಗಳಿಕೆ ಎಂಥದ್ದು ಎಂಬುದರ ಕಡೆ ಸ್ವಲ್ಪ ಮನಸ್ಸು ಹಾಯಿಸೋಣ: ಅತ್ಯಲ್ಪ ಕಾಲದಲ್ಲಿ ಈರ್ವರು ಪ್ರಧಾನಿಗಳು ಗದ್ದುಗೆಯಿಂದ ಜಾರಿ ಕೆಳಕ್ಕೆ ಬಿದ್ದದ್ದು, ತಮ್ಮ ವೈಯಕ್ತಿಕ ಕಾರಣಗಳ ನಿಮಿತ್ತವೇ ಹೊರತು ಪ್ರಜಾಹಿತದ ಕೆಲಸ ಕಾರ್ಯಗಳ ಬಗೆಗಿನ ಭಿನ್ನಾಭಿಪ್ರಾಯಕ್ಕಾಗಿ ಅಲ್ಲ. ಆಯ ವ್ಯಯದ ಮಂಡನೆಯಿಲ್ಲದ ಆಯ ವ್ಯಯದ ಅಧಿವೇಶನ ನಡೆದದ್ದು, ಹಿಂದಿನೆಲ್ಲ ಲೋಕಸಭೆಗಳಿಗಿಂತ ಒಂಬತ್ತನೆಯದು ಅಲ್ಪಾಯುಷಿಯಾದದ್ದು—ಕೇವಲ ಒಂದೂವರೆ ವರ್ಷದ ಅಕಾಲಿಕ ಅಂತ್ಯವನ್ನು ಕಂಡಿದ್ದು; ರಾಜಕೀಯ ಪಕ್ಷವೊಂದಕ್ಕೆ ಅತ್ಯಗತ್ಯವಾದ ಅರ್ಹತೆಗಳಲ್ಲಿ ಒಂದು ಅಂಶದಷ್ಟೂ ಇಲ್ಲದ ಅತ್ಯಂತ ಕಿರಿಯ ಹೊಸ ಪಕ್ಷ ಆಡಳಿತ ನಡೆಸಿದ್ದು, ಮತ್ತು ತಾನೇ ಅಧಿಕಾರ ವಹಿಸಿಕೊಳ್ಳುವ ಸವಲತ್ತುಗಳಿದ್ದರೂ ಹಾಗೆ ಎಸಗದೆ ಅತ್ಯಂತ ಹೆಚ್ಚಿನ ಸಂಖ್ಯಾಬಲವಿದ್ದ ಪಕ್ಷವೊಂದು, ಆ ಹೊಸ ಪಕ್ಷಕ್ಕೆ ಹೊರಗಿನಿಂದ ಬೆಂಬಲ

ನೀಡಿದ್ದು.'

ನಿಸಾರರ ಕೆಲವು ಮಾತುಗಳು ನಮ್ಮ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸಾರ್ವಕಾಲಿಕ ಸತ್ಯಗಳಂತಿವೆ. ಕೋಟ್ಯಂತರ ರೂಪಾಯಿಗಳನ್ನು ನೀರಿನಂತೆ ಚೆಲ್ಲಿ ಚುನಾವಣೆಗಳನ್ನು ನಡೆಸಿ ಆಯ್ಕೆ ಮಾಡಿ ಕಳಿಸಿದ ಮೇಲೆ ಪ್ರತಿನಿಧಿಗಳು ಮಾಡುವುದಾದರೂ ಏನು? 'ಹೀಗೆ ಆಯ್ಕೆಗೊಂಡವರು ಬಹುಮತೀಯ ಸುಭದ್ರ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವರೆಂಬ ಗ್ಯಾರಂಟಿಯಾದರೂ ಏನು? ಎಣ್ಣೆ ಸೀಗೆಕಾಯಿಯಂತಿದ್ದವರು ಒಂದುಗೂಡಿ ಕಟ್ಟುವ ಕಿಚಡಿ ಪಕ್ಷ ತನ್ನನ್ನು ಉಳಿಸಿಕೊಂಡರೆ ಸಾಕಾಗಿದೆ; ಇನ್ನು ಜನತೆಯ ಸೇವೆಗೆ ಅದಕ್ಕೆ ಅವಕಾಶ, ವೇಳೆಗಳೆಲ್ಲಿ? ಗಾದಿಯನ್ನು ಶತಾಯು ಗತಾಯು ಉಳಿಸಿಕೊಳ್ಳುವಾಗಿನ ಈ ಮಂದಿಯ ಮಂಗಾಟ ದೊಂಬರ ಲಾಗಗಳು ಪ್ರಜೆಗಳಿಗೆ ಹೊಸವೇನಲ್ಲ. ಇವನ್ನು ಮೂಕ ಪ್ರೇಕ್ಷಕರಾಗಿ ನೋಡುತ್ತಲೇ, ಷಂಡ ಕೋಪದಿಂದ ಅತೃಪ್ತಿ ಸೂಚಿಸುತ್ತಲೇ ಉಗುಳು ನುಂಗಿ 'ಬಡವ ನೀನು ಮಡಗಿದ ಹಾಗಿರು' ಎಂದು ಕೈಚೆಲ್ಲಿ ಕೂಡುವುದಷ್ಟೆ ನಮ್ಮ ಹಣೆಬರಹ.'

ಈ ಲೇಖನದಲ್ಲಿ ಒಂದು ಬಗೆಯ ನಿರಾಶಾವಾದದ ಧ್ವನಿ ಹೊರಹೊಮ್ಮಿದೆ. ಭಾರತದ ಜನತೆಗೆ ಪ್ರಜಾಪ್ರಭುತ್ವ ಪದ್ಧತಿಯಿಂದ ಆಗುವ ಲಾಭಕ್ಕಿಂತಲು ತೊಂದರೆಗಳೇ ಹೆಚ್ಚು ಎಂಬಂತೆ ಅಭಿಪ್ರಾಯಗಳು ಮೂಡಿ ಬಂದಿವೆ. ರಾಜಕೀಯ ಪಕ್ಷಗಳು ಹಾಗೂ ಅವುಗಳ ನಾಯಕರು ಉದಾತ್ತ ಧ್ಯೇಯಗಳನ್ನು, ವಿಚಾರಗಳನ್ನು ಹೊಂದಿರುವುದರ ಬದಲಾಗಿ ರಾಜಕೀಯ ದೊಂಬರಾಟಗಳಲ್ಲೇ ತಲ್ಲೀನರಾಗಿರುವುದನ್ನು ಲೇಖಕರು ಖಾರವಾಗಿಯೇ ಟೀಕಿಸುತ್ತಾರೆ. ಆದರೆ ವಸ್ತುಸ್ಥಿತಿಯೇ ಹೀಗಿರುವಾಗ, ಅವರು ಬೇರೇನು ಹೇಳಲು ತಾನೆ ಸಾಧ್ಯ?

ಇನ್ನು ಮೂರನೆಯ ಲೇಖನ ಕನ್ನಡ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ್ದು. 'ಕನ್ನಡಿಗರ ಅಭಿಮಾನದ ಸ್ವತ್ತು 'ಪ್ರಜಾಮತ' ಮುಗಿಸಿದೆ ಅರವತ್ತು' ಈ ಲೇಖನದ ಶೀರ್ಷಿಕೆ. ೧೯೯೧ರಲ್ಲಿ 'ಪ್ರಜಾಮತ' ಸಾಪ್ತಾಹಿಕಕ್ಕೆಂದೇ ಬರೆದ ಲೇಖನ.

೧೯೩೧ರ ಆಗಸ್ಟ್‌ನಲ್ಲಿ ಪ್ರಕಟಣೆ ಆರಂಭಿಸಿದ 'ಪ್ರಜಾಮತ'ದ ಏಳುಬೀಳುಗಳ ಇತಿಹಾಸವನ್ನು ಇಲ್ಲಿ ದಾಖಲಿಸುತ್ತಾರೆ. ಜೊತೆ ಜೊತೆಯಲ್ಲೆ ಸಮಾಜದಲ್ಲಿ ಪತ್ರಿಕೆ ವಹಿಸುವ ಪಾತ್ರವನ್ನು ಚೆನ್ನಾಗಿ ವಿವರಿಸಿದ್ದಾರೆ: 'ಸದಾಶಯ ಪ್ರೇರಿತ ಪತ್ರಿಕೆ ಒಂದು ಅಘೋಷಿತ ವಿದ್ಯಾಕೇಂದ್ರ. ಸಮಾಜ ಜೀವನವನ್ನು ಮಲ್ಟಿ ವಿಟಮಿನ್ನಿನಂತೆ ಸದ್ದುಗದ್ದಲವಿಲ್ಲದೆ ಪ್ರಭಾವಿಸುವಲ್ಲಿ, ಸಚೇತನಗೊಳಿಸುವಲ್ಲಿ ಅದರ ಪಾಲು ಹಿರಿದು. ಭಾವ ವಿಚಾರ ತಿಳಿವುಗಳನ್ನು, ಶಿಕ್ಷಣ ಮನೋರಂಜನೆಗಳನ್ನು ಒಂದೇ ಏಟಿಗೆ ದಕ್ಕಿಸಿ ಹೃದಯ ಮನಸ್ಸುಗಳನ್ನು ಹಸನುಗೊಳಿಸುವ ಕಾಯಕದಲ್ಲಿ ಪತ್ರಿಕೆಯದು ಅನ್ಯಾದೃಶವಾದ ಹಿರಿಮೆ, ಅನನ್ಯವಶವಾದ ಗರಿಮೆ. ಮಾಹಿತಿ, ಲೋಕಜ್ಞಾನಗಳನ್ನು ಅದು ನಿಚ್ಚಳವಾಗಿ ಹಾಲ್ಗರೆಯುತ್ತದೆ. ಹಸುಳೆಗಳಿಂದ ಹಿಡಿದು ಹಲ್ಲುಬಿದ್ದ ಅರುಳು ಮರುಳರವರೆಗೂ ಆಸಕ್ತಿಯನ್ನು ಹಚ್ಚಗೆ ಇರುವಂತೆ ನೋಡಿಕೊಳ್ಳುವ, ಅಂತಃಸಂಸ್ಕಾರಕ್ಕೆ ಅನುವಾಗುವ ಸರ್ವೋಪಕಾರಿ ಕೈಂಕರ್ಯ ಅದರದು. ಪ್ರಜಾಭಿಪ್ರಾಯಗಳನ್ನು ಆಡಳಿತಕ್ಕೆ ಅರಿವಾಗಿಸುವ, ರೂಢಿಗತ

ಆಚಾರ ವಿಚಾರಗಳ ಕುಂದು ಕರೆಗಳನ್ನು ಎತ್ತಿ ತೋರಿ ವಿವೇಕ ವಿವೇಚನೆಗಳನ್ನು ಸಾಮಾಜಿಕರಲ್ಲಿ ಬಿತ್ತುವ ಕಾರ್ಯದಲ್ಲಿ, ಚಲಚ್ಚಿತ್ರ ಟಿ.ವಿ. ರೇಡಿಯೋಗಳಂಥ ಸಮರ್ಥ ಮಾಧ್ಯಮಗಳಿಗೆ ಸಮ ಸಮವಾಗಿ ಪತ್ರಿಕೆ ಶ್ರಮಿಸುತ್ತದೆ. ಡಿ.ವಿ.ಜಿ. ಅವರು ಪತ್ರಿಕೆಯನ್ನು 'ಸಮಾಜದ ಕಾವಲು ನಾಯಿ' ಎಂದಿರುವುದು ಸರ್ವಸೂಕ್ತವಾಗಿದೆ.'

ಅಂತೆಯೇ ಕನ್ನಡ ಓದುಗರು ವಾಚನದ ವಿಷಯದಲ್ಲಿ ತೋರುವ ನಿರಾಸಕ್ತಿಯತ್ತಲೂ ಬೊಟ್ಟು ಮಾಡುತ್ತಾರೆ: 'ನೆರೆಯ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ದಿನ, ವಾರ, ಮಾಸ ಪತ್ರಿಕೆಗಳ ಪ್ರಸಾರದ ಸಂಖ್ಯೆ ಉತ್ಸಾಹ ಕುದುರಿಸುವಂಥದ್ದಲ್ಲ. ಇದಕ್ಕೆ ನಿರಕ್ಷರತೆಯೊಂದನ್ನೇ ದೂರುವಂತಿಲ್ಲ. ಅಕ್ಷರಸ್ಥ ವಿದ್ಯಾವಂತರಲ್ಲೂ ಪತ್ರಿಕೆಗಳನ್ನು ಕೊಳ್ಳುವ ಅಭ್ಯಾಸ ಇನ್ನೂ ಮೊಳಕೆಯೊಡೆದಿಲ್ಲ. ಕನ್ನಡ ಪತ್ರಿಕೆಗಳಿಗೆ ಪರ್ಯಾಯವಾಗಿ ಇಂಗ್ಲಿಷ್ ದೈನಿಕ, ವಾರ, ಮಾಸ ಪತ್ರಿಕೆಗಳನ್ನು ಕೊಂಡು ಓದುವ ಕನ್ನಡಿಗರ ಸಂಖ್ಯೆಗೆ ಕೊರತೆಯೆ?'

ಈ ಲೇಖನ ಪ್ರಕಟವಾದ ಸಮಯದಲ್ಲಿ ಕನ್ನಡ ಪತ್ರಿಕೋದ್ಯಮಕ್ಕೆ ಹತ್ತಿರ ಹತ್ತಿರ ಒಂದೂವರೆ ಶತಮಾನ. ಕನ್ನಡ ಪತ್ರಿಕೋದ್ಯಮ ನಡೆದು ಬಂದ ದಾರಿಯನ್ನು ಒಮ್ಮೆ ಇವರು ವೀಕ್ಷಿಸುತ್ತಾರೆ. ಆ ಹಿನ್ನೆಲೆಯಲ್ಲಿ 'ಪ್ರಜಾಮತ'ದ ಸಾಹಸ ಗಾಥೆಯನ್ನು ವಿವರಿಸುತ್ತಾರೆ.

ಅದರ ಸ್ಥಾಪಕರಾದ ಬಿ. ಎನ್. ಗುಪ್ತರಿಗೂ ಕನ್ನಡ ಪತ್ರಿಕಾ ಪ್ರಪಂಚಕ್ಕೂ ಇದ್ದ ಸಂಬಂಧ 'ಎತ್ತಣ ಮಾಮರ ಎತ್ತಣ ಕೋಗಿಲೆ' ಎಂಬಂಥದು. ಆಂಧ್ರ ಪ್ರದೇಶದ ಚಿತ್ತೂರಿನಲ್ಲಿ ಹುಟ್ಟಿದ ಗುಪ್ತರು ರಾಜಕೀಯ ವ್ಯಕ್ತಿ. 'ಪ್ರಜಾಪಕ್ಷ'ದ ವಕ್ತಾರರು. ಅಂದಿನ ಕಾಂಗ್ರೆಸ್‌ನೊಂದಿಗೆ ಅವರ ಪಕ್ಷವನ್ನು ವಿಲೀನಗೊಳಿಸುವ ಪ್ರಯತ್ನ ಮಾಡಿದರು. ಅದರ ಜೊತೆಯಲ್ಲೇ 'ಪ್ರಜಾಮತ' ವಾರ ಪತ್ರಿಕೆ ಹಾಗೂ 'ಜನವಾಣಿ' ದಿನ ಪತ್ರಿಕೆಗಳನ್ನು ಸ್ಥಾಪಿಸಿದರು. ಅವು 'ಪ್ರಜಾಪಕ್ಷ'ದ ಮುಖವಾಣಿಯಾಗಿ ಮೈಸೂರು ಸರ್ಕಾರದ ಅವಕೃಪೆಗೆ ಪಾತ್ರವಾದವು. ಬೆಂಗಳೂರಿನಲ್ಲಿ ಅವನ್ನು ಮುದ್ರಿಸಲು ಸರ್ಕಾರದ ಅನುಮತಿ ಸಿಗಲಿಲ್ಲ. ಆಗಿನ ಸರ್ಕಾರ ವೃತ್ತಪತ್ರಿಕೆಗಳ ಮೇಲೆ ಹತೋಟಿ ಇಡಲು ಶಾಸನ ಮಾಡಿತ್ತು. ಪತ್ರಿಕಾರಂಗ ಅದನ್ನು ಕರಾಳ ಶಾಸನ ಎಂದು ಕರೆದಿತ್ತು. ಅದಕ್ಕೆ ಕಾರಣ, ಆ ದಿನಗಳಲ್ಲಿ ಅರಸರ ಆಡಳಿತಕ್ಕೆ ವಿರುದ್ಧವಾಗಿ ಎದ್ದಿದ್ದ ಜವಾಬ್ದಾರಿ ಸರ್ಕಾರದ ಕೂಗು. ಗುಪ್ತರು ತಮ್ಮ ಪತ್ರಿಕೆಗಳ ಮೂಲಕ ಈ ಚಳವಳಿಗೆ ಕುಮ್ಮಕ್ಕು ಕೊಡುತ್ತಿದ್ದರೆಂಬ ಅಸಮಾಧಾನ ದಿವಾನರಿಗೆ. ಗುಪ್ತರ ಸೆಣಸಾಟದ ಫಲವಾಗಿ ೧೯೩೪ರಲ್ಲಿ 'ಪ್ರಜಾಮತ'ವನ್ನು ಬೆಂಗಳೂರಿನಿಂದ ಪ್ರಕಟಿಸಲು ಸಾಧ್ಯವಾಯಿತು. ಆದರೆ ಘರ್ಷಣೆಗೆ ಅಂತ್ಯ ಕಾಣಲಿಲ್ಲ. ಆಗ ಸರ್ ಮಿರ್ಜಾ ಇಸ್ಮಾಯಿಲ್‌ರವರು ದಿವಾನರು. 'ಪ್ರಜಾಮತ' ಹಾಗೂ ಬಿ. ಎನ್. ಗುಪ್ತರಿಗೆ ಗಡೀಪಾರಿನ ಶಿಕ್ಷೆ. ಮೈಸೂರು ಸಂಸ್ಥಾನದ ಹೊರಗಿನಿಂದ ಅದನ್ನು ಪ್ರಕಟಿಸಲು ನಿರ್ಧಾರ. ಮುಂಬಯಿ ಪ್ರಾಂತಕ್ಕೆ ಸೇರಿದ್ದ ಹುಬ್ಬಳ್ಳಿಯ ಆಯ್ಕೆ.

ಎರಡನೆಯ ಮಹಾ ಯುದ್ಧದ ವೇಳೆಯಲ್ಲಿ ಸಚಿತ್ರವಾಗಿ ಪ್ರಕಟವಾಗುತ್ತಿದ್ದ 'ಪ್ರಜಾಮತ'ದಲ್ಲಿ ನಾಡಿನ ಅನೇಕ ಖ್ಯಾತ ಲೇಖಕರು, ಪತ್ರಕರ್ತರು ಲೇಖನಗಳನ್ನು ಬರೆದು

ಅದನ್ನು ಜನಪ್ರಿಯಗೊಳಿಸಿದರು. ಮಹಾ ಯುದ್ಧದ ಸುದ್ದಿ ಹಾಗೂ ಛಾಯಾಚಿತ್ರಗಳ ಸಹಿತ ಪ್ರಕಟವಾಗುತ್ತಿದ್ದ ವಿಶೇಷ ಲೇಖನಗಳಿಗಾಗಿ ಜನ ಕಾತರದಿಂದ ಕಾಯುವಂತಾಯಿತು. 'ಪ್ರಜಾಮತ'ದ ದೀಪಾವಳಿ ವಿಶೇಷಾಂಕ ಪತ್ರಿಕಾ ರಂಗದಲ್ಲಿ ಮತ್ತೊಂದು ಮೈಲಿಗಲ್ಲು. ೧೯೪೬ರ ಹೊತ್ತಿಗೆ 'ಪ್ರಜಾಮತ' ಮತ್ತು 'ಜನವಾಣಿ'ಗಳು ನಾಡಿನ ಹೆಸರಾಂತ ಕೈಗಾರಿಕೋದ್ಯಮಿ ಬಿ. ಎಂ. ಶ್ರೀನಿವಾಸಯ್ಯನವರಿಗೆ ಹಸ್ತಾಂತರವಾದವು. ಅವರು ಅದಕ್ಕೆ ಹೊಸ ತಿರುವು ನೀಡಿದರು.

ಹೀಗೆ ಆಸಕ್ತಿ ಮೂಡುವಂತೆ 'ಪ್ರಜಾಮತ'ದ ಇತಿಹಾಸವನ್ನು ದಾಖಲಿಸುವ ನಿಸಾರರು, ಕನ್ನಡಿಗರು ಪತ್ರಿಕೆಗಳನ್ನು ಕೊಂಡು ಓದುವುದರ ಬಗ್ಗೆ ತೋರುವ ದಿವ್ಯ ನಿರ್ಲಕ್ಷ್ಯವನ್ನು ಕುರಿತು ಹೀಗನ್ನುತ್ತಾರೆ: 'ಕನ್ನಡ ಪತ್ರಿಕೆಯನ್ನು ಅದರ ಮುಖಪುಟ ಕಾಣದಂತೆ ಮಡಿಸಿ ಬಸ್ಸಿನಲ್ಲಿ ಕೊಂಡೊಯ್ಯುವ ಉದ್ಯೋಗಸ್ಥ ಮಹಿಳೆಯರನ್ನು ನಾನು ಗಮನಿಸಿದ್ದೇನೆ. ಅವರಿಗೆ ಕನ್ನಡ ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಮೆರೆಸುವುದು ಪ್ರತಿಷ್ಠೆಗೆ ಕುಂದು. ಅದೇ ಇಂಗ್ಲಿಷ್ ಪತ್ರಿಕೆಯಾದರೆ, ಅದನ್ನು ಹತ್ತು ಜನರ ಕಣ್ಣಿಗೆ ಬೀಳುವಂತೆ ಪ್ರದರ್ಶಿಸುವುದು ಸಭ್ಯತೆಯ ಲಕ್ಷಣವೆನ್ನಿಸುತ್ತದೆ. ಒಬ್ಬ ತಮಿಳನೋ, ಮಲೆಯಾಳಿಯೋ ಆದರೆ ತನ್ನ ಭಾಷೆಯ ಪತ್ರಿಕೆಯನ್ನು ಯಾವ ಭಿಡೆಯೂ ಇಲ್ಲದೆ ಅವಲೋಕಿಸುವುದನ್ನೂ ಒಯ್ಯುವುದನ್ನೂ ಕಾಣಬಹುದು. ಇದರಿಂದ ಪುರುಷರು ಹೊರತೆಂದು ನನ್ನ ಅರ್ಥವಲ್ಲ. ಎಲ್ಲ ಕ್ಷೇತ್ರಗಳಲ್ಲಿನ ಹಾಗೆ ಇಲ್ಲೂ ಸಹ ಕನ್ನಡಿಗರ ಅಭಿಮಾನ ಶೂನ್ಯತೆ, ಸ್ವ-ಹೀನಮಾನ್ಯ ಪ್ರವೃತ್ತಿ ಸ್ವಯಂಸ್ಪಷ್ಟವಾಗಿದೆ.'

ಇಲ್ಲಿ ಪರಾಂಬರಿಸಲಿರುವ ನಾಲ್ಕನೆಯ ಲೇಖನ ಕುತೂಹಲಕಾರಿಯಾದದ್ದು. ೧೯೮೩ರಲ್ಲಿ ಮುದ್ರಣ ಕಂಡ ಒಂದು ಕನ್ನಡ ಗೆಜೆಟಿಯರನ್ನು ಪರಿಚಯಿಸುವ ಕೆಲಸವನ್ನು ನಿಸಾರರು ಈ ಲೇಖನದಲ್ಲಿ ಮಾಡಿದ್ದಾರೆ. ಇದು ೧೯೭೩ರಲ್ಲಿ ಬರೆದ ಲೇಖನ.

ಲೇಖನದ ಆರಂಭದ ಮಾತುಗಳು ಇವು: 'ಇದೊಂದು ಕನ್ನಡದ ಗೆಜೆಟಿಯರ್. ಹಲವು ವಿಧದಿಂದ ವಿಶಿಷ್ಟ. ಇದರ ಇರವು, ಪರಿಚಯದ ಅರಿವು ಬಹು ಮಂದಿಗಿಲ್ಲ. ಪ್ರಥಮ ಪ್ರಕಟನೆ ಸರಿಯಾಗಿ ನೂರು ವರ್ಷಗಳ ಹಿಂದೆ. ಧಾರವಾಡ, ಬೆಳಗಾವಿ, ಬಿಜಾಪುರ, ಉತ್ತರ ಕನ್ನಡ ಜಿಲ್ಲೆಗಳ (ಕಾನಡಾ) ವಿವರಗಳು ಇದರ ಹೂರಣ. ಆ ಕಾಲಕ್ಕೆ ಇವು ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕದ ಭಾಗ. ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳೆಂದು ಹೆಸರುವಾಸಿ. ಮೂಲ ಇಂಗ್ಲಿಷ್ 'ಗ್ಯಾಝೆಟೀಯರ'ನ್ನು ಮುಂಬಯಿ ಸರಕಾರದ ಹುಕುಮಿನಿಂದ ಕನ್ನಡಿಸಿದ ಮಹಾನುಭಾವರು ಧಾರವಾಡ ಟ್ರೇನಿಂಗ್ ಕಾಲೇಜಿನ ಮಾಜಿ ಪ್ರಿನ್ಸಿಪಾಲರೂ ಆಗಿನ ಸಾರಸ್ವತ ಲೋಕದ ಗಮನಾರ್ಹ ಹೆಸರೂ ಆಗಿದ್ದ ಶ್ರೀ ವೆಂಕಟರಂಗೋ ಕಟ್ಟಿಯವರು.'

ವೆಂಕಟರಂಗೋ ಕಟ್ಟಿ(೧೮೩೩-೧೯೦೧)ಯವರದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ದೊಡ್ಡ ಹೆಸರು. ಅಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ದುಡಿದು, ಸಮಾಜ ಸುಧಾರಕರು ಎಂಬ ಕೀರ್ತಿ ಗಳಿಸಿದ್ದರು. ಕಟ್ಟಿಯವರು ಹುಟ್ಟಿದ್ದು ಬಿಜಾಪುರ ಜಿಲ್ಲೆಯ ಮುಧೋಳದಲ್ಲಿ.

ಮನೆಯಲ್ಲಿಯೇ ಸಂಸ್ಕೃತ ಕಾವ್ಯಶಾಸ್ತ್ರಗಳ ಶಿಕ್ಷಣ ಪಡೆದ ಕಟ್ಟಿಯವರು ಪುಣೆಗೆ ಹೋಗಿ ಇಂಗ್ಲಿಷ್ ಶಿಕ್ಷಣವನ್ನು ಗಳಿಸಿದರು. ಪುಣೆಯಲ್ಲಿದ್ದಾಗ ಅಲ್ಲಿನವರ ಭಾಷಾಭಿವೃದ್ಧಿಯ ಪ್ರಯತ್ನಗಳನ್ನು ಕಂಡು, ಕನ್ನಡಕ್ಕಾಗಿ ತಾವೂ ಏನನ್ನಾದರೂ ಮಾಡಲೇಬೇಕೆಂಬ ಸಂಕಲ್ಪ ತೊಟ್ಟರು. ಅದರ ಪರಿಣಾಮವಾಗಿ ಉತ್ತರ ಕರ್ನಾಟಕದಲ್ಲಿ ಕನ್ನಡಕ್ಕೊಂದು ಭದ್ರ ನೆಲೆ ನಿರ್ಮಿಸಲು ಜೀವನದ ಅಂತ್ಯಕಾಲದವರೆಗೂ ಹಲವು ಬಗೆಗಳಲ್ಲಿ ದುಡಿದರು. ಶಾಲಾ ವಿದ್ಯಾರ್ಥಿಗಳಿಗೆಂದು ಬರೆದ ಪುಸ್ತಕಗಳು ಅತ್ಯಂತ ಜನಪ್ರಿಯವಾದವು. ಜ್ಯೋತಿಷ ಶಾಸ್ತ್ರ, ಪದಾರ್ಥ ವಿಜ್ಞಾನ ಶಾಸ್ತ್ರ. ವನಸ್ಪತಿ ಶಾಸ್ತ್ರ, ಖನಿಜ ಶಾಸ್ತ್ರ, ಲಘು ವ್ಯಾಕರಣ, ಕರ್ನಾಟಕದ ವರ್ಣನೆಯೂ ಇತಿಹಾಸವೂ ಮುಂತಾದ ಪುಸ್ತಕಗಳನ್ನೂ ಬರೆದರು. ಧಾರವಾಡ ವಿದ್ಯಾ ವರ್ಧಕ ಸಂಘದ ಸ್ಥಾಪಕರಲ್ಲೊಬ್ಬರೂ ಆಗಿದ್ದ ಕಟ್ಟಿಯವರು ಅದರ ಮೊದಲನೆಯ ಉಪಾಧ್ಯಕ್ಷರು.

ವೆಂಕಟರಂಗೋ ಕಟ್ಟಿಯವರು ಅನುವಾದಿಸಿದ ಕನ್ನಡ ಗೆಜೆಟಿಯರ್‌ನ ಬಗ್ಗೆ ನಿಸಾರರು ಬರೆದಿರುವ ಲೇಖನ ಅಪೂರ್ವವೆನಿಸುತ್ತದೆ. ಕನ್ನಡ ಗೆಜೆಟಿಯರ್‌ನ ಪುಟಗಳ ಸಂಖ್ಯೆ ಆರುನೂರ ಎಂಬತ್ತನಾಲ್ಕು. ಇಂಗ್ಲಿಷ್ ಮೂಲದ ಸಂಪಾದಕರಾಗಲಿ, ಲೇಖಕರಾಗಲಿ ಯಾರೋ ಗೊತ್ತಿಲ್ಲ. ಪುಸ್ತಕದಲ್ಲಿ ಅವರ ಬಗ್ಗೆ ಎಲ್ಲೂ ಉಲ್ಲೇಖವಿಲ್ಲ.

'ವೆಂಕಟರಂಗೋ ಕಟ್ಟಿಯವರ ಭಾಷಾಂತರ ಭಾಷಾಂತರವೇ ಅಲ್ಲ; ಪುನಃಸೃಷ್ಟಿ. ಸಂದ ಕಾಲದ ಭಾಷೆಯ ಬಳಕೆಗೆ ಒಂದು ಅಪೂರ್ವ ಮಾದರಿ. ಸಾಧಾರಣ ತಿಳಿವಳಿಕಸ್ಥರಿಗೂ ಅರ್ಥವಾಗುವಷ್ಟು ತಿಳಿ. ಪ್ರಾದೇಶಿಕ ಸೊಗಡಿನ ಶಬ್ದಗಳು, ಅಪರಿಚಿತ ಪದ ಗಡಣ, ಮರ ಗಿಡ, ಜನ ಜಾತಿ, ಸರಕಾರಿ ಬಳಕೆಯ ಅಪರೂಪದ ಹೆಸರುಗಳು ಈ ಗೆಜೆಟಿಯರಿನಲ್ಲಿ ಮುಂಗಾರಿನ ಫಸಲಿನಂತೆ, ಯಥೇಚ್ಛ. ಒಂದು-ಒಂದೂವರೆ ಶತಮಾನದ ಮುಂಚಿನ ನಾಡಿನ ಬದುಕಿಗೂ ಈಗಿನದಕ್ಕೂ ಇರುವ ವ್ಯತ್ಯಾಸ ಸೂರ್ಯಪ್ರಖರ. ಆಗಿನ ಜಾತಿ ವ್ಯವಸ್ಥೆ, ನಂಬಿಕೆ ಆಚರಣೆ, ಉಡಿಗೆ ತೊಡಿಗೆ; ಆರ್ಥಿಕ, ಆಡಳಿತಾತ್ಮಕ ರೀತಿ ನೀತಿಯ ಬಣ್ಣನೆ ಕಥಾನಕದಂತೆ ಕುತೂಹಲಜನಕ. ವಿಭವಾಸಂಪನ್ನ ಮನಸ್ಸಿಗೆ ಈ ಗ್ರಂಥಾವಲೋಕನ, ಗತಕಾಲೀನ ಜೀವನದ ರಸ ಯಾನ.'

ಈ ವಾಕ್ಯಗಳು ಬೃಹದ್ಗ್ರಂಥದ ಕಿರು ಪರಿಚಯವನ್ನು ನೀಡುತ್ತವೆ.

ಇಲ್ಲಿ ವಿಷಯಗಳನ್ನು ಹದಿನೈದು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ನಾಲ್ಕೂ ಜಿಲ್ಲೆಗಳ ಭೌಗೋಳಿಕ ವಿವರಗಳು, ನೈಸರ್ಗಿಕ ಸಂಪತ್ತು, ಪಶು ಸಂಪತ್ತು, ನಿವಾಸಿಗಳ ಸಂಖ್ಯೆ, ಭಾಷೆ, ಜಾತಿಗಳ ವಿವರಗಳನ್ನು ವಿವರವಾಗಿ ಒಳಗೊಂಡಿರುವ ಈ ಗೆಜೆಟಿಯರ್‌ನಲ್ಲಿ ಆ ಕಾಲದ ಒಕ್ಕಲುತನ, ಕೈಗಾರಿಕೆ, ಬಂಡವಾಳ, ವ್ಯಾಪಾರ, ಇತಿಹಾಸಗಳ ಒಳನೋಟಗಳಿವೆ.

ಈ ಪುಸ್ತಕದಿಂದ ಉದಾಹರಣಾರ್ಥವಾಗಿ ನೀಡಲಾಗಿರುವ ಕೆಲವು ಆಯ್ದ ಪ್ಯಾರಾಗಳು ಆಗಿನ ಭಾಷೆ, ವರ್ಣನೆಗಳ ಪರಿಚಯ ನೀಡುತ್ತವೆ. ಅವುಗಳ ಪೈಕಿ ಒಂದು ಸ್ಯಾಂಪಲ್ ಹೀಗಿದೆ: 'ಬೈಲು ಶೀಮೆಯಲ್ಲಿ ನೀರಿನ ತಾಪತ್ರಯವಿದ್ದಷ್ಟು ಎಲ್ಲಿಯೂ ಇಲ್ಲ. ನದಿ ತೀರಗಳ ಹೊರ್ತು ಈ ರುಕ್ಷ ಪ್ರದೇಶದಲ್ಲಿ ನೀರಿನ ಸಮೃದ್ಧಿಯುಳ್ಳಂಥ ಗ್ರಾಮಗಳನ್ನು

ಕಾಣುವುದು ಬಹು ದುರ್ಲಭವು. ನೀರು ದೊರೆಯದ ಮೂಲಕ ಜನರ ಮೈ ಮೇಲಿನ ಬಟ್ಟೆಗಳು ಬಹು ಮಲಿನವಿರುತ್ತವೆ; ಅವರು ಯೆಂಟೆಂಟು ದಿವಸ ಸ್ನಾನ ಮಾಡುವುದಿಲ್ಲ; ಮನೆಗಳೂ ಓಣಿಗಳೂ ಕಲ್ಮಶದಿಂದ ತುಂಬಿರುತ್ತವೆ. ಬೇಸಿಗೆಯಲ್ಲಿ ವಿಶೇಷವಾಗಿ ಕೆಲ ಕೆಲವು ಗ್ರಾಮ ನಿವಾಸಿಗಳ ತಾಪತ್ರಯವನ್ನು ನೋಡಿದವರಿಗೆ ದಯೆ ಬರುತ್ತದೆ. ಬೆಳಿಗ್ಗೆ ಕೊಡ ಹಗ್ಗಗಳನ್ನು ಹೊತ್ತುಕೊಂಡು ಗಂಡಸರೂ ಹೆಂಗಸರೂ ಹರದಾರಿಗಿಂತ ಹೆಚ್ಚು ದೂರ ನಡೆದು ಹೋಗಿ ಒಂದು ಕೊಡ ನೀರು ಸಂಪಾದಿಸಿಕೊಂಡು ಮನೆಗೆ ಬಂದರೆ ಬಹು ಭಾಗ್ಯವೆಂದೆಣಿಸುತ್ತಾರೆ. ಆದ್ದರಿಂದ ಬೆಳಗಿನಿಂದ ಸಾಯಂಕಾಲದವರೆಗೆ ನೀರಿನದೊಂದೇ ಚಿಂತೆಯೂ ಯಾವತ್ತೂ ಜನರ ಮನಸ್ಸಿನಲ್ಲಿ ಕಟಿಯುತ್ತಿರುತ್ತದೆ. ಮನೆಗೆ ಯಾರಾದರೂ ಪರಸ್ಥರು ಬಂದರೆ ನೀರು ಮಾತ್ರ ಬೇಡ ಬೇಡಿರೆಂದು ಮನೆಯವರು ದೈನ್ಯದಿಂದ ಹೇಳಿಕೊಳ್ಳುತ್ತಾರೆ. ಮಾರ್ಗಸ್ಥರು ನಾಲ್ನಾಲ್ಕು ಹರದಾರಿ ನೀರು ಕಾಣದೆ ಬಳಲುವರು. ಬಾವಿಗಳೂ ಹಳ್ಳಗಳೂ ಸಣ್ಣ ಹೊಳೆಗಳೂ ಸಹ ಬೇಸಿಗೆಯಲ್ಲಿ ಬತ್ತುತ್ತವೆ. ಕೆಲವು ಬಾವಿಗಳಲ್ಲಿ ನೀರು ಅಲ್ಪಸ್ವಲ್ಪ ದೊರೆಯುತ್ತಿದ್ದರೆ, ಅದು ಪಾತಾಳಕ್ಕೆ ಇಳಿದ ಹಾಗೆ ಕಾಣಿಸುತ್ತದೆ; ಅದನ್ನು ಮೇಲಿನಿಂದ ನೋಡುವವರ ಕಣ್ಣು ತಿರುಗುತ್ತವೆ. ಆ ನೀರು ಕೈಗೆ ಬರುವ ಪೂರ್ವದಲ್ಲಿ ಅದನ್ನು ಬಯಸುವವರ ಕಣ್ಣೊಳಗಿನಿಂದ ನೀರು ಸುರಿಯಹತ್ತುತ್ತದೆ.'

ಜೋಗ ಜಲಪಾತದ ವಿಷಯವಾಗಿ ಈ ಪುಸ್ತಕದಲ್ಲಿ ಕಂಡು ಬರುವ ವರ್ಣನೆ ಗಮನಾರ್ಹ ಎಂದು ಆ ಭಾಗವನ್ನು ಉಲ್ಲೇಖಿಸುತ್ತಾರೆ, ನಿಸಾರರು:

'ಬೇರೆ ಬೇರೆ ಎಸಳುಗಳಾಗಿ ೮೩೦ ಫೂಟು ಆಳವಾದ ತಗ್ಗಿನಲ್ಲಿ ಬೀಳುತ್ತದೆ... ಹೊಳೆ ಬೀಳುವ ಸ್ಥಳದಲ್ಲಿ ಗುಡ್ಡದ ಅಂಚು ಹಿಡಿ ಸಹಿತ ಖುರುಪೆಯ ಆಕಾರವಾಗಿರುತ್ತದೆ; ಖುರುಪೆಯಂತೆ ಮಣಿದ ಭಾಗವು ಕಾರವಾರದ ದಿಕ್ಕಿನಲ್ಲಿ, ಹಿಡಿಯಂತೆ ಸರಳಾಗಿದ್ದ ಭಾಗವು ಮಂಗಳೂರಿನ ದಿಕ್ಕಿನಲ್ಲಿ ಇರುತ್ತದೆ. ಉತ್ತರದ ವಕ್ರ ಭಾಗದ ಮೇಲಿಂದ ಎರಡು ಸರಳುಗಳೂ ದಕ್ಷಿಣದ ಸರಳ ಭಾಗದ ಮೇಲಿಂದ ಎರಡು ಸರಳುಗಳೂ ಬೀಳುತ್ತವೆ. ಈ ನಾಲ್ಕು ಸರಳುಗಳಿಗೆ ಯೂರೋಪಿಯನ್ ಪ್ರೇಕ್ಷಕರು ರಾಜಾ, ರೋಅರರ (ಅಬ್ಬರಗಡಕ), ರಾಕೆಟ್ (ಬಾಣ), ಡೆಮ ಬ್ಲಾಂಕಿ(ಬಿಳಿ ಮುದಿಕೆ)ಯೆಂಬ ಹೆಸರುಗಳನ್ನು ಕೊಟ್ಟಿದ್ದಾರೆ... ದಕ್ಷಿಣಕ್ಕೆ ಸುಮಾರು ೧,೦೦೦ ಫೂಟಿನ ಅಂತರದ ಮೇಲೆ ಅಬ್ಬರಗಡಕವೆಂಬ ಸರಳು ಬೀಳುತ್ತದೆ. ಇದರ ಅಬ್ಬರ ಬಹಳ, ಎರಡು ಮೈಲಿಗಿಂತ ಹೆಚ್ಚು ದೂರ ಕೇಳಿಸುತ್ತದೆ.'

ಈ ಪುಸ್ತಕದ 'ನಿವಾಸಿಗಳು' ಎಂಬ ಜನರ ಜಾತಿ, ಮತಗಳ ಬಗ್ಗೆ ಇರುವ ಅಧ್ಯಾಯದಿಂದ ಕೆಲವು ಭಾಗಗಳನ್ನು ಹೆಕ್ಕಿ ತೆಗೆದು ಈ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಜಾತಿಗಳ ಬಗ್ಗೆ ದೊಡ್ಡ ಪಟ್ಟಿಯನ್ನೇ ಕೊಟ್ಟು ಅವರ ಜೀವನ ಶೈಲಿ, ಆಚಾರ-ವಿಚಾರಗಳು, ನಂಬಿಕೆಗಳು, ಜನಸಂಖ್ಯೆ, ಆರಾಧನಾ ಪದ್ಧತಿ ಮುಂತಾದವುಗಳ ಬಗ್ಗೆ ನೀಡಲಾಗಿರುವ ವಿವರಗಳು ಅತೀವ ಕುತೂಹಲಕಾರಿಯಾಗಿವೆ. ಸುಮಾರು ೨೯೦ ಜಾತಿ ಹಾಗೂ ಒಳ ಭೇದಗಳ ವಿವರಗಳಿವೆ. ಜಾತಿಗಳ, ಒಳ ಪಂಗಡಗಳ ಬಗ್ಗೆ ವಿಸ್ತೃತವಾದ ವಿವರಗಳಿವೆ.

ಬ್ರಾಹ್ಮಣರ ಬಗ್ಗೆ ವಿವರ ಹೀಗಿದೆ: 'ಮಾಧ್ವ ವೈದಿಕರು ಊಟ ಮಾಡುವುದರಲ್ಲಿ

ಹೆಸರಾದವರು. ದೇಶಸ್ಥರು ಹೆಣವನ್ನು ಸುಡುತ್ತಾರೆ. ಸಂನ್ಯಾಸಾಶ್ರಮ ತಕ್ಕೊಂಡವರ ಹೆಣಗಳನ್ನು, ಮೂರು ವರ್ಷದೊಳಗಿನ ಕೂಸುಗಳನ್ನು ಹುಗಿಯುತ್ತಾರೆ... ದೇಶಸ್ಥರೊಳಗೆ ಹೆಣ ಹೊರುವುದಕ್ಕೆ ಬಹಳ ಹಿಂದೆ ಮುಂದೆ ನೋಡುತ್ತಾರೆ. ಬಡವರ ಮನೆಯಲ್ಲಿ ಯಾರಾದರೂ ಸತ್ತರೆ ಹಣ ಕೊಟ್ಟ ಹೊರತು ಹೆಣ ವೊಯ್ಯುವುದಿಲ್ಲ... ಕಾರವಾಡದ ದೇಶಸ್ಥರು ಲಗ್ನದ ಮೂರನೇ ದಿವಸ ಮೆರವಣಿಗೆಯಲ್ಲಿ ಮದಿ ಮಗನನ್ನು ಕುದುರೆಯ ಮೇಲೆ ಕುಳ್ಳಿರಿಸಿ, ಮದಿ ಮಗಳನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸುವರು. ಅವರಿಬ್ಬರಿಗೆ ಮುಸಲ್ಮಾನರಂತೆ ಪೋಷಾಕು ಹಾಕಿ ಮದಿ ಮಗನ ಕೈಯಲ್ಲಿ ಕತ್ತಿ ಢಾಲುಗಳನ್ನು ಕೊಡುವರು. ಮದಿ ಮಗಳಿಗೆ ಬುರಕಿ ಹಾಕುವರು. ಇವರಲ್ಲಿ ಯಾರಾದರೂ ಸತ್ತರೆ ಹೆಣದ ಮೋರೆಗೆ ಶೇಡೀ ಮಣ್ಣು ಹಚ್ಚುವರು.'

ಆ ದಿನಗಳ ಶ್ರೀವೈಷ್ಣವರ ಬಗೆಗಿನ ವಿವರಣೆಯೂ ಕುತೂಹಲಕರವಾಗಿದೆ. 'ಶ್ರೀ ವೈಷ್ಣವರು ಮೀಶಿಯ ಮೇಲಿನ ನೀರು ಬಾಯೊಳಗೆ ಹೋದರೆ ಅದು ಮದ್ಯ ಸಮಾನವೆಂದು ತಿಳಿದು ತಮ್ಮ ತಂದೆ ತಾಯಿಗಳಿದ್ದರೂ ಮೀಶಿಯನ್ನು ಬೋಳಿಸುವರು. ಹೆಂಗಸರು ಗಾಜಿನ ಬಳೆಯನ್ನು ಅಶುದ್ಧವೆಂದು ತಿಳಿದು ಅವುಗಳನ್ನು ಕೈಯಲ್ಲಿ ಇಟ್ಟುಕೊಳ್ಳುವುದಿಲ್ಲ.'

ನಿಸಾರರು ಗೆಜೆಟಿಯರ್‌ನಿಂದ ಬ್ರಾಹ್ಮಣರ ವಿವಿಧ ಕೋಮುಗಳವರ ಬಗ್ಗೆ ಉದಾಹರಿಸಿರುವ ಪ್ಯಾರಾಗಳು ಬಹಳ ಆಸಕ್ತಿಕರವಾಗಿದೆ. ಚಿತ್‌ಪಾವನರು, ಕೊಂಕಣಿಯವರು, ತೆಲುಗು ಬ್ರಾಹ್ಮಣರು, ಎಲೆ ಬಳ್ಳಿಯ ಬ್ರಾಹ್ಮಣರು, ಹವಿಕರು ಮೊದಲಾದವರ ಬಗ್ಗೆ ಉಲ್ಲೇಖವಾಗಿರುವ ಸಂಗತಿಗಳು ಹುಬ್ಬೇರಿಸುವಂತಿವೆ.

ಲಿಂಗಾಯತರು, ಒಕ್ಕಲಿಗರು, ರಜಪೂತರು, ವರ್ತಕರು ಹೀಗೆ ಭಾಗಗಳನ್ನು ಮಾಡಿ ಆಯಾ ಜನಾಂಗಗಳ ವಿವರಗಳನ್ನು ನೀಡುತ್ತಾರೆ. ಲಿಂಗಾಯತರಲ್ಲಿ ಮೂವತ್ತೊಂದು ಒಳ ಪಂಗಡಗಳು, ವರ್ತಕರ ಪಂಗಡದಲ್ಲಿ ಇಪ್ಪತ್ತೈದು ಜಾತಿಗಳು. ಒಕ್ಕಲುತನ ಮಾಡುವವರಲ್ಲಿ ಮೂವತ್ತು ಮೂರು ಉಪ ಜಾತಿಗಳು.

ದಿನಸಿ ಅಂಗಡಿ ಇಟ್ಟವರನ್ನು ಸಾಳಿಗಳು ಎನ್ನುತ್ತಾರಂತೆ. '...ಸಾಳಿಗಳಲ್ಲಿ 'ಸುಂತಾ ಸಾಳಿ' ಎಂಬ ಜಾತಿಯಿದೆ. ಇವರು ಹಿಂದೆ ಮುಸಲ್ಮಾನರಾದವರು; ಆಮೇಲೆ ಹಿಂದುಗಳಾಗಿ ಪರಿವರ್ತನೆಗೊಂಡವರು; ಎಂದೇ ಅವರಿಗೆ ಈ ನಾಮಧೇಯ. ಇವರಲ್ಲಿ 'ಸುಂತಿ' (ಸುನ್ನತಿ ಅಥವಾ ಖತ್ನ) ಮಾಡುವ ನಡಾವಳಿಯಿರುವುದಲ್ಲದೆ ಇನ್ನೆಷ್ಟೋ ವಿಷಯಗಳಲ್ಲಿ ಮುಸ್ಲಿಮರಂತೆ ನಡೆದುಕೊಳ್ಳುತ್ತಾರೆ.'

ಮುಸಲ್ಮಾನರಲ್ಲಿ ನಲವತ್ತನಾಲ್ಕು ಒಳ ಪಂಗಡಗಳನ್ನು ಗುರುತಿಸಲಾಗಿದೆ. ಕ್ರೈಸ್ತರಲ್ಲಿ ಎಂಟು ಒಳ ಪಂಗಡಗಳು. ಇವರ ಬಗೆಗಿನ ವಿವರಗಳೂ ಈ ಲೇಖನದಲ್ಲಿವೆ.

ಇನ್ನೊಂದು ಅತ್ಯಂತ ಸ್ವಾರಸ್ಯಕರ ಅಂಶವೆಂದರೆ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಉಂಟಾಗುತ್ತಿದ್ದ ಬರಗಾಲಗಳದ್ದು. ೧೩೯೬ನೇ ಇಸವಿಯಲ್ಲಿ ಬಂದ 'ದುರ್ಗಾದೇವಿ' ಎಂಬ ಕ್ಷಾಮದ ಉಲ್ಲೇಖದಲ್ಲಿ ೧೨ ವರ್ಷಗಳ ಕಾಲ ಆ ಪ್ರದೇಶ ಉಧ್ವಸ್ತಗೊಂಡಿತೆಂದು ಹೇಳುತ್ತಾರೆ. ಅಂದಿನಿಂದ ೧೮೭೬ರವರೆಗೆ ಹದಿನೈದು ಭಯಂಕರ ಕ್ಷಾಮಗಳು ಬಂದವಂತೆ.

೧೭೯೧ರ ಕ್ಷಾಮಕ್ಕೆ 'ಡೋಗಿ ಬರ' ಎಂಬ ಹೆಸರು. ಏಕೆಂದರೆ ಡೋಗಿಗಳು (ಅಂದರೆ ಮನುಷ್ಯರ ತಲೆ ಬುರುಡೆಗಳು) ದಿಕ್ಕಿಲ್ಲದೆ ಎಲ್ಲೆಂದರಲ್ಲಿ ಉರುಳಾಡುತ್ತಿದ್ದುವಂತೆ. ಆದ್ದರಿಂದ ಆ ಹೆಸರು.

ಹೀಗೆ ಶಿಕ್ಷಣತಜ್ಞ ವೆಂಕಟರಂಗೋ ಕಟ್ಟಿಯವರು ಅನುವಾದಿಸಿದ ಗೆಜೆಟಿಯರ್ ಆ ಕಾಲದ ಒಂದು ಅದ್ಭುತ ದಾಖಲೆ ಗ್ರಂಥ. ಇದೇನು ಅಷ್ಟು ಪ್ರಚಲಿತವಾದ ಪುಸ್ತಕವಲ್ಲ. 1893ರಲ್ಲಿ ಅದರ ಮೊದಲ ಮುದ್ರಣ ಬೆಳಕು ಕಂಡಾಗ ಐನೂರು ಪ್ರತಿಗಳನ್ನು ಮಾತ್ರ ಮುದ್ರಿಸಲಾಗಿತ್ತಂತೆ. ತುಸು ದೊಡ್ಡದೇ ಎನ್ನಬಹುದಾದ ಈ ಲೇಖನದಲ್ಲಿ ನಿಸಾರರು ಅನೇಕ ವಿವರಗಳನ್ನು ಸೇರಿಸಿ, ಉದಾಹರಣೆಗಳನ್ನು ನೀಡಿ ಲೇಖನವನ್ನು ಕುತೂಹಲಭರಿತವನ್ನಾಗಿ ಮಾಡಿದ್ದಾರೆ. ಈ ಲೇಖನವನ್ನು ಓದಿದ ಆಸಕ್ತರು ಮೂಲ ಗ್ರಂಥವನ್ನು ಓದಬೇಕೆಂಬ ಪ್ರೇರಣೆಗೊಳಗಾಗುತ್ತಾರೆ.

—ನಿಸಾರರ ಈ ನಾಲ್ಕು ಲೇಖನಗಳಲ್ಲಿ ಒಂದೊಂದೂ ಒಂದೊಂದು ಬಗೆಯದು. ಒಂದು ಪುಸ್ತಕ ಸಂಸ್ಕೃತಿ ಹಾಗೂ ನ್ಯಾಷನಲ್ ಬುಕ್ ಟ್ರಸ್ಟ್‌ನ ಬಗ್ಗೆ ಇದ್ದರೆ, ಇನ್ನೊಂದು ನಮ್ಮ ಚುನಾವಣೆಗಳ ನಗ್ನಚಿತ್ರವನ್ನು ನೀಡುವಂಥದು. ಮೂರನೆಯದು ಒಂದು ಸಾಪ್ತಾಹಿಕದ ಇತಿಹಾಸವೆನಿಸಿದರೆ ನಾಲ್ಕನೆಯದು ನೂರಕ್ಕೂ ಹೆಚ್ಚು ವರ್ಷಗಳ ಹಿಂದೆ ಪ್ರಕಟವಾದ ಒಂದು ಮಹತ್ವದ ಗೆಜೆಟಿಯರ್ ಬಗ್ಗೆ ಬರೆದಿರುವುದು. ಪ್ರತಿಯೊಂದರಲ್ಲೂ ಅಪರೂಪದ ಹೊಳಹುಗಳಿವೆ, ಮುಖ್ಯ ವಿಷಯಗಳ ಸಂಗ್ರಹವಿದೆ. ಆಕರ್ಷಕವಾಗಿ ಹೇಳುವ ಶೈಲಿ ಇದೆ. ಭೂವಿಜ್ಞಾನ ಓದಿ, ೩೪ ವರ್ಷಗಳ ಕಾಲ ಆ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಿದ ಡಾ. ಕೆ. ಎಸ್. ನಿಸಾರ್ ಅಹಮದ್‌ರು ಕವಿಯಾಗಿ ಎಷ್ಟು ಸಮರ್ಥರೆನ್ನಿಸಿ ಕೊಂಡಿರುವರೋ ಅಷ್ಟೇ ಸಾಮರ್ಥ್ಯವನ್ನು ಅಂಕಣ ಬರಹಗಳಲ್ಲೂ ತೋರಿಸಿದ್ದಾರೆ ಎಂಬುದಕ್ಕೆ ಈ ನಾಲ್ಕು ಲೇಖನಗಳು ಒಳ್ಳೆಯ ಉದಾಹರಣೆಗಳು.

ತನಗೆ ರುಚಿಸಿದ್ದೇ, ಆಕರ್ಷಿಸಿದ್ದೇ, ತತ್‌ಕ್ಷಣ ಮಜ ಕೊಡತಕ್ಕದ್ದೆ ಹಿತಕಾರಿ ಯೆಂದೂ ಹಾಗಲ್ಲದ್ದು ಭೈರಿಗೆಯ ಸಾಮಗ್ರಿಯೆಂದೂ ದೂರ ಸಿಡಿಯ ಬೇಕಾದ್ದಿಲ್ಲ. ಮೈಗೆ ಒಳಿತಾದದ್ದನ್ನು ಯಾವಾಗಲೂ ನಾಲಗೆಯ ಸವಿಯೇ ನಿರ್ಧರಿಸದು. ಜೀವಕ್ಕೆ ಉತ್ಕರ್ಷಕವಾದದ್ದನ್ನು, ಶುಭವಾದದ್ದನ್ನು ಕಾವ್ಯದಲ್ಲಿ ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ಗುಡಾಣದ ಇಲಿಗೆ ಮತ್ತು ಗಣೇಶ ಸಂಗಾತಿ ಮೂಷಿಕಕ್ಕೆ ಯಾವ ಸಾಮ್ಯ? ತತ್ತಿಗಳೆಲ್ಲ ಹೊರಕ್ಕೆ ಒಂದೇ ಥರ. ಒಳಗನ್ನು ಪರೀಕ್ಷಿಸದೆ ಒಳ್ಳೆಯದೊ, ಕೆಟ್ಟದ್ದೊ ನಿರ್ಣಯಿಸಲಾಗದು.

(ಅಭಿರುಚಿ-ಹಿತ)



ನಿಸಾರರ ಗದ್ಯಸಾಹಿತ್ಯದಲ್ಲಿ ವ್ಯಕ್ತಿಚಿತ್ರಣಗಳ ಅನನ್ಯತೆ

♦ ಡಾ. ವಿ. ವಸಂತಶ್ರೀ

ನಿಸಾರರ ಗದ್ಯರೂಪಗಳಿಗೆ ಹಿನ್ನೆಲೆಯಾದ ಅವರ ಚಿಂತನೆ

'ಮನುಷ್ಯನ ಮನೋಹೃದಯಗಳು ಇತರರ ಆಂತರ್ಯ ದಲ್ಲಿ ತಮ್ಮ ಅಮರತ್ವವನ್ನು, ಅಸ್ತಿತ್ವದ ಚಿರಂತನತೆಯನ್ನು ಹಾರೈಸುತ್ತಿರುತ್ತವೆ; ಮತ್ತು ಆ ದಿಶೆಯಲ್ಲಿ ಪ್ರಯತ್ನಶೀಲ ವಾಗುತ್ತಿರುತ್ತವೆ. ಈ ಹಾರೈಕೆ ಮತ್ತು ಪ್ರಯತ್ನದ ಫಲ ಶ್ರುತಿಯೇ ಸಾಹಿತ್ಯ, ಕಲೆಗಳು.' ಎಂಬ ರವೀಂದ್ರನಾಥ ಠಾಕೂರರ ಮಾತುಗಳನ್ನು ನಿಸಾರರ ವ್ಯಕ್ತಿಚಿತ್ರಣಗಳ ಹಿನ್ನೆಲೆಗೆ ಬಹಳ ಚೆನ್ನಾಗಿ ಅನ್ವಯಿಸಬಹು! ನಿಸಾರರ ಕೃತಿ ರಚನೆಗಳ 'ನೇಪಥ್ಯದಲ್ಲಿ ಕ್ರಿಯಾಶೀಲವಾಗಿ ತೊಡಗಿರುವುದು' ಅವರ 'ಅಂತರ್ಮುಖೀ ಸ್ವಭಾವ.' ಅವರ ಚಿಂತನೆ ಗದ್ಯರೂಪ ದಲ್ಲಿಯಾಗಲಿ, ಕವಿತೆಯಾಗಿ ಆಗಲಿ ಹೊಮ್ಮಿರುವುದು ಆ ರೂಪಕ್ಕೆ 'ಚರ್ಮ'ವಾಗಿ. ಗದ್ಯರೂಪದ ಸಾಹಿತ್ಯದಲ್ಲಿ ಮುಕ್ಕಾಲು ತಮ್ಮ ಆಂತರ್ಯದ ಬೆಳವಣಿಗೆಗಾಗಿ, ತಮ್ಮದೇ ಅಧ್ಯಯನವನ್ನು ತೊಡಗಿಸಿಕೊಂಡಾಗ ಮೂಡಿದವು; ಅವು ಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಇದ್ದ ಅಭಿಲಾಷೆ ಗದ್ಯ ಮಾಧ್ಯಮದಲ್ಲಿ ರೂಪುಗೊಂಡಿತೆನ್ನಬಹುದು. ಪ್ರಸ್ತುತ ಈ ಲೇಖನವು 'ಬಾಳಿನ ಬೇರೆ ಬೇರೆ ಪ್ರಕಾರಗಳಲ್ಲಿ ವಿಶಿಷ್ಟ ವ್ಯಕ್ತಿಗಳು ಮಾಡಿರುವ ಅಮೋಘ ಸಾಧನೆಗಳನ್ನು ಕುರಿತು ಮತ್ತು ಅವುಗಳಿಗೆ ಪೂರ್ವಭಾವಿಯಾಗಿ ಅವರವರ ವೈಯಕ್ತಿಕ ಪರಿಚಯವನ್ನು ಕೊಟ್ಟಿರುವುದ'ರಲ್ಲಿರುವ ಅನನ್ಯತೆಯನ್ನು

ಕಂಡು ಅವಲೋಕಿಸುತ್ತದೆ. ಈ ಅವಲೋಕನವು, ನಿಸಾರರು ಆಯ್ದು ಬರೆದಿರುವ ವ್ಯಕ್ತಿಗಳು ಮತ್ತು ಆ ಬರಹದಲ್ಲಿ ಬಳಸಿರುವ ಉಪಮೆಗಳು, ಪದಗಳು ಇವುಗಳನ್ನು ಪ್ರಸ್ತಾಪಿಸುತ್ತದೆ.

ನಿಸಾರರ 'ಸಮಗ್ರ ಗದ್ಯ ಬರಹಗಳು' ಕೃತಿಯನ್ನೋದುತ್ತಾ ನಾನು ಪಟ್ಟಿ ಹಾಕಿರುವುದು ೨೯ ವ್ಯಕ್ತಿಗಳು.

ನಿಸಾರರ ವ್ಯಕ್ತಿ ಚಿತ್ರಣಗಳಲ್ಲಿ ಅನನ್ಯತೆ ಎಲ್ಲಿ, ಯಾವ ಚೌಕಟ್ಟಿನಲ್ಲಿ ಕಾಣ ಬಹುದು?

ಮೊಟ್ಟಮೊದಲಿಗೆ ವ್ಯಕ್ತಿಚಿತ್ರಣಗಳ ಅನನ್ಯತೆಯಿರುವುದು ರಚನೆಗಳಲ್ಲಿ ನುರಿತ ಅನುಭವ ಪಡೆಯುತ್ತಿದ್ದ ಮನಸ್ಸು ಕೃಷಿ ಮಾಡಿದುದರ ಸ್ವರೂಪವನ್ನು ಒಂದು ಗದ್ಯರೂಪ ದಲ್ಲಿ ಮೂಡಿಸಿದುದರಲ್ಲಿ. ವಿಶಿಷ್ಟ ವ್ಯಕ್ತಿಗಳು ಮಾಡಿರುವ ಸಾಧನೆಯನ್ನು ಕೊಂಡಾಡಿದ ಮನಸ್ಸು, ಅವರ ವೈಯಕ್ತಿಕ ಪರಿಚಯವನ್ನೂ ತಿಳಿಯಬಯಸಿದುದರಲ್ಲಿ. ಪ್ರಧಾನವಾಗಿ ಕವಿಯಾದ ಸಾಹಿತಿ ತನ್ನದೇ ಬೆಳವಣಿಗೆಗೆ, ತನ್ನ ಮನದ ಅಭ್ಯುದಯಕ್ಕೆ ಪ್ರಯತ್ನ ನಡೆಸಿ, ಮಾಡಿದ ಪರ್ಯಾಲೋಚನೆಗಳನ್ನು ಇತರರೊದಿಗೆ ಹಂಚಿಕೊಳ್ಳಬಯಸಿದುದು ಇಲ್ಲಿ ಉಲ್ಲೇಖನಿಯ. ಈ ಬಯಕೆ ಪದ್ಯರೂಪದಲ್ಲಿ ಹೊರಬರುವುದು ಸಾಧ್ಯವಿಲ್ಲ. ಕಾವ್ಯದ ಇತಿಮಿತಿಗಳು ಇದನ್ನು ತಡೆಯುತ್ತವೆ. ಇವು ಗದ್ಯವಾಗಿಯೇ ಬರಬೇಕು. ಸಾಮರ್ಥ್ಯ ಪಡೆದಿರುವ ಸಾಹಿತಿ ತನ್ನ ಬರಹದ ಚತುರತೆಯನ್ನು ಕಾವ್ಯಕ್ಕೇ ಮಿತಗೊಳಿಸಬೇಕಾಗಿಲ್ಲ. ತನ್ನ ಆಲೋಚನೆಗಳಿಗೆ ಯಾವ ಮಾಧ್ಯಮ ಸೂಕ್ತವೋ ಅದರಲ್ಲಿ ಅವನ್ನು ವ್ಯಕ್ತಪಡಿಸಲು ಬಳಸಿಕೊಳ್ಳುವುದರಲ್ಲಿರುವುದೇ ಕವಿಗೆ ಇರುವ ಶಕ್ತಿ ಸಾಮರ್ಥ್ಯಗಳ ಅನನ್ಯತೆ. ಈ ಬರಹಗಳು ೧೯೬೦ ರಿಂದ ೧೯೯೮ರ ವರೆಗೆ ಹೊರಬಂದಿವೆ. ಎಂದರೆ ಕವಿ, ವಿಜ್ಞಾನದ ಅಧ್ಯಾಪನ, ಅಧ್ಯಯನಗಳಲ್ಲಿ ಕೆಲಸ ಮಾಡುತ್ತಿದ್ದಾಗಲೇ ಇವುಗಳ ಬಗ್ಗೆ ಚಿಂತನೆಯ ಕೃಷಿ ಮಾಡಿದ್ದಾರೆ. ಇದರಲ್ಲಿರುವುದೇ ಅನನ್ಯತೆ.

ನಿಸಾರರ ವ್ಯಕ್ತಿಚಿತ್ರಣದ ಹರಹು

ಈ ವ್ಯಕ್ತಿಗಳು ಯಾರು? (ಕೊನೆಯಲ್ಲಿ ಕೊಟ್ಟಿರುವ ಪಟ್ಟಿ ನೋಡಿ) ಚಿತ್ರಣಗಳಲ್ಲಿ ಪ್ರಧಾನವಾಗಿ ಕಾಣಬರುವುದು ಕಾವ್ಯರಚನಕಾರರೇ. ಸಾಹಿತಿಗಳು ತದನಂತರ ಸೇರಿದ್ದಾರೆ. ಇದರಾಚೆ ಇತರ ಭಾಷೆಯ ಭಾರತೀಯ ಸಾಹಿತಿಗಳು, ಪರದೇಶದ ಹಳೆಯ ಹೊಸ ಸಾಹಿತಿಗಳು ಇವರ ಅಧ್ಯಯನಕ್ಕೆ, ಪರ್ಯಾಲೋಚನೆಗೆ ಬಂದಿದ್ದಾರೆ. ಕನ್ನಡ ಭಾಷೆಯ ಸಾಹಿತಿಗಳಲ್ಲಿ ಸುಮಾರು ಹದಿನೈದು ಜನರಲ್ಲಿ ಅಡಿಗರನ್ನು ಬಿಟ್ಟರೆ, ಮಿಕ್ಕವರು ಇವರಿಗೆ ವಯಸ್ಸಿನಲ್ಲಿ ಬಹಳಷ್ಟು ಹಿರಿಯರೇ.

ಪ್ರಸ್ತುತ ಈ ಗದ್ಯ ಸಂಕಲನದಲ್ಲಿ ಅಳವಡಿಸಿರುವ ೨೯ ಮಹನೀಯರೂ ಅವರವರ ಕ್ಷೇತ್ರಗಳಲ್ಲಿ ದಿಗ್ಗಜಗಳು. ಇವರೆಲ್ಲರ ಪರಿಚಯ ನಮಗೆ ಇಷ್ಟು ಸುಲಭವಾಗಿ ಕೈಗೆಟುಕು ವಂತಿರುವುದು ಒಂದು ಅನನ್ಯ ಅಚ್ಚರಿ. ಚೊಕ್ಕವಾಗಿ ಸಂಗ್ರಹಣ ಬಂದಿರುವುದರಿಂದ ಗ್ರಹಿಕೆ ಕಷ್ಟತಮವಲ್ಲ. ನಮಗೆ ಇಷ್ಟರಾದ ಹಲವರ ಬಗ್ಗೆ ಮತ್ತಷ್ಟು ತಿಳಿಯುವ ಆಸಕ್ತಿಯೂ ಮೂಡಿಸುತ್ತದೆ. ನಿಸಾರರು ಕನ್ನಡ ಸಾಹಿತಿಗಳಲ್ಲಿ ಹಲವರನ್ನು ಅವರ ಕೃತಿಗಳ ಮೂಲಕ

ವಿವರಗಳನ್ನು ನೀಡಿ, ಇನ್ನು ಹಲವರ ವ್ಯಕ್ತಿ ಪರಿಚಯ ಮಾಡಿಕೊಡುತ್ತಾರೆ.

ತಾವೇ ಭೇಟಿಮಾಡಿ, 'ಒಂದೊಂದು ಭೇಟಿಯೂ ಒಂದೊಂದು ಜ್ಞಾನಾಭ್ಯಂಜನ ಎಂದು ಪರಿಗಣಿಸಿ', ಮಾತನಾಡಿದ ಹಿರಿಯ ಸಾಹಿತಿಗಳನ್ನು ಕುರಿತು ನಿಸಾರರು ಮೂಡಿಸಿರುವ ಬರಹಗಳು ಅವರು ಬೆಳೆಸಿಕೊಂಡ ಪ್ರೀತಿ, ವಿಶ್ವಾಸ, ಗೌರವಗಳನ್ನು ಮುಕ್ತವಾಗಿ ತೆರೆದಿಡುತ್ತವೆ. ಹಿರಿಯರಲ್ಲಿ ಒಂದು ಸಲಿಗೆಯಿದ್ದು ಗಂಭೀರವಾಗಿ ನಡೆದುಕೊಂಡೂ, ಕೊನೆಗೆ ಟೀಕೆ ಮಾಡುವುದಕ್ಕೆ ಹಿಂತೆಗೆಯದೆ ನಯವಾಗಿ ಟೀಕಿಸಿ, ಅವರ ಬಗ್ಗೆ ತಮಗಿದ್ದ ಆತ್ಮೀಯತೆಯನ್ನು ಕುರಿತು ಸಂಭ್ರಮಿಸಿ, ತಮ್ಮ ಸಂತೋಷವನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಇದರಲ್ಲಿದೆ ಅನನ್ಯತೆ. ಮೊಟ್ಟಮೊದಲ ಕನ್ನಡದ ಹಾಡುಗಳ ಧ್ವನಿಸುರುಳಿ ಬಂದುದು ನಿಸಾರರ 'ನಿತ್ಯೋತ್ಸವ'ವಷ್ಟೆ? ಇದು ಸಿದ್ಧವಾಗಲು, ಮತ್ತು ತಮ್ಮ ಇತರ ಕವನಗಳನ್ನು ಗೇಯ ರೂಪಕ್ಕೆ ತರಲು ಒತ್ತುಕೊಟ್ಟ ಇಬ್ಬರು ಸಂಗೀತಗಾರರ ಪರಿಚಯವನ್ನು ಬಹಳ ಆತ್ಮೀಯತೆಯಿಂದ ಹೃದಯ ಕಲಕುವಂತೆ ಮಾಡಿಸಿದ್ದಾರೆ. ಅವರೊಂದಿಗೆ ಇನ್ನು ಹಲವು ಆತ್ಮೀಯರೂ ಸೇರಿ ನಮ್ಮ ನೆನಪನ್ನು ಕೆದಕುತ್ತಾರೆ.

ನಿಸಾರರು ಬಹಳ ಹತ್ತಿರದಿಂದ ನೋಡಿ, ಆದಾಗಲೆಲ್ಲಾ ಭೇಟಿಮಾಡಿ, ಒಡನಾಡಿ, ತಮ್ಮದೇ ಕಾವ್ಯಸೃಷ್ಟಿಗೆ ಉತ್ತೇಜನವನ್ನು ಪಡೆದ ಕೆಲವು ಹಿರಿಯ ಸಾಹಿತಿಗಳನ್ನು ಕುರಿತು ಕೊಟ್ಟಿರುವ ವ್ಯಕ್ತಿ ಚಿತ್ರಣ ನಮಗೂ ಆ ಹಿರಿಯರ ಸನಿಹ ದರ್ಶನ ಆದಂತೆ ಕಾಣಿಸುತ್ತದೆ. ನನ್ನದೇ ಪ್ರತಿಕ್ರಿಯೆಯನ್ನು ಕೊಡಲು ನನ್ನ ನೆನಪುಗಳಿಗೂ ನಿಸಾರರ ಚಿತ್ರಣಕ್ಕೂ ಬರುವ ಸಂಬಂಧವನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಮಾಸ್ತಿಯರನ್ನು ಕಾಣಲು ಅನೇಕರು 'ಮಾಸ್ತಿ ಮನೆ'ಗೆ ಬಂದುಹೋಗಿರುವುದು, ಶಾಲೆಗೆ ಹೋಗುತ್ತಿದ್ದ ನಾವು ಚಿಕ್ಕಮಕ್ಕಳು ಅಂತಹ ಮಹಾನ್ ಚೇತನರನ್ನು ಎದುರಿಗೇ ಕಂಡಿರುವುದು ಎರಡೂ ಸೇರಿ, ವೈಯಕ್ತಿಕವಾಗಿ ನನಗೆ ಈ ಗದ್ಯಚಿತ್ರಣ ಒಂದು ಅಪೂರ್ವ ಅನುಭವವನ್ನು ತಂದುಕೊಟ್ಟಿದೆ. ಅಜ್ಜನವರು, ಅವರ ಟೋಪಿ, ಇಸ್ಪೀಟಾಟ, ಕಿಸೆಯಲ್ಲಿಟ್ಟುಕೊಂಡಿರುತ್ತಿದ್ದ ಚಾಕಲೇಟು, ಗಾಂಧಿಬಜಾರಿನ ಮರಗಳಡಿಯಲ್ಲಿ ಛತ್ರಿ ಹಿಡಿದುಕೊಂಡು ನಡೆದು ಹೋಗುತ್ತಿದ್ದದ್ದು ಎಲ್ಲಾ ನಿಸಾರರ 'ಅಮರ' ಪದ್ಯದಲ್ಲಿ ಛಟ್ಟಿ ಇಳಿದಿದ್ದರೆ, ಮಾಸ್ತಿ ಶತಮಾನದ ಸಂದರ್ಭದಲ್ಲಿ ಬಳಸಿದ 'ಮಾತುಗಾರ ರಾಮಣ್ಣ'*ನಿಗೆ ಬರೆದುಕೊಟ್ಟ ಪ್ರಸ್ತಾವನೆ ಮತ್ತು ನೆನಹುಗಳು ಇವಕ್ಕೆ ಮತ್ತಷ್ಟು ಪುಟ ಕೊಟ್ಟಿವೆ. ಮನೆಯಲ್ಲಿ ನಡೆಯುತ್ತಿದ್ದ ಕವಿಗೋಷ್ಠಿಗೆ ನಿಸಾರರು ಚಿತ್ರಿಸಿರುವ ಅನೇಕರು ಬರುತ್ತಿದ್ದರು: ಅನೇಕ ಸಲ ಡಿ.ವಿ.ಜಿ., ಜಿ.ಪಿ. ರಾಜರತ್ನಂ, ವಿ.ಸೀ., ಬೇಂದ್ರೆ, ಪು.ತಿ.ನ., ವಿ.ಕೃ. ಗೋಕಾಕ್, ಎ.ಆರ್. ಕೃಷ್ಣಶಾಸ್ತ್ರೀ ಇವರುಗಳನ್ನು ನೋಡಿದ್ದೇನೆ; ಕುವೆಂಪು, ಎಂ.ಆರ್.ಶ್ರೀ. ಮತ್ತು ಕಡೆಂಗೋಡ್ಲು ಶಂಕರಭಟ್ಟ ಇವರುಗಳು ಬಂದಿದಾರೆ-ವಿರಳವಾಗಿ; ಇವರಲ್ಲದೆ, ಗೋವಿಂದ ಪೈ ಆಗಾಗ ಬರುತ್ತಿದ್ದರು. ನನ್ನ ತಾಯಿಯವರು ಕೆಲಸ ಮಾಡುತ್ತಿದ್ದ ಆಕಾಶವಾಣಿ ಕೇಂದ್ರಗಳಲ್ಲಿ ಮೈಸೂರು ಬೆಂಗಳೂರು ನಿಲಯಗಳಲ್ಲಿ, ಎ.ವಿ. ಕೃಷ್ಣಮಾಚಾರ್ಯರನ್ನು (ಪದ್ಮಚರಣ್), ಮೈಸೂರು ಅನಂತಸ್ವಾಮಿಯವರನ್ನು

* ಎರಡನೆಯ ಮುದ್ರಣದಲ್ಲಿ ಬಿಟ್ಟುಹೋಗಿದ್ದ ಅವರ ಲೇಖನವನ್ನು ಮೂರನೆಯ ಮುದ್ರಣದಲ್ಲಿ ಸೇರಿಸಿದೆ.

ಕಂಡಿದ್ದೇನೆ. ಹೀಗಾಗಿ ನಿಸಾರರ ಚಿತ್ರಣಗಳು ನನಗಂತೂ ಅಸಾಧಾರಣವಾದ ನಿಕಟ ಪರಿಚಯವನ್ನೊದಗಿಸಿವೆ.

ನಿಸಾರರು ತಮ್ಮ ಚಿತ್ರಣಗಳಿಗೆ ಕೊಟ್ಟಿರುವ ಶೀರ್ಷಿಕೆಗಳು ಲೇಖನಗಳಿಗೇ ತೋರ್ಬೆರಳುಗಳು ಎನ್ನಬಹುದು. ವಿ.ಸೀ. ಯವರನ್ನು ಕುರಿತು ಬರೆಯುವಾಗ-'ಸಂಸ್ಕಾರ ಸಭ್ಯತೆಗಳ ಅಪೂರ್ವ ಚೇತನ ವಿನಯವಂತ ವಿ.ಸೀ.' ಎಂದಿದ್ದಾರೆ; ಮಾಸ್ತಿಯವರನ್ನು ನೆನೆಯುತ್ತಾ 'ಸರಳ, ಸದಭಿರುಚಿಯ ಸಾಹಿತ್ಯಕಾರ' ಎನ್ನುತ್ತಾರೆ. ಕುವೆಂಪುರವರ ಕಾವ್ಯ ಕಾದಂಬರಿಗಳನ್ನು ವಿಮರ್ಶಿಸಿ 'ಮಹಾಕವಿಗೆ ನೆನಪಿನ ನಮನ'ಗಳನ್ನು ಸಲ್ಲಿಸಿದ್ದಾರೆ. ಸ್ವದೇಶಿ ಆಂಗ್ಲ, ಸಂಗೀತಜ್ಞ ಸ್ನೇಹಿತ, ಸುಗಮ ಸಂಗೀತದ ಸಮ್ಮೋಹನಕಾರ ಯಾರಿರಬಹುದು? ಎಂದು ಕುತೂಹಲವಾಗುತ್ತದೆ. ಜಿಮ್ ಕಾರ್ಬೆಟ್, ಎ.ವಿ. ಕೃಷ್ಣಮಾಚಾರ್ (ಪದ್ಮಚರಣ್) ಅನಂತಸ್ವಾಮಿ ಆ ಮಹನೀಯರು ಎಂದು ತಿಳಿದಾಗ ಹರ್ಷವಾಗುತ್ತದೆ.

ಚಿತ್ರಣಗಳು ಅನೇಕ ರೂಪಗಳನ್ನು ತಳೆದಿರುವುದು ವ್ಯಕ್ತಿ ವೈವಿಧ್ಯದ ಕಾರಣಕ್ಕೆ ಮಾತ್ರವಲ್ಲದೆ, ಬದುಕಿನ ಅನೇಕ ಸಂದರ್ಭಗಳಿಗೆ ಅನ್ವಯವಾಗುವುದಕ್ಕೆ ಕೂಡ.

ಕವಿಗಳ ಈ ಪರಿಚಯ ಸರಣಿಯಲ್ಲಿ ನಿಸಾರರು ಅನೇಕರನ್ನು ಅವರ ಕೃತಿಗಳ ವಿಮರ್ಶೆಗಳ ಮೂಲಕ ಕಾಣಿಸುತ್ತಾರೆ ಎಂದು ಮೇಲೆ ಹೇಳಿದೆಯಷ್ಟೆ. ವಿ.ಸೀ. ಮಾಸ್ತಿ, ಕುವೆಂಪು ಅವರ ಬಗ್ಗೆ ಅವರು ಚಿತ್ರಿಸಿರುವಷ್ಟು ಆತ್ಮೀಯತೆ ಇಂಥವುಗಳಲ್ಲಿ ಅಷ್ಟಾಗಿ ಕಾಣದು. ಬದಲು, ಒಂದು ಭಾವನಾತ್ಮಕ ಚಿತ್ರಣವಿದೆ, ನಿಸಾರರು ಡಿ.ವಿ.ಜಿ. ಯವರೊಡನೆ ಎಷ್ಟು ನಿಕಟವಾಗಿದ್ದರು ಎಂದು ಅರಿತುಕೊಳ್ಳಲಾಗುವುದಿಲ್ಲ. ಡಿ.ವಿ.ಜಿ. ಅವರ ಹಾಸ್ಯ ಪ್ರಸಂಗಗಳನ್ನು ಕುರಿತು ಕೊಟ್ಟ ಉಪನ್ಯಾಸದ ಮೂಲಕ ಅಷ್ಟು ಪ್ರಕಾಂಡ ಪಂಡಿತರು ಎಷ್ಟು ಹಾಸ್ಯಪ್ರಿಯರೂ ಕೂಡ ಆಗಿದ್ದರು ಎಂಬುದನ್ನು ಮನಗಾಣಿಸುತ್ತಾರೆ. ಅಂತೆಯೇ, ಬೇಂದ್ರೆ, ರಾಜರತ್ನಂ, ಪಂಜೆ, ಕಡೆಂಗೋಡ್ಲು ಶಂಕರ ಭಟ್ಟ, ಪು.ತಿ.ನ., ಕೆ.ಎಸ್.ನ., ಎಂ.ಆರ್.ಶ್ರೀ., ವಿ.ಕೃ. ಗೋಕಾಕ್ ಇವರುಗಳೂ ಕೂಡ ಕೃತಿ ವಿಶ್ಲೇಷಣೆಗಳ ಮೂಲಕ ಪರಿಚಯವಾಗುತ್ತಾರೆ. ಶ್ರದ್ಧಾಂಜಲಿಗಳನ್ನು ಸಮರ್ಪಿಸುವಾಗ ಮನಸ್ಸಿಗೆ ತಂದುಕೊಂಡವರಲ್ಲಿ ಅಡಿಗ, ಕುವೆಂಪು ಅವರ ಚಿತ್ರಣಗಳು ಎದ್ದು ನಿಲ್ಲುತ್ತವೆ.

ಕಾವ್ಯ ರಚನಕಾರರನ್ನೇ ಮುಂದುವರಿಸಿಕೊಂಡು ಹೋದಂತೆ, ಬರುವುದು ಅನುವಾದ ಮಾಡುವಾಗ ನಡೆದ ಅಧ್ಯಯದ ಫಲ—ಪಾಬ್ಲೊ ನೆರುಡ, ಷೇಕ್ಸ್‌ಪಿಯರ್ ಮತ್ತು ಲಾರ್ಕ ಮಹಾಶಯರುಗಳ ಚಿತ್ರಣ. ಷೇಕ್ಸ್‌ಪಿಯರ್ ಸರಿ, ಸ್ಪ್ಯಾನಿಷ್ ಕವಿಗಳು ಎಲ್ಲಿ ಸಿಕ್ಕರು ಇವರಿಗೆ? ನಿಸಾರರದೇ ಕೃತಿ ರಚನೆಯ ಹಿನ್ನೆಲೆಯಲ್ಲಿ ಶ್ರದ್ಧೆಯಿಂದ ಆಳವಾದ ವ್ಯಾಪಕವಾದ ಸಂಶೋಧನೆ ನಡೆದಿರುವುದು ಇಲ್ಲಿ ಸ್ವಯಂವೇದ್ಯವಾಗಿದೆ, ಆಶ್ಚರ್ಯ ಮೂಡಿಸುತ್ತದೆ.

ಸಾಹಿತಿಗೂ ರಾಜಕೀಯಕ್ಕೂ (ರಾಜಕಾರಣ ಅಲ್ಲ!) ಅಂತರ ಎಷ್ಟು ಇದ್ದರೆ ಅಷ್ಟು ಒಳ್ಳೆಯದು. ಇದು ನಿಸಾರರಿಗೆ ಸ್ವಾಭಾವಿಕವಾಗಿಯೇ ತಿಳಿದಿದೆ ಎನ್ನುವುದರಲ್ಲಿ ಸಂಶಯ ವಿಲ್ಲ. ಇವರು ತಾವೇ ಮೆಲುಕು ಹಾಕಿ ಚಿತ್ರಿಸಿರುವ ಏಕೈಕ ರಾಜಕಾರಣಿಯೆಂದರೆ ಜವಾಹರ ಲಾಲ ನೆಹರು. ಟಿಪ್ಪು ಸುಲ್ತಾನ್ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ರಾಜ್ಯಪಾಲನೆಗೆ

ಸಂಬಂಧಪಟ್ಟ ವ್ಯಕ್ತಿಗಳಾದರೂ ಚರಿತ್ರೆಗೆ ಸೇರಿಹೋದವರು. ಅವರ ವಿಶಿಷ್ಟ ಕೊಡುಗೆಗಳು ಏನು? ಎಂದು ಹುಡುಕ ಹೊರಡಲು ನಿಸಾರರ ಬರಹ-ಪುಸ್ತಕ ಪರಿಚಯ ಪ್ರಚೋದಿಸುತ್ತವೆ. ಅದರಲ್ಲೂ ಅನನ್ಯತೆಯಿರುವುದು ಎಲ್ಲೆಂದರೆ, ಮಿರ್ಜಾರವರ ಪರಿಚಯದಲ್ಲಿ. ಅವರ ಹೆಸರನ್ನು ಜಯಪುರದಲ್ಲಿನ ಒಂದು ಬೀದಿಯ ಹೆಸರಾಗಿ ನೋಡಿದ್ದರಿಂದ ಸ್ಫೂರ್ತಿ ಪಡೆದು ವ್ಯಕ್ತಿಪರಿಚಯಕ್ಕೆ ತೊಡಗಿಸಿಕೊಂಡದ್ದು!

ತಮ್ಮ ಅಸಾಧಾರಣ ಸೇವೆಗಳಿಂದ, ಕಷ್ಟಸಹಿಷ್ಣುತೆಯಿಂದ, ಗಾಂಧೀಜಿಯವರೊಡನೆ ದುಡಿದು ಮಾದರಿಯಾದವರು ಖಾನ್ ಅಬ್ದುಲ್ ಗಫಾರ್ ಖಾನ್. ಗಡಿನಾಡು ಗಾಂಧಿ ಎಂದೇ ಹೆಸರಾಂತವರು; ಇವರಿಗೆ ನಿಸಾರರ ಸವಿನಯ ಸಲಾಂ ಒಪ್ಪವಾಗಿ ಮೂಡಿದೆ. ಜೊತೆಗೆ ಈ ಜೀವನ ಚರಿತ್ರೆ ಓದುಗರ ಎದೆ ಕಲಕುತ್ತದೆ. ಅಯ್ಯೋ! ಇಂಥ ವೀರಪುತ್ರನಿಗೆ ತಾಯಿ ಭಾರತೀಯಳ ಮಡಿಲು ಕೊನೆಗಾಲದಲ್ಲಿ ಸಿಕ್ಕದೇ ಹೋಯಿತೇ? ಎಂದು ಬಹು ದುಃಖವಾಗುತ್ತದೆ. ನಮ್ಮ ನಾಡ ನೈಋತ್ಯದ ವೀರ ಪಠಾಣರಿಗೂ ಕನ್ನಡ ನಾಡಿನವರೇ ಆದ ಶೂರ ಕೊಡವರಿಗೂ ತಂದಿರುವ ಸಾಮ್ಯತೆಗೆ ವಿಶ್ವಾಸ ಉಕ್ಕಿ ಬರುತ್ತದೆ.

ಮಹಾನ್ ಚೇತನ ಶ್ರೀರಾಮಕೃಷ್ಣ ಪರಮಹಂಸರನ್ನು ಕುರಿತು ಓದಿದಷ್ಟೂ ಮತ್ತಷ್ಟು ಓದಬೇಕೆಂಬ ಕಾತರ ಹೆಚ್ಚುತ್ತದೆ. ಈ ಗದ್ಯಗುಚ್ಛದಲ್ಲಿರುವ ಪುಸ್ತಕ ಪರಿಚಯದ ಮೂಲಕ ಜೀವನ ಕೃತಿಯನ್ನು ಓದಲು ಪ್ರಚೋದಿಸುತ್ತದೆ. ಮದರ್ ತೆರೆಸ ನಡೆಸಿದ ಶ್ರಮ-ಶ್ರದ್ಧೆಗಳ ಜೀವನ, ಅವರು ನಡೆಸಿ ಹಾಕಿಕೊಟ್ಟ ಸೇವಾ ಮನೋಭಾವ ನಮ್ಮ ಧರ್ಮದಲ್ಲೂ ವ್ಯಾಪಕವಾಗಿ ನಡೆದರೆ ಎಷ್ಟು ಚೆನ್ನ ಎನಿಸುತ್ತದೆ. ಮಹಾ ನಗರ ಕಲ್ಕತ್ತದ ವಿವರಣೆಗೆ ಬಳಸಿರುವ ಪದಪುಂಜಗಳಂತೂ ಆ ಊರಿನ ಗಂಧ ಗಾಳಿಯನ್ನು ನಮ್ಮ ಮೂಗಿಗೇ ಅಡರಿಸುತ್ತವೆ. ಸೇವಾ ಮನೋಭಾವವನ್ನು ಎಷ್ಟು ಉನ್ನತ ರೀತಿಯಲ್ಲಿ ಬೆಳೆಸಿಕೊಳ್ಳಬಹುದು ಎಂಬುದಕ್ಕೆ ಮದರ್ ತೆರೆಸ ಒಂದು ಪ್ರಜ್ವಲ ಸ್ತ್ರೀಮೂರ್ತಿಯಾಗಿ ನಿಲ್ಲುತ್ತಾರೆ.

ಭಾರತದಲ್ಲಿ ಹುಟ್ಟಿದ 'ಕಾಡು ಮನುಷ್ಯ' ಜಿಮ್‌ನ ಸ್ವಾರಸ್ಯಮಯ ಜೀವನ ಯಾರಿಗೂ ಆಶ್ಚರ್ಯ ಹುಟ್ಟಿಸುವಂತಹುದು. ಕಾರ್ಬೆಟ್ ಕೊಡುವ 'ಕಥೆ'ಗಳನ್ನು ಬಹಳ ಸ್ವಾರಸ್ಯವಾಗಿ ತೆರೆದಿಟ್ಟಿದ್ದಾರೆ. ಕಾಳು-ತಿಲ್ನಿ-ಚಾದಿ ತ್ರಿಕೋನ ಕಥೆ ನಿಜ ಜೀವನದ ಒಂದು ಘಟನೆ. ಕಾಳುವಿನ ಮೊದಲನೆಯ ಹೆಂಡತಿ ಬರುವುದಂತೂ ಬಹಳ ದಾರುಣ ಪ್ರಸಂಗ. ಈ ಕಥೆಯನ್ನು ಮತ್ತು ಜಿಮ್ ಕಾರ್ಬೆಟ್‌ನನ್ನು ಕುರಿತು ನಮ್ಮ ದೃಶ್ಯ ಮಾಧ್ಯಮಗಳು ನಿಸಾರರ ಕನ್ನಡದಲ್ಲಿನ ಈ ವಿಮರ್ಶೆಯ ಅನಂತರವೂ ಏನೂ ಪರಿಚಯವನ್ನು ತರದಿರುವುದು ಶೋಚನೀಯ ಅಜ್ಞಾನವೆನ್ನಿಸುತ್ತದೆ.

ವ್ಯಕ್ತಿ ಚಿತ್ರಣದ ಬರವಣಿಗೆ 'ಆದ್ಯಂತವೆಂಬ ಕಾಲಾನುಸಾರಿ ಕ್ರಮದಲ್ಲಿ ಮುನ್ನಡೆಯುವುದಿಲ್ಲ'. ಇಷ್ಟು ದೊಡ್ಡ ವ್ಯಾಪ್ತಿಯಲ್ಲಿ ಕಾಣಿಸಿರುವ ವ್ಯಕ್ತಿ ಪರಿಚಯಗಳು ಒಟ್ಟಿಗೇ ಜೀರ್ಣಿಸಿಕೊಳ್ಳುವುದಂಥವೂ ಅಲ್ಲ. ನಿಸಾರರಿಗೂ ಇದು ಒಮ್ಮೆಲೇ ಆದ ಅನುಭವವೇನಲ್ಲ. ಅವರು ಕವಿಯಾಗಿ ವಿಕಸನ ಹೊಂದಿದ ಹಾಗೆ, ಅನುವಾದಕ್ಕೆ ನಾಂದಿಯಾಗಿ ಅಧ್ಯಯನ ಮಾಡಿದ ಸಾಹಿತ್ಯ ಭಂಡಾರದ ಖಜಾನೆಯಿಂದ, ಹಲವು ಪುಸ್ತಕ

ಪರಿಚಯಗಳಿಗಾಗಿ ಸಿದ್ಧಪಡಿಸಿಕೊಂಡ ಮಾಹಿತಿಗಳಿಂದ ಸೇರಿಸಿ ಕೊಟ್ಟಿರುವ ಹಲವು ತುಣುಕುಗಳು ಇವು. ನಾವು ನಿಸಾರರ ಗದ್ಯ ಬರಹಗಳಲ್ಲಿ ಕಂಡುಕೊಳ್ಳಬಹುದಾದ ಮುಖ್ಯಾಂಶಗಳು ಹಲವಿವೆ. ವ್ಯಕ್ತಿ ಚಿತ್ರಣ ಮಾಡಿರುವ ಈ ವ್ಯಕ್ತಿಯದೇ ಒಂದು ಚಿತ್ರಣ ಹಿನ್ನೆಲೆಯಲ್ಲಿದೆ. ಬಿಸಿ ರಕ್ತದ ಯೌವನದಲ್ಲೂ ಅವರಲ್ಲಿ ಜಾಗೃತವಾಗಿದ್ದ ಚಿಂತನಶೀಲತೆ, ಭೂವಿಜ್ಞಾನದಲ್ಲಿ ನಿರತರಾಗಿದ್ದೂ ಸಾಹಿತ್ಯ ಕ್ಷೇತ್ರದಲ್ಲಿ ಅವರು ಆರಿಸಿಕೊಂಡ ಒಂದು ಪ್ರಪಂಚ, ಕಾವ್ಯರಚನೆಯಲ್ಲಿದ್ದೂ ಅನೇಕ ಕ್ಷೇತ್ರಗಳಲ್ಲಿನ ಧೀಮಂತ ವ್ಯಕ್ತಿಗಳ ಬಗ್ಗೆ ತಿಳಿಯಲು ಅವರಿಗೆ ಇದ್ದ ಕುತೂಹಲ, ಅಧ್ಯಯನ ಮಾಡಿದ್ದುದನ್ನು ಬರೆದಿಟ್ಟುಕೊಳ್ಳುವ ಸಂಪ್ರದಾಯ ಕವಿಯ ಬೆಳವಣಿಗೆಗೆ ದಿಕ್ಸೂಚಿಯಾಗುತ್ತವೆ. ಹೀಗೆ, ಒಬ್ಬ ಚಿಂತನಶೀಲ ಸಾಹಿತಿ 'ತಾನು ನಂಬಿದ ಧ್ಯೇಯಾದರ್ಶ, ಶ್ಲಾಘಿಸುವ ಅಮೋಘ ಗುಣಾತಿಶಯ, ಗೌರವಿಸುವ ಸಾಧನಶೀಲ ವ್ಯಕ್ತಿ ವಿಶೇಷಗಳ' ಕಿರು ಪರಿಚಯವನ್ನು ಮಾಡಿರುವುದು, ವ್ಯಕ್ತಿ ಪರಿಚಯ ಸಮೂಹದ ಅಖಂಡ ಚಿತ್ರಗಳ ಅನನ್ಯತೆ. ಇದಕ್ಕೆ ಪೂರಕವಾಗಿ ಇರುವುದು ನಿಸಾರರು ಉಪಯೋಗಿಸಿರುವ ಅನೇಕ ಸ್ತರದ ಪದಪುಂಜಗಳು. ಇವನ್ನು ಕೆಳಗೆ ಕೊಟ್ಟಿದೆ. ಕವಿಯ ವ್ಯಕ್ತಿ ಚಿತ್ರಣ ಬರಹದಲ್ಲಿ ಇವು ಹಾಸುಹೊಕ್ಕಾಗಿರುವುದರಿಂದ ಇದನ್ನು ಸೇರಿಸದೆ ಈ ಲೇಖನ ಅಸಂಪೂರ್ಣವಾಗುತ್ತದೆ.

ನಿಸಾರರ ವ್ಯಕ್ತಿಪರಿಚಯ ಶೈಲಿಯಲ್ಲಿ ಅನನ್ಯತೆ

ಈ ಭಾಗ ನಿಸಾರರು ಬಳಸಿರುವ ಪದಪುಂಜಗಳ 'ಜೈ ವಿಮರ್ಶೆ'ಯೂ ಅಲ್ಲ, 'ಬೈ ವಿಮರ್ಶೆ'ಯೂ ಅಲ್ಲ, ಸೈ ವಿಮರ್ಶೆ. ವ್ಯಕ್ತಿ ಪರಿಚಯಕ್ಕೆ ಪೂರಕವಾಗಿರುವ ಅವರ ಇತರ ಎರಡು ಬರಹಗಳನ್ನು ಕೂಡ ಪರಿಗಣಿಸಿದೆ.

ನಿಸಾರರೆನ್ನುತ್ತಾರೆ: 'ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದ ರೀತಿಯಲ್ಲಿ ಕೂಡಿದ ಮಟ್ಟಿಗೆ ಅನನ್ಯತೆಯಿರಬೇಕೆಂಬ ತುಡಿತ ನನ್ನ ಗದ್ಯ ಮತ್ತು ಕವನ ರಚನೆಗಳ ಹಿನ್ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸಮಾಡಿದೆ... ಭಾಷೆ ಅಂಗಿಯಲ್ಲ, ಚರ್ಮ'

'ಮೂಲ ರಾಗದ್ವೇಷಾದಿ ಭಾವಗಳು ಸಮಸ್ತ ಮಾನವ ಕುಲಕ್ಕೂ ಸಮಾನ ಹಾಗೂ ಸಾಮಾನ್ಯವೆನ್ನಿಸಿದರೂ ವ್ಯಕ್ತಿಯಿಂದ ವ್ಯಕ್ತಿಗೆ ಅವುಗಳ ಕ್ರಿಯಾವಿಧಾನ ಭಿನ್ನವಾಗಿರುತ್ತದೆ. ಅನಂತ ವೈವಿಧ್ಯದಿಂದ ಅದು ಅಭಿವ್ಯಕ್ತಗೊಳ್ಳುತ್ತದೆ. ಬೇರೆ ಬೇರೆ ಮನುಷ್ಯರ ಜೀವನ ಸನ್ನಿವೇಶಗಳಿಗೆ ಅನುಗುಣವಾಗಿ ರಾಗ ಭಾವಗಳು ವಿಧ ವಿಧ ರೂಪಗಳಲ್ಲಿ, ವಿವಿಧ ತೀವ್ರತೆಯೊಂದಿಗೆ ಹೊಮ್ಮುತ್ತವೆ'. ಅನೇಕ ರೀತಿಯ ವ್ಯಕ್ತಿಗಳನ್ನು ಚಿತ್ರಣ ಮಾಡಲು ಅನೇಕ ಸ್ತರದ, ರೂಪದ ಭಾಷೆಯ ಅಗತ್ಯವನ್ನು ಕುರಿತು ನಿಸಾರರು ಬರೆದಿರುವುದು ಇದು.

'ಕವಿ ಮನೋಭಾವದ ನನ್ನಿಂದ ವಿಜೃಂಭಣೆಯ ಭಾಷೆಯನ್ನಲ್ಲದೆ ಗ್ರೀಷ್ಮರಿಕ್ತವೂ ಅಪಲ್ಲವವೂ ಆದ ಸಾಧಾರಣ ನೇರ ನುಡಿತವನ್ನು ನಿರೀಕ್ಷಿಸಲಾಗದು'—ಇದು ಅಷ್ಟರ ಮಟ್ಟಿಗೆ ಎಲ್ಲ ಲೇಖನಗಳಲ್ಲೂ ಕಂಡುಬರುತ್ತದೆ. ಆದರೆ ಅನೇಕ ಕಡೆ ನೇರ ನುಡಿ ಎನ್ನುವುದೂ ಕೆಲಸ ಮಾಡಿರುವುದು ಕಾಣುತ್ತದೆ. ಕನ್ನಡ ಸಾಹಿತ್ಯವನ್ನು ಸಾಮಾನ್ಯರು ಓದಿ ಅರಿತುಕೊಳ್ಳಬೇಕಾದರೆ ಬರಹ ಅತಿಯಾಗಿ ಗಂಭೀರ ಪದಗಳನ್ನು ವಾಕ್ಯಗಳನ್ನು ಬಳಸದೆ,

ಕ್ಲಿಷ್ಟವಾಗಿರದೇ ಇರುವುದೇ ಚೆನ್ನು. ಓದುಗರ ಸ್ವಾರಸ್ಯ ಕೆಡದಂತೆ, ವಿಷಯ ಗಹನವಾಗಿದ್ದೂ ಆಸಕ್ತಿಯನ್ನು ಆರಿಸದೆ ಮುಂದೋಡಲು ನಿಸಾರರು ಬಳಸಿರುವ ಶೈಲಿ ಬಹಳ ಸಹಾಯಕವೆಂದೆನಿಸುತ್ತದೆ. ಎಷ್ಟೋ ಕಡೆ, ಮೂಡಿಸಿರುವ ಧ್ವನಿ ಇಂತಹ ಸಂವಹನ ಮಾಧ್ಯಮಕ್ಕೆ ಹೊಂದಿಕೊಳ್ಳುತ್ತದೆ ಕೂಡ.

ನಿಸಾರರ ವ್ಯಕ್ತಿಚಿತ್ರಣ ಒಂದು ಬಗೆಯದಲ್ಲ, ಅನೇಕ ಬಗೆಯದೂ ಅಲ್ಲ; ಅದು ಅನೇಕ ರೂಪಗಳ ಒಂದು ವ್ಯಕ್ತಿಚಿತ್ರ ಸ್ವರೂಪ. ಬಹಳ ಸಂಪ್ರದಾಯದ ಗದ್ಯ, ಒಮ್ಮೊಮ್ಮೆ ಅಚ್ಚ ಸಂಸ್ಕೃತ ಮತ್ತು ಸಂಸ್ಕೃತ ಪದಗಳ ತದ್ಭವಗಳನ್ನೇ ಬಳಸುತ್ತಾ ಓಡುವ ಬರವಣಿಗೆಯಲ್ಲಿ ಅವರು ಅಲ್ಲಲ್ಲಿ, ತಟಕ್ಕನೆ ಒಂದು ಸಾಮಾನ್ಯ ಪದ ಪುಂಜವನ್ನು ಇಲ್ಲವೇ ಮತ್ತೂ ಬಲವಾಗಿ ತಟ್ಟುವಂತೆ ಅನ್ಯ ಭಾಷೆ ಪದಗಳನ್ನು ನುಸುಳಿಸಿರುತ್ತಾರೆ. ಓದುತ್ತಾ ಹೋದ ಹಾಗೆ, ಒಮ್ಮೊಮ್ಮೆ ಕನ್ನಡದಲ್ಲಿ ಪದ ಇತ್ತಲ್ಲ, ಏಕೆ ಬಳಸಲಿಲ್ಲ, ಅನ್ಯ ಪದಗಳು ಏಕೆ ಹೀಗೆ ಬಂದವು ಎನ್ನಿಸುತ್ತದೆ. ಕನ್ನಡದ ಭಾಷೆ, ಸಂಪ್ರದಾಯದ ರೀತಿಯಲ್ಲಿ ಮೂಡುವಾಗ ಸಂಸ್ಕೃತ ಪದಗಳು ಹೆಚ್ಚು. ಸಾಮಾನ್ಯರ ಆಡುಭಾಷೆಯನ್ನು ಮಿಶ್ರಣ ಪದಗಳಿಲ್ಲದೆ ಆಡಬಹುದು, ಆದರೆ ಅದು ಒಂದೊಂದು ಸಲ ನಾಟಕೀಯವಾಗಿ ಕಾಣುತ್ತದೆ. ಇತ್ತೀಚೆಗೆ ಸಹಜವಾಗಿ ಆಡುವ ಕನ್ನಡದಲ್ಲಿ ಅನೇಕ ಇತರ ಭಾಷೆಗಳು ಸೇರಿಕೊಂಡಿವೆ. ಸಂಪ್ರದಾಯದ ಭಾಷೆ ಬಳಸುತ್ತಾ ನಿಸಾರರು ಒಂದೊಂದು ಸನ್ನಿವೇಶದ ವಿವರಣೆಯಲ್ಲಿ ಒಂದು ಅನ್ಯ ಪದವನ್ನು ಕನ್ನಡದ ಅಂತ್ಯವನ್ನು ಕೊಟ್ಟು ಟಂಕಿಸಿರುತ್ತಾರೆ. ಅನೇಕ ಕಡೆ ಉರ್ದು-ಪರ್ಷಿಯನ್ ಪದಗಳು ಬಂದಿವೆ. ಹಲವು ನಮಗೆ ಬಳಕೆಯಾಗಿರುವ ಬಹಮನಿ-ಗೋಲ್ಕೊಂಡ,-ಹೈದರ್-ಟಿಪ್ಪು ಕಾಲದ ಪದಗಳಿರಬೇಕು. ಆದರೂ, ನಿಸಾರ್‌ರವರು ಬಳಸಿರುವ ಅನೇಕ ಉರ್ದು-ಪರ್ಷಿಯನ್ ಪದಗಳಿಗೆ ಒಂದು 'ನಿಸಾರ್ ನಿಘಂಟು' ಬೇಕು. ಇನ್ನು ಕೆಲವು ನಿಜಕ್ಕೂ ಪ್ರಬಲವಾದ ವ್ಯಂಗ್ಯ ವಾಗ್ಬಾಣಗಳಿಗೆ ಉರ್ದು, ಹಿಂದಿ, ಪರ್ಷಿಯನ್ ಪದಗಳಲ್ಲದೆ, ಇಂಗ್ಲೀಷು, ಮರಾಠಿ, ತಮಿಳು ಇತ್ಯಾದಿಗಳು ಉಪಯೋಗಕ್ಕೆ ಬಂದಿವೆ. ಮುಖ್ಯವಾಗಿ ಮನದಟ್ಟಾಗುವುದು ಸಾಹಿತಿ ಓದುಗನಿಗೆ ತಿಳಿಸಬೇಕೆಂದಿರುವ ವಿಷಯಕ್ಕೆ ತಕ್ಕ ಧ್ವನಿ ಕೊಡುವ ಹಾಗೆ ಬರಹಕ್ಕೆ ಸೂಕ್ತ ಕಂಡ ಭಾಷೆ ಬಳಸಿರುವುದು. ನಿಸಾರರ ಪುಸ್ತಕ ಓದಲು ಭಾಷಾ ಪಂಡಿತರೇ ಆಗಬೇಕಾಗಿಲ್ಲ; ಸಾಮಾನ್ಯ ಜನರಿಗೂ ಓದಿನಲ್ಲಿ ಆಸಕ್ತಿ ಹುಟ್ಟಿಸಿ, ಚಿತ್ರಿಸಿರುವ ವ್ಯಕ್ತಿಯನ್ನು ಮತ್ತಷ್ಟು ತಿಳಿದುಕೊಳ್ಳೋಣ ಎಂಬ ಆಸೆ ಹುಟ್ಟಿಸುವಂತಹದ್ದು ಅವರ ಬರವಣಿಗೆ. ಕೆಳಗೆ ಕೊಟ್ಟಿರುವ ಹಲವು ತುಣುಕುಗಳಲ್ಲಿ ನಿಸಾರರ ಚಿತ್ರಣ ಶೈಲಿಯಲ್ಲಿನ ಅನನ್ಯತೆಯನ್ನು ಕಾಣಿಸಬಹುದು:

ಗಮನ ಸೆಳೆಯುವ ನಿಸಾರ್ ಪ್ರಯೋಗಗಳು :

'ಲೇಖಕ ಸತ್ತಲ್ಲದೆ ಆತ ಸಾವಿನ ಮೇಲೆ ಬರೆಯುವುದು ಶಕ್ಯವಲ್ಲ'... (ಸ್ವಾನುಭವದಿಂದಲೇ ಬರೆಯಬೇಕು ಎಂದು ಹೇಳುವವರಿಗೆ ಕವಿ ಹಾಕುವ ಸವಾಲು!) (ಪು. ೯೮೨)

'...ಸ್ವಂತ ರೂಹಿಲ್ಲದೆ ಮಂದೆತನದ ಬ್ಯಾಬ್ಯಾಗಳಾಗಿರುವ'...(ಪು. ೯೮೦)

'...ತುಂಬು ಚಂದ್ರನಿಗೆ ಅಡ್ಡಹಾಯುವ ಕಾರ್ಮುಗಿಲಿನ ತೇಪೆಯಂತೆ'...(ಪು. ೬೦೩)

'...ಬಡಕಲಾಗಿ ವೈಚಾರಿಕತೆಯ ಬೊಜ್ಜಿನಿಂದ ಜಡವಾದದ್ದು ಅದರ ಫಲ ಪರಿಣಾಮಗಳಲ್ಲಿ ಒಂದು.' (ಪು. ೬೭೯)

'ಸೊಗಸಾದ ಪಾದಗಳ... ಆಕಾರ ಮುಚ್ಚಲು... ಹೈಹೀಲ್ ಜೋಡುಗಳು'... (ಪು. ೬೮೨)

'...ಅನೇಕಮುಖಿ ವಜ್ರಸಮ ವ್ಯಕ್ತಿತ್ವದ ಒಂದು ಕೋನವನ್ನು ಮಾತ್ರ'...(ಪು. ೬೮೩)

'...ಸಿಟಿ ಹೆಸರಿನ ಮಾನ್ಸ್ಟ್ರಸಿಟಿ...ನಮ್ಮ ಕಲ್ಕತ್ತ... ಕೊಳೆಗೇರಿಗಳು...ಇವುಗಳ ದುಃಸ್ಥಿತಿಯ ಬಗೆಗಿನ ನಮ್ಮ ಪಡುವ ಶಕ್ತಿ, ಪ್ರಜ್ಞೆಗಳಿಗೆ ಕಿಲುಬು ಹಿಡಿದಿದೆ'...(ಪು. ೩೦೧)

'...ಪ್ರಶ್ನೆ ಸಂದೇಹಗಳ ನಿವಾರಣೆಯ ಬಗೆಗಿನ ವಿಚಾರ ವಿವೇಚನೆಗಳು ಆಸೀನವಾಗಿದ್ದ ಪವಿತ್ರ ಪೀಠಗಳಲ್ಲಿ ಧರ್ಮಾಂಧ ಧೂರ್ತತೆ, ಮೂಢಾಚಾರ, ಮನೆಮುರುಕ ಅಸಡ್ಡಾಳತನ, ಅಸಹನೆಗಳು ಕುಕ್ಕರಿಸಿ ಮೀಸೆ ತಿರುವಿವೆ'... (ಪು. ೨೯೩)

—ಹೇಗೆ ಸಂಸ್ಕೃತ, ಶುದ್ಧ ಸಾಂಪ್ರದಾಯಿಕ ಕನ್ನಡ, ಸಾಮಾನ್ಯ ಕನ್ನಡ ಮತ್ತು ಅನ್ಯಭಾಷಾ ಪದಗಳನ್ನು ಉಪಯೋಗಿಸಿ ಪ್ರಬಲವಾದ ವ್ಯಂಗ್ಯ ಮತ್ತು ಕಟು ಟೀಕೆ ಮೂಡಿವೆಯಲ್ಲ?

ಭಿನ್ನ ಪದವರ್ಗಗಳ ಮಿಶ್ರಣ :

'...ತನ್ನ ಬಾಳಿನ ಕೊನೆಯ ಮಜಲಿನಲ್ಲಿ...ಮುಂಗಾಣ್ಕೆಯ ಕ್ವಚಿದ್ದರ್ಶನ'...(ಪು. ೩೬೧) (ಸಂಸ್ಕೃತ-ಶುದ್ಧ ಕನ್ನಡ-ಉರ್ದು) ಕೆಲವು ಪ್ರಬಲ ಮಾತು:

'...ರಾಷ್ಟ್ರಜೀವನ ನಖಶಿಖಾಂತ ದುರ್ಗಂಧಮಯವಾಗಿ ಗಟಾರಿಸತೊಡಗಿದೆ.' (ಪು. ೫೩೩.)

'...ರಾಷ್ಟ್ರೀಯ ಭಾವನೆಯಿರದ ಪೌರನ ಅಸ್ತಿತ್ವ ಅರ್ಥಶೂನ್ಯ'...(ಪು. ೨೯೮)

'...ತನ್ನ ನೆಲ ಜಲವಷ್ಟೇ ಅಮಲ, ಉಚ್ಚ; ಮಿಕ್ಕದ್ದು ಮಣ್ಣಾಂಗಟ್ಟಿ ಎನ್ನುವ... ಅತಿರೇಕಕ್ಕೇರಿದ ರಾಷ್ಟ್ರಾಭಿಮಾನವನ್ನು ಹುಟ್ಟುಹಾಕುತ್ತದೆ...' (ಪು. ೨೯೮)

'...ನಾನಾ ತೆರನಾದ ಅನ್ಯಾಯಗಳನ್ನು ಎಸಗಲು ಸಾರ್ವಜನಿಕ ಪರವಾನಗಿ ಮುಂದಾಳುಗಳಿಗೆ ಸಿಗುವುದು ಕಷ್ಟವೇನಲ್ಲ...' (ಪು. ೩೬೪)

ಸಂಕೋಚವಿಲ್ಲದೆ ಬಳಸುವ ಮಾತು :

'...ಈ ವಾಚಕ ರಕ್ಕಸರನ್ನು 'ಕಕ್ಕಸ'ರೆಂದು ಬಿರುದಿಸಬಹುದು...' (ಪು. ೨೭೪)

'...ಹೊಳೆಯಾದ 'ಸರಸ್ವತಿ' ಕಂದಚಾರಗಳ, ಪ್ರಗತಿ ವಿರೋಧಿಯಾದ ಪದ್ಧತಿಗಳ

ಏಮ್ಮೆ ದಂಡಿಗೆ ಕ್ರೀಡಾಂಗಣವಾಗುತ್ತದೆ...' (ಪು. ೨೭೪)

ನಮೂನೆಯ ಪದ-ಪದಾಂತ್ಯಗಳು :

'...ಅವರ ಉವಾಚ...ಅವಾಚ್ಯವಾದರೂ...(ಪು. ೭೭೫)...ಈ ವೀರ ಸತ್ಯಾಗ್ರಹಿಯ ಬಾಯಿಂದಲೇ ಅವುಗಳ ಬಯಾನನ್ನು ಕೇಳಿ... (ಪು. ೩೬೭), ಬಯಾನಿಸುವುದು (ಪು. ೧೨೯) ಬಯಾನುಗಳು (ಪು. ೫೧೮)...ಬಯಾನಿಸಬೇಕಾದ ವಿಷಯ. (ಪು. ೪೯೨)

'...ಆಪ್ತತೆ ಒದಗದು; ಅದು ಅಂತರಬೆಂತರವಾದೀತು...' (ಪು. ೨೫೧);

ಪರ್ಷಿಯನ್-ಉರ್ದು ಪದಗಳು :

'...ಸದ್ಯದ ಮಾನದಂಡಗಳಿಂದ...ತಕ್ಕಮಟ್ಟಿಗೆ ಬಚಾವಾಗಿ...(ಪು. ೯೧)... ರೂಬುರೂಬು' (ಪು. ೧೩೧)

'...ಇವರ ಸಂದೇಶದ ಹಿಲಾಲಿನ ಹೊಂಬೆಳಕನ್ನು...ಮುಂದೊಯ್ಯುವ ಚೇತನಗಳಿಗೆ ಲೆಕ್ಕವಿಲ್ಲ...' (ಪು. ೨೬೪)

'...ಮುಖವಾಡ ಧರಿಸಿ ಧಂಡಿಧಂಡಿಯಾಗಿ ವಿಸರ್ಜಿತವಾಗುತ್ತಿರುವ ಪಂಥನಿಷ್ಠ ಲಿಖಾವಟ್ಟುಗಳ ಬಗ್ಗೆ...' (ಪು. ೫೩೬)

'...ಆತನಲ್ಲಿ...ಯೋಜನೆಗಳನ್ನು ಕಾರ್ಯಗತಗೊಳಿಸುವ ಉದ್ದಂಡ ಖುವ್ವತ್ತಿತ್ತು...' (ಪು. ೩೫೦)

'...ಪ್ರಾಚೀನರೊಂದಿಗೆ ನಮ್ಮ ಬಾಳುವೆಯ ಕೃಪಣತೆ, ಚಪರಾಸಿತನಗಳನ್ನು ಹೋಲಿಸಿಕೊಂಡು...' (ಪು. ೨೯೬)

'...ಚರಿತ್ರೆ...ನಿರ್ದೋಷಪೂರ್ಣ ದಸ್ತಾವೇಜಲ್ಲ...' (ಪು. ೩೪೯);

'...ಮಾಸ್ತಿಯವರು ಮಜಬೂತುಗೊಳಿಸಿದ್ದಾರೆ ನಿಜ. (ಪು. ೨೨೭);. ಸಮಯ ಪ್ರೇರಿತ ಬೇಹುಷಾರಿ, ಕಂಜೋರಿಗಳನ್ನು' (ಪು. ೨೨೯)

'...ಅವುಗಳ ರಖಂವಾರಿ ರಂಗು ವಿನ್ಯಾಸಗಳು ಹಾದಿ ಬೀದಿಗರ ಕಣ್ಣನ್ನು ಕೋರೈಸಿ ಸೂರೆಗೊಳ್ಳುತ್ತವೆ...' (ಪು. ೩೭೦)

'...ಕಾಲದ ಸೆಳೆಖಾನೆಯಲ್ಲಿ ಬಚ್ಚಿಡದೆ...ಪೊಗಡುದಸ್ತಾಗಿ ನಿರ್ವಹಿಸಿದರು...' (ಪು. ೨೪೨)

'...ಕಪಾಟುಗಳನ್ನು ಝಡ್ತಿ ಮಾಡತೊಡಗಿದೆ...(ಪು. ೬೦೦) ಆಂತರ್ಯಗಳನ್ನು ಝಡ್ತಿ ಮಾಡಿಕೊಳ್ಳಲು ಕುಮ್ಮಕ್ಕಿಸಿಯಾವು...' (ಪು. ೬೯೧)

'...ಅತಿ ಮಾಮೂಲಿಯಾದ ಮಾತು ಸಹ...(ಪು. ೬೮೬);... ಬರಕಂದಾಜು...' (ಪು. ೬೯೦)

ಇಂಗ್ಲೀಷ್ ಪದ ಪ್ರಯೋಗಗಳು :

'...ಭಕ್ಷ್ಯಗಳ ಐಟಂಗಳು...ಧಾರಾಳ ಬೋನಸ್...(ಪು. ೧೫೯)...ಅನ್ಯಾಯವೆಸಗಿದ ಡೋಲು ವಾದಕ ಇತಿಹಾಸಕಾರರಿಂದ ನಿರ್ಮುಕ್ತಗೊಳಿಸಿ ಸರಿಯಾದ ಫೋಕಸ್ಸಿನಲ್ಲಿ ಅವನ್ನು ನೋಡಲು... (ಪು. ೩೫೫); ಸ್ಲಮ್ಮಿಗರನ್ನು...(ಪು. ೩೦೨)'

'...ಕ್ಲಾಸಿಕ್ ನಮೂನೆ...(ಪು. ೯೨);....ಕಲ್ಲು ಇಟ್ಟಿಗೆ ಕಾಂಕ್ರೀಟುತನದಿಂದ ಸಿದ್ಧವಾದ ಗಟ್ಟಿಮುಟ್ಟಾದ ವಾಸ್ತುಶಿಲ್ಪ...' (ಪು. ೨೪೬)

ಗಹನವಾದ ಗದ್ಯದ ಮಧ್ಯೆ ಆಡುಭಾಷೆಯ ಮಿಶ್ರಣ :

'...ಮಧ್ಯಮವರ್ಗದ ಪೊಳ್ಳು ವೈಚಾರಿಕ ಖಾಯಿಷುಗಳನ್ನು ತಣಿಸುವ ಭರಾಟೆಯಲ್ಲಿ...' (ಪು. ೮೮೭)

'...ಮೇಲಿನವರ ಮೆಹರ್ಬಾನಿಯನ್ನು ದೋಚುವುದಕ್ಕೋಸ್ಕರ...' (ಪು. ೯೫೧)

'...ಮಿಡಿಯಾಕ್ರಿಟಿಗೂ...ದಿಢೀರ್ ಯಶಃಪ್ರಾಪ್ತಿಗಾಗಿ... ಜೋಹುಕುಂವಾದಿಗಳಾಗದಿರುವುದರ ಗುಟ್ಟು... (ಪು. ೭೭೬)......ಇಂತಹ ಜೋಹುಕುಂವಾದಿ ಚರಿತ್ರಕಾರರಿಂದ ಲಿಖಿತವಾದ ಗತಕಾಲದ ಕಥೆಯಲ್ಲಿ...' (ಪು. ೩೪೯)

'.. ನಿಷ್ಠುರ ರಿವಾಜುಗಳ ಅಸ್ಪಷ್ಟ ಭಯ...(ಪು. ೩೦೦);.....ಅಭಿನವ ಧಾರ್ಮಿಕ ಹುದ್ದರಿಗಳು...' (ಪು. ೨೯೩)

'...ಮನೋರೋಗಿಗಳ ದೇಖಬಾಲಿ (ಪು. ೩೦೯);.....ನಕುಲ ಸಹದೇವ ಸದೃಶ ಸಾದಿಲ್ವಾರು ಪ್ರಶಸ್ತಿಗಳು ಮಸ್ತಾಗಿವೆ...' (ಪು. ೩೧೧)

'...ಮಿಸುಕಾಡದಂತೆ ಕರ್ಮಫಲಗಳ ಇಲ್ಲವೇ ಕಿಸ್ಮತ್‌ನ ಪಾಶಗಳಿಂದ ಬಿಗಿದಿದ್ದರು... (ಪು. ೨೯೫)- ನಿಸಾರ್‌ರವರು ಇದು ಒಂದು ಕಡೆ ಮಾತ್ರ 'ಕಿಸ್ಮತ್' ಪದ ಉಪಯೋಗಿಸಿ ಅದಕ್ಕೆ ಅದೃಷ್ಟ ಎಂದು ಅರ್ಥ ಕೊಟ್ಟಿದ್ದಾರೆ.

ಪಟ್ಟಿ ೧ : ನಿಸಾರರ ವ್ಯಕ್ತಿ ಪರಿಚಯಗಳ ಹಿನ್ನೆಲೆಯ ಒಂದು ಸ್ಥೂಲ ನೋಟ

ಕೃತಿ ಸೂಚನೆ: ಇದು ಬರಿ ಬಡಗಲ್ಲೋ ಅಣ್ಣಾ (ಇ.ಬ.ಬೆ.ಅ); ಮನದೊಂದಿಗೆ ಮಾತುಕತೆ (ಮ.ಮಾ); ಹಿರಿಯರು ಹರಸಿದ ಹೆದ್ದಾರಿ (ಹಿಂ.ಹ.ಹೆ); ಅಚ್ಚುಮೆಚ್ಚು (ಅ.ಮೆ.); ವಿಚಾರ ವಿಹಾರ (ವಿ.ವಿ)

ಸಂ.	ವ್ಯಕ್ತಿ	ಸಂಬಂಧಿತ	ಪುಟ ಸಂಖ್ಯೆ	ಕೃತಿ
೧	ದೇವಿ ಸರಸ್ವತಿ	ಮಾಹಿತಿ ಸಂಶೋಧನೆ	೨೭೧-೨೮೦	ಮ.ಮಾ
೨	ಕುವೆಂಪು	ಕಾವ್ಯಾವಲೋಕನ	೩೩-೫೬	ಇ.ಬ.ಬೆ.ಅ
		ಗದ್ಯಾವಲೋಕನ	೯೧-೯೭	ಇ.ಬ.ಬೆ.ಅ
		ವ್ಯಕ್ತಿ, ಕೃತಿ ಅವಲೋಕನ	೫೭-೫೪	ಅ.ಮೆ

		ಶ್ರದ್ಧಾಂಜಲಿ	೭೯೨-೭೮೨	ಅ.ಮೆ.
೩	ಬೇಂದ್ರೆ	ಕಾವ್ಯ ವಿಮರ್ಶೆ	೫೭-೬೬	ಇ.ಬ.ಬೆ.ಅ
		ಕಾವ್ಯ ವಿಮರ್ಶೆ	೧೧೧-೧೧೭	ಇ.ಬ.ಬೆ.ಅ
೪	ಪಂಜೆ	ಕಾವ್ಯ ವಿಮರ್ಶೆ	೬೭-೭೮	ಇ.ಬ.ಬೆ.ಅ
೫	ಜಿ.ಪಿ. ರಾಜರತ್ನಂ	ಕಾವ್ಯ ವಿಮರ್ಶೆ	೭೯-೯೦	ಇ.ಬ.ಬೆ.ಅ
೬	ಕೆ.ಎಸ್.ನ.	ಕಾವ್ಯ ವಿಮರ್ಶೆ	೯೯-೧೦೪	ಇ.ಬ.ಬೆ.ಅ
೭	ಕ.ಶಂ. ಭಟ್ಟ	ಪುಸ್ತಕ ವಿಮರ್ಶೆ	೧೧೮-೧೨೫	ಇ.ಬ.ಬೆ.ಅ
೮	ವಿ.ಸೀ.	ವ್ಯಕ್ತಿ ಪರಿಚಯ	೧೪೯-೧೬೧	ಇ.ಬ.ಬೆ.ಅ
		ವ್ಯಕ್ತಿ ಪರಿಚಯ	೧೪೯-೨೨೬	ಮ.ಮಾ
೯	ಮಾಸ್ತಿ	ಶತಾಬ್ದಿ ವರ್ಷ	೨೨೭-೨೩೩	ಮ.ಮಾ
		ನೆನಹು	೭೬೪-೭೭೧	ಮ.ಮೆ
೧೦	ಎಂ.ಆರ್.ಶ್ರೀ	ಕೃತಿ ಪರಿಚಯದ ಮೂಲಕ	೨೩೪-೨೪೪	ಮ.ಮಾ
೧೧	ವಿ.ಕೃ.ಗೋಕಾಕ್	ವಿಮರ್ಶೆ	೨೪೫-೨೫೭	ಮ.ಮಾ
೧೨	ಅಡಿಗ	ಶ್ರದ್ಧಾಂಜಲಿ	೫೯೮-೬೧೦	ಅ.ಮೆ
೧೩	ಎ.ಆರ್.ಕೃಷ್ಣಶಾಸ್ತ್ರೀ	ವಿಮರ್ಶೆ	೬೯೧-೭೦೧	ಅ.ಮೆ
೧೪	ಪು.ತಿ.ನ	ವಿಚಾರಗಳು	೮೮೦-೮೯೩	ಅ.ಮೆ
೧೫	ಡಿ.ವಿ.ಜಿ.	ಉಪನ್ಯಾಸ	೯೪೭-೯೬೩	ವಿ.ವಿ
೧೬	ರ.ಠಾಕೂರರು	ಅವಲೋಕನ	೬೭೯-೬೯೦	ಅ.ಮೆ
೧೭	ಷೇಕ್ಸ್‌ಪಿಯರ್	ಸ್ವಂತ ಅನುವಾದಗಳಿಗೆ ಹಿನ್ನೆಲೆಯಾಗಿ	೫೧೬-೫೧೯	ಹಿ.ಹ.ಹೆ
೧೮	ಪಾಬ್ಲೊ ನೆರುಡ	ಅನುವಾದಗಳಿಗೆ ಪೂರ್ವಭಾವಿಯಾಗಿ	೧೨೭-೧೪೮	ಇ.ಬ.ಬೆ.ಅ
೧೯	ಲಾರ್ಕ	ಅನುವಾದ;ನಾಟಕಾವಲೋಕನ	೮೧೧-೯೨೪	ಅ.ಮೆ
೨೦	ಎ.ವಿ. ಕೃಷ್ಣಮಾಚಾರ್	ಶುಭಕೋರಿ	೭೭೨-೭೭೭	ಅ.ಮೆ
೨೧	ಮೈ.ಅನಂತಸ್ವಾಮಿ	ಶ್ರದ್ಧಾಂಜಲಿ	೭೮೮-೭೯೫	ಅ.ಮೆ
೨೨	ಬಿ.ಜಿ.ಎಲ್. ಸ್ವಾಮಿ	ಪುಸ್ತಕ ಪರಿಚಯ	೧೦೫-೧೧೦	ಇ.ಬ.ಬೆ.ಅ
೨೩	ಜಿಮ್ ಕಾರ್ಬೆಟ್	ಪುಸ್ತಕ ಪರಿಚಯ	೭೦೩-೭೧೧	ಅ.ಮೆ
೨೪	ಶ್ರೀರಾಮಕೃಷ್ಣ	ಪುಸ್ತಕ ಪರಿಚಯ	೪೮೯-೪೯೪	ಹಿ.ಹ.ಹೆ
೨೫	ಮದರ್ ತೆರೆಸ	ವ್ಯಕ್ತಿಕಥೆ	೩೦೦-೩೧೩	ಮ.ಮಾ
೨೬	ನೆಹರು	ಚಿಂತನೆ	೨೯೦-೨೯೯	ಮ.ಮಾ
೨೭	ಗಫಾರ್ ಖಾನ್	ಶತಾಬ್ದಿ ಚಿಂತನೆ	೩೬೩-೩೭೦	ಮ.ಮಾ
೨೮	ಸರ್ ಮಿರ್ಜಾ	ಮಾಹಿತಿ	೩೨೨-೩೩೫	ಮ.ಮಾ
೨೯	ಟಿಪ್ಪುಸುಲ್ತಾನ್	ಪುಸ್ತಕ ವಿಮರ್ಶೆ	೩೪೭-೩೬೨	ಮ.ಮಾ

(ಈ ಲೇಖನ ಸಪ್ನ ಬುಕ್ ಹೌಸ್‌ನವರು ಹೊರತಂದಿರುವ ನಿಸಾರರ 'ಸಮಗ್ರ ಗದ್ಯ ಬರಹಗಳು' ಪುಸ್ತಕದ ಪ್ರಥಮ ಮುದ್ರಣ [೨೦೦೨]ವನ್ನು ಆಧರಿಸಿ ಬರೆದದ್ದು.)



ನಿಸಾರರ ಗದ್ಯಸಾಹಿತ್ಯದಲ್ಲಿ ಧಾರ್ಮಿಕ, ಪೌರಾಣಿಕ ಸಂಬಂಧಿ ಚಿಂತನೆಗಳು

♦ *ಡಾ. ಜಿ. ವಿ. ಕುಲಕರ್ಣಿ*

ಕೆ. ಎಸ್. ನಿಸಾರ್ ಅಹಮದ್ ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಭದ್ರವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರು ಕವಿಗಳೆಂದೇ ಹೆಚ್ಚಾಗಿ ಖ್ಯಾತರು. ನವ್ಯ ಕಾವ್ಯ ಮಾರ್ಗವನ್ನು ಅವರು ಸಮರ್ಥವಾಗಿ ಪ್ರತಿನಿಧಿಸಿದರೂ ಕನ್ನಡ ಭಾವಗೀತಕಾರರಲ್ಲಿ ಅವರ ಹೆಸರು ಶಾಶ್ವತವಾಗಿ ಉಳಿಯಲು ಅವರ ಸುಪ್ರಸಿದ್ಧ ಕವನ 'ನಿತ್ಯೋತ್ಸವ'ದ ಪ್ರಸಿದ್ಧಿಯೇ ಕಾರಣ. ನಾನು ಎರಡು ಸಲ ಅಮೇರಿಕೆಯ ಪ್ರಯಾಣ ಮಾಡಿದೆ. ಅಲ್ಲಿಯ ಯಾವುದೇ ಕನ್ನಡ ಸಂಘದ ಕಾರ್ಯಕ್ರಮ ನೋಡಿದರೂ ಅದು 'ನಿತ್ಯೋತ್ಸವ' ಪದ್ಯದಿಂದಲೇ ಪ್ರಾರಂಭಗೊಳ್ಳುತ್ತಿತ್ತು. ಅಥವಾ ಈ ಪದ್ಯವೂ ತಪ್ಪದೇ ಹಾಡಲಾಗುತ್ತಿತ್ತು. ನವ್ಯ ಕಾವ್ಯದ ಬಗ್ಗೆ ಚರ್ಚಿಸುವಾಗ ನಮಗೆ ನೆನಪಾಗುವ ಮಹತ್ವದ ಕವಿತೆ ಎಂದರೆ 'ಕುರಿಗಳು, ಸಾರ್, ಕುರಿಗಳು'. ಮೈಸೂರು ಹಾಗೂ ಧಾರವಾಡ ಕಡೆಯ ಕವಿಗಳ ಬಗ್ಗೆ ಮಾತಾಡುವಾಗ ನಾನು ನೆನೆಯುವ ಮೊದಲನೆಯ ಜೋಡಿ ಅಂದರೆ ಕುವೆಂಪು-ಬೇಂದ್ರೆ. ಅನಂತರದ ತಲೆಮಾರಿನ ಜೋಡಿಯ ಬಗ್ಗೆ ಮಾತಾಡುವಾಗ ಬೇಂದ್ರೆಯವರು ನೆನೆಯುತ್ತಿದ್ದ ಜೋಡಿಗಳು ಎಂದರೆ—ಅಡಿಗ-ಗೋಕಾಕ, ಶಿವರುದ್ರಪ್ಪ-ಕಣವಿ, ನಿಸಾರ್-ಕಂಬಾರ್. ಒಂದು ಸಂದರ್ಭದಲ್ಲಿ ಯಾರೋ ನಿಸಾರರನ್ನು 'ನಿಸ್ಸಾರ್' ಎಂದು ಕರೆದಾಗ, ಕವಿ ಬೇಂದ್ರೆ ವ್ಯಾಖ್ಯಾನಿಸಿದ್ದರಂತೆ, 'ಸಂಸಾರ ನಿಸ್ಸಾರ ಎಂದು ಅರಿತಾಗಲೇ

ಪರಮಾರ್ಥದ ಬಗ್ಗೆ ಒಲವು ಕಂಡುಬರುತ್ತದೆ. ಈ ಸ್ಥಿತಿಯನ್ನು ಮುಟ್ಟಲು ಅಹಂಕಾರವನ್ನು ಬಿಡಬೇಕು. 'ಅಹಂ ಮದ' ಬಿಡಬೇಕು. ಇಂಥ ಮಾರ್ಮಿಕ ನುಡಿಗಳು ಬೇಂದ್ರೆಯವರ ಬಾಯಿಯಿಂದಲೇ ಬರುವಂತಹವು. ಎರಡನೆಯ ವಿಶ್ವ ಕನ್ನಡ ಸಮ್ಮೇಲನ ಡೆಟ್ರಾಯಿಟ್‌ನಲ್ಲಿ ೨೦೦೨ರಲ್ಲಿ ನಡೆದಾಗ ಅಲ್ಲಿಗೆ ಮುಖ್ಯ ಅತಿಥಿಯಾಗಿ ನಿಸಾರರು ಬಂದಿದ್ದರು. ಅಮೇರಿಕೆಯಲ್ಲಿ ಅವರ ನಿಕಟವಾದ ಸಂಬಂಧ ಮೂಡಿತು. ಇದಕ್ಕೆ ಮುಖ್ಯ ಕಾರಣ ನಮ್ಮಿಬ್ಬರಿಗೆ ಪ್ರಿಯವಾದ 'ಬೇಂದ್ರೆ ಕಾವ್ಯ'ವಾಗಿತ್ತು.

ನಾನೀಗ ಬರೆಯುತ್ತಿರುವುದು ನಿಸಾರರ ಕಾವ್ಯದ ಬಗ್ಗೆ ಅಲ್ಲ, ಅವರ ಗದ್ಯ ಬರವಣಿಗೆಯ ಬಗ್ಗೆ. ಅದರಲ್ಲೂ ಅವರ ಧಾರ್ಮಿಕ, ಪೌರಾಣಿಕ ಚಿಂತನೆಗಳ ಬಗ್ಗೆ. ಕನ್ನಡದಲ್ಲಿ ಕೆಲವು ಕವಿಗಳು ಪದ್ಯದಲ್ಲಿ ನಿಪುಣರಾಗಿರುವಂತೆ ಗದ್ಯದಲ್ಲಿಯೂ ಪರಿಣತಿಯನ್ನು ಪಡೆದಿದ್ದಾರೆ. ಅಂತಹ ಸವ್ಯಸಾಚಿಗಳಲ್ಲಿ ನಿಸಾರರೂ ಒಬ್ಬರು. ಕೆಲವೆಡೆ ಅವರ ಸಂಸ್ಕೃತ ಪದಗಳ ಬಳಕೆ ಅತಿಯಾಯಿತು ಎನ್ನಿಸಿದರೆ, ಅದಕ್ಕೆ ಅವರು ಆಯ್ದ ವಿಷಯವೇ ಕಾರಣ. ಪುರಾಣ ಹಾಗೂ ತತ್ತ್ವಜ್ಞಾನದ ವಿಷಯಗಳನ್ನು ಚರ್ಚಿಸುವಾಗ ಸಂಸ್ಕೃತ ಪದಗಳ ಬಳಕೆ ಅನಿವಾರ್ಯವಾಗಿಬಿಡುತ್ತದೆ. ನಿಸಾರರು ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ ಅವರು ಆಳವಾಗಿ ಸಂಸ್ಕೃತ ಹಾಗೂ ಕನ್ನಡ ಭಾಷೆಯ ಅಭ್ಯಾಸದಲ್ಲಿ ಒಲವು ತೋರಿಸಿದ್ದಾರೆ. ಉರ್ದು ಅವರ ಮನೆಮಾತಾಗಿದ್ದರೂ ಕನ್ನಡದಲ್ಲಿ ಸಹಜ ಕವಿಯಾಗಿ ತಮ್ಮ ಪ್ರತಿಭೆಯ ಕುಸುಮವನ್ನು ಅರಳಿಸಿ ತೋರಿಸಿದ್ದಾರೆ. ಅವರು ವ್ಯಾಸಂಗಪ್ರಿಯರಾದುದರಿಂದ ತಮ್ಮ ಓದು ಹಾಗೂ ಚಿಂತನೆಗಳನ್ನು ತಮ್ಮ ಗದ್ಯ ಲೇಖನಗಳ ಮೂಲಕ ಓದುಗರೊಡನೆ ಹಂಚಿಕೊಂಡಿದ್ದಾರೆ. ಹಿಂದೆ ಕವಿ ವಿನಾಯಕರು ತಮ್ಮ ಮಹಾಕಾವ್ಯ 'ಭಾರತ ಸಿಂಧುರಶ್ಮಿ'ಯನ್ನು ಬರೆಯುತ್ತಿದ್ದಾಗ ಕೆಲವು ಆಪ್ತಮಿತ್ರರ ಮುಂದೆ, ಸಾಹಿತಿಗಳ ಮುಂದೆ, ತಮ್ಮ ಮಹಾಕಾವ್ಯ ಓದಿ ತೋರಿಸುತ್ತಿದ್ದರು. ಆ ಆಪ್ತ ವಲಯದಲ್ಲಿ ನಿಸಾರರೂ ಇದ್ದರು. 'ಭಾರತ ಸಿಂಧುರಶ್ಮಿ'ಯ ಬಗ್ಗೆ ದೀಪಾವಳಿ ವಿಶೇಷಾಂಕವೊಂದರಲ್ಲಿ ನಿಸಾರರು ಬರೆದ ಲೇಖನ ನಾನು ಬಹುವಾಗಿ ಮೆಚ್ಚಿದ್ದೆ. ನಿಸಾರರ ಸಮಗ್ರ ಗದ್ಯವನ್ನು ಓದುವಾಗ ಅದು ನಮ್ಮ ಮುಂದೆ ಒಂದು ಹೊಸ ಪ್ರಪಂಚವನ್ನೇ ತೆರೆಯುತ್ತದೆ. ನಿಸಾರರ 'ಧಾರ್ಮಿಕ, ಪೌರಾಣಿಕ ಸಂಬಂಧಿ ಚಿಂತನೆಗಳು' ಏಳು ಪ್ರಬಂಧಗಳಲ್ಲಿ ಕೇಂದ್ರಿತವಾಗಿವೆ. ಅವುಗಳ ಬಗ್ಗೆ ವಿಶೇಷ ಗಮನವಿಟ್ಟು ನನ್ನ ಚಿಕ್ಕ ಲೇಖನವನ್ನು ತಯಾರಿಸಿದ್ದೇನೆ. ಮೊದಲನೆಯ ಲೇಖನ ವಿದ್ಯಾಧಿದೇವತೆ ಸರಸ್ವತಿಯ ಬಗ್ಗೆ ಇದೆ. ಎರಡನೆಯ ಲೇಖನ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಒಂದು ಪುಸ್ತಕದ ಬಗ್ಗೆ ಇದೆ. ಮೂರನೆಯದು ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯ ನಾಲ್ಕು ಸಂಪುಟಗಳ ಬಗ್ಗೆ ಇದೆ. ನಾಲ್ಕನೆಯದು 'ಮುಳ್ಳಿನ ಕಿರೀಟ' ಧರಿಸಿದ ಏಸುಕ್ರಿಸ್ತನ ಬಗ್ಗೆ ಇದೆ. ನನ್ನ ಪ್ರಕಾರ ಅತಿ ಮಹತ್ವದ ಮೂರು ಲೇಖನಗಳು, ಇಸ್ಲಾಂ ಧರ್ಮ ಗ್ರಂಥ 'ಕುರ್‌ಆನ್' ಬಗ್ಗೆ, ಇಸ್ಲಾಮೀ ಸಂತರಾದ 'ಸೂಫಿ'ಗಳ ಬಗ್ಗೆ, ಪ್ರವಾದಿ ಮುಹಮ್ಮದ್ (ಸ.) ಅವರ ಆಚಾರ-ವಿಚಾರಗಳನ್ನು ಆಧರಿಸಿದ 'ಹದೀಸ್' ಬಗ್ಗೆ ಇವೆ.

(1)

ಮೊದಲನೆಯ ಲೇಖನ 'ಸಾತ್ವಿಕ ದೈವೀ ಸ್ವರೂಪಿ ಸರಸ್ವತಿ' ಎಂಬುದು. ಕನ್ನಡ ಕಾವ್ಯ ಪರಂಪರೆಯಲ್ಲಿ ವಿದ್ಯಾಧಿದೇವತೆಯಾದ ಸರಸ್ವತಿಯ ಸ್ತುತಿಗೆ ಬಹಳ ಮಹತ್ವದ ಸ್ಥಾನವಿದೆ. ಆದಿಕವಿ ಪಂಪನಿಂದ ಹಿಡಿದು ಆಧುನಿಕ ಕವಿಗಳವರೆಗೆ ಕನ್ನಡ ಕವಿಗಳು ಸರಸ್ವತಿಯನ್ನು ಸ್ತುತಿಸಿದ ವರ್ಣನೆಯನ್ನು ಡಾ|| ರಂ.ಶ್ರೀ. ಮುಗಳಿಯವರು ತಮ್ಮ 'ಸರಸ್ವತಿ ದರ್ಶನ' ಪುಸ್ತಕದಲ್ಲಿ ಬಹು ವಿಸ್ತಾರವಾಗಿ, ಸುಂದರವಾಗಿ ಚಿತ್ರಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ನಿಸಾರ್ ಅವರು ಸರಸ್ವತಿಯ ಬಗ್ಗೆ ಕೆಲವು ಕನ್ನಡ ಕವಿಗಳ ಭಾವನೆಗಳನ್ನು ಸ್ಪಂದಿಸುವುದರ ಜೊತೆಗೆ ಈ ದೇವತೆಯ ಬಗ್ಗೆ ಪುರಾಣಗಳಲ್ಲಿ ವೇದಗಳಲ್ಲಿ ಬರುವ ಕತೆಗಳನ್ನೂ ಆಖ್ಯಾಯಿಕೆಗಳನ್ನೂ ಸಂಗ್ರಹಿಸಿದ್ದಾರೆ.

ಹಳೆಗನ್ನಡ ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಕನ್ನಡ ಸಾಹಿತ್ಯಕ್ಕೆ ಕಾಣಿಕೆ ಸಲ್ಲಿಸಿದವರು ಜೈನ, ವೀರಶೈವ ಹಾಗೂ ಬ್ರಾಹ್ಮಣ ಕವಿಗಳು. ವೀರಶೈವ ಕವಿಗಳು ಸರಸ್ವತಿಯ ಸ್ತುತಿಯನ್ನು ಮಾಡಿದ್ದು ನನಗಂತೂ ಗೊತ್ತಿಲ್ಲ. ಈ ವಿಚಾರವಾಗಿ ನಿಸಾರರು ಮೌನ ತಾಳಿದ್ದಾರೆ. ಅದು ಇಲ್ಲಿ ಪ್ರಸ್ತುತವಾಗಿಲ್ಲ. ನಮಗೆ ಬೇಕಾದದ್ದು ಸರಸ್ವತಿ ದೇವಿಯ ಹಿರಿಮೆ ಮತ್ತು ಗರಿಮೆ. ಕನ್ನಡದಲ್ಲಿ ಹೆಚ್ಚಿನ ಜೈನ ಹಾಗೂ ಬ್ರಾಹ್ಮಣ ಕವಿಗಳು ಸರಸ್ವತಿಯನ್ನು ಸ್ತುತಿಸಿದ್ದಾರೆ. ಪಂಪ, ರನ್ನ, ನಾಗವರ್ಮ ಆಗಲಿ, ಕುಮಾರವ್ಯಾಸ, ಲಕ್ಷ್ಮೀಶ, ಜಗನ್ನಾಥದಾಸರ ವರ್ಣನೆಯನ್ನು ನಾವು ಮರೆಯುವಂತಿಲ್ಲ. ಸರಸ್ವತಿಯನ್ನು ನೆನೆದ ಕವಿಗಳ ಬಗ್ಗೆ ಬರೆಯುತ್ತ, 'ಸರಸ್ವತಿಯ ವ್ಯಾವಹಾರಿಕ, ಆತ್ಮಿಕ, ದೈವಿಕ ಹಾಗೂ ಸಾಂಕೇತಿಕ ಸ್ವರೂಪದ ಸ್ಥೂಲ ವಿವೇಚನೆಯನ್ನು' ನಿಸಾರರು ಈ ಲೇಖನದಲ್ಲಿ ಮಾಡಿದ್ದಾರೆ. ಕನ್ನಡ ಕವಿ ನಾಗವರ್ಮ 'ಸರ್ವಭಾಷಾ ಸರಸ್ವತಿ' ಎಂದು ಕರೆದ. ಮಹಾಕವಿ ಕುವೆಂಪು ಅವರು, ಮೊದಮೊದಲು 'ಸೊಬಗಿನ ಸೆರೆಮನೆಯಾಗಿಹ' ಚೆಲುವೆ ಸರಸ್ವತಿಯ ಎದೆಯಾಳದ 'ಸೆರೆಯಾಳು' ತಾನೆಂದು ಹೇಳಿದವರು, ಅನಂತರ ತಮ್ಮ ಜಗದ್ಭವ್ಯ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ'ದಲ್ಲಿ ಅವಳ ಮಹಿಮೆಗೆ ಮಾರುಹೋಗುತ್ತಾರೆ, ಬಣ್ಣಿಸುತ್ತಾರೆ, ಆ ಮಹಿಮಾನ್ವಿತ ದೇವತೆಯಲ್ಲಿ ಮೊರೆಯಿಡುತ್ತಾರೆ, 'ಪುಟ್ಟನನ್ನು, ಕನ್ನಡದ ಹೊಸ ಸುಗ್ಗಿ, ಬನದ ಪರಪುಟ್ಟನನ್ನು (ಕೋಗಿಲೆಯನ್ನು) ಮಹಾಕಾವ್ಯ ಯಾತ್ರೆಯಲ್ಲಿ ಮುನ್ನಡೆಸುವಂತೆ ಮೊರೆಯಿಡುತ್ತಾರೆ. ವರಕವಿ ಬೇಂದ್ರೆಯವರು ಸರಸ್ವತಿಯನ್ನು ಬಣ್ಣಿಸಿ ಹಲವಾರು ಕವಿತೆಗಳನ್ನು ಬರೆದಿದ್ದಾರೆ. ಅವರು ಬಣ್ಣಿಸಿದ 'ಸಿಂಹ ಮುಖಕ್ಕಿದೆ ನವಿಲಿನ ಸೋಗೆ, ಶಕ್ತಿ ಶಾರದೆಯ ಮೇಳದ ಹಾಗೆ' ಎಂಬ ಸಾಲು ನಿಸಾರರ ಮೇಲೆ ಬಹಳ ಪ್ರಭಾವ ಬೀರಿದೆ. ಸಿಂಹ ಮತ್ತು ನವಿಲುಗಳನ್ನು ವಾಹನವಾಗಿ ಬಳಸುವ ಶಕ್ತಿ-ಶಾರದೆಯ ಪ್ರತಿಮೆ, ಇಂಗ್ಲೀಷಿನಲ್ಲಿ ಹೇಳುವ 'Literature of Power', 'Literature of Knowledge' ಅನ್ನು ನೆನಪಿಗೆ ತರುತ್ತದೆ. ಇದು ಎಂತಹ ಅದ್ಭುತ ಪ್ರತೀಕ! (ಡಾ|| ಡಿ. ಆರ್. ನಾಗರಾಜರು ತಮ್ಮ ಗ್ರಂಥಕ್ಕೆ 'ಶಕ್ತಿ ಶಾರದೆಯ ಮೇಳ' ಎಂತಲೇ ಶೀರ್ಷಿಕೆ ಕೊಟ್ಟರು ಎಂಬುದನ್ನಿಲ್ಲಿ ನೆನೆಯಬಹುದು.) ಸಿಂಹ ವಾಹನೆಯಾದ ದುರ್ಗೆ ಹಾಗೂ ನವಿಲು ವಾಹನೆಯಾದ ಸರಸ್ವತಿ—ಇವರ ವಿರುದ್ಧ ಗುಣ ಸಮ್ಮಿಲನ ಹಾಗೂ ಸಮನ್ವಯ ಕಾಣುವುದನ್ನು ನಿಸಾರ್

ಗಮನಿಸುತ್ತಾರೆ. ಪುತಿನ ಅವರ 'ರಸ ಸರಸ್ವತಿ', ಜಿ.ಪಿ. ರಾಜರತ್ನಂ ಅವರ 'ಪುರುಷ ಸರಸ್ವತಿ' ಕವನಗಳನ್ನು ನೆನೆಯುತ್ತಾರೆ. ಕನ್ನಡದ ಪ್ರಥಮ ವೈಯಾಕರಣಿ ಕೇಶಿರಾಜನ 'ಶಬ್ದ ಮಣಿದರ್ಪಣಂ'ದ ಪ್ರಾರಂಭದಲ್ಲಿ, ಶಬ್ದಪ್ರದಾಯಿನೀ ಶಾರದೆಯನ್ನು ನೆನೆಯುವುದನ್ನು ಉದ್ಧರಿಸುತ್ತಾರೆ. 'ಶ್ರೀ ವಾಗ್ದೇವಿಗೆ, ಪಂಚೇಂದ್ರಿಯಗಳಿಗೆ ಗೋಚರವಾಗುವ ಜ್ಞಾನವನ್ನೆಲ್ಲ ಶ್ರೋತ್ರದಲ್ಲಿ ಉದ್ಭಾವಿಸುವ ನಿರ್ಮಲ ಮತಿಗೆ, ಇಳಾವಂದ್ಯೆಗೆ' ಶಾಸ್ತ್ರ ಸಮ್ಮುಖದಲ್ಲಿ ವಂದಿಸುತ್ತಾನೆ. ರನ್ನ ಮಹಾಕವಿ ಸರಸ್ವತೀ ದ್ರೋಹ ಮಾಡುವವರಿಗೆ 'ಪಾತಕರು' ಎಂದು ಕರೆಯುತ್ತಾನೆ. 'ಅರ್ಥಕ್ಕಾಗಿ ಕುದಿವ ಕವಿ, ಅಬಲೆಯಾದ ಸರಸ್ವತಿಯ ಗೋಣು ಮುರಿವ' ಎನ್ನುತ್ತಾನೆ. ಜ್ಞಾನ ನಿಂತ ನೀರಾಗಬಾರದು, ನಿರಂತರ ಹರಿಯುವ ಪ್ರವಾಹವಾಗಬೇಕು. ಅದಕ್ಕಾಗಿಯೇ ಸರಸ್ವತಿಯನ್ನು ನದಿಯೆಂದು ಕರೆದದ್ದು ಸೂಕ್ತವೆಂದು ನಿಸಾರರಿಗೆ ತೋರುತ್ತದೆ. ಆರ್ಯಾವರ್ತದ ಏಳು ಪವಿತ್ರ ನದಿಗಳಲ್ಲಿ ಸರಸ್ವತಿಯೂ ಒಂದಾಗಿತ್ತು. ಗ್ರೀಕ್ ಪುರಾಣದಲ್ಲಿ ಕಾವ್ಯದೇವತೆಗೆ 'ಮ್ಯೂಸ್(ಜ್)' ಎನ್ನುತ್ತಾರೆ. ಅದು ಕೂಡ ನದಿಯ ಹೆಸರು. ವೇದಗಳಲ್ಲಿ ಬರುವ ಐದು ದೇವತೆಗಳನ್ನು ನಿಸಾರರು ನೆನೆಯುತ್ತಾರೆ. ಸರಸ್ವತಿ, ವಾಣಿ ಸ್ವರೂಪಿಣಿ (ಮಂತ್ರಸಮಳು), ಇಲಾ, ಕಾಣ್ಕೆಯನ್ನು ಕರುಣಿಸುವಾಕೆ, ಸರಮಾ, ಶುದ್ಧ ಅಂತರ್ಬೋಧವನ್ನು ಉಂಟುಮಾಡುವಾಕೆ, ದಕ್ಷಿಣಾ, ಅಂತಃಸ್ಫುರಣೆ ಮತ್ತು ಬುದ್ಧಿಮತ್ತೆಯ ಸಮನ್ವಯವನ್ನು ನೀಡುವಾಕೆ, ಮತ್ತು ಭಾರತಿ, ಸತ್ಯದ ನಾನಾ ಮುಖ ದರ್ಶನವನ್ನು ಮಾಡಿಸುವಾಕೆ. ಸೃಷ್ಟಿಕರ್ತ ಬ್ರಹ್ಮ ವೇದಗಳನ್ನು ಪ್ರತಿಪಾದಿಸಿದರೆ, ಅವನ ರಮಣಿ ಸರಸ್ವತಿ ಅರ್ಥ ಹಾಗೂ ಅಂತಃಸತ್ವವನ್ನು ಸಂಕೇತಿಸುತ್ತಾಳೆ.

ಸರಸ್ವತಿಯ ವೇದಕಾಲೀನ ಕಲ್ಪನೆಗೂ ಸರಸ್ವತಿಯ ಪುರಾಣ ಕಾಲದ ಕಲ್ಪನೆಗೂ ವ್ಯತ್ಯಾಸವಿದೆ ಎನ್ನುತ್ತಾರೆ. ಋಗ್ವೇದದ ಅಂಭೃಣ ಪುತ್ರಿಯಾದ ಅಂಭೃಣೆಗೆ 'ವಾಗಂಭೃಣೀ' ಎಂಬ ಹೆಸರಿದ್ದುದನ್ನು ತಿಳಿಸುತ್ತಾ, ಅಥರ್ವಣ ವೇದದಲ್ಲಿ ಕಾಣಿಸಿಕೊಳ್ಳುವ ಘೃತಾಚಿ ಎನ್ನುವವಳು ಸರಸ್ವತಿಯ ಮೂಲರೂಪವಿರಬಹುದೆಂಬ ಅಭಿಮತದ ಬಗ್ಗೆ ಕೂಡ ಬರೆಯುತ್ತಾರೆ. 'ಶಾಕ್ತ ಅಥವಾ ತಾಂತ್ರಿಕ ಪಂಥದ ಸರಸ್ವತಿಯ ಒಂದು ಉದಾಹರಣೆಯನ್ನು ಶೃಂಗೇರಿಯ ಶಾರದೆಯಲ್ಲಿ ಕಾಣುತ್ತೇವೆ. ಈಕೆ ಶಕ್ತಿಯಾಗಿದ್ದರೂ ಸಾತ್ವಿಕ ಗುಣ ಸಂಪನ್ನೆ. ಮಹಾರಾಷ್ಟ್ರದ ಕೊಲ್ಲಾಪುರದ ಮಹಾಲಕ್ಷ್ಮಿಯೂ ಶಾಕ್ತಳೇ, ಆದರೆ ಈಕೆ ರಜೋಗುಣ ಸಮೃದ್ಧಳು.' ಎನ್ನುತ್ತಾರೆ.

ಜೈನರ ವಾಗ್ದೇವಿಯರಲ್ಲಿ ಸರಸ್ವತಿಯ ಉಲ್ಲೇಖ 'ತಿಲೋಪಣ್ಣತ್ತಿ'ಯಲ್ಲಿ ಸಿಕ್ಕುತ್ತದೆಂದೂ ಸರಸ್ವತಿಯ ಮಿಕ್ಕೆಲ್ಲ ರೂಪಗಳಿಗಿಂತ ಜೈನರು ಶ್ರುತದೇವಿಯೆಂದು ಗುರುತಿಸುವುದೇ ಹೆಚ್ಚು ಎನ್ನುತ್ತಾರೆ. ಶಾಕ್ತ ಸಂಪ್ರದಾಯದಲ್ಲಿ ದೇವಿಯ ಮೂರು ಮುಖ್ಯ ಅವತರಣಿಕೆಗಳು—ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ. ಪುರಾಣಕಾಲದ ಪಾರ್ವತಿ, ಲಕ್ಷ್ಮಿ, ಸರಸ್ವತಿಯರಿಗೂ ಇವರಿಗೂ ಸಂಬಂಧವಿಲ್ಲ ಎನ್ನುತ್ತಾರೆ.

ಸಪ್ತ ಮಾತೃಕೆಯರ ಪೂಜೆ ಸಾಕಷ್ಟು ಪ್ರಚಲಿತವಾಗಿತ್ತೆಂಬುದಕ್ಕೆ ಬಹು ಸಂಖ್ಯೆಯಲ್ಲಿ ಸಿಕ್ಕಿರುವ ಶಿಲಾ ವಿಗ್ರಹಗಳೇ ಸಾಕ್ಷಿ ಎನ್ನುತ್ತ ವೇದಪೂರ್ವಕಾಲದಲ್ಲಿ ಮಾತೃಪೂಜೆ ಇತ್ತು,

ಅದಕ್ಕೆ ಹರಪ್ಪಾ, ಮೊಹೆಂಜೋದಾರೋ ಉತ್ಖನನಗಳಲ್ಲಿ ದೊರೆತ ಸ್ತ್ರೀ ಮುದ್ರೆಗಳು ಸಾಕ್ಷಿ ಎನ್ನುತ್ತಾರೆ.

'ಗಾಯತ್ರಿ, ಸಾವಿತ್ರಿ, ಸರಸ್ವತಿಯರು ದಿನಕ್ಕೆ ಮೂರು ಸಲ ಜಪಿಸುವ ಗಾಯತ್ರೀ ಮಂತ್ರದ ದೇವತೆಗಳೆಂದು ಹೆಸರಾಗಿದ್ದಾರೆ. ಗಾಯತ್ರೀ, ಬೆಳಗಿನ ಪ್ರಾರ್ಥನೆಯ ದೇವತೆ. ಋಗ್ವೇದ ಮತ್ತು ಗಾರ್ಹಪತ್ಯ ಅಗ್ನಿಯ ಯಜಮಾನಿ. ಸಾವಿತ್ರೀ, ಮಧ್ಯಾಹ್ನದ ಪ್ರಾರ್ಥನೆಯ ದೇವತೆ. ಯಜುರ್ವೇದದ ಮತ್ತು ದಕ್ಷಿಣಾ ಅಗ್ನಿಯ ಒಡತಿ. ಸರಸ್ವತೀ, ಸಂಧ್ಯಾ ಪ್ರಾರ್ಥನೆಯ ಅಧಿಷ್ಠಾತ್ರಿ. ಸಾಮವೇದ ಮತ್ತು ಆವಾಹನೀಯ ಅಗ್ನಿಯ ಒಡೆಯಳು. ಈ ಸರಸ್ವತಿಗೆ ಒಂದು ಮುಖ, ನಾಲ್ಕು ಹಸ್ತಗಳಿವೆ, ಈಕೆ ಗರುಡ ವಾಹನೆ.'

'ಸರಸ್ವತಿಯ ಮೂರ್ತಿ ಶಿಲ್ಪದ ಲಕ್ಷಣಗಳೂ ಸ್ವೋಪಜ್ಞ ಹಾಗೂ ಅರ್ಥಪೂರ್ಣ ವಾಗಿವೆ. ಸಂಪ್ರದಾಯದಂತೆ ಬ್ರಹ್ಮನ ರಾಣಿಯಾಗಿದ್ದರೂ ಸ್ವತಂತ್ರ ದೇವೀಶಕ್ತಿಯೆಂದು ಪರಿಗಣಿತಳಾಗಿ ಆರಾಧಿಸಲ್ಪಡುತ್ತಾಳೆ... ಮನ ಮೋಹನಕರ ಲಾವಣ್ಯವತಿಯೂ ಆದ ಸರಸ್ವತಿಯ ಶರೀರ, ವೇಷಭೂಷ ಏನೆಲ್ಲವೂ ಅಪ್ಪಟ ಬಿಳಿಯೇ, ಸ್ವಚ್ಛತೆ ಶುಚಿ ಪರಿಶುಭ್ರತೆಯ ದ್ಯೋತಕವೇ. ಚತುರ್ಭುಜೆಯಾದ ಅವಳು ಎರಡು ಕೈಗಳಿಂದ ವೀಣೆಯನ್ನು ನುಡಿಸುತ್ತಿದ್ದರೆ, ಮತ್ತೆರಡರಲ್ಲಿ ಪುಸ್ತಕ, ಅಕ್ಷರಮಾಲೆ ಹಿಡಿದಿರುತ್ತಾಳೆ. ಕೆಲವೊಮ್ಮೆ ಪಾಶವೋ, ಕಮಲದ ಮೊಗ್ಗೆಯೋ ಇರುವುದುಂಟು. (ಸಂಸ್ಕೃತ ಕವಿ ದಂಡಿ 'ಸರ್ವಶುಕ್ಲಾ ಸರಸ್ವತೀ' ಎಂದು ಶಾರದೆಯನ್ನು ಬಣ್ಣಿಸಿದ್ದು ನೆನಪಿಗೆ ಬರುತ್ತದೆ). ಮೂರ್ತಿಶಿಲ್ಪಗಳಲ್ಲಿ ಸರಸ್ವತಿ ಪದ್ಮಾರೂಢೆ. ಒಂದು ಕೈಯಲ್ಲಿ ಅಮೃತ ಕುಂಭವಿದ್ದರೆ, ಮತ್ತೊಂದು ಕೈ ಬೋಧಿಸುವ ವ್ಯಾಖ್ಯಾನ ಮುದ್ರೆಯಲ್ಲಿ ಇರುತ್ತದೆ.'

'ಸರಸ್ವತಿಗೆ ಎರಡು ವಾಹನಗಳು. ಒಂದು ಮಯೂರ, ಇನ್ನೊಂದು ಹಂಸ. ನವಿಲು ಪ್ರಾಪಂಚಿಕ ವೈಭವ ವಿಲಾಸ ಆಕರ್ಷಣೆಗಳನ್ನು ದ್ಯೋತಿಸಿ ಸಾಧಕನನ್ನು ದಿವ್ಯ ಪಥದಿಂದ ದಿಗ್ಗೆಡಿಸುವ ಅವಿದ್ಯೆ ಅಜ್ಞಾನಗಳನ್ನು ಸೂಚಿಸಿದರೆ, ನೀರಿನಿಂದ ಹಾಲನ್ನು ಬೇರ್ಪಡಿಸುವ ಗುಣವುಳ್ಳ ಹಂಸ ಧವಳವಾಗಿದೆ. ನಮ್ಮ ಉದರಂಭರಣದ ಲೌಕಿಕ ವಿದ್ಯೆಯೇ ಅವಿದ್ಯೆ. ಪರಾವಿದ್ಯೆಯೇ ಮೋಕ್ಷದಾಯಕ. ಅದನ್ನು ಪ್ರತಿನಿಧಿಸುವ ಹಂಸ, ಹಾಲು ನೀರುಗಳನ್ನು ಬೇರ್ಪಡಿಸುವ ವಿವೇಕದ ಪ್ರತೀಕ. ಈ ಕಾರಣದಿಂದಲೇ ಸರಸ್ವತಿಗೆ ನವಿಲು ಹಾಗೂ ಹಂಸ—ಎರಡು ವಾಹನಗಳು ಇರಬೇಕು. ಅದಕ್ಕೇ ಶಾಸ್ತ್ರಗಳು ಈ ರೀತಿ ಭಾವಿಸಿರಬೇಕು' ಎಂದೂ ಬರೆಯುತ್ತಾರೆ.

ಸರಸ್ವತಿ ನದಿಯನ್ನು ಪುರಾಣಗಳ ಪ್ರಕಾರ ವಿಶ್ವಾಮಿತ್ರ ಸೃಷ್ಟಿಸಿದ, ಮುಂದೆ ಈ ನದಿ ಏಳು ಸೀಳುಗಳನ್ನು ಪಡೆದು ಪ್ರವಹಿಸಿದಾಗ 'ಸಪ್ತ ಸಾರಸ್ವತ'ವಾಯಿತು ಎಂಬ ವಿವರವನ್ನು ಕೊಡುತ್ತಾರೆ. ಸರಸ್ವತಿಯ ಬಗ್ಗೆ ಇನ್ನೊಂದು ಪುರಾಣದ ಕತೆಯನ್ನು ಹೇಳುತ್ತಾರೆ. ವಿಷ್ಣುವಿಗೆ ಲಕ್ಷ್ಮಿ, ಗಂಗೆ, ಸರಸ್ವತಿ ಎಂಬ ಮೂವರು ಪತ್ನಿಯರು. ಗಂಗೆ ಸರಸ್ವತಿಯರ ನಡುವೆ ಜಗಳವಾಗುತ್ತದೆ. ನದಿಯಾಗಲು ಒಬ್ಬರು ಇನ್ನೊಬ್ಬರಿಗೆ ಶಾಪ ಹಾಕುತ್ತಾರೆ. ಅದರ ಫಲವಾಗಿ ಅವರಿಬ್ಬರೂ ನದಿಗಳಾಗುತ್ತಾರೆ. ಗಂಗೆ ಭೂಲೋಕಕ್ಕೆ ಇಳಿಯುತ್ತಾಳೆ, ಸರಸ್ವತಿ

ವೈದಿಕ ಯುಗದ ಅನಂತರ ತ್ರಿವೇಣಿಯಲ್ಲಿ ಐಕ್ಯವಾಗುತ್ತಾಳೆ. ಪ್ರಯಾಗದಲ್ಲಿ ಗಂಗಾ, ಯಮುನಾ, ಸರಸ್ವತಿಗಳ ಸಂಗಮವಿದೆ. ಅಲ್ಲಿ ಸರಸ್ವತಿ ಗುಪ್ತಗಾಮಿನಿ.

ನಿಸಾರರ ಈ ಲೇಖನ ಸರಸ್ವತಿಯ ದೈವೀ ಸ್ವರೂಪದ ಪರಿಚಯವನ್ನು ಹಲವು ಆಯಾಮಗಳಲ್ಲಿ ಮಾಡಿಕೊಡುತ್ತದೆ.

(2)

ಎರಡನೆಯ ಲೇಖನ, 'ಮಠಾಧೀಶರ ಮನೋಗತಗಳಿಗೆ ಸ್ವಾನುಭವಗಳ ಸಿಂಧುತ್ವ.' ಈ ಲೇಖನ ಬರೆಯಲು ಪ್ರೇರಣೆ ನೀಡಿದ ಪುಸ್ತಕ ಸಿರಿಗೆರೆಯ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಬರೆದ 'ಧರ್ಮ ಮತ್ತು ಸಮಾಜ—ಕವಲು ದಾರಿಯಲ್ಲಿ' ಎಂಬುದು. ಸ್ವಾಮಿಗಳು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಸಂಸ್ಕೃತದಲ್ಲಿ ಸ್ವರ್ಣ ಪದಕವನ್ನು ಗಳಿಸಿದವರು. ಕಾಶಿ ವಿಶ್ವ ವಿದ್ಯಾಲಯದಿಂದ ಸಂಸ್ಕೃತ ಎಂ.ಎ. ಪದವಿಯನ್ನು, ಜರ್ಮನ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು, 'ಸೂತ ಸಂಹಿತೆ'ಯನ್ನು ಅಧ್ಯಯನ ಮಾಡಿ ಡಾಕ್ಟರೇಟ್ ಪದವಿಯನ್ನು ಗಳಿಸಿದವರು. ಆಸ್ಟ್ರಿಯಾದ ವಿಯೆನ್ನಾ ವಿಶ್ವವಿದ್ಯಾಲಯದ ಫೆಲೋಶಿಪ್ ಪಡೆದು ಪೋಸ್ಟ್ ಡಾಕ್ಟರಲ್ ಪದವಿ ಗಳಿಸಿ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮ್ಮೇಲನಗಳಲ್ಲಿ ಭಾಗ ವಹಿಸಿದವರು. ಈ ಗ್ರಂಥದಲ್ಲಿ ಹತ್ತು ಅಧ್ಯಾಯಗಳಿವೆ. ೧. ಮತ ಸಂಕೇತಗಳು ಮತ್ತು ಸಾಂಪ್ರದಾಯಿಕ ಆಚರಣೆಗಳು, ೨. ಭಕ್ತಿಯ ಉತ್ಕಟಾನುಭವ, ೩. ಗಂಡು ಹೆಣ್ಣು ದೇವರು, ೪. ಮಾತು ಮತ್ತು ಮಾಳ್ಕೆ, ೫. ವಿಜ್ಞಾನ, ನಾಗರಿಕತೆ ಮತ್ತು ಸಂಸ್ಕೃತಿ, ೬. ಜಾತಿ ಮತ್ತು ಸಾಮಾಜಿಕ ಅಸಮಾನತೆಗಳು, ೭. ಶಿಕ್ಷಣದ ಆಶೋತ್ತರಗಳು ಮತ್ತು ಅಪಜಯ, ೮. ವಿಧವೆಯರ ಮೇಲಿನ ಸಾಮಾಜಿಕ ಧಾರ್ಮಿಕ ಅತ್ಯಾಚಾರಗಳು, ೯. ಸ್ತ್ರೀವಿಮೋಚನೆ, ೧೦. ಧರ್ಮ ಮತ್ತು ಕಾನೂನು—ಇವು ಆ ಹತ್ತು ಶೀರ್ಷಿಕೆಗಳು. ಮೂಲ ಇಂಗ್ಲೀಷಿನಲ್ಲಿದ್ದ ಶೀರ್ಷಿಕೆಗಳ ಅನುವಾದ ಕೂಡ ಚೆನ್ನಾಗಿದೆ. ನಿಸಾರರು ತಮ್ಮ ಲೇಖನದಲ್ಲಿ ಸ್ವಾಮಿಗಳ ಮೊದಲನೆಯ ಲೇಖನದ ಬಗ್ಗೆ ವಿವರವಾಗಿ ಬರೆಯುತ್ತಾರೆ. ಇತರ ಲೇಖನಗಳಿಂದ ಒಂದೆರಡು ಮಹತ್ವದ ಸಂಗತಿಗಳನ್ನು ವಿವೇಚಿಸಿದ್ದಾರೆ.

ಮೊದಲನೆಯ ಪ್ರಬಂಧ—'ಮತ ಸಂಕೇತಗಳು ಮತ್ತು ಸಾಂಪ್ರದಾಯಿಕ ಆಚರಣೆಗಳು'. ಮುಂಬೈಯಲ್ಲಿ ಬೆಳಗಿನ ಉಪಾಹಾರ ಮುಗಿಸಿ, ಮಧ್ಯಾಹ್ನ ಲಂಡನ್‌ನಲ್ಲಿ ಭೋಜನ ಮಾಡಿ, ನ್ಯೂಯಾರ್ಕ್‌ನಲ್ಲಿ ರಾತ್ರಿ ಊಟ ಮಾಡುವ ಸೌಕರ್ಯ ಇಂದು ಲಭಿಸಿದೆ. ಜನರು ಹತ್ತಿರ ಆಗಿದ್ದಾರೆ. ಇದರ ಅರ್ಥ ಅವರು ಒಗ್ಗೂಡಿದ್ದಾರೆ ಎಂದಲ್ಲ. ನಾವು ವಿದೇಶಕ್ಕೆ ಹೋದರೂ ನಾವು ನಮ್ಮ ದಕ್ಷಿಣ ಭಾರತೀಯ ತಿಂಡಿಗಳಿಗಾಗಿ (ಇಡ್ಲಿ-ದೋಸೆಗಾಗಿ) ಹಾತೊರೆಯುತ್ತೇವೆ. ಇಡ್ಲಿ-ದೋಸೆಗೆ ನಮ್ಮ ನಾಲಗೆ ಒಗ್ಗಿಹೋಗಿರುವದೇ ಇದಕ್ಕೆ ಕಾರಣವಾಗಿದೆ. ಇದರಂತೆಯೇ ಮತಧರ್ಮಗಳ ಚಿಹ್ನೆ, ಸಂಕೇತಗಳಿಗೂ ಈ ಮಾತು ಅನ್ವಯಿಸುತ್ತದೆ. ನಮ್ಮ ನಂಬಿಕೆಗಳು ನಮ್ಮ ಮನಸ್ಸನ್ನು ನಿಯಂತ್ರಿಸುತ್ತವೆ. ನಮಗೆ ಗಂಗಾ ನದಿಯ ಸ್ನಾನ ಪವಿತ್ರವಾಗಿದ್ದರೆ ಅದು ಬೇರೆ ಮತೀಯರಿಗೆ ವಿಹಾರವಾಗುತ್ತದೆ.

ಚರ್ಚಿನಲ್ಲಿಯ ಶಿಲುಬೆ ಶ್ರದ್ಧಾವಂತ ಕ್ರಿಶ್ಚಿಯನ್ನನ ಹೃದಯದಲ್ಲಿ ಉದ್ದೀಪಿಸುವ ಭಾವ ಇತರರಿಗೆ ಬರಲಿಕ್ಕಿಲ್ಲ. ಸ್ವಾಮಿಗಳಿಗೆ ಒಂದು ಕತೆ ನೆನಪಾಗುತ್ತದೆ. ಶ್ರೀಮಂತನೊಬ್ಬ ಸತ್ಕಾರ್ಯವನ್ನು ಮಾಡಲು ಒಂದು ದೇವಾಲಯ ಕಟ್ಟಿಸಿದ. ಹಿಂದುಗಳನ್ನು ಬಿಟ್ಟು ಇತರರು ಅತ್ತ ಸುಳಿಯಲಿಲ್ಲ. ಅನಂತರ ಅವನು ಒಂದು ಮಸೀದೆಯನ್ನು ಕಟ್ಟಿಸಿದ. ಅಲ್ಲಿ ಕೂಡ ಮುಸ್ಲಿಮರನ್ನು ಬಿಟ್ಟು ಇತರ ಧರ್ಮಿಗಳಾರೂ ಸುಳಿಯಲ್ಲ. ಅನಂತರ ಒಂದು ಇಗರ್ಜಿಯನ್ನು ಕಟ್ಟಿಸಿದ. ಅಲ್ಲಿ ಕ್ರಿಶ್ಚಿಯನ್‌ರನ್ನು ಬಿಟ್ಟು ಬೇರೆಯವರಾರೂ ಕಾಲಿಡಲಿಲ್ಲ. ಕೊನೆಗೆ ಹೆದ್ದಾರಿಯಲ್ಲಿ ಸಂಚರಿಸುವವರಿಗಾಗಿ ಒಂದು ಶೌಚಾಲಯವನ್ನು ಕಟ್ಟಿಸಿದ. ಅಲ್ಲಿ ಎಲ್ಲ ಜನರು ಭೇದ ಭಾವವಿಲ್ಲದೆ ಸೇರತೊಡಗಿದರು, ಅದನ್ನು ಬಳಸತೊಡಗಿದರು. 'ಸ್ವಧರ್ಮೇ ನಿಧನಂ ಶ್ರೇಯಃ', ಅಂತರ್‌ಧರ್ಮೀಯ ಸಂವಾದಕ್ಕೆ ಎಡೆ ಇರಬಾರದೆಂದು ಯಾರೂ ಹೇಳುವುದಿಲ್ಲ. 'ನಮ್ಮ ರಾಷ್ಟ್ರದಲ್ಲಿ, ಅಷ್ಟೇ ಏಕೆ, ವಿಶ್ವದಾದ್ಯಂತ ಭುಗಿಲೆದ್ದಿರುವ ಜನಾಂಗ ವೈಷಮ್ಯಕ್ಕೆ, ತತ್ಪರಿಣಾಮವಾಗಿ ನಡೆಯುವ ನಿರಪರಾಧಿಗಳ ಕಗ್ಗೊಲೆ ಮತ್ತು ಆಸ್ತಿ ಹಾನಿಗೆ ಧರ್ಮದ ಅಪಾರ್ಥತೆ, ತಪ್ಪು ತಿಳಿವಳಿಕೆಗೆ ಕಾರಣ' ಎಂದು ಸ್ವಾಮಿಗಳು ಹೇಳುತ್ತಾರೆ. 'ಭಕ್ತರ ಪಾರಮಾರ್ಥಿಕ ಅಗತ್ಯಗಳನ್ನು ಪೂರೈಸಲು ಅಸ್ತಿತ್ವಕ್ಕೆ ಬಂದ ಆರಾಧನಾಲಯಗಳು ಕಾಲ ಕಳೆದಂತೆ ಪುರೋಹಿತನ ಮಧ್ಯಸ್ಥಿಕೆಯಿಂದ, ದೇವರಲ್ಲಿ ಸಕಲ ಬಗೆಯ ಸವಲತ್ತುಗಳನ್ನು ತಿರುಪೆ ಬೇಡುವ ಕೇಂದ್ರಗಳಾಗಿ ಅಪಮೌಲ್ಯಗೊಂಡವು, ಮಾರಾಟದ ಮಳಿಗೆಗಳಾದವು' ಎಂದು ನಿಸಾರ್ ಖೇದದಿಂದ ಹೇಳುತ್ತಾರೆ.

ಇತರ ಲೇಖನಗಳಲ್ಲಿ ಸ್ವಾಮಿಗಳು 'ಸ್ತ್ರೀಯರ ಸ್ಥಾನಮಾನಗಳನ್ನು ಧಾರ್ಮಿಕ ಐತಿಹಾಸಿಕ ಸಾಮಾಜಿಕ ಹಿನ್ನೆಲೆಯಲ್ಲಿ' ವಿವೇಚಿಸುವುದನ್ನು ನಿಸಾರರು ಮೆಚ್ಚುತ್ತಾರೆ. ಒಂದು ನಿಬಂಧದಲ್ಲಿ ಸ್ವಾಮಿಗಳು ಮದ್ಯಪಾನ ನಿಷೇಧದ ಬಗ್ಗೆ ಬರೆಯುತ್ತ, 'ಇನ್ನೂರು ವರ್ಷಗಳ ಹಿಂದೆ ಟಿಪ್ಪುಸುಲ್ತಾನನು ಮದ್ಯಪಾನವನ್ನು ನಿಷೇಧಿಸಿದ್ದ; ನಮ್ಮ ಆಳರಸರು ಈ ದಿಶೆಯಲ್ಲಿ ಕಣ್ಣು ತೆರೆಯಬೇಕು' ಎಂದು ಹೇಳಿದ ಮಾತನ್ನು ನಿಸಾರರು ಬಹಳ ಮೆಚ್ಚುತ್ತಾರೆ.

(3)

'ಜೀವನ ಚರಿತ್ರೆಗಳಲ್ಲಿ ಕಳಸ ಪ್ರಾಯ' ಎಂಬ ಮೂರನೆಯ ಲೇಖನದಲ್ಲಿ ನಿಸಾರರು ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಹಾಗೂ ಕೃತಿಗಳ ಬಗ್ಗೆ ಬಂದ 'ಶ್ರೀ ರಾಮಕೃಷ್ಣ ಯುಗಾವತಾರ' ಎಂಬ ನಾಲ್ಕು ಸಂಪುಟಗಳ ಬೃಹತ್ಕೃತಿಯ ಬಗ್ಗೆ ಬರೆಯುತ್ತಾರೆ. ಇದರ ಲೇಖಕರು ಸ್ವಾಮಿ ಪುರುಷೋತ್ತಮಾನಂದರು. ಮೊದಲನೆಯ ಸಂಪುಟದಲ್ಲಿ ರಾಮಕೃಷ್ಣರ ವಂಶೇತಿಹಾಸವಿದೆ. ಅವರ ಬಾಲ್ಯದ ವರ್ಣನೆ, ಹದಿನೇಳನೆಯ ವಯಸ್ಸಿಗೆ ದಕ್ಷಿಣೇಶ್ವರಕ್ಕೆ ಅರ್ಚಕರಾಗಿ ಬಂದ ಬಳಿಕ ಅವರ ಆಧ್ಯಾತ್ಮಿಕ ಧಾರ್ಮಿಕ ಸಾಧನೆಗಳ ಹೃದಯಸ್ಪರ್ಶಿ ವಿವರಗಳನ್ನು ನಿಸಾರರು ಶ್ಲಾಘಿಸುತ್ತಾರೆ. ಎರಡನೆಯ ಸಂಪುಟದಲ್ಲಿ ರಾಮಕೃಷ್ಣರ ಸಂಪರ್ಕಕ್ಕೆ ಬಂದ ಅನೇಕ ಸಾಧಕ ಶ್ರೇಷ್ಠರ, ಪಂಡಿತೋತ್ತಮರ ಬಗ್ಗೆ ಇರುವ ರೋಚಕ ವಿವರಣೆ ಇದೆ. ಸತಿ ಶಾರದಾಮಣಿಯವರೊಂದಿಗಿನ ಆತ್ಮಿಕ ಬಾಂಧವ್ಯದ ವಿವರಗಳಿವೆ. ಮೂರನೆಯ ಸಂಪುಟದಲ್ಲಿ ಅಂತರಂಗದ ಶಿಷ್ಯರಾದ ಲಾಟು, ರಾಖಾಲ, ನರೇಂದ್ರ ಮುಂತಾದವರು ಪರಮಹಂಸರಿಂದ ಪಡೆದ ಪ್ರೇರಣೆ ಮತ್ತು ಅನುಭವಗಳ ನಿರೂಪಣೆಯಿದೆ.

ನಾಲ್ಕನೆಯ ಸಂಪುಟದಲ್ಲಿ ಶಿಷ್ಯರ ಸಂಚಯ ಕಾರ್ಯ ಹಾಗೂ ಭಕ್ತಿ ಶ್ರದ್ಧೆಯ ತರಬೇತಿ ಮುಂದುವರಿದಿದೆ. ಅದರೊಂದಿಗೆ ಶ್ರೀ ರಾಮಕೃಷ್ಣರ ಐಹಿಕ ಲೀಲಾ ಜೀವನದ ಕೊನೆಯ ದಿನಗಳ ವಿವರಪೂರ್ಣ ದಾಖಲೆ ಇದೆ.

ಅಧ್ಯಾಯಗಳ ತಲೆಬರಹಗಳು ಕೂಡ ಆಕರ್ಷಕವಾಗಿವೆ. 'ಬಾಲಕ ಬೀರಿದ ಬೆಳಕು', 'ಸಂಕ್ರಮಣದಲ್ಲಿ ಸಂಸಾರ', 'ಅದ್ವೈತಿಗೊಂದು ದ್ವೈತದ ಪಾಠ', 'ಮಹಿಮೆಯಂತೆ ಮಹಿಮಾವಂತ', 'ಉರಿದು ಉರುಳಿದ ಉಲ್ಕೆ', 'ಹರಿಭಕ್ತಿಯ ಕಿರಿ ಭಕ್ತರು', 'ವೈದ್ಯನಾಗಿ ಬಂದ, ಶಿಷ್ಯನಾಗಿ ನಿಂದ'— ಮುಂತಾದವು. 'ಮತ ಧರ್ಮ ಜಾತಿ ಭಾಷೆಗಳ ಹೆಸರಿನಲ್ಲಿ ನೆತ್ತರಿನ ನೆರೆ ಹರಿಸಿರುವ ಜನಗಳಿಗೆ ರಾಮಕೃಷ್ಣ ಪರಮಹಂಸರ ಬದುಕು, ಉಪದೇಶಗಳು ವಿವೇಕೋದಯವನ್ನು ಮೂಡಿಸಿಯಾವು; ಮತ ಧರ್ಮಗಳ ನೈಜ ಸ್ವರೂಪದ ತಿಳಿವಳಿಕೆ ನೀಡಿಯಾವು' ಎಂಬ ಕೊನೆಯ ನಿಸಾರರ ಉವಾಚ ಮನೋಜ್ಞವಾಗಿದೆ.

(4)

ನಾಲ್ಕನೆಯ ಲೇಖನ 'ಮುಳ್ಳಿನ ಮಕುಟದ ಮಸೀಹ'. ಇದು ಏಸುಕ್ರಿಸ್ತನ ಬಗ್ಗೆ ಬರೆದ ಲೇಖನ. 'ಡಿಸೆಂಬರ್ ೨೫: ಮಾನವನ ಇತಿಹಾಸದಲ್ಲಿ ಮರೆಯಲಾಗದ, ಮರೆಯಬಾರದ ಮಹತ್ವದ ದಿನ' ಎಂದು ಲೇಖನ ಪ್ರಾರಂಭವಾಗುತ್ತದೆ. ಇದರಲ್ಲಿ ಏಸುವಿನ ಜನನ, ಬಾಲ್ಯ ಹಾಗೂ ಜೀವನದ ಬಗ್ಗೆ ಬರೆಯುತ್ತಾರೆ. ಅವನು ಬದುಕಿದ್ದು ಕೇವಲ ೩೩ ವರ್ಷಗಳು. ಆದರೆ ಅಷ್ಟು ಅಲ್ಪಾವಧಿಯಲ್ಲಿ ಅವನು ಮಾಡಿದ ಧರ್ಮ ಜಾಗೃತಿ ನಂಬಲಾಗದ್ದು. ಆತ ಯುಗಪ್ರವರ್ತಕ ಪವಾಡಗಳನ್ನೇ ಎಸಗಿದ. ಇಂದು ಪ್ರಪಂಚದ ಮೂರನೆಯ ಒಂದು ಭಾಗ ಅವನ ಅನುಯಾಯಿಗಳೇ ಇದ್ದಾರೆ' ಎನ್ನುತ್ತಾರೆ.

ಸಾಮಾನ್ಯ ವಾಚಕರಿಗೆ ಗೊತ್ತಿರದ ಕೆಲವು ಸಂಗತಿಗಳನ್ನು ನಿಸಾರರು ಬರೆಯುತ್ತಾರೆ. 'ಏಸುಕ್ರಿಸ್ತ ಮುಸ್ಲಿಮರಿಗೂ ಗೌರವಾನ್ವಿತ ಪ್ರವಾದಿ, ಅಲ್ಲಾಹನ ಸಂದೇಶವಾಹಕ. ಅಷ್ಟೇ ಏಕೆ, ಆತ ಉದ್ಧಾರಕ (ಮಸೀಹ=Messiah) ಸಹ. ಅವನ (ಏಸುವಿನ) ಬಗ್ಗೆ ಶ್ರದ್ಧೆ, ವಿಶ್ವಾಸ ತಳೆಯದಿದ್ದರೆ ಅಂಥವ ಮುಸ್ಲಿಂ ಎನ್ನಿಸಿಕೊಳ್ಳಲಾರ. 'ಹಜ್ರತ್' ಎಂಬ ಗೌರವ ಸೂಚೀ ಪದದಿಂದ ಆ ಮಹಾತ್ಮನನ್ನು ಇಸ್ಲಾಂ ಧರ್ಮೀಯರು ಸಂಬೋಧಿಸುತ್ತಾರೆ. ಪವಿತ್ರ ಕುರ್‌ಆನ್‌ನಲ್ಲಿ ಪ್ರವಾದಿವರ್ಯ ಮುಹಮ್ಮದ(ಸ)ರ ಹೆಸರು ಐದು ಬಾರಿ ಉಲ್ಲೇಖ ವಾಗಿದ್ದರೆ, ಏಸುವಿನ ಹೆಸರು ಇಪ್ಪತ್ತೈದು ಸಲ ಬರುತ್ತದೆ. ಹದಿನೈದನೆಯ ಅಧ್ಯಾಯದಲ್ಲಿ ಆತನ ಬಗೆಗಿನ ವಿವರಗಳನ್ನು—ಹುಟ್ಟು, ಆಪ್ತ ಶಿಷ್ಯರು, ಸಂದೇಶ, ಪವಾಡ—ಇತ್ಯಾದಿ ಸಂಗತಿಗಳನ್ನು ಎದುರುಗೊಳ್ಳುತ್ತೇವೆ. ಕುರ್‌ಆನ್ ಏಸುಕ್ರಿಸ್ತನನ್ನು 'ಈಸಾ' ಎನ್ನುತ್ತದೆ. ಇದು ಪ್ರಾಚೀನ ಹೀಬ್ರು ಭಾಷೆಯ 'ಈಸಾವ್'ನಿಂದ ಬಳುವಳಿಯಾಗಿ ಅರಬ್ಬಿ ಭಾಷೆಗೆ ಸಂದ ಪದ. ಯಹೂದ್ಯರು 'ಎಸಾವ್' ಎಂದರೆ, ಅದಕ್ಕೆ ಸಂವಾದಿಯಾಗಿ ಲ್ಯಾಟಿನ್ ಪದ 'ಜೀಸಸ್' ಜನಾದರಣೀಯವಾಗಿದೆ. ಏಸುಕ್ರಿಸ್ತನ ತಾಯಿ ಮೇರಿ ಅಥವಾ ಮರಿಯಳ ಬಗ್ಗೆ ಕುರ್‌ಆನ್‌ನಲ್ಲಿ ಒಂದು ಇಡಿಯ ಅಧ್ಯಾಯವೇ ಇದೆ. 'ಸೂರಾ ಮರ್ಯಮ್' ಎಂಬುದು ಅದರ ತಲೆಬರಹ.' ಈ ಮಾತುಗಳು ವಾಚಕರಿಗೆ ಹೊಸವು. ನಿಸಾರರು ಇದನ್ನು ತಮ್ಮ

ಲೇಖನದಲ್ಲಿ ದಾಖಲಿಸುತ್ತಾರೆ. ಏಸುವನ್ನು ಕುರ್‌ಆನ್ ದೇವಪುತ್ರನೆಂದೂ ದೇವನೆಂದೂ ಬಗೆಯುವುದಿಲ್ಲ. ಅವನ ಆರಾಧನೆಯನ್ನು ಸಮ್ಮತಿಸುವುದಿಲ್ಲ. ಆತ ಶಿಲುಬೆಯನ್ನು ಏರಿ ಮಡಿದುದನ್ನು ಅಂಗೀಕರಿಸುವುದಿಲ್ಲ. ಆತನನ್ನು ಪೂರ್ವದ ದೈವ-ಸಂದೇಶವಾಹಕನೆಂದೂ ಇಸ್ಲಾಂ ಪರಂಪರೆಯ ಪ್ರವಾದಿಗಳಲ್ಲಿ ಒಬ್ಬನೆಂದೂ ಭಾವಿಸುತ್ತದೆ.

ಏಸುಕ್ರಿಸ್ತ, ನಜರೆತ್ ಎಂಬ ಗ್ರಾಮದ ಬಡಗಿ ಯೋಸೆಫ್‌ನ ಮತ್ತು ಮರಿಯಾಳ ಮಗನಾಗಿ ಜನಿಸಿದ್ದು, ಪರಿಶುದ್ಧಾತ್ಮ (ಹೋಲಿ ಘೋಸ್ಟ್)ನ ಸಂಪರ್ಕದಿಂದ ಆತನ ತಾಯಿ ಗರ್ಭ ಧರಿಸಿದ ವಿಷಯ ಬೈಬಲ್‌ನಲ್ಲಿದೆ. ಈ ಮಾತನ್ನು ಕುರ್‌ಆನ್ ಬೇರೆ ರೀತಿಯಲ್ಲಿ ಹೇಳುತ್ತದೆಯಂತೆ. 'ದೇವರು ಸಂಕಲ್ಪ ಮಾಡಿದರೆ ಸಾಕು, ತಂದೆಯಿಲ್ಲದೆ ಏಸುಕ್ರಿಸ್ತನನ್ನು ಸೃಷ್ಟಿಸಬಲ್ಲ. ಅವನ ಇಚ್ಛೆಗೆ ಹೊರತಾದದ್ದು ಯಾವುದಿದೆ?' ಎನ್ನುತ್ತದೆ.

ದನದ ಕೊಟ್ಟಿಗೆಯಲ್ಲಿ ಏಸುವಿನ ಜನನ. ಪರ್ಶಿಯಾದಿಂದ ಮೂವರು ಖಗೋಳ ಶಾಸ್ತ್ರಜ್ಞರು ಬಾನಿನಲ್ಲಿ ಒಂದು ಉಜ್ವಲ ತಾರೆ ಹುಟ್ಟಿದ್ದನ್ನು ನೋಡಿ ಆ ದಿಕ್ಕಿನೆಡೆಗೆ ನಡೆದರು. ಪ್ರವಾದಿಯ ಜನ್ಮವಾದುದನ್ನು ಅರಿತು ಕಾಣಿಕೆಯನ್ನು ಕೊಡಲು ಬೆತ್ಲಹೇಮ್‌ಗೆ ಬಂದರು. (ಅವರು ಕೊಟ್ಟ ಕಾಣಿಕೆಗೆ 'ದಿ ಗಿಫ್ಟ್ ಆಫ್ ದಿ ಮಾಗಿ' ಎನ್ನುತ್ತಾರೆ.) ಏಸು, ಮುಂದೆ ದೀನ ದಲಿತರ ಉದ್ಧಾರ ಕಾರ್ಯವನ್ನು ಕೈಕೊಂಡ. ಹನ್ನೆರಡು ಶಿಷ್ಯರೊಂದಿಗೆ ಗೆಲಿಲಾಯ್ ಸರೋವರದ ಬಳಿಯ ಬೆಟ್ಟವನ್ನೇರಿ ಪ್ರವಚನವನ್ನು ನೀಡಿದ. (ಇದಕ್ಕೆ ಪರ್ವತ ಪ್ರವಚನ ಎನ್ನುತ್ತಾರೆ). ಮಾನವ ಕರುಣೆ, ಪ್ರೇಮ, ತ್ಯಾಗ, ಭಕ್ತಿ ಮತ್ತು ಲೋಕಾಚಾರ, ನೀತಿ ನಡವಳಿಕೆಗಳು ಆ ಪ್ರವಚನದ ಪ್ರಾಣಶ್ವಾಸದಂತಿವೆ. ಅವನು ಎಲ್ಲರೊಡನೆ ಪ್ರೇಮ ಹಾಗೂ ಸೌಹಾರ್ದ ಭಾವದಿಂದ ನಡೆದುಕೊಂಡ. ಅದರಲ್ಲಿ—ಪಾಪಿಗಳು, ವ್ಯಭಿಚಾರಿಗಳು, ಕಳ್ಳರು, ಕೊಲೆಗಡುಕರು, ನಿಂದಕರು, ಆಷಾಢಭೂತಿಗಳು ಇದ್ದರೂ ಅವರನ್ನು ಕಂಡಾಗಲೂ ಸೌಹಾರ್ದದಿಂದ ನಡೆದುಕೊಂಡ. ದೇವರು ಮನುಷ್ಯರಲ್ಲಿ ಭೇದ ಮಾಡುವುದಿಲ್ಲ. ಸೂರ್ಯ, ಅರಮನೆಯಂತೆ ಜೋಪಡಿಗೂ ಸಮಾನ ಬೆಳಕು ಕೊಡುತ್ತಾನೆ. ಹಾಗೆಯೇ ಮಾನವರು ಇತರರೊಡನೆ ಪಂಕ್ತಿಭೇದ ಮಾಡಬಾರದು ಎಂದು ಏಸು ಬೋಧಿಸಿದ. ಕುಷ್ಠ, ಕುಂಟ, ಕುರುಡ, ಕಿವುಡರ ಆರೈಕೆ ಮಾಡಿ ಅವರ ಆರೋಗ್ಯವನ್ನು ಮರಳಿಸಿ ಕೊಟ್ಟ.

ಏಸುವಿನ ಬೋಧನೆಗಳಿಂದ ಪ್ರಭಾವಿತರಾದ ಜನರು ಮೂಢ ನಂಬಿಕೆ, ಗೊಡ್ಡಾಚಾರಗಳನ್ನು ಧಿಕ್ಕರಿಸಲು ಪಣ ತೊಟ್ಟರು. ಯಾಜಿಗಳು, ಫರಿಸಾಯರು ತಮಗೆ ಕಂಟಕನಾದ ಏಸುವನ್ನು ಕೊನೆಗಾಣಿಸಲು ಸಂಚು ಹೂಡಿದರು. ಇದು ಏಸುವಿಗೆ ತಿಳಿದಿತ್ತು. ತಮ್ಮನ್ನು ಆಳುತ್ತಿರುವ ರೋಮನ್ ರಾಜ್ಯಪಾಲರಿಗೆ ಚಾಡಿ ಹೇಳಿ ಸೈನಿಕರಿಂದ ತನ್ನನ್ನು ನಿರ್ದಯವಾಗಿ ಕೊಲ್ಲಿಸುವರೆಂದೂ ಕೊನೆಯ ರಾತ್ರಿಯ ಊಟವನ್ನು ಮಾಡಿದ ಶಿಷ್ಯರಲ್ಲೇ ಒಬ್ಬನು ತನಗೆ ಮೋಸ ಮಾಡುವನೆಂದು ಮೊದಲೇ ಏಸು ನುಡಿದಿದ್ದ. ಕೊನೆಗೂ ಕುತಂತ್ರಿಗಳು ಇವನನ್ನು ಸೆರೆ ಹಿಡಿದರು. ಮುಳ್ಳಿನ ಕಿರೀಟ ತೊಡಿಸಿದರು. ಗೊಲ್ಗೊಥದ ರುದ್ರ ಭೂಮಿಯಲ್ಲಿ ಇವನನ್ನು ಶಿಲುಬೆಗೇರಿಸಿದರು. ಇವನ ಎಡ-ಬಲಬದಿಗೆ ಇಬ್ಬರು ಕಳ್ಳರಿದ್ದರು. ಎಲ್ಲರಿಗೂ ಶಿಲುಬೆಗೇರಿಸಲಾಯ್ತು. ಇವನ ಕೈ ಕಾಲು ಮೂಳೆಗಳಿಗೆ ಮೊಳೆ

ಗಳನ್ನು ಬಡಿಯಲಾಗಿತ್ತು. ಇಂಥ ಯಾತನೆಯಲ್ಲಿ ಕೂಡ ಏಸು ದೇವರಲ್ಲಿ ಪ್ರಾರ್ಥನೆ ಮಾಡಿದ, 'ತಂದೆ, ಈ ಜನರನ್ನು ಮನ್ನಿಸು, ಅವರು ಏನು ಎಸಗುತ್ತಿರುವರೆಂಬುದನ್ನು ಅರಿಯರು' ಎಂದು. ಆ ದಿನ ಶುಕ್ರವಾರವಾಗಿತ್ತು. ಅದುವೆ 'ಗುಡ್ ಫ್ರೈಡೇ' ಆಯಿತು. ಮೂರು ದಿನಗಳ ತರುವಾಯ, ಭಾನುವಾರ ಪ್ರಾತಃಕಾಲ ಏಸು ಸಮಾಧಿಯಿಂದ ಮೇಲಕ್ಕೆದ್ದು ಬಂದನೆಂಬ ಪ್ರತೀತಿ ಇದೆ—ಈ ವಿವರಗಳನ್ನೆಲ್ಲ ನಿಸಾರರು ಸಂಕ್ಷೇಪಿಸಿ ಬರೆದು ಮನಸ್ಸಿಗೆ ನಾಟುವಂತೆ ಚಿತ್ರಿಸುತ್ತಾರೆ. ಮಂಜೇಶ್ವರದ ಗೋವಿಂದ ಪೈಗಳು ಕ್ರಿಸ್ತನ ಕೊನೆಯ ದಿನಗಳನ್ನು 'ಗೊಲ್ಗೊಥ' ಎಂಬ ದೀರ್ಘ ಕಾವ್ಯದಲ್ಲಿ ಹೃದಯಸ್ಪರ್ಶಿಯಾಗಿ ವರ್ಣಿಸಿದ್ದನ್ನೂ ನೆನೆಯುತ್ತಾರೆ.

ನಿಸಾರ್ ಅಹಮದ್ ಅವರ ಅತ್ಯಂತ ಮಹತ್ವದ ಬರವಣಿಗೆ ಮುಂದೆ ಚರ್ಚಿಸಲಿರುವ ಮೂರು ಲೇಖನಗಳಲ್ಲಿ ಅಡಕವಾಗಿದೆ. ಇಸ್ಲಾಂ ಧರ್ಮಗ್ರಂಥದ ಬಗ್ಗೆ, ಇಸ್ಲಾಂ ಸಂತರಾದ ಸೂಫಿಗಳ ಬಗ್ಗೆ, ಪ್ರವಾದಿ ಪೈಗಂಬರರ ಜೀವನದ ಮೇಲೆ ಆಧರಿಸಿ ರಚಿತವಾದ 'ಹದೀಸ್' ಬಗ್ಗೆ ವಿವರವಾಗಿ ಬರೆಯುತ್ತಾರೆ. 'ಕುರ್‌ಆನ್' ಮತ್ತು 'ಹದೀಸ್' ಗಳನ್ನು ಇಸ್ಲಾಂ ಧರ್ಮದ ಅನುಯಾಯಿಗಳ ಎರಡು ಶ್ವಾಸಕೋಶಗಳಂತೆ ಇವೆ ಎನ್ನಲಾಗುತ್ತದೆ. ಈ ವಿಷಯಗಳನ್ನು ಇನ್ನಷ್ಟು ವಿವರವಾಗಿ ನಿಸಾರರು ಬರೆಯಬೇಕಾಗಿತ್ತು, ಕಾರಣ ಇಸ್ಲಾಂ ಧರ್ಮದ ಬಗ್ಗೆ ತಿಳಿದುಕೊಳ್ಳುವುದು ಸಾಕಷ್ಟು ಇದೆ ಮತ್ತು ನಿಸಾರರು ಇಂಥ ವಿಷಯದ ಬಗೆಗೆ ಬರೆಯಲು ಸಮರ್ಥರೂ ಆಗಿದ್ದಾರೆ. ನಿಸಾರರ ತೌಲನಿಕ ಅಧ್ಯಯನ ಹಾಗೂ ಅವರ ಭಾಷಾ ಪ್ರೌಢಿಮೆಗಳಿಗೆ ಓದಿಸಿಕೊಂಡು ಹೋಗುವ ಶಕ್ತಿ ಇದೆ.

ನಾನು ಬಹುವಾಗಿ ಮೆಚ್ಚಿದ ನಿಸಾರರ ಪ್ರಬಂಧ 'ಕನ್ನಡದ ನುಡಿ ಮುಡಿಗೆ ಕುರ್‌ಆನ್‌ನ ಸಿರಿ ಕೊಡುಗೆ' ಎಂಬುದು. ಪ್ರಬಂಧದ ಶೀರ್ಷಿಕೆ ಎಷ್ಟು ಕಾವ್ಯಮಯವಾಗಿದೆಯೋ ಅಷ್ಟೇ ಅವರ ಪ್ರಬಂಧ ಸಹ ಸುಲಲಿತವಾಗಿದೆ. ಸಿರಿಗನ್ನಡ ಖಜಾನೆಗೆ ಸೇರ್ಪಡೆಯಾದ 'ಕುರ್‌ಆನ್' ಗ್ರಂಥದ ಕನ್ನಡ ಅನುವಾದದ ಬಗ್ಗೆ ಅವರು ಬರೆಯುತ್ತಾರೆ. ಮೂಲ ಅರಬ್ಬೀ ಭಾಷೆಯಲ್ಲಿರುವ ಕುರ್‌ಆನ್‌ನ ಅನುವಾದವನ್ನು ಆರು ಸಂಪುಟಗಳಲ್ಲಿ ಮೌಲಾನಾ ಸೈಯದ್ ಆಲಾ ಮೌದೂದಿಯವರು ಮಾಡಿದ್ದರು. ಅದನ್ನು ಉರ್ದು ಓದುಗರ ಅನುಕೂಲಕ್ಕಾಗಿ ೯೫೦ರಲ್ಲಿ ಒಂದು ಸಂಪುಟದಲ್ಲಿ ಸಾರವತ್ತಾಗಿ ಸಂಗ್ರಹಿಸಿದವರು ('ತಲ್‌ಖೀಸ್ ತಫಹೀಮುಲ್ ಕುರ್‌ಆನ್') ಮೌಲಾನಾ ಸದ್ರುದ್ದೀನ್ ಇಸ್ಲಾಹೀ. ಇದನ್ನು ಕನ್ನಡದಲ್ಲಿ ಸಮರ್ಥವಾಗಿ ಕನ್ನಡಿಸಿದವರು, ಉರ್ದು ಹಾಗೂ ಕನ್ನಡ ಭಾಷಾವಿಶಾರದರಾದ ಸುಳ್ಯದ ಎಸ್. ಅಬ್ದುಲ್ ಗಫಾರ್ ಸಾಹೇಬರು. ಈ ಕನ್ನಡ ಗ್ರಂಥ ಒಂದೇ ಸಂಪುಟದಲ್ಲಿ ಹೊರಬರಬೇಕಾಗಿತ್ತು. ಆದರೆ ಕೆಲವು ಅನಿವಾರ್ಯ ಕಾರಣಗಳಿಂದಾಗಿ ಎರಡು ಸಂಪುಟದಲ್ಲಿ ಹೊರಬಂದಿದೆಯಂತೆ. ಮೊದಲನೆಯ ಸಂಪುಟದ ಹೆಸರು, 'ಕುರ್‌ಆನ್ ವ್ಯಾಖ್ಯಾನ'. ಇದರ ವೈಶಿಷ್ಟ್ಯವೆಂದರೆ 'ಕನ್ನಡ ವಾಚಕರು ಮೆಚ್ಚುವಂತಹ ಶ್ಲಾಘ್ಯ ಶೈಲಿ' ಎನ್ನುತ್ತಾರೆ ನಿಸಾರ್. ಇದರ ಪ್ರಕಟನೆಯನ್ನೂ ಅಷ್ಟೇ ಪ್ರೀತಿಯಿಂದ ಮಾಡಿದ್ದಾರಂತೆ. ಬೈಬಲ್‌ಗೆ ಬಳಸುವ ತುಟ್ಟಿ ಬೆಲೆಯ ತೆಳ್ಳನೆಯ ಕಾಗದದ ಬಳಕೆಯನ್ನು ಮಾಡಲಾಗಿದೆ. ಅದರಲ್ಲಿ ಪವಿತ್ರ ಕುರ್‌ಆನ್‌ನ

ಅರಬ್ಬೀ ಮೂಲವೂ ಇದೆ, ಕನ್ನಡ ಭಾಷಾಂತರದ ಜೊತೆಗೆ ಕನ್ನಡ ಟಿಪ್ಪಣಿಗಳೂ ವ್ಯಾಖ್ಯಾನಗಳೂ ಇವೆ. ಇವು ಪುಸ್ತಕದ ಮೌಲಿಕತೆಯನ್ನು ಹೆಚ್ಚಿಸಿವೆ. ೧೧೫೬ ಪುಟಗಳ ಗ್ರಂಥದ ಬೆಲೆ ಕೇವಲ ೧೫೦ ರೂಪಾಯಿ ಮಾತ್ರ! ಕನ್ನಡ ಅನುವಾದ ಗ್ರಂಥ ಬಿಡುಗಡೆ ಯಾದದ್ದು ೨೧ ಏಪ್ರಿಲ್, ೧೯೯೧ರಂದು, ಬೆಂಗಳೂರಿನ ವುಡ್‌ಲ್ಯಾಂಡ್ಸ್ ಹೋಟೇಲಿನಲ್ಲಿ. ಪ್ರಮುಖ ಅತಿಥಿಗಳು ಡಾ|| ಹಾ.ಮಾ.ನಾಯಕ, ಡಾ|| ಸಿದ್ಧಯ್ಯ ಪುರಾಣಿಕ ಮತ್ತು ಅಬ್ದುಲ್ ಗಫಾರ್ (ಅನುವಾದಕ). ಹಿರಿಯ ಕವಿ ಪು.ತಿ.ನ. ಕೂಡ ಉಪಸ್ಥಿತರಿದ್ದು ಕಾರ್ಯಕ್ರಮದ ಘನತೆಯನ್ನು ಹೆಚ್ಚಿಸಿದ್ದರು. ಅಖಿಲ ಭಾರತ ಜಮಾತೆ ಇಸ್ಲಾಮೀ ಅಧ್ಯಕ್ಷ ಮೌಲಾನಾ ಮಹಮ್ಮದ್ ಸಿರಾಜುಲ್ ಹಸನ್ ಅವರು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮಂಗಳೂರಿನ 'ಸನ್ಮಾರ್ಗ' ಪತ್ರಿಕೆಯ ಸಂಪಾದಕ ಇಬ್ರಾಹಿಂ ಸಈದ್ ಪ್ರಾಸ್ತಾವಿಕ ಭಾಷಣ ಮಾಡಿದ್ದರು. ಪುಸ್ತಕದ ಆರು ಸಾವಿರ ಪ್ರತಿಗಳಲ್ಲಿ ಅರ್ಧದಷ್ಟು ಕೂಡಲೇ ಮಾರಾಟ ವಾದವಂತೆ. ಆದರೆ ಗ್ರಂಥದ ಎರಡನೆಯ ಸಂಪುಟದ ಪ್ರಕಟನೆಯ ವಿವರಗಳು ದೊರೆಯುವುದಿಲ್ಲ. ಮೊದಲನೆಯ ಸಂಪುಟದ ಬಗ್ಗೆ ನಿಸಾರರು ವಿವರವಾಗಿ ಬರೆಯುತ್ತಾರೆ.

ಕಳೆದ ಎಂಟು ಶತಮಾನಗಳಿಂದ ಕರ್ನಾಟಕದಲ್ಲಿ ಮುಸ್ಲಿಮರು ನೆಲೆಸಿದ್ದಾರೆ. ಸಾಮಾಜಿಕ ಜೀವನದಲ್ಲಿ ಸಾಮರಸ್ಯ ಸೌಹಾರ್ದಗಳಿಂದ ಹಾಸುಹೊಕ್ಕಾಗಿದ್ದಾರೆ. ಕನ್ನಡ ನಾಡಿನ ಸಾಂಸ್ಕೃತಿಕ, ರಾಜಕೀಯ, ಆಡಳಿತಾತ್ಮಕ ವಲಯಗಳಲ್ಲಿ ಸ್ಮರಣೀಯ ಸೇವೆಯನ್ನು ಸಲ್ಲಿಸಿದ್ದಾರೆ. ಹೀಗಿದ್ದೂ ನಾಡ ನುಡಿಯಾದ ಕನ್ನಡದಲ್ಲಿ ಇಸ್ಲಾಮೀ ಸಾಹಿತ್ಯವಾಗಲಿ, ದಿವ್ಯ ಕುರ್‌ಆನ್‌ನ ತರ್ಜುಮೆಯಾಗಲಿ ಬಹು ಕಾಲದಿಂದ ಆಗಿರಲಿಲ್ಲ. ಅದು ಸಖೇದ ಆಶ್ಚರ್ಯದ ಸಂಗತಿ ಎಂದು ನಿಸಾರರು ಬರೆಯುತ್ತಾರೆ. 'ಇಸ್ಲಾಂ ಧರ್ಮದ ಬಗ್ಗೆ ಮುಸ್ಲಿಮೇತರರ ತಿಳಿವಳಿಕೆ ಅತ್ಯಲ್ಪ. ಇರುವ ತಿಳಿವಳಿಕೆಯೂ ಅಪಾರ್ಥ, ಅನೈಕ್ಯಗಳಿಗೆ ಕಾರಣವಾಗುವಂತಹದು. ಮುಸ್ಲಿಮರು ಮತಾಂಧರು, ತಮ್ಮ ಧರ್ಮ ಗ್ರಂಥಗಳನ್ನು ಇತರರಿಗೆ ಓದಲು ಬಿಡುವುದಿಲ್ಲ, ಎಂಬ ಭಾವನೆ ಈಗ್ಗೆ ಕೆಲವು ವರ್ಷಗಳ ತನಕ ಪರ ಧರ್ಮೀಯರಲ್ಲಿ ಬೇರೂರಿತ್ತು. ಮುಸ್ಲಿಂ ಸಮಾಜದ ಸನಾತನವಾದಿಗಳೂ, ಕಂದಾಚಾರಿ ಕರ್ಮಠರೂ ಇದಕ್ಕೆ ಬಹುತೇಕ ಕಾರಣವೆನ್ನದೆ ವಿಧಿಯಿಲ್ಲ' ಎಂದೂ ನಿಸಾರ್ ಬರೆಯುತ್ತಾರೆ. ಹೀಗೆ ಆತ್ಮವಿಮರ್ಶೆಯನ್ನು ಮಾಡಲು ಧೈರ್ಯ ಬೇಕಾಗುತ್ತದೆ.

ಇಸ್ಲಾಂ ಸಂದೇಶವನ್ನು ಇತರರಿಗೆ ತಲಪಿಸುವವರಿಗೆ 'ತಬ್‌ಲಿಗ್' ಎನ್ನುತ್ತಾರಂತೆ. ಇವರು ಸುಸಂಘಟಿತರಾಗಿ ಕ್ರೈಸ್ತ ಬಾಂಧವರಂತೆ ಪ್ರಚಾರವನ್ನು ನಡೆಸಿ, ಇಸ್ಲಾಂ ಧರ್ಮದ ಬಗ್ಗೆ ಸದ್ಭಾವನೆ ಹಾಗೂ ಸರಿಯಾದ ತಿಳಿವು ಮೂಡಿಸುವುದು ಅವಶ್ಯ ಅನ್ನುತ್ತಾರೆ. ಸ್ವತಃ ಪ್ರವಾದಿ ಮುಹಮ್ಮದ(ಸ)ರು ಹೀಗೆ ನುಡಿದಿದ್ದರಂತೆ, 'ಮಿತಿ ಮೀರಿದ ಪ್ರಾರ್ಥನೆಗಿಂತ ಮಿತಿ ಮೀರಿದ ಜ್ಞಾನ ಮೇಲು. ಯಾವುದನ್ನು ಮಾಡದೆ ಇರಬೇಕು ಎಂಬ ತಿಳಿವಳಿಕೆಯೇ ಧರ್ಮಾಚರಣೆಯ ಅಧಾರ. ಇಡೀ ರಾತ್ರಿಯೆಲ್ಲಾ ಪ್ರಾರ್ಥಿಸುವುದಕ್ಕಿಂತ ರಾತ್ರಿ ಒಂದು ಗಂಟೆ ಕಾಲ ತಾನು ತಿಳಿದದ್ದನ್ನು ತಿಳಿಯದವರಿಗೆ ತಿಳಿಯಪಡಿಸುವುದು ವಾಸಿ' ಎಂದು. ಕುರ್‌ಆನ್ ಮಾರ್ಮಿಕವಾಗಿ ಹೀಗೆ ಹೇಳುತ್ತದೆ, 'ಹೇ ಭಕ್ತರೇ, (ಇಸ್ಲಾಮಿನ ಅಭಕ್ತರು) ಯಾರನ್ನು

ಪ್ರಾರ್ಥಿಸುವರೋ ಅವರನ್ನು (ದೇವತೆಗಳು, ಮೂರ್ತಿಗಳು ಇತ್ಯಾದಿ) ನಿಂದಿಸಬೇಡಿ. (ಮಾರುತ್ತರವಾಗಿ) ಅವರು ಅಲ್ಲಾಹ್‌ನನ್ನೇ ದ್ವೇಷದಿಂದ ಹೀಯಾಳಿಸುವರು.'

ಕನ್ನಡದಲ್ಲಿ ಇದಕ್ಕೆ ಮೊದಲು (ಕುರ್‌ಆನ್‌ನ ಈ ಅನುವಾದ ಪ್ರಕಟವಾಗುವುದಕ್ಕಿಂತ ಮೊದಲು) ಪ್ರಕಟವಾದ ಇಸ್ಲಾಂ ಧರ್ಮವನ್ನು ಕುರಿತ ಕನ್ನಡ ಪುಸ್ತಕಗಳ ಬಗ್ಗೆ ಮಾಹಿತಿ ಕೊಡುತ್ತಾರೆ. ೧೯೪೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹೊರತಂದ 'ಇಸ್ಲಾಂ ಸಂಸ್ಕೃತಿ' ಎಂಬ ಪುಸ್ತಕ, ಇಸ್ಲಾಮೀ ಪುಸ್ತಕಗಳಿಗೆಲ್ಲ 'ಚೂಡಾರತ್ನದಂತೆ ಇದೆ' ಎಂದು ಜಿ.ಪಿ. ರಾಜರತ್ನಂ ಅಂದಿದ್ದರಂತೆ. ಆ ಕಾಲದಲ್ಲಿ ಉರ್ದು ಅರಬ್ಬೀ ಫಾರ್ಸೀ ಭಾಷೆಗಳ ಪ್ರಾಧ್ಯಾಪಕರಾಗಿದ್ದ ಮಹಮ್ಮದ್ ಅಬ್ಬಾಸ್ ಷೂಸ್ತ್ರೀ ಅವರಿಗೆ ಹೇಳಿ ಇಂಗ್ಲೀಷಿನಲ್ಲಿ ಬರೆಸಿದ ಪುಸ್ತಕವನ್ನು ಸ್ವತಃ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದರಂತೆ. ಈ ಪುಸ್ತಕದಲ್ಲಿ ಪ್ರವಾದಿ ಪೈಗಂಬರರ ಬದುಕು, ತತ್ತ್ವೋಪದೇಶ, ಇಸ್ಲಾಂ ಹರಡಿಕೆ, ದೇಶಗಳು, ಮುಸ್ಲಿಂ ಮತಭೇದಗಳು, ರಾಜಕೀಯ ಚರಿತ್ರೆ, ಮುಸ್ಲಿಂ ಕಲಾ ಸಂಸ್ಕೃತಿ, ಸೂಫಿಗಳು, ಮುಸ್ಲಿಂ ದೇವತಾ ಶಾಸ್ತ್ರ ಇತ್ಯಾದಿ ವಿಷಯಗಳು ಇವೆ.

'ಪವಿತ್ರ ಖುರಾನ್' ಎಂಬ ಗ್ರಂಥ ೧೯೫೦ರಲ್ಲಿ ಪ್ರಥಮ ಪ್ರಕಟಗೊಂಡಿತ್ತು. ಅದರೊಂದಿಗೆ ಪೈಗಂಬರರ ಜೀವನ ಚರಿತ್ರೆಯೂ ಇತ್ತಂತೆ. ಅನಂತರ ೧೯೭೫ರಿಂದ ೧೯೮೦ರ ವರೆಗೆ ಕುರ್‌ಆನ್ ಅನುವಾದದ ಮೂರು ಸಂಪುಟಗಳು ಪ್ರಕಟವಾದವು. ಅರಬ್ಬೀ ಮೂಲದ ಅಕ್ಷರಾಂತರವನ್ನು ಪ್ರಕಟಿಸಿದ್ದು ಈ ಅನುವಾದ ಗ್ರಂಥದ ವೈಶಿಷ್ಟ್ಯವಾಗಿತ್ತು. ಉಪಯುಕ್ತ ಅಡಿಟಿಪ್ಪಣಿಗಳು ಇದ್ದವು. ೨೧೦೦ ಪುಟಗಳ ಪುಸ್ತಕ, ಬೆಲೆ ೪೫ ಮಾತ್ರ! ೧೯೭೮ರಲ್ಲಿ ಬೆಂಗಳೂರಿನ ಇಸ್ಲಾಮೀ ಸಾಹಿತ್ಯ ಪ್ರಕಾಶನದವರು ಪ್ರಕಟಿಸಿದ 'ದಿವ್ಯ ಕುರಾನ್' ೧೪೦೦ ಪುಟಗಳ ಸಂಪುಟವಾಗಿತ್ತು, ಬೆಲೆ ೩೦ ರೂಪಾಯಿ ಮಾತ್ರ.

ಇಷ್ಟು ಹಿನ್ನೆಲೆಯನ್ನು ಒದಗಿಸಿ, ಪ್ರಸ್ತುತ 'ಕುರ್‌ಆನ್ ವ್ಯಾಖ್ಯಾನ' ಗ್ರಂಥದ ವಿವರವಾದ ಪರಿಚಯವನ್ನು ಮಾಡುತ್ತಾರೆ. ಮೊದಲನೆಯ ಸಂಪುಟದಲ್ಲಿ ೨೦ ಅಧ್ಯಾಯಗಳ ೧೬ ಕಾಂಡಗಳ ಅನುವಾದವಿದ್ದರೆ, ಎರಡನೆಯ ಸಂಪುಟದಲ್ಲಿ ೯೪ ಅಧ್ಯಾಯಗಳು ೧೪ ಕಾಂಡಗಳು ಪ್ರಕಟವಾಗಲಿವೆ ಎಂದಿದ್ದಾರೆ. ಪ್ರಥಮ ಸಂಪುಟದಲ್ಲಿ ಕೃತಿಯ ಮೂಲ ಲೇಖಕ ಅಬ್ದುಲ್ ಆಲಾ ಮೌದೂದಿಯವರ ಪ್ರಸ್ತಾವನೆ ಮತ್ತು ಸುದೀರ್ಘ ಮುನ್ನುಡಿ ಇದೆಯಂತೆ. ಅರ್ಥಾನುವಾದದ ಮೇಲ್ಗಡೆ ಮೂಲ ಅರಬ್ಬೀ ವಾಕ್ಯ ಅಚ್ಚಾಗಿರುವ ಉಪಯುಕ್ತ ವಿಷಯ ಸೂಚಿ ಇದೆ. 'ಕುರ್‌ಆನ್' ದೇವೋಕ್ತ ದಾಖಲೆಯಾಗಿದ್ದು ಅರಬ್ಬೀ ಭಾಷೆಯ ಸೀಮಾಕೃತಿಯಾಗಿದೆ ಎನ್ನುತ್ತಾರೆ ನಿಸಾರ್. ಮೌಲಾನಾ ಮೌದೂದಿಯವರ ಆರು ಸಂಪುಟಗಳ ಉರ್ದು ಮೂಲಕೃತಿ 'ತಫ್‌ಹೀಮುಲ್ ಕುರಾನ್' ಬಗ್ಗೆ ಬರೆಯುತ್ತ, ಇದೊಂದು ಮೇರುಸದೃಶ ಸಾಧನೆ, 'ಯೋವೈ ಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ' ಎಂಬ ಸೂಕ್ತಿಗೆ ಹೇಳಿ ಮಾಡಿಸಿದ ಕೃತಿ ಎನ್ನುತ್ತಾರೆ. 'ಮೂಲ ಅರಬ್ಬೀ ಭಾಷೆಯಲ್ಲಿರುವ ಕುರ್‌ಆನ್ ಗ್ರಂಥವನ್ನು ತರ್ಜುಮೆ ಮಾಡುವಾಗ ಸಾಮಾನ್ಯವಾದ ಭಾಷಾಂತರ ಪದ್ಧತಿಯನ್ನು ಬಿಟ್ಟು ಸ್ವತಂತ್ರವಾದ ಅರ್ಥ ವಿವರಣ ಪದ್ಧತಿಯನ್ನು ಹಿಡಿದಿದ್ದಾರೆ. ಹೊಸ ಬಗೆಯ ಭಾವಾನುವಾದವನ್ನು

ಸಾಧಿಸಿದ್ದಾರೆ. ಮೂಲ ಕೃತಿ, ಭಾಷಣ ಶೈಲಿ ಇಲ್ಲವೇ ಪ್ರವಚನ ಶೈಲಿಯಲ್ಲಿದೆ. ಇದನ್ನು ಲೇಖನ ಅಥವಾ ಪ್ರಬಂಧ ಶೈಲಿಗೆ ಮಾರ್ಪಡಿಸಿದರೆ ಮೂಲದ ಆಪ್ತತೆ, ನಿಕಟತೆಗಳು ಮಾಯವಾಗುವ ಸಾಧ್ಯತೆ ಇದೆ ಎಂದೇ ಅನುವಾದಕಾರರು ಬಹಳ ಪರಿಶ್ರಮ ವಹಿಸಿದ್ದಾರೆ ಎನ್ನುತ್ತಾರೆ.

ಕುರ್‌ಆನ್‌ಗೆ ಸ್ವೋಪಜ್ಞವಾದ ಪಾರಿಭಾಷಿಕ ಪದಗಳ ಸಮೃದ್ಧಿ ಇದೆ. ಒಂದೇ ಶಬ್ದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಛಾಯೆಗಳಲ್ಲಿ ಬಳಸಲಾಗಿದೆ. ಉದಾಹರಣೆಗೆ 'ಕುಫ್ರ್' ಎಂಬ ಪದ. ಇದಕ್ಕೆ ಹಲವಾರು ಅರ್ಥಗಳಿವೆ. ಸಾಮಾನ್ಯ ಅರ್ಥ 'ನಿಷೇಧ' ಎಂದಿದೆ. ಆದರೆ ಇದನ್ನು ನಿರಾಕರಣೆ, ಕೃತಘ್ನತೆ, ಉಪಕಾರಗೇಡಿತನ, ವೈಚಾರಿಕ ಒಪ್ಪಿಗೆ ಇದ್ದರೂ ಕ್ರಿಯಾತ್ಮಕ ನಿರಾಕರಣೆ, ಪ್ರತ್ಯಕ್ಷ ಸಮ್ಮತಿ ಮತ್ತು ಪರೋಕ್ಷ ನಿಷೇಧ ಎಂಬ ಸೂಕ್ಷ್ಮಾರ್ಥಗಳೂ ಇವೆ. ಆದ್ದರಿಂದ ಶಬ್ದಾನುವಾದ ಮಾಡುವುದನ್ನೇ ಬಿಟ್ಟು ಅರ್ಥ ವಿವರಣ ವಿಧಾನವನ್ನು ಕೈಕೊಂಡಿದ್ದಾರೆ. ಇದು ಕನ್ನಡಕ್ಕೆ ಬರುವಾಗ ಬಹಳ ಎಚ್ಚರ ವಹಿಸಿ ಮೌಲಾನಾ ಅವರು ಅನುವಾದ ಸಿದ್ಧಪಡಿಸಿದ್ದಾರೆ ಎನ್ನುತ್ತಾರೆ. (ವೇದಗಳು ಅಪೌರುಷೇಯ ಎನ್ನುತ್ತಾರೆ. ವೇದಗಳ ಭಾಷೆ ಕೂಡ ಗೂಢಾರ್ಥದಿಂದ ಕೂಡಿದೆ. ಇದರ ಬಗ್ಗೆ ಮಹರ್ಷಿ ಶ್ರೀ ಅರವಿಂದರು ತಮ್ಮ 'ವೇದ ರಹಸ್ಯ' ಗ್ರಂಥದಲ್ಲಿ ಬರೆದಿದ್ದಾರೆ.)

ಪವಿತ್ರ ಕುರ್‌ಆನ್, ಪೈಗಂಬರ್ ಮುಹಮ್ಮದ (ಸ)ರ ಮೇಲೆ ಅವತೀರ್ಣಗೊಂಡ ದೈವ ವಾಣಿಗಳ ಅಕ್ಷರ ಸಂಗ್ರಹ. ಕ್ರಿ.ಶ. ೬೧೦ರ ಆಗಸ್ಟ್ ತಿಂಗಳಲ್ಲಿ, ಅಂದರೆ ರಂಜಾನ್ ತಿಂಗಳಿನ ೨೭ನೆಯ ದಿವಸದ ಮಧ್ಯರಾತ್ರಿಯಲ್ಲಿ, ಜಿಬ್ರಾಯಿಲ್ (ಗೇಬ್ರಿಯಲ್) ಎಂಬ ದೇವದೂತರ ಮುಖಾಂತರ ದೇವವಾಣಿಗಳು ಅವತೀರ್ಣವಾದವು. ಇದನ್ನು 'ವಹೀ' (ದೈವೀ ಆದೇಶ) ಎನ್ನುತ್ತಾರೆ. ಪೈಗಂಬರರಿಗೆ ೪೦ ವರ್ಷ ಇದ್ದಾಗ ಮೊದಲ ದೇವ ಸಂದೇಶ ಬಂದಿತು. ಕುರ್‌ಆನ್‌ನ ೯೬ನೆಯ ಅಧ್ಯಾಯದಲ್ಲಿ ದೇವರ ಮಾತಿವೆ: 'ಮುಹಮ್ಮದರೇ ಓದಿ, ನಿಮ್ಮ ಪ್ರಭುವಿನ ಹೆಸರಿನಿಂದ. ಆತ ಮಾನವರನ್ನು ಹೆಪ್ಪುಗಟ್ಟಿದ ನೆತ್ತರಿನಿಂದ ಸೃಷ್ಟಿಸಿದ್ದಾನೆ. ಓದಿ, ಪ್ರಭು ಮಹಾ ಉದಾರಿ. ಲೇಖನಿಯ ಮೂಲಕ ಜ್ಞಾನ ಕರುಣಿಸಿದವ ಆತ. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ ಕಲಿಸಿದ.' ಆಗ ಪೈಗಂಬರರು, 'ನಾನು ಅನಕ್ಷರಸ್ಥ, ಓದು ಬರಹ ತಿಳಿಯೆ' ಎಂದರು. ಮೂರು ಸಲ ಪ್ರಶ್ನೋತ್ತರಗಳಾದವು. ಅವರ ಆತ್ಮ ಪರಿವರ್ತಿತವಾಯಿತು. ಭಾವಾವೇಶದಲ್ಲಿ ಮಕ್ಕಾಗೆ ಮರಳಿದರು. ಇದಾದ ಬಳಿಕ ಅವರು ಸತತವಾಗಿ 'ಹೀರಾ' ಗುಹೆಗೆ ಹೋಗುತ್ತಿದ್ದರಂತೆ. ಅಲ್ಲಿ ಅವರಿಗೆ ದೇವರ ವಾಣಿ ಕೇಳುತ್ತಿತ್ತು. ೨೩ ವರ್ಷಗಳ ವಿಸ್ತೃತ ಅವಧಿಯಲ್ಲಿ ಈ ಗ್ರಂಥ (ಕುರ್‌ಆನ್) ಬರೆಯಲಾಯಿತು. ಹನ್ನೆರಡು ವರ್ಷ ಅವರು ಮಕ್ಕಾದಲ್ಲಿ ಕಳೆದರು. ಉಳಿದ ವರ್ಷ ಮದೀನಾದಲ್ಲಿ ಕಳೆದರು. ಮಕ್ಕಾದಲ್ಲಿ ೯೦ ಅಧ್ಯಾಯಗಳು, ಮದೀನಾದಲ್ಲಿ ೨೪ ಅಧ್ಯಾಯಗಳು ಬಂದವು. ಒಟ್ಟು ಅಧ್ಯಾಯಗಳ ಸಂಖ್ಯೆ ೧೧೪. ಇವುಗಳಲ್ಲಿ ೬೨೩೬ ಸೂಕ್ತ ಅಥವಾ ವಾಕ್ಯ (ಆಯತ್)ಗಳೂ ೭೭,೯೩೩ ಪದಗಳು ಮತ್ತು ೩,೩೨,೦೧೫ ಅಕ್ಷರಗಳು ಇವೆ. ಕುರ್‌ಆನ್‌ನ ಪ್ರತಿ ಅಧ್ಯಾಯ (ಸೂರಾ)ವನ್ನು ಕವಿತೆಗೆ ಹೋಲಿಸಬಹುದು ಎನ್ನುತ್ತಾರೆ.

ಕುರ್‌ಆನ್‌ನಲ್ಲಿ ಪ್ರತಿಪಾದಿತವಾಗಿರುವ ಮಹತ್ವದ ವಿಚಾರಗಳಾದ ಏಕದೇವನಲ್ಲಿ ವಿಶ್ವಾಸ (ತೌಹೀದ್), ಪರಲೋಕ ವಿಶ್ವಾಸದ ನಿದರ್ಶನಗಳೊಂದಿಗೆ ವಿವರಣೆ (ಆಖಿರತ್), ಪುನರುತ್ಥಾನ (ಖಿಯಾಮತ್), ಸ್ವರ್ಗ ನರಕ ವರ್ಣನೆ ಮುಂತಾದ ಅಧ್ಯಾಯಗಳ (ಸೂರಾ) ಚಿಕ್ಕ ಚಿಕ್ಕ ಸಾಲುಗಳಿಗೆ 'ಆಯತ್' ಎನ್ನುತ್ತಾರೆ. ಹಲವು ಆಯತ್‌ಗಳು ಸೇರಿ ಒಂದು ವಾಕ್ಯವಾಗುತ್ತದೆ. ಒಂದು ಆಯತ್‌ನಲ್ಲಿ ಅನೇಕ ವಾಕ್ಯಗಳಿರುವುದೂ ಉಂಟು.

ಆಯತ್‌ಗಳ ಉದ್ದವನ್ನು ಅವುಗಳ ಛಂದೋಗತಿ, ಪ್ರಾಸಬದ್ಧತೆಯನ್ನು ಅನುಸರಿಸಿ ಮಾಡಲಾಗಿದೆ. ಕಂಠಪಾಠ ಮಾಡಲು ಇದರಿಂದ ಅನುಕೂಲವಾಗುತ್ತದೆ. ಕುರ್‌ಆನ್‌ನ ಅಡಿಪಾಯ ವಿಚಾರ ಮತ್ತು ಜಿಜ್ಞಾಸೆಯ ಮೇಲೆ ನಿಂತಿದೆ, ಅಂಧ ವಿಶ್ವಾಸದ ಮೇಲಲ್ಲ. ಆಯತ್‌ಗಳು ಸೂಕ್ತಿಗಳೇ. ಅವು ತರ್ಕಬದ್ಧವಾಗಿ ಸಾಗುತ್ತವೆ. ಅವುಗಳಲ್ಲಿ ಎರಡು ಬಗೆ: ಪ್ರವಾದಿಯು ಮಕ್ಕಾದಲ್ಲಿದ್ದಾಗ ಅವತರಣಗೊಂಡವು; 'ಹಿಜ್ರತ್'ನ ಅನಂತರ (ಪ್ರವಾದಿಗಳು ಮಕ್ಕಾದಲ್ಲಿ ವಿರೋಧಿಗಳ ಕಿರುಕುಳ ತಡೆಯಲಾರದೆ, ತಮ್ಮ ಅನುಯಾಯಿಗಳ ಜೊತೆಗೆ ಮದೀನಾಕ್ಕೆ ವಲಸೆ ಬಂದ ಅನಂತರ) ಮದೀನಾದಲ್ಲಿ ಕರುಣಿಸಿದವುಗಳು. ಕುರ್‌ಆನ್ ಪ್ರವಾದಿಯ ಸ್ಫೂರ್ತಾವಸ್ಥೆಯಲ್ಲಿ ದೇವರು ದಯಪಾಲಿಸಿದ ಸಂದೇಶಗಳ ಸಂಗ್ರಹವಾದರೆ, ಮುಹಮ್ಮದ(ಸ)ರು ತಮ್ಮ ಸಾಮಾನ್ಯ ಜೀವನದ ಸ್ಥಿತಿಯಲ್ಲಿ ಹೊರಹೊಮ್ಮಿಸಿದ ವಚನಗಳಾದ 'ಹದೀಸ್‌ಗೂ' ಗಣನೀಯ ಅಂತರವಿದೆ. ಪ್ರವಾದಿಗಳು ಕುರ್‌ಆನ್‌ನ ತತ್ತ್ವಗಳನ್ನು ಅನುಸರಿಸಿ ಮಾಡಿದ ಆಚರಣೆಗಳಿಗೆ 'ಸುನ್ನತ್' ಎನ್ನುತ್ತಾರೆ.

ಮುಹಮ್ಮದ(ಸ)ರು ಪೈಗಂಬರೀಯ ಪರಂಪರೆಯ ಪರಿಪೂರ್ಣ ಮತ್ತು ಅಂತಿಮ ಪ್ರವಾದಿಗಳೆಂಬ ತಥ್ಯದ ಮೇಲೆ ಮುಸ್ಲಿಮರು ನಂಬಿಕೆಯಿಡಬೇಕು, ಪ್ರತಿದಿನ ನಮಾಜ್ ಮಾಡಬೇಕು, ರಂಜಾನ್ ತಿಂಗಳಲ್ಲಿ ಉಪವಾಸ ಮಾಡಬೇಕು, ಜೀವನದಲ್ಲಿ ಒಮ್ಮೆಯಾದರೂ ಮಕ್ಕಾ ಯಾತ್ರೆ (ಹಜ್ ಯಾತ್ರೆ) ಮತ್ತು ಭಿಕ್ಷಾದಾನ (ಜಕಾತ್)ವನ್ನು ಪರಿಪಾಲಿಸಬೇಕು. ದಿನಕ್ಕೊಂದು ಕಾಂಡದಂತೆ ಕುರ್‌ಆನ್ ಪಠನ ಮಾಡಬೇಕು, ಒಂದು ತಿಂಗಳ ತನಕ ಓದಬೇಕು. ಮೂರು ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಕುರ್‌ಆನ್ ಪಾರಾಯಣ ಮಾಡಕೂಡದೆಂದು ನಿಯಮವೂ ಇದೆ. ಕುರ್‌ಆನ್‌ನಲ್ಲಿ ಏಳು ಭಾಗ ಮಾಡುತ್ತಾರೆ. ಪ್ರತಿ ಭಾಗಕ್ಕೂ 'ಮಂಜಿಲ್' (ನೆಲೆ) ಅನ್ನುತ್ತಾರೆ. ಪುಣ್ಯವಂತರು ಏಳು ದಿನಗಳಲ್ಲಿ ಕುರ್‌ಆನ್ ಪಾರಾಯಣ ಮುಗಿಸುತ್ತಾರೆ. ಸಮಗ್ರ ಕುರ್‌ಆನ್ ಕಂಠಪಾಠ ಮಾಡಿದವರಿಗೆ 'ಹಾಫೀಜ್' ಅನ್ನುತ್ತಾರೆ: ಮೂಲಾರ್ಥ, ಅನ್ವಯಾರ್ಥಗಳನ್ನು ಬಲ್ಲವರಿಗೆ 'ಆಲಿಮ್' ಎನ್ನುತ್ತಾರೆ.

ಕುರ್‌ಆನ್‌ನ ಕ್ರೋಡೀಕರಣದ ವಿಷಯದಲ್ಲಿ ಒಂದು ಮಾತು. ಪ್ರವಾದಿಯ ಕರ್ತವ್ಯವೆಂದರೆ ದೇವದೂತ ಜಿಬ್ರಾಯಿಲ್‌ರಿಂದ ದೊರೆತದ್ದನ್ನು ಕೇಳಿ, ಓದುವುದು ಮಾತ್ರ. ತಿದ್ದುಪಡಿ, ಬದಲಾವಣೆ ಮಾಡುವುದಾಗಿರಲಿಲ್ಲ. ಕುರ್‌ಆನ್ ಇಂದಿಗೂ ಎಳ್ಳಷ್ಟೂ ಪರಿವರ್ತನೆಗೊಳ್ಳದೆ, ಅದರ ಮೂಲ ಸ್ಥಿತಿಯಲ್ಲಿಯೇ ಅಕ್ಷತವಾಗಿ, ಅಸಂಕರವಾಗಿ ಉಳಿದಿದೆ. ಕುಶ್‌ಆನ್ ದೇವ ಸಂದೇಶದ ಮತ್ತು ಉಪನ್ಯಾಸಗಳ ಸರಮಾಲೆ. ಮನುಕುಲ ಶ್ರೋತೃಗಳು. ಅದರಲ್ಲಿ ಸಂದರ್ಭಾನುಸಾರವಾದ ಸುವಾರ್ತೆಗಳಿವೆ, ಉಪದೇಶಗಳಿವೆ, ಪ್ರೀತಿ

ಅಕ್ಕರೆಯ ಪ್ರೇರಣೆ ಪ್ರೋತ್ಸಾಹನೆಯ ಮೃದು ಮಧುರ ಹಿತೋಕ್ತಿಗಳಿವೆ. ಹಾಗೆಯೇ ಕಠೋರವಾದ, ಕ್ರೋಧೋದ್ವೇಗದ ಎಚ್ಚರ, ಬೆದರಿಕೆಗಳ ಕಠಿಣೋಕ್ತಿಗಳೂ ಇವೆ. ಸಾಮಾನ್ಯ ಗ್ರಂಥದಂತೆ ವಿಷಯಾನುಕ್ರಮಣಿಕೆ ಇಲ್ಲ. ಇದರಲ್ಲಿ ಸಂಸ್ಕೃತಿ, ರಾಜಕೀಯ, ಆರ್ಥಿಕ, ಸಾಮಾಜಿಕ ಏನೆಲ್ಲ ವಿಚಾರಗಳಿವೆ. ಆದರೆ ಅವು ಶಾಸ್ತ್ರೀಯ ವಿಧಾನ ಇಲ್ಲವೇ ಶೈಲಿಯಲ್ಲಿ ನಿರೂಪಿತವಾಗಿಲ್ಲ. ಪಟ್ಟಣಿಗರು, ಹಳ್ಳಿಗರು, ಶಿಕ್ಷಿತರು, ಅಶಿಕ್ಷಿತರು, ನಂಬುವವರು (ಮುಅಮೀನ್), ಸಂದೇಹ ವಾದಿಗಳು (ಮುಷ್‌ರಿಕ್), ಸತ್ಯ ನಿಷೇಧಕರು (ಕಾಫಿರ್)— ಹೀಗೆ ಹಲವಾರು ಬಗೆಯ ಶ್ರೋತೃಗಳು ಇರುತ್ತಿದ್ದರು. ಅವರೊಂದಿಗೆ ಶ್ರದ್ಧಾವಂತರೂ ಇರುತ್ತಿದ್ದರು.

ಕುರ್‌ಆನ್ ಅಧ್ಯಯನಕ್ಕಿಂತ ಮುಂಚೆ, ಇಸ್ಲಾಂ ಧರ್ಮದಲ್ಲಿ ವಿಶ್ವಾಸವಿಡುವ ಕೆಲವು ಮೂಲಭೂತ ಸ್ವರೂಪದ ನಂಬಿಕೆಗಳ ಬಗ್ಗೆ ನಿಸಾರರು ಬರೆಯುತ್ತಾರೆ. ಸೃಷ್ಟಿಕರ್ತನಾದ ಅಲ್ಲಾಹ್ ತನ್ನ ಅತ್ಯಗಾಧ ಸೃಷ್ಟಿಯ ಪೃಥ್ವಿಯೆಂಬ ಭಾಗದಲ್ಲಿ ಮಾನವನನ್ನು ಅಸ್ತಿತ್ವಕ್ಕೆ ತಂದು ಅವನಿಗೆ ಜ್ಞಾನ, ವಿಚಾರ ಹಾಗೂ ಗ್ರಹಣ ಶಕ್ತಿಗಳನ್ನು ದಯಪಾಲಿಸಿದ. ಆಯ್ಕೆ, ಇಚ್ಛಾ ಸ್ವಾತಂತ್ರ್ಯ, ಅಧಿಕಾರಗಳನ್ನು ನೀಡಿ ಅವನನ್ನು ಸ್ವಾಯತ್ತನಾಗಿಸಿದ. 'ಜಗತ್ತಿನಲ್ಲಿ ಇರುವ (ಬದುಕಿರುವ) ಸಮಯವನ್ನು ಪರೀಕ್ಷಾ ಸಮಯವೆಂದು ತಿಳಿ' ಎಂದು ಆಜ್ಞಾಪಿಸಿದ. 'ಕರ್ಮ ಸ್ವಾತಂತ್ರ್ಯ ನಿನ್ನದಾದರೂ ಈ ಸೃಷ್ಟಿ ಸರ್ವಸ್ವದ ಒಡೆಯ ನಾನು. ನಾನಲ್ಲದೆ ಇತರ ಆರಾಧ್ಯನಿಲ್ಲ' ಎಂದು ಸ್ಪಷ್ಟಪಡಿಸಿದ. ನನ್ನ ಸಂದೇಶ, ನಿರ್ದೇಶನಗಳನ್ನು ಗೌರವಿಸಿ ಬದುಕು ನಡೆಸಿದರೆ 'ಜನ್ನತ್' (ಸ್ವರ್ಗ) ಪ್ರಾಪ್ತವಾಗುವುದು, ವ್ಯತಿರಿಕ್ತವಾಗಿ ನಡೆದರೆ ದುಃಖ ದುಮ್ಮಾನಗಳ ಅಗ್ನಿಕೂಪ 'ಜಹನ್ನಮ್' (ನರಕ) ನಿನಗೆ ಕಟ್ಟಿಟ್ಟದ್ದು ಎಂದು ಸರ್ವೇಶ್ವರ ಅಲ್ಲಾಹ್ ಅಪ್ಪಣೆ ಕೊಡಿಸಿದ. ಮನುಷ್ಯನ ಮೂಲ ಮಾದರಿಗಳಾದ ಆದಂ (Adam) ಮತ್ತು ಹವ್ವಾ(Eve)ರನ್ನು ಭೂಮಿಯ ಮೇಲೆ ನೆಲೆಗೊಳಿಸಿ, ಸಂತತಿಯ ದೈವಾಧಾರ ಕೆಲಸ ನಿರ್ವಹಿಸುವಂತೆ ಆದೇಶವಿತ್ತ. ಅನಂತರದ ಕಾಲದಲ್ಲಿ (ಮನುಷ್ಯ) ಧರ್ಮಕಾರ್ಯವೆಸಗದೆ ಭ್ರಷ್ಟನಾದ, ಧರ್ಮ ಮಾರ್ಗವನ್ನು ಹೊಲೆಗೆಡಿಸಿದ, ವಿರೂಪಗೊಳಿಸಿದ. ಸೃಷ್ಟಿಯ ಅಸಂಖ್ಯ ಚರ-ಅಚರ ವಸ್ತುಗಳನ್ನು ದೇವರಿಗೆ ಸಮವಾಗಿ ಕಲ್ಪಿಸಿ ಆರಾಧಿಸತೊಡಗಿದ. ಧರ್ಮಶಾಸ್ತ್ರ (ಷರೀಯತ್) ಬಿಟ್ಟು, ಶರೀರ ಸುಖ ಮತ್ತು ಪಕ್ಷಪಾತಗಳಿಗೆ ಬಲಿಯಾಗಿ ಸ್ವಂತ ಜೀವನ ವಿಧಾನವನ್ನು ರೂಪಿಸಿಕೊಂಡ.

ಮನುಷ್ಯನಿಗೆ ಸ್ವಾತಂತ್ರ್ಯಾನುಸಾರವಾಗಿ ಕರ್ಮವೆಸಗಲು ದೇವರು ಅವಕಾಶ ನೀಡಿದ ಹಾಗೂ ಕಾಲಾವಧಿ ಕೊಟ್ಟ. ಮನುಷ್ಯ ದಿಗ್ಗೇಡಿಯಾದಾಗ, ಮರಳಿ ದೈವಾಜ್ಞೆಗೆ ಶರಣಾಗು ವಂತೆ ಪ್ರೇರೇಪಿಸಲು ಕೆಲ ಸದ್‌ವ್ಯಕ್ತಿಗಳನ್ನು ನಿಯಮಿಸಿದ. ತನ್ನ ಮೇಲೆ ವಿಶ್ವಾಸವಿಟ್ಟವರೇ 'ನಬೀ,' 'ರಸೂಲ್' ಅಥವಾ ಪ್ರವಾದಿಗಳು. ಅವರಿಗೆ ತನ್ನ ದೇವಚರರ ಮೂಲಕ ಜ್ಞಾನವನ್ನು ಕರುಣಿಸಿದ. ಮುಹಮ್ಮದ(ಸ)ರನ್ನು ಅಲ್ಲಾಹ್ ಅರಬ್ ದೇಶಕ್ಕೆ ಕಳುಹಿಸಿದ.

ಕುರ್‌ಆನ್‌ನ ಆದ್ಯ ವಿಷಯ: ಮನುಷ್ಯ. ಅವನ ಶ್ರೇಯಸ್ಸು ಯಾವುದರಲ್ಲಿದೆ, ಅವನ ಅಧಃಪತನ ವಿನಾಶಗಳಿಗೆ ಯಾವುದು ಕಾರಣ ಎನ್ನುವುದೇ ಈ ಗ್ರಂಥದ ಸಾರ

ಸರ್ವಸ್ವ.

ಕುರ್‌ಆನ್ ಅನ್ನು ಹಲವು ಉದ್ದೇಶಗಳಿಂದ ಓದುವವರು ಇದ್ದಾರೆ. ಉದ್ದೇಶ ನಿಷ್ಕಲಂಕವಾಗಿದ್ದರೆ ಕುರ್‌ಆನ್ ತನ್ನ ಅನೇಕ ರಹಸ್ಯಗಳನ್ನು ಬಿಟ್ಟುಕೊಡಬಲ್ಲದು. ಶ್ರದ್ಧೆ ಏಕಾಗ್ರತೆಗಳಿಂದ ಓದಿದರೆ ಅದರ ಸ್ಥೂಲ ಪರಿಚಯಕ್ಕೆ ಒಂದು ವಾಚನ ಸಾಕು. ಅಂತರಾಳವನ್ನು ಹೊಕ್ಕು ಅಪೂರ್ವ ಮುತ್ತುಗಳ ರಾಶಿಯನ್ನು ಪಡೆಯಲು ಕನಿಷ್ಠ ನಾಲ್ಕು ಬಾರಿ ಓದಬೇಕು.

ಕುರ್‌ಆನ್ ಪೈಗಂಬರರನ್ನು ಒಬ್ಬ ಮನುಷ್ಯನನ್ನಾಗಿ ಪರಿಗಣಿಸುತ್ತದೆ, ಅತಿ ಮಾನವ ನಾಗಿ ಅಲ್ಲ. ದೈವತ್ವದಲ್ಲಿ ಅವನಿಗೆ ಕಿಂಚಿತ್ ಪಾಲೂ ಇರುವದಿಲ್ಲ. ಅವನ ಕೆಲಸ ದೇವ ಸಂದೇಶ ಹಾಗೂ ದೈವಾಜ್ಞೆಗಳನ್ನು ಮಾನವರಿಗೆ ತಲಪಿಸುವುದು ಮಾತ್ರ. ಕುರಾನ್ ಅವತಾರಗಳನ್ನು ನಂಬುವುದಿಲ್ಲ.

ಕುರ್‌ಆನ್‌ನ ಭಾಷೆಯ ಬಳಕೆಯ ಸಾಧ್ಯತೆಗಳು ಸೀಮಾಂತ್ಯವನ್ನು ಮುಟ್ಟಿವೆಯೆಂದು ಅರಬ್ಬೀ ಭಾಷಾ ಪರಿಣತರ ಅಭಿಪ್ರಾಯ. ಪವಿತ್ರ ಕುರ್‌ಆನ್‌ನ ಯುಗ ಪ್ರಾರಂಭವಾದಾಗ ಅರೇಬಿಯಾದಲ್ಲಿ ಕಾವ್ಯ ಸ್ಪರ್ಧೆ ಪರಮೋನ್ನತಿ ತಲಪಿತ್ತು. ಸಾರ್ವಜನಿಕವಾಗಿ ಕಾವ್ಯಸ್ಪರ್ಧೆ ನಡೆಯುತ್ತಿದ್ದವು. ಅಲ್ಲಿ ಗೆದ್ದವರಿಗೆ ಸಮಾಜದಲ್ಲಿ ಮಾನ್ಯತೆ ಇತ್ತು. ಕುರ್‌ಆನ್‌ನ ಭಾಷೆ, ಶೈಲಿ ಕಾವ್ಯಾತ್ಮಕವಾದದ್ದು. ಅದರ ಗದ್ಯಕ್ಕೆ ಸಂಮೋಹಿನಿ ಶಕ್ತಿಯಿದ್ದು, ಅದರಲ್ಲಿನ ಒಂದು ಅಧ್ಯಾಯಕ್ಕೆ ಸಂವಾದಿಯಾದದ್ದನ್ನು ಯಾರಾದರೂ ಬರೆದು ತೋರಿಸಲಿ ಎಂಬ ಸವಾಲು ಅಜೇಯವಾಗಿ ಉಳಿದಿತ್ತು. 'ಅಲ್ ಕೌಸರ್' (ಹಿತ ಸಮೃದ್ಧಿ) ಎಂಬ ಕೇವಲ ಮೂರು ವಾಕ್ಯಗಳ 108ನೆಯ ಅಧ್ಯಾಯವನ್ನು ಮಕ್ಕಾ ನಗರದ ಪವಿತ್ರ ಕಾಬಾ ಕಟ್ಟಡದ ಗೋಡೆಯ ಮೇಲೆ ಬರೆಯಲಾಗಿತ್ತು. ಅದರಂತಹ ಸಾಲುಗಳನ್ನು ರಚಿಸಲು ಆಗಿನ ಕಾಲದ ಕವಿಗಳಿಗೆ ಸಾಧ್ಯವಾಗಿರಲಿಲ್ಲ. ಇವು ಮಾನವಕೃತ ಪಂಕ್ತಿಗಳೇ ಅಲ್ಲ ಎಂಬ ಸಂಗತಿ ಜನಜನಿತವಾಗಿತ್ತು.

ಪ್ರವಾದಿ ಪೈಗಂಬರ್ ಮುಹಮ್ಮದ್(ಸ.)ರು ಅತ್ಯಂತ ಹಿಂದುಳಿದ ರಾಷ್ಟ್ರದಲ್ಲಿ ಜನಿಸಿದರು. ಅವರ ಬಾಲ್ಯ ಅನಾಥ ಸ್ಥಿತಿಯಲ್ಲಿತ್ತು. ಆಡು ಕುರಿಗಳನ್ನು ಮೇಯಿಸುವುದರಲ್ಲಿ ಯೌವನ ಕಳೆಯಿತು. ಅವರಿಗೆ ವಿದ್ಯೆಯ ಗಂಧಗಾಳಿ ಇರಲಿಲ್ಲ, ಅಕ್ಷರಜ್ಞಾನವಿರಲಿಲ್ಲ. ಆ ಕಾಲದಲ್ಲಿ ವಿಖ್ಯಾತರಾಗಿದ್ದ ಕವಿಗಳ, ದಾರ್ಶನಿಕರ ಪರಿಚಯ ಅವರಿಗೆ ಇರಲಿಲ್ಲ. ಮಕ್ಕಾ ನಿವಾಸಿಗಳಿಗೆ ಅವರು ಒಬ್ಬ ಸರಳ, ಸತ್ಯಸಂಧ, ಶಾಂತಿಪ್ರಿಯ ವ್ಯಕ್ತಿಯಾಗಿದ್ದರು. ಮಿತಭಾಷಿ ಕೂಡ. ಅವರಿಗೆ ನಲವತ್ತು ವಯಸ್ಸು ಆಗುವವರೆಗೂ ಅವರಿಂದ ಯಾರೂ ಜ್ಞಾನದ, ವಿದ್ವತ್ತೆಯ, ಜಾಣ್ಮೆಯ ಮಾತು ಕೇಳಿರಲಿಲ್ಲ. ಆಧ್ಯಾತ್ಮಿಕತೆ, ಸಾಮಾಜಿಕ ಸಮಸ್ಯೆ, ನ್ಯಾಯ ಕಾನೂನು, ರಾಜಕೀಯ ಮುಂತಾದವನ್ನು ಒಂದು ದಿನವೂ ಚರ್ಚಿಸಿದ್ದನ್ನು ಯಾರೂ ಕಂಡಿರಲಿಲ್ಲ, ಕೇಳಿರಲಿಲ್ಲ. ಅವರಿಂದ ಬಂದ ಕೃತಿ ಅಪೌರುಷೇಯ ಎಂಬುದರ ಬಗ್ಗೆ ಎಲ್ಲರಿಗೂ ವಿಶ್ವಾಸವಿತ್ತು.

ಕುರ್‌ಆನ್ ಕ್ರೋಡೀಕರಣ ಕಾಲದಿಂದ ಒಂದು ಅಕ್ಷರವೂ ಬದಲಾಗದಂತೆ, ಒಂದು ಶಬ್ದವೂ ಸೇರ್ಪಡೆಯಾಗದಂತೆ ಅಕ್ಷತವಾಗಿ, ಸುರಕ್ಷಿತವಾಗಿ ಉಳಿದಿದೆ. ಕುರ್‌ಆನ್

ಪಠಣದಲ್ಲಿ ಯಾರಾದರೂ ಒಂದು ಪದವನ್ನಾದರೂ ಬದಲಾಯಿಸಿ, ಇಲ್ಲವೇ ಬಿಟ್ಟು ಓದಿದರೆ, ಅದನ್ನು ಬಾಯಿಪಾಠ ಮಾಡಿದ 'ಹಾಫೀಜ್'ಗಳು ತಕ್ಷಣ, ಆ ತಪ್ಪನ್ನು ಗ್ರಹಿಸಿ ಬಿಡುತ್ತಾರೆ ಎಂದು ಬರೆಯುತ್ತಾರೆ. (ಇದೇ ಮಾತನ್ನು ವೇದಗಳ ಬಗ್ಗೆ ಕೂಡ ಹೇಳಬಹುದು).

ಕುರ್‌ಆನ್ ಗ್ರಂಥದಲ್ಲಿ ಮನುಷ್ಯಾತೀತವಾದ ಕೈವಾಡವಿರುವುದನ್ನು ಕೆಲ ವರ್ಷಗಳ ಹಿಂದೆ ನಡೆಸಿದ ಕಂಪ್ಯೂಟರ್ ಸಂಶೋಧನೆಗಳು ಪುಷ್ಟೀಕರಿಸುತ್ತವೆ ಎನ್ನುತ್ತಾರೆ. ಕುರ್‌ಆನ್‌ನ ೧೧೪ ಅಧ್ಯಾಯಗಳ ಪೈಕಿ ೨೯ ಅಧ್ಯಾಯಗಳ ಪ್ರಾರಂಭದಲ್ಲಿ ೧೪ ಬಿಡಿ ಬಿಡಿ ಯಾದ ಗೂಢಾರ್ಥಗಳು ಬರುತ್ತವೆ. ಈ ಅಕ್ಷರಗಳ ಗರ್ಭಿತಾರ್ಥ ಇಂದಿಗೂ ಕಗ್ಗಂಟಾಗಿಯೇ ಉಳಿದಿದೆ. ಇವು ಮಹತ್ವದ ನಾಂದೀವಾಕ್ಯವನ್ನು ಸಂಕೇತಿಸುತ್ತವೆ ಎನ್ನುವವರಿದ್ದಾರೆ. ಅವರ ಪ್ರಕಾರ ಅಲೀಫ್, ಲಾಮ್, ಮೀಮ್ ಎಂಬ ಮೂರು ಸಂಕೇತಾರ್ಥಗಳು 'ನಾನು ಅಲ್ಲಾಹ್, ಸರ್ವಜ್ಞ (ನಾನೇ ಸರ್ವಜ್ಞ ಅಲ್ಲಾಹ್) ಎಂಬುದನ್ನು ಸೂಚಿಸುತ್ತವೆ. ಕೆಲವರು ಅಲೀಫ್ ಎಂದರೆ ಅಲ್ಲಾಹ್ ಎಂದು, ಲಾಮ್ ಎಂದರೆ ದೇವದೂತ ಜಿಬ್ರಾಯಿಲ್ ಎಂದು, ಮೀಮ್ ಎಂದರೆ ಪ್ರವಾದಿ ಮುಹಮ್ಮದ್(ಸ) ಎಂದು ಅರ್ಥೈಸುತ್ತಾರೆ. ಅರಬ್ಬಿಯ ೧೪ ರಹಸ್ಯಾಕ್ಷರಗಳು ಇಂತಿವೆ. ಅಲೀಫ್, ಹೈ, ರೆ, ಸೀನ್, ಸ್ವಾದ್, ತೋಯ್, ಐನ್, ಕಾಫ್, ಖಾಫ್, ಲಾಮ್, ಮೀಮ್, ನೂನ್, ಹೆ, ಯೆ. ಇವನ್ನು ಬಿಡಿ ಅಕ್ಷರಗಳು (ಹುರೂಫೆ ಮುಕತ್ತೆಆತ್) ಎನ್ನುತ್ತಾರೆ.

ಈ ರಹಸ್ಯಾಕ್ಷರಗಳು ಪ್ರತಿ ಅಧ್ಯಾಯದಲ್ಲಿರುತ್ತವೆ. ಅವುಗಳ ಒಟ್ಟು ಸಂಖ್ಯೆ ಯಾವಾಗಲೂ ೧೯ ಅಂಕಿಯಿಂದ ಭಾಜ್ಯವಾಗುತ್ತದೆ. ಉದಾಹರಣೆಗೆ ಕುರ್‌ಆನ್‌ನಲ್ಲಿ 'ಖಾಫ್' ಎಂಬ ಐವತ್ತನೆಯ ಅಧ್ಯಾಯವಿದೆ. ಅದರಲ್ಲಿ ಇದೇ ಹೆಸರಿನ ಮೂಲಾಕ್ಷರ, ಅಂದರೆ ಖಾಫ್ ೫೭ ಸಲ ಬರುತ್ತದೆ. ನಲವತ್ತೆರಡನೆಯ ಅಧ್ಯಾಯ 'ಅಶ್ಶೂರ' ಐದು ಗೂಢಾರ್ಥಗಳಿಂದ ಪ್ರಾರಂಭವಾಗುತ್ತದೆ. ಅದರಲ್ಲಿ ಖಾಫ್ ಕೂಡ ಒಂದು. ಅದು ೫೭ ಸಲ ಬರುತ್ತದೆ. 'ಅಲ್ ಕಲಮ್' ಎಂಬ ಅಧ್ಯಾಯದಲ್ಲಿ 'ನೂನ್' ಅಕ್ಷರ ೧೩೩ ಸಲ ಬರುತ್ತದೆ. 'ಯಾಸೀನ್' ಅಧ್ಯಾಯದಲ್ಲಿ 'ಯಾ' ಮತ್ತು 'ಸೀನ್' ಅಕ್ಷರಗಳು ೨೮೫ ಸಲ ಬಂದಿವೆ. 'ಅಶ್ಶೂರ' ಅಧ್ಯಾಯದಲ್ಲಿ 'ಐನ್', 'ಸೀನ್', 'ಕಾಫ್' ಅಕ್ಷರಗಳು ೨೦೯ ಸಲ ಬಂದಿವೆ. ಇವೆಲ್ಲ ೧೯ರಿಂದ ಭಾಜ್ಯವಾಗುವಂಥವೇ. ತೋಯ್ ಮತ್ತು ಮೀಮ್ ಎಲ್ಲ ಅಧ್ಯಾಯಗಳಲ್ಲಿ ೨೧೬೬ ಸಲ ಬರುತ್ತವೆ.

'ಕುರ್‌ಆನ್‌ನ ಓದುಗಾರಿಕೆಯಿಂದ ನಾಡಿನ ನಾನಾ ಧರ್ಮೀಯರಲ್ಲಿ ಅಪಾರ್ಥ ನಿವಾರಣೆಯಾಗಿ ಸ್ನೇಹ ಸೌಹಾರ್ದ, ಸಹಬಾಳ್ವೆ, ಶಾಂತಿಯುತ ವಾತಾವರಣ ಏರ್ಪಡು ವಂತಾಗಲೆಂದು ಆಶಿಸೋಣ' ಎಂಬ ನಿಸಾರರ ಕೊನೆಯ ಮಾತು, ಇತರ ಧರ್ಮೀಯರ ಮೊದಲ ಮಾತಾಗಬೇಕು. ಅನ್ಯ ಮತಗಳ ಧರ್ಮಗ್ರಂಥಗಳನ್ನು ಓದುವುದರಿಂದ ಎಲ್ಲ ಧರ್ಮಗಳ ತಿರುಳು ಒಂದೇ ಎಂಬುದು ತಿಳಿಯುವುದು; ಸಂಶಯದ ಮಂಜು ದೂರ ಸರಿಯುವುದು; ಪರಸ್ಪರರಲ್ಲಿ ಸ್ನೇಹ ಭಾವವು ಮೂಡುವುದು. 'ವಸುಧೈವ ಕುಟುಂಬಕಂ'.

'ಗ್ಲೋಬಲ್ ವಿಲೇಜ್' ಎಂಬ ಮಾತುಗಳು ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರುವ ದಿನಗಳು ಬರಬೇಕಾಗಿದೆ.

'ಇಸ್ಲಾಮೀ ಅಧ್ಯಾತ್ಮದ ಸೀಮಾಸಾಧಕರು: ಸೂಫಿಗಳು'—ಈ ಪ್ರಬಂಧದಲ್ಲಿ ನಿಸಾರರು ಇಸ್ಲಾಂ ಧರ್ಮದ ಬಗ್ಗೆ ಇನ್ನಷ್ಟು ನಿಕಟವಾದ ಹೊಸ ಮುಖದ ಪರಿಚಯ ಮಾಡುತ್ತಾರೆ. ಕುರ್‌ಆನ್‌ಅನ್ನು ಅಪೌರುಷೇಯ ವೇದಗಳಿಗೆ ಹೋಲಿಸಿದರೆ, ಸೂಫಿ ಸಂತರು ಬೀರಿದ ತತ್ತ್ವಬೋಧೆಯನ್ನು ಉಪನಿಷತ್ತುಗಳಿಗೆ ಹೋಲಿಸಬಹುದು.

ನಿಸಾರರು ಸೂಫಿ ಪಂಥದ ಬಗ್ಗೆ ವಿವರವಾಗಿ ಬರೆಯುತ್ತಾರೆ. ಇಷ್ಟು ವಿವರವಾಗಿ ಸೂಫಿ ಸಂತರ ಬಗ್ಗೆ ಮತ್ತಾರೂ ಬರೆದಂತಿಲ್ಲ. ಈ ಪಂಥ ಭಾರತದ ಹೊರಗೆ ಹುಟ್ಟಿತು, ಆದರೆ ಇದು ಸುಭದ್ರ ನೆಲೆಯನ್ನು ಭಾರತದಲ್ಲಿ ಪಡೆಯಿತು. ಕೆಲವು ಸೂಫಿ ಪಂಥಗಳಾದ ಮದಾರಿಯ, ಖಲಂದರಿಯ, ಷತ್ತಾರಿಯ, ಮಜದಾದಿಯಗಳು ಜನ್ಮತಃ ಅಚ್ಚ ಭಾರತೀಯ ವಾಗಿವೆ. ಊರೂರಲ್ಲಿ ಸೂಫಿ ಸತ್ಪುರುಷರ ಸಮಾಧಿಗಳಿವೆ. ಜಾತಿಭೇದವಿಲ್ಲದೆ ಜನರು ಇಲ್ಲಿ ನಡೆದುಕೊಳ್ಳುತ್ತಾರೆ. ಈ ಸಂತರ ವಾರ್ಷಿಕ ಪುಣ್ಯದಿನಾಚರಣೆಗಳಾದ 'ಉರುಸ್'ಗಳಂತೂ ಭಾವೈಕ್ಯಕ್ಕೆ ಹೇಳಿಮಾಡಿಸಿದ ಉದಾಹರಣೆಗಳಾಗಿವೆ ಎನ್ನುತ್ತಾರೆ.

ಸೂಫಿ ಸಂತರಲ್ಲಿ ಕವಿಗಳಿದ್ದಾರೆ, ಗದ್ಯ ಲೇಖಕರಿದ್ದಾರೆ. ಸೂಫಿ ಪಂಥೀಯ ಸಾಹಿತ್ಯ ಪರ್ಷಿಯನ್, ಅರಬ್ಬೀ ಮತ್ತು ಉರ್ದು ಭಾಷೆಗಳಲ್ಲಿ ಪುಷ್ಕಳವಾಗಿದೆ. ಪರ ವಸ್ತುವಿನ ಉತ್ಕಟವಾದ ಚಿಂತನೆಗೆ 'ತಸವ್ವುಫ್' ಎನ್ನುತ್ತಾರೆ. 'ಸೂಫ್' ಎಂದರೆ ಉಣ್ಣೆ ಅಥವಾ ತುಪ್ಪಟ. ಸಂತರು ಧರಿಸುವ ಬಟ್ಟೆಯಿಂದ ಈ ಹೆಸರು ಬಂದಿರಬೇಕು ಎನ್ನುತ್ತಾರೆ.

ಇಸ್ಲಾಂ ಧರ್ಮದಲ್ಲಿ ಸೃಷ್ಟಿ ಮತ್ತು ಸೃಷ್ಟಿಕರ್ತನ ನಡುವಣ ಸಂಬಂಧದ ಬಗ್ಗೆ ಬರೆಯುತ್ತಾರೆ. ಅವೆರಡೂ ಭಿನ್ನವಾದ, ಬೇರೆ ಬೇರೆ ಸತ್ತೆಯ ವಾಸ್ತವಗಳು. ಒಂದು (ಸೃಷ್ಟಿ) ಸತತ ಪರಿವರ್ತನೀಯವೂ ಪರಿಮಿತವೂ ಆದ ಸತ್ತೆ. ಮತ್ತೊಂದು (ಸೃಷ್ಟಿಕರ್ತ) ಸ್ಥಿರವೂ ಅಬಾಧಿತವೂ ಆಗಿರುವುದರ ಜೊತೆಗೇ ಅಮೇಯವಾದ ಸತ್ತೆ. (ಇದನ್ನು ಪ್ರಕೃತಿ-ಪುರುಷ ವೇದಾಂತಕ್ಕೆ ಹೋಲಿಸಬಹುದು). ದೇವರು ನಭೋಮಂಡಲ ವಾಸಿ. ಅವನ ವಿಶೇಷ ಸೃಷ್ಟಿಯಾದ 'ನರ' (ಮನುಷ್ಯ) ಐಹಿಕ ಭೂಮಿಯ, ಮತ್ತು ಸಾವಿನ ಬಳಿಕ ನಾಕ ಇಲ್ಲವೆ ನರಕದ ನಿವಾಸಿ. ಅವೆರಡೂ ಸಂಧಿಸವು. ಪ್ರವಾದಿ ಮುಹಮ್ಮದ(ಸ)ರ ಸ್ವಾನುಭವಗಳ ವಚನಗಳೆ 'ಹದೀಸ್'. ಇದು (ಹದೀಸ್) ಗೊತ್ತುಪಡಿಸುವ ಜೀವನದ ಆದರ್ಶನೀಯ ರೀತಿ 'ಸುನ್ನಾ'. 'ಕುರ್‌ಆನ್' ಮತ್ತು 'ಹದೀಸ್'ಗಳ ಮಾರ್ಗಾನುಸರಣೆಯೇ 'ಷರಿಯತ್' (ಧರ್ಮಶಾಸ್ತ್ರ). ವೇದಾಂತದಲ್ಲಿ ಜೀವಾತ್ಮ ಪರಮಾತ್ಮನಲ್ಲಿ ಒಂದಾಗುತ್ತಾನೆ. ಅಂದರೆ, ಸಾಂತವಾದ ಜೀವ ಅನಂತವಾದ ಪರಮಾತ್ಮನಲ್ಲಿ ಒಂದಾಗುತ್ತಾನೆ. ಇದು ಇಸ್ಲಾಂ ಧರ್ಮಕ್ಕೆ ಒಪ್ಪಿತವಾಗಿಲ್ಲ.

ಸೂಫಿ ಸಂಘಟನೆ ಪ್ರತ್ಯೇಕವೂ ಸರ್ವ ಸ್ವತಂತ್ರವೂ ಆದ ಧರ್ಮವಲ್ಲ. ಅದು ಆಮೂಲಾಗ್ರವಾಗಿ ಇಸ್ಲಾಂ ಧರ್ಮದ ಒಂದು ಅವಿಭಾಜ್ಯ ಕವಲು, ಪಂಥ, ಜೀವನ ಶೈಲಿ. ಹೆಪ್ಪುಗಟ್ಟಿದ ರಿವಾಜುಗಳಿಗೆ, ಬಾಹ್ಯಾಚಾರ ನಿಷ್ಠೆಗೆ ಹೃದಯವಂತಿಕೆ ಎಸೆದ ಸವಾಲು.

ಸೂಫಿಗಳ ಮುಖ್ಯ ತಾತ್ತ್ವಿಕ ವಿಚಾರಗಳು ಹೀಗಿವೆ:

ಈ ಜಗತ್ತು ಮಾಯೆ, ಮಿಥ್ಯೆ; ಪರ ವಸ್ತು ಒಂದೇ ಸತ್ಯ. ಅದೇ ದಿಟವಾದ ಜ್ಞಾನ: ಪರಮೋಚ್ಚ ಸೌಂದರ್ಯ ಹಾಗೂ ಸತ್ಯ ಪ್ರಕಾಶ. ಪರಮಾತ್ಮ, ಮನುಷ್ಯ ಬುದ್ಧಿಗೆ ಎಟುಕದವ. ಅವನಿಗೆ ದೃಶ್ಯ, ಅದೃಶ್ಯಗಳೆಂಬ ಎರಡು ಚಹರೆಗಳುಂಟು. ಹೀಗಾಗಿ ಸೃಷ್ಟಿಕರ್ತ ಮತ್ತು ಈ ವಿಶ್ವ ಬೇರೆಯಲ್ಲ. ದೇವರು ಮತ್ತು ಸೃಷ್ಟಿ, ನೀರು ಮತ್ತು ಮಂಜುಗಡ್ಡೆ ಇದ್ದಂತೆ, (ಎರಡರ) ಅಂತಸ್ಸಾರವೂ ಒಂದೇ.

ಮೊದಲಿಗೆ ದೇವರು ನಿರ್ಗುಣನೇ, ಅಜ್ಞೇಯನೇ. ಆದರೆ ಅವಿದ್ಯೆಯ ದೆಸೆಯಿಂದ ಸಗುಣ, ಇಂದ್ರಿಯಗ್ರಾಹ್ಯ. ಅಮೂರ್ತವೂ ವೇದ್ಯ ದುಸ್ತರವೂ ಆದ ಪರಮಾತ್ಮನನ್ನು ಒಂದು ಪ್ರೇಮ ವಸ್ತುವನ್ನಾಗಿ ಮಾಡಿ ಅರಿಯಬಹುದೆಂದು ಸೂಫಿಗಳು ನಂಬುತ್ತಾರೆ. ಆ ದಿಶೆಯಲ್ಲಿ ಸಾಧನೆ ಮಾಡುತ್ತಾರೆ. ಪ್ರೇಮಾವೇಶಭರಿತ ಭಕ್ತಿ ಸೂಫಿ ಪಂಥದ ಜೀವಾಳ. ಪ್ರಾಚೀನ ಸೂಫಿಗಳೆಲ್ಲ ವಿರಾಗಿಗಳೇ. ಕಟ್ಟುನಿಟ್ಟಾದ ನಿತ್ಯ ವಿಧಿಗಳನ್ನು ಆಚರಿಸುತ್ತ, ಮಕ್ಕಾ ಯಾತ್ರೆಯನ್ನು ಶಕ್ಯವಿದ್ದಷ್ಟು ಸಲ ಮಾಡುತ್ತ, ಜನರಿಂದ ದೂರವಾದ ಮಠ ಆಶ್ರಮಗಳನ್ನು ನಿರ್ಮಿಸಿ ಅಲ್ಲಿ ವಾಸ ಮಾಡುತ್ತಿದ್ದರು. ಹೀಗಾಗಿ ಲೋಕ ನಿರ್ಲಿಪ್ತಿ, ಸನ್ಮಾರ್ಗ ಸಾಧನೆ, ಪ್ರವಾದಿ ಹಾಗೂ ದೇವರ ಬಗೆಗಿನ ಗೌರವ, ಭಕ್ತಿಭಾವ, ಅಂತಃಶಾಂತಿ ಅವರ ಮುಖ್ಯ ಕಾಳಜಿಗಳಾಗಿದ್ದವು.

ಬರಬರುತ್ತ ಅತೀಂದ್ರಿಯ ವಿಷಯಗಳು, ನಂಬಲು ಅಸಾಧ್ಯವಾದ ಪವಾಡಾದ್ಭುತ ಗಳು, ಜನ ಸಾಮಾನ್ಯರಲ್ಲಿ ಭಯ, ಕುರುಡು ಭಕ್ತಿಯನ್ನು ಮೂಡಿಸಲು ಹುಟ್ಟಿಕೊಂಡವು. ಹೀಗಾಗಿ ಸೋಂಭೇರಿ ಜೀವನ, ಕಪಟ ವಿದ್ಯೆ, ತಿರುಪೆಗಳು ಸೂಫಿ ಸತ್ಪುರುಷರ ಕೆಲವು ಅನುಯಾಯಿಗಳಿಗೆ ಅಂಟಿಕೊಂಡವು. ಎಂಟನೆಯ ಶತಮಾನದಿಂದ ಹದಿನೈದನೆಯ ಶತಮಾನದವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸೂಫಿ ಸಾಧಕರು ಅನಂತರ ಇಳಿ ದೆಸೆಯನ್ನು ಕಂಡರು.

ಸೂಫಿ ದರ್ಶನವನ್ನು 'ಸಂಪ್ರದಾಯವಿಮುಖ ನೆಗೆತಕ್ಕೆ ಸಜ್ಜುಗೊಂಡ ಇಸ್ಲಾಮೀ ಶೈಲಿಯ ಮಾನವೀಯತೆ' ಎಂದು ಸಂಕ್ಷೇಪಿಸಬಹುದು. 'ಜೀವೋನ್ನತಿಯ ಸಾಧನೆಯಲ್ಲಿ ಅಧ್ಯಾತ್ಮಾನುಭವಗಳ ಬಹು ಆಯಾಮಗಳುಳ್ಳ ಒಂದು ವ್ಯವಸ್ಥೆ' ಎಂದೂ ಕರೆಯುತ್ತಾರೆ. ಹತ್ತನೆಯ ಶತಮಾನದಿಂದ ಸೂಫಿ ಮಠಗಳು ಅಧ್ಯಾತ್ಮವಿದ್ಯೆಯ ಪಾಠಶಾಲೆಗಳಾದವು. ಸೂಫಿಗಳು ಸ್ವ-ಇಚ್ಛೆಯಿಂದ ದಾರಿದ್ರ್ಯವನ್ನು ಅಂಗೀಕರಿಸಿದರು. ರಾಜರಿಂದ, ಸುಲ್ತಾನರಿಂದ, ವರ್ತಕರಿಂದ, ಧನಿಕರಿಂದ ಸಂದಾಯವಾದ ಹಣವನ್ನು ತತ್‌ಕ್ಷಣ ಬಡ ಬಗ್ಗರಿಗೆ, ಅಸಹಾಯರಿಗೆ ದಾನ ಮಾಡುತ್ತಿದ್ದರು.

ಸೂಫಿ ಪಂಥದಲ್ಲಿ ಅನೇಕ ಸಂಪ್ರದಾಯಗಳಿವೆ, ಪ್ರಭೇದಗಳಿವೆ. ಸುಮಾರು ನೂರಾಎಪ್ಪತ್ತೈದರಷ್ಟಿವೆ. ಮುಖ್ಯವಾದ ಹದಿನಾಲ್ಕು ಪ್ರಭೇದಗಳ ಬಗ್ಗೆ ಅಬುಲ್ ಫಸಲ್ ಎಂಬಾತ ತನ್ನ 'ಆಯಿನೇ ಅಕ್ಬರಿ' ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಭಾರತದಲ್ಲಿ ಹಾಗೂ ಪಾಕಿಸ್ತಾನದಲ್ಲಿ ಚಾಲ್ತಿಯಲ್ಲಿರುವುವು ನಾಲ್ಕು ಸೂಫಿ ಸಂಪ್ರದಾಯಗಳು: ಅವು ಚಿಷ್ತಿ,

ಸುಹ್ರಾವರ್ದಿ, ಖಾದರಿಯ ಮತ್ತು ನಖ್ಷ್ ಬಂದಿಯ.

ನಿಸಾರರು ಸೂಫಿ ಸಿದ್ಧಾಂತ, ವಿಚಾರ, ಆಚರಣೆಗಳ ಬಗ್ಗೆ ವಿವರವಾಗಿ ಬರೆಯುತ್ತಾರೆ.

ಒಂಟಿಯಾಗಿಯೋ, ಗುಂಪಿನಲ್ಲೋ ಅಲೆಯುವುದು ಅಧ್ಯಾತ್ಮವಾದೀ ವಿರಕ್ತರ ಹೆಗ್ಗುರುತು. ಒಬ್ಬ ಮುಖಂಡ ಷೇಖ್‌ನ ಮಾರ್ಗದರ್ಶನದಲ್ಲಿ ಮುನ್ನಡೆಯುವ, ಶಿಸ್ತಿಗೆ ಒಳಪಟ್ಟ ಕಿರಿಯ ಶಿಷ್ಯರ ಗುಂಪಿರುತ್ತದೆ. ಅಲೆಮಾರಿ ಜೀವನವೇ ಸೂಫಿಗಳ ಆಧ್ಯಾತ್ಮಿಕ ಸಾಧನೆಯಲ್ಲಿ ಸಾಂಕೇತಿಕ ಅರ್ಥ ಪಡೆದು, ಪಯಣ-ಪಯಣಿಗ-ಮಾರ್ಗದರ್ಶಿಯೆಂಬ ಸರಣಿಯ ಗುರು ಪರಂಪರೆಯನ್ನು ಸುಭದ್ರಗೊಳಿಸಿದೆ. ಪಯಣಿಗನೆಂದರೆ ಸೂಫಿ ಪಂಥದ ದೀಕ್ಷಾರ್ಥಿ, ಅವನನ್ನು 'ಸಾಲಿಕ್' ಅನ್ನುತ್ತಾರೆ. ಅವನ ಶಿಷ್ಯ 'ಮುರೀದ್'. ಅವರ ಜ್ಞಾನರ್ಜನೆಯೇ ಪಯಣ, 'ಸಲೂಕ್'. ಸನ್ಮಾರ್ಗದರ್ಶಿಯೇ 'ಷೇಖ್' ಅಥವಾ 'ಮುರ್ಷಿದ್'. ಇವನನ್ನು 'ಪೀರ್' ಎಂದೂ ಸಂಬೋಧಿಸುತ್ತಾರೆ. ('ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ನೆನಪಾಗುತ್ತದೆ). ಗುರುವಿನ ಮಹತ್ವ ಸೂಫಿ ತತ್ತ್ವಗಳಲ್ಲೇ ಆದ್ಯ ಹಾಗೂ ಬುನಾದಿಯಂತಿದೆ. ಷೇಖ್, ಮುರ್ಷಿದ್, ಪೀರ್ ಅಥವಾ ಗುರುವಿನ ಆಯ್ಕೆಯನ್ನು ಅತ್ಯಂತ ಜಾಗರೂಕತೆಯಿಂದ ಮಾಡಿಕೊಳ್ಳುವುದು 'ಮುರೀದ್'ನ ಅಥವಾ ಶಿಷ್ಯನ ಕರ್ತವ್ಯ. ಚಕಾರವೆತ್ತದೆ ಶಿಷ್ಯ ಗುರುವನ್ನು ಅನುಸರಿಸಬೇಕಾಗುತ್ತದೆ. ಗುರುಸೇವೆ ಮಾಡುವ ವಿಧಾನವೇ 'ತರೀಖತ್'. ಶಿಷ್ಯನ ಸಾಧನೆ ಪೂರ್ಣವಾದಾಗ ಅವನು ಸೂಫಿ ವಸ್ತ್ರ (ಖಿರಕಾ) ಪಡೆಯುತ್ತಾನೆ. ಇದು ಪದವೀ ಪ್ರದಾನವಿದ್ದಂತೆ.

ಮನುಷ್ಯ 'ಅನಲ್‌ಹಕ್' (ನಾನೇ ಸತ್ಯ: ಅಹಂ ಬ್ರಹ್ಮಾಸ್ಮಿ)ನಿಂದ ಪ್ರಾರಂಭಿಸಿ ಪರಮಾತ್ಮನಲ್ಲಿ ತಾದಾತ್ಮ್ಯಹೊಂದುವ ತನಕ ಸಾಧನೆ ನಡೆಸಿ ಕೊನೆಗೆ 'ಹುವಲ್ ಹಕ್' (ಅವನೇ ಸತ್ಯ) ಎಂಬ ಮನಃಸ್ಥಿತಿಯನ್ನು ಹೊಂದುವ ತನಕ ಮುನ್ನಡೆಯಬಹುದೆಂದು ಸೂಫಿ ತತ್ತ್ವ ಮನವರಿಕೆ ಮಾಡಿಕೊಡುತ್ತದೆ. ಸೂಫಿ ಶಿಷ್ಯನ ಪಾಲಿಗೆ ಗುರುವೆ ಪೋಷಕ, ಪಾಲಕ, ಅಧ್ಯಾತ್ಮ ಮಾರ್ಗದ ದಿಕ್ಸೂಚಿ ಏನೆಲ್ಲಾ ಆಗಿರುತ್ತಾನೆ. ಪೀರ್ ತನ್ನ ಶಿಷ್ಯನ ಮೇಲೆ ದೈವೀ ಗಮನವನ್ನು (ತವಜ್ಜು) ಕೇಂದ್ರೀಕರಿಸುವುದರ ಮೂಲಕ, ಅವನಲ್ಲಿ ದೈವಿಕ ಶಕ್ತಿಯನ್ನು ಪ್ರೇರೇಪಿಸಬಲ್ಲ. (ರಾಮಕೃಷ್ಣ ಪರಮಹಂಸರು ನರೇಂದ್ರನಲ್ಲಿ ದೃಷ್ಟಿ ಹಾಗೂ ಸ್ಪರ್ಶದಿಂದ ಉಂಟುಮಾಡಿದ ಅಲೌಕಿಕ ಅನುಭವದ ಸ್ಥಿತಿಗೆ ಹೋಲಿಸಬಹುದು.) ಗುರುವಿನ ಗೀಳು ಶಿಷ್ಯನಿಗೆ ಎಷ್ಟಿರಬೇಕೆಂದರೆ ಎಲ್ಲದರಲ್ಲಿಯೂ ಅವನಿಗೆ ಗುರುವಿನ ದರ್ಶನವಾಗಬೇಕು. 'ಮುರ್ಷಿದ್‌ನೊಂದಿಗೆ ಸ್ವಪ್ರಜ್ಞಾಲಯ ಸ್ಥಿತಿ' ತಲಪುತ್ತಾನೆ. ಗುರು ತಾನು ಪ್ರತಿನಿಧಿಸುವ ವಿಶಿಷ್ಟ ಸೂಫಿ ಸಂಪ್ರದಾಯದ ಮೂಲ ಪ್ರವರ್ತಕನ ದಿವ್ಯ ಪ್ರಭಾವ ಶಿಷ್ಯನಿಗೆ ಆಗುವಂತೆ ಅನುಗ್ರಹಿಸುತ್ತಾನೆ. ಇದು ಎರಡನೆಯ ಮೆಟ್ಟಲು. ಗುರುವಿನ ಸಹಾಯದಿಂದ ಶಿಷ್ಯ ಪ್ರವಾದಿವರ್ಯನಾದ ಮುಹಮ್ಮದ(ಸ)ರ ದರ್ಶನ ಪಡೆಯಬಲ್ಲನಲ್ಲದೆ, ಸಮಸ್ತ ವಸ್ತು ಕ್ರಿಯೆಗಳಲ್ಲಿ ಆ ಮಹಾನುಭಾವರನ್ನೇ ಕಾಣುವ ಶಕ್ತಿ ಹೊಂದುತ್ತಾನೆ. ಇದು ಮೂರನೆಯ ಹಂತ. ಇದಕ್ಕೆ 'ಪ್ರವಾದಿಗಳೊಂದಿಗಿನ ಸ್ವಪ್ರಜ್ಞಾಲಯ' ಎನ್ನುತ್ತಾರೆ.

ನಾಲ್ಕನೆಯದು ಅಂತಿಮ ಮತ್ತು ಪರಮೋನ್ನತ ಸೋಪಾನ. ಶಿಷ್ಯನಿಗೆ ಈಗ ಭಗವದ್ದರ್ಶನ ಹಾಗೂ ಅವನ ಸಾನ್ನಿಧ್ಯ ಪ್ರಾಪ್ತವಾಗುತ್ತದೆ. ಈ ಸ್ಥಿತಿಯಲ್ಲಿ ಅವನ ಅಹಂ ನಷ್ಟವಾಗಿ ತಾನು ದಿವ್ಯ ಸತ್ವದ ಒಂದು ಭಾಗ ಎಂಬ ಅನುಭವ ಬರುತ್ತದೆ. ಸರ್ವದರಲ್ಲಿಯೂ ಈಶ್ವರನನ್ನು ಕಾಣುತ್ತಾನೆ. (ಸರ್ವಂ ಖಲ್ವಿದಂ ಬ್ರಹ್ಮ ಸ್ಥಿತಿ). ಇದೆಲ್ಲ ಗುರು ಕರುಣೆಯಿಂದ ಮಾತ್ರ ಸಾಧ್ಯ.

ಸೂಫಿ ಪಂಥದ ಯಾವುದೇ ಶಾಖೆ ಅಥವಾ ಸಂಪ್ರದಾಯವಾಗಲಿ, ಅದು ಪ್ರವಾದಿ ಮುಹಮ್ಮದ(ಸ)ರನ್ನು ಆದರ್ಶ ವ್ಯಕ್ತಿಯಾಗಿ ಅಂಗೀಕರಿಸುತ್ತದೆ. ಅವರ ಅನಂತರ ಸೂಫಿಗಳ ಆದರ ಗೌರವಗಳಿಗೆ ಪಾತ್ರರಾದವರು ಹಜರತ್ ಅಲಿ. ಅಲಿಯವರು ಪೈಗಂಬರರ ಮಾರ್ಗ ದರ್ಶನದಲ್ಲಿ ವಿದ್ಯಾ-ಬುದ್ಧಿ-ಸಿದ್ಧಿಗಳನ್ನು ಗಳಿಸಿಕೊಂಡವರು. ಮುಸ್ಲಿಮರ ಒಂದು ಮತ ಪ್ರಭೇದವಾದ ಷಿಯಾ ಹಾಗೂ ಕೆಲವು ವೈಷ್ಣವ ಸಿದ್ಧಾಂತಗಳ ಸಮ್ಮಿಶ್ರಣಗಳನ್ನು ಒಳಗೊಂಡ ಖೋಜಾ ಪಂಥ ಅಲಿಯನ್ನು ವಿಷ್ಣುವಿನ ಹತ್ತನೆಯ ಅವತಾರವೆಂದು ಬಗೆಯುತ್ತದೆ. 'ಹದೀಸ್'ನಲ್ಲಿ ಒಂದು ಮಾತಿದೆ, 'ನಾನು ಜ್ಞಾನ ಗೃಹವಾದರೆ, ನೀನು ಅದರ ಬಾಗಿಲು' ಎಂದು. ಇದರಿಂದ ಅಲಿಯವರ ಹಿರಿಮೆಯ ಅರಿವಾಗುತ್ತದೆ.

ಸೂಫಿ ಪಂಥದ ಪ್ರಕಾರ ಎಷ್ಟು ಜನ ಭಕ್ತರೋ, ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗಗಳೂ ಅಷ್ಟು ಉಂಟು. ('ಭಕ್ತನ ಭಾವದಂತೆ ಭಗವಂತನ ಆವಿರ್ಭಾವ', 'ಎಂತು ಮತ, ಅಂತು ಪಥ') ಆದರೂ ಅಧ್ಯಾತ್ಮ ಮಾರ್ಗದಲ್ಲಿ ಆರೋಹಣ ಕ್ರಮದಲ್ಲಿ ಏಳು ಘಟ್ಟಗಳನ್ನು, ನೆಲೆಗಳನ್ನು ಗುರುತಿಸುತ್ತಾರೆ.

* ಸೂಫಿ ಸಂತರಲ್ಲಿ ಎಲ್ಲರೂ ವಿವಾಹಿತರಾಗಿದ್ದಾರೆ. ಆಜನ್ಮ ಬ್ರಹ್ಮಚರ್ಯ ವ್ರತ ಪ್ರಕೃತಿಗೆ ವಿರುದ್ಧವೆಂದು ಪರಿಗಣಿತವಾಗಿರುವುದೇ ಇದಕ್ಕೆ ಕಾರಣ. ಶಿಸ್ತು, ಸಂಯಮ ಆತ್ಮವಿಕಾಸಕ್ಕೆ ಮಾರ್ಗವಾಗಬೇಕು, ಅಂತಿಮ ಲಕ್ಷ್ಯವಾಗಬಾರದು. ದೇಹವನ್ನು ವೃಥಾ ದಂಡಿಸಿದರೆ ವಿಕಾರಗಳಿಗೆ ಹಾದಿಮಾಡಿಕೊಟ್ಟಂತಾಗುವುದು. ಆದಿ ಸೂಫಿಗಳಲ್ಲಿ ಅನೇಕರು ಅವಿವಾಹಿತರಾಗಿದ್ದರು. ಕಾಲಕ್ರಮೇಣ ಇದು ಬದಲಾಯಿತು.
* ಸೂಫಿಗಳು ಭಕ್ತಿ ಭಾವಾವಶೇಷದ ಆಚರಣೆ, ನಿತ್ಯ ವಿಧಿಗಳನ್ನು, ಅಧ್ಯಾತ್ಮ ಸಾಧನೆಯ ಜೊತೆಯಲ್ಲಿಯೇ ನಡೆಸಬೇಕೆಂದು ಕಡ್ಡಾಯವಿದೆ. ಅವುಗಳಲ್ಲಿ ನಿತ್ಯ ಪ್ರಾರ್ಥನೆಯಾದ ನಮಾಜ್ (ಸಲಾತ್), ಕುರ್‌ಆನ್ ಪಾರಾಯಣ (ತಿಲಾವತ್). ನಿಯಮಿತ ಉಪಾಸನೆ (ಅವ್ರಾದ್), ದೇಹ ದಂಡನೆ (ಮಜಾಹದ್). ಶ್ವಾಸ ನಿಯಂತ್ರಣ (ಪ್ರಾಣಾಯಾಮ) ಮೂಲಕ ಕೈಗೊಳ್ಳುವ ದೈವಸ್ಮರಣೆ (ಜಿಕ್ರ್). ದಿವ್ಯ ಸಾನ್ನಿಧ್ಯದ ಧ್ಯಾನ (ಮುರಾಖಬ) ಮುಖ್ಯವಾದವುಗಳು.
* ಕೆಲ ಸೂಫಿಗಳು 'ಸಲಾತೆ ಮಾಕುಸ್' ಎಂಬ ವಿಲಕ್ಷಣ ಆರಾಧನೆ ಮಾಡು ತ್ತಾರೆ. ಏಕಾಂತ ಸ್ಥಳದಲ್ಲೋ, ಬಾವಿಯಲ್ಲೋ ತಲೆಕೆಳಗಾಗಿ ನೇತಾಡುತ್ತ ಆರಾಧನೆ ಮಾಡುವ ಕ್ರಮ (ಹಠಯೋಗ). ದೆಹಲಿಯಲ್ಲಿ ಸಮಾಧಿಸ್ಥರಾಗಿರುವ

ಖ್ವಾಜಾ ಖುತ್ಬುದ್ದೀನ್ ಬಖ್ತಿಯಾರ್ ಕಾಕಿ ಎಂಬುವರು ಕುರ್‌ಆನ್ ಪಠಿಸುವಾಗ, ಪಾಪಕಾರ್ಯಗಳಿಗೆ ಅಲ್ಲಾಹ್ ವಿಧಿಸುವ ಶಿಕ್ಷೆಯ ಉಲ್ಲೇಖ ಬಂದಾಗ, ಎದೆ ಬಡಿದುಕೊಂಡು ಮೂರ್ಛೆ ಹೋಗುತ್ತಿದ್ದರಂತೆ. ದೈವಾನುಗ್ರಹದ ಬಗ್ಗೆ ಓದುವಾಗ ಭಾವಾವೇಶದಿಂದ ಆನಂದತುಂದಿಲರಾಗಿ ಕುಣಿದಾಡುತ್ತಿದ್ದರಂತೆ.

* ದೇಶಾಟನೆ ಅಥವಾ ಯಾತ್ರೆ ಅಧ್ಯಾತ್ಮ ಜಿಜ್ಞಾಸುವಿನ ಆಸಕ್ತಿಗಳಲ್ಲಿ ಒಂದು. ಎಲ್ಲ ಧರ್ಮದ ಸಾಧುಸಂತರು, ಅನುಭಾವಿ ಫಕೀರರು, ದರವೇಶರು ಪರ್ಯಟನಕಾರರೇ, ಪರಿವ್ರಾಜಕರೇ. ಇದರಿಂದ ಒಂದು ಪ್ರದೇಶಕ್ಕೆ ಕಟ್ಟುಬೀಳದೆ ತಾವು ಇಡೀ ಪ್ರಪಂಚಕ್ಕೆ ಸೇರಿದವರು ಎಂಬ ಭಾವ ಅವರಲ್ಲಿ ಬಲಿಯುತ್ತದೆ.

* ಸೂಫಿ ಸಂತರ ಸಮಾಧಿಯನ್ನು 'ಮಜಾರ್' ಎಂದು, ಅದನ್ನು ಹೊಂದಿದ ಕಟ್ಟಡವನ್ನು 'ದರ್ಗ' ಎಂದು ಕರೆಯುತ್ತಾರೆ. ಸಂತರ ಪುಣ್ಯತಿಥಿಯ ದಿನ 'ಉರುಸ್' ಅನ್ನು ಪ್ರತಿ ವರ್ಷ ಆಚರಿಸುತ್ತಾರೆ.

* ಸೂಫಿ ಸತ್ಪುರುಷರು ಸ್ವಸಾಧನೆಯೊಂದಿಗೆ ಶಿಷ್ಯರ ಮಾರ್ಗದರ್ಶನ ಮಾಡುವುದಲ್ಲದೆ, ತಮ್ಮ ದರ್ಶನಾರ್ಥಿಯಾಗಿ ಬರುವ ಶೋಕಾರ್ತರ, ವ್ಯಾಧಿಗ್ರಸ್ತರ, ದಿಗ್ಗೇಡಿಗಳ ಕಲ್ಯಾಣಕ್ಕಾಗಿ, ಶಾಂತಿ ಸಾಂತ್ವನಗಳಿಗಾಗಿ ಶ್ರಮಿಸುತ್ತಿದ್ದರು. ನಲವತ್ತು ದಿನಗಳ ಪರ್ಯಂತ ಒಂದೇ ಕೋಣೆಯಲ್ಲಿ ದೇವರ ಕೀರ್ತನೆ ಧ್ಯಾನ ಮಾಡುತ್ತ ಕೂಡುವುದೂ ಉಂಟು. ಇದಕ್ಕೆ 'ಛಿಲ್ಲಾ' ಎನ್ನುತ್ತಾರೆ. ನಲವತ್ತು ರಾತ್ರಿ ತಲೆ ಕೆಳಗಾಗಿ ಬಾವಿಯ ಮೇಲೆ ನೇತಾಡುವ ಕಠಿಣ ವ್ರತಕ್ಕೆ 'ಛಿಲ್ಲ-ಎ-ಮಾಕಸ್' ಎನ್ನುತ್ತಾರೆ.

* ಅನೇಕ ಸೂಫಿ ಸಂತರು ಕವಿಗಳಾಗಿದ್ದರು. ಬಾಬಾ ಫರೀದುದ್ದೀನ್ ಷಕರ್‌ಗಂಜ್, ನಿಜಾಮುದ್ದೀನ್ ಔಲಿಯಾ, ಖ್ವಾಜಾ ಬಂದೇನವಾಜ್ ಗೇಸು ದರಾಜ್ ಮುಂತಾದವರು ಭಾರತೀಯರು. ಫರೀದುದ್ದೀನ್‌ರು ಅರಬ್ಬಿ, ಪರ್ಶಿಯನ್, ಹಿಂದಿ ಮತ್ತು ಪಂಜಾಬಿಯಲ್ಲು ಗ್ರಂಥಗಳನ್ನು ರಚಿಸಿದರು. ಜನರ ಆಡುನುಡಿಯಾದ ಮುಲ್ತಾನಿ ಪಂಜಾಬಿ ಭಾಷೆಯಲ್ಲಿ ಕಾವ್ಯವನ್ನು ರಚಿಸಿದರು. ಸಿಖ್ಖರ ಧರ್ಮಗ್ರಂಥ 'ಗ್ರಂಥ ಸಾಹೇಬ್'ದಲ್ಲಿ ಇವರ ಅನೇಕ ಕವನಗಳು ಸೇರ್ಪಡೆಗೊಂಡಿವೆಯಂತೆ. (ಅದರಲ್ಲಿ ಮರಾಠಿ ಸಂತ ನಾಮದೇವನು ಬರೆದ ಹಿಂದಿ ಪದ್ಯಗಳೂ ಇರುವುದನ್ನು ನೆನೆಯಬಹುದು.) ೧೪ನೆಯ ಶತಮಾನದ ಸೂಫಿ ಸಂತ ಹಜ್ರತ್ ಸೈಯದ್ ಮುಹಮ್ಮದ್ ಹುಸೇನಿ ಖ್ವಾಜಾ ಬಂದೇನವಾಜ್ ಗೇಸು ದರಾಜ್ ಅವರು ಉರ್ದು, ಫಾರ್ಸಿ, ಅರಬ್ಬಿಗಳಲ್ಲಿ ಸುಮಾರು ೧೦೫ ಗ್ರಂಥ ರಚಿಸಿದರೆಂಬ ಪ್ರತೀತಿ ಇದೆ. ಅವರ ಸಮಾಧಿ ಕರ್ನಾಟಕದಲ್ಲಿ (ಗುಲ್ಬರ್ಗಾದಲ್ಲಿ) ಇದೆ.

ಸಂತರಲ್ಲದೆ, ಶುದ್ಧ ಕವಿಗಳೆನಿಸಿರುವ ಫಾರಸಿ ಭಾಷೆಯ ಷೇಖ್ ಸಾದಿ, ಹಾಫೀಜ್

ಮುಂತಾದವರು ತಮ್ಮ ಕಾವ್ಯದಲ್ಲಿ ಸೂಫಿ ಸಿದ್ಧಾಂತದ ಸಾರ ಇಳಿಸಿದ್ದಾರೆ. ಪ್ರಸಿದ್ಧ ಕವಿ ಉಮರ್ ಖಯ್ಯಾಮನ ರೂಬಯಾಗಳಲ್ಲಿ ಸೂಫಿ ತತ್ತ್ವಗಳು ಸಾಂಕೇತಿಕವಾಗಿ ವ್ಯಕ್ತವಾಗಿವೆ. ಅವನ ಪದ್ಯದಲ್ಲಿ ಬರುವ ಸುರಾಪಾನ ಉಪಾಸನೆಯ ಪ್ರತೀಕವಾಗಿದೆ. ಹೆಂಡದಂಗಡಿ (ಮೈಖಾನಾ) ಅಧ್ಯಾತ್ಮಸಾಧಕರ ಸಂಘವಾಗಿದೆ, ಸಾಖಿ (ಸಂಗಾತಿ, ಸಖಿ) ವಯೋವೃದ್ಧ ಜ್ಞಾನಿ ದೀಕ್ಷಾರ್ಥಿ ಆಗಿದ್ದರೆ, ಬಟ್ಟಲು (ಪ್ಯಾಲಾ) ಹೃದಯವಾಗಿದೆ. ಇವೆಲ್ಲ ಮಾರ್ಮಿಕ ಅರ್ಥದಲ್ಲಿ ಬಳಸಲಾಗಿವೆಯಂತೆ. ಶಹಜಹಾನನ ಹಿರಿಯ ಮಗ ದಾರಾ ಷಿಕೋವ್, ಸೂಫಿ ಹಾಗೂ ವೇದಾಂತ ಸಾಹಿತ್ಯದ ಆಳವಾದ ಅಧ್ಯಯನ ಮಾಡಿದ್ದ. ಅವುಗಳಲ್ಲಿಯ ಸಾಮ್ಯವನ್ನು ಗುರುತಿಸಿದ್ದ, ಮತ್ತು ಪ್ರಚಾರಗೊಳಿಸಿದ್ದ. ಅವುಗಳಲ್ಲಿ ವ್ಯತ್ಯಾಸವಿದ್ದರೆ ಅದು ಭಾಷೆ, ಹೆಸರು, ಪಾರಿಭಾಷಿಕ ಪದಗಳಲ್ಲಿ ಎಂದು ಸಾರಿದ್ದ. ಉಪನಿಷತ್, ಭಗವದ್ಗೀತೆ, ರಾಮಾಯಣ, ಯೋಗವಾಸಿಷ್ಠ ಮತ್ತಿತರ ಸಂಸ್ಕೃತ ಗ್ರಂಥಗಳನ್ನು ಫಾರಸಿ ಭಾಷೆಗೆ ಅನುವಾದಿಸಿದ್ದ. ಅವನ 'ಅನ್ಯಧರ್ಮಸಹಿಷ್ಣುತೆ' ಅನನ್ಯವಾದುದು.

ಸೂಫಿ ಸಂತರ ಸಮಾಧಿಗೆ ಹೋಗಿ ಪ್ರಾರ್ಥನೆ ಸಲ್ಲಿಸುವುದನ್ನು 'ಜಿಯಾರತ್' ಎನ್ನುತ್ತಾರೆ. ಹಾಗೆ ನೋಡಿದರೆ ಇಸ್ಲಾಂ ಧರ್ಮದಲ್ಲಿ ಸಮಾಧಿ ಪೂಜೆ ನಿಷಿದ್ಧ. ಸರ್ವಶಕ್ತ (ಸರ್ವಕರ್ತ, ಸರ್ವಹರ್ತ, ಸರ್ವಾಂತರ್ಯಾಮಿ) ಅಲ್ಲಾಹ್‌ನಲ್ಲದೆ ಯಾವ ವ್ಯಕ್ತಿಯೂ ಆರಾಧನೆಗೆ ಅರ್ಹನಲ್ಲ. ಇದನ್ನು ನುಡಿದವರು ಪ್ರವಾದಿ ಮುಹಮ್ಮದ(ಸ)ರು. ಅವರು ಈ ಮಾತನ್ನು ತಮ್ಮ ಜೀವನದಲ್ಲಿ ಆಚರಿಸಿ ತೋರಿದರು. ತಾವು ದೈವಾಧೀನರಾದಮೇಲೆ ಈ ಮಾತು ತಮ್ಮ ಸಮಾಧಿಗೂ ಅನ್ವಯಿಸುತ್ತದೆ ಎಂದು ನುಡಿದಿದ್ದರು. ಯಾವುದೇ ಸಮಾಧಿಯ ಬಳಿಗೆ ಹೋದರೆ, ಅಲ್ಲಿ ಸಮಾಧಿಸ್ಥನಾದ ವ್ಯಕ್ತಿಯ ಆತ್ಮದ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಬೇಕೇ ವಿನಾ ಆ ವ್ಯಕ್ತಿಯಲ್ಲಿ ಬೇಡಿಕೊಳ್ಳುವುದಲ್ಲ ಎಂಬ ವಿಚಾರ ಇಸ್ಲಾಂನಲ್ಲಿ ಸ್ಪಷ್ಟವಾಗಿದೆ. ಹೀಗಿದ್ದರೂ ಕಾಲಕ್ರಮೇಣದಲ್ಲಿ ಜನರು ದರ್ಗಾಗಳಿಗೆ ಹೋಗುತ್ತಾರೆ, ಅಲ್ಲಿಯ ಮಜಾರ್ (ಸಮಾಧಿ) ಸಮಕ್ಷಮ ತಮ್ಮ ಕಲ್ಯಾಣಕ್ಕಾಗಿ ಹರಕೆ ಹೊರುತ್ತಾರೆ, ರಕ್ಷೆ (ರಕ್ಷಣೆ)ಗಾಗಿ ತಾಯಿತ (ತಾವೀಜ್) ಕಟ್ಟಿಸಿಕೊಳ್ಳುತ್ತಾರೆ.

'ಸೂಫಿ ಸಂತರ ಸಮಾಧಿ ಸ್ಥಾನಗಳು, ಜಾತಿ, ಮತ, ವರ್ಗವೆನ್ನದೆ ಜನಾಕರ್ಷಣೆಯ ಕೇಂದ್ರಗಳಾಗಿವೆ, ಸಮನ್ವಯ ಬಿಂದುಗಳಾಗಿವೆ, ಭಾವೈಕ್ಯದ ಸಹಾಯಕ ನೆಲೆಗಳಾಗಿವೆ' ಎಂದು ನಿಸಾರರು ಬರೆಯುತ್ತಾರೆ. ಸಮಾಧಿಗಳ ಮೇಲೆ ಹೂವುಗಳ ಚಾದರ ಹಾಸಿ ಅಲಂಕರಿಸುವುದು, ಗುರುವಾರದಂದು ಮಣ್ಣಿನ ಹಣತೆ ಹಚ್ಚುವುದು ಸಾಮಾನ್ಯ ದೃಶ್ಯ. ಕೆಲವು ಸೂಫಿ ಸಂತರು ಜನರಿಗೆ ಎಷ್ಟು ಪೂಜ್ಯರಾಗಿದ್ದಾರೆಂದರೆ, ಅವರ ಮೂಲ ಸಮಾಧಿ ಬಾಗ್ದಾದ್‌ನಲ್ಲೋ, ಮತ್ತೆಲ್ಲೋ ಇದ್ದರೂ ಇಲ್ಲಿ ಹಲವೆಡೆ ಅವರ ಕಾಲ್ಪನಿಕ ಸಮಾಧಿಗಳನ್ನು ರಚಿಸಿ ಪೂಜಿಸುತ್ತಾರೆ. ಉದಾಹರಣೆಗೆ, ಸಂತ ಶ್ರೇಷ್ಠ ಅಬ್ದುಲ್ ಖಾದರ್ ಜಿಲಾನಿಯವರ ಮೂಲ ಸಮಾಧಿ ಇರಾಖ್‌ನ ಬಾಗ್ದಾದದಲ್ಲಿದ್ದರೆ ಅದರ ಪ್ರತಿಕೃತಿ ಕಾಶ್ಮೀರದ ಶ್ರೀನಗರದಲ್ಲಿದೆ. (ಇದೇ ರೀತಿ ಹಿಂದು ಸಾಧು ಸಂತರ ಸಮಾಧಿಗಳು ಮೂಲದಲ್ಲಿ ಒಂದೆಡೆ ಇದ್ದರೂ ಅದರ ಪ್ರತಿಕೃತಿಗಳು ಭಾರತದಾದ್ಯಂತ ಹರಡಿವೆ. ಎಲ್ಲ ಧರ್ಮದವರು ನಡೆದುಕೊಳ್ಳುವ ಪರಿಪಾಠವಿದು.)

ಇಸ್ಲಾಂ ಧರ್ಮ ಸಂಗೀತವನ್ನು ವಿಧ್ಯುಕ್ತ ಆಚರಣೆಗಳಿಂದ ಹೊರಗಿಡುತ್ತದೆ. 'ಸಮಾ' ಎಂಬ ಸಂಗೀತೋತ್ಸವ, ಭಕ್ತಿ ತುಂಬಿದ ಭಜನೆಗಳ ಕಾರ್ಯಕ್ರಮವನ್ನು ಪ್ರಚಾರ ಪಡಿಸಿದವರು ಚಿಷ್ತೀ ಸಂಪ್ರದಾಯದ ಸೂಫಿಗಳು. 'ಉರುಸ್'ಗಳಲ್ಲಿ ಸಂಗೀತೋತ್ಸವದ ಮೇಲುಗೈ ಇರುತ್ತದೆ. ಸೂಫಿಗಳು ಮೃತ್ಯುವನ್ನು ಪ್ರಿಯಕರನೆಂದು, ಆತ್ಮವನ್ನು ಪ್ರಿಯತಮೆ ಎಂದು ಭಾವಿಸಿ, ನಲ್ಲನಲ್ಲೆಯರ ಸಮಾಗಮವನ್ನು ಗಾಯನ, ವಾದ್ಯಗೋಷ್ಠಿಗಳಿಂದ ಆಚರಿಸುತ್ತಾರೆ. ಸೂಫಿಗಳು ಸೌಂದರ್ಯಾರಾಧಕರು. ಅಂತಃಕರಣದ ಭೂಮಿಯನ್ನು ಹಸನುಗೊಳಿಸಿ, ಅಲ್ಲಿ ದೈವೀ ಪ್ರೇಮದ ಬೀಜವು ಮೊಳಕೆಯೊಡೆಯಲು ಆಸ್ಪದವಾಗುವಂತೆ ಸಂಗೀತದ ಸಹಾಯ ಪಡೆಯುತ್ತಾರೆ ಎನ್ನುತ್ತಾರೆ.

(7)

ಪ್ರವಾದಿವರ್ಯರ ಪ್ರವಚನದ ಪ್ರಜ್ವಲ ವಜ್ರಗಳು: ಹದೀಸ್—ಪ್ರವಾದಿ ಮುಹಮ್ಮದ್(ಸ) ಅವರ ನಿಜ ಜೀವನವನ್ನು, ಅವರ ಆಚಾರ ವಿಚಾರಗಳನ್ನು ಆಧರಿಸಿ ಪೈಗಂಬರರ ಆಪ್ತ ಸಂಗಾತಿಗಳು ದಾಖಲಿಸಿದ ಸೂಕ್ತಿಗಳ ಸಂಗ್ರಹ 'ಹದೀಸ್'. ಕುರ್‌ಆನ್‌ನಲ್ಲಿ ಇದ್ದಂತೆ ಇಲ್ಲಿ ಅಪೌರುಷೇಯವಾದದ್ದು ಏನೂ ಇಲ್ಲ. ಪೈಗಂಬರರ ದೈನಂದಿನ ಬದುಕಿನ ಸಾಮಾನ್ಯ ಸಂದರ್ಭಗಳಲ್ಲಿ, ಅವರಿಂದ ಪ್ರಜ್ಞಾಪೂರ್ವಕವಾಗಿ ಹೊರಹೊಮ್ಮಿದ ಮಾತುಗಳು ಹಾಗೂ ಘಟನೆಗಳು ಇದರಲ್ಲಿ ವರ್ಣಿತವಾಗಿವೆ. ಆಪ್ತ ಸಂಗಾತಿಗಳು ಕಂಡು ಕೇಳಿದ ಸಂಗತಿಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ.

ಪೈಗಂಬರರು ತಮ್ಮ ಜೀವನ ಪರ್ಯಂತ ಕುರ್‌ಆನ್‌ನ ಆದೇಶಗಳನ್ನು ಅತ್ಯಂತ ನಿಷ್ಠರಾಗಿ ಪಾಲಿಸಿದರು. ಕುರ್‌ಆನ್‌ನ ಚಿಂತನಯೋಗ್ಯ ಸಾರೋಕ್ತಿಗಳನ್ನು ಪಾಲಿಸುವಾಗ ಅವರು ಅನುಸರಿಸಿದ ಜೀವನ ಕ್ರಮದ ವ್ಯಾಖ್ಯಾನದಂತೆ 'ಹದೀಸ್'ಗಳು ಮೂಡಿಬಂದಿವೆ. ಕುರ್‌ಆನ್‌ನ ಗಟ್ಟಿ ತಳಗಟ್ಟಿನ ಮೇಲೆ ಅರಳಿ ನಿಂತಿರುವ ಕೃತಾರ್ಥ ನಡೆನುಡಿ ಆಚಾರಗಳ ಅನುಪಮ ಸೌಧ 'ಹದೀಸ್' ಎಂದು ನಿಸಾರ್ ಹೇಳುತ್ತಾರೆ.

ಪ್ರವಾದಿಗಳು ಸಂದರ್ಭಾನುಸಾರ ವ್ಯಕ್ತಗೊಳಿಸಿದ ಅಸಂಖ್ಯ ಹೋಲಿಕೆ, ಉದಾಹರಣೆಗಳು ಮನನೀಯವಾಗಿವೆ. ಇಸ್ಲಾಮೀ ಧರ್ಮಶಾಸ್ತ್ರವಾದ 'ಷರಿಯತ್'ಗೆ ಕುರ್‌ಆನ್ ಬಿಟ್ಟರೆ, ದ್ವಿತೀಯ ಆಧಾರವೆಂದರೆ 'ಹದೀಸ್'.

'ಹದೀಸ್'ದಿಂದ ಕೆಲವು ಸುಂದರ ಉಪ ಕತೆಗಳನ್ನು, ದೃಷ್ಟಾಂತಗಳನ್ನು ನಿಸಾರರು ಉದ್ಧರಿಸುತ್ತಾರೆ. ಅವುಗಳಲ್ಲಿ ಕೆಲವನ್ನು ಸಂಗ್ರಹಿಸಿ ಇಲ್ಲಿ ಕೊಡುತ್ತಿರುವೆ. ಅವನ್ನು ಯಾವ ಧರ್ಮದವರಾದರೂ ಓದಿ ಮೆಚ್ಚಬಹುದಾಗಿದೆ. 'ನುಡಿದಂತೆ ನಡೆದವರು' ಪ್ರವಾದಿಗಳು. ಅವರ ಜೀವನ ಶುದ್ಧವಾಗಿತ್ತು, ಸರಳವಾಗಿತ್ತು, ಅನುಕರಣೀಯವಾಗಿತ್ತು.

ಪ್ರವಾದಿ ಪೈಗಂಬರರು 'ಅನಾಥ ಬಂಧು' ಆಗಿದ್ದರು. 'ತಬ್ಬಲಿ ಕಂಗಾಲರನ್ನು ರಕ್ಷಿಸಿ ಸಲಹುವಾತ ಮತ್ತು ನಾನು ಸ್ವರ್ಗದಲ್ಲಿ ಈ ರೀತಿ ಇರುತ್ತೇನೆ' ಎಂದು ತಮ್ಮ ತೋರು ಬೆರಳು ಹಾಗೂ ನಡು ಬೆರಳು ತೋರಿದ್ದರಂತೆ. ಎಷ್ಟು ಮನೋಜ್ಞವಾಗಿದೆ ಅವರ ದೃಷ್ಟಾಂತ.

ಮತ್ತೊಂದು ಸಂದರ್ಭದಲ್ಲಿ ಅವರು ನುಡಿದಿದ್ದರು: 'ಕಾರ್ಮಿಕರನ್ನು ವಿನಾಕಾರಣ ಸತಾಯಿಸಬೇಡಿ. ಅವರ ಒಡಲಿನ ಬೆವರು ಆರುವುದಕ್ಕಿಂತ ಮುನ್ನವೇ ಅವರ ವೇತನವನ್ನು ಪಾವತಿಸಿರಿ.'

ಪ್ರವಾದಿಗಳು ತಮ್ಮ ಕೊನೆಯ ದಿನಗಳಲ್ಲಿ, ಅವರ ಕಾಯಿಲೆ ಉಲ್ಬಣಾವಸ್ಥೆಗೆ ಏರಿದಾಗ, ಎಲ್ಲ ಗುಲಾಮರನ್ನೂ ಬಿಡುಗಡೆ ಮಾಡಿದರು. ಮನೆಯಲ್ಲಿ ಉಳಿದಿದ್ದ ಆರೇಳು ನಾಣ್ಯ(ದಿರ್ಹಮ್)ಗಳನ್ನು ಬಡ ಬಗ್ಗರಲ್ಲಿ ಹಂಚಿದ್ದರು. ಪ್ರವಾದಿಗಳು ಮನಸ್ಸು ಮಾಡಿದ್ದರೆ ಸುಲ್ತಾನನಂತೆ ಜೀವಿಸಬಹುದಾಗಿತ್ತು. ಆದರೆ ಅವರು ಜೀವಿಸುತ್ತಿದ್ದುದು ಜೋಳದ ರೊಟ್ಟಿ ಮತ್ತು ಖರ್ಜೂರಗಳ ಮೇಲೆ. ಅವರ ಹಾಸಿಗೆ ಮತ್ತು ತಲೆ ದಿಂಬು ಒರಟು ಚರ್ಮದ್ದು. ಅವರ ಮನೆಯ ಒಲೆ ತಿಂಗಳುಗಟ್ಟಲೆ ಉರಿಯುತ್ತಿರಲಿಲ್ಲವಂತೆ.

ಒಮ್ಮೆ ಪ್ರವಾದಿಗಳು, ಒಬ್ಬರಿಗೆ ಒಂದು ಸೂಜಿಯನ್ನು ಸಮುದ್ರದ ನೀರಲ್ಲಿ ಅದ್ದಿ ತೆಗೆಯಲು ಹೇಳಿದರಂತೆ. ಇದಕ್ಕೆ ಎಷ್ಟು ನೀರು ಹತ್ತಿದೆ ಎಂದು ಕೇಳಿದರು. ಬಹಳ ಕಡಿಮೆ ಎಂದು ಅವನು ಅಂದಾಗ, 'ನಮ್ಮ ಇಹ ಲೋಕದ ಸುಖ ಸಂಪತ್ತು ಈ ಸೂಜಿಗೆ ಹತ್ತಿದ ನೀರಿನಷ್ಟು ಮಾತ್ರ. ಪರಲೋಕದ ಸುಖ ಸಾಗರದಷ್ಟು' ಎಂದರಂತೆ. (ದಾಸರು 'ಅಲ್ಲಿದೆ ನಮ್ಮ ಮನೆ, ಇಲ್ಲಿರುವುದು ಸುಮ್ಮನೆ' ಎಂದು ಪರಲೋಕ, ಇಹಲೋಕಗಳ ಬಗ್ಗೆ ಹೇಳಿದ್ದು ನೆನಪಾಗುತ್ತದೆ).

ಪೈಗಂಬರರನ್ನು ಅವರ ಶತ್ರುಗಳೂ ಕೂಡ ಎಲ್ಲ ಲೌಕಿಕ ವಿಷಯದಲ್ಲಿ ಅಚಲವಾಗಿ ನಂಬುತ್ತಿದ್ದರಂತೆ. ಎಲ್ಲರಿಗೂ ಅವರು ಸತ್ಯಸಂಧರು, ಪ್ರಾಮಾಣಿಕ ಧರ್ಮದರ್ಶಿಯಂತಿದ್ದರು. ನಗ ನಾಣ್ಯ ಸೊತ್ತುಗಳನ್ನು ಜನ ಅವರ ಬಳಿ ವರ್ಷಾನುಗಟ್ಟಲೆ ರಕ್ಷಣೆಗಾಗಿ ಇಡುತ್ತಿದ್ದರು.

ಜಗಳ ಬಗೆ ಹರಿಸಲು ಪ್ರವಾದಿಗಳು ಸುಲಭ ಉಪಾಯ ಹುಡುಕುತ್ತಿದ್ದರು. ಮಕ್ಕಾ ಪಟ್ಟಣದ ಕಅಬಾ ಭವನ ಲೋಕದಾದ್ಯಂತ ಮುಸಲ್ಮಾನರಿಗೆ ಪರಮ ಪವಿತ್ರವಾದ ಸ್ಥಾನ. ಅದೊಮ್ಮೆ ವಿಪರೀತ ಮಳೆಯಿಂದ ಶಿಥಿಲಗೊಂಡಿತ್ತು. ಅದರ ಪುನರ್‌ನಿರ್ಮಾಣ ಕಾರ್ಯ ಪ್ರಾರಂಭವಾದಾಗ ಉತ್ತಮ ಗೋತ್ರದ ವಿವಿಧ ಮನೆತನಗಳ ಪ್ರತಿನಿಧಿಗಳು ಅಲ್ಲಿ ನೆರೆದಿದ್ದರು. ಪ್ರದಕ್ಷಿಣೆ ಮಾಡುವ ಕಂಭದ ಮೇಲೆ ಕಪ್ಪು ಶಿಲೆಯನ್ನು ಸ್ಥಾಪಿಸಬೇಕಿತ್ತು. ಅದನ್ನು ಯಾರು ನೆರವೇರಿಸಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ಆ ಶಿಲೆಯನ್ನು ಅದರ ಜಾಗೆಗೆ ಒಯ್ಯಲು ಎಲ್ಲರಲ್ಲಿ ಪೈಪೋಟಿ ನಡೆಯಿತು. ಆಗ ಪೈಗಂಬರರು ತಮ್ಮ ಶಾಲನ್ನು ನೆಲದ ಮೇಲೆ ಹಾಸಿದರು. ಆ ಕಲ್ಲನ್ನು ಮಧ್ಯೆ ಇರಿಸಲಾಯಿತು. ಎಲ್ಲರೂ ನಾಲ್ಕು ತುದಿಗಳನ್ನು ಹಿಡಿದು ಎತ್ತಿದರು. ಪುಣ್ಯಕಾರ್ಯ ಮಾಡಿದ ಸಮಾಧಾನ ಅವರೆಲ್ಲರಿಗೆ ದೊರೆಯಿತು.

ಬಡವರಿಗಾಗಿ, ನಿಸ್ಸಹಾಯಕರಿಗಾಗಿ ಒಬ್ಬ ಶ್ರೀಮಂತ ಯಹೂದಿಯಿಂದ ಪೈಗಂಬರರು ಸಾಲ ಪಡೆದಿದ್ದರು. ಪಾವತಿ ಮಾಡಲು ಮೂರು ದಿನಗಳು ಇರುವ ಮೊದಲೇ ಆ ವ್ಯಕ್ತಿ ಪೈಗಂಬರರ ಮನೆಗೆ ಬಂದ. ಹಳೆಯ ಜಗಳ ತೆಗೆದು ಅವರ ಪೂರ್ವಜರು ಸಾಲ

ಕೊಟ್ಟವರಿಗೆ ಮರಳಿ ಕೊಡುವಾಗ ಬಹಳ ಸತಾಯಿಸುತ್ತಿದ್ದರು ಎಂದ. ಇದರಿಂದ ಕುಪಿತಗೊಂಡ ಪೈಗಂಬರರ ಶಿಷ್ಯ ಖಡ್ಗ ಹಿರಿದು, 'ನೀನು ಯಾರೊಡನೆ ಮಾತನಾಡುತ್ತಿದ್ದೀಯ ನಿನಗೆ ಗೊತ್ತೇ?' ಎಂದು ಗದರಿಸಿದ. ಪೈಗಂಬರರು ಸಾಲ ಕೊಟ್ಟವನನ್ನು ಸಮಾಧಾನ ಪಡಿಸಿ, ತನ್ನ ಶಿಷ್ಯನಿಗೆ ಹೇಳಿದರು, 'ನೀವು ಕೋಪಗೊಳ್ಳುವ ಕಾರಣವಿರಲಿಲ್ಲ. ಅವನೊಂದಿಗೆ ನೀವು ನಯವಾಗಿ ನಡೆಯಬಹುದಿತ್ತು. ಇದು ತಪ್ಪು' ಎಂದು ಹೇಳಿ ಸಾಲ ತೀರಿಸಲು ಮೂರು ದಿನ ಬಾಕಿ ಇದ್ದರೂ ಅಂದೇ ಕೊಡಲು ಹೇಳಿದರು. ಗದರಿಸಿದ್ದಕ್ಕೆ ದಂಡವಾಗಿ ಇಪ್ಪತ್ತು ನಾಣ್ಯ ಹೆಚ್ಚು ಕೊಡಲು ಹೇಳಿದರಂತೆ. ಆ ಯಹೂದಿಯ ಮೇಲೆ ಅಗಾಧ ಪರಿಣಾಮವಾಯಿತು. ಮುಂದೆ ಅವನು ಇಸ್ಲಾಂ ಧರ್ಮಾನುಯಾಯಿ ಆಗಲು ಈ ಘಟನೆಯು ಒಂದು ಪ್ರೇರಣೆಯಾಯಿತಂತೆ.

ಒಮ್ಮೆ ಪ್ರವಾದಿಗಳು ಒಂದು ಚಾಪೆಯ ಮೇಲೆ ಮಲಗಿದ್ದರು. ಅವರು ಎದ್ದಾಗ ಅವರ ಮೈಯ್ಯ ಮೇಲೆ ಚಾಪೆಯ ಗುರುತುಗಳು ಮೂಡಿದ್ದವು. ಒಬ್ಬ ಅನುಯಾಯಿ ಇದನ್ನು ಗಮನಿಸಿ, 'ಮೆತ್ತನೆಯ ಗಾದಿಯನ್ನು ನಿಮಗೆ ತಂದು ಕೊಡುವೆ, ನಿಮಗೆ ಆಕ್ಷೇಪಣೆ ಇಲ್ಲವಷ್ಟೇ?' ಎಂದು ಕೇಳಿದ. ಆಗ ಪ್ರವಾದಿಗಳು ನುಡಿದರು, 'ಈ ಜಗತ್ತಿನ ಸುಖದ ಜೊತೆ ನನಗಿರುವ ನಂಟಾದರೂ ಎಷ್ಟರದು? ಪ್ರಯಾಣಿಕನೊಬ್ಬ ಮರದ ನೆರಳಲ್ಲಿ ಆಯಾಸ ಪರಿಹಾರಾರ್ಥವಾಗಿ ಕೆಲ ಕ್ಷಣ ಕಳೆದು ಪಯಣ ಮುಂದುವರಿಸುವಷ್ಟು ಮಾತ್ರ!' ಎಂದು.

ಇಸ್ಲಾಮಿನಲ್ಲಿ ಪ್ರಾಣಿ ಬಲಿ ಮಾಡಿದಾಗ ಬಡವರಿಗೆ ದಾನ ಮಾಡುವುದು ವಾಡಿಕೆ. ಒಬ್ಬ ಆಡಿನ 'ದಿಬ್ಬ' (ಬಲಿ) ಮಾಡಿದ್ದ. ಆಡಿನ ದೇಹದ ಭಾಗಗಳನ್ನೆಲ್ಲ ಹಂಚಿದ್ದ. ಪ್ರವಾದಿಗಳು ಅವನನ್ನು ಕೇಳಿದರು, 'ನೀವು 'ದಿಬ್ಬ' ಮಾಡಿ ಹಂಚಿದ ಮೇಲೆ ಆಡಿನ ಯಾವ ಭಾಗ ನಿಮ್ಮ ಬಳಿ ಉಳಿದಿದೆ?' ಎಂದು. ಅವನು 'ಮುಂಗಾಲನ್ನು ಬಿಟ್ಟು ಎಲ್ಲವನ್ನೂ ದಾನ ಮಾಡಿದ್ದೇನೆ' ಎಂದು ಉತ್ತರಿಸಿದ. ಆಗ ಪ್ರವಾದಿ ನುಡಿದರು, 'ಹಾಗಿದ್ದಲ್ಲಿ ಮುಂಗಾಲುಗಳ ಹೊರತು ಮಿಕ್ಕೆಲ್ಲ ಆಡಿನ ಭಾಗ ನಿಮ್ಮ ಪಾಲಿಗೆ ಉಳಿಯಿತು' ಎಂದರು. ಈ ಮಾತಿನ ಮರ್ಮಾರ್ಥ ಇದು: ದೈವಾನುಗ್ರಹವನ್ನು ಸಂಪಾದಿಸಲು ಕಂಗಾಲರಿಗೆ ದಾನ ಮಾಡುವ ಸಿರಿ ಸಂಪತ್ತೇ ನಿಜವಾದ ಉಳಿತಾಯ. ಇಹಲೋಕದಲ್ಲಿ ದಾನ ಮಾಡಿದ ಮನುಷ್ಯನಿಗೆ ದೇವಲೋಕದಲ್ಲಿ ಅದರ ಫಲ ಸಿಗುತ್ತದೆ. ಇಲ್ಲಿ ಮಾಡಿದ ದಾನಧರ್ಮ, ಪರೋಪಕಾರ ಪರಲೋಕದ ಬ್ಯಾಂಕಿನ ಠೇವಣಿ ಇದ್ದಹಾಗೆ. (ಸರ್ವಜ್ಞನ ಉಕ್ತಿ ನೆನಪಾಗುತ್ತದೆ, 'ಕೊಟ್ಟಿದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ| ಕೊಟ್ಟಿದ್ದು ಕೆಟ್ಟಿತೆನಬೇಡ, ಅದು ಮುಂದೆ| ಕಟ್ಟಿಹುದು ಬುತ್ತಿ ಸರ್ವಜ್ಞ')

ಅವಿಚಾರಕ ಕುರುಡು ನಂಬಿಕೆ (ಅಂಧಶ್ರದ್ಧೆ), ಮನುಷ್ಯನ ಮಹಾ ಶತ್ರು ಎಂಬುದು ಪ್ರವಾದಿಗಳ ಸ್ಪಷ್ಟ ಮತವಾಗಿತ್ತು. ಅವರು ಹೇಳಿದ ಈ ಮಾತು ಆಲೋಚನೀಯವಾಗಿದೆ. 'ಮಿತಿ ಮೀರಿದ ಪ್ರಾರ್ಥನೆಗಿಂತ ಮಿತಿ ಮೀರಿದ ಜ್ಞಾನ ವಾಸಿ. ಇಡೀ ರಾತ್ರಿ ಧ್ಯಾನಿಸುವುದಕ್ಕಿಂತ ಒಂದು ಗಂಟೆಯ ಕಾಲ ತನ್ನ ತಿಳಿವನ್ನು ತಿಳಿಯದವರಲ್ಲಿ ಹಂಚುವವ

ನಿಜಕ್ಕೂ ಕೃತಾರ್ಥ.'

ಇಸ್ಲಾಂ ಧರ್ಮ, ಸರಕಾರ ಮತ್ತು ಜನತೆ—ಇವುಗಳ ನಡುವಣ ಅವಿನಾ ಸಂಬಂಧದ ಬಗ್ಗೆ ಪ್ರವಾದಿಗಳು ಹೇಳುವ ಮಾತು, ಕೊಟ್ಟ ಹೋಲಿಕೆ ಎಷ್ಟು ಸುಂದರವಾಗಿದೆ ನೋಡಬಹುದಾಗಿದೆ. 'ಈ ಮೂರೂ ಷಾಮಿಯಾನ, ಅದರ ಕಂಬ ಮತ್ತು ಆಣಿ (ಗೂಟ)ಗಳಂತೆ ಇವೆ. ಷಾಮಿಯಾನ ಇಸ್ಲಾಂ ಧರ್ಮವಾದರೆ, ಕಂಬ ಸರಕಾರ (ರಾಜಕೀಯ ವ್ಯವಸ್ಥೆ) ಮತ್ತು ಸಾಮಾಜಿಕರು ಆಣಿಗಳು (ಗೂಟಗಳು): ಇವುಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದು ಕ್ಷೇಮವಾಗಿರಲು ಸಾಧ್ಯವಿಲ್ಲ. ಈ ಪೈಕಿ ಯಾವುದೇ ಒಂದು, ಉಳಿದೆರಡರ ಅಭಾವದಲ್ಲಿ ತನ್ನ ನೈಜ ಸ್ಥಿತಿಯಲ್ಲಿ ಸುಸ್ಥಿರ ಅವಸ್ಥೆಯಲ್ಲಿ ಇರಲಾಗದು' ಎಂದಿದ್ದಾರೆ.

ದೇವರು ಒಬ್ಬನೇ ಆಗಿದ್ದಾನೆ. ಅವನು ನಿರ್ಗುಣ ನಿರಾಕಾರ. ಇದನ್ನು ಎಲ್ಲ ಧರ್ಮಗಳೂ ಹೇಳುತ್ತವೆ. ಎಲ್ಲ ಧರ್ಮಗಳ ತಿರುಳು ಒಂದೇ ಆಗಿದೆ. ದೇವರನ್ನು ಪಡೆಯುವ ಮಾರ್ಗಗಳು ವಿಭಿನ್ನವಾಗಿವೆ. ಎಲ್ಲರೂ ತಮ್ಮ ತಮ್ಮ ಧರ್ಮವನ್ನು ಸರಿಯಾಗಿ ಪಾಲಿಸಿದರೆ, ಇತರರ ಧರ್ಮಗಳ ಬೋಧನೆಯ ಸಾರವನ್ನು ಸರಿಯಾಗಿ ತಿಳಿದರೆ ಎಲ್ಲರೂ ಸೌಹಾರ್ದ, ಸಾಮರಸ್ಯ, ಸಹ ಜೀವನದಿಂದ ಬಾಳುವುದು ಸಾಧ್ಯ. ಈ ದಿಶೆಯಲ್ಲಿ ಕವಿ ನಿಸಾರ್ ಅಹಮದ್ ಅವರ ಗದ್ಯ ಸಾಹಿತ್ಯದಲ್ಲಿ ಬರುವ ಧಾರ್ಮಿಕ, ಪೌರಾಣಿಕ ಸಂಬಂಧೀ ಚಿಂತನೆಗಳು ಮಹತ್ವಪೂರ್ಣವಾಗಿವೆ.

ಕೋಮುವಾದಿ ಸಂಘಟನೆಗಳು ಬಹುವ್ಯಾಪ್ತ ಸಾಂಘಿಕ ಸ್ವರೂಪದ ಸೋಗು ಹಾಕಿದರೂ ಪ್ರತಿ ದಾಳ ಚಲಾವಣೆಯಲ್ಲೂ ಧರ್ಮದ ಹೆಸರನ್ನು ಬಳಸುತ್ತಿದ್ದರೂ ಅವು ಪಕ್ಕಾ ಧಾರ್ಮಿಕ ಸಂಸ್ಥೆಗಳಲ್ಲ; ಧಾರ್ಮಿಕ ಘಟಕ ಗುಂಪುಗಳಿಗಷ್ಟೇ ಸೀಮಿತವಾದವು. ಹಳಗಾಲದ ಹದುಳ ಹರುಷಗಳ, ಹಾಲು ಹೊಳೆಗಳ ಹೆಮ್ಮೆಯಿಂದ ಹಿಗ್ಗಿ ಹಿರೇಕಾಯಿಗಳಾಗಲು ಕೋಮುವಾದಿ ಶ್ರೀಸಾಮಾನ್ಯರನ್ನು ಕುಮ್ಮಕ್ಕಿಸುತ್ತಿದ್ದರೂ ಅವರು ಕಾಲಾಂತರದಲ್ಲಿ ಮೋಸ ಅರಿತು ದೂರವುಳಿಯುತ್ತಾರೆ. ಹೀಗಾಗಿ ಕೋಮುವಾದಿಗೆ ಹಂಗಾಮಿಯಾಗಿ ಬಹು ಸಂಖ್ಯೆ ದೊರೆಕೊಂಡರೂ ಕ್ರಮೇಣ ಉಳಿಯುವವರು ಅತ್ಯಲ್ಪ ಮಂದಿ ಮಾತ್ರ. ಜನಪದ ಹುಲ್ಲೆರೂಪದ ಮಾರೀಚನನ್ನು, ಗೌತಮವೇಷಿಯಾದ ಇಂದ್ರನನ್ನು ತಡವಾದರೂ ಗುರುತಿಸುತ್ತದೆ. ಪಥಭ್ರಷ್ಟವಾದದ್ದಕ್ಕೆ ತಹತಹಿಸುತ್ತದೆ.

(ಕೋಮುವಾದಿಯ ಮಿತಿಗಳು)

ಮಾನವೀ ಅಂಶವಿಲ್ಲದೆ ಕೇವಲ ಆಚರಣೆಯ ಸಲುವಾಗಿ, ಸಾಂಪ್ರದಾಯಿಕ ರೂಢಿಯ ಒತ್ತಾಯದಿಂದ ಮಾಡಿದ ಕಾರ್ಯ ಯಾಂತ್ರಿಕ, ಅಶ್ರೇಯಸ್ಕರ, ಮೇವಿಲ್ಲದ ಮೆಲುಕು.

(ಶುಷ್ಕಾಚಾರ)



ನಿಸಾರರ ಗದ್ಯಸಾಹಿತ್ಯದಲ್ಲಿ ಸಾಮಾಜಿಕ, ರಾಜಕೀಯ ಸಂಗತಿಗಳು

♦ ಡಾ. ವೈ. ಸಿ. ಭಾನುಮತಿ

ನಿಸಾರರು ಕವಿಯಾಗಿ ನಾಡಿನ ಉದ್ದಗಲಕ್ಕೂ ಹೆಸರು ಗಳಿಸಿದವರು. ಗದ್ಯಸಾಹಿತ್ಯ ಪ್ರಕಾರದಲ್ಲಿಯೂ ಇವರು ಗಮನಾರ್ಹ ಕೃಷಿ ಮಾಡಿದ್ದಾರೆ. ಇವರ ಸೃಜನಶೀಲ ಬರವಣಿಗೆ ಯಲ್ಲಿ ಕಾವ್ಯ ಕೃಷಿಯು ಭಾವ ಪಾತಳಿಯದಾಗಿದ್ದರೆ ಗದ್ಯ ಕೃಷಿಯು ಬುದ್ಧಿ ಪಾತಳಿಯಲ್ಲಿ ನಡೆದಿರುವಂತಹುದು. ಇವರ ಗದ್ಯ ಬರಹಗಳಲ್ಲಿ ಇವರು ನಂಬಿದ ಮೌಲ್ಯಗಳು, ಸಮಾಜದ ಬಗೆಗಿನ ಧೋರಣೆಗಳು ಹರಳುಗೊಂಡಿವೆ.

ನಿಸಾರರು ದಂತಗೋಪುರದಲ್ಲಿ ಕುಳಿತ ಕವಿಯಲ್ಲ. ಈ ಸಮಾಜದ ಒಂದು ಅಂಗವಾಗಿಯೇ ಬದುಕುತ್ತಿರುವಾಗ ಸಮಾಜದ ಆಗುಹೋಗುಗಳಿಗೆ, ಇಲ್ಲಿನ ಚಟುವಟಿಕೆಗಳಿಗೆ, ಸಮಸ್ಯೆಗಳಿಗೆ ಪ್ರತಿಕ್ರಿಯೆ ನೀಡದೆ ಇರಲಾರರು. ಕೋಮು ಗಲಭೆಯಾಗಲಿ, ಜಾತಿ ಸಮಸ್ಯೆಯಾಗಲಿ, ಮಹಿಳಾ ವಿಚಾರ ವಾಗಲಿ ನಿಸಾರರು ಇವುಗಳನ್ನು ಗ್ರಹಿಸಿದ ರೀತಿ ಅವರ ಗದ್ಯ ಬರಹಗಳಲ್ಲಿ ಸ್ಪಷ್ಟವಾಗುತ್ತದೆ. ಭಾರತ ಬಹುಮುಖೀ ಸಂಸ್ಕೃತಿ ಯನ್ನೊಳಗೊಂಡ ದೇಶ. ಇಲ್ಲಿ ಹಲವು ಜಾತಿಗಳು, ಹಲವು ಭಾಷೆಗಳು, ಹಲವು ಧರ್ಮಗಳು ನೆಲೆಯೂರಿವೆ. ಇವೆಲ್ಲವನ್ನೂ ತನ್ನ ಉನ್ನತ ಮೌಲ್ಯದಿಂದ ಸಮನ್ವಯಗೊಳಿಸಿಕೊಂಡು ಸಾಗಿ ಬಂದಿದ್ದೇ ಈ ದೇಶದ ಹಿರಿಮೆ. ಆದರೂ ಸ್ವಾತಂತ್ರ್ಯಾನಂತರದ ಬೆಳವಣಿಗೆಗಳು ದೇಶದಲ್ಲಿ ವಿಚ್ಛಿದ್ರಕಾರಕ ಶಕ್ತಿಗಳು ತಲೆಯೆತ್ತಿ ನಿಲ್ಲುವಂತೆ ಮಾಡಿದವು. ಇದರ ಪರಿಣಾಮವಾಗಿ ಆಗಾಗ

ಕೋಮು ಗಲಭೆಗಳು ಕಾಣಿಸಿಕೊಳ್ಳುತ್ತ ಭಾವೈಕ್ಯಕ್ಕೆ ಧಕ್ಕೆ ಉಂಟುಮಾಡುವುದನ್ನು ಗಮನಿಸಬಹುದು. ಸೂಕ್ಷ್ಮ ಮನಸ್ಸಿನ ನಿಸಾರರು 'ಪನ್ನೀರಿನ ಕೊಳ ಮತ್ತು ನಾಯಿ' ಎಂಬ ಬರಹದಲ್ಲಿ ಮತಧರ್ಮಗಳಿಗಾಗಿ ನಡೆಯುವ ಘರ್ಷಣೆಗಳನ್ನು ಕುರಿತು ಚಿಂತಿಸಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಪ್ರಜಾಪ್ರಭುತ್ವದ ಬಗೆಗಿನ ಪರಿಕಲ್ಪನೆಗಳು ದೃಢಗೊಂಡಿರಲಿಲ್ಲ. ಆದರೂ ನಮ್ಮ ಹಿರಿಯರು ನೆಮ್ಮದಿಯಿಂದ ಬಾಳಲು ಸಾಧ್ಯವಾದುದಕ್ಕೆ ಸಾವಧಾನ, ವಿವೇಕಾವಿವೇಕ ವಿವೇಚನೆ ಮತ್ತು ಪರ ಹಿತಾಕಾಂಕ್ಷೆ ಎಂಬ ಮೌಲ್ಯಗಳು ಬದುಕಿನ ಬೆನ್ನೆಲುಬಾಗಿದ್ದೇ ಕಾರಣವೆಂದು ನಿಸಾರರು ಹೇಳುತ್ತಾರೆ. ಸಮಾಜದ ಉದ್ಧಾರ, ದೇಶದ ಕಲ್ಯಾಣ ಎಂಬ ಹೆಸರಿನಲ್ಲಿ ನಡೆಯುತ್ತಿರುವ ರಾಜಕೀಯದಿಂದಾಗಿ ಜನ ಸಾಮಾನ್ಯರ ನೆಮ್ಮದಿ ಕದಡುತ್ತಿರುವುದು ಲೇಖಕರನ್ನು ಚಿಂತೆಗೆ ಈಡುಮಾಡುತ್ತದೆ. ನಮ್ಮ ದೇಶದ ವಿಪರ್ಯಾಸವನ್ನು ಮೃದುವಾದ ನುಡಿಗಳಲ್ಲಿಯೇ ಲೇವಡಿ ಮಾಡುತ್ತಾರೆ. ಏಕೆಂದರೆ ನಾವು ಒಂದು ಕಡೆ ನಮ್ಮದು 'ಜಾತ್ಯತೀತ ರಾಷ್ಟ್ರ', 'ಧರ್ಮನಿರಪೇಕ್ಷ ದೇಶ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಮತ್ತೊಂದೆಡೆ 'ನನ್ನ ಕುಲ ಶ್ರೇಷ್ಠ', 'ನನ್ನ ಧರ್ಮ ಶ್ರೇಷ್ಠ' ಎಂದು ಇತರರನ್ನು ಪರಕೀಯರಂತೆ ನೋಡುತ್ತ ನಮ್ಮ ಹೇಳಿಕೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತೇವೆ. ನಿಸಾರರು ಹೇಳುವಂತೆ ಪರಸ್ಪರರ ಸಹಬಾಳ್ವೆಗೆ ಅಗತ್ಯವಿರುವುದು ಸಹಿಷ್ಣುತೆ, ಅನುನಯ, ಹೊಂದಾಣಿಕೆ, ವಿಶ್ವಾಸಾರ್ಹತೆ. ಇದನ್ನು ದಬ್ಬಾಳಿಕೆಯಿಂದ ಹೇರಲು ಸಾಧ್ಯವಾಗದು. ಅದರಲ್ಲಿ ಶೋಷಣೆಯ ಅಪಾಯವಿದೆ. ನಮ್ಮ ಕೋಮು ಗಲಭೆಗಳೆಲ್ಲ ಉತ್ಸವದ ಸಂದರ್ಭಗಳಲ್ಲಿ ನಡೆಯುವುದೊಂದು ದೊಡ್ಡ ವಿಪರ್ಯಾಸ. ಯಾವ ಧರ್ಮದವರ ಮನಸ್ಸಿಗೂ ನೋವಾಗದಂತೆ ನೋಡಿಕೊಳ್ಳಬೇಕೆಂಬುದು ನಿಸಾರರ ಆಶಯ. ಈ ನಿಟ್ಟಿನಲ್ಲಿ ಅನೇಕ ನಿದರ್ಶನಗಳನ್ನು ನೀಡುತ್ತಾರೆ. ಮಾಸ್ತಿಯವರ 'ಮಾತುಗಾರ ರಾಮಣ್ಣ' ಕೃತಿಯಲ್ಲಿ ಬರುವ ಶೃಂಗೇರಿ ಸ್ವಾಮಿಗಳ ಪ್ರಸಂಗವನ್ನು ಬಹುವಾಗಿ ಮೆಚ್ಚಿಕೊಳ್ಳುವ ಲೇಖಕರು ಪರಸ್ಪರರು ಸ್ವಲ್ಪ ಔದಾರ್ಯ ತೋರಿದರೂ ಅಲ್ಲಿ ದ್ವೇಷ ಹಿಮ್ಮೆಟ್ಟಿ ಪ್ರೀತಿ ಅಂಕುರವಾಗುತ್ತದೆಯೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಈ ದೇಶ ಭಾವನಾತ್ಮಕವಾಗಿ ಒಂದಾಗಬೇಕು. ಆದರೆ ದೇಶದ ಸಮಗ್ರತೆ, ಐಕ್ಯ ಎಂಬಿವು ಪುಢಾರಿಗಳ ಭಾಷಣದಲ್ಲಿ ಪಡೆಯುತ್ತಿರುವ ಸ್ವರೂಪ ಗಾಬರಿ ಹುಟ್ಟಿಸುತ್ತದೆ. ಮತ ಧರ್ಮ ಭಾಷೆಗಳ ಸಮನ್ವಯದ ಪರಂಪರೆ ಇರುವ ನಮ್ಮ ದೇಶವು ಅದನ್ನು ಉಳಿಸಿಕೊಂಡು ಭವ್ಯವಾಗಿ ಬೆಳೆಯಬೇಕೆಂಬುದೇ ಲೇಖಕರ ಉದ್ದೇಶ. ಈ ಬರಹದ ಪನ್ನೀರಿನ ಕೊಳ ಶಾಂತಿಯನ್ನು ಸಂಕೇತಿಸುತ್ತದೆ. ಈ ಕೊಳಕ್ಕೆ ಬಿದ್ದ ನಾಯಿಗಳೆಂದರೆ ದೇಶದ್ರೋಹಿಗಳು. ಹಿಂದೂಗಳಲ್ಲಿಯೂ ಕೋಮುವಾದಿಗಳಿದ್ದಾರೆ. ಮುಸಲ್ಮಾನರಲ್ಲಿಯೂ ಕೋಮುವಾದಿಗಳಿದ್ದಾರೆ. ನಿಸಾರರು ಇಂಥ ವಿಚಾರದಲ್ಲಿ ಯಾರ ಪಕ್ಷವನ್ನೂ ವಹಿಸದೆ ಮನುಷ್ಯಪಕ್ಷಪಾತಿಗಳಾಗಿ ನಿಲ್ಲುವುದು ಅವರ ಆರೋಗ್ಯಪೂರ್ಣ ನಿಲವಿಗೆ ಸಾಕ್ಷಿಯಾಗಿದೆ. ಈ ದೃಷ್ಟಿಯಿಂದ ಅವರು ಸಮನ್ವಯದ ಉತ್ತಮ ಮಾದರಿಯಾಗಿ ಕಾಣುತ್ತಾರೆ.

ನಿಸಾರರ 'ಮೀನು ಕೊಳೆಯುವುದು ಇತ್ಯಾದಿ' ಎಂಬ ಬರಹವು ಸಮಾಜದಲ್ಲಿ

ತಾಂಡವವಾಡುತ್ತಿರುವ ಭ್ರಷ್ಟಾಚಾರಕ್ಕೆ ಹಿಡಿದ ಕನ್ನಡಿಯಾಗಿದೆ. ಭ್ರಷ್ಟಾಚಾರದಿಂದಾಗಿ ಸಮಕಾಲೀನ ಸಾಮಾಜಿಕ ವ್ಯವಸ್ಥೆ ಎಷ್ಟು ಅಧೋಗತಿಗೆ ಇಳಿದಿದೆ ಎಂಬುದನ್ನು ಕೊಳೆತ ಮೀನು ಸಂಕೇತಿಸುತ್ತದೆ. ಪ್ರಾಮಾಣಿಕತೆಗೆ ಮನ್ನಣೆಯೇ ಇಲ್ಲದಂತಾಗಿರುವುದು ತಿಳಿದ ವಿಷಯ. ಸಣ್ಣ ಮೀನುಗಳಿಂದ ದೊಡ್ಡ ತಿಮಿಂಗಿಲಗಳವರೆಗೆ ಲಂಚವೆಂಬುದು ಒಪ್ಪಿತ ಮೌಲ್ಯ. ಇಂಥವರು ಪ್ರಾಮಾಣಿಕತೆಯ ಬಗ್ಗೆ ನಿರ್ಭಿಡೆಯಿಂದ ಮಾತನಾಡಬಲ್ಲರು. ಏಕೆಂದರೆ ಲಂಚದ ಸ್ವೀಕರಣೆಯಲ್ಲಿ ಪ್ರಾಮಾಣಿಕತೆಗಿಂತ ಚಾಣಾಕ್ಷತೆಯೇ ಮುಖ್ಯವೆಂಬುದು ಅವರ ಭಾವನೆ. ಹಾಗಾಗಿ ಈ ಬಗ್ಗೆ ಇವರಿಗೆ ಲಜ್ಜೆಯಾಗಲಿ ಭಯವಾಗಲಿ ಇರುವುದಿಲ್ಲ. ಅವರು ಲಂಚ ಸ್ವೀಕಾರವನ್ನು ಸಮರ್ಥಿಸುವ ಧಾಟಿಯಲ್ಲಿ ವಾದವನ್ನು ಮಂಡಿಸಬಲ್ಲರು. ಭ್ರಷ್ಟಾಚಾರ ನಿಗ್ರಹ ಎಂಬ ಪರಿಭಾಷೆ ಚಾಲ್ತಿಯಲ್ಲಿದೆ. ಆದರೆ ಇದೂ ಕೂಡ ನಾಟಕವೆಂಬುದನ್ನು ನಿಸಾರರು ಬಯಲಿಗೆಳೆಯುತ್ತಾರೆ. ಅಧಿಕಾರಿಗಳು ಭ್ರಷ್ಟಾಚಾರ ನಿಗ್ರಹವನ್ನು ಕಾರ್ಯರೂಪಕ್ಕೆ ತಂದಂತೆ ಯಾರೋ ಒಂದಿಬ್ಬರನ್ನು ಹಿಡಿದಂತೆ ತೋರಿಕೆ ಮಾಡುವುದು, ಮಾಧ್ಯಮಗಳಲ್ಲಿ ಸುದ್ದಿಯಾಗುವುದು, ಪರಿಣಾಮ ಮಾತ್ರ ಶೂನ್ಯವೆಂಬುದನ್ನು ಬಿಚ್ಚುತ್ತ ಹೋಗುತ್ತಾರೆ. ಹೀಗೆ ಇದರ ನಿರ್ಮೂಲನೆಯಲ್ಲಿರುವ ತೊಡಕುಗಳ ಗಮನ ಸೆಳೆದರೂ ಲೇಖಕರು ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯುತ್ತಾರೆ. 'ಚಾಣಾಕ್ಷತೆಯಂತೆ ಪ್ರಾಮಾಣಿಕತೆ ಏಕ್‌ದಂ ಫಸಲು ನೀಡುವ ಬೆಳೆಯಲ್ಲ. ಮತಾಪಿನಂತೆ ಕಣ್ಣುಗಳನ್ನು ಕೋರೈಸಿ ಮರು ಕ್ಷಣ ನಿಶ್ಶೇಷವಾಗುವ ಗುಣ ಅದಕ್ಕಿಲ್ಲ. ಅದು ವರ್ಧಿಸಬೇಕಾದರೆ ಸಾವಧಾನ, ಸಾವಕಾಶ, ಸಮಯಾವಕಾಶ ಅಗತ್ಯ. ಈ ಪರಿಶ್ರಮಕ್ಕೆ ತಕ್ಕ ಲಾಭವೂ ಅದರಿಂದ ಉಂಟು. ಸಮಾಜ ದೀರ್ಘಕಾಲೀನ ಸಮೃದ್ಧಿ, ಭಾಗ್ಯಗಳನ್ನು ಹೊಂದುತ್ತದೆ, ಸಂಪನ್ನಗೊಳ್ಳುತ್ತದೆ. ಪ್ರಾಮಾಣಿಕ ಬದುಕಿನ ಫಸಲು ಬಹೂಪಕಾರಿ ಕಲ್ಪವೃಕ್ಷದಂತೆ' ಎಂಬ ಮಾತು ಮನನೀಯವಾಗಿದೆ.

ನಿಸಾರರ ಕವಿ ಮನಸ್ಸು ಪ್ರೀತಿ-ವಿಶ್ವಾಸ-ಸ್ನೇಹದ ಸಿಂಚನಕ್ಕೆ ಮಿಡಿಯುವಂಥಹುದು. 'ಕರುಬಿನ ಕಡಲಿನ ನಡುವೆ ನೇಹದ ನಡುಗಡ್ಡೆಗಳು' ಎಂಬ ಬರಹವು ಮನುಷ್ಯನಲ್ಲಿರುವ ಅಸೂಯೆ ಅಸಹಿಷ್ಣುತೆಗಳನ್ನು ವಿವರಿಸುತ್ತಲೇ ಸ್ನೇಹದ ಮಹತ್ವವನ್ನು ತಿಳಿಸುತ್ತದೆ. ಪ್ರೀತಿ ವಿಶ್ವಾಸ ಸ್ನೇಹಗಳು ಬದುಕಿನಲ್ಲಿ ಇಲ್ಲದೇ ಹೋಗಿದ್ದರೆ ಏನಾಗುತ್ತಿತ್ತು? ಮನುಷ್ಯ ಕುಸಿದು ಹೋಗಿ ಬಿಡುತ್ತಿದ್ದ. ಆದುದರಿಂದ ಎಳವೆಯಲ್ಲಿಯೇ ಮಕ್ಕಳಿಗೆ ಈ ಬಗ್ಗೆ ತಿಳಿಸಿಕೊಡಬೇಕೆಂಬುದು ಇವರ ಅಭಿಮತವಾಗಿದೆ.

ಬದುಕು ಬಹಳ ಸಂಕೀರ್ಣವಾದುದು. ಇದನ್ನು ಪರಿಭಾವಿಸುವ ದೃಷ್ಟಿ ಒಬ್ಬೊಬ್ಬರಲ್ಲಿ ಒಂದೊಂದು ಬಗೆ. ಬಹುಮಂದಿ ಬದುಕನ್ನು ಬಂದಂತೆಯೆ ಸ್ವೀಕರಿಸುತ್ತಾರೆ. ಆದರೆ ಕೆಲವರು ಅದನ್ನು ಕುರಿತು ವಿಚಾರ ಮಾಡುತ್ತಾರೆ. ಹೀಗೆ ವಿಚಾರ ಮಾಡುವುದು ಸೂಕ್ತವೆಂಬುದನ್ನು ನಿಸಾರರು 'ಅನುಷ್ಠಾನಕ್ಕೆ ಅವಸರಿಸುವ ಅಭ್ಯಾಸಗಳು' ಎಂಬ ಬರಹದಲ್ಲಿ ವಿಶ್ಲೇಷಿಸಿದ್ದಾರೆ. ಉದರ ನಿಮಿತ್ತ ದುಡಿಯುತ್ತಿರುತ್ತೇವೆ. ಸಂಪಾದನೆಯೂ ಉತ್ತಮವಾಗಿರಬಹುದು. ಆದರೆ ಒಂದೇ ಬಗೆಯ ದುಡಿಮೆಯು ಬದುಕನ್ನು ಯಾಂತ್ರಿಕಗೊಳಿಸುತ್ತದೆ. ಬದುಕಿನ ಬಗ್ಗೆ ರುಚಿ, ಆಸಕ್ತಿ ತಗ್ಗುತ್ತಿರುತ್ತದೆ. ಇದನ್ನು ಉಳಿಸಿಕೊಳ್ಳುವುದು ಹೇಗೆ? ಎಂಬ

ಬಗ್ಗೆ ನಿಸಾರರು ಚಿಂತನಾಲಹರಿಯನ್ನು ಹರಿಸಿದ್ದಾರೆ. 'ವೃತ್ತಿಪರ ಮಂದಿ ತಮ್ಮ ಕೆಲಸದ ಘಾಟನ್ನು ನಿವಾರಿಸಿಕೊಳ್ಳಲು ಇತರ ಅಭಿರುಚಿಗಳ ಮೊರೆ ಹೋಗಲೇಬೇಕು. ಈ ಅಭಿರುಚಿಗಳಾದರೋ ಶ್ರಮ ನಿವಾರಕಗಳಾಗಿರಬೇಕೇ ವಿನಾ ಭಾವಾತಿಶಯವನ್ನು ಹೆಚ್ಚಿಸುವಂಥವು ಆಗಬಾರದು. ನಮ್ಮ ಸ್ವಾರ್ಥವನ್ನು ಕೊಬ್ಬಿಸದ ಅಭ್ಯಾಸಗಳಿಂದ ನಾವು ಕಲಿಯುವ ಪಾಠ ಮಹತ್ವದ್ದು; ತಾತ್ವಿಕ ಸ್ವರೂಪದ್ದು.'

ದುಡಿಮೆಗೆ ಪ್ರಾಶಸ್ತ್ಯವನ್ನು ಕೊಟ್ಟ ಮನುಷ್ಯ ತನ್ನ ಕೆಲಸದಲ್ಲಿ ಹೇಗೆ ನಿಮಗ್ನನಾಗಿ ಹೋಗಿರುತ್ತಾನೆಂದರೆ ಆತನಿಗೆ ತನ್ನ ಇತಿಮಿತಿಗಳ ವಿವೇಚನೆಯೂ ಇರುವುದಿಲ್ಲ. ಸಮಸ್ಯೆಗಳು ಎದುರಾದಾಗ ಅಕಾರಣ ಭಯ ಶಂಕೆಗಳಿಗೆ ಈಡಾಗಿ ಕೊರಗುತ್ತಾನೆ. ಇದರ ಶಮನಪ್ರಾಯವಾಗಿ ಮನ ರಂಜನೆಯನ್ನು ಅವಲಂಬಿಸಬೇಕೆಂಬುದು ಸಾಮಾನ್ಯ ಅಭಿಪ್ರಾಯ. ನಿಸಾರರು ಮನುಷ್ಯನ ಮನಸ್ಸಿನ ಪದರಗಳಲ್ಲಿ ಆಗುವಂತಹ ತಲ್ಲಣಗಳನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲರು. ಹಾಗಾಗಿ ಈ ಮನ ರಂಜನೆಗಳು ತಾತ್ಕಾಲಿಕ, ಅವು ದುಃಖ ವೇದನೆಗಳನ್ನು ನಿವಾರಿಸಲಾರವೆಂದು ಹೇಳುತ್ತಾರೆ. 'ಮನುಷ್ಯ ದಿಕ್ಕೆಟ್ಟಾಗ ಅವನಿಗೆ ಉಳಿದಿರುವ ದಾರಿ ಪರಾನುಕರಣೆಯಲ್ಲ. ಸ್ವನಿರ್ಧಾರ ಸ್ವವಿವೇಚನೆಗಳನ್ನು ಜೀವನದಲ್ಲಿ ಅವನು ಪದೇ ಪದೇ ಮಾಡುತ್ತಲೇ ಇರಬೇಕು. ಅದರಿಂದ ಒದಗಿದ ಅನುಭವವೇ ಗುರು' ಎಂಬ ನಿಸಾರರ ನುಡಿಗಳು ಮೆಲುಕು ಹಾಕುವಂತಿವೆ. ನಮ್ಮ ಸಣ್ಣಪುಟ್ಟ ಹವ್ಯಾಸವೇ ನಮ್ಮನ್ನು ಇಂಥ ಸಂದರ್ಭಗಳಿಂದ ಪಾರು ಮಾಡಬಲ್ಲವೆಂದು ಎಂಬುದು ಅವರ ದೃಢ ನಂಬಿಕೆ. ಮನುಷ್ಯ ಸ್ವಾರ್ಥಿಯಾಗದೆ ಪರಹಿತಾಕಾಂಕ್ಷಿಯಾದಾಗ ಆತ ಜೀವನದ ಸೋಲನ್ನು ಸೋಲು ಅಪಮಾನವೆಂದು ವೈಯಕ್ತಿಕವಾಗಿ ಪರಿಗಣಿಸುವುದಿಲ್ಲವೆಂದು ಮಾರ್ಗಸೂಚಿ ನೀಡಿದ್ದಾರೆ.

ನಿಸಾರರ ಗದ್ಯ ಬರಹದ ಕೆಲವೊಂದು ಶೀರ್ಷಿಕೆಗಳು ಕುತೂಹಲವನ್ನು ಹುಟ್ಟಿಸುತ್ತವೆ. ಉದಾಹರಣೆಗೆ, 'ಡ್ಯಾಮಿಟ್, ವಾಟ್‌ಎ ಫೈನ್ ಶಾಟ್!' ಎಂಬ ಬರಹದ ಶೀರ್ಷಿಕೆ ಗಮನಿಸಬಹುದು. ಇತಿಹಾಸವನ್ನು ಗ್ರಹಿಸುವ ರೀತಿಯನ್ನು ಕುರಿತ ಲೇಖಕರ ಆಲೋಚನೆ ಇಲ್ಲಿ ಹುರಿಗೊಂಡಿದೆ. ವ್ಯಕ್ತಿಗಳು ತಮಗೆ ಅನುಕೂಲವಾಗುವಂತೆ ಆಯಾ ಸಂದರ್ಭಕ್ಕೆ ಪ್ರತಿಕ್ರಿಯೆ ತೋರಿರುವುದನ್ನು ಇತಿಹಾಸ ನಮಗೆ ತಿಳಿಸಿಕೊಡುತ್ತದೆ. ಗತಿಸಿಹೋದ ಸಂಗತಿಗಳನ್ನು ನಾವು ವರ್ತಮಾನದಲ್ಲಿಟ್ಟು ನೋಡುವುದರಿಂದ ಅಪಾಯವೇ ಹೆಚ್ಚೆಂಬುದು ನಿಸಾರರ ಅಭಿಪ್ರಾಯ. ಇದಕ್ಕೆ ಪೂರಕವಾಗಿ ರಾಜಕೀಯ ಸಂಬಂಧಿಯಾದ ಹಲವು ಅಂಶಗಳನ್ನು ಪ್ರಸ್ತಾಪಿಸುತ್ತಾರೆ. ಚೀನೀಯರು ಆಕ್ರಮಣ ಮಾಡಿದ ಘಟನೆಯನ್ನು ಚರ್ಚಿಸುತ್ತ ಆ ಕರಾಳ ನೆನಪಿನಲ್ಲಿಯೇ ಮರೆತು ಕುಳಿತುಕೊಳ್ಳದೆ ಭವಿಷ್ಯದ ಬಗ್ಗೆ ಚಿಂತಿಸಿ ವ್ಯಾವಹಾರಿಕ ಸಂಬಂಧವನ್ನು ಮತ್ತೆ ಕುದುರಿಸಿಕೊಳ್ಳುವುದೇ ಸೂಕ್ತವೆಂಬ ತೀರ್ಮಾನಕ್ಕೆ ಬರುತ್ತಾರೆ. 'ವ್ಯಕ್ತಿ ಹಂತದಲ್ಲೇ ಆಗಲಿ, ಜನವರ್ಗಗಳ ಹಂತದಲ್ಲೇ ಆಗಲಿ ಹಿಂದಿನ ಕಿಲ್ಬಿಷವನ್ನು ತೊಳೆದು ಸ್ವಚ್ಛವಾದ ಇಂಥ ಪುನರ್ಬಾಂಧುತ್ವದ ಭಂಗಿ ಅಪೇಕ್ಷಣೀಯ ಹಾಗೂ ಅನಿವಾರ್ಯವೆನಿಸುತ್ತದೆ. ಪರಸ್ಪರ ಅನ್ಯೋನ್ಯತೆಯ ಸ್ಥಿರ ಹಾಗೂ ಚಿರ ಅಸ್ತಿತ್ವಕ್ಕೆ ಅಸ್ತಿಭಾರಪ್ರಾಯವಾಗುತ್ತದೆ' ಎಂದಿರುವಲ್ಲಿ ಭಿನ್ನಾಭಿಪ್ರಾಯವನ್ನು ಹೊಗೆಯಾಡಿಸುತ್ತ

ಕುಳಿತುಕೊಳ್ಳದೆ ಮತ್ತೆ ಸ್ನೇಹವನ್ನು ಕುದುರಿಸುವ ಆಶಯವಿದೆ. ಇದಕ್ಕೆ, ಎರಡನೆಯ ಮಹಾಯುದ್ಧದ ಘಟನೆಯನ್ನು ಉದಾಹರಣೆಯಾಗಿ ಕೊಟ್ಟು, ಜಪಾನ್ ಮತ್ತು ಅಮೇರಿಕ ಹಗೆಗಳಾಗಿದ್ದರೂ ಅನಂತರದ ಅವುಗಳ ಸಂಬಂಧ ಸೌಹಾರ್ದಯುತವಾಯಿತೆಂಬುದನ್ನು ನೆನಪಿಸಿಕೊಡುತ್ತಾರೆ. ದೇಶದ ಹಿತದ ದೃಷ್ಟಿಯಿಂದ ಭೂತದ ಕಹಿಗಳನ್ನು ಗುಡಿಸಿ ಹಾಕ ಬೇಕೆಂಬ ಇವರ ನಿಲವು ಸ್ವೀಕಾರಾರ್ಹವಾದುದು. ಇಂದು ನಾವು ಕಾಣುತ್ತಿರುವ ಪ್ರತೀಕಾರ ಹಾಗೂ ಮತೀಯ ವೈಷಮ್ಯಗಳಿಗೂ ತಪ್ಪುಗ್ರಹಿಕೆಗಳೇ ಕಾರಣವೆನ್ನುವ ಇವರ ಮಾತಿನಲ್ಲಿ ಹುರುಳಿದೆ. ಬ್ರಿಟಿಷರ ಗುಣಗ್ರಾಹಿತ್ವ ನಮಗೆ ಆದರ್ಶವಾಗಬೇಕೆಂಬ ಅಭಿಲಾಷೆಯನ್ನು ವ್ಯಕ್ತ ಪಡಿಸುತ್ತಾರೆ. ಸಾಹಿತ್ಯ ವಿಮರ್ಶೆಯಲ್ಲಿ 'ಮಾನಸಿಕ ದೂರ'ದ ಪ್ರಸ್ತಾಪವಿರುವುದನ್ನು ಸಾಹಿತ್ಯದ ವಿದ್ಯಾರ್ಥಿಗಳು ಬಲ್ಲರು. ನಿಸಾರರು ಈ ಪರಿಕಲ್ಪನೆಯ ನೆಲೆಯಿಂದ 'ತಾತ್ವಿಕ ದೂರ' ಎಂಬ ಕಲ್ಪನೆಯನ್ನು ನೀಡಿದ್ದಾರೆ. ಇತಿಹಾಸದ ವಿವೇಚನೆಗೆ ತಾತ್ವಿಕ ದೂರ ಇರಬೇಕಾಗುತ್ತದೆ ಎನ್ನುತ್ತಾರೆ. ಒಟ್ಟಾರೆ ಇತಿಹಾಸವನ್ನು ಇವರು ನೋಡ ಬಯಸುವುದು ಅದು ಘಟಿಸಿದ ಸನ್ನಿವೇಶಗಳ, ಸಮಸ್ಯೆಗಳ ಬೆಳಕಿನಲ್ಲಿ. ಇತಿಹಾಸ ನಮ್ಮ ಹೆಮ್ಮೆಗೆ ಕಾರಣ ವಾದಂತೆ, ಮತ್ತೆ ಮನುಷ್ಯ ತಪ್ಪು ಮಾಡದಂತೆ ನೀಡುವ ಎಚ್ಚರಿಕೆಯೂ ಆಗಿರುತ್ತದೆಂಬುದು ಈ ಬರಹದ ಉದ್ದೇಶ.

ಸಂಸ್ಕೃತಿ ವರ್ಧನೆಯನ್ನು ಕುರಿತ ನಿಸಾರರ ಚಿಂತನೆಗಳು 'ನಡವಳಿಕೆ : ಸಂಸ್ಕೃತಿಯ ಹೆಗ್ಗಳಿಕೆ' ಎಂಬ ಬರಹದಲ್ಲಿ ಪಡಿಮೂಡಿವೆ. ಇಲ್ಲಿ, ಇಂದಿನ ಪೀಳಿಗೆ ಪರಭಾಷಾ ಸಂಸ್ಕೃತಿಗೆ ಮೊರೆ ಹೋಗುತ್ತಿರುವ ಬಗ್ಗೆ ಅಸಮಾಧಾನವಿದೆ. ಸಂಸ್ಕೃತಿಯನ್ನು ಇವರು ಒಳ್ಳೆಯ ನಡವಳಿಕೆ ಎಂಬ ಅರ್ಥದಲ್ಲಿಯೇ ಗ್ರಹಿಸಿದ್ದಾರೆ. (ಈಗ ಸಂಸ್ಕೃತಿ ಎಂಬುದು ವಿವಿಧ ಆಯಾಮ ಪಡೆದುಕೊಂಡಿದೆ.) ಯಾವುದೇ ವ್ಯಕ್ತಿ ಕೇವಲ ವಿದ್ವತ್ತಿನಿಂದಲೇ ಸುಸಂಸ್ಕೃತ ನೆನಿಸಿಕೊಳ್ಳಲಾರ 'ಇತರರ ಒಡನಾಟ, ವ್ಯವಹಾರಗಳಲ್ಲಿ ಅವನು ವ್ಯಕ್ತಪಡಿಸುವ ಕುಶಲತೆ, ಅಸಲೀ ಅನುಕಂಪನೀಯ ಗುಣ ಹಾಗೂ ಸರಸಮಯ ನಡವಳಿಕೆಯಿಂದ ಅವನಿಗೆ ಆ ಪಟ್ಟ ದೊರಕುತ್ತದೆ' ಎನ್ನುವ ಮಾತುಗಳಲ್ಲಿ ಅವರ ಸಂಸ್ಕೃತಿಯ ವ್ಯಾಖ್ಯಾನ ಗೃಹೀತವಾಗುತ್ತದೆ. ವಿನಯವಂತಿಕೆಗೆ ಒತ್ತು ನೀಡುತ್ತ, ವಿನಯಶೀಲತೆಯು ಸಂಸ್ಕೃತಿಯ ಒಂದು ಪ್ರಧಾನ ಲಕ್ಷಣವೆಂದಿದ್ದಾರೆ.

'ಪ್ರಜಾಪ್ರಭುತ್ವದ ಸುತ್ತಮುತ್ತ' ಎಂಬ ಬರಹದಲ್ಲಿ ಈ ಕುರಿತು ದೀರ್ಘವಾಗಿ ಚರ್ಚಿಸಲಾಗಿದೆ. ಪ್ರಜಾಪ್ರಭುತ್ವವೆಂಬುದು ಉನ್ನತ ರಾಜಕೀಯ ವ್ಯವಸ್ಥೆ. ಲೇಖಕರು ಇದರ ಮಹತ್ವವನ್ನು ಮನಗಾಣಿಸಲು ಇತಿಹಾಸದ ಹಲವು ಪುಟಗಳನ್ನು ತಿರುಗಿಸುತ್ತ ಹೋಗು ತ್ತಾರೆ. ಇತರ ವ್ಯವಸ್ಥೆಗಳೊಡನೆ ತುಲನೆ ಮಾಡಿ ನೋಡಿದ್ದಾರೆ. ಹಿಂದಿನ ಪ್ರಭುನಿಷ್ಠ ರಾಜಕೀಯ ವ್ಯವಸ್ಥೆ, ಸ್ವಾತಂತ್ರ್ಯದ ಪರಿಕಲ್ಪನೆ, ಅಥೆನ್ಸ್‌ನ ನಗರೀಕೃತ ಪ್ರಜಾಪ್ರಭುತ್ವ, ರೋಂ ದೇಶದ ರಾಜಕೀಯ ವ್ಯವಸ್ಥೆ ಮುಂತಾದ ಸಂಗತಿಗಳನ್ನು ವಿಶ್ಲೇಷಿಸುತ್ತಾರೆ. ಪ್ರಜಾ ಪ್ರಭುತ್ವವೆಂದಾಕ್ಷಣ, ಅದು ಎಲ್ಲ ದೇಶಗಳಲ್ಲೂ ಏಕರೂಪದಲ್ಲಿ ಕಾಣಿಸಿಕೊಂಡಿದೆ ಎಂದು ಹೇಳಲಾಗದು. ಸ್ಥಳೀಯ ಆವಶ್ಯಕತೆಗಳಿಗೆ ಅನುಗುಣವಾಗಿ ಆಡಳಿತದಲ್ಲಿ ಕೆಲವು ವ್ಯತ್ಯಯ ಗಳಿರುವುದನ್ನು ಲೇಖಕರು ಗಮನಿಸಿದ್ದಾರೆ. ಈ ವ್ಯವಸ್ಥೆಯ ಬಗೆಗೆ ಇವರಿಗಿರುವ ಗೌರವ

ಭಾವುಕತನದ್ದಲ್ಲ. ಹಾಗಾಗಿ ಅದರಲ್ಲಿಯೂ ಲೋಪದೋಷಗಳು, ಇತಿಮಿತಿಗಳಿರುವುದನ್ನು ಅರಿಯಬಲ್ಲರು. ಕೊರತೆಗಳನ್ನು ತಾಳಿಕೊಳ್ಳಬೇಕು ಎನ್ನುವ ಇವರು, 'ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಕಲ ಸುಲಕ್ಷಣ ಸಂಪನ್ನತೆಯನ್ನು ನಿರೀಕ್ಷಿಸಿ ಹತಾಶರಾಗುವ ಬದಲು ಅದರ ಅನಿವಾರ್ಯವಾದ ಕುಂದಕಗಳನ್ನು ಒಪ್ಪಿ ಅವುಗಳನ್ನು ಸುಧಾರಿಸಲು ಸಾಧ್ಯವೆ? ಎಂದು ವಿವೇಚಿಸುವುದು ಜಾಣ ರೀತಿ' ಎಂದು ಹೇಳಿದ್ದಾರೆ.

ಪ್ರಜಾತಂತ್ರ ಯಶಸ್ವಿಯಾಗಬೇಕಾದರೆ ಈ ವ್ಯವಸ್ಥೆಯಲ್ಲಿರುವ ಜನತೆ ಪೂರ್ಣ ರೂಪದ ಬೆಂಬಲ ನೀಡಿ ಸ್ವಇಚ್ಛೆಯಿಂದ ಆಡಳಿತದಲ್ಲಿ ಪಾಲ್ಗೊಂಡು ಸಹಕರಿಸಬೇಕು, ಆಗಲೇ ಈ ವ್ಯವಸ್ಥೆಗೆ ಮೆರುಗು ಬರುವುದು. ಅರೆ ಮನಸ್ಸಿನ ವಿಶ್ವಾಸಾರ್ಹತೆಯಿಂದ ಆಡಳಿತದಲ್ಲಿ ಶಾಸನ, ಕಾಯ್ದೆಗಳು ಮೇಲಾಟ ಪಡೆಯುತ್ತವೆ. ಪ್ರಜೆಗಳು ಅಸ್ವತಂತ್ರರಾಗುವ ಅಪಾಯವಿರುವುದನ್ನು ಬಲ್ಲ ನಿಸಾರರು ಈ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿಸುವತ್ತ ಯೋಚಿಸಿದ್ದಾರೆ. ಪ್ರಜಾತಂತ್ರ ವ್ಯವಸ್ಥೆ ಏನಾದರೂ ಕುಂಠಿತಗೊಂಡಿದ್ದರೆ ಅದಕ್ಕೆ ಆ ಸಿದ್ಧಾಂತ ಕಾರಣವಲ್ಲ; ಸ್ವಾರ್ಥಪರ ಸಾಧಕರು ಹಾಗೂ ಅದನ್ನು ಅನ್ವಯಿಸುವಲ್ಲಿ ವಿಫಲವಾದದ್ದು ಎಂದು ಎರಡು ಅಂಶಗಳತ್ತ ಗಮನ ಸೆಳೆಯುತ್ತಾರೆ. ಪ್ರಜಾತಂತ್ರದಲ್ಲಿ ಪ್ರಜೆ ಪ್ರಬುದ್ಧನಾಗಿರಬೇಕು. ಆದರೆ ನಮ್ಮ ದೇಶದಲ್ಲಿ ಚಿಹ್ನೆ ನೋಡಿ ಮತ ಹಾಕುವವರ ಸಂಖ್ಯೆಯೇ ಇಂದಿಗೂ ಹೆಚ್ಚಾಗಿದೆ. ಹೀಗಿರುವುದರಿಂದ ಉಮೇದುವಾರ ಮತ್ತು ಆತ ಪ್ರತಿನಿಧಿಸುವ ಪಕ್ಷದ ಸಿದ್ಧಾಂತಗಳಿಗೆ ಪ್ರಾಶಸ್ತ್ಯ ಕಡಿಮೆಯಾಗಿ ಪ್ರಚಾರ ವೈಖರಿಯ ಮೇಲೆ ಸೋಲು ಗೆಲುವು ಆಧರಿಸುವುದನ್ನು ಕಂಡು ಲೇಖಕರು ವಿಷಾದ ವ್ಯಕ್ತಪಡಿಸಿದ್ದಾರೆ. ಇಲ್ಲಿ ಶಿಕ್ಷಣದ ಬಗ್ಗೆಯೂ ಉಪಯುಕ್ತ ಚಿಂತನೆಯಿದೆ. ರಾಜಕಾರಣದಲ್ಲಿ ವಿದ್ಯಾವಂತರು, ಸಂಭಾವಿತರೆನಿಸಿಕೊಂಡವರು ರಾಜಕೀಯದಿಂದ ದೂರ ಉಳಿಯುವುದರಿಂದ ಕಸಬುಗಾರ ಪುಢಾರಿಗಳ ಕೈಯಲ್ಲಿ ಆಡಳಿತ ಸೂತ್ರಗಳು ಸಿಕ್ಕಿಬಿಡುತ್ತವೆ. ಇದರಿಂದಾಗಿ ನಿಷ್ಕ್ರಿಯರಾದ ಮತದಾರರಿಂದಲೂ ಪ್ರಜಾತಂತ್ರಕ್ಕೆ ಅಪಾಯ ತಟ್ಟುತ್ತದೆ. ಆಡಳಿತ ಸೂತ್ರವನ್ನು ಹಿಡಿದವರು ಮತ್ತು ಪ್ರಜೆಗಳು ಕೆಲವು ಕಟ್ಟುಪಾಡುಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಹಾಗಿದ್ದಾಗ ಮಾತ್ರ ಪ್ರಜಾತಂತ್ರದ ಉಳಿವು. ಇಲ್ಲದಿದ್ದರೆ ಸರ್ವಾಧಿಕಾರಿ ಆಡಳಿತ ವ್ಯವಸ್ಥೆಗೆ ದಾರಿಯಾಗುವುದೆಂದು ಎಚ್ಚರಿಸಿದ್ದಾರೆ. ಒಟ್ಟಾರೆ ನಿಸಾರರಿಗೆ ಪ್ರಜಾತಂತ್ರದಲ್ಲಿರುವ ನಂಬಿಕೆ, ಅದರ ಅಗತ್ಯ, ಅದನ್ನು ಉಳಿಸಿಕೊಳ್ಳಬೇಕಾದ ರೀತಿ, ಅದರ ಪರಿಣಾಮವನ್ನು ಕುರಿತು ಸ್ಪಷ್ಟವಾದ ಕಲ್ಪನೆಯಿದೆ. ಹಾಗಾಗಿ ಈ ವಿಷಯವನ್ನು ದೀರ್ಘವಾಗಿ ವಿವೇಚಿಸಿದ್ದಾರೆ.

ಇಂದು ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡು ಹಲವು ನಿಟ್ಟಿನ ಅಧ್ಯಯನಗಳು ನಡೆಯುತ್ತಿವೆ. ಸ್ತ್ರೀ ಸಂವೇದನೆಗಳನ್ನು ಸಮಾಜ ಕೂಡ ಒಪ್ಪಿಕೊಳ್ಳುತ್ತದೆ. ನಿಸಾರರೂ ಕೂಡ 'ಮಹಿಳೆ : ಊದಿದ್ದಾಳೆ ಮುಕ್ತಿ ಕಹಳೆ' ಎಂಬ ಸುದೀರ್ಘವಾದ ಬರಹದಲ್ಲಿ ಸ್ತ್ರೀ ಕೇಂದ್ರಿತ ಭಾವನೆಗಳನ್ನು ಹರಿಯಬಿಟ್ಟಿದ್ದಾರೆ. ಮಹಿಳೆಯರ ಸ್ಥಿತಿಗತಿಗಳಲ್ಲಿ ಈಗ ತಕ್ಕಮಟ್ಟಿನ ಸುಧಾರಣೆಗಳಾಗಿವೆ. ಇದನ್ನೇ ಒಟ್ಟು ಸ್ತ್ರೀ ಸಮುದಾಯಕ್ಕೆ ಅನ್ವಯಿಸಿ ಅನೇಕ ಪುರುಷರು ಆಮೂಲಾಗ್ರವಾದ ಬದಲಾವಣೆಯಾಗಿದೆ ಎಂದು ಭಾವಿಸುವುದುಂಟು. ಆದರೆ ನಿಸಾರರು ಆ ರೀತಿ ನೋಡಿಲ್ಲವೆಂಬುದೇ ಮೆಚ್ಚುಗೆಯ ಅಂಶ. ಈ ಬಗ್ಗೆ 'ಬಹುತೇಕ ಸ್ತ್ರೀಯರು, ಪುರುಷ

ಪ್ರಧಾನ ವ್ಯವಸ್ಥೆಯ ಪಾರಂಪರಿಕ ಅನ್ಯಾಯ ಅಸಮಾನತೆಗಳಿಂದ ಇನ್ನೂ ನವೆಯುತ್ತಿದ್ದಾರೆ. ಅವರಿಗೆ ಗಂಡಸರಂತೆ ತಮಗೂ ಪ್ರತ್ಯೇಕ ವ್ಯಕ್ತಿತ್ವವಿದೆ, ಬುದ್ಧಿಮತ್ತೆ, ಪ್ರತಿಭೆಗಳಿವೆ ಎಂಬ ಅರಿವು ಕಿಂಚಿತ್ತಾದರೂ ಆಗಿಲ್ಲ' ಎಂದಿರುವಲ್ಲಿ ಮಹಿಳಾ ಸಮಸ್ಯೆಯನ್ನು ಸೂಕ್ಷ್ಮವಾಗಿ ಗಮನಿಸಿರುವುದು ಕಂಡುಬರುತ್ತದೆ.

'ಅಂತಾರಾಷ್ಟ್ರೀಯ ಮಹಿಳಾ ವರ್ಷ' ಎಂದು ೧೯೭೫ರಲ್ಲಿ ಘೋಷಿತವಾದ ಬಳಿಕ ಸರ್ಕಾರ ಕೂಡ ಸ್ತ್ರೀಯರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿತು. ಆದರೆ ಇವುಗಳ ಫಲಿತವೇನು? 'ಸರಕಾರದ ಉತ್ತೇಜನ ಸಹ ಅವರ ಬಹಿರಂಗ ಬದುಕಿನ ಸೌಕರ್ಯ ಗಳಿಗೆ ಅನುವಾಗುತ್ತಿದೆಯೇ ವಿನಾ ಅವರ ಆಂತರಿಕ ವಿಕಾಸಕ್ಕೆ, ಸಂಘಟಿತ ಕಾರ್ಯಾಚರಣೆಗೆ ಸರಿಸಮಾನತೆಯ ಆಶಯಪೂರ್ತಿಗೆ ಹೆಚ್ಚಿನ ಒತ್ತಾಸೆ ನೀಡುತ್ತಿಲ್ಲ' ಎಂಬ ಸತ್ಯವನ್ನು ಮನಗಾಣಿಸುತ್ತಾರೆ. ಹಳ್ಳಿಯ ಹೆಣ್ಣುಮಕ್ಕಳು ದಾರಿದ್ರ್ಯ ಅಜ್ಞಾನ ದಬ್ಬಾಳಿಕೆಗಳಲ್ಲಿ ಹುದುಗಿ ಹೋಗಿದ್ದಾರೆ. ಮಹಿಳಾ ಚಳವಳಿಗಳು ಪಟ್ಟಣ ಪ್ರದೇಶಗಳಿಗೆ ಸೀಮಿತವಾಗಿವೆ. ಇದು ಮುಂದೆ ಹಳ್ಳಿಗಳಿಗೂ ವಿಸ್ತರಿಸಬಹುದೆಂಬ ಆಶಾಭಾವನೆಯನ್ನು ಈ ಬರಹ ಸಿದ್ಧಪಡಿಸುವ ಕಾಲಕ್ಕೆ ನಿಸಾರರು ವ್ಯಕ್ತಪಡಿಸಿದ್ದರು. ಇವರು ಅಂದು ಕಂಡ ಕನಸು 'ಸ್ತ್ರೀಶಕ್ತಿ ಯೋಜನೆ'ಯ ಮೂಲಕ ಮುಂದೆ ಸ್ವಲ್ಪಮಟ್ಟಿಗಾದರೂ ಫಲಿಸಿತು ಎನ್ನುವುದು ಗಮನಿಸಬೇಕಾದ ಅಂಶ.

ಮಹಾರಾಷ್ಟ್ರದಲ್ಲಿ ಮಹಿಳಾ ಚಳವಳಿಗಳು ನಡೆದ ಮಾದರಿಯಲ್ಲಿಯೇ ಇಲ್ಲಿಯೂ ಅವು ತೀವ್ರಗೊಳ್ಳಬೇಕೆಂಬ ಆಶಯ ನಿಸಾರರದು. ಮಹಾರಾಷ್ಟ್ರದ ಛಾಯಾ ದಾತಾರ್ ಅವರ 'ಸ್ತ್ರೀಪುರುಷ' ಎಂಬ ಕೃತಿಯ ವಿಚಾರಗಳು ಇವರ ಮೆಚ್ಚುಗೆಗೆ ಪಾತ್ರವಾಗಿದೆ. ಅಲ್ಲಿನ ಲೇಖಕಿ ಮಹಿಳಾ ಸಮಸ್ಯೆಯನ್ನು ಗ್ರಹಿಸಿದ ರೀತಿ, ಆಕೆಯ ವಿಚಾರಧಾರೆಗಳು ನಿಸಾರರ ಮನಸ್ಸಿಗೆ ಒಪ್ಪಿತವೆನ್ನಿಸಿವೆ. ಹಾಗಾಗಿ ಸಾಕಷ್ಟು ವಿವರವಾಗಿಯೇ ಈ ಕೃತಿಯನ್ನು ಪರಿಚಯಿಸಿರುವುದರಿಂದ ಓದುಗರಿಗೂ ಆ ಕೃತಿಯ ಆಂತರ್ಯ ಮನದಟ್ಟಾಗುತ್ತದೆ. ಪಾಶ್ಚಿಮಾತ್ಯ ಮಹಿಳೆಗಿರುವ ಮುಕ್ತ ಲೈಂಗಿಕ ಸ್ವಾತಂತ್ರ್ಯವೇ ಸ್ತ್ರೀಸ್ವಾತಂತ್ರ್ಯವಲ್ಲವೆಂಬುದನ್ನು ಛಾಯಾ ಅವರು ತಮ್ಮ ಕೃತಿಯಲ್ಲಿ ಖಚಿತಪಡಿಸುತ್ತಾರೆ. ಸಾಂಪ್ರದಾಯಿಕತೆಯನ್ನು ಮೀರಿದ ಸ್ವೇಚ್ಛಾ ವರ್ತನೆಯು ಸ್ತ್ರೀಮುಕ್ತಿಗೆ ಮಾರಕವೆಂದು ಅವರು ಪ್ರತಿಪಾದಿಸಿದರು. ನಿಸಾರರು ಈ ಕೃತಿಯ ಮೂಲಕ ಮಹಿಳಾಚರಿತ್ರೆಯ ಒಂದು ನೋಟವನ್ನೇ ಬೀರುತ್ತಾರೆ. ಮಾತೃ ಪ್ರಧಾನ ವಾಗಿದ್ದ ಸಮಾಜವು ಪುರುಷ ಪ್ರಧಾನವಾಗಿ ಪಲ್ಲಟಗೊಂಡಿದ್ದು, ಹೆಣ್ಣಿನ ಸೌಭಾಗ್ಯ ಚಿಹ್ನೆಗಳೂ ಪುರುಷನ ಯಾಜಮಾನ್ಯವನ್ನು ಸಂಕೇತಿಸಿರುವಂಥದ್ದು, ಹೆಣ್ಣಿನ ಕಾರ್ಯಕ್ಷಮತೆ ಯನ್ನು ಕಡೆಗಣಿಸುವುದು, ಹೆಣ್ಣಿಗೆ ಮಾತ್ರ ಶೀಲ ವಿಧಿಸುವಂಥದ್ದು, ಮದುವೆ ಸಂತಾನದಂಥ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಇಲ್ಲದಿರುವುದು, ಮಾಧ್ಯಮಗಳಲ್ಲಿ ಹೆಣ್ಣಿನ ಶರೀರದ ದುರ್ಬಳಕೆ, ಮಹಿಳಾ ಶೋಷಣೆ ಮುಂತಾದ ಹಲವು ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಇವರದು ಪಾಶ್ಚಾತ್ಯ ಮತ್ತು ಪೌರ್ವಾತ್ಯಗಳ ಸಮನ್ವಯ ದೃಷ್ಟಿ. ಹಾಗಾಗಿ 'ಭಾರತೀಯ ಸಮಾಜದ ಕಟ್ಟು ಕಟ್ಟಳೆಯ ಅತಿಯಾದ ಕಿಷ್ಕಿಂಧತೆ, ಪಾಶ್ಚಾತ್ಯ ಬದುಕಿನ ನಿರ್ಮುಕ್ತ ಸ್ವೇಚ್ಛಾವೃತ್ತಿ ಸ್ವಚ್ಛಂದತೆಗಳ ಬಯಲುತನ—ಇವೆರಡರ ನಡುವಣ ಒಂದು ಸುವರ್ಣ ಮಧ್ಯಮದ ಸ್ತಿಮಿತ ಸ್ಥಿತಿಯನ್ನು ಕಂಡುಕೊಂಡು ಗಂಡು ಹೆಣ್ಣುಗಳಿಬ್ಬರೂ

ಸಮಾನ ವಿಕಾಸ, ಉನ್ನತಿಗಳನ್ನು ಸಾಧಿಸುವಂತಿರಬೇಕು' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಮಹಿಳಾ ಚಳವಳಿಗಳೂ ತಾತ್ಕಾಲಿಕವಾಗದೆ, ಅವು ನಿರಂತರತೆಯನ್ನು ಉಳಿಸಿಕೊಂಡು ಸಮಾಜಕ್ಕೂ ಮಹಿಳೆಯರಿಗೂ ತಿಳಿವಳಿಕೆ ನೀಡುತ್ತಿರಬೇಕೆಂಬುದು ಇವರ ಆಶಯ. ಹೀಗೆ ಈ ಬರಹಲ್ಲಿ ಮಹಿಳೆಯ ಸಮಾನತೆ, ಮಹಿಳಾ ಚಳವಳಿಯನ್ನು ಕುರಿತು ಕೂಲಂಕಷವಾಗಿ ಚರ್ಚಿಸಿದ್ದು ಲೇಖಕರ ಸ್ತ್ರೀಪರ ಕಾಳಜಿ ಇದರಲ್ಲಿ ಮಡುಗಟ್ಟಿದೆ. ಮಹಿಳಾ ವಿಚಾರಗಳನ್ನು ಪುರುಷನ ಕಣ್ಣಿನಿಂದ ನೋಡದೆ ಮಹಿಳೆಯ ಕಣ್ಣಿನಿಂದಲೇ ನೋಡಿರುವುದು ಇಲ್ಲಿನ ವೈಶಿಷ್ಟ್ಯ. ಏಕೆಂದರೆ ಅನೇಕ ಲೇಖಕರು ಮಹಿಳೆಯರ ವಿಚಾರಕ್ಕೆ ಬಂದಾಗ, ಇದು ಮಧ್ಯಮ ವರ್ಗದ ಮಹಿಳೆಯರ ಹಪಹಪಿಕೆ ಎಂದೋ ಪಾಶ್ಚಾತ್ಯ ವಿಚಾರಧಾರೆಯ ಅನುಕರಣೆ ಎಂದೋ ಹೇಳಿ ಲಘುವಾಗಿ ಪರಿಗಣಿಸುವುದುಂಟು.' ಆದರೆ ಇಲ್ಲಿ ನಿಸಾರರು ಈ ಸಮಸ್ಯೆಯನ್ನು ಗಂಭೀರವಾಗಿ ಸ್ವೀಕರಿಸಿರುವುದು ಸ್ತ್ರೀಪರ ಕಾಳಜಿಯ ಪ್ರತೀಕವಾಗಿದೆ.

'ತಿಳಿವಿಲ್ಲದೆ ಉಳಿವಿಲ್ಲ' ಎಂಬ ಬರಹದಲ್ಲಿ ನೀತಿಗೇಡಿ ರಾಜಕಾರಣದ ಬಗ್ಗೆ ಅಸಮಾಧಾನ ಅತೃಪ್ತಿಗಳು ಕಂಡುಬರುತ್ತವೆ. ಹಾಗೆಯೇ, ಮನುಕುಲವೆಲ್ಲ ಒಂದೇ ಎಂಬ ಆಶಯ ವ್ಯಕ್ತವಾಗಿದೆ. ನಿಸಾರರು ಮಾನವೀಯತೆಗೆ ತಮ್ಮ ಬರಹಗಳಲ್ಲಿ ದೊಡ್ಡ ಸ್ಥಾನವನ್ನು ನೀಡಿದ್ದಾರೆ. ಮನುಷ್ಯ ಇಂದು ಬುದ್ಧಿವಂತಿಕೆಯಿಂದ ಮಹತ್ವವಾದುದನ್ನು ಸಾಧಿಸಿದ್ದಾನೆ. ಆದರೆ ಕೇವಲ ಬುದ್ಧಿಯೊಂದಿದ್ದರೆ ಸಾಲದು, ಆತ ಮಾನವೀಯತೆಯನ್ನು ಉಳಿಸಿಕೊಂಡಾಗ ಮಾತ್ರ ಬುದ್ಧಿಗೆ ಮೆರುಗು ಬರುತ್ತದೆ ಎಂಬ ಅಂಶವನ್ನು 'ಸಾರೊಳಗಿನ ಸೌಟು' ಎಂಬ ಬರಹದಲ್ಲಿ ನಿರೂಪಿಸಲಾಗಿದೆ. 'ಪ್ರಜ್ಞಾಶಾಲಿ, ಇತರರಿಗೆ ಪ್ರಸನ್ನತೆ ಮುದಗಳನ್ನು ನೀಡುವ ರಸವಂತನೂ ಆಗಿ, ಸಮಾಜದ ಇತರರ ಸ್ನೇಹ ಸಹವಾಸಗಳನ್ನು ಸವಿಯುವ ರಸಿಕನೂ ಆಗಿರುತ್ತಾನೆ. ಜೀವನದ ರುಚಿಕಟ್ಟಾದ ಸಾರಿನ ಪಾತ್ರೆಯಲ್ಲಿ ಅವನು ಮರವಟ್ಟ ಸೌಟಲ್ಲ; ಪಟುವಾದ ನಾಲಗೆ. ನಾಡಿನಲ್ಲಿ ಇಂಥವರ ಪೀಳಿಗೆ ವರ್ಧಿಸಲಿ' ಎಂದು ಹೃದಯವಂತಿಕೆ ಸಂವೇದನೆಗಳ ಅಗತ್ಯತೆಯನ್ನು ಹೇಳಲಾಗಿದೆ. ಇದೇ ಆಶಯ, 'ನೀನಾರಿಗಾದೆಯೊ ಎಲೆ ಮಾನವ?' ಎಂಬ ಬರಹದಲ್ಲಿಯೂ ಕಂಡುಬರುತ್ತದೆ. ಯಾವುದೇ ಕಾರ್ಯ ಕೇವಲ ಆಚರಣೆಯ ನಿಮಿತ್ತ, ಸಂಪ್ರದಾಯದ ನಿಮಿತ್ತ ಜರುಗಿದರೆ ಅದು ಯಾಂತ್ರಿಕವಾಗಿಬಿಡುತ್ತದೆ, ನಿಷ್ಪ್ರಯೋಜಕವೆನಿಸುತ್ತದೆ. ನಮ್ಮ ಸಮಾಜದಲ್ಲಿ ತುಂಬಿರುವ ತರತಮ ಗಣನೆ, ಉಚ್ಚ ನೀಚ ಭಾವನೆಗಳನ್ನು ಕಂಡು ಕವಿಗೆ ದುಗುಡವಿದೆ. ಸರ್ವ ಭೂತದಯೆ ಸರ್ವಜೀವಾನುಕಂಪೆಯೇ ಮನುಷ್ಯತ್ವ ಎಂಬ ಆರ್ಷೇಯರ ಚಿಂತನೆಯ ಪ್ರತಿಧ್ವನಿಯನ್ನು ಈ ಬರಹದಲ್ಲಿ ಕಾಣಬಹುದು. ಮನುಷ್ಯನಲ್ಲಿರುವ ಲೋಭ ಮತ್ತು ಸ್ವಾರ್ಥಪರತೆಯ ಬಗ್ಗೆ ಸುಧಾರಕರು ಏನೇ ಹೇಳಿದರೂ ಅವೆಲ್ಲವೂ ರಾಜಕಾರಣಿಗಳ, ಗರ್ವಿತ ಅಧಿಕಾರಿಗಳ ಪ್ರತಿಷ್ಠೆಗಳಿಗೆ ಬಲಿಯಾಗುತ್ತಿರುವುದಕ್ಕೆ ಲೇಖಕರಿಗೆ ವಿಷಾದವಿದೆ.

ಧರ್ಮವನ್ನು ಕುರಿತು ನಿಸಾರರು ಸಾಕಷ್ಟು ಚಿಂತನೆ ನಡೆಸಿದ್ದಾರೆ. ಭಾರತೀಯ ಸಂದರ್ಭದಲ್ಲಿ ಇವರ ಆಲೋಚನೆಗಳು ಮೌಲ್ಯಯುತವಾಗಿವೆ. ಇವರ ಪ್ರಕಾರ ಆತ್ಮಸಾಕ್ಷಿಗಿಂತ ಮಿಗಿಲಾದ ಧರ್ಮವಿಲ್ಲ. ಆದರೆ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತ ಧರ್ಮಭೀರುಗಳಾಗಿರುವವರ ಸಂಖ್ಯೆಯೇ ಸಮಾಜದಲ್ಲಿ ಅಧಿಕ. ಆತ್ಮಸಾಕ್ಷಿಗೆ ಒಪ್ಪಿತವಲ್ಲದ

ಯಾವ ಧರ್ಮವೂ ಧರ್ಮವಾಗುವುದಿಲ್ಲ; ಪ್ರತಿಯಾಗಿ ಆತ್ಮವಂಚನೆಯಾಗುತ್ತದೆ ಎಂಬುದನ್ನು ಒತ್ತಿ ಹೇಳಿದ್ದಾರೆ 'ಹಾಗೆ ನೋಡಿದರೆ ನಿಜವಾದ ಧರ್ಮದ ತಿರುಳು ಅಸಹಾಯಕರ, ದಮನಿತರ ಸೇವೆಯಲ್ಲಿ ಅಡಗಿದೆ'—ಎಂಬ ಇವರ ಚಿಂತನೆಯಲ್ಲಿ ಸಕಲ ಧರ್ಮಗಳ ಸಾರವಿದೆ. ಡಂಭಾಚಾರದ ಪೂಜೆಯನ್ನು ಸಾಧು ಸಂತರೆಲ್ಲ ವಿರೋಧಿಸಿರುವುದನ್ನು ಕಾಣುತ್ತೇವೆ. ನಿಸಾರರೂ ಕೂಡ ಇಂಥ ಪೂಜೆಗೆ ಮನ್ನಣೆ ನೀಡದೆ ಮಾನವತಾವಾದವನ್ನು ಎತ್ತಿಹಿಡಿಯುತ್ತಾರೆ. ಸಮಾಜದಲ್ಲಿ ತಾಂಡವವಾಡುತ್ತಿರುವ ಅಸಮಾನತೆಯು ಕವಿ ಮನವನ್ನು ಬಹುವಾಗಿ ಕಲಕಿದೆ. ಇಂಥ ಅಸಮಾನತೆಗಳು ಕಂಡುಬರುವುದು ಮನುಷ್ಯ ಮನುಷ್ಯನ ನಡುವೆಯೇ ಹೊರತು, ಪ್ರಾಣಿಗಳಲ್ಲಿ ಅಲ್ಲ ಎಂಬ ಕಟು ಸತ್ಯವನ್ನು ಪ್ರಕಟಿಸುತ್ತಾರೆ.

ಕಾವ್ಯ ಮಂಜಿನ ಹನಿಯಂತೆ, ಗದ್ಯ ಹರಿಯುವ ನದಿಯಂತೆ ಎಂಬ ಮಾತಿದೆ. ನಿಸಾರರು ತಮ್ಮ ಕಾವ್ಯದಲ್ಲಿ ಬಿಂದುರೂಪದಲ್ಲಿ ವ್ಯಕ್ತಪಡಿಸಿದ ಸಂಗತಿಗಳು ಇವರ ಗದ್ಯ ಬರಹಗಳಲ್ಲಿ ವಿಸ್ತೃತವಾಗಿ ಹರಿದಿವೆ. ಇವರ ಬಹುಶ್ರುತತ್ವ, ವಿಶ್ಲೇಷಣಾ ಸಾಮರ್ಥ್ಯ ಈ ಬರಹಗಳಲ್ಲಿ ಸ್ಫುಟಗೊಂಡಿದೆ. ಇವರ ಗದ್ಯ ಬರಹಗಳು ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ. ಅನೇಕ ಶಬ್ದಗಳನ್ನು ವಿಶಿಷ್ಟವಾಗಿ ಬಳಸಿದ್ದಾರೆ. ಉದಾಹರಣೆಗೆ— ಹಟಾಯಿಸು, ನಾತಾಯಣ, ಘಾಸಿಸು, ನಕಲಿಸು, ಹಿತಾತ್ಮಕ, ಮೇಧಾವಿತೆ, ಸರಳೀತ, ಮೋಪು, ಮಲಾಮತ್ತು, ಎಬ್ಬಂಕ ಇತ್ಯಾದಿ.

ಮನುಷ್ಯನ ಬಾಳು ಹಸನಾಗಿರಬೇಕು, ನಾಡು ಬೆಳೆಯಬೇಕು, ಸಮಾಜದಲ್ಲಿ ಶಾಂತಿ ನೆಲಸಬೇಕು, ಮಾನವೀಯತೆಯ ಸಮಾನತೆಯ ಹೊಸ ಸಮಾಜವನ್ನು ಕಟ್ಟಬೇಕು ಎಂಬ ಹಂಬಲ ಈ ಬರಹಗಳ ಹಿನ್ನೆಲೆಯಲ್ಲಿದೆ. ಗದ್ಯ ಬರಹಗಳ ಸಂದರ್ಭದಲ್ಲಿ ಸಾಂಸ್ಕೃತಿಕ ಸಾಮಾಜಿಕ ಯೋಚನೆಗಳನ್ನು ಬೆಸೆಯುವುದು, ರಾಜಕೀಯ ನೈತಿಕ ಮೊದಲಾದ ಸಾಹಿತ್ಯೇತರ ವಿಷಯ ಮಂಡನೆಯ ಸಂದರ್ಭದಲ್ಲಿ ಸಾಹಿತ್ಯಕ ಅಂಶಗಳನ್ನು ಬೆಸೆಯುವುದು ನಿಸಾರರ ರೀತಿ. ಆದರೆ ಎಲ್ಲೆಡೆಯಲ್ಲಿಯೂ ಸ್ಪಷ್ಟವಿರುವುದು ಸೃಜನಶೀಲ ಸಾಹಿತಿಯ ಹುಡುಕು ನೋಟ. ಓದುಗನನ್ನು ಆತ್ಮಶೋಧಕನನ್ನಾಗಿ ಪರಿವರ್ತಿಸುವ ಗುಣ ಇವರ ಗದ್ಯಬರಹಗಳಲ್ಲಿ ಎದ್ದು ಕಾಣುತ್ತದೆ.

ಮುಂಬಾಗಿಲೇ ಹಾರೊಡೆದಿರುವಾಗ ಕಳ್ಳರಿಗೆ ಕನ್ನ ಹಾಕಿ ಕದಿಯುವ ಅಗತ್ಯವಾದರೂ ಎಲ್ಲಿದೆ? ಇದೇ ರೀತಿ ಕನ್ನಡಿಗರ, ಕರ್ನಾಟಕದ ಲೂಟಿ ಅನೇಕ ರಾಜ್ಯ, ರಾಷ್ಟ್ರ, ಭಾಷಿಕರಿಂದ ಹಾಡುಹಗಲಲ್ಲೇ ನಿರಾತಂಕವಾಗಿ ನಡೆದಿದೆ. ಗಮನಿಸಿಯೂ ಕಿಮಿಕ್ಕೆನ್ನದ, ತಡೆಗಟ್ಟಲು ಒಂದಾಗಿ ಮುಂದಾಗದ ಔದಾರ್ಯವಂತ ಸಾತ್ತ್ವಿಕ ಅಸಹಾಯಕ ನಾಮರ್ದತೆ ನಮ್ಮದು.

(ಔದಾರ್ಯದ ಉರುಳು)



ಪರಿಸರ ಪ್ರೇಮಿ, ಸಮಾಜಮುಖಿ ಲೇಖಕ

♦ ಡಾ. ಸುಶೀಲಾ ನೆಲ್ಲಿಸರ

ಸಹೃದಯ ಕವಿ, ಸಂಶೋಧಕ, ವಾಗ್ಮಿ, ನಿಸರ್ಗಾರಾಧಕ, ವಿದ್ಯಾರ್ಥಿ ಪ್ರಿಯ, ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸಿದ ಧೀಮಂತ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರದು ಬಹುಮುಖ ಪ್ರತಿಭೆ. ಅವರದು ಕವಿ ಹೃದಯವಾದ್ದರಿಂದ ಸುತ್ತಲಿನ ನಿಸರ್ಗವೆಲ್ಲಾ ಅವರ ಕಣ್ಣಿಗೆ ಸುಂದರವಾಗಿ ಕಾಣುತ್ತದೆ. ಪ್ರಕೃತಿ ರಮಣೀಯತೆಯನ್ನು, ಅದರ ರುದ್ರ ಮನೋಹರತೆಯನ್ನು ಬಗೆಬಗೆಯಾಗಿ ವರ್ಣಿಸುತ್ತಾರೆ. ಹಾಗಾಗಿ ಅವರ ಗದ್ಯಬರಹಗಳ ವಸ್ತು ವೈಶಿಷ್ಟ್ಯದಲ್ಲಿ ವಿನೂತನತೆ ಇದೆ. 'ನಿಸರ್ಗದ ನೋಟ ಕಲಿಸುವ ಪಾಠ'ವೆಂಬ ಗದ್ಯಬರಹದ ಶೀರ್ಷಿಕೆಯೇ ಆಕರ್ಷಕವಾಗಿದೆ. ನಾನು ನನ್ನ ಪ್ರೀತಿಯ ಕವಿ ನಿಸಾರರನ್ನು, ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗಿನಿಂದಲೂ ಹತ್ತಿರದಿಂದ ಬಲ್ಲವಳಾಗಿದ್ದೇನೆ. ಅವರ ಪ್ರತಿಯೊಂದು ಭಾಷಣದಲ್ಲೂ ಶಿವಮೊಗ್ಗೆಯ ಸುತ್ತಲಿನ ಪ್ರಕೃತಿಯ ಸುಂದರ ತಾಣಗಳಾದ ಜೋಗದ ಜಲಪಾತ, ಗಾಜನೂರು ಅಣೆಕಟ್ಟು, ತೀರ್ಥಹಳ್ಳಿಯ ಪರಿಸರದ ಪಕ್ಷಿಧಾಮ; ಐತಿಹಾಸಿಕ ಸ್ಥಳಗಳಾದ ಕೆಳದಿ, ಇಕ್ಕೇರಿ, ಶಿವಪ್ಪ ನಾಯಕನ ಅರಮನೆ; ಪವಿತ್ರ ನದಿಗಳಾದ ತುಂಗಾ ಭದ್ರೆಯರು; ಜಾನಪದ ಭವ್ಯ ಪರಂಪರೆಯ ಶಿರಾಳಕೊಪ್ಪದ ಮಾಸೂರು ಮದಗದ ಕೆರೆ—ಮುಂತಾದ ನೂರಾರು ಸ್ಥಳಗಳ ಬಗ್ಗೆ ಮನದುಂಬಿ ಮಾತನಾಡುತ್ತಿದ್ದರು, ಅವುಗಳ ವೈಶಿಷ್ಟ್ಯವನ್ನು

ತೆರೆದು ತೋರಿಸುತ್ತಿದ್ದರು.

ಶಿಸ್ತು, ಸಂಯಮ, ಸಮಯ ಪರಿಪಾಲನೆ, ಸೂಟು ಬೂಟಿನ ಸುಂದರ ಸದೃಢ ಶರೀರದ ಪ್ರೊ. ನಿಸಾರರಿಗೆ, ಬೆಳೆಯುವ ಎಳೆಯ ಚೇತನಗಳಿಗೆ ಹುರುಪು ಹುಮ್ಮಸ್ಸು ತುಂಬುವುದೆಂದರೆ ಎಲ್ಲಿಲ್ಲದ ಸಂಭ್ರಮ. ಅವರ ಗದ್ಯ ಬರವಣಿಗೆಯಲ್ಲಿ ಸಂಜೆ ಸೂರ್ಯನ ಸುಂದರ ನೋಟವನ್ನು ಕಾಣಬಹುದಾಗಿದೆ. ಮನುಷ್ಯ ಜೀವನದ ಜಂಜಾಟದಲ್ಲಿ ಸಂಜೆ, ಮುಂಜಾನೆ ವಾಯು ವಿಹಾರ ಮಾಡುತ್ತಾ ತಣ್ಣನೆಯ ಬದುಕನ್ನು ನಡೆಸಬೇಕೆಂಬುದು ಲೇಖಕರ ಅಭಿಲಾಷೆ. 'ನಿಸರ್ಗದ ನಡುವೆ ಕೆಲ ಸಮಯ ಕಳೆಯಬೇಕಾದದ್ದು ಇಂದಿನ ಮನುಷ್ಯನ ಪಾಲಿಗೆ ವರ ಸದೃಶವಾಗಿದೆ. ಅದರ ಅಗತ್ಯ ಹಿಂದಿಗಿಂತ ಇಂದು ಅಧಿಕವಾಗಿದೆ. ಅವನ ಬದುಕು ನಾನಾ ರಗಳೆಗಳಿಂದ, ರಂಪ ರಚ್ಚೆಗಳಿಂದ ಕದಡಿ ಹೋಗಿದೆ. ಶಾಂತಿಯ ಅನುಸಂಧಾನಕ್ಕೆ ಹೂ ಹಕ್ಕಿ ಗಿಡ ಮರ ಕೆರೆ ಗುಡ್ಡಗಳ ಸಾನ್ನಿಧ್ಯ ಸಂಜೀವಿನೀ ಸದೃಶವಾಗಿದೆ. ಭವಿಷ್ಯೋನ್ಮುಖರಾದ ಯುವಕರ ದೈಹಿಕ, ಮಾನಸಿಕ ಆರೋಗ್ಯಕ್ಕೆ; ಮಹದಾಲೋಚನೆಗಳಿಗೆ; ಸಂಕಲ್ಪ ಸಾಧನೆಗಳ ಅಂಕುರಾರ್ಪಣೆಗೆ, ದಿನದಲ್ಲಿ ಒಂದೆರಡು ಗಂಟೆಗಳ ಕಾಲ ಅವರು ಏಕಾಂತದಲ್ಲಿ ಕಳೆಯಬೇಕಾದದ್ದು ಅತ್ಯನಿವಾರ್ಯವಾಗಿದೆ. ದುರ್ದೈವದ ಸಂಗತಿಯೆಂದರೆ ನಮ್ಮ ಬಹುತೇಕ ಯುವ ಜನರು ತಮ್ಮ ಅಮೂಲ್ಯ ಸಂಜೆಗಳನ್ನು ಗಲಾಟೆ ಗದ್ದಲಗಳ ಸ್ಥಳಗಳಲ್ಲಿ ಕಳೆಯುತ್ತಾರೆ' ಎಂದು ಹೇಳುವಲ್ಲಿ ಕವಿಯ ಮನಸ್ಸು ಸಮಾಜದ ಬದುಕನ್ನು ಕುರಿತು ಚಿಂತಿಸುವ, ಸಂತೈಸುವ ಪರಿ ವ್ಯಕ್ತವಾಗುತ್ತದೆ.

ಪ್ರೊ. ನಿಸಾರ್‌ರವರು ಶಿವಮೊಗ್ಗೆಯಂಥ ದಟ್ಟ ಮಲೆನಾಡನ್ನು ಬಿಟ್ಟು, ಭಾರೀ ಜನ ಸಂದಣಿಯಿರುವ ಮಹಾ ನಗರ ಬೆಂಗಳೂರನ್ನು ಸೇರಿದ ಮೇಲೂ ಅವರ ಆಲೋಚನೆಗಳು ಭಾವನೆಗಳು ನಿಸರ್ಗದಿಂದ ದೂರವಾಗಲಿಲ್ಲ. ನಾಡನ್ನು ಸಶಕ್ತವಾಗಿ ಕಟ್ಟಬಲ್ಲ ಇಂದಿನ ಯುವಕರು, ನಗರದ ರಂಗುರಂಗಿನ ಬೆಡಗು ಬಿನ್ನಾಣಗಳಿಗೆ ಮರುಳಾಗಿ, ದುಶ್ಚಟಗಳ ದಾಸರಾಗಿ ನಿರ್ವೀರ್ಯರಾಗುವುದನ್ನು ಕಂಡು ಮಮ್ಮಲ ಮರುಗಿದ್ದಾರೆ. 'ಸಂತೆಯಲ್ಲೊಂದು ಮನೆಯ ಮಾಡಿ ಶಬ್ದಕ್ಕೆ ಅಂಜದಿದ್ದೊಡೆ ಎಂತಯ್ಯಾ?' ಎಂದು ನಿಬ್ಬೆರಗಾಗಿದ್ದಾರೆ. ರಸ್ತೆ ಅಗಲ ಮಾಡಲಿಕ್ಕೆ ಹೋಗಿ ಹಳೆಯ ಮರಗಳೊಂದೂ ಉಳಿದಿಲ್ಲ. 'ಪಕ್ಷಿ ಸಂಸಾರಿಗಳಿಗೆ ನಿವೇಶನವೊದಗಿಸಿದ್ದ ಆ ಯಜಮಾನ ವೃಕ್ಷಗಳ ಹೆದ್ದಾರಿ ನಡೆಯುವವರ ಹೃದಯಕ್ಕೆ ತಂಪೆರೆಯುತ್ತಿತ್ತು.' ಈಗ ಅದ್ಯಾವುದೂ ಉಳಿದಿಲ್ಲವೆಂದು ಕೊರಗುತ್ತಾರೆ. ನಮ್ಮ ಇಂದಿನ ಯುವಕ ಯುವತಿಯರು ಸ್ವಲ್ಪ ದೂರ ಹೋಗಬೇಕೆಂದರೂ ಬೈಕು, ಸ್ಕೂಟರ್ ಬೇಡುತ್ತಾರೆ. 'ಹೀಗಾಗಿ ನಡಿಗೆ ಖೋತಾ. ತಮ್ಮ ತೊಂಬತ್ತೈದನೆಯ ವಯಸ್ಸಿನಲ್ಲೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಗವಿಪುರದಿಂದ ಗಾಂಧಿಬಜಾರಿನ ಕ್ಲಬ್ಬಿಗೆ ಹೋಗಿ ಬರುತ್ತಿದ್ದರು; ಒಂದು ಮೈಲಿಗೂ ಹೆಚ್ಚು ದೂರ ಕ್ರಮಿಸುತ್ತಿದ್ದರು. ದೀರ್ಘಾಯುಸ್ಸಿನ ಗುಟ್ಟಿನ ಬಗ್ಗೆ ಕೇಳಿದಾಗ, ಅವರು ಚಿಕ್ಕಂದಿನಿಂದ ಕ್ರಮಬದ್ಧವಾಗಿ ತಪ್ಪದೆ ವಾಕಿಂಗ್ ಹೋಗುತ್ತಿರುವುದೂ ಒಂದು ಮುಖ್ಯ ಕಾರಣ ಅನ್ನುತ್ತಿದ್ದರು. ಇಂಥ ನಡಿಗೆಯ ಅಭ್ಯಾಸ ಮತ್ತು ಶಾಂತಿ, ಸಮಾಧಾನ ದಾಯಕ ಪರಿಸರ ತಪ್ಪಿದ್ದರಿಂದ ಇವೊತ್ತು ಅನೇಕರು ಹೃದ್ರೋಗ, ರಕ್ತದೊತ್ತಡ ತತ್ಸಂಬಂಧವಾದ ಖಾಯಿಲೆಗಳಿಗೆ ತುತ್ತಾಗಿದ್ದಾರೆ' ಎಂದು ವಿಷಾದ ವ್ಯಕ್ತಪಡಿಸುತ್ತಾರೆ.

ಇಂಥ ಅವರ ವೈಜ್ಞಾನಿಕ ಆಲೋಚನೆಗಳು ಸಮಾಜದ ಸ್ವಾಸ್ಥ್ಯದ ಕಡೆಗೆ ತುಡಿಯುತ್ತವೆ.

ಇಷ್ಟು ಸಮೃದ್ಧವಾಗಿ ಸಮರ್ಥವಾಗಿ ಬರವಣಿಗೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ ವಿಶ್ವಾಸವನ್ನು ಬೆಳೆಸಿದ ಸುಸಂಸ್ಕೃತ ಸರಳ ಜೀವಿ ಸದಾ ಸಮಾಜಮುಖಿಯಾಗಿಯೇ ಬೆಳೆದು ಬಂದವರು. 'ಪರಿಚಿತ ಪರಿಸರ ಮತ್ತು ಹೊಸ ಸಂಜೆಯ ಜೊತೆ ಕೊಂಚ ಹೊತ್ತು' ಎಂಬ ಗದ್ಯ ಬರಹ ಇದಕ್ಕೆ ಸಾಕ್ಷಿಯಾಗಿದೆ. 'ಅಸಂವೇದಕ ಜಡತ್ವ, ಅನುಭವಿಸಲಾಗದ ಅಸಹಾಯಕತೆ ಜೀವನವನ್ನು ಮುಸುಕಿರುತ್ತದೆ. ದೂರದ ಬಡಾವಣೆಗಳಿಗೆ ಹೋದರೂ ಅಚ್ಚ ಗ್ರಾಮೀಣ ಪ್ರದೇಶದ ಪ್ರಶಾಂತತೆ, ಏಕಾಂತತೆಗಳ ಮೋಡಿ ನಿಮಗೆ ಪ್ರಾಪ್ತವಾಗದು' ಎನ್ನುವ ಕವಿಗೆ ಪರಿಸರ ಹಾಳಾಗುತ್ತಿರುವುದನ್ನು ನೋಡಲಾಗುತ್ತಿಲ್ಲ. ಜನತೆಯ ಮುಖದಲ್ಲಿ ಮಿನುಗುವ ಮುಗುಳ್ನಗೆ ಇರಬೇಕು, ಸದಾ ಚಟುವಟಿಕೆಯಿಂದಿರಬೇಕು. ಇದು ಪ್ರಕೃತಿಯ ಸುಂದರ ಪರಿಸರದಿಂದ ಮಾತ್ರ ಸಾಧ್ಯ ಎನ್ನುವುದು ಇವರ ಬಲವಾದ ನಂಬಿಕೆ. 'ಸುಮಾರು ಎರಡೂವರೆ ದಶಕಗಳ ಹಿಂದೆ ಬೆಂಗಳೂರಿನಿಂದ ಶಿವಮೊಗ್ಗೆಗೆ ನನಗೆ ವರ್ಗವಾಗಿ ಅಲ್ಲಿ ಹಲವು ವರ್ಷ ನೆಲಸಿದ್ದೆ. ಊರಾಚೆಗಿನ ಆ ಹಳೆಯ ಸಂಜೆಗಳ ನಿತ್ಯ ಭೇಟಿಯಿಂದ ನನಗೊದಗಿರುವ ಆನಂದಾನುಭವದ ನಿಧಿ ಮನಸ್ಸಿನ ಖಜಾನೆಯಲ್ಲಿ ಜಮೆಯಾಗಿ ಇನ್ನೂ ಖರ್ಚಾಗದೆ ಉಳಿದಿದೆ. ಆತಂಕದ ಕ್ಷಣಗಳಲ್ಲಿ ಜೀವ ಸ್ವಾಸ್ಥ್ಯ ರಕ್ಷಣೆಗಾಗಿ ಅದು ಉಪಯೋಗಕ್ಕೆ ಬರುತ್ತಿದೆ' ಎನ್ನುವ ನಿಸಾರರು ಪ್ರಕೃತಿಯಲ್ಲಿ ಲಕ್ಷ್ಮಿ, ಸರಸ್ವತಿಯರನ್ನು, ಶಿವ ಸಾಕ್ಷಾತ್ಕಾರವನ್ನು ಕಂಡಿದ್ದಾರೆ. 'ಸಂಬಂಧಗಳು ಹಳಸುತ್ತಿರುವ, ವೈರತ್ವ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮರ ಗಿಡಗಳ ನಿಸ್ವಾರ್ಥತೆಯನ್ನು, ಚೆಲುವನ್ನು ಕಂಡು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳಿ' ಎಂದು ಕರೆ ನೀಡುತ್ತಾರೆ. ತೆಂಗು ಅಡಿಕೆ ಮರಗಳನ್ನು, ಕಬ್ಬಿನ ಗದ್ದೆಗಳನ್ನು ಕಂಡಾಗ ಕವಿಯ ಮನಸ್ಸು ಅರಳುತ್ತದೆ, ಚೇತೋಹಾರಿಯಾಗುತ್ತದೆ. ನಿಸರ್ಗವನ್ನು ಮನುಷ್ಯ ತನ್ನ ದುರಾಕ್ರಮಣಕ್ಕೆ ಒಳಗು ಮಾಡಿ ಹಾಳುಗೆಡವಿದಾಗ, 'ಇಂದಿನ ಮಾನವನಿಗಿಂತ ಹಿಂದಿನ ತಲೆಮಾರಿನವರಿಗೆ ಪ್ರಕೃತಿ ಅತ್ಯಂತ ನಿಕಟವಾಗಿತ್ತು; ಅತ್ಯಾಪ್ತವಾಗಿತ್ತು. ಅದರ ಒಂದು ಸಾವಯವ ಘಟಕ ತಾನೆಂಬ ಅರಿವು ಅಪ್ರಜ್ಞಾಗೋಚರವಾಗಿ ಅವನಲ್ಲಿದ್ದು, ಅವನ ಸಕಲ ಕಾರ್ಯ ಕಲಾಪಗಳಿಗೆ ಅದು ಕ್ರಿಯಾಶಕ್ತಿಯಾಗಿ ಮರೆಯಲ್ಲೇ ಕೆಲಸ ನಿರ್ವಹಿಸುತ್ತಿತ್ತು. ವರ್ತಮಾನಸ್ಥನಿಗಿಲ್ಲದ ಪ್ರಸನ್ನತೆ, ಪ್ರಫುಲ್ಲತೆಗಳು, ಅಯಾಂತ್ರಿಕ ಲವಲವಿಕೆ ಚೈತನ್ಯೋತ್ಸಾಹಗಳು ಗತ ಕಾಲೀನನ ಬಾಳುವೆಗೆ ಶೋಭೆ ನೀಡಿದ್ದವು' ಎನ್ನುವ ಅವರ ಅಂತಃಕರಣದ ಮಾತುಗಳು ನಾವು ಇನ್ನಾದರೂ ನಿಸರ್ಗವನ್ನು ಜತನದಿಂದ ಕಾಪಾಡಿಕೊಳ್ಳ ಬೇಕೆಂಬ ಎಚ್ಚರಿಕೆಯನ್ನು ನೀಡುತ್ತದೆ.

ಶಿವಮೊಗ್ಗೆಯ ಪರಿಸರದ ಸಹ್ಯಾದ್ರಿ ಬೆಟ್ಟದ ಸಾಲುಗಳನ್ನು ಕೆರೆ ಕೊಳಗಳನ್ನು ಮರ ಗಿಡಗಳನ್ನು ಮನದುಂಬಿ ವರ್ಣಿಸುತ್ತಾರೆ. ಅವರ ಈ ಗದ್ಯದ ಸಾಲು ನೋಡಿ, '...ಕೆಳ ಕೊಂಬೆಯ ಮೇಲೆ ಒಲೆದಿರುವ ಮೈ ನೆರೆದ ಮಲರ ಗೊಂಚಲಿನ ಸುತ್ತ ತಮ್ಮ ಪ್ರಣಯ ಪಹರೆ ನಡೆಸುತ್ತಿವೆ. ಆ ಗಂಧದೇಹಿಗಳು ಸ್ನಿಗ್ಧ ಅಧರಗಳಿಗೆ ತುಟಿ ಹಚ್ಚಲು ಹೊಂಚಿವೆ.'

ಇಲ್ಲೆಲ್ಲಾ ಕವಿ, ಪ್ರೇಮಿಗಳ ಸರಸದ ಸುಮಧುರ ಸಮಯವನ್ನು ಕಂಡಿದ್ದಾರೆ. ಆ ಚೆಲುವು ಒಲವು ಸದಾ ನಮ್ಮಲ್ಲಿರಲೆಂದು ಆಶಿಸುತ್ತಾರೆ. ನಿಸರ್ಗಕ್ಕೆ ಮಣಿಯದ ಕವಿಯಿಲ್ಲ. ಕುಣಿದು ಹಾಡದ ಮನವಿಲ್ಲವೆಂಬ ಮಾತಿಗೆ ಇವರ ಬರಹ ಸಾಕ್ಷಿಯಾಗಿದೆ. ಪ್ರಕೃತಿಯಲ್ಲಿ ಸಂಪೂರ್ಣ ತನ್ನನ್ನು ತಾನು ತಲ್ಲೀನಗೊಳಿಸಿಕೊಂಡು, ಆ ಸೊಬಗನ್ನು ರಸಿಕರಿಗೆ ಉಣಬಡಿಸುತ್ತಾರೆ. ಅವರ ಪ್ರತಿಯೊಂದು ಮಾತಿನಲ್ಲೂ ಆತ್ಮೀಯ ಸ್ಪಂದನವಿದೆ. ಖಚಿತತೆ, ಸಮರ್ಥನೆ ಇದೆ. ಸತ್ಯ ನಿಷ್ಠೆ ಇದೆ. 'ದುಡಿಮೆಯೊಂದೇ, ದ್ರವ್ಯಾರ್ಜನೆಯೊಂದೇ ಪರಮೋಚ್ಚ ಗುರಿಯೆಂದು ನಂಬಿರುವವನಿಗೆ, ಸುಖೋಪಭೋಗ ಹಾಗೂ ವಸ್ತು ಶೇಖರಣೆ ಜೀವನದ ಪುರುಷಾರ್ಥ ವೆನಿಸಿದರೆ ಅಚ್ಚರಿಯೇನು? ಈ ಹಣ ಗಳಿಕೆಯ ಒಂದು ಕಾಳಜಿಯಿಂದ ಮನುಷ್ಯನ ಅನೇಕ ಸೂಕ್ಷ್ಮಾನುಭವಗಳು ಮಣ್ಣುಪಾಲಾಗುತ್ತವೆ. ...ಮುಂದೊಂದು ದಿನ ತನ್ನ ಗಳಿಕೆಯೂ ತನ್ನನ್ನು ಉಳಿಸಿಕೊಳ್ಳಲಾಗದ ಹಂತ ತಲಪುತ್ತಾನೆ. ಘಟ ಒಡೆಯುತ್ತದೆ. ವಿದ್ಯೆ, ಸಂಸ್ಕೃತಿಗಳ ಗಂಧಗಾಳಿಯಿರದವನನ್ನೂ ಹಣ ಸನ್ಮಾನ್ಯರ ಪಟ್ಟಿಗೆ ಸೇರಿಸುತ್ತದೆ. ಸೈಟು, ಬಂಗಲೆ, ಕಾರು, ವಿ.ಸಿ.ಆರ್.—ಹೀಗೆ, ಅಧಿಕ ಪ್ರತಿಷ್ಠಿತವೆನ್ನಿಸುವ ಅಳತೆಗೋಲನ್ನು ಸಮಾಜದ ಮಿಕ್ಕ ವರ್ಗಗಳು ಒಪ್ಪುವಂತೆ ಹಣ ಒತ್ತಾಯ ಹೇರುತ್ತದೆ' ಎನ್ನುವ ಶ್ರೀಯುತರ ಮಾತುಗಳು ಇಂದಿನ ನಮ್ಮ ಕಂಪ್ಯೂಟರ್ ಇಂಜಿನಿಯರುಗಳ ಸ್ಥಿತಿಗತಿಯನ್ನು ಚೆನ್ನಾಗಿ ವಿಡಂಬಿಸುತ್ತವೆ. ಜಾಗತೀಕರಣದ ಈ ಸಂದರ್ಭದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ನಮ್ಮ ಯುವಕರಿಗೆ ಲಕ್ಷಾಂತರ ರೂಪಾಯಿ ಹಣ ಕೊಟ್ಟು, ಕಾರು, ಬಂಗಲೆಗಳಲ್ಲಿ ವಾಸಿಸುವಂತೆ ಮಾಡಿರ ಬಹುದು. ಆದರೆ ಅವರ ಸೂಕ್ಷ್ಮಾತಿಸೂಕ್ಷ್ಮ ಮನಸ್ಸನ್ನು, ಪ್ರೀತಿ ಪ್ರೇಮದ ಕ್ಷಣಗಳನ್ನು ಹಾಳುಮಾಡಿರುವುದಂತೂ ಸತ್ಯ. ದೇಹಕ್ಕೆ ಐಹಿಕ ಸುಖ ಬೇಕು, ಆತ್ಮಕ್ಕೆ ಪಾರಮಾರ್ಥಿಕ ತೃಪ್ತಿ ಬೇಕು. ಇವೆರಡನ್ನೂ ನಾವು ಹೇಗೆ ಪಡೆಯಬೇಕೆಂಬುದಕ್ಕೆ ಪ್ರೊ. ನಿಸಾರರು ಕಂಡ ನಿಸರ್ಗವನ್ನು ಇಂದಿನ ಯುವಕ ಯುವತಿಯರು ತಪ್ಪದೇ ಓದಬೇಕು.

ಮರ ಗಿಡಗಳ ಪರೋಪಕಾರತೆ ನಮಗೆ ಇಂದು ಅನುಕರಣೀಯವಾಗಬೇಕು. ಪ್ರಕೃತಿಯನ್ನು ನುಂಗಿ ನೊಣೆಯುವ ಹಂಬಲ ಹೆಚ್ಚಾದರೆ, ಬದುಕು ಬರಡಾಗುತ್ತದೆಂಬು ದನ್ನು ತಮ್ಮ ಪ್ರಬಂಧದಲ್ಲಿ ಅಲ್ಲಲ್ಲೇ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಮನುಷ್ಯನ ಆಲೋಚನೆಗಳು ಭೌತಿಕ ಸುಖ ಸಂಪತ್ತಿನ ಕಡೆಗೆ ಮಾತ್ರ ಮೀಸಲಾಗಬಾರದು. ಪರಸ್ಪರ ಪ್ರೇಮ ಭಾವನೆಗಳನ್ನು ಪಶು ಪಕ್ಷಿ ಪ್ರಾಣಿಗಳಿಂದ, ಪ್ರಕೃತಿಯಿಂದ ಕಲಿಯುವುದಿದೆ ಎನ್ನುವುದನ್ನು ಶ್ರೀಯುತರು ತಾವು ಕಂಡುಂಡ ಅನುಭವಗಳ ಮೂಲಕ ಸಾದರಪಡಿಸುತ್ತಾ ಸಾಗುವ ಸರಳ ಸುಲಲಿತ ಗದ್ಯಶೈಲಿ ಓದುಗರ ಅಂತರಂಗದಲ್ಲಿ ಚೈತನ್ಯವನ್ನು ತುಂಬುತ್ತದೆ. ಕಾಲದ ಗಣನೆಯಿಲ್ಲದೆ ಜೀವಿಸುವುದು ಆಧುನಿಕರ ಜೀವನ ಶೈಲಿ. ಬಹಿರಂಗ ಚೆನ್ನಾಗಿರ ಬೇಕಾದರೆ ಮಾನಸಿಕ ನೆಮ್ಮದಿ ಮುಖ್ಯ. ಇದನ್ನು ಪಡೆದುಕೊಳ್ಳುವ ಬಗೆ ಹೇಗೆಂಬುದನ್ನು ಪ್ರೊ. ನಿಸಾರರು ನಿಸರ್ಗದ ಒಡನಾಟದೊಂದಿಗೆ ಇದ್ದ ತಮ್ಮ ಅನುಭವದಿಂದ ಉಣಬಡಿಸುವ ರೀತಿ ತುಂಬಾ ಆಪ್ಯಾಯಮಾನವಾಗಿದೆ.

ಕುವೆಂಪು, ಬೇಂದ್ರೆ, ಮಾಸ್ತಿ ಮೊದಲಾದ ಮಹಾನ್ ಲೇಖಕರನ್ನು ಅವರು ಇನ್ನಿಲ್ಲದ ಪ್ರೀತಿ ಗೌರವಗಳಿಂದ ನೆನೆಯುತ್ತಾರೆ. 'ವರ್ಡ್ಸ್‌ವರ್ತ್, ಷೆಲ್ಲಿ, ಕುವೆಂಪು,

ಬೇಂದ್ರೆಯವರಂಥವರ ಅನುಭವದ ಉತ್ಕಟತೆ ಎಲ್ಲರಿಗೂ ಲಭ್ಯವಲ್ಲ. ರಾಮಕೃಷ್ಣ ಪರಮಹಂಸರಿಗಂತೂ ಸೃಷ್ಟಿಯಲ್ಲಿ ಸರ್ವೇಶ್ವರನ ಸಾಕ್ಷಾತ್ಕಾರ ದರ್ಶನ ಪಡೆಯುವುದು ನೀರು ಕುಡಿದಷ್ಟು ಸುಲಭವಾಗಿತ್ತು. ಬೇಂದ್ರೆಯವರು ಮುಂಜಾವಿನ ಮೋಹಕತೆಯಲ್ಲಿ ಮೈಗರೆದು ಹೋಗಿ, ಗಂಧರ್ವರ ಸೀಮೆಯ ದರ್ಶನವನ್ನೇ ಮಾಡುತ್ತಾರೆ. ಕುವೆಂಪು ಅವರ ರಸದೃಷ್ಟಿಗೆ ದಟ್ಟ ಅರಣ್ಯ ಕಲಾ ಶಂಕರವಾಗುತ್ತದೆ.' ಹೀಗೆ ಹೇಳುವ ಲೇಖಕರು, ಇಂಥ ಮಹಾ ಮೇಧಾವಿಗಳಿಗೆ ಸ್ಫೂರ್ತಿಯಾದುದು ನಿಸರ್ಗವಾದುದರಿಂದ ನಾವೂ ಕೂಡ ಆ ಕಡೆಗೆ ಹೆಜ್ಜೆ ಹಾಕಬೇಕೆಂಬ ತುಡಿತವನ್ನುಂಟುಮಾಡುತ್ತಾರೆ. ಇವರು ಕಟ್ಟಿಕೊಡುವ ಚಿತ್ರಗಳಲ್ಲಿ ಆತ್ಮೀಯ ಭಾವ ಹಾಗೂ ಅಂತರಂಗ ದರ್ಶನವಿದೆ. ಹೀಗಾಗಿ ಪರಿಸರ ಪ್ರೇಮಿ, ಪ್ರಕೃತಿ ಕವಿಯ ಪರಿಶ್ರಮ ಎತ್ತರ ಬಿತ್ತರಗಳು ಓದುಗರ ಮನಃಪಟಲದ ಮೇಲೆ ಅಚ್ಚೊತ್ತಿ ನಿಲ್ಲುತ್ತವೆ. ಇಂದು ಸರ್ಕಾರ ಪರಿಸರದ ಸ್ವಚ್ಛತೆಗಾಗಿ, ಕಾಡನ್ನು ಉಳಿಸಲಿಕ್ಕಾಗಿ ನೂರಾರು ಯೋಜನೆ ಗಳನ್ನು ಹಮ್ಮಿಕೊಂಡಿದೆಯಾದರೂ ಜನತೆ ಆ ಕಡೆ ಇನ್ನೂ ಹೆಚ್ಚು ಗಮನ ನೀಡಬೇಕಾದರೆ, ಇಂಥ ಲೇಖಕರ ಪ್ರಬಂಧಗಳನ್ನು ಪಠ್ಯ ವಿಷಯವನ್ನಾಗಿ ಶಾಲಾ ಕಾಲೇಜುಗಳಲ್ಲಿ ಕಲಿಸ ಬೇಕಾದದ್ದು ತೀರಾ ಅಗತ್ಯವೆಂದು ಹೇಳಬಯಸುತ್ತೇನೆ.

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಶ್ರೇಷ್ಠ ಕವಿಗಳಾಗಿರುವಂತೆಯೇ ಶ್ರೇಷ್ಠ ಗದ್ಯ ಬರಹಗಾರರಾಗಿಯೂ ಸಹೃದಯರನ್ನು ತಲಪಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಗೈದು, ಪಾಶ್ಚಿಮಾತ್ಯ ಸಂಸ್ಕೃತಿಗಿಂತ ನಮ್ಮ ಪರಂಪರೆಯ ಭವ್ಯತೆ ಎಷ್ಟು ದೊಡ್ಡದೆಂಬುದನ್ನು ಸರಳವಾಗಿ, ಪರಿಣಾಮಕಾರಿಯಾಗಿ ಅವರ ಬರಹಗಳು ನಿರೂಪಿಸುತ್ತವೆ. ಈ ಮಹನೀಯರು ವಾಸ್ತವ ಸಂಗತಿಗಳನ್ನು ಕಟ್ಟಿಕೊಡುವಾಗ ಬಳಸುವ ಶಬ್ದಗಳು, ಪ್ರಾಸಗಳು, ಗಾದೆ ಮಾತುಗಳು, ಪಡೆನುಡಿಗಳು ಚಿಂತನಮಯವಾಗಿ ಪರಿವರ್ತನೆಗೊಳ್ಳು ತ್ತವೆ, ಸಂಸ್ಕೃತಿಯ ಕಡೆಗೆ ಕರೆದೊಯ್ಯುತ್ತವೆ. ಸಾಹಿತ್ಯಗುಣ ಅವರ ಸುಂದರ ಬರವಣಿಗೆಯ ಶಕ್ತಿ. ನೀತಿ ಮೌಲ್ಯಗಳ ನಡೆ ಅವರ ಉತ್ತಮ ಸಂಸ್ಕಾರದ ಫಲಗಳು. ಇಂತೆಲ್ಲಾ ಪ್ರೀತಿಯ ಮೇಸ್ಟ್ರು ಪ್ರೊ. ನಿಸಾರ್‌ರನ್ನು ಕುರಿತು ನಾವು ಹೇಳಿದರೂ ಅವರು ಮಾತ್ರ, 'ಮನುಷ್ಯನ ಎಷ್ಟೋ ಅನುಭವಗಳು ಶಬ್ದಗಳಲ್ಲಿ ಕಾಲೂರದೆ, ಅರ್ಧಂಬರ್ಧ ಅಪೂರ್ಣವಾಗಿ ಅಂಕಿತ ವಾಗಿರುತ್ತವೆ. ನನಗಾದ ಅಪೂರ್ವ ಪಡುಹಗಳಲ್ಲಿ ನುಡಿಗೆ ನಿಲುಕಿದ್ದು ಇಷ್ಟು. ತಪ್ಪಿಸಿಕೊಂಡು ಹೊರಗುಳಿದವು ಇನ್ನೆಷ್ಟೋ! ಹೊಳೆದದ್ದು ತಾರೆ, ಉಳಿದದ್ದು ಆಕಾಶ' ಎನ್ನುವಲ್ಲಿ ಅವರ ವಿನೀತ ಭಾವ ವ್ಯಕ್ತವಾಗುತ್ತದೆ.

ಸಂಸ್ಕೃತಿ ಆಳದಲ್ಲಿ ಸ್ಥಿರವಾಗಿ ನೆಲೆಯೂರಿ ಮೇಲ್ಮುಖವಾಗಿ ಮೆರೆಯುವ ಶಿಖರಾಗ್ರ. ಹೊಸ ಆವಿಷ್ಕಾರಗಳ ತೊರೆಗಳನ್ನು ಮೈಗೂಡಿಸಿಕೊಂಡು ನಿಟ್ಟೋಟದಲ್ಲಿರುವ ನದಿ ನಾಗರಿಕತೆ.



ನಿಸಾರರ ಗದ್ಯದಲ್ಲಿ ತಾತ್ತ್ವಿಕ ನಿಲುಮೆಗಳು

♦ ಅರವಿಂದ ಚೊಕ್ಕಾಡಿ

ಪುರೋಹಿತಶಾಹಿ ಮತ್ತು ರಾಜಕಾರಣಗಳ ಕೈಯಲ್ಲಿ ಸಂಸ್ಥಾರೂಪಿಯಾಗಿ ಸಂಕುಚಿತಗೊಂಡ ಧರ್ಮ, ಸ್ವಾರ್ಥೋದ್ದೇಶಕ್ಕಾಗಿ ಬಳಸಲ್ಪಡುವ ಸಮರ್ಥ ಆಯುಧವಾಗಿದೆ. ಸ್ವಂತ ಒಳಿತಿನ ಸಾಧನೆಗಾಗಿ ಅವರು ಆಗಿಂದಾಗ್ಗೆ ಝಳಪಿಸುತ್ತ ಪೌರರ ಮಾರಣ ಹೋಮ ನಡೆಸುತ್ತ ಮುಂದುವರಿದಿರುವುದನ್ನು ಚರಿತ್ರೆಯ ಪುಟಪುಟವೂ ದಾಖಲಿಸುತ್ತದೆ—ಈ ಮಾತುಗಳು ದಟ್ಟವಾದ ಎಡ ಪಂಥಿಯ ಪ್ರಭಾವದಿಂದ ಬಂದಿರುವಂತಹವು. ಥಟ್ಟನೆ ಕಾರ್ಲ್ ಹೆನ್ರಿಕ್ ಮಾರ್ಕ್ಸ್‌ಅನ್ನು ನೆನಪಿಸುವಂತಹವು.

'ಲೌಕಿಕ ಸುಖ ಸ್ವಾಸ್ಥ್ಯದ ಮತ್ತೊಂದು ವಿಶೇಷ ಅಂಶವೆಂದರೆ ರೋಜದ ರೇಕಿನಂಥ ಅದರ ನಾಜೂಕತೆ ಮತ್ತು ಬೇಗ ಮುದುರಿ ಮಾಸಲಾಗಿ ಮಾಮೂಲಿಯಾದಂತೆ ಮನಸ್ಸಿಗೆ ಭಾಸವಾಗುವ ಲಕ್ಷಣ. ಆ ಸುಖ ದೊರಕಿದ ಹೊಸದರಲ್ಲಿ ಅದು ನಮ್ಮಲ್ಲಿ ಮೊಳೆಯಿಸುವ ರೋಮಾಂಚ ಹಾಗೂ ಆಕರ್ಷಕತೆಗಳು ಅಲ್ಪ ಸಮಯದಲ್ಲೇ ಬಣ್ಣಗೆಟ್ಟು, ಹಳಸಲಾಗಿ ಜೀವಕ್ಕೆ ಬಿಡಿಚಲು ಬಿಡಿಸಿ ಸಾಕೆನ್ನಿಸುತ್ತವೆ'—ಇವು ಕುರುಡು ಸಂಪ್ರದಾಯ ಶರಣತೆಯನ್ನು ನೆನಪಿಸುವ ಮಾತುಗಳಲ್ಲ. ಆದರೆ ಸ್ಥಾಪಿತ ಎಡ ಪಂಥೀಯ ನಿಲುಮೆಯ ಮಾತುಗಳೂ ಅಲ್ಲ. ಈ ಮಾತುಗಳು ಥಟ್ಟನೆ ಗಾಂಧಿಯನ್ನು ನೆನಪಿಸುವಂತಸವು.

ಈ ಎರಡೂ ಬಗೆಯ ಮಾತುಗಳನ್ನು ನಿತ್ಯೋತ್ಸವದ ಕವಿ ಡಾ. ಕೆ. ಎಸ್. ನಿಸಾರ್ ಅಹಮದ್ ಬರೆಯುತ್ತಾರೆ. ಹಾಗೆ

ಬರೆಯುತ್ತಾರೆ ಎನ್ನುವುದು ತಾತ್ತ್ವಿಕವಾಗಿ ಅವರು ಏನನ್ನು ಪ್ರತಿನಿಧಿಸಬಯಸಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಈ ಅಂಶವನ್ನು ವಿಸ್ತರಿಸುವ ಮುನ್ನ ಆಧುನಿಕ ಜಗತ್ತಿನ ಎರಡು ಹಿನ್ನೆಲೆಗಳ ಬಗ್ಗೆ ಹೇಳಬೇಕು. ಆ್ಯಡಂ ಸ್ಮಿತ್ ಕಟ್ಟಿಕೊಡುವ ಕ್ಯಾಪಿಟಲಿಸ್ಟಿಕ್ ಆಕೃತಿಯಾಗಲಿ, ಮಾರ್ಕ್ಸ್‌ನ ಸೋಷಿಯಲಿಸ್ಟಿಕ್ ಆಕೃತಿಯಾಗಲಿ—ಅವುಗಳ ಹಿಂದೆ 'ಸಿವಿಕ್ ಸೆನ್ಸ್' ಕೆಲಸ ಮಾಡುತ್ತದೆ.ಯಾಕೆಂದರೆ ಪಶ್ಚಿಮದಲ್ಲಿರುವುದು 'ಸಿವಿಕ್ ಸೊಸೈಟಿ'. ಸಿವಿಕ್ ಸೊಸೈಟಿಯು 'ಕಾರಣ' ಮತ್ತು 'ಉದ್ದೇಶ'ಗಳ ಆಧಾರದಲ್ಲಿ ರಾಜಕೀಯ ರೂಪದಲ್ಲಿ ತಾರ್ಕಿಕವಾಗಿ ಸಂಘಟಿತವಾಗಿರುತ್ತದೆ. ಅಲ್ಲಿ ತಾರ್ಕಿಕ ತಿಳಿವಳಿಕೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಬೇರೆ ಬೇರೆ ಜ್ಞಾನ ಶಿಸ್ತುಗಳು ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡು ಬಾಳಬಲ್ಲವಾಗುತ್ತವೆ. ಆದರೆ ಭಾರತ-ಆಫ್ರಿಕಾ-ಪರ್ಶಿಯಾಗಳಂತಹ ಪ್ರದೇಶಗಳಲ್ಲಿ ಸಿವಿಕ್ ಸೊಸೈಟಿ ಇಲ್ಲ. ಬದಲು ಕಲ್ಚರಲ್ ಕಮ್ಯುನಿಟಿಗಳಿವೆ. ಇಲ್ಲಿ ಸಮಾಜವು 'ಕಾರಣ' ಮತ್ತು 'ಉದ್ದೇಶ'ಗಳ ಆಚೆಗೆ ನಿಂತು ತರ್ಕಾತೀತ ಗ್ರಹಿಕೆಗಳನ್ನೂ ಇಟ್ಟುಕೊಂಡು ತನ್ನ ಅಸ್ತಿತ್ವವನ್ನು ಕಂಡುಕೊಂಡಿರುತ್ತದೆ. ಇಲ್ಲಿ ಬೇರೆ ಬೇರೆ ಜ್ಞಾನ ಶಿಸ್ತುಗಳ ಮುಖಾಮುಖಿ ಯಿಂದ ಹುಟ್ಟಿಕೊಂಡ ಅರಿವು ಸಮಾಜವನ್ನು ನಿಯಂತ್ರಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಕಲ್ಚರಲ್ ಕಮ್ಯುನಿಟಿಗಳ ಹಿಂದೆ ಬೃಹತ್ ಧಾರ್ಮಿಕ ಹಿನ್ನೆಲೆ ಇದ್ದು ಅದನ್ನು ಕಳೆದು ಕೊಂಡು ಕಲ್ಚರಲ್ ಕಮ್ಯುನಿಟಿಗಳು ಬಾಳಲಾರವು. ಒಂದು ಉದಾಹರಣೆಯನ್ನು ನೋಡಿ. ಕುವೆಂಪು 'ಶೂದ್ರ ತಪಸ್ವಿ'ಯನ್ನು ಬರೆಯುತ್ತಾರೆ. 'ಶ್ರೀ ರಾಮಾಯಣ ದರ್ಶನಂ' ಅನ್ನು ಬರೆಯುತ್ತಾರೆ. ಆದರೆ ಮೂಲ 'ಶೂದ್ರ ತಪಸ್ವಿ,' ಮೂಲ 'ರಾಮಾಯಣ' ಎತ್ತಿಹಿಡಿಯುವ ಮೌಲ್ಯವೂ ಕುವೆಂಪು ಎತ್ತಿಹಿಡಿಯುವ ಮೌಲ್ಯವೂ ಒಂದೇ ಅಲ್ಲ. ಹಾಗಂತ ಸೆಕ್ಯುಲರ್ ಪಾತ್ರಗಳನ್ನೇ ಇಟ್ಟುಕೊಂಡು ಆ ಮೌಲ್ಯಗಳನ್ನು ಪ್ರತಿಪಾದಿಸಲು ಕುವೆಂಪುಗೆ ಸಾಧ್ಯವಿಲ್ಲ ವೆಂದಲ್ಲ. ಆದರೆ ಮೌಲ್ಯಗಳು ಯಾವುದೇ ಇರಲಿ ಕಲ್ಚರಲ್ ಕಮ್ಯುನಿಟಿಗಳಿಗೆ ತಲಪ ಬೇಕಾದರೆ ಧಾರ್ಮಿಕ ಹಿನ್ನೆಲೆಯ ಅಗತ್ಯ ಕುವೆಂಪುಗೆ ಮನವರಿಕೆಯಾಗಿತ್ತು. ಆದ್ದರಿಂದಲೇ ಭಾರತದಲ್ಲಿ ಹೊಸ ಹೊಸ ಮೌಲ್ಯಗಳೊಂದಿಗೆ ರಾಮಾಯಣ-ಮಹಾಭಾರತಗಳು ಮತ್ತೆ ಮತ್ತೆ ಬರೆಯಲ್ಪಡುತ್ತಲೇ ಇರುತ್ತವೆ. ಜನಪದೀಯ ಆಕೃತಿಗಳಾದ 'ಕಾನೂರು ಹೆಗ್ಗಡತಿ', 'ಬೆಟ್ಟದ ಜೀವ'ದಂತಹವುಗಳು ಸೃಷ್ಟಿಸುವ ಸಾಂಸ್ಕೃತಿಕ ಸನ್ನಿವೇಶಗಳ ಹಿಂದೆ 'ಧಾರ್ಮಿಕ' ಕಲ್ಪನೆಗಳು ಕೆಲಸ ಮಾಡುತ್ತವೆ. ಸ್ವತಃ ನಿಸಾರ್‌ಅವರ ಬಹು ಪ್ರಸಿದ್ಧ 'ನಿತ್ಯೋತ್ಸವ'ದ ಹಿಂದೆ ಕೆಲಸ ಮಾಡಿರುವ ಕಲ್ಪನೆಗಳು ಧಾರ್ಮಿಕ ನೆಲೆಯವುಗಳು. ಅದಕ್ಕಾಗಿಯೆ 'ನಿತ್ಯೋತ್ಸವ' ಎಂಬ ಕಲ್ಪನೆಯು 'ಪ್ರೊಸೆಷನ್' ಕಲ್ಪನೆಗಿಂತ ಆಚೆಗೆ ನಿಲ್ಲುತ್ತದೆ. 'ಫೆಸ್ಟಿವಲ್' ಕಲ್ಪನೆಯನ್ನು ಮೀರಿ ನಿಲ್ಲುತ್ತದೆ. ಹಾಗೆ ನೋಡಿದರೆ ಬಹುಶಃ ಭಾರತದಲ್ಲಿ ರೂಪುಗೊಂಡ ಯಾವ ಸೃಜನಶೀಲ ಆಕೃತಿ ಕೂಡ ಬಹು ಸಂಸ್ಕೃತಿಗಳ ಧಾರ್ಮಿಕ ಹಿನ್ನೆಲೆ ಯನ್ನು ಕೈಬಿಟ್ಟಿರಲು ಸಾಧ್ಯವಿಲ್ಲ. ಬುದ್ಧ, ತಿರುವಳ್ಳುವರ್, ಬಸವಣ್ಣ, ವಿವೇಕಾನಂದ, ಗಾಂಧಿಯಂತಹವರು ಕಟ್ಟಿಕೊಟ್ಟ ವೈಚಾರಿಕ ಆಕೃತಿಗಳು ಕೂಡ ಈ ಹಿನ್ನೆಲೆಯನ್ನು ಬಿಟ್ಟುಕೊಟ್ಟಿವೆ.

ಆದರೆ ಆಧುನಿಕ ಸೆಕ್ಯುಲರ್ ವೈಚಾರಿಕ ಆಕೃತಿಗಳಿಗೆ ಧಾರ್ಮಿಕ ಹಿನ್ನೆಲೆಯಿಂದ

ಕಳಚಿಕೊಂಡು 'ಸಿವಿಕ್ ಸೆನ್ಸ್'ಅನ್ನು ಪ್ರತಿಪಾದಿಸಲು ಸಾಧ್ಯವಾಗಿದೆ ಅಥವಾ ವೈಚಾರಿಕ ಆಕೃತಿಗಳಿಗೆ 'ಸಿವಿಕ್ ಸೆನ್ಸ್' ಹೇಳಿ ಮಾಡಿಸಿದಂತಿರುತ್ತದೆ ಎಂಬುದನ್ನು ಗಮನಿಸಬೇಕು. ಯಾಕೆಂದರೆ ವೈಚಾರಿಕತೆಯು ಎಲ್ಲೋ ಒಂದು ಕಡೆ 'ತರ್ಕ'ದೊಂದಿಗೆ ಸಂಬಂಧ ಸಾಧಿಸಲೇ ಬೇಕಾಗುತ್ತದೆ. 'ತರ್ಕ' ಇಲ್ಲವಾದರೆ 'ವೈಚಾರಿಕತೆ'ಗೆ ಅಸ್ತಿತ್ವವೇ ಇಲ್ಲ. ಅಂಥಲ್ಲಿ ಗಾಂಧಿ ಯಂತಹವರು ಕೂಡ ವಿಚಾರವನ್ನು ಮಂಡಿಸುವ ಕ್ರಮದಲ್ಲಿ ತರ್ಕಾತೀತ ಗ್ರಹಿಕೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತೇ ಹೊರತು, ವಿಚಾರದ ಆತ್ಯಂತಿಕ ನಿಲುಮೆ ತರ್ಕದೊಳಕ್ಕೆ ಸೇರಿಕೊಳ್ಳಬೇಕಾಯಿತು. ಈ ತರ್ಕಾತೀತ ಗ್ರಹಿಕೆಗಳಿಗೆ ಗಾಂಧಿ, ಸಂಸ್ಕೃತಿಗಳನ್ನು ಆಧರಿಸಿದರೆ ಸಾಂಖ್ಯರು, ಬೌದ್ಧರು, ಗೀತಾಚಾರ್ಯ ಮುಂತಾದವರು ಧರ್ಮ ಮತ್ತು ಧಾರ್ಮಿಕ ಹಿನ್ನೆಲೆಗಳನ್ನು ತೆಗೆದುಕೊಂಡರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೇರೆ ಬೇರೆ ರೀತಿಯ ತತ್ತ್ವಗಳನ್ನು ಪ್ರತಿಪಾದಿಸುವುದಕ್ಕಾಗಿ ಬೇರೆ ಬೇರೆ ರೂಪದಲ್ಲಿ ಧಾರ್ಮಿಕ ಮತ್ತು ಸಂಸ್ಕೃತಿಗಳ ಹಿನ್ನೆಲೆಯನ್ನು ಪ್ರೊ. ಎ.ಎನ್. ಮೂರ್ತಿರಾವ್, ಡಾ|| ಯು.ಆರ್. ಅನಂತಮೂರ್ತಿ, ಡಾ|| ಜಿ. ರಾಮಕೃಷ್ಣ, ಡಾ|| ಡಿ. ಆರ್. ನಾಗರಾಜ್ ಮುಂತಾದವರು ಬಳಸಿದ್ದಾರೆ. ಆದರೆ ಮೂಲಭೂತ ಸ್ವಭಾವದಲ್ಲಿ ಈ ಎಲ್ಲರ ಪ್ರತಿಪಾದನೆಗಳು ಬುದ್ಧಿ ಪ್ರಧಾನವಾದವುಗಳು. ಮತ್ತು ವೈಚಾರಿಕತೆಗೆ ಬುದ್ಧಿಪ್ರಾಧಾನ್ಯ ಅನಿವಾರ್ಯವೂ ಹೌದು.

ನಿಸಾರ್ ಅವರ ಗದ್ಯ ಬರಹಗಳನ್ನು ಬೇರೆಯೇ ರೀತಿಯಲ್ಲಿ ನೋಡಬೇಕಾಗಿರು ವುದು ಈ ಕಾರಣಕ್ಕಾಗಿ. ನಿಸಾರ್ ಭಾವ ಪ್ರಧಾನವಾಗಿ ಗದ್ಯ ಬರಹವನ್ನು ಬರೆಯುವ ಪ್ರಯೋಗ ಮಾಡುತ್ತಾರೆ. ಅವರ 'ಫಿರಂಗಿ ಬಾಯಿಯ ಗುಬ್ಬಚ್ಚಿ ಗೂಡು', 'ನಾಗರಿಕ ನರ ಪ್ರಾಣಿಯ ನಿಷ್ಕರುಣ ಕಥನ', 'ಆಸೆ-ಸಂಕಲ್ಪಗಳ ಅನ್ಯೋನ್ಯತೆ', 'ಅನಿಶ್ಚಿತತೆಯ ಚಿತ್ರಕ್ಕೆ ಅಮರತ್ವದ ಚೌಕಟ್ಟು', 'ಬದುಕಿನ ಇಬ್ಬದಿಗಳು', 'ದಾರಿ, ಗುರಿ, ಸಾಫಲ್ಯ', 'ಮನವ ಮಥಿಸುತಿರೋ ದಿನ ನಿತ್ಯ', 'ಯೋ ವೈ ಭೂಮಾ ತತ್ಸುಖಂ', 'ಮೊದಲಾದವರಲ್ಲಿ ಮೊದಲಿಗರು', 'ಅಮಾನವೀಯ ಮಾನವರು', 'ಕಿಡಿ: ಕಾಳ್ಗಿಚ್ಚಿಗೆ ಮುನ್ನುಡಿ', 'ಹುದ್ದೆ ಮುದ್ದೆ ನಿದ್ದೆ: ಬದುಕು ಇಷ್ಟೇನೆ ಪೆದ್ದೆ?' 'ದೇವರು, ದೀಪ, ಸಿಗರೇಟ್, ಸಿನಿಮ' 'ಬದುಕನ್ನು ಪ್ರೀತಿಸುವ ಲೈಮ್‌ಲೈಟ್' ಮುಂತಾದ ಎಲ್ಲ ಗದ್ಯ ಬರಹಗಳಲ್ಲೂ ಈ ಭಾವ ಪ್ರಾಧಾನ್ಯವನ್ನು ಕಾಣಬಹುದು. ಇದು ನಿಸಾರ್ ಅವರು ಉದ್ದೇಶಪೂರ್ವಕವಾಗಿ ಮಾಡಿದ ಪ್ರಯೋಗವೋ, ಇಲ್ಲವೆ ಕವಿಯಾದ ನಿಸಾರರಿಗೆ ಸಹಜವಾಗಿ ಸಿದ್ಧಿಸಿದ ಕಲೆಯೋ ಗೊತ್ತಿಲ್ಲ. ಆದರೆ ಕಾವ್ಯವೇ ವಿಚಾರ ಪ್ರಧಾನ ಮಾತಿನ ಓಘವಾಗಿ ಬದಲಾಗಿರುವ ಕಾಲಘಟ್ಟದಲ್ಲಿ, ನಿಸಾರ್ ಅದರ ವಿರುದ್ಧ ದಿಕ್ಕಿನಲ್ಲಿ ಎತ್ತಿ ಕೊಂಡಿರುವ ಪ್ರಯೋಗಶೀಲತೆ ಅಭಿನಂದನಾರ್ಹ ವಾದುದು.

ಭಾವ ಪ್ರಧಾನವಾಗಿ ವಿಚಾರವನ್ನು ಮುಂದಿಡಲು ತೊಡಗುವ ನಿಸಾರ್ ಅವರಿಗೆ ವಿಚಾರವನ್ನು ಅರಿವಿನ ಸ್ತರಕ್ಕೆ ಒಯ್ಯುವುದು ಅನಿವಾರ್ಯವಾಗುತ್ತದೆ. ಆಗ ನಿರೂಪಣಾ ತಂತ್ರದ ಸಮಸ್ಯೆ ಮುಂದಾಗುತ್ತದೆ. ಆದ್ದರಿಂದಲೇ ಇಲ್ಲಿ 'ಲಹರಿ' ಶೈಲಿಯು ಪ್ರಧಾನವಾಗಿ ಕೆಲಸ ಮಾಡಿರುವುದನ್ನು ಕಾಣಬಹುದು. ವಿಚಾರವು 'ಲಹರಿ'ಯಾಗಿ ಪರಿವರ್ತಿತವಾದಾಗ ಅದರ ಬಗ್ಗೆ ಹೇಳಹೊರಟಿರುವ ನನಗೂ ಸಹ ಸಮಸ್ಯೆ ಉಂಟಾಗುತ್ತದೆ. ಆಗ ನಾನು

ವಸ್ತುವನ್ನು ಮುಖ್ಯವಾಗಿ ಇಟ್ಟುಕೊಂಡು ಚರ್ಚೆ ಮಾಡಲು ಬರುವುದಿಲ್ಲ. ಬದಲು ಈ ರೂಪದ ವಸ್ತುವನ್ನು ನಿರೂಪಿಸಬೇಕಾದರೆ ನಿಸಾರ್ ಅವರ ಮನಸ್ಸು ಯಾವ ರೀತಿ ಕೆಲಸ ಮಾಡಿರಬಹುದು ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಚರ್ಚೆಯನ್ನು ಎತ್ತಿಕೊಳ್ಳಬೇಕಾಗುತ್ತದೆ. ಅಂತಹ ಒಂದು ಪುಟ್ಟ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ನಿಸಾರ್ ಸಾವಿನ ಬಗ್ಗೆ ಬರೆಯುತ್ತಾರೆ. ಆದರೆ ಮಹಾಭಾರತದಲ್ಲಿ ಭಾರದ್ವಾಜ ಹೇಳುವಂತೆ 'ಮನುಷ್ಯ ಸತ್ತರೆ ಸತ್ತನೇ. ಆಮೇಲೆ ಏನೂ ಉಳಿಯುವುದಿಲ್ಲ' ಎನ್ನುವಂತಹ ಪ್ರಾಚೀನ ಭಾರತದ ಲೋಕಾಯತರು ಅನುಸರಿಸಿದ ವೈಚಾರಿಕ ಒರಟುತನದಿಂದ ಬರೆಯುವುದಿಲ್ಲ. ಹಾಗಂತ ಅವರವರ ಕರ್ಮ ಫಲಗಳಿಗೆ ಅನುಗುಣವಾಗಿ ಪುನರ್ಜನ್ಮ ಪ್ರಾಪ್ತವಾಗುತ್ತದೆ; ಆದ್ದರಿಂದ ಒಳ್ಳೆಯ ಕೆಲಸಗಳನ್ನು ಮಾಡಬೇಕು ಎನ್ನುವ ಕರ್ಮ ಸಿದ್ಧಾಂತದ ಆಧಾರದಲ್ಲಿಯೂ ಸಾವನ್ನು ಗ್ರಹಿಸುವುದಿಲ್ಲ. ಬದಲು, ಮೊದಲು 'ಸಾವು' ಎನ್ನುವುದಕ್ಕೆ ವಿಶಿಷ್ಟವಾದ ಅನುಭವ ಲೋಕವನ್ನು ಸೃಷ್ಟಿಸುತ್ತಾರೆ. ಉದಾಹರಣೆಯಾಗಿ ಈ ಮಾತುಗಳನ್ನು ನೋಡಿ—'*ಕಾಶ್ಮೀರದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬ ಸ್ಕೂಟರಿನ ಮೇಲೆ ಹೋಗುತ್ತಿದ್ದ. ಸುತ್ತಣ ನಿಸರ್ಗ ನಿರುಪದ್ರವಕರ, ಚೇತೋಹರವಾಗಿತ್ತು. ಸುಶ್ರಾವ್ಯ ಗಾಯನದಲ್ಲಿ ಬೇಸೂರಿನ ಎಳೆ ಹಾಯ್ದಂತೆ ಅವನ ತಲೆಯ ಮೇಲೆ ಎತ್ತರದಲ್ಲಿ ಹದ್ದೊಂದು ನಾಗರ ಹಾವನ್ನು ಕಚ್ಚಿಕೊಂಡು ಹಾರಾಡುತ್ತಿತ್ತು. ಅದು ಅವನ ಗಮನಕ್ಕೆ ಬರಲಿಲ್ಲ. ಹದ್ದಿನ ಕೊಕ್ಕು ಪಂಜಗಳಿಂದ ಹಾವು ತಪ್ಪಿಸಿಕೊಳ್ಳಲು ಹೆಣಗಾಡುತ್ತಿತ್ತು. ಹದ್ದು ತನ್ನ ಹಿಡಿತ ಸಡಿಲಿಸದೆ ಜೋಲಿ ತಪ್ಪಿ ಅತ್ತಿತ್ತ, ಮೇಲೆ ಕೆಳಗೆ ಹಾರಿತ್ತು. ಬಹಳ ಸೆಣಸಾಡಿದ ಮೇಲೆ ಹಾವು ಹದ್ದಿನಿಂದ ಹೇಗೋ ತಪ್ಪಿಸಿಕೊಂಡು ಸ್ಕೂಟರ್ ಸವಾರನ ಮೇಲೆ ಬಿದ್ದು ಅವನನ್ನು ಕ್ಷಣಾರ್ಧದಲ್ಲಿ ಕಚ್ಚಿತು. ಗಾಬರಿಗೊಂಡ ಯುವಕ ಸ್ಕೂಟರಿನಿಂದ ಕೆಳಗುರುಳಿದ. ಅಪಘಾತ, ಹಾವಿನ ವಿಷ, ಹಠಾತ್ ಆಘಾತ ಅವನನ್ನು ಸಾವಿನ ದವಡೆಗೆ ನೂಕಿದವು. ಇಲ್ಲಿನ ವಿಪರ್ಯಾಸವೆಂದರೆ, ಅಂಥ ತೆರವಾದ ಪ್ರಕೃತಿಯ ಹರಹಿನಲ್ಲಿ ಹಾವು ಮತ್ತೆಲ್ಲೂ ಬೀಳದೆ ಸರಿಯಾಗಿ ಸ್ಕೂಟರಿನ ಮೇಲೆ ಬೀಳಬೇಕೇ?*'

ಈ ಮಾತುಗಳ ಮೂಲಕ ಸಾವಿನ ಅನುಭವ ಲೋಕವನ್ನು ಸೃಷ್ಟಿಸುವ, ಆ ಅನುಭವ ಲೋಕದೊಳಗಿನ ವೈರುಧ್ಯಗಳ ಮುಖಾಮುಖಿ ಮಾಡುವ ಪರಿಯನ್ನು ಕಾಣಬಹುದು. ನಿಸರ್ಗದ ಚೇತೋಹಾರಿ ಸ್ಥಿತಿ, ಸುಶ್ರಾವ್ಯ ಗಾನ, ಇವೆಲ್ಲ ರಮಣೀಯ ಕಲ್ಪನೆಗಳು. ಬಹು ಎತ್ತರದಲ್ಲಿ ಹದ್ದೊಂದು ಹಾವನ್ನು ಕಚ್ಚಿ ತೂಗಾಡುವ ಚಿತ್ರಣ ಕೂಡ ಸುಂದರವೆಂದೇ ತೋರುವಂಥಾದ್ದು. ಆದರೆ ಅದೇ ಸೌಂದರ್ಯ ಹತ್ತಿರಕ್ಕೆ ಬಂದು ಘಾಸಿಗೊಳಿಸಿದಾಗ ಉಂಟಾಗುವ ಪರಿಣಾಮ ಮಾತ್ರ ಘೋರವಾಗಿರುತ್ತದೆ. ಒಟ್ಟು ಬದುಕಿನ ಸಂತೋಷ, ಸಂಭ್ರಮ, ಸೌಂದರ್ಯದ ಒಳಗೆಯೇ ಕ್ರೌರ್ಯ ಇರುವುದನ್ನು ನಿಸಾರ್ ಅವರು ಕಂಡರಿಸುವ ಕ್ರಮ ಇದು. ಈ ಅನುಭವ ಲೋಕದೊಳಗೆ ಓದುಗನನ್ನು ಕೊಂಡೊಯ್ದು ಬಳಿಕ ಅನುಭವ ಲೋಕವನ್ನು ದಟ್ಟವಾಗಿಸುವ ಕೆಲಸವನ್ನು ನಿಸಾರ್ ಅವರು ಮಾಡುತ್ತಾರೆ. ಜಿ.ಪಿ. ರಾಜರತ್ನಂ ಅವರ '*ಶ್ರೀರಂಗ್‌ಪಟ್ನದ್ ತಾವ್...*' ಕವಿತೆ, ಡಾ|| ದ. ರಾ. ಬೇಂದ್ರೆ ಅವರ '*ನೀ ಹೀಂಗ ನೋಡಬ್ಯಾಡ ನನ್ನ...*' ಕವಿತೆ, ಜನಪದೀಯ '*ಬಡವರು ಸತ್ತರೆ....*' ಪದ್ಯ,

ರವೀಂದ್ರನಾಥ ಠಾಕೂರ್ ಸಾವನ್ನು ನೋಡುವ ಕ್ರಮ, ಸಾವಿನ ಬಗ್ಗೆ ಇರುವ ತತ್ತ್ವಜ್ಞಾನದ ಹಿನ್ನೆಲೆಯ ಗ್ರಹಿಕೆಗಳು—ಇವನ್ನೆಲ್ಲ ಪ್ರಸ್ತಾಪಿಸುತ್ತಾ ಅನುಭವ ಲೋಕದ ಪರಿಣಾಮವನ್ನು ಗಾಢವಾಗಿಸುತ್ತಾರೆ. ಇಂತಹ ಗಾಢವಾದ ಪರಿಣಾಮದ ಹಿನ್ನೆಲೆಯಲ್ಲಿ ಸಾವಿಗೆ ಇತ್ಯಾತ್ಮಕ ರೂಪು ಕೊಡುವ ಸಾರ್ಥಕ ಪ್ರಯತ್ನವನ್ನು ಮಾಡುತ್ತಾರೆ. '*ಸಾವು ಇರದಿದ್ದಲ್ಲಿ ಅಥವಾ ಅದು ಒದಗುವ ಕ್ಷಣದ ಖಾತರಿ ಮನುಷ್ಯನಿಗೆ ಇದ್ದಿದ್ದ ಪಕ್ಷದಲ್ಲಿ ಪ್ರಪಂಚದ ವಿದ್ಯಮಾನಗಳೇ ಬೇರೆ ತೆರನಾಗಿರುತ್ತಿದ್ದವು. ಬದುಕಿನ ನಿಯಮಗಳೇ ಭಿನ್ನವಾಗಿರುತ್ತಿದ್ದವು. ಮನುಷ್ಯ ಹೆಚ್ಚು ಸ್ವೈರೋನ್ಮತ್ತ, ಸ್ವಾರ್ಥಪರಾಯಣನಾಗುತ್ತಿದ್ದ. ಈಗಿಗಿಂತ ನೂರ್ಮಡಿ ನಿರಂಕುಶನಾಗಿ ಹಿಂಸೆ ಕ್ರೌರ್ಯಗಳನ್ನು ಬಿತ್ತಿ, ರಕ್ತಪಾತದ ಇಳುವರಿಯನ್ನು ಹೆಚ್ಚಿಸುತ್ತಿದ್ದ. ಮೃತ್ಯು ಬಾಳಿನ ನಾಣ್ಯಕ್ಕೆ ಬೆಲೆ ತರುವ ಸ್ಥಾಯೀ ಮೌಲ್ಯವಾಗಿದೆ*' ಎನ್ನುವ ಮಾತುಗಳ ಮುಖೇನ ಸಾವಿಗೆ ಕೊಡುವ ಇತ್ಯಾತ್ಮಕ ವಿನ್ಯಾಸ ಬಹಳ ಮುಖ್ಯವಾದದ್ದು. ಒಟ್ಟೂ ಬರಹದ ಉದ್ದೇಶವು ಸಾವಿನ ಭಯಾನಕತೆಗೆ, ಕ್ರೌರ್ಯಕ್ಕೆ, ವೇದನೆಗೆ ಕಲಾತ್ಮಕ ನೆಲೆಯನ್ನು ಒದಗಿಸುವುದು, ಆ ಮೂಲಕ ಸಾವಿನ ಗ್ರಹಿಕೆಯನ್ನು ಸಹನೀಯವಾಗಿಸುವುದಾಗಿದೆ. ಓದುತ್ತಾ ಹೋದ ಹಾಗೆ, 'ಅರೆ ಇದೆಲ್ಲ ನಮಗೆ ಗೊತ್ತೇ ಇತ್ತಲ್ಲ' ಎನಿಸುವಂತೆ ಮಾಡುವುದು, ಹಾಗೆ ಅನಿಸುವಾಗಲೇ ಗೊತ್ತಿಲ್ಲದ ಇನ್ನೊಂದು ಲೋಕಕ್ಕೆ ಪ್ರವೇಶ ಕಂಡುಕೊಳ್ಳುವಂತೆ ಮಾಡುವುದು—ನಿಸಾರ್ ಅವರ ನಿರೂಪಣಾ ಕ್ರಮದಿಂದ, ಕಾವ್ಯಾತ್ಮಕ ಶೈಲಿಯಿಂದ ಉದ್ಭವಿಸುವ ಪರಿಣಾಮವಾಗಿದೆ.

ಇದು ನಿಸಾರ್‌ಅವರು ತಳೆಯುವ ಒಂದು ಧಾಟಿಯ ತಾತ್ತ್ವಿಕ ನಿಲುಮೆ. ಈ ವಿಚಾರ ಸಾವಿಗೆ ಸಂಬಂಧಿಸಿ ಮಾತ್ರವೇ ಅನ್ವಯಿಸುವುದಿಲ್ಲ. ಮಾನವ ಸಮಾಜವನ್ನು, ಜೀವ ಜಗತ್ತನ್ನು ಕಾಡುವ ನೋವು, ದುಃಖ, ಯಾತನೆ, ಕುಸಿತಗಳೆಲ್ಲಕ್ಕೂ ಅನ್ವಯಿಸುತ್ತವೆ. ಅಂದರೆ ಬಹುಮಟ್ಟಿಗೆ ಬದುಕಿನ ಅಥವಾ ಪ್ರಪಂಚದ ನೇತ್ಯಾತ್ಮಕ ನೆಲೆಗಳಿಗೆ ಕಲಾತ್ಮಕ ವಿನ್ಯಾಸವನ್ನು ಕೊಟ್ಟು ಅದನ್ನು ಗ್ರಹಿಸುವ ಮೂಲಕ ಸಹಿಸುವ ಶಕ್ತಿಯನ್ನು ಎದುರಿಸುವ ಆತ್ಮ ಸ್ಥೈರ್ಯವನ್ನು ಒದಗಿಸುವುದು ನಿಸಾರ್ ಅವರು ತಳೆಯುವ ನಿಲುಮೆಯಾಗಿದೆ. ಈ ನಿಲುಮೆಯ ಮೂಲಕ ಅವರು ಮನುಷ್ಯನ ಅಂತರಂಗದ ಪ್ರಪಂಚವನ್ನು ದೃಢಗೊಳಿಸುವ ಕೆಲಸವನ್ನು ಮಾಡುತ್ತಾರೆ.

ನಿಸಾರ್ ಅವರು ಅಂತರಂಗದ ಪ್ರಪಂಚದಿಂದ ತಾತ್ತ್ವಿಕ ಆಕೃತಿಯನ್ನು ಕಟ್ಟುತ್ತಾರೆ ಎಂದ ತಕ್ಷಣ, ಅವರನ್ನು ನಮ್ಮ ಕವಿಕುಲ ತಿಲಕರ ಗುಂಪಿಗೆ ಸೇರಿಸುವುದು ತಪ್ಪಾಗುತ್ತದೆ. ಯಾವುದು ಈ ಗುಂಪು? ನಮ್ಮಲ್ಲಿ ಕೆಲವು ಕವಿರತ್ನರು, ಕವಿಪುಂಗವರು ಇದ್ದಾರೆ. ಸಮಾಜ ದಿಂದ ಅವರಿಗೆ ಹಾರ, ತುರಾಯಿ, ಪ್ರಶಸ್ತಿ, ಹಣ, ಅಧಿಕಾರ ಎಲ್ಲವೂ ಬೇಕು. ಆದರೆ ಅವರು ಮಾತ್ರ ಸಮಾಜಕ್ಕೆ ಬದ್ಧರಲ್ಲವಂತೆ. ಕವಿಗೆ ಏನಿದ್ದರೂ ಅಂತರಂಗದ ಪ್ರಪಂಚ ಮಾತ್ರವಂತೆ. ಕವಿ ಬರೆಯುವುದೇ ಆತ್ಮಾನಂದಕ್ಕಾಗಿಯಂತೆ! ಇಂತಹವರ ಬಗ್ಗೆ 'ಆಯತನ' ದಲ್ಲಿ ಡಾ|| ಜಿ. ರಾಮಕೃಷ್ಣ ಒಂದು ಪ್ರಶ್ನೆ ಎತ್ತುತ್ತಾರೆ. 'ಕವಿತೆಯ ಏಕೈಕ ಉದ್ದೇಶ ಆತ್ಮಾನಂದ ಎನ್ನುವುದಾದರೆ ಕವಿತೆ ಬರೆದು ಬೇಕಾದಷ್ಟು ಸಲ ಓದಿ ಆತ್ಮಾನಂದವನ್ನು ಬೇಕಾದಷ್ಟು ಪಡೆದ ಬಳಿಕ ಕವಿತೆಯನ್ನು ಸುಟ್ಟುಹಾಕಬಹುದಲ್ಲ. ಪ್ರಕಟಿಸುವುದು

ಯಾತಕ್ಕೆ?' ಈ ಪ್ರಶ್ನೆಯ ಜೊತೆ ಇನ್ನೂ ಒಂದು ಪ್ರಶ್ನೆಯನ್ನು ಎತ್ತಬೇಕು. ಕವಿತೆ ಸಾರ್ವಕಾಲಿಕ ಪ್ರಸ್ತುತತೆಯನ್ನು ಉಳಿಸಬೇಕು ಅನ್ನುವುದು ಕೆಲವರ ಪ್ರತಿಪಾದನೆ. ಯಾವ ವಿಚಾರವೂ ಸಾರ್ವಕಾಲಿಕವಲ್ಲ. ಆದರೆ ದೀರ್ಘಕಾಲಿಕವಾಗಬಹುದು. ಅದು ಬೇರೆಯ ಸಂಗತಿ. ಆದರೆ ಸಮಾಜದ ಬಗ್ಗೆ ಕಮಿಟ್‌ಮೆಂಟ್ ಬೇಡ ಅನ್ನುವ ಕವಿಯ ಕವಿತೆಗಳು ಸ್ವಾಭಾವಿಕವಾಗಿ ಆತ್ಮಗತವಾಗಿರುತ್ತವೆ. ಆತ್ಮಗತ ಸ್ವಭಾವದ ಕವಿತೆಗಳು ಕವಿ ಸತ್ತ ಮೇಲೆ ಪ್ರಸ್ತುತವಾಗಲು ಹೇಗೆ ಸಾಧ್ಯ? ಕವಿಯ ಅನಂತರವೂ ಕವಿತೆ ಪ್ರಸ್ತುತತೆಯನ್ನು ಉಳಿಸಿ ಕೊಳ್ಳಬೇಕಾದರೆ ಕವಿತೆಯಲ್ಲಿ ಸಾಮಾಜಿಕ ಅರಿವು ಇರಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಿಸಾರ್ ಅವರಲ್ಲಿ 'ನವುಲೆ ಗ್ರಾಮದ ಹನುಮ'ನ ಬಗ್ಗೆ ಪ್ರಾಮಾಣಿಕವಾದ ಕನ್ಸರ್ನ್ ಇದೆ ಎಂಬುದು ಗಮನಾರ್ಹ ಸಂಗತಿ. ಉದಾಹರಣೆಯಾಗಿ ಈ ಮಾತುಗಳನ್ನು ಗಮನಿಸಿ: '*...ದಿನಂಪ್ರತಿ ಕೋಟ್ಯಂತರ ಕಪ್ಪೆಗಳ ಕಾಲುಗಳನ್ನು ತಿರುಚಿ ಬೇರ್ಪಡಿಸುವ, ಆನೆಗಳಿಗೆ ಇನ್ನೂ ಅರೆ ಜೀವ ವಿದ್ದಾಗಲೇ ದಂತಗಳನ್ನು ರಾಕ್ಷಸೀಯವಾಗಿ ಕಿತ್ತುಕೊಳ್ಳುವ, ಹಂದಿಯನ್ನು ಗೋಣಿ ಚೀಲದಲ್ಲಿ ಬಿಗಿದು ದೊಣ್ಣೆಗಳಿಂದ ಬಡಿದು ಸಾಯಿಸುವ ಇತ್ಯಾದಿ, ಇತ್ಯಾದಿ ಅಮಾನುಷ ದುಷ್ಕೃತ್ಯಗಳೂ; ಮಕ್ಕಳನ್ನು ಅಪಹರಿಸಿ ಕೈಕಾಲು ಮುರಿದು, ಕುರುಡುಗೊಳಿಸಿ ದೂರದ ನಗರಗಳಲ್ಲಿ ತಿರುಪೆಗೆ ಹಚ್ಚುವ; ಸಹ ಮಾನವರಿಗೆ ಮಲ ತಿನ್ನಿಸುವ, ಅವರ ಹೆಣ್ಣುಗಳನ್ನು ಬತ್ತಲೆಗೊಳಿಸಿ, ತಲೆ ಬೋಳಿಸಿ ಕತ್ತೆಯ ಮೇಲೆ ಮೆರವಣಿಗೆ ಮಾಡಿಸುವ; ಯುದ್ಧ ಕೈದಿಗಳ ಕೈ ಕಾಲು ಕಟ್ಟಿ, ಬಯೊನೆಟ್ ತರಬೇತಿಯಲ್ಲಿ ಅವರನ್ನು ಜೀವಂತ ಗುರಿಗಳನ್ನಾಗಿ ಬಳಸಿ ಹಿಂಸಿಸಿ ಕೊಲ್ಲುವ, ಎರಡೂ ಹಸ್ತಗಳ ಚರ್ಮವನ್ನು ಸುಲಿದು ಬೆನ್ನ ಹಿಂದೆ ಹೆಡೆಮುರಿ ಕಟ್ಟಿ ಬೆಸೆದುಕೊಳ್ಳುವಂತೆ ಎಸಗುವ ಇತ್ಯಾದಿ ಇತ್ಯಾದಿ ಇತ್ಯಾದಿ ನಾರಕೀಯ ಪಾತಕಗಳೂ ಜಗತ್ತಿನಲ್ಲಿ ಲಾಗಾಯ್ತಿನಿಂದ ಜರುಗಿವೆ; ಜರುಗುತ್ತಿವೆ.*'

ನಿಸಾರ್ ಅವರು 'ಕಿರಿದರೊಳ್ ಪಿರಿದರ್ಥ'ವನ್ನು ಹೇಳುವ ಕ್ರಮ ಇದು. ಇಡೀ ವಿಶ್ವದ ಶೋಷಣೆಯ ಎಲ್ಲವನ್ನೂ ಕೆಲವೇ ಮಾತುಗಳಲ್ಲಿ ಮನಮುಟ್ಟುವಂತೆ ಹೇಳಿರುವ ನಿಸಾರ್ ಅವರಿಗೆ ದಟ್ಟವಾದ ಸಾಮಾಜಿಕ ಅರಿವು, ಸಾಮಾಜಿಕ ಬದ್ಧತೆ ಇದೆ ಎನ್ನುವುದಕ್ಕೆ ಎಲ್ಲ ಪ್ರಬಂಧಗಳೂ ಸಾಕ್ಷಿಯಾಗುತ್ತವೆ. ಈ ವಿಚಾರದ ಮುಖೇನ ಅವರು ಕಟ್ಟಿಕೊಡುವ ತಾತ್ತ್ವಿಕತೆಯ ಬಗ್ಗೆ ಹೇಳುವ ಮೊದಲು ಇನ್ನೊಂದು ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ.

ಎಲ್ಲಿ ಕೂಡ ನಿಸಾರ್ ಇಂತಿಂತಹ ಕಡೆ ಇಂತಹ ಶೋಷಣೆ ನಡೆದಿದೆ ಎನ್ನುವ ದಾಖಲೆಯನ್ನು ಕೊಡಲು ಹೋಗುವುದಿಲ್ಲ. ಅದಕ್ಕೆ ಇಂಥಾದ್ದೇ ಕಾರಣ, ಇಂಥವರೇ ಕಾರಣ ಎಂದು ದೋಷಾರೋಪವನ್ನು ಮಾಡುವುದಿಲ್ಲ. ಇಲ್ಲಿ ನಿಸಾರ್ ಅವರ ಮನಸ್ಸು ಕೆಲಸ ಮಾಡುವ ಕ್ರಮವನ್ನು ಗಮನಿಸಬೇಕು. ಒಬ್ಬ ವೈಚಾರಿಕನ ಪ್ರಜ್ಞೆ ಬಹಿರ್ಮುಖಿ ಚಲನೆಗೆ ಒತ್ತು ಕೊಟ್ಟಿರುವಂಥಾದ್ದು. ಅಂತಲೇ ಅವನಿಗೆ, ಅವನ ನಿಲುಮೆಯ ಸಾರ್ಥಕತೆಗೆ ಸೂಕ್ಷ್ಮ ಗ್ರಾಹಿ ಶಕ್ತಿ ಮುಖ್ಯವಾಗುತ್ತದೆ. ಒಬ್ಬ ಸೃಜನಶೀಲನ ಮನಸ್ಸು ಅಂತರ್ಮುಖಿ ಚಲನೆಗೆ ಒತ್ತು ಕೊಟ್ಟಿರುವಂಥಾದ್ದು. ಅಂತಲೇ ಅವನಿಗೆ ಧ್ಯಾನಸ್ಥ ಮನಃಸ್ಥಿತಿ ಮುಖ್ಯವಾಗುತ್ತದೆ. ಮೂಲಭೂತವಾಗಿ ನಿಸಾರ್ ಅವರದು ಧ್ಯಾನಸ್ಥ ಮನಃಸ್ಥಿತಿಯ ಒಲುವೆ ಹೊಂದಿರು ವಂಥಾದ್ದು. ಆದ್ದರಿಂದಲೇ ಅವರು ಬಹಿರ್ಮುಖಿ ಚಲನೆಯ ಕಡೆಗೆ ಹೊರಳುವಾಗ

ವಸ್ತುವನ್ನು ಸ್ವೀಕರಿಸುವ ಕ್ರಮ ಭಿನ್ನರೂಪ ತಳೆಯುತ್ತದೆ. ಅವರ ಸೂಕ್ಷ್ಮಗ್ರಹಿಕೆಗೆ ಸಿಕ್ಕಿದ ಸಂಗತಿಗಳು ನಿಖರ ವ್ಯಾಖ್ಯಾನದ ರೂಪ ತಾಳದೆ, ಧ್ಯಾನಮುಖೀ ನೆಲೆಯಲ್ಲಿ ಪ್ರಾಪ್ತವಾಗುವ ಜ್ಞಾನದ ರೂಪ ತಾಳುತ್ತವೆ. ಹಾಗಾಗಿ ಇಲ್ಲಿ ಶೋಷಣೆ-ಯಾತನೆಗಳ ನಿಖರ ಘಟನೆಗಳ ಪ್ರಸ್ತಾಪವಿಲ್ಲ. ನಿರ್ದಿಷ್ಟ ಎದುರಾಳಿ ಇಲ್ಲ. ಹಾಗಂತ ಎದುರಾಳಿಯೇ ಇರದ ತಾತ್ತ್ವಿಕತೆ ಸಾಧ್ಯವಾಗಿದೆ ಎಂದೇನಲ್ಲ. ಬದಲು ಎದುರಾಳಿ ಅರಿವಿನ ರೂಪ ತಳೆದಿದ್ದಾನೆ. ಹಾಗಾಗಿ ನಿಸಾರ್ ಅವರು ಪ್ರಜ್ಞೆಯ ಸ್ತರದಲ್ಲಿ ಎದುರಾಳಿಯನ್ನು ನಿಲ್ಲಿಸಿದ್ದಾರೆ. ಆ ಪ್ರಜ್ಞೆಯು ಮಾನವ ಪ್ರಜ್ಞೆಯೇ ಆಗಿದೆ. ಎದುರಾಳಿಯನ್ನು ನಿಸಾರ್ ಅವರು ಈ ರೀತಿ ಗ್ರಹಿಸಿಕೊಂಡಾಗ ಒಟ್ಟೂ ನಿಲವಿಗೆ ದೊರಕುವ ವಿಶಾಲ ವ್ಯಾಪ್ತಿಯನ್ನು ಗಮನಿಸಬೇಕು. ಶೋಷಣೆಯ ನೆಲೆಯನ್ನು ಸಮಗ್ರ ಮಾನವ ಜನಾಂಗದ ಪ್ರಜ್ಞೆಯಲ್ಲಿ ಕಂಡುಕೊಂಡಾಗ ಶೋಷಣೆಯ ವಿರುದ್ಧ ಮಾತನಾಡುವವನೂ ಕೂಡ ಅದರಲ್ಲಿ ಸೇರಿಕೊಂಡು ಬಿಡುತ್ತಾನೆ! ಸೋಲಿನಲ್ಲಿ ನನ್ನ ಜವಾಬ್ದಾರಿ ಕೂಡ ಇದೆ ಎಂಬ ಅರಿವನ್ನು ನಾನಿಟ್ಟುಕೊಂಡು ಬರೆಯುವಾಗ ಸ್ವಾಭಾವಿಕವಾಗಿ 'ಟೋನ್ ಡೌನ್' ಆಗುತ್ತದೆ. ಆಗಬೇಕು. ಆ ಮನಸ್ಸು ಇಲ್ಲಿ ಕೆಲಸ ಮಾಡಿದೆ.

ಅದರಿಂದಾಗಿ ನಿಸಾರ್ ಅವರ ತಾತ್ತ್ವಿಕ ನಿಲುಮೆಗಳು ಹಿಗ್ಗುತ್ತಾ ಹೋಗುತ್ತವೆ. ಹಿಂದೆ ಉಲ್ಲೇಖಿಸಿದ ಮಾತುಗಳನ್ನು ನೋಡಿ. ಅದು 'ಮಾನವೀಯತೆ'ಯ ಪರಿಕಲ್ಪನೆಯ ಆಧಾರದಲ್ಲಿ ಕಟ್ಟಲ್ಪಟ್ಟಿರುವ ನಿಲುಮೆಯ ಮಾತುಗಳಲ್ಲ. ಬದಲು 'ಜೀವಪರ' ಪರಿಕಲ್ಪನೆಯ ಆಧಾರದಲ್ಲಿ ಕಟ್ಟಲ್ಪಟ್ಟಿರುವ ಮಾತುಗಳು. ಈ ನಿಲುಮೆಯಲ್ಲಿ ಸಣ್ಣದೊಂದು ಜೀವ ಜಂತು ಕೂಡ ಮುಖ್ಯವಾಗುತ್ತದೆ.

ಈ ನಿಲುಮೆಗೆ ಬಹು ಪುರಾತನವಾದ ಚರಿತ್ರೆ ಇದೆ. ಪೌರಾಣಿಕ ಕಲ್ಪನೆಗಳನ್ನು, ಜನಪದೀಯ ಕಲ್ಪನೆಗಳನ್ನು ಗಮನಿಸಿ. ಅಲ್ಲಿ ಬರುವ ಕಲ್ಪನೆಗಳಲ್ಲಿ ಮಂಗ ಮಾತಾಡುತ್ತದೆ. ಮರ ದಾರಿ ತೋರಿಸುತ್ತದೆ. ಬಂಡೆಗಳು ಬಾಯ್ದೆರೆಯುತ್ತವೆ. ಹಕ್ಕಿಗಳು ಮೌಲ್ಯಗಳಾಗಿ ಹೋರಾಡುತ್ತವೆ. ಈ ಎಲ್ಲ ಕ್ರಿಯೆಗಳ ಹಿಂದೆ ಮಾನವ ಕಟ್ಟಿದ ಮೌಲ್ಯಗಳು ಮತ್ತು ಇತರ ಚರಾಚರ ವಸ್ತುಗಳಿಗೆ ಇರುವ ಸ್ವಭಾವವೆಂದು ಮನುಷ್ಯನು ಭಾವಿಸುವ ಮೌಲ್ಯಗಳು ಕೆಲಸ ಮಾಡಿವೆ. ಅಂದರೆ, ಚರಾಚರ ವಸ್ತುಗಳಿಗೆಲ್ಲ ಮಾನವ ಸ್ವಭಾವವನ್ನು ಆರೋಪಿಸಲಾಗಿದೆ. ಇದರ ಹಿಂದೆ ಇರುವ ತಾತ್ತ್ವಿಕ ಧೋರಣೆ ಸೃಷ್ಟಿಯ ಎಲ್ಲ ಚರಾಚರ ವಸ್ತುಗಳು ಮನುಷ್ಯನಿಗೆ ಸರಿಸಮನಾದದ್ದೆಂಬ ಕಲ್ಪನೆಯಿಂದ ಹುಟ್ಟಿಕೊಂಡದ್ದು. ಅಂದರೆ, ಮನುಷ್ಯ ಸೃಷ್ಟಿಯ ಕೇಂದ್ರ ಬಿಂದು ಅಲ್ಲ; ಬದಲು ಇಡೀ ಸೃಷ್ಟಿಯೇ ಕೇಂದ್ರ ಬಿಂದು. ಈ ತತ್ತ್ವವನ್ನು ಪ್ರತಿಪಾದಿಸಲು ಮನುಷ್ಯ ಸ್ವಭಾವವನ್ನು ಉಪಕರಣವಾಗಿ ಬಳಸಿಕೊಳ್ಳಲಾಗಿದೆ. ಈ ತತ್ತ್ವಕ್ಕೆ ವರ್ಧಮಾನ ಮಹಾವೀರ, ಬುದ್ಧರು ಹೆಚ್ಚು ವೈಚಾರಿಕವಾದ ಸ್ವರೂಪವನ್ನು ಕೊಟ್ಟರು.

ಇದಕ್ಕಿಂದ ಭಿನ್ನ ರೂಪದಲ್ಲಿ ಸಿವಿಕ್ ಸೊಸೈಟಿಯ ಕಲ್ಪನೆಗಳು ಕೆಲಸ ಮಾಡುತ್ತವೆ. ಅಲ್ಲಿ ಮನುಷ್ಯನೇ ಸೃಷ್ಟಿಯ ಕೇಂದ್ರ ಬಿಂದು. ಮನುಷ್ಯನಿಗಾಗಿ ಚರಾಚರ ವಸ್ತುಗಳಿವೆ. ಈ ತಿಳಿವಳಿಕೆಯಿಂದ ಆಧುನಿಕ ಭಾರತೀಯ ವೈಚಾರಿಕತೆಯು ಬೇಕಷ್ಟು ಪ್ರಭಾವಿತವಾಗಿದೆ ಮತ್ತು ಬಹುಮಟ್ಟಿಗೆ ಅದೇ ಆಗಿದೆ. ಇದರಲ್ಲಿ 'ಮಾನವೀಯತೆ' ಎಂಬ ಪರಿಕಲ್ಪನೆಗೆ ಬಹುವಾದ

ಆದ್ಯತೆ. ಆಗ ಕೆಲಸ ಸ್ವಲ್ಪ ಸುಲಭವಾಗುತ್ತದೆ. ಮನುಷ್ಯನಿಗಾಗಿ ಇತರ ಜೀವಿಗಳನ್ನು ಶೋಷಿಸುವುದು ಪ್ರಮಾದವೆನಿಸುವುದಿಲ್ಲ. ಆದರೆ ನಿಸಾರ್ ಎತ್ತಿಕೊಂಡಿರುವ ನಿಲುವು ಅಷ್ಟು ಸುಲಭದ್ದಲ್ಲ. ಅದು ವಿಸ್ತರಿಸುತ್ತಾ ವಿಸ್ತರಿಸುತ್ತಾ ಬೃಹತ್ ವಿಶ್ವಾತ್ಮದ ಪರಿಕಲ್ಪನೆಯತ್ತ ಜಾರಿಕೊಳ್ಳುತ್ತದೆ. ಹಾಗೆ ನೋಡಿದರೆ, ನಿಸಾರ್ ಅವರಿಗೆ ವಿಶ್ವದ ಬಗ್ಗೆ ಬೆರಗು ಜಾಸ್ತಿ ಇದೆ. ಎಲ್ಲ ಪ್ರಬಂಧಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ವಿಶ್ವದ ಅಸ್ತಿತ್ವದ ಬಗ್ಗೆ ತೀವ್ರವಾದ ಕುತೂಹಲದ ಮನಸ್ಸು ಕಲಾತ್ಮಕವಾಗಿ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ. ಇಂಥದೇ ಒಂದು ಕುತೂಹಲಕಾರಿ ಸಂಗತಿ ಬೃಹದಾರಣ್ಯಕೋಪನಿಷತ್ತಿನಲ್ಲಿದೆ: 'ವಿಶ್ವದ ಅಸ್ತಿತ್ವ ಎಲ್ಲಿದೆ?' ಎಂದು ನಾರದನು ಸನತ್ಕುಮಾರನನ್ನು ಕೇಳುತ್ತಾನೆ. ಸನತ್ಕುಮಾರನು, 'ವಿಶ್ವವು ನಾವು ನಿಂತಿರುವಲ್ಲಿಂದ ಉತ್ತರಕ್ಕಿದೆ. ದಕ್ಷಿಣಕ್ಕಿದೆ. ಪೂರ್ವ, ಪಶ್ಚಿಮ, ಆಗ್ನೇಯ, ನೈಋತ್ಯ, ವಾಯವ್ಯ, ಈಶಾನ್ಯಕ್ಕಿದೆ. ಮೇಲಕ್ಕಿದೆ. ಕೆಳಕ್ಕಿದೆ' ಎಂದು ಉತ್ತರಿಸುತ್ತಾನೆ. ಇಲ್ಲಿ ಪ್ರಶ್ನೆ ಎಷ್ಟು ಕುತೂಹಲಕಾರಿಯೂ ಬೆರಗಿನದೂ ಆಗಿದೆಯೋ ಉತ್ತರವೂ ಅಷ್ಟೇ ಕುತೂಹಲಕಾರಿ ಮತ್ತು ಬೆರಗಿನದಾಗಿದೆ. ಬುದ್ಧಿಯಿಂದ ಉತ್ತರವನ್ನು ಗ್ರಹಿಸಲು ಸಾಧ್ಯವಿಲ್ಲ. ಪ್ರಜ್ಞೆಯಿಂದಲೂ ಕಷ್ಟವೇ. ಜ್ಞಾನದಿಂದ ಸಾಧ್ಯವೋ ಏನೋ. ನಿಸಾರ್ ಮಾಡುತ್ತಿರುವುದು ಈ ಪ್ರಯತ್ನ. ಹಾಗಂತ ಜ್ಞಾನದಿಂದ ಅವರು ವಿಶ್ವಾತ್ಮದ ಕಲ್ಪನೆಯನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆಂದಲ್ಲ. ನಿಸಾರ್ ಅವರಿಗೆಂದಲ್ಲ; ಜಗತ್ತಿನ ಯಾವೊಬ್ಬ ಮನುಷ್ಯನಿಗೂ—ಆತ ಮನುಷ್ಯನೇ ಆಗಿದ್ದರೆ—ವಿಶ್ವಾತ್ಮದ ಕಲ್ಪನೆಯನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ. 'ಅಂಡ ವಿಶ್ವ'ದ ಹಿಂದೆ ಇದ್ದ ವಿಶ್ವದ ಬಗ್ಗೆ ವಿಜ್ಞಾನ ಮಾತನಾಡಲು ಹೋಗುವುದಿಲ್ಲ. ಈ ಮಾತು ಹೇಳಿದ ತತ್‌ಕ್ಷಣ ಎರಡು ವಾದಗಳು ಸಿದ್ಧವಾಗುತ್ತವೆ. ಮೊದಲನೆಯದು, 'ವಿಜ್ಞಾನ ಪರಿಪೂರ್ಣ ಸತ್ಯವನ್ನು ಹೇಳುವುದಿಲ್ಲ. ಆದ್ದರಿಂದ ವಿಜ್ಞಾನ ಹೇಳುವುದನ್ನು ಸತ್ಯವೆನ್ನಲು ಬರುವುದಿಲ್ಲ.' ಎರಡನೆಯದು, 'ವಿಜ್ಞಾನ ಏನು ಹೇಳಿದೆಯೋ ಆ ಮಟ್ಟಿಗೆ ಅದು ಸತ್ಯವೇ. ಆದರೆ ಅದರಾಚೆಗೂ ಏನಾದರೂ ಇದೆಯೋ ಏನೋ ಎಂದು ಅನುಸಂಧಾನ ಮಾಡೋಣ' ನಿಸಾರ್ ಅವರು ಎರಡನೆಯ ಧಾಟಿಯವರು. ಅದಕ್ಕೆ ಬೇಕಾದ ಸರಿ ವಿಧಾನವನ್ನು ಅವರು ತಮ್ಮ ಕಾವ್ಯ ಹುಟ್ಟಿನ ನೆಲೆಯಿಂದ ಪಡೆದುಕೊಳ್ಳುತ್ತಾರೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಅವರು ಜಗತ್ತಿನ ನೋವು-ವೇದನೆ-ತಲ್ಲಣ-ಭಯಗಳಿಗೆ ಕಂಡುಕೊಳ್ಳುವ ಉತ್ತರ ಯಾವುದು? ಎಂಬುದಕ್ಕೆ ಈ ಮಾತುಗಳನ್ನು ಗಮನಿಸಬೇಕು: '*...ಹಾಗೆಂದು ಕೈ ಚೆಲ್ಲಿ ಕೂರುವುದು ವಿವೇಕಿಗಳ, ಅಂತಃಸ್ಸಾಕ್ಷಿ ಉಳ್ಳವರ ಲಕ್ಷಣವಲ್ಲ. ಇವುಗಳ (ಅಂದರೆ ಜಗತ್ತಿನ ನೋವುಗಳ) ದೊಡ್ಡ ಮೊತ್ತದ ಇಳಿತಾಯವಾಗುವಂತೆ ಪದೇ ಪದೇ ಎಚ್ಚರಿಸಿ ಜನ ಜಾಗೃತಿ ಉಂಟು ಮಾಡುವ, ಆಡಳಿತದ ಲಗಾಮನ್ನು ಹಿಡಿದವರ ಕಣ್ಣನ್ನು ಆಗಿಂದಾಗ್ಗೆ ತೆರೆಸುವ ಕಾಯಕ ಅವ್ಯಾಹತವಾಗಿ ಸಾಗುತ್ತಲೇ ಇರಬೇಕು. ಈ ದಿಸೆಯಲ್ಲಿ ಸುದ್ದಿ ಮಾಧ್ಯಮಗಳ ಜವಾಬ್ದಾರಿಯಂತೂ ಅತ್ಯಂತ ಹೆಚ್ಚಿನದು. ಇದೆಲ್ಲ ಒಂದು ರೀತಿಯಲ್ಲಿ ಮಸೀದಿಯ ಮೇಲಿನಿಂದ ದಿನಕ್ಕೆ ಐದು ಸಲ ನಮಾಜ್‌ಗೆ ಕರೆ ಕೊಡುವ ಮುವಜ್ಜನ್ ಎಂಬ ಉದ್ಘೋಷಕನ ಕೆಲಸವಿದ್ದ ಹಾಗೆ. ಇವನ ಕರೆ ದಿನ ನಿತ್ಯ ಕಿವಿಗೆ ಬಿದ್ದೂ ಬಿದ್ದೂ ಯಾವುದೋ ಒಂದು ಶುಭ ಘಳಿಗೆಯಲ್ಲಿ*

ಹೃದಯ ಪರಿವರ್ತನೆಯಾಗಿ ಕೆಲವರಾದರೂ ಪ್ರಾರ್ಥನೆಗೆ ಮನಸ್ಸು ಮಾಡುವ ಸಾಧ್ಯತೆಯುಂಟಲ್ಲವೆ? ಅಷ್ಟು ಮಟ್ಟಿಗಾದರೂ ಭವಿಗಳಲ್ಲಿ ಸದ್ಭಾವ್ಯ ಭಕ್ತಿ ಪ್ರಚಲನೆಯಾಗುವುದಿಲ್ಲವೆ? ಅದೇನು ಸಣ್ಣ ಲಾಭವೆ?'

ಈ ಮಾತುಗಳ ಹಿಂದಿರುವ ತತ್ತ್ವದ ಬಗ್ಗೆ ಹೇಳುವ ಮುನ್ನ ಭಾಷೆಯ ಬಗ್ಗೆ ಹೇಳಬೇಕು. ನಿಸಾರ್, ಇಲ್ಲಿ ಮಸೀದಿಗೆ ಹೋಗಿ ಪ್ರಾರ್ಥಿಸಬೇಕು. ಪ್ರಾರ್ಥನೆಯಿಂದ ಭಯ-ಭಕ್ತಿ ಬರುತ್ತದೆ ಎಂದು ಹೇಳುತ್ತಿದ್ದಾರೆಂದು ಭಾವಿಸಿದರೆ ಅದು ತಪ್ಪು. ಈ ಪದಗಳ ಹಿಂದಿರುವ ಧ್ವನಿ ಬೇರೆ. ಜಗತ್ತಿನ ತಲ್ಲಣಗಳ, ನೋವು-ವೇದನೆಗಳ ನಿವಾರಣೆಗಾಗಿ ಪ್ರಯತ್ನ ಮಾಡುತ್ತಲೇ ಇದ್ದರೆ, ಕೆಲವರಾದರೂ ಅದರಿಂದ ಪ್ರಚೋದಿತರಾಗಿ ಆ ಮಟ್ಟಿಗೆ ನೋವು-ವೇದನೆ ನಿವಾರಣೆಯಾಗುತ್ತದೆ ಎನ್ನುವುದು ಈ ಮಾತುಗಳ ಭಾವಾರ್ಥವಾಗಿದೆ. ಸಹಜವಾಗಿಯೇ ಭಾಷೆಯನ್ನು ಅದರ ಆರ್ಥಿಕ ವಿನ್ಯಾಸದಲ್ಲಿ ಬಳಸದೆ ಸಾಂಸ್ಕೃತಿಕ ವಿನ್ಯಾಸದಲ್ಲಿ ಬಳಸುವ ನಿಸಾರ್ ಅವರು, ತಮ್ಮ ಪ್ರಬಂಧಗಳಲ್ಲಿ ಅದ್ಭುತವಾಗಿ ಧ್ವನಿ ಭಾಷೆಯನ್ನು ಸೃಜಿಸಿಕೊಳ್ಳುತ್ತಾರೆ. ಇದು ಒಂದು ರೀತಿಯ ಅನಿವಾರ್ಯತೆಯೂ ಹೌದು. ವಿಶ್ವಾತ್ಮದಂತಹ ಬೃಹತ್ ಕಲ್ಪನೆಯ ಹಿನ್ನೆಲೆಯಲ್ಲಿ ಪ್ರಬಂಧ ರಚನೆಗೆ ತೊಡಗಿದಾಗ ಆರ್ಥಿಕ ವಿನ್ಯಾಸದಲ್ಲಿ ಕಲ್ಪನೆಯನ್ನು ತಂದಿಡಲು ಬರುವುದಿಲ್ಲ. ಅದಕ್ಕೆ ಸಾಂಸ್ಕೃತಿಕ ಅಥವಾ ಸಂಸ್ಕೃತಿಗಳ ಆಯಾಮವನ್ನು ಕೊಡುವುದು ಅನಿವಾರ್ಯವಾಗುತ್ತದೆ. ಈ ಅನಿವಾರ್ಯತೆಯನ್ನು ಪೂರೈಸಲು ಭಾಷೆಯನ್ನು ಸಾಂಸ್ಕೃತಿಕ ವಿನ್ಯಾಸದಲ್ಲಿ ಬಳಸಲಾಗಿದೆ. ಯಾಕೆಂದರೆ ಅವರ ಮುಂದೆ ಜಗತ್ತಿನ ನೋವುಗಳಷ್ಟೇ ಇಲ್ಲ, ವೇದನೆಗಳೂ ಇವೆ.

ಜಗತ್ತಿನ ನೋವುಗಳಿಗೆ ಮಿಡಿಯುವ ಕಲ್ಪನೆಗಳು ಬೇರೆ ಬೇರೆ ರೀತಿಯಲ್ಲಿ ತಮ್ಮ ತತ್ತ್ವಗಳನ್ನು ನಿರೂಪಿಸುತ್ತಾ ಬಂದಿವೆ. ಅವುಗಳಲ್ಲಿ 'ರಿವಲ್ಯೂಷನರಿ ಥಿಯರಿ' ಮತ್ತು 'ಇವಲ್ಯೂಷನರಿ ಥಿಯರಿ'ಗಳು ಪ್ರಧಾನ ಮತ್ತು ಎಲ್ಲವನ್ನು ಒಳಗೊಂಡ ಸ್ತರದಲ್ಲಿವೆ. ರಿವಲ್ಯೂಷನರಿ ಥಿಯರಿಯಲ್ಲಿ ಎರಡು ವಿಧ : ಮೊದಲನೆಯದು ಬಹಿರಂಗದ ಕ್ರಾಂತಿ. ಅದರಲ್ಲಿ ರಕ್ತ ಕ್ರಾಂತಿ ಮತ್ತು ಸಾಮಾಜಿಕ ಕ್ರಾಂತಿಗಳೆಂಬ ಇನ್ನೆರಡು ವಿಧಾನಗಳಿವೆ. ಎರಡನೆಯದು ಅಂತರಂಗದಲ್ಲಿ ಕ್ರಾಂತಿ. ಸೂಫಿ ಸಂತರ ಒಂದು ಪಂಗಡದಲ್ಲಿ ಇದು ಬಳಕೆಯಾಗಿದೆ. 'ಜೆಹಾದ್'ನ ಮೂರು ಮುಖ್ಯ ಕಲ್ಪನೆಗಳಲ್ಲಿ ಇದೂ ಒಂದು ಕಲ್ಪನೆಯಾಗಿದೆ. ಅದೆಂದರೆ, ಮನುಷ್ಯನು ತನ್ನ ಅಂತರಂಗದ ಕೆಡುಕುಗಳ ವಿರುದ್ಧ ನಿರಂತರವಾಗಿ ಅಂತರಂಗದ ಒಳಿತಿನ ಮೂಲಕ ಯುದ್ಧ ಮಾಡುತ್ತಿರಬೇಕೆನ್ನುವುದು. ಮಹಾವೀರ ಕೂಡ ಇದೇ ತತ್ತ್ವವನ್ನು ಮುಂದಿಟ್ಟಿದ್ದ. ಬಸವಣ್ಣ ಮತ್ತು ಬುದ್ಧರಲ್ಲಿ, ಬಸವಣ್ಣ ಸಾಮಾಜಿಕ ಕ್ರಾಂತಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟು ಅಂತರಂಗದ ಕ್ರಾಂತಿಯನ್ನು ಸಂಯೋಜಿಸಿದ್ದರೆ, ಬುದ್ಧ ಅಂತರಂಗದ ಕ್ರಾಂತಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟು ಸಾಮಾಜಿಕ ಕ್ರಾಂತಿಗೆ ಪ್ರಾಮುಖ್ಯ ಕೊಟ್ಟಿದ್ದ. ಡಾ|| ಅಂಬೇಡ್ಕರ್ ಸಾಮಾಜಿಕ ಕ್ರಾಂತಿಯ ಕಡೆಗೇ ಒಲುವೆ ಇರಿಸಿಕೊಂಡಿದ್ದರು. ಮಾರ್ಕ್ಸ್, ಎಲ್ಲರಿಗೂ ಗೊತ್ತಿರುವ ಹಾಗೆ ರಕ್ತ ಕ್ರಾಂತಿಯ ನಿಲವು ತಳೆದವರು. ಸ್ವೀಡಿಶ್ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್‌ಡಾಲ್ 'ಸಾಂಸ್ಕೃತಿಕ ಕ್ರಾಂತಿ' ಎಂದರೂ ಅವರ ನಿಲವುಗಳು ಸಾಮಾಜಿಕ ಕ್ರಾಂತಿಯತ್ತಲೇ ತುಡಿಯುತ್ತವೆ.

ಇಲ್ಲಿ ಶುದ್ಧರೂಪದ ರಕ್ತ ಕ್ರಾಂತಿ, ಸಾಮಾಜಿಕ ಕ್ರಾಂತಿ, ಅಂತರಂಗದ ಕ್ರಾಂತಿಗಳಿಗೆ ಇರುವ ಮಿತಿಯನ್ನು ಗಮನಿಸಬೇಕು. ರಕ್ತ ಕ್ರಾಂತಿಯಂತಹ ಒಂದು ಕ್ರಿಯೆ ಸಾಮುದಾಯಿಕ ಆಕ್ರೋಶದ ಕ್ಷಣದಲ್ಲಿ ಹುಟ್ಟಿಕೊಳ್ಳುವಂಥಾದ್ದು. ಏಕರೂಪೀ ಮನೋಭಾವ ಅಲ್ಲಿ ಬಹಳ ಮುಖ್ಯವಾಗುತ್ತದೆ. ಭಾರತದಂತಹ ಕಲ್ಚರಲ್ ಕಮ್ಯುನಿಟಿಗಳಿರುವ ದೇಶದ ಸಂಕೀರ್ಣ ಸಂಸ್ಕೃತಿಗಳು ಏಕರೂಪೀ ಮನೋಭಾವವನ್ನು ತರಲಾರದೆ ಹೋಗುತ್ತವೆ. ಶುದ್ಧ ರೂಪದ ಸಾಮಾಜಿಕ ಕ್ರಾಂತಿ ಕೂಡ ಇಲ್ಲಿ ಕಷ್ಟಕರ. ಯಾಕೆಂದರೆ ಅಂತಹ ಕ್ರಾಂತಿಯು ಸಾಮಾಜಿಕ ಸಂದರ್ಭದಲ್ಲಿ ಹುಟ್ಟುವಂತಹದಾಗಿದ್ದು ಬಹಿರ್ಮುಖಿ ಚಲನೆಯನ್ನು ಬೇಡುತ್ತದೆ. ಆದರೆ ಏಕ ಕಾಲಕ್ಕೆ ಬಹುರ್ಮುಖಿ ಮತ್ತು ಅಂತರ್ಮುಖಿ ಚಲನೆ ಮತ್ತು ಆಯ್ಕೆಯ ಪ್ರಶ್ನೆ ಕಲ್ಚರಲ್ ಕಮ್ಯೂನಿಟಿಗಳ ಮೂಲಭೂತ ಸಮಸ್ಯೆಗಳಾಗಿವೆ. ಉದ್ಧಾರಕರ ರೂಪದಲ್ಲಿ ಹೋದರೆ 'ನವುಲೆ ಗ್ರಾಮದ ಹನುಮ' ಬಿಟ್ಟುಕೊಡಲಾರ. ಕುವೆಂಪು ಅವರ ಹೂವಯ್ಯ ನಂತಹವರ ಸಮಸ್ಯೆಯೇ ಇದು. ಹೂವಯ್ಯ ಸಮಾಜ ಸುಧಾರಕ. ಅವನು ಜಮೀನ್ದಾರಿಕೆಯ ವಿರುದ್ಧ ಪ್ರತಿಭಟಿಸುವಾಗ ಸಮುದಾಯ ಅವನ ಜೊತೆಗಿರುತ್ತದೆ. ಆದರೆ ಕಳ್ಳು ಕುಡಿಯ ಬಾರದು ಎನ್ನುವಾಗ ಸ್ವತಃ ಅವನ ತಾಯಿಯೇ ಅವನೊಂದಿಗಿರದೆ ಕದ್ದು ಕಳ್ಳು ಕುಡಿಯುತ್ತಾಳೆ. ಹೂವಯ್ಯನನ್ನು ಸಮುದಾಯವು ತನ್ನೊಳಗೆ ಸೇರಿಸಿಕೊಂಡೂ ಪ್ರತ್ಯೇಕವಾಗಿಯೇ ಇಟ್ಟುಬಿಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ ಡಾ|| ರಹಮತ್ ತರೀಕೆರೆ (ನೋಡಿ: ಮರದೊಳಗಣ ಕಿಚ್ಚು). ಕಾರಂತರ 'ಬೆಟ್ಟದ ಜೀವ'ದಂತಹ ಕಾದಂಬರಿ ಗಳನ್ನು ನೋಡಿದರೆ ಅಲ್ಲಿ ಹರಕು ಮುರುಕು ಚಾಪೆ ಹಾಸಿ ಹಲಸಿನ ಬೇಳೆ, ಹಪ್ಪಳ ಸುಟ್ಟು ಕೊಟ್ಟು ಅತಿಥಿಯನ್ನು ಸತ್ಕರಿಸುವ ಅಜ್ಜಿಯಂದಿರ ಪಾತ್ರಗಳು ಕಾಣಸಿಗುತ್ತವೆ. ಸಾಮಾಜಿಕ ಕ್ರಾಂತಿಯ ದೃಷ್ಟಿಯಲ್ಲಿ ಅವರೆಲ್ಲ ಅನಭಿವೃದ್ಧರು. ಆದರೆ ಅಂತಹ ಒಂದು ಸ್ಥಿತಿ ಸಹನೀಯವೆಂದು ಅವರಿಗನಿಸಿದ್ದರೆ ಅದನ್ನು ಅನಭಿವೃದ್ಧ ಎನ್ನಲು ಸಾಧ್ಯವೆ? ಇದು ಸಮಸ್ಯೆ. ಸಿವಿಕ್ ಸೊಸೈಟಿಯನ್ನು ಸಂಭಾಳಿಸಿದಷ್ಟು ಸುಲಭವಾಗಿ ಕಲ್ಚರಲ್ ಕಮ್ಯುನಿಟಿ ಗಳನ್ನು ಡೀಲ್ ಮಾಡಲು ಬರುವುದಿಲ್ಲ.

ಮನುಷ್ಯನು ಅಂತರಂಗದಲ್ಲಿ ಕೆಡುಕುಗಳ ವಿರುದ್ಧ ಹೋರಾಡುತ್ತಲೇ ಇರಬೇಕು ಎನ್ನುವುದು ಬಹಳ ಸೊಗಸಾದ ಕಲ್ಪನೆ. ಆದರೆ 'ಕೆಡುಕು' ಎನ್ನುವಂಥಾದ್ದು ಮತ್ತೆ ಸಾಮಾಜಿಕ ಸಂದರ್ಭದಲ್ಲಿ ನಿರ್ಧಾರವಾಗಬೇಕಾಗುತ್ತದೆ. ವ್ಯಕ್ತಿಯ ದೃಷ್ಟಿಕೋನವೂ-ಸಾಮಾಜಿಕ ದೃಷ್ಟಿಕೋನವೂ ಭಿನ್ನವಾಗಿರುವ ಸಂದರ್ಭದಲ್ಲಿ 'ಕೆಡುಕಿ'ನ ವ್ಯಾಖ್ಯಾನವೆ ದಿಕ್ಕು ತಪ್ಪಿಬಿಡಲು ಸಾಧ್ಯವಿದೆ. ಅಲ್ಲದೆ ಮನುಷ್ಯನ ಅಂತರಂಗ ಎನ್ನುವುದೇ ಒಂದು ನಿಗೂಢ ಪ್ರಪಂಚ. ಅಲ್ಲಿ ಒಳಿತು-ಕೆಡುಕುಗಳ ವಿರುದ್ಧ ಯುದ್ಧ ನಡೆಯಬೇಕಾದರೆ ಮಾನವ ಸಹಜ ಕಾಮ, ಕ್ರೋಧ, ಮಾತ್ಸರ್ಯ, ಅಹಂಕಾರ, ಪ್ರೀತಿ, ಮೂರ್ಖತನ ಮತ್ತಿತರೆ ಸ್ವಭಾವ ಗಳನ್ನೆಲ್ಲ ಮೀರಿ ನಿಲ್ಲಬೇಕಾಗುತ್ತದೆ. ಸೂಫಿ ಸಂತರಂತಹವರಿಗೋ, ರಾಮಕೃಷ್ಣ ಪರಮ ಹಂಸರಂಥವರಿಗೋ ಇದು ಸಾಧ್ಯ. ಆದರೆ ನಾವು-ನೀವು-ನಮ್ಮ ಸಹಜೀವಿಗಳು?

ಆಗ ಹುಟ್ಟಿಕೊಳ್ಳುವುದೇ ಇವಲ್ಯೂಷನರಿ ಥಿಯರಿ. ಸರಳ ಗ್ರಹಿಕೆಗೆ ಮಾರ್ಕ್ಸ್‌ನ ಅನ್ನು ಬಿಟ್ಟರೆ ಮೇಲೆ ಹೇಳಿದ ಮಿಕ್ಕೆಲ್ಲರೂ ಇವಲ್ಯೂಷನರಿ ಥಿಯರಿಯ ಪ್ರತಿಪಾದಕರಂತೆ


ಕಾಣಿಸುತ್ತಾರೆ. ಆದರೆ ಮೂಲಭೂತವಾಗಿ ಅವರ ಥಿಯರಿಗಳು ರಿವಲ್ಯೂಷನರಿ ಆಗಿದ್ದು, ಅವು ಜಾರಿಗೊಳ್ಳಲು ಬಳಸಿದ ಉಪಕರಣಗಳು ಮಾತ್ರ ಇವಲ್ಯೂಷನರಿ ಆಗಿವೆ ಎಂಬುದು ಗಮನಾರ್ಹ ಸಂಗತಿ. ಅಂಥಲ್ಲಿ ಸಾಂಸ್ಕೃತಿಕ ಕ್ರಾಂತಿಯ ಹಿನ್ನೆಲೆಯಲ್ಲಿ ಉದ್ಭವಿಸಿದ ಗಾಂಧಿಯನ್ ಫಿಲಾಸಫಿ ಹೆಚ್ಚು ಇವಲ್ಯೂಷನರಿ ಸ್ವಭಾವವನ್ನು ಇಟ್ಟುಕೊಂಡಿದೆ ಎಂಬುದನ್ನು ಗಮನಿಸಬೇಕು. ಅದರ ಉಪಕರಣವಾಗಿ ರಿವಲ್ಯೂಷನರಿ ವಿಧಾನ ಕಾಣಿಸಿಕೊಳ್ಳುತ್ತದೆ. ಗಾಂಧಿ ಒಬ್ಬ ತೀವ್ರಗಾಮಿ ನಾಯಕ. ಅವರು ಬಳಸಿದ 'ಅಹಿಂಸೆ' 'ಸತ್ಯಾಗ್ರಹ' ಗಳಂತಹ ಆಯುಧಗಳಿಂದಾಗಿ ಅವರು ಮಂದಗಾಮಿಯಂತೆ ಕಾಣಿಸುತ್ತಾರಾದರೂ ಮೂಲಭೂತವಾಗಿ ಗಾಂಧಿಯನ್ ಚಲನೆ ರಿವಲ್ಯೂಷನರಿ ತೀವ್ರವಾದಿ ನಿಲುಮೆಯಿಂದ ಹುಟ್ಟಿಕೊಂಡಂಥಾದ್ದು. ಆದರೆ ಇವೆಲ್ಲ ಗಾಂಧಿಯನ್ ಕ್ರಿಯಾತ್ಮಕ ಚಟುವಟಿಕೆಗಳನ್ನು ಆಧರಿಸಿದ ವ್ಯಾಖ್ಯಾನಗಳಾಗುತ್ತವೆಯೇ ಹೊರತು ಥಿಯರಿಯಲ್ಲ. ಮೂಲಭೂತವಾಗಿ ಗಾಂಧಿಯನ್ ಥಿಯರಿ ಇವಲ್ಯೂಷನರಿ ಆಗಿ ಇರುವಂಥಾದ್ದು. ಔನ್ನತ್ಯದ ಕಡೆಗೆ ಚಲಿಸಲು ಪ್ರೇರಣೆ ಒದಗಿಸುವಂಥಾದ್ದು. ಅಂತಹ ಪ್ರೇರಣೆಯ ತೀವ್ರತೆ ಸ್ವತಃ ಗಾಂಧಿಯನ್ ತತ್ತ್ವಜ್ಞಾನಕ್ಕೆ ಕೆಲವು ದೌರ್ಬಲ್ಯಗಳನ್ನು ಕೊಟ್ಟಿದೆ. ಸಂಪತ್ತಿನ ಸತ್ಫಲಗಳ ನಿರಾಕರಣೆ ಅದರ ಸ್ವಭಾವ. ಗಾಂಧಿ ಬದುಕಿದ್ದ ಕಾಲಘಟ್ಟದಲ್ಲಿ ಭಾರತದ ರಾಜಕೀಯ ಶತ್ರುಗಳಾದ ಬ್ರಿಟಿಷರದಲ್ಲದ ಸಾಂಸ್ಕೃತಿಕ ವಿನ್ಯಾಸವನ್ನು ಕಟ್ಟುವ ಅಗತ್ಯ ಗಾಂಧಿಗಿತ್ತು. 'ಸಾಂಪತ್ತಿಕ ಸತ್ಫಲಗಳ ನಿರಾಕರಣೆ' ಎನ್ನುವುದು ಅಂತಹ ಉಪಕರಣವೇ ಆಗಿದೆ. ಆದರೆ 'ಸಂಪತ್ತು' ಅಷ್ಟೊಂದು ಕ್ಷುಲ್ಲಕ ವಿಚಾರ ಅಲ್ಲ. ಇಲ್ಲಿ ಹುಟ್ಟಿಕೊಳ್ಳುವ ಸಮಸ್ಯೆಯನ್ನು ಡಾ|| ರಾಮ ಮನೋಹರ ಲೋಹಿಯಾ ನಿವಾರಿಸುವ ಪ್ರಯತ್ನ ಮಾಡುತ್ತಾರೆ. ಲೋಹಿಯಾರ ಸಾಂಸ್ಕೃತಿಕ ಕ್ರಾಂತಿಕ ಕಲ್ಪನೆಗೆ ಅಂತಹ ಶಕ್ತಿ ಇದೆ. 'ಜಾತಿ' ಎನ್ನುವಂತಹ ಒಂದು ಸ್ಥಿತಿಗೆ ಇತ್ಯಾತ್ಮಕ ವಿನ್ಯಾಸವನ್ನು ಕೊಟ್ಟು, ಜಾತಿಯ ಮೂಲಕ ಅಭಿವೃದ್ಧಿಯ ಆಕೃತಿಯನ್ನು ಕಟ್ಟಿ ಜಾತ್ಯತೀತತೆಯ ಕಡೆಗೆ ಸಾಗುವ ಅಥವಾ ಆ ಹಂತಕ್ಕೆ ಜಿಗಿಯುವ ಪರಿಕಲ್ಪನೆಯನ್ನು ಕೊಡಲು ಲೋಹಿಯಾಗೆ ಸಾಧ್ಯವಾಯಿತು. ಆ ಮುಖಾಂತರ ಲೋಹಿಯಾ ಸಿವಿಕ್ ಸೊಸೈಟಿಯ ಸಾಮಾಜಿಕ ಸನ್ನಿವೇಶದಿಂದ ಭಿನ್ನವಾದ ಸಾಮಾಜಿಕ ಸನ್ನಿವೇಶವನ್ನು ಕಟ್ಟಿಬಿಡುತ್ತಾರೆ. ಲೋಹಿಯಾರ 'ಸಾಂಸ್ಕೃತಿಕ' ಕ್ರಾಂತಿಯ ಪರಿಕಲ್ಪನೆಗೆ ಬೇಕಾದಷ್ಟು ಮಂದಿ ಸಾಹಿತಿಗಳು ಸೃಜನಶೀಲ ಆಕೃತಿಯನ್ನು ಕಟ್ಟುವಾಗ ಕಲಾತ್ಮಕ ವಿನ್ಯಾಸವನ್ನು ಕೊಟ್ಟಿದ್ದಾರೆ. ಆ ಕೆಲಸವನ್ನು ನಿಸಾರ್ ಅವರು ವೈಚಾರಿಕ ಪರಿಭಾಷೆಯಲ್ಲಿ ಮಾಡತೊಡಗುತ್ತಾರೆ. ಹಾಗಂತ ನಿಸಾರ್ ಅವರದು ಶುದ್ಧ ವೈಚಾರಿಕ ಪರಿಭಾಷೆ ಎನ್ನಲು ಬರುವುದಿಲ್ಲ. ಯಾಕೆಂದರೆ, ವೈಚಾರಿಕ ಪರಿಭಾಷೆಗೆ ಅಧ್ಯಾತ್ಮದ ಪರಿಭಾಷೆಯ ಸ್ಪರ್ಶಕೊಡುವ ನಿರೂಪಣಾ ತಂತ್ರವನ್ನು ಅವರು ಅನುಸರಿಸುತ್ತಾರೆ. ಇದು ಮನುಷ್ಯನ ದೌರ್ಬಲ್ಯಗಳಿಗೆ ಅಧ್ಯಾತ್ಮದ 'ಟಚ್' ಕೊಟ್ಟು ಅವನು ತನ್ನ ಸಹಜ ದೌರ್ಬಲ್ಯಗಳಿಂದ ಮೇಲಿನ ಹಂತಕ್ಕೆ ಜಿಗಿಯಲು ಕೊಡುವ ಪ್ರೇರಣೆಯೂ ಹೌದು. ಈ ಕಲಾತ್ಮಕ ವಿನ್ಯಾಸದಲ್ಲಿ ಮನುಷ್ಯನಿಗೆ ತನ್ನನ್ನು ತಾನು ಮಾರ್ದವಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ; ಅದರಿಂದಾಗಿ ಜಗತ್ತಿನ ನೋವುಗಳು ಬಹುಮಟ್ಟಿಗೆ ನಿವಾರಣೆಯಾಗಲು ಸಾಧ್ಯವಿದೆ ಎಂಬುದು ಇಲ್ಲಿನ ಮೂಲಭೂತ

ಗ್ರಹಿಕೆಯಾಗಿದೆ. ಒಂದು ರೀತಿಯಲ್ಲಿ ನಿಸಾರ್ ಇಡೀ ಜಗತ್ತನ್ನೇ ಬದಲಾಯಿಸಬಲ್ಲೆ ಎನ್ನುವ ಅತಿ ಆತ್ಮವಿಶ್ವಾಸಿಯೂ ಅಲ್ಲದ; ಹಾಗಂತ ತನಗೆ ಯಾವ ಜವಾಬ್ದಾರಿಯೂ ಇಲ್ಲ ಎನ್ನುವ ಪಲಾಯನವಾದಿಯೂ ಅಲ್ಲದ; ವಾಸ್ತವ ಪ್ರಜ್ಞೆಯ ಹಿನ್ನೆಲೆಯಲ್ಲಿ ತನಗೆ ಸಾಧ್ಯವಾದುದನ್ನು ಮಾಡುತ್ತೇನೆ ಎನ್ನುವ ಭೂಮುಖಿ ಬರಹಗಾರ. ಈ 'ಭೂಮುಖಿ' ಎಂಬ ಪದವು ನಿಸಾರ್ ಅವರ ಧೋರಣೆ ರೂಪುಗೊಳ್ಳುವ ನೆಲೆಯೂ ಹೌದು. ತಮ್ಮ ಧೋರಣೆಯ ಸಾಕಾರಕ್ಕೆ ಬಳಸುವ ತಂತ್ರವೂ ಹೌದು. ತಮ್ಮ ಕಲ್ಪನೆಗಳನ್ನು ಕಟ್ಟುವಾಗ ಅವರು ಆಗಸದ ಎತ್ತರಕ್ಕೆ ಜಿಗಿಯುತ್ತಾರೆ. ಆದರೆ ಅದನ್ನು ಸಾಕಾರಗೊಳಿಸುವ ಉಪಕರಣಗಳನ್ನು ಹೇಳುವಾಗ ನಿಮ್ಮ ಹತ್ತಿರ ಬಂದು ಪಿಸು ದನಿಯಲ್ಲಿ ಕನ್ವಿನ್ಸ್ ಮಾಡುವ ಒಬ್ಬ ನುರಿತ ಅಧ್ಯಾಪಕನ ಶೈಲಿಯನ್ನು ಅನುಸರಿಸುತ್ತಾರೆ. 'ಅದು ಹಾಗಲ್ವೇ?' ಅಂತ ಹೇಳುವ ಶೈಲಿಯಲ್ಲಿ. 'ಅಲ್ಲ' ಎನ್ನಲು ನಿಮಗೆ ಸಾಧ್ಯವಾಗುವುದೇ ಇಲ್ಲ! ಉದಾಹರಣೆಗೆ, ಪಂಡಿತ ರಾಹುಲ ಸಾಂಕೃತ್ಯಾಯನರು ತಮ್ಮ 'ಜಯ ಯೌಧೇಯ'ದಲ್ಲಿ ಯೌಧೇಯರ ಗಣಪತಿ ಜಯನ ಮೂಲಕ ಆಡಿಸುವಂತಹ ಒಂದು ಮಾತನ್ನು ನಿಸಾರ್ ವೈಚಾರಿಕ ಸಂದರ್ಭದಲ್ಲಿ ಹೇಳುತ್ತಾರೆ : 'ನಾವು ಬದುಕಿ ಉಳಿಯುವುದು ನಮ್ಮ ಮುಂದಿನ ಜನಾಂಗದ ಮೂಲಕ' ಎನ್ನುವ ಮಾತನ್ನು ಹೇಗೆ ತಾನೇ ಅಲ್ಲಗಳೆಯಲು ಸಾಧ್ಯ?

ಕವಿಯಾಗಿ ಒಂದು ಎತ್ತರಕ್ಕೆ ಏರಿರುವ ನಿಸಾರ್ ಅವರ ಗದ್ಯ ಬರಹಗಳು ಹೆಚ್ಚು ಪರಿಚಿತವಾಗಿಲ್ಲ. ಆದರೆ ಅವು ಪರಿಚಿತವಾಗಬೇಕು. ಒಂದು ನಿಗೂಢ ಜಗತ್ತನ್ನು 'ಶಿವ ರಂಜನಿ' ರಾಗದಲ್ಲಿ ಅನಾವರಣ ಮಾಡಿದ ಹಾಗೆ ಓದುಗನನ್ನು ಮೋಹಕಗೊಳಿಸಬಲ್ಲ ನಿಸಾರರ ಗದ್ಯ ಬರಹಗಳು ತನ್ಮಯತೆಯನ್ನು ಉಂಟು ಮಾಡುತ್ತವೆ. ಅಲ್ಲೇ ಕರಗುತ್ತಾ ಕರಗುತ್ತಾ ಬೇರೊಂದು, 'ಈಗ ಇದ್ದುದಕ್ಕಿಂತ ಚೆನ್ನಾಗಿರುವ' ಜಗತ್ತಿಗೆ ಪ್ರವೇಶವನ್ನು ಒದಗಿಸುತ್ತವೆ.

ಸಾವು ಇರದಿದ್ದಲ್ಲಿ ಅಥವಾ ಅದು ಒದಗುವ ಕ್ಷಣದ ಖಾತರಿ ಮನುಷ್ಯನಿಗೆ ಇದ್ದಿದ್ದ ಪಕ್ಷದಲ್ಲಿ ಪ್ರಪಂಚದ ವಿದ್ಯಮಾನಗಳೇ ಬೇರೆ ತೆರನಾಗಿರುತ್ತಿದ್ದವು. ಬದುಕಿನ ನಿಯಮಗಳೇ ಭಿನ್ನವಾಗಿರುತ್ತಿದ್ದವು. ಮನುಷ್ಯ ಹೆಚ್ಚು ಸ್ವೈರೋನ್ಮತ್ತ ಮತ್ತು ಸ್ವಾರ್ಥ ಪರಾಯಣನಾಗಿರುತ್ತಿದ್ದ. ಈಗಿಗಿಂತ ನೂರ್ಮಡಿ ನಿರಂಕುಶನಾಗಿ ಹಿಂಸೆ ಕ್ರೌರ್ಯಗಳನ್ನು ಬಿತ್ತಿ ರಕ್ತಪಾತದ ಇಳುವರಿಯನ್ನು ಹೆಚ್ಚಿಸುತ್ತಿದ್ದ. ಮೃತ್ಯು ಬಾಳಿನ ನಾಣ್ಯಕ್ಕೆ ಬೆಲೆ ತರುವ ಸ್ಥಾಯಿ ಮೌಲ್ಯವಾಗಿದೆ. ಬಾಳಿನಲ್ಲಿ ಅಮೂಲ್ಯವಾದದ್ದನ್ನು ಗಳಿಸಲು ಬೆಲೆಯುಳ್ಳ ರಾಜ ಮುದ್ರೆಯಾಗಿದೆ. ಈ ಎಲ್ಲ ವಿಚಾರಗಳಿಂದ ಲೋಕದಲ್ಲಿ ಜೀವಿಯ ಬದುಕು ಫಿರಂಗಿಯ ಬಾಯಲ್ಲಿ ಕಟ್ಟಿದ ಗುಬ್ಬಚ್ಚಿ ಗೂಡಿಗೆ ಸಮನಲ್ಲವೆ?'

(ಸಾವಿನ ಹೆಚ್ಚುಗಾರಿಕೆ)



ನಿಸಾರರ ಗದ್ಯದಲ್ಲಿ ವಸ್ತು ವೈವಿಧ್ಯ, ಭಾವ-ವಿಚಾರಗಳ ವಿವೇಚನೆ

♦ ಸ್ನೇಹಲತಾ ರೋಹಿಡೇಕರ್

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶ್ರೀಯುತ ನಿಸಾರ್ ಅಹಮದರು ಶ್ರೇಷ್ಠಕವಿಗಳೆಂದು ಹೆಸರು ಪಡೆದವರು. ಅವರು ಶ್ರೇಷ್ಠ ಸಾಹಿತ್ಯ ವಿಮರ್ಶಕರೂ ಹೌದು. ಅವರ ಗದ್ಯ ಲೇಖನಗಳ ಐದು ಸಂಕಲನಗಳು ಒಟ್ಟುಗೂಡಿ 'ಸಮಗ್ರ ಗದ್ಯ ಬರಹಗಳು' ಹೆಸರಿನಲ್ಲಿ ಪ್ರಕಟವಾಗಿವೆ.

ನಿಸಾರವರ ಗದ್ಯ ಸಾಹಿತ್ಯದಲ್ಲಿ ವಸ್ತು ವೈವಿಧ್ಯ, ಭಾವ-ವಿಚಾರಗಳ ಬಗೆಗಿನ ವಿವೇಚನೆ ಯಾವ ರೀತಿಯಲ್ಲಿ ವಿನ್ಯಾಸ ಗೊಂಡಿದೆ ಎನ್ನುವುದನ್ನು ಪರಿಶೀಲಿಸುವುದು ನನ್ನ ಲೇಖನದ ಉದ್ದೇಶ.

ವಸ್ತುವಿನ ಹಾಗೂ ಭಾವ ವಿಚಾರಗಳ ಪ್ರಾಮುಖ್ಯ, ಆಂತರಿಕ ಸಂಬಂಧ ಮತ್ತು ಕೃತಿಯ ಮೌಲ್ಯನಿರ್ಣಯದ ವೇಳೆ ಇವುಗಳ ಪಾತ್ರ ಹೇಗೆ ಸಹಾಯಕವಾಗುತ್ತದೆ ಎನ್ನುವುದರ ಬಗ್ಗೆ ನಮ್ಮ ಪ್ರಾಚೀನ ಕಾವ್ಯ ಮೀಮಾಂಸೆಯಲ್ಲಿ ಮತ್ತು ಆಧುನಿಕ ಕಾವ್ಯ ವಿಮರ್ಶನ ಕ್ಷೇತ್ರದಲ್ಲಿ ಸಾಕಷ್ಟು ವಿವೇಚನೆ ನಡೆದಿದೆ. ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ವಸ್ತುವಿಗೆ ಮಹತ್ವ ನೀಡುವ ಒಂದು ವಿಚಾರಶೀಲ ವರ್ಗವಿರುವಂತೆ, ಅದು ಅಷ್ಟು ಅನಿವಾರ್ಯವಲ್ಲ, ಹೇಳುವ ರೀತಿ ಅಥವಾ ಶೈಲಿ ಅಧಿಕ ಮಹತ್ವವನ್ನು ಪಡೆಯುತ್ತದೆನ್ನುವ ಪರಿಶೀಲಕರ ಇನ್ನೊಂದು ವರ್ಗವೂ ಇದೆ.

ನಾನು ಇಲ್ಲಿನ ಮೂರು ಗದ್ಯ ಸಂಗ್ರಹಗಳಲ್ಲಿ

ಗ್ರಹಿಸಿರುವಂತೆ ನಿಸಾರರ ದೃಷ್ಟಿಕೋನ ವಸ್ತುವಿನ ಪ್ರಾಶಸ್ತ್ಯವನ್ನು ಕುರಿತಂತೆ ಇರುವುದು ವೇದ್ಯವಾಗುತ್ತದೆ. ಹಾಗೆಂದು ರೀತಿ ಅಥವಾ ಶೈಲಿಯ ಬಗೆಗೆ ಅವರಿಗೆ ಕೀಳೆಣಿಕೆಯು ಅಭಿಪ್ರಾಯವಾಗಲಿ, ಅವುಗಳನ್ನು ಗೌಣವಾಗಿ ಮಾತ್ರ ಪರಿಶೀಲಿಸಬೇಕೆಂಬ ಅಪ್ರಬುದ್ಧ ವಿಚಾರ ಸರಣಿಯಾಗಲಿ ಇಲ್ಲ.

ವಸ್ತುವನ್ನು ಒಬ್ಬ ಲೇಖಕ ಸಾಮಾನ್ಯವಾಗಿ ಎರಡು ಬಗೆಯಲ್ಲಿ ಬಳಸಿಕೊಳ್ಳುತ್ತಾನೆ: ಒಂದು ವರ್ಣನಾತ್ಮಕವಾಗಿ: ಅಂದರೆ ಯಾವುದೇ ವಸ್ತುವನ್ನು ಅದರ ವಿವಿಧ ಅಂಶಗಳ ವಿವರಣೆಯೊಂದಿಗೆ ನಿರೂಪಿಸುವುದು. ಒಬ್ಬ ಪ್ರಕೃತಿ ಕವಿ ಸೂರ್ಯೋದಯವನ್ನೋ ಒಂದು ಹೂವಿನ ಚಂದವನ್ನೋ ಒಂದು ಜಲಪಾತದ ರುದ್ರ ರಮಣೀಯ ನೋಟವನ್ನೋ ಓದುಗರ ಮನಸ್ಸಿನಲ್ಲಿ ತದ್ವತ್ ಅನುಭವ ಆಗುವಂತೆ ವಿವರಿಸುವುದು ವರ್ಣನಾತ್ಮಕ ವಸ್ತುವಿನ ಒಂದು ಕ್ರಮ. ನವೋದಯ ಮಾರ್ಗದ ಕವನಗಳಲ್ಲಿ ಇಂತಹ ವರ್ಣನಾತ್ಮಕ ವಿಧಾನ ಪ್ರಾಮುಖ್ಯವನ್ನು ಪಡೆಯುತ್ತದೆ. ಪದ್ಯದ ಕೊನೆಯಲ್ಲಿ ಒಂದು ಉದಾತ್ತವಾದ ಕಲ್ಪನೆಯೋ ಆಧ್ಯಾತ್ಮಿಕದ ಒಂದು ಠರಾವೋ ವ್ಯಕ್ತವಾಗಿರಬಹುದು. ಆದರೆ ಅದು ಕವಿಯ ಸ್ವಂತದ ಅಭಿಪ್ರಾಯ ಅನ್ನುವ ನಂಬಿಕೆ ಓದುಗನಲ್ಲಿ ಮೂಡದೆ ಇದೊಂದು ಸಾಮಾನ್ಯೀಕೃತ (generalised) ಅಭಿಮತ ಎನ್ನಿಸುತ್ತದೆ.

ಎರಡನೆಯದು, ಸಾಂಕೇತಿಕವಾಗಿ ವಸ್ತುವನ್ನು ಬಳಸಿಕೊಳ್ಳುವ ವಿಧಾನ. ಅಂದರೆ ಕವಿ ನಂಬಿದ ಯಾವುದೋ ಒಂದು ತತ್ತ್ವಕ್ಕೆ ಅಥವಾ ಬಹು ಕಾಲದಿಂದ ಅವನು ರೂಢಿಸಿ ಕೊಂಡಿರಬಹುದಾದ ಒಂದು ಅಭಿಪ್ರಾಯಕ್ಕೆ ವಸ್ತು ಒಂದು ಪ್ರಣಾಳಿಕೆಯಾಗುತ್ತದೆ. ಹಾಗೆಂದು ಲೇಖಕ ವಿಶ್ವಾಸ ಪಟ್ಟಿರುವ ತಥ್ಯವೇ ಮುಖ್ಯವಾಗಿ, ವಸ್ತು ಅಮುಖ್ಯವೆಂದು ಅರ್ಥವಲ್ಲ. ಒಂದು ನಿರ್ದಿಷ್ಟ ವಸ್ತು ಇಲ್ಲದಿದ್ದ ಪಕ್ಷದಲ್ಲಿ ಅವನು ನಂಬಿರುವ ತತ್ತ್ವ ಇತರರಿಗೆ ಮನೋವೇದ್ಯವಾಗುತ್ತಿರಲಿಲ್ಲವೆನ್ನುವಷ್ಟರ ಮಟ್ಟಿಗೆ ವಸ್ತುವಿಗೆ ಪ್ರಾಮುಖ್ಯ ಒದಗುತ್ತದೆ. ಅಂದರೆ, ಇಲ್ಲಿ ವಸ್ತುವಿಗೂ ಲೇಖಕರ ನಂಬಿಕೆಯ ತತ್ತ್ವಕ್ಕೂ ಸಾವಯವ ವಾದ ಅವಿನಾ ಸಂಬಂಧವಿದೆ ಎಂಬುದು ಗ್ರಹಿಸಬೇಕಾದ ಅಂಶ. ಈ ವಿಧಾನದಲ್ಲೂ ಕೂಡಾ ವಸ್ತುವಿನ ವರ್ಣನೆ ಹಾಗೂ ವಿಶ್ಲೇಷಣೆ ಇರುವುದಿಲ್ಲವೆಂದಲ್ಲ. ಆದರೆ ಅವುಗಳಿಗೆ ಸ್ವತಂತ್ರ ಹಾಗೂ ಸ್ವಂತ ಮಹತ್ವವಿರುವುದಿಲ್ಲ. ಅವು ಲೇಖಕನ ತತ್ತ್ವದ ಅಭಿವ್ಯಕ್ತಿಗೆ ದುಡಿದಿರುತ್ತವೆ.

ಈ ನಿಟ್ಟಿನಲ್ಲಿ ನಿಸಾರರ ವಸ್ತುವನ್ನು ಕುರಿತ ನಿಲವುಗಳೇನು ಎನ್ನುವುದು ಪರಿಶೀಲನ ಯೋಗ್ಯವೆನಿಸುತ್ತದೆ. ವಸ್ತುವಿನ ಪ್ರಸ್ತಾಪ ಇವರ ಅನೇಕ ಲೇಖನಗಳಲ್ಲಿ ಬಂದಿದೆ. ಕೆಲವೊಮ್ಮೆ ವಿವರವಾಗಿ, ಕೆಲವೊಮ್ಮೆ ಸೂಚ್ಯವಾಗಿ. ಇದರ ಜೊತೆಗೇ ಭಾವ ಮತ್ತು ವಿಚಾರದ ನಂಟನ್ನು ಕೂಡಾ ನಿಸಾರರು ಗಂಭೀರವಾಗಿ ಕೆಲವು ಲೇಖನಗಳಲ್ಲಿ ಪ್ರಸ್ತಾಪಿಸಿ ದ್ದಾರೆ. ಈ ಮೂರೂ ಅಂಶಗಳು ಹೇಗೆ ಒಂದು ಬರವಣಿಗೆಯನ್ನು—ಗದ್ಯವಿರಲಿ, ಪದ್ಯವಿರಲಿ—ಸಾರ್ಥಕ್ಯಗೊಳಿಸುತ್ತವೆ ಅನ್ನುವುದು ಗಮನಿಸಬೇಕಾದ ಅಂಶ. ಇವುಗಳ ನಡುವಣ ಔಚಿತ್ಯಪೂರ್ಣ ಅಭಿವ್ಯಕ್ತಿ ಮತ್ತು ಸಾಮರಸ್ಯ, ಲೇಖನ ಅಥವಾ ಪದ್ಯದ ಯಶಸ್ಸಿಗೆ ಮುಖ್ಯ ಕಾರಣವಾಗುತ್ತದೆ ಎನ್ನುವುದು ಕೂಡ ಗಮನಿಸಬೇಕಾದ ಅಂಶ.

ನಿಸಾರ್ ಅಹಮದರು ತಮ್ಮ ಬದುಕಿನುದ್ದಕ್ಕೂ ಕಂಡ, ಕೇಳಿದ, ಓದಿದ, ಭಾಗವಹಿಸಿದ ಘಟನೆಗಳಿಗೆ ಹೃದಯವಂತಿಕೆಯಿಂದ ಸ್ಪಂದಿಸಿದವರು; ತಮ್ಮ ಅಂತರ್ಮುಖೀ ಚಿಂತನದಿಂದ ಮೌಲ್ಯಾಧಾರಿತ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು; ಉದಾತ್ತ ಸಾಹಿತ್ಯೋಪಾಸಕರು ಮತ್ತು ಸೃಜನಶೀಲ ಸಾಹಿತಿಗಳು.

ಬದುಕಿನ ಬೇರೆ ಬೇರೆ ಕಾಲ ಘಟ್ಟಗಳಲ್ಲಿ ಅವರ ವಿಚಾರಾತ್ಮಕ ಮತ್ತು ಭಾವನಾತ್ಮಕ ಅಂತರಂಗವನ್ನು ಕೆಣಕಿದ ವಸ್ತುಗಳನ್ನು, ವ್ಯಕ್ತಿಗಳನ್ನು, ಘಟನೆಗಳನ್ನು ತಮ್ಮ ಗದ್ಯ ಪದ್ಯಗಳ ರಚನೆಗಾಗಿ ಆಯ್ದುಕೊಂಡವರು. ಹೀಗಿದ್ದುದರಿಂದ ಸಹಜವಾಗಿಯೇ ಅವರ ಕೃತಿಗಳಲ್ಲಿ ವಸ್ತು ವೈವಿಧ್ಯ ಎದ್ದು ಕಾಣುತ್ತದೆ. ಈ ಮಾತು ಅವರ ಸಮಗ್ರ ಗದ್ಯ ಸಾಹಿತ್ಯಕ್ಕೆ ಸಹ ಅನ್ವಯಿಸುತ್ತದೆ.

ಉದಾಹರಣೆಗೆ, 'ಅಚ್ಚು ಮೆಚ್ಚು' ಸಂಕಲನದಲ್ಲಿನ ಲೇಖನಗಳು, ನಿಸಾರರೇ ತಮ್ಮ ಮುನ್ನುಡಿಯಲ್ಲಿ ಹೇಳಿದಹಾಗೆ 'ಸಾಹಿತ್ಯ, ಕಲೆ, ಸಂಸ್ಕೃತಿ, ನಾಗರಿಕತೆ, ರಾಜಕೀಯ, ಧರ್ಮ, ಪುರುಷಾರ್ಥ, ಪ್ರಕೃತಿ, ರಾಷ್ಟ್ರ ತದಿತರ ಸಂಗತಿಗಳ ಸುತ್ತ ಪರಿಭ್ರಮಿಸಿವೆ.' ಆದರೂ ಅವರ ಚಿಂತನದ 'ಸ್ಥಾಯೀ ಕೇಂದ್ರ ಮಾತ್ರ ಮನುಷ್ಯ ಜೀವಿತದ ಸಮಷ್ಟಿ ಒಳಿತಿನ ಹಾರೈಕೆ.' ಅವರ ಈ ವ್ಯಕ್ತಿ ವೈಶಿಷ್ಟ್ಯ ಅವರ ಸಮಗ್ರ ಗದ್ಯ ಲೇಖನಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಒಡಮೂಡಿ ವಿಜೃಂಭಿಸಿದೆ.

ಈ ಸಂದರ್ಭದಲ್ಲಿ ಅವರು ಆಯ್ದುಕೊಂಡ ವಸ್ತುಗಳ ವೈವಿಧ್ಯಕ್ಕೆ ಕೆಲವು ಕಾಂಕ್ರೀಟ್ ಉದಾಹರಣೆಗಳನ್ನು ಸಾಮಾನ್ಯ ಓದುಗನ ತಿಳಿವಿಗಾಗಿ ಸಂಕ್ಷಿಪ್ತವಾಗಿ ಹೇಳುವುದು ಅಪ್ರಸ್ತುತವೆನಿಸಲಾರದೆಂದು ಭಾವಿಸಿದ್ದೇನೆ. ಸಾಹಿತ್ಯೋಪಾಸನೆ ಅವರ ಜೀವಾಳ ಮತ್ತು ಉದ್ದಾಮ ಸಾಹಿತಿಗಳ ಮೆಚ್ಚುಗಾರರು ಅವರು. ಆ ಕಾರಣಕ್ಕಾಗಿ ಕೆಲವು ಸಾರ್ವಕಾಲಿಕ ಸಾಹಿತ್ಯ ಶ್ರೇಷ್ಠರಾಗಿ ನೆಲೆ ನಿಂತ ಸಾಹಿತಿಗಳ ಬದುಕು ಬರಹಗಳನ್ನು ವಸ್ತುವಾಗಿ ಆಯ್ದುಕೊಂಡು ಗದ್ಯ ಲೇಖನಗಳನ್ನು ಬರೆದಿದ್ದಾರೆ. ಉದಾಹರಣೆಗಾಗಿ ಕುವೆಂಪು, ಅಡಿಗ, ಎ. ಆರ್. ಕೃಷ್ಣಶಾಸ್ತ್ರೀ, ಮಾಸ್ತಿ, ಪು.ತಿ.ನ., ವಿ.ಸೀ. ಇತ್ಯಾದಿ.

ಹಾಗೆಯೇ ಜೀವನದ ಬಹು ಮುಖಗಳಿಗೆ ಸ್ಪಂದಿಸಿದ ಉದಾಹರಣೆಗಳಾಗಿ 'ಪ್ರಜಾ ಪ್ರಭುತ್ವದ ಸುತ್ತಮುತ್ತ', 'ಕ್ರುದ್ಧ ರಾಜಕೀಯಸ್ಥನ ಹೃದಯವಂತ ಧೀಮಂತಿಕೆ' (ರಾಜಕೀಯ), 'ಪ್ರಿಯ ಬೆಂಗಳೂರು-ಆಪ್ತ ಅನಿಸಿಕೆಗಳು' (ಕಂಡ ಸಂಗತಿಗಳು) 'ಬದುಕಿನ ಇಬ್ಬದಿಗಳು' (ದೈನಂದಿನ ದೃಶ್ಯಗಳು), ಮದರ್ ತೆರೆಸ, ಸರ್ ಮಿರ್ಜಾ ಇಸ್ಮಾಯಿಲ್ (ಸಮಾಜ ಹಿತ ಸಾಧಕರು), 'ಮಠಾಧೀಶರ ಮನೋಗತಿಗಳಿಗೆ ಸ್ವಾನುಭವದ ಸಿಂಧುತ್ವ', 'ಪ್ರವಾದಿಗಳ ಪ್ರವಚನದ ಪ್ರಜ್ವಲ ವಜ್ರಗಳು' (ಆಧ್ಯಾತ್ಮಿಕ)—ಮುಂತಾದ ಬರಹಗಳಿವೆ. ಹೀಗೆ, ನಿಸಾರರು ಆಯ್ದುಕೊಂಡ ವಸ್ತುಗಳ ಹರಹು, ಆಳ ಅಚ್ಚರಿ ಮೂಡಿಸುವಂತೆ ಇದೆ.

ಸಾಹಿತ್ಯ ಕ್ಷೇತ್ರದಲ್ಲಿ ವೈವಿಧ್ಯ :

ಲೇಖಕರು ಎತ್ತಿಕೊಂಡ ವಸ್ತುಗಳಲ್ಲಿ ಬಹು ಪಾಲು ಸಾಹಿತ್ಯಕ್ಕೆ ಸಂಬಂಧಿಸಿದವು

ಗಳು. ಇವುಗಳಲ್ಲಿ ಓದುಗರು ತುಂಬು ವೈವಿಧ್ಯವನ್ನು ಕಾಣಬಹುದು. 'ಸಾಹಿತ್ಯ ಸೃಷ್ಟಿ ಪ್ರಕ್ರಿಯೆ', 'ಸಾಹಿತ್ಯದ ನೆಲೆ ಬೆಲೆ', 'ಸಾಹಿತ್ಯ ಸಮಾಲೋಚನೆ'—ಇಂತಹ ಸಾಮಾನ್ಯ ಸಾಹಿತ್ಯಿಕ ನೇರ ವಸ್ತುಗಳಲ್ಲದೆ, ಸಾಹಿತ್ಯ ಕೃಷಿಯಲ್ಲಿ ಲೇಖಕರ ಸ್ವಾನುಭವಗಳನ್ನು ಬೇರೆ ಬೇರೆ ರೀತಿಯಲ್ಲಿ ಒಳಗೊಂಡಿರುವ ಲೇಖನಗಳೂ ಇವೆ. ಇವೆರಡೂ ರೀತಿಗಳ ಹೊರತಾಗಿ ಸಾಹಿತ್ಯ ವಿಮರ್ಶೆಗೆ ಮುಡಿಪಾದ ಮೌಲಿಕ ಚಿಂತನದ ಲೇಖನಗಳೂ ಇವೆ. ಇವುಗಳಲ್ಲಿ ಸಾಹಿತ್ಯದಲ್ಲಿ ವಿಮರ್ಶಕನ ಸೇತುಬಂಧ ಪಾತ್ರ, ವಿಮರ್ಶಕ ಅಡ್ಡದಾರಿ ಹಿಡಿಯಬಹುದಾದ ರೀತಿಗಳಲ್ಲಿ 'ಬೈ ವಿಮರ್ಶೆ, ಜೈ ವಿಮರ್ಶೆ'ಗಳ ಪರಿಶೀಲನೆ, ಪ್ರಾಮಾಣಿಕ ನಿಷ್ಪಕ್ಷಪಾತ ಸಮತೋಲನ ದೃಷ್ಟಿಯ ವಿಮರ್ಶಕರ ಅಗತ್ಯ, ಆ ವರ್ಗದ ವಿಮರ್ಶಕರ ಸಂಖ್ಯೆಯ ಬೆಳವಣಿಗೆಗೆ ಪತ್ರಿಕೆಗಳು, ವಿಚಾರ ವೇದಿಕೆಗಳು ನೀಡಬಹುದಾದ ಕಾಣಿಕೆ—ಹೀಗೆ, ಸಾಹಿತ್ಯ ವಿಮರ್ಶೆಯ ಬಗೆಗೆ ಪುಂಖಾನುಪುಂಖವಾದ ಆಲೋಚನೆಗಳ ಲೇಖನಗಳು ಸೇರಿವೆ. ಇವುಗಳ ಇನ್ನೊಂದು ವೈಶಿಷ್ಟ್ಯವೆಂದರೆ, ಎಲ್ಲವೂ ಸೃಜನಾತ್ಮಕ ಅಂತರ್ಮುಖೀ ಚಿಂತನದಿಂದ ಮೂಡಿಬಂದ ಮೌಲಿಕ ಲೇಖನಗಳು. ಇವುಗಳನ್ನು ಸಾಹಿತ್ಯಾಸಕ್ತರು ಪರಾಮರ್ಶನ ಸಾಮಗ್ರಿಗಳಾಗಿ ಬಳಸಲು ಯೋಗ್ಯವಾದವುಗಳು.

ವಸ್ತು ವಿವೇಚನೆ

ವಸ್ತು ವಿವೇಚನೆ ಒಂದು ಸಂಕೀರ್ಣ ಪ್ರಕ್ರಿಯೆ ಆದರೂ ಆಯ್ದ ವಸ್ತುವಿನ ಬಗೆಗೆ ಚಿಂತನ ಮಂಥನ, ಆಲೋಚನೆ, ವಿಶ್ಲೇಷಣೆ, ತಾರ್ಕಿಕ ಜೋಡಣೆ, ತರ್ಕಬದ್ಧ ವಿವರಣೆಯ ಸಿದ್ಧತೆ ಹಾಗೂ ಇವುಗಳಿಗೆ ಸೂತ್ರವಾಗಿರುವ ಲೇಖಕನ ನಂಬಿಕೆ ಅಥವಾ ಅವನ ಗಟ್ಟಿ ಅಭಿಪ್ರಾಯದ ಮಂಡನೆಯ ರೂಪ, ಲೇಖಕನ ಸ್ಥಾಯೀಭಾವದಲ್ಲಿ ನಡೆಯುವ ಪ್ರಕ್ರಿಯೆಗಳ ಸರಮಾಲೆ. ಇದಕ್ಕೆ ಆಧಾರವಾಗಿ, ಪೋಷಕವಾಗಿ ಲೇಖಕನ ನಂಬಿಕೆ, ದೃಷ್ಟಿಕೋನಗಳೂ ನೆರವಾಗುತ್ತವೆ.

ನಿಸಾರರ ವಸ್ತು ವಿವೇಚನೆಗೆ, ಅವರೇ ಹಲವೆಡೆ ಹೇಳಿದಂತೆ, ಅವರ ಸ್ಥಾಯೀಭಾವ ವಾದ ಅಂತರ್ಮುಖತ್ವ ಸಹಕಾರಿಯಾಗುತ್ತದೆ. ಗದ್ಯ ವಿವೇಚನೆಯಲ್ಲಿ ಭಾವ ಮತ್ತು ಆಲೋಚನೆಗಳು ಹಿತಮಿತವಾಗಿ ಸಾಮರಸ್ಯ ಹೊಂದಿರಬೇಕೆಂಬುದು ಅವರ ದೃಷ್ಟಿಕೋನ. ಅಂತಹ ಸಾಹಿತ್ಯದಿಂದ ಸಾಮಾಜಿಕ ಹಿತ ಸಾಧ್ಯವೆಂದು ಅವರ ಬಲವಾದ ನಂಬಿಕೆ.

ಈ ಎಲ್ಲ ಸಾಹಿತ್ಯಿಕ ಪ್ರಕ್ರಿಯೆಗಳು ತಾರ್ಕಿಕವಾಗಿ ಹೇಗೆ ಮೇಳೈಸಿ ನಡೆಯುತ್ತಿವೆ ಎಂಬುದಕ್ಕೆ ಅವರ 'ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ' ಎಂಬ ಲೇಖನವನ್ನು ಉದಾ ಹರಣೆಗೆ ತೆಗೆದುಕೊಳ್ಳಬಹುದು. ವಸ್ತುವನ್ನು ಕುರಿತ ತಮ್ಮ ಚಿಂತನದಲ್ಲಿ ಮೊದಲು ಹಲವಾರು ಪ್ರಶ್ನೆಗಳಿಗೆ ಉತ್ತರ ಹುಡುಕಲು ಯತ್ನಿಸಿದ್ದಾರೆ. 'ಸಾಮಾನ್ಯ'ನೆಂದರೆ ಯಾರು? ಅವನು ಸಾಹಿತ್ಯವನ್ನು ಬಯಸುತ್ತಾನೆಯೆ? ಹಾಗಿದ್ದ ಪಕ್ಷದಲ್ಲಿ ಅವನಿಗೆ ಎಂತಹ ಸಾಹಿತ್ಯ ಸರಿ? ಸಾಹಿತ್ಯದಿಂದ ಅವನಿಗೆ ಆಗುವ ಪ್ರಯೋಜನವೇನು? ಈ ಪ್ರಯೋಜನದಿಂದ ಸಮಾಜ ಕಲ್ಯಾಣಕ್ಕೆ ಯಾವ ರೀತಿ ಸಹಾಯವಾಗುತ್ತದೆ? ಇವೆಲ್ಲವುಗಳನ್ನು ವಿವೇಚಿಸಿ ಕೊನೆಗೆ ತಾವು ನಂಬಿದ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಸಾಮಾಜಿಕ ಪರಿವರ್ತನೆಯಲ್ಲಿ

ಅದಕ್ಕೆ ಕಾರಣೀಭೂತವಾದ ಹಲವಾರು ಜೀವಿತ ಮುಖಗಳಲ್ಲಿ ಸಾಹಿತ್ಯಕ್ಕೆ ಒಂದು ಮಹತ್ವದ ಪಾತ್ರವಿದೆ ಎಂಬುದು ನಿಸಾರರ ಅಭಿಮತ. ಸಮಾಜ ಹಿತ ಪರವಾದ ಅವರ ಕಳಕಳಿ ಅವರ ಜೀವನ ಮೌಲ್ಯಗಳಲ್ಲಿ ಪ್ರಮುಖವಾದ ಒಂದು ಅಂಗ. ಆನುಷಂಗಿಕವಾಗಿ ಈ ಪ್ರಕ್ರಿಯೆಯಲ್ಲಿ ಸಾಮಾನ್ಯ ಓದುಗ ಮತ್ತು ಸಾಹಿತಿ ಇವರ ನಡುವಣ ಕಂದರಕ್ಕೆ ಸೇತುಬಂಧವಾಗಿ ಸದ್ವಿಮರ್ಶಕ ಹೇಗೆ ಕೃತಾರ್ಥಕಾರ್ಯವನ್ನು ಮಾಡಬಲ್ಲ ಎಂಬುದನ್ನು ತಮ್ಮ ಸಹಜ ಧ್ವನಿಯಿಂದ ಹೇಳಿದ್ದಾರೆ.

ಇದೇ ರೀತಿಯಾಗಿ ಸಾಹಿತ್ಯ ವಿಮರ್ಶಕನ ಪಾತ್ರವನ್ನು ತಮ್ಮ ಅಂತರ್ಮುಖಿ ಚಿಂತನ ಕ್ಕೊಳಪಡಿಸಿ ಜೀವನ ಮೌಲ್ಯಗಳ ಒರೆಗಲ್ಲಿಗೆ ತಿಕ್ಕಿ ವಿವರಿಸಿದ್ದಾರೆ. ಮುಖ್ಯವಾಗಿ ಒಬ್ಬ ವಿಮರ್ಶಕನ ಅತಿಶಯವಾದ ಅನಾದರ, ಇಲ್ಲವೇ ಅತಿರೇಕದ ಆರಾಧನೆಗಳಿಂದ ಸಾಹಿತ್ಯಕ್ಕೆ, ಸಮಾಜಕ್ಕೆ ಆಗಬಹುದಾದ ಅನ್ಯಾಯಗಳನ್ನು ವಿವರಿಸಿ, ನಿಷ್ಪಕ್ಷಪಾತದ ಪ್ರಾಮಾಣಿಕ ವಿಮರ್ಶಕ ಸಾಹಿತ್ಯಕ್ಕೆ, ಸಮಾಜ ಹಿತಕ್ಕೆ ಹೇಗೆ ಪೋಷಕನಾಗಬಹುದೆಂಬುದನ್ನು 'ಬೈ ವಿಮರ್ಶೆ, ಜೈ ವಿಮರ್ಶೆ' ಎಂಬ ಲೇಖನದಲ್ಲಿ ಮನಂಬುಗುವಂತೆ ಬಿಂಬಿಸಿದ್ದಾರೆ.

ಇದು ವೈಜ್ಞಾನಿಕ ಯುಗ. ವಿಜ್ಞಾನ ತಂತ್ರಜ್ಞಾನಗಳು ನಾಗಾಲೋಟದಲ್ಲಿ ನೆಗೆಯುತ್ತ ಮುನ್ನಡೆದಿವೆ. ವಿಜ್ಞಾನಕ್ಕೆ ಸಿಕ್ಕ ಅಸಾಮಾನ್ಯ ಮಹತ್ವದ ಹಿನ್ನೆಲೆಯಲ್ಲಿ ಸಾಹಿತ್ಯಕ್ಕೆ ಯಾವ ಸ್ಥಾನ? ಎಂದು ವಿಚಾರ ಹರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಸಾಮಾಜಿಕ ಹಿತವನ್ನೇ ಮುಖ್ಯ ಮೌಲ್ಯವೆಂದು ಪರಿಗಣಿಸಿದ ನಿಸಾರ್ ಅವರು ವಿಜ್ಞಾನ ಸಾಹಿತ್ಯಗಳ ತುಲನಾತ್ಮಕ ಚಿಂತನೆಗಳನ್ನು ನಡೆಸಿದ್ದಾರೆ, ಅವರ ಲೇಖನ 'ವಿಜ್ಞಾನ ಮತ್ತು ಸಾಹಿತ್ಯ'ದಲ್ಲಿ.

ಜನ ಸಮುದಾಯಕ್ಕೆ ವಿಜ್ಞಾನದಿಂದಾದ ಲಾಭಗಳನ್ನು ಸಮನ್ವಯ ದೃಷ್ಟಿಯ ನಿಸಾರರು ಅಲ್ಲಗಳೆಯುವುದಿಲ್ಲ. ಜನ ಜೀವನದ ಎಲ್ಲ ಅಂಗಗಳಲ್ಲಿ ಸತ್ಯಾನ್ವೇಷಣೆಯ ನಿಖರ ಆಧಾರ ಅಗತ್ಯವೆಂಬ ವಿಜ್ಞಾನದ ಕಳಕಳಿಯನ್ನು ಅವರು ಒಪ್ಪಿದ್ದಾರೆ. ಇವುಗಳೊಟ್ಟಿಗೆ ಮೂಢ ನಂಬಿಕೆಗಳ ದುರಂತದಿಂದ ವಿಜ್ಞಾನ, ಮಾನವನನ್ನು ಮುಕ್ತಗೊಳಿಸಿದೆ ಎಂಬುದನ್ನೂ ನಿಸಾರರು ಮೆಚ್ಚಿದ್ದಾರೆ.

ಆದರೆ ವಿಜ್ಞಾನದಿಂದಾಗುವ ಎರಡು ಘೋರ ದುಷ್ಪರಿಣಾಮಗಳು ಅವರ ಅಂತರಂಗವನ್ನು ಕದಡಿವೆ. ಮೊದಲನೆಯದಾಗಿ ವಿಜ್ಞಾನಿಗೆ ತನ್ನ ಶೋಧಗಳ ವಿನಾಶಕಾರಿ ಬಳಕೆಯ ಮೇಲೆ ನಿಯಂತ್ರಣವಿಲ್ಲದ್ದರಿಂದ, ರಾಜಕಾರಣಿಗಳು ಜಗತ್ತನ್ನು ವಿನಾಶಾತ್ಮಕ ಯುದ್ಧಗಳತ್ತ ಒಯ್ಯುವ ಸಂಭವ ಹೆಚ್ಚು. ಎರಡನೆಯದಾಗಿ ಭೂಮಿಯ ಅದುರಿನಲ್ಲಿ ಅಡಗಿದ ಖನಿಜ ವಸ್ತುಗಳ ಅನಿಯಂತ್ರಿತ ಬಳಕೆಯಿಂದ ಜಗತ್ತಿನ ಒಟ್ಟು ಖನಿಜ ಸಂಪತ್ತಿಗೆ ಆಗುವ ಖಾಯಂ ಹಾನಿ ನಿಸಾರರನ್ನು ಕಳವಳಗೊಳಿಸಿದೆ.

ಮುಂದೆ ಒದಗಬಹುದಾದ ಘೋರ ಪರಿಸ್ಥಿತಿಯನ್ನು ಪರಿವರ್ತಿಸಿ, ತತ್ತ್ವಜ್ಞಾನ ಮತ್ತು ಧರ್ಮ ಆಧಾರಿತ ಬದುಕಿನೆಡೆಗೆ ಸೆಳೆದು, ಲೋಕದಲ್ಲಿ ಶಾಂತಿ ಸಮಾಧಾನ ನೆಲೆಗೊಳ್ಳುವಂತೆ ಮಾಡುವ ಧನ್ಯ ಕಾರ್ಯ ಒಳ್ಳೆಯ ಸಾಹಿತ್ಯದ್ದು ಎಂದು ಅವರ ದೃಢ ನಂಬುಗೆ. ವಿಜ್ಞಾನದಿಂದ ದೊರೆಯುವ ಸತ್ಯನಿಷ್ಠೆ, ತರ್ಕಬದ್ಧ ಚಿಂತನೆಗಳ ಜೊತೆ ಆಂತರಿಕ

ಸೌಂದರ್ಯೋಪಾಸನೆ, ಮೌಲ್ಯಾವಲಂಬನೆಗಳಿಂದ ಶುಚಿಪೂರ್ಣ ಸಾಹಿತ್ಯ ನಿರ್ಮಾಣವಾಗಿ, ತನ್ಮೂಲಕ ಜನ ಜೀವನಕ್ಕೆ ಶಾಂತಿ ಸುಧೆಯನ್ನು ನೀಡುವ ಪವಿತ್ರಕಾರ್ಯ ಸಾಧ್ಯ ಎಂಬ ನಿಲವು ಈ ವಿಷಯದ ಅವರ ವಸ್ತುವಿವೇಚನೆಯಲ್ಲಿ ಕೇಂದ್ರ ಸ್ಥಾನ ಪಡೆದಿದೆ.

ವಸ್ತು ವಿವೇಚನೆಯಲ್ಲಿ ಇರಲೇಬೇಕಾದ ಒಂದು ಮುಖ್ಯಾಂಶ ಉಳಿದಿದೆ. ವಿವೇಚನೆಯನ್ನು ನಿಯಂತ್ರಿಸುತ್ತ, ದಾರಿದೀಪವಾಗುವ ಅಂಶ ಅದು. ಓದುಗರಿಗೆ ಲಭ್ಯವಾಗಬೇಕಾದ ದೃಷ್ಟಿಯಿಂದ ಸಾಹಿತ್ಯದ ಉದ್ದೇಶಗಳೇನು? ಇದರ ಸ್ಪಷ್ಟ ಕಲ್ಪನೆ ಲೇಖಕನಿಗೆ ಇರಬೇಕಾದುದು ಅಗತ್ಯ. ಈ ದಿಸೆಯಲ್ಲಿ ನಿಸಾರ್ ಅಹಮದ್‌ರ ಸ್ಪಷ್ಟ ಭಾವನೆಗಳೇನು ಎಂಬುದನ್ನು ಪರೀಕ್ಷಿಸೋಣ.

ಸಾಹಿತ್ಯದ ಉದ್ದೇಶದ ಬಗೆಗಿನ ಸ್ಪಷ್ಟ ಕಲ್ಪನೆ ಸಾಹಿತ್ಯ ವಿವೇಚನೆಗೆ ತುಂಬಾ ಸಹಾಯಕ. ನಿಸಾರ್ ಅಹಮದರ ದೃಷ್ಟಿಯಲ್ಲಿ ಸಾಹಿತ್ಯದ ಮುಖ್ಯೋದ್ದೇಶ, ಸುಸಂಸ್ಕೃತ ವಾಚಕನಿಗೆ `ಮನೋರಂಜನೆಯ ನಲಿವು ಮತ್ತು ವಿಚಾರಾತ್ಮಕ ತಿಳಿವು' ಲಭ್ಯವಾಗಿಸುವುದು. ಅಲ್ಲದೆ, ನಲಿವು-ತಿಳಿವುಗಳು ಹಿತಮಿತವಾಗಿ ಸಮರಸಗೊಂಡಿರಬೇಕು. ಇದನ್ನು ಸಾಧಿಸುವುದು ಸುಲಭ ಸಾಧ್ಯವಲ್ಲ. ಸಾವಿರದಲ್ಲಿ ಒಂದೋ, ಎರಡೋ ಪಾಲಿನಷ್ಟು ಸಾಧಿತವಾದರೂ ಸಾಕು, ಇದರಿಂದ ಆ ಭಾಷೆಯ ವಾಙ್ಮಯ ಸಾರ್ಥಕ ಎಂದು ತಮ್ಮ 'ಸಾಹಿತ್ಯದ ನೆಲೆ ಬೆಲೆ' ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಉಜ್ವಲ ಸಾಹಿತಿಗಳ ಚಿಂತನ ಮಂಥನಕ್ಕೆ ಯೋಗ್ಯ ವಿಚಾರವಿದು.

ನಿಸಾರ್ ಅವರ ಗದ್ಯ ಶೈಲಿ

ವಸ್ತು ವಿವೇಚನೆಯಿಂದ ರೂಪುಗೊಂಡ ಆಲೋಚನೆಗಳ ಅಭಿವ್ಯಕ್ತಿಯ ರೀತಿಯೇ ಶೈಲಿ. ಶೈಲಿಯ ಬಗೆಗಿನ ನಿಸಾರ್ ಅಹಮದರ ಮೂಲಭೂತ ವಿಚಾರಗಳನ್ನು ತಿಳಿಯೋಣ.

`ಮನುಷ್ಯನ ನಡೆ-ನುಡಿ, ವೇಷ ಭೂಷಣ, ಹಾವಭಾವಾದಿಗಳಲ್ಲಿ ಅನ್ಯತೆ, ಅನನ್ಯ ಭಿನ್ನತೆ ಇದ್ದರೆ, ಅದು ಆ ಮನುಷ್ಯನ ಶೈಲಿ' ಎಂಬ ಸಾಮಾನ್ಯಾರ್ಥದ ಅಭಿಪ್ರಾಯವನ್ನು ಅವರು ನೀಡುತ್ತಾರೆ. ಸಾಹಿತ್ಯದಲ್ಲಿ `ಶೈಲಿ'ಯನ್ನು ಭಾವ ವಿಚಾರಗಳ ಪೋಷಾಕೆಂದು ಬಗೆದವರುಂಟು. ಹಾಗೆಂದಾಗ ಅಗತ್ಯವೆನಿಸಿದಂತೆ ಬದಲಿಸಬಹುದಾದ ಪರಿಕರವದು ಎಂಬ ಅಪಾರ್ಥಕ್ಕೆ ಎಡೆ ಮಾಡಿ ಕೊಡುವುದರಿಂದ ಈ ಅರ್ಥವನ್ನು, ವ್ಯಾಖ್ಯಾನವನ್ನು ನಿಸಾರರು ತಿರಸ್ಕರಿಸುತ್ತಾರೆ. ಹಾಗೆಯೇ 'ಶೈಲಿ'ಯನ್ನು ಒಡಲಿನ ಚರ್ಮಕ್ಕೂ ಹೋಲಿಸಿದವರುಂಟು. ಇಲ್ಲಿಯೂ ಒಂದು ತೊಡಕಿದೆ. ಚರ್ಮಕ್ಕೆ ಮೇಕಪ್ ಮಾಡಿ, ರೂಪ ಬದಲಿಸುವಂತೆ ಶೈಲಿಯನ್ನೂ ಬೇರೆಯ ರೂಪಕ್ಕೆ ತಿರುಗಿಸಬಹುದು. ಆದ್ದರಿಂದ ನಿಸಾರರು ಈ ನಿಲವನ್ನು ಒಪ್ಪುವುದಿಲ್ಲ.

ಅವರ ಅಭಿಪ್ರಾಯದಲ್ಲಿ ಲೇಖಕನ ಭಾವನೆಗಳ ಜೊತೆಜೊತೆಗೇ `ಶೈಲಿ'ಯೂ ರೂಪುಗೊಳ್ಳುತ್ತ ಹೋಗುತ್ತದೆ. ಹಾಗಾಗಿ `ಶೈಲಿ' ಒಟ್ಟು ಬರವಣಿಗೆಯಿಂದ ಬೇರ್ಪಡಿಸಲಾಗದ ಅಂಗ. ಚಿಂತನೆಗೂ ಶೈಲಿಗೂ ಅನ್ಯೋನ್ಯ ಸಂಬಂಧವಿದೆ ಎಂದು ಅವರ ನಿಲವು. ಈ

ನೆಲೆಯಲ್ಲಿ ಭಾವ ಮತ್ತು ಆಲೋಚನೆಗಳನ್ನು ಕ್ರೋಢೀಕರಿಸಿ, ಭಾಷೆಯಲ್ಲಿ ಅವುಗಳನ್ನು ಚಿತ್ತಾಕರ್ಷಕವಾಗಿ ನಿವೇದಿಸುವುದೇ ಶೈಲಿ. ಭಾವಾಲೋಚನೆಗಳ ಸಾಮರಸ್ಯ ಮತ್ತು ಅವನ್ನು ಚಿತ್ತಾಕರ್ಷಕವಾಗಿ ನಿವೇದಿಸುವ ರೀತಿ—ಈ ಮೂರೂ ಮುಪ್ಪುರಿಗೊಂಡು ರೂಪವ ತಾಳಿದ ಒಂದು ಸಮನ್ವಯತೆಯಲ್ಲಿ ನಿಸಾರ್ ಅಹಮದ್‌ರ ಗದ್ಯಶೈಲಿ ಅರಳಿ ನಿಂತಿದೆ.

ಸಾಮಾನ್ಯನಿಗೆ ಸಾಹಿತ್ಯದಿಂದಾಗುವ ಪ್ರಯೋಜನವೇನು? ಎಂಬ ಪ್ರಶ್ನೆಗೆ, ಅವರು ಉತ್ತರಿಸಿದ ವಾಕ್ಯವಿದು: 'ಸಾಮಾನ್ಯಜನ, ದಿನಚರಿಯ ಲೌಕಿಕ ಹೊಯ್ದಾಟಗಳ ತಂತಿ ಮೇಲಿನ ನಡಿಗೆಯಲ್ಲಿ ಸಮತೋಲ ಕಳೆದುಕೊಂಡು ಎದೆಗುಂದಿದ ವೇಳೆ, ಬಹು ವಸ್ತು ಸಮುಚ್ಚಯದಿಂದ ಕಾಲ್ತೊಡಕಿ ಎಡವುತ್ತಿರುವ ವೇಳೆ, ದಯಾರಹಿತ ಲೋಕ ತಾಡನಕ್ಕೆ ಈಡಾಗಿ ಕ್ಷೋಭೆಗೊಂಡ ವೇಳೆ, ಶ್ರದ್ಧೆ ಧೈರ್ಯ ಸಂತೃಕೆಗಳ ಮುನ್ನೋಟದ ಉತ್ತರ ಮುಖಿಯನ್ನು ಕರುಣಿಸಲು ಸಾಹಿತ್ಯ ಕಲಾನುಭವಗಳು ಮುಂದಾಗುತ್ತವೆ.'

ಅವರ ಶೈಲಿಯಲ್ಲಿ ಉಪಮೆ ರೂಪಕಗಳು ಸಹಜವಾಗಿ ಮೈ ತಳೆಯುವುದಕ್ಕೆ ಉದಾಹರಣೆಯೊಂದನ್ನು ನೋಡಿ: 'ಶ್ರೀ ಸಾಮಾನ್ಯನ ತಲೆ, ಹೊಟ್ಟೆಯ ಗುರುತ್ವಾಕರ್ಷಣ ಶಕ್ತಿಯನ್ನು ಮೀರಿ ಹೊಸ ನಲಿವಿನ, ತಿಳಿವಿನ ನೆಲೆಗಳನ್ನು ಶೋಧಿಸಲು ಸಾಹಿತ್ಯ ಉಪಗ್ರಹ ಸದೃಶ ಸಾಧನವಾಗಬಲ್ಲದು.'

ಹಾಗೆಯೇ, ಶೈಲಿಯಲ್ಲಿ ಸೂಕ್ತವಲ್ಲದ ನಗ್ನ ವರ್ಣನೆಯ ರೀತಿ ಮತ್ತು ಪರಿಷ್ಕೃತ ವಾದ ಅಲಂಕಾರದ ರೀತಿಗಳಲ್ಲಿನ ಭೇದವನ್ನು ತಿಳಿಸಲು, 'ಮಣಿ ಖಚಿತ ನತ್ತುಳ್ಳ ಮೂಗು ಮತ್ತು ಕೇವಲ ಸೂಜಿಯ ತೂತಿರುವ ಮೂಗು'ಗಳ ಹೋಲಿಕೆ ಕೊಟ್ಟಿದ್ದಾರೆ.

ಸಾಹಿತ್ಯವೆಂದರೆ ದೈನಂದಿನ ಘಟನೆಗಳ ವಾಸ್ತವ ವರದಿಯಲ್ಲ. ಘಟನೆಗಳು ಚಿಂತನ ಮಂಥನಕ್ಕೊಳಗಾಗಿ, ಪ್ರತಿಭೆಯ ಕಾವಿನ ಕುಲುಮೆಯಲ್ಲಿ ಕುದಿದು ಪರಿಷ್ಕೃತವಾಗಿ ಅಪ್ಪಟ ಚಿನ್ನದಂತೆ ಪ್ರಕಾಶಮಾನವಾಗಿ ಅಭಿವ್ಯಕ್ತಗೊಳ್ಳಬೇಕು. ಅದೇ ಬಗೆಯಲ್ಲಿ ನಿಸಾರರ ಶೈಲಿ ಉಜ್ವಲ ಮಿಂಚಿನ ಹಾಗೆ ಅದರ ಗತಿ. ವಿಚಾರಗಳ ಗಾಂಭೀರ್ಯಕ್ಕೆ ತಕ್ಕಂತೆ ಅವರ ಭಾಷಾ ಭವ್ಯತೆ. ಉದಾಹರಣೆಗಾಗಿ ಸಾಂಪ್ರದಾಯಿಕ ಉದ್ದಾಮ ಸಾಹಿತಿಗಳ ಬಗೆಗೆ ಹೇಳುವಾಗ 'ಸಂಪದ್ಭರಿತವಾದ ಸಾಹಿತ್ಯ ಸಾಮ್ರಾಜ್ಯದಲ್ಲಿ ಸಿಂಹಾಸನಸ್ಥರಾದ' ಶ್ರೇಷ್ಠ ಸಾಹಿತಿಗಳೆಂದು ಹೇಳಿ, ಅವರ ಬಗೆಗೆ ಹೃದಯ ತುಂಬಿದ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಅವರ ಸಾಹಿತ್ಯಾರಾಧನೆಯಲ್ಲಿ 'ಶೈಲಿಯನ್ನು ಕುರಿತಂತೆ ಕನ್ನಡದಲ್ಲಿ ಪ್ರಕಟವಾಗಿರುವ, ಬಹುಕಾಲ ಬಾಳುವ ವಿದ್ವತ್ಪೂರ್ಣ ಕೃತಿಯೆಂದರೆ ಡಾ|| ಎಸ್. ವಿ. ರಂಗಣ್ಣನವರ ಹೆಬ್ಬೊತ್ತಿಗೆ 'ಶೈಲಿ.'

ಜೀವನ ಮೌಲ್ಯಗಳಿಗೆ ಅವರಿತ್ತ ಸ್ಥಾನದ ಬಗೆಗಿನ ಅಭಿಪ್ರಾಯದೊಂದಿಗೆ ಈ ಲೇಖನವನ್ನು ಮುಗಿಸಬಹುದು : 'ನನ್ನ ಈ ತನಕದ ಒಟ್ಟಾರೆ ಗದ್ಯ ಬರವಣಿಗೆಯಲ್ಲಾಗಲಿ, ಪದ್ಯ ರಚನೆಯಲ್ಲಾಗಲಿ ಪರಂಪರೆಯಿಂದ ಅಂಗೀಕೃತವಾಗಿ, ಕಾಲಧರ್ಮದಿಂದ ಪರೀಕ್ಷಿತವಾಗಿ ಸುದೃಢವಾಗಿರುವ ಉಚ್ಚ ಮೌಲ್ಯಪ್ರಜ್ಞೆಯೊಂದು ಶಿಲಾಖಂಡದೊಳಗಿನ ಸ್ವರ್ಣರೇಖೆಯಂತೆ ಲಕಲಕಿಸಿದೆ ಎಂದು ನಾನು ಭಾವಿಸಿದ್ದೇನೆ.' (ಅಚ್ಚುಮೆಚ್ಚು)

ನಿಸಾರರ ಗದ್ಯಸಾಹಿತ್ಯದಲ್ಲಿ ವಿಜ್ಞಾನ ಮತ್ತು ಶಿಕ್ಷಣದ ವಿಚಾರಗಳು



♦ *ವಸಂತ ಕಲಬಾಗಲ್*
ಆಕ್‌ಲೆಂಡ್ (ನ್ಯೂಜಿಲೆಂಡ್)

೧

ನಿಸಾರ್ ಅಹಮದ್ ಅವರು ಈ ವಿಷಯವನ್ನು ಕುರಿತಂತೆ ನಾಲ್ಕೈದು ಲೇಖನಗಳನ್ನು ಬರೆದಿದ್ದಾರೆ. ಇತರ ಲೇಖನಗಳಲ್ಲಿ ಅಲ್ಲಲ್ಲಿ ಪ್ರಾಸಂಗಿಕವಾಗಿ ಇವುಗಳ ಬಗ್ಗೆ ಆಲೋಚನೆಗಳನ್ನು ಮಂಡಿಸಿದ್ದಾರೆ. ಸಮುದಾಯದ ಮತ್ತು ವೈಯಕ್ತಿಕ ಜೀವನದ ಮೇಲೆ ದೊಡ್ಡ ಪ್ರಮಾಣದ ಪ್ರಭಾವವನ್ನು ಅಚ್ಚೊತ್ತಬಲ್ಲ ಈ ಎರಡು ವಿಷಯಗಳ ಪ್ರಾಮುಖ್ಯ ಆಧುನಿಕ ಜಗತ್ತಿನಲ್ಲಿ ಯಾವ ಬಗೆಯದು ಎಂಬುದನ್ನು ಕ್ಷಣ ಮಾತ್ರದಲ್ಲಿ ಅರಿಯಲು ನಮ್ಮ ಸುತ್ತ ಒಮ್ಮೆ ದೃಷ್ಟಿ ಹರಿಸಿದರೆ ಸಾಕು. ಪತ್ರಿಕೆ, ಟಿ.ವಿ., ಫ್ಯಾನು, ಫೋನು, ವಿದ್ಯುನ್ಮಾನ ಸರಕುಗಳು, ವಾಹನಗಳು, ಪುಸ್ತಕಗಳು—ಒಂದೇ, ಎರಡೇ? ಇಂತಹ ದಿನ ಬಳಕೆಯ ವಸ್ತುಗಳನ್ನು ವಿಶ್ಲೇಷಿಸಿದರೆ ವಿಜ್ಞಾನ ಮತ್ತು ಶಿಕ್ಷಣಗಳ ಮಹತ್ವ ಮನವರಿಕೆಯಾಗುತ್ತದೆ. ಒಂದು ಕಾಲಕ್ಕೆ ವಿಲಾಸೋಪಭೋಗ ವಸ್ತುಗಳೆಂದು, ರೊಕ್ಕಸ್ಥರ ಖಯಾಲಿಯೆಂದು ಪರಿಗಣಿತವಾಗಿದ್ದ ನೂರಾರು ವಸ್ತುಗಳು ಶ್ರೀಸಾಮಾನ್ಯನ ಅನುದಿನದ ಅಗತ್ಯಗಳನ್ನು ಪೂರೈಸುವ ಕೈಂಕರ್ಯಕ್ಕೆ ಕೈ ಕಟ್ಟಿ ಅಣಿಯಾಗಿವೆ. ಅವುಗಳ ಸುಧಾರಿತ ಮಾದರಿಗಳು ಕೆಲವೇ ತಾಸುಗಳಲ್ಲಿ ಉತ್ಪಾದಿತವಾಗಿ ಹಿಂದಿನವನ್ನು ಮೂಲೆ ಹಿಡಿಯುವಂತೆ ಮಾಡಿವೆ. ಹಿಂದಿಗಿಂತ ಅವುಗಳ ತಯಾರಿಕೆ ಸಹಸ್ರಾರು ಪಟ್ಟು ಹೆಚ್ಚಿದೆ. ಬೆಲೆಯಲ್ಲೂ ಗಣನೀಯವಾಗಿ ಬದಲಾವಣೆಯಾಗಿದೆ.

ಇದರಿಂದ ವಿಜ್ಞಾನ-ತಂತ್ರಜ್ಞಾನದ ಪರಿಣಾಮ ಮನುಷ್ಯ ಜೀವನವನ್ನು ಹಾಸುಹೊಕ್ಕು ಎಂತಹ ಅಗಾಧತರ ಪರಿವರ್ತನೆಯನ್ನು ಸಾಧಿಸಿದೆ ಎಂದು ಅರಿಯಬಹುದು. ಅಷ್ಟೇ ಅಲ್ಲದೆ, ಮನುಷ್ಯನನ್ನು ವಿದ್ಯಾಭ್ಯಾಸ ಹೇಗೆ ನಾಗರಿಕನಾಗಿ ಮುಂದುವರಿಯಲು ಸಹಕಾರಿಯಾಗಿದೆ ಎನ್ನುವ ಸಂಗತಿಯೂ ವೇದ್ಯವಾಗುತ್ತದೆ. ವಿಜ್ಞಾನದ ಚರಿತ್ರೆ, ಬೆಳವಣಿಗೆ, ನಡೆದಿರುವ ಅಪೂರ್ವ ಪ್ರಯೋಗಗಳು, ಮನುಷ್ಯನಿಗೆ ಅವುಗಳ ಉಪಯುಕ್ತತೆ ಹಾಗೂ ವೈಚಾರಿಕ ಮನೋದೃಷ್ಟಿಯನ್ನು ಅರ್ಥವಿಸಿಕೊಳ್ಳಲು ಮತ್ತು ಬಹು ಸಂಖ್ಯೆಯ ಜನರಲ್ಲಿ ಪ್ರಚುರ ಪಡಿಸಲು ಶಿಕ್ಷಣ ಅತ್ಯನಿವಾರ್ಯ. ಹಾಗೆಯೇ, ವೈಜ್ಞಾನಿಕ ವಿಷಯದ ಬೋಧನೆಯಿಂದ ಶಿಕ್ಷಣಕ್ಕೆ ಅತಿಶಯ ತುಂಬು, ಮಾಹಿತಿಗಳ ತಿಳಿವು ಮತ್ತು ಸಾರ್ಥಕತೆಯ ಶೋಭೆ ಪ್ರಾಪ್ತವಾಗುತ್ತವೆ. ಹೀಗಾಗಿ ಅವೆರಡು ಪರಸ್ಪರ ಪೂರಕಗಳು; ಅನ್ಯೋನ್ಯಾಶ್ರಯಿ ಗಳು. ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತಲೇ ಶಿಕ್ಷಣ ಸ್ವತಃ ತಾನು ಪುಷ್ಟವಾಗುತ್ತದೆ. ಶಿಕ್ಷಣವನ್ನು ಅವಲಂಬಿಸಿ ವಿಜ್ಞಾನ ಅಧಿಕ ಗತಿಶೀಲತೆ, ಪ್ರಸಾರ ಮತ್ತು ಜನಾದರಣೀಯತೆಯನ್ನು ದಕ್ಕಿಸಿಕೊಳ್ಳುತ್ತದೆ.

ನಿಸಾರ್ ಕವಿಗಳಾಗಿರುವುದರ ಜೊತೆಗೆ ವಿಜ್ಞಾನದ ಶಿಕ್ಷಕರಾಗಿಯೂ ಸುಮಾರು ಮೂರೂವರೆ ದಶಕಗಳ ಕಾಲ ಬೋಧನೆಯನ್ನು ಕೈಗೊಂಡವರು. ಈ ಅವಧಿಯಲ್ಲಿ ಮತ್ತು ವಿದ್ಯಾರ್ಥಿಗಳಾಗಿದ್ದ ಅದಕ್ಕೂ ಮುಂಚಿನ ಕಾಲಮಾನದಲ್ಲಿ ಅವರು ಸಾಕಷ್ಟು ವೈಜ್ಞಾನಿಕ ತಿಳಿವಳಿಕೆಯನ್ನು ಸಂಪಾದಿಸಿಕೊಂಡಿರುವಲ್ಲಿ ಸಂದೇಹವಿಲ್ಲ. (ಭೂ) ವಿಜ್ಞಾನದ ವಿವಿಧ ಪ್ರಭೇದಗಳ ವಿಷಯಗಳನ್ನು ಮನದಟ್ಟುಗೊಳಿಸಿಕೊಂಡು ಅವುಗಳನ್ನು ಸ್ವಾರಸ್ಯಕರವಾಗಿ, ಪ್ರಭಾವಕಾರಿಯಾಗಿ ವಿದ್ಯಾರ್ಥಿಗಳಲ್ಲಿ ಪಡಿಮೂಡಿಸುವಾಗ ಬಹುಶಃ ಅವರಿಗೆ ತಮ್ಮದೇ ಆದ ಅಧ್ಯಾಪನದ ವಿಧಾನವೊಂದು ಕರಗತವಾಗಿರುವುದು ಸಾಧ್ಯ. ದಿನವಹಿ ಪಾಠ ಹೇಳುವಾಗ ಅವರಿಗೆ ಪಠ್ಯ ವಿಷಯದ ಬಗೆಗೆ ಹೊಸ ಹೊಸ ವಿಚಾರಗಳು ಮೊಳೆತಿರುವುದೂ ಸಾಧ್ಯ. ಇಷ್ಟೇ ಅಲ್ಲದೆ, ತಮ್ಮ ಸಹಜ ಪ್ರವೃತ್ತಿಯೆನ್ನಿಸಿದ ಸಾಹಿತ್ಯ ಸೃಷ್ಟಿಗೂ ವೃತ್ತಿ ವಿಷಯ ವಾದ ವಿಜ್ಞಾನಕ್ಕೂ ಇರುವ ನಂಟಿನ ಮತ್ತು ವ್ಯತ್ಯಾಸಗಳ ಬಗೆಗಿನ ಚಿಂತನೆಗಳು ಅವರ ಮನಃಪಟಲದ ಮೇಲೆ ಅನೇಕಾನೇಕ ಬಾರಿ ಮೂಡಿರಲೂಬಹುದು. ಅವು ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗಿಯೊ ಅಪ್ರಜ್ಞಾಪೂರ್ವಕವಾಗಿಯೊ ಅವರ ಕವಿತೆ ಮತ್ತು ಗದ್ಯ ಬರವಣಿಗೆಗಳಲ್ಲಿ ನೆರಳನ್ನು ಹಾಯಿಸಿರುವ ಸಾಧ್ಯತೆಯೂ ಉಂಟು. ಹಾಗೆಂದು ಇವೆಲ್ಲ ನಿಸಾರ್ ಅಹಮದ್ ಅವರ ಅನನ್ಯ ಮತ್ತು ಸ್ವಕೀಯ ವಿಚಾರಗಳೆಂದು ಪರಿಗಣಿಸ ಬೇಕಾದದ್ದಿಲ್ಲ. ಬಹುಶಃ ಅವು ಅವರು ಓದಿನಿಂದ, ಇತರರ ಮಾತುಗಳಿಂದ ಗ್ರಹಿಸಿದ ಚಿಂತನೆಗಳಿದ್ದರೂ ಇರಬಹುದು. ಹೀಗಿದ್ದರೂ, ಅಂತಹ ಆಲೋಚನೆಗಳು ಅವರಿಗೆ ಸಮ್ಮತವಾಗಿರಬಹುದು; ಮೆಚ್ಚಾಗಿರಬಹುದು. ಹಾಗೆ ನೋಡಿದರೆ ಜಗತ್ತಿನ ಯಾರೇ ಮೇಧಾವಿ ವ್ಯಕ್ತಿಯ, ಧೀಶಕ್ತಿಯುಳ್ಳ ಪ್ರತಿಭಾಶಾಲಿಯ ಸ್ವಂತ ಚಿಂತನಗಳೆಂದು ನಾವು ಯಾವುದನ್ನು ನಿರ್ದೇಶಿಸುತ್ತೇವೆಯೋ ಅವು ಸಂಪೂರ್ಣವಾಗಿ ಸ್ವಯಾರ್ಜಿತವೆನ್ನಿಸುವುದಿಲ್ಲ. ಅವು ಅನ್ಯರ ಅಭಿಮತ-ಆಲೋಚನೆಗಳನ್ನು ಗರ್ಭಯಿಸಿಕೊಂಡಿರುತ್ತವೆ; ಅವುಗಳನ್ನು ಅಲ್ಲಲ್ಲಿ ಪರಿಷ್ಕರಿಸಿದ, ಕೆಲವನ್ನು ಹೊಸದಾಗಿ ಸೇರಿಸಿದ ಸುಧಾರಿತ ಆವೃತ್ತಿಗಳಾಗಿರುತ್ತವೆ;

ಕೆಲವಂತೂ ತಮ್ಮ ಮಾತುಗಾರಿಕೆ ಅಭಿವ್ಯಕ್ತಿಗಳ ಚಾತುರ್ಯದಿಂದ ಹೊರಹೊಮ್ಮಿಸಿದ ಅನುಮೋದನೆಗಳಾಗಿರುತ್ತವೆ. ಹೇಗೇ ಇರಲಿ, ಇಂತಹ ವಿಚಾರಗಳನ್ನು ಗಂಭೀರವಾಗಿ ಅಧ್ಯಯಿನಿಸಿದಾಗ ನಮಗೆ ಅವುಗಳನ್ನು ಹೊಂದಿರುವ ಧೀಮಂತ ವ್ಯಕ್ತಿಗಳ ಒಲವು-ನಿಲವುಗಳ, ದೃಷ್ಟಿ-ಧೋರಣೆಗಳ ಪರಿಚಯ ಆಗಬಲ್ಲದು. ಅವರ ಗ್ರಹಿಕೆಯ ಉದ್ದಗಲ ಆಳಗಳೂ ಇಷ್ಟಾನಿಷ್ಟಗಳ ಪರಿಯೂ ಅರಿವಿಗೆ ಬರಬಹುದು.

೨

ನಿಸಾರರ 'ಸಮಗ್ರ ಗದ್ಯ ಬರಹಗಳು' (೨೦೦೨) ಉದ್ಗ್ರಂಥದ ಮೂರು ಬರಹಗಳು ವಿಜ್ಞಾನ ಸಂಬಂಧಿ ಪರ್ಯಾಲೋಚನೆಗೂ ಮೂರು ಲೇಖನಗಳು ಶಿಕ್ಷಣಕ್ಕೆ ಸಂಬಂಧವಿರುವ ಪರಿಶೀಲನೆಗೂ ಅತಿ ಮುಖ್ಯವೆನ್ನಿಸುತ್ತವೆ. ಇವುಗಳೆಂದರೆ—'ವಿಜ್ಞಾನ ವಿಚಾರ ವಿವೇಚನೆ' (ಮನದೊಂದಿಗೆ ಮಾತುಕತೆ), 'ಯುಗಪ್ರವರ್ತಕ ವಿಜ್ಞಾನಿಯ ಯಜಮಾನ ಕೃತಿ' (ಹಿರಿಯರು ಹರಸಿದ ಹೆದ್ದಾರಿ), 'ವಿಜ್ಞಾನ ಮತ್ತು ಸಾಹಿತ್ಯ' (ಅಚ್ಚುಮೆಚ್ಚು) ಹಾಗೂ ಶಿಕ್ಷಣಕ್ಕೆ ನಂಟಿರುವಂಥವು: 'ಸಾರೊಳಗಿನ ಸೌಟು', 'ತುಂಬಿದ ತಿಪ್ಪೆಗೆ ನೊಣಗಳ ಜಾತ್ರೆ' (ಮನದೊಂದಿಗೆ ಮಾತುಕತೆ) ಮತ್ತು 'ಕನ್ನಡ ವಿವಿ ಘಟವೆ, ನೀನು ಹಂಪೆ ತಲಪುವುದು ದಿಟವೆ?' (ಮನದೊಂದಿಗೆ ಮಾತುಕತೆ).

ಹಲವರು ಭಾವಿಸಿರುವಂತೆ ವಿಜ್ಞಾನ, ವೈಜ್ಞಾನಿಕ ರೀತಿ ಕೇವಲ ಕೆಲವು ಶತಮಾನಗಳ ಸಾಧನೆಯಲ್ಲ, ಫಲಶ್ರುತಿಯಲ್ಲ. ಮನುಷ್ಯನಿಗೆ ಬುದ್ಧಿ ತಿಳಿದಾಗಿನಿಂದ ಅದು ಅವನ ಬದುಕಿನೊಂದಿಗೆ ಬೆಸೆದು ಹೋಗಿದೆ. ಅವನು ಹೊಸದಾಗಿ ಬೇಟೆಗಾಗಿ ಬಳಸುತ್ತಿದ್ದ ಹತ್ಯಾರುಗಳಲ್ಲಿ ಮಾಡಿಕೊಂಡ ಸೌಲಭ್ಯವಂತ ಸುಧಾರಣೆಗಳಿಂದ ಹಿಡಿದು, ಬೆಂಕಿಯನ್ನು 'ಕಂಡು ಹಿಡಿದು', ಅದರ ಉಪಯೋಗವನ್ನು ತನ್ನ ದಿನನಿತ್ಯದ ಬಾಳಿನಲ್ಲಿ ಹಾಯಿಸಿ ಕೊಳ್ಳುವಾಗಲೇ, ಅರಿವಿಲ್ಲದೆಯೇ ವಿಜ್ಞಾನದ ಸಂಪರ್ಕ ಅವನಿಗೊದಗಿತು. ಕಾಲಕ್ರಮೇಣ ಅವನು ತನ್ನ ಜೀವನದ ಸುಗಮತರ ಹಾಗೂ ನೆಮ್ಮದಿಯುತ ಮುಂದುವರಿಕೆಗಾಗಿ ತನ್ನ ಮಿತಿಯಲ್ಲಿ ಮಾಡಿದ ಆಲೋಚನೆ, ತತ್ಫಲವಾದ ಸಂಶೋಧನೆಗಳು ಅವನಲ್ಲಿ ವೈಜ್ಞಾನಿಕ ರೀತಿಯನ್ನು ರೂಢಿಸಿ, ಬಲ ಪಡಿಸಲು ನಿಮಿತ್ತವಾದವು. ಅವನ ಬಾಳ್ವೆಯ ಅಗತ್ಯಗಳಿಗಾಗಿ ವಿಜ್ಞಾನದ ಸೌಲಭ್ಯಗಳನ್ನು ಅವನು ಚಿಂತಿಸಿ, ವಶವಾಗಿಸಿಕೊಳ್ಳುವುದರ ಜೊತೆಯಲ್ಲೇ ವಿಜ್ಞಾನದ ಸೈದ್ಧಾಂತಿಕ ರೂಪದ ಜ್ಞಾನವೂ ವರ್ಧಿಸುತ್ತ ಹೋಯಿತು. ನಿಧಾನ ಗತಿಯಲ್ಲಿ ಸಾಗಿದ್ದ ವೈಜ್ಞಾನಿಕ ಆವಿಷ್ಕಾರಗಳು ಕಳೆದ ಒಂದೆರಡು ಶತಮಾನಗಳಲ್ಲಿ ಕಂಡ ಮುನ್ನಡೆಯಂತೂ ಅತ್ಯದ್ಭುತ, ಅಭೂತಪೂರ್ವ ಹಾಗೂ ಕ್ರಾಂತಿಕಾರಿ. ನಮ್ಮ ಜೀವನವನ್ನು ಒಂದು ಕಾಲದಲ್ಲಿ ಸಾರ್ವಭೌಮಿಕವಾಗಿ ಆಳುತ್ತ ತನ್ನ ತಾಬೆಯಲ್ಲಿ ಇಟ್ಟುಕೊಂಡಿದ್ದ ಧರ್ಮಕ್ಕೆ ದೊಡ್ಡ ಸವಾಲೆಸೆದು, ಅದರ ಅಚ್ಚಳಿಯದ ಪ್ರಭಾವವನ್ನು ಮಸಕುಗೊಳಿಸಿದ್ದು ವಿಜ್ಞಾನದ ಅಗ್ಗಳಿಕೆ. ಕೇವಲ ಶ್ರದ್ಧೆ ನಂಬಿಕೆಗಳಿಗಿಂತ ಮನುಷ್ಯನ ವಿಚಾರ ಶಕ್ತಿಗೆ ಅತಿಶಯ ವಾದ ಬೆಲೆಯನ್ನು ಕೊಟ್ಟು, ಯಾವುದನ್ನೂ ಪ್ರಶ್ನಿಸದೆ, ಪ್ರತ್ಯಕ್ಷವಾಗಿ ಪ್ರಮಾಣಿಸದೆ, ಮೂಲ ಚೂಲಗಳನ್ನು ಚಿಂತಿಸದೆ ಸಮ್ಮತಿಸಬಾರದೆಂಬ ವ್ಯಕ್ತಿ ಸ್ವಾತಂತ್ರ್ಯದ ಹೆಚ್ಚುಗಾರಿಕೆಯನ್ನು ಕಲಿಸಿದ್ದು ವಿಜ್ಞಾನ ಮತ್ತು ಅದರ ಜೀವಾಳಸ್ವರೂಪಿಯಾದ ವೈಜ್ಞಾನಿಕ ದೃಷ್ಟಿ.

ನಿಸಾರರು ತಮ್ಮ 'ವಿಜ್ಞಾನ ವಿಚಾರ ವಿವೇಚನೆ' ಹೆಸರಿನ ಲೇಖನದಲ್ಲಿ ವಿಜ್ಞಾನದ ಕೆಲವು ಮೂಲಭೂತ ವಿಷಯಗಳನ್ನು ಚರ್ಚಿಸಿದ್ದಾರೆ. ವಿಜ್ಞಾನವನ್ನು ಪ್ರಮಾಣಿತ ಮತ್ತು ಪ್ರಾಯೋಗಿಕವಾದ ವ್ಯವಸ್ಥಿತ ಜ್ಞಾನವೆಂದು ಹಿಂದೊಮ್ಮೆ ತುಂಬ ಸುರಳೀತವಾಗಿ ಲಕ್ಷಣಿಸಿಬಿಡಬಹುದಿತ್ತು. ನಮ್ಮನ್ನು ಸುತ್ತುವರಿದಿರುವ ಭೌತ ಪ್ರಪಂಚದ ವಿಶ್ಲೇಷಣಾತ್ಮಕ ಸ್ವರೂಪದ ತಿಳಿವು ಎಂದು ಸಂಕ್ಷೇಪಿಸಿ ಹೇಳಿಬಿಡಬಹುದಾಗಿತ್ತು. ಮುಂದುವರಿದು, ನೈಸರ್ಗಿಕ ವಿದ್ಯಮಾನಗಳ ಮೇಲೆ ಮಾನವ ನಡೆಸುವ ಧಣಿತನ ಮತ್ತು ಅವುಗಳ ಬುದ್ಧಿಗಮ್ಯವಾದ ತಿಳಿವಳಿಕೆಯೆಂದು ಸರಳೀಕರಿಸಬಹುದಿತ್ತು. ಆದರೆ ಇವೊತ್ತು ಹೀಗೆ ಅಡಕವಾಗಿ ಸೂತ್ರೀಕರಿಸಿ ನುಡಿಯಲು ಸಾಧ್ಯವಿಲ್ಲ. ಅದರ ಬಿಳಿಲು, ರೆಂಬೆ ಕೊಂಬೆ ಟಿಸಿಲುಗಳ ಜಟಿಲ ಜಾಲವನ್ನು, ಅದರ ನಾನಾಮುಖತೆಯ ಸಂಕೀರ್ಣ ಸ್ವರೂಪವನ್ನು ನಮ್ಮ ಬುದ್ಧಿ ತಕ್ಷಣ ಗ್ರಹಿಸದು. ನಮ್ಮ ಭಾವನೆಗೆ ನುಡಿಗೊಡುವಾಗ ಏನೋ ಒಂದು ಅರಕೆ, ಒಂದು ಅಮೂರ್ತವಾದ ಅಂಶ ಕೈ ತಪ್ಪಿರುವ ಅರಿವು ನಮಗಾಗುತ್ತದೆ.

ವಿಶ್ವವ್ಯಾಪಿಯಾದ ಇಂದಿನ ಜನ ಜೀವನ, ವಿಜ್ಞಾನದ ಸಂಶೋಧನೆಯ ಫಲವಾದ ವಸ್ತು ಸಮುಚ್ಚಯದಿಂದ ಎಷ್ಟು ಪ್ರಭಾವಿತವಾಗಿದೆಯೆಂದರೆ ಅದರ ಪ್ರಾಯೋಜನಿಕ ಚಹರೆಯಷ್ಟೇ ವಿಜ್ಞಾನವೇನೋ ಎಂಬ ನಂಬಿಕೆ ಬಹು ಜನರಲ್ಲಿ ಬೇರೂರಿಬಿಟ್ಟಿದೆ; ಐಹಿಕ ಸ್ಥಿತಿಗತಿಗಳ ಉತ್ತಮಿಕೆ, ಹೊಸ ಹೊಸ ಯಂತ್ರೋಪಕರಣಗಳ ಕಂಡುಹಿಡಿಯುವಿಕೆಗಳೇ ವಿಜ್ಞಾನವೆಂಬ ಕಲ್ಪನೆ ನೆಲೆಯೂರಿದೆ. ವಿಜ್ಞಾನದ ಈ ಉಪಯೋಗಾತ್ಮಕ ಚಹರೆ ಅಮುಖ್ಯ ವೆಂದಲ್ಲ. ಇದರ ಜೊತೆಗೇ ಅದರ ತಾತ್ತ್ವಿಕ ಸ್ವರೂಪದ ಪರಿಗಣನೆಯೂ ಮುಖ್ಯ ಎಂಬ ಸತ್ಯವನ್ನು ಮರೆಯಬಾರದು, ಅಷ್ಟೆ. ಬುದ್ಧಿ ವಿಚಾರಗಳ ಅದ್ಭುತ ಕಾರ್ಯಕ್ಷಮತೆ ಮತ್ತು ವಿಲಾಸವನ್ನು; ಅನುಮಾನ, ಪ್ರತ್ಯಕ್ಷಪ್ರಮಾಣ, ಪ್ರಯೋಗಗಳ ನಿಖರ ಹಾಗೂ ನಿರ್ಮುಕ್ತ ವಾದ ಬಳಕೆಯನ್ನು; ಇವುಗಳಿಗೆ ಕಿರೀಟಪ್ರಾಯದಂತಿರುವ ವೈಜ್ಞಾನಿಕ ಮನೋಭಾವ, ಪೂರ್ವಾಗ್ರಹಪೀಡಿತವಲ್ಲದ ಉದಾರ ವೈಚಾರಿಕ ದೃಷ್ಟಿಯನ್ನು ನೆನೆಯದಿದ್ದರೆ ಸತ್ಯಕ್ಕೆ ಅಪಚಾರವೆಸಗಿದಂತಾಗುತ್ತದೆ. ಅದರಲ್ಲೂ, ಕೊನೆಯಲ್ಲಿ ನುಡಿದಿರುವ ಅಂಶಗಳು ಸಾಮಾಜಿಕರಲ್ಲಿ ಕೂಡಿಕೊಂಡು ಅವರ ಜೀವನ ಶೋಭಾಯಮಾನವಾದಾಗಲೇ ನಿಜವಾದ ಅರ್ಥದಲ್ಲಿ ವಿಜ್ಞಾನದ ಸಾರ್ಥಕ್ಯ.

ಹಾಗೆಯೇ ಮಾನವ, ವಿಜ್ಞಾನದ ಇಮ್ಮೊಗಗಳನ್ನು ಗುರುತಿಸಿ, ಅಹಿತವಾದದ್ದನ್ನು ತಿರಸ್ಕರಿಸುವ ಸಂಕಲ್ಪವನ್ನು ಮಾಡದಿದ್ದರೆ, ಅವನು ಮುಂದೊಮ್ಮೆ (ಮಹಾವಿಜ್ಞಾನಿ ಐನ್‌ಸ್ಟೈನ್ ಹೇಳುವಂತೆ) ಶಸ್ತ್ರಾಸ್ತ್ರಗಳಿಂದಲ್ಲ, ನಾಗರಿಕಪೂರ್ವ ನರ ಪ್ರಾಣಿಯಂತೆ ಕಲ್ಲುಗಳಿಂದ ಹೊಡೆದಾಡಬೇಕಾಗುತ್ತದೆ. ವಿಜ್ಞಾನದ ಒಂದು ಬದಿ ಮಾನವರ ಅಭ್ಯುದಯದ, ಸರ್ವೋದ್ಧಾರದ ಪ್ರಸನ್ನ ಚರ್ಯೆಯಿದೆ. ಇನ್ನೊಂದು ಕಡೆಗೆ ಅದರ ಸರ್ವನಾಶಾತ್ಮಕ, ವಿಕಟಾಟ್ಟಹಾಸದ ಅಮಂಗಳಕರ ಕರಾಳ ರೌದ್ರ ಭಂಗಿಯಿದೆ. ಇದರಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದ ವಿವೇಚನೆ ವಿವೇಕಗಳು ಅವನಲ್ಲಿ ಗಂಭೀರವಾಗಿ ಮೂಡ ಬೇಕಾದ ಕಾಲ ಈಗ ಸನ್ನಿಹಿತವಾಗಿದೆ. ಇಂದು ಬಲಶಾಲಿ ದೇಶವೊಂದು ತನ್ನ ಆಳವಾದ ಸ್ವಾರ್ಥಸಾಧನೆಗೋಸ್ಕರ ಸ್ವಾತಂತ್ರ್ಯ, ಶಾಂತಿ ಸ್ಥಾಪನೆ ಹಾಗೂ ಪ್ರಜಾಪ್ರಭುತ್ವದ

ಬೇರೂರಿಕೆಯ ಮಹತ್ತರ ಧ್ಯೇಯವನ್ನು ಜಗತ್ತಿನೆದುರು ಸಾರಿ, ಬಲಹೀನ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಮಾರಣ ಮಾನಭಂಗವನ್ನು ನಡೆಸುತ್ತಿರುವುದು, ತನ್ನ ತಂತ್ರಜ್ಞಾನದ ಫಲಿತಾಂಶವಾದ ಅತ್ಯಾಧುನಿಕ ಮಾರಕಾಸ್ತ್ರಗಳನ್ನು ಅಮಾಯಕರ ಮೇಲೆ ಪ್ರಯೋಗಿಸುತ್ತಿರುವುದು ಮನಸ್ಸಾಕ್ಷಿ ಇರುವ ಪ್ರತಿ ವ್ಯಕ್ತಿಯನ್ನೂ ಹಂದಾಡಿಸಬೇಕು, ಅವನ ನೆಮ್ಮದಿಯನ್ನು ಕಲಕಬೇಕು, ಪ್ರತಿಭಟಿಸಲು ಪ್ರೇರಿಸಬೇಕು. ಜಾಗತೀಕರಣದ ದೆಸೆಯಿಂದ ಇಂದು ವಿಶ್ವ ಕುಬ್ಜವಾಗಿ 'ಗ್ಲೋಬಲ್ ವಿಲೇಜ್'ನ ಸ್ಥಿತಿಗೆ ಪರಿವರ್ತಿತವಾಗಿರುವಾಗ, ಮನುಷ್ಯರು ಹಿಂದೆಂದಿಗಿಂತ ಅತ್ಯಂತ ಸಮೀಪವರ್ತಿಗಳಾಗಿರುವಾಗ ವಿಜ್ಞಾನದ ಅನಿಷ್ಟ ಮುಖವನ್ನು ಧಿಕ್ಕರಿಸಿ ಮಾನವೀಯ ಮೌಲ್ಯಗಳಾದ ಪ್ರೀತಿ, ಸಹಬಾಳ್ವೆ, ಸಹಿಷ್ಣುತೆಗಳನ್ನು ರೂಢಿಸಿಕೊಳ್ಳುವತ್ತ ಮನಸ್ಸು ಮಾಡಬೇಕಾದ ಜರೂರು ಹೆಚ್ಚಾಗಿದೆ.

ವಿಜ್ಞಾನದ ಹೆಸರಿನಲ್ಲಿ ವ್ಯಕ್ತಿ ಮಟ್ಟದ, ರಾಷ್ಟ್ರ ಹಂತದ ಹುರುಡು ಮತ್ತು ಮೇಲಲೇರಿಕೆಗಳನ್ನು ಸದಾ ಜಪಿಸುತ್ತಿರುವುದು ಇಂದಿನ ವಾಸ್ತವಾಗಿದೆ. ಇದರ ನಿಮಿತ್ತ ಒಂದೇ ಜನ ಸಮುದಾಯದಲ್ಲಿ ಬೇರೆ ಬೇರೆ ಜೀವನ ಕ್ರಮದ ಸ್ತರಗಳು ನಿರ್ಮಾಣವಾಗುತ್ತಿವೆ. ಹಿಂದೆ ಮತಧರ್ಮಗಳ ಹುನ್ನಾರಿನಿಂದ ಕ್ರಿಯಾಶೀಲವಾಗಿದ್ದ ಈ ಮಾನವ ಭೇದಗಣನೆ, ಈಗ ಆರ್ಥಿಕ ಅಸಮಾನತೆಯ ಕಾರಣದಿಂದ ಬೇರೊಂದು ಬಗೆಯಲ್ಲಿ ವಿಜ್ಞಾನದ ಮೂಲಕ ಮುಂದುವರಿಯುತ್ತಿದೆ. ವಿಪರ್ಯಾಸದ ವಿಚಾರವೆಂದರೆ, ಕೆಲ ಕಾಲದಿಂದ ನಾನಾ ಸಂಪ್ರದಾಯದ, ಆಚಾರ ವಿಚಾರಗಳ, ಧರ್ಮ ಮತಗಳ ವಿವಿಧ ನಂಬಿಕೆಗಳ, ಕುಲ ವರ್ಣಗಳ ಅಸಂಖ್ಯಾತ ವಿಭಿನ್ನ ಮನೋದೃಷ್ಟಿಯ ಜನರನ್ನು ಒಂದು ಸಾಮಾಜಿಕ ಏಕತೆಯತ್ತ, ಸಮನ್ವಯತೆಯತ್ತ ಸೆಳೆದು ಒಗ್ಗೂಡಿಸಿದ ವಿಜ್ಞಾನ-ತಂತ್ರಜ್ಞಾನಗಳು ಇಂದು ಮಾನವರ ವಿಘಟನೆಗೆ, ಪ್ರತ್ಯೇಕತೆಗೆ ಪ್ರಚೋದನೆ ನೀಡುತ್ತಿರುವುದು. ವಿಜ್ಞಾನ ಮನುಷ್ಯರಿಗೆ ಲಭ್ಯವಾಗಿಸಿರುವ ವರ ಸ್ವರೂಪಿಗಳಾದ ಸಂಚಾರ ವ್ಯವಸ್ಥೆ, ದೂರವಾಣಿ, ತಂತಿ ಸೌಲಭ್ಯ, ಟಿ.ವಿ., ರೇಡಿಯೊ, ಕಂಪ್ಯೂಟರ್, ಗೃಹೋಪಯೋಗಿ ಸಲಕರಣೆಗಳು ಇತ್ಯಾದಿ; ಏಕ ರೀತಿಯ ಉಡುಗೆ ತೊಡುಗೆಗಳ ತಯಾರಿಕೆ; ಒಂದೇ ಬಗೆಯ ದೈನಂದಿನ ಅಭ್ಯಾಸಗಳು—ಇವುಗಳಿಂದ ವಿವಿಧ ರೀತಿಯ ಜನಗಳಲ್ಲಿ ವ್ಯವಸ್ಥಿತವಾದ, ಏಕಪ್ರಕಾರದ ಒಂದು ಸಮತೋಲನದ ಬದುಕನ್ನು ನಿರ್ಮಿಸಿವೆ. ಕೋಟ್ಯಾವಧಿ ಸಂಖ್ಯೆಯ ನರರನ್ನು ಏಕತ್ರವಾಗಿ, ಅತ್ಯಧಿಕ ಪರಸ್ಪರಾವಲಂಬಿಗಳನ್ನಾಗಿ ಒಗ್ಗೂಡಿಸಿರುವ ಈ ಸಾಮಾಜಿಕ ಸಾಮರ್ಥ್ಯ ವಿಜ್ಞಾನದ್ದು. ಇಂತಹ ವಿಶೇಷ ಶಕ್ತಿಯನ್ನು ಹಿಂದಿನ ಅನೇಕ ಶತಮಾನಗಳಲ್ಲಿ ಇಷ್ಟೊಂದು ಪರಿಣಾಮಕಾರಿಯಾದ ರೀತಿಯಲ್ಲಿ ಬೇರಾವುದೂ ಪ್ರದರ್ಶಿಸಲಿಲ್ಲವೆಂದರೆ ತಪ್ಪಾಗಲಾರದು. ಅದೇ ವಿಜ್ಞಾನ ಇಂದಿನ ದಿನಗಳಲ್ಲಿ ಮಾನವರ ಬೇರ್ಪಡಿಕೆ, ಅಧಃಪಾತ, ನಾಶಗಳಿಗೆ ಮುಂದಾಗುತ್ತಿರುವುದರ ಎಚ್ಚರ ಎಲ್ಲರಿಗಿರಬೇಕು. ಅದನ್ನು ತಡೆಗಟ್ಟುವ ಸಂಕಲ್ಪ ಸಕಲರನ್ನು ಬಾಧಿಸಬೇಕು.

ವಿಜ್ಞಾನ ಹಾಗೂ ತಂತ್ರಜ್ಞಾನಗಳ ಸಂಶೋಧನೆಗಳು ಈಗ ಭೂಮಿಗಷ್ಟೇ ಸೀಮಿತ ವಾಗಿರದೆ ಬಾಹ್ಯಾಕಾಶಕ್ಕೂ ವಿಸ್ತರಿಸಿ, ಕೇಳರಿಯದ ಮಹಾದ್ಭುತಗಳ ಅನಾವರಣದಲ್ಲಿ ತೊಡಗಿವೆ. ನವ ನೆಲೆಗಳ ಅನ್ವೇಷಣೆಯಿಂದ ಭವಿಷ್ಯದಲ್ಲಿ ಮನುಷ್ಯನ ಬದುಕಿನಲ್ಲಿ,

ಅಂತಸ್ಸಂಬಂಧಗಳಲ್ಲಿ ಆಗಬಹುದಾದ ಮಾರ್ಪಾಟುಗಳನ್ನು ಊಹಿಸಲೂ ಅಶಕ್ಯ. ಲೌಕಿಕವಾದ ಅಭಿವೃದ್ಧಿ ಪ್ರಗತಿಗಳು ಬಾಹ್ಯವಾದ ಸಂಪತ್ ಸಮೃದ್ಧಿಗಳನ್ನು ನೀಡಿದರೂ ಭೋಗವಸ್ತುಗಳ ಬಯಕೆ, ಬಳಕೆಗಳನ್ನು ಹೆಚ್ಚಿಸಿದರೂ ಮನುಷ್ಯನ ಆಂತರಿಕ ನೆಮ್ಮದಿಗೆ ಮಾತ್ರ ಭಂಗ ತಪ್ಪಿದ್ದಲ್ಲ. ಅಲ್ಲದೆ, ಮನುಷ್ಯ ತನ್ನ ಚಾರಿತ್ರ್ಯವನ್ನು, ನಡೆ ನುಡಿ ತದಿತರ ಶಿಷ್ಟಾಚಾರವನ್ನು ಉತ್ತಮಪಡಿಸಿಕೊಳ್ಳಲೋ, ಸ್ವಹಿತದ ಸಂಕುಚಿತ ವಲಯದಿಂದ ಸಮಾಜೋಪಯೋಗದ ವಿಸ್ತಾರಕ್ಕೆ ಸೀಮೋಲ್ಲಂಘನ ಮಾಡಲೋ ಸ್ವಪ್ರಯತ್ನ ಮಾಡದಿದ್ದರೆ, ಬರಿಯ ವಿಜ್ಞಾನದತ್ತ ವಸ್ತುಗಳ ಜಮಾವಣೆಯಲ್ಲಿ, ಅವುಗಳ ಸೌಕರ್ಯಗಳಲ್ಲಿ ಮಾತ್ರ ಮೈಮರೆತರೆ ಅವನ ಜೀವಿತ ನರಕಪ್ರಾಯವಾಗುವುದರಲ್ಲಿ ಆಶ್ಚರ್ಯವಿಲ್ಲ. ಇದಲ್ಲದೆ, ಮನುಷ್ಯನ ಸ್ವಾರ್ಥವರ್ಧನೆ ಸಂತೃಪ್ತಿಗಳಿಗೆ ಮಾತ್ರ, ಇತರರ ವಿನಾಶಾತ್ಮಕ ಉದ್ದೇಶಗಳಿಗಷ್ಟೇ ವಿಜ್ಞಾನ-ತಂತ್ರಜ್ಞಾನಗಳು ಉಪಯೋಗ ಕಂಡರೆ, ಲೋಕ ವಸ್ತುಗಳ ನೈತಿಕವಾದ ಮೌಲ್ಯ ಹೊಲೆಗೆಡುತ್ತದೆ.

ವಿಶಾಲಾರ್ಥದಲ್ಲಿ ಚಿಂತಿಸಿದಾಗ ಧರ್ಮ ಮತ್ತು ವಿಜ್ಞಾನ ವಿರೋಧಿಗಳಾಗಬೇಕಾದ ಕಾರಣವಿಲ್ಲ. ನಿಸರ್ಗವನ್ನು ಗೆಲ್ಲುವ ಮತ್ತು ಅದರ ಸಂಪನ್ಮೂಲಗಳನ್ನು ಮಾನವ ಹಿತಕ್ಕೆ ಬಳಸಿಕೊಳ್ಳುವ ವಿಜ್ಞಾನದ ಸಾಹಸೋದ್ಯಮ, ಪರೋಕ್ಷವಾಗಿ ಇನ್ನೊಂದು ಪಾರಲೌಕಿಕ ಲಾಭವನ್ನು ಮನುಷ್ಯನಿಗೆ ದಯಪಾಲಿಸಬಹುದು. ಈ ವಿಷಯವನ್ನು ನಿಸಾರರು 'ವಿಜ್ಞಾನ ಮತ್ತು ಸಾಹಿತ್ಯ' (ಅಚ್ಚುಮೆಚ್ಚು)ವೆಂಬ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

ಜ್ಞಾನದ ಮುಖ್ಯವಾದ ಆಕರವೆಂದರೆ ಮನುಷ್ಯನ ಅನುಭವ. ಆದರೆ ಮತಧರ್ಮಗಳಲ್ಲಿ ಅನುಭವದ ಜಾಗ ನಂಬಿಕೆಗೆ ಮೀಸಲಾಗಿರುತ್ತದೆ. ನಂಬಿಕೆಯನ್ನು ದೃಢಪಡಿಸುವಂತೆ ಕಾರ್ಯಾಚರಣೆ ನಡೆಸುವುದು ಮನುಷ್ಯನ ಭಕ್ತಿ. ಯಾವುದನ್ನೂ ಪ್ರಶ್ನಿಸದೆ, ಬುದ್ಧಿತರ್ಕಗಳಿಗೆ ಒಳಪಡಿಸದೆ ಧರ್ಮ ಉಪದೇಶಿಸುವುದನ್ನು ಪರಿಪಾಲಿಸುವುದಷ್ಟೇ ಮನುಷ್ಯನ ಪಾಲಿಗೆ ಉಳಿದಿರುವುದು. ಈ ಒಂದು ವಿರೋಧದ ಪರಿಣಾಮವಾಗಿ ಸ್ವತಂತ್ರವಾಗಿ ಆಲೋಚಿಸುವ, ಪ್ರಶ್ನಿಸುವ, ಪ್ರಮಾಣವನ್ನು ಆಶಿಸುವ ವ್ಯಕ್ತಿಗಳನ್ನು ಧರ್ಮ ಲಾಗಾಯ್ತಿನಿಂದ ನಿಷ್ಠುರವಾಗಿ ನಡೆಸಿಕೊಂಡಿದೆ, ಪ್ರಭುತ್ವದೊಡನೆ ಕೈ ಜೋಡಿಸಿ ನಾನಾ ತೊಂದರೆಗಳನ್ನು ಕೊಟ್ಟಿದೆ. ಈ ತಿಕ್ಕಾಟ ಮಾನವ ಚರಿತ್ರೆಯಲ್ಲಿ ಒಂದು ದಾಖಲಾರ್ಹ ಅಧ್ಯಾಯ. ವಿಜ್ಞಾನ, ಧರ್ಮಕ್ಕೆ ಅಡಿಯಾಳಾಗಿ ಭಯಾತಂಕದಿಂದ ವರ್ತಿಸುತ್ತಿದ್ದು ತನ್ನ ಸ್ವಾತಂತ್ರ್ಯವನ್ನು, ಗೆಲವನ್ನು ಕಂಡುಕೊಂಡಿದ್ದು ಹತ್ತೊಂಬತ್ತನೆಯ ಶತಮಾನದ ಕೊನೆಯ ವೇಳೆಗೆ.

ವಿಜ್ಞಾನದ ಕಾರ್ಯಾಚರಣೆ ಹೊರಗಣ ಭೌತ ಜಗತ್ತಿನ ಮೇಲೆ. ಧರ್ಮ ಮುಖ್ಯತಃ ಮಾನವನ ಅಂತರಂಗ ಮತ್ತು ಅಧ್ಯಾತ್ಮದ ಜಗತ್ತನ್ನು ಕುರಿತದ್ದಾಗಿದೆ. ಇದರಿಂದ ವೇದ್ಯವಾಗುವ ಸಂಗತಿಯೆಂದರೆ, ವಿಜ್ಞಾನ ಲೋಕವಸ್ತುಗಳ ದೃಗ್ಗೋಚರ ಸ್ವರೂಪವನ್ನು ಕಾಣಿಸುತ್ತದೆಯೇ ವಿನಾ ಗೋಚರಾತೀತ ವಿಶ್ವದ ರಹಸ್ಯವನ್ನು ಮನದಟ್ಟಾಗಿಸದು. ಸೃಷ್ಟಿಯ ಸೀಮಾತೀತತೆ ಮತ್ತು ಅಮೇಯತೆಗಳ ಅರಿವು, ಸಕಲ ಚರಾಚರವೂ ಯಾವುದೋ ಒಂದು ವಿಹಿತವಾದ ಬಾಂಧವ್ಯದಲ್ಲಿ ಸಾಮರಸ್ಯವನ್ನು ಪಡೆದಿರುವಿಕೆ—ಇವೆಲ್ಲವುಗಳ ಪರಿಭಾವನೆ

ಯಿಂದ ಮೈದಾಳುವ ಸಮ್ಯಗ್ದರ್ಶನದ ಹೊಳಹುಗಳನ್ನು ಸಮರ್ಥಿಸಲು ಕೇವಲ ತರ್ಕಬುದ್ಧಿಗಳು ಸಾಲವು: ಅದಕ್ಕೆ ಅಂತರ್ದೃಷ್ಟಿ ಅಗತ್ಯ. ಅದು ಪ್ರಾಪ್ತವಾಗುವುದು ಧರ್ಮಾನುಸಂಧಾನದ ಮೂಲಕ. ಹೀಗಾಗಿ ವಿಜ್ಞಾನದತ್ತ ಬಾಹ್ಯಜ್ಞಾನ ಮತ್ತು ಧರ್ಮಲಭ್ಯ ಅಂತರ್ಜ್ಞಾನಗಳೆರಡೂ ಮನುಷ್ಯನಿಗೆ ಮುಖ್ಯವಾಗುತ್ತವೆ. ಇದರಿಂದ ಜೀವನದ ಪರಿಪೂರ್ಣತೆ, ಸಮಗ್ರತೆಗಳು ರೂಪಿತಗೊಂಡು ಮನುಷ್ಯನ ಅಸ್ತಿತ್ವಕ್ಕೆ ಸಾಕಲ್ಯ, ಸಾರ್ಥಕ್ಯ ಗಳು ಮೂಡುತ್ತವೆ. ವಿಜ್ಞಾನದ ಅನ್ವೇಷಣೆ, ಪರಿಶೋಧನೆಗಳು ಮುಗಿದವು ಎನ್ನುವ ಹೊತ್ತಿಗೆ, ಅಧ್ಯಾತ್ಮದ ಸೀಮೆಯ ಅನಾವರಣ ಪ್ರಾರಂಭವಾಗುತ್ತದೆ. ಹೀಗಾಗಿ, ವಿಜ್ಞಾನ ಮತ್ತು ಧರ್ಮಗಳು ಪೂರಕಗಳಾಗಿ ಮನುಷ್ಯನ ಬದುಕನ್ನು ಬೆಳಗುವುದು ಸಾಧ್ಯ. ಐನ್‌ಸ್ಟೈನ್ ಹೇಳಿದಂತೆ 'Metaphysics begins when physics ends.' ವಿಜ್ಞಾನದ ತರ್ಕ ಮತ್ತು ವಿಚಾರಗಳ ಎಲ್ಲೆಕಟ್ಟು ಮುಗಿದೊಡನೆ ಅಧ್ಯಾತ್ಮದ ನಿಗೂಢ ಅಂತರ್ಲೋಕ ತೆರೆದುಕೊಳ್ಳುತ್ತದೆ. ಅಂದರೆ, ಭೌತವಿಜ್ಞಾನದ ಮುಕ್ತಾಯ ಘಟ್ಟ, ಆಧ್ಯಾತ್ಮಿಕ ಅನುಭೂತಿಯ ಪ್ರಾರಂಭಿಕ ಮುಹೂರ್ತ. ಇದನ್ನು ಡಿ.ವಿ.ಜಿ. ಅಭಿವ್ಯಕ್ತಿಸಿರುವ ಕಾವ್ಯಮಯ ರೀತಿ ಇದು:

> **'ಆಮೂಲಮದರಿರವನ್ ಅರಸಲ್ ಅದು ವಿಜ್ಞಾನ;**
> **ಸಾಮಗ್ರ್ಯದಿಂ ಕಾಣಲ್ ಅದುವೆ ದಿವ್ಯ ಜ್ಞಾನ.'**

ಒಟ್ಟಿನಲ್ಲಿ ಶ್ರೇಯೋಕಾಂಕ್ಷಿಯೆಂಬ ಜೀವನ ವಾಹನದ ಸುಗಮ ಸಾಗಣೆಗೆ ಧರ್ಮ-ವಿಜ್ಞಾನಗಳೆರಡೂ ಚಕ್ರಗಳಿದ್ದಂತೆ.

ಮತ್ತೊಂದು ಹಾಸ್ಯಾಸ್ಪದ ವಿಚಾರವೆಂದರೆ, ನಮ್ಮ ನಾಡಿನ ಧೀಮಂತ ವಿಜ್ಞಾನಿಗಳ, ತಂತ್ರಜ್ಞರ, ವಿಜ್ಞಾನ ಬೋಧಕರ ವರ್ತನೆ: ಅವರ ನಡೆ-ನುಡಿಗಳ ನಡುವಣ ಅಗಾಧ ಕಂದರ: ಮಾತು-ಕೃತಿಗಳ ಮಧ್ಯದ ಅಹಿತಕರ, ಅನಪೇಕ್ಷಿತ ತಾರತಮ್ಯ. ಈ ಮಂದಿ ತಮ್ಮ ತಮ್ಮ ಖಾಸಗಿ ಕಾರ್ಯಕ್ಷೇತ್ರದಲ್ಲಿ ಕ್ರಿಯಾಶೀಲರಾಗಿದ್ದಾಗ ವ್ಯಕ್ತಗೊಳಿಸುವ ಸತ್ಯಶೋಧಕ ನಿಷ್ಠುರ ನೀತಿಗೂ ಸಾರ್ವಜನಿಕ ಬಾಳ್ವೆಯನ್ನು ಹೊಕ್ಕಾಗ ಮಾಡಿಕೊಳ್ಳುವ ಸಮಜಾಯಿಷಿ ಮತ್ತು ಸಂಧಾನದ ನಿಲವುಗಳಿಗೂ ಇರುವ ವ್ಯತ್ಯಾಸ ಜುಗುಪ್ಸೆ ಬರಿಸುವಂಥದ್ದು. ವಿಶ್ವ ವಿಜ್ಞಾನಾಧಿವೇಶನದಲ್ಲಿ ಪಾಲ್ಗೊಳ್ಳಲು ಹೋಗುವಾಗ ಗುಳಿಕ, ರಾಹುಕಾಲಗಳನ್ನು, ಇತರೆ ಶಕುನಗಳನ್ನು ಮನ್ನಿಸುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಇನ್ನು ನಮ್ಮ ವಿದ್ಯಾರ್ಥಿ ವೃಂದಕ್ಕೆ ವಿಜ್ಞಾನದ ವಿಷಯ, ಪರೀಕ್ಷೆಯನ್ನು ತೇರ್ಗಡೆ ಮಾಡಿಸುವ ತತ್ತ್ವ ರೂಪದ ಕಲಿಕೆ ಮಾತ್ರ. ಅದು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ವಾಸ್ತವವಲ್ಲ. ಪ್ರಯೋಗ ಶಾಲೆಯಲ್ಲಿ ಕಪ್ಪೆ, ಜಿರಳೆಗಳನ್ನು ಚೊಕ್ಕವಾಗಿ, ವ್ಯವಸ್ಥಿತವಾಗಿ ಕೊಯ್ದು, ಭಾಗಗಳನ್ನು ನೀಟಾಗಿ ಜೋಡಿಸುವ ವಿಜ್ಞಾನಾರ್ಥಿಗಳು ಮನೆಯಲ್ಲಿ ಸಾಮಾನುಗಳನ್ನು, ಪುಸ್ತಕಗಳನ್ನು ಪೇರಿಸಿಡುವ ಪರಿ ಮತ್ತು ತರಕಾರಿಯನ್ನು ಹೆಚ್ಚುವಿಕೆ ಅತ್ಯಂತ ಅವೈಜ್ಞಾನಿಕವಾಗಿರುತ್ತದೆ. ಬದುಕಿಗೆ ಅನ್ವಯವಾಗದಿದ್ದರೆ ವಿಜ್ಞಾನದ ಉದ್ದೇಶ ನಿಷ್ಫಲ, ನಿರರ್ಥಕ. ಹಾಗೆಯೇ, ವಿಜ್ಞಾನದ ವಿಶೇಷಾಧ್ಯಯನವಾಗಲಿ, ಅದರ ಸಂಶೋಧನೆಗಳಾಗಲಿ ತಮಗೆ ತಾವೇ ಸ್ವಯಂಪೂರ್ಣ ವಲ್ಲ. ಅವು ಕೇವಲ ಒಂದು ಚಾಳಿಯೋ, ಸ್ವಮಗ್ನತೆಯ ಕ್ರೀಡಾವಿಲಾಸವೋ ಆಗಬಾರದು.

ಅವು, ಅಂತಿಮ ಗುರಿಗೆ ಕೊಂಡೊಯ್ಯುವ ಹೆದ್ದಾರಿಗಳು ಮಾತ್ರ. ಆ ಗುರಿ ಸಮಸ್ತ ಮಾನವರ ಜೀವನ. ಅಂಥ ಜೀವನಕ್ಕೆ ಅನ್ವಿತವಾಗುವುದೇ, ಅದನ್ನು ಮೇಲ್ಪಡಿಸುವುದೇ ನಿಜವಾದ ವೈಜ್ಞಾನಿಕ ಶೋಧನೆ ಮತ್ತು ಅಧ್ಯಯನಗಳ ಉದ್ದೇಶ.

ವಿಜ್ಞಾನ ಇವೊತ್ತು ಊಹಿಸಲಾಗದಂಥ ತ್ವರಿತ ಗತಿಯಲ್ಲಿ, ಧಾವಂತದ ಸ್ಥಿತಿಯಲ್ಲಿ ಮುನ್ನುಗ್ಗುತ್ತಿದೆ. ಅದರ ನಾಗಾಲೋಟವನ್ನು ಸ್ವತಃ ಅದನ್ನು ಹುಟ್ಟುಹಾಕಿರುವ ಮನುಷ್ಯನಿಗೇ ತಡೆಯಲಾಗುತ್ತಿಲ್ಲ. ಇದಕ್ಕೆ ವಿರುದ್ಧವಾಗಿ ನಮ್ಮ ಸಾಮಾಜಿಕ ವ್ಯವಸ್ಥೆ, ಸಾಮುದಾಯಿಕ ಸ್ಥಿತಿಗತಿ ಸ್ಥಗಿತವಲ್ಲದಿದ್ದರೂ ಅತ್ಯಂತ ವಿಳಂಬ ಗತಿಯಲ್ಲಿ ತೆವಳುತ್ತಿದೆ. ಇವೆರಡರ ನಡುವೆ ಸಾಂಗತ್ಯವಿಲ್ಲ, ತಾಳಮೇಳವಿಲ್ಲ. ಈ ವೈರುದ್ಧ್ಯ ಮತ್ತು ಬಿಕ್ಕಟ್ಟು ಇಂದಿನ ಹಲವಾರು ಜಾಗತಿಕ ಸಮಸ್ಯೆಗಳನ್ನು ಹುಟ್ಟುಹಾಕಿದೆ. ಇದರ ಫಲವೆಂದರೆ ಮನುಷ್ಯರ ಜೀವನದಲ್ಲಿ ಉದ್ಭವಿಸಿರುವ ಸಂಘರ್ಷ, ಒತ್ತಡ, ಅಸ್ವಸ್ಥತೆ. ಇದನ್ನು ಸಮರ್ಥಿಸುವ ಮತ್ತೊಂದು ವಾಸ್ತವಾಂಶ ಇದು: ವಿಜ್ಞಾನದತ್ತವಾದ ಅಸಂಖ್ಯ ಸಾಮಗ್ರಿಗಳು, ಸಲಕರಣೆಗಳು ಕೆಲ ಕಾಲಾನಂತರ ಸುಖಾನುಭವವನ್ನು ಮರೆಗೊಳಿಸಿ ಬೇಸರ ಮತ್ತು ಜಿಹಾಸೆಗಳಿಗೆ ಕಾರಣವಾಗುವುದು.

ವಿಜ್ಞಾನ ಸೃಷ್ಟಿಸುವ ಮತ್ತೊಂದು ಅಪರಿಹಾರ್ಯವಾದ ಸಮಸ್ಯೆ, ಬೇಡಿಕೆಗಳನ್ನು ಹುಟ್ಟು ಹಾಕಿ, ಜನ ಅವುಗಳನ್ನು ದಕ್ಕಿಸಿಕೊಳ್ಳಲು ಹಾತೊರೆಯುವಂತೆ ಎಸಗುವುದು; ಕೊಳ್ಳುಬಾಕ ಸಂಸ್ಕೃತಿಯನ್ನು ವರ್ಧಿಸುವುದು. ಜೊತೆಗೇ, ಆ ಬೇಡಿಕೆಗಳನ್ನು ಆಗಗೊಳಿಸುವ ನಿಟ್ಟಿನಲ್ಲಿ ನಿರ್ಮಿಸುವ ಸ್ತರೀಕರಣ ಅಥವಾ ಜನ ಜೀವನದಲ್ಲಿ ಮೂಡಿಸುವ ಕೃತಕವಾದ ಅಂತರ. ಜಗತ್ತಿನ ಜನಸಂಖ್ಯೆ ಮಿತಿಯನ್ನು ದಾಟಿ ಹೆಚ್ಚಿದ್ದು, ಜೀವನದಲ್ಲಿ ಪೈಪೋಟಿ ಸ್ಪರ್ಧೆಗಳು ಉತ್ಕಟತರವಾಗಿದ್ದು, ವಿಜ್ಞಾನದತ್ತ ವಸ್ತುಗಳನ್ನು ಹೊಂದಲು ಪಡುತ್ತಿರುವ ಪಾಡು, ಪರಿಪಾಟಲು ಅವರ್ಣನೀಯ. ವ್ಯಕ್ತಿಯ ದುಡಿತದ ವರಮಾನಕ್ಕೆ ಮತ್ತು ಪಡೆಯಲಾಶಿಸುವ ವಸ್ತುಗಳಿಗೆ ಒಂದು ಸಮರಸತೆ, ತಾಳೆ ಏರ್ಪಟ್ಟಿಲ್ಲ. ಕೆಲವರ ಪಾಲಿಗೆ ಅತ್ಯಂತ ಸುಲಭಸಾಧ್ಯವಾಗಿ ದಕ್ಕುವ ವಸ್ತುಗಳು ಇನ್ನೂ ಹಲವರ ಪಾಲಿಗೆ ಮೊಲದ ಕೋಡಾಗಿವೆ. ಹೀಗೆ, ಸೃಷ್ಟಿತವಾದ ಕೃತಕ ಪದರೀಕರಣದಿಂದ ವೈಫಲ್ಯ ಭಾವ, ಹತಾಶೆ, ಈರ್ಷ್ಯಾಸೂಯೆಗಳೂ ಹೆಚ್ಚುತ್ತಿವೆ. ಇವುಗಳ ಪರಿಣಾಮ ಅಕ್ರಮ ವಿಧಾನದ ಗಳಿಕೆಗೆ ಪ್ರಯತ್ನ, ಕೊಲೆ ಸುಲಿಗೆ ದರೋಡೆಗಳ ದಾಂಧಲೆ. ವಿಜ್ಞಾನಕ್ಕೆ ಉತ್ಪಾದಿಸುವ ಶಕ್ತಿ ಅತ್ಯಧಿಕವಾಗಿದ್ದರೂ ವಿತರಣ ಕ್ರಮದಲ್ಲಿ ಅಸಮರ್ಪಕತೆ, ಪೂರ್ವಾಗ್ರಹಗಳು ಅದರ ಅಪಕೀರ್ತಿಗೆ ಕಾರಣವಾಗಿವೆ. ಹೀಗಾಗಿ, ಒಂದೆಡೆ ಸಂಪತ್ಸಮೃದ್ಧ ಬಾಳು; ಅದಕ್ಕೆ ತಗುಲಿಕೊಂಡೇ ದಟ್ಟ ದರಿದ್ರ ಕಂಗಾಲ ಅಸ್ತಿತ್ವ—ನಮ್ಮ ನಾಡಿನ ವಾಸ್ತವವಾಗಿದೆ.

ಇನ್ನೊಂದು ಗುರುತರವಾದ ಸಮಸ್ಯೆಯನ್ನು ವಿಜ್ಞಾನ ಸೃಜಿಸುವುದು ಸಾಮಾನ್ಯರ ಗಮನಕ್ಕೆ ಹೊರತಾಗಿರುವಂಥದ್ದು. ಕೇವಲ ಕೆಲವು ತಜ್ಞರಿಗೆ, ದೂರದೃಷ್ಟಿಯುಳ್ಳ ಮೇಧಾವಿಗಳಿಗೆ ತಿಳಿಯುವಂಥದ್ದು. ನಾನಾ ಬಗೆಯ ಯಂತ್ರಗಳಿಗೆ, ಅಗಣಿತ ತೆರನಾದ ಸಲಕರಣೆ ಹಾಗೂ ಪದಾರ್ಥಗಳ ತಯಾರಿಕೆಗೆ ಖನಿಜಗಳ ಬಳಕೆ ಅನಿವಾರ್ಯವಷ್ಟೆ?

ಇವುಗಳಲ್ಲಿ ಲೋಹ ಮತ್ತು ಅಲೋಹ ವಸ್ತುಗಳು ಎರಡೂ ಸೇರಿವೆ. ಒಮ್ಮೆ ಅವುಗಳನ್ನು ಭೂಮಿಯಿಂದ ಅಗೆದು ಹೊರ ತೆಗೆದ ಮೇಲೆ ಅವುಗಳನ್ನು ಬಳಸಲೇಬೇಕು: ಕೂಡಿಡುವುದೋ, ಇಲ್ಲವೇ ಅವುಗಳ ಮೂಲಕ ಹೊಸದಾದುವುಗಳನ್ನು ಸೃಷ್ಟಿಸುವುದೋ ಸಲ್ಲದ ವಿಚಾರ. ಖನಿಜಗಳನ್ನು ಸಸ್ಯಾದಿಗಳಂತೆ ಪುನಃ ಪುನಃ ಬೆಳೆಸಲಾಗದು. ಹೀಗಾಗಿ, ಇರುವ ಪ್ರಾಕೃತಿಕ ಸಂಪನ್ಮೂಲಗಳನ್ನು ಇಂದಿನ ಅಗತ್ಯಗಳಿಗಾಗಿ ಬಳಸಿ ಮುಗಿಸುವುದು, ಅಜಾಗರೂಕ ದುಂದುಗಾರಿಕೆಯಿಂದ ಬೇಕಾಬಿಟ್ಟಿ ಅಪವ್ಯಯಿಸುವುದು ಮಾನವ ಕುಲಕ್ಕೆ ಗಂಡಾಂತರಕಾರಿಯಾದ ಸಂಗತಿ. ಭವಿಷ್ಯತ್ತಿಗಾಗಿ ವಿವಿಧ ಖನಿಜ ನಿಕ್ಷೇಪಗಳನ್ನು ರಕ್ಷಿಸುವುದು (conservation of mineral deposits) ಮನುಷ್ಯ ಮೊದಲು ಕೈಗೊಳ್ಳಬೇಕಾದ ಮುಖ್ಯ ಕರ್ತವ್ಯವಾಗಿದೆ. ಆದರೆ ವಿಜ್ಞಾನದ ತಡೆ ಕಾಣದ ಉತ್ಪಾದನೆ ಹುಟ್ಟುಹಾಕಿರುವ ಕೊಳ್ಳುಬಾಕ ಸಂಸ್ಕೃತಿಯ ಮುಂದಾಳುಗಳು, ಕುಟಿಲ ರಾಜಕಾರಣಿಗಳು, ಉದ್ದಿಮೆದಾರ ಆಕ್ರೋಪಸ್ಸುಗಳು, ಕಾಲ ಪೋಷಿತ ಹಣಹದ್ದುಗಳು ಸುಮ್ಮನಿರುವುದು ದುಸ್ಸಂಭವ. ಅವರು ವಿಜ್ಞಾನಿಗಳ ತಂತ್ರಜ್ಞಾನದ ಕೌಶಲ ಮತ್ತು ವಿಶಿಷ್ಟ ತಿಳಿವಳಿಕೆಯನ್ನು ತಮ್ಮ ಸ್ವಹಿತ ಸಾಧನೆಗೆ ಬಳಸಲು ಕುಮ್ಮಕ್ಕಿಸುತ್ತಾರೆ. ಅವರನ್ನು ಮರುಳುಗೊಳಿಸುವ ಪ್ರಲೋಭನಗಳಿಂದ ವಶಪಡಿಸಿಕೊಂಡು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಾರೆ. ಇದರಿಂದ ವಿಜ್ಞಾನ ಸಂದೇಶಿಸುವ ಸ್ವಾತಂತ್ರ್ಯ, ಸತ್ಯಶೋಧನೆ, ನಿರ್ಭಯತೆ ಮುಂತಾದ ಸನ್ಮೌಲ್ಯಗಳು ನಾಮಾವಶೇಷವಾಗುತ್ತವೆ.

ಒಟ್ಟಿನಲ್ಲಿ ನಿಸಾರರು ಗದ್ಯ ಲೇಖನಗಳಲ್ಲಿ ಪ್ರಸ್ತಾಪಿಸಿರುವ ವಿಜ್ಞಾನ-ತಂತ್ರಜ್ಞಾನದ ಬಗೆಗಿನ ಚಿಂತನಗಳು ಮನನೀಯ ಮಾತ್ರವಲ್ಲ, ನಮ್ಮಲ್ಲಿ ಎಚ್ಚರ ಮೂಡಿಸುವಂತಹವೂ ಆಗಿವೆ. ಅವುಗಳನ್ನು ಮಂಡಿಸುವಲ್ಲಿನ ನಿಸ್ಸಂದಿಗ್ಧತೆ, ನೇರತನಗಳಾಗಲಿ ವಿಷಯಗಳ ಕ್ರಮಾನುಗತವಾದ ಪ್ರತಿಪಾದನೆಯಾಗಲಿ ಮನೋಬುದ್ಧಿಗಳನ್ನು ಒಲಿಸಿಕೊಳ್ಳುವ ಮೋಡಿಯುಳ್ಳವು. ನಿಸಾರರು ಕಾವ್ಯದಲ್ಲಿ ಸೂಚ್ಯತೆ, ಸಂಕ್ಷಿಪ್ತತೆಯನ್ನು ರೂಢಿಸಿಕೊಂಡಂತೆ ತಮ್ಮ ಗದ್ಯ ಬರಹಗಳಲ್ಲಿ ವಿಶದತೆ, ವಿಶ್ಲೇಷಣೆಗಳ ಜೊತೆಗೆ ಭಾಷೆಯ ಬಿಗಿ, ಬನಿ, ಅಚ್ಚುಕಟ್ಟನ್ನು ಸಾಧಿಸಿರುವುದು ಶ್ಲಾಘನೀಯವೆನ್ನಿಸುತ್ತದೆ.

೩

ನಿಸಾರ್ ಅಹಮದ್ ತಮ್ಮ 'ಮನದೊಂದಿಗೆ ಮಾತುಕತೆ' (೧೯೯೧) ಗದ್ಯ ಲೇಖನಗಳ ಬರಹವೊಂದರಲ್ಲಿ (ಸಾರೊಳಗಿನ ಸೌಟು) ಈ ರೀತಿ ಉವಾಚಿಸಿದ್ದಾರೆ: 'ಜೀವನದ ಎಲ್ಲ ಕ್ಷೇತ್ರಗಳಿಗಿಂತ ವಿದ್ಯಾಕ್ಷೇತ್ರ ಹೆಚ್ಚು ಮಹತ್ವದ್ದು. ರಾಷ್ಟ್ರದ ಭಾವೀ ಪ್ರಜೆಗಳ ಶೀಲ ನಿರ್ಮಾಣ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಕಮ್ಮಾರ ಶಾಲೆ. ಆದರೆ ಅದು ತನ್ನ ಕಾಯಕದಲ್ಲಿ ಕೃತಾರ್ಥವಾಗುತ್ತಿದೆ ಎನ್ನುವುದಿರಲಿ, ಮೊದಲ ಸೋಪಾನಗಳಲ್ಲೇ ಜಾರುತ್ತಿದೆ ಎಂಬುದು ಸರ್ವವೇದ್ಯ ವಿಷಯ. ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ ಕಾಣಿಸದ, ಜೀವನಕ್ಕೆ ನೇರವಾಗಿ ಸಂಬಂಧಿಸದ 'ಹಾಚ್‌ಪಾಚ್' ಪಠ್ಯ ವಿಷಯಗಳನ್ನು ಪಲ್ಯದಂತೆ ಬಡಿಸುವ ತೀರಿನದನು ನಮ್ಮ ಶಿಕ್ಷಣ. ಪಲ್ಯ ಮೃಷ್ಟಾನ್ನವಾದೀತೆ? ಬುದ್ಧಿಗೆ ತಿಳಿವಿನ, ಅಂಕಿ ಅಂಶಗಳ

ಹಿಂಡಿ ಹಾಕಿ, ಆಂತರ್ಯ ವರ್ಧನೆಗೆ ಸುಗ್ರಾಸ ನೀಡದಿದ್ದರೆ ಅದನ್ನು ಶಿಕ್ಷಣ ಎಂದು ಕರೆಯಬಹುದೆ? ಉದ್ಯಾನ ವನಗಳಿಗಿಂತ ಹುಲ್ಲುಗಾವಲನ್ನು ಹೆಚ್ಚು ಹೋಲುತ್ತಿವೆ ನಮ್ಮ ವಿದ್ಯಾಲಯಗಳು.'

ನಮ್ಮ ನಾಡಿನ ವಿದ್ಯಾಭ್ಯಾಸ ಕ್ಷೇತ್ರದ ಅವನತ ಸ್ಥಿತಿಗಳನ್ನು ಬಿಂಬಿಸುವಲ್ಲಿ ನಿಸಾರರ ಈ ಮಾತುಗಳು ಕೈಗನ್ನಡಿಯಂತಿವೆ. ಅನೇಕ ದಶಕಗಳವರೆಗೆ ಕಾಲೇಜಿನಲ್ಲಿ ಅಧ್ಯಾಪನ ಮಾಡಿರುವ ಅನುಭವಸ್ಥರ ಈ ಅಭಿಪ್ರಾಯ ಸಾಧಾರವಾದದ್ದು ಮತ್ತು ಶಿಕ್ಷಣ ಕ್ಷೇತ್ರದ ಬಹು ಮುಖ್ಯ ಕೊರತೆಯತ್ತ ಬೆರಳು ಮಾಡಿ ತೋರಿಸುವಂಥದ್ದು. ಬರಿಯ ತಿಳಿವಿನ, ಭೌತ ಮಾಹಿತಿಗಳ ಹೊರೆಯನ್ನು ಹೇರಿ, ಪದವಿಯ ಅರ್ಹತಾಪತ್ರ ನೀಡಿ ಕಾಲೇಜುಗಳಿಂದ ಭವಿಷ್ಯಕ್ಕೆ ಹೊರ ದಬ್ಬುವ ನಮ್ಮ ಶಿಕ್ಷಣ ಕ್ರಮ ಸೋತಿರುವುದು ವ್ಯಕ್ತಿಯ ಆಂತರ್ಯವನ್ನು ಸಂಪುಷ್ಟಗೊಳಿಸುವುದರಲ್ಲಿ; ಸದ್ಗುಣಗಳನ್ನು, ಸದಾಚಾರ ಸಚ್ಛೀಲಗಳನ್ನು ಕಲಿಸುವುದರಲ್ಲಿ, ಅಭಿವರ್ಧಿಸುವುದರಲ್ಲಿ. ಇದರ ಒಟ್ಟು ಪರಿಣಾಮ, 'ಬಲೂನಿನಂತಹ ಬಾಹ್ಯದ ತೋರು ಗಾಣಿಕೆಯ ಸಭ್ಯತೆ ಘನತೆಗಳು ಒಳಗಿನ ಟೊಳ್ಳನ್ನು ವರ್ಣರಂಜಿತವಾಗಿ ಮುಚ್ಚಿವೆ. ಸಂಸ್ಕೃತಿಯ ಚಲನವಲನಕ್ಕೆ ನಡೆಮುಡಿಯಾಗಬೇಕಾದ ಅಂತರಂಗ ಬಿಡಾಡಿ ಭಾವನೆಗಳ ಕಾಲೊರಸಿಯಾಗಿದೆ.'

ನಮ್ಮ ಶಿಕ್ಷಣ ಪದ್ಧತಿ ಕೇವಲ ಉದ್ಯೋಗಾಭಿಮುಖಿಯಾಗಿರುವುದೇ ಅದರ ವೈಫಲ್ಯಕ್ಕೆ ಮುಖ್ಯ ಕಾರಣ. ಅದರ ನೈಜ ಉದ್ದೇಶವಾದ ಜ್ಞಾನಾರ್ಜನೆ ಹಾಗೂ ಚಾರಿತ್ರ್ಯ ವರ್ಧನೆಗಳ ಬಗೆಗೆ ಶಿಕ್ಷಣವೇತ್ತರು, ಬುದ್ಧಿಜೀವಿಗಳು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಗಂಟಲು ಹರಿಯುವಂತೆ ಕಿರುಚಾಡುತ್ತಾರೆ. ವಾಸ್ತವದಲ್ಲಿ ಇದನ್ನು ಕಾರ್ಯಗತ ಮಾಡಲು ಹಿಂಜರಿಯುತ್ತಾರೆ. ವ್ಯಾಪಾರೀಕರಣಕ್ಕೆ ತೊಡಗಿರುವ ಶಿಕ್ಷಣ ಸಂಸ್ಥೆಗಳಿಂದ, ವಿದ್ಯೆಬುದ್ಧಿಗಳ ತಕ್ಕಷ್ಟು ಪರಿಣತಿ ಇರದವರಿಂದ 'ಉದರಮುಖಿ' ಕಲಿಕೆ ಮಾತ್ರ ಸಾಧ್ಯ. ಅವರಿಗೆ ಹಣ ಗಳಿಕೆಯನ್ನು ಬಿಟ್ಟು ಬೇರೆಯ ಸನ್ಮೌಲ್ಯಗಳ ಪರಿವೆಯಿಲ್ಲ. ಹಣ, ಯಶಸ್ಸುಗಳ ಲೆಕ್ಕಾಚಾರದಲ್ಲಿ ತೊಡಗಿದವರಿಗೆ ಬಾಳಿನ ಶ್ರೇಯಸ್ಸು, ಪುರುಷಾರ್ಥ ಸಾಧನೆ ನಗಣ್ಯ. ನಾಲ್ಕೈದು ದಶಕಗಳ ಹಿಂದಿನ ಬೆಂಗಳೂರಿನಲ್ಲಿದ್ದ ವಿದ್ಯಾ ಸಂಸ್ಥೆಗಳ ಸ್ಥಿತಿಗತಿಗಳಿಗೂ ಇಂದಿನದಕ್ಕೂ ಅಪಾರ ವ್ಯತ್ಯಾಸ ಕಂಡುಬರುತ್ತದೆ. ಶಿಕ್ಷಣದ ವ್ಯಾಪಾರೀ ಹುರುಡು ಈಗ ಸರ್ಕಾರದ ನಿಯಂತ್ರಣವನ್ನು ಮೀರಿ ಉಲ್ಬಣಿಸಿದೆ. ಉದ್ಯಮಿಗಳು, ಹೆಂಡದ ದೊರೆಗಳು, ಪುಢಾರಿಗಳು, ಅಷ್ಟೇಕೆ ಸ್ವಜಾತಿ ಮತಧರ್ಮದ ಅರಿವನ್ನು ಸದಾ ಜಾಗೃತವಾಗಿ ಇರಿಸುವಲ್ಲಿ ಅಹರ್ನಿಶಿ ಶ್ರಮಿಸುತ್ತಿರುವ 'ಜಾತ್ಯತೀತ ರಾಷ್ಟ್ರ'ದ ಮಠಾಧಿಪತಿಗಳು ಇವೊತ್ತು 'ವಿದ್ಯಾದಾನ'ದ ಪವಿತ್ರ ಹೆಸರಿನಲ್ಲಿ ನಡೆಸುತ್ತಿರುವ ಲಾಭಕೋರ ಅನೀತಿಯುತ ಧಂದೆಗಳು ಶಿಕ್ಷಣದ ಅರ್ಥವನ್ನೇ ಹೊಲೆಗೆಡಿಸಿವೆ.

ಇವೊತ್ತಿನ ಶಿಕ್ಷಣ ಸಂಸ್ಥೆಗಳನ್ನು ಹೊರಗಿನಿಂದ ನೋಡಿದವರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳಬೇಕು—ಹಾಗಿರುತ್ತದೆ ಅವುಗಳ ಚೆಲುವು, ಚೆಂದ, ಚೇತೋಹಾರಿತ್ವ. ನಿಸಾರರ ನುಡಿಗಳಲ್ಲೇ ಹೇಳಬಹುದಾದರೆ: 'ಅಂದವಾದ ಕಟ್ಟಡಗಳಿವೆ, ಪ್ರಯೋಗಶಾಲೆ

ಗ್ರಂಥಾಲಯಗಳಿವೆ. ಟಿಪ್‌ಟಾಪಾಗಿ ಡ್ರೆಸ್ ಮಾಡುವ ಅಧ್ಯಾಪಕರ, ವಿದ್ಯಾರ್ಥಿಗಳ ಸಮೂಹವಿದೆ—ಜೀನು ಲಗಾಮು ಕಣ್ಣುಪಟ್ಟಿ ಮೆತ್ತನೆಯ ಆಸನ, ಏನೆಲ್ಲ ಇವೆ: ಜೀವಂತ ಕುದುರೆ ಮಾತ್ರ ಇಲ್ಲ. ಹೀಗಾಗಿ, ಹೌಸ್‌ಫುಲ್ ಆಗಿಯೂ ಬಿಕೋ ಎನ್ನಿಸುತ್ತಿವೆ ನಮ್ಮ 'ವಿದ್ಯಾಲಾಯ'ಗಳು!'

ವ್ಯಕ್ತಿತ್ವದ ಮಾಗುವಿಕೆಯೇ ಶಿಕ್ಷಣದ ಮುಖ್ಯೋದ್ದೇಶವೆಂದು ನಿಸಾರ್ ಈ ಲೇಖನದಲ್ಲಿ ತರ್ಕಸಮ್ಮತವಾಗಿ ಪ್ರತಿಪಾದಿಸುತ್ತಾರೆ. ವ್ಯಕ್ತಿ ಅಕ್ಷರಸ್ಥನಾದ ಮಾತ್ರಕ್ಕೆ, ಕಲಿತ ಮಾತ್ರಕ್ಕೆ ವಿದ್ಯಾಶಾಲಿ ಎನ್ನಿಸಲಾರ. ಹೆಸರೆಂಬ ಗಾಳಿಪಟಕ್ಕೆ ಡಿಗ್ರಿಗಳ ಮಾರುದ್ದದ ಬಾಲಂಗೋಚಿಯನ್ನು ನೇತು ಹಾಕಿಕೊಂಡ ಮಾತ್ರಕ್ಕೆ, ಆಸ್ತಿಪಾಸ್ತಿ ದುಡ್ಡಿನ ಪ್ರತಿಷ್ಠೆಯನ್ನು ಇತರರು ಮತ್ಸರಿಸುವ ಪ್ರಮಾಣದಲ್ಲಿ ಗುಡ್ಡೆ ಹಾಕಿಕೊಂಡ ಮಾತ್ರಕ್ಕೆ ಸಂಸ್ಕೃತಿವಂತ, ಸಭ್ಯ ಎನ್ನಿಸಿಕೊಳ್ಳಲಾರ. ತುಂಬಾ ತಿಳಿದವ, ಲೌಕಿಕ ಅರಿವಿನ ಉಗ್ರಾಣವಾಗಿರುವವ ನಿಜವಾದ ಅರ್ಥದಲ್ಲಿ ವಿದ್ಯಾ ಸಂಪನ್ನನಲ್ಲ, ಪ್ರಜ್ಞಾವಂತನಲ್ಲ. ಸರ್ವಜ್ಞತೆ, ಬಹುಶ್ರುತತೆಗಳು ಧಂಡಿಯಾಗಿದ್ದೂ ವ್ಯಕ್ತಿಯೊಬ್ಬ ಅಸಂಸ್ಕೃತನಾಗಿರುವುದು ವಿರಳವೇನಲ್ಲ. ವಿದ್ಯೆ ನರ ಪ್ರಾಣಿಯನ್ನು ಮಾನವನನ್ನಾಗಿ ಮಾರ್ಪಡಿಸುವ ಒಂದು ವರರೂಪಿ ಸ್ಪರ್ಶಮಣಿ. ಆದರೆ ನಮ್ಮ ವಿದ್ಯಾಭ್ಯಾಸ ಅದನ್ನು ಎಸಗುತ್ತಿದೆಯೆ? ಎಂಬ ಬಗೆಗೆ ಪ್ರತಿಯೊಬ್ಬ ಬುದ್ಧಿಜೀವಿಯೂ ಆತ್ಮಶೋಧನೆ ಮಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಸಾಮಾಜಿಕರಲ್ಲಿ ಜಾಗೃತಿ ಮೂಡಿಸಲು ಶ್ರಮಿಸಬೇಕು.

ನಮ್ಮ ಬಹುತರ ವಿದ್ಯಾವಂತರೆನ್ನಿಸಿಕೊಂಡವರು ಹಲವು ವಿಷಯಗಳಲ್ಲಿ ಕೊಂಚ ಮಟ್ಟಿನ ತಿಳಿವನ್ನು ಪಡೆದಿರುವುದೇನೋ ನಿಜ. ಆದರೆ ಅವರಿಗೆ ತಾವು, ತಮ್ಮ ಕುಟುಂಬ, ಆಪ್ತೇಷ್ಟರ ವಿನಾ ಸಮಾಜದ ಬಗೆಗೆ ಹೆಚ್ಚಿನ ಕಾಳಜಿ ಇರುವುದಿಲ್ಲ. ಆ ದೃಷ್ಟಿಯಿಂದ ಅವರು ಸಂವೇದನಾಶೂನ್ಯರು, ಅನುಕಂಪಹೀನರು. ಅವರು ಮರದ ಸೌಟಿನ ಹಾಗೆ. ಮೂರು ಹೊತ್ತೂ ಸಾರಿನಲ್ಲಿ ಮುಳುಗಿದ್ದರೂ ಅದಕ್ಕೆ ಸಾರಿನ ರುಚಿಯನ್ನು ಚಪ್ಪರಿಸುವ ಭಾಗ್ಯವಿಲ್ಲ. ಭಾವಾಸ್ವಾದ ಅದರ ಪಾಲಿಗೆ ಸೊನ್ನೆ. ನಿಜವಾದ ಶಿಕ್ಷಣ ನಿರ್ಮಿಸಬೇಕಾದದ್ದು ಪ್ರಜ್ಞಾಶಾಲಿ ಪ್ರಜೆಗಳನ್ನು. ರುಚಿಯನ್ನು ಅನುಭವಿಸುವ ಪಟುವಾದ ಜೀವಂತ ನಾಲಗೆಗಳನ್ನು, ಮರವಟ್ಟ ಸೌಟುಗಳನ್ನಲ್ಲ.

'ತುಂಬಿದ ತಿಪ್ಪೆಗೆ ನೊಣಗಳ ಜಾತ್ರೆ' (ಮನದೊಂದಿಗೆ ಮಾತುಕತೆ) ಎಂಬ ಬರವಣಿಗೆಯಲ್ಲಿ ನಿಸಾರ್ ಅವರು ಶಿಕ್ಷಣ ಕ್ಷೇತ್ರದ ಸಮಕಾಲೀನ ವಿದ್ಯಮಾನಗಳ ಮೇಲೆ ಕ್ಷ-ಕಿರಣ ಬೀರಿದ್ದಾರೆ. ಇಲ್ಲಿ ಕೆಲವು ಗಂಭೀರ ಹಾಗು ಮೌಲಿಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಕೆಲವೊಂದು ಪರಿಹಾರಗಳನ್ನೂ ಸೂಚಿಸಿದ್ದಾರೆ. ಒಟ್ಟಿನಲ್ಲಿ ಈ ಲೇಖನ ನಮ್ಮ ವಿದ್ಯಾಕೇಂದ್ರಗಳ ದಾರುಣ ಮತ್ತು ಶೋಚನೀಯ ಅವಸ್ಥೆಯನ್ನು, ಅದರ ಹಿಂದಿರುವ ದುಶ್ಶಕ್ತಿಗಳನ್ನು ನಮ್ಮೆದುರು ನಿಲ್ಲಿಸುತ್ತದೆ. ಜಗತ್ತಿನ ಅತ್ಯಂತ ದೊಡ್ಡ ಪ್ರಜಾತಂತ್ರವೆನ್ನಿಸಿಕೊಂಡಿರುವ ನಮ್ಮ ಈ ಮಹಾನ್ ದೇಶದ ವಿದ್ಯಾಭ್ಯಾಸ ಕ್ರಮ, ಜನಾಭಿಮುಖಿಯಾಗಿರುವ ಬದಲು ಕೆಲವೇ ಪಟ್ಟಭಧ್ರ ಪ್ರತಿಷ್ಠಿತರ ಹಿತ ಸಾಧನೆಯ ಆಡುಂಬೊಲವಾಗಿರುವುದನ್ನು ಅರಿತು ನಮ್ಮ ಚಿತ್ತ ಕುದಿಯುತ್ತದೆ.

ಜನ ಸಂಖ್ಯೆ ಸ್ಫೋಟಿಸುತ್ತಿರುವಂತೆ ಅನಕ್ಷರತೆಯ ಪಿಡುಗೂ ಅಧಿಕಗೊಳ್ಳುತ್ತಿರುವುದು ಇಂದಿನ ವಾಸ್ತವವಾಗಿದೆ. ನಮ್ಮ ದೇಶದ ಈಚಿನ ಜನ ಗಣತಿಯ ಪ್ರಕಾರ, ಬ್ರಿಟನ್ ಮತ್ತು ಅಮೆರಿಕದ ಒಟ್ಟು ಜನ ಸಂಖ್ಯೆಗೆ ಸಮನಾದಷ್ಟು ಅಕ್ಷರಹೀನರು ನಮ್ಮಲ್ಲಿದ್ದಾರೆ. ನಗರವಾಸಿಗಳ ವಿಷಯವಿರಲಿ, ನಮ್ಮ ರಾಷ್ಟ್ರದ ಬಹುತರ ಗ್ರಾಮಸ್ಥರಿಗೆ ಅವರ ಹಳ್ಳಿಯ ಪರಿಸರದ ತಿಳಿವಳಿಕೆ ಬಿಟ್ಟರೆ ಉಳಿದದ್ದರ ಪರಿಜ್ಞಾನವಿಲ್ಲ. ಈಚೆಗೆ ಬಂದಿರುವ ಟಿ.ವಿ.ಯಿಂದಲೂ ಅವರ ತಿಳಿವಿನ ಪರಿಧಿ ಹೆಚ್ಚಿದೆಯೆಂದು ಹೇಳುವಂತಿಲ್ಲ. ರಾಷ್ಟ್ರದ ಆಗುಹೋಗುಗಳ ಸಾವಿರದಲ್ಲಿ ಒಂದು ಅಂಶದಷ್ಟೂ ಅವರ ಅರಿವಿನ ವಲಯವನ್ನು ಹೊಕ್ಕಿಲ್ಲ. ಗಾಂಧೀಜಿ ಅವರು ಗ್ರಾಮೋದ್ಧಾರಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದರೂ ಸ್ವಾತಂತ್ರ್ಯ ಲಭಿಸಿ ಐದೂವರೆ ದಶಕಗಳ ಮೇಲಾದರೂ ಹಳ್ಳಿಗರ ಒಟ್ಟಾರೆ ಸ್ಥಿತಿ ಬದಲಾಗಿಲ್ಲ. ಮಕ್ಕಳ ಶಿಕ್ಷಣವಿರಲಿ, ವಯಸ್ಕರ ವಿದ್ಯಾಭ್ಯಾಸದಲ್ಲೂ ನಿರೀಕ್ಷಿತ ಮುನ್ನಡೆಯನ್ನು ಕಂಡಿಲ್ಲ. ಹಳ್ಳಿಗಾಡಿನಲ್ಲಿ ಪ್ರಾಥಮಿಕ ಶಾಲೆಗೆ ಸೇರಿ ಕೆಲ ವರ್ಷಗಳ ಬಳಿಕ ಅದನ್ನು ಬಿಡುವವರ ಸಂಖ್ಯೆ ನಿಜಕ್ಕೂ ತಲ್ಲಣಗೊಳಿಸುವಂಥದ್ದು. ಅದರಲ್ಲೂ ಹೆಣ್ಣುಮಕ್ಕಳ ಸ್ಥಿತಿಗತಿಗಳಂತೂ ಅತ್ಯಂತ ಕರುಣಾಜನಕ, ಅಮಾನವೀಯ. ಮೂಢನಂಬಿಕೆ, ಕಂದಾಚಾರಗಳಿಗೆ ಬಲಿಯಾಗುವವರಲ್ಲಿ ಹೆಂಗಸರದೇ ಮೇಲುಗೈ. ಅವರು ದುಡಿತಕ್ಕಾಗಿಯೇ ಹುಟ್ಟಿದವರಂತೆ ಅವರನ್ನು ಶೋಷಿಸುವ ಜನರು ಹಲವು ಬಗೆಯವರು, ರೀತಿ ಅಸಂಖ್ಯ ತೆರದ್ದು.

ವಿಶ್ವಸಂಸ್ಥೆ, ಯಾವುದೇ ರಾಷ್ಟ್ರ ತನ್ನ ಆಯವ್ಯಯದ ಶೇಖಡ ಏಳರಷ್ಟನ್ನು ಮಕ್ಕಳ ಕಲ್ಯಾಣಕ್ಕಾಗಿ ಮತ್ತು ವಿದ್ಯಾಭ್ಯಾಸಕ್ಕಾಗಿ ಮೀಸಲಿಡಬೇಕೆಂದು ಆದೇಶಿಸಿದೆ. ನಮ್ಮ ರಾಷ್ಟ್ರದಲ್ಲಿ ಇದರ ಅನ್ವಯ ಕೋಟ್ಯಂತರ ರೂಪಾಯಿಗಳು ವೆಚ್ಚವಾಗುತ್ತಿದ್ದರೂ ಪರಿಣಾಮ ಅತ್ಯಲ್ಪ. ನಮ್ಮ ರಾಜಕಾರಣಿಗಳು, ಭ್ರಷ್ಟ ಹಾಗೂ ಅದಕ್ಷರಾದ ಅಧಿಕಾರಿಗಳು, ಸ್ವಹಿತಸಾಧಕ ಸಮಾಜದ ಪ್ರತಿಷ್ಠಿತ ವರ್ಗ, ಹೆಚ್ಚಿನ ರಾಷ್ಟ್ರಕರು ಅನಕ್ಷರಸ್ಥರಾಗಿಯೇ ಉಳಿಯಬೇಕೆಂಬ ಮಹದಾಸೆಯನ್ನು ತಳೆದವರಾಗಿದ್ದಾರೆ. ಹಾಗಿದ್ದಾಗ ಮಾತ್ರ ತಮಗೆ ಲಾಭದಾಯಕ. ಶಿಕ್ಷಣದ ಮೂಲಕ ತಿಳಿವಳಿಕೆ ಹಾಗೂ ವಿಚಾರಶೀಲತೆಯನ್ನು ರೂಢಿಸಿಕೊಂಡರೆ ತಮ್ಮ ಕೈಮೀರಿ ಹೋಗುತ್ತಾರೆಂಬ ಭೀತಿ. ಗ್ರಾಮೀಣ ಪ್ರದೇಶಗಳ ಶಾಲೆಗಳ ಸ್ಥಿತಿಯಂತೂ ದೇವರಿಗೇ ಪ್ರೀತಿ. ಸರಿಯಾದ ಕಟ್ಟಡವಾಗಲಿ, ಪೀಠೋಪಕರಣವಾಗಲಿ, ಉಪಾಧ್ಯಾಯರಾಗಲಿ, ಕೊನೆಗೆ ಹೆಣ್ಣುಮಕ್ಕಳಿಗೆ ಶೌಚಾಲಯಗಳಾಗಲಿ ಇರದಿರುವುದು ಸರ್ವೇಸಾಮಾನ್ಯ. ದೇಶದ ಒಟ್ಟು ಜನಸಂಖ್ಯೆಯ ಮುಕ್ಕಾಲು ಭಾಗ ಹಂಚಿ ಹೋಗಿರುವುದು ಹಳ್ಳಿಗಾಡಿನ ಪ್ರದೇಶದಲ್ಲಿ. ಅವರಲ್ಲಿ ಶೇಖಡ ನಲವತ್ತೆಂಟರಷ್ಟು ಬಡತನದ ರೇಖೆಯ ಕೆಳಗೆ ಬರುವಂಥವರು. ಇನ್ನವರ ಮಕ್ಕಳು ಪೂರ್ಣಾವಧಿಯ ವಿದ್ಯಾಭ್ಯಾಸವನ್ನು ಪೂರೈಸುವುದು ಹೇಗೆ ಸಾಧ್ಯ?

ಹಾಲಿ ಶಿಕ್ಷಣ, ಸಾಮಾಜಿಕ ಪ್ರಸ್ತುತತೆಯನ್ನು ಕಳೆದುಕೊಂಡಿರುವುದಲ್ಲದೆ, ಜನರನ್ನು ಬೇರೆ ಬೇರೆ ಸ್ತರಗಳಲ್ಲಿ ವಿಭಾಗಿಸಿರುವುದು ದುರಂತದ ವಿಚಾರ. ಪರೀಕ್ಷೆ ಮತ್ತು ನೌಕರಿ ಓದಿನ ಮುಖ್ಯ ಉದ್ದೇಶವೆಂಬ ಭಾವನೆಯನ್ನು ಮೊದಲು ಹೋಗಲಾಡಿಸುವ ಪ್ರಯತ್ನ ನಡೆಯಬೇಕು.

ಹಿಂದೆ ಸೂಚಿಸಿದಂತೆ ಶಿಕ್ಷಣದ ಮಹದಾಶಯ, ಹೃದಯ ಮತ್ತು ಅಂತರಂಗವನ್ನು ಸಂಸ್ಕರಿಸುವುದು, ತರಬೇತುಗೊಳಿಸುವುದು. ನೆನಪಿನಲ್ಲಿ ಅಂಕಿ ಅಂಶ ಮಾಹಿತಿಗಳನ್ನು ಗಿಡಿಯುವುದಲ್ಲ. ಇದರಿಂದ ಅಕ್ಷರ ಜ್ಞಾನಿಗಳನ್ನು ತಯಾರಿಸಬಹುದೇ ಹೊರತು ವಿದ್ಯಾ ಪಾರಂಗತರನ್ನಲ್ಲ. ಅಂಕಿ ಅಂಶ ಮತ್ತು ಮಾಹಿತಿಗಳ ಮೊತ್ತಕ್ಕೆ ಅನಿರ್ವಚನೀಯ ಶೋಭೆ, ಜೀವ ಕಳೆ ಮೂಡುವುದು ಅವುಗಳಿಗೆ ವ್ಯಕ್ತಿತ್ವ ಶಕ್ತಿಯ ಸಂಸರ್ಗವೊದಗಿದಾಗ. ನಿಸಾರರ ಪ್ರಕಾರ, 'ಶಿಕ್ಷಣವೆಂದರೆ ಕೇವಲ ಅಕ್ಷರಗಳ ಮೊತ್ತದ ಪರಿಜ್ಞಾನವಲ್ಲ; ಅದು ಮನಸ್ಸುಗಳ ಸಂಯೋಗ. ಲೋಕದ ಬಾಳಿನಲ್ಲಿ ಸಾಮರಸ್ಯ ಹೊಂದುವುದಕ್ಕಾಗಿ ಬಾಹ್ಯ ಹಾಗೂ ಅಂತರಂಗದ ತಾಲೀಮು. ನಮ್ಮ ಶಿಕ್ಷಣದಲ್ಲಿ ಈಗ ನಡೆಯುತ್ತಿರುವುದು ತಿಳಿವಿನ ಉದ್ದ ಅಗಲ ಗಾತ್ರಗಳನ್ನು ಹೆಚ್ಚಿಸುವುದಷ್ಟೇ. ಅದರ ಜೀವನ ಸಂದರ್ಭಾನುಸಾರಿಯಾದ ಪ್ರಯೋಜನದ ಬಗ್ಗೆ ನಾವು ಪೂರ್ತಿ ನಿರ್ಲಕ್ಷ್ಯ ತೋರುತ್ತಿದ್ದೇವೆ.'

ಕೆಲವು ವರ್ಷಗಳಿಂದ ಈಚೆಗೆ ನಮ್ಮ ಶಿಕ್ಷಣ ಮಾಧ್ಯಮದ ಪ್ರಶ್ನೆ ತುಂಬ ಗುರುತರವಾದ ಆಯಾಮವನ್ನು ಪಡೆದಿದೆ. ನಮಗೆ ದೊರಕಿರುವುದು ಸಂಪೂರ್ಣ ಸ್ವಾತಂತ್ರ್ಯವೋ ಅಥವಾ ಕೇವಲ ರಾಜಕೀಯ ಮುಕ್ತಿಯೋ ಎನ್ನುವ ಶಂಕೆಯನ್ನು ಬಲಿಸುವಂತೆ ಮಾಧ್ಯಮದ ಸಮಸ್ಯೆ ಸಮಾಜದ ಹಿತ ಚಿಂತಕರ ತಲೆ ತಿನ್ನುತ್ತಿದೆ. ಒಂದು ಕಡೆ ಕನ್ನಡದ ಉದ್ಧಾರದ ಮಾತನ್ನಾಡುತ್ತ, ಇನ್ನೊಂದೆಡೆ ಇಂಗ್ಲೀಷ್ ಶಾಲೆಗಳಿಗೆ ಬೇಕಾಬಿಟ್ಟಿ ಮಂಜೂರು ಪತ್ರ ನೀಡುತ್ತ ಇಬ್ಬಂದಿ ನೀತಿಯನ್ನು ಪಾಲಿಸುತ್ತಿರುವ ಸರ್ಕಾರದ ಧೋರಣೆ ನಮ್ಮ ನಾಡು-ನುಡಿಗಳ ಒಳಿತಿಗೆ ಮುಳುವಾಗಿದೆ. ಜನರ ಒತ್ತಾಯಕ್ಕೆ ಮಣಿದು ಕನ್ನಡಪರ ಆದೇಶವನ್ನು ಆಡಳಿತ ವ್ಯವಸ್ಥೆ ಹೊರಡಿಸಿದರೆ, ಅದಕ್ಕೆ ಕಂಟಕಪ್ರಾಯವಾದ ತೀರ್ಪನ್ನು ನೀಡಿ ಯಥಾಸ್ಥಿತಿಯನ್ನು ಕಾಪಾಡುವಂತೆ ಎಸಗುವ ನ್ಯಾಯಾಲಯಗಳ ಹುನ್ನಾರ ಸಹ ಕನ್ನಡಿಗರ ಹಿತದ ಪಾಲಿಗೆ ಕುಠಾರಪ್ರಾಯವಾಗಿದೆ. ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ವನ್ನು ಪಡೆಯಬೇಕಾದದ್ದು ಯಾವುದೇ ರಾಜ್ಯದ ಜನತೆಯ ಹಕ್ಕು. ಸಂವಿಧಾನ ಕೂಡ ಇದನ್ನು ವಿರೋಧಿಸದು. ನಾಲ್ಕೈದು ದಶಕಗಳ ಹಿಂದೆ ಇಂಗ್ಲೀಷ್ ಮಾಧ್ಯಮದ ವ್ಯಾಮೋಹ ಇಷ್ಟು ತೀವ್ರತರದ್ದಾಗಿರಲಿಲ್ಲ. ಈಗಂತೂ ಬಡವ ಬಲ್ಲಿದರೆನ್ನದೆ ಎಲ್ಲರೂ ಅದಕ್ಕೆ ಗಂಟು ಬಿದ್ದಿದ್ದಾರೆ. ಎಲ್ಲಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ನಮ್ಮ ನಾಡಿನಲ್ಲಿ ಉದ್ಯೋಗ ಮತ್ತಿತರ ಸವಲತ್ತುಗಳು ಲಭ್ಯವಾಗುವುದಿಲ್ಲವೋ, ನಮ್ಮ ಕನ್ನಡ ಶಾಲೆಗಳ ಶೋಚನೀಯ ಅವಸ್ಥೆ ನಿವಾರಿತವಾಗಿ, ಇಂಗ್ಲೀಷ್ ಕಾನ್ವೆಂಟ್‌ಗಳ ಅಂದಚೆಂದ, ಸೌಕರ್ಯ, ಶಿಕ್ಷಕ ವರ್ಗದ ಭಯ ಭಕ್ತಿಯ ಕಾರ್ಯನಿರ್ವಹಣೆ ಇತ್ಯಾದಿಗಳು ಅವುಗಳಲ್ಲಿ ಮೈಗೂಡು ವುದಿಲ್ಲವೋ ಅಲ್ಲಿಯ ತನಕ ಕನ್ನಡ ಮಾಧ್ಯಮದ ಬಗೆಗೆ ಮಾತನಾಡುವುದು ಬರಿಯ ಅರಣ್ಯರೋದನವಾದೀತು. ಆಂಗ್ಲ ಮಾಧ್ಯಮದ ಶಾಲೆಯ ಶೌಚಾಲಯಕ್ಕೆ ಖರ್ಚು ಮಾಡುವ ಹಣವನ್ನು ಇಡೀ ಕನ್ನಡ ಶಾಲೆಯ ಕಟ್ಟಡ, ಪರಿಕರಗಳಿಗೆ ವೆಚ್ಚಮಾಡಬಹುದು.

ತಮ್ಮ ಮೂವತ್ತೈದು ವರ್ಷಗಳ ಬೋಧನಾನುಭವದ ಆಧಾರದ ಮೇಲೆ ನಿಸಾರರು, ಪ್ರಾಥಮಿಕ ಶಾಲೆಯಿಂದ ಡಿಗ್ರಿಯ ತರಗತಿಗಳವರೆಗೆ ಕನ್ನಡ ಮಾಧ್ಯಮದಲ್ಲಿ ವಿಜ್ಞಾನವನ್ನು

ಪಾಠ ಹೇಳಬಹುದು ಎನ್ನುತ್ತಾರೆ. ಮುಖ್ಯವಾಗಿ ಬೇಕಾದದ್ದು ನಿಸ್ಸಂದೇಹಪೂರ್ವಕ ಪರಿಶ್ರಮ, ಪ್ರಾಮಾಣಿಕವಾದ ಶ್ರದ್ಧೆ ಮತ್ತು ಪೂರ್ತ ತಯ್ಯಾರಿ. ಸ್ನಾತಕೋತ್ತರ ವ್ಯಾಸಂಗವನ್ನು ಕೈಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಪರಿಮಿತ. ಅಂಥವರು ಇಂಗ್ಲಿಷ್ ಮಾಧ್ಯಮವನ್ನು ಆಯ್ಕೆಮಾಡಿಕೊಳ್ಳಬಹುದು. ಆದರೆ ಕಾಲೇಜಿನಲ್ಲಿ ಓದುವವರೆಲ್ಲ ಎಂಬಿಬಿಎಸ್, ಬಿಇ, ಎಂಎ, ಎಂಎಸ್ಸಿಗಳನ್ನು ಓದುತ್ತಾರೆಂದಾಗಲಿ, ಡಾಕ್ಟರೇಟ್ ಪದವಿಗಳನ್ನು ಪಡೆಯುತ್ತಾರೆಂದಾಗಲಿ ಹೇಳುವಂತಿಲ್ಲ. ಹೆಚ್ಚಿನವರು ಪಿಯುಸಿ, ಡಿಗ್ರಿ ಮುಗಿಸಿ ಬ್ಯಾಂಕ್, ಕಛೇರಿ, ವ್ಯಾಪಾರಿ ಸಂಸ್ಥೆ, ಕಾರ್ಖಾನೆ, ಶಾಲೆಗಳಲ್ಲಿ ಅಥವಾ ಸ್ವಂತದ ವೃತ್ತಿಯಲ್ಲಿ ತೊಡಗಿಕೊಳ್ಳುವವರು. ಅವರಿಗೆ ಜನ ಸಂಪರ್ಕ ಅನಿವಾರ್ಯ. ಇದರಿಂದಾಗಿ ಕನ್ನಡ ಬಳಕೆ ಕಡ್ಡಾಯವಾಗಿರುತ್ತದೆ. ಇಂಥವರು ಕನ್ನಡ ಮಾಧ್ಯಮದಲ್ಲಿ ಓದಿ ಪರಿಣತರಾದರೆ ಅವರ ಭವಿಷ್ಯ ಕಾಲದ ವ್ಯವಹಾರಗಳು ಸುಗಮ. ಹಾಗೆಂದು ಅವರು ಇಂಗ್ಲೀಷನ್ನು ಕಡೆಗಣಿಸಬೇಕೆಂದಲ್ಲ. ಅಂತರ್ರಾಷ್ಟ್ರೀಯ ಚಾಲ್ತಿಯ ಆ ಭಾಷೆಯನ್ನು ಚೆನ್ನಾಗಿ ಕಲಿತಷ್ಟೂ ಕನ್ನಡದಲ್ಲಿ ವಿಷಯಗಳನ್ನು ಅಧಿಕತರವಾಗಿ ವ್ಯಕ್ತಪಡಿಸಲು ಸಹಾಯಕ.

ಇಂಗ್ಲೀಷ್ ಮಾಧ್ಯಮದ ನಿಮಿತ್ತ ತೀವ್ರವಾದ ವರ್ಗ ತಾರತಮ್ಯ ಉಂಟಾಗಿರುವುದು ಸತ್ಯಸ್ಯಸತ್ಯ ಸಂಗತಿ. ನಗರದ ಪರಿಸರದ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗೂ, ಅದೇ ಪ್ರದೇಶದ ಕನ್ನಡ ಮಾಧ್ಯಮದ ವಿದ್ಯಾರ್ಥಿಗೂ ಹೇಗೆ ವ್ಯತ್ಯಾಸ ಗೋಚರಿಸುತ್ತದೆಯೋ ಹಾಗೆಯೇ ನಗರದ ವಿದ್ಯಾರ್ಥಿಗೂ ಹಳ್ಳಿಯವನಿಗೂ ಭೇದ ಕಾಣಿಸುತ್ತದೆ. ಇಂಗ್ಲೀಷ್ ಕಲಿತವನ ಮೇಲರಿಮೆ, ಆತ್ಮವಿಶ್ವಾಸ ಹಾಗೂ ದಿಟ್ಟ ನಡೆ ನುಡಿಗಳ ಮುಂದೆ ನಮ್ಮ ಕನ್ನಡದ ಹೈದ ಮುದುಡಿ ಹೋಗುವ ಪರಿಯನ್ನು ನೆನೆದರೆ ಮನಸ್ಸು ಚಡಪಡಿಸುತ್ತದೆ.

ನಮ್ಮ ಶಿಕ್ಷಣದ ಏಕಪಕ್ಷೀಯತೆ ಮತ್ತು ಪಾರ್ಶ್ವಿಕ ಒಲವುಗಳು, ಅದರ ಅಸಮತೋಲನ ಸ್ಥಿತಿಗೆ, ಸಮಾಂಗವಲ್ಲದ ಬೆಳವಣಿಗೆಗೆ ಮುಖ್ಯ ಕಾರಣ. ನಮ್ಮ ಶಿಕ್ಷಣೋದ್ಯಮಿಗಳು ಮತ್ತು ಕೆಲ ಲಾಭಬಡುಕ ರಾಜಕಾರಣಿಗಳು ವೃತ್ತಿ ಶಿಕ್ಷಣದ ಉನ್ನತ ವಿದ್ಯಾಭ್ಯಾಸ ಪೊಗದಸ್ತಾಗಿ ಬೆಳೆದು ಹರಡುವುದಕ್ಕೆ ಕಾರಣವಾಗುವುದರ ಜೊತೆಗೇ ಪ್ರಾಥಮಿಕ, ಮಾಧ್ಯಮಿಕ ಹಂತದ ಸಾರ್ವಜನಿಕ ವಿದ್ಯಾಕೇಂದ್ರಗಳು ಪೋಷಣೆಯಿಲ್ಲದೆ ಸೊರಗಿ ಹೋಗುವುದಕ್ಕೂ ನಿಮಿತ್ತವಾಗಿದ್ದಾರೆ. ಅವರಿಗೆ ಅಧಿಕವಾದ ನಫೆ ಎಲ್ಲಿ ಬರುತ್ತದೋ ಅಲ್ಲಿ ಹೆಚ್ಚಿನ ಆಸಕ್ತಿ, ಅದಕ್ಕೆ ಆರೈಕೆ. ಉಳಿದದ್ದನ್ನು ಕಟ್ಟಿಕೊಂಡು ಅವರಿಗೆ ಆಗಬೇಕಾದದ್ದು ಏನಿದೆ? ತುಂಬಿದ ತಿಪ್ಪೆಯಲ್ಲಿ ನೊಣಗಳು ಜಾತ್ರೆ ನೆರೆಯುವುದು ಸ್ವಾಭಾವಿಕ ತಾನೆ?

ನಿಸಾರರು ಇದೇ ಗದ್ಯ ಸಂಗ್ರಹದಲ್ಲಿ, ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಯ ವೇಳೆ ನಡೆದ ಚರ್ಚೆ, ವಾದ ವಿವಾದ ಮತ್ತು ಅಂಥದೊಂದು ವಿ.ವಿ.ಯ ಅಗತ್ಯದ ಬಗ್ಗೆ 'ಕನ್ನಡ ವಿವಿ ಘಟವೆ, ನೀನು ಹಂಪೆ ತಲಪುವುದು ದಿಟವೆ?' ಎಂಬ ಲೇಖನದಲ್ಲಿ ಕೂಲಂಕಷ ಮತ್ತು ತಲಸ್ಪರ್ಶಿಯಾದ ಚಿಂತನೆಗಳನ್ನು ಹರಿಸಿದ್ದಾರೆ. ಇದು ಅಕೆಡೆಮಿಕ್ ಬಗೆಯ ಶಿಕ್ಷಣ ಸಮಸ್ಯೆಯಾದರೂ ಇದರ ಪರಿಣಾಮ ಒಟ್ಟು ವಿದ್ಯಾಭ್ಯಾಸ ಕ್ರಮವನ್ನು ಒಳಗೊಂಡಿದ್ದು.

ಪತ್ರಿಕೆಗಳಲ್ಲಿ ಈಗ್ಗೆ ಒಂದೂವರೆ ದಶಕದ ಹಿಂದೆ ನಡೆದ ಪರ-ವಿರೋಧ ವಾದಿಗಳ 'ಟಗ್ ಆಫ್ ವಾರ್'ನ ದೆಸೆಯಿಂದ ಕನ್ನಡ ವಿವಿ ಸ್ಥಾಪನೆಯ ಪ್ರಶ್ನೆ ಇನ್ನಷ್ಟು ಗೊಂದಲಮಯವಾಗಿ ಗೋಜಲಾಗಿ ದಿಕ್ಕು ತಪ್ಪಿಸುವ ನೆಲೆಯಲ್ಲಿ ಸಾಗಿತು. ಈ ಚರ್ಚೆ ಶುದ್ಧಮನಸ್ಕ ಅಕೆಡೆಮಿಷಿಯನ್ನರ ನಡುವೆ ನಡೆದಂತೆ ತೋರಲಿಲ್ಲ. ಅಲ್ಲಿನ ಉನ್ನತ ಹುದ್ದೆಗೆ ಕಣ್ಣಿಟ್ಟವರ ಮತ್ತು ಅದು ತಮಗೆಂದೂ ದಕ್ಕಲಾರದು ಎನ್ನುವವರ ಮಧ್ಯದ ವಾಗ್ಯುದ್ಧವಾಗಿ ಪರಿಣಮಿಸಿದ್ದು ದುರ್ದೈವದ ಸಂಗತಿ. ಈಗಾಗಲೇ ಆ ವಿಶ್ವವಿದ್ಯಾಲಯ ಸ್ಥಾಪಿತವಾಗಿ, ವರ್ಧಿಸುತ್ತ ಮುನ್ಸಾಗಿ ಕಾರ್ಯಾಚರಣೆಯಲ್ಲಿ ತೊಡಗಿರುವುದರಿಂದ, ಪ್ರಸ್ತುತ ಲೇಖನವನ್ನು ಪರಿಶೀಲಿಸುವುದರಲ್ಲಿ ಅರ್ಥ ತೋರದು. ಇದೊಂದು ಸಾಮಯಿಕ ಸ್ವರೂಪದ ಲೇಖನವಾದದ್ದರಿಂದ ಇದರ ಪ್ರಸ್ತುತತೆ ಇಂದಿಗೆ ಸೂಕ್ತ ಕಾಣದು.

ನೆರೆಯ ರಾಜ್ಯದ ವಿ.ವಿ.ಯ ಮಾದರಿಯನ್ನು ಅನುಸರಿಸಿ, ನಮಗೆ ಅತ್ಯಗತ್ಯವೋ ಅಲ್ಲವೋ ಅನ್ನುವುದನ್ನು ಸಮಂಜಸವಾಗಿ ವಿವೇಚಿಸದೆ, ಕೇವಲ ಪ್ರತಿಷ್ಠೆಗಾಗಿ ಕನ್ನಡ ವಿ.ವಿ.ಯನ್ನು ಸ್ಥಾಪಿಸಲು ಕೆಲವು ಶಿಕ್ಷಣವೇತ್ತರ ಆಗ್ರಹಕ್ಕೆ ಮಣಿದು ಸರಕಾರ ಈ ಯೋಜನೆಯನ್ನು ಕೈಗೊಂಡಿತು. ಅದರ ಉದ್ದೇಶದ ಬಗೆಗೆ ಖಚಿತವಾದ ತಿಳಿವಳಿಕೆ ಇರದಿರುವುದು ಈ ಸಮಸ್ಯೆಯ ಜಟಿಲತೆಗೆ ಇನ್ನೊಂದು ಕಾರಣ. ಈಗಾಗಲೇ ನಮ್ಮ ನಾಡಿನಲ್ಲಿರುವ ಹಲವು ವಿ.ವಿ.ಗಳು ನೆರವೇರಿಸುತ್ತಿರುವ ಕಾರ್ಯಾವಳಿಯನ್ನೇ ಹೊಸ ವಿವಿ ಮರುಕೊಳಿಸುವುದಾದರೆ ಅದರ ಪ್ರತ್ಯೇಕವಾದ ಅಸ್ತಿತ್ವ ಏಕೆ ಬೇಕು? ಪ್ರೌಢತರವಾದ ಸಂಶೋಧನೆಗಳಿಗೆ ಮೀಸಲಾಗಿರಲು ಈ ವಿ.ವಿ.ಯನ್ನು ಸ್ಥಾಪಿಸುವುದಾದರೆ, ಯಾವ ವಿವೇಕವಂತ ಶಿಕ್ಷಣತಜ್ಞನೂ ಕೇವಲ ಸಂಶೋಧನೆಯನ್ನು ನಡೆಸುವ ಸಂಸ್ಥೆಗೆ ವಿವಿಯ ಉನ್ನತ ಅಂತಸ್ತನ್ನು ಕೊಡುವುದನ್ನು ಸರ್ವಥಾ ಒಪ್ಪಲಾರ. ಹಾಲಿ ಪ್ರಚಲಿತವಿರುವ ನಮ್ಮ ನಾಡಿನ ವಿ.ವಿ.ಯಲ್ಲಿ ಸಂಶೋಧನಾಂಗವೂ ಇದ್ದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯಾದ್ದರಿಂದ ಕನ್ನಡ ವಿ.ವಿ.ಯಂಥ ಬಿಳಿ ಆನೆಯ ಅಗತ್ಯವೇನು? ಎಂಬ ಪ್ರಶ್ನೆಯೂ ಆಗ ಪತ್ರಿಕೆಗಳಲ್ಲಿ ಚರ್ಚಿತವಾಯಿತು. 'ಕರ್ನಾಟಕಾಲಜಿ' ಮಾತ್ರ ಅಲ್ಲಿ ಸಂಶೋಧನೆಯ ವಿಷಯವಾಗುವುದಿಲ್ಲ; ಇತರ ವಿಷಯಗಳ ಪ್ರೌಢ ಸಂಶೋಧನೆಗಳಿಗೂ ಅಲ್ಲಿ ಎಡೆ ಇರುತ್ತದೆ ಎಂದು ವಿವಿಯ ಸ್ಥಾಪನೆಗೆ ಕಾತರಿಸಿದವರ ಅಭಿಮತ. ಈ ವಿ.ವಿ.ಯ ಅಕೆಡೆಮಿಕ್ ವಿಷಯಗಳ ವಿಭಾಗಗಳು ಅಂತಶ್ಶಿಸ್ತೀಯ (inter-disciplinary) ವಿಷಯದಲ್ಲಿ ಮತ್ತು ಉತ್ಕೃಷ್ಟ ಮಾನದಂಡಗಳ ವಿಚಾರದಲ್ಲಿ ಇತರೇ ವಿ.ವಿ.ಗಳಿಗಿಂತ ಅತಿಶಯದ್ದಾಗಿರುತ್ತವೆ ಎಂಬುದು ಈ ವಿ.ವಿ. ಬೆಂಬಲಿಗರ ಅನ್ನಿಸಿಕೆ.

ಒಟ್ಟಿನಲ್ಲಿ ನಿಸಾರರ ಶಿಕ್ಷಣ ಸಂಬಂಧಿ ಚಿಂತನೆಗಳು ಮನನಯೋಗ್ಯ ಮತ್ತು ಸಂಗತವೆನ್ನಿಸುತ್ತವೆ. ಶಿಕ್ಷಣ ಸಂಸ್ಥೆಗಳ ಬೋಧನೆಯ ಕ್ರಮ ಮತ್ತು ಆಡಳಿತ ವ್ಯವಸ್ಥೆಗಳಲ್ಲಿ ಒಂದು ನಿಖರವೂ ವಿವೇಕಯುತವೂ ಆದ ವೈಜ್ಞಾನಿಕ ವಿಧಾನವಿದ್ದರೆ; ಶಿಕ್ಷಕರಲ್ಲಿ ತಮ್ಮ ಗುರುಗಳ ನೋಟ್ಸನ್ನು ಮಕ್ಕಿಕಾಮಕ್ಕಿ ವಿದ್ಯಾರ್ಥಿಗಳಿಗೆ ಹಸ್ತಾಂತರಿಸದೆ, ಸ್ವತಂತ್ರವಾಗಿ ಅಧ್ಯಯನಿಸಿ ಆಲೋಚಿಸುವ ವೈಚಾರಿಕ ಪ್ರವೃತ್ತಿ ಮೊಳೆತರೆ ವಿದ್ಯಾಭ್ಯಾಸ ಹೆಚ್ಚು ಅರ್ಥವಂತ ಹಾಗೂ ಪ್ರಸ್ತುತ ಅನ್ನಿಸೀತು.



ನಿಸಾರ್ ಅವರ ಷೇಕ್ಸ್‌ಪಿಯರ್ ನಾಟಕಾನುವಾದಗಳು

♦ ಡಾ. ಕೆ. ಮರುಳಸಿದ್ಧಪ್ಪ

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಷೇಕ್ಸ್‌ಪಿಯರ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಲು ತೊಡಗಿದ ಕಾಲವು ಕನ್ನಡ ರಂಗ ಭೂಮಿಯ ಚರಿತ್ರೆಯಲ್ಲಿ ಒಂದು ಮಹತ್ವದ ತಿರುವಿನ ಕಾಲ ವಾಗಿತ್ತು. ಆಧುನಿಕ ರಂಗಭೂಮಿಯು ವೃತ್ತಿಪರತೆಯನ್ನು ಮೈಗೂಡಿಸಿಕೊಳ್ಳುತ್ತಿದ್ದ ಈ ಕಾಲದಲ್ಲಿಯೇ ನವ್ಯ ಚಳವಳಿಯ ಪ್ರಭಾವ ಕನ್ನಡ ನಾಟಕಗಳಿಗೂ ವ್ಯಾಪಿಸಿತು. ನವ್ಯ ಕಾವ್ಯದ ಜೊತೆಗಿದ್ದೂ ತಮ್ಮದೇ ವಿಶಿಷ್ಟ ಕಾವ್ಯಾಭಿವ್ಯಕ್ತಿಯನ್ನು ಸಾಧಿಸಿ ಕೊಂಡಿದ್ದ ನಿಸಾರರೂ ಈ ಎಪ್ಪತ್ತರ ದಶಕದಲ್ಲಿ ರಂಗಭೂಮಿ ಯತ್ತ ಆಕರ್ಷಿತವಾದದ್ದು ಆಕಸ್ಮಿಕವೇನಲ್ಲ. ಸ್ವತಂತ್ರ ನಾಟಕಗಳನ್ನೇ ರಚಿಸಬಹುದಾಗಿದ್ದ ಅವರು ಅನುವಾದಕ್ಕೆ ರಂಗಭೂಮಿಗೆ ಕೈಹಾಕಿದುದು ಆಶ್ಚರ್ಯವೆನ್ನಿಸಿದರೂ ಪರಿಣಾಮವಾಗಿ ಕನ್ನಡ ರಂಗಭೂಮಿಗೆ ಶ್ರೇಷ್ಠ ಷೇಕ್ಸ್‌ಪಿಯರ್ ಅನುವಾದಗಳು ದೊರೆತದ್ದು ಮಾತ್ರ ಉತ್ತೇಜನಕಾರಿ ಸಂಗತಿ ಯಾಗಿಯೇ ಉಳಿಯಿತು. ಆಡು ಮಾತಿನ ಲವಲವಿಕೆಯಿರುವ ಅವರ ಕಾವ್ಯ ಭಾಷೆ-ಚುರುಕುತನ, ವ್ಯಂಗ್ಯ ಹಾಗೂ ಸಾಮಾಜಿಕ ಕಳಕಳಿಯಿಂದಾಗಿ, ಸಮಕಾಲೀನ ಕಾವ್ಯ ಸಂದರ್ಭದಲ್ಲಿ ಅತ್ಯಂತ ಜನಪ್ರಿಯತೆಯನ್ನು ಗಳಿಸಿದುದು ಆಶ್ಚರ್ಯದ ವಿಚಾರವೇನೂ ಅಲ್ಲ. ಸಂಕೀರ್ಣತೆಯ ಹೆಸರಿನಲ್ಲಿ ಕ್ಲಿಷ್ಟವಾಗದೆ, ಓದುಗರನ್ನು ಆಪ್ತ ಸಂಭಾಷಣೆಗೆ ಎಳೆಯುವ ಗುಣ ಅವರ ಕವನಗಳ ಒಂದು ಮುಖ್ಯ ಲಕ್ಷಣವೆನ್ನಬಹುದಾಗಿದ್ದು ಉತ್ತಮ ನಾಟಕಕಾರನ

ಸಂವಾದ ಚಾತುರ್ಯ ಅಲ್ಲಿರುವುದರಿಂದ ಸಹಜವಾಗಿಯೇ ಅವರು ಮಾಡಿದ ನಾಟಕಾನುವಾದವೂ ರಂಗಭೂಮಿಯ ದೃಷ್ಟಿಯಿಂದಲೇ ಮೇಲ್ತರಗತಿಗೆ ಸೇರುತ್ತದೆ. ಅವರು ಅನುವಾದಿಸಿದ ಎರಡೂ ನಾಟಕಗಳು ಮುದ್ರಣಗೊಳ್ಳುವ ಮುನ್ನವೇ ಹತ್ತಾರು ರಂಗ ಪ್ರದರ್ಶನಗಳನ್ನು ಪಡೆದದ್ದು, ಈ ಅನುವಾದಗಳ ಮಹತ್ವವನ್ನು ಸೂಚಿಸುವುದರೊಂದಿಗೆ ಎಪ್ಪತ್ತರ ದಶಕದ ಕನ್ನಡ ರಂಗಭೂಮಿಯ ವೈಭವಕ್ಕೂ ಸಾಕ್ಷಿಯಾಗುತ್ತದೆ. ಮಾಸ್ತಿಯವರ 'ಕಾಕನ ಕೋಟೆ'ಯಂತಹ ಶ್ರೇಷ್ಠ ನಾಟಕವನ್ನು ಪ್ರಕಟವಾದ ಮೂರು ದಶಕಗಳ ಬಳಿಕ ರಂಗ ಪ್ರದರ್ಶನಕ್ಕೆ ಅಣಿಗೊಳಿಸಿದ ಬೆಂಗಳೂರಿನ ಜನಪ್ರಿಯ ರಂಗ ತಂಡವಾದ 'ನಟರಂಗ'ವೇ ನಿಸಾರರ ಷೇಕ್ಸ್‌ಪಿಯರ್ ಅನುವಾದಗಳನ್ನೂ ಮೊದಲು ರಂಗಭೂಮಿಗೆ ಸಮರ್ಪಿಸಿತು. 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕದ ಪ್ರದರ್ಶನವಂತೂ (೧೯೭೩) ಅಂದಿನ ಕಾಲದಲ್ಲಿ ಅತ್ಯಂತ ಯಶಸ್ವಿ ರಂಗ ಪ್ರಯೋಗವಾಗಿ ಪರಿಣಮಿಸಿ, ಹತ್ತಾರು ಪ್ರಯೋಗ ಗಳನ್ನು ದಕ್ಕಿಸಿಕೊಂಡಿತು. ಒಂದೆಡೆ ಗಿರೀಶ್ ಕಾರ್ನಾಡ್, ಲಂಕೇಶ್, ಕಂಬಾರರ ಸ್ವತಂತ್ರ ನಾಟಕಗಳು ರಂಗಭೂಮಿಯಲ್ಲಿ ಹೊಸ ಉತ್ಕರ್ಷವನ್ನು ಮೂಡಿಸುತ್ತಿದ್ದರೆ, ಅಷ್ಟೇ ಪರಿಣಾಮಕಾರಿಯಾಗಿ, ಅದೇ ಕಾಲದಲ್ಲಿ ನಿಸಾರರ ಷೇಕ್ಸ್‌ಪಿಯರ್ ಅನುವಾದಗಳೂ ರಂಗಭೂಮಿಗೆ ಹೊಸ ಭರವಸೆಯನ್ನು ತಂದುಕೊಟ್ಟವು. ಇಪ್ಪತ್ತೈದು ವರ್ಷಗಳ ಬಳಿಕ, 'ನಟರಂಗ'ವು ಅದೇ ತಂಡದ ಹಿರಿಯ ನಟರ ಮುಂದಿನ ತಲೆಮಾರಿನ ಯುವ ಕಲಾವಿದರನ್ನೇ ಆರಿಸಿಕೊಂಡು ಮತ್ತೊಮ್ಮೆ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕವನ್ನು (೧೯೯೮) ರಂಗ ಪ್ರಯೋಗಕ್ಕೆ ಅಣಿಗೊಳಿಸಿದ್ದು ರಂಗಭೂಮಿಯ ಚರಿತ್ರೆ ಯಲ್ಲಿ ದಾಖಲಾರ್ಹ ಸಂಗತಿಯಾಗಿದೆ. ಎರಡೂ ಸಂದರ್ಭದಲ್ಲಿ ಸಿ. ಆರ್. ಸಿಂಹ ಅವರೇ ನಿರ್ದೇಶಕರಾಗಿದ್ದರು. ಹೀಗೆ, ಒಂದು ನಾಟಕದ ಪ್ರದರ್ಶನ, ರಂಗ ತಂಡವೊಂದರ ರಜತ ಮಹೋತ್ಸವಾಚರಣೆಯ ಅಂಗವಾಗಿ ಮತ್ತೊಮ್ಮೆ ವಿಶಿಷ್ಟವಾದ ರೀತಿಯಲ್ಲಿ ಮರು ಪ್ರಯೋಗವಾದುದು ಒಂದು ಅಪೂರ್ವ ಸಂಗತಿ, ಎನ್ನಬಹುದಾದರೆ—ಅದಕ್ಕೆ ಇರುವ ಕಾರಣಗಳಲ್ಲಿ, ನಿಸಾರರ ಅದ್ಭುತ ಸೃಜನಶೀಲ ಅನುವಾದ ಪ್ರತಿಭೆಯೂ ಬಹು ಮುಖ್ಯವಾದ ವಿಚಾರವಾಯಿತೆಂಬುದು ಗಮನಾರ್ಹವಾಗುತ್ತದೆ.

ಮತ್ತೊಂದು ವಿಚಾರ: ಆಧುನಿಕ ಕನ್ನಡ ರಂಗಭೂಮಿಯ ಉತ್ಕರ್ಷದ ಕಾಲವಾಗಿದ್ದ ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ರಂಗ ತಂಡವೊಂದು ತನ್ನ ರಜತ ಮಹೋತ್ಸವಾಚರಣೆಗೆ ಷೇಕ್ಸ್‌ಪಿಯರ್ ನಾಟಕಾನುವಾದವನ್ನು ವಿಶಿಷ್ಟ ರೀತಿಯಲ್ಲಿ ಮರು ಪ್ರಯೋಗಿಸಲು ತೊಡಗಿದ ಸಂಗತಿ, ಕನ್ನಡಕ್ಕೂ ಷೇಕ್ಸ್‌ಪಿಯರ್‌ನಿಗೂ ಇರುವ ಗಾಢವಾದ ಸಂಬಂಧದ ದ್ಯೋತಕವೂ ಆಗುತ್ತದೆ. ಏಕೆಂದರೆ 'ನಟರಂಗ'ವು ಈ ಸಂದರ್ಭಕ್ಕೆ ತನ್ನ ತಂಡದ ಇನ್ನೊಂದು ಉಜ್ವಲ ರಂಗ ಕೃತಿಯಾಗಿದ್ದ 'ಕಾಕನ ಕೋಟೆ'ಯನ್ನು ಆಯ್ಕೆ ಮಾಡಿ ಕೊಳ್ಳದೆ ಷೇಕ್ಸ್‌ಪಿಯರ್ ಕೃತಿಯತ್ತ ಹೋದುದು, ಮಾಸ್ತಿಯವರಂತೆಯೇ ಷೇಕ್ಸ್‌ಪಿಯರ್ ಸಹ ನಮಗೆ ತೀರಾ ಪ್ರಸ್ತುತ ಎಂಬುದನ್ನು ಸ್ಪಷ್ಟಪಡಿಸಿದಂತಾಯಿತು. ಈ ಒಪ್ಪಿಕೊಳ್ಳುವಿಕೆಗೆ ಹಿನ್ನೆಲೆಯಾಗಿ ನೂರಿಪ್ಪತ್ತೈದು ವರ್ಷಗಳ ನಿಡಿದಾದ ಸಂಬಂಧ ನಮ್ಮ ರಂಗಭೂಮಿ

ಯೊಂದಿಗೆ ಷೇಕ್ಸ್‌ಪಿಯರನಿಗಿದೆ ಎಂಬುದೂ ಅತ್ಯಂತ ಮಹತ್ವದ ಸಂಗತಿಯಾಗುತ್ತದೆ. ವಸಾಹತುಶಾಹಿಯ ದುಷ್ಪರಿಣಾಮಗಳೇನೇ ಇರಲಿ, ಇಂಗ್ಲಿಷ್ ಭಾಷೆ ಮತ್ತು ಷೇಕ್ಸ್‌ಪಿಯರ್ ಕೃತಿಗಳು, ಭಾರತೀಯ ಸಂಸ್ಕೃತಿಯನ್ನು ಗಾಢವಾಗಿ ಪ್ರಭಾವಿಸಿದವೆಂಬುದನ್ನು, ತನ್ಮೂಲಕವಾಗಿ ಹೊಸ ಎಚ್ಚರವೊಂದು ನಮ್ಮ ಸಾಹಿತ್ಯ ಹಾಗೂ ರಂಗಭೂಮಿಯಲ್ಲಿ ಕಾಣಿಸಿಕೊಂಡಿತೆಂಬುದನ್ನು ಇಂದು ನಾವು ಸಂತೋಷದಿಂದ ಒಪ್ಪಿಕೊಳ್ಳಬಹುದಾಗಿದೆ.

ಷೇಕ್ಸ್‌ಪಿಯರ್‌ನನ್ನು ಮೊತ್ತಮೊದಲು ಕನ್ನಡಕ್ಕೆ ಅನುವಾದಿಸಿದ ಡೆಪ್ಯುಟಿ ಚೆನ್ನಬಸಪ್ಪನವರ 'ನಗದವರನ್ನು ನಗಿಸುವ ಕಥೆ' (ಕಾಮೆಡಿ ಆಫ್ ಎರರ್ಸ್) ೧೮೭೧ರಲ್ಲಿ ಮುದ್ರಣವಾಯಿತೆಂದು ಕಿಟ್ಟೆಲ್ ಹೇಳಿದ್ದಾರೆ. ನಿಸಾರ್ ಅವರು ಷೇಕ್ಸ್‌ಪಿಯರ್ ನಾಟಕಗಳನ್ನು ಅನುವಾದಿಸುವುದಕ್ಕೆ ಹಿನ್ನೆಲೆಯಾಗಿ ಕನ್ನಡದಲ್ಲಿ ಒಂದು ಶತಮಾನಕ್ಕೂ ಮೀರಿದ ಷೇಕ್ಸ್‌ಪಿಯರ್ ಅನುವಾದ ಪರಂಪರೆಯಿದೆ. ವಾಸ್ತವವಾಗಿ ಸ್ವತಂತ್ರ ಆಧುನಿಕ ಕನ್ನಡ ನಾಟಕ ಹುಟ್ಟುವ ಮುನ್ನವೇ ಕನ್ನಡ ರಂಗಭೂಮಿಗೆ ಷೇಕ್ಸ್‌ಪಿಯರ್ ಪ್ರವೇಶ ವಾಗಿತ್ತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ಹೊತ್ತಿಗೆ ಅವನ ಬಹು ಮುಖ್ಯ ನಾಟಕಗಳೆಲ್ಲ ಕನ್ನಡಕ್ಕೆ ಅನುವಾದಗೊಂಡಿದ್ದವು. ಈ ಸಂದರ್ಭದಲ್ಲಿಯೇ ವೃತ್ತಿ ರಂಗಭೂಮಿಗೂ ಷೇಕ್ಸ್‌ಪಿಯರ್ ಪ್ರವೇಶವಾಗಿದೆ. ಭಾರತೀಯ ಹಾಗೂ ಕನ್ನಡ ವೃತ್ತಿ ರಂಗಭೂಮಿ ಎರಡೂ ಷೇಕ್ಸ್‌ಪಿಯರ್ ರೂಪಾಂತರಗಳನ್ನು ಪ್ರಯೋಗಿಸಿವೆ. ನಮ್ಮ ಕಂಪನಿ ನಾಟಕಕಾರರ ಮೇಲೆ, ಅದರಲ್ಲೂ ವಿಶೇಷವಾಗಿ ಚಾರಿತ್ರಿಕ ವಸ್ತುವನ್ನು ನಿರ್ವಹಿಸಿದ ನಾಟಕಕಾರರ ಮೇಲೆ ಅವನ ಪ್ರಭಾವ ದಟ್ಟವಾದುದು. ಕಂದಗಲ್ ಹನುಮಂತರಾಯರನ್ನು ಕನ್ನಡದ ಷೇಕ್ಸ್‌ಪಿಯರ್ ಎಂದೇ ಕರೆಯಲಾಗುತ್ತಿತ್ತು. ಆಧುನಿಕ ನಾಟಕ ಪರಂಪರೆಯಂತೂ ಷೇಕ್ಸ್‌ಪಿಯರ್ ಪ್ರಭಾವಕ್ಕೆ ಆದಿಯಿಂದಲೂ ತೆರೆದುಕೊಂಡಿದೆ. ನಮ್ಮ ಶ್ರೇಷ್ಠ ಆಧುನಿಕ ನಾಟಕಕಾರರಾದ ಸಂಸ, ಕುವೆಂಪು, ಗಿರೀಶ್ ಕಾರ್ನಾಡರ ಚಾರಿತ್ರಿಕ ನಾಟಕಗಳ ವಸ್ತು ರಚನೆಯ ಮೇಲೆ ಷೇಕ್ಸ್‌ಪಿಯರನ ಪ್ರಭಾವವಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. ಹಾಗೆ ನೋಡಿದರೆ, ಕಾಳಿದಾಸನಿಗಿಂತ ಷೇಕ್ಸ್‌ಪಿಯರ್ ಕನ್ನಡಕ್ಕೆ ಹತ್ತಿರದವನಾಗಿದ್ದಾನೆ. ಸಾಂಸ್ಕೃತಿಕವಾಗಿ ಇದು ಅತ್ಯಂತ ಮಹತ್ವದ ವಿಚಾರ.

ಆಧುನಿಕಪೂರ್ವ ಕನ್ನಡ ರಂಗಭೂಮಿ ಷೇಕ್ಸ್‌ಪಿಯರ್‌ನನ್ನು ರೂಪಾಂತರಗಳ ಮೂಲಕ ಬರಮಾಡಿಕೊಳ್ಳುವುದು ಮತ್ತು ಆಧುನಿಕೋತ್ತರ ಸಂದರ್ಭದಲ್ಲಿ ಅನುವಾದಗಳೇ ಹೆಚ್ಚಾಗುತ್ತ ಹೋಗಿರುವುದು—ಇಲ್ಲಿ ಗಮನಿಸಬೇಕಾದ ವಿಚಾರವಾಗಿದೆ. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯವು ಭಾರತೀಯ ಸಮಾಜವನ್ನು ಗಾಢವಾಗಿ ವ್ಯಾಪಿಸಿದಂತೆ, ಷೇಕ್ಸ್‌ಪಿಯರ್ ನಾಟಕಗಳ ಜಗತ್ತು ನಮಗೆ ಅಪರಿಚಿತವೆನ್ನಿಸಲಿಲ್ಲವಾಗಿ ನೇರವಾಗಿ ಅನುವಾದದ ಮೂಲಕವೇ ಷೇಕ್ಸ್‌ಪಿಯರ್‌ನನ್ನು ನಾವು ಓದಲು ಮತ್ತು ರಂಗಭೂಮಿಯ ಮೇಲೆ ಕಾಣಲು ಸಾಧ್ಯವಾಯಿತು. ಈ ಪ್ರಕ್ರಿಯೆಯು ಸ್ವಾತಂತ್ರ್ಯೋತ್ತರ ಕಾಲದಲ್ಲಿಯೇ ವೇಗವನ್ನು ಪಡೆಯಿತೆಂಬುದು ಆಶ್ಚರ್ಯಕರ ಸಂಗತಿಯಾದರೂ ವಸ್ತುಸ್ಥಿತಿಯನ್ನು ಮರೆಮಾಚುವಂತಿಲ್ಲ. ಷೇಕ್ಸ್‌ಪಿಯರ್ ನಾಟಕಗಳು ಹತ್ತೊಂಬತ್ತನೆಯ ಶತಮಾನದ ಓದುಗ, ಪ್ರೇಕ್ಷಕರಿಗೆ ವಿದೇಶಿ ಎನ್ನಿಸುವುದರಿಂದ, ರೂಪಾಂತರಗಳಾದವು. ಸಮಕಾಲೀನ ಓದುಗ, ಪ್ರೇಕ್ಷಕರಿಗೆ ಷೇಕ್ಸ್

ಪಿಯರ್, ಖಂಡಿತಾ ವಿದೇಶಿ ನಾಟಕಕಾರನೆನ್ನಿಸುವುದಿಲ್ಲವಾದುದರಿಂದ ಅನುವಾದಗಳೇ ಹೆಚ್ಚಿನ ಪ್ರಮಾಣದಲ್ಲಿ ಇಂದಿಗೂ ನಡೆಯುತ್ತಿವೆ.

ಷೇಕ್ಸ್‌ಪಿಯರ್ ಅನುವಾದಗಳಲ್ಲಿಯೂ ತರತಮಗಳಿವೆ. ವಾಚ್ಯಾನುವಾದಗಳಂತೆ ಭಾವಾನುವಾದಗಳಿವೆ. ಮೂಲ ಕೃತಿಯನ್ನು ಪದಕ್ಕೆ ಪದವೆಂಬಂತೆ ಭಾಷಾಂತರಿಸಿ ರಂಗಪ್ರದರ್ಶನದ ದೃಷ್ಟಿಯಿಂದ ಅಥವಾ ಸಾಹಿತ್ಯದ ದೃಷ್ಟಿಯಿಂದ ನೀರಸ ಕೃತಿಗಳಿಗೆ ನವೋದಯ ಪರಂಪರೆಯ ಹಿರಿಯ ಸಾಹಿತಿಗಳೇ ಕಾರಣರಾಗಿರುವುದೂ ಉಂಟು. ನಮ್ಮ ನಾಡಿನ ಚಾರಿತ್ರಿಕ ಸಂದರ್ಭಗಳಿಗೆ ಹೊಂದಿಸಿ ಭಾವಾನುವಾದವೆಂಬಂತೆ ರೂಪಾಂತರಿಸಿ ದಾಗಲೂ ಗಮನಾರ್ಹವಾದ ಯಶಸ್ಸು ದೊರೆತಿಲ್ಲದಿರುವ ಉದಾಹರಣೆಗಳಿವೆ. ಎಪ್ಪತ್ತರ ದಶಕದವರೆಗೆ ಬಂದ ಷೇಕ್ಸ್‌ಪಿಯರ್ ನಾಟಕಾನುವಾದಗಳಲ್ಲಿ ಸೃಜನಶೀಲ ಸ್ವಾತಂತ್ರ್ಯದ ಅಭಾವ ಎದ್ದು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ನಿಸಾರ್ ಅವರ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಅನುವಾದವು ಕನ್ನಡ ಅನುವಾದ ಪರಂಪರೆಗೆ ಒಂದು ಹೊಸ ಚಾಲನೆ ನೀಡಿತೆಂಬುದು ಮಹತ್ವದ ವಿಚಾರವಾಗುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿಯೇ 'ಒಥೆಲೊ' ಹಾಗೂ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಕನ್ನಡಕ್ಕೆ ರೂಪಾಂತರ ಗೊಂಡಿವೆ. ಗುಂಡೋಕೃಷ್ಣ ಚುರುಮುರಿಯವರ 'ರಾಘವೇಂದ್ರ ರಾವ್ ನಾಟಕ' ಮತ್ತು ಬಸವಪ್ಪ ಶಾಸ್ತ್ರಿಗಳ 'ಶೂರಸೇನ ಚರಿತೆ', 'ಒಥೆಲೊ' ರೂಪಾಂತರಗಳು. ಅಂತೆಯೇ ಶ್ರೀಕಂಠೇಶಗೌಡರ 'ಪ್ರಮೀಳಾರ್ಜುನೀಯಂ', 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ರೂಪಾಂತರ. ಈ ಮೂರು ರೂಪಾಂತರಗಳು ತಮ್ಮದೇ ಆದ ವಿಶಿಷ್ಟ ಮಾದರಿಗಳಾಗಿ ಕನ್ನಡ ನಾಟಕ ಪರಂಪರೆಯಲ್ಲಿ ಉಳಿದಿವೆ. ಆದರೆ ಈ ಎರಡೂ ನಾಟಕಗಳ ಸೃಜನಶೀಲ ಅನುವಾದಗಳನ್ನು ಮೊತ್ತಮೊದಲು ಕನ್ನಡಕ್ಕೆ ನೀಡಿದ ಕೀರ್ತಿ ಮಾತ್ರ ನಿಸಾರ್ ಅಹಮದ್ ಅವರಿಗೆ ಸಲ್ಲುತ್ತದೆ. ವಾಸ್ತವವಾಗಿ ನಿಸಾರ್ ಅವರು ಷೇಕ್ಸ್‌ಪಿಯರ್‌ನನ್ನು ಅನುವಾದಿಸಿದ ತರುವಾಯ ಕನ್ನಡ ರಂಗಭೂಮಿಯಲ್ಲಿ ಶ್ರೇಷ್ಠ ಅನುವಾದಗಳ ಸುಗ್ಗಿಯೇ ಆರಂಭ ವಾಯಿತು. ಲಂಕೇಶರ ಸಾಪೋಕ್ಲಿಸ್ ನಾಟಕಗಳ ಅನುವಾದ, ರಾಮಚಂದ್ರ ದೇವ ಶಿವಪ್ರಕಾಶ್-ಕೆ. ಎಸ್. ಭಗವಾನ್ ಮುಂತಾದವರ ಷೇಕ್ಸ್‌ಪಿಯರ್ ಅನುವಾದಗಳೆಲ್ಲವೂ ನಿಸಾರ್ ತುಳಿದ ಹಾದಿಯನ್ನೇ ತುಳಿದವು. ಪದಕ್ಕೆ ಪದ ಎಂಬ ಭಾಷಾಂತರ ಕ್ರಮವನ್ನು ತ್ಯಜಿಸಿ, ಸಂವಾದದ ಒಂದು ಘಟಕವನ್ನು ಒಟ್ಟಾಗಿ ಪರಿಭಾವಿಸಿ, ಕನ್ನಡ ನುಡಿಗಟ್ಟಿಗೆ ಹೊಂದಿಸಿ ಕಾವ್ಯಾತ್ಮಕವಾಗಿ ಅನುವಾದಿಸುವ ಒಂದು ಪರಂಪರೆಯನ್ನೇ ನಿಸಾರರ ಷೇಕ್ಸ್‌ಪಿಯರ್ ನಾಟಕಾನುವಾದಗಳು ಆರಂಭಿಸಿದವೆಂದರೆ ಸ್ವಲ್ಪವೂ ಅತಿಶಯೋಕ್ತಿಯಾಗುವುದಿಲ್ಲ.

ಅನುವಾದಕ್ಕಾಗಿ ನಿಸಾರ್ ಅವರು ಆಯ್ಕೆ ಮಾಡಿಕೊಂಡ ಎರಡೂ ನಾಟಕಗಳು ಷೇಕ್ಸ್‌ಪಿಯರ್ ಕೃತಿ ಶ್ರೇಣಿಯಲ್ಲಿ ಅಪೂರ್ವ ಮಾದರಿಗೆ ಸೇರುವ ನಾಟಕಗಳು. ಒಂದು ಹರ್ಷ ನಾಟಕವಾದರೆ, ಮತ್ತೊಂದು ದುರಂತ ನಾಟಕ.

'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ರಂಗಭೂಮಿಯ ಮೇಲೆ ಸೃಷ್ಟಿಸುವ ಸರಸ

ಸಂತೋಷದ ಅದ್ಭುತ ರಮ್ಯ ಜಗತ್ತು ದೇಶ ಕಾಲಾತೀತವಾದುದು; ಎಂದೇ ಮಹಾಭಾರತದ ಅರ್ಜುನ ಪ್ರಮೀಳೆಯರ ಕಥೆಗೆ ಇದನ್ನು ಸಮನ್ವಯಗೊಳಿಸಿ ಶ್ರೀಕಂಠೇಶಗೌಡರು ರೂಪಾಂತರಿಸಿದರು; ಉಪಕಥಾನಕಗಳನ್ನು ಸಮಕಾಲೀನ ಸಮಾಜಕ್ಕೆ ಹತ್ತಿರವಾಗಿರುವಂತೆ ನೋಡಿಕೊಂಡರು. ನಿಸಾರ್ ಅವರು ವಸ್ತು ಪಾತ್ರಗಳ ಪರಿವರ್ತನೆಗೆ ಹೋಗದೆ ಕನ್ನಡಿಸಿದರೂ ಮೂಲದ ಸೊಬಗು ಮುಕ್ಕಾಗದೆ ನಮ್ಮ ಸಮಾಜಕ್ಕೆ ಹತ್ತಿರವಾಗಿ, ಪ್ರೇಕ್ಷಕರನ್ನು ರಂಜಿಸಿತು. ಭಾಷಾಪ್ರಯೋಗದ ತಾಜಾತನದಿಂದಲೇ ಅದು ಕನ್ನಡದ ಮನಸ್ಸುಗಳನ್ನು ಸೂರೆಗೊಳ್ಳುತ್ತದೆ. ಮೂಲ ನಾಟಕದ ಲವಲವಿಕೆ, ಉತ್ಸಾಹ, ಸ್ವಪ್ನಸದೃಶ ರಮ್ಯತೆಗಳೆಲ್ಲವನ್ನೂ ನಿಸಾರರ ಭಾಷೆಯ ಕಾವ್ಯಾತ್ಮಕ ಶೈಲಿ ಸಮರ್ಥವಾಗಿ ಪ್ರತಿಬಿಂಬಿಸಿದೆ. ಸಾಹಿತ್ಯ ಕೃತಿಯಾಗಿ ರಂಗಕೃತಿಯಾಗಿ ಅಸಾಧಾರಣ ಯಶಸ್ಸು ಪಡೆದ ನಾಟಕವಿದು. ಅಲ್ಲಿ ನಾಲ್ಕು ಜೋಡಿಗಳ ಪ್ರೇಮ ಕಥೆಯಿದೆ. ರಾಜ-ರಾಣಿ, ಮೇಲುವರ್ಗದ ಎರಡು ಯುವ ಜೋಡಿಗಳು, ಕಿನ್ನರ ಲೋಕಕ್ಕೆ ಸೇರಿದ ಒಂದು ಪ್ರೇಮಕಥಾನಕ. ಈ ನಾಲ್ಕೂ ಕಥಾನಕಗಳು ವೈವಿಧ್ಯಮಯವಾದ ಸರಸ ಸುಂದರ ಬದುಕನ್ನು ಚಿತ್ರಿಸಿದರೆ, ಐದನೆಯ ಕಥಾನಕವೊಂದು ಸಾಮಾನ್ಯ ವರ್ಗದ ಬದುಕಿನೊಂದಿಗೆ ನಾಟಕವನ್ನು ತಳುಕು ಹಾಕಿದೆ. ದುಡಿಯುವ ವರ್ಗದ ಸಾಮಾನ್ಯರು ತಮ್ಮ ರಾಜನ ಮದುವೆಯ ಸಂದರ್ಭಕ್ಕೆ ಆಡುವ ನಾಟಕವೊಂದರ ತಾಲೀಮು ಮತ್ತು ರಂಗಪ್ರದರ್ಶನ—ಒಟ್ಟಾರೆ ನಾಟಕಕ್ಕೇ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದೆ. ಐದೂ ಕಥಾನಕಗಳನ್ನು ಒಟ್ಟಿಗೆ ಸೇರಿಸಿ ಕಟ್ಟಿರುವ ರಚನಾವಿನ್ಯಾಸ ಅದ್ಭುತವಾದುದು. ಪ್ರಣಯದ ಸಂತೋಷ, ಅಗಲುವಿಕೆಯ ನೋವು, ಪ್ರಣಯ ತಿರಸ್ಕಾರ ದಿಂದ ನಿರಾಸೆ, ಸಾವಿನ ಅಂಚಿಗೆ ಹೋಗಿ ಹಿಂದಿರುಗುವ ಸಂದರ್ಭಗಳು, ಇವೆಲ್ಲವೂ ಬಹುರಂಜಕವಾಗಿ ನಾಟಕದ ನೆಯ್ಗೆಯಲ್ಲಿ ಹಾಸುಹೊಕ್ಕಾಗಿ ಬರುತ್ತವೆ. ಅಲ್ಲಿನ ಹಾಸ್ಯ, ಸನ್ನಿವೇಶ ಜನ್ಯವೇ ಹೊರತು ಮಾತಿನ ಚಮತ್ಕಾರದಿಂದ ಹುಟ್ಟುವುದಲ್ಲ. ಕಾವ್ಯ, ಸಂಗೀತ, ಅತಿಮಾನುಷ ಚಮತ್ಕಾರ—ಎಲ್ಲವೂ ಅಲ್ಲಿ ಸಮಾವೇಶಗೊಂಡಿವೆ. ಅನುವಾದಿಸಲು ಈ ನಾಟಕವನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕವೇ ನಿಸಾರರು ತಮ್ಮ ರಂಗಪ್ರಜ್ಞೆಯನ್ನು ಸಾಬೀತು ಗೊಳಿಸಿದ್ದಾರೆ. ಅವರ ಅನುವಾದದ ಸ್ವಾರಸ್ಯವನ್ನು ಪರಿಚಯಿಸಲು ಕೆಲವು ನಿದರ್ಶನಗಳನ್ನೇ ನೀಡಬೇಕಾಗುತ್ತದೆ.

ಮೊದಲನೆಯ ಅಂಕದ ಮೊದಲ ದೃಶ್ಯದಲ್ಲಿಯೇ ಹರ್ಮಿಯಳ ತಂದೆ ಈಗಿಯಸ್ ದೊರೆಯ ಬಳಿಗೆ ತನ್ನ ಮಗಳ ಮೇಲೆ ದೂರು ತಂದಿದ್ದಾನೆ: ತಾನು ಅವಳಿಗಾಗಿ ಆಯ್ಕೆ ಮಾಡಿದ್ದ ವರನನ್ನು ಆಕೆ ತಿರಸ್ಕರಿಸಿ, ಲೈಸಾಂಡರ್ ಎಂಬ ಬೇರೆ ಯುವಕನೊಂದಿಗೆ ಅವಳಿಗೆ ಪ್ರೇಮವಿದೆ, ಎಂದು ದೂರುತ್ತಾನೆ. ದೊರೆ ಥೀಸಿಯಸ್ ವಿಚಾರಣೆ ನಡೆಸುತ್ತಾನೆ. ಹರ್ಮಿಯಳಾದರೋ ದಿಟ್ಟವಾಗಿ ವಿನಯಪೂರ್ವಕವಾಗಿ ಉತ್ತರಿಸುತ್ತಾಳೆ. ತಾನು ತನ್ನ ಪ್ರೇಮದ ಸಲುವಾಗಿ ಯಾವ ಶಿಕ್ಷೆಯನ್ನು ಬೇಕಾದರೂ ಅನುಭವಿಸಲು ಸಿದ್ಧವೆನ್ನುತ್ತಾಳೆ. 'ಡೆಮಿಟ್ರಿಯಸ್‌ನ ಜೊತೆ ಲಗ್ನಕ್ಕೊಪ್ಪದಿದ್ದರೆ, ಅತಿ ಘೋರ ಶಿಕ್ಷೆ ಯಾವುದು?'—ಎಂದು ದೊರೆಯನ್ನು ಕೇಳುತ್ತಾಳೆ. ಅದಕ್ಕೆ ರಾಜನ ಉತ್ತರ ಹೀಗಿದೆ:

'Either to die the death, or to abjure
For ever the society of men.
Therefore, fair Hermia, Question your desires;
Know of your youth, examine well your blood.
Whether, if you yield not to your father's choice,
You can endure the livery of a nun,
For aye to be shady cloister mew'd,
To live a barren sister all your life,
Chanting faint hymns to the cold fruitless moon.
Thrice blessed they, that master so their blood
To undergo such maiden pilgrimage:
But carthlier happy is the rose distill'd
Than that which, withering on the virgin thorn,
Grows, lives and dies in single blessedness.'

ನಿಸಾರರ ಅನವಾದ ಹೀಗಿದೆ:

'ಮರಣ ದಂಡನೆ ಅಥವಾ ಎಲ್ಲ ಕಾಲಕ್ಕೂ
ಪುರುಷ ಸಮಾಜದಿಂದ ಬಹಿಷ್ಕಾರ.
ಎಂದೇ, ಚೆಲುವೆ ಹರ್ಮಿಯ, ನಿನ್ನಾಸೆಗಳ ಪ್ರಶ್ನಿಸು;
ಯೌವನವನ್ನ ವಿಚಾರಕ್ಕೆ ಗುರಿಪಡಿಸು; ಸಹಜ ಕಾಮನೆಗಳ
ಚೆನ್ನಾಗಿ ಪರೀಕ್ಷಿಸು. ತಂದೆಯಾಯ್ಕೆಗೆ ಬಾಗದಿದ್ದರೆ,
ಜೋಗಿತಿಯಂತೆ ಶ್ವೇತಾಂಬರವನ್ನೊಪ್ಪಬೇಕಾದೀತು;
ಹೌದು, ಕಗ್ಗತ್ತಲಿನ ಕೋಣೆಯಲ್ಲಿ ಮುಗ್ಗಿ
ಬಂಜೆ ಕನ್ಯೆತನಕ್ಕೆ ಇಡೀ ಬಾಳ ವ್ಯಯಿಸಬೇಕಾದೀತು—
ನಿಷ್ಫಲ, ಶೀತಲ, ಯೌವನದೇವತೆ ಡಯಾನಳೆದುರು
ಸಪ್ಪೆ ಮಂತ್ರಗಳ ವಟಗುಟ್ಟುತ್ತ.
ಚಿತ್ತವೃತ್ತಿಗಳ ಪಳಗಿಸಿ ಕನ್ಯೆಯಾಗಿಯೇ
ಜೀವನ ಯಾತ್ರೆ ಮುಗಿಸುವವರು ಮಹಾಪುಣ್ಯವಂತರೆ ನಿಜ;—
ಆದರೂ, ಬಳ್ಳಿಯ ಮುಳ್ಳಿನೊಂಟಿತನದಲ್ಲಿ
ಬೆಳೆದು, ಅರಳಿ, ದಳವುದುರಿ ಮಣ್ಣೂಡುವುದಕಿಂತ
ಹಿಡಿದ ಕೈಗಳಿಗೆ ಸುವಾಸನೆ ಮೆತ್ತಿ,
ನಲುಗಿ ಬದುಕುವ ಗುಲಾಬಿಯ ಬಾಳ್ವೆ ಹೆಚ್ಚು ಅರ್ಥಪೂರ್ಣ.'

ಮೂಲದಲ್ಲಿರುವ ಸಾಲುಗಳನ್ನು ಮರೆತು ನೋಡಿದರೆ, ಕನ್ನಡ ನಾಟಕವೊಂದರ ಕಾವ್ಯಮಯ ಸಂವಾದದ ತುಣುಕಿನಂತೆ ಗೋಚರಿಸುವ ಈ ಅನುವಾದವನ್ನು ಮೂಲದೊಂದಿಗೆ ಹೋಲಿಸಿದಾಗ ಅದರ ಅಪೂರ್ವ ಸೃಜನಶೀಲತೆ ಕಾಣಿಸುತ್ತದೆ. ಸಂಭಾಷಣೆಯ ಇಡೀ ಘಟಕವನ್ನೇ ಒಟ್ಟಾಗಿ ಹಿಡಿದು ಅನುವಾದಿಸಿರುವುದರಿಂದ ಕನ್ನಡ ಭಾಷೆಯ

ಜಾಯಮಾನಕ್ಕೆ ಸಹಜವಾಗಿ ಈ ಸಂವಾದವು ಹೊಂದಿಕೊಂಡಿದೆ. ಜೋಗಿತಿ, ಶ್ವೇತಾಂಬರ, ಮುಗ್ಗಿ, ಸಪ್ಪೆ ಮಂತ್ರಗಳ ವಟಗುಟ್ಟುತ್ತ, ಚಿತ್ತವೃತ್ತಿಗಳ ಪಳಗಿಸಿ ಎಂಬಂತಹ ಪ್ರಯೋಗ ಗಳ ಸ್ವಂತಿಕೆಯು ಮೂಲವನ್ನು ಸಾರ್ಥಕವಾಗಿ ಹಿಡಿದಿಡುತ್ತದೆ. ಪದಶಃ ಅನುವಾದಕ್ಕೂ ಈ ಬಗೆಯ ಸೃಜನಾತ್ಮಕ ಅನುವಾದಕ್ಕೂ ಇರುವ ವ್ಯತ್ಯಾಸಕ್ಕೆ ನಿದರ್ಶನವಾಗಿ ಈ ನಾಟಕ ದುದ್ದಕ್ಕೂ ಇಂತಹ ಹಲವಾರು ಸಂವಾದ ಭಾಗಗಳನ್ನು ಉಲ್ಲೇಖಿಸಲು ಸಾಧ್ಯವಿದೆ. ಸಾಂಸ್ಕೃತಿಕ ನುಡಿಗಟ್ಟುಗಳು ಮಾತ್ರವಲ್ಲ, ನಿಸರ್ಗ ಚಿತ್ರವೊಂದನ್ನು ನೀಡುವಾಗಲೂ ಮೂಲ ವನ್ನು ಕಾವ್ಯಮಯವಾಗಿ ಉಜ್ವಲಗೊಳಿಸಿರುವುದಕ್ಕೆ ಉದಾಹರಣೆಯಾಗಿ ಮೇಲೆ ಉಲ್ಲೇಖಿಸಿರುವ ಸಂವಾದ ಭಾಗದ ಕೊನೆಯ ನಾಲ್ಕು ಸಾಲುಗಳನ್ನು ಪರಿಭಾವಿಸಬೇಕು.

ಅಂಕ ಒಂದು, ದೃಶ್ಯ ಎರಡರ ಆರಂಭದಲ್ಲಿಯೇ ಅಥೆನ್ಸ್ ನಗರದ ಕಾರ್ಮಿಕ ವರ್ಗದವರು ನಡೆಸುತ್ತಿರುವ ನಾಟಕವೊಂದರ ತಾಲೀಮಿನ ಸಂದರ್ಭದ ಸಹಜ ಸ್ವಾರಸ್ಯ ವನ್ನು ಈಗ ನೋಡಬಹುದಾಗಿದೆ. ಮೂಲದೊಂದಿಗೆ ಹೋಲಿಸುವುದು ಅನಗತ್ಯವೆಂಬಂತೆ ಈ ಸಂವಾದವು ಕನ್ನಡ ಆಡುಮಾತಿಗೆ ಬಹು ಚೆನ್ನಾಗಿ ಹೊಂದಿಕೊಂಡು ಬಿಟ್ಟಿದೆ:

ಕ್ವಿನ್ಸ್ : ಏನ್ರಪ್ಪ, ಎಲ್ಲ ಬಂದಿದೀರೊ?

ಬಾಟಮ್ : ಪಟ್ಟಿ ಪ್ರಕಾರ ಒಬ್ಬೊಬ್ರನ್ನೂ ಕರೆಯೋದೆ ವಾಸಿ ಅಂತ ಕಾಣುತ್ತೆ.

ಕ್ವಿನ್ಸ್ : ಎಲ್ರ ಹೆಸರು ಇರೋ ಪಟ್ಟಿ ಇಲ್ಲಿದೆ. ನಮ್ಮ ಅರಸನ ಮದುವೆಯ ರಾತ್ರಿ ನಾವು ಆಡುವ ನಾಟಕಕ್ಕೋಸ್ಕರ ನಾನು ತಯಾರಿಸಿರೋ ಪಟ್ಟೀನ ಸರಿಯಾಗಿಲ್ಲ ಅಂತ ಇಡೀ ಅಥೆನ್ಸಿನಲ್ಲಿ ಯಾರಿಗೆ ದಮ್ಮಿದೆ ಹೇಳೋಕೆ?

ಬಾಟಮ್ : ಅದ್ಸರಿ, ಪೀಟರ್ ಕ್ವಿನ್ಸ್, ಇದನ್ಹೇಳು: ನಮ್ಮ ನಾಟಕದ ಕಥೆ ಏನೂಂತ? ಅನಂತರ ನಟರ ಹೆಸರನ್ನೋದು. ಆಮೇಲೆ ಒಂದು ನಿರ್ಧಾರಕ್ಕೆ ಬರೋಣ.

ಕ್ವಿನ್ಸ್ : ಸ್ವಲ್ಪದರಲ್ಲೇ ಹೇಳಬೇಕೂಂದ್ರೆ ಅದು ಅತ್ಯಂತ ದುಃಖಾಂತ ನಗೆ-ನಾಟಕ: ಪಿರಮಸ್ ಮತ್ತು ಥಿಸ್ಬಿಯ ಕ್ರೂರ ಮರಣಕ್ಕೆ ಸಂಬಂಧಿಸಿದ್ದು.

ಬಾಟಮ್ : ಹಾಗಾದ್ರೆ ಅದು ಬಹಳ ಒಳ್ಳೆಯ ನಾಟ್ಕಾನೇ ಇರಬೇಕು. ಜೊತೆಗೆ ತುಂಬಾ ದಿಲ್ಲಗೀನೂ ಕೊಡಬಹುದು. ಕ್ವಿನ್ಸ್ ಮಹಾಶಯರೇ, ನಟರ ಹೆಸರನ್ನು ಓದುವಂಥವರಾಗಿ. ನಟಸಾರ್ವಭೌಮರೇ ಸಾಲಾಗಿ ನಿಲ್ಲಿ.

ದಿನನಿತ್ಯದ ಆಡುಮಾತನ್ನು ಬಳಸಿರುವ ಈ ಕನ್ನಡ ಸಂವಾದದ ಪಾತ್ರಗಳ ಹೆಸರನ್ನು ನಮ್ಮ ಪರಿಸರಕ್ಕೆ ರೂಪಾಂತರಿಸಿ ಓದಿಕೊಂಡರೆ, ಷೇಕ್ಸ್‌ಪಿಯರಿನ ನೆನಪೂ ಗೋಚರಿಸು ವುದಿಲ್ಲ. ನಮ್ಮದೇ ಒಂದು ಹಾಸ್ಯ ನಾಟಕವೆಂಬಂತಿದೆ. ಇಲ್ಲಿ ರೂಪಾಂತರಕ್ಕೂ ಅನುವಾದಕ್ಕೂ ಇರುವ ವ್ಯತ್ಯಾಸ ಸಂಪೂರ್ಣವಾಗಿ ಮಾಯವಾಗಿದೆ. ಪಟ್ಟಿ, ದಮ್ಮಿದೆ, ದಿಲ್ಲಗಿ, ಓದುವಂಥವರಾಗಿ, ನಟಸಾರ್ವಭೌಮರೇ—ಈ ಮುಂತಾದ ಪದಪ್ರಯೋಗ, ಅನುವಾದಕರಿಗಿರುವ ತಾಜಾ ಆಡುಮಾತಿನ ಪರಿಚಯದ ಸ್ವರೂಪವನ್ನು ಎತ್ತಿ ತೋರಿಸು

ತ್ತದೆ. ಶ್ರೀಕಂಠೇಶಗೌಡರು ರೂಪಾಂತರಿಸಿದಾಗಲೂ ಇದಕ್ಕಿಂತ ಭಿನ್ನವಾದ ವಿಶಿಷ್ಟ ಸಹಜ ಶೈಲಿಯನ್ನೇನೂ ತಂದಿಲ್ಲ. ಅನುವಾದವಿರಲಿ, ರೂಪಾಂತರವಿರಲಿ, ಈ ಕಾರ್ಯಕ್ಕೆ ತೊಡಗಿಸಿ ಕೊಂಡ ಲೇಖಕನು ಬದುಕಿಗೆ ಹತ್ತಿರವಾಗಿದ್ದು, ಜನಬಳಕೆಯ ಮಾತನ್ನು ಕಣ್ಣಿಟ್ಟು ಗುರುತಿಸುವ ಪ್ರತಿಭೆ ಉಳ್ಳವನಾಗಿರಬೇಕೆಂಬುದೇ ಮುಖ್ಯ ಸಂಗತಿಯೆನ್ನಬಹುದಾಗಿದೆ.

ಮೂಲ ನಾಟಕದೊಂದಿಗೆ ಅನುವಾದವನ್ನು ಹೋಲಿಸಲು ಹಾಸ್ಯ ಸನ್ನಿವೇಶದ ಮತ್ತೊಂದು ಸಂದರ್ಭವನ್ನು ತೆಗೆದುಕೊಳ್ಳಬಹುದು: ಮೂರನೆಯ ಅಂಕದ ಮೊದಲ ದೃಶ್ಯದಲ್ಲಿ ಬಾಟಮ್‌ನಿಗೆ ಕತ್ತೆಯ ತಲೆಯನ್ನು ಕಿನ್ನರ ಪುರುಷ ಪಕ್ ಜೋಡಿಸಿದ ಸಂದರ್ಭವಿದು. ತನ್ನಲ್ಲಿ ಆಗಿರುವ ವ್ಯತ್ಯಾಸ ದೈಹಿಕವಾಗಿ ಬಾಟಮ್‌ನ ಅರಿವಿಗೆ ಬಂದಿಲ್ಲ; ಆದರೆ ಅವನ ಸ್ನೇಹಿತರು ಇದನ್ನು ನೋಡಿ ದಿಗ್ಭ್ರಮೆಗೊಂಡಿರುತ್ತಾರೆ. ಅವರು ಅದನ್ನು ಅಸ್ಪಷ್ಟವಾಗಿ ತಿಳಿಸಲು ಯತ್ನಿಸಿದರೆ ಬಾಟಮ್ ಅವರನ್ನು ತಪ್ಪು ತಿಳಿಯುತ್ತಾನೆ. ಪರೀಕ್ಷೆ ಮಾಡಿಕೊಳ್ಳದೆ ಉಡಾಫೆಯಿಂದ ತಳ್ಳಿ ಹಾಕುತ್ತಾನೆ.

ಮೂಲ ನಾಟಕದ ಸಂವಾದ ಭಾಗ ಹೀಗಿದೆ:

(Re-enter Snout)

Snout : O Bottom! Thou art chang'd; what do I see on thee? (Exit)

Bottom : What do you see? You see an ass-head of your own, do you?

(Re-enter Quince)

Quince : Bles thee, Bottom! Bless thee! Thou art translated. (Exit)

Bottom : I see their Knavery. This is to make an ass of me, to fright me, if they could. But I will not stir from this place, do what they can. I will walk up and down here, and I will sing, that they shall hear I am not afraid (sings)

The ousel cock, so black of hue
with orange tawncy bill
The throstle with his note so true,
The wren with little quill.'

ನಿಸಾರ್ ಅವರ ಕನ್ನಡಾನುವಾದವನ್ನು ನೋಡೋಣ:

(ಸ್ನೌಟ್ ಮರು ಪ್ರವೇಶ)

ಸ್ನೌಟ್ : ಅಯ್ಯೋ ಬಾಟಮ್! ನೀನು ಬದಲಾಗಿದೀಯ! ನಿನ್ನ ಕುತ್ತಿಗೆಯ ಮೇಲೆ ನಾನು ನೋಡ್ತಿರೋದು ಏನು?

(ನಿರ್ಗಮಿಸುತ್ತಾನೆ)

ಬಾಟಮ್ : ಏನು ನೋಡ್ತಿದೀಯ? ಆ ನಿನ್ನ ಕತ್ತೆಯಂಥ ದರಿದ್ರ ತಲೇನ ನೋಡ್ತಿರಬೇಕು, ಅಲ್ವೆ? (ಸ್ನೌಟ್ ನಿಷ್ಕ್ರಮಣ)

(ಕ್ವಿನ್ಸ್ ಮರು ಪ್ರವೇಶ)

ಕ್ವಿನ್ಸ್ : ದೇವ್ರು ಕಾಪಾಡ್ಬೇಕು ಬಾಟಮ್, ನಿನ್ನನ್ನು ದೇವ್ರೇ ಕಾಪಾಡ್ಬೇಕು! ನೀನು ಬದಲಾಯಿಸಿ ಹೋಗಿದೀಯ. (ಕ್ವಿನ್ಸ್ ನಿಷ್ಕ್ರಮಣ)

ಬಾಟಮ್ : ಓಹೋ! ಅವರ ಕುತಂತ್ರ ಈಗ ಸ್ಪಷ್ಟವಾಗಿ ಅರ್ಥವಾಯ್ತು. ನನ್ನನ್ನು ತಮಾಷೆ ಮಾಡಿ, ಪೆಕ್ರ ಪೆಕ್ರವಾಗಿ ಒಳ್ಳೇ ಕತ್ತೆ ಥರ ಆಡೋ ಹಾಗೆ ಮಾಡಿ ಖುಷಿ ಪಡೋಕೆ: ಸಾಧ್ಯವಾದರೆ ನನ್ನನ್ನ ದಿಗಿಲಿಕ್ಕಿಸಿ ಇಲ್ಲಿಂದ ಓಡಿಸೋಕೆ ಈ ಮುಂಡೆ ಗಂಡ್ರೆಲ್ಲಾ ಸೇರಿ ಹೂಡಿರೋ ಹಿಕ್ಮತ್ತಿದು. ನೋಡೇ ಬಿಡ್ತೀನಿ ನಾನೂ, ಅದ್ಹೇಗೆ ಹೆದರಿಸಿ ಓಡಿಸ್ತಾರೋ ಅಂತ. ಜಪ್ಪಯ್ಯಾಂದ್ರು ಈ ಜಾಗ ಬಿಟ್ಟು ಕದ್ಲೊಲ್ಲ. ಇಲ್ಲೇ ಶತಪಥ ಹಾಕ್ತೀನಿ. ನನಗೆ ಒಂದು ಚೂರೂ ಭಯವಿಲ್ಲಾಂತ ಅವರಿಗೆ ಮನದಟ್ಟು ಆಗೋ ಹಾಗೆ ಜೋರಾಗಿ ಹಾಡ್ತೀನಿ:

ಮಬ್ಬಿನ ಬಣ್ಣದ ಕಾಡಿನ ಹಕ್ಕಿ
ತೆರೆಯಿತು ತಾಂಬೂಲದ ಬಾಯಿ;
ಕಬ್ಬಿಣ ಕಂಠದ ತಿಜೋರಿ ಒಡೆಯಿತು
ಸುರಿದವು ಇನಿ ದನಿ ರೂಪಾಯಿ.'

ಅನುವಾದದ ಸಹಜ ರಮ್ಯತೆಗೆ ಇದಕ್ಕಿಂತ ಉತ್ತಮ ನಿದರ್ಶನ ಕೊಡಲು ನಿಸಾರರ ಇದೇ ನಾಟಕದ ಇತರ ಹಲವು ಸಾಲುಗಳನ್ನೇ ಉಲ್ಲೇಖಿಸಬೇಕಾಗಬಹುದು. ಮೇಲೆ ಉಲ್ಲೇಖಿಸಿರುವ ಸಂವಾದದ ಕಾವ್ಯಾತ್ಮಕವಾದ ಕೊನೆಯ ನಾಲ್ಕು ಸಾಲುಗಳು ಮೂಲಕ್ಕಿಂತ ಅನುವಾದದಲ್ಲಿಯೇ ಹೆಚ್ಚು ರಂಜಕವಾಗಿರುವುದನ್ನು ನೋಡಬಹುದು. ಇನ್ನು ಬಾಟಮ್ ಮಾತಿನಲ್ಲಿ ಬಳಕೆಯಾಗಿರುವ ಶಬ್ದ ಸಂಪತ್ತು ನಮ್ಮ ಸುತ್ತಣ ಸಮಾಜದ ಆಡು ಮಾತಿನಿಂದಲೇ ಹೆಕ್ಕಿಕೊಂಡಿರುವಂತಹುದು. ಕುತಂತ್ರ, ಪೆಕ್ರ ಪೆಕ್ರವಾಗಿ, ಖುಷಿ ಪಡೋಕೆ, ದಿಗಿಲಿಕ್ಕಿಸಿ, ಈ ಮುಂಡೆಗಂಡ್ರೆಲ್ಲಾ ಸೇರಿ, ಹೂಡಿರೋ ಹಿಕ್ಮತ್ತಿದು, ಜಪ್ಪಯ್ಯಾಂದ್ರು ಈ ಜಾಗ ಬಿಟ್ಟು ಕದಲೊಲ್ಲ—ಮುಂತಾದ ಪದ ಪುಂಜಗಳು ರಂಗ ಕೃತಿಯನ್ನು ಪ್ರೇಕ್ಷಕರಿಗೆ ಆತ್ಮೀಯಗೊಳಿಸಿಬಿಡುತ್ತವೆ. ನವೋದಯ ಸಂದರ್ಭದ ಅನುವಾದಕರಿಗೆ ಈ ಬಗೆಯ ಜನ ಬಳಕೆಯ ಶಬ್ದಸಂಪತ್ತು ಪರಿಚಯವಿರಲಿಲ್ಲವೆಂದೇನೂ ಅಲ್ಲ. ಆದರೆ ಅವರ ದೃಷ್ಟಿ ಪ್ರೇಕ್ಷಕರಿಗಿಂತ ಸಾಹಿತ್ಯವನ್ನು ಓದುವ ಮಧ್ಯಮ ವರ್ಗದವರ ಮೇಲೆ ಇತ್ತು. ಜನ ಭಾಷೆಗಿಂತ ಸಾಹಿತ್ಯ ಭಾಷೆ ಬಳಸಿದರೆ ತಮ್ಮ ಕೃತಿಯು ಮೂಲಕ್ಕೆ ಹೆಚ್ಚು ನಿಷ್ಠವಾಗಿರಲು ಸಾಧ್ಯವೆಂಬ ನಂಬಿಕೆ ಇತ್ತು. ಪಾತ್ರ ಸ್ವಭಾವ, ಅದರ ಸಾಮಾಜಿಕ ನೆಲೆ ಮತ್ತು ನಾಟಕದಲ್ಲಿ ನಿರ್ದಿಷ್ಟ ಸಂವಾದದ ಭಾವನಾತ್ಮಕ ಸನ್ನಿವೇಶ—ಇದೆಲ್ಲವನ್ನೂ ಗಮನದಲ್ಲಿರಿಸಿಕೊಂಡು,

ಸೂಕ್ತ ಭಾಷಾ ಪ್ರಯೋಗವನ್ನು ಅನುವಾದಿಸುವವರು ಕಂಡುಕೊಳ್ಳಬೇಕಾಗುತ್ತದೆ. ಪಾಂಡಿತ್ಯಕ್ಕಿಂತ ಪ್ರತಿಭೆಯನ್ನು ನಂಬಿದವರಿಗೆ ಇದೆಲ್ಲ ಹೊಳೆಯಬಹುದು. ನಿಸಾರ್ ಅವರ ಅನುವಾದ ಎರಡನೆಯ ಮಾದರಿಗೆ ಸೇರಿದೆ.

ನಿಸಾರರ ಕಾವ್ಯ ಪ್ರತಿಭೆ ಷೇಕ್ಸ್‌ಪಿಯರ್‌ನ ನಾಟಕಗಳ ಅನುವಾದದಲ್ಲಿ ಇಮ್ಮಡಿ ಕಾಂತಿಯುಕ್ತವಾಗಿ ಬೆಳಗಿರುವುದಕ್ಕೆ ಹಲವು ನಿದರ್ಶನಗಳನ್ನು ಉಲ್ಲೇಖಿಸಬಹುದಾದರೂ ಪ್ರಾಸಾನುಪ್ರಾಸಗಳನ್ನು ಅಳವಡಿಸಿದಾಗ ರಂಗಭೂಮಿಯ ಅಗತ್ಯಕ್ಕೆ ಹೆಚ್ಚು ಸೂಕ್ತವಾಗುವುದ ರಿಂದ ಅಂತಹ ಒಂದು ಉದಾಹರಣೆ ನೀಡಿ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನೆಲೆಯ ಪಾತ್ರಗಳ ಪ್ರಸ್ತಾಪವನ್ನು ಮುಗಿಸಬಹುದಾಗಿದೆ. ನಾಟಕದ ಅತಿ ಮಾನುಷ ನೆಲೆಯ ಪಾತ್ರಗಳ ಸಂವಾದದ ಸಾಲುಗಳಿವು:

ಪಕ್ : ಕಿನ್ನರಿ, ಬಂದುದೇಕಿಲ್ಲಿ? ಮತ್ತೆಲ್ಲಿ ಪಯಣ?

ಯಕ್ಷಿಣಿ : ಗಿರಿಗಳಲ್ಲಿ ದರಿಗಳಲ್ಲಿ
ಪೊದೆಗಳಲ್ಲಿ ಮೆದೆಗಳಲ್ಲಿ
ಕ್ರೀಡಾವನ ಬೇಲಿಗಳಲಿ
ಮಹಾಪೂರ, ಜ್ವಾಲೆಗಳಲಿ
ಎಲ್ಲೆಂದರೆ ಅಲ್ಲಿ, ಅಲೆಯ—
ಬಲ್ಲ ಸುರಾ ಬಾಲಕಿ;
ಯಕ್ಷರಾಣಿ ಸೇವಕಿ.
....
....

'ಒಥೆಲೊ', ಷೇಕ್ಸ್‌ಪಿಯರ್‌ನ ನಾಲ್ಕು ಶ್ರೇಷ್ಠ ದುರಂತ ನಾಟಕಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ಕೃತಿ. ಜನಾಂಗ ಸಂಘರ್ಷ, ಹೆಣ್ಣು ಗಂಡುಗಳ ಪ್ರೇಮ ಮಾತ್ಸರ್ಯ, ಅಧಿಕಾರ ಕೇಂದ್ರಿತ ಸಂಚುಗಳು—ಇವೆಲ್ಲವನ್ನೂ ಈ ನಾಟಕದ ತೆಕ್ಕೆಯಲ್ಲಿ ಒಗ್ಗೂಡಿಸಿ ವಿಶ್ಲೇಷಿಸಿರುವ ಷೇಕ್ಸ್‌ಪಿಯರ್‌ನ ಪಾತ್ರ ಜಗತ್ತಿನಲ್ಲಿ, ಈ ನಾಟಕದ ಇಯಾಗೊ ಒಂದು ಅದ್ಭುತ ಸೃಷ್ಟಿಯೆನ್ನಬಹುದು. ಮಹಾಭಾರತದ ಶಕುನಿಯನ್ನು ಸ್ವಲ್ಪಮಟ್ಟಿಗೆ ಹೋಲುವುದಾದರೂ ಇದೊಂದು ಅಸಮಾನ ಪಾತ್ರವೆಂದು ವಿಮರ್ಶಕರು ಭಾವಿಸಿದ್ದಾರೆ. ಅಧಿಕಾರ ವಂಚಿತನಾದುದರಿಂದ ಅದಕ್ಕೆ ಕಾರಣನಾದ ಒಥೆಲೊನ ಮೇಲೆ ಇಯಾಗೊ ಸೇಡು ತೀರಿಸಿಕೊಳ್ಳಲು ಉದ್ಯುಕ್ತನಾದನೆಂಬುದು ತೀರಾ ಸರಳವಾದ ತೀರ್ಮಾನವಾಗುತ್ತದೆ. ಇಯಾಗೊ ಸ್ವತಃ ಹೀಗೆ ಹೇಳಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. ಅವನ ಸೇಡಿಗೆ ಇನ್ನೂ ಆಳವಾದ ಕಾರಣಗಳಿವೆ. ಅದರಲ್ಲಿ ಜನಾಂಗ ದ್ವೇಷವೂ ಸೇರಿದೆ. ಅದೆಲ್ಲಕ್ಕೂ ಮಿಗಿಲಾಗಿ ಅವನೊಬ್ಬ ದುಷ್ಟ, ಕುತಂತ್ರಿ, ಕೇಡಿನ ಸಾಕಾರ ಮೂರ್ತಿ. ಜನರ ದೌರ್ಬಲ್ಯವನ್ನು ಬಂಡವಾಳವಾಗಿಸಿಕೊಂಡು ಅವರ ಭಾವನೆಗಳೊಂದಿಗೆ ಚೆಲ್ಲಾಟವಾಡುವ

ಇಂತಹ ಕೊಳಕು ಚಾಡಿಕೋರನನ್ನು ಸೃಷ್ಟಿಸಲು ಬಯಸುವ ನಾಟಕಕಾರನಿಗೆ ಮನುಷ್ಯ ಸ್ವಭಾವದ ಗಾಢವಾದ ಪರಿಚಯವಿರಬೇಕಾಗುತ್ತದೆ. ಆತ್ಮಸಾಕ್ಷಿಯೇ ಇಲ್ಲದ ಈ ಹೀನನಿಗೆ ಬಲಿಯಾಗುವ ಒಥೆಲೊ, ಶೂರನಾಗಿದ್ದರೂ ಆತ್ಮವಿಶ್ವಾಸವಿಲ್ಲದವನು. ಕೀಳರಿಮೆ ಸದಾ ಅವನನ್ನು ಬಾಧಿಸುತ್ತಿರುತ್ತದೆ. ತನ್ನ ಹುಟ್ಟಿನ ಬಗೆಗೆ, ಮೈ ಬಣ್ಣದ ಬಗೆಗೆ, ವಯಸ್ಸಿನ ಬಗೆಗೆ ಬಹುವಾಗಿ ನೊಂದು ಕೀಳರಿಮೆ ಅನುಭವಿಸುತ್ತಿರುವ ಒಥೆಲೊನನ್ನು ಇಯಾಗೊ ಸುಲಭವಾಗಿ ವಂಚಿಸುತ್ತಾನೆ.

'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್'ನಲ್ಲಿ ಸ್ವಪ್ನಸದೃಶವೆನ್ನಿಸುವ ಅದ್ಭುತ ರಮ್ಯ ಷೇಕ್ಸ್‌ಪಿಯರ್‌ನ ಸೃಷ್ಟಿಯನ್ನು ಕನ್ನಡಿಗರಿಗೆ ಪರಿಚಯಿಸಿದ ನಿಸಾರರು, 'ಒಥೆಲೊ' ಮೂಲಕ ಮನುಷ್ಯನ ದುರಂತದ ಮೂಲ ಕಾರಣಗಳ ಷೇಕ್ಸ್‌ಪಿಯರ್ ಪೃಥಕ್ಕರಣೆಯನ್ನು ಅನುವಾದಿಸಿದ್ದಾರೆ. ನಾಯಕನಿಗಿಂತ ಪ್ರತಿ ನಾಯಕನೇ ವಿಜೃಂಭಿಸುವ ನಾಟಕವಿದು. ಭಾಷಾಶೈಲಿಯ ದೃಷ್ಟಿಯಿಂದಲೂ ಎರಡೂ ನಾಟಕಗಳ ನಡುವಿನ ಅಂತರವನ್ನು ಮನಗಾಣಬೇಕಾಗುತ್ತದೆ. ಹರ್ಷ ನಾಟಕವನ್ನು ಅನುವಾದಿಸುವಾಗ ಕಾವ್ಯಮಯವಾಗಿ ಉಲ್ಲಾಸದಿಂದ ಪ್ರಾಸಾನುಪ್ರಾಸಗಳಲ್ಲಿ ಕುಣಿದು ಕುಪ್ಪಳಿಸುವ ಭಾಷೆ, 'ಒಥೆಲೊ' ನಾಟಕದ ದುರಂತ ಗಾಂಭೀರ್ಯಕ್ಕೆ ತಕ್ಕಂತೆ ತನ್ನ ಗತಿಯನ್ನು, ಲಯವನ್ನು ಪರಿವರ್ತಿಸಿಕೊಳ್ಳುತ್ತದೆ. ವ್ಯಂಗ್ಯ, ಕುತಂತ್ರ, ವಂಚನೆ, ದುಃಖ, ದಿಗ್ಭ್ರಮೆಗಳಂತಹ ಭಾವನೆಗಳಿಗೆ ಕನ್ನಡಿ ಹಿಡಿದು ಸಮರ್ಥವಾಗಿ ಪ್ರತಿಬಿಂಬಿಸಬಲ್ಲ ಭಾಷೆ ಈ ಅನುವಾದದಲ್ಲಿದೆ.

ಬ್ರಬಾನ್ಷಿಯೊನ ಮಗಳು ಒಥೆಲೊನೊಂದಿಗೆ ಓಡಿ ಹೋದ ರಾತ್ರಿ, ಇಯಾಗೊ ಮತ್ತು ಸಂಗಡಿಗರು ಆಕೆಯ ತಂದೆಯನ್ನು ಎಚ್ಚರಿಸಿ ಕೆರಳಿಸುವ ಸಂದರ್ಭವನ್ನು ನೋಡಬಹುದು. ಅಲ್ಲಿ ವ್ಯಕ್ತವಾಗಿರುವ ಕ್ರೂರ ಅಶ್ಲೀಲತೆಯನ್ನು, ಕೇಡಿಗರ ಉತ್ತೇಜನವನ್ನು ಮೂಲದಷ್ಟೇ ಸಮರ್ಥವಾಗಿ ಅನುವಾದ ಕಟ್ಟಿಕೊಟ್ಟಿದೆ. ಇಯಾಗೊ ಹೇಳುವ ಮಾತುಗಳಿವು:

'Zounds, Sir! You are robb'd;
for shame, put on your gown;
Your heart is burst, you have lost half your soul;
Even now, now, very now, an old black ram
is tupping your white ewe. Arise, Arise!
Awake the snorting citizens with the bell,
or else the devil will make a grand sire of you.
Arise, I say.'

ನಿಸಾರರ ಅನುವಾದವೂ ಮೂಲ ಸಂವಾದದಲ್ಲಿರುವ ತುರ್ತನ್ನು ಚೆನ್ನಾಗಿ ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿದೆ:

'ಸ್ವಾಮಿ, ಕ್ರಿಸ್ತನ ಗಾಯಗಳಾಣೆ, ನಿಮ್ಮ ದರೋಡೆಯಾಗಿದೆ!
ಸಭ್ಯತೆಗಾದರೂ ಅಂಗಿ ಧರಿಸಿ!
ನಿಮ್ಮ ಹೃದಯ ಬಿರಿದು ಹೋಗಿದೆ;

ಅರ್ಧ ಆತ್ಮವನ್ನೇ ಕಳೆದು ಕೊಂಡಿದ್ದೀರಿ.
ಈಗ, ಈ ಕ್ಷಣದಲ್ಲಿ, ಈಗಲೂ ಸಹ,
ಕಪ್ಪನೆ ಮುದಿ ಟಗರೊಂದು
ನಿಮ್ಮ ಬಿಳಿ ಹೆಣ್ಣು ಕುರಿಯ ಮೇಲೆ ಅಮರುತ್ತಿದೆ.
ಏಳಿ, ಎಚ್ಚರವಾಗಿ.
ಗೊರಕೆ ಹೊಡೆದಿರುವ ಪೌರರನ್ನು ಗಂಟೆ ಬಿಡಿದೆಬ್ಬಿಸಿ.
ಇಲ್ಲವೇ, ಆ ಕರಿ ದೆವ್ವದ ದೆಸೆಯಿಂದ ನಿಮಗೆ
ಅಜ್ಜನ ಪಟ್ಟ ಸ್ವತಃಸಿದ್ಧ.
ಹೋ! ಬೇಗ ಏಳಿ!'

ಮೂಲದಲ್ಲಿರುವ ಕಟಕಿ, ವ್ಯಂಗ್ಯ, ಚುಚ್ಚುಮಾತು, ಚಾಡಿಕೋರನ ಆತುರ— ಇದನ್ನೆಲ್ಲಾ ಅನುವಾದ ಎಷ್ಟೊಂದು ಸಮರ್ಥವಾಗಿ ಹಿಡಿದಿದೆ ಎಂಬುದಕ್ಕೆ ವಿವರಣೆ ಅನಗತ್ಯ. ಇಯಾಗೊ ಪಾತ್ರದ ಕ್ಷುಲ್ಲಕ ಗುಣಕ್ಕೆ ತಕ್ಕಂತಹ ಅವನ ಮಾತುಗಾರಿಕೆಯನ್ನು ಕನ್ನಡಿಸುವಲ್ಲಿ ನಿಸಾರರ ಪ್ರತಿಭಾ ಚಾತುರ್ಯ ಇಲ್ಲಿ ಅದ್ವಿತೀಯವೆನ್ನಿಸುತ್ತದೆ.

ಮನುಷ್ಯ ಸಂಕಲ್ಪದ ಬಗೆಗೆ ಅತೀವ ವಿಶ್ವಾಸವಿರುವ ಇಯಾಗೊ, ತನ್ನ ಸಂಕಲ್ಪ ಶಕ್ತಿಯನ್ನೆಲ್ಲಾ ಕೆಡುಕಿಗೇ ವಿನಿಯೋಗಿಸುವನೆಂಬುದರಿಂದಾಗಿ ಅವನ ವಂಚನೆಗೆ ಬಲಿಯಾಗದವ ರಿಲ್ಲ. ಒಥೆಲೊ, ರಾಡರಿಗೊ, ಎಮಿಲಿಯ, ಬ್ರಬಾನ್ಷಿಯೊ—ಹೀಗೆ ನಾಟಕದ ಹೆಚ್ಚಿನ ಪಾತ್ರಗಳು ಇವನ ಸಂಚಿನ ಬಲೆಗೆ ಬಿದ್ದು ಬಲಿಯಾಗುವ ಪ್ರಾಣಿಗಳು. ಅವನಿಗೆ ಹೆಣ್ಣು ಕುಲವನ್ನೇ ಕಂಡರಾಗದು; ತೀವ್ರ ತಿರಸ್ಕಾರ. ತನ್ನ ಹೆಂಡತಿಯ ಮುಖಕ್ಕೇ ಈ ಮಾತುಗಳನ್ನು ನಿರ್ದಾಕ್ಷಿಣ್ಯದಿಂದ ರಾಚುತ್ತಾನೆ. ಈ ಮಾತುಗಳನ್ನು ಅನುವಾದಿಸುವಲ್ಲಿ ಮೂಲದಷ್ಟೆ ಸಮರ್ಥವಾದ ವ್ಯಂಗ್ಯ, ತಿರಸ್ಕಾರವನ್ನು ನಿಸಾರ್ ತೋರಿಸಿ ಕೊಡುತ್ತಾರೆ. ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ವಹಿಸಿ ಇದನ್ನು ಸಾಧಿಸಲಾಗಿದೆ:

'Come on, come on; you are pictures out of doors,
Bells in your parlours, wild cats in your
Kitchens, Saints in your injuries,
devils being offended, players in your
housewifery, and house wives in your beds.`
..'

'ಇರಲಿ ಬಾ, ಕಂಡಿದ್ದೇನೆ! ಲಲನಾಮಣಿಯರು ನೀವು,
ಹೊಸ್ತಿಲಾಚೆ ಮೂಕ ವರ್ಣಚಿತ್ರಗಳು; ಖಾಸಗಿ ಕೋಣೆಯಲ್ಲಿ
ಇನಿ ದನಿಯ ಗಂಟೆಗಳು; ಅಡಿಗೆ ಮನೆಯಲ್ಲೋ ಭಯಂಕರ
ಕಚ್ಚಾಡುವ ಬೆಕ್ಕುಗಳು; ಹಾನಿಯೆಸಗುವುದರಲ್ಲಿ ಸಂತರ
ಥರ ಶ್ರೀಮದ್ಗಂಭೀರೆಯರು. ಪರರು ನಿಮ್ಮನ್ನು
ಕೆಣಕಿದರೆ, ಸಾಕ್ಷಾತ್ ಪಿಶಾಚಿಗಳು; ಮನೆಗೆಲಸದಲ್ಲಿ

ಮಹಾ ಮೈಗಳ್ಳಿಯರು; ಶಯ್ಯೆಯಲ್ಲೋ ಬಿಚ್ಚೋಲೆ
ಗೌರಮ್ಮಗಳು.'

ಮೇಲಿನ ಉಲ್ಲೇಖದಲ್ಲಿ 'ಇರಲಿ ಬಾ ಕಂಡಿದ್ದೇನೆ' ಎಂಬ ಪ್ರಯೋಗವೇ ಷೇಕ್ಸ್‌ಪಿಯರ್‌ನ ಸಂವಾದಕ್ಕೆ ಇಮ್ಮಡಿ ಮೊನಚು ತಂದುಬಿಟ್ಟಿದೆ. ಲಲನಾಮಣಿ, ಸಾಕ್ಷಾತ್ ಪಿಶಾಚಿ, ಮಹಾ ಮೈಗಳ್ಳಿ—ಸಹಜವಾಗಿವೆ. ಬಿಚ್ಚೋಲೆ ಗೌರಮ್ಮಕ್ಕೆ ವಾಚ್ಯಾರ್ಥ, ವ್ಯಂಗ್ಯಾರ್ಥಗಳೆರಡೂ ಕೂಡಿ ಬಂದಿವೆ.

ಮತ್ತೊಂದೆಡೆ, ರಾಡರಿಗೋನನ್ನು ಉತ್ತೇಜಿಸುವುದಕ್ಕಾಗಿ ಡೆಸ್ಡೆಮೋನಾಳ ಶೀಲದ ಬಗೆಗೆ ಹಗುರವಾಗಿ ಪ್ರಸ್ತಾಪಿಸಿದಾಗ: 'ಅವಳ ಬಗ್ಗೆ ಇಂಥ ಮಾತುಗಳನ್ನು ನಾನು ನಂಬಲಾರೆ. ಅವಳ ಸ್ವಭಾವದಲ್ಲಿಪಾವಿತ್ರ್ಯ ತುಂಬಿ ತುಳುಕಿದೆ'—ಎನ್ನುತ್ತಾನೆ. ರಾಡರಿಗೋನ ಮಾತುಗಳಿಗೆ ಇಯಾಗೊ ಪ್ರತಿಕ್ರಿಯೆ, ಕನ್ನಡದ ಆಡುನುಡಿಯಲ್ಲಿ ಎಷ್ಟೊಂದು ಪರಿಣಾಮ ಕಾರಿಯಾಗಿ ವ್ಯಕ್ತವಾಗಿದೆ ಎಂಬುದನ್ನು ಅರಿಯಲು ಮೂಲದೊಂದಿಗೆ ಹೋಲಿಸುವುದು ಅನಿವಾರ್ಯವಾಗುತ್ತದೆ:

'Bless'd fig's end! The wine she drinks
is made of grapes. If she had been bless'd,
She would never have loved the Moor.
Bless'd pudding! Dids't thou not see her
Paddle with the palm of his hand?
Dids't not mark that?
.........................'

'ಪಾವಿತ್ರ್ಯ! ಬದನೆಕಾಯಿ ತೊಟ್ಟು! ಎಲ್ಲ ಹೆಂಗಸರಂತೆ
ಅವಳು ಕುಡಿಯುವ ಮದ್ಯವೂ ದ್ರಾಕ್ಷಿಯಿಂದಲೇ ತಯಾರಾದದ್ದಪ್ಪ!
ಅವಳಲ್ಲಿ ಪಾವಿತ್ರ್ಯವಿದ್ದಿದ್ದರೆ ಆ ಮೂರನನ್ನು ಯಾವತ್ತೂ
ರಮಿಸುತ್ತಿರಲಿಲ್ಲ. ಪಾವಿತ್ರ್ಯವಂತೆ ಪಾವಿತ್ರ್ಯ! ಲೊಳಲೊಟ್ಟೆ!
ಕ್ಯಾಷಿಯೊ ಅಂಗೈಯನ್ನ ಅವಳು ಸವರಿ ಮುದ್ದು ಮಾಡಿದ್ದನ್ನ
ನೀನು ನೋಡಲಿಲ್ಲವೇ? ಗಮನಿಸಲೇ ಇಲ್ಲವೇ?'

ಮೂಲದ fig's end ಎಂಬುದು ಇಲ್ಲಿ 'ಬದನೆಕಾಯಿ ತೊಟ್ಟು' ಎಂದಾಗಿದೆ; Bless'd pudding ಎಂಬುದು—ಪಾವಿತ್ರ್ಯವಂತೆ, ಪಾವಿತ್ರ್ಯ, ಲೋಳಲೊಟ್ಟೆ ಎಂದು ಪರಿವರ್ತನೆಯಾಗಿರುವುದು ಎಷ್ಟೊಂದು ಸಹಜವಾಗಿ ಹೊಂದಿಕೊಳ್ಳುತ್ತದೆಯೆಂಬುದಕ್ಕೆ ವ್ಯಾಖ್ಯಾನವೇ ಬೇಕಿಲ್ಲ. ಮೂಲದ ಸಂವಾದದಲ್ಲಿ ಕಾಣಿಸದ ಕ್ಯಾಷಿಯೋ ಹೆಸರನ್ನು ಅರ್ಥ ಸ್ಪಷ್ಟತೆಗಾಗಿ ಅನುವಾದದಲ್ಲಿ ಸೇರಿಸಿರುವುದು ನಿಸಾರರ ರಂಗ ಪ್ರಜ್ಞೆಗೆ ಹಿಡಿದ ಕನ್ನಡಿ ಯಂತಿದೆ. ಕನ್ನಡ ಭಾಷೆ ಹಾಗೂ ರಂಗ ಭೂಮಿಗೆ ಅತ್ಯಂತ ಸಹಜವಾಗಿ ಷೇಕ್ಸ್‌ಪಿಯರ್ ಪ್ರತಿಭೆಯನ್ನು ಹೊಂದಿಸುವಲ್ಲಿ ನಿಸಾರರ ಚಾತುರ್ಯಕ್ಕೆ ನಿದರ್ಶನವಾಗಿ ಇಂತಹ ನೂರಾರು ನಿದರ್ಶನ ಗಳಿವೆ. ಪುಸ್ತಕದ ಬದನೆಕಾಯಿ, ತಾಪೇದಾರಿ, ಜಮಾಖರ್ಚು ಬರೆಯುವ, ನಿಗಾ,

ದಗಾ, ರೊಕ್ಕ, ಸೂಕ್ಷ್ಮ ಸ್ವಭಾವದ ಕೊರಮ, ಅಳ್ಳಳ್ಳಾಯಿ, ಜಾಣ ಲೌಡಿ, ಹರಾಮಿ, ಬಿಡಿ ಸೂಳೆ, ಥೇಟ್ ನೀಚ, ಕಣ್ಮಣಿ—ಹೀಗೆ ಅಚ್ಚಗನ್ನಡ ತಾಜಾ ಶಬ್ದಗಳ ಪಟ್ಟಿಯನ್ನು ಬೆಳೆಸುತ್ತ ಹೋಗಬಹುದು. ಇಲ್ಲಿ ನಾನು ಅಚ್ಚಗನ್ನಡ ಎಂಬುದನ್ನು ಬಳಕೆ ಮಾತಿನ ಕನ್ನಡವೆಂಬ ಅರ್ಥದಲ್ಲಿ ಪರಿಭಾವಿಸಿದ್ದೇನೆ. ನಿಸಾರರೂ ಕನ್ನಡ ಭಾಷೆಯ ಬಗೆಗೆ ಇದೇ ದೃಷ್ಟಿಕೋನವಿರುವುದರಿಂದಲೇ ಅವರ ಅನುವಾದ ರೂಢಿ ಮಾತಿನ ತೇಜಸ್ಸಿನಿಂದ ಕಂಗೊಳಿಸುತ್ತದೆ. ಅಕೆಡೆಮಿಕ್ ಪರಿಭಾಷೆಯ ಅಚ್ಚಗನ್ನಡ ಬಳಸಿದ್ದರೆ ಪುಸ್ತಕದ ಬದನೆಕಾಯಿ ಆಗುತ್ತಿತ್ತು. ಇಂತಹ ಪುಸ್ತಕದ ಬದನೆಕಾಯಿ ಅನುವಾದಗಳನ್ನು ರಂಗಭೂಮಿ ಮೂಸಿಯೂ ನೋಡುವುದಿಲ್ಲವೆಂಬುದಕ್ಕೆ ಉದಾಹರಣೆ ನೀಡುವ ಅಗತ್ಯವಿಲ್ಲ.

ಇಯಾಗೊನ ಚಾಡಿಯಿಂದ ತೀವ್ರವಾಗಿ ಪ್ರಭಾವಿತನಾಗಿ ಅತ್ಯಂತ ದಾರುಣ ಸ್ಥಿತಿಯನ್ನು ತಲಪಿರುವ ಒಥೆಲೋನ ವಿಹ್ವಲತೆಯನ್ನು ನಿಸಾರರು ಕನ್ನಡಿಸಿರುವ ಉದಾಹರಣೆಯೊಂದನ್ನು ನೀಡಿ, ಈ ನಿದರ್ಶನಗಳ ಪಟ್ಟಿಯನ್ನು ಮುಕ್ತಾಯ ಗೊಳಿಸಬಹುದಾಗಿದೆ. ಉಳಿದೆಲ್ಲ ಸಂದರ್ಭದಂತೆ ಇಲ್ಲಿಯೂ ಗ್ರಾಂಥಿಕ ಶೈಲಿ ಮತ್ತು ಆಡು ನುಡಿಗಳೆರಡೂ ಹದವರಿತು ಬೆರೆತಿವೆ. ಕನ್ನಡ, ಸಂಸ್ಕೃತ, ಉರ್ದು ಶಬ್ದಗಳೆಲ್ಲ ಹವಣರಿತು ಎಡೆಯಾಡಿವೆ:

'ಕಲ್ಲೊಡ್ಡರು, ಇನ್ನುಳಿದವರು, ಇಡೀ ಸೇನೆಯೇ
ಇವಳ ಮೈಯ ರುಚಿ ನೋಡಿದ್ದರೂ ನನಗದು ತಿಳಿಯದಿದ್ದಲ್ಲಿ
ನಿರಾಳನಾಗಿರುತ್ತಿದ್ದೆ. ಹಾ! ಈಗ ಮನಶ್ಶಾಂತಿಗೆ ಶಾಶ್ವತ ವಿದಾಯ!
ಸಂತೃಪ್ತಿಗೆ ವಿದಾಯ! ಗರಿ ಸೆಕ್ಕಿಸಿದ ಮಹಾ ಯೋಧರಿಗೆ
ಮಹತ್ವಾಕಾಂಕ್ಷೆಯನ್ನು ಸುಗುಣವಾಗಿಸುವ
ಮಹಾ ಸಮರಗಳಿಗೆ ವಿದಾಯ! ಓ! ವಿದಾಯ!
ಕದನಾಶ್ವಗಳ ಹೇಷಾಘೋಷಕ್ಕೆ, ಕೀಚು ದನಿಯ
ಕಹಳೆಗೆ, ಚೇತನೋತ್ಸಾಹಿ ಭೇರಿಗೆ, ಕಿವಿಡೆಬ್ಬಿಸುವ
ರಣಗೊಳಲಿಗೆ, ರಾಜ ಲಾಂಛನಕ್ಕೆ ವಿದಾಯ!
ಕೀರ್ತಿದಾಯಕ ಕದನಗಳ ಸಕಲ ಆಕರ್ಷಣೀಯ
ವಿಶೇಷಣಗಳಿಗೆ, ಮತ್ತದರ ಪ್ರತಿಷ್ಠೆ, ವೈಭವ,
ವಿಧಿವಿಹಿತ ಕರ್ಮಾಚಾರಗಳಿಗೆ ವಿದಾಯ!
ಮಳೆ ದೇವ ಜ್ಯುಪಿಟರಿನ ಆರ್ಭಟಗಳನ್ನನುಕರಿಸುವಂತೆ
ಸಿಡಿಲ್ಗರೆವ ಓ! ಮಾರಕ ಫಿರಂಗಿಗಳೇ ವಿದಾಯ!
ಒಥೆಲೋನ ಯೋಧ ಜೀವನ ಮಣ್ಣೂಡಿತು!'

ಕರುಳು ಕಿವುಚುವಂತಹ ಈ ಪರಿತಾಪವನ್ನು ಮೂಲದೊಂದಿಗೆ ಹೋಲಿಸುವ ಅಗತ್ಯವೇನೂ ಇಲ್ಲ. ಎಲ್ಲೆಡೆಯಂತೆ ಇಲ್ಲಿಯೂ ಸಂವಾದ ಭಾಗದ ಒಟ್ಟಾರೆ ಧ್ವನಿಯನ್ನು ಅನುಸರಿಸಿ ಮಾಡಿದ ಸೃಜನಶೀಲ ಅನುವಾದವಿದು.

ಕನ್ನಡಕ್ಕೆ ಷೇಕ್ಸ್‌ಪಿಯರ್‌ನನ್ನು ಅನುವಾದಿಸಿರುವರಲ್ಲಿ ರಂಗಪ್ರಜ್ಞೆ, ಸಾಹಿತ್ಯ

ಪ್ರಜ್ಞೆ—ಎರಡೂ ಮೇಳೈಸಿರುವ ಅಪರೂಪದ ಮಾದರಿಗಳಿಗೆ ನಿಸಾರರ ಎರಡೂ ಅನುವಾದಗಳು ಸೇರುತ್ತವೆ. ಈ ಬಗೆಯ ಅನುವಾದಗಳು ಎರಡು ಭಾಷೆಗಳ ನಡುವೆ ಸಂಪರ್ಕ ಸೇತುವೆಯಾಗುವಂತೆಯೇ ಎರಡು ಸಂಸ್ಕೃತಿಗಳನ್ನೂ ಹತ್ತಿರ ತರುತ್ತವೆ. ಮೂಲಾಂಶಗಳಲ್ಲಿ ಮನುಷ್ಯ ಕುಲವೆಲ್ಲಾ ಒಂದೇ ಎಂಬುದನ್ನು ಸಿದ್ಧಪಡಿಸಿ ತೋರಿಸಲು, ಬೇರೆ ಬೇರೆ ಭಾಷಾ ಸಂಸ್ಕೃತಿಯ ಮಹಾ ಕೃತಿಗಳನ್ನು ನಾವು ನಮ್ಮ ಭಾಷೆಗೆ ಸ್ವಾಗತಿಸ ಬೇಕಾಗುತ್ತದೆ. ಈ ಕಾರ್ಯವನ್ನು ಸೃಜನಶೀಲ ಸಾರ್ಥಕ ಅನುವಾದಗಳು ಮಾತ್ರ ಸಮರ್ಥವಾಗಿ ಮಾಡಬಲ್ಲವೆಂಬುದನ್ನು ಮಾತ್ರ ಮರೆಯಬಾರದು.

ಒಂದು ಹರ್ಷ ನಾಟಕ, ಮತ್ತೊಂದು ದುರಂತ ನಾಟಕ—ಹೀಗೆ ಆಯ್ಕೆ ಮಾಡಿ ಕೊಂಡು ಎರಡು ಮಾದರಿಗಳನ್ನು ನಿಸಾರರು ಅನುವಾದಿಸಿದ್ದಾರೆ. ಕನ್ನಡ ರಂಗಭೂಮಿಯಲ್ಲಿ ಪ್ರೇಕ್ಷಕರ ಅಭಿರುಚಿಯನ್ನು ಬೆಳೆಸುವ ದಿಕ್ಕಿನಲ್ಲಿ ಷೇಕ್ಸ್‌ಪಿಯರ್‌ನ ನಾಟಕಗಳು ವಹಿಸಿದ ಪಾತ್ರ ಮಹತ್ತರವಾದುದು. ಹೀಗಿರುವಾಗ, ನಿಸಾರರಂತಹ ಶ್ರೇಷ್ಠ ಕವಿಗಳು ಕೇವಲ ಎರಡೇ ನಾಟಕಗಳನ್ನು ಅನುವಾದಿಸದೆ ಇನ್ನೂ ನಾಲ್ಕಾರು ಷೇಕ್ಸ್‌ಪಿಯರ್ ನಾಟಕಗಳನ್ನು ಕೈಗೆತ್ತಿ ಕೊಂಡಿದ್ದರೆ, ಕನ್ನಡ ರಂಗಭೂಮಿಯ ಭಾಗ್ಯದ ಬಾಗಿಲು ತೆರೆದಂತಾಗುತ್ತಿತ್ತು. ಆದರೂ ಮುಂದೆ ಬಂದ ಕೆಲವು ಸಮರ್ಥ ಅನುವಾದಕರೂ ಸಹ ಸಮೃದ್ಧಗೊಳಿಸಿದರೆಂಬುದು ಮಾತ್ರ ಸ್ವಲ್ಪ ಮಟ್ಟಿಗೆ ಸಮಾಧಾನ ತರುವ ಸಂಗತಿಯಾಗುತ್ತದೆ.

ಷೇಕ್ಸ್‌ಪಿಯರನ ಅನುಪಮ ಹಾಗೂ ದಿಗ್ಭ್ರಮಕಾರಕ ಪಾತ್ರ ಸೃಷ್ಟಿ, ಮತ್ತು ಆ ಪಾತ್ರಗಳ ಪ್ರಾದೇಶಿಕ ಬದುಕಿನ ವೈಚಿತ್ರ್ಯ, ವೈಭವ, ಆಳ ಅಗಲಗಳನ್ನು ಗಮನಿಸಿ ಅವನ ಸಾಹಿತ್ಯ ಕ್ಷೇತ್ರವನ್ನು ಪ್ರತ್ಯೇಕವಾಗಿ 'ಷೇಕ್ಸ್‌ಪಿಯರ್ ಲ್ಯಾಂಡ್' ಎಂದು ವಿಮರ್ಶಕರು ಕರೆದಿದ್ದಾರೆ. ಪ್ರಾದೇಶಿಕತೆಯ ಸಮಸ್ತ ಸಾಧ್ಯತೆಗಳನ್ನು ತಮ್ಮ ಸುತ್ತಮುತ್ತಲಿನಿಂದ ದೋಚಿಕೊಂಡವರು ನಮ್ಮಲ್ಲಿ ಇಬ್ಬರೇ: ಒಬ್ಬರು, ಬಿಡಿಬಿಡಿಯಾದ ಹಲವಾರು ಕಾದಂಬರಿಗಳಲ್ಲಿ, ಮತ್ತೊಬ್ಬರು ಎರಡು ತೋರ ಕಾದಂಬರಿಗಳಲ್ಲಿ ಅದರ ಸಾರಸರ್ವಸ್ವದ ವಿರಾಟ್ ದರ್ಶನ ಮಾಡಿಸಿದ್ದಾರೆ. ಈ ಇಬ್ಬರು ಘಟಾನುಘಟಿಗಳ ಸಾಹಿತ್ಯ ಪ್ರದೇಶಗಳ ಹವಾಗುಣ, ಭೂಗುಣ, ಪ್ರಕೃತಿ, ಜನ, ಜೀವಿತ ವಿಧಾನ, ನೀತಿ ನಿಯಮಗಳು ಸರ್ವ ಸ್ವತಂತ್ರ ಹಾಗೂ ಅನನ್ಯ. ಆ ಸಾರಸ್ವತ ಪ್ರದೇಶಗಳನ್ನು ಪ್ರತ್ಯೇಕಿಸುವುದು ಸಹ್ಯಾದ್ರಿ ಶ್ರೇಣಿ. ಅವುಗಳೆಂದರೆ 'ಕುವೆಂಪು ಲ್ಯಾಂಡ್' ಮತ್ತು 'ಕಾರಂತ್ ಲ್ಯಾಂಡ್'.

(ಸಾಹಿತ್ಯದಲ್ಲಿ ಪ್ರಾದೇಶಿಕತೆ)



ನಾಡದೇವಿಯೇ ಹೊತ್ತೆ ನಿನ್ನ ಮಡಿಲಲ್ಲಿ ಎಂಥ ರತ್ನ

♦ ಸಿ. ಆರ್. ಸಿಂಹ

ನಿಸಾರ್ ಅಹಮದ್ ಕನ್ನಡ ನಾಡಿನ ಜನಪ್ರಿಯ ಕವಿಗಳಲ್ಲಿ ಒಬ್ಬರು. ನಾನು ಇವರನ್ನು ಯಾವಾಗಿನಿಂದ ಬಲ್ಲೆ? ನಾಲ್ಕು ದಶಕಗಳೇ ಆದವೇನೋ! ನಾನು ಡಿಗ್ರಿ ಮುಗಿಸಿ ಇಂಜಿನಿಯರಿಂಗ್ ಓದುತ್ತಿದ್ದೆ. ಆದರೆ ಹೆಚ್ಚಿನ ಸಮಯವೆಲ್ಲ ರಂಗಭೂಮಿ, ಸಾಹಿತ್ಯ, ಸ್ಪೋರ್ಟ್ಸ್‌ಗಳಲ್ಲೇ ಕಳೆಯುತ್ತಿತ್ತು. ಅರವತ್ತರ ದಶಕವೆಂದರೆ ನವ್ಯದ ಉಬ್ಬ್ರಾಯ ಕಾಲ. ಹದಿ ಹರೆಯದ ಸಮಯವೆಂದರೆ ರಮ್ಯ ಚೈತ್ರ ಕಾಲ ಆಗಿದ್ದರಿಂದ, ಮುಂಚೆ ನನ್ನ ನೆಚ್ಚಿನ, ಮೆಚ್ಚಿನ ಕವಿ ಕೆ.ಎಸ್.ನ. ಆಗಂತೂ 'ಮೈಸೂರ ಮಲ್ಲಿಗೆ'ಯ ಎಲ್ಲ ಕವನದ ಸಾಲುಗಳೂ ನಾಲಿಗೆಯ ಮೇಲೆ ನಲಿಯುತ್ತಿದ್ದವು. ಅದರಿಂದಾಗಿ ನನಗೆ ಅನೇಕ ಲಾಭಗಳೂ ಆಗಿದ್ದವೆನ್ನಿ. ಇರಲಿ, ಅವೆಲ್ಲ ನನ್ನ ಭವಿಷ್ಯತ್ತಿನ ಆತ್ಮಕತೆಗೆ ಮುಡಿಪಾಗಿರಲಿ.

ನವ್ಯದ ಕಾಲಕ್ಕೆ ನಾನು ಹೊರಳುವ ಹೊತ್ತಿಗೆ ಅಡಿಗ ಅವರ ಕಾವ್ಯ ನನ್ನನ್ನು ಆವರಿಸಿತು. ನವ್ಯ ಕಾವ್ಯ ಕತೆ ಕಾದಂಬರಿ ನಾಟಕ ಇತ್ಯಾದಿಗಳನ್ನು ಕುರಿತ ಮಾತು, ಅರ್ಥ ವಿಶ್ಲೇಷಣೆಯ ಗೋಷ್ಠಿಗಳಿಗೆ ಗಾಂಧಿಬಜಾರು ಕೇಂದ್ರವಾಗಿತ್ತು. ವೈಯೆನ್ಕೆ ಎಂಬ ಮ್ಯಾಗ್ನೆಟ್ಟಿನ ಸುತ್ತಮುತ್ತ ಕಲೆಯುತ್ತಿದ್ದವರಲ್ಲಿ ಸಾಹಿತಿಗಳು ಕಲಾವಿದರೇ ಹೆಚ್ಚು. `ವಿದ್ಯಾರ್ಥಿ ಭವನ`, `ಸರ್ಕಲ್ ಲಂಚ್ ಹೋಂ`ಗಳ ಒಳ ಹೊರಗೆ ಸಾಹಿತ್ಯಾಸಕ್ತಿಗೂ ಸಾಕಷ್ಟು ರುಚಿಕರ ಆಹಾರ ದೊರೆಯುತ್ತಿತ್ತು. ಮಾತುಕತೆಯೆಲ್ಲ

ಸಾರವತ್ತಾಗಿ ಇರುತ್ತಿತ್ತು. ಆ ಸಮಯದಲ್ಲೇ ಸಿಕ್ಕಿದವರು ನಿಸಾರ್. ಅವರು ಬರೆದಿದ್ದ ಕಾವ್ಯ ನನಗೆ ಬಲು ಇಷ್ಟ. ಗಾಂಧಿ ಬಜಾರಿನಲ್ಲಿ ಮೊದಲು ಭೇಟಿ ಮಾಡಿದ ನಿಸಾರ್ ಅಹಮದ್ ಅವರ ಮೊದಲ ಕಾವ್ಯ ಸಂಗ್ರಹ: 'ಮನಸು ಗಾಂಧಿ ಬಜಾರು.'

ನಿಸಾರ್ ಅವರ ಕವಿತೆಗಳನ್ನು ಥಟ್ಟನೇ ಇಷ್ಟಪಟ್ಟುಬಿಡಬಹುದು. ಒಂದು ಚುಂಬಕ ಶಕ್ತಿ ಉಂಟು ಅವರ ಕಾವ್ಯಕ್ಕೆ. ರೂಪಕ ಶಕ್ತಿ, ವಿಡಂಬನೆ, ಲಘು ಹಾಸ್ಯ, ಚತುರೋಕ್ತಿ— ಇವೆಲ್ಲ ನಿಸಾರ್ ಅವರ ಬತ್ತಳಿಕೆಯಿಂದ ಚಿಮ್ಮುವ ಬಾಣಗಳು. 'ದೀಪಗಳೆ, ಕುರುಡು ತಮವ ಕೊರೆಯುವಂಥ ಬಾಣ ಬಿಟ್ಟ ಚಾಪಗಳೆ'. ಅವರ ಮತ್ತೊಂದು ಕವನ: 'ಇಪ್ಪತ್ತನೆಯ ಶತಮಾನದ ಕೊಲಂಬಸ್', ಅಲ್ಲಿನ 'ನಾನು, ದಿಗ್ದಿಗಂತದ ಬೆಳ್ಳಿ ಗೆರೆಗೆ ಆಶಿಸಿದವನು. ಕಲ್ಲಲ್ಲಿ ಸಿರಿ, ನೆಲದಲ್ಲಿ ಝರಿ, ಕಾಡೊಳಗು ದಾರಿಯನು ಕನಸಿದವನು' ಎಂಬ ಸಾಲುಗಳು ಈ ಜಿಯಾಲಜಿಸ್ಟ್ ಕವಿಗೂ ಅನ್ವಯಿಸಬಹುದೇನೋ.

ನಿಸಾರ್ ಅಹಮದ್ ಅವರ ಅತ್ಯಂತ ಪ್ರಖ್ಯಾತ ಕವನ ಎಂದರೆ 'ಕುರಿಗಳು, ಸಾರ್, ಕುರಿಗಳು'. ಅಧಿಕಾರಿಗಳು, ಕುತಂತ್ರಿ ರಾಜಕಾರಣಿಗಳಿಗೆ ಬಲಿ ಆಗುತ್ತಲೇ ಇರುವ ಜನತೆಯೇ ಕುರಿಗಳು. ಕುರಿಯ ಕತ್ತ ಕಚಕ್ಕೆಂದು ಕೊಚ್ಚಿ, ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುವ, ನಮ್ಮ ಕಾಯ್ವ ಕುರುಬರು. ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವ ಬಂಡಲ್ ಬ್ಯೂರಾಕ್ರಸಿ, ಭ್ರಷ್ಟ ರಾಜಕಾರಣದ ದುಷ್ಟ ಕೂಟ. ಇವರ ಆಟದ ನಡುವೆ ದನಿ ಕುಗ್ಗಿಸಿ, ತಲೆ ತಗ್ಗಿಸಿ, ಅಂಡಲೆಯುವ ನಾವು, ನೀವು ಕುರಿಗಳು, ಸಾರ್, ಕುರಿಗಳು. ಎಂಥ ಅಪ್ರತಿಮ ಚಿತ್ರಣ! ಇಡೀ ದೇಶದ ಊರೂರು ಹಳ್ಳಿ ಹಳ್ಳಿಗಳಲ್ಲಿ ನಡೆಯುತ್ತಿರುವ ವಾಸ್ತವಕ್ಕೆ ಇಡೀ ಕವನ ಒಂದು ಬ್ರಿಲಿಯಂಟ್, ಹಾಗೆಯೇ ಭಯಾನಕ ರೂಪಕ!

ನಿಸಾರ್ ಅಹಮದ್ ಅವರ ಈ ಕವನಕ್ಕೆ ಅಪೂರ್ವವೂ ಅನುಪಮವೂ ಆದ ರಾಗ ಸಂಯೋಜನೆ ಮಾಡಿ ಹಾಡಿದವರು ಸುಗಮ ಸಂಗೀತದ 'ದೊರೆ', ಹಾಡು ಹಕ್ಕಿ ಮೈಸೂರು ಅನಂತಸ್ವಾಮಿ. ಈ ಕವನಕ್ಕೆ ಯಾವುದೇ ಒಂದು ನಿಶ್ಚಿತವಾದ Rhyme pattern (ಸುಗಮ) ಆಗಲಿ, ಒಂದೇ ಸಮನಾದ Metre ಛಂದಸ್ಸೇ ಆಗಲಿ ಇಲ್ಲ. ಆದ ಕಾರಣಕ್ಕೇ ಇದನ್ನು ಹಾಡಿಗೆ ಹೊಂದಿಸಿದ್ದಾದರೂ ಹೇಗೆ? ಎಂಬ ಅಚ್ಚರಿ ಮೂಡುತ್ತದೆ. ಆದರೆ ಕವನದಲ್ಲಿ ಅಂತರ್ಗತವಾಗಿದ್ದ ಭಾಷೆಯ Rhythmನ, ಪದ ಪದದ ವಾಕ್ಯಗಳ ನಾಡಿ ಬಡಿತವನ್ನು ಹಿಡಿದು, ಸ್ವರ ರಾಗ ಲಯಕ್ಕೆ ಬಗ್ಗಿಸಿ ಒಗ್ಗಿಸಿದ ಅಸಲು ಕಸುಬುದಾರ ಅನಂತಸ್ವಾಮಿ. ನಿಸಾರ್ ಅವರ ಅದ್ಭುತ ಕವನ ಹೀಗೆ ಅನುಪಮ ಹಾಡಾಗಿ ಕನ್ನಡಿಗರೆಲ್ಲರ ಮೈನವಿರೇಳಿಸಿಬಿಟ್ಟಿತು.

ಇನ್ನು 'ನಿತ್ಯೋತ್ಸವ' ಎಂಬ ನಿಸಾರ್ ಕವಿತೆಯ ಮೋಡಿಯನ್ನು ಏನೆಂದು ವರ್ಣಿಸಲಿ? ಅದಕ್ಕೂ ಸಹ ಅನಂತಸ್ವಾಮಿಯ ರಾಗವೆಂಬ ಚಿನ್ನದ ಚೌಕಟ್ಟು. ಆ ಕವನವನ್ನು ಹಾಡಾಗಿ ಕೇಳದೆ ಇರುವ ಕನ್ನಡಿಗರೇ ಇಲ್ಲ ಎಂಬುದು ಅತಿಶಯೋಕ್ತಿ ಅಲ್ಲ. ನಮ್ಮ ಭಾರತ ದೇಶಕ್ಕೆ 'ಜನಗಣ ಮನ' ರಾಷ್ಟ್ರಗೀತೆ National Anthem ಆದರೆ, 'ವಂದೇ ಮಾತರಂ'ಗೆ National Song ಎಂಬ ಅಧಿಕೃತ ಮುದ್ರೆ ಇದೆ. ಹಾಗೆಯೇ ನಮ್ಮ

ಕರ್ನಾಟಕಕ್ಕೆ ಕುವೆಂಪು ಅವರ `ಜಯ ಹೇ ಕರ್ನಾಟಕ ಮಾತೆ' ಕವನ 'ನಾಡ ಗೀತೆ' ಎಂದು ಮಾನ್ಯ ಮಾಡಿರುವ ಜೊತೆಗೇ ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಕವನಕ್ಕೆ 'ನಾಡ ಹಾಡು' ಎನ್ನಬಹುದಾದ ಅರ್ಹತೆ ಉಂಟು. ಕನ್ನಡದಲ್ಲಿ ಕ್ಯಾಸೆಟ್, ಧ್ವನಿ ಸುರುಳಿಯ ಆರಂಭವೇ ನಿಸಾರ್ ಅವರ 'ನಿತ್ಯೋತ್ಸವ' ಎಂಬುದು ಹೆಗ್ಗಳಿಕೆಯ ದಾಖಲೆ.

ಅವರ ಎರಡು ಕವನಗಳು ನನಗೆ ಒದಗಿ ಬಂದ ಬಗೆ ಹೀಗೆ. 'ಸಿಂಹಾಸನ' ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದೆ. ಅದರಲ್ಲಿ ಒಂದು ಸನ್ನಿವೇಶ ಹೀಗಿದೆ. ಒಬ್ಬ ಪತ್ರಕರ್ತ ಊರು ಸುತ್ತುತ್ತಿದ್ದಾನೆ. ಒಂದೆಡೆ ಶ್ರೀಮಂತಿಕೆ, ಮತ್ತೊಂದೆಡೆ ದಟ್ಟ ದಾರಿದ್ರ್ಯ. ಹೀಗೆ, ಎಲ್ಲಿ ನೋಡಿದರಲ್ಲಿ ವೈದೃಶ್ಯ, ಭೇದ ಭಾವ, ಅಸಮಾನತೆ. Montages ಅಂದರೆ, ಚಿಕ್ಕ ಚಿಕ್ಕ ದೃಶ್ಯ ಮಾಲಿಕೆಗಳನ್ನು ಹೆಣೆಯುತ್ತ, Juxtapose ತದ್ವಿರುದ್ಧಗಳ ಕಾಣಿಸುತ್ತ ಈ ನಾಡಿನ ವಾಸ್ತವದ ಚಿತ್ರಣ ಮೂಡಿಸುವುದು ನನ್ನ ಉದ್ದೇಶ. ಇವೆಲ್ಲಕ್ಕೂ ಒಂದು ಚೌಕಟ್ಟು ಬೇಕಿತ್ತು. background, ಅಂದರೆ ಹಿನ್ನೆಲೆಯಲ್ಲಿ ಒಂದು ವಿಳಂಬ ಗತಿಯ, ವಿಷಾದ ಭಾವದ ಒಂದು ಗೀತೆ ಇದ್ದರೆ ಪರಿಣಾಮಕಾರಿ ಆದೀತು ಎನಿಸಿತು. ಆಗ ನನಗೆ ಹೊಳೆದದ್ದು ನಿಸಾರ್ ಅಹಮದ್ ಅವರ ಭಾವಗೀತೆ 'ನಾಡದೇವಿಯೆ, ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ' ಎಂಬುದೇ ಸನ್ನಿವೇಶಕ್ಕೆ ತಕ್ಕನಾದ ಹಾಡು ಎಂದು. ಗುರುದತ್ ಅವರ ಅನುಪಮ ಚಿತ್ರ 'ಪ್ಯಾಸಾ'. ಅಲ್ಲಿನ ಒಂದು ವಿಷಾದ ಗೀತೆ 'ನಾಜ್ ಹೈ ಹಿಂದ್ ಪರ್ ವೋಹ್ ಕಹಾಂ ಹೈ'. ಹಿನ್ನೆಲೆ ವಾದ್ಯಗಳ ಅಬ್ಬರ ಒಂದಿಷ್ಟೂ ಇಲ್ಲದೆ ಮನ ಕಲಕುವ ಹಾಡು ಅದು. ಅದೇ ಧಾಟಿಯನ್ನು ಅನುಸರಿಸಿ, ನಿಸಾರ್ ಅವರ ಗೀತೆಯನ್ನು ಬಳಸಿದ್ದೆ, 'ಸಿಂಹಾಸನ' ಸಿನಿಮಾದಲ್ಲಿ.

ದೂರದರ್ಶನ ಅದೇ ತಾನೆ ಬೆಂಗಳೂರು ಕೇಂದ್ರವನ್ನು ಆರಂಭಿಸಿತ್ತು. New Year Eveಗೆ ಒಂದು ವಿಶೇಷ ಕಾರ್ಯಕ್ರಮ ರೂಪಿಸುವ ಹೊಣೆ ನನ್ನ ಪಾಲಿಗೆ. ವಿವಿಧ ಹಾಡು, ತಮಾಷೆ ದೃಶ್ಯ ಇತ್ಯಾದಿ ಕೂಡಿದ ವಿನೋದಾವಳಿ. ನಿಸಾರ್ ಅಹಮದ್ ಬರೆದ ಒಂದು ಕಾಮಿಡಿ ಕವನ ಇದೆ. 'ಅಮ್ಮ, ಆಚಾರ, ನಾನು' ಎಂಬ ಆ ಕವನದ ನಾಯಕನ ತಾಯಿಗೆ ವಿದ್ಯಾವಂತೆಯಾದ ಆಧುನಿಕ ಸೊಸೆಯನ್ನು ತರುವುದು ಇಷ್ಟವಿಲ್ಲ. ಕೊನೆಗೆ ಎಂತೋ ಹೇಗೋ ಒಪ್ಪಿದಾಗ ನಾಯಕನಿಗೆ ನಿರುಮ್ಮಳ. ಮಡದಿಯ ಜೊತೆಯಲ್ಲಿ ಮೊದಲ ವಾಕಿಂಗು. ಆ ಡಬ್ಬಲ್ ಪದವೀಧರೆ ಭಾರಿ Fashionable ಆಗಿ ಅಲಂಕರಿಸಿಕೊಂಡು ಹೊರಟವಳು 'ನಡೆಯಿರಿ' ಎಂದಾಗ, ನೋಡಿದರೆ ನಾಯಕ ತಬ್ಬಿಬ್ಬಾಗಿ ಸುಸ್ತು. ಏಕೆಂದರೆ ಅಲಂಕಾರವೆಲ್ಲ ಮುಚ್ಚಿ ಹೋಗುವಂತೆ ಆಕೆ 'ಉಟ್ಟಿದ್ದಳು ನಮ್ಮಮ್ಮನ ಬುರ್ಖಾ!' ಪುಟ್ಟ ಪ್ರಹಸನವಾಗಿ ಈ ವಿನೋದ ಕವನ ವೀಕ್ಷಕರಿಗೆಲ್ಲ ಮೆಚ್ಚುಗೆ ಆಯಿತು. ನಿಸಾರ್ ಅಹಮದ್ ಅವರಲ್ಲಿನ ವಿಡಂಬನೆ, ತಿಳಿ ಹಾಸ್ಯ ಪ್ರಜ್ಞೆಗೆ ಸಾಕ್ಷಿ ಈ ಕವನ.

೧೯೭೭ರಲ್ಲಿ ನಮ್ಮ 'ನಟರಂಗ'ದ ಆಹ್ವಾನದ ಮೇರೆಗೆ ಬಿ.ವಿ. ಕಾರಂತರು 'ಚೆ ಗೆವಾರ' ಎಂಬ ವಿಶ್ವವಿಖ್ಯಾತ ಕ್ರಾಂತಿಕಾರಿಯನ್ನು ಕುರಿತ ನಾಟಕವನ್ನು ನಿರ್ದೇಶನ ಮಾಡಿದರು. ಆ ಚೆ ಗೆವಾರನ ಹತ್ಯೆ ಆಗಿ ಏಳೇ ವರ್ಷದೊಳಗೆ ಹತ್ತಾರು ಸಾವಿರ ಮೈಲು

ಗಳಾಚೆಯ ಬೆಂಗಳೂರಿನಲ್ಲಿ ಅವನನ್ನು ಕುರಿತ ನಾಟಕ. ನಾನೇ ಚೆ ಗೆವಾರನ ಪಾತ್ರ ಮಾಡಿದ್ದೆ. ನಾಟಕದ ಅಂತ್ಯಕ್ಕೆ ಒಂದು ಚಿಕ್ಕ ಹಾಡು ಬಂದರೆ ಒಳ್ಳೆಯದು ಎಂದರು ಕಾರಂತರು. ನಾನು 'ನಿಸಾರ್ ಅಹಮದ್ ಅವರನ್ನು ಕೇಳಿಕೊಳ್ಳೋಣ' ಎಂದು ಹೇಳಿದೆ. ಅಂತೆಯೇ ಅವರೊಂದು ಹಾಡನ್ನು ಬರೆದುಕೊಟ್ಟರು.

'ಕ್ರಾಂತಿಗೆ ಯಾಕೆ ಸೇರಿದೆ ನೀನು,
ಕ್ರಾಂತಿಗೆ ಯಾಕೆ ಸೇರಿದೆ?
ಸ್ವಂತ ಸುಖಕ್ಕೆ ಬೆನ್ನು ತೋರಿ
ಬೆಂಕಿಗೆ ಯಾಕೆ ಹಾರಿದೆ? ||ಪಲ್ಲವಿ||

'ಬಂದೂಕಿನ ನಳಿಗೆ ಮೇಲೆ
ಹೊಳೆವ ಕಿರಣ ವ್ಯಕ್ತಿ ಬಾಳು—
ಹೇಗೋ ಎಂತೋ ಮುಗಿವ ಮೊದಲು,
ಲಕ್ಷ ಲಕ್ಷ ಜನರ ಗೋಳು
ಅಳಿಸಲೆಂದು ಸೇರಿದೆ
ಕ್ರಾಂತಿಗೆ ನಾನು ಸೇರಿದೆ||'

ನಿಸಾರ್ ಅಹಮದ್ ಅವರು ಬರೆದ ಈ ಗೀತೆ 'ಚೆ' (CHE) ಎಂಬ ಕ್ರಾಂತಿಕಾರಿಯ ದಾರುಣ ಹತ್ಯೆಯ ಸಂದರ್ಭದ ಅನಂತರ ಬರುತ್ತದೆ. ಎಲ್ಲ ಕ್ರಾಂತಿಕಾರಿಗಳ ಪರಮ ಧ್ಯೇಯ ಏನು, ಅದಕ್ಕಾಗಿ ಅವರು ಅರ್ಪಿಸಬೇಕಾದ ತ್ಯಾಗ ಬಲಿದಾನ ಏನು? ಎಂಬುದನ್ನು ಇಷ್ಟು ಅಡಕವಾಗಿ, ಸೂಕ್ತಿಯಂತೆ ಹೊಳೆವ ಧ್ಯೇಯ ವಾಕ್ಯಾಗಿ ಕವನ ಬೆಳಗುತ್ತದೆ. ನಿಸಾರ್ ಅವರು ಬರೆದು ಕೊಟ್ಟ ಈ ಹಾಡು ನಾಟಕಕ್ಕೆ ಸೂಕ್ತವಾದ ಮುಕ್ತಾಯವನ್ನು ನೀಡಲು ಸಹಕಾರಿ ಆಯಿತು.

'ಮಾಸ್ತಿ' ಅವರನ್ನು ಕುರಿತು ಬರೆದ ಇವರ ಕವನ ಪ್ರಖ್ಯಾತಿ ಗಳಿಸಿದೆ. ಮಾಸ್ತಿ ಅವರನ್ನು ಹತ್ತಿರದಿಂದ ಬಲ್ಲ ನನಗೆ, ಅವರು ಹೆಗಲ ಮೇಲೆ ಕೊಡೆ ಏರಿಸಿ ಸಂಜೆ ಗಾಂಧಿ ಬಜಾರಿನ ಮೂಲಕ ಕ್ಲಬ್ಬಿಗೆ ಹೋಗಿ ಬರುವುದನ್ನು ಕಂಡಿದ್ದ ಸಹಸ್ರಾರು ಜನರಿಗೆ ಈ ಪದ್ಯ ಒಂದು ಕಿರು ಚಲನ ಚಿತ್ರದಂತೆ ಬಿಚ್ಚಿಕೊಳ್ಳುತ್ತದೆ. ಕವಿ ಎಷ್ಟೊಂದು ವಿವರಗಳನ್ನು ಸೂಕ್ಷ್ಮವಾಗಿ, ಆಪ್ತವಾಗಿ, ತಿಳಿ ನಗೆಯನ್ನೂ ಕೂಡಿದ್ದಾಗಿ ಬಿಡಿಸಿದ್ದಾರೆ.

'ಕ್ಲಬ್ಬಿನಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು—ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು.'

ಮಾಸ್ತಿ ಅವರು ತಮ್ಮ ಜೀವನ ಹೇಗೆ ನಡೆಸಿದರೆಂದರೆ;

'ಇನ್ನಿವರ ಜೀವನ? ಅದು ಕೂಡ ಹೀಗೆಯೆ
ಎಲ್ಲ ಖುಲ್ಲ
ಖುಷಿಗಷ್ಟೆ ನಫೆಗಲ್ಲ.'

ಇಲ್ಲಿ 'ಜೀವನ' ಎನ್ನುವುದು ಶ್ಲೇಷಾರ್ಥದಲ್ಲಿ ಬಳಕೆಯಾಗಿರುವುದನ್ನು

ಗಮನಿಸಬೇಕು. ಆ ಹೆಸರಿನ ಮಾಸಿಕವೊಂದನ್ನು ಅವರು ಯಾವುದೇ ಲಾಭವಿಲ್ಲದೆ, ಕೇವಲ ಗಂಭೀರ ಹಾಗೂ ಶುದ್ಧ ಸಾಹಿತ್ಯದ ಪ್ರಸಾರಕ್ಕಾಗಿ ಸಂಪಾದಿಸಿ, ಪ್ರಕಟಿಸಿದರು.

ಮಾಸ್ತಿ ಗಾಂಧಿ ಬಜಾರ್‌ನ ಚೌಕ ದಾಟಿ ಬೀದಿ ತಿರುಗನ್ನು ಹೊಕ್ಕಾಗ ಕವಿಗೆ ಅನಿಸುತ್ತದೆ:

'ಮರೆಯಾಗುವವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ
ಸರಳ ಸದಭಿರುಚಿಯ ಖ್ಯಾತಿಯಂತೆ'

ಮಾಸ್ತಿ ಅವರಂಥ ಹಿರಿಯ ಜೀವಕ್ಕೆ ನಿಸಾರ್ ನೀಡಿದ್ದು ಈ ಕಾವ್ಯ ಕಾಣಿಕೆ.

ಇನ್ನು ನಿಸಾರ್ ಅವರು ನನಗಿತ್ತ ಎರಡು ಬ್ಯೂಟಿಫುಲ್ ಬಳುವಳಿಗಳ ಬಗ್ಗೆ ಹೇಳಬೇಕು. ಷೇಕ್ಸ್‌ಪಿಯರ್ ವಿಶ್ವದ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬ. ಅವನ ಹಲವಾರು ನಾಟಕಗಳು ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದವೋ ರೂಪಾಂತರವೋ ಆಗಿ ಅವತಾರವೆತ್ತಿ ನಾಟಕ ಸಾಹಿತ್ಯವನ್ನೂ ರಂಗಭೂಮಿಯನ್ನೂ ಶ್ರೀಮಂತಗೊಳಿಸಿವೆ. ಕನ್ನಡ ದಲ್ಲೂ ಒಂದು ಶತಮಾನಕ್ಕೆ ಹಿಂದಿನಿಂದಲೂ ಷೇಕ್ಸ್‌ಪಿಯರನೊಂದಿಗೆ ಒಡನಾಟ ನಡೆದಿದೆ. ಬಹಳವಾಗಿ ರೂಪಾಂತರಗಳು. 'ರಾಮವರ್ಮ ಲೀಲಾವತಿ', 'ಶೂರಸೇನ ಚರಿತ್ರೆ', 'ಪ್ರಮೀಳಾರ್ಜುನೀಯಮ್', 'ರಕ್ತಾಕ್ಷಿ', 'ಬಿರುಗಾಳಿ'—ಇತ್ಯಾದಿ. ಒಂದೆರಡು ನೇರ ಭಾಷಾಂತರ ಇದ್ದರೂ (ಉದಾ: ಡಿ.ವಿ.ಜಿ ಅವರ 'ಮ್ಯಾಕ್‌ಬೆತ್') ಅವು ಹಳೆಗನ್ನಡದಲ್ಲಿ. ಮೌಲಿಕವೇ ಆಗಿದ್ದರೂ ರಂಗಸ್ಥಳದಲ್ಲಿ ಸಂವಹನ (ಅಸಾಧ್ಯವಲ್ಲದಿದ್ದರೂ) ಕೊಂಚ ತೊಡಕೇ.

ನನಗೆ ಬಹು ದಿನದ ಆಸೆಯಿತ್ತು. ಷೇಕ್ಸ್‌ಪಿಯರ್ ನಾಟಕವನ್ನು ತದ್ವತ್ತಾಗಿ ರಂಗದ ಮೇಲೆ ತರಬೇಕು, ಅದು ಆಧುನಿಕ ಕನ್ನಡವಾಗಿರಬೇಕು. ಜೊತೆಗೇ ಅವನ ಕಾವ್ಯಶಕ್ತಿಯನ್ನು ಸಾಧ್ಯವಾದಷ್ಟೂ ಹಿಡಿದಿರಬೇಕು. ಅಂತಹ ಅನುವಾದವನ್ನು ಮಾಡಿಕೊಡುವವರು ಯಾರು? ಆ ವೇಳೆಗಾಗಲೇ ಬಲು ಪರಿಚಿತರೂ ಆಪ್ತರೂ ಆಗಿದ್ದ ನಿಸಾರ್ ಅಹಮದ್ ಅವರನ್ನು ನಾನು ಕೇಳಿಕೊಂಡೆ. ಮೊದಲಿಗೆ ಅವರು ಒಪ್ಪಲಿಲ್ಲ. ನಾಟಕ ತಮ್ಮ ಕ್ಷೇತ್ರ ಅಲ್ಲ. ಅದರಲ್ಲೂ ಷೇಕ್ಸ್‌ಪಿಯರ್‌ನನ್ನು ಮುಟ್ಟುವುದು ಸಾಧ್ಯವಿಲ್ಲ ಎಂದರು. ನಾನು ಬಿಡಬೇಕಲ್ಲ. ಕೊನೆಗೆ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕದ ಒಂದೆರಡು ದೃಶ್ಯಗಳನ್ನು ಅನುವಾದ ಮಾಡಿ ನೋಡುತ್ತೇನೆ. ನನಗೂ, ನಿಮಗೂ ಚೆನ್ನಾಗಿದೆ ಅನಿಸಿದರೆ ಮುಂದುವರೆಸುತ್ತೇನೆ—ಅಂದರು. ಹಲವು ದಿನಗಳ ಅನಂತರ ಗೆಳೆಯ ಬಿ.ಕೆ. ಪಾರ್ಥಸಾರಥಿಯ ಗಾಂಧಿ ಬಜಾರ್ ಮನೆಯಲ್ಲಿ ಓದಿದರು. (ಮತ್ತೆ ನೋಡಿ, ಗಾಂಧಿ ಬಜಾರಿನ ನಂಟು ಹೇಗಿದೆ!) ನಾನು, ಕಪ್ಪಣ್ಣ, ಚಿಂತಾಮಣಿಗೆ ಖುಷಿಯೋ ಖುಷಿ. ಸಂವಹನಶೀಲ ಕನ್ನಡದಲ್ಲಿ, ಸುಂದರ ಕಾವ್ಯದ ಸೊಬಗಿನಲ್ಲಿ ನಿಸಾರ್ ಅವರು ಷೇಕ್ಸ್‌ಪಿಯರನನ್ನು ಅನುವಾದಿಸಿದ್ದರು. ಸ್ವತಃ ಕವಿಗಳಿಗೂ ಕೇಳುಗರಾದ ನಮಗೂ ಖುಷಿಯಾಯಿತು ಎಂದ ಮೇಲೆ ಇನ್ನೇನು? ತಿಂಗಳೊಪ್ಪತ್ತಿನಲ್ಲಿ ಪೂರ್ಣ ನಾಟಕವನ್ನು ಸಿದ್ಧ

ಮಾಡಿಕೊಟ್ಟರು. ನಮ್ಮ 'ನಟರಂಗ' ತಂಡದಿಂದ ಎಪ್ಪತ್ತ ನಾಲ್ಕನೆಯ ಇಸವಿಯಲ್ಲಿ ರಂಗಕ್ಕೆ ಏರಿತು. ಷೇಕ್ಸ್‌ಪಿಯರ್ ನಾಟಕವನ್ನು ನಿರ್ದೇಶನ ಮಾಡುವ ನನ್ನ ಬಹು ಕಾಲದ ಕನಸು ನನಸಾಯಿತು. ಕನ್ನಡದಲ್ಲಿ ಮೊಟ್ಟ ಮೊದಲ ಬಾರಿಗೆ ಷೇಕ್ಸ್‌ಪಿಯರ್‌ನ ಪಕ್ಕಾ ಕನ್ನಡಾನುವಾದವನ್ನು ಅತ್ಯಂತ ಯಶಸ್ವಿಯಾಗಿ ಹಾಗೂ ಲೆಕ್ಕವಿಲ್ಲದಷ್ಟು ಬಾರಿ ನೆರವೇರಿಸಿದ ಹೆಮ್ಮೆ ನನಗಿದೆ.

ನಿಸಾರ್ ಅವರ ಅನುವಾದಕ್ಕೆ ಸುಲಲಿತ ಕನ್ನಡ ಕಾವ್ಯಶೈಲಿಯ ಸೊಬಗಿಗೆ ಒಂದಷ್ಟು ಉದಾಹರಣೆ:—

'ಮನ್ಮಥನ ಬಲಿಷ್ಠ ಬಿಲ್ಲಿನಾಣೆ,
ಅವನ ಶ್ರೇಷ್ಠ ಬಾಣದ ಮೊನೆಯ ಬಂಗಾರದಾಣೆ,
ಪ್ರೇಮಾಧಿದೇವತೆ ವೀನಸಳ ರಥ ಎಳೆವ
ಮುಗ್ಧ ಪಾರಿವಾಳಗಳಾಣೆ,
ಸ್ತ್ರೀಯರೀ ತನಕ ಮುರಿದ ವಚನಗಳಿಗಿಂತ
ನೂರ್ಮಡಿಯೆನ್ನಿಸುವ ಪುರುಷರ ತಪ್ಪಿದಾಣೆಗಳೆಲ್ಲದರ ಆಣೆ.'

'ನೀನೆ ಅಲ್ಲವೆ ಅಣ್ಣಾ, ಆ ಘಟಿಂಗ,
ಪಕ್ ಹೆಸರಿನ ಠಕ್ಕ, ಕಿಲಾಡಿ ರಂಗ?'

'ಅಡಿಕೆ ಮರವ ತಬ್ಬಿದಂತೆ
ವೀಳ್ಯದೆಲೆಯು ಹಂಬು.'

—ಇಂಥ ನೂರಾರು ಸಾಲುಗಳಲ್ಲಿ ಷೇಕ್ಸ್‌ಪಿಯರನ ಕಾವ್ಯಕ್ಕೂ ಹತ್ತಿರವಾಗಿ, ಕನ್ನಡದ ಈ ನೆಲದ ಜಾಯಮಾನಕ್ಕೂ ನಿಷ್ಠರಾಗಿ ಜಂಟಿಯಾಗಿ ನಿಸಾರ್ ಅಹಮದ್ ಸಾರ್ಥಕ ಅನುವಾದವನ್ನು ಸಾಧಿಸಿಬಿಟ್ಟರು. ಈ ಪ್ರಯೋಗ, ಪ್ರೇಕ್ಷಕರಿಗೆ ಬಲು ಮೆಚ್ಚುಗೆ ಆಯಿತು. ನವ ದೆಹಲಿ, ಮದ್ರಾಸಿನಲ್ಲೂ ಜನ ನೋಡಿ ಸಂತೋಷಪಟ್ಟರು. ಬಿ.ಎಲ್.ಟಿ. ಎಂಬ ಇಂಗ್ಲಿಷ್ ನಾಟಕ ಸಂಸ್ಥೆಯಲ್ಲಿ ನನಗೆ ಆಪ್ತರಾಗಿದ್ದ ಶೋನಾ ಅಧಿಕಾರಿ ಎಂಬ ಬಂಗಾಳಿ ಮಹಿಳೆಯನ್ನು ಕೇಳಿಕೊಂಡೆ. ಈ ನಾಟಕದ ಯಕ್ಷರು, ಕಾರ್ಮಿಕ ವರ್ಗ ಮತ್ತು ರಾಜ ವರ್ಗಕ್ಕೆ ಮೂರು ವಿಧದ ವಸ್ತುವಿನ್ಯಾಸವನ್ನು ಮಾಡಿದ್ದರು. ಈ ನಾಟಕದಲ್ಲಿ ಗೋಡೆಯ ಪಾತ್ರ ಮಾಡಿದ್ದ ಲಕ್ಷ್ಮೀನಾರಾಯಣ್‌ಗೆ 'ಗೋಡೆ' ಎಂಬ ಅಡ್ಡ ಹೆಸರು ಖಾಯಮ್ಮಾಯಿತು.

ಒಂದು ಸ್ವಾರಸ್ಯದ ಸಂಗತಿಯನ್ನು ಹೇಳಬೇಕು. ನಾಟಕ ನೋಡಿದ ಡಾ|| H.N. ಅವರು ಹೇಳಿದರಂತೆ 'ನಿಸಾರ್ ಅಹಮದ್ ಅವರೆ, ನಿಮ್ಮ ನಾಟಕವನ್ನು ಆ ಷೇಕ್ಸ್‌ಪಿಯರ್ ಇಂಗ್ಲಿಷಿಗೆ ಅನುವಾದ ಮಾಡಿಬಿಟ್ಟಿದ್ದಾನೆ ನೋಡ್ರೀ'. ಆಗ ನಿಸಾರ್ ಅವರು 'ಸಾರ್, ಆ ಷೇಕ್ಸ್‌ಪಿಯರನೆಲ್ಲಿ? ನಾನೆಲ್ಲಿ?' ಅಂದರಂತೆ. ತಾತ್ಪರ್ಯ ಏನೆಂದರೆ, ಕನ್ನಡಾನುವಾದ ಅಷ್ಟು ಸೊಗಸಾಗಿ ಸಾರ್ಥಕವಾಗಿ ಬಂದಿದೆ ಅಂತ.

ಈ ಕಾಮಿಡಿ ನಾಟಕವನ್ನು ಮಾಡಿದ ಮೇಲೆ ನನಗೆ ಷೇಕ್ಸ್‌ಪಿಯರ್ ಬರೆದ ನಾಲ್ಕು

ಶ್ರೇಷ್ಠ ಟ್ರಾಜಿಡಿಗಳಲ್ಲಿ ಒಂದಾದ 'ಒಥೆಲೊ' ಮಾಡುವ ಹಂಬಲ ತೀವ್ರವಾಯಿತು. ನಿಸಾರ್ ಅವರಿಗೂ ಉತ್ಸಾಹ, ಉಮೇದು ತುಂಬಿತು. ಬಹಳ ಬಿಗಿಯಾದ ಭಾಷಾಬಂಧದಲ್ಲಿ ಭಾಷಾಂತರ ಮಾಡಿಕೊಟ್ಟರು.

ಕೊನೆಯ ದೃಶ್ಯ. ಪತ್ನಿ ಡೆಸ್ಡೆಮೋನ ಹಾಸಿಗೆಯಲ್ಲಿ ಮಲಗಿ ನಿದ್ರಿಸಿದ್ದಾಳೆ. ಒಥೆಲೊ ತನ್ನ ಕೈಲಿ ದೀಪ ಹಿಡಿದು ಕೋಣೆಯೊಳಗೆ ಬರುತ್ತಾನೆ. ತನಗೆ ದ್ರೋಹ ಬಗೆದಳೆಂದು ತಪ್ಪಾಗಿ ಭಾವಿಸಿ, ಪತ್ನಿಯನ್ನು ಕೊಲ್ಲುವ ನಿರ್ಧಾರ ಮಾಡಿದ್ದಾನೆ. ಆಗ ಅವನ ಮನದ ತುಮುಲ ಈ ಮಾತುಗಳಲ್ಲಿ ಧ್ವನಿಪೂರ್ಣವಾಗಿ ಹೊಮ್ಮುತ್ತದೆ:

'Put out the light, and then put out the light'

ಇಲ್ಲಿ ಎರಡು ದೀಪ, ಜ್ಯೋತಿಗಳಿವೆ. ಒಂದು ಕೈಯಲ್ಲಿ ಹಿಡಿದಿರುವುದು, ಮತ್ತೊಂದು ಮಂಚದಲ್ಲಿ ಮಲಗಿರುವುದು (ಪತ್ನಿ ಡೆಸ್ಡೆಮೋನಳ ಜೀವಕ್ಕೆ ಅನ್ವಯಿಸಿದ್ದು).

ಷೇಕ್ಸ್‌ಪಿಯರಿಗೂ ಹತ್ತಿರವಾಗಿ, ನಮ್ಮದೇ ನುಡಿಕಟ್ಟು ಸಂಸ್ಕಾರವನ್ನೂ ಒಳಗಂಡದ್ದಾಗಿ ನಿಸಾರರ ಅನುವಾದ ಹೀಗಿದೆ;

'ಮೊದಲು ಜ್ಯೋತಿಯನ್ನಾರಿಸುತ್ತೇನೆ
ಬಳಿಕ ಜೀವಜ್ಯೋತಿಯನ್ನಾರಿಸುತ್ತೇನೆ.'

ಒಥೆಲೊನ ಸ್ವಗತ ಮುಂದುವರೆಯುತ್ತದೆ:

'ನಿನ್ನನ್ನಾರಿಸಿದೆನೇ, ಓ ಪ್ರಕಾಶದಾಯಿನಿಯೆ,
ಮರುಗಿ ಮನಸ್ಸು ಬದಲಾಯಿಸಿದರೆ
ಪುನಃ ಆ ದೀಪ್ತಿಯನ್ನ ಮರಳಿಸಬಲ್ಲೆ.
ಆದರೊಮ್ಮೆ ನಿನ್ನ ಬೆಳಕನ್ನ ನಂದಿಸಿದೆನೋ,
ಓ! ಪ್ರಕೃತಿಯ ಪರಮೋತ್ಕೃಷ್ಟ ಹಸ್ತಕೌಶಲದ ಮಹಾ ಚತುರ ಮಾದರಿಯೆ,
ನಿನ್ನನ್ನ ಪುನರುದ್ದೀಪಿಸಬಲ್ಲ
ಆ ಸ್ವರ್ಗೀಯ ಕಿಚ್ಚೆಲ್ಲಿರುವುದೋ ಕಾಣೆ'

ಷೇಕ್ಸ್‌ಪಿಯರನ ಮಾತುಗಳಿಗೆ ಒಂದು ಮಹತ್ತು, ಒಂದು ಬಂಧ, ಒಂದು ಲಯ ಉಂಟು. Dramatic ಮತ್ತು Poetic ಎರಡೂ ಒಗ್ಗೂಡಿ. ನಿಸಾರ್ ಅಹಮದ್ ಅವರ ಅನುವಾದದ ಸಾರ್ಥಕತೆಗೆ ಇಂತಹ ಅನೇಕ ಉದಾಹರಣೆಗಳುಂಟು, 'ಒಥೆಲೊ' ನಾಟಕದಲ್ಲಿ. ನಿರ್ದೇಶಕನಾಗಿ, ಜೊತೆಗೇ ನಟನೂ ಆಗಿ ನನ್ನಲ್ಲೂ ಒಂದು ಸಾರ್ಥಕ ಭಾವ ತುಂಬಿತು, ಈ ನಾಟಕವನ್ನು ಮಾಡಿ.

'ನಟರಂಗ'ದ ಪ್ರದರ್ಶನಗಳಲ್ಲಿ ಇನ್ನೂ ಒಂದು ಹೊಸ ಪ್ರಯೋಗವನ್ನು ಮಾಡಿದೆ. ಒಂದು ಸಂಜೆ ನಾನು ಒಥೆಲೊ ಪಾತ್ರ, ಲೋಕೇಶ್‌ಗೆ ಇಯಾಗೊ ಪಾತ್ರ. ಮಾರನೆಯ ಸಂಜೆ ಅವನು ಒಥೆಲೊ, ನಾನು ಇಯಾಗೊ. ಎರಡೂ ಪಾತ್ರಗಳ ಜಗತ್ತನ್ನು ಇಬ್ಬರೂ ಹಿಡಿಯೋಣ ಎಂದು. ಹೀಗೆ ಆರು ಸಂಜೆ. ಮುಂದೆ ಲೋಕೇಶ್ ಚಲನ ಚಿತ್ರರಂಗದಲ್ಲಿ ಹೆಚ್ಚು ನಿರತನಾಗಬೇಕಾಗಿ ಬಂತು. ನಾನು ಒಥೆಲೊ, ವೆಂಕಟರಾವ್ ಇಯಾಗೊ, ಗಿರಿಜಾ

ಲೋಕೇಶ್ ಡೆಸ್ಡೆಮೋನ ಆಗಿ ಅನೇಕ ಪ್ರದರ್ಶನಗಳು ಆದವು. ಶ್ರೀನಿವಾಸ್ ಜಿ. ಕಪ್ಪಣ್ಣನ ಲೈಟಿಂಗ್ ವಿನ್ಯಾಸ ವಿಶೇಷವಾಗಿತ್ತು. ಹಾಗೆಯೇ ಪ್ರೇಮಾ ಕಾರಂತ ಅವರ ವಸ್ತುವಿನ್ಯಾಸ ಕೂಡ.

ಕೆ. ಎಸ್. ನಿಸಾರ್ ಅಹಮದ್ ಅವರು ಅನುವಾದಿಸಿದ ಈ ಎರಡೂ ನಾಟಕಗಳು, ಹಾಗೆಯೇ ಅವೆರಡರ ಯಶಸ್ವಿ ಪ್ರಯೋಗಗಳಾದದ್ದು ಕರ್ನಾಟಕದ ಹವ್ಯಾಸಿ ರಂಗಭೂಮಿಯಲ್ಲಿ ಚಾರಿತ್ರಿಕ ಘಟ್ಟಗಳೆಂದು ಪರಿಣತರು ಗುರುತಿಸಿದ್ದಾರೆ ಎಂಬುದನ್ನು ವಿನಯಪೂರ್ವಕವಾಗಿ ನಮೂದಿಸಲು ಬಯಸುತ್ತೇನೆ. ಇದಾದ ಅನಂತರವೇ ಮತ್ತೆ ಹಲವು ಷೇಕ್ಸ್‌ಪಿಯರ್‌ನ ನಾಟಕಗಳು ಇತರರಿಂದ ಭಾಷಾಂತರಗೊಂಡು ಪ್ರಯೋಗಗಳಾದವು ಎಂಬುದನ್ನೂ ದಾಖಲಿಸಲು ಇಚ್ಛಿಸುತ್ತೇನೆ.

ಎರಡು ಸಾವಿರದ ನಾಲ್ಕನೆಯ ಇಸವಿಯಲ್ಲಿ ಅಮೇರಿಕಾದ ಫ್ಲಾರಿಡಾದಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ನಾನೂ ಭಾಗವಹಿಸಿದ್ದೆ. ಅಲ್ಲಿ ಒಂದು ಸ್ವಾರಸ್ಯಕರ ಪ್ರಸಂಗ ನಡೆಯಿತು. ಸಮ್ಮೇಳನ ನಡೆದಿದ್ದ ಹೊಟೇಲ್ ಅಂಗಳದಲ್ಲಿ ನೂರಾರು ಜನ. ಯಾರೊಂದಿಗೋ ಮಾತನಾಡುತ್ತಿದ್ದೆ. ಒಬ್ಬ ಮಧ್ಯ ವಯಸ್ಕ ವ್ಯಕ್ತಿ, ದೂರ ನಿಂತು ಗಮನಿಸುತ್ತಿದ್ದಾತ ಹತ್ತಿರ ಬಂದು ಪರಿಚಯ ಮಾಡಿಕೊಂಡರು. ಆತ ವೆಂಕಟೇಶ್, ಕಾಲು ಶತಮಾನದಿಂದ ಅಲ್ಲೇ ನೆಲೆಸಿದ್ದ ಇಂಜಿನಿಯರ್. ನಾನು ನನ್ನ ಹೆಸರು ಹೇಳಿದೆ. ಆತ ಅವಾಕ್ಕಾಗಿ ಮೂರು ಕ್ಷಣ ಮೌನ. 'ಹಿಂದೆ, ಒಥೆಲೊ ಪಾತ್ರ ಮಾಡಿದ್ದ ಸಿ. ಆರ್. ಸಿಂಹಾ ನೀವೇನಾ? ಕ್ಷಮಿಸಬೇಕು. ಆ ನಟ ಇನ್ನೂ ಈಗಲೂ ಬದುಕಿರಬಹುದು ಅಂತ ನಾನು ಭಾವಿಸಿರಲಿಲ್ಲ. ಆಗಲೇ ಆತನಿಗೆ ಮಧ್ಯ ವಯಸ್ಸು ದಾಟಿತ್ತೆಂದು ಎಣಿಸಿದ್ದೆ!' ಎಂದು ಆತ ಹೇಳಿದರು. ನಾನು ನಗುತ್ತಲೇ ಸ್ವೀಕರಿಸಿದೆ. ವೆಂಕಟೇಶ್ ಆಗ ಇಂಜಿನಿಯರಿಂಗ್ ಓದುತ್ತಿದ್ದರಂತೆ ಬೆಂಗಳೂರಿನಲ್ಲಿ. ಆ ಸಂಜೆ ನೋಡಿದ ಒಥೆಲೊ ಸುಮಾರು ಮೂರು ದಶಕ ಕಳೆದ ಮೇಲೂ ಖಚಿತವಾಗಿ ನೆನಪಿನಲ್ಲಿ ಉಳಿದೇಹೋಗಿದೆ ಎಂದರು. ಒಬ್ಬ ನಿರ್ದೇಶಕ ನಟನಿಗೆ ಇದಕ್ಕಿಂತ ಸಾರ್ಥಕವಾದ, ಧನ್ಯವಾದ ಗಳಿಗೆ ಯಾವುದಿದೆ? ಅದರಿಂದ ನಾಲ್ಕಾರು ಸಂಭಾಷಣೆಗಳನ್ನೂ ಆತ ಉದ್ಧರಿಸಿದಾಗ, ಕವಿ ನಿಸಾರ್ ಅಹಮದ್ ಅವರ ಅನುವಾದದ ಪ್ರಭಾವ ಎಷ್ಟೆಂದು ಸಂತೋಷಗೊಂಡಿದ್ದಿದೆ.

'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕವನ್ನು ತೊಂಬತ್ತೆರಡನೆಯ ಇಸವಿಯಲ್ಲಿ ನಮ್ಮ 'ನಟರಂಗ'ದ ಯುವ ಕಲಾವಿದರ ಗುಂಪಿಗೆಂದೇ ಮತ್ತೆ ನಿರ್ದೇಶನ ಮಾಡಿದ್ದೆ. ಹತ್ತಾರು ಪ್ರಯೋಗಗಳು ಆದವು. ಮತ್ತೆ ಎರಡು ಸಾವಿರದ ನಾಲ್ಕನೆಯ ಇಸವಿಯಲ್ಲಿ ನಮ್ಮ 'ವೇದಿಕೆ' ತಂಡಕ್ಕೆ ನನ್ನ ಮಗ ಋತ್ವಿಕ್ ಸಿಂಹ ವಿನೂತನ ರೀತಿಯಲ್ಲಿ ಪ್ರಯೋಗಿಸಿದ. ಪ್ರದರ್ಶನಗಳು ನಡೆದೇ ಇವೆ. ಈ ಎಳೆಯರ ಪರಿಶ್ರಮಪೂರ್ಣ ಪ್ರಯತ್ನವನ್ನು ಸ್ವತಃ ನಿಸಾರರು ಕಂಡು ಹರ್ಷಚಿತ್ತರಾಗಿ, ಅವರನ್ನು ಹರಸಿದ್ದಾರೆ.

ನಲವತ್ತು ವರ್ಷದ ನಂಟು ನಮ್ಮ ನಿಸಾರ್ ಅಹಮದ್ ಅವರೊಂದಿಗೆ. ಅವರ ಸ್ನೇಹವನ್ನೂ ಸವಿದಿದ್ದೇನೆ. ಹಾಗೆಯೇ 'ಈದ್' ಸಮಯದಲ್ಲಿ ಅವರ ಮಡದಿ

ಉಣಬಡಿಸಿದ ವಿಶೇಷ ಭೋಜನವನ್ನೂ ಸವಿದಿದ್ದೇನೆ. ಈಗ ಕವಿಗಳು ಎಪ್ಪತ್ತು ದಾಟಿದ್ದಾರೆ. ಆಯುರಾರೋಗ್ಯ ಭಾಗ್ಯ ಅವರದಾಗಲಿ. ಅವರಿಗೆ 'ಶತಮಾನಂ ಭವತಿ' ಅನ್ನುವಂತೆಯೇ, ಅವರ ಕಾವ್ಯಕ್ಕೆ 'ತುಮ್ ಜೀಯೋ ಹಜಾರೋಂ ಸಾಲ್' ಎಂಬ ಆಶಯವನ್ನೂ ಅರ್ಪಿಸುತ್ತಿದ್ದೇನೆ.

ಸಾಹಿತ್ಯದಲ್ಲಿ ಅತ್ಯುತ್ತಮ ಕೃತಿಗಳ ವಿವೇಚನೆ ಪರೀಕ್ಷೆಯ ಉತ್ತರ ಪತ್ರಿಕೆಯ ಮೌಲ್ಯಮಾಪನದಷ್ಟು ಸುಸೂತ್ರವಾಗಲಿ ಸಡಿಲವಾಗಲಿ ಅಲ್ಲ. ಸರ್ವೋತ್ಕೃಷ್ಟ ಮತ್ತು ಉತ್ಕೃಷ್ಟ ಗ್ರಂಥಗಳ ಮಧ್ಯೆ ವ್ಯತ್ಯಾಸ ಹೇಗೆ ತೆಳುವೋ, ಉತ್ಕೃಷ್ಟ ಹಾಗೂ ಸಾಧಾರಣ ಗ್ರಂಥಗಳ ನಡುವಣ ಅಂತರವೂ ತೆಳುವಾಗಿರಲು ಸಾಧ್ಯ. ಸ್ವಲ್ಪ ಒರಟಾದ ಉದಾಹರಣೆ ನೀಡಬಹುದಾದರೆ ಪಂದ್ಯದಲ್ಲಿ ಮೊದಲನೆಯ ಸ್ಥಾನ ಪಡೆದ ಕುದುರೆಗೂ ಎರಡನೆಯದಿರಲಿ ಐದನೆಯ ಸ್ಥಾನ ಗಳಿಸಿದ್ದಕ್ಕೂ ಹಲವು ಸಲ ವ್ಯತ್ಯಾಸವಿರುವುದು ಅಂಗುಲಕ್ಕಿಂತ ಕಡಮೆ ಅಂತರದಲ್ಲಿ ಮಾತ್ರ! 'ನೆಕ್ ಟು ನೆಕ್ ಫಿನಿಷ್', 'ಫೋಟೋ ಫಿನಿಷ್' ಅನ್ನುತ್ತಾರಲ್ಲ, ಹಾಗೆ.

(ಸಾಹಿತ್ಯ ಕೃತಿಗಳ ಮೌಲ್ಯಮಾಪನ)

✧ ✧ ✧

ಸಾಮಯಿಕ ಸಂಗತಿಗಳ ಸಾದರ ಪಡಿಸುವಿಕೆ ಪ್ರಥಮ ಉದ್ದೇಶವಾಗಿರುವ ಪತ್ರಿಕಾ ಮನೋದೃಷ್ಟಿಯ ಇಂದಿನ ಬಹುತರ ಲಿಖಾವಟ್ಟುಗಳಿಗೂ ಗಹನ ಜಾಯಮಾನದ ಮಹತ್ತರ ಸಾಹಿತ್ಯ ರಚನೆಗಳಿಗೂ ಇರುವ ವ್ಯತ್ಯಾಸಗಳಲ್ಲಿ ಗಣ್ಯವೆನ್ನಿಸಬೇಕಾದದ್ದು ಅವು ನೀಡುವ ನಲಿವು ಮತ್ತು ತಿಳಿವುಗಳ ನಡುವಣ ಅಂತಸ್ತಿನ ವಿವೇಚನೆ, ತಾರತಮ್ಯ ವಿವೇಕ. ಈ ಇಬ್ಬಗೆಯ ಲೇಖನ ಪ್ರಕಾರಗಳಲ್ಲಿ ಇವೆರಡು ಅಂಶಗಳು ಅಂತಸ್ಥವಾಗಿದ್ದರೂ ಒಂದರದು ಅಲ್ಪ ಪ್ರಮಾಣದ ತತ್ಕಾಲೀನ ಮಿಂಚಿನ ಅನುಭವ; ಮತ್ತೊಂದರದು ಅಧಿಕ ಪ್ರಮಾಣದ ನಿತ್ಯಸ್ವರೂಪದ ನಕ್ಷತ್ರಾನುಭೂತಿ. ನೀರಿಗೊಂದು ಕರ್ತವ್ಯವಿರುವಂತೆ ಪನ್ನೀರಿಗೊಂದು ಮೌಲ್ಯವಿರುತ್ತದೆ. ಇವೆರಡರ ಕಲಸುಮೇಲೋಗರ, ಇಲ್ಲವೇ ಸ್ಥಾನಮಾನದ ಅದಲುಬದಲಿಯಾದಾಗ ವಿಮರ್ಶೆ ಜಾಡು ತಪ್ಪಿ ಸಾಹಿತ್ಯದ ಪಥಿಕರನ್ನು ಕಂಗೆಡಿಸುತ್ತದೆ.

(ಪತ್ರಿಕಾ ಲೇಖನಗಳು ಮತ್ತು ಗಂಭೀರ ಸಾಹಿತ್ಯ)



ನಿಸಾರರ ಮಕ್ಕಳ ಸಾಹಿತ್ಯ ಕೃತಿಗಳ ನೆಲೆ-ಬೆಲೆ

♦ ಎಸ್. ವಿ. ಶ್ರೀನಿವಾಸರಾವ್

ಮಾಗಿದ ಮನಸ್ಸಿನ ನಿಸಾರರು ತಮ್ಮ ಅಪಾರ ಅನುಭವವನ್ನು ಮಥಿಸಿ ತೆಗೆದ ನವ ರಸಭರಿತ ಕಾವ್ಯ ಮಕರಂದವನ್ನು ಸರ್ವರಿಗೂ ಪ್ರಿಯವಾಗುವ ಮಾಧ್ಯಮದ ಬಾಳೆ ಎಲೆಯ ಮೇಲೆ ಉಣಬಡಿಸುತ್ತಿರುವುದಲ್ಲದೆ ಮಕ್ಕಳಿಗೆ ಪ್ರಿಯವಾಗುವ ಪಾಯಸವನ್ನು ಧಾರಾಳವಾಗಿ ಕುಡಿಯಲು ನೀಡಿದ್ದಾರೆ, ನೀಡುತ್ತಿದ್ದಾರೆ.

ಮಕ್ಕಳ ಮನಸ್ಸಿಗೆ ಪ್ರಿಯವಾಗುವ ವಸ್ತುವನ್ನು ಆಯ್ದು ಸುಮಧುರವಾದ ಪುಟ್ಟ ಪುಟ್ಟ ಪದಗಳ ಮೂಲಕ ಮಕ್ಕಳ ಮಾನಸಿಕ ನೆಲೆಯನ್ನು ತಟ್ಟಿ, ಕಂಪನವೆಬ್ಬಿಸಿ ಭವಿಷ್ಯ ಜೀವನಕ್ಕೆ ತಿಳಿ ಮಾತಿನಲ್ಲಿ ಮಾರ್ಗದರ್ಶನ ನೀಡುತ್ತಾರೆ. ನೀತಿಯ ಐಸ್‌ಕ್ಯಾಂಡಿಯನ್ನು ಚೀಪುವಂತೆ ಮಾಡುತ್ತಾರೆ. ಇದೇ ಅವರ ಸಾಹಿತ್ಯ ರಚನೆಯ ಒಳ ಗುಟ್ಟು. ಇದನ್ನೇ ಅವರ ಸಾಹಿತ್ಯ ರಚನೆಯ ಹೂರಣವೆಂದೂ ಹೇಳಬಹುದು.

ಯಾವ ಸಾಹಿತ್ಯ ಅಥವಾ ನುಡಿಗಟ್ಟನ್ನು ಮಕ್ಕಳು ಕೇಳಿ ಅಥವಾ ಓದಿ ಆನಂದ ಪರವಶರಾಗುವರೋ, ಪ್ರಚೋದಿತರಾಗುವರೋ; ಮಾನಸಿಕ ವಿಕಾಸಕ್ಕೆ ಒಳಗಾಗುವರೋ, ತಾದಾತ್ಮ್ಯ ಹೊಂದುವರೋ, ಕಲ್ಪನೆಯ ಕುದುರೆಯ ಬೆನ್ನೇರಿ ವಿಹರಿಸಬಯಸುವರೋ, ಭಾವೋದ್ರೇಕಗೊಂಡು ಬೆದರುವರೋ, ಬೆವರುವರೋ, ಕುಣಿಯುವರೋ—ಅಂತಹ ಪ್ರಚೋದನೆ ನೀಡುವ ಜೀವಾಂಶವೇ ಮಕ್ಕಳ ಸಾಹಿತ್ಯ. ಅಂದರೆ, ಮಕ್ಕಳ ಸಾಹಿತ್ಯದ ನೆಲೆ—ಮಾನವ ಮನಸ್ಸು. ಈ ಮನಸ್ಸೇ

ಸಾಹಿತ್ಯ ಸೃಷ್ಟಿಯ ಮೂಲ.

ಪ್ರಪಂಚದ ಅತಿ ಪ್ರಾಚೀನ ಭಾಷೆಯಾದ ಸಂಸ್ಕೃತವನ್ನು ಒಳಗೊಂಡು ಯಾವುದೇ ಆರ್ಷೇಯ ಭಾಷೆಯ ಸಾಹಿತ್ಯವನ್ನು ನಾವು ವಿಶ್ಲೇಷಿಸಿದರೂ ಮಕ್ಕಳಿಗೆಂದೇ ರಚಿತವಾದ ಪ್ರತ್ಯೇಕ ಸಾಹಿತ್ಯ ಪ್ರಕಾರ ಕಂಡುಬರುವುದಿಲ್ಲ. ಆದರೆ ನೀತಿ ಬೋಧನೆ, ಮನೋರಂಜನೆ ಹಾಗೂ ಮಾನಸಿಕ ವಿಕಾಸದ ದೃಷ್ಟಿಯಿಂದ ಆದ ಸಾಹಿತ್ಯ ರಚನೆ ವಿಪುಲವಾಗಿ ಎಲ್ಲೆಡೆ ಕಂಡುಬರುತ್ತದೆ. ಇವು ಮಕ್ಕಳಿಗೆ ಉಪಯುಕ್ತವಾಗಿರುತ್ತದೆ. ಸಾಹಿತ್ಯವೆಂದರೆ ವಾಚ್ಯ-ವಾಚಕಗಳ ಸಮ್ಮಿಳನ ಅಥವಾ ಸಹಿತ ಭಾವ. ಮನುಷ್ಯ ಮಾತನಾಡಲು ಕಲಿತಂದಿನಿಂದಲೂ ಒಂದುರೀತಿಯ ಸೃಜನಾತ್ಮಕ ಸಾಹಿತ್ಯ ಸೃಷ್ಟಿಯಾಗುತ್ತಲೇ ಇದೆ.

ಈ ಹಿನ್ನೆಲೆಯಲ್ಲಿ ಶ್ರೀ ನಿಸಾರರ ಸಾಹಿತ್ಯವನ್ನು ವಿಶ್ಲೇಷಿಸಿದರೆ ಅಪಾರ ಸಂಖ್ಯೆಯ ಅವರ ಕವನಗಳು ಮಕ್ಕಳ ಮನಸ್ಸನ್ನು ಮುದಗೊಳಿಸುವುದರೊಂದಿಗೆ ಅವರ ಸುಪ್ತ ಚೇತನವನ್ನೂ ಜಾಗ್ರತಗೊಳಿಸಲು ಶಕ್ತವಾಗಿರುವುದು ಅರಿವಾಗುತ್ತದೆ. ಇದೇ ಸಾರ್ಥಕ ಸಾಹಿತ್ಯದ ಗೆಲವು. ಆನಂದ, ಸಂತೃಪ್ತಿಯೇ ಇದಕ್ಕೆ ಸಲ್ಲುವ ಬೆಲೆ.

ಅವರ ಹಲವಾರು ಕೃತಿಗಳಲ್ಲಿ ಮಕ್ಕಳ ಮಾನಸಿಕ ತುಡಿತಕ್ಕೆ ತಕ್ಕಂತೆ ಆಶಯ ಮಿಡಿಯುವುದನ್ನು ಕಾಣುತ್ತೇವೆ.

ಉದಾಹರಣೆಗಾಗಿ ಕೆಲವು ಕವನಗಳ ತುಣುಕುಗಳನ್ನು ನೀಡುತ್ತಿದ್ದೇನೆ.

'ಪುಟ್ಟ ಕಂದನಿಗಮ್ಮ ಚಂದಮಾಮನ ತೋರಿ
ಒಲಿಸಿ ತಿನಿಸಿದ ತುಪ್ಪದನ್ನ ಬಾಲ್ಯ;
ನಿದ್ರಿಸಿತು ಪಾಪಚ್ಚಿ, ಇನ್ನು ಅಡಿಗೆಗೆ ಸಮಯ
ಎನ್ನುತಿರಲು, ಎವೆಮೊಗ್ಗಿನರಳು ಬಾಲ್ಯ.' (ಬಾಲ್ಯ)

'ಬೆಣ್ಣೆ ಕದ್ದ ನಮ್ಮ ಕೃಷ್ಣ,
ಬೆಣ್ಣೆ ಕದ್ದನಮ್ಮ,
ಬೆಣ್ಣೆಯ ಕದ್ದು ಜಾರುತ ಬಿದ್ದು
ಮೊಳಕಾಲೂದಿಸಿಕೊಂಡ,
ಬಿಂದಿಗೆ ಬಿದ್ದು ಸಿಡಿಯಲು ಸದ್ದು
ಬೆಚ್ಚಿದ ರಾಧೆಯ ಗಂಡ, ಬೆಣ್ಣೆ ಕದ್ದ...' (ಬೆಣ್ಣೆಗಳ್ಳ ಕೃಷ್ಣ)

'ಮನಮೋಹನ ಸುರ ರೂಪಿನ
ಚಿರ ಯೌವನ ಸುಂದರ
ಉಟ್ಟ ನೀಲಿ ನಿಲುವಂಗಿಯ
ಬೆಳ್ಳಿಗುಂಡಿ ಚಂದಿರ.' (ಒಂದು ಬೆಳ್ದಿಂಗಳು)

'ಮಣ್ಣಿನ ಹಣತೆ; ಬೆಳ್ಳಿಯ ಲೇಪ
ಸುಗ್ಗಿಯ ಇರುಳಲಿ ಹುಣ್ಣಿಮೆ ದೀಪ'
(ಹುಣ್ಣಿಮೆ ದೀಪ)

'ಕನ್ನಡವೆಂದರೆ ಬರಿ ನುಡಿಯಲ್ಲ
ಹಿರಿದಿದೆ ಅದರರ್ಥ;
ಜಲವೆಂದರೆ ಕೇವಲ ನೀರಲ್ಲ
ಅದು ಪಾವನ ತೀರ್ಥ.' (ಕನ್ನಡವೆಂದರೆ)

'ಕನ್ನಡ ಬರಿ ಕರ್ನಾಟಕವಲ್ಲ
ಅಸೀಮ, ಅದು ಅದಿಗಂತ
ದೇವರು ಕೇವಲ ವಿಗ್ರಹವಲ್ಲ
ಅಂತರ್ಭಾವ ಅನಂತ.' (ಅದೇ)

'ಭವಿಗಳ ಮೇಲಿರೆ ಅನುಭಾವಿಯ ಕೃಪೆ
ಕಳ್ಳಿಯೆ ಮಲ್ಲಿಗೆ ಬಳ್ಳಿ;
ಚಂದ್ರನ ಕಿರಣದ ನೆರವೊಂದಿದ್ದರೆ
ಕೊಚ್ಚೆಯ ಜಲವೂ ಬೆಳ್ಳಿ.' (ಸಹವಾಸ ಮಹಿಮೆ)

'ಅಬಕಾರಿಯಂಥ ಇಲಾಖೆಯಲ್ಲಿದ್ದೂ
ಅಳಿಯನ ಕೈ ಬಾಯಿ ಶುದ್ಧ;
ಯಾವ ಆಮಿಷಕ್ಕೂ ಮಾರುಹೋಗಲ್ಲ,
ಥೇಟ್ ಅಭಿನವ ಬುದ್ಧ.' (ಗುಣಗಾನ)

'ನನ್ನ ಕವನಗಳ ಭಾಷೆಯನ್ನು ನಾನು ಬೆವರು ಸುರಿಸಿ ಸಂಪಾದಿಸಿದ್ದೇನೆ' ಎನ್ನುವ ನಿಸಾರರ ಮಾತು ಪೂರ್ಣ ಸತ್ಯದ್ದು ಎಂದು ಅವರ ಕಾವ್ಯಭಾಷೆಯನ್ನು ಅವಲೋಕಿಸಿ, ಸಾಧಿಸಿರುವ ಸಿದ್ಧಿಯನ್ನು ಮನಗಂಡಿರುವ ಎಲ್ಲರಿಗೂ ಅರಿವಾಗುತ್ತದೆ. ಭಾವಜೀವಿಯೊಬ್ಬನ ಮಾನಸಿಕ ತುಮುಲ, ತುಡಿತಗಳನ್ನು ಬಣ್ಣದ ಕಾರಂಜಿಯಾಗಿ ಹೊರಹೊಮ್ಮಿಸುವ ಸಾಮರ್ಥ್ಯ ರೂಢಿಸಿಕೊಂಡಿರುವುದು ನಿಸಾರರ ಯಶಸ್ಸಿನ ಮುಖ್ಯ ಗುಟ್ಟು.

ಖ್ಯಾತ ಕವಿಯಾಗಿರುವ ನಿಸಾರರು ಮಕ್ಕಳ ಸಾಹಿತ್ಯವನ್ನೂ ಸಂಪನ್ನಗೊಳಿಸಿದ್ದಾರೆ. ಈ ದಿಸೆಯಲ್ಲಿ ಅವರ ಕೊಡುಗೆಗಳು: 'ಹಕ್ಕಿಗಳು', 'ಶಿಲೆಗಳು, ಖನಿಜಗಳು', 'Birds', 'Rocks and Minerals', 'ಪುಟ್ಟ ಸಂತರು ಮತ್ತು ಕಲಿಗಳು'. 'ಹಕ್ಕಿಗಳು' ಕೃತಿಗೆ ಭಾರತ ಸರ್ಕಾರದ ಎನ್.ಸಿ.ಇ.ಆರ್.ಟಿ.ಯಿಂದ ೧೯೭೭ರಲ್ಲಿ ರಾಷ್ಟ್ರೀಯ ಬಹುಮಾನ ಲಭಿಸಿದೆ. ಅದೇ ವರ್ಷ ಈ ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಹ ದೊರೆತಿದೆ. ಐಬಿಎಚ್ ಪ್ರಕಾಶನದ 'ವಿಜ್ಞಾನ ನೋಡಿ ಕಲಿ' ಪುಸ್ತಕ ಮಾಲೆಯಡಿ ಪ್ರಕಟಗೊಂಡಿರುವ ಈ ಕೃತಿಯಲ್ಲಿ ಬಹಳಷ್ಟು ಬಣ್ಣದ ಸುಂದರ ಚಿತ್ರಗಳಿವೆ. ಈ ಕೃತಿಯಲ್ಲಿನ ಸರಳ ಸುಂದರ ಭಾಷೆಗೆ ಉದಾಹರಣೆ:

'ಹಕ್ಕಿಯಂಥ ಸುಂದರ ಪ್ರಾಣಿ ಪ್ರಪಂಚದಲ್ಲಿ ಯಾವುದಿದೆ? ನವಿಲು ಗರಿಗೆದರಿ ನಿಂತಾಗ ಅದನ್ನು ಮೀರಿಸುವ ಪಕ್ಷಿ ಇದೆಯೆ? ಪಕ್ಷವುಳ್ಳದ್ದು 'ಪಕ್ಷಿ'. ಇದೇ ಹಕ್ಕಿ. ಪಕ್ಷ ಎಂದರೆ ರೆಕ್ಕೆ. ರೆಕ್ಕೆಗಳ ನೆರವಿನಿಂದ ಹಕ್ಕಿ ಹಾರಾಡಬಲ್ಲದು. ಆದರೆ ರೆಕ್ಕೆ ಇರುವ ಜೀವಿಗಳೆಲ್ಲ ಹಕ್ಕಿಗಳಲ್ಲ. ಚಿಟ್ಟೆ, ಹಾತೆ, ಜೇನು ನೊಣ, ಮಿಡತೆ ಕೂಡ ಹಾರಾಡಬಲ್ಲವು.

ಇವೆಲ್ಲ ಬೆನ್ನೆಲುಬಿಲ್ಲದ ಜೀವಿಗಳು (ಅಂದರೆ ಅಕಶೇರುಕಗಳು). ಅಲ್ಲದೆ ಉಷ್ಟ್ರಪಕ್ಷಿ, ಪೆಂಗ್ವಿನ್ ಮುಂತಾದವು ಪಕ್ಷಿಗಳಾದರೂ ಹಾರಲಾರವು.' 'ನೀನು ಪ್ರತಿದಿನ ನೋಡುವ ಗುಬ್ಬಚ್ಚಿ, ಕಾಗೆ, ಪಾರಿವಾಳ, ಗಿಳಿ, ಗೊರವಂಕ (ಮೈನಾ), ಬಾತು ಮೊದಲಾದವು ಹಕ್ಕಿಗಳೇ ಆದರೂ ಅವು ಬದುಕುವ ಬಗೆ, ಉಣ್ಣುವ ಉಣಿಸು, ಕಟ್ಟುವ ಗೂಡು ಒಂದಕ್ಕಿಂತ ಒಂದು ಬೇರೆ. ಅವುಗಳ ಅನುಕೂಲತೆಗೆ ತಕ್ಕಂತೆ ದೇಹದ ರಚನೆಯೂ ಬೇರೆ'

ಹಕ್ಕಿಯನ್ನು ಕವನದ ಮೂಲಕ ಹೀಗೆ ವರ್ಣಿಸಿದ್ದಾರೆ:

'ಕಡಲಾಳಗಳ ಮೇಲೆ ಜಾರಿ ಜಗಿಯುವ ಜಹಜ
ಹಿಂಬಾಲಿಸುವ ಸಂಗಾತಿ ಕಡಲ ಹಕ್ಕಿ;
ಬರಿಯ ಹಕ್ಕಯೆ? ಅಲ್ಲ, ಸ್ವಚ್ಛತೆಯ ಸಂಕೇತ;
ಎತ್ತರದೊಳಾಡುತಿರೆ ಬೆಳ್ಳಿ ಚುಕ್ಕಿ' **(ಕಡಲ ಹಕ್ಕಿ)**

ಶಿಲೆಗಳು ಮತ್ತು ಖನಿಜಗಳನ್ನು ಪರಿಚಯಿಸುವ ಪರಿ ನೋಡಿ, ಎಷ್ಟು ಆಕರ್ಷಕವಾಗಿದೆ.

'ಕಲ್ಲೆಂದು ಜರೆಯದಿರಿ' : ರಸ್ತೆ ರಿಪೇರಿ ಮಾಡುತ್ತಿರುವಲ್ಲಿ ಜಲ್ಲಿಯನ್ನು ಗುಡ್ಡೆ ಗುಡ್ಡೆಯಾಗಿ ಒಟ್ಟಿರುತ್ತಾರೆ. ಮನೆಯಲ್ಲಿ ರುಬ್ಬುಗುಂಡು, ಬೀಸುವ ಕಲ್ಲು, ಬಟ್ಟೆ ಒಗೆಯಲು ಹಾಸಿರುವ ಚಪ್ಪಡಿ ಇವನ್ನೆಲ್ಲ ನೀನು ನೋಡಿರುವೆ. ಊರಾಚೆ ಹೋದರೆ ಬಂಡೆ ಕಲ್ಲು, ಗುಡ್ಡ, ಬೆಟ್ಟ ಮುಂತಾದವು ಕಾಣಿಸುತ್ತವೆ. ಇವೆಲ್ಲ ಏನು ಹೇಳು? ಶಿಲೆಗಳಲ್ಲವೆ? ಆದರೆ ಜಲ್ಲಿಯ ಆಕಾರವೇ ಬೇರೆ, ರುಬ್ಬುಗುಂಡಿನದೇ ಬೇರೆ. ಬಂಡೆಯದೇ ಬೇರೆ. ಒಂದೊಂದು ಕಲ್ಲಿನ ಕತೆ ಒಂದೊಂದು—ಕೇಳುವ ಕಿವಿ ಮತ್ತು ನೋಡುವ ಕಣ್ಣು ನಮಗೆ ಬೇಕು ಅಷ್ಟೆ.

'ಖನಿಜಗಳು' : ಖನಿಜಗಳು ಗಣಿಯಲ್ಲಿ ಮಾತ್ರ ದೊರೆಯುವಂಥವು ಎಂಬ ಭಾವನೆ ಹಲವರಿಗಿದೆ. ಆದರೆ ಅವು ಎಲ್ಲ ಶಿಲೆಗಳಲ್ಲಿ ಇರುವುದು ನಿನ್ನ ತಿಳಿವಿಗೆ ಬಂದಿದೆಯಲ್ಲವೆ? ಗಣಿಗಳಲ್ಲಿ ಅವು ಒಟ್ಟೊಟ್ಟಾಗಿ ಇರುತ್ತವೆ—ಅಪರೂಪಕ್ಕೆ ಕೆಲವು ಒಂಟಿಯಾಗಿಯೂ ಸಿಕ್ಕಬಹುದು.

'ಖನಿಜಗಳಲ್ಲಿ ಎರಡು ಬಗೆ' : ಲೋಹದ ಧಾತು ಇರುವುವು, ಅಲೋಹದ ಧಾತು ಇರುವುವು. ಮೊದಲನೆಯದಕ್ಕೆ ಉದಾಹರಣೆ 'ಮ್ಯಾಗ್ನಟೈಟ್' ಮತ್ತು 'ಬಾಕ್ಸೈಟ್'. ಎರಡನೆಯದಕ್ಕೆ ಉದಾಹರಣೆ 'ಕಲ್ನಾರು' ಮತ್ತು 'ಅಭ್ರಕ'. ಖನಿಜಗಳಿಗೆ ಕೆಲವು ವಿಶೇಷ ಗುಣಗಳಿವೆ. ಉದಾಹರಣೆಗೆ ಅವುಗಳ ಆಕಾರ, ಬಣ್ಣ, ಒರೆ, ಹೊಳಪು, ಕಾಠಿಣ್ಯ—ಇತ್ಯಾದಿ. ಇವುಗಳ ಸಹಾಯದಿಂದ ಅವನ್ನು ಗುರುತಿಸಬಹುದು.'

ಒಟ್ಟಿನಲ್ಲಿ ನಿಸಾರರು ರಚಿಸಿರುವ ಮಕ್ಕಳ ಸಾಹಿತ್ಯ ಅಂಕಿ-ಅಂಶಗಳಿಂದ, ಅಪರೂಪದ ಮಾಹಿತಿಗಳಿಂದ ಕೂಡಿದ್ದು ಮಕ್ಕಳಿಗೆ ಉಪಯುಕ್ತವಾಗಿದೆ ಮಾತ್ರವಲ್ಲದೆ ವಾಚನೀಯವೂ ಆಗಿದೆ. ಇದರ ರಚನೆಯಲ್ಲಿ ಲೇಖಕರು ವಹಿಸಿರುವ ಶ್ರಮ, ಶ್ರದ್ಧೆ, ಆಸಕ್ತಿಗಳು ಶ್ಲಾಘನೀಯ ಎನ್ನಿಸುತ್ತವೆ.




ಒಂದೂವರೆ ವರ್ಷದ
ನಿಸಾರ್ : ತಂದೆ, ತಾತ
ಮತ್ತು ಚಿಕ್ಕಪ್ಪನವರೊಂದಿಗೆ
(೧೯೩೭)




ಕೆಳಗೆ ಕುಳಿತಿರುವ ಮಕ್ಕಳಲ್ಲಿ
ಎಡದಿಂದ : ನಾಲ್ಕು ವರ್ಷದ
ನಿಸಾರ್, ಮೂರು ವರ್ಷದ
ತಮ್ಮ ಸಫೀರ್.
ಕುಳಿತಿರುವ ಹಿರಿಯರಲ್ಲಿ
ಎಡದಿಂದ
ಮೂರನೆಯವರು
ನಿಸಾರರ ತಂದೆ
ಕೆ. ಎಸ್. ಹೈದರ್
(೧೯೪೦)



ನಿಸಾರ್, ತಾಯಿಯ ಜೊತೆ
ಪದ್ಮನಾಭನಗರದ
ಮನೆಯಲ್ಲಿ (೧೯೮೬)



ನಿಸಾರರ ತಂದೆ, ತಾಯಿ, ತಂಗಿಯರು, ತಮ್ಮ
ಮತ್ತು ಆತನ ಮಡದಿ, ಮಕ್ಕಳೊಡನೆ (೧೯೭೫)



ನಿಸಾರ್, ಮಡದಿ ಷಹನವಾಜ್ ಬೇಗಂ ಮತ್ತು ಗಂಡುಮಕ್ಕಳು
ನವೀದ್, ಫರೀದ್ ಹಾಗೂ ಹೆಣ್ಣುಮಕ್ಕಳು ತನ್ವೀರ್
ಮತ್ತು ಫರ್ಹೀನ್‌ರೊಂದಿಗೆ (೧೯೮೩)



ನಿಸಾರ್ ದಂಪತಿಗಳು (೨೦೦೫)



ನಿಸಾರ್ ಕುಟುಂಬ : ಗಂಡು ಮಕ್ಕಳು, ಹೆಣ್ಣು ಮಕ್ಕಳು, ಸೊಸೆ, ಅಳಿಯ ಮತ್ತು ಮೊಮ್ಮಕ್ಕಳೊಡನೆ (೨೦೦೫)



ನಿಸಾರ್ ಮತ್ತು ದುಬೈನ ತಂಗಿಯರು ದಿಲ್‌ಷಾದ್ ಮತ್ತು
ಷಹನಾಜ್ ದಾಫುರ್ ಜೊತೆ (೧೯೯೪)




ತಂಗಿ ಷಹನಾಜ್ ಗಂಡ ದಾಫುರ್‌ನೊಂದಿಗೆ (೨೦೦೪)



ನಿಸಾರರ ಮಡದಿ ಷಹನವಾಜ್ ಬೇಗಂ ತನ್ನ ತಾಯಿ, ತಂಗಿ,
ತಮ್ಮನ ಮಡದಿ, ಮತ್ತು ಮಗಳೊಂದಿಗೆ (೧೯೯೯)



ನಿಸಾರ್ ತನ್ನ ನಾದಿನಿಯರ ಜೊತೆ (ಅಮೇರಿಕದ ಮಯಾಮಿ
ನಗರದ ಮನೆಯಲ್ಲಿ) (೨೦೦೨)



ನಿವೃತ್ತರಾದ ಪ್ರೊ. ವಿ.ಸೀ. ಅವರಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದಿಂದ ಬೀಳ್ಕೊಡುಗೆ ಸಮಾರಂಭ.
ಕುಳಿತಿರುವವರು (ಎಡದಿಂದ) : ಕೆ.ಎಸ್.ನ., ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಡಿ. ಎಲ್. ನರಸಿಂಹಾಚಾರ್
ಆರ್. ಎಲ್. ನರಸಿಂಹಯ್ಯ, ಜಿ. ಪಿ. ರಾಜರತ್ನಂ, ಎಸ್. ವಿ. ಕೃಷ್ಣಮೂರ್ತಿ ರಾವ್, ಎ. ಆರ್. ಕೃಷ್ಣಶಾಸ್ತ್ರಿ,
ಪ್ರೊ. ವಿ.ಸೀ., ಪ್ರಿನ್ಸಿಪಾಲ್ ಮಾಧವರಾವ್, ನಿಟ್ಟೂರು ಶ್ರೀನಿವಾಸರಾವ್, ಬಿಬಿಡಿ ಪವರ್ ಪ್ರೆಸ್‌ನ ಮಲ್ಯ, ಬಿ. ವಿ. ಗೋವಿಂದರಾಜುಲು
ಕೆ. ವಿ. ಅಯ್ಯರ್. ನಿಂತಿರುವ ಮುಂದಿನ ಸಾಲಿನ ವಿದ್ಯಾರ್ಥಿಗಳಲ್ಲಿ ಬಲದಿಂದ ನಾಲ್ಕನೆಯವರು ನಿಸಾರ್. (೧೯೫೫)



ಈ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಶಿವಮೊಗ್ಗೆಯಲ್ಲಿ ನಡೆಯಲಿರುವ
೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ
ನಿಸಾರ್ ಆಯ್ಕೆಗೊಂಡಿರುವುದನ್ನು ಅವರಿಗೆ ತಿಳಿಸಿ ಸರ್ಕಾರದ ವತಿಯಿಂದ
ಅಭಿನಂದಿಸಲು ಮನೆಗೆ ಆಗಮಿಸಿದ್ದ ಉಪ ಮುಖ್ಯಮಂತ್ರಿ
ಬಿ.ಎಸ್. ಯಡಿಯೂರಪ್ಪ ಮತ್ತು ಕಸಾಪ ಅಧ್ಯಕ್ಷ ಪ್ರೊ. ಚಂದ್ರಶೇಖರ ಪಾಟೀಲ,
ಕಾರ್ಯದರ್ಶಿ ಜರಗನಹಳ್ಳಿ ಶಿವಶಂಕರ್ (೨೮.೮.೨೦೦೬)




ಕುದುರೆಮುಖ ಪರ್ವತಾರೋಹಿಗಳ ೧೨ನೆಯ ಬೆಟಾಲಿಯನ್ ಅಧಿಕಾರಿಗಳ ತಂಡ
ಶಿವರಾಮ ಕಾರಂತರ ಪುತ್ತೂರಿನ ಮನೆಯಲ್ಲಿ (೧೯೬೨)
ಬಲದಿಂದ ಮೂರನೆಯವರು ನಿಸಾರ್



ಮಾಸ್ತಿ ವೆಂಕಟೇಶ ಅಯ್ಯಂಗಾರರ ಜೊತೆ (೧೯೮೦)




ಎಸ್. ವಿ. ರಂಗಣ್ಣನವರೊಂದಿಗೆ ಮೈಸೂರಿನಲ್ಲಿ ನಡೆದ
ವಿಶ್ವ ಕನ್ನಡ ಸಮ್ಮೇಳನದಲ್ಲಿ (೧೯೮೫)



ರಾಷ್ಟ್ರಕವಿ ಕುವೆಂಪು ಜೊತೆ (೧೯೮೨)



ಶಿವರಾಮ ಕಾರಂತರೊಡನೆ ಬೆಂಗಳೂರಿನ
ಸಮಾರಂಭವೊಂದರಲ್ಲಿ (೧೯೮೪)




ಬೆಂಗಳೂರಿನ ಮಲ್ಲೇಶ್ವರದ ಪುತಿನ ಮನೆಯಲ್ಲಿ ಗೋಪಾಲಕೃಷ್ಣ ಅಡಿಗರೊಡನೆ ನಿಸಾರ್.
ಅಮೇರಿಕದ ಕ್ಯಾಲಿಫೋರ್ನಿಯ ನಿವಾಸಿ ಪುತಿನ ಮಗಳು ಅಲುಮೇಲು ಅಯ್ಯಂಗಾರ್ ಚಿತ್ರದಲ್ಲಿದ್ದಾರೆ. (೧೯೬೦?)



ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ
ಸುವರ್ಣ ಮಹೋತ್ಸವದ ಕವಿಮೇಳ. ನಿಸಾರ್ ಕವಿತೆ ವಾಚಿಸುತ್ತಿದ್ದಾರೆ.
ಎಡದಿಂದ : ರಂ.ಶ್ರೀ.ಮುಗಳಿ, ಜಿ. ಪಿ. ರಾಜರತ್ನಂ, ಪುತಿನ, ದ.ರಾ.ಬೇಂದ್ರೆ
ವಿ. ಕೃ. ಗೋಕಾಕ್, ಪ್ರಿನ್ಸಿಪಾಲ್ ಷಡಕ್ಷರ ಸ್ವಾಮಿ (೧೯೭೨)



ಕ.ಸಾ.ಪ.ದ ವಜ್ರಮಹೋತ್ಸವದ ಕವಿಗೋಷ್ಠಿ.
ನಿಸಾರ್ ಅಧ್ಯಕ್ಷ ಭಾಷಣ ಮಾಡುತ್ತಿರುವುದು.
ಎಡದಿಂದ : ಜಿ. ಪಿ. ರಾಜರತ್ನಂ, ಎಸ್. ವಿ. ರಂಗಣ್ಣ,
ಜಿ. ನಾರಾಯಣ. (೧೯೭೬)





ಸುಗಮ ಸಂಗೀತದ ಇಬ್ಬರು ಖ್ಯಾತ ಗಾಯಕರು—ಮೈಸೂರು ಅನಂತಸ್ವಾಮಿ ಮತ್ತು ಸಿ. ಅಶ್ವತ್ಥ್ ನಿಸಾರರನ್ನು ಅಭಿನಂದಿಸುತ್ತಿರುವುದು (೧೯೯೩)




ಸುಗಮ ಸಂಗೀತದ ಪ್ರಪ್ರಥಮ ಕನ್ನಡದ ದನಿ ಸುರುಳಿ 'ನಿತ್ಯೋತ್ಸವ'ದ ಹಾಡುಗಳ ರಿಕಾರ್ಡಿಂಗ್ ರಿಹರ್ಸಲ್‌ನ ದೃಶ್ಯ (ಪ್ರಭಾತ್ ಸ್ಟುಡಿಯೊ). ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ ಅವರ ಎದುರಿಗೆ ನಿಸಾರ್ (೧೯೭೮)



ನಿಸಾರ್ ಕುಟುಂಬದೊಂದಿಗೆ ರಾಜಕುಮಾರ್ (೧೯೯೩)




ವರನಟ ರಾಜಕುಮಾರ್ ಅವರ ಮನೆಯಲ್ಲಿ (೨೦೦೫)



ಮಾಜಿ ಮುಖ್ಯ ಸಚಿವ ಎಂ. ವೀರಪ್ಪ ಮೊಯಿಲಿ ನಿಸಾರ್ ಮನೆಗೆ ಭೇಟಿ ನೀಡಿದಾಗ. ಶ್ರೀಮತಿ ನಿಸಾರ್, ಮೊಮ್ಮಗ ಆಖಿಬ್, ನಿಸಾರ್, ಮೊಯಿಲಿ ಮತ್ತು ಕೆ. ಆರ್. ಕಮಲೇಶ್. (೨೦೦೪)



ಮೈಸೂರಿನಲ್ಲಿ ಸಾಹಿತಿ, ಪತ್ರಕರ್ತರ ವತಿಯಿಂದ ನಿಸಾರರಿಗೆ ಸನ್ಮಾನ.
ಎಡದಿಂದ : ಎಚ್ಚೆಸ್ಕೆ, ನಿಸಾರ್, ಚದುರಂಗ, ಪಿ. ಆರ್. ತಿಪ್ಪೇಸ್ವಾಮಿ (೧೯೮೪)



ಮಿತ್ರ ಸಿ. ಕೃಷ್ಣಶಾಸ್ತ್ರಿ ಅವರ ಅಮೇರಿಕದ ಅಯೋವಾ ರಾಜ್ಯದ ಸೀಡರ್ ಫಾಲ್ಸ್ ಊರಿನ ಮನೆಯೆದುರು. ಎಡಗಡೆಯಿಂದ : ತಾಯಿ ದಿವಂಗತ ಸುಬ್ಬಲಕ್ಷ್ಮಮ್ಮ, ಅಣ್ಣ ಶೈಲಶಾಸ್ತ್ರಿ, ನಿಸಾರ್, ಸಿ. ಕೃಷ್ಣಶಾಸ್ತ್ರಿ (೨೦೦೨)



ಅಮೇರಿಕದ ಡೆಟ್ರಾಯಿಟ್‌ನಲ್ಲಿ ನಡೆದ 'ಅಕ್ಕ'ದ ವಿಶ್ವ ಕನ್ನಡ ಸಮ್ಮೇಳನದಲ್ಲಿ. ಎಡಗಡೆಯಿಂದ : ಸಿ. ಕೃಷ್ಣಶಾಸ್ತ್ರಿಯವರ ಮಡದಿ ಶಾಂತಾ (ಎರಡನೆಯವರು), ನಾಗರತ್ನ (ನಾಲ್ಕನೆಯವರು), ರವಿ (ಶಾಸ್ತ್ರಿಗಳ ಅಳಿಯ) ಮತ್ತು ಸಿ. ಕೃಷ್ಣಶಾಸ್ತ್ರಿ (೨೦೦೨)




ಜಗತ್ತಿನ ವಿವಿಧ ಭಾಷೆಗಳ ಕಥೆಗಳ ಅನುವಾದದ ಗ್ರಂಥಗಳ ಬಿಡುಗಡೆ.
ಎಡದಿಂದ : ಸಂಪಾದಕ ನಿರಂಜನ, ನಿಸಾರ್, ವ್ಯಾಸರಾಯ ಬಲ್ಲಾಳ,
ಹಾ.ಮಾ.ನಾಯಕ, ಗೊರೂರು ರಾಮಸ್ವಾಮಿ ಅಯ್ಯಂಗಾರ್ (೧೯೭೭)



ಕೊಲ್ಲಿ ರಾಷ್ಟ್ರ ಯು.ಎ.ಇ.ಯ ರಾಜಧಾನಿ ಅಬುದಾಭಿ ನಗರದಲ್ಲಿ
ನಿಸಾರರ 'ಸುಮಧುರ' ದನಿ ಸುರುಳಿಯನ್ನು ಅಲ್ಲಿನ ಹಿರಿಯ
ಉದ್ಯಮಿ ಬಿ. ಆರ್. ಶೆಟ್ಟಿ ಬಿಡುಗಡೆ ಮಾಡುತ್ತಿರುವುದು (೧೯೯೪)



ವಿಶ್ವಖ್ಯಾತಿಯ ಆಂಗ್ಲ ಮತ್ತು ಫ್ರೆಂಚ್ ಬರಹಗಾರ
ಹಾಸನದ ರಾಜಾರಾವ್‌ರೊಂದಿಗೆ
ಎಡದಿಂದ : ನಿಸಾರ್, ರಾಜಾರಾವ್, ಎಲ್.ಎಸ್.ಎಸ್. (೧೯೮೬)



ಶಾಸ್ತ್ರೀಯ ಸಂಗೀತದ
ಅಗ್ರಗಣ್ಯ ವೀಣಾ ದೊರೆಸ್ವಾಮಿ
ಅಯ್ಯಂಗಾರ್ ಜೊತೆ (೧೯೯೪)

ಶಾಸ್ತ್ರೀಯ ಸಂಗೀತದ
ಹಿರಿಯ ಗಾಯಕ ಶ್ರೇಷ್ಠ
ಆರ್. ಕೆ. ಶ್ರೀಕಂಠನ್ ಜೊತೆ (೧೯೯೫)





ನಿಸಾರರ ಪುಸ್ತಕ ಬಿಡುಗಡೆ.

ಎಡದಿಂದ : ನಿಸಾರ್, ಎಲ್.ಎಸ್.ಎಸ್., ಎ. ಎನ್. ಮೂರ್ತಿರಾವ್, ಎಚ್. ನರಸಿಂಹಯ್ಯ (೧೯೯೨)



ನಿಸಾರರ 'ಅಚ್ಚುಮೆಚ್ಚು' ಗದ್ಯ ಕೃತಿಯ ಬಿಡುಗಡೆ.


ಎಡದಿಂದ : ಪ್ರಕಾಶಕ ಎ. ಎಸ್. ಭಟ್, ಡಾ. ದೇ. ಜವರೇಗೌಡ, ನಿಸಾರ್, ಪುತಿನ (೧೯೯೪)



ನಿಸಾರರ 'ಅರವತ್ತೈದರ ಐಸಿರಿ' ಕವನ ಸಂಕಲನದ ಬಿಡುಗಡೆ.
ಎಡದಿಂದ : ನರಹಳ್ಳಿ ಬಾಲಸುಬ್ರಹ್ಮಣ್ಯ, ಕೆ.ಎಸ್.ನ., ದೇ.ಜ.ಗೌ.
ನಿಸಾರ್, ಎಚ್. ಎಸ್. ವೆಂಕಟೇಶಮೂರ್ತಿ (೨೦೦೦)



ನಿಸಾರರ 'ಸಮಗ್ರ ಗದ್ಯ ಬರಹಗಳು' ಬಿಡುಗಡೆ.
ಎಡದಿಂದ : ಸಿ. ಎನ್. ರಾಮಚಂದ್ರನ್, ಎಚ್ಚೆಸ್ಕೆ, ನಿಸಾರ್, ದೇ.ಜ.ಗೌ.
ಸಪ್ನ ಬುಕ್ ಹೌಸ್‌ನ ನಿತಿನ್ ಷಾ (೨೦೦೧)







ಬೆಂಗಳೂರಿನ ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜು ಏರ್ಪಡಿಸಿದ್ದ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನದ ಉದ್ಘಾಟನೆ ಮಾಡಿದ ನಿಸಾರರೊಂದಿಗೆ ಗಣ್ಯ ಲೇಖಕಿಯರು. ಚಿತ್ರದಲ್ಲಿ ಕವಿ ವೇಣುಗೋಪಾಲ ಸೊರಬರೂ ಇದ್ದಾರೆ. (೧೯೮೫)



೧೯೮೧ರ ಸಾಲಿನ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ,
ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರಿಂದ (೧೯೮೨)



ಕರ್ನಾಟಕ ಸಾಹಿತ್ಯ ಅಕಾಡೆಮಿ ನವದೆಹಲಿಯಲ್ಲಿ ಏರ್ಪಡಿಸಿದ್ದ ಎರಡು ದಿನಗಳ
'ಸಮಕಾಲೀನ ಭಾರತೀಯ ಸಾಹಿತ್ಯ'ದ ವಿಚಾರ ಸಂಕಿರಣದ ಉದ್ಘಾಟನೆ
ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರಿಂದ. ಕಸಾ ಅಕಾಡೆಮಿ ಅಧ್ಯಕ್ಷ ನಿಸಾರ್,
ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವಿ.ಕೃ. ಗೋಕಾಕ್ ಚಿತ್ರದಲ್ಲಿದ್ದಾರೆ (೧೯೮೭)



ನಿಸಾರ್ ನಿಮಗಿದೋ ನಮನ



ರಾಷ್ಟ್ರಕವಿ ಕುವೆಂಪು ಹೆಸರಿನಲ್ಲಿ ಮೈಸೂರಿನ ಡಾ. ದೇ.ಜ.ಗೌ. ಟ್ರಸ್ಟ್ ನೀಡಿದ 'ವಿಶ್ವಮಾನವ ಪ್ರಶಸ್ತಿ' ಪ್ರದಾನ, ಮೈಸೂರು ವಿವಿಯ ಕುಲಪತಿಗಳಿಂದ. ಚಿತ್ರದಲ್ಲಿ ಈಗಿನ ಕುಲಪತಿ ಶಶಿಧರ ಪ್ರಸಾದ್ ಇದ್ದಾರೆ. (೧೯೯೬)



ಅನಕೃ–ನಿರ್ಮಾಣ್ ಪ್ರಶಸ್ತಿ ಪ್ರದಾನ.
ಎಡದಿಂದ : ಶ್ರೀಮತಿ ಮತ್ತು ಶ್ರೀ ನಿಸಾರ್, ಸಚಿವ ಕೆ. ಎಚ್. ರಂಗನಾಥ್, ನಿರ್ಮಾಣ್ ಷೆಲ್ಟರ್ಸ್‌ನ ಲಕ್ಷ್ಮೀನಾರಾಯಣ, ಹಾರ್ನಹಳ್ಳಿ ರಾಮಸ್ವಾಮಿ (೨೦೦೧)



ನಿಸಾರರೊಂದಿಗೆ ಒಂದು ಸಂಜೆ. ಎಡದಿಂದ : ನಿಸಾರ್,
ನಿಟ್ಟೂರು ಶ್ರೀನಿವಾಸರಾವ್, ಪ್ರಭುಶಂಕರ್ (ನಾಲ್ಕನೆಯವರು),
ಎಚ್. ನರಸಿಂಹಯ್ಯ (೨೦೦೦)




ಮೈಸೂರಿನ ವಿಶ್ವವಿಖ್ಯಾತ ಭೌತವಿಜ್ಞಾನಿ ಡಾ. ತಾತಾಚಾರಿ–ಮಾಧುರಿ ಸಾಹಿತ್ಯ
ಪ್ರಶಸ್ತಿ ಪ್ರದಾನ. ಎಡದಿಂದ : ದೇಜಗೌ, ಎಚ್. ಜೆ. ಲಕ್ಕಪ್ಪಗೌಡ,
ಸಚಿವೆ ರಾಣಿ ಸತೀಶ್, ಷಹನವಾಜ್ ಬೇಗಂ, ನಿಸಾರ್, ಕಣವಿ,
ಜಿಎಸ್‌ಎಸ್, ಎಚ್ಚೆಸ್ಕೆ. (೨೦೦೨)




'ನಿಸಾರ್ ಸಾಹಿತ್ಯ ಸುಗ್ಗಿ' ಸಮಾರಂಭ. ಸಿರಿಗೆರೆಯ ತರಳಬಾಳು ಮಠದ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿ ಅವರಿಂದ ನಿಸಾರ್ ದಂಪತಿಗಳಿಗೆ ಸನ್ಮಾನ. ಸಚಿವ ಜೀವರಾಜ ಆಳ್ವ ಚಿತ್ರದಲ್ಲಿದ್ದಾರೆ. (೧೯೯೪)



ತುಮಕೂರು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿ ಅವರಿಂದ ಸನ್ಮಾನ. ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯ ಚಿತ್ರದಲ್ಲಿದ್ದಾರೆ. (೨೦೦೪)





ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರಿನ 'ಕರ್ನಾಟಕ ಜ್ಯೋತಿ ಪ್ರಶಸ್ತಿ'.
ಮುಖ್ಯಮಂತ್ರಿ ಜೆ. ಎಚ್. ಪಟೇಲರಿಂದ ಪ್ರದಾನ. (೧೯೯೭)




ಚಲಚ್ಚಿತ್ರ ನಿರ್ದೇಶಕರ ಸಂಘದ ವಾರ್ಷಿಕ ಬಹುಮಾನ ವಿತರಣೆ.
ಎಡದಿಂದ : ರಾಜೇಂದ್ರ ಸಿಂಗ್ ಬಾಬು, ಮಹೇಶ್ ಭಟ್ (ಹಿಂದಿ ನಿರ್ದೇಶಕ), ನಿಸಾರ್, ಮುಖ್ಯಮಂತ್ರಿ ಎಸ್. ಎಂ. ಕೃಷ್ಣ. (೨೦೦೧)



ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಷಿಪ್ ಗೌರವ
(ನಿಸಾರ್ ಮನೆಯಲ್ಲಿ ಪ್ರದಾನ) ಕನ್ನಡ ಸಂಸ್ಕೃತಿ ನಿರ್ದೇಶನಾಲಯದ
ಮುಖ್ಯಸ್ಥ ವ.ರಾ. ಕುಲಕರ್ಣಿ, ನಿಸಾರ್ ಮಗ ನವೀದ್ (೧೯೯೯)



ನಿಸಾರ್ ಮನೆಯಲ್ಲಿ ಹಂಪಿಯ ಕನ್ನಡ ವಿವಿಯ 'ನಾಡೋಜ ಪ್ರಶಸ್ತಿ' ಪ್ರದಾನ.
ಕುಲಪತಿ ಎಚ್. ಜೆ. ಲಕ್ಕಪ್ಪ ಗೌಡ, ರಿಜಿಸ್ಟ್ರಾರ್ ಕೆ. ವಿ. ನಾರಾಯಣ,
ಧ್ರುವ ನಾರಾಯಣ, ಕೆ. ಆರ್. ಇಕ್ಬಾಲ್ ಅಹ್ಮದ್, ಅಪ್ಪಗೆರೆ ತಿಮ್ಮರಾಜು,
ಶ್ರೀಮತಿ ನಿಸಾರ್, ಮೊಮ್ಮಗ. (೨೦೦೪)





ಕರ್ನಾಟಕ ವಿವಿಯ ಗೌರವ ಡಿಲಿಟ್ ಪ್ರದಾನ (ನಿಸಾರ್ ಮನೆಯಲ್ಲಿ).
ಚಿತ್ರದಲ್ಲಿ ರಿಜಿಸ್ಟ್ರಾರ್ ಮತ್ತು ಉಪ ರಿಜಿಸ್ಟ್ರಾರ್ (೨೦೦೫)



ರಾಜ್ಯಪಾಲ
ಟಿ. ಎನ್. ಚತುರ್ವೇದಿ
ಅವರಿಂದ ಸನ್ಮಾನ.
(೨೦೦೬)




ನಿಸಾರ್–೭೦ ಸನ್ಮಾನ ಸಮಾರಂಭ.
ಎಡದಿಂದ : ಜಿ. ವೆಂಕಟಸುಬ್ಬಯ್ಯ, ಮಹಾನಗರ ಪಾಲಿಕೆ ಕೌನ್ಸಿಲರ್
ಆಡುಗೋಡಿ ಬಿ. ಮೋಹನ್, ಎಚ್.ಎಸ್. ದೊರೆಸ್ವಾಮಿ,
ಫಲ್ಗುಣ, ಜಿ. ನಾರಾಯಣ, ಹಾರ್ನಹಳ್ಳಿ ರಾಮಸ್ವಾಮಿ (೨೦೦೫)



ನಿಸಾರ್–೭೦ ಸನ್ಮಾನ ಸಮಾರಂಭ (೨೦೦೫)



ಶಿವಮೊಗ್ಗೆಯ
ಕರ್ನಾಟಕ
ಸಂಘದ
ಸನ್ಮಾನ :
ಸಂಘದ ಅಧ್ಯಕ್ಷ
ಕೆ.ಜಿ. ಸುಬ್ರಹ್ಮಣ್ಯ
ಅವರಿಂದ
(೨೦೦೧)



'ನಿಸಾರ್ ನಿಮಗಿದೋ ನಮನ' ಗ್ರಂಥಕ್ಕೆ ದುಡಿದ ನಿಸಾರರ ಮಿತ್ರ ವರ್ಗ :
ನಿಸಾರ್ ಜೊತೆ ಅ.ನಾ. ಪ್ರಹ್ಲಾದರಾವ್, ವೈ.ಜಿ. ಗಿರಿಶಾಸ್ತ್ರಿ,
ಎಚ್.ಪಿ. ರಾಜಶೇಖರ ಶೆಟ್ಟಿ (೨೦೦೬)




ಡಾ. ಮಾಸ್ತಿ ಪ್ರಶಸ್ತಿ (೨೦೦೬). ಎಡದಿಂದ : ಮಾವಿನಕೆರೆ ರಂಗನಾಥನ್, ಎಚ್.ಎಸ್. ವೆಂಕಟೇಶಮೂರ್ತಿ, ಕೆ.ಎಚ್. ರಾಮರಾವ್, ಜಿ.ಎಸ್. ಸಿದ್ಧಲಿಂಗಯ್ಯ, ಮಹೇಶ ಜೋಷಿ, ಜಿ. ವೆಂಕಟಸುಬ್ಬಯ್ಯ (೨೦೦೬)



ಕರ್ನಾಟಕ ಸರ್ಕಾರದಿಂದ ೨೦೦೬ನೆಯ ಸಾಲಿನ ಡಿ. ದೇವರಾಜು ಅರಸು ಪ್ರಶಸ್ತಿ ಪ್ರದಾನ, ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಂದ. ಉಪ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮತ್ತು ಸಚಿವ ಕೆ.ಎಸ್. ಈಶ್ವರಪ್ಪ ಚಿತ್ರದಲ್ಲಿದ್ದಾರೆ (೨೦೦೬)

ಭಾಗ–೩

ಬಿಡಿ ಕವಿತೆಗಳ ಪ್ರಾಯೋಗಿಕ ವಿಮರ್ಶೆ



ಜೀವನ ಜಿಜ್ಞಾಸೆ

೧

ಬಾಳುವುದೆ ಬದುಕಲ್ಲ: ಬದುಕಿನರ್ಥವ ತಿಳಿವ
ಚಿಂತನೆಯೆ ನಿಜ ಬದುಕು ನರ ಜೀವಿಗೆ;
ಬದುಕಲಿಕೆ ಇಹ ಕಲಿಕೆ, ಅನ್ಯರನುಭವ ಗಳಿಕೆ:
ವಿಶ್ವವಿದು ರೂಪುಗೊಳಲೊಂದಾವಿಗೆ.

೨

ಹುಟ್ಟನೀ ಬದಿ ನೆರಳು, ಸಾವಿನಾಚೆಗೆ ಮರಳು,
ನಡುವೆ ಗಿರಿ ತುದಿ ಹಿಮದ ಕಣ ಜೀವನ;
ಯಾವ ಚಣ ಜಾರುವುದೊ, ಕರಗಿ ತಳ ಸೇರುವುದೊ,
ಕೆಸರ ಕಂಬವೊ ಭವದ ಬೃಂದಾವನ.

೩

'ನಮ್ಮ ಬಾಳಿಗೆ ನಾವೆ ಒಡೆಯರೋ! ತಡೆಯುಂಟೆ
ಮುನ್ನಡೆಗೆ' ಎಂದುಬ್ಬಿ ಬೀಗುತಿಹೆವು.
ಬಾಗಿಸದ ತಲೆಯಂತೆ ಹೊಸ್ತಿಲಿಗೆ ಬಡಿದೊಡನೆ
ಹಮ್ಮುಳಿದು ಮುಮ್ಮಲನೆ ಮರುಗುತಿಹೆವು.

೪

ಹಾರದಾಸೆಯು ಬಿದ್ದ ಗರಿ ಪುಕ್ಕಗಳನಾಯ್ದು
ಮರವೆ ತೊಟ್ಟಿಗೆ ಬಿಸುಡಿ ಬಿಸುಸುಯ್ವೆವು;
ಅನುದಿನದ ಈ ಕತೆಗೆ ಅಸಹಾಯರಾಸತ್ತು
ಅತ್ತು ಹಣೆಬರಹವನು ಕಡು ಬಯ್ವೆವು.

೫

ತತ್ತರಿಸುವೆದೆ ಲತೆಗೆ ಅಭಯ ಹಂದರ ನಿಲಿಸೆ
ಎತ್ತರದ ನೀಲಿಮೆಯನೊಲಿಸಬೇಕು;
ಬೀಸುವೆಲರಿನ ಒಲವ ಬೆಂಬಲವ, ಹಾರಿಕೆಯ
ಹಂಬಲಕೆ ಇಂಬಾಗಿ ಗಳಿಸಬೇಕು.

೬

ನಂಬಬೇಕೋ, ನಂಬಿ ಅವ್ಯಕ್ತ ಪ್ರಭೆಯಿಂದ
ಜೀವನವನಾದ್ಯಂತ ಬೆಳಗಬೇಕು;
ಭವವೆಂಬ ನಶ್ವರದ ಶುಕ್ತಿಕೆಯ ಹೃದಯದಲಿ
ಪರದ ಚಿರ ಮುಕ್ತಿಕೆಯ ಸಲಹಬೇಕು.

೭

ಕಡಲ ದಾಟುವ ಪಕ್ಷಿ ರೆಕ್ಕೆಗಳ ಬಲ ನೆಮ್ಮಿ
ಸಾಗುವನಿತೂ ಸಾಗಿ, ಸೋತು ಹೋಗಿ—
ಜಹಜುಗಂಬದ ಮೇಲೆ ಕೂರುವಂತೆಲೆ ಜೀವ
ಶರಣಾಗು ಪರಶಕ್ತಿ ಕೃಪೆಗೆ ಬಾಗಿ.

೮

ಮಣ್ಣ ಕಗ್ಗತ್ತಲಲಿ ಮುಲುಗುವೆರೆ ಹುಳದಂತೆ
ಐಹಿಕಾಮೋದದಲಿ ಜೀವ ಹೂತು—
ಮುಂಗಾಣದಿರೆ ನೊಂದು, ವರದ ಹಸ್ತವದೊಂದು
ಮೂಡಿ ಮೇಲೆತ್ತುವುದು ಬಿಡದೆ ಗುರುತು.

೯

ಅಳಲ ಗರ್ಭವ ತಳೆದ ಬಾಳ ಬಸುರಿಯ ಬೇನೆ
ಉಲ್ಬಣಿಸಿ ಉರಿದಿರಲು ಪ್ರಾಣ ಹೊತ್ತಿ,
ಸರಿಹೊತ್ತಿಗೈತರುವಳೆಲ್ಲಿಂದಲೋ ಕರುಣೆ,
ಶೋಕೋಪಶಮಕಾರಿ ಸೂಲಗಿತ್ತಿ.

೧೦

ಬಾಳಿನಡುಗೆಯ ಮನೆಯ ದಟ್ಟೈಸಿದುರಿ ಹೊಗೆಯ
ಉಸಿರು ಕಟ್ಟಿಸುವಂಥ ಆವರಣದಲಿ
ದೈವ ಸ್ಮರಣೆಯ ಚಿಮಣಿ ನಿತ್ಯ ತೆರೆದಿರಬೇಕು;
ಕರಣ ಗಣವಿರಬೇಕು ಓರಣದಲಿ.

೧೧

ಪರಮ ಪದ ಸೋಪಾನದಾಟ ನಮ್ಮೆಳೆ ಬದುಕು
ಚಣಚಣವು ನಡೆಸಿಹೆವು ಬಯಕೆ ದಾಳ.
ಸೌಭಾಗ್ಯದೇಣಿಗಳನೇರಿಸುವ ಕಟು ವಿಧಿಯೆ
ತೆರೆಯುವುದು ಕಾಳಾಹಿಯೊಡಲ ಪಾತಾಳ.

೧೨

ಮಂದಲಿಗೆ ಇಬ್ಬದಿಯ ಹಾಗೆಮ್ಮ ಪುರುಷಾರ್ಥ:
ಒಂದು ಬದಿ ಸವೆಯಿತೋ, ಸಿದ್ಧ ಒಂದು;
ಒಂದು ಮಜಲಿನ ತನಕ ಕಾಮಾರ್ಥ ಧಗಧಗಿಸಿ,
ವೈರಾಗ್ಯದುಪಶಾಂತ ದೀಪ್ತಿ ಮುಂದು.

೧೩

ಸ್ವಾನುಭವಗಳ ಸರಕಿಗಾತ್ಮವಸ್ತುವೆ ಮಾನ,
ಭವದ ಮಾಲಿನ ಗಳಿಕೆಗೆಲ್ಲ ಅಳತೆ;
ಮೈ ಮನದ ಪೇರುಗಳ ತೂಗುತಕ್ಕಡಿ ಬಾಳ್ವೆ,
ಸತ್ಯ ಶಿವ ಸುಂದರದ ಬೊಟ್ಟು ಬಳಕೆ.

೧೪

ಬಾಳು ಹೋರಾಟ ದಿಟ; ಪರಚುತಿಹ ನರ ಪ್ರಾಣ
ಸ್ವಂತ ಜೀವಿತ ಗುಹೆಯ ಹೊಸ್ತಿಲೆದುರು
ಸಾಹಿತ್ಯ ಸಂಸ್ಕೃತಿಯ ಹೂದೋಟ ಬೆಳಸಿಕೊಳೆ
ವೇಣುವಾದಂತೆ, ಅಹ! ಕಾಡ ಬದಿರು.

★ ★ ★

(ಕವನ ಸಂಕಲನ : 'ಸ್ವಯಂಸೇವೆಯ ಗಿಳಿಗಳು')



'ಜೀವನ ಜಿಜ್ಞಾಸೆ':
ತಾತ್ವಿಕ ತಪಾಸಣೆಯ ತಲಸ್ಪರ್ಶಿ ತುಡಿತ

◆ ಪ್ರೊ. ಅ. ರಾ. ಮಿತ್ರ

ಕೆ. ಎಸ್. ನಿಸಾರ್ ಅಹಮದ್ ಅವರ 'ಜೀವನ ಜಿಜ್ಞಾಸೆ' ಚತುರ್ದಶ ಚರಣಗಳ ಛಪ್ಪನ್ನಾರು ಸಾಲುಗಳ ಒಂದು ವೈಚಾರಿಕ ಚಿಂತನವಾಗಿದೆ. ಇದರ ಛಂದಸ್ಸು ಇಂಥ ರಚನೆಗಳ ಸಂಪ್ರದಾಯವನ್ನು ಹಿನ್ನೆಲೆಯಲ್ಲಿ ಇರಿಸಿಕೊಂಡಿದೆ. ಈ ಸಿದ್ಧ ಛಂದಸ್ಸಿನ ಮಾದರಿಯನ್ನು ಹದಗೊಳಿಸಿದವರೆಂದರೆ ದ. ರಾ. ಬೇಂದ್ರೆ (ಸಖೀಗೀತ), ಮಧುರಚೆನ್ನ (ನನ್ನ ನಲ್ಲ), ಕುವೆಂಪು (ತಾವರೆಯ ತೇರು), ಕೆ. ಎಸ್. ನರಸಿಂಹಸ್ವಾಮಿ (ಗಡಿಯಾರದಂಗಡಿಯ ಮುಂದೆ), ಗೋಪಾಲಕೃಷ್ಣ ಅಡಿಗ (ಶ್ರೀರಾಮ ನವಮಿಯ ದಿವಸ, ಕೂಪಮಂಡೂಕ). ಇನ್ನೂ ಕೆಲವು ಕವಿಗಳು ಕಥನ ಗೀತೆಗಳಿಗೆ ಇದೇ ಛಂದಸ್ಸನ್ನು ಆರಿಸಿಕೊಂಡಿರುವುದು ಗಮನಿಸಬೇಕಾದ ವಿಷಯ. ಡಿವಿಜಿಯವರ 'ಮಂಕು ತಿಮ್ಮನ ಕಗ್ಗ' ಈ ಛಂದಸ್ಸಿನ ಮೈಲಿಗಲ್ಲು ಎನ್ನಬಹುದು. ಸಾಂಗತ್ಯ ಮತ್ತು ಸೀಸ ಪದ್ಯಗಳ ಹಾಗೂ ಅಂಶ ಷಟ್ಪದಿಗಳ ರಚನೆಯ ನೇಯ್ಗೆ ಇಲ್ಲಿಯದು.

ಪ್ರತಿ ಪದ್ಯದ ಎರಡು ಮತ್ತು ನಾಲ್ಕನೆಯ ಸಾಲುಗಳಲ್ಲಿ ಪ್ರಾಸ ಸಂಬಂಧವಿರಿಸಿಕೊಂಡಿರುವ ಇಲ್ಲಿಯ ಹದಿನಾಲ್ಕು ಚರಣಗಳ ನಡಿಗೆ ಹೀಗಿವೆ:

5   5   5   5

ಬಾಳಿನಡು | ಗೆಯ ಮನೆಯ | ದಟ್ಟೈಸಿ | ದುರಿ

ಹೊಗೆಯ | 5 5 5 5

5 5 5 –

ಉಸಿರು ಕ | ಟ್ಟಿಸುವಂಥ | ಆವರಣದ | ಲಿ 5 5 5 + ಗುರು

5 5 5 5

ದೈವಸ್ಮ ರ | ಣೆಯ ಚಿಮಣಿ | ನಿತ್ಯ ತೆರೆ | ದಿರಬೇಕು | 5 5 5 5

5 5 5 –

ಕರಣ ಗಣ | ವಿರಬೇಕು | ಓರಣದ | ಲಿ 5 5 5 + ಗುರು

ಒಂದನೆಯ ಮತ್ತು ಮೂರನೆಯ ಸಾಲುಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು. ಎರಡನೆಯ ಮತ್ತು ನಾಲ್ಕನೆಯ ಸಾಲುಗಳಲ್ಲಿ ಐದೈದು ಮಾತ್ರೆಗಳ ಮೂರು ಗಣಗಳು ಮತ್ತು ಕೊನೆಯಲ್ಲಿ ಗುರು. ಇದು ಪ್ರತಿ ಚರಣದ ಮಾತ್ರಾ ವಿನ್ಯಾಸ.

ಬದುಕಿನ ಸೂಕ್ಷ್ಮತೆ ಖೂಕ್ಷತೆಗಳನ್ನು ಅರ್ಥಮಾಡಿಕೊಳ್ಳುವ ದಿಕ್ಕಿನಲ್ಲಿ ಕವಿತೆ ಸಾಗುತ್ತದೆ. ಬಾಳಿಗೊಂದು ನಂಬಿಕೆಯನ್ನು ರೂಪಿಸುವುದೇ ಕವಿಯ ಆಶಯವಾಗಿರುವುದರಿಂದ ಎಲ್ಲ ಚರಣಗಳೂ ಆ ಮೂಲ ಆಶಯವನ್ನು ಸಾಕಾರಗೊಳಿಸಲು ಶಿಸ್ತಿನಿಂದ ದುಡಿಯುತ್ತವೆ. ಈ ನಿಟ್ಟಿನಲ್ಲಿ ಒಂದೊಂದು ಚರಣವೂ ವಚನಗಳಂತೆ ಸ್ವತಂತ್ರ ಖಂಡವಾಗಿ ರೂಪಣಗೊಂಡು ಸಮಗ್ರ ಚಿಂತನೆಯ ರೂಪವನ್ನು ಕಡೆದಿರಿಸುತ್ತವೆ. ಎಲ್ಲ ಚರಣಗಳ ನಡುವೆ ಸಂಪರ್ಕ ಸರಣಿ ಇರುವುದರಿಂದ ಈ ಪದ್ಯಖಂಡಗಳು ಅಖಂಡ ಅನುಭವವನ್ನು ನೀಡಲು ಸಮರ್ಥವಾಗಿವೆ. ಮೊದಲನೆಯ ಪದ್ಯವೇ ಅವರ ಆಶಯವನ್ನು ಸ್ಪಷ್ಟವಾಗಿ ತಿಳಿಸುತ್ತದೆ.

'ಬಾಳುವುದೆ ಬದುಕಲ್ಲ: ಬದುಕಿನರ್ಥವ ತಿಳಿವ
ಚಿಂತನೆಯೆ ನಿಜ ಬದುಕು ನರ ಜೀವಿಗೆ;
ಬದುಕಲಿಕೆ ಇಹ ಕಲಿಕೆ, ಅನ್ಯರನುಭವ ಗಳಿಕೆ:
ವಿಶ್ವವಿದು ರೂಪುಗೊಳಲೊಂದಾವಿಗೆ.'

ಆವಿಗೆ ಎಂದರೆ ಕುಂಬಾರನ ಒಲೆ, ಕುಲುಮೆ. ಹಸಿಯ ಮಣ್ಣನ್ನು ಬೆಂಕಿಯಿಂದ ಸಂಸ್ಕರಿಸುವ ಒಂದು ಸಾಧನ. ಬದುಕಿನಲ್ಲೂ ಈ ಸಂಕೇತ ಮುಂದುವರಿದಿದೆ. ಆಹಾರ ನಿದ್ರೆ ಭಯ ಮೈಥುನಗಳ ಯಾಂತ್ರಿಕ ಸಾರ್ವತ್ರಿಕ ಬದುಕು, ಬರಿಯ ಮಣ್ಣಿನ ಬದುಕು. ಕವಿಯ ದೃಷ್ಟಿಯಲ್ಲಿ ಬದುಕೇ ಅಲ್ಲ. ಚಿಂತನೆಯ ಕುಲುಮೆಯಲ್ಲಿ ಸಂಸ್ಕಾರಗೊಂಡಾಗ ಈ ಬದುಕಿಗೆ ಅರ್ಥ ಬರುತ್ತದೆ. ಈ ಕುಲುಮೆಗೆ ಇಂಧನ ಒದಗಿಸುವ ಧಾತುಗಳೆಂದರೆ ವಿದ್ಯೆ ಮತ್ತು ಅನ್ಯರ ಅನುಭವಗಳು ಎಂಬ ಹಿದಿರೆಗಳು (ಪುಳ್ಳೆಗಳು). ಕವಿ ಮೊದಲನೆಯ ಚರಣದಲ್ಲೇ ಬದುಕಿಗೆ ಇರಲೇಬೇಕಾದ ಬೌದ್ಧಿಕ ತಂತುಗಳನ್ನು ಕುರಿತು ಪ್ರಸ್ತಾವಿಸಿದ್ದಾನೆ. ಜೀವನಕ್ಕೆ ಒಂದು ಸ್ಪಷ್ಟ ಅರ್ಥವಿದೆ. ಅದನ್ನು ಶೋಧಿಸುವ ಪ್ರಾಮಾಣಿಕ ಪ್ರಯತ್ನ ಅಗತ್ಯ ಎಂದು ಕವಿ ಭಾವಿಸುತ್ತಾನೆ.

'ಹುಟ್ಟನೀ ಬದಿ ನೆರಳು, ಸಾವಿನಾಚೆಗೆ ಮರಳು,
ನಡುವೆ ಗಿರಿ ತುದಿ ಹಿಮದ ಕಣ ಜೀವನ;

ಯಾವ ಚಣ ಜಾರುವುದೊ, ಕರಗಿ ತಳ ಸೇರುವುದೊ,
ಕೆಸರ ಕಂಬವೊ ಭವದ ಬೃಂದಾವನ.'

ಬದುಕಿನ ಪೂರ್ವಾಪರಗಳೆರಡನ್ನೂ ವಿಶ್ಲೇಷಿಸುವ ಪ್ರಯತ್ನ ಇಲ್ಲಿ ನಡೆದಿದೆ. 'ಅವ್ಯಕ್ತಾದೀನಿ ಭೂತಾನಿ, ವ್ಯಕ್ತ ಮಧ್ಯಾನಿ ಭಾರತ ಅವ್ಯಕ್ತ ನಿಧನಾನ್ಯೈವ... ಕಾ ತತ್ರ ಪರಿವೇದನಾ...' ಎಂಬ ಗೀತೋಕ್ತಿಯಿಂದ ನಮ್ಮ ಜೀವಿತಾವಧಿಯ ಪೂರ್ವವನ್ನು ನಿಸಾರರು 'ನೆರಳು' ಎನ್ನುತ್ತಾರೆ. 'ನೆರಳು' ಎಂಬ ಶಬ್ದ ತನ್ನ ಬಳಕೆಯ ಸಂಪತ್ತಿನಿಂದಾಗಿ ಅನುಕರಣೆ, ಮಾಯೆ, ಪ್ರತಿಕೃತಿ, ಅಸ್ವತಂತ್ರ ಎಂಬೆಲ್ಲ ಅರ್ಥಗಳನ್ನು ಹೊಮ್ಮಿಸುತ್ತದೆ. ಬದುಕಿನ ಒಂದು ತುದಿ ನೆರಳಿನಂತೆ ಅಸ್ಪಷ್ಟವಾದರೆ ಇನ್ನೊಂದು ತುದಿ ಸಾವು ತಾನೇ! ಆದರೆ ಅದನ್ನು ಕವಿ ಮರಳು ಎನ್ನುತ್ತಾನೆ. ನೆರಳಿನ ಅರ್ಥ ಸರಣಿಯಂತೆಯೇ ಮರಳಿನ ಅರ್ಥ ಸರಣಿ ಕೂಡ ಎಣಿಕೆಗೆ ಮೀರಿದ್ದು, ಉಪಯೋಗ ರಹಿತವಾದದ್ದು, ತುಂಡರಿಸಿ ರಾಶಿಯಾದದ್ದು—ಎಂಬೆಲ್ಲ ಭಾವಗಳನ್ನು ಸೃಷ್ಟಿಸುತ್ತದೆ. ವ್ಯಕ್ತ ಮಧ್ಯ ಎನ್ನುವುದು ಹುಟ್ಟು-ಸಾವುಗಳ ನಡುವಣ ವಾಸ್ತವ ಜೀವನ. ಇದು ಅಲ್ಪಕಾಲೀನವಾದದ್ದು, ಬೆಟ್ಟದ ಶೃಂಗದ ಹಿಮ ಕಣದಂಥದು. ಇಲ್ಲಿ ಕಣ ಎಂಬುದು 'ಕ್ಷಣ'ದ ತದ್ಭವವೂ ಆಗಿ ಅಲ್ಪತೆಯ ಕಡೆಗೆ ಬೊಟ್ಟು ಮಾಡುತ್ತದೆ. ಗಿರಿ ಶೃಂಗ ಎಂದರೇ ಹೆಚ್ಚು ಕಾಲ ಅಲ್ಲಿ ವಾಸಿಸಲು ಸಾಧ್ಯವಿಲ್ಲ ಎಂಬ ಕಠೋರ ಸತ್ಯವನ್ನು ಸಂಕೇತಿಸುವ ಶಬ್ದ. ಅಲ್ಲದೆ, ಅಲ್ಲಿಯ ವಾಸ್ತವ್ಯವನ್ನು 'ಮಲ್ಲಕಂಬ' ಎಂಬ ಕ್ರೀಡೆಗೆ ಕವಿ ಹೋಲಿಸುತ್ತಾನೆ. ಮಲ್ಲಕಂಬ ಒಂದು ಕಂಬವೇರುವ ಆಟ. ಆ ಕಂಬಕ್ಕೆ ಎಣ್ಣೆ ಹಚ್ಚಿರುತ್ತಾರಾದ್ದರಿಂದ ಮೇಲೇರಲು ಹೋದರೆ ಅದು ಜಾರಿಸುತ್ತದೆ. ಹಿಮಕ್ಕೆ ಹೋಲಿಸಿರುವುದರಿಂದ ಅದು ಬಿಸಿಲಿಗೆ ಕರಗಿ, ಅಂದರೆ ಆಯುಷ್ಯದ ಝಳಕ್ಕೆ ಸಿಕ್ಕಿ ತಳ ಸೇರುವ ಅಪಾಯವನ್ನು ಕವಿ ಸೂಚಿಸುತ್ತಾನೆ. ಇಷ್ಟಾದರೂ ಕವಿ ಬದುಕಿಗೆ ವಿಮುಖನಾಗಿಲ್ಲ. ಇದು ಭವದ 'ಬೃಂದಾವನ' ಎನ್ನುತ್ತಾನೆ. ಬೃಂದಾವನ ಎಂಬುದು ಮುಗ್ಧತೆ, ಮೋಹಕತೆ, ಜೀವಮಯತೆ ಮೊದಲಾದ ಇತ್ಯಾತ್ಮಕ ಲೋಕವನ್ನು ನೆನಪಿಸುವ ಒಂದು ಧ್ವನ್ಯಾತ್ಮಕ ಶಬ್ದ.

'ನಮ್ಮ ಬಾಳಿಗೆ ನಾವೆ ಒಡೆಯರೋ! ತಡೆಯುಂಟೆ
ಮುನ್ನಡೆಗೆ' ಎಂದುಬ್ಬಿ ಬೀಗುತಿಹೆವು.
ಬಾಗಿಸದ ತಲೆಯಂತೆ ಹೊಸ್ತಿಲಿಗೆ ಬಡಿದೊಡನೆ
ಹಮ್ಮುಳಿದು ಮಮ್ಮಲನೆ ಮರುಗುತಿಹೆವು.'

ಒಂದು ಘಟ್ಟದಲ್ಲಿ ಮನುಷ್ಯ ತನಗೆ ಯಾರೂ ಸಮಾನರಿಲ್ಲ, ತನ್ನ ಬದುಕಿನ ದಿಗ್ದರ್ಶಕ ತಾನೇ. ಇಡೀ ಜೀವನ ಕ್ರಿಯೆ ತನ್ನ ಸುತ್ತಲೇ ಕೇಂದ್ರೀಕೃತವಾಗಿದೆ. ತನ್ನ ಭವಿಷ್ಯಕ್ಕೆ ಯಾರೂ ಅಡ್ಡಿ ಮಾಡಲಾರರು ಎಂಬ ಬಡಿವಾರದಿಂದ ಬೀಗುತ್ತಾನೆ. ಆದರೆ ಇಂಥ ಸಂಭ್ರಮದ ಗಳಿಗೆಯಲ್ಲಿ ಅವನು ಬಾಗಿಲವಾಡ ತಗುಲಿ ಕೆಳಗೆ ಬಿದ್ದು, ತಲೆ ಹೊಸ್ತಿಲಿಗೆ ಬಡಿಯುವುದುಂಟು. ಆಗ ಅಹಂಕಾರಕ್ಕೆ ಮರ್ಮಾಘಾತವಾಗಿ ಅವನು ತನ್ನ ಮಿತಿಯನ್ನೂ ಪ್ರಕೃತಿಯ ಸತ್ವವನ್ನೂ ತಿಳಿದು ವಾಸ್ತವಕ್ಕೆ ಮರಳಬೇಕಾದ ಸಂದರ್ಭ ಬರುತ್ತದೆ. ಅಲ್ಪ ಸಾಧನೆಗೇ ಸೊಕ್ಕಿ ನಡೆಯಬಾರದು ಎಂಬ ಪ್ರಜ್ಞೆ ಮನುಷ್ಯನಿಗೆ ಬರುವಂತೆ ಪ್ರಕೃತಿಯೇ ಈ ಹುನ್ನಾರ ಮಾಡುತ್ತದೋ ಏನೋ!

'ಬಾಗಿಸದ ತಲೆ' ಮನುಷ್ಯನ ದರ್ಪ, ಪ್ರತಿಷ್ಠೆಗಳನ್ನು ಸೂಚಿಸುತ್ತದೆ, ನಿಜ. ಆದರೆ 'ಬಾಗಿಲ ವಾಡಕ್ಕೆ' ತಲೆ ತಾಕುತ್ತದೆ ಎಂಬ ವಾಡಿಕೆಯ ಮಾತಿಗೆ ಇಲ್ಲಿ ವ್ಯತ್ಯಯವಾಗಿರುವುದೇಕೋ ತಿಳಿಯುವುದಿಲ್ಲ. ಬಾಗಿಸದ ತಲೆಗೆ ಬಾಗಿಲಿನ ಮೇಲುಭಾಗದ ಪಟ್ಟಿ ಬಡಿಯಬೇಕೇ ಹೊರತು ಹೊಸ್ತಿಲಲ್ಲವಲ್ಲ! ಹಿರಿಯ ಮಗನಾಗಬೇಡ, ಹಿತ್ತಿಲ ಕದವಾಗಬೇಡ ಎಂಬ ಗಾದೆಯನ್ನು ಗಮನಿಸಿದರೆ ಇದು ಸ್ಪಷ್ಟವಾದೀತು.

'ಹಾರದಾಸೆಯ ಬಿದ್ದ ಗರಿ ಪುಕ್ಕಗಳನಾಯ್ದು
ಮರವೆ ತೊಟ್ಟಿಗೆ ಬಿಸುಡಿ ಬಿಸುಸುಯ್ವೆವು;
ಅನುದಿನದ ಈ ಕತೆಗೆ ಅಸಹಾಯರಾಸತ್ತು
ಅತ್ತು ಹಣೆಬರಹವನು ಕಡು ಬಯ್ವೆವು.'

—ಹೀಗೆ ಗರ್ವಭಂಗವಾದರೂ ನಮಗೆ ಬುದ್ಧಿ ಬರುತ್ತದೇನು? ಎಂದು ಕವಿ ಪ್ರಶ್ನಿಸುತ್ತಾನೆ. ಹಕ್ಕಿಯ ಪ್ರತಿಮೆ ಈ ಚರಣದಲ್ಲಿ ರೂಪಿತವಾಗಿದೆ. ನಮ್ಮದು ಸತತವಾಗಿ ಹಾರುವ ಆಸೆ. ಆದರೆ ನಮ್ಮ ರೆಕ್ಕೆಗಳಲ್ಲಿ ಪ್ರಕೃತಿ ಆ ಸತ್ವವನ್ನು ಇನ್ನೂ ತುಂಬಿಲ್ಲ. ಪರಿಣಾಮವಾಗಿ ನಮ್ಮ ರೆಕ್ಕೆಯ ಪುಕ್ಕಗಳು ಕೆಳಗೆ ಬೀಳುತ್ತವೆ. ಆದರೂ ಮನುಷ್ಯ ಆ ಗರ್ವಭಂಗವನ್ನು ಒಪ್ಪುವುದಿಲ್ಲ. ಬಿದ್ದ ರೆಕ್ಕೆ ಪುಕ್ಕಗಳನ್ನೆಲ್ಲ ತೊಟ್ಟಿಗೆ ಬಿಸುಡುವ, ನಿಟ್ಟುಸಿರು ಬಿಡುವ ಕ್ರಿಯೆಗಳೆರಡೂ ಏಕ ಕಾಲದಲ್ಲಿ ನಡೆಯುತ್ತವೆ. ಇದನ್ನು ಕವಿ 'ಅನುದಿನದ ಕಥೆ' ಎಂದು ಸೊಗಸಾದ ಭಾಷ್ಯ ಬರೆಯುತ್ತಾನೆ. ನಿಜವಾಗಿ ಇದಕ್ಕೆ ಮನುಷ್ಯನೇ ಕಾರಣ. ಆದರೆ ಪ್ರಾಂಜಲವಾಗಿ ಅದನ್ನು ಒಪ್ಪದ ಮನುಷ್ಯ ತನ್ನ 'ಹಣೆ ಬರಹ'ದ ಮೇಲೆ ಗೂಬೆ ಕೂರಿಸುತ್ತಾನೆ.

'ತತ್ತರಿಸುವೆದೆ ಲತೆಗೆ ಅಭಯ ಹಂದರ ನಿಲಿಸೆ
ಎತ್ತರದ ನೀಲಿಮೆಯನೊಲಿಸಬೇಕು;
ಬೀಸುವೆಲರಿನ ಒಲವ ಬೆಂಬಲವ, ಹಾರಿಕೆಯ
ಹಂಬಲಕೆ ಇಂಬಾಗಿ ಗಳಿಸಬೇಕು.'

ಪ್ರಕೃತಿಯ ಸಹಾಯಹಸ್ತವಿಲ್ಲದೆ, ಅಭಯದ ಹಂದರವಿಲ್ಲದೆ ಜೀವಲತೆ ಬೆಳೆಯುವುದಿಲ್ಲ. 'ಲತೆ' ಎಂದು ಕರೆಯುವ ಮಾತಿನಿಂದಲೇ ಕವಿ, ಬದುಕು ಪರ ಬಲಾವಲಂಬಿಯಾದದ್ದು ಎಂದು ಸೂಚಿಸಿದ್ದಾನೆ. ಎತ್ತರದ ನೀಲಿಮೆಯನ್ನು ಆಶ್ರಯಿಸಿಯೇ ಜೀವ ಲತೆ ಬಲಿಷ್ಠವಾಗಿ ಹರಡಿಕೊಳ್ಳಬೇಕು. ಬೀಸುವ ಗಾಳಿಯ ಒಲವಿನ ಬೆಂಬಲವನ್ನು ಪಡೆದೇ ವರ್ಧಿಷ್ಣುವಾಗಬೇಕು. ಇದು ಗಳಿಸಬೇಕಾದ ಸಂಪತ್ತೇ ಹೊರತು ಕೃಪೆಯಿಂದ ಪಡೆಯಬೇಕಾದುದಲ್ಲ ಎಂದು ಕವಿ ಸ್ಪಷ್ಟಪಡಿಸಿ, ಪ್ರಾಕೃತಿಕ ಶಕ್ತಿಗಳನ್ನು ಪಳಗಿಸಿಕೊಂಡು ಮನುಷ್ಯ ಶಕ್ತಿಶಾಲಿಯಾಗಿ ಹಾರುವ ಗರುಡ ಸತ್ವವನ್ನು ಪಡೆಯಬೇಕು ಎಂಬ ಆಶಯ ಇಲ್ಲಿದೆ.

'ನಂಬಬೇಕೋ, ನಂಬಿ ಅವ್ಯಕ್ತ ಪ್ರಭೆಯಿಂದ
ಜೀವನವನಾದ್ಯಂತ ಬೆಳಗಬೇಕು;

ಭವವೆಂಬ ನಶ್ವರದ ಶುಕ್ತಿಕೆಯ ಹೃದಯದಲಿ
ಪರದ ಚಿರ ಮುಕ್ತಿಕೆಯ ಸಲಹಬೇಕು.'

ಹೀಗೆ ಹಾರಲು ಲಂಘನ ತ್ರಾಣವನ್ನು ಪಡೆಯುವುದು ಎಲ್ಲಿಂದ? ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ. ಕವಿ ತಟಕ್ಕನೆ ಇಲ್ಲಿ ಇಹ, ಪರಗಳ ಸಂಪರ್ಕ ಸೇತುವಿನ ಕಡೆಗೆ ತಿರುಗಿದ್ದಾನೆ. ಈ ಸಂಪರ್ಕ ಸಾಧನದಲ್ಲಿ ಮುಖ್ಯವಾದದ್ದು ನಂಬಿಕೆ, ಶ್ರದ್ಧೆ, ವಿಶ್ವಾಸ ಮತ್ತು ಆಪ್ತತೆ. ಇದೇ ಬದುಕನ್ನು ಬೆಳಗಿಸುವ 'ಅವ್ಯಕ್ತ ಪ್ರಭೆ' ಎಂದು ಕವಿ ಗುರುತಿಸುತ್ತಾನೆ. ಶುಕ್ತಿಕೆ, ಮುಕ್ತಿಕೆ ಎಂಬ ಶಬ್ದರೂಪಗಳು ಬರಿಯ ಪ್ರಾಸಫಲವಾಗದೆ ಚಿಪ್ಪು-ತಿರುಳುಗಳ ವ್ಯತ್ಯಾಸವನ್ನು ತೋರಿಸುವ ರೂಪಿಕೆಗಳಾಗಿವೆ. ಭವ ಅಥವಾ ಲೋಕ ಜೀವನವನ್ನು ನಶ್ವರವಾದ ಶುಕ್ತಿಕೆ (ಚಿಪ್ಪು) ಎಂದು ಒಪ್ಪಿಕೊಳ್ಳುವ ಕವಿ ಆ ಚಿಪ್ಪಿನಲ್ಲಿಯೇ ಅಲೌಕಿಕತೆಯ ಮುತ್ತು ರೂಪ ತಾಳುವಂತೆ ಮಾಡಬೇಕಾದ ಸಾಧನೆಯ ಹಾದಿಯತ್ತ ಬೊಟ್ಟು ಮಾಡುತ್ತಾನೆ. ಇದನ್ನು ಪರ ಶಕ್ತಿ ಎಂದು ಗುರುತಿಸುವ ಕವಿ ಅದರ ಸತ್ವ ಸಾಮರ್ಥ್ಯಗಳನ್ನು ಮುಂದಿನ ಚರಣದಲ್ಲಿ ವಿವರಿಸುತ್ತಾನೆ. ಕವಿಯ ದೈವ ಶ್ರದ್ಧೆಯ ವಿಷಯ ಇಲ್ಲಿ ರಂಗದ ಮೇಲೆ ಬರುತ್ತದೆ.

'ಕಡಲ ದಾಟುವ ಪಕ್ಷಿ ರೆಕ್ಕೆಗಳ ಬಲ ನೆಮ್ಮಿ
ಸಾಗುವನಿತೂ ಸಾಗಿ, ಸೋತು ಹೋಗಿ—
ಜಹಜುಗಂಬದ ಮೇಲೆ ಕೂರುವಂತೆಲೆ ಜೀವ
ಶರಣಾಗು ಪರಶಕ್ತಿ ಕೃಪೆಗೆ ಬಾಗಿ.'

ರೆಕ್ಕೆ ಬಡಿಯುವುದು ಎಂದರೆ ಮನುಷ್ಯನ ಸಾಧನಾಮುಖವಾದ ಕ್ರಿಯೆ. ಬದುಕು ಒಂದು ಹಕ್ಕಿ ಎನ್ನುವುದಾದರೆ, ಈ ಜೀವ ಪಕ್ಷಿ ತನ್ನ ರೆಕ್ಕೆಯ ಬಲವನ್ನು ನಂಬಿ ಸಾಗುವಷ್ಟು ದೂರ ಸಂಸಾರದ ಸಾಗರದ ಮೇಲೆ ಸಾಗುತ್ತದೆ. ಅಂದರೆ, ಜೀವಿಯಲ್ಲಿ ಚೈತನ್ಯದ್ರವ ಆರಿರುವುದಿಲ್ಲ, ನಿಜ. ಆದರೆ ಅಪಾರ ಸಾಗರವನ್ನು ದಾಟಲು ಬರಿಯ ದೇಹ ಬಲ ಸಾಲದು. ಅದನ್ನೇ ನಂಬಿ ಹಾರಲು ಹೋದರೆ ರೆಕ್ಕೆ ಬಡಿದು ಹತಾಶೆಗೊಂಡು ಕೊನೆಗೆ ಜಹಜುಗಂಬದ ಮೇಲೆ ಕುಳಿತು ಹೈರಾಣಾಗುತ್ತದೆ. ಇಂಥ ಅಸಹಾಯಕ ಸ್ಥಿತಿಗೆ ತಲಪುವ ಬದಲಿಗೆ ಜೀವ ಪಕ್ಷಿಯು ದೈವಕೃಪೆಯ ಮಹತ್ವವನ್ನು ಗುರುತಿಸಿ ಅದಕ್ಕೆ ತಲೆ ಬಾಗಿ ಮಾನಸಿಕವಾಗಿ ಬೆಳೆದರೆ ಮಾತ್ರ ಲಂಘನ ಕಾರ್ಯ ಸುಲಭ ಎಂಬುದು ಕವಿಯ ನಿಲವು. ಶರಣಾಗತಿ ತತ್ತ್ವವನ್ನು ಕವಿ ಇಲ್ಲಿ ಬೋಧಿಸುತ್ತಿದ್ದಾನೆ ಎನ್ನಿಸಿದರೂ ಬರಿಯ ದೇಹ ಶಕ್ತಿಯ ಮಿತಿಯನ್ನು ಗುರುತಿಸಿರುವುದನ್ನು ಮರೆಯಬಾರದು.

'ಮಣ್ಣ ಕಗ್ಗತ್ತಲಲಿ ಮುಲುಗುವೆರೆ ಹುಳದಂತೆ
ಐಹಿಕಾಮೋದದಲಿ ಜೀವ ಹೂತು—
ಮುಂಗಾಣದಿರೆ ನೊಂದು, ವರದ ಹಸ್ತವದೊಂದು
ಮೂಡಿ ಮೇಲೆತ್ತುವುದು ಬಿಡದೆ ಗುರುತು.'

ಎರೆ ಹುಳದ ಪ್ರತಿಮೆ ಇಲ್ಲಿದೆ. ಎರೆ ಹುಳ ರೈತನ ಬಂಧು. ಆದರೆ ಆ ಹುಳ ಸರ್ವದಾ

ಮಣ್ಣಿನ ಒಳ ಪದರದ ಆಳದ ಕತ್ತಲಲ್ಲಿ ಮುಲುಗುಟ್ಟುತ್ತಿರುತ್ತದೆ. ಅಂದರೆ, ಮನುಷ್ಯ ಜೀವ ಲೌಕಿಕ ಸುಖ ಸಂತೋಷಗಳ ಮಣ್ಣಿನಲ್ಲಿ ಹೂತು ಹೋಗಿ ಅದೇ ತನ್ನ ಪ್ರಪಂಚವೆಂದು ಭ್ರಮಿಸುತ್ತದೆ. ಈ ತಾತ್ಕಾಲಿಕ ಸುಖಸೀಮೆಯಿಂದ ಅದು ಆಚೆಗೆ ಬರಲು ಬಯಸುವುದೇ ಇಲ್ಲ. ಇದು ಪ್ರತಿಯೊಂದು ಜೀವದ ಗುಣ. ಆದರೆ ಈ ಜೀವ ಹಿಂದಿನ ಚರಣದಲ್ಲಿ ಕವಿ ಹೇಳುವ ಶರಣಾಗತಿ ತತ್ತ್ವವನ್ನು ನಂಬಿದರೆ ಆ ದೈವದ ವರದ ಹಸ್ತ ಜೀವವನ್ನು ಗುರುತಿಟ್ಟುಕೊಂಡಿದ್ದು ಅದರ ಬೆಂಬಲಕ್ಕೆ ಧಾವಿಸುತ್ತದೆ. ಈ ದೈವ ಮುಂದಿನ ಚರಣದಲ್ಲಿ 'ಸೂಲಗಿತ್ತಿ'ಯಾಗಿ ಬೆಳೆದಿರುವುದು ಒಂದು ಸುಂದರ ಕಲ್ಪನೆ. ಜೀವ-ದೈವಗಳೆರಡರ ಚಿಂತನೆಯೂ ಈ ಚರಣದಲ್ಲಿದೆ:

'ಅಳಲ ಗರ್ಭವ ತಳೆದ ಬಾಳ ಬಸುರಿಯ ಬೇನೆ
ಉಲ್ಬಣಿಸಿ ಉರಿದಿರಲು ಪ್ರಾಣ ಹೊತ್ತಿ,
ಸರಿಹೊತ್ತಿಗೈತರುವಳೆಲ್ಲಿಂದಲೋ ಕರುಣೆ,
ಶೋಕೋಪಶಮಕಾರಿ ಸೂಲಗಿತ್ತಿ.'

ಜೀವದ ಮೊರೆ, ದೈವದ ಅಭಯ ಎರಡೂ 'ಅವಿನಾ'ಭಾವದಲ್ಲಿ ಸೇರಿಕೊಂಡಿರುವ ಚರಣ ಇದು. ದಿನ ತುಂಬಿದ ಬಸುರಿಯ ಬೇನೆ, ಪ್ರಸವೇಚ್ಛೆ ಹಾಗೂ ದೈವ ಸೂಲಗಿತ್ತಿಯ ಸೇವಾಪಟುತ್ವಗಳೆರಡೂ ಇಲ್ಲಿ ಬೆಸೆದುಕೊಂಡಿವೆ. ಜೀವನವನ್ನು 'ದುಃಖದ ಗರ್ಭ ಧರಿಸಿದ ಬಸುರಿಯ ಬೇನೆ' ಎಂದು ಸಮಂಜಸವಾಗಿ ಕರೆದಿರುವ ಕವಿ ಜೀವನದ ಯಾತನಾಮಯತೆ ಯನ್ನು ಸಮರ್ಥವಾಗಿ ಧ್ವನಿಸಿದ್ದಾನೆ. ಹೆರಿಗೆಯ ಬೇನೆ ಉಲ್ಬಣಿಸಿ ಜೀವ ಸಂಕಟಪಡು ತ್ತಿದ್ದರೆ ಯಾವುದೋ ಕಾಣದ ಮೂಲೆಯಿಂದ ಒಂದು ಕೃಪಾಶಕ್ತಿ ಸೂಲಗಿತ್ತಿಯಾಗಿ ಇಳಿದು ಬರುತ್ತದೆ. ಆಕೆ ನಮಗೆ ಪರಿಚಿತಳೂ ಅಲ್ಲ, ಆಕೆಯನ್ನು ಜೀವ ಆಹ್ವಾನಿಸಿರಬಹುದೇನೋ. ಆದರೆ ಕೇವಲ ಕರುಣೆಯಿಂದ ಆಕೆ ಜೀವದ ಬಳಿ ಸುಳಿಯುತ್ತಾಳೆ. ಈ ಸೂಲಗಿತ್ತಿಯನ್ನು ಕವಿ 'ಶೋಕೋಪಶಮಕಾರಿ' ಎಂದು ಅರ್ಥಪೂರ್ಣವಾಗಿ ವರ್ಣಿಸಿದ್ದಾನೆ. ಅಂದರೆ, ಎಲ್ಲ ನೊಂದ ಜೀವಗಳ ಎದೆ ನೋವನ್ನು ಕರಗಿಸುವ ಲೋಕ ಚೇತನವೊಂದಿದೆ ಎಂಬುದನ್ನು ಕವಿ ಇಲ್ಲಿ ಗುರುತಿಸಿದ್ದಾನೆ.

'ಬಾಳಿನಡುಗೆಯ ಮನೆಯ ದಟ್ಟೈಸಿದುರಿ ಹೊಗೆಯ
ಉಸಿರು ಕಟ್ಟಿಸುವಂಥ ಆವರಣದಲಿ
ದೈವ ಸ್ಮರಣೆಯ ಚಿಮಣಿ ನಿತ್ಯ ತೆರೆದಿರಬೇಕು;
ಕರಣ ಗಣವಿರಬೇಕು ಓರಣದಲಿ.'

ನಿಸಾರರ ದೃಷ್ಟಿಯಲ್ಲಿ ಬದುಕು ಸುಖದ ಸುಪ್ಪತ್ತಿಗೆಯಲ್ಲ. ಬದುಕಿನಲ್ಲಿ ಉತ್ಸಾಹಕ್ಕಿಂತ ಮಂಕು ಕವಿಸುವ ಸಂದರ್ಭಗಳ ಸಂಖ್ಯೆ ಹೆಚ್ಚು. ಈ ಬದುಕು ಒಂದು ಹಳೆಯ ಕಾಲದ ಅಡಿಗೆಯ ಮನೆ. ಹಳೆಯ ಅಡಿಗೆ ಮನೆಗಳಲ್ಲಿ ಸೌದೆ, ಸೋಗೆ, ಬೆರಣಿ ಮೊದಲಾದ ಒಲೆಯುರಿಸುವ ಸಾಧನಗಳಿದ್ದುವಲ್ಲವೆ? ಅವುಗಳ ಹೊಗೆ ಎಲ್ಲ ಕಡೆ ಹರಡಿ ಉಸಿರು ಕಟ್ಟಿಸುವಂಥ ವಾತಾವರಣ ಸೃಷ್ಟಿಯಾಗುತ್ತಿತ್ತು. ಈ ಹೊಗೆಯನ್ನು ಮೇಲೆಳೆದು

ಆಚೆಗೆ ಸಾಗಿಸಲು ಸರಿಯಾದ ಚಿಮಣಿ ಇದ್ದರೆ ಮಾತ್ರ ಸಾಧ್ಯ. ನಮ್ಮ ಬದುಕನ್ನು ಕವಿಯುವ ದುರ್ಭರ ಸನ್ನಿವೇಶಗಳ ಹೊಗೆಯನ್ನು ಓಡಿಸಲು ದೈವ ಸ್ಮರಣೆಯ ಚಿಮಣಿಯನ್ನು ತೆರೆದಿರಬೇಕು ಎಂದು ಕವಿ ಹೇಳುತ್ತಾನೆ. ನಮ್ಮ ಇಂದ್ರಿಯಗಳೇ ಅಂಥ ಚಿಮಣಿಗಳು. ಅವು ಓರಣವಾಗಿದ್ದರೆ ಕೊಳವೆಗೆ ಮೆತ್ತಿಕೊಳ್ಳುವ ಕಿಟ್ಟವನ್ನು ಉದುರಿಸಿ ಚಿಮಣಿಯನ್ನು ಸ್ವಚ್ಛಗೊಳಿಸುತ್ತವೆ. ಅಂದರೆ ಚಿತ್ತಸ್ವಾಸ್ಥ್ಯವಿದ್ದರೆ ಎಂಥ ವಿಷಮ ಸಂದರ್ಭದಿಂದಲೂ ಪಾರಾಗಬಹುದು ಎಂಬ ನಂಬಿಕೆ ಕವಿಯದು. ಬದುಕಿನಲ್ಲಿ ಒಂದು ನಿರ್ದಿಷ್ಟ ಗುರಿ ಇರಿಸಿಕೊಳ್ಳುವುದು ಎಷ್ಟು ಮುಖ್ಯವೋ, ನಮ್ಮ ನರ ನರಗಳಲ್ಲೂ ವ್ಯವಸ್ಥೆಯನ್ನು ತುಂಬಿ ಆ ಗುರಿಯತ್ತ ಕವಾಯತು ಮಾಡಿಸುವುದೂ ಅಷ್ಟೇ ಮುಖ್ಯ ಎಂಬುದು ಕವಿಯ ಆಶಯ. ಅಡಿಗೆ ಮನೆಯ ರೂಪಕ ನಮ್ಮ ಬದುಕಿನ ವಿಷಮ ಸಂದರ್ಭಗಳ ಯಾತನೆಯ ಹೊಗೆಯನ್ನು ಕಣ್ಣಿಗೆ ಕಟ್ಟಿರುವ ರೀತಿಯು ಪರಿಭಾವನಾಯೋಗ್ಯವಾದದ್ದು.

‘ಪರಮ ಪದ ಸೋಪಾನದಾಟ ನಮ್ಮಿಳೆ ಬದುಕು
ಚಣಚಣವು ನಡೆಸಿಹೆವು ಬಯಕೆ ದಾಳ.
ಸೌಭಾಗ್ಯದೇಣಿಗಳನೇರಿಸುವ ಕಟು ವಿಧಿಯೆ
ತೆರೆಯುವುದು ಕಾಳಾಹಿಯೊಡಲ ಪಾತಾಳ.’

—ವಿಧಿಯಾಟವು ಹುಡುಗರಾಡುವ ಪರಮ ಪದ ಸೋಪಾನ ಪಟ ಇದ್ದ ಹಾಗೆ. ಅಂದರೆ, ಹಾವು ಏಣಿಯಾಟ. ಇಪ್ಪತ್ತನೆಯ ಶತಮಾನದ ಹುಡುಗರು ಆಡುತ್ತಿದ್ದ ಒಂದು ಜನಪ್ರಿಯ ಗೃಹಾಂತರದ ಆಟ. ದಾಳ ಉರುಳಿಸಿ ಗರಕ್ಕೆ ತಕ್ಕಂತೆ ಕಾಯನ್ನು ಮುನ್ನಡೆಸುವ ಆಟ ಇದು. ವಿಧಿಯ ಗರಕ್ಕೆ ಸಿಕ್ಕ ನಮ್ಮ ಬದುಕೂ ಇದೇ ಬಗೆಯದು. ಈ ಆಟದಲ್ಲಿ ನಮ್ಮನ್ನು ಅನಿರೀಕ್ಷಿತವಾಗಿ, ಇದ್ದ ಸ್ಥಾನದಿಂದ ಮೇಲಕ್ಕೆ ಏರಿಸುವ ವ್ಯವಸ್ಥೆಯ ಏಣಿ ಇರುವಂತೆಯೇ ಪಾತಾಳದಾಳಕ್ಕೆ ಬಲವಂತವಾಗಿ ತಳ್ಳುವ ಸರ್ಪ ಮುಖಗಳೂ ಉಂಟು. ಇವೆಲ್ಲ ನಮ್ಮ ನಮ್ಮ ಅ-ದೃಷ್ಟಗಳನ್ನವಲಂಬಿಸಿದ ಒಂದು ಕಾರ್ಯ ಪ್ರಣಾಲಿ. ಅಂದರೆ ಸೌಭಾಗ್ಯ ದೌರ್ಭಾಗ್ಯಗಳೆರಡರಲ್ಲಿ ನಾವು ಯಾವುದಕ್ಕೆ ಸಿಕ್ಕುತ್ತೇವೆಂದು ಖಚಿತವಾಗಿ ಹೇಳಲಾಗದ ಜೀವನ ಕ್ರೀಡೆ ಇದು. ಹಗ್ಗ ಜಗ್ಗಾಟವಾಗಿದ್ದರೆ ನಮ್ಮ ಸಾಮರ್ಥ್ಯಕ್ಕೆ ಬೆಲೆಯಿದೆ ಎಂದಕೊಳ್ಳ ಬಹುದಾಗಿತ್ತು. ಆದರೆ ಇದು ಹಾವು-ಏಣಿಯಾಟವಾದ್ದರಿಂದ ನಮ್ಮ ಒಳಿತು ಕೆಡುಕು ಗಳೆರಡೂ ವಿಧಿ ನಿಯಂತ್ರಿತವಾಗಿವೆ ಎಂದು ಕವಿ ಹೇಳುತ್ತಾನೆ. ಬದುಕಿನ ಮುಂದಿನ ಹೆಜ್ಜೆಯ ಅನಿಶ್ಚಿತತೆಯನ್ನು ಸಮರ್ಥವಾಗಿ ಬಿಂಬಿಸುವ ಪ್ರತಿಮೆಯಾಗಿ ಈ `ಪರಮ ಪದ ಸೋಪಾನ ಪಟ' ಎಂಬ ಕ್ರೀಡಾವಸ್ತು ಸೃಷ್ಟಿಗೊಂಡಿದೆ. ಬದುಕು ಪಡೆದುಕೊಳ್ಳುವ ಎರಡು ಹೊರಳುಗಳನ್ನು ಮುಂದಿನ ಚರಣ ವಿವರಿಸಿ, ಎರಡರ ಸ್ವರೂಪ ದಿಗ್ದರ್ಶನವನ್ನು ಮಾಡುತ್ತದೆ:

‘ಮಂದಲಿಗೆ ಇಬ್ಬದಿಯ ಹಾಗೆಮ್ಮ ಪುರುಷಾರ್ಥ:
ಒಂದು ಬದಿ ಸವೆಯಿತೊ, ಸಿದ್ಧ ಒಂದು;
ಒಂದು ಮಜಲಿನ ತನಕ ಕಾಮಾರ್ಥ ಧಗಧಗಿಸಿ,
ವೈರಾಗ್ಯದುಪಶಾಂತ ದೀಪ್ತಿ ಮುಂದು.’

ಬಯಕೆಯ ಸ್ಥಿತಿ ಮತ್ತು ಉಪಶಮನ ಸ್ಥಿತಿ—ಇವೆರಡೂ ಒಂದೇ ಮಂದಲಿಗೆಯ (ಚಾಪೆಯ) ಎರಡು ಬದಿಗಳು ಎನ್ನುತ್ತಾನೆ ಕವಿ. ಹಿಂದೆ ಮನೆಯಲ್ಲಿ ಕುರ್ಚಿ ಸೋಫ ಇತ್ಯಾದಿ ಸಲಕರಣೆಗಳಿರದಿದ್ದಾಗ, ನೆಲವು ಸಗಣಿ ಹಚ್ಚಿ ಸಾರಿಸಿದ ನೆಲವೇ ಆಗಿದ್ದಾಗ ಕೂರಲು ಮಂದಲಿಗೆಯನ್ನೇ ಹಾಸುತ್ತಿದ್ದರು. ಈ ಚಾಪೆಯ ಒಂದು ಬದಿ ಸವೆದು ಹೋಗಿದ್ದರೆ ಆ ಚಾಪೆಯನ್ನು ತಿರುಗಿಸಿ ಹಿಂಬದಿಯನ್ನು ಮೇಲೆ ಮಾಡುತ್ತಿದ್ದರು. ಅಂದರೆ, ಒಂದು ಸವೆದರೆ ಇನ್ನೊಂದು ಬದಿ ಸಿದ್ಧವಾಗಿರುತ್ತಿತ್ತು. ಹಾಗೆಯೇ ನಮ್ಮ ಜೀವನದ ಮಂದಲಿಗೆಯಲ್ಲಿ ಇಂದ್ರಿಯಗಳು ಪಟುವಾಗಿದ್ದಾಗ ಕಾಮ ಅರ್ಥಗಳು ಪ್ರಕರ್ಷಗೊಂಡು ಮೆರೆಯುತ್ತಿದ್ದುದು ನಿಜವಾದರೆ ಅವು ಮುಂದೆ ವೈರಾಗ್ಯ, ಉಪಶಾಂತಿ ಮನೋಸ್ವಾಸ್ಥ್ಯಗಳಿಗೆ ಎಡೆಮಾಡಿಕೊಟ್ಟು ವಿರಮಿಸುತ್ತಿದ್ದುವು. ಅಂದರೆ ಕಾಮ ಅರ್ಥಗಳ ಅನಂತರ ಧರ್ಮ, ಮೋಕ್ಷಗಳ ಪ್ರಸಕ್ತಿ ಬಂದಿದೆ. ನಾವು ತಿಳಿದುಕೊಂಡಿರುವ ಭೋಗ ಜೀವನವೇ ಶಾಶ್ವತವಲ್ಲ, ಭೋಗದ ತುದಿ ವೈರಾಗ್ಯ ಎಂಬುದು ಕವಿಯ ಭಾವ. ನಿಜವಾಗಿ ಇದು ವಿಕಾಸಶೀಲವಾದ ಚೇತನ ಪಡೆಯಬೇಕಾದ ಸಹಜ ಅವಸ್ಥಾಂತರಗಳೆಂಬುದು ಕವಿಯ ಇಂಗಿತ.

'ಸ್ವಾನುಭವಗಳ ಸರಕಿಗಾತ್ಮವಸ್ತುವೆ ಮಾನ,
ಭವದ ಮಾಲಿನ ಗಳಿಕೆಗೆಲ್ಲ ಅಳತೆ;
ಮೈ ಮನದ ಪೇರುಗಳ ತೂಗುತಕ್ಕಡಿ ಬಾಳ್ವೆ,
ಸತ್ಯ ಶಿವ ಸುಂದರದ ಬೊಟ್ಟು ಬಳಕೆ.'

ಇಲ್ಲಿ ನಿಸಾರರು ಬಳಸಿರುವ 'ಭವ' ಎಂಬ ಶಬ್ದ ಲೌಕಿಕತೆಯನ್ನು ಪ್ರತಿನಿಧಿಸುವ ವ್ಯಾವಹಾರಿಕ ಶಬ್ದ. ತಾತ್ವಿಕ ಚಿಂತನೆಗಳಲ್ಲೂ ಈ ಶಬ್ದವು ಪಂಪನ ಕಾಲದಿಂದ, ವಚನಗಳ ಕಾಲದಿಂದ ಇಂದಿನವರೆಗೆ ಬಳಕೆಯಲ್ಲಿದ್ದು ಐತಿಹಾಸಿಕತೆಯನ್ನು ಪಡೆದುಕೊಂಡಿದೆ. ಮೈ-ಮನಸ್ಸು, ಇಹ-ಪರ ಎರಡನ್ನೂ ಅಳೆಯಲು ಅಥವಾ ತೂಗಲು ಒಂದು ಮಾಧ್ಯಮ ಬೇಕಷ್ಟೆ? ಆತ್ಮವೇ ಈ ಮಾನದಂಡದ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತದೆ. ಸ್ವಾನುಭವಗಳ ಸರಕನ್ನು ಅದು ತಪಶೀಲಾಗಿ ಬೆಲೆಕಟ್ಟಿ ನೋಡುತ್ತದೆ. 'ಭವ'ದ ಅಂದರೆ, ವ್ಯಾವಹಾರಿಕ ಜೀವನದ ನಮ್ಮ ಗಳಿಕೆಯನ್ನು ತೂಗಿ ನೋಡುವಂತೆಯೇ ಅದು ನಮ್ಮ ಅಂತರಂಗದ, ಒಳಜೀವದ ಸಂಸ್ಕಾರದ ಗಳಿಕೆಯನ್ನೂ ಒರೆಗೆ ಹಚ್ಚುತ್ತದೆ. ಇದನ್ನೇ ವರ್ತಕರ ಪರಿಭಾಷೆಯಲ್ಲಿ 'ಪೇರು' ಎನ್ನುತ್ತೇವೆ. ಪೇರು ಎಂದರೆ ತಕ್ಕಡಿಯನ್ನು ಸಮತೋಲನಗೊಳಿಸುವ ಪರಡೆಗಳಲ್ಲಿ ಹಾಕುವ ಬಟ್ಟು ಕಲ್ಲು ಅಥವಾ ಅಂಥ ಯಾವುದೇ ಮಾನಕ ವಸ್ತು. ಮೈಯ ಪೇರು ವ್ಯಾವಹಾರಿಕ ಲೋಕದ್ದು. ಮನದ ಪೇರು ಅಂತರಂಗದ ಸ್ವಭಾವವನ್ನು ಕುರಿತು ಹೇಳುವಂಥದು. ಒಂದರ ಪೇರು ತೂಕದ ಬಟ್ಟಾದರೆ ಇನ್ನೊಂದರ ಪೇರು 'ಸತ್ಯ ಶಿವ ಸುಂದರ' ಎಂಬ ಮೌಲ್ಯಗಳ ಬೊಟ್ಟು. ಎರಡೂ ಸಮತಟ್ಟಾಗಿ ನಿಂತಾಗ ಅಳತೆ ಸಾರ್ಥಕವಾಗುತ್ತದೆ. ಇಲ್ಲಿ ವಸ್ತುನಿಷ್ಠವಾಗಿ ತೂಗಿ ನೋಡುವ ಆತ್ಮವು ಯಾವ ದಯಾ ದಾಕ್ಷಿಣ್ಯಕ್ಕೆ ಒಳಗಾಗದೆ ಮೈ-ಮನಸ್ಸುಗಳೆರಡರ ನೈಜ ಸತ್ವವನ್ನು ಹೊರಗಾಣಿಸುತ್ತದೆ. ಚಿಂತನಶೀಲ ಚೇತನವು ಲೌಕಿಕದಲ್ಲಿ ವ್ಯಾವಹಾರಿಕ ನೈಪುಣ್ಯವನ್ನು

ಸಾಧಿಸುವಂತೆಯೇ ಮನಸ್ಸಿನ ನೆಲದ ಹರವಿನಲ್ಲಿ ತ್ರೈಮೌಲ್ಯಗಳೆನಿಸಿದ ಸತ್ಯ, ಶಿವ, ಸುಂದರಗಳ ಸೀಮೆಯಲ್ಲೂ ಹೆಸರು ಪಡೆದರೆ ಮಾತ್ರ ಬದುಕು ಸಾರ್ಥಕ ಎಂಬುದು ಕವಿಯ ಅನ್ನಿಸಿಕೆ. ಈ ಎರಡನೆಯ ತ್ರಿಮೌಲ್ಯಗಳ ಬದುಕು ಎಷ್ಟು ಅಗತ್ಯ ಎಂಬುದನ್ನು ಕೊನೆಯ ಚರಣ ನಿಸ್ಸಂದಿಗ್ಧವಾಗಿ ಉದ್ಘೋಷಿಸುತ್ತದೆ:

'ಬಾಳು ಹೋರಾಟ ದಿಟ; ಪರಚುತಿಹ ನರ ಪ್ರಾಣಿ
ಸ್ವಂತ ಜೀವಿತ ಗುಹೆಯ ಹೊಸ್ತಿಲೆದುರು
ಸಾಹಿತ್ಯ ಸಂಸ್ಕೃತಿಯ ಹೂದೋಟ ಬೆಳಸಿಕೊಳೆ
ವೇಣುವಾದಂತೆ, ಅಹ! ಕಾಡ ಬಿದಿರು.'

ಗೋಪಾಲಕೃಷ್ಣ ಅಡಿಗರು 'ವರ್ಧಮಾನ'ದಲ್ಲಿ ಮಂಗನಾಗಬಾರದು ಆಂಜನೇಯನಾಗಿ ಬೆಳೆಯಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಂತೆ, ಇಲ್ಲಿ ನಿಸಾರರು ಕಾಡ ಬಿದಿರು, ನಾದಮಯ ಕೊಳಲಾಗಬೇಕು ಎಂಬ ತುದಿ ನಿಲವಿಗೆ ಬರುತ್ತಾರೆ. ಕವಿಯ ಪ್ರಕಾರ ಒಂದು ಸಾಧಾರಣ ಬದುಕು. ಪ್ರತಿಯೊಂದು ಜೀವಿಯೂ ಸ್ವಂತ ಬದುಕಿನ ಗುಹೆಯ ಹೊಸ್ತಿಲಲ್ಲಿ ಚಡಪಡಿಸುತ್ತಿರುತ್ತದೆ. ಏಕೆಂದರೆ ಈ ಬಾಳು ಸದಾ ಹೋರಾಟಕ್ಕೆ ಅಸ್ತಿತ್ವ ಪ್ರತಿಷ್ಠಾಪನೆಗೆ ಪಂಥಾಹ್ವಾನ ನೀಡಿ ಸಮಸ್ಯೆಗಳ ಜಾಲವನ್ನು ಹರಡುತ್ತಿರುತ್ತದೆ. ಮನಸ್ಸಿನ ಸ್ವಾಸ್ಥ್ಯವನ್ನು ಕೆಡಿಸಿ ಆಕ್ರೋಶಗೊಳ್ಳುವಂತೆ ಮಾಡುತ್ತಿರುತ್ತದೆ. ಇದಕ್ಕೆ ಪರಿಹಾರವನ್ನು ಕವಿ ಸೂಚಿಸು ತ್ತಾನೆ. ಸಾಹಿತ್ಯ ಪ್ರೇಮ ಮತ್ತು ಸಂಸ್ಕೃತಿ ವರ್ಧನೆಯ ಬಯಕೆ ಇವೆರಡೂ ಮನೆಯ ಮುಂದಿನ ಸ್ವನಿರ್ಮಿತ ಹೂತೋಟವಿದ್ದಂತೆ. ಗಂಟುಗಳಿಂದ ಕೂಡಿದ ಕಾಡಿನ ಬಿದಿರನ್ನು ಸುಂದರವಾದ ನಾದಮಯವಾದ ಆಹ್ಲಾದಕಾರಿ ಧ್ವನಿಯನ್ನು ಚಿಮ್ಮಿಸಬಲ್ಲ ಕೊಳಲಾಗಿ ಪರಿವರ್ತಿಸುವುದಿದೆಯಲ್ಲ, ಅದೇ ಆತ್ಮ ಸಂಸ್ಕಾರದ ಫಲ. ಈ ಆತ್ಮ ಸಂಸ್ಕಾರವನ್ನು ಪ್ರತಿಯೊಬ್ಬನೂ ಬೆಳೆಸಿಕೊಂಡು ಮನೋನಂದನವನ್ನು ಮೂಡಿಸಿಕೊಂಡರೆ ಕಾಡ ಬಿದಿರಾಗಬೇಕಾದ ಬೊಂಬು ಕೊಳಲಾಗುವ ಪವಾಡ ನಡೆಯುತ್ತದೆ.

ಇದು ಸ್ಥೂಲವಾಗಿ ಈ ಕವನ ನಡೆದು ಬರುವ ಹಾದಿ. ಒಂದೊಂದು ಚರಣವೂ ಹೊಸ ಹೊಸ ಅನುಭವವನ್ನು ತಮ್ಮ ಬಗಲಿಗೆ ಏರಿಸಿಕೊಳ್ಳುವುದರ ಜೊತೆಗೆ ಕವಿಯ ಒಟ್ಟು ಆಶಯವನ್ನು ಪೃಥಕ್ಕಾಗಿ ಬಿಡಿಸಿ ತೋರುವ ಪ್ರಯತ್ನವನ್ನು ಸಮರ್ಪಕವಾಗಿ ಮಾಡಿದೆ. ಒಟ್ಟಿನಲ್ಲಿ ಈ ಸಾರ್ಥಕ ಬದುಕಿನ ರಸಾಯನಗಳು ಯಾವುವು ಎಂಬುದನ್ನು ಎಲ್ಲ ಚರಣಗಳೂ ಚರ್ಚಿಸುತ್ತವೆ. ಬಿಡಿ ಬಿಡಿಯಾಗಿ ಕಾಣುವ ಚರಣ ಖಂಡಗಳು ಒಂದು ಬಲವಾದ ತಾರ್ಕಿಕ ಸರಣಿಯನ್ನು ಅವಲಂಬಿಸಿ ಒಂದಕ್ಕೊಂದು ಹೆಣಿಗೆಗೊಂಡು ಕವನದ ಒಟ್ಟಂದವನ್ನು ಹೆಚ್ಚಿಸಿವೆ. ಲೌಕಿಕ-ಜಿನಾಗಮಗಳೆರಡನ್ನೂ ಸಮ ಹದದಲ್ಲಿ ಪೋಷಿಸಿಕೊಂಡು ಬರುವ ಪ್ರಯತ್ನ ಇಲ್ಲಿದೆ. ಆದ್ದರಿಂದ 'ಜೀವನ ಜಿಜ್ಞಾಸೆ' ಸಮಗ್ರ ಜೀವನವನ್ನು ಸಿಂಹಾವಲೋಕನಕ್ಕೆ ಒಳಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುವಲ್ಲಿ ಯಶಸ್ವಿಯಾಗಿದೆ ಎನ್ನಬಹುದು. ಆವಿಗೆ, ಮಲ್ಲಕಂಬ, ಬಿದ್ದ ರೆಕ್ಕೆ ಪುಕ್ಕ, ಬದುಕಿನ ಬಳ್ಳಿ, ಭವ ಶುಕ್ತಿಕೆ, ಚಿರ ಮುಕ್ತಿಕೆ, ಜಹಜುಗಂಬ, ಎರೆ ಹುಳದ ಮುಲುಕಾಟ, ಸೂಲಗಿತ್ತಿ,

ಚಿಮಣಿ, ಪರಮ ಪದ ಸೋಪಾನ ಪಟ, ಮಂದಲಿಗೆ, ಮಾನದಂಡ, ವೇಣುವಾಗುವ ಕಾಡ ಬಿದಿರು—ಈ ಬಲಿಷ್ಠ ಪ್ರತಿಮೆಗಳು ಜೀವನ ಸಿದ್ಧಾಂತದ ನೆಲೆಯನ್ನು ತಡಕಿ ನೋಡಿರುವ ಬಗೆ ವಿಸ್ಮಯಕರವಾದದ್ದು. ಇವು ನಿತ್ಯ ಜೀವನದ ವಿವಿಧ ಕ್ಷೇತ್ರಗಳಿಂದ ಆಯ್ದ ಅನುಭವ ಕುಂಜವಾಗಿದ್ದು ಮನಸ್ಸನ್ನು ಸೆಳೆಯುತ್ತವೆ. ಪದ್ಯದಲ್ಲಿ ನವ್ಯ ಛಂದಸ್ಸಿನಿಂದ ಸಿದ್ಧ ಛಂದಸ್ಸಿಗೆ ಜಿಗಿದಿರುವ ನಿಸಾರರು ಭೋಗದ ನೆಲೆಯಿಂದ ಬದುಕಿನ ಮೌಲ್ಯ ನಿಷ್ಕರ್ಷೆಯ ನೆಲೆಗೆ ಲಂಘಿಸಿರುವುದೂ ಗಮನಿಸಬೇಕಾದ ಸಂಗತಿಯಾಗಿದೆ. ಎಲ್ಲ ಮುಖ್ಯ ಕವಿಗಳೂ ಬದುಕನ್ನು ಅರ್ಥೈಸಲು ಜಿಜ್ಞಾಸೆಯ ಹಾದಿ ಹಿಡಿಯುತ್ತಾರೆ. ನಿಸಾರರೂ ಇದಕ್ಕೆ ಹೊರತಲ್ಲ. ಮತಧರ್ಮದ ಪ್ರಸಕ್ತಿಗೇ ಹೋಗದೆ ಜೀವ ಧರ್ಮದ ಒಳ ಹರಡುಗಳನ್ನು ಶೋಧಿಸುವ ಪ್ರಯತ್ನ ಇಲ್ಲಿ ನಡೆದಿರುವುದು ಲಕ್ಷಿಸಬೇಕಾದ ಸಂಗತಿಯಾಗಿದೆ.

ಮಹದ್ವಸ್ತು ಮಾತ್ರ ಮಹದ್ದರ್ಶನ ಪ್ರೇರಕ: ಜೀವಿಗಳಲ್ಲೇ ಬೃಹದ್ಗಾತ್ರಿಯಾದ ತಿಮಿಂಗಲಕ್ಕೆ ಸಮುದ್ರವಲ್ಲದೆ ಕೆರೆ ಕುಂಟೆ ಆವಾಸವಾಗಲಾರದು. ಪಟ್ಟಣದ ಸುಲಭ ಲಭ್ಯ ಪಾರ್ಕುಗಳಲ್ಲಿನ ಪ್ರಕೃತಿಯ ಪುಟ್ಟ ಪಾಳಯಪಟ್ಟುಗಳನ್ನು ಕಂಡಾಗ ಅಲ್ಲ, ದುರ್ಗಮ ಹಾಗೂ ದುರ್ಭೇದ್ಯವಾದ ನಿಬಿಡಾರಣ್ಯದ ನಿಸ್ಸೀಮ ನಿಜಾಮಿಕೆಯ ನೋಟಕರಾದಾಗ ನಮಗೆ ಸೃಷ್ಟಿಯ ರಮ್ಯ ರುದ್ರಾನ್ವಿತ ಭವ್ಯತ್ವ ಅನುಭವ ವೇದ್ಯವಾಗುವುದು. ದೊಡ್ಡ ಲೇಖಕರು ಎನ್ನಿಸಿಕೊಂಡಿರುವವರ ಲಿಖಿತಗಳ ಮಹಾನುಭಾವತೆ ಈ ಬಗೆಯದು.

(ವಸ್ತುವಿನ ಹಿರಿಮೆ)

✧ ✧ ✧

ವಸ್ತು ವಿಚಾರ ಶೈಲಿಗಳ ಮಧ್ಯೆ ಮೂರ್ತೀಭವಿಸುವ ಸಮ ಹದತ್ವ, ಸಹ ಮಹತ್ವ ಹೆಚ್ಚಿನದು, ಮೇಲಿನದು. ಇದಿಲ್ಲದೆ ಯಾವುದಿದ್ದರೂ ಬರವಣಿಗೆ ಕುರುಡು, ಜೀವಕಳಾಶೂನ್ಯ. ಇಂತಹ ಬರವಣಿಗೆ ರಂಗುರಂಗಾಗಿರವಲ್ಲದೇಕೆ? ಸಂರಚನೆಯಲ್ಲಿ ಸುವ್ಯವಸ್ಥೆ ತೋರವಲ್ಲದೇಕೆ? ಆದರೆ, ಅದು ಹೆರಳು ತಳೆಯಲು ಹಂಬಲಿಸದ ಕಂಪಿಲ್ಲದ ಕುಸುಮ; ಭ್ರಮರ ಪ್ರದಕ್ಷಿಸದ ಬಂಡಿಲ್ಲದ ಬಡಿವಾರ.

(ಸಾಹಿತ್ಯ ಪರಿಕರಗಳ ಸಾಮರಸ್ಯ)

ಮುಚ್ಚು ಅಂಗಡಿಯನ್ನು

೧

ಹಾಕು ಬಾಗಿಲು ಹಾಕು
ನಿನ್ನ ಹಳೆಯ ಅಂಗಡಿಗಿನ್ನು.
ಇನ್ನೆಷ್ಟು ದಿನ ಹೀಗೇ ಬೀಗಿ
ಹರವಿಡುತ್ತೀಯ ಬಿಕರಿಗಾಗಿ
ನಿನ್ನ ಹರಕು ಮುರುಕು ತಂಗಳು ಸರಕನ್ನು?
ಎಷ್ಟೆ ಜೋರಿದ್ದರೂ ಜಾಹೀರಿನ ಕಮಾಲು
ಮುಗಿಯಬಲ್ಲುದೆ ಹೇಳು ಮುಗ್ಗಿರುವ ಮಾಲು?

ತೆರೆದಿದ್ದರು ಯಾವಾಗಲೂ
ಬೆಳಕು ಅಡಿಯಿಡಲು ಹೇಸಿರುವ ಅಂಗಡಿಯ ಕಾಯಲು
ಅಣೆಯಾದ ಹಲವಾರು ನಿಲು ಹಲಗೆಗಳ
ಶತಮಾನದಾದಿಯ ಬಾಗಿಲು—
ಹಾಕದನು ಮತ್ತೆಂದು ತೆರೆಯದಂತೆ,
ದುರ್ಗತಿಗೆ ಅವರಿವರು ಹೀನ್ಯೆಸಿ ಜರೆಯದಂತೆ.

ಎಂದೋ ಕೆಟ್ಟು ನಿಂತಿರುವ ಅಷ್ಟಕೋನಾಕೃತಿಯ
ಸಮಯದಸ್ವೀಕೃತಿಯ ಗೋಡೆ ಗಡಿಯಾರ,
ಅದನು ಚೆಂಬಲಿಸಿರುವ ಜೇಡ ಬಲೆಗಳ ಜಾಲ,
ತುಕ್ಕಿಗಾಹಾರವಾಗಿರುವ ನಾಮ ಫಲಕದ ಲೋಹ ಭಾರ
—ಸಾಲದೆ ಸಾಕ್ಷಿ ಹೇಳಲು ನಿನ್ನ ವ್ಯಾಪಾರ ವೈಖರಿಗೆ?
ಚಾಕರಿಗಿದ್ದ ಒಬ್ಬಿಬ್ಬರೂ ಕಂಬಿ ಕಿತ್ತಿದ್ದಾರೆ ತೊರೆದು,
ಹೊಸ ನೌಕರಿಗಾಗಿ ಹಾತೊರೆದು.

ಯಾರು ಕೊಳ್ಳುವರೀಗ ಕೊಡುವೆನೆಂದರು ಸಾಲ
ನಿನ್ನ ನೊಣ-ಮುತ್ತ ನಿಂಬೆಹುಳಿ, ಶುಂಠಿ ಪೆಪ್ಪರಮಿಂಟು—
ಹೊಲಗೇರಿ ಗೂಡಂಗಡಿಯಲ್ಲೂ ಸಿಗುವಾಗ ಲೀಲಾಜಾಲ
ವಿಲಾಯತಿ ಟಾಫಿ, ಚೂಯಿಂಗಮ್ಮು, ಪರಮಾಷಿ ಸೆಂಟು?

೨

ಅಂದು ಬೀದಿಗಿದ್ದದ್ದೆ ಒಂದೆರಡು ದುಕಾನು,
ಆಗೆಲ್ಲ ನೀನೇ ನವಾಬ; ಸಕಲ ವಸ್ತುಪ್ರದಾಯಿ ಕಾಮಧೇನು.
ಆದರೀವೊತ್ತು ಅಡಿಗೊಂದು ಅತ್ಯಾಧುನಿಕ ಮಳಿಗೆ
ರವಾನಿಸುತ್ತದೆ ಬಯಸಿದ್ದನ್ನು ನೇರ ಹೊಸತಿಲ ಬಳಿಗೆ.
ಹಿಂದೊಮ್ಮೆ ಸರಬರಾಜಿಸಿದ್ದೆ ನೀನು
ನಿತ್ಯೋಪಯೋಗಿ ತಾಜಾ ಮಾಲು;
ಅಳತೆ, ತೂಕದಲೂ ಮಾಡಿರಲಿಲ್ಲ ಯಾವುದೇ ಗೋಲ್‌ಮಾಲು.
ಎಂದೇ, ನಿನ್ನ ಅಂಗಡಿಯೆದುರು ಗಿರಾಕಿ
ಗಿಜಿಗುಟ್ಟುತಿದ್ದುದು ದಿಟ ಹಗಲಿರುಳು ಮುತ್ತಿಗೆ ಹಾಕಿ.
ಆದರೀಗಿನ ಪಾಡೆ ಬೇರೆ:
ಅಂಗಲಾಚಿದರೂ ಅಂಜುತ್ತಾರೆ
ಕೊಳ್ಳುವವರು ನಿನ್ನ ಬಳಿ ಸಾರೆ.
ಒಂದೆರಡು ಸಾವಿರದ ಬಂಡವಾಳವೇ ಬ್ರಹ್ಮಾಂಡ,
ವ್ಯವಹಾರಕ್ಕೆ ನಿಶೆಯೇರಿಸುವ ಬಗನಿ ಹೆಂಡ;
ವಿಸ್ತರಿಸುವುದಕೂ ಮುನ್ನ ಈ ಮೊಹಲ್ಲ;
ಈಗಲೋ ಲಕ್ಷೋಪಲಕ್ಷಗಳೆ ಲೆಕ್ಕಕಿಲ್ಲ.

೩

ದಿನೇದಿನೇ ಉಲ್ಬಣಿಸುತಿದೆ ಬೇಪಾರಿನಲಿ ಹುರುಡು;
ಇನ್ನಾದರೂ ನೀಗಿ ನಿನ್ನ ಬಗೆಗುರುಡು—
ಹೆರವರ ಅನಾದರಕ್ಕೆ ಪಕ್ಕಾಗಿ
ಆಗುವುದಕೂ ಮುಂಚೆ ಎತ್ತಂಗಡಿ
ಈ ನಿನ್ನ ಚಿಲ್ಲರೆ ಅಂಗಡಿ,
ಹಾಕು ಬಾಗಿಲು ಖಾಯಂ, ನೀನೆ ಮುಂದಾಗಿ;
ಅಪಕೀರ್ತಿ, ನಗೆಪಾಟಲಿನ ಕಿರಿಕಿರಿ ಬಂದಾಗಿ
ಬದುಕು ಸಾಗಿಸು ಹಾಯಾಗಿ.
ಮರ್ಯಾದಸ್ಥ ಮಾಜಿಯಾಗಿ.

★ ★ ★

(ಕವನ ಸಂಕಲನ : 'ಆಕಾಶಕ್ಕೆ ಸರಹದ್ದುಗಳಿಲ್ಲ')



‘ಮುಚ್ಚು ಅಂಗಡಿಯನ್ನು’: ಮೌಲ್ಯ ಪಲ್ಲಟಗಳ ಮಾರ್ಮಿಕ ಮನೋಗತಗಳು

♦ ಪ್ರೊ. ಎಂ. ಎಚ್. ಕೃಷ್ಣಯ್ಯ

ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಹನ್ನೊಂದನೆಯ ಕವನ ಸಂಕಲನ ‘ಆಕಾಶಕ್ಕೆ ಸರಹದ್ದುಗಳಿಲ್ಲ’ ೧೯೯೮ರಲ್ಲಿ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದಿಂದ ಪ್ರಕಟವಾಯಿತು. ಐವತ್ತು ಕವನಗಳು ಆ ಸಂಕಲನದಲ್ಲಿವೆ. ಹದಿಮೂರನೆಯ ಕವಿತೆ ‘ಮುಚ್ಚು ಅಂಗಡಿಯನ್ನು’ ಎಂಬುದು. ರೂಪಕಗಳ ಸಾಲುಗಳನ್ನೇ ನೀಡುತ್ತ ಕವನ ಕಟ್ಟುವ ಬಗೆ ಒಂದು. ಇಡೀ ಕವನವೇ ಒಂದು ಕಾವ್ಯ ಪ್ರತಿಮೆಯಾಗಿ ನಿಲ್ಲುವ, ವರ್ಣಿತ ವಿವರಗಳು ಸೂಚಕಗಳಾಗಿ ಬೇರೊಂದೇ ಅನುಭವ ಕಟ್ಟಿ ಕೊಡುವ ಬಗೆ ಬೇರೆ. ‘ಅಂಚೆ ಪೆಟ್ಟಿಗೆ’ ಕವನ ಸಹ ‘ಮುಚ್ಚು ಅಂಗಡಿಯನ್ನು’ ಬಗೆಯದೇ ಆಗಿದೆ. ಇಂತಹ ಕವನಗಳನ್ನು ಓದಿದಾಗ ಕವಿಯ ಉದ್ದೇಶಿತ ಅರ್ಥದ ಬಗೆಗೆ ಅನಿಶ್ಚಯ ತಲೆ ಹಾಕುವುದುಂಟು. ಸಂದೇಹ, ಸಂಶಯ ಮೂಡುವುದುಂಟು. ವಾಸ್ತವ ವಿವರ, ವರ್ಣನೆಗಳೇ ಸೊಗಸಾಗಿದ್ದು ಅವಷ್ಟೇ ಕವಿತೆಯ ಪಠ್ಯದ ಉದ್ದೇಶಿತ ಅರ್ಥವಾಗಿರುವುದಿಲ್ಲ ಎಂಬುದೂ ಸ್ಪಷ್ಟ. ಕೆ.ಎಸ್.ನ. ಅವರ ‘ಬರಿಗೊಡಗಳಿಗೆ ಸಮಾಧಾನ’ ಹೇಳುವ ಚಿತ್ರ ಕೇವಲ ನಗರದ ಬಡ ನಿವಾಸಿಗಳ ನೀರಿನ ಬವಣೆ ಯನ್ನಾಗಲಿ ಅಥವಾ ಬೇಸಗೆಯ ಬಿಸಿಲಿನ ತಾಪವನ್ನಾಗಲಿ ಹೇಳುವುದಕ್ಕೇ ನಿಲ್ಲುವುದಿಲ್ಲ ಎಂಬುದೂ ಸ್ಪಷ್ಟ. ಬೇಂದ್ರೆ ಯವರ ‘ಜೋಗಿ’ಯಂತಹ ಕವನ ನಿಗೂಢವೂ ಸಾಂದ್ರವೂ ಆಗಿದ್ದು ಅಸ್ಪಷ್ಟವಾಗಿಯೇ ಆಕರ್ಷಣೀಯವಾಗುತ್ತದೆ. ಕೆಲವು

ಕವನಗಳು ಹೀಗೆ ಅಮೂರ್ತ ಶಿಲ್ಪದಂತೆ ವಿಭಿನ್ನ ಅನುಭವಗಳಿಗೆ ಎಡೆಮಾಡಿಕೊಡುತ್ತವೆ. ನಿಸಾರರ ಈ ಕವಿತೆ ಸಹ ಸಾವಯವ ಶಿಲ್ಪ ಉಳ್ಳದ್ದಾಗಿ ಈ ಬಗೆಗೆ ಸೇರಿದ ಅರ್ಥಪೂರ್ಣ ರಚನೆಯಾಗಿದೆ.

ಸಾಹಿತ್ಯವೂ ಸೇರಿದಂತೆ ಎಲ್ಲ ಕಲೆಗಳೂ ಪ್ರತೀಕಾತ್ಮಕವಾದುವೆ, ಸಾಂಕೇತಿಕವಾದುವೆ. ಪ್ರಸಿದ್ಧ ತತ್ತ್ವಜ್ಞಾನಿ ಎಸ್. ಕೆ. ಲ್ಯಾಂಗರ್ ಹೇಳುವಂತೆ ವ್ಯಾನ್‌ಗೋನ ಕೋಣೆಯಲ್ಲಿನ ಕುರ್ಚಿಯ ಚಿತ್ರ ಅವನ ಕೊಠಡಿ ಮತ್ತು ಕುರ್ಚಿಯ ವಾಸ್ತವ ಚಿತ್ರಣದ ಉದ್ದೇಶವಷ್ಟೇ ಆಗಿರುವುದಿಲ್ಲ. ಅದು ಕಲಾತ್ಮಕ ಸಂವೇದನೆಗಳಿಗೆ ಸಂಕೇತವಾಗುತ್ತದೆ. ಬೇರೆಯೇ ಅನುಭವಗಳಿಗೆ ಸಂಕೇತವಾಗುತ್ತದೆ. ಹಾಗೇ ಗಾಗಿನ್‌ನ ಹಳದಿ ಹೂವು ಸಹ ಎನ್ನುತ್ತಾರೆ ಲ್ಯಾಂಗರ್. ನೋಡುಗನ ಮನಸ್ಸು ಅದನ್ನು ಬೇರೆಯೇ ಅನುಭವದ, ಸಂವೇದನೆಯ ಪ್ರತೀಕವಾಗಿ ಗ್ರಹಿಸುವ ಸಾಧ್ಯತೆ ಇದೆ. ಹೀಗಾಗುವುದರ ಬಗ್ಗೆ ಬಾರ್ಥೆ 'ದಿ ಡೆತ್ ಆಫ್ ದಿ ಆಥರ್' ಲೇಖನದಲ್ಲಿ (Image Music Text ಗ್ರಂಥ) ವಿವರಿಸುವ ಬಗೆ ಬೇರೆ: 'As soon as a fact is *narrated* no longer with a view to acting directly on reality but intransitively, that is to say, finally outside of any function other than that of the very practice of the symbol itself, this disconnection occurs, the voice loses its origin, the author enters into his own death, writing begins.' ಕವನ ರಚಿಸಿದ ಕವಿಯ ಮೂಲ ದನಿ, ಉದ್ದೇಶ ಮರೆಯಾಗಿ, ಕವನ ಅಸ್ತಿತ್ವ ತಳೆಯುತ್ತದೆ. ಓದುಗನಲ್ಲಿ, ಆತನ ಮನಸ್ಸಿನ ಹಿನ್ನೆಲೆಯಲ್ಲಿ, ಕಾವ್ಯ ಪ್ರತಿಮೆ ಅರ್ಥ ಪಡೆಯುತ್ತದೆ. ಇ.ಡಿ. ಹಿರ್ಷ್ ಎಂಬಾತ authenticity ಎಂದರೇನು ಎಂಬುದನ್ನು ಹೀಗೆ ವಿವರಿಸಿದ್ದಾನೆ: 'A valid interpretation is one that represents an authentic realization of meaning through one's own perspective, or through that of one's time and culture. The practical aim of perspectivism can be expressed in positive terms as an attempt to replace the meaningless criterion of correctness with the presumably meaningful criterion of authenticity.' (ಲೇಖನ Faulty Perspectives, ಗ್ರಂಥ The Aims of Interpretation.) ಓದುಗನ ಮನಸ್ಸಿನ ಪ್ರತಿಕ್ರಿಯೆಗೆ ಒತ್ತು ನೀಡಿರುವುದು ಗಮನಾರ್ಹ. ವುಲ್ಫ್‌ಗಾಂಗ್ ಐಸರ್ ಸಹ 'ರೀಡರ್ಸ್ ರೆಸ್ಪಾನ್ಸ್' ಸಿದ್ಧಾಂತವನ್ನೇ ಹೇಳುತ್ತಾನೆ. 'The fact that completely different readers can be differently affected by the 'reality' of a particular text is ample evidence of the degree to which literary texts transform reading into a creative process that is far above mere perception of what is written. The literary text activates our own faculties, enabling us to recreate the world it presents. The product of this creative activity is what we might call the virtual dimension of the text, which endows it with its reality. This virtual dimension is not

the text itself, nor is it the imagination of the reader: it is the coming together of text and imagination,' (ಲೇಖನ : The Reading Process: a phenomenological approach.) ಪಠ್ಯವನ್ನೇ ಆಧರಿಸಿ ವಸ್ತುನಿಷ್ಠವಾಗಿ ಪ್ರಾಯೋಗಿಕ ವಿಮರ್ಶೆಯ ಬಗೆಯಲ್ಲಿ ಅರ್ಥೈಸುವ ದೃಷ್ಟಿಯಿಂದ ಬಹು ದೂರ ಬಂದಿದ್ದೇವೆ, ವಿಚಾರಗಳು ಬಹಳಷ್ಟು ಪಲ್ಲಟಗೊಂಡಿವೆ ಎಂಬುದು ಸ್ಪಷ್ಟ. ಸ್ಪಷ್ಟ ಮೂರ್ತ ವಿವರಗಳಿಂದ ಕೂಡಿದ ಕವನವೂ ವಾಸ್ತವ ವರ್ಣನೆಯಷ್ಟೇ ಆಗಿರದೆ ಬೇರೊಂದು ಅರ್ಥ, ಅನುಭವಕ್ಕೆ ಸೂಚಕ ಸಂಜ್ಞೆ(signifier)ಯಾಗುತ್ತದೆ. ಇಡೀ ಕವನವೇ ಕಾವ್ಯಪ್ರತಿಮೆಯಾಗಿ ನಿಂತಾಗ ಓದುಗರಲ್ಲಿ ಹಲವು ಬಗೆಯ ಭಾವನೆ, ಕಲ್ಪನೆಗಳಿಗೆ ಎಡೆಗೊಡುವುದು ಸಹಜ ಎನ್ನುವುದಕ್ಕಾಗಿ ಇತ್ತೀಚಿನ ಕೆಲವು ಸಾಹಿತ್ಯ ಚಿಂತಕರ ಅಭಿಪ್ರಾಯ ಗಳನ್ನು ನೆನಪಿಸಿದೆ.

೨

'ಅಂಚೆ ಪೆಟ್ಟಿಗೆ' ಕವನದ ಕೊನೆಯ ಸಾಲುಗಳಲ್ಲಿ 'ಅಂಚೆ ಪೆಟ್ಟಿಗೆಯ ವಿಶ್ವೋಪಕಾರಿ ಗುಣ | ನೆನಪಾದಾಗೆಲ್ಲ ಮನವರಿಕೆಯಾಗುವುದು ನನಗೆ | ಮಾನವರ ಕಾಪಿಡುವ ಮಹಾತ್ಮರ ಉದಾತ್ತ ಗಣ' ಎಂಬ ಸೂಚನೆ ಇದೆ. ಹಾಗೇ 'ಮುಚ್ಚು ಅಂಗಡಿಯನ್ನು' ಕವನದ ಕೊನೆಯ ಸಾಲುಗಳು ಸೂಚಕ ಸಂಜ್ಞೆಯಾಗಬಹುದು:

'ಬದುಕು ಸಾಗಿಸು ಹಾಯಾಗಿ
ಮರ್ಯಾದಸ್ಥ ಮಾಜಿಯಾಗಿ.'

ಇಲ್ಲಿ ಒಂದು ಹಳೆಯ ಕಾಲದ ಅಂಗಡಿಯ ವಾಸ್ತವ ಚಿತ್ರಣವಿದೆ. ಐವತ್ತು ವರ್ಷಗಳ ಹಿಂದೆ ಪೇಟೆ ಬೀದಿಗಳಲ್ಲಿ ಇರುತ್ತಿದ್ದ ಅಂಗಡಿಗಳ ಸೊಗಸಾದ ವರ್ಣನೆ ಕಣ್ಣಿಗೆ ಕಟ್ಟುವಂತೆ, ನೆನಪು ಕೆದಕುವಂತೆ, ಕವನದಲ್ಲಿ ಮೂಡಿ ಬಂದಿದೆ.

'ಸಾಕು ಬಾಗಿಲು ಹಾಕು
ನಿನ್ನ ಹಳೆಯ ಅಂಗಡಿಯನ್ನು.'

ಅದರ ಹೊರಗಿನ ನೋಟ, ಒಳಗಿನ ಸರಕುಗಳು ಹಳೆಯ ಕಾಲದವು. ಇಂದು ಕಾಲ ಬದಲಾಗಿದೆ. ಆ ಅಂಗಡಿ ಹಗಲು ತೆರೆದಿದ್ದಾಗಲೂ ಬೆಳಕು ಅಡಿಯಿಡಲು ಹಿಂಜರಿಯುವ ಹೇಸುವ ಬಗೆ. ಸಾಮಾನು ಸರಕುಗಳು ಆ ಮಬ್ಬುಕತ್ತಲೆಯಲ್ಲೆ ಹರಡಿರುವ, ಕಿಕ್ಕಿರಿದು ತುಂಬಿರುವ ಅವ್ಯವಸ್ಥೆಯ ಆಗರ. ಅದರ ಬಾಗಿಲೂ ಆ ಕಾಲದಲ್ಲಿ ರೂಢಿಯಲ್ಲಿದ್ದ ರೀತಿ, ಅದೇ ಆ ಅಂಗಡಿಗೆ ರಕ್ಷಣೆ. ಬಿಡಿ ಬಿಡಿಯಾದ ಹಲಗೆಗಳನ್ನು ಅಂಗಡಿಯ ಮಧ್ಯ ಭಾಗದ ಮರದ ಹೊಸ್ತಿಲಿನ ಪಟ್ಟಿಯ ತೋಡಿನ ಜಾಡಿನಲ್ಲಿ ಮೇಲೆತ್ತಿ ಇಟ್ಟು ಎಡ, ಬಲಕ್ಕೆ ಸರಿಸಿ ಮುಚ್ಚುವ ಬಗೆಯ ಬಾಗಿಲು. ಮಧ್ಯದ ಹಲಗೆಗೆ ಬೀಗ ಹಾಕುವುದು, ಮೇಲಕ್ಕೆತ್ತಿ ತೆಗೆಯಲಾಗದಂತೆ. ಇಂತಹ ಹಳೆಯ ಕಾಲದ ಬಾಗಿಲಿನ ತಂತ್ರ ಈಗ ಯಾರಿಗೆ ಬೇಕಿದೆ. ಒಳಗಿನ ಸರಕೋ—ಹರಕು ಮುರುಕು ತಂಗಳು ಸರಕು. ಅಂಗಡಿಗೂ ಮುಪ್ಪಾಗಿದೆ, ಒಳಗಿನ ಸರಕೂ ತಂಗಳಾಗಿದೆ. ಇಂತಹ ಅಂಗಡಿ ಮತ್ತು ಮಾರುವ ಸರಕಿಗೆ ಯಾವ ಆಕರ್ಷಣೆ?

ಅಂಗಡಿಯ ಗೋಡೆಯ ಗಡಿಯಾರದ ಮುಂದೆ ಬರುವ ವಿವರ ಕಾಲಮಾನದ

ಅಂತರವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅಷ್ಟಕೋನಾಕೃತಿಯ ಗಡಿಯಾರ ಕೆಟ್ಟು ನಿಂತಿದೆ. 'ಅದನು ಬೆಂಬಲಿಸಿರುವ ಜೇಡ ಬಲೆಗಳ ಜಾಲ.' ಹಾಗೆಯೇ ಗಡಿಯಾರದ ನಾಮಫಲಕದ ಲೋಹ ಲಾಳಕವೂ ತುಕ್ಕು ಹಿಡಿದು ನಿಂತಿದೆ. ಈ ಎಲ್ಲ ಚಿತ್ರ, ಕಾಲದ ಅಂತರದಲ್ಲಿ ಆಗಿರುವ ವಿಚಾರಗಳ, ಮೌಲ್ಯಗಳ, ಆದರ್ಶಗಳ ಪಲ್ಲಟವನ್ನು, ತುಕ್ಕು ಹಿಡಿದು ಚಾಲನೆ ಕಳೆದು ಕೊಂಡಿರುವುದನ್ನು ಸೂಚಿಸುತ್ತದೆ. ಹಳೆಯ ಆದರ್ಶಗಳಿಗೆ ಕಟ್ಟುಬಿದ್ದಿದ್ದ ಒಬ್ಬಿಬ್ಬರೂ ಬದಲಾಗಿದ್ದಾರೆ. 'ಚಾಕರಿಗಿದ್ದ ಒಬ್ಬಿಬ್ಬರೂ ಕಂಬಿ ಕಿತ್ತಿದ್ದಾರೆ ತೊರೆದು, ಹೊಸ ನೌಕರಿಗಾಗಿ ಹಾತೊರೆದು.' ಸಾಮಾಜಿಕ ಮೌಲ್ಯಗಳ ಪಲ್ಲಟವಾಗಿದೆ. ಇಂದು ಯಾರಿಗೆ ಬೇಕಿದೆ ಸ್ವಾತಂತ್ರ್ಯಪೂರ್ವದ ಆ ಮನೋಧರ್ಮ?

ಇಂದು, 'ವಿಲಾಯಿತಿ ಟಾಫಿ, ಚೂಯಿಂಗಮ್ಮು, ಪರಮಾಷಿ ಸೆಂಟು'ಗಳೂ ಗೂಡಂಗಡಿಯಲಿ ಲೀಲಾಜಾಲವಾಗಿ ಸಿಗುವಾಗ ಹಳೆಯ ಅಂಗಡಿಯ ನೊಣ ಮುತ್ತಿದ ನಿಂಬೆಹುಳಿ, ಶುಂಟಿ ಪೆಪ್ಪರಮೆಂಟುಗಳನ್ನು ಸಾಲ ಕೊಡುವೆನೆಂದರೂ ಯಾರೂ ಕೊಳ್ಳರು. 'ವಿಲಾಯಿತಿ ಟಾಫಿ' ಸಮಾಜದ ಮೇಲಾಗಿರುವ ಪ್ರಭಾವಗಳು, ಅವುಗಳ ಪರಿಣಾಮ ದಿಂದಾದ ಬದಲಾವಣೆಗಳನ್ನು ಸೂಚಿಸುತ್ತವೆ.

ಈ ಭಾಗ ಅಂಗಡಿಯ ಒಳ-ಹೊರಗುಗಳನ್ನು ಚಿತ್ರಿಸಿದರೆ, ಎರಡನೆಯ ಭಾಗ ಹಿಂದಿನ ವ್ಯಾಪಾರ, ವ್ಯವಹಾರದ ವೈಭವವನ್ನು, ಉತ್ಸಾಹದ ಚಿತ್ರವನ್ನು ನೀಡುತ್ತ ವೈದೃಶ್ಯದ ಮೂಲಕ ಇಂದಿನ ಸ್ಥಿತಿಯನ್ನು ವಿವರಿಸುತ್ತದೆ. 'ಅಂದು ಬೀದಿಗಿದ್ದದ್ದೆ ಒಂದೆರಡು ದುಕಾನು, ಆಗೆಲ್ಲ ನೀನೆ ನವಾಬ; ಸಕಲ ವಸ್ತು ಪ್ರದಾಯಿ ಕಾಮಧೇನು'. ಸರಳವಾದ ಬದುಕು, ಅಗತ್ಯಗಳು ಅಲ್ಪ, ನಂಬಿಕೆಗಳೂ ಆ ಬಗೆಯವೆ. ಇಂದು ಅಂಗಡಿ, ವ್ಯಾಪಾರಗಳ ಪರಿಕಲ್ಪನೆಯೇ ಬದಲಾಗಿದೆ. ಸ್ಪರ್ಧೆಯಿಂದ ಮನೆಗೆ ಮಾಲು ಸರಕು ಬಯಸಿದ್ದೆಲ್ಲವನ್ನೂ ತಲಪಿಸುವ ಬಗೆ. ಸರಿ, ಆದರೆ ಎಂತಹ ಸರಕು, ಯಾವ ಬಗೆಯ ವ್ಯವಹಾರ ಅಂದು ಮತ್ತು ಇಂದು? 'ಹಿಂದೊಮ್ಮೆ ಸರಬರಾಜಿಸಿದ್ದೆ ನೀನು, ನಿತ್ಯೋಪಯೋಗಿ ತಾಜಾ ಮಾಲು.' ನಿತ್ಯ ಬದುಕಿಗೆ ಅಗತ್ಯವಾದ, ಸಮಾಜಕ್ಕೆ ಆರೋಗ್ಯಕರವಾದ ಮೌಲ್ಯಗಳು ಅವು. ಸಮಾಜದ ಹಿತದ ದೃಷ್ಟಿ, ವಂಚನೆಯಲ್ಲ. 'ಅಳತೆ, ತೂಕದಲೂ ಮಾಡಿರಲಿಲ್ಲ ಯಾವುದೇ ಗೋಲ್‌ಮಾಲು.' ಆದ್ದರಿಂದ ಗಿರಾಕಿಗಳು ಗಿಜಿಗುಟ್ಟುತ್ತಿದ್ದರು, ಅಂಗಡಿಗೆ ಮುತ್ತಿಗೆ ಹಾಕಿ. ಇಡೀ ಸಮಾಜ ನಂಬಿ ನಡೆಯುತ್ತಿದ್ದ ಬಗೆ ಅದು. ಆ ಆದರ್ಶ, ನಿತ್ಯ ವ್ಯವಹಾರದಲ್ಲಿನ ಆ ಪ್ರಾಮಾಣಿಕತೆ ಈಗ ಉಳಿದಿಲ್ಲ. ಅಲ್ಪತೃಪ್ತಿಯ, ಸುರಳೀತ ಬದುಕಿನ ಕಾಲದ ರೀತಿ ಬೇರೆ, ಇಂದಿನ ಜೀವನ ಶೈಲಿ ಬೇರೆ. ಆದ್ದರಿಂದ ಮೌಲ್ಯಗಳ ಪಲ್ಲಟವೂ ಒಂದು ಬೆಳವಣಿಗೆಯೆ? ಈಗ ಮೊಹಲ್ಲ ವಿಸ್ತರಿಸಿದೆ. ಸ್ಪರ್ಧೆಯ ಕಾಲ. ಹಳೆಯ ಮೌಲ್ಯಗಳಿಗೆ, ಅವು ಆರೋಗ್ಯಕರವೇ ಆಗಿದ್ದರೂ, ಬೆಲೆಯಿಲ್ಲವಾಗಿದೆ. 'ಅಂಗಲಾಚಿದರೂ ಅಂಜುತ್ತಾರೆ, ಕೊಳ್ಳುವವರು ನಿನ್ನ ಬಳಿ ಸಾರೆ.'

ಮೂರನೆಯ ಭಾಗದಲ್ಲಿ ಅಂಗಡಿಯನ್ನು ಮುಚ್ಚುವ ಬಗ್ಗೆ, ಹಳೆಯ ವಿಚಾರ ಧಾರೆಯನ್ನು ಬಿಟ್ಟು ಹೊಸ ಕಾಲಧರ್ಮಕ್ಕೆ ಹೊಂದಿಕೊಳ್ಳುವ ಬಗ್ಗೆ ಹೇಳುವ

ಮಾತುಗಳಿದ್ದರೂ ಹೇಳದ ಮಾತುಗಳೇ ಸೂಚ್ಯವಾಗುತ್ತವೆ. 'ಬೇಪಾರಿನಲಿ ಹುರುಡು'. ಸ್ಪರ್ಧೆ ಹೆಚ್ಚಾದಾಗ ಗಿರಾಕಿ ಗಳನ್ನು ಸೆಳೆಯುವ ಆಕರ್ಷಣೆ ಮುಖ್ಯವಾಗುತ್ತದೆಯೇ ಹೊರತು ಪ್ರಾಮಾಣಿಕತೆಯಲ್ಲ, ಗಿರಾಕಿಯ ಹಿತವಲ್ಲ, ತೃಪ್ತಿಯಲ್ಲ. 'ಇನ್ನಾದರೂ ನೀಗಿ ನಿನ್ನ ಬಗೆಗುರುಡು' ಇಂದು ಬದಲಾದ ಕಾಲದಲ್ಲಿ ಹಿಂದಿನ ಆ ಮೌಲ್ಯದೃಷ್ಟಿ ಯಾರಿಗೆ ಬೇಕಿದೆ? ಇನ್ನೂ ಜನ ಅವುಗಳಿಗೆ ಒಲಿಯುತ್ತಾರೆ, ಬಯಸುತ್ತಾರೆ ಎಂಬುದು ಬಗೆ ಕುರುಡು, ಅವಾಸ್ತವ ನಂಬಿಕೆ. 'ಹೆರವರ ಅನಾದರಕ್ಕೆ ಪಕ್ಕಾಗಿ ಆಗುವುದಕೂ ಮುಂಚೆ ಎತ್ತಂಗಡಿ, ಈ ನಿನ್ನ ಚಿಲ್ಲರೆ ಅಂಗಡಿ; ಹಾಕು ಬಾಗಿಲು ಖಾಯಂ, ನೀನೆ ಮುಂದಾಗಿ.' ಮೌಲ್ಯಗಳು, ಮಾನವ ಸಂಬಂಧಗಳು, ಸಾಮಾಜಿಕ ಸಮಷ್ಟಿ ಹಿತದೃಷ್ಟಿಗಳು ಪಲ್ಲಟಗೊಂಡಾಗ, ಅವು 'ಮರ್ಯಾದಸ್ಥ ಮಾಜಿಯಾಗಿ', ಹಾಯಾಗಿ ಬದುಕು ಸಾಗಿಸುವುದು ಒಳಿತು. ಇಲ್ಲಿ ವ್ಯಂಗ್ಯವೂ ಇದೆ.

ಈ ಕವನದ ಹಳೆಯ ಅಂಗಡಿ, ವ್ಯಾಪಾರಿ, ಸರಕು—ಇವು ವ್ಯಕ್ತಿ, ವ್ಯಕ್ತಿಯ ಪ್ರಾಮಾಣಿಕ ಮೌಲ್ಯ ಆದರ್ಶಗಳಿಗೆ ಸೂಚಕವಾಗಿ, ಇಂದಿನ ಹೀನಸ್ಥಿತಿಯನ್ನು ವ್ಯಂಗ್ಯವಾಗಿ ಹೇಳುತ್ತಲೇ ವಿಷಾದದ ಎಳೆಯನ್ನೂ ಸೂಚ್ಯವಾಗಿ ಮುಟ್ಟಿಸುತ್ತಿರಬಹುದು. ಸ್ವಾತಂತ್ರ್ಯ ಪೂರ್ವದ ಅಂತಹ ಹಿರಿಯ ತಲೆಗಳು ಈಗಲೂ ನಮ್ಮೆದುರು ಇದ್ದಾರೆ. ಒಂದು ನೆಲ, ಒಂದು ಸಮಾಜ, ಒಂದು ಸಾಂಸ್ಕೃತಿಕ ಬದುಕಿನಲ್ಲಿ ಗೆದ್ದಲು ಹತ್ತಿದ, ತುಕ್ಕುಹಿಡಿದ ಶಾಸ್ತ್ರಬದ್ಧ ಪರಂಪರೆಯ ನಂಬಿಕೆಗಳನ್ನು ಅವು ಕಾಲ ಧರ್ಮಕ್ಕೆ ಬದಲಾದ ಬದುಕಿಗೆ ಹೊಂದದೆ ಹೋದಾಗ ಬಿಟ್ಟು, ಹೊಸ ಹೆಜ್ಜೆ ಇಡುವುದರ, ಹೊಸ ದಾರಿ ಕಾಣುವುದರ ಸೂಚಕವೂ ಆಗಬಹುದು. ವಾಸ್ತವ ಚಿತ್ರಣದ ವಿವರಾಂಶಗಳು ಕೂಡಿ ಮೂಡಿಸುವ ಸಮಷ್ಟಿ ಅನುಭವ ಇಲ್ಲಿ ಮುಖ್ಯವಾಗುತ್ತದೆ. ಆ ಅನುಭವ ವಿವಿಧ ಪರಿಪ್ರೇಕ್ಷ್ಯ ಅಥವಾ ಕಣ್ಣೆಲೆಗೆ ವಿಭಿನ್ನವಾಗಿಯೂ ಮೂಡಬಹುದು, ಬಹುಮುಖಿಯದೂ ಆಗಬಹುದು (multiple perspective). ಇಡೀ ಕವನ ಒಂದು ಪ್ರತಿಮೆಯಾಗಿ ಓದುಗರ ದೃಷ್ಟಿಗೆ ಅವರವರ ಅನುಭವಗಳ ಹಿನ್ನೆಲೆಯಲ್ಲಿ ಸ್ಪಂದಿಸುವ ಬಗೆ ಕುತೂಹಲಕಾರಿಯಾದರೂ ಅದು ಅವಾಸ್ತವ ಊಹೆಯಲ್ಲ ಎಂಬುದು ಮುಖ್ಯ. ಇಂದು ಕಾವ್ಯ ಹಾಗೂ ಕಲಾ ಮೀಮಾಂಸಕಾರರು ಅತ್ತ ಒಲಿಯುತ್ತಿದ್ದಾರೆ. ನಿಸಾರ್ ಅವರ ಮನಸ್ಸನ್ನು ತಳಮಳಗೊಳಿಸುತ್ತಿರುವ ಇಂದಿನ ಅನುಭವಗಳು ಇಂತಹ ಕಾವ್ಯಪ್ರತಿಮೆಗಳ ಸೃಷ್ಟಿಗೆ ಕಾರಣವಾಗಿವೆ. ಅವು ತಮ್ಮದೇ ಅಸ್ತಿತ್ವ ಪಡೆದು ಅರ್ಥವಂತಿಕೆಯನ್ನು ತೋರುತ್ತವೆ.

ವಿಜ್ಞಾನದ ಫಲಗಳನ್ನು ಭೋಗಿಸುತ್ತ ವೈಜ್ಞಾನಿಕ ಧೋರಣೆಯನ್ನು ರೂಢಿಸಿ ಕೊಳ್ಳದ ಜನರು, ಗುಡಿಯನ್ನು ಪ್ರದಕ್ಷಿಸಿ ದೇವರ ದರ್ಶನ ಮಾಡದವರ ಹಾಗೆ ಅಕೃತಾರ್ಥತೆಗೆ ಭಾಜನರು.

ಪ್ರಾಗ್ಬಂಧಗಳು

ಎಲ್ಲಿರುತ್ತವೊ ಕಾಣೆ:
ಅಂಥವು ಇಂಥವು ಎನ್ನಲು ಬಾರದವು.
ತಮ್ಮ ಶಬ್ದ, ಚಲನೆ, ನನ್ನ ಮನದ ಭಯದೊಡನೆ
ಸ್ವಸ್ಥಾಪಿಸಿಕೊಳ್ಳುವವು;
ಬೆಳಕಲ್ಲಿ ಗುರುತಿಸಿಕೊಳ್ಳದೆ ಭೂಗತವಾಗಿ
ಮಬ್ಬಿನ ಸುಸ್ವಾಗತಕ್ಕೆ ಅಸ್ತಿತ್ವ ತಾಳುವವು.
ನೆರಳು ಚೆಲ್ಲಿ ಮೂಲ ಸೂಚಿಸುವಂಥವೆ?
'ಇಗೋ ಎದ್ದೆವು ಜಾಗ್ರತೆ' ಎನ್ನುವಂಥವೆ?
ಸ್ವಗೃಹದ ಬಿರುಕುಗಳು ಭದ್ರವಯ್ಯ ಎಂದು ಎಚ್ಚರಿಸುವಂಥವೆ?
ಒಂದೊಂದೇ, ಒಂದೊಂದೇ ಸಂತೆ ಸೇರಿ
ತಮ್ಮ ತಾವೇ ಕೊಂದೊ, ತಿಂದೊ,
ಪೂರ್ವದ ಹೊದಿಕೆ ತೇಜೋಮಯನ ಅಂಗಾಲ ಹೊರ ತೋರುವಲ್ಲಿ
ಹಿಡಿಯುತ್ತವೆ ತಂತಮ್ಮ ಹಂಗಾಮಿ ಠಿಕಾಣೆ—
ಎಲ್ಲಡಗುತ್ತವೋ ಕಾಣೆ.

ಕೈಕಾಲು ಕಿವಿ ನಾಲಗೆ ಖೋತ ಆದವಕ್ಕೆ, ಅಥವಾ
ಪ್ರಕೃತಿಯಿಂದ ಮೊಟಕಿಸಿಕೊಂಡವಕ್ಕೆ
—ಅಳು ನಗುವಿಲ್ಲ—ಸುಖ ದುಃಖ ಹೇಗೆ ತೋಡಿಕೊಂಡಾವು?
ಅಥವಾ ಇವೆಲ್ಲ ಇತ್ತೀಚಿನವು ಬಿಡು
ಎನ್ನಿಸಿ ಉಪೇಕ್ಷಿಸುವಂಥವಕ್ಕೆ,
ಬರೇ ಹೊಟ್ಟೆ ಹುಟ್ಟುಗಳ ಊಳಿಗಕ್ಕೇ ಹುಟ್ಟಿದವಕ್ಕೆ
ಗೋರಿ, ಪಕ್ಷ, ನಲವತ್ತನೆಯ ದಿನದ ಪುನಸ್ಕಾರ
ಹೇಗೆ ಸಿಕ್ಕಬೇಕು? ಸ್ಮೃತಿ, ಸ್ಮಾರಕಗಳು
ಹೇಗೆ ನಿಲ್ಲಬೇಕು?

ಸೃಷ್ಟಿಯ ಅಕ್ಷರಾಭ್ಯಾಸದ ಜೀವದೆರಕಗಳು;
ಆದಿ ಮಾದರಿಗಳು: ಅಮಾನವ ಲೋಕದ ಅರಸರು;
ಪೌರಾಣಿಕ ಗಾತ್ರದಲ್ಲೇ ಧ್ವನ್ಯರ್ಥಿಸಿಕೊಳ್ಳುವಂಥವು;
ಪ್ರತಿಮಾ ಮಟ್ಟದಲ್ಲೇ ತರ್ಕಬದ್ಧವಾಗುವಂಥವು.
ವರ್ತಮಾನಕ್ಕೆ ವಾಮನರೂಪಿ ಚಿಲ್ಲರೆ ಪ್ರತಿನಿಧಿಗಳ ಬಿಟ್ಟವು;

ಬಿಟ್ಟರೂ,
ತಮ್ಮ ಸ್ವರ್ಣಯುಗದ ಪಾಶವೀ ಭಯ, ಕ್ರೌರ್ಯ, ಸಂಖ್ಯೆಯ
ಭಟ್ಟಿಯಿಳಿಸಿಕೊಂಡವು.
ಏಕರೂಪತೆಯಲ್ಲಿನ ಅಷ್ಟಿಷ್ಟು ಭೇದ; ಹೀಚು ಬುದ್ಧಿಯ
ಬಂಧಿಸಿದ ನಿರಂಕುಶ ಪ್ರವೃತ್ತಿ—ಮತ್ತದರದೇ ಅನಿಶ್ಚಿತ ಕ್ರಿಯೆಗಳ—
ತಮ್ಮ ಪೀಳಿಗೆಯಲ್ಲಿ ಅವಶೇಷಿಸಿಕೊಂಡವು—ಎಂದೇ
ಪೂಜಿಸಿಕೊಳ್ಳುತ್ತವೆ, ಧರ್ಮವಿಲ್ಲದವು;
ಸಂಕೇತಿಸಿಕೊಳ್ಳುತ್ತವೆ, ಅರ್ಥವಿಲ್ಲದವು.

ಜೀವದ ಹೊಸ ನಮೂನೆಗಳಿಗೆ ಸವಾಲಾಗಿ
ಉಳಿವ ಸೃಷ್ಟಿಯೊಕ್ಕಲು ತಾವೇ ಎನಿಸುವಂತೆ
ನಿಗೂಢತೆಯ ದೇಹಿಸಿಕೊಂಡು
ಕಕ್ಕಾಬಿಕ್ಕಿಗೊಳಿಸುವ ಇವು—
ಸ್ವಪ್ರಯತ್ನಿಸದೆ ಕಾಲ, ನಿಸರ್ಗಗಳ ಮರ್ಜಿ ಹಿಡಿದು
ಇಷ್ಟಿಷ್ಟೇ, ಇಷ್ಟಿಷ್ಟೇ ಹತ್ತಲು ಹೆಣಗುತ್ತವೆ—
ಎಲ್ಲೇಳುತ್ತವೋ ಕಾಣೆ
ಕತ್ತಲೊಂದಿಗೇ ಆಕೃತಿಸಿಕೊಳ್ಳುವ ವಿಕೃತಿಗಳು;
ಜೀವಕ್ಕಂಟಿದ ಪ್ರಾಗ್ಬಂಧಗಳು.

★ ★ ★

(ಕವನ ಸಂಕಲನ: 'ನಾನೆಂಬ ಪರಕೀಯ')



'ಪ್ರಾಗ್ಬಂಥಗಳು': ಸೃಷ್ಟಿಯ ನಿಗೂಢ ಸತ್ವಗಳ ಸಾಂಕೇತಿಕ ಸಮೀಕ್ಷೆ

♦ *ವೇಣುಗೋಪಾಲ ಸೊರಬ*

೧

ಕವಿತೆ ಪ್ರಾರಂಭವಾಗುವುದೇ ಅನುಮಾನದಿಂದ: ಅನುಮಾನ ಅಸ್ತಿತ್ವದ ಬಗೆಗಲ್ಲ, ಆದರೆ 'ಎಲ್ಲಿರುತ್ತವೊ' ಎನ್ನುವ ಬಗ್ಗೆ. ಈ ಮಾತೊಂದರಿಂದಲೇ ಇಡೀ ಕವನದಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯದ ವ್ಯಾಪ್ತಿ ಸ್ಪಷ್ಟವಾಗುತ್ತದೆ. ಈ ಪದ್ಯ ಇಲ್ಲದೇ ಇರುವುದರ ಬಗ್ಗೆ ಅಲ್ಲ, ಆದರೆ ಇದ್ದರೂ ಅದು ಎಲ್ಲಿರುತ್ತವೆ ಎಂಬ ಬಗ್ಗೆ ತಿಳಿವಳಿಕೆಯಿಲ್ಲದೆ ಇರುವಂತಹವುಗಳ ಬಗ್ಗೆ. ಮೊದಲನೆಯ ಸಾಲಿನೊಂದಿಗೆ ಮೊದಲನೆಯ ಪ್ಯಾರಾದ ಕೊನೆಯ ಸಾಲನ್ನೂ ಗಮನಿಸಿದಾಗ, ಮತ್ತೆ ಅದೇ ಭಾವ ಸಮರ್ಥನೆಗೊಳ್ಳುತ್ತದೆ—

> **'ಎಲ್ಲಡಗುತ್ತವೊ ಕಾಣೆ.'**

ಈ ಪ್ಯಾರಾದ ಉಳಿದ ಸಾಲುಗಳಲ್ಲಿ, ಇವುಗಳ ಅಸ್ತಿತ್ವದ ಬಗ್ಗೆ ಮತ್ತಷ್ಟು ವಿವರಗಳು ಬಂದಿವೆ. ಇದರಲ್ಲಿ ಮುಖ್ಯವಾದ ಸಾಲುಗಳು:

> **'ತಮ್ಮ ಶಬ್ದ, ಚಲನೆ, ನನ್ನ ಮನದ ಭಯದೊಡನೆ**
> **ಸ್ವಸ್ಥಾಪಿಸಿಕೊಳ್ಳುವವು;'**

ಇಲ್ಲಿ 'ಸ್ವಸ್ಥಾಪಿಸಿಕೊಳ್ಳುವವು' ಎನ್ನುವಲ್ಲಿನ ಅಸಹಜತೆ ಮತ್ತು ಅದರಿಂದ ಉಂಟಾಗುವ ಕ್ಲಿಷ್ಟತೆ ಕಂಡುಬರುತ್ತದೆ. ಇಲ್ಲಿ ಗಮನಿಸಬೇಕಾದದ್ದು 'ಸ್ವಸ್ಥಾಪಿಸಿಕೊಳ್ಳುವವು' ಎನ್ನುವುದು

ತಂತಾನೆ ನಡೆಯುವ ಕ್ರಿಯೆಯಲ್ಲ. ಆದರೆ ಅದನ್ನು ದಾಖಲೆಗೊಳಿಸುವ ರೀತಿ. ಕವನದಲ್ಲಿ ಮೊಟ್ಟಮೊದಲಿಗೆ 'ನನ್ನ ಮನದ ಭಯದೊಡನೆ' ಎಂಬ ಪ್ರಥಮ ಪುರುಷ ಪ್ರಯೋಗ ಕಂಡುಬರುತ್ತದೆ. ಈ ಪ್ರಥಮ ಪುರುಷದೊಂದಿಗೆ 'ಸ್ವಸ್ಥಾಪಿಸಿ'ಕೊಳ್ಳುವ ಕ್ರಿಯೆ—ಇಲ್ಲಿ ಕೂಡ ಅಸಹಜತೆ, ಅಂದರೆ ಪ್ರಥಮ ಪುರುಷನ ಪ್ರಯತ್ನಪೂರ್ವಕ-ಪ್ರಜ್ಞಾಪೂರ್ವಕ ಕ್ರಿಯೆ ಮತ್ತು ಈ 'ಸ್ವಸ್ಥಾಪಿಸಿಕೊಳ್ಳುವವು' ಎನ್ನುವ ಉತ್ತಮ ಪುರುಷದ ವಸ್ತ್ವಾತ್ಮಕ ವಿವರಣೆ—ಇವುಗಳ ನಡುವೆ ನಡೆಯುವ ಘರ್ಷಣೆ ಮತ್ತು ಗಲಿಬಿಲಿ—ಇವು ಇಡೀ ಕವನದ ದ್ರವ್ಯವನ್ನು ಪರಿಚಯಿಸುತ್ತವೆ. ಇದು ಹೇಗೆ ಪಂಕ್ತಿ ಪಂಕ್ತಿಗೆ ಬೆಳೆಯುತ್ತಾ ಹೋಗುತ್ತದೆ ಎನ್ನುವುದನ್ನು ಅದರ ಮುಂದಿನ ಸಾಲುಗಳಲ್ಲಿ ನೋಡಬಹುದು—

'ಬೆಳಕಲ್ಲಿ ಗುರುತಿಸಿಕೊಳ್ಳದೆ ಭೂಗತವಾಗಿ,
ಮಬ್ಬಿನ ಸುಸ್ವಾಗತಕ್ಕೆ ಅಸ್ತಿತ್ವ ತಾಳುವವು.'

ಕೇವಲ ಹಿಂದಿನ ಸಾಲಿನಲ್ಲಿ 'ಸ್ವಸ್ಥಾಪಿಸಿಕೊಳ್ಳುವವು' ಎಂದು ನಿರಾತಂಕವಾಗಿ ಉಕ್ತವಾದದ್ದು ಇಲ್ಲಿ 'ಭೂಗತ'ವಾಗುತ್ತವೆ ಎನ್ನುವುದು, 'ಮಬ್ಬಿನ ಸುಸ್ವಾಗತಕ್ಕೆ ಅಸ್ತಿತ್ವ ತಾಳುವವು' ಎನ್ನುವುದು, ಮೇಲಿನ 'ಸ್ಥಾಪನೆ' ನಡೆಯದೆ ಇರುವ, ಆದರೆ ನಡೆಯ ಬಹುದಾದ ಕ್ರಿಯೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಮೊದಲನೆಯ ಪ್ಯಾರಾದ ಕೊನೆಯ ಸಾಲಿನ ಹಿಂದಿನ ಸಾಲು 'ಹಂಗಾಮಿ ಠಿಕಾಣೆ' ಎನ್ನುವುದನ್ನು ಬಹಿರಂಗಗೊಳಿಸುವ ಮೂಲಕ, ಭೂಗತವಾದದ್ದೂ ಕೂಡ ಅಸ್ಥಿರ ಎನ್ನುವ ಅಂಶವನ್ನು ದೃಢೀಕರಿಸುತ್ತದೆ. ಈ ಅಂಶ ನಮಗೆ, ಇಡೀ ಕವನದ ಧೋರಣೆಯ ಬಗ್ಗೆ ಮತ್ತೊಮ್ಮೆ ಚಿಂತಿಸುವಂತೆ ಮಾಡುತ್ತದೆ. ಯಾಕೆಂದರೆ ಹೆಸರೇ ಸೂಚಿಸುವಂತೆ ಇಲ್ಲಿ ಕವಿ ಹೇಳುತ್ತಿರುವುದು 'ಪ್ರಾಕ್‌ಬಂಧಗಳ' ಬಗ್ಗೆ. ಹಾಗೆಂದು ಇಲ್ಲಿ ಹೇಳಿರುವುದೆಲ್ಲ ಪ್ರಾಚೀನ, ಅಂದರೆ ಚೆನ್ನಾಗಿ ಬೇರೂರಿದ ಹಳತಾದ ವಿಷಯಗಳೆಂದು ಅಲ್ಲ. ಆದರೆ ಪ್ರಾಚೀನ ಅಂದರೆ ಹಳತಾಗಿದ್ದೂ ಕೂಡ, ನಮ್ಮ ಅನುಭವಕ್ಕೆ ನೇರವಾಗಿ, ಸ್ಪಷ್ಟವಾಗಿ ಸಿಲುಕದಿರುವ 'ಬಂಧಗಳ' ಬಗ್ಗೆ ಕವಿ ತನ್ನ ಅನಿಸಿಕೆಗಳನ್ನು ದಾಖಲುಗೊಳಿಸುತ್ತಿದ್ದಾನೆ. ಆದ್ದರಿಂದಲೇ 'ಸ್ವಸ್ಥಾಪನೆ' ಎನ್ನುವಾಗಲೂ 'ಹಂಗಾಮಿ ಠಿಕಾಣೆ'ಯ ಬಗ್ಗೆ ಕವಿ ಸ್ಪಷ್ಟವಾಗಿ ನುಡಿದಿದ್ದಾನೆ.

ಈ 'ಬಂಧಗಳು' ಎಂತಹವು ಎನ್ನುವ ಬಗ್ಗೆ ಕವಿಯ ಅನುಮಾನಗಳಿಗೆ ಮಿತಿಯಿಲ್ಲ—

'ನೆರಳ ಚೆಲ್ಲಿ ಮೂಲ ಸೂಚಿಸುವಂಥವೆ?
'ಇಗೊ ಎದ್ದೆವು ಜಾಗ್ರತೆ' ಎನ್ನುವಂಥವೆ?
ಸ್ವಗೃಹದ ಬಿರುಕುಗಳು ಭದ್ರವಯ್ಯ ಎಂದು ಎಚ್ಚರಿಸುವಂಥವೆ?'

ಇಡೀ ಮೊದಲನೆಯ ಪ್ಯಾರಾದಲ್ಲಿ, ಇಲ್ಲಿ ಕಂಡು ಬರುವಂತಹ ನಾಟಕೀಯತೆ ಇನ್ನೆಲ್ಲೂ ಕಂಡುಬರುವುದಿಲ್ಲ. ಸದಾ ಭಯದಲ್ಲಿ ಮತ್ತು ಭೂಗತವಾಗಿ ಸ್ವಸ್ಥಾಪಿಸಿಕೊಳ್ಳುವಂತಹ ಅನಿಶ್ಚಿತರೂಪದ 'ಪ್ರಾಕ್‌ಬಂಧ'ಗಳು, ತೀರ ಅಮೂರ್ತವಾದವಲ್ಲ. ಹಾಗೆ ಅವು ಒಂದು ವೇಳೆ ಅಮೂರ್ತವಾದರೂ ಆಗೀಗ ವ್ಯಕ್ತಿಯ ಮನಸ್ಸಿನ ಬಲ ಅಥವಾ ನಿರ್ಬಲತೆ

ಯನ್ನು ಅನುಸರಿಸಿ, ಕಾಲ್ಪನಿಕವಾದ ಆಕಾರ ಪಡೆಯುವುದು ಸಾಧ್ಯ. ಹಾಗೆ ಆಕಾರ ಪಡೆದಾಗಲೇ, ನಾಟಕೀಯತೆಯ ಅಂಶ ಕಾಲಿಡುತ್ತದೆ. ಈ ನಾಟಕೀಯ ಗುಣ, ವಸ್ತುವಿನ ಅಥವಾ ವ್ಯಕ್ತಿಯ ಬಲ ಅಥವಾ ನಿರ್ಬಲತೆಗಿಂತ, ಅದರ ಹಿಂದಿನ ಸಂವೇದನೆಯ ತೀವ್ರತೆಯನ್ನು ಸೂಚಿಸುತ್ತದೆ. ಈ ದೃಷ್ಟಿಯಿಂದ ನೋಡಿದಾನ, ಬದುಕಿನ ಸಹಜ ಅನುಭವಕ್ಕೆ ದೂರವಾದ ಕವಿ ಸಮಯದಂತಹ 'ಪೂರ್ವದ ಹೊದಿಕೆ ತೇಜೋಮಯನ ಅಂಗಾಲ ಹೊರತೋರು' ಎನ್ನುವ ಸಾಲು ಈ ಇಡೀ ಪ್ಯಾರಾದಲ್ಲಿಯೇ ನಿರ್ಬಲತೆಯ ಸಾಲಾಗಿದೆ.

ಮೇಲೆ ಉದ್ಧರಿಸಿದ ಮೂರು ಸಾಲುಗಳಲ್ಲಿ, ಕೊನೆಯ ಸಾಲಿನ ಕಡೆಗೆ ಮತ್ತೊಮ್ಮೆ ದೃಷ್ಟಿ ಹಾಯಿಸಬಹುದು—

'ಸ್ವಗೃಹದ ಬಿರುಕುಗಳು ಭದ್ರವಯ್ಯ ಎಂದು ಎಚ್ಚರಿಸುವಂಥವೆ?'

ಇಲ್ಲಿ 'ಎಚ್ಚರಿಸುವಂಥವೆ?' ಎನ್ನುವ ಮಾತು ಹಿಂದಿನ ಪಂಕ್ತಿಗಳಲ್ಲಿನ 'ಸೂಚಿಸು' ಮತ್ತು 'ಜಾಗ್ರತೆ ಎನ್ನುವಂಥವೆ?' ಎನ್ನುವ ಮಾತುಗಳಿಗೆ ಸಮತೋಲನ ತರಲಿಕ್ಕೆ ಬಂದಿದೆ. ಆದರೆ ಆ ಸಾಲುಗಳಲ್ಲಿ ಇಲ್ಲದ 'ಸ್ವಗೃಹದ' ಮಾತು ಇಲ್ಲಿ ಬರುತ್ತದೆ. ಈ ಸ್ವಗೃಹ ಕವಿ ಅಥವಾ ಕೇಂದ್ರವ್ಯಕ್ತಿಗೆ ಸಂಬಂಧಿಸಿದ್ದೋ ಅಥವಾ 'ಪ್ರಾಕ್‌ಬಂಧ'ಗಳಿಗೆ ಸಂಬಂಧಿಸಿದ್ದೋ? 'ಸ್ವಸ್ಥಾಪನೆ'ಯ ಮಾತಿನಲ್ಲಿಯೆ, 'ಸ್ವಗೃಹದ' ಕಲ್ಪನೆಯಾಗುವುದು ಸಹಜ. ಆದರೆ 'ಹಂಗಾಮಿ ಠಿಕಾಣೆ'ಯಾಗಿಯೂ ವಿವರಿಸಲ್ಪಟ್ಟಿರುವ, ಈ 'ಸ್ವಸ್ಥಾಪನೆ' ಯಾರೊಬ್ಬರ ಮನಸ್ಸಿನಲ್ಲಿ ಎನ್ನುವುದು ಮರೆಯಲಾಗದು. ಆದ್ದರಿಂದಲೇ 'ಸ್ವಗೃಹದ ಬಿರುಕುಗಳು' ಒಂದುಕಡೆ ಕೇಂದ್ರವ್ಯಕ್ತಿಗೆ ಸಂಬಂಧಿಸಿದರೆ, ಇನ್ನೊಂದುಕಡೆಯಿಂದ, 'ಪ್ರಾಕ್‌ಬಂಧ'ಗಳಿಗೇ ಸಂಬಂಧಿಸಿದೆ. ಒಟ್ಟಿನಲ್ಲಿ ಎರಡರಲ್ಲೂ ಈ ಬಿರುಕುಗಳು ಕಂಡುಬರುವುದು ಸಹಜ.

ಈ ಅಂಶಗಳನ್ನೆಲ್ಲ ಗಮನಿಸಿದಾಗ, ಮೊದಲನೆಯ ಪ್ಯಾರಾ ವಸ್ತುವಿನ ಬೇರೆ ಬೇರೆ ಮುಖ ಗಳನ್ನು ಪರಿಚಯಿಸುವುದರ ಜತೆಗೆ, ಅದರ ಅಸ್ತಿತ್ವದ ಗೂಢತೆಯ ಬಗೆಗೂ ತಿಳಿಸುತ್ತದೆ. ಅಲ್ಲಿಂದ ಎರಡನೆಯ ಪ್ಯಾರಾಕ್ಕೆ ಧಾವಿಸಿದಾಗ, ಅಲ್ಲಿ ನಮಗೆ ಗೋಚರವಾಗುವುದು ಅಸ್ತಿತ್ವದ ನಿರಸನದ ಬಗೆಗಿನ ಸಂಗತಿ. ಎರಡನೆಯ ಪ್ಯಾರಾ ಪ್ರಾರಂಭವಾಗುವುದೇ ದೈಹಿಕವಾಗಿ ಊನವಾದುದರ ಪ್ರಸ್ತಾಪದೊಂದಿಗೆ—

'ಕೈಕಾಲು ಕಿವಿ ನಾಲಗೆ ಖೋತ ಆದವಕ್ಕೆ, ಅಥವಾ
ಪ್ರಕೃತಿಯಿಂದ ಮೊಟಕಿಸಿಕೊಂಡವಕ್ಕೆ.'

ಇಲ್ಲೂ ಕೂಡ, 'ಖೋತ' ಆಗುವುದಕ್ಕೂ 'ಪ್ರಕೃತಿಯಿಂದ ಮೊಟಕಿಸಿಕೊಂಡವ'ಕ್ಕೂ ಒಂದು ಸೂಕ್ಷ್ಮ ವ್ಯತ್ಯಾಸ ಕಂಡುಬರುತ್ತದೆ. 'ಖೋತ' ಎನ್ನುವ ಮಾತು, ಮೊದಲು ಅಸ್ತಿತ್ವದಲ್ಲಿ ಇದ್ದು ಆಮೇಲೆ ನಷ್ಟವಾದದ್ದನ್ನು ಸೂಚಿಸಿದರೆ, 'ಪ್ರಕೃತಿಯಿಂದ ಮೊಟಕಿಸಿ' ಎನ್ನುವುದು, ಹುಟ್ಟಿನಿಂದಲೇ ಉಂಟಾದ ನ್ಯೂನತೆಯನ್ನು ಸೂಚಿಸುತ್ತದೆ. ಹೇಗೇ ಆಗಲಿ, ಇವು ಸುಖ ದುಃಖ ತೋಡಿಕೊಳ್ಳಲಾರವು ಎನ್ನುವುದು ಇಲ್ಲಿನ ತೀರ್ಮಾನ. ಆದರೆ ಈ

ತೀರ್ಮಾನ ಅಂತಿಮವಾದದ್ದಲ್ಲ. ಯಾಕೆಂದರೆ ಇಲ್ಲಿನ ಯಾವುದೇ ತೀರ್ಮಾನವೂ ಸ್ವಯಂಪ್ರಕಾಶಿತ ಅಥವಾ ಸ್ವಸಂಪೂರ್ಣವಾದದ್ದಲ್ಲ. ಪ್ರತಿ ತೀರ್ಮಾನವೂ ಇನ್ನೊಂದು ಅಭಿಪ್ರಾಯದ ಮೇಲೆ ಬೆಳಕು ಚೆಲ್ಲುತ್ತದೆ.

ಮುಂದಿನ ಸಾಲುಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯ ಎಷ್ಟರ ಮಟ್ಟಿಗೆ ವೈಜ್ಞಾನಿಕ ವಾಗಿರಬಲ್ಲುದೋ ಅಷ್ಟೇ ಸಾಂಪ್ರದಾಯಿಕವೂ ಆಗಿರಬಹುದಾಗಿದೆ. ಇವೆರಡರಲ್ಲಿ ಒಂದು ಮುಖ್ಯ ವ್ಯತ್ಯಾಸ: ಧಾರ್ಮಿಕ ಶಬ್ದಗಳ ಬಳಕೆಯಿಂದ ವ್ಯಕ್ತವಾಗುವ ಸಾಂಪ್ರದಾಯಿಕತೆ, ವೈಜ್ಞಾನಿಕ ನಿಲವನ್ನು ಆಚ್ಛಾದಿಸಿರುವುದು:

> **'ಬರೇ ಹೊಟ್ಟೆ ಹುಟ್ಟುಗಳ ಊಳಿಗಕ್ಕೇ ಹುಟ್ಟಿದವಕ್ಕೆ**
> **ಗೋರಿ, ಪಕ್ಷ, ನಲವತ್ತನೆಯ ದಿನದ ಪುನಸ್ಕಾರ**
> **ಹೇಗೆ ಸಿಕ್ಕಬೇಕು? ಸ್ಮೃತಿ, ಸ್ಮಾರಕಗಳು**
> **ಹೇಗೆ ನಿಲ್ಲಬೇಕು?'**

ಈ ಸಾಲುಗಳಿಗೆ ಹಿನ್ನೆಲೆಯಾಗಿ ನಿಲ್ಲುವ—

> **'ಇವೆಲ್ಲ ಇತ್ತೀಚಿನವು ಬಿಡು**
> **ಎನ್ನಿಸಿ ಉಪೇಕ್ಷಿಸುವಂಥವಕ್ಕೆ'**

ಎನ್ನುವ ಸಾಲುಗಳು, ಮೇಲೆ ಸೂಚಿತವಾದ ಸಾಂಪ್ರದಾಯಿಕತೆಗೆ ಪ್ರತಿಪಕ್ಷವಾಗಿ ನಿಲ್ಲುವ ಮನೋಭಾವವನ್ನು ಸೂಚಿಸುವುದನ್ನು ಧ್ವನಿಸುತ್ತವೆ. ಅಂದರೆ, ಪೂರ್ವಿಕರಿಂದ ಒಪ್ಪಿ ಕೊಳ್ಳಲ್ಪಟ್ಟ ಹಿನ್ನೆಲೆಯಲ್ಲಿ ಅಸ್ತಿತ್ವ ಪಡೆದ 'ಪ್ರಾಕ್‌ಬಂಧಗಳು' ಒಂದು ಬಗೆಯಾದರೆ, ಆಧುನಿಕ ವಿದ್ಯಾಭ್ಯಾಸ ರೂಪಿಸುವ 'ಪ್ರಾಕ್‌ಬಂಧಗಳು' ಇನ್ನೊಂದು ಬಗೆ. ಇವುಗಳಲ್ಲಿ ಯಾವುದೇ ಬಗೆಯದಾದರೂ 'ಉಪೇಕ್ಷೆ' ಮಾತ್ರ ಒಳ್ಳೆಯದಲ್ಲ. ಯಾವಾಗ ಬದುಕು ಬರೀ 'ಹೊಟ್ಟೆ ಹುಟ್ಟುಗಳ ಊಳಿಗ'ವಾಗುತ್ತದೆಯೋ, ಆಗಲೇ ಪಾಪದ ಕಲ್ಪನೆ ಮೊಳೆಯುತ್ತದೆ. ಅಂಗವಿಕಲರ ಬಗ್ಗೆ, ಅವರ ಅಂತಹ ಸ್ಥಿತಿಗೆ ಅವರ ಪಾಪ ಕರ್ಮ ಎನ್ನುವ ಭಾವನೆ, ಪರಂಪರಾಗತವಾದದ್ದು. ಹಾಗೆಯೇ 'ಸುಖ ದುಃಖ ಹೇಗೆ ತೋಡಿಕೊಂಡಾವು?' ಎಂಬ ನಿಸ್ಸಹಾಯಕ ಸ್ಥಿತಿ ಕೂಡ, ಪಾಪ ಪ್ರಜ್ಞೆಯ ಒಂದು ಭಾಗವಾಗಿಯೇ ವ್ಯಕ್ತವಾಗುತ್ತದೆ.

ಅಂದರೆ, ಎರಡನೆಯ ಪ್ಯಾರಾದ ಮುಖ್ಯ ಅಂಶ ಪಾಪಪ್ರಜ್ಞೆ. ಇಂತಹ 'ಪ್ರಾಕ್‌ಬಂಧಗಳ' ಅಸ್ತಿತ್ವಕ್ಕೆ ಅದು ಮಾರಕ ಅಷ್ಟೇ ಅಲ್ಲ; ಪಾಪಪ್ರಜ್ಞೆಯಿಂದಾಗಿ, ಒಬ್ಬ ವ್ಯಕ್ತಿ ಇಂತಹ 'ಪ್ರಾಕ್‌ಬಂಧಗಳ'ನ್ನು ಗುರುತಿಸದೆಯೂ ಹೋಗಬಹುದು. ಆದ್ದರಿಂದ ಅವುಗಳ ಬಗ್ಗೆ ತಳೆದ ಉಪೇಕ್ಷೆ ಇದೇ ಅಸ್ತಿತ್ವಕ್ಕೆ ಮಾರಕವಾಗುತ್ತದೆ. ಯಾಕೆಂದರೆ ಬದುಕು ಬರೀ 'ಹೊಟ್ಟೆ ಹುಟ್ಟುಗಳ ಊಳಿಗ' ಅಲ್ಲ. ಅದಕ್ಕಿಂತಲೂ ಗಹನವಾದ ಅನೇಕ ವಿಷಯಗಳು ಉಂಟು. ಅಂದರೆ, ಎರಡನೆಯ ಪ್ಯಾರಾದ ವಿವರಗಳಿಂದಾಗಿ, 'ಪ್ರಾಕ್‌ಬಂಧಗಳು' ಹಾಗೂ ಅಸ್ತಿತ್ವ ಮತ್ತು ನಿರಸನ—ಎರಡಕ್ಕೂ ಸಂಬಂಧ ಕಲ್ಪಿಸುವ ಪಾಪಪ್ರಜ್ಞೆ ನಮಗೆ ಗೋಚರವಾಗುತ್ತದೆ. ಇದರಿದಾಗಿ, 'ಪ್ರಾಕ್‌ಬಂಧಗಳ' ವ್ಯಾಪ್ತಿಗೆ ಧಾರ್ಮಿಕ ಅಂಶವೂ ತನ್ನ ಪಾಲಿನ ಕಾಣಿಕೆಯನ್ನು ಕೊಟ್ಟಂತಾಗಿದೆ.

ಮೂರನೆಯ ಪ್ಯಾರಾದ ಆರಂಭವೇ ದೊಡ್ಡದೊಂದು ಪಟ್ಟಿಯಿಂದ ಪ್ರಾರಂಭವಾಗುತ್ತದೆ. ಎರಡನೆಯ ಪ್ಯಾರಾದಲ್ಲಿ ಯಾವುದನ್ನು ಹೆಸರಿಸದೆಯೆ, ಕೇವಲ ಸೂಚಿಸಲ್ಪಟ್ಟಿದ್ದವೋ, ಅವುಗಳೆಲ್ಲ ಇಲ್ಲಿ ಪ್ರತ್ಯಕ್ಷವಾಗುತ್ತವೆ.

'ಸೃಷ್ಟಿಯ ಅಕ್ಷರಾಭ್ಯಾಸದ ಜೀವದೆರಕಗಳು;
ಆದಿ ಮಾದರಿಗಳು; ಅಮಾನವ ಲೋಕದ ಅರಸರು;
ಪೌರಾಣಿಕ ಗಾತ್ರದಲ್ಲೇ ಧ್ವನ್ಯರ್ಥಿಸಿಕೊಳ್ಳುವಂಥವು;
ಪ್ರತಿಮಾ ಮಟ್ಟದಲ್ಲೇ ತರ್ಕಬದ್ಧವಾಗುವಂಥವು.'

—ಡಾರ್ವಿನ್‌ನ ವಿಕಾಸವಾದ ಜೀವ ವಿಕಾಸದ ಹಲವು ಹಂತಗಳನ್ನು ನಿರೂಪಿಸುತ್ತದೆ. ದೈಹಿಕವಾಗಿ ಬೃಹತ್ ಗಾತ್ರದ ಪ್ರಾಣಿಗಳು—ಉದಾ: ಡೈನಾಸಾರಸ್‌ಗಳು—ತಮ್ಮದೇ ಜಾತಿಯ ಸಣ್ಣಪುಟ್ಟ ಜೀವಿಗಳಿಗೆ ಎಡೆಕೊಟ್ಟು ತಾವು ಮರೆಯಾದದ್ದು ಒಂದು ಪ್ರಮುಖ ಘಟ್ಟ, ವಿಕಾಸದಲ್ಲಿ. ಅ-ಮಾನವ (pre-human) ಲೋಕದ ಕಲ್ಪನೆ ಕೂಡ ಹೀಗೇ ವಿಕಾಸವಾದಕ್ಕೇ ಸೇರಿದ್ದು. ಆದರೆ ದೈಹಿಕ ಗಾತ್ರಕ್ಕೂ ಅವು ಪ್ರತಿಮಿಸುವ ಸತ್ಯಕ್ಕೂ ತರ್ಕದ ಮಟ್ಟದಲ್ಲಿ ಬೇರೆಯದೇ ಅರ್ಥ ಹೊಳೆಯುತ್ತದೆ. ಇದು ನಾಗರಿಕತೆಯ ಪರಿಣಾಮವೇ ಆದರೂ ಕೂಡ, ಆ ಎಲ್ಲ ಅನುಭವಗಳೂ—ಪ್ರಾಚೀನ ಅನುಭವಗಳು ಸಂಚಿತವಾಗಿ (cumulative) ಬಂದಿದ್ದರಿಂದಲೇ—ಇಂದು ಅಂತಹ ಅರ್ಥ ಹೊರಡಲು ಸಾಧ್ಯವಾಗಿದೆ ಎನ್ನುವುದು ಗಮನಾರ್ಹ. ಈ ಕೆಳಗಿನ ಸಾಲುಗಳಲ್ಲಿನ ವ್ಯಾಖ್ಯಾನದಲ್ಲಿ ಇಡೀ ವಸ್ತು ವಿವರಗಳಿಗೆ ಅರ್ಥ ಹಚ್ಚುವ ಹಿಂದಿನ ಮನೋಧರ್ಮ ವ್ಯಕ್ತವಾಗುತ್ತದೆ:

'ವರ್ತಮಾನಕ್ಕೆ ವಾಮನರೂಪಿ ಚಿಲ್ಲರೆ ಪ್ರತಿನಿಧಿಗಳ ಬಿಟ್ಟವು;
ಬಿಟ್ಟರೂ,
ತಮ್ಮ ಸ್ವರ್ಣಯುಗದ ಪಾಶವೀ ಭಯ, ಕ್ರೌರ್ಯ, ಸಂಖ್ಯೆಯ
ಭಟ್ಟಿಯಿಳಿಸಿಕೊಂಡವು.'

ಮನಸ್ಸಿನ ಭಯದಲ್ಲಿ ರೂಪುಗೊಂಡ (ಮೊದಲ ಪ್ಯಾರಾ) 'ಪ್ರಾಕ್‌ಬಂಧಗಳು' ಇಲ್ಲಿ ಪ್ರಾಚೀನ ಅವಶೇಷಗಳ ಮೂಲಕ ಅಭಿವ್ಯಕ್ತಿ ಪಡೆಯುವುದನ್ನು ಕಾಣ ಬಹುದು. ಆದ್ದರಿಂದಲೇ ಕವಿತೆ ಪ್ರಸ್ತುತವಾದದ್ದನ್ನಾಗಲೀ, ಅಥವಾ ಒಬ್ಬ ವ್ಯಕ್ತಿಯ ವೈಯಕ್ತಿಕ ಅನುಭವಗಳನ್ನಾಗಲೀ ಪ್ರತಿಮಿಸುವುದರಲ್ಲಿ ತನ್ನ ಅಸ್ತಿತ್ವವನ್ನು ಸಮರ್ಥಿಸಿ ಕೊಳ್ಳುವುದಿಲ್ಲ. ಆದರೆ, ಪ್ರಸ್ತುತದಲ್ಲಿ ಭೂತಕಾಲದ ಅನುಭವ ಪರಂಪರೆಯನ್ನೂ ಘಟನಾವಳಿಗಳನ್ನೂ ಸೆರೆ ಹಿಡಿಯಲು ಯತ್ನಿಸುತ್ತದೆ. ಆದರೆ ಇಲ್ಲಿಗೇ ಮುಗಿಯುವುದಿಲ್ಲ, ಈ ಇಡೀ ತಡಕಾಟ. ಮತ್ತೆ ಮತ್ತೆ ಪ್ರಕ್ರಿಯೆಗಳಲ್ಲಿ, ಸಾಮಾನ್ಯ ಮೌಲ್ಯಮಾಪನದಲ್ಲಿ ಇಡೀ ಅನುಭವಗಳನ್ನು ಬಂಧಿಸಿಡುವ ಪ್ರಯತ್ನ ನಡೆಯುತ್ತದೆ—

'ಏಕರೂಪತೆಯಲ್ಲಿನ ಅಷ್ಟಿಷ್ಟು ಭೇದ; ಹೀಚು ಬುದ್ಧಿಯ
ಬಂಧಿಸಿದ ನಿರಂಕುಶ ಪ್ರವೃತ್ತಿ—ಮತ್ತದರದೇ ಅನಿಶ್ಚಿತ ಕ್ರಿಯೆಗಳ—
ತಮ್ಮ ಪೀಳಿಗೆಯಲ್ಲಿ ಅವಶೇಷಿಸಿಕೊಂಡವು—ಎಂದೇ
ಪೂಜಿಸಿಕೊಳ್ಳುತ್ತವೆ, ಧರ್ಮವಿಲ್ಲದವು;

ಸಂಕೇತಿಸಿಕೊಳ್ಳುತ್ತವೆ, ಅರ್ಥವಿಲ್ಲದವು.'

ಇಲ್ಲಿ 'ಅನಿಶ್ಚಿತ ಕ್ರಿಯೆಗಳ' ಎಂಬ ಮಾತಿನ ಮೇಲೆ ಒತ್ತು ಹಾಕಬೇಕು. 'ಏಕರೂಪತೆ' ಮತ್ತು 'ನಿರಂಕುಶ ಪ್ರವೃತ್ತಿ' ಕೂಡ 'ಅನಿಶ್ಚಿತ ಕ್ರಿಯೆ'ಗೆ ಪೂರಕವಾಗಿ ಬಂದಂತಹವುಗಳೇ. ಆದರೆ ಇಂತಹ 'ಅನಿಶ್ಚಿತ ಕ್ರಿಯೆಗಳು' ಕೂಡ ಅವಶೇಷ ರೂಪವಾಗಿ ಬಂದಿರುವುದು, ಇಲ್ಲಿನ ಬದುಕಿನ ಅಂಚಿಗೆ ಸೇರಿಯೂ ಸೇರದ ಸ್ಥಿತಿಯನ್ನು ದೃಢೀಕರಿಸುತ್ತದೆ. 'ಧರ್ಮವಿಲ್ಲದವು' ಎಂಬ ಮಾತಂತೂ ಈ ಪ್ಯಾರಾದ 'ಕೋನ ಶಿಲೆ' (cornerstone) ಎಂದರೆ ತಪ್ಪಲ್ಲ. 'ಧರ್ಮ' ಎಂಬ ಮಾತಿನಲ್ಲಿಯೇ ಧಾರಣೆಯ ಪ್ರಕ್ರಿಯೆ ಅಡಗಿದೆ. ಆದ್ದರಿಂದ 'ಧರ್ಮವಿಲ್ಲದವು' ಎನ್ನುವಾಗ, ಈ 'ಪ್ರಾಕ್‌ಬಂಧಗಳ' ಅಸ್ತಿತ್ವ ಎಷ್ಟು ದಯನೀಯ ಎನ್ನುವುದು ಗೋಚರವಾಗುತ್ತದೆ. 'ಅರ್ಥವಿಲ್ಲದವು' ಎನ್ನುವುದು ಧರ್ಮದಷ್ಟು ಆಳ ಪಡೆಯದಿದ್ದರೂ ಹೆಚ್ಚು ವ್ಯಾವಹಾರಿಕತೆಯನ್ನು ಪಡೆದಿದೆ. ಹೀಗೆ ಧರ್ಮ-ಅರ್ಥ ಎರಡೂ ಇಲ್ಲದವು 'ಪೂಜಿಸಿಕೊಳ್ಳು'ವುದೂ 'ಸಂಕೇತಿಸಿಕೊಳ್ಳು'ವುದೂ ಆ ಹಂತದಲ್ಲಿ ಬದುಕು ನಿರರ್ಥಕವಾಗುವುದನ್ನು ಧ್ವನಿಸುತ್ತದೆ. ಅಂದರೆ, ಬದುಕಿನ ಅತ್ಯಂತ ಆಳಕ್ಕೆ ಹೋಗುವ 'ಪ್ರಾಕ್‌ಬಂಧಗಳು' ನಿರರ್ಥಕವಾಗುವುದು, ಅಸಾಮಾನ್ಯವಾಗುವುದು ಅಪವಾದವೇನಲ್ಲ. ಆದರೆ ಇವು ಪೂಜೆಗೆ ಸಂಕೇತಗಳಿಗೆ ಯೋಗ್ಯವಾಗುವುದು, ತಮ್ಮ ಅಷ್ಟಿಷ್ಟು ಸ್ವರೂಪಭೇದ ಮತ್ತು ನಿರಂಕುಶ ಪ್ರವೃತ್ತಿಯಿಂದಾಗಿ.

ಇನ್ನು ಕೊನೆಯ ಪ್ಯಾರಾದಲ್ಲಿ ಈ 'ಪ್ರಾಕ್‌ಬಂಧಗಳು' ಹೇಗೆ ಅಸ್ತಿತ್ವಕ್ಕಾಗಿ ಸೆಣಸಲು ಯತ್ನಿಸುತ್ತವೆ ಎನ್ನುವುದು ನಿರೂಪಿತವಾಗಿದೆ. ಆದರೆ ಮೊದಲಿನ ಪ್ಯಾರಾಕ್ಕೂ ಇಲ್ಲಿಗೂ ಒಂದು ಮುಖ್ಯ ವಿರೋಧಾಂಶವನ್ನು ಗಮನಿಸಬೇಕು. ಮೊದಲನೆಯ ಪ್ಯಾರಾದಲ್ಲಿ 'ನನ್ನ ಮನದ ಭಯದೊಡನೆ ಸ್ವಸ್ಥಾಪಿಸಿಕೊಳ್ಳುವುದು;' ಎಂದಿದ್ದರೆ, ಇಲ್ಲಿ—

'ಸ್ವಪ್ರಯತ್ನಿಸದೆ ಕಾಲ, ನಿಸರ್ಗಗಳ ಮರ್ಜಿ ಹಿಡಿದು
ಇಷ್ಟಿಷ್ಟೇ, ಇಷ್ಟಿಷ್ಟೇ ಹತ್ತಲು ಹೆಣಗುತ್ತವೆ—'

ಎಂಬ ಮಾತು ಬರುತ್ತದೆ. ಮೊದಲನೆಯ ಪ್ಯಾರಾದಲ್ಲಿ ಸ್ವಸ್ಥಾಪಿಸಿಕೊಳ್ಳುವುದಕ್ಕೆ 'ನನ್ನ ಮನದ ಭಯದೊಡನೆ' ಎಂಬ ಮಾತು ತಕ್ಕ ಸಂದರ್ಭವನ್ನು ಸೂಚಿಸುತ್ತದೆ. ಆದರೆ ಅದು ಸಂಪೂರ್ಣ ವಾಗಿ ಸಮರ್ಥನೀಯವಲ್ಲ. ಏಕೆಂದರೆ ಇಲ್ಲಿನ ಸಾಲುಗಳಲ್ಲಿ 'ಸ್ವಪ್ರಯತ್ನಿಸದೆ' ಎನ್ನುವಾಗ, ಸ್ಥಾಪನೆಗೊಳ್ಳುವ ದಿಕ್ಕಿನಲ್ಲಿ ಯಾವ ಪ್ರಯತ್ನವೂ ತನ್ನಿಂದ ತಾನಾಗಿ ನಡೆದಿಲ್ಲ ಎನ್ನುವುದು ತಿಳಿಯುತ್ತದೆ.

ಇದರಿಂದಾಗಿ, ಕವಿತೆಯ ನಡೆ ತನ್ನ ಮೂಲ ಧೋರಣೆಯಾದ ಅನುಮಾನದ ಸ್ಥಿತಿಗೆ ತಿರುಗಿದಂತಾಗಿದೆ. ಅಸ್ತಿತ್ವ ಅನುಮಾನಕ್ಕೆ ಒಳಗಾಗಿದೆ. ಅಂದರೆ ಇಲ್ಲದರ ಬಗ್ಗೆ ಕವಿ ಹೇಳುತ್ತಿದ್ದಾನೆ ಎಂದಲ್ಲ. ಇಲ್ಲಿವರೆಗಿನ ಬೆಳವಣಿಗೆ 'ಪ್ರಾಕ್‌ಬಂಧಗಳ' ಅಸ್ತಿತ್ವದ ಬಗ್ಗೆ ಹೇರಳವಾಗಿ ಹೇಳಿದೆ. ಅಷ್ಟೇ ಅಲ್ಲ, ಕೊನೆಯ ಪ್ಯಾರಾದ ಆರಂಭದ ಸಾಲುಗಳು. 'ಪ್ರಾಕ್‌ಬಂಧಗಳ' ಪ್ರಾಚೀನತೆಗೆ ಸಂವಾದಿಯಾಗಿ ಭವಿಷ್ಯತ್ತನ್ನು ಸೂಚಿಸುತ್ತವೆ:

'ಜೀವದ ಹೊಸ ನಮೂನೆಗಳಿಗೆ ಸವಾಲಾಗಿ
ಉಳಿವ ಸೃಷ್ಟಿಯೊಕ್ಕಲು ತಾವೇ ಎನಿಸುವಂತೆ
ನಿಗೂಢತೆಯ ದೇಹಿಸಿಕೊಂಡು
ಕಕ್ಕಾಬಿಕ್ಕಿಗೊಳಿಸುವ, ಇವು—'

ಇಲ್ಲಿನ ಕೊನೆಯ ಎರಡು ಸಾಲು, ಇಡೀ ಕವನದಲ್ಲಿ ಪ್ರತಿಪಾದಿತವಾಗಿರುವ ಅಂಶವನ್ನೇ ನೇರವಾಗಿಯೂ ಹ್ರಸ್ವಗೊಳಿಸಿಯೂ ಹೇಳುತ್ತದೆ. ಆದರೆ ಮೊದಲನೆಯ ಎರಡು ಸಾಲುಗಳು 'ಪ್ರಾಕ್‌ಬಂಧಗಳ' 'ಆದಿ-ಅಂತ' ಎರಡನ್ನೂ ಹೇಳುತ್ತವೆ. ಹಾಗೆ ಹೇಳುವಲ್ಲಿ ಇಡೀ ಜೀವ ಕೋಟಿಯ (ಕೇವಲ ಮಾನವ ಕೋಟಿಯಲ್ಲ) ಉಗಮ-ವಿಕಾಸ-ಅಳಿವುಗಳನ್ನೆಲ್ಲ ಒಳಗೊಳ್ಳು ತ್ತವೆ. ಆದ್ದರಿಂದ, 'ಪ್ರಾಕ್‌ಬಂಧಗಳ' ಬಗೆಗಿನ ನಿಲವು ಸಂಕುಚಿತವಾದದ್ದಲ್ಲ ಎನ್ನುವುದನ್ನು ಗಮನಿಸಬೇಕು. ಹಾಗೆ ನೋಡಿದರೆ, ಅದು ಒಳಗೊಳ್ಳದೇ ಇರುವ ವಿಷಯವೇ ಇಲ್ಲ.

'ಕತ್ತಲೊಂದಿಗೇ ಆಕೃತಿಸಿಕೊಳ್ಳುವ ವಿಕೃತಿಗಳು;
ಜೀವಕ್ಕಂಟಿದ ಪ್ರಾಗ್ಬಂಧಗಳು.'

ಎನ್ನುವ ಕೊನೆಯ ಸಾಲುಗಳು ಆಲೋಚನಾ ಪರಂಪರೆಗೆ ತಕ್ಕ ನಿಲುಗಡೆಯನ್ನು ಒದಗಿಸುತ್ತವೆ. ಇಲ್ಲಿ ಮೊದಲನೆಯ ಬಾರಿಗೆ 'ವಿಕೃತಿಗಳು' ಎಂದು ಕರೆಯಲಾಗಿದೆ 'ಪ್ರಾಗ್ಬಂಧಗಳ'ನ್ನು. ಹಾಗೆ ಕರೆಯದೇ ಗತ್ಯಂತರವಿಲ್ಲ. ಯಾಕೆಂದರೆ, ಅದು ಮನುಷ್ಯನ ನೋಟದ ಸಂಕುಚಿತತೆ, ನಾಗರಿಕತೆಯ ಬಣ್ಣದ ಗಾಜಿನ ಮೂಲಕ ನೋಡುವ ಮನುಷ್ಯ ಸಹಜ ನ್ಯೂನತೆ. ಇವುಗಳಿಂದಲೇ ಅವು ವಿಕೃತಿಗಳಾಗಿ ಗೋಚರಿಸುವುದು ತರ್ಕಬದ್ಧ. ಅಲ್ಲದೆ ಕವಿತೆಯ ಆರಂಭದಿಂದಲೂ ಇಂತಹ ಒಂದು ಧ್ವನಿ ಪ್ರಧಾನವಾಗಿರುವುದನ್ನು ನಾವು ಕಾಣುತ್ತೇವೆ. ಆದ್ದರಿಂದ 'ವಿಕೃತಿಗಳು' ಎನ್ನುವ ಮಾತು ಇಲ್ಲಿ ಅಸಂಗತವಾಗಿ ಕಾಣುವುದಿಲ್ಲ. 'ಜೀವಕ್ಕಂಟಿದ ಪ್ರಾಗ್ಬಂಧಗಳು' ಎನ್ನುವ ಮಾತೂ ನಮ್ಮನ್ನು ಮತ್ತೆ 'ನನ್ನ ಮನದ ಭಯದೊಡನೆ' ಎನ್ನುವುದಕ್ಕೆ ಕರೆದೊಯ್ಯುತ್ತದೆ. ಪರಿಣಾಮವಾಗಿ, ಕವನದುದ್ದಕ್ಕೂ ಒಳ ದನಿಯಲ್ಲೇ ಮಿಡಿಯುವ ಈ ಸಂಬಂಧ ಇಲ್ಲಿ ವ್ಯಕ್ತವಾಗಿ ಹೊರಬರುತ್ತದೆ.

೨

ಇಲ್ಲಿಯವರೆಗೂ ಕವನದ ವಿಶ್ಲೇಷಣೆಯನ್ನು ಮಾಡಲಾಯಿತು. ಈಗ ಇಡೀ ಒಂದೇ ನೋಟಕ್ಕೆ ಹೇಗೆ ಈ ಕವನವನ್ನು ಅರ್ಥೈಸಬಹುದು ಎನ್ನುವುದನ್ನು ನೋಡಬೇಕು. ಅಡಿಗರ 'ಭೂತ' ಪದ್ಯವನ್ನು ಬಿಟ್ಟರೆ, ಕನ್ನಡದಲ್ಲಿ ಇಂತಹ ಸುಲಭಗ್ರಾಹ್ಯವಲ್ಲದ ವಸ್ತುವಿನ ಬಗ್ಗೆ 'ಪ್ರಾಗ್ಬಂಧಗಳು' ಬಿಟ್ಟು ಬೇರೆ ಪದ್ಯಗಳಿದ್ದಂತೆ ತೋರುವುದಿಲ್ಲ. ಆದರೆ ಆ ಕಾರಣ ಕ್ಕಾಗಿಯೇ, ಇದು ಮುಖ್ಯವಾದ ಕವನವಾಗುವುದಿಲ್ಲ. ಕವನ ಮುಖ್ಯವಾಗುವುದು ಅನಿಶ್ಚಿತ ಹಾಗೂ ಮನೋದೈಹಿಕ ಪರಿಧಿಗೆ ಸೇರಿದರೂ ಆ ಅನುಭವ ಕ್ಷೇತ್ರಕ್ಕೆ ಹೊರಗಿನದು ಎಂಬ ಅನುಮಾನವಿರುವ ವಸ್ತುವನ್ನು ಕವಿ ನಡೆಸಿಕೊಂಡು ಹೋಗುವ ರೀತಿ, ಮತ್ತು ಅದರಲ್ಲಿ ಸಾಧಿತವಾದದ್ದು.

'ಪ್ರಾಗ್ಬಂಧಗಳು' ತೆರೆದು ತೋರುವ ಪ್ರಪಂಚ, ಸಾಮಾನ್ಯ ಅನುಭವಕ್ಕೆ ದಕ್ಕುವಂತಹದ್ದು ಅಲ್ಲ ಎನ್ನುವುದು ಒಂದಂಶವಾದರೆ, ಅದನ್ನು ದಾಖಲೆಗೊಳಿಸುವ ರೀತಿ ಕೂಡ ಅಷ್ಟೇ ಮುಖ್ಯವಾದ ಅಂಶವಾಗುತ್ತದೆ. 'ಪ್ರಾಗ್ಬಂಧಗಳು' ಕವಿತೆಯ ಆರಂಭದಿಂದ ಕೊನೆಯವರೆಗೂ ಕೇಂದ್ರ ವ್ಯಕ್ತಿ ಹಿನ್ನೆಲೆಯಲ್ಲಿಯೇ ಇರುವುದು ಇಲ್ಲಿನ ಮುಖ್ಯ ಗುಣ. ಹಾಗೆಂದು ಇದು ವ್ಯಕ್ತಿನಿರಪೇಕ್ಷ(Impersonal)ವಾದ ಪದ್ಯವಲ್ಲ. ಹಾಗೆ ವ್ಯಕ್ತಿನಿರಪೇಕ್ಷ ಆಗಬಹುದಾಗಿದ್ದಲ್ಲಿ, ಇಲ್ಲಿ ಕವಿತೆ ಸಂಭ್ರವಿಸುವ ಬದಲು, ಒಂದು ವೈಜ್ಞಾನಿಕ ಸೂತ್ರವೊ, ವಿವರಣೆಯೊ ನಿರ್ಮಾಣವಾಗುತ್ತಿತ್ತು. ಅಂದರೆ ಕೇಂದ್ರವ್ಯಕ್ತಿಯ ಅನುಭವದ ಪಾಕದಲ್ಲಿ ಇಲ್ಲಿನ ವಿವರಗಳು ದಾಖಲುಗೊಂಡಿರುವುದರಿಂದ ಕವಿತೆ ಸೃಷ್ಟಿಯಾಗಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ: ಸಾಮಾನ್ಯವಾದ, ಧಾರ್ಮಿಕ ಅಥವಾ ಸಾಂಪ್ರದಾಯಿಕ ಭಯ, ಭೀತಿ, ಪಾಪಪ್ರಜ್ಞೆ—ಇವುಗಳನ್ನು ಕವಿ ತಾನು ಪಡೆದಿರುವ ವೈಜ್ಞಾನಿಕ ಶಿಸ್ತಿಗೆ ಒಳಪಡಿಸಿರುವುದು. ಈ ವೈಜ್ಞಾನಿಕ ಶಿಸ್ತು ಕವನದ—ವೈವಿಧ್ಯಮಯ ಹಾಗೂ ವಿವಿಧ ಸ್ತರಗಳಿಗೆ ಸೇರಿದ—ಭಾವನೆಗಳನ್ನು ಒಟ್ಟುಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ವೈಜ್ಞಾನಿಕ ಶಿಸ್ತು ಕವನದ ಸ್ವರೂಪವನ್ನು ನಿರ್ಧರಿಸುವುದರ ಜೊತೆಗೇ ಕವನಕ್ಕೆ ಇತ್ಯಾತ್ಮಕ ಮೌಲ್ಯವನ್ನು ತಂದುಕೊಡುವಲ್ಲಿ ಸಾರ್ಥಕವಾಗಿದೆ.

ಜೀವನ ಒಂದು ಘಟ್ಟದಲ್ಲಿ ಭಯಾನಕವೆನ್ನಿಸುತ್ತದೆ—ಜೀವನದ ಮೂಲ ಸೂತ್ರವನ್ನಾಗಲೀ, ಮೂಲ ಸ್ರೋತವನ್ನಾಗಲೀ ಅರಸುತ್ತ ಹೊರಟಂತಹ ವ್ಯಕ್ತಿಗೆ. ಜೀವನ ಎನ್ನುವುದು ಬೌದ್ಧಿಕವಾಗಿ ಚರ್ಚಿಸಬಲ್ಲಂತಹ ಕಾರ್ಯಕಾರಣ ವ್ಯಾಪ್ತಿಗೆ ಸೇರಿದ್ದಲ್ಲ ಎಂಬ ಭಾವನೆ ಇದಕ್ಕೆ ಹಿನ್ನೆಲೆ. ಆದರೆ ಅರಸುವಿಕೆ ಕಷ್ಟವಾಗುತ್ತಾ ಹೋದಂತೆ, ಯಾವುದು ಬದುಕು, ಯಾವುದು ಬದುಕಲ್ಲ ಎಂಬ ಪ್ರಶ್ನೆ ಮತ್ತು ಜೀವನದ—ಗೋಚರ ಹಾಗೂ ಅಗೋಚರ ರೂಪದಲ್ಲಿ ಪ್ರಕಟವಾಗುವ—ವಿರಾಟ್ ಸ್ವರೂಪ—ಇವುಗಳೆಲ್ಲ ಈ ಕವನದುದ್ದಕ್ಕೂ ಸುಳಿದು ಹೋಗುವುದರಿಂದಾಗಿ ಇಲ್ಲಿ ಮಹತ್ವ ಕಂಡುಬರುವುದು.

ಇಪ್ಪತ್ತನೆಯ ಶತಮಾನದಲ್ಲಿ ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದಾಗಿ, ಇಂದಿನ ಭಾರತೀಯ ಜೀವನವನ್ನು ನೋಡುವ ದೃಷ್ಟಿ ಬದಲಾಗಿದೆ. ಆದ್ದರಿಂದ, ಆ ಹೊಸ ದೃಷ್ಟಿಕೋನವನ್ನು ಮೈಗೂಡಿಸಿಕೊಂಡ ಈ ಕವಿತೆಯಲ್ಲಿ ದೇವರ ಅಪಾರ ಶಕ್ತಿಯ ಬಗೆಗಾಗಲೀ, ದೇವತ್ವ-ಪಶುತ್ವ ಮತ್ತು ಎರಡನ್ನೂ ಅನುಭವಿಸಲಾಗದ ಮನುಷ್ಯತ್ವ—ಇವುಗಳ ಬಗೆಗಾಗಲೀ ಪ್ರಸ್ತಾಪವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇದು ಸರಿ, ಇದು ತಪ್ಪು ಎನ್ನುವ ಬಾಲಿಶ ಮನೋಭಾವವಾಗಲೀ, ಇದರಿಂದ ತಪ್ಪಿಸಿಕೊಳ್ಳಬೇಕು, ಇದರಿಂದ ದೂರ ಹೋಗಬೇಕು ಎನ್ನುವ ತಪ್ಪಿತಸ್ಥ ಮನೋಭಾವವಾಗಲೀ ಇಲ್ಲಿ ಪ್ರಕಟವಾಗಿಲ್ಲ. ಇಲ್ಲಿ ದಾಖಲಾಗಿರುವ ಭಯ, ಆತಂಕ, ವಿಷಣ್ಣತೆ, ರೇಜಿಗೆ—ಇವುಗಳೆಲ್ಲ ಮಾನವ ಸಹಜ ಅನುಭವಗಳಾಗಿ, ಯಾವ ಅತಿರೇಕವೂ ಇಲ್ಲದ ಹಾಗೆ ಕಂಡುಬರುತ್ತವೆ. ಅದು ಕೂಡ, ಇಲ್ಲಿನ ಒಂದು ಮುಖ್ಯ ಗುಣ.

೩

'ಪ್ರಾಗ್ಬಂಧಗಳು' ಓದುಗನ ಅನುಭವದ ಪರಿಧಿಯನ್ನು ವಿಸ್ತರಿಸುವ ರೀತಿ ವಿಶಿಷ್ಟವಾದದ್ದು. ಇಲ್ಲಿ ವ್ಯಕ್ತಿಯ ಅನುಭವ ಹೇಗೆ ಸಾಮಾನ್ಯೀಕರಣಕ್ಕೆ ಒಳಗಾಗಿದೆ ಎನ್ನುವುದನ್ನು ಗಮನಿಸಬೇಕು. ಮನುಷ್ಯನ ಅನುಭವಕ್ಕೆ ಹೊಸದಲ್ಲದ, ಆದರೆ, ಇಷ್ಟೇ ಕಾಳಜಿಯಿಂದ ಈ ಮೊದಲು ಯಾರೂ ನಿರೂಪಿಸಲು ಯತ್ನಿಸದ ಅನುಭವ ಇಲ್ಲಿ ಹರಳುಗಟ್ಟಿದೆ.

'ಪ್ರಾಗ್ಬಂಧಗಳು' ಸಂವೇದನೆಯನ್ನು ವಿಸ್ತಾರಗೊಳಿಸದಿದ್ದರೂ ಆ ಕ್ಷೇತ್ರದ ಬಾಂದುಕಲ್ಲುಗಳನ್ನು ಸ್ಥಾಪಿಸುತ್ತದೆ. ವಿವಿಧ ಸ್ತರಗಳಿಗೆ ಸೇರಿದ ಸಂವೇದನೆಯನ್ನು ಒಂದು ನಿಟ್ಟಿನಲ್ಲಿ ತರುವುದರಲ್ಲಿ ಯಶಸ್ವಿಯಾಗಿದೆ. ನಿರಂತರ ಕಾಲ ಪ್ರವಾಹದಲ್ಲಿ ಒಂದೇ ರೀತಿಯಾಗಿ ಹರಿದು ಬಂದಿರುವ ಅನುಭವಗಳು ಇಲ್ಲಿ ಮೂರ್ತಗೊಂಡಿದೆ. ಇಲ್ಲಿನ ವಿಶಿಷ್ಟ ವಾತಾವರಣದ ಸೃಷ್ಟಿಗೆ ಪದಗಳ ಬಳಕೆ ಹಾಗೂ ಲಯ ಬಹಳಷ್ಟು ಸಹಕಾರಿಯಾಗಿವೆ.

'ಪ್ರಾಗ್ಬಂಧಗಳು' ತನ್ನ ವಿಶಿಷ್ಟತೆಯನ್ನು ಕಾಯ್ದುಕೊಳ್ಳುವ ರೀತಿ ಅದ್ಭುತವಾಗಿದೆ. ಮುಖ್ಯವಾಗಿ, ಇಲ್ಲಿನ ಗುಹ್ಯ ಜಗತ್ತು ನಮ್ಮಲ್ಲಿನ ಗೂಢ ಅನಿಸಿಕೆಗಳನ್ನು ಗಟ್ಟಿಗೊಳಿಸುವ ರೀತಿಯಲ್ಲಿಯೇ, ಈ ಅದ್ಭುತ ಗುಣ ಅಡಗಿದೆ. 'ಪ್ರಾಗ್ಬಂಧಗಳು' ಮರೆವಿನ, ಪರಾ ಮನಸ್ಸಿನ, ದೌರ್ಬಲ್ಯದ ಕ್ಷೇತ್ರಗಳನ್ನು ತಟ್ಟಿದರೂ ಕೂಡ, ಜಾಗ್ರತ ಪ್ರಜ್ಞೆಯ ಮೂಲಕ ಇವುಗಳೆಲ್ಲವೂ ಕೆಲಸ ಮಾಡುವ ರೀತಿ ಅನುಸಂಧಾನಯೋಗ್ಯವಾಗಿದೆ. ಆದ್ದರಿಂದಲೇ, ನಮಗೆ ಈ ಕವನವನ್ನು ಓದುವಾಗ, ಯಾವುದೋ ಅನ್ಯ ಪ್ರಪಂಚವೊಂದನ್ನು ಪ್ರವೇಶಿಸಿದ ಅನುಭವವಾಗುವುದು. ಅದರಲ್ಲಿಯೇ ಇಲ್ಲಿಯ ವೈಶಿಷ್ಟ್ಯವೂ ಅಡಗಿದೆ.

ಅತಾರ್ಕಿಕವೂ ಕೇವಲ ಮನೋವೇದ್ಯವೂ ಆಗುವಂತಹ ನಿಗೂಢತಮವಾದ ಅನುಭೂತಿ 'ಪ್ರಾಗ್ಬಂಧಗಳು' ಕವಿತೆಯ ಉಗಮದ ಹಿನ್ನೆಲೆಗಿದೆ. ಒಂದು ಕಡೆ ಗಾಢವಾದ ಅನುಭಾವಿಕ ದರ್ಶನದಿಂದ, ಮತ್ತೊಂದು ಕಡೆ ವೈಜ್ಞಾನಿಕವಾದ ವಿಕಾಸವಾದದ ದಟ್ಟ ಅರಿವಿನ ಫಲವಾದ ಪ್ರಜ್ಞೆಯಿಂದ ಅಷ್ಟಿಷ್ಟು ಮಸಕು ಮಸುಕಾಗಿ ಹೃದಯ ಸಂವೇದ್ಯವಾಗುವ ಅಪೂರ್ವ ಅನುಭವವನ್ನು 'ಪ್ರಾಗ್ಬಂಧಗಳು' ಕವನದ ವಸ್ತು ಒಳಗೊಂಡಿದೆ. ಆದಿಮ ಜೀವಿಗಳ ಅಸ್ತಿತ್ವ ಹಾಗೂ ಕ್ರಿಯಾಶೀಲತೆಯ ಪಳೆಯುಳಿಕೆಯ ರೂಪದ ಪ್ರಪ್ರಾಚೀನ ಅನುಭೂತಿಗಳನ್ನು ನಿಕ್ಷೇಪಿಸಿಕೊಂಡಿರುವ ಮಾನವನ ಸುಪ್ತಾಂತರಾಳದ ಕೆಲವು ಹೊಳಹು ಗಳನ್ನು ಬುದ್ಧಿಗಮ್ಯ ಮಾತುಗಳಲ್ಲಿ ಹಿಡಿದಿಡುವ ಪ್ರಯತ್ನ ಈ ಕವಿತೆಯಲ್ಲಿ ನಡೆದಿದೆ. ಆದರೆ ಅದು ತರ್ಕದ ಮಟ್ಟದಲ್ಲಿ ಸ್ಪಷ್ಟವಾಗಿ ಅರ್ಥವಾಗುವಂಥದ್ದಲ್ಲ. ಹೀಗೆ ಗಹನ ವಾದದ್ದನ್ನು ಸಂಕೇತ, ಪ್ರತಿಮೆಗಳ ಮೂಲಕ ಮಾತ್ರ ಅಷ್ಟಿಷ್ಟು ಗ್ರಹಿಸಲು ಸಾಧ್ಯವಾದೀತು.

ಪರ್ಣಾಶ್ರಮ

೧

ಅಗ್ರಹಾರಯ್ಯನವರ ಶಹರು ಮಧ್ಯದ ಮಾರ್ಕೆಟ್ ಬದಿಯ
ಪ್ರಶಾಂತ, ಸರಳ, ಏರ್‌ಕಂಡಿಷನ್ಡ್ ಪರ್ಣಕುಟಿಗೊಮ್ಮೆ ಹೋಗಿ ಬನ್ನಿ;
ಆ ಕಡೆಯಿಂದ ನೋಡಿದಿರೋ ದೇಗುಲ, ಈ ಕಡೆಯಿಂದ ಇಗರ್ಜಿ,
ಊ ಕಡೆಯಿಂದ ಮಸೀದಿ; ಅಥವಾ ಒಂದೇ ಎತ್ತರದಲ್ಲಿ ನಿಂತು
ಬೇರೆ ಬೇರೆ ಎತ್ತರದ ಮಂದಿ ವೀಕ್ಷಿಸಿದರೆ ಅವರವರ ಭಾವದಂತೆ
ಪರ್ಣಾಶ್ರಮದ ಚಹರೆಯಾವಿರ್ಭಾವ.

ಇನ್ನು ಆಸುಪಾಸಿನ ಪವಿತ್ರತಾ
ವನ್ಯ ಶಾಂತಿ, ಸಾತ್ವಿಕಾಲಸ ಪರಿಸರ ಅವರ್ಣನೀಯ; ಅತ್ಯಾಧುನಿಕ
ಸ್ವಯಂಚಾಲಿತ ಗೇಟು ದಾಟಿದೊಡನೆ—ಶುದ್ಧ ಯೂರಿಯಾ
ಮಕ್ಕರಿಗಟ್ಟಲೆ ಮುಕ್ಕಿ ಕೊಬ್ಬಿದ ಅಪುಷ್ಪಿತ ಕಾಕಡಾ
ಲತೆಗಳ ನಡುವೆ ಸುಭಿಕ್ಷ ಸೂಸುವ, ಒದ್ದರಷ್ಟೇ ಕುಪ್ಪಳಿಕೆ
ಒಪ್ಪಿಸುವ ಮುಗ್ಧ ಹರಿಣ ಸಂಕುಲ. ಚಿಮ್ಮುತ್ತ ಬಂದು
ಸಂದರ್ಶಕರ ಕೈ ಜಪ್ತಿಮಾಡಿ, ಏನೂ ದಕ್ಕದಿದ್ದರೆ ಕಚ್ಚೆಗೇ
ಬಾಯಿ ಹಾಕುವ ಭೋಳೇ ಎಳೆಗರುಗಳು. ಕರೆಯದಿದ್ದರೇನಂತೆ,
ವಿಭೂತಿ ಭಸ್ಮಗಳ ಕಚ್ಚಾ ಸಾಮಗ್ರಿ ಯಥೇಚ್ಛ ತಯಾರಿಸುವ
ಧರ್ಮಸೇವಾಭೀರು ಪುಣ್ಯಕೋಟಿಗಳು; ಅವುಗಳಲ್ಲೊಂದರ
ಕೆಚ್ಚಲಿಗೆ ಒಣ ತುಟಿಯೊತ್ತಿ ಆಗಂತುಕರಿಗೆ ಪೋಸು ಕೊಡುವ
ಅವನ್ಯಜನ್ಯ ಮರಿಹುಲಿ.
ಟಾಂಗಾ ನಿಂತೊಡನೆ ಶೇಂಗಾ ಖಾತ್ರಿಯಾಯ್ತೆಂದು ಮುಕ್ಕಾಲು
ಕತ್ತರಿಸಿದ ಗರಿಯವಶೇಷ ಮೆರೆಸಿ ಪುಸಲಾಯಿಸುವ
ಅಡ್ನಕಸುಬಿ ಮಯೂರಗಳ ಬಳಿಯೇ ಭೂತಬಲಿಪುಷ್ಟ
ಕಾಗೆಗಳಲ್ಲಿ ಬೆರೆತು ಕಾಕಾ ಕಲಿತ ಖಳಕಂಠ ಪರಪುಟ್ಟಗಳು;
ಕುಲಗೆಟ್ಟ ಮತದಂತೆ ಎಣಿಕೆಗೆ ಬಾರದ ಬರೀ ಅಸ್ತಿತ್ವವಾದಿ
ಸ್ತುತಿಪಾಠಕ ಪಂಡಿತವಕ್ಕಿಗಳು.

ನಗರದನಾಥಾಲಯದ ಕಲೋಪವಾಸಿ
ಸುಪುತ್ರರು ರಚಿಸಿ ಆಶ್ರಮಕ್ಕರ್ಪಿಸಿದ ಮಾತೃದೇವೋಭವ,

ಪಿತೃದೇವೋಭವವದ ವರ್ಣರಂಜಕ ಫಲಕ ಎಲ್ಲೆಲ್ಲು.
ಪೂರ್ವಕ್ಕೆ, ಸ್ವೈರನ್ನಿನಂತೆ ನಿಡಿದಾದ ಹಾದಿ
ಯಿಬ್ಬದಿಗೆ ವಿಸ್ತೃತ ರಾಮಣೀಯಕ ಶಾದ್ವಲ ವಣ ಶ್ರೀಯ ಮಧ್ಯೆ
ಯಾರಿಗೂ ಗೊತ್ತಾಗದಂತೆ ಬೆಳೆಸಿದ ಗಾಂಜಾ ಸಸಿಗಳು;
ಅದಕ್ಕಂಟಿಕೊಂಡೇ, ಬಾಣಂತಿಯ ಪ್ರಸನ್ನತೆಯ ಮನಕ್ಕೆ ಮೂಡಿಸುವ,
ಅಕಾಲಫಲಶೋಭೀ ದ್ರಾಕ್ಷಾಲತೆಗಳು; ಪಕ್ಕದ ಒತ್ತುಯಂತ್ರದ ಬಳಿ
ಸ್ವೈಜುವಾರಿ ಬಾಟಲಿ, ಓಪನರುಗಳು. ಅಂಚುಗಟ್ಟಿದಂತೆ,
ಕೊಳಚೆಯಿಂದ ಬಿಡಿಸಿಕೊಂಡೆದ್ದ ಶಿಷ್ಟ ತೆಂಗುಗಳು; ಅವಕ್ಕೆ
ಕಟ್ಟಿದ ಮಡಕೆಗಳು. ಅಲ್ಲಲ್ಲಿ, ಬಳ್ಳಿ ಮಾಡದ ಕರ್ಮಠ
ನೆರಳುಗಳಲ್ಲಿ ಪ್ಲೇಬಾಯ್ ಪತ್ರಿಕಾಲೀನ ಕಪೋಲಕೇಶೀ
ವಿಶಿಖ ಕುಮಾರ ವಟುಗಳು. ಸೃಷ್ಟಿಯ ಗುಹ್ಯ ಗರ್ಭ
ಭೇದಿಸುವ, ಚಿಂತಿಸುವ, ಶೋಧಿಸುವ ಸ್ವಮಗ್ನ
ನಗ್ನ ಜೋಡಿಗಳು.

ಪ್ರತಿಬಿಂಬಹೀನ, ಫರ್ಮೆಂಟಿಸಿದ ತೀರ್ಥದ
ಮನೋಜ್ಞ ಪುಷ್ಕರಿಣಿ ಹಿಂಬದಿಯ ತಗ್ಗಿನಲ್ಲಿ.
ಇತ್ತ ಸಿಮೆಂಟಿನಗ್ನಿಕುಂಡದಲ್ಲಿ ಪೆಟ್ರೋಲು ಪ್ರಚೋದಿತ,
ಡಾಲ್ಡಾರ್ಪಿತ ಹಸಿಹಸೀ ಎಲುಬಿನ ಬಣ್ಣದುರಿಯ ಸುತ್ತ
ಅಖಾದ್ಯಭಕ್ಷಣತೃಪ್ತ ಅಜಪರು; ಚಳಿ ಕಾಯಿಸುವ ವಿಜಾತರು;
ತುಂಡು ಬೀಡಿ ಹೊತ್ತಿಸಿಕೊಳ್ಳುವ ಪರಪೋಷಿಗಳು; ಕೂರೆ ಹೆಕ್ಕುವ
ನಿರಾಶ್ರಿತರು.

ಪರ್ಣಾಶ್ರಮ ಹೊಕ್ಕರೆ ಭಿತ್ತಿಗೆ
ಪ್ರಾಚೀನಶ್ಲೋಕರ ವರ್ಣರಂಜಿತ ಸಾಂಪ್ರತ ನಮೂನೆಗಳು.
ಹಾಗೆಯೇ ಪೂಜಾರಿಗೊಂದು, ಮೌಲ್ವಿಗೊಂದು, ಪ್ರೀಸ್ಟಿಗೊಂದು
ಅವರವರ ಸ್ಥಾನಮಾನಕ್ಕೆ, ಅಭ್ಯರ್ಚನಕ್ಕೆ ತಕ್ಕಂತೆ ಮೆತ್ತನೆಯ
ಸುಖಾಸನ; ಎದುರಿಗೇ, ಸಾಕ್ಷಾತ್ ಅಹಿಂಸಾವತಾರಿ ಕೃಷ್ಣಾಜಿನಸ್ಥ
ಅಗ್ರಹಾರೇಶ್ವರಾನಂದಜೀಯವರ ಅಕ್ರೂರ ಮುದ್ರೆ.
ಮುಂದಕ್ಕೆ ಪೂಜ್ಯರ ಕಡೆಯಿಂದ ದಿಟ್ಟಿಸಿದರೆ ಸಿಂಹಾಸನ,
ಇತರರ ಕಡೆಯಿಂದ ಕಮೋಡಿನ ಅನುಮಾನ ಗಾಢವಾಗಿಸುವ
ಪೀಠೋಪಕರಣಕ್ಕಂಟಿದ 'ಜನತಾ ಜನಾರ್ದನ' ಬೋರ್ಡಿಗೆದುರಾಗಿ
ಏರಿಂಡಿಯಾ ರಾಜನ ಯುವರ್ಸ್‌ಫೇಯ್ತ್‌ಫುಲಿ ಭಂಗಿ. ಮತ್ತೂ
ಒಳಗೆ ಡಿ.ಡಿ.ಟಿ., ಫೆನಾಯಿಲ್ ಸಂಪ್ರೋಕ್ಷಣಕ್ಕೂ ಮೋಕ್ಷ
ಸಿಕ್ಕದ ಸಾಧುಜೀವಿಗಳ ಕಣ್ಮರೆಯ ಅಂಟುಜಾಡ್ಯದ ಪ್ರಯೋಗಶಾಲೆಯ
ಕಗ್ಗತ್ತಲಲ್ಲಿ ಗಂಧ ತೇಯುವ ಕಾರ್ಮಿಕರ ಜೊತೆಗೇ
ಕೂಳು ಬೇಯಿಸುವ, ಹೊರಗಾದ, ಸಾಲಂಕೃತ, ಫಲಿತ ವಿತಂತುಗಳು.

೨

ಕತ್ತಲೊಂದಿಗೇ ಚಟುವಟಿಕೆ, ಗಲಿಬಿಲಿ ಚಿತ್ರಸ್ಥ;
ಆಗಿದು ಪಾನಪ್ರಸ್ಥಾಶ್ರಮ. ಟ್ರೇಡ್ ಯೂನಿಯನ್ ಶುರುವಾಗುತ್ತೆ;
ಒಳಗೆ ಹಂಗಾಮವೋ ಹಂಗಾಮ. ಮಹಾರಾಯ, ಯಾರಿದು?
ಮಡದನೋ? ಗಂಡತಿಯೋ? ಎಂದು ಗುರುತಿಸದಂಥ ಬೆಡ್‌ಲೈಟಿನ
ಮೈಲಿಗೆ ಬೆಳಕಲ್ಲಿ ನೀತಿ ಭಾವನೆ ಮಾನಿನಿಯ ಮಾಂಗಲ್ಯ
ದಷ್ಟೇ ತೆಳ್ಳಗಾಗುತ್ತೆ. ಹಗಲ ತಿಜೋರಿಯ ಕಪ್ಪುಹಣ
ಕತ್ತಲಲ್ಲಿ ಬೆಳ್ಳಗಾಗುತ್ತೆ. ಚಿನ್ನದುಂಗುರದ ಪರಿಣತ ಬೆರಳು
ಹಸಿದ ಮಿದು ಹೊಟ್ಟೆಯನ್ನೊತ್ತಿ ತೀಡುತ್ತವೆ. ಗೆದ್ದಲು ಹಿಡಿದ
ಕಲ್ಪವೃಕ್ಷದ ಶಾಖೆ, ಗೊಡ್ಡಾದ ಸುರಭಿಯ ನೆಣಗೆಚ್ಚಲು
ಕೂಸುಗಳ ಸಮಾನಾಂತರದ ಕೂಗುಗಳಿಗೆ ಸಾಂತ್ವನ ನೀಡುತ್ತವೆ.
ಪುತ್ರೋತ್ಸವವಾಗುತ್ತಿದ್ದಂತೆ ಒಳಗಲ್ಲಿ, ಇಲ್ಲಿ ಆಚೆ,
ಈ ಸನಾತನ ಅಸ್ವಸ್ಥ ವೃಕ್ಷದಡಿಯಲ್ಲಿ ಶಬ್ದವಾಗದಂತೆ
ಅರ್ಚಕರು, ಮೌಲ್ವಿಗಳು, ಪ್ರೀಸ್ಟರು ಗುಣ ತೋಡುತ್ತಾರೆ.
ಅಗ್ರಹಾರಯ್ಯ ನಿರ್ದೇಶಿಯಾಗಿ, ಜೊತೆಗೇ ಜಪಮಣಿ ಎಣಿಸುತ್ತ
ಮಂತ್ರೋಚ್ಚಾರದಲ್ಲಿ ರಾತ್ರಿ ದಾಟುತ್ತಾರೆ...
ಆಶ್ರಮ—ಇತ್ತ ಕತ್ತಲೂ ಅಲ್ಲದ, ಅತ್ತ ಬೆಳಕೂ ಅಲ್ಲದ
ಮುಹೂರ್ತದಲ್ಲಿ, ಸಾತ್ವಿಕ ತಟಸ್ಥತೆಯಿಂದ ಮಿಕಿಮಿಕಿ ನೋಡುತ್ತದೆ.
ಅಂದ ಹಾಗೆ ಮರೆತಿದ್ದೆ, ಇಂಥ ಪುಣ್ಯಕುಟಿ ಮೊನ್ನೆ ತಾನೇ
ಮಾರ್ಟ್‌ಗೇಜ್ ಆಗಿದೆಯಂತೆ ವಾಲ್‌ಸ್ಟ್ರೀಟಿನ ದಳ್ಳಾಳಿಯೊಬ್ಬನಿಗೆ.

★ ★ ★

(ಕವನ ಸಂಕಲನ: 'ನಾನೆಂಬ ಪರಕೀಯ')



'ಪರ್ಣಾಶ್ರಮ': ಬದುಕಿನ ಅಪಮೌಲ್ಯದ ವಿಪರ್ಯಸ್ತ ಚಿತ್ರಣ

♦ ಡಾ. ಎಚ್. ಎಸ್. ವೆಂಕಟೇಶ ಮೂರ್ತಿ

ವಿಖ್ಯಾತ ಕವಿಗಳಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ನವ್ಯಕಾವ್ಯ ಆರಂಭವಾದ ದಿನಗಳಿಂದಲೂ ಸಂತತವಾಗಿ ಕಾವ್ಯ ರಚಿಸುತ್ತಾ ಬಂದಿರುವವರು. ಆಧಿಕ್ಯದಿಂದ ತಮ್ಮ ಕಾವ್ಯದ ಗುಣಮಟ್ಟ ತಗ್ಗಿಸಿಕೊಳ್ಳದೆ ಎಚ್ಚರದಿಂದ ಕಾಯ್ದುಕೊಳ್ಳುತ್ತಲೂ ಬಂದವರು. ತಮ್ಮ ಜೊತೆಗಾರರು ಕಾವ್ಯದಿಂದ ಪ್ರಾರಂಭಿಸಿ, ಕಥೆ ಕಾದಂಬರಿ ನಾಟಕ ಕೊನೆಗೆ ಸಿನಿಮಾಗಳತ್ತ ತಿರುಗಿದರೂ ಇವರು ಮಾತ್ರ ಒಂದು ಮೊಂಡು ಹಠದಿಂದ ಎಂಬಂತೆ ಕಾವ್ಯದಲ್ಲೇ ತಮ್ಮ ಉತ್ಕೃಷ್ಟವನ್ನು ಸಾಧಿಸಲು ಸೆಣೆಸಿ ಸಫಲ ರಾದದ್ದನ್ನು ನೋಡುವಾಗ ಈ ಕವಿಯ ಬಗ್ಗೆ ಆಶ್ಚರ್ಯವೂ ಗೌರವವೂ ಉಂಟಾಗುತ್ತದೆ.

ಪ್ರಾರಂಭದಲ್ಲಿ ಸರಳವಾದ ಲಲಿತವಾದ ಲಯಭರಿತವಾದ ಕವನಗಳಿಂದ ತೊಡಗಿ ನಿಸಾರ್ ಅಹಮದ್ ಕನ್ನಡ ಕಾವ್ಯ ರಸಿಕರಿಗೆ ಪ್ರಿಯರಾದರು. ಈ ಜನಪ್ರಿಯತೆ ಈವರೆಗೂ ಈ ಕವಿಗೆ ಒಂದು ಸವಾಲಾಗಿಯೇ ಬಂದಂತಿದೆ. ಅವರ ಕಾವ್ಯದ ಯಾವುದೇ ಪ್ರಯೋಗವೂ ಇಂಥ ಸವಾಲಿನಿಂದ ನಿಯಂತ್ರಣಗೊಳ್ಳುತ್ತಾ ಬಂದಿತಾಗಿ ಈ ಕವಿ ತಮ್ಮ ಅನುಭವದ ಅಭಿವ್ಯಕ್ತಿಗೆ ಹೊಸ ಬಗೆಗಳನ್ನು ಕಂಡುಕೊಳ್ಳುವಾಗ ತಮ್ಮದೇ ಒಂದು ವಿಶಿಷ್ಟ ಮಧ್ಯವರ್ತಿ ಮಾರ್ಗವನ್ನು ಕಂಡುಕೊಳ್ಳಬೇಕಾಯಿತೆಂಬುದು ಸ್ಪಷ್ಟ. ಕ್ರಮೇಣ ಅವರ ವ್ಯಂಗ್ಯ ಮೊದಲಿಗಿಂತಲೂ ಹೆಚ್ಚು ಹೆಚ್ಚು ಸೋದ್ದಿಶ್ಯಭರಿತವಾಗುತ್ತದೆ.

ಪದ್ಯದ ಬಂಧ ಕ್ರಮ ಕ್ರಮೇಣ ಬಿಗಿಗೊಳ್ಳುತ್ತಾ ಹೋಗುತ್ತದೆ. ಭಾಷೆಯನ್ನು ವಿಶಿಷ್ಟವಾಗಿ ಕಸಿಮಾಡುತ್ತಾ ಒಂದು ಹದಕ್ಕೆ ಅವರು ಸಿದ್ಧಮಾಡುತ್ತಾರೆ. ಸುಲಭವಾಗಿ ಓದುಗರಿಗೆ ವಶವಾಗುವ ಲಾಲಿತ್ಯವಂತೂ ಅವರದ್ದೇ ಗುಣ. ಅವರ ಪ್ರಸಿದ್ಧ ಕವನ 'ಕುರಿಗಳು...' ಪದ್ಯದಿಂದಲೂ ಮಾತಿನ ಧಾರಾಳ ಬಳಕೆಯಿಂದಲೇ ಅರ್ಥವನ್ನು ಸಾಧಿಸುವುದು ಅವರ ವಿಶಿಷ್ಟ ಶೈಲಿಯಾಗಿಯೇ ಪರಿಣಮಿಸಿದೆ. ಅದು ತಪ್ಪೆಂದು ನನಗಂತೂ ಎಂದೂ ತೋರಿಲ್ಲ. ನಿಸಾರರು ನಿಸಾರರಂತೆ ಬರೆಯುತ್ತಾರೆ. ಹಾಗೇಕೆಂದು ಕವಿ ವಿವರಣೆ ಕೊಡುವ ಅಗತ್ಯವೂ ಇಲ್ಲ.

ನಿಸಾರರ ಹೊಸ ಪ್ರಯೋಗದ ಪ್ರಾತಿನಿಧಿಕ ಕವನವೆಂಬಂತೆ ಇರುವ 'ಪರ್ಣಾಶ್ರಮ' ಆ ಕಾರಣಕ್ಕಾಗಿಯೇ ನನಗೆ ಪ್ರಿಯವಾದ ಒಂದು ಕವನವಾಗಿದೆ. ಇಲ್ಲಿನ ನಿರೂಪಕ ಸ್ವಲ್ಪ ಮಾತಾಳಿಯಾದರೂ ಸುಸಂಬದ್ಧವಾಗಿ ಮಾತಾಡಬಲ್ಲವನಾಗಿದ್ದಾನೆ. ಪದ ಪ್ರಯೋಗದ ಎಚ್ಚರ, ಸಣ್ಣತನದ ಬಗ್ಗೆ ತಾತ್ಸಾರ, ಮುಗ್ಧ ನಿಷ್ಪಾಪಿ ಜನರ ನೋವಿನ ಬಗ್ಗೆ ಮಾನವೀಯ ಕಳಕಳಿ ಉಳ್ಳ ವ್ಯಕ್ತಿ ಈತ. ಕವನದ ಮೊದಲಿನಿಂದ ಕೊನೆಯವರೆವಿಗೆ ಗೇಲಿ ಮಾಡುವ ಒಂದು ವ್ಯಂಗ್ಯ ಧ್ವನಿ ಸ್ಥಾಯಿಯಾಗಿದೆ. ಆದರೆ ಈ ವ್ಯಂಗ್ಯ ಕೇವಲ ಛೇಡಿಕೆಯಲ್ಲೇ ವ್ಯಯವಾಗದೆ ಕರುಣೆಗೆ, ನೋವಿಗೆ, ದುರಂತಕ್ಕೆ ಕೂಡ ದನಿಯಾಗುವ ಬಗೆ ವಿಶಿಷ್ಟವಾಗಿದೆ.

ಕವನ ಕೇವಲ ಒದು ಪರ್ಣಾಶ್ರಮದ ವರ್ಣನೆ ಎನ್ನುವಂತಿಲ್ಲ. ಹೆಸರು 'ಪರ್ಣಾಶ್ರಮ' ಎಂದಿದ್ದರೂ ಇಡೀ ಕವನ ಪರ್ಣಾಶ್ರಮದ ಆಭಾಸವೇ ಆಗಿದೆ. ವ್ಯವಸ್ಥೆಯೊಂದನ್ನು ರಾಜಕೀಯ, ಧಾರ್ಮಿಕ, ಸಾಮಾಜಿಕ ಹಿನ್ನೆಲೆಯನ್ನೊಳಗೊಂಡಂತೆ ಬೆತ್ತಲು ಮಾಡುವ ಪ್ರಯತ್ನವಿಲ್ಲಿದೆ. ವ್ಯವಸ್ಥೆಯ ಪೊಳ್ಳು ಗಾಂಭೀರ್ಯವನ್ನು ಫ್ರೀವರ್ಸಿನ ಹುಸಿ ಗಾಂಭೀರ್ಯದ ಲಯಗಾರಿಕೆಯಿಂದ ತಮಾಷೆ ಮಾಡುತ್ತಾರೆ. ಸಂಸ್ಕೃತ ಪ್ರಯೋಗದ ಹೆಚ್ಚಳವೂ ಪ್ರಾಯಶಃ ಇದೇ ಕಾರಣಕ್ಕಾಗಿಯೇ ಬಂದಿದೆ. ಉದಾಹರಣೆಗೆ ಪದ್ಯದ ಆರಂಭದ ಭಾಗವನ್ನೇ ನೋಡಿ:

> 'ಅಗ್ರಹಾರಯ್ಯನವರ ಶಹರು ಮಧ್ಯದ ಮಾರ್ಕೆಟ್ ಬದಿಯ
> ಪ್ರಶಾಂತ, ಸರಳ, ಏರ್‌ಕಂಡಿಷನ್ಡ್ ಪರ್ಣಕುಟಿಗೊಮ್ಮೆ ಹೋಗಿ ಬನ್ನಿ;
> ಆ ಕಡೆಯಿಂದ ನೋಡಿದಿರೋ ದೇಗುಲ, ಈ ಕಡೆಯಿಂದ ಇಗರ್ಜಿ,
> ಊ ಕಡೆಯಿಂದ ಮಸೀದಿ; ಅಥವಾ ಒಂದೇ ಎತ್ತರದಲ್ಲಿ ನಿಂತು
> ಬೇರೆ ಬೇರೆ ಎತ್ತರದ ಮಂದಿ ವೀಕ್ಷಿಸಿದರೆ ಅವರವರ ಭಾವದಂತೆ
> ಪರ್ಣಾಶ್ರಮದ ಚಹರೆಯಾವಿರ್ಭಾವ.
>
> ಇನ್ನು ಆಸುಪಾಸಿನ ಪವಿತ್ರತಾ
> ವನ್ಯಶಾಂತಿ, ಸಾತ್ವಿಕಾಲಸ ಪರಿಸರ ಅವರ್ಣನೀಯ; ಅತ್ಯಾಧುನಿಕ
> ಸ್ವಯಂಚಾಲಿತ ಗೇಟು ದಾಟಿದೊಡನೆ—ಶುದ್ಧ ಯೂರಿಯಾ
> ಮಕ್ಕರಿಗಟ್ಟಲೆ ಮುಕ್ಕಿ ಕೊಬ್ಬಿದ ಅಪುಷ್ಪಿತ ಕಾಕಡಾ
> ಲತೆಗಳ ನಡುವೆ ಸುಭಿಕ್ಷ ಸೂಸುವ, ಒದ್ದರಷ್ಟೇ ಕುಪ್ಪಳಿಕೆ
> ಒಪ್ಪಿಸುವ ಮುಗ್ಧ ಹರಿಣ ಸಂಕುಲ.'

ಇಲ್ಲಿ ಬರುವ ಅಗ್ರಹಾರ, ಶಹರು ಮಧ್ಯೆ ಮತ್ತು ಮಾರ್ಕೆಟ್ ಬದಿ ಎಂಬ ಮಾತುಗಳನ್ನು ಹೊಂದಿಸುವುದರಲ್ಲೇ ಇರುವ ವಿಪರ್ಯಾಸದಿಂದಾಗಿ ಕವಿತೆ ತನ್ನ ಹೇಳಿಕೆಯ ಧಾಟಿಯನ್ನು ಖಚಿತ ಪಡಿಸುತ್ತದೆ. ಸರಳತೆಯ ಅಭಿನಯದಲ್ಲಿ ವೈಭವ ಪ್ರದರ್ಶನದ ಆಭಾಸಕ್ಕೆ ತಕ್ಕ ವಿಡಂಬನೆಯ ಮೊನಚೂ ಇಲ್ಲಿದೆ. ಈ ತೋರಿಕೆಯ ಪರ್ಣಾಶ್ರಮ ವರ್ತಮಾನ ಕಾಲಕ್ಕೆ ಸಂಬಂಧಿಸಿದ್ದು ಎಂಬುದನ್ನು ಧ್ವನಿಸುವುದಕ್ಕೆ ಸಂಸ್ಕೃತದೊಂದಿಗೆ ಸಮಕಾಲೀನ ಭಾಷಾ ಮಿಶ್ರಣವನ್ನು ಕವಿ ಬಳಸುವ ಕ್ರಮ ಸಾರ್ಥಕವೆನ್ನಿಸುತ್ತದೆ. ಮಾರ್ಗ ಮತ್ತು ದೇಸೀಯ ಈ ಬೆಸುಗೆ ಕುಮಾರವ್ಯಾಸನ ಶೈಲಿಯನ್ನು ನನಗೆ ನೆನಪಿಸುತ್ತಿದೆ:

> **‘ಆ ಮಹೀಶಕ್ರತುವರದೊಳು**
> **ದ್ದಾಮ ಮುನಿಜನರಚಿತ ಮಂತ್ರ**
> **ಸ್ತೋಮ ಪುಷ್ಕಲ ಪೂತ ಪುಣ್ಯಜಲಾಭಿಷೇಚನದ**
> **ಶ್ರೀಮುಡಿಗೆ ಕೈಯಿಕ್ಕಿದನು ವರ**
> **ಕಾಮಿನೀ ನಿಕುರುಂಬವಕಟಕ**
> **ಟಾ ಮಹಾಸತಿ ಶಿವ ಶಿವಾಯೆಂದೊದರಿತಲ್ಲಲ್ಲಿ.’**

ಅಂದರೆ, ಪರಂಪರೆಯಿಂದ ಕಲಿಯಬೇಕಾದದ್ದನ್ನು ಕವಿ ಹೇಗೆ ಕಲಿತು ತಮ್ಮ ಭಾಷಾ ಪಾಕವನ್ನು ಸಾಧಿಸಿದ್ದಾರೆ ಎಂಬುದನ್ನು ಇಂಥ ನೆನಪುಗಳು ಸೂಚಿಸುತ್ತವೆ. ಸಂಸ್ಕೃತ ಮತ್ತು ಕನ್ನಡವನ್ನು ಬೆಸೆಯುವ ಯತ್ನವನ್ನು ನಮ್ಮ ಮಹತ್ವದ ಕವಿಗಳೆಲ್ಲರೂ ಮಾಡಿದ್ದಾರೆ, ನಿಜ. ಆದರೆ ನಿಸಾರರ ಭಾಷಾಪ್ರಯೋಗ, ಅವರ ಕನ್ನಡದಲ್ಲಿ ಅನ್ಯಭಾಷಿಕ ಪದಗಳು ಧಾರಾಳವಾಗಿ ನುಗ್ಗುವುದರಿಂದ ತನ್ನಷ್ಟಕ್ಕೆ ವಿಶಿಷ್ಟವೆನ್ನಿಸುತ್ತದೆ. ಅಡಿಗರನ್ನು ಬಿಟ್ಟರೆ ಬೇರಾವ ಕವಿಯಲ್ಲು ಇಷ್ಟು ಸಮೃದ್ಧವಾದ ಸೋದ್ದಿಶ್ಯ ಭಾಷಾಸಂಕರ ಕಾಣುವುದಿಲ್ಲ.

ನಿಸಾರರ ‘ಪರ್ಣಾಶ್ರಮ’ದಲ್ಲಿ ಪ್ರಾಚೀನ ಪರ್ಣಾಶ್ರಮದ ಎಲ್ಲಾ ಸಾಮಗ್ರಿಯೂ ಅಧಃಪಾತಗೊಂಡ ನೆಲೆಯಲ್ಲಿ ಚಿತ್ರಿತಗೊಂಡಿರುವುದು ವಿಡಂಬನ ಕಾವ್ಯಕ್ಕೆ ಉಚಿತವಾಗಿಯೇ ಇದೆ. ಮಲ್ಲಿಕಾ ಲತೆಗಳು ಇಲ್ಲಿ ಕಾಕಡ ಲತೆಗಳಾಗಿವೆ. ಅವಾದರೋ ಮಕ್ಕರಿಗಟ್ಟಲೆ ಶುದ್ಧ ಯೂರಿಯ ಮುಕ್ಕಿ ಕೊಬ್ಬಿದ ಅಪುಷ್ಟಿತ ಕಾಕಡಾ ಲತೆಗಳು. ಆಶ್ರಮದಲ್ಲಿರುವ ಹರಿಣಗಳು ಒದ್ದರಷ್ಟೆ ಕುಪ್ಪಳಿಕೆ ಒಪ್ಪಿಸುವಂಥ ಮುಗ್ಧಹರಿಣ ಸಂಕುಲ. ಇನ್ನು ಇಲ್ಲಿರುವ ಹಸು ಕರುಗಳನ್ನು ನೋಡಬೇಕು. ‘ಚಿಮ್ಮುತ್ತ ಬಂದು ಸಂದರ್ಶಕರ ಕೈ ಜಪ್ತಿ ಮಾಡಿ, ಏನೂ ದಕ್ಕದಿದ್ದರೆ ಕಚ್ಚೆಗೇ ಬಾಯಿ ಹಾಕುವ ಭೋಳೇ ಎಳೆಗರುಗಳು! ಕರೆಯದಿದ್ದರೇನಂತೆ, ವಿಭೂತಿ ಭಸ್ಮಗಳ ಕಚ್ಚಾ ಸಾಮಗ್ರಿ ಯಥೇಚ್ಛ ತಯಾರಿಸುವ ಧರ್ಮಸೇವಾಭೀರು ಪುಣ್ಯಕೋಟಿಗಳು!’ ಇನ್ನು ಈ ಆಶ್ರಮದ ನವಿಲುಗಳು-ಕೋಗಿಲೆಗಳು-ಗಿಳಿಗಳು ಹೇಗಿವೆ ನೋಡಿ:

> **‘ಟಾಂಗಾ ನಿಂತೊಡನೆ ಶೇಂಗಾ ಖಾತ್ರಿಯಾಯ್ತೆಂದು ಮುಖ್ಬಾಲು**
> **ಕತ್ತರಿಸಿದ ಗರಿಯವಶೇಷ ಮರೆಸಿ ಪುಸಲಾಯಿಸುವ**
> **ಅಡ್ಡಕಸುಬಿ ಮಯೂರಗಳ ಬಳಿಯೇ ಭೂತಬಲಿಪುಷ್ಟ**
> **ಕಾಗೆಗಳಲ್ಲಿ ಬೆರೆತು ಕಾಕಾ ಕಲಿತ ಖಳಕಂಠ ಪರಪುಟ್ಟಗಳು;**

ಕುಲಗೆಟ್ಟ ಮತದಂತೆ ಎಣಿಕೆಗೆ ಬಾರದ ಬರೀ ಅಸ್ತಿತ್ವವಾದಿ
ಸ್ತುತಿಪಾಠಕ ಪಂಡಿತವಕ್ಕಿಗಳು.'

ಇನ್ನು ಈ ಆಶ್ರಮದಲ್ಲಿ ನಡೆಯುವ ಚಟುವಟಿಕೆಗಳು ಎಂಥವು? ಮದ್ಯ ತಯಾರಿಕೆ, ಯಾರಿಗೂ ಗೊತ್ತಾಗದಂತೆ ಗಾಂಜಾ ಸಸಿಗಳನ್ನು ಬೆಳೆಸುವುದು, ಯಜ್ಞ ಕುಂಡದಲ್ಲಿ(!) ಅಖಾದ್ಯಭಕ್ಷ್ಯಗಳ ತಯಾರಿಕೆ, ಗಂಡು ಹೆಣ್ಣುಗಳ ಸ್ವೈರ ವರ್ತನೆಗಳು—ಒಟ್ಟಿನಲ್ಲಿ, ಎಲ್ಲ ಬಗೆಯ ಅಸಾಮಾಜಿಕ ಚಟುವಟಿಕೆಗಳು! ರಾತ್ರಿಯಾದರೆ ಅದು ವಾನಪ್ರಸ್ಥಾಶ್ರಮವಲ್ಲ, ಪಾನಪ್ರಸ್ಥಾಶ್ರಮ! ಕಪ್ಪುಹಣವನ್ನು ಬಿಳಿ ಮಾಡುವ ಪ್ರಯೋಗಶಾಲೆ!

ಇಂಥ ಪರ್ಣಾಶ್ರಮದ ಮುಖ್ಯಸ್ಥ ಅಗ್ರಹಾರಯ್ಯ! ಅವನ ನಿರ್ದೇಶನದಲ್ಲಿ ಜಪ ಮಣಿ ಎಣಿಸುತ್ತಿರುವವರು ಅರ್ಚಕರು, ಮೌಲ್ವಿಗಳು, ಪ್ರೀಸ್ಟರು! ಕವಿತೆಯ ಕೇಂದ್ರ ವಾಗಿರುವ ಅಗ್ರಹಾರಯ್ಯನ ಈ ಚಿತ್ರವನ್ನು ನೋಡಿ:

'ಪರ್ಣಾಶ್ರಮ ಹೊಕ್ಕರೆ ಭಿತ್ತಿಗೆ
ಪ್ರಾಚೀನ ಶ್ಲೋಕರ ವರ್ಣರಂಜಿತ ಸಾಂಪ್ರತ ನಮೂನೆಗಳು.
ಹಾಗೆಯೆ ಪೂಜಾರಿಗೊಂದು, ಮೌಲ್ವಿಗೊಂದು, ಪ್ರೀಸ್ಟಿಗೊಂದು
ಅವರವರ ಸ್ಥಾನಮಾನಕ್ಕೆ, ಅಭ್ಯರ್ಚನಕ್ಕೆ ತಕ್ಕಂತೆ ಮೆತ್ತನೆಯ
ಸುಖಾಸನ; ಎದುರಿಗೇ, ಸಾಕ್ಷಾತ್ ಅಹಿಂಸಾವತಾರಿ ಕೃಷ್ಣಾಜಿನಸ್ಥ
ಅಗ್ರಹಾರೇಶ್ವರಾನಂದಜೀಯವರ ಅಕ್ರೂರ ಮುದ್ರೆ.'

ಪರ್ಣಾಶ್ರಮದ ವರ್ಣನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಪೊಳ್ಳು ವ್ಯವಸ್ಥೆಯನ್ನೇ ಕವಿ ಇಲ್ಲಿ ತೀವ್ರವಾಗಿ ವಿಡಂಬಿಸುತ್ತಿದ್ದಾರೆ ಅನ್ನಿಸುತ್ತದೆ. ಇದು ಒಂದು ಧಾರ್ಮಿಕ ವ್ಯವಸ್ಥೆ ಇರಬಹುದು: ರಾಜಕೀಯ ವ್ಯವಸ್ಥೆ ಇರಬಹುದು; ಸಾಹಿತ್ಯಕ ವ್ಯವಸ್ಥೆಯೂ ಇರಬಹುದು. ಒಟ್ಟಾರೆ ಕಲುಷಿತಗೊಂಡ ಆಧುನಿಕ ಸಮಾಜವನ್ನು (ಭಾರತದ ಹಿನ್ನೆಲೆಯಲ್ಲಿ) ನಿಸಾರ್ ಲೇವಡಿಗೆ ಒಳಪಡಿಸಿದ್ದಾರೆ. ಕೃತಕವೂ ಪೊಳ್ಳೂ ಸ್ವಾರ್ಥಪರವೂ ಆದ ಒಟ್ಟಾರೆ ವ್ಯವಸ್ಥೆ ಇಲ್ಲಿ ಕವಿಯ ಆಕ್ರೋಶಕ್ಕೆ ಗುರಿಯಾಗಿದೆ. ಅಸ್ತಿತ್ವವಾದವನ್ನು ಬಾಯಿಪಾಠ ಒಪ್ಪಿಸುವ ಪಂಡಿತವಕ್ಕಿಗಳು ನಮ್ಮ ಸಾಹಿತ್ಯಕ ಸಂದರ್ಭವನ್ನು ಸೂಚಿಸಿದರೆ, ಎಲ್ಲ ಧರ್ಮಗಳ ಪುರೋಹಿತಶಾಹಿಯ ವಿಡಂಬನೆ ನಮ್ಮ ಸಾಮಾಜಿಕ, ಧಾರ್ಮಿಕ ವಲಯವನ್ನು ಸೂಚಿಸುವಂತಿದೆ. 'ಇಂಥ ಪುಣ್ಯಕುಟಿ ಮೊನ್ನೆ ತಾನೆ ಮಾರ್ಟ್ಗೇಜ್ ಆಗಿದೆಯಂತೆ ವಾಲ್ ಸ್ಟ್ರೀಟ್‌ನ ದಳ್ಳಾಳಿಯೊಬ್ಬರಿಗೆ' ಎಂದು ಕವಿತೆ ಮುಕ್ತಾಯಗೊಳ್ಳುವುದು ಈ ದೇಶ ಶಕ್ತ ರಾಷ್ಟ್ರದ ಕೈಗೊಂಬೆಯಾಗುವ ಸೂಚನೆ ಕೊಡುವಂತಿದೆ. (ವಾಲ್ ಸ್ಟ್ರೀಟ್ ಅಮೇರಿಕಾದ ನ್ಯೂಯಾರ್ಕಿನಲ್ಲಿರುವ ಪ್ರಭುಶಕ್ತಿ, ಅರ್ಥಶಕ್ತಿ, ಧಾರ್ಮಿಕ ಶಕ್ತಿ ಮುಪ್ಪುರಿಗೊಂಡ ಕೇಂದ್ರಸ್ಥಳ.)

* * *

ಕವಿ ತಮ್ಮ ಉದ್ದೇಶಕ್ಕೆ ತಕ್ಕಂತೆ ಭಾಷೆಯನ್ನೂ ರೂಪಕ ಸಾಮಗ್ರಿಯನ್ನೂ ರೂಢಿಸಿರುವ ಪರಿ ಮೆಚ್ಚುವಂತಿದೆ. ಉದಾಹರಣೆಗೆ ಆಶ್ರಮದ ನಿಷ್ಪಾಪಿ ಪ್ರಾಣಿಗಳ ವರ್ಣನೆಯಲ್ಲಿ, ಪರಂಪರೆಯ ಹಳೆಯ ವರ್ಣನೆಗಳ ಹಿನ್ನೆಲೆಯಲ್ಲಿ ಒಂದು ವೈದೃಶ್ಯವನ್ನು

ಸೃಷ್ಟಿಸುವ ಜೊತೆಗೆ ವ್ಯಂಗ್ಯವು ಕರುಣೆಯನ್ನು ಪೋಷಿಸುವ ಬಗೆ ಕುತೂಹಲಕರವಾಗಿದೆ.

೧. ಒದ್ದರಷ್ಟೆ ಕುಪ್ಪಳಿಕೆ ಒಪ್ಪಿಸುವ ಮುಗ್ಧ ಹರಿಣ ಸಂಕುಲ.

೨. ಚಿಮ್ಮುತ್ತ ಬಂದು ಸಂದರ್ಶಕರ ಕೈ ಜಪ್ತಿ ಮಾಡಿ ಏನೂ ದಕ್ಕದಿದ್ದರೆ ಕಚ್ಚೆಗೇ ಬಾಯಿ ಹಾಕುವ ಭೋಳೇ ಎಳೆಗರುಗಳು. (ಇತ್ಯಾದಿ...)

ಪ್ರಸಿದ್ಧವಾದ ವರ್ಣನೆಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಸಿದ್ಧ ಪದಗಳನ್ನು ಸ್ವಲ್ಪವೇ ತಿರುಚಿ ದುರಂತವನ್ನು ಧ್ವನಿಸುವುದು ನಿಸಾರರ ಇನ್ನೊಂದು ಪ್ರಯತ್ನ.

೧. ಖಳಕಂಠ (ಕಲಕಂಠಕ್ಕೆ) ೨. ವಿಶಿಖ (ಶಿಖಿಕ್ಕೆ) ೩. ಪಾನ ಪ್ರಸ್ಥಾಶ್ರಮ (ವಾನ ಪ್ರಸ್ಥಾಶ್ರಮಕ್ಕೆ) ೪. ಕಲೋಪವಾಸಿ (ಕಲೋಪಾಸಿಗೆ) ೫. ಅಸ್ವಸ್ಥ ವೃಕ್ಷ (ಅಶ್ವತ್ಥ ವೃಕ್ಷಕ್ಕೆ) —ಈ ಬಗೆಯ ಪ್ರಯೋಗಗಳು ಉಚಿತ ಎಡೆಗಳಲ್ಲಿ ಅಪ್ರಯತ್ನಕವೆಂಬಷ್ಟು ಸಹಜವಾಗಿ ಹೊಂದಿಕೊಂಡು ತಮ್ಮ ಉದ್ದೇಶವನ್ನು ಸಾಧಿಸುತ್ತವೆ.

ಧರ್ಮ, ಸೇವೆ, ಸಂಪ್ರದಾಯ, ಪರಂಪರೆಗಳ ಹೆಸರಿನಲ್ಲಿ ಪೊಳ್ಳು ಮತ್ತು ಕ್ರೂರ ವ್ಯವಸ್ಥೆಗಳು ಸಾಮಾನ್ಯ ಮುಗ್ಧ ಜನತೆಯನ್ನು ಶೋಷಿಸುತ್ತಾ ತಮ್ಮ ಸ್ವಾರ್ಥ ಸಾಧಿಸುತ್ತಾ ಹೋಗುತ್ತವೆ. ಯುವ ಶಕ್ತಿಯನ್ನು ದಾರಿ ತಪ್ಪಿಸುತ್ತವೆ. ಕೊನೆಗೆ ಇಡೀ ನಾಡನ್ನೇ ಪರಭಾರೆ ಮಾಡುತ್ತವೆ. ಆಗ ಅನೇಕ ಬಡಪಾಯಿಗಳು ಸ್ವಧರ್ಮ ಸ್ವಂತಿಕೆ ಸ್ವಾತಂತ್ರ್ಯ ಲವಲವಿಕೆ ಗಳನ್ನು ಕಳೆದುಕೊಂಡು ಜಡವಾದ ತೋರಿಕೆಯ ವಸ್ತುಗಳಾಗಿ ಪರಿಣಮಿಸುತ್ತಾರೆ. ವ್ಯವಸ್ಥೆಗೆ ಜನತೆಯಲ್ಲಿ ಆಳವಾಗಿ ಬೇರೂರಿದ ನಂಬಿಕೆಗಳನ್ನೇ ಬಳಸಿಕೊಂಡು, ಅವುಗಳನ್ನೇ ಅವರ ಮುಂದಿಟ್ಟು, ಅವುಗಳ ರಕ್ಷಣೆಯಲ್ಲೇ ತಮ್ಮ ಸ್ವಾರ್ಥಮಯ ಅಕ್ಷಮ್ಯ ಬದುಕನ್ನು ಸಾಗಿಸುವುದು ಸುಲಭವಾಗಿಬಿಟ್ಟಿದೆ. (ಅಗ್ರಹಾರಯ್ಯನವರದ್ದು ಏರ್‌ಕಂಡೀಷನ್ಡ್ ಪರ್ಣಕುಟಿ ಎಂಬುದನ್ನು ಗಮನಿಸಿ). ಆಶ್ರಮದ ಹೊರ ವಲಯದ ವರ್ಣನೆಗಳನ್ನೇ ಕವನದ ಕೊನೆಯ ಅರ್ಧದಲ್ಲಿ ಅದರ ಆಂತರ್ಯಕ್ಕೆ ವರ್ಗಾಯಿಸುವ ಕವಿಯ ಪ್ರಯತ್ನ ಈ ದೃಷ್ಟಿಯಿಂದ ತುಂಬ ಉಚಿತವಾಗಿದೆ. ಆಶ್ರಮದ ಕತ್ತಲೆ ಕೋಣೆಯೊಳಗಿನ ಪಾಪಗಳೇ ಆಶ್ರಮದ ಹೊರ ವಲಯದಲ್ಲಿ ಸನಾತನ ಕರುಣಾ ಪರಂಪರೆಯನ್ನು ಎತ್ತಿ ಹಿಡಿಯುವ ಜೀವಂತ ಸುಪುತ್ರರಾಗುವ ವ್ಯಂಗ್ಯ ದಾರುಣವಾಗಿದೆ. 'ಕಗ್ಗತ್ತಲಲ್ಲಿ ಗಂಧ ತೇಯುವ ಕಾರ್ಮಿಕರ, ಸಾಲಂಕೃತ ಫಲಿತ ವಿತಂತುಗಳ' ಚಿತ್ರಗಳಂತೂ ಎದೆ ಹಿಂಡುವಂತಿದೆ. 'ಚಿನ್ನದುಂಗುರದ ಪರಿಣತ ಬೆರಳು ಹಸಿದ ಮಿದು ಹೊಟ್ಟೆಯನ್ನೊತ್ತಿ ತೀಡುತ್ತವೆ'—ಎಂಬ ಪ್ರತಿಮೆ ತನ್ನಷ್ಟಕ್ಕೇ ಭಯಾನಕವಾಗಿದ್ದು ಇಂತಹ ಡಂಭಾಚಾರದ ಪರ್ಣಾಶ್ರಮಗಳ ಬಗ್ಗೆ ರೋಷ ಜುಗುಪ್ಸೆ ಉಂಟಾಗುವಂತೆ ಮಾಡುತ್ತದೆ.

ಸಾವಧಾನವಾಗಿ ಸಂಪೂರ್ಣವಾಗಿ ಅಸಂದಿಗ್ಧವಾಗಿ ಅರ್ಥವನ್ನು ಸಾಧಿಸುವ ನಿಸಾರರ ಕಾವ್ಯಮಾರ್ಗ ಈ ಕವನದಲ್ಲಿ ತನ್ನೆಲ್ಲ ಸಾಧ್ಯತೆಗಳೊಂದಿಗೆ ಅಭಿವ್ಯಕ್ತವಾಗಿದೆ. ಇಂಥ ಪ್ರತ್ಯೇಕತೆಯಿಂದಾಗಿಯೇ ಶಕ್ತಿಶಾಲಿಗಳಾದ ಅನೇಕ ಕವಿಗಳ ನಡುವೆಯೂ ನಿಸಾರರು ಅನನ್ಯ ಕವಿಯಾಗಿ ವ್ಯಕ್ತಿವಿಶಿಷ್ಟತೆಯನ್ನು ಸಾಧಿಸುತ್ತಾರೆ.

ಸವತಿ ಮಕ್ಕಳ ಹಾಗೆ

ಸವತಿ ಮಕ್ಕಳ ಹಾಗೆ ಕಾಣಬೇಡವ್ವ;
ಸವತಿ ಮಕ್ಕಳ ಹಾಗೆ ಕಾಡಬೇಡ.

೧

ಹಾಲನುಣಿಸಿದ ಮೊಲೆಯ ಕೊಯ್ಯುವರು ಎಂಬೆ
ತಾಯ ಲಾಡಿಗೆ ಕೈಯ್ಯ ಹಚ್ಚುವರು ಎಂಬೆ—
ಮರುಧರೆಯ ಮರುಳರ ಕಡು ನೆಂಟರೆಂಬೆ
ಪಕ್ಕದ ಖೂಳನ ಏಜೆಂಟರೆಂಬೆ.
ಹಳೆ ಹೇಳಿಗೆಯ ನಂಜೆದೆಯ ತಳಿಗಳ ಜೊತೆಯಲ್ಲೆ,
ಹೊಸ ಪೀಳಿಗೆಯ ನಿರಪಾಯ ಏಳಿಗೆಯ ಸುಳಿಗಳನು
ದೂಡುವೆ ಸಂಶಯದ ಖೆಡ್ಡಕ್ಕೆ ತಾಯಿ
ಲೇಬಲ್ಲನಂಟಿಸುವೆ ಗಡ್ಡಕ್ಕೆ ತಾಯಿ.
ಸವತಿ ಮಕ್ಕಳ ಹಾಗೆ...

೨

ಧರ್ಮಾಂಧ ಧೂರ್ತರ ಎಡಗೈಯ ತುತ್ತಿಗೆ
ಕೊಬ್ಬಿರುವ ಮನೆಮುರುಕ ಮಂದಿಯ ಕತ್ತಿಗೆ
ಒರೆಯಾಗಿ ಇಹರಿವರು ಒಳಗೊಳಗೆ ಮೆತ್ತಗೆ;
ಕೊಯ್ಯಲು ಕುತ್ತಿಗೆ ಸರಿಯಾದ ಹೊತ್ತಿಗೆ
ಹೊಂಚಿಹರು ಎಂಬಂತೆ, ತಲೆ ಹೊಯ್ದು ಇಟ್ಟರೂ
ಸೋರೆ ಬುರುಡೆಯೆ ಎಂದು ಶಂಕಿಸುವೆ ನಮ್ಮವ್ವ—
ಚೆಲ್ಲಣರ ಎದೆಯಲ್ಲು ತಲ್ಲಣದ ದೆವ್ವ
ಕುಣಿಸುತ್ತ, ತಿರುಚುವೆ ಹೊಂಗನಸ ಹುವ್ವ.
ಸವತಿ ಮಕ್ಕಳ ಹಾಗೆ...

೩

ಹೆಚ್ಚು ಕಡಿಮೆಗಳಿಲ್ಲ ಇಂಡಿಯನ್ನರು ಒಂದೆ
ಹಲವು ಬಣ್ಣದ ಕುರಿಗಳಿಂದಾದ ಮಂದೆ
ಎಂದು ಲೋಕಕೆ ಸಾರಿ, ಪಶ್ಚಿಮರ ಮುಂದೆ

ಮೆರೆಸುವೆ ರಾಷ್ಟ್ರಪತಿ ದಾಡಿಗನ ಮಂಡೆ.
ಬಾಡಿಗೆಯ ಮನೆಗಿಲ್ಲಿ ಅಲೆದಿರಲು, ಮನೆಯೊಡೆಯ
ಹೆಸರಿಂದ ಕುಲವರಿತು, ಅಟ್ಟಲು ಕಾರಣ—
ಮುದಿ ತಾಯ ಮಡಿತನವನೊಡ್ಡುವೆ ಅಮ್ಮ,
ಬೇವರ್ಸಿಗಳ ಹಾಗೆ ಅಲೆಸುವೆ ಅಮ್ಮ.
ಸವತಿ ಮಕ್ಕಳ ಹಾಗೆ...

೪

ನಾವೂನು ಭಾರತಿಯ ಬಸಿರವರೆ ಎನ್ನುತ್ತ
ತಾಯೆಂಬ ಬಾಯಲ್ಲೆ ನಾಯುಣಿಸು ತಿನ್ನುತ್ತ
ಮೀರ್ ಸಾದಖರು ಮತ್ತೆ ನಮ್ಮಕ್ ಹರಾಮರು
ಮೊಘುಲಾಯಿ ದೌಲತ್ತು ಮೆರೆವ ಅನಾಮರು—
ಇದ್ದಾರು ಕೋಮಿನ ಕಂತ್ರಾಟುದಾರರು
ಮಾಸೂಮು ಮಂದಿಯ ನೆಮ್ಮದಿ ಚೋರರು.
ಮಾಡವ್ವ ಅಂಥವರ ಸುಳಿಯ ಸಫಾಯಿ;
ನಿಷ್ಪಾಪಿಗಳಿಗಾಗು ನಿರ್ಭಯದಾಯಿ.
ಸವತಿ ಮಕ್ಕಳ ಹಾಗೆ...

೫

ಬೆಳಕ ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ,
ಏನಾಟ ನಡೆದರೂ ನಿನ್ನಡಿಯ ಗಡಿಯಲ್ಲೆ.
ಮರಳಂತೆ ಸಣ್ಣಾಗಿ ಬಾಳ್ದೊರೆಯ ತಡಿಯಲ್ಲೆ
ಸುಡು ಬಿಸಿಲನುಂಡರೂ, ಕೈ ನೀಡಿನೆಡೆಯಲ್ಲೆ
ಹರಿವ ನೀರನು ಕಂಡು, ನೀರಡಿಕೆ ಉಲ್ಬಣಿಸಿ,
ನಿನ್ನ ಹಳಿಯುವ ಖೋಡಿ ತಿಳಿಗೇಡಿಗಳ ಹರಸಿ—
ತೆಗೆದುಕೊ ಇವರನ್ನೂ ಲೆಕ್ಕಕ್ಕೆ ತಾಯೆ;
ಪರದೆಯೆಳಿ ಇವರೆದೆಯ ದುಃಖಕ್ಕೆ ತಾಯೆ.
ಸವತಿ ಮಕ್ಕಳ ಹಾಗೆ...

★ ★ ★

(ಕವನ ಸಂಕಲನ: 'ಅನಾಮಿಕ ಆಂಗ್ಲರು')



‘ಸವತಿ ಮಕ್ಕಳ ಹಾಗೆ’:

ತಾರತಮ್ಯದ ತಲ್ಲಣಗಳ ತೀವ್ರತರ ತೋಡಿಕೆ

♦ ಪ್ರೊ. ಬರಗೂರು ರಾಮಚಂದ್ರಪ್ಪ

ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರು ಕನ್ನಡದ ಪ್ರಮುಖ ಕವಿಗಳಲ್ಲೊಬ್ಬರು ಎಂದು ಹೇಳಿದರೆ ಅದೊಂದು ಕ್ಲೀಷೆಯ ಮಾತಾದೀತು ಎಂಬ ಅರಿವು ನನಗಿದೆ. ಆದರೆ ನಾನು ಪ್ರಮುಖ ಕವಿಯೆಂದು ಹೇಳುವಾಗ ಅವರ ಕಾವ್ಯ ಸಾಧನೆಯೇ ಆಧಾರ, ಯಾವುದೇ ರಿಯಾಯಿತಿಯಲ್ಲ. ಹುಟ್ಟಿನಿಂದ ಮುಸ್ಲಿಮ ರಾಗಿದ್ದೂ ಕನ್ನಡದಲ್ಲಿ ಸೊಗಸಾಗಿ ಬರೆಯುತ್ತಾರೆಂದು ಅನೇಕರು ಹೇಳುವಾಗ, ಹೀಗೆ ಹೇಳುವವರ ಮನಸ್ಸಿನಲ್ಲಿ ಬೇರು ಬಿಟ್ಟ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು. ಮುಸ್ಲಿಮರೂ ಕನ್ನಡಿಗರೇ ಎಂಬ ಸಾಮಾನ್ಯ ಸತ್ಯವನ್ನು ಹೀಗೆ ಮಾತನಾಡು ವವರು ಮತ್ತು ಸ್ವತಃ ಮುಸ್ಲಿಮರು ಅರ್ಥಮಾಡಿಕೊಂಡರೆ ಇಂತಹ ಮಾತುಗಳು ಬರುವುದಿಲ್ಲ. ಆದರೇನು ಮಾಡುವುದು, ನಮ್ಮ ಸನ್ನಿವೇಶ ಅಷ್ಟು ಸರಳವಾಗಿಲ್ಲ. ಕನ್ನಡ ಮತ್ತು ಕನ್ನಡಿಗ—ಎಂಬ ಕಲ್ಪನೆಯನ್ನು ಮಾತೃಭಾಷೆಗೆ ಮಾತ್ರ ಸಂಕುಚಿತಗೊಳಿಸುವ ವಲಯವೊಂದು ನಮ್ಮಲ್ಲಿದೆ. ಕನ್ನಡ ಮಾತೃಭಾಷೆಯಲ್ಲದವರನ್ನು ಕನ್ನಡಿಗರೆಂದು ಕರೆಯುವಾಗ ಇಲ್ಲದ ‘ಔದಾರ್ಯ’ವನ್ನು ಪ್ರದರ್ಶಿಸಲಾಗುತ್ತಿದೆ. ರಾಜರತ್ನಂ ಮತ್ತು ಮಾಸ್ತಿಯವರ ಮಾತೃಭಾಷೆ ತಮಿಳು, ಬೇಂದ್ರೆಯವರ ಮಾತೃಭಾಷೆ ಮರಾಠಿ ಎಂದು ಸದ್ಯ ಯಾರೂ ತಕರಾರು ಮಾಡಿಲ್ಲ! ಅವರು ಭೌಗೋಳಿಕವಾಗಿ ಕರ್ನಾಟಕದವರಾಗಿರು ವುದು, ಮೊದಲಿನಿಂದಲೂ ಕನ್ನಡದ ಮೂಲಕವೇ ಅಭಿವ್ಯಕ್ತಿ

ಯನ್ನು ಸಾಧಿಸಿರುವುದು ಸಾಂಸ್ಕೃತಿಕವಾಗಿ ಮುಖ್ಯ ಸಂಗತಿ. ಮಾಸ್ತಿ, ಬೇಂದ್ರೆ, ರಾಜರತ್ನಂ ಮುಂತಾದವರ ಮಾತೃಭಾಷೆ ಅಥವಾ ಮನೆಮಾತು ಬೇರೆಯಿದ್ದರೂ ಅವರು ಕರ್ನಾಟಕದ ಭಾಷಾ ಅಲ್ಪಸಂಖ್ಯಾತರಲ್ಲ; ಧಾರ್ಮಿಕ ಅಲ್ಪಸಂಖ್ಯಾತರೂ ಅಲ್ಲ. ತಮಿಳುನಾಡು, ಮಹಾರಾಷ್ಟ್ರ, ಕೇರಳ, ಆಂಧ್ರ—ಮುಂತಾದ ರಾಜ್ಯಗಳಿಂದ ವಲಸೆ ಬಂದು ಇಲ್ಲಿ ನೆಲೆಸಿದವರು ಭಾಷಾ ಅಲ್ಪಸಂಖ್ಯಾತರೆಂಬ ಅಭಿಧಾನ ಪಡೆದಿದ್ದಾರೆ. ಇಂಥವರಿಗೆ ಮಾತೃ ಭಾಷೆಗೆ ಸಂಬಂಧಿಸಿದಂತೆ ಕೆಲವು ಸಂವಿಧಾನಾತ್ಮಕ ಸವಲತ್ತುಗಳೂ ಇರುತ್ತವೆ. ಕನ್ನಡದಲ್ಲಿ ಪ್ರಸಿದ್ಧರಾದ ಈ ಕವಿ-ಲೇಖಕರು ಸಂವಿಧಾನಾತ್ಮಕವಾಗಿ ಭಾಷಾ ಅಲ್ಪಸಂಖ್ಯಾತರೆಂದು ಕರೆಸಿಕೊಂಡವರಲ್ಲ. ಧಾರ್ಮಿಕವಾಗಿಯಂತೂ ಒಂದೇ ಧರ್ಮಕ್ಕೆ ಅರ್ಥಾತ್ ಹಿಂದೂ ಧರ್ಮಕ್ಕೆ ಸೇರಿದವರು.

ನಾನು ಇಷ್ಟೆಲ್ಲ ವಿವರಿಸಲು ಕಾರಣವಿದೆ: ಕೆ. ಎಸ್. ನಿಸಾರ್ ಅಹಮದ್ ಅವರು ಏಕಕಾಲಕ್ಕೆ ಭಾಷಾ ಅಲ್ಪಸಂಖ್ಯಾತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರು. ಹೀಗಾಗಿ ಇವರು ಕನ್ನಡದ ಒಬ್ಬ ಪ್ರಮುಖ ಕವಿ ಎಂಬ ಮಾತಿಗೆ ಅದರದೇ ಆದ ಮಹತ್ವವಿದೆ.

ನಿಸಾರ್ ಅಹಮದ್ ಅವರು 'ನಿತ್ಯೋತ್ಸವ' ಗೀತೆಯನ್ನು ಬರೆದು ಅದು ರಾಜ್ಯ ದಾದ್ಯಂತ ಪ್ರಸಿದ್ಧಿ ಪಡೆದ ಮೇಲೆ 'ನಿತ್ಯೋತ್ಸವ ಕವಿ'ಯೆಂದೇ ಹೆಸರಾದರು. ನವ್ಯಕಾವ್ಯದ ಸೆಳೆತದಲ್ಲೂ ತಮ್ಮದೇ ಆದ ಶೈಲಿಯೊಂದನ್ನು ರೂಪಿಸಿಕೊಂಡರು. ಅವರು ಬರೆದ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂಬ ಕವಿತೆಯನ್ನು ನಿಸಾರರ ಸಾಹಿತ್ಯ ಮತ್ತು ಸಾಮಾಜಿಕ ಸಂದರ್ಭಗಳೆರಡಕ್ಕೂ ಅನ್ವಯಿಸಬಹುದು.

'ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೇ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ'

—ಎಂದು ಬರೆಯುವ ಕವಿಯ ಪರಕೀಯ ಪ್ರಜ್ಞೆಯ ತಳಮಳವು ಇತರೆ ನವ್ಯ ಕವಿಗಳ ಇದೇ ಭಾವಕ್ಕಿಂತ ಭಿನ್ನವಾದುದು. ಈ ನೆಲದಲ್ಲಿ ಬೇರೊತ್ತಿ ಬೆಳೆದರೂ ಪರಕೀಯ ಪ್ರಜ್ಞೆಗೆ ತುತ್ತಾಗುವ ಸಂಕಟವನ್ನು ನಿಸಾರ್ ಅಹಮದ್ ಎದುರಿಸಿದ್ದಾರೆ. ಮುಸ್ಲಿಮರಾದ್ದರಿಂದ ಅನೇಕ ಸವಲತ್ತು ಸಿಗುತ್ತವೆಯೆಂದು ಹುಸಿ ಪ್ರಚಾರ ಮಾಡುವ ಮತ್ತು ಧರ್ಮ-ಧರ್ಮಗಳ ನಡುವೆ ವಿಷ ಬೀಜವನ್ನು ಬಿತ್ತುವ ಕೆಲವರ ಕೃತ್ಯಕ್ಕೆ ಮನ್ನಣೆ ದೊರಕತೊಡಗಿದಂತೆ ಧಾರ್ಮಿಕ ಅಲ್ಪಸಂಖ್ಯಾತರು ಎದುರಿಸುವ ಸಮಸ್ಯೆ ಆಳವಾದುದು. ಇಂತಹ ಸಂದರ್ಭದಲ್ಲಿ ಸಂವೇದನಾಶೀಲ ಮನಸ್ಸಿಗೆ ಆಗುವ ಘಾಸಿ ಅಷ್ಟಿಷ್ಟಲ್ಲ. ಒಬ್ಬ ಮನುಷ್ಯನ ವಿಶ್ವಾಸಾರ್ಹತೆ ಮತ್ತು ಪ್ರಾಮಾಣಿಕತೆಯನ್ನೇ ಪ್ರಶ್ನಿಸುವ ಪ್ರವೃತ್ತಿಯಿಂದ ಮೂಡಿದ ಮಾನಸಿಕ ಗಾಯಗಳಿಗೆ ಏನೆಂದು ಸಾಂತ್ವನ ಹೇಳುವುದು? ರಾಷ್ಟ್ರೀಯತೆಯನ್ನು ಏಕ ಧರ್ಮ ಮತ್ತು ಏಕ ಸಂಸ್ಕೃತಿಗೆ ಸೀಮಿತಗೊಳಿಸುವ ಮೂಲಭೂತವಾದಿ ಮನೋಧರ್ಮದಿಂದ ರಾಷ್ಟ್ರೀಯತೆಯ ಕಲ್ಪನೆ

ಯನ್ನೇ ಅವಮಾನಿಸಿದಂತಾಗುತ್ತದೆ. ಸುತ್ತಮುತ್ತ ಹರಿದಾಡುವ ಅನುಮಾನದ ಕಣ್ಣುಗಳು ಕವಿ ಮನಸ್ಸನ್ನು ಕಳವಳಕ್ಕೀಡುಮಾಡುತ್ತವೆ. ನಿಸಾರ್ ಹೀಗೆ ಬರೆಯುತ್ತಾರೆ:

'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನಿಯತ್ತು ಹಕ್ಕು,
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನು
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.'

(ನಿಮ್ಮೊಡನಿದ್ದೂ ನಿಮ್ಮಂತಾಗದೆ)

ನಿಸಾರರ ಕವಿತೆಯ ಸಾಲುಗಳಲ್ಲಿ ಕಾಣುವ ಸಂಕಟ ಅಕ್ಷರಗಳನ್ನು ಮೀರಿದ್ದು. ಅಂತಃಕರಣಕ್ಕೆ ಸಂಬಂಧಿಸಿದ್ದು. ಕಲಕಿದ ಅಂತಃಕರಣಕ್ಕೆ ಅನ್ನಿಸುತ್ತದೆ, 'ಸವತಿ ಮಕ್ಕಳ ಹಾಗೆ' ತಮ್ಮನ್ನು ನೋಡಬಾರದು—ಎಂದು. ಇದು ಕಳಕಳಿಯ ಕರುಳಿನ ದನಿ.

ಮುಸ್ಲಿಮರನ್ನು ವಿನಾಕಾರಣ ಅನುಮಾನಿಸುವ ಮತ್ತು ಅವಮಾನಿಸುವ ಅಮಾನವೀಯ ಸಂದರ್ಭವನ್ನು ಭರತ ಮಾತೆಗೆ ನಿವೇದಿಸಿಕೊಳ್ಳುವ ವಿಧಾನದಲ್ಲಿ 'ಸವತಿ ಮಕ್ಕಳ ಹಾಗೆ' ಕವಿತೆಯನ್ನು ಕಟ್ಟಲಾಗಿದೆ.

'ಹಾಲನುಣಸಿದ ಮೊಲೆಯ ಕೊಯ್ಯುವರು ಎಂಬೆ
ತಾಯ ಲಾಡಿಗೆ ಕೈಯ್ಯ ಹಚ್ಚುವರು ಎಂಬೆ—
ಮರುಧರೆಯ ಮರುಳರ ಕಡು ನೆಂಟರೆಂಬೆ
ಪಕ್ಕದ ಖೂಳನ ಏಜೆಂಟರೆಂಬೆ.

....

ದೂಡುವೆ ಸಂಶಯದ ಖೆಡ್ಡಕ್ಕೆ ತಾಯಿ
ಲೇಬಲ್ಲ ನಂಟಿಸುವೆ ಗಡ್ಡಕ್ಕೆ ತಾಯಿ.'

(ಸವತಿ ಮಕ್ಕಳ ಹಾಗೆ)

ಈ ಸಾಲುಗಳಲ್ಲಿರುವ ನಿಸಾರರ ನೋವಿಗೆ ಸಾರ್ವತ್ರಿಕ ಸ್ವರೂಪವಿದೆ. ಯಾರೋ ಕೆಲವು ಕಿಡಿಗೇಡಿಗಳ ಕೆಲಸಕ್ಕೆ ಇಡಿಯಾಗಿ ಒಂದು ಧರ್ಮದವರನ್ನು ದೂಷಿಸುವ, ಸಂಶಯದಿಂದ ನೋಡುವ, ಪರಕೀಯರನ್ನಾಗಿಸುವ ದೃಷ್ಟಿಕೋನವನ್ನು ನಿಸಾರರು ತಮ್ಮ ನಿವೇದನೆಯ ನೋವಿನಲ್ಲಿ ಪ್ರತಿರೋಧಿಸುತ್ತಾರೆ. 'ಸವತಿ ಮಕ್ಕಳ ಹಾಗೆ' ಕವಿತೆಯಲ್ಲಿರುವುದು ಅಸಹಾಯಕತೆಯಲ್ಲ; ಸಂಕಟದ ಸಂವೇದನೆ; ಪ್ರತಿರೋಧಾತ್ಮಕ ನಿವೇದನೆ. ಇಷ್ಟಾಗಿಯೂ ಕವಿಗೆ ಕೆಲವರ ಕಿಡಿಗೇಡಿತನದ ಅರಿವಿದೆ. 'ಧರ್ಮಾಂಧ ಧೂರ್ತರ ಎಡಗೈಯ ತುತ್ತಿಗೆ | ಕೊಬ್ಬಿರುವ ಮನೆಮುರುಕ ಮಂದಿಯ ಕತ್ತಿಗೆ | ಒರೆಯಾಗಿ ಇಹರಿವರು ಒಳಗೊಳಗೆ ಮೆತ್ತಗೆ.' ಆದರೆ ಇಂಥವರ 'ತಲೆ ಹೊಯ್ದು ಇಟ್ಟರೂ ಸೋರೆ ಬುರುಡೆಯೆ

ಎಂದು ಶಂಕಿಸುವೆ ನಮ್ಮವ್ವ' ಎನ್ನುವ ಕವಿ ಸಮಕಾಲೀನ ಸಂದರ್ಭದಲ್ಲಿ ಸಂಶಯವೇ ಕಣ್ಣು ಕಿವಿಯಾಗುತ್ತಿರುವ ಅಪಾಯವನ್ನು ಅನಾವರಣಗೊಳಿಸುತ್ತಾರೆ.

> 'ಮೀರ್ ಸಾದಖರು ಮತ್ತು ನಮ್ಮಕ್ ಹರಾಮರು
> ಮೊಘಲಾಯಿ ದೌಲತ್ತು ಮೆರೆವ ಅನಾಮರು—
> ಇದ್ದಾರು ಕೋಮಿನ ಕಂತ್ರಾಟುದಾರರು
> ಮಾಸೂಮು ಮಂದಿಯ ನೆಮ್ಮದಿ ಚೋರರು'

ಎಂಬ ತಿಳಿವಳಿಕೆಯಿಂದ ಕೂಡಿದ ಕವಿಯ ಕಾಳಜಿ, ಕಡೆಗೆ ಕೇಳಿಕೊಳ್ಳುವುದು ಹೀಗೆ: 'ಮಾಡವ್ವ ಅಂಥವರ ಸುಳಿಯ ಸಫಾಯಿ | ನಿಷ್ಪಾಪಿಗಳಿಗಾಗು ನಿರ್ಭಯದಾಯಿ.' ಮುಂದುವರಿದು ಕವಿ ಘೋಷಿಸುತ್ತಾರೆ: 'ಬೆಳಕು ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ | ಏನಾಟ ನಡೆದರೂ ನಿನ್ನಡಿಯ ಗಡಿಯಲ್ಲೆ.' ಕೊನೆಗೆ ಬೇಡಿಕೊಳ್ಳುತ್ತಾರೆ: 'ನಿನ್ನ ಹಳಿಯುವ ಖೋಡಿ ತಿಳಿಗೇಡಿಗಳ ಹರಸಿ | ತೆಗೆದುಕೊ ಇವರನ್ನೂ ಲೆಕ್ಕಕ್ಕೆ ತಾಯೆ | ಪರದೆಯೆಳಿ ಇವರೆದೆಯ ದುಃಖಕ್ಕೆ ತಾಯೆ.'

ಕಾವ್ಯಶಕ್ತಿಯ ದೃಷ್ಟಿಯಿಂದ ನೋಡಿದರೆ ನಿಸಾರ್ ಅಹಮದ್ ಇದಕ್ಕಿಂತ ಅತ್ಯುತ್ತಮ ಕವಿತೆಗಳನ್ನು ರಚಿಸಿದ್ದಾರೆ. ಆದರೆ ನಿಸಾರ್ ನಮ್ಮ ವಿಶಿಷ್ಟ ಸಾಮಾಜಿಕ ಸಂದರ್ಭದ ಸಂಕಟವನ್ನು ಸಾಚಾತನದಿಂದ ನೋವಿನ ನಿಷ್ಠುರತೆಯಲ್ಲಿ ಕಟ್ಟಿಕೊಟ್ಟಿರುವ ಕಾರಣಕ್ಕೆ 'ಸವತಿ ಮಕ್ಕಳ ಹಾಗೆ' ಕವಿತೆ ಮುಖ್ಯವಾಗುತ್ತದೆ. 'ಹೆಚ್ಚು ಕಡಿಮೆಗಳಿಲ್ಲ ಇಂಡಿಯನ್ನರು ಒಂದೆ | ಹಲವು ಬಣ್ಣದ ಕುರಿಗಳಿಂದಾದ ಮಂದೆ' ಎಂಬ ಸರಳ ಸತ್ಯವನ್ನು ಸರಳವಾಗಿಯೇ ಹೇಳಲಾಗಿದೆ. ಇಂತಹ ಸಂದಿಗ್ಧಕ್ಕೆ ದೂಡಿದ ಧಾರ್ಮಿಕ ಮೂಲಭೂತ ವಾದಿಗಳ ಬಗ್ಗೆ ಪ್ರತಿರೋಧ ಒಡ್ಡಲಾಗಿದೆ. ಕವಿಯ ಸಮತೋಲನ ಸ್ಥಾಯಿಯಾಗಿರುವುದು ಕವಿತೆಯ ವಿಶೇಷ ಗುಣವಾಗಿದೆ. ಸಮಚಿತ್ತದ ಸಂಕಟಕ್ಕೆ ಸ್ವತಃ ಮುಸ್ಲಿಂ ಮೂಲಭೂತ ವಾದವನ್ನೂ ವಿಮರ್ಶಿಸಲು ಸಾಧ್ಯವಾಗಿದೆ. ಹಾಗೆ ನೋಡಿದರೆ ಯಾವುದೇ ಧರ್ಮದಲ್ಲಿ ಮೂಲಭೂತ ವಾದಿಗಳ/ಕೋಮುವಾದಿಗಳ ಸಂಖ್ಯೆ ಕಡಿಮೆ. ಆದರೆ ಅವರ ಅಬ್ಬರ ಹೆಚ್ಚು; ದುಷ್ಪರಿಣಾಮ ಅಗಾಧ ಹಾಗೂ ಅಪಾಯಕಾರಿ.

'ಅನಾಥರು' ಎಂಬ ಕವಿತೆಯಲ್ಲಿ ನಿಸಾರರು ಎರಡು ಬಗೆಯ ಅನಾಥರನ್ನು ಚಿತ್ರಿಸುತ್ತಾರೆ. 'ದೇಶಭಕ್ತ'ರನ್ನು ಉದ್ದೇಶಿಸಿ ಹೇಳುವ ನಿರೂಪಣಾ ತಂತ್ರವನ್ನು ಬಳಸಿರುವ ಈ ಕವಿತೆಯು ಆರಂಭದಲ್ಲಿ ಅನಾಥ ಮಕ್ಕಳ ಸ್ಥಿತಿಯನ್ನು ಪ್ರಸ್ತಾಪಿಸುತ್ತದೆ. ಕವಿತೆಯ ನಾಯಕ ದೇಶ, ಸಂಸ್ಕೃತಿ, ಭವಿಷ್ಯಗಳ ಬಗ್ಗೆ ಭಾಷಣವನ್ನು ಬಿಗಿದು ರೂಮಿಗೆ ಮರಳುತ್ತಾನೆ. ಆಗ ಏನಾಯಿತು ಗೊತ್ತೆ?

> 'ರೂಮಿಗೆ ಬಂದೊಡನೆ ನಾನೇ ಗಳಗಳನೆ ಅತ್ತೆ
> ನೆಂದ ಮೇಲೆ ಇನ್ನು ನಿನ್ನನ್ನ ಕೇಳಬೇಕೆ? ಅಳುವುದು, ಅದೂ
> ದೇಶಕ್ಕಾಗಿ ಅಳುವುದು ಬರೀ ನಿನ್ನ, ನಿನ್ನಂಥವರ
> ಹಕ್ಕೆಂದು ನಂಬಿರುವ ನೀನು ನಾನತ್ತೆನೆಂದರೆ
> ನಂಬಲಾರೆ. ನಂಬಿದರೂ ಆಶ್ಚರ್ಯ ಪಡದಿದ್ದರೆ

ಅದೇ ನನಗೆ ಮಹದಾಶ್ಚರ್ಯ. ಹೌದು, ದೇಭ,
ನನ್ನಂಥವರೂ ಅಳುತ್ತಾರೆ, ಆದರೆ ಮರೆಯಲ್ಲಿ.
ಯಾರಾದರೂ ಕಣ್ಣು ಕೆಂಪಾದದ್ದು ಕಂಡು ವಿಚಾರಿಸಿದರೆ
ಧೂಳು ಬಿತ್ತೆನ್ನುತ್ತಾರೆ.'

(ಅನಾಥರು)

ಈ ಸಾಲುಗಳು ಸ್ವಯಂಸ್ಪಷ್ಟವಾಗಿವೆ. ಕವಿತೆಯ ಆರಂಭದಲ್ಲಿ ಬರುವ ಅನಾಥ ಮಕ್ಕಳ ಸ್ಥಿತಿಯನ್ನು ಕಂಡು ಅಳುವ ಕವಿತೆಯ ನಾಯಕನ 'ಅನಾಥ ಪ್ರಜ್ಞೆ'ಗೆ ವಿಶೇಷ ಅರ್ಥವಿದೆ. ಒಂದು ಕಡೆ ಮಕ್ಕಳು ಅನಾಥರು, ಇನ್ನೊಂದು ಕಡೆ ಅವರ ಸ್ಥಿತಿಯನ್ನು ಅನುಭವಿಸಿದ ನಾಯಕನ ಅನಾಥ ಪ್ರಜ್ಞೆಯ ಅಳು. ಈ ಅನಾಥ ಪ್ರಜ್ಞೆಯ ಅಳು ಅಲ್ಪಸಂಖ್ಯಾತರ ಮನದಾಳದ ಮೌನದ ಮಾತು. ಆದರೆ ದೇಶಭಕ್ತಿಯನ್ನು ಗುತ್ತಿಗೆ ತೆಗೆದುಕೊಂಡಿರುವವರು ಇವರ ಅಳುವನ್ನು ನಂಬುತ್ತಾರೆಯೆ? ಈ ಪ್ರಶ್ನೆ ಕಾಡಿಸಿದಾಗ ಹುಟ್ಟಿದ್ದು ಈ ಕವಿತೆ. ನಂಬದವರ ನಡುವೆ ಮರೆಯಲ್ಲೇ ಅಳುವ, ಕೇಳಿದವರಿಗೆ ಕಣ್ಣಲ್ಲಿ ಧೂಳು ಬಿತ್ತೆನ್ನುವ ಯಾತನೆ ಅನುಭವಿಸಿದವರಿಗೇ ಗೊತ್ತು. ಏಕಕಾಲಕ್ಕೆ ದೇಶದ ದುಃಸ್ಥಿತಿ, ಕೆಲ ದೇಶಭಕ್ತರ ಸೋಗಲಾಡಿ ಮನಃಸ್ಥಿತಿ ಮತ್ತು ಅಲ್ಪಸಂಖ್ಯಾತರ ಅನಾಥ ಪ್ರಜ್ಞೆಯನ್ನು ನೇರವಾಗಿ, ನವುರಾಗಿ ನಿರೂಪಿಸುವ ಕವಿತೆಯಿದು.

ಕಡೆಯದಾಗಿ, ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಮಾತುಗಳನ್ನು ಉಲ್ಲೇಖಿಸುತ್ತೇನೆ:

'ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯಬೇಕಾದ ನನ್ನಂಥ ಕೃತಿಕರ್ತನಿಗೆ ಅನುಕೂಲಗಳೂ ಇವೆ: ಅಡಚಣೆಗಳೂ ಇವೆ. ಇಂಥ ಪರಿಸ್ಥಿತಿಯಲ್ಲಿ ಕಾವ್ಯರಚನೆಯನ್ನು ಮಾಡ ಬೇಕಾದ ಲೇಖಕ ಬದುಕಿನ ಸರ್ವಗ್ರಾಸಿಯಾದ ಒಟ್ಟಾರೆ ಸಾರ್ವತ್ರಿಕ ಅನುಭವಗಳನ್ನು ಕೈ ಬಿಟ್ಟು ಬಡವನಾಗುವ ಸಂಭವವೇ ಅಧಿಕ. ಅಂಥ ಅನುಭವಗಳನ್ನು ಉಳಿದು ಸಂಸ್ಕೃತಿ ವಿಭಿನ್ನತೆಯ, ಅಲ್ಪಸಂಖ್ಯಾತತೆಯ ಅರಿವನ್ನು ಮಾತ್ರ ಗಾಢಗೊಳಿಸಿಕೊಂಡು, ಮೂರು ಹೊತ್ತು ಅವುಗಳನ್ನೇ ವಿಚಾರ ಮಾಡುತ್ತ, ಕಾವ್ಯದಲ್ಲಿ ಅವನ್ನು ಹೇಗಾದರೂ ಎಳೆದು ತರಬೇಕೆಂದು ಹೂಟ ಹೂಡಿದರೆ, ಅಂಥ ಕಾವ್ಯ ರಚನೆ ಕೃತಕವಾಗುತ್ತದೆ, ಅಸಮಗ್ರ ವೆನಿಸುತ್ತದೆ. ಸರ್ವಜನ ಸಮಾನವಾದ ಸರ್ವಾಂಗೀಣ ಜೀವನಾನುಭವದ ಸಂತೋಷ ಸಂಭ್ರಮ ಬೆರಗುಗಳಿಂದ ವಂಚಿತವಾಗುತ್ತದೆ.

'ಆಗ ಕವಿ ತನ್ನ ದೈನಿಕ ಕಷ್ಟಕೋಟಲೆ ಮತ್ತು ಸಮಸ್ಯೆಗಳ ಮೇಲೆ, ಬಹುಸಂಖ್ಯಾತ ವ್ಯವಸ್ಥೆಯಿಂದ ಆಗುತ್ತಿರುವ ಅನ್ಯಾಯದ ಮೇಲೆ ಸದಾ ಕಾವು ಕೂತು ಹತಾಶೆಯ ಏಕರೂಪತೆಯ ತತ್ತಿಗಳನ್ನು ತಯಾರಿಸುತ್ತಾ ಹೋಗುತ್ತಾನೆ. ವ್ಯಕ್ತಿತ್ವದಲ್ಲಿ ಸಂಕುಚಿಸುತ್ತಾ ಹೋಗಿ ಗೋಳುಕರೆ, ಪ್ರತಿಭಟನೆ, ಆಕ್ರೋಶಗಳನ್ನೇ ಕಾರುವ ಯಾಂತ್ರಿಕ ಕ್ರಿಯೆಯ ಕೈಗೊಂಬೆಯಾಗುತ್ತಾನೆ. ಅವನು ಹಲವನ್ನು ಬರೆದರೂ ವೈವಿಧ್ಯ ವ್ಯಕ್ತಪಡದು. ಒಂದೇ ಪಾತ್ರ ಭಿನ್ನ ವೇಷ ಧರಿಸಿ ಅಡ್ಡಾಡಿದಂತೆ ಬೇಸರ, ಜಿಹಾಸೆಗಳಿಗೆ ನಿಮಿತ್ತವಾಗುತ್ತದೆ. ಎಂದೇ,

ಸಂಸ್ಕೃತಿ ವಿಭಿನ್ನತೆಯ ಆಶಯವುಳ್ಳ ಕವನಗಳ ಜೊತೆಜೊತೆಯಲ್ಲೇ, ಸರ್ವ ಮಾನವರಿಗೂ ಸಮನಾದ ಅನುಭವಗಳನ್ನು ತೋಡಿಕೊಳ್ಳುವ ರಚನೆಗಳೂ ನನ್ನ ಕೃತಿಗಳಲ್ಲಿ ಧಂಡಿಯಾಗಿವೆ.'

('ಸಮಗ್ರ ಕವಿತೆಗಳು'—ಮುನ್ನುಡಿಯಿಂದ)

ಕವಿಯೊಬ್ಬ ಸರ್ವಮಾನವರಿಗೂ ಸಲ್ಲಬೇಕಾದ ಆದರ್ಶದ ಆಶಯಗಳನ್ನು ಅಭಿವ್ಯಕ್ತಿಸಬಹುದು. ಆದರೆ 'ಸರ್ವಮಾನವರಿಗೂ ಸಮನಾದ ಅನುಭವಗಳನ್ನು' ಅಭಿವ್ಯಕ್ತಿಸುವುದು ಸಾಧ್ಯವೆ? ಎಂಬುದು ಚರ್ಚೆಯ ವಿಷಯ. ಇಲ್ಲಿ 'ಅನುಭವ' ಮತ್ತು 'ಆದರ್ಶದ ಆಶಯ' ಎಂಬ ಪದಗಳನ್ನು ಗಮನಿಸಬೇಕು. ಎರಡೂ ಪ್ರತ್ಯೇಕಾರ್ಥವನ್ನು ತಿಳಿಸುತ್ತವೆ. 'ಸರ್ವ ಮಾನವರ ಅನುಭವಗಳನ್ನು' ಅಭಿವ್ಯಕ್ತಿಸಹೋಗುವ ಕವಿ ಸಹ 'ಯಾಂತ್ರಿಕ ಕ್ರಿಯೆಯ ಕೈಗೊಂಬೆಯಾಗುತ್ತಾನೆ'. ಆದರೆ ಸರ್ವಮಾನವ ಸಮಾನತೆಯ ಆಶಯವನ್ನು ಅಂತರ್ಗತ ಮಾಡಿಕೊಳ್ಳುವುದು ಯಾಂತ್ರಿಕವೂ ಅಲ್ಲ; ಕೈಗೊಂಬೆಯೂ ಅಲ್ಲ. 'ಸಂಸ್ಕೃತಿ ವಿಭಿನ್ನತೆಯ ಅಲ್ಪಸಂಖ್ಯಾತತೆಯ ಅರಿವು' ಮತ್ತು 'ಸರ್ವಜನ ಸಮಾನವಾದ ಸರ್ವಾಂಗೀಣ ಜೀವನಾನುಭವ'ಗಳು ವೈಪರೀತ್ಯಗಳಾಗದಿದ್ದರೆ ಸಾಕು. ಒಂದು ದೃಷ್ಟಿಯಿಂದ ನಿಸಾರ್ ಅಹಮದ್ ಅವರು 'ಸರ್ವಮಾನವರಿಗೂ ಸಮನಾದ ಅನುಭವಗಳನ್ನು' ಕುರಿತು ಹೆಚ್ಚಾಗಿ ಮಾತನಾಡುವುದು ಸಹ ಅಲ್ಪಸಂಖ್ಯಾತರ ಅನಾಥ ಪ್ರಜ್ಞೆಯ ಪ್ರತಿಫಲನವೇ ಆಗಿದೆ; ಇದು 'ಸವತಿ ಮಕ್ಕಳ ಹಾಗೆ' ಸದಾ ಬಾಳಬೇಕಾಗಬಹುದೆಂಬ ಅಳುಕಿನ ಅನಾವರಣವಾಗಿರುವ ಸಾಧ್ಯತೆಯೂ ಇದೆ.

ಅದೇನೇ ಇರಲಿ, ನಿಸಾರ್ ಅವರ ಸವತಿ ಮಕ್ಕಳ ಸಂವೇದನೆಯ ಸಂಕಟಕ್ಕೆ ವಿಶಿಷ್ಟ ಸ್ಥಾನವಿದೆ.

ಭಾವ ಅಥವಾ ಲೋಕಾನುಭವವನ್ನು ಕವಿ ಸಂವೇದಿಸಿ ತನ್ನ ಕೃತಿಯಲ್ಲಿ ದಾಖಲಿಸುವ ಕಲಾನುಭವ ಒಂದು ಅರ್ಥದಲ್ಲಿ ಸೀಮಿತ. ಅದಕ್ಕೊಂದು ನಿರ್ದಿಷ್ಟ ಚೌಕಟ್ಟಿರುವುದು ಸಾಧ್ಯ. ಅದು ಕವಿಯ ಮನಃಸ್ಥಿತಿಯ ಉತ್ಕಟತೆಗೆ, ಅವನು ದೃಶ್ಯ ಲೋಕದ ವಸ್ತುವಿನಲ್ಲಿ ಎಷ್ಟು ಮಟ್ಟಿಗೆ ನಿಮಗ್ನನಾಗಿದ್ದಾನೆಂದು ಸೂಚಿಸುವಿಕೆಗೆ ಕಾರಣವಾಗುತ್ತದೆ. ಆದರೆ ಆಳ ಅಗಲಗಳನ್ನು, ಅರ್ಥದ ಹೆಚ್ಚುವರಿಯನ್ನು ಸಾಧಿಸಲು ವೈಚಾರಿಕ ಅಂಶದ ನೆರವು ಬೇಕೇಬೇಕು. ಕವಿಯ ವೈಯಕ್ತಿಕಾನುಭವದ ಪರಿಮಿತ ಸೀಮೆಯನ್ನು ವಿಸ್ತರಿಸಿ ಇಲ್ಲವೇ ನಿಸ್ಸೀಮಗೊಳಿಸಿ ಅದಕ್ಕೆ ಸಾರ್ವತ್ರಿಕತೆಯನ್ನೂ ತಾತ್ತ್ವಿಕ ಶ್ರೀಮಂತಿಕೆಯನ್ನೂ ದಯಪಾಲಿಸುವುದು ವಿಚಾರವಂತಿಕೆ. ಆದ್ದರಿಂದ ಭಾವ ಹೆಚ್ಚು ಮೂರ್ತ, ವಿಚಾರ ಅಮೂರ್ತ.

(ವಿಚಾರ-ಭಾವ)

ಮಾಸ್ತಿ

೧

ಸದಾ ಇವರು ಹೀಗೆಯೇ—
ಇಲ್ಲೆ, ಗಾಂಧಿ ಬಜಾರಿನ ಹಿರಿ ಚೌಕದೆದುರಲ್ಲೇ,
ಸಿಗರೇಟು ಸೇದುತ್ತಲೊ, ಪತ್ರಿಕೆಯನೋದುತ್ತಲೊ,
ಹರಟುತ್ತಲೊ ಇದ್ದಾಗ ಎದುರಾಗುವರು ಇದ್ದಕಿದ್ದಂತೆ—
ನಿರ್ದಿಷ್ಟ ಸಮಯದಂತೆ.

ವಯಸು ಅನುಭವ ಹೂಡಿ ಸುಖ ದುಃಖ ಬೆಳೆದ ಮುಖ,
ಹಿಂದೊಮ್ಮೆ ನೆಲಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು;
ಸಾಂತ್ವನವ ನುಡಿದಿರುವ ಹಳೆ ನಮೂನೆಯ ಚಶ್ಮ.
ಅದೇ ಕೊಡೆಯ ಗದೆ:
ಬೆದರಿಸಲು ಭಿಕ್ಷುಕರ ಹುಡುಗರನ್ನ,
ಬೀದಿ ಕುನ್ನಿಯ, ಪೋಲಿ ದನಗಳನ್ನ,
ಎದುರಿಸಲು ಮಳೆ ಬಿಸಿಲ ದಾಳಿಯನ್ನ,
ಸಾಲು ವೃಕ್ಷದ ಹಕ್ಕಿ ಹಿಕ್ಕೆಯನ್ನ.

ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ.

೨

ಗವೀಪುರದಿಂದ ಗಾಂಧಿ ಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು.
ಅಲ್ಲಿ ಕಾಯುತ್ತಾರೆ ಕಿಟ್ಟಿ ಗುಂಡೂ ಸುಬ್ಬು—
ಹೊಚ್ಚ ಹೊಸ ಯೌವನದ ರಂಗುಗಳ ಗುಂಗುಗಳ,
ಫ್ಯಾಶನ್ನು ಪಹರೆಗಳ, ಕಸಿ ಹಣ್ಣು ಚಹರೆಗಳ
ವರ್ತಮಾನದ ನಟ್ಟ ನಡುವಿನಲ್ಲಿ
ಹುಚ್ಚು ಹುರುಪಿನ ನೂಕುನುಗ್ಗಲಲ್ಲಿ—

ಅಚ್ಚುಕಟ್ಟಿನ ಹಾಗೆ,
'೪೦ ಮಾದರಿಯ ಬೆಂಗಳೂರಿನ ಹಾಗೆ,
ಕಾಲ ಕುಗ್ಗಿಸಿದೊಡಲು ಕಾಲನೆಳೆಯುತ ಬರಲು
ಈ ವೃದ್ಧರನು ಕಂಡು 'ಅಯ್ಯೊ' ಎಂದಿದ್ದೇನೆ;
ಎನ್ನುತಿರುವಂತೆಯೇ ಕೈಯ ಮುಗಿದಿದ್ದೇನೆ.

ರಸ್ತೆ ಹಿರಿದಾಗಿ ಫುಟ್‌ಪಾತು ಕಿರಿದಾಗಿ
ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ,
ಲೋಕ ಕಂಪ್ಯೂಟರಿನ ಸ್ವಿಚ್ಚು ತಂತಿಗಳಂತೆ ಸಂದಿಗ್ಧವಾಗಿ,
ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು
ಎಸೆಯುತಿವೆ ಪ್ರತಿ ಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿ ಸವಾಲು.

೩

ಕ್ಲಬ್ಬಿನಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು—ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು:
ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ
ಟೈಲರನ ಎಡಗಾಲನುಳುಕಿಸಿದ್ದು;
ರಾತ್ರಿ ಪುರ ಭವನದಲಿ ಸಂಗೀತ ಸಾಮ್ರಾಜ್ಞಿ
ಶಂಕರಾಭರಣದಲಿ ಪುಲಕಿಸಿದ್ದು;
ಅಬ್ದುಲನ ಹೈ ಕೋರ್ಟು ರಿಟ್ಟು ವಜಾ ಆದದ್ದು;
ಖೋಟ ನೋಟ್ ಕೃಷ್ಣನಿಗೆ ಕಠಿಣ ಸಜ ಆದದ್ದು;
ಬದರಿ ನಾದಿನಿಗೊಬ್ಬ ಒಳ್ಳೆ ವರ ಸಿಕ್ಕಿದ್ದು;
ರಷ್ಯ ಚೀನಾ ಕ್ಯೂಬ ಅಮೇರಿಕ ವಾರ್ತೆ ಮಿಕ್ಕಿದ್ದು;
ಅದೂ ಇದೂ ಇಪ್ಪತ್ತೆಂಟನಾಡುವುದು.
ನಡುವೆ ತಪ್ಪಾಡಿದರೆ ಎದುರಾಳಿಯಲ್ಲೊಬ್ಬ
ಮನೆಯ ಕಿರಿ ಸೊಸೆಯಂತೆ ಮುಖವನೂದಿಸಿ ಬೀಗಿ
ಗೊಣಗುವುದು: Let us play the game
for game's sake.

ಇನ್ನಿವರ ಜೀವನ? ಅದು ಕೂಡ ಹೀಗೆಯೇ, ಎಲ್ಲ ಖುಲ್ಲ;
ಖುಷಿಗಷ್ಟೆ ನಷೆಗಲ್ಲ.
ಗಂಟೆಗಟ್ಟಲೆ ಕಲಸಿದರು ಕೈ
ಬಂದರಿಪ್ಪತ್ತು ಹೋದರಿಪ್ಪತ್ತು ನ.ಪೈ.,
ಕೂಗು ಹುಸಿ ಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ;
ಚಣಕ್ಕಷ್ಟು ಚಳಿ ನೂಲು, ಒಂದಿಷ್ಟು ಹೂ ಬಿಸಿಲು,
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.

೪

ಹೊತ್ತಾಯಿತೆ? ಆವರಿಸಿತೇ ಮಬ್ಬು?
ಕೊಡೆ ತೆರೆದು ಏಕಾಕಿ ಮನೆಯತ್ತ ನಡೆಯುವರು ಮರೆತು ಕ್ಲಬ್ಬು.
ಗಾಂಧಿ ಬಜಾರೀಗ ತಿಳಿಯಾಗಿ ಫರ್ಲಾಂಗು ಬೆಳಕ ಹಬ್ಬ—
ಚೌಕದೆಡೆ ಆಗೀಗ ಪ್ರತಿಪಕ್ಷದವನೊಬ್ಬ
ಎಲುಬಿರದ ನಾಲಗೆಯ ನಾಚು ನಡೆಸುತ್ತಿರಲು
ಸರ್ಕಾರದಸಫಲತೆಯ ಹುಣ್ಣ ನೋಣ–ಸುತ್ತಿರಲು,
ದೀಪಗಳ ಝುಗಮಗದಿ ಕಣ್ಸೋತು ನಿಂತಿರಲು
ಮನೆ ಮಠವ ಮರೆತಿರುವ ಮಂದಿ ಸಂತೆ—
ಬೊಬ್ಬೆ ಅಬ್ಬರದೆದುರು ಗುರುತು ಹತ್ತದ ಹಾಗೆ
ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ;
ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.

ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ.

★ ★ ★

(ಕವನ ಸಂಕಲನ: 'ಸಂಜೆ ಐದರ ಮಳೆ')



'ಮಾಸ್ತಿ':

ವ್ಯಕ್ತಿತ್ವದ ಚಿತ್ರಣದ ಮೂಲಕ ಕಾಲ- ಸಂಸ್ಕೃತಿಗಳ ಮೌಲ್ಯ ವಿವೇಚನೆ

♦ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

ಕನ್ನಡದಲ್ಲಿ ವ್ಯಕ್ತಿಗಳನ್ನು ಕುರಿತು ರಚಿತವಾದ ಕವಿತೆಗಳಿಗೆ ಒಂದು ಪರಂಪರೆಯೇ ಇದೆ. ಆಧುನಿಕ ಕನ್ನಡ ಕಾವ್ಯದಲ್ಲಂತೂ ವ್ಯಕ್ತಿ ಕವಿತೆಗಳು ಸಮೃದ್ಧವಾಗಿವೆ, ವೈವಿಧ್ಯಪೂರ್ಣವಾಗಿವೆ, ಧ್ವನಿಸಮೃದ್ಧವಾಗಿವೆ. ಇದೊಂದು ರೀತಿಯಲ್ಲಿ ಗೌರವ ಸೂಚಿಸುವ ಕ್ರಮ. ತಾನು ಗೌರವಿಸುವ, ಪ್ರೀತಿಸುವ ವ್ಯಕ್ತಿತ್ವಕ್ಕೆ ಸೃಜನಶೀಲ ಮನಸ್ಸು ಸ್ಪಂದಿಸುವ ಬಗೆ—ಕವಿತೆಯ ಆಕಾರ ವನ್ನು ತಾಳುತ್ತದೆ. ಗೌರವವನ್ನು ಸಲ್ಲಿಸುವುದು ಇಂಥ ಕವಿತೆಗಳ ಪ್ರಾಥಮಿಕ ನೆಲೆ ಎಂಬುದು ನಿಜವಾದರೂ ಕೆಲವು ಕವಿತೆಗಳು ಆ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವ, ವಿಶ್ಲೇಷಿಸುವ, ವಿಮರ್ಶಿಸುವ ಪ್ರಯತ್ನವನ್ನೂ ಮಾಡುತ್ತವೆ. ಸೃಜನಶೀಲ ಮನಸ್ಸು ಸ್ಪಂದಿಸುವ ಕ್ರಮ ಮಾಹಿತಿಗಳ ವಿವರ ಮಾತ್ರವಾಗಿರು ವುದಿಲ್ಲ. ಇಂಥ ರಚನೆಗಳು ಹೆಚ್ಚು ಮಹತ್ವದ್ದಾಗಿರುತ್ತವೆ. ಮತ್ತೆ ಕೆಲವೊಮ್ಮೆ ವ್ಯಕ್ತಿ ಕವಿತೆಗಳು ವ್ಯಕ್ತಿಯನ್ನು ಕೇಂದ್ರ ವಾಗಿಟ್ಟುಕೊಂಡು ಆ ವ್ಯಕ್ತಿತ್ವ ರೂಪುಗೊಂಡ ಸಂದರ್ಭವನ್ನು, ಸಮಾಜವನ್ನು, ಸಂಸ್ಕೃತಿಯನ್ನು ವಿಶ್ಲೇಷಿಸುವ, ಅರ್ಥೈಸುವ ಪ್ರಯತ್ನ ಮಾಡುತ್ತವೆ. ಇಂಥವು ಸಹಜವಾಗಿಯೇ ಸಂಕೀರ್ಣ ವಿನ್ಯಾಸವನ್ನು ಪಡೆದು, ವ್ಯಕ್ತಿ ಕವಿತೆಗಳ ವ್ಯಾಪ್ತಿಯನ್ನು ವಿಸ್ತರಿಸುತ್ತವೆ.

ಸಾಮಾನ್ಯವಾಗಿ ವ್ಯಕ್ತಿ ಕವಿತೆಗಳು ಸಾಮಾಜಿಕ ಮನ್ನಣೆಯನ್ನು ಪಡೆದ ಪ್ರಸಿದ್ಧ ವ್ಯಕ್ತಿಗಳನ್ನೇ ಕುರಿತು

ರಚಿತವಾಗಿರುತ್ತವೆ. 'ಕರಿ ಸಿದ್ಧ'ನಂಥವರು ಇಲ್ಲವೆಂದಲ್ಲ. ಅಪರೂಪ. ನಮ್ಮ ಚರಿತ್ರೆಯೇ ಪ್ರಸಿದ್ಧ ವ್ಯಕ್ತಿಗಳ ಚರಿತ್ರೆ. 'ಪ್ರಸಿದ್ಧಿ' ಎಂಬುದು ಒಂದು ವ್ಯವಸ್ಥೆ ಎಂಬುದನ್ನು ನಾನಿಲ್ಲಿ ವಿವರಿಸುವ ಅಗತ್ಯವಿಲ್ಲ. ಹೀಗಾಗಿ, ವ್ಯಕ್ತಿ ಕವಿತೆಗಳ ಅಧ್ಯಯನ ಒಂದು ಸಾಮಾಜಿಕ ವ್ಯವಸ್ಥೆಯ ಸ್ವರೂಪದ ಅಧ್ಯಯನವೂ ಆಗುತ್ತದೆ.

ನಮ್ಮ ಪ್ರಾಚೀನ ಕವಿಗಳ ಪೀಠಿಕಾ ಪದ್ಯಗಳಲ್ಲಿ ಬರುವ ಹಿಂದಿನ ಕವಿಗಳನ್ನು ಕುರಿತ ಸೂಕ್ತಿ ರೂಪದ ಮಾತುಗಳಲ್ಲಿಯೇ ವ್ಯಕ್ತಿ ಕವಿತೆಗಳ ಸ್ವರೂಪವನ್ನು ನಾವು ಗುರ್ತಿಸ ಬಹುದಾಗಿದೆ. ಇದು ಕಾವ್ಯ ವಿಮರ್ಶೆಯಾಗಿರುವಂತೆಯೇ, ಒಂದು ಸಂಸ್ಕೃತಿ ರೂಪು ಗೊಳ್ಳುತ್ತಾ ಬಂದ ಪ್ರಕ್ರಿಯೆಯನ್ನೂ ಸೂಚಿಸುತ್ತದೆ. ಆಧುನಿಕ ಸಾಹಿತ್ಯದಲ್ಲಿ ವ್ಯಕ್ತಿ ಕವಿತೆಗಳು ಸ್ಪಷ್ಟ ರೂಪ ಪಡೆದುಕೊಂಡು ಒಂದು ಪರಂಪರೆಯೇ ನಿರ್ಮಾಣವಾಗಿದೆ. ಈ ಪರಂಪರೆಯಲ್ಲಿ ಕೆ. ಎಸ್. ನಿಸಾರ್ ಅಹಮದ್ ಅವರ 'ಮಾಸ್ತಿ' ಕವಿತೆ ಮಹತ್ವದ ಒಂದು ವಿಶಿಷ್ಟ ರಚನೆ.

ವ್ಯಕ್ತಿ ಕವಿತೆಗಳಲ್ಲಿ ನಾವು ಕಾಣುವ ಸಾಮಾನ್ಯ ಸ್ವರೂಪ—ವೈಭವೀಕರಣ. 'ಮಾಸ್ತಿ' ಕವಿತೆ ವಿಶಿಷ್ಟವೆನ್ನಿಸುವುದು, ನನಗೆ ಇಷ್ಟವಾಗುವುದು ಅದರ ಸಹಜತೆಯಿಂದಾಗಿ. ಈ ಕವಿತೆಯಲ್ಲಿ ಯಾವುದೇ ಬಗೆಯ ವಿಶೇಷಣಗಳಿಲ್ಲ, ಕೀರ್ತಿಸುವ ವಿನ್ಯಾಸವಿಲ್ಲ. ದೈನಿಕದ ಒಂದು ಘಟನೆಯ ಮೂಲಕ ಮಾಸ್ತಿಯವರ ವ್ಯಕ್ತಿತ್ವವನ್ನು ಕವಿತೆ ನಮ್ಮ ಮನಸ್ಸಿಗೆ ಮುಟ್ಟಿಸುತ್ತದೆ. ನಮ್ಮಲ್ಲಿ ಒಂದು ಪ್ರಸನ್ನ ಭಾವವನ್ನು ಮೂಡಿಸುತ್ತದೆ. ಇಡೀ ಕವಿತೆ ಒಂದು ಅನುಭವವನ್ನು ಕಟ್ಟಿಕೊಡುವ ಕ್ರಮದಲ್ಲಿಯೇ 'ಮಾಸ್ತಿ' ಕವಿತೆಯ ಚೆಲುವಿದೆ.

* * *

ಕವಿತೆಯಲ್ಲಿ ನಾಲ್ಕು ಭಾಗಗಳಿವೆ. ಮೊದಲನೆಯ ಭಾಗ ಮಾಸ್ತಿಯವರನ್ನು ಕವಿ ಕಂಡದ್ದು; ಎರಡನೆಯ ಭಾಗ ಮಾಸ್ತಿ ಕ್ಲಬ್ಬಿಗೆ ಹೋಗುವುದು; ಮೂರನೆಯ ಭಾಗ ಕ್ಲಬ್ಬಿನಲ್ಲಿ ಮಾಸ್ತಿ ಇಪ್ಪತ್ತೆಂಟನಾಡುವುದು; ಕಡೆಯ ನಾಲ್ಕನೆಯ ಭಾಗದಲ್ಲಿ ಮಾಸ್ತಿ ಕ್ಲಬ್ಬಿನಿಂದ ಮನೆಗೆ ಹಿಂತಿರುಗುವುದು. ಇಡೀ ಕವಿತೆ ಮಾಸ್ತಿಯವರು ತಮ್ಮ ಮನೆಯಿಂದ ಕ್ಲಬ್ಬಿಗೆ ಹೋಗಿ ಹಿಂತಿರುಗುವ ದೈನಿಕದ ಚಿತ್ರವೊಂದನ್ನು ನೀಡುತ್ತದೆ. ಇದು ಮಾಸ್ತಿಯವರ ದೈನಂದಿನವಾದ ಒಂದು ಸಹಜ ಕ್ರಿಯೆ. ಇದನ್ನು ನೆಪವಾಗಿಟ್ಟುಕೊಂಡು ನಿಸಾರ್ ಅಹಮದ್ ಮಾಸ್ತಿಯವರ ವ್ಯಕ್ತಿತ್ವವನ್ನು, ಆ ಮೂಲಕ ಒಂದು ಸಂಸ್ಕೃತಿಯ ಚಿತ್ರವನ್ನು ನಮ್ಮ ಅನುಭವಕ್ಕೆ ತಂದುಕೊಡುತ್ತಾರೆ.

'ಸದಾ ಇವರು ಹೀಗೆಯೇ—
ಇಲ್ಲೆ, ಗಾಂಧಿ ಬಜಾರಿನ ಹಿರಿ ಚೌಕದೆದುರಲ್ಲೇ,
ಸಿಗರೇಟು ಸೇದುತ್ತಲೊ, ಪತ್ರಿಕೆಯನೋದುತ್ತಲೊ,
ಹರಟುತ್ತಲೊ ಇದ್ದಾಗ ಎದುರಾಗುವರು ಇದ್ದಕಿದ್ದಂತೆ
ನಿರ್ದಿಷ್ಟ ಸಮಯದಂತೆ.'

ಬೆಂಗಳೂರು ನಗರದಲ್ಲಿ ಗಾಂಧಿ ಬಜಾರ್, ಗಾಂಧಿ ನಗರ, ಗಾಂಧಿ ರಸ್ತೆ (ಮಹಾತ್ಮ

ಗಾಂಧಿ ರಸ್ತೆ)—ಮೂರು ಸಂಸ್ಕೃತಿಗಳ ಪ್ರತೀಕ. ಮೂರರಲ್ಲೂ 'ಗಾಂಧಿ' ಸಾಮಾನ್ಯವಾದರೂ ಗಾಂಧಿ ಬಜಾರ್—ಪರಂಪರೆಗೆ, ಗಾಂಧಿನಗರ—ವಾಣಿಜ್ಯ ವ್ಯವಹಾರಗಳಿಗೆ, ಗಾಂಧಿ ರಸ್ತೆ—ಆಧುನಿಕತೆಗೆ ಪ್ರತೀಕವಾಗಿವೆ. ಈಗ ಗಾಂಧಿ ಬಜಾರ್ ಸಹ ವಾಣಿಜ್ಯೀಕರಣಗೊಳ್ಳುತ್ತಿದ್ದರೂ ಅರವತ್ತು–ಎಪ್ಪತ್ತರ ದಶಕಗಳ ಗಾಂಧಿ ಬಜಾರಿನ ಚಿತ್ರವೇ ಬೇರೆ. 'ಸಂದ ಜೀವನದೊಂದು ರೀತಿಯಂತೆ' ಎಂದು ಮಾಸ್ತಿಯವರ ಬಗ್ಗೆ ನಿಸಾರ್ ಹೇಳುವ ಮಾತುಗಳು ಗಾಂಧಿ ಬಜಾರಿಗೂ ಈಗ ಅನ್ವಯಿಸುತ್ತದೆ. ಒಂದು ಕವಿತೆ ಸಾರ್ವಕಾಲಿಕ ಅರ್ಥವನ್ನು ಪಡೆದುಕೊಳ್ಳುವುದೇ ಹೀಗೆ.

ಮಾಸ್ತಿಯವರು ಗಾಂಧಿ ಬಜಾರಿನ ಈ ತುದಿಯ ಗವೀಪುರ ಗುಟ್ಟಹಳ್ಳಿಯ ತಮ್ಮ ಮನೆಯಿಂದ, ಆ ತುದಿಯ ಬಸವನಗುಡಿ ಕ್ಲಬ್‌ಗೆ ಪ್ರತಿ ನಿತ್ಯ ಸಂಜೆ ಹೋಗಿ ಬರುತ್ತಿದ್ದರು. ಹಾದಿಯಲ್ಲಿ ವಿದ್ಯಾರ್ಥಿ ಭವನ, ಕರ್ನಾಟಕ ಬುಕ್ ಹೌಸ್, ಲಿಪಿ ಪ್ರಕಾಶನ ಇತ್ಯಾದಿ. ಇವುಗಳೇ ನೆಪವಾಗಿ ಸಾಹಿತಿಗಳ ಗುಂಪು ಅಲ್ಲಿ ಸೇರುತ್ತಿತ್ತು. ಅದರಲ್ಲೂ ಆ ಕಾಲಕ್ಕೆ ತರುಣರಾಗಿದ್ದ ನವ್ಯ ಸಾಹಿತಿಗಳು ಹೆಚ್ಚಾಗಿ ಈ ಗುಂಪಿನಲ್ಲಿರುತ್ತಿದ್ದರು. ಸಿಗರೇಟು ಸೇದುತ್ತಲೋ, ಪತ್ರಿಕೆಯನೋದುತ್ತಲೋ, ಹರಟುತ್ತಲೋ—ನಿಂತಿದ್ದಾಗ 'ನಿರ್ದಿಷ್ಟ ಸಮಯ'ದಂತೆ ಇವರೆದುರು ಮಾಸ್ತಿ ತಮ್ಮ ಪಾಡಿಗೆ ತಾವು ನಡೆದು ಹೋಗುತ್ತಿದ್ದರು.

ಇದು ಎರಡು ತಲೆಮಾರುಗಳ ಮುಖಾಮುಖಿಯ ಚಿತ್ರವೂ ಹೌದು. ನಿಸಾರ್ ಹೊಸ ತಲೆಮಾರಿನ ಪ್ರತಿನಿಧಿ; ಮಾಸ್ತಿ ಹಳೆಯ ತಲೆಮಾರಿನ ಪ್ರತೀಕ. ಸಾಮಾನ್ಯವಾಗಿ ಹೊಸ ತಲೆಮಾರು ಹಳೆಯ ತಲೆಮಾರನ್ನು ವ್ಯಂಗ್ಯ ಅನುಮಾನಗಳಿಂದಲೇ ನೋಡುತ್ತದೆ; ಕೆಲವೊಮ್ಮೆ ಅಲ್ಲಿ ಕುಹಕವೂ ಸೇರಿಕೊಳ್ಳುವುದುಂಟು. ತನ್ನನ್ನು ಸ್ಥಾಪಿಸಿಕೊಳ್ಳುವ ತುಡಿತದಲ್ಲಿ ಹೊಸ ಪ್ರಜ್ಞೆ ಹಳೆಯದನ್ನು ಬಲವಾಗಿ ಪ್ರತಿಭಟಿಸುತ್ತದೆ, ನಿರಾಕರಿಸುತ್ತದೆ, ವಿಡಂಬನೆಗೆ ಗುರಿಪಡಿಸುತ್ತದೆ. ಆದರೆ ಇಲ್ಲಿಯ ಚಿತ್ರ ಹಾಗಿಲ್ಲವೆನ್ನುವುದೇ ಗಮನಿಸಬೇಕಾದ ಮುಖ್ಯ ಅಂಶ.

> **'ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ**
> **ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,**
> **ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ**
> **ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ.'**

ನಿಸಾರ್ ಹೊಸ ತಲೆಮಾರಿಗೆ ಸೇರಿದವರಾದರೂ ನವ್ಯ ಮಾರ್ಗದ ಸಂದರ್ಭದಲ್ಲಿ ಬರೆಯುತ್ತಿದ್ದರೂ ಪರಂಪರೆಯ ಬಗ್ಗೆ ಗೌರವವನ್ನು ಕಳೆದುಕೊಂಡವರಲ್ಲ. ಪರಂಪರೆಯ ಬಗ್ಗೆ, ಸಾಮಾಜಿಕ ಒಪ್ಪಿತ ಮೌಲ್ಯಗಳ ಬಗ್ಗೆ ಅವರಿಗೆ ವಿಶ್ವಾಸ. ನಿಸಾರರದು ಮೂಲತಃ ರಮ್ಯಕ್ಕೆ ಒಲಿದ ಮನಸ್ಸು. ಪರಂಪರೆಯನ್ನು ಅದರ ಎಲ್ಲ ಮಿತಿಗಳ ನಡುವೆಯೂ ಅವರು ಕೀರ್ತಿಸುತ್ತಾರೆ. ನಾಗರಿಕತೆಯ ಪ್ರವೇಶವನ್ನು ಅವರು ಆಕ್ರಮಣವೆಂದೇ ಭಾವಿಸಿ ಕಸಿವಿಸಿಗೊಳ್ಳುತ್ತಾರೆ. ಇದಕ್ಕೆ ಮುಖ್ಯ ಕಾರಣ ನಾಗರಿಕ ಪ್ರಪಂಚದಲ್ಲಿ ಮನುಷ್ಯ ಮನುಷ್ಯನ ಸಂಬಂಧದಲ್ಲಿ ಕಾಣೆಯಾಗುತ್ತಿರುವ ಭಾವ ಜಗತ್ತಿನ ಬಗೆಗಿನ ನಿಸಾರರ ಆಸಕ್ತಿ, ಆತಂಕದ

ರೂಪದಲ್ಲಿ ಅವರ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಹೀಗಾಗಿಯೇ ಮಾಸ್ತಿಯವರನ್ನು ಕಂಡಾಗ ಕವಿಯ ಮನಸ್ಸಿನಲ್ಲಿ ಪ್ರಸನ್ನಭಾವ ಮೂಡುತ್ತದೆ; ಮನಸ್ಸು ಭಾರವಾಗದೆ ಹಗುರಾಗುತ್ತದೆ. ಇದು ನಿಸಾರರ ಮನೋಭಾವವನ್ನು ಸೂಚಿಸುವುದು ಮಾತ್ರವಲ್ಲ, ಮಾಸ್ತಿಯವರ ವ್ಯಕ್ತಿತ್ವವನ್ನೂ ಸೂಚಿಸುತ್ತದೆ. ಮಾಸ್ತಿಯವರದು ಸಾತ್ವಿಕ ತೇಜಸ್ಸಿನ ವ್ಯಕ್ತಿತ್ವ; ಸುಖ ದುಃಖಗಳ ಅನುಭವದಿಂದ ಮಾಗಿದ ಸಮಾಧಾನದ ವ್ಯಕ್ತಿತ್ವ; ಹತ್ತಿರ ಬಂದವರನ್ನು ಸಾಂತ್ವನಗೊಳಿಸುವ, ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸುವ ಹಣ್ಣಾದ ಚೇತನ. ಜೊತೆಗೆ ಹಳ್ಳಿಗಾಡಿನ ಕೃತಕವಲ್ಲದ ಮುಗ್ಧ ಚೆಲುವೂ ಈ ವ್ಯಕ್ತಿತ್ವದಲ್ಲಿದೆ ಎಂಬುದು ಕವಿಯ ನಿಲವು.

* * *

ಕವಿತೆಯ ಎರಡನೆಯ ಭಾಗ ಬದಲಾಗುತ್ತಿರುವ ಸಾಮಾಜಿಕ ಸಂದರ್ಭ ಹಾಗೂ ಒಂದು ಕಾಲದ ಜೀವನ ರೀತಿಗೆ ಒಗ್ಗಿದ ಜೀವ ಎದುರಿಸುವ ಸವಾಲುಗಳನ್ನು ಚಿತ್ರಿಸುತ್ತದೆ. ಇಲ್ಲಿ ಮಾಸ್ತಿಯವರ ವ್ಯಕ್ತಿತ್ವ ಒಂದು ಕಾಲಮಾನದ ಬದುಕಿನ ರೀತಿಯೊಡನೆ ಸಮೀಕರಣಗೊಳ್ಳುತ್ತದೆ. ನಲವತ್ತು ಮಾದರಿಯ ಬೆಂಗಳೂರಿನ ಹಾಗಿರುವ ಮಾಸ್ತಿ ಎಪ್ಪತ್ತರ ದಶಕದ ಫ್ಯಾಶನ್ನು ಪಹರೆಗಳ, ಕಸಿ ಹಣ್ಣು ಚಹರೆಗಳ ಹೊಚ್ಚ ಹೊಸ ಯೌವನದ ವರ್ತಮಾನದಲ್ಲಿ ಕಾಲನೆಳೆಯುತ್ತ ಬರುವಾಗ 'ಕಾಲ'ನ ಪರಿಣಾಮದ ಬೆರಗಿನ ಜೊತೆಗೆ ಗೌರವಪೂರಿತ ಅನುಕಂಪೆಯೂ ಸೇರಿಕೊಳ್ಳುತ್ತದೆ. ಈ ಕವಿತೆ ಮತ್ತೆ ಮತ್ತೆ ಸಮಕಾಲೀನಗೊಳ್ಳುತ್ತಾ ಹೋಗುವ ಕ್ರಮ—ನಿಸಾರರ ಪ್ರತಿಭೆಗೆ ಸಂಬಂಧಿಸಿದ್ದು. ಈಗ ಓದುವಾಗ ಈ ಭಾಗ ಮಾಸ್ತಿ ಎದುರಿಸಿದ ಸಮಸ್ಯೆಗೆ ಬದಲಾಗಿ ನಮ್ಮ ಸಮಕಾಲೀನ ಸಮಸ್ಯೆಯಾಗಿ ರೂಪಾಂತರಗೊಳ್ಳುತ್ತದೆ.

'ರಸ್ತೆ ಹಿರಿದಾಗಿ ಫುಟ್‌ಪಾತು ಕಿರಿದಾಗಿ
ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ,
ಲೋಕ ಕಂಪ್ಯೂಟರಿನ ಸ್ವಿಚ್ಚು ತಂತಿಗಳಂತೆ ಸಂದಿಗ್ಧವಾಗಿ,
ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು
ಎಸೆಯುತಿವೆ ಪ್ರತಿ ಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿ ಸವಾಲು.'

ಇದು ಮಾಸ್ತಿಯವರ ಸಮಸ್ಯೆಯಾದಂತೆಯೇ ಪ್ರಸ್ತುತ ನಿಸಾರರ ಸಮಸ್ಯೆಯೂ ಹೌದು. ಬೆಳೆಯುತ್ತಿರುವ ಬದಲಾಗುತ್ತಿರುವ ಜೀವನ ವಿಧಾನದ ಬಗೆಗಿನ ಸಾರ್ವಕಾಲಿಕ ವ್ಯಾಖ್ಯಾನವೆಂಬಂತೆ ಈ ಭಾಗವಿದೆ.

* * *

ಮೂರನೆಯ ಭಾಗ 'ಮಾಸ್ತಿ' ಕವಿತೆಯ ಆತ್ಮ. ನಿಸ್ಸಂದೇಹವಾಗಿ ಈ ಭಾಗ ಮಾಸ್ತಿಯವರ ವ್ಯಕ್ತಿತ್ವವನ್ನು ಇಸ್ಪೀಟು ಆಟದ ರೂಪಕದ ಮೂಲಕ ಸಮರ್ಥವಾಗಿ ಹಿಡಿದಿಡುತ್ತದೆ. ಈ ಬದುಕು ಒಂದು 'ಆಟ' ಎನ್ನುವುದೇ ಮಾಸ್ತಿಯವರ ಬದುಕಿನ ಹಿಂದಿನ ತಾತ್ವಿಕ ನಿಲವನ್ನು ಸೂಚಿಸುತ್ತದೆ. ನಿಶ್ಚಿಂತೆಯಾಗಿ ಎಲೆ ಕಲಸುತ್ತ ಇಪ್ಪತ್ತೆಂಟನಾಡುವ

ಕ್ರಮ—ಬದುಕನ್ನು ಸಮಾಧಾನವಾಗಿ ಸ್ವೀಕರಿಸುವ ರೀತಿಗೆ ಸಂಕೇತವಾಗಿಬಿಡುತ್ತದೆ. ಸುತ್ತಮುತ್ತಲಿನ ಎಲ್ಲ ಗದ್ದಲದ ನಡುವೆಯೂ ಸಮಚಿತ್ತವನ್ನು ಕಾಯ್ದುಕೊಳ್ಳುವ ಮಾಸ್ತಿಯವರ ವ್ಯಕ್ತಿತ್ವದ ಜೀವ ಸತ್ವವನ್ನು ನಾವಿಲ್ಲಿ ಕಾಣುತ್ತೇವೆ. 'ತಾಳುವಿಕೆ' ಮಾಸ್ತಿಯವರ ವ್ಯಕ್ತಿತ್ವದ, ಸಾಹಿತ್ಯದ ಪ್ರಧಾನ ಗುಣ.

'ಇಪ್ಪತ್ತೆಂಟನಾಡುವುದು—ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು;'

ಇದು ಮಾಸ್ತಿಯವರ ವ್ಯಕ್ತಿತ್ವದ ಮತ್ತೊಂದು ಪ್ರಧಾನ ಗುಣವನ್ನು ಸೂಚಿಸುತ್ತದೆ. ಜೀವನದ ಎಲ್ಲ ವಿಷಯಗಳ ಬಗೆಗಿನ ಆಸಕ್ತಿಯನ್ನಿಲ್ಲಿ ನಾವು ಕಾಣುತ್ತೇವೆ. ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ. ಬದರಿ ನಾದಿನಿಗೆ ಒಬ್ಬ ಒಳ್ಳೆಯ ವರ ಸಿಕ್ಕಿದ್ದರಿಂದ ಹಿಡಿದು ಅಬ್ದುಲ್ಲನ ಹೈಕೋರ್ಟ್ ರಿಟ್ ವಜಾ ಆದದ್ದು, ಖೋಟ ನೋಟು ಕೃಷ್ಣನಿಗೆ ಸಜಾ ಆದದ್ದು, ಸಂಗೀತ ಸಾಮ್ರಾಜ್ಞಿ ಪುರ ಭವನದಲ್ಲಿ ಹಾಡಿದ್ದು, ರಷ್ಯಾ, ಚೀನಾ, ಕ್ಯೂಬ, ಅಮೇರಿಕ ಸುದ್ದಿಯವರೆಗೆ ಎಲ್ಲವೂ ಇಲ್ಲಿ ಬಂದು ಹೋಗುತ್ತದೆ.

ಮಾಸ್ತಿಯವರ ಮನೆಗೆ ನಾನೊಮ್ಮೆ ಹೋಗಿದ್ದಾಗ ನಮ್ಮ ಊರಿನ ಹೆಸರು ಕೇಳಿ ಹತ್ತಿರದ ಜಕ್ಕನಹಳ್ಳಿ ಎಂಬ ಕೂಡು ರಸ್ತೆಯೊಂದರ ಬಗ್ಗೆ ಪ್ರಸ್ತಾಪಿಸಿ, ಅಲ್ಲಿ ಕೆಂಪು ಬಣ್ಣದ ಹಲಸಿನ ತೊಳೆಯ ರುಚಿಯ ಬಗ್ಗೆ ಮಾತನಾಡಿದ್ದು ನನಗಿಲ್ಲಿ ನೆನಪಾಗುತ್ತದೆ. ಬದುಕಿನಲ್ಲಿ ಎಲ್ಲವೂ ಮುಖ್ಯ, ಎಲ್ಲಕ್ಕೂ ತನ್ನದೇ ಆದ ಪಾತ್ರ-ಪ್ರಾಮುಖ್ಯವಿದೆ ಎಂಬುದು ನವೋದಯ ಮಾರ್ಗದ ಲೇಖಕರಲ್ಲಿ ನಾವು ಕಾಣುವ ನಿಲವು. ನಿಸಾರ್ ಅವರು ನವೋದಯದ ಈ ನಿಲವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ.

ಇದು ಮುಖ್ಯವಾಗಿ ಜೀವನಾಸಕ್ತಿಯನ್ನು ಸೂಚಿಸುವಂಥದು. ಮಾಸ್ತಿಯವರದು ಇತ್ಯಾತ್ಮಕ ಮನೋಭಾವ. ಈ ಬದುಕಿನ ಬಗ್ಗೆ ಅವರಿಗೆ ಅಪಾರ ಗೌರವ. ಎಲ್ಲವನ್ನೂ ಅನುಭವಿಸಿ ಸುಖಿಸಬೇಕೆಂಬ ಹಂಬಲ. ಆಯ್ಕೆಗಿಂತ ಹೆಚ್ಚಾಗಿ ಬಂದದ್ದನ್ನು ಒಪ್ಪಿ ಸ್ವೀಕರಿಸುವ ನೆಲೆಯಿದು. ಈ ಎಲ್ಲ ಗೊಂದಲ, ಅಸಹನೆ, ಗದ್ದಲಗಳ ನಡುವೆಯೂ ಬದುಕಿನ ಚೆಲುವನ್ನು ಗುರ್ತಿಸಿಕೊಳ್ಳುವ ರೀತಿ ಇದು.

'ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.'

* * *

ಕವಿತೆಯ ಕಡೆಯ ಭಾಗದಲ್ಲಿ ಮಾಸ್ತಿ ಕ್ಲಬ್ಬಿನಿಂದ ಮನೆಗೆ ಹಿಂತಿರುಗುವ ಚಿತ್ರವಿದೆ. ಇಲ್ಲಿಯೂ ಆಡಂಬರದ, ಗದ್ದಲದ ಪರಿಸರ. ರಾಜಕೀಯ ನಮ್ಮ ಬದುಕನ್ನು ಆವರಿಸಿ ನೆಮ್ಮದಿಯನ್ನು ಕೆಡಿಸುತ್ತಿರುವ ಚಿತ್ರ; 'ಮನೆ' ಮರೆತಿರುವ ಮಂದಿಯ ಪ್ರಸ್ತಾವ ಕೌಟುಂಬಿಕ ಜೀವನದಲ್ಲಿ ವಿಘಟನೆಯನ್ನು ಇದು ಸೂಕ್ಷ್ಮವಾಗಿ ಧ್ವನಿಸುತ್ತದೆ. ಇಂಥ ಪರಿಸರದಲ್ಲೂ ಮಾಸ್ತಿ—

'ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ;

ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.'

ಇದು ಗಾಂಧಿಯುಗದ ತಾತ್ತ್ವಿಕ ನಿಲವು. ಸ್ವಾತಂತ್ರ್ಯಪೂರ್ವದ ಬದುಕಿನಲ್ಲಿ ದೇಶಕ್ಕೆ, ಸಮಾಜಕ್ಕೆ ತನ್ನ ಕೊಡುಗೆಯೇನು ಎಂಬ ಪ್ರಶ್ನೆ ಮುಖ್ಯವಾಗಿತ್ತು. 'ಸಾಮಾಜಿಕ ಋಣ'ದ ಪರಿಕಲ್ಪನೆ ಪ್ರಧಾನವಾಗಿತ್ತು. ಹಕ್ಕುಗಳಂತೆ ಕರ್ತವ್ಯದ ಬಗೆಗೂ ಕಾಳಜಿಯಿತ್ತು. ಇವೆಲ್ಲವೂ ಪರಿಪೂರ್ಣ ಆಚರಣೆಯಲ್ಲಿತ್ತು ಎಂದಲ್ಲ; ಆ ಬಗ್ಗೆ ಅರಿವಿತ್ತು. ನಿಸಾರ್ ಅಹಮದ್ ಅವರು ಈ ಒಂದು ಸಣ್ಣ ಕ್ರಿಯೆಯ ಮೂಲಕ ಒಂದು ಯುಗದ ಗುಣ ಧರ್ಮದ ಬಗ್ಗೆ ನಮ್ಮ ಗಮನ ಸೆಳೆಯುತ್ತಿದ್ದಾರೆ.

'ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ.'

ಒಂದು ಯುಗ, ಒಂದು ಜೀವನ ರೀತಿ—ಮರೆಯಾಗುತ್ತಿರುವ ಭಾವ; ಆ ಬಗ್ಗೆ ಗೌರವಪೂರ್ವಕ ಕೃತಜ್ಞತೆ.

* * *

'ಮಾಸ್ತಿ' ಕವಿತೆ ವ್ಯಕ್ತಿಯನ್ನು ಕುರಿತ ಕವಿತೆಯೇ ಆದರೂ ನಿಸಾರ್ ಅಹಮದ್ ಈ ಕವಿತೆಯಲ್ಲಿ ಮಾಸ್ತಿಯವರನ್ನು ಕೇಂದ್ರವಾಗಿಟ್ಟುಕೊಂಡು ಎರಡು ತಲೆಮಾರುಗಳ ಕಥನವಾಗಿ ಈ ಕವಿತೆಯನ್ನು ರೂಪಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕವಿತೆ ಬದಲಾಗುತ್ತಿರುವ ಸಾಮಾಜಿಕ ಸಂದರ್ಭದ ವ್ಯಾಖ್ಯಾನವೂ ಆಗಿಬಿಡುತ್ತದೆ.

ಕವಿತೆಯಲ್ಲಿ ಪರಂಪರೆಯ ಬಗ್ಗೆ ಗೌರವವಿದೆ; ಕಳೆದು ಹೋಗುತ್ತಿರುವ ಜೀವನ ರೀತಿಯ ಸರಳತೆ ಹಾಗೂ ಸದಭಿರುಚಿಯ ಬಗ್ಗೆ ಕಳಕಳಿ ಇದೆ. ಆದರೆ ಆಧುನಿಕ ಜೀವನದ ಅನಿವಾರ್ಯತೆಯನ್ನು ಕವಿತೆ ಒಪ್ಪಿಕೊಳ್ಳುತ್ತದೆ. ಇದು 'ನಾಸ್ತಾಲ್ಜಿಕ್' ಮಾದರಿಯ ಕವಿತೆಯಲ್ಲ. ಬದಲಾಗುತ್ತಿರುವ ಬದುಕಿನ ಅನಿವಾರ್ಯತೆಯನ್ನು, ಈ ಪ್ರಕ್ರಿಯೆಯಲ್ಲಿ ಪಡೆದು ಕೊಳ್ಳುವುದಷ್ಟೇ ಅಲ್ಲ, ಕಳೆದುಕೊಳ್ಳುವುದೂ ಅನಿವಾರ್ಯವೆಂಬ ಕಟು ವಾಸ್ತವವನ್ನು ಕವಿತೆ ತನ್ನ ವಿನ್ಯಾಸದಲ್ಲಿ ಧ್ವನಿಸುತ್ತದೆ.

ನಿಸಾರ್ ಅಹಮದ್ ಅವರ ಜನ ಪ್ರೀತಿ ಪಡೆದ ಮುಖ್ಯ ಕವಿತೆಗಳಲ್ಲಿ 'ಮಾಸ್ತಿ' ಕವಿತೆಯೂ ಒಂದು. ನಿಸಾರರ ಕಾವ್ಯಪ್ರತಿಭೆಯ ಸ್ವರೂಪವನ್ನು ಪರಿಚಯಿಸುವ ಪ್ರಾತಿನಿಧಿಕ ಕವಿತೆಯಾಗಿಯೂ ಈ ಕವಿತೆ ಮಹತ್ವದ್ದೆನ್ನಿಸುತ್ತದೆ.

ಮೃಗಾಯಣ

೧

ಶಿಕಾರಿ ಹನೀಫ್ ಸಾಹೇಬರು ಮೊನ್ನೆ ಸತ್ತರಂತೆ;
ಈ ಹೆಸರು ನೀವು ಕೇಳಿರದಿದ್ದರೂ ಮಲೆನಾಡಿನ
ಆ ಘಾಸಲೆಗೆಲ್ಲ ಅವರ ಕಾಫಿ ಎಸ್ಟೇಟು, ಬಂಗಲೆ
ಹೆಸರುವಾಸಿ. ನಾನು ಕಂಡಾಗ ಸಾಹೇಬರಿಗೆ ಎಡ ಪ್ರಾಯ;
ಮಾತ್ರ ಅವರ ಜೋಡಿ ನಳಿಗೆ ಸದಾ ಚೆಲ್ಲು.
ನಿಕಾ ಕಾಣದ ವಸಾರೆ, ಸೂತಕದ ವಾಸನೆ ಸೂಸದ
ಕೋಣೆಗಳ ಬಂಗಲೆ—ತುಂಬು ಗರ್ಭಿಣಿ: ದೋಸ್ತಿಗಳ
ಕಾಡು ಹರಟೆ, ಪ್ರವಾಸಿಗಳ ಕುತೂಹಲ, ಫೈಸಲಾದ
ಪಶುಗಳ ಸ್ತಬ್ಧ ಜೀವಂತಿಕೆಯಿಂದ.

೨

ಲಾಗಾಯ್ತಿನಿಂದ ಬಲಿಯಾದ ಮೈಸೂರಿನ
ಪ್ರಾಣಿ ಸಂಪತ್ತಿನ ಪ್ರಾಣರಹಿತ ಮಾದರಿಗಳಲ್ಲಿ
ಹುಲ್ಲು ತುರುಕಿಸಿಕೊಂಡು ಕೆಲವು, ದಂತ ಚರ್ಮ ಕೊಂಬು
ನಮ ನಮೂನೆಯ ರೆಕ್ಕೆ ಪುಕ್ಕಗಳ ಪಕ್ಷಪಾತದ
ಸ್ಥಿತಿಯಲ್ಲಿ ಕೆಲವು,
ಕಾಲ ದೇಶಗಳ ಪ್ರಜ್ಞೆಗೆ ಹೊರತಾಗಿಯೂ ಕಾಲ ದೇಶ–
ದಲ್ಲೇ ವ್ಯವಸ್ಥಿತವಾಗಿ, ಪೊದೆ ಬದಲು
ಮುಖಮಲ್ಲಿನಲ್ಲಿ ನೆಲೆಗೊಂಡಿವೆ—ಅನೈಸರ್ಗಿಕವಾಗಿ:
ನಿಸರ್ಗದ ಖಂಡಿತ ಸಾಕ್ಷ್ಯಗಳು.

೩

ಅರಣ್ಯದಜ್ಞಾತ ವೈಶಾಲ್ಯಗಳ ದರ್ಶನಾತೀತ
ಸಂದಿಗೊಂದಿಗಳಲ್ಲಿ ಜನಿಸಿ, ಕಚ್ಚಾಡಿ, ಸತ್ತು
ಅನಾಮವಾಗಬಹುದಿದ್ದ ಸಸ್ತನಿ, ಸರೀಸೃಪದ
ಈ ತಳಿಗಳು,
ಸಾಹೇಬರಿಂದ ಭವಿಷ್ಯಕ್ಕೆ ಪ್ರತಿಯಾಗಿ ಮೋಕ್ಷ ಗಿಟ್ಟಿಸಿ
ಬಂಗಲೆಯ ಸೀಮಿತದಲ್ಲಿ ಜನಪ್ರಿಯವಾಗಿವೆ;

ತಮ್ಮ ಹುಟ್ಟು, ಅಸ್ತಿತ್ವವನ್ನ
ಮೃತ್ಯು ಮುಖೇನ ಗಳಿಸಿದ ಅಪೂರ್ಣ ಪೋಸುಗಳಿಂದ
ಪ್ರಮಾಣಿಸಿಕೊಂಡಿವೆ; ಪೂರ್ಣವಾಗಿವೆ.
ಇವು ಉಸಿರಿದ್ದಾಗ ಹೀಗೇ, ಇಷ್ಟು ಸಮೀಪವೇ
ರೂಬುರೂಬು ನಿರ್ವಾತ ದುರುಗುಟ್ಟಿ,
ಶಂಕೆ ಹುಟ್ಟಿಸಿಯೂ ಶಂಕಿಸಲಾಗದೆ
ನಿರಪಾಯ ನಿಲ್ಲುತ್ತಿದ್ದವೆ, ಶಕ್ತಿ ಚಲನೆಗಳೇ ಮೂಲ–
ಧನವಾದ ಈ ಉದರ ಧ್ಯೇಯಿಗಳು? ಎನಿಸಿ,
ಈ ಸಾಹಚರ್ಯ ಆಶ್ಚರ್ಯ ತರಿಸದಿದ್ದರೆ ಹೇಳಿ!

ಗಾಜುಗಣ್ಣು, ಅರಗಿನ ನಾಲಗೆ, ಹೊಲಿಗೆಯ ಗುರುತು
ಬಿಟ್ಟರೆ ಥೇಟ್ ತಮ್ಮ ಸಜೀವ ಸ್ವರೂಪಗಳೇ,
ಈ ಕ್ಷಣ ನಮ್ಮೆದುರಿದ್ದೂ ಆ ಕಾಲಕ್ಕೆ ಸೇರಿದವರು.

೪

ಹನೀಫ್ ಸಾಹೇಬರು—
ಆರೂವರೆ ಅಡಿಯ ಕೊತ್ತಿಗಣ್ಣಿನ ಪಠಾಣ ದೈತ್ಯ
ತಮ್ಮ ಈ ಸ್ವಯಾರ್ಜಿತ ಸಂಪತ್ತಿನ ನಡುವೆ, ರಾತ್ರಿಯ ವೇಳೆ
ಒಂದೊಂದರ ಗೋತ್ರ, ಮೊಕ್ಕಾಂ, ಮೊಕಾಬಿಲೆ,
ಫಲಾನೆ ಮಿಗಕ್ಕೆ ಶಿಕಾರಿ ಮುಂಚಿನ ತಯಾರಿ,
ಅನಂತರದ ಹುಷಾರಿ ವಗೈರೆಯ ಬಯಾನು ನೀಡಿದ್ದಾಗ
ಅವರೇ ಒಂದು ಪ್ರಾಣಿಯಾಗಿ ಭಯ ಹುಟ್ಟಿಸದಿದ್ದರೆ;
ಮಷ್ಕರಿಗೆ 'ಯಾವತ್ತೂ ನಾನು ಸಾಯುವುದು
ಪ್ರಾಣಿಯಿಂದಲೇ' ಎಂದು ಜೋರಾಗಿ ನಕ್ಕ
ಅಲೆ ಅಲೆ ಆ ಮೂಕ ಮೋರೆಗಳಿಂದ ದ್ವಿಗುಣಿಸಿ,
ಬಂದೆರಗಿ ನೀವೇ ಪ್ರಾಣಿಯಾದಂತೆ ಭಾಸವಾಗದಿದ್ದರೆ ಹೇಳಿ!
ಇನ್ನು ಈ ಪಶುಗಳಿಗೆ ಜೀವವಿದ್ದಾಗೊಂದು
ಪ್ರಯೋಜನವಿದ್ದರೆ, ಸತ್ತ ಮೇಲೆ—ಮದ್ರಾಸು
ಕೇರಳ ಆಂಧ್ರ ಎಲ್ಲೆಲ್ಲಿಂದಲೋ ಪಾದ ಬೆಳೆಸುವ
ನಾಟೀ ವೈದ್ಯರಿಗೆ ಕೊಬ್ಬು ವಿಷ ವಗೈರೆಯಿಂದ,
ಪರದೇಶಿ ಪ್ರವಾಸಿಣಿಯ ಬೆಲ್ಟು ಎಕ್ಕಡಗಳಿಗೆ ಚರ್ಮಗಳಿಂದ
ಸಾಹೇಬರ ಕರ್ಣಗೈಯಿಂದ ಕೊಡುಗೆಗಳಾಗಿ;
ಯೋಗವಶಾತ್ ಅಂದೇ ಶಿಕಾರಿಯಾಗಿ, ಆ ಮಾಂಸ
ಧರ್ಮೋಕ್ತವಾಗಿದ್ದಲ್ಲಿ
ಭಕ್ಷ್ಯದ ದ್ವಾರಾ ಉಪಯುಕ್ತವಾಗುವುದೂ ಅಚ್ಚರಿಯೆ!

೫

ಸಾವು ಸದಾ ಸಂಗಾತಿಯಾದ
ಹನೀಫ್ ಸಾಹೇಬರು, ತಮ್ಮ ಬಲಿಗಳ ತಬ್ಬಲಿಗೊಳಿಸಿ,
ಮೊನ್ನೆ ಶುಕ್ರವಾರ ಸತ್ತರಂತೆ:
ಮುದಿ ಎಮ್ಮೆ ಕಟ್ಟಲು ಹೋಗಿ, ಅದು ಒದರಿ, ಏರಿನಿಂದ ಬಿದ್ದು.
ಅವರ ಭವಿಷ್ಯದ್ವಾಚನ ನಿಜವಾಯಿತಲ್ಲ!
'ಪರಮ ದಯಾಳುವಾದ ಅಲ್ಲಾ, ಆ ಸಾಹಸಿಯ
ಆತ್ಮಕ್ಕೆ ಶಾಂತಿ ನೀಡಲಿ. ಆಮೀನ್.'

★ ★ ★

(ಕವನ ಸಂಕಲನ : 'ಸ್ವಯಂಸೇವೆಯ ಗಿಳಿಗಳು')



‘ಮೃಗಾಯಣ’: ನರ ಪ್ರಾಣಿಯ ಅಸ್ತಿತ್ವ-ಅವಸಾನಗಳ ಕಗ್ಗಂಟಿನ ಕಾಣ್ಕೆ

♦ *ರಾಘವೇಂದ್ರ ಪಾಟೀಲ*

ಕನ್ನಡ ಕಾವ್ಯಕ್ಕೆ ನವ್ಯ ಮಾರ್ಗವು ಅನೇಕ ಗುಣಾತ್ಮಕ ಅಂಶಗಳನ್ನು ಸೇರಿಸಿದ್ದು ನಿಜವಾದರೂ ಕಾವ್ಯದ ಸಂವಹನಶೀಲತೆಯ ಬಗೆಗೆ, ಕಾವ್ಯದ ಸುಭಗತೆಯ ಬಗೆಗೆ ಅದು ನೇತ್ಯಾತ್ಮಕ ನಿಲವು ತಾಳಿದ ಸಂಗತಿಯೂ ನಿಜವಾದದ್ದು. ನವ್ಯದ ಸಂದರ್ಭದಲ್ಲಿ ಕಾವ್ಯ ಮತ್ತು ರಸಿಕನ ನಡುವೆ ದುರೂಹ್ಯತೆಯ ಕಂದರವೊಂದು ಬೆಳೆದು ನಿಂತಿತು. ನವ್ಯದ ಅನೇಕ ಲೇಖಕರು ಈ ದುರೂಹ್ಯತೆಯನ್ನು ಕಾವ್ಯದ ಸಾರ್ಥಕತೆಯ ಮಾನಕವಾಗಿ ಪರಿಗಣಿಸಿದರು. ಒಬ್ಬ ಕವಿಯ ಬೆಳವಣಿಗೆಯನ್ನು ಆ ಕವಿಯು ಕಳೆದುಕೊಳ್ಳುವ ಓದುಗರ ಸಂಖ್ಯೆಯನ್ನು ಅವಲಂಬಿ ಸಿರುತ್ತದೆ ಎನ್ನುವ ಹುಸಿ ತಾತ್ವಿಕತೆಯೊಂದನ್ನು ಭ್ರಮಿಸುತ್ತ ತಮ್ಮ ಕಾವ್ಯದ ದುರೂಹ್ಯತೆಯನ್ನು ಸಮರ್ಥಿಸಿಕೊಳ್ಳ ತೊಡಗಿದರು. ಇಂಥ ನಿಲವು ಕಾವ್ಯದ ಓದುಗನನ್ನು ಅಮಾನ್ಯ ಗೊಳಿಸುವಂತಹದ್ದಾಗಿದ್ದು, ಇದು ಭಾರತೀಯ ಕಾವ್ಯ ಪರಂಪರೆಗೆ ಹೊರತಾದುದಾಗಿದೆ. ಭಾರತೀಯ ಕಾವ್ಯ ಮೀಮಾಂಸೆ ಮತ್ತು ಕಾವ್ಯ ಪರಂಪರೆಗಳು ಕಾವ್ಯ ರಸಿಕನಿಗೆ ವಿಶೇಷ ಮಹತ್ವ ನೀಡುತ್ತವೆ. ಕಾವ್ಯ ರಸಿಕನನ್ನು ಕವಿಯ ಸಮಾನ ಸ್ಥಾನದಲ್ಲಿ ಕುಳ್ಳಿರಿಸುತ್ತವೆ. ಸರಳತೆ ಸುಭಗತೆಗಳನ್ನು ಕಾವ್ಯ ಸೌಂದರ್ಯದ ಮುಖ್ಯಾಂಶಗಳಾಗಿ ಪರಿಗಣಿಸಿದ್ದಲ್ಲದೆ, ಭಾಷಿಕವಾಗಿ ಸಾಧಿಸುವ ಪಾರದರ್ಶಕತೆಯು ಕಾವ್ಯದ ಒಂದು ದೊಡ್ಡ ಸವಾಲೆಂದು ಅವು ಪರಿಗಣಿಸಿದವು. ಇಂಥ ಸವಾಲಿನ ನೆಲೆಯಲ್ಲಿಯೇ ಕನ್ನಡದ

ಶ್ರೇಷ್ಠ ತತ್ತ್ವಪದಗಳು ಮೂಡಿಬಂದಿರುವುದನ್ನು ಗಮನಿಸಬಹುದು. ನವ್ಯವು ಪರಂಪರೆಯಲ್ಲಿನ ಈ ಸಂಗತಿಗಳ ಬಗೆಗೆ ಉಪೇಕ್ಷೆಯ ನಿಲವು ತಾಳಿತು.

ಹಾಗೆಯೇ ಕಥನದ ಬಗೆಗೂ ನವ್ಯ ಮಾರ್ಗವು ಹೆಚ್ಚು ನೇತ್ಯಾತ್ಮಕ ನಿಲವನ್ನು ತಾಳಿತು. ಪಶ್ಚಿಮದ ಪ್ರಭಾವದಲ್ಲಿ ನವೋದಯದ ಭಾವಗೀತೆಯೇ ಇಂಥ ಮಾರ್ಗವನ್ನು ಅನುಸರಿಸಿತ್ತಾದರೂ ನವೋದಯವು ಮಾಸ್ತಿ, ಕುವೆಂಪು ಮುಂತಾದವರ ಕಥನ ಕವನಗಳ ವಿಶೇಷ ಪ್ರಭೇದದ ಮೂಲಕ ಕಾವ್ಯವನ್ನು ಕಥನಾಂಶದ ಸಂಪರ್ಕದಿಂದ ಕಳಚಿಕೊಳ್ಳದಂತೆ ನೋಡಿಕೊಂಡಿತು. ಭಾವಗೀತೆಗಳ ಭಾವುಕ ತೀವ್ರತೆ, ಭಾಷಿಕ ಪಾರದರ್ಶಕತೆ ಮತ್ತು ಕಥನ ಕವನಗಳ ಕಥನಾಂಶ ಇವುಗಳ ಮೂಲಕ ನವೋದಯವು ಕಾವ್ಯ ರಸಿಕನೊಂದಿಗೆ ಸೇಂದ್ರಿಯ ಸಂಬಂಧವನ್ನು ಉಳಿಸಿಕೊಂಡಿತು.

ಕವಿ ಕೆ. ಎಸ್. ನಿಸಾರ್ ಅಹಮದ್ ಮುಖ್ಯವಾಗಿ ನವ್ಯದ ಸಂದರ್ಭದಲ್ಲಿ ಬೆಳೆದು ಬಂದ ಕವಿಯಾದರೂ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ಹೇಳಿಕೊಳ್ಳುತ್ತ ನವ್ಯದ ಅನೇಕ ನೇತ್ಯಾತ್ಮಕ ಅಂಶಗಳನ್ನು ನಿವಾರಿಸಿಕೊಂಡವರು. ನವೋದಯ ಮತ್ತು ನವ್ಯ ಕಾವ್ಯ ಮಾರ್ಗಗಳ ಇತ್ಯಾತ್ಮಕ ಅಂಶಗಳನ್ನು ಅಳವಡಿಸಿಕೊಳ್ಳುತ್ತ ತಮ್ಮ ಕಾವ್ಯ ಮಾರ್ಗವನ್ನು ರೂಪಿಸಿಕೊಂಡವರು. ಇಂಥ ನೆಲೆಯಲ್ಲಿಯೇ ಅವರ ಕಾವ್ಯ ಭಾಷಿಕ ಪಾರದರ್ಶಕತೆ, ಕಥನಾಂಶದ ಗರಿಷ್ಠ ಬಳಕೆಗಳ ಮೂಲಕ ಸುಭಗತೆಯ ಸುವಾಸನೆಯನ್ನು ಪಡೆದುಕೊಳ್ಳುತ್ತದೆ. ಇದರ ಜೊತೆ ಜೊತೆಗೇ ನವ್ಯದ ಕಾವ್ಯಕ್ರಿಯೆಯ ಬಗೆಗಿನ ಅತ್ಯಂತ ಗಂಭೀರ ನಿಲವಾದ, ಕಾವ್ಯವು ಜೀವನ ಶೋಧನೆಯ ಕಠಿಣವಾದ ಮಾರ್ಗ ಎನ್ನುವುದನ್ನು ನಿಸಾರರು ಒಪ್ಪಿಕೊಂಡವರು. ಇಂಥ ವಿಭಿನ್ನ ಕಾವ್ಯ ಮಾರ್ಗಗಳ ಸಂಯೋಜನಶೀಲತೆಯ ಮೂಲಕ ನಿಸಾರ್ ಅಹಮದ್ ಅವರ ಕಾವ್ಯ ವ್ಯಕ್ತಿತ್ವವು ಗಾಂಭೀರ್ಯ ಮತ್ತು ಜನಾದರಗಳೆರಡನ್ನೂ ಏಕ ಕಾಲಕ್ಕೆ ಸಾಧಿಸಿಕೊಳ್ಳಲು ಸಾಧ್ಯವಾಗಿದೆ. ನಿಸಾರರದು ಕಾವ್ಯ ರಸಿಕನೊಂದಿಗೆ ಗರಿಷ್ಠ ಸಂಬಂಧವನ್ನು ಸಾಧಿಸಿಕೊಂಡ ಕಾವ್ಯ ವ್ಯಕ್ತಿತ್ವ.

ಪ್ರಸ್ತುತ 'ಮೃಗಾಯಣ' ಕವಿತೆಯು ನಿಸಾರರ ಇಂಥ ಕಾವ್ಯ ವ್ಯಕ್ತಿತ್ವಕ್ಕೆ ಅನುಗುಣ ವಾಗಿಯೇ ಇದೆ. ಕಥನಾಂಶದ ಬಳಕೆ, ಭಾಷಿಕ ಪಾರದರ್ಶಕತೆ ಮತ್ತು ಸುಭಗತೆ, ಮನುಷ್ಯತ್ವದ ಮತ್ತು ಜೀವನದ ಬಗೆಗಿನ ಗಂಭೀರ ಶೋಧನೆ—ಈ ಕಾವ್ಯದ ಕಟ್ಟೋಣದ ಇತ್ಯಾತ್ಮಕತೆಗೆ ಕಾರಣವಾಗಿವೆ. ಹಾಗೆಯೇ ನವ್ಯದ ಒಂದು ವಿಶೇಷ ಉಪಕರಣವಾದ ವ್ಯಂಗ್ಯವನ್ನು ಅಳವಡಿಸಿಕೊಳ್ಳುವ ಮೂಲಕ 'ಮೃಗಾಯಣ'ವು ತಾನು ಕಟ್ಟಿಕೊಡುವ ಅನುಭವಕ್ಕೆ ವಿಶೇಷ ಮೊನಚನ್ನು ಸಾಧಿಸುತ್ತದೆ. ಇನ್ನೊಂದು ಸಂಗತಿಯನ್ನು ಇಲ್ಲಿಯೇ ಹೇಳಬೇಕು. ಅದೆಂದರೆ, ನವ್ಯ ಮಾರ್ಗವು ಮನುಷ್ಯ ಕೇಂದ್ರಿತ ತಾತ್ವಿಕತೆಯ ನೆಲೆಗಟ್ಟಿನ ಮೇಲೆ ರೂಪುಗೊಂಡದ್ದು. ಇಡೀ ಪ್ರಪಂಚ ಪ್ರಕ್ರಿಯೆಯ ಉದ್ದೇಶ ಮನುಷ್ಯ ಪಾರಮ್ಯವನ್ನು ಸಾಧಿಸುವುದಾಗಿದೆ ಎಂತೆನ್ನುವ ತಾತ್ವಿಕತೆಯ ಭ್ರಮೆಯಲ್ಲಿ ಬೆಳೆದು ಬಂದದ್ದು. ಆದ್ದರಿಂದಲೇ ಅದಕ್ಕೆ ಮನುಷ್ಯನ ಹೊರಗಿನದು ಗೌಣವಾಗುತ್ತದೆ; ತಾತ್ಸಾರಕ್ಕೆ ಒಳಗಾಗುತ್ತದೆ. ಮನುಷ್ಯ ಪ್ರಪಂಚಕ್ಕೆ ಹೊರತಾದ, ಅದರಿಂದ ಸ್ವತಂತ್ರವಾದ ಅಸ್ತಿತ್ವ

ಹೊಂದಿದ ಇನ್ನೊಂದು ಪ್ರಪಂಚ ಇರುವ ಬಗೆಗೆ ನವ್ಯ ಮಾರ್ಗವು ಕುರುಡುಗಣ್ಣು ತಾಳುತ್ತದೆ. ನಿಸಾರರ 'ಮೃಗಾಯಣ' ಕವಿತೆಯು ನವ್ಯದ ಈ ತಾತ್ವಿಕತೆಯನ್ನು ನಿರಾಕರಿಸುತ್ತದೆ. ಶಿಕಾರಿ ಹನೀಫರ ಬದುಕು ಒಂದು ತಾರ್ಕಿಕತೆಯನ್ನು ರೂಪಿಸಿಕೊಂಡಿದ್ದರೆ ಅದಕ್ಕೆ ಹೊರತಾಗಿ ಮತ್ತು ಸ್ವತಂತ್ರವಾಗಿ, ಪ್ರಾಣಿ ಪ್ರಪಂಚವನ್ನು ಒಳಗೊಂಡ ಪರಿಸರವು ತನ್ನ ಬದುಕನ್ನು ಕುರಿತಂತೆ ಇನ್ನೊಂದೇ ಆದ ತಾರ್ಕಿಕತೆಯನ್ನು ಬೆಳೆಸಿಕೊಂಡಿದೆ. ಪರಿಸರದ ಬದುಕಿನ ಈ ತಾರ್ಕಿಕತೆಯನ್ನು ಹನೀಫರು ತಮಾಷೆ ಮಾಡುತ್ತ ಅದರ ಅಸ್ತಿತ್ವವನ್ನು ಅಮಾನ್ಯ ಮಾಡುತ್ತಾರೆ. ಆದರೆ ಹನೀಫರ ಸಾವಿನಲ್ಲಿ ಪರಿಸರದ ಬದುಕಿನ ತಾರ್ಕಿಕತೆಯು ತನ್ನ ಅಸ್ತಿತ್ವವನ್ನು ಸಾಬೀತುಪಡಿಸುತ್ತದೆ. ನಿಸಾರರ ಅನೇಕ ಕವಿತೆಗಳು ನವ್ಯ ಮಾರ್ಗದ ಇಂತಹ ತಾತ್ವಿಕತೆಯನ್ನು ನಿಕಷಕ್ಕೆ ಒಡ್ಡುತ್ತವೆ.

ನಿಸಾರರ 'ಮೃಗಾಯಣ' ಕವಿತೆ ಮನುಷ್ಯತ್ವದ ಅಹಂಕಾರವನ್ನು ವ್ಯಂಗ್ಯಕ್ಕೆ ಈಡು ಮಾಡುತ್ತದೆ. ಈ ಮನುಷ್ಯತ್ವವು ಸೃಜನಶೀಲತೆಯನ್ನು ಕಳೆದುಕೊಂಡಿರುವಂತಹದು.

> **'ನಿಕಾ ಕಾಣದ ವಸಾರೆ, ಸೂತಕದ ವಾಸನೆ ಸೂಸದ**
> **ಕೋಣೆಗಳ ಬಂಗಲೆ'**

ಕವಿತೆಯ ಈ ಸಾಲುಗಳು ಮನುಷ್ಯ ಕಟ್ಟಿಕೊಂಡಿರುವ ಆವರಣವನ್ನು ಹೇಳುವುದಲ್ಲದೆ ಹುಟ್ಟನ್ನು ಎಷ್ಟು ಇಂದ್ರಿಯಗಮ್ಯವಾಗಿಸುತ್ತವೆ ಎನ್ನುವುದನ್ನು ಗಮನಿಸಬಹುದು. 'ಸೂತಕ'ವು ಬಾಣಂತಿ ಕೋಣೆಯ ಕತ್ತಲು, ಅಲ್ಲಿನ ಗುನುಗು ವಾಸನೆ ಮತ್ತು ಲೋಭಾನದ ಹೊಗೆಗಳನ್ನು ನಮ್ಮ ಇಂದ್ರಿಯಗಳಿಗೆ ಒಡ್ಡುತ್ತದೆ. ಗರ್ಭಕಟ್ಟಿ ಕೊಳ್ಳುವ ಶಾಬ್ದಿಕತೆಯ ಇಂಥ ಮಾರ್ಗವು ನವ್ಯದ ಒಂದು ಮುಖ್ಯ ಬಳುವಳಿಯಾಗಿದೆ.

ಏನನ್ನೂ ಹುಟ್ಟಿಸಲಾಗದ ಮನುಷ್ಯತ್ವದ ಅಹಂಕಾರವು ಸಾವನ್ನು ನೀಡುವ ಕ್ರೌರ್ಯವನ್ನು ಯಥೇಚ್ಛವಾಗಿ ರೂಪಿಸಿಕೊಂಡಿದೆ (ಅವರ ಜೋಡಿ ನಳಿಗೆ ಸದಾ ಚೆಲ್ಲು). ಮನುಷ್ಯರಿಗೆ ಪ್ರಾಣಿ ಪ್ರಪಂಚದಲ್ಲಿ ಅಂತರ್ಗತವಾಗಿರುವ ಜೀವಂತಿಕೆಯನ್ನು ಹೀರಿ ತೆಗೆದು ಅಲ್ಲಿ ಹುಲ್ಲನ್ನು ತುಂಬಿ ನಿರ್ಜೀವವನ್ನು ಪ್ರತಿಷ್ಠಾಪಿಸುವ ತುರುಸು! ಎಲ್ಲವನ್ನೂ ಅನೈಸರ್ಗಿಕಗೊಳಿಸುವ ಅಹಂಕಾರ! ಇಡೀ ನಿಸರ್ಗದ ಅನೂಹ್ಯತೆ, ಅಗಾಧತೆಗಳನ್ನು ತೆಗೆದು ಹಾಕಿ ತನ್ನ ಆವರಣದ ಸೀಮಿತತೆಗೆ ಒಳಪಡಿಸುವ ಆತುರ!

> **'ಅರಣ್ಯದಜ್ಞಾತ ವೈಶಾಲ್ಯಗಳ ದರ್ಶನಾತೀತ**
> **ಸಂದಿಗೊಂದಿಗಳಲ್ಲಿ ಜನಿಸಿ, ಕಚ್ಚಾಡಿ, ಸತ್ತು**
> **ಅನಾಮವಾಗಬಹುದಿದ್ದ ಸಸ್ತನಿ, ಸರೀಸೃಪದ**
> **ಈ ತಳಿಗಳು,**
> **ಸಾಹೇಬರಿಂದ ಭವಿಷ್ಯಕ್ಕೆ ಪ್ರತಿಯಾಗಿ ಮೋಕ್ಷ ಗಿಟ್ಟಿಸಿ**
> **ಬಂಗಲೆಯ ಸೀಮಿತದಲ್ಲಿ ಜನಪ್ರಿಯವಾಗಿವೆ;**
> **ತಮ್ಮ ಹುಟ್ಟು, ಅಸ್ತಿತ್ವವನ್ನ**
> **ಮೃತ್ಯು ಮುಖೇನ ಗಳಿಸಿದ ಅಪೂರ್ಣ ಪೋಸುಗಳಿಂದ**
> **ಪ್ರಮಾಣಿಸಿಕೊಂಡಿವೆ; ಪೂರ್ಣವಾಗಿವೆ.'**

ಜೊತೆಗೆ ಈ ಪ್ರಾಣಿ ಪ್ರಪಂಚವನ್ನು 'ಉದರ ಧ್ಯೇಯಿ'ಗಳು ಎಂದು ಕರೆದು ತನ್ನ ಬುದ್ಧಿವಂತಿಕೆಯನ್ನು ಮೆರೆಯುವ ಅಹಂಕಾರ.

ಮನುಷ್ಯ ಕೇಂದ್ರಿತ ತಾತ್ವಿಕತೆಯನ್ನು 'ಮೃಗಾಯಣ' ಕವಿತೆ ಇನ್ನೊಂದು ರೀತಿಯಿಂದಲೂ ಹೇಳುತ್ತದೆ. ನಿಸರ್ಗವನ್ನು ಕೇವಲ ಪ್ರಯೋಜನವಾದೀ ದೃಷ್ಟಿಯಿಂದ ನೋಡುತ್ತ, ಮನುಷ್ಯನಿಗೆ ಯಾವ ನೆಲೆಯಲ್ಲಿ ಉಪಯುಕ್ತವಾಗುತ್ತದೆಂದು ಲೆಕ್ಕ ಹಾಕುತ್ತ ಪರಿಸರದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ನೆಲೆ ಇದು.

'... ಈ ಪಶುಗಳಿಗೆ ಜೀವವಿದ್ದಾಗೊಂದು
ಪ್ರಯೋಜನವಿದ್ದರೆ, ಸತ್ತ ಮೇಲೆ—ಮದ್ರಾಸು
ಕೇರಳ ಆಂಧ್ರ ಎಲ್ಲೆಲ್ಲಿಂದಲೋ ಪಾದ ಬೆಳೆಸುವ
ನಾಟೀ ವೈದ್ಯರಿಗೆ ಕೊಬ್ಬು ವಿಷ ವಗೈರೆಯಿಂದ,
ಪರದೇಶಿ ಪ್ರವಾಸಿಣಿಯ ಬೆಲ್ಟು ಎಕ್ಕಡಗಳಿಗೆ ಚರ್ಮಗಳಿಂದ
ಸಾಹೇಬರ ಕರ್ಣಗೈಯಿಂದ ಕೊಡುಗೆಗಳಾಗಿ;
ಯೋಗವಶಾತ್ ಅಂದೇ ಶಿಕಾರಿಯಾಗಿ, ಆ ಮಾಂಸ
ಧರ್ಮೋಕ್ತವಾಗಿದ್ದಲ್ಲಿ
ಭಕ್ಷ್ಯದ ದ್ವಾರಾ ಉಪಯುಕ್ತವಾಗುವುದೂ ಅಚ್ಚರಿಯೆ!'

ಇಲ್ಲಿನ 'ಧರ್ಮೋಕ್ತ' ಎನ್ನುವ ಶಬ್ದವು ಸಾಧಿಸುವ ವ್ಯಂಗ್ಯವನ್ನು ಗಮನಿಸಬೇಕು. ಮನುಷ್ಯ ಕಟ್ಟಿಕೊಂಡ ಧರ್ಮದ ನೆಲೆಗಟ್ಟು ಯಾವ ಬಗೆಯದೆನ್ನುವುದನ್ನೂ ಇದು ಸೂಚಿಸುತ್ತದೆ. ಇಷ್ಟಲ್ಲದೆ, ಎಷ್ಟೆಲ್ಲ ಕರ್ಣಗೈಯಿಂದ ದಾನ ನೀಡಿದ, ಎಷ್ಟೆಲ್ಲ ಪ್ರಾಣಿಗಳ ಮಾಂಸವನ್ನು ಧರ್ಮೋಕ್ತವಾಗಿ ಅನ್ನದಾನಗೈದ ಹನೀಫ್ ಸಾಹೇಬರು ಶುಕ್ರವಾರದ ಪವಿತ್ರ ದಿನದಂದೇ ಸಾಯಬೇಕಲ್ಲವೆ! ಮನುಷ್ಯನನ್ನು ಕಾಪಾಡಲೆಂದೇ ನಿರ್ಮಾಣಗೊಂಡ ದೇವರು ಹನೀಫ್ ಸಾಹೇಬರ ಆತ್ಮಕ್ಕೆ ಶಾಂತಿ ನೀಡದೇ ಇರುತ್ತಾನೆಯೇ?

—ಹೀಗೆ, 'ಮೃಗಾಯಣ' ಕವಿತೆಯು ತನ್ನ ಉದ್ದಕ್ಕೂ ಬಳಸಿಕೊಳ್ಳುವ ವ್ಯಂಗ್ಯ ಮತ್ತು ಗರ್ಭಕಟ್ಟಿಕೊಳ್ಳುವ ಶಾಬ್ದಿಕತೆಯ ನಿರೂಪಣೆಗಳು ನವ್ಯ ಮಾರ್ಗ ನೀಡಿದ ರೀತಿಗಳಾದರೂ ಈ ರೀತಿಗಳ ಮೂಲಕ ನವ್ಯಕ್ಕೆ ಹೊರತಾದ ತಾತ್ವಿಕತೆಯನ್ನು ಕಟ್ಟಿಕೊಡುತ್ತದೆ. ಮನುಷ್ಯ ಧರಿಸಿರುವ ಮುಖವಾಡದ ಅಡಿಗೆ ಅಡಗಿರುವ ನಿಜದ ನೆಲೆಯ ದರ್ಶನವನ್ನು ಮಾಡಿಸುತ್ತ ನಮ್ಮ ಅಹಂಕಾರದ ತಲೆ ತಗ್ಗುವಂತೆ ಮಾಡುತ್ತದೆ.

ಚಿಕ್ಕವರನ್ನು ತಿದ್ದಬಹುದೇ ಹೊರತು ದೊಡ್ಡವರನ್ನು ತಿದ್ದಲು ಆಗದು. ಹಾಲನ್ನು ಮೊಸರು ಮಾಡಬಹುದೇ ವಿನಾ ಮೊಸರನ್ನು ಹಾಲಾಗಿ ಪರಿವರ್ತಿಸಲಾಗದು.

ರಾಮನ್ ಸತ್ತ ಸುದ್ದಿ

ರಾಮನ್ ಸತ್ತ ಸುದ್ದಿ ಓದಿದ ಬೆಳಿಗ್ಗೆ ಶಿವಮೊಗ್ಗೆಗೆ
ದರಿದ್ರ ಥಂಡಿ; ಅಸ್ತಿತ್ವದ ಅಸ್ಪಷ್ಟ ಜಿಜ್ಞಾಸೆ, ಗುರುತಿಸಲಾಗದ
ಕಸಿವಿಸಿ, ಮುಜುಗರ ತಾಳದೆ ವಾಕಿಂಗ್ ಹೊರಟೆ; ಬೀದಿ–
ಗದೇ ಮಾಮೂಲು ಭಂಗಿ; ಯಾರೂ ದುಃಖಿಸುತ್ತಿಲ್ಲವೆನ್ನಿಸಿ
ದುಃಖವಾಯಿತು. ಮೈಲಿಗೆ
ಪರಿಚಿತ ಸಿಕ್ಕಿದ್ದು ನವುಲೆ ಗ್ರಾಮದ ಹನುಮ;
ಯಾರದೋ ಗದ್ದೆಯಲ್ಲಿ ಗೇಯುವ, ಮೋಟು ಬೀಡಿಯ
ಕಿವಿಗೆ ಸಿಕ್ಕಿಸಿಕೊಳ್ಳುವ, ತೊಡೆಯ ಪರಪರ ಕೆರೆದುಕೊಳ್ಳುವ,
ಹಳ್ಳಿಯೇ ಹನುಮಿಸಿದಂತೆ ನನಗೆ ಭಾಸವಾಗುವ ವಿಚಿತ್ರ—
ಅಭ್ಯಾಸರೂಪಿತ ನಿರ್ದಿಷ್ಟ ಅಳತೆಯ ನಿರ್ವಿವಿಧ ಕೂಗಿಂದ
ಹಕ್ಕಿಗಳ ಅಟ್ಟುತಿದ್ದ; ಪಾತಿ ಸರಿಗೊಳಿಸುತಿದ್ದ; ಅಪ್ರಚಲಿತ
ಹಳ್ಳಿಪದದ ಅಶಾಸ್ತ್ರೀಯ ಮಟ್ಟನ್ನು ಕುರುಕುತಿದ್ದ.

ಕಂಡೊಡನೆ, 'ಹ್ಯಾಂಗಿದೀರಿ' ಅಂದ;
ಈಚೀಚೆಗೆ ಅಪರೂಪವಲ್ಲ ಅಂದ, ಯಾಕೋ ಬಡವಾಗಿದ್ದೀರಿ
ಅಂದ, ಮಳೆ ಬೇಕಾಗಿಲ್ಲ ಅಂದ, ಫಸಲನ್ನು ಅಂದಾಜಿಸಿದ,
ನೆರೆಯವನೊಡನೆ ದಿನವಹಿ ಕಾದಾಟ ಸಾಕಾಗಿದೆ ಮಾರಾಯರೇ
ಅಂದ—ಕೊರೆಯುತ್ತಲೇ ಇದ್ದ—ಹೂಂಗುಟ್ಟಿದೆ—
ಅವನ ಮಾತಿಗೆ ಮಂಜಿನೊಳಗಿನ ಸೂರ್ಯ ನನ್ನ ಪ್ರಜ್ಞೆ.
'ರಾಮನ್ ಸತ್ತರೋ ಹನುಮ' ಅನ್ನಬೇಕು, ಆಗ ತಡೆದು
ಸುಮ್ಮನಾದೆ. ರಾಮನ್ ಅರ್ಥೈಸಿಕೊಳ್ಳಬಹುದೆ ಇವನ
ಅಶಿಕ್ಷಿತ ಅರಿವಿಗೆ?

ಆ ಕಡೆ ರಾಮನ್, ಈ ಕಡೆ ಹನುಮ;
ದಿನವಿಡೀ ಮೈ ಕೆಸರಿಸಿಕೊಂಡು, ನನ್ನಂಥವ ನೆನೆಯಲೂ
ನಿರಾಕರಿಸುವ ತಂಗಳುಂಡು, ರಾತ್ರಿ ಕಳ್ಳಭಟ್ಟಿಯ ಹೊಡೆದು—
ನಾಡಿದ್ದು ನಾಳೆಯ, ನಾಳೆ ಇವೊತ್ತಿನ, ಇಂದು ನೆನ್ನೆಯ
ಪುನರಾವರ್ತನೆಯ ಏಕತಾನತೆಯಲ್ಲಿ—ಲೋಕ ಮರೆಯುವ
ಹನುಮನಿಗೆ ರಾಮನ್ ಹೋದರೆಷ್ಟೋ ರಸೆಲ್ ಹೋದರೂ ಅಷ್ಟೆ.
ಪತ್ರಿಕೆಯೋದುವುದಿಲ್ಲ; ನಾನು ಕವಿಯೆಂಬುದು ಗೊತ್ತಿಲ್ಲ:

ಹೊಟ್ಟೆಬಟ್ಟೆಯ ಅಗತ್ಯ ಮೀರಿದ ನನ್ನ ಹಸಿವು, ಅಸ್ವಸ್ಥತೆ
ಅರಿತಿಲ್ಲ; ಲೋಕದ ಪ್ರತಿನಿತ್ಯದ ಆಗು–ಹೋಗುಗಳಿಗೆ ಪ್ರತಿಕ್ರಿಯಿಸುವ
ಸೂಕ್ಷ್ಮತೆ ಕಂಡಿಲ್ಲ; ಅನೇಕ ಮಟ್ಟದಲ್ಲಿ ಬಾಳುವ ಪ್ರಶ್ನೆಯೇ
ಉದ್ಭವಿಸಿಲ್ಲ—ಆದರೂ ತೃಪ್ತ...
ಗದ್ದೆ, ಧಣಿ, ಹ್ಯಾಪ ಮೋರೆಯ ಹೆಂಡಿರು, ಸಿಂಬಳಸುರುಕ ಮಕ್ಕಳು,
ದೇವರ ಗ್ರಾಮ್ಯ ಕಲ್ಪನೆ, ಊರಿನ ಪುಢಾರಿ—ಇಷ್ಟೇ ಜಗತ್ತು—
ಆದರೂ ತೃಪ್ತ...

ನನ್ನಂತೆ ಕನ್ನಡ, ಗಡಿ, ನದಿ, ಪದ್ಯ, ಪ್ರತಿಷ್ಠೆ ಕಾಡುವುದಿಲ್ಲ—
ಹೆಂಡತಿಗೆ ಚೋಲಿ, ಹಿರಿ ಮಗನ ಶಾಲೆ
ಬೆಲ್ಲದ ಕಾಫಿಯ ಹಾಲೇಶಿಯ ಸಾಲ
ಹೊತ್ತು ಹೊತ್ತಿಗೆ ರುಚಿ ಗೌಣ ಅರಸಿಕ ಕೂಳು—ಚಿಂತೆಯಿಲ್ಲವೆಂದಲ್ಲ—
ಆದರೂ ತೃಪ್ತ...

ಇದ ಮೆಚ್ಚಿ, ಕರುಬಿ, ಪೇಚಾಡಿ ನಡೆದಾಗ
ದೂರದಿಂದ, ಪ್ರಕೃತಿಯ ಅಗಾಧದಲ್ಲಿ ಹಿಮಾಚ್ಛಾದಿತ ಹನುಮ,
ಅವನ ಕೂದಲೆಳೆಯ ಕೂಗು—
ಅರ್ಥ ತೋರದ ಚುಕ್ಕೆ.

ಇಲ್ಲಿಂದ ನನಗೆ ವರ್ಗವಾಗುತ್ತೆ—ಒಂದು ದಿನ
ಹನುಮ ಸಾಯುತ್ತಾನೆ—ತಿಳಿಯುವುದಿಲ್ಲ.
ಇಲ್ಲಿನ ಹಳಬ ಅಲ್ಲಿ ಹೊಸಬನಾಗುತ್ತೇನೆ,
ಎಲ್ಲೋ ಹೇಗೋ ಸಾಯುತ್ತೇನೆ—ತಿಳಿಯುವುದಿಲ್ಲ.
ನನ್ನ ಹೆಸರು, ಹುದ್ದೆ, ಪದ್ಯ, ತಳಮಳ, ಬದುಕು—ತಿಳಿಯುವುದಿಲ್ಲ.
ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು—
ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವ ಸಂಚಾರ—ತಿಳಿಯುವುದಿಲ್ಲ.

ಕೊರಲು ಬಿಗಿದು ಒಬ್ಬಂಟಿ ನಿಧಾನ ನಡೆದಂತೆ
ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು...

★ ★ ★

(ಕವನ ಸಂಕಲನ: 'ನಾನೆಂಬ ಪರಕೀಯ')

‘ರಾಮನ್ ಸತ್ತ ಸುದ್ದಿ’: ಬದುಕು–ಸಾವಿನ ಪ್ರಖರ ಭಾವಾತ್ಮಕ ಮಂಥನ



♦ ಶರತ್ ಕಲ್ಕೋಡ್

ನಿತ್ಯ ಜೀವನದಲ್ಲಿ ನಡೆಯುವ ಸಾಮಾನ್ಯ ಘಟನೆಯೊಂದು ಕವಿತೆಯ ವಸ್ತುವಾಗಿ, ಸಾರ್ವಕಾಲಿಕ ಮೌಲ್ಯವನ್ನು ಪಡೆಯಲು ಸಾಧ್ಯವೆ? ‘ಸಾಧ್ಯ’ವೆನ್ನುತ್ತಾರೆ ಕನ್ನಡದ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್. ‘ರಾಮನ್ ಸತ್ತ ಸುದ್ದಿ’ ಕವನದ ಮೂಲಕ ಅದನ್ನು ಸಾಧಿಸಿ ತೋರಿಸಿದ್ದಾರೆ. ಈ ಕವನವನ್ನು ಬರೆದದ್ದು ೧೯೭೦ರಲ್ಲಿ, ಕವಿ ಶಿವಮೊಗ್ಗೆಯಲ್ಲಿದ್ದಾಗ. ನಿಸಾರರ ಐದನೆಯ ಕವನ ಸಂಗ್ರಹ ‘ನಾನೆಂಬ ಪರಕೀಯ’(೧೯೭೨)ದಲ್ಲಿ ಸೇರಿದೆ. ಕವನ ಆರಂಭವಾಗುವುದೇ ಬೆಳಕು ಹರಿಯುತ್ತಿರುವ ಮುಂಜಾನೆಯಿಂದ. ಆದರೆ ಆ ಮುಂಜಾನೆ ಕವಿಯ ಪಾಲಿಗೆ ಉತ್ಸಾಹದಾಯಕವಾಗಲಿ, ಚೈತನ್ಯಪೂರಕವಾಗಿ ಆಗಿರಲಿಲ್ಲ. ಮಂಕು ಬಡಿದಿದ್ದ ವಾತಾವರಣದ ಜೊತೆ ಜೊತೆಗೆ, ಬುದ್ಧಿಗೆ ಮಂಕು ಕವಿಸುವಂತಹ ಪತ್ರಿಕೆಯಲ್ಲಿ ಪ್ರಕಟವಾದ ‘ಭಾರತಕ್ಕೆ ನೊಬೆಲ್ ಪಾರಿತೋಷಕ ತಂದ ಹಿರಿಮೆಗೆ ಪಾತ್ರ’ವಾಗಿದ್ದ ಡಾ. ಸಿ. ವಿ. ರಾಮನ್ ಸತ್ತ ಸುದ್ದಿ. ದುಃಖದ ಭಾವವನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ಜೊತೆಗೆ ಬೇರೆ ಯಾರೂ ಇಲ್ಲ. ಏಕಾಂತವಾಗಿ ಹೆಜ್ಜೆ ಕಿತ್ತಿಡುತ್ತ ತಳಮಳದಲ್ಲಿ ವಾಕಿಂಗ್ ಹೊರಡುವ ಕವಿಯ ಮನಸ್ಸಲ್ಲೇ ಕಾವ್ಯರಂಗಕ್ಕೆ ಪೂರ್ವಸಿದ್ಧತೆ:

> ‘ರಾಮನ್ ಸತ್ತ ಸುದ್ದಿ ಓದಿದ ಬೆಳಿಗ್ಗೆ ಶಿವಮೊಗ್ಗೆಗೆ
> ದರಿದ್ರ ಥಂಡಿ; ಅಸ್ತಿತ್ವದ ಅಸ್ಪಷ್ಟ ಜಿಜ್ಞಾಸೆ, ಗುರುತಿಸಲಾಗದ
> ಕಸಿವಿಸಿ, ಮುಜುಗರ ತಾಳದೆ ವಾಕಿಂಗ್ ಹೊರಟೆ; ಬೀದಿ
> ಗದೇ ಮಾಮೂಲು ಭಂಗಿ; ಯಾರೂ ದುಃಖಿಸುತ್ತಿಲ್ಲವೆನ್ನಿಸಿ

ದುಃಖವಾಯಿತು. ಮೈಲಿಗೆ
ಪರಿಚಿತ ಸಿಕ್ಕಿದ್ದು ನವುಲೆ ಗ್ರಾಮದ ಹನುಮ;'

ಹೀಗೆ ಕಳವಳಿಸುತ್ತಾ ಹೆಜ್ಜೆ ಕಿತ್ತಿಡುತ್ತಾ ಒಬ್ಬೊಂಟಿಯಾಗಿ ವಾಕಿಂಗ್ ಹೊರಟ ಕವಿಗೆ ಎದುರಾದದ್ದು ನವುಲೆ ಗ್ರಾಮದ ಹನುಮ. ಅದು ಯಾವ ದೂರದ ಊರಿನಲ್ಲಿ ಸಿಕ್ಕಿದ್ದು? ಮೈಲಿಗೆ! ಅಕ್ಷರ-ವಿದ್ಯೆಗಳಿಂದ ಮೈಲಿ, ಮೈಲಿ ದೂರವಿರುವ, ವಿಜ್ಞಾನಿ ರಾಮನ್ ಅರಿವಿನ ಬಗ್ಗೆ ಮೈಲಿ, ಮೈಲಿ ದೂರವಿರುವ ಹನುಮ. ಇಲ್ಲಿ ಕವಿ ಉದ್ದೇಶಪೂರ್ವಕವಾಗಿ ಹನುಮನ ಬಗ್ಗೆ ಬಳಸಿರುವ ಪದ 'ಮೈಲಿಗೆ'. ಎಷ್ಟು ಧ್ವನಿ ಹಾಗೂ ಅರ್ಥಪೂರ್ಣ! ಯಾರು ಈ ಹನುಮ?

'ಯಾರದೋ ಗದ್ದೆಯಲ್ಲಿ ಗೇಯುವ, ಮೋಟು ಬೀಡಿಯ
ಕಿವಿಗೆ ಸಿಕ್ಕಿಸಿಕೊಳ್ಳುವ, ತೊಡೆಯ ಪರಪರ ಕೆರೆದುಕೊಳ್ಳುವ,
ಹಳ್ಳಿಯೇ ಹನುಮಿಸಿದಂತೆ ನನಗೆ ಭಾಸವಾಗುವ ವಿಚಿತ್ರ—
ಅಭ್ಯಾಸರೂಪಿತ ನಿರ್ದಿಷ್ಟ ಅಳತೆಯ ನಿರ್ವಿವಿಧ ಕೂಗಿಂದ
ಹಕ್ಕಿಗಳ ಅಟ್ಟುತಿದ್ದ; ಪಾತಿ ಸರಿಗೊಳಿಸುತಿದ್ದ; ಅಪ್ರಚಲಿತ
ಹಳ್ಳಿಪದದ ಅಶಾಸ್ತ್ರೀಯ ಮಟ್ಟನ್ನು ಕುರುಕುತಿದ್ದ.'

ಕವಿಯ ಮನದಲ್ಲಿ ಪ್ರಸಿದ್ಧ ವಿಜ್ಞಾನಿ 'ರಾಮನ್ ಸತ್ತ ಸುದ್ದಿ' ವಿಚಿತ್ರ ತಳಮಳ, ಕಸಿವಿಸಿ ಉಂಟುಮಾಡುತ್ತಿದ್ದರೆ, ಕಣ್ಣೆದುರಿಗೆ ನಿಂತಿದ್ದಾನೆ 'ಹಳ್ಳಿಯೇ ಹನುಮಿಸಿ'ದಂತಿರುವ ನವುಲೆ ಗ್ರಾಮದ ಹನುಮ! ಪರಿಚಿತರನ್ನು ಕಂಡೊಡನೆ ಸುಮ್ಮನಿರದ ಹಳ್ಳಿಯ ಸ್ವಭಾವದ ಹನುಮ ಕವಿಯೊಡನೆ 'ಉಭಯ ಕುಶಲೋಪರಿ' ಆರಂಭಿಸಿಯೇಬಿಟ್ಟ!

'ಕಂಡೊಡನೆ, 'ಹ್ಯಾಂಗಿದೀರಿ' ಅಂದ;
ಈಚೀಚೆಗೆ ಅಪರೂಪವಲ್ಲ ಅಂದ, ಯಾಕೋ ಬಡವಾಗಿದ್ದೀರಿ
ಅಂದ, ಮಳೆ ಬೇಕಾಗಿಲ್ಲ ಅಂದ, ಫಸಲನ್ನು ಅಂದಾಜಿಸಿದ,
ನೆರೆಯವನೊಡನೆ ದಿನವಹಿ ಕಾದಾಟ ಸಾಕಾಗಿದೆ ಮಾರಾಯರೇ
ಅಂದ—ಕೊರೆಯುತ್ತಲೇ ಇದ್ದ—ಹೂಂಗುಟ್ಟಿದೆ—
ಅವನ ಮಾತಿಗೆ ಮಂಜಿನೊಳಗಿನ ಸೂರ್ಯ ನನ್ನ ಪ್ರಜ್ಞೆ,
'ರಾಮನ್ ಸತ್ತರೋ ಹನುಮ' ಅನ್ನಬೇಕು, ಆಗ ತಡೆದು
ಸುಮ್ಮನಾದೆ. ರಾಮನ್ ಅರ್ಥೈಸಿಕೊಳ್ಳಬಹುದೆ ಇವನ
ಅಶಿಕ್ಷಿತ ಅರಿವಿಗೆ?'

ವಿಜ್ಞಾನ-ಅಜ್ಞಾನ, ನಗರ-ಹಳ್ಳಿ, ವಿದ್ಯಾವಂತ-ಅವಿದ್ಯಾವಂತ, ಸಂಸ್ಕೃತಿ-ಅಸಂಸ್ಕೃತಿಗಳ ಮುಖಾಮುಖಿ ಕವನದುದ್ದಕ್ಕೂ ಮೈದೋರುತ್ತ ಓದುಗನ ವಿವೇಕವನ್ನು ಪ್ರಶ್ನಿಸುತ್ತಲೇ ಹೊಸ ಹೊಸ ಆಯಾಮ ಪಡೆಯುತ್ತ ವಿಶಿಷ್ಟ ಬಗೆಯ ಅನುಭವ ಹಾಗೂ ಅರ್ಥವನ್ನು ಹೊರಹೊಮ್ಮಿಸುತ್ತ 'ಸರ್ವಕಾಲಿಕತೆ'ಯನ್ನು ಪಡೆಯುವುದೇ ಈ ಕವಿತೆಯ ವಿಶೇಷ.

'ಆ ಕಡೆ ರಾಮನ್, ಈ ಕಡೆ ಹನುಮ;
ದಿನವಿಡೀ ಮೈ ಕೆಸರಿಸಿಕೊಂಡು, ನನ್ನಂಥವ ನೆನೆಯಲೂ
ನಿರಾಕರಿಸುವ ತಂಗಳುಂಡು, ರಾತ್ರಿ ಕಳ್ಳಭಟ್ಟಿಯ ಹೊಡೆದು—

ನಾಡಿದ್ದು ನಾಳೆಯ, ನಾಳೆ ಇವೊತ್ತಿನ, ಇಂದು ನೆನ್ನೆಯ
ಪುನರಾವರ್ತನೆಯ ಏಕತಾನತೆಯಲ್ಲಿ—ಲೋಕ ಮರೆಯುವ
ಹನುಮನಿಗೆ ರಾಮನ್ ಹೋದರೆಷ್ಟೋ ರಸೆಲ್ ಹೋದರೂ ಅಷ್ಟೆ.'

'ತನ್ನ ವೃತ್ತದೊಳಗೆ ತಾನೇ ಬಂದಿ'ಯಾಗಿರುವ ಹನುಮ ಅಲ್ಪ ತೃಪ್ತ. ಅವನ ಕೃಷಿ, ಅವನ ಸಂಸಾರ—ಇದೇ ಅವನ ಜಗತ್ತು. ಅದರಾಚೆಯ ಜಗತ್ತಿನ ಬಗ್ಗೆ ಅವನಿಗೆ ಪರಿವೆಯೇ ಇಲ್ಲ. ಅದರ ಬಗ್ಗೆ ಚಿಂತೆಯೂ ಇಲ್ಲ; ಬೇರೆ ವಿಷಯದ ಬಗ್ಗೆ ಆಸಕ್ತನೂ ಅಲ್ಲ! ಹೆಚ್ಚಿಗೆ ಏನು? ಎದುರು ಸಿಕ್ಕ ವ್ಯಕ್ತಿಯ ಬಗ್ಗೆಯೂ ಅವನಿಗೆ ಹೆಚ್ಚು ಗೊತ್ತಿಲ್ಲ!

'ಪತ್ರಿಕೆಯೋದುವುದಿಲ್ಲ; ನಾನು ಕವಿಯೆಂಬುದು ಗೊತ್ತಿಲ್ಲ:
ಹೊಟ್ಟೆಬಟ್ಟೆಯ ಅಗತ್ಯ ಮೀರಿದ ನನ್ನ ಹಸಿವು, ಅಸ್ವಸ್ಥತೆ
ಅರಿತಿಲ್ಲ; ಲೋಕದ ಪ್ರತಿನಿತ್ಯದ ಆಗು–ಹೋಗುಗಳಿಗೆ ಪ್ರತಿಕ್ರಿಯಿಸುವ
ಸೂಕ್ಷ್ಮತೆ ಕಂಡಿಲ್ಲ; ಅನೇಕ ಮಟ್ಟದಲ್ಲಿ ಬಾಳುವ ಪ್ರಶ್ನೆಯೇ
ಉದ್ಭವಿಸಿಲ್ಲ—ಆದರೂ ತೃಪ್ತ...
ಗದ್ದೆ, ಧಣಿ, ಹ್ಯಾಪ ಮೋರೆಯ ಹೆಂಡಿರು, ಸಿಂಬಳಸುರುಕ ಮಕ್ಕಳು,
ದೇವರ ಗ್ರಾಮ್ಯಕಲ್ಪನೆ, ಊರಿನ ಪುಢಾರಿ—ಇಷ್ಟೇ ಜಗತ್ತು—
ಆದರೂ ತೃಪ್ತ...
ನನ್ನಂತೆ ಕನ್ನಡ, ಗಡಿ, ನದಿ, ಪದ್ಯ, ಪ್ರತಿಷ್ಠೆ ಕಾಡುವುದಿಲ್ಲ—
ಹೆಂಡತಿಗೆ ಚೋಲಿ, ಹಿರಿ ಮಗನ ಶಾಲೆ
ಬೆಲ್ಲದ ಕಾಫಿಯ ಹಾಲೇಶಿಯ ಸಾಲ
ಹೊತ್ತು ಹೊತ್ತಿಗೆ ರುಚಿ ಗೌಣ ಅರಸಿಕ ಕೂಳು—ಚಿಂತೆಯಿಲ್ಲವೆಂದಲ್ಲ—
ಆದರೂ ತೃಪ್ತ...'

ಮೇಲಿನ ಕವನದ ಸಾಲುಗಳಲ್ಲಿ 'ನನ್ನಂತೆ ಕನ್ನಡ, ಗಡಿ, ನದಿ, ಪದ್ಯ, ಪ್ರತಿಷ್ಠೆ ಕಾಡುವುದಿಲ್ಲ', ಈ ಪದಗಳಲ್ಲಿ ಅಡಕವಾಗಿರುವ ಸಮಸ್ಯೆಗಳ ಸರ್ವಕಾಲಿಕತೆಯನ್ನು ಗಮನಿಸಿ. ಇಲ್ಲಿ ಕವಿಯ ವೈಯಕ್ತಿಕ ಬದುಕಿನೊಂದಿಗೆ 'ಹಳ್ಳಿಯ ಹನುಮ' ಮುಖಾಮುಖಿಯಾಗುತ್ತಾನೆ. ಹನುಮನ ಅಲ್ಪ ತೃಪ್ತ ಬದುಕನ್ನು ಕಂಡು ಕವಿ ಅಸೂಯೆ ಪಡುವಂತಹ ಸನ್ನಿವೇಶ—

'ಇದ ಮೆಚ್ಚಿ, ಕರುಬಿ, ಪೇಚಾಡಿ ನಡೆದಾಗ
ದೂರದಿಂದ, ಪ್ರಕೃತಿಯ ಅಗಾಧದಲ್ಲಿ ಹಿಮಾಚ್ಛಾದಿತ ಹನುಮ,
ಅವನ ಕೂದಲೆಳೆಯ ಕೂಗು—
ಅರ್ಥ ತೋರದ ಚುಕ್ಕಿ.'

ಮೇಲಿನ ಸಾಲುಗಳಲ್ಲಿ ಕವಿ ಬಳಸುವ 'ಪ್ರಕೃತಿಯ ಅಗಾಧದಲ್ಲಿ ಹಿಮಾಚ್ಛಾದಿತ ಹನುಮ' ಪುರಾಣದ ಕಲ್ಪನೆಯ ಹಿನ್ನೆಲೆಯಲ್ಲಿ 'ಹಳ್ಳಿ ಹನುಮ'ನ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ನೀಡುವುದರೊಂದಿಗೆ, ಎಷ್ಟು ಅರ್ಥೈಸಹೊರಟರೂ ಊಹೆಗೆ, ಶಬ್ದಕ್ಕೆ ನಿಲುಕದ ವ್ಯಕ್ತಿತ್ವವನ್ನು ಸೆರೆಹಿಡಿಯುವಲ್ಲಿ ಕವಿ ಬಳಸುವ 'ಅರ್ಥ ತೋರದ ಚುಕ್ಕಿ' ಪದಗಳು ಹನುಮನ ವ್ಯಕ್ತಿತ್ವವನ್ನು ಇನ್ನಷ್ಟು ನಿಗೂಢಗೊಳಿಸುವುದರಲ್ಲಿ ಯಶಸ್ವಿಯಾಗುತ್ತವೆ.

—ಹೀಗೆ ದಾರಿಯಲ್ಲಿ ಎದುರಾದ 'ಹಳ್ಳಿಯ ಹನುಮ' ಕವಿಗೊಂದು ಜೀವನ ದರ್ಶನವನ್ನೇ ನೀಡುತ್ತಾನೆ ಎಂಬುದು ಹನುಮನ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಎತ್ತಿ ಸಾರುತ್ತದೆ; ಇದು ಕವನದ ಶಿಖರ!

'ಇಲ್ಲಿಂದ ನನಗೆ ವರ್ಗವಾಗುತ್ತೆ—ಒಂದು ದಿನ
ಹನುಮ ಸಾಯುತ್ತಾನೆ—ತಿಳಿಯುವುದಿಲ್ಲ.
ಇಲ್ಲಿನ ಹಳಬ ಅಲ್ಲಿ ಹೊಸಬನಾಗುತ್ತೇನೆ,
ಎಲ್ಲೋ ಹೇಗೋ ಸಾಯುತ್ತೇನೆ—ತಿಳಿಯುವುದಿಲ್ಲ.
ನನ್ನ ಹೆಸರು, ಹುದ್ದೆ, ಪದ್ಯ, ತಳಮಳ, ಬದುಕು—ತಿಳಿಯುವುದಿಲ್ಲ.
ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು—
ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವ ಸಂಚಾರ—ತಿಳಿಯುವುದಿಲ್ಲ.

ಕೊರಲು ಬಿಗಿದು ಒಬ್ಬಂಟಿ ನಿಧಾನ ನಡೆದಂತೆ
ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು...'

ಒಳ್ಳೆಯ ಪದ್ಯಕ್ಕೂ ಗದ್ಯಕ್ಕೂ ವ್ಯತ್ಯಾಸವಿಲ್ಲ ಎಂಬ ಮಾತೊಂದಿದೆ. ಕವಿ ನಿಸಾರ್‌ರ ೫೩ ಸಾಲಿನ 'ರಾಮನ್ ಸತ್ತ ಸುದ್ದಿ'—ಕವನ ಆ ಮಾತಿಗೆ ಒಂದು ಅತ್ಯುತ್ತಮ ಸಾಕ್ಷಿ.

ಗದ್ಯ-ಪದ್ಯ ಮಿಶ್ರಿತ ಈ ಕವನವನ್ನು ಕವಿ ನಿಸಾರರೇ ವಾಚಿಸುವುದನ್ನು ಕೇಳಬೇಕು. ಅದೊಂದು ಮರೆಯಲಾಗದ ಅನುಭವ. ಕಾವ್ಯ ರಸಿಕರ ಪಾಲಿಗೊಂದು ಅಪೂರ್ವ ರಸದೌತಣ! ಕವಿಯ ವಾಚನದ ಆ ದನಿಯ ಏರಿಳಿಕೆ, ಅವರ ಮುಖದ ಹಾವ-ಭಾವ, ಕೈಗಳ ಚಲನೆ, ಕಾವ್ಯದಲ್ಲಿ ಮಗ್ನರಾಗುವ ರೀತಿ (ಘಟನೆ ಈಗತಾನೇ ನಡೆದಿದೆಯೇನೋ ಎನ್ನುವ ಹಾಗೆ, ಅವರು ಸೃಷ್ಟಿಸುವ ಶೈಲಿ)—ನಿಸಾರ್ ಈ ಕವನವನ್ನು ಓದುವ ಪರಿಯನ್ನೊಮ್ಮೆ ಕಂಡವರ ಪಾಲಿಗೆ, ಜೀವನದುದ್ದಕ್ಕೂ ಹಾಂಟ್ ಮಾಡುವ ಅಪೂರ್ವ ದೃಶ್ಯದ ಅನುಭವವೆಂದೇ ಹೇಳಬಹುದು.

ಹೀಗೆ, 'ರಾಮನ್ ಸತ್ತ ಸುದ್ದಿ' ನಿಸಾರರ ಅಪೂರ್ವ ಕವನಗಳ ಸಾಲಿನಲ್ಲಿ ಸರ್ವಶ್ರೇಷ್ಠ ಕವನವೆಂದು ನಿಸ್ಸಂದೇಹವಾಗಿ ಹೇಳುವುದರ ಜೊತೆಗೆ ಕವಿಯ ಮಾನವೀಯತೆಗೆ ಹಿಡಿದ ಕೈಗನ್ನಡಿ ಎನ್ನಬಹುದು.

ಮಹತ್ಕೃತಿಗಳು ಮಾನವ ಮನಸ್ಸಿನ ಮಹಾ ದಾಖಲೆಗಳು. ಹಿರಿಯ ಚೇತನಗಳ ಅಂತರ್ದೃಷ್ಟಿ, ಕಾಲ ಕಾಲಕ್ಕೆ ಗ್ರಹಿಸಿದ ನಿತ್ಯ ಸತ್ಯಗಳನ್ನಲ್ಲದೆ, ದಿನಂಪ್ರತಿ ಜೀವನದ ಒಳಿತಿಗೆ ಅಗತ್ಯವಾದ ನೀತಿ ನಡಾವಳಿ ನಿತ್ಯಾಚರಣೆಗಳನ್ನು, ಶಾಸ್ತ್ರ ವಿಧಿಗಳನ್ನು ಗ್ರಂಥಗಳು ನಮಗೆ ದಯಪಾಲಿಸುತ್ತವೆ. ಗ್ರಂಥ ವೈವಿಧ್ಯ ಮನುಷ್ಯನ ಚಿಂತನ ಪ್ರವೃತ್ತಿಯ ಉದ್ದಗಲಗಳ ಅಳತೆಗೋಲು.

(ಉದಾತ್ತ ಗ್ರಂಥಗಳ ಹಿರಿಮೆ)

ಬಾಪೂ

೧

ಹಣ್ಣು ಹುಳಿಯೋ ಸಿಹಿಯೋ, ರುಚಿಯ ನೋಡುವ ಮೊದಲೆ
ಯಾರನ್ನೊ ಅನುಕರಿಸಿ ಮಾಡಿದ್ದೆ ನಾನಾಗ ಮರದ ಗುಣಗಾನ;
ಅರ್ಜೆಂಟಿನಲಿ ಹೊರಟಾಗ ಅಂಗಿ ತೊಟ್ಟಿದ್ದಷ್ಟೆ—
ಇಲ್ಲ ದೊಗಳೆಯೊ, ಬಿಗಿಯೊ ಎನುವ ಅನುಮಾನ.
ಬಾಪೂ—
ಬೆರಗ ಬಣ್ಣವ ಬುದ್ಧಿಮೊನೆಯಿಂದ ಕೆರೆದು
ಸ್ವಾನುಭವದಲ್ಲಿ ಅರೆದು ಒರೆಯ ಹಚ್ಚಿದ್ದೇನೆ.

ಲೋಕಕೇ ಕಣ್ಣಾದ ಬೆಳುದಿಂಗಳು
ಮನೆಯ ಬೆಳಗಿಲ್ಲೆಂದು ಕೂಗಾಡಲೆ,
ಹೊತ್ತಿಸದೆ ದೀಪ?
ಮೇರೆಯಿಲ್ಲದ ಕಡಲು ನನ್ನ ಬಾಯಾರಿಕೆಯ
ತಣಿಸಲಿಲ್ಲೆಂದು ರೇಗಾಡಲೆ,
ತೋಡದೆಯೆ ಕೂಪ?
ವ್ಯಕ್ತಿ ಬದುಕಿನ ಕಿರಿಯ ಪಾತ್ರವೇ ನಿನ್ನದು?
ಒಂಟಿಯೇ ನೀನು?
ಎಲ್ಲವೂ ನಿಸ್ಸೀಮ: ಸ್ವಾತಂತ್ರ್ಯ, ಉದ್ಧಾರ, ದಯೆ, ಸರ್ವಭ್ರಾತೃತ್ವ;
ಹಿರಿದು ಬದುಕಿನ ತತ್ತ್ವ.
ಕೊನೆ ತನಕ ದೇಶವೇ ನಿನ್ನ ಜೊತೆಯಲ್ಲಿ:
ಬೆಟ್ಟವೇರಿದ ಹಾಗೆ ನಟ್ಟಿರುಳಿನಲ್ಲಿ.

೨

ಹೆಳವ ನಡಿಗೆಯ ಹೊಳೆಗೆ ಇದ್ದಕಿದ್ದಂತೆ ಮಳೆ ಹೊಯ್ದು
ಮನೆಮಠಗಳೆಲ್ಲ ತೆಪ್ಪ ತೇಲುತ್ತವೆ.
ನಸುಕಿನ ಮುಸುಕಿನಲ್ಲಿ ತಣ್ಣಗೆ ಒರಗಿದ್ದಾಗ
ಭೂಮಿ ಮೈಮುರಿದೊ, ಅಣ್ವಸ್ತ್ರ ಸಿಡಿದೊ
ನಂಬಿಕೆಯ ಬೇರುಗಳು ಸಡಿಲುತ್ತವೆ.
ಒಟ್ಟು ಬದುಕಿನ ಸಾಫು ಹಾದಿಯಲ್ಲಿ

ಸಲೀಸು ಸಾಗುವ ಚಕ್ರ
ಬೆಟ್ಟ ಕೊರಕಲಿನಲ್ಲಿ ಮುಗ್ಗರಿಸದೆ?
ವ್ಯಕ್ತಿ ವ್ಯಕ್ತಿಗೆ ಬಡಿವ ಹಠಾತ್ತನೆಯ ಘಟನೆಯಲಿ
ನಿನ್ನ ಅನುಭವ ಬಾಳ ಬಗ್ಗಡಿಸದೆ?

ಬಾಪೂ—
ಜಿಂಕೆ ಮೊಲ ನವಿಲೊಡನೆ, ಇವೆ ಹಾವು ಹುಲಿ ಹಂದಿ;
ಪ್ರಕೃತಿಯ ದ್ವಂದ್ವಕ್ಕೆ ಯಾವ ಬಟ್ಟೆ?
ಬರೀ ಹೃದಯ, ಕರುಳಷ್ಟೆ ಇದ್ದಿದ್ದರಿವಕೆಲ್ಲ!
ಕೂಡಿಕೊಂಡಿವೆ ಹಾಳು ಹಲ್ಲು, ಹೊಟ್ಟೆ.

ಇದಕ್ಕೇನನ್ನುವುದು ಹೇಳು:
ಅರಿವೆ ಇಲ್ಲದೆ ನಿತ್ಯ ಹಿಂಸೆಯಲೆ ಹಿಗ್ಗುತಿದೆ ಜಗದ ಬಾಳು.
ನೋಡಿದನ್ನು—ಹಿತ್ತಲಿನ ಈ ಬಳ್ಳಿ, ಮರವನ್ನು:
ಹೂವಿಂದ ಹೆರಳು ಚೆನ್ನು
ನಾಲಗೆಯ ನಲಿಸುವುದು ಹಣ್ಣುಕಾಯಿ
ಕೊಂಬೆ ಕಡಿದೊಟ್ಟಿರಲು ಒಲೆಯಲ್ಲಿ, ತಣಿಯುವುದು ಹಸಿವು–ನಾಯಿ.
ಮೊನ್ನೆ ಲಕ್ವಾ ಹೊಡೆದ ನೆರೆಯಾತ ನರಳುತ್ತ
ಪಾರಿವಾಳವ ಕೊಯ್ದು ರಕ್ತ ಹೀರದೆ ಸತ್ತ;
ಮಡದಿ ಮಕ್ಕಳಿಗಾರು ಗತಿಯೊ ತಂದೆ?

೩

'ಸತ್ತರೇ ಗಾಂಧಿ' ಎಂದತ್ತ ಅಪ್ಪನ ಜೊತೆಯೇ
ಹಂಚಿ ಸಕ್ಕರೆ ಬೂಂದಿ ಸಂತೋಷ ಪಟ್ಟವರ,
ಸಭೆಯಲ್ಲಿ ಕೈ ಕುಲುಕಿ ಸಮಾನತ್ವ ನಟಿಸಿ
ಮನೆಯಲ್ಲಿ ನೀರೆರೆದುಕೊಂಡು ಮಡಿಯಾದವರ,
ಹಡಾಸು ಬಂಡಿಯಾಚಾರಕ್ಕೆ ಜೆಟ್ ಬುದ್ಧಿ ಹೊಂದಿಸಿ
ಪ್ರಗತಿ ಕನಸುತ್ತಿರುವ ಮಹಾನುಭಾವರ,
ನೆರೆಯವನ ಬಂದೂಕು ತುದಿ ಬೆನ್ನಿಗೊತ್ತಿರಲು
ಅಹಿಂಸೆಯ ಬೋಧಿಸಲೆಂದು ತವಕಿಸಿದ ಪ್ರೇತಾತ್ಮ ಗಣದವರ,
ನಮ್ಮದೆನ್ನುವುದಕ್ಕೆ ಕಾವು ಕೂತಿಹ ಹಾವ
ದಾಟಿ ಮಾನವ್ಯದೆಡೆ ಕಾಲು ಹಾಯಿಸದವರ,
ದೇವರೆಂದೇ ಭ್ರಮಿಸಿ, ದೂಡಿ ಸೆರೆಯಲಿ, ನಮಿಸಿ
ನಿನ್ನ ಮರೆತಿರುವವರ ನಡುವೆ ಏಗುವ ನಾನು—
ಅಪ್ಪ ಕಲಿಸಿದ್ದನ್ನೆ ನನ್ನ ಮೊಮ್ಮಕ್ಕಳಿಗೆ ಮಗ್ಗಿಯೊಪ್ಪಿಸಲೇನು?
ಗತ ಕಾಲಸೂಚಿ ಹಳೆಯುಳಿಕೆ, ನಾಣ್ಯದ ಬಳಕೆ
ಏಕಾಗಲಿಲ್ಲೆಂದು ಸವಾಲೆತ್ತಿದರೆ—ಏನು ಹೇಳಲಿ ಬಾಪೂ?

ಭವಿಷ್ಯತ್ತಿಗೂ ನಿನಗೂ ಕಟ್ಟಾಗಿ ಹೊಕ್ಕುಳಿಕೆ

ತಲೆ ಕೆರೆಯುತಿರುವಾಗ ಎಲ್ಲಿ ಹುಡುಕಲಿ ನಿನ್ನ?
ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ?
ಹೆಸರಲ್ಲೆ? ಸಮಾಧಿ, ಪಾರ್ಕಿನ ಪ್ರತಿಮೆಯಲ್ಲೆ?
ಭಕ್ತರಲ್ಲೆ?
ಜಾತ್ರೆಜಂಗುಳಿಯಲ್ಲಿ ಕ್ಷೀಣಿಸಿದ ನಿನ್ನ ಲೆಫ್ಟ್‌ರೈಟು ಸನ್ನೆಯಲ್ಲೆ?
ಸತ್ಯಾಗ್ರಹ ಉಪವಾಸ ಮುಷ್ಕರದ ಮರೆಯಲ್ಲೆ?
ಪಡಖಾನೆಯಲ್ಲೆ? ಕಾಲಧರ್ಮವಾಗಿರುವ ದುರಭಿಲಾಷೆಯಲ್ಲೆ?
ತಿಕ್ಕಾಡಿರುವ ಭಾಷೆಯಲ್ಲೆ?
ಅಥವಾ ತಕ್ಕಲಿಯಲ್ಲಿ? ಫ್ಯಾಕ್ಟರಿಯಲ್ಲಿ?
ಕಛೇರಿಗಳ ಐಲುಫೈಲಾದ ಫೈಲು ಫೈಲುಗಳ ಕಪಾಟಿನಲ್ಲಿ?
ಖೋಟ ನೋಟಿನಲ್ಲಿ?
—ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ ಹುಡುಕಲಿ ನಿನ್ನ?

೪

ತೊರೆ ಮೊರೆಯುತ್ತದೆ ಬಾಪೂ, ತೊರೆ ಮೊರೆಯುತ್ತದೆ,
ಕಣ್ಮುಚ್ಚಿ ಬಿಡುವಷ್ಟರಲ್ಲೇ ಮೈಗರೆಯುತ್ತದೆ.
ಮೊರೆದಾಗ ತಾನೇ ಎಲ್ಲವಾಗಿ ಬೀಗಿ, ದಡಕ್ಕೆ ತಾಗಿ,
ಮೊರೆಯುತ್ತದೆ—ಆಗ ಕಣ್ಣಿಗದೇ ಅಚ್ಚು
ಎದೆಗದರದೇ ಹುಚ್ಚು;
ಅಪ್ಪಳಿಸಿ ಹಿಂದೆಯೇ ಸೊಕ್ಕುವ ಹೆದ್ದೆರೆಗಳಟ್ಟಹಾಸದಲ್ಲಿ
ತೆರೆ ಮೈಗರೆಯುತ್ತದೆ.
ಕಾಲ ಸೃಷ್ಟಿಯ ದಿನ ದಿನದ ಸನ್ನಿವೇಶದಲಿ
ನಿನ್ನ ನಿರುಪಮ ಚಿತ್ರ ಚಲಚ್ಚಿತ್ರದಲ್ಲಿನ ಜಲಪಾತವಾಗಿ
ಕ್ಯಾಲೆಂಡರಿನ ಸಿಂಹವಾಗಿ
ಸಾಮಾನ್ಯತೆಯ ಸೌಮ್ಯತೆಯ ತಾಳುತ್ತದೆ;
ಗೊಮ್ಮಟನ ಠೀವಿಯಲಿ ಮೌನ ಸಾಮ್ರಾಜ್ಯವನು ಆಳುತ್ತದೆ.
ಆಳುತ್ತದೆ ಮಹಾತ್ಮ, ಆಳುತ್ತದೆ:
ಪ್ರಕೃತಿಯಂತೆ, ಸತ್ಕೃತಿಯಂತೆ ಅಥವಾ
ಮಧ್ಯರಾತ್ರಿಯ ಸ್ಪರ್ಶಾತೀತ ರಾಜನಾಕೃತಿಯಂತೆ.
ನಿನಗಿಂತ ಹಿರಿಯರನು ಕಾಣೆ ಮಹಾತ್ಮ—
ಮಿತಿಮೀರಿ ಏರಿರುವೆ, ಬಾಳಿಗೆ ದಕ್ಕದೆ ಮೀರಿರುವೆ;
ವಾಸ್ತವತೆ ನಾನು, ಆದರ್ಶ ನೀನು.
ಲೋಕವನೆ ದಹಿಸಿರುವ ಸೂರ್ಯನಿಗೆ ತಡೆಯಾಗಿ
ನಿನ್ನ ಕೊಡೆ ನೆತ್ತಿಯನು ಕಾಯುತಿರಲಿ;
ಕಾದ ಹಾದಿಯ ನಡೆಯೆ ಸ್ವಾನುಭವ ಕೆರವಾಗಿ
ಸ್ವಂತ ಜೀವನದೊಡನೆ ತೇಯುತಿರಲಿ.

★ ★ ★

(ಕವನ ಸಂಕಲನ: 'ಸಂಜೆ ಐದರ ಮಳೆ')



'ಬಾಪ್ರೊ': ದ್ರಷ್ಟಾರನ ಬಗೆಗಿನ ದೃಷ್ಟ್ಯಂತರದ ದ್ವಂದ್ವ

♦ ಡಾ. ತಾಳ್ತಜೆ ವಸಂತಕುಮಾರ

ಮನುಷ್ಯನ ಮನಸ್ಸು ಸದಾ ತ್ರಿಕಾಲ ಪರ್ಯಟನಗಳಲ್ಲಿ ಪ್ರವೃತ್ತವಾಗಿರುತ್ತದೆ. ವರ್ತಮಾನದ ವಾಸ್ತವಗಳೊಂದಿಗಿನ ಧೃವ ಗತಿಯ ಸಂಚಾರದಿಂದ ಬಳಲುವ ಚಿತ್ತ, ಕ್ಷಣಕಾಲ ಇತಿಹಾಸದ ನೆರಳಿನಲ್ಲಿ ವಿಶ್ರಮಿಸುತ್ತದೆ; ಆ ಶೈತ್ಯಾಗಾರದಲ್ಲಿರುವ ಚೈತನ್ಯವನ್ನು ಸಂಗ್ರಹಿಸಿಕೊಂಡು, ಭವಿಷ್ಯದ ವರ್ಣಮಯ ಸ್ವಪ್ನಗಳಲ್ಲಿ ವಿಹರಿಸುತ್ತದೆ; ಮತ್ತೆ ಇಂದಿನ ಸತ್ಯಗಳೆಡೆಗೆ ಮರಳುತ್ತದೆ. ಈ ಪ್ರವಾಸ ಶೀಲದಿಂದ ಅದಕ್ಕೆ ಅನೇಕ ಲಾಭಗಳಾಗುತ್ತವೆ. ಪ್ರಜ್ಞೆಯ ಹಲವು ಗಿಳಿ ಬಾಗಿಲುಗಳು ತೆರೆದುಕೊಂಡು ಹೊರಗಿನ ಗಾಳಿ, ಬೆಳಕು, ಸಂತಸ, ಸಂಕಟ, ನಸುಕು-ಮುಸ್ಸಂಜೆಗಳೆಲ್ಲವೂ ಒಳ ಪ್ರವೇಶಿಸಲು ಉದ್ಯುಕ್ತವಾಗುತ್ತವೆ; ಸಾಹಿತ್ಯದಂಥ ಸೃಷ್ಟ್ಯಾತ್ಮಕ ಕಲೆಗಳಲ್ಲಿ ಅಭಿವ್ಯಕ್ತವಾಗಲು ಕಾಯುತ್ತವೆ.

ಈ ಕರಂಡಕದೊಳಗೆ ಹಾಯಾಗಿರುವ ಪ್ರತಿ ಅನುಭವವನ್ನೂ ವಾತ್ಸಲ್ಯದಿಂದ ಎಚ್ಚರಿಸುತ್ತ, ಆಸ್ಥೆಯಿಂದ ಶಬ್ದ ಶರೀರದೊಳಗೆ ಅದನ್ನು ಅಳವಡಿಸುತ್ತ, ಮೃದುವಾಗಿ ಲೋಕ ಮುಖಕ್ಕೆ ಪ್ರಸ್ತುತ ಪಡಿಸುವ ಕವಿ ಕರ್ಮವನ್ನು ನೋಡುವುದು ಭಾವುಕ ಹೃದಯಗಳಿಗೆ ಚೇತೋಹಾರಿಯೆನಿಸುತ್ತದೆ. ಎಲ್ಲರಿಗೂ ಕಾಣಿಸುವ ಸರ್ವ ಸಾಧಾರಣ ಅಂಶಗಳಲ್ಲಿ ಅವಿತಿರುವ ಅನನ್ಯತೆಗಳನ್ನು ಗ್ರಹಿಸುವ ಇಂಥ ದೃಷ್ಟಿಯಲ್ಲಿಯೇ ಸಾಹಿತ್ಯದ ಸಾರ್ಥಕ್ಯ-ಸಾಮಂಜಸ್ಯಗಳಿರುತ್ತವೆ. ಈ ನೆಲೆಯಲ್ಲಿ ವಿಶಿಷ್ಟ

ಅನುಭೂತಿಗಳಿಗೆ ಕಾರಣರಾಗುವ ಸಮಕಾಲೀನ ಸಾಹಿತಿಗಳ ಪಂಕ್ತಿಯಲ್ಲಿ ಕವಿ ಕೆ. ಎಸ್. ನಿಸಾರ್ ಅಹಮದ್ ಅವರಿಗೆ ತುಂಬ ವಿಶಿಷ್ಟವಾದ ಸ್ಥಾನವಿದೆ.

ನಿಸಾರ್ ಅವರ ಕವನಗಳು ಕಾವ್ಯತತ್ತ್ವಕ್ಕೆ ಮಾತ್ರ ವಿನೀತವಾಗಿರುತ್ತವೆ. ಸಮ್ಯಕ್ ನೆಲೆಯ ಆಸರೆ, ಪೂರ್ಣತ್ವದ ಹುಡುಕಾಟ, ಮಾನವ ನಿರ್ಮಿತವಾದ ಗಡಿ ಪಹರೆಗಳನ್ನೊಲ್ಲದ ಮುಕ್ತ ಛಂದದ ನಿರೀಕ್ಷೆಗಳು ಅವರ ಕಾವ್ಯದ ಪ್ರಧಾನ ಲಕ್ಷಣಗಳಾಗಿವೆ.

ರೂಪಕ, ಧ್ವನಿ, ಸಂವೇದನೆ ಮುಂತಾದ ಪಾರಿಭಾಷಿಕಗಳನ್ನು ಬದಿಗೆ ಸರಿಸಿ, ಅನುಭವ ಪ್ರಾಮಾಣ್ಯದ ಕಣ್ಣರಿಕೆಯಲ್ಲಿಯೇ ಈ ಕವಿ ಬರೆಯುತ್ತಾ ಹೋಗುತ್ತಾರೆ. ಸಾಮಾಜಿಕ-ಸಾಂಸ್ಕೃತಿಕ ವಿಧಿ-ನಿಷೇಧಗಳಿಂದ ವಿಚಲಿತರಾಗದೆ, ಅವುಗಳಿಗೆ ರಚನಾತ್ಮಕ ಪ್ರತಿಕ್ರಿಯೆಗಳ ರೂಪದಲ್ಲಿ ತಮ್ಮ ಕಾವ್ಯ ಧರ್ಮವನ್ನು ಅವರು ಗುರುತಿಸಿಕೊಳ್ಳುತ್ತಾರೆ. ಹಾಗಾಗಿಯೇ ಅಂಥ ಸಂದರ್ಭಗಳಲ್ಲಿ ಆವೇಶದ ಬದಲಿಗೆ ತಣ್ಣನೆಯ ವ್ಯಂಗ್ಯವು ಮುನ್ನೆಲೆಗೆ ಬರುತ್ತದೆ; ಪರಿಣಾಮಗಳನ್ನು ನಿರ್ಧರಿಸುತ್ತದೆ. ಈ ನಿಟ್ಟಿನಿಂದ, 'ಅಮ್ಮ, ಆಚಾರ ಮತ್ತು ನಾನು' ಕವಿತೆಯ ಹೊರ ಮೈಯಲ್ಲಿರುವ ಲಘು ಧಾಟಿಯ ವಿಡಂಬನೆಯೊಳಗೆ ವಿಷಾದವನ್ನು ಹರಳುಗಟ್ಟಿಸುವುದು ಅವರಿಗೆ ಸಾಧ್ಯವಾಗುತ್ತದೆ.

ನಿರ್ದಿಷ್ಟವಾದ ಸ್ವ-ನಿರೀಕ್ಷೆಗಳಿಂದ ಹುಟ್ಟುವ ನಿಸಾರರ ಕಾವ್ಯ, ಜೀವ ಸಮ್ಮುಖವಾಗುವ ತನ್ನ ರೀತಿಯಿಂದಾಗಿ ತುಂಬ ಆಪ್ತವಾಗಿ ಬಿಡುತ್ತದೆ. ಆಕರ್ಷಕವಾದ ಶಬ್ದಶಯ್ಯೆಯೊಂದೇ ಅವರ 'ನಿತ್ಯೋತ್ಸವ' ಕವನದ ಆಸ್ತಿಯೆಂದು ಟೀಕಿಸುವವರೂ ಕೂಡ ಅಪ್ರಯತ್ನವಾಗಿ ಅದರ ಮೋಡಿಗೆ ಒಳಗಾಗುತ್ತಾರೆ. ಆ ಉತ್ಸವ ಮೂರ್ತಿಯನ್ನು ವರ್ಣಿಸುವ ಸಾಲುಗಳನ್ನು ಗುಣುಗುಣಿಸುತ್ತಾರೆ. ಗಾಢವಾದ ವಿಡಂಬನೆಯನ್ನು ಮಾಧ್ಯಮವಾಗಿ ಬಳಸಿಕೊಂಡು, ಜನ ಜಾಗೃತಿಯ ಸಾಮಯಿಕ ಸಂದೇಶವನ್ನು ನೀಡುವ 'ಕುರಿಗಳು, ಸಾರ್, ಕುರಿಗಳು', ಮನುಷ್ಯನೊಳಗಿನ ಖಾಲಿತನವನ್ನು ನಿರ್ದೇಶಿಸುವ 'ಖಾಲಿ ಸೈಟುಗಳು', ಒಬ್ಬ ವ್ಯಕ್ತಿಯು ಹೇಗೆ ಮೌಲ್ಯಗಳ ಪ್ರತಿನಿಧಿಯಾಗುತ್ತಾನೆಂಬುದನ್ನು ತೋರಿಸಿಕೊಡುವ 'ಮಾಸ್ತಿ'—ಇವೆಲ್ಲ ಅವರ ಮಹತ್ವದ ರಚನೆಗಳಲ್ಲಿ ಸೇರುತ್ತವೆ.

ಈ ಹಿನ್ನೆಲೆಯಲ್ಲಿ ನಿಸಾರರ 'ಬಾಪೂ' ಕವನದಲ್ಲಿ ವ್ಯಕ್ತವಾಗುವ ಧೋರಣೆ ಹಾಗೂ ಸಂಘರ್ಷದ ಸ್ವರೂಪಗಳನ್ನು ಹತ್ತಿರದಿಂದ ಗಮನಿಸುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಸ್ವಾತಂತ್ರ್ಯೋತ್ತರ ಜನ ಸಮುದಾಯವು ಗಾಂಧೀಜಿಯವರನ್ನು ಬರಿಯ ವ್ಯಕ್ತಿಯಾಗಿ ಕಾಣಲಾರದು. ಬಾಪೂವಿನ ಜೀವನ ಸಿದ್ಧಾಂತಗಳು, ಆಂತರಿಕ ಹೋರಾಟಗಳಿಂದಲೇ ನಿರ್ಮಾಣಗೊಂಡ ಅವರ ಗಟ್ಟಿತನ, ನಿಷ್ಠುರ ವಾದ, ತಲ್ಲಣಗಳು, ರಾಷ್ಟ್ರೀಯತೆಯ ಪರಿಕಲ್ಪನೆಗಳೆಲ್ಲವೂ ನಮ್ಮೆಲ್ಲರನ್ನೂ ಬದುಕಿನ ಒಂದಲ್ಲ ಒಂದು ಹಂತದಲ್ಲಿ ಕಾಡಿವೆ; ಕಾಡುತ್ತಿವೆ. ಬುದ್ಧನ ಜ್ಞಾನೋದಯಕ್ಕೂ ಬೋಧಿವೃಕ್ಷಕ್ಕೂ ನೇರವಾದ, ತಾರ್ಕಿಕ ಸಂಬಂಧವೇನೂ ಇಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ, ನಮ್ಮ ಪ್ರಜ್ಞೆಯಲ್ಲಿ ಮಾತ್ರ ಆ ಪ್ರತ್ಯೇಕತೆಯು ಅಳಿದು ಹೋಗಿದೆ. ಹಾಗೆಯೇ, ಸಮಕಾಲೀನ ಮೌಲ್ಯ ಪಲ್ಲಟಗಳನ್ನು

ಗಾಂಧೀಜಿಯವರ ಸಂದರ್ಭಗಳಿಂದ ಆಚೆಗಿಟ್ಟು ಪರಿಶೀಲಿಸುವುದು ನಮಗೆ ಸಾಧ್ಯವಾಗಲಾರದು. ನಮ್ಮೆದುರಿಗೆ ಅವರೊಂದು ಚೈತನ್ಯವಾಗಿ, ಸವಾಲಾಗಿ, ನೈತಿಕ ಊರುಗೋಲಾಗಿ, ಬೆರಗಾಗಿ, ರಹಸ್ಯವಾಗಿ ಜೀವಂತವಾಗಿದ್ದಾರೆ. ಅವರ ಇಡಿಯ ಬದುಕೇ ಆವರಣದಿಂದ ನಿರಾವರಣದೆಡೆಗಿನ ಚಲನೆಯಾಗಿತ್ತು. ಬಾಹ್ಯ ಹೊದಿಕೆಗಳಿಂದ ವಿಮೋಚನೆ, ರಕ್ಷಣೆಯ ನಿರಾಕರಣೆ, ಮುಕ್ತ ಬಯಲಿನೆಡೆಗಿನ ನಡಿಗೆ, ಬಂಧನಗಳಿಂದ ಬಿಡುಗಡೆ, ಅಂತರಂಗದ ಪಾರದರ್ಶಕತ್ವಗಳಿಗೆಲ್ಲ ಈ 'ನಿರಾವರಣ' ಪರಿಕಲ್ಪನೆಯು ಸಂವಾದಿಯಾಗುತ್ತದೆ; 'ಆವರಣವೆ ಇಲ್ಲದವರಿಗನಾವರಣವೆಂಥದೋ' ಎನ್ನುವ ಕವಿ ಕೌತುಕಕ್ಕೆ ಕಾರಣವಾಗುತ್ತದೆ.

ನಿಸಾರರ 'ಬಾಪೂ' ಕವನದಲ್ಲಿ ಈ ಎಲ್ಲ ಅಂಶಗಳ ಕ್ರೋಡೀಕರಣವನ್ನು ಕಾಣುತ್ತೇವೆ. ಹಲವು ಕವಿಗಳು ಮೊಗೆ ಮೊಗೆದು ತೆಗೆದರೂ ಕುಂದದ ಶಕ್ತಿ ಪುಂಜದಿಂದ ತಮ್ಮ ಪಾಲನ್ನು ಅವರು ಎತ್ತಿಕೊಂಡಿದ್ದಾರೆ.

'ಬಾಪೂ' ಎನ್ನುವ ಕವನದ ಶೀರ್ಷಿಕೆಯೇ ಆ ಅವಿಸ್ಮರಣೀಯ ವ್ಯಕ್ತಿತ್ವದೊಂದಿಗೆ ಆತ್ಮೀಯ ಸಂಬಂಧವೊಂದನ್ನು ಕುದುರಿಸಿಬಿಡುತ್ತದೆ. 'ಮಹಾತ್ಮಾ' ಇತ್ಯಾದಿ ಉಪಾಧಿಗಳಿಲ್ಲದ, 'ಗಾಂಧೀಜಿ' ಎನ್ನುವಂಥ ಗೌರವಸೂಚಕ ಪ್ರತ್ಯಯಗಳನ್ನು ಕಳಚಿಕೊಂಡ ಸಂಬೋಧನೆಯ ಕ್ರಮವು ಪ್ರೀತಿಯನ್ನು ಹುಟ್ಟಿಸುತ್ತದೆ.

ಈ ಕವನವು ತನ್ನ ಮೊದಲ ಪಾದಗಳಲ್ಲಿಯೇ ಬಾಪುವಿನ ಬಗೆಗೆ ಎಲ್ಲರಲ್ಲೂ ಇರುವ ಆರಾಧನಾ ಭಾವವನ್ನು ಪ್ರದರ್ಶಿಸುತ್ತದೆ. ಆ ಹಂತದಲ್ಲಿ ಬಾಪುವಿನ ಅಂತಃಸತ್ವಗಳ ಅನ್ವೇಷಣೆಗಳಾಗಲಿ, ಅಹಿಂಸೆ ಮುಂತಾದ ತತ್ತ್ವ ಪ್ರಣಾಳಿಗಳ ಬಿಗು-ಮಿದುಗಳ ಪರೀಕ್ಷೆಗಳಾಗಲಿ ನಡೆಯದೆ, ಹೊರಗಿನ ಇರಸರಿಕೆಯ ಆಕರ್ಷಣೆ ಹಾಗೂ ಪರಂಪರೆಯಿಂದ ದತ್ತವಾದ ನಂಬಿಕೆಗಳಷ್ಟೇ ಎಡೆ ಪಡೆಯುತ್ತವೆ.

'ಹಣ್ಣು ಹುಳಿಯೊ ಸಿಹಿಯೊ ರುಚಿಯ ನೋಡುವ ಮೊದಲೆ
ಯಾರನ್ನೊ ಅನುಕರಿಸಿ ಮಾಡಿದ್ದೆ ನಾನಾಗ ಮರದ ಗುಣಗಾನ'

ಎನ್ನುವಾಗ ನಿಸಾರರ ಧ್ವನಿ ತುಂಬ ಪ್ರಾಮಾಣಿಕವಾಗುತ್ತದೆ. ಬೌದ್ಧಿಕ ಎಳಸುತನ, ಮನುಷ್ಯನ ಪ್ರಬಲ ಪ್ರವೃತ್ತಿಗಳಲ್ಲೊಂದಾಗಿರುವ ಅನುಕರಣಶೀಲವನ್ನು ಒಪ್ಪಿಕೊಳ್ಳಲು ಕವಿ ಹಿಂಜರಿಯುವುದಿಲ್ಲ. ನಮ್ಮ ಮುಂದಿರುವುದು 'ಫಲ ಸಮೃದ್ಧವಾದ ವೃಕ್ಷ' ಎನ್ನುವ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಈ ಹೇಳಿಕೆಯು ವ್ಯಕ್ತವಾಗುತ್ತದೆ. ಒಂದು ಅರ್ಥದಲ್ಲಿ, ರುಚಿ ಪ್ರಭೇಧಗಳಂಥ ಮಾನವ ನಿರ್ಮಿತವಾದ ಮಾನದಂಡಗಳಿಂದಷ್ಟೇ ಮರವೊಂದರ ಮೌಲ್ಯವು ನಿಗದಿಯಾಗಲಾರದು. ನಿಸರ್ಗದಲ್ಲಿ ನಿಶ್ಚಿತ ಸ್ಥಾನವಿರುವ ಅದಕ್ಕೆ ಸ್ವತಂತ್ರವಾದ ವ್ಯಕ್ತಿತ್ವವೊಂದು ಇದ್ದೇ ಇರುತ್ತದೆ; ಅದರ ಕಲಾತ್ಮಕತೆ-ಉಪಯುಕ್ತತೆಗಳಿಗೂ ಅನ್ಯ ನೆಲೆಗಳಿರುತ್ತವೆ. ಮರವು ಕೊಡುವ ಹಣ್ಣಿನ ರುಚಿ, ಅದರ ಬೆಲೆಯನ್ನು ಬದಲಾಯಿಸಬಹುದೇ ಹೊರತಾಗಿ ಅಸ್ತಿತ್ವವನ್ನು ಪ್ರಶ್ನಿಸಲಾರದು. ಈ ಅಭಿಪ್ರಾಯದ ಮೂಲಕ ಬಾಪು ಅವರ ವ್ಯಕ್ತಿತ್ವವನ್ನು ಬಹು ಉದಾತ್ತವಾದ ಚೌಕಟ್ಟಿನೊಳಗೆ ಸ್ಥಾಪಿಸುತ್ತಾರೆ, ಕವಿ ನಿಸಾರರು. ಆ ಕಲ್ಪನೆಯ ಜಾಡಿನಲ್ಲಿ ಕವನದ ಮುಂದಿನ ಮೆಟ್ಟಲುಗಳನ್ನು ಸಜ್ಜುಗೊಳಿಸುತ್ತಾರೆ.

'ಅರ್ಜೆಂಟಿನಲಿ ಹೊರಟಾಗ ಅಂಗಿ ತೊಟ್ಟಿದ್ದಷ್ಟೆ—
ಇಲ್ಲ ದೊಗಳೆಯೊ ಬಿಗಿಯೊ ಎನುವ ಅನುಮಾನ'

ಎನ್ನುವಲ್ಲಿ ಸಮಗ್ರ ಭಾರತವು ಬಾಪುವನ್ನು ಸ್ವೀಕರಿಸಿದ ಕ್ರಮಕ್ಕೆ ಅವಧಾರಣೆಯಿದೆ. ಇಲ್ಲಿ, 'ಅರ್ಜೆಂಟಿನಲಿ' ಎಂಬ ಪ್ರಯೋಗವು ಆ ಸ್ವೀಕಾರದ ಪ್ರಾಸಂಗಿಕ ತುರ್ತುಗಳ ಬಗೆಗಿನ ಊಹೆಗಳನ್ನು ಮುಂದಿಡುತ್ತದೆ. ಸದ್ಯಕಾಲೀನ ಆವಶ್ಯಕತೆಯ ಪೂರೈಕೆಯೊಂದೇ ಲಕ್ಷ್ಯವಾಗಿರುವ ಸಂದರ್ಭದಲ್ಲಿ ಹಾಳತ-ಚೆಂದಗಳ ಬಗೆಗಿನ ಗಮನವು ಸಹಜವಾಗಿಯೇ ಕಡಮೆಯಾಗಿರುತ್ತದೆ. ಅಂಗಿಯೇ ಇಲ್ಲದಿರುವಾಗ ಸಿಕ್ಕಿದುದನ್ನು ಧರಿಸುವ ಆತುರವಷ್ಟೇ ಇರುತ್ತದೆ. ಹಾಗೆಯೇ, ಮನಸ್ಸಿನ ಸ್ವಾಸ್ಥ್ಯಕ್ಕೆ 'ಅನುಮಾನವೇ' ಇಲ್ಲದಂಥ ಆಸರೆಯ ಅಗತ್ಯವೂ ಇಲ್ಲಿ ಪ್ರತಿಪಾದಿತವಾಗಿದೆ. ಗಾಂಧೀಜಿಯ ವ್ಯಕ್ತಿತ್ವ ಹಾಗೂ ಕರ್ತೃತ್ವಗಳು ಇಲ್ಲಿ ವಿವಾದಾತೀತವಾಗುತ್ತವೆ; ಮೊದಲ ದರ್ಶನದ ಬೆರಗಿಗೆ ಕಾರಣಗಳಾಗುತ್ತವೆ.

ಕವನದ ಮುಂದಿನ ಸಾಲುಗಳಲ್ಲಿ ಈ ಭಾವುಕತೆಯ ಜಾಗದಲ್ಲಿ ವೈಚಾರಿಕತೆಯನ್ನು ಕಾಣಬಹುದು.

'ಬಾಪೂ—
ಬೆರಗ ಬಣ್ಣವ ಬುದ್ಧಿ ಮೊನೆಯಿಂದ ಕೆರೆದು
ಸ್ವಾನುಭವದಲ್ಲಿ ಅರೆದು ಒರೆಯ ಹಚ್ಚಿದ್ದೇನೆ'

ಎನ್ನುವಾಗ ಕವಿಯೊಳಗಿನ ನಂಬಿಕೆ-ವಿಶ್ವಾಸಗಳಿಗೆ ಸತಾರ್ಕಿಕವಾದ ಸಮರ್ಥನೆಗಳು ದೊರೆಯುತ್ತವೆ. ಗಾಂಧೀಜಿಯವರ ಕುರಿತಾದ ಕೌತುಕವು ಕೇವಲ ಹೊರ ಹೊದಿಕೆ; ಮೆತ್ತಲ್ಪಟ್ಟ ಬಣ್ಣವಾಗಿರಬಹುದೇ ಹೇಗೆ? ಎಂದು ಅವರು ಸಂದೇಹಿತರಾಗುತ್ತಾರೆ. ಹರಿತವಾದ ವಿಮರ್ಶೆಯ ಅಲಗಿನಿಂದ ಬಹು ಜಾಗರೂಕತೆಯಿಂದ ಆ ಪದರಗಳನ್ನು ನಿವಾರಿಸಿಕೊಂಡು, ನಿಜವಾದ ಆಕೃತಿಯ ಸ್ವರೂಪ-ಸತ್ವಗಳನ್ನು ಹಿಂಜಿ ನೋಡುವ ಉಪಕ್ರಮಗಳಿಗೆ ಅವರು ಮುಂದಾಗುತ್ತಾರೆ. ಆಗ, ಭ್ರಮೆಯಿರಬಹುದೆಂದುಕೊಂಡಿದ್ದ ಬೆರಗು, ವಾಸ್ತವವಾಗಿ ಪರಿವರ್ತಿತವಾಗುತ್ತದೆ; ಬಾಪುವಿನ ವ್ಯಕ್ತಿತ್ವವು ನಿಚ್ಚಳವಾಗ ತೊಡಗುತ್ತದೆ. ಇದರೆಡೆಯಲ್ಲಿ ಸ್ವಂತದ ಅನುಭವಗಳನ್ನು ಕವಿ ಗಮನಿಸುವ ರೀತಿಯೂ ಸ್ಫುಟವಾಗುತ್ತದೆ.

ಇಲ್ಲಿ ಒಂದು ಸೂಕ್ಷ್ಮವನ್ನೂ ಗಮನಿಸಬೇಕು. ಋಜುತ್ವದ ಬಗೆಗೆ ಅಪಾರ ಶ್ರದ್ಧೆಯಿದ್ದ ಗಾಂಧೀಜಿಯವರಿಗೆ, ಅದರ ನೆರಳಲ್ಲೆ ಮೊಳಕೆಯೊಡೆಯುತ್ತಿದ್ದ ಕೇಡುಗಳು ಕಾಣಿಸದೆ ಹೋದವು. ವಿಶ್ವ ಮಟ್ಟದಲ್ಲಿ ಮಾನವೀಯತೆಯನ್ನು ಎಚ್ಚರಿಸಿದ ಅವರ ಸಾಮರ್ಥ್ಯ ಸ್ವಂತದ ನೆಲೆಯನ್ನು ಕತ್ತಲಲ್ಲೇ ಉಳಿಸಿಬಿಟ್ಟಿತೆಂಬ ಖೇದವು ಕವನದ ಮುಂದಿನ ಸಾಲುಗಳಲ್ಲಿ ಪ್ರಸ್ತಾಪಿತವಾಗಿದೆ. ಈ ವೈರುಧ್ಯದ ಕಾರಣಗಳಿಗಾಗಿ ತೀವ್ರವಾದ ಶೋಧವನ್ನು ಕವಿ ನಡೆಸುತ್ತಾರೆ. ಅದರಲ್ಲಿ ಸಫಲರೂ ಆಗುತ್ತಾರೆ.

'ಲೋಕಕೇ ಕಣ್ಣಾದ ಬೆಳುದಿಂಗಳು
ಮನೆಯ ಬೆಳಗಿಲ್ಲೆಂದು ಕೂಗಾಡಲೆ,

ಹೊತ್ತಿಸದೆ ದೀಪ?
ಮೇರೆಯಿಲ್ಲದ ಕಡಲು ನನ್ನ ಬಾಯಾರಿಕೆಯ
ತಣಿಸಲಿಲ್ಲೆಂದು ರೇಗಾಡಲೆ,
ತೋಡದೆಯೆ ಕೂಪ?'

ಈ ಸಂದರ್ಭದಲ್ಲಿ, ನಿಸಾರರು ಕೆಲವು ವಸ್ತುಸತ್ಯಗಳನ್ನು ತುಂಬ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಬೆಳದಿಂಗಳು ಎಷ್ಟು ಬೆಳಕನ್ನು ನೀಡಿದರೂ ಮನೆಯ ನಾಲ್ಕು ಗೋಡೆಗಳೊಳಗೆ ಅದು ಪ್ರವೇಶಿಸಲಾರದು; ಅಲ್ಲಿಗೆ ಪ್ರಕಾಶವನ್ನು ನೀಡಲಾರದು. ಮನೆಯೊಳಗು ಬೆಳಕಾಗಬೇಕಾದರೆ ಮನುಷ್ಯ ನಿರ್ಮಿತವಾದ ದೀಪವೇ ಬೇಕಾಗುತ್ತದೆ. ವ್ಯಕ್ತಿಯ ಪ್ರಯತ್ನವಿಲ್ಲದಿದ್ದರೆ ಅವನ ಮನಸ್ಸು ತಿಳಿಯಾಗಲಾರದು; ತಿಳಿವನ್ನು ಗ್ರಹಿಸಲಾರದು. ಗಾಂಧೀಜಿಯವರು ಉಜ್ವಲವಾದ ಬೆಳಕಿನ ಕೇಂದ್ರವಾಗಿರ ಬಹುದು. ಅದರ ಪ್ರತಿಫಲನ-ಪ್ರವೇಶಗಳಿಗೆ ಸನ್ನದ್ಧರಾಗಬೇಕಾದುದು ನಮ್ಮ ವೈಯಕ್ತಿಕ-ಸಾಮೂಹಿಕ ಹೊಣೆಯೆಂಬ ಸೂಚನೆಯು ಇಲ್ಲಿದೆ. ಬಿಗಿಯಾಗಿ ಮುಚ್ಚಿದ ಹೃದಯದ ಕವಾಟವನ್ನು ಗಾಂಧೀಜಿಯವರಂಥವರೂ ತೆರೆಯಲಾರರೆಂಬ ನೀತಿಯು ಸಮಕಾಲೀನ ಪ್ರಸ್ತುತತೆಯನ್ನು ಹೊಂದಿದೆ.

ಇದರ ಪದರಿನಲ್ಲಿಯೇ ಸಮುದ್ರದ ಪ್ರಸ್ತಾಪವೂ ಬರುತ್ತದೆ. ಅಪಾರ ವಿಸ್ತಾರವಿರುವ ಕಡಲು, ಅಗಾಧವಾದ ನೀರಿನಲೆಯೆಂಬುದೇನೋ ನಿಜವೇ. ಆದರೆ ಆ ಉಪ್ಪು ನೀರು ಜೀವಿಯ ಬಾಯಾರಿಕೆಯನ್ನು ತಣಿಸಲಾರದು. ಅದಕ್ಕೆ ಅವನ ಪರಿಶ್ರಮಕ್ಕೆ ಒಲಿಯುವ ಬಾವಿಯ ಸಿಹಿ ನೀರೇ ಬೇಕಾಗುತ್ತದೆ. ಅಲ್ಲದೆ, ಮೇಲ್ನೋಟಕ್ಕೆ ತನಗೆ ಮೇರೆಗಳಿಲ್ಲವೆಂದು ತೋರಿಸಿಕೊಳ್ಳುವ ಕಡಲಿಗೂ ಮೀರಲಾರದ ಮಿತಿಗಳಿವೆ. ಸ್ವಂತದ ನೀರಡಿಕೆಗಳನ್ನು ಪರಿಹರಿಸಿಕೊಳ್ಳಲು ವ್ಯಕ್ತಿಯೇ ಮುಂದಾಗಬೇಕು ಹೊರತಾಗಿ, ನೀರು ತಾನಾಗಿ ತನ್ನೆಡೆಗೆ ಬರಲೆಂದು ಬಯಸಬಾರದು; ಅದು ಎಷ್ಟು ಮಾತ್ರಕ್ಕೂ ಬರಲಾರದು ಕೂಡ. ಗಾಂಧೀಜಿಯವರ ವ್ಯಕ್ತಿತ್ವದ ತೂಕ, ತತ್ತ್ವನಿಷ್ಠೆಗಳು ನಮಗೆ ಸಿದ್ಧಿಸಲಿಲ್ಲ ವೆಂಬುದಕ್ಕೆ ಅವರು ಜವಾಬ್ದಾರರಲ್ಲವೆಂಬ ಸಮಚಿತ್ತದ ಸೂಚನೆಯಾಗಿ ಈ ಭಾಗಕ್ಕೆ ಮಹತ್ವವಿದೆ.

ಗಾಂಧೀಜಿಯವರು ತಾವು ಬೆಳೆಯುವುದರೊಂದಿಗೆ ದೇಶವನ್ನು ಬೆಳೆಸಲು ಪ್ರಯತ್ನಿಸಿದರು; ಸಮಷ್ಟಿಯ ಹಿತವೆನ್ನುವುದು ಅವರ ಬಾಳಿಗೊಂದು ಮಂತ್ರವೇ ಆಯಿತು. ಅದರ ಪುರಶ್ಚರಣೆ ನಡೆಯುತ್ತಿದ್ದಂತೆ, ಅವರ ವ್ಯಕ್ತಿತ್ವವೂ ಸರ್ವಾಂಗೀಣ ಬೆಳವಣಿಗೆಯನ್ನು ಕಾಣತೊಡಗಿತು; ಅಖಂಡವಾಯಿತು. ಬದುಕಿನ ನಿಯಮಿತ ಪಾತ್ರಗಳನ್ನು ದಾಟುವ ಅನಂತ ವಿಸ್ತಾರದ ಸಾಧನೆಯೇ ಅವರ ಲಕ್ಷ್ಯವಾಯಿತು. ಇದು, ಅರ್ಥದ ಒಂದು ನೆಲೆಯಾದರೆ, ಇನ್ನೊಂದೆಡೆಗೆ ವ್ಯಷ್ಟಿ ಬದುಕಿನ ಮಗ, ತಂದೆ, ಸೋದರ, ಗಂಡ ಸೀಮಿತ ಬಂಧುತ್ವಗಳ ನಿರ್ವಹಣೆಗಳಿಗೆ ಅವರು ನಿಂತು ಬಿಡಲಿಲ್ಲ. ಆ ಬಾಂಧವ್ಯದ ಪರಿಧಿಯನ್ನು ವಿಸ್ತರಿಸಿ ಕೊಳ್ಳುತ್ತ, 'ಸರ್ವಭ್ರಾತೃತ್ವ'ದೆಡೆಗೆ ಅದನ್ನೊಯ್ದರು. ಬದುಕಿನುದ್ದಕ್ಕೂ ಆ ಭಾವವನ್ನು

ರೆಪ್ಪೆಯೊಳಗಿಟ್ಟು ರಕ್ಷಿಸುವ ಹಠವನ್ನಿಟ್ಟುಕೊಂಡರೆಂಬ ಅರ್ಥವನ್ನು ಮುಂದಿನ ಸಾಲುಗಳಲ್ಲಿ ನೋಡಬಹುದು.

'ವ್ಯಕ್ತಿ ಬದುಕಿನ ಕಿರಿಯ ಪಾತ್ರವೇ ನಿನ್ನದು?
ಒಂಟಿಯೇ ನೀನು?
ಎಲ್ಲವೂ ನಿಸ್ಸೀಮ: ಸ್ವಾತಂತ್ರ್ಯ, ಉದ್ಧಾರ, ದಯೆ, ಸರ್ವಭ್ರಾತೃತ್ವ;
ಹಿರಿದು ಬದುಕಿನ ತತ್ತ್ವ.'

ವಿಶ್ವಕ್ಕೆಲ್ಲ ಸಮಾನವಾಗಿ ಪಸರಿಸುವ ಬೆಳ್ದಿಂಗಳು, ದಿಗಂತ ವಿಸ್ತೃತವಾದ ಕಡಲುಗಳೊಂದಿಗೆ ಗಾಂಧೀಜಿಯವರನ್ನು ಸಮೀಕರಿಸುವ ಹಿಂದಿನ ಸಾಲುಗಳ ಹಿನ್ನೆಲೆಯೊಂದಿಗೆ ಈ ಭಾಗವನ್ನು ಪರಿಶೀಲಿಸಬೇಕು. 'ಪಾತ್ರ' ಪರಿಕಲ್ಪನೆಯ ಅನ್ಯಾನ್ಯ ಅರ್ಥಗಳು ಇಲ್ಲಿ ಶೋಧಿಸಲ್ಪಟ್ಟಿವೆ. 'ನಿಸ್ಸೀಮ' ಪದದಲ್ಲಿರುವ ಸೀಮಾರಾಹಿತ್ಯ ಹಾಗೂ ತುಲನೆಗೆ ಸಿಗದ ಗುರುತ್ವಗಳೂ ಇಲ್ಲಿ ಪ್ರತಿಪಾದಿತವಾಗಿವೆ.

ಅಂಥ ಭದ್ರವಾದ ಬುನಾದಿಯಿದ್ದುದರಿಂದಲೇ ಅಸಾಧ್ಯವಾದವುಗಳನ್ನು ಸಾಧಿಸುವ ಇಚ್ಛಾಶಕ್ತಿಯು ಗಾಂಧೀಜಿಯವರಿಗೆ ಪ್ರಾಪ್ತವಾಯಿತು. ಇಡಿಯ ದೇಶವನ್ನು ಒಂದು ಸಂಯುಕ್ತ ಘಟಕವಾಗಿ ರೂಪಿಸುವುದೂ ನಡು ರಾತ್ರಿಯ ಕಗ್ಗತ್ತಲೆಯಲ್ಲಿ ಬೆಟ್ಟವನ್ನೇರುವ ಕ್ರಿಯೆಗೆ ಅದನ್ನು ಸಿದ್ಧಪಡಿಸುವುದೂ ಇದರ ನೆರವಿನಿಂದಲೇ ಆದವೆಂಬ ಅಂಶಕ್ಕೆ ಮುಂದಿನ ಸಾಲುಗಳು ಅವಧಾರಣೆಯನ್ನು ನೀಡುತ್ತವೆ.

'ಕೊನೆ ತನಕ ದೇಶವೇ ನಿನ್ನ ಜೊತೆಯಲ್ಲಿ:
ಬೆಟ್ಟವೇರಿದ ಹಾಗೆ ನಟ್ಟಿರುಳಿನಲ್ಲಿ.'

ಎನ್ನುವ ಅರ್ಥಪೂರ್ಣ ಹೇಳಿಕೆಯೊಂದಿಗೆ ಈ ಕವನದ ಮೊದಲ ಭಾಗವು ಸಮಾಪ್ತವಾಗುತ್ತದೆ.

ಕವನದ ಎರಡನೆಯ ಭಾಗವು ಬಾಪೂವಿನ ಸದೃಢವಾದ ಮೌಲ್ಯ ಸಂಹಿತೆಯ ಮೂಲಕ ವರ್ತಮಾನದ ವಿಸಂಗತಿಗಳನ್ನು ಜಾಲಾಡುತ್ತದೆ.

'ಹೆಳವ ನಡಿಗೆಯ ಹೊಳೆಗೆ ಇದ್ದಕಿದ್ದಂತೆ ಮಳೆ ಹೊಯ್ದು
ಮನೆ ಮಠಗಳೆಲ್ಲ ತೆಪ್ಪ ತೇಲುತ್ತವೆ.
ನಸುಕಿನ ಮುಸುಕಿನಲ್ಲಿ ತಣ್ಣಗೆ ಒರಗಿದ್ದಾಗ
ಭೂಮಿ ಮೈಮುರಿದೂ, ಅಣ್ವಸ್ತ್ರ ಸಿಡಿದೂ
ನಂಬಿಕೆಯ ಬೇರುಗಳು ಸಡಿಲುತ್ತವೆ.'

ಕವಿ ಚಿತ್ತದ ವ್ಯಾಕುಲತೆ, ಆತಂಕ, ವೇದನೆಗಳೆಲ್ಲ ಸಂಧಿಸುವ ಈ ಸಾಲುಗಳಲ್ಲಿ ವಾಸ್ತವ ಬದುಕಿನ ವೈಕಲ್ಯ, ವೈಫಲ್ಯಗಳೆರಡೂ ವ್ಯಕ್ತವಾಗುತ್ತವೆ. ತೆಳು ಧಾರೆಯ ನದಿಗೆ, ಧಾರಾಕಾರವಾದ ಮಳೆಯ ನೀರನ್ನು ಭರಿಸುವ ಶಕ್ತಿಯಿರುವುದಿಲ್ಲವೆನ್ನುವ ಕವನ, ಇಂದಿನ ಜಡವಾದ ಜೀವನ ಗತಿಗೆ ಬಾಪುವಿನ ಸಿದ್ಧಾಂತಗಳ ಮಹಾಪೂರವನ್ನು ತಾಳಿಕೊಳ್ಳುವ ಸಾಮರ್ಥ್ಯವಿಲ್ಲವೆಂದೂ ನಿರ್ಧರಿಸುತ್ತದೆ; ಭಾರತೀಯ ಮನಸ್ಸಿನ ಆಶ್ರಯ ತಾಣಗಳೆಲ್ಲ

ಭಗ್ನವಾಗುವ ಚೋದ್ಯಕ್ಕೆ ದನಿ ನೀಡುತ್ತದೆ.

ಭೂಕಂಪದಂಥ ನೈಸರ್ಗಿಕ ಆಪತ್ತಿರಲಿ, ಅಣ್ವಸ್ತ್ರದಂಥ ಮಾನವಕೃತ ಮಾರಕ ಪರಿಕರವಿರಲಿ ಪರಿಣಾಮತಃ ಸಡಿಲಗೊಳಿಸುವುದು ವಿಶ್ವಾಸ-ಭರವಸೆಗಳ ಬೇರುಗಳನ್ನೇ ಎಂಬ ಭಾವವು ಇಲ್ಲಿದೆ. ಭೌತಿಕ ಪರಿಸರದಲ್ಲಿ ಬುಡ ಕಳಚಿಕೊಂಡು ಉರುಳುವ ಹೆಮ್ಮರಗಳು ಇದರ ಸಂಕೇತಗಳಾಗುತ್ತವೆ. ಸೃಷ್ಟಿಯ ಆಶ್ವಾಸನೆಯಂತೆಯೇ ಮನುಷ್ಯರ ನಡುವಿನ ಸೌಹಾರ್ದಯುತವಾದ ಸಂಬಂಧಗಳೂ—ಅನ್ಯಾನ್ಯ ಕಾರಣಗಳಿಂದಾಗಿ—ಮುರಿದು ಬೀಳುತ್ತವೆಂಬ ಧ್ವನಿಯು ಇಲ್ಲಿ ವ್ಯಕ್ತವಾಗುತ್ತದೆ.

‘ಒಟ್ಟು ಬದುಕಿನ ಸಾಫು ಹಾದಿಯಲ್ಲಿ
ಸಲೀಸು ಸಾಗುವ ಚಕ್ರ
ಬೆಟ್ಟ ಕೊರಕಲಿನಲ್ಲಿ ಮುಗ್ಗರಿಸದೆ?
ವ್ಯಕ್ತಿ ವ್ಯಕ್ತಿಗೆ ಬಡಿವ ಹಠಾತ್ತನೆಯ ಘಟನೆಯಲಿ
ನಿನ್ನ ಅನುಭವ ಬಾಳ ಬಗ್ಗಡಿಸದೆ?’

ಈ ಹಂತದಲ್ಲಿ, ಕವಿ ಬಾಪೂವಿನ ಪ್ರತಿಮೆಯನ್ನು ತುಂಬ ವಿಶಾಲವಾದ ಭಿತ್ತಿಯಲ್ಲಿಟ್ಟು ನೋಡುತ್ತಾರೆ; ಆ ಬದುಕು ಆರಿಸಿಕೊಂಡ ತತ್ತ್ವಗಳತ್ತ ಕುತೂಹಲದ ದೃಷ್ಟಿಯನ್ನು ಬೀರುತ್ತಾರೆ. ಜೀವನ ಯಾನವು ಎತ್ತ ಸಾಗಬೇಕೆಂಬುದರ ಬಗೆಗೆ ಬಾಪುವಿಗಾಗಲಿ, ಜನ ಸಾಮಾನ್ಯರಿಗಾಗಲಿ ಕಲ್ಪನೆಗಳಿರಬಹುದೇ ಹೊರತಾಗಿ ಅವುಗಳ ಮೇಲೆ ನಿಯಂತ್ರಣವಿರಲಾರದು. ಮಟ್ಟಸವಾದ ದಾರಿಯಷ್ಟು ಸುಗಮವಾಗಿ ಸವಾಲುಗಳ ಎತ್ತರ ಹಾಗೂ ಸೋಲುಗಳ ಕಂದಕಗಳನ್ನು ನಿಭಾಯಿಸುವುದು ಅದಕ್ಕೆ ಸಾಧ್ಯವಾಗಲಾರದು. ಈ ನೆಲೆಯಿಂದ ಪ್ರತಿ ವ್ಯಕ್ತಿಯ ಬಾಳುವೆಯೂ ವಿಶಿಷ್ಟವೇ ಸರಿ. ಗಾಂಧೀಜಿಯವರ ಅನುಭವ ಸರಣಿಗಳ ಸ್ಮರಣೆಯಿಂದ ಬಿಡಿಸಿಕೊಳ್ಳುವುದು ತುಂಬ ಕಷ್ಟವಾದುದರಿಂದ, ಅನಿರೀಕ್ಷಿತವಾದ ಘಟನೆಗಳನ್ನು ಎದುರಿಸುವ ವ್ಯಕ್ತಿಯ ಸ್ತಿಮಿತ ಕದಡುವ ಸಾಧ್ಯತೆಗಳಿಲ್ಲವೇ ಹೇಗೆ? ಎಂಬ ಪ್ರಶ್ನೆಯನ್ನು ಕವಿ ಮುಂದಿಡುತ್ತಾರೆ. ‘ಪರಕೀಯ’ ಅನುಭವದ ಪ್ರಭಾವದಿಂದ ಬಿಡಿಸಿಕೊಳ್ಳುವ ಅಗತ್ಯವೂ ಇಲ್ಲಿ ಸೂಚಿತವಾಗಿದೆ. ಇದರೊಂದಿಗೆ ತುಂಬ ತೆಳುವಾಗಿ, ಸದ್ಯಕಾಲೀನ ಪರಿಸ್ಥಿತಿಯಲ್ಲಿ, ಗಾಂಧೀಜಿಯವರೊಂದಿಗೆ ಇಂಥ ಸಮೀಕರಣಗಳು ಅನಿವಾರ್ಯವೆಂಬ ಅನಿಸಿಕೆಯೂ ಇದೆ. ಎಂದರೆ, ಗಾಂಧೀಜಿಯವರ ಅನುಭವಗಳು ಯಾವುದೋ ಒಂದು ಘಟ್ಟದಲ್ಲಿ ಪ್ರತಿಯೊಬ್ಬನದೂ ಆಗುತ್ತವೆಯೇ ಎಂಬ ಅನುಮಾನವೂ ನಮ್ಮನ್ನು ಕಾಡುತ್ತದೆ.

‘ಬಾಪೂ
ಜಿಂಕೆ ಮೊಲ ನವಿಲೊಡನೆ ಇವೆ ಹಾವು ಹುಲಿ ಹಂದಿ;
ಪ್ರಕೃತಿಯು ದ್ವಂದ್ವಕ್ಕೆ ಯಾವ ಬಟ್ಟೆ?
ಬರೀ ಹೃದಯ, ಕರುಳಷ್ಟೆ ಇದ್ದಿದ್ದರಿವಕೆಲ್ಲ!
ಕೂಡಿಕೊಂಡಿವೆ ಹಾಳು ಹಲ್ಲು, ಹೊಟ್ಟೆ.’

ನಿಸಾರರು ವಾಚ್ಯ-ಸೂಚ್ಯಾದಿ ಗೊಂದಲಗಳ ಬಗೆಗೆ ಅನಾಸಕ್ತರೆಂಬುದಕ್ಕೆ

ಸಾಕ್ಷಿಯಾಗುವ ಈ ಸಾಲುಗಳು ಕವನದ ಆಶಯದ ದೃಷ್ಟಿಯಿಂದಲೂ ಮುಖ್ಯವಾಗುತ್ತದೆ. ಇಲ್ಲಿ ಕವಿ, ಪ್ರಾಣಿ ಪ್ರತೀಕಗಳ ಮೂಲಕ ಮನುಷ್ಯನೊಳಗಿನ ಕ್ರೌರ್ಯ-ವೈಷಮ್ಯಗಳನ್ನು ಪರಿಶೀಲಿಸುತ್ತಾರೆ. ಮೃದುತ್ವ, ಸೌಂದರ್ಯ, ಶುಚಿತ್ವಗಳೊಂದಿಗೆ ಈ ಅಂತರಂಗ-ಬಹಿರಂಗಗಳ ಶ್ವಪಚತನದ ಇರುವಿಕೆಯು ಅವರ ವೇದನೆಗೆ ಕಾರಣವಾಗುತ್ತದೆ. ಈ ಸಂದರ್ಭದಲ್ಲಿ 'ಬಟ್ಟೆ' ಪದದ ಶ್ಲೇಷಾರ್ಥಗಳನ್ನೂ ಅವರು ಯಶಸ್ವಿಯಾಗಿ ಬಳಸಿಕೊಳ್ಳುತ್ತಾರೆ. ಪ್ರಕೃತಿಯಲ್ಲಿ ಎದ್ದು ಕಾಣುವ ದ್ವಿಮುಖ ನೀತಿಗಳಿಗೆ ಯಾವ ಮರೆಯೂ ಇಲ್ಲ. ಆದರೆ ಅವುಗಳ ಕಾಯತಂತ್ರಗಳು ಮಾತ್ರ ಅಗೋಚರವಾಗಿರುತ್ತವೆಂಬ ನಿಲವು ಇಲ್ಲಿ ಕಾಣಿಸುತ್ತದೆ. ಇದರೊಂದಿಗೆ, ಗಾಢ ವಿಷಾದವೂ ಕವನವನ್ನು ಆವರಿಸುತ್ತದೆ. ಜೈವಿಕ ಅಸ್ತಿತ್ವದ ಪ್ರತಿನಿಧಿಯಾಗಿ ಕರುಳು-ಸಂವೇದನೆಗಳಿಗೆ ಆಸರೆ ನೀಡುವ ಹೃದಯಗಳಷ್ಟೇ ಅಸ್ತಿತ್ವದಲ್ಲಿದ್ದರೆ, ಜಾಗತಿಕ ಸ್ವಾಸ್ಥ್ಯವೂ ತಂತಾನೇ ಉಳಿಯುತ್ತಿತ್ತು. ಪ್ರಾಣಿಗಳಿಗಿರುವ 'ಹಲ್ಲು, ಹೊಟ್ಟೆ'ಗಳು ಅವುಗಳಷ್ಟಕ್ಕೇ ನಿರುಪದ್ರವಿಗಳು, ದೇಹದ ಉಪಯುಕ್ತ ಅವಯವಗಳು. ಅವುಗಳ ಹಿಂದೆ 'ಹಾಳು' ವಿಶೇಷಣವಿದ್ದಾಗ ಮಾತ್ರ ಅಪಾಯವಿರುತ್ತದೆಂಬ ಪರಿಜ್ಞಾನದೊಂದಿಗೆ, ಕವನವು ಮಾನವೀಯ ಕಾಳಜಿಗಳನ್ನು ಪ್ರದರ್ಶಿಸುತ್ತದೆ. ಈ ಪರಿವರ್ತನೆಯ ಹಿಂದಿರುವ ಕೇಡಿನ ಸ್ವರೂಪ ಶೋಧನೆಯತ್ತ ಕವಿ, ತಮ್ಮೆಲ್ಲ ಗಮನವನ್ನು ಕೇಂದ್ರೀಕರಿಸುತ್ತಾರೆ.

ಈ ಎಲ್ಲ ತಳಮಳ, ಕಳವಳ, ಜಿಜ್ಞಾಸೆಗಳು ಬಾಪುವಿನ ಮುಂದೆ ನಿವೇದಿತವಾಗುತ್ತವೆ:

'ಇದಕ್ಕೇನನ್ನುವುದು ಹೇಳು:
ಅರಿವೆ ಇಲ್ಲದೆ ನಿತ್ಯ ಹಿಂಸೆಯಲೆ ಹಿಗ್ಗುತಿದೆ ಜಗದ ಬಾಳು.
ನೋಡಿದನ್ನು—ಹಿತ್ತಲಿನ ಈ ಬಳ್ಳಿ, ಮರವನ್ನು:
ಹೂವಿಂದ ಹೆರಳು ಚೆನ್ನು
ನಾಲಗೆಯ ನಲಿಸುವುದು ಹಣ್ಣುಕಾಯಿ
ಕೊಂಬೆ ಕಡಿದೊಟ್ಟಿರಲು ಒಲೆಯಲ್ಲಿ, ತಣಿಯುವುದು ಹಸಿವು–ನಾಯಿ.
ಮೊನ್ನೆ ಲಕ್ವಾ ಹೊಡೆದ ನೆರೆಯಾತ ನರಳುತ್ತ
ಪಾರಿವಾಳವ ಕೊಯ್ದು ರಕ್ತ ಹೀರದೆ ಸತ್ತ;
ಮಡದಿ ಮಕ್ಕಳಿಗಾರು ಗತಿಯೊ ತಂದೆ?'

ಬಾಪು ಕಂಡಿರಲಾರದ, ಆದರೆ ತಾವು ಕಂಡ ಸತ್ಯಗಳನ್ನು ಅವರಿಗೆ ತೋರಿಸುವ ಪ್ರಯತ್ನದಲ್ಲಿ ಕವಿ, ಜಗತ್ತಿನ ಎಲ್ಲೆಡೆಗಳಲ್ಲಿ ನಡೆಯುತ್ತಿರುವ ಕ್ರೌರ್ಯದ ನಗ್ನ ನರ್ತನಗಳನ್ನು, ಹಿಂಸೆಯಲ್ಲಿ ರಮಿಸುವ ಅಜ್ಞಾನದ ವ್ಯಾಪಕತೆಯನ್ನು ನಿರ್ಲಿಪ್ತಿಯಿಂದ ಉಲ್ಲೇಖಿಸುತ್ತಾರೆ. ಸೌಂದರ್ಯದ ಅನುಭೂತಿ-ಪ್ರಯೋಜನಗಳ ಅನುಸಂಧಾನಗಳನ್ನು ತೂಗಿ ನೋಡುತ್ತಾರೆ. 'ಪಾರ್ಶ್ವ ವಾಯುವಿಗೆ ತುತ್ತಾದವರು ಪಾರಿವಾಳದ ಹಸಿ ರಕ್ತವನ್ನು ಹೀರಿದರೆ ಗುಣಮುಖರಾಗುತ್ತಾರೆ' ಎಂಬ ಜನಜನಿತವಾದ ನಂಬಿಕೆಯ ಮುಖಾಂತರ ಅವರು ವರ್ತಮಾನದ ದುರಂತಗಳನ್ನು ನಿರೂಪಿಸಿದ್ದಾರೆ. ರೋಗಗ್ರಸ್ತವಾದ ಚೈತನ್ಯವು ವಾಸ್ತವ,

ಅದರ ಪರಿಹಾರವು ಕೇವಲ ಮಿಥ್ಯೆಯೊಂದನ್ನು ಆಧರಿಸಿದೆ ಎನ್ನುವ ಸೂಕ್ಷ್ಮವನ್ನು ಇಲ್ಲಿ ಲಕ್ಷಿಸಬೇಕು. ಪಾರಿವಾಳವನ್ನು ಕೊಯ್ಯುವ, ಹೀರುವ ಕ್ರಿಯೆಗಳ ನಡುವೆ ಅಲ್ಪ ವಿರಾಮ ವಿಲ್ಲದಿರುವುದರ ಸಂಕೇತವನ್ನೂ ಗ್ರಹಿಸಬೇಕು. ಈ ಜಾಡಿನಲ್ಲಿ ನಡೆಯುವ ಕವನದ ಭಾಗವು ನಿತ್ಯದ ನಿರ್ಗತಿಕತನವನ್ನು ಸ್ಪಷ್ಟಪಡಿಸುತ್ತಾ ಮುಗಿತಾಯಕ್ಕೆ ಬರುತ್ತದೆ.

ಮುಂದೆ, ಬಾಪುವಿನ ಆದರ್ಶಗಳು, ಸಿದ್ಧಾಂತಗಳು, ಮೌಲ್ಯ ಸಂಹಿತೆಗಳು ತೀರಾ ಅಪ್ರಸ್ತುತವಾಗುತ್ತಿವೆಯೇನೋ ಎಂಬ ಅನುಮಾನದ ಅಭಿವ್ಯಕ್ತಿಯಿದೆ. ಅದರೊಂದಿಗೆ ಜನತೆಯ ಭಂಡತನ, ಸೋಗಲಾಡಿತನ, ತೋರಿಕೆಯ ಸಾಮರಸ್ಯದ ಹಿಂದಿರುವ ದ್ರೋಹ ಚಿಂತನೆಗಳನ್ನೆಲ್ಲ ಬಯಲಿಗೆ ಎಳೆದೇ ತೀರಬೇಕೆಂಬ ಹಠವೂ ಇದೆ.

‘ ‘ಸತ್ತರೇ ಗಾಂಧಿ’ ಎಂದತ್ತ ಅಪ್ಪನ ಜೊತೆಯೆ
ಹಂಚಿ ಸಕ್ಕರೆ ಬೂಂದಿ ಸಂತೋಷ ಪಟ್ಟವರ,
ಸಭೆಯಲ್ಲಿ ಕೈ ಕುಲುಕಿ ಸಮಾನತ್ವ ನಟಿಸಿ
ಮನೆಯಲ್ಲಿ ನೀರೆರೆದುಕೊಂಡು ಮಡಿಯಾದವರ
ಹಡಾಸು ಬಂಡಿಯಾಚಾರಕ್ಕೆ ಜೆಟ್ ಬುದ್ಧಿ ಹೊಂದಿಸಿ
ಪ್ರಗತಿ ಕನಸುತ್ತಿರುವ ಮಹಾನುಭಾವರ...’

ತಮ್ಮ ಪರಿಸರವನ್ನು ಪರೀಕ್ಷಿಸುತ್ತಿದ್ದಂತೆ ಕವಿಯ ಆಕ್ರೋಶ, ತಾತ್ಸಾರಗಳು ಹೊರ ಹರಿವಿಗೆ ಕಾಯುತ್ತವೆ. ಧಾರಣ ಶಕ್ತಿಯೇ ಇಲ್ಲದ ಮನಸ್ಸುಗಳು ಹೊಸ ಸತ್ವವನ್ನು ಸ್ವೀಕರಿಸುವುದಾದರೂ ಹೇಗೆ? ಎಂಬ ಲೇವಡಿಯ ಮಗ್ಗುಲಿಗೇ, ವರ್ತಮಾನದ ವಿಸಂಗತಿಗಳನ್ನು ಅವರು ನಿಲ್ಲಿಸುತ್ತಾರೆ. ‘ಹಡಾಸು ಬಂಡಿಗೆ ಜೆಟ್ ಬುದ್ಧಿ ಹೊಂದಿಸಿ’ದರೂ ಪ್ರಗತಿ ಸಾಧ್ಯವಾಗಲಾರದೆಂಬ ವಿವೇಕ ಏಕೆ ಇಲ್ಲವಾಗುತ್ತಿದೆಯೆಂಬ ಕೊರಗೂ ಇಲ್ಲಿ ವ್ಯಕ್ತವಾಗುತ್ತದೆ, ಒಂದರ್ಥದಲ್ಲಿ. ಇದು ಎರಡನೆಯ ಭಾಗದಲ್ಲಿ ಸೂಕ್ಷ್ಮವಾಗಿ ಮನೋವೃತ್ತಿಯ ಸ್ಥೂಲ ರೂಪವೇ ಆಗಿದೆ. ಕಟುವಾದ ಟೀಕೆ, ವಾಗ್ದಾಳಿ, ಭರ್ತ್ಸನೆಗಳಿಗೆ ಈ ಸಾಲುಗಳು ಮೀಸಲಾಗಿವೆ. ಈ ಅನಿಸಿಕೆಗಳು ಸಾಂದ್ರಗೊಳ್ಳುವ ಕ್ರಮದ ಹಿಂದೆ, ಕವಿಯ ವಿವಶತೆ ಇದೆ.

‘ನೆರೆಯವನ ಬಂದೂಕು ತುದಿ ಬೆನ್ನಿಗೊತ್ತಿರಲು
ಅಹಿಂಸೆಯ ಬೋಧಿಸಲೆಂದು ತವಕಿಸಿದ ಪ್ರೇತಾತ್ಮ ಗಣದವರ;
ನಮ್ಮದೆನ್ನುವುದಕ್ಕೆ ಕಾವು ಕೂತಿಹ ಹಾವ
ದಾಟಿ ಮಾನವ್ಯದೆಡೆ ಕಾಲು ಹಾಯಿಸದವರ
ದೇವರೆಂದೇ ಭ್ರಮಿಸಿ, ದೂಡಿ ಸೆರೆಯಲಿ ನಮಿಸಿ
ನಿನ್ನ ಮರೆತಿರುವವರ ನಡುವೆ ಏಗುವ ನಾನು’

ಇಲ್ಲಿ, ರಾಜಕೀಯವಾದ ಅತಂತ್ರಾವಸ್ಥೆ, ವಿದ್ರೋಹ, ವ್ಯಕ್ತಿ-ವ್ಯಕ್ತಿಗಳ ಮತ್ತು ರಾಷ್ಟ್ರ-ರಾಷ್ಟ್ರಗಳ ನಡುವಿನ ದ್ವೇಷ, ಅಮಾನವೀಯ ವ್ಯಕ್ತಿತ್ವಗಳನ್ನು ದೈವತ್ವಕ್ಕೇರಿಸಿ ಸಂಭ್ರಮಿಸುವ ನೈತಿಕ ದಿವಾಳಿತನ ಮುಂತಾದವುಗಳ ತೀಕ್ಷ್ಣವಾದ ವಿಮರ್ಶೆಯಿದೆ, ಹೇವರಿಕೆಯಿದೆ. ಅಲ್ಲದೆ, ‘ಸ್ವಂತಿಕೆ’ಯ ಹೆಸರಿನಲ್ಲಿ ವಿಷ ಸಂತಾನವನ್ನು ಪೋಷಿಸಬಾರದೆಂಬ

ಇಲ್ಲಿಯ ಎಚ್ಚರವು ತೀರಾ ಸಾಮಯಿಕವೆನಿಸುತ್ತದೆ. ಈ ಪ್ರತಿಕೂಲ ವಾತಾವರಣದಲ್ಲಿ ನಿಂತಿರುವ ಎಲ್ಲ ಪ್ರಜ್ಞಾವಂತರ ಪ್ರತಿನಿಧಿಯಾಗಿ ಕವಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಸ್ವಂತದ ಕರ್ತವ್ಯಗಳ ಬಗೆಗೆ ವಿವಂಚಿತರಾಗುತ್ತಾರೆ.

'ಅಪ್ಪ ಕಲಿಸಿದ್ದನ್ನೆ ನನ್ನ ಮೊಮ್ಮಕ್ಕಳಿಗೆ ಮಗ್ಗಿಯೊಪ್ಪಿಸಲೇನು?
ಗತ ಕಾಲಸೂಚಿ ಹಳೆಯುಳಿಕೆ, ನಾಣ್ಯದ ಬಳಕೆ
ಏಕಾಗಲಿಲ್ಲೆಂದು ಸವಾಲೆತ್ತಿದರೆ—ಏನು ಹೇಳಲಿ ಬಾಪೂ?'

ಕವಿ, ಬಾಪುವಿನ ಮುಂದಿಡುವ ಪ್ರಶ್ನೆಯು ಪ್ರಸ್ತುತ ಸಂದರ್ಭದಲ್ಲಿ ತುಂಬ ಮಹತ್ವದ್ದೆನಿಸುತ್ತದೆ. ಹೇಗೆ ಮಗ್ಗಿಯು ಎಂದೂ ಬದಲಾಗಲಾರದೋ, ಹೇಗೆ ಅದು ಯಾವುದೇ ರೀತಿಯ ಸ್ಥಾನ ಪಲ್ಲಟವನ್ನು ಒಪ್ಪಿಕೊಳ್ಳಲಾರದೋ, ಹಾಗೆಯೇ ಬಾಪುವಿನ ಸಿದ್ಧಾಂತಗಳು ಸ್ಥಿರವಾದವುಗಳಾಗಿವೆ. ಕಾಲದಿಂದ ಕಾಲಕ್ಕೆ ಬದಲಾಗಲಾರದ ತತ್ತ್ವಗಳು 'ಪಳೆಯುಳಿಕೆ'ಗಳಾಗಿ ನಿಲ್ಲುತ್ತವೆಯೇ ಹೊರತಾಗಿ, ಪ್ರಚಲಿತ ಮೌಲ್ಯಗಳಾಗಿ ಅಲ್ಲವೇನೋ ಎನ್ನುವ ಸಂಶಯವು ಕವಿಗಿದೆ. ಈ ಸಂಶಯವು ನಿರಾಧಾರವಾಗಿ ಇರಲಿ ಎಂದವರು ಪ್ರಜ್ಞಾಪೂರ್ವಕವಾಗಿ ಬಯಸುತ್ತಾರೆ. ಆದರೆ, ಬಾಪು ಕಂಡ ಸತ್ಯಗಳಿಗೂ ನಮ್ಮ ನಾಳಿನ ಜನಾಂಗದ ಮುಂದಿರುವ ಜಗತ್ತಿಗೂ ತಾಳಮೇಳಗಳಿಲ್ಲವೆಂಬ ನಿಜವನ್ನು ನಿರಾಕರಿಸುವುದು ಅವರಿಂದ ಆಗುತ್ತಿಲ್ಲ. ಈ ಸಂದಿಗ್ಧವು ಇಲ್ಲಿ ಸ್ಫುಟವಾಗಿ ಕಾಣಿಸುತ್ತದೆ. ಬಗೆ ಕದಡದ ಹಾಗೆ ಆ ಪ್ರಶ್ನೆಗೆ ಉತ್ತರಿಸುವ ಜವಾಬ್ದಾರಿಯನ್ನು ಅವರು ಗಾಂಧೀಜಿಗೇ ಹಸ್ತಾಂತರಿಸುತ್ತಾರೆ.

ಮುಂದಿನ ಸಾಲುಗಳಲ್ಲಿ, ಬರಿದಾಗುತ್ತಿರುವ ಗಾಂಧೀತ್ವ ಬಗೆಗಿನ ತಹತಹವಿದೆ.

'ಭವಿಷ್ಯತ್ತಿಗೂ ನಿನಗೂ ಕಟ್ಟಾಗಿ ಹೊಕ್ಕುಳಿಳೆ
ತಲೆ ಕೆರೆಯುತಿರುವಾಗ ಎಲ್ಲಿ ಹುಡುಕಲಿ ನಿನ್ನ?'

ಇತಿಹಾಸವು ಕಟ್ಟೆಚ್ಚರದಿಂದ ಕಡೆದಿರಿಸಿದ ಮೌಲ್ಯಗಳ ಮೂರ್ತಸ್ವರೂಪವಾಗಿದ್ದವರು, ಬಾಪೂ. ಆ ಭೂತ-ಭವಿಷ್ಯಗಳ ನೆಂಟಸ್ತನವು ಕಡಿದು ಹೋದ ನೋವು, ಬಾಪುವಿನೊಂದಿಗೆ ಕರುಳು ಬಳ್ಳಿಯ ಜೀವಂತ ಸಂಪರ್ಕವೇ ಇಲ್ಲವಾಗಿರುವಾಗ, ತಲೆಯೊಳಗಿನ ಗೊಂದಲಗಳು ಪರಿಹಾರವಾಗುವುದಾದರೂ ಹೇಗೆ? ಎಂಬ ಬೇಗುದಿಯಲ್ಲಿಯೇ ಈ ಭಾಗವು ಬೆಳೆಯುತ್ತದೆ.

'ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ?
ಹೆಸರಲ್ಲೆ? ಸಮಾಧಿ, ಪಾರ್ಕಿನ ಪ್ರತಿಮೆಯಲ್ಲೆ?
ಭಕ್ತರಲ್ಲೆ?
ಜಾತ್ರೆಜಂಗುಳಿಯಲ್ಲಿ ಕ್ಷೀಣಿಸಿದ ನಿನ್ನ ಲೆಫ್ಟ್‌ರೈಟು ಸನ್ನೆಯಲ್ಲೆ?
ಸತ್ಯಾಗ್ರಹ ಉಪವಾಸ ಮುಷ್ಕರದ ಮರೆಯಲ್ಲೆ?'

ಬರಿಯ ಹೆಸರು ಅರ್ಥಹೀನ, ಕೇವಲ ಪ್ರತಿಮೆಯೂ ನಿರ್ಜೀವವೆನ್ನಿಸುವ ಪ್ರಸ್ತಾಪದ ಹಿನ್ನೆಲೆಯಲ್ಲಿರುವ 'ಮಹಾತ್ಮ' ಸಂಬೋಧನೆಯ ವ್ಯಂಗ್ಯಕ್ಕೆ ಮಹತ್ವವಿದೆ. ಎಲ್ಲೆಲ್ಲಿ ಬಾಪುವಿನ ವ್ಯಕ್ತಿತ್ವದ ಪ್ರಭಾವ ಕಾಣಿಸಬೇಕಿತ್ತೋ, ಅಲ್ಲೆಲ್ಲ ಯಾಂತ್ರಿಕ ಅನುಕರಣೆಯಿದೆ,

ಸ್ವಾರ್ಥದ ಪರಾಕಾಷ್ಠೆಯಿದೆ. ಹೀಗೆ, ಕಳೆದು ಹೋಗಿರುವ ಗಾಂಧೀಜಿಗಾಗಿ ಹುಡುಕಬಾರದ ಕಡೆಗಳನ್ನೂ ಹುಡುಕುತ್ತದೆ, ಕವನ.

'ಪಡಖಾನೆಯಲ್ಲೆ? ಕಾಲಧರ್ಮವಾಗಿರುವ ದುರಭಿಲಾಷೆಯಲ್ಲೆ?
ತಿಕ್ಕಾಡಿರುವ ಭಾಷೆಯಲ್ಲೆ?
ಅಥವಾ ತಕ್ಕಲಿಯಲ್ಲಿ? ಫ್ಯಾಕ್ಟರಿಯಲ್ಲಿ?
ಕಛೇರಿಗಳ ಐಲುಫೈಲಾದ ಫೈಲು ಫೈಲುಗಳ ಕಪಾಟಿನಲ್ಲಿ?
ಖೋಟ ನೋಟಿನಲ್ಲಿ?
—ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ ಹುಡುಕಲಿ ನಿನ್ನ?'

ಮೌಲ್ಯ ವ್ಯವಸ್ಥೆಯ ಅಧಃಪತನವನ್ನು ಗಮನಿಸುವ ಕವಿಯ ವ್ಯಗ್ರತೆಗೆ ಇಲ್ಲಿ ಅವಕಾಶವು ದೊರೆತಿದೆ. ಬೆಲೆಯಿಲ್ಲದ ಕಳ್ಳ ನೋಟಿನ ಮುದ್ರೆಯಾಗಿ ಉಳಿದಿರುವ ಬಾಪುವಿನ ಚಿತ್ರದ ಸಾಂಕೇತಿಕತೆಯನ್ನು ಇಲ್ಲಿ ಅವರು ಬಳಸಿಕೊಳ್ಳುತ್ತಾರೆ. ಬಾಪುವಿಗಾಗಿ ನಡೆಸಿದ ಹುಡುಕಾಟಗಳೆಲ್ಲ ನಿಷ್ಫಲವಾದ ನೋವಿನ ನಿರೂಪಣೆ. ಅವರನ್ನು ಕಂಡೇ ಕಾಣಬೇಕೆಂಬ ಕವಿಯ ಉತ್ಕಂಠತೆಗಳಲ್ಲಿ ಕವನದ ಭಾಗವು ಕೊನೆಯಾಗುತ್ತದೆ.

ಬಾಪೂವಿನ ಅನುಪಮವಾದ ವ್ಯಕ್ತಿತ್ವದ ಬಗೆಗೆ ಕವಿಗಿರುವ ಗೌರವಾದರಗಳೆಲ್ಲವೂ ಕವನದ ಕೊನೆಯ ಭಾಗದಲ್ಲಿ ಕೆನೆಗಟ್ಟುತ್ತವೆ. ಹಿಂದಿನ ಆವೇಶ, ಉದ್ವೇಗ, ಆಕ್ರೋಶ, ಸ್ವಾನುಕಂಪ, ಒಳ ತಿವಿತಗಳೆಲ್ಲವೂ ತಣಿದ ಸಮಾಹಿತವಾದ ಸ್ಥಿತಿಯನ್ನು ತಲಪುವ ಕವನವು ವಾಸ್ತವವಾದದ ನೆರಳಿಗೆ ಬರುತ್ತದೆ.

'ತೊರೆ ಮೊರೆಯುತ್ತದೆ ಬಾಪೂ, ತೊರೆ ಮೊರೆಯುತ್ತದೆ,
ಕಣ್ಮುಚ್ಚಿ ಬಿಡುವಷ್ಟರಲ್ಲೇ ಮೈಗರೆಯುತ್ತದೆ.
ಮೊರೆದಾಗ ತಾನೇ ಎಲ್ಲವಾಗಿ ಬೀಗಿ ದಡಕ್ಕೆ ತಾಗಿ,
ಮೊರೆಯುತ್ತದೆ—ಆಗ ಕಣ್ಣಗದೇ ಅಚ್ಚು
ಎದೆಗದರದೇ ಹುಚ್ಚು;
ಅಪ್ಪಳಿಸಿ ಹಿಂದೆಯೇ ಸೊಕ್ಕುವ ಹೆದ್ದೆರೆಗಳಟ್ಟಹಾಸದಲ್ಲಿ
ತೆರೆ ಮೈಗರೆಯುತ್ತದೆ.'

ಗಾಂಧೀತ್ವದ ಸಾರ್ವಭೌಮತ್ವಗಳೆಲ್ಲವೂ ಆ ಯುಗದ ಧರ್ಮಗಳಾಗಿದ್ದುವು ಎಂಬ ಸತ್ಯವನ್ನು ಎದುರಿಗೆ ಹಿಡಿಯುವ ಈ ಭಾಗವು ನಮ್ಮನ್ನು ಅಲುಗಾಡಿಸಿಬಿಡುತ್ತದೆ; ಚಿಂತನೆಗಳಿಗೆ ಚಾಲನೆಯನ್ನು ನೀಡುತ್ತದೆ. 'ತಾನೇ ಎಲ್ಲ' ಎನ್ನುವ ಅಭಿಮಾನದಿಂದ 'ಬೀಗಿದದಕ್ಕೆ ತಾಗುವ' ಹೆದ್ದೆರೆಗಳೆಲ್ಲ ಆ ಕಾಲದ ವಾಸ್ತವಗಳೇ ಆಗಿವೆ. ಅವುಗಳ ಆಕೃತಿ-ಅಬ್ಬರಗಳೆಲ್ಲವೂ ಕ್ಷಣಿಕವಾದವುಗಳಾಗಿವೆ. ಅವು ಒಂದೋ ಮರೆಯಾಗುತ್ತವೆ, ಇಲ್ಲವೇ ರೂಪಾಂತರಗೊಳ್ಳುತ್ತವೆ. ಆದರೆ, ಆ ನೋಟ ಎದೆಯಾಳದಲ್ಲಿ ನೆಲೆಯೂರಿ ಬಿಡುತ್ತದೆ. ಇಲ್ಲಿ ವ್ಯಕ್ತಿಗತವಾದ ಸ್ವಪ್ರತಿಷ್ಠೆ-ಅಹಂಕಾರಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಕವಿಯ ದೃಷ್ಟಿಯನ್ನು ಗಮನಿಸಬೇಕು. ಮೆಲುನಗೆಯು ನೀಡುವ ಸಾಂತ್ವನ-ಅಟ್ಟಹಾಸದಿಂದ ಹುಟ್ಟುವ ಭೀತಿಗಳನ್ನೂ ತುಲನೆ ಮಾಡಬೇಕು. ಇಂಥ ಅನ್ವಯಿಕ ನೆಲೆಗಳು ಈ

ಸಂದರ್ಭದಲ್ಲಿ ಉಲ್ಲೇಖಾರ್ಹವೆನಿಸುತ್ತವೆ. ಇದು ನಿಸಾರರ ಕಾವ್ಯದ ಪ್ರತ್ಯೇಕ ಲಕ್ಷಣವೇ ಆಗಿದೆ.

ಈಗ, ಬಾಪೂ ಒಂದು ಕನಸು. ಭೌತಿಕ ಅಸ್ತಿತ್ವದಾಚೆಯ ಒಂದು ಸ್ಥಿತಿ. ಬಾಪುವಿನ ವೈಯಕ್ತಿಕ, ಕ್ರಿಯಾಶೀಲ ಲಕ್ಷಣಗಳೆಲ್ಲವೂ ಸ್ಥಗಿತಗೊಂಡಿವೆ. ಒಂದು ಹಂತದಲ್ಲಿ ಪ್ರಬಲವೂ ನಿರ್ಣಾಯಕವೂ ಆಗಿದ್ದ ಈ ಶಕ್ತಿಯು ಇಂದು 'ಸಾಮಾನ್ಯತೆಯ ಸೌಮ್ಯತೆ'ಯನ್ನು ತಳೆದಿದೆಯೆಂದು ಒಪ್ಪುವ ಕವಿಗೆ ನೋವುಗಳಿಲ್ಲ. ಬದಲಿಗೆ, ವಾಸ್ತವವನ್ನು ಒಪ್ಪಿಕೊಳ್ಳುವ ನಮ್ರತೆಯಿದೆ ಎನ್ನುವುದನ್ನು ಕವನದ ಮುಂದಿನ ಸಾಲುಗಳು ಸ್ಪಷ್ಟಪಡಿಸುತ್ತವೆ:

'ಕಾಲ ಸೃಷ್ಟಿಯ ದಿನದಿನದ ಸನ್ನಿವೇಶದಲಿ
ನಿನ್ನ ನಿರುಪಮ ಚಿತ್ರ ಚಲಚ್ಚಿತ್ರದಲ್ಲಿನ ಜಲಪಾತವಾಗಿ,
ಕ್ಯಾಲೆಂಡರಿನ ಸಿಂಹವಾಗಿ
ಸಾಮಾನ್ಯತೆಯ ಸೌಮ್ಯತೆಯ ತಾಳುತ್ತದೆ'

ತುಂಬ ಪ್ರತಿಕ್ರಿಯಾಶೀಲರಾಗಿದ್ದ ಗಾಂಧೀಜಿ, ಬರಿಯ ಸಾಕ್ಷಿಯಾಗಿ ಪರಿವರ್ತಿತರಾಗಿದ್ದಾರೆ. ಇಲ್ಲಿಯ, ಇಂದಿನ ಬಾಪು ನಿರ್ಲಿಪ್ತ, ನಿಸ್ಪಂದಮೂರ್ತಿಯಾಗಿದ್ದಾರೆ. ಅವರೆಂದರೆ ಇಂದ್ರಿಯಾತೀತವಾದ ಒಂದು ಅನುಭವ ಮಾತ್ರವೇ. ಅವರ ಮೂಲಗುಣ ಸ್ವಭಾವಗಳೆಲ್ಲವೂ ನಿಷ್ಕ್ರಿಯವಾಗಿವೆ ಎನ್ನುವುದರ ಹಿಂದೆ, ಗಾಂಧೀ ಸಿದ್ಧಾಂತಗಳು ಅರ್ಥ ಕಳೆದುಕೊಂಡಿರುವುದರ ಬಗೆಗೆ ಕವಿಗೆ ಆಗುವ ವೇದನೆಯಿದೆ. ಆದರೆ ಈ ನೋವಿನಿಂದ ಅವರು ನಿರಾಶರಾಗಿಲ್ಲ ಎನ್ನುವ ಸೂಚನೆಯನ್ನು ಮುಂದಿನ ಸಾಲುಗಳು ನೀಡುತ್ತವೆ.

'ಗೊಮ್ಮಟನ ಠೀವಿಯಲಿ ಮೌನ ಸಾಮ್ರಾಜ್ಯವನು ಆಳುತ್ತದೆ,
ಆಳುತ್ತದೆ ಮಹಾತ್ಮ, ಆಳುತ್ತದೆ:
ಪ್ರಕೃತಿಯಂತೆ, ಸತ್ಕೃತಿಯಂತೆ ಅಥವಾ
ಮಧ್ಯರಾತ್ರಿಯ ಸ್ಪರ್ಶಾತೀತ ರಾಜನಾಕೃತಿಯಂತೆ.'

'ಆಳುತ್ತದೆ' ಪದವನ್ನು ಪುನರಾವರ್ತಿಸುವುದರ ಮೂಲಕ ಕವಿ, ತಮ್ಮ ನಂಬಿಕೆಯನ್ನು ದೃಢಪಡಿಸುತ್ತಾರೆ. ಸತ್ಕೃತಿಯೊಂದಕ್ಕೆ ಕಾಲ-ದೇಶಗಳ ಬಂಧನವಿಲ್ಲದ ಹಾಗೆ, ಗಾಂಧೀ ಪ್ರಜ್ಞೆಯೂ ಶಾಶ್ವತವಾಗಿರುತ್ತದೆಂದು ಸ್ವಂತವನ್ನೂ ಸುತ್ತಮುತ್ತಲಿನದನ್ನೂ ನಂಬಿಸುವ ಪ್ರಯತ್ನಗಳನ್ನು ಅವರು ಮಾಡುತ್ತಾರೆ. ನಿಜವಾದ ಅರ್ಥದಲ್ಲಿ, ಸಮಕಾಲೀನ ಬದುಕಿನಲ್ಲಿ ಬಾಪುವಿನ ಸ್ಥಾನವನ್ನು ಇಲ್ಲಿ ಕವಿ ನಿರ್ದೇಶಿಸುತ್ತಾರೆ; ಈ ಸಂಯಮದ ಮೂಲಕವೇ ಕವನಕ್ಕೆ ಆತ್ಮೀಯ ಸ್ಪರ್ಶವನ್ನು ನೀಡುತ್ತಾರೆ.

ಬಾಪುವಿನ ಬಗೆಗಿನ ಭಾರತೀಯರೆಲ್ಲರ ಭಾವ ಸಂಪತ್ತನ್ನು ಕವನದ ಕೊನೆಯ ಸಾಲುಗಳು ಸಂಗ್ರಹಿಸುತ್ತವೆ:

'ನಿನಗಿಂತ ಹಿರಿಯರನು ಕಾಣೆ ಮಹಾತ್ಮ
ಮಿತಿಮೀರಿ ಏರಿರುವೆ, ಬಾಳಿಗೆ ದಕ್ಕದೆ ಮೀರಿರುವೆ—
ವಾಸ್ತವತೆ ನಾನು, ಆದರ್ಶ ನೀನು.
ಲೋಕವನೆ ದಹಿಸಿರುವ ಸೂರ್ಯನಿಗೆ ತಡೆಯಾಗಿ

ನಿನ್ನ ಕೊಡೆ ನೆತ್ತಿಯನು ಕಾಯುತಿರಲಿ;
ಕಾದ ಹಾದಿಯ ನಡೆಯೆ ಸ್ವಾನುಭವ ಕೆರವಾಗಿ
ಸ್ವಂತ ಜೀವನದೊಡನೆ ತೇಯುತಿರಲಿ'

ಎನ್ನುವ ಕವಿಯ ನಿರ್ಣಯವು, ಬರಿಯ ಹೇಳಿಕೆಯ ಮಟ್ಟವನ್ನು ದಾಟಿ, ಒಂದು ಕಣಸಾಗಿ ನಿಲ್ಲುತ್ತದೆ. ಬಾಪುವನ್ನು ಮಾನವ ಸಿದ್ಧಿಯ ಶಿಖರವಾಗಿ ಕಾಣುವ ಉಪಕ್ರಮವು ಇಲ್ಲಿ ಉತ್ಪ್ರೇಕ್ಷಿತವೆನಿಸುವುದಿಲ್ಲ. ತನ್ನ ಪರಿಣಾಮಕಾರಿತ್ವಕ್ಕಾಗಿ ಕವನವು ವಹಿಸುವ ಶ್ರಮದ ಸಾರ್ಥಕ್ಯವನ್ನು ಈ ಭಾಗದಲ್ಲಿ ಕಾಣಬಹುದು. ವಾಸ್ತವ-ಆದರ್ಶಗಳ ನಡುವಿನ ಅಂತರವನ್ನು ವಿನಯದಿಂದ ಸ್ವೀಕರಿಸುವುದರಲ್ಲಿಯೇ ಅದರ ಮೇಲ್ಮೆಯಿದೆ.

ಕೊನೆಯಲ್ಲಿ ಕವಿ ಪ್ರಸ್ತುತಪಡಿಸುವ ಸಂದೇಶವು ಮನಸ್ಸನ್ನು ಆರ್ದ್ರಗೊಳಿಸುತ್ತದೆ. ಬಾಪುವಿನ ವ್ಯಕ್ತಿತ್ವದ ಭಾಗವೇ ಆಗಿರುವ ಕೊಡೆಗೆ ವಿಶಿಷ್ಟವಾದ ರಕ್ಷಣಾ ಸಾಮರ್ಥ್ಯವಿದೆ. ಹಾಗಾಗಿ, ಬದುಕಿನ ಕಾವು ಕಾಡದ ಹಾಗೆ ಕಾಯುವ ಹೊಣೆಯನ್ನು ತುಂಬ ಪ್ರೀತಿಯಿಂದ ಕವಿ ಅದಕ್ಕೆ ನೀಡುತ್ತಾರೆ. ಆದರೆ, ನಮಗಾಗಿ ಎದುರು ನೋಡುತ್ತಿರುವ, ಬಿಸಿಲಿನಲ್ಲಿ ಕಾದ ಹಾದಿಯನ್ನು ಕ್ರಮಿಸಲು ಸ್ವಂತದ ಅನುಭವಗಳ ಬೆಂಬಲವೇ ಇರಲೆಂಬ ಕವಿಯ ಆಯ್ಕೆಯಿಂದ ಮನಸ್ಸು ತುಂಬಿ ಬರುತ್ತದೆ; ಬದುಕಿನುದ್ದಕ್ಕೂ ಆ ಅನುಭವಗಳೂ ಸವೆಯುತ್ತಿರಲೆಂಬ ಆಶಯದ ನಿಸ್ಪೃಹತೆಗೆ ಒಲಿಯುತ್ತದೆ. ಕೊಡೆಗೂ, ನೆತ್ತಿಗೂ ನಡುವೆ ಮರ್ಯಾದಿತ ಅಂತರವಿದೆ; ಪಾದಕ್ಕೂ ಪಾದರಕ್ಷೆಗೂ ಸಂಪರ್ಕದ ಸೌಖ್ಯವಿದೆಯೆಂಬ ಧ್ವನಿಯಿಂದ ಕವನವು ಮತ್ತಷ್ಟು ಹತ್ತಿರಕ್ಕೆ ಬರುತ್ತದೆ.

ಒಟ್ಟಿನಲ್ಲಿ, ನಿಸಾರರ ಯಶಸ್ವೀ ಕವನ ಸಮೂಹದಲ್ಲಿ 'ಬಾಪೂ' ಪ್ರತ್ಯೇಕವಾಗಿಯೇ ನಿಲ್ಲುತ್ತದೆ. ಸರಳವಾದ ಹೇಳಿಕೆಗಳ ಗರ್ಭದೊಳಗಿನ ಗಹನವಾದ ಅರ್ಥವಂತಿಕೆ, ಗಾಂಧೀಜಿಯನ್ನು ಒಂದು ಸಂಕೇತವಾಗಿಟ್ಟುಕೊಂಡೇ ನಡೆಯುವ ಮಾನವೀಯ ಮೌಲ್ಯಗಳ ಶೋಧ ಕ್ರಮ, ಮುಗ್ಧ ಆರಾಧನಾ ಭಾವದಿಂದ ತೊಡಗಿ ನಿಷ್ಠುರ ವಾಸ್ತವದ ದರ್ಶನ ದೊಂದಿಗೆ ವಿರಮಿಸುವ ವಿಕಸನ ವಿಧಾನಗಳೆಲ್ಲವುಗಳಿಗೂ ಯುಕ್ತವಾದ ಸ್ಥಾನಗಳು ಇಲ್ಲಿ ದೊರೆತಿವೆ. ಮೊದಲಿಗೆ ವ್ಯಕ್ತಿಯಾಗಿ ಕವನ ಕ್ಷೇತ್ರವನ್ನು ಪ್ರವೇಶಿಸುವ ಬಾಪೂ ಒಂದು ಕಣಸಾಗಿ, ಶಾಶ್ವತ ಸತ್ಯವಾಗಿ ಪರಿವರ್ತನೆ ಹೊಂದುವ ವಿನ್ಯಾಸದಲ್ಲಿ ಅದರ ಶ್ರೇಷ್ಠತ್ವವಿದೆ.

ನಾಡಿನ ಸಂಪತ್ತನ್ನು ಪೋಷಿಸಬೇಕಾದವರು ಅಪೋಷಿಸಲು ಶುರುವಿಟ್ಟಿರುವುದೇ ನಮ್ಮ ದುರದೃಷ್ಟ.

(ಮುಂದಾಳುಗಳು)

ಕಂಡಷ್ಟೇ ಸತ್ಯವಲ್ಲ

ಇದು ಸೃಷ್ಟಿ:
ಕಪಿ ಮುಷ್ಟಿ.
ಮಂತ್ರಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲು.
ಉಸಿರಿನರವತ್ತೆಂಟು ಕೋಟಿ ಬಿಡಿ, ಬಿಡಿ ನೂಲು
ಗಂಟುಗಂಟಾಗಲ್ಲಿ ಗೋಜು ಗೋಜಲ ಮಜಲು—
ನಡುವೆ ನೇತಾಡುತಿದೆ ನವಿರು ನವಿರಾದೆಳೆಯ
ಒಂಟಿಗೂದಲ ಮೂಲ.
ಜೀವ ಜೀವಾಳಗಳ ಗಡಿ ಗೆರೆಗಳೆಲ್ಲವೂ ಒಂದನೊಂದಾಕ್ರಮಿಸಿ,
ಒಂದನಳಿಸುತ ಒಂದು, ಹಾದು ಒಂದರ ಮೇಲೆ ಇನ್ನೊಂದು, ಅಂಗೈಯ-
ರೇಖೆಯಂತೊಳಗಡೆಯೆ ಕಲಸಿ ಆಗಿವೆ ಮೇಳ.
ಸಿಕ್ಕಿಕೊಂಡಿದೆ ಅಲ್ಲಿ, ದೂಳಲ್ಲಿ
ಜೀವಿಗಳ ಹುಟ್ಟುಸಾವಿನ ಮೊದಲ ಅಳತೆಗೋಲು.
ಹೊರ ತೆಗೆದು ಹಾಕುವುದೆ ಇಲ್ಲಿರುವ ಚಾಲಾಕಿ; ಅದೆ ಕಮಾಲು;
ಶ್ರಮವಗಾಧ.
ಮುಚ್ಚಿದೀ ಹಿಡಿಯನ್ನು ಬಿಚ್ಚುವನು ಯುಗಕೊಮ್ಮೆ
ಎಲ್ಲೊ ಕೋಟಿಗೆ ಒಬ್ಬ ನುರಿತ ಉಸ್ತಾದ.
ರೆಪ್ಪೆ ಬಡಿಯುವ ತನಕವಷ್ಟೆ: ಒಳಗುಟ್ಟನ್ನು
ಹಲ್ಲು ಕಿರಿದುಬ್ಬುತ್ತ ಮುಟ್ಟಲೆಂದಿನ್ನೇನು
ಕೈ ನೀಡುವಷ್ಟರಲೆ ಈ ನಮ್ಮ ನರ ಪಿಳ್ಳೆ ಗುಳ್ಳೆಯಾಗೊಡೆಯುವನು.
ನೆಗೆದುಬೀಳುವುದಿಷ್ಟು ದಿನವು ಯಾತವನೆತ್ತಿ ಪಾತಿ ಕಟ್ಟಿದ ಜೀತ:
ಫಸಲೆಲ್ಲ ಖೋತ, ಇಲ್ಲವೆ ಗೋತ.
ಮುಚ್ಚುವುದು ಹಿಡಿ:
ಅದರಂತೆ ಕಂಡದ್ದ ಮರೆಸುವುದು, ಇಲ್ಲವೇ
ಅರಳುಮರುಳಿನ ತೊದಲ ಕಕ್ಕಿ ಹಾರಾಡುವುದು
ನಸರಾಣಿ ನುಡಿ.
ಒಳಗೆ ದರ್ಶನವೆಲ್ಲ ಬರಿ ಮಬ್ಬು, ಮಬ್ಬು.
ಹೊರ ರಂಗೊ, ಬರಿ ಚಮಕೊ—ಅಷ್ಟಕ್ಕೆ ತಬ್ಬಿಬ್ಬು.
ಅವನಿಗಿಷ್ಟೇ ಕಾಣ್ಕೆ: ಸಿಪ್ಪೆ ತೆಳುವನು ಜೆಬುಕಿ

ಒಳ ತಿರುಳ ಸವಿದಂಥ ಖುಷಿಯ ಷೋಕಿ.
ಗೂಢಚಾರನಿಗೊಂದು ಎಲ್ಲೆಯಿದೆ, ಅದರಲ್ಲೆ
ತಡಕಾಡಿ ಹಿಡಿದಷ್ಟೆ ಹಲ್ಲಿಗೊದಗುವ ಹಲ್ಲೆ;
ಕಂಡಷ್ಟೂ ಸತ್ಯವಿರಬಹುದು,
ಕಂಡಷ್ಟೇ ಸತ್ಯವಲ್ಲ.
ದಕ್ಕಿದಷ್ಟನೆ ಮೆದ್ದು ಹಿಗ್ಗುವುದೆ ಜಾಯಮಾನ.
ಆದರೂ ಕಾಣಿಸದ ಕಡೆಗಿದ್ದೆ ಇರಬೇಕು ಕಾಣುವಾಸೆಯ ನೋಟ,
ಮನಸಿನನುಮಾನ;
ಅದೆ ಮಾನ, ಹಿರಿತನಕೆ ಅನುಮಾನ.
ಆಗಾಗ್ಗೆ ತಳಪಳನೆ ನೀರಾಚೆ ತಲೆ ಚಿಮ್ಮಿ
ಪಲ್ಟಿಹೊಡೆಯುವ ಮೀನ ಕಂಡ ಅರ್ಧಂಬರ್ಧ ನೋಟ
'ಅರಿವಿ'ರಬಹುದು.
ಆದರದು ಕಣ್ಕಪಟ, ಕಣ್ಣ ಸುತ್ತಲೂ ಹಾಕಿದರೆಕಾಣ್ಕೆ ಜಾದು.
ಜೀವ ಕೋಶದ ರಕ್ತಮಾಂಸ ಮುದ್ದೆಯ ಮೊದ್ದು—
ಒಟ್ಟು ಮೈಯಾಕಾರ ಪಡೆದಾಗ ಅದಕೆ ಬೆಲೆ, ಹಾಲ ಮೊಲೆ,
ತಾಯ ಮುದ್ದು.
ಈ ಸೃಷ್ಟಿ:
ಆಗಾಗ ಬಿಚ್ಚುವುದು ಮಂಗ ಮುಷ್ಟಿ.
ಈ ತನಕ ಅಷ್ಟಿಷ್ಟು ತಡಕಿದ್ದೆ ಮಸ್ತಾಗಿ
ಇರಲು, ಹೊಸ ಹುಡುಕಾಟದುತ್ಸಾಹದಲಿ ಬೀಗಿ
ಹಿಂದಿನದನೇ ಎಡವಿ, ಹೊಸತ ಲಪಟಾಯಿಸಿದೆವೆಂದು
ಸಾರುವೆವು; ಬರಿ ಭ್ರಾಂತಿಗೆದೆ, ಮೈಯ ಮಾರುವೆವು.
ಆದರಿದು ಅರಿವಲ್ಲ:
ನೇರ ದಿಟ್ಟಿಯ ದಿಶೆಗೆ ನಿಶೆಯೇರಿಸುವ ಮರೆವು.
ನಮ್ಮ ಕಾಲದ ಗತ್ತು, ನೀಯತ್ತೆ ಬೇರೆ ಥರ—
ಹೊಸತೊಂದೆ ಗುರಿಯಲ್ಲ.
ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ
ಬೆಸೆದು ಹೊಸೆಯುವ ಕಲೆಯೆ ಈ ಕಾಲ'ದರಿವು';
ಹೊಸತ ಹುಡುಕಲು ಹೋಗಿ ತೂಕ ತಪ್ಪುವ ಬುದ್ಧಿ—
ಕುಂಟು ಕಾಲಿನ ಕುದುರೆ, ಬಂಜೆ ಗೋವು.

★ ★ ★

(ಕವನ ಸಂಕಲನ: 'ನೆನೆದವರ ಮನದಲ್ಲಿ')



'ಕಂಡಷ್ಟೇ ಸತ್ಯವಲ್ಲ': ಸೃಷ್ಟಿ ಮತ್ತು ಜೀವನದ ಜಿಜ್ಞಾಸಾಪರ ಲಹರಿಗಳು

♦ *ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ*

'ನಿತ್ಯೋತ್ಸವ'ದಂತಹ ಉತ್ತಮ ಕವನಗಳಿಂದ ಕನ್ನಡ ಜನತೆಯ ಮನದಲ್ಲಿ ನಿತ್ಯ ನೆಲೆಸಿರುವ ಕವಿ ಪ್ರೊ. ನಿಸಾರ್ ಅಹಮದ್. ಅವರ 'ಬೆಣ್ಣೆ ಕದ್ದ ನಮ್ಮ ಕೃಷ್ಣ', 'ಕುರಿಗಳು, ಸಾರ್, ಕುರಿಗಳು' ಮುಂತಾದವು ಅತ್ಯಂತ ಜನಪ್ರಿಯ ಕವನಗಳು. ಅವರು ಜಾತಿ-ನೀತಿಗಳ, ಮತ-ಧರ್ಮಗಳ ಕಟ್ಟುಪಾಡಿಗೆ ಒಳಗಾದ ಕವಿಯಲ್ಲ. ವಿಶ್ವ ವಿಶಾಲ ಮನೋಧರ್ಮದ ಬಿಚ್ಚು ಮನಸ್ಸಿನ ಪ್ರಸಿದ್ಧ ಕವಿ. ಆಧುನಿಕ ಕನ್ನಡ ಕಾವ್ಯ ಕಂಡ ವಿಶಿಷ್ಟ ಕವಿಗಳಲ್ಲಿ ಒಬ್ಬರಾದ ಅವರು ಹೊಸ ತಲೆಮಾರಿನ ಗಮನಾರ್ಹ ಕವಿ. ಯಾವುದೇ ಪಂಥಕ್ಕೆ ಅಂಟಿಕೊಳ್ಳದೆ, ಯಾವುದೇ ಧೋರಣೆಯ ಹಣೆಪಟ್ಟಿಯನ್ನು ಕಟ್ಟಿಕೊಳ್ಳದೆ ಕಾಲ ಕಾಲಕ್ಕೆ ತಕ್ಕಂತೆ ಅಗತ್ಯವಾದ ಬದಲಾವಣೆಗಳನ್ನು ಮಾಡಿ ಕೊಂಡು ಕನ್ನಡ ಕಾವ್ಯಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿ ಹಳತು ಹೊಸತುಗಳ ಸಮನ್ವಯತೆಯನ್ನು ಸಾಧಿಸಿದ ಅನನ್ಯ ಕವಿ. ನವೋದಯ ಹಾಗೂ ನವ್ಯ ಪಂಥ ಮಾತ್ರವಲ್ಲದೆ ನವ್ಯೋತ್ತರ ಕಾಲದಲ್ಲೂ ಸಮರ್ಥವಾಗಿ ಕವನಗಳನ್ನು ರಚಿಸಿ ಯಶಸ್ಸನ್ನು ಸಾಧಿಸಿದವರು ಪ್ರೊ. ನಿಸಾರ್ ಅಹಮದ್. ಅವರು ಅನೇಕ ಪ್ರಮುಖ ಹಾಗೂ ಪ್ರಸಿದ್ಧ ಕವನ ಸಂಕಲನಗಳನ್ನು ರಚಿಸಿ ಕನ್ನಡ ಕಾವ್ಯಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ಪ್ರೊ. ಎಲ್. ಎಸ್. ಶೇಷಗಿರಿ ರಾವ್ ಅವರು,

ಪ್ರೊ. ನಿಸಾರ್ ಅಹಮದ್ ಅವರ ಕವನಗಳ ಬಗೆಗೆ ಹೇಳಿದ. 'ಜನಪ್ರಿಯ ಕವಿಗಳಲ್ಲೊಬ್ಬರು ಕೆ. ಎಸ್. ನಿಸಾರ್ ಅಹಮದ್. ಆಕರ್ಷಕವಾಗಿ ಬರೆಯುವುದು ಅವರ ವಿಶಿಷ್ಟ ಗುಣ. ಸ್ವಚ್ಛಂದ ಛಂದ, ಶಿಷ್ಟ ಭಾಷೆ, ಆತ್ಮೀಯ ಸಂಭಾಷಣೆಯ ಭಾಷೆ, ಗ್ರಾಮಗಳಿಂದ ತಂದ ಪದಗಳು... ಅಂತ್ಯಪ್ರಾಸ, ಅಂತರ್ಪ್ರಾಸ ಎಲ್ಲವನ್ನೂ ಬಳಸಿಕೊಂಡು, ಪಂಕ್ತಿಗಳ ಗತಿಯ ಅಸಾಧಾರಣ ನಿಯಂತ್ರಣದಿಂದ ಪರಿಣಾಮವನ್ನು ಸಾಧಿಸಬಲ್ಲರು. ನವ್ಯ ಎಂದು ನಾವು ಕರೆಯುವ ಕಾವ್ಯ ಮಾರ್ಗದ ಹೊರ ಲಕ್ಷಣಗಳು ಈ ಕವಿಯ ಸೃಷ್ಟಿಯಲ್ಲಿ ಕಾಣುತ್ತವೆ. ಹೇಳಬೇಕಾದುದನ್ನು ಆಕರ್ಷಕವಾಗಿ ಸಂಪೂರ್ಣವಾಗಿ ಹೇಳುತ್ತಾರೆ'—ಈ ಮಾತುಗಳು ('ಹೊಸಗನ್ನಡ ಸಾಹಿತ್ಯ', ೧೯೮೮, ಪು. ೧೬೨-೧೬೩) ತುಂಬ ಸೂಕ್ತವೂ ಅರ್ಥಪೂರ್ಣವೂ ಆಗಿವೆ.

'ಕಂಡಷ್ಟೇ ಸತ್ಯವಲ್ಲ' ಎಂಬ ಕವನವನ್ನು ಅವರು ಕನ್ನಡದಲ್ಲಿ ನವ್ಯ ಕಾವ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ, ಅಂದರೆ ೧೯೬೦ಕ್ಕೂ ಮುಂಚೆ ರಚಿಸಿದ್ದಾರೆ. ಹುಡುಕಾಟ ಮಾನವ ಸಹಜವಾದ ಗುಣ. ಸೃಷ್ಟಿಯ ರಹಸ್ಯವನ್ನು ಅರಿಯುವ ಮಾನವ ಪ್ರಯತ್ನ ನಿರಂತರ ಸಾಗಿದೆ. ಕೆಲವೊಮ್ಮೆ ತನ್ನ ಪ್ರಯತ್ನದಲ್ಲಿ ಸೋತು ನಿರಾಶೆ ಹೊಂದಿದರೂ ತನ್ನ ಆಸೆಯ ನೋಟವನ್ನು ಮತ್ತೆ ಮುಂದಕ್ಕೆ ಹರಿಸುವುದು ಅವನ ಜಾಯಮಾನ. ಸೃಷ್ಟಿ ರಹಸ್ಯದ ಆಳ-ಅಗಲ, ಎತ್ತರ-ಬಿತ್ತರಗಳನ್ನು ಅರಿಯಲು ಅಸಾಧ್ಯ. ಅದರ ಹರಹು ಜಗದಗಲ, ಬಾನಗಲ, ಜಲದಗಲ. ಸೃಷ್ಟಿಯ ಅಗಾಧತೆಯ ಮೂಲಕ ಪರಂಪರೆ ಮತ್ತು ನವೀನತೆಗಳ ನಡುವೆ ಹೊಂದಾಣಿಕೆ ಅತ್ಯಗತ್ಯ ಎಂಬ ಆಶಯವನ್ನು ಕವಿ ನಿಸಾರ್ ಅಹಮದ್ ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

'ಕಂಡಷ್ಟೇ ಸತ್ಯವಲ್ಲ' ಎಂಬುದು ಸೃಷ್ಟಿಯ ಅಮೇಯತೆಯ ಬಗೆಗಿನ ಒಂದು ಸಾಂಕೇತಿಕ ಕವಿತೆ. ಮಾನವನ ಎಣಿಕೆಗೆ ಮೀರಿದ, ಅವನ ದೃಷ್ಟಿಯ ಅಳತೆಗೆ ನಿಲುಕದ ಸೃಷ್ಟಿಯ ಅನನ್ಯತೆಯ ಸ್ವರೂಪವನ್ನು ಬಿಚ್ಚಿಡಲು ಕವಿ ಇಲ್ಲಿ ಪ್ರಯತ್ನಿಸಿದ್ದಾರೆ. ಸೃಷ್ಟಿಯ ರಹಸ್ಯ ಅತ್ಯಂತ ಜಟಿಲವಾದುದು. ಗೋಜಲು ಗೋಜಲಾದುದು. ವಿಚಿತ್ರವಾದುದು. ಅದು ಒಂದಕ್ಕೊಂದು ಸಿಕ್ಕು ಹಾಕಿಕೊಂಡು ಯಾರಿಂದಲೂ ಪೂರ್ತಿಯಾಗಿ ಬಿಡಿಸಲಾಗದ ಕಗ್ಗಂಟು. ಸೃಷ್ಟಿ ರಹಸ್ಯದ ಪೂರ್ತಿ ಒಳಗುಟ್ಟನ್ನು ಚೆನ್ನಾಗಿ ಅರಿಯಲು ಯಾರಿಗೇ ಆಗಲಿ ಕಷ್ಟಸಾಧ್ಯ. ವಿಜ್ಞಾನದ ಪ್ರಗತಿಯ ಮೂಲಕ ನೂರಾರು ಅದ್ಭುತಗಳನ್ನು ಸಾಧಿಸಿದ, ಶೋಧನೆಗಳನ್ನು ನಡೆಸಿದ ಮಾನವನಿಗೆ ಸೃಷ್ಟಿಯ ರಹಸ್ಯವನ್ನು ಭೇದಿಸಲು ಸಾಧ್ಯವಾಗಿಲ್ಲವೆಂಬುದು ಕವಿಯ ಅಭಿಪ್ರಾಯ. ಆದ್ದರಿಂದಲೇ ಕವಿ ಈ ಸೃಷ್ಟಿಯನ್ನು ಕಪಿಮುಷ್ಟಿಯೆಂದು ಕರೆದಿದ್ದಾರೆ. ಕಪಿ ಮುಷ್ಟಿಯಂತೆ ಅದು ಬಿಡಿಸಲಾಗದ ಒಗಟು. ಕವಿ ತಮ್ಮ ವಿಚಾರ ಧಾರೆಗಳನ್ನು ಸ್ಪಷ್ಟಪಡಿಸಲು ನೀಡುವ ದೃಷ್ಟಾಂತಗಳು, ಬಳಸುವ ಸಂಕೇತಗಳು ಅದ್ಭುತವಾಗಿವೆ. ಈ ಜಗತ್ತಿನ ಜೀವ ಜಾಲಗಳ, ಚರಾಚರಗಳ, ಪ್ರಕೃತಿಯ ಸೃಷ್ಟಿ ವಿಸ್ಮಯಕಾರಿಯಾದದ್ದು, ಹಾಗೂ ವಿಚಿತ್ರವಾದದ್ದು. ಅದರ ಒಳಹೊಕ್ಕು ಕಂಡವರಿಲ್ಲ. ಸೃಷ್ಟಿಯ ರಹಸ್ಯವನ್ನು ತಿಳಿಯಲು ಹೊರಟವರು ತಮಗೆ ತೋಚಿದಂತೆ ಊಹಾಪೋಹಗಳನ್ನು ಕಲ್ಪಿಸಿಕೊಳ್ಳುವುದು

ಸಹಜ. ಸೃಷ್ಟಿ ರಹಸ್ಯದ ವಿರಾಟ್ ಸ್ವರೂಪ ದರ್ಶನವನ್ನು ಮಾಡಿಸುವುದೇ ಈ ಕವನದ ಮುಖ್ಯ ಉದ್ದೇಶವೆನ್ನಬಹುದು. ಕವನದ ಶಿರೋನಾಮೆ ತುಂಬ ಅರ್ಥವತ್ತಾಗಿದೆ. ಯಾವುದೇ ಇರಲಿ ಅದು ನಾವು ಕಂಡಷ್ಟೇ, ಕೇಳಿದಷ್ಟೇ ಸತ್ಯವಲ್ಲ. ಕಾಣದುದರಾಚೆಗೂ ಸತ್ಯ ವ್ಯಾಪಿಸಿದೆ ಎಂಬುದರ ಅರಿವು ನಮಗಿರಬೇಕು. ಕಂಡಷ್ಟು ಅಥವಾ ಕಂಡದ್ದೆಲ್ಲಾ ಸತ್ಯವಿರಬೇಕೆಂದೇನೂ ಇಲ್ಲ. ಸತ್ಯವಿರಲಾರದೆಂದೂ ಹೇಳಲಾಗದು. 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು' ಎಂದು ಗಾದೆ ಮಾತೇ ಹೇಳುತ್ತದೆ. ಅವರವರ ದೃಷ್ಟಿಗೆ ಕಂಡದ್ದು ಸತ್ಯವೆಂದು ಅವರವರು ನಂಬುತ್ತಾರೆ. ಎಲ್ಲರ ದೃಷ್ಟಿಯೂ ಒಂದೇ ತೆರನಾಗಿರಬೇಕಾಗಿಲ್ಲ. ಸೃಷ್ಟಿಯ ರಹಸ್ಯ, ವೈಚಿತ್ರ್ಯ, ವೈಶಿಷ್ಟ್ಯ ಎಲ್ಲರಿಗೂ ಒಂದೇ ರೀತಿಯಾಗಿ ಕಾಣಬೇಕೆಂದಿಲ್ಲ. ಅವರವರ ದೃಷ್ಟಿಗೆ, ಭಾವಕ್ಕೆ ತಕ್ಕಂತೆ ಅದು ಬದಲಾಗಬಹುದು. ಮಂತ್ರ ಮರೆತ ಅಲಿಬಾಬ ಗವಿಯ ಬಾಗಿಲನ್ನು ಹೇಗೆ ತೆರೆಯಲು ಸಾಧ್ಯ? ಮಂತ್ರವೇ ಅವನ ಕೀಲಿಕೈ, ಮುಖ್ಯಸಾಧನ. ಅದಿಲ್ಲದೆ ಅವನ ಕಾರ್ಯ ಸಾಗದು. ಅರುವತ್ತೆಂಟು ಕೋಟಿ ಜನರ (೧೯೬೮ರಲ್ಲಿ ಭಾರತದ ಜನಸಂಖ್ಯೆ ೬೮ ಕೋಟಿ ಇದ್ದಿರಬೇಕು) ಉಸಿರಿನ ಬಿಡಿ ನೂಲು ಒಂದಕ್ಕೊಂದು ಸೇರಿ ಗಂಟು ಗಂಟಾಗಿ, ಗೋಜಲು ಗೋಜಲಾಗಿ ಬಿಡಿಸಲಾರದ ಕಗ್ಗಂಟಾಗುತ್ತದೆ. ಮಧ್ಯೆ ನೇತಾಡುತ್ತದೆ ಮೃದುವಾದ ಎಳೆಯ ಒಂಟಿ ಕೂದಲಿನ ಮೂಲ.

ಪ್ರಾಣಿ ಜಗತ್ತಾಗಲಿ, ಮಾನವ ಜನಾಂಗವಾಗಲಿ ಸಮರ್ಥರಾದವರಿಗೇ ಈ ಬದುಕು ಮೀಸಲು. ಸೃಷ್ಟಿಯ ಆದಿಯಿಂದಲೂ ಪ್ರಚಲಿತವಾಗಿರುವ ಈ ಪ್ರವೃತ್ತಿಯನ್ನು ಗಮನಿಸಿ ಮೂಕ ವಿಸ್ಮಿತರಾಗುತ್ತೇವೆ. ಜೀವ ಜೀವಾಳಗಳ ಗಡಿ ಗೆರೆಗಳೆಲ್ಲವೂ ತಮ್ಮ ನಿಯಮವನ್ನು ಮೀರಿ ಒಂದನ್ನೊಂದು ಆಕ್ರಮಿಸುತ್ತ, ಪ್ರಬಲವಾದದ್ದು ದುರ್ಬಲವಾದದ್ದನ್ನು ಅಳಿಸುತ್ತ, ಒಂದರ ಮೇಲೆ ಇನ್ನೊಂದು ಹಾಯ್ದು ಬದುಕು ಸಾಗಿಸುತ್ತಾ ಬಂದಿದೆ. ಅಂಗೈಯ ರೇಖೆಗಳಂತೆ ಒಳಗಡೆಯೇ ಸಂಕೀರ್ಣಗೊಂಡಿದೆ. ಜೀವಿಗಳ ಹುಟ್ಟು ಸಾವಿನ ಅಳತೆಗೋಲಿನ ಆರಂಭ ಧೂಳಿನಲ್ಲಿ. ಸಕಲ ಜೀವ ಜಾಲಗಳ ಸೃಷ್ಟಿಯ ರಹಸ್ಯವನ್ನು ಕಂಡುಕೊಂಡು ಹೊರ ಹಾಕುವುದೆ ಜಾಣ್ಮೆಯ, ಅತಿಶಯದ ಕೆಲಸ. ಅದೊಂದು ಕೈವಾಡ, ಕರಾಮತ್ತು. ಅದಕ್ಕೆ ಬೇಕು ಅಗಾಧವಾದ ಶ್ರಮ. ಯುಗಕ್ಕೊಮ್ಮೆ ಮಹಾಪುರುಷರು ಅವತರಿಸಿ ಸೃಷ್ಟಿ ರಹಸ್ಯದ ಕಪಿ ಮುಷ್ಟಿಯನ್ನು ಬಿಚ್ಚುತ್ತಾರೆ. ಅಂತಹ ವಿಭೂತಿ ಪುರುಷರು, ಆಚಾರ್ಯ ಪುರುಷರು ಜನಿಸುವುದು ಕೋಟಿಗೊಬ್ಬರಂತೆ. ಅಂತಹ ಮಹಿಮಾಪುರುಷರ ಬಾಳೂ ಕ್ಷಣಿಕವಾದದ್ದು. ಯುಗಕ್ಕೊಮ್ಮೆ ಜನಿಸುವ ಇಂತಹ ಮಹಾತ್ಮರು ಇನ್ನೇನು ಸೃಷ್ಟಿಯ ಅದ್ಭುತ ಏನೆಂಬುದನ್ನು ತಿಳಿಸುತ್ತಾರೆ ಎಂಬಷ್ಟರಲ್ಲೇ ಅವರ ಕಾಲವೂ ಅಂತ್ಯಗೊಳ್ಳುತ್ತದೆ. ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಹೋಗುತ್ತದೆ. ಸೃಷ್ಟಿಯ ರಹಸ್ಯ ಮತ್ತೆ ನುಂಗಲಾರದ ತುತ್ತಾಗುತ್ತದೆ. ಪ್ರತಿದಿನ ಏತವನ್ನೆತ್ತಿ ದುಡಿದು ಪಾತಿ ಕಟ್ಟಿದ ಜೀತ ಬದುಕಿನ ಶ್ರಮ ನಿಷ್ಫಲವಾದಂತೆ ಫಸಲೆಲ್ಲ ನಾಶವಾಗುತ್ತದೆ. ಎಲ್ಲ ಮುಳುಗಿ ಹೋಗುತ್ತದೆ. ಹಿಡಿ ಮುಚ್ಚಿಕೊಳ್ಳುತ್ತದೆ. ಕಂಡದ್ದನ್ನು ಮರೆಸುತ್ತದೆ ಅಥವಾ ಅರುಳು-ಮರುಳಿನ ಸ್ಥಿತಿಯಾಗುತ್ತದೆ. ಮಾತು ಮರುಳಾಗುತ್ತದೆ. ತೊದಲು ಮಾತನಾಡಿ ತನ್ನತನವನ್ನು ತೋರಿಸಿ ಬಿಡುತ್ತದೆ ತುಚ್ಛವಾದ ನುಡಿ. ನಡೆದು ಹೋದ ಒಳಗಿನ ದರ್ಶನವೆಲ್ಲ ಈಗ ಅಸ್ಪಷ್ಟ.

ಮಬ್ಬು ಮಬ್ಬು. ಆದರೆ ಹೊರಗೆ ಆಡಂಬರ, ಷೋಕಿ; ಝುಗಝುಗಿಸುವಿಕೆ. ಅಷ್ಟಕ್ಕೇ ಜೀವ ತಬ್ಬಿಬ್ಬಾಗುತ್ತದೆ. ಮಾನವ ಕೋಟಿಗೆ ಸಿಕ್ಕಿದ ಕಾಣ್ಕೆ ಅಷ್ಟೇ. ಅದರಿಂದಾಚೆಗೆ ಏನೆಂದು ತಿಳಿಯದು. ಅಷ್ಟಕ್ಕೇ ಆತನಿಗೆ ತೆಳು ಸಿಪ್ಪೆಯನ್ನು ಸುಲಿದು ಒಳ ತಿರುಳನ್ನು ಸವಿದ ಆನಂದ. ಹೊರ ಜಗತ್ತಿನ ವಿಸ್ಮಿತ ಲೋಕಕ್ಕೆ ಮರುಳಾಗುವುದನ್ನಷ್ಟೇ ಆತ ಬಲ್ಲ.

ರಹಸ್ಯವನ್ನು ಪತ್ತೆ ಹಚ್ಚುವ ಗೂಢಚಾರನಿಗೂ ಒಂದು ಎಲ್ಲೆಯಿದೆ; ಮಿತಿಯಿದೆ. ಅದನ್ನು ಮೀರಿ ಆತ ಏನೂ ಮಾಡಲಾರ. ತನ್ನ ಕಾರ್ಯಕ್ಷೇತ್ರದೊಳಗೇ ಹುಡುಕಾಡಿ, ತಡಕಾಡಿ ಶೋಧಿಸಿದ್ದಷ್ಟೇ ಅವನಿಗೆ ಒದಗುವ ಫಲ. ಕವಿ ಹೇಳುತ್ತಾರೆ—ಕಂಡಷ್ಟೂ ಸತ್ಯವಿರಬಹುದು. ಆದರೆ ಅದೆಲ್ಲವೂ ಸತ್ಯವಿರಲೇಬೇಕೆಂದಿಲ್ಲ. ಸತ್ಯವಿರಲೂಬಹುದು ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ ಕವಿ. ಆದರೆ ಕಂಡಷ್ಟೇ ಸತ್ಯವಲ್ಲ. ಕಂಡದ್ದರಾಚೆಗೂ ಸತ್ಯ ವ್ಯಾಪಿಸಿದೆ ಎಂಬುದನ್ನು ಕವಿ ಸ್ಪಷ್ಟಪಡಿಸುತ್ತಾರೆ. ಆದರೆ ಕಾಣದ ಸತ್ಯಕ್ಕಾಗಿ ಹಾರೈಸಿ ಪ್ರಯೋಜನವೇನು? ಪಾಲಿಗೆ ಬಂದದ್ದು ಪಂಚಾಮೃತ ಎಂದು ದಕ್ಕಿದಷ್ಟನ್ನೇ ಅಥವಾ ದೊರಕಿದಷ್ಟನ್ನೇ ಅನುಭವಿಸುವುದು ಈ ಲೋಕದ ಜನರ ಜಾಯಮಾನವಾಗಿದೆ. ಅದುವೇ ಜಾಣತನವಾದರೂ ಅಷ್ಟರಲ್ಲೇ ತೃಪ್ತಿಹೊಂದದೆ ಕಾಣದ್ದನ್ನು ಕಾಣಬೇಕೆಂಬ ಆಶಾವಾದವನ್ನು ಕವಿ ವ್ಯಕ್ತಪಡಿಸಿದ್ದಾರೆ. ಯಾವುದು ಕಾಣಿಸದ್ದೋ ಅದರ ಕಡೆಗಿರಬೇಕು ಸದಾ ನಮ್ಮ ಲಕ್ಷ್ಯ, ಕಾಣುವಾಸೆಯ ನೋಟ. ಕಂಡದ್ದರ ಮೂಲಕ ಕಾಣದುದನ್ನು ಕಲ್ಪಿಸಿಕೊಳ್ಳಬೇಕು. ಮನಸ್ಸಿನೊಳಗಿನ ಅನುಮಾನ ಹಾಗೆಯೇ ಇರಬಾರದು. ಅದನ್ನು ಮನಸ್ಸಿನಿಂದ ಕಿತ್ತೊಗೆಯ ಬೇಕು. ಸಂಶಯಾತ್ಮವಿನಶ್ಯತಿ ಅಲ್ಲವೆ? ಮಾನವತೆಯೇ ಜೀವನ. ಹಿರಿತನ ಯಾವುದು? ಕಿರಿತನ ಯಾವುದು? ಎಂಬುದೇ ಅನುಮಾನಾಸ್ಪದವಾಗಿದೆ. ಕಂಡ ಸೃಷ್ಟಿಯ ದೃಶ್ಯವೆಲ್ಲ ಒಂದು ಕ್ಷಣದ ನೋಟ. ಎಲ್ಲವೂ ಅಸ್ಪಷ್ಟವಾದ ಅರ್ಧಂಬರ್ಧ ನೋಟ. ಅರಿವು-ಜ್ಞಾನ ಎಂಬುದು ಮಿಂಚಿನಂತೆ. ನೀರಿನ ಮೇಲಕ್ಕೆ ನೆಗೆದು ಥಕ್ಕನೆ ನೀರಲ್ಲಿ ಮುಳುಗಿ ಹೋಗುವ ಮೀನನ್ನು ಕಂಡ ನೋಟದಂತೆ. ಒಂದು ಕ್ಷಣದ ನೋಟವಾದರೂ ಅದು ಅರಿವೇ. ಆದರೆ ಅದು ಕಣ್ಕಪಟ. ಕಣ್ಣಿಗೆ ಮಾಯೆ ಕವಿದಂತೆ. ಕಣ್ಣನ್ನು ಮುಸುಕುವ ಕಾಣ್ಕೆಯ ಇಂದ್ರಜಾಲ. ಸೃಷ್ಟಿ ಆರಂಭದಿಂದ ಕೊನೆಯವರೆಗೂ ಅನೇಕ ಹಂತಗಳಲ್ಲಿ ನಡೆಯುತ್ತದೆ. ಅದು ನಿರಂತರ ನಿಲ್ಲದ ಕ್ರಿಯೆ. ಸೃಷ್ಟಿಗೆ ಬೆಲೆ ಬರುವುದು ಅದು ಒಂದು ಪೂರ್ಣ ಸ್ವರೂಪವನ್ನು ಪಡೆದಾಗ. ಆವರೆಗೂ ಅದು ರಕ್ತಮಾಂಸಗಳ ಮುದ್ದೆ ಮಾತ್ರ. ಪೂರ್ಣ ಮೈಯ ಆಕಾರ ಪಡೆದಾಗ ಮಾತ್ರ ಜೀವಕೋಶಕ್ಕೆ ಬೆಲೆ. ಮಗು ತಾಯಿಯ ಮೊಲೆ ಕುಡಿದು ಆಕೆಯ ಮುದ್ದಿಸುವಿಕೆಗೆ ಪಾತ್ರವಾಗುತ್ತದೆ. ಇದು ಮಾನವ ಸೃಷ್ಟಿಯ ರಹಸ್ಯ. ಸೃಷ್ಟಿ ಭೌತಿಕವಾಗಿ ಮತ್ತು ಮಾನಸಿಕವಾಗಿ ನಡೆಯುತ್ತದೆ. ಜೀವಕೋಶಕ್ಕೆ ಬೇಕು ಕಾಯಕೋಶದ ಆಸರೆ. ಕಾಯವಿಲ್ಲದೆ ಜೀವವಿಲ್ಲ. ಜೀವವಿಲ್ಲದೆ ಕಾಯ ನಿಲ್ಲದು. ಒಂದಕ್ಕೊಂದು ಪೂರಕ, ಪರಿಣಾಮಕಾರಕ.

ಈ ಸೃಷ್ಟಿಯೆಂಬ ಕಪಿಮುಷ್ಟಿ ಆಗಾಗ ಬಿಚ್ಚಿಕೊಳ್ಳುವುದು. ಹೊಸತನ್ನು ಕಂಡು ಹಿಡಿದವರೆಷ್ಟೋ ಮಂದಿ. ಹೊಸತನ್ನು ಸೃಷ್ಟಿಸಿದರೆಷ್ಟೋ ಮಂದಿ. ಈತನಕ ಮಾಡಿದ ಸಾಧನೆಯೇ ದೊಡ್ಡದು. ಅಷ್ಟಿಷ್ಟು ತಡಕಿದಾಗ ದೊರೆತದ್ದೇ ಅಧಿಕವಾಗಿದೆ. ಸಂಶೋಧನೆಗೆ, ಕಂಡುಹಿಡಿಯುವಿಕೆಗೆ ಕೊನೆಯಿಲ್ಲ, ಮಿತಿಯಿಲ್ಲ. ಹೊಸ ಹೊಸತನ್ನು, ನವ

ನವೀನವಾದ್ದನ್ನು ಕಂಡು ಹಿಡಿಯುವ ಹುಡುಕಾಟದ ಉತ್ಸಾಹದಲ್ಲಿ ಬೀಗಿ ದಾರಿ ತಪ್ಪುವುದು, ಎಡವುವುದು ಸಹಜ. ಅದೇನೋ ಹೊಸದೊಂದನ್ನು ಕಂಡುಕೊಂಡೆವೆಂದು ಭಾವಿಸುತ್ತೇವೆ. ಬರಿಯ ಭ್ರಾಂತಿಗೆ ಮರುಳಾಗುತ್ತೇವೆ. ಪ್ರತಿಯೊಂದು ಕ್ಷೇತ್ರದಲ್ಲೂ ಹೊಸ ಧೋರಣೆಗಳನ್ನು ಕಂಡುಕೊಂಡವರ ಸ್ಥಿತಿ ಇದು. ಪ್ರೊ. ಕೆ. ಎಸ್. ನಿಸಾರ್ ಅಹಮದ್, ಕನ್ನಡ ಕಾವ್ಯದಲ್ಲಿ ನವ್ಯ ತಲೆಯೆತ್ತಿ ಮೆರೆಯತೊಡಗಿದಾಗ ಏನೋ ಅದ್ಭುತವಾದದ್ದನ್ನು ಕಂಡುಕೊಂಡಿದ್ದೇವೆಂದು ಹಿರಿ ಹಿಗ್ಗಿದ ನವ್ಯಕವಿಗಳನ್ನು ಇಲ್ಲಿ ವಿಡಂಬಿಸಿದ್ದಾರೆ ಎಂದು ನನ್ನ ಊಹೆ. ಇದು ನಿಜವಾದ ಅರಿವಲ್ಲ, ತಿಳಿವಳಿಕೆಯಲ್ಲ, ಋಜು ಮಾರ್ಗದ ನೋಟಕ್ಕೆ ಅಂಧಕಾರವನ್ನು ಕವಿಸುವ ಮರೆವು. ಕವಿ ಹಿಂದಿನ ಕಾಲಕ್ಕೆ ಹೋಗುತ್ತಾರೆ. 'ನಮ್ಮ ಕಾಲದ ಗತ್ತು ನೀಯತ್ತೆ ಬೇರೆ ಥರ' ಎನ್ನುತ್ತಾರೆ. ಹೊಸತನಕ್ಕೆ ಹಾರೈಸುವ ಗುಣ ಎಲ್ಲ ಕಾಲದಲ್ಲೂ ಕಂಡುಬರುತ್ತದೆ. ಆದರೆ, ಹೊಸತೊಂದೇ ಗುರಿಯಾಗಬಾರದು. ಅಂದು-ಇಂದು, ಹಿಂದು-ಮುಂದು, ಹಳತು-ಹೊಸತುಗಳ ಸಮನ್ವಯ, ಹೊಂದಾಣಿಕೆ ಜೀವನದ ಗುರಿಯಾಗ ಬೇಕೆಂಬುದು ಕವಿಯ ಉದ್ದೇಶ. ಹಿಂದಿನ ಕಾಲದ ಜೀವನ ಮೌಲ್ಯಗಳ ಅಸ್ತಿವಾರದ ಮೇಲೆ ಹೊಸ ಮೌಲ್ಯಗಳು ಗಟ್ಟಿಯಾಗಿ ನಿಲ್ಲಬೇಕು.

'ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ
ಬೆಸೆದು ಹೊಸೆಯುವ ಕಲೆಯೆ ಈ ಕಾಲ'ದರಿವು';
ಹೊಸತ ಹುಡುಕಲು ಹೋಗಿ ತೂಕ ತಪ್ಪುವ ಬುದ್ಧಿ—
ಕುಂಟು ಕಾಲಿನ ಕುದುರೆ, ಬಂಜೆ ಗೋವು.'

ಎಂದು ಅರ್ಥಪೂರ್ಣವಾಗಿ ಕವನವನ್ನು ಮುಕ್ತಾಯಗೊಳಿಸಿದ್ದಾರೆ. ಹೊಸತಿಗಾಗಿ ಹಂಬಲಿಸಿ ಸೋಲುವ ಜನರ ಬುದ್ಧಿಯ ವೈಪರೀತ್ಯವನ್ನು ಕವಿ ವಿಡಂಬಿಸಿದ್ದಾರೆ. ಈ ಕವನದಲ್ಲಿ ನವೋದಯ, ನವ್ಯಪಂಥಗಳ ಲಕ್ಷಣಗಳ ಸಮನ್ವಯವನ್ನು ಕಾಣಬಹುದು. ಪರಂಪರೆಗೆ, ಹಳತಿಗೆ ಎಷ್ಟು ಬೆಲೆಯಿದೆ ಎಂಬುದನ್ನು ತಿಳಿಸಿ, ಹಳತು ಹೊಸತುಗಳ ಸಂಗಮವಾಗಬೇಕಾದ ಅಗತ್ಯವನ್ನು ಕವಿ ಒತ್ತಿ ಹೇಳಿದ್ದಾರೆ. ಪರಂಪರೆಯ ಮೌಲ್ಯಗಳಿಗೆ ಕವಿ ನೀಡುವ ಮಹತ್ವ ಅನನ್ಯವಾದುದು. ಈ ಕವನದ ಭಾಷೆ-ಶೈಲಿ ಆಕರ್ಷಕ ಹಾಗೂ ಪ್ರಭಾವಕಾರಿ. ಅಂತ್ಯಪ್ರಾಸ, ಒಳ ಪ್ರಾಸ, ಅನುಪ್ರಾಸ ಮುಂತಾದವುಗಳು ಕವನದ ಅಂದವನ್ನು ಹೆಚ್ಚಿಸಿವೆ. ಹಲವು ದೃಷ್ಟಿಕೋನಗಳಿಂದ ಈ ಕವನ ವಿಶಿಷ್ಟವಾಗಿದೆ. ಓದಿದಷ್ಟೂ ಭಾವಾರ್ಥ ವಿಸ್ತಾರವಾಗುತ್ತಾ ಹೋಗುತ್ತದೆ. ಹೊಸ ಹೊಸ ಧ್ವನ್ಯರ್ಥಗಳು ಹೊಳೆಯುತ್ತಾ ಹೋಗುತ್ತವೆ.

ಉತ್ತಮ ಕಾವ್ಯದಲ್ಲಿ ಬಾಯಿ ಬಿಟ್ಟು ಹೇಳಿದ್ದಕ್ಕಿಂತ ಅನುಕ್ತವಾದದ್ದೇ, ಪಂಕ್ತಿಗಳ ಮರೆಯಲ್ಲಿ ಅಗೋಚರವಾಗಿ ಅವಿತಿರುವುದೇ ಮುಖ್ಯ.

(ಕಾವ್ಯದ ಇಂಗಿತ)

ಸ್ವಯಂಸೇವೆಯ ಗಿಳಿಗಳು

೧

ಕಲಾಕ್ಷೇತ್ರದ ಕೌಂಟರು, ಗೇಟಿನಲ್ಲಿ
ಪ್ರೇಕ್ಷಕರ ತಕ್ಕ ಸೀಟಿನಲ್ಲಿ
ಪ್ರತಿಷ್ಠಾಪಿಸುವ ಲಗುಬಗೆಯಲ್ಲಿ
ಬೆಂಗಳೂರನ್ನೇ ಹೊತ್ತ ಸೋಗಿನಿಂದ,
ಕಾಲ್ಗೆಟಿಸಿದ ನಗೆಯಿಂದ,
ಆತ್ಮೀಯರಾಗುತ್ತಾರೆ—
ಸ್ವಯಂಸೇವೆಯ ಸಂವೇದಕ ಗಿಳಿಗಳು;
ಸ್ವದೇಶಿ ನಾಲಗೆಯ ವಿದೇಶಿ ಉಚ್ಚಾರಣೆಯ
ಸ್ವಾತಂತ್ರ್ಯೋತ್ತರ ವಿಚಿತ್ರ ತಳಿಗಳು—
'ಹಲೊ' ಅನ್ನುತ್ತಾರೆ ಗುರುತಿದ್ದರೆ,
ದುರುಗುಟ್ಟುತ್ತಾರೆ ಮರೆತಿದ್ದರೆ.
ಬಿಷಪ್ ಕಾಟನ್ನಿನ ಬಾಬ್‌ಕಟ್ಟಿನ ಪೊಗದಸ್ತು ಬೇಬಿಗಳು—
ಎನಿಡ್ ಬ್ಲೈಟನ್ನಳ ಕಥೆಯ ಸ್ಕರ್ಟ್ ಹಿಡಿದು ಜಿಗಿದಾಡಿ
ಮೌಂಟ್ ಕಾರ್ಮೆಲ್ಲಿಗೆ ತಲಪಿ, ಹರಗಿದ ಹೊಲಗಳಾಗಿ
ಮುಂಗಾರಿನ್ನೈನೀರನೆರೆದುಕೊಳ್ಳುವ ಹೊತ್ತಿಗೆ
ಆಗುತ್ತಾರೆ ಹಾಡ್ಲಿ ಛೇಸನ ವಿಲಾಯತಿ
ಹೀರೋಗಳ ಗುತ್ತಿಗೆ.
ಮೈ ತಿಳಿದಾಗ ಸಂಸ್ಕೃತಿಯ ಸ್ವಂತ ಸೂರುಗಳನ್ನ,
ಆರ್ಯಾವರ್ತತೆಯ ಹಚ್ಚನೆಯ ಬೇರುಗಳನ್ನ
ಹುಡುಕುತ್ತಾರೆ ನಾಟಕ, ನಾಟ್ಯಗಳಲ್ಲಿ;
ಚಲಚ್ಚಿತ್ರೀಯ ಸಂಗೀತದ ಅಚ್ಚ ಜಾನಪದ ಗೀತಗಳಲ್ಲಿ.

೨

ಫ್ಯಾಕ್ಟರಿ ಡೈರೆಕ್ಟರೊ, ಮಿಲ್ಲಿನ ಮ್ಯಾನೇಜರೊ ಡ್ಯಾಡಿ—
ಕಳಚಿ ದಿನನಿತ್ಯದ ಫೋನ್, ಫೈಲುಗಳ ಬೇಡಿ
ಸಂಜೆ ಸೆಂಚ್ಯುರಿ ಕ್ಲಬ್ಬಿನ ವಿಸ್ಕಿ, ಬಿಲಿಯರ್ಡ್ಸ್‌ಗೆ ಹೊಕ್ಕರೆ
ಮನೆಯ ಜ್ಞಾಪಿಸಬೇಕು ಕೋಳಿಗಳು ಹಾಡಿ.
ಇನ್ನು ಮಮ್ಮಿ: ಸೋಫಾದ ಮೆತ್ತನೆಯಲ್ಲಿ ಹಗಲ ಭಾಗಿಸುತ್ತ,
ಕಮರ್ಷಿಯಲ್ ಸ್ಟ್ರೀಟಿನಂಗಡಿಗಳ ಲೋಹಚುಂಬಕ ದೀಪ್ತಿ ಸುತ್ತ

ಪಾತರಗಿತ್ತಿಯಲೆದು, ಮಾತು ನಗೆಯಷ್ಟೆ ಕೊಳ್ಳುತ್ತ
ಮೆಲ್ಲಲಾರದೆ ಸೌಖ್ಯ,
ಮಂಚಕ್ಕೆ ಮೈಚಾಚಿ ಕಾಮ ಫುಲ್‌ಸ್ಟಾಪಿರದ ದೀರ್ಘವಾಕ್ಯ.
—ಇಂಥವರ ಅಪರೂಪದ ಫಲಗಳಿವು;
ಪರ ಬೀಜ ಕನಸಿ, ಸಸಿ ನಿಗುರದ ಹತಾಶ ನೆಲಗಳಿವು;
ಫರಂಗಿ ಅಕ್ಷರಾಭ್ಯಾಸ ಮಾಡಿ ನಾರಂಗಿ ಪಡೆಯಬಯಸುವ
ನಿಷ್ಫಲ ಛಲಗಳಿವು.

೩

ತೆರೆ ಸಂಕುಚಿಸಿ ಸಭಾಂಗಣ ಕತ್ತಲಿಸಿದಾಗ
ಪ್ರೇಕ್ಷಕರ ಲಕ್ಷ್ಯಕ್ಕೆ ನಾಟಕ, ನಾಟ್ಯ, ಸಂಗೀತ ಬೆಸೆದು
ನೇಪಥ್ಯದಲ್ಲೋ ಗೇಟಿನ ಮೂಲೆಯ ಅರೆಗತ್ತಲಲ್ಲೊ,
ಕಣ್ಣಲ್ಲೆ ನೇಗಿಲ ಹೂಡುವ ಪಡ್ಡೆ ಹೈದರ ಜೊತೆ
ಪಿಸಿಪಿಸಿ ಚಿಲಿಯುವ, ಮೈ ತಾಕಿಸುವ,
ಕುಚಾಯಿಸುವ
ಸ್ವಸಮಾರಂಭ ಆರಂಭಿಸುತ್ತಾರೆ.

ಕಾರ್ಯಕ್ರಮದ ಮೊದಲಲ್ಲಿ
ಸಮಸ್ತ ಉತ್ಸಾಹ ಮುಖಕ್ಕೆ ಹೇರಿಸಿಕೊಂಡವರು,
ಮುಗಿದಾಗ, ಮಂದಿ ಒಬ್ಬೊಬ್ಬರೇ ಕರಗಿದಾಗ,
ಬರಿದಾದ ರಂಗದ ಖಾಲಿ ಮೌನಗಳನ್ನ
ಗಂಟೆ ಮಾತ್ರದ ಸಂಸ್ಕೃತಿಯ ಉದುರು ಪಕಳೆಗಳನ್ನ
ಗೆರೆಗೊಂಡ ನೋಟದಲಿ ತುಂಬುತ್ತ
ಕೌಂಟರು, ಗೇಟು, ಪ್ರೇಕ್ಷಕರ ಸೀಟಲ್ಲಿ
ನಿಧಾನ ಚೆಲ್ಲುತ್ತಾರೆ;
ತಮ್ಮ ಅಳತೆಗೆ ತಕ್ಕ ಬಾಣ ದಕ್ಕದೆ ಕೊನೆಗು
ಅನಾಥ ಬಿಲ್ಲಾಗುತ್ತಾರೆ.

★ ★ ★

(ಕವನ ಸಂಕಲನ: 'ಸ್ವಯಂಸೇವೆಯ ಗಿಳಿಗಳು')



'ಸ್ವಯಂಸೇವೆಯ ಗಿಳಿಗಳು':

ಸ್ವಸಂಸ್ಕೃತಿಯ ಬೇರುಗಳಿರದ ಸ್ವಾತಂತ್ರ್ಯೋತ್ತರ ತಳಿಗಳು

♦ ಡಾ. ಚೆನ್ನಣ್ಣ ವಾಲೀಕಾರ

೧

ಕನ್ನಡ ಕಾವ್ಯ ವಿಚಿತ್ರ ಪರಿಸ್ಥಿತಿಯಲ್ಲಿದೆ. ಒಂದು ಕಾಲಕ್ಕೆ ಕವಿತೆಯೊಂದನ್ನೇ ತಮ್ಮ ಫಲವತ್ತಾದ ಭೂಮಿಯನ್ನಾಗಿ ಮಾಡಿಕೊಂಡಿದ್ದ ಕೆಲವು ಸಾಮರ್ಥ್ಯಶಾಲಿ ಕನ್ನಡ ಕವಿಗಳು ಇಂದು ಇತರ ಆಕರ್ಷಣೆಗಳ ಕ್ಷೇತ್ರಗಳಿಗೂ ಮನ ಸೋತು ಗುಳೆ ಹೊರಟಿರುವುದು ಸುಗೋಚರ ಸತ್ಯ ಸಂಗತಿಯಾಗಿದೆ. ಇದರಿಂದ ಸತ್ವಯುತ ಕಾವ್ಯವನ್ನು ಬರೆಯುವವರ ಕೊರತೆ ಹೆಚ್ಚ ತೊಡಗಿದೆ.

ಇಂಥ ಸ್ಥಿತಿಯಲ್ಲಿ ಯಾವ ಪ್ರಭಾವಗಳಿಗೂ ಒಳಗಾಗದೆ ನಿಷ್ಕಾಮವಾಗಿ, ಎಡೆಬಿಡದೆ ಕಾವ್ಯಾರಾಧನೆಯನ್ನು ಮಾಡುತ್ತ, ಕಾವ್ಯದ ಹೊಸ ಹೊಸ ದಿಕ್ಕುಗಳನ್ನು ಹುಡುಕುತ್ತ ಹೊರಟ ಕವಿಗಳೆಂದರೆ ಕೆ. ಎಸ್. ನರಸಿಂಹಸ್ವಾಮಿ ಅವರು ಮತ್ತು ಅವರ ಆಮೇಲಿನ ತಲೆಮಾರಿನ ಕೆ. ಎಸ್. ನಿಸಾರ್ ಅಹಮದ್.

ಹೊಸ ಕಾವ್ಯದ ಪ್ರಮುಖ ಲಕ್ಷಣ ವ್ಯಂಗ್ಯವೆಂಬುದು ಎಲ್ಲರೂ ಒಪ್ಪಿ ಬರೆಯುವ ಮಾತಾಗಿದೆ. ಇವೊತ್ತಿನ ರಾಜಕೀಯದ ಗಡಿಬಿಡಿಯ ಮಧ್ಯದಲ್ಲಿ ಇದ್ದಾಗಲೂ ಕೆ. ಎಸ್. ನಿಸಾರ್ ಅಹಮದ್ ಅವರು ಅದಕ್ಕೆ ಅಡಿಯಾಳಾಗದೆ, ಮೋಹಗೊಳ್ಳದೆ ಅನ್ಯವಾಗಿದ್ದು ಅದರ ಒಳಿತು ಕೆಡುಕುಗಳನ್ನು ಚಿಂತಿಸುವುದರಿಂದ ಅವರಿಂದ ಕಲಾತ್ಮಕವಾದ ಕಾವ್ಯ ಬರಲು ಕಾರಣವಾಗಿದೆ.

ನಿಸಾರರ ವ್ಯಂಗ್ಯ ಸಿಡಿಲಿನಂತೆ ಭೂತಳಕ್ಕಿಳಿದು ಕೆಲಸ ಮಾಡುವಂಥದ್ದು. 'ಕುರಿಗಳು, ಸಾರ್ ಕುರಿಗಳು', 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂಬ ಕವಿತೆಗಳನ್ನು ನೋಡಿದಾಗ ಎಷ್ಟು ಸಮರ್ಥವಾಗಿ ವರ್ತಮಾನ ಕಾಲದ ಜೀವನವನ್ನು ವಿಡಂಬಿಸಿದ್ದಾರೆ ಎಂಬುದು ಅರ್ಥವಾಗುವುದು. 'ಸ್ವಯಂಸೇವೆಯ ಗಿಳಿಗಳು' ಎಂಬ ಅವರ ಕವನ ಸಂಗ್ರಹದಲ್ಲಿರುವ ಇದೇ ಹೆಸರಿನ ಕವಿತೆ, ಇವೊತ್ತಿನ ಥಳುಕು ಬಳುಕಿನವರ, ಉಳ್ಳವರ, ಇಲ್ಲಿದ್ದೂ ಬೇರೂರದವರ, ಖೊಟ್ಟಿ ಜನರ ವಿಪರ್ಯಾಸದ ಬದುಕಿನ ದರ್ಶನ ಮಾಡಿಸುವುದರಿಂದ, ಕವಿತೆಯ ಆ ಬಗ್ಗೆ ನಾನು ಯೋಚಿಸುತ್ತಿರಲು ಕಾರಣವಾಗಿದೆ.

೨

ಇವೊತ್ತಿನ ಬದುಕಿನ ನೇರ ಅಭಿವ್ಯಕ್ತಿಗಾಗಿ ಈ ಕವಿತೆ ನನಗೆ ಹಿಡಿಸಲು ನಿಮಿತ್ತ ವಾಗಿದೆ. ನಿಸಾರರ ಭಾಷೆ ಹೊಚ್ಚ ಹೊಸದು. ಅಭಿವ್ಯಕ್ತಿ ಮುಕ್ತ ರೀತಿಯದು. ಅಲಂಕಾರ, ವರ್ಣನೆಗಳ ಅಧಿಕತರವಾದ ಬಂಧನವಿಲ್ಲದೆ ಇಡೀ ಕವನವೇ ಒಂದು ಸಂಕೇತವಾಗಿ ನಿಂತಿದ್ದು, ಹಸಿ ಗೋಡೆಗೆ ಹರಳು ಹೊಡೆದಂತೆ ಮನಕ್ಕೆ ಬಂದು ನಾಟುವಂಥದ್ದು. ಇಂಥ ಸರಳ ಶೈಲಿಯ ಮೋಹಕ ಗುಣವೇ ನಿಸಾರರ ಕಾವ್ಯವನ್ನು ಪ್ರೀತಿಸುವಂತಾಗಲು ಪ್ರಮುಖ ಕಾರಣ.

ನಿಸಾರರ 'ಸ್ವಯಂಸೇವೆಯ ಗಿಳಿಗಳು' ಕವನದ ಕ್ರಿಯೆಯ ಸ್ಥಳ, ನಾಟಕಗಳ ಸಾರ್ವಜನಿಕ ರಂಗ ಪ್ರಯೋಗ ನಡೆಯುವ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ. ಈ ಕವಿತೆಯ ವಸ್ತು ಸ್ವಯಂಸುಖಕ್ಕಾಗಿ ಕಲಾರಾಧನೆಯ ಪೋಜು ಕೊಡುವ ಬೆಂಗಳೂರಿನ ಕೆಲವು ಪ್ರತಿಷ್ಠಿತ ನಾಗರಿಕರ ಮಕ್ಕಳು. ಈ ಕವಿತೆಯನ್ನು ಮೂರು ಭಾಗ ಮಾಡಲಾಗಿದೆ. ಮೊದಲನೆಯದರಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ನಾಟಕ, ಜಾನಪದ ಮೇಳ, ಸಭಾ ಸಮ್ಮೇಳನಗಳಿಗೆ ಬರುವ ಜನರ ಇಂತಹ ಆಸಕ್ತಿಯ, ಪ್ರವೃತ್ತಿಯ ವಿವರಗಳು ಪ್ರಸ್ತಾಪಿತವಾಗಿದ್ದರೆ, ಎರಡನೆಯದಲ್ಲಿ ಪ್ರೇಕ್ಷಕರನ್ನು ತಮ್ಮ ತಮ್ಮ ಜಾಗಗಳಲ್ಲಿ ವ್ಯವಸ್ಥಿತವಾಗಿ ಕೂಡಿಸುವ ಈ ಸ್ವಯಂಸೇವಕ(ಕಿ)ರ ತಾಯಿ ತಂದೆಗಳ ವಿವರವಿದೆ. ಮೂರನೆಯದರಲ್ಲಿ ಸಭಾಂಗಣದಲ್ಲಿ ಪ್ರೇಕ್ಷಕರು ತಲ್ಲೀನರಾಗಿರುವಾಗ, ಸ್ವಯಂಸೇವಕರು ತಮ್ಮತಮ್ಮಲ್ಲೇ ನಡೆಸುವ ಪ್ರಣಯ ವಿಲಾಸದ ಹಾಗೂ ಕೊನೆಯಲ್ಲಿ ಹತಾಶೆ, ಖೇದಗಳ ಪರಿಣಾಮಕಾರಿ ಚಿತ್ರಣವಿದೆ.

ಈ ಕವಿತೆ ಹೆಚ್ಚಿನ ವಿವರಣೆ, ಟಿಪ್ಪಣಿಗಳನ್ನು ಬೇಡದು. ಓದುತ್ತ ಹೋದಂತೆ ವಿಚಾರಗಳ, ಘಟನೆಗಳ ದೃಶ್ಯ ತೆರೆಯುತ್ತ ಹೋಗುತ್ತದೆ:

> **'ಬೆಂಗಳೂರನ್ನೇ ಹೊತ್ತ ಸೋಗಿನಿಂದ,**
> **ಕಾಲ್ಗೆಟಿಸಿದ ನಗೆಯಿಂದ'**

ರವೀಂದ್ರ ಕಲಾಕ್ಷೇತ್ರದ ಕೌಂಟರು, ಗೇಟು, ಸೀಟುಗಳಲ್ಲಿ ಎಂದೂ ಇಲ್ಲದ ಪ್ರೀತಿ, ವಿನಯ, ಸೌಹಾರ್ದತೆಯನ್ನು ತೋರಿಸುತ್ತ ಆತ್ಮೀಯರಾಗಲು ಪ್ರಯತ್ನಿಸುವ ಲಲನೆಯರು ಬರಿಯ ಪ್ರೇಕ್ಷಕರಾಗಿ ಬಂದಿಲ್ಲ. ಅವರು ಕೇವಲ ಸ್ವಯಂಸೇವಕರಾಗಿಯೂ ಬಂದಿಲ್ಲ. ಕಲೆಯನ್ನು

ಅನುಭವಿಸುವ ನೆಪದಲ್ಲಿ ಸ್ವಂತ ಖಾಯೀಷುಗಳನ್ನು, ಯೌವನದ ಬೇಡಿಕೆಗಳನ್ನು ತಣಿಸಲು ಬಂದವರಾಗಿರುತ್ತಾರೆ.

'ಸ್ವದೇಶಿ ನಾಲಗೆಯ ವಿದೇಶಿ ಉಚ್ಚಾರಣೆಯ
ಸ್ವಾತಂತ್ರ್ಯೋತ್ತರ ವಿಚಿತ್ರ ತಳಿ'

ಗಳಾದ ಇವರು ಸಡಗರ ಸಂಭ್ರಮದ, ಯೌವನೋತ್ಸಾಹದ ಬುಗ್ಗೆಗಳಾಗಿದ್ದಾರೆ.

ಸುಮ್ಮನೆ ಕೂಡುವ ಪೈಕಿಯಲ್ಲ: ಗುರುತಿದ್ದರೆ ಹಲೋ ಹಲೋ ಎಂದು ತಮ್ಮ ದೊಡ್ಡಸ್ತಿಕೆಯನ್ನು ತೋರಿಸಲು ಮಾತಾಡುವವರು. ಮರೆತಿದ್ದರೆ ದುರುಗುಟ್ಟಿ ನೋಡುವವರು. ಕವಿ ಅವರ ವೇಷ ಭೂಷಣ, ನಡೆ ನುಡಿಗಳನ್ನು ವೈನೋದಿಕವಾಗಿ ಬಣ್ಣಿಸುತ್ತಾರೆ.

ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಬಂದ ಈ ಪೀಳಿಗೆ ನಮ್ಮ ದೇಶದ ಸಂಸ್ಕೃತಿ, ಆಚಾರ ವಿಚಾರಗಳನ್ನು ಬಾಲ್ಯದಿಂದ ರೂಢಿಸಿಕೊಳ್ಳದೆ ಪಾಶ್ಚಾತ್ಯ ಭಾಷೆ, ಉಡುಗೆ ತೊಡುಗೆ, ಜೀವನ ಶೈಲಿಯನ್ನು ನಕಲಿಸುವವರು. ಪ್ರಾಯಕ್ಕೆ ಬಂದಾಗ ಅವರು ಭಾರತೀಯ ಆಚಾರ ವಿಚಾರಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವ ರೀತಿ ಹಾಸ್ಯಾಸ್ಪದವೆನ್ನಿಸುವಂತಹದು. ತಮ್ಮನ್ನು ತಾವೇ ವಿದೇಶೀ ಕಾದಂಬರಿಗಳಲ್ಲಿ ಬರುವ ನಾಯಕ ನಾಯಕಿಯರು ಎಂದು ಭ್ರಮಿಸುತ್ತ ಬಾಳು ಸಾಗಿಸುವ ಇವರು—

'ಮೈ ತಿಳಿದಾಗ ಸಂಸ್ಕೃತಿಯ ಸ್ವಂತ ಸೂರುಗಳನ್ನ,
ಆರ್ಯಾವರ್ತತೆಯ ಹಚ್ಚನೆಯ ಬೇರುಗಳನ್ನ
ಹುಡುಕುತ್ತಾರೆ ನಾಟಕ, ನಾಟ್ಯಗಳಲ್ಲಿ;
ಚಲಚ್ಚಿತ್ರೀಯ ಸಂಗೀತದ ಅಚ್ಚ ಜಾನಪದ ಗೀತಗಳಲ್ಲಿ.'

ಅವರ ವೈಫಲ್ಯವನ್ನು ಕಂಡು ನಮಗೆ ಮರುಕ ಹುಟ್ಟುತ್ತದೆ. ಜೊತೆಗೆ ತಿಳಿ ನಗೆ ಹೊಮ್ಮುತ್ತದೆ.

೩

ಕವಿತೆಯ ಎರಡನೆಯ ಭಾಗದಲ್ಲಿ ರವೀಂದ್ರ ಕಲಾಕ್ಷೇತ್ರದ ಕಾರ್ಯಕ್ರಮಗಳಿಗೆ ಬಂದ ಈ ಪ್ರಾಯಸ್ಥ ಸೇವಾತತ್ಪರರ ಅನಾಥಪ್ರಜ್ಞೆಗೆ, ನಮ್ಮ ಸಂಸ್ಕೃತಿಯೊಂದಿಗೆ ಅಸಾಂಗತ್ಯವನ್ನು ಹೊಂದಿದ ಪಾಡಿಗೆ ಅವರ ಪೋಷಕರ ಲಾಲನೆ ಪಾಲನೆಯಲ್ಲಿನ ನ್ಯೂನತೆ, ನಿರ್ಲಕ್ಷ್ಯಗಳೇ ಕಾರಣವೆಂದು ಕವಿ ಸಕಾರಣವಾಗಿ ನಿವೇದಿಸುತ್ತಾರೆ.

ಹಿರಿಯ ಹುದ್ದೆಯ ತಂದೆ ಮುಂಜಾನೆಯಿಂದ ಸಂಜೆಯ ತನಕ ಮಿಲ್ಲು, ಕಾರ್ಖಾನೆಗಳ ಫೈಲುಗಳ ಬೇಡಿಯಲ್ಲಿದ್ದು ಸಂಜೆಯಾಗುತ್ತಲೇ ಕ್ಲಬ್ಬು ಸೇರಿ ವಿಸ್ಕಿ, ಬ್ರ್ಯಾಂಡಿ ಸೇವಿಸಿ ಬಿಲಿಯರ್ಡ್ಸ್ ಆಟ ಆಡುತ್ತ ಅಲ್ಲೇ ಬಿದ್ದುಕೊಂಡರೆ, ತಾಯಿಯಾದವಳು ಹಗಲಿಡೀ ಸೋಫಾದಲ್ಲಿ ವಿರಾಜಮಾನಳಾಗಿ ತನ್ನ ದೈಹಿಕ, ಮಾನಸಿಕ ಸುಖಗಳಿಗೆ ಎರವಾಗಿ, ಬೋರಿನಿಂದ ತಪ್ತಳಾಗಿ ವ್ಯಾಪಾರೀ ಬೀದಿಗಳ ಅಂಗಡಿಯಲ್ಲಿ ಪಾತರಗಿತ್ತಿಯಂತೆ

ಗುರಿಯಿಲ್ಲದೆ ಅಲೆದು ಬಸವಳಿದು ಮತ್ತೆ ಗೃಹಕೃತ್ಯವೆಂಬ ಏಕಾಕಿತನದ, ನಿಸ್ಸಂಗತ್ವದ ನರಕಕ್ಕೆ ಮರಳುವವಳು. ಅಂತಹ ಜನ್ಮದಾತರ ಮಕ್ಕಳು ಹೇಗೆ ತಾನೆ ಒಂದು ಕಟ್ಟುನಿಟ್ಟಿನ, ಶಿಸ್ತು ಸಂಯಮದ, ತಮ್ಮತನದ ಹೆಮ್ಮೆಯ ಬಾಳನ್ನು ರೂಪಿಸಿಕೊಂಡಾರು? ಇಂಥವರಿಂದ ಜನ್ಮ ತಳೆದು ಬಂದಿರುವ ಕನಿಕರಕ್ಕೆ ಪಾತ್ರವಾಗುವ ಪೀಳಿಗೆಯ ಅವಸ್ಥೆಯನ್ನು ಕವಿಯ ಮಾತುಗಳಿಂದಲೇ ಅರಿಯೋಣ:

'ಪರ ಬೀಜ ಕನಸಿ, ಸಸಿ ನಿಗುರದ ಹತಾಶ ನೆಲಗಳಿವು;
ಫರಂಗಿ ಅಕ್ಷರಾಭ್ಯಾಸ ಮಾಡಿ ನಾರಂಗಿ ಪಡೆಯಬಯಸುವ
ನಿಷ್ಫಲ ಛಲಗಳಿವು.'

೪

ಇಲ್ಲಿಯವರೆಗೆ ಕವಿ, ಸಭಾಂಗಣದಲ್ಲಿ ಕುಳಿತ ಪ್ರೇಕ್ಷಕರ ದೃಷ್ಟಿಗೆ ಹೊರಗಾಗಿ, ನೇಪಥ್ಯ, ಬಾಗಿಲು ಅಥವಾ ಕೌಂಟರಿನ ಬಳಿಯ ಅರೆಗತ್ತಲಲ್ಲಿ:

'ಕಣ್ಣಲ್ಲೆ ನೇಗಿಲ ಹೂಡುವ ಪಡ್ಡೆ ಹೈದರ ಜೊತೆ
ಪಿಸಿಪಿಸಿ ಚಿಲಿಯುವ, ಮೈ ತಾಕಿಸುವ,
ಕುಚಾಯಿಸುವ
ಸಮಾರಂಭ ಆರಂಭಿಸುತ್ತಾರೆ'

ಈ ಧನಿಕ ವರ್ಗದ ಯುವತಿಯರು, ಕೊನೆಯಲ್ಲಿ ಉತ್ಸಾಹೀನರಾಗುವುದನ್ನು ಕವಿ ಬಣ್ಣಿಸುತ್ತಾರೆ. ಕಾರ್ಯಕ್ರಮ ಮುಗಿದು ಸಭಿಕರು ಒಬ್ಬೊಬ್ಬರಾಗಿ ಎದ್ದು ಹೋದಂತೆ ಸಭಾಂಗಣ ಬರೀ ಕುರ್ಚಿಗಳಿಂದ ಉಳಿಯುವದು. ಭಣಭಣ ಎನ್ನಿಸುವುದು. ಆರಂಭದಲ್ಲಿ 'ಸಮಸ್ತ ಉತ್ಸಾಹ ಹೇರಿಕೊಂಡು ಬಂದ ಇವರು, ಬರಿದಾದ ರಂಗಮಂದಿರವನ್ನು ನೋಡಿ ಗಂಟೆ ಮಾತ್ರದ ಸಂಸ್ಕೃತಿಯ ಉದುರು ಪಕಳೆಗಳನ್ನೆಲ್ಲ ಅಲ್ಲಿಯೇ ಬಿಸುಟು ಬರುತ್ತಾರೆ.' ಅವರ ಪಾಲಿನ ಸಂಭ್ರಮ, ಸುಖ ಕ್ಷಣಿಕದ್ದಾಗಿ ಪರಿಣಮಿಸುತ್ತದೆ. ಯಥಾಪ್ರಕಾರದ ಯಾಂತ್ರಿಕ ಹಾಗೂ ಪರದೇಶಿತನದ ಅಸಾರ್ಥಕ ಬದುಕು ಅವರಿಗೆ ಎದುರಾಗುತ್ತದೆ. ಕೊನೆಗೆ ತಾವು ಭಾವಿಸಿಕೊಂಡ ದೈಹಿಕ ಸಂತೋಷದ ಹಂಬಲವೂ ಭಗ್ನವಾಗಿ ಅವರು ಖಾಲಿ ಮನಸ್ಸನ್ನು ಹೊತ್ತು ಹಿಂದಿರುಗುತ್ತಾರೆ. 'ತಮ್ಮ ಅಳತೆಗೆ ತಕ್ಕ ಬಾಣ ದಕ್ಕದೆ ಕೊನೆಗೂ ಅನಾಥ ಬಿಲ್ಲಾಗುತ್ತಾರೆ.' ಕಲಾಸೇವೆಯನ್ನು ಮಾಡುತ್ತೇವೆ—ಎಂದು ಹೇಳಿ ತಮ್ಮ ಸುಖವನ್ನಷ್ಟೇ ಸಂಪಾದಿಸಿ ಕೊಳ್ಳಲು ಹವಣಿಸುವ ಕರುಣಾಜನಕ ಯುವಕ ಯುವತಿಯರ ಸ್ವಭಾವಗಳನ್ನು ಫೋಟೋ ತೆಗೆದಂತೆ ಚಿತ್ರಿಸುತ್ತದೆ 'ಸ್ವಯಂಸೇವೆಯ ಗಿಳಿಗಳು' ಕವನ.

ವ್ಯಕ್ತಿಗಳನ್ನು ಕುರಿತು ವಿಡಂಬನಾತ್ಮಕವಾಗಿ ಬರೆಯುತ್ತಲೇ ನಮ್ಮ ಸಮಾಜದ, ರಾಷ್ಟ್ರದ ಬಹು ಮುಖ್ಯ ಸಮಸ್ಯೆಯಾದ ದೇಶ ಪ್ರೇಮದ; ಸ್ವದೇಶಿ ಸಂಸ್ಕೃತಿ, ಆಚಾರ ವಿಚಾರಗಳ ಅಳವಡಿಕೆಯ ಕೊರತೆಯ ಚಿತ್ರಣವನ್ನು ಕವಿ ನಿಸಾರರು ಬಹಳ ಹೃದಯಂಗಮವಾಗಿ ಮನೋವೇದ್ಯವಾಗಿಸಿದ್ದಾರೆ. ವೈಚಾರಿಕವಾಗಿ ಪರಿಶೀಲಿಸಿದಷ್ಟೂ ಅರ್ಥಗಳನ್ನು ತೆರೆಯುತ್ತಾ ಹೋಗುವ ಸಮರ್ಥ ಕವಿತೆ 'ಸ್ವಯಂಸೇವೆಯ ಗಿಳಿಗಳು'.

ಅಮೇರಿಕ, ಅಮೇರಿಕ

ಅಮೇರಿಕ, ಅಮೇರಿಕ,
ನಿನ್ನ ಸಂಸ್ಕೃತಿಯನಾಗಸಕ್ಕೆತ್ತಿದಾಗೆಲ್ಲ
ನಿನ್ನವರ ಟೈ ಸೂಟು ಸ್ಕರ್ಟುಗಳನೊಂದೊಂದೆ ಕಳಚಿ, ನೆತ್ತರಿನಿಂದ
ಸ್ಪ್ಯಾನಿಶರ ಜರ್ಮನರ ಪೋರ್ಚುಗೀಸಾಂಗ್ಲ ನೀಗ್ರೋಗಳ
ಕಡಲ್ಗಳ್ಳ ಹಂತಕ ಹಾದರಗಿತ್ತಿಯರನೆತ್ತೆತ್ತಿ
ನಿನ್ನೆದುರು ನೂಕಿ ಪಕಪಕನೆ ನಗಬೇಕೆಂದಾಗ—
ಲಿಂಕನ್ ಕೆನೆಡಿ ಕಿಂಗರ ಚಹರೆಗಳ ಕಂಡು
ನುಡಿ ಎಡವಿ, ಕೈ ಮುಗಿದು ಬೆಪ್ಪಾಗುತ್ತೇನೆ.

ಕಮ್ಯುನಿಸ್ಟ್ ನಾಜಿಗಳ ತುಳಿವ ಹುಲು ನೆವದಲ್ಲಿ
ಲೈಫ್ ಟೈಮುಗಳ ದ್ವಾರ ಸ್ವಪ್ರತಿಷ್ಠೆಯ ನೀನು
ಮೈಥುನಿಸಿದಾಗೆಲ್ಲ ಕ್ಯಾಕರಿಸಿ ಉಗಿದು ವೋಡ್ಕಾ ಹೀರಿ
ಕ್ಯಾಸ್ಟ್ರೊ ಡಿಗಾಲ್ ಹೋಚಿಮಿನ್ ನಾಸೆರರ ಜೊತೆ ಹರಟುತಿರುವಾಗ—
ಚೀಣ ಪಾಕ್ ದಾಳಿಗಳ ಚೂರಿ ಸ್ಮೃತಿಯನು ತಿವಿದು
ಆರು ಸಾವಿರ ಮೈಲಿಯುದ್ದದಭಯದ ನಿನ್ನ
ಸ್ನೇಹ ಹಸ್ತವ ಕಂಡು ತೆಪ್ಪಗಾಗುತ್ತೇನೆ.

ಸಭ್ಯತೆಯ ಧ್ವಜವನಂಪೈರ್ ಸ್ಟೇಟು ಕಟ್ಟಡದ ಮೇಲೆ ತೂಗಿಸಿದಾಗ
ನೈಟ್‌ಕ್ಲಬ್ಬು ಬೀಚಿನಲಿ ಗಂಡಲೆವ ಕಣ್ಣುಗಳ ನಾಟ್ ನಾಟ್ ಸೆವೆನ್ನುಗಳ
ಹಾಲಿವುಡ್ ಬೀಟ್ ಟ್ವಿಸ್ಟು ಕ್ಯಾನ್‌ಕ್ಯಾನು ರೋಗಗಳ ಮಾನಸಿಕ ಲಾಗಗಳ
ಗಾಂಜ ಮಾರೀವಾನ ಎಲ್ಲೆಸ್ಡಿ ಪಿಲ್ಲುಗಳ ಹಾಗೆ ಎಪ್ಪೆಲ್ಲುಗಳ
ತೀಟೆಗಳ ಕಳ್ಳಕೂಟಗಳ ಗಳಿಗೆಗಿಪ್ಪತ್ತೈದು ಸೋಡಚೀಟಿಗಳ
ಕಂಡು ಕೈ ಚಪ್ಪಾಳೆ ತಟ್ಟಿ ಲೋಕಕ್ಕಿವನು ಸಾರುವಾಸೆ—
ಲೋಕದೆಡೆ ಮೊಗ ಮಾಡಿ, ಬೆಂದಿರುಹಿ ನಿನ್ನತ್ತ
ನಿಂತ ದೇವಿ ಲಿಬರ್ಟಿಯನ್ನು ತಿರುಗಿಸಿ ಹಿಂದೆ
ನಿನ್ನೆದೆಯ ಸ್ಲಮ್ಮುಗಳ ನೀಗ್ರೋ ಹೇರ್ಲಮ್ಮುಗಳ
ಕಡೆಗವಳ ದಿಟ್ಟಿಯನು ಹರಿಸುವಾಸೆ—
ಹುಟ್ಟುಹಬ್ಬಕೆ ಹಸುಳೆಗೆಂದು ನಿನ್ನವರೀವ
ಟಾಮಿಗನ್ನಿನ ಕೊಡಿಗೆಗಳ ಬಿಸುಟು, ಬೈಬಲ್ಲು
ಗೀತೆ ಖುರ್‌ಆನುಗಳ ನೀಡುವಾಸೆ—
ನಿನ್ನವರ ಮಲಗೆದ್ದ–ಬೆಡ್‌ಶೀಟು–ಮೊಗಗಳಿಗೆ

ಪ್ರಾಚ್ಯ ಋಷಿಗಳ ತೇಜ ತೊಡಿಸುವಾಸೆ—
ಜಾನ್ಸನಿನ ಹಣೆಯಲ್ಲಿ ಗೆರೆಯಾದ ಉಬ್ಬುಗಳ,
ಬಿಗಿದಿರುವ ಹುಬ್ಬುಗಳನಿಸ್ತ್ರಿಗೊಳಿಸುತ, ತುಟಿಗೆ
ನೆಹರು ರೋಜದ ನಗೆಯ ತೀಡುವಾಸೆ.

ಅಮೇರಿಕ, ಅಮೇರಿಕ—

ನಿನ್ನ ಬಲದ ಬಡಾಯಿ ಕೊಚ್ಚುತಿರುವಾಗೆಲ್ಲ
ವಿಯಟ್ನಾಮಿನಲಿ ರಾಷ್ಟ್ರೀಯ ವೀರ ದಳ ಮೊರೆದೆದ್ದು
ತಿಗಣೆಯುಜ್ಜುತ್ತಿರುವ ಹರಯದುತ್ಸಾಹಗಳ,
ಸರ್ಕಾರಗಳ ಮುರಿದು ನಿಲಿಸಿ ಹೌದಪ್ಪಗಳ
ಹೆಣಗಿ ಸೋಲುತ್ತಿರುವ ಸಿ.ಐ.ಎ., ಸಂಸ್ಥೆಗಳ,
ಏರಿದೊಡನೆಯೆ ಬಿದ್ದು ಮಣ್ಣಾದ ಕ್ಷಿಪಣಿಗಳ
ಚಂದಿರನ ಏಣಿಗಳ
ಕಡೆ ನಿನ್ನ ಕಿವಿ ಹಿಂಡಿ ತಿರುಗಿಸಲೆ ಎಂದಾಗ—
ಗೋಧಿಯ ಋಣ, ಪಿ.ಎಲ್. ೪೮೦ರ ಹಣ,
ವಿದೇಶಾಂಗ ನೀತಿ ಕಟ್ಟುವುದು ಬಾಯ.

ನಿನ್ನ ಸಮಕಿನ್ನೊಂದು ರಾಷ್ಟ್ರವಿಲ್ಲದ್ದನ್ನ
ಆನೆ ಬಿದ್ದರೂ ಕುದುರೆಯಷ್ಟು ಅನ್ನುವುದನ್ನ
ನುಂಗಿ, ತುಟಿಗಳ ಹೊಲಿದು ಸುಮ್ಮನಾಗುತ್ತೇನೆ;
ನಿನಗೆ ಬಾಗುತ್ತೇನೆ.

ಸದ್ದಿರದೆ ಸುದ್ದಿಯಲಿ ನನ್ನ ಕಬಳಿಸುತಿರುವ
ನಿನ್ನ ಉತ್ಕರ್ಷಕ್ಕೆ ಕರುಬಿ ಹಳಿದಾಗೆಲ್ಲ
ನನ್ನ ಕಡು ದಾರಿದ್ರ್ಯ
ಜನಸಂಖ್ಯೆ
ಭೂಗೋಳ
ನಾಲಗೆಯ ನಿಲಿಸುತ್ತವೆ;
ತಾಳ್ಮೆ ಪಾಠವನೆನಗೆ ಕಲಿಸುತ್ತವೆ.

★ ★ ★

(ಕವನ ಸಂಕಲನ: 'ಸಂಜೆ ಐದರ ಮಳೆ')



‘ಅಮೇರಿಕ, ಅಮೇರಿಕ’ :

ಬಲಾಢ್ಯತೆಯ ನಶೆಯೇರಿದ ರಾಷ್ಟ್ರದ ಜೊತೆ ತೌಲನಿಕ ಮಾತುಕತೆ

♦ ಡಾ. ಶಶಿಕಲಾ ವೀರಯ್ಯಸ್ವಾಮಿ

ಕೆ.ಎಸ್. ನಿಸಾರ್ ಅಹಮದ್ ಅವರ ಕವಿತಾ ರಚನೆಗಳು ಕನ್ನಡ ಕಾವ್ಯ ಸಂದರ್ಭದಲ್ಲಿ ಸಾಂದ್ರವಾದ ಜೀವನಾನುಭವಗಳ ಲವಲವಿಕೆಯ ಧಾಟಿಯ, ಹರಿತ ವಿಡಂಬನೆ, ವಿನೂತನ ಪದ ಪ್ರಯೋಗ, ನವ ಅರ್ಥಗಳ ಸ್ಫುರಣೆಗಳಿಂದ ಪರಿಪ್ಲುತವಾದ ಪರಿಪುಷ್ಟ ಧಾತುಶಕ್ತಿಯುಳ್ಳವು. ಅವರ ಗದ್ಯವನ್ನು ಓದಿದಾಗಲೇ ಎಷ್ಟೋ ಸಲ ಸುಂದರವಾದ ಮಾರ್ದವ ಕವಿತೆಯನ್ನು ಓದಿದಂತಿರುತ್ತದೆ. ಇನ್ನು ಕಾವ್ಯವನ್ನು ಕೇಳಬೇಕೆ? ಮುಸ್ಲಿಂ ಸಂವೇದನೆಯ ಹಿನ್ನೆಲೆಯಿದ್ದರೂ ಅವರು ಬಳಸುವ ತಾಜಾ ಕನ್ನಡ ಪದಗಳು ಸದಾ ಕಾಲ ಹೊಳಪಾಗಿರುತ್ತವೆ. ಆ ಹೊಳಪಿನ ಬೆಳಕಿನಲ್ಲಿ ನಾನಾ ಅರ್ಥಗಳು ಸ್ಫುರಿಸುತ್ತವೆ. ಇದು ಅವರ ಕಾವ್ಯಶಕ್ತಿ.

ಈ ಹಿನ್ನೆಲೆಯಲ್ಲಿ ಅವರ ‘ಅಮೇರಿಕ ಅಮೇರಿಕ’ ಪದ್ಯವನ್ನು ಅವಲೋಕಿಸೋಣ. ೧೯೭೦ರಲ್ಲಿ ಪ್ರಕಟವಾದ ನಾಲ್ಕನೆಯ ಕವನ ಸಂಕಲನ ‘ಸಂಜೆ ಐದರ ಮಳೆ’ಯಲ್ಲಿರುವ ಮಹತ್ವದ ಪದ್ಯಗಳಲ್ಲಿ ಇದೂ ಒಂದು.

‘ಅಮೇರಿಕ ಅಮೇರಿಕ’ ಕವಿತೆ ಒಂದು ಬೃಹತ್ ರಾಷ್ಟ್ರದ ಘನತೆಯನ್ನೂ ಅದರ ಹಿಂದಿರುವ ಕರಾಳ ಕ್ಷುದ್ರತೆಗಳನ್ನೂ ಒಟ್ಟೊಟ್ಟಿಗೇ ಎತ್ತಿ ತೋರುವ ಕವನ. ಆರ್ಷೇಯ ಭಾರತದ ಸುಸಂಸ್ಕೃತ ಪರಂಪರೆ ಒಂದು ಕಡೆ, ಅಮೇರಿಕದಂಥ ಬಲಾಢ್ಯ ದೇಶದ ವಿಚ್ಛಿದ್ರಕಾರೀ ಸ್ವಚ್ಛಂದ ಪ್ರವೃತ್ತಿ ಇನ್ನೊಂದೆಡೆಗೆ.

ಎರಡೂ ದೇಶಗಳನ್ನು ಎದುರಿಗಿಟ್ಟುಕೊಂಡಾಗ ಕವಿಯಲ್ಲಿ ಹುಟ್ಟುವ ಪ್ರಶ್ನೆಗಳು, ಅಮೇರಿಕದ ಬಗ್ಗೆ ಇರುವ ಅಪಾರ ಮೆಚ್ಚುಗೆ, ಮರು ಕ್ಷಣವೇ ಹುಟ್ಟಿಕೊಳ್ಳುವ ಅಪರಿಮಿತ ದ್ವೇಷವನ್ನೂ ಅದರ ಕಾರಣಗಳನ್ನೂ ಇಲ್ಲಿ ಹುಡುಕಬಹುದು. ಅಮೇರಿಕದ ಘನೋದ್ದೇಶಗಳನ್ನು ಮೆಚ್ಚಿಕೊಳ್ಳುವಾಗ ಅದರ ಕುತ್ಸಿತತನದ ನೆನಪಾಗುತ್ತದೆ. ಅದರ ಪೈಶಾಚಿಕ ಪ್ರವೃತ್ತಿಯನ್ನು ಖಂಡಿಸಲು ಹೊರಟಾಗ, ಭಾರತಕ್ಕೆ ಆ ದೇಶದ ನೆರವು ನೆನಪಿಗೆ ಬಂದು ಕವಿ ನಿರ್ವಿಣ್ಣನಾಗುತ್ತಾನೆ. ಅಮೇರಿಕದ ಬಗ್ಗೆ ತೀವ್ರ ಪ್ರೀತಿ-ತೀವ್ರ ದ್ವೇಷ ಎರಡೂ ಇಲ್ಲಿ ಢಾಳಾಗಿ ಚಿತ್ರಿಸಲಾಗಿದೆ. ಕವಿಗಳೇ ಇತ್ತೀಚೆಗೆ ಒಂದು ಕಡೆಗೆ ಹೇಳಿದಂತೆ, ಈ ಪದ್ಯವನ್ನು ಬರೆದದ್ದು 'ಅಮೇರಿಕ, ವಿಯೆಟ್ನಾಂ ಮೇಲೆ ದುರಾಕ್ರಮಣ ಮಾಡಿದ ವರ್ಷಗಳಲ್ಲಿ. ಅಮೇರಿಕದ ಸಾಹಿತ್ಯ-ಸಂಸ್ಕೃತಿ-ಇತಿಹಾಸ ಇತ್ಯಾದಿಗಳಿಂದ ಪ್ರಭಾವಿತನಾಗಿದ್ದ ನನಗೆ ಅಲ್ಲಿ ಈಗ ರಾಜಕೀಯ ಸ್ವಾರ್ಥಿಗಳ ದೊಡ್ಡಣ್ಣನ ಧೋರಣೆ; ಸ್ವಾತಂತ್ರ್ಯ, ಸಮಾನತೆ ಎಂದು ಬಾಯಿಯಲ್ಲಿ ಜಪಿಸುತ್ತಲೇ ಸ್ವಹಿತ ಸಾಧನೆಗಾಗಿ ತನಗೆ ಸಂಬಂಧ ಪಡದ ಅಮಾಯಕರ ಮೇಲೆ, ಬಡ ರಾಷ್ಟ್ರಗಳ ಮೇಲೆ ಗುಂಡು ಹಾರಿಸಲು ಸದಾ ಸನ್ನದ್ಧವಾಗಿರುವ ಅನೈತಿಕ ನಿಲವು ಹೇಸಿಗೆ ಬರಿಸಿತು. ಈಗಲೂ ಸಹ ಇರಾಕ್‌ನಂಥ ಸಣ್ಣ ರಾಷ್ಟ್ರದ ಮೇಲೆ ಅದು ಎಸಗಿರುವ ಅಮಾನವೀಯ ಅತ್ಯಾಚಾರ ನನ್ನಲ್ಲಿ ಕ್ರೋಧವನ್ನು ಉಕ್ಕಿಸುತ್ತದೆ. ಹುಲು ರಾಜಕಾರಣಿಗಳ ಈ ವರ್ತನೆಯಿಂದ ನಿಜಕ್ಕೂ ಮಹಾನ್ ದೇಶವಾದ ಅಮೆರಿಕದ ಮಾನ ಮಣ್ಣು ಪಾಲಾಗಿಸುತ್ತಿರುವುದು ದುರ್ದೈವದ ಸಂಗತಿ. ಅಂತೂ ಆ ರಾಷ್ಟ್ರದ ಬಗೆಗೆ Love-hateನ ಸಂಕೀರ್ಣ ಸಂಬಂಧ ಇಲ್ಲಿ ವ್ಯಕ್ತವಾಗಿದೆ.'

ಈ ಮಾತುಗಳಿಗೆ ಸಾಕ್ಷಿಯನ್ನು ನಾವು ಕವಿತೆಯುದ್ದಕ್ಕೂ ಕಾಣಬಹುದು:

'ಅಮೇರಿಕ ಅಮೇರಿಕ,
ನಿನ್ನ ಸಂಸ್ಕೃತಿಯನಾಗಸಕ್ಕೆತ್ತಿದಾಗೆಲ್ಲ
ನಿನ್ನವರ ಟೈ ಸೂಟು ಸ್ಕರ್ಟುಗಳನೊಂದೊಂದೆ ಕಳಚಿ, ನೆತ್ತರಿನಿಂದ
ಸ್ಪ್ಯಾನಿಶರ ಜರ್ಮನರ ಪೋರ್ಚುಗೀಸಾಂಗ್ಲ ನೀಗ್ರೊಗಳ
ಕಡಲ್ಗಳ್ಳ ಹಂತಕ ಹಾದರಗಿತ್ತಿಯರನೆತ್ತೆತ್ತಿ
ನಿನ್ನೆದುರು ನೂಕಿ ಪಕಪಕನೆ ನಗಬೇಕೆಂದಾಗ—
ಲಿಂಕನ್ ಕೆನೆಡಿ ಕಿಂಗರ ಚಹರೆಗಳ ಕಂಡು
ನುಡಿ ಎಡವಿ, ಕೈಮುಗಿದು ಬೆಪ್ಪಗಾಗುತ್ತೇನೆ.'

ಅಮೇರಿಕೆಗಿರುವ ಭವ್ಯ ಸಂಸ್ಕೃತಿಯ ಬಗೆಗೆ ಕವಿಗೆ ಅಭಿಮಾನವಿದೆ. ಅದನ್ನು ಕುರಿತು ಎತ್ತಿ ಹೇಳಬೇಕೆಂದುಕೊಂಡ ಕ್ಷಣದಲ್ಲೇ, ಸ್ಪ್ಯಾನಿಶ್, ಜರ್ಮನ್, ಪೋರ್ಚುಗೀಸ್, ಆಂಗ್ಲ, ನೀಗ್ರೊ, ಕಡಲ್ಗಳ್ಳ, ಹಂತಕ, ಹಾದರಗಿತ್ತಿಯರನ್ನು ಅಮೇರಿಕ ಅಂತರ್ಗತಿಸಿಕೊಂಡಿದ್ದೂ ನಾಶ ಮಾಡಿದ್ದೂ ಕಣ್ಣೆದುರು ಬರುತ್ತವೆ. ಅದನ್ನು ವ್ಯಂಗ್ಯವಾಗಿ ಅದಕ್ಕೆ ಚುಚ್ಚಿ ಹೇಳೋಣ ವೆಂದರೆ ಹಿಂದೆಯೇ ಇಂಥವರಿಗಾಗಿಯೇ ಬದುಕನ್ನು ಮುಡಿಪಾಗಿಟ್ಟ ಮಹಾನುಭಾವರಾದ ಲಿಂಕನ್, ಕೆನೆಡಿ, ಕಿಂಗರು ನೆನಪಾಗುತ್ತಾರೆ. ನಾಲಗೆ ಕಳೆದುಕೊಂಡಂತೆ ಕವಿ ಮೂಕ ನಾಗುತ್ತಾನೆ.

'ಕಮ್ಯುನಿಸ್ಟ್ ನಾಜಿಗಳ ತುಳಿವ ಹುಲು ನೆವದಲ್ಲಿ
ಲೈಫ್ ಟೈಮುಗಳ ದ್ವಾರ ಸ್ವಪ್ರತಿಷ್ಠೆಯ ನೀನು
ಮೈಥುನಿಸಿದಾಗೆಲ್ಲ ಕ್ಯಾಕರಿಸಿ ಉಗಿದು ವೋಡ್ಕಾ ಹೀರಿ
ಕ್ಯಾಸ್ಟ್ರೊ ಡಿಗಾಲ್ ಹೋಚಿಮಿನ್ ನಾಸೆರರ ಜೊತೆ ಹರಟುತಿರುವಾಗ—
ಚೀಣ ಪಾಕ್ ದಾಳಿಗಳ ಚೂರಿ ಸ್ಮೃತಿಯನು ತಿವಿದು
ಆರು ಸಾವಿರ ಮೈಲಿಯುದ್ದದಭಯದ ನಿನ್ನ
ಸ್ನೇಹ ಹಸ್ತವ ಕಂಡು ತೆಪ್ಪಗಾಗುತ್ತೇನೆ.'

ಕಮ್ಯುನಿಸ್ಟ್‌ರನ್ನು, ನಾಜಿಗಳನ್ನು ತುಳಿದು ಹಾಕುವ ಒಂದು ಚಿಕ್ಕ ನೆವದಲ್ಲಿ, ಫಿಡೆಲ್ ಕ್ಯಾಸ್ಟ್ರೋ, ಡಿಗಾಲ್, ಹೋಚಿಮಿನ್, ನಾಸೆರರ ಜೊತೆಗಿನ ಸ್ನೇಹವನ್ನು ನೆನೆಸಿ, ಭಾರತದ ಮೇಲೆ ನಡೆದ ಚೀನಾ, ಪಾಕಿಸ್ತಾನಗಳ ದಾಳಿಗಳನ್ನು ಅಮೇರಿಕದ ಸ್ಮರಣೆಗೆ ತಂದು ನಾಚಿ ನೀರಾಗುವಂತೆ ಮಾಡೋಣವೆಂದರೆ, ಆರು ಸಾವಿರ ಮೈಲುಗಳಷ್ಟು ದೀರ್ಘ ದೂರದ ಸ್ನೇಹದ ಅಭಯ ಹಸ್ತವನ್ನು ಅದು ಚಾಚುತ್ತದೆ. ಕೃತಜ್ಞತೆಗೆ ಬಾಯಿ ಬಂದಾಗುತ್ತದೆ—ಎನ್ನುತ್ತಾನೆ ಕವಿ.

೨

'ಸಭ್ಯತೆಯ ಧ್ವಜವನಂಪೈರ್ ಸ್ಟೇಟು ಕಟ್ಟಡದ ಮೇಲೆ ತೂಗಿಸಿದಾಗ
ನೈಟ್‌ಕ್ಲಬ್ಬು ಬೀಚಿನಲಿ ಗಂಡಲೆವ ಕಣ್ಣುಗಳ ನಾಟ್ ನಾಟ್ ಸೆವೆನ್ನುಗಳ
ಹಾಲಿವುಡ್ ಬೀಟ್ ಟ್ವಿಸ್ಟು ಕ್ಯಾನ್‌ಕ್ಯಾನು ರೋಗಗಳ ಮಾನಸಿಕ ಲಾಗಗಳ
ಗಾಂಜ ಮಾರೀವಾನ ಎಲ್ಲೆಸ್ಡಿ ಪಿಲ್ಲುಗಳ ಹಾಗೆ ಎಪ್ಪೆಲ್ಲುಗಳ
ತೀಟೆಗಳ ಕಳ್ಳಕೂಟಗಳ ಗಳಿಗೆಗಿಪ್ಪತ್ತೈದು ಸೋಡಚೀಟಿಗಳ
ಕಂಡು ಕೈ ಚಪ್ಪಾಳೆ ತಟ್ಟಿ ಲೋಕಕ್ಕಿವನು ಸಾರುವಾಸೆ.'

'ಅಮೇರಿಕ, ನಿನ್ನ ನಾಗರಿಕತೆ, ಪ್ರಗತಿಗಳನ್ನು, ಸಭ್ಯತೆಯನ್ನು ಸಾರುವಂತೆ ಅಂಪೈರು ಸ್ಟೇಟು ಕಟ್ಟಡದ ಮೇಲೆ ನಿನ್ನ ಧ್ವಜ ಹಾರುವಾಗ ನನಗೆ ಅದರ ಬಗ್ಗೆ ಗೌರವ ಮೂಡುವುದಿಲ್ಲ. ಬದಲಾಗಿ ನಿನ್ನ ಒಡಲಿಡೀ ತುಂಬಿದ ನೈಟ್ ಕ್ಲಬ್ಬುಗಳು, ಬತ್ತಲೆಯ ಬೀಚುಗಳು, ಅಳತೆಗೆಟ್ಟ ಕುಡಿತಗಳು, ಸಿನಿಮಾಗಳ ಕುಣಿತಗಳು, ದೇಹ-ಭಾವದ ರೋಗಗಳು, ಅಸಂಖ್ಯ ಮಾದಕ ದ್ರವ್ಯಗಳು, ಶಿಥಿಲ ದಾಂಪತ್ಯ, ಅನೈತಿಕ ಸಂಬಂಧಗಳು, ಒಂದೇ? ಎರಡೇ? ಇವೆಲ್ಲ ಸಭ್ಯತೆಯ ಧ್ವಜದ ಕೆಳಗೇ ದಿನ ನಿತ್ಯ, ಕ್ಷಣಕ್ಕೊಮ್ಮೆ ನಡೆಯುವ ಹುನ್ನಾರಗಳು. ಅಷ್ಟೇ ಅಲ್ಲ, ಅಮೇರಿಕಕ್ಕೆ ಬೆನ್ನು ಮಾಡಿ, ಲೋಕಕ್ಕೆ ಮುಖ ಮಾಡಿ ನಿಂತ ಸ್ವಾತಂತ್ರ್ಯದಧಿದೇವಿಯ ಕಣ್ಣುಗಳಿಗೆ ನಿನ್ನ ಅಂತರ್ಯದಲ್ಲಿನ ಸ್ಲಮ್ಮುಗಳನ್ನು, ನೀಗ್ರೊಗಳ ನಾರಕೀಯ ವಸತಿಗಳನ್ನು ತೋರಿಸಬೇಕು. ಗೀತೆ, ಬೈಬಲ್, ಖುರ್‌ಆನುಗಳ ಪರಿಚಯ ಮಾಡಿಸಬೇಕು. ಪ್ರಾಚ್ಯಋಷಿಗಳ ತೇಜಸ್ಸಿನ ದರ್ಶನ ಮಾಡಿಸಬೇಕು' ಎನ್ನುತ್ತದೆ ಕವಿ ಮನಸ್ಸು. ಹಾಗೆಯೇ, ಸದಾ ಹುಬ್ಬುಗಂಟಿಕ್ಕಿದ ಜಾನ್ಸನ್‌ನ ಹಣೆಯನ್ನು ಇಸ್ತ್ರಿ ಮಾಡಿ, ನೆಹರು ಅವರ ನಿರಭ್ರ ನಗೆಯ ಗುಲಾಬಿಯನ್ನು ಜಾನ್ಸನ್‌ಗೆ ಪರಿಚಯಿಸ ಬೇಕೆನಿಸುತ್ತದೆ—ಎನ್ನುತ್ತಾರೆ ಕವಿ.

'ಅಮೇರಿಕ, ಅಮೇರಿಕ—
ನಿನ್ನ ಬಲದ ಬಡಾಯಿ ಕೊಚ್ಚುತಿರುವಾಗೆಲ್ಲ
ವಿಯಟ್ನಾಮಿನಲಿ ರಾಷ್ಟ್ರೀಯ ವೀರ ದಳ ಮೊರೆದೆದ್ದು
ತಿಗಣೆಯುಜ್ಜುತ್ತಿರುವ ಹರಯದುತ್ಸಾಹಗಳ
ಸರ್ಕಾರಗಳ ಮುರಿದು ನಿಲಿಸಿ ಹೌದಪ್ಪಗಳ
ಹೆಣಗಿ ಸೋಲುತ್ತಿರುವ ಸಿ.ಐ.ಎ., ಸಂಸ್ಥೆಗಳ;
ಏರಿದೊಡನೆಯೆ ಬಿದ್ದು ಮಣ್ಣಾದ ಕ್ಷಿಪಣಿಗಳ
ಚಂದಿರನ ಏಣಿಗಳ
ಕಡೆ ನಿನ್ನ ಕಿವಿ ಹಿಂಡಿ ತಿರುಗಿಸಲೆ ಎಂದಾಗ
ಗೋಧಿಯ ಋಣ, ಪಿ.ಎಲ್. ೪೮೦ರ ಹಣ,
ವಿದೇಶಾಂಗ ನೀತಿ ಕಟ್ಟುವುದು ಬಾಯ.'

ಅಮೆರಿಕ ಜಗತ್ತಿನಲ್ಲೇ ತಾನು ಸಶಕ್ತ ರಾಷ್ಟ್ರ ಎಂದು ಯಾವಾಗಲೂ ಕೊಚ್ಚಿಕೊಳ್ಳುತ್ತಿರುತ್ತದೆ. 'ವಿಯಟ್ನಾಮಿನ ಅಲ್ಪಸಂಖ್ಯೆಯ ರಾಷ್ಟ್ರೀಯ ವೀರ ದಳಕ್ಕೆ ಅದು ತತ್ತರಿಸಿ ಹಿಂಜರಿದದ್ದನ್ನು ಅದರ ನೆನಪಿಗೆ ತರುವ ಆಸೆಯಾಗುತ್ತದೆ. ಸಾಲು ಸೋಲುಗಳನ್ನು ಉಣ್ಣುತ್ತಿರುವ C.I.A. ಸಂಸ್ಥೆಗಳ ಬಗ್ಗೆ, ವಿಫಲವಾದ ಕ್ಷಿಪಣಿಗಳ ಬಗ್ಗೆ ನಿನ್ನ ಗಮನಕ್ಕೆ ಹರಿಸಬೇಕು, ಅನ್ನಿಸುತ್ತದೆ ನನ್ನ ಮನಸ್ಸು. ಆದರೆ ಅದೇ ಸಮಯಕ್ಕೆ ನಮ್ಮ ದೇಶಕ್ಕೆ ನೀನು ಸಕಾಲಿಕವಾಗಿ ನೀಡಿದ ಗೋಧಿಯ ಋಣ, ಪಿ.ಎಲ್. ೪೮೦ರ ಹಣ, ವಿದೇಶಾಂಗ ನೀತಿ ಇತ್ಯಾದಿ ನೆನಪಾಗಿ ನನ್ನ ಬಾಯಿ ಕಟ್ಟುತ್ತದೆ; ನಾಲಗೆ ತಡವರಿಸುತ್ತದೆ. ನಿನ್ನನ್ನು ಮೆಚ್ಚಲೂ ಆಗದೇ ತಿರಸ್ಕರಿಸಲೂ ಆಗದೇ ತೊಳಲಾಡುತ್ತಿದ್ದೇನೆ'—ಎಂದು ಕವಿ ತನ್ನ ತಳಮಳವನ್ನು ವ್ಯಕ್ತಮಾಡುತ್ತಾನೆ.

ಮುಂದುವರಿದು, 'ನಿನ್ನ ಮುಂದೆ ನನ್ನ ದೇಶದ ಅಪಾರ ಜನಸಂಖ್ಯೆ, ಇತಿಹಾಸ, ಭೂಗೋಲ—ಎಲ್ಲ ನೆನಪಾಗಿ ನಾನು ನಿಸ್ಸಹಾಯಕನಾಗುತ್ತೇನೆ ಎನ್ನುತ್ತದೆ' ಕವಿ ಮನಸ್ಸು. ಇಲ್ಲಿ ಕವಿ, ತಾನು ಸ್ವಂತದ ಆಕ್ರೋಶ ಹಾಗೂ ಸಿಟ್ಟುಗಳಿಂದ ಉದ್ಗರಿಸುವಂತೆ ಭಾಸವಾದರೂ ವಾಸ್ತವದಲ್ಲಿ ಒಂದು ದೇಶದ ಆತ್ಮವೇ ನುಡಿದಂತೆ ನಮಗೆ ಮನವರಿಕೆಯಾಗುತ್ತದೆ. ವ್ಯಷ್ಟಿಯ ಪ್ರತಿಕ್ರಿಯೆ, ಸಮಷ್ಟಿಯ ಭಾವನಾಲಹರಿಯ ಅಭಿವ್ಯಕ್ತಿಯಾಗಿ ಅನುಭವಕ್ಕೆ ಬರುತ್ತದೆ.

ಒಂದು ದೇಶದ ಯಶಸ್ಸು-ಸೋಲುಗಳು, ಸಂಸ್ಕೃತಿಯ ಒಳಗಡೆಯೇ ಬಚ್ಚಿಟ್ಟುಕೊಂಡ ವಿಕೃತಿಗಳು, ಮಾನವ ದ್ವೇಷದ ಹಿಂದೆಯೇ ಅಡಗಿರುವ ನೆರವಿನ ಕೈಗಳು—ಇತ್ಯಾದಿ ನಾನಾ ಭಾವಾಲೋಚನೆಗಳ ಸಂಕೀರ್ಣತೆಯನ್ನು ಈ ಪದ್ಯ ಒಳಗೊಂಡಿದೆ. ಅದನ್ನು ಮಾತುಗಳಲ್ಲಿ ಪಡಿಮೂಡಿಸುವಾಗ ಯಾವುದೇ ಅಸ್ಪಷ್ಟತೆ, ಅಪಾರ್ಥತೆಗಳು ನೆರಳು ಹಾಯಿಸದಂತೆ ಕವಿ ಎಚ್ಚರ ವಹಿಸುತ್ತಾರೆ. ಹೀಗಾಗಿ ಘನವಾದ, ವೈವಿಧ್ಯಮಯವಾದ ಪ್ರಸ್ತುತ ಸಮಾಜೋ-ರಾಜಕೀಯ ವಿಷಯವನ್ನು ತುಂಬ ಮನಮುಟ್ಟುವಂತೆ ನಮ್ಮ ಮುಂದೆ ಇಡುತ್ತದೆ ಕವಿತೆ.

ನಿಸಾರ್ ಅಹಮದ್ ಅವರು ಹಲವಾರು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವುಳ್ಳ ಜಾಗತಿಕ ಆಗುಹೋಗುಗಳ ಮೇಲೆ, ಸಂಗತಿಗಳ ಮೇಲೆ ಕವನಗಳನ್ನು ರಚಿಸಿದ್ದಾರೆ. ಕವಿಯ ಬಗ್ಗೆ ಒಟ್ಟಾರೆ ವಿವೇಚನೆ ನಡೆಸುವ ಸಂದರ್ಭದಲ್ಲಿ ಅವುಗಳಿಗೆ ಮಹತ್ವವಿದೆ. ಆದರೆ 'ಅಮೇರಿಕ, ಅಮೇರಿಕ' ಕವಿತೆ, ನಿಸಾರರ ಈ ನಮೂನೆಯ ಇನ್ನಿತರ ಕವನಗಳಿಗಿಂತ ವಸ್ತುವಿನ ಹಾಸು-ಬೀಸುಗಳಲ್ಲಿ, ಸಂಕೀರ್ಣತೆಯಲ್ಲಿ ಸಮಗ್ರ ಗ್ರಹಿಕೆಯಲ್ಲಿ ಭಿನ್ನವಷ್ಟೇ ಅಲ್ಲ, ಹೆಚ್ಚು ಚಿಂತನಶೀಲವಾದದ್ದೂ ಎನ್ನಿಸುತ್ತದೆ. ಒಂದು ದೇಶದ ಹಿರಿಮೆ ಗರಿಮೆಗಳನ್ನು, ಅದರ ಲೌಕಿಕ ಸೌಲಭ್ಯಗಳ ನಿಟ್ಟಿನಲ್ಲಿನ ಮಹೋತ್ತುಂಗ ಸಾಧನೆಗಳನ್ನು, ಸೈದ್ಧಾಂತಿಕವಾಗಿ ಅದು ಅಂಗೀಕರಿಸಿರುವ ಸರ್ವಸಮಾನತೆ, ಸರ್ವೋದ್ಧಾರದ ಭಾವನೆಗಳನ್ನು ಮಾತ್ರ ಪ್ರವರಿಸಿಯೋ, ಇಲ್ಲವೇ ಇದಕ್ಕೆ ವಿರುದ್ಧವಾದ ಕಟು ಟೀಕೆಗಳನ್ನು ಉಗ್ಗಡಿಸಿಯೋ ಕೈ ತೊಳೆದುಕೊಳ್ಳುವ ಸರಳ ಹಾಗೂ ಸೂತ್ರಾವಲಂಬಿಯೆನ್ನುವಂಥ ಮಾರ್ಗವನ್ನು ಈ ಕವಿತೆ ಹಿಡಿದಿಲ್ಲ. ಬದಲು ವಾಸ್ತವದ ಎರಡು ವಿರುದ್ಧ ಮಗ್ಗುಲುಗಳನ್ನೂ ಹದಗೆಡದಂತೆ ಹಾಸುಹೊಕ್ಕಾಗಿಸಿ ವಾಚಕರೆದುರು ಹರವುತ್ತದೆ. ಹಲವು ಬಣ್ಣಗಳ ನೂಲುಗಳಿಂದ ನೇಯ್ದೂ ಕೂಡ, ಹಲವಾರು ತಥ್ಯಗಳ ಮಿಂಚಿಕೆ ಮತ್ತು ಮಿರುಗುಗಳನ್ನು ಅಲ್ಲಲ್ಲಿ ಮೂಡಿಸಿಯೂ ಕೂಡ, ಒಟ್ಟು ಕವನ ಒಂದು ಸಮಗ್ರ ಶಿಲ್ಪದಂತೆ, ಸಾಂಗೋಪಾಂಗದ ಆನುರೂಪ್ಯವುಳ್ಳ ಒಂದು ಪರಿಪೂರ್ಣ ಕಲಾಕೃತಿಯಂತೆ ಹೃದಯವೇದ್ಯವಾಗುತ್ತದೆ.

ಒಬ್ಬ ವ್ಯಕ್ತಿಯನ್ನೊ, ಸಮಾಜವನ್ನೊ ಕುರಿತು ವಿವೇಚಿಸುವಾಗ ಅದರ ಅನೇಕ ವಿಶಿಷ್ಟ ಗುಣಗಳಿಂದ ಯಾವುದೋ ಒಂದನ್ನು ಆಯ್ದು ಅಲಾಯಿದಗೊಳಿಸಿ ದೊಡ್ಡದು ಮಾಡಿ, ಆ ಭೂತಗನ್ನಡಿಸಿದ ಗುಣವೇ ಆ ವ್ಯಕ್ತಿ ಯಾ ಸಮಾಜದ ಗಣನಾರ್ಹ ವಿಶೇಷವೆಂದು ಸಾರುವುದು ಸತ್ಯಕ್ಕೆ ಅಪಚಾರ ಎಸಗಿದಂತೆಯೇ ಸರಿ. ಒಳಿತು-ಕೆಡಕು, ಹಿತಾಹಿತ, ಸಿಹಿಕಹಿಗಳ ಅನೇಕ ಎಳೆಗಳ ಬೇರೆ ಬೇರೆ ಪ್ರಮಾಣದ ಸಮ್ಮಿಶ್ರಣ ನಮ್ಮ ಬದುಕು ಎನ್ನುವ ತಥ್ಯವನ್ನು ಅರಿತವನಿಗೆ ಒಂದು ರಾಷ್ಟ್ರದ ಹಲವಾರು ಮುಖಗಳ ತೊಡಕಿನ ಸಂಬಂಧದ ಅರಿವನ್ನು ಗ್ರಹಿಸಲು ಸಾಧ್ಯ. ಅಂಥದ್ದನ್ನು ಸೃಜನಾತ್ಮಕವಾಗಿ ತನ್ನ ಕೃತಿಗಳಲ್ಲಿ ಹಿಡಿದಿಡಲು ಸಾಧ್ಯ. ಈ ರೀತಿಯ ಸಮಗ್ರ ದರ್ಶನವನ್ನು ಮಾಡಿಸುವಾತ, ಅದರ ಸಂವೇದನಾತ್ಮಕ ಅನುಭವವನ್ನು ಓದುಗರಲ್ಲಿ ಉಂಟುಮಾಡುವಾತ ನಿಜಕ್ಕೂ ಸಮರ್ಥ ಕವಿ. 'ಅಮೇರಿಕ, ಅಮೇರಿಕ' ಕವಿತೆಯಲ್ಲಿ ನಮಗಾಗುವುದು ಒಂದು ರಾಷ್ಟ್ರದ ಆತ್ಮದರ್ಶನ. ಅಮೇರಿಕದ ವ್ಯಕ್ತಿತ್ವದಲ್ಲಿ ಗಗನಚುಂಬಿಗಳ ವೈಭವೋಪೇತ ಮಹದ್ಗುಣಗಳನ್ನು ಹೇಗೋ ಹಾಗೆಯೇ ಅದರ ಗಬ್ಬು ನಾರುವ ಕೊಳಚೆಗೇರಿಗಳ ಅವನತ ಅಂಶಗಳನ್ನೂ ಈ ಕವನ ಕಟ್ಟಿಕೊಡುವ ವಿಧಾನ ಶ್ಲಾಘನೀಯವೆನ್ನಿಸುತ್ತದೆ. ಆಕ್ರೋಶ-ಸ್ತಿಮಿತತೆ, ಆವೇಶ-ಸಾವಧಾನತೆ, ಹೆಗ್ಗಂಟಲು-ಮೆಲು ಮಾತುಗಳು ಯಥೋಚಿತವಾಗಿ ಮನಸ್ಸಿನಲ್ಲಿ ಬಹು ಸಮಯದಿಂದ, ಸಂಯಮದಿಂದ ಪರಿಭಾವಿತವಾಗಿ ಮೈ ತಳೆದು, ತಕ್ಕ ಸ್ಫೂರ್ತಿ ಸಮಯದಲ್ಲಿ ಹುಟ್ಟು ಪಡೆದ ಈ ಕವನ, ಅವರ ಕಾವ್ಯಸೃಷ್ಟಿಯ ಒಂದು ಅಪೂರ್ವ ಫಲ ಎನ್ನಬೇಕು. ಕೊನೆಯ ಕೆಲವು ಸಾಲುಗಳಲ್ಲಿ ವ್ಯಕ್ತಿಗತ ಹಾಗೂ ಸಾರ್ವತ್ರಿಕ ಠರಾವುಗಳು ಏಕೀಭವಿಸಿ, ಅವಿನಾಭಾವದಿಂದ

ಒಂದಾಗಿಬಿಡುವ; ಪ್ರಸ್ತುತ ನಮ್ಮ ನಾಡಿನ ನಿಸ್ಸಹಾಯಕ ಸ್ಥಿತಿಯ ದೆಸೆಯಿಂದ ತಳೆದ ಸಂಯಮಪೂರ್ಣ ನಿಲುಮೆಯನ್ನು ಮುಚ್ಚುಮರೆಯಿಲ್ಲದೆ ಸಾರಿಬಿಡುವ ಪ್ರಾಮಾಣಿಕ ಅಭಿವ್ಯಕ್ತಿ ದಾಖಲಾಗುತ್ತದೆ:

'ಸದ್ದಿರದೆ ಸುದ್ದಿಯಲಿ ನನ್ನ ಕಬಳಿಸುತಿರುವ
ನಿನ್ನ ಉತ್ಕರ್ಷಕ್ಕೆ ಕರುಬಿ ಹಳಿದಾಗೆಲ್ಲ
ನನ್ನ ಕಡು ದಾರಿದ್ರ್ಯ
ಜನಸಂಖ್ಯೆ
ಭೂಗೋಳ
ನಾಲಗೆಯ ನಿಲಿಸುತ್ತವೆ;
ತಾಳ್ಮೆ ಪಾಠವನೆನಗೆ ಕಲಿಸುತ್ತವೆ.'

ಒಟ್ಟಿನಲ್ಲಿ 'ಅಮೇರಿಕ, ಅಮೇರಿಕ' ಕವಿತೆ ನಿಸಾರರ ಪ್ರಬುದ್ಧ ವಿಚಾರಶೀಲತೆಯನ್ನು ಸೂಚಿಸುವುದಲ್ಲದೆ, ಅವರದೇ ಕೆಲವು ಕವನಗಳ ಹಾಗೆ ಕನ್ನಡ ಕಾವ್ಯ ಕ್ಷೇತ್ರದಲ್ಲೇ ಅಪ್ರತಿಮ ಎನ್ನಿಸುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರಕಾರ ಮೆಚ್ಚಿಗೆಯಾಗಿರುವುದು ಸರ್ವೇ ಸಾಧಾರಣ. ಅಪರೂಪಕ್ಕೆ ಒಬ್ಬನಿಗೇ ಸಾಹಿತ್ಯದ ಹಲವು ಪ್ರಭೇದಗಳ ಬಗ್ಗೆ ಹೆಚ್ಚು ಕಡಮೆ ಸಮಾನವಾದ ಆಸಕ್ತಿಯಿರುವುದೂ ಅಸಂಭವನೀಯವೇನಲ್ಲ. ಹೀಗೆ ಒಪ್ಪಿತವಾದ ಕಾರಣಕ್ಕೆ ಈ ಪ್ರಕಾರಗಳಲ್ಲಿ ಯಾವುದೋ ಒಂದು ಹೆಚ್ಚು, ಇನ್ನೊಂದು ಕಡಮೆ ಎಂದ ಭೇದ ಎಣಿಸುವುದು ಸರ್ವಥಾ ಸರಿಯಲ್ಲ. 'ಡಾಕ್ಟರ್' ಒಂದು ಒಟ್ಟಂದದ ಪದ: ಎಲ್ಲ ದೇಹಾವಯವಗಳಿಗೂ ಒಬ್ಬನೇ ವೈದ್ಯನಿರುವುದಿಲ್ಲ. ಬೇರೆ ಬೇರೆ ವ್ಯಾಧಿಗಳಿಗೆ, ಶರೀರದ ಬೇರೆ ಬೇರೆ ಭಾಗಗಳಿಗೆ ಪ್ರತ್ಯೇಕವಾಗಿ ಹಲವರು ತಜ್ಞರಿರುತ್ತಾರೆ. ಇವರಲ್ಲಿ ಯಾರು ಹೆಚ್ಚು, ಯಾರು ಕಡಮೆ?—ಈ ಪ್ರಶ್ನೆಯೇ ಅಸಂಗತ. ಅವರವರ ಕ್ಷೇತ್ರಗಳಲ್ಲಿ ಅವರೆಲ್ಲ ಗಣ್ಯರೇ, ಶ್ಲಾಘ್ಯರೇ. ಜನರ ಆಯಾ ಅಗತ್ಯಕ್ಕೆ ತಕ್ಕದ್ದಾಗಿ ಒಬ್ಬೊಬ್ಬ ವೈದ್ಯನ, ಅವನು ನೀಡುವ ಚಿಕಿತ್ಸೆಯ ಪ್ರಯೋಜನ ಅವರಿಗೆ ಬೇಕಾಗಬಹುದು. ಇದರ ಹಾಗೆಯೇ ಸಹೃದಯನಿಗೆ ಸಾಹಿತ್ಯದ ವಿವಿಧ ಪ್ರಕಾರಗಳ ಬಗೆಗಿನ ಒಲವು ಮತ್ತು ಆವಶ್ಯಕತೆ.

(ಸಹೃದಯರಿಗೆ ತಕ್ಕ ಸಾಹಿತ್ಯ)

ತುಂಬಿದ ತಪ್ಪಲೆ ಮತ್ತು ತುಂಟ ಪೋರರು

೧

ಮದುವೆ ಛತ್ರದ ನೀರು ತುಂಬಿಟ್ಟಿರುವ ಕೊಳದಪ್ಪಲೆಗೆ
ದೊಡ್ಡವರ ಕಣ್ಣು ತಪ್ಪಿಸಿ,
ಗುಂಪುಗೂಡಿದ ಹುಚ್ಚು ಪೋರರು
ಕಲ್ಲುಚೂರುಗಳನೆಸೆದು ನಡೆಸಿದ್ದಾರೆ
ಮೋಜು, ಕುಚೋದ್ಯಗಾರರು.
ಸ್ತಬ್ಧ ಪ್ರಶಾಂತ ಜಲ
ಒಮ್ಮೆಲೇ ಕಲಕಿ ತಳಮಳಿಸಿ
ಕಳೆದುಕೊಂಡು ಸಮತ್ವ ಹೌಹಾರಿ ಕಳವಳಿಸಿ
ಚೆಲ್ಲತೊಡಗಿದೆ ಕುಲುಕಿ ಅತ್ತ ಇತ್ತ
ಮರಿ ಈಜುಕೊಳವನ್ನು ಅಣಕಿಸುತ್ತ.

ಒಂದಿಷ್ಟು ಜಲ ವಿಹ್ವಲಿಸಿ ತಪ್ಪಲೆಯ ಗಡಿ ತೊರೆದು
ಜಗಿದಿರುವುದಾಚೆಗೆ ಗತಿಗೆಟ್ಟು ಹರಿದು.
ಮತ್ತೊಂದಷ್ಟು ವಿರಳ ಸಂಖ್ಯೆಯ ನೀರು ದೂರಕೆ ಸಿಡಿದು
ಬದಿಯ ಮಣ್ಣಿನ ರಾಶಿಯೊಳಗಿಳಿದು
ಭಯಭೀತವಾದಂತೆ, ಅತ್ಯಂತ ತ್ವರಿತ
ಆಗಿಹುದು ಭೂಮಿಗತ.
ಮಿಕ್ಕ ಹನಿಗಳಂಟಿಕೊಂಡಿವೆ ಒಳಗೆ, ಪಾರ್ಶ್ವಗಳಿಗೆ—
ತಪ್ಪಲೆಗೆ ಹೇಳದೆ ಪೂರ್ತಿ ವಿದಾಯ;
ತ್ರಿಶಂಕುವಿನ ಹಾಗೆ ಸದಾ ನಿಸ್ಸಹಾಯ.

೨

ಸದರಿ ಬಿಂದುಗಳು ಒಟ್ಟು ಜಲದಿಂದ ಪರಿತ್ಯಕ್ತಗೊಂಡು
ಸಂಬಂಧವನು ಚುಕ್ತಗೊಳಿಸಿ ಮುಕ್ತವಾದಂತೆ ಕಂಡು
ಅನತಿ ದೂರದಲಿ ನೆರೆದಿವೆ ನಿಜ—
ಆದರವು ತ್ಯಜಿಸಿ ತಪ್ಪಲೆಯ ಜಲ ಸಮಸ್ತವನು,
ಹೊರ ನೆಗೆದು ಗಡೀಪಾರಾದ ಮೊತ್ತವನು
ಕೂಡಿಕೊಳ್ಳಲು ಹಾತೊರೆದು ಹವಣಿಸದೆ
ಪಾತ್ರೆ ಪರಿಧಿಗೇ ಕಚ್ಚಿಕೊಂಡಿವೆ;

ಗುಪ್ತ ಹುನ್ನಾರಗಳ ಚಿತಾವಣೆಸದೆ,
ಎಂದೆಂದಿಗೂ ಅದನೆ ನೆಚ್ಚಿಕೊಂಡಿವೆ—
ಊರುಗೋಲನಾಶ್ರಯಿಸಿರುವ ಕುಂಟರಂತೆ;
ಉಳ್ಳವರ ಮನೆಯ ಕಂಗಾಲ ನಂಟರಂತೆ.

೩

ಗಮನಿಸುತ ಈ ಎಲ್ಲ ವಿದ್ಯಮಾನಗಳ
ಕಲ್ಪಿಸುತ ಇಲ್ಲಸಲ್ಲದ ಕಾರಸ್ಥಾನಗಳ
ತಪ್ಪಲೆಯ ಜಲದಿಂದ ಹನಿಗಳೆಂದೆಂದಿಗೂ ಹೊರಗೇ,
ಪ್ರತ್ಯೇಕತೆಯ ಹೊಂಚುತಿವೆ
ಹೂಡಿ ಸಂಚನು ಪ್ರತಿ ಗಳಿಗೆ ತೆರೆ ಮರೆಗೆ
ಎಂದೆನುವ ಅವಸರದ ಗುಮಾನಿ ಧೂಪವ ಹಚ್ಚಿ
ಕುಪ್ರಚಾರದೂಹಾಪೋಹದ ಪಿಶಾಚವನು ಬಿಚ್ಚಿ
ಹುಚ್ಚು ಕುಣಿತದುದ್ವೇಗಕ್ಕೆ ಹಚ್ಚಿ
ಸೊಗ ಸವಿವ ಅನ್ಯಾಯ, ಹೊಲ್ಲತನ ಹುಟ್ಟಳಿದು
ನಿಜ ಸ್ಥಿತಿಯನರಿತು ಅದ ಸುತ್ತ ಸಾರುವ
ತಾಳ್ಮೆ, ಸಂಯಮ ಬೆಳೆದು
ಮತಿ ತೊಳಗಬೇಕು ಸುವಿವೇಕವನು ತಳೆದು—

೪

ಕಲ್ಲೋಲ ಜಲ ತಿಳಿದು ಸಮರಸದ ಸ್ಥಿತಿಗೆ ಮರಳುವುದು
ಬೇರ್ಪಟ್ಟ ಬಿಂದುಗಳು ಮುಂದೊಮ್ಮೆ ಬಳಿ ಸಾರಿ
ಮೂಲದವಿಭಾಜ್ಯ ಭಾಗಗಳಾಗಿ ಜೊತೆ ಸೇರಿ
ಸ್ವಾಸ್ಥ್ಯ, ನೆಮ್ಮದಿ ನೆಲಸಬಹುದೆಂಬ ವಿಶ್ವಾಸ ಬೇರಿಳಿಸಿ,
ನಚ್ಚು, ನಂಬಿಕೆಯ ನನೆ ಕಣ್ ಕೋರೈಸಬೇಕು ನಳನಳಿಸಿ.
ಸಹನೆಯಲಿ ಸಾಗುತ್ತ ಒಳಿತಿನೆತ್ತರದ ಹಂತಕ್ಕೆ
ಹಾರೈಸುತಿರಬೇಕು ನಿತ್ಯ ಶುಭದಂತ್ಯಕ್ಕೆ.

★ ★ ★

(ಕವನ ಸಂಕಲನ: 'ಅರವತ್ತೈದರ ಐಸಿರಿ')



'ತುಂಬಿದ ತಪ್ಪಲೆ ಮತ್ತು ತುಂಟ ಪೋರರು':

ಅಲ್ಪಸಂಖ್ಯಾತರ ಅತಂತ್ರ ಅಸ್ತಿತ್ವದ ಆತ್ಮಕಥನ

♦ ಪ್ರೊ. ಚಂದ್ರಶೇಖರ ತಾಳ್ಯ

ನಮ್ಮ ಪ್ರೀತಿಯ ಕವಿ ನಿಸಾರ್ ಅಹಮದ್ ನನ್ನ ಮಟ್ಟಿಗೆ ಕನ್ನಡ ಕಾವ್ಯದ ದೊಡ್ಡ ಸಂಕೇತ. ಅದನ್ನು ಅರ್ಥೈಸಿದಂತೆಲ್ಲಾ ವಿಸ್ತರಿಸಿ ಕೊಳ್ಳುತ್ತದೆ. ಹೊಸ ಆಯಾಮಗಳನ್ನು ತೆರೆದು ತೋರುತ್ತದೆ. ಅವರ ಹೆಸರು ಮುಸ್ಲಿಂ ಆದರೂ ಸಂವೇದನೆಯಂತೂ ಪೂರ್ಣ ಪ್ರಮಾಣದಲ್ಲಿ ಕನ್ನಡದ್ದೇ. ಕನ್ನಡ ಕಾವ್ಯ ಕಂಡ ಅಪರೂಪದ ವ್ಯಕ್ತಿತ್ವ ಈ ಕವಿಯದು. ಕನ್ನಡ ಸಂಸ್ಕೃತಿಯ ಬೇರುಗಳಿಗೆ ಇಳಿದು ಮೇಲೆ ಪಲ್ಲವಿಸಿದ ಅವರ ಚಿಂತನೆ ಬೆರಗು ಹುಟ್ಟಿಸುವಂಥದು. ಈ ನಾಡಿನ ತರು, ಲತೆ, ಅರಣ್ಯ, ಮಣ್ಣು, ನದಿ, ಆಕಾಶ, ಗಾಳಿ, ಬೆಂಕಿ ಯಾವುದೂ ಈ ಕವಿಯಿಂದ ಹೊರಗಿಲ್ಲ. ಹೊರಗಿನಿಂದ ಯಾವ ಮಾತೂ ಬರದೆ ಅಂತಃಸೆಲೆ ಯಾಗಿ ಚಿಮ್ಮುವ ಅವರ ಚೈತನ್ಯಕ್ಕೆ ಯಾರಾದರೂ ಶರಣು ಹೊಡೆಯಲೇಬೇಕು. ಅವರ ಕೃಷ್ಣನ ಬಗೆಗಿನ ರಚನೆ, ಅವರ ಕನ್ನಡ ನಾಡನ್ನು ಕುರಿತ ಗೀತೆ, ಪ್ರೇಮ ಕವಿತೆಗಳು, ಸಾಮಾಜಿಕ ಕವಿತೆಗಳು, ವಿಡಂಬನಾತ್ಮಕ ಕವಿತೆಗಳು—ಯಾವುದನ್ನು ಪರಿಗಣಿಸಿದರೂ ಅವುಗಳಲ್ಲಿ ಕನ್ನಡದ್ದೇ ರಕ್ತವನ್ನು ನಾವು ಕಾಣಬಲ್ಲೆವು. ಅನ್ಯಧರ್ಮವೊಂದರಲ್ಲಿ ಹುಟ್ಟಿ ಮತ್ತೊಂದು ಸಂಸ್ಕೃತಿಯಲ್ಲಿ ಬೆಳೆಯುವ ಯಾವುದೇ ಸೃಜನಶೀಲ ಮನಸ್ಸಿಗೆ ಒಂದು ರೀತಿಯ ತಲ್ಲಣ, ತಳಮಳ ವೈಯಕ್ತಿಕ ನೆಲೆಯಲ್ಲಿ ಇದ್ದೇ ಇರುತ್ತದೆ. ಆದರೆ ನಿಸಾರರಿಗೆ ಆ ರೀತಿಯ ಗಾಢ ತಳಮಳಗಳಿಲ್ಲ, ಹೆದರಿಕೆ ಭಯಗಳಿಲ್ಲ. ತನ್ನೊಳಗೆ

ಅನುಮಾನಗಳ ಮೊಟ್ಟೆಯಿಟ್ಟುಕೊಂಡವನಿಗೆ ಮಾತ್ರ ಈ ಭಯ, ತಲ್ಲಣಗಳಿರುತ್ತವೆ ಎಂಬುದು ಈ ಲೇಖಕನ ಗಾಢ ನಂಬಿಕೆ. ಸಮ ಚಿತ್ತ ಇರುವವನಿಗೆ, ಕಲ್ಮಶವಿಲ್ಲದವನಿಗೆ ಇಂಥ ಭಯದ ಹಂಗು ಇರಲಾರದು. ನಿಸಾರ್ ಹಾಗೆ ಕನ್ನಡ ಬದುಕಿನ ಜೊತೆ ಒಂದಾಗಿ ಬದುಕಿದ್ದಾರೆ. ಹಾಗೆ ಬದುಕಿ ಬೇರೆ ಕನ್ನಡ ಕವಿಗಳ ರೀತಿಯಲ್ಲೇ ತಮ್ಮ ಅಭಿವ್ಯಕ್ತಿಯನ್ನು ಸಾಧಿಸಿದ್ದಾರೆ. ಪರಕೀಯತೆ ಮಾನವ ಕುಲದ ಅಸ್ತಿತ್ವದ ಶಂಕೆಯಲ್ಲಿ ಅವರನ್ನು ಕಾಡಿದೆಯೇ ಹೊರತು ಇಡಿಯಾಗಿ ಪರಧರ್ಮೀಯನೊಬ್ಬನಿಗೆ ಕಾಡಿದಂತೆ ಕಾಡಿಯೇ ಇಲ್ಲ. ಹಾಗೆ ಕಾಡಿದರೂ ಒಬ್ಬ ಜನಪರ ಕವಿಯಾದವನಿಗೆ ಇರುವ ಕಾಳಜಿಯ ರೀತಿಯಲ್ಲಿ ಮಾತ್ರ ಅದು ನಿಜವೆನಿಸುತ್ತದೆ. ಹಾಗಾಗಿ ಅವರು ಬೇರೆಲ್ಲ ಕನ್ನಡ ಕವಿಗಳಂತೆಯೇ ಈ ನೆಲದ ನಿಜವಾದ ವಾಸನೆಯನ್ನು ಗ್ರಹಿಸಿದ್ದಾರೆ. ಅದರ ಅನುಭವಗಳನ್ನೇ ತಮ್ಮ ಕವಿತೆಯೆಂಬ ಮಾಧ್ಯಮದ ಮೂಲಕ ದಾಖಲಿಸಿದ್ದಾರೆ.

ಅಚ್ಚರಿಯ ಕವಿ ನಮ್ಮ ನಿಸಾರ್, ಅವರು ತಮ್ಮ ಕಾವ್ಯೋದ್ಯೋಗದಲ್ಲಿ ಬಳಸುವ ನಿಸರ್ಗ ಪ್ರತಿಮೆಗಳೋ, ಪ್ರಾಣಿ ಪ್ರತಿಮೆಗಳೋ, ವ್ಯಕ್ತಿ ಪ್ರತಿಮೆಗಳೋ ಯಾವುದೇ ಆಗಲಿ ಈ ನೆಲದ ಕಸುವಿನಿಂದಲೇ ಹೊಮ್ಮಿದಂಥವು. ಬೇರೆ ಬರಲು ಸಾಧ್ಯವೂ ಇಲ್ಲ ಅಲ್ಲವೇ? ಯಾಕೆಂದರೆ ಯಾವ ಜೀವ ಎಲ್ಲಿ ಹುಟ್ಟಿ ತನ್ನ ಬಾಳನ್ನು ರೂಪಿಸಿಕೊಳ್ಳುತ್ತದೆಯೋ ಅಲ್ಲಿನದೇ ಪರಿಕರಗಳನ್ನು ಬಳಸಿಯೇ ಅದು ಮಾತಾಡಬೇಕು. ಮಾತಿಗೆ ಬೇರೆ ವಸ್ತು ಪ್ರತಿರೂಪಗಳು ಸಿಕ್ಕುವುದೇ ಇಲ್ಲ. ಧರ್ಮಗಳು ಬೇರೆ ಬೇರೆ ಇದ್ದಾವು. ಆದರೆ ಸಾರ್ವತ್ರಿಕವಾದ ಬದುಕಿನ ಆತ್ಮ ಒಂದೇ ರೀತಿಯಲ್ಲಿರುತ್ತದೆ. ಈ ಅರ್ಥದಲ್ಲಿ ಯಾವ ಧರ್ಮವೂ ನಿರಪೇಕ್ಷವಲ್ಲ. ಹಾಗಾಗಿ ಅದು ಕೋಟೆ ಕಟ್ಟಿಕೊಳ್ಳಲು ಸಾಧ್ಯವೇ ಇಲ್ಲ. ಇದು ಬದುಕಿನ ದೊಡ್ಡ ರಾಜಕೀಯ. ಉಸಿರು ಉಸಿರಿಗೆ ಬೆರೆಯುತ್ತಲೇ ಅದರ ಸೊಗಡಿನ ಮರ್ಮ ತಿಳಿಯುತ್ತಾ ಕೊಡು ಕೊಳ್ಳುವ ಆಟ ಆಡುವುದು ಬದುಕಿಗೆ ಅನಿವಾರ್ಯವೂ ಹೌದು, ಸಹಜವೂ ಹೌದು. ನಿಕ್ಕಿ ಹೇಳಬೇಕೆಂದರೆ ಸಾಪೇಕ್ಷದಲ್ಲೇ ಅದರ ಪರಮ ಗಂತವ್ಯ ಅಡಗಿರುವುದು. ನಿಸಾರ್ ಹೀಗೆ ಬದುಕುತ್ತಿರುವ ಸಹಜ ಕವಿ. ನನಗೆ ನಿಸಾರ್ ಹೇಗೆ ಕಾಣಿಸುತ್ತಾರೆಂದರೆ—ನನಗೊಬ್ಬ ಮುಸ್ಲಿಂ ಗೆಳೆಯನಿದ್ದ. ಉತ್ತರ ಕರ್ನಾಟಕದ ಭಾಗದಲ್ಲಿ ನಾನು ಕೂಲಿ ಕೆಲಸ ಮಾಡಲು ಹೋಗಿದ್ದಾಗ ಅವನೂ ನನ್ನೊಟ್ಟಿಗೆ ಕೂಲಿ ಕೆಲಸಕ್ಕೆ ಬರುತ್ತಿದ್ದ. ಅವನ ಹೆಸರನ್ನು ನಾನೀಗ ಮರೆತಿರುವೆ. ನಲವತ್ತು ವರ್ಷಗಳ ಹಿಂದಿನ ನೆನಪು ಇದು. ಹಾಗೆ ಕೂಲಿಗೆ ಬರುವಾಗ ಒಮ್ಮೊಮ್ಮೆ ತನ್ನ ಬುತ್ತಿಯಲ್ಲಿ ಹುಗ್ಗಿ ಇತ್ಯಾದಿ ಸಿಹಿಯನ್ನು ತಂದು ನನಗೆ ಕೊಡುತ್ತಿದ್ದ. 'ಯಾಕೆ ಸಿಹಿ ಇವತ್ತು ನಿಮ್ಮ ಮನೆಯಲ್ಲಿ?' ಎಂದರೆ ಅವನು, ಯಾವುದೋ ಹಿಂದೂ ಹಬ್ಬದ, ಹರಿದಿನದ ಹೆಸರು ಹೇಳಿ ಅದಕ್ಕೆ ಸೀಪರು ಮಾಡಿದ್ದರು ಅನ್ನುತ್ತಿದ್ದ. ನನಗೆ ಈ ಮುಸಲ್ಮಾನನ ಮನೆಯಲ್ಲಿ ಹಿಂದೂ ಹಬ್ಬಗಳ ಆಚರಣೆಯೇ? ಎಂದು ತಬ್ಬಿಬ್ಬಾಗುತ್ತಿತ್ತು. ಅವನು ಅತ್ಯಂತ ಸಹಜವಾಗಿ ಹೇಳುತ್ತಿದ್ದ ಮಾತುಗಳು ನನ್ನನ್ನು ಗೊಂದಲಕ್ಕೆ ಕೆಡವುತ್ತಿದ್ದವು. ಅವನಲ್ಲಿ ಎಳ್ಳಷ್ಟೂ ಮುಸ್ಲಿಂತನವನ್ನು ಕಾಣುವುದು ನನ್ನ ಮಟ್ಟಿಗೆ ನನಗೇ ದ್ರೋಹ ಮಾಡಿಕೊಂಡಂತೆ ಅನ್ನಿಸುತ್ತಿತ್ತು—ಹಾಗೆ ನನಗೆ ನಿಸಾರ್ ಕಾಣಿಸುತ್ತಾರೆ. ನಮಾಜು ಮಾಡದ, ಅಲ್ಲಾಹುವನ್ನು

ನೆನೆಯದ, ಆದರೆ ಅತ್ಯುತ್ತಮ ಗುಣದ ಮುಸ್ಲಿಂ ಸ್ನೇಹಿತರೂ ನನಗಿದ್ದಾರೆ. ಈ ನೆಲದ ಸೋಜಿಗ ಇದು ಎಂದೇ ನಾನು ಭಾವಿಸಿರುವೆ. ಇರಲಿ. ನಿಸಾರ್ ಅತ್ಯುತ್ತಮ ಕವಿಯಾಗಿರುವುದಕ್ಕೆ ಈ ತೆರನಾದ ಸಂವೇದನೆಯೇ ಮುಖ್ಯ ಕಾರಣ ಎಂದು ಬಲವಾಗಿ ನಾನು ನಂಬಿರುವೆ.

ಅವರ ಕವಿತೆಗಳಲ್ಲಿ ಮುಸ್ಲಿಂ ಸಂವೇದನೆ ಕಡಿಮೆ ಎಂದೆ. ಆದರೆ ನಮ್ಮೊಳಗೇ ಚಿಕ್ಕಂದಿನಿಂದ ರೂಪಿಸಿದ ಧರ್ಮವೊಂದರ ಸೆಳಕು ಯಾರಿಗಾದರೂ ಇಲ್ಲದಿದ್ದರೆ ಅವನು ಅಪ್ರಾಮಾಣಿಕ. ನಾನು ಮೇಲೆ ಮಂಡಿಸಿದ ಪ್ರಮೇಯಕ್ಕೇನೂ ಈ ಮಾತುಗಳು ಧಕ್ಕೆ ತರಲಾರವು. ಹಾಗೆ ಹೇಳಿದ್ದರ ಅರ್ಥವಿಷ್ಟೆ: ತೊಂಬತ್ತು ಭಾಗ ದೇಸೀ ಸಂವೇದನೆಯನ್ನೂ ಉಳಿದ ಹತ್ತು ಭಾಗ ತನ್ನ ಆಳದ ಸಂವೇದನೆಯನ್ನೂ ಒಬ್ಬ ವ್ಯಕ್ತಿಯಲ್ಲಿ ಕಂಡಾಗ ಅವನೊಬ್ಬ ಆರೋಗ್ಯಪೂರ್ಣ ವ್ಯಕ್ತಿಯೆಂದೇ ನಾವು ಭಾವಿಸಬೇಕು. ಅವೆರಡೂ ಬೆರೆತ ಹದದಲ್ಲಿ ಹೊಮ್ಮುವ ಫಲಿತಗಳು ಅತ್ಯುತ್ಕೃಷ್ಟವಾಗಿ ಇರಬಲ್ಲವು—ನಿಸಾರ್ ಈ ರೀತಿ ಹದಗೊಂಡ ಕವಿ.

ಇಷ್ಟು ಮಾತುಗಳನ್ನು ನಾನು ಹೇಳುವುದಕ್ಕೆ ಕಾರಣಗಳಿವೆ. ಅವರ 'ತುಂಬಿದ ತಪ್ಪಲೆ ಮತ್ತು ತುಂಟ ಪೋರರು' ಎಂಬ ಕವಿತೆಯನ್ನು ವಿಶ್ಲೇಷಿಸಲು ಹೊರಟಾಗ ಕಾರಣ ಸಹಿತವಾಗಿಯೇ ನನ್ನ ಈ ಮೇಲಿನ ಮಾತುಗಳು ಬಂದಿವೆ. ಈ ಕವಿತೆ ಅತ್ಯಂತ ಸಾಂಕೇತಿಕವಾದ ಕವಿತೆ. ಮೇಲ್ನೋಟಕ್ಕೆ ಅದೊಂದು ಮದುವೆ ಮನೆಯಲ್ಲಿ ತುಂಟ ಹುಡುಗರು ಮಾಡುವ ಗಲಾಟೆಯ ವರ್ಣನೆ ಅಷ್ಟೆ. ವಾಚ್ಯಾರ್ಥದಲ್ಲೇ ನಿಂತರೆ ಇದಕ್ಕಿಂತ ಹೆಚ್ಚು ಇಲ್ಲಿ ಏನೂ ಇಲ್ಲ. ಆದರೆ ಅದು ಸಂಕೇತಾರ್ಥಗಳಲ್ಲಿ ಅನೇಕ ಪದರುಗಳನ್ನು ಬಿಚ್ಚಿಕೊಳ್ಳುತ್ತಾ ಹೋಗುವ ಕವಿತೆ. ದೇಶ ವಿಭಜನೆಯ ಮತ್ತು ಅನಂತರದ ಕಾಲದಲ್ಲಿ ಹಿಂದೂ ಮುಸ್ಲಿಂ ಜನರ ನಡುವೆ ನಡೆದ ಗಲಭೆ ಹಿಂಸೆಗಳನ್ನು ಕುರಿತದ್ದು. ಆದರೆ ಈ ಕವಿತೆಯಲ್ಲಿ ಹಾಗೆ ಸೂಚನೆ ನೀಡುವ ಯಾವುದೇ ಶಬ್ದ ಉದ್ದೇಶಪೂರ್ವಕವಾಗಿ ಬಳಕೆಯಾಗಿಲ್ಲ. ಹಾಗಾದರೆ ಇದು ಈ ರೀತಿಯ ವಸ್ತು ಉಳ್ಳದ್ದು ಎಂದು ನಾವು ಪತ್ತೆ ಹಚ್ಚುವುದು ಹೇಗೆ? ಮುಸ್ಲಿಂ ಸಂವೇದನೆಯ ವಸ್ತುವುಳ್ಳ ಕವಿತೆಗಳನ್ನು ನಿಸಾರ್ ಬರೆದಿರುವುದೇ ಕ್ವಚಿತ್ತಾಗಿ. 'ನಾನೆಂಬ ಪರಕೀಯ', 'ಸವತಿ ಮಕ್ಕಳ ಹಾಗೆ', 'ರಂಗೋಲಿ ಮತ್ತು ಮಗ', 'ಅಮ್ಮ ಆಚಾರ ಮತ್ತು ನಾನು' ಇಂಥ ಕೆಲವು ಪದ್ಯಗಳನ್ನು ಬಿಟ್ಟರೆ ಈ ಕವಿತೆಯಲ್ಲಿ ಮಾತ್ರ ಹಿಂದೂ ಮುಸ್ಲಿಂ ಸಂಘರ್ಷದ ವಸ್ತುವನ್ನು ಸೂಚ್ಯವಾಗಿ ಕಾಣುತ್ತೇವೆ. ಆ ಕಾರಣಕ್ಕಾಗಿಯೇ 'ತುಂಬಿದ ತಪ್ಪಲೆ...' ಕವಿತೆಯನ್ನು ಸೂಕ್ಷ್ಮ ಓದಿಗೆ ಒಳಪಡಿಸಿಯೇ ವಾಚಿಸಬೇಕಾಗುತ್ತದೆ.

ಮೊದಲೇ ನಾನು ಹೇಳಿದಂತೆ, ಈ ಕವಿತೆ ಪ್ರಾರಂಭವಾಗುವುದೇ ಮದುವೆ ಮನೆಯಲ್ಲಿ ತುಂಟ ಹುಡುಗರು ತಪ್ಪಲೆಯಲ್ಲಿ ತುಂಬಿದ ನೀರಿನ ಜೊತೆ ಆಡುವ ಹುಡುಗಾಟದೊಂದಿಗೆ. ತುಂಬಿದ ತಪ್ಪಲೆಯನ್ನು ಅವರು ಆಕ್ರಮಿಸಿಕೊಂಡಾಗ ಅದರಲ್ಲಿದ್ದ ನೀರು ಹೊರಚೆಲ್ಲುತ್ತದೆ. ಅದೊಂದು ಮರಿ ಈಜುಕೊಳವೆಂದೇ ಭಾವಿಸಿ ಅವರಲ್ಲಿ ಸ್ಪರ್ಧೆಗಿಳಿದಂತೆ ನೀರಿನ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಆಗ ತಪ್ಪಲೆಯ ಪಾರ್ಶ್ವಕ್ಕೆ ಅಂಟಿದ ಸ್ವಲ್ಪ

ಹನಿಗಳಿವೆ. ಅವು ತ್ರಿಶಂಕುವಿನ ಹಾಗೆ ಅತಂತ್ರ. ಕೆಲವು ಹನಿಗಳು ಹೊರಗೆ ಚೆಲ್ಲಿ ಭೂಮಿಯಲ್ಲಿ ಇಂಗಿ ಹೋಗಿವೆ. ಇಂಗಿ ಹೋದ ಹನಿಗಳ ಬಗ್ಗೆ ಕವಿಗೆ ಅಷ್ಟೊಂದು ಕಾಳಜಿ ಇಲ್ಲ. ಅದು ಆಗಿ ಹೋದದ್ದು. ಆದರೆ ಪಾರ್ಶ್ವಕ್ಕೆ ಅಂಟಿಕೊಂಡಿರುವ ಈ ಹನಿಗಳದ್ದು ಕಾರುಣ್ಯಮಯ ಸ್ಥಿತಿ. ಅವು ವಾಪಸ್ಸು ತಪ್ಪಲೆಯಲ್ಲಿರುವ ನೀರಿನ ಜೊತೆ ಸಲೀಸಾಗಿ ಬೆರೆಯಲಾರವು. ಆದರೆ ಬೆರೆಯುವ ಆಸೆಯನ್ನು ಸಂಪೂರ್ಣವಾಗಿ ತ್ಯಜಿಸಲೂ ಆರವು. ಆದರೆ ತಪ್ಪಲೆಯಿಂದ ಸಿಡಿದು ಹೋಗಿರುವ ಹನಿಗಳದ್ದೇ ದೊಡ್ಡ ರಾಮಾಯಣ. ಅವು ಎಂದೂ ಮೂಲ ಜಲದೊಂದಿಗೆ ಬೆರೆಯಲಾರವು. ಬೆರೆಯುವ ಇಚ್ಛೆಯನ್ನೂ ಹೊಂದಿರದವು. ಪಾರ್ಶ್ವದ ಹನಿಗಳ ಸಂಕಟವನ್ನು ಗುಮಾನಿಯಿಂದಲೇ ಗಮನಿಸುತ್ತಾ ಕಾರಸ್ಥಾನಗಳನ್ನು ರಚಿಸುವಂಥವು. ಪ್ರತಿ ಸಂಚುಗಳನ್ನು ಹೂಡುವಂಥವು. ಇದೆಲ್ಲ ತೆರಮರೆಯ ಆಟ. ಕವಿಗೆ ಒಲವಿರುವುದು ಈ ಪಾರ್ಶ್ವಕ್ಕೆ ಅಂಟಿಕೊಂಡ ಹನಿಗಳ ಮೇಲೆಯೇ. ಅದಕ್ಕಾಗಿ ಕಾರಸ್ಥಾನ ರಚಿಸುತ್ತಿರುವ ಈ ಹನಿಗಳ ಕ್ರಿಯೆಯನ್ನು ಎಚ್ಚರಿಕೆಯಿಂದ ಗಮನಿಸುತ್ತಾ ಒಂದು ರೀತಿಯ ವಿಷಾದದ, ಆದರೆ ಆಶಾಪೂರ್ಣವಾದ ಭಾವವನ್ನು ತಳೆದಿದ್ದಾನೆ. ಇದು ಈ ಕವಿತೆಯ ವಾಚ್ಯಾರ್ಥ. ಈ ವಾಚ್ಯಾರ್ಥದಲ್ಲಿ ಅಂಥ ವಿಶೇಷವೇನೂ ಇಲ್ಲ. ಆದರೆ ಇಲ್ಲಿ ಬಳಕೆಯಾಗಿರುವ 'ತಪ್ಪಲೆಯ ಗಡಿ', 'ವಿರಳ ಸಂಖ್ಯೆ', 'ಗಡೀಪಾರು', 'ಕಾರಸ್ಥಾನ', 'ಸಂಚು', 'ಮತಿ ತೊಳಗಬೇಕು', 'ಕಲ್ಲೋಲ ಜಲ'—ಇತ್ಯಾದಿ ಕ್ರಿಯಾ ಪ್ರತಿಮೆಗಳನ್ನು ಗಮನಿಸಿದಾಗ ಇದು ಬರೀ ನೀರು ತಪ್ಪಲೆ, ತುಂಟ ಹುಡುಗರ ಆಟವಷ್ಟೇ ಅಲ್ಲ. ಇದಕ್ಕೆ ಬೇರೇನೋ ಒಂದು ಆಯಾಮ ಇರಬಹುದು ಎಂದು ಅನ್ನಿಸತೊಡಗುತ್ತದೆ. ಹಾಗೆ, ಈ ಕವಿತೆಯನ್ನು ಬಗೆಯುತ್ತಾ ಹೋದಂತೆ, ಇದನ್ನು ಬರೆದ ಕವಿಯ ತಳಮಳ ಅರ್ಥವಾಗುತ್ತದೆ, ಜೊತೆಗೆ ಕವಿತೆಯ ಆಶಯವೂ ಬಿಚ್ಚಿಕೊಳ್ಳುತ್ತದೆ.

ಮದುವೆ ಎಂಬ ಸಂಸ್ಥೆ ಇಡೀ ಭಾರತೀಯ ಸಂಪ್ರದಾಯಗಳಲ್ಲೇ ಸಂಭ್ರಮವನ್ನು ಪ್ರತಿನಿಧಿಸುವಂಥದು. ಬದುಕಿನ ಬಹು ಮುಖ್ಯ ಘಟ್ಟ ಅದು. ಎಲ್ಲ ಬದುಕೂ ಸಾರ್ಥಕತೆಯನ್ನು ತಲಪುವುದು ಈ ಮದುವೆಯ ಮೂಲಕವೇ. 'ಅರ್ಥೇಚ ಕಾಮೇಚ' ಎಂದು ಮಾಂಗಲ್ಯಧಾರಣೆಯ ಸಂದರ್ಭದಲ್ಲಿ ಹೇಳಲ್ಪಡುವ ಶ್ಲೋಕ ಗಂಡು, ಹೆಣ್ಣು ಎರಡಕ್ಕೂ ಅನ್ವಯಿಸಿ ಬದುಕಿನ ಇಡೀ ಮರ್ಮವನ್ನೇ ಬಿಚ್ಚಿಡುವಂಥದು. ಜವಾಬ್ದಾರಿ ಮತ್ತು ಕಾಮದ ಸಂಭ್ರಮಗಳೆರಡನ್ನೂ ಒಟ್ಟಿಗೆ ತಂದುಕೊಡುವ ಈ ಸಂದರ್ಭವನ್ನೇ ಕವಿ ಸಂದರ್ಭವಾಗಿಟ್ಟುಕೊಂಡು ಈ ಕವಿತೆಯನ್ನು ಪ್ರಾರಂಭಿಸುತ್ತಾರೆ. ಮದುವೆಯ ಸಂದರ್ಭ ದೊಡ್ಡವರಿಂದ ಚಿಕ್ಕವರವರೆಗೂ ಯಾವುದೇ ನಿರ್ಬಂಧವಿಲ್ಲದ ಸ್ವಾತಂತ್ರ್ಯದ ಸಂದರ್ಭವೂ ಹೌದು. ಅದರಲ್ಲೂ ಮಕ್ಕಳಂತೂ ಮೇರೆ ಮೀರಿ ಕುಣಿಯುವ, ಚೀರುವ ಕಾಲ. ಹಾಗಾಗಿ ಮದುವೆ ಮನೆಯಲ್ಲಿ ಕಾವಲು ಕಾಯುವುದು ಕಡಿಮೆಯೇ. ಮಕ್ಕಳಿಗೆ ಈ ಸಮಯ ಎಲ್ಲ ದೃಷ್ಟಿಯಿಂದಲೂ ಸಂತಸದ ಸಮಯವೇ. 'ದೊಡ್ಡವರ ಕಣ್ಣು ತಪ್ಪಿಸಿ' ಅವರು ಏನು ಬೇಕಾದರೂ ಮಾಡಬಲ್ಲರು. ಅನಾಹುತವನ್ನೂ ಕೂಡ. ಮದುವೆಯ ಈ ಸಂಭ್ರಮವನ್ನು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಸಂಭ್ರಮಕ್ಕೆ ಸಮೀಕರಿಸಬಹುದು. ಹಾಗೆ ಇಲ್ಲಿ ಸಮೀಕರಿಸಲಾಗಿದೆ. 'ಛತ್ರ' ನಮ್ಮ ದೇಶ ನಾಮದ ಪ್ರತೀಕವಾಗಬಲ್ಲದು. ಗದ್ದಲ

ಗಲಾಟೆಗಳ ಪ್ರತೀಕವೂ ಹೌದು. ಸ್ವಾತಂತ್ರ್ಯ ಸಿಕ್ಕಿ ಹಾಗೂ ಅದರ ಅನಂತರದ ಸಂದರ್ಭಗಳಲ್ಲಿ ನಡೆದ ಗಲಭೆ ಹಿಂಸಾಚಾರಗಳನ್ನು ಈ ತುಂಟ ಹುಡುಗರ ನೀರಾಟದ ಗಲಾಟೆಯ ಮೂಲಕ ಪ್ರತಿನಿಧಿಸಲಾಗಿದೆ. ಇಡೀ ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾದ ಸಡಗರದಲ್ಲಿ ಎಲ್ಲರೂ ತಲ್ಲೀನರಾಗಿರುವಾಗ ಪಾಕ್ ವಿಭಜನೆಯ ಅತ್ಯಂತ ವೇದನಾಮಯ ಘಟನೆಯೂ ಜರುಗುತ್ತಿತ್ತು. ಅಲ್ಲಿ ಬೇರ್ಪಟ್ಟ ಜನರ ನೋವು ಹತಾಶೆ ಸಿಟ್ಟು ಎಲ್ಲವೂ ಹಿಂಸೆಯ ಸ್ವರೂಪವನ್ನು ಪಡೆದುಕೊಂಡುಬಿಟ್ಟಿದ್ದವು. ಅವರನ್ನು ಸಂಘಟಿಸಲೆಂದೇ ಅನೇಕ ಸಂಘ ಸಂಸ್ಥೆಗಳು ರೂಪುಗೊಂಡಿದ್ದವು. ಈ ಹಿಂದೂ, ಮುಸ್ಲಿಂ ಸಂಘಟನೆಗಳೆರಡನ್ನೂ ಕವಿ ಬೇರ್ಪಟ್ಟ ಕೆಲವೇ ಹನಿಗಳಿಗೆ ಹೋಲಿಸಿದ್ದಾರೆ. ಇಡೀ ಜಲ(ಜನ)ಸಮೂಹ ತಪ್ಪಲೆಯಲ್ಲಿ ಇದ್ದರೂ ಅದರೊಟ್ಟಿಗೆ ಯಾವ ಸಂಬಂಧವೂ ಇಲ್ಲದಂತೆ ಈ ಬೇರ್ಪಟ್ಟ ಹನಿಗಳ (ಹುಡುಗರ) ಹಿಂಸೆಯ ಚೆಲ್ಲಾಟ ನಡೆದಿರುವುದನ್ನೇ ಮದುವೆ ಎಂಬ ಸ್ವಾತಂತ್ರ್ಯೋತ್ಸವದ ಕಾಲಘಟ್ಟದಲ್ಲಿ ಈ ಹುಚ್ಚು ಹುಡುಗರು ಮಾಡುವ ಗಲಾಟೆಗೆ ಹೋಲಿಸಲಾಗಿದೆ. ಮದುವೆಯೇನೂ ಇದರಿಂದ ನಿಲ್ಲಲಾರದು. ಆದರೆ ಈ ಪೋರರ ಹುಚ್ಚಾಟ ಅಷ್ಟರ ಮಟ್ಟಿಗೆ ಕಪ್ಪು ಅಧ್ಯಾಯವಾಗಿಯೇ ಉಳಿದು ಬಿಡುವ ಸಾಧ್ಯತೆ ಇದೆ. ಅನಂತರದ ತಲೆಮಾರುಗಳಲ್ಲಿ ಅದು ಹಬ್ಬಿ ಇಡೀ ವಾತಾವರಣ ಸುಖಮಯವಾಗಿರಲು ಬಿಡಲಾರದು. 'ಸ್ತಬ್ಧ ಪ್ರಶಾಂತ' ಜಲ ಕಲಕಿ ಸಮತ್ವ ಹಾರಿ ಹೋಗುವ ಕ್ರಿಯೆ ಕವಿತೆಯಲ್ಲಿ ಸೂಚಿತವಾಗಿದೆ. 'ಸ್ತಬ್ಧ ಪ್ರಶಾಂತ' ಜಲ ರೂಪಕ ಶಕ್ತಿಯುಳ್ಳದ್ದು. ಪ್ರಶಾಂತವಾಗಿರುವ ಜಲ ಮೇಲ್ನೋ ನಿಶ್ಚಲ ವಾಗಿಯೇ ಕಾಣುತ್ತದೆ. ಒಳಗೆ ಭೂಮಿಯ ನೆಲೆಯಲ್ಲಿ ಎಷ್ಟೇ ಗುಂಡಿ ಗೊಟರು, ಕಲ್ಲು ಬಂಡೆ, ವಿವಿಧ ಪ್ರಾಣಿಗಳು ಏನಿದ್ದರೂ ಅವು ಜಲದೊಳಗೇ ಮುಚ್ಚಿಕೊಂಡು ಕಣ್ಣಿಗೆ ಕಾಣದಂತಿರುತ್ತವೆ. ಸ್ತಬ್ಧ ಪ್ರಪಂಚವನ್ನು ಕದಡಿದರೆ ಆಗ ಕಾಣುವ ಚಿತ್ರವೇ ಬೇರೆ. ಇಂಡಿಯಾದ ಸಾಮಾಜಿಕ ಸ್ಥಿತಿಗತಿಯೂ ಹೀಗೇ. ಬಹು ಸಂಸ್ಕೃತಿಯ ಈ ನಾಡಿನಲ್ಲಿ ಅನೇಕ ವೈರುಧ್ಯಗಳು ಎದ್ದು ಕಾಣುವಂತಿದ್ದರೂ ಭಾವೈಕ್ಯದ ಒಂದು ಪ್ರಶಾಂತ ಎಳೆ ಅದೆಲ್ಲವನ್ನೂ ಸಮನಾಗಿ ನೋಡುವ ಪಾರಂಪರಿಕ ದೃಷ್ಟಿಯೊಂದನ್ನು ನಮಗೆ ಲಾಗಾಯ್ತಿನಿಂದಲೂ ನೀಡಿಕೊಂಡು ಬಂದಿದೆ. ಹಾಗಾಗಿ ಇಲ್ಲಿ 'ಸಮತ್ವ' ಎಂಬುದು 'ಹೌಹಾರುವ' ಕ್ರಿಯಾ ರೂಪಕ ತುಂಬಾ ಅರ್ಥಪೂರ್ಣವಾದದ್ದು.

ಕವಿತೆ ಪ್ರಾರಂಭದಲ್ಲಿ ಇಂಥ ಒಂದು ನೆಲೆಯನ್ನು ಸ್ಥಾಪಿಸಿಕೊಂಡು ಮುಂದೆ ಮತ್ತೊಂದು ಹಂತಕ್ಕೆ ಬೆಳೆಯುತ್ತದೆ. ಅಂದರೆ, ಅದು ಹುಡುಗರ ಗಲಾಟೆಯಿಂದಾದ ಗೊಂದಲವನ್ನು ವಿವರಿಸುತ್ತದೆ. ಹಿಂಸೆಯಲ್ಲಿ ಸತ್ತವರನ್ನು,

'ವಿರಾಟ್ ಸಂಖ್ಯೆಯ ನೀರು ದೂರಕೆ ಸಿಡಿದು
ಬದಿಯ ಮಣ್ಣಿನ ರಾಶಿಯೊಳಗಿಳಿದು
ಭಯಭೀತವಾದಂತೆ, ಅತ್ಯಂತ ತ್ವರಿತ
ಆಗಿಹುದು ಭೂಮಿಗತ.'

ಈ ಹನಿಗಳ ಇತಿಹಾಸ ಮುಗಿದು ಹೋಗಿದೆ. ಅವುಗಳ ಬಗ್ಗೆ ದಟ್ಟ ವಿಷಾದದ ಹೊರತು ಮತ್ತೇನೂ ಮಾಡುವಂತಿಲ್ಲ. ಆದರೆ ಮುಂದೆ ಪಾರ್ಶ್ವಗಳಿಗೆ ಅಂಟಿಕೊಂಡಂತಿರುವ

ಬಿಂದುಗಳ ಅಸಹಾಯಕತೆಯ ಚಿತ್ರವಿದೆ. ಅವುಗಳ ತ್ರಿಶಂಕು ಸ್ಥಿತಿ ಕಂಗಾಲು ಪಡಿಸುವಂಥದು. ಇತ್ತ ಮೂಲ ಜಲದೊಂದಿಗೂ ಬೆರೆಯಲಾರವು; ಅತ್ತ ಹೊರಕ್ಕೆ ಹೋಗಿಯಾದರೂ ಬದುಕಲಾರವು. ಸಂಸ್ಕೃತಿಯೊಂದರ ಅನಾಥ ಸ್ಥಿತಿ ಇದು. ಆದರೆ ಬದುಕು ಈ ವಿಹ್ವಲತೆಯನ್ನು ಬಯಸುವುದಿಲ್ಲ. ಇವುಗಳಿಂದ ಅಪಾಯವಂತೂ ಇಲ್ಲ. ಆದರೆ ಇವುಗಳ ಹೆಳವತನ, ಪರಾಶ್ರಯದ ಸ್ಥಿತಿ ಚಿಂತಾಜನಕ.

'ಊರುಗೋಲನಾಶ್ರಯಿಸಿರುವ ಕುಂಟರಂತೆ;
ಉಳ್ಳವರ ಮನೆಯ ಕಂಗಾಲ ನಂಟರಂತೆ.'

ಈ ಉಪಮೆಗಳನ್ನು ಗಮನಿಸಬೇಕು. ಅಲ್ಪಸಂಖ್ಯಾತ ಎಂಬ ಹಣೆ ಪಟ್ಟಿ ಕಟ್ಟಿ ಅದು ಯಾವಾಗಲೂ ಭಯಗ್ರಸ್ಥ ಅವಸ್ಥೆಯಲ್ಲೇ ಬದುಕುವಂತೆ ಮಾಡಿದ ಪರಿಸ್ಥಿತಿ, ಸರಕಾರ ಅವುಗಳಿಗೆ, ಅಲ್ಪಸಂಖ್ಯಾತರಿಗೆಂದೇ ಕೊಡುವ ನೆರವು, ರಾಜಕೀಯ ತಂತ್ರಗಳಿಗೆ ಬಲಿಪಶುಗಳಾಗುವ ದುಃಸ್ಥಿತಿ ಇದೆಲ್ಲವನ್ನೂ ಈ ಉಪಮೆಗಳು ಪ್ರತೀಕಿಸುತ್ತವೆ. ಸ್ವತಂತ್ರ ದೇಶದ ಪ್ರಜೆಗಳಾಗಿಯೂ ಕೂಡ ಅವು ಸ್ವತಂತ್ರವಲ್ಲ. ತಮ್ಮ ಪಾಡಿಗೆ ತಾವು ಬದುಕುತ್ತಿದ್ದರೂ ಅವು ಯಾವೊತ್ತಾದರೂ ಯಾರದೋ ಚಿತಾವಣೆಯಿಂದಾಗಿ ಸ್ಫೋಟಗೊಳ್ಳಬಹುದಾದ ಘಟಕಗಳೆಂದೇ ಕವಿಗೆ ಇಲ್ಲಿ ಆತಂಕ ಮೂಡಿದೆ. 'ಗುಪ್ತ ಹುನ್ನಾರಗಳ ಚಿತಾವಣೆಸದೆ' ಎಂಬುದಿದ್ದರೂ ಜಲ ಸಮಸ್ತವನ್ನಾಗಲಿ, ಹೊರ ನೆಗೆದು ಗಡೀಪಾರಾದ ಮೊತ್ತವನ್ನಾಗಲಿ ಅವು ಕೂಡಿಕೊಳ್ಳಲು ಹವಣಿಸುತ್ತಿಲ್ಲ ಎಂಬುದಂತೂ ಇನ್ನಷ್ಟು ಕಂಗೆಡಿಸುವಂಥದು. ಸಂಘಜೀವಿಯಾದ ಮಾನವ, ಸಮಸ್ತವನ್ನೂ ತಬ್ಬಿಕೊಂಡು ಬದುಕಬೇಕು ಎಂಬ ಕವಿಯ ಆಶಯಕ್ಕೇ ಅದು ಧಕ್ಕೆಯೊಡ್ಡಿದೆ. ಪಾತ್ರೆಯ ಪಾರ್ಶ್ವವನ್ನೇ ನೆಚ್ಚಿಕೊಂಡಿರುವ ಅವು ಸುಖವೂ ಇಲ್ಲದೆ, ದುಃಖವೂ ಇಲ್ಲದೆ ತ್ರಿಶಂಕುವಿನಂತೆ ಬದುಕು ತಳ್ಳುವುದು ಎಳ್ಳಷ್ಟೂ ಸಮಂಜಸವಾದದ್ದಲ್ಲ. ಆದರೆ ಅಸಹಾಯಕ ಪರಿಸ್ಥಿತಿಯಲ್ಲಿ ಅವು ಮತ್ತೇನನ್ನೂ ಮಾಡಲಾರವಲ್ಲವೆ?

ಒಂದು ಕಡೆ ಜಲ ಸಮಸ್ತವಿದೆ. ಮತ್ತೊಂದು ಕಡೆ ಪಾತ್ರೆಯಿಂದ ಹೊರ ನೆಗೆದು ಹೋದ ಹನಿಗಳಿವೆ. ನಡುವೆ ಈ ಅತಂತ್ರ ಸ್ಥಿತಿಯ ಹನಿ ಸಮೂಹವಿದೆ. ಈ ಅತಂತ್ರ ಸಮೂಹದ ಬಗೆಗೆ ಕವಿಯಲ್ಲಿ ದಟ್ಟ ವಿಷಾದವಿದೆ. ಹೊರ ನೆಗೆದು ಹೋದ ಹನಿ ಸಮೂಹದ ಬಗೆಗೆ ಭಯ, ತಲ್ಲಣಗಳಿವೆ. ಯಾಕೆಂದರೆ ಹೊರ ನೆಗೆದ ಹನಿಗಳು ಸುಮ್ಮಗಿಲ್ಲ. ಅವು ತಮ್ಮಲ್ಲಿ ಕಾರಸ್ಥಾನವನ್ನು ಕಲ್ಪಿಸುತ್ತಲೇ ಇವೆ. ಸಂಚನ್ನು ಹೂಡುತ್ತಲೇ ಇವೆ. ತೆರೆಮರೆಯ ಈ ಆಟ ಇಡೀ ತಪ್ಪಲೆಯನ್ನೇ ಮುಳುಗಿಸುವಂಥದು. ತಪ್ಪಲೆಯಲ್ಲಿ ನೀರಿರಬೇಕೇ ಹೊರತು ನೀರಿನಲ್ಲಿ ತಪ್ಪಲೆ ಇರಬಾರದಲ್ಲವೆ? ಆದರೆ ಸದ್ಯದ ಸ್ಥಿತಿ ಹಾಗಲ್ಲ. ದೊಡ್ಡವರ ಕಣ್ಣು ತಪ್ಪಿಸಿದ ಈ ಆಟ ಎಲ್ಲಿಗೆ ಮುಟ್ಟುತ್ತದೋ ತಿಳಿಯದು. ಯಾವೊತ್ತೂ ಹಿಂಸೆಯ ನೆರಳಲ್ಲೇ ಬದುಕುವಂಥ ದುರಂತದ ಆಟ ಇದು. ಇದಕ್ಕೆ ಒಂದು ಆಂಟಿ ಥೀಸಿಸ್ ಕೂಡ ಇದ್ದೇ ಇರುತ್ತದೆ. ಇವುಗಳ ಜಗ್ಗಾಟದಲ್ಲಿ ಇಂಥದಕ್ಕೇ ಅಪಾಯ ಕಾಗಿದೆ ಎಂದು ಕರಾರುವಾಕ್ಕಾಗಿ ಹೇಳಲು ಬರುವುದಿಲ್ಲ. ದೇಶವೆಂಬ ಈ ತಪ್ಪಲೆ ಪ್ರಜಾಸತ್ತಾತ್ಮಕ ನೆಲೆಯಲ್ಲಿ ತನ್ನದೇ ಆಕಾರವನ್ನು ಪಡೆದುಕೊಂಡು ತನ್ನ ಅಸ್ತಿತ್ವವನ್ನು ಸುರಕ್ಷಿತವಾಗಿಟ್ಟು

ಕೊಳ್ಳಬೇಕು. ಆದರೆ ಈ ವಿರುದ್ಧ ಸೆಳವುಗಳ ಎಳೆದಾಟದಲ್ಲಿ ಹಾನಿಯಾಗುವುದು ನಡುವೆ ಸಿಕ್ಕ ಅಮಾಯಕರಿಗೇ. ಅದಕ್ಕೆ ನೆರವಾಗುವಂತೆ ಅಪ ಪ್ರಚಾರ, ಕೆಟ್ಟ ಊಹೆಗಳು ಸಕ್ರಿಯಗೊಂಡು ಇಲ್ಲದ ಅಪಾಯಗಳಿಗೆ ದಾರಿ ಮಾಡಿಕೊಟ್ಟೀತು ಎಂಬ ಕಳವಳ ಕವಿತೆಯುದ್ದಕ್ಕೂ ಹಾಸುಹೊಕ್ಕಾಗಿದೆ.

ಸದ್ಯದ ನಮ್ಮ ದೇಶದ ಸ್ಥಿತಿ ಇದನ್ನೇ ಹೇಳುತ್ತಿದೆಯಲ್ಲವೆ? ಕಾಶ್ಮೀರದ ಬಗೆಹರಿಯದ ಸಮಸ್ಯೆ; ಉಗ್ರವಾದಿಗಳ ತಿಳಿವಳಿಕೆಯಿಲ್ಲದ ಅಟ್ಟಹಾಸಗಳು, ಜಮಾತ್, ಆರ್.ಎಸ್.ಎಸ್., ಭಜರಂಗ ದಳ, ವಿಶ್ವ ಹಿಂದೂ ಪರಿಷತ್ತು—ಈ ಎಲ್ಲ ಸಂಘಟನೆಗಳೂ ವಿಧಾಯಕವಾಗಿ ಚಿಂತಿಸದೆ ನಕಾರಾತ್ಮಕ ಕ್ರಿಯೆಗಳನ್ನೇ ನಂಬಿ, ನೆಚ್ಚಿ, ಕ್ರಿಯಾಶಾಲಿಯಾಗಿವೆ. ಇನ್ನಿಲ್ಲದಂತೆ ಅವಕ್ಕೆ ಬಲ ಬಂದೊದಗಿದ ಸಂದರ್ಭ ಅತ್ಯಂತ ಕ್ರೌರ್ಯಮಯವೂ, ಹೇಯವೂ ಆಗಿರುತ್ತದೆ. ದೇಶದಲ್ಲಿ ಪದೇ ಪದೇ ನಡೆಯುವ ಕೋಮು ಹಿಂಸೆಗಳು, ಸುಖಾಸುಮ್ಮನೆ ವಿನಾಕಾರಣ ಒಬ್ಬೊಬ್ಬರ ನಡುವೆಯೂ ಹುಟ್ಟಿ ಸಾಯುವ ಗುಮಾನಿಗಳು ನಿತ್ಯದ ಬದುಕನ್ನೇ ನರಕವಾಗಿಸಿಬಿಟ್ಟಿವೆ. ಜಾಗತೀಕರಣದ ನೆಲೆಯಲ್ಲಂತೂ ಅವು ಅಸಹಿಷ್ಣುತೆಯನ್ನೇ ಹೆಚ್ಚು ಬೆಳೆಸಿಕೊಳ್ಳುತ್ತಿವೆ. ಅಂತಾರಾಷ್ಟ್ರೀಯ ಪ್ರಚೋದನೆಗಳಿಂದಾಗಿ ಈ ಚಿತಾವಣೆಗಳಿಗೆ ಎಣ್ಣೆ, ಬೆಂಕಿ ಹೆಚ್ಚು ಸರಬರಾಜಾಗುತ್ತ ದಿನನಿತ್ಯವೂ ಈ ಗೊಂದಲ ದಲ್ಲೇ ಇಡೀ ದೇಶ ಕಾಲ ನೂಕುವಂತಾಗಿದೆ. ಅದರ ಆರೋಗ್ಯ, ಶಿಕ್ಷಣ, ಆಹಾರ, ನೆಲ, ಜಲ, ಅರಣ್ಯ, ಖನಿಜ ಯಾವುದಲ್ಲೂ ಒಂದು ಅಂಗುಲ ಕೂಡ ಪ್ರಗತಿಯನ್ನು ಸಾಧಿಸದೇ ಕೇವಲ ರಾಜಕೀಯದ ಆಟಕ್ಕೆ ಸೀಮಿತಗೊಳ್ಳುತ್ತಾ ಜನತೆ ಕುಬ್ಜ ಹಾದಿಯನ್ನು ಹಿಡಿಯುವುದು ಅನಿವಾರ್ಯವೆನ್ನುವ ಪರಿಸ್ಥಿತಿ ನಿರ್ಮಾಣಗೊಂಡು ಬಿಟ್ಟಿದೆ. ಯಾವುದಕ್ಕೆ ಯಾರು ಕಾರಣ ಎಂದು, ಯಾರಿಗೆ ಯಾರು ಶತ್ರು ಎಂದು ನಿಖರವಾಗಿ ಹೇಳಲಾಗದ ಕಲಸು ಮೇಲೋಗರವೇ ಎದ್ದು ಕಾಣುತ್ತಿದೆ. ಹೊಗೆ ಮುಸುಕಿರುವ ಈ ಬೆಂಕಿಯನ್ನು ಹೊಗೆಯಿಂದ ಮುಕ್ತ ಗೊಳಿಸಲೇಬೇಕು. ಬೆಂಕಿಯನ್ನು ಬೆಳಕಾಗಿ ಪರಿವರ್ತಿಸಿಕೊಂಡು ಆ ಬೆಳಕಿನಲ್ಲಿ ಸಮಸ್ತ ಪ್ರಗತಿಯನ್ನು ಸಾಧಿಸಬೇಕು. ಆರಂಭದ 'ಮದುವೆ'ಯ ಶುಭ ಸಂದರ್ಭದಲ್ಲಾದ ಅಮಂಗಳ ನಮ್ಮನ್ನು ಎಲ್ಲಿಗೆ ತಂದು ಬಿಟ್ಟುಬಿಟ್ಟಿದೆ? ಕವಿತೆಯ ಕಸಿವಿಸಿ ಇರುವುದೇ ಇಲ್ಲಿ.

ಧರ್ಮವೆನ್ನುವುದು ಮನುಷ್ಯರ ರಕ್ತ, ಚರ್ಮ, ನರನಾಡಿಯಿದ್ದಂತೆ. ಮನುಷ್ಯನ ಹುಟ್ಟಿನಿಂದ ಅದು ಒಂದು ನಂಬಿಕೆಯಾಗಿ ಆವರಿಸಿಕೊಂಡು ಅವನನ್ನು ಪೊರೆಯುವ ಶಕ್ತಿಯಾಗಿ ರೂಪುಗೊಂಡಿದೆ. ಅದರ ಸಮಗ್ರ ಸ್ವರೂಪವನ್ನು ಹಿಡಿಯುವುದು ಇಂದಿಗೂ ಕಷ್ಟವಾದದ್ದೇ. ಹಾಗಾಗಿ ಅದರ ಸರಿಯಾದ ಅರ್ಥವನ್ನು ಗ್ರಹಿಸುವಲ್ಲಿ ಮನುಷ್ಯ ಸೋತಿದ್ದಾನೆ. ಇಂಥ ಸೋಲಿನಿಂದಲೇ ಅದು ಅನೇಕ ನೆಲೆಗಳಲ್ಲಿ ಪರಿಭಾವಿಸಲ್ಪಟ್ಟಿದೆ. ಸಮ್ಮತವಾದ ವ್ಯಾಖ್ಯಾನವೊಂದು ಸಾಧ್ಯವಾದಾಗಲೂ ಅದನ್ನು ಯಾರೂ ಗಮನಿಸುತ್ತಿಲ್ಲ. ಧರ್ಮದ ಮೂಲ ಉದ್ದೇಶವನ್ನೇ ಮರೆತಿರುವುದರಿಂದಾಗಿ ಸರ್ವ ಜನಾಂಗಬ ತೋಟವನ್ನೇ ನೆಲ ಸಮ ಮಾಡಲಾಗುತ್ತಿದೆ. ಬಹು ಸಂಸ್ಕೃತಿಯ ತಿರುಳಿರುವುದೇ ಎಲ್ಲರೂ ಎಲ್ಲರ ಸಂಸ್ಕೃತಿಯನ್ನು ಗೌರವಿಸುವುದರಲ್ಲಿ. ಪರಮಹಂಸರು ಇದಕ್ಕೆ ಬಹು ದೊಡ್ಡ ಉದಾಹರಣೆ. ಪರಮಹಂಸರು ಜಗತ್ತಿನಲ್ಲಿ ಎಷ್ಟು ಧರ್ಮ, ಮತಗಳಿವೆಯೋ ಅವೆಲ್ಲವನ್ನೂ exhaust

ಮಾಡಿದ ಮಹಾನ್ ಗುರುಗಳು. ಅವರಿಗೆ ಯಾವುದೂ ಅರೆಕೊರೆಯಾಗಿ ಕಾಡಿದ್ದಿಲ್ಲ. ಆದರೆ ಪರಮಹಂಸ, ಅವರ ಶಿಷ್ಯ ಸ್ವಾಮಿ ವಿವೇಕಾನಂದ, ಬೈಬಲ್, ವೇದ, ಖುರಾನಿನ ನಿಜವಾದ ಅರ್ಥ—ಇವು ಯಾವುದಕ್ಕೂ ಜಗ್ಗದ, ಆದರೆ ಅವೆಲ್ಲವನ್ನೂ ಅಪವ್ಯಾಖ್ಯಾನಕ್ಕೀಡು ಮಾಡುವ ಮನುಷ್ಯರ ರೀತಿ ಮಾತ್ರ ದೊಡ್ಡ ದುರಂತಕ್ಕೆ ಆಹ್ವಾನ ನೀಡುವಂಥದು. ಈಗ ಈ ದೇಶದಲ್ಲಿ, ಪ್ರಪಂಚದಲ್ಲಿ ಆಗುತ್ತಿರುವುದು ಇದೇ. ಕವಿತೆ ತನ್ನೆಲ್ಲ ಸೂಕ್ಷ್ಮತೆಗಳೊಂದಿಗೆ ಇದನ್ನು ತೆರೆದಿಡುತ್ತದೆ. ಇಷ್ಟನ್ನು ವರ್ಣಿಸಿ ಕವಿತೆ ಕೊನೆಗೊಂಡಿದ್ದರೆ ಅದಕ್ಕೇನೂ ಅಂತಹ ಮಹತ್ವ ಇರುತ್ತಿರಲಿಲ್ಲ. ಈ ಎಲ್ಲ ಮಹಾ ಗೊಂದಲವನ್ನೂ ನಿವಾರಿಸಿಕೊಂಡು ಹೊಸ ಮನ್ವಂತರವನ್ನು ಆಹ್ವಾನಿಸುವ ಆಶಯ ಕವಿತೆಯಲ್ಲಿರುವುದರಿಂದಲೇ ಅದಕ್ಕೊಂದು ಮಹತ್ವ ಲಭಿಸಿದೆ.

> **'ಕಲ್ಲೋಲ ಜಲ ತಿಳಿದು ಸಮರಸದ ಸ್ಥಿತಿಗೆ ಮರಳುವುದು**
> **ಬೇರ್ಪಟ್ಟ ಬಿಂದುಗಳು ಮುಂದೊಮ್ಮೆ ಬಳಿ ಸಾರಿ'**

ಎಂಬುದೇ ಕವಿತೆಯ ಮೂಲ ಆಶಯ. 'ವಿಶ್ವಾಸದ ಬೇರು' ಎಂಬ ರೂಪಕವೇ ಸಾಕು ಅದು ಚಿಗುರಿ ಹರಡಿಕೊಳ್ಳಬೇಕಾದ ಟೊಂಗೆ, ಟಿಸಿಲುಗಳನ್ನು ಮುಂಗಾಣಿಸುತ್ತದೆ. ನಚ್ಚು, ನಂಬಿಕೆ, ಸಹನೆ, ಒಳಿತಿನೆತ್ತರ ನಿಲುಕಿ ಆಕಾಶದ ತುಂಬ ತನ್ನ ಕೊಂಬೆಗಳನ್ನು ಬಿಚ್ಚಿ ಚಾಚಬೇಕು. ಅದರ ಅಪಾರ ನೆರಳಿನಲ್ಲಿ ಜನ ಬದುಕಬೇಕೆಂಬ ಕವಿಯ ಬಯಕೆ ನಿತ್ಯನೂತನ ಹಾಗೂ ನಿತ್ಯಸತ್ಯವಾದದ್ದು. ಇದು ಅಪೇಕ್ಷಣೀಯವೂ ಆದದ್ದು.

ನಾಡೋಜ ನಿಸಾರ್ ತಮ್ಮ ಬೇರುಗಳನ್ನು ಇಳಿಸಿಕೊಂಡಿರುವುದು, ತಮ್ಮ ಟೊಂಗೆಗಳನ್ನು ಹರಡಿಕೊಂಡಿರುವುದು ಹೀಗೆ. ಈ ಕಾರಣಕ್ಕಾಗಿ ನಿಸಾರರೇ ಒಂದು ಸಂಕೇತವಾಗಿಬಿಡಬಲ್ಲರು. ಅವರ ಹುಟ್ಟು, ಬದುಕು, ಬೆಳವಣಿಗೆ ಎಲ್ಲಕ್ಕೂ ಇದು ಸಂಕೇತವೇ. ಮುಸ್ಲಿಮರಾಗಿ ಈ ದೇಶದಲ್ಲಿ ಬದುಕುವ ಪರಿ ಹೀಗೆ ದಿಗಿಲಿನಲ್ಲೇ ಸಾಗಿದರೆ ಚೈತನ್ಯದ ಒರತೆ ಬತ್ತಿ ಹೋಗದಿದ್ದೀತೆ? ಮುಸ್ಲಿಮರು ಈ ದೇಶಕ್ಕೆ ಬಂದು ನೂರಾರು ವರ್ಷ ಈ ದೇಶವನ್ನೇ ಆಳಿದರು. ರಾಜಕೀಯದ ಆಟದಲ್ಲಿ ಅನೇಕ ಏರುಪೇರುಗಳು ಇದ್ದೇ ಇರುತ್ತವೆ. ಆಳಿದ ಎಲ್ಲ ಮುಸ್ಲಿಂ ಚಕ್ರವರ್ತಿಗಳೂ ನಿರಂಕುಶಮತಿಗಳಂತೇನೂ ವರ್ತಿಸಿಲ್ಲ. ಇಲ್ಲಿನ ಎಲ್ಲ ಹಿಂದೂಗಳನ್ನೂ ಮತಾಂತರಿಸಿ ಮುಸ್ಲಿಮರನ್ನಾಗೇನೂ ಮಾಡಿಲ್ಲ. ಹಾಗೆ ಮಾಡಿದ್ದಿದ್ದರೆ ಈಗ ಒಬ್ಬ ಹಿಂದುವೂ ಇರುತ್ತಿರಲಿಲ್ಲ. ಹಾಗೆ ಅವರು ಆ ಕಾಲಘಟ್ಟದಲ್ಲಿ ಇಚ್ಛೆಪಟ್ಟಿದ್ದರೆ ಅದೇನೂ ಅವರಿಗೆ ಕಷ್ಟವೂ ಆಗುತ್ತಿರಲಿಲ್ಲ. ಆದರೆ ಇಂತಹ ಕೃತ್ಯ ಸಾಧ್ಯವಾಗದಂತೆ ಒಂದು ವ್ಯವಸ್ಥೆ ತನ್ನನ್ನೇ ತಾನು ರೂಪಿಸಿಕೊಂಡಿರುತ್ತದೆ. ಹಿಂದೂಗಳಲ್ಲಿ ಬುದ್ಧ, ಬಸವ, ಕನಕ, ಪುರಂದರ, ಪರಮಹಂಸರಿರುವಂತೆಯೇ ಮುಸ್ಲಿಮರಲ್ಲಿ ಸೂಫಿಗಳಿದ್ದಾರೆ. ಇಂಥವರು ಇತಿಹಾಸದ ಎಲ್ಲ ಕಾಲಕ್ಕೂ ಇದ್ದರು, ಮತ್ತು ಈಗಲೂ ಇದ್ದಾರೆ. ಇಂಥ ಮಹಾವ್ಯಕ್ತಿಗಳ ಮಧ್ಯಸ್ಥಿಕೆಯಲ್ಲಿ ಯಾವ ಅಹಂಕಾರವೂ ತನ್ನ ಆಟವನ್ನು ತನ್ನಿಷ್ಟಕ್ಕೇ ಆಡಲಾರದು. ಸಮೂಹ ಶಕ್ತಿಯ ತಿರುಳನ್ನು ಪ್ರತಿನಿಧಿಸುವ ಇಂಥ ಘನ ವ್ಯಕ್ತಿತ್ವಗಳು ಯಾವೊತ್ತೂ ಅರಾಜಕತೆಯನ್ನು ಹತೋಟಿಯಲ್ಲಿಟ್ಟಿವೆ. ಈ ದೇಶದಲ್ಲಾದದ್ದೂ ಹೀಗೆಯೇ. ಟಿಪ್ಪುವಿನಂಥ ದೊರೆ ಶ್ರೀರಂಗನಾಥನ ಭಕ್ತನಾಗುವ ಪ್ರಕ್ರಿಯೆ ಅಸಾಧಾರಣ ಮತ್ತು

ಪವಾಡಸದೃಶವಾದದ್ದು. ಈಗೀಗ ಹಿಂದೂ ಮೂಲಭೂತವಾದಿಗಳಿಗೂ ಮುಸ್ಲಿಂ ಮೂಲಭೂತವಾದಿಗಳಿಗೂ ಇದು ತುರ್ತಾಗಿ ಅರ್ಥವಾಗಬೇಕಿದೆ. ಕ್ಷುಲ್ಲಕ ಕಾರಣಗಳಿಗಾಗಿ ಕ್ಯಾತೆ ತೆಗೆಯುವ ಈ ವಿರುದ್ಧ ಬಣಗಳು ಆಯಾ ಧರ್ಮದ ವಿಶಾಲ ತಳಹದಿಯನ್ನು ತಿಳಿದು ತಮ್ಮ ಕ್ರಿಯೆಗಳನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಎಂದಿಗಿಂತ ಇಂದು ಹೆಚ್ಚಾಗಿಯೇ ಇದೆ. ನಿಸಾರರ ಕವಿತೆ ಇದನ್ನೇ ಒತ್ತಿ ಒತ್ತಿ ಅನ್ಯೋಕ್ತಿಯ ಮಾದರಿಯಲ್ಲಿ ಅಭಿವ್ಯಕ್ತಿಸಿದೆ. 'ನಿತ್ಯ ಶುಭದಂತ್ಯಕ್ಕೆ' ಅದು ಸದಾ ತುಡಿಯುವಂತಿದೆ. ಕವಿತೆಯೆಂಬ ಕಲೆಯ ಮೂಲಕ ನಿಸಾರ್ ತಮ್ಮ ಪ್ರತಿಭೆಯ ವೈಶಾಲ್ಯವನ್ನು ಮೆರೆದಿದ್ದಾರೆ.

ಕೊನೆಯದಾಗಿ, ನಿಸಾರರು ಬಳಸುವ ಭಾಷೆಯ ಬಗ್ಗೆ ಹೇಳಲೇಬೇಕು. ಮೇಲ್ನೋಟಕ್ಕೆ ಗದ್ಯದ ಮಾತಿನ ಬೀಸಿನಂತೆ ಕಾಣುವ ಅವರ ಭಾಷೆ ನುಲಿಯುತ್ತಾ, ತಿರುವುತ್ತಾ, ಚಾಚುತ್ತಾ ವಿಸ್ತಾರಗೊಳ್ಳುವ ಗುಣವುಳ್ಳದ್ದು. ವಾಚಾಳಿಯಂತೆ ಕಂಡರೂ ಆಂತರ್ಯದಲ್ಲಿ ಅನೇಕ ರೂಪಕ, ಪ್ರತಿಮೆಗಳನ್ನು ಅಡಗಿಸಿಕೊಂಡಿರುವಂಥದು. ಲಯಕ್ಕೆ ಒಗ್ಗಿಸಿಕೊಳ್ಳುವ ಈ ಕುಶಲತೆಯನ್ನು ಕನ್ನಡದ ಮತ್ತೊಬ್ಬ ಕವಿಯಲ್ಲಿ ಕಾಣುವುದು ಕಷ್ಟ. ನುರಿತ ಕೈಯಲ್ಲಿ ಮಾತ್ರ ಬಳಕೆಗೊಳ್ಳಬಹುದಾದ ಅವರ ಭಾಷಾಶಕ್ತಿ 'ಮೆಚ್ಚಿ ಅಹುದು ಅಹುದು' ಅನ್ನಿಸಿಕೊಳ್ಳುತ್ತದೆ. ಸಲೀಸಾಗಿರುವ, ಸುಲಲಿತವಾಗಿರುವ ವಿಚಿತ್ರ ಮತ್ತು ವಿಶಿಷ್ಟ ಶೈಲಿಯ ಈ ಕವಿ, ಕನ್ನಡದ ಅಪರೂಪದ ಮುಸ್ಲಿಂ ಕವಿಯೂ ಹೌದು—ಹಾಗೆಂದು ಕರೆಯಲೇ ಬೇಕೆಂದರೆ. ಆದರೆ ನಿಸಾರ್ ಕನ್ನಡದ ಶ್ರೇಷ್ಠ ಕವಿ ಎಂಬಲ್ಲಿಗೆ ನಾನು ಈ ಲೇಖನದ ಆರಂಭದಲ್ಲಿ ಹೇಳಿದ ಮಾತುಗಳನ್ನು ಪುನರಾವರ್ತಿಸುವ ಆವಶ್ಯಕತೆ ಇಲ್ಲ ಎಂದೇ ಭಾವಿಸಿರುವೆ.

ನಗರೀಕರಣದ ಮೇಲುಮೇಲಿನ ಮೋಹಕ ಮೋಡಿಯ ಮರೆಯಲ್ಲಿ ನಡೆದಿರುವ ವ್ಯಕ್ತಿ ಪ್ರತ್ಯೇಕತೆಯ, ತಿಜೋರಿ ತುಂಬಿಕೆಯ, ಗಿಲೀಟು ವ್ಯವಹಾರಗಳ ದೈನಂದಿನ ನಾಟಕವನ್ನು ನೋಡಿ, ವಿಮರ್ಶಿಸಿ ಬೆಲೆ ಕಟ್ಟುವುದಕ್ಕೆ ಪ್ರಕೃತಿ ಒಂದು ಪ್ರಬಲವಾದ ಮಾನದಂಡ. ಅದು ನೂರಾರು ಮೈಲಿ ಆಚೆಗಿನ ಒಂದು ಸುಂದರ ಗುಂಗಾಗದೆ, ಮಂತ್ರಗಂಬಳಿಯಾಗದೆ ಜೊತೆಜೊತೆಗೇ ನಡೆದು ಪ್ರತಿ ಸಲವೂ ಪುನರ್ಜೀವಿಸುವ ಹೊಚ್ಚಹೊಸ ಸಜೀವಾನುಭವ: ಕೈ ಹಿಡಿದು ನಡೆಸುವ ಕರುಣಾಳು. ಒಮ್ಮೆ ಅತಿಥಿಯಾಗಿ, ಆಮೇಲೆ ನಿಕಟ ಸಂಬಂಧಿಯಾಗಿ, ತದನಂತರ ಪೊರೆಯುವ ದೈವವಾಗಿ ಪರಿಣಮಿಸುವ ನಿಸರ್ಗದ ಪರಿ ಮೂಕಗೊಳಿಸುವಂಥದು.

(ನಿಸರ್ಗದ ಉಪಕಾರ)

ಗ್ರ್ಯಾಂಡ್ ಕ್ಯಾನ್ಯನ್ ಮತ್ತು ಗರ್ಭಿಣಿ

೧

ಆರಿಜೋನ ಪ್ರಾಂತದ ಬೃಹದ್ಭವ್ಯ ಮಹಾ ಕಂದರ
ಗ್ರ್ಯಾಂಡ್ ಕ್ಯಾನ್ಯನ್‌ನ ಭೇಟಿ ಪ್ರಾಪ್ತವಾದ ದಿನ, ನನ್ನ ಮನ
ದೈನಂದಿನ ಪಡುಹಗಳ ಮಾಮೂಲುತನ ದಾಟಿ ಪರವಶತೆಯಲಿ
ಅನುಭವಿಸಿದಾನಂದ, ಸಂಭ್ರಮಾಶ್ಚರ್ಯಗಳಿಗಿಲ್ಲ ಸರಿಸಾಟಿ.
ಮೈ ನೆತ್ತರನು ಹೆಪ್ಪಾಗಿಸುವ ಚಳಿಯುಡುಪು ಧರಿಸಿ
ಎದುರಾದ ಮುಂಜಾನೆಯಲಿ ದರ್ಶಿಸಿದ ಆ ಭೂಮಾದ್ಭುತ
ವಿರಾಟ್‌ದೃಶ್ಯದ ಅಪಾರ ವಿಸ್ತಾರ, ಮೈಲಿಯಾಳದ ತನಕ
ಬಾಯ್ತೆರೆದ ಕರಾಳ ಪಾತಾಳ, ತಿಳಿಗೆಂಪು ಕಂದು ಬಿಳಿ ಹಳದಿ
ಮರಳುಗಲ್ಲಿನಗಾಧ ಆಕಾರಗಳ ಹಲವು ಯೋಜನೆಗಟ್ಟಲೆಯ
ವೈವಿಧ್ಯಮಯ ಹರವು, ಹುಬ್ಬುಗಂಟಿಕ್ಕಿ ದುರುಗುಟ್ಟಿರುವ
ಭಯೋದ್ವೇಗಕರ ಮಹನ್ಮೌನ, ಕೋಟ್ಯಂತರ ವರುಷ
ಜಲ ಚಾಣದಿಂದಖಂಡ ಬಂಡೆಗಳ ಕೊರೆದು ಕೆತ್ತುತ್ತ ಈ
ಬೃಹನ್ನಿರ್ಮಿತಿಗಳ ರೂವಾರಿಸಿದ ಕೊಲರೆಡೊ ನದಿ ಜಕಣಾರ್ಯನ
ಆಳದಲಿ ಮೈ ತಳೆದ ಮಿಂಚು ನೂಲಿನ ಹರಿವು—ಇತ್ಯಾದಿ ನೋಟ
ಅದೆಷ್ಟು ಸಮಯದ ತನಕ ಹೃದಯ ತನ್ಮಯಗೊಳಿಸಿ
ಬರಿಸಿತ್ತೊ ಮೈ ಮರೆವು; ನಿಸರ್ಗದಾಕಳು ದೃಶ್ಯ ಸುಧೆ
ಮನದಣಿಯ ಕೆಚ್ಚಲಿಸಿದುದಕೆ ಮುಡಿ ಮಣಿದು
ಭಾವಾತಿಶಯತೆಯಲಿ ಧನ್ಯವೆನಿಸಿತ್ತೊ ನನ್ನಿರವು.

೨

ಹೀಗೆ ನಾನು ಮತ್ತು ಫೀನಿಕ್ಸ್ ನಗರದ ಸಾರಥಿ ಮಿತ್ರರು
ದೃಶ್ಯವಶರಾಗಿ ಭಾವ ಮೂಕತೆಯಿಂದ ಚಿತ್ರಸ್ಥವಾಗಿರಲು
ಎಚ್ಚರಿಸಿತೆನ್ನನ್ನು ಮಹಿಳೆಯೊಬ್ಬಳ ತೆಳ್ಳನೆಯ ಕೊರಳು:
'ನೀವು ಕವಿಗಳಲ್ಲವೇನು?', ಹೌದೆಂದು ಆಡಿಸಿದೆ ಗೋಣು.
ಅಮೇರಿಕದ ದೂರದ ದುರ್ಗಮಯ ದುರ್ಗಮ ಪ್ರದೇಶದಲ್ಲಿ.
ಕನ್ನಡದ ನುಡಿ ಕೇಳಿ ವಿಸ್ಮಯಿಸಿ, ಗಮನಿಸಲು ಪಕ್ಕದಲಿ
ನಿಂತಿದ್ದಳೊರ್ವ ಯುವತಿ. ಪರಿಚಯದ ಬಳಿಕ ಗೊತ್ತಾದುದಿಷ್ಟು:
ನ್ಯೂಜೆರ್ಸಿಯಲಿ ವಾಸ. ಈಕೆ ಚೊಚ್ಚಲು ಬಸುರಿ. ಗಂಡ

ಸಾಫ್ಟ್‌ವೇರ್ ಇಂಜಿನಿಯರು. ಮೈಸೂರಿನಿಂದಾಗಮಿಸಿದ ಮಾವನಿಗೆ
ರಮಣೀಯ ತಾಣಗಳ ತೋರಿಸಲು ಬಂದಿರುವುದೀ ಹೊಸ ಜೋಡಿ.
ಕೆಲ ಸಮಯ ಸಲ್ಲಾಪಿಸಿ ವಿದಾಯ ಹೇಳಿದರು ಆ ಮೂರು ಜನ.
ಅಗಲುವ ಮುನ್ನ ಆ ಗರ್ಭಿಣಿ ಹೆಣ್ಣು ನನ್ನ ಬಳಿ ಸಾರಿ
ನಾಚಿಕೆಯ ತಗ್ಗು ದನಿಯಲ್ಲಿ: 'ಗಂಡು, ಹೆಣ್ಣು ಮಕ್ಕಳಿಗಿಡುವ
ಒಂದೆರಡು ಮುದ್ದಾದ ಹೆಸರ ಸೂಚಿಸುವಿರಾ? ವಾರವಾದರೂ
ಚಿಂತೆಯಿಲ್ಲ'
ಎಂದೊರೆದು ಕಾಗದದ ತುಣುಕಿನಲಿ ದೂರವಾಣಿಯ ಸಂಖ್ಯೆ
ಬರೆದು ನನ್ನ ಕೈಗಿತ್ತು ಸೇರಿಕೊಂಡಳು ತನ್ನವರ ಜೊತೆ.
'ಆಗಲಿ' ಎಂದಾಗ ಅವಳ ಮೊಗದಲ್ಲಿ ಮೊಗ್ಗರಳಿದ ಕೃತಜ್ಞತೆ,
ಕೃತಾರ್ಥತೆಯ ಗಮಗಮ, ಬಾಳಿನಲಿ ಬಹು ಸಮಯ ಸ್ಮರಣೀಯ.
ಆಕೆ ಕಣ್ಮರೆಯಾದ ಮೇಲಷ್ಟೆ ಹೊಳೆದಿತ್ತು ನನಗೆ ಅಂದು:
'ಛೆ! ಆಕೆಯ ಹೆಸರು, ವಿಳಾಸ ವಿಚಾರಿಸಲಿಲ್ಲವಲ್ಲ'
ಎನ್ನುವ ಕೊರಗು.
ಶಪಿಸಿದೆ ನನ್ನನ್ನು ನಾನೇ, ಹಾಳು ವಿಸ್ಮೃತಿಗೆ ಕಡು ನೊಂದು.

೩

ಚೆಲು ನೋಟದೈಸಿರಿಗೆ ಮತ್ತೆ ಶರಣಾದೆ ಕೆಲ ಹೊತ್ತು
ತಣಿದು ದಣಿಯುವ ತನಕ ಕಣ್ಮನಸು ತಲೆ ಕತ್ತು.
ಹೊರಡುವ ಮೊದಲು ಬಿಚ್ಚಿದ್ದ ಷೂ ಲೇಸು ಕಟ್ಟಲು ನಾನು
ಬಾಗಿರಲು, ಕಿಸೆಯೊಳಿಟ್ಟಿದ್ದ ವಿಳಾಸದ ಕಾಗದ ಕೆಳ ಬಿದ್ದು
ಗಾಳಿ ರಭಸಕೆ ಕೊಚ್ಚಿ ತೇಲುತ್ತ ಕಂದರದ ಆಳಕಿಳಿದಿತ್ತು;
ರಕ್ಷಿಸಲು ಆಗದಸಹಾಯಕತೆಗೆ ಮನ ಬಹುವಾಗಿ ಮರುಗಿತ್ತು.
ಆಮೇಲೆ ಏಕೋ ಆ ಕಂದರದ ಮಹಾದೃಶ್ಯ ಅಪಥ್ಯವೆನಿಸಿತ್ತು.
ನಾ ಕೊಟ್ಟ ಮಾತು ಹಣ್ಣೊಳ್ಳದೆಯೆ ಸುರುಟಿ ಹೋದದ್ದು,
ದೂರವಾಣಿಯ ಕರೆ ಈಗ ಬರಬಹುದು, ನಾಳೆ ಬರಬಹುದೆಂಬ
ಆ ಗರ್ಭವತಿ ಹೆಣ್ಣ ಭಾರಿ ನಿರೀಕ್ಷೆ ಮಣ್ಣುಗೂಡಿದ್ದು,
ಒಂದೆರಡು ಚಣಗಳ ನಮ್ಮ ಅಚಾನಕ ಮಿಲನದ ನಲವು,
ಹಾಗೆಯೇ ಆಗಾಗ್ಗೆ ನನಗೆ ಕಹಿಯುಣಿಸುವ ಕಡು ವಿಷಾದದ ಬೇವು
—ಇವನೆಲ್ಲ ಸ್ವಸ್ಥ ಚಿತ್ತದಲಿ ಮೆಲುಕು ಹಾಕಿದ ಹೊತ್ತು ಅನ್ನಿಸುವುದೆನಗೆ:
ಜೀವನವೆ ಹಾಗೆ, ವ್ಯಕ್ತಿ ಸಂಕಲ್ಪವನು ಲೆಕ್ಕಿಸದ ಘಟಿತಗಳ
ಅನೂಹ್ಯ ಸರಮಾಲೆ. ಒಂದೊಂದು ಅನುಭವವೂ ಮಾನವ-
ನಿಗೊಂದೊಂದು ಪಾಠಶಾಲೆ. ಎಷ್ಟೆ ಚಿಂತಿಸಿದರೂ ಕೊನೆಗೆ
ಬಿಚ್ಚದೇ ಉಳಿವ ಕಗ್ಗಂಟು—ಜೀವಿಗಳ ಬಾಳಿನೊಳ ನಂಟು.

★ ★ ★

(ಅಪ್ರಕಟಿತ)



'ಗ್ರ್ಯಾಂಡ್ ಕಾನ್ಯನ್ ಮತ್ತು ಗರ್ಭಿಣಿ':
ಸಂಭ್ರಮ-ವಿಷಾದಗಳ ತೊರೆ ತೋರಿಸಿದ ತೆರೆಮರೆಯ ತಾತ್ತ್ವಿಕ ನೆರೆ

♦ *ಮಹಾಬಲ ಮೂರ್ತಿ ಕೊಡ್ಲೆಕೆರೆ*

ನಿಸಾರ್ ಅಹಮದ್ ಅವರು ಕನ್ನಡದ ಸುಪ್ರಸಿದ್ಧ ಕವಿಗಳು. ಜತೆಗೆ ಮುಖ್ಯ ಕವಿಗಳೂ ಕೂಡ. ಮುಖ್ಯತೆಯು ಒದಗಿಸ ಬಹುದಾದ ಪರಿಪೂರ್ಣತೆಯಲ್ಲಿ ಅನೇಕ ಸೂಕ್ಷ್ಮತೆಗಳು ಚಿಗುರಿ ಕೊಳ್ಳುತ್ತವೆ. ಈ ಎಲ್ಲ ಸೂಕ್ಷ್ಮತೆಗಳೂ ಮತ್ತೊಂದು ಇನ್ನೊಂದು ಎಂಬ ಹೊಸ ಹೊಸ ಬೆಳವಣಿಗೆಗಳನ್ನು [illegible] ಬಲ್ಲಂಥವು. ಹೀಗಾಗಿ ಪ್ರೊ. ನಿಸಾರರಲ್ಲಿ ನನಗೆ ಎಂದಿನಿಂದಲೂ ಅಭಿಮಾನಪೂರ್ವಕವಾದ ಗೌರವವಿದೆ.

ಇವರ 'ಸಗ್ಗದ ಸಿರಿ' ಎಂಬ ಕವಿತೆಯ ಕೆಲವು ಸಾಲು ಗಳೊಂದಿಗೆ ಈ ಲೇಖನವನ್ನು ಪ್ರಾರಂಭಿಸುತ್ತಿದ್ದೇನೆ.

'ಅರಿಸಿನ ಕುಂಕುಮ ಮೈಗೆಲ್ಲ ಮೆತ್ತಿ
ಹಸುರುಟ್ಟ ನೆಲದವ್ವ ಮದುವಣಗಿತ್ತಿ
ತೊಟ್ಟರೆ ಜರತಾರಿ ಮರಗಳ ನೆತ್ತಿ—
ದಿಬ್ಬಣ ಹೊರಟವೋ ಪಾತರಗಿತ್ತಿ.'

ನಿಸಾರ್ ಅಹಮದ್ ಅವರು ಕಾವ್ಯದ ಪ್ರಾರಂಭವನ್ನು ನೆಲದ ಮೇಲೆ ನಿಂತೇ ನಡೆಸಿಕೊಂಡು ಬಂದದ್ದು ಎಂಬುದು ಮೇಲಿನ ಅವರ ಕವನಗಳ ಸಾಲುಗಳಿಂದ ಸಹಜವಾಗಿಯೇ ತಿಳಿಯ ಬಹುದಾಗಿದೆ. ಈ ಕವಿತೆ ಅವರ ಮೊದಲ ಕವಿತೆಯಲ್ಲ ದಿರಬಹುದು. ಆದರೆ ಪ್ರಾರಂಭದ ದಿನಗಳಲ್ಲಿ ಅವರ ಕಾವ್ಯ ಕೃಷಿಗೆ ನಿಂತ ನೆಲ ಅವರನ್ನು ಸ್ಪಂದಿಸಿದೆ ಎಂಬುದನ್ನು ಈ ಸಾಲುಗಳು ಸ್ಪಷ್ಟಪಡಿಸುತ್ತವೆ. ಕವಿಯ ದಂತಗೋಪುರ

ದೊಳಗಿನ ಅಭಿವ್ಯಕ್ತಿಗಿಂತ, ನೆಲದ ಮೇಲೆ ನಿಂತು ಬರೆಯುವ ಕ್ರಿಯೆಗೆ ಹೆಚ್ಚಿನ ಶಕ್ತಿ ಒದಗುತ್ತದೆ.

ಧರ್ಮರಾಜನ ರಥ ನೆಲಕ್ಕಿಂತ ಎರಡು ಅಂಗುಲಗಳಷ್ಟು ಮೇಲೆ ನಿಂತಿರುತ್ತಿತ್ತು ಎಂಬುದನ್ನು ನಾವು ಪುರಾಣದಲ್ಲಿ ಓದಿದ್ದೇವೆ. ಹೀಗಾಗಿ ಪಾಂಡವರು ಹಾಗೂ ಸುಖದ ನಡುವೆ ವಾಸ್ತವವಾಗಿ ದುರ್ಯೋಧನ ನಿಂತಿದ್ದಲ್ಲ, ತಾನೇ ನಿಂತುಕೊಂಡಿದ್ದೇನೆ ಎಂಬ ವಿಷಯ ತಿಳಿಯಲೇ ಇಲ್ಲ. ಹೀಗಾಗಿ ಭೀಮ ಹಾಗೂ ಪಾಂಚಾಲಿಯರ ಮನದೊಳಗಿನ ಚಡಪಡಿಕೆ, ಅವಮಾನ, ಖಿನ್ನತೆಗಳು ಅರ್ಥವಾಗಲೇ ಇಲ್ಲ. ಧರ್ಮದ ದೀಕ್ಷೆಯನ್ನು ತಾನು ಗ್ರಹಿಸಿ ಸ್ವೀಕರಿಸಿದ ನಮೂನೆಯಲ್ಲೇ ಸ್ವೀಕರಿಸಬೇಕು ಎಂಬ ಮೊಂಡು ಅರ್ಥವನ್ನೇ ಮಾಡತೊಡಗಿದ. ಪರಿಣಾಮ ಏನೆಂದರೆ, ಎಂದೋ ಕೇವಲ ನೊರಜುಗಳಂತೆ ಭೀಮನ ಗದೆಯ ಆಘಾತದಿಂದ ಸಾಯಬೇಕಿದ್ದ ಕೌರವಾದಿಗಳಿಗೆ ಹದಿಮೂರು ವರ್ಷಗಳಷ್ಟು ಅವಧಿಯ ಜೀವದಾನವೂ ಪಾಂಡವರಿಗೆ ಕಾಡು, ಅಜ್ಞಾತ ವಾಸ, ಬೇಗುದಿ, ತಳಮಳಗಳೆಂಬ ದುರದೃಷ್ಟವೂ ತಲೆದೋರಿತು. ಇಷ್ಟಾಗಿಯೂ ಧರ್ಮರಾಜ ಇವನ್ನೆಲ್ಲ ಸ್ವೀಕರಿಸು ವಂತಾದದ್ದು ಅಧರ್ಮದ ಬೀಜವಾದ ಜೂಜಿನಿಂದಲೇ ಎಂಬುದು ಒಂದು ವಿಪರ್ಯಾಸ. ಅಂತೆಯೇ ದುರಂತ ಕೂಡ. ನೆಲದ ಮೇಲೆ ನಿಂತವನಾಗಿದ್ದರೆ ಧರ್ಮರಾಜನಿಗೆ ದುಷ್ಟರು ಕ್ಷಣಕಾಲ ಕೂಡ ಬದುಕಲು ಯೋಗ್ಯರಾಗಿರುವುದಿಲ್ಲ ಎಂಬ ವಿವೇಚನೆ ಇರುತ್ತಿತ್ತೋ ಏನೋ?

ಪುರಾಣದ ಕಥೆಯೊಂದನ್ನು ನಿಸಾರ್ ಅಹಮದ್ ಅವರ ಕಾವ್ಯ ಸಂದರ್ಭದಲ್ಲಿ ನೆನಪಿಸಿಕೊಂಡದ್ದು ನೆಲದ ಸತ್ವಕ್ಕೆ ಹತ್ತಿರವಾಗುವವರು ಭೀಮ ಹಾಗೂ ದ್ರೌಪದಿಯರಂಥ ದಿವ್ಯದ ಸೋಗು ಹೊಂದಬಯಸದ ಕೇವಲ ಮನುಷ್ಯರು ಮಾತ್ರ ಎಂಬುದಕ್ಕಾಗಿ. ಹೀಗಾಗಿ ಮನುಷ್ಯರಿಗೆ ಇಹವೂ ಇಲ್ಲೇ, ಸ್ವರ್ಗವೂ ಇಲ್ಲೇ. ಸಶರೀರವಾಗಿ ಸ್ವರ್ಗಾರೋಹಣ ಮಾಡುವ ಚೈತನ್ಯರಹಿತ ಕ್ರಿಯೆಗೆ ಅವರಿಗೆ ಮನಸ್ಸಿರುವುದಿಲ್ಲ. ಇವರು ಹುಟ್ಟಿದ್ದೂ ನೆಲದಲ್ಲೇ, ಕಣ್ಮುಚ್ಚುವುದೂ ನೆಲದಲ್ಲೇ. ಇಂಥವರ ಹಂಗು ಸ್ವರ್ಗಕ್ಕಿರುವುದರಿಂದಲೇ ಧರ್ಮರಾಜನಿಗಿಂತ ಮುಂಚೆಯೇ ಇವರು ಸ್ವರ್ಗ ತಲಪಿರುತ್ತಾರೆ. ಆದರೆ ಧರ್ಮರಾಯನಿಗೆ, ಧರ್ಮರಾಯನಂಥವರಿಗೆ ನರಕದ ದರ್ಶನವಾದ ಮೇಲೆಯೇ ಸ್ವರ್ಗ ದೊರಕುತ್ತದೆ.

ನಿಸಾರ್ ಅಹಮದ್ ಅವರು ನೆಲದ ಪ್ರೀತಿಯಿಂದಲೇ 'ಸಗ್ಗದ ಸಿರಿ ಬಂತು' ಎಂಬ ಕವಿತೆ ಬರೆಯಬಲ್ಲರು. ನೆಲದ ಪ್ರೀತಿಯೊಂದಿಗೆ, ನೆಲದ ಸಂಸ್ಕೃತಿ ಕೂಡ ಅವರಿಗೆ ಮುಖ್ಯವೆನಿಸುತ್ತದೆ. ಕೆ. ಎಸ್. ನರಸಿಂಹಸ್ವಾಮಿಯವರಿಗೆ ಕುಂಕುಮ ಭೂಮಿ ಮಾತ್ರ ಕಂಡಂತಿದ್ದರೂ ನಿಸಾರರಿಗೆ ಕುಂಕುಮದೊಂದಿಗೆ, ಅರಿಶಿಣ ಕೂಡ ಬಳಿದುಕೊಂಡ ಮದುವಣಗಿತ್ತಿಯಂತೆ, ಅವ್ವನಂತೆ ಕಾಣಿಸುತ್ತಾಳೆ. ಈ ಚಿತ್ರದಲ್ಲಿ ನೆಲದ ಫಲವಂತಿಕೆಯನ್ನು ಕಾಣುವ ಕವಿಯ ದೃಷ್ಟಿ, ಸಮೃದ್ಧಿಯನ್ನೇ ಸಂಕೇತಿಸುತ್ತದೆ. ಮರ, ಗಿಡ, ಬಳ್ಳಿಗಳೆಲ್ಲ ಜರತಾರಿ ಸೀರೆ ಉಟ್ಟು, ನೆಲದವ್ವ ದಿಬ್ಬಣದೊಂದಿಗೆ ಹೊರಟ ಸಂಭ್ರಮ ಕೂಡ ಕಾಣುತ್ತದೆ. ಹೀಗಾಗಿ, ಕವಿಯ ವರ್ಣನೆಗಳಿಂದಾಗಿ ಪಡೆದ ರೂಪಾಂತರಗಳಿಗೆ ಸಹಜವಾಗಿ

ಹೊಂದಿಕೊಳ್ಳುತ್ತ ನಮ್ಮ ಮನಸ್ಸನ್ನು ಗೆಲ್ಲುತ್ತದೆ. ಇಲ್ಲಿನ ಶಬ್ದಗಳೆಲ್ಲ ಒತ್ತಕ್ಷರಗಳ ಕರ್ಕಶಗಳಿರದೆ, ಕವಿತೆಗೆ ತನ್ನದೇ ಆದೊಂದು ಗೇಯತೆ ಒದಗುವುದೂ ಕೂಡ ಸಕಾರಾತ್ಮಕ ಅಂಶ. ನೆಲದ ಆಗುಹೋಗುಗಳ ಕುರಿತಾಗಿ ಪ್ರತಿಕ್ರಿಯಿಸುವ ಸೂಕ್ಷ್ಮತೆ ನಿಸಾರರಿಗೆ ಹೀಗಾಗಿಯೇ ಸುಲಭಸಾಧ್ಯ.

ಸೂಕ್ಷ್ಮತೆಯ ಕುರಿತಾಗಿ ಪ್ರಸ್ತಾಪ ತೆಗೆದದ್ದು ನಿಸಾರರ ಮುಖ್ಯ ಹಾಗೂ ಒಳ್ಳೆಯ ಕವಿತೆಯಾದ `ರಾಮನ್ ಸತ್ತ ಸುದ್ದಿ`ಯ ಸಾಲನ್ನು ನೆನಪಿಸಿಕೊಂಡೇ. ಪ್ರಾಧ್ಯಾಪಕರಾಗಿದ್ದ, ವಿಜ್ಞಾನಿಯಾಗಿದ್ದ ಸರ್ ಸಿ. ವಿ. ರಾಮನ್ ನಿಧನ ಹೊಂದಿದ ಸುದ್ದಿಯಿಂದಾಗಿ ಕವಿತೆಯ ನಿರೂಪಕನಿಗೆ ಮನಸ್ಸಿಗೆ ಖಿನ್ನತೆ ಆವರಿಸಿದೆ. ಜವಾಬ್ದಾರಿಯನ್ನು ಒದಗಿಸಿದ ಸೃಷ್ಟಿ, ತಾನು ಮಾತ್ರ ಜವಾಬ್ದಾರಿ ಇರದಂತೆ ವರ್ತಿಸಿ, ಯಾರು ಯಾರನ್ನೋ ಸರ್ರನೆ ಒಯ್ದಾಗ, ಅವರನ್ನು ಪ್ರೀತಿಸಿದ್ದ ಆರಾಧಿಸಿದ್ದ, ಅಭಿಮಾನ ಗೌರವದಿಂದ ಕಂಡಿದ್ದ, ಇನ್ನೂ ಬದುಕಿರುವ ಮಂದಿಗೆ ನೋವು ಚಿಮ್ಮುತ್ತದೆ. ಹೃದಯ ರೋದಿಸುತ್ತದೆ. ಕವಿತೆಯ ನಿರೂಪಕನಿಗೆ ರಾಮನ್ ಸತ್ತಾಗ ಇಂಥದೊಂದು ಹೃದಯ ರೋದನ ಆವರಿಸಿದೆ. ಆದರೆ ವೇದನೆಯೊಂದಿಗೇ ವಾಕಿಂಗ್ ಹೊರಟಾಗ ನವುಲೆ ಎಂಬ ಪುಟ್ಟ ಗ್ರಾಮದ ಹನುಮ ಎಂಬ ಅಮಾಯಕ, ಮುಗ್ಧ, ಕಷ್ಟಜೀವಿ ಎದುರಾಗುತ್ತಾನೆ. ಜೀವನದ ವೈರುಧ್ಯದ ಬಗೆಗೆ ಕವಿ ನಿಸಾರ್ ವೈಚಾರಿಕ ವ್ಯಾಖ್ಯಾನವೊಂದನ್ನು ಚೆನ್ನಾಗಿ ಕಟ್ಟಿಕೊಡುತ್ತ, ರಾಮನ್ ಸಾವಿನ ಆಘಾತವನ್ನು ಸಹಿಸಿ ಕೊಳ್ಳುವ ಸಾಂತ್ವನವೊಂದನ್ನು ಒದಗಿಸುತ್ತಾರೆ. ಕವಿತೆಯೊಳಗಿನ `ರಾಮನ್ ಸತ್ತರೋ ಹನುಮ` ಅನ್ನಬೇಕು, ಆಗ ತಡೆದು ಸುಮ್ಮನಾದೆ. ರಾಮನ್ ಅರ್ಥೈಸಿಕೊಳ್ಳಬಹುದೆ ಇವನ ಅಶಿಕ್ಷಿತ ಅರಿವಿಗೆ?' ಈ ಸಾಲು ಮಾರ್ಮಿಕವಾಗಿದೆ.

ನಮಗೆಲ್ಲ ಹನುಮ ಯಾವ ರೀತಿಯೋ, ಹಾಗೆ ನಾವೆಲ್ಲ ಪ್ರಕೃತಿಗೆ. ಪ್ರಕೃತಿಗೆ ತಾನು ಮುಟ್ಟಬೇಕಾದ ಗುರಿಯ, ಯೋಜನೆಗಳ ಅರ್ಥ, ವ್ಯಾಖ್ಯಾನಗಳ ವಿವರಗಳನ್ನು ಇಡಿಯಾಗಿ ಮಾನವ ಕುಲಕ್ಕೆ ತಿಳಿಸಲು, ಅಂದು ವಿವರಿಸಲು ಸಾಧ್ಯವಾಗದಷ್ಟು ಅಸಹಾಯಕತೆ ಇದ್ದೀತು. ಹಾಗಾಗಿ ಪ್ರಕೃತಿಗೆ ನಾವೆಲ್ಲ ಹನುಮರು. ನಮಗೆ ಬೇಕಾದಂತೆ ತತ್ತ್ವ, ಶಾಸ್ತ್ರ, ವೇದ, ವೇದಾಂಗ, ಪುರಾಣ ಕಟ್ಟಿಕೊಂಡಿದ್ದೇವೆ. ಆಸ್ತಿಕತೆ ಹಾಗೂ ನಾಸ್ತಿಕತೆ ಎರಡೂ ಸಹ ಪ್ರಕೃತಿಗೆ ನಮ್ಮೆಲ್ಲರ ಸಿನಿಕತೆಯಾಗಿ ಕಂಡೀತು.

ನಿಸಾರ್ ಅವರ ಈ ಕವಿತೆಯ ಕೊನೆಯ ಸಾಲುಗಳನ್ನು ಗಮನಿಸಿದರೆ ಇದು ಇನ್ನಿಷ್ಟು ಸ್ಪಷ್ಟ: 'ಕೊರಲು ಬಿಗಿದು ಒಬ್ಬಂಟಿ ನಿಧಾನ ನಡೆದಂತೆ ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು...'

ಕವಿತೆಯ ಚಂದ ಈ ಸಾಲಿನಲ್ಲಿದೆ. ಪ್ರಕೃತಿಯೂ ಒಂಟಿ. ಅದು ಮಳೆ, ಗಾಳಿ, ಹಿಮ. ಸೆಕೆ, ಶೂನ್ಯ ಆಕಾಶ, ಮಣ್ಣು ಇತ್ಯಾದಿಗಳ ಆಕ್ರೋಶ ಹಾಗೂ ಸಾಂತ್ವನಗಳ ನಡುವೆಯೇ ತಾನೂ ಒಂಟಿಯಾಗಿದೆ. ಪ್ರಕೃತಿಗೆ ಚಲನೆ ಇರುವುದರಿಂದ ನಿಧಾನವಾಗಿ ಆಘಾತಗಳನ್ನು ಸಹಿಸಿಕೊಳ್ಳುವ, ನಿರ್ಲಿಪ್ತವಾಗಿರಲು ಸಾಧ್ಯವಾಗುವ ಸಹನೆ ಪಡೆದುಕೊಂಡಿದೆ. ರಾಮನ್ ಸತ್ತ ಸುದ್ದಿಯನ್ನು ನೆವ ಮಾಡಿಕೊಂಡು ನಿಸಾರ್ ಪ್ರಕೃತಿಯ ಬಗೆಗೆ, ಭೂಮಿಯ ಬಗೆಗೆ

ಹೇಳುತ್ತಾರೆ. 'ದೂರದಿಂದ, ಪ್ರಕೃತಿಯ ಅಗಾಧದಲ್ಲಿ ಹಿಮಾಚ್ಛಾದಿತ ಹನುಮ, ಅವನ ಕೂದಲೆಳೆಯ ಕೂಗು—ಅರ್ಥ ತೋರದ ಚುಕ್ಕೆ' ಎಂಬಲ್ಲಿ ಇದು ಹೆಚ್ಚು ಸ್ಪಷ್ಟ.

ನಿಸಾರರ ಜನಪ್ರಿಯ ಹಾಡು 'ನಿತ್ಯೋತ್ಸವ' ಕೂಡ ಕನ್ನಡ ತಾಯಿಯ ಹಾಡಾದರೂ ಕನ್ನಡ ತಾಯಿ ಪ್ರಕೃತಿಯ ವಿನಾ ಬೇರೆ ಏನಲ್ಲ. ಒಟ್ಟಿನಲ್ಲಿ ಪ್ರಕೃತಿ ಇರದೆ, ನೆಲವೇ ಇರದೆ, ಹಸಿರು, ಹೂ, ಲೋಹ, ಅದಿರುಗಳಿರದೆ ನಿಸಾರರ ಕವಿತೆಗಳಿಲ್ಲ. ಹೀಗಾಗಿ ನಿಸಾರರ ಕವಿತೆ ಅಡಿಗರ ಅಭಿಮತವಾದ, 'ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು. ಅನಂತರ ಇಷ್ಟ ದೇವತಾ ವಿಗ್ರಹಕ್ಕೊಗ್ಗಿಸುವ' ಇತ್ಯಾದಿ... ಇತ್ಯಾದಿ... ಅಂತೆಯೇ ನರಸಿಂಹಸ್ವಾಮಿಗಳ ಅಭಿಮತವಾದ 'ಕುಂಕುಮ ಭೂಮಿ, ಗುದ್ದಲಿಯ ಕೆಲಸಕ್ಕೆ ಮುಕ್ತಾಯ' ಇತ್ಯಾದಿ... ಇತ್ಯಾದಿ...' ಕೂಡ ಹೌದು. ನಿಸಾರರಿಗೆ ಪ್ರಕೃತಿ ದೇವರೂ ಹೌದು; ವಿಚಿತ್ರ ಪರಿಸ್ಥಿತಿಯಲ್ಲಿ ಅಕಸ್ಮಾತ್ತಾಗಿ ಮೈತಳೆದ ವಿಶಿಷ್ಟವೂ ಹೌದು. ಅವರು ವಾಸ್ತವವಾಗಿ ಭೂವಿಜ್ಞಾನ ಓದಿದವರು. ಭೂಮಿ ಸಹಜವಾಗಿಯೇ ಅವರಿಗೆ ಹೆಚ್ಚು ಕುತೂಹಲಕಾರಿ.

ಭೂಮಿಯ ಕುರಿತಾದ ಅವರ ಕುತೂಹಲವೇ ಅವರ ಕವಿತೆಗಳನ್ನು ಮತ್ತೆ ಮತ್ತೆ ಓದಿಕೊಳ್ಳುವ ಪ್ರೇರಣೆ ನೀಡಿದೆ ಎಂಬುದು ಸತ್ಯ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ರಂಗೋಲಿ ಮತ್ತು ಮಗ', 'ಅಮ್ಮ, ಆಚಾರ, ನಾನು', 'ಕುರಿಗಳು, ಸಾರ್ ಕುರಿಗಳು' ಮುಂತಾದ ಕವಿತೆಗಳು ಬೇರೆಯದೇ ಆದ ಕಾರಣಕ್ಕೆ ಗೆದ್ದರೆ, ಇತ್ತೀಚೆಗೆ (೨೦೦೩ರಲ್ಲಿ) ಬರೆದ 'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಕವಿತೆಯೂ ಸೇರಿದಂತೆ ಭೂಮಿಯನ್ನೋ, ಪ್ರಕೃತಿ ಯನ್ನೋ ಬಳಸಿಕೊಂಡು, ಉಲ್ಲೇಖಿಸಿಕೊಂಡು ಬರೆದ ಕವಿತೆಗಳು. ಇವುಗಳಲ್ಲಿನ ನವಿರು ವಿಷಯಗಳು ಏಕತಾನವಾಗದಂತೆ ಜೀವನವನ್ನು, ಜೀವನದ ಗೆಲವನ್ನು ಸಮಗ್ರವಾಗಿ ಕಟ್ಟಿಕೊಡುವ, ಪುನರ್ಮೌಲ್ಯಕ್ಕೆ ಗುರಿಯಾದಾಗಲೂ ಹೆಚ್ಚಿನ ಅರ್ಥವನ್ನು ಒದಗಿಸಲು ಸಾಧ್ಯವಾಗುವ ಉತ್ತಮ ಕವಿತೆಗಳೆನಿಸುತ್ತವೆ. ಕ್ಷಣಿಕತೆಯಲ್ಲಿಯೂ ಜೀವನದ ಅನರ್ಘ್ಯತೆಯ ಬಗೆಗೆ ಧ್ವನಿಯಾಗುವ ಕವಿತೆಗಳೆನಿಸುತ್ತವೆ. ಇದು ನಿಸಾರರ ಹೆಚ್ಚುಗಾರಿಕೆ. ತತ್ಕಾಲವನ್ನು ಮೀರಿ ಇನ್ನೆಲ್ಲಿಗೋ ವ್ಯಾಪಿಸುವ ಕುಶಲಗಾರಿಕೆ.

ಪ್ರಸ್ತುತ ಅವರ 'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ'ಯಲ್ಲಿ ಅನಾವರಣಗೊಳ್ಳುವ ಪ್ರಕೃತಿ ಎರಡು ಸ್ವರೂಪದ್ದು. ಒಂದೆಡೆ ಪ್ರಕೃತಿ ಅಂದರೆ ನೆಲ. ಪೂರ್ತಿ ಸವಕಳಿ ಗೊಂಡಿದ್ದರೂ ಒಡಲನ್ನು ಬಗೆದು ತೋರಿದ ಪ್ರಪಾತದಲ್ಲಿ ಹೊಸದೇ ಬೆರಗು, ಅದ್ಭುತ ಅನುಭವ, ಒಂದರ್ಥದ ಎಚ್ಚರಿಕೆ ಎಲ್ಲ ಇದ್ದರೆ, ಇನ್ನೊಂದೆಡೆ ತುಂಬಿಕೊಂಡ ಗರ್ಭದ ತಾಯಿ ಸಮೃದ್ಧಿಯ ನೆಲೆಯನ್ನು ತೋರತೊಡಗಿದ್ದಾಳೆ. ಭೂಮಿಯ ಒಡಲು ಸವೆದರೂ ಅವಳು ಒದಗಿಸುವ ಬುತ್ತಿಯ ಗಂಟು ಇನ್ನೆಲ್ಲಿಯೋ ಸಮೃದ್ಧಿಯಲ್ಲಿರುವುದರ ಚಿತ್ರ ಸ್ಪಷ್ಟವಾಗಿದೆ.

ಈ ಕವಿತೆಯಲ್ಲಿ ಸಂಯುಕ್ತ ಅಮೇರಿಕ ಸಂಸ್ಥಾನಕ್ಕೆ ನಿಸಾರರು ಪ್ರವಾಸ ಹೋಗಿದ್ದಾಗ ಅಲ್ಲಿನ ಆರಿಜೋನ ಪ್ರಾಂತದಲ್ಲಿನ ಜಗತ್ತಿನ ಅದ್ಭುತಗಳಲ್ಲಿ ಒಂದಾದ ಗ್ರಾಂಡ್ ಕಾನ್ಯನ್ ಕಣಿವೆಯನ್ನು ನೋಡಲು ಅಲ್ಲಿನ ಗೆಳೆಯರೊಂದಿಗೆ ಹೊರಟಿದ್ದಾರೆ.

ಹಿಮಾಲಯ, ಆಲ್ಪ್ಸ್, ಗರ್ಡಿಶ್ ಪರ್ವತ ಸಾಲುಗಳು ಭೂಮಿಯ ಎತ್ತರ ಶ್ರೇಣಿಗಳನ್ನು ಪ್ರತಿಬಿಂಬಿಸಬಲ್ಲಂಥವಾದರೆ, ಗ್ರ್ಯಾಂಡ್ ಕಾನ್ಯನ್ ಕಣಿವೆ ಭೂಮಿಯ ತಗ್ಗನ್ನು ತೆರೆದು ತೋರುವಂಥದು. ಕೋಟ್ಯಂತರ ವರ್ಷಗಳಿಂದ ಹರಿದ ನದಿಯ ರಭಸಕ್ಕೆ ಮಣ್ಣು ಕೊಚ್ಚಿಕೊಂಡು, ಕೊಚ್ಚಿಕೊಂಡು ಸವಕಳಿಯಿಂದ ನಿರ್ಮಾಣಗೊಂಡ ಭೂ ವಿಶೇಷ ಈ ಗ್ರ್ಯಾಂಡ್ ಕಾನ್ಯನ್ ಕಣಿವೆ. ಈ ವಿಸ್ತಾರದ ಇನ್ನೊಂದು ಕಣಿವೆ ಪ್ರಪಂಚದ ಬೇರೆ ಯಾವ ಭಾಗದಲ್ಲೂ ಇಲ್ಲ. ಒಂದೆಡೆ ಫೀನಿಕ್ಸ್ ಎಂಬ ಆರಿಜೋನಾ ಪ್ರಾಂತದ ದೊಡ್ಡ ಪಟ್ಟಣವೂ ಮರಳುಗಾಡೂ ಆಗಿರುವಲ್ಲಿಂದ ಗ್ರ್ಯಾಂಡ್ ಕಾನ್ಯನ್ ಕಡೆ ಹೊರಟರೆ ಪ್ರಕೃತಿಯ ಅನೇಕ ಗುಣ ವಿಶೇಷಗಳು, ಅದ್ಭುತಗಳು ನಮಗೆ ಕಾಣಸಿಗುತ್ತವೆ. ಫೀನಿಕ್ಸ್ ಎಂಬ ಪಟ್ಟಣದಲ್ಲಿ ಸಾವಿರಾರು ಎತ್ತರೆತ್ತರ ಕಳ್ಳಿ (ಕ್ಯಾಕ್ಟಸ್) ಗಿಡಗಳನ್ನು ನೋಡಬಹುದಾಗಿದೆ. ನೆಲದ ಬಂಜರನ್ನೇ ತಿಂದು, ಒಂಟಿ ಎಲುಬಿನ ದೈತ್ಯನಂತೆ ಎದ್ದು ನಿಲ್ಲುವ ಈ ಪಾಪಾಸುಕಳ್ಳಿಗಳ ಹಸಿರು ಕಣ್ಣಿಗೆ ಅದ್ಭುತ ಎನಿಸುವುದು ಹಸಿರಿನಿಂದಲ್ಲ, ಬದಲು ಮೊನಚಾದ ಅದರ ದೇಹದ ಮುಳ್ಳುಗಳಿಂದ. ಮುಳ್ಳಿನಿಂದ ಬಿಡುಗಡೆಗೊಳ್ಳುವ ಅಪರೂಪದ ಹಸಿರು ಕೂಡ ಆರಿಜೋನಾ ಪ್ರಾಂತದ ಒಂದು ವೈಶಿಷ್ಟ್ಯ. ಬಂಜರು ಭೂಮಿಯಲ್ಲಿ ಫೀನಿಕ್ಸ್ ನಗರವನ್ನು ಅಮೇರಿಕ ದೇಶ ಅದ್ಭುತವಾಗಿ ನಿರ್ಮಿಸಿದೆ. ನಾವಿಲ್ಲಿ ನಮ್ಮ ಮರಳುಗಾಡಿನ ನಗರಗಳಿಗೆ, ಹಳ್ಳಿಗಳಿಗಿರಲಿ ನೀರೇ ಇರುವ ಪ್ರದೇಶಗಳಿಗೆ ನೀರನ್ನು ಅಡೆತಡೆ ಇರದಂತೆ ಪೂರೈಸಲು ಸುಸ್ತು ಹೊಡೆಯುತ್ತಿದ್ದೇವೆ. ನಮ್ಮಂಥ ಇದ್ದೂ ನಿರ್ಗತಿಕರಾದವರ ಕಥೆಯನ್ನು ನೆನಪಿಸಿಕೊಂಡರೆ ಫೀನಿಕ್ಸ್ ನಗರ ಯಾಕೆ ಶ್ರೇಷ್ಠ ಎಂಬುದನ್ನು ತಿಳಿಯುವುದು ಹೆಚ್ಚು ಸುಲಭ.

ಈ ಬರಡು ನೆಲ ಫೀನಿಕ್ಸ್‌ನಿಂದ ಸುಮಾರು ನಾಲ್ಕು ತಾಸುಗಳ ಹಾದಿ (ಐದು ನೂರು ಕಿಲೋಮೀಟರ್ ದೂರ) ಗ್ರ್ಯಾಂಡ್ ಕಾನ್ಯನ್‌ಗೆ ಹೋಗುವ ಮುನ್ನ ಪ್ರಕೃತಿಯ ಅನೇಕ ಸ್ಥಿತ್ಯಂತರಗಳನ್ನು ಗಮನಿಸಬಹುದು. ಬರಡು ಭೂಮಿ, ಹಸಿರಿನ ಸೆರಗು, ದಟ್ಟ ಹಸಿರು, ಘಟ್ಟ ಮಲೆ ಸೋಪಾನಗಳು ಹೊಯ್ದಾಡುತ್ತ, ಒಮ್ಮೆಗೇ ಪ್ರಕೃತಿ ಬೃಹದಾಕಾರದ ಕಣಿವೆ ಗಳಾಗಿ ಪಾತಾಳಕ್ಕೆ ಕುಸಿದ ಅದ್ಭುತ ಈ ಗ್ರ್ಯಾಂಡ್ ಕಾನ್ಯನ್. ಬದುಕಿನ ಭಾವ ವಿಶೇಷವೂ ಇದೇ ತೆರವೋ ಎಂಬಂತೆ ಅಲ್ಲಿ ಸಾವಿನ ದರ್ಶನ, ಸಾವಿಗೂ ಮುನ್ನವೇ ಎಂಬಂತೆ ಕಾಣಿಸದೆ ಇರದು. ಅಕ್ಷರಶಃ ಪಾತಾಳವನ್ನೇ ಕಾಣುವಂಥ ವಿಸ್ಮಯ ಅದು. ನಿಸಾರ್ ಪ್ರಕೃತಿಯ ಸಾವಯವ ಶಿಲ್ಪಕ್ಕೆ ಬೆರಗಾದವರು, ಭೌತಿಕ ಶಿಲ್ಪವನ್ನು ಕಂಡು ಅದು ಸವಕಳಿಗೊಂಡು ಪಾತಾಳವಾದ ಅದ್ಭುತ ವನ್ನು ಹೀಗೆ ಸೃಷ್ಟಿಸುತ್ತಾರೆ:

‘.......... ಆ ಭೂಮಾದ್ಭುತ
ವಿರಾಟ್‌ದೃಶ್ಯದ ಅಪಾರ ವಿಸ್ತಾರ, ಮೈಲಿಯಾಳದ ತನಕ
ಬಾಯ್ತೆರೆದ ಕರಾಳ ಪಾತಾಳ, ತಿಳಿಗೆಂಪು ಕಂದು ಬಿಳಿ ಹಳದಿ
ಮರಳುಗಲ್ಲಿನಗಾಧ ಆಕಾರಗಳ ಹಲವು ಯೋಜನೆಗಟ್ಟಲೆಯ
ವೈವಿಧ್ಯಮಯ ಹರವು, ಹುಬ್ಬುಗಂಟಿಕ್ಕಿ ದುರುಗುಟ್ಟಿರುವ
ಭಯೋದ್ವೇಗಕರ ಮಹಸ್ಮೌನ, ಕೋಟ್ಯಂತರ ವರುಷ
ಜಲ ಚಾಣದಿಂದಖಂಡ ಬಂಡೆಗಳ ಕೊರೆದು ಕೆತ್ತುತ್ತ ಈ

ಬೃಹನ್ನಿರ್ಮಿತಿಗಳ ರೂವಾರಿಸಿದ ಕೊಲರೆಡೊ ನದಿ ಜಕಣಾರ್ಯನ
ಆಳದಲಿ ಮೈತಳೆದ ಮಿಂಚು ನೂಲಿನ ಹರಿವು—ಇತ್ಯಾದಿ ನೋಟ
ಅದೆಷ್ಟು ಸಮಯದ ತನಕ ಹೃದಯ ತನ್ಮಯಗೊಳಿಸಿ
ಬರಿಸಿತ್ತೊ ಮೈ ಮರೆವು; ನಿಸರ್ಗದಾಕಳು ದೃಶ್ಯ ಸುಧೆ
ಮನದಣಿಯ ಕೆಚ್ಚಲಿಸಿದುದಕೆ ಮುಡಿ ಮಣಿದು
ಭಾವಾತಿಶಯತೆಯಲಿ ಧನ್ಯವೆನಿಸಿತ್ತೊ ನನ್ನಿರವು.'

'ಗ್ರಾಂಡ್ ಕಾನ್ಯನ್ ಕಣಿವೆ'ಯನ್ನು ಪ್ರತ್ಯಕ್ಷ ನೋಡದವರಿಗೂ ಅದರ ಸೊಬಗೇನೆಂಬುದನ್ನು ನಿಖರವಾಗಿ ಕಟ್ಟಿಕೊಟ್ಟ ಅದ್ಭುತ ಈ ಸಾಲುಗಳಲ್ಲಿದೆ.

ಬಾಯ್ತೆರೆದ ಕರಾಳ ಪಾತಾಳ, ಅಗಾಧ ಆಕಾರಗಳ ಯೋಜನಗಟ್ಟಲೆಯ ವೈವಿಧ್ಯಮಯ ಹರವು, ಹುಬ್ಬುಗಂಟಿಕ್ಕಿ ದುರುಗುಟ್ಟಿರುವ ಭಯೋದ್ವೇಗಕರ ಮಹಾ ಮೌನ, ಕೋಟ್ಯಂತರ ವರ್ಷ ಜಲ ಚಾಣದಿಂದ—ಖಂಡ ಬಂಡೆಗಳ ಕೆತ್ತುವಿಕೆ, ಈ ಚಾಣ ಸಂಚಲನೆಯಿಂದ ಉಂಟಾದ ಬೃಹನ್ನಿರ್ಮಿತಿಗಳ ರೂವಾರಿತನ ನಡೆಸಿದ ಸನಿಹದಲ್ಲೇ ಹರಿಯುವ ಕೊಲರೆಡೊ ನದಿ. ಈ ನದಿಯನ್ನು ನಮ್ಮ ಜಕಣಾಚಾರಿಗೆ ಹೋಲಿಸಿದ ಅನನ್ಯತೆ, ಆಳದಲ್ಲಿ ನದಿ ಮಿಂಚಿನ ನೂಲಂತೆ ಇನ್ನೂ ಪ್ರಹರಿಸುತ್ತಿರುವ ಅಮೋಘ ದೃಶ್ಯ, ಮರಳು ಗಲ್ಲುಗಳು ಇತ್ಯಾದಿ—ಕವಿತೆಯಲ್ಲಿನ ಚಿತ್ರ ಒಟ್ಟಾರೆಯಾಗಿ ಓದುಗನಿಗೆ ಕಣಿವೆಯ ಅದ್ಭುತವನ್ನು ಚಕ್ ಎಂದು ಕಟ್ಟಿಕೊಡುತ್ತದೆ.

ಕವಿ, ಕಣಿವೆಯ ಮಹತ್ವಿಕೆಯನ್ನು ಬೆಳೆಸುತ್ತ, ಕವಿತೆ ಬೆಳೆಯುವ ಕ್ರಮವನ್ನು ತೋರದೇ ಇರರು. ಇಷ್ಟೇ ಅಲ್ಲ, ಪ್ರಕೃತಿಯ ಈ ಮಹಾನ್ ವಿಶೇಷವನ್ನು ಚಿತ್ರಿಸಿ ತೋರಿಸುತ್ತ, ತನ್ನಲ್ಲುಂಟಾದ ಆತ್ಮದ ಬೆಳಕಿನ ಕುರಿತೂ ತಿಳಿಸುವ, ಆ ಬೆಳಕಿನ ಸೌಂದರ್ಯ ವಿದೆ.

'... ನಿಸರ್ಗದಾಕಳು ದೃಶ್ಯ ಸುಧೆ
ಮನದಣಿಯ ಕೆಚ್ಚಲಿಸಿದುದಕೆ ಮುಡಿ ಮಣಿದು
ಭಾವಾತಿಶಯತೆಯಲಿ ಧನ್ಯವೆನಿಸಿತ್ತೊ ನನ್ನಿರವು.'

ಒಂದನ್ನು ಇನ್ನೊಂದಕ್ಕೆ ಹೊಂದಿಸುತ್ತ ಸರಾಗವಾಗಿ ಹೊರ ಹೊಮ್ಮಿದ ಶಬ್ದ ವಿಶೇಷ ಕವಿತೆಯ ಚೆಂದವಾಗಿದೆ ತಿಣುಕಿ ಬರೆದ ಕವಿತೆಯಾಗಿದ್ದರೆ, ಶಬ್ದಗಳು ಕೃತಕವಾಗಿ ಇಲ್ಲಿ ನರಳುತ್ತಲಿದ್ದವು.

'ನಿಳಯುವನು ಹೊರವಂಟು ಕಂಗಳ ಬೆಳಕು
ತಿಮಿರವ ಕೆಡಿಸೆ ಕಂಕಣ ಲಲಿತ ಝೇಂಕೃತಿಯಿಂದ
ತೂಗುವ ವಾಮ ಭುಜ ಲತೆಯ
ಒಲಿದು ಮೇಲುದು ನೂಕಿ ನಡುಗುವ
ಮೊಲೆಯ ಭರದಲಿ ಮೆಲ್ಲನಡಿಯಿಡುತ
ಬಂದಳು ಬಾಣಸಿಗನರಮನೆಗೆ.'

ಕುಮಾರವ್ಯಾಸನ ಕವಿತೆಯ ಈ ಚಿತ್ರಣದಲ್ಲಿ ದ್ರೌಪದಿ ಅಡಿಗೆ ಶಾಲೆಯಲ್ಲಿರುವ

ಭೀಮನನ್ನು ಸಂಧಿಸಲು ಹೊರಟಿದ್ದಾಳೆ. ಅಜ್ಞಾತವಾಸದ ಸಂದರ್ಭದಲ್ಲಿ ಬಂದುಳಿದ ವಿರಾಟ ರಾಜ್ಯದ ಸೇನಾಧಿಪತಿ ಕೀಚಕನ ಕೀಟಲೆಯನ್ನು ತಾಳಲಾಗದೆ ಅವನನ್ನು ಸಂಹರಿಸು ಎಂದು ನಿವೇದಿಸಲು ಬರುವ ಸನ್ನಿವೇಶದ ಈ ಸಾಲುಗಳನ್ನು ನೆನಪಿಸಿಕೊಂಡೇ ನಿಸಾರರ ಕವಿತೆಯ ಕುರಿತು ಮುಂದುವರಿಯ ಬೇಕಾಗಿದೆ.

ನಿಳಯ, ತಿಮಿರ, ಲಲಿತ ಝೇಂಕೃತಿ, ವಾಮ ಭುಜ ಲತೆ, ಮೊಲೆಯ ಭರ, ಬಾಣಸಿಗನರಮನೆ ಇತ್ಯಾದಿ ಶಬ್ದಗಳ ಪುಂಜಕ್ಕೆ ರಭಸದ ಚಲನೆ ಇದೆ. ಲೇಖನಿಯ ತಿಣುಕಾಟದಿಂದಾಗಿ ಹೊರ ಬಂದವು ಅಲ್ಲ ಅವು. ಅಂತೆಯೇ ಶಬ್ದಗಳ ನಿರರ್ಥಕ ಪ್ರದರ್ಶನವಿಲ್ಲ ಇಲ್ಲಿ. ಕ್ಲಿಷ್ಟತೆ ಇಲ್ಲದ ಸರಳತೆ ಶಬ್ದಗಳ ಪ್ರಧಾನ ಗುಣ ಇಲ್ಲಿ. ದುಷ್ಟ ನೊಬ್ಬನಿಂದ ಬೇಸತ್ತವಳು, ಕದ್ದು ಗಂಡನ ಬಳಿ ಸಾಗಿ ಹೊರಟ ಸಂದರ್ಭದಲ್ಲಿ ಆವರಿಸಿದ ಕತ್ತಲು, ಉಸಿರಿನ ಹೊಯ್ದಾಟ, ದೇಹದ ಬಳಲಿಕೆ ಎಲ್ಲ ಚೆನ್ನಾಗಿ ಚಿತ್ರಗೊಂಡಿದೆ.

ನಿಸಾರರು ಕೂಡ ಕುಮಾರವ್ಯಾಸನ ಮಟ್ಟದಲ್ಲೇ ಶಬ್ದಗಳ ಜಾಲರಿ ನಿರ್ಮಿಸಿ ಕವನಕ್ಕೆ, ಅದರ ಅರ್ಥಕ್ಕೆ ತಾನು ಒದಗಿಸಬೇಕಾದ ನಿರ್ದಿಷ್ಟ ಆವರಣವನ್ನು ಒದಗಿಸಬಲ್ಲರು ಎಂಬುದಕ್ಕೆ 'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಕವಿತೆ ಒಳ್ಳೆಯ ಉದಾಹರಣೆಯಾಗಿದೆ. ನಿಸರ್ಗದ ಕಾರ್ಯ ವಿಧಾನದಲ್ಲಿ ತಂತಾನೆ ನಿರ್ಮಿತವಾದ ಪಾತಾಳ, ಮಾನವನ ಬದುಕು ಎತ್ತರದಲ್ಲೇ ನಿಂತು ಆಹ್ಲಾದವನ್ನು ಪಡೆಯುವ ಪಾತಾಳವೂ ಆಗಿದೆ. ಸುಮ್ಮನೆ ಆದ ಪಾತಾಳವಲ್ಲ ಇದು. ಕೋಟ್ಯಂತರ ವರ್ಷಗಳ ಕಾಲ ಕೊಲರೆಡೊ ಎಂಬ ನದಿ ಜಲ ಚಾಣ ಹಿಡಿದು, ನಮ್ಮ ನೆಲದ ಅಂದರೆ, ಕನ್ನಡದ ಸೊಗಡಿನ ಜಕಣಾಚಾರ್ಯನಂತೆ ಬಂಡೆಗಳ ಕಡೆದು, ಈ ಪ್ರಪಾತವನ್ನು ನಿರ್ಮಿಸಿದೆ. 'ಆಳದಲಿ ಮೈತಳೆದ ಮಿಂಚು ನೂಲಿನ ಹರಿವು, ಬರಿಸಿತ್ತೊ ಮೈಮರೆವು' ಪ್ರಾಸಕ್ಕಾಗಿನ ಪ್ರಾಸವಾಗಿ ಆಯಾಸ ಪಡೆಯುತ್ತಿಲ್ಲ.

ಈ ಲೇಖನದ ಮೊದಲೇ ತಿಳಿಸಿದಂತೆ ಪ್ರಕೃತಿಯನ್ನು ಆರಾಧಿಸುವುದು ನಿಸಾರರಿಗೆ ಯಾವಾಗಲೂ ಮುಖ್ಯ. ಹೀಗಾಗಿ ವರ್ತಮಾನದ ಕಾಲಘಟ್ಟದಲ್ಲಿ ಪ್ರಕೃತಿಯ ಸ್ವರೂಪ, ಆ ತನಕ ತಾನು ಕಂಡಿರದ ಸ್ವರೂಪದಲ್ಲಿ ಹುಟ್ಟಿಸುವ ಬೆರಗಲ್ಲಿ, ಅವರಿಗೆ ಸಹಜವಾದ ಕಾವ್ಯಹೃದಯದ ಫಲವಂತಿಕೆಗೆ ಹೊರ ಶಕ್ತಿ ದಕ್ಕಿದ್ದು ಇರಬೇಕು. ನಿಸರ್ಗವನ್ನು ಆಕಳಂತೆ ಕಂಡ ಕವಿಗೆ ಭಾವಾತಿಶಯತೆ ಮೂಡುತ್ತದೆ. 'ಕೆಚ್ಚಲಿಸು' ಎಂಬ ಶಬ್ದ ಪ್ರಯೋಗಕ್ಕೆ ಮುಂದಾಗುತ್ತಾರೆ. ಕರ್ಕಶವಿರದ ಶಬ್ದವೊಂದು ಟಂಕಿಸಿಕೊಂಡಾಗ ಕವಿತೆ ಹೊಸ ಚಿಂತನೆಗೂ ದಾರಿಯೊಂದನ್ನು ಮಾಡುತ್ತದೆ. 'ನಿಸರ್ಗದಾಕಳು ಗ್ರಾಂಡ್, ಕಾನ್ಯನ್ ಅಂಥ ದೃಶ್ಯಸುಧೆ ಯನ್ನು ಮನದಣಿಯೆ ಕೆಚ್ಚಲಿಸಿದುದಕೆ ಕವಿಯ ಮುಡಿ ಮಣಿಯುತ್ತದೆ. ಗೋಳವೊಂದರ ಒಳಗೆ ಹಿಡಿದಿಟ್ಟ, ಬಣ್ಣದ ದ್ರಾವಣದಲ್ಲಿ ಬೇಗಡೆಯನ್ನು ವಿವಿಧ ಆಕೃತಿಗಳಲ್ಲಿ ಕತ್ತರಿಸಿ ಬಣ್ಣಬಣ್ಣದ ನಕ್ಷತ್ರ, ವರ್ತುಲ, ತ್ರಿಕೋನಗಳನ್ನಾಗಿಸಿ ತೇಲಿಸಿ, ಆ ಗಾಜಿನ ಗೋಳವನ್ನು ಮೇಲೆ ಕೆಳಗೆ, ಹಿಂದೆ ಮುಂದೆ ಮಾಡಿದಾಗ ಚಕಚಕನೆ ವಿವಿಧ ಸ್ವರೂಪ, ಆಕಾರ, ಶಿಸ್ತು ಬದ್ಧತೆಯಲ್ಲಿ ಹೊಡಚಾಡುವ ದೃಶ್ಯಕ್ಕೆ ಮನೋಹರತೆಯಿದ್ದಂತೆ, ಶಬ್ದಗಳು ನಿಸಾರರ ಕವಿತೆಯಲ್ಲಿ ಶಿಸ್ತಿನಿಂದ ಹೊಡಚಾಡುತ್ತವೆ. ಕಿವಿಗೆ ಆಕರ್ಷಕವಾಗಿರುತ್ತವೆ. ಕರ್ಕಶತನ

ವೊದಗಿದ್ದರೆ ಹೊಸ ಶಬ್ದ ಟಂಕಿಸಿಯೂ ಸಾರ್ಥಕತೆ ದಕ್ಕದೇ ಹೋಗುತ್ತಿತ್ತು. ಸಾರ್ಥಕತೆ ಇರದ ಹೊಸ ಶಬ್ದವನ್ನು ನಿಸಾರ್ ಎಂದೂ ಟಂಕಿಸಲಾರರು.

'ಕೆಚ್ಚಲಿಸು' ನಿಸಾರರಿಂದ ಉಂಟಾದ ಸಾರ್ಥಕ ಶಬ್ದ. ಕರ್ಕಶತೆ ಇರದೆ ಇದರ ಅರ್ಥವೂ ಇಲ್ಲಿ ಉಪಲಬ್ಧ. ಇದು ಅವರ ಶಬ್ದ ಬ್ರಹ್ಮಸ್ವರೂಪವೇ ಆಗಿದೆ. ಕೆಲ ತಿಂಗಳ ಹಿಂದೆ ನಡೆದ ಕಾರ್ಯಕ್ರಮವೊಂದು compact disc ಹಾಡುಗಳ (ಅದು ಶ್ರೀಮತಿ ಎಂ. ಆರ್. ಕಮಲ ಅವರ ಹಾಡುಗಳ ಸಿಡಿಯ ಬಿಡುಗಡೆ ಸಂದರ್ಭ) ಬಿಡುಗಡೆಗಾಗಿ ನಿಯೋಜಿತ ಗೊಂಡಿತ್ತು. ಬಿಡುಗಡೆ ನಿಸಾರರಿಂದಲೇ. ಆ ದಿನ compact discಗೆ ನಿಸಾರರು ಒಂದು ಸುಂದರ ಕನ್ನಡ ಶಬ್ದವನ್ನು ಟಂಕಿಸಿಯೂ ಕೊಟ್ಟರು. 'ಸಾಂದ್ರಿಕೆ' ಎಂದು ಕರೆಯಬಹು ದೆಂದರು. ಹೌದು, ಇದು ಒಂದು ಒಳ್ಳೆಯ ಶಬ್ದ. ಬಳಕೆಗೆ ಸುಸೂತ್ರವಾದದ್ದು ಎಂದೇ ಅನಿಸಿಕೆ.

ಇನ್ನೊಂದು ಸಮಾರಂಭದ ದಿವಸ. ಶ್ರೀಮತಿ ವಸಂತ ಕಲಬಾಗಲ್ ಅವರ ಪುಸ್ತಕ ಬಿಡುಗಡೆಯ ದಿವಸ ನಿಯೋಜಿತಗೊಂಡ ಸಮಾರಂಭ. ಸರ್‍ರನೆ ನಿಸಾರರ ಭಾಷಣದಲ್ಲಿ 'ವಾತಾಪಿಸು' ಎಂಬ ಶಬ್ದ ಪ್ರಯೋಗಗೊಂಡಿತ್ತು. ಕರ್ಕಶತೆಯೇ ಇರದ ಹೊಸ ಶಬ್ದ ಪ್ರಯೋಗವೇ ಇದು! ಅನುಮಾನವಿಲ್ಲ. ವಾತಾಪಿಯಂಥ ದುಷ್ಟ ರಾಕ್ಷಸ ಕ್ರಿಮಿಯನ್ನು ಅಗಸ್ತ್ಯರು ಜಠರದಲ್ಲಿ ಅರಗಿಸಿಕೊಳ್ಳುವ ಕಥನವೇ ಒಂದು ಶಬ್ದದಲ್ಲಿ ಹೊರಹೊಮ್ಮುವ ಪರಿ ಅನನ್ಯವಾಗಿದೆ. ಪ್ರತಿ ಕ್ಲಿಷ್ಟಕರ ಸನ್ನಿವೇಶದಲ್ಲೂ ಸಮರ್ಥನೊಬ್ಬನಿಗೆ ಕಂಟಕ ವೊಂದನ್ನು ಅರಗಿಸಿಕೊಳ್ಳುವುದಕ್ಕೆ ಚೈತನ್ಯ ಬೇಕಾಗುತ್ತದೆ. 'ವಾತಾಪಿಸಿಕೊಳ್ಳು' ಎಂಬುದರ ಅರ್ಥ ಇಲ್ಲಿ ಹೀಗಾಗಿ ಸರಿಹೊಂದಬಹುದು. ಇದು ಅದ್ಭುತ.

ಇಂಥ ಅನೇಕ ಶಬ್ದಗಳು ಇವರ ವಿವಿಧ ಕವಿತೆಗಳ ಹಕ್ಕಿ ಕೊರಳಿಂದ ಹೊರ ಹೊಮ್ಮಿಕೊಂಡ ಉದಾಹರಣೆಗಳಿವೆ. ಇವು ಕವಿತೆಯ ಚಲನೆಯಲ್ಲಿ, ಇನ್ನೇನೋ ಒಂದರ ಜತೆ ಕೂಡಿಕೊಂಡು ಒದಗಿಸಿದ ಸಂಧಿ, ಸಮಾಸ, ನುಡಿಗಟ್ಟುಗಳಲ್ಲಿ ವೈವಿಧ್ಯವನ್ನು, ಸುಹಾಸಕರ ಸ್ವರೂಪವನ್ನು, ಇನ್ನೊಂದೇ ತೆರನಾದ ಸಮತೋಲನವನ್ನು ಕವಿತೆಗೆ ಒದಗಿಸುತ್ತವೆ. ಉದಾಹರಣೆಗೆ: 'ಅತಿ ಸನಾತನ' ಕವಿತೆಯ 'ಜಲಜನ್ಮದರ್ಹತೆ'ಯು ಮೀನಿಗಿದೆ ಎಂಬ ಪ್ರಯೋಗ, 'ಅಭಿವಂದನೆ, ನಿಮಗೆ' ಎಂಬ ಕವಿತೆಯ 'ದಿವಗಾಮಿ ಗಳಾದರು' ಎಂದು ಗಡಿಯಲ್ಲಿ ರಕ್ಷಣೆಯ ಭಾರ ಹೊತ್ತ ಸೈನಿಕರು ಪ್ರಾಣ ನೀಗಿದ ಸಂದರ್ಭದಲ್ಲಿ ಉಪಯೋಗಿಸಿದ ರೀತಿ, ಇದೇ ಕವಿತೆಯಲ್ಲೇ ಪ್ರಯೋಗಿಸಿದ 'ಘೀಂಕರಿಸು' ಎಂಬ ಶಬ್ದದ ಮಹತ್ವಿಕೆ, ಬಾಲ್ಯ ಎಂಬ ಕವಿತೆಯಲ್ಲಿ,

'ಪುಟ್ಟ ಕಂದನಿಗಮ್ಮ ಚಂದಮಾಮನ ತೋರಿ
ಒಲಿಸಿ ತಿನಿಸಿದ ತುಪ್ಪದನ್ನ ಬಾಲ್ಯ'

ಎಂಬಲ್ಲಿ ಇಡೀ ಬಾಲ್ಯವನ್ನೇ ತುಪ್ಪದನ್ನದ ಸ್ವಾದಕ್ಕೆ ಸಮಾನಗೊಳಿಸುವ ನವಿರಿನಲ್ಲಿ ವಿಶೇಷವಾದ ನಿಸಾರರದೇ ಆದ ಅಪರೂಪದ ಕವನ ನಿರ್ಮಾಣದ ಅಸಲು ಕ್ರಿಯೆಯೊಂದು ಹರಳುಗಟ್ಟುತ್ತದೆ.

ನಾನಪಾತ್ರ, ನಾಟಿನಂತಲುಗದೆಯೆ, ವಿಷ ಕಹಿಸಿದೆ, ನಿಸ್ತರಂಗ ಕೊಳದೆದೆ, ಮಧುಪ ಗೀತ, ಯವ್ವನದ ಹದಿನೆಂಟು ಹೆಜ್ಜೆಯಲ್ಲಿ, ವಿಲಯಾನಲ, ಕೃತಾರ್ಥಕಾರ್ಯರು, ಖೋಡೇಸ್ ಹಾಲು, ನಿರ್ಮತ್ಸರ—ಇತ್ಯಾದಿ 'ನಿಸಾರಿಸಂ', ಮತ್ಸರವಿರದೆ ಸಾರ್ಥಕವಾದ ಬೆಳಕಿನಲ್ಲಿ ಕಾಣಬೇಕಾದ ಪ್ರಯೋಗಗಳಾಗಿವೆ. ಯಾದಿ ಇನ್ನೂ ಇದ್ದೇ ಇದೆ.

'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಕವನದ ಮೊದಲ ಭಾಗವನ್ನು ಕುರಿತಾಗಿ ಇವಿಷ್ಟನ್ನು, ಜತೆಗೆ ನಿಸಾರರು ಟಂಕಿಸುವ ಹೊಸ, ಹೊಸ ಶಬ್ದಗಳ ಬಗೆಗೊಂದು ಟಿಪ್ಪಣಿಯನ್ನು ಹೇಳಿ ಮುಗಿಸಿದ ಮೇಲೆ, ಕವಿತೆಯ ಎರಡನೆಯ ಭಾಗಕ್ಕೆ ಹೊರಳಿಕೊಳ್ಳಲು ನನಗೆ ಇನ್ನಿಷ್ಟು ಕುತೂಹಲವಿದೆ. ಪ್ರಕೃತಿ ಒಟ್ಟಾರೆಯಾಗಿ ತೋರುವ ಬೆರಗಿನ ಎದುರೇ, ಜೀವ ಜೀವದ ಅನ್ಯೋನ್ಯತೆ ಬೆಸೆದುಕೊಳ್ಳುವ ವಿಶಿಷ್ಟ ಸನ್ನಿವೇಶವೊಂದನ್ನು ಎರಡನೆಯ ಭಾಗದಲ್ಲಿ ಕವಿ ಚಿತ್ರಿಸಿದ್ದಾರೆ. ನಿಸಾರರ ಕವಿತೆಗಳನ್ನು ಓದಿ, ಕೇಳಿ ನಿಸಾರರ ಬಗೆಗೆ ತಿಳಿದಿದ್ದ, ಅವರನ್ನು ನೋಡಿಯೂ ಇದ್ದ ಗರ್ಭಿಣಿಯಾಗಿದ್ದ ಯುವತಿಯೋರ್ವಳನ್ನು ಅವರು ಸಂಧಿಸುತ್ತಾರೆ. ಗರ್ಭವತಿ ಯುವತಿ ಕೂಡ ಅದ್ಭುತ ಪ್ರಕೃತಿಯ ಒಂದು ಭಾಗ. ಕವಿ ಕೂಡ ಇನ್ನೇನು? ಹೀಗಾಗಿ ಕವಿಗೆ ಪ್ರಕೃತಿ ಹಾಗೂ ಜೀವನ ಯಾವಾಗಲೂ ಮುಖ್ಯವೇ ಎಂದು ಎಂದೋ ತಿಳಿದ ನಂಬಿಕೆ ಇನ್ನಿಷ್ಟು ದೃಢಗೊಳ್ಳುವ ಸನ್ನಿವೇಶ ಎದುರಾಗುತ್ತದೆ.

ಗ್ರಾಂಡ್ ಕಾನ್ಯನ್ ಎಂಬ ಭೂಮಾದ್ಭುತ ದೃಶ್ಯವಶರಾಗಿ ಕವಿ ಭಾವ ಮೂಕತೆ ಯಿಂದ ಚಿತ್ರಸ್ಥವಾಗಿದ್ದಾಗ ('ಚಿತ್ರಸ್ಥ' ಎನ್ನುವ ಶಬ್ದದ ಬಳಕೆಯಲ್ಲಿ ಆಹ್ಲಾದತೆ, ಅರ್ಥ ಪೂರ್ಣ ಧ್ವನಿ ಎರಡೂ ಇವೆ) ಗರ್ಭಿಣಿ ಯುವತಿ ಎದುರಾಗಿದ್ದಾಳೆ, ಕವಿಗೆ. ಅಮೇರಿಕದ ನ್ಯೂಜರ್ಸಿ ಪ್ರಾಂತದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸದಲ್ಲಿರುವ ಕನ್ನಡಿಗ ಈಕೆಯ ಪತಿ. ಮೈಸೂರಿನಿಂದ ಅಮೇರಿಕಕ್ಕೆ ಬಂದ ಮಾವನಿಗೆ ಅಮೇರಿಕ ದೇಶದ ರಮಣೀಯ ಪ್ರದೇಶಗಳನ್ನು ತೋರಿಸಲು ಗಂಡನ ಜತೆ ಮಾಡಿಕೊಂಡು ಬಂದಿದ್ದಾಳೆ. ಚೊಚ್ಚಲ ಬಸುರಿ. 'ಕನ್ನಡವೆನೆ ಕಿವಿ ನಿಮಿರುವುದು' ಎಂಬುದು ಯುವತಿಯ ಭಾವ ವಿಶೇಷ. ಹೀಗಿರುವಾಗ ಕನ್ನಡ ಕವಿಯೇ ಗ್ರಾಂಡ್ ಕಾನ್ಯನ್ ಎದುರು ಎದುರಾದಾಗ ಅವಳಿಗೆ ಸಂತೋಷ. 'ನೀವು ಕವಿಗಳಲ್ಲವೆ?' ಎಂದು ಪ್ರಶ್ನಿಸಿ ಹೌದೆಂಬುದನ್ನು ದೃಢೀಕರಿಸಿಕೊಂಡಿ ದ್ದಾಳೆ. ಗಂಡ, ಮಾವ, ಅವಳು—ಹೀಗೆ ಮೂವರೂ ಕವಿಯೊಂದಿಗೆ ಕನ್ನಡದಲ್ಲಿ ಕುಶಲ ಮಾತನಾಡಿಕೊಂಡಿದ್ದಾರೆ. ಭೂಗರ್ಭದ ಸವಕಳಿ ನದಿಯ ಜಲ ಚಾಣದಿಂದಾಗಿ ನಡೆಯುತ್ತಲೇ ಇರುವ ಎದುರಿನ ಭೂಮಾದ್ಭುತದ ಎದುರು, ಯುವತಿಯಾಗಿ ಕವಿಯ ಎದುರು ಬಂದಿರುವ ಪ್ರಕೃತಿ ತನ್ನವನ ಚಿಗುರನ್ನು ಒಳಗೆ ತುಂಬಿಟ್ಟುಕೊಂಡು, ಗರ್ಭವನ್ನು ಶ್ರೀಮಂತಗೊಳಿಸುತ್ತಿದ್ದಾಳೆ. ಮಾವ, ಅವರ ಮಗ ಅಂದರೆ ತನ್ನ ಪತಿ ಈ ಇಬ್ಬರ ಜತೆಗೆ ಕವಿಯ ಎದುರಿಗಿದ್ದಾಳೆ. ಕವಿಗೆ ವಿಭಿನ್ನ ದೃಶ್ಯಗಳು ಎದುರಾದ ಬಗೆಯಿಂದ ಜೀವನದ ಕುರಿತಾಗಿನ ಪ್ರಸ್ತುತ ವಿಸ್ಮಯ ಹೊಸ ಅನುಭವವನ್ನು ಒದಗಿಸಿದೆ. ಮೇಲಾಗಿ ದುರ್ಗಮ ಪ್ರದೇಶದಲ್ಲಿ ಒಮ್ಮೆಗೇ ತುಂಬಿಕೊಂಡ ಕನ್ನಡ ಭಾಷೆ. ಹೀಗಾಗಿ ಕನ್ನಡವನ್ನು ಹೊಸ ದೃಶ್ಯ, ಕಾಲ, ಪರಿಸರದಲ್ಲಿ ಕವಿ ಬಳಸಿಕೊಳ್ಳುತ್ತಾರೆ. ಭಾವುಕತೆಯಲ್ಲಿ, ನಾಟಕೀಯತೆಯಲ್ಲಿ,

ಜೀವದ ಉತ್ಸಾಹದಲ್ಲಿ ಕವಿತೆ ಒಂದು ಹೊಸ ಮಜಲು ಪಡೆಯುತ್ತದೆ.

ಕೆಲ ಹೊತ್ತು ಕನ್ನಡ ಕವಿಯ ಜತೆಗೆ ಮಾತನಾಡಿದ ಯುವತಿ, ಅವಳ ಗಂಡ, ಮಾವ ಅಲ್ಲಿಂದ, ಕವಿಯಿಂದ ವಿದಾಯ ಪಡೆಯುತ್ತಾರೆ. ಆದರೆ ಹೀಗೆ ಅಗಲುವ ಮುನ್ನ ಏನಾಗುತ್ತದೆಂಬುದನ್ನು ಕವಿತೆಯ ಸಾಲುಗಳಿಂದಲೇ ತಿಳಿದರೆ ಚೆನ್ನ. ಕವಿತೆಯೊಳಗಿನ ನಾಟಕೀಯ ಅಂಶದ ಪರಿಪೂರ್ಣತೆಗೆ ಭಂಗ ತರಕೂಡದೆಂಬ ದೃಷ್ಟಿಯಿಂದ ಆ ಸಾಲುಗಳನ್ನೇ ಯಥಾವತ್ ಇಟ್ಟಿದ್ದೇನೆ:

‘ಅಗಲುವ ಮುನ್ನ ಆ ಗರ್ಭಿಣಿ ಹೆಣ್ಣು ನನ್ನ ಬಳಿ ಸಾರಿ
ನಾಚಿಕೆಯ ತಗ್ಗು ದನಿಯಲ್ಲಿ: ‘ಗಂಡು, ಹೆಣ್ಣು ಮಕ್ಕಳಿಗಿಡುವ
ಒಂದೆರಡು ಮುದ್ದಾದ ಹೆಸರ ಸೂಚಿಸುವಿರಾ? ವಾರವಾದರೂ
ಚಿಂತೆಯಿಲ್ಲ’
ಎಂದೊರೆದು ಕಾಗದದ ತುಣುಕಿನಲಿ ದೂರವಾಣಿಯ ಸಂಖ್ಯೆ
ಬರೆದು ನನ್ನ ಕೈಗಿತ್ತು ಸೇರಿಕೊಂಡಳು ತನ್ನವರ ಜೊತೆ.
‘ಆಗಲಿ’ ಎಂದಾಗ ಅವಳ ಮೊಗದಲ್ಲಿ ಮೊಗ್ಗರಳಿದ ಕೃತಜ್ಞತೆ,
ಕೃತಾರ್ಥತೆಯ ಗಮಗಮ, ಬಾಳಿನಲಿ ಬಹು ಸಮಯ ಸ್ಮರಣೀಯ.
ಆಕೆ ಕಣ್ಮರೆಯಾದ ಮೇಲಷ್ಟೆ ಹೊಳೆದಿತ್ತು ನನಗೆ ಅಂದು:
‘ಛೆ! ಆಕೆಯ ಹೆಸರು, ವಿಳಾಸ ವಿಚಾರಿಸಲಿಲ್ಲವಲ್ಲ’
ಎನ್ನುವ ಕೊರಗು
ಶಪಿಸಿದೆ ನನ್ನ ನಾನೇ, ಹಾಳು ವಿಸ್ಮೃತಿಗೆ ಕಡು ನೊಂದು.’

ಇಲ್ಲಿಂದ ಕವಿತೆ ತನ್ನ ಮೂರನೆಯ ಘಟ್ಟಕ್ಕೆ ಹೊರಳಿಕೊಳ್ಳುತ್ತದೆ. ಈ ಹಂತದಲ್ಲಿ ಕವಿತೆಯ ಸಫಲತೆಯ ದೃಷ್ಟಿಯಿಂದ ಅತಿ ಮುಖ್ಯವಾದ ಭಾಗ.

ಕವಿಯದೇ ಮಾತುಗಳಲ್ಲಿ ಹೇಳುವುದಾದರೆ: ‘ವ್ಯಕ್ತಿ ಸಂಕಲ್ಪವನು ಲೆಕ್ಕಿಸದ ಘಟಿತಗಳ ಅನೂಹ್ಯ ಸರಮಾಲೆ.’

ಕ್ರೌಂಚಪಕ್ಷಿಯು ಮಿಥುನಕ್ಕೆ ಕೂಡಿದ್ದ ಕಾವಿನ ಬೆರಗಿನಲ್ಲಿ ಹಿಗ್ಗುತ್ತ, ಹಿಗ್ಗುತ್ತ ಪ್ರಕೃತಿಯ ವಿಸ್ತಾರಕ್ಕೆ ತನ್ನದೊಂದಿಷ್ಟು ಪಾಲನ್ನು ಒದಗಿಸುತ್ತಿದ್ದ ಸಂದರ್ಭದಲ್ಲಿ, ಬೇಡ ನೋರ್ವ ಬಾಣ ಬಿಟ್ಟು, ಸಾವನ್ನು ದೀಕ್ಷೆಯಾಗಿಸ ಹೊರಟ ಸಂದರ್ಭದಲ್ಲಿ ‘ಮಾ ನಿಷಾದ’ ಎಂಬ ಕವಿಯ ಆರ್ತತೆ, ನೋವೇ ಮೊದಲಾಗಿ ಹುಟ್ಟಿದ ರಾಮಾಯಣದ ಪುರಾಣದಂತೆ, ಇಲ್ಲಿಯೂ ಕವಿಯ ವಿಷಾದಕ್ಕೆ ಅನೇಕ ಆಯಾಮಗಳಿವೆ. ಕವಿಗೆ ಅನಿಸಿದ ತೀವ್ರತೆಗೆ, ಬದುಕಿನ ಕ್ಷಣಿಕತೆ, ಆದರೂ ಇದ್ದಿರುವ ಸಂಭ್ರಮ ಓದುಗನಿಗೂ `ಅರೆ, ಹೀಗಾಗಿ ಹೋಯ್ತಲ್ಲ' ಎಂಬ ವಿಷಾದ ಆವರಿಸುವ ಹಾಗೆ ಹೊಸ ಹೊಸ ಒಳನೋಟಗಳು ಒದಗುತ್ತಲೇ ಇರುತ್ತವೆ.

ಯುವತಿ ತನ್ನ ಫೋನ್ ಸಂಖ್ಯೆಯನ್ನು ಕೊಟ್ಟು ಹೋಗುತ್ತಾಳೇನೋ ಹೌದು. ಆದರೆ ತಿರುಗಿ ಭೂಮಾದ್ಭುತದ ಚೆಲು ನೋಟದೈಸಿರಿಗೆ ಕವಿ ಶರಣಾಗುತ್ತಾನೆ. ಕಣ್ಮನಸು,

ತಲೆ, ಕತ್ತು ದಣಿಯುವ ತನಕ ನೋಡಿ ಮುಗಿಸಿದ ಮೇಲೆ ತಿರುಗಿ ಮನೆಗೆ ಎಂದು, ತನ್ನನ್ನು ಕರೆ ತಂದಿದ್ದ ಗೆಳೆಯರ ಜತೆಗೆ ವಾಪಸ್ಸಾಗುವಾಗ ಬಿಚ್ಚಿದ್ದ ಷೂ ಲೇಸು ಕಟ್ಟಲು ಕವಿ ಬಾಗುತ್ತಾರೆ, ಪಾದಗಳ ಬಳಿ.

ಆದರೆ ದುರ್ದೈವವೋ ಎಂಬಂತೆ ಗರ್ಭಿಣಿ ಯುವತಿ ನೀಡಿದ್ದ ದೂರವಾಣಿಯ ಸಂಖ್ಯೆ ಇದ್ದ ಚೀಟಿ ಅಂಗಿಯ ಕಿಸೆಯಲ್ಲಿ ಇರಿಸಿದ್ದು ಕೆಳಗೆ ಸರ್ರನೆ ಬಿದ್ದು, ಗಾಳಿಯ ರಭಸಕ್ಕೆ ಅಲ್ಲಿದ್ದ ಸನಿಹದ ಗ್ರ್ಯಾಂಡ್ ಕಾನ್ಯನ್ ಕಂದರದ ಆಳಕ್ಕೆ ತೇಲುತ್ತ ಕೊಚ್ಚಿ ಹೋಗಿತ್ತು. ಒಂದು ಕವಿತೆ, ಕಥೆಯಾಗುವ ಸ್ಥಿತ್ಯಂತರದ ಘಟ್ಟ ಇದೇ ಆಗಿದೆ. ಈ transformation ಕೇವಲ melodramatic ಘಟನೆಯಾಗಿ ಉಳಿಯದಂತೆ ಮುಂದೆ ಕವಿ ಕವಿತೆಯ ಮೂಲಕ ಕಟ್ಟಿಕೊಟ್ಟ ಜೀವನದ ಬಗೆಗಿನ ಸೂಕ್ಷ್ಮ ವ್ಯಾಖ್ಯಾನ ನಿಸಾರರ ಉತ್ತಮ ಕಾವ್ಯ ಅಭಿವ್ಯಕ್ತಿಯ ಶಕ್ತಿಗೆ ಒಳ್ಳೆಯ ಸಾಕ್ಷಿಯಾಗಿದೆ.

'ನಾ ಕೊಟ್ಟ ಮಾತು ಹಣ್ಣೊಳ್ಳದೆಯೆ ಸುರುಟಿ ಹೋದದ್ದು,
..
ಆ ಗರ್ಭವತಿ ಹೆಣ್ಣ ಭಾರಿ ನಿರೀಕ್ಷೆ ಮಣ್ಣುಗೂಡಿದ್ದು.'

'ಎಷ್ಟೇ ಚಿಂತಿಸಿದರೂ ಕೊನೆಗೆ ಬಿಚ್ಚದೇ ಉಳಿವ ಕಗ್ಗಂಟು—ಜೀವಿಗಳ ಬಾಳಿನೊಳ ನಂಟು' ಎಂಬ ಮಾತಿನೊಂದಿಗೆ ಕವಿತೆ ಮುಗಿಯುತ್ತದೆ. ಈ ಅಸಹಾಯಕತೆಯಿಂದಾಗಿ ಗ್ರ್ಯಾಂಡ್ ಕಾನ್ಯನ್ ಎಂಬ ಆ ಭೂಮಾದ್ಭುತ ಕಂದರದ ಮಹಾದೃಶ್ಯವೇ ಕವಿಗೆ ಅಪಥ್ಯವೆನಿಸುತ್ತದೆ. ಬದುಕಿನ ವಿಪರ್ಯಾಸ ಇಲ್ಲಿ ಸ್ಪಷ್ಟ. ತನ್ನ ಮಗುವಿಗೆ ಇಡಬಹುದಾದ ಹೆಸರುಗಳ ಯಾದಿಯೊಂದು ಬರುತ್ತದೆ ಎಂದು ಕಾದಿರುವ ಗರ್ಭಿಣಿ ಯುವತಿಗೆ ತಾನು ನೀಡಿದ ದೂರವಾಣಿಯ ಸಂಖ್ಯೆಯನ್ನು ಕವಿ ಕಳಕೊಂಡ ಸುದ್ದಿ ತಿಳಿಯದು. ಕವಿಯಿಂದ ದೂರವಾಣಿಯ ಕರೆಘಂಟೆ ಈಗ, ಇದೀಗ, ಇಂದೀಗ ಬರಬಹುದೆಂಬ ನಿರೀಕ್ಷೆಯಲ್ಲಿಯೇ ಅವಳಿರುತ್ತಾಳೆ. ಕನ್ನಡದ ದಿಸೆಯಿಂದ ಎಲ್ಲೋ ದೂರದ ಅಮೇರಿಕದ ದುರ್ಗಮ ಬಿಂದುವಿನಲ್ಲಿ ಸಂಧಿಸಿದ ಕನ್ನಡಿಗರು ಬದುಕಿನ ಭಾಗವಾಗಿ ಸ್ವೀಕರಿಸಬೇಕಾಗಿ ಬಂದ ಈ ಘಟನೆ ಸ್ವಾರಸ್ಯಕರ, ಅನಂತ ಕಾಲದ ತನಕ ಮೆಲುಕು ಹಾಕಬಹುದಾದ ಘಟನೆ. ಆದರೆ ವಿಶಿಷ್ಟ ಸನ್ನಿವೇಶದಿಂದಾಗಿ ಕವಿಗೂ ಗರ್ಭಿಣಿ ಯುವತಿಗೂ ಇನ್ನು ಸಂಪರ್ಕ ಸಾಧ್ಯವಾಗದ ಹಾಗೆ ನಿರ್ಮಾಣಗೊಂಡ ಅಸಹಾಯಕತೆ. ಜವಾಬ್ದಾರಿಯಿಂದ ಅನಿರೀಕ್ಷಿತವಾಗಿ ಹಿಂದೆ ಸರಿಯಬೇಕಾದ ಕವಿಯ ಮನಸ್ಸಿನ ದಾರುಣತೆ—ಬದುಕಿನ ಸಂದರ್ಭದ ಅನಿವಾರ್ಯ, ರಹಸ್ಯ ನಿಗೂಢಗಳು. ಬಿಚ್ಚದೇ ಉಳಿಯುವ ಕಗ್ಗಂಟು.

ಎಲ್ಲಕ್ಕೂ ಹೆಚ್ಚಿನ ಬೆರಗು ಕವಿತೆಯೊಳಗೆ ಒಡಮೂಡಿದ ಕವಿಯ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಅನನ್ಯತೆ. ಎಲ್ಲವೂ ಸುಖಮಯ ಎಂಬ ಹೊತ್ತಿಗೆ ಬೆಳೆದುಕೊಳ್ಳುವ ಕಹಿಯುಣಿಸುವ ವಿಷಾದ. ಈ ವಿಷಾದಕ್ಕೆ ಕವಿ ಚಡಪಡಿಸಬೇಕಿರಲಿಲ್ಲ. ಆದರೆ ನಿಸಾರರಿಗೆ ಚಡಪಡಿಕೆ ಇದೆ. ಇದು ಅವರ ಮಾನವೀಯತೆಯ ಸೂಚಕ. ಸಂಗಡ ಪ್ರಕೃತಿಯ ಸ್ವರೂಪಗಳನ್ನು ಈ ವಿಷಾದದ ನೆರಳಲ್ಲಿಯೇ ಅದ್ಭುತವಾಗಿಸುವ, ಅನಂತರ ಅದ್ಭುತವೇ

ಅಪಥ್ಯವೆನ್ನಿಸುವ ಪರಿಣಾಮಗಳನ್ನು ಕಟ್ಟಿಕೊಡುವ, ಕವನದ ತೀವ್ರತೆಯನ್ನು ಒಂದು ಬಿಂದುವಿನಿಂದ, ಇನ್ನೊಂದು ಬಿಂದುವಿಗೆ ಸರಿಸಿ ಚಲನಶೀಲವಾಗಿಸುವ ಅವರ ಪ್ರತಿಭೆ. ಮಾನವೀಯತೆ ಹಾಗೂ ಪ್ರತಿಭೆ ಎರಡೂ ಒಗ್ಗೂಡಿದಾಗ ಮಾತ್ರ ಗ್ರಾಂಡ್ ಕಾನ್ಯನ್ ಎಂಬ ಕಣಿವೆ ಪ್ರಕೃತಿಯ ಸವಕಳಿಗೊಂಡ ಸ್ವರೂಪವಾದರೂ ಭೂಮಾದ್ಭುತವಾಗಿ, ಯುವತಿಯೋರ್ವಳ ಗರ್ಭದಲ್ಲಿ ಮತ್ತೆ ಚಿಗುರಲು, ಬೆಳೆಯಲು ಸಾಧ್ಯವಾಗುತ್ತದೆ.

ಮನುಷ್ಯ ಕೇವಲ ಹೊಟ್ಟೆ ಹೊರೆಯುವ, ತನುವನ್ನು ತಣಿಸಿಕೊಳ್ಳುವ ಪ್ರಾಣಿಯಲ್ಲ. ಸೌಂದರ್ಯಕ್ಕೆ ಮಿಡಿಯುವ, ಭಾವವಶವಾಗುವ ಅತಿಶಯ ಗುಣವೂ ಅವನಿಗೆ ಜನ್ಮದತ್ತವಾಗಿ ಪ್ರಾಪ್ತವಾಗಿರುತ್ತದೆ. ಚಹ ಕಾಫಿ ಕುಡಿಯುವ ಬಟ್ಟಲು ಬಸಿಗಳ ಮೇಲೆ ಚೆಲುವಾದ ಚಿತ್ತಾರವಿರುವುದನ್ನು ಅವನು ಮೆಚ್ಚುತ್ತಾನೆ. ಆದರಿಂದ ಹರ್ಷಗೊಳ್ಳುತ್ತಾನೆ. ಹೊದಿಕೆ, ತಲೆದಿಂಬು, ಮೇಜಿನ ಮೇಲೆ ಹಾಸುವ ಬಟ್ಟೆ ಇತ್ಯಾದಿಗಳ ಮೇಲೂ ಸಾಮಾನ್ಯ ದೃಷ್ಟಿಯಿಂದ ಪ್ರಯೋಜನವಿಲ್ಲವೆನ್ನುವಂತಹ ಕುಸುರಿ ಕೆಲಸವನ್ನು ಮೂಡಿಸಿರುತ್ತಾನೆ. ಮನೆಯ ಕಟ್ಟಡದ ರಕ್ಷಣೆಯ ಮುಖ್ಯೋದ್ದೇಶವುಳ್ಳ ಬೆಳ್ಳಗಿನ ಬೋಳು ಗೋಡೆಗಳ ಮೇಲೆ ಬಣ್ಣಬಣ್ಣದ ಪಟಗಳನ್ನು, ಭಾವಚಿತ್ರಗಳನ್ನು ದಿನಸೂಚಿಯನ್ನು ತೂಗಿ ಹಾಕಿರುತ್ತಾನೆ. ಇವೆಲ್ಲವೂ ಹಸಿವೆಯನ್ನು ಮರೆಸಿ ತುತ್ತಿನ ಚೀಲವನ್ನು ಭರ್ತಿ ಮಾಡುತ್ತವೆಯೆ? ಬಟ್ಟೆಯಂತೆ ಮೈ ಮುಚ್ಚುತ್ತವೆಯೆ? ಹಾಗಿದ್ದರೆ ಏಕೆ ಇಂಥವೆಲ್ಲ? ದೈಹಿಕ ಅಗತ್ಯಗಳ ಈಡೇರಿಕೆಯ ಜೊತೆಯಲ್ಲೇ ಹೃನ್ಮನಗಳನ್ನು ಸಂತೈಸಬೇಕಾದ, ಸಂತೋಷಗೊಳಿಸಬೇಕಾದ ಒಂದು ಕರ್ತವ್ಯವೂ ಮನುಷ್ಯನಿಗೆ ಇರುತ್ತದೆ. ಸೌಂದರ್ಯದ ಅನುಸಂಧಾನ ಮತ್ತು ಕಲಾನುಭವಗಳ ಮೂಲಕ ಇದು ಸಾಧ್ಯವಾಗುತ್ತದೆ.

(ಮನುಷ್ಯನ ಸೌಂದರ್ಯ ಪ್ರಜ್ಞೆ)

✧ ✧ ✧

ಸಾರ್ಥಕ ಜೀವಿಯ ಬಾಳ್ವೆ ಸ್ವ-ಅರ್ಥಕ್ಕಿಂತ ಪರಾರ್ಥಕ್ಕೆ ಮಿಗಿಲಾಗಿ ಮೀಸಲು. ಸ್ವಹಿತ ಸವೆಯದೆ ಪರ ಹಿತ ಪ್ರಜ್ವಲಿಸದು.

(ಪರೋಪಕಾರ ಗುಣ)

ಉತ್ಸವಪ್ರಿಯರು

೧

ಮುಗಿಯಿತಲ್ಲ ಸದ್ಯಕ್ಕೆ ಸಮಾರಂಭದ ಜಲಸ,
ಬೀದಿಯಿಕ್ಕೆಲದ ಬಣ್ಣದಲಂಕಾರ ದೀಪಗಳಿಗಿನ್ನೇನು ಕೆಲಸ?
ತೆಗೆದು ಹಾಕಿ.
ಬಾಡಿಗೆಯ ಕುರ್ಚಿ ಜಮಖಾನ
ಷಾಮಿಯಾನಗಳ ಟೆಂಪೊ ರೆಡಿಯಾಗಿದೆ:
ಮಾಡಿ ಬಿಡಿ ಚುಕ್ತ ಬಾಕಿ.

ಹಾಡೆಂದು ಅರಚಿ ನೆರೆಹೊರೆಯ ನೆಮ್ಮದಿಯ ಪರಚಿದ್ದಾಯ್ತು;
ನಾಟ್ಯವೆನ್ನುತ್ತ ಕಂಡಾಪಟ್ಟೆ ಕೈಕಾಲುಗಳ ತಿರುಚಿ
ಸಭಿಕೋತ್ತಮರ ಸದಭಿರುಚಿಯ ತರಚಿ
ಗಾಯಗೊಳಿಸಿ ಕೃತಕೃತ್ಯರಾದದ್ದಾಯ್ತು;
ಭಾಷಣ ಜಡಿದು, ಆಲಿಸಿದ ಅಮಾಯಕ ಕಿವಿಗಳ
ಶೀಲ ಉಜಾಡೆಬ್ಬಿಸಿ ಪುಣ್ಯ ಕಟ್ಟಿಕೊಂಡಾಯ್ತು.
—ಮತ್ತೇನುಳಿದಿದೆ ನಿಮ್ಮ ಅಪ್ರತಿಭ ಪ್ರತಿಭಾಪ್ರದರ್ಶನಕ್ಕೆ?
ಸಾಕಲ್ಲವೆ ಇಷ್ಟು, ಕಾಡಿ ಬೇಡಿ ಭಿಕ್ಷೆ
ವಸೂಲಿಸಿದ ಕಾಣಿಕೆಯ ಸಾರ್ವಜನಿಕ ಹಣಕ್ಕೆ?

೨

ಗುಡಿಸಿ, ಬೆಂಚು ಮೇಜನ್ನೆಳೆದು ಮೋಜಿಗಣಿಮಾಡಿ
ಬೆವರು ಹರಿಸುವ ಸೇವಕ ಬಡಪಾಯಿಗಳು ಯಾರೋ;
ವೇದಿಕೆ ರಚಿಸಿ, ಬಾಳೆಯ ಕಂಬ, ಮಾವಿನೆಲೆ ತೋರಣ,
ಬ್ಯಾನರ್, ಬಣ್ಣ ಬಣ್ಣದ ಕಾಗದದ ಓರಣದಲಂಕರಣ
ಕಟ್ಟಿ ಸಿಂಗರಿಸುವ ಸ್ವಯಂಸಹಾಯಕ ಭಾಯಿಗಳು ಯಾರೋ—
ಪಾದ ಬೆಳೆಸುತ್ತೀರಿ ನೀವು ಶ್ರೀಮದ್ಗಂಭೀರ ಚಹರೆ ಹೊತ್ತು
ತುದಿಗಾಲ ಮೇಲೆ ಕಾದಿರಲು ಬಲು ಹೊತ್ತು ಮಂದಿ ಬೇಸತ್ತು.
ಮುಕ್ತಾಯ ಭಾಷಣದ ತೂಕಡಿಕೆಯ ಮುಕ್ತಿಯವಧಿಯವರೆಗೆ

ರಂಗದ ಮೇಲೆಲ್ಲ ನಿಮ್ಮದೇ ಧಣಿತನದ ದವಲತ್ತು, ಗೌಜು ಗಮ್ಮತ್ತು.
ಇನ್ನು ವ್ಯವಸ್ಥಾಪಕರೆಂಬ ಹಕ್ಕು ಸ್ಥಾಪಕರು,
ಸಂಚಾಲಕರು ಹೇಗೋ ಹಾಗೆ ಚಾಲಕರು ನೀವೇ
ಮುನ್ನಾಗಿಸಲು ಮನಸ್ಸೀ ಮನೋರಂಜನೆಯ ನಾವೆ.
ಅಷ್ಟೇಕೆ, ಅತಿಥಿ ಮಾನ್ಯರು ಸಹ ನೀವೇ, ನಿಮ್ಮವರೆ;
ನಿಮ್ಮದೇ ಜಾತಿ, ಜಾಯಮಾನದವರೆ.
ನಿಮ್ಮ ಹಿರಿಮೆಯ ಹದನು ಇನ್ನು ಹೇಳುವುದೇನು?
ಎಲ್ಲವೂ ನೀವೇ ಅಲ್ಲವೇನು? ಸ್ವಾತ್ಮರತಿಗಳು,
ಸರ್ವಾಧೀಶ ನಿರಾತಂಕ ಭೂಪತಿಗಳು,
ಸಮಾರಂಭದೆಡಬಿಡಂಗಿ ಸಾರೋಟಿನ ಸ್ವಾರ್ಥಸಾರಥಿಗಳು.

೩

ನಿಮ್ಮ ಬಾಲಲೀಲೆಗಳನೊಂದೂ ಬಿಡದೆ ಬಿಚ್ಚಿ,
ಖರೀದಿಸಿ ಸಿಳ್ಳು ಕೇಕೆ ಕೋಲಾಹಲಗಳ ವರ್ಣಮಯ ಗಿಲಗಿಚ್ಚಿ,
ಶಹಭಾಸ್‌ಗಿರಿಯ ಪುಷ್ಪಭಾರವೇರಿಸಿಕೊಂಡು ಕೊರಳಿಗೆ
ಮಹಾರಾಯರಾಗಿ ಸರಿಯುತ್ತೀರಿ ನೇಪಥ್ಯದ ತಣ್ಣೆರಳಿಗೆ.
ನಿಮ್ಮ ಗಂಟೆಗಟ್ಟಲೆಯ ಗಂಟಲಿನ ಆವುಟದ ಹಾರಾಟಕ್ಕೆ ನೂಲು,
ಮನ್ನಣೆ ಪ್ರತಿಷ್ಠೆಗಳ ರಖಂವಾರು ಬಾವುಟಕ್ಕೆ ಕೋಲು;
ಅಭಿನಯದ ಹೆಸರಿನಲಿ ನಟಿಯನೂ ನಾಚಿಸುವ ನಖರಾಗಳಿಗೆ
ಕುಮ್ಮಕ್ಕಿನೆಣ್ಣೆಯಾಗಿರುವ ಪಾಪಿ ಬಕರಾಗಳಿಗೆ—
ನಿಮ್ಮ ಗರಿಗರಿ, ಸೆಂಟು ಸುವಾಸಿತ ವರ್ಚಸ್ಸು ಪ್ರಸಿದ್ಧಿಗಳೆಂಬ
ನೋಟ ಸೆಳೆಯುವ ಮಾಟದುಡುಪುಗಳ ಮೆರೆದಾಟಕೆಂದೇ, ಒಳಗೆ
ಬೆವರು ಕೊಳೆ ಗಬ್ಬುಗಳ ಹೀರಿ, ಅಜ್ಞಾತತೆಯಲ್ಲೇ ನಾರಿ
ಕಾಯಕ ಸವೆಸಿರುವ ರದ್ದಿ ಅಸ್ತಿತ್ವದ ಬನಿಯನ್ನುಗಳಿಗೆ—
ಮತ್ತೆ ಶುರು ನಡು ರಾತ್ರಿತನಕ ಮೈದಣಿಯ ಕರಸೇವೆ:
ಕಟ್ಟಿದ್ದನ್ನ, ಜೋಡಿಸಿದ್ದನ್ನ, ತೂಗಿಸಿದ್ದನ್ನ
ಬಿಚ್ಚುವ, ಬೇರ್ಪಡಿಸುವ, ಇಳಿಸಿ ಸುರುಳಿಸುವ,
ತಂದಂತೆ ಸರಿಯಾಗಿ ಲೆಕ್ಕವಿಟ್ಟು ಮಳಿಗೆಗೆ ಮರಳಿಸುವ
ನಿಷ್ಕಾಮ ಚಾಕರಿಯ ಹೊಣೆಗಾರಿಕೆಯ ಒಣ ಹೆಮ್ಮೆ.

ವರ್ಷೇ ವರ್ಷೇ ಪುನರುಚ್ಚರಿಸುತ್ತದೆ ಇದೇ ಕತೆ:
ಕಾಯಕರ್ತರಿಗೆ ಸಭಾಸದರ ಜೊತೆ
ಚಕಾರವೆತ್ತದೆ ನಿಮ್ಮ ಮಂಗಾಟಗಳ ಹೇರನ್ನೆಲ್ಲ
ಹೊತ್ತು ಸಂಭಾಳಿಸುವ ನಿಸ್ಸಹಾಯಕತೆ.

ಕಾರ್ಯಕ್ರಮದ ಸಂಭ್ರಮದ ಐಸಿರಿಯೆಲ್ಲ ಹೋಗಿ ಸೂರೆ
ಪೀತಾಂಬರದ ಸೀರೆಯುಟ್ಟು ಸಡಗರಿಸಿದ್ದ ಊರಿಗೂರೇ
ನಾಳೆ ತಳೆಯುತ್ತದೆ ಯಥಾಪ್ರಕಾರದ ಹ್ಯಾಪ ಮೋರೆ.
ಪುನಃ ಚಾಲು ಹಾದಿಬೀದಿಗಳಲ್ಲಿ ಪುರಸೊತ್ತಿಲ್ಲದ ವರಾತ:
ತಿರುಬೋಕಿಗಳ ತಿರುಗಾಟ, ಗುಲ್ಲುಗದ್ದಲದ ಬೋಗಾರು ಕೊರೆತ;
ಪೆಟ್ರೋಲು, ಡೀಜಲೆಣ್ಣೆಗಳ ಕರೆ, ಹೊಗೆಗಳಿರಿತ;
—ಕನ್ನ ಕೊರೆಯಿಸಿಕೊಂಡು ಅಭ್ಯಾಸವಾಗಿರುವ
ತೆರಿಗೆದಾರನ ಕಿಸೆಯ ಮೂಕ ಖಿನ್ನತೆಯಂತೆ—
ತುಟಿಪಿಟಕ್ಕೆನ್ನದೆ ಎಲ್ಲ ಸೈರಿಸಿಕೊಂಡು
ದುಡಿವ ತೊತ್ತಿನ ಬಡಕಲೆತ್ತಿನ ಬಾರುಗೋಲಿನ ಬಡಿತ.

★ ★ ★

(ಕವನ ಸಂಕಲನ: **‘ಆಕಾಶಕ್ಕೆ ಸರಹದ್ದುಗಳಿಲ್ಲ’**)



'ಉತ್ಸವಪ್ರಿಯರು' : ಮೇಲೇರಿದವರ ಮೆರೆದಾಟಕ್ಕೆ ಕೊಳೆಗಬ್ಬಿಗರ ಕರಸೇವೆ

♦ *ಸತ್ಯನಾರಾಯಣ ರಾವ್ ಅಣತಿ*

ನಿಸಾರ್ ಅವರು ಅರ್ಧ ಶತಮಾನದಿಂದ ಸಮಕಾಲೀನ ನಗರ ಜೀವನದ ಸಂವೇದನೆಯನ್ನು ತಾವೇ ಟಂಕಿಸಿಕೊಂಡ ನುಡಿಗಟ್ಟುಗಳ ಮೂಲಕ ಹಿಡಿದಿಡುತ್ತಾ ಬಂದಿದ್ದಾರೆ. ಇವರು ಹುಟ್ಟಿನ ಮುಸ್ಲಿಂ ಸಂಸ್ಕೃತಿಯ ಮನೆಮಾತಿನ ಉರ್ದು ಭಾಷೆಯ ನುಡಿಗಳನ್ನು ತಾವು ಬದುಕುತ್ತಿರುವ ಸಾಂಸ್ಕೃತಿಕ ಸಂದರ್ಭದ ಕನ್ನಡ ನುಡಿಯೊಂದಿಗೆ ಸಮ್ಮಿಲನಗೊಳಿಸಿ ಕಾವ್ಯಾರ್ಥವನ್ನು ಹೊಮ್ಮಿಸುವ ಕವಿ. ಎರಡು ಸಂಸ್ಕೃತಿಗಳನ್ನೂ ಸಮನ್ವಯಗೊಳಿಸಲು ಪರಿಶ್ರಮಿಸುತ್ತಾ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ಕೊರಗುವ ಕವಿಯೂ ಹೌದು. ಓರಗೆಯ ನವ್ಯರಿಗಿಂತ ಭಿನ್ನವಾದ ಗಾಯನ ಧಾಟಿಯನ್ನು ರೂಢಿಸಿಕೊಂಡವರು. ಇವರ ಕಾವ್ಯದಲ್ಲಿ ನುಡಿ ಜಾಣ್ಮೆ ನಿಯತ ಲಯಬದ್ಧತೆ, ಪ್ರಾಸ ನೈಪುಣ್ಯ, ಸಂಗೀತದ ನಾದ, ಲಾಲಿತ್ಯ ಎಲ್ಲವೂ ಸಮ್ಮಿಲನಗೊಂಡು ಓದುಗರು ಹಾಗೂ ಕೇಳುಗರು 'ವಾಹ್' ಅನ್ನುವಂತೆ ಆಕೃತಿಯನ್ನು ನಿರ್ಮಿಸುವ ಚಾಲಾಕಿಯ ಕವಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ 'ಉತ್ಸವ ಪ್ರಿಯರು' ಕವಿತೆಯನ್ನು ಪರಿಶೀಲಿಸಬಹುದು.

'ಉತ್ಸವ ಪ್ರಿಯರು' ನಿಸಾರ್ ಅಹಮದ್ ಅವರ ಪ್ರಾತಿನಿಧಿಕ ಕವಿತೆಗಳಲ್ಲೊಂದು. ಅವರ ಹನ್ನೊಂದನೆಯ ಕವನ ಸಂಕಲನ 'ಆಕಾಶಕ್ಕೆ ಸರಹದ್ದುಗಳಿಲ್ಲ' (೧೯೯೮) ಸಂಕಲನದಲ್ಲಿದೆ. ನಾಲ್ಕು ವಿಭಾಗಗಳಲ್ಲಿರುವ ಅರವತ್ನಾಲ್ಕು ಪಂಕ್ತಿಗಳ

ಕವಿತೆ. ಶೀರ್ಷಿಕೆಯೇ ಸೂಚಿಸುವಂತೆ ಉತ್ಸವಗಳನ್ನು ವಿಜೃಂಭಣೆಯಿಂದ ನಡೆಸುವ `ಧಣಿ`ತನವನ್ನು, ಢೋಂಗಿತನವನ್ನು; ಉತ್ಸವದ ಯಶಸ್ಸಿಗಾಗಿ ಶ್ರಮಿಸುವ ಸೇವಕ ಬಡಪಾಯಿಗಳನ್ನು, ಸ್ವಯಂ ಸಹಾಯಕ ಭಾಯಿಗಳ ಪರಿಪಾಟಲನ್ನು; ಉತ್ಸವದ ಅನಂತರದ ಊರಿನ ಹ್ಯಾಪಮೋರೆಯನ್ನು ಮಾರ್ಮಿಕವಾಗಿ ಅನಾವರಣಗೊಳಿಸುತ್ತದೆ. ಕಾಣಿಕೆ ತೆರುವವರ ಅಸಹಾಯಕ ಸ್ಥಿತಿ, ಅಮಾಯಕ ಸಭಿಕರ ಕಿವಿಗಳ ಶೀಲ ಹರಣ, ಪ್ರದರ್ಶನಗೊಳ್ಳುವ ಪ್ರತಿಭೆಗಳು `ಸದಭಿರುಚಿಯನ್ನು ತರಚುವುದು` ಎಲ್ಲವನ್ನೂ ಕವಿ ಗೇಲಿ ಮಾಡುತ್ತಾರೆ.

ಕವಿತೆ ಉತ್ಸವ ಮುಗಿದ ಮೇಲೆ, ಉತ್ಸವಕ್ಕಾಗಿ ತಂದ ಸಾಮಾನು ಸರಂಜಾಮುಗಳ ವಿಲೇವಾರಿ ಕಾರ್ಯವನ್ನು ನಿರ್ದೇಶಿಸುವುದರೊಂದಿಗೆ ಆರಂಭವಾಗುತ್ತದೆ: 'ಮುಗಿಯಿತಲ್ಲ ಸಧ್ಯಕ್ಕೆ ಸಮಾರಂಭದ ಜಲಸ` ಎಂಬ ನಿಟ್ಟುಸಿರಿನೊಂದಿಗೆ. ಸಾರ್ವಜನಿಕರಿಂದ ವಸೂಲು ಮಾಡಿದ ಕಾಣಿಕೆಯ ಹಣವನ್ನು ಉಡಾಯಿಸಿದ ರೀತಿ ರಿವಾಜುಗಳನ್ನು ಗುರಿಯಾಗಿಟ್ಟು ಕೊಂಡು ಮೊದಲ ಹದಿನೈದು ಸಾಲುಗಳಲ್ಲಿ, ಉತ್ಸವಕ್ಕಾಗಿ ಮಾಡಿದ ವಿದ್ಯುತ್ ಅಲಂಕಾರ, ತಂದುಹಾಕಿದ ಷಾಮಿಯಾನ, ಜಮಖಾನ ಎಲ್ಲವನ್ನೂ ಹಿಂದಿರುಗಿಸಿ ಬಾಡಿಗೆ ಚುಕ್ತ ಮಾಡಲು ನಿರ್ದೇಶಿಸುವ ಮೇಲ್ವಿಚಾರಕರು. ಸಮಾರಂಭದಲ್ಲಿ ನಡೆದದ್ದಾರೂ ಏನು?

'ಹಾಡೆಂದು ಅರಚಿ ನೆರೆಹೊರೆಯ ನೆಮ್ಮದಿಯ ಪರಚಿದ್ದಾಯ್ತು;
ನಾಟ್ಯವೆನ್ನುತ್ತ ಕಂಡಾಪಟ್ಟೆ ಕೈಕಾಲುಗಳ ತಿರುಚಿ
ಸಭಿಕೋತ್ತಮರ ಸದಭಿರುಚಿಯ ತರಚಿ
ಗಾಯಗೊಳಿಸಿ ಕೃತಕೃತ್ಯರಾದದ್ದಾಯ್ತು;
ಭಾಷಣ ಜಡಿದು, ಆಲಿಸಿದ ಅಮಾಯಕ ಕಿವಿಗಳ
ಶೀಲ ಉಜಾಡೆಬ್ಬಿಸಿ ಪುಣ್ಯ ಕಟ್ಟಿಕೊಂಡಾಯ್ತು.
—ಮತ್ತೇನುಳಿದಿದೆ ನಿಮ್ಮ ಅಪ್ರತಿಭ ಪ್ರತಿಭಾಪ್ರದರ್ಶನಕ್ಕೆ?
ಸಾಕಲ್ಲವೆ ಇಷ್ಟು, ಕಾಡಿ ಬೇಡಿ ಭಿಕ್ಷೆ,
ವಸೂಲಿಸಿದ ಕಾಣಿಕೆಯ ಸಾರ್ವಜನಿಕ ಹಣಕ್ಕೆ?'

—ಹೀಗೆ ಪುಣ್ಯ ಕಟ್ಟಿಕೊಳ್ಳುವ ಡೌಲನ್ನು, ಅಭಿರುಚಿಯನ್ನು ತರಚಿದ ಪ್ರತಿಭಾ ಪ್ರದರ್ಶನವನ್ನು, ಸಭಿಕರ ಅಮಾಯಕ ಕಿವಿಗಳ ಶೀಲವನ್ನು ಉಜಾಡೆಬ್ಬಿಸಿದ್ದನ್ನು ಚಿತ್ರಿಸುವ ಮೇಲಿನ ಸಾಲುಗಳು ಓದುಗನಿಗೆ `ಹೌದು, ಹೀಗೆ ನಡೆಯುವುದು` ಅನ್ನಿಸಿಬಿಡುತ್ತದೆ.

ಎರಡನೆಯ ಭಾಗದಲ್ಲಿ: ಉತ್ಸವಕ್ಕಾಗಿ—

'ಗುಡಿಸಿ, ಬೆಂಚು ಮೇಜನ್ನೆಳೆದು ಮೋಜಿಗಣಿಮಾಡಿ
ಬೆವರು ಹರಿಸುವ ಸೇವಕ ಬಡಪಾಯಿಗಳು ಯಾರೋ;
ವೇದಿಕೆ ರಚಿಸಿ, ಬಾಳೆಯ ಕಂಬ, ಮಾವಿನೆಲೆ ತೋರಣ,
ಬ್ಯಾನರ್, ಬಣ್ಣ ಬಣ್ಣದ ಕಾಗದದ ಓರಣದಲಂಕರಣ
ಕಟ್ಟಿ ಸಿಂಗರಿಸುವ ಸ್ವಯಂಸಹಾಯಕ ಭಾಯಿಗಳು ಯಾರೋ'

ಉತ್ಸವಕ್ಕಾಗಿ ಶ್ರಮದ ಬೆವರು ಹರಿಸುವವರ, ಅಲಂಕರಣಗೊಳಿಸುವ ಸ್ವಯಂ

ಸಹಾಯಕ ಭಾಯಿಗಳ ಅಜ್ಞಾತ ಸ್ಥಿತಿಯಲ್ಲಿ:

> 'ರಂಗದ ಮೇಲೆಲ್ಲ ನಿಮ್ಮದೇ ಧಣಿತನದ ದವಲತ್ತು, ಗೌಜು ಗಮ್ಮತ್ತು.
> ಇನ್ನು ವ್ಯವಸ್ಥಾಪಕರೆಂಬ ಹಕ್ಕು ಸ್ಥಾಪಕರು'

ಇಂಥವರು ಉತ್ಸವದ ಸಂಚಾಲಕರು, ಚಾಲಕರೂ ಆಗಿ 'ಮನಸ್ವೀ ಮನರಂಜನೆಯ ನಾವೆ' ಹಾಯಿಸಿದವರು ಮಾತ್ರವಲ್ಲ:

> 'ಅತಿಥಿ ಮಾನ್ಯರು ಸಹ ನೀವೇ, ನಿಮ್ಮವರೆ;
> ನಿಮ್ಮದೇ ಜಾತಿ, ಜಾಯಮಾನದವರೆ.'

—ಇನ್ನು ಇವರ ಹಿರಿಮೆ ಎಂಥದ್ದು ಅಂದರೆ: 'ಸ್ವಾತ್ಮರತಿಗಳು, ಸರ್ವಾಧೀಶ ನಿರಾತಂಕ ಭೂಪತಿಗಳು, ಸಮಾರಂಭದ ಎಡಬಿಡಂಗಿ ಸಾರೋಟಿನ ಸ್ವಾರ್ಥ ಸಾರಥಿಗಳು'. ನಿಸಾರರು ಮಾತ್ರ ಹೀಗೆಲ್ಲಾ ಟೀಕಿಸುತ್ತ ಲೇವಡಿ ಮಾಡುವ ಸಾಮರ್ಥ್ಯವುಳ್ಳವರು ಎಂಬುದು ಅವರ ಸೃಜನಶೀಲತೆಯ ಯಶಸ್ಸೂ ಆಗಿದೆ.

ಮೂರನೆಯ ಭಾಗದಲ್ಲಿ: ಸ್ವಾರ್ಥ ಸಾರಥಿಗಳಾದವರು ತಮ್ಮ ಬಾಲಲೀಲೆಗಳನ್ನೆಲ್ಲಾ ಬಿಚ್ಚಿಟ್ಟು, ಸಿಳ್ಳು ಕೇಕೆಗಳನ್ನೂ ಖರೀದಿಸಿ, ಶಹಭಾಸ್‌ಗಿರಿ ಗಿಟ್ಟಿಸಿ, ಹಾರ ಹಾಕಿಸಿಕೊಂಡು ಮಹಾರಾಯರಾಗಿ ಮೆರೆದು ನೇಪಥ್ಯದ ತಂಪು ನೆರಳಿಗೆ ಸರಿದುಬಿಡುತ್ತಾರೆ. ಇಷ್ಟೆಲ್ಲಕ್ಕೂ ಕುಮ್ಮಕ್ಕಿನ ಎಣ್ಣೆಯಾಗಿರುವ ಪಾಪಿ ಬಕರಾಗಳು:

> 'ನಿಮ್ಮ ಗರಿಗರಿ, ಸೆಂಟು ಸುವಾಸಿತ ವರ್ಚಸ್ಸು ಪ್ರಸಿದ್ಧಿಗಳೆಂಬ
> ನೋಟ ಸೆಳೆಯುವ ಮಾಟದುಡುಪುಗಳ ಮರೆದಾಟಕೆಂದೇ, ಒಳಗೆ
> ಬೆವರು ಕೊಳೆ ಗಬ್ಬುಗಳ ಹೀರಿ, ಅಜ್ಞಾತತೆಯಲ್ಲೇ ನಾರಿ
> ಕಾಯಕ ಸವೆಸಿರುವ ರದ್ದಿ ಅಸ್ತಿತ್ವದ ಬನಿಯನ್ನುಗಳಿಗೆ—
> ಮತ್ತೆ ಶುರು ನಡು ರಾತ್ರಿತನಕ ಮೈದಣಿಯ ಕರಸೇವೆ:
> ಕಟ್ಟಿದ್ದನ್ನ, ಜೋಡಿಸಿದ್ದನ್ನ, ತೂಗಿಸಿದ್ದನ್ನ,
> ಬಿಚ್ಚುವ, ಬೇರ್ಪಡಿಸುವ, ಇಳಿಸಿ ಸುರುಳಿಸುವ,
> ತಂದಂತೆ ಸರಿಯಾಗಿ ಲೆಕ್ಕವಿಟ್ಟು ಮಳಿಗೆಗೆ ಮರಳಿಸುವ
> ನಿಷ್ಕಾಮ ಚಾಕರಿಯ ಹೊಣೆಗಾರಿಕೆಯ ಒಣ ಹೆಮ್ಮೆ.'

ಉತ್ಸವದ ಯಶಸ್ಸು, ಧಣಿಯರ ಹೆಗ್ಗಳಿಕೆಗಾಗಿ ದುಡಿದವರು ಮತ್ತೆ ಮೈದಣಿಯ ಕರಸೇವೆಯಲ್ಲಿ ತೊಡಗಿ ತಮ್ಮ ಹೊಣೆಗಾರಿಕೆಯನ್ನು, ನಿಷ್ಕಾಮ ಚಾಕರಿಯ ವಿವರಗಳನ್ನು ಜೋಡಿಸಿ, ಅಜ್ಞಾತತೆಯಲ್ಲಿ ನಾರಿ ಕಾಯಕ ಸವೆಸಿರುವ ರದ್ದಿ ಅಸ್ತಿತ್ವದ ಬನಿಯನ್ನುಗಳ ಸ್ಥಿತಿಗತಿಯನ್ನು ಒಂದು ರೀತಿ ವಿಜೃಂಭಿಸುವಂತೆ ಕಾವ್ಯಮಯವಾಗಿಸಿ, ಅನುಕಂಪವನ್ನು ಅಭಿವ್ಯಕ್ತಿಗೊಳಿಸಿರುವ ರೀತಿ ಮನ ಮಿಡಿಯುವಂತಿದೆ. ಇಷ್ಟೆಲ್ಲಾ ಪ್ರತಿವರ್ಷ ನಡೆಯುವ ಕ್ರಿಯಾವಿಧಿಯಾಗಿರುವುದು:

> 'ವರ್ಷೇ ವರ್ಷೇ ಪುನರುಚ್ಚರಿಸುತ್ತದೆ ಇದೇ ಕತೆ :
> ಕಾರ್ಯಕರ್ತರಿಗೆ ಸಭಾಸದರ ಜೊತೆ

ಚಕಾರವೆತ್ತದೆ ನಿಮ್ಮ ಮಂಗಾಟಗಳ ಹೇರನ್ನೆಲ್ಲ
ಹೊತ್ತು ಸಂಭಾಳಿಸುವ ನಿಸ್ಸಹಾಯಕತೆ'

—ಯಲ್ಲಿ ಅಸಹಾಯಕರಾಗಿ ನಡೆಸಿಕೊಂಡುಬರುತ್ತಿರುವ ಅಮಾಯಕರನ್ನು 'ನಿಷ್ಕಾಮ ಚಾಕರಿಯ ಹೊಣೆಗಾರಿಕೆಯ ಒಣಹೆಮ್ಮೆ'ಯಲ್ಲಿರುವವರು ಎಂಬ ಮಾತಿನ ಮೂಲಕ ವ್ಯಂಗ್ಯಮಾಡುತ್ತಾರೆ.

ಕವಿತೆಯ ಕೊನೆಯ, ನಾಲ್ಕನೆಯ ಭಾಗದಲ್ಲಿ:

'ಕಾರ್ಯಕ್ರಮದ ಸಂಭ್ರಮದ ಐಸಿರಿಯೆಲ್ಲ ಹೋಗಿ ಸೂರೆ
ಪೀತಾಂಬರದ ಸೀರೆಯುಟ್ಟು ಸಡಗರಿಸಿದ್ದ ಊರಿಗೂರೇ
ನಾಳೆ ತಳೆಯುತ್ತದೆ ಯಥಾಪ್ರಕಾರದ ಹ್ಯಾಪಮೋರೆ.'

ಕವಿಗೆ ಪ್ರತಿವರ್ಷ ನಡೆಯುವ ಉತ್ಸವದ ಪರಿಣಾಮದ ಬಗ್ಗೆ ಚಿಂತೆ: ಪೀತಾಂಬರ ಸೀರೆಯುಟ್ಟು ಸಡಗರಿಸಿದ್ದ ಊರಿನ ಹ್ಯಾಪ ಮೋರೆಯ ಬಗ್ಗೆ ಅನುಕಂಪ. ಮತ್ತದೆ—'ಪುನಃ ಚಾಲು ಹಾದಿಬೀದಿಗಳಲ್ಲಿ ಪುರಸೊತ್ತಿಲ್ಲದ ವರಾತ: / ತಿರುಬೋಕಿಗಳ ತಿರುಗಾಟ, ಗುಲ್ಲು ಗದ್ದಲದ ಬೋಗಾರು ಕೊರೆತ;' ಇಷ್ಟೇ ಅಲ್ಲ, ಊರಿನ ಹವಾಮಾನ ಕಲುಷಿತವಾಗುವುದೂ ನಾಗರಿಕರ ಮೂಕ ಖಿನ್ನತೆ, ತೊತ್ತಿನ ಬಡಕಲೆತ್ತಿನ ದುಃಸ್ಥಿತಿ ಎಲ್ಲವನ್ನೂ ಮೂಕ ಪ್ರೇಕ್ಷಕರೆನ್ನುವಂತೆ ಚಿತ್ರಿಸಿದ್ದಾರೆ:

'ಪೆಟ್ರೋಲು, ಡೀಜಲೆಣ್ಣೆಗಳ ಕರೆ, ಹೊಗೆಗಳಿರಿತ;
—ಕನ್ನ ಕೊರೆಯಿಸಿಕೊಂಡು ಅಭ್ಯಾಸವಾಗಿರುವ
ತೆರಿಗೆದಾರನ ಕಿಸೆಯ ಮೂಕ ಖಿನ್ನತೆಯಂತೆ—
ತುಟಿಪಿಟಕ್ಕೆನ್ನದೆ ಎಲ್ಲ ಸೈರಿಸಿಕೊಂಡು
ದುಡಿವ ತೊತ್ತಿನ ಬಡಕಲೆತ್ತಿನ ಬಾರುಗೋಲಿನ ಬಡಿತ.'

ಇಂಥ ಅಸಹಾಯಕತೆ ಪ್ರಜಾಪ್ರಭುತ್ವದ ದುರಂತವಾಗಿ ಪರಿಣಮಿಸಿರುವುದರ ಬಗೆಯನ್ನು ಈ ಕವಿತೆಯಲ್ಲಿ ತೋರಿಸಿದ್ದಾರೆ. ಕವಿತೆಯ ಉದ್ದಕ್ಕೂ ನಿಸಾರರ ಛಾಪು ಅಚ್ಚಳಿಯದಂತೆ ಗೋಚರಿಸುತ್ತದೆ.

—ಹೀಗೆ, 'ಉತ್ಸವ ಪ್ರಿಯರು' ಕವಿತೆಯಲ್ಲಿ ನಿಸಾರರು ತಮ್ಮ ಸಿದ್ಧ ಧಾಟಿಯಲ್ಲಿ ಈ ಮೊದಲೇ ಹೇಳಿದ ತಮ್ಮೆಲ್ಲ ಚಹರೆಗಳೊಂದಿಗೆ ಕಾಣಿಸಿಕೊಳ್ಳುತ್ತಾರೆ. 'ಕುರಿಗಳು, ಸಾರ್ ಕುರಿಗಳು' ಕವಿತೆಯ ಯಶಸ್ಸಿನ ಉತ್ಸಾಹದಲ್ಲಿ ಬರೆದ ಕವಿತೆಗಳಲ್ಲಿ ಇದೂ ಮತ್ತೊಂದು. ಅಲ್ಲಿನ ಕುರಿ ಇಲ್ಲಿ ಬಕರ, ಅಲ್ಲಿನ ಮಚ್ಚು ಹಿಡಿದು ಕಚಕ್ ಎನ್ನಿಸಲು ನಿಂತಿರುವವನು ಇಲ್ಲಿ ದವಲತ್ತಿನ ಧಣಿ. ಅಲ್ಲಿನ ಕ್ರೌರ್ಯ ಭೀಕರವಾಗಿದೆ. ಇಲ್ಲಿ ಉತ್ಸಾಹ ಡೌಲು ಗೌಜು ಗಮ್ಮತ್ತಿನ ಸ್ವಾರ್ಥದ ಪ್ರತಿಷ್ಠೆಯ ರಖಂವಾರುಗಳಾಗಿ ಕಾಣಿಸಿಕೊಳ್ಳುತ್ತವೆ. ಯಾಕೆಂದರೆ ಇಲ್ಲಿರುವುದು ಉತ್ಸವ ಪ್ರಿಯತೆಯಾದದ್ದರಿಂದ. ಭಾಷೆಯ ಬಳಕೆಯ ಉತ್ಸಾಹದಲ್ಲಿ ಪ್ರಾಸದ ಸರಮಾಲೆ ನಿರ್ಮಾಣವಾಗುತ್ತದೆ. ಅರಚಿ, ಪರಚಿ, ತಿರಚಿ, ತರಚಿ: ಬಕರ ನಖರ ಇತ್ಯಾದಿ. ಇದನ್ನು ನಿಸಾರರ ವಿಶೇಷವೆಂದು ಪರಿಗಣಿಸಬಹುದೇನೋ. ನಿಸಾರರ ಮತ್ತೊಂದು

ಗುಣವೆಂದರೆ, ಸಮೂಹಕ್ಕೆ ಸಂವಹಿಸುವ ಧಾಟಿ. ಆದ್ದರಿಂದಲೇ ವಾಚಾಳಿ. ಆದರೆ ಜಾಣ ವಾಚಾಳಿ. ಬಂಧದ ಸಡಿಲತೆಗೂ ಇದೇ ಕಾರಣವನ್ನು ಅನ್ವಯಿಸಬಹುದು. ಯಶಸ್ಸು ಜನಪ್ರಿಯತೆಯನ್ನು ಪರಿಗಣಿಸಿದಾಗ ನಿಸಾರ್ ಅವರು ಓರಗೆಯವರೆಲ್ಲರೂ ಅಸೂಯೆಪಡುವಂತೆ ಬರೆದು ಬಿಡುತ್ತಾರೆ. ನಿಸಾರ್ ನಮ್ಮ ಸಂದರ್ಭದಲ್ಲಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿಯೂ ಮುಖ್ಯವೆನ್ನಿಸುವ ನೀಟಾದ ಕವಿತೆಗಳನ್ನು ನೀಡಿರುವ ಕವಿಯಾಗಿದ್ದಾರೆ. ಅಂಥ ಕವಿತೆಗಳಲ್ಲಿ ಇದೂ ಒಂದು.

ಸ್ವತಃ ತಾನು ಪಡುವುದರ ಜೊತೆಗೆ ಪರರ ಅನುಭವಗಳನ್ನು ತನ್ನದಾಗಿಸಿಕೊಳ್ಳುವುದೂ ತನಗೆ ಪ್ರತ್ಯಕ್ಷವಾಗಿ ಆದಂತೆ ಸಂವೇದಿಸುವುದೂ ಸಹ ಸ್ವಾನುಭವ ಸಮಾನವೇ; ಅಷ್ಟೇ ಏಕೆ, ಸ್ವಾನುಭವವೇ. ಸಾಹಿತ್ಯದ ಮೂಲಕ ಅಭಿವ್ಯಂಜಿತವಾಗುವ ಬರಹಗಾರನ ಪಡುಹಗಳಲ್ಲಿ ಈ ತೆರನಾದ ಪರೋಕ್ಷಾನುಭವವೇ ಹೆಚ್ಚಿನ ಪ್ರಮಾಣದ್ದು. ಬೆಂಕಿಯಿಂದ ಕೈ ಸುಟ್ಟುಕೊಂಡೇ, ಯಾತನೆಯನ್ನು ಅನುಭವಿಸಿಯೇ ಅದರ ಬಗೆಗೆ ಬರೆಯಬೇಕೆನ್ನುವ ವಿಚಾರ ಬಾಲಿಶವಾದದ್ದು. 'ನಿಮ್ಮ ಅನುಭವದ ಬಗ್ಗೆ ಮಾತ್ರ ಬರೆಯಿರಿ. ಅನುಭವಗಳಿಸಿಯೇ ಸಾಹಿತ್ಯ ರಚಿಸಿ' ಎಂದು ವಿಮರ್ಶಕ, ಲೇಖಕಿಯರಿಗೆ ಹುಕುಂ ಚಲಾವಣೆ ಮಾಡಿದರೆ ಈಗ ತಯಾರಾಗುತ್ತಿರುವ ಶೇಕಡ ಎಂಬತ್ತಕ್ಕೂ ಹೆಚ್ಚು ಕಾದಂಬರಿ ಕತೆ ಕವನಗಳಿಗೆ ಖೋತಾ ಬೀಳಬಹುದು! ಈ ವಿಧಿಯ ಅನ್ವಯ, ಲೇಖಕ ಸತ್ತಲ್ಲದೆ ಸಾವಿನ ಮೇಲೆ ಬರೆಯುವುದು ಶಕ್ಯವಲ್ಲ.

(ಸ್ವಾನುಭವ-ಪರಾನುಭವ)

✧ ✧ ✧

ಮಾನುಷ ಸಾಧನೆಗಳು ದ್ವಿಪಗಳಲ್ಲ, ಅಖಂಡ ಅವಿಚ್ಛಿನ್ನ ಖಂಡಗಳು. ಅವು ಒಬ್ಬಂಟಿಯ ಪೇಷನ್ಸ್ ಆಟವಲ್ಲ; ಸಮಷ್ಟಿರೂಪದ ಟೀಂನಂತಹ ಕಾಲ್ಚೆಂಡಿನಾಟ. ಅಲ್ಲಿ ಸ್ವಹಿತಕ್ಕೆ, ಸ್ವಂತದ ಸ್ವಚ್ಛಂದಕ್ಕೆ ತಾವಿಲ್ಲ; ಪರಸ್ಪರ ಪೂರಕತೆ, ಒಟ್ಟಿನ ಸಾಫಲ್ಯಕ್ಕಷ್ಟೇ ಅವಕಾಶ, ಬೆಲೆ.

(ಸಾಧನೆಗಳ ಸ್ವರೂಪ)

ದ್ವಂದ್ವ

೧

ಯಾವುದೋ ಮಗು ಸ್ವಂತ? ಯಾವುದೋ ಪರಕೀಯ?
ಎಲ್ಲಕ್ಕು ಒಂದೆ ಪಾಯ.
ನಿನ್ನದೇ ಈ ಜೀತ?
ಸ್ವಂತದ್ದರಲು ಮುಕ್ಕಾಲು ಪಿತ್ರಾರ್ಜಿತ.
ಬೆಸೆಯುವುದು ಹೋಳೆ, ದಡವ
ಗಾಳಿಯೊ, ಬಾನ್ನೆಲವ:
ದ್ವಂದ್ವ ಮಾಯ.

ಸ್ವಂತ ಪರಕೀಯಗಳ ಸರಹದ್ದ ಗೆರೆ ಗೀಚಿ
ಗುಂಡು ತೋಪು ಫಿರಂಗಿ ನಿಲಿಸಿದಾತ,
ಮೊದಲೆ ಧಗಧಗ ಬೆಂಕಿ, ಅದಕಷ್ಟು
ಪೆಟ್ರೋಲಿನೆಣ್ಣೆ ನೈವೇದ್ಯವನು ಸಲಿಸಿದಾತ,
ಬಿರುಕುಬಿಟ್ಟರೆ ಕಟ್ಟೆ, ಎಲ್ಲ ಬಾಗಿಲು ತೆರೆದು
ನುಗ್ಗು ರೊಚ್ಚಿನ ಹುಚ್ಚು ಹರಿಸಿದಾತ,
ಜೇನುಹುಟ್ಟಿಗೆ ಕವಣೆ ಬೀರಿ, ಕಂಬಳಿ ಹೊದ್ದು
ಪರರ ನೋವಿಗೆ ಕಣ್ಣು ಸುರಿಸಿದಾತ—
ನೀನೆ ಅಲ್ಲವೆ ಮಗುವೆ?
ಹಾಗೆನಲು ಬರಿ ನಗುವೆ.

೨

ನಿನ್ನದಿದು ಈ ತೋಟ—
ಸಸ್ಯ ಜಗದಚ್ಚರಿಯ ನೋಡು: ಹಸುರಿನ ಮಾಟ;
ನೀನೆ ಸ್ವಂತದಲ್ಲವೆಂದು ಕಡಿಯುವ ಮರವ
ನೆಲದಾಯ ಚಾಮರವ:
ರಫ್ತಾದ ಬೀಜವೀ ಅಪರಿಚಿತ ಪರಿಸರದ
ಗಾಳಿ ಜಲ ಬೆಳಕುಗಳ ಹೀರಿ ಬೆಳದಿಹ ಪರಿಯ
ನೂರಾರು ಚದರಡಿಯ ಸುವಿಶಾಲ ಪರಿಧಿಯಲಿ
ಸೊಕ್ಕಿರುವ ಹೊರೆ ಹೊರೆಯ
ಋತು ಋತುಗೆ ಹೊಸ ದಿರಿಸು ತೊಟ್ಟು ಮೆರೆಯುವ ದೊರೆಯ

ಕಣ್ಮನದ ವರವ—ಈ ಹೆಮ್ಮರವ
ನೋಡು: ಬೆಳಗಲ್ಲಿ ಬೈಗಲ್ಲಿ ವಾದ್ಯವೃಂದ
ಇರುಳಲ್ಲಿ ಚಂದ್ರಿಕೆಯ ಬಾಹುಬಂಧ
ಅಳಿ ದುಂಬಿ ಅಳಿಲುಗಳ ಸಲಿಗೆಯಾದೀ ಮರವ
ನೋಡು ಮಗು.

ಸಹಪಾಠಿಗಳ ಜೊತೆಗೆ ಮರಕೋತಿಯಾಡಿದ್ದೆ
ಹೆಸರ ಮೊದಲಕ್ಷರವ ಬುಡದಲ್ಲೆ ಕೆತ್ತಿದ್ದೆ
ಹರಕೆಗಳ ಹೊತ್ತಿದ್ದೆ
ಹೂವುಗಳ ತಿರುಚಿ ಹಣ್ಣುಗಳ ದೋಚಿ
ಹೆಜ್ಜೇನು ಚಪ್ಪರಿಸಿ, ಸುರಿಸಿದ್ದೆ ಜೊಲ್ಲ
ಮರೆತೆಯಾ ಅದನೆಲ್ಲ?

ನಾಳೆ ನೀ ಹಾಕಲಿಹ ಕೊಡಲಿಗೂ ಹಿಡಿ ಕೂಡ
ಈ ಸಾಧು ವೃಕ್ಷದ್ದು—ಇದರದೇ ವಕ್ಷದ್ದು.
ಬೀಜ ಪರಕೀಯ ನಿಜ, ಎಂದೆ ವೃಕ್ಷವು ಕೂಡ?
ಸುತ್ತ ನೀನೇ ಬೆಳೆದ ಸೊರಗು ಸಸಿ ಈ ವೃಕ್ಷ
ದೆತ್ತರಕೆ ಬರುವನಕ ಕಾಯೊ ಮೂಢ;
ಶ್ರೀಗಂಧ ಬೆಳೆದರೂ ಬೇಕು ಬೇರೆಯ ಸೌದೆ
ಮೊದಲು ನೆನೆ ಹೊಟ್ಟೆ ಪಾಡ.

೩

ಸ್ವಂತ ಯಾವುದೊ ಕಂದ? ಯಾವುದೊ ಬಂದಳಿಕೆ?
ಸಹಜ ಸಂತತಿ ಜೊತೆಗೆ ಇರಲಿ ಬಿಡು ಇವು ಕೂಡ
ಇವೇ ನಿನ್ನ ಅಗ್ಗಳಿಕೆ:
ಹಿತ್ತಲಿನ ಹತ್ತಡಿಯ ಕೊಟ್ಟಿಗೆಯು ಇರುಳಲ್ಲಿ
ಮನೆಯಾಚೆ ಮೈದಾನದೆಳೆಹುಲ್ಲು ಹಗಲಲ್ಲಿ—
ಕರೆಯುವುವು ಕರೆಯುತ್ತವೆ:
ಹೊತ್ತು ಭಾರವ ಹೊಟ್ಟೆ ಹೊರೆಯುತ್ತವೆ;
ಮನೆಗೆ ಪೋಲೀಸಾಗಿ ಪೊರೆಯುತ್ತವೆ.

★ ★ ★

(ಕವನ ಸಂಕಲನ: 'ಸಂಜೆ ಐದರ ಮಳೆ')



‘ದ್ವಂದ್ವ’: ಸ್ವಂತ-ಅನ್ಯಗಳ ಸೂಕ್ಷ್ಮತರ ಸ್ವರೂಪದ ಸಂವೀಕ್ಷಣೆ

♦ ಡಾ. ಕೃಷ್ಣಮೂರ್ತಿ ಹನೂರು

೧

‘ದ್ವಂದ್ವ’ ಕವನ ನಿಸಾರ್ ಅಹಮದ್ ಅವರ ‘ಸಂಜೆ ಐದರ ಮಳೆ’ ಕವನ ಸಂಕಲನದಲ್ಲಿ ೧೯೭೦ರಲ್ಲಿ ಮೊದಲನೆಯ ಬಾರಿಗೆ ಪ್ರಕಟವಾಯಿತು. ೭೦ರ ದಶಕದಲ್ಲಿ ‘ಸಂಜೆ ಐದರ ಮಳೆ’ ಸಂಕಲನದ ಮೂಲಕ ನಿಸಾರರು ಸಾಹಿತಿಗಳ ನಡುವೆ ಸಂಜೆ ಐದರ ಸಮಯದ ನಿತ್ಯ ಮಾತುಕತೆಯಾಗಿಬಿಟ್ಟಿದ್ದರು. ಆ ಕಾಲಕ್ಕೆ ನಿಸಾರರ ‘ಮಾಸ್ತಿ’ ‘ಕುರಿಗಳು, ಸಾರ್, ಕುರಿಗಳು’ ಕವನ ಗಳನ್ನು ಕೇಳದವರಿರಲಿಲ್ಲ. ತದನಂತರ ನಿಸಾರರ ಜನಪ್ರಿಯತೆ ಹಾಗೆಯೇ ಬೆಳೆದು ‘ನಿತ್ಯೋತ್ಸವ’ ಮುಂತಾದ ಭಾವಗೀತೆಗಳ ಮೂಲಕ ಅವರು ಮನೆ ಮನೆಯ ಕವಿಯಾದರು. ಬಹುಶಃ ಕೆ.ಎಸ್.ನ. ಅವರ ಅನಂತರ ಕಾವ್ಯಪ್ರಿಯರ ನಡುವೆ ಅಪಾರ ಜನ ಪ್ರೀತಿಯನ್ನು ಗಳಿಸಿದವರು ನಿಸಾರ್ ಅಹಮದ್ ಅವರೇ! ಆದರೆ ತೀರ ಈಚಿನ ದಿನಗಳಲ್ಲಿ ಭಾವಗೀತ ಪ್ರಕಾರದ ಸುಶ್ರಾವ್ಯತೆಗೆ ಆಧುನಿಕ ವಿದ್ಯುನ್ಮಾನಗಳ ಅಬ್ಬರದ ಕಾರಣ ಒಂದು ಬಗೆಯ ಕ್ಷೀಣತೆ ಆವರಿಸಿಕೊಂಡು ಬಿಟ್ಟಿದೆ. ಆದರೆ ಅದು ದುರ್ಬಲವಾಗಿಲ್ಲವಷ್ಟೆ. ಆದರೂ ಒಂದಲ್ಲ ಒಂದು ದಿನ ಈ ಆಧುನಿಕ ವಿದ್ಯುನ್ಮಾನಗಳ ಏಕತಾನತೆ ತಗ್ಗಲೇಬೇಕಾಗು ತ್ತದೆ. ಇದರಿಂದ ಸೃಜನಶೀಲತೆಗೆ, ಅದರ ಶಕ್ತಿಗೆ ಎಂದೂ ಮುಪ್ಪು ಆವರಿಸುವುದಿಲ್ಲ. ಆ ಅರ್ಥದಲ್ಲೇ ಸೃಜನಶೀಲ ಕಲೆ ನವನವೋನ್ಮೇಷಶಾಲಿನಿಯೆಂದು ಪ್ರಾಚೀನ ಕಾಲದಿಂದಲೂ

ಆಲಂಕಾರಿಕರು ಹೇಳಿ ಕೊಳ್ಳುತ್ತಲೇ ಬಂದಿದ್ದಾರೆ.

೨

'ದ್ವಂದ್ವ' ಕವನದ ಮೂಲಕ ನಿಸಾರರು ಒಂದು ಶಾಶ್ವತ ಸತ್ಯವನ್ನು ಹೇಳ ಹೊರಟಿದ್ದಾರೆ. ಮನುಷ್ಯನಿಗೆ ಯಾವುದರ ಮೇಲೂ ಅಧಿಕಾರ ಬರುವುದಿಲ್ಲ. ಆದರೆ ಆತ ಎಲ್ಲದರ ಮೇಲೂ ಅಧಿಕಾರ ಸಾಧಿಸಲು ಹೆಣಗುತ್ತಾನೆ. ಅದು ಜರುಗಲಾರದ ಸಂಗತಿ ಎಂಬುದು ಅರಿವಿಗೆ ಬರುತ್ತಿದ್ದಂತೆ ಹೊಂದಾಣಿಕೆಗೆ ಮುಂದಾಗುತ್ತಾನೆ. ಇದು ಇತಿಹಾಸದ ಉದ್ದಕ್ಕೂ ನಡೆದು ಬಂದದ್ದು. ಹನ್ನೆರಡನೆಯ ಶತಮಾನದಲ್ಲಿ ಮುಸ್ಲಿಮರ ಆಗಮನ ಅನ್ಯ ಸಂಸ್ಕೃತಿಯ ದಾಳಿ ಎಂದು ಭಾರತೀಯರಿಗೆ ಅನ್ನಿಸಿತು. ಆದರೆ ಕಾಲಕ್ರಮೇಣ ಇಸ್ಲಾಂ ಸಂಸ್ಕೃತಿ ಭಾರತದಲ್ಲಿ ಸಂಲಗ್ನಗೊಂಡ ಮೇಲೆ, ತದನಂತರ ಆಗಮಿಸಿದ ಬ್ರಿಟಿಷರು ಭಾರತೀಯರಿಗೆ ಮತ್ತೊಂದು ಸಂಸ್ಕೃತಿಯ ದಾಳಿಕೋರರಾಗಿ ಕಾಣಿಸಿದರು. ಆಗ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಟಿಪ್ಪು ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರನಾಗಿ ಬಿಟ್ಟ. ಇಂದು ಬ್ರಿಟಿಷರು ಭಾರತವನ್ನು ಬಿಟ್ಟಿದ್ದರೂ ಅವರ ಭಾಷೆ ನಮ್ಮ ಸಂಸ್ಕೃತಿಯನ್ನು ಬೇರೆಯಾಗಿಯೇ ರೂಪಿಸುವ ಶಕ್ತಿಯನ್ನು ಪಡೆದು ನಮ್ಮನ್ನು ಆಳುತ್ತಿದೆ. ಹಾಗಾದರೆ ನಮ್ಮದೆನ್ನುವುದು ಯಾವುದು, ಪರಕೀಯವೆನ್ನುವುದು ಯಾವುದು? ಮನುಷ್ಯ ತನ್ನಷ್ಟಕ್ಕೆ ತಾನೇ ಕೋಟೆ ಕಟ್ಟಿಕೊಂಡು ಬದುಕಲು ಸಾಧ್ಯವೆ? ಹಾಗಿದ್ದರೆ ಅವನ ಉದ್ಧಾರ ಮತ್ತು ರಕ್ಷಣೆ ಎಷ್ಟರ ಮಟ್ಟಿಗೆ ಸಾಧ್ಯ? ಹೀಗಾಗಿ ಎಲ್ಲ ದ್ವಂದ್ವವನ್ನೂ ದಾಟುವ ಶಕ್ತಿ, ಬೇರೆಯದನ್ನು ತನ್ನದಾಗಿಸಿಕೊಂಡು ಬದುಕುವ ಜಾಣತನ ಮನುಷ್ಯ ಜೀವಕ್ಕೆ ಇದ್ದರೆ ಅದು ಕ್ಷೇಮ ಎನ್ನುವ ಸಾರ್ವತ್ರಿಕ ಸತ್ಯವನ್ನು 'ದ್ವಂದ್ವ' ಕವನ ಸಾರುವಂತಿದೆ.

೩

ನಾವು ಸದಾ ದ್ವಂದ್ವಗಳ, ಪರಸ್ಪರ ವಿಭಿನ್ನ ಹಾಗೂ ವೈರುಧ್ಯಗಳ ಮುಖಾಮುಖಿಯನ್ನು ಎದುರುಗೊಳ್ಳುವುದು ಸ್ವಾಭಾವಿಕ. ಕೆಲವೊಮ್ಮೆ ಅವುಗಳಿಗೆ ಪ್ರತಿರೋಧ ಒಡ್ಡುತ್ತಲೋ, ಅಷ್ಟಿಷ್ಟು ಸಮಜಾಯಿಷಿ ಮಾಡಿಕೊಳ್ಳುತ್ತಲೋ, ಇಲ್ಲ ಅವುಗಳಿಗೆ ನಿಸ್ಸಹಾಯಕರಾಗಿ ಒಗ್ಗಿಕೊಳ್ಳುತ್ತಲೋ ಬದುಕುವುದನ್ನು ರೂಢಿಮಾಡಿಕೊಂಡಿರುತ್ತೇವೆ. ಭಾಷೆಯೋ, ಧರ್ಮವೋ, ಸಾಮಾಜಿಕ ಜೀವನದ ರೀತಿ ರಿವಾಜುಗಳೋ—ಇಂಥ ದ್ವಂದ್ವದ ತೊಡಕಿಗೆ ಕಾರಣವಾಗಬಹುದು. ಇವುಗಳಲ್ಲಿ ನಮಗೆ, ಅಂದರೆ ಭಾರತೀಯರಿಗೆ, ಅದರಲ್ಲೂ ಕರ್ನಾಟಕದವರಿಗೆ ಎದುರುಗೊಳ್ಳುವ ದ್ವೈಧೀಭಾವದ ಮುಖ್ಯ ಸಮಸ್ಯೆಯೆಂದರೆ ಭಾಷೆಯದು ಮತ್ತು ವರ್ಣ ದ್ವೇ[illegible] ಬಹುಕಾಲದಿಂದ ನಮ್ಮ ಸಾಮುದಾಯಿಕ ಬಾಳ್ವೆಯಲ್ಲಿ ಬೇರೂರಿ ನಮ್ಮದೇ ಎನ್ನಿಸುವಷ್ಟು ಅಥವಾ ನಮ್ಮದೇ ಸಂಸ್ಕೃತಿಯ ಭಾಗವಾಗಿ ಹೋಗಿರುವ ಸತ್ಯವೊಂದನ್ನು ನಾವು ಏನೆಂದು ಪರಿಗಣಿಸೋಣ? ದೀರ್ಘ ಹಾಗೂ ತಲಸ್ಪರ್ಶಿಯ ಚಿಂತನ ಮಾಡುತ್ತ ಹೋದಷ್ಟು ಈ ಸ್ವಂತ-ಅನ್ಯಗಳ, ಸ್ವದೇಶಿ-ವಿದೇಶಿಗಳ ಸಂಬಂಧ ಸಂಕೀರ್ಣ ಮತ್ತು ಸೂಕ್ಷ್ಮತರವಾಗುತ್ತ ಹೋಗಿ ನಮಗೆ ಗೊಂದಲಕ್ಕೀಡುಮಾಡುತ್ತದೆ. ಕಿಂಕರ್ತವ್ಯವಿಮೂಢ ಅವಸ್ಥೆಗೆ ತಲಪಿಸುತ್ತದೆ. ಆಗ ನಮ್ಮೆದುರಿಗಿರುವ ಉಪಾಯ ಒಂದೇ: ನಮ್ಮದು ಅಪ್ಪಟ ಭಾರತೀಯ ಎಂದು ನಾವು

ಯಾವುದನ್ನು ಭಾವಿಸುತ್ತೇವೆಯೋ ಅದರೊಂದಿಗೆ ಸಂಘರ್ಷಕ್ಕೆ ಆಸ್ಪದವಾಗದ ಹಾಗೆ ಹೊರಗಿನದನ್ನು ಹೊಂದಿಸಿಕೊಳ್ಳುವುದು. ಆದರೆ ಈ ಸಂದರ್ಭದಲ್ಲಿಯೇ ಒಂದು ಸಂಗತಿಯನ್ನು ನಾವು ಮರೆಯದೇ ಪರಿಪಾಲಿಸಬೇಕು: ಹೊರಗಿನದೆಂದು ತುಚ್ಛೀಕರಿಸದ, ಹಾನಿಗೆ ಒಳಗಾಗಿಸದ ಕಟ್ಟೆಚ್ಚರ. ನಮ್ಮದೆನ್ನುವುದನ್ನು ಆಳಾಗಿಸಿ, ತಾನು ಆಳುವ ದಬ್ಬಾಳಿಕೆಯ ವಿರುದ್ಧದ ನಿತ್ಯ ಹುಷಾರಿ. ಎಷ್ಟೋ ವೇಳೆ ಸ್ವಂತ-ಪರಕೀಯಗಳ ನಡುವಣ ಗೆರೆ ತೆಳುವಷ್ಟೇ ಅಲ್ಲ, ಅದು ಅಳಿಸಿಹೋಗಿ ಒಂದರೊಡನೊಂದು ಬೆರೆತು ಹೋಗಿರುವ ಅನುಭವವೂ ನಮಗೆ ಉಂಟಾಗುವುದಿದೆ. ಹೀಗೆ ದಿನನಿತ್ಯದ ಉಪಮೆ, ರೂಪಕ ಹಾಗೂ ಪ್ರತಿಮೆಗಳ ಬಳಕೆಯಿಂದ, ಕೌಟುಂಬಿಕ ಮತ್ತು ಬಾಲ್ಯಾವಸ್ಥೆಯ ಚಿತ್ರಗಳಿಂದ 'ದ್ವಂದ್ವ' ಕವಿತೆ ತನ್ನ ಆಶಯವನ್ನು ಮಾರ್ಮಿಕವಾಗಿ ಅಭಿವ್ಯಕ್ತಗೊಳಿಸುತ್ತದೆ.

೪

'ದ್ವಂದ್ವ' ಕವನದ ಪ್ರಾರಂಭದ ಸಾಲುಗಳೇ ಕವಿತೆಯ ಆಶಯವನ್ನು ಮತ್ತು ಅದರ ಜಟಿಲತೆಯನ್ನು ಅರಿವಿಗೆ ಮೂಡಿಸುತ್ತವೆ :

'ಯಾವುದೋ ಮಗು ಸ್ವಂತ? ಯಾವುದೋ ಪರಕೀಯ?
ಎಲ್ಲಕ್ಕು ಒಂದೆ ಪಾಯ.

ನಿನ್ನದೇ ಈ ಜೀತ?
ಸ್ವಂತದ್ದರಲು ಮುಕ್ಕಾಲು ಪಿತ್ರಾರ್ಜಿತ.
ಬೆಸೆಯುವುದು ಹೊಳೆ, ದಡವ
ಗಾಳಿಯೊ, ಬಾನ್ನೆಲವ : ದ್ವಂದ್ವ ಮಾಯ.'

ಇಲ್ಲಿ ಕವನದ ವಾಕ್ಯ, ಒಂದು ಸ್ವಂತ ಸಂಗತಿಯಿಂದ ಪ್ರಕೃತಿಯ ಸಾರ್ವತ್ರಿಕತೆಯ ಕಡೆಗೆ ಸಾಗುತ್ತದೆ. ನಮ್ಮ ಮನೆ, ನಮ್ಮ ಮಕ್ಕಳು ಎಂದರೆ ಅದರ ಮೋಹದ ಪರಿಯೇ ಬೇರೆ. ಅನ್ಯ ಸಂಬಂಧ ಎಂದರೆ ಅದರಲ್ಲಿ ನಮ್ಮ ಪಾಲೇನೂ ಇರುವುದಿಲ್ಲವೆಂಬಂತೆ ಇದ್ದು ಬಿಡುತ್ತೇವೆ. ಆಸ್ತಿಯ ವಿಚಾರವೂ ಅಷ್ಟೆ. ನಮ್ಮದೆಂದರೆ ಹಾವಿನಂತೆ ಕಾಯುತ್ತೇವೆ. ಬೇರೆಯವರದೆಂದರೆ ಅದು ಸಾರ್ವತ್ರಿಕ ಎಂಬ ತಾತ್ಸಾರ! ನಮ್ಮದು ಎಂದರೆ ಅದು ನಿಜವಾಗಿ ನಮ್ಮದೇ? ಅದು ನಮ್ಮದೂ ಅಲ್ಲ, ಪಿತ್ರಾರ್ಜಿತ. ಆದರೆ ಪ್ರಕೃತಿ ಯಾವಾಗಲೂ ತನ್ನದು, ಬೇರೆಯವರದು ಎಂಬುದನ್ನು ಎಣಿಸುವುದಿಲ್ಲ. ಪ್ರಕೃತಿಯಲ್ಲಿ ದ್ವಂದ್ವಭಾವವೇ ಇರುವುದಿಲ್ಲ. ಪ್ರಕೃತಿಯ ನಡುವೆ ಬದುಕುವ ಮನುಷ್ಯನಿಗೂ ಸದಾ ಸಾರ್ವತ್ರಿಕವಾಗಿಯೇ ವರ್ತಿಸುವ ಪ್ರಕೃತಿಗೂ ಅದೆಷ್ಟು ವ್ಯತ್ಯಾಸವೆಂಬ ಭಾವದೊಂದಿಗೆ ಕವನ ಆರಂಭವಾಗು ತ್ತದೆ. ಸ್ವಂತದ್ದು, ಪರಕೀಯವಾದುದು ಎಂಬ ಗೆರೆ ಎಳೆದು ಇದರ ದ್ವೇಷದಲ್ಲಿಯೇ ಯುದ್ಧ ಮಾಡಿದವರು ಅದೆಷ್ಟು ಜನ! ಫಿರಂಗಿ ಇಟ್ಟು, ಮದ್ದು ಹಚ್ಚಿ ಇವರು ನಮ್ಮ ಸೈನಿಕರು, ಅವರು ಶತ್ರು ಸೈನಿಕರು ಎಂದು ಮನುಷ್ಯ ಸಮೂಹವನ್ನು ಕೊಂದವರೆಷ್ಟು ರಾಜ ಮಹಾರಾಜರು? ಇದಕ್ಕೆ ಎಣ್ಣೆ ಸುರಿದು ಉರಿ ಹೆಚ್ಚಾಗಲು ಕಾರಣರಾದವರು ಎಷ್ಟು ಜನ ಬುದ್ಧಿವಂತರು? ಏನೂ ಅರಿಯದೆ ತಮ್ಮತಮ್ಮ ಕಾಯಕದಲ್ಲಿದ್ದ ಮುಗ್ಧ ಜನ ಸಮೂಹಕ್ಕೆ ಇದರಿಂದ ಆದ ಆಘಾತಗಳೆಷ್ಟು?

೫

ಪ್ರಕೃತಿಯಲ್ಲಿ ನಿರಂತರ ಕಂಗೊಳಿಸುವ ಸಸ್ಯ ಸಂಪತ್ತು ಮನುಷ್ಯನಂತೆಯೇ ತನ್ನದು-ಪರರದು ಎಂದು ಯೋಚನೆಗೆ ತೊಡಗಿಬಿಟ್ಟರೆ, ಅದೇ ಮನುಷ್ಯನ ಬಾಳು ಸಾಗುವುದೆ? ಈ ಅರಿವನ್ನು ಪಡೆದಿರುವ ಮನುಷ್ಯ ಕೇವಲ ತಾತ್ವಿಕ ಸಂಗತಿಗಳನ್ನು ಕೇಳಿಕೊಂಡು ಬದುಕಿದರೂ ಆತ ತನ್ನದು ಪರರದು ಎಂಬ ದ್ವಂದ್ವದಿಂದ ಪಾರಾಗದೆಯೇ ತೊಳಲಾಡುತ್ತಿದ್ದಾನೆ. ಊರು-ಕೇರಿ, ಜಾತಿ-ಮತ, ವರ್ಗ, ವರ್ಣ, ಭಾಷೆ ಎಲ್ಲದಕ್ಕೂ ತನ್ನದು ಪರರದು ಎಂಬ ಸ್ವಾರ್ಥ ಸಮುಚಿತ ದ್ವಂದ್ವದಲ್ಲೇ ಕಾಲ ತಳ್ಳುತ್ತಿದ್ದಾನೆ. ನಿರಂತರ ನೆರಳು ನೀಡುವ ಮರ ತನ್ನ ಆಶ್ರಯಕ್ಕೆ ಬರುವವರನ್ನು ತನ್ನವರು, ಅನ್ಯರು ಎಂದು ನೋಡುವುದಿದೆಯೆ? ಕವಿ ಇಲ್ಲಿ,

'ಋತುಋತುಗೆ ಹೊಸ ದಿರಿಸು ತೊಟ್ಟು ಮೆರೆಯುವ ದೊರೆಯ
ಕಣ್ಮನದ ವರವ—ಈ ಹೆಮ್ಮರವ
ನೋಡು...:'

—ಎನ್ನುತ್ತಾರೆ. ಈ ಮರ ಅದೆಷ್ಟು ಚರಾಚರಗಳಿಗೆ ಆಶ್ರಯ ಕೊಟ್ಟಿದೆ ಎಂದು ಕವಿ ತಮ್ಮ ಬಾಲ್ಯಕ್ಕೆ ಹೋಗುತ್ತಾರೆ. ಮಕ್ಕಳಲ್ಲಿ ದ್ವಂದ್ವಭಾವವಿಲ್ಲ. ಅವು ಬಾಲ್ಯದಲ್ಲಿ ಒಂದೇ ಆಗಿರುತ್ತವೆಂಬ ಸೂಚನೆ ಕೊಡುತ್ತಾರೆ. ದ್ವಂದ್ವವಿಲ್ಲದ ಕಾಲ ಬಾಲ್ಯ. ಅದರಿಂದ ಯಾವ ಭೇದ ಭಾವವೂ ಇಲ್ಲದೆ, ಮೇಲು ಕೀಳೆನ್ನದೆ, ಅದೇ ಮರದ ಮೇಲೆ ತಾವು ಬಂದು ಮರಕೋತಿಯಾಟ ಆಡಿದೆ ಎನ್ನುತ್ತಾರೆ:

'ಸಹಪಾಠಿಗಳ ಜೊತೆ ಮರಕೋತಿಯಾಡಿದ್ದೆ
ಹೆಸರ ಮೊದಲಕ್ಷರವ ಬುಡದಲ್ಲಿ ಕೆತ್ತಿದ್ದೆ
ಹರಕೆಗಳ ಹೊತ್ತಿದ್ದೆ
ಹೂವುಗಳ ತಿರುಚಿ, ಹಣ್ಣುಗಳ ದೋಚಿ
ಹೆಜ್ಜೇನು ಚಪ್ಪರಿಸಿ, ಸುರಿಸಿದ್ದೆ ಜೊಲ್ಲ—
ಮರೆತೆಯಾ ಅದನೆಲ್ಲ?'

ಈ ಮರ ಎಲ್ಲಿಯವರೆಗೆ ತನ್ನ ಸಾರ್ವತ್ರಿಕತೆಯನ್ನು ಮೆರೆಯುತ್ತದೆಯೆಂದರೆ ಕೊನೆಗೆ ಮನುಷ್ಯನಿಗೆ, ತನ್ನನ್ನೇ ಕಡಿಯುವ ಕೊಡಲಿಗೆ ಕಾವಾಗಿಯೂ ಸಹ ಸಹಾಯಕವಾಗು ತ್ತದೆ. ಅಲ್ಲಿಯೂ ಮರ ತನ್ನ ಯಾವುದೇ ದ್ವಂದ್ವಭಾವವನ್ನು ವ್ಯಕ್ತಪಡಿಸುವುದಿಲ್ಲ. ಹೀಗಾಗಿ ಪ್ರಕೃತಿಯ ಮಡಿಲಿನ ಮೂಢರೆಲ್ಲ ಪರಕೀಯತೆಯನ್ನು ಬಿಡಬೇಕಾಗಿದೆ. ಎಲ್ಲವೂ ತನ್ನನ್ನು ಬದುಕಿಸಲು ನೆರವು ನೀಡುವಂಥದ್ದು ಎಂದು ಪರಿಗ್ರಹಿಸಬೇಕಿದೆ:

'ಸ್ವಂತ ಯಾವುದೊ ಕಂದ? ಯಾವುದೊ ಬಂದಳಿಕೆ?
ಸಹಜ ಸಂತತಿ ಜೊತೆಗೆ ಇರಲಿ ಬಿಡು ಇವು ಕೂಡ
ಇವೇ ನಿನ್ನ ಅಗ್ಗಳಿಕೆ:'

—ಎಂಬ ಔದಾರ್ಯ ಭಾವದೊಡನೆ ಕವನ ಮುಕ್ತಾಯವಾಗುತ್ತದೆ. ಈ ಔದಾರ್ಯ ಭಾವ ಇಲ್ಲದೇ ಹೋದದ್ದರಿಂದಲೇ ನಮ್ಮ ಇತಿಹಾಸ ಅನೇಕ ಕಪ್ಪು ಚುಕ್ಕೆಗಳಿಂದ ಕೂಡಿದೆ ಎಂಬ ಮಹತ್ವದ ಸಂಗತಿಯನ್ನು ಬಿತ್ತರಿಸುತ್ತದೆ 'ದ್ವಂದ್ವ' ಕವನ.

ನಿಮ್ಮೊಡನಿದ್ದೂ ನಿಮ್ಮಂತಾಗದೆ

೧

ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೇ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆ ಎತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ—
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೇ ಪೋಷಿಸಿ ಸಾಕುತ್ತ
ರೇಖೆಯಲ್ಲೇ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

೨

ಒಳಗೊಳಗೇ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿ ಹೀರಿ ಪೇಪರೋದಿ ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

೩

ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಚೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು

ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನು
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.

★ ★ ★

(ಕವನ ಸಂಕಲನ: 'ಸಂಜೆ ಐದರ ಮಳೆ')



‘ನಿಮ್ಮೊಡನಿದ್ದೂ ನಿಮ್ಮಂತಾಗದೆ’: ವೈಯಕ್ತಿಕ ನೋವಿನ ಅನುಭವದ ಉರಿ ಸಾರ್ವತ್ರಿಕಾರ್ಥದ ಬೆಳಕಾಗುವ ಪರಿ

♦ ರಂಜಾನ್ ದರ್ಗಾ

೧

ಜನ ಕೋಟಿಯ ಮನದಲ್ಲಿ ನಿತ್ಯೋತ್ಸವದ ಭಾವವನ್ನು ಮೂಡಿಸುತ್ತ, ಕನ್ನಡವನ್ನು ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲದ ಪ್ರತೀಕವಾಗಿ ಕಾಣುತ್ತ, ಕನ್ನಡ ಮಂತ್ರದಿಂದ ರಾಜ್ಯದ ಬಹಳಷ್ಟು ಜನರಲ್ಲಿ ಒಂದೇ ಕುಟುಂಬವೆಂಬ ಪ್ರಜ್ಞೆಯನ್ನು ಮೂಡಿಸುವಲ್ಲಿ ಯಶಸ್ವಿಯಾದ ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ‘ನಿಮ್ಮೊಡನಿದ್ದೂ ನಿಮ್ಮಂತಾಗದೆ’ ಕವಿತೆಯನ್ನು ಬರೆದು ೩೭ ವರ್ಷಗಳಾದವು. ಈ ಸುದೀರ್ಘ ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಸಹಸ್ರಾರು ಕೋಮು ಗಲಭೆಗಳಾಗಿವೆ. ತಿಳಿದವರು ಎಷ್ಟೇ ಪ್ರಯತ್ನಿಸಿದರೂ ಕೋಮು ಗಲಭೆಗಳ ಪಿಡುಗನ್ನು ತಡೆಗಟ್ಟಲಿಕ್ಕೆ ಆಗುತ್ತಿಲ್ಲ. ಕಾರಣ, ಸಂಶಯದ ಹುತ್ತ ದೇಶದ ತುಂಬೆಲ್ಲ ಬೆಳೆದಿದೆ. ಬದುಕುವ ಮನುಷ್ಯ ಬಾಳುವುದನ್ನು ಕಲಿಯದೇ ಇದ್ದಾಗ ವಸ್ತು ಜಗತ್ತು ಮಾತ್ರ ಆತನ ಅರಿವಿಗೆ ಬರುತ್ತಿರುತ್ತದೆ. ಮನುಷ್ಯ ಬಾಳುವುದನ್ನು ಕಲಿತಾಗ ಮಾತ್ರ ಭಾವನಾತ್ಮಕ ಜಗತ್ತಿನ ಸೃಷ್ಟಿಯಾಗುತ್ತದೆ. ಅಲ್ಲಿ ಕೇವಲ ಪ್ರೇಮ ಭಾವ ಹರಡಿಕೊಳ್ಳುತ್ತದೆ. ಸಂಶಯಕ್ಕೆ ಮತ್ತು ಪರಕೀಯತೆಗೆ ಅಲ್ಲಿ ಅವಕಾಶ ಇರುವುದಿಲ್ಲ.

ದೇಶದಲ್ಲಿ ಅನೇಕ ಧರ್ಮಗಳಿವೆ, ಜಾತಿ ಉಪ ಜಾತಿಗಳಿವೆ, ಬುಡಕಟ್ಟುಗಳಿವೆ, ಸಂಪ್ರದಾಯಗಳಿವೆ, ಭಾಷೆಗಳಿವೆ.

ಇಷ್ಟೊಂದು ವೈವಿಧ್ಯದಿಂದ ಕೂಡಿದ ದೇಶ ಇನ್ನೊಂದಿಲ್ಲ. ಈ ದೇಶವನ್ನು ಒಂದುಗೂಡಿಸಿದ ಶಕ್ತಿ ಎಂದರೆ ಪ್ರೇಮ ಭಾವ. ಈ ಪ್ರೇಮ ಭಾವ ತನ್ನಿಂದ ತಾನೇ ಸೃಷ್ಟಿಯಾಗಿಲ್ಲ. ಭಕ್ತಿ ಪರಂಪರೆಯಲ್ಲಿ ಪ್ರೇಮ ಭಾವದ ಸೃಷ್ಟಿಯಾಗಿದೆ. ಭಾಗವತದ ಕೃಷ್ಣ ಮತ್ತು ಗೋಪಿಕೆಯರು ನಿಷ್ಕಲ್ಮಶ ಪ್ರೇಮ ಭಾವದ ಗಂಗೋತ್ರಿಯಾಗಿದ್ದಾರೆ. ಶರಣರು, ದಾಸರು, ಸಂತರು, ಸೂಫಿ ಸಂತರು ಮತ್ತು ತತ್ತ್ವ ಪದಕಾರರು ಈ ದೇಶದಲ್ಲಿ ಪ್ರೇಮ ಭಾವದ ನದಿ ನಿರಂತರವಾಗಿ ಹರಿಯುವಂತೆ ಮಾಡಿದ್ದಾರೆ. ದೇಶದ ೬ ಲಕ್ಷಕ್ಕೂ ಮಿಕ್ಕ ಹಳ್ಳಿಗಳಲ್ಲಿ ಕನಿಷ್ಠ ಒಬ್ಬ ಸಂತನ ಅಥವಾ ಸೂಫಿ ಸಂತನ ಸಮಾಧಿ ಸಿಗುವುದು. ಅಂದರೆ ಈ ದೇಶದಲ್ಲಿ ಸಂತರು ನಡೆದಾಡದ ಜಾಗವೇ ಇಲ್ಲ. ಭಾರತೀಯ ಜಾತ್ಯತೀತ ನಿಲವು ಸರ್ವಧರ್ಮ ಸಮ ಭಾವದ ನಿಲವಾಗಿದೆ. ಈ ಭಕ್ತಿ ಪಂಥದ ಪ್ರೇಮ ಭಾವದ ವಾತಾವರಣದಲ್ಲಿ ಭಾರತೀಯ ಜನ ಸಮುದಾಯಗಳು ಶತಮಾನಗಳಿಂದ ಒಂದಾಗಿ ಬದುಕುತ್ತಿವೆ. ಆದರೆ ಧರ್ಮಗಳಿಗೆ ಕೋಮುವಾದದ ಸೋಂಕು ತಗುಲಿದಾಗ ಧರ್ಮದ ಅನುಯಾಯಿಗಳ ಮನಸ್ಸುಗಳು ಕೆರಳುತ್ತವೆ. ಆ ಮನಸ್ಸುಗಳಲ್ಲಿ ಸಂಶಯದ ಹುತ್ತಗಳು ಮನೆ ಮಾಡುತ್ತವೆ. ಅಸಹನೆಯ ನಾಗರಗಳು ಬುಸುಗುಟ್ಟತೊಡಗುತ್ತವೆ. ಇಂಥ ಸ್ಥಿತಿಯಲ್ಲಿ ಅವರ ಜೊತೆಗೇ ಇರುವ ಇತರ ಧರ್ಮೀಯರು ಪರಕೀಯತೆಯನ್ನು ಅನುಭವಿಸತೊಡಗುತ್ತಾರೆ. ಹೀಗೆ ಸಂಶಯ ಮತ್ತು ಆ ಮೂಲಕ ಸೃಷ್ಟಿಯಾಗುವ ಪರಕೀಯತೆ ಒಂದು ದೇಶದ ಭಾವನಾ ಪ್ರಪಂಚವನ್ನು ನಾಶಮಾಡತೊಡಗುತ್ತವೆ. ಆಗ ಜಾತಿ ಸಂಘರ್ಷಗಳು, ಕೋಮು ಗಲಭೆಗಳು ಮತ್ತು ಭಯೋತ್ಪಾದನೆ 'ನಿತ್ಯೋತ್ಸವ'ವಾಗತೊಡಗುತ್ತವೆ. ಮನುಷ್ಯ ಯಾವ ಸ್ಥಿತಿಯಿಂದ ಯಾವ ಸ್ಥಿತಿಗೆ ತಲಪಿದ ಎಂದು ಒಳ್ಳೆಯವರು ಉದ್ಗಾರ ತೆಗೆಯುವುದು ಮಾತ್ರ ಬಾಕಿ ಉಳಿಯುತ್ತದೆ. ಇಂಥ ವಾತಾವರಣ ಇಂದು ದೇಶಾದ್ಯಂತ ಹಬ್ಬಿದ ಸಂದರ್ಭದಲ್ಲಿ ನಿಸಾರ್ ಅಹಮದ್ ಅವರ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆ ನಮ್ಮನ್ನು ಎಚ್ಚರಿಸುವ ಕಾಯಕದಲ್ಲಿ ತೊಡಗುತ್ತದೆ.

೨

ಈ ಕವಿತೆಯಲ್ಲಿ ನಿರಾಶೆ, ಬೇಸರ, ಪರಕೀಯತೆ, ಅಪಮಾನ ಮತ್ತು ಅಸಹನೆ ಮನೆ ಮಾಡಿದ್ದರೂ 'ನಿಮ್ಮೊಡನಿದ್ದೂ ನಿಮ್ಮಂತೆ ಆಗಿಲ್ಲ' ಎಂಬ ಸಮಾಧಾನವಿದೆ. ಇಷ್ಟೊಂದು ಹತಾಶ ಭಾವದಲ್ಲೂ ಸರ್ವರ ಜೊತೆ ಆತ್ಮಸಂಬಂಧವಿರಿಸಿಕೊಳ್ಳುವ ತುಡಿತವಿದೆ. ಕವಿತೆಯೊಂದು ಯಶಸ್ಸನ್ನು ಸಾಧಿಸುವುದು ಇಂಥ ಕ್ಷಣವನ್ನು ತನ್ನ ಜೀವಾಳವಾಗಿಸಿಕೊಳ್ಳುವುದರಲ್ಲಿ.

'ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೇ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆ ಎತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.'

ಭಾರತೀಯ ಸಂಸ್ಕೃತಿಯ ವೃಕ್ಷ ಅನೇಕ ಧರ್ಮ ಮತ್ತು ಪರಂಪರೆಗಳ

ಬೇರುಗಳಿಂದಾಗಿ ಸಮೃದ್ಧವಾಗಿದೆ. 'ವಸುಧೈವ ಕುಟುಂಬಕಂ' ಎಂಬುದು ಈ ಸಂಸ್ಕೃತಿಯ ತಾಯಿಬೇರಾಗಿದೆ. ಸ್ವಂತಿಕೆಯನ್ನು ಹೊಂದಿದಾತ ಇಂಥ ಒಂದು ಪರಂಪರೆಯ ಬೇರಿನ ಭಾಗವಾಗಿದ್ದರೂ ಪರಕೀಯನೆನ್ನಿಸಿಕೊಳ್ಳುವುದು, ಅಂಥ ವಾತಾವರಣದಲ್ಲಿ ಬೆಳೆಯುವುದು ಕಷ್ಟಕರವಾದು ದೆಂದು ಅಳಲು ತೋಡಿಕೊಳ್ಳುವುದು ಭಾರತೀಯ ಸಮಾಜದ ಭಾವೈಕ್ಯದ ಬೇರುಗಳು ಸಡಿಲುಗೊಳ್ಳುತ್ತಿರುವುದರ ಬಗ್ಗೆ ಎಚ್ಚರಿಕೆ ವಹಿಸುವಂತೆ ಮಾಡುತ್ತದೆ.

'ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ—
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೇ ಪೋಷಿಸಿ ಸಾಕುತ್ತ
ರೇಖೆಯಲ್ಲೇ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.'

ಪರರ ನಿಷ್ಠೆಯನ್ನು ಪರೀಕ್ಷಿಸುವವರಿಗೆ ತಾವು ಬಹುಸಂಖ್ಯಾತ ಧರ್ಮಕ್ಕೆ ಸೇರಿದವರು ಎಂಬುದೊಂದೇ ಅರ್ಹತೆಯಾಗಿರುತ್ತದೆ. ಮೌಲಿಕ ಜೀವನವನ್ನು ಸಾಗಿಸುವವರು ಪರರ ನಿಷ್ಠೆಯನ್ನು ಪರೀಕ್ಷಿಸುವ ತವಕ ಹೊಂದಿರುವುದಿಲ್ಲ; ಕೆಣಕುವುದಿಲ್ಲ. ಅವರನ್ನು ಬಲೆಗೆ ಬೀಳಿಸುವ ಕೆಲಸವನ್ನು ಮಾಡುವುದಿಲ್ಲ. ಆದರೆ ಪರರ ನಿಷ್ಠೆಯನ್ನು ಪರೀಕ್ಷಿಸುವವರ ಮುಂದೆ ನಿಂತವನು ಪಂಚೇಂದ್ರಿಯಗಳಿಗೆ ಲಗಾಮು ಜಡಿದ ಸಂಯಮಿ ಆಗಿದ್ದಾನೆ ಎಂಬುದನ್ನು ಕವಿ ಇಲ್ಲಿ ಸೂಚಿಸುತ್ತಾರೆ. ಕ್ರೌರ್ಯವನ್ನು ಮೌಲಿಕ ಬದುಕಿನಿಂದ ಮತ್ತು ಸಂಯಮದಿಂದ ಎದುರಿಸಲು ಸಾಧ್ಯ ಎಂಬುದರ ಬಗ್ಗೆ ಕವಿಗೆ ಸಂಶಯವಿಲ್ಲ. ಆದರೆ ಈ ಮಾನಸಿಕ ಕಸರತ್ತಿಗೆ ಬೇಸರಗೊಳ್ಳುತ್ತಾರೆ.

'ಒಳಗೊಳಗೇ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿ ಹೀರಿ, ಪೇಪರೋದಿ, ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.'

ನೀಲಾಂಜನೆಯ ನೃತ್ಯದ ವೇಳೆ ಯಮ ಧರ್ಮ ನೀಲಾಂಜನೆಯ ಜೀವವನ್ನು ಪಡೆದು ಆಕೆಯ ನೃತ್ಯ ಮುಗಿಯುವವರೆಗೆ ಬೆಂತರವನ್ನು ಸೇರಿಸುವುದನ್ನು ವೃಷಭ ದೇವ ಗಮನಿಸುವ ಹಾಗೆ, ಇಲ್ಲಿ ಬೇರು ಕೊಯ್ದು ನೀರು ಹೊಯ್ಯುವ ಕೃತ್ಯವನ್ನು ಕವಿ ಗಮನಿಸಿದ್ದಾರೆ. ಈ ರೀತಿಯ ಸಲಹುವ ಕಪಟತನ ಗೊತ್ತಿದ್ದರೂ ಗೊತ್ತಿಲ್ಲದ ಹಾಗೆ ಇದ್ದು ದೈನಂದಿನ ಬದುಕನ್ನು ಅಂಥವರ ಜೊತೆ ಕಳೆಯುವುದು ಮಾತ್ರ ಬಲು ಕಷ್ಟದ ಕೆಲಸವೆಂದು ಕವಿ ಉದ್ಗಾರ ತೆಗೆಯುತ್ತಾರೆ.

'ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಚೆಕ್ಕು

ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನು
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.'

ಯಾವುದೇ ಕ್ಷೇತ್ರದಲ್ಲಿನ ಅಲ್ಪಸಂಖ್ಯಾತರ ನೀಯತ್ತನ್ನು ಪ್ರಶ್ನಿಸುವ ಕೆಲ ಬಹುಸಂಖ್ಯಾತರ ಮಾತುಕತೆಗಳಲ್ಲಿ ಅಹಂಕಾರದ ಬೆಕ್ಕು ಸಂಶಯದ ಪಂಜ ಎತ್ತುತ್ತಲೇ ಇರುತ್ತದೆ. ನಂಬಿಕೆ, ನೀಯತ್ತು, ಮಾನವ ಹಕ್ಕು ಮತ್ತು ಸಾಚಾತನವನ್ನು ಪರಚುತ್ತಲೇ ಇರುತ್ತದೆ. ದುಃಖವನ್ನು ಸೃಷ್ಟಿಸುತ್ತಲೇ ಇರುತ್ತದೆ. ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳನ್ನು ತನಿಖೆ ಮಾಡುವ ಕ್ಷಣವನ್ನು ಹುಸಿ ನಗುತ್ತ ಎದುರಿಸುವುದು ಮಾನವನ ದುರಂತವಾಗಿದೆ. ಅಂತೆಯೆ, ಇದು ಬಲು ಕಷ್ಟದ ಕೆಲಸ ಎಂದು ಕವಿ ಸೂಚಿಸುತ್ತಾರೆ.

'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ಹೇಳುವಲ್ಲಿ ದೃಢ ನಿರ್ಧಾರವಿದೆ; ಆತ್ಮವಿಶ್ವಾಸವಿದೆ; ಒಳ್ಳೆಯದನ್ನು ಸಾಧಿಸುವ ಛಲವಿದೆ. ಕೆಟ್ಟದ್ದರ ಕಡೆಗೆ ಜಾರಲಿಲ್ಲ ಎಂಬ ಸಮಾಧಾನವಿದೆ. ಈ ದೇಶದಲ್ಲಿ ಎಂಥ ಪ್ರಸಂಗದಲ್ಲೂ ಮೌಲ್ಯಗಳೇ ವಿಜಯ ಸಾಧಿಸುತ್ತವೆ ಎಂಬ ಸಂದೇಶವಿದೆ.

೩

ಈ ಕವನದಲ್ಲಿ ಇನ್ನೂ ಕೆಲವು ಸಂಗತಿಗಳು ಗಮನಾರ್ಹವಾಗಿವೆ. ಈ ಕವಿತೆ ಮೂರೂವರೆ ದಶಕಗಳ ಹಿಂದೆ ಸಾಪ್ತಾಹಿಕವೊಂದರಲ್ಲಿ ಪ್ರಕಟವಾದಾಗ ಇದರ ಆಶಯವನ್ನು ತಪ್ಪಾಗಿ ಅರ್ಥಮಾಡಿಕೊಂಡ ವ್ಯಕ್ತಿಯೊಬ್ಬರು ವಿವಾದವನ್ನು ಸೃಷ್ಟಿಸಿದ್ದರು. ಕವಿತೆಯ ಅಂತರಾರ್ಥವನ್ನು ವಿವರಿಸಿ ಕೆ. ಎಸ್. ನಿಸಾರ್ ಅಹಮದ್ ಅವರು ತಮ್ಮ ಧೋರಣೆಯನ್ನು ಸ್ಪಷ್ಟೀಕರಿಸಿದ್ದರು. ಕನ್ನಡದಲ್ಲಿ ಈ ಬಗೆಯ—ಸಾರ್ವಜನಿಕದಲ್ಲಿ ತುಂಬ ಪ್ರಸ್ತುತ ಮತ್ತು ಗಂಭೀರವಾದ—ವಸ್ತುವಿನ ಬಗೆಗೆ, ಎರಡು ಸಂಸ್ಕೃತಿಯ ನಡುವೆ ನಿಂತು ಬರೆಯುವ ಬರಹಗಾರನ ಮಾನಸಿಕ ತುಮುಲ, ಅಪಮಾನ-ಅನುಮಾನಗಳ ಬಗೆಗೆ ದಿಟ್ಟವಾಗಿ ಪ್ರಕಟಗೊಂಡ ಮೊದಲನೆಯ ಕವನ ಇದು. ಅನಂತರ ನಿಸಾರ್ ಅವರೇ ಈ ಜಾತಿಯ ಹಲವಾರು ಪದ್ಯಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದಿದ್ದಾರೆ. ಇವರನ್ನು ಅನುಸರಿಸಿ ಕೆಲ ಕಾಲಾನಂತರ ಇನ್ನೂ ಕೆಲವು ಲೇಖಕ-ಲೇಖಕಿಯರು ತಮ್ಮ ಕವಿತೆ, ಕತೆ, ಲೇಖನಗಳಲ್ಲಿ ಈ ಕವಿತೆ ಪ್ರತಿಬಿಂಬಿಸುವ ಸಮಸ್ಯೆಯನ್ನು ತೋಡಿಕೊಂಡಿದ್ದಾರೆ. ಹೀಗಿದ್ದೂ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಪದ್ಯದಷ್ಟು ವಿಮರ್ಶಕರಿಗೆ ಮತ್ತು ಸುಶಿಕ್ಷಿತ ವಾಚಕರಿಗೆ ಪ್ರಿಯವಾದ ಇನ್ನೊಂದು ರಚನೆ ಇಲ್ಲವೆನ್ನಬೇಕು. ಕವಿಯ ಸುಕುಮಾರ ಮನಸ್ಸು ಕೆಲವೊಂದು 'ಅಗ್ನಿ ಪರೀಕ್ಷೆ'ಗಳ ಸಂದರ್ಭಗಳಲ್ಲಿ ಪ್ರತಿಕ್ರಿಯಿಸಿರುವ ಉತ್ಕಟ

ಸಂವೇದನಾತ್ಮಕ ಬಗೆಯನ್ನು, ಅನುಭವಿಸಿರುವ ಆಳವಾದ ವೇದನೆ ಹಾಗೂ ತಲ್ಲಣಗಳನ್ನು ಈ ಕವಿತೆ ಸಮರ್ಥವಾಗಿ ಕಟ್ಟಿ ಕೊಡುತ್ತದೆ. ಈ ವೇಳೆಯಲ್ಲೇ ತಮ್ಮ ಆಕ್ರೋಶ, ಸಿಟ್ಟು, ಹತಾಶೆಗಳು ಬರಿಯ ಬೈಗುಳವೋ, ಅಸಹಾಯಕತೆಯ ವಿಪ್ರಲಾಪದ ಜಲ್ಪವೋ, ಸ್ವಾಭಿಮಾನ ಹಾಗೂ ಸ್ವಪ್ರತಿಭೆಯ ಕೊರತೆಯ ಅರಿವೋ ಆಗದಂತೆ ಆರೋಗ್ಯಕರ ಮತ್ತು ಸಕಾರಾತ್ಮಕವಾದ ಸಂಯಮಪೂರ್ಣ ವ್ಯಂಗ್ಯ ಕೆಲಸ ಮಾಡಿರುವುದು ಮೆಚ್ಚುಗೆಯನ್ನು ಮೂಡಿಸುತ್ತದೆ.

ವೈಯಕ್ತಿಕ ಮತ್ತು ವ್ಯಕ್ತಿ ಕೇಂದ್ರಿತ ಅನುಭವದ ಮುಖೇನ ನಮ್ಮ ದೇಶದ ಅಪರಿಹಾರ್ಯವೆನ್ನಿಸಿರುವ ಸಮಸ್ಯೆಯೊಂದನ್ನು ಧ್ವನಿಸುವ ಪರಿ ಅಚ್ಚರಿ ಮೂಡಿಸುತ್ತದೆ. ಇಲ್ಲಿನ ಚಿತ್ರಗಳು, ಹೋಲಿಕೆಗಳು ದಿನನಿತ್ಯದ ಬದುಕಿನ ಸಾಮಾನ್ಯ ಸಂಗತಿಗಳಿಗೆ ಸಂಬಂಧ ಪಟ್ಟಿದ್ದರೂ ಅವು ಒಟ್ಟಾರೆಯಾಗಿ ಉಂಟುಮಾಡುವ ಪರಿಣಾಮ ಅಸಾಧಾರಣ. ಹೊಳೆಯ ತಡಿಯ ಮರಳನ್ನು ಬಗೆದಷ್ಟೂ ಉಕ್ಕುವ ಜಲದಂತೆ, ಈ ಕವನ ಪ್ರಚೋದಿಸುವ ವಿಚಾರ ಸಮೃದ್ಧವಾದದ್ದು.

ಈ ದೃಷ್ಟಿಯಿಂದ, ನಮ್ಮ ಕನ್ನಡ ಕಾವ್ಯದ ಕೆಲವು ಉತ್ತಮ ಚಿಂತನಶೀಲ ಕವಿತೆಗಳಲ್ಲಿ ನಿಸಾರರ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ರಚನೆ ಸಹ ಒಂದು ಎಂದು ಧಾರಾಳವಾಗಿ ಉಲ್ಲೇಖಿಸಬಹುದು. ಆಗಿನ ಕಾಲದ ಸಣ್ಣ ಪತ್ರಿಕೆಗಳಲ್ಲಿ 'ಪರಕೀಯ ಪ್ರಜ್ಞೆ' 'ಅನಾಥ ಪ್ರಜ್ಞೆ'ಯ ಮೇಲೆ 'ನವ್ಯ ಧೀಮಂತ'ರ ಲೆಕ್ಕವಿಲ್ಲದಷ್ಟು ಹಾಳೆಗಟ್ಟಳೆ ವಿಮರ್ಶಾತ್ಮಕ ಬರಹಗಳು ತಯಾರಾಗುತ್ತಿದ್ದಾಗ, ಸದ್ದಿಲ್ಲದೆ ತುಂಬು ಸಾಂದ್ರತೆಯ ಈ ಚಿಕ್ಕ ಪದ್ಯ, ಆ ಲೇಖನಗಳ ಆಶಯವನ್ನು ಮಿಗಿಲು ಪರಿಣಾಮಕಾರಿಯಾಗಿ ನಿದರ್ಶನ ಪೂರ್ವಕವಾಗಿ ಭಾವಾಭಿವ್ಯಕ್ತಿಸಿ, ಕಾಲವನ್ನು ಮೆಟ್ಟಿ ಇಂದಿಗೂ ಪ್ರಸಕ್ತವಾಗಿರುವುದು ವಿಸ್ಮಯಕರ ಎನ್ನಿಸುತ್ತದೆ. ಸಂವೇದನಶೀಲನಾದ ಯಾರೇ ವ್ಯಕ್ತಿಯ ಜೀವನದಲ್ಲಿ ಇಂತಹ ತವಕ, ತಳಮಳ, ತಳ್ಳಂಕಗಳ ಅನುಭವ ಒಮ್ಮೆಯಲ್ಲ ಒಮ್ಮೆ ಆಗುವುದನ್ನು ನೆನೆದಾಗ, ಅದರ ಕಾರಣದಿಂದ ಅಸಹಾಯಕತೆಯ ಅಸಹನೀಯ ನೋವನ್ನು ಅನುಭವಿಸಿದಾಗ ನಿಸಾರರ ಈ ಕವನ ಜ್ಞಾಪಕಕ್ಕೆ ಬಂದೇ ಬರುತ್ತದೆ. ಪರ್ಯಾಲೋಚಿಸಿದಾಗ ಅದರ ಸಾರ್ವತ್ರಿಕ ಭಾವಾರ್ಥ ಮನದಟ್ಟಾಗುತ್ತದೆ.

ಬಾಳಿನ ನಿಜವಾದ ಧ್ಯೇಯಾದರ್ಶಗಳನ್ನು, ಸತ್ಯ ಸ್ಥಿತಿಯನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಸಾಹಿತ್ಯದ ಪಾತ್ರ ಅದ್ವಿತೀಯ. ಪಾರಂಪರಿಕ ವಾದ ಸಾರಾಸಾರ ವಿವೇಕದ ಸನ್ಮೌಲ್ಯಗಳ ಪ್ರಜ್ಞೆಯನ್ನು ಜನಪದದ ಸ್ಮೃತಿ ಯಲ್ಲಿ ನಾಟಿಸುವಲ್ಲಿ ಸಾಹಿತ್ಯಕ್ಕೆ ಇನ್ನೂ ಅಮಿತಾವಕಾಶವಿದೆ, ಪ್ರಶ್ನಾತೀತ ನಾಣ್ಯತೆಯಿದೆ.

(ಸಾಹಿತ್ಯದ ಮಹೋಪಕಾರ)

ವೈಜಯಂತಿ

ನನ್ನ ಪರಿಚಯದ ವೈಜಯಂತಿ
ಅಮಾವಾಸ್ಯೆಗೊ ಪೌರ್ಣಿಮೆಗೊ
ಹಠಾತ್ತನೆ ಭೇಟಿಯಾಗಿ,
ಮನಸ್ಸಿನ ನಡೆಗೆ ಆಗುಂಬೆ ಘಾಟಿಯಾಗಿ—
ತಾನು ಮಾತ್ರ ನನ್ನನ್ನ ಸಲೀಸಾಗಿ
ದಾಟಿ ಹೋಗುತ್ತಾಳೆ.

ಮೊನ್ನೆ ಜಯನಗರದ ಹೋಟಲಿನ ಎದುರು
ಅವಳ ಗುರುತು ಸಿಕ್ಕಿದ್ದೇ ಒಂದು ಪವಾಡ.
ಸಿಲ್ಕಿನ ಸೀರೆ ರವಿಕೆ, ಒಂದೂವರೆ ಮೀಟರ್ ಜಡೆ ಇಳಿಕೆ,
ಹಾಲು ಬಾಟಲಿಯ ಮುಚ್ಚಳದಗಲದ ಹಣೆ ಬೊಟ್ಟು,
ಸೆರಗು ಮರೆ ಎದೆ ಗುಟ್ಟು—
ಪರಂಪರೆಯೆ ಹದಿನಾರಾದಂತಿದ್ದ ಈಕೆ,
ನನ್ನ ಸಾಹಿತಿ ಕಪಿನೀಪತಿ ಜೊತೆ
ಪ್ರತ್ಯಕ್ಷವಾಗುತ್ತಿದ್ದ ಸ್ಫಟಿಕದ ಸಲಾಕೆ—

ಹಳದಿ ಹ್ಯಾಂಡ್‌ಲೂಮ್ ಷರ್ಟು, ಕೆಂಪು ಬೆಲ್‌ಬಾಟಮ್ಸ್,
ಬಲ ಹೆಗಲಿಗೆ ಜೋಳಿಗೆಯ ಥರ
ಗೋಣಿ ಚೀಲದ ಮರಿಯನಿಳಿಬಿಟ್ಟು
ಕೈ ಬೀಸಿ 'ಹಲೊ' ಎಂದಾಗ
—ನನಗೋ ಕಸಿವಿಸಿ; ಮಂಡೆಯೆಲ್ಲಾ ಬಿಸಿ.

'ಇವಳಿಗೇನಾಗಿದೆ? ಯಾಕೀ ಅವಾಂತರ?'
ಅಂದುಕೊಳ್ಳುತಿರುವಂತೆಯೇ ನೆನಪಾಯ್ತು—
ಸಮಾಜವಾದದ ಅವಳ ಈಚಿನ ಮತಾಂತರ!
ವಿಮೆನ್ಸ್ ಲಿಬ್ಬಿಗೂ ಸೇರಿರಬಹುದೆಂಬ
ನನ್ನ ಗುಮಾನಿಗೆ
ಸುರಿಸುವಂತಿದ್ದಳು ತೈಲ
ಈ ಸ್ತ್ರೀರೂಪದ ಗೊಂದಲ.

'ನಿನ್ನ ಫ್ರೆಂಡ್ ಕಪಿನಿ ಮದುವೆಗೆ ಹೋಗಿದ್ದೆಯ?' ಎಂದೆ.

'ಈಚೆಗೇನು ಬರೆದಿರಿ?' ಕೇಳಿದಳು.
'ಕಾಫಿ ಕುಡಿಯೋಣ' ಅಂದೆ.
ಇತ್ತೀಚೆ ತಾನು ಹೆಕ್ಕಿದ ಮಾರ್ಕ್ಸ್ ಸಿದ್ಧಾಂತ,
ಪಾಶ್ಚಾತ್ಯ ಕಾವ್ಯತತ್ತ್ವಗಳ ರಾದ್ಧಾಂತ,
ನಮ್ಮ ನಾರೀಮಣಿಗಳ ಗೋಳು, ದಾಂಪತ್ಯದ ಸೀಳು
ಮುದ್ದು ತುಟಿಗಳಿಂದ ಮುದ್ದೆ ಮುದ್ದೆ
ಹೊರಗೆಡವುತಿದ್ದಾಗ
ಇವೆಲ್ಲ ಯಾಕೋ ಈ ಸುಂದರಿಗೆ
—ದಾಡಿ ಬಿಡಿಸಿದ ಹಾಗೆ—ವಿಲಕ್ಷಣವೆನ್ನಿಸಿತು;
ನ್ಯೂಯಾರ್ಕಿನ ನೆಲ ತುಳಸಿ ತೂಗಿದ ಹಾಗೆ
ಅವಳ ಸ್ಥಿತಿ ಅನ್ನಿಸಿತು.

ಗಳಪುತ್ತಲೇ ಇದ್ದಳು
ಮರೆತು ತನ್ನನ್ನ, ನನ್ನನ್ನ, ಆವರಣವನ್ನ.
ನಾನೂ ಮೆಚ್ಚುತ್ತ ಕೂತಿದ್ದೆ:
ಅವಳ ಚೆಂದುಳ್ಳ ಕೆನ್ನೆಯ ಚಿಕ್ಕ ಮಚ್ಚೆಯನ್ನ,
ಹಣೆಯ ಮೇಲಿನ ನೀಲಿ ನರ ಮೂಡಿಸಿದ ಹಚ್ಚೆಯನ್ನ.
ತನ್ನ ಮಾತೇ ತನಗೆ ಬೇಸರಾದಂತೆ
ತುಟಿ ತನಕ ಪುಟಿದ ಆಕಳಿಕೆಯನೊಳಗೇ ತಡೆದು
ಹಾಡಿದಳು ಜನಗಣ ಮನ:
'ನೈಜ ಕವಿಗೆ ಕಮಿಟ್‌ಮೆಂಟೆ ಮೂಲಧನ.'

ಕೇಳಿದೆ : 'ಏನು ಹಾಗಂದರೆ?'
'ಅದೇ ನಿಮ್ಮಂಥವರ ತೊಂದರೆ—
ಸಮಾಜದ ಜ್ವಲಂತ ತೊಡಕುಗಳ ದರ್ಶನ;
ಕೃತಿಯಲ್ಲಿ ಅದರ ಪ್ರದರ್ಶನ.'
'ವೈಜಯಂತಿ, ಮನಸ್ಸು ಗೂಟಕ್ಕೆ ಬಿಗಿದ ಆಕಳಲ್ಲ;
ಕೊಂಬೆ ರೆಂಬೆಯ ಅಳಿಲು.'

ತಿದ್ದಿದಳು : 'ಅಲ್ಲ. ಹತ್ತು ಕಡೆ ಅಗೆದರೆ ಗೋರಿ;
ಒಂದೆಡೆ ತೋಡುತ್ತಾ ಹೋದರೆ ಬಾವಿ.
ಕಮಿಟ್‌ಮೆಂಟ್ ಇಲ್ಲದವನ ಬರಹ
ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ.
ಕೆಂಗೇರಿಯಿಂದ ಹಂಗೇರಿಯ ತನಕ,
ಅಂಗೋಲದಿಂದ ಬಂಗಾಲದ ತನಕ ಹಣ ಹದ್ದಿನ
ಮೆರೆತ,
ಅದರಡಿಯಲಿ ಅರೆ ಬಟ್ಟೆ, ಬರಿ ಹೊಟ್ಟೆಯ ಮೊರೆತ.
ಇದಷ್ಟೇ ವಾಸ್ತವಿಕತೆ;
ಉಳಿದದ್ದೆಲ್ಲ ಅಡಗೂಲಜ್ಜಿಯ ಕತೆ.'

ಹೇಳಿದೆ : 'ಇನ್ನೊಂದು ಚಹರೆಯೂ ಉಂಟು—
ಮನುಷ್ಯನಿಗದೇ ಕಗ್ಗಂಟು:
ಬಿಸಿಲಿಗೆ ಬೆಂದು, ಮಳೆಗೆ ನೆಂದು
ಗಾಳಿಗೆ ಸೆರಗೆತ್ತುವ ಮರಕ್ಕೂ ತಲೆ ತುಂಬ ಕನಸು.
ಕೊಂಬೆ ಕೊಂಬೆ ಸಜೀವ—ನೋಟಕ್ಕೆ ತಿನಿಸು.
ಸಂಜೆ ಮುಂಜಾನೆಯಲಿ ಮರಮರವು ಗಿಲಗಿಚ್ಚಿ;
ಚೈತ್ರೋದಯಕ್ಕೆ ಪ್ರಕೃತಿಯೆ ಹುಚ್ಚಿ.
ಹಾಗೆಯೆ—
ಗುಡಾಣ ಹೊಟ್ಟೆಯ ಧನಿಕ ತೋಳ
ಕಳಿಸುತ್ತಾನೆ ಪ್ರತಿ ಹೊತ್ತಾರೆ
ಕ್ಷಯದಾಸ್ಪತ್ರೆಗೆ ಸೇಬು, ಕಿತ್ತಲೆಯ ಚೀಲ.
ನೋಡು, ಈ ಹೋಟಲಿನ ಸಾಹುಕಾರನ ಕರುಳು:
ನೋಟುಗಳ ನಡುವೆಯೂ ನೆನೆದಿರುವುದೊಂದೆ—
ಒಬ್ಬನೇ ಮಗನ ವಾಸಿಯಾಗದ ಮರುಳು.
ಪತ್ರಕ್ಕೆ ಅಂಟಿಸಿದ ಸ್ಟ್ಯಾಂಪು ಕಿತ್ತಂತೆ, ವೈಜಯಂತಿ,
ಜೀವಿಗಳ ನಂಟು;
ಬೇರ್ಪಡಿಸಲೊಂದು, ಮತ್ತೊಂದೂ
ಹಿಂಬಾಲಿಸುವುದುಂಟು—
ಇದೇ ಮನುಷ್ಯನಿಗೆ ಕಗ್ಗಂಟು.
ಕರಿ ಬಿಳಿ ಎಲ್ಲೋ ಕಲಸಿ ಬೂದಾಗುತ್ತದೆ;
ಎರಡೆರಡು ಐದಾಗುತ್ತದೆ.'
ಮೊಟ್ಟೆಯನ್ನಡ್ಡಡ್ಡ ನುಂಗಿದವಳಂತೆ
ಮುಖ ಸೊಟ್ಟಸಿ ವೈಜಯಂತಿ
ಹರಿಸಿದಳು ನುಡಿಯ ಲಾವ:
'ವೇದಾಂತ ಸಾಕು; ನೀವೊಬ್ಬ ಬೂರ್ಜ್ವಾ.'
ಇನ್ನು ಈ ದೊರೆ ಸಮಾಜವಾದಿ ಜೊತೆ
ಚರ್ಚಿಸುವುದರಲ್ಲಿಲ್ಲ ಸಾರ್ಥಕತೆ—ಎಂದು
ಬದಲಿಸಿದೆ ಮಾತಿನ ಗತಿ:

'ಹೇಗಿದ್ದಾನೆ ನಿನ್ನ ಹಳೇ ದೋಸ್ತಿ ಕಪಿನೀಪತಿ?'
'ಅವರೊಬ್ಬರಿಗೇ ನಮ್ಮಲ್ಲಿರುವುದು ಕಮಿಟ್‌ಮೆಂಟು;
ಅವರ ಪಂಕ್ತಿ ಪಂಕ್ತಿಯ ತುಂಬ
ಮಣ್ಣಿನ, ಕೆಳ ಬದುಕಿನ ಸೆಂಟು;
ಸಮಕಾಲೀನತೆಯ ಬಗ್ಗೆ
ಪಡೆಯಬೇಕಿದೆ ನೀವು ಅವರಿಂದ ಹಿಂಟು.'
'ನಿಜ. ಮೂವತ್ತೆಕರೆ ತೆಂಗು,
ನಾಲ್ಕೈದು ಬಂಗ್ಲೆ, ಬ್ಯಾಂಕ್ ಬ್ಯಾಲೆನ್ಸು—

ಬೇಡವೆಂದರೂ ಸಮಾಜವಾದಿಯಾಗಿಸುತ್ತೆ;
ಬಡತನದ ಬಗ್ಗೆ ಮಹಾಕಾವ್ಯ ಹಾಡಿಸುತ್ತೆ.'

ಮೇಜನ್ನ, ರೊಟ್ಟಿ ತಟ್ಟುವ ಹಾಗೆ, ಗುದ್ದಿ
ಕಿಡಿದಳು:
'ಆ ಆಸ್ತಿ ಆಳದ ದುಡಿತ ನಿಮಗೆ ಅರ್ಥವಾಗೊಲ್ಲ.
ಶೋಷಿತರ ಬಗೆಗಿರುವ ಎದೆ ಬಡಿತ ನಿಮಗೆ ಅರ್ಥವಾಗೊಲ್ಲ.
ಕರುಣೆಯಲ್ಲದ್ದಿ ತೆಗೆದಂಥ ನುಡಿತ,
ಗಂಡಸಿನ ಹೆಂಗರುಳ ಮಿಡಿತ ನಿಮಗೆ ಅರ್ಥವಾಗೊಲ್ಲ.
ನೀವೊಂದು ಚಿಟ್ಟೆ.
ನಿಮಗರ್ಥವಾಗುವುದೆಲ್ಲ ಬರಿಯ ಲೊಳಲೊಟ್ಟೆ—
ಅರ್ಥಾತ್ ನೀವಷ್ಟೆ.'

'ವೈಜಯಂತಿ, ಮೊನ್ನೆ ಕಪಿನಿ ಸಿಕ್ಕಿದ್ದ ಗೊತ್ತ?'
'ಎಲ್ಲಿ?' ಅಂದಳು, ಸಮಸ್ತ ಹುಮ್ಮಸ್ಸನ್ನ ಮುಖಕ್ಕೆ ತರಿಸಿಕೊಳ್ಳುತ್ತ.
'ಅವೆನ್ಯೂ ರಸ್ತೆಯಲ್ಲಿ. ಜೊತೆಗೆ ನೀಲಿಗಣ್ಣಿನ ಪತ್ನಿ.
ಈ ಸಲದ ಫಸಲಲ್ಲಿ ಹತ್ತು ಸಾವಿರ ಆಕೆಗೆಂದ.
ಚಿನ್ನದೊಡವೆ, ಹತ್ತಾರು ಸೀರೆಗಳ ಪ್ಯಾಕೆಟ್ಟು
ಹೊತ್ತು ಕಾರಲ್ಲಿ ಕೂತಿದ್ದ ಆಕೆ
ಬಿಚ್ಚೋಲೆ ಗೌರಿ ಥೇಟು.'
ವೈಜಯಂತಿಯ ವದನ
ಕೆಂಡ ಸುರಿದ ಬಾಳೇ ದಿಂಡು;
ಕಿವಿ ತುದಿ ಕೆಂಪಾಗಿ ಉದುರಿದವು ನುಡಿ ಗುಂಡು:
'ಅಬ್ಬಾ! ಆ ಹಳ್ಳಿಮುಕ್ಕಿಯ ಸೊಕ್ಕೆ!
ಮಹಾ ಧಿಮಾಕಿನ ಬಜಾರೀರಿ ಆಕೆ—
ತಾನೊಬ್ಬ ದೊರೆಸಾನಿ ಅಂದುಕೊಂಡಿದ್ದಾಳೆ ಭಡವೆ,
ಎಲ್ಲರೆದುರು ಪ್ರದರ್ಶಿಸುತ್ತಾಳೆ ವಸ್ತ್ರ ಒಡವೆ.
ಇನ್ನೆರಡು ವರ್ಷ ತಾಳಿ
ಬೀಸಲಿ ಹೊಸ ವ್ಯವಸ್ಥೆಯ ಗಾಳಿ,
ನಾನೂ ಉಟ್ಟು, ತೊಟ್ಟು
ಅವಳ ಹೊಟ್ಟೆ ಉರಿಸದಿದ್ದರೆ ಕೇಳಿ!'
'ನೀನೀಗ ನಿಜಕ್ಕೂ ಸಮಾಜವಾದಿ ನೋಡು'
ಅಂದೆ ಜೋರಾಗಿ ನಕ್ಕು.
ಎದ್ದು ಧಡ ಧಡ ಹೊರಟೇಬಿಟ್ಟಳು ರಿಕ್ಷಾ ಹೊಕ್ಕು.

ವೈಜಯಂತಿಯ ಅಭಾರತೀಯ ವೇಷ,
ಸಮಾಜವಾದದಾವೇಶ, ಕಪಿನಿ,
ಅವನ ಹಳೆಯ ಮಾದರಿ ಪತ್ನಿ

ಒಂದಕ್ಕೊಂದು ನಂಟಾಗಿ,
ಅವಳ ವಿಚಿತ್ರ ತರ್ಕದ ಹಿಂದಿರುವ ಕೊರತೆ
ಕಗ್ಗಂಟಾಗಿ
ಚಿಂತಿಸುತ್ತಾ ಕೂತೆ.

★ ★ ★

(ಕವನ ಸಂಕಲನ: 'ಸ್ವಯಂಸೇವೆಯ ಗಿಳಿಗಳು')



'ವೈಜಯಂತಿ': ನಿಸಾರರ ಕವಿತೆಗಳಿಗೊಂದು ಕಾವ್ಯ ಮೀಮಾಂಸೆಯ ಕೈಗನ್ನಡಿ

♦ ಡಾ. ಪ್ರಹ್ಲಾದ ಅಗಸನಕಟ್ಟೆ

ಡಾ. ಕೆ. ಎಸ್. ನಿಸಾರ್ ಅಹಮದ್ ನವ್ಯಕಾವ್ಯದ ಉಚ್ಛ್ರಾಯ ದಿನಗಳಲ್ಲಿ ತಮ್ಮ ಕಾವ್ಯ ಸಂವೇದನೆಗಳನ್ನು ರೂಪಿಸಿಕೊಂಡವರಾದರೂ ಅವರು ಅಡಿಗರ ಆಲದ ನೆರಳಿನ ಕೆಳಗೆ ಬಾಡಿ ಹೋದ ಹಲವು ನಿಸ್ತೇಜ ಕವಿಗಳಂತಲ್ಲ. ಅತ್ತ ತೀವ್ರ ಸಂಕೀರ್ಣವೂ ಪ್ರತಿಮಾತ್ಮಕವೂ ಬದುಕಿನ ಬಗ್ಗೆ ಭ್ರಮಾತ್ಮಕ ನಿಲವನ್ನೂ ತಾಳದೆ—ಇತ್ತ ಅಗ್ಗದ ಜನಪ್ರಿಯತೆ, ಸುಲಭವಾದ ರಂಜನೀಯ ಮಾದರಿಗಳಿಗೆ ಮಾರುಹೋಗದೆ, ಈ ಎರಡರ ನಡುವೆ ತಮ್ಮದೇ ಆದ ದನಿಯನ್ನು, ಅನನ್ಯತೆಯನ್ನು, ವೈಶಿಷ್ಟ್ಯಗಳನ್ನು ಕಾಪಾಡಿಕೊಳ್ಳುತ್ತಾ ಬಂದವರು ಅವರು. ನವ್ಯರಿಗಿಂತ ಭಿನ್ನವಾದ ಆಕೃತಿ-ಆಶಯಗಳನ್ನು ಕಟ್ಟಿಕೊಳ್ಳುತ್ತಾ—ಅಡಿಗರ ಪ್ರಭಾವಳಿಯ ಸನಿಹವಿದ್ದರೂ ತಮ್ಮ ಕಾವ್ಯ ಪ್ರತಿಭೆ ಆ ಪ್ರಭಾವಳಿಯ ಎದುರು ಮಂಕಾಗದಂತೆ ಒಂದು ಸ-ದೂರವನ್ನು ಎಚ್ಚರದಿಂದ ಕಾಪಾಡಿಕೊಳ್ಳುತ್ತ ಬಂದವರು ನಿಸಾರ್.

ಸ್ವವಿಮರ್ಶೆ—ನವ್ಯಕಾವ್ಯದ ಒಂದು ಮುಖ್ಯ ತಾತ್ತ್ವಿಕ ಪಾತಳಿ. ಸ್ವವಿಮರ್ಶೆ ತನ್ನನ್ನು ಕುರಿತದ್ದು ಇರಬಹುದು ಅಥವಾ ಪರರನ್ನು ಕುರಿತದ್ದು ಇರಬಹುದು ಅಥವಾ ತನ್ನ ಕಾವ್ಯ ಧೋರಣೆಯ ಅರ್ಥ ವಿನ್ಯಾಸಗಳ ಸ್ವಕೀಯ ಪರಾಮರ್ಶೆ ಇರಬಹುದು. ಪ್ರಸ್ತುತ ಕೈಗೆತ್ತಿಕೊಂಡಿರುವ 'ವೈಜಯಂತಿ' ಎಂಬ ಕೆ. ಎಸ್. ನಿಸಾರ್ ಅಹಮದ್ ಅವರ ಪದ್ಯದ

ಪ್ರಾಯೋಗಿಕ ವಿಮರ್ಶೆಯಲ್ಲಿ ಎದ್ದು ಕಾಣುವ ಆಶಯ ಈ ಬಗೆಯ ಇಬ್ಬಗೆಯ ಸ್ವ-ಪರ ವಿಮರ್ಶೆ, ಮತ್ತು ಅದೇ ಕಾಲಕ್ಕೆ ಅವರು ಮುಂದಿಡುವ ಅವರ ಕಾವ್ಯದ ಒಟ್ಟಾರೆ ಆಶಯದ ಮಂಡನೆ. ಇವೆರಡೂ ಈ ಪದ್ಯದಲ್ಲಿ ವಿವೇಚಿಸಲ್ಪಟ್ಟಿವೆ.

ಎಲ್ಲರೊಳಗೂ ಇದ್ದು ಎಲ್ಲರಂತಾಗಲೊಲ್ಲದ ನಿಲವು ಕೆ. ಎಸ್. ನಿಸಾರ್ ಅಹಮದ್ ಅವರಲ್ಲಿ ಪುನಃಪುನಃ ನಾವು ಎದುರಾಗುವ ಒಂದು ವಿಶಿಷ್ಟ ಜಿಜ್ಞಾಸೆ. ಇದನ್ನೇ ಅವರು 'ನಿಮ್ಮೊಳಗಿದ್ದೂ ನಿಮ್ಮಂತಾಗದವ' ಎಂದು ಕರಕೊಂಡದ್ದು ಉಂಟು. 'ವೈಜಯಂತಿ' ಎಂಬ ಈ ಪದ್ಯದ ಮುಖ್ಯ ಆಶಯ ಕೂಡ ಅಂಥ ದಿಕ್ಕಿನ ಕಡೆ ನಮ್ಮ ಗಮನ ಸೆಳೆಯುವಂಥದು. ಇಲ್ಲಿ 'ವೈಜಯಂತಿ' ಬದಲಾಗುತ್ತಿರುವ, ಇಂಥ ಬದಲಾವಣೆಯಲ್ಲಿ ಬಹುಮುಖಿಯಾದ ಜೀವನವನ್ನು ತಪ್ಪಾಗಿ ಅರ್ಥೈಸುವುದರ ಸಂಕೇತವಾಗಿದ್ದಾಳೆ. ಇಷ್ಟೇ ಅಲ್ಲದೆ ಈಕೆಯ ಸ್ನೇಹಿತ ನವ ಸಾಹಿತಿ ಕಪಿನೀಪತಿ—ನವ್ಯ ಸಾಹಿತ್ಯದ ಸಂದರ್ಭದಲ್ಲಿ ಮಾತು-ಕೃತಿಯ ನಡುವೆ ಒಂದು ಅಸಂಗತ ಅಸಮತೋಲನವನ್ನು ಪ್ರಕಟಿಸುತಿದ್ದುದರ ಪ್ರತೀಕವಾಗಿ ಕಾಣಿಸಿಕೊಂಡಿದ್ದಾನೆ.

ಕವಿ ಸ್ವತಃ ಈ ಪರಂಪರೆಗೆ ಸೇರಿದವನಾಗಿದ್ದರೂ ಈ ಪರಂಪರೆಯನ್ನು ಅಧಿಕೃತ ವಾಗಿ—ಸಾರೋದ್ಧಾರವಾಗಿ ಪ್ರತಿನಿಧಿಸುತ್ತಿರುವವರ ಬಗ್ಗೆ ನಿಷ್ಠವಾದ ಒಲುಮೆಯುಳ್ಳವ ನಾಗಿಲ್ಲ. ಈ ಕಾವ್ಯ ಪಂಥ ಮಂಡಿಸುತ್ತಿರುವ ಜೀವನ ಮೀಮಾಂಸೆ—ಹಾಗೂ ಕಾವ್ಯ ಮೀಮಾಂಸೆಯ ಬಗ್ಗೆ ಕವಿಗೆ ತನ್ನದೇ ಆದ ಭಿನ್ನಾಭಿಪ್ರಾಯಗಳು ಹಾಗೂ ತಕರಾರುಗಳೂ ಇವೆ. ಅವು ಈ ಪದ್ಯದಲ್ಲಿ ಮತ್ತೆ ಮತ್ತೆ ಉಕ್ತಗೊಳ್ಳುತ್ತವೆ.

ಪದ್ಯ ಪ್ರಾರಂಭವಾಗುವುದೇ ಪರಿಚಯತೆ ಮತ್ತು ಅಪರಿಚಯತೆಯ ನಡುವಿನ ಸಂಘರ್ಷದಿಂದ!

'ನನ್ನ ಪರಿಚಯದ ವೈಜಯಂತಿ
ಅಮಾವಾಸ್ಯೆಗೊ ಪೌರ್ಣಿಮೆಗೊ
ಹಠಾತ್ತನೆ ಭೇಟಿಯಾಗಿ,
ಮನಸ್ಸಿನ ನಡೆಗೆ ಆಗುಂಬೆ ಘಾಟಿಯಾಗಿ—
ತಾನು ಮಾತ್ರ ನನ್ನನ್ನು ಸಲೀಸಾಗಿ
ದಾಟಿ ಹೋಗುತ್ತಾಳೆ.'

ಮೊದಲ ಈ ಪಂಕ್ತಿಯಲ್ಲಿಯೇ ಈ ವೈಜಯಂತಿಯ ವೈಚಿತ್ರ್ಯವನ್ನು ನಮಗೆ ಕವಿ ಕಟ್ಟಿಕೊಡುತ್ತಾರೆ. ನಿತ್ಯ ಭೇಟಿಗಿಂತ—ಅಪರೂಪಕ್ಕೆ ಭೇಟಿಯಾಗುವವರ ಏನಾದರೊಂದು ದಿಗಿಲನ್ನು-ಶಾಕ್ ಅನ್ನು ನಮಗೊಡ್ಡುತ್ತಾರೆ. ನಮ್ಮ ಮನಸ್ಸಿನ ಸಹಜ ನಡಿಗೆಗೆ ಒಂದು ಭಂಗ ತರುತ್ತಾರೆ. ಆದರೆ ಅವರು ಮಾತ್ರ ನಿರುಮ್ಮಳರಾಗಿರುತ್ತಾರೆ.

ಕವಿಯ ಆತ್ಮೀಯ ಬಳಗಕ್ಕೆ ಸೇರಿದವಳೆನ್ನಬಹುದಾದ ಈ ವೈಜಯಂತಿ ಒಂದು ಕಾಲದಲ್ಲಿ ನಮ್ಮ ಪರಂಪರೆಯ ಪ್ರತಿನಿಧಿ ಇದ್ದಂತೆ ಇದ್ದವಳು—

'ಸಿಲ್ಕಿನ ಸೀರೆ ರವಿಕೆ, ಒಂದೂವರೆ ಮೀಟರ್ ಜಡೆ ಇಳಿಕೆ,

ಹಾಲು ಬಾಟಲಿಯ ಮುಚ್ಚಳದಗಲದ ಹಣೆ ಬೊಟ್ಟು,
ಸೆರಗು ಮರೆ ಎದೆ ಗುಟ್ಟು—'

ಹೀಗಿದ್ದ ಈ ವೈಜಯಂತಿ ಇದ್ದಕ್ಕಿದ್ದಹಾಗೆ—

'ಹಳದಿ ಹ್ಯಾಂಡ್‌ಲೂಮ್ ಷರ್ಟು, ಕೆಂಪು ಬೆಲ್‌ಬಾಟಮ್ಸ್,
ಬಲ ಹೆಗಲಿಗೆ ಜೋಳಿಗೆಯ ಥರ
ಗೋಣಚೀಲದ ಮರಿಯನಿಳಿಬಿಟ್ಟು
ಕೈಬೀಸಿ 'ಹಲೊ' ಎಂದಾಗ
—ನನಗೋ ಕಸಿವಿಸಿ; ಮಂಡೆಯೆಲ್ಲಾ ಬಿಸಿ.'

ಇಂಥ ಊಹಾತೀತ ಪರಿವರ್ತನೆಗೆ ಈ ಕಾವ್ಯದ ನಾಯಕ ಎರಡು ಕಾರಣಗಳನ್ನು ನಿಮ್ಮ ಮುಂದೆ ಇಡುತ್ತಾನೆ. ಒಂದು ನವ್ಯ ಸಾಹಿತಿ ಕಪಿನೀಪತಿಯೊಡನೆ ಅವಳ ಸ್ನೇಹ. ಮತ್ತೊಂದು 'ಸಮಾಜವಾದದ ಅವಳ ಈಚಿನ ಮತಾಂತರ'. ಈ ಎರಡಕ್ಕೂ ಒಂದು ತಾರ್ಕಿಕ ಸಂಬಂಧ ಕೂಡ ಇದೆ. ನವ್ಯ ಸಾಹಿತ್ಯದ ಬಹುತೇಕ ಬರಹಗಾರರು ಸಮಾಜವಾದದ ಹಿನ್ನೆಲೆಯುಳ್ಳವರು. ಮತ್ತು ಮಹಿಳಾ ಸ್ವಾತಂತ್ರ್ಯದ ಪ್ರತಿಪಾದಕರು; ಹಾಗೂ ಮುಕ್ತ ಲೈಂಗಿಕ ಸಂಬಂಧಗಳ ವಕ್ತಾರರು, ಜೊತೆಗೆ ಪರಂಪರೆಯ ಕಡು ವೈರಿಗಳು.

ಕಪಿನೀಪತಿಯ ನಿಕಟ ಗೆಳತಿಯಾದ ವೈಜಯಂತಿಯ ಮೇಲೆ ಇದರ ದಟ್ಟ ಪ್ರಭಾವ ವಾಗಿರುವುದನ್ನು ಮುಂದಿನ ಸಾಲುಗಳು ಸಾಬೀತುಪಡಿಸುತ್ತವೆ. ಮಾತು ಮಾತಿಗೆ ಆಕೆ 'ಮಾರ್ಕ್ಸ್ ಸಿದ್ಧಾಂತ, ಪಾಶ್ಚಾತ್ಯ ಕವಿಗಳ ರಾದ್ಧಾಂತ, ನಾರೀಮಣಿಗಳ ಗೋಳು'ಗಳ ಬಗ್ಗೆ ನಿರರ್ಗಳವಾಗಿ ಗಳಹುತ್ತಲೇ ಸಾಗುತ್ತಾಳೆ. ಆದರೆ ಕವಿಗೆ 'ಇವೆಲ್ಲಾ ಯಾಕೋ ಈ ಸುಂದರಿಗೆ—ದಾಡಿ ಬಿಡಿಸಿದ ಹಾಗೆ' ವಿಲಕ್ಷಣವೆನ್ನಿಸುತ್ತದೆ. ಆಕೆಯ ಈ ಬಗೆಯ ತರ್ಕ ಗಳೆಲ್ಲಾ ಬಾಯಿ ಪಾಠದ ಮಾತಿನ ಹಾಗೆ ಅಸಹಜವೆನ್ನಿಸುತ್ತಾ ಹೋಗುತ್ತವೆ. ಕವಿಯ ಮನಸ್ಸೆಲ್ಲ ಈ ಅಸಹಜ ಮಾತಿನಾಚೆಯ ಆಕೆಯ ಸಹಜ ಸೌಂದರ್ಯದಲ್ಲಿ ತಲ್ಲೀನವಾಗಿ ಬಿಡುತ್ತದೆ.

ತನ್ನ ವಾದದ ಕಡೆಗೆ ಆಕೆ ಕವಿಯ ಕಾವ್ಯ ಧೋರಣೆಯನ್ನು ಕುರಿತು—

'ನೈಜ ಕವಿಗೆ ಕಮಿಟ್‌ಮೆಂಟೆ ಮೂಲಧನ'

ಎಂಬ ಫರ್ಮಾನು ಹೊರಡಿಸುತ್ತಾಳೆ. 'ನಿಮಗೆಲ್ಲಾ ಕಮಿಟ್‌ಮೆಂಟ್ ಇಲ್ಲ, ಕೃತಿಕಾರನ ರಚನೆಯಲ್ಲಿ ಸಮಾಜದ ಜ್ವಲಂತ, ತೊಡಕುಗಳ ದರ್ಶನವಿರಬೇಕು' ಎಂಬ ಮಾತಿನ ಚಾಟಿ ಬೀಸುತ್ತಾಳೆ.

ವೈಜಯಂತಿ ಮುಂದಿಡುವ ಪ್ರಶ್ನೆ—ಕೆ. ಎಸ್. ನಿಸಾರ್ ಅಹಮದ್ ಅವರ ಒಟ್ಟಾರೆ ಕಾವ್ಯಕ್ಕೆ ವಿಮರ್ಶಕರು ಒಡ್ಡಿದ ಪ್ರಶ್ನೆ. ಇಲ್ಲಿ ವೈಜಯಂತಿ ನಿಮಿತ್ತ ಮಾತ್ರ. ಬದ್ಧತೆ, ಕಮಿಟ್‌ಮೆಂಟ್, ಮಣ್ಣಿನ ವಾಸನೆ, ದರ್ಶನ—ಇತ್ಯಾದಿ ವಿಮರ್ಶನಾ ಪರಿಕರಗಳನ್ನು ಇಟ್ಟುಕೊಂಡು ನಡೆಸುತ್ತಿದ್ದ ಚರ್ಚೆಗಳಲ್ಲಿ ನಿಸಾರ್ ಅವರ ಕಾವ್ಯ ಮತ್ತೆ ಮತ್ತೆ ಎದುರಿಸುತ್ತಿದ್ದ ಪ್ರಶ್ನೆ ಇದು. ನಿಸಾರ್ ಅವರು ತಮ್ಮ ಕಾವ್ಯದಲ್ಲಿ ಏನನ್ನು

ಶೋಧಿಸುತ್ತಿದ್ದಾರೆ, ಅವರ ಕೇಂದ್ರ ಕಾಳಜಿ ಯಾವುದು? ಅವರ ಕಾವ್ಯದ ಬದ್ಧತೆ ಏನು? ಅವರನ್ನು ಯಾವ ಮೌಲ್ಯಗಳು ಗಾಢವಾಗಿ ಕಾಡುತ್ತಿವೆ? ಅವರ ಕಾವ್ಯ ತೆಳುವಾದ ಮೇಲು-ಮೇಲಿನ ರಚನೆ ಎಂಬಿತ್ಯಾದಿ ವಿಮರ್ಶಕರ ಪ್ರಶ್ನೆಗಳನ್ನೇ ಇಲ್ಲಿ ವೈಜಯಂತಿ ಎತ್ತುತ್ತಿದ್ದಾಳೆ.

ಪದ್ಯದಲ್ಲಿ ಮುಂದೆ ನಡೆಯುವ ಚರ್ಚೆಯಲ್ಲಿ ಕವಿ ತನ್ನ ಕಾವ್ಯದ ನಿಲವು, ಅದಕ್ಕಿರುವ ವಿಸ್ತಾರದ ಹರಹು, ಸಂಕೀರ್ಣತೆ, ಅದು ಒಳಗೊಳ್ಳುವ, ಬರಮಾಡಿಕೊಳ್ಳುವ ಅನುಭವದ ವಿಸ್ತಾರಗಳನ್ನು ಪ್ರಸ್ತಾಪ ಮಾಡುತ್ತಾನೆ. ವೈಜಯಂತಿಯ ಪ್ರಶ್ನೆಗೆ ಕವಿ ಒಂದು ಸೂತ್ರ ರೂಪದ ಮಾತನ್ನು ಮುಂದಿಡುತ್ತಾನೆ—

'ವೈಜಯಂತಿ, ಮನಸ್ಸು ಗೂಟಕ್ಕೆ ಬಿಗಿದ ಆಕಳಲ್ಲ;
ಕೊಂಬೆ ರೆಂಬೆಯ ಅಳಿಲು.'

ವಾದ, ಸಿದ್ಧಾಂತ, ಕಮಿಟ್‌ಮೆಂಟ್‌ಗಳು ಕವಿಯನ್ನು ಒಂದು ಗೂಟಕ್ಕೆ ಬಿಗಿಯುತ್ತವೆ. ಆದರೆ ಕವಿಯಾದವನು ಅಳಿಲಿನಂತೆ ಇಡೀ ಮರದ (ಬದುಕಿನ) ತುಂಬಾ ಅಲೆದಾಡುವ ಅಗಣಿತ ವ್ಯಾಪ್ತಿಯನ್ನು—ವೈಶಾಲ್ಯವನ್ನೂ ಒಳಗೊಳ್ಳಬೇಕೆಂಬ ತನ್ನ ವಾದವನ್ನು ಮುಂದಿಡುತ್ತಾನೆ. ಇದಕ್ಕೆ ಪ್ರತಿಯಾಗಿ ವೈಜಯಂತಿ:

'ಅಲ್ಲ. ಹತ್ತು ಕಡೆ ಅಗೆದರೆ ಗೋರಿ;
ಒಂದೆಡೆ ತೋಡುತ್ತಾ ಹೋದರೆ ಬಾವಿ.
ಕಮಿಟ್‌ಮೆಂಟ್ ಇಲ್ಲದವನ ಬರಹ
ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ'

—ಎಂದು ಛೇಡಿಸುತ್ತಾಳೆ. ಪ್ರಾಯಶಃ ಈ ಮಾತಿನಲ್ಲಿ ಆ ಕಾಲದ ಒಟ್ಟಾರೆ ಮನೋಭಾವ ಪ್ರತಿಬಿಂಬಿತವಾಗಿದೆ. ಯಾವುದೇ ಒಂದು ಪ್ರಕಾರದಲ್ಲಿ ಬರಹಗಾರನಾದವನು ತನ್ನನ್ನು ತಾನು ಆಳವಾಗಿ ತೊಡಗಿಸಿಕೊಳ್ಳಬೇಕು. ಹಲವು ಪ್ರಕಾರಗಳಲ್ಲಿ ತನ್ನ ಸೃಜನಶೀಲತೆಯನ್ನು ಉದ್ಯುಕ್ತಗೊಳಿಸಿದರೆ ಶಕ್ತಿ ಹ್ರಾಸವಾಗುತ್ತದೆಂಬ ವಾಡಿಕೆಯ ಮಾತು ಆಗ ನಮಗೆ ಗೊತ್ತಿದ್ದ ವಿಷಯ. ಈ ಕಾರಣಕ್ಕಾಗಿ ನವೋದಯದವರು ಆರಂಭಿಸಿದ ಹಲವು ಪ್ರಕಾರಗಳನ್ನು ಸಶಕ್ತವಾಗಿ ನವ್ಯರಿಗೆ ಮುಂದುವರೆಸಲಾಗಲಿಲ್ಲ. ಲಲಿತ ಪ್ರಬಂಧ, ಹರಟೆ, ಮಕ್ಕಳ ಸಾಹಿತ್ಯ, ಹಾಸ್ಯ ಬರವಣಿಗೆ—ಮುಂತಾದ ಪ್ರಕಾರಗಳು ಮೂಲೆಗೆ ತಳ್ಳಲ್ಪಟ್ಟವು.

ಬದುಕು ಅನ್ನುವುದಕ್ಕೆ ಹಲವು ಆಯಾಮಗಳಿವೆ. ನಮ್ಮ ಕಣ್ಣುಗಳಿಗೆ ಪಟ್ಟೆ ಕಟ್ಟಿಕೊಂಡರೆ ಬದುಕು ಅನ್ನುವುದು ತೀರಾ ಖಾಸಗಿಯಾದ ಪ್ರಪಂಚವಾಗಿಬಿಡುತ್ತದೆ. ಬರಹಗಾರನಿಗೆ ದುಡಿಯುವವನ ದುಃಖ ಎಷ್ಟು ಮುಖ್ಯವೋ ದುಡಿಸುವವನ ಸಂಕಟ, ವಿಷಾದಗಳೂ ಅಷ್ಟೇ ಮುಖ್ಯ. ಈ ವಾದವನ್ನೆ ಕವಿ ತನ್ನ ಮುಂದಿನ ಪಂಕ್ತಿಯಲ್ಲಿ ಮುಂದುವರೆಸುತ್ತಾ—

'ಗುಡಾಣ ಹೊಟ್ಟೆಯ ಧನಿಕ ತೋಳ
ಕಳಿಸುತ್ತಾನೆ ಪ್ರತಿ ಹೊತ್ತಾರೆ
ಕ್ಷಯದಾಸ್ಪತ್ರೆಗೆ ಸೇಬು, ಕಿತ್ತಲೆಯ ಚೀಲ.
ನೋಡು, ಈ ಹೋಟೆಲಿನ ಸಾಹುಕಾರನ ಕರುಳು:

ನೋಟುಗಳ ನಡುವೆಯೂ ನೆನೆದಿರುವುದೊಂದೆ—
ಒಬ್ಬನೇ ಮಗನ ವಾಸಿಯಾಗದ ಮರುಳು.
ಪತ್ರಕ್ಕೆ ಅಂಟಿಸಿದ ಸ್ಟಾಂಪು ಕಿತ್ತಂತೆ ವೈಜಯಂತಿ,
ಜೀವಿಗಳ ನಂಟು;
ಬೇರ್ಪಡಿಸಲೊಂದು, ಮತ್ತೊಂದೂ
ಹಿಂಬಾಲಿಸುವುದುಂಟು—
ಇದೇ ಮನುಷ್ಯನಿಗೆ ಕಗ್ಗಂಟು.
ಕರಿ ಬಿಳಿ ಎಲ್ಲೋ ಕಲಸಿ ಬೂದಾಗುತ್ತದೆ;
ಎರಡೆರಡು ಐದಾಗುತ್ತದೆ.'

ಎಂಬ ತನ್ನ ಜೀವನ ದೃಷ್ಟಿಕೋನವನ್ನು ಕವಿ ತೆರೆದಿಡುತ್ತಾನೆ. ವ್ಯಾವಹಾರಿಕ ನೋಟ ಮತ್ತು ಭಾವನಾತ್ಮಕ ನೋಟಗಳ ಉದ್ದೇಶ ಸತ್ಯಗಳ ಶೋಧ ಏನು ಎಂಬುದನ್ನು ಕವಿ ಈ ಸಾಲುಗಳಲ್ಲಿ ಪ್ರಕಟಿಸಲು ಮುಂದಾಗಿದ್ದಾನೆ. ವ್ಯಾವಹಾರಿಕ ಸತ್ಯಗಳ ಶೋಧನೆಯೇ ಬರಹಗಾರನ ಬರವಣಿಗೆಯ ಉದ್ದೇಶವಲ್ಲ. ವ್ಯಾವಹಾರಿಕ ಜಗತ್ತಿನಲ್ಲಿ ಎರಡು-ಎರಡು ನಾಲ್ಕು ಆಗಬಹುದು. ಆದರೆ ಭಾವನಾತ್ಮಕ ಲೋಕದಲ್ಲಿ ಎರಡು-ಎರಡು ಎರಡೇ ಆಗುವುದು ಗ್ಯಾರಂಟಿಯಿಲ್ಲ. ಅದು ಐದಾಗಬಹುದು—ಎರಡೇ ಆಗಬಹುದು. ಕವಿಯಾದವ ಈ ಮಿತಿಗಳನ್ನು ಮೀರಿರುತ್ತಾನೆ. ಅದೃಶ್ಯ ಸತ್ಯಗಳ ಶೋಧದ ಕಡೆಯೇ ಅವನ ಲಕ್ಷ್ಯವಿರುತ್ತದೆ. ಚಳವಳಿಗೂ ಮತ್ತು ಸೃಜನಶೀಲತೆಗೂ ನಡುವಿನ ಸಂಘರ್ಷವಿರುವುದು ಇಲ್ಲಿಯೇ! ಕವಿ—ಮ್ಯಾನಿಫೆಸ್ಟೋ ಬರೆಯಲಾರ. ಮ್ಯಾನಿಫೆಸ್ಟೋ ಕಾಣಲಾರದ ಸತ್ಯಗಳ, ಸಂಕಟಗಳ ಕಡೆಯೂ ಅವನ ಗಮನ ಮತ್ತು ಆಸಕ್ತಿ ಕೆಲಸ ಮಾಡುತ್ತದೆ.

ಕವಿಯ ಈ ಮಾತುಗಳನ್ನು ಆಲಿಸಿದ ವೈಜಯಂತಿ ಇದ್ದಕ್ಕಿದ್ದಂತೆ ಕೋಪಗೊಂಡು 'ವೇದಾಂತ ಸಾಕು; ನೀವೊಬ್ಬ ಬೂರ್ಜ್ವಾ' ಎಂಬ ಹಣೆಪಟ್ಟಿಯನ್ನು ಕವಿಗೆ ಅಂಟಿಸಿ ಬುಸುಗುಟ್ಟುತ್ತಾಳೆ.

ಇಲ್ಲಿಂದ ಮುಂದೆ ಕವಿತೆ—ಯಾರು ಬೂರ್ಜ್ವಾ? ಕವಿಯೋ ಅಥವಾ ವೈಜಯಂತಿಯ ಗುರು-ಗೆಳೆಯ ಕಪಿನೀಪತಿಯೋ?—ಎಂಬ ವಿಮರ್ಶೆಗೆ ಮುಂದಾಗುತ್ತದೆ. ಕವಿ ಕುಹಕದಿಂದ, ವೈಜಯಂತಿಯನ್ನು ಛೇಡಿಸುವ ಉದ್ದೇಶದಿಂದ 'ಹೇಗಿದ್ದಾನೆ ನಿನ್ನ ಹಳೆಯ ದೋಸ್ತಿ ಕಪಿನೀಪತಿ?' ಎನ್ನುತ್ತಾನೆ. ಇಷ್ಟು ಕೇಳಿದ್ದೇ ಸಾಕೆಂಬಂತೆ ವೈಜಯಂತಿ—

'ಅವರೊಬ್ಬರಿಗೇ ನಮ್ಮಲ್ಲಿರುವುದು ಕಮಿಟ್‌ಮೆಂಟು;
ಅವರ ಪಂಕ್ತಿ ಪಂಕ್ತಿಯ ತುಂಬ
ಮಣ್ಣಿನ, ಕೆಳ ಬದುಕಿನ ಸೆಂಟು;'

ಎಂದು ತನ್ನ ಗೆಳೆಯನ ಪರ ವಕಾಲತ್ತು ಮತ್ತು ಪ್ರಶಂಸೆಯನ್ನು ಮುಂದಿಡುತ್ತಾಳೆ. ಕವಿ ಕಪಿನೀಪತಿಯ ನಿಜವಾದ ಸಮಾಜವಾದದ ಪ್ರದರ್ಶನವನ್ನು—ಹೊರಗೆಡಹುವ ಉದ್ದೇಶದಿಂದ—

'ನಿಜ. ಮೂವತ್ತೆಕರೆ ತೆಂಗು,

ನಾಲ್ಕೈದು ಬಂಗ್ಲೆ, ಬ್ಯಾಂಕ್ ಬ್ಯಾಲೆನ್ಸು—
ಬೇಡವೆಂದರೂ ಸಮಾಜವಾದಿಯಾಗಿಸುತ್ತೆ;
ಬಡತನದ ಬಗ್ಗೆ ಮಹಾಕಾವ್ಯ ಹಾಡಿಸುತ್ತೆ.'

ಎನ್ನುತ್ತಾನೆ. ಸಮಾಜವಾದದ ಹೆಸರು ಹೇಳಿಕೊಂಡು ಮಜಾ ಉಡಾಯಿಸುವ, ದ್ವಿಮುಖಿ ನಿಲವುಗಳನ್ನು ಪ್ರದರ್ಶಿಸುವವರು ಲಾಗಾಯ್ತಿನಿಂದ ಇದ್ದವರೆ. ಬದುಕು-ಬರಹದ ನಡುವಿನ ಅಪಾರ ಕಂದರ, ನುಡಿ-ನಡೆಯ ನಡುವಿನ ವೈರುದ್ಧ್ಯ ಇವೆಲ್ಲಾ ಕವಿಯನ್ನ ಗಾಢವಾಗಿ ಕಲಕಿವೆ. 'ಸ್ವಯಂಸೇವೆಯ ಗಿಳಿಗಳು'—ಎಂಬ ಪದ್ಯದಲ್ಲೂ ಇಂಥದ್ದೇ ಆಶಯವನ್ನು ನಿಸಾರ್ ಮುಂದಿಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು.

ಸತ್ಯ—ಯಾವಾಗಲೂ ಕಠೋರ. ಕಪಟ ಯಾವಾಗಲೂ ಮೋಹಕ ಮತ್ತು ಮರುಳು ಮಾಡುವ ಛದ್ಮ ವೇಷಧಾರಿ. ತನ್ನ ಗೆಳೆಯನ ಈ ನಗ್ನಸತ್ಯವನ್ನು ಕಾಣದ ವೈಜಯಂತಿ ಕವಿಯನ್ನು ತರಾಟೆಗೆ ತಕ್ಕೊಳ್ಳುತ್ತಾ—

'ಆ ಆಸ್ತಿ ಆಳದ ದುಡಿತ ನಿಮಗೆ ಅರ್ಥವಾಗೊಲ್ಲ.
ಶೋಷಿತರ ಬಗೆಗಿರುವ ಎದೆಬಡಿತ ನಿಮಗೆ ಅರ್ಥವಾಗೊಲ್ಲ.
ಕರುಣೆಯಲ್ಲದ್ದಿ ತೆಗೆದಂಥ ನುಡಿತ,
ಗಂಡಸಿನ ಹೆಂಗರುಳ ಮಿಡಿತ ನಿಮಗೆ ಅರ್ಥವಾಗೊಲ್ಲ.
ನೀವೊಂದು ಚಿಟ್ಟೆ.
ನಿಮಗರ್ಥವಾಗುವುದೆಲ್ಲ ಬರಿಯ ಲೊಳಲೊಟ್ಟೆ—'

ಅನ್ನುತ್ತಾಳೆ. ಕವಿಯು ಈಗ ಯಾರು 'ಚಿಟ್ಟೆ' ಎಂಬುದನ್ನು ನಿರ್ಣಾಯಕಗೊಳಿಸುವ ಹಂತಕ್ಕೆ ಬಂದು ತಲಪುತ್ತಾನೆ. ಮುಂದೆ ಪದ್ಯ ಸಮಾಜವಾದಿ ಎಂದು ಹೇಳಿಕೊಂಡು ಅಡ್ಡಾಡುವ ಕಪಿನೀಪತಿ ಎಂಥ ಆಷಾಢಭೂತಿ ಎಂದು ತೋರುವ ಅನಾವರಣದ ಕೆಲಸಕ್ಕೆ ಮುಂದಾಗುತ್ತದೆ.

'ವೈಜಯಂತಿ, ಮೊನ್ನೆ ಕಪಿನಿ ಸಿಕ್ಕಿದ್ದ ಗೊತ್ತಾ?'—ಎಂದು ಆರಂಭವಾಗುವ ಮುಂದಿನ ಸಾಲುಗಳು ವೈಜಯಂತಿ ಮನಗಾಣದ ಕಪಿನೀಪತಿಯ ಇನ್ನೊಂದು ವ್ಯಕ್ತಿತ್ವದ ಪರದೆಯನ್ನು ಸರಿಸಲು ಮುಂದಾಗುತ್ತದೆ. ಕವಿಯ ಉದ್ದೇಶವೂ ಇದೇ.

'ಅವನ್ನೂ ರಸ್ತೆಯಲ್ಲಿ. ಜೊತೆಗೆ ನೀಲಿಗಣ್ಣಿನ ಪತ್ನಿ.
ಈ ಸಲದ ಫಸಲಲ್ಲಿ ಹತ್ತು ಸಾವಿರ ಆಕೆಗೆಂದ.
ಚಿನ್ನದೊಡವೆ, ಹತ್ತಾರು ಸೀರೆಗಳ ಪ್ಯಾಕೆಟ್ಟು
ಹೊತ್ತು ಕಾರಲ್ಲಿ ಕೂತಿದ್ದ ಆಕೆ
ಬಿಚ್ಚೋಲೆ ಗೌರಿ ಥೇಟು.'

—ಕವಿಯ ಈ ಮಾತುಗಳು ಸಮಾಜವಾದದ ಬಗ್ಗೆ ಮಾತಾಡುವ, ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಮಾತಾಡುವ ಕಪಿನೀಪತಿ ಸ್ವಂತ ಬದುಕಿನಲ್ಲಿ ಎಷ್ಟೊಂದು ಪ್ರತಿಗಾಮಿಯಾಗಿದ್ದಾನೆ—ಬೇರೆ ಹೆಂಗಸರನ್ನು ಮುಕ್ತ ಸ್ವಾತಂತ್ರ್ಯ, ಸಮಾನತೆ, ಲೈಂಗಿಕ ಸ್ವಾತಂತ್ರ್ಯ ಎಂದೆಲ್ಲಾ ಮಾತನಾಡಿ ಪ್ರೋತ್ಸಾಹಿಸುವ, ಅವರ ಪರ ವಕಾಲತ್ತು ವಹಿಸಬಲ್ಲ ಈ ನವ್ಯ ಸಾಹಿತಿ ಕಪಿನೀಪತಿ—ತನ್ನ

ಹೆಂಡತಿಯ ವಿಷಯದಲ್ಲಿ ಮಾತ್ರ ಪಕ್ಕಾ ಫ್ಯೂಡಲ್—ಎಂಬುದನ್ನು ತೋರಿಸುವಂತಿದೆ.

ಈ ಮೇಲಿನ ಸಾಲುಗಳನ್ನು ಕೇಳುತ್ತಿದ್ದಂತೆ ಮಹಿಳಾ ಕ್ಲಬ್‌ಗಳಲ್ಲಿ ಮಹಿಳಾ ಸಮಾನತೆಯ ಆಣಿಮುತ್ತು ಉದುರಿಸುವ ವೈಜಯಂತಿ ಇಲ್ಲಿ ಮಾತ್ರ—

'ಅಬ್ಬಾ! ಆ ಹಳ್ಳಿಮುಕ್ಕಿಯ ಸೊಕ್ಕೆ!
ಮಹಾ ಧಿಮಾಕಿನ ಬಜಾರೀರಿ ಆಕೆ—
ತಾನೊಬ್ಬ ದೊರೆಸಾನಿ ಅಂದುಕೊಂಡಿದ್ದಾಳೆ ಭಡವೆ,
ಎಲ್ಲರೆದುರು ಪ್ರದರ್ಶಿಸುತ್ತಾಳೆ ವಸ್ತ್ರ ಒಡವೆ.
ಇನ್ನೆರಡು ವರ್ಷ ತಾಳಿ
ಬೀಸಲಿ ಹೊಸ ವ್ಯವಸ್ಥೆಯ ಗಾಳಿ,
ನಾನೂ ಉಟ್ಟು ತೊಟ್ಟು
ಅವಳ ಹೊಟ್ಟೆ ಉರಿಸದಿದ್ದರೆ ಕೇಳಿ!'

—ಎಂದು ಘೋಷಿಸುತ್ತಾಳೆ. ಕವಿಯ ಉದ್ದೇಶ ಕೂಡ ವೈಜಯಂತಿಯ ನಿಜ ದರ್ಶನ ಮಾಡುವುದಾಗಿರುವುದರಿಂದ ಮೇಲಿನ ಸಾಲುಗಳು ಆಕೆಯ ನಿಜವಾದ ಬಣ್ಣವನ್ನು ಬಯಲು ಮಾಡುತ್ತವೆ. ಕಪಿನೀಪತಿಯ ಹಾಗೆ ವೈಜಯಂತಿ ಕೂಡ ಬಣ್ಣ ಬದಲಿಸುವ ಊಸರವಳ್ಳಿಯಂತೆ. ಯಾವುದನ್ನು ಮಾತಿನಲ್ಲಿ ವಿರೋಧಿಸುತ್ತಾಳೋ, ಸ್ವತಃ ಆಕೆ ಅದೇ ಆಗಿದ್ದಾಳೆ. ಇದೇ ಈ ಕಾಲದ ವೈರುಧ್ಯ ಮತ್ತು ವಿಸಂಗತಿಯಾಗಿದೆ.

'ನೀನೀಗ ನಿಜಕ್ಕೂ ಸಮಾಜವಾದಿ ನೋಡು'—ಅನ್ನುತ್ತಾನೆ ಕವಿ ವೈಜಯಂತಿಯ ಮಾತಿಗೆ ಪ್ರತಿಕ್ರಿಯೆಯಾಗಿ. ಈ ಮಾತಿನಲ್ಲಿ ಕವಿ ವ್ಯಂಗ್ಯದಿಂದ ಆಕೆಯನ್ನು ಇರಿಯುತ್ತಾನೆ. ಯಾವ ಅರ್ಥದಲ್ಲಿ ಸಮಾನತೆಗಾಗಿ ತುಡಿಯಬೇಕಾಗಿತ್ತೋ—ಅದರ ವಿರುದ್ಧಾತ್ಮಕತೆಯ ಕಡೆ ಕಪಿನೀಪತಿ ಹಾಗೂ ವೈಜಯಂತಿ ಇದ್ದಾರೆಂದು ತೋರುವ ಇರಾದೆ ಕವಿಯದು.

'ವೈಜಯಂತಿಯ ಅಭಾರತೀಯ ವೇಷ,
ಸಮಾಜವಾದದಾವೇಶ, ಕಪಿನಿ,
ಅವನ ಹಳೆಯ ಮಾದರಿ ಪತ್ನಿ
ಒಂದಕ್ಕೊಂದು ನಂಟಾಗಿ,
ಅವಳ ವಿಚಿತ್ರ ತರ್ಕದ ಹಿಂದಿರುವ ಕೊರತೆ
ಕಗ್ಗಂಟಾಗಿ
ಚಿಂತಿಸುತ್ತಾ ಕೂತೆ.'

—ಎಂಬ ಕವಿಯ ಮನೋಗತದ ಮೂಲಕ ಪದ್ಯ ಮುಗಿಯುತ್ತದೆ.

ಇಡೀ ಪದ್ಯದ ಮೇಲೊಂದು ಕ್ಷ-ಕಿರಣದೋಪಾದಿಯ ನೋಟ ಹಾಯಿಸಿದರೆ ನಮಗೆ ದಕ್ಕುವುದು ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಜೀವನ ಮೀಮಾಂಸೆ ಹಾಗೂ ಕಾವ್ಯ ಮೀಮಾಂಸೆಯ ಬಗ್ಗೆ ಅವರು ಇಟ್ಟುಕೊಂಡಿರುವ ನಂಬಿಕೆ, ಧೋರಣೆ ಹಾಗೂ ಒಲವುಗಳ ಒಂದು ಸಾಂದ್ರವಾದ ಘನೀಕೃತ ಮೊತ್ತ—ಇದಾಗಿದೆ. ತನ್ನ ಕಾಲದ ಕಾವ್ಯವಿಮರ್ಶೆ, ಪಂಥ, ಪಂಗಡ, ಚಳವಳಿ ಮತ್ತು ಅದನ್ನು ಎತ್ತಿ ಮೆರೆಸುವವರ ಬಗ್ಗೆ ಕವಿಗಿರುವ ಒಂದು ಸಣ್ಣ

ಅನುಮಾನ ಹಾಗೂ ಗುಮಾನಿ ಈ ಪದ್ಯದ ತುಂಬಾ ಹರವಿಕೊಂಡಿದೆ.

ಪದ್ಯದ ಒಳಗೆ ವ್ಯಂಗ್ಯ ತೀವ್ರವಾದ ಧಾಟಿಯಾಗಿ ಬಳಕೆಯಾಗಿದೆ. ನಿಸಾರ್ ಅವರ ವಿಶಿಷ್ಟವಾದ ಶೈಲಿ ಇದು. ಅವರ ಬಹುತೇಕ ಪದ್ಯಗಳು—ಗದ್ಯದ-ಸಂಭಾಷಣೆಯ—ಪ್ರಶ್ನೋತ್ತರ ಧಾಟಿಯಲ್ಲಿ ಕಟ್ಟಲ್ಪಟ್ಟಿದ್ದರೂ ಅದರೊಳಗೆ ಸಾಧಿಸುವ ಲಯ-ಪ್ರಾಸ-ಅನುಪ್ರಾಸಗಳು ಇಂಥ ಕವನಗಳನ್ನು ಅತ್ಯುತ್ತಮ ಪದ್ಯವನ್ನಾಗಿ ಪರಿವರ್ತಿಸಿಬಿಡುವ ಮಿಂಚನ್ನು ಪ್ರಾಪ್ತಗೊಳಿಸಿಕೊಳ್ಳುತ್ತವೆ. ಸ್ವಲ್ಪ ಹೆಚ್ಚು ಕಡಿಮೆಯಾದರೂ ನೀರಸ ಗದ್ಯವೋ-ಕಟು ಟೀಕೆಯೋ-ಬೈಗುಳವೋ ಆಗಬಲ್ಲ ಇಂಥ ಪದ್ಯಗಳು, ನಿಸಾರ್ ಅವರ ಕೈಯಲ್ಲಿ ಮಾತ್ರ ಅತ್ಯುತ್ತಮ ಪದ್ಯಗಳಾಗಿ ಬಿಡುತ್ತವೆ. ಬೇಂದ್ರೆಯವರು ಜಾನಪದೀಯ ಶಬ್ದಗಳನ್ನು ತಮ್ಮ ಪದ್ಯಗಳಲ್ಲಿ ಹೇಗೆ ಮುಕ್ತವಾಗಿ, ಯಥೇಚ್ಛವಾಗಿ ಶಬ್ದಾರ್ಥಗಳಿಗೆ ಕೊಂಚವೂ ಊನವಾಗದಂತೆ ಬಳಸಬಲ್ಲರೋ—ನಿಸಾರ್ ತಮ್ಮ ಪದ್ಯಗಳಲ್ಲಿ ಗ್ರಾಂಥಿಕ ಭಾಷೆಯನ್ನು ಆ ಪರಿಯಾಗಿ, ಸಮೃದ್ಧವಾಗಿ ಬಳಸುವಂತಹ ಶಕ್ತಿಯುಳ್ಳವರು. ಬಹಳಷ್ಟು ನವ್ಯ ಕವಿಗಳು ಭಾಷೆಯ ಬಳಕೆಯಲ್ಲಿ—ಶಬ್ದ ಸಂಪತ್ತಿನಲ್ಲಿ ಜಿಪುಣರು—ಹಿತಮಿತ ಬಳಕೆಗೆ ಒತ್ತು ಕೊಡುವವರು. ಆದರೆ ನಿಸಾರ್ ಇದಕ್ಕೆ ಅಪವಾದ.

ನಿಸಾರ್ ಅವರ ಕಾವ್ಯ ಧೋರಣೆಯೇನು? ಅವರ ಕಾವ್ಯ ಮೀಮಾಂಸೆಯೇನು?—ಎಂದು ಯಾರಾದರೂ ಪ್ರಶ್ನಿಸಿದಲ್ಲಿ ಅವರಿಗೆ ಸಮರ್ಥ ಉತ್ತರವಾಗಿ ಈ ಪದ್ಯ 'ವೈಜಯಂತಿ'ಯನ್ನು ಓದಲು ನೀಡಬಹುದು. ಆ ರೀತಿಯ ಹಲವು ಅರ್ಥಗಳನ್ನು ಈ ಪದ್ಯ ಸಮರ್ಥವಾಗಿ ತನ್ನೊಳಗೆ ಅಡಕಗೊಂಡಿರಿಸಿದೆ.

ಬದುಕಿನ ಓರೆಕೋರೆಗಳನ್ನು ಮರೆಯಾಗಿಸಿ ಸಜಾವಟ್ಟುಗೊಳಿಸಿ ಕೇವಲ ಚೆಂದ ಮಾಡುವುದೋ ಆನಂದ ನೀಡುವುದೋ ಕಲೆಯ ಚರಮ ಕರ್ತವ್ಯವಲ್ಲ. ಅದು ಬಾಳ್ವೆಯ ಹೂವಿಗೆ ಸಾರ್ಥಕ್ಯದ ಸುಗಂಧ ಮತ್ತು ಮಧುರ ಮಕರಂದವನ್ನು ಜೋಡಿಸುತ್ತದೆ. ಮನುಷ್ಯರ ಗದ್ಯಮಯ ಬದುಕನ್ನು ಭಾವಗೀತವಾಗಿ ಪರಿವರ್ತಿಸಿ ಹಾಡಿಸುತ್ತದೆ.

(ಕಲೆಯ ಉಪಕಾರ)

✧ ✧ ✧

ದಿಂಬಿನ ಹೊದಿಕೆ ಬೇರೆ ಬೇರೆ ಬಣ್ಣದ್ದಿರಬಹುದು, ಒಳಗಿನ ಹೂರಣ ಒಂದೇ—ಹತ್ತಿ. ಅದು ಎಲ್ಲ ದಿಂಬುಗಳಲ್ಲೂ ಬಿಳಿದು. ಹಾಗೆಯೇ, ಬಾಹ್ಯಾಚರಣೆಯಲ್ಲಿ ವ್ಯತ್ಯಾಸ ಕಂಡರೂ ಎಲ್ಲ ಧರ್ಮಗಳ ತಿರುಳೂ ಒಂದೇ.

(ಧರ್ಮದ ಹೂರಣ)

ಇಪ್ಪತ್ತನೆಯ ಶತಮಾನದ ಕೊಲಂಬಸ್

೧

ನಾನು—
ದಿಗ್ದಿಗಂತದ ಬೆಳ್ಳಿ ಗೆರೆಗೆ ಆಶಿಸಿದವನು,
ಕಲ್ಲಲ್ಲಿ ಸಿರಿ, ನೆಲದಲ್ಲಿ ಝುರಿ, ಕಾಡೊಳಗು ದಾರಿಯನು ಕನಸಿದವನು.
ನಗುವ ಭಡವರ ನಡುವೆ ಎಡವಿ ಬಿದ್ದರು, ಎದ್ದು
ಗೆದ್ದೆ ಬರುವೆನು ಎಂದು ಕಾರವಾನಿನ ಸೇನೆ ಜೊತೆಗೆ ಹೊರಟವನು.

ಬಿಟ್ಟ ಊರಿನ ನೆನಪು ಸುಟ್ಟರೂ ಸಾಯದು,
ಸಿಕ್ಕಲಾರದು ಹುಡುಕಿ ಬಂದ ಜಾಡು.
ಅರಮನೆಯ ದಾರಿಯಲಿ ಬೆಡಗಿಯರ ದಂಡು—
'ಅವರ ಎಡಗಡೆ ಗುಂಡು, ಅವರ ಬಲಗಡೆ ಗುಂಡು'
ಕಂಡು ಸುಖವುಂಡು ಮೆರೆಯಬಹುದಿತ್ತು;
ಬಂಧು ಬಳಗದ ಪಾದ ಸಮೆದ ಹಾದಿಯ ಹಿಡಿದು ಸಾಗಬಹುದಿತ್ತು;
ಇದ್ದಕಿದ್ದಂತೇಕೋ ಮಧ್ಯರಾತ್ರಿಯ ನಿದ್ದೆ ಸಂತೆ ಗದ್ದಲವಾಗಿ
ಅರಸುಗುವರನ ಧೈರ್ಯ ಬೆನ್ನು ಬಿತ್ತು.

ಹಡಗಿನಟ್ಟದ ಮೇಲೆ ಹೊತ್ತು ಸುಸ್ತಾದಾಗ,
ಇರುಳರಳಿ ಎದ್ದಾಗ,
ಮೇಲೆ ಕಕ್ಕಾಬಿಕ್ಕಿಯಾಗಿ ಚಿಕ್ಕೆ ಸಮೂಹ:
'ಬೇಡ ಮರುಧರೆಯಲ್ಲಿ ನೀರ ದಾಹ,
ಬಿಟ್ಟ ಕಡೆ
ಮರಳಿ ನಡೆ,
ನೆರಳಿನಾಳದ ಗಾಳಕೇಕೆ ಮೋಹ?'
—ಚೆಲುವು ಮೋಡದ ಮರೆಗೆ ಸಿಡಿಲ ಕಾರ್ಖಾನೆ
ಇರುವುದನು ನಂಬುವುದು ಹೇಗೆ ತಾನೆ?
ಹಾವಿಗೆರೆದೆನೆ ಹಾಲ?
ತಳ್ಳಬೇಕಿದೆ ಬೇಡ ಪಡೆಯ ನಡುವೆಯೆ ಬಾಳ!
ವರುಷ ನೂರರ ಒರಲೆ ತಿಂದ ತೊಲೆಯಿದೊ ತಂದೆ,
ಕಣ್ಣ ಕಡಿದರು ಅಯ್ಯೊ ನಿದ್ದೆಯಿಲ್ಲ!
ನಡೆದಾಟವೋ ತೂಗು-ಕತ್ತಿಯ ಕೆಳಗೆ

ಹದ್ದುಗಣ್ಣಿನ ಹಸಿವು ಕತ್ತಲೊಳಗೆ—
ತಿನಿಸು ಕಾಣದ ಬಾಯ ಚಾಟಿ ಏಟಿನ ಚುರುಕು;
ಮನಸು ರೇಸಿನ ಕುದುರೆ,
ಬುದ್ಧಿ ಬೆದರಿದೆ ಇರದೆ ಮೂಗುದಾರ!
ಎಲೆ ತುದಿಯ ಹನಿ, ಎಳೆಯ ದಾರದ ಏಣಿ ನೆಚ್ಚಿ ನಿಂತೆ:
ಕೋಳಿ ಕಹಳೆಯ ವೇಳೆ ಒಂದೆ ಮಾರು;
ತೋಡ, ಭಿಲ್ಲರ ಬಿಲ್ಲು ಕಂಡು ಉಡುಗಿದೆ ಮಾತೆ,
ತೋರಬಾರದೆ ಹಸಿರು, ನೆಲದ ಗೀರು?
ಹುಬ್ಬನೇರಿಸಿ, ಕೈಯನೆತ್ತಿ ಮಬ್ಬನು ಸರಿಸಿ ಕಣ್ಣು ಹರಿಸಿದೆ ಮುದುಕ
ತೆರೆದ ಬಾಗಿಲು ಬಾಯಿ; ಬೆರಳು ಮೂಗಿನ ಮೇಲೆ, ಮನಸು ಮೂಕ!
ದೂರ ದಂಡೆಯ ಮೇಲೆ ಮೂಡು-ಬಣ್ಣದ ಹೆಜ್ಜೆ
ಮಣ್ಣು ಮರ ಗಿಡಕೆಲ್ಲ ಎಂಥದೋ ಲಜ್ಜೆ!
ಮೂಡಣದ ಬಾನೊಂದು ಚೆಲುವು ತುಂಬಿದ ಮಂಡಿ,
ಹೊದರು ಮರಬಳ್ಳಿಗಳು ಮಧುರ ನಾದದ ಹುಂಡಿ—
ಹೊಸ ಲೋಕ, ಹೊಸ ಲೋಕ
Eureka! Eureka!

೨


ಪಡುವಣದ ಬೆಟ್ಟಗಳ ಮೇಲೆ ನೆಟ್ಟಿತು ಸಂಜೆ ತನ್ನ ವಿಜಯ ಪತಾಕೆ.
ಕಡಲ ಮಡಿಲನು ಹೊಕ್ಕೆ:
ಮನಸಿನಾಸೆಗೆ ಮೂಡಿಬಂತು ರೆಕ್ಕೆ;
ಪುಲಕದಲೆಯೊಂದೆದ್ದು ಕುಣಿಯೆ, ತಟ್ಟಿತು ಒಳಗೆ
ಬಿಸಿಯ ನೆತ್ತರ ಶಾಖ ನರನರಕ್ಕೆ;
ಹಾರಿದಷ್ಟೂ ದೂರ ದೂರವಾಯಿತು ತಾಯಿನಾಡ ಹಕ್ಕೆ!
ಇತರರರೆದೆಯಾಳದಲಿ ಸುಳಿವ ಅಲೆಗಳನಳೆವ ಹುಚ್ಚು ನನಗೆ,
ಭೂಕಂಪ ಮಾಪನದ ಯಂತ್ರವಾದೆ;
ಅಪರಿಚಿತ ಬಂಡೆಗಳ ಒಳಗೆ ಮಿಂಚಿನ ನಡಿಗೆ,
ನೂರು ಹರಿದಾರಿಗಳ ಸಂಚರಿಸಿದೆ!
ಎತ್ತರೆತ್ತರಕೆಸೆದ ಕಲ್ಲು ನಾನು:
ಮಣ್ಣನಂಟಿಗೆ ಹೇಸಿ ತಾರೆಗಳ ಗೆಳೆತನವ ಬಯಸಿದವನು—
ಮೇಲು ಮೇಲಕೆ ಮೊಗವ ಚಾಚಿದವನು.
ಆದರೇಕೋ ನನ್ನ ಬಾಚಿ ತಬ್ಬದು ಬಾನು; ಗಾಳಿ ತಡೆಯದು ತಾನು,
ಮತ್ತೆ ಬಿದ್ದೆನೆ ಹಾಳು ನೆಲದ ತೊಡೆಗೆ?
ಮರಳ ದಂಡೆಯ ಮೇಲೆ ಸಂಭ್ರಮವಿದೇನೆಂದೆ?
ನಾಡ ಮಕ್ಕಳ ಇಂಥ ಕೇಕೆ, ಹರ್ಷೋದ್ಗಾರ ಏತಕೆಂದೆ?
ಅರಿತೆನರಿತೆನು, ಓಹೋ! ಸೃಷ್ಟಿಯಖಿಲಕೆ ನಾನು ದೃಷ್ಟಿದಾತ—

ಜಗದ ಸೊಟ್ಟನು ತಿದ್ದಿ ಕೊಟ್ಟ ಭಾನು,
ದಾರಿ ತಪ್ಪಿದ ಬದುಕ ಹಿಡಿದು ನಿಲ್ಲಿಸಿದವನು, ಜಗದ ತಂದೆ,
ಎಂದುಕೊಂಡೆ:
ನನ್ನ ಬರುವಿಕೆಗಾಗಿ ಕಾದು ನಿಂತಿದೆ ಮುಂದೆ
ಸಕಲ ಜನ ಪರಿವಾರ
ಹಿಡಿದು ಕೈಕೈಯಲ್ಲಿ ಬೆಳಕ ಹಾರ
ಸಾಮಾನ್ಯನೆ ನಾನು? ಸಹರದಾಚೆಯ ರಾಯಭಾರಿ, ಸರದಾರ
ಕಡಲ ಬೆನ್ನ ಸವಾರ!

ಗಹಗಹಿಸಿ ನಕ್ಕೆ:
ಕೆಂಡ–ಕಣ್ಣಿನ ಜನತೆ; ಕೊಡಲಿ, ಗುದ್ದಲಿ, ಸನಿಕೆ!
ಚಿಕ್ಕೆ ಬಳಗದ ತೆಕ್ಕೆಯೊಳಗೆ ಸಿಕ್ಕಿದ ಮುಗಿಲ
ನೆನೆದು ನಕ್ಕೆ!
ಗಳಿಗೆ ಗಳಿಗೆಗೂ ನನ್ನ ಬಾಳ ತುಳಿಯುತಲಿರುವ
ನೆರಳ ಸಪ್ಪಳ ಜಗಕೆ ಕೇಳದೇಕೆ?
ನಾನಿಷ್ಟೇ ಲೋಕಕ್ಕೆ:
ತೇದಂತೆ ಕರಗುವ ಗಂಧದೊಂದು ಚಕ್ಕೆ!

★ ★ ★

(ಕವನ ಸಂಕಲನ: 'ಮನಸು ಗಾಂಧಿ ಬಜಾರು')



‘ಇಪ್ಪತ್ತನೆಯ ಶತಮಾನದ ಕೊಲಂಬಸ್’ :
ತಡಕಾಟದ ತಲ್ಲಣ ತುಮುಲಗಳ ತಪಶೀಲುಗಳು

♦ *ಡಾ. ಜಯಪ್ರಕಾಶ ಮಾವಿನಕುಳಿ*

ಶ್ರೀ ಎಸ್. ನಿಸಾರ್ ಅಹಮದ್ ಅವರು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಒಬ್ಬ ವಿಶಿಷ್ಟ ಕವಿ. ಅವರೇ ಒಂದು ಕಡೆ ಹೇಳಿಕೊಳ್ಳುವಂತೆ: ‘ಎರಡು ಸಂಸ್ಕೃತಿಗಳ ನಡುವೆ ನಿಂತು ಬರೆಯಬೇಕಾದ ನನ್ನಂಥ ಕೃತಿಕರ್ತನಿಗೆ ಅನುಕೂಲಗಳೂ ಇವೆ; ಅಡಚಣೆಗಳೂ ಇವೆ. ಇಂಥ ಪರಿಸ್ಥಿತಿಯಲ್ಲಿ ಕಾವ್ಯರಚನೆಯನ್ನು ಮಾಡಬೇಕಾದ ಲೇಖಕ ಬದುಕಿನ ಸರ್ವಗ್ರಾಸಿಯಾದ ಒಟ್ಟಾರೆ ಸಾರ್ವತ್ರಿಕ ಅನುಭವಗಳನ್ನು ಕೈಬಿಟ್ಟು ಬಡವನಾಗುವ ಸಂಭವವೇ ಅಧಿಕ...’

೧೯೫೭ರಲ್ಲಿ ಬರೆದ ‘ಇಪ್ಪತ್ತನೆಯ ಶತಮಾನದ ಕೊಲಂಬಸ್’ ಅವರ ಮೊದಲನೆಯ ಕವಿತಾ ಸಂಕಲನ (೧೯೬೦) ‘ಮನಸು ಗಾಂಧಿ ಬಜಾರು’ನಲ್ಲಿ ಪ್ರಕಟವಾಗಿದೆ. ಹದಿಹರೆಯದ ಈ ಕವಿಯ ಜೀವನೋತ್ಸಾಹವನ್ನು, ಕನಸುಗಾರಿಕೆಯನ್ನು, ಅದಮ್ಯ ಛಲವನ್ನು ಕವನದುದ್ದಕ್ಕೂ ಕಾಣಬಹುದು. ಕವಿಯ ಅಂತರಂಗದ ಅಭೀಪ್ಸೆಯನ್ನು ಕವಿತೆ ಆರಂಭದಲ್ಲೇ ಪ್ರಚುರಪಡಿಸು ತ್ತದೆ:

‘ನಾನು—
ದಿಗ್ದಿಗಂತದ ಬೆಳ್ಳಿ ಗೆರೆಗೆ ಆಶಿಸಿದವನು,
ಕಲ್ಲಲ್ಲಿ ಸಿರಿ, ನೆಲದಲ್ಲಿ ಝುರಿ, ಕಾಡೊಳಗು
ದಾರಿಯನು ಕನಸಿದವನು.
ನಗುವ ಭಡವರ ನಡುವೆ ಎಡವಿಬಿದ್ದರು, ಎದ್ದು

ಗೆದ್ದ ಬರುವೆನು ಎಂದು ಕಾರವಾನಿನ ಸೇನೆ ಜೊತೆಗೆ ಹೊರಟವನು.'

ಕವಿಯ ಮಹೋನ್ನತೆ ಆಕಾಂಕ್ಷೆಯನ್ನು ಈ ಸಾಲುಗಳು ಸಾರುತ್ತವೆ. ದಿಗಂತದಲ್ಲಿ ಬೆಳ್ಳಿಗೆರೆಯ ಕನಸು ಕಾಣುತ್ತಾನೆ. ಅಷ್ಟೇ ಅಲ್ಲ, ಕಲ್ಲನ್ನು ಕುಟ್ಟಿ ಅಲ್ಲಿ ಸಿರಿ ಮೂಡಬೇಕೆಂಬ, ದಟ್ಟ ಕಾಡಿನ ಮಧ್ಯೆಯೂ ದಾರಿಗಾಗಿ ಹಠವನ್ನು ಹೂಡುತ್ತಾನೆ. ಆದರೆ ಕವಿಗೆ ಗೊತ್ತಿದೆ ತಾನು ನೋಡುವವರ, ನಗುವವರ, ಕುಹಕ ಮಾಡುವವರ ನಡುವೆ ಇದ್ದೇನೆ ಮತ್ತು ಎಡವಿ ಬೀಳಲೂಬಹುದು. ಆದರೆ ಸಂಕಲ್ಪ ಸ್ಪಷ್ಟವಿದೆ—

'.................. ಎದ್ದು
ಗೆದ್ದ ಬರುವೆನು ಎಂದು ಕಾರವಾನಿನ ಸೇನೆ ಜೊತೆಗೆ ಹೊರಟವನು.'

ಹೀಗೆ ಹೊರಡುವುದು ಸುಲಭದ ಮಾತಲ್ಲ. ಕಾರಣ ಹೊಸ ಹಾದಿಯನ್ನು ಹುಡುಕ ಹೊರಟವನಿಗೆ ಎರಡು ಗೊಂದಲಗಳು ಇರುತ್ತವೆ—ಹಿಂದಿನ, ಊರಿನ, ತನ್ನವರ ನಿತ್ಯದ ನೆನಪು; ಇನ್ನೊಂದು—ಹುಡುಕ ಹೊರಟ, ಕನಸು ಕಂಡ ಲೋಕ ಸಿಗುತ್ತದೆಯೋ ಸಿಗುವುದಿಲ್ಲವೋ ಎಂಬ ಕಾತರ, ಅನುಮಾನಗಳು. ಅದೇ ಸ್ವಗತದ ಮಾತುಗಳು—

'ಬಿಟ್ಟ ಊರಿನ ನೆನಪು ಸುಟ್ಟರೂ ಸಾಯದು,
ಸಿಕ್ಕಲಾರದು ಹುಡುಕಿ ಬಂದ ಜಾಡು.'

'ಗೆದ್ದು ಬರುವೆನು' ಎಂಬ ಆತ್ಮವಿಶ್ವಾಸದ ಜೊತೆಗೆ ಇದ್ದರೂ ಆತ ಒಂಟಿಯಲ್ಲ, ಜೊತೆಗೆ ಜನ ಇದ್ದಾರೆ; 'ಸೇನೆ' ಇದೆ. ಯಾಕೆಂದರೆ ಆತ 'ಕಾರವಾನಿನ ಸೇನೆ ಜೊತೆಗೆ ಹೊರಟವನು'.

ನಮ್ಮನ್ನು ಪದೇ ಪದೇ ಗೊಂದಲಕ್ಕೆ, ಸಂದಿಗ್ಧತೆಗೆ ಸಿಕ್ಕಿಸುವ ಅನೇಕ ಘಟನೆಗಳು ಜೀವನದುದ್ದಕ್ಕೂ ಕಾಣುತ್ತವೆ. ಷೇಕ್ಸ್‌ಪಿಯರನ ನಾಟಕದ 'To be or not to be' ಪ್ರಶ್ನೆ ಧುತ್ತನೆ ಎದ್ದು ನಿಲ್ಲುತ್ತದೆ. ಆಸೆ ಮತ್ತು ನಿರಾಶೆಯ ಮಧ್ಯೆ ಹೊಯ್ದಾಡಿಸುತ್ತದೆ. ಆಚೆ ದಡ ಕಾಣಿಸುವುದಿಲ್ಲ; ಈಚೆ ದಡ ಬಿಡುವ ತವಕ. ಇಲ್ಲೂ ಅಷ್ಟೆ...

'ಬೇಡ ಮರುಧರೆಯಲ್ಲಿ ನೀರ ದಾಹ,
ಬಿಟ್ಟ ಕಡೆ
ಮರಳಿ ನಡೆ,
ನೆರಳಿನಾಳದ ಗಾಳಕೇಕೆ ಮೋಹ?'

ಈ ಮೋಹ ಎನ್ನುವುದು ಬಿಡಲಾರದ passion. ಆದರೆ ಇದು ಬರಿಯ ಮೋಹ ಅಲ್ಲ. ಇಲ್ಲದ್ದನ್ನು ಸಾಧಿಸಬೇಕೆಂಬ ಆಕಾಂಕ್ಷೆಯಷ್ಟೇ ಅಲ್ಲ—ಅನಿವಾರ್ಯ ಆತಂಕಗಳು.

'ಹಾವಿಗೆರೆದೆನೆ ಹಾಲ?
ತಳ್ಳಬೇಕಿದೆ ಬೇಡ ಪಡೆಯು ನಡುವೆಯೆ ಬಾಳ!
ವರುಷ ನೂರರ ಒರಲೆ ತಿಂದ ತೊಲೆಯಿದೂ ತಂದೆ,
ಕಣ್ಣ ಕಡಿದರು ಅಯ್ಯೊ ನಿದ್ದೆಯಿಲ್ಲ!'

ವ್ಯಕ್ತಿಯ ಒಳ ಮನಸ್ಸಿನ ತಾಕಲಾಟವನ್ನು—sleepless nightsಗಳನ್ನು—ಇಲ್ಲಿ

ನೋಡಬಹುದು. ಅಶಾಂತ ಮನಸ್ಸು ಮೊದಲಿಗೆ ಬೆಂಕಿ ಕಾಣಿಸುವುದು ನಿದ್ರೆಗೆ. 'ಮಧ್ಯರಾತ್ರಿಯ ನಿದ್ದೆ ಸಂತೆ ಗದ್ದಲವಾಗಿ' '...ಅಯ್ಯೋ ನಿದ್ದೆಯಿಲ್ಲ' ಎನ್ನುವುದು ಇಡೀ ಕವನದ ಒಂದು ಸ್ವರೂಪವನ್ನು ಹೇಳುತ್ತದೆ. (ಮಧ್ಯರಾತ್ರಿಯ ನಿದ್ದೆಗೆಟ್ಟು ಓಡಿ ಹೊರಗಡೆ ಹೋದವನು ಗೌತಮ. ಆದರೆ ಇದು ಥಕ್ಕನೆ ನೆನಪಾದರೂ ಕವನದ ಉದ್ದಕ್ಕೂ ಇದು ತನ್ನ ಛಾಯೆಯನ್ನು ಬೀರದ ಕಾರಣ ಗೌತಮ ಇಲ್ಲಿ ಗೌಣನಾಗುತ್ತಾನೆ.)

ಮುಂದಿನ ದಾರಿ ಸುಗಮವಲ್ಲ. ಗಾಳಿಯ ಮೋಹದಲ್ಲಿ ನಡೆದ ವ್ಯಕ್ತಿಗೆ 'ಬೇಡ ಪಡೆ' 'ಭಿಲ್ಲರ ಬಿಲ್ಲು'—ಇದ್ದು ಅತ್ಯಂತ ಕಠಿಣ ಹಾದಿ. ಹೀಗೆ ಇವನ್ನು ಓದುತ್ತಿರುವಾಗಲೇ ಕವನದ ಶೀರ್ಷಿಕೆಯನ್ನು ನೋಡಿದಾಗ ಕೊಲಂಬಸ್‌ನ ಹೊಸ ದೇಶ ಹುಡುಕುವ ಹೋರಾಟದ—ಕಡಲಿನ ಕಷ್ಟಗಳ—ಸಮುದ್ರದ ಸಂಕಷ್ಟಗಳ ಅರಿವು ಮೂಡುತ್ತದೆ. ೧೪೯೨ರಲ್ಲಿ ಕಂಡುಹಿಡಿದ ಅಮೇರಿಕಾ ಆತನಿಗೆ ಗೊತ್ತಿರಲಿಲ್ಲ. ಹಾಗೊಂದು ದೇಶ ಇರಬಹುದೇ ಎಂಬ ಕುತೂಹಲ ಮಾತ್ರ ಆತನಲ್ಲಿ ಇದ್ದುದು ಮತ್ತು ಆ ಕುತೂಹಲಕ್ಕೆ ಧೈರ್ಯದ ಗಾಳಿ ಸೇರಿ ಹೊರಟು ಬಿಡುತ್ತಾನೆ.

'ಮನಸು ರೇಸಿನ ಕುದುರೆ,
ಬುದ್ಧಿ ಬೆದರಿದೆ ಇರದೆ ಮೂಗುದಾರ!'

'ಮೂಗುದಾರ' ಎನ್ನುವುದು ಸ್ವಾತಂತ್ರ್ಯಕ್ಕೆ ಕಟ್ಟಿದ ಮಿತಿ ಅದು. ಆದರೆ ಆ ಮಿತಿಯ ಬಂಧವನ್ನು ಮೀರಲು ಬಯಸುವ ಕವಿ ಮುಂದೆ ಕಾಣುವ ಹೊಸ ಲೋಕದ ಕನಸಿಗೆ ಲಗ್ಗೆ ಇಡಲು ಹಂಬಲಿಸುತ್ತಾನೆ. ಕವಿಯ ಮನಸ್ಸಿನಲ್ಲಿ ಬಿಚ್ಚಿ ಅರಳುವ ಭಿತ್ತಿ ಅಭೂತಪೂರ್ವವಾದ ಹೊಸ ಆವಿಷ್ಕಾರಕ್ಕೆ ತೀವ್ರವಾಗಿ ಚಡಪಡಿಸುವ ಹುಮ್ಮಸ್ಸನ್ನು ಕಾಣಬಹುದು. ಯಾಕೆಂದರೆ ನಮ್ಮ ಇಂದ್ರಿಯವು ನಮ್ಮ ಮನಸ್ಸಿಗೆ ಕೇವಲ ಸಕಲ ವಸ್ತು ವಿಚಾರಗಳನ್ನಷ್ಟೇ ಅಲ್ಲದೆ ಸಂಕೀರ್ಣ ವಸ್ತು ವಿಚಾರವನ್ನೂ ಒದಗಿಸುತ್ತದೆ. ಒಂದು ವಸ್ತು ಹೇಗೆ ಅನೇಕ ಗುಣಗಳನ್ನು ಒಳಗೊಂಡಿರುತ್ತದೆಯೋ ಅಥವಾ ಒಂದು ಸಂಗ್ರಹದಲ್ಲಿ ಹೇಗೆ ಅನೇಕ ವಸ್ತುಗಳು ಕೂಡಿಕೊಂಡಿರುತ್ತವೆಯೋ ಹಾಗೆಯೇ ಇಂದ್ರಿಯಗಳು ವಸ್ತುಗುಣಗಳ ಸಂಕುಳ ಕಲ್ಪನೆಯನ್ನು ಒದಗಿಸುತ್ತವೆ. ಹೀಗೆ ನಮ್ಮ ಮನಕ್ಕೆ ತಟ್ಟಿದ, ತಟ್ಟಿ ಆಳಕ್ಕಿಳಿದವು ಮಾತ್ರ ಧಾರಣ ಮಾಡಿಕೊಳ್ಳಲ್ಪಟ್ಟು ನೆನಪಿಡಲ್ಪಡುತ್ತವೆ; ತಿರುಗಿ ತಿರುಗಿ ಗುರುತಿಸಲ್ಪಡುತ್ತದೆ. ಈ ಅನಿಸಿಕೆಗಳನ್ನು ಮನಸ್ಸು ಲಕ್ಷಿಸುತ್ತದೆ. ಕಲ್ಪನಾಶಕ್ತಿ ಮತ್ತು ಊಹಾಶಕ್ತಿ(Imagination and Fancy)ಗಳಿಂದ ವಸ್ತು ಘಟಕಗಳನ್ನು ರೂಪಿಸಿಕೊಳ್ಳುತ್ತದೆ. ಅದಕ್ಕಾಗಿಯೇ ಪ್ರಾಯಶಃ ಕಾಲರಿಜ್ ಹೇಳಿದ್ದು—'ನಾವು ಓದಿ ಬಿಟ್ಟುದುದು ಕವನವಲ್ಲ. ನಾವು ತಿರುಗಿ ಓದಬೇಕೆನಿಸಿದ ಕಾವ್ಯದಲ್ಲಿ ಮಾತ್ರ ಪ್ರತಿಭೆಯಿರುವುದು.'

* * *

ಕವಿಯ ಮನಸ್ಸಿನ ಆಸೆ, ನಿರಾಸೆ, ಹತಾಶೆ, ಕನಸುಗಳೆಲ್ಲವೂ ಮಿಣುಕಿ ಮಿಣುಕಿ ಮಾಯವಾಗುತ್ತವೆ. 'ತೋರಬಾರದೆ ಹಸಿರು, ನೆಲದ ಗೀರು?' ಎನ್ನುವ ಕವಿ:

'ಮೂಡಣದ ಬಾನೊಂದು ಚೆಲುವು ತುಂಬಿದ ಮಂಡಿ

ಹೊದರು ಮರ ಬಳ್ಳಿಗಳು ಮಧುರ ನಾದದ ಹುಂಡಿ—
(ಆಗ ಸಿಗುತ್ತದೆ) ಹೊಸ ಲೋಕ, ಹೊಸ ಲೋಕ
Eureka! Eureka!'
(—ದಕ್ಕಿತು, ಸಿಕ್ಕಿತು.)

ಕವಿಯ ಆರಂಭದಲ್ಲಿ ಬರೆದ ಈ ಕವಿತೆ ಅವರ ಮನಸ್ಸಿನ ಸ್ಥಿತಿಯನ್ನು ಬಿಚ್ಚಿ ಹೇಳುತ್ತದೆ. ಆಗಿನ್ನೂ ಬರೆಯಲು ಆರಂಭಿಸಿ, ಬೇರೆಯವರ ಹೆಜ್ಜೆಯಲ್ಲಿ ಹೆಜ್ಜೆ ಹಾಕಲು ಇಷ್ಟಪಡದ ಅರ್ಥವಂತಿಕೆಯ ಮನಸ್ಸು, ತನ್ನ ನೈಜ ದಾರಿಯನ್ನು ಕಂಡುಕೊಳ್ಳಲಾಗದೆ ಇದ್ದಂತಹ ಸ್ಥಿತಿ ಅದು.

'ಇತರರೆದೆಯಾಳದಲಿ ಸುಳಿವ ಅಲೆಗಳನಳೆವ ಹುಚ್ಚು ನನಗೆ, ಭೂಕಂಪ
ಮಾಪನದ ಯಂತ್ರವಾದೆ;
ಅಪರಿಚಿತ ಬಂಡೆಗಳ ಒಳಗೆ ಮಿಂಚಿನ ನಡಿಗೆ, ನೂರು ಹರಿದಾರಿಗಳ
ಸಂಚರಿಸಿದೆ!'

ಕವಿಯೇ ಕೊಲಂಬಸ್. ಕೊಲಂಬಸ್‌ನ ಹೋರಾಟದ ಧ್ವನಿ ಕವಿಯ ಧ್ವನಿ ಅದು. ಕವಿಯ ಧ್ವನಿ ಎಂದರೆ ಕಾವ್ಯವನ್ನು ಮುಂದೆ ಸಾಗಿಸುವ ಕ್ರಮ-ಉಪಕ್ರಮದ ಜಿಜ್ಞಾಸೆಯ ಧ್ವನಿ ಅದು. ಈ ಧ್ವನಿ ಕವಿಯ ಸುಪ್ತ ಮನಸ್ಸನ್ನು ತೆರೆದು ತೋರುತ್ತದೆ. ಅದಕ್ಕಾಗಿಯೇ ಸಾರ್ತ್ರ್ ಹೇಳಿದ್ದು—'ಜಗತ್ತಿನ ಅನುಭವಗಳಿಗೆ ಸುಪ್ತ ಮತ್ತು ಜಾಗೃತ ಮನಸ್ಸು ಸ್ಪಂದಿಸುವುದೇ ಸಾಹಿತ್ಯದ ಧ್ವನಿ.' ಈ ಧ್ವನಿಯನ್ನು ಕವನದ ಉದ್ದಕ್ಕೂ ಗುರುತಿಸಬಹುದು.

'ಎತ್ತರೆತ್ತರಕೆಸೆದ ಕಲ್ಲು ನಾನು:
ಮಣ್ಣನಂಟಿಗೆ ಹೇಸಿ ತಾರೆಗಳ ಗೆಳೆತನವ ಬಯಸಿದವನು—
ಮೇಲು ಮೇಲಕೆ ಮೊಗವ ಚಾಚಿದವನು.'

ತಾರೆಗಳಿರುವುದು ಎತ್ತರದ ಆಗಸದಲ್ಲಿ. ಕವಿ ಇರುವುದು ಭೂಮಿಯಲ್ಲಿ. ಆದರೆ 'ಬಾನೊಂದು ಚೆಲುವು ತುಂಬಿದ ಮಂಡಿ'. ಕವಿಯ ಅದಮ್ಯ ಆಸೆಯನ್ನು ಹೇಳುವ ಮಾತು ನಿಜಕ್ಕೂ ಸಾರ್ಥಕ ಸಾಲುಗಳು. ಆದರೆ ಅದು ಸುಲಭವಲ್ಲ; ಅಸಾಧ್ಯವೂ ಅಲ್ಲ. ಕೊನೆಗೆ ಬೀಳುತ್ತಾನೆ. ಮತ್ತೆ ಅಂದುಕೊಳ್ಳುತ್ತಾನೆ 'ಮರಳ ದಂಡೆಯ ಮೇಲೆ ಸಂಭ್ರಮವಿದೇನೆಂದೆ?' ಒಮ್ಮೊಮ್ಮೆ ನಿರಾಶೆಯ ಅಂಚಿಗೆ ಅದು ತಲಪುತ್ತದೆ.

'ದಾರಿ ತಪ್ಪಿದ ಬದುಕ ಹಿಡಿದು ನಿಲ್ಲಿಸಿದವನು, ಜಗದ ತಂದೆ,
ಎಂದುಕೊಂಡೆ:'

ಮತ್ತೆ ಕೊಲಂಬಸ್ ಕಾಣಿಸುತ್ತಾನೆ... ಸಾಮಾನ್ಯನೆ ನಾನು? ಸಹರದಾಚೆಯ ರಾಯಭಾರಿ... ಕಡಲ ಬೆನ್ನ ಸವಾರ! ಒಮ್ಮೆ ಜಗದ ತಂದೆಯ ನೆನಪಾದರೆ ಮತ್ತೊಂದು ಕ್ಷಣದಲ್ಲಿ ಸಾಮಾನ್ಯನೆ ನಾನು! ಎಂಬುದು ಗಟ್ಟಿಯಾಗುತ್ತದೆ. ತನ್ನ ಅಂತರಂಗದ ಆತಂಕ ಕ್ಷಣಗಳು, ಜಗಕ್ಕೆ ಯಾಕೆ ಕೇಳುವುದಿಲ್ಲ ಎಂದು ಕನವರಿಸುತ್ತಾನೆ ಕವಿ. ಈ ಕವನ ಒಬ್ಬ ವ್ಯಕ್ತಿಯ ಅನನ್ಯತೆ(Individual identity)ಯನ್ನು ಮತ್ತು ಸಾರ್ವತ್ರಿಕ ಅನನ್ಯತೆ (Universal identity)ಯನ್ನು ನಮ್ಮ ಕಣ್ಣಿನ ಮುಂದೆ ನಿಲ್ಲಿಸುತ್ತದೆ. ಯಾವ ರೀತಿಯ

ಕವಿತೆಯೇ ಆಗಿರಲಿ (ಅಥವಾ ಯಾವುದೇ ಪ್ರಕಾರವಾಗಿರಲಿ) ವ್ಯಕ್ತಿಯ ಅನುಭವ, ಸಾಮೂಹಿಕ ಅರಿವು ಈ ಎರಡನ್ನೂ ಒಳಗೊಂಡೇ ಹೊರಬೇಕಾಗುತ್ತದೆ. ಇದರಲ್ಲಿ ಯಾವುದೊಂದು ಜಾಳಾದರೂ ಕವನ ಜಾಳಾಗುತ್ತದೆ. ಇದನ್ನು ಕವಿ ಅರಿತಿದ್ದಾನೆ. ಆದುದರಿಂದ ಅವನ ಆರ್ತತೆ ಅರ್ಥವಾಗುತ್ತದೆ.

> **'ಗಳಿಗೆ ಗಳಿಗೆಗೂ ನನ್ನ ಬಾಳ ತುಳಿಯುತಲಿರುವ**
> **ನೆರಳ ಸಪ್ಪುಳ ಜಗಕೆ ಕೇಳದೇಕೆ?**
> **ನಾನಿಷ್ಟೇ ಲೋಕಕ್ಕೆ:**
> **ತೇದಂತೆ ಕರಗುವ ಗಂಧದೊಂದು ಚಕ್ಕೆ!'**

ಬಾಳನ್ನು ಮೆಟ್ಟುತ್ತಿದ್ದರೂ ಕವಿ ತೇದಿ ಹೋಗುತ್ತಿದ್ದಾನೆ, ಆದರೆ ಗಂಧದಲ್ಲಿ. ಅದು ಸುವಾಸನೆ ಬೀರದಿದ್ದೀತೆ?

ಆರಂಭದಲ್ಲಿ ಹೀಗೆ ತಪತಹಿಸಿ ಬರೆದ ಕವಿ ಕೊನೆಗೆ ಸುಮಾರು ಐದು ದಶಕಗಳಲ್ಲಿ ಕನ್ನಡದ 'ಅಕ್ಷರದಲ್ಲಿ ಅವತಾರವೆತ್ತಿ'ದಂತೆ ಬರೆದಿರುವುದನ್ನು ಮತ್ತು ನಾಡೋಜರಾಗಿರುವುದನ್ನು ಕನ್ನಡ ಲೋಕ ಹೆಮ್ಮೆಯಿಂದ ಅವರ ಕಡೆ ನೋಡುತ್ತಿದೆ.

ಎಂತಹ ತೇಜಶ್ಶಕ್ತಿಯ ಕವಿಯೇ ಆಗಲಿ, ಅವನ ಪರಿಮಿತ ಜೀವಮಾನದ ಒಟ್ಟು ಕಾವ್ಯ ಫಲಿತದಲ್ಲಿ ವಾಸ್ತವ ಸತ್ಯದ ಕಿಂಚಿತ್ ಸ್ವರೂಪವನ್ನು ಮಾತ್ರ ನಮಗೆ ಮನದಟ್ಟಾಗಿಸಬಲ್ಲ. ದೂರದ ಗ್ರಹ ನಕ್ಷತ್ರದ ಮಾತಿರಲಿ— ಮನುಷ್ಯನಿಗೆ ತೀರಾ ಹತ್ತಿರವಿದ್ದೂ ಅತಿ ಪರಿಚಿತವೆನ್ನಿಸಿಯೂ ಗ್ರಹ ನಕ್ಷತ್ರಗಳಿಂದ ದೂರವಾಗಿ ಆಗಂತುಕವಾಗಿ ಕಗ್ಗಂಟಾಗಿ ಉಳಿದಿರುವುದೆಂದರೆ— ಮನುಷ್ಯನೇ; ಅವನ ಸ್ವಭಾವ, ಅಂತಃಪ್ರವೃತ್ತಿಗಳೇ. ಮನುಷ್ಯನ ಬಗ್ಗೆ ಮನುಷ್ಯ ಎಷ್ಟು ತಲೆ ಕೆಡಿಸಿಕೊಂಡಿದ್ದಾನೆಂಬುದನ್ನು ಮನುಕುಲದ ಚರಿತ್ರೆ ಲಾಗಾಯ್ತಿನಿಂದ ಸಾರುತ್ತಾ ಬಂದಿದೆ. ವಿಜ್ಞಾನದ ಮಹತ್ಸಾಧನೆ ಸಹ ಅವನ ಮನಸ್ಸಿನ ಮೇಲ್ಮೈಯನ್ನೂ ಕೂಲಂಕಷವಾಗಿ ಅರಿತಿಲ್ಲ. ಅವನ ಯಾವುದೇ ವರ್ತನೆಗೆ ಹೊರಗಣ ಘಟನೆ ಒಂದು ನೆವ ಅಷ್ಟೆ. ತನಗೇ ತಿಳಿಯದ ರಹಸ್ಯಮಯ ಕಾರ್ಯಕಾರಣಗಳ ಕೈಗೊಂಬೆಯಾಗಿರುವ ಅವನಿಗೆ, ಅವನ ಬಗೆಗೇ ಇರುವ ಕುತೂಹಲ, ಸೋಜಿಗ—ಸೋಜಿಗ ಮೂಡಿಸುವಂಥದ್ದು.

(ಕವಿಯ ಮಿತಿ)

ಮನೆಯೆದುರು ಎದ್ದಿರುವ ಚಪ್ಪರ

ಮನೆಯೆದುರು ಎದ್ದಿರುವ ಹರವಾದ ಚಪ್ಪರವೆ,
ಹೇಳು ಶುಭ ಓಲಗದ ಶಬ್ದವೆಲ್ಲಿ?
ಜನರಿಂದ ಕಿಕ್ಕಿರಿದ ಹೊರ ಹಾದಿ ಸಪ್ಪಳವೆ,
ಮಾತೇಕೆ ಬಿರಿಸಿಲ್ಲ ಬಾಯ ಬಳ್ಳಿ?

ಇಷ್ಟೆಲ್ಲ ಮಂದಿ ಮಠ ಮೆರೆದಿದ್ದರೂ ಅಲ್ಲಿ
ಸೂಜಿ ಬಿದ್ದರೆ ಕೇಳುವಂಥ ಮೌನ;
ಎಷ್ಟೆಲ್ಲ ಸಿಂಗರದ ಸಂತೆ ನೆರೆದಿದ್ದರೂ
ಇಲ್ಲ ಗದ್ದಲ ಗೌಜು, ಹರುಷ, ಗಾನ!

ಹೇಳು ಕಾರಣವೇನು, ಇಮ್ಮಾವ ತೋರಣವೆ?
ಬಿಮ್ಮನಿಸಿ ಭಣಗುಡುವುದೇಕೆ ಬೀದಿ?
ಎತ್ತರಿಸಿತೇಕೆ ವಿಷಾದದ ಸಭಾಂಗಣವ
ನಗೆ, ಕೇಕೆ, ಸಡಗರದ ಹೆಬ್ಬುನಾದಿ?

ಗುಂಭ ಮೌನದ ಕೆರೆಗೆ ಪಿಸು ಮಾತ ಹರಳೆಸೆತ;
ಆಗೀಗ ಕಿರು ಅಲೆಯ ಬಳೆಗಳರಳು;
ತುಂಬು ಗೋಪ್ಯವದೊಂದು ತುಟಿಯ ಹೊಲಿದಿರುವಂತೆ
ಮನ ಬಿಚ್ಚಿ ಆಡದಿದೆ ಜನರ ಕೊರಳು.

ಸಂಭ್ರಮವನುಟ್ಟಿದ್ದ ನಡು ಹಗಲ ನೋಟವಿದೆ
ತಾಳಿಯಿಲ್ಲದ ಹೆಣ್ಣ ಕೊರಳ ಹೋಲಿ.
ಉರಿವ ಸೂರ್ಯನ ಚಿತೆಯ ಬೂದಿಯಂತಿದೆ ಬಾನು;
ಹೊಳಪು ಕಳಕೊಂಡಿರುವ ಗಾಜು ಗೋಲಿ.

ಹರಯದಲೆ ಬೋಳಾದ ನೆರೆಯ ಬೇವಿನ ಹರೆಯ
ಕಾಗೆ ದನಿ ಪರಚುತಿದೆ ದಿನದ ಮೊಗವ;
ಮರೆಯೊಳಗೆ ಮೊಗ ಮರೆಸಿ ಬಿರಿದಿದ್ದ ಕಿರು ಮೊಗ್ಗ
ಅಳಿಲು ಕಿತ್ತೆಸೆದಿಹುದು—ಬಳ್ಳಿ ಸೊಗವ.

ಮನೆ ಹಣೆಯ ಸಿಂದೂರದಂತಿರುವ ರಂಗೋಲಿ
ನಡೆದಾಟದಿಂದಳಿಸಿ ಬರೆಯಂತಿದೆ;

ಒಂದೆರಡು ಚಣದಲ್ಲಿ ಘಟಿಸಿತ್ತು ಏನೆಲ್ಲ!
ಹಣೆ ಬರಹವನು ಹಲ್ಲಿ ಒರೆದಂತಿದೆ.

ಹತ್ತೂರ ಮುತ್ತೈದೆ ಬಳಗ ಒಳ ಮನೆಯೊಳಿದೆ;
ಮೂಲೆಯಲಿ ತಲೆ ತಗ್ಗಿದೊಂದು ಜೀವ.
ಮುಡಿಯನೇರದ ಬಿಡಿಯ ಹೂವಿನಂತಿದೆ ಮನಸು;
ನುಡಿಯಲಾಗದ ನೋವ ಕಣ್ಣ ಭಾವ.

ಚಂಬೆಳಕಿನೊಡನಾಡಿ ಕತ್ತಲೊಂದೇ ಅಲ್ಲ,
ಮಿಂಚು ಸಹ ಎಂಬರಿವು ಜಾರಿ ಹೋಯ್ತು;
ಬೆಳಕು ತೊಡಿಸಲು ಮನೆಗೆ ಮುಂದಾದ ಗಂಡೊಡಲು
ತಂತಿ ರೂಪದ ಬೆಂಕಿಗುರಿದು ಬಿತ್ತು.

ಮದುಮಗಳಿಗಿದ್ದಾನೆ ತಲೆ ನರೆತ ಹಳೆ ನೆಂಟ;
ಮೊದಲಿಂದ ಅವಳ ಮೇಲಿವನ ದೃಷ್ಟಿ;
ಓಡಾಡುತಲೆ ಮನೆ ತುಂಬ, ಸುಳಿವ ನೀಡದೆ ಹುಂಬ—
ಕಲಕಿದ್ದ ಒಳ ಹಗೆಯ ಜೇನುಹುಟ್ಟಿ.

★ ★ ★

(ಕವನ ಸಂಕಲನ: 'ನವೋಲ್ಲಾಸ')



'ಮನೆಯೆದುರು ಎದ್ದಿರುವ ಚಪ್ಪರ': ಹಗೆಯ ಸೂಕ್ಷ್ಮ ಬಗೆಯೊಂದರ ವಿಷಾದ ಗಾಥೆ

♦ *ಎಂ. ವಿ. ವೆಂಕಟೇಶ ಮೂರ್ತಿ*

ಆಧುನಿಕ ಕನ್ನಡದ ಮಹತ್ವದ ಕವಿಗಳಲ್ಲಿ ಡಾ. ಕೆ. ಎಸ್. ನಿಸಾರ್ ಅಹಮದ್ ಒಬ್ಬರು. ಮೂಲತಃ ನವೋದಯ ಕಾವ್ಯಮಾರ್ಗ ಮನೋಧರ್ಮದ ಅವರ 'ಮನೆಯೆದುರು ಎದ್ದಿರುವ ಚಪ್ಪರ' 'ನವೋಲ್ಲಾಸ' ಸಂಕಲನದಲ್ಲಿ ಸಂಗ್ರಹಗೊಂಡಿರುವ ಹತ್ತು ಚತುಷ್ಪದಿಗಳ ಒಂದು ಸಾರ್ಥಕ ಭಾವಗೀತೆ. ಕಥನ ಕವನದ ಸ್ವರೂಪ ಲಕ್ಷಣಗಳನ್ನೊಳಗೊಂಡಿರುವ ಈ ಕವಿತೆ ಸಶಕ್ತ ಪ್ರತಿಮೆ-ರೂಪಕಗಳ ಮೂಲಕ ದುರಂತ ಕಥೆಯ ಹಂದರವೊಂದನ್ನು ಯಶಸ್ವಿಯಾಗಿ ಹಬ್ಬಿಸುತ್ತದೆ.

ಕವಿ ಅಥವಾ ನಿರೂಪಕ ಮನೆಯ ಎದುರು ಎದ್ದಿರುವ ಚಪ್ಪರವನ್ನು, ಅದರ ಮುಂದೆಯೊ ಸಮೀಪವೊ ಇರಬಹುದಾದ ಹೊರ ಹಾದಿಯಲ್ಲಿನ ಸಪ್ಪಳವನ್ನು ಸಂಬೋಧಿಸಿ ಪ್ರಶ್ನಿಸುವುದರೊಂದಿಗೆ ಕವಿತೆ ಪ್ರಾರಂಭವಾಗುತ್ತದೆ:

> **'ಮನೆಯೆದುರು ಎದ್ದಿರುವ ಹರವಾದ ಚಪ್ಪರವೆ,**
> **ಹೇಳು ಶುಭ ಓಲಗದ ಶಬ್ದವೆಲ್ಲಿ?**
> **ಜನರಿಂದ ಕಿಕ್ಕಿರಿದ ಹೊರ ಹಾದಿ ಸಪ್ಪಳವೆ,**
> **ಮಾತೇಕೆ ಬಿರಿಸಿಲ್ಲ ಬಾಯ ಬಳ್ಳಿ?'**

ನಿರೂಪಕನ ಪ್ರಶ್ನೆಯಲ್ಲಿಯೇ ಆ ಮುಂಚೆ ಅಲ್ಲಿ ಶುಭ ಓಲಗದ ಶಬ್ದವಿತ್ತು, ಈಗ ಅದಿಲ್ಲ ಎಂಬ ಅಂಶ ಧ್ವನಿಸುತ್ತದೆ. 'ಹರವಾದ ಚಪ್ಪರ'. 'ಶುಭ ಓಲಗದ ಶಬ್ದ'ಗಳು ಅಲ್ಲಿ ನಡೆಯಲಿದ್ದುದು ಶುಭ ಸಮಾರಂಭವೆಂದೇ ಸೂಚಿಸುತ್ತವೆ.

ಓಲಗದ ಹಿಂದಿರುವ ವಿಶೇಷವೂ ಅದನ್ನು ಖಚಿತಪಡಿಸುತ್ತದೆ. ಚಪ್ಪರದ ಮುಂದೆಯೊ, ಸಮೀಪವೊ ಇರಬಹುದಾದ ಹೊರ ಹಾದಿಯು ಜನರಿಂದ ಕಿಕ್ಕಿರಿದಿದೆ; ಅವರ ಹೆಜ್ಜೆ ಸಪ್ಪಳ ಕಿವಿಗೆ ಕೇಳುತ್ತಿದೆ; ಆದರೆ ಅವರ ಬಾಯಿ ಬಳ್ಳಿ ಮಾತ್ರ ಯಾವ ಮಾತನ್ನೂ ಬಿರಿಸದಾಗಿದೆ. ನೆರೆದಿದ್ದ ಜನ ಹೀಗೆ ಮೌನವನ್ನು ತಾಳಿರುವುದು ನಿರೂಪಕನ ಪ್ರಶ್ನೆಗೆ ಕಾರಣವಾಗುತ್ತದೆ. ಇಲ್ಲಿಯೂ, ಕಿಕ್ಕಿರಿದ ಜನ ಆ ಮುಂಚೆ ಮಾತನಾಡುತ್ತಿದ್ದರು, ಈಗ ಮೌನ ವಹಿಸಿದ್ದಾರೆ ಎಂಬ ಸೂಚನೆಯನ್ನು ಕೊಡುತ್ತದೆ. ಆ ಮೌನ ನಿರೂಪಕನಲ್ಲಿ ಕುತೂಹಲವನ್ನು ಹುಟ್ಟಿಸಿದೆ. ಮುಂದಿನ ಸ್ಟಾಂಜಾ ಅವನ ಅಚ್ಚರಿ, ಕುತೂಹಲಗಳಿಗೆ ಉಕ್ತಿ ನೀಡುತ್ತದೆ:

'ಇಷ್ಟೆಲ್ಲ ಮಂದಿ ಮಠ ಮೆರೆದಿದ್ದರೂ ಅಲ್ಲಿ
ಸೂಜಿ ಬಿದ್ದರೆ ಕೇಳುವಂಥ ಮೌನ;
ಎಷ್ಟೆಲ್ಲ ಸಿಂಗರದ ಸಂತೆ ನೆರೆದಿದ್ದರೂ
ಇಲ್ಲ ಗದ್ದಲ ಗೌಜು, ಹರುಷ, ಗಾನ!'

ಮಂದಿಯ ಮೆರೆತ, ಸಿಂಗರದ ಸಂತೆಯ ನೆರೆತ—ಇವೂ ಆ ಮನೆಯಲ್ಲಿ ನಡೆಯುತ್ತಿದ್ದುದು ಶುಭ ಸಮಾರಂಭವೇ ಎಂಬ ಅಂಶವನ್ನು ಪುಷ್ಟೀಕರಿಸುತ್ತವೆ. ಆದರೆ ಅಲ್ಲಿ ಹರ್ಷ, ಗಾನ, ಗೌಜು ಗದ್ದಲಗಳು ಇಲ್ಲದಿರುವುದೂ ಸೂಜಿ ಬಿದ್ದರೂ ಕೇಳಿಸುವಂಥ ಮೌನ ಅಲ್ಲಿ ನೆಲಸಿರುವುದೂ ಸೋಜಿಗದ ಸಂಗತಿಯೆನ್ನಿಸಿ ನಿರೂಪಕನ ಅಚ್ಚರಿಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಸ್ಟಾಂಜಾಂತ್ಯದಲ್ಲಿನ ಆಶ್ಚರ್ಯಸೂಚಕ ಚಿಹ್ನೆ ಉಚಿತವೇ ಆಗಿದೆ.

ಚಪ್ಪರ, ಸಪ್ಪಳ ಇವುಗಳಿಂದ ಉತ್ತರ ಪಡೆಯುವುದು ಅಸಂಭವನೀಯವಾದ್ದರಿಂದ ನಿರೂಪಕ ತನ್ನ ಪ್ರಶ್ನಾವಳಿಯನ್ನು ಮುಂದುವರೆಸುತ್ತಾನೆ. ಈಗ ಅವನ ಪ್ರಶ್ನೆಯ ಸರದಿ ಅಲ್ಲಿದ್ದ ಇಮ್ಮಾವಿನ ತೋರಣಕ್ಕೆ.

'ಹೇಳು ಕಾರಣವೇನು, ಇಮ್ಮಾವ ತೋರಣವೆ?
ಬಿಮ್ಮನಿಸಿ ಭಣಗುಡುವುದೇಕೆ ಬೀದಿ?
ಎತ್ತರಿಸಿತೇಕೆ ವಿಷಾದದ ಸಭಾಂಗಣವ
ನಗೆ, ಕೇಕೆ, ಸಡಗರದ ಹೆಬ್ಬುನಾದಿ?'

ಕಿಕ್ಕಿರಿದ ಜನ, ಸಿಂಗರದ ಸಂತೆ ಅಲ್ಲಿದ್ದರೂ ಚಪ್ಪರದ ಸಮೀಪವಿದ್ದ ಬೀದಿ ಬಿಮ್ಮೆನ್ನಿಸಿ ಭಣಭಣಗುಟ್ಟುತ್ತಿದೆ. ಆ ಮುಂಚೆ ಅಲ್ಲಿ ನೆಲಸಿದ್ದ ನಗೆ, ಕೇಕೆ, ಸಡಗರಗಳ ಹಿರಿಯ ಬುನಾದಿ ವಿಷಾದದ ಸಭಾಂಗಣವನ್ನು ಎತ್ತರಿಸಿದೆ. ಇದಕ್ಕೆ ಕಾರಣವಾದರೂ ಏನು?—ಎಂಬುದೇ ನಿರೂಪಕನ ಜಿಜ್ಞಾಸೆಯಾಗಿದೆ. ಹರವಾದ ಚಪ್ಪರ, ಶುಭ ಓಲಗದ ಸದ್ದು, ಶೃಂಗಾರದ ಸಂತೆಗಳಂತೆಯೇ ಇಮ್ಮಾವಿನ ತೋರಣವೂ ಶುಭ ಸೂಚಕವೇ, ಹರ್ಷ ಸೂಚಕವೇ. ನಗೆ, ಕೇಕೆ, ಸಡಗರಗಳೂ ಅಷ್ಟೇ. ಆದರೆ ಇವಕ್ಕೆ ವಿದೃಶವೆಂಬಂತೆ ಬಿರಿಯದ ಬಾಯಿ, ನೆಲಸಿರುವ ಮೌನ, ಇಲ್ಲದ ಗದ್ದಲ-ಗೌಜು, ಕೇಳಿಸದ ಹರ್ಷ ಗಾನ, ಭಣಗುಡುವ ಬೀದಿ, ವಿಷಾದದ ಸಭಾಂಗಣ ಇತ್ಯಾದಿ, ಪರಿಸ್ಥಿತಿಯ ಅಸಹಜತೆಯನ್ನು ವೈದೃಶ್ಯದಲ್ಲಿ ಎತ್ತಿ ಕಾಣಿಸುತ್ತದೆ.

ಇಮ್ಮಾವಿನ ತೋರಣದಿಂದಲೂ ನಿರೂಪಕನ ಪ್ರಶ್ನೆಗೆ—ಸಹಜವಾಗಿಯೇ ಉತ್ತರ

ಬಾರದೆ ಹೋಗಿ, ಸುತ್ತಲ ಆವರಣದಲ್ಲಿ ಕಾಣಿಸುತ್ತಿದ್ದ ಕ್ರಿಯೆ-ಪ್ರತಿಕ್ರಿಯೆ ಮತ್ತು ಪ್ರಚಲಿತ ವಾತಾವರಣದ ವರ್ಣನೆಯೊಂದಿಗೆ ಕವಿತೆ ಮುಂದುವರಿಯುತ್ತದೆ:

'ಗುಂಭ ಮೌನದ ಕೆರೆಗೆ ಪಿಸು ಮಾತ ಹರಳೆಸೆತ;
ಆಗೀಗ ಕಿರು ಅಲೆಯು ಬಳೆಗಳರಳು;
ತುಂಬು ಗೋಪ್ಯವದೊಂದು ತುಟಿಯ ಹೊಲಿದಿರುವಂತೆ
ಮನ ಬಿಚ್ಚಿ ಆಡದಿದೆ ಜನರ ಕೊರಳು.

ಸಂಭ್ರಮವನುಟ್ಟಿದ್ದ ನಡು ಹಗಲ ನೋಟವಿದೆ
ತಾಳಿಯಿಲ್ಲದ ಹೆಣ್ಣ ಕೊರಳ ಹೋಲಿ.
ಉರಿವ ಸೂರ್ಯನ ಚಿತೆಯ ಬೂದಿಯಂತಿದೆ ಬಾನು;
ಹೊಳಪು ಕಳಕೊಂಡಿರುವ ಗಾಜು ಗೋಲಿ.

ಹರಯದಲೆ ಬೋಳಾದ ನೆರೆಯ ಬೇವಿನ ಹರೆಯ
ಕಾಗೆ ದನಿ ಪರಚುತಿದೆ ದಿನದ ಮೊಗವ;
ಮರೆಯೊಳಗೆ ಮೊಗ ಮರೆಸಿ ಬಿರಿದಿದ್ದ ಕಿರು ಮೊಗ್ಗ
ಅಳಿಲು ಕಿತ್ತೆಸೆದಿಹುದು—ಬಳ್ಳಿ ಸೊಗವ.

ಮನೆ ಹಣೆಯ ಸಿಂದೂರದಂತಿರುವ ರಂಗೋಲಿ
ನಡೆದಾಟದಿಂದಳಿಸಿ ಬರೆಯಂತಿದೆ...'

(ಸಿಂದೂರ)

ಕಿಕ್ಕಿರಿದ ಜನ ಸಂದಣಿಯಿದ್ದರೂ ಜನರ ಬಾಯಿ ಬಿರಿಯದ ಕಾರಣ ಗಾಢ ಮೌನ ಅಲ್ಲಿ ನೆಲಸಿದೆಯಲ್ಲವೆ? ಆ ನಿಗೂಢ ಮೌನದ ಕೆರೆಯಲ್ಲಿ ಒಬ್ಬಿಬ್ಬರ ಪಿಸುಮಾತಿನ ಹರಳಿನ ಎಸೆತದಿಂದಾಗಿ ಆಗಾಗ ಕಿರು ಅಲೆಗಳೆದ್ದು ನೀರಿನಲ್ಲಿ ವರ್ತುಲಗಳು ಅರಳುತ್ತಿದ್ದವು; ಎಂದರೆ, ಪಿಸುಮಾತಿನ ದನಿಯಷ್ಟೆ ಕೇಳಿ ಬರುತ್ತಿತ್ತು. ಏನೋ ರಹಸ್ಯ ಜನರ ತುಟಿಯನ್ನು ಹೊಲಿದು ಬಿಟ್ಟಿದೆಯೇನೊ ಎನ್ನಿಸುವಂತೆ, ನೆರೆದಿದ್ದವರು ತಮ್ಮ ಮನಸ್ಸನ್ನು ಬಿಚ್ಚಿ ಮಾತನಾಡಲಾರದಷ್ಟು ಮೂಕ ವಿಸ್ಮಿತರಾಗಿ ಬಿಟ್ಟಿದ್ದರು. ನೆರೆದಿದ್ದ ಜನರಲ್ಲಿಯೂ ಏನೊ ಸಂಶಯ ಮೂಡಿದೆ, ಘಟಿಸಿರಬಹುದಾದ ಯಾವುದೊ ಘಟನೆಯ ಬಗೆಗೆ ಅಷ್ಟಿಷ್ಟು ಸುಳಿವು ಸಿಕ್ಕಿದೆ; ಆದರೆ ಅದು ಖಚಿತವಾಗಿ ತಿಳಿಯದಿರಬಹುದು, ಅಥವಾ ಆ ಸುಳಿವು ಅಹಿತಕರವಾದ್ದಾಗಿರಬಹುದು, ಆ ಕಾರಣ ಅದನ್ನು ಗೋಪ್ಯವಾಗಿಯೇ ಇಡಲಾಗಿದೆ ಎಂಬ ಸೂಚನೆಯೂ ಇಲ್ಲಿ ಧ್ವನಿಸುತ್ತದೆ. ಸ್ವಲ್ಪ ಮುಂಚೆಯಷ್ಟೆ ಸಂಭ್ರಮಿಸಿದ್ದ ನಡು ಹಗಲಿನ ನೋಟ ಈಗ ತಾಳಿಯಿಲ್ಲದ ಹೆಣ್ಣಿನ—ವಿಧವೆಯ—ಕೊರಲನ್ನು ಹೋಲಿದೆ. ಉರಿಯುವ ಸೂರ್ಯನ ಚಿತೆಯ ಬೂದಿಯಂತೆ ಆಕಾಶವೂ ಮಂಕಾಗಿ ಕಾಣಿಸುತ್ತಿದೆ. ಸೂರ್ಯನೇ ಕಳೆಗುಂದಿ ಹೊಳಪು ಕಳಕೊಂಡಿರುವ ಗಾಜಿನ ಗೋಲಿಯಂತಿದ್ದಾನೆ. ಮನೆಯ ನೆರೆಯಲ್ಲಿರುವ ಬೇವಿನ ಮರ ಹರೆಯದಲ್ಲಿಯೇ ಬೋಳಾಗಿಬಿಟ್ಟಿದೆ. ಅದರ ರೆಂಬೆಯ ಮೇಲಿರುವ ಕಾಗೆ ಮ್ಲಾನವಾಗಿ ದಿನದ ಮುಖವನ್ನು ಪರಚುವಂತೆ ಅರಚುತ್ತಿದೆ. ಬಳ್ಳಿಗೇ ಸೊಗಸು ಎನ್ನಿಸುವಂತಿದ್ದ, ಮರೆಯೊಳಗೆ ಮುಖ ಮರೆಸಿಕೊಂಡಿದ್ದ, ಬಿರಿಯುತ್ತಿದ್ದ ಕಿರಿ

ಮೊಗ್ಗನ್ನು ಅದು ಅರಳುವ ಮುನ್ನವೇ ಅಳಿಲು ಕಿತ್ತೆಸೆದಿದೆ. ಮನೆ ಹಣೆಯ ಸಿಂದೂರ ದಂತಿದ್ದ ರಂಗವಲ್ಲಿ ಜನರ ತುಳಿತ, ನಡೆದಾಟದಿಂದಾಗಿ ಅಳಿಸಿ, ಅಸ್ತವ್ಯಸ್ತಗೊಂಡು ಬರೆ ಎಳೆದಂತೆ ಕಾಣಿಸುತ್ತಿದೆ.

ಹೀಗೆ ನಿಗೂಢ ಮೌನ, ತಾಳಿಯಿಲ್ಲದ ಹೆಣ್ಣ ಕೊರಳು, ಚಿತೆಯ ಬೂದಿ, ಹರೆಯದಲ್ಲೇ ಬೋಳಾದ ಮರ, ಕಾಗೆ ದನಿ, ಅಳಿಲು ಕಿತ್ತೆಸೆದ ಬಿರಿದ ಕಿರಿ ಮೊಗ್ಗು, ಅಸ್ತವ್ಯಸ್ತವಾಗಿರುವ ಮನೆಯ ಹಣೆಯ ಸಿಂದೂರ ಎಲ್ಲವೂ ಅಶುಭ, ಅಮಂಗಳಸೂಚಕ ಪ್ರತಿಮೆಗಳೇ ಆಗಿದ್ದು, ಅಲ್ಲಿ ನಡೆದಿರಬಹುದಾದ ದುರಂತದ ಮುನ್ಸೂಚನೆಯನ್ನು ನೀಡುತ್ತವೆ. ಹಿಂದೆ ಉಲ್ಲಾಸ, ಹರ್ಷದ ಪ್ರತೀಕವಾಗಿ ಇಮ್ಮಾವು ಕಾಣಿಸಿದ್ದರೆ ಈಗ ದುಃಖ, ದುಮ್ಮಾನದ ಪ್ರತೀಕವಾಗಿ ಬೇವು ಕಾಣಿಸಿಕೊಂಡಿದೆ.

'ಒಂದೆರಡು ಚಣದಲ್ಲಿ ಘಟಿಸಿತ್ತು ಏನೆಲ್ಲ!
ಹಣೆ ಬರಹವನು ಹಲ್ಲಿ ಒರೆದಂತಿದೆ.'

ಎಂಬ ಕವಿತೆಯ ಮುಂದಿನ ಸಾಲು ಆಗಿರಬಹುದಾದ ಅನಾಹುತದ ಅರಿವನ್ನು ಮೂಡಿಸುವುದಕ್ಕಿಂತ ಹೆಚ್ಚಾಗಿ ಅದನ್ನು ತಿಳಿದುಕೊಳ್ಳಲೇಬೇಕೆಂಬ ಕುತೂಹಲವನ್ನು ಹೆಚ್ಚಿಸುವ ಶಿಖರಾವಸ್ಥೆಯ ಘಟ್ಟವನ್ನು ತಲಪುತ್ತದೆ.

ಈವರೆಗಿನ ಸ್ಟಾಂಜಾಗಳು ಮನೆಯ ಹೊರಗೆ ನೆಲಸಿದ್ದ ಪರಿಸ್ಥಿತಿಯನ್ನು ಸಾಧಾರಣ್ಯ(Generalised)ದಲ್ಲಿ ವರ್ಣಿಸಿದ್ದರೆ ಇನ್ನು ಮುಂದಿನ ಕೆಲವು ಸಾಲು ಒಳಮನೆಯ ವಾತಾವರಣದ ಬಗೆಗೆ ಬೆಳಕು ಹಾಯಿಸುತ್ತವೆ, ಮತ್ತು ಅದರೊಂದಿಗೆ ನಡೆದಿರ ಬಹುದಾದ ಘಟನೆ ಯಾರ ಪಾಲಿಗೆ ದುರಂತವಾಗಿ ಪರಿಣಮಿಸಿದೆ ಎಂಬುದನ್ನೂ ಸೂಚ್ಯವಾಗಿ ತಿಳಿಸುತ್ತವೆ:

'ಹತ್ತೂರ ಮುತ್ತೈದೆ ಬಳಗ ಒಳ ಮನೆಯೊಳಿದೆ;
ಮೂಲೆಯಲಿ ತಲೆ ತಗ್ಗಿದೊಂದು ಜೀವ.
ಮುಡಿಯನೇರದ ಬಿಡಿಯ ಹೂವಿನಂತಿದೆ ಮನಸು;
ನುಡಿಯಲಾಗದ ನೋವ ಕಣ್ಣ ಭಾವ.'

ಶುಭ ಸಮಾರಂಭಕ್ಕೆ ಬಂದಿದ್ದ ಹತ್ತೂರಿನ ಮುತ್ತೈದೆಯರ ಬಳಗ ಒಳ ಮನೆ ಯಲ್ಲಿದ್ದರೂ ತಲೆ ತಗ್ಗಿಸಿ ಮೂಲೆಯಲ್ಲಿ ಕುಳಿತಿರುವ ಜೀವವೊಂದರ ಕಡೆಗೆ ಕವಿತೆ ಗಮನ ಸೆಳೆಯುತ್ತದೆ. 'ಮುತ್ತೈದೆಯರ ಬಳಗ'ಕ್ಕೆ ದೊರೆತಿರುವ ಒತ್ತು ಅಂಥ ಬಳಗವಿದ್ದರೂ ತಲೆ ತಗ್ಗಿಸಿ ಕುಳಿತಿರುವ ಜೀವವನ್ನು ಆ ದುಃಸ್ಥಿತಿಯಿಂದ ಪಾರುಮಾಡಲಾಗಿಲ್ಲ ಎನ್ನಬಹುದಾದ ತೆಳು ವ್ಯಂಗ್ಯದ ನೆಳಲನ್ನು ಹಾಯಿಸುತ್ತದೆ. ಇನ್ನು ಒಂಟಿಯಾಗಿ ಕುಳಿತಿದ್ದ ಜೀವದ ಮನಃಸ್ಥಿತಿಯೊ: ಮಾಲೆಯಾಗಿ ಮುಡಿಯೇರುವ ಶಕ್ಯತೆ, ಭಾಗ್ಯ ಇಲ್ಲದೆ ಬಿಡಿಯ ಹೂವಾಗಿಯೇ, ಏಕಾಕಿಯಾಗಿಯೇ ಉಳಿದು ಬಿಡುವಂತಾಗಿದೆ. ಆಕೆಯ ಕಣ್ಣಿನಲ್ಲಿ ನುಡಿಯಲಾಗದ ನೋವಿನ ಭಾವ ನೆಲಸಿದೆ.

ಮನೆಯ ಒಳ-ಹೊರ ವಾತಾವರಣದ ವಿವರಗಳನ್ನು ಕಂಡ ನಿರೂಪಕನಿಗೆ ಈಗ

ನಡೆದಿರುವ ದುರಂತದ ಸುಳಿವು ಸಿಕ್ಕಿದೆ, ವಸ್ತುಸ್ಥಿತಿಯ ಅರಿವಾಗಿದೆ :

'ಚೆಂಬೆಳಕಿನೊಡನಾಡಿ ಕತ್ತಲೊಂದೇ ಅಲ್ಲ,
ಮಿಂಚು ಸಹ ಎಂಬರಿವು ಜಾರಿ ಹೋಯ್ತು;
ಬೆಳಕು ತೊಡಿಸಲು ಮನೆಗೆ ಮುಂದಾದ ಗಂಡೊಡಲು
ತಂತಿ ರೂಪದ ಬೆಂಕಿಗುರಿದು ಬಿತ್ತು.'

ಬೆಳಕಿನ ಸಂಗಾತಿ ಕತ್ತಲೆಯೊಂದೇ ಅಲ್ಲ, ಮಿಂಚು ಸಹ ಅದರ ಒಡನಾಡಿಯೇ ಎಂಬ ಭಾವನೆ ಮದುಮಗನ ಮನಸ್ಸಿನಿಂದ ಮರೆತುಹೋಗುತ್ತದೆ:

ಮನೆಯ ವಿದ್ಯುದ್ದೀಪದಲ್ಲಿ ಏನೋ ದೋಷ ತಲೆದೋರಿ, ದೀಪ ಆರಿ ಕತ್ತಲು ಆವರಿಸಿರಬೇಕು. ಅದನ್ನು ಸರಿಪಡಿಸಲು ಮದುಮಗನೇ ಮುಂದಾಗಿ ಹೊರಟ. ಪ್ರವಹಿಸುತ್ತಿದ್ದ ವಿದ್ಯುತ್ ತಂತಿಯನ್ನು ಆಕಸ್ಮಿಕವಾಗಿ ಮುಟ್ಟಿಯೊ ಅಥವಾ ಅವನಿಗೆ ಅದು ತಗುಲಿಯೊ ವಿದ್ಯುದಾಘಾತದಿಂದ ಕೂಡಲೇ ಅವನು ಅಸು ನೀಗಿರಬೇಕು. ಮದುಮಗ ಆ ಮನೆಗೆ ಮಾತ್ರವೇ ಬೆಳಕು ತೊಡಿಸಲು ಮುಂದಾಗಿದ್ದವನಲ್ಲ, ಒಳ ಮನೆಯಲ್ಲಿ ತಲೆ ತಗ್ಗಿಸಿ ಕುಳಿತಿದ್ದ ಒಂಟಿ ಜೀವದ ಬದುಕಿಗೂ ಬೆಳಕು ತೊಡಿಸಲು ಮುಂದಾಗಿದ್ದವನು. ಆದರೆ ಹೀಗೊಂದು ಅವಘಡಕ್ಕೆ ತುತ್ತಾಗಿದ್ದಾನೆ. ಇದೇ ಘಟಿಸಿರುವ ದುರಂತ ಎಂಬ ವಿಷಾದ ಮನಸ್ಸನ್ನು ಆವರಿಸುತ್ತಿರುವಂತೆಯೇ ಕವಿತೆಯ ಕೊನೆಯ ಸ್ಟ್ಯಾಂಜಾ ಓದುಗರನ್ನು ಬೆಚ್ಚಿ ಬೀಳಿಸುತ್ತದೆ. ಕಾರಣ, ಹೀಗೆ ಸಾವು ಆಕಸ್ಮಿಕವಾಗಿ ಆದದ್ದಲ್ಲ, ವ್ಯವಸ್ಥಿತ ಸಂಚಿನ ಪರಿಣಾಮವಾಗಿ ಜರುಗಿರುವಂಥದು ಎಂಬ ಸಂಗತಿ ನಮ್ಮ ಅರಿವಿಗೆ ಬರುತ್ತದೆ:

'ಮದುಮಗಳಿಗಿದ್ದಾನೆ ತಲೆ ನರೆತ ಹಳೆ ನೆಂಟ;
ಮೊದಲಿಂದ ಅವಳ ಮೇಲಿವನ ದೃಷ್ಟಿ;
ಓಡಾಡುತಲೆ ಮನೆ ತುಂಬ, ಸುಳಿವ ನೀಡದೆ ಹುಂಬ—
ಕಲಕಿದ್ದ ಒಳ ಹಗೆಯ ಜೇನುಹುಟ್ಟಿ.'

ಮೊದಲಿಂದ ಅವಳ ಮೇಲೆ ಕಣ್ಣಿಟ್ಟಿದ್ದ ಮುದಿ ವಯಸ್ಸಿನ (`ತಲೆ ನರೆತ`) ಹಳೆಯ ನೆಂಟನೊಬ್ಬ ಮನೆಯ ತುಂಬ ಓಡಾಡಿಕೊಂಡಿದ್ದು, ಯಾವ ಸುಳಿವನ್ನೂ ನೀಡದೆ, ತನ್ನಲ್ಲಿ ಅಡಗಿದ್ದ ಹಗೆಯ ಜೇನುಹುಟ್ಟಿಯನ್ನು ಕಲಕಿ ಬಿಟ್ಟಿದ್ದ. ಮೇಲುನೋಟಕ್ಕೆ ಆಕಸ್ಮಿಕವೆಂದು ಕಾಣಿಸಬಲ್ಲ, ಆದರೆ ವ್ಯವಸ್ಥಿತ ಷಡ್ಯಂತ್ರವನ್ನು ರಚಿಸಿ, ತಾನು ಆ ಹುಡುಗಿಯ ಮೇಲೆ ಕಣ್ಣಿಟ್ಟಿದ್ದು ಸುವಿದಿತವಾಗುತ್ತದೆ. ಈಗ ಮದು ಮಗಳಾಗಿದ್ದವಳ ಬಾಳನ್ನು ಬೆಳಗಲು ಮುಂದಾಗಿದ್ದ ಮದುಮಗನನ್ನು ಆಹುತಿ ತೆಗೆದುಕೊಂಡಿದ್ದ. ಹೀಗೆ, ಆಕೆಯ ಮನೆಗೂ ಬದುಕಿಗೂ ಬೆಳಕಾಗಲು ಹೊರಟಿದ್ದ ತರುಣನನ್ನು ತನ್ನ ಒಳ ಸಂಚಿಗೆ, ಕ್ರೌರ್ಯಕ್ಕೆ ಬಲಿಯಾಗಿಸಿದ್ದ.

ಮದುವೆಯ ಶುಭ ಕಾರ್ಯ ನಡೆದ ಮೇಲೆ ಈ ದುರಂತ ಘಟಿಸಿತೊ, ಆ ಮುಂಚೆಯೊ ಎಂಬುದರ ಸ್ಪಷ್ಟ ನಿರ್ದೇಶನ ಕವಿತೆಯಲ್ಲಿ ಇಲ್ಲವಾದರೂ ಮದುವೆಯಾದ ಮೇಲೆ ನಡೆದಿರಬೇಕೆಂದು ಭಾವಿಸಬೇಕಿದೆ. ತಾಳಿಯಿಲ್ಲದ ಹೆಣ್ಣಿ ಕೊರಳು, ಹರಯದಲ್ಲಿಯೇ ಬೋಳಾದ ಜೇವು, ಅಳಿಸಿಹೋದ ಮನೆ ಹಣೆಯ ಸಿಂದೂರ ಇತ್ಯಾದಿ ಪದಪುಂಜಗಳು ಅಂಥ

ಸೂಚನೆಯನ್ನು ನೀಡುತ್ತವೆ.

ಮನೆಯೇ ಕವಿತೆಯ ಕೇಂದ್ರ ಪ್ರತಿಮೆಯಾಗಿದೆ. ಮನೆಯೆದುರು ಚಪ್ಪರ ಎದ್ದಿದೆ; ಮನೆ ಹಣೆಯ ಸಿಂದೂರವಾಗಿದೆ ರಂಗವಲ್ಲಿ; ಮನೆಗೆ ಬೆಳಕು ತೊಡಿಸಲೆಂದೇ ಮದುಮಗ ಮುಂದಾಗಿದ್ದಾನೆ. ಆದರೆ ಮನೆಯೆದುರಿನ ಚಪ್ಪರ ವ್ಯರ್ಥವಾಗಿದೆ; ಮನೆಯ ಸಿಂದೂರ ಅಸ್ತವ್ಯಸ್ತವಾಗಿ ಅಳಿಸಿದೆ; ಮನೆಗೆ ಬೆಳಕು ತೊಡಿಸಲು ಮುಂದಾದವನು ಅಸು ನೀಗಿದ್ದಾನೆ. ಹೀಗಾಗಿ, ಮದುಮಗಳ ಮನೆ ಹಾಗೂ ಬದುಕು ಎರಡನ್ನೂ ಅವನು ಬೆಳಗಲಿಲ್ಲ.

ಭಾವಗೀತೆಗೆ, ಕಥನ ಕವನಕ್ಕೆ ಅತ್ಯಂತ ಉಚಿತವಾದ ಐದು ಮಾತ್ರಾ ಗಣದ ಲಯ ವಿನ್ಯಾಸದಲ್ಲಿ, ಯಾವ ಅಬ್ಬರವೂ ಸಂಕೀರ್ಣತೆಯೂ ಇಲ್ಲದೆ ಕವಿತೆ ಹೇಳಬೇಕಾದುದನ್ನು ಸರಳವಾಗಿ, ಸಹಜವಾಗಿ, ಮೆಲು ದನಿಯಲ್ಲಿ ಹೃದಯಕ್ಕೆ ತಟ್ಟುವಂತೆ ಹೇಳುತ್ತದೆ; 'ಭಾವಾಲೋಚನೆಗಳ ನೇರ ನಿರಾಡಂಬರ ಅಭಿವ್ಯಕ್ತಿಯನ್ನು' ಕವಿತೆಯುದ್ದಕ್ಕೂ ಕಾಣಿಸುತ್ತದೆ.

ಇದೇ ಬಗೆಯ ಕಥಾವಸ್ತುವನ್ನು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಬಹು ಹಿಂದೆಯೇ ಸಣ್ಣಕಥೆಯ ರೂಪದಲ್ಲಿ ರಚಿಸಿದ್ದಾರೆಂದು ನೆನಪು. ಈಚೆಗೆ 'ಒಲವಿನ ಕವಿ' ಕೆ.ಎಸ್.ನ. ತಮ್ಮ 'ಕೈಮರದ ನೆಳಲಲ್ಲಿ' ನೀಳ್ಗವನದಲ್ಲಿ ಒಂದು ಕಡೆ ಇನ್ನಷ್ಟು ಅಡಕವಾಗಿ, ಆದರೆ ನೇರವಾಗಿ ಇದನ್ನು ನಿರೂಪಿಸಿದ್ದಾರೆ. ಅಲ್ಲಿ ಸಾವು ಆಕಸ್ಮಿಕವೆಂಬಂತೆ ನಿರೂಪಿತ. ಆದರೆ ಈ ಎರಡು ರಚನೆಗಳ ನಡುವೆ ರೂಪುಗೊಂಡಿರುವ ನಿಸಾರರ ಭಾವಗೀತೆಯಲ್ಲಿ ಸಾವು ಮುದಿಯ ನೆಂಟನೊಬ್ಬನ ಷಡ್ಯಂತ್ರದಿಂದ ಘಟಿಸಿದ್ದು ಎಂಬ ನಿರೂಪಣೆಯಿಂದಾಗಿ ಕವಿತೆಗೆ ವಿಸ್ಮಯದ ಹೊಸ ಅಂಶವೊಂದು ಸೇರಿಕೊಂಡಿದೆ. ಒಂದೇ ಕಥಾವಸ್ತುವಿನ ಹಂದರ ಹೀಗೆ ಬೇರೆ ಬೇರೆ ಕಾಲಮಾನಗಳಲ್ಲಿ ಮೂವರು ಸಾಹಿತಿಗಳನ್ನು ಆಕರ್ಷಿಸಿರುವುದೂ ಭಿನ್ನ ಬಗೆಯ ಅಭಿವ್ಯಕ್ತಿಯನ್ನು ಪಡೆದಿರುವುದೂ ಒಂದು ವಿಶೇಷವೇ.

ಕವಿತೆಯಲ್ಲಿ ವರ್ಣಿಸಿರುವ ವಿವರಗಳು ಒಂದು ಚಿತ್ರ ಪರಂಪರೆಯನ್ನೇ ಕಣ್ಣಮುಂದೆ ಕಟ್ಟಿ ನಿಲ್ಲಿಸುವಷ್ಟು ಸಶಕ್ತವಾಗಿವೆ. ಅದರ ಕೇಂದ್ರಬಿಂದುವಾಗಿ ಮೂಲೆಯಲ್ಲಿ ತಲೆತಗ್ಗಿಸಿ ಕುಳಿತಿರುವ ಜೀವದ ಅಂತಃಕರಣವನ್ನು ಕಲಕುವ ಚಿತ್ರವಂತೂ ನಮ್ಮ ಚಿತ್ತಭಿತ್ತಿಯಲ್ಲಿ ಸ್ಥಾಯಿಯಾಗಿ ಉಳಿದುಬಿಡುತ್ತದೆ. ಹೀಗೆ ಈ ಭಾವಗೀತೆ ದೃಶ್ಯಕಾವ್ಯವೂ ಆಗಿದೆ.

ಮನುಷ್ಯರ ಒಳ ಹೊರಗನ್ನು ಮಾಗಿಸುವತ್ತ, ಅಂತಃಸಂಪನ್ನತೆಯನ್ನು ವರ್ಧಿಸುವತ್ತ; ದುಶ್ಶೀಲ-ಸಚ್ಚಾರಿತ್ರ್ಯಗಳ, ವಿಸ್ಮೃತಿ-ಜಾಗೃತಿಗಳ, ಧರ್ಮಾಧರ್ಮಗಳ ಸಾರಾಸಾರ ವಿವೇಕವನ್ನು ಸಾಂದ್ರವಾಗಿಸುವತ್ತ ಉತ್ತಮ ಸಾಹಿತ್ಯ ಕಾರ್ಯಪ್ರವೃತ್ತಗೊಳ್ಳುತ್ತದೆ. ಹೀಗಾಗಿ, ಅದು ಅಂತರಂಗ ಪೋಷಕ; ಚೇತನೋತ್ತಾರಕ.

(ಸಾಹಿತ್ಯದ ಉಪಕಾರ)

ಖಾಲಿ ಸೈಟುಗಳು

೧

ಹೊಸ ಮದುಮಗಳ ನಾಚಿಕೆಯ
ಬಡಾವಣೆಗಳಲ್ಲಿ
ಒಮ್ಮೆ ಬಡಾವಣೆಗಳೆನಿಸಿ, ಈಗ ಗರತಿಗಳಾಗಿ
ಪಳಗಿರುವ ಮೊಹಲ್ಲಗಳಲ್ಲಿ
ಮಾಟಾದ ಸೌಧಗಳ
ನೋಟದಾಮೋದಗಳ
ನೀಟು ದಂತಾವಳಿಯ ನಡುವೆ
ಕಣ್ಣನಿರಿಯುತ್ತವೆ ಧುತ್ತೆಂದು
—ಅಲ್ಲೊಂದು ಇಲ್ಲೊಂದು ಹಲ್ಲಿರದ ಸಂದು:
ಪಾರ್ಥೇನಿಯಮ್ಮಿನ ದಟ್ಟ ತೋಟಗಳು
ಬಾಡಿಗೆವಾಸಿಗಳ ಕಣ್ಣಿನ ಕಾಲಕೂಟಗಳು
ಸೆಟ್ಟರ, ಸೇಟುಗಳ,
ನರಾಕೃತಿವೆತ್ತ ನೋಟುಗಳ
ಸುಲಭ ಕಮಾಯಿಯ ಬತ್ತದೂಟೆಗಳು;
ದಿನೇ ದಿನೇ ದಿವಕ್ಕೇರಿರುವ ರೇಟುಗಳು;
—ಖಾಲಿ ಸೈಟುಗಳು!
ಇದ್ದಲ್ಲೆ ಇದ್ದರೂ
ಕದಲದೆ ಬಿದ್ದಿದ್ದರೂ
ಪತ್ರಗಳ ದ್ವಾರಾ ಕಛೇರಿಗಳನಲೆದು
ಹತ್ತು ಕೈಗಳ ಬದಲಿ,
ಕೊನೆಗೆ ಯಾರದೋ ತೊತ್ತು;
ಜಂಬದ ಮೂಗಿನ, ಸಿರಿವಂತಿಕೆಯ ನತ್ತಿನ
ತೋರಿಕೆಯ ಮುತ್ತು.

೨

ಟೇಪಿನಳತೆಯ ಈ ಕರಾರುವಾಕ್ಕು ಉದ್ದಗಲಗಳು,
ನೆಲದಸಂಖ್ಯಾತ ಒಂದೆತನದ ಹೋಳುಗಳಲ್ಲಿ
ನೆಟ್ಟ ಕಲ್ಲಿನ
ಕಪ್ಪು ನಂಬರಿನ
ಏಕಮೇವ ಗುರುತುಗಳು—

ಕೆಲವೊಮ್ಮೆ ಚೌರ ಮಾಡಿಸಿದಂತೆ
ಸಸ್ಯ ಸಂತತಿಯೆಲ್ಲ ತೋಪಾಗಿ
ತಿಟ್ಟು ತೆವರು ತೋಪಡ ಹೊಡೆಸಿಕೊಂಡು ಸಾಫಾಗಿ
ಅಲಂಕರಣದಂಕಣಗಳಾಗುತ್ತವೆ:
ಚಿಳ್ಳೆಪಿಳ್ಳೆಗಳ ಕ್ರಿಕೆಟ್ ಆಟ,
ದನ ಕರುಗಳ ಗೂಟ,
ನೆರೆಮನೆಯ ಒಗೆದರಿವೆಗಳ ತೂಗಾಟ,
ನಾಯಿಗಳ ಕೂಟಗಳಿಗೆ;
ಹಾಗೆಯೇ,
ಸಂಜೆ ಮಗ್ಗಲು ಮನೆಗಳೆಲ್ಲ ದೀಪ್ತಿಯ ಧರಿಸಿ
ಹೊರಗೆಸೆದ ನೆರಳುಗಳ ಪಟ್ಟೆಗಳಿಗೆ,
ತಮದ ಬೆಳ್ಪಟ್ಟೆಗಳಿಗೆ.
ನಿವಾಸ ನಾಮೆಯ ಕಣ್ತುಂಬುವ ಸೊಗಸುಗಳ
ನಿಗುರಿಸಿಕೊಂಡ ಸಹ ನಿವೇಶನಗಳೊಡನೆ, ಹಿಂದೊಮ್ಮೆ
ಮಸಿ ಹಿಡಿದ ಮೊಗದ ಈ ಅ-ಪಾಯಗಳು ಕೂಡ,
ಬಡ ಆರಂಬಗಾರನ ಹೊಟ್ಟೆಪಾಡ
ನೇಗಿಲಿನ ಹಂಬಲ,
ತಲತಲಾಂತರದ ಬೆಂಬಲ.
ಬಟಾಬಯಲ ಈ ಖುಷ್ಕಿ ತುಂಡುಗಳು,
ನಗರ ಒತ್ತರಿಸಿ
ಹಳ್ಳಿ ಆಸುಪಾಸೆಲ್ಲ ತತ್ತರಿಸಿ
ಸೈಜುವಾರಿ ಕತ್ತರಿಸಿ ಹಂಚಿಕೆಗೊಂಡು
—ಈಗ ಸಿಕ್ಕಿದವರ ಸೀರುಂಡೆಗಳು;
ಹಣದಾಹಿಯ ಬುಂಡೆಗಳು.

೩

ಕೆಲವು ಸೈಟು:
ಮದುವೆ ಲೇಟಾದ ಕನ್ಯೆಯರೆ ಥೇಟು.
ವಾರಿಗೆಯ ಪ್ರಿಯಂವದೆಯರೆಲ್ಲ ಸಂಸಾರವೊಂದಿಗರಾಗಿ
ಉಪ್ಪರಿಗೆ ಮೇಲುಪ್ಪರಿಗೆಯ ಕರುಳ ತೆನೆಗಳ ತೂಗಿ
ಬೀಗಿದ್ದರೂ, ಇವು ಮಾತ್ರ ಸೊರಗಿ—
ಪ್ರಾಧಿಕಾರದ ಮಲತಾಯ
ತಹಬಂದಿಯಲ್ಲಿ ಬಂದಿಗಳಾಗಿ,
ದಫ್ತರಿನ ಅಂಕಿ ಅಂಶದ ಇಂಕಿನ ಚಕ್ಕುಬಂದಿಗಳಾಗಿ,
ಅಲಾಟಾಗದುಳಿದ ನೆಲದಾಕಾರದ ನೋಟುಗಳು.
ಸದ್ಯಕ್ಕೆ ಈ ತೆರೆಮರೆಯ ವಹಿವಾಟುಗಳು
ಕುಲಗೆಟ್ಟ ಓಟುಗಳು;
ಮುಂದೊಮ್ಮೆ ಹಿಗ್ಗಬಹುದು

ವಧುದಕ್ಷಿಣೆಯ ಮೇರೆ:
ಆ ಮಾತು ಬೇರೆ!
ಸೈಟುಗಳ ಪಾಲಿಗೆ,
ಒಂದನ್ನೇ ತೂಗಿಸಿಕೊಂಡು
ಹೋಗಲಾಗದಸಹಾಯಕತೆಗೆ
ಅನೇಕರು,
ಏಕಪತ್ನೀವ್ರತಸ್ಥರು:
ಏಕದೇಹ ರತಸ್ಥರು,
ಒಂದೆ ಕೆರೆಯ ಬೆಸ್ತರು.
ಕೆಲವರೋ ದೇಹವಿಡಿ ಧನೇಂದ್ರಿಯರಾದ
ಭೂಲೋಕದಿಂದ್ರರು.
ಅವರಿಗೆ ಹತ್ತಾರು ತೆವಲಿನ್ನೈಲು,
ದುಡ್ಡಸ್ತಿಕೆಯ ದಾಸಯ್ಯತನದ ಡೌಲು.
ಎಂದೇ, ಅಂಥ ಸ್ತ್ರೀಮಂತರು ಬಹುಪತ್ನೀಕ;
ಆಗಬೇಕವರಿಗೆ ಹಲವಾರು ಅನಧಿಕೃತ ನಿಕಾ!

೪

ನಮ್ಮಂತರಾಳಗಳ ಲೇಔಟುಗಳಲ್ಲು ಇವೆ
ಖಾಲಿ ಸೈಟುಗಳು;
ಅಲ್ಲಿ ಅಕ್ರಮವಾಗಿ ತಳವೂರಿವೆ:
ಅಟ್ಟಲಾಗದ ಕಠೋರ ನೆನಹುಗಳು
ಗಿಜಿಗುಡುವ ಬಡ ಕುಟೀರಗಳು,
ಹಳೆ ಹತಾಶೆಗಳ ಗಟಾರದಂಚಿನ ನಾರುವ ವಠಾರಗಳು.
ವಿಷಾದದ ಆಗುಹೋಗುಗಳು;
ಮಾ ನಿಷಾದದ ವ್ಯರ್ಥ ಕೂಗುಗಳು.

★ ★ ★

(ಕವನ ಸಂಕಲನ: 'ಅನಾಮಿಕ ಆಂಗ್ಲರು')



'ಖಾಲಿ ಸೈಟುಗಳು':
ವಾಸ್ತವದ ಮೇಲೆದ್ದ ತಾತ್ತ್ವಿಕತೆ ಸೌಧ ಮನಕೆ ಮೂಡಿಸುವ ಸತ್ಯಗಳ ಬೋಧ

♦ *ಎಚ್. ಆನಂದರಾಮ ಶಾಸ್ತ್ರೀ*

ನಮ್ಮ ಕೆ. ಎಸ್. ನಿಸಾರ್ ಅಹಮದ್ ಅಪ್ಪಟ ಕವಿ.

ನಮ್ಮೊಡನಿರುವ ಭಾಗ್ಯ. ಕನ್ನಡ ಕಾವ್ಯಕ್ಷೇತ್ರದ ಅತ್ಯಂತ ಯೋಗ್ಯ.

ಬುದ್ಧಿ-ಮನ-ಹೃದಯಗಳಿಗೆ ಆಪ್ತವಾಗುವ ಸಾಹಿತ್ಯದ ಪರಿಯನ್ನು ನಾವು ಕನ್ನಡಿಗರೆಲ್ಲ ಪ್ರಾಮಾಣಿಕವಾಗಿ ಯೋಚಿಸಿದಾಗ ಥಟ್ಟನೆ ನಮಗೆಲ್ಲ ಆಪ್ತವಾಗಿ ಬಿಡುವ ಹೆಸರು ನಿಸಾರ್ ಅಹಮದ್. ಆಪ್ತ ಇವರ ಗದ್ಯ, ಇವರ ಪದ್ಯ-ಕಾವ್ಯ. ಜಗದಲ್ಲಿ ಒಂದಾಗಿ ಜಗವನ್ನು ಅನುಭವಿಸುತ್ತ, ಜನರಲ್ಲಿ ಒಂದಾಗಿ ಜನರನ್ನು ಗಮನಿಸುತ್ತ, ತನ್ನ ಸುತ್ತಣ ವಸ್ತು-ವಿಷಯ-ವಿಚಾರ-ವಿಶೇಷ-ವೈರುದ್ಧ್ಯಗಳ ಸುತ್ತ ಸುತ್ತುತ್ತ, ಯೋಚಿಸುತ್ತ, ಮಥಿಸುತ್ತ, ತನ್ನ ಕಾಣ್ಕೆಯನ್ನು ಮಾತ್ರೆ-ಗಣ-ಛಂದಗಳ ಬಂಧದಲ್ಲಿ ಸೊರಗಿಸದೆ, ಹಾಗೆಂದು ಬಂಧಮುಕ್ತತೆಯೆಂದು ಎಂದಿಗೂ ಬೀಡಾಡಿಯಾಗದೆ, ಚಂದವಾದ ಕಾವ್ಯವನ್ನು ಸೃಷ್ಟಿಸುತ್ತ—ಓದುಗನ ಒಳಗಣ್ಣಿಗೆ ಸ್ಪಷ್ಟಗೋಚರ ವಾಗುವಂತೆ ಕಾಣಿಸಿಕೊಡುವ ನೇಹಿಗ ಈ ಕವಿ, ಎಂದೇ ಅಪ್ಪಟ ಕವಿ.

ಜೀವನದೊಂದು ಉಲ್ಲಾಸದಂತೆ ಜೀವನದೊಂದು ವಿಷಾದವೂ ನಿಸಾರರ ಲೇಖನಿಯಲ್ಲಿ ಭಾವಪೂರ್ಣ ಕಾವ್ಯವಾಗಿ ಅನುಭಾವವಾಗಿ ಹೊರಹೊಮ್ಮಿ ಓದುಗನಲ್ಲಿ ಮನೋಲ್ಲಾಸವನ್ನು ಸೃಷ್ಟಿಸಬಲ್ಲುದು. ಕಿರಿದಾದೊಂದು ವಿಷಯ ಕುರಿತು ಕಿರಿಕಿರಿಯಿಲ್ಲದೆ ಹೇಳುತ್ತ, ಹಿರಿದಾದೊಂದು ಅನುಭವವನ್ನೂ

ಮತ್ತು ಮಹದರ್ಥವನ್ನು ಕೂಡಾ ಪ್ರಸ್ತುತಪಡಿಸಿ ನಮ್ಮನ್ನು ಬೆರಗಾಗಿಸುವ ಕಾವ್ಯ ನಿಸಾರದು. ಎಂದೇ, ಜನ ಮೆಚ್ಚಿ ಅಹುದಹುದೆನ್ನುವಂಥ ಕಾವ್ಯ. ಸರಳ-ಸುಂದರ, ಅರ್ಥಗರ್ಭಿತ, ಉಜ್ವಲ, ಮೇಲ್ನೋಟಕ್ಕೆ ನಿರಾಳ, ಆಂತರ್ಯದಲ್ಲಿ ಆಳ; ಓದಿನ ಪ್ರಾಮಾಣಿಕ ಭಾವಕ್ಕೆ ಅನುಭವಕ್ಕೆ ಚಿಂತನೆಗೆ ಚೇತನಕ್ಕೆ ದಕ್ಕುವಂಥ—ಎಂದೇ ಆಪ್ತ ಕಾವ್ಯ. ನಮ್ಮೊಡನಿರದ ಅಥವಾ ನಮ್ಮೊಡನಿದ್ದೂ ನಮ್ಮಂತಾಗದ ಕಾವ್ಯವಲ್ಲ ನಿಸಾರರ ಕಾವ್ಯ. ನಮ್ಮೊಡನಿದ್ದು ನಮ್ಮಂತಾಗಿ, ನಮ್ಮಂತಾಗಿಯೂ ತಾನೇ ತಾನಾಗಿ ವಿಜೃಂಭಿಸುತ್ತ ಬಂದಿರುವಂಥದು ನಿಸಾರರ ಕಾವ್ಯ. ಕಾವ್ಯದ ಗತ್ತು (ಲಯ, ಶಬ್ದ ಸೌಂದರ್ಯ, ಶಬ್ದಚಾತುರ್ಯ, ಪ್ರಾಸಗಳೂ ಸೇರಿದಂತೆ), ಗಮ್ಮತ್ತು (ಬಣ್ಣನೆಯ ಶೈಲಿ, ತಿಳಿಹಾಸ್ಯ, ವಿಡಂಬನೆಗಳೂ ಸೇರಿದಂತೆ), ಗೈರತ್ತು (ಸರಳ ಹೊರನೋಟದೊಳಗೊಂದು ತೀಕ್ಷ್ಣ ಒಳನೋಟದ ಅಡಕವೂ ಸೇರಿದಂತೆ)—ಇವುಗಳನ್ನು ಸ್ಪಷ್ಟಪಡಿಸುತ್ತದೆ ಕವಿ ನಿಸಾರರ ಕಾವ್ಯ. ಇಂದು ಚಳವಳಿ, ಪಾಳೇಗಾರಿಕೆಗಳು ಕನ್ನಡ ಕಾವ್ಯಲೋಕದ ಕಂಟಕಗಳಾಗಿ ಪರಿಣಮಿಸಿರುವಾಗ, ಹೊಸ ಹಾದಿಯ ಅನ್ವೇಷಣೆಯ ಭ್ರಮೆಯಲ್ಲಿ ಹಾದಿ ತಪ್ಪಿರುವಾಗ, ಕೋಮಲ ಸುಂದರಿ ಕಾವ್ಯಕನ್ನಿಕೆಯನ್ನು ಕುರೂಪ-ವಿರೂಪಗೊಳಿಸುತ್ತಿರುವಾಗ, ಸ್ವಚ್ಛ-ಶುಭ್ರ ಸಲಿಲ ಪ್ರವಾಹದಂತೆ ಹರಿದು ಬಂದಿರುವ ಅಮೃತಧಾರೆ ನಿಸಾರರ ಕಾವ್ಯ.

೧೯೮೨ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟಗೊಂಡ ಕೆ. ಎಸ್. ನಿಸಾರ್ ಅಹಮದ್ ಅವರ ಎಂಟನೆಯ ಕವನ ಸಂಗ್ರಹ 'ಅನಾಮಿಕ ಆಂಗ್ಲರು' ಕೃತಿಯಲ್ಲಿನ ಕವನ 'ಖಾಲಿ ಸೈಟುಗಳು`. ಕವನದ ತಲೆಬರಹವೇ ಹೇಳುವಂತೆ ಖಾಲಿ ಸೈಟು ಈ ಕವನದ ವಸ್ತು. ನಗರದ ಮಧ್ಯಮ ವರ್ಗದ ಆಕಾಂಕ್ಷೆ, ಬವಣೆ, ಶ್ರೀಮಂತರ ಧನ ದಾಹ, ರೈತಾಪಿ ಮಂದಿಯ ಪಾಡು—ಈ ವಿಷಯಗಳ ನೆಲೆಯಲ್ಲಿ ಖಾಲಿ ಸೈಟುಗಳ ಚಿತ್ರಣ ಕವನದುದ್ದಕ್ಕೂ ಸಾಗುತ್ತದೆ. ನಗರದ ಬಡಾವಣೆ-ಮೊಹಲ್ಲಗಳ ಜನಜೀವನವನ್ನು, ಇರಸ್ತಿಕೆಯನ್ನು, ಪರಿಸರವನ್ನು, ನಾನಾ ಆಗುಹೋಗುಗಳನ್ನು ಅನಾವರಣಗೊಳಿಸುತ್ತ ಇವುಗಳ ಮಧ್ಯೆ ಸಿಕ್ಕಿಕೊಂಡಿರುವ ಖಾಲಿ ಸೈಟುಗಳ ಗುಣ ವಿಶೇಷಣಗಳನ್ನು ತಿಳಿಸುತ್ತ ಕವನವು ಅರ್ಥವನ್ನು ಕಟ್ಟತೊಡಗುತ್ತದೆ. ಕವನದ ಮೂರು ಭಾಗಗಳಲ್ಲಿ ಅರ್ಥದ ಆತ್ಮಸಾಕ್ಷಾತ್ಕಾರವಾದರೆ, ನಾಲ್ಕನೆಯ (ಕೊನೆಯ) ಭಾಗದಲ್ಲಿ ಅಂತರಾತ್ಮದರ್ಶನವಾಗುತ್ತದೆ. ಮೊದಲನೆಯ ಮೂರು ಭಾಗಗಳಲ್ಲಿ ಒಂದು ಮಜಲಿಗೇರಿದ ಕವನವು ನಾಲ್ಕನೆಯ (ಕೊನೆಯ) ಭಾಗದಲ್ಲಿ ಇನ್ನೊಂದು ಮಜಲಿಗೆ ಹಾರಿ, ನೆಲದಿಂದ ಮುಗಿಲಿಗೇರಿ ವಿಶ್ವರೂಪಿಯಾಗಿ ಧನ್ಯತೆ ಪಡೆಯುತ್ತದೆ; ಶ್ರೇಷ್ಠವೆನಿಸಿಕೊಳ್ಳುತ್ತದೆ. ಖಾಲಿ ಸೈಟು ಇತ್ಯಾದಿ ವಸ್ತು-ವಿಷಯಗಳ ಚಿತ್ರಣದ ಜೊತೆಜೊತೆಗೆ ಮಾನವ ಸ್ವಭಾವದ, ಅವನ ಕಾರುಬಾರುಗಳ ನವಿರು ನಿರೂಪಣೆಯನ್ನು ಮೊದಲ ೭೯ ಸಾಲುಗಳಲ್ಲಿ ಕಟ್ಟಿಕೊಡುವ ಕವನವು, ಕೊನೆಯ ಕೇವಲ ಎಂಟೇ ಎಂಟು ಸಾಲುಗಳಲ್ಲಿ ಗಂಭೀರ ಲೋಕ ಸತ್ಯವೊಂದನ್ನು (ಮೊದಲ ೭೯ ಸಾಲುಗಳನ್ನೂ ಪ್ರತಿಮೆಯನ್ನಾಗಿಸಿ) ಬಿಚ್ಚಿಟ್ಟು ನಮ್ಮನ್ನು ಬೆಚ್ಚಿಬೀಳಿಸುತ್ತದೆ! ನಮ್ಮನಮ್ಮ ಅನುಭವ-ಬುದ್ಧಿ-ಯೋಚನಾ ಸಾಮರ್ಥ್ಯಗಳಿಗನುಗುಣವಾಗಿ ನಾವು ಈ ಎಂಟು ಸಾಲುಗಳಲ್ಲಿ ಎಷ್ಟೆಲ್ಲ ಜೀವನ ಸತ್ಯಗಳನ್ನು ಕಾಣಬಹುದು! ಕಣ್ಣಿಗೆ ಕಾಣುವ ಖಾಲಿ ಸೈಟು, ಕಣ್ಣಿಗೆ ಕಾಣದ ನಮ್ಮ ಅಂತರಾಳದ ಲೇಔಟಿನ ಖಾಲಿ ಸೈಟು ಇವೆರಡೂ ಪರಸ್ಪರ

ಉಪಮಾನ-ಉಪಮೇಯವೂ ಆಗಬಲ್ಲವು, ಉಪಮೇಯ-ಉಪಮಾನವೂ ಆಗಬಲ್ಲವು ಇದು ಈ ಕವನದ ಇನ್ನೊಂದು ವಿಶೇಷ.

ಹೀಗೆ, ಮೂರು ವಿಷಯ ವಿಶೇಷಗಳನ್ನು, ಅಂದರೆ, (i) ಖಾಲಿ ಸೈಟು-ಸುತ್ತ ಮುತ್ತಲಿನ ನಗರ ಜೀವನ, ಆಕಾಂಕ್ಷೆ-ಬವಣೆ ಇತ್ಯಾದಿ ಚಿತ್ರಣ, (ii) ಅಂತ್ಯದಲ್ಲಿ ಜೀವನ ಸತ್ಯವೊಂದರ ದರ್ಶನ ಮತ್ತು (iii) ಉಪಮಾನ-ಉಪಮೇಯ ಚಾತುರ್ಯ—ಇವುಗಳನ್ನು ಲಯಬದ್ಧವಾಗಿ ಪ್ರಸ್ತುತಪಡಿಸುವ ಮೂಲಕ ಪರಿಪೂರ್ಣತೆ ಸಾಧಿಸುತ್ತದೆ ಕವನ.

ಕವನದ ಆರಂಭವೇ ಅಪ್ರತಿಮ ಪ್ರತಿಮೆಯಿಂದ ಓದುಗನಲ್ಲಿ ಕಾವ್ಯೋಲ್ಲಾಸವನ್ನು ಅನಾಯಾಸವಾಗಿ ಹುಟ್ಟುಹಾಕಿಬಿಡುತ್ತದೆ:

‘ಹೊಸ ಮದುಮಗಳ ನಾಚಿಕೆಯ
ಬಡಾವಣೆಗಳಲ್ಲಿ
ಒಮ್ಮೆ ಬಡಾವಣೆಗಳೆನಿಸಿ, ಈಗ ಗರತಿಗಳಾಗಿ
ಪಳಗಿರುವ ಮೊಹಲ್ಲಗಳಲ್ಲಿ
...
ನೀಟು ದಂತಾವಳಿಯ ನಡುವೆ
ಕಣ್ಣನಿರಿಯುತ್ತವೆ ಧುತ್ತೆಂದು
—ಅಲ್ಲೊಂದು ಇಲ್ಲೊಂದು ಹಲ್ಲಿರದ ಸಂದು:
...’

ಅನುಭವೀ ಗರತಿಯ ಲಕ್ಷಣಗಳ ಅನುಭವವಿಲ್ಲದೆ ನಾಚಿ ನಿಂತ ಬಡಾವಣೆಯೆಂಬ ಮದುಮಗಳು ಕಾಲಾಂತರದಲ್ಲಿ ಈ ಎಲ್ಲ ಅನುಭವವನ್ನು ಹೊಂದಿದ ಗರತಿ ಮೊಹಲ್ಲ ಆಗುತ್ತಾಳಷ್ಟೆ! ಹೀಗೆ ಪಳಗಿದ ಮೊಹಲ್ಲವೊಂದು ನೀಟು ದಂತಾವಳಿ; ಅದರ ನಡುವೆ-ಅಲ್ಲೊಂದು ಇಲ್ಲೊಂದು-ಧುತ್ತೆಂದು ಕಣ್ಣನ್ನು ಇರಿಯುವ ಹಲ್ಲಿರದ ಸಂದು : ಖಾಲಿ ಸೈಟು! (ತುಂಬಿದ ಮೊಹಲ್ಲದಲ್ಲೊಂದು ಖಾಲಿ ಸೈಟು ಕಂಡರೆ ಅದು ಹಲ್ಲಿರದ ಸಂದಿನಂತೆ ಅನ್ನಿಸಿ ಕಣ್ಣನ್ನು ಇರಿಯದೆ ಮತ್ತೇನು!)

ಹೀಗೊಂದು ಅಪ್ರತಿಮ ಹೋಲಿಕೆಯಿಂದ ಆರಂಭವಾಗುವ ಕವನವು ಮುಂದೆ ಉದ್ದಕ್ಕೂ ನಾನಾ ಪ್ರತಿಮೆ-ಉಪಮೆಗಳ ಅಲಂಕಾರದಿಂದಲೇ ಖಾಲಿ ಸೈಟುಗಳ, ಪರಿಸರದ ಜನ ಜೀವನದ, ಮಾನವ ಸ್ವಭಾವದ ಚಿತ್ರವನ್ನು ರಚಿಸುತ್ತ, ನಮ್ಮ ಕಣ್ಮನಗಳಿಗೆ ಪ್ರತಿನಿತ್ಯ ನಾವು ಕಾಣುವ ಹಾಗೂ ಯೋಚಿಸುವ ವಾಸ್ತವವೊಂದನ್ನು ಕಟ್ಟಿಕೊಡುತ್ತದೆ.

‘ಇದ್ದಲ್ಲೆ ಇದ್ದರೂ’ ‘ಪತ್ರಗಳ ದ್ವಾರಾ ಕಛೇರಿಗಳನಲೆ’ಯುವವು ಈ ಸೈಟುಗಳು; ‘ಕೊನೆಗೆ ಯಾರದೋ ತೊತ್ತು’ ಆಗಿ ಅವರ ‘ಜಂಬದ ಮೂಗಿನ, ಸಿರಿವಂತಿಕೆಯ ನತ್ತಿನ ತೋರಿಕೆಯ ಮುತ್ತು’ಗಳಾಗುವವು! ಹೀಗೆ, ಹೋಲಿಕೆಗಳಲ್ಲಿ ಗಟ್ಟಿತನವಿದೆ; ಮಾನವನ ಗುಣ ಸ್ವಭಾವಗಳನ್ನು ಗ್ರಹಿಸಿ ಸಂದರ್ಭಕ್ಕೆ ಅಳವಡಿಸಿ ಸಾದರಪಡಿಸುವ ಜಾಣ್ಮೆಯಿದೆ. ಸೈಟೆಂಬುದು ಅದರ ಮಾಲೀಕನ ಸೇವಕ ಅದಾಗ್ಯೂ ಅದು ಅವನ ಮಾಲೀಕತ್ವದ ಜಂಬದ

ಮೂಗಿನ, ಸಿರಿವಂತಿಕೆ ಪ್ರದರ್ಶನದ ಮೂಗುತಿಯ ಮುತ್ತು!

ಸೈಟುಗಳನ್ನು 'ನೆಲದಸಂಖ್ಯಾತ ಒಂದೆತನದ ಹೋಳುಗಳೆಂ'ದು ಕರೆದು ಕವಿಯು ಒಡನೆಯೆ ತಾತ್ತ್ವಿಕ ಮಗ್ಗುಲಿಗೆ ಹೊರಳುತ್ತಾರೆ. ಒಂದೆ ಭೂಮಿಯ, ಒಂದಾಗಿರುವ ನೆಲದಲ್ಲಿ ಮಾನವ ನಿರ್ಮಿತ, ಊಹ್ಣೂಂ, ಕಲ್ಪಿತ (ಸೈಟುಗಳೆಂಬ) ಅಸಂಖ್ಯಾತ ಹೋಳುಗಳು, ಅವಕ್ಕೆ ಅಸಂಖ್ಯಾತ ಒಡೆತನಗಳು! ಒಂದೆತನವಿದ್ದೂ ಹೋಳು ಹೋಳು! ವಿಚಿತ್ರವೋ, ವಿಷಾದವೋ, ಜಗನ್ನಿಯಮವೋ, ಕೇವಲ ಕಾಲದ ಮಹಿಮೆಯೋ, ತನ್ನ ಭಾವಕ್ಕೆ ತಕ್ಕಂತೆ ಈ ವಾಸ್ತವವನ್ನು ಓದುಗ ಅರ್ಥೈಸಿಕೊಳ್ಳಲು ಅವಕಾಶ ಮಾಡಿ ಕೊಡುತ್ತಾರೆ, ಇಲ್ಲಿ ಕವಿ. ಇದು ನಿಜಕ್ಕೂ ಕವಿಯ ಸಾಮರ್ಥ್ಯ ವಿಶೇಷ. ಸಂಜೆ, ಮಗ್ಗುಲು ಮನೆಗಳಲ್ಲಿ ದೀಪ ಹತ್ತಿದಾಗ ಖಾಲಿ ಸೈಟಿನ ಮೇಲೆ ಬೀಳುವ ನೆರಳಿನ ಪಟ್ಟೆಗಳು ಕವಿಗೆ 'ತಮದ ಬೆಳ್ಳಟ್ಟೆ'ಗಳಾಗಿ ಗೋಚರಿಸುತ್ತವೆ! ಅಜ್ಞಾನಾಂಧಕಾರದ, ಪಾಪದ ಗೂಡುಗಳಾಗಿ, ತಲೆಯಿಲ್ಲದ ದೇಹಗಳಾಗಿ, ರಸ ತೆಗೆದ ಕಬ್ಬಿನ ಸಿಪ್ಪೆಗಳಾಗಿ, ಗಾಯದ ಮಲಿನ ಒಣ ಪದರ(ಹಕ್ಕಳೆ)ಗಳಾಗಿ! ಮತ್ತೊಮ್ಮೆ ಇಲ್ಲಿ ತತ್ತ್ವದರ್ಶನ; ಸಾಮರ್ಥ್ಯವಿಶೇಷದ ಸಹಜ ಪ್ರದರ್ಶನವನ್ನು ಮನಗಾಣುತ್ತೇವೆ.

ಮುಂದುವರಿದು, ಕವಿಗೆ ಈ ಸೈಟೆಂಬ ಸದ್ಯದ ಯಾರದೋ ತೊತ್ತಿನ ಹಿನ್ನೆಲೆ, ಚರಿತ್ರೆ ಮನ ಕಲಕುತ್ತದೆ. ಈಗಿವರ ತೊತ್ತಾಗಿರುವ ಇದು, ಈ ಮುನ್ನ ಇನ್ನಾರದೋ ತುತ್ತಿನ ಚೀಲ ಆಗಿದ್ದಿತ್ತಲ್ಲವೆ?

> **'ಬಡ ಆರಂಬಗಾರನ ಹೊಟ್ಟೆಪಾಡ**
> **ನೇಗಿಲಿನ ಹಂಬಲ,**
> **ತಲತಲಾಂತರದ ಬೆಂಬಲ.'**

ಆಗಿದ್ದಿತ್ತಲ್ಲವೆ? ಬಡ ಬೇಸಾಯಗಾರನ ಒಣ ಬೇಸಾಯದ ತುತ್ತಿನ ಚೀಲವಾಗಿದ್ದ ಇದೀಗ,

> **'... ಈ ಖುಷ್ಕಿ ತುಂಡು...,**
> **.... ಕತ್ತರಿಸಿ ಹಂಚಿಕೆಗೊಂಡು**
> **... ಸಿಕ್ಕಿದವರ ಸೀರುಂಡೆಗಳು...;**
> **ಹಣ ದಾಹಿಯ ಬುಂಡೆಗಳು.'**

ಹೀಗೆ, ಸಿಕ್ಕಿದವರಿಗೆ ಸೂರೆಯಾಗಿ, ನವುರಾದ ಸಿಹಿ ಭಕ್ಷ್ಯವಾಗಿ, ಧನ ದಾಹಿಯ ಮದ್ಯದ ಪಾತ್ರೆಯಾಗಿ, ಹೀಗೊಂದು 'ಪೊಳ್ಳು ವಸ್ತು'ವಾಗಿ ಪರಿವರ್ತಿತವಾಗುವ—'ನಗರ ಒತ್ತರಿಸಿ'ದಾಗ—'ಹಳ್ಳಿ ಆಸುಪಾಸೆಲ್ಲ ತತ್ತರಿಸಿ'ದುದು ಕವಿಯ ಮನ ಕಲಕಲು ಕಾರಣ; ರೈತನ 'ನೇಗಿಲಿನ ಹಂಬಲ' (ಸೈಟಿನೊಡನೆ) ಕತ್ತರಿಸಿಹೋದದ್ದು ಕಾರಣ. ಹೀಗೆ, ಖಾಲಿ ಸೈಟಿನ ಹಿನ್ನೆಲೆಯಲ್ಲಿ ಕಟು ವಾಸ್ತವವೊಂದರ ಅನಾವರಣವಾಗಿ ಅದು ಓದುಗನ ಎದೆಯಾಳಕ್ಕೆ ಇಳಿಯುತ್ತದೆ. ನಗರೀಕರಣದಿಂದಾಗುವ ಈ ಚೋದ್ಯವನ್ನು, 'ಅನ್ಯಾಯ'ವನ್ನು ಇಷ್ಟು ಸರಳವಾಗಿ, ಸಮರ್ಥವಾಗಿ ಹೇಳಲು ನಿಸಾರರಂಥ ಕವಿಗೆ ಮಾತ್ರ ಸಾಧ್ಯ. ಖಾಲಿ ಸೈಟಿನ ಅಕ್ಕಪಕ್ಕದ 'ನಿವಾಸ ನಾಮೆ'ಯ ಸೊಗಸು. 'ಹಿಂದೊಮ್ಮೆ ಮಸಿ ಹಿಡಿದ ಮೊಗದ ಈ ಅ-ಪಾಯ' ಇಂದೀಗ ಒಬ್ಬರಿಗೆ ಅಪಾಯ, ಇನ್ನೊಬ್ಬರಿಗೆ ಸುಂದರ (ಮೊಗದ) ಪಾಯ.

ಹೀಗೆ, ಸೈಟಿನ ಆತ್ಮವೂ ಈ ಹಂತದಲ್ಲಿ ಬಿಚ್ಚಿಕೊಳ್ಳುತ್ತದೆ.

ಬಡಾವಣೆಯೆಂಬುದು ಮೊಹಲ್ಲದ ರೂಪು ತಳೆಯುವ ಹಂತಕ್ಕೆ ಬಂದಿದ್ದರೂ ಕೆಲವೊಂದು ಖಾಲಿ ಸೈಟುಗಳು ಇನ್ನೂ ಹಾಗೆಯೇ ಉಳಿದಿದ್ದು, ಪ್ರಾಧಿಕಾರ ಉಳಿಸಿಕೊಂಡ ಈ ಸ್ಟ್ರೇ (stray) ಸೈಟುಗಳು ಒಳ ವಹಿವಾಟುಗಳಿಗೆ ಪಕ್ಕಾಗಿ, (ಮುಂದೆ) ಭಾರೀ ದಕ್ಷಿಣೆ ತರುವ ನೋಟುಗಳು ಆಗಬಲ್ಲವು. ಈ ಒಂದು ಸಾಮಾನ್ಯ ಸತ್ಯವೂ ಅದರೊಳಗಿನ 'ಅಸಾಮಾನ್ಯ' ಆಗುಹೋಗುಗಳೊಡನೆ ಕವಿಯ ಲೇಖನಿಯಲ್ಲಿ (ಪುನಃ ಉಪಮೆಗಳ ಸೌಂದರ್ಯದೊಂದಿಗೆ) ಎಷ್ಟು ಸೊಗಸಾಗಿ ಮೂಡಿಬಂದಿದೆ ನೋಡಿ:

'ಕೆಲವು ಸೈಟು:
ಮದುವೆ ಲೇಟಾದ ಕನ್ಯೆಯರೆ ಥೇಟು.
ವಾರಿಗೆಯ ಪ್ರಿಯಂವದೆಯರೆಲ್ಲ ಸಂಸಾರವೊಂದಿಗರಾಗಿ
ಉಪ್ಪರಿಗೆ ಮೇಲುಪ್ಪರಿಗೆಯ ಕರುಳ ತೆನೆಗಳ ತೂಗಿ
ಬೀಗಿದ್ದರೂ, ಇವು ಮಾತ್ರ ಸೊರಗಿ—
ಪ್ರಾಧಿಕಾರದ ಮಲತಾಯ
ತಹಬಂದಿಯಲ್ಲಿ ಬಂದಿಗಳಾಗಿ,
ದಫ್ತರಿನ ಅಂಕಿ ಅಂಶದ ಇಂಕಿನ ಚಕ್ಕುಬಂದಿಗಳಾಗಿ,
ಅಲಾಟಾಗದುಳಿದ ನೆಲದಾಕಾರದ ನೋಟುಗಳು.
ಸದ್ಯಕ್ಕೆ ಈ ತೆರೆಮರೆಯ ವಹಿವಾಟುಗಳು
ಕುಲಗೆಟ್ಟ ಓಟುಗಳು;
ಮುಂದೊಮ್ಮೆ ಹಿಗ್ಗಬಹುದು
ವಧುದಕ್ಷಿಣೆಯ ಮೇರೆ:
ಆ ಮಾತು ಬೇರೆ!'

ಒಂದು ಸೈಟು ಹೊಂದಿ ಸುಸ್ತಾದವ ಕವಿಯ ಕಣ್ಣಿಗೆ 'ಏಕಪತ್ನೀವ್ರತಸ್ಥ', 'ಏಕ ದೇಹ ರತಸ್ಥ', 'ಒಂದೆ ಕೆರೆಯ ಬೆಸ್ತ'. ಹಲವು ಸೈಟುಗಳನ್ನು ಹೊಂದಿದ ಶ್ರೀಮಂತ, ದೇಹವಿಡೀ ಕಣ್ಣಾದ ಇಂದ್ರ. (ಅಹಲ್ಯೆ-ಗೌತಮ-ಇಂದ್ರರ ಕಥೆ.) ಕವಿಯ ಪ್ರಕಾರ ಆತ 'ದೇಹವಿಡೀ ಧನೇಂದ್ರಿಯನಾದ ಭೂಲೋಕದಿಂದ್ರ!' ಇಂಥ 'ದೊಡ್ಡಸ್ತಿಕೆ'ಯ ಶ್ರೀಮಂತ, ಕವಿಯ ಕಣ್ಣಲ್ಲಿ 'ದುಡ್ಡಸ್ತಿಕೆ'ಯ 'ಸ್ತ್ರೀಮಂತ'! ಎಂದೇ ಈ 'ಬಹುಪತ್ನೀಕ'ನಿಗೆ ಆಗಬೇಕು 'ಹಲವಾರು ಅನಧಿಕೃತ ನಿಕಾ!' ('ಅನಧಿಕೃತ' ಎಂಬ ಪದ ಇಲ್ಲಿ ಗಮನಾರ್ಹ. ವಿವರಣೆ ಅನವಶ್ಯ.) ಇಂಥ ಸೈಟುದಾಹಿ ಧನಿಕರಿಗೆ ಕವಿ ಹೇಳುವಂತೆ 'ದುಡ್ಡಸ್ತಿಕೆಯ ದಾಸಯ್ಯತನದ ಡೌಲು'. ದುಡ್ಡಸ್ತಿಕೆಯ 'ದೊಡ್ಡಸ್ತಿಕೆ'ಯಲ್ಲಿ ಅಡಗಿರುವ ದಾಸಯ್ಯತನವನ್ನೂ ದುಡ್ಡಿಗೆ ಅಡಿಯಾಳಾದ ಈ 'ದೊಡ್ಡಮನುಷ್ಯ'ರು ಅದನ್ನೇ ಡೌಲೆಂದು ಭ್ರಮಿಸುವುದನ್ನೂ ಕೇವಲ ಮೂರೇ ಮೂರು ಸರಳ ಶಬ್ದಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಣ್ಣಿಸಿಬಿಟ್ಟಿದ್ದಾರೆ ಕವಿ.

'ಸ್ತ್ರೀಮಂತ', 'ದುಡ್ಡಸ್ತಿಕೆ' ಇಂಥ ಶಬ್ದಗಳನ್ನು ಔಚಿತ್ಯಪೂರ್ಣವಾಗಿ, ಅರ್ಥವತ್ತಾಗಿ ಸೃಷ್ಟಿಸಿ, ಬಳಸಿ ಕವನದ ಮೆರುಗನ್ನು ಹೆಚ್ಚಿಸುತ್ತಾರೆ, ನಿಸಾರರು ಓದುಗನನ್ನು

ಬೆರಗುಗೊಳಿಸುತ್ತಾರೆ! (ಇತರ ಕವನಗಳಲ್ಲಿ ನಿಸಾರರು 'ಸ್ತನಿತೆಯರು', 'ನಾಯಕಾಸುರ', 'ಹನುಮಿಸು', 'ನಿರ್ವಿವಿಧ', 'ಕಕ್ಕಸಿಸು', ಮುಂತಾದ ಅನೇಕ ಸೃಷ್ಟಿಗಳನ್ನು ಹದವರಿತು ಮಾಡಿದ್ದಾರೆ. (ಹಿಂದಿ, ಉರ್ದು ಪದಗಳ ಹದವರಿತ ಬಳಕೆಯಲ್ಲೂ ನಿಸಾರರದು ಎತ್ತಿದ ಕೈ. ಈ ಕವನದಲ್ಲಿ 'ಕಮಾಯಿ', 'ದಫ್ತರು', 'ನಿಕಾ' ಎಂಬ ಪದಗಳನ್ನು ಬಳಸಿದಂತೆ ನಿಸಾರರು ತಮ್ಮ ಇತರ ಕವನಗಳಲ್ಲಿ 'ಮುಲಾಖಾತ್, ಖೋಲಿ, ರುಸುಮು, ಮಿಸಾಲು, ರಖಂ, ಹರಾಮಕೋರ, ಮಾಸೂಮು, ತಸಬೀರು, ಹತ್ಯಾರು, ರಿವಾಜು, ದಾವತ್ತು, ಖಿಲ್ಲತ್ತು, ತರಬಿಯತ್ತು, ಗರ್ಮಿ, ಆಬಾದು, ಬರ್ಬಾದು, ಖಬರಸ್ತಾನ, ಜೋಹುಕುಂ, ಬಯಾನು, ನೌಜವಾನ, ಫರಕು, ಕಾರವಾನು, ಜಲಸ', ಮೊದಲಾದ ಶಬ್ದಗಳನ್ನು ಕನ್ನಡವೇ ಎಂಬಂತೆ ಬಳಸಿದ್ದಾರೆ. 'ವ್ರತಸ್ಥ' ಪದದೊಡನೆ ಪರಿಣಾಮಕಾರಿ ಪ್ರಾಸಕ್ಕಾಗಿ 'ರತಸ್ಥ' ಶಬ್ದದ ಸೃಷ್ಟಿ, ಬಳಕೆ, 'ತೆವಲಿನ್ಯೆಲು' ಎಂದು ಒಂದು ರೀತಿಯಲ್ಲಿ ದ್ವಿರುಕ್ತಿಯನ್ನು ಅರ್ಥಬಾಹುಲ್ಯಕ್ಕಾಗಿ ಬೇಕೆಂದೇ ಬಳಸಿದುದು—ಇಂಥ ಕೆಲ ಕವಿ ಜಾಣ್ಮೆಗಳನ್ನೂ ಈ ಕವನದಲ್ಲಿ ಕಾಣಬಹುದು. ಅಂದ ಹಾಗೆ, ನಿಸಾರರಿಗೆ ಅಂತ್ಯಪ್ರಾಸ ಹೆಚ್ಚು ಪ್ರಿಯವೇನೋ! ಕಾವ್ಯವು ಶ್ರಾವ್ಯವೂ ಆಗುವ ಸಲ್ಲಕ್ಷಣಗಳಲ್ಲಿ ಇದೂ ಒಂದು.

ಕವನದ ಅಂತ್ಯದಲ್ಲಿ (ಕೊನೆಯ ಭಾಗದಲ್ಲಿ)—ನಾನು ಮೊದಲೇ ಹೇಳಿದಂತೆ—ಕವನದ ಅಂತರಾರ್ಥದ ಅನಾವರಣವಾಗಿ ಕವನವು ಹೊಸ, ಉನ್ನತ ಮಜಲನ್ನು ಮುಟ್ಟುತ್ತದೆ. ಇಲ್ಲಿ ಜೀವನ ವಾಸ್ತವವೊಂದು ಬಯಲಾಗುತ್ತದೆ, ಮಾನವ ಸ್ವಭಾವವು ಬಿಚ್ಚಿಡಲ್ಪಡುತ್ತದೆ; ಇಡೀ ಕವನಕ್ಕೆ ತತ್ತ್ವದರ್ಶನದ ಮೌಲ್ಯ ಲಭ್ಯವಾಗುತ್ತದೆ, ಸಾರ್ವತ್ರಿಕ ಮೌಲ್ಯ ಬರುತ್ತದೆ; ಓದುಗನ ಆಂತರ್ಯಕ್ಕೆ, ಅಂತಃಸಾಕ್ಷಿಗೆ, ಜೊತೆಗೇ ಬುದ್ಧಿಗೆ ಸಹ ಆಲೋಚನೆ, ಕಾಣ್ಕೆಗಳ ಅನೇಕ ಆಯಾಮಗಳು ಕಾಣಿಸಿಕೊಳ್ಳತೊಡಗುತ್ತವೆ, ಎಟುಕ ತೊಡಗುತ್ತವೆ. ಇಡೀ ಕವನವನ್ನೂ ಆತ, 'ಇದು ಕೇವಲ ಖಾಲಿ ಸೈಟು ಇತ್ಯಾದಿ ವಸ್ತು ಪರಿಸರಗಳ ವರ್ಣನೆಯಲ್ಲ ಮಾನವ ಸ್ವಭಾವದ, ಅವನ ದುರವಸ್ಥೆಯ ಸಾಂಕೇತಿಕ ಬಣ್ಣನೆ' ಎಂದು ಭಾವಿಸಿ ಮತ್ತೆ ಓದತೊಡಗುವಂತೆ ಒಳ ಅರ್ಥಗಳನ್ನು ಹುಡುಕತೊಡಗುವಂತೆ ಪ್ರಚೋದಿಸುತ್ತದೆ. ಇದಿಷ್ಟನ್ನೂ ಕವಿಯು,

> **'ನಮ್ಮಂತರಾಳಗಳ ಲೇಔಟುಗಳಲ್ಲು ಇವೆ**
> **ಖಾಲಿ ಸೈಟುಗಳು'**

ಎಂದು ಹೇಳಿ ಮುಂದುವರಿದು, 'ಅಟ್ಟಲಾಗದ ಕಠೋರ ನೆನಹುಗಳು ಗಿಜಿಗುಡುವ ಬಡ ಕುಟೀರಗಳು' ಮತ್ತು 'ಹಳೆ ಹತಾಶೆಗಳ ಗಟಾರದಂಚಿನ ನಾರುವ ವಠಾರಗಳು' ಎಂಬ ಹೋಲಿಕೆಗಳಲ್ಲಿ ಮನುಷ್ಯನ ಮನದೊಳಗಿನ ಕಹಿ ನೆನಪುಗಳನ್ನೂ ಹಳೆಯ ಹತಾಶೆಗಳನ್ನೂ ತಿಳುಹಿ, ತನ್ಮೂಲಕ ಮಾನವನ ದೌರ್ಭಾಗ್ಯವನ್ನೂ ದುರವಸ್ಥೆಯನ್ನೂ ದೌರ್ಬಲ್ಯವನ್ನೂ ಸ್ವಭಾವವನ್ನೂ ಪ್ರಚುರಪಡಿಸಿ, ಓದುಗನನ್ನು ಹೊಸ ಚಿಂತನೆಗೆ, ಆತ್ಮಾವಲೋಕನಕ್ಕೆ ಹಚ್ಚಿ, ಕೊನೆಗೆ, 'ಮಾ ನಿಷಾದದ ವ್ಯರ್ಥ ಕೂಗುಗಳು' ಎಂದು ಖೇದದ 'ಕೂಗಿ'ನೊಂದಿಗೆ ಬಹು ಅರ್ಥಗರ್ಭಿತವಾಗಿ ಕವನವನ್ನು ಸಂಪನ್ನಗೊಳಿಸುತ್ತಾರೆ. ಮನದ ಕೊಳೆಯನ್ನು ನಿವಾರಿಸ ಬೇಕೆಂದು ಹೀಗೆ ಸಾಂಕೇತಿಕವಾಗಿ ಇಲ್ಲಿ ಹೇಳಿರುವ ಬಗೆ ಅನನ್ಯ.

—ಹೀಗೆ, ತನ್ನ ನಿಕಷದ ಎಲ್ಲ ಬೇಡಗಳಿಂದ ಮುಕ್ತವಾಗಿ, ಎಲ್ಲ ಬೇಕುಗಳಿಂದ ಕೂಡಿರುವಂಥ ನಿಜ ಕವನ ನಿಸಾರ್ ಅಹಮದ್‌ರ 'ಖಾಲಿ ಸೈಟುಗಳು'. ಬಳಕೆಯ ಭಾಷೆ ಮತ್ತು ದಿನನಿತ್ಯದ ಜೀವನದ, ಪರಿಸರದ ಹೋಲಿಕೆಗಳು ಕವನವನ್ನು ಓದುಗನಿಗೆ ಇನ್ನಷ್ಟು ಹತ್ತಿರವಾಗಿಸುತ್ತವೆ. ಇಡೀ ಕವನದಲ್ಲಿ ಇದೆ. ಅನಗತ್ಯ ಶಬ್ದವಾಗಲೀ, ಹಿಗ್ಗಿಸಿದ ಬಣ್ಣನೆಯಾಗಲೀ, ತೂಕ ಕಳೆದುಕೊಂಡ ಸಾಲಾಗಲೀ, ಜಟಿಲ ಪದ ಸಮುಚ್ಚಯವಾಗಲೀ, ಕ್ಲಿಷ್ಟ ವಾಕ್ಯ ಭಾಗಗಳಾಗಲೀ ಇಲ್ಲ. ಪದಗಳ ಬಳಕೆಯಲ್ಲಿ ಕವಿಯ ಜಾಗರೂಕತೆ, ಮೆಹನತ್ತುಗಳು ಎದ್ದುಕಾಣುತ್ತಿರುವಂತೆಯೇ, ಕವನದಲ್ಲಿ ಪ್ರಾಸ, ಲಯಗಳ ಸಹಜತೆಯೂ ಹಾಗೂ ಪದಗಳ ಆಯ್ಕೆಯ ಪ್ರಾಮಾಣಿಕತೆಯೂ ಸ್ಪಷ್ಟವಾಗುತ್ತದೆ. ಕಣ್ಣಿಗೆ ಕಾಣುವ ವಿಷಯವೊಂದನ್ನೆತ್ತಿಕೊಂಡು ಕಣ್ಣಿಗೆ ಕಟ್ಟುವಂತೆ ಅದನ್ನು ಚಿತ್ರಿಸುತ್ತ, ಜೊತೆಗೇ ಲಯಬದ್ಧ ಲಹರಿಯನ್ನು ಹರಿಯಬಿಡುತ್ತ, ಪರಿಪೂರ್ಣವಾಗುವ/ಅಂತರಾರ್ಥ ಬಿಂಬಿಸುವ, ಮೋಹಕ ನಿರೂಪಣಾ ಶೈಲಿಯ ನಿಸಾರ್ ಕವಿತೆಯ ಒಂದು ಉತ್ತಮ ಮಾದರಿ 'ಖಾಲಿ ಸೈಟುಗಳು'. ಖಾಲಿ ಸೈಟೆಂಬ ಅನಾಕರ್ಷಕ, ನಿರ್ಜೀವಿ ವಸ್ತುವಿನಲ್ಲಿಯೂ ಕಲ್ಪನೆ, ಭಾವದ ಆಕರ್ಷಣೆ, ಉಪಮಾ ಚಾತುರ್ಯ, ನವಿರು ಹಾಸ್ಯ ಮತ್ತು ಗಂಭೀರ ಸತ್ಯ ಇವುಗಳನ್ನು ಮಿಂಚಿಸುವ ಸಾಮರ್ಥ್ಯ ನಿಸಾರರಂಥ ಪ್ರಾಮಾಣಿಕ ಕವಿಗೆ, ಪ್ರಯತ್ನಶೀಲ ಕವಿಗೆ ಮಾತ್ರ ದಕ್ಕುವಂಥದ್ದು.

'ಸಾಮಾಜಿಕರಿಗೆ ನೇರ ಕೈವಶವಾಗದ ವಾಸ್ತವ ಸತ್ಯದ ಕೆಲವು ವಿನ್ಯಾಸಗಳು ಅವನ (ಕವಿಯ) ಬಗೆಗಣ್ಣಿಗೆ ಪ್ರರೂಪ(patterns)ಗಳಾಗಿ ಕಾಣಿಸಿಕೊಳ್ಳುವುದುಂಟು. ಅವುಗಳನ್ನು ಬಾಹ್ಯ ಸನ್ನಿವೇಶಗಳಿಂದ ಆಯ್ದು, ಸಂದರ್ಭೋಚಿತ ವಸ್ತು ಪ್ರತಿರೂಪಗಳ ಮೂಲಕ ಅರ್ಥವತ್ತಾದ ಆಕೃತಿಯನ್ನು ಮೂಡಿಸಿ ಶಬ್ದಗಳಲ್ಲಿ ಪ್ರತಿಸೃಷ್ಟಿ ಮಾಡುವುದರಿಂದ ಆ ಸತ್ಯವಿನ್ಯಾಸಗಳ ಮನಗಾಣಿಕೆಯ ಲಾಭ ಇತರರಿಗೂ ಸಾಧ್ಯವಾಗುತ್ತದೆ' ಎಂದು ಪ್ರಸ್ತುತ ಕವನ ಸಂಕಲನದ ಪ್ರಸ್ತಾವನೆಯಲ್ಲಿ ನಿಸಾರ್ ಅಹಮದ್ ಹೇಳಿದ್ದಾರೆ. 'ಖಾಲಿ ಸೈಟುಗಳು' ಕವನವೂ ಸೇರಿದಂತೆ ನಿಸಾರರ ಎಲ್ಲ ಕವನಗಳೂ ಓದುಗರಿಗೆ ಈ ಲಾಭವನ್ನು ಶೇಕಡಾ ನೂರು ತಂದುಕೊಟ್ಟಿವೆ. ಈ ಹಾದಿಯಲ್ಲಿ ನಿಸಾರರು, ಪಾಬ್ಲೋ ನೆರುಡನ ಬಗ್ಗೆ ಅವರು ಅಭಿಪ್ರಾಯಪಡುವಂತೆ, ಸ್ವಯಂ ತಾವು ಸಹ 'ತತ್ತ್ವಕ್ಕೆ ಕಾವ್ಯತ್ವವನ್ನು, ವಿಚಾರಕ್ಕೆ ವಿಸ್ಮಯವನ್ನು, ತಿಳಿವಳಿಕೆಗೆ ಚೆಲ್ವಿಕೆಯನ್ನು ಎಂದೂ ವಿಕ್ರಯಿಸಿಕೊಂಡಿಲ್ಲ'. ಕವಿಯೋರ್ವನಲ್ಲಿರಬೇಕಾದ ಗುಣಗಳ ಬಗ್ಗೆ ನಿಸಾರರು ಹೇಳಿರುವ ಹಾಗೆ ಸ್ವಯಂ ನಿಸಾರರೂ 'ತನ್ನ ಜಾಯಮಾನ, ಮೂರ್ತಿತ್ವಗಳ ಪರಿಚಯ' ಹೊಂದಿದ್ದು, 'ಅವಕ್ಕೆ ಅನುರೂಪವಾದ ಹಾದಿ ಆಯ್ಕೆ, ನುಡಿಗಾರಿಕೆಯನ್ನು ಅನೇಕ ವರ್ಷಗಳ ಮೆಹನತ್ತಿನಿಂದ ದಕ್ಕಿಸಿಕೊಂಡಿ'ದ್ದು, 'ಪರಿಸರದ ಬಗ್ಗೆ ತೋರುವಷ್ಟೇ ಕಳಕಳಿ ಅಕ್ಕರಾಸ್ಥೆಯನ್ನು ನಿಯೋಜನೆ ತಂತ್ರಾಭಿವ್ಯಕ್ತಿಯ ಮೇಲೂ' ತೋರುತ್ತಿದ್ದು, 'ಕಾವ್ಯರಚನೆಗೆ ಅವಶ್ಯವಾದ ವಿಶಿಷ್ಟ ತರಂಗಾಂತರ, ದ್ಯುತಿಗ್ರಾಹಿ ಸಾಮರ್ಥ್ಯ'ಗಳನ್ನು ಹೊಂದಿರುವುದರಿಂದಲೇ ಅವರು ಇಷ್ಟು ಸಲೀಸಾಗಿ, ಇಷ್ಟು ಹೃದ್ಯ ಕಾವ್ಯವನ್ನು ರಚಿಸಬಲ್ಲರು ಮತ್ತು ಆ ಪ್ರಭಾಪೂರ್ಣ ಕಾವ್ಯದಿಂದಾಗಿ, ಮೆಚ್ಚಿ ಅಹುದಹುದೆನ್ನುವ ಸಡಗರವನ್ನು ನಮಗೆ ನೀಡಬಲ್ಲರು, ನಮ್ಮವರೆನಿಸಬಲ್ಲರು. ಆಟಾಟೋಪ, ಸಿನಿಕತೆ, ಪ್ರತಿಭಟನೆ, ಕಾಮ, ಕ್ಲೀಷೆ, ಕ್ಲೇಶಗಳೇ ದಿಕ್ಕೆಟ್ಟ ದರವೇಶಿಗಳಂತೆ

ತಥಾಕಥಿತ ಕಾವ್ಯಗಳಲ್ಲಿ ಹರಿಯುತ್ತಿರುವ ಇಂದಿನ ಕನ್ನಡ ಕಾವ್ಯಲೋಕದಲ್ಲಿ, ಅಲಾಯಿದ ನಿಲ್ಲುವ ಕೆಲವೇ ಕವಿಗಳ ಪರಿಶುಭ್ರ ಕಾವ್ಯದ, ನಿಜ ಕಾವ್ಯದ ಪಂಕ್ತಿಯಲ್ಲಿ ಅಗ್ರಗಣ್ಯ ಸ್ಥಾನ ನಿಸಾರರ ಕಾವ್ಯಕ್ಕೆ ಇದೆ. ಸ್ವಚ್ಛ ಶುಭ್ರ ಮನ ಹೊಂದಿ ಪ್ರಾಮಾಣಿಕವಾಗಿ, ಪರಿಭಾವಿಸಿದುದನ್ನು ಭಾವಿಸಿದಂತೆ, ತನ್ನಲ್ಲಿ ತುಡಿದದ್ದನ್ನು ತುಡಿದಂತೆ, ಜೊತೆಗೆ ಬುದ್ಧಿ ಮನಗಳು ದುಡಿದದ್ದನ್ನು ದುಡಿದಂತೆ ಬಲು ಜವಾಬ್ದಾರಿಯಿಂದ ಜೀವನ ಪ್ರೀತಿಯಿಂದ ಅಕ್ಷರಗಳಲ್ಲಿ ಇಳಿಸುತ್ತ ಸಾಗಿದ ಕವಿ ನಿಸಾರ್ ಅಹಮದ್. ಹಾಗೆ ಸಾಗುವಾಗ, ಅಕ್ಷರ ಸಮೂಹದ ಅರ್ಥವಂತಿಕೆಯ ಸೊಬಗನ್ನೂ ಕಾವ್ಯರಸರುಚಿಯನ್ನೂ ಶಕ್ತಿಯನ್ನೂ ಅರಿತು, ಅನುಭವಿಸಿ ಆಲೋಚಿಸಿ ತನ್ನೆಲ್ಲ ಪ್ರತಿಭೆ-ಪ್ರಭೆ-ಪ್ರಯತ್ನಗಳನ್ನೂ ಉಪಯೋಗಿಸಿ, ಯಾವ ಆಮಿಷಕ್ಕೂ ಬಂಧನಕ್ಕೂ ತುತ್ತಾಗದೆ ಬಲು ಜತನದಿಂದ ಬರೆಯುತ್ತ ಸಾಗಿದವರು ನಿಸಾರ್. ತತ್ಫಲವಾಗಿ, ಉತ್ತಮ ಸಾಹಿತ್ಯದ ಫಸಲನ್ನು, ಸ್ವಾದಿಷ್ಟ ಕಾವ್ಯದ ಫಲಗಳನ್ನು ಸಮೃದ್ಧವಾಗಿ ನಾಡಿನ ಎಲ್ಲರಿಗೂ ನಿಷ್ಕಾಪಟ್ಯದಿಂದ ಉಣಿಸುತ್ತ, ಶ್ರೀ ಸಾಮಾನ್ಯನಿಗೂ ವಿದ್ವಾಂಸನಿಗೂ ಇಬ್ಬರಿಗೂ ಇಷ್ಟವಾಗುತ್ತ, ಇಬ್ಬರೂ ತನ್ನ ಶ್ರೇಷ್ಠತೆಯನ್ನು ಒಪ್ಪಿದಾಗ್ಯೂ ಅದರಿಂದಾಗಿ ಯಾವ ಅಹಮ್ಮನ್ನೂ ಹೊಂದದೆ ವಿನಯಶೀಲರಾಗಿಯೇ ಮುಂದುವರಿದಿರುವ ಅಪರೂಪದ ಕವಿ, ಜನದ ಕವಿ, ಜನ ಮನದ ಮೆಚ್ಚಿನ ಕವಿ. ಎಂದೇ ಭಾರತ ಜನನಿಯ ತನುಜಾತೆ, ಕರ್ನಾಟಕ ಮಾತೆಯ ಹೆಮ್ಮೆಯ ಪುತ್ರ ನಮ್ಮ ನಿಸಾರ್ ಅಹಮದ್.

ಅನಿರ್ಬದ್ಧ ಕವಿ ಯಾವುದೇ ಗುಂಪಿಗೆ ತನ್ನ ಕಾವ್ಯ ಪ್ರತಿಭೆಯನ್ನು ವಿಕ್ರಯಿಸಿ ಕೊಳ್ಳಲು ತಯಾರಿಲ್ಲದಾತ. ಕಾವ್ಯದ ಮುಖೇನವೇ ತನ್ನೆಲ್ಲ ಪ್ರತಿಕ್ರಿಯೆ ಸಿಟ್ಟು ವಕಾಲತ್ತು ಹಾಯಬೇಕೆಂಬ ವ್ರತ ಅವನದು. ಅವು ತಮ್ಮ ಹಸಿತನ ಹಾಗಲುತನಗಳನ್ನು ನೀಗಿಕೊಂಡು ಕಲೆಯಾಗಿ ಮಾರ್ಪಟ್ಟು ಇತರರ ಅನುಭವಗಳೊಂದಿಗೆ ತಾಳೆಯಾಗಬೇಕೆಂಬ ಇರಾದೆ ಅವನದು. ಹೀಗಾಗಿ, ಆತ ಸಾಹಿತ್ಯಕ ಗಲಭೆಗಳಿಂದ ದೂರವಾಗಿ, ಏಕಾಕಿಯಾಗಿ ತನ್ನ ಕಸುಬಿನಲ್ಲಿ ಮಗ್ನನಾಗಿರುತ್ತಾನೆ. ಅವನ ವಿನೀತ ವಾಣಿ ದೊಡ್ಡ ಗಂಟಲಿನವರ ಅಬ್ಬರ ಕಿರುಚುಗಳ ನಡುವೆ ಸದ್ಯಕ್ಕೆ ಮರೆಯಾಗಿದ್ದರೂ ಕಾಲಕ್ರಮೇಣ ಸಮಾಜಕ್ಕೆ ಸಾಂತ್ವನ ನುಡಿಯುವುದರಲ್ಲಿ, ಮೆಲು ಮಾತಿನಿಂದಲೇ ಮಹಾ ಪವಾಡಗಳನ್ನು ಸೃಷ್ಟಿಸುವುದರಲ್ಲಿ ಯಶಸ್ವಿಯಾಗಬಹುದು. ಅವನ ಕೃತಿ ಸಮುದಾಯ ಸಂಸ್ಕೃತಿಯ ಒಂದು ವಿಶಿಷ್ಟ, ಅವಿಭಾಜ್ಯ ಅಂಗವಾಗಿ ಸ್ಥಾಯಿತ್ವ ಪಡೆಯ ಬಹುದು.

(ಅನಿರ್ಬದ್ಧ ಕವಿ)

ಕುರಿಗಳು, ಸಾರ್, ಕುರಿಗಳು

ಕುರಿಗಳು, ಸಾರ್, ಕುರಿಗಳು:
ಸಾಗಿದ್ದೇ
ಗುರಿಗಳು.
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,
ಕುರಿಗಳು, ಸಾರ್, ಕುರಿಗಳು:
ನಮಗೂ ನೂರು ಗುರಿಗಳು.
ಎಡ ದಿಕ್ಕಿಗೆ, ಬಲ ದಿಕ್ಕಿಗೆ, ಒಮ್ಮೆ ದಿಕ್ಕುಪಾಲಾಗಿ,
ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತಿರುವ,
ಬರೀ ಕಿರುಚಿ ರೇಗುತಿರುವ,
ನೊಣ ಕೂತರೆ ಬಾಗುತಿರುವ,
ತಿನದಿದ್ದರು ತೇಗುತಿರುವ,
ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ
ಅವರು, ಇವರು, ನಾವುಗಳು
ಕುರಿಗಳು, ಸಾರ್, ಕುರಿಗಳು.

ಮಂದೆಯಲ್ಲಿ ಎಲ್ಲವೊಂದೆ ಆದಾಗಲೇ ಸ್ವರ್ಗ ಮುಂದೆ:
ಅದಕಿಲ್ಲವೆ ನಾವುತ್ತರ?
ಮೆದುಳಿನಲ್ಲಿ ತಗ್ಗೆತ್ತರ,
ಹಿರಿದು, ಕಿರಿದು ಮಾಯಿಸಿ,
ಒಬ್ಬೊಬ್ಬರಿಗಿರುವ ಮೆದುಳ ಸ್ವಾರ್ಥದ ಉಪಯೋಗದಿಂದ
ಇಡಿ ಮಂದೆಗೆ ಹಾಯಿಸಿ,
ಹೊಟ್ಟೆ ಬಟ್ಟೆಗೊಗ್ಗದಂಥ ಕಲೆಯ ಕರ್ಮಕಿಳಿಯದಂತೆ
ತಲೆ ಬೆಲೆಯ ಸುಧಾರಿಸಿ,
ಬಿಳಿ, ಕಪ್ಪಿನ ದ್ವಂದ್ವಗಳಿಗೆ ಮಾಡಿಸಿ ಸಮಜಾಯಿಷಿ,
ನಮ್ಮ ಮೆದುಳು ಶುದ್ಧಿಯಾಗಿ, ಬುದ್ಧಿ ನಿರ್ಬುದ್ಧಿಯಾಗಿ,
ಕೆಂಬಣ್ಣವನೊಂದೆ ಪೂಸಿ,

ಅದರ ಬಾಲ ಇದು, ಮತ್ತೆ ಇದರ ಬಾಲ ಅದು ಮೂಸಿ
ನಡೆವ ನಮ್ಮೊಳಿಲ್ಲಿ ಬಿರುಕು?

ನಮ್ಮ ಕಾಯ್ವ ಕುರುಬರು:
ಪುಟಗೋಸಿಯ ಮೊನ್ನೆ ತಾನೆ ಕಿತ್ತು ಪಂಚೆಯುಟ್ಟವರು,
ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟನು ಒತ್ತುವವರು,
ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬನನ್ನ
ಮೆಚ್ಚಿ, ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ
ಕಿಸೆಗೆ ಹಸಿರು ನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು.
ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.
ಮಾರಮ್ಮನ ಮುಡಿಗೆ ಕೆಂಪು ದಾಸವಾಳ ಆಯುವವರು.
ಬೆಟ್ಟ ದಾಟಿ ಕಿರುಬ ನುಗ್ಗಿ, ನಮ್ಮೊಳಿಬ್ಬರನ್ನು ಮುಗಿಸಿ
ನಾವು 'ಬ್ಯಾ, ಬ್ಯಾ' ಎಂದು ಬಾಯಿ ಬಾಯಿ ಬಡಿದುಕೊಂಡು
ಬೊಬ್ಬೆ ಹಾಕುತಿದ್ದರೂ
ಚಕ್ಕಭಾರ ಆಟದಲ್ಲೆ ಮಗ್ನರು ಇವರೆಲ್ಲರು
ನಮ್ಮ ಕಾಯ್ವ ಗೊಲ್ಲರು.

ದೊಡ್ಡಿಯಲ್ಲಿ ಕೂಡಿ ಹಾಕಿ ನಿಲ್ಲಲಿಲ್ಲ, ಕೂರಲಿಲ್ಲ,
ಎದ್ದರೆ ಸರಿದಾಡಲಿಲ್ಲ, ಬಿದ್ದರೆ ಹರಿದಾಡಲಿಲ್ಲ,
ದೀಪದ ದೌಲತ್ತು ಇಲ್ಲ,
ಗಾಳಿಯ ಗಮ್ಮತ್ತು ಇಲ್ಲ,
ಕಿಂಡಿಯಿಂದ ತೆವಳಿ ಬಂದ ಗಾಳಿ ಕೂಡ ನಮ್ಮದೇನೆ:
ನಮ್ಮ ಮಂದೆ ಕುರಿಯ ಸುಲಿದು, ಆಚೆ ಅಲ್ಲಿ ಉಪ್ಪು ಸವರಿ
ಒಣಗಲಿಟ್ಟ ಹಸಿ ತೊಗಲಿನ ಬಿಸಿ ಬಿಸಿ ಹಚೆ ವಾಸನೆ,
ಇರಿಯುತಿಹುದು ಮೂಗನೆ!
ಕೊಬ್ಬಿರುವೀ ಮಬ್ಬಿನಲ್ಲಿ, ಮೈ ನಾತದ ಗಬ್ಬಿನಲ್ಲಿ
ಇದರ ಉಸಿರು ಅದು, ಮತ್ತೆ ಅದರ ಉಸಿರು ಇದು ಮೂಸಿ
ಹೇಸಿದರು ನಿಭಾಯಿಸಿ,
ತಾಳ್ಮೆಯನೆ ದಬಾಯಿಸಿ,
ನಮ್ಮ ನಾವೆ ಅಂದುಕೊಂಡೊ, ಉಗುಳು ನುಂಗಿ ನೊಂದುಕೊಂಡೊ,
ನಂಬಿಕೊಂಡು ಏಗುತಿರುವ ನಾವು, ನೀವು, ಇಡೀ ಹಿಂಡು
ಕುರಿಗಳು, ಸಾರ್, ಕುರಿಗಳು.

ತಳವೂರಿದ ಕುರುಬ ಕಟುಕನಾದ; ಅವನ ಮಚ್ಚೊ ಆಹ!
ಏನು ಝುಳಪು, ಏನು ಹೊಳಪು, ಏನು ಜಾದು, ಏನು ಮೋಹ!
ಆ ಹೊಳಪಿಗೆ ದಂಗಾಗಿ, ಕಣ್ಣಿಗದೇ ರಂಗಾಗಿ,
ಒಳಗೊಳಗೇ ಜಂಗಾಗಿ
ಕಣ್ಣು ಕುಕ್ಕಿ ಸೊಕ್ಕಿರುವ, ಹೋಗಿ ಹೋಗಿ ನೆಕ್ಕಿರುವ,
ಕತ್ತನದಕೆ ತಿಕ್ಕಿರುವ,
ನಾವು, ನೀವು, ಅವರು, ಇವರು
ಕುರಿಗಳು, ಸಾರ್, ಕುರಿಗಳು!
ಮಚ್ಚಿನ ಆ ಮೆಚ್ಚಿನಲ್ಲಿ, ಅದರಾಳದ ಕಿಚ್ಚಿನಲ್ಲಿ
ಮನೆ ಮಾಡಿವೆ ಹುಚ್ಚಿನಲ್ಲಿ
ನಮ್ಮೆಲ್ಲರ ಗುರಿಗಳು!
ಕುರಿಗಳು, ಸಾರ್, ಕುರಿಗಳು...

★ ★ ★

(ಕವನ ಸಂಕಲನ: 'ನೆನೆದವರ ಮನದಲ್ಲಿ')



'ಕುರಿಗಳು, ಸಾರ್, ಕುರಿಗಳು': ನಾಡಿನ ಪಾಡಿನ ವಿಡಂಬನಾತ್ಮಕ ವ್ಯಾಖ್ಯೆ

♦ ಮಾವಿನಕೆರೆ ರಂಗನಾಥನ್

೧

'ಕುರಿಗಳು, ಸಾರ್, ಕುರಿಗಳು' ಕನ್ನಡದ ಅತಿ ಮುಖ್ಯ ವಿಡಂಬನೆಗಳಲ್ಲಿ ಒಂದು. ಅದು ರಚಿತವಾಗಿ ೪೨ ವರ್ಷಗಳು ಕಳೆದಿದ್ದರೂ ಅದರ ಜನ ಮೆಚ್ಚುಗೆಗೆ ಸ್ವಲ್ಪವೂ ಚ್ಯುತಿ ಬಂದಿಲ್ಲ. ತದ್ವಿರುದ್ಧವಾಗಿ ಅದು ಇನ್ನೂ ಹೆಚ್ಚು ಆದರಣೀಯವಾಗುತ್ತ ಮುಂದುವರಿದಿದೆ. ಕನ್ನಡ ಜನತೆ, ಅದರಲ್ಲೂ ಮಧ್ಯಮ ವರ್ಗದ ಪ್ರಜೆಗಳು ತಮ್ಮ ಪಾಡನ್ನು ಅದರಲ್ಲಿ ಗುರುತಿಸಿಕೊಂಡಿದ್ದಾರೆ. ತಮ್ಮ ಬಯಕೆ ಭರವಸೆಗಳಿಗೆ, ಸಾಚಾ ಬಾಳಿನ ಕಲ್ಪನೆಗೆ ಮತ್ತು ಮುಕ್ತ ಕ್ರಿಯಾಶೀಲತೆಗೆ ಎದುರು ಹಾಯ್ದಿರುವ ದುಃಶಕ್ತಿಗಳನ್ನು ಮತ್ತು ಅವುಗಳ ಕುತ್ಸಿತ ಕಾರ್ಯಪ್ರವೃತ್ತಿಗಳನ್ನು 'ಕುರಿಗಳು, ಸಾರ್...' ಪದ್ಯದಲ್ಲಿ ಕಂಡುಕೊಂಡಿದ್ದಾರೆ. ಹಾಗೆಯೇ, ತಮ್ಮ ಅಸಹಾಯಕತೆ ಮತ್ತು ಅನಾಥತೆಯನ್ನು ಸಹ ಮನಗಂಡು ಮೌನದಲ್ಲೇ ನೊಂದಿದ್ದಾರೆ. ಇದು ಕೇವಲ ಒಬ್ಬಿಬ್ಬರ ಪಾಡಲ್ಲ, ಸಂಕಷ್ಟ ಪರಂಪರೆಯಲ್ಲ, ಎಲ್ಲರದೂ ಎಂದು ಭಾಸವಾದಾಗ ಏನೋ ಸಮಾಧಾನ ಕಂಡವರಂತೆ, ಪ್ರತಿಭಟನೆ ನಿಷ್ಫಲದಾಯಕವೆಂಬ ತಿಳಿವು ಗಾಢಗೊಂಡಂತೆ, ತಮ್ಮಷ್ಟಕ್ಕೆ ತಾವು ಹಳಿದುಕೊಂಡು ಸುಮ್ಮನಾಗಿದ್ದಾರೆ. ಜೊತೆಗೇ ತಮ್ಮ ಈ ದೈನೇಸಿ ಸ್ಥಿತಿಗೆ ನಕ್ಕು ಹಗುರರಾಗಲು ಯತ್ನಿಸಿದ್ದಾರೆ. ಒಟ್ಟಿನಲ್ಲಿ ಈ ಪದ್ಯ, ನಿಸಾರರ 'ನಿತ್ಯೋತ್ಸವ'ದ ಹಾಗೆ: ಒಂದಷ್ಟು ಬೇರೆಯದೇ ಆದ

ವೈಚಾರಿಕ ನೆಲೆಯ 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ', 'ಸವತಿ ಮಕ್ಕಳ ಹಾಗೆ' ಮತ್ತು 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನಗಳ ಹಾಗೆ ಕನ್ನಡದ ಅತ್ಯಂತ ವಿಶಿಷ್ಟ ಪದ್ಯಗಳಲ್ಲಿ ಒಂದಾಗಿದೆ.

'ಕುರಿಗಳು, ಸಾರ್...' ಅಷ್ಟು ಸಾಹಿತ್ಯಕ, ಸಾಹಿತ್ಯೇತರ ನೆಲೆಗಳಲ್ಲಿ ಉದ್ಧರಿಸಿದ ಪದ್ಯ ಕನ್ನಡದಲ್ಲಿ ಇನ್ನೊಂದಿರದು. ಶಿಷ್ಟ ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟದ್ದಲ್ಲದೆ, ಜನ ಸಾಮಾನ್ಯರ ಸ್ವಕೀಯ ರೂಪದ ದೈನಿಕ ಸಮಸ್ಯೆಗಳಿಗೆ; ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಆಗುಹೋಗುಗಳಿಗೆ ಇದರ ಶೀರ್ಷಿಕೆಯನ್ನು ಬಳಸಿರುವ, ಬಳಸುತ್ತಿರುವ ರೀತಿ ಕುತೂಹಲ ಜನಕವಾಗಿದೆ; ವಿಸ್ಮಯಾವಹವಾಗಿದೆ. ಈ ತಲೆಬರಹ ಹಲವು ದಿನ ಪತ್ರಿಕೆಗಳ ಸಂಪಾದಕೀಯಗಳಿಗೆ ಗ್ರಾಸವಾಗಿದೆ; ವಾಚಕರ ವಾಣಿಯ ಎಷ್ಟೋ ಕುಂದು ಕೊರತೆಗಳ ಪತ್ರಗಳಿಗೆ ಇದು ಆಕರ್ಷಕ ಶಿರೋನಾಮೆಯಾಗಿದೆ. ಇದನ್ನು ಅನುಕರಿಸಿ ಹಲವಾರು ಕವಿತೆ ಗಳು ರಚನೆಯಾಗಿವೆ. ಒಂದು ಚಲನಚಿತ್ರದ 'ಟೈಟಲ್' ಕೂಡ ಆಗಿ ಜನಪ್ರಿಯತೆಯನ್ನು ದೋಚಿದೆ. ಅಷ್ಟೇ ಸಾಲದೆಂಬಂತೆ, ಅಂತಹ 'ಟೈಟಲ್ಲು'ಗಳ ಒಂದು ಪರಂಪರೆಗೆ ಪ್ರೇರಣೆ ಒದಗಿಸಿದೆ. ಅಲ್ಲದೆ, ಒಂದು ಟಿ.ವಿ. ವಾಹಿನಿಯ ಹಾಸ್ಯ ಧಾರಾವಾಹಿಯಾಗಿಯೂ ಬಳಕೆಯಾಗುತ್ತಿದೆ.

ನವ್ಯಕಾವ್ಯ ಉಚ್ಛ್ರಾಯ ಪಡೆಯುತ್ತಿದ್ದ ತುಂಬು ಉತ್ಸಾಹ, ಸಂಭ್ರಮದ ಅರವತ್ತರ ಪ್ರಾರಂಭಿಕ ಕಾಲಾವಧಿಯಲ್ಲಿ ರಚಿತವಾದ ಈ ಕವನದ ಮತ್ತೊಂದು ವಿಶೇಷವೆಂದರೆ— ಆಗಿನ ರೂಢಿಯಲ್ಲಿದ್ದ ಸಾಮಾನ್ಯವಾದ ಜಾಡಿನಲ್ಲಿ ಹೆಜ್ಜೆ ಹಾಕುತ್ತಲೇ ಹೊಸ ನಿಟ್ಟಿನ ಕಡೆ ತಲಪಿದ್ದು. ನವ್ಯದ ಅಂಗೀಕೃತ ಕಾವ್ಯರಚನಾ ಸೂತ್ರಗಳೆಂದು ಕವಿಗಳು ಮತ್ತು ವಿಮರ್ಶಕರು ಭಾವಿಸಿದ್ದ ಅನುಭವದ ಸಂಕೀರ್ಣತೆ, ವೈಚಾರಿಕ ಅತಿಶಯತೆ, ಕ್ಲಿಷ್ಟತೆ, ಸಾಂಕೇತಿಕತೆಗಳ ನೆಲೆಯನ್ನು ಒಪ್ಪಿಕೊಂಡು ಮುನ್ನಡೆದೇ, ಅವುಗಳೆಲ್ಲವನ್ನು ಮೈಗೂಡಿಸಿಕೊಂಡೇ ಈ ಕವಿತೆ ಸಾರ್ವತ್ರಿಕತೆಯನ್ನು ಸಂಪಾದಿಸಿದ್ದು. ಕೇವಲ ಕೆಲವು ಧೀಮಂತರಿಗಷ್ಟೇ ಮೀಸಲಾದಂತಿದ್ದ ಕಾವ್ಯವನ್ನು ಬಹು ಸಂಖ್ಯೆಯ ಶಿಷ್ಟ ವಾಚಕ ವರ್ಗ ಸಹ ಸವಿಯಲು, ಚಿಂತಿಸಿ ಅನುಭವಿಸಲು ಸಾಧ್ಯವಾಗುವಂತೆ ದಿಟ್ಟವಾಗಿ ಪ್ರಯತ್ನಿಸಿದ್ದು ಈ ಕವನದ ವಿಶಿಷ್ಟತೆ. ಅರ್ಥವಾಗುವಂತೆ ಬರೆಯುವುದೇ ಅಪರಾಧವೆಂಬಂತೆ, ನವ್ಯಕಾವ್ಯದ ನಿಯಮಗಳಿಗೆ ವಿರುದ್ಧವೆಂಬಂತೆ ಭಾವಿಸಿದ್ದ ಕೆಲವು ಅರೆ ಬೆಂದ ವಿಮರ್ಶಕನಾಮರಿಂದ ಛೀಮಾರಿ ಹಾಕಿಸಿಕೊಳ್ಳುವ ಅಂಜಿಕೆಯ ಮಧ್ಯದಲ್ಲೂ ಇಂತಹ ಹಾದಿಯ ಕವಲೊಡೆತವನ್ನು ರೂಪಿಸಿಕೊಂಡು ಸಾಗಿದ್ದು ನಿಸಾರರ ಅಗ್ಗಳಿಕೆ ಎನ್ನಬಹುದು. ಅವರ ಸರೀಕ ಕವಿಗಳಲ್ಲಿ ಕೆಲವರು ನವ್ಯ ಕವನ ರಚನೆಯ ರೂಢಿಗತವಾದ ಪ್ರಯಾಸಕರ ಮಾರ್ಗವನ್ನು ಬಿಟ್ಟು ಆಗ ಗದ್ಯದ ಕಡೆಗೆ ಹೊರಳಿದ್ದೂ ಈ ಕಾರಣಕ್ಕಾಗಿಯೇ. ವಿಮರ್ಶಕರನ್ನು ಸಂತೃಪ್ತಗೊಳಿಸುವ ನಿಟ್ಟಿನಲ್ಲಿ ಸಾಗಿದ ಅವರ ಕವಿತಾರಚನೆ ಸಹಜವಾಗಿಯೇ ಅಸಂಖ್ಯ ಓದುಗರಿಗೆ ಬೆನ್ನು ತೋರಿಸುವಂತಾಯಿತು; ಸಮಾಜಪರವಾದ ಕಾಳಜಿಯನ್ನು ಮರೆತಂತಾಯಿತು. ಇಂತಹ ಸಂದರ್ಭದಲ್ಲಿ ಎದೆಗಾರಿಕೆ ಯಿಂದ ತಮಗೆ ಸರಿ ತೋಚಿದ ಹಾದಿಯಲ್ಲಿ ಸಾಗಿ ಕಾವ್ಯ ಜನತೆಯ ಹತ್ತಿರ ಹಿಂದಿರುಗು ವಂತೆ ಎಸಗಿದವರಲ್ಲಿ ಬಹು ಮುಖ್ಯರು ಕೆ.ಎಸ್.ನ. ಮತ್ತು ಕೆ.ಎಸ್.ನಿ.

ಮುಂದೆ ನಿಸಾರ್ ಅವರು ತಮ್ಮ 'ನಿತ್ಯೋತ್ಸವ' ಕವನ ಸಂಕಲನವನ್ನು ಹೊರ ತಂದು, ಒಂದು ಕಡೆ ಕನ್ನಡ ಸುಗಮ ಸಂಗೀತಕ್ಕೆ ನಾಂದಿ ಹಾಡಿದ್ದರ ಜೊತೆಗೆ, ಕಾವ್ಯದಲ್ಲಿ ವಿಚಾರ ಪ್ರಖರತೆಯ ಜೊತೆಗೇ ಭಾವದ ಮಾರ್ದವತೆಯನ್ನೂ ಮೈಗೂಡಿಸಿ ಮುಂದೆ ಕವನ ರಚಿಸಲಿರುವವರ ಪಾಲಿಗೆ ಒಂದು ಸಮರಸತೆಯ ಮಾರ್ಗವನ್ನು ರಚಿಸಿದರು; ಕಾವ್ಯದ ಬಗೆಗೆ ಅಕ್ಕರೆ, ಆದರ ಮರುಕೊಳಿಸಲು ಕಾರಣರಾದರು.

ಹೀಗೆ, ಕವಿತೆಯೊಂದು ತನ್ನ ಮೂಲ ಆಶಯವನ್ನು ಮೀರಿ ಬೇರೆ ಬೇರೆ ನಿಟ್ಟಿನಲ್ಲಿ ಆಯಾಮ ಪಡೆಯುತ್ತ ಕಾಲದಲ್ಲಿ ರಕ್ಷಣೆ ಪಡೆಯುವ ಬಗೆ ಕೌತುಕಮಯವೆನ್ನಿಸದೆ ಇರದು. ಜನರು, ಇದನ್ನು—ನಿಸಾರರ ಇನ್ನಿತರ ಕೆಲವು ಕವನಗಳಂತೆ—ತಮ್ಮ ಸ್ವಂತ ಆಸ್ತಿಯೆಂದು ಭಾವಿಸಿ ಮಾತುಕತೆ, ವ್ಯವಹಾರಗಳಲ್ಲಿ ಬಳಸುವ ಭಾಗ್ಯ ಹೆಚ್ಚು ಕವಿತೆಗಳಿಗೆ ಪ್ರಾಪ್ತವಾಗದು. ಇದೆಲ್ಲದರ ಅಂತರಾರ್ಥವೆಂದರೆ, ಜನಗಳಿಗೆ ಈ ಕವಿತೆಯ ಪ್ರಸ್ತುತತೆ ಮನದಟ್ಟಾಗಿರುವುದು. ಇದಲ್ಲದೆ, ವರ್ತಮಾನದ ಬದುಕಿನ ವಿವಿಧ ಹಂತಗಳಲ್ಲಿ, ವಿವಿಧ ವಲಯಗಳಲ್ಲಿ 'ಕುರಿಗಳು, ಸಾರ್...' ಪ್ರಜಾ ಪರಿಸ್ಪಂದನೆಗೆ ತನ್ನನ್ನು ತೆರೆದುಕೊಳ್ಳುವುದು.

ಆ ಕವನದ ಹೆಸರಿನಲ್ಲಿ ಬರುವ 'ಸಾರ್' ಎಂಬ ಆಪ್ತ ಸಂಬೋಧನೆಯೂ 'ಕುರಿಗಳು' ಪದದ ಪುನರುಚ್ಚಾರವೂ ಅದರ ಲೋಕಪ್ರಿಯತೆಗೆ ಬಹುಮಟ್ಟಿಗೆ ನಿಮಿತ್ತ ವೆಂಬುದು ದಿಟವಾದರೂ ಆ ಇಡೀ ಕವಿತೆಯ ವಸ್ತುವಿನ, ನಾಟಕೀಯ ಶೈಲಿಯ, ಲವಲವಿಕೆಯ ಪ್ರಾಸಾನುಯುಕ್ತ ಪಂಕ್ತಿಗಳ ಸರಾಗ ನಡಿಗೆಯ ಆಪ್ತತೆ ಅದರ ಸುದೀರ್ಘ ಪ್ರಚಲಿತತೆಗೆ ಕಾರಣವೆಂಬುದು ಗಮನಿಸಬೇಕಾದ ಮುಖ್ಯಾಂಶವಾಗಿದೆ. ನಮ್ಮ ರಾಜಕೀಯ ದುರ್ವಿದ್ಯಮಾನಗಳ ಜ್ವಲಂತ ಚಿತ್ರಣವನ್ನು ಈ ಕವಿತೆ ಮನ ಮುಟ್ಟುವಂತೆ ಕಟ್ಟಿಕೊಡು ತ್ತದೆ. ರಾಜಕೀಯ ಮುಂದಾಳುಗಳ ಲಜ್ಜಾಹೀನ ಹುನ್ನಾರಗಳು ಈ ಕವನದಲ್ಲಿ ನಿರ್ಭಯ ವಾಗಿ ಪಡಿಮೂಡಿವೆ.

ಈ ಕವನ ರಚನೆಯಾದ ಹಿನ್ನೆಲೆಯನ್ನು ಕೊಂಚ ತಿಳಿಯೋಣ: ಇದನ್ನು ಕವಿ ನಿಸಾರ್ ಅಹಮದ್ ಅವರೇ ಕೆಲವೊಮ್ಮೆ ಟಿ.ವಿ. ಮತ್ತು ಪತ್ರಿಕೆಗಳ ಸಂದರ್ಶನಗಳಲ್ಲಿ ಉಲ್ಲೇಖಿಸಿ ದ್ದಾರೆ; ದೇಶದ ಬಗೆಗಿನ, ಇಲ್ಲಿನ ನಾಗರಿಕರ ಬಗೆಗಿನ ತಮ್ಮ ಕಾಳಜಿಯನ್ನು ತೋಡಿ ಕೊಂಡು ಮಮ್ಮಲ ಮರುಗಿದ್ದಾರೆ. ಪ್ರಜೆಗಳ ಕುರಿತನವೊಂದನ್ನೇ ನಿಸಾರರು ನಿರ್ದೇಶಿಸಿ ವಿಡಂಬಿಸಿದ್ದರೆ ಬಹುಶಃ ಅದು ಉದ್ದೇಶಿಸಿರುವ ವ್ಯಂಗ್ಯ, 'ಐರನಿ'ಯನ್ನು ತಕ್ಕ ಪ್ರಮಾಣದಲ್ಲಿ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ತಮ್ಮಲ್ಲೂ ಆ ಕುರಿತನವಿರುವುದೂ ತಾವೂ ಇತರರಂತೆ ನಿಸ್ಸಹಾಯಕರೆಂಬ ಅರಿವು ಅವರಿಗಿರುವುದೂ 'ವ್ಯಂಗ್ಯ'ದ ಸಮೃದ್ಧಿಗೆ ಕಾರಣವೆನ್ನಿಸುತ್ತದೆ. ಅದನ್ನು 'ಅವರು, ಇವರು, ನೀವು' ಎಂದು ಸುಮ್ಮನಾಗದೆ, 'ನಾವು' ಎನ್ನುವುದನ್ನೂ ಸೇರಿಸಿರುವುದು ಈ ಕೌಶಲಕ್ಕೆ ದ್ಯೋತಕವೆನ್ನಿಸುತ್ತದೆ.

೧೯೬೨ರಲ್ಲಿ ನಮ್ಮ ನಾಡಿನ ಮೇಲೆ ಏಕಾಏಕಿ ನಡೆದ ಚೀಣಾದ ದಾಳಿಯಿಂದ ಇಡೀ ದೇಶವೇ ತತ್ತರಿಸಿ ಹೋಗಿತ್ತು. ಪಂಚಶೀಲದ ನಾಮವನ್ನು ಜಪಿಸುತ್ತಲೇ, 'ಭಾಯಿ ಭಾಯಿ' ಎನ್ನುತ್ತಲೇ ನಮ್ಮ ನಾಡಿನ ಎದೆಗೆ ಚೂರಿ ಬಿದ್ದಿತ್ತು. ಇದರಲ್ಲಿ ನಮ್ಮ ರಾಜಕಾರಣಿಗಳದೂ

ಗುರುತರವಾದ ಪ್ರಮಾದವಿದ್ದುದನ್ನು ಮರೆಯಲಾಗದು. ಶಾಂತಿಮಂತ್ರವನ್ನು ಜಪಿಸುತ್ತಿರಬೇಕು, ಆದರೆ ಸ್ವರಕ್ಷಣೆಗಾಗಿ ನಮ್ಮ ಸೇನೆಯನ್ನು ಸನ್ನಾಹಗೊಳಿಸಿಕೊಂಡಿರಬೇಕು ಎಂಬ ಸಾಮಾನ್ಯ ಸತ್ಯ ಸಹ ನಮ್ಮನ್ನು ಆಳುವ ಮಂದಿಗೆ ಇರದಿದ್ದುದಕ್ಕೆ ಕಾರಣ, ಬೇರೆಯವರ ಬಗೆಗಿನ ನಮ್ಮ ಪರಮ ವಿಶ್ವಾಸ, ಪೂರ್ಣ ನಂಬುಗೆ. ಇದರೊಂದಿಗೆ, ದೇಶದ ಪ್ರಧಾನಿಯಾಗಿದ್ದವರಿಗೆ ಸೇನೆಯ ಕಾರ್ಯಾಚರಣೆ, ಸಿದ್ಧತೆ ಇನ್ನಿತರ ಸಂಗತಿಗಳ ಬಗೆಗೆ ಸರಿಯಾದ ಮಾಹಿತಿಯನ್ನಾಗಲಿ, ಸಲಹೆಯನ್ನಾಗಲಿ ನೀಡದ ಸಂಬಂಧಪಟ್ಟವರ ಕರ್ತವ್ಯಲೋಪವೂ ಕಾರಣವಾಗಿ ನಮ್ಮ ಸೇನೆ, ಚೀನಿಯರ ಹಠಾತ್ ಆಕ್ರಮಣಕ್ಕೆ ತುತ್ತಾಗಿ ದಿಕ್ಕೆಟ್ಟು ಹೋಯಿತು. ಓಬೀರಾಯನ ಕಾಲದ ಬಂದೂಕುಗಳು, ಮೆಷಿನ್‌ಗನ್ನು ಸ್ಟೆನ್‌ಗನ್ನುಗಳು ಮತ್ತಿತರ ಸ್ಫೋಟಕ ಯಂತ್ರಗಳು ಚೀಣಿಯರಿಗೆ ಮಕ್ಕಳ ಆಟಿಕೆಯ ಸಾಮಾನುಗಳಂತೆ ದುರ್ಬಲವಾಗಿ ತೋರಿ, ನಮ್ಮ ಸೈನಿಕರ ಮಾರಣಹೋಮ ನಡೆಯಿತು. ಹಿಮಾಲಯದ ಮಂಜು ಕೆಂಪೇರಿದ್ದಲ್ಲದೆ ಸಹಸ್ರಾರು ಮೈಲಿಗಳ ನಮ್ಮ ಪ್ರದೇಶ ಚೀಣಿಯರ ವಶವಾಯಿತು. ಹಿಮಾಲಯದಂಥ ಕಡಿದಾದ, ಮಹೋನ್ನತ ಪರ್ವತ ಪ್ರದೇಶದಲ್ಲಿ ಯುದ್ಧ ಮಾಡುವ ತರಬೇತಿ ಪಡೆಯದ ನಮ್ಮ ಜವಾನರ ಅಪಾರ ಜೀವ ಹಾನಿ, ನಮ್ಮ ದೇಶದ ಆಡಳಿತ ಸೂತ್ರಗಳನ್ನು ಹಿಡಿದಿದ್ದ ರಾಜಕೀಯಸ್ಥರ ಅವಜ್ಞೆ, ಅಲಕ್ಷ್ಯ ಮತ್ತು ಮಹಾಪರಾಧದ ಫಲವೆಂಬುದನ್ನು ಆಗಿನ ರೇಡಿಯೊ ಮತ್ತು ದಿನ ಪತ್ರಿಕೆಗಳಲ್ಲಿ ಬರುತ್ತಿದ್ದ ಮಾರಕ ಸುದ್ದಿ ಸಾರಿತ್ತು. ರೇಡಿಯೊ ತಿರುಗಿಸಿದರೆ ಸಾಕು 'ಇವೊತ್ತು ನಮ್ಮ ಬಾಮ್ದಿಲ ಪ್ರದೇಶ ಚೀಣೆಯರ ಕುತಂತ್ರಕ್ಕೆ ಕೈಬಿಟ್ಟಿತು; ನಿನ್ನೆ ಸೇಲಾ ಪ್ರದೇಶವನ್ನು ಶತ್ರುಗಳು ಆಕ್ರಮಿಸಿಕೊಂಡರು. ಚೀನಿಯರು ನಮ್ಮ ನಾಡಿನ ಒಳ ಪ್ರದೇಶದ ನಗರವಾದ ತೇಜಪುರದವರೆಗೂ ಬಂದು ಬಿಟ್ಟಿದ್ದಾರೆ. ಅಲ್ಲಿನ ಪೌರರು ಆಸ್ತಿಪಾಸ್ತಿಗಳನ್ನು ಬಿಟ್ಟು ದಿಕ್ಕಾಪಾಲಾಗಿ ಚೆದುರಿ ಹೋಗಿದ್ದಾರೆ'—ಕೇವಲ ಇಂಥವೇ ದುರಂತಮಯ ಸುದ್ದಿಗಳು. ಅತ್ಯಂತ ಅವಮಾನಕರ ಪ್ರಸಂಗವೆಂದರೆ, ಚೀನಿಯರ ಒಬ್ಬ ಸೈನಿಕನನ್ನೂ ನಮಗೆ ಸೆರೆ ಹಿಡಿಯಲು ಸಾಧ್ಯವಾಗದೇ ಇದ್ದದ್ದು! ಇದರ ಜೊತೆಗೆ, ನಮ್ಮ ಅರಿಗಳು, ಶರಣಾಗತರಾದ ಸಹಸ್ರಾರು ಭಾರತೀಯ ಯೋಧರನ್ನು ಅವರ ದೇಶದ ರಾಜಧಾನಿಯಾದ ಪೀಕಿಂಗ್(ಈಗ ಬೀಜಿಂಗ್) ನಲ್ಲಿ ಪ್ರಜೆಗಳ ಎದುರು ಪೆರೇಡ್ ಮಾಡಿಸಿದ್ದು. ಈ ಚಿತ್ರಗಳು ನಮ್ಮ ಮತ್ತು ದೇಶ ವಿದೇಶದ ಪತ್ರಿಕೆಗಳಲ್ಲಿ ಮತ್ತು ಅಲ್ಲಿನ ಟಿ.ವಿ.ಗಳಲ್ಲಿ ಬಿತ್ತರಗೊಂಡು ನಮ್ಮ ನಾಡಿಗೆ ನಾಡೇ ನಾಚಿಕೆ, ಅವಮಾನಗಳಿಂದ ತಲೆ ತಗ್ಗಿಸುವಂತೆ ಆದದ್ದು. ಇಷ್ಟಾದರೂ ಪಟ್ಟಭದ್ರ ಹಿತಾಸಕ್ತಿಗಳು ಎಚ್ಚೆತ್ತುಕೊಳ್ಳಲಿಲ್ಲ. ನಮ್ಮ ರಾಷ್ಟ್ರದ ಅತ್ಯಪಾರ ಜನಸಂಖ್ಯೆಗೆ ನಿಜ ಸ್ಥಿತಿಯನ್ನು ತಿಳಿಸದೆ ಅಜ್ಞಾನಾಂಧಕಾರದಲ್ಲಿ ಇಟ್ಟದ್ದು, ವಿಶ್ವದ ಅತ್ಯಂತ ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆಯ ಜನತೆಗೆ ಸುಳ್ಳುಗಳ ಸರಮಾಲೆಯನ್ನೇ ತೊಡಿಸಿದ್ದು. 'ಚೀಣೀಯರು, ಬರೀ ಮಂಜಿನ ತಾಣವಾಗಿರುವ ನಮ್ಮ ಮಹೋನ್ನತ ಪರ್ವತಾವಳಿಯನ್ನು ಯಾಕೆ ದಾಟಿ ಬಂದಾರು? ಅವರಿಗೆ ಅಲ್ಲಿ ಯಾವ ಲಾಭವಿದೆ? ಅಲ್ಲಿ ಒಂದು ಹುಲ್ಲೆಸಳೂ ಬೆಳೆಯುವುದಿಲ್ಲ(not a blade of grass grows there)'ವೆಂದು ನಮ್ಮ ಪ್ರಧಾನಿಗಳು ಜನ ಪ್ರತಿನಿಧಿಗಳಿಗೆ, ಜನಪದಕ್ಕೆ ಅರುಹಿದರು. ಅವರಿಗೆ ಸರಿಯಾದ ಅಂಕಿ ಅಂಶಗಳನ್ನು,

ಸಮರದ ವಿವರಗಳನ್ನು ತಿಳಿಸದ ಸಲಹೆಗಾರರನ್ನು ಬಹಿರಂಗಗೊಳಿಸಿ ಶಿಕ್ಷೆ ಒದಗಿಸದಿದ್ದದ್ದು ನಮ್ಮ ತಲೆಯಾಳುಗಳ ಲೋಪವಾಗಿತ್ತು—ಇಂತಹ ಹಿನ್ನೆಲೆಯಲ್ಲಿ `ಕುರಿಗಳು, ಸಾರ್, ಕುರಿಗಳು` ಪದ್ಯ ಮೂಡಿರುವುದಾಗಿ ನಿಸಾರರು ನುಡಿದಿದ್ದಾರೆ.

ಆ ಅವಧಿಯಲ್ಲಿ ಆಗ ಅವರ ಮನಸ್ಸಿನಲ್ಲಿ ಉಂಟಾದ ಕ್ಷೋಭೆ, ಕೋಪ ತಾಪ, ಅಪಮಾನಗಳ ಪ್ರತೀಕವಾಗಿ ಈ ಕವಿತೆ ಉದ್ಭವಿಸಿದೆ. ಅವರು ಇದನ್ನು ವಾರಗಟ್ಟಲೆ ಪ್ರತಿದಿನ ಅನುಭವಿಸಿದ್ದನ್ನು ನೆನೆಯುತ್ತಾರೆ. ಇಂತಹ ಚಿತ್ತ ಸ್ವಾಸ್ಥ್ಯವನ್ನು ಕಳೆದುಕೊಂಡಿದ್ದ ಒಂದು ದಿನ ಅವರು ಯಥಾಪ್ರಕಾರ ಸಂಜೆಯ ವೇಳೆ ಬಸವನಗುಡಿಯಲ್ಲಿದ್ದ ತಮ್ಮ ಮನೆಯಿಂದ ಗಾಂಧಿ ಬಜಾರ್‌ಗೆ ಮಿತ್ರರನ್ನು ಭೇಟಿಯಾಗಲು ನಡೆದು ಹೋಗುತ್ತಿದ್ದಾಗ, ಅಲ್ಲೊಂದು ಕುರಿಯ ಮಂದೆ ರಸ್ತೆ ಹಾದದ್ದನ್ನು ಗಮನಿಸಿದರಂತೆ. ಆ ಕುರಿಗಳ ಅಸ್ವತಂತ್ರ ಮತ್ತು ಪರಾಧೀನ ವರ್ತನೆ, ಒಂದು ಕುರಿ ದಿಕ್ಕು ತಪ್ಪಿದರೆ ಇಡೀ ಮಂದೆ ಅದನ್ನು ಹಿಂಬಾಲಿಸುವುದು, ಕುರುಬನ ಒಡೆತನದ ನಿಷ್ಕರುಣೆ ಇತ್ಯಾದಿಗಳು ನಿಸಾರರಿಗೆ ತಟಕ್ಕೆಂದು ಪ್ರಸ್ತುತ ದೇಶದ ಪರಿಸ್ಥಿತಿಗೆ ಲಗತ್ತಾದಂತೆ ಭಾಸವಾಗಿ, ಅವರಿಗೆ ಅರಿವೇ ಇಲ್ಲದ ಹಾಗೆ ಅಪ್ರಜ್ಞಾಪೂರ್ವಕವಾಗಿ `ಕುರಿಗಳು, ಸಾರ್, ಕುರಿಗಳು' ಎನ್ನುವ ಶೀರ್ಷಿಕೆ ಹೊಳೆದು, ಅದನ್ನು ತಮ್ಮಲ್ಲೇ ತಾವು ಉಚ್ಚರಿಸಿದರಂತೆ. ನಮ್ಮ ನಾಡಿನ ಜನತೆಯ ನಿಸ್ಸಹಾಯ ಸ್ಥಿತಿಗೆ, ಅಡ್ಡಾದಿಡ್ಡಿ ಹಾಗೂ ಅವ್ಯವಸ್ಥಿತ ಜೀವನಕ್ಕೆ, ನಮ್ಮನ್ನು ಅಧಿಕಾರದ ಕಡಿವಾಣದಿಂದ ನಿಯಂತ್ರಿಸಿ ನಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರುವ ಸೋಗಲಾಡಿ ಪ್ರಭುವರ್ಗಕ್ಕೆ ಒಂದು ಸಮಂಜಸವಾದ ಪ್ರತೀಕವನ್ನು ಮನಗಂಡವರಂತೆ ವಾಪಸ್ಸು ಮನೆಗೆ ಮರಳಿ, ಆ ಭಾವಾವೇಶದ ಅವಸ್ಥೆಯಲ್ಲಿ ಸುಮಾರು ಒಂದು ತಾಸಿನ ಅವಧಿಯಲ್ಲಿ ಅವಿಚ್ಛಿನ್ನವಾಗಿ `ಕುರಿಗಳು, ಸಾರ್...` ಕವನವನ್ನು ರಚಿಸಿದರಂತೆ.

ಅದು ಯೋಗವಶಾತ್ ಒಂದು ವಾರದಲ್ಲೇ ಮಾಸಪತ್ರಿಕೆ(`ಕೈಲಾಸ`)ಯೊಂದರಲ್ಲಿ ಪ್ರಕಟವಾಗಿ, ಅದಕ್ಕೆ ಓದುಗರಿಂದ ಬಂದ ಪತ್ರರೂಪದ ಪ್ರತಿಕ್ರಿಯೆಗಳು ಸಂಪಾದಕರನ್ನು ಮತ್ತು ನಿಸಾರರನ್ನು ಏಕಕಾಲಕ್ಕೇ ವಿಸ್ಮಯಗೊಳಿಸಿದವಂತೆ.

—ಈ ಹಿನ್ನೆಲೆಯಿಂದ ಕವನದ ಅರ್ಥೈಕೆಗೆ ಹೆಚ್ಚು ಸಹಾಯಕವಾಗಬಹುದೆಂಬ ಕಾರಣಕ್ಕೆ ಇಲ್ಲಿ ಅದನ್ನು ಪ್ರಸ್ತಾಪಿಸಲಾಗಿದೆ.

— ೨ —

ಇಡೀ ಪದ್ಯ ಆದ್ಯಂತವಾಗಿ ಒಂದು ಸ್ಥಾಯಿಯಾದ ಪ್ರತಿಮೆಯನ್ನು ಒಳಗೊಂಡು, ಕವಿಯ ಅಂತರಂಗದ ಆಶಯಕ್ಕೆ ಅನುರೂಪದ ಭೂಮಿಕೆಯನ್ನು ಕಲ್ಪಿಸಿರುವುದು ಇಲ್ಲಿ ಮೊದಲನೆಯದಾಗಿ ಮತ್ತು ಪೂರ್ವಭಾವಿ ಅಗತ್ಯವಾಗಿ ಗ್ರಹಿಸಬೇಕಾದ ಸಂಗತಿ. ಕುರಿ ಮಂದೆಯ ಕೇಂದ್ರ ಸಂಕೇತದೊಂದಿಗೆ ಇಲ್ಲಿನ ಇತರ ವಿವರಗಳು ಸಾವಯವ ಬಾಂಧವ್ಯವನ್ನು ಹೊಂದಿರುವುದು ನಮಗೆ ತಕ್ಷಣಕ್ಕೆ ವಿದಿತವಾಗುವ ವಿಷಯ. ಕುರುಬ, ದೊಡ್ಡಿ, ಅಲ್ಲಿನ ಹೊಲಸು, ಬ್ಯಾ ಬ್ಯಾ ಎಂಬ ನಿರಂತರ ಸದ್ದು, ಕಟುಕ—ಇತ್ಯಾದಿಗಳು ಕುರಿಗಳಿಗೆ ನೇರವಾದ ನಂಟನ್ನು ಹೊಂದಿರುವಂತೆಯೇ: ಅವುಗಳನ್ನು ಸ್ವಾಹಾ ಮಾಡಿ

ಋಷಿಯಿಂದ ತೃಪ್ತರಾಗುವ, ತಮ್ಮ ಸ್ವಹಿತದ ಬೇಳೆಯನ್ನು ಬೇಯಿಸಿಕೊಳ್ಳಲು ಹುನ್ನಾರು ನಡೆಸುವ, ಕೇವಲ ಬಾಯಾಳಿತನದಿಂದಲೇ ಅಮಾಯಕ ಪ್ರಜೆಗಳನ್ನು ಮರುಳುಗೊಳಿಸುವ, ಧೀಮಂತ ಅಧಿಕಾರಿಗಳೆನ್ನಿಸಿಕೊಂಡ ವರಿಷ್ಠರ ಕೈಗೊಂಬೆಯಾಗಿರುವ ಹುದ್ದರಿಗಳ ಚಿತ್ರಣ ಪರೋಕ್ಷವಾದ ಆದರೆ ಪ್ರಭಾವಶಾಲಿಯಾದ ಒಂದು ಸಂಬಂಧವನ್ನು ತಳೆದಿದೆ. ಇವೆಲ್ಲವುಗಳ ಕ್ರಿಯಾವಂತಿಕೆಯ ಒಟ್ಟಾರೆ ಪರಿಣಾಮವನ್ನು ನಮ್ಮ ನಾಡಿನ ಪ್ರಜೆಗಳೊಂದಿಗೆ ಸಂಲಗ್ನಗೊಳಿಸಿ ನೋಡುವುದು, ವಿವೇಚಿಸುವುದು ಈ ಕವಿತೆಯ ಮುಖ್ಯ ಉದ್ದೇಶ. ಇದನ್ನು ವಾಚಕರಲ್ಲಿ ಉತ್ಕಟವಾಗಿ ಅನುಭವವೇದ್ಯವಾಗಿಸುವುದು ನಿಸಾರರ ಮಾಟಗಾರಿಕೆಯ ಮಾತು—ಅದರ ಸರಾಗ ಮತ್ತು ಸುಲಲಿತವಾದ ಕುಣಿತದ ಓಟ, ಆಡುನುಡಿಯ ಹತ್ತಿರದ ಆಪ್ತ ಧಾಟಿ ಮತ್ತು ಅಮೋಘ ಚಿತ್ರಕ ಸಾಮರ್ಥ್ಯ. ಮೊದಲ ಬಾರಿಗೆ ಕನ್ನಡ ಕವನದಲ್ಲಿ ಬಿರಿಯಾನಿ, ಮೆಹರುಬಾನಿ, ಜಂಗು, ಜಮಾಬಂದಿ, ಗೈರತ್ತು, ಗಮ್ಮತ್ತು, ಜಂಗ್ ಮುಂತಾದ ಉರ್ದು ಪದಗಳನ್ನು ಯಥೋಚಿತವಾಗಿ ಪದ್ಯದ ಪರಿಣಾಮಕಾರಿತೆಯನ್ನು ಸಾಧಿಸಲು ಬಳಸಿಕೊಂಡದ್ದು ನಿಸಾರರ ಕೌಶಲಕ್ಕೆ ಸಾಕ್ಷಿ ನೀಡುತ್ತದೆ.ಕವಿತೆಯ ಸಾಲುಗಳ ಉದ್ದ ಮತ್ತು ನಿಲುಗಡೆಯಲ್ಲಿ, ಪ್ರಾಸಗಳ ಉಪಯೋಗದಲ್ಲಿ ಒಂದೇ ತೆರನಾದ ನಿಯಮವಿಲ್ಲದಿದ್ದರೂ ಕವಿತೆಯ ವಸ್ತುವಿನ ನಿರೂಪಣೆಯಲ್ಲಿ ಸುವ್ಯವಸ್ಥಿತ ಹಾಗೂ ಸುಸಂಬದ್ಧವಾದ ಕಾರ್ಯವನ್ನು ನಿರ್ವಹಿಸುವುದು ಒಂದು ವಿಶೇಷ.

ಕವಿತೆ ಶುರುವಾಗುವುದೇ ನಾಟಕೀಯ ಹಾಗೂ ನೇರ ಸಂಬೋಧನೆಯ ಪಲ್ಲವಿ ರೂಪದ ಮಾತಿನ ರೀತಿಯಿಂದ:

> **‘ಕುರಿಗಳು, ಸಾರ್, ಕುರಿಗಳು:**
> **ಸಾಗಿದ್ದೇ**
> **ಗುರಿಗಳು.’**

ಕವಿತೆಯ ಆಶಯವನ್ನು ಮುನ್ಸೂಚಿಯೆಂಬಂತೆ ಬರುವ ‘ಸಾಗಿದ್ದೇ ಗುರಿಗಳು’ ಎಂಬ ಸಾಧಾರಣ ಮಾತುಗಳಲ್ಲಿ ಜನರ ಸಾಮೂಹಿಕ ಬಾಳಿನ ಅನಿಶ್ಚಿತ ಮತ್ತು ಅವ್ಯವಸ್ಥಿತ ರೀತಿಯ ಸೂಚನೆಯಿದೆ. ಒಟ್ಟಾರೆಯಾಗಿ ಇರಲು ಕಲಿತಿರುವವರಲ್ಲಿ ಒಗ್ಗಟ್ಟಿದೆಯೆಂದು ನಂಬಬೇಕಾದ್ದಿಲ್ಲ. ವ್ಯಕ್ತಿ ವಿಶೇಷವೆನ್ನಿಸುವ ಸ್ವಂತಿಕೆ, ಸ್ವತಂತ್ರತೆ, ಸ್ವಾಭಿಮಾನಗಳನ್ನು ರೂಢಿಸಿಕೊಳ್ಳಲು ಮಂದೆ ಬಾಳು ಆಸ್ಪದವೀಯದು. ಒಂದು ಮತ್ತೊಂದರ ಹಿಂಬಾಲಿಕೆಯನ್ನು, ಅನುಕರಣೆಯನ್ನು ಮಾಡುವ ಅಭ್ಯಾಸದ ಕಾರಣ ಯಾವುದಕ್ಕೂ ತನ್ನ ಧೀಶಕ್ತಿಯನ್ನಾಗಲಿ, ವಿವೇಚನಾ ಸಾಮರ್ಥ್ಯವನ್ನಾಗಲಿ ಬೆಳೆಸುವ, ಬಳಸುವ ಪ್ರಮೇಯವೇ ಬಾರದು. ಅವುಗಳಿಗೆ ಮುಖ್ಯವಾದದ್ದು ಹೊಟ್ಟೆ ಹೊರೆದುಕೊಳ್ಳುವಿಕೆಯಷ್ಟೆ. ಉದರ ವಿಧೇಯಿಗಳಾದ ಇಂತಹ ಪರಾಧೀನ ಜೀವಿಗಳಿಗೆ ಜೀವನದ ಸಾರ್ಥಕತೆಯ ಹಿರಿಯ ಆದರ್ಶವನ್ನು ಬೋಧಿಸುವುದಂತೂ ಬಹು ದೂರದ ವಿಚಾರ. ಕೊನೆಯ ಪಕ್ಷ ತಮ್ಮ ಸ್ವಂತ ಬದುಕಿನಲ್ಲಿ ಸುಧಾರಣೆಯನ್ನೊ, ಸ್ವಾಭಿಮಾನವನ್ನೊ ತಂದುಕೊಳ್ಳುವಷ್ಟಾದರೂ ಬುದ್ಧಿಯ ಬಳಕೆಯಾದರೆ ಸಾಕು ಎಂದರೆ, ಅದೂ ಕೂಡ ಅವುಗಳ ನಿಲುಕಿಗೆ ಎಟುಕದ ಸಂಗತಿ. ಈ ವಿಷಯವನ್ನು ಕೆಳಗಿನ ಸಾಲುಗಳು ಮನವರಿಕೆ ಮಾಡಿಕೊಡುತ್ತವೆ:

‘ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ,
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,
ಕುರಿಗಳು, ಸಾರ್, ಕುರಿಗಳು’

ಮುಂದಿನ ಸಾಲುಗಳಲ್ಲಿ ನಮ್ಮ ನಾಡಿಗೆ ಖಚಿತವಾದ ಒಂದು ಸಮಾಜೋ-ರಾಜಕೀಯ ನಿಲವು ಇಲ್ಲದಿರುವಿಕೆಯನ್ನು, ಸಮಯಕ್ಕೆ ತಕ್ಕದ್ದಾಗಿ ಲೋಕವ್ಯಾಪಿಯಾದ ಯಾವುದಾದರೂ ಒಂದು ಸಿದ್ಧಾಂತಕ್ಕೆ ಬದ್ಧವಾಗಿರುವುದನ್ನು, ಕೆಲವೊಮ್ಮೆ ಯಾವುದೇ ನಿಶ್ಚಿತವಾದ ಹಾಗೂ ನಮ್ಮ ರಾಷ್ಟ್ರದ ಜಾಯಮಾನಕ್ಕೆ ಅನುಗುಣವಾದ ಧೋರಣೆಯಿರದೆ ತಾಟಸ್ಥ್ಯವನ್ನು, ನಿರ್ಲಿಪ್ತಿಯನ್ನು ಅಪ್ಪಿಕೊಳ್ಳುವುದನ್ನು—ನಾವು ಗಮನಿಸುತ್ತೇವೆ. ಆಗ ನಮ್ಮ ನಾಡು ‘Golden Neutrality’ ಎಂಬ ತತ್ತ್ವಕ್ಕೆ ಅಂಟಿದ್ದನ್ನು ಈ ನಿಲವಿನಿಂದ ತಿಳಿಯಬಹುದು:

‘ಎಡ ದಿಕ್ಕಿಗೆ, ಬಲ ದಿಕ್ಕಿಗೆ, ಒಮ್ಮೆ ದಿಕ್ಕುಪಾಲಾಗಿ,
ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತಿರುವ,
ಬರೀ ಕಿರುಚಿ ರೇಗುತಿರುವ,
ನೊಣ ಕೂತರೆ ಬಾಗುತಿರುವ,
ತಿನದಿದ್ದರು ತೇಗುತಿರುವ,
ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ
ಅವರು, ಇವರು, ನಾವುಗಳು
ಕುರಿಗಳು, ಸಾರ್, ಕುರಿಗಳು.’

ಒಮ್ಮೆ ನಾವು ಎಡ ಪಂಥೀಯ(Leftists)ರಾಗಿ, ಮತ್ತೊಮ್ಮೆ ಬಲ ಪಂಥೀಯ (Rightists)ರಾಗಿ, ಒಮ್ಮೆ ಇವೆರಡನ್ನೂ ಗಾಳಿಗೆ ತೂರಿ, ಅಲಕ್‌ನಿರಂಜನರಂತೆ ಯಾವುದನ್ನೂ ಹಚ್ಚಿಕೊಳ್ಳದೆ ಸುಮ್ಮನೆ ಇದ್ದು ಬಿಡುವುದು ಮತ್ತು ಇಂತಹ ಎಡಬಿಡಂಗಿ ಧೋರಣೆಯ ದೆಸೆಯಿಂದ ಸ್ತಿಮಿತ ತಪ್ಪಿ ನಮ್ಮ ಜಾಯಮಾನಕ್ಕೆ ಅಸಹಜವಾದ ಕಾರ್ಯಗಳಲ್ಲಿ ತೊಡಗಿ ಅವುಗಳನ್ನೇ ನಿಜವಾದುವೆಂಬಂತೆ, ಸರಿಯೆಂಬಂತೆ ಭ್ರಮೆಯನ್ನು ಬೆಳೆಸಿಕೊಳ್ಳುವುದು, ನಿಜಕ್ಕೂ ನಮ್ಮ ನಾಡಿನ ಒಟ್ಟಾರೆ ಬದುಕಿನ ದುರಂತ. ಇದರಿಂದ ನಾವು ನಿಷ್ಕ್ರಿಯರಾಗಿ, ದುರ್ಬಲರಾಗಿ ನರಳುತ್ತಿರುವುದು ನಮಗೇ ವೇದ್ಯವಾಗುತ್ತಿಲ್ಲ. ಅಂದಿನ ನಾಡಿನ ಸ್ಥಿತಿಗತಿಗಳಿಗೂ ಇಂದಿನವಕ್ಕೂ ಹೆಚ್ಚು ವ್ಯತ್ಯಾಸವಿಲ್ಲದಿರುವುದೇ ಈ ಕವಿತೆ ಇಂದಿಗೆ ಸಹ ‘ರಿಲೆವೆಂಟ್’ ಅನ್ನಿಸಲು ಕಾರಣ.

ಆಗಿನ ಕಾಲದಲ್ಲಿ ಪ್ರಚಲಿತವಾಗಿದ್ದ ಸಮಾಜವಾದ ಆಧಾರಿತ ಸಮಾಜ (Socialistic Pattern of Society)ವೆಂಬ ರಾಜಕೀಯ ಕಲ್ಪನೆಯ ಇತಿಮಿತಿಗಳು ಮುಂದಿನ ಪಂಕ್ತಿಗಳಲ್ಲಿ ಮಾರ್ಮಿಕವಾಗಿ ಪ್ರಸ್ತಾಪಗೊಂಡಿವೆ. ನೆಹರೂ ಅವರ ಜೊತೆ ಇಂಡೋನೀಸಿಯದ ಸುಕರ್ನೊ, ಈಜಿಪ್ಟ್‌ನ ನಾಸೆರ್, ಚೀನಾದ ಚೌಎನ್ ಲೈ ಮತ್ತಿತರರು

ಪಾಶ್ಚಿಮಾತ್ಯ ರಾಜಕೀಯ ಪದ್ಧತಿಯ ಸಾಮ್ರಾಜ್ಯಶಾಹಿ ಧೋರಣೆಗೆ ವಿರುದ್ಧವಾಗಿ ಈ ರಾಜಕೀಯ ಸಿದ್ಧಾಂತವನ್ನು ತಾತ್ತ್ವಿಕವಾಗಿ ಅಂಗೀಕರಿಸಲು ಬಾಂಡುಂಗ್ ಎಂಬಲ್ಲಿ ಸಭೆ ಸೇರಿ ಅನುಮೋದಿಸಿದ್ದರು. ಆದರೆ ಅದು ಆಚರಣೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಿಲ್ಲ. ಈ ತತ್ತ್ವ ನಮ್ಮ ದೇಶದ ಜನ ಸಾಮಾನ್ಯರ ಒಟ್ಟಾರೆ ಹಿತದ ದೃಷ್ಟಿಯಿಂದ ಸಮ್ಮತವೆನ್ನಿಸಿದರೂ ಅದು ವ್ಯಕ್ತಿಯ ಸ್ವಾತಂತ್ರ್ಯವನ್ನು, ಅವನ ವಿಶೇಷತೆಗಳನ್ನು ಲೆಕ್ಕಿಸುವಂತಹದ್ದಾಗಿರಲಿಲ್ಲ. ವ್ಯಕ್ತಿ ತಾನು ಸಮುದಾಯವೆಂಬ ಸರಪಣಿಯ ಗೊಣಸಾಗಿ ಯಾಂತ್ರಿಕ ದುಡಿಮೆಗೆ ಅರ್ಪಿಸಿಕೊಂಡು ಸಮಾಜದೆದುರು ತನ್ನ ಸ್ವಕೀಯ ಚಹರೆಯನ್ನು ಮರೆ ಮಾಡಿಕೊಳ್ಳುವ ಪರಿಸ್ಥಿತಿಗೆ ಪಕ್ಕಾಗುತ್ತಾನೆ. ಅನ್ನ-ವಸ್ತ್ರದ ಅಗತ್ಯಗಳ ಪ್ರಾಮುಖ್ಯದಲ್ಲಿ ವ್ಯಕ್ತಿಯ ಮಾನಸಿಕ ವಿಕಾಸ, ಕಲಾ ಸಾಹಿತ್ಯಾದಿ ಸೃಜನಾತ್ಮಕ ಚಟುವಟಿಕೆಗಳು ಸ್ವತಂತ್ರವಾಗಿ ನೆರವೇರಲು ಶಕ್ಯವಾಗುವುದಿಲ್ಲ. ವ್ಯಷ್ಟಿ ಮಟ್ಟದ ಧೀಶಕ್ತಿಯ ಉಪಯೋಗ ಮತ್ತು ಅದರ ನಿಮಿತ್ತವಾದ ಸಾಧನೆ, ಸ್ವಹಿತಾಸಕ್ತಿಯ ಹುನ್ನಾರವೆನ್ನಿಸಿ ಸಮಾಜ ವಿರೋಧಿಯೆಂದು ಪರಿಗಣಿತವಾಗುತ್ತದೆ. ಒಂದು ದೃಷ್ಟಿಯಿಂದ ಪ್ರಜಾಪ್ರಭುತ್ವದ ಜೀವಾಳಸ್ವರೂಪದಂತಿರುವ ಸಮಾಜವಾದದ ತತ್ತ್ವಗಳು, ಸಂಯಮರಹಿತ ಹಾಗೂ ಅತಿರೇಕದ ಬಳಕೆಯಿಂದ ವ್ಯಕ್ತಿ ಬದುಕಿಗೆ, ಅವನ ಪ್ರತಿಭಾ ವಿಲಾಸದ ಪ್ರದರ್ಶನಕ್ಕೆ ಕಂಟಕಪ್ರಾಯವೂ ಆಗಬಹುದು. ಈ ಅಪಾಯವನ್ನು ಪ್ರಸ್ತುತ ಪದ್ಯದ ಈ ಸಾಲುಗಳು ಮೊಗುಂ ಆಗಿ ಸೂಚಿಸುತ್ತವೆ:

‘ಮಂದೆಯಲ್ಲಿ ಎಲ್ಲವೊಂದೆ ಆದಾಗಲೇ ಸ್ವರ್ಗ ಮುಂದೆ:
ಅದಕಿಲ್ಲವೆ ನಾವುತ್ತರ?
ಮೆದುಳಿನಲ್ಲಿ ತಗ್ಗೆತ್ತರ,
ಹಿರಿದು, ಕಿರಿದು ಮಾಯಿಸಿ,
ಒಬ್ಬೊಬ್ಬರಿಗಿರುವ ಮೆದುಳ ಸ್ವಾರ್ಥದ ಉಪಯೋಗದಿಂದ
ಇಡಿ ಮಂದೆಗೆ ಹಾಯಿಸಿ,
ಹೊಟ್ಟೆ ಬಟ್ಟೆಗೊಗ್ಗದಂಥ ಕಲೆಯ ಕರ್ಮಕಿಳಿಯದಂತೆ
ತಲೆ ಬೆಲೆಯ ಸುಧಾರಿಸಿ,
ಬಿಳಿ ಕಪ್ಪಿನ ದ್ವಂದ್ವಗಳಿಗೆ ಮಾಡಿಸಿ ಸಮಜಾಯಿಷಿ,
ನಮ್ಮ ಮೆದುಳು ಶುದ್ಧಿಯಾಗಿ, ಬುದ್ಧಿ ನಿರ್ಬುದ್ಧಿಯಾಗಿ,
ಕೆಂಬಣ್ಣವನೊಂದೆ ಪೂಸಿ,
ಅದರ ಬಾಲ ಇದು, ಮತ್ತೆ ಇದರ ಬಾಲ ಅದು ಮೂಸಿ
ನಡೆವ ನಮ್ಮೊಳೆಲ್ಲಿ ಬಿರುಕು?’

ಮೇಲು ನೋಟಕ್ಕೆ ಕುರಿಯ ಮಂದೆಯನ್ನು ಕಂಡಾಗ ಎಷ್ಟೊಂದು ಗಾಢವಾದ ಸಹಬಾಳ್ವೆ, ಒಗ್ಗಟ್ಟು, ಪರಸ್ಪರ ಅನ್ಯೋನ್ಯತೆಯಿದೆ ಎಂದು ಭಾಸವಾಗದಿರದು. ಆದರೆ ವಾಸ್ತವದಲ್ಲಿ ಒಂದೊಂದು ಜೀವವೂ ಅಸ್ವತಂತ್ರ, ನಿಯಂತ್ರಿತ ಮತ್ತು ಮಂದೆಯಲ್ಲೇ ಅಸ್ತಿತ್ವ, ಅರ್ಥವಂತಿಕೆಗಳನ್ನು ಕಂಡಿರುವಂಥದ್ದು.

ಇಂತಹ ಪರಾಧೀನ ಬಾಳನ್ನು ನೂಕುತ್ತಿರುವವರನ್ನು ಎಚ್ಚರಿಕೆಯಿಂದ ನಿಗಾ ವಹಿಸಿ

ರಕ್ಷಿಸುವ, ಅವರ ಆಶೋತ್ತರಗಳನ್ನು ಪೂರೈಸಲು ನೇಮಕವಾಗಿರುವ ನೇತಾರರು ಎಂಥವರು? ಲೋಕ ಜ್ಞಾನವಾಗಲಿ, ನಾಡಿನ ಸ್ಥಿತಿಗತಿಗಳ ನಿಜವಾದ ತಿಳಿವಳಿಕೆಯಾಗಲಿ ಇಲ್ಲದ ಅಸಂವೇದಕ ಅಶಿಕ್ಷಿತರು. ಹಣ, ಅಧಿಕಾರಗಳನ್ನೇ ಪುರುಷಾರ್ಥವೆಂದು ನಂಬಿದವರು. ನವ ಶ್ರೀಮಂತ ವರ್ಗ(Neo-rich Class)ಕ್ಕೆ ಸೇರಿರುವ ಈ ಖದೀಮರು ಇತ್ತೀಚಿಗಷ್ಟೇ ಸಭ್ಯತೆ ಶಿಷ್ಟಾಚಾರಗಳನ್ನು ತಮ್ಮ ಉಡಿಗೆ ತೊಡಿಗೆಗಳಲ್ಲಿ, ಮಾತು ವರ್ತನೆ ಗಳಲ್ಲಿ ರೂಢಿಸಿಕೊಂಡವರು, ಅಥವಾ ಹಾಗೆ ನಟಿಸುವವರು. ಐದು ವರ್ಷಗಳಿಗೊಮ್ಮೆ ಅಮಾಯಕರ ಅಜ್ಞಾನವನ್ನು ಬಳಸಿಕೊಂಡು ಕುತ್ಸಿತ ಮಾರ್ಗದಿಂದ ಗಾದಿಯನ್ನು ಏರಿದವರು. ಆಡಳಿತದ ಲವಲೇಶವೂ ಗೊತ್ತಿಲ್ಲದ ಇವರು, ಸ್ವಾರ್ಥಪರ ವಿದ್ಯಾವಂತ ಮೇಲುವರ್ಗವೆನ್ನಿಸುವ ಐಎಎಸ್ ಅಧಿಕಾರಿಗಳು ರೂಪಿಸುವ ಆದೇಶಗಳಿಗೆ ತುಟಿಪಿಟಿಕ್ಕನ್ನದೆ ತಮ್ಮ ಹೆಬ್ಬೆಟ್ಟಿನ ಒಪ್ಪಿಗೆಯನ್ನು ನೀಡುವವರು.

—ಇಂಥ ಸೋಗಲಾಡಿ ಧುರೀಣರ ಸ್ವಭಾವ ವಿಶೇಷವನ್ನು, ಅವರ ಮೋಜು ಮಜಗಳ ವೈಖರಿಯನ್ನು, ತಮಗಿಂತ ಮೇಲಿರುವವರ ವಶೀಲಿಬಾಜಿಗಾಗಿ, ಮರ್ಜಿಗಾಗಿ ಹಿಡಿಯುವ ಅಪದ್ಧ ಮಾರ್ಗವನ್ನು, ಮುಗ್ಧ ತೆರಿಗೆಗಾರರನ್ನು ನಿರ್ದಾಕ್ಷಿಣ್ಯವಾಗಿ ಬಲಿಗೊಟ್ಟು ತನ್ನ ಸ್ವಹಿತವನ್ನು ರಕ್ಷಿಸಿಕೊಳ್ಳುವ ನೀಚತನವನ್ನು—ಕವಿ ಮುಂದಿನ ಒಂದು ಚಿತ್ರದಿಂದ ಭಾವಾಭಿನಯ ಮಾಡಿಸಿ ಓದುಗರ ಮೇಲೆ ಗಾಢ ಪರಿಣಾಮ ಉಂಟುಮಾಡು ತ್ತಾರೆ. ಈ ಚಿತ್ರ, ಪದ್ಯ ಬರೆದ ಕಾಲಕ್ಕೆ ಹೇಗೆ ಹೊಚ್ಚಹೊಸದೆನ್ನಿಸಿರಬಹುದೋ, ಹಾಗೆಯೇ ಇವೊತ್ತು ಸಹ ಸ್ವಚ್ಛವಾಗಿ ಗೋಚರಿಸುತ್ತದೆ. ಕಂದಾಯ (ರೆವಿನ್ಯೂ) ಇಲಾಖೆಯ ಕಾರ್ಯಾಚರಣೆ, ಕಾರುಬಾರುಗಳನ್ನು ನೆನಪಿಸುವ ಅದು ಹೀಗಿದೆ:

'ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬನನ್ನ
ಮೆಚ್ಚಿ, ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ
ಕಿಸೆಗೆ ಹಸಿರು ನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು.
ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು'

—ಎಲ್ಲದರ ಮೇಲೆ ಕರವನ್ನು ಹೇರಿ ಬದುಕನ್ನು ದುರ್ಭರವೆನ್ನಿಸಿದ್ದಲ್ಲದೆ, ವಸೂಲಿಯಾದ ರೊಕ್ಕದಿಂದ ತಾವು ಬೆಚ್ಚಗಿರುವ ಸೌಲಭ್ಯಗಳನ್ನು ಪಡೆದುಕೊಂಡು ಐಷಾರಾಮಿ ಜೀವನವನ್ನು ಸಾಗಿಸುತ್ತಿರುವುದನ್ನು, ಒಂದಾದ ಮೇಲೊಂದು ಯೋಜನೆಗಳನ್ನು ರೂಪಿಸಿ ಅವನ್ನು ಸಮಾಜದ ಉಪಯೋಗಕ್ಕೆ ಮೀಸಲಿಡುವ ಕಾರ್ಯಗಳ ಹಿಂದೆ ತಾವು ಎಷ್ಟು ಸಾಧ್ಯವೋ ಅಷ್ಟನ್ನು ಲಪಟಾಯಿಸುವ ಕುತಂತ್ರವನ್ನು ಮೇಲಿನ ಕೊನೆಯ ಎರಡು ಸಾಲುಗಳು ಸೂಚಿಸುತ್ತವೆ.

ಹೀಗೆ, ರಾಜಕೀಯ ಪುಢಾರಿಗಳ ಸಾರ್ವತ್ರಿಕವಾದ ಹಗಲು ದರೋಡೆತನವನ್ನು ಅನಾವರಣಗೊಳಿಸುತ್ತಲೇ ದೇಶದ ವರ್ತಮಾನಸ್ಥ ಸ್ಥಿತಿಯನ್ನೂ ಅದರೊಂದಿಗೆ ಕೂಡಿಸಿ ಪ್ರಸಕ್ತತೆಯನ್ನೂ ಅಧಿಕತರ ಪರಿಣಾಮಕಾರಿತೆಯನ್ನೂ ಒಂದೇ ಸಲಕ್ಕೆ ಸಾಧಿಸುವುದು ನಿಸಾರರ ಜಾಣ್ಮೆಗೆ ಕನ್ನಡಿ ಹಿಡಿದಂತಿದೆ. ಹೀಗಾಗಿ, ಕವಿತೆ ಸಾರ್ವಜನಿಕ ಮತ್ತು ವ್ಯಕ್ತಿಗತ ಹಾಗೂ ಸಾರ್ವಕಾಲಿಕ ಮತ್ತು ಸಾಂಪ್ರತಗಳನ್ನು ಒಟ್ಟೊಟ್ಟಿಗೆ ಅರಿವು ಮಾಡಿಕೊಡುವುದನ್ನು 'ಕುರಿಗಳು, ಸಾರ್, ಕುರಿಗಳು' ಉದ್ದಕ್ಕೂ ಎಸಗುತ್ತದೆ. ಚೀಣೀಯ ಸೈನಿಕರು ನಮ್ಮ ಯೋಧರ ಮಾರಣ ಹೋಮ ನಡೆಸುತ್ತಿದ್ದರೂ ದೇಶದ ಜನತೆ ಅವಮಾನದಿಂದ ತಲೆ ತಗ್ಗಿಸಿದ್ದರೂ ತಾವು ಮಾತ್ರ ಮೋಜು ಮಜಗಳಲ್ಲಿ, ವಿಲಾಸೋಪಭೋಗಗಳ ನಶೆಯಲ್ಲಿ ತನ್ಮಯರಾಗಿದ್ದುದನ್ನು, ಅಸಹಾಯಕ ಬಡ ಜನತೆಯ ಬೊಬ್ಬೆ ಗೋಳು ಆಕ್ರಂದನಗಳು ಮುಗಿಲು ಮುಟ್ಟುತ್ತಿದ್ದರೂ ಕಿವುಡರಂತೆ ತಮ್ಮ ಆಮೋದಗಳಲ್ಲಿ ಮೈ ಮರೆತಿದ್ದ ನಾಯಕ ಮಣಿಗಳ ಕಟು ಚಿತ್ರ ಇಲ್ಲಿದೆ:

'ಬೆಟ್ಟ ದಾಟಿ ಕಿರುಬ ನುಗ್ಗಿ, ನಮ್ಮೊಳಿಬ್ಬರನ್ನು ಮುಗಿಸಿ
ನಾವು 'ಬ್ಯಾ, ಬ್ಯಾ' ಎಂದು ಬಾಯಿ ಬಾಯಿ ಬಡಿದುಕೊಂಡು
ಬೊಬ್ಬೆ ಹಾಕುತ್ತಿದ್ದರೂ
ಚಕ್ಕಭಾರ ಆಟದಲ್ಲೆ ಮಗ್ನರು ಇವರೆಲ್ಲರು
ನಮ್ಮ ಕಾಯ್ವ ಗೊಲ್ಲರು'

ಕುರಿಗಳನ್ನು ಬಿಸಿಲಿನ ಝಳದ ಮೈದಾನದಲ್ಲಿ ಮೇಯಲು ಬಿಟ್ಟು ತಾವು ಮರದ ತಣ್ಣನೆಯ ನೆರಳಲ್ಲಿ ಆರಾಮಾಗಿ ಕೂತು ಚೌಕಾಭಾರ ಆಟದಲ್ಲಿ ತಲ್ಲೀನರಾಗುವ ಕುರುಬರ ಆಪ್ತಚಿತ್ರ ಕಣ್ಣಿಗೆ ಕಟ್ಟಿದಂತೆ ಇಲ್ಲಿ ನಿರೂಪಿತವಾಗಿದೆ.

ಮುಂದಿನ ಹದಿನೈದು ಸಾಲುಗಳಲ್ಲಿ ನಮ್ಮ ದೇಶವನ್ನು ದೊಡ್ಡಿಗೆ, ರೊಪ್ಪಕ್ಕೆ ಹೋಲಿಸಲಾಗಿದೆ. ನಮ್ಮ ದೇಶದ ಜನಸಂಖ್ಯೆಯ ಏರುವೆ, ಅದರ ಪರಿಣಾಮವಾಗಿ ಸಂಭವಿಸಿರುವ ಇಕ್ಕಟ್ಟಿನ ಕಿಷ್ಕಿಂಧಾರೂಪದ ಜನ ವಸತಿ, ವಾಯು ಮಾಲಿನ್ಯ, ರಸ್ತೆಗಳಲ್ಲಿನ ಜನ ದಟ್ಟಣೆ ಇತ್ಯಾದಿ ಸಾರ್ವಜನಿಕ ಮತ್ತು ಖಾಸಗಿ ವಲಯದ ಗಬ್ಬು ಗಲೀಜು ದುರ್ನಾತವನ್ನು, ಇಲ್ಲಿನ ಮಿತಿಯರಿಯದ ಅಜ್ಞಾನಾಂಧಕಾರವನ್ನು ಹೃದಯಂಗಮವಾಗಿ ಚಿತ್ರಿಸುತ್ತವೆ ಈ ಪಂಕ್ತಿಗಳು. ಎಷ್ಟೇ ಕಷ್ಟ ನಷ್ಟ ಕೋಟಲೆ ಕಾರ್ಪಣ್ಯ ನಮ್ಮ ಜನರ ಬಾಳನ್ನು ಮುಕ್ಕುಗೊಳಿಸಿದ್ದರೂ ಕುರಿಗಳಂತೆ ಪ್ರತಿಭಟಿಸದೆ ಎಲ್ಲವನ್ನೂ ಸಹಿಸಿಕೊಂಡು, ತಮ್ಮನ್ನೇ ತಾವು ಶಪಿಸುತ್ತ ಒಳಗೊಳಗೇ ನೊಂದುಕೊಂಡು ಒಬ್ಬರನ್ನೊಬ್ಬರು ಸಾಂತ್ವನಿಸುತ್ತ ಬದುಕನ್ನು ತಳ್ಳುತ್ತಿರುವ ರೀತಿ ಅತ್ಯಂತ ಅಮಾನವೀಯ ಮತ್ತು ಕರುಣಾಜನಕವೆನ್ನಿಸುವಂಥದು. ಇಂತಹ ದುಸ್ಸಹನೀಯ ಜೀವಿತವನ್ನು ಕುರಿ ದೊಡ್ಡಿಗೆ ಸವಿವರವಾಗಿ ಹೋಲಿಸಿ ಪರಿಣಾಮವನ್ನು ಸಾಧಿಸಿರುವುದು ಸರ್ವೋಚಿತವಾಗಿದೆ.

ಕೊನೆಯ ಹನ್ನೊಂದು ಸಾಲುಗಳಲ್ಲಿ ನಮ್ಮನ್ನು ರಕ್ಷಿಸಬೇಕಾದ, ಪೋಷಿಸಬೇಕಾದ ಕುರುಬರೇ, ಅಂದರೆ ನಮ್ಮ ಉದ್ಧಾರಿಗಳೇ ನಮ್ಮ ಹತ್ಯೆಗೆ ಸನ್ನದ್ಧರಾದ ಕಟುಕರಾಗಿ ಮಾರ್ಪಡುವ ಸಂಗತಿ, ತನ್ನ ಓಜಃಪೂರ್ಣ ಮತ್ತು ಏದುಸಿರು ಬಿಡುವಂತೆ ಮುನ್ನುಗ್ಗುವ

ಪ್ರಾಸಬದ್ಧ ಸಾಲುಗಳಲ್ಲಿ ಸುವ್ಯಕ್ತವಾಗಿದೆ. ಅಧಿಕಾರವನ್ನು ತಳೆದಿರುವ ಕುರುಬ, ತನ್ನ ಕಟುಕತನವನ್ನು ಬಹಿರಂಗವಾಗಿ ಮೆರೆಸಿದ್ದರೂ ಕುರಿಗಳಿಗೆ ಅದರ ನೆದರಿಲ್ಲ, ಅದರ ಗಂಡಾಂತರದ ಅರಿವಿಲ್ಲ. ಅಧಿಕಾರವೆಂಬ ಮಚ್ಚಿನ ಫಳಫಳವೆಂಬ ಹೊಳಪಿಗೆ, ಬೀದಿ ದೀಪಕ್ಕೆ ಮಳೆ ಹಾತೆಗಳು ಹಾತೊರೆಯುವ ಹಾಗೆ, ಕುರಿಗಳ ಕಣ್ ಕೋರೈಸಿ ಸ್ವತಃ ತಾವೇ ಹೋಗಿ ತಮ್ಮ ಕುತ್ತಿಗೆಯನ್ನು ಅದಕ್ಕೆ ನೀಡಿವೆ. ಐದು ವರ್ಷಕ್ಕೊಮ್ಮೆ ಅಪಾತ್ರರನ್ನು ಅಧಿಕಾರದ ಗದ್ದುಗೆಗೆ ಏರಿಸುವ ಜನಸಾಮಾನ್ಯರು, ತಮ್ಮ ಕತ್ತಿಗೆ ತಾವೇ ನೇಣು ಕುಣಿಕೆ ಬಿಗಿದುಕೊಳ್ಳುವ ನೈಜ ಸ್ಥಿತಿ ಇಲ್ಲಿ ಪಡಿಮೂಡಿದೆ. ನಡುನಡುವೆ ತಡೆದೂ ತಡೆದೂ ಶಕ್ತಿಯನ್ನು ಹೆಚ್ಚಿಸಿಕೊಂಡು ಧಾವಿಸುತ್ತಿರುವ ತುಂಬು ಹೊನಲಿನ ನೋಟದಂತಹ ಪಂಕ್ತಿಗಳ ಓಟವನ್ನು ಗಮನಿಸಿ: ಹಾಗೆಯೇ ಓದುಗರ ಮನಸ್ಸಿನ ಮೇಲೆ ಅವು ಸೃಷ್ಟಿಸುವ impression' ಅನ್ನೂ ಅನುಭವಿಸಿ:

'ತಳವೂರಿದ ಕುರುಬ ಕಟುಕನಾದ; ಅವನ ಮಚ್ಚೊ ಆಹ!
ಏನು ಝುಳಪು, ಏನು ಹೊಳಪು, ಏನು ಜಾದು, ಏನು ಮೋಹ!
ಆ ಹೊಳಪಿಗೆ ದಂಗಾಗಿ, ಕಣ್ಣಿಗದೇ ರಂಗಾಗಿ,
ಒಳಗೊಳಗೇ ಜಂಗಾಗಿ
ಕಣ್ಣು ಕುಕ್ಕಿ, ಸೊಕ್ಕಿರುವ, ಹೋಗಿ ಹೋಗಿ ನೆಕ್ಕಿರುವ,
ಕತ್ತನದಕೆ ತಿಕ್ಕಿರುವ,
ನಾವು, ನೀವು, ಅವರು, ಇವರು,
ಕುರಿಗಳು, ಸಾರ್, ಕುರಿಗಳು!
ಮಚ್ಚಿನ ಆ ಮೆಚ್ಚಿನಲ್ಲಿ, ಅದರಾಳದ ಕಿಚ್ಚಿನಲ್ಲಿ
ಮನೆ ಮಾಡಿವೆ ಹುಚ್ಚಿನಲ್ಲಿ
ನಮ್ಮೆಲ್ಲರ ಗುರಿಗಳು!'

ಒಟ್ಟಿನಲ್ಲಿ ಹೇಳುವುದಾದರೆ, 'ಕುರಿಗಳು, ಸಾರ್, ಕುರಿಗಳು' ಪದ್ಯ, ಕನ್ನಡದ ಭಾಗ್ಯಶಾಲಿ ಕವಿತೆಗಳಲ್ಲಿ ಒಂದಾಗಿದೆ. ಅದನ್ನು ಓದಿದಾಗ, ಹಾಡಿನ ರೂಪದಲ್ಲಿ ಆಲಿಸಿದಾಗ ಆಗುವ ಆನಂದದ ಜೊತೆಯಲ್ಲೇ, ನಮ್ಮ ನಾಡಿನ ಬವಣೆ ಬನ್ನಗಳ ಸಾಮಾಜಿಕ ಬದುಕಿನ ದರ್ಶನವಾಗಿ ವಿಷಾದದ ಭಾವವೂ ಗಾಢಗೊಳ್ಳುತ್ತದೆ: ನಿಜ ಸ್ಥಿತಿಯ ತಿಳಿವಳಿಕೆಯಿಂದ ನಮ್ಮ ಮನಸ್ಸು ಆಲೋಚನಾಪರವಾಗುತ್ತದೆ. ಬಾಳನ್ನು ನಿಟ್ಟಿಸುವ ನಮ್ಮ ನೋಟಕ್ಕೆ ಒಂದು ತಾತ್ತ್ವಿಕ ರೂಪದ ಕಾಣ್ಕೆ ಪ್ರಾಪ್ತವಾಗುತ್ತದೆ.

ಜೋಗದ ವಿದ್ಯುದಾಗರ ದೈವಿಕ ಶಕ್ತಿ. ಪೀಣ್ಯದ ಸ್ಥಾವರ ಗಾಂಧೀಜಿಯ ಆತ್ಮಶಕ್ತಿ. ನಗರದ ಉಪ ವಿದ್ಯುತ್ ಸ್ಟೇಷನ್‌ಗಳು ಬಾಪೂಸ್ಫೂರ್ತ ಉದಾತ್ತ ನಾಯಕರು. ಅವರಿಂದ ಜನ ಜೀವನದ ಕೋಟ್ಯಂತರ ದೀಪಗಳಿಗೆ ಶಕ್ತಿ, ಸ್ಥೈರ್ಯ.

ಬಂಡೆ ಮತ್ತು ಕಲ್ಲಿನ ಚೂರುಗಳು

೧

ದೈತ್ಯ ಹೆಬ್ಬಂಡೆ ಗರ್ವದಲಿ ನಿಮಿರಿ ಮಂಡೆ,
ತಾನೊಬ್ಬನೇ ಪರಿಸರದ ಭೀಮ,
ಅನಭಿಷಿಕ್ತ ಸಾರ್ವಭೌಮ
ಎನುತ ಠೇಂಕರಿಸಿತ್ತು ಸುತ್ತಮುತ್ತ
ತನ್ನ ದರ್ಪಿಷ್ಠ ಮಸ್ತಿಯ ಗತ್ತ.
ಅದರ ಅಡಿಯ ಬಳಿ ಬಾಯ್ತೆರೆದ ಕೊರಕಲಿನಲಿ
ಅಳಲಿವೆ ದೈನ್ಯದಲಿ ಅನುದಿನ ಅಸಂಖ್ಯ ಕಲ್ಲು ಚೂರುಗಳು;
ಬಂಡೆ ಕಿವಿಗೇರದನಾಥ ಆರ್ತ ದೂರುಗಳು.

ಕಿಚಾಯಿಸುತ್ತದೆ ಕುಚೋದ್ಯದಲಿ ಹೆಬ್ಬಂಡೆ
ಠೀವಿಯಲಿ ಭಾಷಿಸಿ, ಶಿಲೆ ತುಣುಕುಗಳನುದ್ದೇಶಿಸಿ:
'ತೊತ್ತುಗಳಿರಾ, ನಿರ್ಲಕ್ಷ್ಯದ ನಿತ್ಯ ತುತ್ತುಗಳಿರಾ,
ಬಿದ್ದಲ್ಲೇ ಬಿದ್ದು ನೀವು ಒದ್ದಾಡುತ್ತೀರಿ;
ಮುಳ್ಳು, ಕುರುಚಲು, ಕಳೆ, ಹಲ್ಲಿ,
ಹುಳು ಹುಪ್ಪಟೆಗಳ ಅಹೋರಾತ್ರಿ ಮುದ್ದಾಡುತ್ತೀರಿ.
ನನ್ನಂತೆ ಹಾದಿಗರ ನಿಬ್ಬೆರಗ ನೋಟಕ್ಕೆ
ಮುಗಿಲ ಜೂಟಾಟಕ್ಕೆ
ಮೈ ಸೆಟೆಸುವವಕಾಶ ನಿಮಗೆಲ್ಲಿ?
ಹತಭಾಗ್ಯ ಹುಟ್ಟುಗಳು,
ಸೃಷ್ಟಿಯ ತ್ಯಾಜ್ಯ ಗಷ್ಟುಗಳು'.

೨

ಮರು ನುಡಿದವು ವಿನಮ್ರತೆಯಲಿ
ಸ್ವಗೋತ್ರೀಯ ಚೂರುಗಳು,
ಪ್ರಕೃತಿಯ ಸದವಕಾಶವಂಚಿತ ಲಾಚಾರುಗಳು:
'ಅಯ್ಯಾ! ಸ್ವಘೋಷಿತ ಮಹನ್ಮಹನೀಯ
ಪರಿಸರ ಕೃಪಾಪೋಷಿತ ಶಿಖರ ಸ್ಥಾನೀಯ,
ಆಗಿದ್ದೆವೊಮ್ಮೆ ನಾವೂ ನಿನ್ನಂತೆ
ಬಂಡೆಯ ಅಖಂಡ ಅವಯವ,

ವಿಜೃಂಭಿಸಿದ್ದೆವು ಮೇಲ್ಮೆ ಎತ್ತರದಲ್ಲಿ ನಿರಾತಂಕ, ನಿರ್ಭಯ.
ಹಂಗಿಸಿದ್ದೆವು ನಿನ್ನಂತೆ ಹಳ್ಳದಾಳಕ್ಕೆ ಬಿದ್ದವರ,
ಅನವರತ ಅಪಮಾನ, ನೋವು ಮೆದ್ದವರ.
ನಮ್ಮ ಸ್ವಯಮಾರೋಪಿತ ಘನತೆ, ಬಲ, ಸುಸ್ಥಿರತೆಯೆದುರು
ಯಾವುದಿದೆ ಸಾಟಿ ಎನುವಹಂಕಾರದಮಲಿನ ನೆದರು
ಜಾರಿಸಿತು ನಮ್ಮನೀ ಅಧಮತಮ ಗತಿಗೆ
ತಾತ್ಸಾರ, ಯಃಕಶ್ಚಿತತೆಯ ಅಧೋಸ್ಥಿತಿಗೆ.

ನಮಗಿಂತ ಬಲು ಘಟ್ಟಿಗ ಕಾಲದ ಆ ಕಲ್ಲುಕುಟ್ಟಿಗ:
ಮಳೆ ಬಿಸಿಲು ಹಿಮ ಗಾಳಿಗಳ ಉಳಿ, ಹತ್ಯಾರುಗಳ
ಸುದೀರ್ಘಾವಧಿಯ ಎಡೆಬಿಡದ ಪೆಟ್ಟುಗಳಿಂದ
ನಮ್ಮನೀ ನಗೆಪಾಟಲಿನ ನಾಯಿ ಪಾಡಿಗೆ ತಂದ;
ಇವನ ಜೊತೆ ನರ ಕೂಡ ಪಣ ಹೂಡಿ
ಪುಡಿಗೈದ ನಮ್ಮನ್ನು ಸಿಡಿ ಮದ್ದ ಜೊತೆಗೂಡಿ.
ಉಬ್ಬದಿರು ಅಣ್ಣಯ್ಯ,
ನಾಳೆ ಕಾದಿಗೆ ನಿನಗೂ ಮಾರಿ ಹಬ್ಬ,
ಸಮಯ ಸಂದಂತೆ ಕಂದರಕ್ಕಿಳಿಯುವುದು
ನಿನ್ನಹಂಕೃತಿಯ ದಿಬ್ಬ.
ಆಲಿಕಲ್ಲುಗಳ ಕರಗಿನ ಕೊರಗನು ನೋಡಿ
ಮಂಜುಗಡ್ಡೆಯಂತೆ ನಗಬೇಡ ಖಿಕ್ಕೆಂದು,
ಮರೆತು ನೀನು ಸಹ ಮುಂದೊಮ್ಮೆ ಆ ಖೋಡಿ
ಕಾಲ ಬಕಾಸುರನ ಒಕ್ಕುಡಿತೆ, ಮುಕ್ಕೆಂದು.'

೩

ಇಂತೊರೆದ ಶಿಲಾ ವಾಮನರನೇಕರ ನೊಂದ ದನಿ ಕೇಳಿ,
ಪೊದೆಯ ಮೇಲಿನ ಅನಾಮಕ ಕಿರು ಹಕ್ಕಿ ಅನುಕಂಪ ತಾಳಿ
ಬಳಿ ಬಂದು ನಿಂತು ಸಾಂತ್ವನಿಸಿತಿಂತು:
'ಕಲ್ಲಿನ ಕಂಗಾಲ ತುಣುಕುಗಳೆ,
ಹೆಬ್ಬಂಡೆಯಣಕುಗಳೆ,
ಅರ್ಥವಾಗುತ್ತದೆ ನನಗೆ
ನಿಮ್ಮ ಮನಸಿನಾಳದ ಅಳಲು,
ಅಸ್ತಿತ್ವವನು ಕವಿದಿರುವ ಕಡು ವಿಷಾದದ ನೆಳಲು.
ಕುಸಿಯಬೇಕಿಲ್ಲ ನೀವು ಕೀಳರಿಮೆ ಕೂಪದ ತಳಕ್ಕೆ,
ಉಣಿಸಾಗಬೇಕಿಲ್ಲ ನಿತ್ಯ ಅವಹೇಳನದ ಹುಳಕ್ಕೆ.
ನಿಮ್ಮ ಇರುವಿಕೆ ಹೆಬ್ಬಂಡೆಗಿಂತಲೂ ಧನ್ಯ,
ಸರ್ವಂಸಹೆ ಪ್ರಕೃತಿಯ ದೃಷ್ಟಿಯಲಿ
ನೀವು ಸಹ ನಿರತಿಶಯ ಸನ್ಮಾನ್ಯ.

ನಿಮ್ಮಂಥ ಹುಲು ಕಲ್ಲು ಚೂರುಗಳು
ಚಿನ್ನ ತೆಗೆದಿರುವ ಸುಳಿವು ನೀಡುವ ಹಾಗೆ,
ಅದರ ನಿಚ್ಚಳ ನಿಕ್ಷೇಪದಕ್ಷಯ ಹೆಚ್ಚಳವನು
ಆಸುಪಾಸಿಗೆಲ್ಲ ಕೂಗಿ ಸಾರುವ ಹಾಗೆ,
ಬಂಜೆ ಹೆಬ್ಬಂಡೆ ಸೂಚಿಸುವುದಿಲ್ಲ;
ಗಡಾರಿ, ಡೈನಮೈಟಿಗೆ ಹುಡಿಯಾಗಿ ನಿಮ್ಮಂತೆ
ಅದರಿರವು ಕೃತಾರ್ಥವಾಗುವುದಿಲ್ಲ.'

★ ★ ★

(ಕವನ ಸಂಕಲನ: 'ಅರವತ್ತೈದರ ಐಸಿರಿ')



‘ಬಂಡೆ ಮತ್ತು ಕಲ್ಲಿನ ಚೂರುಗಳು’: ಸಾಮಾಜಿಕ ಸ್ತರಗಳ ಅಂತರದ ಗಹನ ಕಥಾನಕತೆ

♦ ಡಾ. ತಮಿಳ್ ಸೆಲ್ವಿ

ಹೊಸ ಕಾವ್ಯಾಭಿವ್ಯಕ್ತಿಯ ಮೂಲಕ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸಿದ ನಿಸಾರರು ಆಧುನಿಕ ಸಂವೇದನೆಗಳಿಗೆ ತಮ್ಮನ್ನು ಒಡ್ಡಿಕೊಂಡವರು. ನಿಸಾರ್ ಅಹಮದ್ ಅವರ ಅತ್ಯುತ್ತಮ ರಚನೆಗಳಲ್ಲಿ ಒಂದಾದ ‘ಬಂಡೆ ಮತ್ತು ಕಲ್ಲಿನ ಚೂರುಗಳು’ ಮಾನವ ಜೀವನದ ವಾಸ್ತವ ಗ್ರಹಿಕೆಯ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ವಸ್ತು, ಶಿಲ್ಪ, ಲಯ, ಕಾವ್ಯತ್ವ ಎಲ್ಲ ದೃಷ್ಟಿಯಿಂದ ಇದೊಂದು ಗಮನಾರ್ಹ ಕವನ. ಮೇಲ್ನೋಟಕ್ಕೆ ಸರಳವಾದ, ಲಲಿತವಾದ ಪದ ಪುಂಜಗಳ ಜಾಲದಂತೆ ಈ ಕವಿತೆ ಕಾಣಿಸಿದರೂ ಅದರ ಒಟ್ಟಾರೆ ಸತ್ವ ಗಹನವೂ, ಸೂಕ್ಷ್ಮವೂ ಆಗಿದೆ. ಇಲ್ಲಿ ದೈನಂದಿನ ಜೀವನದ ಪ್ರತಿಮೆಗಳಿಂದಲೇ ಪ್ರಮುಖ ಕಲೆಗಾರಿಕೆಯ ಅಭಿವ್ಯಕ್ತಿಯನ್ನು ಕಾಣಬಹುದು.

‘ಹೆಬ್ಬಂಡೆ’ಯೊಂದು ತಾನೇ ಸಾರ್ವಭೌಮನೆಂದು ಬೀಗುತ್ತಾ, ತನ್ನ ಸುತ್ತ ಬಿದ್ದಿರುವ ಕಲ್ಲಿನ ಚೂರುಗಳನ್ನು ಕಿಚಾಯಿಸುತ್ತಾ, ಅವುಗಳನ್ನು ಹೀನಾಯವಾಗಿ ಕಾಣುತ್ತಾ ಅವಹೇಳನದ ನುಡಿಗಳನ್ನು ಆಡುವುದರೊಂದಿಗೆ ಕವನ ಆರಂಭವಾಗುತ್ತದೆ. ಇಲ್ಲಿ ಹೆಬ್ಬಂಡೆ ಮತ್ತು ಕಲ್ಲಿನ ಚೂರುಗಳು ಪ್ರತಿಮಾತ್ಮಕವಾದವುಗಳು. ಬಂಡೆ—ಅಧಿಕಾರದ, ಉನ್ನತ ವರ್ಗದ, ಶ್ರೀಮಂತಿಕೆಯ, ಯೌವನದ, ಆರೋಗ್ಯದ, ಜೀವಂತಿಕೆಯ, ಇನ್ನೂ ಹೆಚ್ಚು ಹೇಳಬೇಕೆಂದರೆ ‘ಸಬಲತೆ’ಯ ಪ್ರತೀಕವಾದರೆ, ಕಲ್ಲಿನ ಚೂರುಗಳು ಅಧಿಕಾರರಹಿತರ,

ಶೋಷಿತರ, ದುಃಖಿತರ, ಎಂದರೆ 'ಅಬಲತೆ'ಯ ಪ್ರತೀಕ.

'ಸಬಲತೆ' ಎಂಬ ಒಂದು ಅಮೂರ್ತ ಸಂಸ್ಥೆ ವ್ಯಕ್ತಿಯನ್ನು ಪ್ರವೇಶಿಸಿ ಪಡೆಯುವ ವೈವಿಧ್ಯಮಯ ರೂಪಗಳನ್ನು ಗ್ರಹಿಸಬೇಕಾದಲ್ಲಿ ಅದರ ಎಲ್ಲ ಅರ್ಥಪೂರ್ಣತೆಯನ್ನೂ ಒಂದು ಚೌಕಟ್ಟಿನಲ್ಲಿ ಹಿಡಿಯಲು ಹೆಣಗಾಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಇಡೀ ಕವನದಲ್ಲಿ ವ್ಯಾಪಿಸಿಕೊಂಡಿರುವ ಕಲ್ಲಿನ ಚೂರುಗಳ ಪ್ರತಿಮೆ ತುಂಬ ಔಚಿತ್ಯಪೂರ್ಣವಾಗಿದೆ. ಕೆಳ ವರ್ಗದ, ಶೋಷಿತರ, ಅಬಲತೆಯ ದಾರುಣ ಸ್ಥಿತಿಯನ್ನು ಅತ್ಯಂತ ಸೂಕ್ಷ್ಮವಾಗಿ ಧ್ವನಿಸುತ್ತಾ, ಭವಿಷ್ಯತ್ತಿನಲ್ಲಿ ಅದರ ಸಾಧ್ಯತೆಗಳೇನು? ಭೂತದ ವೈಭವವೇನು? ವಾಸ್ತವದ ದಾರುಣತೆಯೇನು? ಎಂಬುದನ್ನು ಸೂಚ್ಯವಾಗಿ ಧ್ವನಿಸುತ್ತದೆ.

ಒಂದು ಕಾಲದಲ್ಲಿ ಸಬಲತೆಯನ್ನು ಹೊಂದಿದ್ದ ವ್ಯಕ್ತಿತ್ವ, ಪರಿಸರ ಅಥವಾ ಅಧಿಕಾರ ಕ್ರಮೇಣ 'ಅಬಲತೆ'ಯ ಕಡೆಗೆ ಸಾಗುತ್ತಾ ಹೋಗುತ್ತದೆ. ಆದರೆ ಈ ಅರಿವೇ ಇಲ್ಲದ ಸಬಲತೆ, ಅಬಲತೆಯನ್ನು ಹಂಗಿಸುತ್ತದೆ. ಅದಕ್ಕೆ ತನ್ನ ಸ್ಥಾನ ಉನ್ನತ ಎಂಬ ಅಹಂ ಇದೆ. ಉಳಿದವರನ್ನು ಕೀಳಾಗಿ ನೋಡುವ ಮನೋಭಾವ ರೂಢಿಗತವಾಗಿದೆ. ಹಿಂದೊಮ್ಮೆ ಅಂತಹುದೇ ಸ್ಥಾನಮಾನ, ಅಧಿಕಾರದಲ್ಲಿದ್ದು ಈಗ ಮೂಲೆಗುಂಪಾಗಿರುವ ಅಸಹಾಯಕ ವಸ್ತುಗಳು, 'ಅಧಿಕಾರದ ಹಮ್ಮಿನಲಿ ಬೀಗಬೇಡ, ನಾಳೆ ನಿನಗೂ ಇದೇ ಸ್ಥಿತಿ' ಎಂದು ತಿಳಿ ಹೇಳುವ ಪ್ರಯತ್ನ ಮಾಡುತ್ತವೆ.

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಡಗಿರಬಹುದಾದ 'ಸರ್ವಾಧಿಕಾರತ್ವ'ದ ಗುಣ ಕಾಲ ಮಾಗುತ್ತಿದ್ದಂತೆ, ವಯಸ್ಸಾಗುತ್ತಿದ್ದಂತೆ ಕ್ಷೀಣಿಸುತ್ತಾ ಹೋಗುತ್ತದೆ. ಆಗ ತನ್ನ ಮೊದಲಿನ ಸ್ಥಾನದಲ್ಲಿ ಬಂದು ನಿಂತ ಯುವ ಸಮೂಹವೂ ತನ್ನಂತೆಯೇ ಸರ್ವಾಧಿಕಾರದಿಂದ ವರ್ತಿಸುವುದನ್ನೂ ಅಧಿಕಾರದ ಅಹಮ್ಮಿನಲ್ಲಿ ತನ್ನನ್ನೂ ತನ್ನಂತಹವರನ್ನೂ ಹೇಯವಾಗಿ ಕಾಣುವುದನ್ನೂ ನೋಡಿ ಮರುಗುತ್ತದೆ, ಪಶ್ಚಾತ್ತಾಪ ಪಡುತ್ತದೆ. ತನ್ನ ಅನುಭವದ ಸಾರವನ್ನು ಅದಕ್ಕೆ ಧಾರೆಯೆರೆದು, ತಿದ್ದುವ ಪ್ರಯತ್ನ ಮಾಡುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಕವನ ನಮ್ಮ ಸಮಾಜದ ಒಂದು ಪ್ರಾತಿನಿಧಿಕ ಧ್ವನಿಯಾಗಿ ಮೂಡಿ ಬಂದಿದೆ.

ವ್ಯಕ್ತಿ ಹಂತ ಹಂತವಾಗಿ ಬೆಳೆಯುತ್ತಾ, ಸಾಧನೆಯ ಉತ್ತುಂಗ ತಲಪಿದ ಅನಂತರ ಅಲ್ಲಿಂದ ಕ್ರಮೇಣ ಕಾಲ ಚಕ್ರದಲ್ಲಿ ಕೆಳಗಿಳಿಯಲೇಬೇಕು. ಇದು ಪ್ರಕೃತಿಸಿದ್ಧ. ಯಥಾಸ್ಥಿತಿಯಲ್ಲಿ ಸ್ಥಿರವಾಗಿ ಇದ್ದು ಬಿಡುವುದು ಸಾಧ್ಯವಿಲ್ಲ. ಪೂರ್ಣಚಂದ್ರನೂ ಒಮ್ಮೆ ಕತ್ತಲಲ್ಲಿ ಕರಗಿ ಹೋಗುತ್ತಾನೆ. ಜೀವನ ಚಕ್ರ ಒಮ್ಮೆ ಮೇಲೇರಿದರೆ, ಮತ್ತೊಮ್ಮೆ ಕೆಳಕ್ಕಿಳಿಯಲೇಬೇಕು: ಅಧಿಕಾರ, ಸಾಧನೆ, ವೈಚಾರಿಕತೆ, ಸೃಜನಶೀಲತೆ—ಎಲ್ಲದರಲ್ಲೂ! ಅನಂತ, ಅಗಾಧ ವಿಶ್ವದಲ್ಲಿ ಸಾಧನೆಯ ಉನ್ನತಿಯನ್ನು ತಲಪಿದ ವ್ಯಕ್ತಿಯೂ ಮುಂದೆ ನಗಣ್ಯನಾಗುತ್ತಾನೆ. ನಿಧಾನವಾಗಿ ಜೀವ ಶಕ್ತಿ ಕುಂದುತ್ತದೆ. ಸಬಲನಾದವನು ಇತರರ ಆಧಾರ ಬಯಸುತ್ತಾನೆ. ಇದೊಂದು ಸಾರ್ವಕಾಲಿಕ ಅನುಭವ.

ಯಾವ ವ್ಯಕ್ತಿಯೇ ಆಗಲಿ ತನ್ನ ಕ್ಷೇತ್ರದಲ್ಲಿ ಉತ್ತುಂಗ ಸಾಧನೆ ಮಾಡಿದಾಗ ತನ್ನ ಕೆಲಸದಲ್ಲಿ ಕೃತಕೃತ್ಯತೆಯನ್ನು ಅನುಭವಿಸುತ್ತಾನೆ. ಆದರೆ ಆತ ಎಷ್ಟೇ ಉನ್ನತ

ಸ್ಥಾನದಲ್ಲಿದ್ದರೂ ಅದು ಶಾಶ್ವತವಲ್ಲ; ಎಂದೋ ಒಂದು ದಿನ ಮುಗಿದು ಹೋಗುತ್ತದೆ. ವ್ಯಕ್ತಿ ಯಾಂತ್ರಿಕವಾಗಿ, ಪ್ರಭಾವಹೀನವಾಗಿ ಎಲ್ಲವನ್ನೂ ನೋಡುತ್ತಾ ನಿರ್ಲಿಪ್ತ ಸ್ಥಿತಿ ತಲಪುತ್ತಾನೆ. ಇದು ಅನಿವಾರ್ಯವೂ ಹೌದು! ಆದರೆ ಅಧಿಕಾರದಲ್ಲಿರುವವರಿಗೆ ಇದು ಯಾವುದರ ಪರಿವೆಯೂ ಇರುವುದಿಲ್ಲ:

'ದೈತ್ಯ ಹೆಬ್ಬಂಡೆ ಗರ್ವದಲಿ ನಿಮಿರಿ ಮಂಡೆ,
ತಾನೊಬ್ಬನೇ ಪರಿಸರದ ಭೀಮ,
ಅನಭಿಷಿಕ್ತ ಸಾರ್ವಭೌಮ
ಎನುತ ಠೇಂಕರಿಸಿತ್ತು ಸುತ್ತಮುತ್ತ
ತನ್ನ ದರ್ಪಿಷ್ಠ ಮಸ್ತಿಯ ಗತ್ತ.'

ಅಧಿಕಾರದ, ಉನ್ನತ ಸ್ಥಾನದಲ್ಲಿರುವ, ರಾಜಕೀಯ ವರೇಣ್ಯನೆನ್ನಿಸಿದ ವ್ಯಕ್ತಿ ಗರ್ವದಿಂದ ಮಂಡೆ ನಿಮಿರಿಸಿ ನಿಂತು ಠೇಂಕರಿಸುತ್ತಿದ್ದಾನೆ. ತನ್ನ ಸುತ್ತಮುತ್ತಲು ತನ್ನಂತಹ ಶಕ್ತಿಶಾಲಿ, ಭೀಮ ಸ್ವರೂಪಿ ಯಾರೂ ಇಲ್ಲ ಎಂಬ ಅಹಂಭಾವ ಆತನದು. ಅನಭಿಷಿಕ್ತ ಸಾರ್ವಭೌಮನಂತೆ ತನ್ನ ಸುತ್ತ ಇರುವವರ ಮೇಲೆ ಅಧಿಕಾರ ಚಲಾಯಿಸುತ್ತಾನೆ. ಹೆಬ್ಬಂಡೆಯ ದೈತ್ಯತೆ, ಅಧಿಕಾರ ಮದವನ್ನು ನೆನಪಿಸುವುದರೊಂದಿಗೆ, 'ಅನಭಿಷಿಕ್ತ ಸಾರ್ವಭೌಮತ್ವ'ದ ಗುಣ ಆತನಲ್ಲಿ ಅಡಗಿರುವ 'ಸರ್ವಾಧಿಕಾರ'ವನ್ನೂ ಪ್ರಕಟಪಡಿಸುತ್ತದೆ.

ಅಧಿಕಾರದಲ್ಲಿರುವವನು, ನಾಯಕತ್ವದ ಮುಂಚೂಣಿಯಲ್ಲಿರುವವನು ತನಗಿಂತ ಕೆಳ ಹಂತದಲ್ಲಿರುವ ವ್ಯಕ್ತಿಗಳ ಮೇಲೆ ಹುಕುಂ ಚಲಾಯಿಸುತ್ತ, ದರ್ಪ ಪ್ರದರ್ಶಿಸುತ್ತ, ತನ್ನನ್ನು ಮೀರಿಸಿದವರಿಲ್ಲ ಎಂಬ ಅಹಂನಿಂದ 'ಅನಭಿಷಿಕ್ತ ಸಾರ್ವಭೌಮ'ನಂತೆ ವರ್ತಿಸುತ್ತಾನೆ. ಅಧಿಕಾರಷಾಹಿಗೆ ದಮನಿತರ, ಅನಾಥರ ಅನುದಿನದ ಆರ್ತನಾದ, ದೈನ್ಯ ಕೊರಗು, ದೂರುಗಳು ಕಿವಿಗೆ ಬೀಳುವುದೇ ಇಲ್ಲ.

'ಕಲ್ಲಿನ ಚೂರು'ಗಳೆಂದರೆ ಬಂಡೆಯ ತುಣುಕುಗಳು. ಇಂದು ಅವು ಚೂರುಗಳಾಗಿದ್ದರೂ ಹಿಂದೊಮ್ಮೆ ಅವೂ ದೈತ್ಯ ಬಂಡೆಯೊಂದರ ಅವಿಭಾಜ್ಯ ಅಂಗಗಳಾಗಿದ್ದವು—ಎಂದು ಕವಿ ಹೇಳುವುದು ಇತಿಹಾಸದ ಸಂಕೀರ್ಣತೆಯನ್ನು ಗುರುತಿಸುವುದಕ್ಕಾಗಿ. ನಮ್ಮಲ್ಲಿ ಹೊಸ ಸಂವೇದನೆ ಮತ್ತು ಯೋಚನಾಕ್ರಮದ ಆವಶ್ಯಕತೆಯಿದೆ ಎಂಬ ಧ್ವನಿ ಇದರಿಂದ ಹೊಮ್ಮುತ್ತದೆ.

ಅಧಿಕಾರಷಾಹಿ, ಅಸಹಾಯಕರನ್ನು ಎಷ್ಟೊಂದು ತುಚ್ಛವಾಗಿ ಗಣಿಸುತ್ತದೆ ಎಂಬುದನ್ನು ಕವಿ ಇಲ್ಲಿ ಮಾರ್ಮಿಕವಾಗಿ ಹೀಗೆ ಸೂಚಿಸುತ್ತಾರೆ:

'..... ಹೆಬ್ಬಂಡೆ
ಠೀವಿಯಲಿ ಭಾಷಿಸಿ, ಶಿಲೆ ತುಣುಕುಗಳನುದ್ದೇಶಿಸಿ:
'ತೊತ್ತುಗಳಿರಾ, ನಿರ್ಲಕ್ಷ್ಯದ ನಿತ್ಯ ತುತ್ತುಗಳಿರಾ,
ಬಿದ್ದಲ್ಲೆ ಬಿದ್ದು ನೀವು ಒದ್ದಾಡುತ್ತೀರಿ;
ಮುಳ್ಳು, ಕುರುಚಲು, ಕಳೆ, ಹಲ್ಲಿ,
ಹುಳು ಹುಪ್ಪಟೆಗಳ ಅಹೋರಾತ್ರಿ ಮುದ್ದಾಡುತ್ತೀರಿ.

ನನ್ನಂತೆ ಹಾದಿಗರ ನಿಬ್ಬೆರಗ ನೋಟಕ್ಕೆ
ಮುಗಿಲ ಜೂಟಾಟಕ್ಕೆ
ಮೈ ಸೆಟೆಸುವವಕಾಶ ನಿಮಗೆಲ್ಲಿ?'

—ಎಂದು ಹಿಯಾಳಿಸುತ್ತದೆ. ಅಸ್ತಿತ್ವವಾದದ ಜೊಳ್ಳು ಮಾತುಗಳು ಮತ್ತು ಅಸಂಗತವಾದ ಭೋಳೆತನ 'ಸಬಲತೆ'ಗೆ ಸಹಜವಾದದ್ದು.

ಬಿದ್ದಲ್ಲೆ ಬಿದ್ದು ಒದ್ದಾಡುವ ಕಲ್ಲಿನ ಚೂರುಗಳು ತಮ್ಮ ಸ್ಥಿತಿಯಿಂದ ಪುನಃ ಮೇಲೇರುವ ಸಾಧ್ಯತೆಯೇ ಇಲ್ಲ. ಅವು ಮಾನಸಿಕ ನೋವಿನಿಂದಲೂ ಒದ್ದಾಡುತ್ತಿವೆ. ತಮ್ಮ ಸ್ಥಿತಿಗಾಗಿ ಮರುಗುತ್ತಿವೆ, ನಿರ್ಲಕ್ಷ್ಯಕ್ಕೆ ತುತ್ತಾಗುತ್ತಿವೆ. ಅವು ತೊತ್ತುಗಳಂತೆ ಹೆಬ್ಬಂಡೆಗೆ ಸೇವೆ ಸಲ್ಲಿಸಬೇಕಾಗುತ್ತದೆ. ಇಷ್ಟಾಗಿಯೂ ಅವುಗಳ ದುಃಸ್ಥಿತಿ ಮಾತ್ರ ಯಾರ ಗಮನಕ್ಕೂ ಬರುವುದಿಲ್ಲ. ಅವುಗಳತ್ತ ಯಾರೂ ನೋಟ ಹರಿಸುವುದಿಲ್ಲ. ಹೆಬ್ಬಂಡೆ ಮಾತ್ರ ಆ ಹಾದಿಯಲ್ಲಿ ಹಾದು ಹೋಗುವ ಹಾದಿಗರೆಲ್ಲರ ಗಮನ ಸೆಳೆಯುತ್ತಾ ನಿಲ್ಲುತ್ತದೆ, ಅವರ ಆಶ್ಚರ್ಯಕ್ಕೆ ಪಾತ್ರವಾಗುತ್ತದೆ.

ಬಡವರು, ಶೋಷಿತರು, ದೀನ-ದಲಿತರು ಎಷ್ಟೇ ಕಷ್ಟಪಟ್ಟು ದುಡಿದರೂ ಅವರಿಗೆ ಹೆಸರು ಸಿಗಲಾರದು. ಅವರ ಕಷ್ಟಕ್ಕೆ ತಕ್ಕ ಪ್ರತಿಫಲವೂ ಸಿಗಲಾರದು. ನಾಯಕನ ಗೆಲವಿಗಾಗಿ, ಕೀರ್ತಿಗಾಗಿ ಹಗಲಿರುಳೂ ಶ್ರಮಿಸಿದ ಅಮಾಯಕ ಅನುಯಾಯಿಗಳಿಗೆ ನಿಲ್ಲಲು ಸ್ಥಳವಾದರೂ ಎಲ್ಲಿ? ಆದರೆ ನಾಯಕ ವೇದಿಕೆಯ ಮೇಲೆ ವಿಜೃಂಭಿಸುತ್ತಾನೆ. ಒಂದು ದೇವಾಲಯದ ಕಟ್ಟಡ ನಿರ್ಮಿಸುವಲ್ಲಿ ಅಹೋರಾತ್ರಿ ಶ್ರಮಿಸಿದ ಕಾರ್ಮಿಕರ, ಕೂಲಿಕಾರರ ಹೆಸರು ಎಲ್ಲಿಯೂ ದಾಖಲಾಗದು. 'ನಿರ್ಮಿಸಿದವನು' ಎಂಬ ಹೆಸರು ಮಾತ್ರ ಇನ್ನಾರಿಗೋ! ನಿರ್ಮಿಸಿದವನಿಗೆ ಇರುವ ಅಹಂ, ಪ್ರತಿಷ್ಠೆ, ಅಧಿಕಾರದ ಹೆಮ್ಮೆ ತನಗೆ ಇವೆಲ್ಲವನ್ನೂ ತಂದುಕೊಟ್ಟವರನ್ನು ಕಡೆಗಣಿಸುವಂತೆ ಮಾಡಬಹುದು.

ಇಷ್ಟಾದರೂ, 'ಕಲ್ಲು ಚೂರು'ಗಳಾದ ದೀನ-ದಲಿತರಲ್ಲಿರುವ ಮಾನವೀಯತೆ, ದಯೆ, ಅನುಕಂಪೆ ಮತ್ತು ತಮ್ಮಂತೆಯೇ ಇರುವವರಿಗೆ ಆಶ್ರಯ ನೀಡುವ ಗುಣ ಶ್ರೀಮಂತಿಕೆಯ ಲೋಲುಪತೆಯಲ್ಲಿ ಮೆರೆಯುವವರಲ್ಲಿ ಇರುವುದು ಅಪರೂಪ. ಆದ್ದರಿಂದಲೇ ಕಲ್ಲಿನ ಚೂರುಗಳು ಮುಳ್ಳು, ಕುರುಚಲು, ಕಳೆ, ಹಲ್ಲಿ, ಹುಳು ಹುಪ್ಪಟೆ ಗಳನ್ನು ಅಹೋರಾತ್ರಿ ಮುದ್ದಾಡುತ್ತವೆ. ಅವುಗಳಿಗೆ ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ ಎಂಬ ಅನಾದರವಿಲ್ಲ. ತಮ್ಮ ಪಾಡಿಗೆ ತಾವು ಸಮಾನತೆಯನ್ನು ಮೆರೆಯುತ್ತವೆ, ನಿರಾತಂಕವಾಗಿ. ಶ್ರೀಮಂತಿಕೆಗೆ, ಅಧಿಕಾರಷಾಹಿಗೆ ಅಸಹಾಯಕರು ಕಾಣಿಸಲಾರರು. ತನ್ನಂತೆಯೇ ಇದ್ದಿರಬಹುದಾದ ಹೆಬ್ಬಂಡೆಯೊಂದರ ತುಣುಕುಗಳಾದ ಕಲ್ಲಿನ ಚೂರುಗಳೇ ಬಂಡೆಗೆ ನಿರ್ಲಕ್ಷ್ಯದ ತೊತ್ತುಗಳಂತೆ ಕಾಣುವಾಗ, ಅವುಗಳ ಆಶ್ರಯದಲ್ಲಿರುವ ಇವು ಕಂಡಾವೆಯೇ?

ಮುಗಿಲಿನಷ್ಟು ಎತ್ತರಕ್ಕೇರಿ, ಮೈ ಸೆಟೆದು ಉಬ್ಬಿ ನಿಂತಿರುವ ಹೆಬ್ಬಂಡೆ ಎಲ್ಲರ ಗಮನ ಸೆಳೆಯುತ್ತದೆ; ಅದೇ ಅದರ ಜಂಭಕ್ಕೆ ಕಾರಣವೂ ಆಗಿದೆ. ತನಗಿರುವ ಅವಕಾಶ, 'ಸೃಷ್ಟಿಯ ಹತಭಾಗ್ಯ ಹುಟ್ಟುಗಳಾದ' ನಿಮಗೆ ಹೇಗೆ ತಾನೆ ಸಿದ್ಧಿಸೀತು? ಎಂದು

ಹಂಗಿಸುತ್ತದೆ. ನೀವು 'ಸೃಷ್ಟಿಯ ತ್ಯಾಜ್ಯ ಗಪ್ಪುಗಳು' ಎಂದು ಹೀಯಾಳಿಸುತ್ತದೆ.

ಹೆಬ್ಬಂಡೆಯ ತಾತ್ಸಾರವನ್ನೆಲ್ಲ ಸಹಿಸಿಕೊಂಡೂ ಕಲ್ಲುಚೂರುಗಳು ಸಹನೆಯಿಂದಲೂ ನಮ್ರತೆಯಿಂದಲೂ ಅದಕ್ಕೆ ಹಿತ ನುಡಿಯುತ್ತವೆ. ಮಾರ್ಗ ತೋರಲು ಯತ್ನಿಸುತ್ತವೆ. ಏಕೆಂದರೆ ಅವುಗಳು ಅನುಭವಸ್ಥ ಜೀವಗಳು. ಅಲ್ಲದೆ, ತಮ್ಮ ಕುಲದವನೆಂಬ ಅಭಿಮಾನವೂ ಅವಕ್ಕಿವೆ.

ಅವುಗಳ ಮಾತಿನಲ್ಲಿ ವ್ಯಂಗ್ಯವೂ ನುಸುಳದೇ ಇಲ್ಲ! ಉತ್ತಮ ವಿಡಂಬನೆ ಕಾವ್ಯಕ್ಕೆ ಮೆರುಗು ನೀಡುತ್ತದೆ. ಕೊರತೆಗಳನ್ನು ನಿರ್ಮತ್ಸರ ಭಾವದಿಂದ ಯಥಾರ್ಥವಾಗಿ ತೋರಿಸಿ ಕೊಡುವ ವಿಮರ್ಶಾತ್ಮಕ ವಿಡಂಬನ ಪ್ರಜ್ಞೆ ಕಾವ್ಯಕ್ಕೆ ಶೋಭೆ ತರುತ್ತದೆ. ಗಿಡ ಚೆನ್ನಾಗಿ ಬೆಳೆಯಬೇಕಾದರೆ, ಮುಳ್ಳು-ಕಳೆಯನ್ನು ಕಿತ್ತು ಕಸಿ ಮಾಡುವುದು ಗಿಡದ ಆರೋಗ್ಯಕ್ಕೆ ಆವಶ್ಯಕ. ಹಾಗೆ ಕೀಳುವಾಗ ಗಿಡದ ಬೇರಿಗೆ ಪೆಟ್ಟು ಬಿದ್ದು ಮಾರಕವಾಗಬಾರದು ಎಂಬ ಎಚ್ಚರವೂ ಅಗತ್ಯ. ಪೂರ್ವಾಗ್ರಹವಿಲ್ಲದ ಯೋಚನೆ, ನಿಷ್ಕಳಂಕ ಮನೋಭಾವ, ನಿರ್ದಾಕ್ಷಿಣ್ಯ ನಿಶಿತ ಮತಿ, ಲೋಕಾನುಭವಗಳು ವಿಡಂಬಕನಿಗಿರಬೇಕಾದ ಗುಣಗಳು. ಚಿಂತನಶೀಲರೂ ಗಂಭೀರ ಜಿಜ್ಞಾಸಕರೂ ಆದ ನಿಸಾರರ ಕವನಗಳ ಮಾತಿನ ಹರಿತ ಕೆಲವೊಮ್ಮೆ ಮುಟ್ಟಿ ನೋಡಿಕೊಳ್ಳುವಷ್ಟು ತೀಕ್ಷ್ಣವಾಗಿರುತ್ತದೆ:

' 'ಅಯ್ಯಾ! ಸ್ವಘೋಷಿತ ಮಹನ್ಮಹನೀಯ
ಪರಿಸರ ಕೃಪಾಪೋಷಿತ ಶಿಖರ ಸ್ಥಾನೀಯ,
ಆಗಿದ್ದೆವೊಮ್ಮೆ ನಾವೂ ನಿನ್ನಂತೆ
ಬಂಡೆಯ ಅಖಂಡ ಅವಯವ,
ವಿಜೃಂಭಿಸಿದ್ದೆವು ಮೇಲ್ಮೆ ಎತ್ತರದಲ್ಲಿ ನಿರಾತಂಕ, ನಿರ್ಭಯ'

—ಎನ್ನುವ ಕಲ್ಲಿನ ಚೂರುಗಳ ಮಾತಿನಲ್ಲಿ ಮೇಲ್ನೋಟಕ್ಕೆ ಟೀಕೆಯಿದ್ದರೂ ಆಳದಲ್ಲಿ ದುಃಖದ ಮಜಲು ತೆರೆದುಕೊಳ್ಳುತ್ತದೆ; ಮ್ಲಾನತೆ ಮಡುಗಟ್ಟುತ್ತದೆ. ಅವು ಈಗ ನಿರ್ಲಕ್ಷ್ಯಕ್ಕೆ, ತಾತ್ಸಾರಕ್ಕೆ ತುತ್ತಾದರೂ ಮೊದಲಿನಿಂದ ಹಾಗೇನಿರಲಿಲ್ಲ. ಈಗ ಅಧಿಕಾರದಲ್ಲಿರುವ ವ್ಯಕ್ತಿ ಹೇಗೆಲ್ಲ ನಡೆದುಕೊಳ್ಳುತ್ತಿದ್ದಾನೋ, ತನಗಿಂತ ಕೆಳಗಿನವರನ್ನು ಹಂಗಿಸುತ್ತಿದ್ದಾನೋ ಅದೇ ರೀತಿಯಲ್ಲಿ ಈ ಚೂರುಗಳೂ ಹಿಂದೊಮ್ಮೆ ಹೆಬ್ಬಂಡೆಯ ಅವಿಭಾಜ್ಯ ಅಂಗಗಳಾಗಿದ್ದಾಗ, ಎಂದರೆ ತಾವೂ ಅಧಿಕಾರದಲ್ಲಿದ್ದಾಗ, ಹಾಗೆಯೇ ನಡೆದುಕೊಂಡಿವೆ. ತಾವು ಹಾಗೆ ನಡೆದುಕೊಂಡದ್ದರ ಬಗ್ಗೆ ಅವುಗಳಿಗೆ ಪಶ್ಚಾತ್ತಾಪವೂ ಇದೆ. ಏಕೆಂದರೆ ಮನಸ್ಸು ಮಾಗಿದಂತೆಲ್ಲಾ, ವಯಸ್ಸು ಏರಿದಂತೆಲ್ಲಾ, ಉಳಿಯ ಪೆಟ್ಟು ತಾಗಿದಂತೆಲ್ಲಾ—ಮರುಕ ಕೋಡಿವರಿಯುತ್ತದೆ. ಅಧಿಕಾರದ ಅಮಲಿನ ನೆದರು ನೆತ್ತಿಗೇರಿ, 'ಅನವರತ ಅಪಮಾನ ನೋವು ಮೆದ್ದವರ'ನ್ನು ಹಂಗಿಸಿದುದರ ಫಲವಾಗಿಯೇ ತಾವು ಈ ಅಧೋಗತಿಗೆ ಜಾರಿದ್ದೇವೆಂಬ ಆತ್ಮವಿಮರ್ಶೆ ಅವುಗಳಲ್ಲಿದೆ. ಅನುಭವದಲ್ಲಿ ಅವು ದೊಡ್ಡವು. ತಿಳಿವಳಿಕೆಯಲ್ಲಿ ಹೆಚ್ಚಿನವು. ಹಂತಹಂತವಾಗಿ ಬೆಳೆದ ಅವುಗಳ ಅನುಭವದ ಪ್ರೌಢಾವಸ್ಥೆ ಕಾವ್ಯದಲ್ಲಿ ಮೈ ತೆರೆದುಕೊಳ್ಳುತ್ತದೆ.

ದುರಂತವೆಂಬುದು ಸಂಸ್ಕೃತಿ ವಿಶಿಷ್ಟವಾದುದು. ಅಮೆರಿಕಾದ ಸಂಸ್ಕೃತಿಯಲ್ಲಿ ಅದು ವರ್ಗದ ಸ್ವರೂಪ ತಾಳಿದರೆ, ಭಾರತದಲ್ಲಿ ಜಾತಿಯ ಸ್ವರೂಪ ತಾಳುತ್ತದೆ. ಆದರೆ ಅಧಿಕಾರದ ದುರಂತ ಸ್ವರೂಪ ಮಾತ್ರ ಎಲ್ಲೆಡೆಯೂ ಒಂದೇ. ಇಂತಹ ಸ್ವವಿಮರ್ಶೆ ಕಾವ್ಯದ ಪ್ರಧಾನವಾದ ಅಂಶ. ತನ್ನನ್ನು ಅರ್ಥ ಮಾಡಿಕೊಳ್ಳುವುದರೊಂದಿಗೆ ಸಮಾಜವನ್ನೂ ಬದುಕನ್ನೂ ಅರ್ಥಮಾಡಿಕೊಳ್ಳುವ ಕ್ರಮವನ್ನು ಇಲ್ಲಿ ಗ್ರಹಿಸಬಹುದು.

ಕವನದಲ್ಲಿ ಬದುಕನ್ನು ಸಹ್ಯವಾಗಿಸಬೇಕೆನ್ನುವ ಛಲವಿದೆ. ಕವನ ತೆರೆದಿಡುವ ಸಮಾಜ ದರ್ಶನ ಪರಿಚಿತವಾದದ್ದು ಎನ್ನಿಸಿದರೂ ಶಕ್ತಿಶಾಲಿ ಹೇಳಿಕೆಗಳು ಭಾವೋದ್ವಿಗ್ನ ರನ್ನಾಗಿ ಮಾಡಿದರೂ ಅಸ್ತಿತ್ವವಾದ-ಮಾರ್ಕ್ಸ್‌ವಾದಗಳೆರಡೂ ಸೇರಿ ವಾಸ್ತವದ ಬಿರುಕು ಗಳನ್ನು ತೋರಿಸುತ್ತವೆ. ವ್ಯಕ್ತಿಯ ಅಂತರಂಗದ ಶಕ್ತಿಗಳನ್ನೆಲ್ಲ, ಅವನ ಖಾಸಗಿತನವನ್ನೆಲ್ಲ ಸಮಾಜ ಅಳಿಸಿ ಹಾಕಬಹುದು ಎಂಬ ಭಯವೂ ಕವನದ ನಿರೂಪಕನಿಗಿದೆ. ಕವನ ಮುಂದು ವರಿಯುವುದೇ ಈ ಧ್ವನಿಯಿಂದ. ಜಂಗಮ ಸಮಾಜದ ಕೆಲವು ಅಚಲ ರಚನೆಗಳು ವ್ಯಕ್ತಿಯನ್ನು ಕ್ರಮೇಣ ಕುಬ್ಜನನ್ನಾಗಿ ಮಾಡಿಬಿಡಬಹುದು.

ಏಕೀಕೃತ ಸಾಮರಸ್ಯವೆಂಬುದು ನವೋದಯದ ಒಂದು ಪ್ರಾತಿನಿಧಿಕ ನೆಲೆ. ಇದಕ್ಕೆ ತೀರ ಭಿನ್ನವಾದ ನಿಲವು ಈ ಕವನದ್ದು. ಅದೇ ಸಮಯದಲ್ಲಿ ಪ್ರಗತಿಪರ ಕಾವ್ಯದ ತಾತ್ತ್ವಿಕ ನೆಲೆಗೂ ಭಿನ್ನವಾದ ನೋಟವಿದು. ಪ್ರಗತಿಪರ ನಿಲವಿನ ಪ್ರಕಾರ ವ್ಯಕ್ತಿಯು ಪ್ರಸ್ತುತ ಸಮಾಜದ ಅಸಮಾನತೆಯ ಮರಳಿನಲ್ಲಿ ಮುಚ್ಚಿ ಹೋಗಿದ್ದಾನೆ. ವ್ಯಕ್ತಿಯನ್ನು ಬಡಿದೆಬ್ಬಿಸುವುದಕ್ಕಾಗಿ ಇಡೀ ಸಮೂಹವನ್ನೇ ಜಾಗೃತಗೊಳಿಸಬೇಕಾಗಿದೆ. ಎಂದರೆ, ಪ್ರಗತಿಪರ ದರ್ಶನದಲ್ಲಿ ಸಮೂಹಕ್ಕೆ ಪ್ರಾಶಸ್ತ್ಯ. ಆದರೆ ಪ್ರಸ್ತುತ ಕಾವ್ಯದಲ್ಲಿ ವ್ಯಕ್ತಿಗೇ ಪ್ರಾಮುಖ್ಯ. ಎಲ್ಲ ಆಧುನಿಕ ಸಮಾಜಗಳೂ ವ್ಯಕ್ತಿಯ ಬೇರೆ ಬೇರೆ ಸ್ಥಿತ್ಯಂತರಗಳನ್ನು ಗಮನಿಸುತ್ತಾ ದಕ್ಷತೆಯನ್ನು ಬಯಸುತ್ತವೆ.

ಕವನದಲ್ಲಿ ಬರುವ ಕಲ್ಲಿನ ಚೂರುಗಳು ವೈಯಕ್ತಿಕತೆಯ, ಸ್ವಂತಿಕೆಯ ಪ್ರತಿಬಿಂಬ ಗಳಾಗುತ್ತವೆ. 'ಆತ'ನೂ ಪ್ರಕೃತಿಯ ದೃಷ್ಟಿಯಲ್ಲಿ, ಸಾಮಾಜಿಕವಾಗಿ ಒಬ್ಬ ಮನುಷ್ಯ. ಈ ನೆಲೆಯಿಂದಲೇ ಬಂದ ಮಧ್ಯಮ ವರ್ಗದ ವ್ಯಕ್ತಿಗಳು ಇಡೀ ವರ್ಗದ ಪ್ರತಿನಿಧಿಗಳೂ ಆಗುತ್ತಾರೆ. ಸಮಾಜವಾದವನ್ನು ಸೂಕ್ಷ್ಮ ರೂಪದಲ್ಲಿ ತನ್ನೊಳಗುಮಾಡಿಕೊಂಡಿರುವ ಕವನ ಪೂರ್ಣವಾಗಿ ವ್ಯಕ್ತಿ ಕೇಂದ್ರಿತವಾದದ್ದು.

ಅಧಿಕಾರಷಾಹಿ ಬಹು ಬೇಗ ಭ್ರಷ್ಟವಾಗಿ ಹೋಗುತ್ತದೆ ಎಂಬ ಎಚ್ಚರ ಕವಿಗಿದೆ. ಸಬಲತೆಯೆಂಬುದು ಕ್ರಮೇಣ ಸರ್ವಾಧಿಕಾರಿ ರೂಪಗಳನ್ನು ತಾಳುತ್ತದೆ ಎನ್ನುವಲ್ಲಿ, ಸಮಾಜದ ಒಟ್ಟಾರೆ ವರ್ತನೆಯ ಬಗೆಗಿನ ಅಸಹನೆಯನ್ನು ಸೂಕ್ಷ್ಮವಾಗಿ ಕವಿತೆ ಧ್ವನಿಸುತ್ತದೆ; ಸಬಲತೆಯ ಕುರೂಪಿಯಾದ ಮುಖವನ್ನು ತೋರಿಸುತ್ತದೆ.

ಇಂದಿನ ವಾತಾವರಣದಲ್ಲಿ ವ್ಯಕ್ತಿ ಮತ್ತು ಸಮಾಜದ ನಡುವೆ ಸಾಮರಸ್ಯದ ಹೊಂದಾಣಿಕೆಯಿಲ್ಲ ಎಂಬುದೂ ಕವನದಲ್ಲಿ ಧ್ವನಿತವಾಗುತ್ತದೆ. ವ್ಯಕ್ತಿಯ ಅಧಿಕೃತ ಅಸ್ತಿತ್ವದಲ್ಲಿ ನಿರಾಸೆ, ಉದ್ವಿಗ್ನತೆ, ಆತಂಕಗಳೆಲ್ಲ ಪರಿಣಾಮಕಾರಿಯಾಗಿ ಇಲ್ಲಿ ವ್ಯಕ್ತವಾಗಿವೆ.

ವಾಸ್ತವ ಒಳತೋಟಗಳನ್ನು ಪ್ರಾಮಾಣಿಕವಾಗಿ ಹೇಳಿಕೊಳ್ಳುತ್ತಲೇ ಪ್ರಕಟಗೊಳ್ಳುವ ಅಭಿವ್ಯಕ್ತಿಯ ಕ್ರಮ ವ್ಯಕ್ತಿವಿಶಿಷ್ಟತೆಯ ಪ್ರತೀಕವಾಗುತ್ತದೆ. ವ್ಯಕ್ತಿಯ ಅತ್ಯಂತ ಉತ್ಕಟವಾದ ವೈಯಕ್ತಿಕ ಅನುಭವಗಳು ಇಲ್ಲಿ ವಾಸ್ತವವಾಗುತ್ತವೆ.

ಅಧಿಕಾರ ಶಾಶ್ವತವೆಂಬ ಭ್ರಮೆಯನ್ನು ಮೂಲೋತ್ಪಾಟನೆ ಮಾಡಿ ಹೊಸ ವೈಚಾರಿಕತೆಯ ತಳಹದಿಯ ಮೇಲೆ ನಿಲ್ಲುವ ಆಶಯವನ್ನು ವ್ಯಕ್ತಪಡಿಸುತ್ತಾ ಕವನ ಮುಂದೆ ಸಾಗುತ್ತದೆ:

'ನಮಗಿಂತ ಬಲು ಘಟ್ಟಿಗ ಕಾಲದ ಆ ಕಲ್ಲುಕುಟ್ಟಿಗ:
ಮಳೆ ಬಿಸಿಲು ಹಿಮ ಗಾಳಿಗಳ ಉಳಿ, ಹತ್ಯಾರುಗಳ
ಸುದೀರ್ಘಾವಧಿಯ ಎಡೆಬಿಡದ ಪೆಟ್ಟುಗಳಿಂದ
ನಮ್ಮನೀ ನಗೆಪಾಟಲಿನ ನಾಯಿಪಾಡಿಗೆ ತಂದ;'

ಕಾಲನನ್ನು ಕಲ್ಲು ಕುಟ್ಟಿಗನಿಗೆ ಹೋಲಿಸುತ್ತಿರುವುದು ತುಂಬ ಸಮಂಜಸವಾಗಿದೆ. ಹೆಬ್ಬಂಡೆಯ ದೈತ್ಯಾಕಾರವನ್ನೂ ಮುಗಿಲಿನೊಂದಿಗೆ ಅದು ಜೂಜಾಟವಾಡುತ್ತಿರುವುದನ್ನೂ ಕಂಡವರಿಗೆ ಮತ್ತು ಸ್ವತಃ ಆ ಬಂಡೆಗೇ ತಾನು ಶಾಶ್ವತ ಎಂಬ ಭ್ರಮೆ ಮೂಡುವುದು ಅಸಹಜವೇನಲ್ಲ. ಆದರೆ ಸೃಷ್ಟಿಯ ಪ್ರತಿಯೊಂದು ವಸ್ತುವೂ ಜೀವಿಯೂ—ಅಷ್ಟೇಕೆ ಸಮಸ್ತವೂ ಒಂದಲ್ಲ ಒಂದು ದಿನ ಕಾಲನ ಕೈಗೆ ಸಿಕ್ಕಿ ಅಳಿಯಲೇ ಬೇಕು. ಸೃಷ್ಟಿಯ ಈ ನಿಯಮ ಗೊತ್ತಿದ್ದೂ ಎಲ್ಲರೂ ಅದನ್ನು ಮರೆಯುತ್ತಾರೆ.

ಅಹಂಕಾರ, ದರ್ಪ, ದೌರ್ಜನ್ಯ, ನಾನೇ ಶ್ರೇಷ್ಠ—ಎಂದು ಮೆರೆಯುವ ಮನಸ್ಸಿಗೆ ಸಣ್ಣ-ಪುಟ್ಟ ಜೀವದ ಅಸ್ತಿತ್ವಗಳ ಬಗ್ಗೆ ಯಾವ ಕಾಳಜಿಯೂ ಇಲ್ಲ. ಆದರೆ 'ಕಾಲ'ನೆಂಬ ಕಲ್ಲುಕುಟ್ಟಿಗ ಆ ಘನತೆ-ಶ್ರೇಷ್ಠತೆಗಳನ್ನೆಲ್ಲ ಕುಟ್ಟಿ ಕುಟ್ಟಿ ಸಣ್ಣದಾಗಿಸಿ ಬಿಡುತ್ತಾನೆ, ಏಕೆಂದರೆ 'ಕಾಲ' ಬಹಳ ಘಟ್ಟಿಗ.

ಮಹಾಭಾರತದಲ್ಲಿನ 'ಯಕ್ಷಪ್ರಶ್ನೆ'ಯ ಪ್ರಸಂಗ ಇಲ್ಲಿ ನೆನಪಾಗುತ್ತಿದೆ. ಯಕ್ಷ ಯುಧಿಷ್ಠಿರನನ್ನು ಪ್ರಶ್ನಿಸುತ್ತಿದ್ದಾನೆ. ಲೋಕದಲ್ಲಿ ತುಂಬ ಅಚ್ಚರಿಯೆನಿಸುವ ಸಂಗತಿ ಯಾವುದು? ಯುಧಿಷ್ಠಿರ ಉತ್ತರಿಸುತ್ತಾನೆ: ಪ್ರತಿ ದಿನವೂ ಸೃಷ್ಟಿಯಲ್ಲಿ ಅಸಂಖ್ಯ ಜೀವಿಗಳು ತಮ್ಮ ಕಣ್ಣೆದುರಿಗೇ ಮರಣವನ್ನು ಅಪ್ಪುತ್ತಿರುವುದನ್ನು ಜನರು ಕಣ್ಣಾರೆ ಕಾಣುತ್ತಾರೆ. ಆದರೆ ತಾವು ಮಾತ್ರ ಶಾಶ್ವತವಾಗಿ, ಹೀಗೇ ಇದ್ದುಬಿಡುತ್ತೇವೆನೋ ಎಂಬಂತೆ ವರ್ತಿಸುತ್ತಾರೆ, ಬದುಕುತ್ತಾರೆ. ಇದಕ್ಕಿಂತ ಆಶ್ಚರ್ಯಕರವಾದುದು ಏನಿದೆ?

ಶಾಶ್ವತವೆಂದು ಭಾವಿಸುವ ದೈತ್ಯಗಾತ್ರದ ಬಂಡೆಯೂ ಕೂಡ ಕಾಲನೆಂಬ ಕಲ್ಲುಕುಟಿಗನ ಕೈಯಲ್ಲಿರುವ ಮಳೆ-ಬಿಸಿಲು ಹಿಮ-ಗಾಳಿಗಳೆಂಬ ಉಳಿ-ಸುತ್ತಿಗೆಗಳ ಎಡೆಬಿಡದ ಪೆಟ್ಟಿಗೆ ಭಗ್ನಗೊಳ್ಳಲೇಬೇಕು. ಮುಂದೆ ಕವನ ಇದೇ ಧಾಟಿಯಲ್ಲೇ ಸಾಗುತ್ತದೆ. ಯಾವುದೂ ಶಾಶ್ವತವಲ್ಲ ಎಂಬ ನಿಲವನ್ನು ಪ್ರಕಟಿಸುತ್ತದೆ. ಇಂದು ಬದುಕು ಜಟಿಲತೆಯ ಗೂಡಾಗಿದೆ. ಬೇರೆಲ್ಲ ಆಯಾಮಗಳಿಗಿಂತಲೂ ಸ್ವ-ಪ್ರತಿಷ್ಠೆಯ ಪ್ರದರ್ಶನವೇ ವಾಸ್ತವವಾಗಿದೆ. ಅದನ್ನೇ ಕವಿ ಮೇಲಿನ ಸಾಲುಗಳಲ್ಲಿ ಪಡಿಮೂಡಿಸುತ್ತಾರೆ.

ಕಲ್ಲಿನ ಚೂರುಗಳು ಬಂಡೆಯ ಮುಂದೆ ಕೈ ಕಟ್ಟಿ ನಿಂತು ವಿನಮ್ರವಾಗಿ ಹೇಳುತ್ತಿದ್ದರೂ ಅವುಗಳಲ್ಲಿ ಪ್ರತಿಭಟನೆಯ ಧ್ವನಿಯಿದೆ. ಈ ದೃಷ್ಟಿಯಿಂದ ನೋಡಿದಾಗ ಕವನದಲ್ಲಿ ನಾವು ಎರಡು ಅಂಶಗಳನ್ನು ಗಮನಿಸಬಹುದು. ಒಂದು: ವ್ಯಕ್ತಿ ವಿಶಿಷ್ಟತೆಯ ದೃಷ್ಟಿ ಮತ್ತು ಆತ್ಮಜಾಗೃತಿಯ ಕಡೆಗೆ, ಪೂರ್ಣತ್ವದ ಕಡೆಗೆ ವ್ಯಕ್ತಿಯ ಸಾಗುವಿಕೆ; ಎರಡು: ಸರ್ವಾಧಿಕಾರತ್ವದ, ಅಧಿಕಾರಷಾಹಿಯ ವಿರುದ್ಧ ಪ್ರತಿಭಟನೆ—ಶಾಂತ ರೀತಿಯಿಂದ. ಜೀವನ ಕ್ರಮದ ದುರಂತ ವಿನ್ಯಾಸದಲ್ಲಿಯೇ ಹೊಮ್ಮುವ ಪ್ರತಿಭಟನೆಯ ಸಾಧ್ಯತೆಗಳು ಓದುಗರನ್ನು ಸೆರೆ ಹಿಡಿಯುತ್ತವೆ.

ಬರವಣಿಗೆಯಲ್ಲಿ ತಮ್ಮದೇ ಆದ ಭಿನ್ನ ಶೈಲಿಯನ್ನು ರೂಢಿಸಿಕೊಂಡಿರುವ ನಿಸಾರರು ಕೆಲವೊಮ್ಮೆ ಓದುಗರು ಬೆಚ್ಚಿ ಬೀಳುವಷ್ಟು ನಿರ್ಭೀತಿಯಿಂದ ಬರೆಯಬಲ್ಲರು. ಸಮಾಜದ ಡಾಂಭಿಕತನದ ಬಗ್ಗೆ, ಅಮಾನವೀಯ ನಡವಳಿಕೆಗಳ ಬಗ್ಗೆ ಖಾರವಾಗಿಯೂ ವ್ಯಂಗ್ಯ ವಾಗಿಯೂ ಬರೆಯುವ ಈ ಕವಿ 'ಬಂಡೆ'ಯ ಪ್ರತಿಮೆಯ ಮೂಲಕ ಇಂದಿನ ರಾಜಕೀಯ ಹಾಗೂ ಸಾಮಾಜಿಕ ವಲಯಗಳಲ್ಲಿ ನಡೆಯುತ್ತಿರುವ ಹಕೀಕತ್ತನ್ನೂ, ದೊಂಬರಾಟವನ್ನೂ ಕೂಡ ವ್ಯಂಗ್ಯವಾಗಿ ಹೇಳುತ್ತಿದ್ದಾರೆಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಇಡೀ ಕವನ ಇತ್ಯಾತ್ಮಕ ಪ್ರತಿಮೆಯಾಗಿದ್ದು, ತನ್ನ ಅಂತಿಮ ಪರಿಣಾಮದಲ್ಲಿ ವ್ಯಂಗ್ಯವನ್ನು ಒಳಗೊಂಡಿದೆ. ಇದರ ಪೂರ್ಣಾರ್ಥ ಹೊಳೆದಾಗ ಈ ಸಾಲುಗಳ ವ್ಯಂಗ್ಯಾತ್ಮಕ ವಿಷಾದ ಮೇಲೆ ತೇಲುತ್ತದೆ. ಗ್ರಹಿಕೆಯಲ್ಲಿ ಬಹುರೂಪತೆಯ ಸಾಧ್ಯತೆಯನ್ನು ಒಳಗೊಂಡಿರುವ ಕವನ, ಅಧಿಕಾರದ ಅಹಮ್ಮಿನ ಧೋರಣೆಯನ್ನು ಚೆನ್ನಾಗಿ ಗುರುತಿಸುತ್ತದೆ.

ಅಧಿಕಾರ ಕಳೆದುಕೊಂಡ ವ್ಯಕ್ತಿತ್ವದ ಪ್ರತಿನಿಧಿಯಾಗಿ ನಿಲ್ಲುವ ಕಲ್ಲಿನ ಚೂರು, ವರ್ತಮಾನದಲ್ಲಿ ತನ್ನ ಕಾಲವನ್ನು ಸ್ಥಿರವಾಗಿ ಊರುವ ಪ್ರಯತ್ನದಲ್ಲಿ ತನ್ನ ಪರಂಪರೆಯ ಜೊತೆ ಒಂದು ಅರ್ಥಪೂರ್ಣ ವಾಗ್ವಾದಕ್ಕಿಳಿಯುತ್ತದೆ. ಬದುಕನ್ನು, ಲೋಕವನ್ನು ಅರಿತ ಅರಿಯುವ ತನ್ನ ಕ್ರಮವು ಹೇಗೆ ಅನನ್ಯವೂ ವಿಶಿಷ್ಟವೂ ಯೋಗ್ಯವೂ ಆದದ್ದೆಂಬುದನ್ನು ವ್ಯಾಖ್ಯಾನಿಸುತ್ತದೆ. ಹಾಗಾಗಿ ಇದೊಂದು ವಿಶಿಷ್ಟ ಗ್ರಹಿಕೆಯ ಕ್ರಮವೂ ಆಗಿದೆ. ಕೇವಲ ಮಾನವ ಕೇಂದ್ರಿತ ಚಿಂತನೆಯಷ್ಟೇ ಇದರ ವೈಶಿಷ್ಟ್ಯವಲ್ಲ; ಲೋಕವನ್ನು ಅರಿಯುವ, ಬಗೆಯುವ ಕ್ರಮವೂ ಇದೆ. ನಿಸಾರರು ತಮ್ಮ ನಿಲವಿನಲ್ಲಿ ತೋರುವ ಈ ವೈಶಿಷ್ಟ್ಯ ಸದ್ಯದ ಕನ್ನಡ ಕಾವ್ಯೋದ್ಯೋಗಕ್ಕೆ ಪ್ರಮುಖವೂ ಹೌದು!

ಕಲ್ಲಿನ ಚೂರುಗಳು ಬಂಡೆಯೊಂದಿಗೆ ತಮ್ಮ ಸ್ವಗತವನ್ನು ಮುಂದುವರೆಸುತ್ತಾ ತಮ್ಮ ಇಂದಿನ ದಾರುಣ ಸ್ಥಿತಿಗೆ ಪ್ರಕೃತಿಯಷ್ಟೇ ಕಾರಣವಲ್ಲ; ಮನುಷ್ಯನೂ ಅದರೊಂದಿಗೆ ಕೈ ಮಿಲಾಯಿಸಿದ್ದಾನೆಂದು ಮರುಗುತ್ತವೆ. ತಮ್ಮ ಇಂದಿನ ಸ್ಥಿತಿಗೆ ಕಾರಣರಾದವರ ಬಗೆಗಿನ ಆಕ್ರೋಶ, ಆವೇಗಗಳು ಚಿಂತನೆಯ ಹಾದಿಯಲ್ಲಿ ಸಾಗುತ್ತವೆ.

ಕಲ್ಲುಚೂರು ತನ್ನ ಅನುಭವದಿಂದ ಹೇಳುತ್ತಿದೆ, ಸಂಕಟದಿಂದ: 'ನರ ಕೂಡ ಪಣ ಹೂಡಿ / ಪುಡಿಗೈದ ನಮ್ಮನ್ನು ಸಿಡಿ ಮದ್ದು ಜೊತೆಗೂಡಿ.' ನೋವಿಗೊಳಗಾದವರ, ಅಸಹಾಯಕರ ದೀನ ನುಡಿ ಇದು.

ಒಮ್ಮೆ ನಿನ್ನಂತೆಯೇ ಮೆರೆಯುತ್ತಿದ್ದ ನಮಗಿಂದು ಈ ಗತಿ. 'ನಾಳೆ ನಿನಗೂ ಕಾದಿದೆ ಮಾರಿ ಹಬ್ಬ! ಆದ್ದರಿಂದ ಉಬ್ಬದಿರು ಅಣ್ಣಯ್ಯ'—ಎನ್ನುವಲ್ಲಿ ಕಾಣುವ ವ್ಯಂಗ್ಯ, ಅದರ ಅರ್ಥಪೂರ್ಣತೆಯಿಂದ ಮತ್ತೆ ಮತ್ತೆ ಓದಿಸಿಕೊಳ್ಳುತ್ತದೆ. ಮಾರಿ ಹಬ್ಬದ ಪ್ರಧಾನ ಆಕರ್ಷಣೆ, ಆಚರಣೆಯೆಂದರೆ ಬಲಿ ನೀಡುವುದು. ಇಂದು ನಾವು ಬಲಿಯಾಗಿ ಈ ಸ್ಥಿತಿಗೆ ಇಳಿದಿದ್ದೇವೆ. ನಾಳೆ ನೀನೂ ಕೂಡ ನಮ್ಮಂತೆಯೇ ಬಲಿ ಪಶುವಾಗಿ `ಕಾಲ'ನ ಕೈಗೆ ಸಿಗಲೇಬೇಕು. ಆ ವಾಸ್ತವತೆಯನ್ನು ಗ್ರಹಿಸದೆ ಉಬ್ಬಿ ಹೋಗಬೇಡ ಎಂಬ ಹಿತವಾದ ಮರ್ಮಕ್ಕೆ ನಾಟುವಂತಿದೆ.

ಈ ಸಂದರ್ಭದಲ್ಲಿ ಅದೇಕೋ ಪಂಪನ ಭರತ ನೆನಪಾಗುತ್ತಿದ್ದಾನೆ. ಭರತ ಚಕ್ರವರ್ತಿ ದಿಗ್‌ಮಂಡಲವನ್ನೆಲ್ಲ ಗೆದ್ದು, ಆನಂದತುಂದಿಲನಾಗಿ ವೃಷಭಾದ್ರಿಯಲ್ಲಿ ತನ್ನ ಹೆಸರನ್ನು, 'ವಿಶ್ವ ವಿಶ್ವಂಭರಾ ವಿಜಯ' ಪ್ರಶಸ್ತಿಯನ್ನು ಕೆತ್ತಿಸುವ ಆಸೆಯಿಂದ ಹೊರಡುತ್ತಾನೆ. ಹೋಗಿ ನೋಡಿದರೆ ವೃಷಭಾದ್ರಿಯ ನೆತ್ತಿಯಲ್ಲಿ ಒಂದಕ್ಷರ ಬರೆಯಲೂ ಸ್ಥಳವಿಲ್ಲ! ತನಗಿಂತ ಹಿಂದೆ ಇದ್ದ ರಾಜರು ತಮ್ಮ ದಿಗ್ವಿಜಯದ ಸ್ಮಾರಕಾರ್ಥ ತಮ್ಮ ಹೆಸರನ್ನು ಅಲ್ಲೆಲ್ಲ ಬರೆದಿಟ್ಟು ಹೋಗಿದ್ದಾರೆ:

'ಅದಜೊಳನೇಕ ಕಲ್ಪ ಶತ ಕೋಟಿಗಳೊಳ್ ಸಲೆಸಂದ ಚಕ್ರಿವೃ
ದದ ಚಲದ ಆಯದ ಆಯತಿಯ ಬೀರದ ಚಾಗದ ಮಾತುಗಳ್ ಪೊದ
ಪ್ಪೊದವಿರೆ ತತ್ಪ್ರಶಸ್ತಿಗಳೊಳ್ ಅಂತವನೊಯ್ಯನೆ ನೋಡಿ ನೋಡಿ ಸೋ
ರ್ದುದು ಕೊಳೆಗೊಂಡ ಗರ್ವ ರಸಮಾ ಭರತೇಶ ಚಕ್ರವರ್ತಿಯಾ ||

(ಆದಿಪುರಾಣ, ಪಂಪ, ೧೩ನೇ ಆಶ್ವಾಸ, ಪು. ೭೧)

ತಾನೊಬ್ಬನೇ ಷಟ್ಖಂಡ ಮಂಡಲವನ್ನು ಗೆದ್ದವನೆಂದು ಗರ್ವೋದ್ದೀಪಿತನಾಗಿದ್ದ ಭರತನ ಗರ್ವ ರಸ ಅಲ್ಲಿದ್ದ ಅಸಂಖ್ಯಾತ ಹೆಸರುಗಳ ರಾಶಿಯನ್ನು ಕಂಡ ಒಡನೆ ಜರ್ರನೆ ಸೋರಿ ಹೋಯಿತು! ಆದರೂ ಆತ ಸಾಂಪ್ರದಾಯಿಕವಾಗಿ ತನ್ನ ಹೆಸರನ್ನು ಬರೆಯಲು ಮುಂದಾಗುತ್ತಾನೆ. ಹಿಂದಿನ ದೊರೆಗಳಲ್ಲೊಬ್ಬನ ಪ್ರಶಸ್ತಿಯನ್ನು ತನ್ನ ದಂಡದಿಂದ ಸೀಂಟಿ ಕಳೆದು ಅಲ್ಲಿ ತನ್ನದನ್ನು ಬರೆಸುತ್ತಾನೆ. ಹೀಗೆ ಅಳಿಸುವಾಗ ಆತನಿಗೆ ಚೆನ್ನಾಗಿ ಗೊತ್ತು: ತನ್ನ ಪ್ರಶಸ್ತಿಯೇನೂ ಇಲ್ಲಿ ಶಾಶ್ವತವಾಗಿ ಹೀಗೇ ಇರುವುದು ಸಾಧ್ಯವಿಲ್ಲ ಎಂಬ ಸತ್ಯ. ಮುಂದೊಬ್ಬ ತನ್ನಂತೆಯೇ ಇಲ್ಲಿ ಬಂದು ತನ್ನ ಪ್ರಶಸ್ತಿಯನ್ನು ಅಳಿಸಿ ಹಾಕಬಹುದು. ಆದರೆ ಅಧಿಕಾರದ ಆಕರ್ಷಣೆ ಇವೆಲ್ಲವನ್ನೂ ಕೆಲವೇ ಕ್ಷಣಗಳಲ್ಲಿ ಮರೆಸಿ ಬಿಡುತ್ತದೆ. ಪುನಃ `ರಾಜಚಕ್ರಿ'ಯೆಂಬ ಹೆಸರಿಗಾಗಿಯೇ ಹಾತೊರೆದು ನಡೆದುಕೊಳ್ಳುತ್ತಾನೆ.

'ಬಂಡೆ ಮತ್ತು ಕಲ್ಲಿನ ಚೂರುಗಳು' ಕವನ ಮುಂದುವರೆಯುತ್ತದೆ:

'ಸಮಯ ಸಂದಂತೆ ಕಂದರಕ್ಕಿಳಿಯುವುದು
ನಿನ್ನಹಂಕೃತಿಯ ದಿಬ್ಬ.'

ಇಲ್ಲಿನ ಪ್ರತೀಕಗಳು ಕನಸು-ನೆನಪುಗಳ ಮೂಲಕ ಭೂತ-ವರ್ತಮಾನಗಳನ್ನು ಖಚಿತಗೊಳಿಸುತ್ತವೆ. ಈ ವರ್ತಮಾನದ ವ್ಯಾಖ್ಯೆಯ ಸಮರ್ಥ ಬೇರುಗಳು ಕಳೆದ

ದಿನಗಳಲ್ಲಿವೆ. ಸಂಬಂಧ ವ್ಯಾಖ್ಯೆಯಲ್ಲಿ ಇವು ಜೀವ ಸಂಗೋಪನ ಶಕ್ತಿಯ ಪ್ರತೀಕಗಳಾಗಿವೆ. ಆದರೆ ಇವು ಭೂತ ಕಾಲಕ್ಕೇ ಗಂಟು ಬಿದ್ದಿಲ್ಲ; ಜೀವೋತ್ಸಾಹ ಹಾಗೂ ವರ್ಧಮಾನತೆಯ ಪರವಾಗಿವೆ.

ಆಧುನಿಕ ನಾಗರಿಕ ಲೋಕ ಅರಿತ ಸೂಕ್ಷ್ಮಗಳು, ಚಿಂತನೆಯ ವಿವಿಧ ರೂಪಗಳು ಮನುಷ್ಯ ಈ ಜಗತ್ತನ್ನು ಗೆಲ್ಲುವ, ಉಪಯೋಗಿಸುವ ತಿಳಿವಳಿಕೆಯನ್ನು ಕೊಟ್ಟಿವೆ; ಲೋಕದ ಖಾಸಗಿ ರಹಸ್ಯಗಳನ್ನೂ ಅರಿತುಕೊಳ್ಳುವಂತೆ ಮಾಡಿವೆ. ಆದರೆ ಜಗತ್ತಿನ ತಾಳಕ್ಕೆ ಹೊಂದಿಕೊಳ್ಳಲು ಕಲಿಸಲಿಲ್ಲ—ಎಂಬ ಭಾವ ಈ ಕವನದಲ್ಲಿದೆ. ಇದೊಂದು ಪ್ರಾತಿನಿಧಿಕ ಧ್ವನಿ.

ವ್ಯವಸ್ಥೆಗೆ ಬಲಿಯಾಗುವ ಸಮಾಜದ ಒಂದು ಭಾಗ ತನ್ನ ಇರುವಿಕೆಯ ಎಲ್ಲಾ ಮಾನವೀಯ ಅರ್ಥಗಳನ್ನೂ ಕಳೆದುಕೊಳ್ಳುತ್ತದೆ. ಈ ಮಾನವೀಯತೆಯ ನಿರಾಕರಣೆ ಸಂಸ್ಕೃತಿಯ ಕೇಂದ್ರದಲ್ಲಿ ಅವ್ಯವಸ್ಥೆಯಿಂದ ಉಂಟಾಗುತ್ತದೆ. ಸಮಾಜದ ಕೆಳ ಹಂತದಲ್ಲಿ ಬದುಕುವವರಿಗೆ ಇದು ವಿಕೃತವಾಗಿ ತೋರುತ್ತದೆ.

ಕವನ ಮುಂದೆ ಹೀಗೆ ಸಾಗುತ್ತದೆ :

'ಆಲಿಕಲ್ಲುಗಳ ಕರಗಿನ ಕೊರಗನು ನೋಡಿ
ಮಂಜುಗಡ್ಡೆಯಂತೆ ನಗಬೇಡ ಖಿಕ್ಕೆಂದು,
ಮರೆತು ನೀನು ಸಹ ಮುಂದೊಮ್ಮೆ ಆ ಖೋಡಿ
ಕಾಲ ಬಕಾಸುರನ ಒಕ್ಕುಡಿತೆ, ಮುಕ್ಕೆಂದು.'

—ಕಾಲನೆಂಬ ಬಕಾಸುರನಿಗೆ ತಿನ್ನಲು ಎಷ್ಟಿದ್ದರೂ ಸಾಲದು! ಈ ಬಂಡೆಯೂ ಅದರ 'ಒಕ್ಕುಡಿತೆಯ ಮುಕ್ಕು' ಮಾತ್ರ! ಒಂದು ಗುಟುಕಿನ ಒಂದು ಮುಕ್ಕು ಮಾತ್ರ. ಇದನ್ನೂ ಮರೆಯಬಾರದು ಎಂಬ ಎಚ್ಚರಿಕೆಯಿದೆ. ನಮ್ಮ ಸುತ್ತಲಿನ ಅವ್ಯವಸ್ಥೆಯ ಒಂದು ಭಾಗ ವಾಗಿದ್ದುಕೊಂಡೂ ಅದರ ಅಂಗವಾಗದೇ ಇರುವುದು; ಸಾಮಾಜಿಕ ಕಟ್ಟಳೆಗೆ ಅನುಗುಣ ವಾಗಿಯೇ ನಡೆಯುತ್ತಿದ್ದೇನೆ ಎಂದುಕೊಳ್ಳುತ್ತಾ ಸಹ ಮಾನವರ ಬಗ್ಗೆ ನಿರ್ದಯವಾಗಿ ನಡೆದುಕೊಳ್ಳುವ ಸಾಧ್ಯತೆಗಳನ್ನು ಕವಿ ನಿಸಾರರು ಪ್ರಾಮಾಣಿಕತೆಯ ಅಭಿವ್ಯಕ್ತಿಗೆ ಒಳಪಡಿಸಿದ್ದಾರೆ.

* * *

ಕವನದ ಮೂರನೆಯ ಭಾಗದಲ್ಲಿ ಧುತ್ತೆಂದು ಪ್ರತ್ಯಕ್ಷವಾಗುವ ಮತ್ತೊಂದು ಜೀವ ಆಶ್ಚರ್ಯ ಹುಟ್ಟಿಸುತ್ತದೆ. ಅದೇ ಅನಾಮಿಕ ಕಿರು ಹಕ್ಕಿ! ಹಕ್ಕಿ ಕಿರಿದಾದರೂ ಅದರ ಲೋಕಾನುಭವ, ಜೀವ ಪ್ರೀತಿ, ಸಹಾನುಭೂತಿಗಳು ಹಿರಿದಾದವು.

ಎಷ್ಟೋ ಸಂದರ್ಭಗಳಲ್ಲಿ ತೀರ ನೊಂದು ಬಸವಳಿದು ಹೋದಾಗ ಯಾರೋ ಒಬ್ಬ ದಾರಿಹೋಕ ಅಪರಿಚಿತ ವ್ಯಕ್ತಿಯ ಸಾಂತ್ವನದಿಂದ ಮನಸ್ಸು ಶಾಂತಗೊಳ್ಳುವಂತೆ, ಕಿರು ಹಕ್ಕಿ ಕಲ್ಲಿನ ಚೂರುಗಳಿಗೆ ಸಮಾಧಾನ ಹೇಳುತ್ತದೆ. ಅದರ ಅನುಕಂಪದ ನುಡಿಗಳು ನೊಂದ ಜೀವಕ್ಕೆ ತಂಪೆರೆಯುತ್ತವೆ:

' 'ಕಲ್ಲಿನ ಕಂಗಾಲ ತುಣುಕುಗಳೆ,
ಹೆಬ್ಬಂಡೆಯಣಕುಗಳೆ,
ಅರ್ಥವಾಗುತ್ತದೆ ನನಗೆ
ನಿಮ್ಮ ಮನಸಿನಾಳದ ಅಳಲು,
ಅಸ್ತಿತ್ವವನು ಕವಿದಿರುವ ಕಡು ವಿಷಾದದ ನೆಳಲು.'

—ಅವು ಹೆಬ್ಬಂಡೆಯ ಅಣಕುಗಳು, ಈಗ ಕಂಗಾಲ ತುಣುಕುಗಳು ಎಂಬುದು ಅದಕ್ಕೆ ಗೊತ್ತು. ಅವುಗಳ ಮನಸ್ಸಿನಾಳದ ಅಳಲು ಅದಕ್ಕೆ ಅರ್ಥವಾಗುತ್ತದೆ. ಅದು ಸಾಂತ್ವನ ಹೇಳುವುದರೊಂದಿಗೆ ಉತ್ಸಾಹ ಹಾಗೂ ಸ್ಫೂರ್ತಿಯನ್ನು ತುಂಬಲು ಪ್ರಯತ್ನಿಸುತ್ತದೆ. ಪ್ರಕೃತಿಯ ದೃಷ್ಟಿಯಲ್ಲಿ ಎಲ್ಲವೂ ಸಹನೀಯ, ಸಮಾನ ಎಂಬ ತತ್ತ್ವವನ್ನು ನೆನಪಿಸುತ್ತದೆ:

'ಕುಸಿಯಬೇಕಿಲ್ಲ ನೀವು ಕೀಳರಿಮೆ ಕೂಪದ ತಳಕ್ಕೆ,
ಉಣಸಾಗಬೇಕಿಲ್ಲ ನಿತ್ಯ ಅವಹೇಳನದ ಹುಳಕ್ಕೆ.
ನಿಮ್ಮ ಇರುವಿಕೆ ಹೆಬ್ಬಂಡೆಗಿಂತಲೂ ಧನ್ಯ,
ಸರ್ವಂಸಹೆ ಪ್ರಕೃತಿಯ ದೃಷ್ಟಿಯಲಿ
ನೀವು ಸಹ ನಿರತಿಶಯ ಸನ್ಮಾನ್ಯ.'

—'ಚಿನ್ನದ ನಿಕ್ಷೇಪ'ದ ಸುಳಿವು ನೀಡುವುದು ಕಲ್ಲಿನ ಚೂರುಗಳೇ ಹೊರತು ಹೆಬ್ಬಂಡೆ ಅದನ್ನು ಸೂಚಿಸುವುದಿಲ್ಲ ಎಂಬ ಸತ್ಯವನ್ನು ಅವುಗಳಿಗೆ ನೆನಪು ಮಾಡಿಕೊಡುವುದರೊಂದಿಗೆ ಕವನ ಮುಕ್ತಾಯವಾಗುತ್ತದೆ.

ಪರಿಮಿತ ಸಾಮರ್ಥ್ಯದ ಮತ್ತು ಪರಿಸರದ ಸಾಧ್ಯತೆಗಳ ಮಿತಿಯೊಳಗೇ ಸಾರ್ಥಕ್ಯವನ್ನು ಕಂಡುಕೊಳ್ಳಬೇಕೆನ್ನುವ ಸತ್ಯ ಇಲ್ಲಿದೆ. ಪರಿಮಿತಿಯ ಪ್ರಜ್ಞೆ ಇಲ್ಲಿ ಮೂರ್ತ ಸ್ವರೂಪ ಪಡೆದುಕೊಳ್ಳುತ್ತದೆ. ಎಲ್ಲ ಆದರ್ಶ ವ್ಯವಸ್ಥೆಯ ಕಲ್ಪನೆಗಳೂ ಮನುಷ್ಯನ ಸ್ವಾತಂತ್ರ್ಯಪ್ರಿಯತೆ ಮತ್ತು ನ್ಯಾಯದ ಹಂಬಲದ ಜೊತೆಗೇ ಬದುಕುವ ಹಾಗೂ ಮನುಷ್ಯನಂತೆ ಪಾಡು ಪಡುವ ಅಪೇಕ್ಷೆಯ ಫಲವಾಗಿ ರೂಪುಗೊಂಡವು.

ಬಂಡೆ ಮತ್ತು ಕಲ್ಲಿನ ಚೂರುಗಳ ನಡುವಿನ ಅಂತರ ವ್ಯಕ್ತಿ-ವ್ಯಕ್ತಿಗಳ ನಡುವಿನ ಅಂತರವನ್ನೂ ಸೂಚಿಸುತ್ತದೆ. ಈ ಅಂತರವನ್ನು ಹಕ್ಕಿಯ ಕಲ್ಪನೆಯ ಮೂಲಕ ಹಿಗ್ಗಿಸುವ, ಕುಗ್ಗಿಸುವ ಸಾಧ್ಯತೆಗಳನ್ನು ಕವನ ತೆರೆದಿಡುತ್ತದೆ. ಇವುಗಳ ನಡುವಿನ ದೂರ ಕೇವಲ ಭೌತಿಕವಾದುದಲ್ಲ; ಮಾನಸಿಕ ಅಂತರವನ್ನೂ ಅದು ಪ್ರತಿನಿಧಿಸುತ್ತದೆ. ಚೂರುಗಳು ಭೌತಿಕವಾಗಿ ಹತ್ತಿರವಿದ್ದರೂ ಬಂಡೆಯ ತಳದಲ್ಲೇ ಇದ್ದರೂ ಅವು ಮಾನಸಿಕವಾಗಿ ಹತ್ತಿರವಾಗಿಲ್ಲ. ಮುಂದುವರಿದ ನಾಗರಿಕತೆಯ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಬಂಧದ ಅನಾಪ್ತತೆ, ಆಗಂತುಕತೆಯ ಚಿಂತನೆಯನ್ನು ಇಲ್ಲಿ ಮಾಡಲಾಗಿದೆ.

ಆಂತರಿಕ ಶಿಸ್ತಿನ ವಿಕಾಸದ ತಿಳಿವಳಿಕೆ, ಅಂತಃಕರಣದಿಂದ ಹೊಮ್ಮುವ ಸಂಯಮಗಳನ್ನು ಇಲ್ಲಿ ಗುರುತಿಸಬೇಕು. ಸರ್ವಾಧಿಕಾರತ್ವದ ವಿರೋಧದ ನಿಲವಿನಲ್ಲಿ ಇವು ಬಹು ಪ್ರಮುಖ ಅಂಶಗಳು ಎಂಬುದನ್ನು ಮರೆಯುವಂತಿಲ್ಲ.

ಈ ಕವನದಲ್ಲಿ ಕವಿಯನ್ನು ಕಾಡುವ ಸಮಸ್ಯೆಯೆಂದರೆ, ಸಾಮಾಜಿಕ ಅಲ್ಲೋಲ ಕಲ್ಲೋಲಗಳು. ಎಂದರೆ ವ್ಯವಸ್ಥೆ ಹಾಗೂ ಬಂಡಾಯ. ನಿಸಾರರು ಬಂಡವಾಳಷಾಹಿಯ, ಅಧಿಕಾರ ಕೇಂದ್ರೀಕರಣದ ಬೆಂಬಲಿಗರಂತೂ ಅಲ್ಲ. ಅದರ ಅಸಹನೀಯ ಮೌಲ್ಯಗಳ ಪರಿಣಾಮ ಏನಿರಬಹುದೆಂಬ ಪ್ರಜ್ಞೆ ಕವಿಯಲ್ಲಿದೆ. ಅದೇ ಸಮಯದಲ್ಲಿ ಕವನ ಸಮಾಜ ವಾದೀ ಶಕ್ತಿಗಳನ್ನು ಬೆಂಬಲಿಸುವುದೂ ಇಲ್ಲ. ಈ ಎರಡೂ ವ್ಯವಸ್ಥೆಗಳು ವ್ಯಕ್ತಿಯನ್ನು, ಅವನ ವಿಶಿಷ್ಟವಾದ ಮೂರ್ತಿತ್ವವನ್ನು ಹತ್ತಿಕ್ಕಬಹುದು ಎಂಬ ಅನುಮಾನವಿರಬಹುದು.

ಈ ಕವನದಲ್ಲಿ ನಿಸಾರರ ಭಾಷಾ ವೈಶಿಷ್ಟ್ಯವನ್ನು ಗುರುತಿಸುವುದೂ ಲಾಭದಾಯಕ. ಕವಿತೆಯ ಕಟ್ಟಡದಲ್ಲಿ ಸಾಕಷ್ಟು ವೈವಿಧ್ಯವನ್ನು ತೋರಿಸಿದ್ದಾರೆ. ನಿಸಾರ್ ಅಹಮದ್ ಅವರ ಕವಿತೆಗಳು ಜನ ಸಾಮಾನ್ಯರನ್ನೂ ಥಟ್ಟನೆ ಮುಟ್ಟಲು ಇದೂ ಒಂದು ಕಾರಣ. ಈ ಕವನದಲ್ಲಿ ಬಂದಿರುವ ಉಪಮೆ ಮತ್ತು ಪ್ರತಿಮೆಗಳ ಬಳಕೆಯನ್ನು ಗಮನಿಸೋಣ:

'ನಮಗಿಂತ ಬಲು ಘಟ್ಟಿಗ ಕಾಲದ ಕಲ್ಲುಕುಟ್ಟಿಗ.'

'ಸಮಯ ಸಂದಂತೆ ಕಂದರಕ್ಕಿಳಿಯುವುದು ನಿನ್ನಹಂಕೃತಿಯ ದಿಬ್ಬ.'

'ಕಾಲ ಬಕಾಸುರನ ಒಕ್ಕುಡಿತೆ, ಮುಕ್ಕೆಂದು.'

ನಿಸಾರರು ಹೊಸ ಹೊಸ ಪದಗಳನ್ನು ಟಂಕಿಸುವುದರಲ್ಲಿ ನಿಷ್ಣಾತರೆಂಬುದು ಎಲ್ಲರೂ ಬಲ್ಲ ಸಂಗತಿ. ಬೇರೆ ಬೇರೆ ಪದಗಳನ್ನು ಪೋಣಿಸಿ, ಹೊಸದನ್ನು ಸೃಷ್ಟಿಸಿ ಭಾಷೆಯ ಜೊತೆ ಚಕ್ಕಂದವಾಡುತ್ತಾರೆ.

ವ್ಯಾಕರಣ ಘಟಕಗಳು ಮತ್ತು ಛಂದೋ ಘಟಕಗಳು ನಿಸಾರರಲ್ಲಿ ಬಹುಮಟ್ಟಿಗೆ ಸಮಾನಾಂತರವಾಗಿ ನಡೆಯುತ್ತಿವೆ. ನಿಸಾರರ ಮೊಟ್ಟಮೊದಲ ಕವನ ಸಂಕಲನದಿಂದ ಇತ್ತೀಚಿಗಿನ ಕವನ ಸಂಕಲನದವರೆಗೂ ಅವರ ಕಾವ್ಯ ಪ್ರಾಸಬದ್ಧ ದ್ವಿಪದಿಯನ್ನೂ ಕೆಲವು ಸಲ ಚೌಪದಿಯನ್ನೂ ಬಳಸಿಕೊಂಡಿದೆ. ತಪ್ಪಿದರೆ ೫ ಮಾತ್ರೆಗಳ ಮುಕ್ತ ಛಂದಸ್ಸನ್ನು ಆಶ್ರಯಿಸಿದೆ. ಇವರು ಈ ಛಂದೋಪ್ರಕಾರಗಳನ್ನು ಬಳಸುವಾಗ ಸಾಕಷ್ಟು ವೈವಿಧ್ಯವನ್ನು ತರುತ್ತಾರೆ. ಸಾಲುಗಳ ಅಳತೆಯಲ್ಲಿ ಹೆಚ್ಚು ಕಡಿಮೆ ಮಾಡುವುದರ ಮೂಲಕ, ಒಂದೇ ಅಂತ್ಯ ಪ್ರಾಸವನ್ನು ಮುಂದಿನ ಸಾಲಿಗೂ ವರ್ಗಾಯಿಸುವುದರ ಮೂಲಕ, ಒಳ ಪ್ರಾಸಗಳ ಬಳಕೆಯ ಮೂಲಕ, ಯಾವುದೋ ಒಂದು ಸಾಲಿನಲ್ಲಿ ಪ್ರಾಸವನ್ನು ಕೈಬಿಡುವುದರ ಮೂಲಕ ವೈವಿಧ್ಯ ಉಂಟಾಗುತ್ತದೆ.

'ನಿಸಾರರ ಪ್ರಾಸಗಳ ವಿಶೇಷತೆಯೆಂದರೆ ಅವುಗಳ ಅನಿರೀಕ್ಷಿತತೆ. ಹೀಗಾಗಿ ಪ್ರಾಸಗಳಲ್ಲಿ ಕೂಡಿಕೊಳ್ಳುವ ಶಬ್ದಗಳು ಅವರ ಉಪಮೆಗಳ ಹಾಗೇ ಆಶ್ಚರ್ಯ ಉಂಟು ಮಾಡುವುವು.'[1]

—ಈ ಅಭಿಪ್ರಾಯಕ್ಕೆ ಅನುರೂಪವಾದ ಉದಾಹರಣೆಗಳು ಈ ಕವನದಲ್ಲೂ ಸಾಕಷ್ಟು ಸಿಗುತ್ತವೆ:

---

1. ಶೂದ್ರ, ಸಂಚಿಕೆ ೫, ಸಂಪುಟ ೯, ಮಾರ್ಚ್-೧೯೮೪, ಪು. ೬-೮.

'ದೈತ್ಯ ಹೆಬ್ಬಂಡೆ-ನಿಮಿರಿ ಮಂಡೆ'. 'ಭೀಮ-ಸಾರ್ವಭೌಮ'. 'ಠೇಂಕರಿಸುತ್ತಿತ್ತು ಸುತ್ತಮುತ್ತ-ತನ್ನ ದರ್ಪಿಷ್ಠ ಮಸ್ತಿಯ ಗತ್ತ'. 'ತೊತ್ತುಗಳಿರಾ, ನಿರ್ಲಕ್ಷ್ಯದ ನಿತ್ಯ ತುತ್ತುಗಳಿರಾ'. 'ಒದ್ದಾಡುತ್ತೀರಿ-ಮುದ್ದಾಡುತ್ತೀರಿ'. 'ನೋಟಕ್ಕೆ-ಜೂಟಾಟಕ್ಕೆ'. 'ಅಯ್ಯಾ ಸ್ವಘೋಷಿತ ಮಹನ್ಮಹನೀಯ / ಪರಿಸರ ಕೃಪಾಪೋಷಿತ ಶಿಖರ ಸ್ಥಾನೀಯ'. 'ಬಲು ಘಟ್ಟಿಗ-ಕಲ್ಲುಕುಟ್ಟಿಗ'. 'ನೋಡಿ-ಖೋಡಿ'. 'ಖಿಕ್ಕೆಂದು-ಮುಕ್ಕೆಂದು'. 'ಕಂಗಾಲ ತುಣುಕುಗಳೆ-ಹೆಬ್ಬಂಡೆಯಣಕುಗಳೆ'. 'ಅಳಲು-ನೆಳಲು'—ಹೀಗೆ ಇನ್ನೂ ಹಲವು ಉದಾಹರಣೆಗಳನ್ನು ನೀಡಬಹುದು.

ಒಟ್ಟಾರೆ, 'ಬಂಡೆ ಮತ್ತು ಕಲ್ಲಿನ ಚೂರುಗಳು' ಕವಿತೆ ತನ್ನ ಸಾಂಕೇತಿಕ ಗೂಢಾರ್ಥಗಳಿಂದ, ಹೊಚ್ಚ ಹೊಸದೆನ್ನಿಸುವ ವಾಕ್ಚಿತ್ರಗಳಿಂದ, ಮಾತುಗಳ ಮಾಟಗಾರಿಕೆಯಿಂದ ಮತ್ತು ಕಥಾನಕತೆಯ, ವರ್ಣನಾತ್ಮಕತೆಯ ಧಾಟಿಯಲ್ಲೇ ಸಾಗಿದ್ದರೂ ತನ್ನ ಅಡಕತೆ-ಸಾಂದ್ರತೆಗಳಿಂದ ನಿಸಾರರ ಕವಿತೆಗಳಲ್ಲಿ ತುಂಬ ಗಹನವಾದ ರಚನೆಯೆನ್ನಿಸುತ್ತದೆ. ಕನ್ನಡದ ಕೆಲವು ಅತ್ಯುತ್ತಮ ಪ್ರತೀಕಾತ್ಮಕ ಕಾವ್ಯಕೃತಿಗಳ ಸಾಲಿಗೆ ನಿಸ್ಸಂದೇಹವಾಗಿ ಸೇರುತ್ತದೆ. ಈ ಕವಿತೆಯ ವಸ್ತುವಿನ ಪ್ರಸ್ತುತತೆ ಮತ್ತು ಸಮಾಜಮುಖಿ ನಿಲವುಗಳು ಗಮನಾರ್ಹ ಅಷ್ಟೇ ಅಲ್ಲ, ಇನ್ನೂ ಹೆಚ್ಚಿನ ವಿಶ್ಲೇಷಣೆ, ಸಮಾಲೋಚನೆಗೂ ಒಡ್ಡಿಕೊಳ್ಳುತ್ತವೆ.

ಸರ್ಕಾರದ ಮತ್ತು ಅದರ ಕೃಪಾಪೋಷಿತ ಸಾರ್ವಜನಿಕ ವಲಯದ ಕಾರುಬಾರುಗಳು ಕಾರಿನಂತೆ. ಹೊರಗೆ ನೋಡಲು ದಿವಿನಾಗಿರುತ್ತವೆ. ಟೈರು ದೀಪಗಳು ಯಥಾಸ್ಥಿತಿಯಲ್ಲಿರುತ್ತವೆ. ಒಳಗಿನ ಎಂಜಿನ್, ಬ್ಯಾಟರಿ, ಕಾರ್ಬೊರೇಟರ್ ಇನ್ನಿತರ ಸಾರಭೂತ ಭಾಗಗಳು ನಾಪತ್ತೆ. ಆಡಳಿತದಲ್ಲಿ ಚಾಲ್ತಿಯಲ್ಲಿರುವ ನಿಯಮಗಳಿರಲಿ, ನ್ಯಾಯಾಲಯಗಳ ಕಾನೂನು ಕಾಯ್ದೆಗಳು ಸಹ ಬಯಸುವುದು ಹೊರಗಣ ಸಾಕ್ಷ್ಯಾಧಾರಗಳನ್ನು. ತಿರುಳನ್ನು ಕೀಟ ಕಬಳಿಸುತ್ತಿರಲಿ, ಆಚೆಯ ಸಿಪ್ಪೆ ಸುಕ್ಕಾಗಿರದಿದ್ದರೆ, ಮುಕ್ಕಾಗಿರದಿದ್ದರೆ ಸಾಕು. ಕಾಡಿನ ಹೊರ ಸರಹದ್ದಿನ ಮರಗಳು ಇದ್ದ ಹಾಗೆಯೇ ಇರುತ್ತವೆ: ಶ್ರೀಗಂಧ, ಸಾಗವಾನಿ, ಹೊನ್ನೆ, ಬೀಟೆ ಸತತ ಸ್ವಾಹಾ. ಸರ್ಕಾರದ ಬಹುತರ ಬಾಬುಗಳಿಗೆ, ಇಲಾಖೆಗಳಿಗೆ ಈ ಮಾತು ಪೂರ್ತಾ ಅನ್ವಯ.

(ಸರಕಾರಿ ಕಾರುಬಾರುಗಳು)

✧ ✧ ✧

ನದಿ ಹೇಗೆ ವ್ಯವಸಾಯ ಮತ್ತು ವಿದ್ಯುದುತ್ಪಾದನೆಗಳೆರಡಕ್ಕೂ ಸಹಾಯಕವೋ ಹಾಗೆಯೇ ಸಾಹಿತ್ಯ ಕೂಡಾ ದ್ವಿಮುಖ ಉಪಯೋಗಿ: ನಲಿವು ಹಾಗೂ ತಿಳಿವು ಅದರ ಸತ್ಪರಿಣಾಮಗಳು.

(ಸಾಹಿತ್ಯದ ಪ್ರಯೋಜನ)

ಪ್ರಾಪ್ತಿ

೧

ವಾಸನೆಯ ಜೀರ್ಣಿಸಿಕೊಂಡು ಸಿಂಬೆ ಸುತ್ತುವ ಬಲಿಷ್ಠ ನೆರಳುಗಳ
ಮಾಂಸದೊತ್ತಡವ ತಡೆದೊಳಕ್ಕೊತ್ತರಿಸುವ ಗವಿಷ್ಠ ಸರಳುಗಳ
ಒಳಗೆ ಸೇದಿ, ಸಂಕುಚಿಸಿ ಆಕೆ
ವರ್ಣ ತಂತಾನೆ ಏರಿಳಿವ ಸ್ಫಟಿಕದ ಸಲಾಕೆ.
ಝಳಕ್ಕೊಪ್ಪಿಸಿಕೊಳ್ಳುವ ದೂಳಿನರಳಲ್ಲಿ ಸುಡುವ ಆತ—
ಹೊಸ್ತಿಲು ಪ್ರತ್ಯೇಕಿಸುವ ರೇಖೆ.

೨

ಹಿಂದಿಂದ ಹೊಗಿಸಿಕೊಂಡು ತನ್ನ ತೋಟಕ್ಕೆ
ಬುಡಕ್ಕಾನಿಸಿ ಪಾದರಿ ಕುಕ್ಕೆ
ಅನಿಮಿಷ ನಿಲ್ಲುವಳು; ಒಳಕೊಳ್ಳುತ್ತ ತನ್ನ ಹಿತ್ತಲ ತೋಟದಲ್ಲಿ
ಬೆವೆಯುವವನ; ಬೆವೆತಷ್ಟೂ ಬೇರೊತ್ತಿಸಿಕೊಳ್ಳುವವನ;
ಮತ್ತವನ ಮೈಯ ಪ್ರಖರತೆಯಲ್ಲಿ ಕನಸುಗಳ ಕಾಸಿ
ಗಟ್ಟಿಗೊಳಿಸುತ್ತ ಮರೆತು ತನ್ನನ್ನ.
ಅವಳ ನೆರಳಲ್ಲಿ ತನ್ನ ಬಿಸಿಲಿನ ಭಾರ—ನಿಂದಿಸುವ.
ಹಂಬನ್ನೆತ್ತಿ ಹೆಗ್ಗೊಂಬೆಗೆ ಹೊಂದಿಸುವ
ಭರದಲ್ಲಿ ಜಾರಿದರೆ ಮುಂಡಾಸು ನೀರ
ಚಿಗುರು ಮಿದು ಪಾದಕ್ಕೆ,
ಹಾರುವಳು ಮಾರು ದೂರ ಪ್ರಮಾದಕ್ಕೆ.

ಮರು ಕ್ಷಣ, ಬೆಳ್ದಿಂಗಳಲ್ಲಿ ಬೆಳ್ಳಿ ಗಂಟೆಯಾಡಿಸಿದ ಹಾಗೆ
ಕೆನ್ನೆಗುಳಿಯತ್ತಿತ್ತ ಗುಲುಗುಲು ಗಿಲಿಗಿಲಿಸಿ ಹಿತೋಷ್ಣವಾದವಳು
ಜಾರುಬಂಡೆಯ ಮೇಲಿನೇಕಾಗ್ರ ಹಗಲಂತೆ ತೀಕ್ಷ್ಣವಾದವಳು
ತಟಕ್ಕನೇಳುವ ತನ್ನ ಬೇರೆತನದರಿವಲ್ಲಿ
ಘಾಟಿಂದ ತಳ್ಳಿದ ಹಾಗೆ ತಟಸ್ಥೆಯಾದರೆ—ಹೆದರುವ;
ಬೇಸಿಗೆಗೆ ಧಗೆಯಷ್ಟು, ಚೆಲ್ಲು ವಯಸ್ಸಿಗೆ ನಗೆಯಷ್ಟು
ನೈಜವಾದವಳ ಅನ್ಯತನಕ್ಕೆ; ಅವಳ
ಸುತ್ತಾ ನಿಧಿ ಕಾದ ಸನಾತನಕ್ಕೆ; ಅವಳ
ಕಿರಣಗಳ ಲಾಳಿಯಾಡದ ದಟ್ಟ ನೆರಳಿಗೆ

ಊದೂದಿ ಉರಿಸಿ, ತಾನೇ ಮರಳೆರಚುವ ಮರುಳಿಗೆ—ಹೆದರುವ;
ಮೊದಲಿಗೆ ತೆನೆ ಕೊನೆಯಲ್ಲಿ ಸಮ ತೂಕ ಕೂತ ಹಕ್ಕಿ ಹಗುರ
ವಾದಾಕೆ, ಕ್ರಮೇಣ ಒಳಕ್ಕೂರಿ ಭೂಮಿ ಸಡಿಲಿಸುವ
ಬಿಕ್ಕಟ್ಟು ಜಾಲವಾದರೆ—ಹೆದರುವ;
ವಾಸ್ತವ್ಯದಲ್ಲಿ ಕನಸಾಗಿ ಬಹು ವಚನಕ್ಕೇರಿಸಿಕೊಂಡು
ಅವ ಬೆಳೆದ ದವನವ ಅವನೆದುರೇ ತೊಳೆದು ಮುಡಿದುಕೊಳ್ಳುವಾಕೆ;
ಕನಸಲ್ಲಿ ವಾಸ್ತವ್ಯ ಬಿಚ್ಚಿ ದೇಹವಿಡಿ ಹಿಡಿಯಾಗಿ
"ಇಡಿ, ಇಡಿ" ಕನವರಿಸಿ ಕೆಡಿಸಿಕೊಳ್ಳುವಾಕೆ—
ಈ ಇಮ್ಮೊಗದ ಕ್ಲಿಷ್ಟಕ್ಕೆ ಹೆದರುವ.

೩

ಜಾತ್ರೆ ಗಡಿಬಿಡಿಯ ಹೆತ್ತವರ ಮರೆವಲ್ಲಿ
ನೆಟ್ಟಗೆರಗಿದರೆ ಹಟ್ಟಿಗತ್ತಲೊಳಕ್ಕೆ—ಮಿಂಚುಬಳ್ಳಿ—
ಹುರಿದುಂಬಿಸಿದರೆ ದಿಗಿಲುಗೊಂಡವನ, ಬಾಳ ತೆರವಲ್ಲಿ
ನಡು ಹಗಲ, ತಪ್ಪಿದರೆ ಕಾರಿರುಳ ಉಂಡವನ; ಹೀಗೆಂದರೆ:
ಇಗೊ, ಅಳಿಸಿ ಹೊಸ್ತಿಲ ಗೆರೆ, ಕಳಚಿ ಹೊರೆ, ಸಂಧಿಸಿದೆ—
ನಿನ್ನೊಳಕೊಳ್ಳದಿದ್ದರೂ ಅಲ್ಲಿ.
ತಿಕ್ಕುತ್ತಾ ಹೋಗು, ಕೊಡವಿ ಪ್ರದರ್ಶನದ ಬಣ್ಣ
ನಿಧಾನ ಹೊರಳಿಸುತ್ತೇನೆ ಒಳಗೆಂಪ—ನಿನ್ನ ನಾಡಿಗಳನಲೆಯುವಂಥದ್ದೇ—
ಹಿಡಿ ಹಿಡಿ, ಇದ ಹಿಡಿ, ಬರೀ ತಿರುಳಾಗುತ್ತೇನೆ;
ಕಾಡ, ನೀನು ಕುದಿವ, ಕಂಬನಿಗರೆವ ಕರುಳಾಗುವೆ;
ಚಪ್ಪರಿಸು, ಏರುವೆ.
ಝುಳಪಿಸುವೆ ನಿನ್ನ, ಝುಳಕ್ಕೊಪ್ಪಿಸಿಕೊಂಡಂತೆ ನಾನೂ.

ಗುಪ್ತ ರೇಖೆಗಳ ನನ್ನ ಮೂಲೆ ಮೊಡಕುಗಳ ವಕ್ರ ತೊಡಕುಗಳ
ದುರುಗುಟ್ಟು—ದರ್ಶಿಸುವೆ:
ನಿನ್ನವರ ಒಳಗುಗಳ ಧಿಗ್ಗನುರಿಸಿದ ನನ್ನ ಸಂಬಂಧಿಗಳ
ಅರಿವು ಹೊಡಕರಿಸುವ ದಿವ್ಯ ದೊಂದಿಗಳ—ಹೀಗೆಂದರೆ,
ಸಂಜೆ ಮೈಗೂಡಿಸಿಕೊಂಡ ಕೆರೆಯಂತೆ ಧಗಧಗಿಸನೆ ತಣ್ಣಗೆ?
ಕಣ್ಣು ಕುಕ್ಕಿ ಹೊರಳನೆ, ಎರೆ ಹುಳದಂತೆ ಆಪ್ತಮಣ್ಣಗೆ?

೪

ನೋಡುತ್ತಿದ್ದಂತೆ ಹಿಗ್ಗುವಳು, ಹಿಗ್ಗುವಳು, ಹಿಗ್ಗುವಳು
ತನ್ನ ಹಿತ್ತಲ ತೋಟ ಅವನ ಹೊಲವಾದಂತೆ;
ಅರಿವಿನೆಳೆನಾಜೂಕು ಬದುಕಲ್ಲಿ ಹೊಕ್ಕು ಬಲವಾದಂತೆ,
ಮುಂಡಾಸು ಮೂಸಿ, ತೊಟ್ಟರಿವೆ ಹಾಸಿ ಒರಗಿಸುವಳು:
ಉಟ್ಟಾಗೊಂದು ಪರಿ, ಇಟ್ಟಾಗೊಂದು ಪರಿ

ಗುಟ್ಟಲ್ಲೊಂದು, ರಟ್ಟಲ್ಲೊಂದು—
ಋತುಗೆ ಪ್ರಕೃತಿಯಂತೆ ಮಾರ್ಪಡುವ ವಿಧಿಯಲ್ಲೆ ಬದಲಿಸುವಳು
ಅವನಲ್ಲಿ ತನ್ನ ಮನಸ,
ಜಡ ವಲಯದ ಸುತ್ತ ಕನಸ;
ಮೃದುತ್ವದ ಬೆಚ್ಚನೆಯ ಸಮತ್ವದಲ್ಲಿ
ಸವರುತ್ತಾಳೆ ಒಗರ;
ಹೇರುತ್ತಾಳೆ ಅವನತ ಕೊರಡಲ್ಲೂ ಮಾರ್ದವತೆಯ ಚಿಗುರ.

೫

ಹತ್ತಿಸಿ ಅವನ ಘಾಟಿಂದ ಕಂಪಿಗೆ
ಪರಿಣಮಿಸಿ ತಾನು ಬಿಳುಪಿಂದ ರಕ್ತಕ್ಕೆ
ಮೌನಿ, ಪ್ರಬಲಿಸಿಕೊಂಡು ಮಾತು
ಹೂಡಿಸಿಕೊಳ್ಳುತ್ತಾಳೆ ಬಿಸಿಲ ಧಾತು.
ಕೋಲಿಗಳ, ಗೂಡೆಗಳ, ರೊಪ್ಪಗಳ ಜೀವೋತ್ತೇಜಕ ಮೂಲ ವಾಸನೆಯಲ್ಲಿ
ನಿಸ್ಸಂಕೋಚ ಬೆರೆಯುತ್ತಾಳೆ; ಹದವಾಗಿ ಬೆವರುತ್ತಾಳೆ.
ಆಗಷ್ಟೇ ಉತ್ತ ನೇಗಿಲ ಹಸಿ ಹಸೀ ಮಣ್ಣಂತೆ ಕಚ್ಚಿಕೊಂಡಾಕೆ
ಮೃದುವಾಗುತ್ತಾಳೆ, ಹೊಸದಾಗಿ;
ತನ್ನಾತ್ಮಕ್ಕೆ ಮೂರ್ತತ್ವ ದಕ್ಕಿಸಿಕೊಂಡ ಸ್ವಲಾಭದಲ್ಲಿ
ಅವನ ಓರೆಕೋರೆಗೆ ನಯದ ಒರೆಯಾಗುತ್ತಾಳೆ.
ಸಂಸ್ಕೃತಿಯ ಪುಟ ತಿರುವುತ್ತಾಳೆ.

★ ★ ★

(ಕವನ ಸಂಕಲನ: ‘ನಾನೆಂಬ ಪರಕೀಯ’)



'ಪ್ರಾಪ್ತಿ': ವರ್ಣ ಸಮಸ್ಯೆಯ ವ್ಯಕ್ತಿಗತ ನೆಲೆಯ ಸ್ಪಷ್ಟ ಪ್ರತಿಬಿಂಬ

◆ ಪ್ರೊ. ವೇಣುಗೋಪಾಲ ಸೊರಬ

೧

ನಾವು ಕವಿಯೊಬ್ಬನನ್ನು ಮಹತ್ವದವನೆಂದು ಗುರುತಿಸುವುದು, ಆತ ಬೇರೆ ಕವಿಗಳಿಗಿಂತ ವಿಭಿನ್ನ ರೀತಿಯಲ್ಲಿ ಬರೆಯುತ್ತಾನೆ ಎಂಬುದಕ್ಕಷ್ಟೇ ಅಲ್ಲ. ಆ ಕವಿ ಬೇರೆಯವರಿಗಿಂತ ವಿಭಿನ್ನ ವಸ್ತುಗಳನ್ನು ಕುರಿತು ಬರೆಯುತ್ತಾನೆ ಎನ್ನುವುದಕ್ಕೂ ಅಲ್ಲ. ಇವುಗಳಿಗಿಂತ ಮುಖ್ಯವಾಗಿ ಆತನಿಗೆ ತನ್ನದೇ ಆದ ಕೆಲವು—ಅಥವಾ ಒಂದಾದರೂ—ಮೂಲಭೂತ ಕಾಳಜಿಗಳಿವೆ ಎಂಬ ದೃಷ್ಟಿಯಿಂದ. ಹಾಗೆ ಹೇಳುವಾಗ, ಪ್ರತಿಯೊಬ್ಬ ಕವಿಯನ್ನೂ ಇವನು ರಾಷ್ಟ್ರೀಯತಾವಾದದ, ವಾಮ ಪಂಥದ, ಇಲ್ಲವೇ ಲಿಬಿಡೊ ಪ್ರಜ್ಞೆಯ ಕವಿ ಎಂದು ಗುರುತಿಸಬೇಕೆಂದಲ್ಲ. ಆದರೆ ಈ ಯಾವುದೋ ಒಂದು ಧೋರಣೆ ಹಾಗೂ ಪ್ರಜ್ಞೆ, ಅವನ ಕಾವ್ಯದಲ್ಲಿ ಅತ್ಯವಶ್ಯವಾದ ಅಂಶವಾಗಿಯೂ ಅನೈಚ್ಛಿಕವಾದ ಅಂಶವಾಗಿಯೂ ಇರುತ್ತದೆ. ಅಷ್ಟೇ ಅಲ್ಲದೆ, ಬೆಳವಣಿಗೆಯ ಬೇರೆ ಬೇರೆ ಘಟ್ಟಗಳಲ್ಲಿ, ಪುನಃ ಪುನಃ ಪ್ರಸ್ತಾಪಿಸಲ್ಪಟ್ಟು— ಪ್ರತಿಮೆಯ ಮೂಲಕವಾಗಲೀ, ಲಯದ ಮೂಲಕವಾಗಲೀ, ಸನ್ನಿವೇಶಗಳ ಪುನರ್‌ನಿರ್ಮಾಣದಲ್ಲಿಯಾಗಲೀ—ಕವಿಗೂ ಆ ವಸ್ತುವಿಗೂ ಇರುವ ನೇರ ಸಂಪರ್ಕ, ಸಹಭಾಗಿತ್ವ, ಆತ್ಮೀಯತೆಗಳು ವ್ಯಕ್ತವಾಗುತ್ತವೆ.

ಈ ರೀತಿ ನಾವು ಮಹತ್ವದ ಮತ್ತು ಹಾಗಲ್ಲದ ಕವಿಗಳೆಂದು, ಇರುವ ಕವಿಗಳೆಲ್ಲರನ್ನೂ ಯಾವುದಾದರೂ

ಒಂದು ಗುಂಪಿಗೆ ದೂಡುವುದು ಸರಿಯಲ್ಲ. ಜೀವಂತ, ಸಮಕಾಲೀನ ಕವಿಗಳಲ್ಲಿಯಂತೂ ಅವರ ಕೃತಿಯ ಜೀವಂತಿಕೆ ಮುಖ್ಯ. ಉಳಿದದ್ದು ಆಮೇಲೆ. ಕವಿಯೊಬ್ಬ ಒಂದು ಮಹತ್ವದ ಕವನವನ್ನು ಪ್ರಕಟಿಸಿದರೆ, ಅದನ್ನು ಆವಶ್ಯಕವಾಗಿ ಗಮನಿಸಬೇಕಾದ್ದು ವಿಮರ್ಶಕನ ಕರ್ತವ್ಯ. ಗಮನಿಸುವುದರ ಜೊತೆಗೇ, ಮೌಲ್ಯಮಾಪನ ಮಾಡಿ, ಆ ಕೃತಿಗೆ ಸಲ್ಲತಕ್ಕ ಸ್ಥಾನ ವನ್ನು ನಿರ್ದೇಶಿಸಬೇಕಾದುದು ಅವನ ಹೊಣೆ. ಮಹತ್ವ ಪೂರ್ಣ ಕವಿತೆಗಳನ್ನು ರಚಿಸಿರುವ ಶ್ರೀ ಕೆ. ಎಸ್. ನಿಸಾರ್ ಅಹಮದರ ಒಟ್ಟು ಕವನಗಳ ಬಗ್ಗೆ, ಅವರ ಕಾವ್ಯಕರ್ಮದ ಬಗ್ಗೆ ಜಾಗರೂಕತೆಯಿಂದ ಜವಾಬ್ದಾರಿಯಿಂದ ಚರ್ಚಿಸಬೇಕಾದ ಸಮಯ ಈಗ ಬಂದಿದೆ.

ಭಾವಗೀತಾತ್ಮಕವಾದ ಯಾವುದೇ ಒಂದು ಭಾವವನ್ನು ನೇರವಾಗಿ ರೂಪಿಸುವುದೇ ನಿಸಾರರ ಮೂಲ ಕವನಗಳ ಗುಣ. ಆಡು ಭಾಷೆಯನ್ನು ಬಹಳವಾಗಿ ಬಳಸಿ, ಆಡುಮಾತಿನ ಲಯಕ್ಕೆ ತಮ್ಮ ಸಾಲುಗಳನ್ನು, ಪದ ಪುಂಜಗಳನ್ನು ಪಳಗಿಸಿ, ಆತ್ಮೀಯತೆಯ ಕಂಪನ್ನು ಅವರು ತಮ್ಮ ಕವನಗಳಲ್ಲಿ ಸಾಧಿಸಿದ್ದಾರೆ. ತಮ್ಮ ಪ್ರತ್ಯೇಕತೆಯನ್ನು, ತಮ್ಮ ವೈಯಕ್ತಿಕತೆ ಯನ್ನು ಬೆಳೆಸಿಕೊಳ್ಳಲು ಬಹಳ ಹಿಂದಿನಿಂದಲೇ ಅವರು ಮಾಡಿದ ಪ್ರಯತ್ನ ಇಲ್ಲಿ ಸಾರ್ಥಕಗೊಳ್ಳುವ ದಿಕ್ಕಿನಲ್ಲಿ ಏನಾದರೂ ಸೂಚನೆಗಳಿವೆಯೆ? ಎಂದೂ ನೋಡಬಹುದು.

೨

ಪ್ರಸ್ತುತ 'ಪ್ರಾಪ್ತಿ' ಕವನ, ವಸ್ತುವಿನ ಆಯ್ಕೆ ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ಹಾಗೂ ಬಳಸಿರುವ ಉಪಮೆ ರೂಪಕಾದಿಗಳಲ್ಲಿ ಅವರ 'ಪ್ರಾಗ್ಬಂಧಗಳು' ಪದ್ಯದಂತೆ ಸಂಕೀರ್ಣ ಸ್ವರೂಪದ್ದಾಗಿದೆ. ಇದೊಂದು ಸಮಾಜದಲ್ಲಿ ರೂಢಿಗತವಾಗಿ ಕಾಡಿರುವ ವರ್ಣ ಸಮಸ್ಯೆ ಯನ್ನು ವ್ಯಕ್ತಿಗತ ನೆಲೆಯಲ್ಲಿ ಪ್ರತಿಬಿಂಬಿಸುವ ಪ್ರಯತ್ನವಾಗಿದೆ.

'ಪ್ರಾಪ್ತಿ' ಕವಿತೆ ಇಂದಿನ ಜೀವನವನ್ನು ಕುರಿತು ಹೇಳುತ್ತದಾದರೂ ಇಡೀ ಬದುಕಿನ ಬಗೆಗೆ ಚಿಂತನೆಯನ್ನೂ ವ್ಯಾಖ್ಯೆಯನ್ನೂ ಒಳಗೊಂಡಿದೆ. ಗಂಡು ಹೆಣ್ಣುಗಳನ್ನು ಎರಡು ವಿರೋಧೀ ಶಕ್ತಿಗಳಾಗಿ ಮಾತ್ರ ಕವಿ ನೋಡುವುದಿಲ್ಲ. ಬದಲಾಗಿ, ಹೆಣ್ಣು ಗಂಡುಗಳನ್ನು ಸಂಸ್ಕೃತಿ ಹಾಗೂ ರೂಕ್ಷತೆ, ಅರಿವು ಹಾಗೂ ವಿಸ್ಮೃತಿ, ಸುಕುಮಾರತೆ-ಗಡಸುತನ, ಪ್ರಕೃತಿ-ಪುರುಷ, ಕನಸು-ವಾಸ್ತವ್ಯ, ಕಲೆ-ಜೀವನ ಇತ್ಯಾದಿ ದ್ವಂದ್ವಗಳ ಪ್ರತೀಕವನ್ನಾಗಿ ನೋಡಿದ್ದಾರೆ. ಈ ಎರಡೂ ಪರಸ್ಪರ ವಿರೋಧಿಗಳಾದರೂ ಅಯಸ್ಕಾಂತದ ಎರಡು ಮುಖಗಳಂತೆ, ಧ್ರುವಗಳಂತೆ ಒಂದನ್ನೊಂದು ತೊರೆದು ಇರಲಾರವು. ಆದರೆ ಇವುಗಳ ಸಾಮರಸ್ಯ ಹಾಗೂ ಸಹಯೋಗ ಸಾಧ್ಯವೆ? ಕವಿಗೆ ಅದು ಸಾಧ್ಯ ಎನ್ನುವ ಆತ್ಮವಿಶ್ವಾಸವಿದೆ. ಅಲ್ಲದೆ, ಹಾಗೆ ಸಾಧಿತವಾದಾಗಲೇ ಬದುಕಿಗೆ ಪರಿಪೂರ್ಣತ್ವ ಒದಗುತ್ತದೆ ಎಂಬ ಆಶಾಭಾವನೆಯೂ ಇದೆ. ಈ ಪರಸ್ಪರ ವಿರೋಧೀ ಶಕ್ತಿಗಳನ್ನು 'ಸಮಾವೇಶ' ಹೆಸರಿನ ಕವಿತೆಯಲ್ಲಿ, 'ಹೋರಿಸುವ' ಪ್ರತಿಮೆಯಿದ್ದರೂ, ಅಲ್ಲಿ ಕವಿ ಹೆಚ್ಚಾಗಿ ನೈತಿಕ ತತ್ವಕ್ಕೇ ಗಂಟು ಬಿದ್ದು, ಕವನ ಹದ ಪಡೆಯುವುದಿಲ್ಲ. ಇಲ್ಲಿಯಾದರೋ 'ಪ್ರಾಪ್ತಿ' ಎಂಬ ಹೆಸರಿಗೆ ತಕ್ಕ ರೀತಿಯಲ್ಲಿ, ಅದು ಸಾರ್ಥಕ್ಯವನ್ನು ಪಡೆದಿದೆ. 'ಪ್ರಾಪ್ತಿ'ಯಲ್ಲಿ ಒಬ್ಬ ಗಂಡು ಮತ್ತು ಒಬ್ಬ ಹೆಂಗಸಿನ ಪರಸ್ಪರ ವಿರುದ್ಧದ ಬದುಕಿನ ರೀತಿ, ಆಚಾರ ವಿಚಾರ ಮತ್ತು ಪ್ರತ್ಯೇಕತೆಗಳ ಸಂಲಗ್ನತೆ,

ಸಮನ್ವಯತೆಗಳಿಂದ ಪ್ರಾಪ್ತವಾಗುವ ಯುಗಧರ್ಮ ವಿಹಿತವಾದ ಒಂದು ಪರಿಪೂರ್ಣತೆಯ ಅನಿವಾರ್ಯವನ್ನು ನಿಸಾರರು ಯಶಸ್ವಿಯಾಗಿ ಪ್ರತಿಪಾದಿಸಿದ್ದಾರೆ.

ಕವನದ ಆರಂಭದಲ್ಲಿ ಕವಿ, ಆತ ಮತ್ತು ಆಕೆಯನ್ನು ಪರಿಚಯಿಸುವ ರೀತಿ ಕುತೂಹಲಕಾರಿಯಾಗಿದೆ. ಅವರುಗಳ ಬಗ್ಗೆ ನಮ್ಮಲ್ಲಿ ಆದರವನ್ನು ಹುಟ್ಟಿಸುತ್ತದೆ. ಅವಳನ್ನು ಪರಿಚಯಿಸುವ ಈ ಸಾಲುಗಳಲ್ಲಿ, ಅವಳಲ್ಲಿ ಅಡಕವಾಗಿರುವ ಹಲವಾರು ಸಂಸ್ಕಾರಗಳನ್ನು ನೋಡಬಹುದು—

'ವಾಸನೆಯ ಜೀರ್ಣಸಿಕೊಂಡು ಸಿಂಬೆ ಸುತ್ತುವ ಬಲಿಷ್ಠ ನೆರಳುಗಳ
ಮಾಂಸದೊತ್ತಡವ ತಡೆದೊಳಕ್ಕೊತ್ತರಿಸುವ ಗವಿಷ್ಠ ಸರಳುಗಳ
ಒಳಗೆ ಸೇದಿ, ಸಂಕುಚಿಸಿ ಆಕೆ
ವರ್ಣ ತಂತಾನೆ ಏರಿಳಿವ ಸ್ಫಟಿಕದ ಸಲಾಕೆ.'

ಪರಂಪರಾಗತವಾಗಿ ಬಂದ ಸಂಸ್ಕಾರಗಳಿಂದ ಆಕೆ ಪುಟಗೊಂಡಿದ್ದಾಳೆ. ಆದರೆ ಯಾವುದು ಸಂಸ್ಕಾರದಿಂದ ಬಂದಿದೆಯೋ ಅದನ್ನು ಒಳಗೆ ಸೇದಿ, ಸಂಕೋಚಗೊಳಿಸಿ, ಆಕೆ ವರ್ಣ ತಂತಾನೆ ಏರಿಳಿಯುವ ಸ್ಫಟಿಕದ ಸಲಾಕೆಯಾಗಿದ್ದಾಳೆ. ಇಷ್ಟಾದರೂ ಅವಳದು ಸ್ವೇಚ್ಛಾವೃತ್ತಿ ಯಲ್ಲ. ಹೊಸ್ತಿಲು, ಅವಳನ್ನು ಹೊರ ಪ್ರಪಂಚದಿಂದ ಪ್ರತ್ಯೇಕಿಸುವ ರೇಖೆಯಾಗಿದೆ. ಅಂತಃಪುರದ ಅಮೂಲ್ಯ ರತ್ನ ಅವಳು. ಇವನಾದರೋ ದೂಳಿನಲ್ಲಿ ಸುಡುತ್ತಾನೆ. ಹೊರಗಿನ ಝಳಕ್ಕೊಪ್ಪಿಸಿಕೊಳ್ಳುವ, ತಲೆಯ ಮೇಲೆ ಒಂದು ಚಾವಣಿಯನ್ನೂ ಕಾಣದ ಪ್ರಾಕೃತಿಕ ಜೀವಿ ಈತ. ಕವನದ ಈ ವಿವರಗಳನ್ನು ಒಳಗೊಂಡ ಮೊದಲನೆಯ ಭಾಗ ಒಂದು ಪೀಠಿಕೆ ಯಂತಿದೆ.

ಎರಡನೆಯ ಭಾಗದಲ್ಲಿ, ಇವರಿಬ್ಬರಲ್ಲಿ ಇರುವ ಪರಸ್ಪರ ಸೆಳೆತ ಚಿತ್ರಿತವಾಗಿದೆ. ಎಲ್ಲ ಸಂಸ್ಕಾರಗಳನ್ನೂ ಭಟ್ಟಿಯಿಳಿಸಿದಂತಹ ಪರಿಸರದಲ್ಲಿ ಬೆಳೆದ ಸುಕುಮಾರ ಹೆಣ್ಣು, ಸಂಸ್ಕಾರದ ಪರಿಚಯವೂ ಇಲ್ಲದ ರೂಕ್ಷ ಗಂಡು—ಇವರಿಬ್ಬರಲ್ಲಿ ವ್ಯಕ್ತವಾಗುವ ಪರಸ್ಪರ ಆಕಾಂಕ್ಷೆ, ಆಕರ್ಷಣೆ, ದೈಹಿಕ ಮಾನಸಿಕ ತುಯ್ತಗಳು ಎರಡು ಸಂಸ್ಕೃತಿಗಳಲ್ಲಿ ಉಂಟಾಗ ಬಹುದಾದ ಘರ್ಷಣೆಗಿಂತ ವಿಪರೀತವಾದದ್ದು. ಈ ಕವನದ ಮುಖ್ಯ ಅಂಶವೆಂದರೆ, ಇಂದಿನ ಸಾಹಿತ್ಯಕ ಮೌಲ್ಯವಾಗಿ ಚಲಾವಣೆ ಪಡೆಯುತ್ತಿರುವ ಶೂದ್ರ-ಬ್ರಾಹ್ಮಣ ಪ್ರಜ್ಞೆಗಳನ್ನು ನಿಸಾರ್‌ರವರು ತಪ್ಪಿಸಿರುವುದು. ಹೀಗೆ ಪರಂಪರಾಗತ ಪ್ರಜ್ಞೆಗಳನ್ನು ಪ್ರತಿನಿಧಿಸಿಯೂ ತಪ್ಪು ದಾರಿಗೆ ಎಳೆಯಬಹುದಾದ ಅದರ ಲೇಬಲ್‌ಗಳನ್ನು ತಪ್ಪಿಸಿರುವುದು ಮಾನಸಿಕ ಸಮತೂಕದ ಒಳ್ಳೆಯ ಗುಣ. ಆದರೆ ತನ್ನ ಅಭಿಪ್ರಾಯವನ್ನು ಕವಿ ಹೇಗೆ ಸಮರ್ಥಿಸಿಕೊಳ್ಳುತ್ತಾನೆ ಎನ್ನುವುದನ್ನು ಆತ ಉಪಯೋಗಿಸಿರುವ ಪ್ರತಿಮೆಗಳ ಮೂಲಕ ನೋಡಬೇಕು. ಅಡಿಗರ ಸರ್ವಶ್ರೇಷ್ಠ ಕೃತಿಗಳಾದ `ಭೂತ` ಮತ್ತು `ಕೂಪ ಮಂಡೂಕ`ಗಳಲ್ಲಿ ಇದೇ ರೀತಿಯ ಯಾವುದೇ ಒಂದು ಪಂಗಡಕ್ಕೆ ಅಥವಾ ಗುಂಪಿಗೆ ಸೇರಿದ ಧಾರ್ಮಿಕ, ನೈತಿಕ ಪದಗಳನ್ನು ಉಪಯೋಗಿಸದೆಯೇ ಪ್ರತಿಮೆಗಳ ಮೂಲಕವಾಗಿಯೇ ತಮ್ಮ ಮೂಲ ಉದ್ದೇಶವನ್ನು ಸಮರ್ಥಿಸುವ ರೀತಿಯಲ್ಲಿ ಸಾಧಿಸಿರುವುದನ್ನು ಹೇಗೆ

ನೋಡಬಹುದೋ ಹಾಗೆಯೇ ಟಿ. ಎಸ್. ಎಲಿಯಟ್ ತನ್ನ ಕೃತಿಗಳಲ್ಲಿ ಎಲ್ಲಿ ಕ್ರಿಶ್ಚಿಯನ್ ಪ್ರತಿಮೆಗಳನ್ನು ಹೆಚ್ಚಾಗಿ ಬಳಸಿಲ್ಲವೋ, ಇಲ್ಲಿ ಇದೇ ರೀತಿಯ ಯಶಸ್ಸು ಗಳಿಸಿರುವುದನ್ನು ನೋಡಬಹುದು. (ಮುಖ್ಯವಾಗಿ The Four Quartetsನ ಕೆಲವು ಭಾಗಗಳನ್ನು ಗಮನಿಸಬೇಕು.)

ಇಲ್ಲಿ ಕವಿ ಉಪಯೋಗಿಸುವ ಪ್ರತಿಮೆಗಳು: ಅವನ ಹೊಲ, ಅವಳ ಹಿತ್ತಲ ತೋಟ ಅಥವಾ ಕೈ ತೋಟ, ಹಾಗೆಯೇ ಮುಂಡಾಸಿನ ಪ್ರತಿಮೆ. (ಇದು ಎರಡು ರೀತಿಯಲ್ಲಿ ಕೆಲಸ ಮಾಡುತ್ತದೆ.)

ಆಕೆ ತಾನಾಗಿ ಆತನನ್ನು ತನ್ನ ತೋಟಕ್ಕೆ ಹಿಂದಿನಿಂದ, ಅಂದರೆ ಹಿತ್ತಲಿನಿಂದ ಹೊಗಿಸಿಕೊಳ್ಳುವಳು. ನೇರವಾಗಿ, ನಿರ್ಭಯವಾಗಿ ಮುಂಬಾಗಿಲಿನಿಂದ ಅಲ್ಲ. ವಿಧಿನಿಷೇಧಗಳ ಭಯಾಶಂಕೆಯ ಕಾರಣದಿಂದ ಗುಪ್ತವಾಗಿ ಮರೆಯಿಂದ ಆಹ್ವಾನಿಸಿಕೊಳ್ಳುವಳು. ತನಗೆ ಬರಿಯ ಕನಸೇ ಆಗಿರುವ ಬದುಕನ್ನು ಅವನ ಪ್ರಖರತೆಯಲ್ಲಿ ಕಾಸಿ ಗಟ್ಟಿಗೊಳಿಸುವಳು. ಆದರೆ ಸಂಸ್ಕಾರವಿಲ್ಲದ ಆತನಿಗೆ ಹಿಂಜರಿಕೆ. ಅಲ್ಲದೆ ಆತ ಬಹಳವಾಗಿ ಕಷ್ಟ ಪಟ್ಟು, ದೈಹಿಕ ಶ್ರಮ ವಹಿಸಿ ದುಡಿಯುವಾಗ, ಸ್ವಲ್ಪವೇ ಅವನ ಮುಂಡಾಸು ಜಾರಿದರೂ ಆಕೆ ಮಾರು ದೂರ 'ಹಾರುವಳು' ಪ್ರಮಾದಕ್ಕೆ. ಇದು ಆತನಲ್ಲಿಯೂ ಸಂಕೋಚ ಉಂಟು ಮಾಡುತ್ತದೆ. ಕಾಡು ಮೃಗವಾಗಿ ಆತ ಆಕೆಯ ಮೇಲೆ ಬೀಳಲಾರ. ಅವನು ಪಾಕೃತಿಕವಾದ, ಸಂಸ್ಕಾರ ರಹಿತವಾದ ಚೈತನ್ಯ ಪಡೆದವನಾದರೂ ಕ್ಯಾಲಿಬಾನ್‌ನಂತೆ ರಾಕ್ಷಸೀ ರಕ್ತದವನಲ್ಲ. ಆದ್ದರಿಂದಲೇ ಅವಳ ಹಲವು ಬಗೆಯ ಸೌಂದರ್ಯದೆದುರು ಮುಗ್ಧನಾಗುತ್ತಾನೆ. ಆದರೆ ತನ್ನ ಬೇರೆತನವನ್ನು, ಅವಳ ಸುಸಂಸ್ಕೃತ ವ್ಯಕ್ತಿತ್ವಕ್ಕಿಂತ ಭಿನ್ನವಾದ ತನ್ನ ಒರಟುತನವನ್ನು ಕಂಡುಕೊಂಡು ತಾನೇ ಹೆದರಿಕೊಳ್ಳುತ್ತಾನೆ—

'... ಬೆಳ್ದಿಂಗಳಲ್ಲಿ ಬೆಳ್ಳಿ ಗಂಟೆಯಾಡಿಸಿದ ಹಾಗೆ
ಕೆನ್ನೆಗುಳಿಯತ್ತಿತ್ತ ಗುಲುಗುಲು ಗಿಲಿಗಿಲಿಸಿ ಹಿತೋಷ್ಣವಾದವಳು
ಜಾರುಬಂಡೆಯ ಮೇಲಿನೇಕಾಗ್ರ ಹಗಲಂತೆ ತೀಕ್ಷ್ಣವಾದವಳು
ತಟಕ್ಕನೇಳುವ ತನ್ನ ಬೇರೆತನದರಿವಲ್ಲಿ
ಘಾಟಿಂದ ತಳ್ಳಿದ ಹಾಗೆ ತಟಸ್ಥೆಯಾದರೆ—ಹೆದರುವ;'

ತಟಸ್ಥೆಯಾದರೆ—ಅಂದರೆ ತಾನಾಗಿಯೇ ಆಹ್ವಾನಿಸಿ ಮನಸ್ಸು ಕೊಡದೇ ಹೋದರೆ, ಅವನು ಸಹಜವಾಗಿಯೇ ಹೆದರಬೇಕಾಗಿಲ್ಲ. ಯಾಕೆಂದರೆ, ಇದು ಅಮೃತಮತಿ-ಅಷ್ಟಾವಂಕರ ಪ್ರಣಯದಂತಹ ಸಂದರ್ಭವಲ್ಲ. ಆದರೂ ಹೆದರುವುದು ಏತಕ್ಕೆ?—ಜಾರುಬಂಡೆಯ ಮೇಲಿನೇಕಾಗ್ರ ಹಗಲಂತೆ—ಅವಳು ಸಮಸ್ತ ಸಂಸ್ಕಾರಗೊಂಡವಳು. ಅವಳ ಕಾಮ ತೃಷೆಯೂ ಅಷ್ಟೇ ತೀಕ್ಷ್ಣ. ಅದು ಜಾರುಬಂಡೆಯ ಹಾಗೆ. ಅದರ ಮೇಲಿನ ಅವಳ ಸಂಸ್ಕಾರ ಮಾತ್ರ ಆ ಬಂಡೆಯ ಮೇಲಿನ ಹಗಲಿನಂತೆ. ಅದು ಅವಿಚಲಿತ. ಈ ದ್ವಂದ್ವ ಆತನಲ್ಲಿ ಹೆದರಿಕೆಯನ್ನು ಉಂಟುಮಾಡುವುದು ಸಹಜವೇ. ಕವಿ ಮತ್ತೆ ಮುಂದುವರಿಸುತ್ತಾರೆ—

'ಬೇಸಿಗೆಗೆ ಧಗೆಯುಷ್ಟು, ಚೆಲ್ಲು ವಯಸ್ಸಿಗೆ ನಗೆಯುಷ್ಟು
ನೈಜವಾದವಳ ಅನ್ಯತನಕ್ಕೆ; ಅವಳ

ಸುತ್ತಾ ನಿಧಿ ಕಾದ ಸನಾತನಕ್ಕೆ; ಅವಳ
ಕಿರಣಗಳ ಲಾಳಿಯಾಡದ ದಟ್ಟ ನೆರಳಿಗೆ;
ಊದೂದಿ ಉರಿಸಿ, ತಾನೇ ಮರಳಿರಚುವ ಮರುಳಿಗೆ—ಹೆದರುವ;'

ಇಲ್ಲಿನ ಪ್ರತಿಯೊಂದು ವಿವರವೂ ಆತನಿಗೂ ಅವಳಿಗೂ ಇರುವ ಅಂತರವನ್ನು ಎತ್ತಿ ಹೇಳುತ್ತದೆ. ಅಂತಹವಳ ಜತೆ ಸಂಸರ್ಗ ಸಾಧ್ಯವೆ? ಸಾಧ್ಯವಾದರೂ ಕೂಡ, ಅದು ಆಳವಾಗುತ್ತಾ ಹೋದಂತೆ, ಆತನಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ—

'... ಕ್ರಮೇಣ ಒಳಕ್ಕೂರಿ ಭೂಮಿ ಸಡಿಲಿಸುವ
ಬಿಕ್ಕಟ್ಟು ಜಾಲವಾದರೆ—ಹೆದರುವ;'

—ಇಷ್ಟಾದರೂ ಕನಸಲ್ಲಿ ಅವಳು ಅವನ ರಾಣಿ. ವಾಸ್ತವ್ಯದಲ್ಲಿ ಮಾತ್ರ ಅಷ್ಟು ದೂರ. ಅವನು ಬೆಳೆದ ದವನವನ್ನು ಅವನೆದುರೇ ತೊಳೆದು ಮುಡಿದುಕೊಳ್ಳುವ ಸಂಪ್ರದಾಯ ಅವಳದು. ಕನಸಲ್ಲಿ ತನ್ನವಳಾಗಿಯೂ ವಾಸ್ತವ್ಯದಲ್ಲಿ ಹಾಗೆ ದೂರ ನಿಲ್ಲುವ ಇಮ್ಮೊಗದ ಈ ಕ್ಲಿಷ್ಟಕ್ಕೆ ಆತ ಅವಶ್ಯಕವಾಗಿ ಹೆದರಿಕೊಳ್ಳುತ್ತಾನೆ.

ಮೂರನೆಯ ಭಾಗದಲ್ಲಿ ಈ ಹೆದರಿಕೆಯನ್ನು ಮೀರಿ ನಿಂತ ಚಿತ್ರ ಪ್ರಭಾವಕಾರಿಯಾಗಿ ಮೂಡಿದೆ. ಎರಡನೆಯ ಭಾಗದಲ್ಲಿ ಅವಳೇ ಪ್ರೇರೇಪಣೆಯನ್ನು ಒದಗಿಸಿದರೆ, ಇಲ್ಲಿ ಕೂಡ ಅವಳೇ ನೆಟ್ಟಗೆ ಎರಗುತ್ತಾಳೆ, ಅವನ ಹಟ್ಟಿಗತ್ತಲೊಳಕ್ಕೆ. ಆದರೆ ಈಗಲೂ ಅವನ ಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯಿಲ್ಲ. ಆಕೆ ಹುರಿದುಂಬಿಸಿದರೆ ದಿಗಿಲುಗೊಳ್ಳುತ್ತಾನೆ. ಇವನಿಗೂ ಯಾವುದೇ ಅನುಭವ ತೀಕ್ಷ್ಣವಾಗಿಯೇ ಆಗುತ್ತದೆ—

'ಬಾಳ ತೆರವಲ್ಲಿ
ನಡು ಹಗಲ, ತಪ್ಪಿದರೆ ಕಾರಿರುಳ ಉಂಡವನ;'

ಆದರೆ ಇದಕ್ಕೂ ತೀಕ್ಷ್ಣವಾಗಿ ಆಕೆ ಸ್ವಯಂಪ್ರೇರಣೆಯಿಂದ ತನ್ನನ್ನು ತಾನಾಗಿ ಕೊಟ್ಟುಕೊಂಡಾಗ ಅವನು ಒಪ್ಪಿಕೊಳ್ಳದಿರುತ್ತಾನೆಯೆ?

ಮೂರನೆಯ ಭಾಗದಲ್ಲಿ, ಅವಳು ಕೊಡುವ ಆಹ್ವಾನ ರೋಮಾಂಚಕಾರಿಯಾಗಿದೆ—

'ತಿಕ್ಕುತ್ತಾ ಹೋಗು, ಕೊಡವಿ ಪ್ರದರ್ಶನದ ಬಣ್ಣ
ನಿಧಾನ ಹೊರಳಿಸುತ್ತೇನೆ ಒಳಗೆಂಪ—ನಿನ್ನ ನಾಡಿಗಳನಲೆಯುವಂಥದ್ದೇ—'

ಎನ್ನುವಾಗ, ಮೂಲಭೂತವಾಗಿ, ಅವರಿಬ್ಬರಲ್ಲಿ ಹರಿಯುವ ಸತ್ವ ಒಂದೇ ಎನ್ನುವುದರ ತಿಳಿವಳಿಕೆ ಆಕೆಯಲ್ಲಿ ಮೂಡಿರುವುದು, ಆಕೆಯ ಕಾತರದ ಅಂಶವಾಗಿ ಕೂಡ ಪರಿಗಣಿಸಬಹುದು. ಮತ್ತೆ—

'ಹಿಡಿ ಹಿಡಿ, ಇದ ಹಿಡಿ, ಬರೀ ತಿರುಳಾಗುತ್ತೇನೆ;
ಕಾಡ, ನೀನು ಕುದಿವ, ಕಂಬನಿಗರೆವ ಕರುಳಾಗುವೆ;
ಚಪ್ಪರಿಸು, ಏರುವೆ.
ಝಳಪಿಸುವೆ ನಿನ್ನ, ಝಳಕ್ಕೊಪ್ಪಿಸಿಕೊಂಡಂತೆ ನಾನೂ.'

—ಇಲ್ಲಿ ಹೆಜ್ಜೆ ಹೆಜ್ಜೆಗೂ ಅವಳ ಸಮರ್ಪಣ ಭಾವವನ್ನೂ ಜತೆಯಲ್ಲಿಯೇ ಅವನ

ಗುಣಗಳನ್ನು ಉಜ್ವಲಗೊಳಿಸುವ ದಿಟ್ಟತನವನ್ನೂ ಕಾಣುತ್ತೇವೆ. ಹಾಗೆಯೇ, ವಿಧಿ ನಿಷೇಧಗಳಿಗೆ ಒಳಗಾಗಿ ತನ್ನ ಆಂತರ್ಯದ ಪ್ರಕಾಶಕ್ಕೆ ಅವಕಾಶವಿಲ್ಲದ ಅವಳು, ಈಗ ಅವನನ್ನು ಆಹ್ವಾನಿಸುವುದರ ಮೂಲಕ, ತನ್ನ ಸ್ವಂತ ನಿಧಿಯನ್ನು ಇನ್ನಷ್ಟು (ಬರಿಯ ತಿರುಳಾಗುತ್ತೇನೆ) ಶ್ರೀಮಂತಗೊಳಿಸಿಕೊಳ್ಳುತ್ತಾಳೆ. ಅವನ ಝಳದಲ್ಲಿ ಆಕೆ ಹರಿತಗೊಂಡ ಕತ್ತಿಯಂತೆ ಶಕ್ತಿಯುತವಾಗಿ ಝಳಪಿಸುತ್ತಾಳೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನಲ್ಲಿ ಅಡಕವಾಗಿರುವ, ಪ್ರಾಚೀನ ಕಾಲದಿಂದ ನಡೆದು ಬಂದ ದಿವ್ಯತ್ವದ, ಜ್ಞಾನದ ಪ್ರತಿಭೆಯನ್ನು ಅವನಿಗೆ ಪರಿಚಯಿಸುತ್ತಾಳೆ.

> 'ನಿನ್ನವರ ಒಳಗುಗಳ ಧಿಗ್ಗನುರಿಸಿದ ನನ್ನ ಸಂಬಂಧಿಗಳ
> ಅರಿವು ಹೊಡಕರಿಸುವ ದಿವ್ಯ ದೊಂದಿಗಳ'

—ಅವನನ್ನು ತನ್ನಲ್ಲಿ ಕಾಣಬೇಕೆಂದು ತವಕಿಸುತ್ತಾಳೆ. ಇಂತಹವಳ ಒಡನಾಟ, ಆತ್ಮೀಯ ಸಂಬಂಧ ಆತನಿಗೆ ಇನ್ನೂ ಕೆಲವು ಭ್ರಮೆಗಳನ್ನು ಒಡ್ಡಿದಂತೆ ತೋರುತ್ತದೆ. ಆದರೆ ಅದರಲ್ಲೂ ಆತ ಒಂದು ಬಗೆಯ ಹಿತಕರವಾದ ಗುಣವನ್ನು ವ್ಯಕ್ತಪಡಿಸುವುದು, ಆತನಲ್ಲಿ ಉಂಟಾಗಿರುವ ಪರಿವರ್ತನೆಯ ಸೂಚನೆಯಾಗಿದೆ—

> 'ಸಂಜೆ ಮೈಗೂಡಿಸಿಕೊಂಡ ಕೆರೆಯಂತೆ ಧಗಧಗಿಸನೆ ತಣ್ಣಗೆ?
> ಕಣ್ಣು ಕುಕ್ಕಿ ಹೊರಳನೆ, ಎರೆ ಹುಳದಂತೆ ಆಪ್ತ ಮಣ್ಣಗೆ?'

ಆಕೆಯ ಸುದೀರ್ಘ ಕಾಲದ ಸಂಸ್ಕಾರದ ಪ್ರಖರತೆಯ ಎದುರು ಅವನು ತತ್ತರಿಸುವುದನ್ನು, ಕಾಠಿಣ್ಯ ಬಲ ಗಡುಸುಗಳೇ ಮೈತಳೆದಂತಿರುವ ಅವನು ಅಸಹಾಯಕನಾಗಿ ಬೆಂದಿರುಗಲು ಪ್ರಯತ್ನಿಸುವುದನ್ನು ಕವಿ ಔಚಿತ್ಯಪೂರ್ಣವಾಗಿ ಚಿತ್ರಿಸಿದ್ದಾರೆ.

ನಾಲ್ಕನೆಯ ಭಾಗದಲ್ಲಿ ಧನ್ಯತೆಯ, ಪ್ರಸನ್ನತೆಯ ಚಿತ್ರ ಆಪ್ಯಾಯಮಾನವಾಗಿ ಮೂಡಿದೆ. ಇಲ್ಲಿನ ಅಸ್ಖಲಿತವಾದ ಸುಂದರ ವಾತಾವರಣ ನವ್ಯಕಾವ್ಯದಲ್ಲಿ ಬೇರೆಲ್ಲಿಯೂ ಸಿಗುವುದಿಲ್ಲ. ನವ್ಯ ಕಾವ್ಯಕ್ಕೆ ಸಹಜ ಎನಿಸಿರುವ ವ್ಯಂಗ್ಯದ ಮೊನಚು, ಕಟಕಿಗಳು ಇಲ್ಲಿಲ್ಲ. ಇಲ್ಲಿಯ ಪ್ರಸಾದ ಗುಣ, ಇಡೀ ಕವನದ ಆರೋಗ್ಯಕರ ಬೆಳವಣಿಗೆಗೆ ಕಿರೀಟಪ್ರಾಯವಾಗಿದೆ. ಇಲ್ಲಿನ ಸಾಲುಗಳು ಅವರಿಬ್ಬರಲ್ಲಿ ಪರಸ್ಪರ ಉಂಟಾದ ಪರಿವರ್ತನೆಯನ್ನು—ಪರಿಪೂರ್ಣತೆಯ ಕಡೆಗಿನ ಪರಿವರ್ತನೆ—ಯನ್ನು ಪ್ರಮಾಣನಿಷ್ಠವಾಗಿ (Authentic) ಮೂರ್ತೀಭವಿಸುತ್ತವೆ—

> 'ನೋಡುತ್ತಿದ್ದಂತೆ ಹಿಗ್ಗುವಳು, ಹಿಗ್ಗುವಳು, ಹಿಗ್ಗುವಳು
> ತನ್ನ ಹಿತ್ತಲ ತೋಟ ಅವನ ಹೊಲವಾದಂತೆ;
> ಅರಿವಿನೆಳೆನಾಜೂಕು ಬದುಕಲ್ಲಿ ಹೊಕ್ಕು ಬಲವಾದಂತೆ.'

ಇದುವರೆಗೂ ಕೇವಲ ಅಮೂರ್ತವಾಗಿದ್ದ, ಕನಸಿನ ಗಂಟಾಗಿದ್ದ ಅವಳ ಬದುಕಿಗೆ ಅರಿವಿನ ನಾಜೂಕು ಎಳೆಯೊಂದು ಹೊಕ್ಕು, ಅದು ಬಲ ಪಡೆಯಿತು, ಮೂರ್ತ ರೂಪ ಪಡೆಯಿತು. ಅವನ ಸಂಸರ್ಗದಿಂದಾಗಿ ಅವಳಿಗೆ ಹೊಸ ಚೈತನ್ಯ ಪ್ರಾಪ್ತಿಯಾಯಿತು. ಪರಸ್ಪರ ಆಕರ್ಷಣೆ ಮತ್ತು ಲೈಂಗಿಕ ಕ್ರಿಯೆ ಕೂಡ ಈಗ ನಿರ್ಭೀತವಾಗಿ ನಡೆಯುವುದಕ್ಕೆ ದಾರಿಯಾಯಿತು—

'ಮುಂಡಾಸು ಮೂಸಿ, ತೊಟ್ಟರಿವೆ ಹಾಸಿ ಒರಗಿಸುವಳು.'

ಮೊದಲು ಯಾವ ಮುಂಡಾಸು ಕೊಂಚ ತಗಲಿದರೂ ಪ್ರಮಾದವೆಂದು ಭಾವಿಸುತ್ತಿದ್ದಳೋ, ಈಗ ಅದೇ ಹುಡುಗಿಯಲ್ಲಿ ಎಂತಹ ಪರಿವರ್ತನೆ! ತಾನು ಅವನಿಂದ ಒಂದು ರೂಪ ಪಡೆದ ಹಾಗೆಯೇ, ಅವನಲ್ಲೂ ಹೊಸ ಸವಿಯನ್ನು, ಚಿಗುರನ್ನು ಪ್ರೇರೇಪಿಸುತ್ತಾಳೆ—

'ಮೃದುತ್ವದ ಬೆಚ್ಚನೆಯ ಸಮತ್ವದಲ್ಲಿ
ಸವರುತ್ತಾಳೆ ಒಗರ;
ಹೇರುತ್ತಾಳೆ ಅವನತ ಕೊರಡಲ್ಲೂ ಮಾರ್ದವತೆಯ ಚಿಗುರ.'

—ಹೀಗೆ ಇವರಿಬ್ಬರ ಸಮ್ಮಿಲನ, ಇಬ್ಬರನ್ನೂ ಒಂದು ಹೊಸ ಸ್ತರಕ್ಕೆ ಎಳೆದೊಯ್ಯುತ್ತದೆ. ಒಂದು ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಹಾದಿ ರಚಿಸುತ್ತದೆ.

ಕೊನೆಯ ಭಾಗದಲ್ಲಿ ಕವಿ, ಆ ಹೊಸ ಸ್ತರದ ಬಗ್ಗೆ ಸೂಚ್ಯವಾಗಿ ತಿಳಿಸಿದ್ದಾರೆ—

'ಹತ್ತಿಸಿ ಅವನ ಘಾಟಿಂದ ಕಂಪಿಗೆ,
ಪರಿಣಮಿಸಿ ತಾನು ಬಿಳುಪಿಂದ ರಕ್ತಕ್ಕೆ—
ಮೌನಿ, ಪ್ರಬಲಿಸಿಕೊಂಡು ಮಾತು
ಹೂಡಿಸಿಕೊಳ್ಳುತ್ತಾಳೆ ಬಿಸಿಲ ಧಾತು.'

—ಇದು ಪರಸ್ಪರ ಅರಿವಿನ, ಒಳಕೊಳ್ಳುವುದರ ಒಂದು ಉನ್ನತ ಮಜಲು. ಈ ಮಟ್ಟದಲ್ಲಿ, ನಮಗೆ ಅವಳಲ್ಲಿ ಉಂಟಾಗಿರುವ ಪರಿವರ್ತನೆ (ಬಿಳುಪಿಂದ—ರಕ್ತ, ಬಿಸಿಲ ಧಾತುವನ್ನು ಹೂಡಿಸಿಕೊಳ್ಳುವಿಕೆ) ಅಸಾಮಾನ್ಯವೆಂದು ತಿಳಿಯುತ್ತದೆ.

ಇಡೀ ಕವನ ಯಾವುದರ ಕಡೆಗೆ ಕೈ ಚಾಚಿ ತೋರಿಸುತ್ತದೆಯೋ ಅಂತಹ ಒಂದು ಹೊಸ ಪ್ರಪಂಚದ, ಹೊಸ ದೃಷ್ಟಿಕೋನದ, ಹೊಸ ಆವಿಷ್ಕಾರದ, ಹೊಸ ಮೌಲ್ಯಗಳ ಸೃಷ್ಟಿ, ಅವುಗಳ ತೊಡಗುವಿಕೆಯನ್ನು ನಿಸಾರರು ಈ ಸಾಲುಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ—

'ಕೋಳಿಗಳ, ಗೂಡೆಗಳ, ರೊಪ್ಪಗಳ ಜೀವೋತ್ತೇಜಕ ಮೂಲ ವಾಸನೆಯಲ್ಲಿ
ನಿಸ್ಸಂಕೋಚ ಬೆರೆಯುತ್ತಾಳೆ; ಹದವಾಗಿ ಬೆವರುತ್ತಾಳೆ.
ಆಗಷ್ಟೇ ಉತ್ತ ನೇಗಿಲ ಹಸಿ ಹಸೀ ಮಣ್ಣಂತೆ ಕಚ್ಚಿಕೊಂಡಾಕೆ
ಮೃದುವಾಗುತ್ತಾಳೆ, ಹೊಸದಾಗಿ;
ತನ್ನಾತ್ಮಕ್ಕೆ ಮೂರ್ತತ್ವ ದಕ್ಕಿಸಿಕೊಂಡ ಸ್ವಲಾಭದಲ್ಲಿ
ಅವನ ಓರೆಕೋರೆಗೆ ನಯದ ಒರೆಯಾಗುತ್ತಾಳೆ.'

ನಾಗರಿಕತೆಯ ಮೂಲಕ ಉಂಟಾಗಿರುವ ನಾಗರಿಕ ಹಾಗೂ ಗ್ರಾಮ್ಯ ಎಂಬ ಧ್ರುವೀಕರಣ, ಸಂಸ್ಕೃತ-ಪ್ರಾಕೃತ ಪ್ರಭೇದಗಳು, ಉಚ್ಚ-ನೀಚ ಎಂಬ ವರ್ಗಗಳು—ಇವುಗಳನ್ನು ಮೀರಿದ ಹೊಸ ಮೌಲ್ಯಗಳ ಸೃಷ್ಟಿಯಾಗಬೇಕಾದರೆ, ಇಂತಹ ಸಹಯೋಗದಿಂದ ಮಾತ್ರ ಸಾಧ್ಯ ಎಂದು ಕವಿ ನಂಬಿದ್ದಾರೆ. ಈ ಆಶಯ, ಆದರ್ಶಗಳನ್ನು ಪುಷ್ಟೀಕರಿಸಲು ಮೇಲಿನ ಸಾಲುಗಳು ಸಹಾಯ ಮಾಡುತ್ತವೆ.

೩

ಒಟ್ಟಿನಲ್ಲಿ 'ಪ್ರಾಪ್ತಿ' ಕವನ, ತನ್ನ ದಟ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ಅರಿವಿನಿಂದ, ವಿಪುಲ ಮತ್ತು ವೈವಿಧ್ಯಪೂರ್ಣವಾಗಿ ಬಳಸಿರುವ ಉಪಮೆ ರೂಪಕಗಳಿಂದ, ಮಾತುಗಾರಿಕೆಯ ಬಿಗಿ ಬನಿ ಮತ್ತು ಹೃದಯಂಗಮ ಗುಣದಿಂದ ವಿಚಾರವಂತರ ಪರಿಶೀಲನೆಗೆ ಪಾತ್ರವಾಗುತ್ತದೆ.

ಕೊನೆಯದಾಗಿ, ನಿಸಾರ್ ಅಹಮದ್ ಅವರ ಈಚಿನ ಮುಖ್ಯ ಕವಿತೆಗಳನ್ನು ಗಮನಿಸಿದಾಗ, ಸ್ವಂತಿಕೆಯನ್ನು ಸಾಧಿಸುವ ಚಪಲವೊಂದೇ ಅವರ ಮುಖ್ಯ ಗುರಿಯಾಗಿಲ್ಲ—ಎಂದು ದೃಢಪಡುತ್ತದೆ. ಎರಡನೆಯದಾಗಿ, ತನ್ನ ಮತ್ತು ಹೊರಗಿನ ಸಂಸ್ಕೃತಿಗಳ ಸಮನ್ವಯ ಸಾಧ್ಯವಿಲ್ಲವೆಂದು ಭಾವಿಸಿದರೂ ಎರಡು ವಿರೋಧೀ ಶಕ್ತಿಗಳ, ಬಣಗಳ ಸಮನ್ವಯ, ಹಾಗೂ ಪರಸ್ಪರ ಮುಖಾಮುಖಿಗಳಿಂದಲೇ ಹೊಸದರ ಆವಿಷ್ಕಾರ ಸಾಧ್ಯ—ಎಂದು ಭಾವಿಸಿದ್ದಾರೆ ಎನ್ನುವುದು ಸುವ್ಯಕ್ತವಾಗುತ್ತದೆ. ಮೂರನೆಯದಾಗಿ, ಈ ಕವಿ ತನ್ನ ಪರಿಸರ ದಿಂದಾಗಿ, ಬೇರೆಯೆಲ್ಲ ಸಮಕಾಲೀನ ಕವಿಗಳಿಗಿಂತ ಹೆಚ್ಚಾಗಿ—ವೈಜ್ಞಾನಿಕ ದೃಷ್ಟಿಕೋನ, ಅದರ ಅನ್ವೇಷಣೆ ಮತ್ತು ವಿಚಕ್ಷಣೆ—ಇವುಗಳಿಂದ ಪ್ರಭಾವಿತರಾಗಿದ್ದಾರೆ ಎಂದು ತಿಳಿದು ಬರುತ್ತದೆ.

೧೯೭೪

ದಿನನಿತ್ಯದ ಇಂದ್ರಿಯಾನುಭವಗಳನ್ನು ಸಾಹಿತ್ಯಮಾನ್ಯ ಸಾಮಗ್ರಿಯಾಗಿ ಪರಿವರ್ತಿಸುವುದು ಗುಹ್ಯವಾದ ಮನಃಕ್ರಿಯೆ. ಇದು ನೆರವೇರುವುದು ಜನ್ಮತಃ ಪಡೆದು ಬಂದ ಒಂದು ಅಪೂರ್ವ ಗುಣಶಕ್ತಿಯ ಮುಖೇನ. ಈ ಗುಣ ವಿಶೇಷವೇ ಪ್ರತಿಭೆ. ಅದೊಂದು ಸೃಷ್ಟಿಶೀಲ ಸ್ಫೂರ್ತ ಕ್ಷಣಗಳ ಸುಮುಹೂರ್ತ: ಮಾಮೂಲಿಯಲ್ಲಿ ಮಹಿಮಾನ್ವಿತವಾದದ್ದನ್ನು; ಸಾಧಾರಣ ದಲ್ಲಿ ಸತತ ಹೊಚ್ಚ ಹೊಸದನ್ನು ದರ್ಶನ ಮಾಡಿಸುವ, ಅನುಸೃಷ್ಟಿಸುವ ಪ್ರತ್ಯುತ್ಪನ್ನ ಮತಿ ಸಾಮರ್ಥ್ಯ: ವಿರೋಧಗಳ ಅವಿನಾ ರೀತಿಯ ಸಮರಸ ಸ್ಥಿತಿ. ಸೌದೆಯ ವಾಸ್ತವದಲ್ಲಿ ಮರದ ಜೀವಂತ ಕಲಾತ್ಮಕತೆಯನ್ನು ಮನವರಿಕೆ ಮಾಡಿಸುವ ಅನ್ಯಾದೃಶ ಕೌಶಲ. ಅದೊಂದು ಹೊಳಪು, ಮಿಂಚು. ಬಿಡಿಗಾಳಿನಲ್ಲಿ ಕಂಗೊಳಿಸುವ ಗದ್ದೆಯನ್ನು, ಮಗ್ಗಿ ಪುಸ್ತಕದ ಅಂಕಿಗಳಲ್ಲಿ ಐನ್‌ಸ್ಟೈನ್‌ನ ಸಾಪೇಕ್ಷ ಸಿದ್ಧಾಂತವನ್ನು ಮನಗಾಣಿಸುವ ವಿಭಾವನೆಯ ಕಾಣ್ಕೆ. ಲೋಕ ಸಾಮಾನ್ಯವಾದ ತರ್ಕಯುಕ್ತಿಗಳಿಗೂ ಪ್ರತಿಭೆಗೂ ಮಹದಂತರವಿದೆ. ಒಂದರದು ಬುವಿಯ ಕುಪ್ಪಳಿಕೆ: ಮತ್ತೊಂದರದೋ ಬಾನಲೆತ: ಅಪೂರ್ವತೆ ವಿಸ್ಮಯಗಳು ಪ್ರತಿಭಾ ವೈನತೇಯನ ರೆಕ್ಕೆಗಳು.

(ಪ್ರತಿಭೆಯ ಪವಾಡ)

ಸುದ್ದಿ ಮಾಧ್ಯಮಗಳು

೧

ಸುದ್ದಿ ಮಾಧ್ಯಮಗಳ ಹಣೆ ಬರಹವೇ ಅಷ್ಟು:
ಬೆಟ್ಟ ಮಾಡಿ ರವೆಯಷ್ಟನ್ನು
ಎತ್ತಿ ಮೆರೆಸುತ್ತವೆ ಬರೀ ಗಷ್ಟನ್ನು.
ಅವುಗಳಿಗೆ ಅತಿ ಮುಖ್ಯ
ಮಿಂಚು, ಮಳೆಬಿಲ್ಲು, ಸಂಜೆ ಮುಗಿಲಿನ ಸಖ್ಯ.
ಶಾಶ್ವತದ ಹೂರಣಕ್ಕೆ ಮಾಡಿ ದಖಲ್‌ಪಟ್ಟೆ
ಮುಜುರೆ ಸಲ್ಲಿಸುತ್ತವೆ
ಸಾಮಯಿಕ ಕಣಕಕ್ಕೆ ಪಟ್ಟ ಕಟ್ಟಿ.

ತಾರಾಮೌಲ್ಯವಿರದ ಭೂಪ
ಅವುಗಳ ಪಾಲಿಗೆ ಮರೆವಿನ ಕೂಪ;
ಚಾಲ್ತಿಯಿಲ್ಲದ ಭೂಗತ ಸ್ತೂಪ.
ಎಂದೇ, ಆ ಮಾಧ್ಯಮಗಳ ಉದ್ದಗಲ
ಲೌಕಿಕ ಸಾಧಾರಣರದೇ ನಿತ್ಯ ಗದ್ದಲ:
ರಾಜಕಾರಣಿ ಶಕುನಿ, ಸಿನಿಮಾ ಮೊದ್ದು ಕಣ್ಮಣಿ,
ಕ್ರಿಕೆಟ್ ಶಿಖಾಮಣಿಗಳದೇ ಕೈಫಿಯತ್ತು;
ಅವರದೇ ದೇಖಾವೆಯ ದೊಂಬರಾಟದ ಗರ್ದಿ ಗಮ್ಮತ್ತು.

೨

ಸಾಧನಾಸಮರ್ಪಿತ ಅಂತರ್ಮುಖಿಗಳಾಗಿ
ಲೋಕ ಕಲ್ಯಾಣಾರ್ಥ ಜೀವವನೆ ಚಂದನಗಳಾಗಿ ನೀಗಿ
ದೂರದೇಕಾಂತದಜ್ಞಾತ ಎಡೆಗಳಲ್ಲಿ
ಪರಿಪಕ್ವವಾಗುತ್ತ ಅಧ್ಯಾತ್ಮ ಅನುಭಾವದಡೆಗಳಲ್ಲಿ,
ಕಂಗಾಲರನವರತ ಕೈಂಕರ್ಯದಾರೈಕೆಯಲ್ಲಿ,
ಸಚರಾಚರದ ಶ್ರೇಯಸಿನ ಹಾರ್ದ ಹಾರೈಕೆಯಲ್ಲಿ
ಬದುಕ ಕೃತಕೃತ್ಯತೆಗೆ ಹಾಯಿಸಿದ
ಯೋಗಿ ಸಂತ ದಾರ್ಶನಿಕ ಮಹಾಕವಿ ಸತ್ವಗಳ
ತೇಜೋಜ್ವಲ ಚಿರ ಚೇತನ ಮಹತ್ವಗಳ
ಅರಿವು ಬಾರದು ಸಮೂಹ ಮಾಧ್ಯಮಗಳಿಗೆ
ದಿನನಿತ್ಯದಾಗುಹೋಗುಗಳ ಬಾಲವನು
ನೇರ್ಪಡಿಸುವುದರಲ್ಲಿ ನಿಮಗ್ನವಾದ ನಫೆಯ ನಳಿಗೆಗಳಿಗೆ.

೩

ಲೋಕದ ಜಾಯಮಾನವೇ ಹೀಗೆ—
ಸುಪ್ರಶಸ್ತ ಅದಕ್ಕೆ ಕಾಗೆ, ಡೇಗೆ;
ನೆನಪಾಗುವುದು ಅಪರೂಪ ಸೋಗೆ.
ಅದರ ಸ್ಥೂಲ ದೃಷ್ಟಿಗೆ ಬಿದ್ದು
ಕಾಣಿಸುವುದು ತತ್‌ಕ್ಷಣಕ್ಕೆದ್ದು
ಮೇಲುಗಡೆ ರಾರಾಜಿಸುವ ಹರಳಿನುಂಗುರದ
ನಾಲ್ಕು ಬೆರಳು ಮಾತ್ರ;
ತಗ್ಗಿನ ಹೆಬ್ಬೆಟ್ಟು ಅದರ ಕೃಪಾವಲೋಕನಕ್ಕೆ ಚಿರ ಅಪಾತ್ರ.
ಆದರದು ಕೆಳಗಿರುತ್ತಲೇ,
ಸ್ವಂತ ಮೇಲ್ಮೆಯನು ಮರೆಸುತ್ತಲೇ
ಸಲ್ಲಿಸುತ್ತದೆ ಸತ್ಕಾಯಕವ, ನಿರಾಭರಣ.

ಎಂದೇ, ಎಲ್ಲ ಬೆರಳುಗಳಿಗಿಂತ ಅದು
ಗಣ್ಯ, ಅಸಾಧಾರಣ.
ಅದರ ನೆರವಿರದೆ ಯಾವುದನು ತಾನೆ
ಹಿಡಿಯಲಾದೀತು ಗಟ್ಟಿ?
ಕಾರ್ಯ ನೆರವೇರಿಸಲಾದೀತು ಬೆರಳುಗಳು ಮುಟ್ಟಿ?
ಅದನುಳಿದು ಮುಚ್ಚಿದರೆ
ಅಪೂರ್ಣ, ಅಸಾರ್ಥಕ ಭದ್ರ ಮುಷ್ಟಿ.

★ ★ ★

(ಕವನ ಸಂಕಲನ: 'ಅರವತ್ತೈದರ ಐಸಿರಿ')



'ಸುದ್ದಿ ಮಾಧ್ಯಮಗಳು': ಅಲ್ಪತೆಗೆ ಅರಸುಪಟ್ಟ ಕಟ್ಟಿ ಮಹತ್ತನ್ನು ಕಾಡಿಗಟ್ಟುವ ವ್ಯವಸ್ಥೆ

♦ ರವಿ ಉಪಾಧ್ಯ

'ಸುದ್ದಿ ಮಾಧ್ಯಮಗಳು' ಕವಿತೆ ನಿಸಾರ್ ಅಹಮದ್ ಅವರು ಬದುಕಿನ, ಸಾಹಿತ್ಯ ಕಲೆಗಳ ಬಗೆಗೆ ತಳೆದಿರುವ ಮೇಲ್ಮಟ್ಟದ ಚಿಂತನೆಗೆ ಅತ್ಯುತ್ತಮ ಉದಾಹರಣೆ ಎನ್ನಿಸುತ್ತದೆ. 'ಯೋ ವೈಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ' ಎನ್ನುವ ಮಾತನ್ನು ಸಮರ್ಥಿಸುವ ಗಾಂಭೀರ್ಯ, ಹಿರಿಮೆ-ಗರಿಮೆಗಳನ್ನು ಸೂಚಿಸುವುದರ ಜೊತೆಗೆ, ಮಾನವ ಜೀವನದ ಸಾರ್ಥಕತೆ ಇರುವುದೆಲ್ಲಿ? ಎಂಬುದನ್ನು ಈ ಕವನ ಚಿಂತನಶೀಲವಾಗಿ ವಿವೇಚಿಸಬಯಸುತ್ತದೆ. ಒಟ್ಟಾರೆ ನಿಸಾರರು ಜೀವನ, ಕಲೆ ಸಾಹಿತ್ಯಗಳನ್ನು ಪರಿಗಣಿಸುವ ಔನ್ನತ್ಯದ ನಿಲವಿಗೆ 'ಸುದ್ದಿ ಮಾಧ್ಯಮಗಳು' ಕವನ ತೋರುಗಂಬದಂತಿದೆ. 'ಮೀಡಿಯಾಕ್ರಿಟಿ'ಯ ಮೆರೆಸುವಿಕೆಯನ್ನೇ ಮೂಲಮಂತ್ರ ಮಾಡಿಕೊಂಡಿರುವ ಟಿ.ವಿ., ಪತ್ರಿಕೆ ಮತ್ತಿತರ ಮಾಧ್ಯಮಗಳ ಮನೋಧರ್ಮಕ್ಕೆ ಪ್ರಸ್ತುತ ಕವನ, ಸುವಿವೇಕದ ಒಂದು ಸವಾಲಿನಂತಿದೆ.

ಈ ಪದ್ಯದಲ್ಲಿ ಸಂಕೀರ್ಣತೆಯಿದ್ದರೂ ಅರ್ಥ ದುರೂಹ್ಯವಾಗುವ ಅಷ್ಟೊಂದು ಕ್ಲಿಷ್ಟತೆಯಿಲ್ಲ. ಹೀಗೆಂದ ಮಾತ್ರಕ್ಕೆ, ಒಂದೇ ಓದಿಗೆ ತನ್ನನ್ನು ಪೂರ್ತಿ ಬಿಚ್ಚಿ ಕೊಳ್ಳುತ್ತದೆ ಎಂದು ಅರ್ಥವಲ್ಲ. ಎರಡು-ಮೂರು ಓದಿನ ಚಿಂತನ-ಮಂಥನದ ತಾದಾತ್ಮ್ಯದಲ್ಲಿ ತನ್ನೊಳಗಿನ ಸೂಕ್ಷ್ಮಾತಿಸೂಕ್ಷ್ಮ ಮರ್ಮವನ್ನು ಹೊರ ಬಿಂಬಿಸುತ್ತದೆ. ಆದರೆ ಎಲ್ಲವನ್ನೂ ಅಲ್ಲ.

ಹಾಗೆ ನೋಡಿದರೆ, 'ಸುದ್ದಿ ಮಾಧ್ಯಮಗಳು' ಎನ್ನುವ

ಈ ಪದ್ಯ ವರದಿ ರೂಪದಲ್ಲಿರಬೇಕಿತ್ತು. ಆದರೆ ನಿಸಾರ್ ಅಹಮದ್ ಅವರಂಥ ಪ್ರತಿಭಾ ಸಂಪನ್ನ ಕವಿಯ ಕೈಯಲ್ಲಿ ರೂಕ್ಷತೆಯ ಬದಲು ಅಕ್ಷಯತೆಯನ್ನು ಪಡೆದುಕೊಂಡಿದೆ. ಒಂದು ಯಶಸ್ವೀ ಪದ್ಯದ ಸಾರ್ಥಕತೆ ಇರುವುದು, ಅದು ನಿಘಂಟಿನ ಅರ್ಥಗಳಾಚೆಯ ಭಾವಾರ್ಥದ ಬಾಹುಳ್ಯದಿಂದಾಗಿ. ಇಂಥ ಪದ್ಯಗಳನ್ನು ಬೆನ್ನಟ್ಟಿ ಹೋಗುವ ವಿಮರ್ಶಕ ತನ್ನ ಗ್ರಹಿಕೆಯ ಹೆಚ್ಚುಗಾರಿಕೆಯನ್ನು ತೋರ್ಪಡಿಸುತ್ತ ತನ್ನ ಮಟ್ಟವನ್ನೂ ಎತ್ತರಿಸಿಕೊಳ್ಳ ಬಹುದಾಗಿದೆ. ತನ್ನಲ್ಲೂ ಸೃಜನಶೀಲತೆಯ ಮಿಂಚನ್ನು ಹೊಳೆಯಿಸಿಕೊಳ್ಳಬಹುದಾಗಿದೆ.

'ಸುದ್ದಿ ಮಾಧ್ಯಮಗಳು' ಎಂಬ ಪದ್ಯದ ಪ್ರಾರಂಭ ಹೇಗಿದೆ ನೋಡಿ:

'ಸುದ್ದಿ ಮಾಧ್ಯಮಗಳ ಹಣೆಬರಹವೇ ಅಷ್ಟು :
ಬೆಟ್ಟ ಮಾಡಿ ರವೆಯಷ್ಟನ್ನು
ಎತ್ತಿ ಮೆರೆಸುತ್ತವೆ ಬರೀ ಗಷ್ಟನ್ನು.
ಅವುಗಳಿಗೆ ಅತಿ ಮುಖ್ಯ
ಮಿಂಚು, ಮಳೆಬಿಲ್ಲು, ಸಂಜೆ ಮುಗಿಲಿನ ಸಖ್ಯ.
ಶಾಶ್ವತದ ಹೂರಣಕ್ಕೆ ಮಾಡಿ ದಖಲ್‌ಪಟ್ಟ
ಮುಜುರೆ ಸಲ್ಲಿಸುತ್ತವೆ
ಸಾಮಯಿಕ ಕಣಕಕ್ಕೆ ಪಟ್ಟ ಕಟ್ಟಿ.'

—ಇಲ್ಲಿ ಕವಿ, ಕಾಲ ಪುರುಷನ ಸಾನ್ನಿಧ್ಯವನ್ನೇರ್ಪಡಿಸಿ, ತಾನು ಕಂಡರಿಸಿದ ಅಣುಮಾತ್ರದ ನಿಸರ್ಗದ ಚೆಲುವನ್ನು ತನ್ನ ಮಿತಾಕ್ಷರಗಳ ಅಭಿವ್ಯಕ್ತಿಯಿಂದ ಗಜಗಾತ್ರದಷ್ಟಾಗಿಸುವ ಭಗೀರಥ ಸಾಹಸ ತೋರಿದಂತಿದೆ. ಆಶ್ಚರ್ಯವೆಂದರೆ ಕವಿ ಅಭಿವಾದನ ಹೇಳುವುದನ್ನು ಮರೆತಿಲ್ಲವೆಂಬುದು.

ನೈಸರ್ಗಿಕ ಚೆಲುವು ಅಬಾಧಿತವಾದರೂ ಕವಿಗೆ ಆ ಶಾಶ್ವತ ಹೂರಣವನ್ನು ತನ್ನ ಸ್ವಾದಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವ ಸ್ವಾತಂತ್ರ್ಯವಿದೆ ಎನ್ನುತ್ತಾನೆ.

ಸೌಂದರ್ಯ ಪ್ರಜ್ಞೆಯ ಕವಿಯ ಮಗ್ಗುಲಿನಿಂದ ಅವಲೋಕಿಸಿದಾಗ, ನಾನು ಈ ಮೇಲೆ ಗ್ರಹಿಸಿಕೊಂಡಂತೆ ಅರ್ಥೈಸಬಹುದೇನೋ.

ಆದರೆ ಇಲ್ಲಿ ಕವಿಗೆ ಸುದ್ದಿ ಮಾಧ್ಯಮಗಳ ರೀತಿ-ನೀತಿ ಎಂಥದೆಂಬುದನ್ನು ಹೇಳಬೇಕಿದೆ. ಸುದ್ದಿ ಮಾಧ್ಯಮಗಳು, ಕೈಗೆ ಸಿಗದಂತಹ ಒಂದು ರವೆಯ ಕಣವೇ ಬೆಟ್ಟವಾಗಿ ಕಾಣಿಸಬೇಕೆನ್ನುತ್ತವೆ. ಯಾವುದಕ್ಕೆಲ್ಲ ರಾವುಗನ್ನಡಿ ಬೇಕೇ ಬೇಕು. ಅದಿಲ್ಲದೆ ಅವುಗಳಿಗೆ ಕೆಲಸವೇ ಇಲ್ಲ. ಕವಿ ಉತ್ಪ್ರೇಕ್ಷಾಲಂಕಾರಿಯಾದರೆ, ಸುದ್ದಿ ಮಾಧ್ಯಮಗಳು ರಾವಣಾಲಂಕಾರಿ ಗಳು.

ಈ ಸುದ್ದಿ ಮಾಧ್ಯಮಗಳು ಒಂದು ರೀತಿಯಲ್ಲಿ ಹಸ್ತಕ್ಷೇಪವಾದಿಗಳು. ಎಂದೂ ಬೂಸರು ಬರದಂಥ ಶಾಶ್ವತ ಹೂರಣವನ್ನೇ ಕಲ್ಮಷಗೊಳಿಸಿ ಬಿಡುತ್ತವೆ. ಇಲ್ಲಿ ಕವಿ ಬಳಸಿರುವ 'ಶಾಶ್ವತ ಹೂರಣ'ವೆಂದರೆ 'ಉನ್ನತ ಆದರ್ಶ ಮೌಲ್ಯದ ತಿರುಳು' ಎಂದರ್ಥ. ಸುದ್ದಿ ಮಾಧ್ಯಮಗಳಿಗೆ ಇದು ಬೇಕಿಲ್ಲ. ಆದರ್ಶಗಳನ್ನು ಕಟ್ಟಿಕೊಂಡು ಏನಾಗಬೇಕಿದೆ

ಅವುಗಳಿಗೆ? ಅವುಗಳ ಬೆನ್ನು ಹತ್ತಿದರೆ ಮಣ್ಣು ಮುಕ್ಕಬೇಕು ಅನ್ನುತ್ತವೆ ಅವು. ಅವುಗಳಿಗೆ ಅತಿ ಮುಖ್ಯ `ಮಿಂಚು, ಮಳೆಬಿಲ್ಲು, ಸಂಜೆ ಮುಗಿಲ ಸಪ್ಪೆ'. ಇವೆಲ್ಲಾ ಕ್ಷಣಿಕತೆಯ, ಅಲ್ಪಕಾಲಿಕತೆಯ ಪ್ರತೀಕಗಳು. ಕವಿಯ ಈ ಹೇಳಿಕೆಯಲ್ಲಿ ಸರಳತೆಯಿದ್ದರೂ ಆ ಸರಳತೆಯಲ್ಲೇ ಒಂದು ಬಗೆಯ ವ್ಯಂಗ್ಯವಿದೆ ಎಂದೆನಿಸುತ್ತದೆ.

ಪತ್ರಿಕೆಗಳಿಗೆ ಅವು ಕೊಡುವ ಸುದ್ದಿಯ ಹಿಂದೆ ಎಲ್ಲಿಲ್ಲದ ಮಿಂಚಿನ ಹೊಳಪಿನ ಕೋರೈಕೆ, ಮಳೆಬಿಲ್ಲಿನ ಮನಮೋಹಕತೆ, ಸಂಧ್ಯಾ ಮೇಘದ ಬಣ್ಣಬಣ್ಣದ ರಂಜಕತೆ ಇರಬೇಕೆಂಬ ಹಂಬಲ ಸದಾ ಇದ್ದೇ ಇರುತ್ತದೆ. ಈ ಬಯಕೆಯ ಹಿಂದೆ ಅವು ತಮ್ಮ ತಮ್ಮ ಲಾಭಾಂಶದ ಗೇಣನ್ನು ಹಾಕುತ್ತಲೇ ಇರುತ್ತವೆ. ಇದು ಸ್ವಾಭಾವಿಕವೂ ಕೂಡ. ಆದರೆ ಅಲ್ಲದ-ಸಲ್ಲದ ಸುದ್ದಿಗೆ ಮುದ್ದಾಂ ಮಿಂಚು ತುಂಬುವುದು, ಮನಮೋಹಕತೆಯ ಮತ್ತನ್ನು ಬರಿಸುವುದು, ಬೇಕಾದ್ದು ಬೇಡವಾದದ್ದು ಎಲ್ಲದಕ್ಕೂ ಬಣ್ಣದ ಲೇಪವನ್ನು ಹಚ್ಚುವುದು ಅದೆಷ್ಟು ಅಪೇಕ್ಷಣೀಯ? ಸುದ್ದಿ ಬರೆದಾತರು ಸೋಗಿನ ಚಂದ್ರರಲ್ಲದೆ ಮತ್ತೇನು? ಇವರಿಗೆಲ್ಲ ಅಂತರ್ಗತವಾಗಿ ಸುದ್ದಿಗೆ ಸಂಬಂಧಿತವಾಗಿ ತಲೆ ಕೆಡಿಸಿಕೊಂಡವರ ಬಗ್ಗೆ ಅವ್ಯಕ್ತದಲ್ಲಿ ಮೋಜು ನೋಡುವುದೇ ಬೇಕಾಗಿರುತ್ತದೆ. ಬ್ಲ್ಯಾಕ್‌ಮೇಲ್ ಮಾರ್ಗವನ್ನು ಹಿಡಿದು ಹಣ ಗಳಿಸುವುದೇ ಆಗಿರುತ್ತದೆ. ಹಾಲಿನಲ್ಲಿ ಹುಳಿ ಹಿಂಡುವುದೇ ಇವರ ಕಾಯಕ. ಮೇಲ್ನೋಟಕ್ಕೆ ಸೌಂದರ್ಯ ಪ್ರಜ್ಞೆಯವರಾಗಿ ಕವಿಭಾವವುಳ್ಳವರಾಗಿರುತ್ತಾರೆ. ಸಮಾಜ ಸೇವಕರೆಂಬ ಮುಖವಾಡದವರಾಗಿರುತ್ತಾರೆ.

ಪದ್ಯದ ಆರಂಭದ ಎಂಟು ಸಾಲುಗಳು ಮೇಲಿನಂತೆ ಅರ್ಥ ಸ್ಫುರಿಸುತ್ತವೆ ಎಂಬುದು ನನ್ನ ಗ್ರಹಿಕೆ. ಇತರರಿಗೆ ಇನ್ನೂ ಬೇರೆ ಥರದ ಅರ್ಥ ಸ್ತರಗಳು ಹುಟ್ಟಿಕೊಳ್ಳುವ ಶಕ್ಯತೆ ಇದೆ. ಬಹುಶಃ `ಮಿಂಚು'. `ಮಳೆಬಿಲ್ಲು'. `ಸಂಜೆ ಮುಗಿಲು' ಎನ್ನುವ ಚಿತ್ರಗಳನ್ನು ನಿಸಾರರು ಬಳಸಿರುವುದು ಮತ್ತೊಂದು ಅರ್ಥದಲ್ಲಿಯೂ ಸಮಂಜಸವೆನ್ನಿಸುತ್ತದೆ. ಇವು ಮೂರೂ ಕಣ್ಮನಗಳಿಗೆ ಮುದ ನೀಡಿದರೂ ಮುಂಚೆ ತಿಳಿಸಿದಂತೆ ಅವುಗಳ ಅಸ್ತಿತ್ವ ಅಲ್ಪಕಾಲೀನ, ನಶ್ವರ. ಹೀಗೆ ಮೂಡಿ ಹಾಗೆ ಕಣ್ಮರೆಯಾಗುವ, ನಮ್ಮ ಬಾಳಿನ ಶ್ರೇಯಸ್ಸಿಗೆ ಅಮುಖ್ಯ ವೆನ್ನಿಸುವ ದೈನಂದಿನ ಆಗುಹೋಗುಗಳನ್ನು, ವ್ಯಕ್ತಿಗಳನ್ನು ಮತ್ತವರ ಮಾಳ್ಕೆಗಳನ್ನು ನಿಸರ್ಗದ ಈ ಮೂರು ದೃಶ್ಯಚಿತ್ರಗಳು ಅರ್ಥಪೂರ್ಣವಾಗಿ ಮನವರಿಕೆ ಮಾಡಿಕೊಡುತ್ತವೆ.

ಪತ್ರಿಕೆಗಳಲ್ಲಿ ಸುದ್ದಿಗೆ ಗ್ರಾಸವಾಗದ ವ್ಯಕ್ತಿ ಬಹುತೇಕ ತಾರಾಮೌಲ್ಯರಹಿತ ನಾಗಿರುತ್ತಾನೆ. ಅವುಗಳ ದೃಷ್ಟಿಯಲ್ಲಿ ಅವನೊಬ್ಬ ಮರೆವಿನ ಕೂಪವಿದ್ದಂತೆ, ಚಾಲ್ತಿಯಿಲ್ಲದ ಭೂಗತ ಸ್ತೂಪವಿದ್ದಂತೆ.

ಸುದ್ದಿ ಮಾಧ್ಯಮಗಳಿಗೆ ಶಕುನಿಯಂಥ ರಾಜಕಾರಣಿ ಮೇರು ಪರ್ವತದಂತೆ ಕಾಣುತ್ತಾನೆ. ಅತ್ಯಂತ ಜನಪ್ರಿಯ ನಟನೊಬ್ಬ ಆರಾಧ್ಯ ದೈವವಾಗಿ ನಿಲ್ಲುತ್ತಾನೆ. ಇಂಥವರು ನಿಜದಲ್ಲಿ ಲೌಕಿಕ ಸಾಧಾರಣರೇ. ಇವರಂತೂ ಒಂದು ಬದಿಗೆ. ಕ್ರಿಕೆಟ್ ಶಿಖಾಮಣಿ ಗಳದಂತೂ ಲೀಡ್‌ನಲ್ಲೇ ಸಮಾಚಾರ. ನಮ್ಮ `ಸುದ್ದಿ ಮಾಧ್ಯಮ'ಗಳು ಇಂದು ನಮ್ಮನ್ನು ರಂಜಿಸುವ, ಆದರೆ ಆಲೋಚನೆ ವಿವೇಚನೆಗಳಿಗೆ ಬಿಲ್‌ಕುಲ್ ಹೊರತಾದ ಈ ಮೂರು

ಬಗೆಯ 'ಜನಪ್ರಿಯ' ವ್ಯಕ್ತಿಗಳನ್ನು ಉತ್ಸವ ಮಾಡಿ ವಿಜೃಂಭಿಸುತ್ತಿವೆ; ನಮ್ಮ ಅಭಿರುಚಿಗಳನ್ನು ಪರೋಕ್ಷವಾಗಿ ಹಾಳ್ಗೆಡಿಸುತ್ತಿವೆ: ಬಾಳನ್ನು ಲಘುತ್ವದ ಕಡೆ ಹೊರಳಿಸುತ್ತಿವೆ.

ನಿಸಾರ್ ಅಹಮದ್ ಅವರು ಪದ್ಯದ ೨ನೆಯ ಭಾಗವನ್ನು ಬೆಳೆಸುವುದು ಹೀಗೆ:

'ಸಾಧನಾಸಮರ್ಪಿತ ಅಂತರ್ಮುಖಿಗಳಾಗಿ
ಲೋಕ ಕಲ್ಯಾಣಾರ್ಥ ಜೀವವನೆ ಚಂದನಗಳಾಗಿ ನೀಗಿ
ದೂರದೇಕಾಂತದಜ್ಞಾತ ಎಡೆಗಳಲ್ಲಿ
ಪರಿಪಕ್ವವಾಗುತ್ತ ಅಧ್ಯಾತ್ಮ ಅನುಭಾವದಡೆಗಳಲ್ಲಿ,
ಕಂಗಾಲರನವರತ ಕೈಂಕರ್ಯದಾರೈಕೆಯಲ್ಲಿ,
ಸಚರಾಚರದ ಶ್ರೇಯಸಿನ ಹಾರ್ದ ಹಾರೈಕೆಯಲ್ಲಿ
ಬದುಕ ಕೃತಕೃತ್ಯತೆಗೆ ಹಾಯಿಸಿದ
ಯೋಗಿ ಸಂತ ದಾರ್ಶನಿಕ ಮಹಾಕವಿ ಸತ್ವಗಳ
ತೇಜೋಜ್ವಲ ಚಿರ ಚೇತನ ಮಹತ್ವಗಳ
ಅರಿವು ಬಾರದು ಸಮೂಹ ಮಾಧ್ಯಮಗಳಿಗೆ
ದಿನನಿತ್ಯದಾಗುಹೋಗುಗಳ ಬಾಲವನು
ನೇರ್ಪಡಿಸುವುದರಲ್ಲಿ ನಿಮಗ್ನವಾದ ನಘೆಯ ನಳಿಗೆಗಳಿಗೆ.'

ಪದ್ಯದ ಈ ೨ನೆಯ ಭಾಗದಲ್ಲಿ ಕವಿ, ಸಾಧಕರು ಯಾರು, ಅವರ ಲಕ್ಷಣಗಳೇನು, ಅವರ ಮನಸೇಚ್ಛೆಯ ಕರ್ತವ್ಯವೇನು, ಜಂಗಮ-ಸ್ಥಾವರವೆಂದೆಣಿಸದೆ ಸಕಲ ಚರಾಚರಕ್ಕೇ ಅವರ ಶುಭ ಹಾರೈಕೆಯೇನು, ಬದುಕನ್ನು ಯಾವುದೊಂದು ನಿಟ್ಟಿನತ್ತ ಕೊಂಡೊಯ್ಯುವ ಅವರ ಅಂತಿಮ ಉದ್ದೇಶವೇನು ಎಂಬುದನ್ನು ನೇರವಾಗಿ, ಅಷ್ಟೇ ಸರಳವಾಗಿ ನಮ್ಮ ಅರಿವಿಗೆ ತರುತ್ತಾರೆ. ಜೊತೆಗೇ, ಸುದ್ದಿ ಮಾಧ್ಯಮಗಳೆಂಬುವು ಎಷ್ಟೆಲ್ಲ ದಿವ್ಯ ನಿರ್ಲಕ್ಷ್ಯ ತಾಳುತ್ತವೆ ಎನ್ನುವುದರೊಂದಿಗೇ, ಅವುಗಳು ದೈನಂದಿನ ಆಗುಹೋಗುಗಳ ಬಾಲವನ್ನು ನಳಿಗೆಯಿಂದ ಸರಳಗೊಳಿಸುವ ಶತ ಪ್ರಯತ್ನದಲ್ಲೇ ಅದುವೇ ತಮ್ಮ ಮಹತ್ಕಾರ್ಯವೆಂಬಂತೆ, ಸಂನ್ಯಾಸವ್ರತಿಯಂತೆ ಲೀನವಾಗಿರುತ್ತವೆ—ಎಂಬ ತಥ್ಯವನ್ನು ಸಂದೇಹಕ್ಕೆ ಎಡೆಯಿಲ್ಲದಂತೆ ಸಾರಿದ್ದಾರೆ. ಇದು ಎಷ್ಟೆಂದರೂ ವ್ಯರ್ಥ ಪ್ರಯತ್ನವೇ, ನಿಷ್ಪ್ರಯೋಜಕವೇ. ಯಾಕೆಂದರೆ ನಳಿಗೆಯನ್ನು ತೆಗೆದಾಕ್ಷಣವೇ ಬಾಲ ಮೊದಲಿರುವ ಹಾಗೆ ಡೊಂಕಾಗಿರುತ್ತದೆ. ಈ ಕಾರಣಕ್ಕೇ ಅಲ್ಲವೆ 'ಡೊಂಕುಬಾಲದ ನಾಯಕರೆ' ಎಂಬ ಎಂದೂ ಅಳಿಸಿ ಹಾಕಲಾಗದಂಥ ನುಡಿಗಟ್ಟು ಅಂದಿಗೂ ಇಂದಿಗೂ ಪ್ರಚಲಿತವಾದದ್ದು?

ಕವಿಯ ದೃಷ್ಟಿಯಲ್ಲಿ ನಿಜವಾದ ಸಾಧಕ ಯಾರೆಂದರೆ, ಯಾವನು ಸಮರ್ಪಿತ ಅಂತರ್ಮುಖಿಯಾಗುತ್ತಾನೋ, ಲೋಕ ಕಲ್ಯಾಣದಲ್ಲೇ ತನ್ನ ಇಡೀ ಜೀವನವನ್ನು ಚಂದನದಂತೆ ಸವೆಸುತ್ತಾನೋ, ಎಲ್ಲೋ ದೂರದ ಏಕಾಂತದ ಬೆಳಕಿಗೆ ಬಾರದ ತಾಣಗಳಲ್ಲಿ ನೈಸರ್ಗಿಕ ದರ್ಶನದಲ್ಲಿ ಅನುಭವವನ್ನು ಅನುಭಾವವಾಗಿಸಿಕೊಳ್ಳುವ ಮೂಲಕ ಅಧ್ಯಾತ್ಮವಾದಿಯಾಗುತ್ತಾನೋ (ಧರ್ಮ ಮತ್ತು ಅಧ್ಯಾತ್ಮಗಳ ನಡುವಣ ಸೂಕ್ಷ್ಮಭೇದವನ್ನರಿಯುತ್ತ), ದೀನ-ದಲಿತರ ಹಸಿವಿನ ಸಮಸ್ಯೆಗೆ ಓಗೊಡುತ್ತ, ಶಕ್ತಿ ಮೀರಿ ಮಾನವೀಯ

ಅಂತಃಕರಣದಲ್ಲಿ ದಯಾಸಿಂಧು ಆಗಿರುತ್ತಾನೋ, ಸಕಲ ಚರಾಚರದ ಉನ್ನತೋನ್ನತ ಯಶೋಭಿವೃದ್ಧಿಗೆ ಹಾರ್ದಿಕ ಶುಭವನ್ನು ಕೋರುತ್ತಾನೋ, ಬದುಕಿನ ಅನುಪಮ ಸಾರ್ಥಕ್ಯದಲ್ಲೇ ಪರಮಾನಂದಿಯಾಗುತ್ತಾನೋ ಅವನು. ಇಂಥವನು ಯೋಗಿಯಾಗಿರ ಬಹುದು, ಸಂತನಾಗಿರ ಬಹುದು, ದಾರ್ಶನಿಕನಾಗಿರಬಹುದು, ಮಹಾ ಕವಿಯಾಗಿರಬಹುದು. ಇಲ್ಲವೇ ಎಲ್ಲವನ್ನೂ ಒಳಗೊಂಡವನೇ ಆಗಿರಬಹುದು. ಒಟ್ಟಾರೆ, ಮಾನವೀಯ ಮಾನವಂತ ಮಾನವನಾಗಿರಬಹುದು. ಒಟ್ಟಿನಲ್ಲಿ ಇವೊತ್ತಿನ ಯುಗದ ಧರ್ಮವೆನ್ನಿಸಿರುವ ಸ್ವಾರ್ಥಪರಾಯಣತೆ, ವಿಷಯೋಪಭೋಗ ಲಾಲಸೆ ಮತ್ತು ಕೇವಲ ಸ್ವಂತದ, ಸ್ವಹಿತದ ಬಗೆಗಿನ ಗಾಢಾಸಕ್ತಿಗಳು ಮನುಷ್ಯ ಜೀವಿತದ ಲಾಂಛನಗಳೆನ್ನಿಸಿರುವಾಗ, ಇವುಗಳನ್ನು ಧಿಕ್ಕರಿಸಿ ಪರೋಪಕಾರತೆ, ಲೋಕ ಕಲ್ಯಾಣಗಳೆಂಬ ಮಹೋನ್ನತ ಮೌಲ್ಯಗಳನ್ನು ಅಂಗೀಕರಿಸಿದ ಮಹಾನುಭಾವರು ಇವರು.

ಕವಿ ವಿಷಾದ ಪಡುವುದು ಏಕೆಂದರೆ, ಸುದ್ದಿ ಮಾಧ್ಯಮಗಳು ಸಾರಾಸಾರ ಯೋಗ್ಯಾ ಯೋಗ್ಯತೆಯನ್ನು, ಅದರಲ್ಲಿರುವ ತಾರತಮ್ಯವನ್ನು ಸರಿಯಾಗಿ ಅರಿಯದಿರುವುದಕ್ಕೆ; ಸತ್ಕರ್ಮಿ-ಸತ್ಪಾತ್ರಗಳಿಗೆ ವಿಮುಖವಾಗಿರುವುದಕ್ಕೆ; ಹಿರಿಯ ಚೇತನಗಳ ಮಹದ್ಗುಣಗಳನ್ನು ಲೆಕ್ಕಿಸದಿರುವುದಕ್ಕೆ.

ಸುದ್ದಿ ಮಾಧ್ಯಮಗಳ ಹಾಡು-ಪಾಡು ಗೊತ್ತೇ ಇದೆಯಲ್ಲ. ಕವಿಯ ಅಸಮಾಧಾನ, ವಿಷಾದ, ಕೋಪ ಕಟ್ಟಿಕೊಂಡು ಅವುಗಳಿಗೆ ಏನಾಗಬೇಕಿದೆ? ಅವು ಹೇಳಿ ಕೇಳಿ ಯಂತ್ರ ಸೃಷ್ಟಿಯ ಉತ್ಪಾದನೆಗಳು. ಮಾರುಕಟ್ಟೆಯಲ್ಲಿ ತಮಗೆಷ್ಟು ಲಾಭವೆಂಬುದನ್ನೇ ಲೆಕ್ಕ ಹಾಕುವುದು ಅವುಗಳ ಮೂಲೋದ್ದೇಶ. ಉನ್ನತ ಮೌಲ್ಯಗಳು ಕುಸಿದರೇನು, ನೆಲ ಕಚ್ಚಿದರೇನು? ಅವುಗಳಿಗೆ ವ್ಯತ್ಯಾಸವೇ ಕಂಡುಬರುವುದಿಲ್ಲ.

ಪದ್ಯದ ೩ನೆಯ ಭಾಗವನ್ನು ನಿಸಾರ್ ಅಹಮದ್ ಅವರು ಬೆಳೆಸಿದ್ದು ಹೀಗೆ:

'ಲೋಕದ ಜಾಯಮಾನವೇ ಹೀಗೆ—
ಸುಪ್ರಶಸ್ತ ಅದಕ್ಕೆ ಕಾಗೆ, ಡೇಗೆ;
ನೆನಪಾಗುವುದು ಅಪರೂಪ ಸೋಗೆ.
ಅದರ ಸ್ಥೂಲ ದೃಷ್ಟಿಗೆ ಬಿದ್ದು
ಕಾಣಿಸುವುದು ತತ್‌ಕ್ಷಣಕ್ಕೆದ್ದು
ಮೇಲುಗಡೆ ರಾರಾಜಿಸುವ ಹರಳಿನುಂಗುರದ
ನಾಲ್ಕು ಬೆರಳು ಮಾತ್ರ;
ತಗ್ಗಿನ ಹೆಬ್ಬೆಟ್ಟು ಅದರ ಕೃಪಾವಲೋಕನಕ್ಕೆ ಚಿರ ಅಪಾತ್ರ.
ಆದರದು ಕೆಳಗಿರುತ್ತಲೇ,
ಸ್ವಂತ ಮೇಲ್ಮೆಯನು ಮರೆಸುತ್ತಲೇ
ಸಲ್ಲಿಸುತ್ತದೆ ಸತ್ಕಾಯಕವ, ನಿರಾಭರಣ.
ಎಂದೇ, ಎಲ್ಲ ಬೆರಳುಗಳಿಗಿಂತ ಅದು
ಗಣ್ಯ, ಅಸಾಧಾರಣ.

ಅದರ ನೆರವಿರದೆ ಯಾವುದನು ತಾನೆ
ಹಿಡಿಯಲಾದೀತು ಗಟ್ಟಿ?
ಕಾರ್ಯ ನೆರವೇರಿಸಲಾದೀತು ಬೆರಳುಗಳು ಮುಟ್ಟಿ?
ಅದನುಳಿದು ಮುಚ್ಚಿದರೆ
ಅಪೂರ್ಣ, ಅಸಾರ್ಥಕ ಭದ್ರ ಮುಷ್ಟಿ.'

ಪದ್ಯದ ಈ ೩ನೆಯ ಹಾಗೂ ಕೊನೆಯ ಭಾಗವನ್ನು, ಪದ್ಯದ ೨ನೆಯ ಭಾಗದ ಅಂತ್ಯದಲ್ಲಿ ಬರುವ ಲಾಭಾಂಶವನ್ನೇ ಮುಖ್ಯ ಗುರಿಯಾಗಿಸಿಕೊಳ್ಳುವ ಸಮೂಹ ಮಾಧ್ಯಮ ಗಳು ಅಂದರೆ 'ನಫೆಯ ನಳಿಗೆಗಳು', ದಿನನಿತ್ಯದ ಆಗುಹೋಗುಗಳ ಬಾಲವನ್ನು ನೆಟ್ಟಗಾಗಿಸುವಲ್ಲೇ ತಲ್ಲೀನವಾಗಿರುತ್ತವೆ ಎಂಬುದಕ್ಕೆ ಅನುಸರಣೆಯಾಗಿತ್ತು. ಅವುಗಳ ಜಾಯಮಾನವೇ ಅದಾಗಿರುವುದರಿಂದ ಅವುಗಳಿಗೆ ನವಿಲುಗಳು ನೆನಪಾಗುವ ಬದಲು ಕಾಗೆ, ಗಿಡುಗಗಳೇ ಪ್ರಶಸ್ತವೆನಿಸುತ್ತವೆ. ಹಾಗೆಯೇ ಅವುಗಳಿಗೆ ಉಂಗುರ ಧಾರಣೆಯ ಬೆರಳುಗಳು ಮಾತ್ರ ಕಾಣಿಸುತ್ತವೆ ಎಂದೆನ್ನುತ್ತಾನೆ ಕವಿ. ಈ ಸಂಗತಿಯನ್ನು ಹೇಳುವಾಗಿನ ಕವಿಯ ಆಂತರಿಕ ಮನಸ್ಸು ಒಂದು ಬಗೆಯ ಕಸಿವಿಸಿಯನ್ನು ಅನುಭವಿಸಿರಲಿಕ್ಕೆ ಸಾಕು. ಹೆಬ್ಬೆಟ್ಟು ಹೊರತು ನಾಲ್ಕು ಬೆರಳುಗಳೆಂದರೆ, ಒಂದು ರೀತಿಯಲ್ಲಿ ತಮಗೆ ತಾವೇ ಎಲ್ಲಿಲ್ಲದ ಅದೃಷ್ಟಶಾಲಿಗಳು. ತಮ್ಮ ಶ್ರೀಮಂತಿಕೆಯ ಗತ್ತುಗಾರಿಕೆ ಹೆಬ್ಬೆಟ್ಟಿಗೆ ಇಲ್ಲವೇ ಇಲ್ಲ ಎಂಬ ಅಹಮಿಕೆಯನ್ನು ಅವು ಪ್ರದರ್ಶಿಸುವುದನ್ನು ಕವಿ ಎಳ್ಳಷ್ಟೂ ಇಷ್ಟಪಡುವುದಿಲ್ಲ.

ಹೆಬ್ಬೆಟ್ಟು ಸಮೂಹ ಮಾಧ್ಯಮಗಳ ಕೃಪಾವಲೋಕನಕ್ಕೆ ಯಾವತ್ತೂ ಅಪಾತ್ರವಾಗಿರ ಬಹುದು. ಆದರೆ ಅದು ತಗ್ಗಿನಲ್ಲಿದ್ದುಕೊಂಡೇ ತನ್ನ ಹೆಚ್ಚುಗಾರಿಕೆಯ ಕ್ಷಮತೆಯನ್ನು ಮರೆ ಯಲ್ಲಿಡುತ್ತ, ನಿರಾಭರಣತೆಯಲ್ಲೇ ತನ್ನ ಸತ್ಕಾಯಕವನ್ನು ಸಲ್ಲಿಸುತ್ತದೆ. ಪ್ರತಿಫಲಾಪೇಕ್ಷೆ ಯೊಲ್ಲದ ಅದು ಡಂಭಾಚಾರದಿಂದ ಮುಕ್ತ. ಹಾಗೆಯೇ ಭ್ರಷ್ಟಾಚಾರದಿಂದಲೂ ಸಹ. ಆಕಾರದಲ್ಲಿ ಚಿಕ್ಕದಾಗಿದ್ದರೂ ಸಾಕಷ್ಟು ದಪ್ಪಗಿದ್ದೇನೆಂದುಕೊಂಡು ದರ್ಪದಿಂದ ಮೆರೆಯು ವುದಿಲ್ಲ ಹೆಬ್ಬೆಟ್ಟು.

ಸುದ್ದಿ ಮಾಧ್ಯಮಗಳಲ್ಲಿ ಪತ್ರಿಕಾ ಮಾಧ್ಯಮ ಅತ್ಯಂತ ಮಹತ್ವದ್ದು ಮತ್ತು ಅಷ್ಟೇ ಪ್ರಭಾವಶಾಲಿಯಾದದ್ದು. ಸಂಸ್ಕೃತಿ ನಿರ್ಮಾಣದಲ್ಲಂತೂ ಇದರ ಪಾತ್ರ ಬಹು ದೊಡ್ಡದು.

ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಈ ಕವಿ, ಮಾಧ್ಯಮದ ಧರ್ಮವನ್ನು ಪತ್ರಿಕಾ ದೊರೆಗಳಿಗೆ ಜ್ಞಾಪಿಸಲೆಂಬ ಉದ್ದೇಶದಿಂದಲೇ 'ಸುದ್ದಿ ಮಾಧ್ಯಮಗಳು' ಎಂಬ ಪದ್ಯವನ್ನು ಬರೆದದ್ದು. ಹಾಗೆ ನೋಡಿದರೆ, ಒಂದು ಲೇಖನದ ಮೂಲಕ ಈ ಕೆಲಸವನ್ನು ಮಾಡಬಹುದಿತ್ತಲ್ಲ? ಎಂದು ನಾವು ಸಹಜವಾಗಿ ಅನ್ನಬಹುದು. ಆದರೆ ನಿಸಾರ್ ಅವರು ಪ್ರಥಮತಃ ಕವಿಯಾಗಿರುವುದರಿಂದ ಅಂಥ ವಿಷಯವನ್ನೂ ಕಾವ್ಯಾಭಿವ್ಯಕ್ತಿಯ ಚೌಕಟ್ಟಿಗೆ ಒಗ್ಗಿಸಿಕೊಂಡು, ಅದನ್ನು ಒಂದು ಅರ್ಥಪೂರ್ಣ ಪದ್ಯವಾಗಿಸಿದ್ದು ಗಮನಾರ್ಹ. ಪದ್ಯದ ರಾಚನಿಕತೆಯಲ್ಲಿ ಶ್ರದ್ಧೆ ತೋರಿರುವಂತೆ, ಪದ್ಯ ವಿವಿಧ ಆಯಾಮಗಳಿಗೂ ತೆರೆದುಕೊಳ್ಳು ವಂತೆ ಮಾಡಿದ್ದಾರೆ. ಓದುಗನನ್ನು, ವಿಮರ್ಶಕನನ್ನು ಬಹು ಬಗೆಯ ಚಿಂತನೆಗೆ ಹಚ್ಚುವಂತೆ

ನಿಗಾ ವಹಿಸಿದ್ದಾರೆ.

ಒಟ್ಟಾರೆ, ಕವಿ ನಿಸಾರ್ ಅಹಮದ್ ಅವರ 'ಸುದ್ದಿ ಮಾಧ್ಯಮಗಳು' ಎಂಬ ಪದ್ಯದ ಸೃಷ್ಟಿಯ ಹಿಂದಿನ ಆಶಯವೇನು?

ಈ ಪದ್ಯದ ಮೂಲಕ ಕವಿ ಉನ್ನತ ಮೌಲ್ಯಗಳ ಅಧಃಪತನದ ಬಗ್ಗೆ ಚಿಂತಿಸುತ್ತ, ಇಂಥ ದುರಂತಮಯ ಸನ್ನಿವೇಶದ ಅಂಟಿಗೆ ಬದುಕನ್ನು ತಳ್ಳಿದ ಸುದ್ದಿ ಮಾಧ್ಯಮಗಳ ಹೊಣೆಗೇಡಿತನದ ವಾಸ್ತವ ಚಿತ್ರಣವನ್ನು ಅರ್ಥಪೂರ್ಣವೆನ್ನಿಸುವ ರೂಪಕಾತ್ಮಕತೆಯಲ್ಲಿ ಕಟ್ಟಿಕೊಟ್ಟಿದ್ದಾನೆ. ಮೌಲ್ಯಗಳು ಅಪಮೌಲ್ಯವಾಗಿ, ಬದುಕು ಸಮಾಧಿಸ್ಥವಾಗಿದ್ದರ ಬಗ್ಗೆ ಈ ಕವಿ ಗಾಢ ವಿಷಾದಕ್ಕೊಳಗಾಗಿ, ಯಾಕಾದರೂ ನಾಗರಿಕತೆ ಬಂದಿದೆಯೋ ಎಂಬ ಹತಾಶ ಭಾವವನ್ನು ಒಳಗೊಂಡಿದ್ದಾನೆ. ತೀವ್ರ ಸಾಮಾಜಿಕ ಕಳಕಳಿಯುಳ್ಳ ಚಿಂತಕನ ಚಿಂತೆಯೇ ಹೀಗೆ.

ಅಂತೂ 'ಸುದ್ದಿ ಮಾಧ್ಯಮಗಳು' ಎಂಬ ಪದ್ಯದ ಮೂಲಕ ಶ್ರೇಷ್ಠ ಶ್ರೇಣಿಯ ಕವಿ ನಿಸಾರ್ ಅಹಮದ್ ಅವರು ಅವುಗಳ ಜಾತಕವನ್ನು ಬಹಿರಂಗಪಡಿಸಿದ್ದಾರೆ. ಅವುಗಳ ಪಾಲಿಗೆ ನಾವೀಗ ಗಂಡಾಗುವುದೋ ಹೆಣ್ಣಾಗುವುದೋ, ನಮಗೆ ಬಿಟ್ಟದ್ದು.

ವಿವೇಚನೆಯ ಪಕ್ವ ಫಲಕ್ಕೆ ಬುದ್ಧಿಯೇ ಬೇರು. ಕಾರ್ಯಕಾರಣ ಸಂಬಂಧವನ್ನು ಪರೀಕ್ಷಿಸುವಿಕೆ, ಸಾರಾಸಾರಗಳನ್ನು ವಿವೇಚಿಸುವಿಕೆ, ಪರಿಣಾಮಕಾರಿತೆಯ ಮೂಲ-ಚೂಲಗಳನ್ನು ಪರಿಶೀಲಿಸುವಿಕೆ ಬುದ್ಧಿಯಿಂದ ಸಾಧ್ಯವೇ ವಿನಾ ಹೃದಯಾನುಭವದಿಂದ ಶಕ್ಯವಿಲ್ಲ. ಭಾವ ನಿರ್ಭರವಾದ ಜೀವ ಸ್ವಲ್ಪ ಮಟ್ಟಿಗೆ ಸುರಾಪಾನಿಯ ಅವಸ್ಥೆಯನ್ನು ಹೋಲುತ್ತದೆ. ಅಮಲಿಗೂ ಅನ್ವೇಷಕ ಪ್ರವೃತ್ತಿಗೂ ಅಜಗಜಾಂತರ.

(ಬುದ್ಧಿಯ ಅಗ್ಗಳಿಕೆ)

✧ ✧ ✧

ಸಕಾಲದಲ್ಲಿ ಲೌಕಿಕ ಲಾಭ ಲಭ್ಯವಾಗಲಿಲ್ಲವೆಂದು ತಮ್ಮ ಶಕ್ತಿಸಾಮರ್ಥ್ಯಗಳ ಬಗೆಗೇ ಅನುಮಾನಿಸಿ ನಿಷ್ಕ್ರಿಯರಾಗುವುದು ಪ್ರಾಜ್ಞರ ಲಕ್ಷಣವಲ್ಲ. ಒಂದು ಪ್ರಶಸ್ತಿ ವಿಳಂಬವಾಗಿ ದೊರಕಿದ್ದರಿಂದ ತನ್ನ ಯೋಗ್ಯತೆ ಹಿರಿಮೆಗಳು ತಗ್ಗಿಬಿಡುವುದಿಲ್ಲ. ದಸರಾ ಮೆರವಣಿಗೆಯಲ್ಲಿ ಡೌಲು ಡಂಭಾಚಾರಗಳ ವಿವಿಧ ವಿನೋದ ಹಾವಳಿಗಳ ತರುವಾಯ ಬರುವುದು ಅಂಬಾರಿ ಹೊತ್ತ ಆನೆ. ಹಾಗೆಂದು ಅದು ನಿಕೃಷ್ಟವೆ? ಅದರ ಘನತೆಗೆ ಕುಂದೆ?

(ಸಂಮಾನ, ಕೀರ್ತಿ ಇತ್ಯಾದಿ)

ನಮ್ಮ ಬಡಾವಣೆಯ ಕತೆ

ಅಯ್ಯಾ ಸಹವಾಸಿ, ಹೊಸಬ ನೀನು ಬೆಂಗಳೂರಿಗೆ;
ವರ್ಗವಾಗಿ ಸಕುಟುಂಬ ಅವತರಿಸಿದೆ ಮೊದಲ ಬಾರಿಗೆ.
ಹಿಡಿದೆ ಈ ಬಡಾವಣೆಯಲ್ಲೊಂದು ದಿವಿನಾದ ಮನೆ.
ದೂರವಿದೆ ನಿಜ ಆಫೀಸಿಗೆ—ಹಾಗೆಂದು ಇದಲ್ಲ ಲೋಕದ ಕೊನೆ.

ಮೊನ್ನೆ ಫ್ಯೂಸ್ ಮುನಿದು, ಮಾಡಿದರೂ ಐದಾರೂ ಸಲ ಫೋನು,
ವಿದ್ಯುಚ್ಛಕ್ತಿ ಇಲಾಖೆಯ ಪಾದ ಬೆಳೆಯಲಿಲ್ಲೆಂದು ಹಾರಾಡಿದೆ ನೀನು.
ಒಂದಷ್ಟು ತಡವಾದದ್ದಕ್ಕೆ ಆಕಾಶವೇ ಬಿದ್ದಂತೆ ಅದೆ ಹತಾಶ;
ಹಳಬ ನನಗೆ ಬಾಯಿಪಾಠವಾಗಿದೆ ಈ ಬಡಾವಣೆಯ ಇತಿಹಾಸ.

ಹಿಂದೆ ಈ ನಿವೇಶನಗಳಲಿ ಮನೆಗಳರಳುವ ಮೊದಲು
ಬೀದಿಯ ಬೆಟ್ಟ ಕಣಿವೆಗಳಿಗೆ ಟಾರು ಸಮಾನತೆ ಸಾರುವ ಮೊದಲು
ಬಸ್‌ಸ್ಟ್ಯಾಪು, ಹೆರಿಗೆಯಾಸ್ಪತ್ರೆ, ಪೋಸ್ಟಾಫೀಸು ನೆರಳು ಚೆಲ್ಲುವ ಮೊದಲು
ನೆಲಸಿದ್ದರಿಲ್ಲಿ ಇನ್ನೆಷ್ಟು ಹರಿಸುತ್ತಿದ್ದೆಯೊ ಗಂಟಲಿನ ಹೊನಲು.

ಒಂದು ಕಾಲಕ್ಕಿಲ್ಲಿ ರಾಗಿ, ಹುಚ್ಚೆಳ್ಳು ಹೊಲ, ಜಾಲಿ, ಈಚಲು ವನ—
ಸಿಟಿ ಮಾರ್ಕೆಟ್ಟಿಗಿಂತ ಕನಕಪುರವೇ ಹತ್ತಿರವೆಂದು ಜನ
ಜೋಕು ಮಾಡುವ ಕಾಲದಲ್ಲಿ, ಮನೆಕಟ್ಟಿದ್ದವರಲ್ಲಿ ನಾನೂ ಒಬ್ಬ;
ನಲ್ಲಿ ಗೊರಗೊರ ಎಂದು ಕಂಠ ಸರಿಪಡಿಸಿಕೊಂಡರೆ ಇರಬೇಕು ಆ ದಿನ ಹಬ್ಬ.

ಕಂಬಕ್ಕೆ ತಂತಿ ಚಿಗುರಿ, ಒಂದೇ ವರ್ಷಕ್ಕೆ ಮನೆಗೆ ಬೆಳಕಿನ ಭಾಗ್ಯ;
ಗುಲ್‌ಮೊಹರಿನೆಸಳೂ ಉದುರದ ಗಾಳಿ ಬೀಸಿದರು ಕಂಬಕ್ಕೆ ಅನಾರೋಗ್ಯ.
ವಾರಕ್ಕೆರಡು ಸಲ ಈ ಬಡಾವಣೆ ಅಂಧಕಾಸುರನ ಗೋಡೌನು; ಮೇಣದ ಬತ್ತಿ
ತರಲೊಂದೇ ಮೈಲಿ, ಹತ್ತಿರದ ದಾರಿ ಹಿಡಿದರೆ, ಹಿಂದೆ ಅಲ್ಲಿದ್ದ ಗುಡ್ಡ ಹತ್ತಿ.

ಈಗ ಗಿರಣಿಯಿದೆಯಲ್ಲ, ಅಲ್ಲಿ ಅಧಿಕಾರ ನಡೆಸಿತ್ತು ದೊಡ್ಡ ಹೊಂಡ—
ಮಳೆಗಾಲದಲ್ಲೂ ಹಸಿರು; ಸಂಜೆ ಐದಕ್ಕೇ ಸಿದ್ಧ ಪಿಟೀಲು ವಾದಕರ ತಂಡ.
ಹೆಚ್ಚು ಹೇಳುವುದಿಲ್ಲ ಕಲ್ಪಿಸಿಕೊ: ನಾವಿಲ್ಲಿ ನೆಲಸಿ ಮನೆ ಕಟ್ಟಲು ಹಿಂದೇಟು
ಹಾಕುತ್ತಿದ್ದವರ ಪಾಯದಿಂದ ತೋರಣದವರೆಗು ಮೇಸ್ತ್ರಿಗಳೆ ಥೇಟು.

ಕಟ್ಟಿದ ಮನೆಯ ದೊರೆ ಮಗನಂತೆ ಸೇರಿದ ನಿನಗೆ, ಪುಟ್ಟ ಕೊರತೆಗಳೂ ಬೆಟ್ಟ—
ಆ ಕಷ್ಟಗಳನುಂಡ ನನಗೆ ಈ ಸೌಕರ್ಯಗಳ ಹೋಲಿಸಲು ನೆನಪೇ ತಕ್ಕಡಿ.
ನೆನೆದರೇನೋ ತೃಪ್ತಿ. ಆಡಿದ್ದು ಧನ್ಯತೆಯ ಕುಡಿ. ಇರವು ಹೂವೇರಿದ ಮುಡಿ.
ಕಷ್ಟ ಪಡದಿದ್ದರೂ ನೀನು, ಇರಲಿ ಪರಂಪರೆಯ ಊಹೆ—ಬದುಕು ಸಂತುಷ್ಟ.

★ ★ ★

(ಕವನ ಸಂಕಲನ: 'ಸ್ವಯಂಸೇವೆಯ ಗಿಳಿಗಳು')



'ನಮ್ಮ ಬಡಾವಣೆಯ ಕತೆ': ಆಧುನಿಕತೆಯ ಅರ್ಥವಂತಿಕೆಗೆ ಪರಂಪರೆಯ ಅರಿವಿನ ಅಗತ್ಯ

♦ ಡಾ. ಎಚ್. ಆರ್. ಪ್ರಭಾ

೧

ಈ ಕವಿತೆ ಮೇಲ್ನೋಟಕ್ಕೆ ತುಂಬಾ ಸರಳ ಮತ್ತು ಏಕ ವಿಷಯವನ್ನು ನಿರೂಪಿಸುವ ರಚನೆಯಂತೆ ಇದು ಭಾಸವಾಗುತ್ತದೆ. ಯಾವುದೇ ಆಲಂಕಾರಿಕ ಸಜಾವಟ್ಟುಗಳಿಂದ ಭಾರವೆನ್ನಿಸದೆ ಸುಲಲಿತವಾಗಿ ಓದಿಸಿಕೊಂಡು ಅರ್ಥವನ್ನು ಬಿಟ್ಟುಕೊಡುತ್ತದೆ. ಕಳೆದ ಶತಮಾನದ ಎಪ್ಪತ್ತರ ದಶಕದ ಮೊದಲ ಭಾಗದಲ್ಲಿ ರಚಿತವಾದಂತಿರುವ ಈ ಪದ್ಯದ ವಿಶೇಷತೆಯೆಂದರೆ, ನವ್ಯ ಕಾವ್ಯದ ಮೇಲೆರುವೆಯ ಕಾಲಾವಧಿಯದಾದರೂ ಅದರದೇ ಜಾಯಮಾನದ್ದಾದರೂ ಅಭಿವ್ಯಕ್ತಿ ಕ್ರಮದಲ್ಲಿ ಯಾವುದೇ ಸಂಕೀರ್ಣತೆಯನ್ನು ತೋರದಿರುವುದು. ಸಾಂಕೇತಿಕತೆಯನ್ನು ಬೆಳೆಸುವ ನಿಟ್ಟಿನಲ್ಲಿ ಅವಗಾಹತೆಗೆ ತೊಡಕನ್ನು ಉಂಟುಮಾಡದಿರುವುದು. ಈ ಅಂಶವನ್ನು ಆಗಿನ ಕಾಲಾವಧಿಯಲ್ಲಿ ಪ್ರಕಟವಾಗಿರುವ ಗಣ್ಯ ಕವಿಗಳ ಕವನ ಸಂಗ್ರಹಗಳನ್ನು ಪರಿಶೀಲಿಸಿದರೆ ಸಂದೇಹಕ್ಕೆ ಎಡೆಯಿಲ್ಲದೆ ಅರಿಯಬಹುದು.

ನಿಸಾರ್ ಅವರ ಅಗ್ಗಳಿಕೆಯಿರುವುದೇ ಇಂತಹ ಪದ್ಯಗಳ ವಸ್ತುವನ್ನು ಅಪೂರ್ವವಾಗಿ ನಿಭಾಯಿಸಿ ಉದ್ದೇಶಿತ ಪರಿಣಾಮವನ್ನು ವಾಚಕರಲ್ಲಿ ಮೂಡಿಸುವುದು. ಮೊದಲನೆಯ ಓದಿಗೆ ಒಂದು ಹೊಸದಾದ ಬಡಾವಣೆಯ ಬನ್ನ ಬವಣೆಗಳನ್ನು, ಅಸೌಲಭ್ಯ ಅನನುಕೂಲಗಳನ್ನು ಸ್ವಾನುಭವಪ್ರೇರಿತರಾಗಿ ಕವಿ ಬಣ್ಣಿಸಿದಂತೆ ಓದುಗನಿಗೆ ಭಾವವಾಗುತ್ತದೆ. ನಾವೂ ಕೂಡ

ನಗರ ವಾಸಿಗಳೊ, ದೊಡ್ಡ ಊರಿನ ವಾಸಸ್ಥರೊ ಆಗಿದ್ದ ಪಕ್ಷದಲ್ಲಿ ಇಂತಹ ಸಂಕಷ್ಟಗಳ ಸರಪಳಿಯಿಂದ ತೊಂದರೆಗೆ ಈಡಾಗುತ್ತಿದ್ದುದನ್ನು ನೆನಪಿಗೆ ತಂದುಕೊಳ್ಳುತ್ತೇವೆ. ನಮ್ಮೆಲ್ಲರ ಅನುಭವಕ್ಕೆ ಕವಿ ಎಂತಹ ಸಮರ್ಪಕವಾದ ಶಬ್ದಚಿತ್ರಗಳನ್ನು ನೀಡಿದ್ದಾರೆ ಎಂದು ವಿಸ್ಮಯಿಸುತ್ತೇವೆ.

ಆದರೆ ಕವಿಯ ಉದ್ದೇಶ ಇಷ್ಟೇ ಆಗಿದ್ದರೆ ಅದು ಸೀಮಿತ ಮತ್ತು ಅಲ್ಪ ಅರ್ಥದ 'ಕ್ಯಾನ್ವಾಸ'ನ್ನು ಮಾತ್ರ ಹೊಂದಿರುತ್ತಿತ್ತು. ಹಲವು ಮಾಮೂಲಿ ಪದ್ಯಗಳ ಗುಂಪಿನ ದೊಡ್ಡಿಗೆ ಸೇರ್ಪಡೆಯಾಗುತ್ತಿತ್ತು. ನಿಸಾರ್ ಅವರ ಕೌಶಲ, ಸೂಕ್ಷ್ಮಾರ್ಥ ಸೃಜನ ಸಾಮರ್ಥ್ಯ ಮತ್ತು ವಿವರಪೂರ್ಣತೆಯ ಕರಾರುವಾಕ್ಕುತನದಿಂದ ಕವಿತೆಗೆ ಹೆಚ್ಚುಗಾರಿಕೆ ದಕ್ಕಿಬಿಡುತ್ತದೆ. ಒಂದು ಹಂತದಲ್ಲಿ, ನಗರದ ನವ ವಿಸ್ತರಣವೊಂದರ ನಿವಾಸಿಯೊಬ್ಬನ ಸ್ವಕಥನದಂತೆ ಮುದ ನೀಡುವ ಪದ್ಯ, ಸಾಮಾನ್ಯ ಕಾವ್ಯಾಸಕ್ತರಿಗೂ ಗ್ರಹಿಕೆಯಾಗುವ ಈ ಪದ್ಯ, ಇನ್ನೊಂದು ಹಂತದಲ್ಲಿ ಆಳವಾದ ಅರ್ಥವೊಂದನ್ನು ಗರ್ಭಯಿಸಿಕೊಂಡಿರುವಂತೆ ಅನುಭವ ವಾಗುತ್ತದೆ. ಏನನ್ನೊ ಧ್ವನಿಸುತ್ತಿದೆಯೋ ಎಂಬ ಅನುಮಾನವನ್ನು ಹುಟ್ಟುಹಾಕುತ್ತದೆ.

ಇಂತಹ ಪದ್ಯಗಳ ನಿರ್ವಹಣೆ ಹಗ್ಗದ ಮೇಲಿನ ನಡೆಯಂತೆ ತುಂಬು ಎಚ್ಚರವನ್ನು ಬೇಡುವಂಥದ್ದು. ಕವಿತೆಯ ಉಗಮ ಒಂದು ತೆರನಾದ ಸ್ವಯಂಸ್ಫೂರ್ತಿಯ ಸಂದರ್ಭವನ್ನು ಅವಲಂಬಿಸಿದರೂ ಅಪ್ರಜ್ಞೆ ಮತ್ತು ಸುಪ್ತಪ್ರಜ್ಞೆಗಳ ಪ್ರಕ್ರಿಯೆಯನ್ನು ಅನುಸರಿಸಿದರೂ ಬೆಳವಣಿಗೆ, ಮುನ್ನಡೆ ಎಚ್ಚರದ ಮತ್ತು ಜಾಗೃತ ಪ್ರಜ್ಞೆಯಿಂದ ಜರುಗುವಂಥದು; ಬುದ್ಧಿಯ ಸಾವಧಾನತೆಯಿಂದ ನೆರವೇರುವಂಥದು. ಕವಿ ನಿರೂಪಿಸುವ ವಿವರಗಳಲ್ಲಿ ಸ್ಥೂಲವಾದ ಗ್ರಹಿಕೆಗೆ ಅವು ಸಮಂಜಸವಾಗಿವೆಯೆಂಬ ಭಾವನೆ ನಮಗೆ ಉಂಟಾಗುವ ಹಾಗೆಯೇ, ಅದರ ಸೂಕ್ಷ್ಮಾರ್ಥ ಮತ್ತು ಸಾಂಕೇತಿಕತೆಗಳನ್ನು ಆ ವಿವರಗಳು ಸೂಕ್ತವಾಗಿ ಕಟ್ಟಿಕೊಡಬಲ್ಲವು ಎಂಬ ತಿಳಿವಳಿಕೆ ಮೂಡುತ್ತದೆ. ಆ ವಿವರಗಳು ಹೆಚ್ಚೂ ಆಗದೆ ಕೊರೆಯೂ ಎನ್ನಿಸದೆ ಒಂದು ವಿಹಿತವಾದ ಪ್ರಮಾಣದಲ್ಲಿ, ಸಂಖ್ಯೆಯಲ್ಲಿ ಇರಬೇಕಾಗುತ್ತದೆ. ಅವುಗಳ ಒಡಲಲ್ಲಿ ಹುದುಗಿರುವ ಅತಿಶಯವಾದ ಮಾರ್ಮಿಕಾಂಶಗಳನ್ನು ನಮಗೆ ಮನೋವೇದ್ಯವಾಗಿಸ ಬೇಕಾಗುತ್ತದೆ. ಇಂತಹ 'ದ್ವಂದ್ವ' ಅರ್ಥ(Double meaning)ಗಳ ಕವಿತೆಯ ಪೂರ್ವಾಪೇಕ್ಷಿತ ನಿಯಮ ಇದು.

'ನಮ್ಮ ಬಡಾವಣೆಯ ಕತೆ' ಕವಿತೆಯಲ್ಲಿ ನಿಸಾರರು ಒಂದು ಕಡೆ ಪ್ರತ್ಯಂಗ ವಿವರಗಳನ್ನು ಸಮರ್ಪಕವಾದ ಬಗೆಯಲ್ಲಿ ವರ್ಣನಾತ್ಮಕವಾಗಿ ನೀಡಿ ಸ್ಥೂಲವಾದ ಒಂದು ಅರ್ಥವನ್ನು ಹೊಮ್ಮಿಸುವುರಲ್ಲದೆ, ಅಷ್ಟೇ ಸರಾಗವಾಗಿ ಅವುಗಳನ್ನು ಔಚಿತ್ಯಯುತವಾಗಿ ಬಳಸಿ ಸೂಕ್ಷ್ಮಾರ್ಥವನ್ನು ಧ್ವನಿಸುತ್ತಾರೆ. ಇದೆಲ್ಲವೂ ತೀರಾ ನಿರಾಯಾಸವಾಗಿ, ಸ್ವಾಭಾವಿಕವಾಗಿ ನೆರವೇರಿದಂತೆ ನಮಗನ್ನಿಸುವುದು ಕವಿಯ ಮತ್ತೊಂದು ಹೆಚ್ಚುಗಾರಿಕೆ.

೨

ಈ ಹಿನ್ನೆಲೆಯಲ್ಲಿ ಕವನವನ್ನು ಪರಿಶೀಲಿಸೋಣ. ಮೊದಲಿಗೆ ಅದರ ಮೇಲ್ನೋಟದ ಅರ್ಥದ ಗ್ರಹಿಕೆಗೆ ಪ್ರಯತ್ನಿಸೋಣ. ಒಬ್ಬ ವ್ಯಕ್ತಿ, ಸಾಕಷ್ಟು ಅನುಭವ ಪಡೆದವ.

ಮತ್ತೊಬ್ಬ ಹೊಸಬನಿಗೆ, ಇನ್ನೂ ನಿರನುಭವಿಯಾದವನಿಗೆ ಪಟ್ಟಣದ ಹೊಸದಾದ ಲೇಔಟ್ ಒಂದರ ಬಗೆಗೆ ಕೆಲವು ಸಂಗತಿಗಳನ್ನು ನಿರೂಪಿಸುವಂತೆ ಕವನ ಪ್ರಾರಂಭವಾಗುತ್ತದೆ. ಈ ಮೊದಲನೆಯ ಅನುಭವಸ್ಥ ಸ್ವತಃ ಕವಿಯೇ ಆಗಿರಬಹುದು ಎನ್ನುವ ಅನುಮಾನ ನಮಗೆ ಮೂಡಿದರೆ ಆಶ್ಚರ್ಯವಿಲ್ಲ. ಸದ್ಯಕ್ಕೆ ಅದು ಮುಖ್ಯವಲ್ಲ. ಈಗಾಗಲೇ ಈ ವಿಸ್ತರಣದಲ್ಲಿ ಕೆಲವು ವರ್ಷಗಳಿಂದ ವಾಸಿಸುತ್ತ ಹಳಬನೆನ್ನಿಸಿಕೊಂಡಿರುವ ಒಬ್ಬ ವ್ಯಕ್ತಿಯೆಂದು ನಾವು ಭಾವಿಸಬಹುದು. ಈಗ ಬೆಂಗಳೂರಿನ ಬಡಾವಣೆಯಲ್ಲಿ ಮನೆ ಮಾಡಲು ಬರುತ್ತಿರುವ ವ್ಯಕ್ತಿ—ಅವನು ಸರಕಾರಿ ನೌಕರನೋ ಖಾಸಗಿ ನೌಕರನೋ ಯಾರಾದರೂ ಇರಲಿ—ಇಲ್ಲಿಗೆ ಹೊಸಬ; ಸಂಸಾರ ಸಮೇತ ಇಲ್ಲಿಗೆ ಆಗಮಿಸುತ್ತಿರುವವ. ಹೊಸ ಬಡಾವಣೆ ಎಂದ ಮೇಲೆ ಅದು ಸಾಮಾನ್ಯವಾಗಿ ನಗರ ಮಧ್ಯದಿಂದ ಸಾಕಷ್ಟು ದೂರದಲ್ಲಿರುವಂಥದ್ದು. ಹಾಗೆಯೇ ನಗರ ಪ್ರದೇಶದಲ್ಲಿ, ಇದ್ದದ್ದರಲ್ಲಿ ಸುಲಭವಾಗಿ ಮನೆ ಬಾಡಿಗೆಗೆ ದೊರೆಯುವಂಥದ್ದು. ಅಷ್ಟೇ ಅಲ್ಲ, ಪಟ್ಟಣದ ಮಧ್ಯ ಭಾಗದ ಇಕ್ಕಟ್ಟಾದ ಕಿಷ್ಕಿಂಧೆಯಂತಹ ಗೂಡಿಗಿಂತ ವಿಶಾಲವಾದ ವಾಸಯೋಗ್ಯವಾದ ಮನೆ ಸಿಕ್ಕುವುದೂ ಇಂತಹ ನಗರಕ್ಕೆ ದೂರವಿರುವ ಲೇಔಟಿನಲ್ಲೇ. ಅಂಥದ್ದೊಂದು ಸೊಗಸಾದ ಮನೆ ಈ ಹೊಸಬನಿಗೆ ಸಿಕ್ಕಿದೆ. ತಾನು ಕೆಲಸ ಮಾಡುತ್ತಿರುವ ಕಛೇರಿಗೆ ಹತ್ತಿರವಿಲ್ಲದಿರಬಹುದು. ಹಾಗೆಂದು ಇದು ನಗರದಾಚೆಗೆ ತುಂಬಾ ದೂರದಲ್ಲೂ ಇಲ್ಲ. ಹೀಗಾಗಿ, ಈ ಬಡಾವಣೆ ಪ್ರಪಂಚದ ಕೊನೆಯೇನಲ್ಲ.

ಈಚೆಗೆ ರಚಿತವಾದ ಬಡಾವಣೆ ಇದಾಗಿರುವುದರಿಂದ, ಇಲ್ಲಿ ಹಳೆಯ ಮೊಹಲ್ಲಾಗಳಂತೆ ಎಲ್ಲವೂ ಸಲೀಸೇನಲ್ಲ. ಅಲ್ಲಿನ ಸೌಕರ್ಯಗಳೆಲ್ಲ ಸಹಜವಾಗಿಯೇ ಇಲ್ಲಿ ಸಿಕ್ಕುವುದಿಲ್ಲ. ಹಲವು ನಮೂನೆಯ ಅರೆಕೊರೆಗಳು ನಿವಾಸಿಗಳನ್ನು ಕಾಡುವುದು ಸಹಜ. ಮುಂದೆ ಇಲ್ಲಿ ನಿವೇಶನಗಳೆಲ್ಲ ಗೃಹಗಳಾಗಿ ಪರಿವರ್ತಿತವಾಗಿ ಹೆಚ್ಚು ಜನರು ಬಂದು ನೆಲಸಲು ಪ್ರಾರಂಭಿಸಿದಾಗ ಇದೂ ಕೂಡ ಲವಲವಿಕೆಯಿಂದ, ಅನುಕೂಲತೆಗಳಿಂದ ವಿರಾಜಿಸುತ್ತದೆ. ಈಗ ಅನುಭವಿಸಬೇಕಾಗಿರುವ ತಾತ್ಕಾಲಿಕ ಮತ್ತು ಮಾಮೂಲಾದ ತೊಂದರೆಗಳು ಬಗೆಹರಿಯುತ್ತವೆ, ಬದುಕು ಸುಖಮಯ ಮತ್ತು ನಿರಾಳದ್ದಾಗುತ್ತದೆ. ಆ ತನಕ ತಾಳ್ಮೆಯಿಂದ ಕಾಯುವುದೇ ಜಾಣತನ. ಇದು ಇಲ್ಲಿ ನೆಲೆಯೂರಿರುವ ಹಳಬ ವ್ಯಕ್ತಿಯ ಸಲಹೆ ಹಾಗೂ ಉಪದೇಶ.

ಈಚೆಗೆ ಒಂದು ಸಲ ಮನೆಯೆದುರಿನ ಬೀದಿಗಂಬದ ಫ್ಯೂಸ್ ಕೆಟ್ಟುಹೋಗಿ ವಿದ್ಯುಚ್ಛಕ್ತಿಯ ಕಛೇರಿಗೆ ಹಲವು ಬಾರಿ ನೀನು ದೂರವಾಣಿಯ ಮೂಲಕ ದೂರು ನೀಡಿದ್ದು ನಿಜ. ಹೀಗಿದ್ದರೂ ಸಂಬಂಧ ಪಟ್ಟವರು ಬಂದು ತಕ್ಷಣ ದುರಸ್ತಿ ಮಾಡಲಿಲ್ಲವೆಂದು ನಿನಗೆ ಸಿಟ್ಟು. ವಿಳಂಬ ಆಯಿತು ಎನ್ನುವುದು ಸುಳ್ಳಲ್ಲ. ಆದರೆ ಅವರು ಬರಲೇ ಇಲ್ಲ, ರಿಪೇರಿ ಮಾಡಲೇ ಇಲ್ಲ ಎನ್ನಲಾಗದು. ನಿನ್ನ ದೂರಿಗೆ ಓಗೊಡುವಂತೆ ಕೊಂಚ ಹೆಚ್ಚಿನ ಸಮಯದ ತರುವಾಯ ಬಂದು, ಸರಿಪಡಿಸಿ ಬೆಳಕಿನ ಭಾಗ್ಯವನ್ನು ದಯಪಾಲಿಸಿ ಹೋದರು. ಅಬ್ಬ! ಇಷ್ಟಕ್ಕೇ ಎಷ್ಟೊಂದು ಅಬ್ಬರ ಕೂಗಾಟ, ಎಷ್ಟೊಂದು ಅಸಮಾಧಾನ, ಎಷ್ಟೊಂದು ಮುನಿಸು, ನಿರಾಶೆ! ನಾನಿಲ್ಲಿ ಹೆಚ್ಚು ಸಮಯದಿಂದ ಇದ್ದೇನಷ್ಟೆ? ಈ ಬಡಾವಣೆಯ ಮೂಲಚೂಲ, ಇದರ ಅಂತರಂಗ ನನಗೆ ಅಂಗೈ ನೆಲ್ಲಿಯಂತೆ ತಿಳಿದಿದೆ. ಇದು

ಸ್ಥಾಪಿತವಾದಾಗಿನಿಂದ ಇಲ್ಲಿ ಏನೇನು ಆಗಿದೆ, ಯಾವ ಯಾವ ಪ್ರಸಂಗಗಳು, ಘಟನೆಗಳು ಜರುಗಿವೆ ಎನ್ನುವುದು ನನಗೆ ಆದ್ಯಂತ ತಿಳಿದಿದೆ. ಒಟ್ಟಿನಲ್ಲಿ ಈ ಲೇಔಟ್‌ನ ಜಾತಕವೇ ನನ್ನ ಬಳಿ ಇದೆ.

ನಿನಗೆ ಅದನ್ನು ಬಣ್ಣಿಸಿದರೆ ಈ ಬಡಾವಣೆಯ ಈಗಿನ ಸ್ವರೂಪದ ಮೇಲಾದ ಸ್ಥಿತಿಗತಿಗಳ ಅರಿವಾಗಬಹುದು. ಬದುಕು, ಸಣ್ಣ ಪುಟ್ಟ ಕೊರತೆಗಳ ಮಧ್ಯೆಯೂ ಸಹ್ಯ, ಸುಸೂತ್ರ ಎನ್ನುವ ತಿಳಿವಳಿಕೆ ಮೂಡಬಹುದು. ಅಂದಿನ ಸಂಗತಿಗಳನ್ನು ಒಂದೊಂದಾಗಿ ನಿವೇದಿಸುತ್ತೇನೆ, ಕೇಳು. ಆಮೇಲಿನ ನಿರ್ಧಾರ ನಿನಗೆ ಬಿಟ್ಟಿದ್ದು. ಬಹಳ ಹಿಂದೆ ಇಲ್ಲಿನ ಖಾಲಿ ಸೈಟುಗಳಲ್ಲಿ ಗೃಹಗಳು ಮೈತಳೆಯುವುದಕ್ಕೆ ಮುಂಚೆ; ಆಚೆ ಅಡಿಯಿಟ್ಟರೆ ಸಾಕು ಎದುರಾಗುತ್ತಿದ್ದ ಅನೇಕ ಹಳ್ಳತಿಟ್ಟುಗಳನ್ನು ಧಮ್ಮಾಸಿನಿಂದ ಸಮತಟ್ಟುಗೊಳಿಸಿ, ರಸ್ತೆಗಳನ್ನಾಗಿ ಮಾರ್ಪಡಿಸಿ ಅವುಗಳಿಗೆ ಡಾಂಬರಿನ ಲೇಪನ ಮಾಡಿ ಸಂಚಾರಕ್ಕೆ ಸುಗಮ ಮಾಡುವುದಕ್ಕೂ ಮುಂಚೆ; ದಿನನಿತ್ಯದ ಬಾಳ್ವೆಗೆ ಅತ್ಯಾವಶ್ಯಕ ಮೂಲಭೂತ ಸೌಕರ್ಯ ಗಳೆನ್ನಿಸುವ ವಾಹನ ನಿಲ್ದಾಣ, ಹೆರಿಗೆಯಾಸ್ಪತ್ರೆ, ಅಂಚೆ ಕಛೇರಿ ಮುಂತಾದವು ಇಲ್ಲಿ ನೆಲೆಯೂರಲು ಅಗತ್ಯವಾದ ಕಟ್ಟಡಗಳು ನಿಮಿರಿ ನಿಲ್ಲುವ ಮುಂಚೆ—ಇಲ್ಲಿ ನೀನು ವಾಸಕ್ಕೆ ಬಂದಿದ್ದರೆ, ಇಲ್ಲಿನ ಲೋಪಗಳ ಸರಮಾಲೆಯನ್ನು ಕಂಡು ಅದೆಷ್ಟು ಅಲವತ್ತು ಕೊಳ್ಳುತ್ತಿದ್ದೆಯೊ, ಅದೆಷ್ಟು ರೇಗಿ ಕಿರುಚಾಡಿ ರಾಣಾರಂಪವೆಬ್ಬಿಸುತ್ತಿದ್ದೆಯೊ, ಗೊತ್ತಿಲ್ಲ.

ಇಷ್ಟೇ ಅಲ್ಲ, ಇನ್ನೂ ಕೇಳು: ಹಿಂದೊಮ್ಮೆ ಇಲ್ಲೇನಿತ್ತು? ಒಂದು ನೆಲೆಯೆ? ಓಡಾಟವೆ? ಜನರ ಚಲನವಲನ, ಚಟುವಟಿಕೆ, ಮಾತು ಮುಂತಾದವೆ? ಬಟಾಬಯಲು, ನೆಮ್ಮದಿಗೆಡಿಸುವ ನೀರವ ಮತ್ತು ಅಸಹನೀಯ ಆಗಂತುಕತೆ. ಆಗ ಇಲ್ಲಿನ ಆಸುಪಾಸಿನಲ್ಲಿ ಕಣ್ಣಿಗೆ ಬೀಳುತ್ತಿದ್ದದ್ದು ರಾಗಿ ಜೋಳ ಹುಚ್ಚೆಳ್ಳು ಹುರುಳಿ ಇತ್ಯಾದಿಗಳನ್ನು ಬೆಳೆಯುವ ಹೊಲಗಳು, ಕಾಲಿಡಲಾಗದ ಮುಳ್ಳು ಜಾಲಿಯ ಮರಗಳ ದಟ್ಟಣೆ, ಈಚಲಿನ ಕಗ್ಗಾಡು—ಕ್ರಿಮಿಕೀಟ ಪ್ರಾಣಿಗಳ ತೌರು. ಇಲ್ಲಿ ಹಗಲಿನ ಹೊತ್ತೇ ನಮ್ಮಂಥ ಪಟ್ಟಣಿಗರಿಗೆ ಕಾಲಿಡಲು ದಿಗಿಲಾಗುತ್ತಿತ್ತು, ಎದೆ ಡವಡವಗುಟ್ಟುತ್ತಿತ್ತು. ಇದರ ಇಂತಹ ನಿರ್ಜನ ದುರವಸ್ಥೆಯನ್ನು ಗಮನಿಸಿದ ಈ ಷಹರಿನ ಜನಗಳು, ಲೇಔಟ್ ಆಗಲಿರುವ ಈ ಜಾಗ ಬೆಂಗಳೂರಿಗೆ ಸೇರಿದ್ದೆಂದು ಹೇಗೆ ಹೇಳುವುದು; ಇದು ನಮ್ಮ ನಗರಕ್ಕಿಂತ ಕನಕಪುರಕ್ಕೆ ಸಮೀಪ ಎಂದು ತಮಾಷೆ ಮಾಡಿ ನಗುತ್ತಿದ್ದ ಕಾಲ ಅದು. ಅಂಥ, ಯಾವುದೇ ಅನುಕೂಲಗಳಿಲ್ಲದ ಅವಧಿಯಲ್ಲಿ ಧೈರ್ಯ ಮಾಡಿ ಕೇವಲ ಬೆರಳೆಣಿಕೆಯಷ್ಟು ಮಂದಿ ಮನೆಯನ್ನು ಕಟ್ಟುವ ನಿರ್ಧಾರ ಮಾಡಿದರು. ಬಂದದ್ದು ಬರಲಿ, ಎದುರಿಸೋಣವೆನ್ನುವ ನಿಶ್ಚಲ ನಿಶ್ಚಯದೊಂದಿಗೆ ಗೃಹಗಳನ್ನು ಎಬ್ಬಿಸಿದರು. ಹಾಗೆ ಸಂಕಲ್ಪಿಸಿದವರಲ್ಲಿ ನಾನೂ ಒಬ್ಬ. ವಾರಕ್ಕೊಮ್ಮೆ ಒಂದಷ್ಟು ಹೊತ್ತು ಬೆಳಕಿಲ್ಲದಿದ್ದರೆ ಕೋಪದಿಂದ ಕುದಿಯುವ ನಿನಗೆ ಒಂದು ನಿಜಾಂಶವನ್ನು ಹೇಳಲೆ? ಆಗ, ರಾತ್ರಿ ವೇಳೆಗೆ ಅಗತ್ಯವಾದ ವಿದ್ಯುತ್ ಬೆಳಕಿರಲಿ, ಹಗಲಿರುಳೂ ದಿನ ಬಳಕೆಗೆ ಬೇಕಾಗಿದ್ದ ನೀರು ಸಹ ದಕ್ಕುವುದು ಸುಲಭವಾಗಿರಲಿಲ್ಲ. ಕೊಳಾಯಿಯಲ್ಲಿ ನೀರು ಬಂತೆಂದರೆ, ಆ ದಿವಸ ಏನೋ ವಿಶೇಷವಿರಬೇಕೆಂದು ಬಗೆಯುತ್ತಿದ್ದೆವು. (ಅದನ್ನು ಕವಿ ಚಿತ್ರಿಸುವುದು ಹೀಗೆ: 'ನಲ್ಲಿ ಗೊರಗೊರ ಎಂದು ಕಂಠ

ಸರಿಪಡಿಸಿಕೊಂಡರೆ, ಇರಬೇಕು ಆ ದಿನ ಹಬ್ಬ.') ಸಂತೋಷ ಸಂಭ್ರಮಗಳಿಂದ ಹಿಗ್ಗುತ್ತಿದ್ದೆವು.

ಇದಷ್ಟೇ ಅಲ್ಲ—

'ಕಂಬಕ್ಕೆ ತಂತಿ ಚಿಗುರಿ, ಒಂದೇ ವರ್ಷಕ್ಕೆ ಮನೆಗೆ ಬೆಳಕಿನ ಭಾಗ್ಯ;
ಗುಲ್‌ಮೊಹರಿನೆಸಳೂ ಉದುರದ ಗಾಳಿ ಬೀಸಿದರು ಕಂಬಕ್ಕೆ ಅನಾರೋಗ್ಯ.
ವಾರಕ್ಕೆರಡು ಸಲ ಈ ಬಡಾವಣೆ ಅಂಧಕಾಸುರನ ಗೋಡೌನು; ಮೇಣದ ಬತ್ತಿ
ತರಲೊಂದೇ ಮೈಲಿ, ಹತ್ತಿರದ ದಾರಿ ಹಿಡಿದರೆ, ಹಿಂದೆ ಅಲ್ಲಿದ್ದ ಗುಡ್ಡ ಹತ್ತಿ.'

(ಈ ಸಾಲುಗಳಲ್ಲಿನ ದೃಶ್ಯವನ್ನು ಚಿತ್ರಿಸಿಕೊಳ್ಳಿ. ಹಾಗೆಯೇ ಇಲ್ಲಿನ ಮಾತುಗಾರಿಕೆಯ ಲೆಕ್ಕಾಚಾರದ ಬಳಕೆ, ಅಡಕತೆಗಳನ್ನೂ ಗಮನಿಸಿ.)

ನಾವು ಇಲ್ಲಿ ನೆಲಸಿದ ಸಮಯಕ್ಕೆ ವಿದ್ಯುದ್ದೀಪದ ಬೆಳಕು ನಮ್ಮನ್ನು ಹರಸಲಿಲ್ಲ, ಹಿಗ್ಗನ್ನು ಕರುಣಿಸಲಿಲ್ಲ. ಬರಿದಾದ ಕಂಬಗಳನ್ನು ನೆಟ್ಟು ಹೋದ ವಿದ್ಯುತ್ ಇಲಾಖೆಯವರು ಅವುಗಳಿಗೆ ತಂತಿಗಳನ್ನು ಅಳವಡಿಸಿ ಕರೆಂಟು ಹಾಯಿಸಿ ನಮ್ಮ ಬಡಾವಣೆಯನ್ನು, ಮನೆಗಳನ್ನು ಬೆಳಗಬೇಕಾದರೆ ಒಂದು ವರ್ಷದಷ್ಟು ಸಮಯ ಹಿಡಿಯಿತು. ಆವರೆಗೂ ನಮಗೆ ಲಾಟೀನೋ, ಹಣತೆಯೋ—ಅಷ್ಟೇ ಗತಿ. ಇವೊತ್ತು ನೀನಿರುವ ಬಡಾವಣೆಯ ಸ್ಥಿತಿಗತಿಗಳೊಂದಿಗೆ ಹಿಂದಿನದನ್ನು ಹೋಲಿಸಿಕೊ. ಇಂದು ಗೃಹವನ್ನು ನಿರ್ಮಿಸುವುದರ ಜೊತೆಗೇ ವಿದ್ಯುತ್ತೂ ಒದಗುತ್ತದೆ, ವಾಸಕ್ಕೆ ಬಂದಂದೇ ಬೆಳಕೂ ಒಲಿದು ಬರುತ್ತದೆ. ವರ್ಷವಾದ ಮೇಲೆ ವಿದ್ಯುದ್ದೀಪ ಬಂದಿತು ಅಂದೆನಲ್ಲ. ಹಾಗೆ ಒದಗಿದ್ದು ನಿರ್ವಿಘ್ನವಾಗಿ ಸದಾ ಕಾಲ ಇತ್ತು ಎಂದುಕೊಂಡೆಯ? ತೀರಾ ದುರ್ಬಲವಾದ ಗಾಳಿಯ ಬೀಸಿಗೂ ಬೀದಿಯ ಕಂಬದಲ್ಲಿನ ವೈರುಗಳು ಅಸ್ತವ್ಯಸ್ತವಾಗಿ ಬೆಳಕು ಇಲ್ಲದಾಗುತ್ತಿತ್ತು (ಗುಲ್‌ಮೊಹರ್‌ನಂತಹ ಅತಿ ಕೋಮಲವೂ ಹಗುರವೂ ಆದ ಸುಮವನ್ನೂ ಸಹ ಉದುರಿಸದಷ್ಟು ನಿಶ್ಶಕ್ತವಾದ ಗಾಳಿ ಎಂಬಲ್ಲಿನ, ಕಂಬಕ್ಕೆ ಅನಾರೋಗ್ಯವೆನ್ನುವಲ್ಲಿನ ಮಾತಿನ ಚಮತ್ಕಾರದ ಸೊಗಸನ್ನು ಗಮನಿಸಿ. ಕಂಬದ ಜಡಾವಸ್ಥೆಯನ್ನು ಮರೆಸಿ, ಅದರಲ್ಲಿನ ವಿದ್ಯುತ್ತಿನ ದೆಸೆಯಿಂದ ಅದು ಸಜೀವತೆಯನ್ನು ಪಡೆದಂತೆ, ನಿವಾಸಗಳ ಹಾಗೆಯೇ ಕಂಬಕ್ಕೂ ನೆಗಡಿ, ಜ್ವರ ಬಂದು ಅಸ್ವಸ್ಥವಾದಂತೆ ನುಡಿದಿರುವ ಪರಿಯನ್ನು ಪರಿಶೀಲಿಸಿ. ವಿದ್ಯುತ್ ಕಂಬ ಬಡಾವಣೆಯ ಜನರೊಂದಿಗೆ ಅತ್ಯಾಪ್ತವಾದ ಜೀವಂತ ಸಂಬಂಧ ಹೊಂದಿರುವ ಧ್ವನಿ ಇಲ್ಲಿದೆ.) ಹೀಗೆ, ಬೆಳಕು ಖೋತಾ ಆದಾಗ ಈ ಇಡೀ ಲೇಔಟ್‌ನ ತೇಜೋಮಯ ಚರ್ಯೆ, ಇದ್ದಕ್ಕಿದ್ದಂತೆ ಅಂಧಕನೆಂಬ ಪೀಡಾಕಾರಕನೂ ಅನಿಷ್ಟ ಸ್ವರೂಪಿಯೂ ಆದ 'ನೆಗೆಟಿವ್ ಸತ್ತ್ವ'ದ ಉಗ್ರಾಣದಂತೆ ಭಯಂಕರವಾಗುತ್ತಿತ್ತು. ನಾವೆಲ್ಲ ಜೀವವನ್ನು ಕೈಯ್ಯಲ್ಲಿ ಹಿಡಿದುಕೊಂಡು ಬಾಳುತ್ತಿದ್ದೆವು. ಈಗ ನಿನಗೆ ಅಂತಹ ದುಃಸ್ಥಿತಿ ಇಲ್ಲದಿರುವುದಕ್ಕೆ ಸಂತೋಷಪಡು. ಇನ್ನೂ ಒಂದು ಸಂಗತಿ ಗೊತ್ತೆ? ಕತ್ತಲೆಗೆ ಬೇಸತ್ತು ಮೋಂಬತ್ತಿಯನ್ನು ತರೋಣವೆಂದರೆ, ಇಲ್ಲೆಲ್ಲೂ ಅಂಗಡಿಗಳೇ ಆಗ ತಲೆಯೆತ್ತಿರಲಿಲ್ಲ. ಜನ ಬಾಹುಳ್ಯವಿದ್ದರೆ ತಾನೆ ಅಂಗಡಿಗಳು, ವ್ಯಾಪಾರ ವಹಿವಾಟು? ಹೀಗಾಗಿ, ಅಂಗಡಿಯ ಬೆನ್ನು ಹತ್ತಿ ನಾವು ಹೋದರೆ, ಅದೂ ಹಾದಿಗೆ ಎದುರಾಗಿದ್ದ ಗುಡ್ಡವನ್ನು ಪ್ರಯಾಸಕರವಾಗಿ ಹತ್ತಿ ತುಂಬಾ ಸಮೀಪದ ಹಾದಿ

ಹಿಡಿದು ಸಾಗಿದರೆ ಒಂದು ಮೈಲಿಯ ದೂರವನ್ನು ಕ್ರಮಿಸಬೇಕಾಗಿತ್ತು.

ಇದಾಯಿತೆ? ಇನ್ನು, ಈಗ ಗಿರಣಿ ಇರುವುದಲ್ಲ ಆ ಜಾಗ ಹಿಂದೆ ದೊಡ್ಡ ನೀರಿನ ಹೊಂಡವಾಗಿತ್ತು. ನೀರು ನಿಂತಲ್ಲೇ ನಿಂತು ಚಲನೆಯಿಲ್ಲದ್ದರಿಂದ ಪಾಚಿಗಟ್ಟಿ ಬಳಸಲು ಅಯೋಗ್ಯವಾಗಿತ್ತು. ಮಳೆ ಸುರಿಯುವ ಕಾಲದಲ್ಲೂ ಅದು ತನ್ನ ಪಾಚಿಯ ದಟ್ಟೈಕೆಯಿಂದ ಶಾಪ ವಿಮೋಚನೆ ಪಡೆಯದೆ ಹಸುರುಗಟ್ಟಿರುತ್ತಿತ್ತು. ಸರಿ, ಸೂರ್ಯ ಮುಳುಗುವುದಕ್ಕೆ ಮುಂಚಿನಿಂದಲೇ ಸೊಳ್ಳೆಗಳ ಗುಂಯ್ಗುಡುವ ವಾದ್ಯ ಸಂಗೀತಕ್ಕೆ ಪ್ರಾರಂಭ. ಮೊದಲೇ ಮನೆಗಳಲ್ಲಿ ಕತ್ತಲೆಯ ದರಬಾರು, ಜೊತೆಗೆ ಬೆವರಿಡಿಸುವ ಸಖತ್ ಸೆಖೆ. ಇದರೊಂದಿಗೆ ಸೊಳ್ಳೆಗಳ ದಂಡಿನ ದಾಳಿ ಬೇರೆ. ಕೆರೆತದಿಂದ ಶುರುವಾಗುತ್ತಿದ್ದ ತಾಪತ್ರಯ, ಆಮೇಲೆ ಜ್ವರ ಇತ್ಯಾದಿ ವ್ಯಾಧಿಗಳಿಗೆ ಮುಕ್ತ ಆಹ್ವಾನ. ಹೆಚ್ಚು ಹೇಳಿ ನಿನ್ನ ತಲೆ ಕೆಡಿಸುವುದಿಲ್ಲ. ಇದನ್ನೆಲ್ಲ ನೀನು ಸ್ವತಃ ಅನುಭವಿಸಿದಂತೆ ಕೊಂಚ ಕಲ್ಪಿಸಿಕೊ. ಆಗ ನಾವೆಲ್ಲ ಹಿಂದೆ ಪಟ್ಟ ಪಾಡಿನ ಸ್ವಲ್ಪಮಟ್ಟಿನ ಅರಿವಾದರೂ ನಿನಗೆ ಮೂಡಿ, ಇಂದಿನ ನಿನ್ನ ಇಲ್ಲಿನ ಬಾಳು ಎಷ್ಟು ಸಹನೀಯ, ಸುಖಮಯ ಎನ್ನುವುದೂ ಮನದಟ್ಟಾಗುತ್ತದೆ. ನಾವು ಇಲ್ಲಿ ನೆಲಸಿಯಾದ ಮೇಲೂ ಬಹಳ ಸಮಯದವರೆಗೆ ಬೇರೆಯವರು ಮನೆ ಕಟ್ಟುವ ಸಾಹಸ ಮಾಡಿದ್ದರೆ ಹೇಳು! ಎಲ್ಲರೂ ಬಂದು ತಮ್ಮ ನಿವೇಶನಗಳ ತಪಾಸಣೆ ಮಾಡಿಕೊಂಡು ಹೋಗುವವರೇ ಹೊರತು ಇಲ್ಲಿ ಆಗ ನೆಲಸುವ ಧೈರ್ಯ ಮಾಡುತ್ತಿರಲಿಲ್ಲ. ನಮಗೂ ಜೊತೆ, ಸಹ-ವಾಸದ ಅಗತ್ಯವಿತ್ತಲ್ಲ? ಹೆಚ್ಚು ಮನೆಗಳಾದರೆ ಅಧಿಕತರವಾದ ಸೌಲಭ್ಯಗಳು ದೊರಕುತ್ತವೆಂಬ ದೂರದ ಆಸೆ ನಮಗೆ. ಈ ಕಾರಣದಿಂದ, ಮನೆಯನ್ನು ಕಟ್ಟಲು ಅನುಮಾನಿಸುತ್ತಿದ್ದ, ಹಿಂಜರಿಯುತ್ತಿದ್ದ ಮಂದಿಯ ಮನವೊಲಿಸಿ. 'ನಾವು ನಿಮಗೆ ಸಹಾಯ ನೀಡುತ್ತೇವೆ' ಎಂಬ ಆಶ್ವಾಸನೆಯನ್ನು ನೀಡಿ ಅವರು ಕಾರ್ಯಪ್ರವೃತ್ತರಾಗುವಂತೆ ಪ್ರಯತ್ನಿಸುತ್ತಿದ್ದೆವು. ಮನೆಯನ್ನು ತಳಪಾಯದ ಕಾಲದಿಂದ ಹಿಡಿದು ಅದು ಪೂರ್ತಿಯಾಗಿ ಗೃಹ ಪ್ರವೇಶೋತ್ಸವ ನೆರವೇರುವವರೆಗೂ ಇಲ್ಲಿ ಮೊದಲೇ ನೆಲಸಿದ್ದ ನಾವು ಐದಾರು ಜನ ಹೊಸಬರಿಗೆ ನೆರ ವಾಗುತ್ತಿದ್ದೆವು. ಅವರಿಗೆ ಹೆಜ್ಜೆ ಹೆಜ್ಜೆಗೂ ಸಲಹೆ ನೀಡುತ್ತಿದ್ದೆವು; ಸದಾ ಕಾಲ ಸಹಕರಿಸು ತ್ತಿದ್ದೆವು. ಮನೆ ಕಟ್ಟುವಾಗ ನಾವು ಅನುಭವಿಸಿದ ತೊಂದರೆ ತಿಸುರುಗಳನ್ನು, ಅನುಭವ ವಿಲ್ಲದೆ ಮಾಡಿದ್ದ ತಪ್ಪುಗಳನ್ನು ಇವರು ಎಸಗದಂತೆ ನೋಡಿಕೊಂಡಿದ್ದೆವು. ಅಂತೂ ನವ ಸಹ ನಿವಾಸಿಗಳ ಗೃಹ ನಿರ್ಮಾಣದ ಆದ್ಯಂತ ಅವಧಿಯಲ್ಲಿ ಉಸ್ತುವಾರಿಕೆಯನ್ನು ವಹಿಸಿಕೊಂಡಿದ್ದೆವು; ಥೇಟ್ ಮೇಸ್ತ್ರಿಗಳೇ ಆಗಿದ್ದೆವೆಂದರೂ ನಡೆಯುತ್ತದೆ.

ಹೀಗೆ, ಕವಿತೆ ತಡೆಯಿಲ್ಲದೆ ಮುಂದುವರಿದು ಮುಕ್ತಾಯದ ಘಟ್ಟವನ್ನು ಮುಟ್ಟುತ್ತದೆ. ಕಥನದ ಧಾಟಿಯಲ್ಲಿ ತನ್ನ ಆಶಯವನ್ನು ಪೂರ್ತಿ ಮಾಡಲು ಉದ್ಯುಕ್ತವಾಗುತ್ತದೆ. ಕೊನೆಯ ನಾಲ್ಕು ಸಾಲುಗಳಲ್ಲಿ ಈ ಕವಿತೆಯ ಆತ್ಮವೆನ್ನಬಹುದಾದ ಅಂತರಾರ್ಥ ಮೈಮರೆಸಿದೆ. ವೈಯಕ್ತಿಕ ಅನುಭವದ ನಿರೂಪಣೆಯಿಂದ ಪ್ರಾರಂಭವಾದ ಕವನ ಇಲ್ಲಿ ಒಂದು ಸಾರ್ವತ್ರಿಕತೆಯ ಅಧಿಕಾರ್ಥವನ್ನು ಧ್ವನಿಸುತ್ತ ಹೊರಳುತ್ತದೆ. ವಾಚ್ಯ ವರ್ಣನಾತ್ಮಕತೆ, ಸೂಚ್ಯ ಸಾಂಕೇತಿಕತೆಯಲ್ಲಿ ಸಾಫಲ್ಯವನ್ನು ಹೊಂದುತ್ತದೆ. ಇದರೊಂದಿಗೆ

ಕವಿ ನಿಸಾರರ ಮಾರ್ಮಿಕ ಧ್ವನಿ ಶಕ್ತಿ ನಿರ್ಮಾಣದ ನೈಪುಣ್ಯವನ್ನೂ ರುಜುವಾತು ಪಡಿಸುತ್ತದೆ:

'ಕಟ್ಟಿದ ಮನೆಯ ದೊರೆ ಮಗನಂತೆ ಸೇರಿದ ನಿನಗೆ, ಪುಟ್ಟ ಕೊರತೆಗಳೂ ಬೆಟ್ಟ—
ಆ ಕಷ್ಟಗಳನುಂಡ ನನಗೆ ಈ ಸೌಕರ್ಯಗಳ ಹೋಲಿಸಲು ನೆನಪೇ ತಕ್ಕಡಿ.
ನೆನೆದರೇನೋ ತೃಪ್ತಿ. ಆಡಿದ್ದು ಧನ್ಯತೆಯ ಕುಡಿ. ಇರವು ಹೂವೇರಿದ ಮುಡಿ.
ಕಷ್ಟಪಡದಿದ್ದರೂ ನೀನು, ಇರಲಿ ಪರಂಪರೆಯ ಊಹೆ—ಬದುಕು ಸಂತುಷ್ಟ.'

ಇಲ್ಲಿನ ಒಂದೊಂದು ನುಡಿಯೂ ಅರ್ಥಭಾರದಿಂದ, ಫಲಭರಿತ ವೃಕ್ಷದಂತೆ, ಶೋಭಾಯಮಾನವೆನ್ನಿಸುತ್ತದೆ. ಹೊಚ್ಚ ಹೊಸದಾಗಿ ಬಡಾವಣೆಗೆ ಬಂದ ವ್ಯಕ್ತಿಗೂ ಬಲು ಹಿಂದಿನಿಂದ ಇಲ್ಲಿ ನೆಲೆಯೂರಿದವರಿಗೂ ಇರುವ ವ್ಯತ್ಯಾಸವನ್ನಷ್ಟೇ ಇಲ್ಲಿನ ಸಾಲುಗಳು ಪುನರಾವರ್ತಿಸುವುದಿಲ್ಲ, ಮತ್ತೇನನ್ನೋ ಧ್ವನಿಸುತ್ತಿವೆ ಭಿನ್ನವಾದ ಅನುಭವವನ್ನು ನಮ್ಮಲ್ಲಿ ಹುಟ್ಟುಹಾಕುತ್ತವೆ. ಹಾಗಿದ್ದರೆ ಅವು ಧ್ವನಿಸುತ್ತಿರುವುದು ಏನನ್ನು? ನೇರವೂ ಸರಳವೂ ಆದ ನಿರೂಪಣ ರೀತಿಯ ಮೇಲಿನ ಸ್ತರದ ಆಶಯ ಇಲ್ಲಿ ಕೊನೆಗೊಂಡು ಒಳಗಿನ ಸ್ತರದ ಮರ್ಮಾರ್ಥದ ತಿರುವನ್ನು ಕವಿತೆ ಪಡೆಯುವುದನ್ನು ಪರಿಶೀಲಿಸೋಣ.

— ೩ —

ಕವಿತೆಯಲ್ಲಿ ಮೂಲ ವಸ್ತುವಿನಂತೆ ತೋರಿಬರುವ, ಮೇಲಿಂದ ಮೇಲೆ ಬಣ್ಣನೆಗೆ ಒಳಪಡುವ ನಿವೇಶನ, ಮನೆ, ಬಡಾವಣೆ, ಬೆಳಕು ನೀಡುವ ವಿದ್ಯುತ್ತಿನ ಬೀದಿಗಂಬ, ಹೊಂಡ, ಅಲ್ಲಿನ ನಿರ್ಜನತೆ, ಆನುಕೂಲ್ಯರಾಹಿತ್ಯ ಇತ್ಯಾದಿ ಚಿತ್ರಗಳು ಪ್ರತಿಮಾ ಸ್ವರೂಪ ವನ್ನು ತಾಳಿದಂತೆ ನಮಗೆ ಮನೋವೇದ್ಯವಾಗುವುದು ಕವಿತೆಯ ಕೊನೆಯ ನಾಲ್ಕು ಸಾಲುಗಳನ್ನು ಓದಿ, ವಿವೇಚಿಸಿದಾಗಲೇ. ನಿಸಾರರು, ನವೋದಯ ಮಾರ್ಗ ಒಂದು ಪ್ರಚಲಿತ ಶಕ್ತಿಯಾಗಿ ಚಾಲ್ತಿಯಲ್ಲಿದ್ದ ಕಾಲದಲ್ಲಿ ಕವಿತಾ ರಚನೆಯನ್ನು ಪ್ರಾರಂಭಿಸಿದವರು. ಮೊದಲೇ ಸೂಚಿಸಿದಂತೆ ಈ ಪದ್ಯ ಗತ ಶತಮಾನದ ಎಪ್ಪತ್ತರ ದಶಕದ ಮುಂಚಿನ ವರ್ಷಗಳಲ್ಲಿ ರಚಿತವಾದದ್ದು. ಆ ವೇಳೆಗೆ ನವ್ಯ ಕಾವ್ಯ ಭದ್ರವಾಗಿ ನೆಲೆಯೂರಿ, ಅನೇಕ ಹೊಸ ದನಿಗಳು ಕೇಳಿಸತೊಡಗಿದ್ದವು. ಅಂದರೆ, ಈ ಹೊಸಬರಿಗೆ ಒಂದು ಪೂರ್ವಸಿದ್ಧವಾದ ದಾರಿ ನಿರ್ಮಿತವಾಗಿ ಅವರು ಸುಗಮವಾಗಿ ಸಂಚರಿಸಲು ಸಾಧ್ಯವಾಗಿತ್ತು. ಈ ಕಾವ್ಯಮಾರ್ಗದ ಪ್ರಾರಂಭದ ದೆಸೆಯಲ್ಲಿ ಕವಿತಾ ರಚನೆಯಲ್ಲಿ ತೊಡಗಿದವರು ಕಷ್ಟ ಪರಿಶ್ರಮಗಳಿಂದ, ಹೊಸ ಹೊಸ ಪ್ರಯೋಗಶೀಲ ಸಾಹಸಗಳಿಂದ ನಿರ್ಮಿಸಿದ ಕವನ ಮಾದರಿಗಳು ಹೊಸಬರ ಅನುಸರಣೆಗೆ ಅಣಿಯಾಗಿದ್ದವು. ಹಿರಿಯ ಕವಿಗಳು ಪಟ್ಟ ತ್ರಾಸ ಪ್ರಯಾಸಗಳ ಸ್ವಂತ ಅರಿವು ಹೊಸ ಅನುಯಾಯಿಗಳಿಗೆ ಅಗತ್ಯವಿರಲಿಲ್ಲ. ತಿಟ್ಟು-ತೆವರು, ಕೊಳ್ಳ-ಗುಡ್ಡ, ಮುಳ್ಳು-ಕುರುಚಲನ್ನು ಸಫಾಯಿಗೊಳಿಸಿ ಹಾದಿ ನಿರ್ಮಿಸಿಕೊಂಡವರಿಗೂ ಅನಂತರ ಆ ಹಾದಿಯಲ್ಲಿ ಸಂಚರಿಸುವವರಿಗೂ ಕಂಡು ಬರುವ ವ್ಯತ್ಯಾಸವೇ ಈ ನವ್ಯದ ಹಳಬರಿಗೂ ಹೊಸಬರಿಗೂ ಇದ್ದಿತು. ಚಿಕ್ಕ ಪುಟ್ಟ ನ್ಯೂನತೆಗಳು, ಬಿಕ್ಕಟ್ಟುಗಳು ಎದುರಾದಾಗಲೂ ತುಂಬ ಗುರುತರ ವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆಂಬ ಹೊಸಬರ ಅನ್ನಿಸಿಕೆ, ಹಿರಿಯ ಕವಿಗಳು ಸ್ವಾನುಭವಿಸಿದ ಕಷ್ಟಗಳ ಸರಮಾಲೆಯ ಎದುರು ಗೌಣ, ನಗಣ್ಯವೆನ್ನಿಸುತ್ತದೆ. ಇದು

ವೇದ್ಯವಾಗಬೇಕಾದರೆ ಬರಿಯ ಸಂಕಷ್ಟಗಳೇ, ಸಾಹಸಮಯ ಪ್ರವೃತ್ತಿಯೇ ಅಡಿಗಡಿಗೆ ಬಾಧಿಸಿದ್ದ ಅಂದಿನವರ, ಮಾರ್ಗಸ್ಥಾಪಕರ ದಾರುಣ ಅನುಭವಗಳ ಪ್ರಜ್ಞೆ ಮೂಡಬೇಕು. ಆ ಕಷ್ಟಗಳನ್ನು ಉಂಡವರಿಗೆ ಇಂದಿನ ಸೌಕರ್ಯಗಳ ಮಹತ್ವದ ಅರಿವಿರುತ್ತದೆ. ಇಂತಹ ಅರಿವನ್ನು ದಕ್ಕಿಸಿಕೊಳ್ಳಲು ನೆನಪಿನ ಮೊರೆ ಹೋಗಬೇಕು. ಅಂದರೆ, ಯಾವುದೇ ರಚನಾತ್ಮಕ ಕಾರ್ಯವನ್ನಾಗಲಿ, ಸೃಜನಶೀಲ ಕೃತಿಯನ್ನಾಗಲಿ ಕೇವಲ ಸದ್ಯದ ಸಮಕಾಲೀನತೆಯ ಕ್ಯಾನ್ವಾಸಿನಲ್ಲಿಟ್ಟು ಪರಿಶೀಲಿಸಿದರೆ ಪೂರ್ಣ ಸತ್ಯದ ಅರಿವಾಗುವುದಿಲ್ಲ. ಅದನ್ನು ಸಮಗ್ರವಾಗಿ, ಆದ್ಯಂತಿಮವಾಗಿ ವಿವೇಚಿಸಿದಾಗಲೇ ಅದರ ನೈಜ ಸ್ವರೂಪದ ದರ್ಶನ ನಮಗಾಗುವುದು. ಅಂತಹ ಪೂರ್ಣದೃಷ್ಟಿಯಿಂದ ಪಕ್ವಗೊಂಡು ಅಭಿವ್ಯಕ್ತಪಡಿಸುವ ವಿಚಾರ ಗಳು ಧನ್ಯತೆಗೆ ಭಾಜನವಾಗುತ್ತವೆ. ಜೀವನಕ್ಕೆ ತುಂಬುತನದ, ಸಾರ್ಥಕ್ಯದ ಭಾವನೆ ಕೂಡಿ ಕೊಳ್ಳುತ್ತದೆ— ಮುಡಿಯನ್ನು ಏರುವ ಹೂವಿನ ಸರ ಸ್ವಂತ ಕೃತಕೃತ್ಯತೆಯನ್ನೂ ಹೇಗೋ ಹಾಗೆಯೇ ತಲೆಗೆ ಅನುಪಮ ಶೋಭೆಯನ್ನೂ ಮೂಡಿಸುವಂತೆ ಈ ಕಾಣ್ಕೆಯ ಫಲ.

ನವೋದಯದ ಸಿದ್ಧ ಹಾಗೂ ಸುಪರಿಚಿತ ಮಾರ್ಗವನ್ನು ಬಿಟ್ಟುಕೊಟ್ಟು ನವ್ಯದ ಆಗಂತುಕವೂ ದುರ್ಗಮವೂ ಆದ ಪಂಥವನ್ನು ಹಿಡಿದಾಗಿನ ಕಷ್ಟಗಳನ್ನು ಕೊರತೆಗಳನ್ನು ನಿವೇದಿಸುತ್ತಲೇ, ಆಮೇಲಿನ ಕವಿಗಳಿಗೆ ಲಭಿಸಿದ ಅನುಕೂಲಗಳನ್ನು ಈ ಕವಿತೆಯಲ್ಲಿ ಮನ ಮುಟ್ಟುವ ಪರಿಣಾಮಕಾರಿತೆಯಿಂದ ಚಿತ್ರಿಸಿದ್ದಾರೆ. ಈಗ ಕಷ್ಟ ಪಡದಿದ್ದರೂ ಸಹ, ಅಂದಿನ ಪಾಡುಗಳ ಪರಂಪರೆಯ ಅರಿವಿದ್ದಾಗ, ಅದನ್ನು ಕಲ್ಪಿಸಿಕೊಂಡು ಸ್ವತಃ ಅನುಭವಿಸಿದಾಗ ಸಿದ್ಧ ಮಾರ್ಗದ ಕವಿಗಳಿಗೆ ಜ್ಞಾನೋದಯವಾದೀತು. ತಾವು ಎಷ್ಟು ಭಾಗ್ಯಶಾಲಿಗಳು ಎಂಬ ತಿಳಿವು ಮೂಡೀತು.

ನವೋದಯ-ನವ್ಯಗಳ ವಿಷಯವನ್ನು ಕೂಡ ಮೀರಿ ಈ ಕವಿತೆ, ಒಟ್ಟಂದದ ಸಾರ್ವತ್ರಿಕ ಅರ್ಥವನ್ನು ಇಡೀ ಮನುಷ್ಯ ವರ್ಗಕ್ಕೆ ತಿಳಿಯಪಡಿಸುತ್ತಿದ್ದೆಯೋ ಎನ್ನಿಸುತ್ತದೆ. ನಮ್ಮ ಸಾಂಸ್ಕೃತಿಕ, ಧಾರ್ಮಿಕ ಪರಿಸರಕ್ಕೂ ಚಾಚಿಕೊಳ್ಳುತ್ತದೆಯೋ ಎಂಬ ಭಾವನೆಯನ್ನು ಮನಸ್ಸಿಗೆ ಹೊಳೆಯಿಸುತ್ತದೆ. ಪರಂಪರೆಯ ಊಹೆ ಮತ್ತು ಜ್ವಲಂತ ಅರಿವು ಒಂದು ಸಮಾಜಕ್ಕೆ, ರಾಷ್ಟ್ರಕ್ಕೆ ಸದಾ ಜಾಗೃತವಿದ್ದಾಗ ಮಾತ್ರ ನಮ್ಮ ಸಮಕಾಲೀನ ಬದುಕು ಅರ್ಥವಂತವಾಗುವುದೆಂಬ, ಪೂರ್ಣತ್ವವನ್ನು ಪ್ರಾಪ್ತಿಸಿಕೊಳ್ಳುವುದೆಂಬ ಸತ್ಯದ ದರ್ಶನವನ್ನು ಈ ಕವಿತೆ ಮಾಡಿಕೊಡುತ್ತದೆ. ನಮ್ಮ ನಾಡಿನ ಹಾಲಿ ಪರಿಸ್ಥಿತಿಯನ್ನು 'ನಮ್ಮ ಬಡಾವಣೆಯ ಕತೆ' ಮನವರಿಕೆಗೊಳಿಸುತ್ತದೆ.

ಮುನ್ನೆಚ್ಚರ, ಮಿತಿ ವಿವೇಕವನ್ನು ಮತಿವಂತರು ಮರೆಯುತ್ತಿರುವುದೇ ಮನುಷ್ಯ ಮನುಷ್ಯರ ಮಧ್ಯದ ಮನಸ್ತಾಪ ಮಾತ್ಸರ್ಯಗಳು ಮುಗಿಲು ಮುಟ್ಟಿರು -ವುದಕ್ಕೆ ಕಾರಣ.

ಹಕ್ಕು

ನನ್ನ ಕಾಂಪೌಂಡಲ್ಲಿ ನಾನೆ ಬೆಳೆಸಿದ ತೆಂಗು
ನೋಡುನೋಡುತ್ತಿದ್ದಂತೆ ಎತ್ತರ ಬೆಳೆದದ್ದು ಗೊತ್ತಿದ್ದರೂ
ಬಿರು ಬಿಸಿಲಿನಲ್ಲೊಮ್ಮೆ ಮನೆಗೆ ಬರುವಾಗ್ಗೆ
ರಸ್ತೆಗೂ ಅದು ನೆರಳ ಚೆಲ್ಲಿದ ಅರಿವಾದದ್ದು
ಆ ನೆರಳಲ್ಲಿ ನಿಂತ ಯಾರದೋ ಕಾರು ಕಂಡಾಗಲೇ.

ಅರೆ, ಎಂದು ಒಂದು ಕ್ಷಣ ಆಶ್ಚರ್ಯಪಟ್ಟೆ.
ಆಲೋಚಿಸಿದೆ:
ನೆರಳು ನನ್ನ ಮರದ್ದು, ನಿಲ್ಲಿಸಬೇಡಯ್ಯ ಕಾರು
ಅಂದರೆ ತಪ್ಪೆ?
ಅದರ ನೆರಳಲ್ಲಿ ನಿಂತಿದ್ದರಿಂದ ಆ ಕಾರು
ನನ್ನದೆಂದರೆ ತಪ್ಪೆ?

ದಬಾಯಿಸಿದರೆ ಅವ ಹೀಗೆ: ಬೆಪ್ಪೆ,
ತೆಂಗು ನಿನ್ನದಿರಬಹುದು, ಅದರ ನೆರಳು ನಿನ್ನದ?
ದಿನ ಬೆಳಗಾದರೆ ಗರಿಗಳಲ್ಲಿ ಅರಳುವ ಹಕ್ಕಿ ನಿನ್ನದ?
ಅದರ ಕಿಚಪಿಚ, ಅಲೆಯುವ ಹವೆ, ಹೊಳೆಯುವ ಕಿರಣ,
ತೂಗುವ ಚಂದ್ರ—ನಿನ್ನದ?

ಇದು ಸಾರ್ವಜನಿಕ ರಸ್ತೆ—ಕಾರು ನಿಲ್ಲಿಸಲು,
ಅಲ್ಲಿ ಚೆಲ್ಲಿದ ನೆರಳೂ ನನ್ನದೆನ್ನಲು ಹಕ್ಕುಂಟು.
ಅಲ್ಲದೆ, ನೆರಳ ನೆಪದಿಂದ ವಾಹನ ನಿಲ್ಲುತ್ತೆ,
ಹಾಗಾಗಿ ಸಂಚಾರಕ್ಕೆ ಅಡಚಣೆ, ಕತ್ತರಿಸು
ಮರವನೆಂದರೆ ಎಲ್ಲಿದೆ ನನ್ನಲ್ಲಿ ಜವಾಬು?

ಕ್ಷಣ, ದಿಗಿಲಾಗಿ
ಕಾರಲ್ಲಿ ಯಾರೂ ಇಲ್ಲದ್ದು ಖುಷಿಯಾಗಿ
ನೆರಳ ನೋಡದೆ
ಬರೀ ಕಾರಿನಂದವ ಮೆಚ್ಚುತ್ತ ಸರಸರ ಒಳಗೆ ನಡೆದೆ.

★ ★ ★

(ಕವನ ಸಂಕಲನ: 'ನಾನೆಂಬ ಪರಕೀಯ')



‘ಹಕ್ಕು’: ಸವಲತ್ತು-ಹೊಣೆಗಳ ಅಂತರ ಮನಗಾಣಿಸುವ ಮಾರ್ಮಿಕ ರಚನೆ

♦ ಡಾ. ರಾಮಚಂದ್ರ ಗಣಾಪೂರ

ಕನ್ನಡ ಕಾವ್ಯಲೋಕದಲ್ಲಿ ತಮ್ಮದೇ ಛಾಪು ಮೂಡಿಸಿರುವ ವಿಶಿಷ್ಟ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು. ಸ್ವಂತ ಶೈಲಿಯ, ಪದ ಬಂಧಗಳ ಜೋಡಣೆಯಿಂದ ಮೊನಚಾದ ಮಾತಿನ ಪ್ರಯೋಗದಿಂದ ವಿಡಂಬನಾತ್ಮಕ ನಾಟಕೀಯ ಧಾಟಿಯಿಂದ ಕವಿತೆಗೆ ಜೀವ ತುಂಬುವ ವರ ಕವಿ. ಅರ್ಥವಂತಿಕೆಯಿಂದ ಕೂಡಿದ ನಿಸಾರ್ ಅವರ ಕಾವ್ಯ ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತದೆ. ಓದುಗರನ್ನು ತನ್ನೆಡೆಗೆ ಸೆಳೆದು ಮೋಡಿ ಮಾಡುವಷ್ಟು ಸತ್ವಯುತ ಶೈಲಿ ಅವರದು. ಕನ್ನಡ ಕಾವ್ಯದ ಬೊಕ್ಕಸಕ್ಕೆ ೧೨ ಕವನ ಸಂಕಲನಗಳನ್ನು ಜಮೆ ಮಾಡುವುದರ ಮೂಲಕ ಅದರ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಪ್ರತಿ ಸಂಕಲನದಲ್ಲೂ ಅವರ ಪಕ್ವವಾದ, ಮಾಗಿದ ಅನುಭವ ಮನಸ್ಸಿಗೆ ಮುದ ನೀಡುತ್ತದೆ.

ನಿಸಾರ್ ಅಹಮದ್ ಅವರ ಹಲವಾರು ಪ್ರಸಿದ್ಧ ಕವಿತೆಗಳಲ್ಲಿ ‘ಹಕ್ಕು’ ಎನ್ನುವ ಕವಿತೆಯೂ ಸಹ ಒಂದು. ೨೫ ಸಾಲುಗಳಿಂದ ಕೂಡಿದ ಪ್ರಸ್ತುತ ಕವಿತೆ ವಿಶಿಷ್ಟ ಶೈಲಿಯಲ್ಲಿ ಮೂಡಿ ಬಂದಿದೆ. ಕವಿತೆಯ ಹೊರ ಪದರ ಹಾಸ್ಯದ ಹೊದಿಕೆಯಿಂದ ಅಲಂಕೃತವಾದಂತೆ ಕಂಡುಬರುತ್ತದೆ. ಆದರೆ ಕವಿತೆಯ ಜೀವಾಳ ಗಂಭೀರತೆಯ ಹೂರಣದಿಂದ ಕೂಡಿದ್ದು ಸಮಾಜವನ್ನು ಎಚ್ಚರಿಸುವ ಉದ್ದೇಶದಿಂದ ರಚನೆಯಾಗಿದೆ. ಪ್ರಸ್ತುತ ‘ಹಕ್ಕು’ ಕವಿತೆಯನ್ನು ಪ್ರಾಯೋಗಿಕ ವಿಮರ್ಶಾ

ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಕಾವ್ಯದ ಭಾವ, ಒಳಗೊಂಡ ತರ್ಕ, ಹಿಡಿದಿಡುವ ಅರ್ಥವಂತಿಕೆ, ಬಳಕೆಯಾಗಿರುವ ಪ್ರತಿಮೆಗಳು, ಪದ ಪ್ರಯೋಗಗಳ ವಿಶಿಷ್ಟತೆ ಹಾಗೂ ಇವೆಲ್ಲವುಗಳಿಂದ ಕವಿತೆ ಪಡೆದ ಸಾವಯವ ರೂಪ—ಇವೆಲ್ಲವೂ ವಿಚಾರಪ್ರಚೋದಕ ಎನ್ನಿಸುತ್ತವೆ.

ನಿಸಾರ್ ಅಹಮದ್ ಅವರ ಶಿವಮೊಗ್ಗದ ವೃತ್ತಿ ಜೀವನ ಅವರ ಸೃಜನಶೀಲ ಬದುಕಿಗೆ ಸ್ಮರಣೀಯ ಕಾಣಿಕೆಗಳನ್ನು ನೀಡಿತು. ವೃತ್ತಿ ಜೀವನದ ಆ ಎಂಟು ವರ್ಷಗಳು ಅವರ ಬರವಣಿಗೆಯ, ಕಾವ್ಯ ರಚನೆಯ ಮಧುರ ಕಾಲ, ಚೈತ್ರ ಸದೃಶ ಕಾಲ. ಅವರ ಪ್ರಮುಖ ಸಂಕಲನಗಳಾದ 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ', 'ನಿತ್ಯೋತ್ಸವ' ಗಳಂತಹ ಪ್ರಮುಖ ಸಂಕಲನಗಳು ರಚನೆಯಾದದ್ದು ಶಿವಮೊಗ್ಗದ ಆ ಸಹ್ಯಾದ್ರಿಯ ಮಡಿಲಿನಲ್ಲಿಯೆ. ಹಾಗೆಯೇ ಪ್ರಸ್ತುತ 'ಹಕ್ಕು' ಎಂಬ ಕವಿತೆಯೂ ಸಹ ಶಿವಮೊಗ್ಗದಲ್ಲಿಯೇ, ೧೯೭೦ರಲ್ಲಿ ರಚನೆಯಾದಂತಹ ಮಹತ್ವದ ಕವಿತೆ. ಮೂವತ್ತೈದು ವರ್ಷ ಕಳೆದರೂ ಇಂದಿಗೂ ಈ ಕವಿತೆಯ ಜೀವಂತಿಕೆ ಅಬಾಧವಾಗಿದೆ ಮತ್ತು ಅದರ ಅಂತಸ್ಸತ್ವ ಪ್ರಸ್ತುತವಾಗಿದೆ, ನಿತ್ಯ ನೂತನವಾಗಿದೆ ಎಂಬುದು ನಮ್ಮ ಅರಿವಿಗೆ ಬಾರದೆ ಇರದು.

ಕಾವ್ಯ ಕಟ್ಟುವ ಕಲೆಯಲ್ಲಿ ನಿಷ್ಣಾತರಾದ ನಿಸಾರ್ ಅಹಮದ್ ಅವರ 'ಹಕ್ಕು' ಕವಿತೆ ಅರ್ಥಪೂರ್ಣವಾಗಿರುವಂತೆ ಮೊದಲ ಓದಿಗೇ ಮನಸ್ಸನ್ನು ಮೋಡಿ ಹಾಕಿ ಸೆಳೆಯುವ ಗುಣವನ್ನು ಹೊಂದಿದೆ. ಕವಿತೆ ಆಧುನಿಕ ಜೀವನದ ಸಂದರ್ಭದಲ್ಲಿನ ನಗರ ಜೀವನದ ಚಿತ್ರಣವನ್ನು ಮನೋಜ್ಞವಾಗಿ ಬಿಚ್ಚಿಡುತ್ತಾ ಹೋಗುತ್ತದೆ. ಸಮಾಜದಲ್ಲಿ ಬಾಳುವ ಪ್ರಜೆ ಯಾವ ರೀತಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾನೆ, ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ ಎನ್ನುವ ಚಿತ್ರಣವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇಂದಿನ ಪ್ರಜಾತಂತ್ರ ವ್ಯವಸ್ಥೆಯ ದುರಂತ ಬದುಕಿನ ಚಿತ್ರಣಕ್ಕೆ ಕವಿತೆ ಕನ್ನಡಿ ಹಿಡಿಯುತ್ತದೆ. ಸಮಾಜದಲ್ಲಿ ಬಾಳುವ ಎಲ್ಲಾ ನಾಗರಿಕರಿಗೂ ರಸ್ತೆ, ನೀರು, ವಿದ್ಯುತ್ತು—ಮುಂತಾದ ಮೂಲಭೂತ ಸೌಲಭ್ಯಗಳು ಬೇಕು. ಆದರೆ ತಮಗಿರುವ ಕರ್ತವ್ಯಗಳ ಅರಿವು ಕನಸು ಮನಸಿನಲ್ಲಿಯೂ ಸಹ ಮೂಡದಿರುವುದು ತುಂಬಾ ಸೋಜಿಗದ ಸಂಗತಿಯಾಗಿ, ಮಾರ್ಮಿಕವಾಗಿ ಕವನದಲ್ಲಿ ಮೂಡಿ ಬಂದಿದೆ. ನಾವು ಸ್ವಾತಂತ್ರ್ಯ ಪಡೆದು ಹಲವು ದಶಕಗಳೇ ಕಳೆದಿವೆ. ಆದರೂ ನಮ್ಮ ಜೀವನದಲ್ಲಿ ಕರ್ತವ್ಯಪ್ರಜ್ಞೆ ವರ್ಧಿಸದೆ, ದಿನೇ ದಿನೇ ಕಮರಿಹೋಗುತ್ತಿರುವುದಕ್ಕೆ ಕವಿ ಮರುಗುತ್ತಾರೆ. ಇದಕ್ಕೆ ರಾಜಕೀಯ ವ್ಯವಸ್ಥೆ, ಜನ ಪ್ರತಿನಿಧಿಗಳು ಹಾಗೂ ನಾಗರಿಕರೆನಿಸಿರುವ ಪ್ರಜಾಪ್ರಭುಗಳೂ ಸಹ ಕಾರಣರಾಗಿದ್ದಾರೆ. ತಮ್ಮ ಸ್ವಂತದ ಬದುಕನ್ನು ಸಾಗಿಸುವ ಉದ್ದೇಶಕ್ಕಾಗಿ ಸಮಾಜಕ್ಕೆ, ಜನ ಜೀವನಕ್ಕೆ ಯಾವ ರೀತಿ ಅಡ್ಡಿಯಾಗುತ್ತಾರೆ, ವ್ಯವಸ್ಥೆಗೆ ಹೇಗೆ ಹೊರೆಯಾಗುತ್ತಾರೆ, ತಮ್ಮ ಕರ್ತವ್ಯ, ಹೊಣೆಗಳನ್ನು ಹೇಗೆ ನಿರಾಳವಾಗಿ ಮರೆಯುತ್ತಾರೆ ಎಂಬುದೇ ಈ ಕವಿತೆಯ ಜೀವಾಳ ವಾಗಿದೆ.

ಕವಿತೆಯ ರೂಪ ಮೇಲ್ನೋಟಕ್ಕೆ ನವಿರಾದ ಹಾಸ್ಯದ ಲಘು ಧಾಟಿಯಲ್ಲಿದ್ದಂತೆ ತೋರುತ್ತದೆಯಾದರೂ ಭಾವಾರ್ಥದಲ್ಲಿ ತುಂಬಾ ಗಂಭೀರವಾದಂತಹ ವಿಚಾರಗಳೆಡೆಗೆ ಕರೆದೊಯ್ಯುತ್ತದೆ. ಮನುಷ್ಯ ಸ್ವಭಾವದ ಸಹಜ, ವಾಸ್ತವ ಭಾವಾಲೋಚನೆಯ ತಳಹದಿಯಿಂದ ಕವಿತೆ ಆರಂಭವಾಗುತ್ತದೆ. ತನ್ನ ತೆಂಗಿನ ಮರ, ಅದರ ನೆರಳು, ಆ ನೆರಳಿನ ಅಡಿಯಲ್ಲಿ ನಿಂತ ಬೇರೆಯವರ ಕಾರು, ಆ ಕಾರು ತನ್ನ ತೆಂಗಿನ ನೆರಳಿನ ಆಶ್ರಯ ಪಡೆದದ್ದನ್ನು ಕಂಡು ಮನದಲ್ಲಾಗುವ ಒಳತೋಟಿ, ತುಮುಲಗಳ ತೊಳಲಾಟ ಮುಂತಾದ ಅಪೂರ್ವ ವಿಚಾರ ಲಹರಿಗಳು ಮಾರ್ಮಿಕವಾಗಿ ಮೂಡಿಬಂದಿವೆ.

'ನನ್ನ ಕಾಂಪೌಂಡಲ್ಲಿ ನಾನೆ ಬೆಳೆಸಿದ ತೆಂಗು
ನೋಡುನೋಡುತ್ತಿದ್ದಂತೆ ಎತ್ತರ ಬೆಳೆದದ್ದು ಗೊತ್ತಿದ್ದರೂ
ಬಿರು ಬಿಸಿಲಿನಲ್ಲೊಮ್ಮೆ ಮನೆಗೆ ಬರುವಾಗ್ಗೆ
ರಸ್ತೆಗೂ ಅದು ನೆರಳ ಚೆಲ್ಲಿದ ಅರಿವಾದದ್ದು
ಆ ನೆರಳಲ್ಲಿ ನಿಂತ ಯಾರದೋ ಕಾರು ಕಂಡಾಗಲೇ.
ಅರೆ, ಎಂದು ಒಂದು ಕ್ಷಣ ಆಶ್ಚರ್ಯಪಟ್ಟೆ.
ಆಲೋಚಿಸಿದೆ :
ನೆರಳು ನನ್ನ ಮರದ್ದು, ನಿಲ್ಲಿಸಬೇಡಯ್ಯ ಕಾರು
ಅಂದರೆ ತಪ್ಪೆ?
ಅದರ ನೆರಳಲ್ಲಿ ನಿಂತಿದ್ದರಿಂದ ಆ ಕಾರು
ನನ್ನದೆಂದರೆ ತಪ್ಪೆ?'

ಇಲ್ಲಿ ಬಳಕೆಯಾಗಿರುವ ಪದಪ್ರಯೋಗ ಸರಳ ಹಾಗು ಸುಭಗವಾಗಿದೆ. ತನ್ನ ನೇರತನದಿಂದ ವಿಸ್ಮಯಗೊಳಿಸುತ್ತದೆ. ಮಾನವ ಸ್ವಭಾವದ ಅನೇಕ ಆಲೋಚನೆಗಳು ತಮಗರಿವಿಲ್ಲದಂತೆಯೇ ಮೇಲೆದ್ದು ಮೆರೆಯಲು ಹವಣಿಸಿ, ಜವಾಬ್ದಾರಿಯಿಂದ ಜಾರಿಗೊಳ್ಳುವ ವ್ಯರ್ಥ ಪ್ರಯತ್ನವನ್ನು ಮನವರಿಕೆ ಮಾಡಿಸುತ್ತವೆ. ವ್ಯಂಗ್ಯ, ವಿಡಂಬನೆಗೆ ಹೆಸರಾದ ನಿಸಾರ್ ಅವರ ಈ ಕಾವ್ಯವನ್ನು ಅವರ ಬಾಯಿಯಿಂದ ಕೇಳುವುದೇ ಒಂದು ಭಾಗ್ಯ. ಆ ಪದಗಳ ಏರಿಳಿತಗಳು, ಆ ಕುಟುಕುಗಳು ಸಂದರ್ಭೋಚಿತವಾಗಿ ಮೈ ತಳೆದು ಮನಕ್ಕೆ ಮುದ ನೀಡುತ್ತವೆ. ಕವಿತೆ ಮುಂದುವರೆದು:

'ದಬಾಯಿಸಿದರೆ ಅವ ಹೀಗೆ: ಬೆಪ್ಪೆ,
ತೆಂಗು ನಿನ್ನದಿರಬಹುದು, ಆದರೆ ನೆರಳು ನಿನ್ನದ?
ದಿನ ಬೆಳಗಾದರೆ ಗರಿಗಳಲ್ಲಿ ಅರಳುವ ಹಕ್ಕಿ ನಿನ್ನದ?
ಅದರ ಕಿಚಪಿಚ, ಅಲೆಯುವ ಹವೆ, ಹೊಳೆಯುವ ಕಿರಣ,
ತೂಗುವ ಚಂದ್ರ—ನಿನ್ನದ?

ಇದು ಸಾರ್ವಜನಿಕ ರಸ್ತೆ—ಕಾರು ನಿಲ್ಲಿಸಲು,
ಅಲ್ಲಿ ಚೆಲ್ಲಿದ ನೆರಳೂ ನನ್ನದೆನ್ನಲು, ಹಕ್ಕುಂಟು.
ಅಲ್ಲದೆ, ನೆರಳ ನೆಪದಿಂದ ವಾಹನ ನಿಲ್ಲುತ್ತೆ,

ಹಾಗಾಗಿ ಸಂಚಾರಕ್ಕೆ ಅಡಚಣೆ, ಕತ್ತರಿಸು
ಮರವನೆಂದರೆ ಎಲ್ಲಿದೆ ನನ್ನಲ್ಲಿ ಜವಾಬು?'

ಹೀಗೆ, ಮೇಲಿನ ಸಾಲುಗಳಲ್ಲಿ ತನ್ನ ಹಿತಾಸಕ್ತಿಯ ವ್ಯಾಮೋಹಕ್ಕಾಗಿ ಇನ್ನೊಬ್ಬರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನಿಸುವುದು ವೇದ್ಯವಾಗುತ್ತದೆ. ಸ್ವಂತ ಬದುಕಿನಲ್ಲಾಗಲಿ, ಸಾರ್ವಜನಿಕ ಸಹಬಾಳ್ವೆಯಲ್ಲಾಗಲಿ ಮನುಷ್ಯರು ತಮ್ಮ ಅನುಕೂಲಗಳನ್ನು, ಸವಲತ್ತುಗಳನ್ನು ಮತ್ತು ಸ್ವಂತದ ಲಾಭಗಳನ್ನು ಗಳಿಸಲು ಹಂಬಲಿಸಿ, ಅವುಗಳನ್ನು ದಕ್ಕಿಸಿಕೊಳ್ಳಲು ಅಹರ್ನಿಶಿ ಹೆಣಗುತ್ತಾರೆ. ಎಷ್ಟೋ ಸಲ ಕುಟಿಲ ಹಾಗೂ ಅನ್ಯಾಯದ ಮಾರ್ಗಗಳನ್ನು ಹಿಡಿಯುತ್ತಾರೆ. ತಮ್ಮ ಹಾಗೆ ಇತರ ಸಾಮಾಜಿಕರಿಗೂ ಅನುಕೂಲ, ಸವಲತ್ತು, ಲಾಭಗಳ ಹಕ್ಕಿರುತ್ತದೆ. ಅದನ್ನು ಅರ್ಥ ಮಾಡಿಕೊಂಡು, ಇತರರಿಗೆ ತೊಂದರೆಯಾಗದಂತೆ ಸಂಯಮಪೂರ್ಣವಾಗಿ ಬಾಳನ್ನು ಸಾಗಿಸಬೇಕೆಂಬ, ಹಕ್ಕಿನಷ್ಟೇ ಜವಾಬ್ದಾರಿಯೂ ಮುಖ್ಯವೆಂಬ ಸತ್ಯ ಅವರಿಗೆ ಹೊಳೆದಿರುವುದಿಲ್ಲ. ನಮ್ಮ ದೇಶದ ಬಲು ದೊಡ್ಡ ದುರಂತವೆಂದರೆ ಇದು. ಪ್ರತಿ ಪ್ರಜೆಯೂ ನಾಡು ನೀಡಿರುವ ಹಕ್ಕಿನ ಜೊತೆಯಲ್ಲೇ ಹೊಣೆಗಾರಿಕೆಯ ಅರಿವನ್ನೂ ಇತರ ಸಾಮಾಜಿಕರಿಗೆ ಹಾಗೂ ತನ್ನ ದೇಶಕ್ಕೆ ಋಣಿಯಾಗಿದ್ದು ನಿಸ್ಪೃಹವಾಗಿ ಕೈಂಕರ್ಯ ಸಲ್ಲಿಸಬೇಕೆಂಬ ಮನೋಧರ್ಮವನ್ನೂ ರೂಢಿಸಿಕೊಂಡಾಗ ಮಾತ್ರ ವ್ಯಕ್ತಿ ಬದುಕಿಗೆ ಮೌಲ್ಯ, ಹಿರಿಮೆ ಕೂಡಿಕೊಳ್ಳಲು ಸಾಧ್ಯವಾಗುವುದು. ಈ ವಿಷಯವನ್ನು 'ಹಕ್ಕು' ಕವಿತೆ ಸಾಂಕೇತಿಕವಾಗಿ ನಮ್ಮೆದುರು ಹರವಿ ಇಡುತ್ತದೆ.

ಹೀಗೆ, ಮನುಷ್ಯ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸ್ವಾರ್ಥಭಾವವನ್ನು ಕವಿ ನಿಸಾರ್ ಅಹಮದ್ ಅವರು ಅರ್ಥಪೂರ್ಣವಾಗಿ ಹಿಡಿದಿಟ್ಟಿದ್ದಾರೆ. ಮನುಷ್ಯ ಮೊದಲು ತನ್ನ ಸ್ವಹಿತದ ಪ್ರಜ್ಞೆಯನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕೆಂಬ ಕಾಳಜಿ ಈ ಕವನದಲ್ಲಿ ಎದ್ದು ಕಾಣುತ್ತದೆ.

'ಕ್ಷಣ, ದಿಗಿಲಾಗಿ
ಕಾರಲ್ಲಿ ಯಾರೂ ಇಲ್ಲದ್ದು ಖುಷಿಯಾಗಿ
ನೆರಳ ನೋಡದೆ
ಬರೀ ಕಾರಿನಂದವ ಮೆಚ್ಚುತ್ತ ಸರಸರ ಒಳಗೆ ನಡೆದೆ.'

ಎನ್ನುವ ಮನೋಜ್ಞ ಸಾಲುಗಳಲ್ಲಿ ಸಾಮಾಜಿಕ ವ್ಯಕ್ತಿಗೆ ತನ್ನ ತಪ್ಪಿನ ಅರಿವಾಗಿ, ಅದನ್ನು ತಿದ್ದಿಕೊಳ್ಳುವ ವಿವೇಕ ಮೂಡಿದ್ದನ್ನು ಕವಿತೆಯಲ್ಲಿ ಗುರುತಿಸಬಹುದು. ಸಮಾಜದಲ್ಲಿ ವ್ಯಕ್ತಿಗಳ ವ್ಯವಹಾರ ಕೌಶಲವನ್ನು ಹಾಗೂ ತನ್ನಮೇಲೆ ಬೀಸುವ ದೊಣ್ಣೆ ಬಿದ್ದಾಗ ತಪ್ಪಿಸಿಕೊಳ್ಳುವ ಚಾತುರ್ಯ ತೋರುವುದನ್ನು ವಿಡಂಬನೆ ತುಂಬಾ ಮನೋಜ್ಞವಾಗಿ ನಿಸಾರರು ಚಿತ್ರಿಸಿದ್ದಾರೆ.

ನಿಸಾರ್ ಅಹಮದ್ ಅವರ ಕಾವ್ಯ ಕಟ್ಟುವ ಕಲೆ ಅದ್ಭುತವಾದದ್ದು. ನಿಸಾರರು ಅನ್ಯ ಭಾಷೆಯ ಪದಗಳನ್ನೂ ಸಹ ಕಾವ್ಯದ ಕಟ್ಟಡಕ್ಕೆ ಅಗತ್ಯ ಪರಿಕರಗಳಾಗಿ ಸ್ವೀಕರಿಸಿ ಕವಿತೆಯ ಸೌಂದರ್ಯವನ್ನು ಹೆಚ್ಚಿಸುತ್ತಾರೆ. 'ಹಕ್ಕು' ಕವಿತೆಯಲ್ಲಿನ 'ಕಾಂಪೌಂಡು', 'ಖುಷಿ',

'ಜವಾಬು' ಎನ್ನುವ ಶಬ್ದಗಳನ್ನು ಗಮನಿಸಬಹುದು. ಈ ರೀತಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಕವಿತೆ 'ಹಕ್ಕು' ಮಾನವನ ಕರ್ತವ್ಯ ಪ್ರಜ್ಞೆಯನ್ನು ಉದ್ದೀಪನಗೊಳಿಸುವ, ಸ್ವಾರ್ಥ ವ್ಯಾಮೋಹದ ಬಗೆಗೆ ವಿವೇಕಯುತವಾಗಿ ತಿಳಿ ಹೇಳುವ ಕವಿತೆಯಾಗಿ ಮನ ಸೆಳೆಯುತ್ತದೆ. ಇಂತಹ ಅಸಂಖ್ಯ ಮಹತ್ವದ ಕವಿತೆಗಳು ಪ್ರೊ. ನಿಸಾರ್ ಅಹಮದ್ ಅವರ ಬತ್ತಳಿಕೆಯಲ್ಲಿ ಇರುವುದನ್ನು ಓದುಗ ದರ್ಶಿಸಬಹುದು. ಅವು ಸಂಪದ್ಭರಿತವಾಗಿ ನೆಲೆಗೊಂಡು ಕನ್ನಡ ಕಾವ್ಯವನ್ನು ವೈವಿಧ್ಯಮಯ ಹಾಗೂ ವರ್ಣೋಜ್ವಲಗೊಳಿಸಿವೆ.

ಕವಿಗೆ ಪದ ಪ್ರಯೋಗ ಕುಶಲತೆ, ವ್ಯುತ್ಪತ್ತಿ, ಸೌಂದರ್ಯ ಗ್ರಹಣ ಸಾಮರ್ಥ್ಯ, ಮೋಹಕ ಮಾತುಗಾರಿಕೆ, ಛಂದಃಪ್ರಜ್ಞೆ ಮತ್ತು ಇವೆಲ್ಲಕ್ಕೂ ಕಿರೀಟಪ್ರಾಯ ವಾದ ಅನನ್ಯ ವಿಭಾವನಾ ಸಂಪತ್ತು ಸಮನ್ವಿತವಾಗಿರಬಹುದು. ಹಾಗೆಂದು ಅವನು ಬಯಸಿದ ತತ್‌ಕ್ಷಣ, ಅಲ್ಲಾವುದ್ದೀನನಿಗೆ ಪ್ರತ್ಯಕ್ಷವಾಗುವ ಭೂತ ದಂತೆ ಕವಿತೆ ಮೈದೋರಿ ಬಿಡುವುದಿಲ್ಲ. ಮುಹೂರ್ತಕ್ಕೆ ಕವಿ ಕಾಯಬೇಕು. ಸುಸಜ್ಜಿತ ಆಸ್ಪತ್ರೆ, ನಿಪುಣ ವೈದ್ಯೆ, ಆಧುನಿಕ ಪರೀಕ್ಷಣ ಸಲಕರಣೆ, ಔಷಧೋಪಚಾರ, ಆರೈಕೆಗಳಿಗೆ ಹೆಸರಾದ ದಾದಿ—ಏನೆಲ್ಲ ಇರಬಹುದು. ಆದರೂ ಅನೂನವಾದ ಶಿಶು ಜನನಕ್ಕೆ ನವ ಮಾಸ ಬೇಕು.

(ಕವಿಯ ಸಾಮರ್ಥ್ಯ ಮತ್ತು ಸುಮುಹೂರ್ತ)

✧ ✧ ✧

'ಶ್ರೀಮಂತ' ಎನ್ನುವುದು ಒಂದು ಸಮಗ್ರಾರ್ಥಸೂಚೀ ಪದ. ಇದರಲ್ಲಿ ಸಾಧಾರಣ ಸ್ಥಿತಿವಂತನಿಂದ ಲಕ್ಷಾಧಿಪತಿ ಕೋಟೀಶ್ವರರನ್ನು ಒಳಗೊಂಡಂತೆ ಆಗರ್ಭ ಬಿಲಿಯನಾಧೀಶ್ವರರವರೆಗೆ ಅಸಂಖ್ಯರು ಸೇರಿರುತ್ತಾರೆ. ಇದೇ ರೀತಿಯಲ್ಲಿ 'ಕವಿ' ಎನ್ನುವ ಶಬ್ದದಲ್ಲಿ ಪದ್ಯ ಹೊಸೆಕ ಜೋಕರ್‌ನಿಂದ ಹಿಡಿದು ಅರಸಪ್ರಾಯ ರಸ ದ್ರಷ್ಟಾರರವರೆಗೂ ಗರ್ಭೀಕೃತರಾಗಿರುತ್ತಾರೆ. 'ಸಾಹಿತಿ' ಎನ್ನುವುದರಲ್ಲೂ ಹೀಗೆಯೇ: ಗಾಜು ಹವಳ ಮುತ್ತು ಮಾಣಿಕ್ಯ ವಜ್ರದಂಥ ಶ್ರೇಣೀಕೃತ ತಾರತಮ್ಯವಿರುತ್ತದೆ. ಇವುಗಳ ನಡುವಣ ಭೇದದ ಪರಿಜ್ಞಾನ ವ್ಯಾವಹಾರಿಕತೆಗೆ ಅತ್ಯಾವಶ್ಯಕ.

(ಕವಿ, ಸಾಹಿತಿಗಳ ಭೇದಗಣನೆ)

ರಂಗೋಲಿ ಮತ್ತು ಮಗ

೧

ನಮ್ಮದೊಂದು ಮನೆ ವಿನಾ
ಮಿಕ್ಕೆಲ್ಲ ಮನೆಯೆದುರು ಪರಿಶುಭ್ರ ಹಲ್ಲಂತೆ
ಮುಂಜಾನೆ ರಂಗವಲ್ಲಿ:
ಕಿಲಿಕಿಲಿಸಿದಂತೆ ಇಡಿ ಗಲ್ಲಿ.
ಹಾಲಿಗೆ ಹೊರಟಾಗ ಹೊತ್ತಾರೆ
ಚಿತ್ತಾಪಹಾರಿ ಚಿತ್ತಾರ
ಖಾಲಿ ಮನಸಿನ ಖೋಲಿ ಖೋಲಿಗಳ ಬೀಗ
ತೆರೆದು, ತುಂಬುವುದೆಂಥ ಭಾವಾವೇಗ!

ಈ ಡಿಸೈನಿಗೆ ಹಾಗೆ ಅದಿಲ್ಲ,
ಅದರಂತೆ ಇದಿಲ್ಲ;
ಜ್ಯಾಮಿತಿಯ ಗಡಸು, ಜಟಿಲ ಸೂತ್ರಗಳಿಗೆಲ್ಲ
ದಕ್ಕಿರುವುದಿಲ್ಲಿ ಮಿಗಿಲರ್ಥ:
ಮೃದು ಬೆರಳ ಪರಿಹಾರ.
ಕಾಲೇಜು ಕಲಿಯದ ಸುಮಂಗಲೆ
ರಂಗೋಲಿ ನೆವದಿಂದ ನೀಡಿದ್ದಾಳೆ
ಪ್ರತಿ ದಿನವೂ ಸೂತ್ರಗಳಿಗಾಕಾರ.

ಕೋನ ರೇಖೆಗಳೇನು! ಚೌಕ ವೃತ್ತಗಳೇನು!
ಸ್ವಸ್ತಿಕ, ಮಂಡಲ, ಚುಕ್ಕೆ;
ಯಾವುದೋ ಆರ್ಷ ಮಂತ್ರಕ್ಕೆ
ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ.

೨

ರಂಗವಲ್ಲಿ
ನನ್ನೆದೆಯ ಕದ್ದದ್ದು ಚಿಕ್ಕಂದಿನಲ್ಲಿ.
ಇದರ ಶುರು ಮತ್ತೆ ಕೊನೆಯೆಲ್ಲಿ ಎಂದು
ಗೊತ್ತಾಗದೆ ನೊಂದು
ತಲೆ ಕೆಡಿಸಿಕೊಂಡಿದ್ದೇನೆ ಸಲ ಸಲಕ್ಕು:

ಈ ಬೆಳ್ಳನೆಯ ಕಗ್ಗಾಡ ಕಣ್ಣಿಂದ ಹೊಕ್ಕು.
ನೆರೆಯಾಕೆ ಬಾಗಿ
ಚಣದಲ್ಲಿ ಬಿಡಿಸಿದ ವಿಚಿತ್ರಕ್ಕೆ ಬೆರಗಾಗಿ
ಚಾಕ್‌ಪೀಸು ಪುಡಿಯಿಂದ ನಮ್ಮ ಪಡಸಾಲೆಯಲಿ
ನಕಲಿಸಲು ಹೋಗಿ ಸಲಸಲವು ಸೋತಿದ್ದೆ;
ಕಾಫರನ ಬಿರುದು ಹೆತ್ತವಳಿಂದ ಹೊತ್ತಿದ್ದೆ.

ಪಕ್ಕದ ಮನೆಯ ಅಯ್ಯಂಗಾರರ ವೇದವಲ್ಲಿ
ಬಿಡಿಸಿದ್ದರೊಮ್ಮೆ ತೊಡಕಾದ ರಂಗವಲ್ಲಿ.
ನೆಟ್ಟಕಣ್ಣಿನ ನನ್ನ ಕೌತುಕಕ್ಕೆ
ಮೆರೆಸಿ ತಮ್ಮೆಲ್ಲ ಹಲ್ಲ—
'ಸಾಬರು ಯಾಕೊ ರಂಗೋಲಿ ಇಡೊಲ್ಲ?'
—ದೇವರೇ, ಜವಾಬು ಗೊತ್ತಿದ್ದರೆ!
ನಾಚಿ ನೀರಾಗಿದ್ದೆ.

ನಮ್ಮ ಔಟ್‌ಹೌಸಿನ ಜನ
ಹೊಸ್ತಿಲ ಬಳಿ ರಂಗೋಲಿ ಬಿಡಿಸಿದ ಹೊತ್ತು
ಅಜ್ಜಿ ತೋರಿರಲು ಬಿರು ನುಡಿಯ ದೌಲತ್ತು
ಅಬ್ಬ! ನನಗೆಂಥ ನೋವಾಗಿತ್ತು.
ಒಮ್ಮೆ ಯಾವುದೋ ಚಿಂತೆಯಲ್ಲಿ ಬಗೆ ನೆಟ್ಟು
ಮನೆಯೊಂದರ ರಂಗೋಲಿ ಮೇಲೆ ಅಡಿಯಿಟ್ಟು
ಸರಕ್ಕನೆಳೆದುಕೊಂಡಿದ್ದೆ, ಕೆಂಡ ತುಳಿದವನಂತೆ;
ಜೊತೆಗೆ ಆ ಮನೆಯವರು ಕಂಡರೋ ಎಂಬ ಚಿಂತೆ.

೩

ಆರು ವರ್ಷದ ಹಿರಿಯ ಮಗ ಮೊನ್ನೆ
ಹಾಲು ತರಲು ಹೊರಟ ನನ್ನೊಡನೆ.
ರಂಗೋಲಿ ನೋಡುತ್ತ ನಡೆದಿದ್ದ;
ಗಮನಿಸಿದ ಅವನೆಂದ:
—ಯಾಕೆ ಬಿಡಿಸುತ್ತಾರೆ ಇವರು ಹೀಗೆ ದಿನಾ ಚಕ್ರಬಂಧ?—
ವಿವರಣೆಯ ಗೆಣ್ಣು ಗಂಟುಗಳನೆಲ್ಲ
ಹೆರೆದು ಸಾಫುಗೊಳಿಸಿದ್ದೆ ಉತ್ತರದ ಗೆಲ್ಲ:

'ನಮ್ಮ ಪದ್ಧತಿಗೆ ಅದು ಸಲ್ಲ.'
ಮನದ ಗೊಂದಲ ತಿಳಿ ಮೊಗಕ್ಕೂ ಮುಸುಕಿ
ಯಾಕೆಂಬ ಮರು ಪ್ರಶ್ನೆ ಮಿಂಚಿಸಿರಲು—
ತೆಪ್ಪಗಿರಿಸಲು ಮಗನ, ಪಲುಕಿದೆ ಹಳೆಯ ರಾಗ:
'ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ.'
ತೊರೆದು ಅರೆಗಳಿಗೆ ಮೌನದ ಹಕ್ಕೆ

ಹವ್ವನೆರಗಿತು ಮತ್ತೆ ಪ್ರಶ್ನೆ ಗರುಡನ ರೆಕ್ಕೆ:
—ಅಲ್ಲಿ ಹೇಳಿದ ಹಾಗೆ ಆಚರಿಸಬೇಕೆ?—
ಹೌದೆಂದೆ, ಪ್ರಶ್ನೆ ಸೋನೆಯ ಬೇಸರಕ್ಕೆ.
—ಮನೆಯ ಕಟ್ಟಿದ ಇಸ್ಸಿ,
ನಿನ್ನ ಹೆಸರು ಮನೆಯೆದುರಲ್ಲಿ
ಬರೆಸಿರುವೆಯಲ್ಲ, ಹೇಳಿದೆಯೆ ಖುರಾನಿನಲ್ಲಿ?—

ಆತ್ಮಸಾಕ್ಷಿಯ ಕತ್ತು ಹಿಚುಕ ಬಂದವನನ್ನ,
ಮಗುವೆನ್ನಬಹುದೆ ಇವನನ್ನ?
ಭೋಳೆ ಪ್ರಶ್ನೆ ಎಲ್ಲೆಲ್ಲಿಗೋ ಕೈ ಚಾಚಿ
ಪೇಚಿಗಿಡಿಸಿತು ನನ್ನ
ಆಚರಣೆ, ನಂಬಿಕೆಗಳ ಮಡಿಕೆ ಮಡಿಕೆಯ ರಾಚಿ.

'ಕ್ಯೂ ಬೆಳೆಯುತ್ತೆ, ಹೆಜ್ಜೆ ಹಾಕೋ ಬೇಗ'
ಎಂದೆ ಎಚ್ಚೆತ್ತು.
ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ:
ಬೆರಗು ಪ್ರಶ್ನೆಗಳವಳಿ ರೆಕ್ಕೆ
ಹರಡಿದ ಪುಟ್ಟ ಹಕ್ಕಿಯಂತೆ;
ಮನದ ತುಂಬಾ ನೆರೆಸಿ ಚಿಂತನೆಯ ಸಂತೆ.

★ ★ ★

(ಕವನ ಸಂಕಲನ: 'ಅನಾಮಿಕ ಆಂಗ್ಲರು')



‘ರಂಗೋಲಿ ಮತ್ತು ಮಗ’:
ಬೆರಗು-ಪ್ರಶ್ನೆಯ ರೆಕ್ಕೆ ಹಕ್ಕಿಯೆದುರು ಆಚರಣೆ ನಂಬಿಕೆಗಳ ಆತ್ಮಶೋಧ

♦ ಡಾ. ಕೆ. ಆರ್. ಇಕ್ಬಾಲ್ ಅಹಮದ್

೧

ಈ ಕವನ ನಿಸಾರ್ ಅಹಮದ್ ಅವರ ಕಾವ್ಯದ ಬೆಳವಣಿಗೆಯಲ್ಲಿ ಒಂದು ಮುಖ್ಯ ಘಟ್ಟವನ್ನು ಪ್ರತಿನಿಧಿಸುವುದಲ್ಲದೆ ಅವರದೇ ಸ್ವವಿಶಿಷ್ಟ ಕವಿತೆಗಳೆನ್ನಬಹುದಾದ ‘ಸವತಿ ಮಕ್ಕಳ ಹಾಗೆ’, ‘ನಿಮ್ಮೊಡನಿದ್ದೂ...’. ‘ಇಬ್ಬಂದಿ’, ‘ಸ್ವಜನೋದ್ಧಾರಕರು’, ‘ವಿವರಣೆ’ಗಳ ಮಾಲೆಗೆ ಸೇರ್ಪಡೆಯಾದ ಮತ್ತೊಂದು ಅಮೂಲ್ಯ ರತ್ನವಾಗಿದೆ. ‘ರಂಗೋಲಿ ಮತ್ತು ಮಗ’ದ ವಸ್ತು ತಂತಿ ಮೇಲಿನ ನಡಿಗೆಯಂತಹ ನಾಜೂಕಿನದ್ದು. ಕವಿ ತುಸು ಎಚ್ಚರ ತಪ್ಪಿದ್ದರೂ ಅನೌಚಿತ್ಯದ ಆಭಾಸಕ್ಕೆ, ಅಪಾರ್ಥತೆಗೆ ಎಡೆ ಮಾಡಿಕೊಡುವಂತಹ ಸೂಕ್ಷ್ಮ ಸ್ವರೂಪದ್ದು. ಧಾರ್ಮಿಕ ಪ್ರತೀಕವೆನ್ನಿಸುವ ಒಂದು ವಿಷಯವನ್ನು ಕೇಂದ್ರವಾಗಿ ಇಟ್ಟು ಕೊಂಡು ಅದರ ಸುತ್ತ ಭಾವಗಳ ಪರಿಭ್ರಮಣೆ ಮಾಡಿಸುವಾಗ ಲೇಖಕ ಎಷ್ಟು ಮುನ್ನೆಚ್ಚರ ವಹಿಸಿದರೂ ಕಡಮೆ ಎನ್ನಿಸುತ್ತದೆ.

ನಿಸಾರರು ತಮ್ಮ ಮನಸ್ಸಿನಲ್ಲಿ ಬೇರೂರಿ ಬಹು ಕಾಲದವರೆಗೆ ಕಾಡಿ ಅಸ್ಪಸ್ಟಗೊಳಿಸಿರುವ ಭಾವಾಲೋಚನೆಗಳಿಗೆ ಸೂಕ್ತವಾದ ವಸ್ತು ಪ್ರತಿರೂಪ(objective correlatives) ಗಳನ್ನು ಅನ್ವೇಷಿಸಿಕೊಂಡು, ಅವುಗಳ ಮೂಲಕ ಆ ಮಾನಸಿಕ ಇಂಗಿತಗಳನ್ನು ಅರ್ಥೈಸಿಕೊಳ್ಳುವ ಪರಿ ವಿಶಿಷ್ಟವಾದದ್ದು. ತೀರಾ ಸುಲಭವಾದ ಭಾಷೆಯನ್ನು ಬಳಸಿ, ನೇರವಾದ ಸಂವಾದದ ಮಾರ್ಗದ ಮೂಲಕ ತಾವು ಹಂಬಲಿಸುವ ಗುರಿಯನ್ನು

ತಲಪಲು ಪ್ರಯತ್ನಿಸುವುದು ಈ ಕವಿಯ ಅಭಿವ್ಯಕ್ತಿ ಕ್ರಮದ ವಿಧಾನಗಳಲ್ಲಿ ಒಂದು.

'ರಂಗೋಲಿ' ಹಿಂದೂ ಜನಗಳ ಪವಿತ್ರವಾದ ಒಂದು ಸಂಕೇತವಾಗಿದ್ದು ನಿತ್ಯ ಬಳಕೆಯ ಧಾರ್ಮಿಕಾಚರಣೆಯಿಂದ ಅತ್ಯಂತ ಜನಾದರಣೀಯವಾಗಿರುವುದಲ್ಲದೆ, ಅದು ತನ್ನ ನಾನಾ ಬಗೆಯ ಆಕೃತಿಗಳಿಂದ, ಸಂಕೀರ್ಣ ರೇಖಾಚಿತ್ರಗಳಿಂದ ಕಲಾತ್ಮಕವಾಗಿಯೂ ಇದೆ. ಅದರ ವೈವಿಧ್ಯಕ್ಕೆ ಪಾರವಿಲ್ಲದ ಹಾಗೆಯೇ ಅದರ ಗೂಢಾರ್ಥವೂ ಅಗಮ್ಯ. ಅಲ್ಲಿ ಬಳಕೆಯಾಗುವ ಜ್ಯಾಮಿತೀಯ ಸೂತ್ರಾನ್ವಯದ ರೇಖೆ, ಕೋನ, ವೃತ್ತ, ಚುಕ್ಕಿಗಳನ್ನು ಅನೇಕ ವಿನ್ಯಾಸಗಳಲ್ಲಿ ಅಶಿಕ್ಷಿತ ಮಹಿಳೆಯೂ ಲೀಲಾಜಾಲವಾಗಿ ದಿನವಹಿ ಬಳಸುವುದು ಪರಂಪರೆ ಉಳಿಸಿ ಬೆಳೆಸಿದ ಅದ್ಭುತ ಆಚರಣೆ ಎನ್ನಿಸುತ್ತದೆ. ಮಂಗಳಸೂಚಕವೂ ಶ್ರೇಯೋಭಿವೃದ್ಧಿದ್ಯೋತಕವೂ ಆಗಿರುವ ಈ ಮನೆ ಮುಂದಿನ ಮುಂಜಾವಿನ ಪವಾಡ, ದಿನ ನಿತ್ಯದ ಉಪಯೋಗದ ನಿಮಿತ್ತ ನಮ್ಮ ಕುತೂಹಲ ಬೆರಗುಗಳಿಗೆ ಹೊರಗಾಗಿದೆ. ಶತಮಾನಗಳಿಂದ ಬಳಕೆಗೆ ಸಲ್ಲುತ್ತಿರುವ ರಂಗವಲ್ಲಿಯ ಮೂಲ ಕಾಲದ ಬಗೆಗೆ, ಸಂಕೇತಾರ್ಥದ ಬಗೆಗೆ ಸಾಕಷ್ಟು ಅಭಿಪ್ರಾಯಗಳು ಸಂಬಂಧ ಪಟ್ಟ ಪರಿಣತರಿಂದ ವ್ಯಕ್ತವಾಗಿವೆ. ಅದರ ಪ್ರಾಚೀನತೆಯನ್ನು ಮತ್ತು ಅದು ಪ್ರತಿಮಿಸುವ ಗೂಢಾರ್ಥವನ್ನು ಈ ತನಕ ಯಾರೂ ನಿಖರವಾಗಿ ಪುರಾವೆಗಳ ಸಮೇತ ವಿವರಿಸಿಲ್ಲವಾದ್ದರಿಂದ ಅದರ ಅಮೇಯತೆ, ಅಗಮ್ಯತೆಗಳು ಮನುಷ್ಯನ ಮನಸ್ಸನ್ನು ಇನ್ನೂ ಆವರಿಸಿಕೊಂಡಿವೆ.

ಈ ಕವಿತೆಯಲ್ಲಿ ಪ್ರಾರಂಭದ ಸಾಲುಗಳಲ್ಲಿಯೇ ರಂಗವಲ್ಲಿಯ ದೈನಿಕ ನೋಟದ ಸವಿವರ ಚಿತ್ರಣವಿದೆ. ಕವಿ ಸ್ವತಃ ನಿರೂಪಕನ ಪಾತ್ರ ವಹಿಸಿ, ಬೀದಿಯಲ್ಲಿ ತಮ್ಮ ಒಂದು ಮನೆಯ ಹೊರತು ಇನ್ನೆಲ್ಲ ಗೃಹಗಳ ಮುಂದೆ ರಂಗೋಲಿ ರಾರಾಜಿಸುವುದನ್ನು ಪ್ರಸ್ತಾಪಿಸುತ್ತಾರೆ. ಅದರ ಪ್ರತ್ಯಂಗ ಸ್ವರೂಪವನ್ನು ಕಂಡು, ಜಟಿಲ ವಿನ್ಯಾಸವನ್ನು ಭಾವಾನುಭವಿಸಿ ಚಕಿತರಾಗುತ್ತಾರೆ. ಅವರಿಗೆ ರಂಗೋಲಿ ಯಾವುದೋ ಪ್ರಾಚೀನವಾದ ಗುಹ್ಯತರ ಮಂತ್ರಕ್ಕೆ ಮೈಯಾಕಾರ ದೊರೆತಂತೆ ಭಾಸವಾಗುತ್ತದೆ. ಆ ಮಂತ್ರಕ್ಕೆ ಜೀವಂತಿಕೆ ಪ್ರಾಪ್ತವಾದಂತೆ, ಅದು ಚಲನಶೀಲವಾಗಿರುವಂತೆ ಕವಿಗೆ ಅನುಭವವಾಗುತ್ತದೆ. 'ಯಾವುದೋ ಆರ್ಷ ಮಂತ್ರಕ್ಕೆ ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ' ಎನ್ನುವ ಸಾಲುಗಳಲ್ಲಿ ಈ ಭಾವನೆಗೆ ಇಂಬು ದೊರೆಯುತ್ತದೆ. ಇಲ್ಲಿ ಧಾರ್ಮಿಕ ಸ್ವರೂಪದ ಅಪೌರುಷೇಯ 'ಮಂತ್ರ'ಕ್ಕೆ, ಮನುಷ್ಯಕೃತ ಕಲೆಗಾರಿಕೆ ಸಂಲಗ್ನಗೊಂಡಿರುವುದನ್ನು ಗಮನಿಸಬೇಕು. ಯಾವುದು ಕೇವಲ ಅಮೂರ್ತವಾದ ಹಾಗೂ ಸಾಮಾನ್ಯ ಬುದ್ಧಿ ತರ್ಕಗಳಿಗೆ ನಿಲುಕದ ಪಾವನತರ ಮತ್ತು ಗಹನವಾದ 'ಮಂತ್ರ'ವಾಗಿ ಉಳಿದು ಬಿಡುತ್ತಿತ್ತೋ, ಅದು ಮನುಷ್ಯನ ಮನೋಬುದ್ಧಿಗಳ ಗ್ರಹಿಕೆಗೆ ಸಂದು, ಸ್ಪಷ್ಟಾಕಾರದ ಕಲಾವಂತಿಕೆಯನ್ನು ತಳೆದು ದಿನನಿತ್ಯದ ಬಳಕೆಗೆ, ನೋಡುಗರ ಕಣ್ಮನಗಳ ಸಂತೋಷ ತಣಿವುಗಳಿಗೆ ನಿಮಿತ್ತವಾಗಿದೆ. ಆ 'ಮಂತ್ರ'ಕ್ಕೆ ಕಲೆಯಿಂದ ಒಂದು ಬೆಲೆ ಲಭಿಸಿರುವಂತೆ, ಆ ಕಲೆಗೆ ಮಹಿಮಾಸ್ಪದವಾದ ಮಂತ್ರದಿಂದ ಒಂದು ಮೌಲ್ಯ ಪ್ರಾಪ್ತಿಯೂ ಆಗಿರುವುದು ಆಲೋಚನೀಯ ವಿಚಾರ. ಪ್ರಾರಂಭದಲ್ಲಿ ಪ್ರಾಯಶಃ ಸರಳ ಹಾಗೂ ನಿರ್ವಿವಿಧವಾದ ಸುಲಭ ಬಗೆಯ ಚಿತ್ತಾರ ರೂಪದಲ್ಲಿದ್ದ

ರಂಗವಲ್ಲಿ, ಶತಮಾನಗಳು ಕಳೆದಂತೆ ಅಸಂಖ್ಯಾತ ವಿನ್ಯಾಸಗಳ ಅತ್ಯಂತ ಜಟಿಲತಮವಾದ ಆಕೃತಿಗಳನ್ನು ಪಡೆದು, ಭವಿಷ್ಯದಲ್ಲೂ ವಿಕಸನ ಹೊಂದುವುದೆಂಬ ಭರವಸೆಯನ್ನು ಮೂಡಿಸುತ್ತಿದೆ. ಇದರ ಅಧ್ಯಯನವೇ ಅದ್ಭುತ ರೀತಿಯ ಕುತೂಹಲಭರಿತ ಉದ್ಗ್ರಂಥಕ್ಕೆ ಕಾರಣವಾದೀತು.

ಈ ಕವಿತೆಯಲ್ಲಿ ಮಂತ್ರಕ್ಕೆ ಕಲೆಗಾರಿಕೆಯ ದೆಸೆಯಿಂದ ರೆಕ್ಕೆ ಮೂಡಿತು ಎಂದಾಗ, ರಂಗವಲ್ಲಿಯನ್ನು ಹಕ್ಕಿಗೆ ಹೋಲಿಸುವುದು ಸುವಿದಿತವೆನ್ನಿಸುತ್ತದೆ. 'ರೆಕ್ಕೆ' ಗತಿಶೀಲತೆಯನ್ನು ಮಾತ್ರವಲ್ಲದೆ, ಅದು ಭೂಮಿಯಿಂದ ಮೇಲೆ ಹಾರಾಡಲು ಅನುವು ಮಾಡಿಕೊಡುವುದರಿಂದ ರಂಗೋಲಿ ಐಹಿಕವನ್ನು ಮೀರಿದ ಪಾವಿತ್ರ್ಯಕ್ಕೆ, ಔನ್ನತ್ಯಕ್ಕೆ ಪ್ರತೀಕವಾಗುತ್ತದೆ. ದಿನ ಬಳಕೆಯಲ್ಲಿದ್ದೂ ಸಾಮಾನ್ಯರಿಂದ ರಚಿತವಾಗಿದ್ದೂ ಅದು ನಿತ್ಯಸ್ವರೂಪಿಯಾಗಿದೆ; ಅಲೌಕಿಕತೆಯ ಪ್ರತಿಮೆಯಾಗಿದೆ.

'ರೆಕ್ಕೆ' ಎಂಬ ಪದವನ್ನು ಕವಿತೆಯ ಮೊದಲಲ್ಲಿ ರಂಗೋಲಿಗೆ ಅನ್ವಯಿಸಿರುವ ಕವಿ, ಕೊನೆಯಲ್ಲಿ ಬರೆದಿರುವ ಸಾಲುಗಳನ್ನು ಗಮನಿಸಬೇಕು: 'ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ: ಬೆರಗು ಪ್ರಶ್ನೆಗಳವಳಿ ರೆಕ್ಕೆ ಹರಡಿದ ಪುಟ್ಟ ಹಕ್ಕಿಯಂತೆ'. ಮೊದಲು 'ರೆಕ್ಕೆ'ಯೆಂದು ಸೂಚಿತವಾದದ್ದು ಕೊನೆಯಲ್ಲಿ ಪೂರ್ಣಾಕೃತಿಯ 'ಹಕ್ಕಿ'ಯಾಗಿದೆ. ರಂಗವಲ್ಲಿಯ ಪಕ್ಷಿ ಸ್ವರೂಪ ಕೊನೆಯಲ್ಲಿ ಸ್ಪಷ್ಟವಾಗಿರುವುದಲ್ಲದೆ, ಅದು ಮನುಷ್ಯ ವ್ಯಾಪಾರಗಳಿಗೆ ಅತೀತವಾಗಿ ತನ್ನಲ್ಲೇ ತಾನು ಉಳಿದಿದೆ—ಆಶ್ಚರ್ಯವನ್ನು ಹೊಮ್ಮಿಸುತ್ತ, ಪ್ರಶ್ನೆಗಳನ್ನು ಕೆರಳಿಸುತ್ತ; ಆದರೆ ಎಂದಿಗೂ ಮನುಷ್ಯ ಬುದ್ಧಿಗೆ ಅರ್ಥವಾಗದೆ ನಿಗೂಢವಾಗಿ ವಿರಾಜಿಸುತ್ತ.

ಒಂದು ಬಗೆಯಲ್ಲಿ, ಕವಿಯ ಎರಡು ಸಂಸ್ಕೃತಿಗಳ ನಡುವಿನ ಸಮಸ್ಯೆಯ ವೈಯಕ್ತಿಕ ತುರ್ತಿನ ಫಲವಾಗಿ ಮೂಡಿದ ರಂಗವಲ್ಲಿ ಆಧಾರಿತ ಕವನ, ಕೊನೆಯಲ್ಲಿ ಆ ಆಶಯ ಪೂರ್ತಿಯನ್ನು ನೆರವೇರಿಸುವುದಲ್ಲದೆ, ರಂಗವಲ್ಲಿಯ ತಾತ್ತ್ವಿಕ ಸ್ವರೂಪದ ಜಿಜ್ಞಾಸೆಗೂ ತೊಡಗಿ ನಮ್ಮ ಮನಸ್ಸನ್ನು ಚಿಂತನಶೀಲತೆಯ ನೆಲೆಗೆ ಒಯ್ಯುತ್ತದೆ. ಒಂದೇ ಸಲಕ್ಕೆ ಎರಡು ಪಾತಳಿಗಳಲ್ಲಿ ಕಾರ್ಯಶೀಲವಾದ ಕವಿತೆ, ತನ್ನ ಕಥಾನಕ ರೀತಿಯ ಸರಳ ನಾಟಕೀಯ ಭಾಷಾಭಿವ್ಯಕ್ತಿಯಿಂದ ಅಗಮ್ಯವಾದದ್ದರ, ಜಟಿಲವಾದದ್ದರ ಸ್ವರೂಪವನ್ನು ನಮಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತದೆ.

೨

ಕವನದ ಆರಂಭದಲ್ಲೇ ಕವಿಯ ಇಂಗಿತ ಸುವಿದಿತವಾಗುತ್ತದೆ. ಬೆಳ್ಳಗಿನ ಚಿತ್ತಾರದೊಂದಿಗೆ ಮನೆಗಳೆದುರು ವಿಜೃಂಭಿಸಿರುವ ರಂಗವಲ್ಲಿ ಇಡೀ ಬೀದಿಯೇ ನಕ್ಕ ಹಾಗೆ ಭಾಸವಾಗುತ್ತದೆ. ಮುಂಜಾನೆಯ ವೇಳೆ ಕವಿ ಹಾಲಿಗೆ ಹೊರಟಾಗ ಪ್ರತಿನಿತ್ಯ ರಂಗೋಲಿಯ ಚಿತ್ತಾಪಹಾರಿ ಚಿತ್ತಾರಕ್ಕೆ ಮನ ಸೋಲುತ್ತಾನೆ, ಅದರ ಚೆಲ್ವಿಕೆಗೆ ಮಾರು ಹೋಗಿ ಭಾವಾವೇಗಕ್ಕೆ ಒಳಗಾಗುತ್ತಾನೆ. ಮನೆ ಮನೆಯ ಮುಂದಿನ ಒಂದೊಂದು ರಂಗವಲ್ಲಿಯ ವಿನ್ಯಾಸ, ಉದ್ದಗಲ, ವೈವಿಧ್ಯವೂ ಅವನನ್ನು ವಿಸ್ಮಿತಗೊಳಿಸುತ್ತದೆ.

ರಂಗೋಲಿಯ ಆಕರ್ಷಣೆ ಕವಿಗೆ ನಿನ್ನೆ ಮೊನ್ನೆಯದಲ್ಲ. ಬಾಲ್ಯದಿಂದಲೂ ಅದು ಅವನ ಕಲ್ಪನೆಯನ್ನು ಕುದುರಿಸಿದೆ, ಭಾವನೆಗಳನ್ನು ಬಲಿಸಿದೆ. ಅದು ಅವನಿಗೆ ತನ್ನ ಗುಟ್ಟನ್ನು ಕೊಂಚವೂ ಬಿಟ್ಟುಕೊಡದೆ ಗುಂಭವಾಗಿಯೇ ಉಳಿದಿದೆ. ಅದನ್ನು ನೆರೆಮನೆಯ ಗೃಹಿಣಿ ಕ್ಷಣ ಮಾತ್ರದಲ್ಲಿ ಬಿಡಿಸಿ ಮನೋಹರವಾದ ಆಕೃತಿಯನ್ನು ರೂಪಿಸುವ ಅದ್ಭುತವನ್ನು ಅಚ್ಚರಿಯಿಂದ ಗಮನಿಸಿದ್ದಾನೆ. ಅದು ಎಲ್ಲಿ ಪ್ರಾರಂಭವಾಗಿ ಎಲ್ಲಿ ಕೊನೆಗೊಳ್ಳುತ್ತದೆಂಬ ಸಂಗತಿ ಅರಿಯದಾಗಿ, ಅದನ್ನು ತಿಳಿದುಕೊಳ್ಳಲು ಹಲವಾರು ಬಾರಿ ಪ್ರಯತ್ನಿಸಿ ಸಫಲವಾಗದೆ ತಲೆ ಕೆಡಿಸಿಕೊಂಡಿದ್ದುಂಟು. ಅದನ್ನು ತಾನು ಚಾಕ್‌ಪೀಸು ಪುಡಿಯಿಂದ ರಚಿಸಲು ಹೋಗಿ ತಾಯಿಯಿಂದ ಛೀಮಾರಿ ಹಾಕಿಸಿಕೊಂಡಿದ್ದೂ ಉಂಟು. ಧಾರ್ಮಿಕವಾಗಿ ಯಾವುದು ಆದೇಯ, ಯಾವುದು ನಿಷಿದ್ಧವೆನ್ನುವ ಕಲ್ಪನೆಯಿಲ್ಲದ ಮುಗ್ಧ ವಯಸ್ಸಿನ ಪೋರನ ತುಮುಲ ತುಂಬ ಸಹಜವಾಗಿ ಇಲ್ಲಿ ವ್ಯಕ್ತವಾಗಿದೆ. ಪಕ್ಕದ ಮನೆಯಾಕೆ, ಮುಸ್ಲಿಮರ ಮನೆಯೆದುರು ಯಾಕೆ ರಂಗೋಲಿಯನ್ನು ರಚಿಸುವುದಿಲ್ಲವೆಂದು ತಮಾಷೆಗೆ ಕೇಳಿದಾಗ, ಕಿಶೋರ ವಯಸ್ಸಿನ ಕವಿಗೆ ಉತ್ತರ ಗೊತ್ತಿಲ್ಲದೆ ಹೇಗೆ ಹೇಗೋ ಆಗುತ್ತದೆ. ತನ್ನ ಅಸಹಾಯಕತೆಗೆ, ಅಜ್ಞಾನಕ್ಕೆ ಅವನಿಗೆ ನಾಚಿಕೆಯಿಂದ ತಲೆ ತಗ್ಗಿಸುವಂತಾಗುತ್ತದೆ. ಇಲ್ಲಿನ ಒಂದೊಂದು ಸಾಧಾರಣವಾದ ಪಂಕ್ತಿಯೂ ಧರ್ಮ ಭೇದದ, ಸಂಸ್ಕೃತಿ ವ್ಯತ್ಯಾಸದ, ವಿರುದ್ಧ ಜೀವನ ಕ್ರಮದ ಸಮಸ್ಯೆಯನ್ನು ಎತ್ತಿ ಮೆರೆಸುತ್ತದೆ. ಜೊತೆಗೇ, ಹೀಗೆ ತಾರತಮ್ಯ ವೈರುಧ್ಯಗಳಿದ್ದರೂ ವೈವಿಧ್ಯದ ಬೇರೆತನವಿದ್ದರೂ ನೆರೆ ಹೊರೆಯಲ್ಲಿ ಸೌಹಾರ್ದದಿಂದ, ಸಮಾನ ಗೌರವದಿಂದ, ಸಾಮರಸ್ಯದಿಂದ ಬಾಳುತ್ತಿರುವ ಕುಟುಂಬಗಳ ವರ್ಷಾನುಗಟ್ಟಲೆಯ ಬದುಕು ಶ್ಲಾಘನೀಯ ವೆನ್ನಿಸುತ್ತದೆ. ನಮ್ಮ ನಾಡಿನ ಸಾಮಾನ್ಯ ಸಾಮಾಜಿಕರ ಧರ್ಮ ಸಹಿಷ್ಣುತೆಗೆ, ಔದಾರ್ಯಕ್ಕೆ, ಶಾಂತಿಪ್ರಿಯತೆಗೆ ಸಾಕ್ಷಿ ಎನ್ನಿಸುತ್ತದೆ. ಹೀಗಿದ್ದರೂ ಅಪರೂಪಕ್ಕೆ ಹೇಗೆ ಸಂಪ್ರದಾಯವಾದಿ ವಯಸ್ಕರು ಜನಗಳ ನಡುವೆ ಭೇದ ಗಣನೆಯನ್ನು ಮಾಡಿ ಪ್ರತ್ಯೇಕತೆಯನ್ನು ಮೆರೆಯಲು ಪ್ರಯತ್ನಿಸುತ್ತಾರೆ ಎನ್ನುವ ಕಟು ಸತ್ಯವನ್ನು ನಿಸಾರರು ಸೂಕ್ಷ್ಮವಾಗಿ ಮುಂದಿನ ಸಾಲುಗಳಲ್ಲಿ ಕಾಣಿಸುತ್ತಾರೆ:

> **‘ನಮ್ಮ ಔಟ್‌ಹೌಸಿನ ಜನ**
> **ಹೊಸ್ತಿಲ ಬಳಿ ರಂಗೋಲಿ ಬಿಡಿಸಿದ ಹೊತ್ತು**
> **ಅಜ್ಜಿ ತೋರಿರಲು ಬಿರು ನುಡಿಯ ದೌಲತ್ತು**
> **ಅಬ್ಬ! ನನಗೆಂಥ ನೋವಾಗಿತ್ತು.**
> **ಒಮ್ಮೆ ಯಾವುದೋ ಚಿಂತೆಯಲ್ಲಿ ಬಗೆ ನೆಟ್ಟು**
> **ಮನೆಯೊಂದರ ರಂಗೋಲಿ ಮೇಲೆ ಅಡಿಯಿಟ್ಟು**
> **ಸರಕ್ಕನೆಳೆದುಕೊಂಡಿದ್ದೆ, ಕೆಂಡ ತುಳಿದವನಂತೆ;**
> **ಜೊತೆಗೆ ಆ ಮನೆಯವರು ಕಂಡರೋ ಎಂಬ ಚಿಂತೆ.’**

ಕುವೆಂಪು ಅವರು ಹೇಳುವ ಒಂದು ಮಹತ್ವದ ಮಾತು ಇಲ್ಲಿ ನೆನಪಾಗುತ್ತದೆ. ಹುಟ್ಟಿದಾಗ ಮನುಷ್ಯ ನಿರ್ಮುಕ್ತನಾಗಿ, ಯಾವುದೇ ಉಪಾಧಿಗಳಿಲ್ಲದೆ ವಿಶ್ವ ಮಾನವತ್ವದ ಸಂಕೇತವಾಗಿರುತ್ತಾನೆ. ಆದರೆ ಅವನು ಬೆಳೆದ ಹಾಗೆ ಲೌಕಿಕದ ಕಿಲ್ಬಿಷ ಕಾಷಾಯಗಳು

ಅವನನ್ನು ಅಮರಿಕೊಳ್ಳುತ್ತವೆ. ಆಗ ಮತ ಧರ್ಮ ವರ್ಗ ವರ್ಣ ಜಾತಿ ಇತ್ಯಾದಿಗಳು ಅವನನ್ನು ಸಹ ಮಾನವರಿಂದ ಬೇರ್ಪಡಿಸುತ್ತವೆ. ಹೀಗೆ ಪ್ರತ್ಯೇಕಗೊಂಡ ಮನುಷ್ಯನನ್ನು ಎಲ್ಲ ಮತ ಧರ್ಮ ಶ್ರದ್ಧೆಗಳಿಂದ, ದಿಗ್ಗಡಿಸುವ ತತ್ತ್ವ ಸಿದ್ಧಾಂತಗಳಿಂದ ನಿರ್ಮುಕ್ತನನ್ನಾಗಿ ಮಾಡಿ ಮರಳಿ ಅವನನ್ನು ವಿಶ್ವ ಮಾನವನನ್ನಾಗಿ ಮಾರ್ಪಡಿಸುವುದರಲ್ಲಿ ಬದುಕಿನ ಮಹೋದ್ದೇಶ ವಿದೆ, ಪುರುಷಾರ್ಥವಿದೆ.

ಕುವೆಂಪು ಅವರ ಈ ಮಾತುಗಳು ನಿಜಕ್ಕೂ ಚಿಂತನಶೀಲವಾಗಿವೆ. ಈ ಪದ್ಯದ ಅಜ್ಜಿ ಸಹ ವಯಸ್ಸಾದಂತೆ ಮತ ಧರ್ಮದ ಹೆಸರಿನಲ್ಲಿ, ಅಥವಾ ಅದನ್ನು ಅಪಾರ್ಥಿಸಿಕೊಂಡ ಸ್ಥಿತಿಯಲ್ಲಿ ಅಸಹಿಷ್ಣುತೆಯನ್ನು ಬೆಳೆಸಿಕೊಳ್ಳುತ್ತಾಳೆ; ತನ್ನ ಅಜ್ಞಾನ ಅವಿವೇಕವನ್ನು ಪ್ರದರ್ಶಿಸುತ್ತಾಳೆ. ಆದರೆ ಅದನ್ನು ಗಮನಿಸಿದ ಹಸುಳೆ ಆಕೆಯನ್ನು ಪ್ರತಿಭಟಿಸಲಾರದ ನಿಸ್ಸಹಾಯಕ, ವಯಸ್ಸಿನ ಕಾರಣದಿಂದ ನಿರ್ಬಲ. ಹಿರಿಯರ ಎದುರು ನಿಂತು ವಾದಿಸು ವುದೋ ಪ್ರತಿಭಟಿಸುವುದೋ ಕಿರಿಯರಿಗೆ ತಕ್ಕದ್ದಲ್ಲ. ಹಿರಿಯರು ತಪ್ಪೆಸಗಿದರೆಂಬ ಅರಿವಿದ್ದರೂ ಕಿರಿಯರು ಅವರಿಗೆ ತಿಳಿವಳಿಕೆ ಹೇಳುವಂತಿಲ್ಲ. ಇದು ನಮ್ಮ ಪರಂಪರಾನುಗತವಾದ ಸಾಮಾನ್ಯ ರೂಢಿ.

ಜೊತೆಗೇ, ತನ್ನ ಮತ ಧರ್ಮದ ನಂಬಿಕೆಗೆ ಸಲ್ಲದ ಆಚಾರದೆದುರು ಕಟ್ಟುನಿಟ್ಟಾಗಿರ ಬೇಕೆಂಬುದೂ ಒಂದು ಅಲಿಖಿತ ನಿಯಮ. ಇಲ್ಲದಿದ್ದರೆ ವ್ಯಕ್ತಿ ಪಾಪ ಪ್ರಜ್ಞೆಯಿಂದ ನವೆಯಬೇಕಾಗುತ್ತದೆ. ಈ ಕವಿತೆಯ ಪೋರ, ತನಗೆ ಗೊತ್ತಿಲ್ಲದಂತೆ ಯಾರದೋ ಮನೆಯ ಎದುರಿನ ರಂಗವಲ್ಲಿಯ ಮೇಲೆ ನಡೆದು ಹೋಗುತ್ತಾನೆ. ಆಗ ಅವನಿಗೆ ಇಬ್ಬಗೆಯ ಸಂಕಟ, ಅಪರಾಧ ಭಾವ: ತನ್ನ ಧರ್ಮ ಅಂಗೀಕರಿಸದ, ನಿಷಿದ್ಧವೆಂದು ಭಾವಿಸಿದ ರಂಗೋಲಿಯ ಮೇಲೆ ಕಾಲಿಟ್ಟಿದ್ದು ಕೆಂಡದ ಮೇಲೆ ನಡೆದಂಥ ತಪ್ತ ಭಾವನೆಯನ್ನು ಮೂಡಿಸುವುದು ಒಂದು; ಆ ಮನೆಯವರು, ತಾನು ರಂಗೋಲಿಯ ಮೇಲೆ ನಡೆದದ್ದನ್ನು ಗಮನಿಸಿದರೆ ವಿಧರ್ಮೀಯನೊಬ್ಬ ಬೇಕುಬೇಕಾಗಿ ತಮ್ಮ ಧಾರ್ಮಿಕ ಆಚಾರವನ್ನು ಅಗೌರವಿಸಿದ, ಅವಮಾನಿಸಿದ ಎಂದು ರಾದ್ಧಾಂತ ಮಾಡುವುದು ಇನ್ನೊಂದು.

ಇಲ್ಲಿಯವರೆಗೆ ಕವಿ ತಮ್ಮ ಸ್ವಾನುಭವದ ಕಥನದಲ್ಲಿ ತೊಡಗಿದ್ದರೆ, ಮುಂದೆ ಕವಿತೆ ಅವನ ಮಗನ ಜೊತೆಯ ಸಂವಾದದಿಂದ ಬೆಳೆದು ಬೇರೆಯದೇ ಆದ ಗಹನವಾದ ಆಯಾಮವನ್ನು ಪಡೆದುಕೊಳ್ಳುತ್ತದೆ. ಸಾಧಾರಣ ಮಾತುಗಳೂ ಅತ್ಯಂತ ಅರ್ಥಗರ್ಭಿತ ವಾಗಿ, ಮೂಲಭೂತವಾದ ಧಾರ್ಮಿಕ-ಸಾಮಾಜಿಕ ಶ್ರದ್ಧೆ ನಂಬಿಕೆಗಳ ಸಂಕೀರ್ಣ ಸ್ವರೂಪ ವನ್ನು ಅನಾವರಣಗೊಳಿಸುತ್ತವೆ. ಮುಗ್ಧ ಮತ್ತು ಅಮಾಯಕ ನುಡಿಗಳ ಆಳದಲ್ಲಿ ಊಹೆಗೂ ಮೀರಿದ ತಾತ್ತ್ವಿಕ ಸಮಸ್ಯೆ ಬಾಯ್ದೆರೆದು ಬುದ್ಧಿತರ್ಕ ವಿವೇಚನೆಗಳನ್ನು ನುಂಗಿ ನೊಣೆಯುವುದರ ದರ್ಶನ ಓದುಗನಿಗೆ ಆಗುತ್ತದೆ. ಮುಂದೆ ಎಲ್ಲಿಯೂ ಭಾಷೆ ಆಡಂಬರಯುತವಾಗಿ, ವೈಭವ ವಿಜೃಂಭಣೆಗಳಿಂದ ಕೂಡಿದ್ದಾಗಿ ಬಳಕೆಯಾಗದಿರುವುದು ಗಮನಾರ್ಹ. ಅತ್ಯಂತ ಮೂಲಭೂತ ಹಾಗೂ ಭಾವಾತ್ಮಕವಾದ ಶ್ರದ್ಧಾಮೂಲದ ತತ್ತ್ವದ ಜಟಿಲತೆಯ ಮಾರ್ಮಿಕವಾದ ಅಭಿವ್ಯಕ್ತಿ ನೆರವೇರಿರುವುದು ಲೋಕಾಭಿರಾಮದ

ವ್ಯವಹಾರಮಾನ್ಯವಾದ ಸಂಭಾಷಣೆಯ ಭಾಷೆಯ ಮೂಲಕ.

ಆರು ವರ್ಷದ ಮಗನೊಂದಿಗೆ ಕವಿ ರಂಗೋಲಿಯನ್ನು ಗಮನಿಸುತ್ತ ನಡೆದಾಗ, ಆ ಹಸುಳೆಗೆ ರಂಗೋಲಿ ಚಕ್ರಬಂಧದಂತೆ ಒಗಟಾಗಿ ಭಾಸವಾಗುತ್ತದೆ. ಅದನ್ನು ಮುಸ್ಲಿಮೇತರರು ಬಳಸುವುದಕ್ಕೆ ಕಾರಣವನ್ನು ಕೇಳಿದಾಗ, ತಂದೆ ತೀರಾ ಸಾಮಾನ್ಯವಾದ ಉತ್ತರಗಳಿಂದ ಮಗನನ್ನು ಸುಮ್ಮನಾಗಿಸಲು ಪ್ರಯತ್ನಿಸುತ್ತಾನೆ. ಆದರೆ ಇದರಿಂದ ಮಗ ತೃಪ್ತಿಗೊಳ್ಳುವುದಿಲ್ಲ. ಮರಳಿ ಪ್ರಶ್ನಿಸಿದಾಗ, ಮಾಮೂಲಾಗಿ ಹೇಳುವಂತೆ, ಅದನ್ನು ನಾವು ಬಳಸುವಂತಿಲ್ಲ, ಏಕೆಂದರೆ ನಮ್ಮ ಪರಮ ಪವಿತ್ರ ಗ್ರಂಥವಾದ ಖುರ್‌ಆನ್‌ನಲ್ಲಾಗಲಿ, ಇನ್ನಿತರ ಧಾರ್ಮಿಕ ಗ್ರಂಥಗಳಲ್ಲಾಗಲಿ ಅದರ ಉಲ್ಲೇಖವಿಲ್ಲವೆನ್ನುತ್ತಾನೆ. ಆದರೆ ಮಗನ ಸಂದೇಹ ತಣಿದಂತೆ ಕಾಣುವುದಿಲ್ಲ. ಅವನು ತಂದೆಗೆ, ಹಾಗಾದರೆ ಮನೆಯನ್ನು ಕಟ್ಟಿಸಿದ ವರ್ಷವನ್ನು, ನಿನ್ನ ಹೆಸರನ್ನು ಮನೆಯ ಎದುರು ಬರೆಸಿದ್ದೀಯಷ್ಟೆ? ಅದನ್ನು ಖುರ್‌ಆನ್‌ನಲ್ಲಿ ಹೇಳಿದೆಯೆ?—ಎಂದು ಮಗ ತನ್ನ ಸಹಜವಾದ ಸಂದೇಹವನ್ನು ವ್ಯಕ್ತಪಡಿಸುತ್ತಾನೆ. ಈ ಪ್ರಶ್ನೆ ಅಮಾಯಕವೆನ್ನಿಸಿದರೂ ಸಾಮಾನ್ಯವೆನ್ನಿಸಿದರೂ ಅದು ಕವಿಯ ಆತ್ಮಸಾಕ್ಷಿಯ ಝುಡತಿಗೇ ಕೈ ಹಚ್ಚುತ್ತದೆ. ಅವನು ಪರಿಪಾಲಿಸುತ್ತಿರುವ ಧರ್ಮದ ಆಚರಣೆಗಳು ನಿರ್ದೋಷವೂ ಸೂಕ್ತವೂ ಆಗಿವೆಯೆ? ತನ್ನ ನಂಬಿಕೆ ಶ್ರದ್ಧೆಗಳಿಗೆ ತನ್ನ ಸಾಮಾಜಿಕ ಬದುಕಿನ ರೀತಿಯಿಂದ ಚ್ಯುತಿ ಬಂದಿಲ್ಲವೆ? ಮುಂತಾಗಿ ಗಂಭೀರ ಪ್ರಶ್ನೆಗಳು ಕವಿಯ ಮನಸ್ಸನ್ನು ಬಾಧಿಸುತ್ತವೆ; ಅವನ ನೆಮ್ಮದಿಯನ್ನು ಹಾಳುಗೆಡಿಸುತ್ತವೆ.

ಮಗನ ಪ್ರಶ್ನೆಗೆ ಉತ್ತರಿಸಲಾಗದ ಅಸಹಾಯಕತೆಯಿಂದ ವಿಷಯಾಂತರ ಮಾಡಲು, ಹಾಲಿಗೆ ಕ್ಯೂ ಬೆಳೆಯುತ್ತದೆ, ಬೇಗ ಹೋಗೋಣ ನಡೆ—ಎಂದು ತುಮುಲದಿಂದ ಪಾರಾಗಲು ಪ್ರಯತ್ನಿಸುತ್ತಾನೆ. ಇಷ್ಟೆಲ್ಲ ತಾತ್ತ್ವಿಕ ಚಿಂತನೆಗಳಿಗೆ ಕಾರಣವಾದ ರಂಗೋಲಿ, ಮನಸ್ಸಿನ ತುಂಬಾ ಚಿಂತೆಯ ಸಂತೆಯನ್ನೇ ನೆರೆಸಿ, ತಾನು ಮಾತ್ರ ಏನೂ ಆಗದ ಸ್ಥಿತಿಯಲ್ಲಿ ತನ್ನಲ್ಲಿ ತಾನೇ ಮೆರೆದಿದೆ—ಒಂದು ಕಡೆ ಆಶ್ಚರ್ಯಕ್ಕೆ ಕಾರಣವಾಗುತ್ತ, ಮತ್ತೊಂದು ಕಡೆ ಪ್ರಶ್ನೆಗಳನ್ನು ಹುಟ್ಟು ಹಾಕುತ್ತ.

ನಿಸಾರರ ಕಲಾ ಕೌಶಲಕ್ಕೆ, ಅಭಿವ್ಯಕ್ತಿಯ ಅತಿಶಯತೆಗೆ ಹಾಗೂ ಸಾಂಕೇತಿಕ ವಸ್ತುವಿನ ಆಯ್ಕೆ ಮತ್ತು ನಿಭಾವಣೆಯ ಸಾಮರ್ಥ್ಯಕ್ಕೆ 'ರಂಗೋಲಿ ಮತ್ತು ಮಗ' ಕವಿತೆಗಿಂತ ಉತ್ತಮ ನಿದರ್ಶನ ಅವರ ಕವನಗಳಲ್ಲಿ ಮತ್ತೊಂದಿರಲಾರದು.

ಎಲ್ಲ ಸಂದರ್ಭಗಳಲ್ಲೂ ಗಾತ್ರವೊಂದೇ ಗಣನೀಯ, ನಿರ್ಧಾರಕ ಅಲ್ಲ;
ಗುಣವೂ ಮುಖ್ಯವೆನ್ನಿಸುತ್ತದೆ. ವೃತ್ತದ ಹಿರಿಮೆ ಇರುವುದು ಅದರ ಗಾತ್ರದಲ್ಲಿ
ಅಲ್ಲ, ನಿಷ್ಕಲಂಕವೂ ಪರಿಪೂರ್ಣವೂ ಆದ ಅದರ ದುಂಡುತನದಲ್ಲಿದೆ.

ಬೀದಿಯ ಮಾರಿ

೧

ಬಡಾವಣೆಯಲ್ಲಿ ಮನೆ ಹಿಡಿದಾಗಿನ ಸಂಗತಿ:
ಬೀದಿಗು ಪೊರಕೆಗು ಮೊಖಾಬಿಲೆಯಾಗಿ
ಎಷ್ಟು ದಿನವೊ!
ಗಲೀಜನ್ನ ನೋಡಿ ನೋಡಿ ಸಾಕಾಗಿ
ವಾಚಕರ ವಾಣಿ, ಕಾರ್ಪೊರೇಷನ್ನಿಗೆ
ಪುಂಖಾನುಪುಂಖ ಪತ್ರ, ಅರ್ಜಿ ಬರೆದು
ಸಂಬಂಧಿಸಿದವರನ್ನ ಖುದ್ದಾಗಿ ಕಂಡು, ಒರೆದು,
ಬೇಳೆ ಬೇಯದೆ ಬಲು ಬೇಜಾರು ಪಟ್ಟೆ.
ಬೀದಿಯವರಿಗಿರದ ಉಸಾಬರಿ ನನಗೇಕೆಂದು
ಅವರಂತೆಯೇ ಗಲೀಜು ಗಬ್ಬಿಗೆ
ಮೂಗು, ಮನಸ್ಸನ್ನ ರಾಜಿಗೊಳಿಸಿ
ಸುಮಾರು ಕಾಲ ತಳ್ಳಿದೆ.

ಒಂದು ಮಧ್ಯಾಹ್ನ ನಾನು ಆಫೀಸಿಗೆ ಹೋಗಿದ್ದಾಗ
ನನ್ನ ವಿಳಾಸ ಹಿಡಿದು ಕಾರ್ಪೊರೇಷನ್ ಲಾರಿ
ಸೊಗಸಾದ ಸಿಮೆಂಟ್ ತೊಟ್ಟಿ ಹೊತ್ತು ತಂದಿತ್ತು.
ಇದು ನನ್ನ ಅವಿರತ ಶ್ರಮದ ಫಲವಷ್ಟೆ?
ಇತರರಿಗಿಂತ ಅದರ ಮೇಲೆ ನನ್ನ ಹಕ್ಕು ಹೆಚ್ಚಷ್ಟೆ?
—ಎಂದೇ ಆ ತೊಟ್ಟಿಯನ್ನ ನನ್ನ ಮನೆಯೆದುರು
ಪ್ರತಿಷ್ಠಾಪಿಸಿ
ಕಾರ್ಪೊರೇಷನ್ ಜನ
ನ್ಯಾಯ ಬುದ್ಧಿಯನ್ನ ಬೀದಿಗೆಲ್ಲಾ ಸಾರಿ
ನನ್ನ ಕೃತಜ್ಞತೆಗೆ ಪಾತ್ರರಾದರು.

ಸಂಜೆ, ಬೀದಿಗರ ಶಹಬಾಸ್‌ಗಿರಿ
ನನ್ನನ್ನ ಮೂಕಗೊಳಿಸಿತು.

ಒಬ್ಬ ಮಹಾನುಭಾವನಂತೂ ಫ್ಯಾಕ್ಟರಿ ಷಿಫ್ಟ್ ಮುಗಿಸಿ
ಊಟದೆಲೆಯನ್ನ ತೊಟ್ಟಿಗೆ ರವಾನಿಸುವ ಕಾಯಕದಲ್ಲಿ
ನಡು ರಾತ್ರಿಯಲ್ಲಿ ನನ್ನನ್ನೆಬ್ಬಿಸಿ
ಧನ್ಯವಾದವರ್ಪಿಸಿ ಧನ್ಯನಾದ.
ಮುಂಚೆ ಹಿತ್ತಲಲ್ಲೊ, ತಮ್ಮ ಮನೆಯೆದುರಿನ
ಚರಂಡಿಯಲ್ಲೊ ಮೋಕ್ಷ ಕಾಣುತ್ತಿದ್ದ ಊಟದೆಲೆ
ತೊಟ್ಟಿಗೆ ಬಿದ್ದು ಕೊಳೆಯಹತ್ತಿದವು—
ಆಗಾಗ್ಗೆ ಖಾಲಿ ಮಾಡಿ ಸ್ವಚ್ಛಗೊಳಿಸುವ
ಮಂದಿಯ ಗೈರುಹಾಜರಿಯಿಂದ.

೨

ಬೀದಿಯೆಂದ ಮೇಲೆ ನಾಯಿಗಳೂ ಇರಬೇಕಲ್ಲವೆ?
ನಮ್ಮ ಬೀದಿಯ ಆ ತುದಿಗೊಂದು ಈ ತುದಿಗೊಂದು
—ಎರಡು ನಾಯಿ
ತಮ್ಮದೇ ಚಕ್ರಾಧಿಪತ್ಯ ಸ್ಥಾಪಿಸಿ
ಗಡಿ ಗೆರೆ ಭಾವಿಸಿಕೊಂಡು,
ಕಳ್ಳಕಾಕರರಿಂದ ನಮಗೂ ನೆಮ್ಮದಿ ನೀಡಿ
ತಾವೂ ನಿಸೂರಾಗಿ ಬಾಳುತ್ತಿದ್ದವು.

ತೊಟ್ಟಿಯ ಪ್ರವೇಶವಾದಂದಿನಿಂದ
ಅವುಗಳ ಗಡಿ ಗೆರೆ ಕಲಸಿಹೋದವು;
ಸಾಮ್ರಾಜ್ಯ ಹಿಗ್ಗತೊಡಗಿತು,
ಯಾವುದೇ ಮನೆಯಿಂದ ಎಲೆಯನ್ನೊ,
ತಿಂದು ಮಿಕ್ಕಿದ್ದನ್ನೊ
ತೊಟ್ಟಿಗೆ ಸಾಗಿಸಿದರೆ ಸಾಕು—
ಮರಿ ಕುರುಕ್ಷೇತ್ರಕ್ಕೆ ಮುನ್ನುಡಿ.

ರಜಾ ದಿವಸ ಮಧ್ಯಾಹ್ನ ಒಂದಷ್ಟು ಅಡ್ಡಾಗೋಣ,
ದಿನಾ ಸಂಜೆ ಓದೋಣ,
ರಾತ್ರಿ ಮಲಗೋಣವೆಂದರೆ ರಂಪವೋ ರಂಪ.
ಸಾಲದ್ದಕ್ಕೆ ಇವುಗಳ ಕಹಳೆ ಕೇಳಿ,
ಹಿಂದೆ ನಮ್ಮ ಬೀದಿಯತ್ತ ತಲೆ ಹಾಕದ
ಇತರ ಬೀದಿ ನಾಯಿಗಳೂ ಲಗ್ಗೆ ಹಾಕಿ
ರಾತ್ರಿ ಗದ್ದಲವೋ ಗದ್ದಲ.
ತೊಟ್ಟಿಗೆದುರಾಗಿದ್ದ ನನ್ನ ಕೋಣೆಗೆ
ದಿನಕ್ಕೊಂದು ನಮೂನೆಯ ನರುಗಂಪು ಬೇರೆ!

೩

ಒಂದು ನಡು ರಾತ್ರಿ,
ನಮ್ಮ ಆಫೀಸಿನ ಜವಾನರನ್ನ
ಗುಪ್ತವಾಗಿ ಕರೆಸಿ,
ತೊಟ್ಟಿಯನ್ನ ಬೀದಿ ತಿರುವಿಗೆ
ಗಡೀಪಾರುಗೊಳಿಸಿದೆ.
ಈಗ ಚೆನ್ನಾಗಿ ನಿದ್ದೆ ಹತ್ತುತ್ತಿದೆ.

★ ★ ★

(ಕವನ ಸಂಕಲನ: 'ಸ್ವಯಂಸೇವೆಯ ಗಿಳಿಗಳು')



‘ಬೀದಿಯ ಮಾರಿ’: ಬಳಿಗೆ ಬರಮಾಡಿಕೊಂಡವನ ಬದುಕು ಅನರ್ಥಕಾರಿ

♦ ಯಶೋದಾ ರಾಮಸ್ವಾಮಿ

೧

‘ಬೀದಿಯ ಮಾರಿ’ ನಿಸಾರರ ‘ಸ್ವಯಂಸೇವೆಯ ಗಿಳಿಗಳು’ (೧೯೭೭) ಕವನ ಸಂಕಲನದಲ್ಲಿರುವ ಪದ್ಯ. ಇದರ ಸ್ವರೂಪ ಘಟನಾತ್ಮಕ ರೀತಿಯದು. ಘಟನೆಯೊಂದನ್ನು ಕಥನಿಸುತ್ತ ಅದನ್ನು ಮೀರಿದ ಅರ್ಥವೊಂದನ್ನು ಧ್ವನಿಸುವ ಕವನಗಳ ಜಾತಿಗೆ ಸೇರಿದ್ದು. ಸ್ವಕೀಯವಾದ ಅನುಭವವೊಂದನ್ನು ಸ್ವಾರಸ್ಯಕರವಾಗಿ ನಿರೂಪಿಸುತ್ತಲೇ ಸಾರ್ವತ್ರಿಕ ಆಯಾಮವನ್ನು ಪಡೆಯುವಂತೆ ಅಲ್ಲಲ್ಲಿ ಸನ್ನೆ ಸೂಕ್ಷ್ಮಗಳನ್ನು ಸೂಚಿಸುವ ಜಾಣ್ಮೆಗೆ ಈ ಪದ್ಯ ಒಂದು ಹೃದ್ಯವಾದ ಉದಾಹರಣೆಯಾಗುತ್ತದೆ. ಈ ಕವಿತೆಯಲ್ಲಿ ಹೋಲಿಕೆಗಳ, ರೂಪಕಗಳ ಹೇರಿಕೆಯಿಲ್ಲ; ಮಾತುಗಾರಿಕೆಯ ಮಾಟ, ಚಾತುರ್ಯವಿಲ್ಲ. ಸಾದಾ ಸೀದವಾದ, ನೇರವಾದ ಕಥಾನಕ ವಿಧಾನ, ನಿರೂಪಿತ ಘಟನೆಯಲ್ಲೇ ಓದುಗ ಕುತೂಹಲಾಸಕ್ತಿಯನ್ನು ಕೇಂದ್ರೀಕರಿಸಲು ಸಹಕಾರಿಯಾಗುತ್ತದೆ; ಮುಂದೆ ಜರುಗುವ ಕ್ರಿಯೆಯನ್ನು ತದೇಕ ಚಿತ್ತದಿಂದ ನಿರೀಕ್ಷಿಸುವಂತೆ ಎಸಗುತ್ತದೆ.

ಬಹುಶಃ ಇದನ್ನು ಗದ್ಯದಲ್ಲಿ ಮತ್ತಷ್ಟು ವಿಸ್ತರಿಸಿ ಹೇಳಿದ್ದರೆ ಒಂದು ಕೌತುಕದ ಅತಿ ಸಣ್ಣಕಥೆಯಾಗ ಬಹುದಿತ್ತು. ಅಲ್ಲಿ ಕಥೆ ಮುಖ್ಯವಾಗಿ ಅದು ಧ್ವನಿಸಬಹುದಾದ ಮಾರ್ಮಿಕ ಅರ್ಥವಂತಿಕೆ ಓದುಗನಿಗೆ ಎರವಾಗುತ್ತಿತ್ತು. ಈ ಕವನದಲ್ಲಿ ಕವಿಯ ಉದ್ದೇಶ ಒಂದು ಸಾರ್ವಜನಿಕ ಸೇವಾ ಸಂಬಂಧವಾದ

ಕಟು ವಾಸ್ತವವನ್ನು—ನಮ್ಮೆಲ್ಲರಿಗೂ ಬೇರೆ ಬೇರೆ ಬಗೆಯ ಅನುಭವಗಳ ಮೂಲಕ ಮನದಟ್ಟಾದುದನ್ನು—ವೇದ್ಯಗೊಳಿಸುವುದಷ್ಟೇ ಅಲ್ಲ. ಅದನ್ನು ಕಲಾತ್ಮಕ ಕೌಶಲದಿಂದ ಹೆಚ್ಚು ಸಂವೇದನಾತ್ಮಕವಾಗಿ ನಮ್ಮ ಪ್ರಜ್ಞೆಯ ಆಳಕ್ಕೆ ಇಳಿಯುವಂತೆ ಮಾಡುವುದು. ನೀತಿಯ ಹೊಳಹು ಅದರಲ್ಲಿದ್ದರೂ ಅದರ ಅರಿವಾಗದೆ, ಅದು ಮಾಡಬಹುದಾದ ಪರಿಣಾಮವನ್ನು ನಾವು ಅನುಭವಿಸುವುದು. ಕಾಂತ ಸಂಮಿತವೆಂದು ಪ್ರಾಚೀನ ಕಾವ್ಯ ಮೀಮಾಂಸಕರು ಪ್ರತಿಪಾದಿಸಿರುವ ಪ್ರಭಾವಕಾರಿ ಪ್ರಯೋಜನಕ್ಕೆ 'ಬೀದಿಯ ಮಾರಿ' ಕವಿತೆ ನವ್ಯಮಾರ್ಗದ ಒಂದು ದೃಷ್ಟಾಂತವೆನ್ನಿಸುತ್ತದೆ.

ಇಲ್ಲಿ ಕವನದ ಪ್ರಮುಖ ಪಾತ್ರ ಕವಿಯೇ. ಕವಿತೆ ನೇರವಾಗಿ ನಿರೂಪಣೆಗೆ ತೊಡಗುತ್ತದೆ. ಕವಿ ನಗರದ ಬಡಾವಣೆಯೊಂದರಲ್ಲಿ ಬಾಡಿಗೆಗೆ ಮನೆಯೊಂದನ್ನು ಗೊತ್ತು ಮಾಡಿಕೊಂಡು, ಅಲ್ಲಿ ವಾಸಿಸಲು ಸಂಸಾರ ಸಮೇತ ಹೋಗಿದ್ದಾರೆ. ಮೊದಲೇ ಹೊಸ ವಿಸ್ತರಣ, ನಗರದ ರೂಢಿಗತ ಸೌಲಭ್ಯ, ಅನುಕೂಲತೆಗಳಿಂದ ಸುದೂರ. ಇನ್ನೂ ಮನೆಗಳು ಕಡಮೆಯಾಗಿದ್ದು, ಜನಸಂಖ್ಯೆ ಹೆಚ್ಚಿಲ್ಲದಿರುವುದರಿಂದ ಬಡಾವಣೆಯ ಬಗೆಗೆ ನಗರ ಪಾಲಿಕೆಗೊ, ಸರಕಾರಕ್ಕೊ ಅಲ್ಲಿನ ಕುಂದು ಕೊರತೆಗಳ ಬಗೆಗೆ ಹೆಚ್ಚು ಕಾಳಜಿ ಮೂಡಿಲ್ಲ. ಎಲ್ಲಿ ನೋಡಿದರೂ ಕಸ, ಕೊಳೆ. ಅದನ್ನು ಗುಡಿಸಿ ಸ್ವಚ್ಛಗೊಳಿಸುವ ಮಂದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ನೇಮಿಸಿಲ್ಲ. ಅನೇಕ ದಿವಸಗಳಿಂದ ರಾಶಿ ಬಿದ್ದಿರುವ ಈ ಗಲೀಜಿನಿಂದ ಜೀವಕ್ಕೆ ಅಸಹ್ಯ, ಮೂಗಿಗೆ ದುರ್ವಾಸನೆ, ಆರೋಗ್ಯಕ್ಕೆ ಹಾನಿ. ಈ ಯಾತನೆಯನ್ನು ದಿನನಿತ್ಯ ಅನುಭವಿಸಿ ಸಾಕಾಗಿ ಕವಿ ಪತ್ರಿಕೆಗಳಿಗೆ ಬರೆದು ತಮ್ಮ ಬಡಾವಣೆಯ ದುಃಸ್ಥಿತಿಯನ್ನು ವಿವರಿಸುತ್ತಾರೆ. ಅಷ್ಟೇ ಅಲ್ಲದೆ, ಈ ದುರವಸ್ಥೆಯ ಬಗೆಗೆ ನಗರ ಪಾಲಿಕೆಯ ಕಛೇರಿಗೆ ಲೆಕ್ಕವಿಲ್ಲದಷ್ಟು ಒಂದಾದ ಮೇಲೊಂದು ಅಹವಾಲನ್ನು ಬರೆದು ರವಾನಿಸಿದ್ದಲ್ಲದೆ, ಸಂಬಂಧಿಸಿದವರನ್ನು ನೇರವಾಗಿ ಭೇಟಿಯಾಗಿ ತಮ್ಮ ಬಡಾವಣೆಯ ಬವಣೆಯನ್ನು ಬಣ್ಣಿಸಿದ್ದರೂ ಕವಿಯ ಉದ್ದೇಶ ಈಡೇರಲಿಲ್ಲ. ಕಾರ್ಪೊರೇಷನ್ನಿನವರು ಅತ್ತ ಕಡೆ ಹಾಯಲಿಲ್ಲ. ಇದರಿಂದ ಬೇಸತ್ತ ಕವಿ, ತನಗೊಬ್ಬನಿಗೇ ಈ ಕಾಳಜಿ ಯಾಕೆ ಬೇಕು? ಬಡಾವಣೆಯಲ್ಲಿರುವ ಇತರರಿಗೆ ಈ ಸಮಸ್ಯೆ ಬಗ್ಗೆ ಅರಿವಾಗಲಿ, ಅದರ ನಿವಾರಣೆಗೆ ಮಾರ್ಗೋಪಾಯಗಳನ್ನು ಅನುಸರಿಸುವುದಾಗಲಿ ಬೇಕಾಗಿಲ್ಲ. ಕೊಳೆ, ಕಸ, ದುರ್ಗಂಧ, ನೊಣಗಳ ಹಾವಳಿ ಇತ್ಯಾದಿಗಳಿಗೆ ಅವರು ಹೊಂದಿಕೊಂಡು ತಟಸ್ಥರಾಗಿರುವ ಬಗೆಗೆ ಕವಿಗೆ ಸಿಟ್ಟು ಬಂದರೂ ಅದನ್ನು ವ್ಯಕ್ತಪಡಿಸಿ ಬಡಾವಣೆಯವರ ಅಸಮಾಧಾನಕ್ಕೆ ತುತ್ತಾಗುವ ಅಂಜಿಕೆಯಿಂದ ಸುಮ್ಮನಿರಬೇಕಾಗಿದೆ. ಎಲ್ಲರಿಗೂ ಆದದ್ದು ತನಗೂ ಆಗದೆ ವಿಧಿಯಿಲ್ಲ ಎನ್ನುವುದನ್ನು ಮನಗಂಡ ಕವಿ ಬೇರೆ ನಿವಾಸಿಗಳಂತೆ ಗಲೀಜಿನೊಂದಿಗೆ ರಾಜಿ ಮಾಡಿಕೊಂಡು ಸಾಕಷ್ಟು ಸಮಯವನ್ನು ಸವೆಸುತ್ತಾರೆ. ತಮ್ಮಷ್ಟಕ್ಕೆ ತಾವು ಇದ್ದು ಬಿಡುತ್ತಾರೆ. ಹೀಗೆ ಸುಮಾರು ದಿವಸಗಳು ಕಳೆದು ಹೋಗುತ್ತವೆ.

ಮುಂದಿನದನ್ನು ಕವಿಯ ಮಾತಿನಿಂದಲೇ ಕೇಳಿ:

'ಒಂದು ಮಧ್ಯಾಹ್ನ ನಾನು ಆಫೀಸಿಗೆ ಹೋಗಿದ್ದಾಗ
ನನ್ನ ವಿಳಾಸ ಹಿಡಿದು ಕಾರ್ಪೊರೇಷನ್ ಲಾರಿ

ಸೊಗಸಾದ ಸಿಮೆಂಟ್ ತೊಟ್ಟಿ ಹೊತ್ತು ತಂದಿತ್ತು.
ಇದು ನನ್ನ ಅವಿರತ ಶ್ರಮದ ಫಲವಷ್ಟೆ?
ಇತರರಿಗಿಂತ ಅದರ ಮೇಲೆ ನನ್ನ ಹಕ್ಕು ಹೆಚ್ಚಷ್ಟೆ?
—ಎಂದೇ ಆ ತೊಟ್ಟಿಯನ್ನ ನನ್ನ ಮನೆಯೆದುರು
ಪ್ರತಿಷ್ಠಾಪಿಸಿ
ಕಾರ್ಪೊರೇಷನ್ ಜನ
ನ್ಯಾಯ ಬುದ್ಧಿಯನ್ನ ಬೀದಿಗೆಲ್ಲಾ ಸಾರಿ
ನನ್ನ ಕೃತಜ್ಞತೆಗೆ ಪಾತ್ರರಾದರು.'

ಕವಿ ತಾನು ದಿನಪತ್ರಿಕೆಗಳಿಗೆ, ನಗರ ಪಾಲಿಕೆಗೆ ಎಡೆಬಿಡದೆ ದೂರು ಕೊಟ್ಟ ಪ್ರತಿಫಲ ಕೊನೆಗೂ ಸಿಕ್ಕಿತು. ಗಲೀಜನ್ನು ಹಾದಿ ಬೀದಿಗಳ ತುಂಬೆಲ್ಲ ಚೆಲ್ಲದೆ, ಒಂದೆಡೆ ಶೇಖರಿಸಲು ಅನುಕೂಲವಾಗುವ ಸಿಮೆಂಟ್ ತೊಟ್ಟಿಯನ್ನು ನಗರ ಪಾಲಿಕೆಯವರು ಬಡಾವಣೆಯವರಿಗೆ ಔದಾರ್ಯಪೂರ್ವಕವಾಗಿ ದಯಪಾಲಿಸಿದ್ದರು. ನೈರ್ಮಲ್ಯ, ಸ್ವಚ್ಛತೆಯನ್ನು ಕಾಪಾಡುವ ತಮ್ಮ ಜಾಹೀರಾತುಗಳ ಘನೋದ್ದೇಶದ ಘೋಷಣೆಗೆ ಒಂದು ವಾಸ್ತವತೆಯ ನಿದರ್ಶನ ವನ್ನು ನೀಡಿದ್ದರು. ಕಾರ್ಪೊರೇಷನ್‌ನ ಅಧಿಕಾರಿಗಳಿಗೆ, ಶ್ರಮಪಟ್ಟಿರುವ ಕವಿಗೆ ಕೃತಜ್ಞತೆ ಯನ್ನು ಸಲ್ಲಿಸುವ ಭಾವನೆ ಮೂಡಿ, ಆ ತೊಟ್ಟಿಯನ್ನು ಎಲ್ಲೋ ದೂರ ಸ್ಥಾಪಿಸದೆ, ಕವಿಯ ಮನೆಯೆದುರಿನಲ್ಲಿ ಇಟ್ಟರು. ಇದರಿಂದ ತಾವು ನ್ಯಾಯಯುತವಾದ ನೀತಿಯನ್ನು ಪಾಲಿಸಿರು ವುದಾಗಿ ಬಗೆದರು. ತಮಾಷೆಯೆಂದರೆ, ಬಡಾವಣೆಯ ಕೊಳೆ, ಕಸದ ನಿವಾರಣೆಯ ಹಿರಿಯ ಧ್ಯೇಯದಿಂದ ಕಾರ್ಯಪ್ರವೃತ್ತರಾದ ಕವಿ ತನಗರಿಯದೇ ತನ್ನ ಮೇಲೆ ಗಲೀಜನ್ನು ಹೇರಿ ಕೊಂಡಂತಾಯಿತು. ಸಾರ್ವಜನಿಕವಾಗಿ ಒಳಿತನ್ನು ಮಾಡಲು ಹೋಗಿ ತಾನು ಸಂಕಷ್ಟವನ್ನು ಆಹ್ವಾನಿಸಿಕೊಳ್ಳಬೇಕಾಯಿತು. 'ನಮಾಜು ಮಾಡಲು ಹೋಗಿ ಮಸೀದಿಯನ್ನು ತಲೆಯ ಮೇಲೆ ಬೀಳಿಸಿಕೊಂಡ' ಎನ್ನುವ ಗಾದೆಯ ಮಾತಿನಂತಾಯಿತು ಕವಿಯ ಗತಿ. ಹಾಗೆಯೇ, 'ಊರಿನ ದನಗಳನ್ನು ಕಾದು ಬೋರೇಗೌಡ ಅನ್ನಿಸಿಕೊಂಡ'ವನ ಶೋಚನೀಯ ಸ್ಥಿತಿ ಅವರದಾಯಿತು. ತಾನು ಮಾಡಿದ ತಪ್ಪಿನ ಅರಿವು ಆಗುತ್ತಿದ್ದಾಗ, ಅದರಿಂದ ಮನಸ್ಸು ತಹತಹಿಸುತ್ತಿದ್ದಾಗ, ಬಡಾವಣೆಗೆ ಮಾಡಿರುವ ಉಪಕಾರಕ್ಕಾಗಿ ಆ ದಿವಸ ಸಾಯಂಕಾಲ ನೆರೆಹೊರೆಯ ಜನಗಳೆಲ್ಲ ಬಂದು ಇವರನ್ನು ಅಭಿನಂದಿಸಿ ಹೊಗಳತೊಡಗಿದರು.

ತಾವು ತಿಂದಾದಮೇಲೆ ಬಿಸಾಡುವ ಬಾಳೆಯೆಲೆ ಹಾಗೂ ಮಿಕ್ಕಿರುವ ಎಂಜಲಿನ ಉಣಿಸನ್ನು ಜನ ಕವಿಯ ಮನೆಯೆದುರಿನ ತೊಟ್ಟಿಗೆ ಹಾಕಲು ಶುರುಮಾಡಿದರು. ಅಷ್ಟೇ ಸಾಲದೆಂಬಂತೆ ಒಬ್ಬ ಫ್ಯಾಕ್ಟರಿಯ ಉದ್ಯೋಗಿ ತನ್ನ ಪಾಳಿಯನ್ನು ಮುಗಿಸಿ ಬಂದು ಊಟ ಮಾಡಿ ನಟ್ಟ ನಡುರಾತ್ರಿಯಲ್ಲಿ ಕವಿಯ ನಿದ್ರಾಭಂಗ ಮಾಡಿ ಎಬ್ಬಿಸಿ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಿದ. ಜನಗಳಿಗೆ ತಾವು ಕವಿಗೆ ತೊಂದರೆ ಕೊಡುತ್ತಿದ್ದೇವೆಂಬ, ಅಹಿತವಾದದ್ದನ್ನು ಎಸಗುತ್ತಿದ್ದೇವೆಂಬ ಅರಿವು ಲವಲೇಶವೂ ಇರಲಿಲ್ಲ. ಬದಲಿಗೆ, ತಾವು ಅವನನ್ನು ಶ್ಲಾಘಿಸಿ ಮನಸ್ಸಂತೋಷ ಪಡಿಸುತ್ತಿದ್ದೇವೆಂಬ ಭಾವನೆಯ ಜೊತೆಗೇ, ಹಾಗೆ ಮಾಡದಿದ್ದರೆ ಕವಿ ತಮಗೆಲ್ಲ ಎಸಗಿರುವ ಒಳಿತಿಗೆ ತಾವು ಕೃತಘ್ನರಾಗುತ್ತೇವೆಂಬ

ಅನ್ನಿಸಿಕೆಯೂ ಅಂಕುರಿಸಿತ್ತು.

ತೊಟ್ಟಿಯನ್ನೇನೋ ಕಾರ್ಪೊರೇಷನ್ನಿನವರು ಈ ವಿಸ್ತರಣೆಗೆ ತಂದಿಟ್ಟು ಉಪಕಾರ ಎಸಗಿದರು ನಿಜ. ಆದರೆ ಅದನ್ನು ಕೆಲವು ದಿವಸಗಳಿಗೊಮ್ಮೆಯಾದರೂ ಸ್ವಚ್ಛಗೊಳಿಸುವ ಸಫಾಯಿಗಾರರನ್ನು ನೇಮಿಸಲಿಲ್ಲ. ಇದರ ದೆಸೆಯಿಂದ ಕೊಳೆ ಕಸ ಕವಿಯ ಮನೆಯೆದುರಿನ ತೊಟ್ಟಿಯಲ್ಲಿ ಜಮಾವಣೆಯಾಗಿ ಕೊಳೆತು ನಾರಿ ಗಬ್ಬು ಹೊಡೆಯತೊಡಗಿತು; ನೊಣ ಮತ್ತಿತರ ರೋಗಕಾರಕ ಕ್ರಿಮಿಗಳ ತವರಾಯಿತು. ತೊಟ್ಟಿಯನ್ನು ಇಲ್ಲಿ ಸ್ಥಾಪಿಸುವ ಮುಂಚೆ ಇದ್ದ ಸ್ಥಿತಿಯೇ ವಾಸಿ ಎನ್ನಿಸತೊಡಗುತ್ತದೆ ಕವಿಗೆ. ಆಗ ಕಸ, ಗಲೀಜು ಬೇರೆಡೆಯಲ್ಲಿ ಹರಡಿ ಹಂಚಿ ಹೋಗಿತ್ತು. ಈಗಲಾದರೋ ಒಂದೆಡೆ ಶೇಖರಿತವಾಗಿ ತನ್ನ ಆರೋಗ್ಯ, ನೆಮ್ಮದಿಗಳಿಗೆ ಕುತ್ತು ತರುವಂತಾಗಿದೆ.

ಕವಿತೆ, ಇಲ್ಲಿಯ ತನಕ ನೇರವಾದ ನಿರೂಪಣೆಯ ಜಾಡಿನಲ್ಲಿ ಸಾಗುತ್ತಿತ್ತು. ಇಲ್ಲಿಂದ ಮುಂದೆ ಅದು ಅನಿರೀಕ್ಷಿತವಾದ ತಿರುವನ್ನು ಪಡೆಯುತ್ತದೆ. ಗಮನಿಸಬೇಕಾದ ಸಂಗತಿಯೆಂದರೆ, ಈವರೆಗು ಘ್ರಾಣೇಂದ್ರಿಯಕ್ಕೆ ಅಂದರೆ, ಮೂಗಿಗೆ ಸಿಕ್ಕಿದ ಪ್ರಾಮುಖ್ಯ ಹಾಗೂ ಒತ್ತು ಮುಂದೆ ಶ್ರವಣೇಂದ್ರಿಯ ಅಥವಾ ಕಿವಿಗೆ ಮೀಸಲಾಗುವುದು. ಬೀದಿಗಳೆಂದರೆ ಸಹಜವಾಗಿ ನಾಯಿಗಳೂ ಅಲ್ಲಿ ವಾಸವಾಗಿರುತ್ತವೆ. ಅವುಗಳಲ್ಲೂ ತಕ್ಕಮಟ್ಟಿನ ರಾಜಿ, ಸೌಹಾರ್ದದ ಬಾಳ್ವೆಯ ನೀತಿ ನಿಯಮವಿರುವುದು ನಮ್ಮೆಲ್ಲರ ಅನುಭವಕ್ಕೆ ಬಂದಿರುವ ಸತ್ಯ. ಒಂದು ನಾಯಿ ಬೀದಿಯ ಒಂದು ತುದಿಯಲ್ಲಿ ಜೀವಿಸಿ ಅದನ್ನು ತನ್ನ ಸ್ವಂತ ಆಧಿಪತ್ಯವೆಂದು ಭಾವಿಸಿದರೆ, ಮತ್ತೊಂದು ನಾಯಿ ಇನ್ನೊಂದು ತುದಿಯಲ್ಲಿ ವಾಸಿಸುತ್ತದೆ. ಈ ಒಡಂಬಡಿಕೆಯಿಂದ ಅವು ಪರಸ್ಪರ ಕಚ್ಚಾಡುವ ಸಂದರ್ಭಗಳು ಕಡಮೆ. ತಮ್ಮ ತಮ್ಮ ಎಡೆಗಳಲ್ಲಿ ತಾವು ನಿಸೂರಾಗಿ ಇರುವುದಲ್ಲದೆ ಕಳ್ಳರಿಂದ, ಆಗಂತುಕರಿಂದ ಅಲ್ಲಿನ ನಿವಾಸಿಗಳಿಗೆ ಅಪಾಯವೊದಗದಂತೆ ರಕ್ಷಿಸುವ ಜವಾಬ್ದಾರಿಯನ್ನೂ ಹೊತ್ತಿರುತ್ತವೆ. ಹೀಗೆ ಶಾಂತಿಯುತವಾಗಿದ್ದ ನಾಯಿಗಳ ಬದುಕಿನಲ್ಲಿ ವಿಪ್ಲವ ಶುರು ಆಯಿತು:

'ತೊಟ್ಟಿಯು ಪ್ರವೇಶವಾದಂದಿನಿಂದ
ಅವುಗಳ ಗಡಿ ಗೆರೆ ಕಲಸಿಹೋದವು;
ಸಾಮ್ರಾಜ್ಯ ಹಿಗ್ಗತೊಡಗಿತು,
ಯಾವುದೇ ಮನೆಯಿಂದ ಎಲೆಯನ್ನೊ,
ತಿಂದು ಮಿಕ್ಕಿದ್ದನ್ನೊ
ತೊಟ್ಟಿಗೆ ಸಾಗಿಸಿದರೆ ಸಾಕು—
ಮರಿ ಕುರುಕ್ಷೇತ್ರಕ್ಕೆ ಮುನ್ನುಡಿ.'

ಈ ಕಚ್ಚಾಟದ ಗದ್ದಲದಿಂದ ಈಗ ಮತ್ತೊಂದು ಬಗೆಯಲ್ಲಿ ಜೀವನ ಸಂತ್ರಸ್ತ. ಭಾನುವಾರವೋ ಅಥವಾ ಯಾವುದಾದರೂ ಹಬ್ಬದ ದಿನವೋ ರಜೆ ಸಿಕ್ಕಿದಾಗ ಕಛೇರಿ ಹಾಗೂ ಹೊರಗಿನ ಜಂಜಡವನ್ನು ಮರೆತು ಮನೆಯಲ್ಲಿ ಆರಾಮಾಗಿ ವಿರಮಿಸುವುದು ಉದ್ಯೋಗವಂತರ ವಾಡಿಕೆ. ಮಧ್ಯಾಹ್ನದ ಭೋಜನಾನಂತರ ಒಂದಷ್ಟು ನಿದ್ರೆಯನ್ನು ಮಾಡಿ ಅಥವಾ ಸಂಜೆಯ ವೇಳೆ ಏನಾದರೂ ಒಂದನ್ನು ಓದಿ ಸಂತೋಷದಿಂದ ಸಮಯವನ್ನು

ಕಳೆಯೋಣವೆಂದರೆ, ಈ ಹಾಳು ತೊಟ್ಟಿ ಬಂದಾಗಿನಿಂದ ಅವಕ್ಕೆ ತತ್ವಾರವುಂಟಾಗಿದೆ. ರಾತ್ರಿ ಕೊಂಚ ಬೇಗ ಮಲಗೋಣವೆಂದು ಸಿದ್ಧತೆ ಮಾಡಿಕೊಂಡರೆ ಈ ಎರಡು ನಾಯಿ ರೂಪದ ಪೀಡೆಗಳಿಂದ ಇನ್ನಿಲ್ಲದ ತ್ರಾಸ, ತಳಮಳ. ಇವುಗಳ ಬೊಗಳುವಿಕೆಯ ಗದ್ದಲವನ್ನು ಕೇಳಿ, ಹಿಂದೆ ಯಾವತ್ತೂ ಈ ಬೀದಿಗೆ ಬಾರದ ನಾಯಿಗಳೂ ಲಗ್ಗೆ ಹಾಕಿ ಇಡೀ ರಾತ್ರಿ ರಾಣಾರಂಪ, ಕರ್ಕಶವಾದ ಬೊಬ್ಬೆ. ಇಷ್ಟು ಸಾಲದೋ ಎನ್ನುವ ಹಾಗೆ, ಸರಿಯಾಗಿ ತೊಟ್ಟಿಗೆ ಹತ್ತಿರದಲ್ಲಿರುವ ಕವಿಯ ಕೊಠಡಿಗೆ ದಿನನಿತ್ಯ ಒಂದೊಂದು ಹೊಸ ನಮೂನೆಯ ದುರ್ವಾಸನೆ. ವಿಧಿಯಿಲ್ಲದೆ ಇದನ್ನು ಸಹಿಸಲೇಬೇಕಾದ ಪರಿಸ್ಥಿತಿಯನ್ನು ಸುಮ್ಮನಿರಲಾರದೆ ಮೈ ಮೇಲೆ ಬರಿಸಿಕೊಂಡದ್ದಕ್ಕೆ ತನ್ನ ಮೇಲೇ ತನಗೆ ಸಿಟ್ಟು. ಯಾರಿಗೂ ಹೇಳಿಕೊಳ್ಳುವಂತಿಲ್ಲ, ಸಹಾಯಕ್ಕೆ ಕರೆಯುವಂತಿಲ್ಲ. ಇಂತಹ ಮೂಕ ಸಂಕಟವನ್ನು ಹಲವು ದಿನಗಳ ತನಕ ಗತ್ಯಂತರವಿಲ್ಲದೆ ತಾಳಿಕೊಂಡ ಕವಿಗೆ ಒಂದು ಉಪಾಯ ಹೊಳೆಯುತ್ತದೆ. ಅದನ್ನು ಆತ ರಹಸ್ಯಮಯವಾಗಿ ಮಾಡಬೇಕು. ನೆರೆಯವರ ಗಮನಕ್ಕೆ ಬಂದರೆ ಕಷ್ಟ. ಆ ಉಪಾಯದಿಂದ ಕವಿಗೆ ನೆಮ್ಮದಿ ಮರುಕಳಿಸಿದಂತಾಯಿತು; ಕಳೆದುಕೊಂಡಿದ್ದ ಸುಖ, ಸಮಾಧಾನಗಳು ಮತ್ತೆ ಒದಗಿದಂತಾದವು. ಇನ್ನೊಮ್ಮೆ ಈ ಬಗೆಯ ಸಾರ್ವಜನಿಕ ಕೈಂಕರ್ಯವನ್ನು ಸರಿಯಾಗಿ ಆಲೋಚಿಸದೆ, ಮುಂದಿನ ಆಗು-ಹೋಗುಗಳನ್ನು ಚಿಂತಿಸದೆ ಕೈಗೊಳ್ಳಬಾರದೆಂಬ ಸಂಕಲ್ಪ ಮೂಡಿರಲೂ ಸಾಧ್ಯ. ಆತ ಕೈಗೊಂಡ 'ಪ್ಲಾನು' ಇದು:

'ಒಂದು ನಡು ರಾತ್ರಿ,
ನಮ್ಮ ಆಫೀಸಿನ ಜವಾನರನ್ನ
ಗುಪ್ತವಾಗಿ ಕರೆಸಿ,
ತೊಟ್ಟಿಯನ್ನ ಬೀದಿ ತಿರುವಿಗೆ
ಗಡೀಪಾರುಗೊಳಿಸಿದೆ.
ಈಗ ಚೆನ್ನಾಗಿ ನಿದ್ದೆ ಹತ್ತುತ್ತಿದೆ.'

'ಬೀದಿಯ ಮಾರಿ' ಎಂಬ ಶೀರ್ಷಿಕೆಯೇ ಗಂಡಾಂತರಗಳಿಗೆ ಕೈ ಮರದಂತಿದೆ. ಎಲ್ಲೋ ಹೋಗುವ ಪೀಡೆಯನ್ನು ತಾನಾಗಿ ಮನೆಗೆ ಬರಮಾಡಿಕೊಳ್ಳುವ ಅರ್ಥದಲ್ಲಿ ಇದನ್ನು ಜನ ಸಾಮಾನ್ಯರು ಬಳಸುತ್ತಾರೆ. ಇಲ್ಲಿ ಇದು ಕೇವಲ ಕಸದ ತೊಟ್ಟಿಗಷ್ಟೇ ಸೀಮಿತವಾಗಿರದೆ, ಅದು ಹುಟ್ಟುಹಾಕುವ ಆಮೇಲಿನ ತಾಪತ್ರಯಗಳಿಗೂ ತೋರುಬೆರಳಾಗುತ್ತದೆ. ಕಸ, ದುರ್ಗಂಧ, ನಾಯಿಗಳ ಗದ್ದಲಗಳ ಕಲಸುಮೇಲೋಗರದ ಅನುಭವ ಪರಂಪರೆಗಳಿಗೆಲ್ಲ ಈ 'ಮಾರಿ' ರೂಪದ ತೊಟ್ಟಿ ತವರಾಗುತ್ತದೆ.

ಈ ಬಗೆಯಿಂದ ಘಟನೆಯೊಂದನ್ನು ಕಥಾತ್ಮಕವಾಗಿ ಹಾಗೂ ಕಲಾತ್ಮಕ ಚಾತುರ್ಯದಿಂದ ವರ್ಣಿಸಿ ಅರ್ಥಾತಿಶಯವನ್ನು, ಧ್ವನಿಯನ್ನು ಹೊಮ್ಮಿಸುವ ರೀತಿ ಕನ್ನಡದಲ್ಲಿ ಹೊಸದಲ್ಲವಾದರೂ ಅಪರೂಪವಾದದ್ದು. ಕೆಲವರ ಈ ಬಗೆಯ ಕಥಾನಕಗಳು ಕೇವಲ ರಂಜಕ ವಿಷಯಗಳು ಮಾತ್ರವಾಗಿ ಯಾವುದೇ ಅರ್ಥದ ಹೆಚ್ಚಳವನ್ನು ಸೂಚಿಸದೆಯೋ, ಸೂಚಿಸಲು ಸೂಕ್ತ ಕೌಶಲವಿಲ್ಲದೆ ಸೋತುಹೋಗಿಯೋ ನಿಷ್ಫಲವೆನ್ನಿಸುವ ಅನಿಸಿಕೆಯನ್ನು ಸಹೃದಯರಲ್ಲಿ ಮೂಡಿಸುತ್ತವೆ. ಸತ್ವಶಾಲಿ ಕವಿಗಳಿಗೆ ಮಾತ್ರ, ಪ್ರತಿಭಾ

ಶ್ರೀಮಂತ ಚೇತನಗಳಿಗೆ ಮಾತ್ರ ಕವನವನ್ನು ಕಥನಿಸುವ ಜೊತೆಯಲ್ಲೇ ಕಾಣ್ಕೆಯನ್ನು ಇಲ್ಲವೇ ಬದುಕಿಗೆ ಸಂಗತವಾಗುವಂತಹ ಅಂತರಾರ್ಥವನ್ನು ಮನಗಾಣಿಸಲು ಶಕ್ಯ. ಅಂಥವರಲ್ಲಿ ಕೆ. ಎಸ್. ನರಸಿಂಹಸ್ವಾಮಿಯವರನ್ನು ಬಿಟ್ಟರೆ ಬಹುಶಃ ನಿಸಾರ್ ಅಹಮದ್ ಅವರನ್ನು ಉಲ್ಲೇಖಿಸುವುದು ಅತ್ಯುಚಿತವೆನ್ನಿಸುತ್ತದೆ. ಕೆ.ಎಸ್.ನ. ಅವರ 'ತೆರೆದ ಬಾಗಿಲು' ಕವನ ಸಂಗ್ರಹದ 'ಕ್ಯಾಂಟೊ' ರೂಪದ ಕೆಲವು ಪದ್ಯಗಳಿಗೆ ಈ ಬಗೆಯ ವಿಶೇಷ ಶಕ್ತಿಯಿರುವುದನ್ನು ನಾವು ಗುರುತಿಸಬಹುದು. ನಿಸಾರರ 'ಅಮ್ಮ, ಆಚಾರ, ನಾನು'. 'ಅಂತರ'. 'ವೈಜಯಂತಿ', 'ರಂಗೋಲಿ ಮತ್ತು ಮಗ', 'ಬಂಡೆ ಮತ್ತು ಕಲ್ಲಿನ ಚೂರುಗಳು' ಮೊದಲಾದ ಘಟನಾತ್ಮಕ ನಿರೂಪಣೆಯ ಅಥವಾ ಕಥಾನಕ ಧಾಟಿಯ ಕವನಗಳಲ್ಲಿ ಸಹ ಈ ಅಪೂರ್ವ ಅರ್ಥವಂತಿಕೆಯ ಅಂಶವನ್ನು ಗ್ರಹಿಸುತ್ತೇವೆ. ಕೆ.ಎಸ್.ನ. ಅವರ 'ಕ್ಯಾಂಟೊ' ಗಳಲ್ಲಿ ಸಾಮಾನ್ಯವಾಗಿ ಚೌಪದಿಯ ಮಾದರಿಗಳು ಹೆಚ್ಚಾಗಿದ್ದರೆ, ನಿಸಾರರಲ್ಲಿ ಮುಕ್ತ ಛಂದದ ವಿಲಾಸ ವೈವಿಧ್ಯ ಅನುಭವಕ್ಕೆ ಬರುತ್ತದೆ. 'ಬೀದಿಯ ಮಾರಿ'ಯಂತಹ ಕವನಗಳ ಜಾಯಮಾನಕ್ಕೆ ಹೊಂದಿಕೊಳ್ಳುವುದು ಬಹುಶಃ ಹಾಸ್ಯ, ವಿಡಂಬನೆಗಳ ಧಾಟಿ. ಆ ಹಾಸ್ಯವೂ ಸಹ ಪರಿಶ್ರಮಪೂರ್ಣ(Laboured)ವೆನ್ನಿಸದೆ ತುಂಬಾ ಅನಾಯಾಸವಾಗಿ, ಸ್ವಾಭಾವಿಕವಾಗಿ ಕಾವ್ಯ ವಸ್ತುವಿನ ಒಂದು ಸಹಜಾಂಶ ವೆಂಬಂತೆ ಬಂದಾಗ ಅದರ ಪರಿಣಾಮಕಾರಿತೆ ಅಧಿಕ. ಈ ಗುಣ ವಿಶೇಷ ಪ್ರಸಕ್ತ ಪದ್ಯದ ಅಗ್ಗಳಿಕೆ.

'ಬೀದಿಯ ಮಾರಿ'ಯ ಮಾದರಿಯ ಕವನ ರಚನೆಗೂ ಬೇರೆಯ ವರ್ಣನಾತ್ಮಕ ಕವಿತೆಗಳಿಗೂ ಇರುವ ಒಂದು ಮುಖ್ಯ ವ್ಯತ್ಯಾಸವನ್ನು ಗಮನಿಸಬೇಕು: ಸಾಮಾನ್ಯವಾಗಿ ಕವಿತೆಯೆನ್ನುವುದು ಕವಿಯ ಸದ್ಯಕಾಲಿಕ, ಸಹಜಸ್ಫೂರ್ತ ಪ್ರಕ್ರಿಯೆಯ ಫಲ. ಅದರ ಬೆಳವಣಿಗೆ ಅನಿರೀಕ್ಷಿತ; ಕವನ ರಚನಾಪೂರ್ವದ ವೇಳೆಯಲ್ಲಿ ಅದು ಮುಂದೆ ತಾಳ ಬಹುದಾದ ಸ್ವರೂಪ ಕವಿಗೆ ಅವೇದ್ಯ ಅಥವಾ ಅಸ್ಪಷ್ಟ ವೇದ್ಯ. ಇಂತಹ ಸಾಮಾನ್ಯ ರೂಪದ ಕವಿತೆಗಳು ಬಹುಮಟ್ಟಿಗೆ ಕವಿಯ ಜಾಗೃತ ಪ್ರಜ್ಞೆಗಿಂತ, ಅವನ ತರ್ಕಬುದ್ಧಿಗಳ ನೆಲೆಗಿಂತ ಭಿನ್ನ ಭೂಮಿಕೆಯಲ್ಲಿ ಸೃಷ್ಟಿಯಾಗುವಂಥವು; ಸುಪ್ತಾಂತರಾಳದ ಕ್ರಿಯೆಯ ಫಲಿತವಾಗಿರು ವಂಥವು. ಆದರೆ 'ಬೀದಿಯ ಮಾರಿ'ಯಂಥ ಕವಿತೆಗಳು ಮೊದಲೇ ಕವಿಯ ಮನಸ್ಸಿನಲ್ಲಿ ಚೆನ್ನಾಗಿ ಪರಿಭಾವಿತವಾಗಿ, ಬುದ್ಧಿ ತರ್ಕಗಳ ನೆರವಿನಿಂದ ಪೋಷಿತವಾಗಿ ಆಕೃತಿ ಪಡೆದಂಥವು. ಕವನದ ವಸ್ತುವನ್ನು ಹೇಗೆ ಬೆಳೆಸಬೇಕು, ಎಷ್ಟು ಬೆಳೆಸಬೇಕು; ಹೇಗೆ ಪ್ರಾರಂಭಿಸಿ, ಹೇಗೆ ಮುಗಿಸಿದರೆ ಪರಿಣಾಮದ ದೃಷ್ಟಿಯಿಂದ ಫಲಕಾರಿ; ನಿರೂಪಿಸುತ್ತಿರುವ ವಸ್ತುವಿಗೆ ಮಿಗಿಲಾದ ಭಾವಾರ್ಥ ವನ್ನು ಯಾವ ರೀತಿಯಲ್ಲಿ ಲಗತ್ತಿಸಬಹುದು—ಇತ್ಯಾದಿ ಸಂಗತಿಗಳೆಲ್ಲ ಮುಂಚೆಯೇ, ಕೆಲವೊಮ್ಮೆ ಎಷ್ಟೋ ದಿನಗಳವರೆಗೆ ಚೆನ್ನಾಗಿ ಆಲೋಚಿಸಲ್ಪಟ್ಟು ಅನಂತರ ಈ ಬಗೆಯ ಕವಿತೆ ಮೈದಾಳುತ್ತದೆ.

ಕವಿತೆ ಯಾವ ವಿಧಾನದಲ್ಲೇ ಮೈ ತಳೆಯಲಿ, ಅದು ನಮ್ಮ ಅಂತರಂಗದೊಡನೆ ಆಪ್ತವಾಗಿ ಸಂವಾದಿಸಿದಾಗಲೇ, ಕಾವ್ಯಾಸಕ್ತನನ್ನು ಗಾಢವಾಗಿ ಸಂವೇದಿಸಿದಾಗಲೇ ಅದರ ಸಾಫಲ್ಯ. ಅಂತಹ ಅಗತ್ಯವನ್ನು 'ಬೀದಿಯ ಮಾರಿ' ಪೂರೈಸುವುದರಲ್ಲಿ ಸಂದೇಹವಿಲ್ಲ.

ಅಮ್ಮ, ಆಚಾರ, ನಾನು

ನನ್ನ ಮದುವೆಗೆ ಮುಂಚೆ
ಹತ್ತಾರು ಹೆಣ್ಣುಗಳ ನೋಡಿ ನಮ್ಮಮ್ಮ
ಒಬ್ಬೊಬ್ಬರನೂ ತನ್ನ ಒಪ್ಪಿಗೆಯ ಒರೆಯಲ್ಲಿ ಅರೆದು
ಅವಳು ಹಾಗೆ ಇವಳು ಹೀಗೆ
ಆಕೆಗಿಂತ ವಾಸಿ ಕಾಗೆ
ಈಕೆ ಎಲ್ಲ ಸರಿ, ಆದರೆ ಉದ್ದ ನಾಲಗೆ
ಒಬ್ಬಾಕೆ ಲಂಕಿಣಿ
ಇನ್ನೊಬ್ಬಾಕೆ ಜಿರಾಫಿಣಿ
ಒಬ್ಬಳು ನಿಂತರೆ ಬೆದರು ಬೊಂಬೆಯ ತರಹ
ಇನ್ನೊಬ್ಬಳ ಹಲ್ಲು ಮಕ್ಕಳ ಬರಹ
ಎಂದೆಲ್ಲರಿಗೂ ಹಚ್ಚಿ ಬಿರುದು—
ಬಹಳ ದಿನ ಅವಿವಾಹಿತನಾಗಿಯೇ ಉಳಿದೆ;
ಅಮ್ಮ ನನ್ನ ಮನಸಾರ ಹಳಿದೆ.

ಅಮ್ಮ ಕಟ್ಟಾ ಸಂಪ್ರದಾಯಸ್ಥೆ
ಖುರಾನು ನಮಾಜು ರಂಜಾನಿನ ಉಪವಾಸ
ಧಾರ್ಮಿಕಾಚಾರಗಳಲ್ಲಿ ಹೇಳತೀರದ ಆಸ್ಥೆ;
ಬುರ್ಖಾ ತೊಡದೆ ಬೀದಿಯಲಿ ಹಾದುಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ—
ಹೆಚ್ಚು ಕಲಿತ ಬಜಾರಿಗಳ ಹಣೆಬರಹವೇ ಇಷ್ಟು
ದೇವರು ಧರ್ಮಗಳ ಭಯವಿರದೆ ಎಳ್ಳಷ್ಟೂ
ಗಂಡಸರೆದುರು ಮೈ ಪ್ರದರ್ಶಿಸುವ ಗಂಡು
ಬೀರಿಗಳು ಗಂಡಂದಿರ ಜೊತೆ ಬಾಳಿಯಾರೆ?
ಇಂಥವರನ್ನ ನನ್ನ ಮಗನಿಗೆಂದೂ ತಾರೆ
ನೆಂದು ಪ್ರತಿಜ್ಞಿಸಿ—

ಸದಾ ಬುರ್ಖಾ ತೊಡುವ ಕರಡಿಯನ್ನ
ಆಧುನಿಕ ವಿದ್ಯಮಾನಗಳ ಕಂಡರಿಯದ ಕುರುಡಿಯನ್ನ
ಹಳ್ಳಿ ಮೊದ್ದನ್ನ ಮೆಚ್ಚಿ
ನನ್ನ ಕೇಳಿದಾಗ, ನಾನೋ ಬೆಚ್ಚಿ
ಖುದ್ದಾಗಿ ನೋಡಿ ಒಪ್ಪಿದ ವಿದ್ಯಾವಂತೆಯ

ಕೈ ಹಿಡಿವೆನೆಂದಾಗ—
'ಓದಿದವರು ಹಾಳಾಗ
ನಾನೇನು ಓದಿದ್ದೆನೋ ಪೆದ್ದ?
ಮದುವೆಗೆ ಮುಂಚೆ ಹುಡುಗ
ಹೆಣ್ಣ ನೋಡುವುದು ಧರ್ಮ ನಿಷಿದ್ಧ.
ನಾವೆಲ್ಲ ಕಣ್ಣು ಮುಚ್ಚಿ ಹೆಣ್ಣ ಮೆಚ್ಚಿ ಗಂಟು ಹಾಕುವೆವೆ?'
ಎಂದು ಬಾಯಿ ಮುಚ್ಚಿಸಿದಳು;
ತನ್ನ ಮೇಲಿನ ನನ್ನ ಜುಗುಪ್ಸೆ ಹೆಚ್ಚಿಸಿದಳು.

ಅಪ್ಪ ಉದಾರಿ:
'ಮಗ ತಾನೇ ಆರಿಸಿಕೊಳ್ಳಲಿ ಭವಿಷ್ಯದ ದಾರಿ
ಹೆತ್ತವರು ನಾವೇಕೆ ಆಗುವುದು ತಡೆ
ಆ ಯೋಚನೆಯ ಬಿಟ್ಟುಬಿಡೆ'
ಎಂದು ಎಚ್ಚರಿಸಿದಾಗ
—ಅಮ್ಮ ಅನ್ನ ನೀರು ಬಿಟ್ಟು ಗಳಗಳ ಅತ್ತು
ಉರಲು ಬಾವಿ ಬೆಂಕಿಗಳ ಉಚ್ಚರಿಸಿದಾಗ
ತೆಪ್ಪಗಾದೆ.

ಅಪ್ಪ ಲೋಕ ಕಂಡವರು—ಹಾಗೇ ಅಮ್ಮನ
ಕೋಪ ಹಟ ಕಂಡವರು.
ವಿಪರೀತಕ್ಕೆ ಬಂತು ತಗಾದೆ
ಎನಿಸಿ, ಮುಂದೇನೂ ತೋಚದೆ 'ನಿನ್ನಿಷ್ಟ'ವೆಂದರು;
ರಾತ್ರಿಯೆಲ್ಲ ಕೋಣೆಯ ದೀಪವುರಿಸಿ ಸಿಗರೇಟು ಹಚ್ಚಿ
ಶತಪಥಿಸಿ ಒಳಗೊಳಗೇ ನೊಂದರು.

ಒಂದು ದಿನ ಅಮ್ಮನಿಗೆ ಜ್ಞಾನೋದಯ
ವಾಯಿತೆಂದೆನ್ನಿಸಿತು; ಊಟಕ್ಕೆ ಕುಳಿತಿದ್ದಾಗ
'ನಿನ್ನಿಷ್ಟದಂತೆ ಓದಿದವಳನೇ ಮದುವೆಯಾಗಪ್ಪ'
—ಎಂದಾಗ ಅಪನಂಬಿಕೆಯೊಂದಿಗೆ ಅಚ್ಚರಿ
ಯೊಂದಿಗೆ ಖುಷಿಯೊಂದಿಗೆ ಭಯ
ಬೆಳೆದು ಕೈ ತೊಳೆದು ಎದ್ದೆ ಬೇಗ.

ಆ ಡಬಲ್ ಪದವೀಧರೆಯ ಭಾವಚಿತ್ರವನ್ನ
ಇಡೀ ದಿನ ನೆಟ್ಟು ಕಣ್ಣ
ತೂಗಿ ಅಳೆದು
ವಿಳಾಸ ತಿಳಿದು ಹತ್ತಿರದಲ್ಲೇ ಕಂಡು ಮೆಚ್ಚಿ
ನಿಶ್ಚಿತಾರ್ಥ ಶಾಸ್ತ್ರ ಮದುವೆ ಎಲ್ಲ ಮುಗಿಯಿತು:
ಮನಸ್ಸು ಅಮ್ಮನಿಗೆ ಮೌನದಲ್ಲೇ ಕೈ ಮುಗಿಯಿತು.

ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು
ಭಾರೀ ಸೀರೆಯನ್ನ ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ
ಕೊರಳಿಗೆ ಚಿನ್ನದ ಸರ
ಕಾಲಿಗೆ ಹೈಹೀಲ್ಡು ಕೆರ
ಕಿವಿಗೆ ಬೆರಳಿಗೆ ಉಂಗುರ ತೊಟ್ಟು
ಲಿಪ್‌ಸ್ಟಿಕ್ಕು ಪೌಡರು ರೂಜು ಬಳಿದು ದೃಷ್ಟಿಬೊಟ್ಟಿಟ್ಟು
ಹೆರಳಗೋಪುರದಲ್ಲಿ ಕೂದಲ ಬಿಗಿದು
ಎಡ ಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು—ಆಗ
'ಬಂದೆ ತಡೆಯಿರಿ' ಎಂದು ಒಳಗೋಡಿ
ಬಂದು 'ನಡೆಯಿರಿ' ಎಂದಾಗ
ತಲೆ ಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ.

★ ★ ★

(ಕವನ ಸಂಕಲನ: 'ಸಂಜೆ ಐದರ ಮಳೆ')



'ಅಮ್ಮ, ಆಚಾರ, ನಾನು': ಪರಂಪರೆ-ಆಧುನಿಕತೆಗಳ ನಡುವಣ ತೊಳಲಾಟದ ಚಿತ್ರಣ

◆ ಡಿ. ಬಿ. ರಜಿಯಾ

ನವೋದಯ ಕಾವ್ಯ ಸಂದರ್ಭದಲ್ಲಿ ಬರೆಯುತ್ತಿರುವ ಲೇಖಕರಲ್ಲಿ ಪ್ರಮುಖರಾದವರು ಕವಿ ಕೆ. ಎಸ್. ನಿಸಾರ್ ಅಹಮದ್.

ಉರ್ದು ಮಾತೃಭಾಷೆಯ, ಅಲ್ಪಸಂಖ್ಯಾತ ಸಮುದಾಯದ ಈ ಕವಿ ಅಕ್ಷರ ಲೋಕವು ನಿಬ್ಬೆರಗಾಗುವಂತೆ ಕನ್ನಡ ಭಾಷೆಯನ್ನು ರೂಢಿಸಿಕೊಂಡು ಬೆಳೆದು, ಮುಂದು ವರೆದಿದ್ದು ಆ ಕಾಲಘಟ್ಟದಲ್ಲಿನ ದೊಡ್ಡ ಅಚ್ಚರಿಯೆ.

ಒಂದು ಸಮುದಾಯವನ್ನು ಕುರಿತು ಹೆಚ್ಚಿನ ತಿಳಿವಳಿಕೆಗೆ ಅಂದಿನ ಸಾಮಾಜಿಕ ಸ್ಥಿತಿ ಆಸಕ್ತಿ ತೋರಲಿಲ್ಲ ಎಂಬುದು ಸ್ಪಷ್ಟವಾದರೂ ಕರ್ನಾಟಕದಲ್ಲಿ ಕಳೆದ ಎಂಟು ಶತಮಾನ ಗಳಿಂದ ಮುಸ್ಲಿಮರು ನೆಲೆಸಿದ್ದಾರೆ ಎಂಬುದು ಸತ್ಯ. ಸುಮಾರು ಮುನ್ನೂರು ವರ್ಷಗಳವರೆಗೂ ವಿವಿಧ ಭಾಗಗಳಲ್ಲಿ ಆಳ್ವಿಕೆ ನಡೆಸಿದ್ದಾರೆ—ಸಾಮಾಜಿಕ ಜೀವನದಲ್ಲಿ ಸಾಮರಸ್ಯ ಸೌಹಾರ್ದ ಗಳಿಂದ ಹಾಸುಹೊಕ್ಕಿದ್ದಾರೆ.

ಅಲ್ಲದೆ ನಾಡಿನ ಸಾಂಸ್ಕೃತಿಕ, ರಾಜಕೀಯ ವಲಯ ಗಳಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಹೀಗಿದ್ದೂ ಕನ್ನಡ ದಲ್ಲಿ ಸಾಹಿತ್ಯ ರಚನೆ ಮಾಡುತ್ತಾ ಆ ಧರ್ಮದ ಆಚಾರ-ವಿಚಾರ ಕಂದಾಚಾರಗಳನ್ನು ಇತರ ಸಮುದಾಯಕ್ಕೂ ತಿಳಿಯಪಡಿಸು ವಂತಹ ಕೆಲಸ ಕಳೆದ ಎರಡು ಮೂರು ದಶಕಗಳಿಂದ ಪ್ರಾರಂಭ ವಾಗಿದೆ.

ಉರ್ದು ಭಾಷೆ ಮಾತಾಡುವಂಥ ಅನಕ್ಷರಸ್ಥರಾದ ಒಂದು ಸಮುದಾಯ ಎಂದಷ್ಟೇ ತಿಳಿದಂತಿದ್ದ ಈ ಜನರು, ಎಪ್ಪತ್ತರ ದಶಕಗಳಿಂದ ಈಚೆಗೆ ಮುಸ್ಲಿಂ ಸಮಾಜದ ನೈಜ ಚಿತ್ರಣಗಳನ್ನು ಸಾಹಿತ್ಯ ಕೃತಿಗಳ ಮೂಲಕ ಅನಾವರಣಗೊಳಿಸತೊಡಗಿದ್ದು ಸಂತೋಷದ ಸಂಗತಿ. ಪ್ರತಿ ಧರ್ಮದಲ್ಲಿರುವಂತೆ ಇವರೂ ಸಹ ತಮ್ಮ ನೋವು-ನಲಿವುಗಳನ್ನು ಅನುಭವಿಸುವವರೆ, ಹಲವು ಬಗೆಯ ಶೋಷಣೆ, ರೀತಿ-ರಿವಾಜುಗಳಿಗೆ ಒಳಪಟ್ಟವರೆ, ಆದರೆ ಈಗ ಇವರೂ ಸಹ ತಮ್ಮ ಆತಂಕಗಳನ್ನು ಅಭಿವ್ಯಕ್ತಿಸುವಲ್ಲಿ ಮುಂದಾಗಿರುವುದು ಸುವ್ಯಕ್ತ ವಾಗಿದೆ.

ಈ ಅವಧಿಯಲ್ಲೇ ಬರೆಯುತ್ತಿರುವ ಲೇಖಕರು ತಮ್ಮ ಸಮುದಾಯದ ಕಂದಾಚಾರಗಳನ್ನು ಕುರಿತು ಚರ್ಚೆ ನಡೆಸುತ್ತಿರುವುದೂ ಸ್ಪಷ್ಟವಾಗಿ ಗೋಚರಿಸುತ್ತಿದೆ. ಈಗಾಗಲೇ ಪ್ರಮುಖರಾದ ಕೆಲವು ಹಿರಿಯ ಲೇಖಕರು-ಲೇಖಕಿಯರು ತಮ್ಮ ರಚನೆಗಳ ಮೂಲಕ ಈ ಜನಾಂಗದ ಬದುಕಿನ ಆಂತರ್ಯದ ವಿದ್ಯಮಾನಗಳ ತೆರೆಯನ್ನು ಸರಿಸಲು ಪ್ರಯತ್ನ ನಡೆಸಿದ್ದಾರೆ.

ಇವರಲ್ಲಿ ಪ್ರಖ್ಯಾತ ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ಹಿರಿಯ ತಲೆಮಾರಿನ ಲೇಖಕರಲ್ಲೇ ಪ್ರಮುಖರಾಗಿ, ಕಾವ್ಯ ಕ್ಷೇತ್ರದಲ್ಲಿ ಗಂಭೀರವಾಗಿ, ಮಾರ್ಮಿಕತೆ ಯಿಂದ ಕಳಕಳಿಸುವಂತಹ ಪದ ಬಳಕೆಯ ಅನನ್ಯ ಮತ್ತು ಹೃದ್ಯ ಪ್ರಯೋಗಗಳನ್ನು ಕಳೆದ ನಾಲ್ಕೈದು ದಶಕಗಳಿಗೂ ಮೀರಿ ಮಾಡುತ್ತಾ ಬಂದಿದ್ದಾರೆ—ವಿಡಂಬನೆಯ ಮೂಲಕ ವಿಷಯಗಳನ್ನು ಪ್ರತಿಪಾದಿಸುತ್ತಾ ಗಂಭೀರ ವಿಚಾರ ಸರಣಿಯನ್ನು ಕಟ್ಟಿಕೊಡುವ ಇವರ ಬರವಣಿಗೆಯು ಹೆಚ್ಚು ವಿಶಿಷ್ಟವಾಗಿದ್ದು, ನಮಗೆಲ್ಲಾ ಅನುಸರಣಯೋಗ್ಯವಾಗಿದೆ.

ನಾನು ಆಯ್ದುಕೊಂಡ 'ಅಮ್ಮ, ಆಚಾರ, ನಾನು' ನಮ್ಮ ಹಿರಿಯ ಲೇಖಕರಲ್ಲಿ ತುಂಬಾ ಸತ್ವಶಾಲಿ ಬರಹಗಾರರಾದ ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಪ್ರಾತಿನಿಧಿಕ ಕವನಗಳಲ್ಲಿ ಮುಖ್ಯವಾದದ್ದು.

ಈ ಕವನವನ್ನು ೩೬ ವರ್ಷಗಳ ಹಿಂದೆ ನಿಸಾರರು ಬರೆದಿದ್ದರೂ ಇದರಲ್ಲಿರುವ ವಿಷಯಗಳು, ದ್ವಂದ್ವ ತುಮುಲಗಳು ಇಂದಿಗೂ ಚಲಾವಣೆಯಲ್ಲಿರುವುದು ಈ ಸಮುದಾಯದ ಸಾಮಾಜಿಕ ವೈಪರೀತ್ಯವೆನ್ನಿಸುತ್ತದೆ. ಪುರಾತನ ನಂಬಿಕೆಗಳೇ ನಮ್ಮನ್ನು ಕಾಪಾಡಿಕೊಂಡು ಬರುತ್ತವೆ ಎಂಬ ಸಂವಹನವು ಇದಾಗಿಬಿಡುತ್ತದೆಯೋ ಎಂದು ಯೋಚಿಸಲೇಬೇಕಾಗಿದೆ. ಇಲ್ಲಿ ಪ್ರಗತಿಪರ ಮನೋಭಾವ ಮತ್ತು ಸಾಂಪ್ರದಾಯಿಕತೆಯ ಮುಖಾಮುಖಿಯನ್ನು ಕಾಣುತ್ತೇವೆ. ಕವಿಯ ಉದ್ದೇಶ ಇವುಗಳ ನಡುವೆ ಸಂಘರ್ಷವನ್ನು ಮಾಡಬೇಕೆಂದೋ ರಾಜಿ-ಸಂಧಾನಗಳಿಗೆ ಪ್ರಯತ್ನಿಸಬೇಕೆಂದೋ ಆಶಯವನ್ನು ಉಳ್ಳದ್ದಲ್ಲ. ಇವೆರಡರ ವೈದೃಶ್ಯವನ್ನು, ಆ ಮೂಲಕ ವರ್ತಮಾನದ ಸ್ಥಿತಿಗತಿಗಳನ್ನು ಹಾಗೂ ವಾಸ್ತವ ತಥ್ಯವನ್ನು ಅರಿವು ಮಾಡಿಕೊಡುವುದಾಗಿದೆ. ಈ ಅಂಶವು ವ್ಯಕ್ತಿ ಮಟ್ಟದಲ್ಲಿ ಆಲೋಚನೆಗೆ ತೊಡಗಿಸಿ, ಸ್ವಂತ ನಿರ್ಧಾರವನ್ನು ರೂಪಿಸಿಕೊಳ್ಳುವತ್ತ ಸಹಕಾರಿಯಾಗಬಹುದು.

ವಿವಾಹಯೋಗ್ಯನಾದ ವಿದ್ಯಾವಂತ ಯುವಕನಿಗೆ ಆಧುನಿಕತೆಯ ಬಗ್ಗೆ

ಒಲವಿರುವುದು ವಯಸ್ಸಹಜವೇ. ಆದರೆ, ಧಾರ್ಮಿಕಾಚಾರಗಳಲ್ಲಿ ಅಪಾರ ಶ್ರದ್ಧೆಯಿರುವ ತಾಯಿಗೆ, ಧರ್ಮಬಾಹಿರವೆಂದು ಒಪ್ಪಿತವಾಗಿರುವ, ಭಾವಿಸಲಾಗಿರುವ ರೀತಿನೀತಿಗಳ ಬಗ್ಗೆ ವಿರೋಧವಿದೆ; ವಿದ್ಯಾವಂತ ತರುಣಿಯರು ಮೈ ಮಾಟವನ್ನು ಪ್ರದರ್ಶಿಸುವ ಬಗ್ಗೆ ಅತೀವ ಆಕ್ರೋಶವಿದೆ. ಹಾಗೆಂದು ಹೆಣ್ಣಿನ ಸ್ವಾತಂತ್ರ್ಯಕ್ಕೆ ಇತಿಮಿತಿ ಹೇರುವ ಧೋರಣೆ ಇಲ್ಲ. ಒಂದು ಶಿಷ್ಟಾಚಾರದ, ನಡೆ-ನುಡಿಯ ಕಟ್ಟುಪಾಡು ಸಂಯಮಕ್ಕೆ ಒಗ್ಗಿಕೊಳ್ಳುವ ಮತ್ತು ಸಭ್ಯತೆ ಸದಾಚಾರಗಳಿಗೆ ಸಮ್ಮತಿಸಿ ನಡೆಯುವ ಬದುಕನ್ನು ವಯಸ್ಸಾದ ತಾಯಿ ಬಯಸುವುದರಲ್ಲಿ ತಪ್ಪಿದೆಯೆಂದು ತೋರುವುದಿಲ್ಲ. ಅದರಲ್ಲೂ ಇಂದಿನ ಸಿನಿಮ, ಜಾಹೀರಾತು, ಸೌಂದರ್ಯ ಪ್ರದರ್ಶನ ಇತ್ಯಾದಿ ಆಧುನಿಕ ವಿದ್ಯಮಾನಗಳ ಸ್ವೈರ ಹಾಗೂ ಲಂಗುಲಗಾಮಿಲ್ಲದ ಸ್ವಚ್ಛಂದ ವರ್ತನೆ, ಉಡುಗೆತೊಡುಗೆ ಮತ್ತು ಅಂಗಾಂಗಗಳನ್ನು ಮುಕ್ತ ಹರಾಜಿಗೆ ಇಡುವಿಕೆಯನ್ನು ನೋಡಿದಾಗ, ಹೆಣ್ಣಿನ ಸ್ವಾತಂತ್ರ್ಯವೆಂದರೆ ಸಮಾಜಕ್ಕೆ, ಸ್ವಂತ ಜೀವನಕ್ಕೆ ಮಾರಕವಾದ, ಇತರರನ್ನೂ ದುರ್ಮಾರ್ಗಕ್ಕೆ ಎಳೆಯುವ ಇಂತಹ ಸ್ವೈರೋನ್ಮತ್ತ ನಡಾವಳಿಯಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.

'ಅಮ್ಮ ಕಟ್ಟಾ ಸಂಪ್ರದಾಯಸ್ಥೆ
ಖುರಾನು ನಮಾಜು ರಂಜಾನಿನ ಉಪವಾಸ
ಧಾರ್ಮಿಕಾಚಾರಗಳಲ್ಲಿ ಹೇಳತೀರದ ಆಸ್ಥೆ;
ಬುರ್ಖಾ ತೊಡದೆ ಬೀದಿಯಲಿ ಹಾದು ಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ
ಹೆಚ್ಚು ಕಲಿತ ಬಜಾರಿಗಳ ಹಣೆಬರಹವೇ ಇಷ್ಟು
ದೇವರು ಧರ್ಮಗಳ ಭಯವಿರದೆ ಎಳ್ಳಷ್ಟೂ
ಗಂಡಸರೆದರು ಮೈ ಪ್ರದರ್ಶಿಸುವ ಗಂಡು
ಬೀರಿಗಳು ಗಂಡಂದಿರ ಜೊತೆ ಬಾಳಿಯಾರೆ?
ಇಂಥವರನ್ನ ನನ್ನ ಮಗನಿಗೆಂದೂ ತಾರೆ
ನೆಂದು ಪ್ರತಿಜ್ಞಿಸಿ.'

—ಹೀಗೆ, ತಾಯಿ ತಾನು ಕಟ್ಟಿಕೊಂಡ ಬದುಕಿನ ಕಟ್ಟುಪಾಡುಗಳಿಗೆ ಅನುಸಾರವಾಗಿಯೇ ತನ್ನ ಮಗನ ಬಾಳ ಸಂಗಾತಿಯ ಆಯ್ಕೆಯೂ ನಡೆಯಬೇಕೆಂಬ ರೂಢಿಗತ ಸಂಪ್ರದಾಯವನ್ನು ಎತ್ತಿ ಹಿಡಿಯುತ್ತಾಳೆ. ಆಕೆಯ ಈ ನಿಲವು ಅನುಭವದಿಂದ ರೂಪಿತವಾದದ್ದು. ಆಕೆಗೆ ವಿದ್ಯಾವಂತ ಜಗತ್ತಿನ ಪರಿಚಯವಿರುವುದಿಲ್ಲ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಮಗನ ಹಿತ, ಭವಿಷ್ಯ ಹಾಗೂ ಸಂಸಾರದ ಸಾಮರಸ್ಯಗಳ ದೂರದೃಷ್ಟಿಯಿರುವಂತೆ ಭಾಸವಾಗುತ್ತದೆ. ಅದಕ್ಕೇ ಆಕೆ—

'ಓದಿದವರು ಹಾಳಾಗ
ನಾನೇನು ಓದಿದ್ದೆನೋ ಪೆದ್ದ?
ಮದುವೆಗೆ ಮುಂಚೆ ಹುಡುಗ
ಹೆಣ್ಣ ನೋಡುವುದು ಧರ್ಮ ನಿಷಿದ್ಧ.
ನಾವೆಲ್ಲ ಕಣ್ಣು ಮುಚ್ಚಿ ಹೆಣ್ಣ ಮೆಚ್ಚಿ ಗಂಟು ಹಾಕುವವೆ?'

ಎಂಬುದಾಗಿ ಹೇಳುವಾಗ ಉತ್ತಮ ಸಂಸ್ಕಾರವಂತ ಮಗ ಹಿರಿಯರಿಗೆ, ಅದೂ ಹೆತ್ತ ತಾಯಿಗೆ ಎದುರಾಡುವಂತೆಯೂ ಇಲ್ಲ. ಬುರ್ಖಾ ತೊಡುವವಳನ್ನು, ಹಳ್ಳಿ ಮೊದ್ದನ್ನು ಮೆಚ್ಚಿ ಮದುವೆಯಾಗಲೂ ಒಲ್ಲ! ಇಲ್ಲಿ ಮನಸ್ಸು ದ್ವಂದ್ವಕ್ಕೊಳಗಾಗುವುದು ಹುಡುಗನಿಗೆ ಮಾತ್ರ ಅಲ್ಲ, ಅವನ ತಂದೆಗೂ ಸಹ. ಯಾಕೆಂದರೆ, ಈ ಉದಾರಿ ತಂದೆ ಲೋಕ ಕಂಡವರು, ಮಗನ ಮನಸ್ಸನ್ನೂ ಕಂಡವರು; ಜೊತೆಗೆ ಹೆಂಡತಿಯ ಕೋಪ, ಹಟವನ್ನೂ ಉಂಡವರು. ತಂದೆಗೆ ಮಗನ ನಿಲವಿನಲ್ಲಿ ಯಾವ ತಪ್ಪೂ ಕಾಣಿಸದು. ಅವರು ಬಾಹ್ಯ ಪ್ರಪಂಚವನ್ನು ಕಂಡವರು. ಸುತ್ತಲೂ ಆಗುತ್ತಿರುವ ಪರಿವರ್ತನೆಯ ಅರಿವು ಇರುವವರು. ಹೆಚ್ಚಾಗಿ ಮುನ್ನೋಟ, ಅಭ್ಯುದಯಶೀಲ ದೃಷ್ಟಿಧೋರಣೆಯಿರುವವರು. ತಾಯಿಯಂತೆ ಕೇವಲ ಮನೆಯೇ, ಗೃಹಕೃತ್ಯವೇ ಸರ್ವಸ್ವವೆಂದು ಬಗೆದವರಲ್ಲ. ಹೀಗಿದ್ದರೂ ಮಡದಿಯನ್ನು ಎದುರು ಹಾಕಿಕೊಂಡು ಧೈರ್ಯವಾಗಿ ಮಗನನ್ನು ಬೆಂಬಲಿಸಲು ಆಗದ ಅಸಹಾಯಕರು ಕೌಟುಂಬಿಕ ಅಸಾಮರಸ್ಯ, ವಿರಸಗಳನ್ನು ಎದುರಿಸಬೇಕಾದೀತೆಂಬ ಅಂಜಿಕೆ ಇರುವವರು. ಅವರ ಅಂತರಂಗದ ತೊಳಲಾಟವನ್ನು ಕವಿ ಸರಳ ಮತ್ತು ನೇರವಾಗಿ ತಿಳಿಸಿದ್ದಾರೆ; ಹೀಗೆಯೇ, ತಾಯಿಯ ಹಠಮಾರಿತನ, ಆಕೆಯ ಹಂಬಲ ವಿಫಲವಾದರೆ ಕೈಗೊಳ್ಳಬಹುದಾದ ಅನಾಹುತಕಾರಿ ಕಾರ್ಯಾವಳಿಯನ್ನು ಪರಿಣಾಮಕಾರಿಯಾಗಿ ರೇಖಿಸಿದ್ದಾರೆ:

'ಅಪ್ಪ ಉದಾರಿ:
'ಮಗ ತಾನೇ ಆರಿಸಿಕೊಳ್ಳಲಿ ಭವಿಷ್ಯದ ದಾರಿ
ಹೆತ್ತವರು ನಾವೇಕೆ ಆಗುವುದು ತಡೆ
ಆ ಯೋಚನೆಯ ಬಿಟ್ಟುಬಿಡೆ'
ಎಂದು ಎಚ್ಚರಿಸಿದಾಗ
—ಅಮ್ಮ ಅನ್ನ ನೀರು ಬಿಟ್ಟು ಗಳಗಳ ಅತ್ತು
ಉರಲು ಬಾವಿ ಬೆಂಕಿಗಳ ಉಚ್ಚರಿಸಿದಾಗ
ತೆಪ್ಪಗಾದೆ.
ಅಪ್ಪ ಲೋಕ ಕಂಡವರು—ಹಾಗೇ ಅಮ್ಮನ
ಕೋಪ ಹಟ ಕಂಡವರು.
ವಿಪರೀತಕ್ಕೆ ಬಂತು ತಗಾದೆ
ಎನಿಸಿ, ಮುಂದೇನೂ ತೋಚದೆ 'ನಿನ್ನಿಷ್ಟ'ವೆಂದರು;
ರಾತ್ರಿಯೆಲ್ಲ ಕೋಣೆಯ ದೀಪವುರಿಸಿ ಸಿಗರೇಟು ಹಚ್ಚಿ
ಶತಪಥಿಸಿ ಒಳಗೊಳಗೇ ನೊಂದರು.'

ಈ ಕವನದಲ್ಲಿನ ಒಂದು ಗಮನಾರ್ಹ ವಿಷಯವೆಂದರೆ, ಇಲ್ಲಿ ಯಾರ ನಿಲವು ಸರಿ, ಯಾರದು ಅಲ್ಲ ಎನ್ನುವ ಏಕಪಕ್ಷೀಯ ನಿರ್ಧಾರವನ್ನು ಕವಿ ಸೂಚಿಸದೆ, ಇವರೆಲ್ಲರ ದೃಷ್ಟಿಯಲ್ಲೂ ಕೊಂಚ ಮಟ್ಟಿನ ತಥ್ಯಾಂಶವಿರುವುದನ್ನು ಮಾರ್ಮಿಕವಾಗಿ ನಿರೂಪಿಸಿರುವುದು. ಕವಿಯ ಈ ಸಮತೋಲನದ ಧೋರಣೆ ಕವಿತೆಯ ಯಶಸ್ಸಿಗೆ ಮುಖ್ಯ ಧಾತುವನ್ನು ಒದಗಿಸಿದೆ.

ಮುಂದೆ ನಡೆದ ಘಟನೆಗಳನ್ನು ಓದುತ್ತಿದ್ದಂತೆ, ಆ ಹುಡುಗನಿಗೆ ಆದ ಅನುಭವ

ನಮ್ಮ ಮನಸ್ಸಿಗೂ ತಟ್ಟುತ್ತದೆ. ಅವನ ಅಪನಂಬಿಕೆ ಆಶ್ಚರ್ಯ ಖುಷಿಯಲ್ಲಿ ನಾವೂ ಪಾಲ್ಗೊಳ್ಳುತ್ತೇವೆ. ಅವನೊಂದಿಗೆ ನಾವೂ ಸಂಭ್ರಮಿಸುತ್ತೇವೆ. ಆ ಸಾಲುಗಳ ಚಾತುರ್ಯದ ವೈಖರಿ ಹೀಗಿದೆ:

'ಒಂದು ದಿನ ಅಮ್ಮನಿಗೆ ಜ್ಞಾನೋದಯ
ವಾಯಿತೆಂದೆನ್ನಿಸಿತು; ಊಟಕ್ಕೆ ಕುಳಿತಿದ್ದಾಗ
'ನಿನ್ನಿಷ್ಟದಂತೆ ಓದಿದವಳನೇ ಮದುವೆಯಾಗಪ್ಪ'
—ಎಂದಾಗ ಅಪನಂಬಿಕೆಯೊಂದಿಗೆ ಅಚ್ಚರಿ
ಯೊಂದಿಗೆ ಖುಷಿಯೊಂದಿಗೆ ಭಯ
ಬೆಳೆದು ಕೈ ತೊಳೆದು ಎದ್ದೆ ಬೇಗ.'

ಈಗ ಕವಿತೆಯ ನಾಯಕನ ಕನಸು ನನಸಾಗುವ, ಹಣ್ಗೊಳ್ಳುವ ಸೂಕ್ತ ಸಮಯ. ಹುಡುಗನ ಅಂತರಾಳದಲ್ಲಿ ಸುಂದರಳೂ, ವಿದ್ಯಾವಂತಳೂ, ಪ್ರಜ್ಞಾವಂತಳೂ ಆದ ಸಂಗಾತಿಯ ಕಲ್ಪನಾ ಚಿತ್ರ ಮೂಡಿತ್ತು. ಈಗ ಅದು ಕೈಗೂಡುವ, ಸಾಕಾರಗೊಳ್ಳುವ ಸಮಯ ಸನ್ನಿಹಿತವಾಗಿತ್ತು. ಸಾಂಪ್ರದಾಯಿಕವಾಗಿಯೇ, ತಾಯಿಯ ಸ್ವಯಂ ರಾಜಿ ಒಪ್ಪಿಗೆಗಳ ಸಹಕಾರದಿಂದಲೇ ತನ್ನ ಅಭಿಲಾಷೆ ನೆರವೇರಿದ್ದಕ್ಕಾಗಿ ಮನಸ್ಸಿನಲ್ಲೇ ತಾಯಿಗೆ ಕೃತಜ್ಞತೆ ಸಲ್ಲಿಸುತ್ತಾನೆ:

'ಆ ಡಬಲ್ ಪದವೀಧರೆಯ ಭಾವಚಿತ್ರವನ್ನ
ಇಡೀ ದಿನ ನೆಟ್ಟು ಕಣ್ಣ
ತೂಗಿ ಅಳೆದು
ವಿಳಾಸ ತಿಳಿದು ಹತ್ತಿರದಲ್ಲೇ ಕಂಡು ಮೆಚ್ಚಿ
ನಿಶ್ಚಿತಾರ್ಥ ಶಾಸ್ತ್ರ ಮದುವೆ ಎಲ್ಲ ಮುಗಿಯಿತು:
ಮನಸ್ಸು ಅಮ್ಮನಿಗೆ ಮೌನದಲ್ಲೇ ಕೈ ಮುಗಿಯಿತು.'

ಕವನ ಓದುತ್ತಿದ್ದ ನಮಗೂ ಯಾವುದೋ ಆತಂಕದ ಹೊರೆ ಇಳಿದಂತೆ ಮನಸ್ಸು ನಿರಾಳವಾಗುತ್ತದೆ. ಸದ್ಯ ನಮ್ಮ ಪ್ರೀತಿ, ಸಹಾನುಭೂತಿಯಿರುವ ಹುಡುಗನ ಆಸೆ ಕಮರಲಿಲ್ಲವಲ್ಲ, ಹೃದಯ ಮುದುಡಲಿಲ್ಲವಲ್ಲ, ನಿರಾಸೆಯಾಗಲಿಲ್ಲವಲ್ಲ, ಬಯಸಿದ್ದು ದೊರೆಯಿತಲ್ಲ ಎಂದೆನ್ನಿಸುತ್ತದೆ; ಸಮಾಧಾನದ ನಿಟ್ಟುಸಿರು ಹೊಮ್ಮುತ್ತದೆ.

ಆದರೆ ಇಡೀ ಕವನದ ಸ್ವಾರಸ್ಯವಿರುವುದು ಕೊನೆಯ ಒಂದೇ ಒಂದು ಸಾಲಿನಲ್ಲಿ. ಕವಿ ಇದನ್ನು ಬಹಳ ಚೆನ್ನಾಗಿ ಸಾಧಿಸಿದ್ದಾರೆ. ಇದನ್ನು ಒಂದು ವಿನೋದದ ಸಂಗತಿ ಎಂದು ಪರಿಗಣಿಸಿ ನಕ್ಕು ಮರೆತು ಬಿಡುವಂತಿಲ್ಲ. ಕವನದ ಪರಿಣಾಮಕ್ಕೋಸ್ಕರವೇ ಪ್ರಜ್ಞಾಪೂರ್ವಕ ವಾಗಿ ಆಲೋಚಿಸದ ಚಮತ್ಕಾರಿಕ ಮುಗಿವು ಎಂದು ಬಗೆಯಬೇಕಾಗಿಲ್ಲ. ಅತ್ಯಂತ ಗಹನವಾದ, ಅಪರಿಹಾರ್ಯವೆನ್ನಿಸುವ ಸಮಸ್ಯೆಯೊಂದರ ದರ್ಶನವನ್ನು ಇದು ನಮಗೆ ಗಂಭೀರವಾಗಿ ಮಾಡಿಸುತ್ತದೆ. ಆ ಕಾಣ್ಕೆ ನಮಗೆ ಮನದಟ್ಟಾಗಲು, ಅವಿಸ್ಮರಣೀಯವಾಗಿ ಅಂತರಂಗದಲ್ಲಿ ಉಳಿಯಲು, ಈ ಬಗೆಯ ಅನಿರೀಕ್ಷಿತ ಮತ್ತು ಚತುರವಾದ ಅಂತ್ಯ ಅನಿವಾರ್ಯ ಎನ್ನಿಸುತ್ತದೆ. ನಮ್ಮ ಸಮಾಜದ ಸಹ-ಜನಾಂಗವೊಂದರ ಮೂಲಭೂತ

ಚೌಕಟ್ಟನ್ನು ನಮ್ಮೆದುರು ಹರವಿ, ಅದರ ಬಗ್ಗೆ ವಿಚಾರಪರರಾಗಲು ಪ್ರೇರೇಪಿಸುತ್ತದೆ. ಒಟ್ಟಿನಲ್ಲಿ ಹುಡುಗನ ಆಸೆ ಮತ್ತು ಸಂಕಲ್ಪ ಮರಳಿನಲ್ಲಿ ಕಟ್ಟಿದ ಮಹಲು ಎಂದು ಅರಿವಾಗುವುದು ಈ ಕೆಳಗಿನ ಸಾಲುಗಳಲ್ಲಿ:

'ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು
ಭಾರೀ ಸೀರೆಯನ್ನ ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ
ಕೊರಳಿಗೆ ಚಿನ್ನದ ಸರ
ಕಾಲಿಗೆ ಹೈಹೀಲ್ಡು ಕೆರ
ಕಿವಿಗೆ ಬೆರಳಿಗೆ ಉಂಗುರ ತೊಟ್ಟು
ಲಿಪ್‌ಸ್ಟಿಕ್ಕು ಪೌಡರು ರೂಜು ಬಳಿದು ದೃಷ್ಟಿಬೊಟ್ಟಿಟ್ಟು
ಹೆರಳಗೋಪುರದಲ್ಲಿ ಕೂದಲ ಬಿಗಿದು
ಎಡ ಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು—ಆಗ
'ಬಂದೆ ತಡೆಯಿರಿ' ಎಂದಾಗ
ತಲೆ ಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ.'

ಇಲ್ಲಿನ ಒಂದು ಮಾರ್ಮಿಕ ಸನ್ನೆಯನ್ನೂ ಗಮನಿಸಬೇಕು; ಅದು ಹೊಮ್ಮಿಸುವ ಆಳವಾದ ಅರ್ಥಸೂಕ್ಷ್ಮತೆಯ ಅತಿಶಯತೆಯನ್ನು ಪರಿಭಾವಿಸಬೇಕು. ಅದೆಂದರೆ, ಆಧುನಿಕ ವಧು ತನ್ನ ಇಚ್ಛೆಯನ್ನು ಪೂರೈಸಿಕೊಳ್ಳುವಂತೆ ಅಲಂಕರಿಸಿಕೊಂಡು ಚೆಂದವಾದ ಉಡುಪನ್ನು ಧರಿಸಿ, ಪರಂಪರೆಯ ಪ್ರತೀಕವಾದ ವೃದ್ಧ ಅತ್ತೆಯ ಇಂಗಿತವನ್ನೂ ವಿಧೇಯತೆಯಿಂದ ಪರಿಪಾಲಿಸುವುದು. ಆ ತರುಣಿ ತೊಡುವುದು 'ಬರಿಯ' ಬುರ್ಖಾ ಅಲ್ಲ, 'ಸ್ವಂತ' ಬುರ್ಖಾ ಅಲ್ಲ; ತನ್ನ ಗಂಡನ ತಾಯಿಯ ಅರ್ಥಾತ್ 'ಅತ್ತೆ'ಯ ಬುರ್ಖಾ. ಅಲ್ಲೂ ಕೂಡ ತಾನು ಸ್ವತಂತ್ರಳಾದರೂ ಅದಕ್ಕೊಂದು ಹಳೆಯ ಸಾಂಪ್ರದಾಯಿಕ ನಿರ್ಬಂಧ, ಕಟ್ಟುಪಾಡಿರುವುದನ್ನು ನಿಸಾರರು ಬಹಳ ಕೌಶಲ ಹಾಗೂ ಬುದ್ಧಿವಂತಿಕೆಯಿಂದ ಸೂಚಿಸಿದ್ದಾರೆ.

—ಮೇಲೆ ಉದ್ಧರಿಸಿರುವ ಕವನದ ಸಾಲುಗಳನ್ನು ಓದುತ್ತಿರುವಾಗ, ಕೊನೆಯ ಒಂದು ಸಾಲು ಬರುವತನಕವೂ ಉಸಿರು ಬಿಗಿ ಹಿಡಿದು ನಾವೂ ಮುಂದೆ ಘಟಿಸಲಿರುವುದನ್ನು ಕಾತರದಿಂದ ಕಲ್ಪಿಸಿಕೊಳ್ಳುತ್ತಿರುತ್ತೇವೆ.

'ನೋಡಿದರೆ ಉಟ್ಟಿದ್ದಳು ನಮ್ಮಮ್ಮನ ಬುರ್ಖಾ' ಎನ್ನುವ ಸಾಲು ಅನಿರೀಕ್ಷಿತವಾಗಿ ಸ್ಫೋಟಗೊಂಡಾಗ ನಮಗಾಗುವ ಹಾಸ್ಯಮಿಶ್ರಿತ ಖೇದಾಶ್ಚರ್ಯಗಳ ಅನುಭವ ಅನಿರ್ವಚನೀಯ. ಜೊತೆಗೇ ಆ ಹುಡುಗನ ಬಗ್ಗೆ ಪಡುವ ಮರುಕವೂ ಬಣ್ಣಿಸಲು ಅಸದಳ. ಆ ಆಘಾತದ ಕಸಿವಿಸಿಯ ಬಿಸಿ ನಮಗೂ ತಟ್ಟುತ್ತದೆ. ಆಳವಾಗಿ ಚಿಂತನೆ ನಡೆಸುವಾಗ, ವ್ಯಕ್ತಿ

ಸ್ವಾತಂತ್ರ್ಯದ ನಡುವೆಯೂ ಒಂದು ಸ್ವಂತ ಹಿತಕಾರಿಯಾದ ಮತ್ತು ಸಮಾಜದ ಒಳಿತಿಗೆ ಸಹಕಾರಿಯಾದ ಸಂಯಮಿತ ನಿರ್ಬಂಧ, ಮೇರೆ ಮಿತಿ ಇರುವುದು ಆದೇಯ ಎನಿಸುತ್ತದೆ.

ಜೊತೆಗೇ ಎಷ್ಟೇ ವಿದ್ಯಾವಂತರಾದರೂ ವೈಚಾರಿಕ ಪ್ರಜ್ಞೆ ಇದ್ದರೂ ಈ ಆಚಾರ ಪದ್ಧತಿಗಳ, ಸಾಂಪ್ರದಾಯಿಕ ರೀತಿ ರಿವಾಜುಗಳ ಬೇಲಿಯೊಳಗೇ ಬಂಧಿತರಾಗಿರುವಂತಹ ಮುಸ್ಲಿಂ ಸಮುದಾಯದ ಪಾಡು ಬೆಚ್ಚಿಬೀಳಿಸುತ್ತದೆ; ಗಂಭೀರ ಚಿಂತನೆಗೆ, ಆತ್ಮಾವಲೋಕನಕ್ಕೆ ನಮ್ಮನ್ನು ಒಳಪಡಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ಕವನದಲ್ಲಿ ನಿಸಾರರು ಪರಂಪರೆ-ಆಧುನಿಕತೆಗಳ ಸಮಜಾಯಿಷಿಗೊಳ್ಳದ ತಿಕ್ಕಾಟದ ಚಿತ್ರಣ ನೀಡಿರುವುದು ಕೇವಲ ಹೃದ್ಯವಷ್ಟೇ ಅಲ್ಲ, ಅತ್ಯಂತ ಪ್ರಸ್ತುತವೂ ಆಗಿದೆ. ಇಂತಹ ಅಪೂರ್ವವಾದ ಮುಸ್ಲಿಂ ಸಮಾಜದ ಮಹಿಳೆಯರಿಗೆ ಸಂಬಂಧಿಸಿದ ಒಂದು ಮಹತ್ವದ ಸಮಸ್ಯೆಯನ್ನು ಮೊದಲ ಬಾರಿಗೆ ಕನ್ನಡ ಸಾಹಿತ್ಯದಲ್ಲಿ ಪ್ರಸ್ತಾಪಿಸಿ ದಾಖಲಿಸಿರುವುದಲ್ಲದೆ, ಮತ್ತೆ ಯಾರೂ ಇಷ್ಟು ಚಿತ್ತಾಕರ್ಷಕವಾಗಿ, ಹಾಸ್ಯ ಲೇಪಿತವಾದರೂ ತುಂಬು ಗಂಭೀರ ಭಾವಾರ್ಥ ದ್ಯೋತಕವಾದ ರೀತಿಯಲ್ಲಿ ಹಾಗೂ ಕಥಾನಕ ಧಾಟಿಯಲ್ಲಿ ಬರೆಯುವುದು ಸಾಧ್ಯವಿಲ್ಲದಂತಹ ಅನನ್ಯತೆಯನ್ನು ಸಾಧಿಸಿದ್ದಾರೆ. ಕನ್ನಡ ಕಾವ್ಯದ ಅಪರೂಪದ, ಅಮೂಲ್ಯ ಕವನ ರತ್ನ 'ಅಮ್ಮ, ಆಚಾರ, ನಾನು' ಕವಿತೆ. ಎಂದೇ, ಇದು ಕಾಲ ಕಳೆದಂತೆಲ್ಲ ತನ್ನ ಉಜ್ವಲತೆಯನ್ನು ಹೆಚ್ಚಿಸಿಕೊಳ್ಳುತ್ತ ಕಾವ್ಯ ರಸಿಕರಿಗೆ ಹೆಚ್ಚು ಹೆಚ್ಚು ಅಪೇಕ್ಷಣೀಯವೆನ್ನಿಸುತ್ತಿರುವುದು.

ಕೋಮುವಾರು ಪೆಡಂಭೂತ ಮತಧರ್ಮದ ಸುರಕ್ಷಾ ಕವಚವನ್ನು ಮೈಗೇರಿಸಿ ಕೊಂಡು, ಅದರ ತರಾವರಿ ರಂಗುಗಳ ಮೆರವಣಿಗೆಯಿಂದ ಜನ ಸಾಮಾನ್ಯರಿಗೆ ಮೋಡಿ ಹಾಕಿ ಸೆಳೆದು, ಮುಗ್ಧರನ್ನು ತೊತ್ತಳದುಳಿದು ಹೊಸಕಿ ಹಾಕುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ, ಅಭಿಪ್ರಾಯ ಭೇದವನ್ನು ನ್ಯಾಯಸಮ್ಮತವಾದ ಮಾತುಕತೆಗಳ ಮೂಲಕ ಬಗೆ ಹರಿಸಲು ಅಣಿಯಾಗದೆ, ತಲೆಯಾಳುಗಳನ್ನು ಹಿಕ್ಮತ್ತು ಹೀನೋಪಾಯಗಳಿಂದ ಕೊನೆಗಾಣಿಸುವ ವ್ಯಾಪಕ ಹಿಂಸಾಚಾರ, ಕಗ್ಗೊಲೆಗಳು ಜೀವನ ಶೈಲಿಯಾಗುತ್ತಿವೆ. ಇವೊತ್ತಿನ ಉಧ್ವಸ್ತ ಸ್ಥಿತಿಯನ್ನು ಗಮನಿಸಿದಾಗ ಗಾಂಧಿ ನೆಹರು ಅವರಂತಹ ಎತ್ತರದ ಚೇತನಗಳ ಬರವಿಗಾಗಿ ನಾಡು ಅಣಿಯಾಗುತ್ತಿರಬಹುದೇ ಎಂದೂ ಅನ್ನಿಸುತ್ತದೆ—ಗುಡುಗು ಸಿಡಿಲು ಝುಂಝಾವಾತಗಳಿಂದ ತಾಡಿತವಾದ ಕಾರಿರುಳಿನ ಅಧ್ವಾನದ ಅನಂತರ ಮನೋಹರವಾದ ಹೊಚ್ಚ ಹೊಸ ಮುಂಜಾವು ಎವೆ ತೆರೆಯುವಂತೆ, ಪ್ರಕೃತಿ ಯಲ್ಲಿ ಶಾಂತಿ ಸಾಮರಸ್ಯಗಳ ಸಮತೋಲನದ ವಿಲಾಸ ಪುನಃ ಸ್ಥಾಪಿತ ವಾಗುವಂತೆ.

(ನೆಹರು ವಿಚಾರಗಳ ಪ್ರಸ್ತುತತೆ)

ಭಾಗ–೪

ಅ) ಬಿಡಿ ಕವನ ಸಂಕಲನ ಗಳ ಸಮಾಲೋಕನ





'ಮನಸು ಗಾಂಧಿ ಬಜಾರು':
ಮಾತಿನ ಕುಂದಣ ಕೆಲಸದ ಕೌಶಲ

♦ ಡಾ. ಕೆ. ಎಸ್. ನರಸಿಂಹಸ್ವಾಮಿ

ತರುಣ ಕವಿಯೊಬ್ಬ ತನ್ನ ಮೊಟ್ಟ ಮೊದಲನೆಯ ಕವನ ಸಂಗ್ರಹವನ್ನು ಪ್ರಕಟಿಸುತ್ತಿರುವ ಸಂದರ್ಭದಲ್ಲಿ ಇನ್ನೊಬ್ಬ ಸ್ನೇಹಿತರಿಂದ ಒಂದು ಮುನ್ನುಡಿಯನ್ನು ಬಯಸುವುದು ಸಾಮಾನ್ಯ ರೂಢಿ. ಇಂಥದೊಂದು ಲೇಖನವನ್ನು ತನ್ನ ಸಂಗ್ರಹಕ್ಕೆ ಸೇರಿಸುವುದರಿಂದಲೇ ತನ್ನ ಕೃತಿಯ ಮೌಲ್ಯ ಹೆಚ್ಚುವುದಿಲ್ಲವೆಂಬುದು ಆತನಿಗೂ ತಿಳಿದ ವಿಷಯವೇ. ಆದರೂ ಹೊಸ ಕವಿಯೊಬ್ಬನ ಪರಿಚಯವನ್ನು ಮಾಡಿಕೊಡುವ ಮುನ್ನುಡಿಯನ್ನು ಒಳ್ಳೆಯ ಕೆಲಸವೆಂದೇ ನಾನು ಪರಿಗಣಿಸುತ್ತೇನೆ.

ಈ ಮುನ್ನುಡಿಯ ಉದ್ದೇಶವೂ ಈ ಸಂಗ್ರಹದ ಲಘು ಪರಿಚಯವೇ ಹೊರತು ಸಮಗ್ರ ವಿಮರ್ಶೆಯಲ್ಲ. ಆ ಕೆಲಸವನ್ನು ಸಹೃದಯ ವಿಮರ್ಶಕರು ನಾಳೆ ಮಾಡುತ್ತಾರೆ. ನನಗೆ ಕೂಡ ಈ ಕವಿಯ ಪರಿಚಯ ಆರು ವರ್ಷಗಳ ಈಚಿನದು. ಇವರ ಎಲ್ಲಾ ಕೃತಿಗಳನ್ನೂ ನೋಡಿಲ್ಲ. ಈ ಪುಸ್ತಕ ಅಚ್ಚಾಗುತ್ತಿರುವ ಸಮಯದಲ್ಲಿ ಇಲ್ಲಿನ ಕವನಗಳ ಪರಿಚಯ ನನಗೆ ತಕ್ಕ ಮಟ್ಟಿಗೆ ಆಗಿದೆ. ರೇಡಿಯೋ ಮೂಲಕ, ಪತ್ರಿಕೆಗಳ ಮೂಲಕ ಇಲ್ಲಿನ ಕೆಲವು ಕವನಗಳು ಈಗಾಗಲೇ ಪ್ರಸಾರಗೊಂಡಿವೆ.

ಇಂದಿನ ತರುಣ ಕವಿಗಳಲ್ಲಿ ಕೆ. ಎಸ್. ನಿಸಾರ್ ಅಹಮದ್ ಅವರ ಹೆಸರು ಹೆಚ್ಚು ಜನರ ಗಮನವನ್ನು ಸೆಳೆದಿದೆ. ಇದು ಅವರ ಮೊದಲನೆಯ ಕವನ ಸಂಗ್ರಹ.

ಈ ಸಂಗ್ರಹವನ್ನು ನೋಡುತ್ತಾ ಇದು ಎರಡು ಪ್ರತ್ಯೇಕ ಸಂಪ್ರದಾಯಗಳ ಕವನಗಳ ಸಂಕಲನವೆಂಬುದನ್ನು ಗಮನಿಸಿದ್ದೇನೆ. ಪೂರ್ವಾರ್ಧದ ಕವನಗಳು ಹೆಚ್ಚು ಕಡಿಮೆ ರೊಮ್ಯಾಂಟಿಕ್ ಸಂಪ್ರದಾಯದ ಕೆಲವು ಮಾದರಿಗಳನ್ನು ಅನುಸರಿಸಿವೆ. ಸುಂದರವಾದ ಭಾವಗಳನ್ನು ಒಳಗೊಂಡು ಇಂಪಾಗಿವೆ. ಇವನ್ನು ಹಾಡಲೂ ಬಹುದು. ಈ ಸೌಕರ್ಯಕ್ಕೆ ಮನಸ್ಸು ಕೊಟ್ಟ, ಈ ಭಾಗದ ಕವನಗಳು ಹೆಚ್ಚಿನ ಸ್ವಾತಂತ್ರ್ಯವನ್ನೂ ಚಿಂತನೆಯ ಚಿಕಿತ್ಸೆಯನ್ನೂ ಪಡೆಯುವುದು ಆಗಲಿಲ್ಲ. ಆದರೂ ಇವುಗಳ ತಾರುಣ್ಯದ ಮುಗ್ಧತೆ ಸಹಜವಾಗಿದೆ; ಇವುಗಳ ರಚನೆ ಸರಳವೂ ನೇರವೂ ಆಗಿದೆ.

ಉತ್ತರಾರ್ಧದ ಕವನಗಳ ಅರ್ಥ, ಪೂರ್ವಾರ್ಧದ ಕವನಗಳಷ್ಟು ಸರಳವೂ ಸ್ಪಷ್ಟವೂ ಆಗಿಲ್ಲ. ರೂಪ, ರಚನೆಗಳಲ್ಲಿ ಮತ್ತು ಛಂದಸ್ಸಿನಲ್ಲಿ ಅವು ಹೆಚ್ಚಿನ ಸ್ವಾತಂತ್ರ್ಯವನ್ನು ವಹಿಸಿವೆ. ಇಂಗ್ಲೀಷ್ ನವ್ಯ ಪದ್ಧತಿಯ ಕಡೆಗೆ ಇವರಿಗೆ ಹೆಚ್ಚು ಒಲವಿರುವುದು ಅಲ್ಲಿ ಕಾಣುತ್ತಿದೆ. ಆ ಧಾಟಿಯ ಕವನಗಳ ರಚನೆಗೆ ಇಲ್ಲಿ ಪ್ರಯತ್ನ ನಡೆದಿರುವುದನ್ನೂ ಕಾಣಬಹುದು.

ಇವೆರಡಕ್ಕೂ ಸಮಾನಾಂಶಗಳಾಗಿವೆ, ಇಲ್ಲಿನ ಪದ ಮೈತ್ರಿ ಮತ್ತು ಲಲಿತ ಶೈಲಿ. ಇವೆರಡು ಸಂಪ್ರದಾಯಗಳಲ್ಲಿ—ಎಂದರೆ ರೊಮ್ಯಾಂಟಿಕ್ ಮತ್ತು ನವ್ಯ—ಯಾವುದು ಉತ್ತಮ ಎನ್ನುವ ಪ್ರಶ್ನೆಗಿಂತ, ಪ್ರತಿಯೊಂದು ಕವನ ತನ್ನ ರೀತಿಯಲ್ಲಿ ತಾನು ಗುರಿ ಮುಟ್ಟಿದ ಕವಿತೆಯಾಗಿದೆಯೆ? ಎನ್ನುವುದೇ ಪ್ರಶ್ನೆ. ಈ ಮೊದಲನೆಯ ಸಂಗ್ರಹದ ಅವಧಿಯಲ್ಲಿಯೇ ಈ ತರುಣ ಕವಿಯ ಮನಸ್ಸು ಒಂದು ಮಾರ್ಗವನ್ನು ಬಿಟ್ಟು ಇನ್ನೊಂದಕ್ಕೆ ಕೂಡಿಕೊಳ್ಳಲು ಹವಣಿಸುವುದು ಇಲ್ಲಿ ಕಾಣುತ್ತಿದೆ.

ಈ ಕವಿಗಿರುವ ನವಿರಾದ ಸೌಂದರ್ಯ ದೃಷ್ಟಿಯೂ ಮಾತಿನ ಕುಂದಣದ ಕೆಲಸದಲ್ಲಿ ಇರುವ ತೋರುತ್ತಿರುವ ಜಾಣ್ಮೆಯೂ ಇವರ ಕವನಗಳಿಗೆ ನುಣ್ಪನ್ನೂ ಮೃದುತ್ವವನ್ನೂ ತಂದುಕೊಟ್ಟಿವೆ. ನನಗೇನೋ ಈ ಕವಿ ಕಟ್ಟುವ ಹಲವಾರು ಚಿತ್ರಗಳ ಸೊಗಸು ತುಂಬ ಹಿಡಿಸಿದೆ. ಈ ಸಂಗ್ರಹದ ಉದ್ದಕ್ಕೂ ವಿಧವಿಧವಾದ ಆಸೆಯ ಪ್ರಕರಣಗಳಿವೆ.

ಯಾವ ಆಸೆಯೂ ಅರಿವಿನ ಸಹಾಯವಿಲ್ಲದೆ ಸಿದ್ಧಿಸುವುದಿಲ್ಲ;

'ಇದು ಸನಾತನ ವೃಕ್ಷ; ಮೆದುಳಿದರ ಬೇರು, ಇದನೇರು;
ತುದಿಗೆ ತೂಗಿದ ಚೀಲದೊಳಗೆ ಏನೇನಿಹುದೊ ಹುಡುಕಿ
ನೋಡು!'

'ಪಂಜರದ ಗಿಣಿ'ಯಲ್ಲಿ ಸಾಮಾಜಿಕ ಪ್ರಜ್ಞೆಯ ಪ್ರತಿಧ್ವನಿಯಿದೆ. ಎಷ್ಟೋ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದ ಜೀವ ಇತ್ತೀಚಿನ ಕಠಿನ ವರ್ಷಗಳಲ್ಲಿ ಪಡುತ್ತಿರುವ ಕಷ್ಟ ನಷ್ಟಗಳನ್ನು ಕವಿ ಈ ಪ್ರತೀಕದ ಮೂಲಕ ಇಲ್ಲಿ ಚಿತ್ರಿಸಿದ್ದಾರೆ. ಭ್ರಾಂತಿಯೊಡೆದ ಜೀವ—

'ಬೇಸಗೆಯ ದಾಹಕ್ಕೆ ಬಲಿಯಾದ ಹೊಳೆ ನಾನು,
ಮಳೆ ಮಾಂತ್ರಿಕನ ಹೆಜ್ಜೆ ದನಿಗೆ ಕಾದಿರುವವನು,

ಅವನಿನ್ನು ನನ್ನೆಡೆಗೆ ಬಾರನೇನು?
ಬತ್ತಿದೆದೆಯಲಿ ಮತ್ತೆ ನಗುವ ನೀರನು ಬಿತ್ತಿ
ಕಡಲೆಡೆಗೆ ಕೈಹಿಡಿದು ನಡೆಸನೇನು?'

—ಎಂದು ತವಕಪಡುತ್ತಿದೆ. ತನ್ನನ್ನು ಸಿಂಗರಿಸುವ ನೆಪದಲ್ಲಿ ತನ್ನ ಕಾಲಿಗೆ ಬಿಗಿದಿರುವ ನಕಲಿ ಚಿನ್ನದ ದಾರ ಇರದಿದ್ದರೇ ಚೆನ್ನಾಗಿತ್ತೆಂದು ಅದು ಕೊರಗುತ್ತದೆ.

ಇಂಥದೇ ಬಗೆಯ ಕವನ 'ಇಪ್ಪತ್ತನೆಯ ಶತಮಾನದ ಕೊಲಂಬಸ್'. ಈ ಲೋಕಕ್ಕೆ ಶಾಂತಿ ಸೌಭಾಗ್ಯಗಳ ಹೊಸ ನೆಲೆಯನ್ನು ಕಾಣಿಸಹೊರಟ ಇಂದಿನ ಈ 'ನಾಯಕ' ಇನ್ನೊಬ್ಬ ಕೊಲಂಬಸ್ ಎಂಬುದು ಈ ಕವನದ ಎಣಿಕೆ. ಅವನು ಎದುರಿಸಿದ ವಸ್ತುಸ್ಥಿತಿಯೂ ಅವನ ಆತಂಕ, ಚಿಂತೆಗಳೂ ಇಲ್ಲಿ ಮೂಡಿವೆ. ಜೊತೆಯ ನಾವಿಕರು, ಆ ದ್ವೀಪವನ್ನು ಇನ್ನು ತಮಗೆ ತೋರಿಸದಿದ್ದರೆ ತನ್ನನ್ನು ಕೊಂದುಬಿಡುವರೇನೋ ಎಂಬ ಭಯವೂ ಅವನಿಗೆ ಒದಗುತ್ತದೆ:

'ಎಲೆ ತುದಿಯ ಹನಿ, ಎಳೆಯ ದಾರದ ಏಣಿ ನೆಚ್ಚಿ ನಿಂತೆ—
ಕೋಳಿ ಕಹಳೆಯ ವೇಳೆ ಒಂದೇ ಮಾರು!
ತೋಡ, ಭಿಲ್ಲರ ಬಿಲ್ಲು ಕಂಡು ಉಡುಗಿದೆ ಮಾತೆ;
ತೋರಬಾರದೆ ಹಸಿರು, ನೆಲದ ಗೀರು.
ನಡೆದಾಟವೋ ತೂಗು-ಕತ್ತಿಯ ಕೆಳಗೆ
ಹದ್ದುಗಣ್ಣಿನ ಹಸಿವು ಕತ್ತಲೊಳಗೆ
ತಿನಿಸು ಕಾಣದ ಬಾಯ ಚಾಟಿ ಏಟಿನ ಚುರುಕು;
ಮನಸು ರೇಸಿನ ಕುದುರೆ
ಬುದ್ಧಿ ಬೆದರಿದೆ, ಇರದೆ ಮೂಗುದಾರ!'

ನಿತ್ಯ ಜೀವನದ ದುರ್ದಮ್ಯ ಒತ್ತಡದಿಂದ ವಿಮುಕ್ತನಾಗುವ ಆಕಾಂಕ್ಷೆ:

'ಎತ್ತರೆತ್ತರಕೆಸೆದ ಕಲ್ಲು ನಾನು:
ಮಣ್ಣಿನಂಟಿಗೆ ಹೇಸಿ ತಾರೆಗಳ ಗೆಳೆತನವ ಬಯಸಿದವನು—
ಮೇಲು ಮೇಲಕೆ ಮೊಗವ ಚಾಚಿದವನು.
ಆದರೇಕೋ ನನ್ನ ಬಾಚಿ ತಬ್ಬದು ಬಾನು, ಗಾಳಿ ತಡೆಯದು ತಾನು;
ಮತ್ತೆ ಬಿದ್ದೆನೆ ಹಾಳು ನೆಲದ ತೊಡೆಗೆ!'

—ಈ ರೀತಿ ಭಾವಪೂರ್ಣವಾಗಿ ಅಭಿವ್ಯಕ್ತವಾಗುತ್ತದೆ.

ತನ್ನ ಮಹಾ ಪ್ರಯತ್ನಗಳೆಲ್ಲಾ ವಿಫಲವಾಗಿ ಅವನು:

'ನಾನಿಷ್ಟೆ ಲೋಕಕ್ಕೆ:
ತೇದಂತೆ ಕರಗುವ ಗಂಧದೊಂದು ಚಕ್ಕೆ'

ಎಂದು ವ್ಯಾಕುಲ ಪಡುತ್ತಾನೆ. ಈ ವರ್ಗದ ಕವನಗಳಲ್ಲಿ ನೆಳಲು ಹಾಕಿರುವ ನಿರಾಶೆ, ವಿಫಲತೆ ಮುಂತಾದ ಕಹಿ ಭಾವಗಳ ಚಿತ್ರಣ ಸಾಕಷ್ಟು ಹುಲುಸಾಗಿ ನಡೆದಿದೆ. ಕವಿತೆ ಈ ಭಾವಗಳನ್ನೇ ಹೊತ್ತು ಬರುವಾಗಲೂ ತನ್ನ ಚೆಲುವಿನ ನೋಟವನ್ನು ಕಳೆದುಕೊಂಡಿಲ್ಲ.

ಮೃದು ಮಧುರವಾದ,

'ಚೈನೀ ಕನ್ಯೆಯ ಮಲ್ಲಿಗೆ ಹೂವಿನ ಚಿತ್ರದ
ನೀಲಿಮ ಛತ್ರಿ,
ಈ ಬೆಳುದಿಂಗಳ ರಾತ್ರಿ.'

* * *

'ಕಿರಣದಲೆಗಳ ನಕ್ಕ ಕೋಹಿನೂರಿನ ಪಕ್ಕ
ರಾಗಮಾಲಿಕೆ ಮಾರ್ದನಿ.'

* * *

'ಕಡೆದ ಬೆಳಗಿನ ಜೇನು!
ಒಂದೊಂದು ಮರ ಗಿಡವೂ ಶಹನಾಯ್, ವಯೊಲೀನು.
ಮಂದಾರ ವನಗಳಲಿ ಸುಳಿದು ಗಂಧವ ಹೀರಿ ಬಂದ ಮಂದಾ-
ನಿಲನ ಕಂಡೆಯೇನು?
ರಾತ್ರಿಯೆಲ್ಲಾ ನಿದ್ದೆಗೆಟ್ಟು ಯಾರೋ ಹಸಿರ ಮೇಲೆ ಸುಣ್ಣವ
ಬಳಿದು ಹೋದರೇನು?
ದೇವರೂರಿನ ಗಂಗೆ ದಾರಿ ತಪ್ಪಿದಳೇನು?'

—ಹೀಗೆಯೇ ಇಲ್ಲಿನ ಕವನಗಳ ಒಳ-ಹೊರಗ ಸೊಬಗನ್ನು ಆಲೋಚಿಸುತ್ತಾ ಹೋಗಬಹುದು. ಕವಿ ಅಲ್ಲೆಲ್ಲ ಕಾಣಿಸಿರುವ ತನ್ನ ಸ್ವಂತ ಕಾಣ್ಕೆಗಳನ್ನು ಮೆಚ್ಚಬಹುದು.

೧೯೬೦

ಕಲೆ, ತಲೆಯನ್ನು ಸಂಪೂರ್ಣವಾಗಿ ಕಡೆಗಣಿಸದಿದ್ದರೂ ಅದಕ್ಕೆ ತಲೆಯ ಜೊತೆಗಿನ ಬೌದ್ಧಿಕ ವ್ಯವಹರಣೆ ಅಷ್ಟಕ್ಕಷ್ಟೆ. ಯಾವತ್ತಿಗೂ ಅದು ಆಪ್ತತೆಯಿಂದ ಸಲ್ಲಾಪಿಸಲು ಹಾತೊರೆಯುವುದು ಹೃದಯದೊಂದಿಗೆ, ಅದರ ಮಾರ್ದವ ಸ್ವಭಾವದೊಂದಿಗೆ. ಬದುಕಿಗೆ ಅರ್ಥ ಕೊಡುವ ಕಲೆಯ ಅರ್ಥವನ್ನು ತರ್ಕಯುಕ್ತಿಗಳಿಂದ ಹುಡುಕಬಾರದು. ಆಗಷ್ಟೆ ಬದುಕುವಿಕೆ ಅರ್ಥಪೂರ್ಣವೆನ್ನಿಸುವುದು.

(ಕಲೆ-ಬುದ್ಧಿ ಮತ್ತೆ)

✧ ✧ ✧

ಮಾನವ ನಾಗರಿಕತೆ ಹಾದು ಬಂದ ಹಾದಿಯ ಭಾವಚಿತ್ರ ಮೇಲ್ನೋಟಕ್ಕೆ ಗುಲಾಬೀಯವೂ ನಿಸ್ತರಂಗವೂ ಪ್ರಸನ್ನವೂ ಆಗಿ ಕಂಗೊಳಿಸಬಹುದು. ಆದರೆ ಅದರ ಅಂತರಾಳದಲ್ಲಿ ಅಸಂಖ್ಯ ಸುಳಿಗಳು, ಮಡುಗಳು ಘೂರ್ಮಿಸಿವೆ. ಮಾನವ ಸ್ವಾರ್ಥದ ಪರಿ ಪರಿಯ ವಿಷ ಜಂತುಗಳ ಉನ್ಮತ್ತ ಕ್ರೀಡಾವಿಲಾಸವೇ ಅಲ್ಲಿ ಸಾಗಿದೆ.

(ನಾಗರಿಕತೆಯ ಅಂತರಾಳದಲ್ಲಿ)



‘ಮನಸು ಗಾಂಧಿಬಜಾರು’ ಮತ್ತು ‘ನೆನೆದವರ ಮನದಲ್ಲಿ’: ಮಾನವ್ಯದ ಕಳಕಳಿಯ ಕವಿ

♦ ವತ್ಸಲಾ ಮೋಹನ್

ಒಬ್ಬ ವ್ಯಕ್ತಿ ಕವಿಯಾಗುವ ಮೊದಲು ಮಾನವೀಯತೆಯ ತಂತಿ ಮೀಟುವ ಮನುಷ್ಯನಾಗಿದ್ದರೆ ಮಾತ್ರ ಅವನ ಕಾವ್ಯತ್ವಕ್ಕೆ, ಅವನ ಯಾವುದೇ ಕೊಡುಗೆಗೆ ಒಂದು ಅರ್ಥ ಕಲ್ಪಿತವಾಗಬಲ್ಲುದು. ಇದು ಕೆ. ಎಸ್. ನಿಸಾರ್ ಅಹಮದ್ ಅವರಲ್ಲಿ ಕಾಣುವ ಒಂದು ನಿಖರವಾದ ಗುಣ. ಇದನ್ನು ನಾನು ಕಂಡುಕೊಂಡಿದ್ದು ಅವರ ಮನೆಗೆ ಹೋಗಿ ಅವರ ಜೊತೆ ಎರಡು ಗಂಟೆಗಳ ಕಾಲ ಕೂತು ಮಾತನಾಡಿದಾಗ ಮತ್ತು ನಿಸಾರರ ಮೊದಲ ಎರಡು ಕವನ ಸಂಕಲನಗಳಾದ ‘ಮನಸು ಗಾಂಧಿ ಬಜಾರು’ ಹಾಗೂ ‘ನೆನೆದವರ ಮನದಲ್ಲಿ’ಯಲ್ಲಿನ ಕವನಗಳನ್ನು ಓದಿದಾಗ.

ವಿದ್ಯಾರ್ಥಿ ಜೀವನದ, ತಾರುಣ್ಯದ ಹೊಸ್ತಿಲಲ್ಲಿ ನಿಂತಿದ್ದ ತರುಣ ಕವಿ ನಿಸಾರ್ ಅಹಮದ್ ಬರೆದ ರಚನೆಗಳ ಮೊಟ್ಟ ಮೊದಲ ಕವನ ಸಂಗ್ರಹ ‘ಮನಸು ಗಾಂಧಿ ಬಜಾರು’. ೧೯೬೦ರಲ್ಲಿ ಮೊದಲನೆಯ ಮುದ್ರಣ ಕಂಡ ಈ ಕವನ ಸಂಕಲನ ೧೯೬೬ರಲ್ಲಿ ಮರು ಮುದ್ರಣವಾಯಿತು. ‘ಮೈಸೂರು ಮಲ್ಲಿಗೆ’ಯ ಕವಿ ಕೆ. ಎಸ್. ನರಸಿಂಹಸ್ವಾಮಿಯವರು ಈ ಹೊಸ ಕವಿಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ೧೯೬೦ ರಲ್ಲಿ ಮುದ್ರಣವನ್ನು ಕಾಣುವುದಕ್ಕೆ ಮುಂಚೆಯೇ ಇವರ ಕವನಗಳು ರೇಡಿಯೋ ಹಾಗೂ ಪತ್ರಿಕೆಗಳ ಮೂಲಕ ಜನ ಮಾನಸವನ್ನು ತಲಪಿದ್ದವು. ಮುನ್ನುಡಿಯಲ್ಲಿ ಕೆ.ಎಸ್.ನ. ಅವರು ‘ಈ ಕವಿಗಿರುವ ನವಿರಾದ ಸೌಂದರ್ಯ ದೃಷ್ಟಿಯೂ ಮಾತಿನ

ಕುಂದಣದ ಕೆಲಸದಲ್ಲಿ ಇವರು ತೋರುತ್ತಿರುವ ಜಾಣ್ಮೆಯೂ ಇವರ ಕವನಗಳಿಗೆ ನುಣ್ಪನ್ನೂ ಮೃದುತ್ವವನ್ನೂ ತಂದುಕೊಟ್ಟಿವೆ. ನನಗೇನೋ ಈ ಕವಿ ಕಟ್ಟುವ ಹಲವಾರು ಚಿತ್ರಗಳ ಸೊಗಸು ತುಂಬ ಹಿಡಿಸಿದೆ' ಎಂದು ಹೇಳಿ, ಮುಂದುವರೆಯುತ್ತಾ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ: '...ಪೂರ್ವಾರ್ಧದ ಕವನಗಳು ಹೆಚ್ಚು ಕಡಿಮೆ ರೊಮ್ಯಾಂಟಿಕ್ ಸಂಪ್ರದಾಯದ ಮಾದರಿಗಳನ್ನು ಅನುಸರಿಸಿವೆ. ಸುಂದರವಾದ ಭಾವಗಳನ್ನು ಒಳಗೊಂಡು ಇಂಪಾಗಿ ಹಾಡುವ ಮಟ್ಟಿನಲ್ಲಿವೆ. ರಚನೆ ಸರಳವೂ ನೇರವೂ ಆಗಿದೆ. ಆದರೆ ಉತ್ತರಾರ್ಧದ ಕವನಗಳು ಅಷ್ಟು ಸರಳವಾಗಿಲ್ಲ. ಜೊತೆಗೆ ಇಂಗ್ಲೀಷ್ ನವ್ಯ ಪದ್ಧತಿಯ ಕಡೆಗೆ ಇವರಿಗೆ ಹೆಚ್ಚು ಒಲವಿರುವುದು ಇಲ್ಲಿ ಕಾಣುತ್ತಿದೆ. ಅಂದರೆ, ಈ ತರುಣ ಕವಿಯ ಮನಸ್ಸು ಒಂದು ಮಾರ್ಗವನ್ನು ಬಿಟ್ಟು ಇನ್ನೊಂದಕ್ಕೆ ಕೂಡಿಕೊಳ್ಳುವ ಹವಣಿಕೆ ಇಲ್ಲಿ ಕಾಣುತ್ತಿದೆ' ಎಂದು ಕೆಲವು ಕವನಗಳನ್ನು ತಮ್ಮದೇ ರೀತಿಯಲ್ಲಿ ವಿಮರ್ಶಿಸಿ ಕವಿಗೆ ಶುಭ ಕೋರಿದ್ದಾರೆ.

'ಮನಸು ಗಾಂಧಿ ಬಜಾರು' ಕವನ ಸಂಗ್ರಹ ಒಟ್ಟು ೧೭ ಕವನಗಳ ಗುಚ್ಛ. ಕವಿಯ ಮನಸ್ಸು ಕೆಂಪುತೋಟ(ಲಾಲ್‌ಬಾಗ್)ದಲ್ಲಿ ಪ್ರಶಾಂತವಾಗಿ ವಿಹರಿಸಿದರೆ, ಗಾಂಧಿ ಬಜಾರಿನ ಮೂಲಕ, ಆಕಾಂಕ್ಷೆಗಳನ್ನು ರೂಢಿಸಿಕೊಂಡಿದೆ. ಆಗಿನ ತರುಣ ಮನಸ್ಸು ಕಠಿಣ ವರ್ಷಗಳಲ್ಲಿ ಪಟ್ಟ ಕಷ್ಟನಷ್ಟ, ಸಾಮಾಜಿಕ ಅಸಮಾನತೆಯ ಅನುಭವದ ಜೊತೆಗೆ ಹೊಸ ಆಲೋಚನೆ, ನಿರಾಶೆ, ವಿಫಲತೆ ಮುಂತಾದ ಕಹಿ ಭಾವನೆಗಳ ಚಿತ್ರಣವನ್ನು ಈ ಸಂಕಲನ ಬಿಚ್ಚಿಡುತ್ತದೆ.

ನಿಸಾರರ 'ಯಾತ್ರಿಕ' ಹೆಸರಿನ ಕವನ ಸುಂದರ ಪದ ಜಾಲಗಳ ಹಿನ್ನೆಲೆಯಲ್ಲಿ ಬದುಕಿನ ಅರ್ಥಗಳ ಅನ್ವೇಷಣೆಗೆ ತೊಡಗುತ್ತದೆ. ಇಲ್ಲಿನ ಸಾಲುಗಳಲ್ಲಿ ಚಿತ್ರಕ ಶಕ್ತಿಯಿದೆ. ಹೊಳೆದೂ ಗ್ರಹಿಕೆಗೆ ಮೀರಿದ ಅರ್ಥ ಚಮತ್ಕಾರವೂ ಅಡಗಿದೆ. ಬದುಕಿನ ಪಥದಲ್ಲಿ ಮುನ್ನಡೆದ ಯಾತ್ರಿಕ ಗುರಿ ಮುಟ್ಟುವ ಮುನ್ನ ವಿಭ್ರಮಕ್ಕೆ, ಐಹಿಕ ಆಮಿಷಕ್ಕೆ ಒಳಗಾಗಿ ಅನುಭವಿಸುವ ತಳಮಳವೂ ಇಲ್ಲಿದೆ:

'ಪಟ್ಟ ಅನುಭವ ಹೆಣೆದ ನೆನಪಿನ
ತೊಟ್ಟಿಲೋ ಈ ಬಾಳುವೆ!
ಇಲ್ಲಿ ನಿಟ್ಟುಸಿರಳಲ ಜೊತೆಯಲೆ
ಗೆಲವು ಸಂತಸ ತೂಗಿವೆ.' (ಯಾತ್ರಿಕ)

—ಎಂಬ ಸಾಲುಗಳು ಇಡೀ ಕವಿತೆಯ ಆಶಯವನ್ನು ಸಮರ್ಥವಾಗಿ ತೆರೆದಿಟ್ಟಿವೆ. ಕವಿಯ ಚಿತ್ರಕ ಶಕ್ತಿಯ ಸಾಮರ್ಥ್ಯಕ್ಕೆ ಈ ಕವಿತೆ ಉತ್ತಮ ಉದಾಹರಣೆಯಾಗಿದೆ. ನಿಸಾರರ ಆರಂಭಿಕ ಕವನಗಳಲ್ಲಿ ನವೋದಯ ಹಾಗೂ ನವ್ಯದ ಸಮ್ಮಿಳನವಿದೆ. ಯೌವನದಲ್ಲಿ ಬರೆದ ಪದ್ಯಗಳು ಆವೇಶದಿಂದ ಕೂಡಿದ್ದು ವೈಚಾರಿಕ ದೃಷ್ಟಿಯಿಂದ ಗಮನಾರ್ಹವೆನ್ನಿಸುವುದಿಲ್ಲ. ಆದರೆ, ಅವುಗಳಿಂದ ಕವಿಯ ಶ್ರೀಮಂತ ಭಾವನಾತ್ಮಕ ವ್ಯಕ್ತಿತ್ವದ ಪರಿಚಯವಾಗುತ್ತದೆ. ಅಲ್ಲದೆ, ಮುಂದೆ ನಿಸಾರರು ಅನುಸರಿಸಲಿರುವ ನವ್ಯದ ಸಾಂಕೇತಿಕತೆಯನ್ನು ಇಲ್ಲಿಂದಲೇ ಗುರುತಿಸಬಹುದು. ಕವನ ಸಂಕಲನದ ಶೀರ್ಷಿಕೆಯ ಪದ್ಯವಾದ 'ಮನಸು ಗಾಂಧಿ ಬಜಾರು' ಕವನದ ಬಗ್ಗೆ ಹೇಳುವ ಮುಂಚೆ, ಇದರ ಹಿಂದಿರುವ ಮನಸ್ಸಿನ ತುಡಿತವನ್ನು ಹೇಳಬೇಕು.

೧೯೫೫-೫೭ರ ಅವಧಿಯ ಕಾಲೇಜು ವಿದ್ಯಾರ್ಥಿಯ ಮನಸ್ಸು ಯಾವ ರೀತಿ ವ್ಯವಹರಿಸಬಹುದು ಎನ್ನುವುದನ್ನು ಇಲ್ಲಿ ಮನಗಾಣಬಹುದು. ಎಂದರೆ ವ್ಯವಸ್ಥೆಯನ್ನು ನೋಡುವ, ಗ್ರಹಿಸುವ ಹಾಗೂ ಅದರ ಪೊಳ್ಳುತನದ ವಿರುದ್ಧ ಸಿಡಿಯುವ ಪರಿ ಹೇಗೆ ಅಭಿವ್ಯಕ್ತವಾಗಬಹುದು ಎಂಬುದಕ್ಕೆ, ಇಲ್ಲಿನ ಕವಿತೆಗಳು ಉತ್ತಮ ಉದಾಹರಣೆಯಾಗ ಬಲ್ಲವು. ನಗರೀಕರಣದ ಭರಾಟೆ ಜನರನ್ನು ಭಂಡರನ್ನಾಗಿಸಿ, ಬೆಂಗಳೂರು ಥಳುಕಿನ ಬೆಳಕಲ್ಲಿ ಬೆತ್ತಲಾಗುವ ಬಗೆ ಇಲ್ಲಿ ಸಮರ್ಥವಾಗಿ ರೂಪು ತಳೆದಿದೆ. ಇಲ್ಲಿನ ಗದ್ದಲ, ಡಂಭಾಚಾರ, ಸೋಗಲಾಡಿತನಗಳ ನಡುವೆ ನೆಮ್ಮದಿಯನ್ನು ಅರಸುವ ಕವಿಯ ಮನಸ್ಸು ಅದನ್ನು ಹೇಳಲು ಬಳಸುವ ಉಪಮೆಗಳು ಸುಂದರವಾಗಿವೆ:

'ಆ ಹಿರಿಯ ಕುಹರದಲಿ ಮೌನಿಯಾಗುವ ಆಸೆ;
ಹವಳ ಚಿಪ್ಪಿನ ನಡುವೆ
ನುಸುಳಿ ಒಮ್ಮೆಗೆ ಮಲಗಿ ನಿದ್ರಿಸುವ ಆಸೆ' **(ಮನಸು ಗಾಂಧಿ ಬಜಾರು)**

ಎಂಬ ಸಾಲುಗಳು ಧ್ವನಿಪೂರ್ಣವಾಗಿವೆ. ಒಡೆಯ ಹೇಳಿದ್ದಕ್ಕೆಲ್ಲ ಒಪ್ಪಿ ತಲೆಯಾಡಿಸುವ ಜನರ ಬಗ್ಗೆ ಸಿಡಿಯುವ, ಹಾಗೆಯೇ ಭಟ್ಟಂಗಿತನವನ್ನು ವಿರೋಧಿಸುವ ಕವಿಯ ಮನಸ್ಸು, ಕಡೆಗೂ 'ಇದರಿಂದ ಮುಕ್ತಿಯಿಲ್ಲ' ಎಂಬ ನಿರಾಶೆಯೊಂದಿಗೆ ಕವನವನ್ನು ಕೊನೆಗೊಳಿಸು ವುದು ಕವಿತೆಯ ಒಟ್ಟು ಆಶಯಕ್ಕೆ ಧಕ್ಕೆಯಾಗಿದೆ ಎನ್ನಿಸಬಹುದು. ಸೋಲನ್ನೊಪ್ಪುವ ಬದಲು ಹೊಸ ಭರವಸೆಗೆ ಬೆಳಕು ನೀಡುವುದರಿಂದ ಕವಿತೆಯ ಸೊಬಗು ಹೆಚ್ಚಿಸುತ್ತಿತ್ತು ಎಂದು ತೋರುತ್ತದೆ.

ಮನುಷ್ಯನ ಕೀಳರಿಮೆ, ಅಸೂಯೆ ಹಾಗೂ ಅದರ ಎಲ್ಲಾ ನಿರರ್ಥಕತೆಗಳು 'ಸಿಡಿದ ಸದ್ದು' ಕವಿತೆಯೊಳಗೆ ಅಸಾಧಾರಣ ಪ್ರತಿಮೆಗಳ ಮೂಲಕ ಅನಾವರಣಗೊಂಡಿವೆ. ಇಲ್ಲಿ ಅಪೂರ್ವ ಕಲ್ಪನೆಗಳಿವೆ; ಅವುಗಳನ್ನು ಅಪ್ರತಿಮವಾಗಿ ಚಿತ್ರಿಸುವ ಮಾಂತ್ರಿಕತೆಯಿದೆ. ಪ್ರಕೃತಿಯ ಪರವಶ ಗುಣವನ್ನು, ಸುಂದರತೆಯನ್ನು ಅಭಿವ್ಯಕ್ತಿಸುವ ಮೂಲಕವೇ ಬದುಕಿನ ನಿರಾಶೆಯನ್ನೂ ಸೂಚಿಸುವುದು ನಿಸಾರರ ಇಂತಹ ಕವಿತೆಗಳ ಪ್ರಮುಖ ಗುಣವಾಗಿದೆ:

'ರಾತ್ರಿಯೆಲ್ಲಾ ನಿದ್ದೆಗೆಟ್ಟು ಯಾರೋ-
ಹಸಿರ ಮೇಲೆ ಸುಣ್ಣವ ಬಳಿದು ಹೋದರೇನು?
ದೇವರೂರಿನ ಗಂಗೆ ದಾರಿ ತಪ್ಪಿದಳೇನು?' **(ಸಿಡಿದ ಸದ್ದು)**

ಎಂಬ ಸಾಲುಗಳು ಹೇಗೋ ಹಾಗೆಯೇ—

'ಕತ್ತೆ ಕಿರುಚೇ ಇಲ್ಲಿ ವಿಜಯ ದುಂದುಭಿ—
ನೀನೂ ಹಾಗೆ ಕೂಗು' **(ಅದೇ)**

ಎಂಬ ಸಾಲುಗಳೂ ಇಲ್ಲಿವೆ. ಬದುಕಿನ ಎರಡು ವೈರುಧ್ಯಗಳ ವರ್ಣನೆ ಈ ಕವನದ ಉದ್ದಕ್ಕೂ ಕಾಣುತ್ತದೆ. ಇಂದಿನ ಸಮಾಜದಲ್ಲಿ ಆದರ್ಶಗಳು ಕೆಲಸಕ್ಕೆ ಬರುವುದಿಲ್ಲ; ವ್ಯವಸ್ಥೆಯ ಜೊತೆಗೆ ಭಟ್ಟಂಗಿಗಳಾಗಿ ಬದುಕುವವರಿಗೆ ಮಾತ್ರ ಇಲ್ಲಿ ಯಶಸ್ಸು ಎಂಬ ನಿರಾಶಾವಾದ ಮಡುಗಟ್ಟಿದೆ.

ಮನುಷ್ಯನ ಆಮಿಷಗಳು, ಲೌಕಿಕ ಆಸೆಗಳು, ಅವುಗಳನ್ನು ಮುಂದಿಟ್ಟುಕೊಂಡು ಬದುಕು ಆತನನ್ನು ನಡೆಯಿಸಿಕೊಳ್ಳುವ ಪರಿಯನ್ನು ಇಲ್ಲಿ ಮೂರು ಚಿತ್ತಾಕರ್ಷಕ ಪ್ರತಿಮೆಗಳ ಮೂಲಕ ಬಿಡಿಸಲಾಗಿದೆ. ಹಸುಳೆಯೊಂದರ ಕಲ್ಪನೆಗೆ ಎಟುಕಬಲ್ಲ ಸ್ವಚ್ಛತನದ ಚಿತ್ತಾರದ ಸಂಭ್ರಮ 'ಮೂರು ಬೆಳುದಿಂಗಳು' ಕವನದಲ್ಲಿ ವಿಜೃಂಭಿಸಿದೆ:

'ಗತ ಯುಗದ ನೂರಾರು ಚಿತ್ರದರಮನೆ ಚಿತ್ತ
ಗವಿ ಅಜಂತ' (ಮೂರು ಬೆಳುದಿಂಗಳು)

ಎಂಬ ಸಾಲುಗಳಲ್ಲಿ ವ್ಯಕ್ತವಾಗುವ ಗತ ಬದುಕಿನ ನೆನಪಿನ ಹೊಡೆತಕ್ಕೆ ಸಿಗುವ ಮನಸ್ಸು ಭವಿಷ್ಯದ ಸಾರ್ಥಕತೆಯತ್ತ ಮುಖ ಮಾಡಿ ನಿಲ್ಲುವುದು ಸುವ್ಯಕ್ತಗೊಳ್ಳುತ್ತದೆ.

ಒಟ್ಟಾರೆ ಕವನದ ಆಶಯವನ್ನು ಕವಿ ಈ ಸಾಲುಗಳಲ್ಲಿ ಸುಂದರವಾಗಿ ಹಿಡಿದಿಡುತ್ತಾರೆ:

'ಭವಿಷ್ಯ ದರ್ಶಿನಿಯಲ್ಲಿ ಕಂಡುದಿಷ್ಟು:
ಕುಂಟು ಕತ್ತೆಯ ಮುಂದೆ
ಹಿಡಿ ಹುಲ್ಲ ತೋರಿಸುತ
ಚಾಟಿ ಏಟಿನ ಮಳೆಯ ಕರೆಯುತಿಹ ನಿಷ್ಕರುಣಿ' (ಮೂರು ಬೆಳುದಿಂಗಳು)

ಬದುಕುವ ಆಶೆಗೆ ಆಮಿಷದ ಹುಲ್ಲನ್ನು ತೋರುತ್ತಾ ಮುಂದೆ ಸಾಗುವ ಅನಿವಾರ್ಯವನ್ನು ಈ ಕವಿತೆ ಪ್ರತಿಬಿಂಬಿಸುತ್ತದೆ.

'ಪಂಜರದ ಗಿಣಿ'ಯಲ್ಲಿ ಸಾಮಾಜಿಕ ಪ್ರಜ್ಞೆಯ ಧ್ವನಿಯನ್ನು ಕಂಡರೆ, 'ಇಪ್ಪತ್ತನೆಯ ಶತಮಾನದ ಕೊಲಂಬಸ್'ನಲ್ಲಿ ಇಂದಿನ ಹೊಸ ನಾಯಕನ ಕಲ್ಪನೆಯ ಜೊತೆಗೆ ಸಾಧನೆ, ಜೀವನದ ಸಂಘರ್ಷ ಹಾಗೂ ಆತ ಎದುರಿಸುವ ವಸ್ತುಸ್ಥಿತಿಯ ಆತಂಕ, ಭಯ ಹಾಗೂ ಕಾಡುವ ನಿರಾಶೆಗಳ ಮಾರ್ಮಿಕ ಚಿತ್ರಣವಿದೆ. ಒಟ್ಟಾರೆಯಾಗಿ ಹೇಳುವುದಾದರೆ 'ಮನಸು ಗಾಂಧಿ ಬಜಾರು' ಕವನ ಸಂಕಲನದಲ್ಲಿ ಅಂದಿನ ಕಾಲದ ರಮ್ಯ ಸಂಪ್ರದಾಯವನ್ನು ಅಳವಡಿಸಿಕೊಂಡು ವಯೋಮಾನಕ್ಕೆ ತಕ್ಕಂತೆ ಸರಳವಾಗಿ, ಸುಂದರವಾಗಿ ತಾರುಣ್ಯದ ಮುಗ್ಧತೆಯ ಸಹಜವಾದ ಅನುಭವಗಳನ್ನು ಪಡಿಮೂಡಿಸಲಾಗಿದೆ. ಜೊತೆಗೇ ಗಾಂಧಿ, ಟಾಗೋರ್, ಬೇಂದ್ರೆ, ಕುವೆಂಪು, ಅಡಿಗರ ಪ್ರಭಾವ ಕವಿಯನ್ನು ಆಕರ್ಷಿಸಿದಂತೆ ಕಂಡುಬರುತ್ತದೆ. ಹಗಲಿನ ಪ್ರಶಾಂತವಾದ ಲಾಲ್‌ಬಾಗ್‌ನ ಪ್ರಕೃತಿಯ ರಮ್ಯತೆಯ ಜೊತೆಗೆ, ಸಂಜೆ ಗಾಂಧಿ ಬಜಾರಿನ ಗದ್ದಲಕ್ಕೆ ನಾಲಗೆ ನೀಡುವ ಭಾವಾತ್ಮಕ ಕಾಯಕದಲ್ಲಿ ಇಲ್ಲಿನ ಕವಿತೆಗಳು ಕೃತಕೃತ್ಯತೆಯನ್ನು ಸಾಧಿಸಿವೆ.

'ಮನಸು ಗಾಂಧಿ ಬಜಾರು' ಕವನ ಸಂಕಲನದಲ್ಲೇ ನಿಸಾರ್ ಅಹಮದ್ ತಮ್ಮ ಮುಂದಿನ ಕಾವ್ಯದ ಮುಖ್ಯ ಆಶಯಗಳಲ್ಲಿ ಒಂದಾದ ಮಾನವೀಯತೆಯ ಮಹತ್ವವನ್ನು ಮೆರೆಸುವ ಅಭಿಲಾಷೆಯನ್ನು, ಅಂತಃಕರಣಪೂರ್ವಕವಾದ ಸಹಾನುಕಂಪೆಯ ಗುಣದ ಸ್ವಾಭಿವ್ಯಕ್ತಿಯನ್ನು ಸೂಕ್ಷ್ಮವಾಗಿ ಮನವರಿಕೆ ಮಾಡಿಸುತ್ತಾರೆ. ಕಾವ್ಯ ತನ್ನ ವೈಯಕ್ತಿಕ ಪಾಡುಗಳನ್ನು, ತಲ್ಲಣ-ತುಡಿತಗಳನ್ನು ದಾಟಿ ಸಾರ್ವಜನಿಕದ ಕಡೆಗೆ, ಒಟ್ಟಾರೆ ಮಾನವ್ಯದ

ಒಳಿತಿನ ಕಡೆಗೆ ತುಯ್ಯುವ ಹಂಬಲವನ್ನು ಸಾರುತ್ತಾರೆ. ಈ ಸಂಗ್ರಹದ 'ನನ್ನ ನುಡಿ' ಹೆಸರಿನ ಮೊದಲನೆಯ ಪದ್ಯದಲ್ಲೇ ಅವರು ತಾಳುವ ನಿಲುಮೆ ಗಮನೀಯವಾದದ್ದು:

'ಮಾನವ ಕೋಟಿಯ ಮೂಕ ಸಂಕಟಕೆ
ಮಾತಿನ ಪ್ರತಿನಿಧಿ ನನ್ನ ನುಡಿ;
ನಿರ್ಬಲ ಸಾಹಸವಿಹೀನ ಬದುಕಿಗೆ
ಅಭಯದ ಗುಡಿ ಈ ನನ್ನ ನುಡಿ.' (ನನ್ನ ನುಡಿ)

—ಹಾಗೆಯೇ, ಅದು ವ್ಯವಸ್ಥೆಯ ಕುಟಿಲತೆಗಾಗಲಿ, ಸಮಾಜದ ಕುತ್ಸಿತಮತಿಗಳ ಆಷಾಢ ಭೂತಿತನಕ್ಕಾಗಲಿ ಮಾರುಹೋಗದೆ, ತನ್ನತನವನ್ನು ಕಾಪಾಡಿಕೊಳ್ಳುವ ಹಾಗೂ ಮನಸ್ಸಾಕ್ಷಿಗೆ ಅನುಗುಣವಾಗಿ ನಡೆಯುವ ವ್ರತವನ್ನೂ ಕವಿ ಮನಸ್ಸು ತಾಳುತ್ತದೆ:

'ನಗೆ ಮೊಗ ತಾಳಿದ ಹಗೆ ಮಾಡುವ ಬಗೆ
ಮಾಟಕೆ ಮರುಳಾಗದು ಎಂದೂ;
ಕಪಟ ಮೋಸಗಳ ದರ್ಪಕೆ, ಆಜ್ಞೆಗೆ
ತಲೆ ಬಾಗದು ಇದು ಎಂದೆಂದೂ.' (ಅದೇ)

'ದೀಪಗಳು' ಎನ್ನುವುದು ಈ ಸಂಗ್ರಹದ ಮತ್ತೊಂದು ಸಫಲವೆನ್ನಿಸುವ ಸಾಂಕೇತಿಕ ಭಾವಗೀತೆ. ಕವಿಗೆ ತನ್ನ ಸುತ್ತ ಕವಿದಿರುವ ಸಾಮಾಜಿಕ ಅಸಮಾನತೆಯ ಅತ್ಯಗಾಧ ಗಾಢಾಂಧಕಾರದ ನಡುವೆ ಆಶಾಕಿರಣವಾಗಿ ಕಾಣುವುದು ವೈಯಕ್ತಿಕ ಮನೋನಿಶ್ಚಯದ ಹಣತೆಯ ಹೊಂಬೆಳಕು. ತಾಮಸರೂಪಿಯಾದ ಕಗ್ಗತ್ತಲೆಯ ಗಹಗಹಿಕೆ, ರೌದ್ರಾಟ್ಟಹಾಸ ಗಳಲ್ಲೂ ಕುಡಿವರೆದು ಭವಿಷ್ಯದ ಬಗೆಗಿನ ಭರವಸೆಯನ್ನು ಬಲಗೊಳಿಸುವ ಕಿರು ದೀಪ್ತಿ ಸಾತ್ತ್ವಿಕರೂಪಿಯಷ್ಟೇ ಅಲ್ಲ, ದಿವ್ಯ ಸ್ವರೂಪಿಯೂ ಹೌದು. ಅದರ ಹೊಮ್ಮುವಿಕೆ ಒಂದು ಯೋಗಾಯೋಗದ, ಅಪೂರ್ವ ಸಮ್ಮಿಲನದ ಸತ್ಫಲ. ಅದರದು ಅಮೃತ ಮುಹೂರ್ತ. ಬೆಳಕಿನ ಹಿರಿಮೆಯನ್ನು ಹಿಡಿದಿಡುವ ಈ ಪಂಕ್ತಿಗಳನ್ನು ಅವಲೋಕಿಸಿ:

'ಎಂದೊ ಒಮ್ಮೆ ಅನಿರೀಕ್ಷಿತ ಮುಗಿಲು, ನೆಲದ ಸಭೆ
ಅಂಥ ಒಂದು ದಿವ್ಯ ಗಳಿಗೆ ಫಲವೆ ನಿಮ್ಮ ಪ್ರಭೆ.
ಹೂವು ಗರಿಯ ಹುಡಿಗಳೆ,
ಕಿಡಿಯ ತೊದಲು ನುಡಿಗಳೆ,
ಬೆಳ್ದಿಂಗಳ ಮರಿಗಳೆ—
ನಡೆದಿದ್ದರು ಗಾಳಿ ದಾಳಿ,
ನಗುತಿದ್ದರು ಕತ್ತಲು,
ಬೆದರದಂತೆ ಹರಡುತಿರಿ
ನಿಮ್ಮ ಬೆಳಕ ಸುತ್ತಲು.' (ದೀಪಗಳು)

ದೀಪಗಳು 'ಕುರುಡು ತಮವ ಕೊರೆಯುವಂಥ ಬಾಣ ಬಿಟ್ಟ ಚಾಪಗಳು' ಎಂಬ ಪ್ರಾರಂಭದ ವಾಕ್ಯಾವಳಿಯೇ ಹೃದಯಸ್ಪರ್ಶಿ ಮಾತ್ರವಲ್ಲ, ಧ್ವನಿಸೂಚಕವೂ ಆಗುತ್ತದೆ.

'ಮೂರು ಬೆಳುದಿಂಗಳು' ಕವಿತೆಯಲ್ಲಿ ಸಾಂಕೇತಿಕತೆಯ ದೆಸೆಯಿಂದ ಕವಿಯ

ಆಶಯ ಅಸ್ಪಷ್ಟವೇದ್ಯವಾದರೂ ಅಲ್ಲಿ ಬರುವ ಅಪರೂಪದ ಮತ್ತು ಹೊಚ್ಚ ಹೊಸದೆನ್ನಿಸುವ ನುಡಿ ಚಿತ್ತಾರಗಳು ಆಪ್ಯಾಯಮಾನವೆನ್ನಿಸುತ್ತವೆ. ಒಂದನ್ನು ನಿದರ್ಶನಕ್ಕಾಗಿ ನೀಡುತ್ತಿದ್ದೇನೆ:

'ಚೈನೀ ಕನ್ಯೆಯ ಮಲ್ಲಿಗೆ ಹೂವಿನ
ಚಿತ್ರದ ನೀಲಿಯ ಛತ್ರಿ
ಈ ಬೆಳುದಿಂಗಳ ರಾತ್ರಿ.
ತಿದ್ದುತಿವೆ ತೆಂಗು ಗರಿ ಬಾಚಣಿಗೆ ಅಲ್ಲಲ್ಲಿ
ಇರುಳ ಗಾಳಿಯ ಕುರುಳ
ಹಾಲು ಕುಡಿದಿವೆ ಹರಳು-ಮರಳ ಜೋಳ.' **(ಮೂರು ಬೆಳುದಿಂಗಳು)**

'ಪಂಜರದ ಗಿಣಿ' ಈ ಸಂಕಲನದ ಬಹು ಮುಖ್ಯ ಕವನ. ಇದು ಕವಿ ಮನಸ್ಸಿನ ಅಂದಿನ ಸ್ಥಿತಿಗಳನ್ನು ಹೇಗೋ ಹಾಗೆ ಸೃಜನಾತ್ಮಕ ವ್ಯಕ್ತಿತ್ವವಿರುವ ಸುಕುಮಾರ ವ್ಯಕ್ತಿಗಳ ಸ್ವತಂತ್ರ ಮನೋವೃತ್ತಿಯನ್ನು ಬಗ್ಗುಬಡಿಯುವ ನಿರ್ದಯ ಸಮಾಜದ ನಯ ವಂಚಕ ಕುಯುಕ್ತಿಯನ್ನೂ ಸಂಕೇತಿಸುತ್ತದೆ. ವ್ಯವಸ್ಥೆಯಿಂದ ತ್ರಸ್ತಗೊಂಡ ಮುಗ್ಧ ಮನಸ್ಸಿನ ಆರ್ತತೆ ಈ ಸಾಲುಗಳಲ್ಲಿ ಪ್ರತೀಕಾತ್ಮವಾಗಿ ಪ್ರತಿಧ್ವನಿಸಿದೆ:

'ಬೇಸಗೆಯ ದಾಹಕ್ಕೆ ಬಲಿಯಾದ ಹೊಳೆ ನಾನು
ಮಳೆ ಮಾಂತ್ರಿಕನ ಹೆಜ್ಜೆ ದನಿಗೆ ಕಾದಿರುವವನು.
ಅವನಿನ್ನು ನನ್ನೆಡೆಗೆ ಬಾರನೇನು?
ಬತ್ತಿದೆದೆಯಲಿ ಮತ್ತೆ
ನಗುವ ನೀರನು ಬತ್ತಿ
ಕಡಲೆಡೆಗೆ ಕೈಹಿಡಿದು ನಡೆಸನೇನು?' **(ಪಂಜರದ ಗಿಣಿ)**

ಒಟ್ಟಿನಲ್ಲಿ, 'ಮನಸು ಗಾಂಧಿ ಬಜಾರು' ಸಂಗ್ರಹ ಅನನ್ಯ ಹಾಗೂ ಮಹತ್ವದ ಕವಿಯೊಬ್ಬನ ಆಗಮನವನ್ನು ಸಾರುತ್ತದೆ.

೨

ಕವಿ ನಿಸಾರರು ತಮ್ಮ ಸ್ವಕೀಯ ಛಾಪಿಗೆ ಮರಳಿದ್ದನ್ನು, ಅಂದರೆ ಹಿರಿಯ ಕವಿಗಳ ಪ್ರಭಾವವನ್ನು ದಾಟಿ ಸ್ವಂತತನವನ್ನು ರೂಢಿಸಿಕೊಂಡದ್ದನ್ನು ನಾವು ಅವರ 'ನೆನೆದವರ ಮನದಲ್ಲಿ' ಹೆಸರಿನ ಕವನ ಸಂಕಲನದಲ್ಲಿ ಕಾಣಬಹುದು. ಇದು ಅವರ ಎರಡನೆಯ ಕವಿತಾ ಸಂಕಲನ. ಇದರಲ್ಲಿ ಸುಮಾರು ೨೮ ಕವನಗಳಿವೆ. ೧೯೬೪ರಲ್ಲಿ ಈ ಸಂಕಲನ ಪ್ರಕಟವಾಯಿತು. ಅನಂತರ ೧೯೯೧ರಲ್ಲಿ ಮರು ಮುದ್ರಣ ಕಂಡಿತು. ಅವರೇ ಮುನ್ನುಡಿಯಲ್ಲಿ 'ನನ್ನ ಕಾವ್ಯದಲ್ಲಿ ಒಂದು ಹದ ಕಾಣಿಸಿಕೊಂಡಿದ್ದು ಇತ್ತೀಚೆಗೆ. ಅಂದ ಮಾತ್ರಕ್ಕೆ ಕಾವ್ಯಸಿದ್ಧಿ ಗಳಿಸಿದ್ದೇನೆ ಎಂಬ ಅಹಂಭಾವವಿಲ್ಲ' ಎಂದು ಹೇಳಿದ್ದಾರೆ. ನವ್ಯದ ಹೊರಳು ಹಾದಿಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಒಟ್ಟಾರೆ 'ನೆನೆದವರ ಮನದಲ್ಲಿ' ಎಂಬ ಕವಿತೆಗಳ ಗುಚ್ಛ ಕನ್ನಡ ಕಾವ್ಯಲೋಕದಲ್ಲಿ ಹೊಸ ಬಣ್ಣದ, ಹೊಸ ರೂಪದ, ಹೊಸ ಚೈತನ್ಯದ, ಹೊಸ ತಳಿಯ ಹೂವುಗಳಿಂದ ಅಲಂಕೃತವಾಗಿದೆ. ಇಲ್ಲಿ ಯುವ ಕವಿಯ ಬದುಕಿನ ಬಗೆಗಿನ

ನೋಟಗಳು ಬಿಡಿ ಬಿಡಿಯಾಗಿ, ಸಂದರ್ಭಕ್ಕೆ ಅನುಗುಣವಾಗಿ ಅಭಿವ್ಯಕ್ತಿಗೊಂಡಿವೆ. ಭರವಸೆಯ ಹೊಸ ಕವಿಯ ಆಗಮನವನ್ನು ಈ ಕವಿತೆಗಳು ಸಾರುತ್ತವೆ.

ಈ ಸಂಗ್ರಹದ 'ಬಿತ್ತನೆ' ಹೆಸರಿನ ಕವನ, ಸೃಷ್ಟಿಕ್ರಿಯೆಯ ಹಿಂದಿನ ಮಾನವನ ತಳಮಳದ ಅನನ್ಯ ಚಿತ್ರಣವನ್ನು ನೀಡುತ್ತದೆ. ಲಕ್ಷ ಕಾಳುಗಳನ್ನು ಬಿತ್ತಿದರೆ, ಪುಣ್ಯ ಮಾಡಿದವು ಮಾತ್ರ ಮೊಳಕೆಯೊಡೆಯುವುದು. ಹೊಸ ಜೀವವೊಂದು ಇಹಲೋಕಕ್ಕೆ ಅಡಿಯಿಡುವ ಸಂದರ್ಭದಲ್ಲಿ, ಆ ಜೀವಕ್ಕೆ ಕಾರಣರಾದವರ ಒಡಲಾಳದ ತಲ್ಲಣವನ್ನು ಬೀಜದಿಂದ ಮೊಳಕೆಯೊಡೆಯುವ ಸಸಿಯ ಸೃಷ್ಟಿಯ ಕ್ರಿಯೆಗೆ ಹೋಲಿಸಿ, ತನ್ಮೂಲಕ ಕವಿತೆಯ ಉದ್ಭವವನ್ನೂ ನಿಸಾರರು ಇಲ್ಲಿ ಸಮರ್ಥ ಪ್ರತಿಮೆಯ ಮೂಲಕ ಕಟ್ಟಿಕೊಟ್ಟಿದ್ದಾರೆ.

ಹುಟ್ಟಲಿರುವ ಹೊಸ ಜೀವ ಯಾವ ವಿರೂಪವೂ ಇಲ್ಲದೆ ಸುಗುಣಸಂಪನ್ನವಾಗಿ ಹುಟ್ಟಲಿ ಎಂದು ಆ ಜೀವಕ್ಕೆ ಕಾರಣಕರ್ತರಾದವರ ಎದೆಯಲ್ಲಿ ಉಂಟಾಗುವ ತಳಮಳ ವನ್ನು ಇಲ್ಲಿ ಕವಿ ಹಿಡಿದಿಡುತ್ತಾರೆ. ಇದನ್ನು ಬಣ್ಣಿಸಲು ಅವರು ನಕಲಿ ಕಾಳಿನ, ಅನ್ಯ ಬೀಜದ, ವಿಜಾತೀಯ ಹಾಗೂ ವಿರೂಪದ ಕಾಳುಗಳ ವಿವಿಧ ಚಿತ್ರಗಳ ಮೊರೆ ಹೋಗುತ್ತಾರೆ.

'ಶುಕ್ಲಾಣುಕೋಟಿಯಲಿ ಕೋಶಕಂಟುವುದೊಂದೇ ಯೋಗ್ಯ ಬಿಂದು' ಎಂಬ ಒಂದೇ ಸಾಲಿನಲ್ಲಿ ಇಡೀ ಕವನದ ತಲ್ಲಣದ ತಾರ್ಕಿಕ ಅಂತ್ಯಕ್ಕೆ ತಲಪುತ್ತಾರೆ.

ನಿಸಾರರ 'ಕುರಿಗಳು, ಸಾರ್, ಕುರಿಗಳು' ಹೆಸರಿನ ಸುಪ್ರಸಿದ್ಧ ಕವನ ಅತ್ಯಂತ ಜನಪ್ರಿಯ ಭಾವಗೀತೆಯಾಗಿ, ಚಲಚ್ಚಿತ್ರದ ಶೀರ್ಷಿಕೆಯಾಗಿ, ಧಾರಾವಾಹಿಯೊಂದರ ತಲೆ ಬರಹವಾಗಿ, ಕಡೆಗೆ ಜನರ ನುಡಿಗಟ್ಟಾಗಿ ಉಳಿದುಬಿಟ್ಟಿದೆ. ಕನ್ನಡ ಸಂಸ್ಕೃತಿಯ ಒಂದು ಭಾಗ ವಾಗಿ ಬಿಟ್ಟಿದೆ. ಎಸ್. ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಶಾಂತವೇರಿ ಗೋಪಾಲಗೌಡರು ಅಸೆಂಬ್ಲಿಯಲ್ಲಿ ಈ ಕವನವನ್ನು ಇಡಿಯಾಗಿ ಓದಿ ಸರಕಾರದ ಕಾರ್ಯವೈಖರಿಯನ್ನು ಟೀಕಿಸಿದ್ದರು. ತುರ್ತು ಪರಿಸ್ಥಿತಿಯ ವರ್ಷಗಳಲ್ಲಿ ರೇಡಿಯೋದಲ್ಲಿ ಈ ಕವನವನ್ನು ಬ್ಯಾನ್ ಮಾಡಿದ್ದರು.

ಭಾರತದ ಮೇಲೆ ಚೀಣಿಯರ ಆಕ್ರಮಣ(೧೯೬೨)ವಾದ ಕಾಲದಲ್ಲಿ ರಚಿತವಾದ 'ಕುರಿಗಳು, ಸಾರ್, ಕುರಿಗಳು' ಇಂದಿಗೂ ಪ್ರಸ್ತುತವಾಗಿದೆ. ಇಂತಹ ಅದೃಷ್ಟ ಪಡೆದ ಕನ್ನಡದ ಕವನಗಳು ವಿರಳಾತಿವಿರಳವೆನ್ನಬೇಕು.

ಇದೊಂದು ಸಂಕೀರ್ಣ, ಬಹುಮುಖ ಹಾಗೂ ಅತ್ಯಂತ ಕಟು ವಿಡಂಬನಾತ್ಮಕ ಪ್ರತಿಮೆಗಳುಳ್ಳ ಕವನ. ಇಲ್ಲಿ ಎಲ್ಲ ಕಾಲಕ್ಕೂ ಸಲ್ಲುವ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯ ನಗ್ನ ವರ್ಣನೆಯಿದೆ; ಜನ ಸಾಮಾನ್ಯರ ಮನಃಸ್ಥಿತಿಯ ಚಿತ್ರಣವಿದೆ. ರಾಜಕಾರಣಿಗಳು, ನಾಯಕರೆನ್ನಿಸಿಕೊಂಡವರು ಜನರನ್ನು ದಿಕ್ಕು ತಪ್ಪಿಸುವ, ಅವರ ಮುಗ್ಧತೆ ಯನ್ನು ದುರುಪಯೋಗಪಡಿಸಿಕೊಂಡು ದಬ್ಬಾಳಿಕೆ ನಡೆಸುವ ದಿಟ್ಟ ನಿರೂಪಣೆಯಿದೆ. ಕುರಿ ಮಂದೆ ಹಾಗೂ ಕುರುಬರ ಸಮೀಕರಣ ಇಲ್ಲಿ ಮನೋಜ್ಞವಾಗಿದೆ. ಹರಕೆಯ ಕುರಿಯನ್ನು

ಕಡಿಯುವ ಮಚ್ಚಿನ ವರ್ಣನೆ ಕೃತಾರ್ಥವಾಗಿದೆ. 'ಮಚ್ಚಿನ ಆ ಮೆಚ್ಚಿನಲ್ಲಿ, ಅದರಾಳದ ಕಿಚ್ಚಿನಲ್ಲಿ, ಮನೆ ಮಾಡಿವೆ ಹುಚ್ಚಿನಲ್ಲಿ ನಮ್ಮೆಲ್ಲರ ಗುರಿಗಳು' ಎಂಬ ಸಾಲುಗಳಲ್ಲಿರುವ 'ಪಂಚ್' ಅದ್ಭುತವಾಗಿದೆ. ಗೊತ್ತುಗುರಿಯಿರದ ಸಮಾಜಕ್ಕೆ ಎಚ್ಚರಿಕೆಯ ಚಾವಟಿಯ ಏಟು ಇಲ್ಲಿದೆ. ಈ ಕವಿತೆಯನ್ನು ಎಲ್ಲರ ಮನ ಮುಟ್ಟುವಂತೆ ಹಾಡಿ ಯಶಸ್ವಿಯಾಗಿ ಜನರಿಗೆ ತಲಪಿಸಿದರು ಶ್ರೀ ಮೈಸೂರು ಅನಂತಸ್ವಾಮಿ. ಕನ್ನಡದ ಉತ್ಕೃಷ್ಟ ಕವನವೊಂದನ್ನು ಗಾಯನದ ಮೂಲಕ ಲೋಕ ಪ್ರಸಿದ್ಧಗೊಳಿಸಿದ ಶ್ರೀಯುತರು ನಿಜಕ್ಕೂ ಅಭಿನಂದನಾರ್ಹರು.

ಮುಪ್ಪು ಮನುಷ್ಯನಿಗೆ ಅನಿವಾರ್ಯ. ಅದು ಮನುಷ್ಯನನ್ನು ಕಾಡುವ, ಅವನ ತಲ್ಲಣಗಳನ್ನು ಅನಾವರಣಗೊಳಿಸುವ ಮತ್ತು ಮನುಷ್ಯ ಅದನ್ನು ಸ್ವೀಕರಿಸುವ ಮನೋವೃತ್ತಿಯ ಹಿಂದಿನ ನಿರಾಕರಣೆಗಳ ಸಮರ್ಥ ಅಭಿವ್ಯಕ್ತಿ 'ಮುದುಕ' ಕವಿತೆಯಲ್ಲಿದೆ.

ಇಲ್ಲಿನ ಪ್ರತಿಮೆಗಳು ಮನೋಜ್ಞವಾಗಿವೆ. ಬದುಕಿನ ಎಲ್ಲ ಸಹಜ ಕ್ರಿಯೆಗಳಿಗೆ ವಿಶೇಷ ಅರ್ಥ ಹೊಳೆಯುತ್ತದೆ. 'ಅಜ್ಞಾತದಲ್ಲಿ ಕಾಯುತಿದೆ ಕಾಳ್ಗಿಚ್ಚು, ಎಡೆ ಕೊಟ್ಟ ಮೆಳೆಯನ್ನೆ ತಿನುವ ಹುಚ್ಚು'; ಹಾಗೆಯೇ 'ಗುಪ್ತಚಾರನ ಹಾಗೆ ಬರುವ ನೆರಳು, ಒಂಟಿಯಾಗಿರಗೊಡದೆ ಪೀಡಿಸಿದೆ ಮೈಗಂಟಿ' ಎಂಬ ಮೋಹಕ ಚಿತ್ರಣದ ಹಿಂದೆ ಮುಪ್ಪು ಕಾಡುವ ಬಗೆಯನ್ನು ವರ್ಣಿಸುತ್ತಾರೆ. ಮನುಷ್ಯನ ಜೀವೋನ್ಮುಖ ಚಿಂತನೆಗೆ ಮುಪ್ಪು ಎಂಬುದು ಅಡ್ಡಿಯಾಗದೆ ಸಹಜವಾಗಿ ಸ್ವೀಕರಿಸುವಂತಾಗಬೇಕು ಎಂಬ ಆಶಯದ ಈ ಕವಿತೆ ನಿಸಾರರ ಕವಿತಾ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ. ಅಲ್ಲದೆ, ಸೃಷ್ಟಿಯ ಬಗೆಗಿನ ತಾತ್ವಿಕ ನಿಲವನ್ನು ಸಹ ಇಲ್ಲಿ ಕಾಣಬಹುದು.

'ಆತ್ಮಶೋಧ'ದಲ್ಲಿ ನನ್ನ ಧ್ವನಿ ಎಲ್ಲಿದೆ? ಅನ್ನುವ ಹುಡುಕಾಟವಿದೆ. ಪರರ ಮೂದಲೆಯಿಂದ ನೊಂದ ಮನಸ್ಸು ತನ್ನನ್ನು ತಾನು ಶೋಧಿಸುವ, ಆತ್ಮಾವಲೋಕನ ಮಾಡಿಕೊಳ್ಳುವ ಪರಿ ಇಲ್ಲಿ ಅನಾವರಣಗೊಂಡಿದೆ. ಆತ್ಮಶೋಧ ನಿಜದ ಶೋಧವೂ ಆಗುವುದು. 'ನನ್ನೆದೆಯ ಭಾವಗಳು ದೆಸೆಗೆಟ್ಟ ನಾವೆಗಳು' ಎಂಬ ಸಾಲುಗಳಲ್ಲಿ ಕವಿಯ ಮನದ ಹೊಯ್ದಾಟದ ಚಿತ್ರಣವಿರುವಂತೆಯೇ, 'ಅವರಿವರ ಸೋಂಕಿಂದ ಮಡಿಗೆಡುತಲಿ ಹುದು ನುಡಿ' ಎಂಬ ಸಾಲಿನಲ್ಲಿ ಅದಕ್ಕೆ ಕಾರಣವನ್ನು ಸೂಚಿಸುತ್ತಾರೆ. ಮನದಾಳದಲ್ಲಿ ಹುದುಗಿರುವ ನಿಜದ ಶೋಧ ತನ್ನನ್ನು ತಾನು ಶೋಧಿಸುವ ಕ್ರಿಯೆಯೂ ಆಗಿ ಸಹಜ ಪ್ರಕ್ರಿಯೆಯ ನಿಮಿತ್ತ ಕವಿತೆಯ ದನಿಯನ್ನು ಗಟ್ಟಿಗೊಳಿಸುತ್ತದೆ.

ಪ್ರೇಮ ಕಾಮಗಳ ನಡುವಿನ, ಮನಸ್ಸಿನ ಕಲ್ಪ ವಿಕಲ್ಪಗಳ ನಡುವಿನ ಅಂತರವನ್ನು ವಿಶಿಷ್ಟ ರೀತಿಯಲ್ಲಿ ಕಟ್ಟಿಕೊಡುವ ಕವಿತೆ 'ಮನೋರಮಾ'. ನಿರ್ಮಲ ಪ್ರೀತಿಯ ಮಲಗೋಬದ ಗಮ ಗಮದೊಂದಿಗೆ ಆರಂಭವಾಗುವ ಕವಿತೆ. 'ತೊಗಲ ತುಂಬ ತೆವಲು ನನಗೆ ತೆಗೆಯೆ ಸೇಸಿಮ್ ಬಾಗಿಲು' ಎಂಬ ಸಾಲುಗಳಲ್ಲಿ ಅನಾವರಣಗೊಳ್ಳುವ ವಾಂಛೆಯಾಗಿ ಕಡೆಗೆ 'ನೀನು ನನಗೆ ದೇಹವಲ್ಲ, ಬರೀ ಹೆಸರ ವಿಭ್ರಮ' ಎಂಬ ನಿರಾಶೆಯಲ್ಲಿ ಮುಕ್ತಾಯಗೊಳ್ಳುವುದು ಕವಿಯ ಯೌವನಾವಸ್ಥೆಯ ಮನದ ಸ್ಥಿತಿಯನ್ನು ಬಿಂಬಿಸುತ್ತದೆ.

ಸುಕೃತ, ವಿಕೃತ, ಪ್ರಕೃತ ಎಂಬ ಮೂರು ಭಾವದ ಒಟ್ಟು ಚಿತ್ರಣವಾಗಿ 'ಮನೋರಮಾ' ಕವಿತೆ ಅನನ್ಯವಾಗಿದೆ. ನಿರ್ಮಲ ಪ್ರೀತಿಯ ಅಭಿವ್ಯಕ್ತಿ ಸುಕೃತವಾದರೆ ದೇಹ ವಾಂಛೆಯ ಬಯಕೆ ವಿಕೃತವಾಗಿ, ಕಡೆಗೆ ಕೈಗೆ ಎಟುಕದ 'ಮನೋರಮಾ'ಳ ಪ್ರೀತಿಯಿಂದ ವಿರಕ್ತವಾಗುವ ಪ್ರಕೃತ ಅವಸ್ಥೆ ಈ ಕವಿತೆಯ ಆಶಯ. 'ಮನಸು ಗಾಂಧಿ ಬಜಾರು' ಕವನ ಸಂಕಲನದಲ್ಲಿನ 'ಕಾಯುತಿರಲು ಪದ್ಮಿನಿ' ಕವನಕ್ಕೆ ಹೋಲಿಸಿದರೆ ಇಲ್ಲಿ ಹೊಸ ಕಲ್ಪನೆ ಯಿದೆ. ಕವನದಲ್ಲಿ ತರುಣ ಕವಿಯ ಮನಸ್ಸು ಪ್ರೀತಿಯ ಕಡೆಗೂ ತಿರುಗುತ್ತದೆ. ಜೀವನಕ್ಕೆ ಅನ್ವಯವಾಗುವ ಮನೋದೈಹಿಕ ಸಾಮರ್ಥ್ಯ ಹಾಗೂ ಸೌಂದರ್ಯ ಪ್ರಜ್ಞೆಗೆ ಕವಿ ಮಹತ್ವ ನೀಡಿದ್ದಾರೆ.

ಹೊಸ ತಲೆಮಾರಿನ ಯೌವನೋತ್ಸಾಹ ಮತ್ತು ಮಹತ್ವಾಕಾಂಕ್ಷೆಯ ಹಾಗೂ ಹಳೆಯ ತಲೆಮಾರಿನ ತಟಸ್ಥ ಸ್ವಭಾವದ ತಾತ್ವಿಕ ಸಂಘರ್ಷ, ವೈಚಾರಿಕ ಕಲಹಗಳ ಮುಖಾಮುಖಿ 'ಬೀಜ-ಮರ' ಕವಿತೆಯ ವಸ್ತು.

ವಾಮನತೆಯಿಂದ ಎದ್ದು ತ್ರಿವಿಕ್ರಮ ಪದವಿಗೇರುವ ಕಿರಿಯ ಬೀಜದ ಉತ್ಸಾಹ ವನ್ನೂ ಅದಕ್ಕೆ ಎದುರಾಗುವ ಮುದಿ ಮರದ ಕುಹಕವನ್ನೂ ಮತ್ತು ಅದು ಕಿರಿಯ ಬೀಜದ ಉತ್ಸಾಹಕ್ಕೆ ತಡೆಯಾಗುವ ವಾಸ್ತವತೆಗಳ ಚಿತ್ರಣದಿಂದ ತಲೆಮಾರುಗಳ ನಡುವಿನ ಅಂತರದ ಕಲಹವನ್ನು ಕವಿತೆ ಸಾರ್ಥಕವಾಗಿ ಪ್ರತಿಬಿಂಬಿಸಿದೆ. ಯುವ ಕವಿಯ ಜೀವನೋತ್ಸಾಹ ಹಾಗೂ ಬದುಕಿನ ಮಹತ್ವಾಕಾಂಕ್ಷೆಗಳು ಇಲ್ಲಿ 'ಬೀಜ-ಮರ'ದ ರೂಪದಲ್ಲಿ ಅಭಿವ್ಯಕ್ತಗೊಂಡಿವೆ.

'ಮದುವೆ' ಕವನವನ್ನು ನಿಸಾರ್ ಅವರು ಬರೆದಿದ್ದು ಅವರ ಮಿತ್ರ ಮೈಸೂರು ಅನಂತಸ್ವಾಮಿಯ ಮದುವೆಯ ಸಂದರ್ಭದಲ್ಲಿ. ಇವರಿಬ್ಬರ ಸಂಬಂಧ ಅನನ್ಯವಾದದ್ದು. ಇಲ್ಲಿ ಮದುವೆಯ ಚಿತ್ರಣದ ಜೊತೆಗೆ ಹಿತವಾದದ ಮಿಂಚಿನೆಳೆಯೂ ಹಾಸುಹೊಕ್ಕಾಗಿದೆ.

ಬದುಕಿನ ದೋಣಿ ಮದುವೆಯ ಅನಂತರ ಹೊಸ ಹಾದಿಯಲ್ಲಿ ಸಾಗಿ ಹೊಸ ನೀರಿನಲ್ಲಿ, ಹೊಸ ದಿಕ್ಕಿನಲ್ಲಿ ಮುನ್ನಡೆಯುವ ಬಗೆಯನ್ನು ಕವಿ ಇಲ್ಲಿ ಬಣ್ಣಿಸಿದ್ದಾರೆ. ಹೆಣ್ಣು ಹೆತ್ತವರಿಗೆ ಭಾರವನ್ನು ಕಳೆಯುವ ಭಾವ, ನೆಂಟರಿಗೆ ಬಿಸಿ ಊಟದ ಲಾಭ, ಗಂಡು-ಹೆಣ್ಣಿಗೆ ಹೊಸ ಅನುಭವ—ಹೀಗೆ ಮದುವೆಯೆಂಬುದು ಮನುಷ್ಯರ ವಿವಿಧ ಭಾವನೆಗಳಿಗೆ ಇಂಬು ನೀಡುವ ಸಾರ್ವಜನಿಕ ಹಿತಕಾರಿಯಾದ ಒಂದು ಮಹದ್ಘಟನೆ. ಇದನ್ನು ಚಿತ್ರಿಸುತ್ತಲೇ ಅಂತರಾರ್ಥವನ್ನು ಬಿಚ್ಚಿಡುವ ಪ್ರಯತ್ನವನ್ನು ಸಹ ಕವಿ ಮಾಡುತ್ತಾರೆ.

'ಬದುಕು ಎರಡು ಗಾಲಿಯ ಬಂಡಿ', 'ಸಂಸಾರ ತಂತಿಯ ಮೇಲಿನ ನಡಿಗೆ' ಎಂಬ ಚಿತ್ರಗಳು ಕವಿಯ ಚಿತ್ರಕ ಶಕ್ತಿಯ ಪ್ರತೀಕಗಳಾದರೆ, 'ಅಂಬೆಗಾಲಿನ ಕೇಕೆ, ತೊದಲು ನಗೆಯ ಪತಾಕೆ' ಎಂಬ ಸಾಲುಗಳು ಕವಿತೆಯ ಒಟ್ಟಾರೆ ಆಶಯವನ್ನು, ಫಲಪ್ರದತೆಯ ಅಂತಿಮ ಗುರಿಯನ್ನು ಅಭಿವ್ಯಕ್ತಿಸುತ್ತವೆ.

ನಿಸಾರರ ಪ್ರಾರಂಭದ ಪದ್ಯಗಳನ್ನು ಪರಿಶೀಲಿಸಿದಾಗ ಆವೇಶ, ಭಾವನಾತ್ಮಕ ವ್ಯಕ್ತಿತ್ವದ ತುಡಿತ, ತನ್ಮಯ ಗುಣ ಅವುಗಳ ಮುಖ್ಯ ಲಕ್ಷಣವೆನ್ನಿಸುತ್ತವೆ.

ಆಗಿನ ಅವರ ದೃಷ್ಟಿ ಪ್ರತಿಕ್ರಿಯಾತ್ಮಕ ಸ್ವರೂಪದ್ದು. ಹೆಣ್ಣಿನ ಮೋಹದ ಸೆಳವಿಗೆ ಸಿಕ್ಕಿದ ಉಧ್ವಸ್ತ ತರುಣ ಮನಸ್ಸಿನ ಹಲವು ಪಾಡುಗಳ ಚಿತ್ರಣವೂ ಪ್ರಾರಂಭಿಕ ಕವಿತಾ ರಚನೆಗಳ ಹೂರಣವಾಗಿದೆ. ಆದರೆ ಬರಬರುತ್ತ ಅವರ ದೃಷ್ಟಿ ಪಕ್ವವಾಗಿ, ಔಚಿತ್ಯ ಮತ್ತು ಸ್ವಾಸ್ಥ್ಯಗಳು ಮೇಲ್ಮೈ ಪಡೆಯುತ್ತವೆ. ನಿಲವಿನಲ್ಲಿ ಒಂದು ಸಮತ್ವ, ಸಂಯಮ ಮತ್ತು ಸಮರಸತೆಯ ಭಾವನೆ ಒಡಮೂಡುತ್ತದೆ.

ನಿಸಾರರು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ತುಂಬಾ ಗಮನಾರ್ಹ ವ್ಯಕ್ತಿ. ಸಾಹಿತ್ಯ ಮಾರ್ಗದಲ್ಲಿ ನಿಸಾರ್ ಅಹಮದ್ ಅವರು ಎಲ್ಲರಂತೆ ನಡೆದರೂ ತಮ್ಮ ಭಾಷೆ, ವಸ್ತು ಹಾಗೂ ಪ್ರತಿಮೆ, ರೂಪಕಗಳ ಉಪಯೋಗದಲ್ಲಿ ಸ್ವಂತಿಕೆಯ ಛಾಪನ್ನು ಒತ್ತಲು ಮರೆಯಲಿಲ್ಲ. ಕನ್ನಡದ ಸಂವೇದನಾಶೀಲ ಸಾಹಿತಿಯಾಗಿ ನಿಸಾರ್ ಸದಾ ನಮ್ಮ ನೆನಪಿನಲ್ಲಿರುತ್ತಾರೆ. ಸಾಹಿತ್ಯ ಎಂದರೆ ಜೀವನದ ದಿನವಹಿಯ ವ್ಯಾಪಾರದಲ್ಲಿನ ಜಂಜಡದಲ್ಲಿಯೂ ಅಂತರಂಗದ ಆಳದ ಭಾವ ತರಂಗಗಳ ಆಣಿ ಮುತ್ತುಗಳನ್ನು ಮೇಲಕ್ಕೆ ಎತ್ತಬಲ್ಲ; ನಮ್ಮ ಇರವನ್ನೇ ಮರೆಸಿ, ಆಚೆಯ ಇನ್ನಾವುದೋ ಅಪೂರ್ವ ಲೋಕಕ್ಕೆ ಕರೆದೊಯ್ಯಬಲ್ಲ ಶಕ್ತಿಯೂ ಹೌದು. ತಮ್ಮ ಗದ್ಯ ಬರವಣಿಗೆ ಮತ್ತು ಕವಿತೆಗಳಲ್ಲಿ ನಿಸಾರ್ ಇದನ್ನು ರುಜುವಾತು ಪಡಿಸಿದ್ದಾರೆ. ನಿಸಾರ್ ಅಹಮದ್ ಅವರ ಕವಿತೆಗಳನ್ನು ಓದುತ್ತಾ ಹೋದಂತೆ ಆ ಕವಿತೆಗಳು ನಮ್ಮೊಂದಿಗೆ ತಮ್ಮ ಆಂತರ್ಯದ ಐಸಿರಿಯನ್ನು ತೆರೆದುಕೊಳ್ಳುವುದರ ಜೊತೆಗೆ ನಮ್ಮ ಅರಿವನ್ನು ಎಚ್ಚರಿಸುತ್ತವೆ, ವಿಸ್ತರಿಸುತ್ತವೆ; ನಮ್ಮನ್ನು ಆಲೋಚನೆಗೆ ಹಚ್ಚುವಂತೆ ಕೆರಳಿಸುತ್ತವೆ; ನಮ್ಮ ಆಂತರ್ಯದೊಂದಿಗೆ ಸಂವಾದಿಸುತ್ತವೆ.

ಸಮಕಾಲೀನ ಸಂದರ್ಭವನ್ನು ಕವಿ ನಿಸಾರ್ ಅಹಮದ್ ಅವರು ಕಾವ್ಯದಲ್ಲಿ ಅತ್ಯಂತ ಸಮರ್ಥವಾಗಿ ಮನಸ್ಸಿಗೆ ನಾಟುವಂತೆ ಬಳಸಿಕೊಳ್ಳಬಲ್ಲರು. ಹಿಂದು ಮತ್ತು ಮುಸ್ಲಿಂ ಸಂವೇದನೆಗಳು ಪರಸ್ಪರ ಮುಖಾಮುಖಿಯಾಗುವ ಬಗೆಯನ್ನು `ರಂಗೋಲಿ ಮತ್ತು ಮಗ`ದಂತಹ ಹಲವಾರು ಕವಿತೆಗಳಲ್ಲಿ ಅವರು ಅನಂತರದ ಕಾಲದಲ್ಲಿ ತುಂಬಾ ಮನೋಜ್ಞವಾಗಿ ಚಿತ್ರಿಸಿರುತ್ತಾರೆ. ನಿಸಾರ್ ಅಹಮದ್ ನವೋದಯದ ಲಯ, ಲಾಲಿತ್ಯ, ಭಾವನಾತ್ಮಕತೆಯನ್ನೂ ನವ್ಯದ ವೈಚಾರಿಕತೆ-ಚಿಕಿತ್ಸಕ ಮನೋಭಾವವನ್ನೂ ದಲಿತ, ಬಂಡಾಯದ ಶೋಷಣೆಯ ಚಿತ್ರಣ ಹಾಗು ಜನಪರ ಧೋರಣೆಯನ್ನೂ ತಮ್ಮ ಕಾವ್ಯದಲ್ಲಿ ಸಮನ್ವಯಗೊಳಿಸಿಕೊಂಡು ಬರೆದ, ಬರೆಯುತ್ತಿರುವ ಹಾಗೂ ಸಮಕಾಲೀನ ವಾಸ್ತವಕ್ಕೆ ಸ್ಪಂದಿಸುತ್ತಿರುವ ಮಾನವ್ಯದ ಕವಿ.

ಸಂಸ್ಕೃತಿ ವ್ಯಕ್ತಿಯ ಅಂತರ್ನಯ ಪ್ರೇರಕ. ಸಭ್ಯತಾ ಸಂವರ್ಧಕ, ಜೀವನೋದ್ದೀಪಕ. ನಾಗರಿಕತೆ ಮಾನವ ಸಾಹಸ ಸೂಚಕ, ಸೌಲಭ್ಯಕಾರಕ, ಅಭ್ಯುದಯ ಸಾಧಕ.



'ನೆನೆದವರ ಮನದಲ್ಲಿ':
ವಿಭಿನ್ನ ಮಾರ್ಗದ ಕವಿ

◆ ಎನ್. ಎಸ್. ವೆಂಕಟರಾಮ್

ತಮ್ಮ ಮೊದಲ ಕವಿತಾ ಸಂಕಲನ 'ಮನಸು ಗಾಂಧಿ ಬಜಾರು' (೧೯೬೦) ಪ್ರಕಟಿಸಿದ ನಾಲ್ಕು ವರ್ಷಗಳ ಅನಂತರ (೧೯೬೪) ಶ್ರೀ ಕೆ. ಎಸ್. ನಿಸಾರ್ ಅಹಮದ್ ಮತ್ತೊಂದು ಕವನ ಸಂಗ್ರಹ ('ನೆನೆದವರ ಮನದಲ್ಲಿ')ವನ್ನು ಕಾವ್ಯ ರಸಿಕರಿಗೆ ಅರ್ಪಿಸಿದ್ದಾರೆ. ಆಧುನಿಕ ಕಾವ್ಯ ನಿರ್ಮಾಣದಲ್ಲಿ ತೊಡಗಿರುವ ಪ್ರತಿಭಾವಂತ ತರುಣ ಕವಿಗಳಲ್ಲಿ ಈಗಾಗಲೇ ಗಣನೀಯ ಸ್ಥಾನವನ್ನು ಪಡೆದಿರುವ ನಿಸಾರ್ ಅಹಮದ್ ಈ ನಾಲ್ಕು ವರ್ಷಗಳ ಅಂತರದಲ್ಲಿ ಸಾಧಿಸಿರುವ ಕಾವ್ಯ ರಚನೆಯ ಅದ್ಭುತ ಪ್ರಗತಿಯನ್ನು ನಿಸ್ಸಂದೇಹವಾಗಿ ಈ ಸಂಕಲನ ವ್ಯಕ್ತಪಡಿಸಿದೆ.

'ನೆನೆದವರ ಮನದಲ್ಲಿ' ನಿಸಾರ್ ಅಹಮದ್ ಆಗಿಂದಾಗ್ಗೆ ಪತ್ರಿಕೆಗಳಿಗಾಗಿ, ರೇಡಿಯೋ ಪ್ರಸಾರಕ್ಕಾಗಿ, ಪುಸ್ತಕ ರೂಪದಲ್ಲಿ ಪ್ರಕಟನೆಗೆಂದೇ ಬರೆದ ಕೆಲವು ಅಪ್ರಕಟಿತ ಮತ್ತು ವೈವಿಧ್ಯಪೂರ್ಣ ಕವಿತೆಗಳ ಸಂಗ್ರಹ.

ಇವರ ಕವನಗಳನ್ನು ಓದುವಾಗ ಈ ಕವಿ ಯಾವ ಒಂದು ಪಂಥಕ್ಕಾಗಲಿ, ಕಟ್ಟು ನಿಬಂಧನೆಗಳಿಗಾಗಲಿ ಒಳಪಡದೆ ಸ್ವತಂತ್ರ ವಿಚಾರ ಧಾರೆಯನ್ನು ಹರಿಸಲು ಸೂಕ್ತ ಮಾಧ್ಯಮ ವನ್ನು ಚತುರತೆಯಿಂದ ಬಳಸಿಕೊಂಡಿರುವುದು ಕಂಡುಬರುತ್ತದೆ. ಆಧುನಿಕ ಕಾವ್ಯದ ನವ್ಯಮಾರ್ಗದಲ್ಲಿ ಇವರ ಬರವಣಿಗೆ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿರುವುದಾಗಿ ಕೆಲವು ಕವಿತೆಗಳು ಸ್ಪಷ್ಟಪಡಿಸಿವೆಯಾದರೂ ನೇರವಾಗಿ, ಸರಳವಾಗಿ

ರೂಪಗೊಂಡಿರುವ ಇತರ ಕವಿತೆಗಳಲ್ಲಿ ವಿಭಿನ್ನ ಮಾರ್ಗವನ್ನೇ ಈ ಕವಿ ಅನುಸರಿಸಿದ್ದಾರೆ.

ಗಾಂಧೀಜಿಯ ಅನಂತರ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆದರ್ಶವೆಂಬ ಸುಳ್ಳು ಸೋಗನ್ನೇ ತಮ್ಮ ರಕ್ಷಾಕವಚವನ್ನಾಗಿ ಮಾಡಿಕೊಂಡು ಸ್ವಾರ್ಥಸಾಧಕರಾಗಿ, ರಾಷ್ಟ್ರದ ಪ್ರಕ್ಷುಬ್ಧತೆಗೆ ಕಾರಣರಾದವರ ಚಿತ್ರಣವನ್ನು ವಿಡಂಬನಾತ್ಮಕವಾಗಿ ನಾಲ್ಕು ವರ್ಷಗಳ ಹಿಂದೆ 'ಮನಸು ಗಾಂಧಿ ಬಜಾರಿ'ನ 'ಸಿಡಿದ ಸದ್ದು' ಕವಿತೆಯಲ್ಲಿ ನೀಡಿರುವ ಈ ಕವಿ, ಇನ್ನೂ ಸುಸ್ಪಷ್ಟವಾಗಿ ಈ ಕವನ ಸಂಕಲನದ 'ಕುರಿಗಳು, ಸಾರ್, ಕುರಿಗಳು' ಎನ್ನುವ ಹೃದಯಂಗಮ ವ್ಯಂಗ್ಯ ಕವನದಲ್ಲಿ ಮೂಡಿಸಿದ್ದಾರೆ:

'ನಮ್ಮ ಕಾಯ್ವ ಕುರುಬರು—
ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.'
(ಕುರಿಗಳು ಸಾರ್, ಕುರಿಗಳು)

ಗಂಡಾಂತರವನ್ನು ಎದುರಿಸುತ್ತಿರುವ ರಾಷ್ಟ್ರ ಸನ್ನದ್ಧಗೊಳ್ಳಬೇಕಾದರೆ ಮೊದಲು ನಿವಾರಿಸಿಕೊಳ್ಳಬೇಕಾದ ಮೂಲಭೂತ ಸಮಸ್ಯೆಗಳನ್ನು ಎತ್ತಿ ಹಿಡಿದು, ಸಮಾಜ ಜೀವನ ದಲ್ಲಿ ಕಂಡುಬರುವ ಲೋಪದೋಷಗಳಿಗೆ ನಿರ್ಭೀತವಾಗಿ ಕನ್ನಡಿ ಹಿಡಿದಿರುವುದಲ್ಲದೆ, ಹೇಡಿಗಳಂತೆ ತಲೆಮಾರುಗಳಿಂದ ಅನ್ಯಾಯವನ್ನು ಪ್ರತಿಭಟಿಸದೆ ನಿರ್ವೀರ್ಯರಂತಿರು ವವರನ್ನು ಚುಚ್ಚಿ ಎಚ್ಚರಿಸುತ್ತದೆ ಈ ಕವನ, 'ಕುರಿಗಳು, ಸಾರ್, ಕುರಿಗಳು'.

ತನ್ನತನವನ್ನು, ತನ್ನದೇ ಆದ ವ್ಯಕ್ತಿತ್ವವನ್ನು, ಪ್ರಾಮಾಣಿಕತೆಯನ್ನು ರೂಢಿಸಿಕೊಳ್ಳ ಬೇಕು; ಕೇವಲ ಮತ್ತೊಬ್ಬರ ದಯೆ, ಪ್ರಭಾವಗಳಿಗೆ ಮಣಿದು ತನ್ನ ವಿವೇಚನಾಶಕ್ತಿಯನ್ನು ಬಲಿಗೊಡಬಾರದೆಂಬ ಆಶಯವನ್ನು 'ಜಾಗ್ರತೆಯ ಕೊಡು', 'ಬಿತ್ತನೆ', 'ಹುಟ್ಟುಹಬ್ಬದ ಹಾಡು', 'ಆತ್ಮಶೋಧ', 'ಕಂಡಷ್ಟೇ ಸತ್ಯವಲ್ಲ', 'ನಿನ್ನ ದಯೆ ಬೇಡ' ಕವನಗಳು ಸಾರುತ್ತವೆ. ಕಾವ್ಯರಚನೆಯ ಸಾಧನೆಯಲ್ಲಿ ಅವರಿಗಾದ ಸಂವೇದನೆಯನ್ನು, ಕುಂದು ಕೊರತೆ ಅಭಾವಗಳನ್ನು 'ಆತ್ಮಶೋಧ' ಯಥಾರ್ಥವಾಗಿ ಚಿತ್ರಿಸುತ್ತದೆ:

'ನನ್ನೆದೆಯ ಭಾವಗಳು,
ದೆಸೆಗೆಟ್ಟ ನಾವೆಗಳು,
ಮುಂಗಾರ ಮೋಡಗಳ ಮೂಕ ತರ್ಜನಿ
ಮೆರೆದು ಹವೆಯಲ್ಲಿ ಬೆರೆಯುವುವು;
ಕೊಳ್ಳಿದೆವ್ವದ ಹಾಗೆ ಅರೆ ನಿಮಿಷ
ಕತ್ತಲಲಿ ಬಂಗಾರ ಕೊರೆಯುವುವು.
ಸತತ ತಮವೆಸೆಯುವುವು.
ತಲೆ ಹೊಯ್ದ ಪಶುವಂತೆ ಏಳಲಾರದೆ ಎದ್ದು
ನಿಂತಲ್ಲಿ ಕುಸಿಯುವುವು.' (ಆತ್ಮಶೋಧ)

ಹಾಗೆಯೇ ಈ ಸಾಲುಗಳನ್ನೂ ನೋಡಬಹುದು—

'ಕಂಡಷ್ಟೇ ಸತ್ಯವಲ್ಲ' ಕವನದಲ್ಲಿ:

'ಕಂಡಷ್ಟೂ ಸತ್ಯವಿರಬಹುದು,
ಕಂಡಷ್ಟೇ ಸತ್ಯವಲ್ಲ.
ದಕ್ಕಿದಷ್ಟನೆ ಮೆದ್ದು ಹಿಗ್ಗುವುದೆ ಜಾಯಮಾನ;
ಆದರೂ ಕಾಣಿಸದ ಕಡೆಗಿದ್ದೆ ಇರಬೇಕು
ಕಾಣುವಾಸೆಯ ನೋಟ ಮನಸಿನನುಮಾನ.' (ಕಂಡಷ್ಟೇ ಸತ್ಯವಲ್ಲ)

ಪ್ರಕೃತಿಯ ಗರ್ಭದಲ್ಲಿ ಹುದುಗಿರುವ ಸತ್ಯದ ವಿಶ್ವರೂಪವನ್ನು ಕಾಣಬೇಕೆಂಬ ಕವಿಯ ಜ್ಞಾನ ದಾಹ, ದಿಟ್ಟತನದ ಸತ್ಯ ಪ್ರತಿಪಾದನೆಯ ಆಕಾಂಕ್ಷೆ 'ಕಂಡಷ್ಟೇ ಸತ್ಯವಲ್ಲ' ಕವನದಲ್ಲಿ ಹೃದಯಸ್ಪರ್ಶಿಯಾಗಿ ಒಡಮೂಡಿದೆ.

ಪಾರಮಾರ್ಥಿಕ ವಿಚಾರಗಳೂ ಈ ಕವಿಯನ್ನು ಕಾಡಿಸದೆ ಇಲ್ಲ: 'ನೀನೇ ಸರ್ವಸ್ವ', 'ನಡೆ-ನುಡಿ', 'ತೊಡೆದು ಬಿಡು'—ಈ ಕವನಗಳೇ ಇದಕ್ಕೆ ಸಾಕ್ಷಿ. ಈ ಸಂಕಲನದ ಅತ್ಯುತ್ತಮ ಕವಿತೆ 'ಮುದುಕ'. ಪ್ರತೀಕನಿಷ್ಠವಾದ ಈ ಕವನದಲ್ಲಿ ವಯೋವೃದ್ಧನಾದರೂ ನೆಲದ ಸಮ್ಮೋಹಕ್ಕೆ ಅಧೀನನಾದವನ ವಿಶ್ಲೇಷಣೆಯಿದೆ. ತಾನು ಸತ್ತ್ವಹೀನ, 'ವಿಷ ಕಳೆದ ಹಾವಾದರೂ' ಕೂಡ ವಿಷಯಲೋಲುಪತೆ, ವ್ಯಾಮೋಹ ಈ ಮುದುಕನನ್ನು ಬಿಟ್ಟಿಲ್ಲ: ಜೀವವಿರುವವರೆಗೂ ಕಾಮನೆಗಳು ಮನುಷ್ಯನಿಗೆ ತಪ್ಪಿದ್ದಲ್ಲ, ಎಷ್ಟು ಎಚ್ಚರವಾಗಿದ್ದರೂ ಅವು ಮಾನವನನ್ನು ಮೋಸಗೊಳಿಸುತ್ತವೆ:

'—ಇದು ಯಾರ ಮನೆಯದೋ ಬೆಕ್ಕು
ಬಂದಡುಗೆ ಮನೆಯಲ್ಲಿ ಸ್ಥಾಪಿಸಿದೆ ಹಕ್ಕು!
ಕೊಠಡಿ ಕೊಠಡಿಯ ಸುತ್ತಿ, ಮಹಡಿ ಮೆಟ್ಟಲ ಹತ್ತಿ
ಹೊರ ದಬ್ಬಿ ಬಾಗಿಲಿಗೆ ಚಿಲುಕವೊತ್ತಿ
'ಪೀಡೆ ತೊಲಗಿತು' ಎಂದು ನೆಮ್ಮದಿಯ ನಿಟ್ಟುಸಿರೆಳೆದು
ಒರಗಿದರೆ, ಹಿತ್ತಲಿನ ಕಿಟಕಿಯಿಂದಿಳಿದಂತೆ;
ಮತ್ತೆ ಅದರದೇ ಚಿಂತೆ!' (ಮುದುಕ)

ಲೈಂಗಿಕ ವಿಷಯಗಳನ್ನು ಬಳಸಿಕೊಂಡು ರಚಿಸಿರುವ 'ತೀಟೆ', 'ಮನೋರಮಾ' ಎಂಬ ಕವನಗಳಲ್ಲೂ ಶ್ರೀ ನಿಸಾರ್ ಅಹಮದ್ ಅವರ ಜೀವನ ದರ್ಶನ ಆರೋಗ್ಯಕರವಾದ ಉನ್ನತ ರೀತಿಯಲ್ಲಿ ಚಿತ್ರಿತಗೊಂಡಿದೆ. ಒಳ ಬಾಳನ್ನು ಬಿಚ್ಚಿ ಹೊರ ತರಬೇಕು ಎಂಬ ಶೋಧಕ ಬುದ್ಧಿ ಇವರನ್ನು ಬಾಧಿಸಿದೆ. ಶಸ್ತ್ರಚಿಕಿತ್ಸೆ ನಡೆಸುವ ವೈದ್ಯನಂತೆ ಒಮ್ಮೊಮ್ಮೆ ಇವರ ಸತ್ಯಾನ್ವೇಷಣೆಯ ಈ ಆಕಾಂಕ್ಷೆ ಮನಸ್ಸು ಹಾಗೂ ಹೃದಯವನ್ನು ಹೊಕ್ಕು ಎಲ್ಲೆಡೆಯಲ್ಲೂ ತಮ್ಮ ಲೇಖನಿಯನ್ನು ಹರಿಸುವಂತೆ ಮಾಡಿದೆ. ಅಂತರಂಗ-ಬಹಿರಂಗ ಎರಡನ್ನೂ ತೂಕ ಮಾಡಿ ತೋರಿಸುವ ವರ್ತಕ ಶ್ರೇಷ್ಠಿಯಾಗಿದ್ದಾರೆ ಈ ಕವಿ. 'ತೀಟೆ'ಯ ಈ ಪ್ರಾಮಾಣಿಕವಾದ ಒಳತೋಟೆಯನ್ನು ನೋಡಬಹುದು: 'ಅರ್ಧನಾರೀಶ್ವರನ ಅಪರಾವತಾರ, ಅಹ! / ನಾ ಗಂಡಭೇರುಂಡ: / ಅರೆ ಹೆಣ್ಣು, ಅರೆ ಗಂಡು; ಕವಲು ಬಾಳುವೆ ನನದು: /

ತೊಡೆ ಸಂಧಿಯಾಳದಲಿ ವಿಕೃತ ಬೆಳಕಿನ ದೊಂದಿ! / ಆಚೆ ಕವನದ ಮೇಲೆ ಕಾವಿ ಚಿಂದಿ.'

'ಮನೋರಮಾ' ಕವಿತೆ ನಿಸಾರ್ ಅಹಮದ್ ಅವರ ಕಾವ್ಯಸೃಷ್ಟಿಯಲ್ಲಿ ವೈವಿಧ್ಯಕ್ಕೆ ದ್ಯೋತಕವಾಗಿದೆ. ಒಂದೇ ಕವನದಲ್ಲಿ ಪ್ರೇಮ, ಕಾಮ, ಭಗ್ನ ಮನೋರಥ—ಈ ವಿಭಿನ್ನ ಭಾವನೆಗಳನ್ನು ಮೂಡಿಸಲು ಬಳಸಿರುವ ತಂತ್ರ ಮೆಚ್ಚುವಂತಿದೆ. ಈ ಪದ್ಯವನ್ನು ಮತ್ತೆ ಮತ್ತೆ ಚಪ್ಪರಿಸಿದಾಗಲೇ ಅದರ ಸಿಹಿ ನಮಗೆ ಗೊತ್ತಾಗುವುದು. 'ಮನೋರಮಾ'ದ ಈ ಸಾಲುಗಳಲ್ಲಿನ ಅಪೂರ್ವತೆಯನ್ನು ನೋಡಿ:

'ತುಟಿಯಗಲಿಸಿ ನಕ್ಕೆ:
ಮುಂಜಾವದ ಐದಕ್ಕೆ
ಮಿಂಚಾದವೆ ಕೆರೆಯಂಚಿಗೆ ಹಾಲಕ್ಕಿಯ ರೆಕ್ಕೆ?
ತೂಗಿದವೆ, ಬೀಗಿದವೆ ಪೊದೆ ಬಳ್ಳಿ ಮರಕ್ಕೆ
ಚಿಲಿಪಿಲಿಚಿಲಿ, ಕೂಹೂಗಳ ದನಿಗಳ ಹೂಗಳ ಕುಕ್ಕೆ?
....
'ನೀನಾಡುವ ಮಾತು:
ಬಾಯಿಯಿಂದ ದೊಂಬ ತೆಗೆವ ತರಾವರಿಯ ಟೇಪು.
....
'ಆಗದು, ಕಣೆ, ಆಗದು ನಿನ್ನ ನನ್ನ ಸಂಗಮು;
ಈ ಮಾತಿನ ಥಾನು ಥಾನು ಬಟ್ಟೆ ಆಗಲಾರದು.
ಕಾಗದದೀ ಕಾಮಧೇನು ಪ್ರೇಮ ರಸವನೊಸರದು.' (ಮನೋರಮಾ)

ಹೆಣ್ಣಿನ ಬಗ್ಗೆ ಕನಿಕರ, ಸಹಾನುಭೂತಿ 'ಮರುಗುವೆನು ಎಲೆ ಚೆಲುವೆ' ಎಂಬ ಪದ್ಯದಲ್ಲೂ, ಭಕ್ತಿಯ ಪರಾಕಾಷ್ಠೆ 'ಪುರಂದರ ದಾಸರು' ಕವನದಲ್ಲೂ ಚೆನ್ನಾಗಿ ಪ್ರತಿಬಿಂಬಿತವಾಗಿದೆ. ರಾಷ್ಟ್ರಪ್ರೇಮವನ್ನು ಪ್ರಚೋದಿಸಿ, ಹುರಿದುಂಬಿಸುವ 'ಓ! ಪರ್ವತ ಚಕ್ರವರ್ತಿ', 'ನೆಲ ನಮ್ಮದು, ಜಲ ನಮ್ಮದು'. 'ಅಭಿನಂದನೆ ನಿಮಗೆ' ಪದ್ಯಗಳು ಉತ್ತಮ ಮಟ್ಟಕ್ಕೆ ಸೇರಿದವು.

—ಹೀಗೆ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರ ಲೇಖನಿ ಹಲವಾರು ವಿಷಯ ಗಳಲ್ಲಿ ಹಲವಾರು ರೀತಿಯಲ್ಲಿ ಓಡಾಡಿದ್ದರೂ ಕೂಡ ವಿಶಿಷ್ಟತೆಯನ್ನು ಕಳೆದುಕೊಂಡಿಲ್ಲ. ಅಲೆ ಅಲೆಯಾಗಿ ಹೊರಬರುವ ಭಾವನೆಗಳು ನಮ್ಮ ಮನಸ್ಸನ್ನು ಮುಟ್ಟುವುದು ಮಾತ್ರವಲ್ಲ, ಚಿಂತನೆಗೂ ಚಿಕಿತ್ಸೆಗೂ ಅವಕಾಶ ನೀಡುವಂತಿವೆ.

ಕವಿಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯ, ಕಲಾವಂತಿಕೆಯನ್ನು ಕರಗತ ಮಾಡಿ ಕೊಂಡಿರುವ ನಿಸಾರ್ ಅಹಮದ್ ಕನ್ನಡ ಕಾವ್ಯಭಂಡಾರಕ್ಕೆ ಇನ್ನೂ ಹೆಚ್ಚಿನ ಕೊಡುಗೆಗಳನ್ನು ನೀಡುವುದರಲ್ಲಿ ಸಂದೇಹವಿಲ್ಲ.

೧೯೬೪



'ಸುಮುಹೂರ್ತ': ಒಂದು ಭಾವಾಲೋಚಕ ಗ್ರಹಿಕೆ

♦ ಎ. ಆರ್. ಮಣಿಕಾಂತ

೧

ಗದ್ಯ ನೂರು ಸಾಲುಗಳಲ್ಲಿ ಹೇಳಲು ಪ್ರಯತ್ನಿಸುವುದನ್ನು ಪದ್ಯ ಒಂದು ಪದದಲ್ಲಿ ಹೇಳಿ ಮುಂದೆ ಸಾಗುತ್ತದೆ. ಅದು ಒಲಿದವಳ ಮುಗುಳ್ನಗೆಯಂತೆ, ಮುನಿಸಿನಂತೆ. ಒಲವಿನಿಂದ ನೋಡದ ಹೊರತು ಅರ್ಥವಾಗುವುದೂ ಇಲ್ಲ, ದಕ್ಕುವುದೂ ಇಲ್ಲ. ಕಾವ್ಯವನ್ನು ನೋಡಬೇಕಾದದ್ದೇ ಹಾಗೆ—ಪ್ರೀತಿಯಿಂದ.

ಇಂಥದೊಂದು ನಿರ್ಧಾರಕ್ಕೆ ಬಂದ ಸಂದರ್ಭದಲ್ಲೇ ಕೆಲವರು ಕೇಳುವುದುಂಟು: 'ಒಳ್ಳೆಯ ಕವಿತೆಯನ್ನು ಓದುವುದು ಹೇಗೆ? ಕಾವ್ಯಕ್ಕೆ ಪ್ರವೇಶ ಪಡೆಯುವುದು ಹೇಗೆ? ಅಷ್ಟು ಸುಲಭವಾಗಿ ಒಳಗೆ ಬಿಟ್ಟುಕೊಳ್ಳದ ಕಾವ್ಯವನ್ನು ಅರಗಿಸಿಕೊಳ್ಳು ವುದು ಹೇಗೆ?' ಇಂಥ ಪ್ರಶ್ನೆಗಳಿಗೆ ಸಾಮಾನ್ಯವಾಗಿ ಉತ್ತರ ಸಿಗುವುದಿಲ್ಲ. ಕಾವ್ಯ ಎಂಬುದು—ಕವಿ ಒಲಿದಂತೆ ಹಾಡುವ, ಓದುಗ ಒಲಿಸಿಕೊಳ್ಳಬೇಕಾದ ಸಂಗತಿ. It happens. ಅದಕ್ಕೊಂದು ಫಾರ್ಮುಲಾ ಇಲ್ಲ.

ಕವಿತೆಗೆ ಒಂದು ಫಾರ್ಮುಲಾ ಇಲ್ಲ ಅಂದುಕೊಂಡ ತತ್‌ಕ್ಷಣ ಅಚ್ಚರಿಯಾಗುತ್ತದೆ. ಒಂದು ಚೌಕಟ್ಟೇ ಇಲ್ಲದ ಪದ್ಯ, ಕೇವಲ ಹತ್ತಿಪ್ಪತ್ತು ಸಾಲುಗಳಲ್ಲಿ ಅದೆಷ್ಟೋ ಸಾವಿರ ಅರ್ಥಗಳನ್ನು ಹೇಳುವ ರೀತಿ ಎಂಥವರನ್ನೂ ಬೆರಗಾಗಿಸುತ್ತದೆ. ಆ ಬೆರಗಿನ ಕ್ಷಣದಲ್ಲೇ ಕವಿ ನೆನಪಾಗಿಬಿಡುತ್ತಾನೆ. ಅಲ್ಲ, ಕವಿ ಯಾಕೆ ಪದ್ಯ ಬರೆಯುತ್ತಾನೆ? ಎಂಬ ಒಂದು ಪ್ರಶ್ನೆ ಆಗಲೇ

ಎದ್ದು ನಿಲ್ಲುತ್ತದೆ. ಮರು ನಿಮಿಷದಲ್ಲೇ ಐದಾರೇಳೆಂಟು ಥರದ ಉತ್ತರಗಳೂ ಕೈ ಜಗ್ಗುತ್ತವೆ. ಏನೆಂದರೆ—

ಕವಿ, ತನ್ನಿಂದ ತಾನು ತಪ್ಪಿಸಿಕೊಳ್ಳಲಿಕ್ಕೆ ಬರೆಯುತ್ತಾನೆ. ತನ್ನನ್ನು ತಾನು ಹುಡುಕಿಕೊಳ್ಳಲಿಕ್ಕೆ ಬರೆಯುತ್ತಾನೆ. ಅಸ್ಪಷ್ಟತೆಯಿಂದ ಸ್ಪಷ್ಟತೆಯತ್ತ ಸಾಗಲಿಕ್ಕೆ ಬರೆಯುತ್ತಾನೆ. ಗೊಂದಲಗೊಳ್ಳುವುದಕ್ಕೆ, ಗೊಂದಲದಿಂದ ಪಾರಾಗುವುದಕ್ಕೆ, ಏನೂ ಆಗದೇ ಇರುವುದಕ್ಕೆ, ಏನಾದರೂ ಆಗುವುದಕ್ಕೆ ಬರೆಯುತ್ತಾನೆ. ಕವಿತೆಯೊಂದನ್ನು ಬರೆಯಲು ಶುರುಮಾಡಿದಾಗಿನಿಂದ ಮುಗಿಸುವವರೆಗೂ ಅವನು ಏನೂ ಆಗಿರುವುದಿಲ್ಲ; ಕೇವಲ ನಿಗರ್ವಿಯಾಗಿರುತ್ತಾನೆ! (ಆ ಕ್ಷಣದಲ್ಲಿ ಪ್ರಶಸ್ತಿಗಳೂ ಗೌರವಗಳೂ ಗೆಳತಿಯರೂ ಸಂಪತ್ತೂ ಅವನ ನೆರವಿಗೆ ಬರುವುದಿಲ್ಲ.) ಕಾವ್ಯ ಸೃಷ್ಟಿಗೆ ಕೂತ ಅನಂತರ, ಅವನು ಮತ್ತು ಅವನನ್ನು ಮೀರಿ ಧುಮುಕುವ ಅಕ್ಷರಗಳು—ಅಷ್ಟೇ ಅವನ ಜಗತ್ತು.

ಅಂದಹಾಗೆ, ಕವಿ ಹೇಗೆ ಬದುಕುತ್ತಾನೆ?

—ಅದು ಮತ್ತೊಂದು ಪ್ರಶ್ನೆ. ಆತ, ತನ್ನ ಕಾವ್ಯಕ್ಕೆ ಬೇಕಾದ ಅನುಭವ ದ್ರವ್ಯವನ್ನು ಎಲ್ಲಿಂದ ಪಡೆಯುತ್ತಾನೆ? ಎಂಬುದು ನಿಜಕ್ಕೂ ಕುತೂಹಲಕಾರಿ. ಅಕ್ಷರ ಮಾಲೆಯಲ್ಲಿರುವ ಐವತ್ತೂ ಚಿಲ್ಲರೆ ಅಕ್ಷರಗಳು ನಮಗೂ ಗೊತ್ತಲ್ಲ? ಅವನ್ನೇ ತಾನೆ ಕವಿಯೂ ಬಳಸುವುದು? ಆದರೆ ಕವಿ ಅದನ್ನು ಎಷ್ಟು ಸುಂದರವಾದ ಅಕ್ಷರ ಮಾಲಿಕೆಯನ್ನಾಗಿ ಮಾಡುತ್ತಾನೆ? ಅದೊಂದು ಕುಶಲ ಕಲೆಯೆ? ವಿಜ್ಞಾನವೆ? ಶಾಸ್ತ್ರವೆ?

ಯೋಚಿಸಿದರೆ, ಇಂಥ ವಿಚಿತ್ರ ಪ್ರಶ್ನೆಗಳು ಹೊಳೆಯತೊಡಗುತ್ತವೆ. ಅವುಗಳಿಗೆ ಉತ್ತರವೇ ಸಿಗುವುದಿಲ್ಲ. ಕವಿಯ ಕವಿತ್ವ ಮಾತ್ರ ಬೆರಗಾಗಿಸುತ್ತದೆ. 'ನನ್ನ ನಿನ್ನ ಜೀವಿತ, / ಯಾರಿಗೋ ಸಮರ್ಪಿತ; / ನೋವು ನಲವು ಪಾಲಿಗಾಗಿ / ದುಡಿಯಬೇಕು ಕಾಯುತ' ಎಂಬ ಸಾಲಿನಲ್ಲಿರುವ ಹಳೆಯ ಪ್ರೀತಿ, ಹಳೆಯ ಮೋಹ, ಅದೇ ತರಹ ನೂರು ಥರದಲ್ಲಿ ನೆನಪಾಗಿ ಧಿಗ್ಗನೆ ಬೆಚ್ಚಿ ಬೀಳಿಸುತ್ತದೆ. ಮರುಕ್ಷಣವೇ ನಾವು ಕವಿಯೊಳಗೆ ಸೇರಿ ಹೋಗುತ್ತೇವೆ. ಕವಿ ದೊಡ್ಡವನಾಗುತ್ತಾನೆ!

ಕವಿ ಮತ್ತು ಕವಿತೆ ಎರಡಕ್ಕೂ ಶರಣು ಶರಣು ಎನ್ನುತ್ತ ಮತ್ತೆ 'ನನ್ನ ನಿನ್ನ ಜೀವಿತ, ಯಾರಿಗೋ ಸಮರ್ಪಿತ'ದ ಸಾಲಿನೊಂದಿಗೆ ಜೀಕುತ್ತಿದ್ದಾಗಲೇ ಮಂದಿ, ಕವಿತೆಯನ್ನು ವಿವರಿಸಿ ಅನ್ನುತ್ತಾರೆ. ಕವಿತೆಗಿರುವ ಕಷ್ಟ ಅದೊಂದೇ. ವಿವರಿಸಲು ಸಾಧ್ಯವಾಗುವುದು ಕವಿತೆಯಲ್ಲ. ವಿವರಿಸುವುದೆಂದರೆ, ತನ್ನ ಜ್ಞಾನಭಂಡಾರವನ್ನೂ ಅರಿವನ್ನೂ ಕವಿತೆಯೊಳಗೆ ತುಂಬುವುದು. ಹಾಗೆ ವಿವರಿಸತೊಡಗಿದರೆ ಕವಿತೆ ಸೂತ್ರವಾಗುತ್ತದೆ. ಲೆಕ್ಕಾಚಾರವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಅದೊಂದು ಕೈಗೆಟುಕದ ನಿಗೂಢದಂತೆ ಭಾಸವಾಗುತ್ತದೆ. ಕವಿತೆಯನ್ನು ಕವಿತೆಯಲ್ಲದ ಮತ್ತೊಂದು ರೂಪದಲ್ಲಿ ಹೇಳಲು ಸಾಧ್ಯವಾಗುವುದಿಲ್ಲ ಎನ್ನುವುದೇ ಅದರ ಹೆಚ್ಚುಗಾರಿಕೆ.

ತನ್ನ ರೂಪ ಮತ್ತು ಬಂಧದಲ್ಲಿ ಮಾತ್ರ ಅದು ತನ್ನನ್ನು ತಾನು ತೆರೆದುಕೊಳ್ಳುತ್ತದೆ. ಈ ಮಾತಿಗೆ ಒಂದು ಉದಾಹರಣೆ ಎಂದರೆ ನಿಸಾರ್ ಅಹಮದ್ ಅವರ 'ನಿತ್ಯೋತ್ಸವ'

ಕವಿತೆ. ಕಾವ್ಯದ ಉತ್ಕರ್ಷಕ್ಕೆ ಮತ್ತು ಅದು ನೀಡುವ ಹರ್ಷಕ್ಕೆ ಈ ಕವನ ಸಾಕ್ಷಿ. ನಮ್ಮ ಕಣ್ಣನ್ನೇ ಕ್ಯಾಮರಾ ಮಾಡಿಕೊಂಡಂತೆ ಆ ಕಾವ್ಯ ಕಾಣಿಸಿಕೊಳ್ಳುತ್ತದೆ:

'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯಹರಿದ್ವರ್ಣ ವನದ ತೇಗ, ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ, ನಿನಗೆ...' (ನಿತ್ಯೋತ್ಸವ)

ಅದೊಂದು ದೃಶ್ಯ ಕಾವ್ಯ. 'ಜೋಗದ ಸಿರಿ ಬೆಳಕಿನಲ್ಲಿ' ಎಂಬುದು ಕೇವಲ ಮೂರು ಪದಗಳಲ್ಲ. ಅದು ವಿಸ್ತೃತ ಪ್ರಕ್ರಿಯೆ 'ಪ್ರಾಸೆಸ್ಸು'. 'ಶರಾವತಿ ನದಿ ಜೋಗದಲ್ಲಿ ಧುಮುಕಿ, ಕರೆಂಟು ಉತ್ಪಾದಿಸುವ ಯಂತ್ರಗಳನ್ನು ಹಾದು, ಆ ಕರೆಂಟು ತಂತಿಗಳಲ್ಲಿ ಸಾಗಿ ಮೊಳಕಾಲ್ಮೂರಿನ ಬೀದಿಗಳನ್ನು ಬೆಳಗಿತು' ಎಂಬುದನ್ನು ನಿಸಾರ್ 'ಜೋಗದ ಸಿರಿ ಬೆಳಕಿನಲ್ಲಿ' ಎಂಬ ಒಂದೇ ಸಾಲಿನಲ್ಲಿ ಹೇಳಿ ಬಿಟ್ಟಿದ್ದಾರೆ. ಹಾಗೆಯೇ 'ತುಂಗೆಯ ತೆನೆ ಬಳುಕಿನಲ್ಲಿ' ಎಂಬ ಪದದಲ್ಲಿರುವ ಅಚ್ಚರಿಯನ್ನು ಗಮನಿಸಿ. ತುಂಗೆ ಹರಿಯುತ್ತಾಳೆ. ಅವಳ ನೀರಿನಿಂದ ಎಲ್ಲೋ ಭತ್ತ ಬೆಳೆಯುತ್ತದೆ. ಆ ಭತ್ತ ತೆನೆ ಬಿಡುತ್ತದೆ. ಇದೆಲ್ಲವೂ ಸೇರಿ 'ತುಂಗೆಯ ತೆನೆ ಬಳುಕಿನಲ್ಲಿ' ಎಂಬ ಒಂದು ಸಾಲಿನಲ್ಲಿ ಬಂದು ಹೋಗುತ್ತದೆ! 'ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ' ಅನ್ನುವ ಸಾಲಿನಲ್ಲೂ ಒಂದು ಬೆರಗಿದೆ. ಲೋಹದ ಅದಿರು ಸಾಮಾನ್ಯವಾಗಿ ಅಡಗಿರುವುದು ಆಳದಲ್ಲಿ, ಭೂಗರ್ಭದಲ್ಲಿ. ಆದರೆ—ಲೋಹದದಿರು ಮೆರೆದಿರುವುದು ಉತ್ತುಂಗದ ನಿಲುಕಿನಲ್ಲಿ ಅನ್ನುತ್ತಾರೆ ನಿಸಾರ್.

—ಹೀಗೆ, ಅವರ ಕ್ಯಾಮರಾ ಕಣ್ಣು ಮುಂದುವರಿಯುತ್ತದೆ. ಒಂದು ಪರಿಸರದ ಚಿತ್ರಣವನ್ನು ಎಲ್ಲ ಸಂಕೇತಗಳ ಜತೆಗೇ ನಿಸಾರ್ ಕೊಡುತ್ತಾ ಹೋಗುತ್ತಾರೆ. ಅದು ಇತಿಹಾಸವಾಗಿ, ನಾಡಿನ ವೈಭವವಾಗಿ, ಪ್ರಕೃತಿಯ ರಾಗವಾಗಿ, ಎಂದೋ ಕೇಳಿದ ಕತೆಯಾಗಿ ಅರಳುತ್ತಾ, ಬೆಳೆಯುತ್ತಾ ಹೋಗುತ್ತದೆ, ಹೀಗೆ:

'ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ
ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ...' (ಅದೇ)

'ನಿತ್ಯೋತ್ಸವ'ದ ಹಾಡು ಹೀಗೆ, ನಿತ್ಯವೂ ಹೊಸದಾಗಿ ಕಾಣುವಾಗಲೇ ಅದೇ ನಿಸಾರ್ ಅಹಮದ್ ಅವರ 'ಸುಮುಹೂರ್ತ' ಕೈ ಹಿಡಿದು ಜಗ್ಗುತ್ತದೆ. ಜತೆ ಜತೆಗೇ ನಡೆದು ಬರುತ್ತದೆ : ಪ್ರೀತಿಯಿಂದ ಮತ್ತು ಪ್ರೀತಿಯಿಂದ!

೨

ನಿಸಾರರ 'ಮನಸು ಗಾಂಧಿ ಬಜಾರು' (೧೯೬೦), 'ನೆನೆದವರ ಮನದಲ್ಲಿ' (೧೯೬೪) ಕವನ ಸಂಗ್ರಹಗಳ ಬಳಿಕ ಪ್ರಕಟವಾದ ಮೂರನೆಯ ಕವಿತಾ ಸಂಕಲನ 'ಸುಮುಹೂರ್ತ' (೧೯೬೭)ದಲ್ಲಿ ಒಟ್ಟು ನಲವತ್ತಾರು ಪದ್ಯಗಳಿವೆ. ಭಾಗ-೧ರಲ್ಲಿ ಇಪ್ಪತ್ತೆರಡು ಸ್ವರಚಿತ ಕವಿತೆಗಳು, ಭಾಗ-೨ರಲ್ಲಿ ಇಪ್ಪತ್ತನಾಲ್ಕು ಅನುವಾದಿತ ಕವನಗಳು ಸೇರ್ಪಡೆಯಾಗಿವೆ. ನಾನು

ಓದಿ ಹರ್ಷ ಪಟ್ಟಿರುವ 'ತೀನಂಶ್ರೀ' ಮತ್ತು 'ರಾಜ್ಯೋತ್ಸವ' ಕವನಗಳಲ್ಲದೆ ಇನ್ನೂ ಹಲವು ಮನ ಮುಟ್ಟುವ ಸ್ವಂತ ರಚನೆಗಳು ಈ ಸಂಗ್ರಹದಲ್ಲಿರುವುದು ಗಮನಾರ್ಹ. 'ವಾಸ್ತವಿಕ', 'ನವೋದಯ', 'ನಕ್ಷತ್ರಿಕ', 'ಮಡಿವಂತ', 'ನೆಹರು', 'ಪ್ರಾಯ', 'ಕಾರವಾರದ ಕಡಲ ದಂಡೆಯಲ್ಲಿ', 'ಉಭಯ ಕಷ್ಟ' ಮತ್ತು 'ಸುಮುಹೂರ್ತ' ಹೆಸರಿನ ಸುದೀರ್ಘ ಕವಿತೆ ತಮ್ಮ ಕಾವ್ಯಾಂಶ ಮತ್ತು ಚಿಂತನಶೀಲ ಗುಣಗಳಿಂದ ವಾಚನಯೋಗ್ಯವಾಗಿವೆ. 'ವಾಸ್ತವಿಕ' ಮತ್ತು 'ಸುಮುಹೂರ್ತ' ನವ್ಯದ ಮಾದರಿಗಳೆನ್ನಿಸಿದರೆ, ಉಳಿದವು ರಮ್ಯಮಾರ್ಗಕ್ಕೆ ನಿಕಟವಾಗಿವೆ.

'ವಾಸ್ತವಿಕ' ಕವಿತೆ ವ್ಯಂಗ್ಯಾತ್ಮಕ ಧಾಟಿಯಿಂದ ಪ್ರಾರಂಭವಾಗಿ ತಾತ್ತ್ವಿಕ ಉನ್ನತಿಯನ್ನು ಮುಟ್ಟುವ ಪರಿ ಕುತೂಹಲಕಾರಿಯೆನ್ನಿಸುತ್ತದೆ. ಗೋಚರ ಮತ್ತು ಶ್ರವಣ ಜಗತ್ತಿನ ಆಚೆಗೆ ನೆಲೆಸಿರುವ ಸತ್ಯದ ಸೀಮೆಯನ್ನು ದರ್ಶಿಸಿದ ಹೊರತು ಲೋಕ ವಾಸ್ತವವನ್ನು ತನ್ನ ಪರಿಪೂರ್ಣ ದಶೆಯಲ್ಲಿ ಗ್ರಹಿಸುವುದು ಅಶಕ್ಯವೆನ್ನುವ ನಿಲವನ್ನು ಈ ಕವಿತೆ ಒತ್ತಿ ಹೇಳುತ್ತದೆ. ಹೊರಗಿನ ಚಿತ್ತಾಕರ್ಷಕ ಆಕರ್ಷಣೆಯ, ಹೂವು ಹಣ್ಣು ಎಲೆ ಕೊಂಬೆ ರೆಂಬೆ ಹಕ್ಕಿ ಗೂಡು ಮೊದಲಾದ ವೈಭವಯುತ ದೃಶ್ಯಗಳ ಪ್ರದರ್ಶನದ ಮರೆಗೆ ಕತ್ತಲನ್ನು ಹೊದ್ದು ಮಲಗಿರುವ ಬೀಜಗಳು, ಕಣ್ಮರೆಯಲ್ಲಿರುವ ಜೀವೋತ್ಕರ್ಷಕ ಗೂಢಗಳು ನಿಜಕ್ಕೂ ವಾಸ್ತವತೆಯ ನೆಲೆ. ಅದರ ಅರಿವಿರದ ಮಾನವನ ಜೀವಿತ ಬರಿಯ ಅಸ್ತಿತ್ವದಲ್ಲಷ್ಟೇ ಪರಮ ಪುರುಷಾರ್ಥವನ್ನು ಕಾಣಬಯಸುವ ಸೀಮಿತ ಜೀವಿತ. ಪ್ರಾಣಿ ಬದುಕಿಗೂ ನರನ ಬಾಳ್ವೆಗೂ ನಡುವಣ ಗಡಿ ಗೆರೆ ಅಳಿಸಿ ಹೋಗಿರುವ ಜೀವಿತ. ಜೀವನದ ನೈಜ ಸ್ವರೂಪದ ದರ್ಶನವಾಗುವುದು ಮೇಲ್ಮೈಯ ಅನಾವರಣವಾದಾಗಲೇ. ಆಂತರ್ಯ ದಲ್ಲಿ ಅಡಗಿರುವ ನಿಗೂಢತೆಯ ಮನೋಗ್ರಹಿಕೆಯಾದಾಗಲೇ. ಇಂತಹ ಸ್ಥಿತಿಗೆ ಮನುಷ್ಯ ತಲಪಬೇಕಾದರೆ ಅವನು ಬದುಕಿನಲ್ಲಿ ಬಹಿರಾವರಣಗಳನ್ನು ಒಂದೊಂದಾಗಿ ತೊಡೆಯುತ್ತ ಮುನ್ನಡೆಯಬೇಕು. ಕವನದ ಶಿಖರಾವಸ್ಥೆಯನ್ನು ಮನೋಗಮ್ಯವಾಗಿಸುವ ಈ ಸಾಲುಗಳ ಅರ್ಥವಂತಿಕೆಯನ್ನು ಅನುಭವಿಸಿ:

'ಕಳಚಿ ಒಂದೊಂದೇ: ಕನ್ನಡಕ, ಗಡಿಯಾರ
ಚೈನು, ಕೆರ, ಪೋಷಾಕು—
ದಿಗಂಬರತೆ ವಾಸ್ತವಿಕ.
ಕಳಚಿ ದೇಶ, ಸಮಾಜ, ಧರ್ಮ ಮತ, ವರ್ಗಗಳ—
ನಿರ್ಮಮತೆ ವಾಸ್ತವಿಕ.
ಕಳಚಿದ್ದನೆಣಿಸದಿರಿ ಹಾಕಿ ಲೆಕ್ಕಾಚಾರ
ಉಳಿದದ್ದು ವಾಸ್ತವಿಕ.
ನಿಲ್ಲಿ ಹುಟ್ಟಿದ ಹಾಗೆ ಗೊಮ್ಮಟನನನುಕರಿಸಿ,
ನೋಡಿ ಕನ್ನಡಿಯಲ್ಲಿ ನಿಮ್ಮ ಮುಖ :
ಚರ್ಮ ಚಕ್ಕಳ ಮಾಂಸದಾಚೆ ಕಾಣದ
ಪ್ರಾಣ:
ಅದರರಿವೇ ವಾಸ್ತವಿಕ.' (ವಾಸ್ತವಿಕ)

'ನವೋದಯ' ಕವಿತೆಯಲ್ಲಿ ಮುದ್ದಣನ ಬದುಕು, ಸಾಹಿತ್ಯಕ ಮಹತ್ವ, ಕಾವ್ಯ ವಸ್ತುವಿನ ವೈಶಾಲ್ಯ ಮತ್ತು ಬೃಹತ್ತುಗಳ ಬಗೆಗೆ ನಾಟಕೀಯ ಧಾಟಿಯ ನವ್ಯಾಭಿವ್ಯಕ್ತಿಯಿದೆ. ಕನ್ನಡದ ವ್ಯಕ್ತಿ ಕವನಗಳ ರಚನೆಯಲ್ಲಿ ಅದ್ವಿತೀಯ ಹಾಗೂ ಅನನ್ಯ ಸ್ಥಾನವನ್ನು ಸಂಪಾದಿಸಿರುವ ನಿಸಾರರ ಸೃಜನಶೀಲ ಪ್ರವೃತ್ತಿಗೆ 'ನವೋದಯ' ಕವನವೂ ಒಂದು ಉದಾಹರಣೀಯ ಮಾದರಿ ಎನ್ನಲು ಅಡ್ಡಿಯಿಲ್ಲ.

'ಸುಮುಹೂರ್ತ' ಕವನ ದಾಂಪತ್ಯಪೂರ್ವ ಹಾಗೂ ದಾಂಪತ್ಯಕಾಲೀನ ಅನುಭವಗಳ ಪರಸ್ಪರ ಹೋಲಿಕೆ-ತಾರತಮ್ಯಗಳ ನಿರೂಪಣೆಯನ್ನು ಮಾಡುತ್ತ ಸಾಂಸಾರಿಕತೆಯ ಅಂತಿಮ ಉದ್ದೇಶವಾದ ಸಂತಾನಪ್ರಾಪ್ತಿಯ ಹೆಗ್ಗಳಿಕೆಯನ್ನು ಸಾರುವಂತೆ ತೋರಿಬರುತ್ತದೆ. ಅಂಗಾಂಗ ಸುಖದ ಅನಂತರದ ಜೀವದ ಹುಟ್ಟಿನ ಸಮಯದ ನೋವು, ಆತಂಕ, ಅನಿಶ್ಚಯತೆಗಳನ್ನು ಕವಿಯ ಲೋಕಾನುಭವದ ತರುವಾಯದ ಕಾವ್ಯಸೃಷ್ಟಿಪ್ರಕ್ರಿಯೆಯೊಂದಿಗೆ ಸಂಲಗ್ನಗೊಳಿಸುವ ಆಶಯ ಕವಿಗೆ ಇದ್ದಂತಿದೆ. ಸೃಜನ ಕ್ರಿಯೆಯೂ ಹೆರಿಗೆಯ ಕ್ರಿಯೆಯಂತೆಯೇ ನಿಗೂಢವಷ್ಟೇ ಅಲ್ಲ, ತ್ರಾಸಮಯವೂ ಮನೋಗ್ರಾಹ್ಯಾತೀತವೂ ಆಗಿ, ತನ್ನ ಅಂತಿಮ ದೆಸೆಯಲ್ಲಿ ಶುಭಪ್ರದವೆನ್ನಿಸುವಂಥದ್ದಾಗಿದೆ ಎಂಬ ತಥ್ಯವನ್ನು ನಿವೇದಿಸಲು ಕವಿ ಈ ಕವನದಲ್ಲಿ ಪ್ರಯತ್ನಿಸಿದಂತಿದೆ. ಕವನದ ಉದ್ದಕ್ಕೂ ಹಲವಾರು ವಿಭಿನ್ನ ಪ್ರತಿಮೆಗಳ ರತ್ನಗಂಬಳಿ ಹಾಸಿದಂತೆ ಭಾಸವಾಗುತ್ತದೆ. ಇವುಗಳಿಂದ ಸಾಂಕೇತಿಕತೆಯ ದಟ್ಟವಾದ ಹಸೆಯೊಂದು ನಿರ್ಮಾಣವಾದಂತೆ ಮನವರಿಕೆಯಾಗುತ್ತದೆ.

ಸೃಷ್ಟಿ ಪ್ರಕ್ರಿಯೆಯ ಅವಿನಾಭಾವದ ಅನುಭವವನ್ನು ನಮ್ಮಲ್ಲಿ ಸಾಂದ್ರವಾಗಿಸುವ ಈ ಅಪೂರ್ವ ಕಾವ್ಯಾತ್ಮಕ ಪಂಕ್ತಿಗಳ ಸಾರ್ಥಕ್ಯವನ್ನು ಗಮನಿಸಿ:

'ಎಲ್ಲಿತ್ತು ಕಿರು ಬಳ್ಳಿಗೀ ಪರಿಯ ಸಂಪತ್ತು?
ಮೈತುಂಬ ಬಿಸಿ ಮುತ್ತು, ರೋಮಾಂಚ ಈವೊತ್ತು:
ಸೂರ್ಯೋದಯದ ನಭದಂಶ,
ಮಗುವಿನಂಗೈ ಮೆತುವು,
ನಸರಿ, ಸಕ್ಕರೆ ಬಳಿತ, ಮೈಗೆ ಅತ್ತರ ಚಿಮುಕು?
ಹಸುರ ಹೊರೆಗೆಲ್ಲಿತ್ತು ಈ ರಖಂವಾರು ರಸ?
ಗಂಧರ್ವ ಯಕ್ಷಿಣಿಯ ಭುಜದ ಸೋಕು?
ಬಿತ್ತದಲೆ? ಮಣ್ಣಲ್ಲೆ? ಬೆಳಕಿನಲ್ಲೆ?
ಅಥವಾ ಮುಗಿಲಿನ ಕರುಳ ಕರಗಿನಲ್ಲೆ?
ಎಲ್ಲಿತ್ತು ಈ ಕವಿತೆ?
ಕಣ್ಣಲ್ಲೆ? ಎದೆಯಲ್ಲೆ?
ಪ್ರಕೃತಿಯ ಬಸಿರಲ್ಲೆ? ದೃಶ್ಯದಲ್ಲೆ?
ಪಾತ್ರವಲ್ಲದೆ ಇನ್ನು ನನ್ನದೇನಿದೆ ಇಲ್ಲಿ?
ಅದೃಶ್ಯದೇರಿಳಿವು; ನಾ ಮೆಟ್ಟಿಲು.
ಇಲ್ಲದ್ದು ಸುಮುಹೂರ್ತದಲ್ಲಿ ಮೂರ್ತೀಭವಿಸಿ
ಕೂಡುವುದು; ಆಡುವುದು ಚೆಂದೊಟ್ಟಿಲು.' (ಸುಮುಹೂರ್ತ)

ಇನ್ನು 'ಸುಮುಹೂರ್ತ' ಸಂಕಲನದ ಅನುವಾದಗಳ ಸ್ವಾರಸ್ಯ, ಮಹತ್ವವನ್ನು ಅರಿಯಬೇಕಾದರೆ ಮೂಲದೊಂದಿಗೆ ಈ ರಚನೆಗಳನ್ನು ಹೋಲಿಸಿ ನೋಡುವುದಷ್ಟೇ ಅಲ್ಲ, ಬೇರೆಯೇ ಒಂದು ಸಂವೇದನೆಯ ಗ್ರಹಿಕೆಗೆ ಮನಸ್ಸನ್ನು ಸಿದ್ಧಗೊಳಿಸಬೇಕಾಗುತ್ತದೆ. 'ಲಗ್ನ'. 'ನ್ಯಾಯ', 'ಲಂಗ'. 'ಯೌವನ', 'ಕಡಲ ಹಕ್ಕಿಗಳು'. 'ನ್ಯೂಯಾರ್ಕಿನ ಮುಂಜಾನೆ'. 'ವಿಲಾಪ', 'ಊರಿಗೆ ಬಂದವಳು'—ಇಲ್ಲಿನ ಅನುವಾದಗಳಲ್ಲಿ ಶಿರೋಮಣಿಪ್ರಾಯವಾದವು.

ಒಟ್ಟಿನಲ್ಲಿ, 'ಸುಮುಹೂರ್ತ' ಸಂಗ್ರಹದ ಕವಿತೆಗಳು ನಿಸಾರರ ಸೃಜನಶೀಲ ಜೀವನದ ಒಂದು ಮುಖ್ಯ ಘಟ್ಟವಾಗಿರುವುದಲ್ಲದೆ, ಅವು ಸಂಕ್ರಮಣಾವಸ್ಥೆಯನ್ನು ದ್ಯೋತಿಸುತ್ತವೆ. ಹಾಗೆಯೇ, ಅವರು ಮುಂದೆ ಹಿಡಿಯಲಿರುವ ಜಾಡಿನ ಮುನ್ಸೂಚಕವೂ ಆಗಿವೆ.

ನವ್ಯ ಕಾವ್ಯವನ್ನು ಬರೆದರೂ ಜನರಿಗೆ ಅರ್ಥವಾಗುವಂಥ ಕವನ ಬರೆದವರು ಎಂದು ರಾಷ್ಟ್ರಕವಿ ಕುವೆಂಪು ಅವರಿಂದಲೇ ಮೆಚ್ಚುಗೆ ಪಡೆದವರು ನಿಸಾರ್ ಅಹಮದ್. ನಿಸಾರರ ಕಾವ್ಯ ಭಾಷೆಯನ್ನು ಕುರಿತು ವಿಚಾರ ಮಾಡುವಾಗ—ಸಮಕಾಲೀನರಾದ ಮಿಕ್ಕ ಕವಿಗಳಿಗಿಂತ ನಿಸಾರ್ ಹೇಗೆ ಭಿನ್ನ? ಅವರ ಭಾಷೆ-ಶೈಲಿಯ ವ್ಯತ್ಯಾಸವೇನು? ಕಾವ್ಯದಲ್ಲಿ ಅವರ ಮನೋಧರ್ಮ ಹೇಗೆ ವ್ಯಕ್ತವಾಗಿದೆ? ಕಾಲಕಾಲಕ್ಕೆ ಅವರು ನಡೆಸಿದ ಪ್ರಯೋಗಗಳು—ಅಥವಾ ಅಭಿವ್ಯಕ್ತಿಯಲ್ಲಿ ಕಂಡುಬರುವ ಬದಲಾವಣೆ—ಪ್ರಜ್ಞಾಪೂರ್ವಕವಾಗಿ ಮೂಡಿದ್ದೋ ಅಥವಾ ಕಾವ್ಯ ದೃಷ್ಟಿಯೂ ಮನೋಧರ್ಮವೂ ಬದಲಾಗಿದೆಯೋ ಹೇಗೆ ಎಂಬೆಲ್ಲ ಪ್ರಶ್ನೆಗಳು ಕಾವ್ಯಾಭ್ಯಾಸಿಯನ್ನು ಕಾಡುತ್ತವೆ.

೧೯೬೦ರಲ್ಲಿ 'ಮನಸು ಗಾಂಧಿ ಬಜಾರು' ಸಂಕಲನದ ಮೂಲಕ ಕಾವ್ಯಲೋಕವನ್ನು ಪ್ರವೇಶಿಸಿದ ನಿಸಾರ್ ಅಹಮದ್, ತಮ್ಮ ಮೂರನೆಯ ಕವನ ಸಂಕಲನ ತರುವ ಹೊತ್ತಿಗೆ ಹೇಗೆ ಬದಲಾಗಿದ್ದರು ಎಂಬುದಕ್ಕೆ 'ಸುಮುಹೂರ್ತ'ದಲ್ಲಿ ಉತ್ತರವಿದೆ. ಈ ಸಂಕಲನದಲ್ಲಿ ಕಾವ್ಯಕ್ಕೆ ಗದ್ಯತನದ ಹೊದಿಕೆ ಹಾಕಿದ್ದಾರೆ ನಿಸಾರ್. ಈ ಗದ್ಯತನದ ಅರ್ಥ ಮತ್ತು ಉದ್ದೇಶವನ್ನು ಹೀಗೆ ಹೇಳಬಹುದು: ಹಾಡುವಿಕೆ ಅಥವಾ ಗೇಯ ಗುಣಕ್ಕೆ ಕೊಡುವ ಪ್ರಾಧಾನ್ಯವನ್ನು ಕಳೆಯುವುದು; ಅಂದರೆ, ಕಾವ್ಯವನ್ನು ಸಂಗೀತವಾಗಿಸದೆ ಕಾವ್ಯವಾಗಿಯೇ ಉಳಿಸುವುದು. ಒಂದು ಕಾವ್ಯಕೃತಿಯನ್ನು ದಂತಗೋಪುರವಾಗಿಸದೆ ಓದುಗರಿಗೆ ಹತ್ತಿರವಾಗಿಸುವುದು, ಎಂದು.

ಈ ಎರಡೂ ಪ್ರಯತ್ನಗಳಲ್ಲಿ ನಿಸಾರ್ ಅಹಮದ್ ಗೆದ್ದಿದ್ದಾರೆ ಎಂಬುದೇ ಅವರ ಹೆಚ್ಚುಗಾರಿಕೆ. ಈ ಮಾತಿಗೆ ಉದಾಹರಣೆ ಬೇಕು ಅನ್ನುವವರು 'ಸುಮುಹೂರ್ತ'ದ ತೀ.ನಂ.ಶ್ರೀ. ಪದ್ಯವನ್ನು ಓದಬೇಕು. ಆ ಪದ್ಯದಲ್ಲಿ ತೀ.ನಂ.ಶ್ರೀ. ಅವರ ವ್ಯಕ್ತಿತ್ವ, ಅಂತಃಕರಣ, ಮಿತ್ರಸ್ನೇಹ, ಶಿಷ್ಯವಾತ್ಸಲ್ಯ, ಕಾರ್ಯಕ್ಷಮತೆ, ಕನ್ನಡದ ಬಗೆಗಿನ ಕಾಳಜಿ—ಎಲ್ಲವೂ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ—ಈರುಳ್ಳಿಯ ಪಕಳೆಗಳಂತೆ...

ತೀ.ನಂ.ಶ್ರೀ. ಅವರು ಕಲಿಸದೆಯೂ ಪ್ರಭಾವ ಬೀರಿದ ಮೇಷ್ಟರಾಗಿ ಗುರುವಾಗಿ ನೀಡಿದ ಮಾರ್ಗದರ್ಶನ ನಿಸಾರ್ ಅವರ ಕಾವ್ಯಕ್ಕೆ ಊರುಗೋಲು. ಅದು ನೆನಪಾದ

ತತ್‌ಕ್ಷಣ ನಿಸಾರ್ ಭಾವುಕರಾಗುತ್ತಾರೆ, ವಿನೀತರಾಗುತ್ತಾರೆ. ಗುರುಗಳ ಹೃದಯ ವೈಶಾಲ್ಯಕ್ಕೆ ಏಕಕಾಲದಲ್ಲಿ ಪುನೀತರೂ ಪುಳಕಿತರೂ ಆಗಿ ಹೇಳುತ್ತಾರೆ:

'ದಾರಿ ಕೈಮರ ಊರ ತೋರದಿದ್ದರು, ದಾರಿ
ತೋರದಿರುವುದೆ ಹೇಳು?
ಕಸುವು ನನ್ನದೆ, ಮತ್ತೆ ನನ್ನವೇ ಕೈಕಾಲು—
ಸನ್ನೆಗೆದೆ ಅಭಾರಿ.
ಕೋವಿ ನನ್ನದೇ, ಹಾಗೆ ಕಾದಾಟವೂ ಕೂಡ—
ಸಲಹೆ ಕೊಟ್ಟವ ನೀನು ದಂಡಾಧಿಕಾರಿ...' (ತೀನಂಶ್ರೀ)

ಇವೊತ್ತು ಗುರು ಪರಂಪರೆ ನಾಶವಾಗಿದೆ. ಆ ಹೊತ್ತಿನಲ್ಲೇ ನಿಸಾರ್ ಹಿರಿಯರ ಸ್ಮರಣೆಗೆ ನಿಂತು, ಗುರುವೇ ಪರದೈವ ಎಂದು ಸಾರಿ ಹೇಳುತ್ತಾರೆ. ಗುರಿ ಮುಟ್ಟಿದ ಮೇಲೂ ಯುದ್ಧದಲ್ಲಿ ಗೆದ್ದ ಮೇಲೂ ಹಿಂತಿರುಗಿ ನೋಡುತ್ತಾರೆ. ಗೆಲವಿನ ಗುಟ್ಟು ಹೇಳಿ ಗುರುವಿಗೆ ನಮೋನಮಃ ಎನ್ನುತ್ತಾರೆ. ನಿಮ್ಮ ಮಾರ್ಗದರ್ಶನ ಇಲ್ಲದಿದ್ದರೆ ಏನೊಂದೂ ಸಾಧ್ಯವಾಗುತ್ತಿರಲಿಲ್ಲ ಎನ್ನುವ ಮೂಲಕ, ಕಲಿಕೆಯಲ್ಲಿ ನಾನು ಎಂದೆಂದೂ ವಿದ್ಯಾರ್ಥಿ ಎಂದು ಖಚಿತವಾಗಿ ಹೇಳುತ್ತಾರೆ. ಅಷ್ಟೆಲ್ಲ ಹೇಳಿದ ಅನಂತರವೂ ಕಡೆಗೆ—

'ಋಣ ಹೊತ್ತು ನಿಂತಾಗ, ಋಣ
ತೀರಿತೆನಲಾರೆ.
ಇರದಿದ್ದರೂ, ನನಗೆ ಇರುಳಲ್ಲಿ ಪ್ರತ್ಯಕ್ಷ,
ನಿರ್ಭಯದ ಧ್ರುವತಾರೆ' (ಅದೇ)

ಅನ್ನುತ್ತಾರೆ. ಅಂದರೆ, ತೀ.ನಂ.ಶ್ರೀ. ಅವರ ನೆನಪು ಕತ್ತಲಲ್ಲಿಯೂ ಕಾಡುತ್ತದೆ. ಅದು ಧ್ರುವತಾರೆಯಂತೆ ಉಳಿಯುತ್ತದೆ. ಇಲ್ಲಿ ಗುರಿ ತೋರಿಸಿದ ಗುರುವನ್ನು ಧ್ರುವತಾರೆ ಎಂದಿದ್ದಾರೆ ನಿಸಾರ್. ಅದನ್ನು ಮೀರಿದ ಹೋಲಿಕೆ ಯಾವುದಿದೆ?

ನಿಸಾರ್ ಅಹಮದ್ ಅವರ ಕವಿತೆಗಳಲ್ಲಿ ಹಾಸ್ಯವಿರುತ್ತದೆ, ವಿಡಂಬನೆ ಇರುತ್ತದೆ, ವ್ಯಂಗ್ಯ ಇರುತ್ತದೆ, ಅವೆಲ್ಲದರ ಹಿಂದೆಯೇ ವಿಷಾದವೂ ಇರುತ್ತದೆ; ಬದಲಾದ ಭ್ರಷ್ಟ ವ್ಯವಸ್ಥೆಯ ಕುರಿತು ಚಾಟೂಕ್ತಿ ಇರುತ್ತದೆ. ಸತ್ತಂತಿರುವ ಕನ್ನಡಿಗರ ನಿರಭಿಮಾನದ ಬಗ್ಗೆ ಕನಿಕರವೂ ಇರುತ್ತದೆ. ಇದನ್ನೆಲ್ಲ ನಿಸಾರ್ ಅಹಮದ್ ಒಂದೇ ಪದ್ಯದಲ್ಲಿ ಹೇಳಿಬಿಟ್ಟಿದ್ದಾರೆ:

'ಗಾಢ ನಿದ್ದೆಯೊಳೊಮ್ಮೆ ಕಣ್ತೆರೆದು ಕೂತವನು
ಮರು ಗಳಿಗೆ ಮುಸುಕೆಳೆದು ಮಲಗಿದಂತೆ
ಇಂದಿನುತ್ಸವ, ಹಬ್ಬ, ಸಡಗರದ ಸಂತೆ.
ಧರ್ಮ ದೇವರಿನಂತೆ ಕನ್ನಡವು ಒಂದು ಪದ:
ಎರಡು ಲಘು, ಒಂದು ಗುರು, ಮೂರಕ್ಷರ!' (ರಾಜ್ಯೋತ್ಸವ)

ಕನ್ನಡಿಗರಿಗೆ 'ರಾಜ್ಯೋತ್ಸವ' ಎಂಬುದು ಸಂತೆಯ ಹಾಗೆ! ದೇವರು, ಧರ್ಮ ಎರಡಕ್ಕೂ ಹೇಗೆ 'ಕೇರ್' ಮಾಡುವುದಿಲ್ಲವೋ, ಹಾಗೆಯೇ ಕನ್ನಡವನ್ನೂ ಕನ್ನಡಿಗರು ಕೇರ್ ಮಾಡುವುದಿಲ್ಲ. ಅವರ ಪಾಲಿಗೆ 'ಕನ್ನಡ' ಎಂಬುದು ಒಂದು ಯಕಃಶ್ಚಿತ್ ಪದ ಅನ್ನುತ್ತಾರೆ

ನಿಸಾರ್. ಪ್ರತಿ ವರ್ಷವೂ ರಾಜ್ಯೋತ್ಸವದ ಸಂದರ್ಭದಲ್ಲಿ ಹೋರಾಟಗಾರರ ಹಾರಾಟ, ಹಾರಾಡುವವರ ಮತ್ತು ಹಾಡುವವರ ಚೀರಾಟ ಹೇಗಿರುತ್ತದೆ ಎಂಬುದನ್ನು ವ್ಯಂಗ್ಯವಾಗಿ ಹೇಳುತ್ತಾ ಹೋಗುವ ನಿಸಾರ್ ಮುಂದೆ ಹೀಗೆನ್ನುತ್ತಾರೆ:

'ಹಿತ್ತಲಿನ ಬೇಲಿಯಲಿ ನುಗ್ಗುತಿರೆ ಪೋಲಿ ದನ
ಲಬಲಬೋ, ಅಯ್ಯಯ್ಯೋ—ವ್ಯರ್ಥ ರೋಷ.'

(ಅದೇ)

ಹೌದು ತಾನೆ? ಕರುನಾಡ ಕನ್ನಡಿಗರು ೫೦ ವರ್ಷಗಳಿಂದಲೂ ಇರುವುದೇ ಹೀಗೆಯೇ ಪರಭಾಷೆಯವರು ಹಿಂದಿನ ಬಾಗಿಲಿನಿಂದ ನುಗ್ಗಿ ಬರುತ್ತಲೇ ಇದ್ದಾರೆ. ಹಾವಳಿ ಎಬ್ಬಿಸುತ್ತಲೇ ಇದ್ದಾರೆ. ಪರಿ ಪರಿಯಲ್ಲಿ, ಕಾಡುತ್ತಲೇ ಇದ್ದಾರೆ. ಆದರೆ ನಾವು ಮಾಡುತ್ತಿರುವುದಾದರೂ ಏನು? ಬರಿಯ ಬಾಯಿಮಾತಿನ ಹೋರಾಟ. ನಮ್ಮದೇನಿದ್ದರೂ ಉತ್ತರ ಕುಮಾರನ ಪೌರುಷ! ಇದೆಲ್ಲವನ್ನೂ ಕೇವಲ ಎರಡೇ ಸಾಲುಗಳಲ್ಲಿ ಹೇಳಿಬಿಡುವ ನಿಸಾರ್ ಅಹಮದ್‌ರವರ ಕಾವ್ಯ ಮಿಂಚಾಗಿ ಹೊಳೆಯುತ್ತದೆ—

'ನಮ್ಮ ರಾಜ್ಯೋತ್ಸವವೊ ಬರಿಯ ರಜ,
ಸೋಂಭೇರಿಗಳ ಮಜ...'

(ಅದೇ)

ಹೌದಲ್ಲವೆ? ಈ ಸಾಲುಗಳಿಗೆ ವಿವರಣೆ ಬೇಕಿಲ್ಲ.

ಕಾಲ ಮತ್ತು ಕವಿ, ಇಬ್ಬರನ್ನೂ ಮೀರಿ ನಿಲ್ಲುವುದು ಉತ್ತಮ ಕಾವ್ಯದ ಲಕ್ಷಣ ಎಂಬ ಮಾತಿದೆ. ಇಲ್ಲಿ ಆಗಿರುವುದೂ ಅದೇ. ನಿಸಾರ್ ಅವರು 'ಸುಮುಹೂರ್ತ'ವನ್ನು ತಂದಿದ್ದು ೧೯೬೭ರಲ್ಲಿ. ಈಗ, ಸಂಕಲನ ಪ್ರಕಟವಾಗಿ ೩೯ ವರ್ಷಗಳಾದ ಅನಂತರವೂ ಕನ್ನಡ ಮತ್ತು ಕರ್ನಾಟಕದ ಪರಿಸ್ಥಿತಿ ೧೯೬೭ರಲ್ಲಿ ಇದ್ದಂತೆಯೇ ಇದೆ! ಅಂದರೆ, ೨೦೦೭ರ ಹೊತ್ತಿಗೆ ಕನ್ನಡ ಮತ್ತು ಕರ್ನಾಟಕ ಹೇಗಿರುತ್ತವೆ ಎಂಬ ದಿವ್ಯ ಸತ್ಯವೊಂದು ಕವಿ ನಿಸಾರ್ ಅವರಿಗೆ ದೂರದೃಷ್ಟಿಯಂತೆ ಕಾಣಿಸಿತ್ತೋ ಹೇಗೆ?

ರವಿ ಕಾಣದ್ದನ್ನು ಕವಿ ಕಂಡ ಅನ್ನುವುದು ಇದಕ್ಕೇ ಇರಬಹುದೆ?

* * *

ಕಳೆದ ೨೦ ವರ್ಷಗಳಿಂದ ನಿಸಾರ್ ಅಹಮದ್ ಅವರನ್ನು ಪ್ರೀತಿಯಿಂದ ಮತ್ತು ಅವರ ಕವಿತೆಗಳನ್ನು ಬೆರಗಿನಿಂದ ನೋಡುತ್ತ ಬೆಳೆದವನು ನಾನು. ಪ್ರೀತಿ ಮತ್ತು ಬೆರಗನ್ನು ಅಂಗೈಯಲ್ಲಿ ಹಿಡಿದುಕೊಂಡೇ ನಿಸಾರ್ ಅಹಮದ್ ಮತ್ತು ಅವರ ಕಾವ್ಯವನ್ನು ನನಗೆ ಅರ್ಥವಾದಷ್ಟರ ಮಟ್ಟಿಗೆ ವಿವರಿಸಿದ್ದೇನೆ. ಈಗ ೭೧ರ ಸಂಭ್ರಮದಲ್ಲಿದ್ದಾರೆ ನಿಸಾರ್. ಎಪ್ಪತ್ತು ನೂರಾಗಲಿ. ಮುಂದಿನ ಆ ಮಧುರ ಕ್ಷಣದಲ್ಲೂ ನಾಲ್ಕು ಮಾತು ಬರೆಯುವ ಸುಯೋಗ ನನಗೆ ಒದಗಿಬರಲಿ. ಇದು ನನ್ನ ಬಯಕೆ ಮತ್ತು ಹಾರೈಕೆ.



'ಸಂಜೆ ಐದರ ಮಳೆ' : ಒಂದು ಒಟ್ಟಾರೆ ಸಮೀಕ್ಷೆ

♦ ಡಾ. ಶಾಂತಿನಾಥ ದೇಸಾಯಿ

ನಿಸಾರ್ ಅಹಮದರ ಕಾವ್ಯದಲ್ಲಿ ಥಟ್ಟನೆ ಮನ ಸೆಳೆಯುವ ವಿಷಯವೆಂದರೆ ಅವರ ವಾಕ್ಚಾತುರ್ಯ, ವಾಕ್ಪ್ರಿಯತೆ. ಇವರ ಕವಿತೆಗಳ ತುಂಬೆಲ್ಲ ಅನಾಯಾಸವಾಗಿ ಮೂಡಿಬರುವ ಮಿಂಚು-ಮಾತುಗಳನ್ನು, ಪಲ್ಲವಿಸುವ ಹೊಸ ಬಗೆಯ ಪ್ರತಿಮೆಗಳನ್ನು ಓದುತ್ತಿದ್ದಂತೆ 'ವಾಹ್ ವಾ' ಎಂದು ಕೈ ತಟ್ಟಲು ಹಚ್ಚುತ್ತೇವೆ. (ಅಂತೆಯೇ 'ಕಸ್ತೂರಿ'ಯಲ್ಲಿ 'ನಿಸಾರ್ ಅಹಮದ್ ಉವಾಚ' ಎಂಬ ಅವರ ಕವಿತೆಗಳಲ್ಲಿಯ 'ಉತ್ಕೃಷ್ಟ' ಸಾಲುಗಳ ಸಂಗ್ರಹ ಬಂದದ್ದರಲ್ಲಿ ಆಶ್ಚರ್ಯವೇನಿಲ್ಲ.) 'ಸಂಜೆ ಐದರ ಮಳೆ'ಯನ್ನು ಎಲ್ಲಿ ತೆರೆದು ನೋಡಿದರೂ ಕೆಳಗಿನಂತಹ ಸಾಲುಗಳು ಕಣ್ಣು ಸೆಳೆಯುತ್ತವೆ.

'ಹದಿನೆಂಟು ವಸಂತಿಸಿ ಅಂಗಾಂಗ ಲಲಲಾಲ.'
(ಪವಾಡ)

'ಅವಸರದಲ್ಲಿ
ತೊಡಕುಗಂಟಿನ ಲಾಡಿ ಬಿಚ್ಚುವಾಗಿನ,
ಹಲ್ಲಿರದ ಬಾಚಣಿಕೆಯಲ್ಲಿ ಕ್ರಾಪು
ಕೂರಿಸುವಾಗಿನ ಪೀಕಲಾಟ.' (ತಿಂಗಳಿನ ಕೊನೆ)

'ಕತ್ತಲಿನ ಸ್ತರಗಳಿಗೇ ಉಡ ಹಿಡಿದ ಜೀವಕ್ಕೆ
ಅಕಸ್ಮಾತ್ ಅಜೀರ್ಣವಾಗಿ ವಾಕಿಂಗ್ ಹೊರಟು
ಮಳೆ ಎದುರಾಗಿ ಸೀನಿದಾಗಷ್ಟೆ ಮೂಗೆಂಬುದರ ನೆನಪು'
(ಪಳೆಯುಳಿಕೆ)

ನಿಸಾರರ ಕಾವ್ಯದ ಜೀವಾಳವೆಂದರೆ ಅವರ ಆಡುಮಾತಿನ ಪರಿಣತ ಶೈಲಿ. ಈ ಶೈಲಿಯ ಪ್ರಧಾನ ವೈಶಿಷ್ಟ್ಯ ಮೂರು ಸಂಗತಿಗಳಲ್ಲಿದೆ: ಒಂದು, ಅತ್ಯಂತ ವಿಭಿನ್ನ ವಿಷಯಗಳಲ್ಲಿ ಸಮಾನ ಅಂಶಗಳನ್ನು ಕಾಣುವ ಅವರ ಚುರುಕು ದೃಷ್ಟಿಯಲ್ಲಿ:

'ಬರಿಸಿ ನಕ್ಕಾಗಿವರು ಥೇಟ್ ಜುಲೈ
ತಿಂಗಳಿನ ಶಿವಮೊಗ್ಗೆ.' (ಮಾಸ್ತಿ)

'ತಿಂಗಳಿನ ಕೊನೆಯಲ್ಲಿ / ಇದ್ದಕಿದ್ದಂತೆ ನೆಂಟರಿಳಿದಂತೆ ಬರೀ ಚಿಂತೆ.'
(ತಿಂಗಳಿನ ಕೊನೆ)

'ಆಗೀಗ ಮಳೆ ಕರ್ಫ್ಯೂ ಹಾಕಿದರೆ
ಮನಸ್ಸು ಬಾಣಂತಿ ಕೋಣೆ.'
(ತಿಂಗಳಿನ ಕೊನೆ)

'ಮರದ ಹೊಟ್ಟಿನ ಹಾಗೆ ಎಲ್ಲದಕ್ಕೂ
ಸುರುಳಿಯಾಗುವ ಮನಸು.' (ಸ್ವಗತ)

ಎರಡನೆಯದಾಗಿ ಅನುಭವಗಳನ್ನು ಮೂರ್ತೀಕರಿಸುವ ದೈನಂದಿನ ವಾಸ್ತವ ಅನುಭವಗಳ ಮೂಲಕ ಭಾವನೆಗಳಿಗೆ ಮುಖ ಮೂಡಿಸುವ ಕುಶಲ ವಿಧಾನದಲ್ಲಿ:

'ಹೊಸ್ತಿಲಲ್ಲೇ ಜೀವಂತ ಜಾಹಿರಾತು;
ಆಚೆ ಹೊರಟರೆ? ಕಣ್ಣಲ್ಲೇ ಹಾಸಿಗೆ ಸರಿಪಡಿಸಿ ಚಿಲುಕ ಹಾಕಿ
ದೀಪ ಕೆಡಿಸುವ ಸ್ವಪ್ನವಲ್ಲಭರ ಸ್ವತ್ತು.'
(ಪವಾಡ)

'ನನ್ನ ಹೊಸಿಲಲ್ಲಿ ಮೂರು ಕಾಲಾಗಿ
ಅಮೃತ ಹರಿಸುತ್ತಿದ್ದ ನನ್ನ ಟಾಮಿಗೆ
ನಾನು ಆಸ್ಪತ್ರೆ ಕಾಣಿಸಿದ್ದೋ...' (ಗೃಹಕೃತ್ಯ)

ಮೂರನೆಯದಾಗಿ, ಕತೆ, ಕಾದಂಬರಿಕಾರನ ಆಸ್ಥೆಯಿಂದ ಅವರು ತುಂಬುವ ಜೀವನಾನುಭವದ ವಿವರಗಳಲ್ಲಿ. ಉದಾ: 'ಗಾಂಧಿ ಬಜಾರಿನ ಬೆಳಗು', 'ಗಾಂಧಿ ಬಜಾರಿನ ಸಂಜೆ', 'ತಿಂಗಳಿನ ಕೊನೆ', 'ಸಂಜೆ ಐದರ ಮಳೆ' ಮುಂತಾದ ಕವಿತೆಗಳ ವೈಶಿಷ್ಟ್ಯವೆಲ್ಲ ಇಂಥ ವಿವರಗಳ ರಾಶಿಯಲ್ಲಿದೆ.

ನಿಸಾರರ ಕವಿತೆಗಳನ್ನು ಓದುವಾಗ ನಮಗೆ ಅತ್ಯಂತ ತೀಕ್ಷ್ಣವಾಗಿ ನೆನಪಾಗುವ ಇಂಗ್ಲೀಷ್ ಕವಿಯೆಂದರೆ ಡಬ್ಲ್ಯೂ. ಎಚ್. ಆಡೆನ್. ನಿಸಾರರಲ್ಲಿ ಆಡೆನ್ನನ ವೈಶಿಷ್ಟ್ಯಪೂರ್ಣವಾದ ಭಾಷಾ ಚಮತ್ಕಾರವಿದೆ, ವಸ್ತುನಿಷ್ಠ ವಿವರಪ್ರಿಯತೆಯಿದೆ, ಜೀವನದ ವಾಸ್ತವ ಸಂಗತಿಗಳನ್ನು ಕಾವ್ಯದಲ್ಲಿ ತುಂಬುವ ಹವ್ಯಾಸವಿದೆ. ಆದರೆ ಆ ವಾಸ್ತವ ವಿವರಗಳನ್ನು ಅರ್ಥಪೂರ್ಣ ಮಾಡುವ ಆಡೆನ್ನನ ಬೌದ್ಧಿಕ ಹಾಗೂ ನೈತಿಕ ಆಸಕ್ತಿ ಮಾತ್ರ ನಿಸಾರರಲ್ಲಿ ಇದ್ದಂತಿಲ್ಲ. ಹಳ್ಳಿಯ ಜೀವನ, ನಿಸರ್ಗ, ಸೌಂದರ್ಯ—ಇವುಗಳ ಬಗ್ಗೆ ತೀರ ಪ್ರಾಥಮಿಕವಾದ ರೊಮ್ಯಾಂಟಿಕ್ ಆಸಕ್ತಿ ಅವರ ವ್ಯಂಗ್ಯದ ಮೂಲದಲ್ಲಿದೆ ಹಾಗೂ ಆ ಆಸಕ್ತಿಯಲ್ಲಿ

ನಗರ ಜೀವನದ ವೈವಿಧ್ಯಮಯ ವಿವರಗಳನ್ನು ಅರ್ಥಹೀನಮಾಡಿ ಮೂದಲಿಸಿ ದೂರೀಕರಿಸುವಷ್ಟು ಶಕ್ತಿಯಿಲ್ಲ.

ನಿಸಾರರ ಕವಿತೆಗಳಲ್ಲಿ ವಸ್ತುನಿಷ್ಠವಾದವುಗಳಿಗಿಂತ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿಯಂತೆ ಕಾಣುವ ಕವಿತೆಗಳೇ ಹೆಚ್ಚು ಸಫಲವಾಗಿವೆಯೆಂದು ಹೇಳಬೇಕು. 'ನಿರ್ಧಾರ', 'ನಿನ್ನ ಚಿತ್ರವಾದದ್ದು ಹೇಗೆ', 'ಹೊಳೆ', 'ದ್ವಂದ್ವ', 'ಇನ್ನೊಂದು ಮುಖ', 'ನಿಮ್ಮೊಡನಿದ್ದೂ ನಿಮ್ಮಂತಾಗದೆ'—ಇವು ಈ ಸಂಗ್ರಹದಲ್ಲಿಯ ಉತ್ತಮ ಕವಿತೆಗಳು. ಇವುಗಳಲ್ಲಿ ಕವಿ ತನ್ನ ಅನಿಸಿಕೆಗಳ ಸಂಕೀರ್ಣತೆಯನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾನೆ. ಅಂತೆಯೇ ಅವು ತೃಪ್ತಿಕರವಾಗಿವೆ. ಕವಿ ತನ್ನ ಅಂತರಂಗದ ದ್ವಂದ್ವವನ್ನು ದಿಟ್ಟತನದಿಂದ ಎದುರಿಸಿ ಕಾವ್ಯದ ಮೂಲಕವೇ ಅದನ್ನು ಗೆಲ್ಲಲು ಹೆಣಗುತ್ತಾನೆ, ಅಂತೆಯೇ ಇಲ್ಲಿಯ ಕಾವ್ಯಕ್ಕೆ ಅನನ್ಯ ಸಾಧಾರಣವಾದ ಕಾವು ಬಂದಿದೆ. ಕೆಲವು ಕಡೆ ಸಂಪೂರ್ಣ ತಿಳಿಯದಿದ್ದರೂ (ಉದಾ: 'ಇನ್ನೊಂದು ಮುಖ') ಅದು ಹೃದಯವನ್ನು ತಟ್ಟುತ್ತದೆ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆ, ಕವಿಯ ಕೇಂದ್ರ ದ್ವಂದ್ವವನ್ನು—ಪರಕೀಯ ಭಾವವನ್ನು—ಬಹು ಸಮರ್ಥವಾಗಿ ಅಭಿವ್ಯಕ್ತಗೊಳಿಸುತ್ತದೆ:

'ಒಳಗೊಳಗೇ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿ
ಹೀರಿ, ಪೇಪರೋದಿ, ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.' **(ನಿಮ್ಮೊಡನಿದ್ದೂ ನಿಮ್ಮಂತಾಗದೆ)**

—ಇದರಿಂದ ಸಿದ್ಧವಾಗುವ ಮಾತೆಂದರೆ ನಿಸಾರರು ಇನ್ನೂ ಹೆಚ್ಚಾಗಿ, ಇನ್ನೂ ತೀಕ್ಷ್ಣವಾಗಿ ಆತ್ಮಶೋಧನೆಯ ಕೆಲಸ ಮಾಡಬೇಕು. ಅನಂತರ, ಒಂದು ಜೀವನ ದೃಷ್ಟಿ ಹದಗೊಂಡು ನಿಂತ ಅನಂತರ ಅವರು ಬಾಹ್ಯ ಜಗತ್ತಿನ ವಸ್ತುನಿಷ್ಠ ನಿರೀಕ್ಷಣೆ-ವಿಮರ್ಶೆಗಳಲ್ಲಿ ತೊಡಗಬೇಕು. ಅಂದಾಗಲೇ, ಅವರ ವಸ್ತುನಿಷ್ಠ ಕಾವ್ಯಕ್ಕೆ ಅವರದೇ ಆದ ಅರ್ಥಪೂರ್ಣತೆ, ಪ್ರಗಲ್ಭತೆ ಬಂದೀತು. ಕವಿ ಹಾಗೆ ಬೆಳೆಯಬೇಕು, ಹೀಗೆ ಬೆಳೆಯಬೇಕು ಎಂದು ಹೇಳುವುದು ಒಂದು ರೀತಿಯಿಂದ ತಪ್ಪು. ಯಾಕೆಂದರೆ ನಿಜವಾದ ಕವಿ ತನ್ನ ವ್ಯಕ್ತಿತ್ವದ ಆಂತರಿಕ ನಿಯಮಗಳಿಗೆ ಅನುಸಾರವಾಗಿಯೇ ಬೆಳೆಯುತ್ತಿರುತ್ತಾನೆ. ನಿಸಾರರು ಬೆಳೆಯುವ ಕವಿ, ಬೆಳೆದು ಶ್ರೀಮಂತ ಕಾವ್ಯವನ್ನು ನೀಡಬಲ್ಲ ಕವಿ. ಅವರು ಬೇಗನೆ ತಮ್ಮ ಎತ್ತರವನ್ನು ಮುಟ್ಟಲಿ ಎಂದೇ ಸಹೃದಯ ರಸಿಕರ ಹಾರೈಕೆ; ಮೇಲಿನ 'ಬೇಕು'ಗಳ ಹಿಂದಿನ ಮುಖ್ಯ ಪ್ರೇರಣೆ.

೧೯೭೦



'ಸಂಜೆ ಐದರ ಮಳೆ' ಮತ್ತು 'ನಾನೆಂಬ ಪರಕೀಯ': ಭಾಷೆಗೆ ಭಾಷೆ ಕೊಟ್ಟ ಕವಿ

◆ ಡಾ. ಡಿ. ಮಂಗಳಾ ಪ್ರಿಯದರ್ಶಿನಿ

ಆಧುನಿಕ ಕನ್ನಡ ಕಾವ್ಯ ಜಂಗಮರೂಪಿಯಾದುದು. ಚಲನಶೀಲ ಸಂಸ್ಕೃತಿಯಲ್ಲಿ ಅನೇಕ ಹೊರಳು, ಪಲ್ಲಟಗಳಿರುತ್ತವೆ. ಅದರ ಚಲನೆಗೆ ಒತ್ತಡ, ಒತ್ತಾಸೆಗಳಿರುತ್ತವೆ. ಒಂದು ನಿರ್ದಿಷ್ಟ ಜನ ಸಮುದಾಯದಲ್ಲಿ ಘಟಿಸುವ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳು, ಆಯಾ ಕಾಲದ ಅಗತ್ಯಗಳು, ಅನಿವಾರ್ಯತೆಗಳು ಆ ಸಮಾಜದ ಬೌದ್ಧಿಕ, ಭಾವುಕ, ಭಾಷಿಕ ಅಭಿವ್ಯಕ್ತಿಯಾದ ಸಾಹಿತ್ಯದ ಮೇಲೆ ಪ್ರಭಾವವನ್ನು ಬೀರಿರುತ್ತವೆ.

ಆಧುನಿಕ ಕನ್ನಡ ಕಾವ್ಯದ ಎಲ್ಲ ಹೊರಳುಗಳಲ್ಲೂ ಮಗ್ಗುಲು ಬದಲಿಸಿ ಬಂದ ನಿಸಾರ್ ಅಹಮದ್ ಅವರು ಅರವತ್ತರ ದಶಕದ ಕೊನೆಯಿಂದ ತಮ್ಮ ಬರವಣಿಗೆಯ ಗತಿಯನ್ನು ಬದಲಿಸಿಕೊಂಡು ಅಭಿವ್ಯಕ್ತಿ ಸೂಕ್ಷ್ಮತೆಯನ್ನು ಗಳಿಸಿಕೊಂಡರು. ಕವಿ ನಿಸಾರರು ಶಿವಮೊಗ್ಗೆಯ ವಾಸ್ತವ್ಯವನ್ನು ತಮ್ಮ 'ಸಂಜೆ ಐದರ ಮಳೆ' ಸಂಕಲನದ ಭೂಮಿಕೆಯನ್ನಾಗಿಸಿ ಕೊಳ್ಳುತ್ತಾರೆ. ಅಧ್ಯಾಪಕತನದ ವೃತ್ತಿ ಸಂಬಂಧೀ ಅನುಭವಗಳು ಇವರ ಈ ಘಟ್ಟದ ಅನೇಕ ಕವನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸದಾ ಚಿಟುಗುಟ್ಟುವ ಮಳೆನಾಡಿನ ಅನುಭವಗಳು, ಸಹ್ಯಾದ್ರಿಯ ಹಸಿರು ಅವರ ಅಭಿವ್ಯಕ್ತಿಗೆ ವಿಶೇಷ ನವಿರುತನವನ್ನು ತಂದುಕೊಡುತ್ತದೆ. ಸುಂದರ ಸಂಜೆಯ ವಿವಿಧ ಉದ್ದೇಶಗಳನ್ನು ನೀರು ಪಾಲು ಮಾಡುವ ಮಳೆ ಚಂಡಾಲನ ಆಗಮನ ಹಾಗೂ ನಿರ್ಗಮನಗಳು—ಮನುಷ್ಯರ ಬದುಕು ಹಾಗೂ ಪ್ರಕೃತಿ—

ಇವೆರಡರ ಮೇಲೆ ಉಂಟು ಮಾಡುವ ಪ್ರಭಾವವನ್ನು ವಿವರಿಸಿಕೊಳ್ಳುತ್ತವೆ.

ನಿಸಾರರು ಅತ್ಯುತ್ತಮ ವ್ಯಕ್ತಿಚಿತ್ರಗಳನ್ನು ತಮ್ಮ ಕವಿತೆಗಳಲ್ಲಿ ಮನೋಜ್ಞವಾಗಿ ಹಿಡಿದಿಟ್ಟಿದ್ದಾರೆ. ಪುರಂದರ ದಾಸರು, ನೆಹರು, ಬಾಪು, ಅರವಿಂದರು, ತೀ.ನಂ.ಶ್ರೀ., ಕೆ.ಎಸ್.ನ., ಮಾಸ್ತಿಯವರಂತಹ ಕವಿಗಳು, ರಾಷ್ಟ್ರ ನಾಯಕರುಗಳ ಬಗೆಗೆ ಕವನಗಳನ್ನು ರಚಿಸುತ್ತಾರೆ. ಅವರ 'ಮಾಸ್ತಿ' ಕವನ, ಆಧುನಿಕ ಕನ್ನಡದ ಆಸ್ತಿಯಾದ ಮಾಸ್ತಿ ವೆಂಕಟೇಶ ಐಯ್ಯಂಗಾರರ ಬದುಕನ್ನು ಅತ್ಯಂತ ಸಣ್ಣಪುಟ್ಟ ವಿವರಗಳ ಸೂಕ್ಷ್ಮತೆಯಲ್ಲಿ ಹಿಡಿದಿಡುವ ಕವನ. ಗವೀಪುರದ ವಿಸ್ತರಣದಲ್ಲಿನ ಅವರ ಮನೆಯಿಂದ ಅದೇ ರಸ್ತೆಯಲ್ಲಿ ಗಾಂಧಿ ಬಜಾರನ್ನು ದಾಟಿ ಮೂಲೆಯಲ್ಲಿನ ಕ್ಲಬ್ಬಿಗೆ ಬಂದು ತಮ್ಮ ಗೆಳೆಯರೊಂದಿಗೆ ಬೆರೆತು ಇಸ್ಪೀಟಾಟ ಆಡಿ ಮತ್ತೆ ಅದೇ ಹಾದಿಯಲ್ಲಿ ಮರಳಿ ಮನೆ ಸೇರುವ ಅವರ ಒಂದು ಸಂಜೆಯ ತಿರುಗಾಟದ ವಿವರವನ್ನು ನೀಡುತ್ತದೆ. ಈ ಎರಡು ಮೂರು ಗಂಟೆಗಳ ಮಾಸ್ತಿಯವರ ಚಿತ್ರಣದ ಮೂಲಕ ಇಡೀ ಅವರ ಬದುಕಿನ ಚಿತ್ರವನ್ನು ಸಮರ್ಥವಾಗಿ ಕಟ್ಟಿಕೊಡುತ್ತಾರೆ, ಕವಿ.

ಮಾಸ್ತಿಯವರ ಕೈಯ್ಯಲ್ಲಿ ಸದಾ ಇರುತ್ತಿದ್ದ ಕೊಡೆ ಬಹೂಪಯೋಗಿಯಾದದ್ದು. ಅದನ್ನು ಕವಿ 'ಕೊಡೆಯ ಗದೆ' ಎನ್ನುತ್ತಾರೆ. ಭಿಕ್ಷುಕರ ಹುಡುಗರನ್ನು ಬೆದರಿಸಲು, ಬೀದಿ ಕುನ್ನಿ, ಪೋಲಿದನಗಳನ್ನು ಓಡಿಸಲು ಬಳಕೆ ಮಾಡಿಕೊಳ್ಳುತ್ತಿದ್ದ ಕೊಡೆ ಬಿಸಿಲು, ಮಳೆ, ಕೊನೆಗೆ ಗಾಂಧಿ ಬಜಾರಿನ ಸಾಲು ವೃಕ್ಷಗಳ ಮೇಲೆ ಕೂತ ಹಕ್ಕಿಗಳು ಹಾಕುವ ಹಿಕ್ಕೆಗಳನ್ನೂ ತಡೆಯಲಿಕ್ಕೆ ಉಪಯೋಗವಾಗುತ್ತದೆ. ಅವರ ಸರಳ, ಸುಪ್ರಸನ್ನ ವ್ಯಕ್ತಿತ್ವ ಎದುರಿಗಿದ್ದವ ರನ್ನು ಪ್ರೇರಿಸುವಂತಹದು.

ಒಂದು ಹಿರಿಯ ತಲೆಮಾರಿನ ಚಟುವಟಿಕೆಗಳು, ಮನೋರಂಜನೆಗಳು ಎಂದೂ ಹಾದಿ ತಪ್ಪಿದವಲ್ಲ. ಅವು ಕೇವಲ ಖುಷಿಗಷ್ಟೇ ಮೀಸಲಾದವುಗಳು. ಸ್ನೇಹಿತ ವಲಯವನ್ನು ಭೇಟಿಯಾಗುವ ಉದ್ದೇಶವನ್ನಷ್ಟೇ ಹೊಂದಿರುವಂತಹವು. ಅಲ್ಲಿ ಅವರು ಮಾತನಾಡುವ ವಿಷಯಗಳಾದರೂ ಅತ್ಯಂತ ಸಾಮಾನ್ಯ ವ್ಯಕ್ತಿಗಳ ನಿತ್ಯ ಬದುಕಿಗೆ ಸಂಬಂಧಪಟ್ಟಿರುವಂಥವು. ಎರಡನೆಯ ನಂಬರಿನ ಬಸ್ಸಿನ ಮುಂದೆ ಯಾರೋ ಟೈಲರೊಬ್ಬ ಬಾಳೆ ಹಣ್ಣಿನ ಸಿಪ್ಪೆಯ ಮೇಲೆ ಜಾರಿ ಬಿದ್ದು ಕಾಲು ಉಳುಕಿಸಿಕೊಂಡ ವಿಷಯ ಜನಪ್ರಿಯ ಕವಿಯೊಬ್ಬ ಗಮನಿಸ ದೆಯೇ ಹೋಗಿಬಿಡಬಹುದಾದ ಸಣ್ಣ ಸಂಗತಿ. ಅವರಾಡುವ ವಿಷಯಗಳು ಇಪ್ಪತ್ತೆಂಟು. ಹಾಗೆಯೇ ಅವರಾಡುವ ಇಸ್ಪೀಟಿನಾಟವೂ ಇಪ್ಪತ್ತೆಂಟೆ. ಯಾರದೋ ನಾದಿನಿಗೆ ವರಸಿಕ್ಕ ವಿಷಯದಿಂದ ಹಿಡಿದು ದೇಶ, ವಿದೇಶಗಳ ಸುದ್ದಿ ಸಮಾಚಾರದವರೆಗೆ ಹರಡಿಕೊಂಡು ಲೋಕಾಭಿರಾಮವಾದದ್ದು ಅವರ ಮಾತುಕತೆ. ಅವರ ಬದುಕು ಸಾರ್ವಜನಿಕರೆದುರು ತೆರೆದ ಹೊತ್ತಗೆ. ಕಾಲಿಗೊತ್ತಿದ ಗಾಜಿನ ಚೂರನ್ನು ಮತ್ತೊಬ್ಬರ ಕಾಲಿಗೆ ತಗುಲದಂತೆ ಬಗ್ಗಿ ದೂರ ಎಸೆದು 'ಕರ್ತವ್ಯದೆಚ್ಚರಿನ ಸನ್ನೆ'ಯಂತೆ ಯಾವ ಜಾಹೀರಾತಿಗೂ ಗುರುತು ಸಿಕ್ಕದ ಹಾಗೆ ಸಾಗುವ ಮಾಸ್ತಿಯವರ ಬದುಕು 'ಸರಳ ಸದಭಿರುಚಿಯ ಖ್ಯಾತಿಯಂತೆ' ಎಂದು ನಿಸಾರರು ಗುರುತಿಸುತ್ತಾರೆ. ಮಾಸ್ತಿಯವರ ಮಾನವೀಯ ಗುಣಗಳು, ಬದುಕಿನ ಬಗೆಗಿನ ತುಂಬು

ಪ್ರೀತಿ, ಬದುಕಿನ ಸಣ್ಣ ಸಣ್ಣ ವಿಚಾರಗಳಲ್ಲೂ ತೋರುವ ಆಸ್ಥೆ, ಸಮಯ ಪ್ರಜ್ಞೆ, ಶಿಸ್ತು—ಇವುಗಳನ್ನು ಕವಿ ಎಲ್ಲೂ ವಾಚ್ಯವಾಗಿಸದೆ ಅತ್ಯಂತ ಧ್ವನಿಪೂರ್ಣ ನೆಲೆಯಲ್ಲಿ ಪ್ರಕಟಪಡಿಸುತ್ತಾರೆ.

ನಿಸಾರರನ್ನು ಕಾಡುವ ಪ್ರಮುಖ ವಿಚಾರಗಳೆಂದರೆ `ಶಿವಮೊಗ್ಗೆ' ಹಾಗೂ ಬೆಂಗಳೂರಿನ `ಗಾಂಧಿ ಬಜಾರು'. ಅವರ ಅನೇಕ ಪ್ರಮುಖ ಕವನಗಳ ಹುಟ್ಟಿನ ಕೇಂದ್ರಸ್ಥಾನ ಶಿವಮೊಗ್ಗೆ ಹಾಗೂ ಗಾಂಧಿ ಬಜಾರುಗಳು. ಗವೀಪುರದಿಂದ ಗಾಂಧಿ ಬಜಾರಿನಗುಂಟ ಸಾಗುವ ಮಾಸ್ತಿಯವರ `ತುಟಿಗಳ ಮೊಗ್ಗೆ ಅರಳಿ ನಕ್ಕರೆ, ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ'ಯಂತೆ ಕವಿಗೆ ಕಾಣುತ್ತದೆ. ಗಾಂಧಿ ಬಜಾರಿನ ಗದ್ದಲ, ಗೊಂದಲಗಳ ನಡುವೆಯೂ ಶಿವಮೊಗ್ಗೆಯ ಸುಪ್ರಸನ್ನತೆ ಕಾಣಿಸಿಕೊಳ್ಳುತ್ತದೆ. ಬದುಕಿನ ಅತ್ಯಂತ ಕ್ರಿಯಾಶೀಲ ಕ್ಷಣಗಳನ್ನು ಇಲ್ಲಿನ ಅನುಭವಗಳು ತುಂಬಿ ಕೊಡುತ್ತವೆ.

ಕವಿ ಕುವೆಂಪುರವರು `ಸೂರ್ಯೋದಯ'ವನ್ನು ಎಲ್ಲ ಮಾಸ, ಋತುಮಾನಗಳಲ್ಲೂ ಹಿಡಿದಿಟ್ಟು ಆ ಚೆಲುವನ್ನು ಮತ್ತೆ ಮತ್ತೆ ತುಂಬಿಕೊಳ್ಳುವಂತೆ, 'ಗಾಂಧಿ ಬಜಾರು' ನಿಸಾರರನ್ನು ಕಾಡುತ್ತದೆ. ಪು.ತಿ.ನ. `ಯದುಗಿರಿ', ಕೆ.ಎಸ್.ನ. 'ಮನೆ', ಬೇಂದ್ರೆ 'ಶ್ರಾವಣ', ಜಿ.ಎಸ್.ಎಸ್. `ಹಣತೆ'ಯ ಪ್ರತಿಮೆಗಳನ್ನು ಬಳಸಿಕೊಳ್ಳುವಂತೆ, ನಿಸಾರರು 'ಗಾಂಧಿ ಬಜಾರ'ನ್ನು ಬಳಸಿಕೊಳ್ಳುತ್ತಾರೆ. ಈ ಬಜಾರಿನ ಬೆಳಗು, ಸಂಜೆ, ಮಳೆಗಾಲ, ಚಳಿಗಾಲ—ಒಟ್ಟು ಎಲ್ಲ ಋತುಮಾನಗಳಲ್ಲೂ ಕವಿಯನ್ನು ಕಾಡುತ್ತವೆ. ಗಾಂಧಿ ಬಜಾರಿನ ಗೊಂದಲ, ಉತ್ಸಾಹ, ವರ್ಣರಂಜಿತತೆ; ಅಲ್ಲಿಯ ತರಕಾರಿ, ಹಣ್ಣು—ಅವುಗಳ ಕಂಪು, ಸಾಲುಮರಗಳು, ಅವುಗಳ ಮೇಲೆ ವಾಸ್ತವ್ಯ ಹೂಡಿರುವ ವಿವಿಧ ಜಾತಿಯ ಪಕ್ಷಿಗಳು, ಅವುಗಳ ಹಿಕ್ಕೆಗಳು, ವೃತ್ತದಲ್ಲಿ ಸದಾ ನಡೆಯುವ ರಾಜಕೀಯ ಹಾಗೂ ಸಾಮಾಜಿಕ ವಿಷಯದ ಭಾಷಣಗಳು, ಇದರ ಮಧ್ಯೆ ಮೂಗನ್ನು ಬಡಿದೆಬ್ಬಿಸುವ 'ವಿದ್ಯಾರ್ಥಿ ಭವನ'ದ ಮಸಾಲೆ ದೋಸೆಯ ವಾಸನೆ; ಸಿಗರೇಟು ಸೇದುತ್ತ, ಪೇಪರೋದುತ್ತ, ಕಾಫಿ ಹೀರುತ್ತ, ದೋಸೆ ತಿನ್ನುತ್ತ ಹರಟುವ ಬುದ್ಧಿ ಜೀವಿಗಳು, ಕವಿಗಳು; ಅಂಗಡಿ ಮುಂಗಟ್ಟುಗಳಲ್ಲಿ ವ್ಯಾಪಾರಕ್ಕೆ ತೊಡಗಿರುವ ಗಂಡ, ಹೆಂಡತಿ, ಮಕ್ಕಳು-ಮರಿಗಳು—ಒಂದು ಸಂಭ್ರಮದ, ಸದಾ ಗಿಜಿಗುಟ್ಟುವ ಗಾಂಧಿ ಬಜಾರಿನ ಚೈತನ್ಯಮಯ ಚಟುವಟಿಕೆಗಳನ್ನು ಕವಿ ಅತ್ಯಂತ ಆಪ್ತವಾಗಿ ವಿವರಿಸುತ್ತಾರೆ. ಅದರ ಸಂಕೀರ್ಣತೆಯನ್ನು ಮನಸ್ಸಿನ ಸಂಕೀರ್ಣತೆ, ಗೊಂದಲಗಳಿಗೆ ರೂಪಕಾತ್ಮಕವಾಗಿಸುತ್ತ, `ಮನಸು ಗಾಂಧಿ ಬಜಾರು' ಎನ್ನುತ್ತಾರೆ. ಗಾಂಧಿ ಬಜಾರು ಅವರ ಕವನಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಆವರ್ತನ ಪ್ರತಿಮೆಯಾಗುತ್ತದೆ. ಗಾಂಧಿ ಬಜಾರು ನಾಗರಿಕತೆ, ನಗರೀಕರಣದ ಸಂಕೇತವಾದರೆ, ಶಿವಮೊಗ್ಗೆ ದೇಸೀ ಸಂವೇದನೆಗಳಿಗೆ ಇಂಬುಗೊಡುವ ಸರಳ ನೆಲೆ.

`ಗಾಂಧಿ ಬಜಾರಿನ ಬೆಳಗು' ನಗರದ ಬದುಕಿನೊಳಗೆ ಬೆಳಗಿನ ಜೀವ ಸಂಚಾರದ ವಿವಿಧ ಚಟುವಟಿಕೆಗಳನ್ನು ಹೇಳುತ್ತದೆ. ನಗರಗಳ ಯಾಂತ್ರಿಕ, ವೇಗದ ಬದುಕಿನೊಳಗೆ ಜಾನಪದದ ರಂಗೋಲಿ, ಭಕ್ತಿ, ಹೂವು, ಪ್ರಕೃತಿ, ಸಂಗೀತ, ಶಾಂತತೆಗಳು ಕಳೆದು ಹೋಗುತ್ತಿರುವುದರ ಬಗೆಗೆ ಕವಿಯ ಮನಸ್ಸಿನಲ್ಲೊಂದು ವಿಷಾದದ ಛಾಯೆಯಿದೆ.

ಗ್ರಾಮೀಣ ಬದುಕಿನ ಶಾಂತಿ, ನೆಮ್ಮದಿ, ನಿಧಾನತೆಗಳು ನಗರದ ಬದುಕಿನಿಂದ ಮಾಯವಾಗುತ್ತಿರುವ ಸಂಕಟವಿದೆ. ಗ್ರಾಮೀಣ ಬದುಕಿನ ವಸ್ತು ಪ್ರಪಂಚವನ್ನು ಪಾಶ್ಚಾತ್ಯ ಜಗತ್ತು ಆವರಿಸಿಕೊಳ್ಳುತ್ತಿರುವ; ಶಾಂತಿ, ನೆಮ್ಮದಿಗಳು ಮಾಯವಾಗುತ್ತ ಗದ್ದಲ, ಗೊಂದಲಗಳು ಅವನ್ನು ತುಂಬಿಬಿಟ್ಟಿರುವ ನೋವು ಆಳದಲ್ಲಿದೆ. ಗಾಂಧಿ ಬಜಾರಿನ 'ಬೆಳಗು', 'ಸಂಜೆ'ಗಳು ಕವಿಗೆ ಎಂದೂ ಬೆರಗು ಹುಟ್ಟಿಸುವಂತಹವೆ. ಅವು ಶಿವಮೊಗ್ಗೆಯಲ್ಲಿದ್ದಾಗಲೂ ಕವಿಸ್ಮೃತಿಯಲ್ಲಿ ಸದಾ ಹಸಿರಾಗಿರುವಂತಹವೆ. ಕವಿಗೆ ಶಿವಮೊಗ್ಗೆಯಲ್ಲಿ ಗಾಂಧಿ ಬಜಾರು, ಗಾಂಧಿ ಬಜಾರಿನಲ್ಲಿ ಶಿವಮೊಗ್ಗೆ ನೆನಪಾಗುತ್ತದೆ. ಪ್ರಕೃತಿಯ ಹಸಿರು, ಸಹ್ಯಾದ್ರಿಯ ಸಾಲಾವಳಿಗಳು, ತುಂಗ-ಭದ್ರೆಯರ ಸಂಭ್ರಮ, ಜೋಗ ಜಲಪಾತದ ಭೋರ್ಗರೆತ—ನದಿ, ಬೆಟ್ಟ, ಗುಡ್ಡ, ಹೂವು, ಹಣ್ಣು—ಬದುಕಿನ ಸಮೃದ್ಧತೆಯನ್ನು ತುಂಬಿಕೊಡುವ ಶಿವಮೊಗ್ಗೆ, ಕವಿಯ ಮನಸ್ಸಿನೊಳಗೆ ಬೆಚ್ಚಗೆ ಕುಳಿತಿರುವ ಗ್ರಾಮೀಣ ಪ್ರಜ್ಞೆ, ಮೊದಲ ಪಿಪ್ಪಿನ ಫ್ಯಾಕ್ಟರಿ ಬಸ್ಸು, ಆಟೋ, ಹೋಟೆಲಿನ ಕುರ್ಚಿಗಳ ಧಡಭಡ, ಪೋಲೀಸರ ಬೂಟುಗಾಲಿನ ನಡಿಗೆ, ಲಾರಿಯ ಶಬ್ದ—ಇವೆಲ್ಲವೂ ಶುದ್ಧ ಯಾಂತ್ರಿಕತೆಯ ವ್ಯಾಪಾರೀ ಮನೋಭಾವವನ್ನು, ಧಾವಂತದ, ಭಯದ ವಾತಾವರಣವನ್ನು ನಿರ್ಮಾಣ ಮಾಡಿರುವ 'ನಗರಪ್ರಜ್ಞೆ'ಯಾಗಿದೆ.

ಇದೇ ನಗರ ಬದುಕಿನಲ್ಲಿ ಮಧ್ಯಮ ವರ್ಗದ ಸಂಬಳದಾರನ ತಿಂಗಳಿನ ಕೊನೆಯ ದಿನಗಳ ಬದುಕು ಅತ್ಯಂತ ಸಾಹಸಪೂರ್ಣವಾದುದು, ಹೀನಾಯವಾದುದು. ಉದರ ಪೋಷಣೆಗಾಗಿ ತಿಂಗಳ ಕೊನೆಗೆ ಮನೆಯಲ್ಲಿರುವ ಹಳೆಯ ಪೇಪರು, ಖಾಲಿ ಶೀಷೆಗಳನ್ನೂ ಮಾರಿಕೊಂಡು ದಿನಕ್ಕೆ ಹೆದರುವ ದಿನಗಳು. ಇಂತಹ ದಿನಗಳು ತುಂಬ ಉದ್ದವಾದ ದಿನಗಳೇ ಆಗಿವೆ. ತಮ್ಮ ಜೊತೆಗೆ ಬದುಕಿನಲ್ಲಿ ಪಯಣಿಸಿದ ಸಾಮಾನ್ಯರು 'ಮಾಸಾಂತ್ಯದ ಸಂಸಾರಿಯ ಮುಖದವರು'. ಕವಿ ನಗರಗಳಲ್ಲಿ ವಾಸ ಮಾಡುವ ಮಧ್ಯಮ ವರ್ಗ ಹಾಗೂ ಕೆಳ ವರ್ಗದ ಜನಗಳಿಗೆ ಸ್ಪಂದಿಸಿದ ಕ್ಷಣಗಳು 'ತಿಂಗಳಿನ ಕೊನೆ'—ಮುಂತಾದ ಕವನಗಳಲ್ಲಿ ಬಿಚ್ಚಿಕೊಳ್ಳುತ್ತವೆ.

ಕೊಳ್ಳುಬಾಕ ಸಂಸ್ಕೃತಿಯ ವ್ಯಾಪಾರೀ ಮನೋಭಾವ ಹಾಗೂ ಗ್ರಾಹಕನ ಕನಸುಗಳು ನಿಸಾರರ ಕವನಗಳಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ನಗರಗಳಲ್ಲಿ, ಗ್ರಾಹಕ ಸಂಸ್ಕೃತಿಯಲ್ಲಿ ಹೊಟ್ಟೆಪಾಡಿಗಾಗಿ ದುಡಿಯುವ ಹೆಣ್ಣುಮಕ್ಕಳು ಮಾರಾಟದ ನಡುವೆಯೂ ತಮ್ಮ ವೈಯಕ್ತಿಕ ಪ್ರೀತಿಯ ಅನುಭವಗಳನ್ನು ಗೆಳತಿಯರೊಂದಿಗೆ ಹಂಚಿಕೊಳ್ಳುತ್ತಾರೆ. ತನ್ನನ್ನು ಮರ್ಲಿನ್ ಮನ್ರೋ ಎಂದು ಕರೆದ ಪ್ರಿಯಕರ ಗ್ರಿಗರಿ ಪೆಕ್, ಕಾರಿರುವ, ನೀಟಾಗಿರುವ ಸುಂದರ, ಶ್ರೀಮಂತ ಯುವಕ: ಹಾಸ್ಯಪ್ರಿಯ, ರಸಿಕ. ತನ್ನ ಮನ ಗೆದ್ದುದನ್ನು ತನ್ನ ಬಿಡುವಿಲ್ಲದ ವ್ಯಾಪಾರದ ನಡುವೆಯೂ ಗೆಳತಿಗೆ ಮುಚ್ಚಟೆಯಿಂದ ವರದಿ ಮಾಡುತ್ತಾಳೆ. ಬಿಡುವಿಲ್ಲದ ದುಡಿಮೆಯ ನಡುವೆಯೂ ಪ್ರಿಯಕರನನ್ನು 'ಬೇಸಿಗೇಲಿ ಐಸ್‌ಕ್ರೀಂ ಇದ್ದ ಹಾಗೆ ಕಣೇ ಅವನು' ಎನ್ನುವ ಹುಡುಗಿ, ತನ್ನ ವಯಸ್ಸು, ಅಂತಸ್ತುಗಳ ಆಸೆಗೆ ಅನುಗುಣವಾಗಿ ಅವನನ್ನು ಗೆಳತಿ ಸುಶಿಗೆ ವರ್ಣಿಸಿಕೊಳ್ಳುತ್ತಾಳೆ. ವರ್ಗ ಯಾವುದೇ ಆಗಲಿ, ಉದ್ಯೋಗ

ಏನೇ ಇರಲಿ, ಬಿಡುವಿಲ್ಲದ ಗಳಿಗೆಗಳ ನಡುವೆಯೂ ಹುಟ್ಟಬಹುದಾದ ವಯಸ್ಸಿಗೆ ಸಹಜವಾದ ಪ್ರೀತಿಯ ಮಜಲುಗಳು ಅತ್ಯಂತ ಸಾಮಾನ್ಯ ಸಂದರ್ಭಗಳಲ್ಲೂ ಕಾಣಿಸಿಕೊಳ್ಳುವ ಪ್ರೀತಿಯ ವಿಶಿಷ್ಟತೆಯಾಗಿದೆ. ಅದೇನು ಆ ಪ್ರೀತಿ ಹಿಮಾಲಯದಂತೆ ಅಚಲವಾಗಿ ನಿಲ್ಲುವಂಥದ್ದೋ?' ಅಥವಾ ಬೇಸಿಗೆಯಲ್ಲಿನ ಐಸ್‌ಕ್ರೀಮಿನಂತೆ ಕ್ಷಣದ ಅಗತ್ಯವನ್ನು ಪೂರೈಸಿ ಬಾಯಿಗಷ್ಟೇ ರುಚಿ, ತಂಪೆನಿಸಿ ಹೇಳ ಹೆಸರಿಲ್ಲದಂತೆ ಕರಗಿ ಹೋಗುವ ಜಾಳಿನ ಕ್ಷಣಗಳೋ?'—ಒಟ್ಟು, ಅದೊಂದು ಬದುಕಿನ ಮಹತ್ವದ ಅನುಭವವಾಗಿ ದಾಖಲಾಗುವಂಥದ್ದು.

'ಸಾಹಿತ್ಯ ಸೃಷ್ಟಿ' ಹಾಗೂ 'ಜೀವ ಸೃಷ್ಟಿ' ಪ್ರತ್ಯೇಕ ಕ್ರಿಯೆಗಳಲ್ಲ. ಅವು ಸೃಜನಶೀಲ ಕವಿಯ ಅತ್ಯಂತ ನೋವಿನ, ಆದರೆ ಸಾರ್ಥಕವಾದ ಕ್ರಿಯೆ. ಸಾಮಾನ್ಯವಾಗಿ ಎಲ್ಲ ಕವಿಗಳೂ ಅದನ್ನು 'ಹೆರಿಗೆ'ಗೆ ಹೋಲಿಸಿದ್ದಾರೆ. ಮುಖ್ಯವಾಗಿ ಕವಿಯಾದವನು ಅಪ್ರಾಮಾಣಿಕತೆಯಿಂದ ಹಸಿ ಹಸಿಯಾಗಿ ತನ್ನ ಅನುಭವಗಳನ್ನು ಕಾರಿಕೊಳ್ಳದೆ, ನಿಯಮದಂತೆ ಗರ್ಭ ತಾಳಬೇಕಾಗಿರುವ ಕಾವ್ಯ ನಿಯಮವನ್ನು ಕುರಿತು ಹೇಳುತ್ತಾನೆ. 'ರೂಢಿಯಂತೆ ಚಿಂತನೆಯ ಬೇನೆಯಲ್ಲುರಿದು ಹೆರಬೇಕಾಗಿರುವ' ಅನಿವಾರ್ಯತೆಯನ್ನು ನಿಸಾರರು ಕಾವ್ಯಕ್ರಿಯೆಯ ಮುಖ್ಯ ವಿಚಾರ ಎಂದು ಭಾವಿಸುತ್ತಾರೆ.

ಪ್ರತಿಯೊಬ್ಬ ಕ್ರಿಯಾಶೀಲ ವ್ಯಕ್ತಿಯೂ ಪರಂಪರೆಯೊಂದಿಗೆ ಸೆಣಸಾಡುತ್ತ, ಕೆಲವೊಮ್ಮೆ ರಾಜಿ ಮಾಡಿಕೊಳ್ಳುತ್ತ, ಮತ್ತೊಮ್ಮೆ ಅದರಿಂದ ಸಿಡಿದು ಬೀಳುತ್ತ ಘರ್ಷಣೆ, ದ್ವಂದ್ವಗಳಿಗೆ ಒಳಗಾಗುವುದು ಅವನ ಬೆಳವಣಿಗೆಯ ಗುಣವಾಗುತ್ತದೆ. ನಿಸಾರರ 'ಅಮ್ಮ, ಆಚಾರ, ನಾನು' ಕವನ ಮೇಲ್ನೋಟಕ್ಕೆ ತೀರಾ ಸರಳವಾದ, ತಮಾಷೆಯ ಪದ್ಯದಂತೆ ಕಂಡರೂ ಹೆಣ್ಣಿನ ಆಧುನಿಕ ಹಾಗೂ ಸಾಂಪ್ರದಾಯಿಕ ನಂಬಿಕೆಗಳ ತಾಕಲಾಟ, ತಿಕ್ಕಾಟಗಳ ಸ್ವರೂಪವನ್ನು ಸಹಜವಾದ ನೆಲೆಯಲ್ಲಿ ವಿವರಿಸುತ್ತದೆ. ಅದರಲ್ಲೂ, ಮುಸ್ಲಿಂ ಹೆಣ್ಣುಗಳು ಇಂದಿಗೂ ಅನುಭವಿಸುತ್ತಿರುವ ಈ ದ್ವಂದ್ವಗಳ ದಾಖಲಾತಿ ಇಲ್ಲಿದೆ. ಅತ್ಯಂತ ಸಂಪ್ರದಾಯಶೀಲ ಆವರಣದಲ್ಲಿ ವಾಸ್ತವವಾಗಿಯೇ ಮುಖಕ್ಕೆ ಪರದೆ ಎಳೆದುಕೊಂಡ ಮುಸ್ಲಿಂ ಹೆಣ್ಣುಮಕ್ಕಳ ಆಸೆ, ಕನಸುಗಳು ಹೊರಗೆ ಅನಾವರಣಗೊಳ್ಳದೆ ಬುರ್ಖಾದೊಳಗೇ ಕರಗಿ ಹೋಗಿಬಿಡುತ್ತವೆ. ಅದಕ್ಕೆ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯ ನಿರೀಕ್ಷಿತ ಗುಣಗಳೂ ಕಾರಣವಾಗುತ್ತವೆ. ಪ್ರಸ್ತುತ ಕವನದಲ್ಲಿನ ಆಧುನಿಕ ಮುಸ್ಲಿಂ ಗಂಡು, ಈ ಸಾಂಪ್ರದಾಯಿಕ ವಿಚಾರಗಳಿಗೆ ಬೇಸತ್ತು ಆಧುನಿಕ ವಿಚಾರಧಾರೆ, ವೇಷ, ಭೂಷಣಗಳಿಂದ ಶೋಭಿಸುವ ಹೆಣ್ಣನ್ನು ತಾಯಿಯ ವಿರೋಧದ ನಡುವೆಯೂ ಮೆಚ್ಚಿ ಮದುವೆಯಾಗಿ ಮನೆಗೆ ಕರೆ ತರುತ್ತಾನೆ. ಮೊದಲನೆಯ ದಿನ ತಿರುಗಾಟಕ್ಕೆ ಹೊರಟ ಸಂದರ್ಭದಲ್ಲಿ ಅತ್ಯಂತ ಆಧುನಿಕವಾಗಿ ಅಲಂಕರಿಸಿಕೊಂಡು ಇವನ ಮನಸ್ಸಿನಂತೆಯೇ ಕಂಡ ಹೆಂಡತಿ, ತಕ್ಷಣ ಒಳಗೆ ಹೋಗಿ, ಮತ್ತೆ ಹೊರಗೆ ಬರುತ್ತಾಳೆ. ನೋಡಿದರೆ, ತಾಯಿಯ ಬುರ್ಖಾವನ್ನೇ ಉಟ್ಟಿರುತ್ತಾಳೆ. ಎಷ್ಟೇ ಆಧುನಿಕವಾಗಬೇಕೆಂಬ ಆಸೆಗಳು, ಅದಕ್ಕೆ ಒತ್ತಾಸೆ ನೀಡುವ ಪುರುಷನಿದ್ದ ಸಂದರ್ಭದಲ್ಲೂ ಹೆಣ್ಣು ಅತ್ತೆಯ, ಪರಂಪರೆಯ ಮೌಲ್ಯಗಳನ್ನೇ ಉಟ್ಟು ಸಂಪ್ರದಾಯ

ಶೀಲತೆಯ ಗಡಿ ಗೆರೆಗಳ ಮಿತಿಯೊಳಗಷ್ಟೇ ಆಧುನಿಕವಾಗಲು ಬಯಸುತ್ತಾಳೆ—ಎಂಬ ಹೆಣ್ಣಿನ ಮನಸ್ಸಿನ ಸೂಕ್ಷ್ಮತೆಗಳನ್ನು ಕವಿ ದಾಖಲಿಸುತ್ತಾರೆ.

ಭಾರತೀಯ ವೈಜ್ಞಾನಿಕ ಬದುಕಿಗೆ ಸರ್ ಸಿ. ವಿ. ರಾಮನ್ ಅಂತಹ ವಿಜ್ಞಾನಿಯನ್ನು ಕಳೆದುಕೊಂಡಾಗ ಉಂಟಾಗಿರಬಹುದಾದ ನಷ್ಟ—ಒಟ್ಟಾರೆಯಾಗಿ ಯಾರೇ ಹೋಗಲಿ, ಇರಲಿ—ಅದು ತನ್ನ ಪಾಡಿಗೆ ತಾನಿರುವಂತಹದು ಎಂದು ಕಂಡುಕೊಂಡ ಸತ್ಯ—ಇವುಗಳನ್ನೂ ಹೇಳುತ್ತಾರೆ. ರಾಮನ್ ಹುಟ್ಟಿದ ನಾಡಿನಲ್ಲೇ ನವುಲೆ ಗ್ರಾಮದ ಅತ್ಯಂತ ಸಾಧಾರಣ ವ್ಯಕ್ತಿತ್ವದ 'ಹನುಮ'ನಿದ್ದಾನೆ. 'ರಾಮನ್' ಹಾಗೂ 'ಹನುಮ' ನಮ್ಮ ದೇಶದ ಎರಡು ವಿಪರೀತ ವರ್ಗದ ಜನತೆಯ ಸಂಕೇತವಾಗಿ ನಿಲ್ಲುತ್ತಾರೆ. ರಾಮನ್ ಈ ದೇಶದ ಅತ್ಯಂತ ಬುದ್ಧಿವಂತ ಪ್ರಜ್ಞೆಯ ಸಂಕೇತವಾದರೆ, ಹನುಮ ಅವಿದ್ಯಾವಂತಿಕೆಯ, ಅಜ್ಞಾನದ ಸಂಕೇತ. ಪುರಾಣದ ರಾಮ-ಹನುಮರ ಸಂಬಂಧ ಅತ್ಯಂತ ಆತ್ಮೀಯವಾದುದು. ಆದರೆ ಈ ಇಬ್ಬರ ಸಂಬಂಧ ಅಂಥ ಸ್ವರೂಪವನ್ನು ಪಡೆಯದರ ವಿಷಾದ ವ್ಯಕ್ತಪಡಿಸುತ್ತಾರೆ. ಅದೇ ಸಂದರ್ಭದಲ್ಲಿ ರಾಮನ್‌ರಂತಹ ಪ್ರಜ್ಞಾವಂತರು ಹನುಮನ ಬದುಕಿನಲ್ಲಿ ಪ್ರವೇಶ ಪಡೆದುಕೊಳ್ಳಲು ಸಾಧ್ಯವಾಗದಿರುವ ಒಂದು ಸ್ಥಿತಿಯ ವಾಸ್ತವತೆಯನ್ನೂ ತೆರೆದು ತೋರಿಸುತ್ತಾರೆ. ಆಧುನಿಕ ಬದುಕಿನ ಯಾವ ತವಕ, ತಲ್ಲಣಗಳೂ ತಟ್ಟದ ಹನುಮನಂತಹವರಿಗೆ ರಾಮನ್ ಅಂತಹ ವಿಜ್ಞಾನಿಗಳಾಗಲಿ, ಬರ್ಟ್ರೆಂಡ್ ರಸೆಲ್‌ರಂತಹ ಚಿಂತಕರೇ ಆಗಲಿ ಯಾರು ಸತ್ತರೂ ಅಷ್ಟೆ. ಇವರಿಗೆ ಹೊತ್ತು ಹೊತ್ತಿಗೆ ಅನ್ನ ಸಂಪಾದಿಸುವುದೇ ದೊಡ್ಡ ಸಮಸ್ಯೆಯಾಗಿದೆ. ನಿಸಾರರು ಬದುಕಿನ ಭ್ರಮೆ ಮತ್ತು ವಾಸ್ತವಗಳನ್ನು ಕುರಿತು ಚಿಂತಿಸುತ್ತಾರೆ. ಯಾವೊಬ್ಬ ವ್ಯಕ್ತಿಯ ಬದುಕೇ ಆಗಲಿ, ಸಾವೇ ಆಗಲಿ ಸಾರ್ವತ್ರಿಕ ಪ್ರಭಾವವನ್ನು ಉಂಟು ಮಾಡೇ ಮಾಡುತ್ತದೆಂಬ ನಂಬಿಕೆ ಸುಳ್ಳು, ಎಂಬ ಸತ್ಯದ ಅರಿವು ಇಲ್ಲಿ ಮುಖ್ಯವಾಗುತ್ತದೆ. ರಾಮನ್ ಸತ್ತಾಗ ಇಡೀ ದೇಶ ಶೋಕ ಸಾಗರದಲ್ಲಿ ಮುಳುಗುತ್ತದೆ ಎಂಬ ನಂಬಿಕೆ ಸುಳ್ಳಾದದ್ದು, ರಾಮನ್ ಸತ್ತರೆ ಇಡೀ ದೇಶದ ವೈಜ್ಞಾನಿಕ ಬದುಕೇ ಇಲ್ಲವಾಗುತ್ತದೆ ಎಂಬ ಭ್ರಮೆ—ಇವೆಲ್ಲವುಗಳ ಸತ್ಯವನ್ನು ಹನುಮನಂತಹ ಸಾಮಾನ್ಯ ಗ್ರಾಮೀಣ, ಅವಿದ್ಯಾವಂತ ಪ್ರತಿಭೆ ಸ್ಫೋಟಗೊಳಿಸುತ್ತದೆ: ಸಾವು ಅನಿವಾರ್ಯವಾದರೂ, ಬದುಕು ನಿರಂತರವಾದುದು ಎಂಬ ದೃಢ ವಾಸ್ತವದ ಅರಿವನ್ನು ಉಂಟುಮಾಡುತ್ತದೆ.

ತನ್ನ ಚಿರ ಪರಿಚಿತ ಪರಿಸರದಲ್ಲಿಯೇ ತಾನು ಪರಕೀಯನಾಗುತ್ತಿರುವ ವಿಷಾದ ನಿಸಾರ್ ಅವರ ಕವನಗಳಲ್ಲಿ ಕಾಣಿಸಿಕೊಳ್ಳುತ್ತದೆ. 'ನವ್ಯಕಾವ್ಯ'ದ ಪರಕೀಯ ಪ್ರಜ್ಞೆ ಅವರನ್ನು ಕಾಡುತ್ತದೆ. 'ನಾನೆಂಬ ಪರಕೀಯ', 'ನಿಮ್ಮೊಡನಿದ್ದೂ ನಿಮ್ಮಂತಾಗದೆ'—ಮುಂತಾದ ಕವನಗಳಲ್ಲಿ 'ಒಂಟಿತನ', 'ಪರಕೀಯತೆ', 'ಏಕಾಕಿತನ'ಗಳು ಪ್ರಸ್ತಾಪಿತವಾಗುತ್ತವೆ. ತನ್ನ ನೆಲದಲ್ಲಿ ತಾನೇ ಅನಾಥವಾಗುವ, ಪರಕೀಯನಾಗುವುದು ಬಹಳ ಕಷ್ಟದ ಕೆಲಸ, ಎಂಬ ಪ್ರಜ್ಞೆ ಕವಿಗಿದೆ. ಹಲವು ಹತ್ತು ಪ್ರಭಾವಗಳಿಗೆ ಒಳಗಾದಾಗಲೂ ತನ್ನತನವನ್ನು ಉಳಿಸಿಕೊಳ್ಳುವುದು, ಪರಕೀಯನಾಗಿಯಾದರೂ ತನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಂಡು ಸ್ವಂತಿಕೆಯನ್ನು ಉಳಿಸಿಕೊಳ್ಳುವುದು ಅತ್ಯಂತ ಕಠಿಣದ ಕೆಲಸ ಎಂದು ಕವಿ ಭಾವಿಸುತ್ತಾರೆ.

ಕವಿಯೊಬ್ಬನಿಗೆ ಎದುರಾಗುವ ಅನೇಕ ಪ್ರಭಾವಗಳಿಗೆ, ಆಕರ್ಷಣೆಗೆ ಒಳಗಾಗದೆ ತನ್ನತನವನ್ನು ಉಳಿಸಿಕೊಂಡು ಹೋಗುವುದು ಅಷ್ಟು ಸುಲಭವೇನಲ್ಲ.

ಒಳಗೊಳಗೇ ಬೇರು ಕುಯ್ಯುತ್ತ, ಹೊರಗೆ ಲೋಕದ ಎದುರು ನೀರೆರೆದು ಪೋಷಿಸುತ್ತಿರುವ ಕಪಟತನದ ಸತ್ಯ, ಮೋಸ ಗೊತ್ತಿದ್ದರೂ ಏನೂ ಗೊತ್ತಿಲ್ಲದಂತೆ, ಏನೂ ಆಗಿಲ್ಲವೇನೋ ಎಂಬಂತೆ ಲೋಕಾಭಿರಾಮವಾಗಿ ಕಾಡುಹರಟೆ ಹೊಡೆಯುವುದು, ಕಾಫಿ ಹೀರುತ್ತ ನಟಿಸುವುದು ಅತ್ಯಂತ ಶ್ರಮದಾಯಕ ನಾಟಕ.

ನಿಸಾರರ ಕವನಗಳಲ್ಲಿ ಇಂತಹ ದಟ್ಟ ಪರಕೀಯ ಪ್ರಜ್ಞೆ, ಏಕಾಕಿತನದ ಪ್ರಜ್ಞೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಇದೇ ನೆಲದಲ್ಲಿ ಹುಟ್ಟಿ ಬೆಳೆದರೂ ಇದೇ ನಾಡಿನ ಭಾಷೆಯನ್ನು ಪ್ರೀತಿಯಿಂದ ಸ್ವೀಕರಿಸಿದ್ದರೂ ಈ ಸಂಸ್ಕೃತಿಗೆ, ಭಾಷೆಗೆ ಹೊರತಾಗಿ ಯಾವುದೋ ಒಂದು ಹಂತದಲ್ಲಿ ಪರಕೀಯವಾಗಿ ಬಿಡುವ, ಆ ಹಂತದಿಂದ ತನ್ನ ಸ್ಥಿತಿಯ ಬಗೆಗೆ ಚಡಪಡಿಸುವ, ತಬ್ಬಲಿತನದ ಭಾವದಿಂದ ತೊಳಲಾಡುವ ಇಂಥ ಪ್ರತಿಬಂಧಕಗಳ ಬಗೆಗೆ ನೋವಿನಿಂದ ಮಾರ್ಮಿಕವಾಗಿ ಪ್ರಶ್ನೆಗಳನ್ನು ನಿಸಾರರು ಎತ್ತುತ್ತಾರೆ.

ತಾನು ಹುಟ್ಟಿ ಬೆಳೆದ ಪರಿಸರದಲ್ಲಿಯೇ ಜಾತಿಯ ಕಾರಣದಿಂದಲೋ, ಭಾಷೆಯ ಕಾರಣದಿಂದಲೋ ಮುಖ್ಯ ಪ್ರವಾಹದೊಳಗೆ ಸಂಪೂರ್ಣವಾಗಿ ಪ್ರವೇಶ ಪಡೆಯದೆ ಅನುಮಾನ, ಗುಮಾನಿಗಳಿಗೆ ಒಳಗಾಗುವ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವದ ತಳಮಳ, ಸಂಕಟಗಳು ಅತ್ಯಂತ ಮಾನವೀಯ ನೆಲೆಯಲ್ಲಿ ಪ್ರಕಟಗೊಳ್ಳುವುದು ನಿಸಾರ್ ಅವರ ಕಾವ್ಯದ ವಿಶೇಷತೆ.

ನಿಸಾರರು ಅತ್ಯಂತ ಸೂಕ್ಷ್ಮ ಲೇಖಕರು. ಅವರು ಭಾಷೆಯನ್ನು ಬಳಸಿಕೊಳ್ಳುವ ಕ್ರಮ ವಿಶಿಷ್ಟ ನೆಲೆಯಲ್ಲಿ ನಡೆಯುತ್ತದೆ. ರಾಜಕೀಯ ವ್ಯಂಗ್ಯ, ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯ `ಕುರಿ`. `ಕುರುಬ`ರ ನೆಲೆಯಲ್ಲಿ ಜನತೆ ಹಾಗೂ ರಾಜಕೀಯ ನಾಯಕರ ಚಿತ್ರಣಗಳು ತುಂಬ ಧ್ವನಿಪೂರ್ಣವಾಗಿ ಕುಂಚಿತವಾಗುತ್ತವೆ. ಅವರ ಕಾವ್ಯದಲ್ಲಿ ಭಾಷೆಯ ಬಾಗು-ಬಳುಕುವಿಕೆಗಳಿಂದ ಒಂದು `ಲಯ`. `ತರಂಗಿತತೆ`ಯ ನಿರ್ಮಾಣವಾಗುತ್ತದೆ.

ಕಾವ್ಯದ ಎಲ್ಲವೂ ಆಗಿರುವ `ಭಾಷೆ` ನಿಸಾರರನ್ನು ಅತಿಶಯವಾಗಿ ಕಾಡಿರುವ ವಿಚಾರ. ಅವರು ತಮ್ಮ ಮಾತೃಭಾಷೆಯಾದ ಉರ್ದುವನ್ನು ಕನ್ನಡ ಭಾಷೆಯೊಂದಿಗೆ ಹದವಾಗಿ ಬೆರೆಸಿ, ತಮ್ಮದೇ ಆದ ಒಂದು ಸಂವಹನ ಭಾಷೆಯನ್ನು ರೂಢಿಸಿಕೊಳ್ಳುತ್ತಾರೆ. ಜೀವ ಪರಿಸರದಲ್ಲಿ ಹುಟ್ಟುವ ಭಾಷೆ. `ಗ್ಲಾಸು ಬ್ಲೌಸಿ`ನಂತಿರದೆ, ಉಸಿರು ತಂತಾನೆ ತುಂಬಿ ಶರೀರವನ್ನು ಪಡೆದು ಕೊಂಡಂತೆ ಅತ್ಯಂತ ಸಹಜವಾಗಿರಬೇಕಾಗುತ್ತದೆ. ಭಾಷೆ ಭೂತದಲ್ಲಿ ಕರಗಿಹೋಗು ವಂತಹದಲ್ಲ. ಬದಲಾಗಿ. `ಭಾಷೆಗೆ ಭವಿಷ್ಯ` ಇದ್ದು ಅದು ಬಹಳ ಸಹಜವಾಗಿದೆ. ಕವಿ ಅದಕ್ಕಾಗಿಯೇ, `ಭಾಷೆಗೆ ಭವಿಷ್ಯ ಕೊಡು, ಪಂಪನ ಬಳಿ ಕಳಿಸದಿರು` ಎನ್ನುತ್ತ `ಭಾಷೆ` ಕೇವಲ ಹಳಹಳಿಕೆಯಲ್ಲಿ ಉಳಿಯುವಂತಹದಲ್ಲ, ಅದು ವರ್ತಮಾನದ ಕ್ರಿಯಾರೂಪದಲ್ಲಿ ಬದುಕುವಂತಹದಾಗಿರಬೇಕು. ಇಂತಹ ಭಾಷೆಗೇ ಭಾಷೆ ಕೊಡುವ, ವಾಗ್ದಾನ ಕೊಡುವ ಕೆಲಸ ಸೃಜನಶೀಲ ಕವಿಗಳಿಂದ ಆಗಬೇಕಾಗಿರುವ ಪರಮ ಅಧಿಕೃತತೆಯ

ಕರ್ತವ್ಯವಾಗಿದೆ. ಈಗಾಗಲೇ ಬಳಸಿ ಬಳಸಿ ಹಳತಾಗಿರುವ ಅದೇ ಭಾಷೆಯ ಸಿದ್ಧರೂಪವನ್ನು ಒಡೆದು ಮತ್ತೆ ಕಟ್ಟ ಬೇಕಾಗಿರುವ ಕವಿಯ ಸಾಹಸ, ಕಾವ್ಯಸೃಷ್ಟಿಯಲ್ಲಿ ತೀರಾ ಅಗತ್ಯವಾಗುತ್ತದೆ. ಭಾಷೆಯನ್ನು 'ಒಡೆಯುವ'. 'ಕಟ್ಟುವ' ಕೆಲಸಗಳಲ್ಲೇ ಕವಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ.

ಕನ್ನಡ ಭಾಷೆಗೆ ದಲಿತೀಯ ಅನುಭವಗಳು ವಿಶಿಷ್ಟವಾದಂತೆ, ಈ ನೆಲದ ಸಂಸ್ಕೃತಿಯೊಳಗೆ ಮಿಳಿತಗೊಂಡ ಮುಸ್ಲಿಮರ ಅನುಭವ ವಿಶಿಷ್ಟತೆಗಳೂ ತುಂಬಾ ಮುಖ್ಯವಾದುವು. ಬಹುಸಂಖ್ಯಾತ ಸಮಾಜದಲ್ಲಿ ಅಲ್ಪಸಂಖ್ಯಾತರಾದ ಈ ಜನ ತಮ್ಮ ಮಾತೃಭಾಷೆಯಲ್ಲಿ ಅಲ್ಲದೆ, ಇದೇ ನೆಲದ ಪ್ರಾದೇಶಿಕ ಭಾಷೆಯಲ್ಲಿ ತಮ್ಮ ಜನಾಂಗದ ನೋವು, ನಲಿವುಗಳನ್ನು ತೋಡಿಕೊಳ್ಳುವ ಸಂದರ್ಭದಲ್ಲಿ ಅನೇಕ ಸಂದಿಗ್ಧತೆಗಳಿಗೆ ಒಳಗಾಗದೇ ಇಲ್ಲ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಕಾವ್ಯದ ಸಂದರ್ಭದಲ್ಲಿ ಕೆ. ಎಸ್. ನಿಸಾರ್ ಅಹಮದ್ ಅವರ ಕಾವ್ಯ ವಿಶಿಷ್ಟ ನೆಲೆಯಲ್ಲಿ ನಿಲ್ಲುವಂತಹದು. ಉತ್ತಮ ಕವಿಗಳಾಗಿ, ಗದ್ಯ ಲೇಖಕರಾಗಿ, ಅನುವಾದಕಾರರಾಗಿ, ಶಿಶು ಸಾಹಿತಿಗಳಾಗಿ, ವೈಜ್ಞಾನಿಕ ಬರಹಗಾರರಾಗಿ ಅವರು ನೀಡಿರುವ ಅಪಾರ ಸಾಹಿತ್ಯಿಕ-ಸಾಂಸ್ಕೃತಿಕ ಕೊಡುಗೆಗಳನ್ನು ಕನ್ನಡಿಗರು ಪ್ರೀತಿಯಿಂದ ಸ್ಮರಿಸಬೇಕಾಗಿದೆ.

ಈ ನೆಲದ ಏನೆಲ್ಲವೂ ಮಹಾನ್ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಭಾಗವೆಂದು ಪ್ರತಿಯೊಬ್ಬ ಪ್ರಜೆಯೂ ಮನಗಾಣದಿದ್ದರೆ ವಿದ್ವೇಷ, ವೈಷಮ್ಯ, ಅಪಾರ್ಥಗಳು ನಮ್ಮ ಬದುಕುಗಳನ್ನು ಹೊಲೆಗೆಡಿಸಿ ಒಂದು ಜನಾಂಗವೆಂಬ ಕಲ್ಪನೆಯನ್ನು, ಮತ ನಿರಪೇಕ್ಷ ಧೋರಣೆಯನ್ನು ಧೂಳೀಪಟಗೊಳಿಸುತ್ತವೆ. ವಿವಿಧ ಧರ್ಮಾನುಯಾಯಿಗಳ ಹೃತ್ಪೂರ್ವಕ ಕೊಡು-ಕೊಳುವಿಕೆಯಿಂದ, ವಿಭಿನ್ನ ಗ್ರಂಥಗಳಲ್ಲಿ ಉಕ್ತವಾಗಿರುವ ಉದಾತ್ತ ಸಂದೇಶಗಳ ತಿಳಿವಿನಿಂದ ಸಾಮಾಜಿಕ ಬಾಳ್ವೆಯಲ್ಲಿ ಸಮತ್ವ, ಸುಮನಸ್ಕತೆ, ನೆಮ್ಮದಿ ನೆಲೆಗೊಂಡಾವು. ಇತಿಹಾಸ ನಮಗೆ ಈ ಬಗ್ಗೆ ನೇತ್ಯಾತ್ಮಕ ಮತ್ತು ಇತ್ಯಾತ್ಮಕ—ಎರಡೂ ಬಗೆಯ ಉದಾಹರಣೆಗಳ ಎಚ್ಚರಿಕೆಯನ್ನು ನೀಡುತ್ತದೆ: ಜನಾಂಗದ ಮೇಲ್ಮೆಗೆ ಸಹಕಾರಿಯಾಗುತ್ತದೆ.

(ಚರಿತ್ರೆಯ ಎರಡು ಮುಖ)



‘ಸ್ವಯಂಸೇವೆಯ ಗಿಳಿಗಳು’ ಮತ್ತು ‘ಅನಾಮಿಕ ಆಂಗ್ಲರು’
ಪ್ರತ್ಯೇಕ ಕಾವ್ಯಮಾರ್ಗದ ಪ್ರತೀಕ

♦ ಎಂ. ಕೆ. ಗೋಪಿನಾಥ್

೧

ಕಳೆದ ನಾಲ್ಕೈದು ದಶಕಗಳ ಕನ್ನಡ ಕಾವ್ಯದ ಸಂದರ್ಭದಲ್ಲಿ ಕೆ. ಎಸ್. ನಿಸಾರ್ ಅಹಮದ್ ಅವರ ಹೆಸರು ಬಹು ಪರಿಚಿತವಾದದ್ದು. ಅವರ ಕಾವ್ಯ ರಚನೆಗಳು ಕನ್ನಡ ಕಾವ್ಯಾಭಿಮಾನಿಗಳ ಮನ, ಮನೆಗಳ ಬಾಗಿಲುಗಳನ್ನು ತಟ್ಟಿವೆ; ಸಾಗರೋತ್ತರ ಸೀಮೆಗಳನ್ನೂ ಮುಟ್ಟಿವೆ.

ಐವತ್ತರ ದಶಕದ ಮಧ್ಯ ಭಾಗದಲ್ಲಿ ಭರವಸೆ ಹುಟ್ಟಿಸುವ ಯುವ ಕವಿಯಾಗಿ ಕನ್ನಡ ಕಾವ್ಯ ಲೋಕದಲ್ಲಿ ಕಾಣಿಸಿಕೊಂಡ ಕೆ. ಎಸ್. ನಿಸಾರ್ ಅಹಮದ್ ೧೯೬೦ರಲ್ಲಿ ತಮ್ಮ ಪ್ರಥಮ ಕವನ ಸಂಕಲನ ‘ಮನಸು ಗಾಂಧಿ ಬಜಾರು’ ಹೊರ ತಂದರು. ಅಲ್ಲಿಂದ ಈಚೆಗಿನ ನಿಸಾರರ ಸಾಧನೆಯನ್ನು ಕನ್ನಡ ನಾಡು ಬೆರಗಿನಿಂದ ಕಂಡಿದೆ, ಮೆಚ್ಚಿಕೊಂಡಿದೆ. ನಿಸಾರ್ ಕವಿಯಾಗಿ ಪ್ರಕಟಗೊಳ್ಳುವ ಹೊತ್ತಿಗೆ ನವ್ಯ ಕಾವ್ಯ ಮಾರ್ಗ ಭದ್ರವಾಗಿ ನೆಲೆಯೂರಿತ್ತು ಮಾತ್ರವಲ್ಲದೆ, ಆರ್ಭಟಿಸುತ್ತಲೂ ಇತ್ತು. ನವೋದಯದ ಕುವೆಂಪು, ಬೇಂದ್ರೆ, ಪು.ತಿ.ನ. ಮೊದಲಾದ ಕವಿಗಳ ದಟ್ಟ ಪ್ರಭಾವದಿಂದ ನವ್ಯ ಕವಿಗಳು ಹೊರ ಬಂದಿದ್ದರು. ಆದರೆ ನವ್ಯ ಕಾವ್ಯ ಮಾರ್ಗ ಪ್ರವರ್ತಕ ಕವಿ ಅಡಿಗರ ಪ್ರಭಾವದಿಂದ ತಪ್ಪಿಸಿಕೊಳ್ಳಲು, ತಮ್ಮದೇ ಸ್ವಂತ ಮಾರ್ಗವನ್ನು ಕಂಡುಕೊಳ್ಳಲು ತಹತಹಪಡುತ್ತಿದ್ದರು. ಇಂತಹ ಸಂಧಿ ಕಾಲದಲ್ಲಿ ನಿಸಾರ್ ಕಾಣಿಸಿಕೊಂಡರು.

ಕನ್ನಡ ಕಾವ್ಯ ಲೋಕ ನಿಸಾರರನ್ನು ಗುರುತಿಸಿರುವುದು ನವ್ಯಕವಿಯೆಂದೇ. 'ಮನೋರಮಾ, ಮನೋರಮಾ, ಸಾಲದೇನೆ ನಿನ್ನ ಹೆಸರೆ ಮಲಗೋಬದ ಗಮಗಮ?', 'ಹದಿನೆಂಟು ವಸಂತಿಸಿ ಅಂಗಾಂಗ ಲಲಲಾಲ'—ಇಂಥ ಸಾಲುಗಳು ಅಸಲು ನವ್ಯ ಕಾವ್ಯದ ಮಾದರಿಗಳಾದರೂ ಅವರ ಕಾವ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಗಮನಿಸಬಹುದಾದ ಅಂಶವೆಂದರೆ ನಿಸಾರ್ ನಿಷ್ಠೆ ತೋರುವುದು ನವ್ಯ ಮಾರ್ಗಕ್ಕೂ ಅಲ್ಲ, ನವೋದಯ ಮಾರ್ಗಕ್ಕೂ ಅಲ್ಲ. ಅವರ ನಿಷ್ಠೆ ಕಾವ್ಯಕ್ಕೆ—ಅರ್ಥ ಸಂದಿಗ್ಧತೆ, ಭಾವ ಸಂದಿಗ್ಧತೆ ಎರಡರಿಂದಲೂ ಪಾರಾದ ಶುದ್ಧ ಪದ್ಯಕ್ಕೆ. Tradition ಅವರನ್ನು ರೂಪಿಸಿದೆ.

> **'ಹಾಡು ಹಗಲಿಗೆ ಇಲ್ಲಿ ನಟ್ಟಿರುಳ ಚಹರೆ**
> **ಬಾವಲಿಯ ಜೊತೆ ಇಲ್ಲಿ ಹಾವು ಚೇಳಿನ ಪಹರೆ**
> **ಗೋರಿಗಲ್ಲಿನ ಮಾಸಿದಕ್ಷರದ ಮೇಲೆಲ್ಲ**
> **ಕಾಲರಾಯನ ಕೋರೆಹಲ್ಲು ಒತ್ತಿದ ಮೊಹರೆ.'** (ಅನಾಮಿಕ ಆಂಗ್ಲರು)

ಈ ಸಾಲುಗಳನ್ನು ನವ್ಯವೆನ್ನುವುದು ಹೇಗೆ? ನವ್ಯ ಕಾವ್ಯದ ಒಂದು ಲಕ್ಷಣ ಕ್ಲಿಷ್ಟತೆ. ಆ ಕ್ಲಿಷ್ಟತೆಯನ್ನು ಕಳೆದುಕೊಂಡು ಸುಭಗವಾಗಿ ಹರಿಯುವ ಮೇಲಿನ ಸಾಲುಗಳು ನಿಸಾರರ ಒಟ್ಟು ಮನೋಧರ್ಮವನ್ನು ದ್ಯೋತಿಸುತ್ತವೆ. ನಿಸಾರರೇ ಒಂದು ಕಡೆ ಹೇಳಿಕೊಂಡಿರುವಂತೆ: 'ನನ್ನ ಕವಿತೆ ಸಹೃದಯರಿಗೆ ಉತ್ತಮವೆನ್ನಿಸಲಿ, ಅನ್ನಿಸದಿರಲಿ ಅರ್ಥ ಗೊಂದಲ, ಸಂದಿಗ್ಧತೆಗಳಿಗೆ ಮಾತ್ರ ಎಡೆ ನೀಡಬಾರದೆಂಬ ದೃಢ ನಿಶ್ಚಯ ನೇಪಥ್ಯದಲ್ಲಿ ಕೆಲಸಕ್ಕೆ ತೊಡಗಿದೆ. ತಂತ್ರಾಭಿವ್ಯಕ್ತಿ ಮತ್ತು ಪ್ರಯೋಗಶೀಲತೆ ಕವನದ ಸಂಹವನ ಗುಣಕ್ಕೆ ಎದುರು ಹಾಯದೆ, ವಿಧೇಯವಾಗಿರುವ ಎಚ್ಚರ ನನ್ನ ಸೃಜನ ಕರ್ಮದ ಹಿನ್ನೆಲೆಗಿದೆ.' ನವ್ಯ ಕಾವ್ಯ ಮಾರ್ಗದಲ್ಲಿ ರಚಿಸಿದ ಕವನಗಳೂ ಸಹ ರೂಪಕವಾಗಿ ಆಪ್ತವಾಗುತ್ತ ಅರ್ಥವನ್ನು ಸುಲಭವಾಗಿ ಬಿಟ್ಟುಕೊಡುತ್ತವೆ. ಉದಾಹರಣೆಗೆ, ಅವರು ಬಹು ಹಿಂದೆ ಬರೆದ 'ಪ್ರಾಯ' ಎನ್ನುವ ಕವಿತೆಯ ಈ ಸಾಲುಗಳನ್ನು ನೋಡಬಹುದು:

> **'ಇಕ್ಕಟ್ಟು ಸಂಧಿಯಲಿ ದಿಕ್ಕೆಟ್ಟ ಮೊಲ ಹೊಕ್ಕು**
> **ಕಚಗುಳಿಯನಿಟ್ಟಂಥ ಮುಲುಮುಲಾಟ;**
> **ಅಮ್ಮ ಕುಚ್ಚಿಸಿಕೊಂಡ ಕೈಯ ಮೇಲಿನ ಕೆರೆತ,**
> **ಕಾಂಪೌಂಡು ಪಾತಿಯಲಿ ಕೋತಿ ಕಾಟ.'** (ಪ್ರಾಯ)

ಪ್ರಾಯಕ್ಕೆ ಸಂದ ಹೆಣ್ಣಿನ ಮನೋಲಹರಿಯ ಅಭಿವ್ಯಕ್ತಿ ಮೇಲಿನ ಸಾಲುಗಳಲ್ಲಿದೆ. ನಿಸಾರರ ಕಾವ್ಯದ ಮೊದಮೊದಲ ಒಲವು ಪದ್ಯ ಸಾಧಿಸಬಹುದಾದ ನಾಟಕೀಯ ಪರಿಣಾಮದ ಕಡೆ ಇರುತ್ತಿತ್ತು. 'ಕುರಿಗಳು, ಸಾರ್, ಕುರಿಗಳು' ಅಂಥ ಒಂದು ಕವನ; ಹರಿತವಾದ ವಿಡಂಬನೆಯ, ತಿವಿಯುವ ಮೊನಚು ಮಾತಿನ 'ಕುರಿಗಳು...' ದಿಟದಲ್ಲಿ ನಿಸಾರರ ಧ್ವನಿಪೂರ್ಣ ಕವನಗಳಲ್ಲಿ ಒಂದಲ್ಲ. ನಿಸಾರರ ಮೊದಲ ಮೂರು ಕವನ ಸಂಗ್ರಹಗಳಲ್ಲಿ ('ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ' ಹಾಗೂ 'ಸುಮುಹೂರ್ತ') ನಾಟಕೀಯ ಮಾತುಗಾರಿಕೆ, ರಂಗುರಂಗಾದ ಚಿತ್ರ ರಚನೆಗಳು, ('ಬಾಯಿಯಿಂದ ದೊಂಬ ತೆಗೆವ ತರಾವರಿಯ ಟೇಪು') ಕೆಲವು ವೇಳೆ ಪದಗಳ ದುಂದು ಹಾಗೂ ನುಗ್ಗಿ ಬರುವ

ಪ್ರಾಸಪ್ರಿಯತೆ ಮೊದಲಾದ ಲಕ್ಷಣಗಳು ಗಂಭೀರ ಚಿಂತನೆಗೆ, ಸಂಯಮಪೂರ್ಣ ಸಂವಹನಕ್ಕೆ ಎಡೆಕೊಡುವ ಕವನಗಳಾಗಿ ಮಾರ್ಪಟ್ಟದ್ದನ್ನು ತರುವಾಯದ ಅವರ ಸಂಗ್ರಹಗಳಲ್ಲಿ ಕಾಣಬಹುದು:

ನಿಸಾರರ ಒಟ್ಟು ಕಾವ್ಯ ಧೋರಣೆಯನ್ನು ಐದು ನೆಲೆಗಳಲ್ಲಿ ಗುರುತಿಸಬಹುದು.

* ಬದುಕನ್ನು ಕುರಿತ ಆರ್ದ್ರ ದೃಷ್ಟಿ ಹಾಗೂ ಪರಂಪರೆಯನ್ನು ಹಳಿಯದೆ ಅದನ್ನು ಗೌರವ ಬುದ್ಧಿಯಿಂದಲೇ ಕಾಣುವ ಮನೋಧರ್ಮ.
* ಸೋಗಲಾಡಿತನವನ್ನು ಕೂಡಲೇ ಗುರುತಿಸಿ ಚುಚ್ಚುವ ವ್ಯಂಗ್ಯ.
* ಕಾವ್ಯಕರ್ಮಕ್ಕೆ ತಾವೇ ರೂಪಿಸಿಕೊಂಡಿರುವ ಒಂದು ಸೂತ್ರ.
* ಎರಡು ವಿಭಿನ್ನ ಸಾಂಸ್ಕೃತಿಕ ನೆಲೆಗಳಲ್ಲಿ ನಿಂತು ಬರೆಯಬೇಕಾದದ್ದರ ಅನಿವಾರ್ಯತೆ ಹಾಗೂ ಅಂತಹ ಸಂದಿಗ್ಧವನ್ನು ಮೀರಿ ನಿಂತ ಕಾವ್ಯ ರಚನೆ.
* ಭಾಷೆಯ ಬಳಕೆಯಲ್ಲಿನ ಎಚ್ಚರ ಹಾಗೂ ಮಡಿವಂತಿಕೆಯ ನಿರಾಕರಣ.

ಮೇಲಿನ ಗ್ರಹಿಕೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ, ನಿಸಾರರದು ನವ್ಯರಲ್ಲಿ ಭಿನ್ನ ದನಿ, ಅವರದೇ ಅನನ್ಯ ಪ್ರತ್ಯೇಕ ಕಾವ್ಯಮಾರ್ಗ.

ನನ್ನ ಮಟ್ಟಿಗೆ ನವ್ಯ ಎನ್ನುವುದು ಈ ಹೊತ್ತಿಗೆ ಒಂದು ಸ್ಥೂಲ ವರ್ಗೀಕರಣವಾಗಿ ಉಳಿದಿದೆಯೇ ಹೊರತು, ಆ ಕಾವ್ಯಮಾರ್ಗ ಹೆಚ್ಚಿನದನ್ನು ಸಾಧಿಸದೆಯೇ ಪತನ ಹೊಂದಿತು. ಕಾವ್ಯ ಜಗತ್ತು ಇಂದು ಪುನಃ ರಮ್ಯ ಕಾವ್ಯ ಮಾರ್ಗದತ್ತಲೇ ಹೊರಳಿದೆ. ನವ್ಯ, ಜನರನ್ನು ಮುಟ್ಟಲಿಲ್ಲ. ನಿಸಾರರ ಕಾವ್ಯ ಜನ ಮನವನ್ನು ಮುಟ್ಟಿತು; ಜನ ಕಾವ್ಯವನ್ನು ಬಯಸುವಂತೆ ಮಾಡಿತು. ಈ ದೃಷ್ಟಿಯಿಂದ ನಿಸಾರ್ ನವ್ಯದ ಭರಾಟೆಯ ಕಾಲದಲ್ಲೇ ಬರೆದರೂ ನವ್ಯತೆಗೇ ಒಂದು ಹೊಸ ಆಯಾಮ ತಂದರು.

೨

ಮೇಲ್ಕಾಣಿಸಿದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಿಸಾರರ ಕೆಲವು ಕವನಗಳನ್ನೂ ಅವುಗಳ ಬೆನ್ನಿಗಿರುವ ಕಾವ್ಯನಿಷ್ಠೆಯನ್ನೂ ಪರಿಶೀಲಿಸಬಹುದು. ನಿಸಾರರ ಒಟ್ಟು ಕಾವ್ಯದ ಅಗಾಧತೆಯನ್ನು ಗಮನಿಸಿದರೆ ಇಂತಹ ಪರಿಶೀಲನೆಯೂ ಅಪೂರ್ಣವೇ ಆಗಬಹುದು.

೧೯೭೭ರಲ್ಲಿ ಹೊರ ಬಂದ `ಸ್ವಯಂಸೇವೆಯ ಗಿಳಿಗಳು` ನಿಸಾರರ ಏಳನೆಯ ಕವನ ಸಂಕಲನ. ನಿಸಾರರ ಕಾವ್ಯದೃಷ್ಟಿಯನ್ನು, ಕಾವ್ಯಕ್ಕೆ ಅವರು ತರುವ ರಸ ವೈವಿಧ್ಯವನ್ನು ಸಮಗ್ರವಾಗಿ ಪ್ರತಿನಿಧಿಸುವ ಸಂಗ್ರಹವಾಗಿ ಈ ಕೃತಿ ಮುಖ್ಯವಾಗುತ್ತದೆ. ಇಲ್ಲಿ ಕಾಣುವುದು ಗಂಭೀರ ಚಿಂತಕ ನಿಸಾರ್. ಭಿನ್ನವಾಗಿ ಚಿಂತಿಸುವ ಕವಿ, ಸ್ವಂತಿಕೆಯನ್ನು ಮೆರೆಯುವ ವಿಚಾರವಂತ ಹಾಗೂ ಜೀವನವನ್ನು ಬಲ್ಲ ಪ್ರಜ್ಞಾವಂತ.

ಹದಿನೈದು ಕವನಗಳ ಈ ಸಂಗ್ರಹದ ಎಲ್ಲ ಕವನಗಳೂ ನಿಸಾರರ ಕಾವ್ಯ ಪ್ರತಿಭೆಯ ವಿವಿಧ ಮಜಲುಗಳನ್ನು ಪ್ರತಿನಿಧಿಸುತ್ತವೆಯಾದರೂ `ನೆನಪೆಲ್ಲ ಮಾಸುತ್ತೆ ಪ್ರಿಯೆ`.

'ಅಂತರ', 'ವೈಜಯಂತಿ', 'ಸ್ವಯಂಸೇವೆಯ ಗಿಳಿಗಳು', 'ಮೈಸೂರು ಜೂ', 'ಬೀದಿಯ ಮಾರಿ', 'ಮೃಗಾಯಣ' ಹಾಗೂ 'ನಮ್ಮ ಬಡಾವಣೆಯ ಕತೆ' ಚಿಂತನಾರ್ಹ ರಚನೆಗಳು.

'ನೆನಪೆಲ್ಲಿ ಮಾಸುತ್ತೆ ಪ್ರಿಯೆ' ಎನ್ನುವುದು ಒಂದು ಭಾವಗೀತಾತ್ಮಕವಾದ ಕವನ. ನೆನಪಿನ ಗುಣವನ್ನು ಮಾತಿನಲ್ಲಿ ಹಿಡಿದಿಟ್ಟಿರುವ ಹಾಡುಗಬ್ಬ. ನೆನಪುಗಳು, ಅದೂ ಪ್ರಿಯತಮೆಯನ್ನು ಕುರಿತಾದ ನೆನಪುಗಳು ನಿತ್ಯಹರಿದ್ವರ್ಣದ ವನದಂತೆ. ಅವು ಮಾಸುತ್ತವೆಂಬುದು ಏತರ ಮಾತು ಎಂಬುದು ಕವನದ ಧ್ವನಿ. ನಿಸಾರರ ಎಲ್ಲ ಕವನಗಳಂತೆ ಅವರು ಸೃಷ್ಟಿಸುವ ಚಿತ್ರಗಳು ಕವನದ ಬಂಡವಲು.

'ನೆನಪೆಲ್ಲಿ ಮಾಸುತ್ತೆ ಪ್ರಿಯೆ? ಅದು
ಆಕಾಶಕ್ಕೆ ಕಚ್ಚಿದ ಮೋಡ;
ಬದಲಾಯಿಸುತ್ತ ಚಹರೆ, ಮುಹೂರ್ತಕ್ಕೆ ಕಾದು ದ್ರವಿಸುತ್ತೆ.
ಸಂಯಮದಲ್ಲಿ ಮನವ ನೇರಗೊಳಿಸಿದ ಬಿಂಕ
ಪ್ರೇಮಕ್ಕೆ ಸಡಿಲಿ, ಪಡೆಯುತ್ತದೆ ಸ್ವಭಾವದ ಕೊಂಕ.
ಹೀಗಿತ್ತೆ ರಾಧಾ, ಇದು ಹೀಗಿತ್ತೆ? ಎಂದು ಜೊತೆಗಾತಿಗೆ
ಬೇಡುವ ಹಾಗೆ ಸುರಿಯುತ್ತೆ.' **(ನೆನಪೆಲ್ಲಿ ಮಾಸುತ್ತೆ ಪ್ರಿಯೆ?)**

ನೆನಪಿನ ಗುಣವನ್ನು ಮೂರ್ತೀಕರಿಸುವುದು ಈ ಕವನದ ಉದ್ದೇಶವಿರುವಂತೆ ತೋರುತ್ತದೆ. ಆ ಉದ್ದೇಶ ಸಾರ್ಥಕ್ಯವನ್ನೂ ಪಡೆದಿದೆ.

'ಮುಳ್ಳ ಮೇಲೇ ಕಾಲನೊತ್ತಿಸುತ್ತಿದ್ದರೂ
ಮುಂಜಾನೆಗಳ ಮುಖದಲ್ಲಿ ಹೊತ್ತಿಸುತ್ತೆ;
ನೆರಳು, ಗೂಡುಗಳ ಭವಿಷ್ಯಕ್ಕೆ
ರಸ್ತೆಯ ಪಕ್ಕ
ಸಾಲು ಮರಗಳ ಬೀಜ ಬಿತ್ತಿಸುತ್ತೆ.' **(ಅದೇ)**

ಆದ್ದರಿಂದಲೇ ಪ್ರಶ್ನೆಯೇಳುವುದು—

'ನೆನಪೆಲ್ಲಿ ಮಾಸುತ್ತೆ ಪ್ರಿಯೆ?'

ಅಮೂರ್ತ ಭಾವಗಳಿಗೆ ದೇಹ ಕೊಟ್ಟಿರುವ ಈ ಕವನ:

'ಕೀಳುತ್ತೆ ಭೂತಕ್ಕೆ ವರ್ತಮಾನದ ಸುಂಕ.'

ನಮ್ಮ ನೆನಪಿನಲ್ಲಿ ಬಹುಕಾಲ ಮಾಸದೆ ಉಳಿಯುವ ಗೀತಾತ್ಮಕತೆಯನ್ನು ಈ ಪದ್ಯ ಸಾಧಿಸಿಕೊಂಡಿದೆ. ಅರ್ಥವನ್ನು ಸ್ವಲ್ಪ ಮಟ್ಟಿಗೆ ಬಚ್ಚಿಟ್ಟುಕೊಂಡೂ ತನ್ನನ್ನು ತಾನು ಬಿಟ್ಟುಕೊಡುವ ಪದ್ಯ.

'ಅಂತರ' ಎಂಬುದು ಗಾಂಧೀಜಿಯನ್ನು ಕುರಿತ ಕವಿತೆ. ಈ ಸಂಗ್ರಹದ ಅತ್ಯಂತ ಧ್ವನಿಪೂರ್ಣ ಕವನವೂ ಹೌದು. ಗಾಂಧೀಜಿಯನ್ನು ಕುರಿತು ಬರೆಯದ ಕವಿ ಬಹುಶಃ ಕನ್ನಡದಲ್ಲಿಲ್ಲ. ನಿಸಾರರೂ ಈ ಹಿಂದೆ ಗಾಂಧೀಜಿಯನ್ನು ಕುರಿತು ಕವನ ಬರೆದಿದ್ದಾರೆ. 'ಅಂತರ' ಕವನದ್ದು ಗಾಂಧಿಯನ್ನು ಕುರಿತ ಭಿನ್ನ ದೃಷ್ಟಿ. ಇಲ್ಲಿರುವುದು ಗಾಂಧೀಜಿಯನ್ನು ಕುರಿತ

ಪ್ರಶಂಸೆಯಲ್ಲ. ಗಾಂಧೀಜಿ ಗುಣಗಾನ ಇಲ್ಲಿಲ್ಲ. ಗಾಂಧೀ ತತ್ತ್ವಬೋಧೆಯ ಪಟ್ಟಿಯಿಲ್ಲ. ಅವುಗಳ ಪಾಲನೆ ಆಗುತ್ತಿಲ್ಲ ಎಂಬ ಹಳಹಳಿಕೆಯೂ ಇಲ್ಲ. ಇಂದು ಗಾಂಧಿ, ಜನರ ಮಟ್ಟ ದಲ್ಲಿ, ಬುದ್ಧಿಜೀವಿಗಳ ತೀರ್ಪಿನಲ್ಲಿ ಏನಾಗಿದ್ದಾರೆ? ಎಂಬ ಪ್ರಶ್ನೆಯನ್ನು ಕವನ ಎತ್ತುತ್ತದೆ. ಪ್ರಶ್ನೆಗೆ ಉತ್ತರವನ್ನು ಸೂಚಿಸುತ್ತದೆ. ಕಥನ ಕವನದ ಧಾಟಿಯಲ್ಲಿ ಕವನ ಆರಂಭವಾಗು ವುದು ಹೀಗೆ:

'ಗಾಂಧೀಜಿ ತೀರಿಕೊಂಡ ದಿನ, ಅಪ್ಪ ಜಮಾಬಂದಿ ಮುಗಿಸಿ
ಮಾರನ ಹಳ್ಳಿಯಿಂದ ಮರಳಿದಾಗ ನಡು ರಾತ್ರಿ.
...................ಸಿಂಧೂ ನಾಗರಿಕತೆಯ ಪಾಠ ಗಟ್ಟಿ
ಮಾಡುತ್ತಿದ್ದವ ಎದ್ದು ಕದ ತೆರೆದಾಗ
ಕಣ್ಸೆಳೆದದ್ದು ಪಟ್ಟೆಪಟ್ಟೆಯ ಕೋಟು, ಹ್ಯಾಟು.' (ಅಂತರ)

ಈ ಕೋಟು, ಹ್ಯಾಟುಗಳೇ ಕವನ ಧ್ವನಿಸುವ ವಿಷಾದಕ್ಕೆ ಪ್ರತೀಕಗಳಾಗುತ್ತವೆ. 'ಅಂತರ' ಕವನದಲ್ಲಿ ಇಬ್ಬರು ನಾಯಕರು. ಒಬ್ಬ ನಾಯಕ, ನುಡಿಯುತ್ತಿರುವ ಕವಿಯ ಅಪ್ಪ. ಇನ್ನೊಬ್ಬ ನಾಯಕ 'ತಕಲಿ ಹಿಡಿದು ಹಲ್ಕಿರಿದು ಗಾಂಧಿ ಜೊತೆ ಫೋಟೋ ತೆಗೆಸಿದ್ದ' ಅನಂತಯ್ಯ.

ಗಾಂಧಿ ಸತ್ತ ದಿನ ಅಪ್ಪ ಜಮಾಬಂದಿ ಮುಗಿಸಿ ಪಟೇಲರೊಟ್ಟಿಗೆ ನಡು ರಾತ್ರಿ ಮನೆಗೆ ಬರುತ್ತಾರೆ. ತಕಲಿ ಅನಂತಯ್ಯ, ಅವರಿಗೆ ಗಾಂಧಿ ಸತ್ತ ದುರಂತದ ವರ್ತಮಾನ ನೀಡುತ್ತಾನೆ. ಇಬ್ಬರೂ ಜಗುಲಿಯ ಮೇಲೆ ಕೂತು, ಕ್ವಿಟ್ ಇಂಡಿಯಾ, ಉಪ್ಪಿನ ಸತ್ಯಾಗ್ರಹದ ಬಗೆಗೆ ಬಹಳ ಹೊತ್ತಿನ ತನಕ ಮಾತನಾಡುತ್ತಿರುತ್ತಾರೆ. ಆಗ ಅಪ್ಪನ ಮಗ—ಈ ಕವನದ ನಿರೂಪಕ—ಈ ಎಲ್ಲವನ್ನೂ ಪಿಳಿ ಪಿಳಿ ದಿಟ್ಟಿಸುತ್ತಿದ್ದ ಮೂಕ ಸಾಕ್ಷಿ. ಕಾಲ ಸರಿಯುತ್ತದೆ. ಈಗ ಮಗ ಆನರ್ಸ್ ಓದುತ್ತಿದ್ದಾನೆ. ಆಗ ಒಮ್ಮೆ ಅಪ್ಪನ ದೋಸ್ತಿ ಅನಂತಯ್ಯ ಈ ಮಗನಿಗೆ ಅವೆನ್ಯೂ ರೋಡಿನಲ್ಲಿ ಎದುರಾಗುತ್ತಾನೆ. ಮಗ ಬಾಪುವನ್ನು ಪ್ರಶಂಸಿಸಿದಾಗ ಅನಂತಯ್ಯ:

'............ ನನ್ನನ್ನೇ ದುರುಗುಟ್ಟಿ—
ಜೊತೆಗಾರ ವೈಕುಂಠಿ ಮಂತ್ರಿಯಾಗಿ, ತಾನು
ಬೀದಿ ಬದಿ ಬೋಂಡ ಕರಿದದ್ದು ಗಾಂಧಿ ದೆಸೆಯಿಂದ' (ಅದೇ)

ಎನ್ನುತ್ತಾನೆ. ಮಗ ಈ ಮಾತನ್ನು ಅಪ್ಪನಿಗೆ ತಿಳಿಸಿದಾಗ, ಅಪ್ಪನ ಮನೋವೃತ್ತಿಯೂ ಬದಲಾಗುತ್ತದೆ.

'ಸೀಮೆಎಣ್ಣೆಗೆ ದಿನವಿಡೀ ಕ್ಯೂ ನಿಂತು ಬರಿಗೈ ಬಂದ ಅಪ್ಪ,
ಬಿಳಿಯರ ಸುಭಿಕ್ಷ ವರ್ಣಿಸಿದ್ದು ಅಸಹ್ಯವಾಗಿ' (ಅದೇ)

ಮಗ(ನಿರೂಪಕ)ನ ಮನಸ್ಸು ಮುದುಡುತ್ತದೆ.

ಕಾಲ ಇನ್ನಷ್ಟು ಸರಿಯುತ್ತದೆ.

ಸ್ವಲ್ಪ ಕಾಲದ ಮೇಲೆ ನಿರೂಪಕನಿಗೆ ಒಂದು ಅನ್ಯಾಯ ಎಸಗಲಾಗುತ್ತದೆ:

'ಮುಂದೆ ನನ್ನ ಸೇವೆ ಅಲಕ್ಷಿಸಿ ಬೊಮ್ಮಾಬೋವಿಗೆ
ಬಡ್ತಿ ಕೊಟ್ಟಾಗ, ಗಾಂಧಿ ಬಗ್ಗೆ ಹೇಗೆ ಹೇಗೋ ಆಗಿ
ಅನಂತಯ್ಯ ನೆನಪಾದ, ಅಪ್ಪ ಹುಸಿ ನಕ್ಕರು;
ನನ್ನ ಮಗ ಗೊಂದಲಪಲ್ಲಿ ಪಿಳಿ ಪಿಳಿ ನೋಡಹತ್ತಿದ.' (ಅದೇ)

ಈಗ ಮಗ ಗಾಂಧೀಜಿಯನ್ನು ಕುರಿತು ಹೊಸ ಪರಿಭಾಷೆಯೊಂದನ್ನು ಸೃಷ್ಟಿಸಿ ಕೊಂಡಿರುತ್ತಾನೆ—

'ಮಗನ ಪರಿಭಾಷೆ ಧ್ವನ್ಯರ್ಥದಿಂದ ಸಂಪದ್ಭರಿತ;
ಕಳ್ಳೇಕಾಯಿ 'ಗಾಂಧಿ ಬಾದಾಮಿ', ಕೈಕೈ ಹತ್ತದ
ಬೀದಿಯ ಬೊಬ್ಬೆ 'ಬರೀ ಗಾಂಧಿ ಗಲಾಟೆ' (ಅದೇ)

ಒಟ್ಟಿನಲ್ಲಿ ಕವನ ನಿರಾಶೆಯಲ್ಲಿ ಕೊನೆಕಾಣುತ್ತದೆ.

'ನನ್ನ ಚರ್ಚೆ, ಸ್ವಪ್ರತಿಷ್ಠೆಗೆ ಗಾಂಧಿ ವಸ್ತುವಾಗುವುದಿಲ್ಲ'—ಸ್ವಲ್ಪ ವಾಚ್ಯವಾಯಿತು ಎನ್ನಬಹುದಾದ ಕೊನೆಯ ಸಾಲಿಲ್ಲದೆಯೂ ಕವನ ತನ್ನ ಗುರಿ ಮುಟ್ಟಿತ್ತು ಎನ್ನಿಸುತ್ತದೆ.

'ವೈಜಯಂತಿ' ಎನ್ನುವ ಕವನ ಢೋಂಗಿ ಸಮಾಜವಾದಿಗಳ ವರ್ತನೆಯ ಲೇವಡಿ. ವಿಷಾದ ಬೆನ್ನಿಗಿರಿಯುವ ಗೇಲಿ. 'ವೈಜಯಂತಿ' ಎಂಬ ಮಾತಾಳಿ ಹೆಣ್ಣು ಒಮ್ಮೆ ಜಯನಗರದ ಹೋಟೆಲಿನ ಎದುರು ಕಂಡಾಗ ಅವಳ ಗುರುತು ಸಿಕ್ಕಿದ್ದೇ ಪವಾಡ.

'ಇವಳಿಗೇನಾಗಿದೆ? ಯಾಕೀ ಅವಾಂತರ?
ಅಂದುಕೊಳ್ಳುತಿರುವಂತೆಯೇ ನೆನಪಾಯ್ತು—
ಸಮಾಜವಾದದ ಅವಳ ಈಚಿನ ಮತಾಂತರ!
ವಿಮೆನ್ಸ್ ಲಿಬ್ಬಿಗೂ ಸೇರಿರಬಹುದೆಂಬ
ನನ್ನ ಗುಮಾನಿಗೆ
ಸುರಿಸುವಂತಿದ್ದಳು ತೈಲ—
ಈ ಸ್ತ್ರೀರೂಪದ ಗೊಂದಲ.' (ವೈಜಯಂತಿ)

ವೈಜಯಂತಿಗೆ ಕಪಿನಿಯೊಂದಿಗೆ ಗೆಳೆತನವಿದೆ. ಕಪಿನಿ ಅವಳಿಗೆ ಸಮಾಜವಾದ ಬೋಧಿಸಿದ ಗುರು ಕೂಡ. ಅವನ ಗೆಳೆತನದ ದೆಸೆಯಿಂದ, ವೈಜಯಂತಿ ಹೋಟೆಲಿನೆದುರು ಸಿಕ್ಕಾಗ ಕಲಿತಿದ್ದನ್ನೆಲ್ಲಾ ಪಲುಕುತ್ತಾಳೆ. ಅಂತಹ ಒಂದು ಆಣಿಮುತ್ತು.

'ನೈಜ ಕವಿಗೆ ಕಮಿಟ್‌ಮೆಂಟ್ ಮೂಲಧನ.' (ಅದೇ)

'ಏನು ಹಾಗೆಂದರೆ?' ಎಂಬ ಕವಿಯ ಪ್ರಶ್ನೆಗೆ ವೈಜಯಂತಿಯ ಉತ್ತರ:

'ಅದೇ ನಿಮ್ಮಂಥವರ ತೊಂದರೆ—
ಸಮಾಜದ ಜ್ವಲಂತ ತೊಡಕುಗಳ ದರ್ಶನ;
ಕೃತಿಯಲ್ಲಿ ಅದರ ಪ್ರದರ್ಶನ.' (ಅದೇ)

ಸಮಾಜವಾದವನ್ನು ಕುರಿತ ಸಂಭಾಷಣಾರೂಪದ ಸಾಲುಗಳಿಂದಾಗಿ ಈ ಕವನ ರವೆಯಷ್ಟು ಕ್ಲಿಷ್ಟತೆಯನ್ನೂ ಮೈಗೂಡಿಸಿಕೊಳ್ಳುತ್ತದೆ. ಆದರೆ ವೈಜಯಂತಿಯ ಪೊಳ್ಳುತನವನ್ನು

ಅಭಿವ್ಯಕ್ತಿಸಲು ಇಂಥ ಸಂಭಾಷಣೆಯ ಅಗತ್ಯವೂ ಕಾಣುತ್ತದೆ.

ವೈಜಯಂತಿ ಎಷ್ಟಾದರೂ ಹೆಣ್ಣು; ತಲೆ ತುಂಬ ಕನಸುಗಳಿದ್ದ ಹೆಣ್ಣು. ಅಂತಹ ಹೆಣ್ಣಿಗೂ ಸಮಾಜವಾದಕ್ಕೂ ಎತ್ತಣ ಸಂಬಂಧ! ಕವಿಯಿಂದ ವೈಜಯಂತಿಗೆ ಅಸ್ತಿತ್ವವಾದದ ಒಂದು ಮಗ್ಗುಲು ದೊರೆಯುತ್ತದೆ.

'ಗುಡಾಣ ಹೊಟ್ಟೆಯ ಧನಿಕ ತೋಳ
ಕಳಿಸುತ್ತಾನೆ ಪ್ರತಿ ಹೊತ್ತಾರೆ
ಕ್ಷಯದಾಸ್ಪತ್ರೆಗೆ ಸೇಬು ಕಿತ್ತಲೆಯ ಚೀಲ.
ನೋಡು, ಈ ಹೋಟೆಲಿನ ಸಾಹುಕಾರನ ಕರುಳು,
ನೋಟುಗಳ ನಡುವೆಯೂ ನೆನೆದಿರುವುದೊಂದೆ—
ಒಬ್ಬನೇ ಮಗನ ವಾಸಿಯಾಗದ ಮರುಳು.
ಪತ್ರಕ್ಕೆ ಅಂಟಿಸಿದ ಸ್ಟಾಂಪು ಕಿತ್ತಂತೆ, ವೈಜಯಂತಿ,
ಜೀವಿಗಳ ನಂಟು.
....
ಕರಿ ಬಿಳಿ ಎಲ್ಲೋ ಕಲಸಿ ಬೂದಾಗುತ್ತದೆ;
ಎರಡೆರಡು ಐದಾಗುತ್ತದೆ.' (ಅದೇ)

—ಈ ಎಲ್ಲ ಅನುಭವ ಪ್ರಣೀತ ಸೈದ್ಧಾಂತಿಕ ಮಾತು ವೈಜಯಂತಿಗೆ ಬೇಡವಾದದ್ದು. ಅವಳು ಕವಿಯನ್ನು 'ನೀವೊಬ್ಬ ಬೂರ್ಜ್ವಾ' ಎಂದು ಹಳಿಯುತ್ತಾಳೆ. ಅವಳ ದೋಸ್ತಿ ಕಪಿನೀ ಪತಿ ಯೊಬ್ಬನೇ ಅವಳ ಪಾಲಿನ ಮಾಂತ್ರಿಕ. 'ಹೇಗಿದ್ದಾನೆ ನಿನ್ನ ಹಳೇ ದೋಸ್ತಿ ಕಪಿನೀಪತಿ?' ಎಂದು ನಿರೂಪಕ ಕೇಳಿದಾಗ, ವೈಜಯಂತಿ ಗಳಪುತ್ತಾಳೆ; ಅವಳ ಅಭಿಪ್ರಾಯ ಸ್ಪಷ್ಟ:

'ಅವರೊಬ್ಬರಿಗೇ ನಮ್ಮಲ್ಲಿರುವುದು ಕಮಿಟ್‌ಮೆಂಟು;
....
ಪಡೆಯಬೇಕಿದೆ ನೀವು ಅವರಿಂದ ಹಿಂಟು.'

ಆಗ ಕವಿ ಕೊಡುವ ಉತ್ತರ ವಾಸ್ತವತೆಯನ್ನು ಒಮ್ಮೆಲೇ ಬಟಾಬಯಲು ಮಾಡುತ್ತದೆ:

'ನಿಜ, ಮೂವತ್ತೆಕರೆ ತೆಂಗು,
ನಾಲ್ಕೈದು ಬಂಗ್ಲೆ, ಬ್ಯಾಂಕ್ ಬ್ಯಾಲೆನ್ಸು;
ಬೇಡವೆಂದರೂ ಸಮಾಜವಾದಿಯಾಗಿಸುತ್ತೆ;
ಬಡತನದ ಬಗ್ಗೆ ಮಹಾಕಾವ್ಯ ಹಾಡಿಸುತ್ತೆ.' (ಅದೇ)

ಹೀಗೆ, ಕಪಿನೀಪತಿಯ ಠಕ್ಕಿನ ಸಮಾಜವಾದ ಹಾಗೂ ಮುಗ್ಧ ಹೆಣ್ಣು ವೈಜಯಂತಿಯ ಸಮಾಜ ಮುಖೀ ನಂಬುಗೆಗಳು ಒಂದಕ್ಕೊಂದು ಹೆಣೆದುಕೊಳ್ಳದೆ ಜೊತೆ ಜೊತೆ ನಡೆದಿದ್ದಾಗ ಕವಿ ಒಮ್ಮೆ ವೈಜಯಂತಿಗೆ ಎನ್ನುತ್ತಾರೆ:

'ವೈಜಯಂತಿ, ಮೊನ್ನೆ ಕಪಿನಿ ಸಿಕ್ಕಿದ್ದ ಗೊತ್ತ?'
'ಎಲ್ಲಿ?' ಅಂದಳು ಸಮಸ್ತ ಹುಮ್ಮಸ್ಸನ್ನು ಮುಖಕ್ಕೆ ತರಿಸಿಕೊಳ್ಳುತ್ತ.

'ಅವೆನ್ಯೂ ರಸ್ತೆಯಲ್ಲಿ. ಜೊತೆಗೆ ನೀಲಿಗಣ್ಣಿನ ಪತ್ನಿ.
ಈ ಸಲದ ಫಸಲಿನಲಿ ಹತ್ತು ಸಾವಿರ ಆಕೆಗೆಂದ.
ಚಿನ್ನದೊಡವೆ, ಹತ್ತಾರು ಸೀರೆಗಳ ಪ್ಯಾಕೆಟ್ಟು
ಹೊತ್ತು ಕಾರಲ್ಲಿ ಕೂತಿದ್ದ ಆಕೆ
ಬಿಚ್ಚೋಲೆ ಗೌರಿ ಥೇಟು.' ' (ಅದೇ)

ಇಡೀ ಪದ್ಯದ ಧಾಟಿ ಬದಲಾಗುವುದು ಈ ಘಟ್ಟದಲ್ಲಿ. ವೈಜಯಂತಿಯ ಹೆಣ್ಣುತನ, ಹೆಣ್ಣಿನ ಸಹಜ ಗುಣ ಪ್ರಕಟವಾಗುವುದು, ಪದ್ಯ ಈವರೆಗೆ ಹೇಳುತ್ತಾ ಬಂದದ್ದನ್ನು ಒಮ್ಮೆಗೇ ವಿಶದೀಕರಿಸುವುದು ಪದ್ಯ ಈ ಹಂತ ತಲಪಿದಾಗ.

'ವೈಜಯಂತಿಯ ವದನ
ಕೆಂಡ ಸುರಿದ ಬಾಳೇ ದಿಂಡು;
ಕಿವಿ ತುದಿ ಕೆಂಪಾಗಿ, ಉದುರಿದವು ನುಡಿ ಗುಂಡು:
'ಅಬ್ಬಾ! ಆ ಹಳ್ಳಿಮುಕ್ಕೆಯ ಸೊಕ್ಕೆ!
....
ಎಲ್ಲರೆದುರು ಪ್ರದರ್ಶಿಸುತ್ತಾಳೆ ವಸ್ತ್ರ, ಒಡವೆ.
ಇನ್ನೆರಡು ವರ್ಷ ತಾಳಿ
ಬೀಸಲಿ ಹೊಸ ವ್ಯವಸ್ಥೆಯ ಗಾಳಿ
ನಾನೂ ಉಟ್ಟು ತೊಟ್ಟು
ಅವಳ ಹೊಟ್ಟೆ ಉರಿಸದಿದ್ದರೆ ಕೇಳಿ!' (ಅದೇ)

ಕವಿ ನಕ್ಕು ನುಡಿಯುತ್ತಾನೆ: 'ನೀನೀಗ ನಿಜವಾದ ಸಮಾಜವಾದಿ ನೋಡು.'

'ಸ್ವಯಂಸೇವೆಯ ಗಿಳಿಗಳು' ಎನ್ನುವ ಕವನ ಕೂಡ ಒಂದು ದುರಂತದ ಚಿತ್ರಣವೇ. 'ವೈಜಯಂತಿ' ವ್ಯಕ್ತಿಗತವಾಗಿ ಒಬ್ಬ ವ್ಯಕ್ತಿಯ ದುರಂತವಾದರೆ, 'ಸ್ವಯಂಸೇವೆಯ ಗಿಳಿಗಳು' ಸಾಮೂಹಿಕವಾಗಿ ಹಲವರ ದುರಂತ. ಇಲ್ಲಿನ ವಿಡಂಬನೆ ಚುಚ್ಚಿ ನೋಯಿಸುವಂಥದಲ್ಲ. ಅನುಕಂಪ ಈ ಕವನದ ಅಸಲು ಪ್ರೇರಣೆ. ವಿಷಾದ ವಿನೋದಕ್ಕೆ ಎಡೆಕೊಡದೆ ಪಡಿನುಡಿ ಯುವ ಕ್ರಮವನ್ನು ಈ ಪದ್ಯದಲ್ಲಿ ಅನುಸರಿಸಲಾಗಿದೆ. ಸಾಮಾನ್ಯವಾಗಿ ನಿಸಾರರ ಎಲ್ಲ ಪದ್ಯಗಳಂತೆ ಅವರು ಇಲ್ಲಿ ಕೂಡ ನೇರವಾಗಿ ವಿಷಯಕ್ಕೇ ಬರುತ್ತಾರೆ:

'ಕಲಾಕ್ಷೇತ್ರದ ಕೌಂಟರು, ಗೇಟಿನಲ್ಲಿ
ಪ್ರೇಕ್ಷಕರ ತಕ್ಕ ಸೀಟಿನಲ್ಲಿ
ಪ್ರತಿಷ್ಠಾಪಿಸುವ ಲಗುಬಗೆಯಲ್ಲಿ
ಬೆಂಗಳೂರನ್ನೇ ಹೊತ್ತ ಸೋಗಿನಿಂದ
ಕಾಲ್ಗೆಟಿಸಿದ ನಗೆಯಿಂದ
ಆತ್ಮೀಯರಾಗುತ್ತಾರೆ—
ಸ್ವಯಂಸೇವೆಯ ಸಂವೇದಕ ಗಿಳಿಗಳು.' (ಸ್ವಯಂಸೇವೆಯ ಗಿಳಿಗಳು)

ಈ ಪದ್ಯದ 'ಗಿಳಿಗಳು' ಎನ್ನುವ ಮಾತು ಹೆಚ್ಚಾಗಿ ಹೆಣ್ಣುಮಕ್ಕಳನ್ನು ಕುರಿತ ರೂಪಕವಾಗಿ ಬಂದಿದೆ. ಈ ಹೆಣ್ಣುಮಕ್ಕಳು ಅಪ್ಪಟ ಭಾರತೀಯರಾದರೂ ಅವರ ನಡೆ ನುಡಿ

ಒನಪು ವಯ್ಯಾರಗಳು ವಿದೇಶೀಯರ ಅನುಕರಣ. ಈ ಬಗೆಗಿನ ಕವಿಯ ಅನಿಸಿಕೆಗಳು ಮೃದುವಾಗಿಯೇ ಹೊಮ್ಮಿದ್ದರೂ ಪರಿಣಾಮಕಾರಿಯಾಗಿವೆ.

'ಸ್ವದೇಶಿ ನಾಲಗೆಯ ವಿದೇಶಿ ಉಚ್ಚಾರಣೆಯ
ಸ್ವಾತಂತ್ರ್ಯೋತ್ತರ ವಿಚಿತ್ರ ತಳಿಗಳು—
'ಹಲೊ' ಅನ್ನುತ್ತಾರೆ ಗುರುತಿದ್ದರೆ,
ದುರುಗುಟ್ಟುತ್ತಾರೆ ಮರೆತಿದ್ದರೆ.
ಬಿಷಪ್ ಕಾಟನ್ನಿನ ಬಾಬ್‌ಕಟ್ಟಿನ ಪೊಗದಸ್ತು ಬೇಬಿಗಳು,
ಎನಿಡ್ ಬ್ಲೈಟನ್ನಳ ಕಥೆಯ ಸ್ಕರ್ಟ್ ಹಿಡಿದು ಜಿಗಿದಾಡಿ
ಮೌಂಟ್ ಕಾರ್ಮೆಲ್ಲಿಗೆ ತಲಪಿ..........' (ಅದೇ)

ಈ ಮೈಮರೆತ ಗಿಳಿಗಳಿಗೂ ಒಮ್ಮೊಮ್ಮೆ ಎಚ್ಚರ ಮೂಡುವುದುಂಟು. ಆಗ ಅವುಗಳ ಚಹರೆಯೇ ಬೇರೆ—

'ಮೈ ತಿಳಿದಾಗ ಸಂಸ್ಕೃತಿಯ ಸ್ವಂತ ಸೂರುಗಳನ್ನ
ಆರ್ಯಾವರ್ತತೆಯ ಹಚ್ಚನೆಯ ಬೇರುಗಳನ್ನ
ಹುಡುಕುತ್ತಾರೆ ನಾಟಕ, ನಾಟ್ಯಗಳಲ್ಲಿ;
ಚಲಚ್ಚಿತ್ರೀಯ ಸಂಗೀತದ ಅಚ್ಚ ಜಾನಪದ ಗೀತೆಗಳಲ್ಲಿ.' (ಅದೇ)

ಗಿಳಿಗಳ ತಂದೆ ಹಾಗೂ ತಾಯಿಯರ ಚಹರೆಪಟ್ಟಿ ತುಂಬ ಕಾವ್ಯಾತ್ಮಕವಾಗಿದೆ:

'ಫ್ಯಾಕ್ಟರಿ ಡೈರೆಕ್ಟರೋ, ಮಿಲ್ಲಿನ ಮ್ಯಾನೇಜರೋ ಡ್ಯಾಡಿ—
ಕಳಚಿ ದಿನನಿತ್ಯದ ಫೋನ್, ಫೈಲುಗಳ ಬೇಡಿ
ಸಂಜೆ ಸೆಂಚುರಿ ಕ್ಲಬ್ಬಿನ ವಿಸ್ಕಿ, ಬಿಲಿಯರ್ಡ್ಸ್ ಹೊಕ್ಕರೆ
ಮನೆಯ ಜ್ಞಾಪಿಸಬೇಕು ಕೋಳಿಗಳು ಹಾಡಿ.' (ಅದೇ)

ಅಪ್ಪನ ಚಿತ್ರ ಮೇಲಿನದು. ಅಮ್ಮನ ಬಯೋಡೇಟ ಇದು:

'ಇನ್ನು ಮಮ್ಮಿ! ಸೋಫಾದ ಮೆತ್ತನೆಯಲ್ಲಿ ಹಗಲ ಭಾಗಿಸುತ್ತ
ಕಮರ್ಷಿಯಲ್ ಸ್ಟ್ರೀಟಿನಂಗಡಿಗಳ ಲೋಹಚುಂಬಕ ದೀಪ್ತಿ ಸುತ್ತ
ಪಾತರಗಿತ್ತಿಯಲೆದು, ಮಾತು ನಗೆಯಷ್ಟೆ ಕೊಳ್ಳುತ್ತ
ಮೆಲ್ಲಲಾರದ ಸೌಖ್ಯ,
ಮಂಚಕ್ಕೆ ಮೈ ಚಾಚಿ ಕಾಮ, ಫುಲ್‌ಸ್ಟಾಪಿರದ ದೀರ್ಘ ವಾಕ್ಯ.' (ಅದೇ)

ವಿಷಾದವನ್ನು ಧ್ವನಿಸುವ ಈ ಕವನ ನೋವಿನ ದನಿಯಲ್ಲೇ ಹೆಜ್ಜೆಯಿಡುತ್ತದೆ. ಆ ವಿಷಾದ ಮಡುಗಟ್ಟಿ ನಿಲ್ಲುವುದು ಕವನದ ಕೊನೆ ಕೊನೆಯ ಸಾಲುಗಳಲ್ಲಿ:

'ಕಾರ್ಯಕ್ರಮದ ಮೊದಲಲ್ಲಿ
ಸಮಸ್ತ ಉತ್ಸಾಹ ಮುಖಕ್ಕೆ ಹೇರಿಸಿಕೊಂಡವರು,
....
ತಮ್ಮ ಅಳತೆಗೆ ತಕ್ಕ ಬಾಣ ದಕ್ಕದೆ ಕೊನೆಗು
ಅನಾಥ ಬಿಲ್ಲಾಗುತ್ತಾರೆ.' (ಅದೇ)

'ಅನಾಥ ಬಿಲ್ಲು' ಎನ್ನುವ ಶಬ್ದ ಇಡೀ ಪದ್ಯದ ಅರ್ಥವಂತಿಕೆಯನ್ನು ಒಂದೇ ಮಾತಿನಲ್ಲಿ ವಿಸ್ತರಿಸುತ್ತದೆ.

೩

'ಅನಾಮಿಕ ಆಂಗ್ಲರು' ನಿಸಾರರ ಎಂಟನೆಯ ಕವಿತಾ ಸಂಗ್ರಹ, ೧೯೮೨ರಲ್ಲಿ ಹೊರಬಂದಿತು. ನಿರಬ್ಬರತೆ ಈ ಸಂಕಲನದ ಪ್ರಧಾನ ಗುಣ. ಈ ಸಂಕಲನದ 'ರಂಗೋಲಿ ಮತ್ತು ಮಗ', 'ಸವತಿ ಮಕ್ಕಳ ಹಾಗೆ' ಮತ್ತು 'ಸ್ವಜನೋದ್ಧಾರಕರು' ಕವನಗಳು ಒಂದು ಗುಂಪಿಗೆ ಸೇರುತ್ತವೆ. ಹುಟ್ಟಿನಿಂದ ವಿಧರ್ಮೀಯನಾಗಿ ದೇಶೀಯ ಧರ್ಮದ ಹಿನ್ನೆಲೆಯಲ್ಲಿ ಬದುಕಬೇಕಾಗಿರುವುದರ ತಲ್ಲಣ, ಸಂಘರ್ಷಗಳು ಹಾಗೂ ನೋವಿನ ದನಿಗಳು ಈ ಕವನಗಳ ಸಮಾನ ವಸ್ತು.

ರಂಗೋಲಿ ಒಂದು ಧರ್ಮದ ಜನರ ಜೀವಂತ ಸಂಸ್ಕೃತಿಯಲ್ಲಿ ತಾಯಿಬೇರು ಎಂಬುದನ್ನು ಮೆಚ್ಚಿ ಒಪ್ಪುವುದೇ ಕವನದ ಆಶಯ. ಬೆರಗು ಹಾಗೂ ವಿನೋದಗಳ ಮೆಲು ದನಿಯಲ್ಲಿ ಈ ಕವನ ಸಾಗುತ್ತದೆ. ಎಳೆಯ ಮನಸ್ಸೊಂದರ ಕೌತುಕದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

> **'ನಮ್ಮದೊಂದು ಮನೆ ವಿನಾ**
> **ಮಿಕ್ಕೆಲ್ಲ ಮನೆಯೆದುರು ಪರಿಶುಭ್ರ ಹಲ್ಲಂತೆ**
> **ಮುಂಜಾನೆ ರಂಗವಲ್ಲಿ.**
> **ಈ ಡಿಸೈನಿನ ಹಾಗೆ ಅದಿಲ್ಲ**
> **ಅದರಂತೆ ಇದಿಲ್ಲ.**
> **ಜ್ಯಾಮಿತಿಯ ಗಡಸು, ಜಟಿಲ ಸೂತ್ರಗಳಿಗೆಲ್ಲ**
> **ದಕ್ಕಿರುವುದಿಲ್ಲ ಮಿಗಿಲರ್ಥ:**
> **ಮೃದು ಬೆರಳ ಪರಿಹಾರ.'** **(ರಂಗೋಲಿ ಮತ್ತು ಮಗ)**

ಅನ್ಯಧರ್ಮೀಯ ಮಗುವೊಂದರ ಕಣ್ಣುಗಳಿಗೆ ಈ ರಂಗೋಲಿಯನ್ನು 'ಯಾಕೆ ಬಿಡಿಸುತ್ತಾರೆ ಇವರು ಹೀಗೆ ದಿನಾ ಚಕ್ರಬಂಧ?' ಎಂಬ ಪ್ರಶ್ನೆಯ ರೂಪ ತಾಳಿದಾಗ ಮಗುವಿನ ತಂದೆ 'ನಮ್ಮ ಪದ್ಧತಿಗೆ ಅದು ಸಲ್ಲ' ಎಂದು ಉತ್ತರಿಸಿ, ಆ ಉತ್ತರದಿಂದ ತೃಪ್ತನಾಗದೆ, 'ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ' ಎಂದೂ ಹಳೆಯ ರಾಗ ಪಲುಕಿರುತ್ತಾನೆ. 'ಮನೆಯ ಮುಂದೆ ನಿನ್ನ ಹೆಸರು ಬರೆಸಿದ್ದೀಯಲ್ಲ, ಅದನ್ನು ಖುರಾನ್‌ನಲ್ಲಿ ಹೇಳಿದೆಯೇ?' ಎಂದು ಮಗನ ಪ್ರಶ್ನೆ. 'ಆತ್ಮಸಾಕ್ಷಿಯ ಕತ್ತು ಹಿಚುಕ ಬಂದವನನ್ನ ಮಗನೆನ್ನಬಹುದೆ?' ಎಂಬ ಪ್ರಶ್ನೆಯೊಂದಿಗೆ ಕವನ ಮುಗಿಯುತ್ತದೆ.

'ಸ್ವಜನೋದ್ಧಾರಕರು' ಆತ್ಮನಿವೇದನೆಯ ಸ್ವಜನ ವಿಮರ್ಶೆಯ ಪದ್ಯ. ಅರಬ್ಬಿ, ಪರ್ಷಿಯನ್, ಉರ್ದು ಶಬ್ದಗಳ ಹೇರಳ ಬಳಕೆಯೊಂದಿಗೆ ರಚಿಸಲಾಗಿರುವ ಈ ಕವನ ಮತೋದ್ಧಾರಕರನ್ನು ವಿಷಾದದ ದನಿಯಲ್ಲಿ ಮೂದಲಿಸುತ್ತದೆ. ಅಂಥ ಮೂದಲಿಕೆ ಪದ್ಯದ ಕೊನೆಯ ಸಾಲುಗಳಲ್ಲಿ ತಾರಕಕ್ಕೇರುತ್ತದೆ:

'ಖಬರಸ್ತಾನದಲ್ಲಿನ್ನೂ ಅಗೆತ ನಡೆದಿದ್ದಂತೆ,
ಬಸ್ಸೋ ರೈಲೋ ಏರಿ
ಪರಾರಿಯಯ್ಯ ನೀವು ವಾಗ್ವೀರರು—
ಕೋಮಿನ ಕಂತ್ರಾಟುದಾರರು
ಮಗುದೊಂದು ಊರಿಗೆ
ರಕ್ಕಸಗಣದುಸ್ತುವಾರಿಗೆ
ಮತ್ತಷ್ಟು ಹೊಸ ಹೊಸಾ ಗೋರಿಗಳ ತಯಾರಿಗೆ.' (ಸ್ವಜನೋದ್ಧಾರಕರು)

'ಸವತಿ ಮಕ್ಕಳ ಹಾಗೆ' ಒಂದು ಮನವಿ, ಒಂದು ಬೇಡಿಕೆ. ಅಲ್ಪಸಂಖ್ಯಾತನೊಬ್ಬ ಭಾರತಾಂಬೆಗೆ ಹೇಳಿಕೊಳ್ಳುತ್ತಿರುವ ಮೊರೆ. ಕವನದ ಆರಂಭವೇ ಬೇಡಿಕೆಯೊಡನೆ. ಕವನ ಅರ್ಥವಾಗಲು ಹೆಚ್ಚು ಕಷ್ಟಪಡಿಸುವುದಿಲ್ಲ:

'ಸವತಿ ಮಕ್ಕಳ ಹಾಗೆ ಕಾಣಬೇಡವ್ವ
ಸವತಿ ಮಕ್ಕಳ ಹಾಗೆ ಕಾಡಬೇಡ.' (ಸವತಿ ಮಕ್ಕಳ ಹಾಗೆ)

ಎಂಬ ಸಾಲುಗಳಿಂದ ಆರಂಭವಾಗುವ ಕವನದ ೪ ಮತ್ತು ೫ನೆಯ ಖಂಡಗಳು ಮನಮಿಡಿಯುವಂತಿವೆ:

'ನಾವೂನು ಭಾರತಿಯ ಬಸಿರವರೆ ಎನ್ನುತ್ತ
ತಾಯೆಂಬ ಬಾಯಲ್ಲೆ ನಾಯುಣಿಸು ತಿನ್ನುತ್ತ
ಮೀರ್ ಸಾದಕರು ಮತ್ತೆ ನಮ್ಮಕ್ ಹರಾಮರು
ಮೊಘಲಾಯಿ ದೌಲತ್ತು ಮೆರೆವ ಅನಾಮರು—
ಇದ್ದಾರು ಕೋಮಿನ ಕಂತ್ರಾಟುದಾರರು
ಮಾಸೂಮು ಮಂದಿಯ ನೆಮ್ಮದಿ ಚೋರರು;
ಮಾಡವ್ವ ಅಂಥವರ ಸುಳಿಯು ಸಫಾಯಿ.' (ಅದೇ)

ಕೃತಿಗೆ ಶೀರ್ಷಿಕೆ ಒದಗಿಸಿರುವ 'ಅನಾಮಿಕ ಆಂಗ್ಲರು' ಬಹು ಸಾರ್ಥಕವಾದ ಕವನ. ವಿಷಾದ ಮಡುಗಟ್ಟಿರುವ ಈ ಕವನ ಬೇಸಗೆಯ ಮಧ್ಯಾಹ್ನದ ಶ್ಮಶಾನದ ನೀರವತೆಯನ್ನು ಯಥಾವತ್ತಾಗಿ ಧ್ವನಿಸುತ್ತದೆ. ಇಂಗ್ಲೆಂಡ್ ದೇಶ ಭಾರತದ ಮೇಲಿನ ತನ್ನ ಬಿಗಿ ಹಿಡಿತವನ್ನು ಬಲಪಡಿಸಲು ಬಳಸಿದ ಈ ವಿದೇಶೀಯ ಸೈನಿಕರ ಬಗೆಗೆ ಕವಿಯ ಅನಿಸಿಕೆ ಹೀಗಿದೆ:

'ನನ್ನ ದೇಶದೊಳಿದ್ದೂ ಪರದೇಶಿಯಾದವರ;
ಇಂಡಿಯಾದಲ್ಲೊಂದು ಇಂಗ್ಲೆಂಡು ಸ್ಥಾಪಿಸಲು
ಹೆಣಗಿ, ಹುಟ್ಟು ನೆಲಕ್ಕು ಹೊರತಾಗಿ ಉಳಿದವರ

ಸ್ವಲ್ಪವೂ ಮರುಕ ತೋರದೆ ಇಂಗ್ಲೆಂಡ್ ಈ ಯೋಧರು—

ವೇಲ್ಸ್, ಎಸೆಕ್ಸ್
ಯಾರ್ಕ್‌ಷೈರ್, ಸಸೆಕ್ಸಿನ ಬಡಪಾಯಿಗಳು
ಸ್ಕಾಟಿಷ್ ಸಿಪಾಯಿಗಳು
ಸಾಮ್ರಾಜ್ಯ ವಿಸ್ತರಣದಾಟದಲಿ ಅತಿ ಬಳಸಿ
ಬಿಸುಟಿರುವ ಕಾಯಿಗಳು.' (ಅನಾಮಿಕ ಆಂಗ್ಲರು)

ಇಂಗ್ಲೆಂಡಿನ ಕೀರ್ತಿಪತಾಕೆಯನ್ನು ಮುಗಿಲಿನ ಎತ್ತರಕ್ಕೆ ಏರಿಸಲು ಬಂದು ಈ ಸಮವಸ್ತ್ರ ಧರಿಸಿದ ಮನುಷ್ಯಾಕೃತಿಯ ಗೊಂಬೆಗಳು, ತಾವು ಬಂದದ್ದರ ಉದ್ದೇಶವನ್ನು ಸಾಧಿಸಿದರೆ?

'ನನ್ನ ಚಪ್ಪಲಿ ತಾಕಿ
ಸರಸರನೆ ಅಲುಗಾಡಿ
ಶತಕಗಳ ನೀರವವ ಕದಲಿಸಿದ ತರಗೆಲೆಯ
ಮೇಲೆ ಮೆಲ್ಲಡಿಯಿಟ್ಟು ಮುಂದುವರಿಯುತ್ತೇನೆ—
ತಡೆ ತಡೆದು
ಜೀವ ಕೈಯಲಿ ಹಿಡಿದು.
ಈ ಅನಾಮಿಕ ಮೃತರ
ಬೇನಾಮಿ ನಾಮಗಳ,
ಕುಲಗೋತ್ರ, ತೇದಿಗಳ
ಪಟ್ಟಿ ಮಾಡುತ್ತೇನೆ;
ಹಾಗೆಯೇ ಈ
ಕಾಲದೇಶದುಪೇಕ್ಷೆಗೊಳಗಾದ ಪ್ರೇಕ್ಷಕರ
ಅವರ ಪಾಲಿಗೆ
ಹಾವು ಚೇಳಿಗೆ
ಬಿಟ್ಟು ಗೋಡೆ ದಾಟುತ್ತೇನೆ' (ಅದೇ)

ಎನ್ನುವವರೆಗೂ ವಿಷಾದದಲ್ಲೇ ಮುಂದುವರಿದ ಕವನ:

'ಕರವಸ್ತ್ರಕಾಗಿ ಕಿಸೆಯ ಹುಡುಕುತ್ತೇನೆ'

ಎಂದಾಗ ತನ್ನ ಇಡೀ ಆವರಣವನ್ನು ವಿಸ್ತರಿಸಿಕೊಳ್ಳುತ್ತದೆ. ಇಂಗ್ಲೆಂಡ್‌ನಲ್ಲಿ ಹುಟ್ಟಿ ಭಾರತ ದಲ್ಲಿ ಪ್ರಾಣವೊಪ್ಪಿಸಿ, ಹೇಳುವವರು ಕೇಳುವವರು ಇಲ್ಲದೆ ಅನಾಮಿಕರಾಗಿ ಕಾಲ ರಾಯನ ಕಾಲ್ತುಳಿತಕ್ಕೆ ಒಳಗಾದವರ ಬಗೆಗೆ ನಾವೂ ಕರವಸ್ತ್ರಕ್ಕೆ ಕೈ ಹಚ್ಚುವಂತಾಗುತ್ತದೆ.

'ಸಾವಿಗೆ ಅತಿಥಿ ಪರಿಚಯ' ದುರಂತದೆದುರು ಸಂಯಮ ಮುಖಾಮುಖಿಯಾಗುವ ವಸ್ತುವನ್ನುಳ್ಳ ಕವನ. ಬಿ.ಜಿ.ಎಲ್. ಸ್ವಾಮಿ ಹಾಗೂ ಬೀಚಿ ಅಲ್ಪಾವಧಿಯಲ್ಲಿ ಒಬ್ಬರಾಗುತ್ತ ಒಬ್ಬರು ತೀರಿಕೊಂಡರು. ಅವರ ಸಾವನ್ನು ನೆಪ ಮಾಡಿಕೊಂಡು, ಸಾವನ್ನು ಉದ್ದೇಶಿಸಿ ಕವಿ ತನ್ನೆದೆಯ ಅಳಲನ್ನು ತೋಡಿಕೊಳ್ಳುವ ವಸ್ತು ಈ ಕವನದ್ದು. ಕವಿ ಸಾವನ್ನು ಉದ್ದೇಶಿಸಿ ಸಂಬೋಧನಾ ವಿಭಕ್ತಿಯಲ್ಲಿ ಸಂಭಾಷಣೆಗೆ ತೊಡಗುತ್ತಾರೆ:

'ಸಾವೇ,
ನಿನಗೀಗ ಸುಗ್ಗಿಯೋ ಸುಗ್ಗಿ—
ಬಲು ನಿಗುರಿರಬೇಕು ಹಿರಿ ಹಿರಿ ಹಿಗ್ಗಿ.
ಕಪಿಮುಷ್ಟಿಯುಲಿ ಬಾಚಿ
ಬಿಜಿಎಲ್, ಬೀಚಿ ಪ್ರಾಣದ ಚೆಂದನೆಯ ಹೊಂದೆನೆಗಳ.'

(ಸಾವಿಗೆ ಅತಿಥಿ ಪರಿಚಯ)

ಮುಂದಿನ ನಾಲ್ಕೈದು ಸಾಲುಗಳಲ್ಲಿ ಬಿಜಿಎಲ್, ಬೀಚಿಯವರನ್ನು ಸೆಳೆದದ್ದಕ್ಕೆ ಸಾವನ್ನು ಪ್ರಶಂಸಿಸಿ, ಬಳಿಕ ಮರಣಕ್ಕೆ ಸವಾಲು:

'ಗೆದ್ದೆ ಇವರನ್ನೆಂದು ಮೆರೆದೀಯೆ ಪೆದ್ದಾಗಿ—
ಬಲ್ಲೆ ಈ ಇಸಮುಗಳ ಕೆಲ ಕಾಲ ಖಿದ್ದಾಗಿ.' (ಅದೇ)

ಬಿಜಿಎಲ್, ಬೀಚಿ ಸಾವಿನ ಮನೆಗೆ ಹೋದ ಅತಿಥಿಗಳೆಂದು ಕವಿಯ ಎಣಿಕೆ. ಎಂದೇ ಆ ಇಬ್ಬರು ಮಹಿಮರ ಗುಣದ ಪರಿಚಯ ಕವನದುದ್ದಕ್ಕೂ ಹಬ್ಬಿಕೊಂಡಿದೆ. ಕೆಲವೇ ಶಬ್ದಗಳಲ್ಲಿ ಒಂದು ಕಾವ್ಯಲೋಕವನ್ನು ನಿರ್ಮಿಸುವ ಮಾತಿನ ಕುಸುರಿ ಕೆಲಸ ನಿಸಾರ್ ಕಾವ್ಯದ ಲಕ್ಷಣಗಳಲ್ಲಿ ಒಂದು. ಸಾವನ್ನು ಚುಡಾಯಿಸುವ ಒಂದು ನುಡಿಗಟ್ಟಿನ ಮೋಡಿ ಹೀಗಿದೆ ನೋಡಿ:

'ನೀನಿರಲಿ,
ಆ ಹಲವು ನಾಮಗಳ ಏಕ,
ನಿನ್ನನ್ನು ಮೆಟ್ಟಂತೆ ಸವೆಸಿರುವ ನಾಕ
ನರಕಗಳ ಮಾಲೀಕ,
ಜೀವಲೋಕದ ಮಗ್ಗುಲಲ್ಲಿ ಆಕಳಿಸಿರುವ
ಸಹರ ಮೌನದ ಶೇಖ—
ಅವನನ್ನೆ ಕ್ಯಾರೆ ಎಂದವರಲ್ಲ.
....
ಪ್ರಯತ್ನವೇ ಪರಮಾತ್ಮವೆಂದ ಶ್ರದ್ಧಾಳುಗಳು.' (ಅದೇ)

ವ್ಯಕ್ತಿಗೀತೆಗಳ ರಚನೆಯಲ್ಲಿ ನಿಸಾರ್ ಅವರದೇ ಒಂದು ಬಗೆಯ ಸ್ವಂತಿಕೆಯುಂಟು. (ಅವರ 'ಮಾಸ್ತಿ' ಕವನವನ್ನಿಲ್ಲಿ ನೆನೆಯಬಹುದು.) ತಾನು ಮಾತನಾಡುತ್ತಿರುವ ವ್ಯಕ್ತಿಯ ಎಲ್ಲ ಬಲ ದೌರ್ಬಲ್ಯಗಳನ್ನೂ ನಿಲವು ನೋಟಗಳನ್ನೂ ಕೊನೆಗೆ ಆಂಗಿಕ ಚಲನೆಗಳನ್ನೂ ಮಾತುಗಳಲ್ಲಿ ಸೆರೆ ಹಿಡಿಯುವ ಮಾಂತ್ರಿಕತೆ ಅವರ ವ್ಯಕ್ತಿಗೀತೆಗಳ ಬಲ. 'ಸಾವಿಗೆ ಅತಿಥಿ ಪರಿಚಯ'ದಲ್ಲಿ ಕೂಡ ಬಿಜಿಎಲ್ ಹಾಗೂ ಬೀಚಿಯ ಚಿತ್ರಗಳು ಭಾವಚಿತ್ರವೊಂದರ ಕುಶಲತೆಯಲ್ಲೇ ಕಾಣಿಸಿಕೊಳ್ಳುತ್ತವೆ. ಬಿಜಿಎಲ್ ಅವರನ್ನು ಕುರಿತ ಮಾತುಗಳಿವು:

'ವಿಲ್ಸ್ ಫ್ಲೇಕು ಹಚ್ಚಿ, ಕೂತು ಸಲೀಸು
ಬಿಜಿಎಲ್ ಉದುರಿಸುವ ಮುತ್ತುಗಳನಾರಿಸು:
ಗಿಡಗಂಟೆ, ದ್ರಾವಿಡರ ಕುಲಗೋತ್ರ,
ಮಹಾದೇವಿಯಕ್ಕನ ಮಂಗಳ ಸೂತ್ರ
ಶ್ರೀ ತುಳಸಿಯ ಮ್ಲೇಚ್ಛ ಜನನ.
ತೊಗರಿಯ ಇಥಿಯೋಪಿಯತನ,
ಇಡ್ಲಿಯ ಪೌರಾಣಿಕತೆ, ಉದ್ದಿನ ಪಾತ್ರ
—ಸಂಶೋಧನೆಯ ಈ ಉದ್ದಗಲ ಗಾತ್ರ
ತಬ್ಬಿಬ್ಬಾಗಿ ಅಬ್ಬಬ್ಬ ಅನಿಸದಿದ್ದರೆ ಹೇಳು.' (ಅದೇ)

ಬೀಚಿಯ ವ್ಯಕ್ತಿಚಿತ್ರ ಇನ್ನೂ ಸೊಗಸಿನದು:

‘ಬೀಚಿ ಗಂಟಲಿನಂತೆ
ಹೃದಯವೂ ತೇವ;
ದಾನವತೆಗದು ಮಿಡಿವ, ಸಿಡಿಮಿಡಿವ ನೋವ
ನೋಡು: ಈ ಹೆಬ್ಬಾವ ಮೊಗದ ಸಾತ್ವಿಕ ಗೋವ;
ಕಳ್ಳ ಬಾಜಾರಿಗರ ಮುಂದೆ ಸಿಡಿಸುವ ಸೇಡ
ಖಾದಿ ಕಾವಿಗಳೆದುರು ಆಡಿಸುವ ಕೋಡ!’ (ಅದೇ)

‘ಸಾವಿಗೆ ಅತಿಥಿ ಪರಿಚಯ’ ನಿಸಾರರ ಬಹು ವಿರಳ ರಚನೆಗಳಲ್ಲೊಂದು. ಮಾಸ್ತಿ, ಜಿ.ಟಿ.ಎನ್., ಎಚ್ಚೆನ್ ಮೊದಲಾದ ಅನೇಕಾನೇಕ ಹಿರಿಯ ಜೀವಗಳ ಬಗೆಗೆ ಅತ್ಯಂತ ವಿಶಿಷ್ಟ ಹಾಗೂ ಅವಿಸ್ಮರಣೀಯ ವ್ಯಕ್ತಿಗೀತೆಗಳನ್ನು ನಿಸಾರ್ ರಚಿಸಿದ್ದಾರೆ.

ಒಬ್ಬ ಯಃಕಶ್ಚಿತ್ ಹಳ್ಳಿ ಗಮಾರನಲ್ಲಿ ಇರಬಹುದಾದ ದೊಡ್ಡ ಗುಣಗಳನ್ನು ಫೋಟೋ ತೆಗೆದಂತೆ ಚಿತ್ರಿಸಿ, ಅಂಥ ವ್ಯಕ್ತಿಯನ್ನು ಲೋಕದಲ್ಲಿ ಚಿರಸ್ಥಾಯಿಯಾಗಿ ನಿಲ್ಲಿಸುವಂಥ ಒಂದು ಪದ್ಯವನ್ನು ನಿಸಾರ್ ಬರೆದಿದ್ದಾರೆ. ಆ ಪದ್ಯದ ಹೆಸರು ‘ಮೈಲಿ ಮೊಗದ ಮಹಾರಾಯ’. ಅವನ ಸ್ವೋಪಜ್ಞ ಚಿತ್ರ ಎರಡೇ ಸಾಲುಗಳಲ್ಲಿ ಕಾಣಿಸಿಬಿಡುತ್ತದೆ:

‘ಅವನಿಲ್ಲ ಈಗ—
ಹಣ್ಣನೊಳಗಿನ ಹುಳುವಿನಂತೆ ಭೋಗವ ಮೆದ್ದ
....
ಮೈ ಬಣ್ಣದಿಂದ ಕದ್ದಿಂಗಳನೆ ಅಂಜಿಸಿ
ಭೇಟಿಯಾದಾಗೆಲ್ಲ ಹೃನ್ಮನವ ರಂಜಿಸಿ
ಮಾತು ಮಾತಿಗೆ ನೆಲದ ಸೊಗಡ ಕಾರಂಜಿಸಿದ
ಮೈಲಿ ಮೊಗದಾತ.’ **(ಮೈಲಿ ಮೊಗದ ಮಹಾರಾಯ)**

ಕಾರಿರುಳಿನ ಮೈ ಬಣ್ಣದ ಸಿಡುಬಿನ ಕಲೆಯ ಮುಖದ ಮಹಾರಾಯನ ದೊಡ್ಡತನ ಕವಿಗೆ ಬೆರಗು. ಕವಿ ಅವನನ್ನು ನೋಡಿದ್ದದ್ದು ಹನ್ನೊಂದು ವರ್ಷಗಳ ಹಿಂದೆ, ಶಿವಮೊಗ್ಗ ದಲ್ಲಿ. ಕವಿ ಶಿವಮೊಗ್ಗ ಬಿಟ್ಟು ಬಂದ ಮೇಲೂ ಆತ ಆಗಾಗ ನೆನಪಿಗೆ ಬಂದು ಕಾಡುತ್ತಿದ್ದು ದುಂಟು:

‘ಹನ್ನೊಂದು ವರುಷ,
ನೂರೆಂಬತ್ತು ಮೈಲಿಗಳ ಕ್ರಮಿಸಿ
ಅಲಕ್ಕನೆದೆ ಆಕ್ರಮಿಸಿ
ಬೆಂಗಳೂರಿನ ನನ್ನ ಸಮತಲದ ಬಾಳ್ವೆಯಲಿ
ಗ್ರಾಮೀಣತೆಯ ಗುಳಿಯ ತೋಡಿ ಯದ್ವಾತದ್ವಾ
ಹಳೆಯುಳಿಕೆಗಳ ಹೊರಗೆಡವಿ ಕಾಡುವಾತ.’ (ಅದೇ)

ಮೈಲಿ ಮೊಗದವನದು ಒಂದು ಸಲ ಬೆಂಕಿಯನ್ನು ಉಗುಳುವ, ಇನ್ನೊಂದು ಸಲ ಅಮೃತವರ್ಷವನ್ನು ಕರೆಯುವ ಸ್ವಭಾವ:

'ಕೈ ಹಿಡಿದವಳ ಪಳಗಿಸಿದ ಪಶುವಂತೆ ದುಡಿಸಿ
ಏಳು ಮಕ್ಕಳಿಗವಳ ಎದೆ ಹಾಲ ಕುಡಿಸಿ
ಎಂಟನೆಯ ಜೀವಕ್ಕೆ ಹಾದಿ ರಚಿಸಿದರೂನು
....
ಸೂಳೆ ಸೌಖ್ಯಕೆ ತಾಳಿ ಅಡವಿಟ್ಟರೂ
ಹಬ್ಬ ಹುಣ್ಣಿಮೆಗೆಲ್ಲ ಇಳಕಲ್ಲ ಸೀರೆ
ಗುಳೇದ ಗುಡ್ಡದ ಖಣವ ತಪ್ಪಿಸದ ಪಾಳಿ.' (ಅದೇ)

ಮುಂದಿನ ಕಾವ್ಯಭಾಗ ಮೈಲಿ ಮುಖದವನ ಗುಣಗಾನಕ್ಕೆ ಮೀಸಲು:

'ನೀತಿಗು ಅನೀತಿಗು ನಡುವೆ ಜಗವೆಳೆದಿರುವ
ಒತ್ತುಗೆರೆಯನ್ನಳಿಸಿ ನನಗೆ ಒಗಟಾಗುಳಿದ
ಮಣ್ಣಿನಪ್ಪಟ ತಳಿಯೆ,
ಓದು ಚಿಂತನೆಯ ನನ್ನ ಸುಕುಮಾರ ಸಪ್ಪೆತನಕ್ಕೆ
ಗಡಸು ಬಾಳಿನ ತುಂಬು ಅನುಭವದ ಲವಣಾಂಶ
ಕೂಡಿಸಿದ ಕುಶಲಿಯೆ
....
ಆಸುಪಾಸಿನ ಗಮಾರರಿಗೆ
ನೀನೊಬ್ಬ ಹೊಲೆಗೊಳಕ,
ನೀತಿಬಾಹಿರ, ಹರಾಮಖೋರ,
ನನಗೆ ಗುರು, 'ಪರಮ ವೇದದ ಸಾರ.' (ಅದೇ)

ಇಡೀ ಕವನಕ್ಕೆ ಕಳಶವಿಟ್ಟಂತಿರುವ ಮುತ್ತಿನಂತಹ ಸಾಲುಗಳು ಪದ್ಯದ ಕೊನೆಯಲ್ಲಿ ಬರುತ್ತವೆ. (ನಿಸಾರರ ಬಹುತೇಕ ಸಾರ್ಥಕ ಕವನಗಳಲ್ಲೆಲ್ಲಾ ಹೀಗೆಯೆ.)

'ಇತ್ತೀಚೆ ಹೋಗಿದ್ದಾಗ
ಎಲ್ಲ ಹಾಗೇ ಇತ್ತು.
....
ಇದ್ದಂತೆ ಇವೆ ಎಲ್ಲ!
ನೀನೊಬ್ಬನಿಲ್ಲ:
ಪಚ್ಚೆ ಉದುರಿದ ಉಂಗುರ
ಸುತ್ತ ಪರಿಸರವೆಲ್ಲ.' (ಅದೇ)

ಪಚ್ಚೆ ಉದುರಿದ ಉಂಗುರದ ಪ್ರತಿಮೆ ಇಡಿಯ ಕವನವನ್ನು ಅರ್ಥಸ್ಪಷ್ಟತೆಯ ಉತ್ತುಂಗಕ್ಕೊಯ್ಯುತ್ತದೆ. ಆ ಪರಿಸರದ ಕೊರತೆಯನ್ನು ಸಮರ್ಥವಾಗಿ ಕಟ್ಟಿ ಕೊಡುತ್ತದೆ.

ಗಿಮ್ಮಿಕ್ಕುಗಳಿಗೆ ಕೈ ಹಾಕದೆ, ಕಾವ್ಯವನ್ನು ಅನಗತ್ಯವಾಗಿ ಅಸ್ಪಷ್ಟವಾಗಿಸದೆ, ಸರಳವಾಗಿ ನೇರವಾಗಿ ನುಡಿಯುವ ಕವಿ ನಿಸಾರ್. ಸರಳ ಎಂದಾಗ, ಆ ಸರಳತೆ ಮಾಸ್ತಿಯವರು ಗದ್ಯದಲ್ಲಿ ಸಾಧಿಸಿರುವಂಥ ಸರಳತೆ. ಹಾಗೆ ನೋಡಿದರೆ, ನಿಸಾರರ ಪದ್ಯಗಳು ಸರಳವೆಂದು ತೋರಿದರೂ ಸಂಕೀರ್ಣ ರಚನೆಗಳು ಬೆಳಕಿನಂತೆ. ಮೇಲ್ನೋಟಕ್ಕೆ

ಬಿಳಿದಾದ ಸರಳತೆ. ವಿಶ್ಲೇಷಿಸಿದರೆ ಸಪ್ತ ವರ್ಣಗಳ ಸಂಕೀರ್ಣತೆ. 'ನೀವು ಸಹಜ ಕವಿಗಳಾಗಿರುವುದರಿಂದ ಪ್ರತಿಯೊಂದು ಕವನವೂ ಒಂದಲ್ಲ ಒಂದು ಮಟ್ಟದಲ್ಲಿ ಮನಸ್ಸಿಗೆ ಸುಖವನ್ನು ಕೊಡುತ್ತದೆ' ಎಂಬ ಅಡಿಗರ ಮಾತೂ 'ನಿಮ್ಮ ಕವನಗಳನ್ನು ಓದುತ್ತಿರುವಾಗ ನಾನೊಬ್ಬ ಸಹಜ ಕವಿಯ ಸತ್ಸಂಗದಲ್ಲಿದ್ದೇನೆ' ಎಂಬ ಪು.ತಿ.ನ. ಅವರ ಮಾತಿಗಿಂತಲೂ ಹೆಚ್ಚಿನ ವಿಮರ್ಶೆ ನಿಸಾರರಿಗೆ ಸಲ್ಲುವುದು ದುಸ್ತರ.

ಹೊಟ್ಟೆ, ಬಟ್ಟೆ, ವೈಭವ ವಸ್ತುಗಳ ಲೋಕಾರೂಢಿಯ ಮಷಾಲು ಬೆಳಕಿನ ವರಾತದಲ್ಲಿ ಕವಿಯ ಅಸ್ತಿತ್ವ ಮೂಲೆಗುಂಪಾಗಿ ಅಗಣ್ಯವಾಗಿ ಕಂಡರೂ ಸಂಸ್ಕೃತಿ ವಾಹಕರಲ್ಲಿ ಅವನೂ ಒಂದು ಮುಖ್ಯ ಪಾತ್ರವಾಗಿರುತ್ತಾನೆ. ಗಲಿಬಿಲಿ ಮಾಡದೆ ಏಕಪ್ರಕಾರದ ಪ್ರಭೆಯಿಂದ ರೂಮಿನ ಮೂಲೆ ಮೊಡಕುಗಳನ್ನು ಬೆಳಗುವ ಹಣತೆಯಂತೆ ಸಾರ್ಥಕ್ಯ ಕಾರ್ಯಶೀಲನಾಗುತ್ತಾನೆ. ಜನಾಂಗ ಸಂಸ್ಕೃತಿಯ ಜಟಿಲ ವಿನ್ಯಾಸದ ಹಸೆಯಲ್ಲಿ ಅವನ ಹೊಣೆ, ಕೊಡುಗೆ ಎಷ್ಟೆಂಬುದನ್ನು ಕಾಲವೇ ಸಾರುತ್ತ ಬಂದಿದೆ. ಒಟ್ಟಿನಲ್ಲಿ, ರಾಷ್ಟ್ರ ಜೀವನದ ದೃಢಾಂಗತೆಗೆ ವರ ಕವಿಯೊಬ್ಬ ಗ್ರಹಿಸಿದ ತಥ್ಯಗಳು ತತ್‌ಕ್ಷಣ ಮೇಲು ನೋಟಕ್ಕೆ ಎದ್ದು ಕಾಣದಿದ್ದರೂ ಸಾವಕಾಶವಾಗಿ ಒಳಗೊಳಗೇ ವಿಟಮಿನ್ನು ಗಳಂತೆ ದುಡಿದಿರುತ್ತವೆ.

(ಕವಿ : ಸಂಸ್ಕೃತಿವಾಹಕ)

✧ ✧ ✧

ಕವಿಗೆ ಮಾತು ತಪಶೀಲು ಮಾಹಿತಿಗಳನ್ನು ಪೇರಿಸುವ ಅಥವಾ ಅರ್ಥವನ್ನು ಸೂಚಿಸಿ ಪಕ್ಕಕ್ಕೆ ಸರಿದು ನಿಲ್ಲುವ ಸಾಧನವಲ್ಲ: ಅದು ಅರ್ಥವರ್ಧಕ, ಅತಿಶಯಾರ್ಥದ್ಯೋತಕ. ಕವಿಗೆ ಶಬ್ದಗಳು ಸಜೀವ ವಸ್ತುಗಳು. ಅವುಗಳ ಸಚೇತನ ಸೂಕ್ಷ್ಮಾಂಶಗಳ, ಬಾಗು ಬಳುಕುಗಳ, ಸೆಖೆ ಶೀತಗಳ, ಕುಸುಮತ್ವ ವಜ್ರತ್ವಗಳ ಗುಣಗಳನ್ನು ಗುರುತಿಸುವ, ಇಂಗಿತಕ್ಕೆ ತಕ್ಕಂತೆ ಅವುಗಳನ್ನು ರಸೋಚಿತವಾಗಿ ಉಪಯೋಗಿಸಿಕೊಳ್ಳುವ ರಸಿಕತೆ, ಜಾಣತನ ಕವಿಗೆ ಇರಬೇಕು. ಕವನ ರಚನೆಯ ಕಾಲದಲ್ಲಿ ಆತ ಮಾತಿನ ಬಗ್ಗೆ ತಾಳಬೇಕಾದ ಎಚ್ಚರ, ಗೌರವ ಮಾತಿಗೆ ಮೀರಿದ್ದು.

(ಕವಿಯ ಭಾಷೆ)



'ಅನಾಮಿಕ ಆಂಗ್ಲರು': ಅಸಾಧಾರಣ ಸ್ವೋಪಜ್ಞ ಕವಿಯ ರಸ ರಚನೆ

♦ *ಡಾ. ಪು. ತಿ. ನರಸಿಂಹಾಚಾರ್*

ತಮ್ಮ 'ಅನಾಮಿಕ ಆಂಗ್ಲರು' ಎಂಬ ಕವನ ಸಂಗ್ರಹವನ್ನು ಓದುತ್ತಿರುವಾಗ ನಾನೊಬ್ಬ ಸಹಜ ಕವಿಯ ಸತ್ಸಂಗದಲ್ಲಿದ್ದೇನೆ ಅನ್ನಿಸಿತು. ಉಲ್ಲಸಿತನಾದೆ. ಯಾವ ಕವನವೂ ಹುಸಿ ಅನ್ನಿಸಲಿಲ್ಲ. ಹೃದಯ ರಸದಲ್ಲಿ ಬುದ್ಧಿ ಪಲ್ಲವಿಸುವ ಒಂದು ಬಗೆಯನ್ನು ಇಲ್ಲಿ ಕಂಡು ಹರ್ಷಿಸಿದೆ. ಆಧುನಿಕ ಕನ್ನಡ ಕಾವ್ಯದಲ್ಲಿ ತಮ್ಮದೊಂದು ಅಸಾಧಾರಣವಾದ ಸ್ವೋಪಜ್ಞ ವಾಣಿ. ಪದಗಳು ಹೆಚ್ಚೆನಿಸದೆ, ಕೊರೆಯೂ ಎನಿಸದೆ ಉಚಿತವಾಗಿ ಅನೇಕ ನಡೆಗಳನ್ನು ಪ್ರದರ್ಶಿಸುತ್ತವೆ, ಜಾತ್ಯಶ್ವಗಳಂತೆ.

ಅರ್ಥಕ್ಕೂ ಭಾವಕ್ಕೂ ನಮ್ಮ ಮನಸ್ಸನ್ನು ಸರಾಗವಾಗಿ ಹಾಯಿಸುವ ವಿನೀತ ಕಲೆಗಾರಿಕೆ ಇವುಗಳಲ್ಲಿ ಗೋಚರಿಸಿ ಹರ್ಷಗೊಳಿಸುತ್ತದೆ. ಬೇಕೆಂದೇ ಪಾದಪೂರಣಕ್ಕೇ ಹಾಕಿದ ಪ್ರಾಸಗಳು ತುಂಬ ಕಡಮೆ. ಕವನದ ಒಟ್ಟು ಭಾವಕ್ಕೆ ಇಂಬುಗೊಟ್ಟು ಆಪ್ಯಾಯನಗೊಳಿಸುವಂತಹವು ಅನೇಕ. ಇವೆಲ್ಲ ಹುಟ್ಟು ಕವಿಗೆ ಸಹಜವಾಗಿ ಸರಸ್ವತಿ ಕರುಣಿಸುವ ವರಗಳು.

'ಅನಾಮಿಕ ಆಂಗ್ಲರು' ಎಂಬ ಕವನವನ್ನು ಈ ಹಿಂದೆ ಎಲ್ಲೋ ಓದಿ ಇದೊಂದು ಶ್ರೇಷ್ಠ ಕವನ ಎಂದುಕೊಂಡಿದ್ದ ಜ್ಞಾಪಕ. 'ಭಗ್ನಾವಶೇಷಗಳ ಅನಾಥ ಮೌನ' 'ನನ್ನ ದೇಶದೊಳಿದ್ದೂ ಪರದೇಶಿಯಾದವರ' ಮುಂತಾದ ಮಾತುಗಳು ಕರುಣೆಯನ್ನು ಉಕ್ಕಿಸುತ್ತವೆ, ಮನಸ್ಸನ್ನು ಈ ನಾಡಿನಲ್ಲಿರುವ ಇಂಥ ಗೋರಿಗಳ ಹಾಗೂ ಜನಗಳ ಮೇಲೆ ಹಾಯಿಸಿ.

ಹಾಗೆಯೇ, ಪ್ರಾಚ್ಯದೇಶಗಳಲ್ಲಿ ಪರರ ಸೇವೆಯಲ್ಲಿ ಪ್ರಾಣ ತೆತ್ತ ನಮ್ಮ ಭಾರತೀಯ ಸೈನಿಕರನ್ನು ನೆನೆದು ಪರಿತಪಿಸುವಂತೆ ಮಾಡುತ್ತವೆ. ಅವರಿಗೆ ಇಂಥ ಸ್ಮಾರಕಗಳು ಏನಾದರೂ ಉಂಟೆ? ಕೃತಜ್ಞತೆಯಿಂದ ನೆನೆಯುವವರು?

'ರಂಗೋಲಿ ಮತ್ತು ಮಗ' ಮತ್ತೊಂದು ಒಳ್ಳೆಯ ಪದ್ಯ. ಒಂದು ಪ್ರಶ್ನೆಯನ್ನು ಮನಸ್ಸಿಗೆ ಹಚ್ಚಿ ಹೋಗುತ್ತದೆ. ಹೊರ ನಾಡುಗಳ ಧರ್ಮವನ್ನು ಸ್ವೀಕರಿಸಿದವರು ತಮ್ಮ ಲೌಕಿಕ ಜೀವನದಲ್ಲಿ ಆ ನಾಡವರ ಸಾಮಾಜಿಕ ವಿಧಿ ನಿಷೇಧ ರೂಪದ ರೂಢಿಗಳನ್ನೂ ಧಾರ್ಮಿಕವೆಂದು ನೆಚ್ಚಿಕೊಂಡು ಬೆರಕೆ ಹಾಕಿ ಇಲ್ಲಿ ಆಚರಣೆಗೆ ತರಬೇಕೆ? ಎಂಬುದು ಪ್ರಶ್ನೆ. ಇದನ್ನು ತಾವು ಬಹು ಚೆನ್ನಾಗಿ ಪ್ರತಿಪಾದಿಸಿದ್ದೀರಿ. ಕವಿ ಹೃದಯಕ್ಕೆ ಎಲ್ಲೆಗಳಿಲ್ಲ. 'ಖಾಲಿ ಸೈಟುಗಳು'—ಅದರಲ್ಲಿನ ಕೊನೆಯ ಭಾಗದಲ್ಲಿನ ವಾಸ್ತವವನ್ನು ಸಂಕೇತಗೊಳಿಸುವ ಕೌಶಲ ಮನೋಜ್ಞವಾಗಿದೆ.

ಬಿ.ಜಿ.ಎಲ್. ಸ್ವಾಮಿ, ಬೀಚಿಗಳಿಗೆ 'ಸಾವಿಗೆ ಅತಿಥಿ ಪರಿಚಯ' ಕವಿತೆಯಲ್ಲಿ ಸೊಗಸಾದ ಪದಗಳ ಸ್ಮಾರಕವನ್ನು ರಚಿಸಿಬಿಟ್ಟಿದ್ದೀರಿ. ಇದರ ಜತೆಗೆ 'ಮೈಲಿ ಮೊಗದ ಮಹಾರಾಯ' ಕವಿತೆ ತಮ್ಮ ಉದಾರ ಹೃದಯವನ್ನೂ ಗುಣಗ್ರಹಣ ಕೌಶಲವನ್ನೂ ಮೆರೆಸು ತ್ತಿದೆ. ಈ ಎರಡನೆಯ ಕವನದಲ್ಲಿ ತಾವು ವರ್ಣಿಸಿದಂಥವನೊಬ್ಬನ ಸ್ನೇಹ ನನಗಿತ್ತು. ಆತ ಸತ್ತಾಗ ನಾನು ಒಂದು ಕೊರತೆಯನ್ನು ಪಟ್ಟು ಮರುಗಿದುದೂ ಉಂಟು. ಹೀಗೆಯೇ, ಈ ಕವನಗಳ ಸೊಗಸುಗಳನ್ನು ಲೆಕ್ಕಿಸುತ್ತಾ ಹೋಗಬಹುದು.

ತಮ್ಮ 'ಸ್ವಜನೋದ್ಧಾರಕರು' ಮತ್ತು 'ಹುಳುಕ'ದಲ್ಲಿ ಹೊರ ಸೂಸುವ ಭಾವ ಉದಾತ್ತವಾಗಿದೆ. ಎಲ್ಲ ಜಾತಿ ಪಂಗಡಗಳಲ್ಲಿ ಇರುವಂಥ ಇವರಂತಹವರ ಮನಸ್ಸು ನಾಡೊಲ ವಿಂದ ಪರಿಷ್ಕೃತವಾದಾಗ ಮಾತ್ರ ನಮ್ಮೀ ನಾಡು ಲೋಕದಲ್ಲಿ ತಲೆಯೆತ್ತಿ ನಿಂತೀತು. ನಾನು ಮಡಕೇರಿಯಲ್ಲಿ ಮಾಡಿದ ಭಾಷಣದಲ್ಲಿ ಇಲ್ಲಿನ ಗತ ಸಾಮ್ರಾಜ್ಯಗಳೆಲ್ಲ ವನ್ನೂ ಮನಸ್ಸಿನಿಂದ ದೂರ ತೊಲಗಿಸಿ, ಜನವನ್ನು ಮಾತ್ರ ಗಮನಿಸಬೇಕೆಂದು ಘೋಷಿಸಿದೆ. ಅದಕ್ಕೆ ಯಾರೂ ಕಿವಿಗೊಟ್ಟಂತಿಲ್ಲ.

'ನಗರವಾಸಿ'ಗಳನ್ನು ಕುರಿತ ಇಂಥ ಶಕ್ತವಾದ ಕವನ ನನ್ನ ಕಣ್ಣಿಗೆ ಬಿದ್ದದ್ದು ನೆನಪಿಲ್ಲ. Congratulations. ಆದರೆ ನಾನೂ ನನ್ನ ಅಂತ್ಯ ಕಾಲದಲ್ಲಿ 'ನಗರವಾಸಿ' ಯಾದೆನಲ್ಲ. ಅಂತ್ಯಕ್ರಿಯೆಯಾದರೂ ನಮ್ಮೂರಿನ ಶ್ಮಶಾನದಲ್ಲಿ ಜರುಗಲಿ ಎಂದಾಸೆ. 'ಸವತಿ ಮಕ್ಕಳ ಹಾಗೆ' ಮತ್ತೊಂದು ಬಹು ಶಕ್ತವಾದ ಕವನ. 'ಎಲ್ಲಿದ್ದೀಯೋ ಹುಡುಗ' ಎಂಬ ಚೆಲುಗವನ, ನಮ್ಮಂಥ ಮುದುಕರನ್ನು ಬೆಚ್ಚಗೆ ಮಾಡುವಂಥದು. ಇಂಥ ಮುದ್ದಾದ ಕವನಗಳು ಒಳ್ಳೆಯ ಮೋಜಿನಲ್ಲಿ ಈ ಸಂಗ್ರಹದಲ್ಲಿವೆ.

ಸೂಕ್ಷ್ಮಮತಿಗಳು ಲೌಕಿಗರ ಸಹವಾಸದಲ್ಲಿ ಪಡುವ ಭಂಗಿಗಳಿಗೂ ಇಲ್ಲಿ ವ್ಯಕ್ತಿಮೆಯುಂಟು. ಚಿಂತನಪರವಾದ 'ನಿರಾಭರಣ'ದಂಥ ಪದ್ಯಗಳೂ ಇಲ್ಲಿವೆ. 'ಸಿನಿಮ ಮಂದಿರದ ಹೆಗ್ಗೋಡಗಗಳ ಉದ್ದುದ್ದನೆ ಲಾಂಗೂಲಗಳು'; 'ಉಚ್ಚತೆಯ ಗರ್ಮಿಯಲಿ ಇನ್ನು ಬೆಚ್ಚಗೆ ಇರುವ ಅಸ್ತಮಯ ನವಾಬಿಕೆಯ ತ್ರಸ್ತ ನೇಸರರೇ'; 'ಬೆನ್ನಟ್ಟಿ ಬಡಿವ

ಖಾರದ ಕಡು ಘಾಟು, ಮೂಗೇಟು, ಘಮಲು; ಮೂಗನು ಮನೆಯಲ್ಲಿರಿಸಿ ಬರುವುದೇ ಮೇಲು'; 'ಒಲವೆಂದೆ ಅನ್ನಿಸದು ಓಲೈಸುವಾಗ'; 'ಸಲಿಸಬೇಕು ತಾಳೆ ಜೊತೆಗೆ ಕತ್ತಾಳೆಯು ಕಾಣಿಕೆ'—ಇಂಥ ಹಲವಾರು ಚೆದುರು ನುಡಿಗಳನ್ನು ಚಪ್ಪರಿಸುತ್ತಾ ಈ ಕವನಗಳನ್ನು ಓದಿ ಸುಖಪಟ್ಟಿದ್ದೇನೆ. ತಾವು ನನಗೆ ಆತ್ಮೀಯರಾಗಿಬಿಟ್ಟಿರಿ.

ತಮ್ಮ ಮುನ್ನುಡಿಯೂ ಮನೋಜ್ಞವಾಗಿದೆ. ಅದರಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಗುರುತಿಸಿ, ತಾವು ಹತ್ತಿರದಲ್ಲಿ ಇಲ್ಲದಿದ್ದುದರಿಂದ, ನನ್ನ ಬೆನ್ನನ್ನು ನಾನೇ ತಟ್ಟಿಕೊಂಡೆ. ಕವಿಯ ಮನಸ್ಸು ಯಾವ ಪೂರ್ವಾಗ್ರಹದಿಂದಲೂ ಪೀಡಿತವಾಗದೆ, ಯಾವ ismಗೂ ಅಂಟಿಕೊಳ್ಳದೆ ಮುಕ್ತವಾಗಿ ಲೋಕಕ್ಕೆ ತೆರೆದುಕೊಳ್ಳಬೇಕೆಂಬುದು ಒಂದು ಅಂಶ.

ನಮ್ಮಲ್ಲಿ, ನಾವೇ ಬಹಳ ಸಲ ಅರಿಯಲಾಗದ 'ಆಸಾಮಿ'ಗಳು ಹುದುಗಿ ಕುಳಿತಿದ್ದಾರೆ; ಸಮಯ ಸಂದರ್ಭಗಳು ಒದಗಿ ಬಂದಾಗ ನಮ್ಮನ್ನೇ ಪಕ್ಕಕ್ಕೆ ಸರಿಯಿಸಿ ಪ್ರಕಟಗೊಳ್ಳುತ್ತಾರೆ, ಎಂಬುದು ಎರಡನೆಯ ಅಂಶ. ಷೇಕ್‌ಸ್ಪಿಯರನ ಜೀವ ಅಂಥ ಆಸಾಮಿಗಳ ದಟ್ಟ ಕಾಡು. ಅಹುದು, ಕವಿಯ ಜೀವ ಒಂದು ವಟಾರ. ಈ ಆಸಾಮಿಗಳ ಸಂಖ್ಯೆ ಕವಿಯ ಮಹತ್ವದ ಹಾಗೂ ಆತನ ಸತ್ಯ ಸಂವೇದನೆಯ ಮಾನಕವಾಗುತ್ತದೆ. ವಿಶ್ವವ್ಯಾಪಿಯಾಗಿದೆ ದೇವರ ಹೃದಯ. ಆ ಹೃದಯದ ಮಿಡಿತಗಳನ್ನು ಕಾವ್ಯದಲ್ಲಿ ಬಿಡಿಸುವವನು ಕವಿ. ನಿಜವಾದ ಕವಿ ಸಕಲರಿಗೂ ಆತ್ಮೀಯ.

ತಮ್ಮ ಈ ಬರವಣಿಗೆ ಶ್ಲಾಘ್ಯವಾಗಿದೆ. ಈ ಪುಸ್ತಕವನ್ನು ಓದಿ ನಾನು ಉಲ್ಲಾಸ ಗೊಂಡಿದ್ದೇನೆ. ನನ್ನಂಥ ಅನೇಕ ಸಹೃದಯರನ್ನು ಇದು ಆಪ್ಯಾಯನಗೊಳಿಸೀತು, ಗಾಢ ಆಲೋಚನೆಗಳಲ್ಲಿ ತೊಡಗಿಸೀತು. ತಮಗೆ ಹಾರ್ದ ಅಭಿನಂದನೆ. ತಮ್ಮಂಥ ಸತ್ ಕವಿಗಳಿಗೆ ಈ ನಾಡು ಎಂದೂ ಮಲತಾಯಿ ಆಗಲಾರದು.

೧೯೮೩

ನಮ್ಮೊಡನೆ ಮಾತಾಡದ, ಜಗಳವಾಡದ, ಪ್ರಣಯಕ್ಕೆ ತೊಡಗದ, ಬಸ್ಸಿಗೆ 'ಕ್ಯೂ' ನಿಲ್ಲದ ನಿಸರ್ಗ; ಮನುಷ್ಯ ಸಂಬಂಧಗಳಂತೆ ದಿನಂಪ್ರತಿಯ ಬಾಳಿನಲ್ಲಿ ಕಲಸಿಕೊಳ್ಳದೆ ನಮ್ಮಿಂದ ತಟಸ್ಥವಾಗಿ ಎಲ್ಲೋ ನೆಲಸಿರುವಂತಹ ನಿಸರ್ಗ— ತನ್ನ ಅಗೋಚರ ಪಾಶಗಳನ್ನು ನಮ್ಮ ಹೃದಯದ ಸುತ್ತ ಬಿಗಿದು ನಮ್ಮನ್ನು ಇಷ್ಟೆಲ್ಲ ಕಾಡಿ ಗದ್ಗದಗೊಳಿಸಬಲ್ಲದು, ವಿಸ್ಮಯಮೂಕವಾಗಿಸಬಲ್ಲದು, ದೂರವಾದಷ್ಟೂ ಹತ್ತಿರ ಹತ್ತಿರ ಸರಿದು ನಮ್ಮ ಆಳಕ್ಕಿಳಿದು ಆಳಬಲ್ಲದು ಎಂದು ನಮಗೆ ಕೆಲವೊಮ್ಮೆ ಯಾದರೂ ಅನ್ನಿಸುವುದುಂಟು.

(ನಿಸರ್ಗದ ಪ್ರಭಾವ)



'ಅನಾಮಿಕ ಆಂಗ್ಲರು' ಕವಿಯ ಮುನ್ನಡೆಯ ಮಹತ್ವಪೂರ್ಣ ಮಾನಕ

♦ ಪ್ರೊ. ವೇಣುಗೋಪಾಲ ಸೊರಬ

ಪ್ರತಿಷ್ಠಿತ ಕವಿಯ ಹೊಸ ಕವನ ಸಂಕಲನವೊಂದು ಸಹೃದಯರಲ್ಲಿ ಬಗೆ ಬಗೆಯ ನಿರೀಕ್ಷೆಗಳನ್ನು ಹುಟ್ಟಿಸುವುದು ಸಹಜ. ನಿಸಾರ್ ಅಹಮದ್‌ರವರ ಎಂಟನೆಯ ಕವನ ಸಂಕಲನ 'ಅನಾಮಿಕ ಆಂಗ್ಲರು', ಅವರ 'ಸ್ವಯಂಸೇವೆಯ ಗಿಳಿಗಳು' ಪ್ರಕಟವಾದ ಆರು ವರ್ಷಗಳ ಅನಂತರ ಪ್ರಕಟವಾಗಿದೆ. ಇಲ್ಲಿ ಸಮೃದ್ಧಿ ಇದೆ, ವೈವಿಧ್ಯ ಇದೆ. ಇಲ್ಲಿನ ಕೆಲವು ರಚನೆಗಳು ನಿರ್ಜೀವ ವಸ್ತುಗಳಲ್ಲಿ ಕೂಡ ಜನ ಜೀವನದ ಆತಂಕ, ರೊಚ್ಚು, ನಿರಾಸೆ, ಸಣ್ಣತನ, ಮೋಸ, ವಂಚನೆಗಳನ್ನು ಅನಾವರಣಗೊಳಿಸುವ ಕ್ರಮವನ್ನು ಮನವರಿಕೆ ಮಾಡಿಕೊಡುವಂತಿವೆ. ಇವುಗಳ ಜತೆಯಲ್ಲಿಯೇ ಧಾರ್ಮಿಕ ಕಾರಣಗಳಿಂದಾಗಿ, ಈ ದೇಶದಲ್ಲಿ ಕಂಡುಬರುವ ವ್ಯತ್ಯಸ್ತ ಸ್ಥಿತಿಗಳನ್ನು ಮಾರ್ಮಿಕವಾಗಿ ನೋಡುವ ನೋಟವಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಸಾಮಾಜಿಕವಾಗಿ ಈ ದೇಶವನ್ನು ಕಾಡುತ್ತಿರುವ ವರ್ಣಭೇದ, ವರ್ಗಭೇದಗಳನ್ನು ಪರೋಕ್ಷವಾಗಿ ತಟ್ಟುವ ರೀತಿ ಸಾಕಷ್ಟು ತೀಕ್ಷ್ಣವಾಗಿದೆ. ಈ ಯಾವುದೇ ಕಾಳಜಿ ನಿಸಾರರ ಮೊದಲಿನ ಕವನಗಳಲ್ಲಿ ಇಲ್ಲವೆಂದಲ್ಲ. ಆದರೆ, ಇಲ್ಲಿ ಈ ಅಂಶಗಳು ಕಣ್ಣಿಗೆ ಹೊಡೆಯುವಷ್ಟು ಪ್ರಖರವಾಗಿ ಪ್ರಕಟಗೊಂಡಿವೆ. ಯಾವುದೇ ಕವಿಯ ಬೆಳವಣಿಗೆಯನ್ನು ತನ್ನ ಸಾಮಾಜಿಕ ಪರಿಸರದ ಹೊರಗೆ ಇಡಬಹುದಾದರೆ, ಆಗ ಅಂತಹ ಬೆಳವಣಿಗೆ ಸಹಜವಾದ ಬೆಳವಣಿಗೆಯಾಗದೆ ಕೇವಲ ಕೃತಕವಾಗುತ್ತದೆ. ಆ ದೃಷ್ಟಿಯಿಂದ

ಈ ಸಂಕಲನದಲ್ಲಿನ ನಿಸಾರರ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ.

ಇಲ್ಲಿನ ಮೊದಲ ಕವಿತೆ: `ಅನಾಮಿಕ ಆಂಗ್ಲರು`. ಈ ಕವಿತೆಯಲ್ಲಿ ಭಾರತ ಮತ್ತು ಇಂಗ್ಲೆಂಡಿನ ನಡುವಿನ ಸಂಬಂಧವನ್ನಷ್ಟೇ ಹೇಳುತ್ತಿಲ್ಲ. ಅದಕ್ಕೂ ಮಿಗಿಲಾಗಿ,

'ಸಾಮ್ರಾಜ್ಞಿಸೇವೆಯಲಿ ಸರ್ವತ್ರ ಸವೆಸವೆದು
ತಾಯ್ನೆಲಕೆ ಹಿಂದಿರುಗಿ ಭೇಟಿಯಾಗದೆ ಅವಳ,
ಸ್ವರ್ಗದ ಮುಲಾಖಾತಿಗಾಗಿ ಹಾತೊರೆದವರು' (ಅನಾಮಿಕ ಆಂಗ್ಲರು)

—ಎನ್ನುವಲ್ಲಿ ಇಂಗ್ಲೆಂಡಿಗೂ ಹೊರತಾಗದಿರುವ ವರ್ಗಪ್ರಜ್ಞೆ, ಶೋಷಣೆಗಳು ಓದುಗರನ್ನು ತಟ್ಟುತ್ತವೆ. ಮುಂದಿನ ಎರಡು ಸಾಲುಗಳಲ್ಲಿ ಇಂತಹ ಜನ ಪರದೇಶಿಗಳಾದದ್ದು ನಿಖರವಾಗಿ ಪ್ರಕಟವಾಗಿದೆ—

'ಪರದೇಶದಲಿ ಜನಿಸಿ ಪರಾಧೀನರಾಗಿಲ್ಲಿ
ಪರದೇಶಿಯಾದಂಥ ವಿದೇಶೀಯರು' (ಅದೇ)

ಇದೇ ರೀತಿ `ಅಮೇರಿಕದಲ್ಲಿ` ಎನ್ನುವ ಕವಿತೆಯನ್ನೂ ನೋಡಬಹುದು. ಸಿಗರೇಟು ಬೆಲೆಯಲ್ಲಿ—ಬೇರೆ ಅನೇಕ ವಸ್ತುಗಳ ಹಾಗೆ—ವ್ಯತ್ಯಾಸವಿಲ್ಲ ಎನ್ನುವ ಒಂದು ಅಂಶದ ಮೂಲಕ ಅಮೇರಿಕದ ರೀತಿಯನ್ನು ಟೀಕಿಸುವ ಕ್ರಮವನ್ನು ನೋಡಿ:

'ನನಗೆ ವಿನೋದ
ಅನ್ನಿಸಿತು
ಕ್ಯಾಪಿಟಲಿಸಮ್ಮಿನ
ದಮ್ಮಿನ
ಸಾಮಗ್ರಿಯ ಸಮತಾವಾದ' (ಅಮೇರಿಕದಲ್ಲಿ)

—ಹೀಗೆ ಹೇಳುವುದರಲ್ಲಿ, ಕವಿಯ ಆಳದ ಪ್ರಜ್ಞೆಯಲ್ಲಿ ಕೆಲಸ ಮಾಡುತ್ತಿರುವ ಸಾಮಾಜಿಕ ವಸ್ತುಸ್ಥಿತಿಯ ಬಗೆಗಿನ ಕಳಕಳಿ ನಮ್ಮ ಗಮನ ಸೆಳೆಯುತ್ತದೆ. ಇಂಗ್ಲೆಂಡು, ಅಮೆರಿಕಗಳ ಬಗ್ಗೆ ಇಷ್ಟೊಂದು ತೀಕ್ಷ್ಣವಾಗಿ ಆಲೋಚಿಸುವ ಕವಿ, ಈ ದೇಶದ ಸ್ಥಿತಿಗತಿಯ ಬಗ್ಗೆ ಕೂಡ ಇಷ್ಟೇ ತೀಕ್ಷ್ಣತೆಯಿಂದ (ಇನ್ನೂ ಹೆಚ್ಚು) ಟೀಕಿಸಬಲ್ಲ ಎನ್ನುವುದನ್ನು `ಓ ನನ್ನ ಹೀರೊಗಳೆ' ಕವನದಲ್ಲಿ ಕಂಡುಕೊಳ್ಳಬಹುದು—

'ನನ್ನ ಕಾಲಿಗೆ ಬಿಗಿದ ಹಗ್ಗ ಬಿಚ್ಚಿದ ನಿಮಗೆ
ಆಭಾರಿ ಎನ್ನುವ ಮೊದಲೆ—
ಬೆನ್ನಿಗೇರಿಸಿದಿರಿ ತುಂಬು ಹೊರೆಯ.
ಭಯವಿಲ್ಲ, ಆಡು ಮಾತಾಡು, ಬೇಕಾದ್ದ ಹಾಡೆಂದು
ನನ್ನ ಬಾಯಿಯ ಹೊಲಿಗೆ ಬಿಚ್ಚಿ—
ಒಡನೆ ಹಾಕಿದಿರಿ ನಾಲಗೆಗೆ ಬರೆಯ.' (ಓ ನನ್ನ ಹೀರೊಗಳೆ)

ಗಣತಂತ್ರದಲ್ಲಿ ಹಲವಾರು ಏರಿಳಿತಗಳನ್ನು ಕಂಡವನು, ಕಹಿ ಉಂಡವನು ಮಾತ್ರ ಇಂತಹ ರೀತಿಯಲ್ಲಿ ಉವಾಚಿಸಬಲ್ಲ. ಇದರ ಹಿಂದೆ ವ್ಯಕ್ತಿಯ ಅಸ್ತಿತ್ವವನ್ನೇ ಅಲ್ಲಾಡಿಸಲು ನಡೆದ ಪ್ರಯತ್ನಗಳನ್ನು ಇಲ್ಲಿ ನಿರ್ಲಕ್ಷಿಸುವ ಹಾಗಿಲ್ಲ.

ಇನ್ನು ಈ ಹೀರೋಗಳ ಇತಿಹಾಸವನ್ನು ಕೆದಕಿ ಅವರ ಅಸ್ತಿತ್ವದ ಬೇರುಗಳನ್ನು ಜಾಲಾಡುವ ಈ ಕ್ರಮವನ್ನು ನೋಡಿ:

'ಅಂದೊಮ್ಮೆ ನಿಲ್ಲಿಸಿದ ಇಮಾರತ್ತುಗಳ ಮುರಿಯುತ್ತ
ನೆರಳುಗಳ ತಿವಿಯುತ್ತ
ಹಿನ್ನಡೆದು ಮುನ್ನಡೆಯ ಕನಸಿರುವ ಕ್ರಿಕ್ಕೋಟರೇ—'

* * *

'ಲಾಗಾಯ್ತಿನ ಟ್ರಾಜಿಡಿಯ ಪಾತ್ರಧಾರಿಗಳೇ,
ಸಿಳ್ಳು ಚಪ್ಪಾಳೆ ದಕ್ಕದೆ,
ಕಟ್ಟೆಯ ಕಲ್ಲು ಕಟ್ಟೆಗೆ ಹೊಂದಿತೆನ್ನುವ ಹಾಗೆ
ನೀವು ಒಬ್ಬರೊಬ್ಬರ ತಬ್ಬಿ, ಕಣ್ಣೀರನೊರೆಸಿ,
ಕೋಡಂಗಿ ವೇಷ ಧರಿಸಿ
ನಗೆ ನಾಟಕವಾಡಿ ನಗೆಯ ಬರಿಸಲು ಹೋಗಿ
ನಗೆಗೀಡು ಆದವರು;
ವೈಫಲ್ಯಕ್ಕೆ ಪರಸ್ಪರರ ಬೈದವರು.' (ಅದೇ)

ಹೀಗೆ ಕಿಚಾಯಿಸುವುದರ ಹಿಂದಿನ ಮನೋಭಾವ ಮುಖ್ಯವಾದದ್ದು. ವ್ಯಕ್ತಿ ಹಿತವನ್ನೇ ಬಲಿ ತೆಗೆದುಕೊಂಡ ಕಾರಣದಿಂದಲೇ ಇಂತಹ ಹೀರೋಗಳ ನಾಯಕತ್ವಕ್ಕೆ ಮಂಗಳ ಹಾಡುವ ಧಾಷ್ಟ್ರ್ಯವನ್ನು ಕವಿ ಪ್ರಕಟಿಸುತ್ತಾನೆ—

'ಅಪ್ಪಳಿಸುವಲೆ
ಅನಿರ್ದಿಷ್ಟ ನೆಲೆ,
ತೂಫಾನಿನ ಮೊಖಾಬಿಲೆ-
ಯ ಬಿಲ್‌ಕುಲ್ ಅಂದಾಜಿರದ ಐಲುವಾನರೇ—
ಬಿಡಿ ಬಡಾಯಿಯ;
ಲಂಗರಿಸಿ ಹಾಯಿಯ.
ಹುನ್ನಾರನರಿತ ನುರಿತ ಕರ್ಣಧಾರರಿಗೆ
ಸಮತೆ ಸಾರುವ ಸಾಹಸೋತ್ಸಾಹಿ ಹರಿಕಾರರಿಗೆ—
ತಾವು ಕೊಡಿ; ಬಿಡಿ ಗಾಡಿ.' (ಅದೇ)

ಗಣತಂತ್ರದ ಮೌಲ್ಯವನ್ನು ಎತ್ತಿ ಹಿಡಿಯುವ ದಿಕ್ಕಿನಲ್ಲಿ ಈ ಮೇಲಿನ ಮಾತುಗಳು ಸಾಮಾನ್ಯನೊಬ್ಬನ ಸ್ಪಷ್ಟ ಧ್ವನಿಯಾಗಿ ಮಹತ್ವವನ್ನು ಪಡೆಯುತ್ತವೆ. ಬೆಳವಣಿಗೆಯ ದೃಷ್ಟಿಯಿಂದ ನಿಸಾರ್ ಇಲ್ಲಿ ದಿಟ್ಟ ಹೆಜ್ಜೆಯೊಂದನ್ನು ಇಟ್ಟಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಇದೇ ದಿಕ್ಕಿನಲ್ಲಿ ಇನ್ನೂ ಹೆಚ್ಚಿನ ಪ್ರಬುದ್ಧತೆಯನ್ನು 'ಸವತಿ ಮಕ್ಕಳ ಹಾಗೆ' ಮತ್ತು 'ಸ್ವಜನೋದ್ಧಾರಕರು'ದ ಕವಿತೆಗಳು ಮೈಗೂಡಿಸಿಕೊಂಡಿರುವುದನ್ನು ನೋಡ ಬಹುದು. ಇವೆರಡೂ ಕವಿತೆಗಳು ಈ ದೇಶದ ಪ್ರಸ್ತುತ ರಾಜಕೀಯ ಹಾಗೂ ಸಾಮಾಜಿಕ ಬದುಕಿನ ಸೂಕ್ಷ್ಮ ಪ್ರಜ್ಞೆಗಳಿಗೆ ಸಂಬಂಧಿಸಿವೆ. ಆದ್ದರಿಂದ ಇಲ್ಲಿ ಕವಿ ತೋರಿಸುವ ಕೆಚ್ಚು ಮತ್ತು ಧೈರ್ಯ ಮೇಲು ಮಟ್ಟಕ್ಕೆ ಸೇರಿದೆ ಎನ್ನುವುದನ್ನು ಗಮನಿಸಬೇಕು—

'ಹಳೆ ಹೇಳಿಗೆಯ ನಂಜೆದೆಯು ತಳಿಗಳ ಜೊತೆಯಲ್ಲೆ,
ಹೊಸ ಪೀಳಿಗೆಯ ನಿರಪಾಯ ಏಳಿಗೆಯ ಸುಳಿಗಳನು
ದೂಡುವೆ ಸಂಶಯದ ಖೆಡ್ಡಕ್ಕೆ ತಾಯಿ
ಲೇಬಲ್ಲನಂಟಿಸುವೆ ಗಡ್ಡಕ್ಕೆ ತಾಯಿ.' (ಸವತಿ ಮಕ್ಕಳ ಹಾಗೆ)

ಇಲ್ಲಿನ ಆತ್ಮೀಯವಾಗಬೇಕೆನ್ನುವುದರ ಎದುರಲ್ಲೇ ಕಂಡು ಬರುತ್ತಿರುವ ಆತಂಕವನ್ನು ಪೊರೆಗಳಚಿರುವ ರೀತಿ ವೇದ್ಯವಾಗಿ ತಟ್ಟುವಂತಿದೆ. ಹಾಗೆಯೇ—

'ಚಲ್ಲಣರ ಎದೆಯಲ್ಲು ತಲ್ಲಣವ ದೆವ್ವ
ಕುಣಿಸುತ್ತ, ತಿರುಚುವೆ ಹೊಂಗನಸ ಹುವ್ವ' (ಅದೇ)

ಎನ್ನುವ ಮಾತಿನಲ್ಲಿಯೂ,

'ಇದ್ದಾರು ಕೋಮಿನ ಕಂತ್ರಾಟುದಾರರು
ಮಾಸೂಮು ಮಂದಿಯ ನೆಮ್ಮದಿಯ ಚೋರರು,
ಮಾಡವ್ವ ಅಂಥವರ ಸುಳಿಯ ಸಫಾಯಿ:
ನಿಷ್ಪಾಪಿಗಳಿಗಾಗು ನಿರ್ಭಯದಾಯಿ.' (ಅದೇ)

ಎನ್ನುವುದರಲ್ಲಿಯೂ, ಈ ಬೆಳವಣಿಗೆಗಳ ಹಿಂದಿರುವ ಕಲುಷಿತ ಮನೋಭಾವ ಹಾಗೂ ಸಮಯ ಸಾಧಕತನಗಳೆಲ್ಲವನ್ನೂ ಸ್ಪಷ್ಟವಾಗಿ ಬಯಲಿಗೆಳೆಯಲಾಗಿದೆ. ಬುಡಮೇಲು ಕೃತ್ಯಗಳನ್ನೇ ತಮ್ಮ ಜೀವಿತದ ಉಸಿರಾಟ ಮಾಡಿಕೊಂಡು ಬಡಪಾಯಿಗಳ ಬದುಕನ್ನೇ ಆಹುತಿ ತೆಗೆದುಕೊಳ್ಳುತ್ತ ಇಡೀ ರಾಷ್ಟ್ರದ ಐಕ್ಯವನ್ನೇ ಹಾಳುಗೈಯುತ್ತಿರುವ ಜನಗಳ ಬಗ್ಗೆ ಇದಕ್ಕಿಂತ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಸಮಸ್ಯೆಯ ಮೂಲವನ್ನು ಇಷ್ಟು ಸ್ಪಷ್ಟವಾಗಿ ಚಿತ್ರಿಸಿರುವ ಮತ್ತೊಬ್ಬ ಕವಿಯಿಲ್ಲ. ಕವನದ ಉದ್ದಕ್ಕೂ ತಪ್ಪು ಕಲ್ಪನೆಯಿಂದಾಗಿ ರಾಷ್ಟ್ರದ್ರೋಹಿ ಚಟುವಟಿಕೆಯಲ್ಲಿ ನಿರತರಾದವರನ್ನು ಕುರಿತು ಹೇಳಿದ್ದರೂ ಅವರ ಸಂದಿಗ್ಧ ಮತ್ತು ಅದಕ್ಕೆ ಕಾರಣವಾದ ವಸ್ತುಸ್ಥಿತಿಯ ಅರಿವಿಲ್ಲದಿರುವಿಕೆ—ಇಲ್ಲಿ ನಿಚ್ಚಳವಾಗಿ ಮೂಡಿ ಬಂದಿವೆ. ಈ ಹಿನ್ನೆಲೆಯಲ್ಲಿಯೇ,

'ಸದಸ್ಸು ಸೇರಿಸಿ, ಹರಿಸುತ್ತೀರಿ ಹೆಗ್ಗಂಟಲಿನ ನಲ್ಲಿ,
ಭಯಾಶಂಕೆಗಳ ನೌಬತ್ತು ಮೊಳಗಿ ದೇಶಾದ್ಯಂತ,
ಬಿರಿಸಿ ಎದೆ ಎದೆಯಲ್ಲಿ ರೋಷದೊದಗೆಗಳ,
ಕಟ್ಟಿ ಊರೂರಲ್ಲಿ ಸಾಲಾಗಿ ಸಿದಿಗೆಗಳ,
ನೊಚ್ಚನೆಯ ನುಡಿಯಲ್ಲೆ ಕಾಳ್ಗಿಚ್ಚು ಹಚ್ಚುವಿರಿ:' (ಸ್ವಜನೋದ್ಧಾರಕರು)

—ಎಂದು ಸ್ವಜನೋದ್ಧಾರಕರನ್ನು ಕುರಿತು ಆಡಿದ ಮಾತು ಅರ್ಥಪೂರ್ಣವಾಗುವುದು. ಇಂತಹ ಸ್ವಜನೋದ್ಧಾರಕರು ಕೈಗೊಳ್ಳುವ ಕಾರ್ಯ ವೈಖರಿಯನ್ನೂ ಎಳೆ ಎಳೆಯಾಗಿ ಬಿಡಿಸಲಾಗಿದೆ—

'ತಡೆ ತಡೆದು ಹವೆಗೆಷ್ಟು ಹರವಿ ಒಡ್ಡಿದರೂನು
ಹಳೆ ಹಗೇವಿನ ಕಡೆಗೇ ತುಯ್ಯುವವರು.

ಹಗೆಯ ಹೊಗೆ ಎಲ್ಲೆಲ್ಲಿ, ಅಲ್ಲಿ ಶಕ್ತ್ಯನುಸಾರ
ಧಾರಾಳ ಪೆಟ್ರೋಲು ಹೊಯ್ಯುವವರೇ,
ಕಠಾರಿಯಂತೆ ಮುರಿದೇವೆ ವಿನಾ
ಬಿಲ್ಲಿನ ಥರ ಬಾಗೆವು;
ಹುಳಿ ಒಗರ ನೀಗೆವು;
ಪ್ರತ್ಯೇಕತೆಯ ಹರೆಯಲ್ಲೆ ಕುಳಿತು ಕೊಳತೇವು,
ಒಗೆತನದ ಅಡೆಯಲ್ಲಿ ನಾವು ಮಾಗೇವು
ಎನುವ ಹಠಮಾರಿಗಳೇ
ಮುನ್ನಡೆಯ ಮುಂದೆಸೆದ ಮುಳ್ಳು ದಾರಿಗಳೇ—' (ಅದೇ)

ಈ ಎಲ್ಲ ಅಭಿಪ್ರಾಯ ದೌರ್ಜನ್ಯವನ್ನು ಮೆಟ್ಟಿ ನಿಲ್ಲಬೇಕೆನ್ನುವುದು, ನೆರುಡನಂತಹ ಸಾಮಾಜಿಕ ಕಳಕಳಿಯ ಕವಿಯ ಆದರ್ಶವನ್ನು ಮುಂದಿಟ್ಟುಕೊಂಡಿರುವ ನಿಸಾರ್ ಆ ದಿಕ್ಕಿನಲ್ಲಿ ತಮ್ಮ ಕಾವ್ಯ ಪ್ರಯೋಗಗಳನ್ನು ಮುಂದುವರೆಸಿರುವುದು ಸ್ವಾಗತಾರ್ಹ. ಆದರೆ ಸಾಮಾಜಿಕ ಕಳಕಳಿಯ ಉತ್ಕಟ ರಚನೆಗಳಿಗಾಗಿ ನಾವು ಇಲ್ಲಿನ ಬೇರೆ ಕವನಗಳನ್ನು ನೋಡಬೇಕು.

ಇವುಗಳಲ್ಲಿ ಮುಖ್ಯವಾದವು: 'ಖಾಲಿ ಸೈಟುಗಳು', 'ನಗರ ನಿವಾಸಿಗಳು', 'ಫುಟ್ ಪಾತುಗಳು', 'ತಪ್ಪಿತಸ್ಥರು' ಇತ್ಯಾದಿ.

'ಪಾರ್ಥೇನಿಯಮ್ಮಿನ ದಟ್ಟ ತೋಟಗಳು
ಬಾಡಿಗೆವಾಸಿಗಳ ಕಣ್ಣಿನ ಕೂಟಗಳು
ಸೆಟ್ಟರ, ಸೇಟುಗಳ
ನರಾಕೃತಿವೆತ್ತ ನೋಟುಗಳ
ಸುಲಭ ಕಮಾಯಿಯ ಬತ್ತದೂಟೆಗಳು;
ದಿನೇ ದಿನೇ ದಿವಕ್ಕೇರಿರುವ ರೇಟುಗಳು;' (ಖಾಲಿ ಸೈಟುಗಳು)

ಎನ್ನುವುದು 'ಖಾಲಿ ಸೈಟುಗಳ' ವಾಸ್ತವ ಚಿತ್ರಣವಾದರೂ,

'ಕೆಲವು ಸೈಟು :
ಮದುವೆ ಲೇಟಾದ ಕನ್ಯೆಯರೆ ಥೇಟು.'

—ಎಂದು ಪ್ರಾರಂಭವಾಗುವ ಮೂರನೆಯ ಭಾಗದಲ್ಲಿ ಕವಿತೆ ಅನಿರೀಕ್ಷಿತ ಬೆಳವಣಿಗೆಯನ್ನು ತೋರಿಸುತ್ತದೆ. ಹಲವು ಸೈಟುಗಳನ್ನು ಹೊಂದಿದವರ ಬಗೆಗಿನ ಈ ಮಾತುಗಳನ್ನು ನೋಡಿ—

'ಕೆಲವರೋ ದೇಹವಿಡಿ ಧನೇಂದ್ರಿಯರಾದ
ಭೂಲೋಕದಿಂದ್ರರು.
ಅವರಿಗೆ ಹತ್ತಾರು ತೆವಲಿನೈಲು,
ದುಡ್ಡಸ್ತಿಕೆಯ ದಾಸಯ್ಯತನದ ಡೌಲು.
ಎಂದೇ, ಅಂಥ ಸ್ತ್ರೀಮಂತರು ಬಹುಪತ್ನೀಕ;
ಆಗಬೇಕವರಿಗೆ ಹಲವಾರು ಅನಧಿಕೃತ ನಿಕಾ!' (ಅದೇ)

ಇಲ್ಲಿ ಶ್ರೀಮಂತರ ಹಲವು ಹವ್ಯಾಸ, ಚಟಗಳನ್ನೆಲ್ಲ ಒಂದೇ ಮಾತಿನಲ್ಲಿ ಬಹಿರಂಗಕ್ಕೆ ಎಳೆಯುವ ವಾಚ್ಯವಲ್ಲದ ಪದ ಜೋಡಣೆ ಕಲಾತ್ಮಕವಾಗಿರುವುದು ಮೆಚ್ಚ ಬೇಕಾದ ಅಂಶ. ಇದೇ ರೀತಿ, 'ನಗರ ನಿವಾಸಿಗಳು' ಪದ್ಯದ ಈ ಸಾಲುಗಳನ್ನು ಗಮನಿಸಿ:

'ದುಷ್ಕರ ಮುಷ್ಕರ ಲಾಕೌಟ್ ವಾಕೌಟ್
ಅಘರಾತಘರಾ ವಿದ್ಯೆಗಳು;
ಕೂಲಿಯೆ ಗಿಟ್ಟದೆ ಕೂಳಿಗೆ ಸುಯ್ಯುವ
ಸ್ವಾಮ್ಯಿನ ಕಣ್ಣಿನ ಒದ್ದೆಗಳು;
ಶಾಸನ ಸಭೆಯ ಸುಖಾಸನಗಳಲಿ
ಮನ ಸುಖರಾಯನ ನಿದ್ದೆಗಳು.' (ನಗರ ವಾಸಿಗಳು)

ಜನಸಾಮಾನ್ಯರನ್ನು ತೀರ ನಿಕೃಷ್ಟ ಸ್ಥಿತಿಗೆ ಇಳಿಸುವ ನಗರದ ದೈತ್ಯ ಜೀವನದ ಚಿತ್ರಣ ಬಡಿದೆಬ್ಬಿಸುವಂತಿದೆ. 'ಫುಟ್‌ಪಾತ್'ಗಳ ಬಗೆಗಿನ ಈ ಚಿತ್ರಣ ನೋಡಿ—

'ದಿನಾ ಉಲ್ಬಣಿಸಿರುವ ವಾಹನಾವಳಿಗೆ,
ಹಸಿವಿನ ಹಾವಳಿಗೆ
ಹಾದಿ ಹೆಬ್ಬಾವು, ಫುಟ್‌ಪಾತ್ ಮಿಗಗಳ ದಾಳಿಗೆ
ತೊಡಗಿ ರವ ರವಷ್ಟೇ ನುಂಗಿ
ಅದೃಶ್ಯಗೊಳಿಸುವ ದೃಶ್ಯ
ನಗರಗಳಲ್ಲಿ ಎಲ್ಲೆಲ್ಲು ಪ್ರತ್ಯಕ್ಷ.' (ಫುಟ್‌ಪಾತುಗಳು)

ಹಾದಿ ಹೆಬ್ಬಾವು ಶ್ರೀಮಂತಿಕೆಯ ಅಧಿಕಾರದ ಪ್ರತೀಕವಾದರೆ, ಫುಟ್‌ಪಾತ್ ಮಿಗಗಳು ಬಡಪಾಯಿಗಳಲ್ಲದೆ ಮತ್ತೆನಾಗಬೇಕು?

ಮೊದಲಿನಿಂದಲೂ ವ್ಯಕ್ತಿಚಿತ್ರಗಳನ್ನು ತಮ್ಮದೇ ಧಾಟಿಯಲ್ಲಿ ಬರೆಯುತ್ತಿರುವ ನಿಸಾರ್ ಅವರು, 'ಸಾವಿಗೆ ಅತಿಥಿ ಪರಿಚಯ' ಎಂಬ ವಿನೂತನ ಚೌಕಟ್ಟಿನಲ್ಲಿ ಬಿಜಿಎಲ್ ಸ್ವಾಮಿ ಮತ್ತು ಬೀಚಿಯವರನ್ನು ಪರಿಚಯಿಸಿರುವುದು ಹೃದಯವನ್ನು ಕಲಕುವಂತಿದೆ—

'ಸಾವೇ
ಆದರಿಸು ಐನಾತಿ ಅತಿಥಿಗಳ,
ಮಾನವಾಂತಃಕರಣದತಿ ವಿರಳ ರೀತಿಗಳ.' (ಸಾವಿಗೆ ಅತಿಥಿ ಪರಿಚಯ)

ತಮ್ಮ ಹಿರಿಯ ಮಿತ್ರರೂ ಸಹೋದ್ಯೋಗಿಗಳೂ ಆದ ಜಿ.ಟಿ.ಎನ್. ಬಗೆಗಿನ ನಿಸಾರರ ಈ ಕರಾರುವಾಕ್ಕು ವರ್ಣನೆ ನೋಡಿ—

'ಎಲ್ಲ ಧಾರಾಳ: ಸಜ್ಜನಿಕೆ, ಅಕರಾಸ್ತೆ, ಮೇಜವಾನಿಯಲ್ಲಿ;
ಹಾಗೆಯೇ ಒಡ್ಡೋಲಗದಲೊಮ್ಮೆ.
ವಿದ್ವತ್ತಿನ ಬರಡೆಮ್ಮೆ
ಕೋಡೆತ್ತಿ ಹಾಯ್ದಾಗ, ಅದ ಮುರಿದದ್ದರ ಬಯಾನಿನಲ್ಲಿ;
ನಡುವೆ ಹಾರಿಸುವ ಸ್ವಪ್ರತಾಪದ ಪತಾಕೆಯಲ್ಲಿ;
ಎದುರಾಳಿಯ ಮಾನ ಹರಾಜಿಗಿಡುವ ಟೀಕೆಯಲ್ಲಿ.
ಬದಲಾಗುವುದಿಲ್ಲ ಜಿ.ಟಿ.ಎನ್.' (ಜಿ.ಟಿ.ಎನ್.)

ಇಲ್ಲಿ ವ್ಯಕ್ತಿಯ ಒಡನಾಟದಿಂದ ಉಂಟಾದ ಪರಿಚಯವೇ ದೊಡ್ಡದಾಗುತ್ತಾ, ಜೀವನದ ಎಲ್ಲ ಮಗ್ಗುಲುಗಳನ್ನು ಆವರಿಸುತ್ತಾ ಹೋಗುತ್ತದೆ. 'ಶಿಲುಬೆ ಏರಿದ್ದಾನೆ' ಎನ್ನುವ ಕವಿತೆಯಲ್ಲಿ ಕ್ರಿಸ್ತನ ವ್ಯಕ್ತಿತ್ವಕ್ಕಿಂತ ಚಾರಿತ್ರಿಕ ಹಿನ್ನೆಲೆ ಯುಗ ಯುಗಗಳನ್ನೇ ಬೆಸೆಯುತ್ತಾ ಹೋಗುತ್ತದೆ—

> 'ನೀವು ಬಡಿದ ಸುತ್ತಿಗೆಗಳು
> ಮೊಳೆಗಳು
> ಮಕುಟ ಹೆಣೆದ ಮುಳ್ಳುಗಳು
> ಹಬ್ಬಿಸಿದ ಸುಳ್ಳುಗಳು
> ರೋಮ್ ನಗರದ ಕಿವಿಡೆಬ್ಬಿಸುವ ಕೊಂಬುಗಳು
> ಕಾಲರಾಯನ ಗುಜರಿ ಸೇರಿಲ್ಲ—
> ವೇಷ ಮರೆಸಿವೆ ಅಷ್ಟೆ, ಈ ಎಲ್ಲ ಕೇಡುಗಳು.' (ಶಿಲುಬೆ ಏರಿದ್ದಾನೆ)

ಎಂದು ಕ್ರಿಸ್ತನನ್ನು ಶಿಲುಬೆಗೇರಿಸಿದವರನ್ನು ಮೂದಲಿಸುವುದರಲ್ಲಿ, ಕೇಡು ಅವ್ಯಾಹತವಾಗಿ ನಡೆದು ಬಂದಿರುವುದನ್ನು ಎಚ್ಚರಿಸುವುದರಲ್ಲಿ ಈ ಕವನ ಗಮನಾರ್ಹ. ಕ್ರಿಸ್ತ 'ಶೋಷಿತರ ಕಂಬನಿಯನೊರಸಿ' ಶಿಲುಬೆ ಏರಿದ್ದಾನೆ ಎನ್ನುವುದು, ಕ್ರಿಸ್ತನ ಬಗೆಗಿನ ಗೌರವವನ್ನು ಹೆಚ್ಚಿಸುತ್ತದೆ.

—ಈ ಮೇಲಿನ ಕವಿತೆಗಳನ್ನೆಲ್ಲ ನೋಡಿದಾಗ, ನಿಸಾರ್ ಅಹಮದ್ ಅವರು ತಮ್ಮ ಹಿಂದಿನ ಸಂಗ್ರಹಗಳ ಕವಿತೆಗಳಿಗಿಂತ ಹೆಚ್ಚಿನ ಮುನ್ನಡೆಯನ್ನು ಸಾಧಿಸಿರುವುದು ಕಂಡು ಬರುತ್ತದೆ. ಈ ಮೊದಲು 'ಕುರಿಗಳು, ಸಾರ್, ಕುರಿಗಳು' ಮತ್ತು 'ವೈಜಯಂತಿ'ಯಂತಹ ರಾಜಕೀಯ ಪ್ರಜ್ಞೆಯ ಕವಿತೆಗಳನ್ನು ನಿಸಾರ್ ಬರೆದಿದ್ದರೂ ಕೂಡ, ಈ ಸಂಗ್ರಹದಲ್ಲಿನ ಕವಿತೆಗಳಲ್ಲಿ ರಾಜಕೀಯ ಪ್ರಜ್ಞೆ ಇನ್ನೂ ಹೆಚ್ಚು ಪ್ರಖರವಾಗಿದೆ, ನಿಶಿತವಾಗಿದೆ. ಅದರ ಅರ್ಥ ಇಲ್ಲಿನ ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆ ಹೆಚ್ಚು ಕ್ರಿಯಾಶೀಲವಾಗಿದೆ ಎಂದು. ಇದು ಪಾಬ್ಲೊ ನೆರುಡನಂತಹ ಕವಿಯ ಕಾವ್ಯದ ಅಭ್ಯಾಸದಿಂದ ಉಂಟಾಗಿರಲು ಸಾಧ್ಯವೆಂದು ಊಹಿಸ ಬಹುದು.

ಒಟ್ಟಿನಲ್ಲಿ, ಕನ್ನಡ ಕಾವ್ಯ ಕ್ಷೇತ್ರ ಹೆಚ್ಚು ಹೆಚ್ಚು ಜನಪರವಾಗಲು ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ನಿಸಾರರು ಸ್ವತಂತ್ರವಾಗಿ, ಆದರೂ ಒಟ್ಟಿನ ಚಟುವಟಿಕೆಯ ದಿಕ್ಕಿನಲ್ಲಿ ಸ್ಪಷ್ಟವಾಗಿ ಯಶಸ್ವೀ ಪ್ರಯೋಗಗಳನ್ನು ಮಾಡುತ್ತಿರುವುದು ಸ್ತುತ್ಯರ್ಹ. 'ಅನಾಮಿಕ ಆಂಗ್ಲರು' ಅವರ ಬೆಳವಣಿಗೆಯ ದೃಷ್ಟಿಯಿಂದ ಒಂದು ಮಹತ್ವಪೂರ್ಣ ಕೃತಿಯಾಗಿದೆ.

(೧೯೮೩)

ಸೊಗಸಿಲ್ಲದೆ ಸೊಗವಿಲ್ಲ; ಸೊಂಪಿಲ್ಲದೆ ತಂಪಿಲ್ಲ.

(ಅತಿಶಯತೆ)



ಹೃನ್ಮನ ತಣಿಸುವ ನಿಸಾರರ
'ಸಮಗ್ರ ಭಾವಗೀತಗಳು'

♦ *ಬಾ.ಕಿ.ನ.*

೧

ಕೆ. ಎಸ್. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಕವನ ಸಂಕಲನವನ್ನು ನಮ್ಮ 'ಲಿಪಿ ಪ್ರಕಾಶನ'ದಿಂದ ಮೊದಲ ಬಾರಿಗೆ (೧೯೭೬) ಪ್ರಕಟಪಡಿಸಿದ ಸಾಹಸ ನಮ್ಮದು. ನನ್ನ ಗೆಳೆಯ ಎಸ್. ದಿವಾಕರ್, ನಿಸಾರರ ಹಾಡುಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಬೇಕೆಂದು ಕವಿಗಳಿಗೆ ಒತ್ತಾಯ ತಂದರು. ನಮ್ಮ ಕೋರಿಕೆಗೆ ಮನಸ್ಸು ಮಾಡಿ ನಿಸಾರರು ಒಪ್ಪಿಗೆ ಕೊಟ್ಟರು. ನಾವು ಮುತುವರ್ಜಿ ವಹಿಸಿ ಚಿಕ್ಕ ಪುಸ್ತಕವನ್ನು ಅಂದವಾಗಿ ಪ್ರಕಟಿಸಿ ಹೊರ ತಂದೆವು. ನಿಸಾರರಿಗೆ ಖುಷಿಯಾಯಿತು. ನವ್ಯ ಕಾವ್ಯದ ಉಸಿರು ಕಟ್ಟಿಸುವ ಆ ದಿನಗಳಲ್ಲಿ ಹಾಡುಗಳನ್ನು ಅಥವಾ ಗೀತೆಗಳನ್ನು ಬರೆಯಲು ಕವಿಗಳು ಸಂಕೋಚ ಪಡುತ್ತಿದ್ದ ಕಾಲದಲ್ಲಿ ನಿಸಾರರು ಧೈರ್ಯ ಮಾಡಿ ಗೀತೆಗಳನ್ನು ಬರೆದರು. ಆಮೇಲೆ ಇವನ್ನು ಅನುಸರಿಸಿ ಮಿಕ್ಕ ನವ್ಯ ಕವಿಗಳೂ ಗೀತೆಗಳ ರಚನೆಗೆ ಮುಂದಾದರು. ಜನರಿಗೆ ಅರ್ಥವಾಗುವ ಗೀತೆಗಳು ಅಪಾರ ಮನ್ನಣೆಗೆ ಪಾತ್ರವಾದವು. ಆಮೇಲೆ, 'ನಿತ್ಯೋತ್ಸವ' ಕವನ ಸಂಕಲನದಿಂದ ಆಯ್ದ ರಚನೆಗಳು ಅದೇ ಹೆಸರಿನಿಂದ ಕನ್ನಡದ ಮೊದಲ ಧ್ವನಿ ಸುರುಳಿಯೂ ಆಗಿ, ಮೈಸೂರು ಅನಂತಸ್ವಾಮಿಯವರ ಸಂಗೀತ ನಿರ್ದೇಶನದಲ್ಲಿ ಅತ್ಯಂತ ಜನ ಮನ್ನಣೆ ಪಡೆಯಿತು. ಸುಗಮ ಸಂಗೀತ ಕ್ಯಾಸೆಟ್ ರಂಗದಲ್ಲಿ ಮೊದಲನೆಯದಾಗಿ ಒಂದು ಮಹತ್ತರ ದಾಖಲೆಯನ್ನು ಸೃಷ್ಟಿಸಿತು.

'ನಿತ್ಯೋತ್ಸವ' ಸಂಕಲನದ ಹದಿನಾಲ್ಕನೆಯ ಮುದ್ರಣವೂ ಪ್ರಕಟವಾಗಿ ಕರ್ನಾಟಕ ದಾದ್ಯಂತ ಸಹಸ್ರಾರು ಓದುಗರು ನಿಸಾರರ ಭಾವಗೀತೆಗಳನ್ನು ಓದಿ ಸಂತೋಷಪಟ್ಟಿದ್ದಾರೆ.

ಈ ಭಾವಗೀತೆಗಳು ಓದುಗನ ಮನಸ್ಸಿನ ಮೇಲೆ ಭಾವನೆಗಳ ಅಲೆಗಳನ್ನು ಅಪ್ಪಳಿಸುತ್ತ ಆನಂದ ಲೋಕದಲ್ಲಿ ತೇಲಾಡುವಂತೆ ಮಾಡುತ್ತವೆ. ಸರಳ ಸಾಹಿತ್ಯ, ಪದ ಪುಂಜಗಳ ಸುಲಲಿತ ಅರ್ಥವಂತಿಕೆ ಓದುಗನನ್ನು ಮತ್ತು ಕೇಳುಗನನ್ನು ಉತ್ಸುಕನನ್ನಾಗಿ ಮಾಡುತ್ತದೆ.

'ನಿತ್ಯೋತ್ಸವ' ಗೀತೆಯಲ್ಲಿ ಕನ್ನಡ ತಾಯಿಗೆ ನಮನ ಸಲ್ಲಿಸಿದ್ದಾರೆ. ಈ ನಾಡದೇವತೆಯ ಹಿರಿಮೆ-ಗರಿಮೆಯನ್ನು ವಿಧ ವಿಧವಾದ ಉಪಮೆಗಳಿಂದ ಕವನದ ಅಕ್ಷರ ಮಾಲೆಯಲ್ಲಿ ಸುಂದರವಾಗಿ ಕೋದಿದ್ದಾರೆ.

'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ'

—ಹಸಿರು ವನ ರಾಶಿಗಳ, ತೇಗ, ಗಂಧದ ಕಾಡುಗಳಲ್ಲಿ ತಾಯಿ ನಿನಗೆ ನಿತ್ಯೋತ್ಸವವೆಂದು ಸ್ತುತಿಸಿದ್ದಾರೆ.

ಇತಿಹಾಸದ ಗತ ಕಾಲದ ಶಾಸನಗಳಲ್ಲಿ, ಓಲೆಗರಿಯ ಬರಹದಲ್ಲಿ, ದೇಗುಲದ ಭಿತ್ತಿಯ ಚಿತ್ರಿಕೆಗಳಲ್ಲಿ—ತಾಯಿಯ ಸಂಭ್ರಮ ನೆಲಸಿದೆ. ಅಂಥ ನಿನಗೆ ನಿತ್ಯೋತ್ಸವ. ಜಾತ್ಯತೀತ ನಿಲವು, ವಿಕಾಸಶೀಲ ಚಿಂತನ, ಉದಾರ ಮನಸ್ಸುಳ್ಳ ನಿನ್ನ ಮಹಿಮೆ ಹಿರಿದಾದುದು, ತಾಯಿ ನಿನಗೆ ನಿತ್ಯೋತ್ಸವ ಎಂದು ಭಾವಪೂರ್ಣವಾಗಿ ಸ್ಮರಿಸಿದ್ದಾರೆ.

—ನಿನ್ನ ಉದಾರ ಮಹಿಮೆಗೆ ನಾವು ನಿತ್ಯವೂ ಉತ್ಸವ ಮಾಡೋಣ ಎಂಬ ಕವಿ ಚಿಂತನೆಯ ಮನಸ್ಸು—ವಿಶಾಲ, ವಿಚಾರಯುಕ್ತ, ಇಂತಹ ಅಭಿವ್ಯಕ್ತಿ ಈ ಕವನಕ್ಕೆ ಜೀವ ರಸವನ್ನು ಕೊಟ್ಟಿದೆ. ಓದುಗನ ಹೃದಯವನ್ನು ಸೂರೆಗೊಳ್ಳುವ ಈ ಗೀತೆ ನಮ್ಮ ನಾಡ ಗೀತೆಯಂತಾಗಿದೆ. ತಾಯಿಗೆ ಕವಿಯ ನುಡಿ ನಮನ ಅರ್ಥಪೂರ್ಣವಾಗಿ ಕೂಡಿ ಬಂದಿದೆ.

ಈ ಕವನ ಸಂಕಲನದಲ್ಲಿ ಸುಮಾರು ೩೪ ಕವನಗಳು ಮೊದಲಿಗೆ ಪ್ರಕಟವಾದರೆ, ಇತ್ತೀಚಿನ ಮುದ್ರಣದಲ್ಲಿ ೬೦ ಕವಿತೆಗಳಿವೆ. ಹಾಡುವ ಗೀತೆಗಳೂ ಸೇರಿಕೊಂಡು ಉಲ್ಲಾಸಭರಿತವಾಗಿವೆ. ಈ ಸಂಕಲನದ ಎಲ್ಲ ಕವನಗಳೂ ಹಾಡುಗಳ ಮಣಿಮಾಲೆಗಳೇ ಆಗಿವೆ. ಅವುಗಳಲ್ಲಿ ಕೆಲವನ್ನು ಎತ್ತಿ ಮುದ್ದಾಡಬಹುದು. ಕೆಲವನ್ನು ತೊಟ್ಟಿಲಲ್ಲಿ ಇಟ್ಟು ತೂಗುಯ್ಯಾಲೆ ಆಡಿಸಬಹುದು.

'ನಾಡ ದೇವಿಯೆ' ಎಂಬ ಕವನದಲ್ಲಿ ಕವಿ ನುಡಿ ಚಿತ್ರಣಗಳನ್ನು ಕುಂಚದ ಬಣ್ಣಗಳಿಂದ ಚಿತ್ರಿಸಿದ್ದಾರೆ.

ನಾಡ ದೇವಿಯ ಮಡಿಲಲ್ಲಿ ಎಂಥೆಂಥ ದೃಶ್ಯ ವೈಭವವಿದೆ. ಅವುಗಳ ನೋಟಗಳಿಂದ ನೋವು-ನಗೆಯ ಮಧ್ಯೆ ಹೃದಯ ವೇದನೆಯಿಂದ ಕಲಕಿತು. ಒಂದೆ ತಾಯಿಯ ಎದೆ ಹಾಲು ಕುಡಿದವರಲ್ಲಿ ಎಂಥ ಭೇದ ಭಾವ! ಒಂದೆ ನೆಲದ ರಸ ಹೀರಿದ ಕಾಯಿಗಳಲ್ಲಿ ಸಿಹಿ-ಕಹಿ

ಸೇರಿಕೊಂಡಿದೆ, ಎಂಥಾ ವಿಪರ್ಯಾಸ!

ಕತ್ತಲಲ್ಲಿ ಎಡವುತ್ತ ನಡೆಯುವ ಮಂದಿಯನ್ನು ಧಿಕ್ಕರಿಸಿ, ಸ್ವಾರ್ಥಪರರು ತಮ್ಮಷ್ಟಕ್ಕೆ ದೊಂದಿ ಹಿಡಿದು ಮುನ್ನಡೆಯುತ್ತಾರೆ. ಬಡವನು ಹೆಣದ ಸಂಸ್ಕಾರಕ್ಕೆ ಗತಿಯಿಲ್ಲದೆ ತಲೆಗೆ ಕೈಕೊಟ್ಟು ಕುಳಿತಿದ್ದಾಗ, ಬೇರೊಬ್ಬ ಧನಿಕ ಹುಟ್ಟುಹಬ್ಬವನ್ನು ವೈಭವದಿಂದ ಆಚರಿಸುತ್ತಿದ್ದಾನೆ. ಅನ್ನಾಹಾರವಿಲ್ಲದ ಹಸುಳೆಗಳನ್ನು ತಬ್ಬಿಕೊಂಡು ತಾಯಿ ಅಳುತ್ತಿದ್ದಾಳೆ. ದುಃಖದ ಸಾಗರದ ದೆಸೆಯಿಂದ ಛಿದ್ರವಾದ ಬಾಳು ಒಂದೆಡೆ. ಈ ಮಧ್ಯೆ ಕೆಲವರು ಹಸಿವನ್ನು ಹಿಂಗಿಸಿ ನಲಿದಾಡುವ ರುದ್ರ ನರ್ತಕರು!

ಬಾಳಿನ ನೀರಿನಲ್ಲಿ ಮನುಷ್ಯನನ್ನೇ ಗಾಳವಾಗಿಸುತ್ತ ಕುಣಿಯುವವರು, ಸತ್ಯಕ್ಕೆ ಅಡ್ಡಗಾಲು ಹಾಕಿ ತೊಡರುವ ಮಂದಿ—ಈ ಎಲ್ಲರನ್ನು ಕವಿ ಎಚ್ಚರಿಕೆ ಇತ್ತು ತಿದ್ದುವ ದಾರ್ಶನಿಕನಾಗಲಿ ಎಂದು ತಾಯಿ ಭಾರತಿಯಲ್ಲಿ ಮೊರೆಯಿಡುತ್ತಾನೆ.

ಸತ್ಯದ ದಾರಿಯಲ್ಲಿ ನಡೆಯುತ್ತ ಗುರಿ ಮುಟ್ಟುವ ಆಸೆ ಫಲಿಸಲಿ; ಈ ಋಣವನ್ನು ಮರೆಯದಂತೆ ಮಾಡು. ನಿನ್ನ ಪ್ರೀತಿ ಸದಾ ನನ್ನ ಎದೆಯಲ್ಲಿರಲಿ; ಬಾಳ ಬತ್ತಿಯು ಪ್ರಕಾಶಿಸಲಿ ತಾಯೇ, ನಿನಗೆ ತಲೆಬಾಗುವೆ. ನನ್ನ ಅನುಭವ ಮಾಗಿ ಪಕ್ವವಾಗಲಿ.

—ಎಂದು ಕನ್ನಡದ ನಾಡದೇವಿಗೆ ಕವಿ ಹೃದಯಾಂತರಾಳದಿಂದ ಬಿನ್ನವಿಸುವ ಧ್ವನಿಪೂರ್ಣ ಗೀತೆ ಓದಿದಾಗ ಮನಸ್ಸಿಗೆ ತಟ್ಟುತ್ತದೆ. ದೇಶದ ದುಃಸ್ಥಿತಿಗೆ ಮರುಗುತ್ತದೆ.

'ಪ್ರಾತಃಕಾಲ' ಎಂಬ ಕವನ ಕವಿಯ ಮನಸ್ಸಿನ ಚಿತ್ರಕ ಶಕ್ತಿಯನ್ನು ಪದರ ಪದರವಾಗಿ ಬಿಚ್ಚುವ ರೀತಿ ಅನನ್ಯವಾಗಿದೆ. ಬೆಳಗಿನ ಬಣ್ಣನೆ ಚಿತ್ತೋಲ್ಲಾಸಕಾರಿಯಾಗಿದೆ.

ಈ ನೆಲ ಪ್ರಾತಃಕಾಲದ ಸ್ಪರ್ಶಕ್ಕೆ ಜುಮ್ಮನೆ ಪುಲಕಗೊಂಡಿದೆ; ಗಾಳಿಯು ಮಿಲನ ಮುಹೂರ್ತದ ಸಂತಸಕ್ಕೆ ಏದುಸಿರು ಬಿಡುವಂತಿದೆ. ಲೋಕದ ಹಸುಳೆಯನ್ನು ತೂಗುವ ಬಣ್ಣ ಬಣ್ಣದ ಸುಂದರವಾದ ತೊಟ್ಟಿಲು. ಮುಂಜಾವಿನ ಹೊಂಗಿರಣದ ರಸ ಉಕ್ಕುತ್ತಿದೆ. ಹಕ್ಕಿಯ ಕೊರಳಿನ ಇಂಚರದಿಂದ ಎಚ್ಚರಗೊಂಡ ಈ ಲೋಕ ಕನಸಿನಿಂದ ಎಚ್ಚೆತ್ತು ಮನಃಪೂರ್ತಿ ಚೆಲುವನ್ನು ಹೀರುತ್ತಿದೆ. ಈ ನಿಸರ್ಗದಲ್ಲಿ ಸ್ವರ್ಗವನ್ನು ಕಾಣುತ್ತೇವೆ. ಮನಸ್ಸಿಗೆ ನೆಮ್ಮದಿ, ಉಲ್ಲಾಸ ಈ ಕ್ಷಣದಲ್ಲಿ ದಕ್ಕುತ್ತದೆ. ಕೈಲಾಸವೇ ಭೂಮಿಗಿಳಿದು ಬಂದಂತೆ ಕಾಣುತ್ತದೆ—ಈ ಪ್ರಾತಃಕಾಲದಲ್ಲಿ ಕವಿ ಕಾಣುವ ರಮ್ಯತೆ ಮೋಹಕವಾಗಿದೆ; ನಮ್ಮ ಮನಸ್ಸನ್ನು ಸೆರೆ ಹಿಡಿದು ಸೆಳೆಯುತ್ತ ಪುಳಕಗೊಳಿಸುತ್ತಿದೆ.

'ಬೆಣ್ಣೆಗಳ್ಳ ಕೃಷ್ಣ' ನಿಸಾರರ ಅತ್ಯಂತ ಪ್ರಸಿದ್ಧ ಕವನಗಳಲ್ಲಿ ಒಂದು. ಈ ಕವನ ತನ್ನ ಸರಳ ಪದ ಬಂಧಗಳಿಂದ ನಿತ್ಯ ನೂತನವಾದ ರಚನೆಯಾಗಿದೆ. ಕೃಷ್ಣನ ವ್ಯಕ್ತಿತ್ವವನ್ನೇ ಕಟ್ಟಿಕೊಡುವ ಸಶಕ್ತ ಕಾವ್ಯ ಸಾಲುಗಳು ಮತ್ತೆ ಮತ್ತೆ ಓದಿ ಮೆಲುಕಾಡುವಂತೆ ಮಾಡುತ್ತವೆ. ಬೆಣ್ಣೆಯನ್ನು ಕದ್ದು ಜಾರುತ್ತ ಬಿದ್ದು, ಮೊಣಕಾಲು ಊದಿಸಿಕೊಂಡು, ಬಿಂದಿಗೆ ಬಿದ್ದು ಸದ್ದಾಗಲು, ಬೆಚ್ಚಿದವನು ರಾಧೆಯ ಗಂಡ! ಈ ಪೋರ ಕೃಷ್ಣ! ತಾಯಿ ಓಡಿ ಬಂದು ನೋಡಿದಾಗ ಕಳ್ಳನ ಕಣ್ಣಿನಲ್ಲಿ ನೀರು ಆದರೂ ಸಿಟ್ಟಿನಿಂದ ಆ ಕ್ಷಣದಲ್ಲಿ ಕಾಳಿಯಂತಾಗಿ

ಕಣ್ ಬಿಟ್ಟು ನೋಡಿದಳು. ಹಣೆ, ಕೆನ್ನೆ, ತುಟಿಗೆ ಮೆತ್ತಿಕೊಂಡಿದ್ದ ಬೆಣ್ಣೆಯನ್ನು ಕಂಡು ಅವಳ ಕೋಪ ಇಳಿಯಿತು; ನಗೆಯೂ ಬಂದಿತು. ದಂಡ ತಪ್ಪಿತಲ್ಲಾ ಎಂದು ನಿಟ್ಟುಸಿರನ್ನು ಬಿಟ್ಟ ನೀಲ ಮೇಘ ಶ್ಯಾಮ. ಅಳುವುದನ್ನು ನಿಲ್ಲಿಸಿದ; ಬಾಯಿಬಿಟ್ಟು ನಕ್ಕ. ಬೆಳುದಿಂಗಳ ಜಾಲವನ್ನು ಹರಡಿದ. ಅವನ ಬೆಣ್ಣೆಯಂಥ ನಗು ಜಗತ್ತನ್ನೇ ಕಾಯಲಿ! ನಗದವರನ್ನೂ ಯಾವಾಗಲೂ ನಗಿಸಲಿ—ಈ ಬೆಣ್ಣೆಕಳ್ಳ ಕೃಷ್ಣ ಎಂಬುದು ಕವಿಯ ಎದೆಯಾಳದ ಕಳಕಳಿ.

ಕವಿಯ ಧ್ವನಿಪೂರ್ಣ ಕವನ ಹಾಡುಗಬ್ಬವಾಗಿ ಓದುಗನನ್ನು ಅಥವಾ ಕೇಳುಗನನ್ನು ಆನಂದ ಸಾಗರದಲ್ಲಿ ಮೀಯಿಸುತ್ತದೆ. ಇದರ ಲಯಗಾರಿಕೆಯ ಸೊಗಸು ಹಿರಿದಾದುದು, ಅಯಸ್ಕಾಂತದ ಆಕರ್ಷಣೆಯುಳ್ಳದ್ದು.

ಕವಿ ನಿಸಾರರ ಜನಪ್ರಿಯ ಗೀತೆ 'ಕುರಿಗಳು, ಸಾರ್, ಕುರಿಗಳು'. ನಾಲ್ಕು ವಿಭಾಗಗಳಲ್ಲಿ ಒಂದು ಸಾಮಾಜಿಕ ನಿತ್ಯಸತ್ಯದ ಪರಿಪಾಠಗಳನ್ನು ವಿಡಂಬನೆಯ ನಿಕಷಕ್ಕೆ ಒಳಗಾಗಿಸಿ ಹೃದ್ಯವಾಗಿ ಗೀತೆಯ ರೂಪದಲ್ಲಿ ಬರೆದಿದ್ದಾರೆ. ನಮ್ಮ ಸ್ವಂತತೆಯನ್ನು ಕಳೆದುಕೊಂಡು ಮಂದೆಯಲ್ಲಿ ಒಂದಾಗಿ ಸಾಗುವ ನಾವು ಕುರಿಗಳಂತೆ. ಒಂದರ ಬಾಲ ಒಂದು ಮೂಸುವ, ದನಿ ಕಳೆದುಕೊಂಡು ತಲೆ ತಗ್ಗಿಸಿ, ಆಹಾರ ಹುಡುಕುತ್ತ ದಿಕ್ಕಿಲ್ಲದೆ ಅಂಡಲೆಯುವ ನಮಗೆ ನೂರು ಗುರಿಗಳು.

ನಾವು ಎಡ ಬಲ ಪಕ್ಷಕ್ಕೆ ಹಾರುತ್ತ, ಕೆಲವೊಮ್ಮೆ ತಟಸ್ಥರಾಗಿ ದಿಕ್ಕಿಲ್ಲದೆ, ಗುರಿ ಕಾಣದೆ ಸುತ್ತುವ ನಾವು ಎಂಥವರು? ಕೈಲಾಗದ ನಾವು ಕಿರುಚಾಡುತ್ತ, ರೇಗಾಡುತ್ತ, ಹೊಟ್ಟೆಗಿಲ್ಲದಿದ್ದರೂ ತೇಗುತ್ತ ಕೂರುವ; ಒದೆಯಲೂ, ಹಾಯಲೂ ಆಗದ ಹೀನಸ್ಥಿತಿಯ ನಾವು ಎಂಥ ಮಂದಿ!

ಮಂದೆಯಲ್ಲಿ ಎಲ್ಲರೂ ಒಂದೆ ಆದಾಗ ಸ್ವರ್ಗ ಎದುರಾಗುತ್ತದೆ ಎಂಬ ಭ್ರಮೆ ನಮಗೆ. ಸ್ವಾರ್ಥದ ಜನ ತಾವೇ ಬುದ್ಧಿವಂತರೆಂದು ಮಂದೆಯನ್ನು ಕಡೆಗಣಿಸಿ, ಹೊಟ್ಟೆ ಬಟ್ಟೆಗೆ ದಕ್ಕದ ಕೆಲಸ ಕೊಟ್ಟು ಮಂದೆಯನ್ನು ದಿಕ್ಕು ತಪ್ಪಿಸಿ ಬುದ್ಧಿಯನ್ನು ಹಾಳುಗೆಡವಿದರೆ, ಕೆಂಪು ಬಣ್ಣದ ಧ್ವಜವೆತ್ತಿ ಮೆರೆದಾಡಿಸುವ ನಾಯಕರು ನಮ್ಮನ್ನು ಕಾಯುವವರೆ? ಅವರ ಬಾಲ ಹಿಡಿದು ಸಾಗುವ ನಾವು ಕುರಿಗಳಲ್ಲವೆ?

ನಮ್ಮನ್ನು ಕಾಯುವ ಕುರುಬರಾದರೂ ಎಂಥವರು? ಓದುಬರಹ ಬಾರದ ಹೆಬ್ಬೆಟ್ಟು ಒತ್ತುವವರು. ಯಾರೋ ದೊಡ್ಡ ವ್ಯಕ್ತಿಗಳು ಬಂದರೆಂದರೆ ಅವರಿಗೆ ತಿಂಡಿ ತೀರ್ಥವನ್ನು ಯಥೇಚ್ಛವಾಗಿ ತಿನಿಸುತ್ತ ಅವರ ಮಾತಿಗೆ ಮರುಳಾಗಿ, ಮಂದಿಯನ್ನು ಬಿಸಿಲಿಗೆ ನಿಲ್ಲಿಸಿ, ತಾವು ಮರದಡಿಯ ನೆರಳಲ್ಲಿ ಕೂತು ಮಾತಿನ ಪೌರುಷವನ್ನು ಮೆರೆಸುತ್ತ, ಯೋಜನೆಗಳ ಕನಸನ್ನು ಕಟ್ಟುತ್ತ, ನಮ್ಮ ಮೈ ಮರೆಸುವ ನಾಯಕರು! ಇವರು ನಮ್ಮನ್ನು ಉದ್ಧರಿಸುವ ಗೊಲ್ಲರು.

ನಮ್ಮ ಜನ ಕೂತರೆ ನಿಲ್ಲಲು ಆಗದು! ಎದ್ದರೆ ನಡೆಯಲು ಆಗದು. ಬಿದ್ದರೆ ಏಳಲಾಗದು. ಬೆಳಕು-ಗಾಳಿ ಕಾಣದ ಕತ್ತಲ ಕೂಪದಲ್ಲಿ ನಮ್ಮ ಬದುಕು. ಕಿಂಡಿಯಲ್ಲಿ ಬಂದ

ಗಾಳಿಯಷ್ಟೇ ನಮ್ಮ ಪಾಲಿಗೆ. ನಮ್ಮನ್ನೇ ಸುಲಿದು ತಿನ್ನುವ ನಾಯಕರು! ಉಸಿರುಗಟ್ಟುವ ವಾತಾವರಣದ ಈ ಜಗತ್ತಿನಲ್ಲಿ ತಾಳ್ಮೆಯ ನಿಷ್ಕ್ರಿಯ ಜೀವನಕ್ಕೆ ಒಗ್ಗಿ ಹೋದ ನಾವು ಹೇಗೋ ಏಗುತ್ತಿದ್ದೇವೆ.

ನಮ್ಮನ್ನು ಕಾಯಬೇಕಾದ ನಾಯಕನಾದ ಕುರುಬ ದಿನಗಳೆದಂತೆ ಕಟುಕನಾಗುತ್ತಾನೆ. ಅವನು ಮಚ್ಚು ಝಳಪಿಸುತ್ತ ಬಂದಾಗ ನಾವು ಹೆದರಿ ಕಂಗಾಲಾಗಿ ಸುರುಟಿ ಹೋಗಿ ಬಲಹೀನರಾಗಿ ಬಲಿಪಶುಗಳಾದೆವು. ನಮ್ಮತನವನ್ನು ಮರೆತು, ಧ್ವನಿ ಕಳಕೊಂಡ ನಾವು ಹುಚ್ಚರಾದೆವು. ನಾವು ಕುರಿಗಳು ಸಾರ್!—ಇಂತಹ ಅರ್ಥಪೂರ್ಣವಾದ ಕವನ ಪ್ರತಿಸಾಲಿನಲ್ಲೂ ನಮ್ಮನ್ನು ತಿವಿದು ಎಚ್ಚರಿಸುವ, ಮೂದಲಿಸುವ, ಹಂಗಿಸುವ, ಕೊಂಕಿಸುವ ಮಾತಿನಲ್ಲಿ ಒಂದು ನಾಟಕೀಯ ಚಿತ್ರಪಟವನ್ನು ಕವಿ ಚಿತ್ರಿಸಿದ್ದಾರೆ. ಆದ್ದರಿಂದ ಈ ಕವನ ಜನಪ್ರಿಯತೆಯ ಉತ್ತುಂಗಕ್ಕೆ ಏರಿ ವಿರಾಜಿಸಿತು. ಪ್ರಜಾಪ್ರಭುತ್ವವನ್ನು ವಿಡಂಬನೆಗೆ ಗುರಿ ಮಾಡಿ ನಮ್ಮ ಜನರ ಸ್ಥಿತಿಗತಿಗಳನ್ನು ನಿಚ್ಚಳವಾಗಿ ಕವನದ ಮೂಲಕ ಕಟ್ಟಿಕೊಟ್ಟ ನಿಸಾರರು ನಮ್ಮ ಶ್ರೇಷ್ಠ ಕವಿಗಳಲ್ಲಿ ಒಬ್ಬರೆಂದು ಸಾರಿ ಹೇಳಬಹುದು.

'ಅಂದೇನು ಇಂದೇನು, ಎಂದಾದರೊಮ್ಮೆ
ಫಲಿಸೀತು ನಮ್ಮಲ್ಲಿ, ಬಲಿದೀತು ಒಲ್ಮೆ.

....

'ನನ್ನೊಡನೆ ಚೆಲ್ಲಾಟವಾಡಿರುವ ಜೀವ
ಮತ್ತಷ್ಟು ಬೆರೆಸದಿರು ನನ್ನೆದೆಗೆ ನೋವ.

....

ಸಾಕು, ಓ ಸಾಕು ಈ ನಿನ್ನಾಸೆ ಬಿಸಿಲು—
ಅದ ನೆಚ್ಚಿ ನಾ ಬೆಳೆವ ಕಂಬನಿಯ ಫಸಲು.'

(ಅಂದೇನು, ಇಂದೇನು)

ಈ ಗೀತೆ ಒಂದು ಉತ್ಕಟ ವಿರಹ ದಾಹ. ಪ್ರೀತಿ ಬೆಳೆದು ಸ್ನೇಹ ಗಟ್ಟಿಯಾದೀತೆಂದು ಕೊಂಡರೆ, ಗೆಳತಿ ಮರೀಚಿಕೆಯಾಗಿ ಭಾವಜೀವಿಯೊಂದಿಗೆ ಚೆಲ್ಲಾಟವಾಡುವ ಪರಿ ಇಲ್ಲಿಯ ಸಶಕ್ತ ರಚನೆಯಲ್ಲಿ ಸಫಲಗೊಂಡಿದೆ.

'ಮತ್ತದೇ ಬೇಸರ' ಹಾಡಿನಲ್ಲಿ—

'ಬಣ್ಣ ಕಳೆದೊಡನೆಯ ತೆರ ಮಾಸುತಲಿದೆ ಸೂರ್ಯಾಸ್ತ;
ನೋಡಗೊ! ತಿಮಿರದ ಬಲೆ ಬೀಸಿದ ಇರುಳಿನ ಬೆಸ್ತ.' **(ಮತ್ತದೇ ಬೇಸರ)**

ಇದು ಇನ್ನೊಂದು ವಿರಹ ಗೀತೆ. ಜೊತೆಗಾತಿಯಿಲ್ಲದ ಬೇಸರದಲ್ಲಿ ಸಂಜೆಯ ಏಕಾಂತತೆ ಕಾಡುತ್ತದೆ. ಮೌನದ ಮೌಢ್ಯ ಆವರಿಸಿದೆ. ಪ್ರಿಯೆ ಬರುತ್ತಾಳೋ ಇಲ್ಲವೋ ಎನ್ನುವ ಸಂಶಯ ಕಾಡುತ್ತದೆ. ಕಳಾಹೀನವಾದ ಒಡವೆಗಳಂತೆ ಸೂರ್ಯನ ಬೆಳಕು ಮಸುಕಾಗುತ್ತ, ಕತ್ತಲಾವರಿಸುತ್ತದೆ. ಈ ಗೀತೆಯ ಲಯಗಾರಿಕೆಯ ದ್ವಾರಾ ಹಂತಹಂತವಾಗಿ ಬೇಸರದ ವಿಭ್ರಾಂತ ಮನಸ್ಸನ್ನು ಕವಿ ತನ್ನ ಕುಂಚಗಳಿಂದ ಮನೋಹರವಾಗಿ ಚಿತ್ರಿಸುತ್ತಾನೆ. ನಿಸಾರರ ಗೀತೆಗಳಲ್ಲಿ ಹರಿದು ಬರುವ ನಾದ, ಲಯ, ಅರ್ಥವಂತಿಕೆ ಅತ್ಯಪೂರ್ವವಾದ

ವಿಭಿನ್ನತೆಗಳಿಂದ ಕೂಡಿ ಒಂದೊಂದು ರಚನೆಯೂ ಕುಸುಮ ಕೋಮಲತೆ ಮತ್ತು ಸುಕುಮಾರ ನಯವಂತಿಕೆಯಿಂದ ಹೃದಯಸ್ಪರ್ಶಿಯಾಗಿದೆ.

೨

ನಿಸಾರರ ಇನ್ನೊಂದು ಭಾವಗೀತೆಗಳ ಸಂಕಲನ 'ಬಹಿರಂತರ' ೧೯೯೦ರಲ್ಲಿ ಪ್ರಕಟವಾಯಿತು. ಇದರಲ್ಲಿ ಸುಮಾರು ೫೮ ಗೀತೆಗಳಿವೆ. ಒಂದೊಂದು ಗೀತೆಯೂ ವಿಷಯ ವೈವಿಧ್ಯಗಳಿಂದ ತುಂಬಿಕೊಂಡು ಹಾಡಿಗೆ, ರಾಗಕ್ಕೆ, ತಾಳಕ್ಕೆ ಲಯಬದ್ಧವಾದ ಸಂರಚನೆಯಾಗಿ ಮೂಡಿಬಂದಿದೆ. ಸುಗಮ ಸಂಗೀತಕ್ಕೆ ಅನುಗುಣವಾದ ಗೇಯರೂಪದ ಕವನಗಳು ಮನಸ್ಸಿಗೆ ಹೃದ್ಯವಾಗಿವೆ. ಓದಿದಾಗ ಮತ್ತು ಹಾಡು ಕೇಳಿದಾಗ ಭಾವಲಹರಿ ಪ್ರಸನ್ನವಾಗುತ್ತದೆ.

'ತೊಟ್ಟಿಲು ತೂಗುವ ಹೆಣ್ಣು' ಕವನದಲ್ಲಿ 'ತೂಗಿರುವಳೋ ಹೆಣ್ಣು ತೊಟ್ಟಿಲನ್ನು —ತೂಗಿ ತುಂಬುತ್ತ ಕಣ್ಣೀರ ಬಟ್ಟಲನ್ನು' ಎನ್ನುವ ಮೊದಲ ಚರಣವೇ ಹೆಣ್ಣಿನ ಒಡಲಾಳದ ಪಾಡನ್ನು ಚಿತ್ರಿಸುತ್ತದೆ. ಸಂತತಿಯಿಲ್ಲದ ತನ್ನ ಬಂಜೆ ಬಾಳನ್ನು ನೆನೆಯುತ್ತ— ಬೇಗುದಿಗೆ ಅಳುಕುವಳು, ಕಂಬನಿಯ ತುಳುಕುವಳು, ನಡುನಡುವೆ ಪಲುಕುವಳು ಸವಿ ಜೋಗುಳ, ಹಲಬುವಳು; ಈ ನನ್ನ ಬದುಕೊಂದು ಬಾಳುವೆಯೆ? ಚೆಲುವಾದ ವಿಗ್ರಹವೇ ಇಲ್ಲದ ಹಳೆಯ ದೇಗುಲ—ಎನ್ನುವ ಆಕೆಯ ಎದೆ ತುಮುಲ ವರ್ಣಿಸಲು ಅಸದಳ ವಾದದ್ದು. ಏನೆಲ್ಲ ಇದ್ದರೂ ಏನೂ ಇಲ್ಲದ ಹಾಗೆ; ಸಭೆ ಮುಗಿದ ಮೇಲೆ ಭಣಗುಟ್ಟುವ ವೇದಿಕೆಯಂತೆ. ಮಧುರವಾದ ಅನುಭವಗಳೆಲ್ಲ ಹೂ ಉದುರಿ ಹುಡಿಯಾದಂತೆ, ಹಳೆಯ ನೆನಹು ನಾರಾಗಿ ಭಣಗುಟ್ಟಿದೆ. ತೊಟ್ಟಿಲು ತೂಗುವ ಹೆಣ್ಣಿನ ಕಣ್ಣೀರಿನ ವ್ಯಥೆಯನ್ನು ಹಲವಾರು ಸಶಕ್ತ ರೂಪಕಗಳಿಂದ ಕವಿ ನಮ್ಮ ಕಣ್ಣಿಗೆ ಚಿತ್ರಿಸುತ್ತ ಸಾಗಿದ ಪರಿ ಪರಿಣಾಮ ಕಾರಿಯಾಗಿದ.

'ನಿಸರ್ಗ ವಿಲಾಸ'ವನ್ನು ಕವಿ ನೋಡಿ ಆನಂದಿಸುವ, ರಮ್ಯ ಮನೋಹರ ಲೋಕ ವನ್ನು ಹೃದಯಂಗಮವಾಗಿ ವರ್ಣಿಸುತ್ತಾ ಹೋಗುವ ಈ ಕವನ ಆಪ್ಯಾಯಮಾನವಾಗಿದೆ.

> **'ಈ ಗಳಿಗೆಯೆ ಮೈ ತಾಳಿತೊ ಎನುವಂತಿದೆ ಲೋಕ**
> **ಇಡಿ ಸೃಷ್ಟಿಯೆ ಸೊಗವಾಂತಿದೆ,**
> **ಸಮಯವೆ ನಸು ನಿಂತಿದೆ;**
> **ಬಾ ಮಾಡಿಸು ಕಣ್ಮನಗಳಿಗಾನಂದದ ಅಭಿಷೇಕ.'** (ನಿಸರ್ಗ ವಿಲಾಸ)

ಈಗಷ್ಟೆ ಹುಟ್ಟಿತೋ ಎನ್ನುವ ಈ ಲೋಕ ಎಷ್ಟೊಂದು ಸೊಗಸಾಗಿದೆ. ಅದನ್ನು ನೋಡುತ್ತ ಕಾಲವೇ ಸ್ವಲ್ಪ ಹೊತ್ತು ನಿಂತಂತಾಗಿದೆ. ಕಣ್ಣಿಗೆ, ಮನಸ್ಸಿಗೆ ಆನಂದದ ಅಭಿಷೇಕವನ್ನು ಮಾಡಿಸುವಂಥ ಪ್ರಕೃತಿಯ ಸೊಬಗನ್ನು ಎಷ್ಟೊಂದು ರೀತಿಯಿಂದ ಬಣ್ಣಿಸಿದರೂ ಕವಿಗೆ ತೃಪ್ತಿಯೆಂಬುದಿಲ್ಲ.

ನೀಲಾಕಾಶದ ಹಿನ್ನೆಲೆಯಲ್ಲಿ ಬೆಳ್ಳಕ್ಕಿಗಳ ಹಿಂಡು, ಉಷಃಕಾಲದ ವಿಧ ವಿಧ ಬೆಳ್ಮುಗಿಲು ರಂಗೋಲಿಯ ಚುಕ್ಕಿಯಂತೆ ಕಾಣುತ್ತದೆ. ಹೊಂಬೆಳಕಿನ ಕಿರಣಗಳಿಂದ ಕೊಳದ ನೀರಿನ ಅಲೆಗಳು ಸ್ನಾನ ಮಾಡಿದರೆ, ತಾವರೆ ಹೂ ರೆಪ್ಪೆ ಬಿಚ್ಚಿದಂತಿದೆ. ಸೂರ್ಯ ಕಿರಣಗಳು

ಭೂ ದೇವಿಯ ತುಟಿಯನ್ನು ಸ್ಪರ್ಶಿಸಿವೆ. ಗರಿಕೆ ಹುಲ್ಲಿಗೆ ಇಬ್ಬನಿಗಳು ಸುರಿದು ಪುಳಕಗೊಂಡಿವೆ. ಹೊಲಗದ್ದೆಗಳ ತೆನೆಗಳಲ್ಲಿ ಪ್ರೀತಿ ಉಕ್ಕಿದೆ. ತಂಗಾಳಿಯ ಹೊಡೆತಕ್ಕೆ ಮರಗಿಡಗಳು ಸುಸ್ವರ ಸೂಸುತ್ತವೆ. ತೆಳು ಮಂಜಿನ ಹೊದಿಕೆ ಹೊದ್ದಂತೆ ಕಾಣುವ ಗುಡ್ಡಕಾಡುಗಳು. ಉಲ್ಲಾಸದಿಂದ ಹರಿಯುತ್ತಿರುವ ನೀರಿನ ತೆರೆಗಳ ಮೇಲೆ ದೋಣಿಗಳನ್ನು ಅಂಬಿಗರು ನಡೆಸುವ ಮನೋಹರ ದೃಶ್ಯ. ಜಲಪಾತದಿಂದ ಧುಮುಕುವ ನೀರು ಮಗ್ಗದಿಂದ ನೇಯ್ದ ಬಟ್ಟೆಯಂತೆ ಕಾಣುತ್ತದೆ. ಬಿಳಿ ನೊರೆ ಮಿಂಚಿನಂತೆ ಸೆಳೆದು, ಮಳೆ ಬಿಲ್ಲಿನ ಅಸಾಮಾನ್ಯ ಚಿತ್ರವನ್ನು ಬಿಡಿಸಿದಂತಿದೆ. ಸ್ವರ್ಗವೇ ಭೂಮಿಗೆ ಇಳಿದು ಬಂದ ಪರಿ. ಬಹು ದೂರದ ಕಾಡಿನ ಅಂಚಿನಲ್ಲಿ ಭೂಮಿ ಮತ್ತು ನೆಲ ಒಂದನ್ನೊಂದು ಕೂಡಿ ಮಿಲನ ಹೊಂದಿದಂತೆ ಕಾಣುವ ದೃಶ್ಯ—ಹೀಗೆ ಪ್ರಕೃತಿಯ ವರ್ಣನೆ ಮಾಡುತ್ತ ಕವಿ ನಮ್ಮ ಮುಂದೆ ಒಂದು ಅನೂಹ್ಯವಾದ ಚಿತ್ರವನ್ನು ತಮ್ಮ ಲೇಖನಿಯೆಂಬ ಕುಂಚದಿಂದ ಬಿಡಿಸಿ ತೋರಿಸಿದ್ದಾರೆ. ಈ ಶಬ್ದ ಚಿತ್ರದ ಸೌಂದರ್ಯವು ಕಾವ್ಯಾರ್ಥವನ್ನು ಹಿಗ್ಗಿಸುತ್ತದೆ; ಸ್ವರ್ಗೀಯವೆನ್ನಿಸುತ್ತದೆ.

'ಹೊಸ ಪೀಳಿಗೆ' ಕವನ ಸಮಾಜವಾದದ ಚಿಂತನೆಯ ಮೂಸೆಯಲ್ಲಿ ಹುಟ್ಟಿ ಬಂದ ಒಂದು ಲಹರಿ :

> **'ಹೊಸ ಅರಿವಿಗೆ ಜನತೆ ಮನಸು ಅರಳುವನಕ ನಿಲ್ಲೆವು**
> **ಹೊಸ ತಿರುವಿಗೆ ನಾಡ ಬದುಕು ಹೊರಳುವನಕ ತಾಳೆವು**
> **ತಲೆ ತಿರುಕರ, ಮನೆ ಮುರುಕರ ಬಡಿದಟ್ಟದೆ ಸುಖಿಸೆವು.'**
>
> **(ಹೊಸ ಪೀಳಿಗೆ)**

ಎಲ್ಲರ ಹಿತಕ್ಕಾಗಿ ದುಡಿಯುವ ಛಲ ಹೊತ್ತ ಪೀಳಿಗೆಯಿದು ಎಂದು ನಿಸಾರರು ಹೊಸ ಜನಾಂಗದ ಧ್ವನಿಯನ್ನು ಎತ್ತಿಹಿಡಿದಿದ್ದಾರೆ.

> **'ಇಲ್ಲಿ ಹುಟ್ಟು ಇಲ್ಲಿ ಬಾಳು ಇಲ್ಲೆ ನಮ್ಮ ಸಾವು**
> **ಬದುಕಿಗಿಲ್ಲ ಬೇರೆ ನೆರವು, ಸೇರಲೊಂದು ರೇವು.'**

ಇಲ್ಲೇ ಹುಟ್ಟಿ, ಇಲ್ಲೇ ಬದುಕಿ, ಇಲ್ಲೇ ಸಾಯುವ ಮಂದಿ ನಾವು. ಈ ಬದುಕೆಂಬ ಪಯಣದಲ್ಲಿ ಕಷ್ಟ ಸುಖಗಳು ಬರುತ್ತವೆ. ಬಿಡುವಿಲ್ಲದ ಕಾರ್ಯದಲ್ಲಿ ಬಾಳಿಗೊಂದು ಅರ್ಥವಿದೆ. ನಮ್ಮನ್ನು ನಾವೇ ಮೆಚ್ಚಬೇಕು. ಮನಸ್ಸಿನ ದ್ವೇಷಾಸೂಯೆಗಳನ್ನು ತೊಡೆಯಬೇಕು. ಜನಾಸೂಯೆಯಿಂದ ಯಾವ ದೇಶವೂ ಉದ್ಧಾರವಾಗಿಲ್ಲ. ಹೊರಗೆ ನೋಡಿದರೆ ನಾವೊಂದು, ಒಳಗೆ ಹೋದರೆ ವಿಷದ ಸಂಚು. ಹಸಿದ ಹೊಟ್ಟೆ, ಹಣದ ಮೂಟೆ—ಪರಿಸ್ಥಿತಿ ಹೀಗಿರುವಾಗ ಕೂಡಿ ಬಾಳುವುದಾದರೂ ಹೇಗೆ? ಸ್ವಂತ ಸುಖವನ್ನು ಮರೆತು ಎಲ್ಲರ ಒಳಿತನ್ನು ಕಾಣಿರಿ; ಸಮತೆಯಲ್ಲಿ ಬಾಳಿದರೆ ಐಕ್ಯವನ್ನು ಕಾಣಬಹುದು ಎನ್ನುವುದು ಕವಿಯ ಸಂದೇಶ.

ನಿಸಾರರ ಈ ವೈವಿಧ್ಯಮಯ ವಿಚಾರ ಲಹರಿಗಳು ಕವನದ ರೂಪ ತಳೆದು ನಾಡಿಗೆ ಸಾರುವ ಸಂದೇಶಗಳು ಅವರ ಸಾಮಾಜಿಕ ಕಾಳಜಿಗೆ ಹಿಡಿದ ಕನ್ನಡಿಯಂತಿದೆ.

ನಿಸಾರರು ಬರೆದ ವ್ಯಕ್ತಿ ಚಿತ್ರಣದ ಕವನಗಳಾದ ಬಸವೇಶ್ವರರು, ಶ್ರೀ ರಾಮಕೃಷ್ಣ,

ಶ್ರೀ ಶಾರದಾದೇವಿ ಮುಂತಾದವು ಒಂದೊಂದೂ ಕೆಲವೇ ಪದ ಪುಂಜಗಳಲ್ಲಿ ಅವರ ಆಧ್ಯಾತ್ಮಿಕ ಚಿಂತನೆಯನ್ನು ಸರಳವಾಗಿ ನಮ್ಮ ಮುಂದೆ 'ಕಿರಿದರೊಳ್ ಪಿರಿದರ್ಥಮನ್' ಎಂಬಂತೆ ಕಟ್ಟಿಕೊಟ್ಟಿದ್ದಾರೆ.

ಈ ಸಂಕಲನದಲ್ಲಿ ಇನ್ನೂ ಹಲವಾರು ಕವನಗಳು ಗಮನಾರ್ಹವಾಗಿವೆ. ಅಷ್ಟೇ ಅಲ್ಲ, ಚಿಂತನಯೋಗ್ಯವಾಗಿವೆ. 'ಯಾರೋ ಬರುವರು', 'ರಂಗೋಲಿ', 'ವಿಗಾನ', 'ರಾಗಾವೇಗ', 'ಹುಚ್ಚನಾಗಬೇಡ' ಮುಂತಾದ ಕವನಗಳು ವಿಷಯ ವೈವಿಧ್ಯದಿಂದ ಉತ್ತಮ ಗೇಯ ಗುಣಗಳಿಂದ ಅಂತಃಕರಣವನ್ನು ಮಿಡಿಯುತ್ತವೆ.

೩

ನಿಸಾರರ ಮೂರನೆಯ ಭಾವಗೀತೆಗಳ ಸಂಕಲನ 'ನವೋಲ್ಲಾಸ' ೬೫ ಕವನಗಳ ಸಂಕಲನ. 'ತುಷಾರ' ಮಾಸಪತ್ರಿಕೆಯ ೨೦ನೆಯ ವರ್ಷದ ಸಂಭ್ರಮದ ಪ್ರಕಟಣೆ. ಕವನಗಳೆಲ್ಲ ಮುದ್ದಾದ, ಆಕರ್ಷಕವಾದ ರೇಖಾಚಿತ್ರಗಳಿಂದ ಕಣ್ಮನ ಸೆಳೆಯುವಂತೆ ಮುದ್ರಣಗೊಂಡಿವೆ. ಈ ಕವನಗಳು ಬೇರೆ ಬೇರೆ ಛಂದಸ್ಸಿನಲ್ಲಿ ರಚಿತವಾದವು. ಒಂದರಂತೆ ಇನ್ನೊಂದಿಲ್ಲ. ಹಾಡುವವರಿಗೆ ಅನುಕೂಲ ಹೆಚ್ಚು. ಇಲ್ಲಿಯ ಲಯ ವಿನ್ಯಾಸ ವಿಶೇಷವಾದ ಗಮನವನ್ನು ಸೆಳೆಯುತ್ತವೆ. ಇದರಲ್ಲಿ ಅನೇಕ ಶ್ರೇಷ್ಠ ಭಾವಗೀತೆಗಳಿವೆ. ಅವುಗಳ ಭಾವ ವೈಭವ, ಉಪಮೆ, ರೂಪಕಗಳ ಶ್ರೀಮಂತಿಕೆ ಮತ್ತು ಸುಭಗ, ಸುಲಲಿತ ಪದಗಳ ಲಾಲಿತ್ಯ ಬೆರಗುಗೊಳಿಸುತ್ತದೆ.

ಮೊದಲನೆಯ ಪದ್ಯವೇ 'ಪ್ರೀತಿ'ಯ ವಿವಿಧ ಮುಖಗಳನ್ನು ವರ್ಣಿಸುತ್ತಾ ಸಾಗುವ ಪರಿ ಕವಿಯ ಭಾವ ವೈಶಾಲ್ಯವನ್ನು ಪ್ರಕಟಿಸುತ್ತದೆ.

'ಹುಟ್ಟು-ಸಾವಿನಿಸವಿ ನಡುವೆ ಪುಟ್ಟ ಕಪ್ಪು ಗೀಟು ಪ್ರೀತಿ;
ನೆಲಕೆ ಬಿದ್ದ ಮಳೆಯ ಹನಿಯ ಚಣದ ಹೂವಿನರಳು ಪ್ರೀತಿ
ಬಾಳ ಬೆರಳಿನುಂಗುರಕ್ಕೆ ಪಚ್ಚೆ ಹರಳ ಮಿರುಗು ಪ್ರೀತಿ;
ಮಡದಿ ಮುತ್ತನಿತ್ತ ಮುತ್ತು, ತಾಯ ಕೈಯ ತುತ್ತು ಪ್ರೀತಿ.'
(ಪ್ರೀತಿ)

ಪ್ರೀತಿ ಒಂದು ಅಳೆಯಲಾಗದ ವಸ್ತು. ಅದು ಅಗೋಚರ ಹಾಗೂ ಅದ್ಭುತ. ಪ್ರೀತಿಯ ಅನಾವರಣ ಅನ್ಯಾದೃಶ. ಕವಿಯ ಕಲ್ಪನಾ ವಿಲಾಸ ಇಲ್ಲಿ ಒಂದು ಮನೋಹರ ರೂಪಕವಾಗಿ ಹೊರ ಹೊಮ್ಮಿದೆ.

'ಬಲ್ಲೆ ನಾನು ಆ ಬೆಡಗಿಯ' ಎನ್ನುವ ಕವನದಲ್ಲಿ ಕವಿ ಹೊರೆಗೂದಲಿನ ಚೆಲುವಾದ ಹುಡುಗಿಯ ಸೌಂದರ್ಯವನ್ನು ಬಗೆ ಬಗೆಯಾಗಿ ವರ್ಣಿಸುತ್ತ ಕೊನೆಗೆ ಅವಳು ನಿದ್ರೆಯ ಗುಳಿಗೆಯ ವಶವಾಗಿ ಸಾವನ್ನಪ್ಪಿದಾಗ—

'ನಿರುಪಮಾನ ಚೆಲುವ ಸುತ್ತ
ಸಾವು ಕಟ್ಟಿತೆಂತು ಹುತ್ತ?
ನಿಗೂಢವಿಹುದು ಆ ನಿಮಿತ್ತ' **(ಬಲ್ಲೆ ನಾನು...)**

ಎಂದು ಕವನ ಕೊನೆಗೊಂಡಾಗ ಆ ಜಂಟಿ ಜಡೆಯ ತುಂಟಿ, ಬಿಂಕ ಸರಸಗಳ ಸಮನ್ವಯದ, ನಡೆ ನುಡಿಯಲಿ ಹಿತ ಮಿತತೆಯ, ವಿನಯದ ಸುಕೋಮಲೆಯ ಅಂತ್ಯ ಹೀಗೆ ಬಯಲಲ್ಲಿ ಮರೆಯಾಯ್ತು ಸೋಗೆಯ ಹಾಗೆ—ಎಂದು ಪ್ರಲಾಪಿಸುವ ಕವಿ ಹೃದಯ ಓದುಗನ ಕಣ್ಣಿನಲ್ಲೂ ನೀರ ಹನಿಯನ್ನು ಕಾಣಿಸುತ್ತದೆ.

'ಕನ್ನಡ'ದ ಹಿರಿಮೆಯನ್ನು ಕಣ್ಣಿಗೆ ಕಟ್ಟುವಂತೆ ನಿಸಾರರು ಕನ್ನಡ ಚಳವಳಿಗಾರರಿಗೆ ಸೋದೋರಣವಾಗಿ ಕಾಣಿಸಿದ್ದಾರೆ. ಇಲ್ಲಿನ ಮಾತುಗಾರಿಕೆ ಹೃದ್ಯ, ಹರ್ಷಪ್ರದ :

'ಕನ್ನಡವೆಂದರೆ ಬರಿ ನಾಡಲ್ಲ,
ಭೂಪಟ, ಗೆರೆ, ಚುಕ್ಕೆ.
ಮರವೆಂದರೆ ಬರಿ ಕಟ್ಟಿಗೆಯೆ?
ಶ್ರೀಗಂಧದ ಚಕ್ಕೆ.
ಕನ್ನಡವೆಂದರೆ ಜನಜಂಗುಳಿಯಲ್ಲ—
ಜೀವನ ಶೈಲಿ ವಿಧಾನ
....
ಕನ್ನಡವಲ್ಲ ತಿಂಗಳು ನಡೆಸುವ
ಗುಲ್ಲಿನ ಕಾಮನಬಿಲ್ಲು
ರವಿ ಶಶಿ ತಾರೆಯ ನಿತ್ಯೋತ್ಸವವದು,
ಸರಸತಿ ವೀಣೆಯ ಸೊಲ್ಲು.' **(ಕನ್ನಡವೆಂದರೆ)**

ಕನ್ನಡದ ಅಭಿಮಾನ ಬರಿ ತೋರಿಕೆಗೆ ಸಾಲದು. ಅದು ಹೃದಯಸ್ಥವಾಗಬೇಕು. ಅದರ ಹಿರಿದಾದ ಅರ್ಥವನ್ನು ಮನಗಾಣಬೇಕೆಂಬ ವಿಚಾರವನ್ನು ಕವಿ ಮನೋಜ್ಞವಾದ ಹಾಡಾಗಿಸಿದ್ದಾರೆ.

'ಈ ದಾರಿಯ ಮರೆಯಲಾರೆ' ಎಂದು ಕವಿ ತಾನು ದಿನ ನಿತ್ಯ ಓಡಾಡುವ ದಾರಿಯಲ್ಲಿ ಕಾಣುವ ಪ್ರಕೃತಿಯ ಸೊಬಗನ್ನು ವರ್ಣಿಸಿದ್ದಾರೆ. ಕಲ್ಪನೆಗಳ ಸ್ವರ್ಗಲೋಕಕ್ಕೆ ರಹದಾರಿ, ಗುಲ್‌ಮೊಹರ್ ಹೂಗಳ ಸುಮ ಸೌರಭ, ಗಿಳಿ ಮೈನಾ ಹಕ್ಕಿಗಳ ಸವಿ ಗಾನ, ಅಳಿಲು ಇರುವೆಯ ಸಂತಾನ, ತರು ಖಗ ಸಂಸಾರ—ಇವುಗಳನ್ನು ಕಾಣುತ್ತಾ ಸಮತಟ್ಟಿನ ತಿಳಿ ಬಿಸಿಲಲ್ಲಿ ವಿಹರಿಸುವ (ಕವಿ ನಡೆಯುವ) ದಾರಿ ಪ್ರಕೃತಿ ಇತ್ತ ಮಹತ್ತರ ಕೊಡುಗೆ. ಇಲ್ಲಿ ನಿಶ್ಶಬ್ದ, ಪ್ರಶಾಂತತೆ, ತಂಪು ಗಾಳಿ ಅಯಸ್ಕಾಂತತೆಯಂತೆ ಸೆಳೆದಾಗ ಕವಿ ಭಾವಕ್ಕೆ ಎಷ್ಟೆಷ್ಟೋ ಸ್ಫೂರ್ತಿ ಉಕ್ಕಿ ಕವನಗಳು ಜೀವ ಪಡೆದು ಈ ದಾರಿಯನ್ನು ಮರೆಯಲು ಅಸಾಧ್ಯ. ಇದು ಜೀವನದ ಒಂದು ಭಾಗವೇ ಆಗಿದೆ ಎಂದು ನಿಸಾರರು 'ತನ್ನ ವ್ಯಕ್ತಿತ್ವದ ರೂವಾರಿ ಈ ದಾರಿ' ಎಂದು ಸಾರಿದ್ದಾರೆ. ದಿನನಿತ್ಯದ ಸಾಮಾನ್ಯ ಸಂಗತಿಗಳಲ್ಲೂ ಅತಿಶಯವಾದದ್ದನ್ನು ಗುರುತಿಸುವ ನಿಸಾರರ ಮನೋದೃಷ್ಟಿ ಅಪೂರ್ವವಾದದ್ದು.

ನಿಸಾರರಿಗೆ ಪ್ರಕೃತಿಯೆಂದರೆ ಅಚ್ಚುಮೆಚ್ಚು. ಬಹುಶಃ ಬಾಲ್ಯಕಾಲದಲ್ಲಿ ಅವರು ಲಾಲ್‌ಬಾಗಿನಲ್ಲಿ ಆಟವಾಡುತ್ತ ಕಳೆದ ದಿನಗಳು ಇದಕ್ಕೆ ಕಾರಣವಿರಬಹುದು. ಲಾಲ್‌ಬಾಗಿನ ಸುಂದರ ಹೂಗಿಡಗಳು, ಕೆರೆ ಗಿರಿ ಪಕ್ಷಿಸಂಕುಲಗಳು ಎಲ್ಲವೂ ಕವಿಯ ಮನಸ್ಸಿನಲ್ಲಿ

ಗಾಢವಾದ ಪ್ರಭಾವ ಬೀರಿರಬೇಕು. ಇದರ ಪರಿಣಾಮ ಪ್ರಕೃತಿ ಪ್ರೇಮ ಹಾಗೂ ಅದನ್ನೆಲ್ಲ ತಮ್ಮ ಭಾವಗೀತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆಂದು ಹೇಳಬಹುದು.

'ಪಚ್ಚೆ ಪತ್ತಲವುಟ್ಟ ಬೆಟ್ಟದ
ನೊಸಲ ತಿಲಕವೊ ನೇಸರ;
ಹಚ್ಚೆ ಕುಚ್ಚಿಸಿಕೊಂಡ ಮದುವಣ-
ಗಿತ್ತಿಯಂತಿದೆ ಪರಿಸರ.'

* * *

'ಈ ನಿಸರ್ಗದ ಚೆಲುವ ಸ್ವರ್ಗದ
ನಲವ ಸವಿಯುವ, ಗೆಳೆಯ ಬಾ!' (ಪ್ರಕೃತಿ ಆಚರಿಸಿಹುದು...)

ಎಂದು ಆಹ್ವಾನ ಕೊಡುವ ನಿಸಾರರು ಸತ್ವತಃ ಪ್ರಕೃತಿ ಕವಿ. ಅವರ ಕಣ್ಣು, ಮನಸ್ಸು ನಿಸರ್ಗದ ಸೌಂದರ್ಯಕ್ಕೆ ಶರಣಾಗಿದೆ.

'ನೆಲದ ಸಿರಿಯ ಸವಿಯದವನ
ಬಾಳು ಬಾಳೇ ಅಲ್ಲ; ಬೀಳು.' (ನೆಲದ ಸಿರಿ)

ಈ ಭೂಮಿಯಲ್ಲಿ ಸೌಂದರ್ಯವನ್ನು ಕಾಣದವನ ಜೀವನ ವ್ಯರ್ಥವಾದುದೆಂಬ ನಿಸಾರರ ವಾದಕ್ಕೆ ಓದುಗ ತಲೆ ಬಾಗಲೇಬೇಕು. ಸೌಂದರ್ಯವನ್ನು ಸವಿಯಬೇಕಾದರೆ ಅದಕ್ಕೆ ಸ್ಪಂದಿಸುವ ಹೃದಯವೂ ಬೇಕು; ತನ್ಮಯತೆಯ ವಿಶೇಷಗುಣವೂ ಇರಬೇಕು.

'ಬಾ ನಲ್ಲೆ ಬೇಟಕ್ಕೆ, 'ಪ್ರೇಮಿಗಳಿಗೆ ಕಡುವ್ಯೆರಿ ನಗರ', 'ನನ್ನ ಬಾಲ್ಯದ ಗೆಳತಿ', 'ಎಲ್ಲಿರುವೆ ಚಿನ್ನ ಬದುಕ ಕಲೆಗೊಳಿಸಿದಾಕೆ', 'ನನ್ನ ಮೆಚ್ಚಿಕೆಯಾತ', 'ಅವಸರ ಏಕೆ?' ಮುಂತಾದ ರಚನೆಗಳು ಪ್ರೇಮ, ಸ್ನೇಹ, ರಾಗ ವಿರಾಗ, ದುಃಖ ದುಮ್ಮಾನಗಳ ವಿಚಾರಗಳಿಂದ ಹುಟ್ಟಿ ಕೊಂಡ ಗೀತೆಗಳು. ನಿಸಾರರ ಇಲ್ಲಿನ ಕವಿತಾ ಪ್ರತಿಭೆಯಲ್ಲಿ ವಿಶೇಷವಾದ ಆಯಾಮವನ್ನು ಕಾಣುತ್ತೇವೆ. ಅವರು ಪ್ರೇಮಿಗಳನ್ನಾಗಲಿ, ವಿರಹಿಗಳನ್ನಾಗಲಿ ತಮ್ಮ ಅಂತರಾಳದ ಸಂವೇದನಪೂರ್ಣ ನೋಟದಿಂದ ಅತ್ಯಂತ ಸೂಕ್ಷ್ಮವಾಗಿ ಕಂಡು ಚಿತ್ರಿಸುವ ಕಲೆಗಾರರಾಗಿದ್ದಾರೆ.

೧. 'ಹಸಿದ ತುಟಿಗಳ ಸ್ಪರ್ಶಕೆ—ಮೈ
ಬಿಸಿಯ ಮಸೆತದ ಘರ್ಷಕೆ.'

೨. 'ಜೊತೆ ನಡೆದವೋ ಖಳ ನೋಟ
ಮುತ್ತಿಡಲೂ ಶನಿ ಕಾಟ—
ನಮಗೆಲ್ಲಿಯ ಬೇಟ?'

೩. 'ಶಾಲೆ ದಿನಗಳ ತುಂಟ ತೆಳ್ಳನೆಯ ಚೆಂದುಳ್ಳಿ—
ಹೊರವಾಗಿ ಕುಸುಮಿಸಿದೆ ಮುದ್ದುಬಳ್ಳಿ.'

೪. 'ಕಳೆದೆನ್ನ ಶೈಶವದ ಹುಣ್ಣಿಮೆಯ ಹೂವೇ
ಕರಿ ಮುಗಿಲ ವಿಷ ಕೀಟ ಮುತ್ತದಿರಲಿ.'

೫. ‘ಚಣದಂತೆ ಸರಿದಿದ್ದ ಉನ್ಮತ್ತ ರಾತ್ರಿಗಳು
ಮಧುಲಿಪ್ತ ನೇತ್ರಗಳು, ಬರಿದಾದ ಪಾತ್ರೆಗಳು
ಅಚ್ಚಳಿಯದಿವೆ ಅಂದಿನಾಮೋದ ಜಾತ್ರೆಗಳು.’

೬. ‘ಪ್ರೇಮದುದ್ಯಾನಕ್ಕೆ ಏಕಾಂತವೆ ಬೇಲಿ
ಒಳಗಲ್ಲಿ ಯೌವನದ ವಿಧ ವಿಧದ ಕೇಲಿ;’

೭. ‘ಪ್ರೇಮ ಮಮತೆಯಲಿ ಅಮೃತ ಕರೆದಾಕೆ
ನಲಿದು ಹರಿಸಿರುವೆ ನಿತ್ಯ ಸೆಲೆಯನ್ನೆ.’

೮. ‘ಕಾಮನ ಬಿಲ್ಲಿನ ಸೇತುವೆ ತೂಗಿದೆ
ಬೆಸೆಯುತ ನಮ್ಮಯ ಮನಸುಗಳ;’

೯. ‘ನುಡಿಗೊಡು ಹಿಮಗಟ್ಟಿರುವ ಒಳ ಅಳಲಿಗೆ
ಹೊರ ಚೆದುರಲಿ ಕಾರ್ಮುಗಿಲು.’

೧೦. ‘ಉರಿವ ಸೂರ್ಯನ ಚಿತೆಯ ಬೂದಿಯಂತಿದೆ ಬಾನು.’

೧೧. ‘ಕಾಗೆ ದನಿ ಪರಚುತಿದೆ ದಿನದ ಮೊಗವ.’

೧೨. ‘ಮುಡಿದ ಬಿಡಿಯ ಹೂವಿನಂತಿದೆ ಮನಸು.’

೧೩. ‘ಸ್ವಪ್ನದುದ್ಯಾನವ ಬಳಸಿರುವುದು ಬಿರು ವಾಸ್ತವದ ಮಸಣ.’

—ಹೀಗೆ ಚಿತ್ರ, ರೂಪಕ, ಪ್ರತಿಮೆ ಹಾಗೂ ಲಯಗಾರಿಕೆಯಿಂದ ಇವರು ಕವನ ಕಟ್ಟುವ ರೀತಿ ಅನನ್ಯವಾದುದು. ಈ ನವಿರಾದ ಭಾವಸ್ಫುರಣೆಗೆ ಸರಳ ಸುಂದರ ಶೈಲಿಯು ಸ್ವಾಭಾವಿಕ ವಾಗಿದೆ. ಕೆಲವು ವಿರಹಗೀತೆಗಳ ಉತ್ಕಟ ಅನುಭವಗಳನ್ನು ಬಿಚ್ಚಿ ತೋರುವ ಸಾಲುಗಳು ಓದುಗನನ್ನು ಚಿಂತನೆಗೆ ಹಚ್ಚುತ್ತವೆ. ನಿಸಾರರ ಕವನದ ಸಾಲುಗಳು ರಸ ಪಾಕದ ಸವಿತುತ್ತುಗಳು.

ನಿಸಾರರ ಕವನ 'ನನ್ನ ನಿನ್ನ ಜೀವಿತ'ದಲ್ಲಿ ಒಂದು ವೃತ್ತ ಹೀಗಿದೆ:

‘ನರನ ಬದುಕು ಸಂತೆ ಸರಕು;
ಹಬ್ಬ ದಿನದ ತೋರಣ.
ದೀಪವಾರಲೆನಿತು ಸಮಯ,
ತೀರೆ ತೈಲ ಹೂರಣ?
ನನ್ನ ನಿನ್ನ ಜೀವಿತ
ಯಾರಿಗೋ ಸಮರ್ಪಿತ;’

ಮನುಷ್ಯನ ಜೀವನವೆಂಬುದು ಸಂತೆಯಲ್ಲಿ ಮಾರುವ ವಸ್ತುವಿನಂತೆ, ಹಬ್ಬ ಹರಿದಿನಗಳಲ್ಲಿ ತೋರಣವನ್ನು ಕಟ್ಟಿ ಮಾರನೆಯ ದಿನ ಎಸೆಯುವಂತೆ, ಹಚ್ಚಿದ ದೀಪ ಎಣ್ಣೆ ಮುಗಿದಾಗ ಆರುವಂತೆ, ನಮ್ಮ ನಿಮ್ಮ ಜೀವ ಇನ್ನಾರಿಗೋ ಮೀಸಲಿಟ್ಟಂತಾಗಿದೆ.

ಇಂತಹ ಅನೇಕ ಕವನಗಳಲ್ಲಿ ಇವರ ಶೈಲಿಯ ಸೊಗಸನ್ನು ಸವಿಯಬಹುದು. ನೈಜ ಉಪಮಾನಗಳನ್ನು ನವಿರಾದ ಪದ ಪುಂಜಗಳಿಂದ ಬಣ್ಣಿಸಿ ಕವನ ಕಟ್ಟುವ ಕಲೆ ನಿಸಾರರಿಗೆ

ಒಲಿದು ಬಂದಿದೆ.

> 'ಸಂಭವಾಮಿ ದಿನೇ ದಿನೇ ಎನುವ ಪಣ ತೊಡು ತಂದೆ,
> ರಕ್ಷಿಸೀ ದೇಶವನು ಖೂಳರಿಂದ.
> ಬಾಳ ತಕ್ಕಡಿ ಏರುಪೇರಾಗದೆಯೆ ನಲಿದಿರಲಿ
> ಸಮತೆಯಲಿ ನಿತ್ಯ ಸ್ವಚ್ಛಂದ.'

ಯುಗಕ್ಕೊಮ್ಮೆ ಅವತರಿಸುವ ದೇವರು, ಈಗ ದಿನದಿನವೂ ಅವತಾರವೆತ್ತಲಿ. ಜಗತ್ತಿಗೇ ಅಧ್ಯಾತ್ಮದ ಸಂದೇಶ ಕೊಟ್ಟ ಈ ದೇಶ ಈಗ ದುಷ್ಟರಿಂದ ತುಂಬಿ ಹೋಗಿದೆ. ಸರ್ವರನ್ನು ಸಮಭಾವದಿಂದ ಕಾಣುವ ಧರ್ಮವಿಂದು ದುಷ್ಟರ ಕೈವಶವಾಗಿ ಎಲ್ಲ ಕಡೆ ಕಣ್ಣೀರು, ನೆತ್ತರಿನ ಮಲಿನತೆಯಿಂದ ನಾಡು ಛಿದ್ರವಾಗಿದೆ. ಧರ್ಮಾಂಧರು ಬಡವರ ದಿಕ್ಕು ತಪ್ಪಿಸಿ, ಜಾತಿವಾದಿಗಳು ದೇವರ ಹೆಸರಿನಲ್ಲಿ ಕೆಸರೆರಚುವ ಕೃತ್ಯಕ್ಕೆ ತೊಡಗಿದ್ದಾರೆ. ವೃತ್ತಪತ್ರಿಕೆಯೂ ಪಕ್ಷಪಾತದಿಂದ ಕೂಡಿ ಕೆಟ್ಟ ಪ್ರಚಾರಕ್ಕೆ ಕಾರಣವಾಗಿದೆ. ರಾಜಕೀಯದ ಪುಢಾರಿಗಳು ಹೊಲಸು ಹುನ್ನಾರ ಮಾಡುತ್ತ ಬಡವರ ಬಾಳು ದಳ್ಳುರಿಗೊಂಡಿದೆ. ದೊಡ್ಡ ಗಂಟಲಿನ ಬಹುಸಂಖ್ಯಾತರು ಮೆಲು ದನಿಯವರನ್ನು ತಳ್ಳಿದ್ದಾರೆ. ರಾಷ್ಟ್ರಪಕ್ಷಿ ನವಿಲನ್ನು ಓಡಿಸಿ, ಕಾಗೆಯನ್ನು ಸ್ಥಾಪಿಸಲು ಹವಣಿಸುತ್ತಿದ್ದಾರೆ. ಈ ಕಾರಣಕ್ಕಾಗಿ ದೇವರು ದಿನ ದಿನವೂ ಹುಟ್ಟಿ ಬಂದು ಈ ದೇಶವನ್ನು ಕೆಟ್ಟ ಜನರಿಂದ ರಕ್ಷಿಸಲಿ. ಬಾಳು ಏರುಪೇರಾಗದಂತೆ ಎಲ್ಲರೂ ಸಮಾನತೆಯಿಂದ ಬಾಳುವಂತಾಗಲಿ, ಎನ್ನುತ್ತಾರೆ ಕವಿವರ್ಯ ನಿಸಾರ್.

ಕವಿಯ ವ್ಯಕ್ತಿತ್ವದಲ್ಲಿ ನಾಡಿನ ಮೇಲಿನ ಅಭಿಮಾನ ಉಕ್ಕಿ ಅಭಿವ್ಯಕ್ತಿಗೊಂಡಾಗ ಉತ್ತಮ ಗೀತೆಯೊಂದು ಹುಟ್ಟಿರುವುದನ್ನು ಇಲ್ಲಿ ಕಾಣುತ್ತೇವೆ. ಮನಸ್ಸಿನ ಮಂಥನದಿಂದ ಛಂದಸ್ಸಿನ ಚೌಕಟ್ಟಿನಲ್ಲಿ ಈ ಕವನ ಅರಳಿ ಬಂದು ಹೃದ್ಯವಾಗಿದೆ.

ನಿಸಾರರು ರಚಿಸಿದ 'ರಂಜಾನಿನಲ್ಲಿ' ಎನ್ನುವ ಗೀತೆ, ಬಾಳಿನ ದಿವ್ಯ ಸಂದೇಶವನ್ನು ನವಿರಾಗಿ, ಅಂತಃಕರಣಪೂರ್ವಕವಾಗಿ ಕಳಕಳಿಯಿಂದ ಸಾರುತ್ತದೆ.

ರಂಜಾನಿನ ಉಪವಾಸಿಯ ಕಣ್ಣಲ್ಲಿ ಮಿಂಚುವ ಹೊಳಪು ಮುಂದೆ ಬರಲಿರುವ ಶುಭ ದಿನಕ್ಕೆ ನಾಂದಿ. ದಿನ ಮತ್ತು ರಾತ್ರಿ ನಮಾಜು ಮಾಡುವ ಕೂಗಿನ ಕರೆ ಕೊಳಕನ್ನು ತೊಳೆಯುವುದು. ಪ್ರವಾದಿಗಳ ಆಚರಣೆ ಮತ್ತು ಸ್ತುತಿಯಿಂದ, ಅಲ್ಲಾನ ಪ್ರಾರ್ಥನೆಯಿಂದ ಜೀವನ ಬೆಳಕಾಗುವುದು. ಪಾಪಗಳು ದೂರವಾಗಿ, ಪುಣ್ಯಗಳು ಮೇಲಾಗಿ, ಒಳ್ಳೆಯ ಗುಣಗಳು ಮನಸ್ಸನ್ನು ತುಂಬಲಿ. ಈ ಚಂಚಲ ಮನಸ್ಸು ಪ್ರಫುಲ್ಲವಾಗಲಿ. ಪರ ಲೋಕದ ಶಿಕ್ಷಾರ್ಹ ನರಕದ ದಾರಿ ತಪ್ಪಿಸಿ ಚಿರ ನಾಕದ ದಿವ್ಯ ಸುಧೆ ಹರಿಯಲಿ.


ಈ ಪವಿತ್ರ ತಿಂಗಳು, ಸವಾಬಿಗಳ ಸಹವಾಸದಲ್ಲಿ ಬಾಳು ಜೀವನ್ಮುಖಿಯಾಗಿ ಬೆಳಗಲಿ. ಎಲ್ಲರ ಉದ್ಧಾರಕ್ಕೆ ಪ್ರಾರ್ಥನೆ, ಆರಾಧನೆ ನಡೆಯುತ್ತಿರಲಿ. ದುಷ್ಟರ ಸಂತತಿ ಅಳಿದು ಸೌಹಾರ್ದತೆ ನೆಲಸಲಿ ಎಂದು ಈ ಕವನದಲ್ಲಿ ಮೊರೆಯಿಟ್ಟಿದ್ದಾರೆ. ಭಾವನೆಗಳು ಸುಭಗ ಭಾಷೆ, ಸರಳ ಛಂದಸ್ಸಿನಲ್ಲಿ ಲಯಬದ್ಧವಾದ ನಡಿಗೆಯನ್ನು ಗೀತೆಯನ್ನು ರೇಶಿಮೆಯ ದಾರದಿಂದ ನವುರಾಗಿ ಕೋದಂತೆ ಭಾಸವಾಗುತ್ತದೆ. ಕವನ ಕಟ್ಟುವ ಕುಶಲ

ಕರ್ಮವನ್ನು ನಿಸಾರರು ಕರಗತಮಾಡಿಕೊಂಡಿದ್ದಾರೆ. ಗಗನದಿಂದ ಧಾರೆಯಾಗಿ ಇಳಿದು ಬಂದ ಧೈರ್ಯ ನವೋಲ್ಲಾಸಕ್ಕೆ ಕಾರಣವೆಂದು ಸಾಬೀತು ಮಾಡುವ ಅವರ ಕವಿ ಸಮಯದ ಆಲಂಕಾರಿಕ ಭಾಷೆ ಚೈತನ್ಯಪೂರ್ವಕವಾದುದು. ಇವರ ಹಲವು ಗೀತೆಗಳಲ್ಲಿ ಮಾನವತಾವಾದ ಸಮನ್ವಯಶೀಲತೆಯ ವಿಚಾರಗಳು ಲಹರಿ, ಲಹರಿಯಾಗಿ ಕಾಣಿಸಿಕೊಳ್ಳುತ್ತವೆ. ನಿಸಾರರ ಕಲಾಪ್ರಜ್ಞೆ ಎಲ್ಲ ಸ್ತರಗಳಲ್ಲೂ ಚೈತನ್ಯದಾಯಕವಾಗಿದೆ.

ನಿಸಾರರ ಗೀತೆಗಳು ಜನರ ಸುಖ ದುಃಖಗಳ ಸಂಮಿಶ್ರಣವಾಗಿವೆ. ಅವರು ಜನ ಸಾಮಾನ್ಯರ ಕವಿ. ಎಲ್ಲರಿಗು ಅರ್ಥವಾಗುವಂತೆ ಬರೆಯುವ ಕಲೆ ಅವರಿಗೆ ಸಿದ್ಧಿಸಿದೆ. ನಿಸಾರರ ಭಾವಗೀತೆಗಳು ಕನ್ನಡ ನಾಡಿನ ಸಾಹಿತ್ಯ ಸಂಪತ್ತಿಗೆ ಒಂದು ಹೊಸ ಶಕ್ತಿಯನ್ನೂ, ವಿಲಾಸವನ್ನೂ, ಆಯಾಮವನ್ನೂ ತಂದುಕೊಟ್ಟಿವೆ ಎಂದು ಅಭಿಮಾನದಿಂದ ಹೇಳಬಹುದು. ಜೀವನ ಪ್ರೀತಿಯನ್ನು, ಬದುಕಿನಲ್ಲಿನ ಒಲವು-ನಲವುಗಳ ಕಂಪನವನ್ನು ಅವರು ಸಮರ್ಥವಾಗಿ ಬಳಸಿದ್ದಾರೆ. ಈ ನೆಲದ ಕವಿಯಾಗಿ ಅವರ ಬಾಳು ಸಾರ್ಥಕವಾಗಿದೆ. ಮುಂದೆಯೂ ಅವರಿಂದ ನವನವೋನ್ಮೇಷಶಾಲಿಯಾದ ಭಾವಗೀತೆಗಳು ಹುಟ್ಟಿಬರಲೆಂದು ಹಾರೈಸುತ್ತೇನೆ.

ಗೋಚರ ಜಗತ್ತಿನ ನಾದಗಳ, ದೃಶ್ಯಗಳ, ಗಂಧಗಳ ಜೀವಂತ ಗ್ರಹಿಕೆ ಕವಿಗೆ ಆವಶ್ಯಕವಾಗಿರುವಂತೆ ಅವುಗಳ ಶಾಬ್ದಿಕ ಪುನಃಸೃಷ್ಟಿಯ ಕೌಶಲವೂ ಮುಖ್ಯವೆನ್ನಿಸುತ್ತದೆ. ಹಾಗಾದಾಗ ಕವನ ನೈಸರ್ಗಿಕ ವಸ್ತು, ದೃಶ್ಯಗಳ ನವನವೋನ್ಮೇಷತೆಯ ಅರಿವನ್ನು ನಮ್ಮಲ್ಲಿ ಉಂಟುಮಾಡುತ್ತದೆ. ತನ್ನ ಇಂದ್ರಿಯಾನುಭವದ ನಿರೂಪಣೆಯಲ್ಲಿ ಕವಿ ಎಷ್ಟೇ ವಸ್ತುನಿಷ್ಠವಾಗಿದ್ದರೂ ಅಲಿಪ್ತತೆಯನ್ನು ಬಯಸಿದರೂ ಅವನ ಕವನ ಪರಿಣಾಮದಲ್ಲಿ ತನ್ನ ಹಾಗೂ ತನ್ನ ಜೀವನ ಸಂದರ್ಭವನ್ನು ಕುರಿತದ್ದಾಗಿರುತ್ತದೆ. ಆದ್ದರಿಂದಲೇ ಕವನದ ಭಾಷೆಯಲ್ಲಿ ಸೃಷ್ಟಿಯಾಗುವ ಶಬ್ದಚಿತ್ರ ಅಥವಾ ಪ್ರತಿಮೆ ತನ್ನ ಮೂಲಾನುಭವದ ತದ್ವತ್ ಕೃತಿಯಾಗಲಾರದು. ಮೂಲಾನುಭವಕ್ಕೆ ಹೋಲಿಸಿದರೆ, ನಮ್ಮ ಕಲ್ಪನೆಯೊಂದಿಗೆ ಸಂವಾದಿಸುವ ಅದರ ಶಾಬ್ದಿಕ ಪ್ರತಿಮೆ ಪೇಲವವಾಗಿ ಮತ್ತು ಪ್ರಕೃತಿಸಿದ್ಧ ಆಯಾಮಗಳನ್ನು ಕಳೆದುಕೊಂಡಂತೆ ಭಾಸವಾಗುತ್ತದೆ.

(ಸೃಷ್ಟಿಕ್ರಿಯೆ)



ನಲಿವು-ತಣಿವುಗಳ ರಸವಂತ ಫಲಗಳು : 'ಸಮಗ್ರ ಭಾವಗೀತಗಳು'

♦ ಡಾ. ಗೀತಾ ರಾಮಾನುಜಂ

ಕಳೆದ ಶತಮಾನದ ಎಪ್ಪತ್ತರದ ದಶಕದಲ್ಲಿ ನಾನು ನನ್ನ ವಿದ್ಯಾರ್ಥಿನಿಯೊಬ್ಬಳ ಕಂಠದಿಂದ ಕೇಳಿದ 'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ...' ಗೀತೆ ನನ್ನ ಭಾವನಾ ಪ್ರಪಂಚವನ್ನೇ ಆಕ್ರಮಿಸಿಕೊಂಡಿತು. ಜೋಗವನ್ನು ಆಗ ನೋಡದಿದ್ದ ನನಗೆ, ನಿಸಾರರ ಈ ಭಾವಗೀತೆಯಲ್ಲಿನ ಪರಿಕಲ್ಪನೆಯ ಅತಿಶಯತೆ, ಆಮೇಲೆ ನಾನು ಜೋಗವನ್ನು ಪ್ರತ್ಯಕ್ಷವಾಗಿ ಕಂಡದ್ದಕ್ಕಿಂತ ಮಿಗಿಲಾದದ್ದು ಎಂದು ಮನಸ್ಸಿಗೆ ಅನ್ನಿಸಿತ್ತು. ಅಂದು ನನ್ನ ಅಂತರಂಗದಲ್ಲಿ ಮೂಡಿದ 'ನಿತ್ಯೋತ್ಸವ' ಗೀತೆಯ ಹೃದಯ ಮಿಡಿತ, ಇಂದು ಯಾರೇ ಅದನ್ನು ಹಾಡಿದರೂ ಹೇಗೆ ಹಾಡಿದರೂ ನಿಗೂಢತೆಯನ್ನೊಳಗೊಂಡ ಪ್ರಕೃತಿಯ ಸೊಬಗಿನ ಅಪರಿಮಿತ ಅನುಭವವನ್ನು ನೀಡುವ ಪರಿ ಅನಿರ್ವಚನೀಯ. ಕ್ರಮೇಣ ನಮ್ಮ ಬೆಂಗಳೂರಿನ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅನೇಕ ಕನ್ನಡ ಕವಿಗಳ ಗೀತೆಗಳನ್ನು ಪರಿಚಯಿಸಿದ್ದ ನನಗೆ, ಅವುಗಳನ್ನು ಹಾಡಿಸಿ ಪಟ್ಟ ಆನಂದ, ಸಂತೃಪ್ತಿ ಮಾತುಗಳಿಗೆ ಎಟುಕದಂಥದ್ದು.

ನನ್ನ ಮೂವತ್ತೊಂದು ವರ್ಷಗಳ ಅಧ್ಯಾಪನದ ಅವಧಿಯಲ್ಲಿ ನಿಸಾರರ ಹಲವು ಭಾವಗೀತೆಗಳು ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮಧುರ ಕಂಠಗಳಿಂದ ಹೊರಹೊಮ್ಮಿ ಮೆರೆದಿವೆ. ಅವರ ಹೊಸ ಹೊಸ ಕೃತಿಗಳನ್ನು ಹುಡುಕಿ, ಅವಕ್ಕೆ

ನಮ್ಮ ವಿದ್ಯಾರ್ಥಿಗಳ ಸಹಾಯದಿಂದ ರಾಗವನ್ನು ಸಂಯೋಜಿಸು ವುದು ವಾಡಿಕೆ. ಹಾಗೆ ಹಾಡಿಸುವ ಮುನ್ನ ರಚನೆಗಳನ್ನು ಅರ್ಥೈಸಿಕೊಂಡು, ನನ್ನ ಅನುಭವಕ್ಕೆ ತಂದುಕೊಂಡು, ಅನಂತರ ವಿದ್ಯಾರ್ಥಿಗಳಿಗೆ ಅವುಗಳ ಭಾವಾರ್ಥವನ್ನು ಪರಿಚಯಿಸುತ್ತಿದ್ದೆ. ಹಾಗಾಗಿ ನಿಸಾರರ ಕೃತಿಗಳ ಅವಲೋಕನಕ್ಕೆ ಮತ್ತು ಅವುಗಳಲ್ಲಿನ ಒಳನೋಟಗಳಿಗೆ ಅವಕಾಶವನ್ನು ಕಲ್ಪಿಸಿಕೊಂಡೆ.

ನಿಸಾರರ 'ಸಮಗ್ರ ಭಾವಗೀತೆಗಳು' ಸಂಪುಟದಲ್ಲಿ ಒಟ್ಟು ೧೮೫ ಗೀತಗಳಿವೆ. ಇವು ಅವರ ಜನಾದರಣೀಯವಾಗಿರುವ ಮೂರು ಕವಿತಾ ಸಂಕಲನಗಳಾದ 'ನಿತ್ಯೋತ್ಸವ', 'ಬಹಿರಂತರ', 'ನವೋಲ್ಲಾಸ'ಗಳಲ್ಲಿ ಸೇರ್ಪಡೆಯಾಗಿವೆ. ಇವುಗಳಲ್ಲಿ ಹಲವು ರಚನೆಗಳು ಕಳೆದ ಮೂರು-ಮೂರೂವರೆ ದಶಕಗಳಿಂದ ಕನ್ನಡ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ನೆಲಸಿವೆ. ಇದಕ್ಕೆ ತಕ್ಕಮಟ್ಟಿನ ಕಾರಣವೆಂದರೆ ಸುಗಮ ಸಂಗೀತದ ನಿರ್ದೇಶಕರು, ಹಾಡುಗಾರರು ಮತ್ತು ವಾದ್ಯಗಾರರು ಎನ್ನಬಹುದು. ಅದರಲ್ಲೂ ದಿವಂಗತ ಮೈಸೂರು ಅನಂತಸ್ವಾಮಿ ಮತ್ತು ದಿವಂಗತ ಪದ್ಮಚರಣ್ (ಎ. ವಿ. ಕೃಷ್ಣಮಾಚಾರ್) ಅವರ ರಾಗ ಹಾಗೂ ಸಂಗೀತ ಸಂಯೋಜನೆ ನಿಜಕ್ಕೂ ನಿಸಾರರ ಕೆಲವು ಗೀತಗಳನ್ನು ಅಜರಾಮರ ಗೊಳಿಸಿವೆ.

ಪ್ರಸ್ತುತ 'ಸಮಗ್ರ ಭಾವಗೀತಗಳು' ೨೦೦೦ ಇಸ್ವಿಯಲ್ಲಿ ಪ್ರಕಾಶಿತಗೊಂಡು ೩೦೪ ಪುಟಗಳನ್ನು ಹೊಂದಿದೆ. ಇದರ ಮೂರು ಕವನ ಗುಚ್ಛಗಳಲ್ಲಿ ಹಾಡುಗಳಾಗಿ ಜನಮನ್ನಣೆ ಪಡೆದ ಹಲವು ಉತ್ತಮ ಗೀತಗಳಿರುವಂತೆ, ಅಷ್ಟೇನೂ ಪ್ರಸಿದ್ಧಿ ಕಾಣದ ಅನೇಕ ಉತ್ಕೃಷ್ಟ ಕವಿತೆಗಳೂ ಇವೆ. ಇವುಗಳೆಲ್ಲವನ್ನೂ ವಿವರವಾಗಿ ವಿಮರ್ಶಿಸಲು ಒಂದು ಹಿರಿಯ ಹೊತ್ತಗೆಯೇ ಬೇಕಾದೀತು. ಹಾಗೆ ನೋಡಿದರೆ, ಕೆ.ಎಸ್.ನ. ಅವರ ಭಾವಗೀತೆಗಳಂತೆ ನಿಸಾರರ ಗೀತೆಗಳೂ ಮೌಲಿಕ ಹಾಗೂ ಕೂಲಂಕಷ ವಿಮರ್ಶೆ, ವಿವೇಚನೆಗಳಿಗೆ ಅರ್ಹವಾಗಿವೆ. ಯಾರಾದರೂ ಇದನ್ನು ನೆರವೇರಿಸಿ ಒಂದು ಉದ್ಗ್ರಂಥವನ್ನು ಹೊರ ತಂದರೆ, ಅದರಿಂದ ಇಬ್ಬಗೆಯ ಲಾಭವಾಗುತ್ತದೆ: ಒಂದು, ನಮ್ಮ ಕನ್ನಡ ಸಾಹಿತ್ಯದ ವಿಮರ್ಶಾ ಕ್ಷೇತ್ರಕ್ಕೆ, ಮತ್ತೊಂದು, ಸುಗಮ ಸಂಗೀತದ ಪ್ರಕಾರಕ್ಕೆ.

ಈಗ ನಾನು ವಿಹಂಗಮಾವಲೋಕನದ ಬಗೆಯಲ್ಲಿ ಅವರ 'ಸಮಗ್ರ ಭಾವಗೀತಗಳು' ಸಂಪುಟದಿಂದ ನನಗೆ ಅತ್ಯಂತ ಮೆಚ್ಚುಗೆಯಾದ ಕೆಲವೊಂದು ಹಾಡುಗಳನ್ನು ಮಾತ್ರ ಪರಿಶೀಲನೆಗೆ ತೆಗೆದುಕೊಂಡಿದ್ದೇನೆ. ಇದು ಒಂದು ಪರಿಚಯಾತ್ಮಕ ಹಾಗೂ ನಾಂದೀಸ್ವರೂಪದ ಲೇಖನ, ಸಮಗ್ರವಾದ ಮತ್ತು ಸವಿವರ ಸಮಾಲೋಕನವಲ್ಲವೆಂದು ಹೇಳಬಯಸುತ್ತೇನೆ.

ನಿಸಾರರ ಭಾವಗೀತೆಗಳಲ್ಲಿ ವಿಷಯ ವೈವಿಧ್ಯ, ಭಾವಗಳ ಉತ್ಕಟತೆ, ಚಿಂತನೆಯ ಆಳ, ನೋವು ನಲಿವುಗಳ ಪರಿಣಾಮಕಾರಿಯಾದ ಅಭಿವ್ಯಕ್ತಿ ನಮ್ಮನ್ನು ಚಕಿತಗೊಳಿಸುತ್ತದೆ. ಪ್ರೇಮ-ವಿರಸಗಳ ತೀವ್ರತರವಾದ ಸಂವೇದನೆ, ನಿಸರ್ಗ ರಮಣೀಯತೆಯ ತನ್ಮಯತೆ, ಸಮಾಜದ ಅಂಕು-ಡೊಂಕುಗಳ ಸ್ವರೂಪದ ವಿಷಾದ, ವೈಯಕ್ತಿಕ ಬದುಕಿನ ಸೋಲು-ಗೆಲವು

ಮತ್ತು ಏಳು-ಬೀಳುಗಳ ಚಿತ್ರಣ ಮನಮುಟ್ಟುವಂತೆ ಮೂಡಿದೆ. ಮತಾತೀತವಾದ ಪ್ರಗತಿಪರ ಅಂತರದರ್ಶನ, ವಿಶ್ವಮಾತೆಯ ಮತ್ತು ಅವಳ ತನುಜಾತೆಯಾದ ಕನ್ನಡ ತಾಯಿಯ ಮಮತೆಯ ಮತ್ತು ಹಿರಿಮೆಯ, ಜೀವನ ತತ್ವದ ಗಹನತೆಯ, ಹೆಣ್ಣಿನ ಅಸಹಾಯಕತೆಯ, ದಮನಿತ ಆರ್ತತೆಯ ಸಜೀವ ನಿರೂಪಣೆ ಅತ್ಯಂತ ಪರಿಣಾಮಕಾರಿಯಾಗಿ ಒಡಮೂಡಿದೆ. ಹೀಗೆ, ಹತ್ತು ಹಲವು ಅರ್ಥಗರ್ಭಿತವಾದ, ಬಾಳಿಗೆ ಸಂದೇಶ ನೀಡುವಂತಹ ಅಂಶ ಗಳನ್ನೊಳಗೊಂಡು ಹೃದಯಕ್ಕೆ ಮುದ ನೀಡುವ, ಮೆದುಳಿಗೆ ಚುರುಕು ಮುಟ್ಟಿಸುವ, ವಿವೇಕಕ್ಕೆ ಸಾಣೆ ಹಿಡಿಯುವ ನಿಸಾರರ ಭಾವಗೀತೆಗಳ ಸ್ವರೂಪ, ಕವಿಯ ವಿಶಾಲವಾದ ಲೋಕಾನುಭವವನ್ನೂ, ಅದನ್ನು ಸಂವೇದನಾತ್ಮಕವಾಗಿ ತಮ್ಮದಾಗಿಸಿಕೊಂಡು ಕಲಾಪೂರ್ಣ ವಾಗಿ ಅಭಿವ್ಯಂಜಿಸುವ ಪ್ರಭಾವಶಾಲಿ ರೀತಿಯನ್ನೂ ಮನದಟ್ಟು ಮಾಡಿಸುತ್ತದೆ.

ಎಪ್ಪತರ ಸಂವತ್ಸರದಿಂದ ಈತನಕ ಅವರ ಭಾವಗೀತೆಗಳಲ್ಲಿ ನಾನು ಕಂಡುಕೊಂಡ ವಿಶೇಷವನ್ನು, ಪಡೆದ ಹಾರ್ದಿಕ ಅನುಭವವನ್ನು ತೋಡಿಕೊಳ್ಳಲು ಈ ಲೇಖನ ಮೈ ತಳೆದಿದೆ. ಇವರ ಭಾವಗೀತೆಗಳಲ್ಲಿ ಚಿಮ್ಮುವ ಭಾವ ತರಂಗಗಳನ್ನು ಟೀಕಾತ್ಮಕವಾಗಿ ಹಳಿದು ನನ್ನ ಜಾಣ್ಮೆ, ಕಲಿಕೆಗಳನ್ನು ಮೆರೆಸುವ ವಿಮರ್ಶೆಯ ಗೋಜಿಗೆ ಹೋಗುವುದು ನನ್ನ ಧ್ಯೇಯವಲ್ಲ. ಅಂದರೆ, ಇವರ ಭಾವಗೀತೆಗಳು ಉನ್ನತಮಟ್ಟದವೋ ಅಥವಾ ಇತರ ಕವಿಗಳಿಗಿಂತ ಹೆಚ್ಚೋ-ಕಡಮೆಯೋ ಎಂದು ಪೋಸ್ಟ್‌ಮಾರ್ಟಮ್ ಮಾಡುವ ತರ್ಕ ಬುದ್ಧಿಯ ಹತ್ಯಾರು ಗಳ ವೈದ್ಯಳೂ ನಾನಲ್ಲ. ನಿಸಾರರ ಕವಿತೆಗಳಲ್ಲಿ ಇರುವ ಶ್ಲಾಘ್ಯ ಗುಣಾಂಶಗಳನ್ನು ಅಭಿವ್ಯಕ್ತಿಸುವುದು ನನ್ನ ಉದ್ದೇಶ.

'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ' ('ನಿತ್ಯೋತ್ಸವ') ಗೀತೆ ನನ್ನಲ್ಲಿ ಆಹ್ಲಾದಕರವಾಗಿ ಮೂಡಿಸಿದ ತೀವ್ರತರ ಭಾವನಾತರಂಗಗಳ ಅನಂತರ, ನನ್ನ ಅಂತರಂಗವನ್ನು ಚಿಂತನೆಗಳ ಝುಂಝಾವಾತದಿಂದ ಮನ ಕಲಕುವಂತೆ ಮಿಡಿದ ಗೀತೆ ಯೆಂದರೆ 'ನಾಡ ದೇವಿಯೆ':

'ನಾಡದೇವಿಯೇ ಕಂಡೆ ನಿನ್ನ
ಮಡಿಲಲ್ಲಿ ಎಂಥ ದೃಶ್ಯ.
ನೋವು ನಗೆಯ ಸಮ್ಮಿಶ್ರದಲ್ಲಿ
ಎದೆಯಾಯಿತದಕೆ ವಶ್ಯ...'

ಎನ್ನುವ ಪ್ರಾರಂಭಿಕ ಪಂಕ್ತಿಗಳೇ ನಮ್ಮ ದೇಶದ ಹಾಲಿ ಪರಿಸ್ಥಿತಿಯ ಅರ್ಥೈಕೆಗೆ ನಾಂದೀಸ್ವರೂಪದ್ದಾಗಿವೆ. ಈ ಗೀತೆಯಲ್ಲಿ ಚಿಂತನೆಯ ಲಹರಿ ವಾಸ್ತವಿಕ ಸತ್ಯದ ಹಳಿಯ ಮೇಲೆ ತಡೆಬಡೆಯಿಲ್ಲದೆ ಮುಂದೆ ಸಾಗುತ್ತದೆ. ಹತ್ತಾರು ವೈಚಾರಿಕ ಲೇಖನಗಳು, ನೂರಾರು ಚಿಂತನಾತ್ಮಕ ಭಾಷಣಗಳು ಬೀರಲಾಗದಂತಹ ಪರಿಣಾಮಗಳನ್ನು ಈ ಗೀತೆ ಪ್ರಭಾವಕಾರಿ ಯಾಗಿ ಮೂಡಿಸುವ ಸಾಮರ್ಥ್ಯವನ್ನು ಹೊಂದಿದೆ. ಬಹುಕಾಲದವರೆಗೆ ನಮ್ಮನ್ನು ಕಾಡುವಂತೆ, ನಮ್ಮ ಮನಃಪರಿವರ್ತನೆಯನ್ನು ಸಾಧಿಸುವಂತೆ ಈ ಗೀತೆ ಪರಿಣಾಮ ಬೀರುತ್ತದೆ. ನಮ್ಮ ದೇಶದ ಸ್ವಾತಂತ್ರ್ಯದ ಅನಂತರದ ಸ್ಥಿತಿಗತಿಗಳನ್ನು ಅಡಕವಾಗಿ,

ಮಾರ್ಮಿಕವಾಗಿ ಬಿಂಬಿಸಿ ನಮ್ಮ ಮನಸ್ಸುಗಳಲ್ಲಿ ಅರಿವು, ಎಚ್ಚರಗಳನ್ನು ಮೊಳೆಯಿಸುತ್ತದೆ.

'ರಿಯಲಿಸ್ಟಿಕ್' ಕವಿತೆಗಳ ಸಾಲಿಗೆ ಸೇರುವಂತಹ ಈ ಕವಿತೆಯ ಚಿಂತನೆಗಳ ಗರ್ಭದಲ್ಲಿ ಅಸಹಾಯಕತೆ, ಆರ್ತತೆ, ಅಪ್ರಾಪ್ಯತೆಯ ಹತಾಶೆಗಳು ನೆಲಸಿವೆ. ಸಮಾಜದ ಒಡಕು-ತೊಡಕುಗಳನ್ನು, ಓರೆಕೋರೆಗಳನ್ನು ಕಾವ್ಯಮಯವಾಗಿ ನಿಸಾರರು ಚಿತ್ರಿಸಿರುವ ರೀತಿ ಹೃದಯಂಗಮವೆನ್ನಿಸುತ್ತದೆ. ಈಗಲೂ ವರ್ಷಕ್ಕೊಮ್ಮೆ ಈ ಗೀತೆಯನ್ನು ವಿದ್ಯಾರ್ಥಿಗಳಿಂದ ಹಾಡಿಸಿ, ಜಾಗೃತಿ ಮೂಡಿಸಲು ಪ್ರಯತ್ನಿಸುವುದು ನನಗೆ ಪ್ರಿಯವಾದ ವಿಷಯ. ಇಂತಹ ಗೀತೆಗಳು ವಿದ್ಯಾರ್ಥಿಗಳಲ್ಲಿ ನಮ್ಮ ಸಮಾಜದ ದುಃಸ್ಥಿತಿಯ ಬಗ್ಗೆ ಬೆಳಕು ಚೆಲ್ಲಿ ಅವರನ್ನು ವಿಚಾರಕ್ಕೆ ಹಚ್ಚುವುದನ್ನು ನಾನು ಅನುಭವದಿಂದ ಬಲ್ಲೆ.

ನನಗೆ 'ನಾಡ ದೇವಿಯೇ' ಕವನದಲ್ಲಿ ಅನೇಕ ಸಾಲುಗಳು ಮೆಚ್ಚಿಗೆಯಾಗಿವೆ; ನನ್ನ ಅಂತರ್ಯವನ್ನು ಮಿಡಿದಿವೆ. ಅವುಗಳೆಂದರೆ:

'ಕತ್ತಲಲ್ಲಿ ಕಂಗೆಟ್ಟು ಎಡವಿ ತಡವರಿಸುತಿರಲು ಮಂದಿ
ಕಡೆಗಣಸುತವರ ನಡೆದಿರುವನೊಬ್ಬ ಸ್ವಹಿತಕ್ಕೆ ಹಿಡಿದು ದೊಂದಿ.
'ಸಂಸ್ಕಾರವಿಲ್ಲ ಹೆಣಕೆಂದು ತಲೆಗೆ ಕೈ ಹೊತ್ತ ಬಡವನೊಬ್ಬ;
ಇನ್ನೊಬ್ಬ ತಾನು ಆಚರಿಸುತಿರುವ ವೈಭವದ ಹುಟ್ಟುಹಬ್ಬ.
'ಅನ್ನವಿರದ ಹಸುಳೆಗಳ ತಬ್ಬಿ ಅಳುತಿರುವ ತಾಯ ಕಂಡೆ
ದುಃಖಪೂರ ಉಕ್ಕುಕ್ಕಿ ಮೊರೆಯೆ ಕೊಚ್ಚಿತ್ತು ಬಾಳ ದಂಡೆ.
'ಹೊಟ್ಟೆ ಹೇಳಿಗೆಯ ಬಿಚ್ಚಿ ಹಸಿವ ಹಾವನ್ನು ಚುಚ್ಚಿ ಕೆಣಕಿ
ಯುಕ್ತಿರಾಗದಲಿ ಕುಣಿಸಿ, ದಣಿಸಿ ನಲಿದಿಹರು ಹಲರು ಬದುಕಿ'
(ನಾಡ ದೇವಿಯೆ)

ಕವನದ ಈ ಚರಣಗಳು ಹೃದಯವನ್ನು ಹಿಂಡುವಂತಹ ಅನುಭವವನ್ನು ನೀಡುತ್ತವೆ. ಅಲ್ಪಸ್ವಲ್ಪ ಮನಃಸಾಕ್ಷಿ ಎಂಬುದಿದ್ದರೆ ದೇಶದ ದುರವಸ್ಥೆಯನ್ನು ಕುರಿತಂತೆ ಜಡರಂತಿರುವ, ಅವಜ್ಞೆಯನ್ನು ತಾಳಿರುವ ನಮ್ಮ ಬಗ್ಗೆ ನಮಗೇ ತಾತ್ಸಾರ ಮೂಡಿಸುವಂತಹ ಪ್ರಬಲ ಹಾಗೂ ಪರಿಣಾಮಕಾರಿ ಚಿಂತನೆಗಳು ಈ ರಚನೆಯಲ್ಲಿವೆ. ಇಂತಹ ಚಿಂತನೆಗಳು ದೇಹಗತವಾಗಿ ಕಾವ್ಯಮಯತೆಯಿಂದ ಹೊರಹೊಮ್ಮಬೇಕಾದರೆ ಕವನ ಕಟ್ಟುವ ಶಕ್ತಿಯಷ್ಟೇ ಸಾಲದು, ಮಾನವೀಯತೆ ಮತ್ತು ಸಹಾನುಕಂಪದ ಹೃದಯವಂತಿಕೆಯೂ ಕವಿಗೆ ಸಹಜವಾಗಿ ಇರಬೇಕಾಗುತ್ತದೆ. ನಿಸಾರರಿಗೆ ಈ ವರ ಪ್ರಾಪ್ತವಾಗಿದೆ ಎನ್ನಬಹುದು.

ಬದುಕಿನ ಗೂಢತೆ, ಅರ್ಥವಾಗದ ಗಹನತೆ ಮತ್ತು ಅಮೇಯತೆಗಳು ನಿಸಾರ್ ಅವರನ್ನು ಬಹುವಾಗಿ ಕಾಡುತ್ತವೆ ಎಂಬುದಕ್ಕೆ 'ಆದಿಯನರಿಯದ ಪಯಣ', 'ಕರ್ಮ', 'ಇಲ್ಲಿ ಹುಟ್ಟು, ಇಲ್ಲಿ ಬಾಳು', 'ಹಳತು-ಹೊಸತು', 'ಚೇತನಾಚೇತನದ ತಿರುಳು', 'ಓ ಅಸೀಮ ಶಕ್ತಿಯೆ', 'ನಮಿಸು ಚಿತ್ತ' ಮುಂತಾದ ಹಲವಾರು ತಾತ್ತ್ವಿಕ ಗೀತೆಗಳು ನಿದರ್ಶನವಾಗಿವೆ.

ಅದರಲ್ಲೂ 'ಕರ್ಮ' ಹೆಸರಿನ ಗೀತೆಯಲ್ಲಿ ಸೃಷ್ಟಿ ನಿಯಮ ಮತ್ತು ಋತದ ಬಗ್ಗೆ ಬೆಳಕು ಚೆಲ್ಲಿರುವುದು ಯಾವ ಸಿದ್ಧಾಂತಕ್ಕೂ ಕಡಿಮೆಯಿಲ್ಲ. ಪ್ರತಿಯೊಂದು ವಸ್ತುವಿನ

ಸೃಷ್ಟಿಯೂ ದೈವನಿಯಮಿತ ಕರ್ಮವೇ ಆದರೂ ಅದನ್ನು ಅದಲು-ಬದಲು ಮಾಡುವ ಅವಿವೇಕಿ ಮನುಷ್ಯನಿಂದ ವಿಪರ್ಯಾಸ ಉಂಟಾಗಿದೆ. ಸೃಷ್ಟಿಯ ಕರ್ತವ್ಯವೊಂದಾದರೆ, ಅದು ಮನುಷ್ಯನ ಕೈವಾಡದ ದೆಸೆಯಿಂದ ಅನುಭವಿಸುತ್ತಿರುವ ಅನಿಷ್ಟಕರ ವಿದ್ಯಮಾನ ಮತ್ತೊಂದಾಗಿದೆ. ಅಂದರೆ, ಸಕಲವೂ ಸೃಷ್ಟಿಯಿಂದ ನಿಯಮಿತವಾದರೂ ಸೃಷ್ಟಿಸಿದ್ದನ್ನು ಉಳಿಸುವಿಕೆಯಲ್ಲಿ ಸಂಯಮಿಸದಿದ್ದರೆ, ಎಚ್ಚೆತ್ತುಕೊಳ್ಳದಿದ್ದರೆ ಅದು ಸೃಷ್ಟಿಗೇ ಸವಾಲಾಗಿ ಪರಿಣಮಿಸುವುದು. ಉದಾಹರಣೆಗೆ, ಈ ಸಾಲುಗಳನ್ನು ಗಮನಿಸಬಹುದು: 'ದೇವರಿಗೆ ಮುಡಿಪಾಗಲೆಂದು ಹುಟ್ಟುವುದು ಹೂವು. / ದೇವನಡಿ ಸೇರಿದರೆ, ಪುಣ್ಯತಮ; / ಆ ಪುಣ್ಯವೂ ಆಕಸ್ಮಿಕ'ವೆಂಬುದು ಕವಿಯ ಕಾಳಜಿ. ಆ ಪುಷ್ಪ ವೇಶ್ಯೆಯ ಹಾಸಿಗೆಯನ್ನು ಸೇರಿದಾಗ ಅದು ತನ್ನ ಹುಟ್ಟನ್ನೇ ಶಪಿಸಿ ಬಾಡಬಹುದು ಎಂಬ ಈ ಗೀತೆಯ ಭಾವಾರ್ಥ ಅತಿ ನಿಗೂಢ. ಏಕೆಂದರೆ, ಇದು ಬರಿಯ ಪುಷ್ಪಕ್ಕೆ ಮಾತ್ರ ಅನ್ವಯಿಸುವುದೆಂಬುದಲ್ಲ: ಪ್ರತಿಯೊಂದು ಪ್ರಕೃತಿಯ ವಸ್ತುವಿಗೂ ಅನ್ವಯಿಸುತ್ತದೆ. ಅದರಲ್ಲೂ ವಿಶೇಷವಾಗಿ ಮನುಷ್ಯ ನೆಂಬ ಬುದ್ಧಿಜೀವಿ ಪ್ರಾಣಿಗೆ ಯಾವುದನ್ನು ಹೇಗೆ, ಎಷ್ಟು, ಎಲ್ಲಿ, ಏಕೆ ಬಳಸಿಕೊಳ್ಳಬೇಕು ಎಂಬುದರ ಅರಿವು ಇರಬೇಕಾಗುತ್ತದೆ. ಆದರೆ ಅದರ ಪರಿವೆಯಿಲ್ಲದೆ ಅನುಚಿತವಾಗಿ ಬಳಸಿಕೊಳ್ಳುವುದಲ್ಲದೆ, ತನ್ನ ಪರಿಸರವನ್ನೂ ಕಲುಷಿತಗೊಳಿಸಿ ನಾಶಗೊಳಿಸುವುದರ ಬಗ್ಗೆ ಎಚ್ಚರಿಕೆಯ ಧ್ವನಿ ಇಲ್ಲಿದೆ. ಈ ಸಾಲುಗಳನ್ನು ಗಮನಿಸಿದರೆ, ಕವಿತೆಯ ಪರಿಪೂರ್ಣ ಅರ್ಥವನ್ನು ಗ್ರಹಿಸಬಹುದು:

'ಹೂ ಹೆತ್ತ ಮರಕಿಲ್ಲ ಉತ್ತರದ ಉದ್ದೇಶ.
ಹೆರುವುದೊಂದೇ ಧರ್ಮ.
ಇನ್ನು ಹೂಗಳ ಕರ್ಮ ಪರರಿಚ್ಛೆಗನುಸಾರಿ;
ಒಂದು ಕರ್ಮಕ್ಕೊಂದು ಕಾರಣದ ಕೈವಾಡ,
ಕಾರಣದ ಹಿನ್ನೆಲೆಯು ಧರ್ಮಗಳಿಗನುವರ್ತಿ
ಹೂವುಗಳ ಸಾರ್ಥಕತೆ
ಮರಕಿಲ್ಲ ಅದರ ವ್ಯಥೆ.' **(ಕರ್ಮ)**

ಬದುಕಿನ ಹಾಳೆಗಳಲ್ಲಿ ಕಳೆದದ್ದು, ಕಳೆಯುತ್ತಿರುವುದು ಹಾಗೂ ಕಳೆಯಬೇಕಾದುದು ಎಂಬ ಭೂತ, ವರ್ತಮಾನ, ಭವಿಷ್ಯಗಳಿರುವುದರಿಂದಲೇ ಮನುಷ್ಯ ನೋವು-ನಲಿವು, ಸುಖ-ದುಃಖ, ಸೋಲು-ಗೆಲವುಗಳನ್ನು ಅನುಭವಿಸಬೇಕಾಗುವುದು. ಮನುಷ್ಯನ ಮನೋ ಪ್ರವೃತ್ತಿಗೆ ಭೂತದ ಬಗ್ಗೆ ಒಲವಿದ್ದು, ವರ್ತಮಾನದ ಬಗ್ಗೆ ಅಜ್ಞಾನವಿದ್ದು, ಭವಿಷ್ಯದ ಬಗ್ಗೆ ಕಲ್ಪನೆಯಷ್ಟೇ ಇರುತ್ತದೆ. ಯಾರು ವರ್ತಮಾನದಲ್ಲಿ ಎಚ್ಚೆತ್ತುಕೊಂಡು ಪ್ರಜ್ಞೆಯಿಂದ ಬದುಕಬಲ್ಲರೋ ಅವರೇ ತಕ್ಕಮಟ್ಟಿಗೆ ಸುಖಿಗಳು. ಆದರೆ ಗತಿಸಿ ಹೋದದ್ದು ನಮ್ಮನ್ನು ಬಿಟ್ಟೀತೇ? ವರ್ತಮಾನದಲ್ಲಿ ಬದುಕಲು ತೊಡಕಾಗದಿರುವುದೇ? ಎಂಬ ಪ್ರಶ್ನೆಗಳಿಗೆ ನಿಸಾರರ ಹಲವು ಗೀತೆಗಳು ನಿದರ್ಶನವಾಗಿವೆ. ಗತಿಸಿದ್ದನ್ನು ಬಲವಂತವಾಗಿ ದೂಡಬೇಕೇ ಹೊರತು, ಅದು ತಾನಾಗಿ ಜೀವಿಯನ್ನು ಬಿಟ್ಟು ಹೋಗದು. ಹಾಗೆಯೇ, ಗತಿಸಿದ್ದರ ಮುಕ್ಕಾಲು ಭಾಗದಷ್ಟು ವಿಷಯವನ್ನು ದೂಡದ ಹೊರತು, ಅದು ವರ್ತಮಾನದ ಬದುಕನ್ನು

ಪ್ರಸನ್ನಗೊಳಿಸದು.

'ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ
ಹೂಡಿ ಬರದಿರು ಮತ್ತೆ ಹಳೆಯ ನೆನಪೇ
ಬರಿದ ತುಟಿಗಳ ತುಂಬು ನಗೆಯ ಕಾರಣವನ್ನೆ
ಹಿರಿದು ಕೊಲ್ಲಲು ಬಳಿಗೆ ಸಾರದಿರು ನೆನಪೇ
'ಭವ್ಯ ಭವಿತವ್ಯಕ್ಕೆ ಮೊಗ ಮಾಡಿ ನಿಂತಿರುವೆ
ಬೆನ್ನಲ್ಲೆ ಇರಿಯದಿರು ಓ ಚೆನ್ನ ನೆನಪೇ.' (ಎಲ್ಲಮರೆತಿರುವಾಗ)

'ಓ! ಚೆನ್ನ ನೆನಪೇ' ಎಂದು ನೆನಪನ್ನೇ ಚೆನ್ನ ಎಂದು ಸಂಭೋಧಿಸುವ ಕವಿಯ ಜಾಣ್ಮೆ ಹೇಳತೀರದು. ಒಳ್ಳೆಯ ಮಾತಿನಿಂದ ದೂರ ಸರಿಸಬೇಕೆಂಬ ಪ್ರಯತ್ನ ಇಲ್ಲಿದೆ. ಅಂದರೆ, ಯಾವ ದಂಡ-ದಶಗುಣಕ್ಕೂ ವಾಲದ ಇಂದಿನ ವೃತ್ತಿಯ ಪ್ರತಿಬಿಂಬವಾದ ನೆನಪು ಇಂತಹ ಪ್ರಶಂಸೆಯ ಮಾತಿಗೆ ಮಾರುಹೋಗಿ ತನ್ನನ್ನು ಅಗಲಬಹುದೆಂಬುದು ಒಂದು ನಂಬಿಕೆಯಷ್ಟೇ.

ಕವಿ ನಿಸಾರರ ಭಾವಗೀತೆಗಳಲ್ಲಿ ನಾನು ಕಾಣಬಹುದಾದ ಹೆಣ್ಣಿನ ಅಬಲತೆ, ಪ್ರೇಮ ಮೀಮಾಂಸೆ, ಕಾಲ ಮರ್ಮ, ಆತ್ಮಸ್ಥೈರ್ಯದ ನಿವೇದನೆ, ಪ್ರಕೃತಿಯ ಸೊಬಗಿನ ವರ್ಣನೆ, ಸ್ವಾತಂತ್ರ್ಯದ ಮಹತ್ತರತೆ, ಆತ್ಮಪ್ರೇರಣೆ, ಭಾರತೀಯ ಅತಿ ಸನಾತನ ಸಂಸ್ಕೃತಿ ಇತ್ಯಾದಿ ಸಂಗತಿಗಳನ್ನು ನಾಲ್ಕಾರು ಸಾಲುಗಳಲ್ಲಿ ಮೂಡಿಸುವಂತಹ ಕೌಶಲ ಮೆಚ್ಚುವಂತದ್ದು. ಭಾವಾರ್ಥಗರ್ಭಿತವಾದ ವಸ್ತುವನ್ನು ಕನ್ನಡ ಭಾಷೆಯ ಸುಲಲಿತ ಮತ್ತು ಸುಭಗ ನುಡಿಗಟ್ಟಿನಿಂದ, ಮೋಡಿಗತ್ತಿನಿಂದ ನಿಸಾರರು ವ್ಯಕ್ತಗೊಳಿಸುವಲ್ಲಿ ಪಡೆದಿರುವ ಸಾಫಲ್ಯ, ಯಶಸ್ಸು, ಸಂತಸದ ಜೊತೆಗೆ ವಿಸ್ಮಯವನ್ನು ಬರಿಸುತ್ತದೆ.

ವಿಡಂಬನೆ ಮತ್ತು ಹಾಸ್ಯದ ಧಾಟಿಯ 'ನಗ್ತೀರ ನನ್ ಹಿಂದೆ', 'ಕುರಿಗಳು, ಸಾರ್, ಕುರಿಗಳು' ಗೀತೆಗಳು ಅರ್ಥನಿಬಿಡವಾಗಿ ಆಲೋಚನೆಗೆ ಗ್ರಾಸ ಒದಗಿಸುವಂತಹವು. ಪ್ರಸಕ್ತ ದೇಶದ ಸಮಸ್ಯೆಯನ್ನು, ಅವ್ಯವಸ್ಥೆಯ ಅಗರವಾಗಿರುವ ಸಾಮಾಜಿಕ ಬಾಳ್ವೆಯನ್ನು ಅವರು ಅಣಕ-ನಗೆಚಾಟಿಕೆಯ ಮೂಲಕ ಕಾವ್ಯಾಸಕ್ತರಿಗೆ ಪರಿಚಯ ಮಾಡಿಕೊಡುವ ವಿಧಾನ ಸ್ವಾರಸ್ಯಕರವಾಗಿದೆ. ದೇಶ ಸಮಾಜಗಳ ಬಗೆಗಿನ ಅತೀತ ಕಾಳಜಿಗೆ ದ್ಯೋತಕವಾಗಿದೆ.

'ಕುರಿಗಳು, ಸಾರ್, ಕುರಿಗಳು' ಪದ್ಯದಲ್ಲಿ ನಮ್ಮ ರಾಜಕೀಯ ಮುಂದಾಳುಗಳು ಜನತೆಯನ್ನು ನಯವಾಗಿ ವಂಚಿಸುವ, ಅವರ ಮುಗ್ಧತೆ ಅಮಾಯಕತೆಗಳನ್ನು ದುರುಪಯೋಗಪಡಿಸಿಕೊಂಡು ಅವರನ್ನು ಎಂದಿನ ದುಃಸ್ಥಿತಿ, ದಾರುಣತೆಗಳ ಬದುಕಿನಲ್ಲೇ ಇರಿಸಿ ತಾವು ಮೇಲೇರುತ್ತ ಸ್ವಹಿತ ಸಾಧನೆಯಲ್ಲಿ ತೊಡಗಿರುವ ಪರಿಯನ್ನು ಅತ್ಯಂತ ಹೃದಯವೇದಕ ಹಾಗೂ ಕನಿಕರ ಬರಿಸುವ ರೀತಿಯಲ್ಲಿ ಚಿತ್ರಿಸಿದ್ದಾರೆ.

ತಮ್ಮ ಸ್ವಹಿತಕ್ಕಾಗಿ, ಸವಲತ್ತುಗಳ ಸಂಪಾದನೆಗಾಗಿ ಶ್ರೀಸಾಮಾನ್ಯರಿಗೆ ಸುಳ್ಳು ಗಳನ್ನು ತಿನ್ನಿಸುತ್ತಾ; ಅವರನ್ನು ತಟತಟ, ದಗಲ್ಬಾಜಿಗಳಿಗೆ ಈಡುಮಾಡುತ್ತ, ತಾವು ಸ್ವೈರೋನ್ಮತ್ತರಾಗಿ ವಿಜೃಂಭಿಸುವುದನ್ನು ಕವಿ ಅಂತಃಕರಣ ಮಿಡಿಯುವಂತೆ ಚಿತ್ರಿಸಿದ್ದಾರೆ. ಈ

ಕೆಳಗಿನ ಸಾಲುಗಳಲ್ಲಿ ನಾಯಕರ ಸಾಮಾನ್ಯ ಜನತೆಯ, ಉಳ್ಳವರ-ಕಂಗಾಲರ ಬದುಕಿನ ವೈದೃಶ್ಯ(contrast)ವನ್ನು ನಿಸಾರರು ಕಾಣಿಸಿರುವ ಬಗೆ ಹೃದಯಸ್ಪರ್ಶಿಯಾಗಿದೆ:

'ಬಿಸಿಲಿನಲ್ಲಿ ನಮ್ಮ ದೂಡಿ ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು,
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.
ಮಾರಮ್ಮನ ಮುಡಿಗೆ ಕೆಂಪು ದಾಸವಾಳ ಆಯುವವರು.
ಬೆಟ್ಟ ದಾಟಿ ಕಿರುಬ ನುಗ್ಗಿ ನಮ್ಮೊಳಿಬ್ಬರನ್ನು ಮುಗಿಸಿ
ನಾವು 'ಬ್ಯಾ, ಬ್ಯಾ' ಎಂದು ಬಾಯಿ ಬಾಯಿ ಬಡಿದುಕೊಂಡು
ಬೊಬ್ಬೆ ಹಾಕುತಿದ್ದರೂ—
ಚಕ್ರಭಾರ ಆಟದಲ್ಲೆ ಮಗ್ನರು ಇವರೆಲ್ಲರು,
ನಮ್ಮ ಕಾಯ್ವ ಗೊಲ್ಲರು.' **(ಕುರಿಗಳು, ಸಾರ್, ಕುರಿಗಳು)**

ಹಾಗೆಯೇ, ಸಾಮಾಜಿಕರು ದಿನನಿತ್ಯ ನೂಕುತ್ತಿರುವ ದುಸ್ಸಹವಾದ ಬಾಳ್ವೆಯ ಕೊಳಕು ಹೊಲಸುತನಗಳನ್ನು, ಅವುಗಳಿಂದ ಪಾರಾಗಿ ನಿರ್ಮಲ ಹಾಗೂ ಸ್ವಾಸ್ಥ್ಯದ ಜೀವನವನ್ನು ನಡೆಸಲು ಸಾಧ್ಯವಾಗದ ಸ್ಥಿತಿಯನ್ನು ಹಾಗೂ ಅವರ ಅಪರಿಹಾರ್ಯವಾದ ಅಸಹಾಯಕತೆ ಯನ್ನು ಕೆಳಗಿನ ಸಾಲುಗಳು ಎಷ್ಟು ಚೆನ್ನಾಗಿ ಕಟ್ಟಿ ಕೊಡುತ್ತವೆ, ನೋಡಿ:

'ಕೊಬ್ಬಿರುವೀ ಮಬ್ಬಿನಲ್ಲಿ, ಮೈ ನಾತದ ಗಬ್ಬಿನಲ್ಲಿ
ಇದರ ಉಸಿರು ಅದು, ಮತ್ತೆ ಅದರ ಉಸಿರು ಇದು ಮೂಸಿ,
ಹೇಸಿದರು ನಿಭಾಯಿಸಿ,
ತಾಳ್ಮೆಯನೆ ದಬಾಯಿಸಿ,
ನಮ್ಮ ನಾವೆ ಅಂದುಕೊಂಡೊ, ಉಗುಳು ನುಂಗಿ ನೊಂದುಕೊಂಡೊ,
ನಂಬಿಕೊಂಡು ಏಗುತಿರುವ ನಾವು, ನೀವು, ಇಡೀ ಹಿಂಡು—
ಕುರಿಗಳು, ಸಾರ್, ಕುರಿಗಳು.' **(ಅದೇ)**

'ಕುರಿಗಳು, ಸಾರ್...' ಕವನದಂತೆಯೇ ವಿಡಂಬನಾತ್ಮಕ ಗೀತೆಯಾಗಿ ಮನಸ್ಸನ್ನು ಸೆಳೆಯುವುದು 'ನಗ್ತೀರ ನನ್ ಹಿಂದೆ' ಹೆಸರಿನ ರಚನೆ. ನಮ್ಮ ಶಿಕ್ಷಣ ಕ್ಷೇತ್ರದ ಅವ್ಯವಹಾರ ಅಕ್ರಮಗಳನ್ನು, ವಶೀಲಿ ಬಾಜಿ, ಭ್ರಷ್ಟತೆ ಮತ್ತು ರಾಜಕೀಯವನ್ನು ತುಂಬ ಉತ್ಕಟವಾಗಿ ಚಿತ್ರಿಸಿರುವ ಕವಿಯ ಜಾಣ್ಮೆಯನ್ನು ಪ್ರಶಂಸಿಸಲೇಬೇಕು. ವಿದ್ಯಾಕ್ಷೇತ್ರದ ಪ್ರಸಕ್ತ ವಿದ್ಯಮಾನಗಳು ಗೌರವಸ್ಥರಿಗೆ, ಆತ್ಮಾಭಿಮಾನವುಳ್ಳವರಿಗೆ ಅಸಹ್ಯ ಬರಿಸುವಂಥವು, ಹೇಸಿಗೆ ಹುಟ್ಟಿಸುವಂಥವು. ಪದವಿಗಳನ್ನು ಮಾರಾಟಕ್ಕೆ ಇಟ್ಟಿರುವ ಮಳಿಗೆಗಳ ಅಧೋಗತಿಗೆ ಇಳಿದಿರುವ ವಿದ್ಯಾಸಂಸ್ಥೆಗಳಿಂದ ನಮ್ಮ ರಾಷ್ಟ್ರದ ಹಿರಿಮೆಗೆ ಎಂತಹ ಕುಂದು ಒದಗಿದೆ ಎನ್ನುವುದನ್ನು ಅಲ್ಲಿ ಗುಪ್ತವಾಗಿ ನಡೆಯುವ ಕಾರುಬಾರುಗಳಿಂದ ಅರಿಯಬಹುದು.

ಡಿಗ್ರಿಯನ್ನು ಕಮಾಯಿಸಬೇಕಾದರೆ ಎಂತೆಂತಹ ಸ್ವಾಭಿಮಾನಶೂನ್ಯವೂ, ಮನಸ್ಸಾಕ್ಷಿಗೆ ವಿರುದ್ಧವೂ ಆದ ಹುನ್ನಾರಗಳಲ್ಲಿ ತೊಡಗಬೇಕು ಎನ್ನುವುದನ್ನು ಈ

ಪಂಕ್ತಿಗಳು ವಿಡಂಬನಾತ್ಮಕವಾಗಿ ವೇದ್ಯವಾಗಿಸುವ ರೀತಿ ಅತ್ಯಂತ ನಿಶಿತವಾದದ್ದು:

'ನಗ್ತೀರ ನನ್ ಹಿಂದೆ? ನಗ್ರಯ್ಯಾ ನಗ್ರಿ;
ಸುಮ್ಮನೆ ಸಿಕ್ಲಿಲ್ಲ ಹೆಸ್ರ್ ಹಿಂದಿನ ಡಿಗ್ರಿ.
ಮೂರ್ ವರ್ಷ ಪ್ರೊಫೆಸರ್ರ ನಾಯಿಗೆ ಸ್ನಾನ
ಹಿರೀ ಮಗನ ಚೌಲಕ್ಕೆ ಮಖ್ಮಲ್ ಜಮ್ಖಾನ
ಇನ್ನವರ ಮೈದುನಗ್ಗೆ ಸಿನಿಮಾ ಗಾನ
ಪ್ರತಿದಿನ ಒಪ್ಸಿದೀನಿ ಅಮ್ಮಾವ್ರಿಗೆ ಸ್ಟೋನ.
'ಪದವಿ ಪಡೆದ್ ಮೇಲು ಪಟ್ಟಿದೀನಿ ಕಷ್ಟ
ಇಲ್ದಿದ್ರೆ ಆಗ್ತಿದ್ದೆ ಬೀದಿ ಅಲೆಯೋ ಭ್ರಷ್ಟ
ಹಿಡ್ದಿದ್ದೀನಿ ಎಂ.ಎಲ್.ಎ. ರಾಮಪ್ನ ಕಾಲ್ನ
ಕುಡ್ಸಿದೀನಿ ಕೊಡಗಟ್ಲೆ ಖೋಡೇಸ್ ಹಾಲ್ನ,
ಪ್ಯೂನಿಗೂ ಕೊಡ್ಸಿದೀನಿ ಒಂದ್ಜೋತೆ ಬಾಟ.'

(ನಗ್ತೀರ ನನ್ ಹಿಂದೆ)

ನಿಸಾರರು ಹೆಣ್ಣಿನ ಬಗೆಗೆ ಬದುಕಿನ ವಿವಿಧ ಘಟ್ಟದಲ್ಲಿ ತಾಳಿರುವ ನಿಲವು ಕುತೂಹಲಕಾರಿಯಾಗಿದೆ, ಅಧ್ಯಯನಯೋಗ್ಯವಾಗಿದೆ. ಆಕೆಯನ್ನು ಯೌವನದ ಕಾವಿನ ಪರವಶತೆಯಲ್ಲಿ ಪ್ರೀತಿ, ಪ್ರಣಯ, ಕಾಮದ ದೃಷ್ಟಿಯಿಂದ ನೋಡಿರುವುದರ ಜೊತೆಗೆ ಜೀವನದ ಸಂಗಾತಿಯಾಗಿ, ಮಹಿಮಾವಂತೆ ಮಾತ್ರವಾಗಿ ಮಾತ್ರವಲ್ಲದೆ, ಪುರುಷನ ಬದುಕಿನ ಮಹತ್ತರ ಪ್ರೇರಕ ಶಕ್ತಿಯಾಗಿ ಕಾಣುತ್ತಾರೆ. ಒಟ್ಟಿನಲ್ಲಿ ನಿಸಾರರು ಹೆಣ್ಣನ್ನು ನೋಡುವ ದೃಷ್ಟಿ ಮಾನವೀಯ ಹಾಗೂ ಸಹಾನುಭೂತಿಪರವಾದದ್ದು. ಅವಳ ದುರ್ಗತಿ, ದುಃಸ್ಥಿತಿಗಳು ಸಮಾಜದ ಅವನತಿ, ವಿಗತಿಗಳನ್ನು ಸೂಚಿಸುವುದಾಗಿ ಅವರು ನಂಬಿದ್ದಾರೆ. ಸಮಾಜದಲ್ಲಿ ಹೆಣ್ಣಿನ ಬದುಕು ಮತ್ತು ಅವಳ ಅಪಮಾನಕರ ಸ್ಥಾನ-ಮಾನಗಳನ್ನು 'ಮರುಗುವೆನು ಎಲೆ ಚೆಲುವೆ' ಗೀತೆ ಎದೆ ಕರಗುವಂತೆ ಚಿತ್ರಿಸುತ್ತದೆ.

ಅವಳ ಅಳಿವು-ಉಳಿವಿಗೆ ಸಮಾಜವೇ ಕಾರಣ. ಆದರೂ ನೋವು ಮಾತ್ರ ಅವಳಿಗಷ್ಟೇ ಮೀಸಲಲ್ಲ. ಹೆಣ್ಣಿನ ಬಗ್ಗೆ ಕಾಳಜಿ ಮಾಡಬಲ್ಲ ಇತರರಿಗೂ ಅದು ಅರಿವಾಗುವುದು. ಇತರರ ನೋವಿಗೆ ತಾನು ಅಸಹಾಯಕರಾಗಿ ಒಳಗೊಳಗೇ ಮರುಗುವುದೇ ಸೂಕ್ಷ್ಮಮತಿಗಳ ಪಾಡಷ್ಟೆ? ಹೀಗಾಗಿ, ತಾನಾಗಿ ಬಂಧನದಿಂದ ಹೊರಬರಬೇಕೆಂಬ ಹಂಬಲವೇ ಕವಿಯ ಹಾರೈಕೆ. ಕವಿಯು ಹೆಣ್ಣನ್ನು ಸಿಂಗಾರದ ಪುತ್ಥಳಿಯೆಂದು ಹೊಗಳಿ, ಕೇವಲ ಭೋಗಾನುಭವದ ವಸ್ತುವಾಗಿ ಅವಳನ್ನು ಬಳಸಿಕೊಳ್ಳುವುದು ಅತ್ಯಂತ ಅಮಾನವೀಯ: ಅವಳನ್ನು ಪುರುಷನಂತೆಯೇ ಸಂವೇದನಾತ್ಮಕ ಜೀವಿಯೆಂದು ಪರಿಗಣಿಸುವುದು ಆವಶ್ಯಕ ಎಂಬ ನಿಲವು ತಳೆದಿದ್ದಾರೆ. ಅವಳನ್ನು ಮುದಿಯನಿಗೆ ಬಲಿ ಕೊಟ್ಟು, ಅವನು ಅಸು ನೀಗಲು, ಅವಳ ಯೌವನದ ತಣಿಯದ ಆಸೆಗಳನ್ನು ಪ್ರಚೋದಿಸಿ ಸಮಾಜ ಅವಳನ್ನು ಕಾಮಾತುರಕ್ಕೆ ಒಳಪಡಿಸಿ ಬೀದಿ ನಾಯಿಯ ದುಃಸ್ಥಿತಿಗೆ ಇಳಿಸುವ ಹೃದಯವಿದ್ರಾವಕ ಚಿತ್ರವನ್ನು 'ಮರುಗುವೆನು ಎಲೆ ಚೆಲುವೆ' ಕವನದಲ್ಲಿ ಕವಿ ಯಶಸ್ವಿಯಾಗಿ ಕಟ್ಟಿ

ಕೊಟ್ಟಿದ್ದಾರೆ. ಇಲ್ಲಿನ ಮಾತುಗಳು ಮೊನಚು; ಶೈಲಿ ಮರ್ಮಭೇದಕವಾದದ್ದು. ಈ ಪಂಕ್ತಿಗಳಲ್ಲಿ ಮಡುಗಟ್ಟಿರುವ ಸಂಕಟ, ನೋವು ತಹತಹಗಳ ಆಳವನ್ನು ಅವಲೋಕಿಸಿ:

'ಎಲ್ಲಿ ಹಾರಿತೆ ನಿನ್ನ ಮೊಗದ ಬೆಳದಿಂಗಳು?
ಎಲ್ಲಿ ಜಾರಿತೆ ಕೆನ್ನೆ ಮೇಲಿನೊಲವಿನ ಪದಕ?
ಓ, ಎಲ್ಲಿ, ಎಲ್ಲಿ, ಆ ದಟ್ಟಗೂದಲ ಹೆರಳು?
ಎಲ್ಲಿ ಮುಳುಗಿತೆ ನಿನ್ನ ನಗೆಯ ನಾಕ?

'ಗುಳಿ ಬಿದ್ದ ಕಣ್ಣೊಳಗೆ ಮೈಯ ಹಸಿವಿನ ನೆರಳು
ತಂತಿ ಸಡಿಲಿದ ವಾದ್ಯದಂತೆ ಕರ್ಕಶ ಕೊರಳು
ತುಂಬುಗೈಗಳ ಬೆರಳೆ? ಅಲ್ಲ, ಮೂಳೆಯ ಸರಳು:
ತುಂಬಿ ತುಳುಕುವ ಬಾಳೊಳೆಲ್ಲೊ ಸೀಳು...

'ಕರಗುವೆನು ಎಲೆ ಹೆಣ್ಣೆ ನಿನ್ನ ದುರ್ಗತಿಗಾಗಿ,
ಅದಕಿಂತ ಹೆತ್ತವರ ವ್ಯಾಪಾರಿ ಮತಿಗಾಗಿ.
ಕಟ್ಟಿದರು ಮುದಿ ಮರಕೆ ನೆರಳೀವುದೆಂದು,
ಬೀಳಿಸಿತು ಭೋರೆಂದು ಬಿರುಗಾಳಿ ಬಂದು.

'ಹಸಿಯಾಸೆ ಬಿಸಿಲೆದುರು ಎಷ್ಟು ದಿನ ಇರವು?
ತೊಗಲು ಬೇಡಿತು ನೆರಳು: ಮರ, ಮರದ ನೆರವು.
ಮರುಗುವೆನು ನಾ ನಿನ್ನ ಹಣೆ ಬರಹಕೆ
ವಿಧಿ ಮಣ್ಣುಗೂಡಿಸಿದ ಹೊಸ ಹರಯಕೆ.'

(ಮರುಗುವೆನು, ಎಲೆ ಚೆಲುವೆ)

ಈ ಕವಿತೆಯನ್ನು ನಿಸಾರರು ಬರೆದದ್ದು ಕಳೆದ ಶತಮಾನದ ಅರುವತ್ತರ ದಶಕದ ಪ್ರಾರಂಭದಲ್ಲಿ, ಸುಮಾರು ೪೪ ವರ್ಷಗಳ ಮುಂಚೆ. ಅಂದರೆ, ಅವರ ಯೌವನದ ಅವಧಿಯಲ್ಲಿ. ಎಂದೇ ಈ ಕವಿತೆಯಲ್ಲಿ ಭಾವಾಧಿಕ್ಯ ಹಾಗೂ ಉದ್ಗಾರಗಳು ಮೇಲುಗೈ ಪಡೆದಿವೆ; ವಿಚಾರಶೀಲತೆ ಕೊಂಚ ಹಿಂದೆ ಸರಿದಿದೆ.

ಪ್ರೀತಿ-ಪ್ರೇಮ ಎಂಬ ಆಸರೆಯಲ್ಲಿ ಸತ್ತು ಬದುಕುವ ಅಥವಾ ಬದುಕಿ ಸಾಯುವ ಅನುಭವವನ್ನು ನೀಡುವ ರಚನೆಗಳು ಮನ ಮುಟ್ಟುವಂತಿದ್ದು ಅವುಗಳಲ್ಲಿ ಕೆಲವು ಹೀಗಿವೆ: 'ನೆನಪಾಗಿ ಬಾರದಿರು', 'ಎಂಥ ಮಾಟ', 'ಮತ್ತೇನೆ ಕೇಳಿದರು', 'ಹರಯ ಬಂತು ಹರಯ', 'ಆ ರೂಪ', 'ನೀನು ಜೊತೆಯೊಳಿರುವ ವೇಳೆ', 'ಪ್ರೀತಿ', 'ಬಾಗಿಲಿಗೆ ನೀ ಬಂದು', 'ನಿನ್ನ ಬಿಟ್ಟಿರಲಾರೆ', 'ಬರುವನೇನೆ ಸಖಿ ಚೆಲುವ?' 'ಎಲ್ಲಿರುವೆ ಚಿನ್ನ', 'ನನ್ನ ಬಾಲ್ಯದ ಗೆಳತಿ', 'ಕಣ್ಣು ಕಣ್ಣೊಡನೆ', 'ನಿನ್ನ ನೆನಪು ಕಾಡದಂತೆ'. ಪ್ರೇಮ ಕಾವ್ಯ ರಚನೆ, ಕವಿ ಎಂಬುವವನ ಬದುಕಿನ ಅವಿಭಾಜ್ಯ ಅಂಗ. ಬಹುಶಃ ರಚನಾ ಶಕ್ತಿ ಪ್ರಾರಂಭಗೊಳ್ಳುವುದೇ ಪ್ರೀತಿ ಅಥವಾ ಅದರ ಅಗಲಿಕೆಯ ದುಃಖದಿಂದ. 'ನೆನಪಾಗಿ ಬಾರದಿರು' ಕವನದಲ್ಲಿ ಯೌವನದಲ್ಲಿ ಮೂಡಿದ ಪ್ರೀತಿ ಮುರಿದ ಸನ್ನಿವೇಶವೊಂದರಲ್ಲಿ ಚಿಮ್ಮಿದ ಭಾವ ತರಂಗಗಳ ಹೊಳಹು ಇದೆ. ಯೌವನದಲ್ಲಿ ಮೂಡಿದ ಪ್ರೀತಿ ಆಮೇಲೆ ನಿರಂತರ ನೆನಪಾಗಿ ಹೆಣ್ಣು ಗಂಡುಗಳನ್ನು

ಕಾಡುವುದು ಸಹಜ. ಹಾಗಾಗಿ, ಯೌವನದ ಅನಂತರ ಮರುಕಳಿಸುವ ಉತ್ಕಟ ಭಾವನೆಗಳು ಚಿತ್ತವನ್ನು ಕಲಕುವಂತೆ ಮೂಡಿವೆ:

'ಮರೆವ ಗೋರಿಯ ಕೆದಕಿ ಹಸಿ ಎಲುಬುಗಳನಾಯ್ದು
ತುಂಬದಿರು ಮುಂಬಾಳ ಮಂಚದಲ್ಲಿ;
ಸಿಂಗರಿಸದಿರು ನನ್ನ ಚಿತೆಯ, ನಗೆಯನು ಹೊಯ್ದು—
ನಾನೆ ಬೆಳಸಿದ ಹೂವ ಗೊಂಚಲಲ್ಲಿ.

....

'ಭವಿತವ್ಯದೊಸಗೆಯಲಿ ಸಾಲಾಗಿ ಇರಿಸದಿರು
ಅಂದೆಂದೊ ಮುಗಿದಿರುವ ದೀಪಗಳನು;
ಚಂದಾದ ರೂಪಗಳನೊಂದೊಂದೆ ತಂದೆಸೆದು
ಮನದಲ್ಲಿ ಬಿತ್ತದಿರು ತಾಪಗಳನು.'

(ನೆನಪಾಗಿ ಬಾರದಿರು)

'ಎಂಥ ಮಾಟ' ಎಂಬ, ಪ್ರೀತಿಯ ಆಕರ್ಷಕತೆಯ ಬಗ್ಗೆ ಬರೆದಿರುವ ಮತ್ತೊಂದು ಕವಿತೆಯಲ್ಲಿ, ಅದು ಭಗ್ನವಾದ ಮೇಲೂ ಮಾದಕವಾಗಿ ಎಡೆಬಿಡದೆ ಕಾಡುವ ಸಹಜ ಪರಿಯನ್ನು ಹೃದ್ಯವಾಗಿ ಚಿತ್ರಿಸಿರುವುದು ಕವಿಯ ಭಾವ ಸಾಮರ್ಥ್ಯಕ್ಕೆ, ವಾಸ್ತವ ಮನೋದೃಷ್ಟಿಗೆ ಸಾಕ್ಷಿಯಾಗಿದೆ.

'ನಿನ್ನ ಹಿಂದೊಮ್ಮೆ ಒಲಿಯಿತೀ ಹೃದಯ
ಸಂದಿದೆ ನಾವು ಅಗಲಿ ಬಲು ಸಮಯ.
ಆದರೂ ಇರಿಯುತಿರುವೆ ನೆನಪಾಗಿ.

'ಚಿತ್ತ ಸಿಂಗಾರಗೊಳಿಸಿ ಒಳ ಕರೆದೆ
ಸಾಟಿಯೇ ಇರದ ಪ್ರೀತಿ ನಾನೆರೆದೆ.
ಅಂದು ನಾನೊಲಿದ ಪರಿಗೆ ಈ ಫಲವೆ?
ನೋವಿನಿಂದೆದೆಯ ಕೊರೆವ ಹುಲು ಛಲವೆ?
ನೋಡು ನೀನೆಂಥ ಮಾಟ ಮಾಡಿರುವೆ;
ಕಣ್ಣಿನ ಮರೆಗೆ ಇದ್ದೂ ಕಾಡಿರುವೆ.'

(ಎಂಥ ಮಾಟ)

'ಮತ್ತೇನೆ ಕೇಳಿದರು' ಕವಿತೆ, ಗಂಡು-ಹೆಣ್ಣುಗಳ ನಡುವಿನ ಪ್ರೇಮದ ಬಂಧ ಒಂದು ರಹಸ್ಯ, ಪ್ರಕೃತಿದತ್ತವಾಗಿ ಹುಟ್ಟಿನಿಂದಲೇ ಬಂದದ್ದು ಎಂಬ ಸಂಗತಿಯನ್ನು ಕಾವ್ಯಾತ್ಮಕವಾಗಿ ಚಿತ್ರಿಸುತ್ತದೆ. ಕಾರಣವನ್ನು ಆಲೋಚಿಸುವುದಕ್ಕೂ ಅವಕಾಶಕೊಡದೆ, ಒಲವು ಪುರುಷ-ಸ್ತ್ರೀಯರ ಹೃದಯಗಳನ್ನು ಆಕ್ರಮಿಸಿ ನೆಲೆಯೂರಿ ಬಿಡುತ್ತದೆ. ಹೀಗಾಗಿ ಪ್ರೀತಿ, ಪ್ರೇಮ, ಕಾಮ ಮುಂತಾದ ಭಾವನಾತ್ಮಕ ಸಂಬಂಧಗಳು ಜೀವಿಗಳ ತರ್ಕಾತೀತವಾದ ಮೂಲಭೂತ ಪ್ರವೃತ್ತಿಗಳಿಗೆ ಸಂಬಂಧಿಸಿದ ಸಂಗತಿಗಳು. ಆದ್ದರಿಂದಲೇ ಅವು ಬುದ್ಧಿ ಮನಸ್ಸುಗಳಿಗೆ ಅಗ್ರಾಹ್ಯವಾಗಿ ಉಳಿದು ಒಗಟಿನಂತೆ ಕಾಡುವುದು.

'ಮತ್ತೇನೆ ಕೇಳಿದರು ಇದ ಕೇಳಬೇಡ;

ನಿನ್ನನೇತಕೆ ಒಲಿದೆನೆನ್ನುವುದು ಗೂಢ.
ಒಲವೆಂದೆ ಎನ್ನಿಸದು ಓಲೈಸುವಾಗ,
ಎದೆಗೆ ಎದೆ ಸಮಗೂಡಿ ಮೇಳೈಸುವಾಗ.
ಒಲಿದದ್ದು ತಿಳಿದೀತು ಒಲಿದಾದ ಮೇಲೆ—
ಮೊದಲೆ ಕಾರಣ ತಿಳಿಸಲದಕಿಲ್ಲ ವೇಳೆ.
....
'ಪ್ರೇಮಿ ತಾನರಿತಾನೆ ಪ್ರೇಮದ ಪರಿಯ?
ಮರ ತಾನು ಅರಿತೀತೆ ತನ್ನೆದೆಯ ಸುರೆಯ?
ಕೊನೆ ಮೊದಲ ಸೇರಿಸುವದದಕೊಂದು ಹಿರಿಮೆ;
ಬಾಲವನೆ ನುಂಗಿರುವ ಹಾವಿನಂತೊಲುಮೆ.'
(ಮತ್ತೇನೆ ಕೇಳಿದರು)

ನಿಸಾರರ ಲಕ್ಷ್ಯಕೇಂದ್ರ ಕೇವಲ ಪ್ರೇಮ-ಪ್ರೀತಿ, ಸಮಾಜದ ಸ್ಥಿತಿ ಗತಿಗಳಿಗೆ ಮೀಸಲಾಗಿಲ್ಲ. ಕಾಲ, ದೇವರು, ಪ್ರಕೃತಿಯ ಸೊಬಗು, ನಾಡುನುಡಿಗಳ ಒಲವು, ಸರ್ವಧರ್ಮ, ಸಂಪ್ರದಾಯಗಳ ಒಳಿತಿನ ಅಂಶಗಳ ಸಾದರ ಸ್ವೀಕಾರ ಇತ್ಯಾದಿ ನಾನಾ ವಸ್ತುಗಳನ್ನು ಅವರು ಅಭಿವ್ಯಕ್ತಿಸಿದ್ದಾರೆ.

'ಎಂದು ಮರೆಯುವೆ ತಾಯಿ', 'ಕನ್ನಡ', 'ಕನ್ನಡ ರಾಜೇಶ್ವರಿ', 'ಅಭಿಮಾನವತಿ', 'ಹಿರಿಮೆ', 'ಕನ್ನಡಾಂಬೆಗೆ', 'ಕನ್ನಡವೆಂದರೆ', 'ನಿತ್ಯೋತ್ಸವ'—ಇತ್ಯಾದಿ ಕವಿತೆಗಳು, ತನ್ನನ್ನು ಕವಿಯಾಗಿ ಮೆರೆಸಿರುವ ಕನ್ನಡ ಮಾತೆಯನ್ನು ವಿಜೃಂಭಿಸುವ ಹಾಗೂ ಉತ್ಸವಿಸಿ ಮೆರೆಸುವ ಗೀತೆಗಳು.

'ಎಂದು ಮರೆಯುವೆ ತಾಯಿ' ಕವನ, ಕನ್ನಡ ನಾಡು ಹಾಗೂ ಭಾಷೆ ಕಳೆದುಕೊಳ್ಳುತ್ತಿರುವ ಪ್ರಾಶಸ್ತ್ಯವನ್ನು ಕುರಿತದ್ದಾಗಿ ಭಾವ-ಬುದ್ಧಿ ಪ್ರಚೋದಕವಾಗಿದೆ. 'ಕನ್ನಡ-ಕನ್ನಡ' ಎಂದು ಘೋಷಿಸುವವರಿಗೆ, ಕನ್ನಡದ ಹಿರಿಮೆ ನಶಿಸುತ್ತಿರುವ ಕಾರಣಗಳನ್ನು ಮುಕ್ತವಾಗಿ ನಿಸಾರರು ನಿರೂಪಿಸಿ, ಚಿಂತನ ಮನನಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

'ಮತ್ತೆ ಎಂದು ಮರೆವೆಯಮ್ಮ
ಕನ್ನಡಿಗರ ಪೊರೆವೆಯಮ್ಮ?
ಕರ್ನಾಟಕ ಅಧೀಶ್ವರಿ.

'ಪರಭಾಷಾ ಜನರ ನಡುವೆ
ಪ್ರಾಗ್ವೈಭವ ರತ್ನದೊಡವೆ
ಕಳೆದುಕೊಂಡು ನೀನು ಬಡವೆ
ನಿನ್ನ ಮನೆಯೊಳೆ.
ಗತಗಾಲದ ಭವ್ಯದೃಶ್ಯ-
ದಲ್ಲೆ ನೀನು ಪಾರವಶ್ಯ,
ನಿನಗಿಲ್ಲವೆ ಸವಿ ಭವಿಷ್ಯ
ನಾಡಿನಿನಿಯಳೆ?

'ನಿನ್ನ ನೀರು ಗಾಳಿ ಅನ್ನ
ಉಂಡು ಅನ್ಯ ಜನರು ನಿನ್ನ
ಮನೆಗೆ ಹಾಕುತಿಹರು ಕನ್ನ—
ಮುದವೆ ಮುಗಿದಿದೆ.'
(ಎಂದು ಮೆರೆಯುವೆ ತಾಯಿ)

—ಎಂದು ನಮ್ಮ ನಾಡಿನ ಯಥಾರ್ಥ ಸ್ಥಿತಿಯನ್ನು ಬಣ್ಣಿಸುತ್ತಾರೆ. ಇಂತಹ ಹತಾಶೆ, ನೈರಾಶ್ಯದ ಚಿತ್ರಣದಲ್ಲೇ ವಿರಮಿಸದೆ, ಆಶಾವಾದದ, ಕರ್ತವ್ಯಪ್ರಜ್ಞೆಗೆ ಪ್ರೇರಕವಾದ ಹಿತ ವಾಕ್ಯಗಳನ್ನು ನುಡಿದಿರುವುದೂ ಕವಿಯ ಪೂರ್ಣದೃಷ್ಟಿಯನ್ನು, ಸಮಗ್ರತೆಯ ಧೋರಣೆಯನ್ನು ಎತ್ತಿ ತೋರಿಸುತ್ತದೆ:

'ಚತುಷ್ಕೋಟಿ ಜನರ ಅರಸಿ
ನಿನ್ನ ಹಣೆಯ ಬರಹ ಒರಸಿ
ಮತ್ತೆ ನಿನ್ನ ಎತ್ತಿ ಮೆರೆಸ-
ಲೆಂದು ಹರಸು ಬಾ.
ನಾಡ ಗುಡಿಗೆ ಹೊನ್ನಗಳಸ,
ಕಾವ್ಯ ಕಲಾ ಭಿತ್ತಿಗೆಲಸ,
ಸಾಧನೆಗಳ ಧ್ವಜಸ್ತಂಭ ನಿಲಿಸ-
ಲಾಸೆ ಬಲಿಯಲಿ.
ಜನ ಜೀವನದುನ್ನತ ಗುರಿ
ನವರಂಗದ ಭುವನೇಶ್ವರಿ;
ಹೃದಯ ಗರ್ಭದಲ್ಲಿ ನುಡಿಯ
ರಾಜೇಶ್ವರಿ ನಲಿಯಲಿ.' (ಅದೇ)

ನಿಸರ್ಗದ ಕವಿತೆಗಳು ನಿಸಾರರ ಪ್ರೇಮ-ವಿರಹಗಳ ಕವನಗಳಂತೆಯೇ ಸಂಖ್ಯೆಗೆ ಮೀರಿರುವಂಥವು. ಕವಿ ಮತ್ತು ಪ್ರಕೃತಿಯ ಒಡನಾಟ ಭಕ್ತ-ದೇವರ ಒಡನಾಟವನ್ನೂ ಮೀರಿ ಒಂದು ಅನಿರ್ವಚನೀಯ ಹಾಗೂ ಉದಾತ್ತವಾದ ಅನುಭವವನ್ನು ನೀಡುತ್ತದೆ. ನಿಸಾರರ ಪ್ರಕೃತಿ ಗೀತೆಗಳು ತಮ್ಮ ಚಿತ್ರಕ ಶಕ್ತಿಯಿಂದ, ಉಪಮೆ ರೂಪಕಾದಿಗಳಿಂದ, ಅಪರೂಪತೆ ನಾವೀನ್ಯಗಳಿಂದ ಮತ್ತು ತಾತ್ವಿಕ ನಿಲವಿನಿಂದ ಅನನ್ಯವಾಗಿವೆ; ಕನ್ನಡ ಕಾವ್ಯಕ್ಕೆ ಮಹತ್ತರದ ಕೊಡುಗೆಗಳಾಗಿವೆ. 'ಸಗ್ಗದ ಸಿರಿ ಬಂತು', 'ಯುಗಾದಿ', 'ನವ ಯುಗ', 'ಮುಂಜಾನೆಯ ಮಾಯೆ', 'ಬಹಿರಂತರ', 'ಒಂದು ಗುಲ್‌ಮೊಹರ್ ಗೀತ', 'ಓ ಪರ್ವತ ಚಕ್ರವರ್ತಿ', 'ಋತು ಪರಿಚಾರ', 'ನಿಸರ್ಗ ವಿಲಾಸ', 'ವರ್ಷಾದಿ', 'ಪ್ರಕೃತಿ ಆಚರಿಸುತಿಹುದು ಹಬ್ಬವ', 'ಸಂಧ್ಯಾ ವೈಭವ', 'ಬೈಗು', 'ಮುಂಜಾನೆಯ ಮೋಡಿ', 'ಒಂದು ಬೆಳ್ದಿಂಗಳು', 'ಭೂಮಿ ತಾಯಿಯ ಚೆಲುವು', 'ಸಂಕೇತ ಸಂಧ್ಯೆ', 'ಕಾಲ ಚಲಿಸು ಮೆಲು ನಡೆಯಲಿ'—ಇತ್ಯಾದಿ ಗೀತೆಗಳಲ್ಲಿ ಕಂಡು ಬರುವ ನಿಸಾರರ ನಿಸರ್ಗಾರಾಧಕ ಸೌಂದರ್ಯಪ್ರಜ್ಞೆ ಮತ್ತು ಅಭಿವ್ಯಕ್ತಿಯ ಶಕ್ತಿ ಬೆರಗು ಹುಟ್ಟಿಸುವಂತಹದು. ಇಂತಹ ಸಮೃದ್ಧಿಯಿದ್ದರೂ ಪುನರುಕ್ತಿಯ ಇರದಿರುವುದು ನಿಸಾರರನ್ನು ಮೆಚ್ಚಲು ಬಲವಾದ ಕಾರಣ ಒದಗಿಸುತ್ತದೆ.

ಅವುಗಳಲ್ಲಿ ಒಂದೆರಡನ್ನು ಉದ್ಧರಿಸಿದರೆ ಉದ್ದೇಶ ಸಫಲವಾಗದು. ಇಡಿಯಾಗಿ ಆ ಕವಿತೆಗಳನ್ನು ಆಸ್ವಾದಿಸಬೇಕಾಗುತ್ತದೆ. ಚಿಕ್ಕ, ಚೊಕ್ಕ ಹನಿಗವನಗಳಂತಹ ರಚನೆ ಚಿಂತನೆಗಳಲ್ಲೂ ಅಡಗಿರುವ ಅಪ್ರತಿಮ ಗೂಢಾರ್ಥ ಅಸದೃಶ. 'ಕನ್ನಡದ ಉದ್ಧಾರ', 'ಘೋಷಣೆ', 'ಗುಣಗಾನ', 'ಸಹವಾಸ', 'ಕೆಡುಕಿನ ಮೂಲ'—ಈ ಬಗೆಯ ಕಿರುಗವಿತೆಗಳು. 'ಕನ್ನಡದ ಉದ್ಧಾರ' ಕವನದಲ್ಲಿ ಕನ್ನಡ ಭಾಷೆಯ ಒಲವು, ಪ್ರಾಣಿ ಪ್ರೇಮ ಎರಡೂ ಒಂದೇ ಎಂಬಂತೆ ಚಿತ್ರಿಸಿರುವುದನ್ನು ಗಮನಿಸುವುದರ ಜೊತೆಗೆ ನಮ್ಮ ವ್ಯವಸ್ಥೆ ಹೇಗೆ ಕನ್ನಡದ ಏಳಿಗೆಯನ್ನು ಕೇವಲ ಭಾಷಣಗಳ, ಪೊಳ್ಳು ಭರವಸೆಗಳ ಮೂಲಕ ನೆರವೇರಿಸುತ್ತದೆ ಎಂಬ ಕಟು ಸತ್ಯದ ದರ್ಶನವೂ ಇದೆ:

'ವರ್ಷವಿಡೀ ಚಾಟಿಯ ಏಟಿನ, ದುಡಿತದ ಎತ್ತಿಗೆ
ಸಂಕ್ರಾಂತಿಯ ದಿನ ಆಹ! ಎಂತಹ ಸಿಂಗಾರ!
ಜ್ಞಾಪಿಸುವುದು ನನಗೀ ದೃಶ್ಯ, ನವೆಂಬರ್ ಒಂದರ
ಸರಕಾರದ ಸಿರಿಗನ್ನಡದುದ್ಧಾರ.' **(ಕನ್ನಡದ ಉದ್ಧಾರ)**

ನುಡಿಯೊಂದು ನಡೆಯೊಂದು ಕೂಡದೆಂಬ ತತ್ವವನ್ನು ಪರಿಪರಿಯಾಗಿ ಪುಟಗಟ್ಟಲೇ ಧರ್ಮದ ಹೆಸರಿನಲ್ಲಿ ಹೇಳುವುದನ್ನು ಕಂಡು ಅರಿತಿರುವ ನಾವು 'ಘೋಷಣೆ' ಎಂಬ ನಾಲ್ಕು ಸಾಲಿನ ಗೀತೆಯಲ್ಲಿ ಕವಿ ಅದನ್ನು ಕುರಿತು ಚಿತ್ರಿಸಿರುವುದು ವಿಶೇಷವಾಗಿ ಮೂಡಿ ಬಂದಿದೆ. ಪ್ರಕೃತಿಯ ಒಡನಾಟ ನಿಸಾರರಿಗೆ ಹೆಚ್ಚು ಆತ್ಮೀಯವಾಗಿ ಕಂಡರೂ, ಕಾಲವೆನ್ನುವುದು ಪ್ರಕೃತಿಯನ್ನು ಮೀರಿದ ಪ್ರಬಲತರ ಅಗೋಚರ ಶಕ್ತಿಯೆಂಬ ಕಲ್ಪನೆ ಈ ಕವಿಗೆ ಇದೆ. ಪ್ರಕೃತಿಯ ಚಲನವಲನಗಳಿಗೆ ಕಾಲ ಕಾರಣಕರ್ತನೆಂಬ ಭಾವನೆ ಸಾಮಾನ್ಯವಾಗಿದ್ದರೂ ಕಾಲಕ್ಕೆ ಯಾರು ಕಾರಣಕರ್ತರೆಂಬ ಹುಡುಕಾಟದ ತಾತ್ತ್ವಿಕ ಜಿಜ್ಞಾಸೆ ನಿಸಾರರ ಅಂತರ್ಯ ದಲ್ಲಿ ಮನೆಮಾಡಿದಂತಿದೆ. ಈ ವಿಚಾರವನ್ನು ಮತ್ತು ಕಾಲದ ಅಂತಃಸತ್ವವನ್ನು ಬಹಳ ಅರ್ಥಗರ್ಭಿತವಾಗಿ ಮನೋಜ್ಞವಾಗಿ 'ಕಾಲದ ಮಗ್ಗ'ವೆಂಬ ಒಂದು ರಚನೆಯಲ್ಲಿ ತೋಡಿ ಕೊಂಡಿದ್ದಾರೆ. ತಾತ್ತ್ವಿಕ ಆಲೋಚನೆಯ ಮೇಲ್ನೆಲೆಯಲ್ಲಿ ವಿಹರಿಸುವ ಈ ಕವನದ ಭಾವನೆಗಳು ಕವಿಯ ಅಂತರಂಗದ ಔನ್ನತ್ಯ, ಉದಾತ್ತತೆಗಳ ಕಡೆಗೂ ಬೆರಳು ಮಾಡುತ್ತದೆ. ಅದರ ಒಂದೆರಡು ಚರಣಗಳನ್ನು ಪ್ರರಿಸೋಣ:

'ಆಡಿದೆ ಕಾಲದ ಮಗ್ಗ ನಿರಂತರ—
ನೂಲೆಳೆ ಲೋಕದ ಜೀವಿಗಳು;
ಸ್ವಭಾವ ವರ್ಣಗಳಸಂಖ್ಯ, ಬಹುತರ
ಬೆಸೆದಿವೆ ಅನುಭವ ರಾಳಿಗಳು.

'ಯಾವ ಪರಾತ್ಪರ ಭೂಮಿಯ ಬೆಳಸಿನ
ಫಲಿತವೊ ಎಳೆಗಳ ಮೂಲಗಳು;
ಯಾವ ಅಪಾರ್ಥಿವ ಗಿರಣಿಯ ಕೃತಿಗಳೊ
ರೇಷಿಮೆ ನಯದೀ ಜಾಲಗಳು.

'ವಿಶ್ವದ ವಿಶಾಲ ಜೀವನ ವಸ್ತ್ರದ

ಮರ್ಮವ ತಿಳಿವವೆ ದಾರಗಳು?
ನೀರಿನ ಬಿಡಿ ಹನಿ ಅರಿವುದೆ ತನ್ನೊಳು
ಅಡಗಿರುವೆಂತಹ ಪೂರಗಳು?

'ಮಗ್ಗವ ನಡೆಸುವ ಕೈಗಳಗೋಚರ;
ಚಲನೆಗೆ ಶಬ್ದದ ಸಾಕ್ಷ್ಯವಿದೆ.
ಬಗೆ ಬಗೆ ವಿನ್ಯಾಸದ ಒಳ ರಚನೆಗೆ
ಯಾವುದೊ ಅಗಮ್ಯ ಲಕ್ಷ್ಯವಿದೆ.'

(ಕಾಲದ ಮಗ್ಗ)

ಸಾಮಾನ್ಯವಾಗಿ ಕವಿಯನ್ನು ವಿಶಾಲ ಮನೋಧರ್ಮದ ಪ್ರಯುಕ್ತ 'ವಿಶ್ವಜೀವಿ' ಯೆಂದು ವಿಶೇಷಿಸುವುದು ಒಂದು ಸಾಮಾನ್ಯ ರೂಢಿ. ಆದರೆ ಕವಿಯೂ ಕೂಡ ಮೂಲತಃ ಮನುಷ್ಯನೇ ಆಗಿರುವುದರಿಂದ ಸ್ವಾರ್ಥ, ಸಂಕುಚಿತ ಮನೋಭಾವಗಳಿಗೆ ಹೊರತಾಗು ವುದಿಲ್ಲ. ಆದರೆ ನಿಸಾರರ ಸರ್ವಧರ್ಮ ಹಾಗೂ ಅನ್ಯ ಸಂಪ್ರದಾಯಗಳ ಸದಂಶಗಳ ಸಾದರ ಸ್ವೀಕಾರ ಗುಣಕ್ಕೆ ಅವರ ಕವನಗಳೇ ನಿದರ್ಶನವಾಗಿ 'ವಿಶ್ವಜೀವಿ ಕವಿ' ಎಂಬುದನ್ನು ಸಮರ್ಥಿಸಿವೆ. ಈ ದಿಸೆಯಲ್ಲಿ 'ರಂಗೋಲಿ', 'ಬೆಣ್ಣೆಗಳ್ಳ ಕೃಷ್ಣ', 'ಶ್ರೀ ಶಾರದಾದೇವಿ', 'ರಾಮಕೃಷ್ಣ ಪರಮಹಂಸರು', 'ಬಸವೇಶ್ವರರು', 'ಪುರಂದರದಾಸರು', 'ರಂಜಾನಿನಲ್ಲಿ'— ಎಂಬ ಕವನಗಳಲ್ಲಿ ಕವಿ ಈ ಮಾತನ್ನು ರುಜುವಾತುಪಡಿಸಿದ್ದಾರೆ.

ನಿಸಾರರ ಇಂತಹ ಕವಿತೆಗಳನ್ನು ಓದಿದಾಗ ಮನದಟ್ಟಾಗುವ ವಿಚಾರವೆಂದರೆ ಯಾವುದೇ ಧರ್ಮ, ಸತ್ಸಂಪ್ರದಾಯ ಯಾವುದೇ ಮತಸ್ಥನಿಗೆ ಆದೇಯ, ಅವನ ಪಾಲಿಗೆ ಸ್ವೀಕರಣೀಯ. ಏಕೆಂದರೆ ಅವೆಲ್ಲವುಗಳ ತಿರುಳೂ ಒಂದೇ. ಹಾದಿಗಳು ಬೇರೆಯಾಗಿದ್ದರೂ, ವಿವಿಧವಾಗಿದ್ದರೂ ಅಂತಿಮ ಗುರಿ ಒಂದೇ. ಯಾವ ಮತಧರ್ಮದ ಮಹದ್ವ್ಯಕ್ತಿಯೂ ಹಾಗೆಯೇ ಸಮಸ್ತರಿಗೂ ಪರಮ ಪೂಜ್ಯ. ಕಾರಣವೆಂದರೆ ಅವರೆಲ್ಲರಲ್ಲೂ ಒಂದೇ ದೈವಾಂಶವಿರುವುದು. ಆದರೆ ನಮ್ಮ ದುರ್ದೈವವೆಂದರೆ ಮನುಷ್ಯ ಮನುಷ್ಯರ ನಡುವೆ ಅನುಮಾನ ಈರ್ಷ್ಯೆ ಮಾತ್ಸರ್ಯದ ಅಡ್ಡ ಗೋಡೆಗಳನ್ನು ಧರ್ಮದ ಹೆಸರಿನಲ್ಲಿ ನಿರ್ಮಿಸಿ ತಾರತಮ್ಯವನ್ನು ಸೃಷ್ಟಿಸಿ ಮನಸ್ಸುಗಳನ್ನು ಒಡೆದಿರುವುದು; ನೆತ್ತರಿನ ಇಳುವರಿಯನ್ನು ಹೆಚ್ಚಿಸಿರುವುದು. ಇಂದು ನಮ್ಮ ಸಾಹಿತಿ, ಕವಿ, ಕಲಾವಿದರು—ಅಷ್ಟೇಕೆ, ಮನುಷ್ಯರೆನ್ನಿಸಿ ಕೊಂಡವರೆಲ್ಲ ಕಂಕಣ ಬದ್ಧರಾಗಿ ಮಾಡಬೇಕಾಗಿರುವುದು ಹೃದಯಗಳನ್ನು ಬೆಸೆಯುವ ಕಾರ್ಯ; ವಿಶ್ವ ಮಾನವತೆಯ ಉದಾರವಾದ ಪರಿಕಲ್ಪನೆಯನ್ನು ಜನ ಜೀವನದಲ್ಲಿ ನೆಲೆಗೊಳಿಸುವ ಕಾರ್ಯ. ನಿಸಾರರ ಬಹುತೇಕ ಕವಿತೆಗಳಲ್ಲಿ ಇದನ್ನು ಉಲ್ಲೇಖಿಸುವ, ಸಾಧಿಸುವ ಸಾತ್ವಿಕ ಛಲದ ಸೂಚನೆಗಳು ಕಂಡು ಬರುತ್ತವೆ. ಅವರ ಜನಾದರಣೀಯತೆಗೆ ಇದೂ ಒಂದು ಕಾರಣವೆನ್ನಬಹುದು. ಇನ್ನು ದೇವರು-ದೈವತ್ವದ ವಿಷಯದಲ್ಲಿ ಅವರ ಗೀತೆಗಳಲ್ಲಿ ಕಾಣುವುದು ದೇವರು 'ಅಸೀಮಶಕ್ತಿ'ಯಾಗಿ, 'ಚೇತನಾಚೇತನದ' ತಿರುಳಾಗಿ. 'ದೇವರ ಹಾರ'ವಾಗಿ ಈ ಜಗತ್ತು ಮೆರೆದರೆ, ಆ ಅಗೋಚರ ಶಕ್ತಿಗೆ 'ನಮಿಸು ಚಿತ್ತ' ಎಂಬ ವಿನಮ್ರತಾ ಭಾವನೆ ನೈಜವಾಗಿ ಹೊರಹೊಮ್ಮುತ್ತದೆ. ಅವರ ಈ ನಮೂನೆಯ ಹಲವಾರು

ಗೀತೆಗಳಲ್ಲಿ ದೇವರೆಂಬುದರ ಆಸ್ತಿಕತೆಯಲ್ಲಿ, ಶಕ್ತಿಯುತ ಸತ್ವದಲ್ಲಿ ನಂಬಿಕೆ ತಿಳಿಯಾಗಿದೆ. ಆ ಅಗೋಚರ ಶಕ್ತಿಯೇ ತನ್ನನ್ನು ಕವಿಯಾಗಿ ಪೋಷಿಸಿದೆ ಎಂಬ ಕೃತಜ್ಞಾಭಾವವಿದೆ. ಇದಕ್ಕೆ ಲೆಕ್ಕವಿರದಷ್ಟು ಉದಾಹರಣೆಗಳನ್ನು ಅವರ ಗೀತೆಗಳಿಂದ ಎತ್ತಿಕೊಳ್ಳಬಹುದು.

ಕವಿಯಾದ ಕಾರಣ ತನಗೆ ಸೀಮಿತ ಎಲ್ಲೆಕಟ್ಟುಗಳಿಲ್ಲ. ಈ ವರವನ್ನು ಆ ವಿಶ್ವಾತ್ಮ ಶಕ್ತಿ ಅನುಗ್ರಹಿಸಿರುವುದರಿಂದ ಅದಕ್ಕೆ ಸಮರ್ಪಿಸಿಕೊಂಡು ಬದುಕಿದರೆ, ಅದಕ್ಕೆ ವಿಹಿತ ವೆಂಬಂತೆ ಕಾರ್ಯವನ್ನು ಎಸಗಿದರೆ ಒಳಿತು ಹಾಗೂ ಸಾರ್ಥಕತೆ ಶತಸ್ಸಿದ್ಧ ಎನ್ನುವ ಭಾವನೆ ಸಹ ನಿಸಾರರ ಹಲವು ಗೀತೆಗಳಲ್ಲಿದೆ. 'ಮುಗಿಲ ಹೂವ' ಎನ್ನುವ ಅವರ ಕವನದ ಕೆಲವು ಸಾಲುಗಳನ್ನು ಪ್ರಾತಿನಿಧಿಕವಾಗಿ ಉದ್ಧರಿಸಬಹುದು.

> **'ಮುಗಿಲ ಹೂವ ಮಕರಂದ ಬಯಸುತಿದೆ ನನ್ನ ಬಾಳ ಭೃಂಗ;**
> **ಏರಲಾಶಿಸುವ ಹಾಗೆ ಹೆಳವ ಸಹ್ಯಾದ್ರಿಗಿರಿಯ ಶೃಂಗ.**
> **ಬಯಕೆ ಭಾರಕು, ಬಗೆಯ ತಾಳಿಕೆಗು ಎಲ್ಲಿಗೆಲ್ಲಿ ತಾಳೆ?**
> **ಒಂದು ಕೊಚ್ಚುತಿಹ ಹುಚ್ಚು ಪೂರ, ಮತ್ತೊಂದು ಚಿಕ್ಕ ನಾಲೆ.**
> **ಒಂದಾಸೆ ತೆನೆಗೆ ಒಂದೊಂದು ವಿಹಗ, ಮುಂದದರ ಗುರಿ ಹತಾಶೆ;**
> **ಕಗ್ಗತ್ತಲಲ್ಲಿ ಕೈಗೊಂಡ ಯಾನ, ಮುರಿದೊಂದು ಪ್ರೇಮಿ ಭಾಷೆ.**
> **ಮುಮ್ಮೊದಲು ಬೇವು, ಆಮೇಲೆ ಬೆಲ್ಲದಂತಲ್ಲ ನೋವು-ನಲಿವು;**
> **ಸವಿಯಾಸೆ ಬೇರು, ಕಹಿ ನೋವ ಹಣ್ಣು—ಸಂಬಂಧ ತಿರುವು-ಮುರುವು?'**
> **(ಮುಗಿಲ ಹೂವ...)**

ಇಂತಹ ವಿಶಾಲ ಮನೋಭೂಮಿಕೆಯ ಕವಿಯ ರಚನೆ ಸರ್ವರಿಗೂ ಅನ್ವಯಿಸು ವುದಲ್ಲದೆ, ಸಾರ್ವಕಾಲಿಕವಾದದ್ದು ಎಂಬ ಭಾವನೆಯನ್ನು ಸಹ ನಮ್ಮ ಅಂತರಂಗದಲ್ಲಿ ಕೊನರಿಸುತ್ತದೆ.

ನಿಸಾರರ ಹತ್ತು ಹಲವು ವಿಷಯವನ್ನೊಳಗೊಂಡ ಗೀತೆಗಳಲ್ಲಿ ಹೆಚ್ಚಾಗಿ ಕಂಡು ಬರುವುದು ಕವಿಯ ಸಮರ್ಪಣೆಯ ಭಾವನೆ, ಮತ್ತು ವಿನಮ್ರಪೂರ್ವಕ ನಿವೇದನೆಯ ತುಡಿತ. 'ಹಾಡು, ಕವಿಯೆ ಹಾಡು' ಎಂಬ ಕವಿ-ಚೇತನ ನಿಸಾರರಲ್ಲಿ ಬೆಳಗಿ, 'ಈ ದಾರಿಯ ಮರೆಯಲಾರೆ' ಎಂದು ಕವಿ ಸಾಗಿದ ದಾರಿಯನ್ನು ಸ್ಮರಿಸಿ, 'ಬೇರೆ ಹಾಡು ಕಲಿಸು' ಎಂಬುದರಲ್ಲಿ ಕವಿಯ ಅಂತರಂಗದ ಒಳ ದನಿಯನ್ನು ಒಲಿಸುವ ಆಶಯವಿದೆ. ಸಹ ಜೀವನದ ಸಂದೇಶ ಅವುಗಳಲ್ಲಿ ಇದ್ದು ಇಂದಿಗೆ ಅವು ಅಧಿಕ ಪ್ರಸ್ತುತವೆನ್ನಿಸುತ್ತವೆ. ಅಲ್ಲದೆ, ಸ್ವಕೀಯವಾದ ಒಂದು ಕೊರತೆಯೂ ಕವಿಯನ್ನು ಬಾಧಿಸಿದಂತಿದೆ. ಅದೆಂದರೆ, ತಾನು ಭಾವ ತುಂಬಿ ಹಾಡಲು ಸಾಧ್ಯವಾಗುತ್ತಿಲ್ಲ; ಆದ್ದರಿಂದ ತನಗೆ ಹೊಸದಾದ ಬೇರೆ ಹಾಡನ್ನು ಕಲಿಸು ತಾಯಿ ಎಂಬ ಆರ್ತವಾದ ನಿವೇದನೆ ಹೊಮ್ಮಿದೆ :

> **'ಬೇರೆ ಹಾಡ ಕಲಿಸು ತಾಯೆ**
> **ಬೇರೆ ತೆರನ ರಾಗವ;**
> **ಸೂರೆಗೊಳಲಿ ತುಂಬು ಭಾವ**
> **ತೆಗೆದು ಬಗೆಯ ಬೀಗವ.**

'ನಾನು ನನ್ನದೆಂಬ ಮೋಹ
ತೆರೆಯ ಮರೆಗೆ ಸರಿಯಲಿ;
ಗಾನಗೊಂಡು ವಿಶ್ವಭಾವ
ಬಾನಿನಗಲ ಮೊರೆಯಲಿ.

'ಒಳಗೊಳಗೇ ಬವಣೆಯುಂಡು ಗತಿಗಾಣದೆ ಕೂಳಿಗೆ
ನವೆವ ಸಕಲ ಜೀವ ಕುಲಕೆ ಹಾಡಾಗಲಿ ನಾಲಿಗೆ.

....

ಜಾತಿ ಧರ್ಮ ವರ್ಣ ಭಾಷೆ ಮಿತಿಯ ಮೇರೆ ದಾಟುತ
ಸೊಕ್ಕುತಿರಲು, ಪ್ರತಿಭಟಿಸಲಿ ಈಟಿಯಂತೆ ನಾಟುತ.

'ನೆತ್ತರ ವಿಷ ಬೆಳಸಿಗಾಗಿ
ಮುಗ್ಧರನ್ನು ಗೊಬ್ಬರ
ಮಾಡಿ ನಲಿವ ಕುಹಕಿ ಜನರ
ಅಡಗಿಸಿರಲಿ ಅಬ್ಬರ.

'ನನ್ನ ಹಾಡಿನಲ್ಲಿ ಹಾಯದಿರಲಿ ನೆರಳು ಹೆರವರ;
ಪೊರೆವ ಹಸ್ತವಾಗಿ ಬರಲಿ ಕಂಬನಿಗಳ ಸುರಿವರ.'

(ಬೇರೆ ಹಾಡ ಕಲಿಸು)

ನಿಸಾರರು ಈ ಕವನದಲ್ಲಿ ಸರಳ ಮತ್ತು ಸುಭಗತರ ರೀತಿಯಲ್ಲಿ ಅತ್ಯಂತ ಪ್ರಭಾವ ಪೂರ್ಣವಾಗಿ ಸಾಮಾಜಿಕ ಪ್ರಸ್ತುತತೆ ಮತ್ತು ಕಳಕಳಿಗಳನ್ನು ತೋಡಿಕೊಂಡಿದ್ದಾರೆ. ಭಾವನೆ ಎಷ್ಟೇ ಬಲವಾಗಿದ್ದರೂ ವೈವಿಧ್ಯಪೂರ್ಣವಾಗಿದ್ದರೂ ಸಮರ್ಥ ಕವಿಯಾದವನು ಅದನ್ನು ಸಂವೇದನಾತ್ಮಕವಾಗಿ ಅನುಭವಿಸಿದ್ದರೆ ಮಾತ್ರ, ಅತ್ಯಂತ ಸಾಧಾರಣ ಮಾತುಗಾರಿಕೆಯ ಮೂಲಕ ಅದನ್ನು ವ್ಯಕ್ತಗೊಳಿಸಬಲ್ಲ ಎನ್ನುವುದಕ್ಕೆ ಈ ಕವಿತೆಯೂ ಒಂದು ಸೂಕ್ತ ನಿದರ್ಶನ.

ಅಂತಿಮವಾಗಿ, 'ಅತಿ ಸನಾತನ' ಗೀತೆಯಲ್ಲಿ ಕವಿ, ಕೃತಜ್ಞತಾ ಭಾವನೆಯಿಂದ ತನ್ನ ಹುಟ್ಟಿನ ಈ ಮಣ್ಣಿನ ಸಂಸ್ಕೃತಿಗೆ, ಹಿರಿಮೆಗೆ ವಂದಿಸಿ 'ನಾದವಿರದ ಬದುಕ'ನ್ನು ಈ ಜೀವಕ್ಕೆ ಅನುಗ್ರಹಿಸಬೇಡವೆಂಬ ನಿವೇದನೆಯನ್ನು ಮಾಡುತ್ತಾರೆ. ಎಷ್ಟು ಜನ್ಮ ಹೊತ್ತರೂ ಈ ಮಣ್ಣಿನಲ್ಲಿ ಕವಿಯಾಗಲು ಬಯಸುವರೆಂಬುದು ಖಚಿತ. 'ಅತಿ ಸನಾತನ' ಹೆಸರಿನ ಈ ಗೀತೆ ಮೇಲ್ನೋಟಕ್ಕೆ ಒಂದು ಮಾಮೂಲಿ ಭಾವಗೀತೆ ಅಥವಾ ಅದರ ವರ್ಗೀಕರಣಕ್ಕೆ ಸೇರಿದಂತೆ ಭಾಸವಾದರೂ ಇದು ಈ ಮಣ್ಣಿನ ಸಂಸ್ಕೃತಿಗೆ ತಾನು ಆಭಾರಿಯಾಗಿದ್ದೇನೆಂಬ ನಮ್ರ ಭಾವನೆಯನ್ನು ಅಂತಃಕರಣಪೂರ್ವಕವಾಗಿ ಹೊಮ್ಮಿಸುವ ತತ್ತ್ವ ಪ್ರಣಾಲಿಯಂತೆ ಭಾಸ ವಾಗುವಂಥದ್ದು :

'ಅತಿ ಸನಾತನ ನಿನ್ನ ತಲೆಮಾರ ಚಾರಿತ್ರ್ಯ;
ನಿನ್ನಲ್ಲಿ ಜನಿಸಿದುದೆ ನನಗೆ ಮಾನ,
ನಿರ್ಬಲನೆ ಇರಬಹುದು, ಕೇರಿದೊಡನೆಯೆ ತೂರಿ
ಬಿದ್ದ ಜಳ್ಳೇನಲ್ಲ; ಜೀವನ ಧನ್ಯ.

....

'ಹೆಸರಿಲ್ಲದಿರಬಹುದು ಅಲ್ಲೆಲ್ಲು, ಎಷ್ಟೊ ಸಲ
ಜಾರಿ ಬಿದ್ದಿರಬಹುದು ಎಲ್ಲೆ ಮೀರಿ;
ಮಣ್ಣಿನಲಿ ಬೇರಿರುವ ಸ್ವಂತಿಕೆಯೆ ಸಾಕೆನಗೆ
ಹೆಮ್ಮೆಯಲಿ ತುಳಿಯುವೆನು ನನ್ನ ದಾರಿ.
'ಹಿರಿತನದ ಎದುರಿನಲಿ ಮೌನವೇ ಗುಣಗಾನ;
ಬಾಯಿಬಿಟ್ಟರೆ ಮಾತು ಅರ್ಥಹೀನ.
ನಿನ್ನಮರ ಸಂತಾನದಲ್ಲಿ ದೊರೆಕಿದೆ ಸ್ಥಾನ;
ಅದಕಿಂತ ಬೇಕಿಲ್ಲ ಬೇರೆ ಮಾನ.'

(ಅತಿ ಸನಾತನ)

'ನಾದವಿರದ ಬದುಕು' ಕವನ, ತಾನು ತನ್ನ ಈ ನೆಲದ ಜಲವನ್ನು, ಅದರ ಋಣವನ್ನು ಮರೆಯಬಾರದೆಂದು ತನ್ನನ್ನೇ ಎಚ್ಚರಿಸಿಕೊಳ್ಳುವ ಸ್ವಾತ್ಮ ನಿವೇದನೆಯಂತಿದೆ. ಜೊತೆಗೆ, ಬದುಕಿನ ಪ್ರೀತಿ, ನಿಸರ್ಗದ ಉಪಾಸನೆಗಳು ಮನುಷ್ಯನಿಗೆ ದೈವದಿಂದ ಪ್ರಾಪ್ತವಾದ ಅಮೂಲ್ಯ ವರಗಳೆಂಬ ಎಣಿಕೆ ನಿಸಾರರಿಗಿದ್ದು, ಅವುಗಳ ಕಳಕಳಿ ಈ ಗೀತೆಯಲ್ಲಿ ಸುವ್ಯಕ್ತವಾಗಿದೆ.

'ನಾದವಿರದ ಬದುಕೇ, ಉನ್ಮಾದ ಕೋರಬೇಡ;
ಈ ನೆಲದ ಜಲವ ಸವಿದು, ರವಿ ಕರುಣೆ ಮರೆಯಬೇಡ.
ಬಿಡುವಿರದ ದುಡಿತದಲ್ಲಿ ಬಲಿಯಾಗದಿರಲಿ ಚೆರಗು;
ಸುಡು ಬಾಳಿನಂಚಿನಲ್ಲಿ ಮೆರೆದಿರಲಿ ಕಲೆಯ ಸೆರಗು.
ಉದಯಾಸ್ತಗಳಲಿ ಲೋಕ ತಾನಲ್ಲ ಬರಿಯ ಮಣ್ಣು,
ಚೆಲುವೆದುರಿನಲ್ಲಿ ಸತತ ಹೊಸತಾಗಬೇಕು ಕಣ್ಣು.
ಚಣ ಚಣವು ಜೀವ ಮಾಗಿ ಮರುಹುಟ್ಟು ಪಡೆಯುತಿರಲಿ;
ಹೊಸ ನಲವ ನೆಲೆಗೆ ತಾನು ನಿಲದಂತೆ ನಡೆಯುತಿರಲಿ.' (ನಾದವಿರದ ಬದುಕು)

—ನಿಸಾರರ ಈ ನಿವೇದನೆ ಫಲಪ್ರದವಾಗಲಿ; ನಿರಂತರವಾಗಿ, ಉತ್ತರೋತ್ತರವಾಗಿ ಅವರ ಬದುಕು-ಬರಹಗಳು ಸಾಗಿರಲೆಂದು ಹಾರೈಸುತ್ತೇನೆ.

ಕೊನೆಯದಾಗಿ, ನನ್ನ ಈ ಲೇಖನದಿಂದ ನಿಸಾರರ 'ಸಮಗ್ರ ಭಾವಗೀತೆಗಳು' ಸಂಪುಟದ ಅನೇಕ ಅತ್ಯುತ್ತಮ ಗೀತೆಗಳ ಕಡೆಗೆ ಓದುಗರ ಗಮನ ಹರಿಯುವುದೆಂದು ಭಾವಿಸುತ್ತೇನೆ. ಅವುಗಳ ಓದಿನಿಂದ ಹೃದಯಕ್ಕೆ ತಣಿವು-ನಲಿವು, ರಸಾಸ್ವಾದ, ತುಷ್ಟಿಪುಷ್ಟಿಗಳು ಲಭಿಸುತ್ತವೆಯೆಂದು ಸ್ವಾನುಭವದಿಂದ ನಾನು ಘೋಷಿಸಬಲ್ಲೆ.

ವೈಯಕ್ತಿಕವಾಗಿ ಖರೀದಿಸುವ ಸಾಹಿತ್ಯಾಸಕ್ತರ, ಪರಾಮರ್ಶಕರ ಸಂಖ್ಯೆಯೆಂಬ ರಾಮ ಪಾದ ಸೋಕಿದ ಹೊರತು ಓದುಗಾರಿಕೆಯ ಅಹಲ್ಯಾ ಶಿಲಾ ಶಾಪ ನೀಗದು.

(ಓದುಗಾರಿಕೆಯ ಸುಧಾರಣೆ)



'ಪ್ರಾತಿನಿಧಿಕ ಕವನಗಳು':
ಒಂದು ಗುಣಗ್ರಾಹಿ ವಿಹಂಗಮಾವಲೋಕನ

♦ ಡಾ. ಕೆ. ಪಿ. ಮಂಜುಳಾ ರೆಡ್ಡಿ

ಒಬ್ಬ ಮಹತ್ವದ ಕವಿಯ ಜೀವಮಾನದಲ್ಲಿ ಅವನ ಕವನಗಳ ಸಂಕಲನಗಳಾಗಿ 'ಸಮಗ್ರ ಕಾವ್ಯ', 'ಆಯ್ದ ಕವನಗಳು' ಮತ್ತು 'ಪ್ರಾತಿನಿಧಿಕ ಕವನ' ಸಂಕಲನಗಳು ರೂಪುಗೊಳ್ಳುವುದು ತೀರಾ ಸಹಜವಾದರೂ ಕೊನೆಯ ಸಂಕಲನಕ್ಕೆ ಹೆಚ್ಚಿನ ಹಿರಿಮೆ ಇದೆ.

ಪ್ರಾತಿನಿಧಿಕ ಕವನಗಳು ಒಬ್ಬ ಕವಿಯ ಮಹತ್ವದ ಕವನಗಳನ್ನು ಗುರುತಿಸಿ ಅರ್ಥೈಸುವುದಕ್ಕೆ ಹೆಚ್ಚು ಸಹಕಾರಿ. ಈ ಪ್ರಾತಿನಿಧಿಕ ಕವನಗಳ ಹಿಂದೆ ಒಬ್ಬ ವ್ಯಕ್ತಿ ಹುಟ್ಟಿ ಬೆಳೆದು ಬಂದ ಸಾಮಾಜಿಕ ಸ್ತರ, ಜಾತಿ, ಆರ್ಥಿಕ ಹಿನ್ನೆಲೆ, ಧರ್ಮ ಅವನ ವ್ಯಕ್ತಿತ್ವ ರೂಪುಗೊಳ್ಳುವಲ್ಲಿನ ಪ್ರಧಾನ ಅಂಶಗಳು. ಪ್ರತಿ ಕ್ಷಣವೂ ಅನುಸಂಧಾನ ಮಾಡುವ ಅಧಿಕಾರದ ಯಾಜಮಾನ್ಯದ ನೆಲೆಗಳು—ಇವುಗಳ ಮೂಲಕ ಅವನು ಮತ್ತೆ ಮತ್ತೆ ಪುನರ್ ಸೃಷ್ಟಿಗೊಳ್ಳುತ್ತಾ ಹೋಗುತ್ತಾನೆ. ಇವು ಅವನ ಅಭಿವ್ಯಕ್ತಿಯ ಮೇಲೆ ಬೀರುವ ಪ್ರಭಾವ, ಪರಿಣಾಮಗಳು ಹೌದು. ಈ ದೃಷ್ಟಿಯಿಂದ ನೋಡಿದಾಗ ಒಬ್ಬ ವ್ಯಕ್ತಿಯ ಪ್ರಾತಿನಿಧಿತ್ವ ಬಹಳ ಮುಖ್ಯ ವಾಗುತ್ತದೆ. ಇಂಥ ಪ್ರಾತಿನಿಧಿತ್ವವನ್ನು ಅಭಿವ್ಯಕ್ತಿಸುವ ನಿಸಾರರ ಕವನಗಳ ವಿವೇಚನೆಯಿದು.

ನಿಸಾರರ ಈ ಪ್ರಾತಿನಿಧಿಕ ಕವನಗಳಲ್ಲಿ ತುಂಬಾ ಜನಪ್ರಿಯವಲ್ಲದ, ಜನಪ್ರಿಯವಾಗಬಹುದಾಗಿದ್ದ ಉತ್ತಮ ಕವನಗಳನ್ನು ಮತ್ತು ಕೆಲವು ಅಂಶಗಳಿಂದ ಪ್ರಮುಖವಾಗ ಬಹುದಾದ ಕವನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಪುಟಗಳ

ಮಿತಿಯಿಂದಾಗಿ ಇಲ್ಲಿ ಪ್ರಾತಿನಿಧಿಕ ಕವನಗಳ ಸ್ಥೂಲ ವಿವೇಚನೆಯಿದೆ.

ನಿಸಾರರನ್ನು ಸಮನ್ವಯ ಕವಿ ಎಂದು ಕೆಲವರು ಗುರುತಿಸುತ್ತಾರೆ. ಈ ಹಣೆಪಟ್ಟಿ ನಿಸಾರರ ಕಾವ್ಯಕ್ಕೆ ಮಿತಿಯನ್ನುಂಟು ಮಾಡುತ್ತದೆ. ಸ್ವತಃ ನಿಸಾರರೇ ಈ ಸಮನ್ವಯತೆಯನ್ನು ತೀವ್ರವಾಗಿ ತಿರಸ್ಕರಿಸುತ್ತಾರೆ. ಇವರ ಕಾವ್ಯಕ್ಕೆ ಯಾವುದೇ ಮಿತಿ ಎಲ್ಲೆಗಳಿಲ್ಲ. 'ಆಕಾಶಕ್ಕೆ ಸರಹದ್ದುಗಳಿಲ್ಲ, ಆಕಾಶ ಕವಿತೆಯಂತೆ, ಎಂದೇ ಅದಕ್ಕೆ ಸರಹದ್ದುಗಳಿಲ್ಲ' ('ಪ್ರಾತಿನಿಧಿಕ ಕವನಗಳು', ಪುಟ: ೨೬೬). ಈ ಮಿತಿಯನ್ನು ಮೀರಿದ ನಿಸಾರರ ಹೆಜ್ಜೆ ಗುರುತುಗಳನ್ನು ಅನ್ವೇಷಿಸುವ ಮತ್ತು ಸಾಂಸ್ಕೃತಿಕ ವಕ್ತಾರರಾಗಿ ಎಷ್ಟು ಮಹತ್ವಪೂರ್ಣ ಕವಿ ಎಂಬ ಹಿನ್ನೆಲೆಯಲ್ಲಿ ಅವರ ಪ್ರಾತಿನಿಧಿಕ ಕವನಗಳನ್ನು ಚರ್ಚಿಸಲು ಇಚ್ಛಿಸುತ್ತೇನೆ.

ನಿಸಾರರ ಕಾವ್ಯ ಕೃಷಿಯ ಪ್ರಾರಂಭದಲ್ಲಿ ದ್ವಂದ್ವವಿತ್ತು. 'ನನ್ನ ದನಿ, ನನ್ನದೇ ಆದ ದನಿ, ನನ್ನೆದೆಯ ಜೀವ ಮಣಿ ಎಲ್ಲಿರುವುದೋ!' ('ಪ್ರಾತಿನಿಧಿಕ ಕವನಗಳು', ಪುಟ: ೨೦)
—ಎಂಬ ತಳಮಳ, ಸಂಕಟ, ನೋವುಗಳಿದ್ದರೂ 'ನೆನೆದವರ ಮನದಲ್ಲಿ' ಕವನ ಸಂಕಲನದ ಹೊತ್ತಿಗೆ ಅವರು ತಮ್ಮ ಹಾದಿಯನ್ನು ಕಂಡುಕೊಂಡರು. ಜನರಿಗೆ ಅರ್ಥವಾಗುವಂತೆ, ಜನರಿಗಾಗಿ ಕಾವ್ಯ ಬರೆಯಬೇಕು ಎಂಬ ನಿಲವು. ಇವರ ಪ್ರಕಾರ ಕಾವ್ಯ ಆತ್ಮ ಶೋಧನೆಯಲ್ಲಿ ನಿರಂತರವಾಗಿ ಪ್ರತಿಕ್ರಿಯಿಸುತ್ತದೆ. ನಿಸಾರರು ತಮ್ಮ ಸೃಜನಕ್ರಿಯೆಯಲ್ಲಿ ಸ್ವಂತಿಕೆಯನ್ನು ಮೆರೆಯಬೇಕು ಎಂಬ ಅಭೀಪ್ಸೆಯನ್ನು ವ್ಯಕ್ತಪಡಿಸುತ್ತಾರೆ. ತಮ್ಮದೇ ಆದ ಜೀವ ಮಣಿಯಾದ ನುಡಿಯನ್ನು ಅನ್ವೇಷಿಸುವ ಛಲವಿದೆ. ಕಾವ್ಯ ಆಗುವಾಗಲೂ ಪ್ರತಿಭೆ ಮತ್ತು ಪರಿಶ್ರಮ ಅಗತ್ಯ ಎಂದು ಭಾವಿಸುತ್ತಾರೆ.

ಕಾವ್ಯದಲ್ಲಿ ಸಂಪೂರ್ಣ ಅಭಿವ್ಯಕ್ತಿ ಸಾಧ್ಯವಿಲ್ಲವೆಂದು ಕವಿ ಪರಿತಪಿಸುತ್ತಾರೆ. ಕೆಲವೊಮ್ಮೆ ಏನೇನೂ ಹೊಳೆಯುವುದಿಲ್ಲ ಎಂದು ಪರಿತಪಿಸಿದರೂ ಕವಿಗೆ ಕಾವ್ಯ ಬರೆಯುವ ಆಸಕ್ತಿ ಮಾತ್ರ ಹಿಂಗುವುದಿಲ್ಲ. ಕವಿ ಸಂಗೀತವನ್ನು ಹೊಮ್ಮಿಸುವ ಗ್ರಾಮಫೋನಿನ ರೆಕಾರ್ಡಿನ ಸೂಜಿಯಾಗಬೇಕು ಎಂಬ ಅಪೇಕ್ಷೆಯಿದೆ. 'ತನ್ನ ಕೃತಿ ಕೀಳಲ್ಲ, ಬಿತ್ತಿದುದು ಬೀಳಲ್ಲ' ಎಂಬ ಆತ್ಮವಿಶ್ವಾಸದಿಂದ ಕಾವ್ಯರಚನೆಗೆ ಹೊರಡುತ್ತಾರೆ. ಇವರು ತಮ್ಮ ಕಾವ್ಯ ಸತ್ವಯುತವಾಗಿ ಕಾಲಾತೀತವಾಗಬೇಕು ಎಂದು ಅಪೇಕ್ಷಿಸುತ್ತಾರೆ. ಸಿದ್ಧಾಂತಗಳಿಗೆ ಬದ್ಧರಾಗುವುದಕ್ಕಿಂತ ಅನುಭವಕ್ಕೆ ನಿಷ್ಠರಾಗುವಲ್ಲಿ ಅವರಿಗೆ ಹೆಚ್ಚಿನ ಒಲವಿದೆ. ಅಂದರೆ, ಸಿದ್ಧಾಂತಗಳನ್ನು ರೂಪಿಸುವ ಬದುಕನ್ನು ಸಮಗ್ರವಾಗಿ ಸಮಯನಿಷ್ಠರಾಗಿ ಪ್ರಾಮಾಣಿಕ ಸಂವೇದನೆಗೆ ಒಡ್ಡಿಕೊಳ್ಳುವ ವೈಶಿಷ್ಟ್ಯವಿದೆ.

ಇವರು ಬರೆಯಲು ಆರಂಭಿಸಿದ್ದೇ ನವೋದಯದ ಸಂದರ್ಭದಲ್ಲಿ. ನವೋದಯ, ನವ್ಯದಿಂದ ಪ್ರಭಾವಿತವಾದರೂ ತಮ್ಮ ಅನನ್ಯತೆಯನ್ನು ಮೆರೆದರು. ಹೊಸತನ್ನು ರೂಢಿಸಲು ಬಂದ ಪಾಶ್ಚಾತ್ಯ ಪ್ರೇರಣೆಯ ನವ್ಯ, ಎಲ್ಲ ಪಂಥಗಳಂತೆ ಏಕತಾನತೆಯನ್ನು ರೂಢಿಸಿಕೊಂಡಿತು. ನವ್ಯದ ಇಂಥ ಪ್ರಚಲಿತ ಕಾಲದಲ್ಲಿ ತಮ್ಮ ಅಸ್ತಿತ್ವ, ಅನನ್ಯತೆಯನ್ನು ಉಳಿಸಿಕೊಳ್ಳಬೇಕು ಎಂಬ ಅಭಿಲಾಷೆ ಅವರ ಸಾಹಿತ್ಯದ ಹಿಂದಿನ ಪ್ರೇರಣೆ. ಹಾಗಾಗಿ 'ನಿತ್ಯೋತ್ಸವ'ದಂಥ ಭಾವಗೀತೆಗಳನ್ನು ಬರೆದರು. ವಿಚಾರ ದೃಷ್ಟಿ ಮತ್ತು ಭಾವದ

ಆರ್ದ್ರತೆಗಳಿಂದ ಮೇಳೈಸಿಕೊಂಡ ಈ ರಚನೆಗಳು ಒಂದು ಸಮಸ್ಥಿತಿಯನ್ನು ಉಂಟು ಮಾಡಿದವು. ಯಾವ ಪಂಥಕ್ಕೂ ಬದ್ಧರಾಗದೇ ಕಾವ್ಯ ಜೀವನದುದ್ದಕ್ಕೂ ಆಯ್ಕೆಯ ವಿಷಯ ದಲ್ಲಿ ತೋರಿರುವ ಧೈರ್ಯ, ಪ್ರಾಮಾಣಿಕತೆ, ಸ್ವಾತಂತ್ರ್ಯ ಮತ್ತು ಮುಖ್ಯ ವಾಹಿನಿಯಲ್ಲಿ ಒಂದಾಗುವ ಉದಾರ ಗುಣದಿಂದಾಗಿ ತಮ್ಮ ವೈಶಿಷ್ಟ್ಯ ಮತ್ತು ಅನನ್ಯತೆಗಳನ್ನು ಮೆರೆದಿದ್ದಾರೆ.

ನಿಸಾರರ ಜೀವನದ ಧೋರಣೆ ಖಚಿತವಾಗಿ ಇಂಥದೇ ಎಂದು ಗುರುತಿಸ ಬಹುದಾಗಿದೆ. ಸ್ವಸ್ಥತೆ, ಸಮಾನತೆ, ಸೌಹಾರ್ದತೆ, ಬಾಂಧವ್ಯ, ಭಿನ್ನತೆಯನ್ನು ಕಾಪಾಡಿ ಕೊಂಡು ಸಮಾಜದಲ್ಲಿ ಒಂದಾಗಿ ಬಾಳಬೇಕು, ಸಾಮರಸ್ಯವನ್ನು ಬೆಳೆಸಿಕೊಳ್ಳಬೇಕೆಂಬುದೇ ಅವರ ಆಶಯ.

ನಿಸಾರರು ನವೋದಯ ಕವಿಗಳಂತೆ ತಮ್ಮ ವ್ಯಕ್ತಿತ್ವದ ಮೂಲ ದ್ರವ್ಯಗಳಾದ ಪ್ರಕೃತಿ, ಗಂಡು-ಹೆಣ್ಣಿನ ಪ್ರೀತಿ, ಮೌಲ್ಯಪ್ರಜ್ಞೆ, ಆಧ್ಯಾತ್ಮಿಕತೆ, ರಾಷ್ಟ್ರೀಯತೆ ಇತ್ಯಾದಿಗಳನ್ನು ಬಿಟ್ಟುಕೊಡಲಿಲ್ಲ. ಕುವೆಂಪು, ಕೆ.ಎಸ್.ನ., ಅವರುಗಳ ಹಾಗೆ ಒಂದು ನಿರ್ದಿಷ್ಟ ಭಾವವನ್ನು ಇವರು ತಮ್ಮ ಕಾವ್ಯದ ಕೇಂದ್ರವಾಗಿ ಮಾಡಿಕೊಂಡಿಲ್ಲ. ಬದುಕಿಗೆ ಅನೇಕ ಚಹರೆಗಳಿರು ವಂತೆ ಇವರ ಕಾವ್ಯಕ್ಕೂ ಅನೇಕ ಮುಖಗಳಿವೆ. ೧೯೬೦ರಲ್ಲಿ ನಿಸಾರರು ತಮ್ಮ ಪ್ರಥಮ ಕವನ ಸಂಕಲನ 'ಮನಸು ಗಾಂಧಿ ಬಜಾರು' ಪ್ರಕಟಿಸಿದರು. ಕನ್ನಡ ಮಾತೃಭಾಷೆಯಲ್ಲದ ಅಲ್ಪಸಂಖ್ಯಾತರಾದ ವ್ಯಕ್ತಿಯೊಬ್ಬ ಕನ್ನಡ ಸಾಹಿತ್ಯ ವಲಯದಲ್ಲಿ ಅಭಿವ್ಯಕ್ತಿಸಿದ್ದು ತುಂಬಾ ಸೋಜಿಗದ ಸಂಗತಿ. ಇವರು ಬರೆಯುವ ಕಾಲಕ್ಕಾಗಲೇ ಬೇಂದ್ರೆ, ಕುವೆಂಪು, ಪು.ತಿ.ನ., ನರಸಿಂಹಸ್ವಾಮಿ ಅವರುಗಳು ಮೇರು ಶಿಖರಗಳಾಗಿ ಸ್ಥಾಪಿತರಾಗಿದ್ದರು. ಹೊಸ ಹೊಸ ಚಳುವಳಿಗಳೂ ಮಾರ್ಗಗಳೂ ನೂತನ ಮನಸ್ಸುಗಳೂ ಆ ಕಾಲದಲ್ಲಿ ಪ್ರವಹಿಸುತ್ತಿದ್ದವು. 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಅಡಿಗರು ಒಂದು ಕಡೆ ಶೋಭಿಸುತ್ತಿದ್ದರು. ಇಂಥವರ ಮುಂದೆ ನಿಸಾರರು ತಮ್ಮ ಧ್ವನಿಯನ್ನು ವ್ಯಕ್ತಪಡಿಸುವುದು ತನ್ಮೂಲಕ ಒಂದು ಸ್ಥಾನ, ಅಂತಸ್ತು ಸಂಪಾದಿಸಿಕೊಳ್ಳುವುದು ಸವಾಲೇ ಆಗಿತ್ತು. ಈ ಸವಾಲನ್ನು ತಮ್ಮ ಅಭಿವ್ಯಕ್ತಿಯಲ್ಲಿ ಹೇಗೆ ಪರಿಹರಿಸಿಕೊಳ್ಳುತ್ತಾರೆಂಬುದನ್ನು ಈ ಪ್ರಾತಿನಿಧಿಕ ಕವನಗಳ ಮೂಲಕ ಗುರುತಿಸಬಹುದು. ಮುಂಚೆ ತಿಳಿಸಿದಂತೆ, ಪ್ರಾತಿನಿಧಿಕ ಕವನಗಳಲ್ಲಿ ಶ್ರೇಷ್ಠ ವಾದರೂ ಅಷ್ಟು ಜನಪ್ರಿಯವಲ್ಲದಿರುವ ಕವಿತೆಗಳನ್ನು ವಿವೇಚನೆಗಾಗಿ ಆಯ್ಕೆ ಮಾಡಿ ಕೊಂಡಿದ್ದೇನೆ. ಕಾವ್ಯದ ವಿಭಿನ್ನ ನೆಲೆಗಳಾದ ಪ್ರಕೃತಿ, ರಾಷ್ಟ್ರೀಯತೆ, ಪ್ರೀತಿ, ಅನನ್ಯತೆ, ಸಾಮಾಜಿಕತೆಯನ್ನು ನಿಸಾರರು ಹೇಗೆ ದುಡಿಸಿಕೊಳ್ಳುತ್ತಾರೆಂಬ ಚರ್ಚೆ ಇಲ್ಲಿದೆ.

ಪ್ರಕೃತಿಯಲ್ಲಿ ಎಲ್ಲ ಜಾವಗಳನ್ನು ಕವಿಗಳು ಚಿತ್ರಿಸಿದರೂ ಮಧ್ಯಾಹ್ನದ ಚಿತ್ರಣಗಳು ಅಪರೂಪ. ಇಂಥ ಮಧ್ಯಾಹ್ನವನ್ನು ನಿಸಾರರು 'ಬಡಾವಣೆಯಲ್ಲೊಂದು ಮಧ್ಯಾಹ್ನ' ಎನ್ನುವ ಕವನದಲ್ಲಿ ಚಿತ್ರಿಸುತ್ತಾರೆ. ಬಿಸಿಲಿನ ಧಗೆ, ತಾಪ ಝಳಗಳಿವೆ. ಕವಿಗೆ ಮಧ್ಯಾಹ್ನದ ಸೂರ್ಯನ ಕೃಪೆ, ಅನಾರ್ಯನ ಬೈಗುಳದ ಹಾಗೆ ಅಸಹನೆ, ಸಿಡುಕನ್ನುಂಟುಮಾಡುತ್ತದೆ. ಬಿಸಿಲಿಗೆ ತರು ಲತೆಗಳು ಬಾಗಿರುವುದು ಕವಿಗೆ ಅವು ನಿಂದನೆಯಿಂದ ತಲೆ ಬಾಗಿದ ಹಾಗೆ

ಗೋಚರವಾಗುತ್ತದೆ. ಈ ಅನುಭವ ನೂತನವಾದದ್ದು. ಮಧ್ಯಾಹ್ನದ ಚಿತ್ರವನ್ನು ಹೇಗೆ ಚಿತ್ರಿಸಿದರೂ ಕವಿಗೆ ತೃಪ್ತಿಯಿಲ್ಲ. ಕೊನೆಗೆ 'ಬಾಣಲೆ'ಗೆ ಹೋಲಿಸುತ್ತಾರೆ. ಈ ಹೋಲಿಕೆ ಸಮರ್ಥ ಶಕ್ತಿಯಾಗಿ ಬೆಳೆದು ಬಿಸಿಲಿನ ಭಯಂಕರತೆಯನ್ನು ಮೂಡಿಸುತ್ತದೆ.

ಮಧ್ಯಾಹ್ನ ನೆಪವಾಗಿ ನಗರೀಕರಣದ ಕಟುಕತ್ವವನ್ನು ಬಡಾವಣೆಗಳ ಹುಟ್ಟನ್ನು, ಹಳ್ಳಿಗಳ ನಾಶವನ್ನು ಒಂದು ಉಪಮೆಯ ಮೂಲಕ ಚಿತ್ರಿಸುತ್ತಾರೆ.

'ಪಕ್ಕ ಹಳ್ಳಿಯ ಹೊಲದ ಮೆದೆಗಳು ಮೇವ ಕುರಿಗಳ ಹೋಲಿವೆ;
ಬರುವ ನಗರೀಕರಣ ಕಟುಕನ ಮಚ್ಚು ಕಾಣದ ತೆರನಿವೆ.'

(ಪ್ರಾತಿನಿಧಿಕ ಕವನಗಳು, ಪುಟ : ೧೯೨)

ಹಳ್ಳಿಗಳನ್ನು ಕುರಿಗಳಿಗೆ ಹೋಲಿಸಿರುವಲ್ಲಿ ಔಚಿತ್ಯವಿದೆ. ಹಳ್ಳಿಗಳು ಮುಗ್ಧತೆ, ಸರಳತೆಯಿಂದ ಸಹಜವಾಗಿರುವುವು, ನಗರೀಕರಣದ ಮಚ್ಚಿಗೆ ಇವೆಲ್ಲ ತಮ್ಮ ಕೊನೆಯನ್ನು, ಅಸ್ತಿತ್ವವನ್ನು ಕಳೆದುಕೊಂಡಿರುವುದನ್ನು ಹಾಗೂ ಧಗೆ ಉಂಟು ಮಾಡುವ ಅಸ್ತವ್ಯಸ್ತತೆಯನ್ನು ಮೂಡಿಸುತ್ತದೆ.

ಪ್ರಕೃತಿ ಕವನಗಳಲ್ಲಿ ತುಂಬಾ ವೈಶಿಷ್ಟ್ಯಪೂರ್ಣವಾದ ಕವನ 'ಈಗ ಮಳೆಗಾಲವಲ್ಲ'. ಮಳೆಯ ನೆಪವಾಗಿ ಬದುಕಿನ ಜಿಜ್ಞಾಸೆಯನ್ನು ಮಾಡಿಸುತ್ತದೆ. ಈಗ ಮಳೆಗಾಲವಲ್ಲದಿದ್ದರೂ ಮಳೆ ಬಂದಿದೆ. ಇದನ್ನು ತಡೆಯಲು ಯಾವ ಅಗಸ್ತ್ಯನಿಂದಲೂ ಸಾಧ್ಯವಿಲ್ಲ. ನಿಯತ ಕಾಲದ ಮಳೆಯಾದರೆ ಏನಾದರೂ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳಬಹುದು. ಆದರೆ ಈಗ ಬಂದ ಮಳೆ ಅನಿರೀಕ್ಷಿತವಾದದ್ದು. ಬಾಳಿನಲ್ಲಿ ಕೂಡ ಅನೇಕ ಸಂಗತಿಗಳು ಹೀಗೆ ಘಟಿಸುತ್ತವೆ :

'ಈಗ ಮಳೆಗಾಲವಲ್ಲ, ಆದರೂ ಹೊಯ್ದಿದೆ ಆಲಿ ಕಲ್ಲ ಮಳೆ.
ಮಳೆ ಬರುತ್ತೇನೆಂದರೆ ಯಾವುದು ತಡೆದೀತು?
ಕಡಲಿನಂತೆ ಯಾವ ಅಗಸ್ತ್ಯ ಕೈ ಕುಡಿದೀತು?
ಬರುವುದು, ಬಾಳಿನಲ್ಲಿ ಬರುವುದು
ಮಳೆಯಂತೆ ಸಾರುವುದಿಲ್ಲ, ಹೆಜ್ಜೆಯೂರುವುದಿಲ್ಲ.'

(ಪ್ರಾತಿನಿಧಿಕ ಕವನಗಳು, ಪುಟ : ೧೨೫)

ಅನಿರೀಕ್ಷಿತವಾಗಿ ಘಟಿಸುವುದನ್ನು ಸಹಜವಾಗಿ ಸ್ವೀಕರಿಸುವ ಮನೋಧರ್ಮ, ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂಬ ಧ್ವನಿ ವ್ಯಕ್ತವಾಗುತ್ತದೆ.

ನಿಸರ್ಗದೊಂದಿಗಿನ ಇವರ ಅನುಸಂಧಾನ ಉತ್ಕಟವಾದ ಅನುರಕ್ತಿಯ ಆರಾಧನೆಯ ಸ್ವರೂಪದ್ದು. ಚೆಲುವಿನ ವೈಭವದ ಮುಖಗಳನ್ನು ಚಿತ್ರಿಸುತ್ತಲೇ ತಮ್ಮ ವಿಶಿಷ್ಟವಾದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಾರೆ. ಕವಿ ಪ್ರಕೃತಿಯಲ್ಲಿ ದೇವರು, ಮಗುವನ್ನು ಕಾಣುತ್ತಾರೆ. ಇವರಿಗೆ ಪ್ರಕೃತಿ ಬೆರಗು, ಹಿಗ್ಗು, ಉಲ್ಲಾಸವನ್ನು ಉಂಟುಮಾಡುತ್ತದೆ. ನಿಸರ್ಗದ ಚೆಲುವಿನಲ್ಲಿ ಬದುಕಿನ ಬವಣೆಗಳನ್ನು ಹೋಗಲಾಡಿಸಿಕೊಳ್ಳಬೇಕೆಂಬ ಭಾವ ಉತ್ಕಟವಾಗಿದೆ.

ನಿಸರ್ಗ ಮಾನವನ ಕಷ್ಟ-ನಷ್ಟ, ನೋವು ಸಂಕಟಗಳಿಗೆ ಸಾಂತ್ವನ ನೀಡುತ್ತದೆಂಬ ಭಾವವಿದೆ. ಇವರ ಕಾವ್ಯದಲ್ಲಿ ಪ್ರಕೃತಿ, ಬರಿಯ ಪ್ರಕೃತಿಯ ಚಿತ್ರಗಳಾಗಿ ಬರುವುದಕ್ಕಿಂತ ಒಂದು ಭಾವದ ಚಿಂತನೆಯ 'ಚಿತ್ರ'ಗಳಾಗಿ ರೂಪುಗೊಂಡಿದೆ. ಕವಿಯ ಒತ್ತು, ಪ್ರಕೃತಿ ಸರ್ವಸ್ವತಂತ್ರ ವಾದದ್ದು, ಅದು ಯಾರ ನಿಯಂತ್ರಣಕ್ಕೂ ಒಳಪಡುವುದಿಲ್ಲ ಎಂಬುದರ ಮೇಲಿದೆ.

'ಪ್ರಕೃತಿಗಿದೆ ತನ್ನದೆ ಮರ್ಜಿ
ಕಿವಿಗೆ ಹಾಕಿಕೊಳ್ಳದು ಅದು
ನರರ ಗೋಳಿನ ಅರ್ಜಿ.' (ಕೊಳವೆ ಬಾವಿಗಳು)

ಇದೇ ಪ್ರಕೃತಿಯೆಂಬ ಭಾವ ಸ್ಥಾಯಿಯಾಗಿದೆ.

ಪ್ರಕೃತಿ ಕವನಗಳಿಗೆ ನಿಸಾರರು ಕುವೆಂಪು ಅವರಿಂದ ಸ್ಫೂರ್ತಿ ಪಡೆದರೆ, ಪ್ರೇಮ ಕಾವ್ಯಕ್ಕೆ ಬೇಂದ್ರೆ, ನರಸಿಂಹಸ್ವಾಮಿಯವರಿಂದ ಸ್ಫೂರ್ತಿ ಪಡೆದರು.

ಬೇಂದ್ರೆ, ಕೆ.ಎಸ್.ನ. ಅವರ ಪ್ರೇಮಾಭೀಪ್ಸೆಯನ್ನು ಮನದಲ್ಲಿ ಅರಗಿಸಿಕೊಂಡು ತಮ್ಮ ಪ್ರೇಮ ಕವನಗಳಲ್ಲಿ ಆತಂಕ ಸಂಕೋಚಗಳಿಲ್ಲದೆ ಮುಕ್ತವಾಗಿ ಬಿಚ್ಚಿಕೊಳ್ಳುತ್ತಾರೆ. ನರಸಿಂಹಸ್ವಾಮಿ ಅವರ ಪ್ರೇಮ ಗೀತೆಗಳು ದಾಂಪತ್ಯ ಗೀತೆಗಳಾದರೆ, ನಿಸಾರರ ಕವನಗಳು ಶುದ್ಧ ಪ್ರೇಮ ಕವನಗಳು.

ಪ್ರೀತಿ ಕವಿಯನ್ನು ಗಾಢವಾಗಿ ಕಾಡಿದೆ. ಈ ನೆಲೆಯಲ್ಲಿ ಪ್ರೀತಿಯ ಜಿಜ್ಞಾಸೆ ಅವರ ಅನೇಕ ಕವನಗಳ ವಸ್ತುವಾಗಿದೆ. ಪ್ರೀತಿ, ಪ್ರೇಮವನ್ನು ತಮ್ಮ ಪಾಂಡಿತ್ಯ, ಮನೋಭೂಮಿಕೆ, ಅನುಭವಗಳ ಮೂಲಕ ವ್ಯಾಖ್ಯಾನಿಸುತ್ತಾರೆ. ಎಲ್ಲರಂತೆ ಇವರನ್ನು ಕೂಡ ಪ್ರೀತಿ ಎಂದರೇನು? ಎಂಬ ಪ್ರಶ್ನೆ ಕಾಡಿದೆ. ಅದಕ್ಕೆ ಉತ್ತರವನ್ನು ಅವರು ಈ ರೀತಿ ಕಂಡುಕೊಂಡಿದ್ದಾರೆ.

ಪ್ರೀತಿ ಎನ್ನುವುದು ತ್ಯಾಗ, ಭೇದ ಭಾವಗಳಿಲ್ಲದ್ದು :

'ಯಾರೊ ಉಡುವ ವಸ್ತ್ರಕ್ಕಾಗಿ ರೇಷ್ಮೆ ಹುಳದ ತ್ಯಾಗ ಪ್ರೀತಿ
ಸ್ವಂತ ಅನ್ಯ ಎಣಿಸದೇಕ ನೀತಿ ಹಕ್ಕಿ ಕಾವು ಪ್ರೀತಿ' (ಪ್ರೀತಿ)

ಪ್ರೀತಿಯ ವಾಸ್ತವಿಕತೆ, ಅರ್ಥವತ್ತತೆ, ನೂತನ ಅನುಭವ, ನವೀನ ವ್ಯಾಖ್ಯಾನವಿದೆ.

'ಹುಟ್ಟು-ಸಾವಿನಿಸವಿ ನಡುವೆ ಪುಟ್ಟ ಕಪ್ಪು ಗೀಟು ಪ್ರೀತಿ' ತುಂಬಾ ಭಿನ್ನವಾದ ಚಿಂತನೆ. ಒಂದು ಹೆಣ್ಣಿನ ಪ್ರೀತಿಯನ್ನು ಪಡೆಯುವುದು ಭಾಗ್ಯ ಎಂದು ಕವಿ ಭಾವಿಸುತ್ತಾರೆ.

ಪ್ರೀತಿ ಏನನ್ನು ಸಾಧಿಸುತ್ತದೆ ಎಂದರೆ,

'ಹೆಣ್ಣು ಗಂಡಿನ ಅನುರಾಗದ
ಬಣ್ಣ ಬಣ್ಣದ ಲತೆ ಹಬ್ಬಲು
ಜಗವೊಂದು ಸುರ ಸುಂದರ
ಅತಿ ಸಮ್ಮೋಹಕರ ಹಂದರ.' (ಕಣ್ಣು ಕಣ್ಣೊಡನೆ)

ಪ್ರೀತಿಯಿಂದ ಬದುಕು ಸುಂದರವಾಗುತ್ತದೆಂಬ ಚಿಂತನೆ ಅನುಭವದಿಂದ ಹರಳು

ಗೊಂಡಿದೆ. ಪ್ರೀತಿಯ ಸಾಧ್ಯತೆಯನ್ನು ಹೀಗೆ ಚಿತ್ರಿಸುತ್ತಾರೆ:

'ಸಾವೊಂದೆ ಶರಣೆಂದು ಬೇಯುತ್ತಲಿರಲು
ನಿನ್ನೊಲವು ರೇವಾಗಿ ಬಳಿ ಬಂದು 'ಬಾ' ಎಂದು
ಸೆಳೆದು ಬಾಚುತ ತನ್ನ ಎದೆಗಪ್ಪಿತು.
ಕಣ್ಣಾರಳಿ ನೋಡಿದರೆ ಸ್ವರ್ಗ ಸುಂದರ ನಗರಿ
ಸೊಬಗು ಬೆಡಗಿನ ಸಿರಿಗೆ ಮೈ ನವಿರಿತು.' (ನಿನ್ನ ಮೈತ್ರಿ)

ವಸಾಹತು ಪ್ರಭಾವದಿಂದಾಗಿ ನಗರದ ಬದುಕು ಸಂಕೀರ್ಣಗೊಂಡ ಫಲವಾಗಿ ಪ್ರೀತಿ, ಪ್ರೇಮಗಳಿಗೆ ನಾನಾ ಮುಖಗಳ ಸಾಧ್ಯತೆಯೊದಗಿದೆ. ಇಂಥ ವಿವಿಧ ಆಯಾಮಗಳಿಗೆ ಆಕೃತಿ ನೀಡಿದರೂ ಪ್ರೀತಿಸಿದವರ ಬಗೆಗಿನ ನೆನಪು ಸ್ಥಾಯಿಯಾಗಿದೆ.

ಪ್ರೀತಿಸಿದವಳು ದೂರವಾದಮೇಲೆ ಕಾಡುವ ಅವಳ ನೆನಪನ್ನು ನಿಸಾರರು ಬಹಳಷ್ಟು ಕವನಗಳಲ್ಲಿ ದಾಖಲಿಸಿದ್ದಾರೆ. ಪ್ರೀತಿಯ ವಿವಿಧ ಆಯಾಮಗಳಲ್ಲಿ ಭಗ್ನ ಪ್ರೇಮ ಮತ್ತು ನೆನಪು ಪದೇ ಪದೇ ಸ್ಥಾಯಿಯಾಗಿ ಬರುತ್ತವೆ. 'ಸುಮುಹೂರ್ತ'ದಿಂದ ನೆನಪು ಆರಂಭವಾಗಿ 'ಆಕಾಶಕ್ಕೆ ಸರಹದ್ದುಗಳಿಲ್ಲ'ದವರೆಗೂ ಅದರ ವ್ಯಾಪ್ತಿಯಿದೆ. ಪ್ರೀತಿಸಿ ದವಳನ್ನು ಮರೆಯಬೇಕು ಎಂದು ಕಷ್ಟಪಡುತ್ತಿದ್ದರೆ—

'ಎಲ್ಲ ಮರೆತಿರುವಾಗ ಇಲ್ಲ ಸಲ್ಲದ ನೆಪವ
ಹೂಡಿ ಬರದಿರು ಮತ್ತೆ ಹಳೆಯ ನೆನಪೇ.'
(ಪ್ರಾತಿನಿಧಿಕ ಕವನಗಳು, ಪುಟ : ೯೪)

ನೆನಪಿಗೆ ಒಂದು ನೆಪ ಬೇಕಷ್ಟೆ? ನೆಪ ಸಿಕ್ಕ ತಕ್ಷಣ ನೆನಪು ತೂರಿ ಬರುತ್ತದೆ. ಅವಳನ್ನು ಮರೆತಿರುವುದು ಅವನ ಭ್ರಮೆ. ಅವಳ ನೆನಪು ಎಲ್ಲೋ ಆಳದಲ್ಲಿ ಕಲ್ಲುಗಳ ನಡುವಿನ ನೀರಿನ ಸೆಲೆಯಂತೆ ಹುದುಗಿರುತ್ತದೆ. ಶೂನ್ಯದಲ್ಲಿ ದೃಷ್ಟಿ, ಮನಸ್ಸುಗಳು ನೆಟ್ಟಾಗ ಬಾಣದ ಹಾಗೆ ನೆನಪು ತೂರಿ ಬರುತ್ತದೆ. ಕಳೆದದ್ದು ಭೂತ, ಬೇಕಿಲ್ಲದ್ದು. ಪ್ರಗತಿಗೆ ಅಡ್ಡಿಯಾಗು ವಂಥದ್ದು. ಈ ಭಾವ ಕವಿಯಲ್ಲಿ ನಿರ್ದಿಷ್ಟವಾಗಿದೆ.

'ಸತ್ತ ಭೂತವನೆತ್ತಿ ಹದ್ದಿನಂದದಿ ತಂದು
ನನ್ನ ಮನದಂಗಳಕೆ ಹಾಕದಿರು ನೆನಪೆ;
ಭವ್ಯ ಭವಿತವ್ಯಕ್ಕೆ ಮೊಗ ಮಾಡಿ ನಿಂತಿರುವೆ
ಚೆನ್ನಲ್ಲೆ ಇರಿಯದಿರು ಓ! ಚೆನ್ನ ನೆನಪೆ!'
(ಅದೇ ಪುಟ)

ನೆನಪು ಮಾಸದೆ, ಮತ್ತೆ ಮತ್ತೆ ರಿಂಗಣಗೊಳ್ಳುತ್ತದೆ. ನೆನಪನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬುದನ್ನು ಒಂದು ಸುಂದರ ರೂಪಕದ ಮೂಲಕ ವ್ಯಕ್ತಪಡಿಸುತ್ತಾರೆ. 'ನೆನಪೆಲ್ಲಿ ಮಾಸುತ್ತೆ ಪ್ರಿಯೆ? / ಅದು ಆಕಾಶಕ್ಕೆ ಕಚ್ಚಿದ ಮೋಡ / ಬದಲಾಯಿಸುತ್ತ ಚಹರೆ / ಮುಹೂರ್ತಕ್ಕೆ ಕಾದು ದ್ರವಿಸುತ್ತದೆ.'

ನಿಸಾರರು ತಮ್ಮ ಪ್ರೇಮ ಕವನಗಳನ್ನು ರಚಿಸಿದ ಆರಂಭದ ಕಾಲಕ್ಕೆ 'ನೆನಪಾಗಿ

ಕಾಡುವ' ಚಿತ್ರಗಳು ಭಿತ್ತಿಯ ಮೇಲೆ ಆಕಾರ ಪಡೆದುಕೊಳ್ಳುತ್ತಾ, ಅನೇಕ ದ್ವಂದ್ವಗಳನ್ನು ಮೂಡಿಸಿಕೊಳ್ಳುತ್ತಾ, ವಿಧಿಯನ್ನು ನಂಬುತ್ತಾ, ಭವಿಷ್ಯಕ್ಕೆ ಪ್ರಗತಿಗೆ ಅಡ್ಡಿ ಆತಂಕ ಎಂಬ ಭಾವ ಬೆಳೆಯುತ್ತಾ, ಕೊನೆಗೆ ಅವರಲ್ಲಿ ನೆನಪು 'ಯಾವುದೂ ಮರೆತಿಲ್ಲ, ಹಚ್ಚ ಹಸಿರಿವೆ ಎಲ್ಲ' ಎಂಬ ಸ್ಪಷ್ಟ ಚಿತ್ರಣ ಪಡೆದುಕೊಳ್ಳುತ್ತದೆ.

ಈ ರೀತಿ ನೆನಪು ಸ್ಥಾಯಿಯಾಗಿ ಈ ಕವನಗಳ ಒಳ ಸೆಲೆಯಾಗಿದೆ. ಪ್ರೀತಿಯ ಇನ್ನೊಂದು ಮುಖವಾದ ವಾತ್ಸಲ್ಯ ಸ್ನೇಹದಂಥ ಭಾವನೆಗಳು ಕವಿಗೆ ಪರಿಚಿತವಾದರೂ ಕಾವ್ಯದಲ್ಲಿ ಅವುಗಳ ಶೋಧನೆಗೆ ಹೊರಡುವುದಿಲ್ಲ. ನಿಸಾರರ ಈ ನಿಲವು ಆಶ್ಚರ್ಯವನ್ನುಂಟು ಮಾಡುತ್ತದೆ.

'ಆಧುನಿಕ ಭಾರತೀಯರಲ್ಲಿ ರಾಷ್ಟ್ರೀಯತೆ ಎಂಬುದು ರಾಷ್ಟ್ರಪ್ರೇಮ, ನಾಡಿನ ಬಗೆಗಿನ ಪ್ರೇಮ, ಮಾತೃಭಾಷೆಯ ಮೂಲಕ ಅಭಿವ್ಯಕ್ತವಾಗಿದೆ. ಭಾರತ ಭೌಗೋಲಿಕವಾಗಿ ವಿಶಾಲ ದೇಶವಾಗಿದ್ದು ಅನೇಕ ಸಂಸ್ಕೃತಿಗಳನ್ನು ಹೊಂದಿದ ನಾಡು. ಈ ರಾಷ್ಟ್ರೀಯತೆ ಇವೆಲ್ಲವನ್ನು ಒಗ್ಗೂಡಿಸುವ ಏಕೈಕ ಮಂತ್ರ ಘೋಷಣೆಯಾಯಿತು. ವಸಾಹತು ಸಂದರ್ಭದಲ್ಲಿ ದೇಶೀಯತೆಯನ್ನು ಅನನ್ಯವೆಂದು ಪರಿಭಾವಿಸಿದೆ. ವಸಾಹತು ಸಂದರ್ಭಕ್ಕೆ ಪ್ರತಿಕ್ರಿಯೆಯಾಗಿ ಮೂಡಿದ್ದು ರಾಷ್ಟ್ರೀಯ ಕಲ್ಪನೆ. ವಸಾಹತುಶಾಹೀ ಸಂದರ್ಭದಲ್ಲಿ ಪ್ರಭುತ್ವವನ್ನು ವಿರೋಧಿಸುವುದಕ್ಕೆ ಆಯ್ಕೆ ಮಾಡಿಕೊಂಡಿರುವ ಆಯುಧವೇ ರಾಷ್ಟ್ರೀಯತೆ' ಎಂದು ಡಾ. ಕೇಶವ ಶರ್ಮ ಅಭಿಪ್ರಾಯಪಡುತ್ತಾರೆ.

ರಾಷ್ಟ್ರೀಯ ಪ್ರಜ್ಞೆ ಜೀವನದ ಮೂಲ ಧಾತುವಾಗಬೇಕು ಎಂದು ನಿಸಾರ್ ಆಶಿಸುತ್ತಾರೆ. ಭಾರತೀಯತೆ ಇವರ ರಕ್ತದ ಕಣಕಣಗಳಲ್ಲಿ ಒಂದಾಗಿರುವುದನ್ನು ಗಮನಿಸಬಹುದು. ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿ ಅಲ್ಪಸಂಖ್ಯಾತರೆಲ್ಲ ಒಂದಾಗಬೇಕು ಎಂಬ ಕಳಕಳಿಯಿದೆ. ಈ ಮಣ್ಣಿನಲ್ಲಿ ಸಹಜವಾಗಿ ಒಂದಾಗುವ ಗುಣಗಳಿವೆ. ಇವರ ಕವನಗಳು—ಇದನ್ನು ಅಭಿವ್ಯಕ್ತಿಸುತ್ತವೆ.

ಅವರು ಮೋಕ್ಷವನ್ನು ತಿರಸ್ಕರಿಸಿ, ಭಾರತದಲ್ಲಿ ಹುಟ್ಟಬೇಕು ಎಂದು ಆಶಿಸುತ್ತಾರೆ.

> **'ಅತಿ ಸನಾತನ ನಿನ್ನ ತಲೆಮಾರ ಚಾರಿತ್ರ್ಯ**
> **ನಿನ್ನಲ್ಲಿ ಜನಿಸಿದುದೆ ನನಗೆ ಮಾನ.'**
>
> **(ಪ್ರಾತಿನಿಧಿಕ ಕವನಗಳು, ಪುಟ : ೬)**

ದೇಶಭಕ್ತಿ ಮೂಲವಾದ ಆರಾಧನೆ, ಆದರ್ಶ, ರಾಷ್ಟ್ರದ ಸಂಸ್ಕೃತಿ, ಹೆಮ್ಮೆ, ವೀರಾವೇಶಗಳು ಸ್ವಾತಂತ್ರ್ಯ ಚಳವಳಿ—ಇದರ ಜೊತೆ ಜೊತೆಗೆ ಕರ್ನಾಟಕದ ಏಕೀಕರಣ ಚಳವಳಿಯು ಕಾಣಿಸಿಕೊಂಡ ಕಾರಣವಾಗಿ ಕನ್ನಡ ನಾಡು ನುಡಿಗಳ ಬಗೆಗಿನ ಅಭಿಮಾನ ಸಾಹಿತ್ಯದಲ್ಲಿ ಗೋಚರಿಸತೊಡಗಿತು. ಕವಿಗಳು ಭಾರತದ ಒಂದು ಭಾಗವಾಗಿ, ಮಗಳಾಗಿ ಕನ್ನಡವನ್ನು ಭಾವಿಸಿದರು. ಇಂಥ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ಬಂದ ನಿಸಾರರು ಕೂಡ ಸಂಸ್ಕೃತಿಯ ವಾಹಿನಿಗೆ ವಿಶೇಷವಾಗಿ ಸ್ಪಂದಿಸಿದರು.

ನಿಸಾರರು ಪರಂಪರೆಯ ಜೊತೆ ಜೊತೆಗೆ ಹೆಜ್ಜೆ ಹಾಕಿದರೂ ಕೂಡ ದೃಷ್ಟಿ ಬೇರೆ ಕಡೆ ಹೊರಳುತ್ತದೆ.

ಸ್ವಾತಂತ್ರ್ಯದ ಅನಂತರದ ಭಾರತದ ಬಗ್ಗೆ ಯಾವ ಕನಸುಗಳಿದ್ದವೋ ಅವೆಲ್ಲ ನುಚ್ಚುನೂರಾಗಿ ಹೋದವು. ದೇಶವನ್ನು ಅರಾಜಕತೆ, ಶೋಷಣೆ, ಸ್ವಾರ್ಥ, ಬಡತನ ಆವರಿಸಿಕೊಂಡವು. ಕವಿಗೆ ದೇಶದ ಬಗ್ಗೆ ಅಭಿಮಾನ ಇರುವ ಕಾರಣದಿಂದಾಗಿ ಯಾವ ಉತ್ಸಾಹವಿತ್ತೋ ಈ ದೇಶದಲ್ಲಿನ ಪರಿಸ್ಥಿತಿಗಳನ್ನು ನೋಡಿ ವಿಷಾದ ಕವಿಯುತ್ತದೆ. 'ನಾಡ ದೇವಿಯ ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ' ಎನ್ನುತ್ತಾ ಎಳೆ ಎಳೆಯಾಗಿ ಇಲ್ಲಿನ ವೈದೃಶ್ಯ, ಅಂತರಗಳನ್ನು ಚಿತ್ರಿಸುತ್ತಾರೆ. ಇವತ್ತು ದೇಶದ ಸ್ಥಿತಿ ಹೇಗಿದೆ ಎಂದರೆ, ಭಾರತ ಹೇಗೆ ಛಿದ್ರ ಛಿದ್ರವಾಯಿತೋ, ಹಾಗೆಯೇ ಭಾರತೀಯ ಮನಸ್ಸುಗಳು ಕೂಡ ಛಿದ್ರಗೊಂಡವು. ರಾಷ್ಟ್ರ, ಚೀನಾ ದಾಳಿಯಿಂದ ತತ್ತರಿಸಿ ಹೋಗಿತ್ತು. ರಾಷ್ಟ್ರ, ನೆಹರೂ ನಿಧನದಿಂದ ಆಘಾತ ಗೊಂಡಿತು. ಇದರ ಸ್ಪಂದನವನ್ನು, ಭಾಷೆಯಲ್ಲಿ ಭಾರತದ ಸ್ವರೂಪವನ್ನು ಸಮರ್ಪಕವಾಗಿ ನಿಸಾರ್ ಕಟ್ಟಿಕೊಡುತ್ತಾರೆ. ಈ ಸ್ಥಿತಿಯ ಬಗ್ಗೆ ಬರಿಯ ವಿಷಾದವನ್ನು ಮಾತ್ರ ವ್ಯಕ್ತಪಡಿಸಿ ತಾವು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ಸಮಾಜದಲ್ಲಿನ ತಮ್ಮ ಹೊಣೆಯ ಬಗ್ಗೆಯೂ ಕವಿಗೆ ಎಚ್ಚರವಿದೆ :

> **'ನರನನ್ನೆ ಗಾಳವಾಗಿಸುತ ಬಾಳ ನೀರಲ್ಲಿ, ನಲಿವ ನರಿಗೆ**
> **ನಾವೊಂದು ಎನುವ ಸತ್ಯಕ್ಕೆ ಅಡ್ಡಗಾಲೆಳೆವ ನಾಡಿನರಿಗೆ**
> **ಎಚ್ಚರವ ನೀಡಿ ತಿದ್ದುತ್ತಲಿರಲಿ ಕವಿ ಭಾವವೆಂಬ ಬಡಿಗೆ;**
> **ತಾಯಿ ಭಾರತಿಯೆ, ಇದುವೆ ನಿನಗೆ ನಾ ಸಲಿಸಲಿರುವ ಕೊಡುಗೆ.'**
>
> **(ಪ್ರಾತಿನಿಧಿಕ ಕವನಗಳು, ಪುಟ : ೯೫)**

ಪಡೆದ ಋಣಗಳನ್ನು ತೀರಿಸಬೇಕೆಂಬ ನೈತಿಕತೆ ಕವಿಗಿದೆ. ಭಾರತದ ಸಮಗ್ರತೆಗೆ, ಐಕ್ಯಕ್ಕೆ ಅಲ್ಪಸಂಖ್ಯಾತರು ಬಹುಸಂಖ್ಯಾತರು ಮುಖಾಮುಖಿಗಳಾಗಬೇಕು. ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಗುಮಾನಿಯಿಂದ ನೋಡುವ ದೃಷ್ಟಿಯಿದೆ. ಅವರ ನಿಷ್ಠೆಯ ಬಗ್ಗೆ ಅನುಮಾನಗಳಿವೆ. ಅವರನ್ನು ಪ್ರತ್ಯೇಕ ದ್ವೀಪಗಳಾಗಿ ಗುರುತಿಸುತ್ತಾರೆ. ಈ ಭಾವವನ್ನು ತ್ಯಜಿಸಿ ಭಾರತದ ಸಂಸ್ಕೃತಿಯಲ್ಲಿ ಅವರನ್ನು ಒಂದಾಗಿಸುವ ಪ್ರಯತ್ನವನ್ನು ಮಾಡಬೇಕು. ಅಲ್ಪಸಂಖ್ಯಾತರು ಕೂಡ 'ಇಲ್ಲಿ ಹುಟ್ಟಿ, ಇಲ್ಲೇ ಬೆಳೆದು, ಇಲ್ಲೇ ಸಾಯುವವರು ನಾವು. ಈ ದೇಶ ಬಿಟ್ಟು ನಮಗೆ ಬೇರೆ ನೆಲೆ, ನೆಲಸು ಇಲ್ಲ. ನಾವು ನಿಷ್ಠರಾಗಿರಬೇಕು. ಅಲ್ಪ ಸಂಖ್ಯಾತರಿಗೆ ತಾವು ಅಲ್ಪಸಂಖ್ಯಾತರು ಅನ್ನೋ ಪ್ರಜ್ಞೆಯನ್ನು ತುಂಬಿಸಿ ಒಂದು ರೀತಿ ಕೀಳರಿಮೆಯುಂಟು ಮಾಡುತ್ತಿದ್ದಾರೆ. ಇದು ತಪ್ಪು. ಅವರನ್ನು ಜೊತೆ ಸೇರಿಸಿಕೊಳ್ಳಬೇಕು. ಎಲ್ಲೋ ಒಂದು ಜಾಗದಲ್ಲಿ ಅವರು ಮೊಂಡಾಗಿರಬಹುದು, ತಮಗೆ ಸರಿಯಾದ ಸವಲತ್ತು ಸಿಗುತ್ತಿಲ್ಲ ಅಂತ. ಬಹುಸಂಖ್ಯಾತರು ಸೌಹಾರ್ದ, ಪರಸ್ಪರ ನಂಬಿಕೆ, ಜಾತಿ ಮತ ಭಾಷಾ ಸಾಮರಸ್ಯವನ್ನು ಬೆಳೆಸಿಕೊಳ್ಳಬೇಕು. ಭಾವೈಕ್ಯ ರಾಷ್ಟ್ರೈಕ್ಯಗಳಿಗೆ ಅಲ್ಪಸಂಖ್ಯಾತರು ಪ್ರಯತ್ನ ಪಡಬೇಕು. ನಾನು ಒಬ್ಬ ಅಲ್ಪಸಂಖ್ಯಾತನಾಗಿ ಈ ಮಾತನ್ನು ಹೇಳುತ್ತಾ ಇಲ್ಲ. ಒಬ್ಬ ಕವಿಯಾಗಿ, ಮನುಷ್ಯನಾಗಿ ಎಲ್ಲಾ ಮೀರಿ ಹೇಳುತ್ತಾ ಇದ್ದೇನೆ' (ಕವಿಯೊಂದಿಗಿನ

ಸಂದರ್ಶನ). ಈ ನಿಲವು, ಭಾವ 'ಇಲ್ಲಿ ಹುಟ್ಟಿ, ಇಲ್ಲಿ ಬಾಳು' ಎಂಬ ಕವನದಲ್ಲಿ ಹರಳುಗಟ್ಟಿದೆ.

ಕನ್ನಡ ನಾಡಿನ ಬಗ್ಗೆ ಕವಿಗೆ ಉಂಟಾಗುವ ಉತ್ಸಾಹ, ಸಂತೋಷ, ಸಂಭ್ರಮಗಳು ಅಷ್ಟಿಷ್ಟಲ್ಲ. ಈ ಸಂತೋಷ ಸಂಭ್ರಮಗಳನ್ನು 'ಕನ್ನಡ ರಾಜೇಶ್ವರಿ' ಕವನದಲ್ಲಿ ವ್ಯಕ್ತಪಡಿಸುತ್ತಾರೆ. ಮಳೆಗಾಲದ ಕಪ್ಪೆಯಂತೆ ರಾಜ್ಯೋತ್ಸವಗಳು ಬರಿಯ ಗದ್ದಲದ ಸಂತೆ. ಆದರೆ 'ನಿತ್ಯೋತ್ಸವ' ಕವನದಲ್ಲಿ ಪ್ರಕೃತಿಯೇ ಕನ್ನಡಾಂಬೆಗೆ ನಿತ್ಯ ಉತ್ಸವವನ್ನು ಆಚರಿಸುತ್ತಿದೆ ಎಂಬ ವಿಶಾಲ ದೃಷ್ಟಿಕೋನವಿದೆ. ಕನ್ನಡಿಗರ ಆಶಯ ನಿತ್ಯೋತ್ಸವವಾಗಿದೆ.

ನಾಡು-ನುಡಿಯನ್ನು ಕುರಿತಂತೆ, 'ಕನ್ನಡವೆಂದರೆ' ಎಂಬ ಕವನದಲ್ಲಿ ಜಿಜ್ಞಾಸೆ ನಡೆಸುತ್ತಾರೆ. ಇದು ಕರ್ನಾಟಕ, ಕನ್ನಡ ನುಡಿಯನ್ನು ಕುರಿತಂತೆ ಅತ್ಯುತ್ತಮವಾದ ಕವನ. ಕನ್ನಡವೆಂದರೆ ಕೇವಲ ಒಂದು ಭಾಷೆಯಲ್ಲ ಎಂಬ ನಿಲುವು ನಿಸಾರರಿಗಿದೆ.

'ಕನ್ನಡವೆಂದರೆ ಬರಿ ನುಡಿಯಲ್ಲ
ಹಿರಿದಿದೆ ಅದರರ್ಥ;
ಜಲವೆಂದರೆ ಕೇವಲ ನೀರಲ್ಲ,
ಅದು ಪಾವನ ತೀರ್ಥ.'

(ಪ್ರಾತಿನಿಧಿಕ ಕವನಗಳು, ಪುಟ : ೨೦೬)

'ಕನ್ನಡವೆಂದರೆ ಜನ ಜಂಗುಳಿಯಲ್ಲ, ಜೀವನ ಶೈಲಿ, ವಿಧಾನ.' ಕನ್ನಡ, ನಿಘಂಟುವಿನ ಭಾಷೆಯಿಂದ ಒಂದು ಪರಿಕಲ್ಪನೆಯಾಗಿ ಬೆಳೆಯುತ್ತಾ ಹೋಗಿ ಭಾವಕೋಶವನ್ನು ಸಿದ್ಧಪಡಿಸುತ್ತದೆ. ಕನ್ನಡ ಎನ್ನುವುದು ಸರಸ್ವತಿಯ ವೀಣೆಯ ಧ್ವನಿ ಎಂದು ಪರಿಭಾವಿಸುವಲ್ಲಿ ದೈವತ್ವಕ್ಕೇರಿಸುತ್ತಾರೆ. ಈ ಕವನ ನೀರಿನಂತೆ ಸರಳ ಪಾರದರ್ಶಕವಾಗಿದ್ದರೂ ಆಳ ವಿಸ್ತಾರಗಳಿವೆ. ಈ ಕವನದ ನೆರಳಿನಂತೆ ಅವರದೇ ಕವನ 'ಮನೆಯೆಂದರೆ' ಎಂಬ ಕವನವಿದೆ.

'ಗೋಡೆ ಮಾಡು ಕಿಟಕಿ ಕದ ಹೊಸತಿಲು
ಬಚ್ಚಲು ಹಿತ್ತಲು ಕಾಂಪೌಂಡು ಸುತ್ತಲೂ'

(ಪ್ರಾತಿನಿಧಿಕ ಕವನಗಳು, ಪುಟ : ೨೨೭)

ಮನೆಯೆಂದರೆ ಇಷ್ಟೇ ಅಲ್ಲ. ಮನೆಯೆಂದರೆ ಬರೀ ಇಷ್ಟೇ ಅಲ್ಲ ಹೇಗೋ, ಹಾಗೇ ಕನ್ನಡವೆಂದರೆ ಬರೀ ನುಡಿಯಲ್ಲ, ಭೌಗೋಳಿಕ ಪ್ರದೇಶವಲ್ಲ. ಅದು ಒಂದು ಭಾವನಾತ್ಮಕ ಸಂಬಂಧ.

ನಿಸಾರರು ರಾಷ್ಟ್ರ, ನಾಡು ನುಡಿಗಳ ಬಗ್ಗೆ ಅಪಾರ ಗೌರವ, ಪೂಜ್ಯ ಭಾವನೆಯನ್ನು ತಳೆದಿದ್ದಾರೆ. ಇವೆಲ್ಲವೂ ಅವರ ಕಾವ್ಯದಲ್ಲಿ ಸಹಜವಾಗಿ, ಮನಮುಟ್ಟುವಂತೆ ಸಂವಹನಗೊಂಡಿವೆ.

ಮುಸ್ಲಿಂ ಸಮಾಜದಿಂದ ಬಂದ ನಿಸಾರರಲ್ಲಿ ಮುಸ್ಲಿಂ ಸಂವೇದನೆಗಳು ಗಾಢವಾಗಿಲ್ಲ ಎಂಬ ಆಕ್ಷೇಪಗಳಿವೆ. ಇವರಲ್ಲಿ ಮುಸ್ಲಿಂ ಸಂವೇದನೆಗಳು ಏಕೆ ಅತಿ ಹೆಚ್ಚಾಗಿ ಇಲ್ಲ

ಎಂದರೆ, ಕವಿಯ ದೃಷ್ಟಿಕೋನವೇ ಭಿನ್ನವಾದದ್ದು. 'ಬದುಕಿನ ಅನುಭವದ ಒಂದು ಸಮಗ್ರತೆ ಬೇಕು. ಸಂಪೂರ್ಣತೆಯ ದೃಷ್ಟಿ ಒಬ್ಬ ಸೃಜನಶೀಲ ಲೇಖಕನಿಗೆ ಅಗತ್ಯ. ಒಬ್ಬ ವ್ಯಕ್ತಿಯಾಗಿ, ಕವಿ ಸಮಾಜದಲ್ಲಿ ಬಾಳಬೇಕಾಗಿರುವಾಗ ಅವನಿಗೆ ಸಾಮಾಜಿಕ, ಕೌಟುಂಬಿಕ, ವೃತ್ತಿ ಸಂಬಂಧಗಳ ಸಂಸರ್ಗ; ಪ್ರಕೃತಿ, ಹೆಣ್ಣಿನ ಬಗೆಗಿನ ಸಂಬಂಧಗಳು ಇತ್ಯಾದಿ ಅನುಭವಗಳ ಜೊತೆಗೆ ಅವನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಶ್ರದ್ಧೆಗಳು ಕೂಡ ಒಂದಾಗಿರುತ್ತವೆ, ಬೆಸೆದಿರುತ್ತವೆ. ನಿಜವಾದ ಕವಿಯಾದವನು ಈ ಎಲ್ಲ ಸಂಬಂಧಗಳನ್ನು ಸೂಕ್ಷ್ಮತರವಾಗಿ ಸಂವೇದಿಸಿ ಅವನ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಬೇಕಾಗುತ್ತದೆ. ಕೇವಲ ಒಂದೇ ಒಂದು ಅನುಭವವನ್ನು, ಉದಾ: ಮುಸ್ಲಿಂ ಸಂವೇದನೆ, ಕ್ರಿಶ್ಚಿಯನ್ ಸಂವೇದನೆ, ವೈದಿಕ ಸಂವೇದನೆ, ಶೂದ್ರ ಸಂವೇದನೆ ಇತ್ಯಾದಿ—ಅದೊಂದನ್ನೇ ಸದಾ ಕಾಲವೂ ಚಿಂತಿಸುತ್ತೇನೆ ಎಂದರೆ ವಿವಿಧ ಮುಖಿಯಾದ ಹಾಗೂ ಸರ್ವ ಮಾನವ ಸಾಮಾನ್ಯವಾದ ಬದುಕಿನ ಅನುಭವಗಳಿಗೆ ಬೆನ್ನು ತಿರುಗಿಸಿದಂತೆ. ಹೀಗಾಗಿ ಅವನ ಕಾವ್ಯ ಪಲಾಯನವಾದಿ ಆಗುವ ಅಪಾಯದ ಜೊತೆಗೆ, ಅಪೂರ್ಣವೂ ಎನ್ನಿಸುವುದರಲ್ಲಿ ಎರಡು ಮಾತಿಲ್ಲ. ಕವಿಗಳು ಕೇವಲ ಕಂಪ್ಲೇಂಟು ಬಾಕ್ಸ್‌ಗಳಾಗಿ ಉಳಿಯದೆ ಬದುಕಿನ ಬಗೆಗೆ ನಿಜವಾದ ತಿಳಿವಳಿಕೆಯನ್ನು ಸಮಾಜಕ್ಕೆ ಮಾಡಿಕೊಡಲು ಮುಂದಾಗಬೇಕು' (ಕವಿಯೊಂದಿಗಿನ ಸಂದರ್ಶನ).

ಈ ನೆಲೆಯಲ್ಲಿಯೇ ನಾನು ಕೂಡ ಮುಸ್ಲಿಂ ಸಂವೇದನೆಯ ಪ್ರಜ್ಞೆಯನ್ನು ನಿರಾಕರಿಸಿ, ಅನನ್ಯತೆಯ ಪ್ರಜ್ಞೆಯನ್ನೇ ಕೇಂದ್ರವಾಗಿಟ್ಟುಕೊಂಡು ಇವರ ಕಾವ್ಯವನ್ನು ಅಧ್ಯಯನ ಮಾಡಿದ್ದೇನೆ. ಭಿನ್ನ ಸಂಸ್ಕೃತಿಯ ನಡುವೆ ನಿಂತು ಕಾವ್ಯ ರಚನೆಗೆ ಕವಿ ತೊಡಗುವುದರಿಂದ ಅನನ್ಯತೆಯ ಪ್ರಶ್ನೆ, ಸಂಘರ್ಷಗಳು, ತಾಕಲಾಟಗಳು ಪ್ರಾಮಾಣಿಕವಾಗಿ ಸಹಜವಾಗಿ ಮೂಡಿವೆ. ನಿಸಾರರು ಅನ್ಯ ಧರ್ಮೀಯರಾಗಿರುವುದರಿಂದಲೇ ಇಂಥ ಕೆಲವು ಅಪರೂಪದ ಅಪರಿಚಿತ ಭಾವ ಜಗತ್ತನ್ನು ಸೃಷ್ಟಿಸಲು ಸಾಧ್ಯವಾಗಿದೆ.

'ನೆನೆದವರ ಮನದಲ್ಲಿ'ಯೇ ಆತ್ಮಶೋಧದ ಅನನ್ಯತೆಯ ಬೀಜಗಳಿವೆ. 'ಸಂಜೆ ಐದರ ಮಳೆ'ಯಲ್ಲಿ ಚಿಗುರೊಡೆದು, 'ನಾನೆಂಬ ಪರಕೀಯ'ದಲ್ಲಿ ಹೆಮ್ಮರವಾಗಿ ಬೆಳೆದಿವೆ. ಈ ಕವನಗಳ ನಂತರ ಅನನ್ಯತೆಯನ್ನು ಸಾಧಿಸಿಕೊಂಡ ನಿಸಾರರು ಮುಂದೆ ಇಂಥ ಯಾವ ದ್ವಂದ್ವ, ಸಂಘರ್ಷಗಳಿಲ್ಲದೆ ತಮ್ಮತನವನ್ನು ಸ್ಥಾಪಿಸಿಕೊಂಡ ನೆಲೆಯಲ್ಲಿ ಸೃಜನಕ್ರಿಯೆಗೆ ತೊಡಗುತ್ತಾರೆ.

'ವಿವರಣೆ' ಎನ್ನುವ ಕವನದಲ್ಲಿ ಕವಿ ತಾನು ಬರೆಯುವುದು ಏಕೆ ಎಂಬ ವಿವರಣೆ ಕೊಡಬಯಸುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಎರಡು ರೀತಿಯಾಗಿ ಅಭಿವ್ಯಕ್ತಿಸುತ್ತಾರೆ.

1. ಬೇರೆಯವರಂತೆ ಬರೆಯುವುದು; ಮತ್ತು
2. ಬೇರೆಯವರಿಗಿಂತ ಭಿನ್ನವಾಗಿ ಬರೆಯುವುದು.

ಒಂಟಿತನದಿಂದ ದೂರವಾಗಿ ವ್ಯಕ್ತಿ ವಿಶಿಷ್ಟತೆಯನ್ನು ಸಾರಲು ಮತ್ತು ಹತ್ತರಲ್ಲಿ ಒಂದಾಗದೆ, ಗುಂಪಿನಲ್ಲಿ ತನ್ನ ಸ್ವಂತಿಕೆಯನ್ನು ಮರೆಯಬೇಕೆಂಬ ಇಚ್ಛೆ ಮತ್ತು ಅನನ್ಯತೆಯ ಅಭಿವ್ಯಕ್ತಿ ಗಾಗಿ.

ಭಾಷೆಯಲ್ಲಿ ಮತ್ತು ಬದುಕಿನಲ್ಲಿ ಸಮತೋಲನ, ಹೊಂದಾಣಿಕೆಗಳನ್ನು ತರುವುದು. ಇವೆರಡನ್ನು ನಿಸಾರರು ತಮ್ಮ ಸೃಜನಶೀಲತೆಯಲ್ಲಿ ಸಾಧ್ಯವಾಗಿಸಿಕೊಂಡಿದ್ದಾರೆ. 'ನಾನೆಂಬ ಪರಕೀಯ'ದಲ್ಲಿ 'ನಾನು' ಎಂಬ ಅಸ್ತಿತ್ವವನ್ನು ಕುರಿತ ಜಿಜ್ಞಾಸೆಯಿದೆ. ಈ ಕವನದಲ್ಲಿ ಪರಕೀಯತೆಯ ಅಸ್ತಿತ್ವದ ಅಸ್ಪಷ್ಟತೆಯನ್ನು ಮತ್ತು ಅದು ಉಂಟುಮಾಡುವ ಭಾವನೆಗಳನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ.

'ಸ್ವಾಮಿ, ಈ ನಾನೆನ್ನುವ ಅಸ್ತಿತ್ವದ ಚೂರಿನಸ್ಪಷ್ಟ
ಅರ್ಥೈಸುವುದು ದೇಶದ ಹವಾಮಾನದಂತೆಯೇ, ಕಷ್ಟ.'

(ಪ್ರಾತಿನಿಧಿಕ ಕವನಗಳು, ಪುಟ : ೭೪)

ವಸಾಹತುಶಾಹಿಯು ಭಾರತೀಯ ಕುಟುಂಬಗಳ ಮೇಲೆ ಉಂಟು ಮಾಡಿದ ಪ್ರಭಾವ ವನ್ನು ಅಭಿವ್ಯಕ್ತಿಸುವ ಕವನ 'ಅಮ್ಮ, ಆಚಾರ, ನಾನು'. ಆಧುನಿಕತೆ ಮತ್ತು ಸಂಪ್ರದಾಯ ಗಳ ತಿಕ್ಕಾಟವನ್ನು ಮತ್ತು ಅವನ್ನು ಹೊಂದಾಣಿಕೆ ಮಾಡಿಕೊಳ್ಳುವ ಭಾರತೀಯ ಮನಸ್ಸು ಗಳನ್ನು ಸಮರ್ಥವಾಗಿ ಕಥನದ ಮೂಲಕ ಅರ್ಥೈಸುವ ಪ್ರಯತ್ನ ಮಾಡುವಲ್ಲಿ ಕವಿ ಯಶಸ್ವಿ ಯಾಗಿದ್ದಾರೆ.

ಮುಸ್ಲಿಂ ಸಮಾಜವನ್ನು ಹಿಂದೂ ಸಮಾಜ ಗುಮಾನಿಯಿಂದ ನೋಡುವ ಸಂದರ್ಭ ದಲ್ಲಿನ ಪ್ರತಿಯೊಬ್ಬ ಮುಸ್ಲಿಮನ ಸಂಕಟಾನುಭವದ ಪ್ರತೀಕ 'ನಿಮ್ಮೊಡನಿದ್ದೂ ನಿಮ್ಮಂತಾಗದೆ'. ಈ ಎರಡು ಪದಗಳ ಮಧ್ಯೆ ಸಹಜವಾಗಿ ಇರಬೇಕಾದ ಖಾಲಿ ಜಾಗಕ್ಕಿಂತ ಹೆಚ್ಚು ಇದೆ. ಈ ಪದಗಳು ಅಕ್ಕಪಕ್ಕದಲ್ಲಿವೆಯೇ ಹೊರತು ಒಂದಾಗಿಲ್ಲ, ಹತ್ತಿರವಾಗಿಲ್ಲ. ಸಮಷ್ಟಿ ಭಾರತೀಯ ಅಲ್ಪಸಂಖ್ಯಾತರ ಸ್ಥಿತಿಯೂ ಸಹ ಇದೇನೇ.

ನಿಸಾರರು ಕಾವ್ಯ ಮತ್ತು ಬದುಕಿನ ಪ್ರಶ್ನೆಯನ್ನು ತಮ್ಮದೇ ಆದ ನೆಲೆಯಲ್ಲಿ ಪರಿಹರಿಸಿಕೊಂಡು ಸ್ವವಿಶಿಷ್ಟ ದಾರಿಯನ್ನು ರೂಪಿಸಿಕೊಂಡರು. ಆದ್ದರಿಂದ ಇವರಲ್ಲಿ ಪ್ರತಿಭಟನೆಗಿಂತ ತಮ್ಮ ಅಸ್ತಿತ್ವದ ಶೋಧನೆಯೇ ಮುಖ್ಯವಾಗುತ್ತದೆ. ನವೋದಯ ಕಾವ್ಯ ಮಾರ್ಗದಲ್ಲಿ ಬರೆಯುತ್ತಿದ್ದ ಅನೇಕ ಕವಿಗಳು ನವ್ಯಕ್ಕೆ ಮುಖ ಮಾಡಿದಾಗ ಅವರ ಕಾವ್ಯದ ವಸ್ತು, ತಂತ್ರ, ಬದುಕಿನ ಬಗೆಗಿನ ಧೋರಣೆಗಳು ಬದಲಾದವು. ಆದರೆ ನಿಸಾರರ ಕಾವ್ಯ ತಟಕ್ಕನೆ ಈ ಬದಲಾವಣೆಗಳನ್ನು ಸ್ವೀಕರಿಸಲಿಲ್ಲ. ಇವರಲ್ಲಿ ಬದಲಾವಣೆ ಹಂತ ಹಂತವಾಗಿ, ಆಂಶಿಕವಾಗಿ ನಡೆಯಿತು. ನವೋದಯ, ನವ್ಯದ ಅಂಶಗಳನ್ನು ಸ್ವೀಕರಿಸಿ ತಮ್ಮದೇ ಆದ ಒಂದು ಪ್ರತ್ಯೇಕ ಮಾರ್ಗವನ್ನು ನಿಸಾರ್ ಕಂಡುಕೊಂಡರು. ನವ್ಯ ಕಾವ್ಯ ಅತಿ ವಾಸ್ತವತೆ ಯಿಂದಾಗಿ ನಿಷ್ಠುರತೆಯ ಜೊತೆ ಜೊತೆಗೆ ಮಾನವತಾವಾದವನ್ನು ಗೌಣವಾಗಿಸಿತು. ಆದರೆ ನಿಸಾರರು ಇವೆರಡು ಭಿನ್ನತೆಗಳನ್ನು ಹೊಂದಾಣಿಕೆ ಮಾಡಿಕೊಂಡು ಸೃಜನಶೀಲತೆಯಲ್ಲಿ ತೊಡಗಿದರು. ಬದುಕಿನ ಅನೇಕ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ಉದಾರವಾದಿ ಮಾನವತಾ ಧೋರಣೆಯನ್ನು ಹೊಂದಿ ಮಹತ್ವದ ಕಾವ್ಯವನ್ನು ನಿರ್ಮಿಸಿದರು.

ನಿಸಾರರ ಕಾವ್ಯ ನಿಯೋಗಗಳಲ್ಲಿ ಜನರಿಗೆ ಅರ್ಥವಾಗುವಂತೆ, ಅವರನ್ನು ಮುಟ್ಟು ವಂತೆ, ಅವರಿಗೆ ಹತ್ತಿರವಾಗುವಂತೆ ಬರೆಯುವುದು ಒಂದು. ಈ ಕಾರಣಗಳಿಂದಾಗಿ ನಿಸಾರರು

ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟು ನವ್ಯವನ್ನು ಮಾತ್ರ ಸ್ವೀಕರಿಸಿ, ತಮ್ಮದೇ ಧೋರಣೆಯ ನೆಲೆಗಟ್ಟಿನ ಮೇಲೆ ಭದ್ರವಾಗಿ ಕಾಲೂರಿದರು. ಹಾಗಾಗಿ, ಇವರ ಕಾವ್ಯದಲ್ಲಿ ನವೋದಯದ ಭಾವ ಪರವಶತೆ, ನವ್ಯದ ಚಿಂತನೆಗಳು ಮೇಳೈಸಿವೆ.

ನಿಸಾರರ ಕಾವ್ಯ ವ್ಯಕ್ತಿ ಕೇಂದ್ರಿತ ತಾತ್ತ್ವಿಕತೆಯನ್ನು, ಸಾಮಾಜಿಕ ರಾಜಕೀಯ ಆಯಾಮಗಳನ್ನು ಬೆಳೆಸಿಕೊಂಡು ಅರ್ಥಪೂರ್ಣವಾಗಿ ಬೆಳೆಯಿತು. ತಮ್ಮ ಮೊದಲನೆಯ ಸಂಕಲನ 'ಮನಸು ಗಾಂಧಿ ಬಜಾರು'ವಿನಿಂದ ಹಿಡಿದು, 'ನಿತ್ಯೋತ್ಸವ' 'ಬಹಿರಂತರ'ಗಳನ್ನು ಹೊರತುಪಡಿಸಿ, 'ಅರವತ್ತೈದರ ಐಸಿರಿ'ಯವರೆಗೂ ನಿಸಾರರು ಸಾಮಾಜಿಕ ಕಾಳಜಿಗಳ ಜೊತೆ ಉದ್ದಕ್ಕೂ ಸಂವಾದ ನಡೆಸಿಕೊಂಡು ಬಂದಿದ್ದಾರೆ.

ನಿಸಾರರ ಕಾವ್ಯದ ನಾಯಕ ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯೋತ್ತರ ಭಾರತದ ಪ್ರಜೆ. ಹಿಂದಿನ ಆದರ್ಶಗಳನ್ನು ಗಾಳಿಗೆ ತೂರಿ ತನ್ನ ಸ್ವಾರ್ಥವೇ ಮುಖ್ಯವಾಗಿರುವ ವ್ಯಕ್ತಿತ್ವ ಇವನದು. ಈ ನೆಲೆಯಲ್ಲಿ ಅವನಲ್ಲಿನ ಅತೃಪ್ತಿ, ನಿರಾಸೆ, ಭಯ, ಪಶ್ಚಾತಾಪ ಮುಂತಾದ ಮನಸ್ಸಿನ ನಾನಾ ಭಾವನೆಗಳನ್ನು ನಿಸಾರರು ಕಟ್ಟಿಕೊಡುವ ಪ್ರಯತ್ನವನ್ನು ನಡೆಸುತ್ತಾರೆ.

ಸ್ವಾತಂತ್ರ್ಯೋತ್ತರ ಸಮಾಜದಲ್ಲಿ ಮನುಷ್ಯನು ಅನುಭವಿಸುವ ವಿಷಾದ, ದುಃಖ, ತಳಮಳಗಳನ್ನು ಚಿತ್ರಿಸುತ್ತಾರೆ. 'ಫ್ರಿಜ್', 'ಫುಟ್‌ಪಾತ್'ಗಳ ಮೂಲಕ ಮನಸ್ಸಿನ ಅನೇಕ ಮುಖಗಳನ್ನು, 'ಖಾಲಿ ಸೈಟುಗಳು' ಕವನದಲ್ಲಿ ಅಂತರಂಗದ ಕೋಣೆಗಳನ್ನು ಪರಿಚಯಿಸುತ್ತಾರೆ.

'ಖಾಲಿ ಸೈಟುಗಳು' ಕವನ ನಾಲ್ಕು ಭಾಗಗಳಾಗಿ ವಿಸ್ತಾರವನ್ನು ಪಡೆದುಕೊಳ್ಳುತ್ತದೆ. ಮೊದಲ ಮೂರು ಭಾಗಗಳಲ್ಲಿ ಖಾಲಿ ಸೈಟುಗಳ ಸ್ಥಿತಿಗತಿಗಳು ಹಾಗೂ ಅಭಿವೃದ್ಧಿ ಪ್ರಾಧಿಕಾರದ ಮಲತಾಯಿ ಧೋರಣೆಯನ್ನು ವಿವರಿಸುತ್ತಾರೆ. ಇವತ್ತು ನಗರಗಳು, ಬಡಾವಣೆಗಳು ರೈತನ ಮತ್ತವನ ಹಳ್ಳಿಯ ಅಸ್ತಿತ್ವವನ್ನು ನಾಶಪಡಿಸುವುದರ ಬಗ್ಗೆ ಕವಿ ವಿಷಾದಿಸುತ್ತಾರೆ. ಕವನದ ಕೊನೆಯ ಭಾಗಕ್ಕೆ ಬಂದಾಗ ಇಡೀ ಆವರಣವೇ ಬದಲಾಗಿ, ಭಾವಾರ್ಥ ಸಾರ್ವತ್ರಿಕವಾಗುತ್ತದೆ. ಖಾಲಿ ಸೈಟಿನ ಬಿತ್ತರದ ವಿನ್ಯಾಸ ದೊಡ್ಡ ಭಿತ್ತಿಯನ್ನು ಅಪೇಕ್ಷಿಸುತ್ತದೆ.

> 'ನಮ್ಮಂತರಾಳಗಳ ಲೇಔಟುಗಳಲ್ಲೂ ಇವೆ
> ಖಾಲಿ ಸೈಟುಗಳು,
> ಅಲ್ಲಿ ಅಕ್ರಮವಾಗಿ ತಳವೂರಿವೆ :
> ಅಟ್ಟಲಾಗದ ಕಠೋರ ನೆನಹುಗಳು
> ಗಿಜಿಗಿಡುವ ಬಡ ಕುಟೀರಗಳು,
> ಹಳೆ ಹತಾಶೆಗಳ ಗಟಾರದಂಚಿನ ನಾರುವ ವಠಾರಗಳು,
> ವಿಷಾದದ ಆಗುಹೋಗುಗಳು :
> ಮಾ ನಿಷಾದದ ವ್ಯರ್ಥ ಕೂಗುಗಳು.' (ಪ್ರಾತಿನಿಧಿಕ ಕವನಗಳು, ಪುಟ : ೧೪೨)

ಕಣ್ಣೆದುರಿಗೆ ಖಾಲಿ ಸೈಟುಗಳು ಬಿದ್ದಿದ್ದರೂ ಅವುಗಳನ್ನು ನೋಡಿದರೂ ಈ ಭಾವ

ನಮ್ಮಲ್ಲಿ ಉದ್ಭವಿಸುವುದಿಲ್ಲ. ವಿಶಿಷ್ಟ ಸಂವೇದನೆಯುಳ್ಳವರಿಗೆ ಮಾತ್ರ ಇಂಥ ಅನುಭೂತಿ ಮೂಡಲು ಸಾಧ್ಯ. ಹಾಗೆಯೇ ಮಾತುಗಾರಿಕೆಯ ಕೌಶಲ ಈ ಕವನದಲ್ಲಿ ಗಮನಾರ್ಹ ವಾಗಿದೆ.

ನಾಟಕೀಯತೆಯನ್ನು ಸೊಗಸಾಗಿ ಮೂಡಿಸುವಲ್ಲಿ ನಿಸಾರರದು ಎತ್ತಿದ ಕೈ. ಎಲ್ಲರಿಗೂ ಪರಿಚಿತವಾದ ಒಂದು ವಸ್ತುವನ್ನು ಅವರು ಗ್ರಹಿಸುವ ರೀತಿ, ಅದರ ಬಗೆಗಿನ ಸೂಕ್ಷ್ಮ ಅರಿವು, ಪ್ರಜ್ಞೆಗಳು ಉಲ್ಲೇಖಾರ್ಹ. 'ಮಾರಾಟಗಾತಿಯ ಮಾತುಕತೆ'ಯಲ್ಲಿ ಸಂಕೀರ್ಣ ಮನೋಭಾವದ ವ್ಯಕ್ತಿತ್ವವನ್ನು ವಸಾಹತುಶಾಹಿಯ ಪ್ರಭಾವದಿಂದಾಗಿ ಮನಸ್ಸು ಅನೇಕ ವಿಷಯಗಳ ಬಗ್ಗೆ ಒಂದೇ ಸಮಯದಲ್ಲಿ ಹೇಗೆ ಪ್ರವಹಿಸುತ್ತದೆ ಮತ್ತು ಇವತ್ತಿನ ಯಾಂತ್ರಿಕ ನಗರದ ಬದುಕಿನಲ್ಲಿ ನವೋದಯದ ಸೂಕ್ಷ್ಮ ಸಂವೇದನೆಯ ಮನಸ್ಸುಗಳು ಆ ಸಂವೇದನೆಗಳನ್ನು ಕಳೆದುಕೊಂಡು, ಅವುಗಳನ್ನು ಹೇಗೆ ಬಹಿರಂಗ ಮಾಡುತ್ತವೆ ಎಂಬುದನ್ನು ಗಮನಿಸಬಹುದು.

'ಆಮೇಲೆ ಅವನು ಏನಂತಾನೆ ಅಂತೀಯ... ಏನು ಬೇಕು ಆ ಸೀರೇನೆ?
ಯಾವ ಬಣ್ಣ? ಮರೂನ್ ಇಲ್ಲವಲ್ಲ, ಇರೋದು ಒಂದೇ ಒಂದು ನೀಲೀನೆ.
ಮರ್ಲಿನ್‌ಮನ್ರೋ ಹಾಗಿದೀಯ ಅಂದ ಕಣೆ... ಇದಕ್ಕಿಂತ ತಿಳೀ
ಬಣ್ಣಾನು ಇದೆ, ತೋರಿಸಲೇ? ಹುಂ ಸುಶಿ! ಹಾಗೆಂದ, ಕೊಟ್ಟ ತಾಳಿ.'
(ಪ್ರಾತಿನಿಧಿಕ ಕವನಗಳು, ಪುಟ : ೬೩)

ಈ ಕವನದಲ್ಲಿ ಮಾರಾಟಗಾತಿಯೊಬ್ಬಳು ತನ್ನ ಕೆಲಸದಲ್ಲಿ ತೊಡಗಿದ್ದಾಳೆ. ಬದುಕು ಬರೇ ಕೆಲಸ. ಹೊಟ್ಟೆಪಾಡಿನದು. ಬಿಡುವಿಲ್ಲದ ಈ ಕೆಲಸದ ನಡುವೆ ತನ್ನ ಪ್ರಿಯಕರನನ್ನು ಕುರಿತು ಯೋಚಿಸಲು, ಧೇನಿಸಲು ಸಮಯವಿಲ್ಲ. ಬರೇ ಕೆಲಸ. ಅವನ ಮತ್ತು ತನ್ನ ಸಂಬಂಧವನ್ನು ಕುರಿತು, ತನ್ನಲ್ಲಿ ಸ್ಪಂದನೆಯನ್ನು ಉಂಟುಮಾಡಿದವನನ್ನು ಕುರಿತು ತನ್ನ ಗೆಳತಿಗೆ ಹೇಳಬೇಕೆಂಬ ಅಭಿಲಾಷೆ. ಆದರೆ ಇಬ್ಬರಿಗೂ ಇದಕ್ಕೆ ಸಮಯವಿಲ್ಲ. ಕೆಲಸದ ಮಧ್ಯೆಯೇ ಅವನ ಪ್ರಸ್ತಾಪವನ್ನು ಮಾಡುತ್ತಾಳೆ. ನಿಸಾರರ ಕವನಗಳಲ್ಲಿ ತುಂಬಾ ಲವಲವಿಕೆಯ ಕವನವಿದು. ಭಾಷೆಯ ಬಳಕೆಯ ದೃಷ್ಟಿಯಿಂದಲೂ ಕೂಡ ಮುಖ್ಯವಾದ ಕವನ. ಮಾರಾಟ ಮಾಡುವಾಗಿನ ಸಹಜವಾದ ಚುರುಕಾದ ಸಂಭಾಷಣೆ ಈ ಕವನದ ವೈಶಿಷ್ಟ್ಯ. ಪದ್ಯದಲ್ಲಿ ಪ್ರತಿಮೆ, ರೂಪಕ, ಸಂಕೇತಗಳನ್ನು ಬಳಸಿಕೊಳ್ಳದೆ ಗದ್ಯಕ್ಕೆ ಹತ್ತಿರ ವಾಗಿಯೂ ಪದ್ಯವಾಗಿರುವುದು ಇದರ ವೈಶಿಷ್ಟ್ಯ. ಕೆ.ಎಸ್.ನ. ಅವರ 'ರೈಲು ನಿಲ್ದಾಣ' ದಲ್ಲಿ ತಾಯಿ ಮಗಳ ಪ್ರಶ್ನೋತ್ತರವಿದ್ದರೆ, 'ಮಾರಾಟಗಾತಿಯ ಮಾತುಕತೆ'ಯಲ್ಲಿ ಏಕಮುಖ ವಾದ ಮಾತುಕತೆ. ಕೆ.ಎಸ್.ನ. ಅವರ ಕವನದಲ್ಲಿ ಒಂದು ವಿಷಯಕ್ಕೆ ಸಂಬಂಧಿಸಿದ ಮಾತುಕತೆಯಾದರೆ, ಇಲ್ಲಿ ಎರಡು ವಿಷಯಗಳನ್ನು ಒಟ್ಟಿಗೆ ನಿಭಾಯಿಸುವ ಜಾಣ್ಮೆ ಎದ್ದು ಕಾಣುತ್ತದೆ.

ನಿಸಾರರು ಭಿನ್ನ ಭಿನ್ನ ವಿಷಯಗಳನ್ನು ತಮ್ಮ ಕಾವ್ಯದ ವಸ್ತುವಾಗಿಸಿಕೊಂಡಿದ್ದಾರೆ. ಅವರ ಸಾಮಾಜಿಕ ದೃಷ್ಟಿಕೋನವುಳ್ಳ ಕವನಗಳಿಗೆ ಇಂಥದ್ದೇ ನಿರ್ದಿಷ್ಟ ವಸ್ತುವಿಲ್ಲ. 'ಅಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ನಿಸಾರರು ಬರೆಯದ ವಿಷಯವಿಲ್ಲ.

ಸಣ್ಣ ತಪ್ಪುಗಳನ್ನು ಮಾಡಿದರೆ ಅವನ್ನು ಅಷ್ಟಕ್ಕೇ ಬಿಡಬೇಕು. ಅವನ್ನು ಸರಿಪಡಿಸಲು ಹೋದರೆ ರಾಡಿಯಾಗುತ್ತದೆ. ರಾಡಿ ಮಾಡುವುದಕ್ಕಿಂತ ಆ ತಪ್ಪುಗಳನ್ನು ಹಾಗೆಯೇ ಬಿಟ್ಟುಬಿಡುವುದೇ ವಾಸಿ ಎಂಬ ತತ್ವವನ್ನು ಕವಿ ಮನೋಜ್ಞವಾಗಿ ಸಂವಹನ ಗೊಳಿಸುತ್ತಾರೆ :

'ಎಸಗಿದ್ದರೆ ನೀವು ಸಣ್ಣ ತಪ್ಪೊಂದನ್ನು
ಬಿಟ್ಟು ಅದರಷ್ಟಕ್ಕೆ ಅದನ್ನು;
ತೆಪ್ಪಗಿದ್ದು ಬಿಡಿ
ಸರಿಪಡಿಸಲು ಮುಂದಿಟ್ಟು ಅಡಿ
ಮಾಡಬೇಡಿ ಗಡಿಬಿಡಿ.'

(ಪ್ರಾತಿನಿಧಿಕ ಕವನಗಳು, ಪುಟ : ೨೯೫)

ಪುಸ್ತಕವನ್ನು ಓದುವಾಗ ಸ್ವಾರಸ್ಯದ ಅಂಶವನ್ನು ಗುರುತು ಹಾಕಲು ಹೋಗಿ ಪೆನ್ಸಿಲಿನ ಗೆರೆ ಉದ್ದಕ್ಕೂ ಮೂಡುತ್ತದೆ. ಆಗ ಅದನ್ನು ರಬ್ಬರಿನಿಂದ ಅಳಿಸಲು ಹೋದರೆ ಕರೆ ಇನ್ನಷ್ಟು ಹೆಚ್ಚಾಗುತ್ತದೆ. ಆದ್ದರಿಂದ ಅದನ್ನು ಹಾಗೆಯೇ ಬಿಡುವುದು ವಾಸಿ. ಇದೇ ರೀತಿ, ಸಣ್ಣ ತಪ್ಪುಗಳನ್ನು ಮಾಡಿದರೆ ಅವನ್ನು ಸರಿಪಡಿಸಲು ಹೋದರೆ ರಾಡಿಯಾಗುತ್ತದೆ. ಆದ್ದರಿಂದ ಮಾಡಿದ ತಪ್ಪುಗಳನ್ನು ಸರಿಪಡಿಸುವುದಕ್ಕಿಂತ, ಅವೇ ತಪ್ಪುಗಳನ್ನು ಮತ್ತೆ ಮತ್ತೆ ಮಾಡದೆ ಇರುವುದು ಒಳ್ಳೆಯದು ಎಂಬ ನಿಲವು ಕವಿಯದು.

ನಗರ ಜೀವನದ ಯಾಂತ್ರಿಕ ಸಂಕೀರ್ಣತೆ ಇವರ ಕಾವ್ಯದಲ್ಲಿ ಅನೇಕ ಮುಖಗಳಲ್ಲಿ ಕಾಣಿಸಿಕೊಂಡಿದೆ. ಬೆಳಕು ಕಾಣದ ಸಮಾಜದ ನಾನಾ ಮೂಲೆಗಳಿಗೂ ಇವರು ಕ್ಷ-ಕಿರಣ ವನ್ನು ಹಾಯಿಸಿ ಅಲ್ಲಿನ ವಸ್ತುಗಳನ್ನು ಬಯಲಿಗೆಳೆಯುತ್ತಾರೆ. 'ನೆನೆದವರ ಮನದಲ್ಲಿ'ನ 'ಕುರಿಗಳು, ಸಾರ್, ಕುರಿಗಳು' ಕವನದಿಂದ ವ್ಯಂಗ್ಯ ವಿಡಂಬನೆಗಳು, ಅಷ್ಟೇ ಅಲ್ಲದೆ ಸಾಮಾಜಿಕ ಸಂವೇದನೆಗಳು ಹನಿ ಹನಿಗೂಡುತ್ತಾ 'ಸುಮುಹೂರ್ತ', 'ನಾನೆಂಬ ಪರಕೀಯ', 'ಸ್ವಯಂಸೇವೆಯ ಗಿಳಿಗಳು', 'ಅನಾಮಿಕ ಆಂಗ್ಲರು' ಸಂಕಲನಗಳಲ್ಲಿ ಹಳ್ಳವಾಗಿ 'ಆಕಾಶಕ್ಕೆ ಸರಹದ್ದುಗಳಿಲ್ಲ'ದಲ್ಲಿ ಮಹಾಪೂರವಾಗಿ ಎಲ್ಲೆಯನ್ನು ಮೀರಿ 'ಅರವತ್ತೈದರ ಐಸಿರಿ'ಯಲ್ಲಿ ತಮ್ಮ ಅಪೂರ್ವ ಶ್ರೀಮಂತಿಕೆಯನ್ನು ಮೆರೆದಿವೆ.

ಈ ರೀತಿಯಾಗಿ ನಿಸಾರರು ವೈವಿಧ್ಯಪೂರ್ಣವಾದ ಸಮಾಜದೆಡೆಗೆ ತಮ್ಮ ಕಬಂಧ ಬಾಹುಗಳನ್ನು ಬಾಚಿದರೂ ತೃಪ್ತಿಯಿಲ್ಲ. 'ಹೇಳುವುದು ಬಹಳವಿದೆ' ಎಂಬ ಅತೃಪ್ತಿ ಅವರನ್ನು ಕಾಡುತ್ತದೆ.

'ಹೇಳಲೇಬೇಕಾದ್ದು ಬಹಳಷ್ಟಿದೆ,
ಎವರೆಸ್ಟಿನೆತ್ತರಕು ನಿಲುವಷ್ಟಿದೆ.
....
ಹೀಗೆಯೇ—
ನಾನು ಹೇಳುವುದೇನೋ ಸಾಕಷ್ಟಿದೆ.'

ಎಂಬ ಹಳಹಳಿಕೆ ಕವಿಯನ್ನು ಸದಾ ಕಾಡುವುದರಿಂದ ಇವತ್ತಿಗೂ ಸಮಾಜದೆಡೆಗೆ ಮುಖ

ಮಾಡಿ ಅನುಭವ, ಚಿಂತನೆ, ತಾತ್ವಿಕತೆ ನಿಲವುಗಳನ್ನು ತಮ್ಮ ಸೃಜನಕ್ರಿಯೆಯಲ್ಲಿ ವ್ಯಕ್ತಪಡಿಸುತ್ತಾರೆ.

ಇವರ ಕವನಗಳಲ್ಲಿ ವ್ಯಂಗ್ಯ ಪ್ರಧಾನವಾದದ್ದು. ಸಮಾಜದ ಭ್ರಷ್ಟತೆ, ಜೊಂಡು ಗಟ್ಟಿರುವ ಸ್ಥಿತಿಯನ್ನು ವಿವರಿಸುವ ಈ ವ್ಯಂಗ್ಯ ಸಮರ್ಪಕವಾದ ಅಭಿವ್ಯಕ್ತಿಯನ್ನು ಪಡೆಯುತ್ತದೆ. ವೈವಿಧ್ಯಮಯವಾದ ಸಾಮಾಜಿಕ ವಸ್ತುವಿನ ಈ ವಿಡಂಬನೆಯ ಹಿಂದೆ ಬದುಕು ಹಸನಾಗಬೇಕು, ಶುಚಿಯಾಗಬೇಕು, ಸಂಸ್ಕಾರಗೊಳ್ಳಬೇಕು ಎಂಬ ಕಳಕಳಿಯಿದೆ.

ಪಾಬ್ಲೊ ನೆರುಡನ 'ಬರೀ ಮರ್ಯಾದಸ್ಥರೆ' ಅನ್ನುವ ಕವನಗಳನ್ನು ನಿಸಾರರು ಅನುವಾದಿಸುವಲ್ಲಿ ನಮ್ಮ ರಾಜಕೀಯ ಪರಿಸ್ಥಿತಿಗಳು ಪ್ರೇರಕವಾಗಿವೆ. ೧೯೮೦ರಲ್ಲಿ ಈ ಕೃತಿ ಹೊರಬಂದಿದೆ. ಅದಕ್ಕೂ ನಾಲ್ಕೈದು ವರ್ಷಗಳ ಮುಂಚೆ ಇದರ ಪದ್ಯಗಳು ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿದ್ದವು. ಈಗಾಗಲೇ ಭಾರತ, ತುರ್ತು ಪರಿಸ್ಥಿತಿಯ ಭೀಕರತೆ, ಝಳಗಳನ್ನು ಅನುಭವಿಸಿತ್ತು. ಕವಿಗಳು ಕಾವ್ಯದ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಸಮಾಜದ ಅನೇಕ ಮುಖಗಳಿಗೆ ತೀವ್ರವಾಗಿ ಸ್ಪಂದಿಸುವ ನಿಸಾರರು ತುರ್ತು ಪರಿಸ್ಥಿತಿಯ ಬಗ್ಗೆ ಮೌನವಾಗಿ ಉಳಿಯುತ್ತಾರೆ. ಇದಕ್ಕೆ ಸಾಮಾಜಿಕ, ಧಾರ್ಮಿಕ ಸ್ಥಿತಿಗಳು ಕಾರಣವಿರಬಹುದು. ಆದರೆ ಸೃಜನಶೀಲ ವ್ಯಕ್ತಿ ಯೊಬ್ಬನಿಗೆ ಪ್ರತಿಕ್ರಿಯಿಸದೆ ಇರಲು ಸಾಧ್ಯವಿಲ್ಲ. ಹಾಗಾಗಿ, ನೆರುಡನ ಕಾವ್ಯವನ್ನು ಅನುವಾದಿಸಲು ಈ ಒತ್ತಡವಿದೆ. ನೆರುಡನ ಬಗ್ಗೆ ನಿಸಾರರ ಈ ಅಭಿಪ್ರಾಯವನ್ನು ನೋಡಿದರೆ ಈ ಸತ್ಯ ವೇದ್ಯವಾಗುತ್ತದೆ. 'ಸ್ಪಷ್ಟ ರಾಜಕೀಯ ಸಿದ್ಧಾಂತವೊಂದಕ್ಕೆ ಕೊನೆಯುಸಿರಿನ ಪರ್ಯಂತ ಮಜಬೂತಾಗಿ ನೆಟ್ಟು ನಿಂತ ನೆರುಡ; ಲಷ್ಕರಶಾಹಿ, ಸಾಮ್ರಾಜ್ಯಶಾಹಿ ಬದ್ಮಾಷರ ಬರ್ಬರತೆಯನ್ನು, ತನ್ನ ಲೋಕ ಪ್ರಿಯತೆ ಪ್ರಾಣಾಪಾಯಗಳನ್ನು ಲೆಕ್ಕಿಸದೆ ತಕಪಕಿಸುವ ಕ್ರೋಧದಿಂದ ಬಾಳಿನುದ್ದಕ್ಕೂ ವಿರೋಧಿಸಿದ ನೆರುಡ; ಶೋಷಿತರ ನರಳಿಕೆ, ಆಶೋತ್ತರಗಳಿಗೆ ನಾಲಗೆಯಾದ, ಮತ ಮಠ ಮೊದಲಗೊಂಡು ಸಕಲ ವಿಧದ ಕಡಿವಾಣಗಳನ್ನು ದ್ವೇಷಿಸಿದ ನೆರುಡ; ನಮ್ಮ ಅಂತರ್ಯ ಗಳನ್ನು ಹಂದಾಡಿಸಿ ಬೆಚ್ಚಿ ಬೀಳಿಸುವಂತೆಯೇ, ಹಿತ ರಮಣೀಯನಾಗಿ ನೊಚ್ಚಗಾಗಿಸುವ ಅನುಭವಗಳೂ ಅಗತ್ಯವೆಂದು ಬಗೆದ; ಜಡಗಟ್ಟಿದ ಚಿತ್ತಗಳನ್ನು ಥಳಿಸುವಂತೆಯೇ, ಕಿಲುಬು ಹೆರೆದು ಥಳಥಳಿಸುವಂತೆ ಎಸಗಬೇಕಾದ ತಥ್ಯವನ್ನರಿತ ನೆರುಡ—ಮಾನವೀಯ ಮೌಲ್ಯಗಳೇ ಮೈವೆತ್ತಂತಿರುವ ಈ ವ್ಯಕ್ತಿಯ ಜೀವನ ಸ್ಮೃತಿ ಹಾಗೂ ಕೃತಿಗಳನ್ನು ಓದಿದಾಗ ನಮ್ಮ ದೃಷ್ಟಿಗೆ ಹೊಸ ಹದ ಕೂಡಿದಂತೆ ಗೆಲವಾಗುತ್ತದೆ'. ಈ ನಿಲವಿನಿಂದ ನಿಸಾರರು ನೆರುಡನ ಕಾವ್ಯವನ್ನು ಅನುವಾದಿಸಿದ್ದಾರೆ.

ಅನುವಾದಿಸುವಲ್ಲಿ ಕೆಲವು ಕವನಗಳು ವಾಚ್ಯವಾಗಿವೆಯಾದರೂ ಅನುವಾದ ಒಟ್ಟಾರೆಯಾಗಿ ಸಮರ್ಪಕವಾಗಿ ಬಂದಿದೆ. ಆಡು ಭಾಷೆಯನ್ನು ಬಳಸಿಕೊಳ್ಳುತ್ತಲೇ ಕಾವ್ಯಮಯತೆಯನ್ನು ಉಳಿಸಿಕೊಳ್ಳುತ್ತಾರೆ ಕವಿ.

ಇದಲ್ಲದೆ ಅಮೇರಿಕನ್, ಸ್ಪ್ಯಾನಿಷ್, ರಷ್ಯನ್, ಜಪಾನ್ ಮತ್ತು ಬ್ರಿಟಿಷ್ ಕವಿಗಳ ಕವನಗಳನ್ನು ಕೂಡ ನಿಸಾರ್ ಅನುವಾದಿಸಿದ್ದಾರೆ. ಅನುವಾದ ಸುಲಲಿತವಾಗಿ, ಸರಳವಾಗಿ,

ಮನೋಹರವಾಗಿ ಕನ್ನಡದ ಲಯವನ್ನು ಹಿಡಿದು ಸಾಗುತ್ತದೆ. ನಾಟಕೀಯ ಚುರುಕು ತೀಕ್ಷ್ಣವಾಗಿ ಮೂಡಿ ಬಂದಿದೆ. ಕನ್ನಡಕ್ಕೆ ಒಗ್ಗುವ ಅನುವಾದವಾಗಿದೆ.

ನಿಸಾರರ ಭಾವಗೀತೆಗಳ ವಿವೇಚನೆಯಿಲ್ಲದೆ ಪ್ರಾತಿನಿಧಿಕ ಕವನಗಳ ಪರಿಶೀಲನೆ ಪೂರ್ಣವಾಗದು. ಹಾಗಾಗಿ ಭಾವಗೀತೆಗಳನ್ನು ಕುರಿತ ಪಕ್ಷಿನೋಟವಿದು:

ನವೋದಯದವರನ್ನು ಹೆಚ್ಚಾಗಿ ಆಕರ್ಷಿಸಿ ಅವರೆಲ್ಲ ಸೃಜನಶೀಲತೆಯಲ್ಲಿ ತೊಡಗಿ ಕೊಳ್ಳುವಂತೆ ಮಾಡಿದ ಪ್ರಕಾರ ಭಾವಗೀತೆ. ಭಾವಗೀತೆಯನ್ನು ಒಬ್ಬೊಬ್ಬ ಕವಿಯೂ ತನ್ನ ವ್ಯಕ್ತಿ ವಿಶಿಷ್ಟತೆಯಿಂದ ಬಳಸಿ, ಬೆಳೆಸಿದ್ದಾನೆ. ಆದರೆ ನವೋದಯ ಕಾವ್ಯ ತನ್ನೆಲ್ಲ ಸತ್ವವನ್ನು ಕಳೆದುಕೊಂಡು ನವ್ಯಕಾವ್ಯಕ್ಕೆ ತನ್ನ ಸ್ಥಾನವನ್ನು ಬಿಟ್ಟುಕೊಟ್ಟ ಅನಂತರ ಭಾವಗೀತೆಗಳ ರಚನೆ ನಿಂತು ಹೋಯಿತು. ನವ್ಯರು ಭಾವಗೀತೆಗಳನ್ನು ಅಲಕ್ಷ್ಯದಿಂದ ಕಂಡರು. ನವಿರಾದ ಭಾವನೆಗಳನ್ನು ಅಸಡ್ಡೆ ಮಾಡಿದರು. 'ನವ್ಯ ಕಾವ್ಯದ ಮುಖ್ಯಧೋರಣೆಗಳಲ್ಲಿ ಕಾವ್ಯವನ್ನು ಹೇಗಾದರೂ ಮಾಡಿ ಹಾಡುಗಾರಿಕೆಯಿಂದ ಪಾರು ಮಾಡಬೇಕೆನ್ನುವುದೂ ಒಂದು. ಕಾವ್ಯವನ್ನು ಸಂಗೀತದ ಸಾಹಚರ್ಯದಿಂದ ಪಾರುಮಾಡುವುದು; ಅದಕ್ಕೆ ಗದ್ಯದ ಸತ್ವವನ್ನು ತುಂಬುವುದು ಮತ್ತು ಅದನ್ನು ಜನರ ಆಡುಮಾತಿನ ಹತ್ತಿರಕ್ಕೆ ತರುವುದು. ಆದರೆ ನವ್ಯಕಾವ್ಯದ ಸಂದರ್ಭದಲ್ಲಿ ಆಡುಮಾತಿನ ಬಗ್ಗೆ ಕಳಕಳಿಯನ್ನು ತೋರಿಸಿಯೂ ಅದನ್ನು ಸಂಗೀತದ ಸಾಹಚರ್ಯದಿಂದ ಪಾರು ಮಾಡಿದ್ದು ಒಂದು ವಿಶೇಷವಾದರೆ, ಅದು ಒಂದು ನಿರ್ದಿಷ್ಟ ಪ್ರೌಢ ಓದುಗ ವಲಯವನ್ನು ದಾಟಿ ಆಚೆಗೆ ಹೋಗದಂತೆ ನೋಡಿಕೊಂಡಿದ್ದು ಮತ್ತೊಂದು ವಿಶೇಷವಾಗಿದೆ' ಎಂದು ಹಿರಿಯ ಕವಿಯೊಬ್ಬರು ಅಭಿಪ್ರಾಯ ಪಡುತ್ತಾರೆ.

ಇಂಥ ಸಂದರ್ಭದಲ್ಲಿ ಕಾವ್ಯಕ್ಕೆ ಹಾಡುಗಾರಿಕೆಯ ಮಕುಟವನ್ನು ತೊಡಿಸಿ ಪ್ರೌಢ ಓದುಗ ವಲಯವನ್ನು ಪ್ರಪ್ರಥಮವಾಗಿ ದಾಟುವಂತೆ ಮಾಡುವಲ್ಲಿ ನಿಸಾರರು ಯಶಸ್ವಿಯಾಗಿದ್ದಾರೆ. ಭಾವಗೀತೆಯ ಕಾಲ ಮುಗಿದು ಹೋಯಿತೇನೋ ಎಂಬ ಸಮಯದಲ್ಲಿ ಭಾವಗೀತೆಗಳಿಗೆ ಪುನರ್ ಚೈತನ್ಯವನ್ನು ನೀಡಿ ಅವುಗಳ ರಚನೆಗೆ ತೊಡಗಿದ್ದು ಒಂದು ಅಪೂರ್ವ ಸಾಧನೆ. ಭಾವಗೀತೆಯ ಗೇಯತೆ, ನಿಯತ ಛಂದಸ್ಸಿನ ಮುಖ್ಯ ಪಕ್ಷಗಳೇ ಇಲ್ಲವಾಗಿದ್ದಾಗ ನಿಸಾರರು ಆ ರೆಕ್ಕೆಗಳನ್ನು ಮತ್ತೆ ಮೂಡಿಸಿದರು.

ನಿಸಾರರ ಕವನಗಳು ಎಲ್ಲಾ ಹಂತಗಳಲ್ಲೂ ಭಾವಗೀತಾತ್ಮಕತೆಯನ್ನು ಬಿಟ್ಟು ಕೊಟ್ಟಿಲ್ಲ. ಬೌದ್ಧಿಕತೆ ಮತ್ತು ಭಾವಗೀತಾತ್ಮಕತೆಗಳ ನಡುವೆ ಸಮನ್ವಯ ಸಾಧಿಸುವುದು ತೀರಾ ಕಷ್ಟದ ಕೆಲಸ. ಇಂಥ ಬಿಕ್ಕಟ್ಟು ನಮ್ಮ ಅನೇಕ ಕವಿಗಳಿಗೆ ಇದೆ. ಆದರೆ ಹೊಂದಾಣಿಕೆ ಮುಖ್ಯ ಲಕ್ಷಣವಾಗಿರುವ ನಿಸಾರರು ಇದನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾರೆ. ಇವರ ನವ್ಯ ಎಂದು ಕರೆಸಿಕೊಳ್ಳುವ ಕವನಗಳು ಕೂಡ ಭಾವಗೀತೆಯ ಲಕ್ಷಣವನ್ನು ಬಿಟ್ಟುಕೊಟ್ಟಿಲ್ಲ. ಉದಾ: 'ಕುರಿಗಳು, ಸಾರ್, ಕುರಿಗಳು' ಕವನ.

ಇವರ ಭಾವಗೀತೆಗಳನ್ನು ಓದಿದಾಗ ಭಾವ ಜಗತ್ತಿನ ಶ್ರೀಮಂತ ರಸಾನುಭವ ವುಂಟಾಗುತ್ತದೆ.

ತಲತ್ ಮಹಮೂದ್, ಮೆಹದಿ ಹಸನ್ (ಪಾಕಿಸ್ತಾನದ ಗಾಯಕ), ಜಗಜೀತ್ ಸಿಂಗ್ ಮುಂತಾದವರ ಗಜಲ್‌ಗಳಿಗೆ ಮಾರು ಹೋದ ನಿಸಾರರು ಕನ್ನಡದಲ್ಲೂ ಇಂಥ ಕ್ಯಾಸೆಟ್ ಪರಂಪರೆಯನ್ನು ಬೆಳೆಸಬೇಕೆಂಬ ಹೆಬ್ಬಯಕೆಯಿಂದ ಮೈಸೂರು ಅನಂತಸ್ವಾಮಿ ಯವರ ಸಂಗೀತ ನಿರ್ದೇಶನದಲ್ಲಿ ೧೯೭೮ರಲ್ಲಿ 'ನಿತ್ಯೋತ್ಸವ' ಕ್ಯಾಸೆಟ್ಟನ್ನು ತಂದದ್ದು ಕ್ಯಾಸೆಟ್ ಯುಗಕ್ಕೆ ನಾಂದಿ ಹಾಡಿತು. ಮೊಟ್ಟ ಮೊದಲ ಈ ಕ್ಯಾಸೆಟ್ ಬಂದಾಗ ಶ್ರೋತೃಗಳ ಹೃದಯವನ್ನು ಸೂರೆಗೊಂಡಿತು. ಸುಗಮ ಸಂಗೀತದ ಹೊಸ ಪರಂಪರೆಯನ್ನು ನಿರ್ಮಿಸಿತು.

'ನಿತ್ಯೋತ್ಸವ' ಕ್ಯಾಸೆಟ್ ಬಂದ ಅನಂತರ, ಹಲವು ಶ್ರೇಷ್ಠ ಕವಿಗಳ ಭಾವಗೀತೆಗಳ ಕ್ಯಾಸೆಟ್‌ಗಳು ಹೊರಬಂದು ಜನಪ್ರಿಯತೆಯನ್ನು ಗಳಿಸಿದವು. ಇದರಿಂದಾಗಿ ಕನ್ನಡದ ಓದುಗರಿಗೆ ಶ್ರೇಷ್ಠ ಕವಿಗಳ ಪರಿಚಯವಾಗಿ ಅವರ ನಾಲಿಗೆಯ ಮೇಲೆ ಸದಾ ಆ ಕವಿಗಳ ಕವನಗಳು ನಲಿದಾಡುವಂತಾದವು. ಕವಿಯ ಪರಿಚಯವಿಲ್ಲದಿದ್ದರೂ ಹಾಡಿನ ಪರಿಚಯ ಉಂಟಾಯಿತು. ಕನ್ನಡಿಗರ ಮನೆ ಮನಗಳಲ್ಲಿ ಅವು ಸ್ಥಿರವಾಗಿ ನೆಲಸುವಂತಾದವು. ಇಂಥ ಒಂದು ಹೊಸ ಅಲೆಯನ್ನು ಉಂಟು ಮಾಡಿದ ಶ್ರೇಯಸ್ಸು ನಿಸಾರರ 'ನಿತ್ಯೋತ್ಸವ'ದ್ದು.

ಕೇವಲ ಸುಗಮ ಸಂಗೀತಕ್ಕಾಗಿಯೇ ಕವನಗಳನ್ನು ಬರೆಯ ಹೊರಟರೆ ಕಾವ್ಯಾಂಶ ಪೇಲವವಾಗುತ್ತದೆ. ಇವತ್ತು ಈ ಜಾಡ್ಯ ಹೆಚ್ಚಾಗಿ, ಕ್ಯಾಸೆಟ್ ಹೊರತರಲೆಂದೇ ಬರೆಯುವ ವರು ಇದ್ದಾರೆ. ಆದರೆ ನಿಸಾರರು ಸುಗಮ ಸಂಗೀತಕ್ಕಾಗಿ ಎಂದೂ ಕವನಗಳನ್ನು ಹೊಸೆದವ ರಲ್ಲ. ಅವರ ಮೊದಲ ಆದ್ಯತೆ ಕವನ, ಅನಂತರ ಸಂಗೀತ. ಹಾಗಾಗಿ ಇವರ ಹಾಡುಗಳಲ್ಲಿ ಕಾವ್ಯ ಗುಣ ಯಥೇಷ್ಟವಾಗಿದೆ. ಇವರ ಭಾವಗೀತೆಗಳಲ್ಲಿ ವಸ್ತು ವೈವಿಧ್ಯದೊಂದಿಗೆ ಛಂದೋ ವೈವಿಧ್ಯ ವರಸಾಮ್ಯದಿಂದ ದಾಂಪತ್ಯಗೂಡಿದೆ.

ಒಬ್ಬ ಒಳ್ಳೆಯ ಕವಿ ಮಾತ್ರ ಒಳ್ಳೆಯ ಹಾಡುಗಳನ್ನು ಬರೆಯಬಲ್ಲನೆಂಬ ಕೆ.ಎಸ್. ನರಸಿಂಹಸ್ವಾಮಿಯವರ ಅಭಿಪ್ರಾಯದಂತೆ ನಿಸಾರರು ಕೂಡ ಉತ್ಕೃಷ್ಟ ಹಾಡುಗಳನ್ನು ಬರೆದ ಒಬ್ಬ ಒಳ್ಳೆಯ ಕವಿ. ನಿಸಾರರು ಭಾವಗೀತೆಗಳನ್ನು ಸುಗಮ ಸಂಗೀತಕ್ಕೆ ಅಳವಡಿಸಿ ಕ್ಯಾಸೆಟ್ ತಂದಿರುವ ಉದ್ದೇಶ, ತಮ್ಮ ಕವನ ಹೆಚ್ಚು ಜನರಿಗೆ ತಲಪಬೇಕೆಂಬ ಆಶಯಕ್ಕಾಗಿ. ಕ್ಯಾಸೆಟ್‌ಗಳ ಮೂಲಕ ನಿಸಾರರ ಭಾವಗಳು ರಾಗದ ಬೆನ್ನೇರಿ ಬಹು ಜನರನ್ನು, ಅನರಕ್ಷರಸ್ಥ ರನ್ನೂ ತಲಪುತ್ತಿವೆ. ಇದರಿಂದ ಕಾವ್ಯಕ್ಕೆ ಹೊಸ ಆಯಾಮ ಕೂಡಿಕೊಂಡಿದೆ.

ನಿಸಾರರಲ್ಲಿ ಮಾತುಗಾರಿಕೆ ಕೊಂಚ ಹೆಚ್ಚು. ಆದರೆ, ಆರಂಭದಲ್ಲಿನ ಮಾತು ಇತ್ತೀಚೆಗೆ ಕಡಿಮೆಯಾಗಿ ಅವರ ಕಾವ್ಯ ಗಟ್ಟಿಯಾಗುತ್ತಾ ಬಂದಿದೆ.

ಕನ್ನಡ ಭಾಷಾ ಸಂಪತ್ತನ್ನು ಹೆಚ್ಚಿಸಬೇಕೆಂಬ ಹಂಬಲದಿಂದ ಉರ್ದು, ಅರಬ್ಬಿ, ಫಾರ್ಸಿ, ಇಂಗ್ಲಿಷ್ ಪದಗಳನ್ನು ಬಳಸಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಕೆಲವೊಮ್ಮೆ 'ಇಸು' ಪ್ರತ್ಯಯ ಸೇರಿಸಿ ಶಬ್ದಗಳನ್ನು ಸೃಜಿಸುತ್ತಾರೆ. ನಿಸಾರರು ಭೂವಿಜ್ಞಾನದ ವಿದ್ಯಾರ್ಥಿಯಾದದ್ದರಿಂದ ಈ ಜ್ಞಾನ ಕಾವ್ಯದಲ್ಲೂ ಬಳಕೆಯಾಗಿದೆ. ಇದಕ್ಕೆ ವೈದೃಶ್ಯವಾಗಿ ಪುರಾಣ ಪ್ರತಿಮೆಗಳನ್ನೂ ಮತ್ತು ಗ್ರೀಕ್, ಅರಬ್ಬಿ ಪ್ರತಿಮೆಗಳನ್ನು ಬಳಸುತ್ತಾರೆ. ತಮ್ಮ ಕಾವ್ಯ ಜನ ಸಾಮಾನ್ಯರಲ್ಲಿ ಒಂದಾಗಬೇಕೆಂಬ ಹಂಬಲ ಆರಂಭದಿಂದಲೂ ಇವರ ಸೃಜನ

ಶೀಲತೆಯ ಹಿನ್ನೆಲೆಯಲ್ಲಿ ದುಡಿಯುತ್ತಿದೆ. ನರಸಿಂಹಸ್ವಾಮಿಯವರಂತೆ ನಿಸಾರರು ಕೂಡ ಸಾಮಾನ್ಯ ಓದುಗರೇ ಮುಖ್ಯ ಎಂದು ಭಾವಿಸುತ್ತಾರೆ. ಹೆಚ್ಚು ಜನರಿಗೆ ತಿಳಿಯುವ ಮಾತಿನಲ್ಲಿ ಹೇಳಬೇಕೆಂಬ ಹಂಬಲ ಅವರ ಕಾವ್ಯದುದ್ದಕ್ಕೂ ಹರಿದು ಬಂದಿರುವ ತುಡಿತ. ಹೀಗಾಗಿ, ನಿಸಾರ್ ಅವರದು ಅಪ್ಪಟ ಜನಪರ ಕಾವ್ಯ ಹಾಗೂ ಸಮಾಜ ಹಿತಾಕಾಂಕ್ಷೆಯ ತುಡಿತದ ಮಹತ್ತರ ಕಾಯಕ.

ಕನ್ನಡದಲ್ಲಿ ಜನಪ್ರಿಯತೆಯನ್ನು, ಜೊತೆಗೆ ಗೌರವವನ್ನು ಗಳಿಸಿದ ಕವಿಗಳ ಸಾಲಿನಲ್ಲಿ ನಿಸಾರರು ಪ್ರಮುಖರು. ಅವರ ಜನಪ್ರಿಯತೆ ಮುದಗೊಳಿಸುವುದಕ್ಕೆ ಮಾತ್ರ ಸೀಮಿತವಾಗದೆ, ಕಲಾತ್ಮಕ ಅಭಿವ್ಯಕ್ತಿಯೂ ಆಗಿದೆ. ಇದು ಬೇರೆಯವರಲ್ಲಿ ಅಪರೂಪ; ಕಂಡೂ ಕಾಣದಂತಿರುತ್ತದೆ. ಆದರೆ ನಿಸಾರರಲ್ಲಿ ಎದ್ದು ಕಾಣುವಂತೆ ರಾರಾಜಿಸುತ್ತದೆ. ಹೀಗೆ ಐವತ್ತರ ದಶಕದಿಂದ ಇವತ್ತಿನವರೆಗೂ ಅವಿರತವಾಗಿ, ದಣಿವರಿಯದೆ ಸೃಜನಶೀಲತೆಯಲ್ಲಿ ತೊಡಗಿಸಿಕೊಂಡಿರುವ ಕೆ. ಎಸ್. ನಿಸಾರ್ ಅಹಮದ್ ಅವರು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಹೆಜ್ಜೆಗಳನ್ನು ಮೂಡಿಸಿದ್ದಾರೆ. ಇದು ಅನನ್ಯ, ಅಸಾಧಾರಣ, ಅನನುಕರಣೀಯವಾದ ಸಾರಸ್ವತ ಸಾಧನೆ.

ಆಸೆ ದುಃಖಕ್ಕೆ ಮೂಲ. ನಿಜವೇ. ಇದು ಹಿರಿಯರ ಅನುಭವ-ಪರೀಕ್ಷಿತ ಭಾಷಿತ. ಆಸೆ ಅನರ್ಥಕ್ಕೆ ಆಹ್ವಾನ ಪತ್ರ. ಅಧ್ವಾನ ಅನಾಹುತಗಳಿಗೆ ಅಹವಾಲು. ಯಾವಾಗ? ಆಸೆ ಔಚಿತ್ಯದ ಲಕ್ಷ್ಮಣ ಗೆರೆಯನ್ನು ಹಾಯ್ದಾಗ; ಅರಾಜಕ ಅನಂಕುಶವಾದಾಗ. ಆಗ ಗತಿಗೇಡು ಕಟ್ಟಿಟ್ಟ ಬುತ್ತಿ. ಆದರೆ ಆಸೆಯಿಲ್ಲದ ಮನುಷ್ಯ ಅರೆ ಚಣವಾದರೂ ಉಸಿರಾಡಲು ಶಕ್ಯವೆ? ಕೊನೆಗಾಲದ ತನಕ ಜೀವಿತದ ಆಸಕ್ತಿ, ಪ್ರೀತಿಗಳಿಗೆ ಆಸೆಯೇ ಆಮ್ಲಜನಕ. ಬಾಳ್ವೆಯ ಹಸುಳೆಗೆ ಎದೆ ಹಾಲು; ಕಣ್ಣಿಗೆ ರೆಪ್ಪೆ, ನದಿಗೆ ನೆರೆ, ಕಡಲಿಗೆ ತೆರೆ ಹೇಗೋ ಹಾಗೆ—ಜೀವನಕ್ಕೆ ಆಸೆ.

(ಆಸೆಯ ಇತಿಮಿತಿ)

✧ ✧ ✧

ಎಳವೆಯಿಂದಲೇ ಏಕಾಂತ ಪ್ರೀತಿ, ಪ್ರಕೃತಿ ಸಂಸರ್ಗವನ್ನು ಗಳಿಸಿಕೊಳ್ಳದವನು ಜೀವನದಲ್ಲಿ ದೊಡ್ಡದ್ದನ್ನು ಸಾಧಿಸಲಾರ, ಪಡೆಯಲಾರ. ಪ್ರಕೃತಿಯ ಒಡನಾಟ ಮುಂಬಾಳಿನ ಜಂಜಾಟಗಳ ನಂಜಿಗೆ ಪ್ರತಿರೋಧಕ—ಆಂಟಿಡೋಟ್. ಎಡೆಬಿಡದ ಸಮಸ್ಯೆಗಳ ಬಾಣ ಹತಿಗೆ ವಜ್ರ ಕವಚ.

(ಪ್ರಕೃತಿ ಸಂಪರ್ಕದ ಅಗತ್ಯ)



'ಆಕಾಶಕ್ಕೆ ಸರಹದ್ದುಗಳಿಲ್ಲ' ಮತ್ತು 'ಅರವತ್ತೈದರ ಐಸಿರಿ': ಮಾಗಿದ ಮನಸ್ಸಿನ ಕೃತಾರ್ಥ ಕವಿತೆಗಳು

♦ ಎಸ್. ಬಿ. ರವಿಕಲಾ

— ೧ —

'ಆಕಾಶಕ್ಕೆ ಸರಹದ್ದುಗಳಿಲ್ಲ' ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಹನ್ನೊಂದನೆಯ ಕವನ ಸಂಕಲನ. ಐವತ್ತು ಕವನಗಳ ಈ ಸಂಕಲನವನ್ನು ೧೯೯೮ರಲ್ಲಿ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಪ್ರಕಟಿಸಿದೆ. ಈವರೆಗೆ ಬೆಳಕು ಕಂಡ ನಿಸಾರರ ಕವನ ಸಂಕಲನಗಳಲ್ಲಿ 'ಆಕಾಶಕ್ಕೆ ಸರಹದ್ದುಗಳಿಲ್ಲ' ಸಂಕಲನ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತದೆ. ಕಾರಣ ಇದರಲ್ಲಿ ಹೆಚ್ಚಿನ ಸಂಖ್ಯೆಯ ಪ್ರಾತಿನಿಧಿಕ ಕವನಗಳು ಅಡಕವಾಗಿವೆ. ಇದೇ ರೀತಿಯ ಕವನಗಳನ್ನು ಒಳಗೊಂಡ 'ಸಂಜೆ ಐದರ ಮಳೆ', 'ಅನಾಮಿಕ ಆಂಗ್ಲರು', 'ಅರವತ್ತೈದರ ಐಸಿರಿ' ನಿಸಾರರ ಗಮನಾರ್ಹ ಕವನ ಸಂಕಲನಗಳಾಗಿವೆ.

ನಿಸಾರರ 'ಆಕಾಶಕ್ಕೆ ಸರಹದ್ದುಗಳಿಲ್ಲ' ಸಂಕಲನದಲ್ಲಿ ಪ್ರಕೃತಿ, ವ್ಯಕ್ತಿಚಿತ್ರಗಳನ್ನು ಒಳಗೊಂಡಿರುವ ಕವಿತೆಗಳ ಜೊತೆಗೆ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ಕವನಗಳೂ ಇವೆ. ಇಲ್ಲಿನ 'ಕವಿಯಿಲ್ಲದಿದ್ದರೆ' ಕವನದಲ್ಲಿ ಕವಿ 'ಸ್ವಹಿತ ಚಿಂತನೆಗೆ ಶೃಂಖಲಿಸಲೊಪ್ಪದ ಸ್ವಚ್ಛಂದ ಸಂಚಾರಿ'ಯಾಗಿ ಚಿತ್ರಿತನಾಗಿದ್ದಾನೆ. ನಿಸಾರರ ಕವಿ ಹೃದಯ ಸಮಾಜದ ನೋವು-ನಲಿವುಗಳಿಗೆ ತೀವ್ರವಾಗಿ ಸ್ಪಂದಿಸುತ್ತದೆ: (ಕವಿ) 'ಹೆಂಗರುಳ: / ಸಮಾಜದ ಆಗು ಹೋಗುಗಳ ಕೊಂಚ ಕುಲುಕಾಟಕ್ಕೂ / ಮಿಡಿವ ತರಂಗ ರೂಪಿ ಸುವಿಚಾರಿ.' ಕವಿ ಸಮಾಜದ ಲೋಪದೋಷಗಳನ್ನು

ಇಡಿಯಾಗಿ ತಿದ್ದಲು ಸಾಧ್ಯವಿಲ್ಲವಾದರೂ ಆರೋಗ್ಯವನ್ನು ಮರುಸ್ಥಾಪಿಸಲು ಅನುವಾಗುವ 'ಅವನೊಂದು ಚುಚ್ಚುಮದ್ದು'. ಕವಿಯ ಬಗ್ಗೆ ತಾತ್ಸಾರ ಮನೋಭಾವ ಪ್ರಕಟಿಸುವವರ ಬಗ್ಗೆ ನಿಸಾರರು ಹೀಗೆ ಹೇಳುತ್ತಾರೆ: 'ಕವಿ—ಕೆಲವರ ಪಾಲಿಗೆ ಸಖತ್ ಸೋಂಭೇರಿ. / ಅಂಥವರರಿಯರು ಅವನೊಂದು ಮೌಢ್ಯ, ದಬ್ಬಾಳಿಕೆಯ ವಿರುದ್ಧದ ರಣಭೇರಿ, / ಏನ್ ವೇಳೆಯಲಿ ಸ್ಫೋಟಿಸುವ ಗ್ರನೇಡೆಂದು'. ಹೀಗೆ, ತನ್ನ ಕಾವ್ಯದ ಮೂಲಕ ಸಮಾಜ ಮುಖಿಯಾದ ಕವಿ ಸುಧಾರಕನ ಹೊಣೆ ಹೊತ್ತವನೂ ಆಗಿರುತ್ತಾನೆ. ತಾನು ಅಸ್ತಿತ್ವದಲ್ಲಿ ಇಲ್ಲದಿದ್ದರೂ 'ಲೋಕ ಉಡುಗಿ ಹೋಗುವುದಿಲ್ಲ. / ನಡುಗಿ ನಲುಗುವುದಿಲ್ಲ; / ಆದರೆ ಬದುಕು ಯಥಾ ಪ್ರಕಾರ / ತನ್ನ ಪಾಡಿಗೆ ಸಾಗುತ್ತದೆ. / ಆದರೆ ಒಂದಿಷ್ಟು ಸೊರಗಿ, ಬರಡಾಗಿ; / ಕೊಂಚ ಕೊರಗಿ, ಕುರುಡಾಗಿ.' ಸೊರಗುವ, ಬರಡಾಗುವ, ಕುರುಡು ಲೋಕಕ್ಕೆ ಕವಿ ಅನಿವಾರ್ಯವೆಂಬುದನ್ನು ಈ ಕವಿತೆ ಸಾರುತ್ತದೆ. ಗಾರೊಡೆದ ದೈನಿಕ ಬದುಕಿನಲ್ಲಿ ನಲಿವು-ಗೆಲವುಗಳ ಹಚ್ಚನೆಯ ಹಸಿರನ್ನು ಹಬ್ಬಿಸುವುದಕ್ಕೆ; ಭಯಭೀತ ಆತಂಕಮಯ ಜನ ಜೀವನದ ಅಂಧಕಾರವನ್ನು ಯಥಾಮತಿ ತೊಡೆಯುವ ಬೆಳಕಿನ ಧೈರ್ಯವನ್ನು ಮೂಡಿಸುವುದಕ್ಕೆ ಕವಿ ಬೇಕಾಗುತ್ತಾನೆ.

ಹೃದಯವಂತಿಕೆಗೆ 'ಗೃಹಪ್ರವೇಶದ ಉಡುಗೊರೆ' ಕವನ ಸಾಕ್ಷೀಭೂತವಾಗಿದೆ. ಕವಿಯ ಗೃಹಪ್ರವೇಶದ ಸಮಾರಂಭದಲ್ಲಿ 'ವಿಶ್ವಾಸವಿಟ್ಟು ಬಂದ ಕನಿಷ್ಠರು, / ವರಿಷ್ಠರು, ನೆಂಟರಿಷ್ಟರು / 'ಹೊಸಮನೆ ಅಮಿತ ಸೌಭಾಗ್ಯವೆರೆಯಲಿ' ಎಂದು ಹಾರೈಸಿ / ಕಣ್ಣು ಕುಕ್ಕುವ ರಂಗುರಂಗಿನ ಪ್ಯಾಕೆಟ್ಟುಗಳ ಸಲ್ವಾರ್ ಕಮೀಜ್ ತೊಟ್ಟು / ಸೂಚಿಸದೆ ಲವಲೇಶವೂ ಗುಟ್ಟು / ಮರೆಮಾಚಿದ ಮಿಠಾಯಿ, ಪುಷ್ಪಗುಚ್ಛ, ಕಪ್ಪುಸಾಸರ್ ಸೆಟ್ಟು, ಗಡಿಯಾರ, ಬಟ್ಟೆಬರೆ— / ತಂದಿತ್ತರು ಇನ್ನು ಏನೇನೋ ಉಡುಗೊರೆ.' ಕವಿ ಕರೆಯೋಲೆಯಲ್ಲಿ ಬೇಡವೆಂದಿದ್ದರೂ ಪ್ರೀತಿಗಾಗಿ ಈ ವಿವಿಧ ಬಗೆಯ ಉಡುಗೊರೆಗಳನ್ನು ಆಪ್ತೇಷ್ಟರು ನೀಡಿದ್ದರು. ಆದರೆ ಈ ಉಡುಗೊರೆಗಳೇನು ಶಾಶ್ವತವೆ? ಮಾರನೆಯ ದಿನವೇ, 'ಬಾಯಿಗಳ ಬೇಟೆಗೆ ಮಿಠಾಯಿಯ ಆಯುಷ್ಯ ಮುಗಿದಿತ್ತು; / ಬೀದಿ ತೊಟ್ಟಿಯ ಹರಿಶ್ಚಂದ್ರ ಘಾಟಿಗೆ / ಬಸವಳಿದ ಹೂ ಬುಕೆ / ಕಾಲ ಕ್ರಮೇಣ ಒಡೆದ ಕಪ್ಪು ಬಸಿಗಳ ಚಕ್ಕೆ ಪಾಪ್ತಿಯಾದವು; / ಗಡಿಯಾರ ಗತಿಗೆಟ್ಟು ಉಪೇಕ್ಷೆಗೊಳಗಾಯಿತು; / ವಸ್ತ್ರ ಹರಿದು ನಿರುಪಯೋಗಿ ಎನಿಸಿಕೊಂಡಿತು; / ಇನ್ನಿತರ ಕಾಣಿಕೆಗಳು ಹಿಂಮನೆಯ ಹಳವ ಕಪಾಟಿಗೆ ವರ್ಗವಾದವು'. ಈ ಬಗೆಯ ಕೊಡುಗೆಗಳೆಲ್ಲ ಕ್ಷಣಿಕ ಹಾಗೂ ನಿರುಪಯುಕ್ತ ಎಂಬುದನ್ನು ಕವನ ಸಾರುವುದಲ್ಲದೆ, ಇವು ಕೇವಲ ತಾತ್ಕಾಲಿಕ ಖುಷಿಗಷ್ಟೇ ಸೀಮಿತವೆಂಬುದನ್ನು ಧ್ವನಿಸುತ್ತದೆ. ಈ ಕೊಡುಗೆಗಳ ಹಿನ್ನೆಲೆಯಲ್ಲೂ ಪ್ರೀತಿಯಿದೆ, ವಿಶ್ವಾಸವಿದೆ, ಔದಾರ್ಯತೆಯಿದೆ ನಿಜ. ಜೊತೆಗೇ ಕ್ರಮೇಣ ಅವು ಮರೆತೂ ಹೋಗುತ್ತವೆ ಎಂಬುದೂ ನಿಜ. ಆದರೆ ಈ ಎಲ್ಲ ನಿರ್ಜೀವ ವಸ್ತುಗಳಿಗಿಂತ ಸದಾ ಮನಸ್ಸಿಗೆ ಮುದ ನೀಡುವ, ಅರಳಿಸುವ ಒಂದು ಅಮೂಲ್ಯವಾದ, ಅನುಪಮವಾದ ಕೊಡುಗೆಯನ್ನು ಕವಿಯ ಕವನಾಭಿಮಾನಿಯೊಬ್ಬ ನೀಡುತ್ತಾನೆ. ನಿಜಕ್ಕೂ ಅದು 'ಬೆಲೆ ಕೊಟ್ಟು ಕೊಳ್ಳದ, / ಬೆಲೆ ಕಟ್ಟಲಾಗದ ಅಪೂರ್ವ ಉಡುಗೊರೆ— / ನಿತ್ಯ ಮಲ್ಲಿಗೆ ಹಂಬಿನೊಂದು ಕಡ್ಡಿ'. ಅದನ್ನಾತ ಕವಿಯ ಹೊಸಮನೆಯ

ಗೇಟಿನ ಬಳಿ ನೆಟ್ಟ. ಅದು ಇಂದಿಗೂ ಜೀವಂತವಾಗಿದೆ; ಅದರ ನರುಗಂಪು ಮನೆಯ ಒಳಹೊರಗೂ ಗಮಗಮಿಸುತ್ತಿದೆ; ಇಂಥ ಅಮೂಲ್ಯ ಹಾಗೂ ಸಾರ್ಥಕ ರೀತಿಯ ಉಡುಗೊರೆಯನ್ನು ನೀಡಿದ, ಹೆಚ್ಚು ನಿಕಟನಲ್ಲದ ಅಭಿಮಾನಿ ಕಣ್ಮರೆಯಾಗಿದ್ದರೂ `ನೋಟಕ್ಕೆ ಹಬ್ಬದೂಟ`ವಾಗಿರುವ ಮಲ್ಲಿಗೆಯ ಬಳ್ಳಿ ಅವನ ನೆನಪನ್ನು ಸದಾ ಹಸಿರಾಗಿ ಇಟ್ಟಿರುತ್ತದೆ ಸಾರ್ಥಕತೆಗೊಂದು ಸಮರ್ಥ ಸಂಕೇತವಾಗಿ.

ಪ್ರೊ. ನಿಸಾರ್ ಅಹಮದ್ ಅವರು ೧೯೯೪ರಲ್ಲಿ ದುಬೈಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಜುಮೈರ ಕಡಲ ದಂಡೆಯನ್ನು ಕಂಡು ಅದರ ಸೊಬಗನ್ನು, ಅದರ ಆಸುಪಾಸಿನಲ್ಲಿ ಕಂಡ ಅಪೂರ್ವ ಮತ್ತು ಸ್ವಾರಸ್ಯಕರವಾದ ದೃಶ್ಯಗಳನ್ನು, ಅಲ್ಲಿನ ಸೋಜಿಗ ಬರಿಸುವ ನೈರ್ಮಲ್ಯವನ್ನು ಸೊಗಸಾಗಿ ಕವನವಾಗಿಸಿದ್ದಾರೆ. ಜುಮೈರ ನಮ್ಮ ದೇಶದ ಮುಂಬೈಯ ಚೌಪಾಟಿ, ಚೆನ್ನೈನ ಅಡ್ಯಾರ್, ಮರೀನಾ ಬೀಚುಗಳನ್ನು ನಿವಾಳಿಸಿ ಎಸೆಯಬೇಕೆನಿಸುವಷ್ಟು ಚೆಂದವಾಗಿ, ಚೊಕ್ಕಟವಾಗಿ, ಅಚ್ಚುಕಟ್ಟಾಗಿ ಕಾಣುತ್ತದೆ ಕವಿಗೆ. ಈ ಬೀಚಿನಲ್ಲಿ ಪ್ರಣಯಿಗಳು ಮೈಮರೆತು ಆಡುವ ಕಾಮದಾಟಗಳು ಸಭ್ಯತೆಯ ಮುಸುಕಿನಲ್ಲೇ ಸಾಗಿರುತ್ತವೆ. ಇಲ್ಲಿ ಮನದ ಹಸಿವಿರುವುದಿಲ್ಲ, ಕೇವಲ ಇಂದ್ರಿಯ ತೃಷೆಗಷ್ಟೇ ಅರಸುಪಟ್ಟ ಕಟ್ಟಿದಂತೆ ಭಾಸವಾಗುತ್ತದೆ. ಜುಮೈರ ಕಡಲ ದಂಡೆ ಆಪ್ಯಾಯಮಾನವಾಗಿದ್ದರೂ ಇಲ್ಲಿಗೆ ಬರುವ ಪಿಕ್ನಿಕ್ಕಿಗರು, ಅವರ ನಡವಳಿಕೆ ಮಾತ್ರ ಗುಹಾವಾಸಿಗಳನ್ನು ನೆನಪಿಸುತ್ತದೆ ಎನ್ನುತ್ತಾರೆ, ಕವಿ. ಮುಸ್ಲಿಂ ರಾಷ್ಟ್ರಗಳಲ್ಲಿ ಮುಕ್ತ ಲೈಂಗಿಕತೆಗೆ ಹೆಚ್ಚಿನ ಆಸ್ಪದವಿಲ್ಲದಿದ್ದರೂ ಜುಮೈರ ಬೀಚಿನಲ್ಲಿ ಎಲ್ಲವೂ ನಗ್ನ ಸತ್ಯ; ಆದರೆ ಇದೆಲ್ಲದಕ್ಕೂ ಒಂದು ಸದಾಚಾರದ, ಸಭ್ಯತನದ ಲೇಪನವಿರುವುದರಿಂದ ನೋಡುಗರಿಗೆ ಸಹ್ಯವೆನ್ನಿಸದೆ ಇರದು. ವಿಹಾರಿಗಳ ಸ್ವಾತಂತ್ರ್ಯವೂ ಇತಿಮಿತಿ ಹಾಗೂ ಕಟ್ಟುಪಾಡಿನ ಚೌಕಟ್ಟಿನಲ್ಲೇ ನಡೆಯುವುದರಿಂದ ಇತರರಿಗೆ ಅದು ಅಸಹ್ಯವೋ, ಅಪಥ್ಯವೋ ಅನ್ನಿಸದು.

'ನಾಡವರ ನಾಯಿಪಾಡು' ಕವನದಲ್ಲಿ ನಿಸಾರರು ಅಸಮಾನತೆಯ ಸಂದುಗೊಂದಿಯಲ್ಲಿ ದಿಕ್ಕು ಕೆಟ್ಟು ಅಂಡಲೆಯುವ, ದೈನಂದಿನ ದೈನ್ಯತರ ಜೀವನ ಕ್ರಮದ ಲಯಗೆಟ್ಟವರ, ಸ್ವಾತಂತ್ರ್ಯ ಬಂದು ಮುಕ್ತರಾದರೂ ಕೂಡ ಭೇದದ ಉರುಳಿಗೆ ಕೊರಳೊಡ್ಡುವವರ ಬಗ್ಗೆ ಅಂತಃಕರಣಪೂರಿತವಾದ ಮರುಕವನ್ನು ಪಡುತ್ತಾರೆ. `ಪರರ ಸುಖ ಲಾಲಸೆಗಳಿಗೆ ಚಿರವಾಗಿ ಅಡವಿಟ್ಟ ಸಚರ ಸೊತ್ತುಗಳಾಗಿ ಸೊರಗಿರುವ`; ಸ್ವಂತ ಸೂರಿಲ್ಲದೆ ಪರರ ಸೌಧಗಳ ನಿರ್ಮಾಣದಲ್ಲಿ ಜೀತದೆತ್ತುಗಳಾಗಿ ದುಡಿದು ಹೇಳಹೆಸರಿಲ್ಲದೆ ಅಜ್ಞಾತವಾಗಿ ಸಾವಿನ ನೇಪಥ್ಯಕ್ಕೆ ಸರಿದು ಹೋಗುವವರ ಬಗ್ಗೆ ಕವಿಗೆ ಅತೀತವಾದ ಅನುಕಂಪವಿದೆ. ನಿರ್ದಯತ್ವದ ಲೋಕ ರೂಢಿಯ ಬಲಿಪಶುಗಳಿಗಾಗಿ ನವೆದು ಹೋಗುವ ನಾಡವರ ಈ ಪರಿಯ ನಾಯಿಪಾಡಿಗಾಗಿ ಕವಿಯ ಮನ ಮಮ್ಮಲ ಮರಗುತ್ತದೆ; ಜೊತೆಗೆ ಸಿಡಿದೇಳುತ್ತದೆ. ಇಲ್ಲಿ ಕವಿಯ ಮನಸ್ಸು ಮಾನವೀಯ ಗುಣದಿಂದ ಆರ್ದ್ರವಾಗಿದೆ; ಶೋಷಿತರ, ನೊಂದವರ, ಕಂಗಾಲರ ಆರ್ತ ದನಿಗೆ ಹೃದಯಾಂತರಾಳದಿಂದ ಸ್ಪಂದಿಸಿದೆ.

'ಮಾತಿಗ' ಒಂದು ಸಮರ್ಥ ವಿಡಂಬನಾತ್ಮಕ ಕವನ. ಅತಿಯಾದ ಮಾತುಗಾರನ

ಚಹರೆಯನ್ನು, ಸದಾ ಬಡಬಡಿಸುವವನ `ಬೈರಿಗೆ`ಯನ್ನು ವೈನೋದಿಕವಾಗಿ ಚಿತ್ರಿಸುತ್ತದೆ. ಇವನ ಮಾತಿಗೆ ಸಿಕ್ಕಿ ಹಾಕಿಕೊಂಡೆವೋ ಸುಮ್ಮನೆ ಬಿಡುವವನಲ್ಲ ಈ ಮನುಷ್ಯಾಕೃತಿಯ ಉಡ, ಮೈವೆತ್ತ ಅವಘಡ! ಇವನ ಮಾತಿನ ಭರಾಟೆ ಎಂಥದು ಎನ್ನುವಿರಾ? 'ಕದವಿಕ್ಕಿದ ಕೊಠಡಿಯಲ್ಲಿ ಮದುವೆ ಮನೆಯ ಜಮಖಾನ ಕೊಡವಿದಂತೆ'. ಇಂಥ ಅತಿ ಅಪೂರ್ವ ಮತ್ತು ಹೊಚ್ಚ ಹೊಸದಾದ ಹೋಲಿಕೆಗಳನ್ನು ಕನ್ನಡದ ಬೇರಾವ ಕವನಕಾರರ ಕವಿತೆಗಳಲ್ಲೂ ಕಾಣುವುದು ಅಪರೂಪ. ಈ ಸಾಲುಗಳಿಗೆ ವಿವರಣೆಯೇ ಬೇಕಿಲ್ಲ. ಅಷ್ಟು ಸರಳ; ಆದರೆ ಅತ್ಯಂತ ಅರ್ಥಗರ್ಭಿತ, ಪರಿಣಾಮಶಾಲಿ. ಇದರ ಭಾವಾರ್ಥದ ಘಾಟು ಉಸಿರು ಸಿಕ್ಕಿಸುವಂಥದು. ಈ ಮಾತಿಗನ ನಾಲಗೆ ಮಾತ್ರ, ನಿದ್ದಿಸಿರಲಿ, ಎದ್ದಿರಲಿ, ಕೊನೆಗೊಬ್ಬನೇ ಇರಲಿ, ಕೇರ್ ಮಾಡದೆ ಯಾರದೇ ಗೇಲಿಗೆ ಕ್ರಿಯಾಶೀಲವಾಗಿ ನಾಚ್ ನಡೆಸುತ್ತಲೇ ಇರುತ್ತದೆ. ಹಾಗೆ ನೋಡಿದರೆ, ಈ ಮಾತಿಗ ಸ್ವಭಾವತಃ ಕೇಡಿಗನೇನಲ್ಲ; ಬೇರೆಯವರಿಗೆ ಅಹಿತವನ್ನಾಗಲಿ, ಅನರ್ಥವನ್ನಾಗಲಿ ಎಸಗುವವ ಖಂಡಿತಾ ಅಲ್ಲ. ಇವನ ಅನಿಷ್ಟದ ಬಾಯಿಯೊಂದೇ ದೌರ್ಬಲ್ಯ. ಮಾತುಗಳ ಮೂರ್ಖತೆಯ ಮಾದಕ ವ್ಯಸನಿ. ಇಷ್ಟು ಬಿಟ್ಟರೆ . 'ಇವನು ಆದ್ಯಂತ ಸಬ್ ಸೋನಾ.' ಅಂದರೆ, ಅಪ್ಪಟ ಚಿನ್ನದಂಥ ವ್ಯಕ್ತಿ. ನಿಸಾರರು ಇಂಥ ಸಾಮಾನ್ಯರ ಬಗ್ಗೆಯೂ ಅತ್ಯಂತ ಮಾರ್ಮಿಕವಾಗಿ ಬರೆಯುತ್ತಾರೆ; ಇದು ಅವರ ಹೆಗ್ಗಳಿಕೆ. ವಿಡಂಬನೆಗೆ ಒಳಗಾದ ವ್ಯಕ್ತಿಯ ಬಗೆಗೆ ತಮಾಷೆ, ಲೇವಡಿಗಳಿದ್ದರೂ ಅವನ ಮಾನ ಹಾನಿಗಾಗಲಿ, ವ್ಯಕ್ತಿತ್ವದ ಹನನಕ್ಕಾಗಲಿ ಮನಸ್ಸು ಮಾಡುವುದಿಲ್ಲ.

ಪ್ರೊ. ನಿಸಾರ್ ಅಹಮದ್ ಅವರು ಸಹಜ ಕವಿ, ಅವರಿಗೆ ಕಾವ್ಯ ಮಾಧ್ಯಮ ಅತ್ಯಂತ ಪ್ರಿಯ. ಕವಿತೆಯೇ ಅವರ ಜೀವದುಸಿರು. ಪ್ರಾಣಪ್ರಾಯವೆನ್ನಿಸುವ ಇಂಥ ಕವಿತೆ ಅವರಿಂದ ದೂರವಾದಾಗ, ಕೈ ಹತ್ತದಿದ್ದಾಗ ಅವರ ಚಡಪಡಿಕೆ, ತಳಮಳಗಳು 'ಎಲ್ಲಿದ್ದೀಯ ನನ್ನ ಕವಿತೆ?' ಎಂಬ ಕವನದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಗೊಳ್ಳುತ್ತದೆ. ಹೊಸದೇ ಆದ ಕಲ್ಪನೆ, ಅನುನಯದ ಮಾತುಗಾರಿಕೆ ಮತ್ತು ಅಪ್ರತಿಮವಾದ ಹೋಲಿಕೆಗಳಿಂದ ಈ ಕವನ ನಮ್ಮ ಮನಸ್ಸನ್ನು ವಶಗೊಳಿಸಿಕೊಳ್ಳುತ್ತದೆ. ಸಾಕುನಾಯಿಯ ಹಾಗೆ ಕಳೆದು ಹೋಗಿರುವ ತಮ್ಮ ಮುದ್ದು ಕವಿತೆಯನ್ನು ಕವಿ ಸಂದಿಗೊಂದಿಗಳಲ್ಲಿ, ಮೊಹಲ್ಲಾಗಳಲ್ಲಿ ಎಲ್ಲೂ ಬಿಡದೆ ತಲಾಶ್ ಮಾಡುತ್ತಾರೆ. 'ಸಾಕಿ ಸಲಹಿದ ನನ್ನ ಚೆನ್ನ ಕವಿತೆ ಈಗೆಲ್ಲಿ ಕಣ್ಮರೆಯಾಯಿತೋ' ಎಂದು ತೀವ್ರವಾಗಿ ಮರುಗುತ್ತಾರೆ. ಕೊನೆಗೆ ಕವಿಗೆ ತಾನು ಎಸಗಿದ ಒಂದು ಅಕಾರ್ಯದಿಂದಾಗಿ ಕವಿತೆ ತನ್ನಿಂದ ದೂರವಾಯಿತೇ? ಎಂದೂ ಅನ್ನಿಸದೆ ಇರದು. ಕವಿ ಹೇಳುತ್ತಾರೆ: 'ಹೊಸದಾಗಿ ನಾ ತಂದು ಹೆಚ್ಚಿನಾಸ್ಥೆಯ ವಹಿಸಿ / ದಿನವಹಿ ಪೋಷಣೆಯ ತಪ್ಪದೆಯೆ ನಿರ್ವಹಿಸಿ / ಸಾಕಿರುವ ಗದ್ಯದತಿ ಚೆಂದನೆಯ ಬೆಕ್ಕು / ಕಿತ್ತುಕೊಂಡಂತೆನಿಸಿ ಒಡೆಯನೊಲವಿನ ಹಕ್ಕು / ಮನನೊಂದು, / ಒಳಗೊಳಗೆ ಭಾರಿ ನೋವನು ತಿಂದು / ನನ್ನ ತೊರೆಯಿತೆ ಕವಿತೆ / ಸವತಿ ಮತ್ಸರ ದಹಿತೆ!' / ತಾನು ಗದ್ಯದ ಕಡೆ ಗಮನ ಹರಿಸಿದ್ದೇ ಕವಿತೆ ತನ್ನಿಂದ ದೂರವಾಗಲು ಕಾರಣವೆಂಬ ನಿರ್ಧಾರಕ್ಕೆ ಬಂದ ಕವಿ ಅದನ್ನು ಓಲೈಸಲು, ಅನುನಯಿಸಲು ಪ್ರಯತ್ನಿಸುತ್ತಾರೆ. ತಮ್ಮ ಮಮತೆ ಒಲವರಗಳನ್ನು ಸಮರ್ಥಿಸುವಂತೆ, 'ನನ್ನ ಮೊದಲನೆ ಒಲವು ಹೇಗೋ ಹಾಗೇ / ನನ್ನ ಕೊನೆಯುಸಿರು ಸಹ

ನೀನೆ / ನೀ ಬಳಿಯೊಳಿಲ್ಲದಿರೆ ನೆಮ್ಮದಿಯ ನಾ ಕಾಣೆ / ... ಎಲ್ಲಿದ್ದರೂ ಬಂದು ಜಿಷು ನನ್ನೆದೆಗೆ ಬೇಗ' ಎಂದು ಅತ್ಯಂತ ಕಾಳಜಿಯಿಂದ ಆತಂಕಪೂರ್ಣ ಕಳಕಳಿಯಿಂದ ಕರೆಯು ತ್ತಾರೆ. ಈ ಪದ್ಯ ಒಂದು ಹೊಸದಾದ ಅನುಭವಕ್ಕೆ ಕದ ತೆರೆದು ತನ್ನ ಒಳಗನ್ನು ಅನಾವರಣ ಮಾಡುತ್ತದೆ. ಕವಿತೆಯ ಬಗೆಗೆ ಇತರರು ಬರೆದಿರುವ ಕವನಗಳ ಭಾವನೆಗಳಿಗಿಂತ ಭಿನ್ನ ಮತ್ತು ನೂತನ ಬಗೆಯದು.

'ಆ ಪ್ರೀತಿ ಈಗೆಲ್ಲಿ?' ಕವನದಲ್ಲಿ ನಿಸಾರರು ವ್ಯಾವಹಾರಿಕತೆಯ ದೆಸೆಯಿಂದ ಇಂದು ಮರೆಯಾಗಿರುವ ಆತ್ಮೀಯತೆ, ಸೌಹಾರ್ದತೆಗಳ ಯಾಂತ್ರಿಕ ಹಾಗೂ ಬರಡು ಪರಿಸರದ ಚಿತ್ರಣವನ್ನು ಮನಮುಟ್ಟುವ ಬಗೆಯಲ್ಲಿ ನೀಡುತ್ತಾರೆ. 'ಎಲ್ಲಿ ಆ ಗತದಿನದ ಅಚ್ಚ ಹಾಲಿನ ಪ್ರೀತಿ? / ಬೆಚ್ಚಗಿನ ವಿಶ್ವಾಸ, ಮೆಚ್ಚು, ಸಲಿಗೆ?' / ಎಂದು ಪ್ರಶ್ನಿಸಿ, ಈಗ 'ಕುಡಿನೋಟದರಳಲ್ಲಿ, ನುಡಿ ಮಾಟದುರುಳಲ್ಲಿ / ಬರಿಯ ಲೆಕ್ಕಾಚಾರ, ದೇಶಾವರಿ: / ನಗೆ ತೆರೆವ ಆಳದಲಿ, ಬಗೆಯೆಸೆವ ಗಾಳದಲಿ ಮಾಮೂಲಿನುಭಯತ್ರ ಕುಶಲೋಪರಿ' / ಮಾತ್ರ ಉಳಿದಿದೆ ಎನ್ನುವ ಖೇದಕರ ನಿರ್ಣಯಕ್ಕೆ ಬರುತ್ತಾರೆ. ಈಗೇನಿದ್ದರೂ 'ತಾನುಂಟು, ತನ್ನೊಡನೆ ಮೂರು ಲೋಕಗಳುಂಟು: / ಮುಬ್ಬು ಬಿಲ, ಕೂಪ ಜಲ, ಗಡಸು ಚಿಪ್ಪು— / ಇದ ಹೊಕ್ಕು ಮೈಮರೆತು ಮೈಗರೆಯುವುದೆ ಇರವು. / ಹೊರ ಆಗುಹೋಗುಗಳಿಗಾಗಿ ಕೆಪ್ಪು' ಎಂದು ವಾಸ್ತವಿಕತೆಯನ್ನು ಬಹಿರಂಗಗೊಳಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಕವಿ, ಕೊನೆಗೆ 'ಮತ್ತೊಮ್ಮೆ ಮುಂಬಾಳ ಚಪ್ಪರದ ಮೇಲೆಲ್ಲ / ಸೌಹಾರ್ದ ಸೌಗಂಧ ಹಬ್ಬುವಂತೆ/ ಅಂತರಂಗಗಳೊಡನೆ ಸಸ್ನೇಹ ಸಂವಾದ / ಮೆರೆದು, ನಳನಳಿಸಿರಲಿ ನಲಿವ ಸಂತೆ' ಎಂದು ಹೃತ್ಪೂರ್ವಕವಾಗಿ ಆಶಿಸುತ್ತಾರೆ. ಜನರ ನಡುವಿನ ಒಳಿತಿಗಾಗಿ, ಕಲ್ಯಾಣಕಾರಿತೆಗಾಗಿ ತುಂಬು ಮನಸ್ಸಿನಿಂದ ಹಾರೈಸುತ್ತಾರೆ. ಇದು ಕವಿಯ ಉದಾತ್ತ ಮನೋಭಾವಕ್ಕೆ ಸಮಾಜಹಿತಮುಖಿ ನಿಲವಿಗೆ ಸಾಕ್ಷಿ.

ತಮ್ಮಿಂದ ದೂರವಾದ ಮಮತೆ ಪುನಃ ಮನೆಗೆ ಮರಳಿದ ಬಗ್ಗೆಯೂ ನಿಸಾರರು ಅನುಪಮವಾದ ಚಿತ್ರಣವನ್ನು ನೀಡಿದ್ದಾರೆ. 'ಮೊಗದ ಮೌನವೆ ನಿನ್ನ ಪರ ವಹಿಸಿ ಮಾತಾಡಿರಲು. / ಶುಷ್ಕ ಶಬ್ದಗಳ ಸಪ್ಪೆ ವಿವರಣೆಯ / ದುಂದುಗಾರಿಕೆ ಏತಕಿನ್ನು?' ಎಂದು ಕೇಳುವ ಕವಿ. 'ಗತಕಾಲದೊಗಚು, ಹುಳಿ ಸುಳಿವುದೋರದೆ ಮುಂದೆ / ಎಂದೆಂದು ನಮ್ಮ ಬಾಳಾಗಲಿ ಬಣ್ಣ, ಪಕ್ವತೆ ಪಡೆದ ತುಂಬೊಲವ ಹಣ್ಣು' ಎಂದು ಸಮಾಧಾನಪಟ್ಟು ಕೊಳ್ಳುತ್ತಾರೆ.

ಕವಿ ನಿಸಾರರು ಕವಿತೆಯನ್ನು ಆಕಾಶಕ್ಕೆ ಹೋಲಿಸಿ. 'ಕವಿತೆ ಆಕಾಶದಂತೆ ಸರ್ವಾಧಾರೆ/ ಅದಕಿಲ್ಲ ಧರ್ಮಗಿರ್ಮಗಳ ಗಡಿ ಗೆರೆ / ರಾಜಕೀಯದ ಜಿಮ್ಮಿಗಲ್ಲು, ಫಲಕಗಳ ಹೊರೆ / ಜಾತಿಕುಲವರ್ಗಗಳ ಟೇಪಿನಳತೆಯ ಮೇರೆ' ಎಂದು ನಿರೂಪಿಸಿ 'ಆಕಾಶದಂತೆ ಕವಿತೆ ಸಹ / ಅಮೇಯ, ಅಗಮ್ಯ, ಅನೌಪಮ್ಯ: / ಮೇಲ್ನೋಟಕ್ಕೆ ಮಾತ್ರ ಬಲು ಸೌಮ್ಯ: / ಸಂತೋಷ ಕೂಟದಂತವರ ದಿನಗಟ್ಟಲೆಯ ನಿರಾಳ ನೋಟ. / ಮೋಡದಾಭರಣಗಳ ಮುದ್ದಿನ ಮಾಟ. / ಉದಯಾಸ್ತಮಾನಗಳ ಆಹ್ಲಾದಪ್ರದ ಬಣ್ಣಗಳ ಬೆಡಗಿನೊಡನಾಟ. / ಆಗಾಗ್ಗೆ ಇಂದ್ರ

ಚಾಪದಪ್ಸರೆಯ ಇಂದ್ರಿಯೋದ್ಯೋಗಿ ನಾಟ್ಯ— / ಇಂಥವೇ ಇನ್ನೆಷ್ಟೋ ಜೀವೋಲ್ಲಾಸಕರ/ ಲಾಲಿತ್ಯ ಲಕ್ಷಣಗಳಿಂದನುನಿತ್ಯ ಸ್ತುತ್ಯ' ಎಂದು ಕವಿತೆಯ ಅಗಾಧತೆಯ ಬಗ್ಗೆ, ಅದರ ರಹಸ್ಯಮಯತೆಯ ಬಗ್ಗೆ ನಿವೇದಿಸಿ, ಕವಿತೆ ಜನ್ಮ ತಳೆಯುವ 'ಮನಸ್ಸು ಕೂಡ ಆಕಾಶದಂತೆ ಅನಂತಾನಂತ ನಿಗೂಢ'ವೆನ್ನುತ್ತಾರೆ. ಅದರ ಹುಟ್ಟಿನ ಮರ್ಮ ಪೂರ್ತಿ ಅರ್ಥವಾಗ ದಂತಹದು; ವಾಙ್ಮಾನಸಾತೀತವಾದದ್ದು. ಈ ಕಾರಣದಿಂದಾಗಿಯೇ ಕವಿತೆ ಹಾಗು ಆಕಾಶಕ್ಕೆ ಮೇರೆಮಿತಿಗಳಿಲ್ಲ ಎನ್ನುವ ವಾಸ್ತವ ಸತ್ಯವನ್ನು 'ಆಕಾಶಕ್ಕೆ ಸರಹದ್ದುಗಳಿಲ್ಲ' ಕವನದಲ್ಲಿ ಮನಸ್ಸನ್ನು ತಟ್ಟುವಂತೆ ವಿಶ್ಲೇಷಣೆ ನಡೆಸಿದ್ದಾರೆ. ಗಹನತರ ಚಿಂತನೆಯನ್ನು ಸಹ ಸುಗಮ ಹಾಗೂ ಸುಲಲಿತ ಸಂವಹನತೆಗೆ ಒಳಗಾಗಿಸಿ ವಾಚಕರಿಗೆ ಮನೋಗಮ್ಯವಾಗಿಸುವ ಪ್ರಯತ್ನದ ಅಪರೂಪದ ಗುಣವನ್ನು ಈ ಕವಿತೆಯಲ್ಲಿ ಹೇಗೋ ಹಾಗೆಯೇ ಅವರ ಅನೇಕ ಇತರ ಕವನಗಳಲ್ಲೂ ಕಾಣುತ್ತೇವೆ.

ಒಟ್ಟಿನಲ್ಲಿ 'ಆಕಾಶಕ್ಕೆ ಸರಹದ್ದುಗಳಿಲ್ಲ' ಸಂಗ್ರಹ ಇನ್ನೂ ಹೆಚ್ಚಿನ ವಿಮರ್ಶನ ಲಕ್ಷ್ಯವನ್ನೂ ಚಿಂತನಪರ ಪರಾಮರ್ಶೆಯನ್ನೂ ಬೇಡುವ ಕೃತಿಯೆಂದು ಧಾರಾಳವಾಗಿ ನುಡಿಯಬಹುದು.

— ೨ —

'ಅರವತ್ತೈದರ ಐಸಿರಿ' ಪ್ರೊ. ನಿಸಾರ್ ಅಹಮದ್ ಅವರ ಹನ್ನೆರಡನೆಯ ಕವನ ಸಂಕಲನ. ಇದನ್ನು ೨೦೦೦ರಲ್ಲಿ ಬೆಂಗಳೂರಿನ ಶ್ರೀವಾರಿ ಪ್ರಕಾಶನ ಪ್ರಕಟಿಸಿದೆ. ಇದರಲ್ಲಿ ೩೪ ಕವನಗಳಿವೆ. ಈ ಸಂಕಲನದ ಬಹಳಷ್ಟು ಕವಿತೆಗಳು ಕವಿಯ ಮನೋಧರ್ಮದ ಉದಾತ್ತತೆ, ಬಾಳಿನಲ್ಲಿ ಹಿರಿದಾದದ್ದರ ಸಾಧನೆಯ ಹಂಬಲ ಮತ್ತು ಆಧ್ಯಾತ್ಮಿಕ ಚಿಂತನೆಗಳ ಬಗ್ಗೆ ಪ್ರಸ್ತಾಪಿಸುತ್ತವೆ. ಹೆಸರೇ ಸೂಚಿಸುವಂತೆ ಕವಿ ತಮ್ಮ ಅರವತ್ತೈದನೆಯ ವಯಸ್ಸಿನ ಜ್ಞಾಪಕಾರ್ಥ ಹೊರ ತಂದ ಸಂಕಲನವಿದು.

'ಮರಳು ದಿಬ್ಬಗಳು' ಮೊದಲನೆಯ ಕವಿತೆ ಸ್ವತಃ ಅರ್ಥನಿಬಿಡವಾಗಿರುವುದರ ಜೊತೆಗೆ, ಇಲ್ಲಿನ ಇತರ ಕವಿತೆಗಳ ಗುಣಮಟ್ಟ ಮತ್ತು ಸಾಂಕೇತಿಕತೆಯ ಸಮೃದ್ಧಿಯನ್ನು ಸೂಚಿಸುತ್ತದೆ. ಈ ಕವನ, ಬಹು ಜನರ ಅನುಕೂಲಸಿಂಧು ವಿಶ್ವಾಸದ ಮತ್ತು ಚಾಂಚಲ್ಯ, ಚಾಪಲ್ಯಗಳ ಪರಿಯನ್ನು ಬಣ್ಣಿಸುತ್ತದೆ. ಚರ ಸಂತೆಯಂತೆ ಗೋಚರಿಸುವ, ಪ್ರಕೃತಿಯ ಜಂಗಮರೂಪಿ ಜಿಪ್ಸಿಗಳಂತೆ ಕಾಣುವ ಮರಳು ದಿಬ್ಬಗಳು 'ನೇಸರಿನ ಕುಲುಮೆಯಲ್ಲಿ ಹಗಲಲ್ಲಿ ಬೇಯುತ್ತವೆ / ಇರುಳಲ್ಲಿ ಬಿಸುಸುಯ್ದು ಬೆವೆಯುತ್ತವೆ / ಭೂಮಿ ಕಕ್ಕುವ ಸುಡು ಬಿಸಿಯ ಜುಲುಮೆಯಲ್ಲಿ.' ಇವು ಯಾರೊಬ್ಬರಿಗೂ ಬದ್ಧವಾಗಿರದ, ವಿಧೇಯತೆಯನ್ನು ತೋರದ ದಿಬ್ಬಗಳು. ಒಂದು ಸ್ಥಿರ ನೆಲೆಯಿಲ್ಲದ ಇಂಥ ದಿಬ್ಬಗಳಂತೆ ಮನುಷ್ಯನ ಮನಃಸ್ಥಿತಿಯಿರುತ್ತದೆ ಎಂಬುದನ್ನು ನಿಸಾರರು ಪ್ರತೀಕಾತ್ಮಕ ವಿಧಾನದಿಂದ ಮನೋಜ್ಞವಾಗಿ ನಿರೂಪಿಸಿದ್ದಾರೆ.

'ಕೊಳವೆ ಬಾವಿಗಳು' ಇನ್ನೊಂದು ಸಫಲ ಮತ್ತು ಸಾರ್ಥಕ್ಯ ಪಡೆದಿರುವ ಕವನ. ಈ ಕವನದಲ್ಲಿ ಅಂತರ್ಜಲ ಯಾರಿಗೆ, ಎಷ್ಟರಮಟ್ಟಿಗೆ, ಯಾವ ರುಚಿಯಲ್ಲಿ ದಕ್ಕುತ್ತದೆ

ಎಂಬುದರ ತಾತ್ತ್ವಿಕ ವಿಶ್ಲೇಷಣೆಯಿದೆ. ಬದುಕಿನ ಲೌಕಿಕ ಸ್ವರೂಪದ ಅನುಭವವೊಂದನ್ನು ಭಾವಾರ್ಥಸಂಪನ್ನಗೊಳಿಸಿ ಆಲೋಚನೀಯ ಅತಿಶಯತೆಯನ್ನು ಸಾಧಿಸುವುದು ನಿಸಾರರ ಹುಟ್ಟುಗುಣ. ಕೊಳವೆ ಬಾವಿ ತೋಡಿಸಿದವರಿಗೆಲ್ಲ ಜಲದೇವಿ ಕೃಪೆ ತೋರುವಳೆಂದು ಖಾತರಿಯಾಗಿ ಹೇಳುವಂತಿಲ್ಲ. ಗೆದ್ದವರಿಗೆ ಜಲ ಹತ್ತಿಪ್ಪತ್ತು ಅಡಿ ಆಳದಲ್ಲೇ ಪ್ರತ್ಯಕ್ಷವಾಗಿ 'ಸಂಪಿ'ನಲ್ಲಿ ದಾಸ್ತಾನಾಗುತ್ತದೆ. ಅದೂ ಈ ನೀರು ಎಂಥದು? ಥೇಟ್ ಎಳನೀರು. ಇದು ಅವರವರ ಅದೃಷ್ಟದ ವಿಚಾರ. ಅದೇ, ಪಾಪಿ ಬೇನಸೀಬುಗಾರರಿಗೆ ನೂರಿನ್ನೂರು ಅಡಿ ಆಳ ಕೊರೆಸಿದರೂ ನೀರು ಗೈರುಹಾಜರಾಗಬಹುದು. ಅಕಸ್ಮಾತ್ ನೀರು ಕಂಡು ಬಂದರೂ ಅದು ನಾಯಿ ಮರಿಯ ತುಟಿಯನ್ನೂ ತೋಯಿಸದಷ್ಟಿರುತ್ತದೆ; ಜೊತೆಗೆ ಉಪ್ಪುಪ್ಪು ಬೇರೆ. ಇದು ಅವರ ದುರದೃಷ್ಟದ ವಿಷಯ. ಆದ್ದರಿಂದಲೇ ಅಂತರ್ಜಲ, ಅಂದರೆ ಅಂತರಂಗ, ಪ್ರತಿಭೆ, ಸಂವೇದಕತೆ, ಸತ್ಕೀರ್ತಿ, ಸ್ವಂತಿಕೆಗಳು ನಮ್ಮ ವಶವಲ್ಲ, ಪಡೆದು ಬಂದ ಫಲವೆಂದು ಕವಿ ಪ್ರತಿಪಾದಿಸುತ್ತಾರೆ. 'ಕೊಳವೆ ಬಾವಿಗಳು' ಪದ್ಯ, ನಮ್ಮ ಜೀವಿತದ ಎಷ್ಟೆಲ್ಲಾ ಸಂಗತಿಗಳಿಗೆ, ಮನುಷ್ಯನ ಪರ ಶಕ್ತಿಯ ಅವಲಂಬನೆಗೆ ಮತ್ತು ಪರಾಧೀನ ಅಸ್ತಿತ್ವಕ್ಕೆ ಸಂಕೇತಪ್ರಾಯವಾದ ತೋರುಬೆರಳಾಗುತ್ತದೆ ಎಂದು ಯೋಚಿಸಿದಾಗ ಸೋಜಿಗ ಮೂಡುತ್ತದೆ.

'ಗ್ರಾಮ ಗರತಿಯ ತಿಲಕ ಪ್ರಾಯವಾದ ಕೆರೆ'ಯ ಬಗ್ಗೆ ನಿಸಾರರು ಕುಂದದ ಹಾಗೂ ಮನಃಸ್ಪರ್ಶಿಯಾದ ಕವನ ಬರೆದಿದ್ದಾರೆ. 'ಕೆರೆ ಕೇವಲ ದಾಹಕ್ಕೆ, ಮೀಹಕ್ಕೆ / ಬಟ್ಟೆ ಬರೆಗಳ ಮಡಿಗೆ; / ಬೇಯಿಸಲು ಅಡಿಗೆ / ತೀರ್ಥಕ್ಕಾಗಿ ಗುಡಿಗೆ: / ಮೀನು ಸೀಗಡಿಗೆ; / ಬೇಸಾಯಕ್ಕೆ ನೀರಾವರಿ / ಅಚ್ಚುಕಟ್ಟಿನ ಹಸುರಿನ್ಸೈಸಿರಿ / ತರಹವಾರಿ ಕಾಮಗಾರಿಗೆ ಮಾತ್ರ ವಲ್ಲ ಗುರಿ / ಊರಿನಗ್ಗಳಿಕೆಯ ಮುಡಿಗೆ ಅದು ಚಂದದ ಗರಿ' ಎಂದು ಕೆರೆಯ ಹಿರಿಮೆಯನ್ನು ಕವಿ ಎತ್ತಿ ಹಿಡಿಯುತ್ತಾರೆ. ಕೆರೆಗೂ ಮನುಷ್ಯರಿಗೂ ಇರುವ ಸಂಬಂಧ ಕೇವಲ ಉಪಯೋಗ ದೃಷ್ಟೇ ಅಲ್ಲ, ಭಾವನಾತ್ಮಕವಾದದ್ದು. ಇಂಥ ಕೆರೆ ಈಗ ಏನಾಗುತ್ತಿದೆ? ಕವಿ ಹೇಳುತ್ತಾರೆ: 'ಕೆರೆ ಆಗಿದ್ದರೂ ಮಹನ್ಮೂಕ / ತನ್ನನ್ನು ಶೋಷಿಸಿ, ನಿವೇಶಿಸಲು, ಕಾಂಪ್ಲೆಕ್ಸು ಗಳನು ದ್ಘೋಷಿಸಲು ಕುಯುಕ್ತಿಸುವ ದುರ್ವಿದ್ಯೆ / ಅದಕ್ಕೆ ನಿತ್ಯ ಕರತಲಾಮಲಕ; / ಆ ಅರಿವಿದ್ದೂ ಪ್ರತಿಭಟಿಸಲಾಗದಮಾಯಕ.' ಈ ಸಾಲುಗಳು ಇಂದಿನ ಕೆರೆಗಳ ದುರವಸ್ಥೆಯ, ಹೀನಾಯ ಸ್ಥಿತಿಯ ವಾಸ್ತವ ಚಿತ್ರಣವನ್ನು ನೀಡುತ್ತವೆ. 'ಕೆರೆ ಬರಿಯ ನೀರೇ?' ಎಂದು ಪ್ರಶ್ನಿಸುವ ಸಂದೇಹಗ್ರಸ್ತರಿಗೆ, ಕವಿ 'ಅದು ಸಕಲ ಜೀವಜಾತರ ಕ್ಷೇಮಾಭ್ಯುದಯದಾಧಾರೆ, / ಅದು ಗ್ರಾಮ ಗರತಿಯ ಹಣೆಯ ತಿಲಕ'—ಎಂದು ಸ್ಪಷ್ಟಪಡಿಸುತ್ತಾರೆ. ಕೆರೆಯ ಮಾನವೋಪಕಾರದ ಮತ್ತು ಪಾವಿತ್ರ್ಯದ ಆಂತರ್ಯವನ್ನು ಸೂಚಿಸಿ, ಅದನ್ನು ಅನಾವರಣ ಗೊಳಿಸುತ್ತಾರೆ.

'ಮನದೊಳಗೆ ಮನೆಮಾಡಿರುವ, ಜಮೆಯಾಗಿರುವ ಹೊಲೆ, / ದಿಗ್ಗೇಡಿ ವಿಷಯಗಳ ಹೂಳು ಮಣ್ಣು ತೆರವಾದಾಗಲೇ / ಮಡುಗಟ್ಟುವುದು ಸುವಿಚಾರ ಸಾರದ ಸೆಲೆ / ತೆರೆಯು ವುದು ತಾನಾಗಿ ಮರೆವುಗಣ್ಣು'—ಇದು 'ಜೀವೋನ್ನತಿ' ಕವನದ ಸಾರಸರ್ವಸ್ವವಾದ ಭಾವ. ಬದುಕು ಹಸನಾಗಬೇಕಾದರೆ, ಎತ್ತರಕ್ಕೆ ಏರಿ ಮೆರೆಯಬೇಕಾದರೆ ಮೊದಲು ಮನುಷ್ಯ ತನ್ನ

ಕಷಾಯ ಕಿಲ್ಬಿಷಗಳನ್ನು ಚಿತ್ತದಿಂದ ನಿವಾರಿಸಿಕೊಂಡು ನಿರ್ಮಲವಾಗಬೇಕು. ಆಗಷ್ಟೆ ಜೀವಿತ ಉದಾತ್ತತೆಯ ಕಡೆ ಸಾಗುವ ಅವಕಾಶ ಮೂಡೀತು—-ಎಂಬುದು ಕವಿಯ ಆಶಯ. ಇದೂ ಕೂಡ ನಿಸಾರ್ ಪದೇಪದೇ ತಮ್ಮ ಗದ್ಯ-ಪದ್ಯಗಳಲ್ಲಿ ದಣಿವರಿಯದೆ ಪ್ರಸ್ತಾಪಿಸುವ, ಸ್ಥಾಯೀ ಧ್ಯೇಯದಂತೆ ನಂಬುವ 'ಯೋ ವೈ ಭೂಮಾ ತತ್ಸುಖಂ, ನಾಲ್ಪೇ ಸುಖ ಮಸ್ತಿ' ಎಂಬ ಉನ್ನತ ಹಾಗೂ ಜೀವಸಂಸ್ಕಾರಕ 'ಪರಿಶುದ್ಧತೆ'ಯ ಚಿಂತನೆಗೆ ಮತ್ತೊಂದು ಸಶಕ್ತ ಉದಾಹರಣೆಯಾಗುತ್ತದೆ.

'ಪೊಗರಿಗ' ಕವನದಲ್ಲಿ ಕವಿ ನಿಸಾರರು ಶ್ರೀಮಂತಿಕೆಯ, ಹೆಸರಿನ ಅಡ್ಡಹಾದಿ ಹಿಡಿದು ಮೇಲೇರಿದವನ ಅಟ್ಟಹಾಸದಲ್ಲಿ ಮೆರೆಯುವವನ ಚಿತ್ರವನ್ನು ಪರಿಣಾಮಕರವಾಗಿ ಮೂಡಿಸಿದ್ದಾರೆ. ಅವನ ಕಣ್ತೆರೆಸಲು ಕವಿ ಅವನ ಮನೆಗೇ ಬಂದು ಹೇಳುತ್ತಾರೆ: '...ಎಲೆ, ಶೂನ್ಯ ಸಂಪಾದನೆಯ ಮಡೆಯ / ರುಜುವಾತಿಸಲು ನಿನ್ನಸಹಾಯಕತೆಯ / ಸ್ವಂತ ಮನೆಗೆ ಬರೋಣ: / ಮಬ್ಬು ಮಿಗವನ್ನಿಷ್ಟೂ ಬಿಡದೆ ಕೊಚ್ಚಿ ಹಾಕಿದೆ ಪ್ರಖರ ಹಾಲ್ಬೆಳಕ ಬಾಣ; / ಸ್ವಿಚ್ಚು ಹೋಲ್ಡರು ವೈರು ಬಲ್ಬು ನಿನ್ನವೇ. / ಸ್ವಗೃಹದ ಸುಪರ್ದಿಯಲ್ಲೇ ಎಲ್ಲ ಇವೆ. / ಆದರುಂಟೆ, ನಿನ್ನ ಮನೆ ಬೆಳಕು ಅಣತಿಯ ಮೀರದಂತೆ / ನೆರೆಯವನ ಬಡ ಅಂಗಳಕೆ ಬೀಳದಂತೆ / ನಿನಗೆ ತಡೆಯುವ ಶಕ್ತಿ ಆಯಾ ಯುಕ್ತಿ?' ಆದ್ದರಿಂದಲೇ ಸ್ವಂತದ್ದೆನ್ನುವ ಬೀಗು ಮತ್ತದರ ಸ್ವಾಮ್ಯದ ಸೋಗು ಬುಡವಿರದ ಭ್ರಮೆ, ಬರಿಯ ಅತಿಶಯೋಕ್ತಿ—ಎನ್ನುವ ತೀರ್ಮಾನಕ್ಕೆ ಬರುತ್ತಾರೆ ಕವಿ.

ಐಷಾರಾಮಿ ಬದುಕಿಗೆ ಹಾತೊರೆಯುವವರಾಗಲಿ, ನಿತ್ಯ ಕೂಳಿಗೆ ಅವಿರತವಾಗಿ ದುಡಿಯುವ ಶ್ರಮಿಕ ವರ್ಗವಾಗಲಿ ತಮ್ಮ ತಮ್ಮ ವೈಯಕ್ತಿಕ ಸುಖ ಜೀವನದ ಬಗ್ಗೆ ಗಮನ ನೀಡುತ್ತಾರೆ; ತಮ್ಮ ಬದುಕು ಚೆಂದವಾಗಿರಲಿ ಎಂದು ಆಶಿಸುತ್ತಾರೆ. ಆದರೆ 'ಬದುಕು ಇಷ್ಟೇ ಅಲ್ಲ: ಸಿನಿಮಾ, ಕ್ರಿಕೆಟ್, ರಾಜಕೀಯ' ಮಾತ್ರವಲ್ಲ ಎಂಬ ಸತ್ಯವನ್ನು ಮರೆಯುತ್ತಾರೆ. ಸಿನಿಮಾ ಎನ್ನುವುದು ಬರಿಯ ನೆರಳು ಬೆಳಕಿನಾಟ. ಕ್ರಿಕೆಟ್ ಸೋಲು ಗೆಲವಿನ ತಾತ್ಕಾಲಿಕ ಕ್ರೀಡೆ. ರಾಜಕೀಯ ದೊಂಬರಾಟದ ಕಣ. ಈ ರಂಗಗಳಲ್ಲಿ ತೊಡಗಿಕೊಂಡು ಇದ್ದಷ್ಟು ಕಾಲ ಸುಖ, ಸಂತೋಷ ದಕ್ಕಬಹುದು. ಆದರೆ ಜೀವನಕ್ಕೆ ಹಿತವಾಗಲಿ, ಶ್ರೇಯಸ್ಸಾಗಲಿ ದೊರಕುವುದಿಲ್ಲ. ನೆಮ್ಮದಿ ಲಭ್ಯವಾಗುವುದಿಲ್ಲ.

'ಚಿತಾವಣೆಯ ಚುನಾವಣೆ' ಕವಿತೆಯಲ್ಲಿ ಐದು ವರ್ಷಕ್ಕೊಮ್ಮೆ ಮತಯಾಚನೆಗೆ ಬರುವ ಪುಢಾರಿಯ ಟೀಕಾತ್ಮಕ ಬಣ್ಣನೆಯ ಚಿತ್ರಣವಿದೆ. '...ಆರಿಸಿ ಬಂದಾಸಾಮಿ ಏಮಾರಿಸಿ, / ಇದ್ದುಬದ್ದೆಲ್ಲವನೆಗರಿಸಿ, ಗುಡಿಸಿ ಸಾರಿಸಿ / ಹೋದ ದೆಹಲಿಗೆ ಸೀದಾ / ಪುಢಾರಿ ವಿಶ್ವಾಮಿತ್ರ ಪ್ರಜಾ ಮೇನಕೆಯ ಹಾದರಿಸಿ!' ಇಂಥ ಪುಢಾರಿ ಮತ್ತೆ ವಕ್ಕರಿಸುವನು ಗತ ಚುನಾವಣೆಯ ನೆನಪಳಿಸಿ ತೆರಳುವಷ್ಟರಲ್ಲಿ. ಈ ಕವನದಲ್ಲಿ ರಾಜಕಾರಣಿಯ ಸೋಗಿನ ಸ್ಪಷ್ಟ ನಿರೂಪಣೆಯಿದೆ.

ಮೊತ್ತದಲ್ಲಿ ನಿಸಾರರ 'ಆಕಾಶಕ್ಕೆ ಸರಹದ್ದುಗಳಿಲ್ಲ' ಮತ್ತು 'ಅರವತ್ತೈದರ ಐಸಿರಿ' ಕವನ ಸಂಕಲನಗಳು ನಿಸಾರರು ಕವಿಯಾಗಿ ಮಾಗಿರುವುದನ್ನೂ ಕಾವ್ಯದ ಪರಿಕರಗಳನ್ನು

ಸಮರ್ಥವಾಗಿ, ಅರ್ಥವಂತವಾಗಿ, ಸೂಚ್ಯವಾಗಿ ಉಪಯೋಗಿಸಿರುವ ಪರಿಣತಿಯನ್ನೂ ಲೋಕಾನುಭವದ ಸಮೃದ್ಧಿ ಶ್ರೀಮಂತಿಕೆಯನ್ನೂ ದ್ಯೋತಿಸುತ್ತವೆ. ಅವರ ಕಾವ್ಯಜೀವನದ ನಿಡಿದಾದ ಹಾದಿಯಲ್ಲಿ ಈ ಸಂಗ್ರಹಗಳು ಕೃತಾರ್ಥತೆಯ ಮೈಲುಗಲ್ಲುಗಳಂತೆ ವಿಜೃಂಭಿಸುತ್ತವೆ ಎಂದು ಹೇಳಬಹುದು. ಮುಂದೆ ಅವರು ಬರೆಯಬಹುದಾದ ಕವನಗಳ ಸ್ವರೂಪವನ್ನೂ ಈ ಸಂಕಲನದ ಪದ್ಯಗಳು ಸೂಚಿಸಬಲ್ಲವು. ವೈವಿಧ್ಯ, ಆಳ ಮತ್ತು ಅರ್ಥವಂತಿಕೆಗಳು ಇನ್ನಷ್ಟು ಯಥೇಚ್ಛ ಪ್ರಮಾಣದಲ್ಲಿ ಅವರ ಭವಿಷ್ಯತ್ತಿನ ಕಾವ್ಯ ರಚನೆಗಳು ಪ್ರದರ್ಶಿಸುತ್ತವೆ ಎಂದು ಆಶಿಸೋಣ.


ಪ್ರಸ್ತುತದ ಸಮಸ್ಯೆಗಳಿಗೆ ಪರಿಹಾರ ಕಾಣಿಸದ, ಹಾಚ್ ಪಾಚ್ ಪಠ್ಯ ವಿಷಯಗಳನ್ನು ಪಲ್ಯದಂತೆ ಬಡಿಸುವ ತೀರಿನದು ನಮ್ಮ ಶಿಕ್ಷಣ. ಪಲ್ಯ ಮೃಷ್ಟಾನ್ನವಾದೀತೆ? ಬುದ್ಧಿಗೆ ತಿಳಿವಿನ, ಅಂಕಿ ಅಂಶಗಳ ಹಿಂಡಿ ಹಾಕಿ ಅಂತರ್ಯವರ್ಧನೆಗೆ ಸುಗ್ರಾಸ ನೀಡದಿದ್ದರೆ ಅದನ್ನು ಶಿಕ್ಷಣ ಎಂದು ಕರೆಯಬಹುದೆ? ಉದ್ಯಾನ ವನಗಳಿಗಿಂತ ಹುಲ್ಲುಗಾವಲುಗಳನ್ನು ಹೆಚ್ಚು ಹೋಲಿವೆ ನಮ್ಮ ವಿದ್ಯಾಲಯಗಳು. ಸಮವಸ್ತ್ರಧಾರಿ ಕವಾಯ್ತಿನ ಯಾಂತ್ರಿಕ ಶಿಕ್ಷೆಯಾಗಿದೆ ಶಿಕ್ಷಣ ಕ್ಷೇತ್ರ.

(ಶಿಕ್ಷಣ ಕ್ಷೇತ್ರ)

✧ ✧ ✧

ನದಿ ಮುಂದುವರಿಯುತ್ತ ಹೊಸ ಹೊಸ ನೀರುಗಳನ್ನು ಮೈಗೂಡಿಸಿಕೊಂಡು ದಷ್ಟಪುಷ್ಟವಾಗಿ ವರ್ಧಿಸುತ್ತ ಹೋಗುವಂತೆಯೇ ಜ್ಞಾನ ವಿಜ್ಞಾನಗಳ ವಿಚಾರವೂ ಸಹ. ಬೆಟ್ಟಗಲದ ಜಲಧಾರೆಯಂತೆ ಒಬ್ಬಿಬ್ಬರ ವಿಚಾರ, ಅನುಭವ ಗಳಿಂದ ಉಗಮಗೊಂಡು ಸಹಸ್ರಾರು ಜನ ಮನಗಳ ಜಟಿಲ ಪಥಗಳಲ್ಲಿ ಹರಿದು, ಕಸುವುಗೊಳ್ಳುತ್ತ ವಿಶಾಲ ಪಾತ್ರದ ಜ್ಞಾನ ವಾಹಿನಿಯಾಗಿ ಮುನ್ನಾಗ ಬೇಕು—ಕಾಲದೇಶ ಜನಾಂಗಗಳನ್ನು ಫಲವತ್ತಾಗಿಸುತ್ತ; ಹಾಗೆಯೇ, ಅವುಗಳನ್ನು ಉತ್ತರಿಸಿ ಭವಿಷ್ಯೋನ್ಮುಖವಾಗುತ್ತ.

(ಜ್ಞಾನ ವಾಹಿನಿ)



‘ಮಿಂಚಿಕೆಗಳು’: ಒಟ್ಟಂದದ ಒಂದಷ್ಟು ಗ್ರಹಿಕೆಗಳು

◆ ಡಾ. ಲತಾ ಗುತ್ತಿ

ನಿತ್ಯೋತ್ಸವದ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಸಾಹಿತ್ಯ ವಲಯದ ಹಿರಿಯ ಚೇತನ. ಅವರ ಕಾವ್ಯಲೋಕದ ಉದ್ಯಾನದೊಳಗೆ ಅಡ್ಡಾಡಿ ಬಗೆಬಗೆಯ ಹೂವುಗಳನ್ನು ಕಂಡು ಸಂತೋಷಪಟ್ಟಿದ್ದೇನೆ. ಇವರು ಕವಿಯಷ್ಟೇ ಅಲ್ಲ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿಯೂ ತಮ್ಮನ್ನು ಸಮರ್ಥವಾಗಿ ಸಮರ್ಪಿಸಿಕೊಂಡಿದ್ದಾರೆ.

ನಿಸಾರ್ ಅಹಮದ್ ಅವರ ಅನೇಕ ಕವಿತೆಗಳನ್ನು, ಕವನ ಸಂಕಲನಗಳನ್ನು ನೋಡಿದ್ದ, ಓದಿದ್ದ ನನಗೆ ಅವರಲ್ಲಿ ಹನಿ, ಮಿನಿ, ಚುಟುಕಗಳ ಸಂಗ್ರಹವೂ ಇದೆಯೆಂದು ಗೊತ್ತಿರಲಿಲ್ಲ. ಆದರೆ ಅವರಿಗೆ ಅಭಿನಂದನೆಯ ಈ ಸಂದರ್ಭದಲ್ಲಿ ಅವರ ‘ಮಿಂಚಿಕೆಗಳು’ (ಕೈ ಬರಹದಲ್ಲಿದ್ದು ಪ್ರಕಟವಾಗಬೇಕಾದ ಸಂಗ್ರಹ) ಸಿಕ್ಕಾಗ ಓದಿ ತುಂಬಾ ಸಂತೋಷ ಪಟ್ಟೆ.

ನಿಸಾರ್‌ರವರು ‘ಮಿಂಚಿಕೆಗಳ’ಲ್ಲಿ ಮುಖ್ಯವಾಗಿ ಸಾಮಾಜಿಕ, ರಾಜಕೀಯ, ಶಿಕ್ಷಣ ವ್ಯವಸ್ಥೆ, ಕನ್ನಡದ ಇಂದಿನ ಪರಿಸ್ಥಿತಿಗಳ ಬಗೆಗೆ ಹತ್ತಾರು ವಿಷಯಗಳನ್ನು ಸೂಕ್ಷ್ಮವಾಗಿ ಎಲ್ಲರೊಂದಿಗೆ ಚರ್ಚಿಸಿದ್ದಾರೆ. ಇವೆಲ್ಲ ಮಿನಿ, ಮಿಡಿ, ಚುಟುಕ, ಹನಿಗವನ ಇತ್ಯಾದಿ ರೂಪದಲ್ಲಿ ಕಾಣಿಸಿಕೊಂಡಿವೆ. ಕೆಲವು ದೊಡ್ಡ ಕವನಗಳಿಗಾಗುವಷ್ಟು ವಿಷಯಗಳ ವಿಸ್ತಾರವೂ ಇದೆ.

ಚುಟುಕ ಹನಿ ಮಿನಿಗಳೆಲ್ಲ ಇಂದಿನ ಪತ್ರಿಕೆಗಳಲ್ಲಿ

ಜನಪ್ರಿಯವಾಗಿವೆ. ಅವು ಕಾವ್ಯದ ಚಿಕ್ಕ ರೂಪವನ್ನು ಪಡೆದಿದ್ದರೂ ಕಾವ್ಯಕ್ಕಿರಬೇಕಾದ ಸಮರ್ಥ ಅರ್ಥವನ್ನು ಕೊಡುವುದರಲ್ಲಿ ಅನೇಕವು ಯಶಸ್ವಿಯೂ ಆಗಿರುತ್ತವೆ. ಚುಟುಕ, ಪ್ರಾಚೀನ ಮುಕ್ತಕದ (ಸುಭಾಷಿತ, ಸೂಕ್ತಿ) ಒಂದು ಪ್ರಕಾರ. ಆದರೆ ಸುಭಾಷಿತಗಳಲ್ಲಿ ನಾಲ್ಕು ಸಾಲುಗಳು ಇರುವಂತೆ ಚುಟುಕಗಳಲ್ಲಿ ಇರುವುದಿಲ್ಲ. ಹೆಚ್ಚೂ ಕಡಿಮೆಯಾಗುತ್ತಲೇ ಇರುತ್ತವೆ. ಒಮ್ಮೊಮ್ಮೆ ಎರಡು ಸಾಲುಗಳಿಂದ ೮-೧೦ ಸಾಲುಗಳವರೆಗೆ ಹೋಗಿದ್ದೂ ಇವೆ. ನಿಸಾರರ ಮಿಂಚಿಕೆಗಳಲ್ಲಿಯೂ ಹೀಗಿರುವುದನ್ನು ಕಾಣುತ್ತೇವೆ. ಚುಟುಕ ಮನುಕುಲದ ಆದಿ ಕಾವ್ಯವೆನ್ನಬಹುದು. ಅನಂತರ ಅದು ಕಾಲಕ್ರಮೇಣ ವಿಕಾಸಗೊಂಡು ಭಾವಗೀತೆ, ಖಂಡಕಾವ್ಯ, ಮಹಾಕಾವ್ಯಗಳ ಮಜಲಿನವರೆಗೆ ಬೆಳೆದಿದೆ.

ಚುಟುಕಗಳನ್ನು ನಾವು ಇಂದು ಅನೇಕ ಹೆಸರುಗಳಲ್ಲಿ ಕಾಣುತ್ತೇವೆ. ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ವಿವಿಧ ಹೆಸರುಗಳಿಂದ ಗುರುತಿಸಲಾಗಿದೆ. ಲಿಮರಿಕ್, ಎಪಿಗ್ರಾಂ, ಎಪಿಟಾಫ್, ಹಾಯ್ಕು, ಶಾಯರಿ, ರುಬಾಯಿ, ಗಜಲ್ ಮುಂತಾದವುಗಳು. ಇವೆಲ್ಲವುಗಳಲ್ಲಿ ಕಿರಿಯದರಲ್ಲಿ ಹಿರಿದಾದ ಅರ್ಥವನ್ನು ಕಾಣುತ್ತೇವೆ.

'ಮಿಂಚಿಕೆಗಳ' ಚಮಕುಗಳು ನಿಸಾರ್ ಅಹಮದ್ ಅವರ ಅನೇಕ ವರ್ಷಗಳ ಸಾಧನೆಯೆಂದು ತಿಳಿಯಿತು. ಇಷ್ಟು ವರ್ಷಗಳಾದರೂ ಯಾಕೋ ಅವರು ಪ್ರಕಟಣೆಯ ಗೋಜಿಗೆ ಹೋಗಿಲ್ಲ. ಪ್ರಕಟವಾಗಿದ್ದರೆ, ಈ ಕೃತಿ ಚುಟುಕ ಸಾಹಿತ್ಯ ಪ್ರಕಾರಕ್ಕೆ ಮಹತ್ವದ ಕೊಡುಗೆಯಾಗುತ್ತಿತ್ತು. ನಿಸಾರ್ ಅವರು ಅಂತರ್ಮುಖಿ ಕವಿ. ಅಂತೆಯೇ ಅವರ ನಿಡಿದಾದ ಕಾವ್ಯಗಳು, ಮಿಂಚಿಕೆಗಳು ಮಹತ್ವದ ವಿಷಯಗಳನ್ನು ಹೇಳುತ್ತವೆ. 'ಹೊರಗಡೆ ಸುಖ ಸಂತೋಷ ಹುಡುಕಿಕೊಂಡು ಅಲೆಯಬೇಡ, ಎಲ್ಲವೂ ನಿನ್ನಲ್ಲಿಯೇ ಇದೆ. ನಿನ್ನನ್ನು ನೀನು ಮೊದಲು ಅರ್ಥಮಾಡಿಕೊಳ್ಳಬೇಕು' ಎನ್ನುವ ತಮ್ಮ ಮನದಿಂಗಿತವನ್ನು ವಚನದ ಶೈಲಿಯಲ್ಲಿಯೇ ಮುಂದಿಡುತ್ತಾರೆ.

'ಹೊರಗಡೆ ಎಲ್ಲಿದೆ? ಒಳಗಡೆ ಇದೆ ಸುಖ;
ತೊಳಲುತ ಬಳಲುವೆಯೇತಕೆ ಬಡ ಮಿಕ,
ಹುಡುಕು ಮನದಲೆ, ಮನೆಯಲ್ಲೆ;
ಪೇಟೆ ಅಲೆಯದಿರು ಕೊಳ್ಳಲು ಗೋವ;
ಅಡುಗೆ ಮನೆಯೊಳಿದೆ ಅರಸುವ ಖೋವ
ಪಾತ್ರೆಯ ಹಾಲಿನ ಕೆನೆಯಲ್ಲೆ.' **(ವಚನಾಮೃತ)**

ಹಾಗೆಯೇ, ಮನುಷ್ಯನಿಗೆ ಒಳ್ಳೆಯ ಸಹವಾಸಗಳೂ ಇರಬೇಕೆನ್ನುತ್ತಾರೆ. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎನ್ನುವ ಮಾತುಗಳನ್ನು ಲಯಬದ್ಧತೆ ವಿಧಾನದಿಂದ ಹೀಗೆ ಹೇಳುವರು:

'ಸಜ್ಜನನಿದ್ದರೆ ಖೂಳರ ಕೆಳೆಯಲಿ
ಅವನುದ್ಧಾರವದೆಲ್ಲಿ?
ಚಂದನ ಸೇರಿರೆ ಸೌದೆಯ ಹೊರೆಯಲಿ
ಒಲೆಗದು ಉರಿಯುವ ಕೊಳ್ಳಿ.

ಭವಿಗಳ ಮೇಲಿರೆ ಅನುಭಾವಿಯ ಕೃಪೆ
ಕಳ್ಳಿಯೂ ಮಲ್ಲಿಗೆ ಬಳ್ಳಿ.
ಚಂದ್ರನ ಕಿರಣದ ನೆರವೊಂದಿದ್ದರೆ
ಕೊಚ್ಚೆಯ ಜಲವೂ ಬೆಳ್ಳಿ.'

(ಸಹವಾಸ ಮಹಿಮೆ)

ನಿಸಾರರು ತಮ್ಮ ಕವನಗಳ ಮುಖಾಂತರ ಕಾವ್ಯಪ್ರಿಯರನ್ನು ಸೆರೆ ಹಿಡಿಯುವ ಮಾತುಗಳು ಸಂಭ್ರಮಯುತವಾದವು. ಸೂಕ್ಷ್ಮ ಸಂವೇದನೆಗಳ ಮತ್ತು ಗಾಢವಾದ ವಿಷಯಗಳ ಮೂಲಕ ಅನೇಕ ಸಂಗತಿಗಳನ್ನು ಮತ್ತೆ ಮತ್ತೆ ಚರ್ಚಿಸುವಂತೆ ಮಾಡುತ್ತವೆ. ಚಿಕ್ಕ ಪುಟ್ಟ ಮಿಂಚಿಕೆಗಳಲ್ಲಿಯೂ ದೊಡ್ಡ ಕವನಗಳಲ್ಲಿನಂತೆಯೇ ಪ್ರಬುದ್ಧತೆಯನ್ನು ತಂದು ಕೊಡುತ್ತವೆ. ಇಂದು ಬುದ್ಧಿಜೀವಿಗಳಿಂದಲೇ ಕನ್ನಡಕ್ಕಾಗುತ್ತಿರುವ ಅನ್ಯಾಯದ ಬಗೆಗೆ ಕುಂಬಾರನನ್ನು ಶಬ್ದರೂಪಕವಾಗಿ ಬಳಸಿಕೊಂಡು ಹೊಮ್ಮಿಸಿರುವ ಮಿಂಚು ಅರ್ಥಪೂರ್ಣವಾದುದು.

'ಸ್ವಂತ ಮನೆಯಲಿ ಸ್ಟೈಯಿನ್‌ಲೆಸ್ ಸ್ಟೀಲಿನ
ಪಾತ್ರೆಯ ಬಳಸುತ ಮನಸಾರ—
ಪರರಿಗೆ ಮಡಕೆಯ ಮಹಿಮೆಯ ದಿನವೂ
ಬೋಧಿಸುತಿರುವನು ಕುಂಬಾರ.'

(ಕನ್ನಡ ಮಾಧ್ಯಮ)

ಹಾಗೆಯೇ, ಕನ್ನಡದ ಇಂದಿನ ಸಂದಿಗ್ಧ ಸ್ಥಿತಿಯ ಬಗೆಗೆ:

'ವರ್ಷವಿಡೀ ಚಾಟಿಯ ಏಟಿನ, ದುಡಿತದ ಎತ್ತಿಗೆ
ಸಂಕ್ರಾಂತಿಯ ದಿನ ಅಹ! ಎಂತಹ ಸಿಂಗಾರ;
ಜ್ಞಾಪಿಸುವುದು ನನಗೀ ದೃಶ್ಯ, ನವೆಂಬರ್ ಒಂದರ
ಸರಕಾರದ ಸಿರಿಗನ್ನಡದುದ್ಧಾರ.'

(ನುಡಿ ಏಳಿಗೆ)

ಎಂದು ಹೇಳುತ್ತ ನವೆಂಬರ್ ಒಂದರ ಸಂಭ್ರಮದಂತೆ ನುಡಿಯ ಏಳಿಗೆಯ ಸಂಭ್ರಮವೂ ಅಷ್ಟೇ ಕ್ಷಣಿಕ ಎಂದು ಹೇಳುತ್ತಾ ನೊಂದುಕೊಳ್ಳುತ್ತಾರೆ. ಹೀಗಾಗಬಾರದೆನ್ನುವ ಅವರ ಮಾತು ಸತ್ಯವೇನೋ ನಿಜ. ಆದರೆ ರಾಜಕಾರಣಿಗಳ ಕೈಯಲ್ಲಿ ಸಿಕ್ಕು ಒದ್ದಾಡುವ ಕನ್ನಡ, ಅದರ ಹೆಸರಿನಿಂದ ದುರುಪಯೋಗ ಮಾಡಿಕೊಳ್ಳುವ ಇಂದಿನ ಕನ್ನಡ ಉದ್ಧಾರಕರ ದುರ್ಬುದ್ಧಿಗೆ ಹಿಡಿದ ಕನ್ನಡಿಯಂತಿದೆ ಇನ್ನೊಂದು ಮಿಂಚು—

'ತಾಯೇ
ನಾ ನಿನ್ನ ಕಾವಲು ನಾಯಿಯೇ,
ಕೊಡಿಸು ನಿನ್ನ ಸೇವೆಯ ಪ್ರವಾಸಕ್ಕೆ
ಫಸ್ಟ್ ಕ್ಲಾಸ್ ಟಿ.ಎ., ಡಿ.ಎ.'

(ಪ್ರಾರ್ಥನೆ)

ಇದು ಸಾಹಿತಿ ರಾಜಕಾರಣಿಗಳ ಬುದ್ಧಿಯಾದರೆ, ಸಾಹಿತ್ಯದ ವಿಮರ್ಶಕರೆಂದುಕೊಂಡವರ

ಸೋಗು ಮತ್ತೊಂದು ಕಡೆಗೆ ಹೇಗಿದೆ ನೋಡಿ—

'ಸುತ್ತಿಗೆ ಕೈಯಲ್ಲಿರುವವನಿಗೆ
ಸುತ್ತ ಎಲ್ಲೆಲ್ಲು ಕಾಣಸುತ್ತವೆ ಭರ್ಜರಿ ಮೊಳೆ;
ವಿಮರ್ಶೆ ಕೈಗೆತ್ತಿಕೊಂಡವನಿಗೆ
ಗೋಚರಿಸುತ್ತವೆ ಬರೀ ದೋಷಪೂರ್ಣ ಕೃತಿಗಳೇ.'

(ವಿಮರ್ಶಕ)

ಇಂಥವರು ಒಂದು ಕೃತಿಯಿಂದ ಒಳ್ಳೆಯದನ್ನು ಪರಿಚಯಿಸಿಕೊಡುವುದಕ್ಕಿಂತ ಹೆಚ್ಚಾಗಿ ತಾವು ಮಹಾನ್ ಬುದ್ಧಿವಂತರು ಎಂದು ತೋರಿಸಿಕೊಡುವುದಕ್ಕೋ ಏನೋ ದುರ್ಬಿನು ಹಾಕಿಕೊಂಡು ದೋಷವನ್ನೇ ಹುಡುಕುವ ಕೆಲಸ ಮಾಡುತ್ತಿರುತ್ತಾರೆ. (ತಮಗೆ ಬೇಕಾದವರಿದ್ದರೆ ಕೃತಿಯಲ್ಲಿ ಇಲ್ಲದ್ದನ್ನು ತಾವೇ ಹುಟ್ಟಿಸಿ ಅದಕ್ಕೆ ಬಣ್ಣ ಹಚ್ಚಿ ಮೆರೆಸುತ್ತಾರೆ.) ಅದರಿಂದ ಮಹಾ ಸಾಧನೆ ಮಾಡುತ್ತಿದ್ದೇವೆನ್ನುವುದು ಅವರ ಭ್ರಮೆ ಅಷ್ಟೆ. ನಿಜವಾಗಿಯೂ ಒಳ್ಳೆಯ ವಿಮರ್ಶಕರು ಬೇರೆ ಬೇರೆ ಭಾಷೆಗಳ ವಿಮರ್ಶಾ ಅಧ್ಯಯನದ ಗುಣ ಬೆಳೆಸಿಕೊಂಡು ಬರೆಯಬೇಕಾದ ಸಂದರ್ಭ ಬರಬೇಕಾಗಿದೆ. ಸುತ್ತಿಗೆ ಇದೆಯೆಂದು ಶಿಲ್ಪಿ ಕಲ್ಲನ್ನು ಹೇಗಾದರೂ ಬಳಸಿಕೊಳ್ಳಬಾರದು. ಇಂತಹ ವಿಮರ್ಶಕರಿಂದ ಸ್ವಲ್ಪವಾದರೂ ತಪ್ಪಿಸಿಕೊಳ್ಳಲು, ಲೇಖಕರು ತಮ್ಮ ಪುಸ್ತಕಕ್ಕೆ ರಕ್ಷಾ ತಾಯಿತವೆಂಬಂತೆ ಮುನ್ನುಡಿಯನ್ನು ಬರೆಸಿಕೊಳ್ಳುತ್ತಾರೆ. 'ಹೊಸಮನೆಗೆ ಬೆರ್ಚಪ್ಪನಂತೆ, ಪಿಶಾಚಿ ಪೀಡೆಯ ಪರಿಹಾರಕ್ಕೆ ತಾಯಿತದಂತೆ' ಎಂದು ವ್ಯಂಗ್ಯವಾಡುತ್ತಾರೆ ನಿಸಾರ್‌ರು.

ಇಂದಿನ ವಿದ್ಯಾರ್ಥಿಗಳಲ್ಲಿ ಅಧ್ಯಯನದ ಶಿಸ್ತು ಇಲ್ಲದಿರುವುದು, ಅದಕ್ಕಿಂತ ಹೆಚ್ಚಾಗಿ ಕೆಟ್ಟ ಹವ್ಯಾಸಗಳಿಗೆ ಬಲಿ ಬೀಳುತ್ತಿರುವುದು ನಿಸಾರ್ ಅವರಿಗೆ ಬಹಳ ಬೇಸರ ಬರಿಸುತ್ತದೆ ಆದ್ದರಿಂದಲೇ ಹೀಗೆ ಹೇಳಿದ್ದಾರೆ:

'ವಿದ್ಯಾರ್ಜನೆಗಿಂತ
ಮದ್ಯಾರ್ಜನೆ
ಅಧಿಕ ಯಶಸ್ವಿ ಈಗ—
ಕ್ಲಾಸ್‌ಮೆಟ್ಸ್‌ಗಳಿಗಿಂತ
ಗ್ಲಾಸ್‌ಮೆಟ್ಸ್‌ಗಳ ಸ್ನೇಹ
ವರ್ಧಿಸುತ್ತಿದೆ ಬೇಗ.'

(ಶಿಕ್ಷಣ)

ಹಾಗೆಯೇ, ಧರ್ಮಪೀಠಗಳಲ್ಲಿ ಕುಳಿತು ಸಮಾಜಕ್ಕೆ ಒಳಿತನ್ನು ಬಯಸಬೇಕಾದ ಪ್ರೀಸ್ಟ್, ಮಠೇಶ, ಮುಲ್ಲಾಗಳು ಇಂದು ಯಾವುದನ್ನೂ ಸರಿಯಾಗಿ ಪರಿಪಾಲಿಸದವರು, ಅವರೆಲ್ಲ ಕೇವಲ 'ಬುಕ್ ಬ್ರಿಂಜಾಲ್'ಗಳೇ (ಪುಸ್ತಕದ ಬದನೆಕಾಯಿಗಳು) ಎನ್ನುತ್ತ ಅವರ ಕರ್ತವ್ಯ ಶ್ರದ್ಧೆಗಳ ಬಗೆಗೆ ಬಹಿರಂಗವಾಗಿಯೇ ಎಚ್ಚರಿಕೆ ಕೊಡುತ್ತಾರೆ. ರಾಜಕೀಯದವರಿಗಂತೂ ಇಲ್ಲಿ ಚಾಟಿ ಏಟುಗಳಿವೆ. ರೈತರನ್ನು ಉದ್ಧಾರ ಮಾಡುತ್ತೇನೆ ಎನ್ನುತ್ತ ಮಣ್ಣಿನ ಮಗ 'ಪ್ರತಿ ನಿತ್ಯ ಕಾಂಟೆಸ, ವಿಮಾನ, ಹೆಲಿಕಾಪ್ಟರ್' ಹತ್ತಿ ಹೋಗುವುದನ್ನು ಸೆರೆ

ಹಿಡಿದಿದ್ದಾರೆ. ಅಷ್ಟೇ ಅಲ್ಲ, 'ಮಣ್ಣಿನ ಮಗ ಎಂದು ಮಹಾ ಜನತೆಗೆ ಮಾತಿನ ಮಂಡಿಗೆ ಮೇಯಿಸುತ್ತಿರುವ ಮುಖಂಡನ ಮಂಡೆಯಲ್ಲಿ ಮಣ್ಣಲ್ಲದೆ ಮತ್ತೇನಿದ್ದೀತು ಮಣ್ಣು!' ಎಂದು ವ್ಯಂಗ್ಯವಾಗಿ ಉದ್ಗರಿಸಿದರೂ ಸತ್ಯವಾದ ಮಾತನ್ನೇ ಹೇಳಿದ್ದಾರೆ. ಕರ್ನಾಟಕದ ಹೊರ ನಾಡುಗಳಿಂದ ಇಲ್ಲಿಗೆ ಬಂದು ನಮ್ಮ ನೆಲ, ಹಣ ದೋಚಿದ ಉದ್ದಿಮೆದಾರರ ಬಗೆಗೆ ನಿಸಾರ್ ಅವರು ಶಬ್ದಗಳೊಡನೆ ಆಟವಾಡುತ್ತ, ಅವರ ಆಟವನ್ನು ನಮಗೆ ತೋರಿಸುತ್ತ 'ಚಂಡಾಲ' ಎಂದು ಆಕ್ರೋಶ ವ್ಯಕ್ತಪಡಿಸಿದ ಒಂದು ಮಿಂಚು ನೋಡೋಣ—

'ವಾಣಿಜ್ಯೋದ್ಯಮಿ ಜಂಡಾಲ
ಹಾಕಿಹ ಭಾರಿ ಪೆಂಡಾಲ;
ತಿಂದ ಅನ್ನಾನ ಅರಗಿಸ್ತಾನೆ,
ಕೊಬ್ಬಿರೊ ಬೊಜ್ಜ ಸೊರಗಿಸ್ತಾನೆ,
ನೋಡೋರ್ನೆಲ್ಲ ಬೆರಗಿಸ್ತಾನೆ
ಬಡ ಕನ್ನಡಿಗರ ನೆಲ, ಹಣ ದೋಚಿ
ಹಿರಿ ಹಿರಿ ಹಿಗ್ಗಿಹ ಬಲೂನಿನಂತೆ
ಉತ್ತರ ರಾಜ್ಯದ ಚಂಡಾಲ.'

(ಕೊಳ್ಳೆ)

ಇತ್ತೀಚೆಗೆ ಬೆಂಗಳೂರಿಗೆ ನೆರೆ ರಾಜ್ಯಗಳಿಂದ ಉದ್ಯೋಗಾರ್ಥಿಗಳಾಗಿ ಬರುವವರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಕೇವಲ ಉದ್ಯೋಗಾರ್ಥಿಗಳಾದರೆ ಬೇರೆ ಮಾತು. ಆದರೆ ನಿಸಾರ್ ಅವರು ಹೇಳಿದಂತೆ ನೆಲ, ಹಣ ಕೊಳ್ಳೆ ಹೊಡೆಯುತ್ತ ಇಲ್ಲಿಯೇ ತಳ ಊರಿದರೆ ಮುಂದೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಎಲ್ಲರೂ ಯೋಚಿಸಲೇಬೇಕಾದಂತಹ ಪರಿಸ್ಥಿತಿ ಇದಾಗಿದೆ.

ನಿಸಾರರು ಬಹಳ ಆತ್ಮೀಯವಾಗಿ ನಮಗೆಲ್ಲ ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ. ಎಷ್ಟೇ ದೊಡ್ಡವರಿದ್ದರೂ ಜಂಬ ತೋರಿಸಿಕೊಳ್ಳಬೇಡಿ ಎನ್ನುತ್ತಾರೆ.

'ಬೀದಿಯಲ್ಲಿ ನೀವು ಹೋಗುತ್ತಿರುವಾಗ
ಯಾರಾದರು ನಮಸ್ಕರಿಸಿದರೆ,
ಪಕ್ಕದಲ್ಲಿ ದೇವಸ್ಥಾನ ಇದೆಯೇ ನೋಡಿ'

(ಗಮನಿಸಿ)

ಎನ್ನುತ್ತಾರೆ. ಹಾಗೆಯೇ ಭಿಕ್ಷುಕರು ಕೈಯೊಡ್ಡಿದರೆ—

'ಭಿಕ್ಷುಕನಿಗೆ
ಕಾಸೆಸೆಯದಿದ್ದರೂ ಚಿಂತೆಯಿಲ್ಲ
ಅವನೆದುರು
ಕಿಸೆಯಲ್ಲಿ ಕೈ ಹಾಕದಿರು'

(ಸಲಹೆ)

ಎನ್ನುವರು. ನೀವು ಕಾಸು ಕೊಟ್ಟೇ ಕೊಡುತ್ತೀರಿ ಎನ್ನುವ ಅವರ ಆಸೆಯ ಕಣ್ಣುಗಳಿಗೆ

ತಣ್ಣೀರನ್ನು ಎರಚಿ ಮನಸ್ಸನ್ನು ನೋಯಿಸಬೇಡಿ—ಎನ್ನುವ ಅರ್ಥಪೂರ್ಣವಾದ ಮಾತು, ಹೃದಯ ತಟ್ಟುವಂತಹ ಪುಟ್ಟ ಸಲಹೆ ಬಹಳಷ್ಟು ದಿವಸ ನೆನಪಿನಲ್ಲಿ ಉಳಿಯುತ್ತವೆ.

ಪ್ರೀತಿ, ಪ್ರಣಯದ ಬಗೆಯನ್ನು ನಿಸಾರರು ಅದೇಕೋ ಮಿಂಚಿಕೆಗಳಲ್ಲಿ ಬಳಸಿಕೊಂಡಿಲ್ಲ. ಹಾಗೆಯೇ ನಿಸರ್ಗದ ಬಗೆಗೆ ಒಂದು ಚುಟುಕ ಬಿಟ್ಟರೆ ಬೇರೆ ಎಲ್ಲಿಯೂ ಅದರ ಸಂದರ್ಭಗಳು ಕಾಣುವುದಿಲ್ಲ. ಬಹುಶಃ ಅವರು ತಮ್ಮ ನೀಳ್ಗವನಗಳಲ್ಲಿ ಸಾಕಷ್ಟು ಈ ವಿಷಯಗಳ ಪ್ರಯೋಗಗಳನ್ನು ಮಾಡಿರುವದರಿಂದಲೋ ಏನೋ ಇಲ್ಲಿ ಹೆಚ್ಚಾಗಿ ಏನೂ ಹೇಳಬಯಸಿಲ್ಲ. ನಿಸರ್ಗದ ಬಗೆಗಿನ ಮಿಂಚಿಕೆ ಒಂದೇ ಇದ್ದರೂ ಅದು ಎಷ್ಟೊಂದು ಹೊಳಪು ಕೊಡುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

‘ರವಿ
ಕೂತಿದ್ದಾನೆ
ಪಡುವಣದ ಅಂಗಡಿಯಲ್ಲಿ
ಸೀರೆಗಳ
ಹರವಿ.’

(ಅಸ್ತಮಾನ)

ಹೀಗೆ ನಿಸಾರರು ತಮ್ಮ ಅನೇಕ ಮಿಂಚಿಕೆಗಳಲ್ಲಿ ಗೇಯ-ಪ್ರಾಸಗಳನ್ನು ಬಳಸಿಕೊಳ್ಳುತ್ತ ಸಮಕಾಲೀನ ಸಂದರ್ಭದಲ್ಲಿ ಕಂಡು ಬರುವ ವಿಷಯ ವಸ್ತುಗಳನ್ನು ಸಮರ್ಪಕವಾಗಿ ಹಿಡಿದಿಟ್ಟಿದ್ದಾರೆ. ಅಲ್ಲಲ್ಲಿ ಕಂಡು ಬರುವ ಅವರ ಭಾಷಾಪ್ರಯೋಗಗಳು ಓದುಗರಿಗೆ ಹೊಸ ಅನುಭವವನ್ನು ಕೊಡುತ್ತವೆ. ಅವರು ಬಳಸುವ ಉರ್ದು ಪದಗಳಾದ ಬೇಕೂಫ, ಸಲಾಂ, ಮುಲ್ಲಾ, ಖಾಜಿ, ಚರ್ಬಿ, ಗರೀಬ, ಬೇಜವಾಬು, ಲಾಜವಾಬು ಮುಂತಾದ ಪದಗಳು ಸಂದರ್ಭಕ್ಕೆ ತಕ್ಕಂತೆ ಸಹಜವಾಗಿ ಅಭಿವ್ಯಕ್ತಿ ಪಡೆದಿವೆ.

—ಹೀಗೆ, ಕವಿಯ ಗಾಢವಾದ ಅನುಭವಗಳು ಅವರ ಮಿಂಚಿಕೆಗಳಲ್ಲಿ ಹೊಳೆದು ಓದುಗರಿಗೆ ಪರಿಣಾಮಕಾರಿಯಾದ ಸಂತೋಷವನ್ನು ಕೊಡುತ್ತವೆ.

ಪ್ರತಿಯೊಬ್ಬ ಕವಿಯೂ ಒಬ್ಬೊಬ್ಬ ಕ್ರಿಸ್ಟೋಫರ್ ಕೊಲಂಬಸ್. ಒಂದೊಂದು ವಿಶಿಷ್ಟ ಕವನ ರಚನೆಯೂ ಒಂದೊಂದು ದುರ್ಗಮವಾದ, ಸಾಹಸಮಯವಾದ ನೌಕಾಯಾನ: ಹೊಸ ನೆಲೆಯ ಅನ್ವೇಷಣ. ಆದರೆ ವ್ಯತ್ಯಾಸವಿಷ್ಟೆ: ಕೊಲಂಬಸನಿಗೆ ಪೂರ್ವಸಿದ್ಧವಾದ, ಘನವಾದ ಭೂಖಂಡವುಂಟು. ಕವಿಯ ತಡಕಾಟವೆಲ್ಲ ನಿರಾಕಾರತೆಯ ಮಬ್ಬುಮಬ್ಬಿನ ಮೊತ್ತದಲ್ಲಿ. ಆ ಅಮೂರ್ತತೆ ಅಸ್ತವ್ಯಸ್ತತೆಗಳಿಗೆ ಸ್ಫುಟತೆ ಹಾಗೂ ಸುವ್ಯವಸ್ಥೆಯನ್ನು ಮಾತು ತಂತ್ರಗಳ ಮುಖೇನ ಕವಿ ದಕ್ಕಿಸಬೇಕಾಗುತ್ತದೆ. ಹಾಗೆ ರೂಪುಗೊಂಡ ಕಲಾಲೋಕ, ವಾಸ್ತವ ಜಗತ್ತಿಗಿಂತ ಭಿನ್ನ. ಅತಿಶಯ, ಆತ್ಮೀಯ, ಸ್ವಾರಸ್ಯಕರ.

(ಸೃಷ್ಟಿಕ್ರಿಯೆ)



'ಬರೀ ಮರ್ಯಾದಸ್ಥರೆ': ನೆರುಡನನ್ನು ನಿಕಟವಾಗಿಸಿದ ನಿಸಾರ್

♦ ಡಾ. ಜಿ. ರಾಮಕೃಷ್ಣ

ಚಿಲಿಯ ಕವಿ ನೆರುದನನ್ನು ಕನ್ನಡ ಸಾಹಿತ್ಯ ಲೋಕಕ್ಕೆ ತಂದುಕೊಟ್ಟ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಅಭಿನಂದನ ಗ್ರಂಥಕ್ಕೆ ಲೇಖನವೊಂದನ್ನು ಬರೆಯುವ ಅವಕಾಶ ಸ್ವಾಗತಾರ್ಹವಾದದ್ದು. ಗ್ರಂಥವನ್ನು ಪ್ರಕಾಶಿಸುತ್ತಿರುವ ಸಂಸ್ಥೆಯೊಡನೆ ನನ್ನ ಸಂಪರ್ಕ ಇಲ್ಲವಾದರೂ ಲೇಖನ ಬರೆಯುತ್ತಿರುವುದು ನಿಸಾರರು ವಿಶಿಷ್ಟವಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆಂಬ ಕಾರಣಕ್ಕೆ ಮತ್ತು ಪಾಬ್ಲೊ ನೆರುದನನ್ನು ಮೊಟ್ಟಮೊದಲಿಗೆ ನಮ್ಮ ಭಾಷೆಗೆ ತಂದರೆಂಬ ಕೃತಜ್ಞತೆ—ಗೌರವಗಳಿಂದ. ನಿಸಾರರ ಅನಂತರ ನೆರುದನ ಕವನಗಳು ಹಲವರಿಂದ ಅನುವಾದಿತಗೊಂಡಿವೆ. ಆದರೆ ಆತನ ಆತ್ಮ ಕತೆಯಿಂದ ನಿಸಾರರು ಆಯ್ದ ಭಾಗಗಳನ್ನು ತಂದು ಕೊಟ್ಟಂತೆ ಬೇರೆ ಯಾರೂ ಮಾಡಿರುವುದು ನನಗೆ ತಿಳಿಯದು. ನೆರುದನ ವ್ಯಕ್ತಿತ್ವ ಅದೆಷ್ಟು ಗಾಢವಾಗಿ ಅಚ್ಚೊತ್ತುತ್ತದೆ ಎಂದರೆ ನಾನು ಸಹ ಅವನ ಎರಡು-ಮೂರು ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಧೈರ್ಯ ತಂದುಕೊಂಡಿದ್ದೆ. ನಿಸಾರ್ ಅಹಮದ್, ತೇಜಸ್ವಿನಿ ನಿರಂಜನ ಮತ್ತು ಕ. ವೆಂ. ರಾಜ ಗೋಪಾಲ ಅವರು ಬಹುಶಃ ನೆರುದನ ಅತ್ಯಧಿಕ ಕವನಗಳನ್ನು ಕನ್ನಡಕ್ಕೆ ತಂದಿರುವವರಲ್ಲಿ ಪ್ರಮುಖರು. ತೌಲನಿಕವಾಗಿ ಯಾವ ಅನುವಾದ ಬೇರೆಯವುಗಳಿಗಿಂತ ಉತ್ತಮವಾದುದೆಂದು ತೀರ್ಮಾನಿಸಲು ಆತುರ ಪಡುವುದಕ್ಕಿಂತ, ಇಷ್ಟೊಂದು ಮಂದಿ ಅನುವಾದಿಸಿದ್ದಾ

ರಲ್ಲ ಎಂಬುದು ಹೆಚ್ಚು ಸಮಾಧಾನಕರವಾದ ಅಂಶ.

ಸೆಪ್ಟೆಂಬರ್ ೧೧, ಎಂದರೆ ಈಚಿನ ದಿನಗಳಲ್ಲಿ ಒಂದು ನಿರ್ದಿಷ್ಟ ಕಾರಣಕ್ಕೆ ದುರಂತದ ಕರಾಳ ದಿನವೆಂದು ಗುರುತಿಸಲಾಗುತ್ತಿದೆ, ನ್ಯೂಯಾರ್ಕಿನ ಎರಡು ದೈತ್ಯ ಗೋಪುರಗಳನ್ನು ಉರುಳಿಸಿದ ಕಾರಣಕ್ಕಾಗಿ. ೧೯೭೩ರ ಅದೇ ದಿನದಂದು ಅಮೆರಿಕಾ ಸರ್ಕಾರ ಚಿಲಿಯಲ್ಲಿ ಅತ್ಯಂತ ಹೇಯ ಮತ್ತು ದುರುಳುತನದ ಕೆಲಸ ಮಾಡಿದ್ದುದು ಕಟ್ಟಡವನ್ನು ಉರುಳಿಸುವ ದುಷ್ಟತನಕ್ಕಿಂತಲೂ ಹೆಚ್ಚಿನದು. ಏಕೆಂದರೆ, ಚಿಲಿಯ ರಾಜಧಾನಿ ಸ್ಯಾಂಟಿಯಾಗೋದಲ್ಲಿ ಅಧ್ಯಕ್ಷರ ವಾಸ ಸ್ಥಾನ ಮತ್ತು ಕಚೇರಿಯನ್ನು ಬಾಂಬುಗಳ ದಾಳಿಯಿಂದ ಕೆಡವಲಾಗಿತ್ತು ಮತ್ತು ಅಧ್ಯಕ್ಷ ಡಾ. ಸಾಲ್ವಡೋರ್ ಅಲೆಂಡೆಯವರನ್ನು ಹತ್ಯೆ ಮಾಡಲಾಗಿತ್ತು. ಅದಾದ ಎರಡು ದಿನಗಳಲ್ಲಿ ಪಾಬ್ಲೊ ನೆರುದ ಒಂದು ಕವನವನ್ನು ಬರೆದು ನಿಕ್ಸನ್, ಫ್ರೈ, ಪಿನೋಶೆಗಳೆಂಬ ಮೂರು ಪಿಶಾಚಿಗಳನ್ನು ಶಪಿಸಿದ್ದ. (ಆ ಕವನವನ್ನು ನಾನು ಕನ್ನಡಕ್ಕೆ ಅನುವಾದಿಸಿದ್ದೆ.) ತನ್ನ 'ಸ್ಮೃತಿಚಿತ್ರ'ಗಳಲ್ಲಿ ನೆರುದ ಹಿಟ್ಲರನನ್ನು 'ಆ ಕಾಲದ ನಿಕ್ಸನ್' ಎಂದು ಕರೆದಿದ್ದಾನೆ (ಪು. ೪೪). ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಬಗ್ಗೆ ಸದಾ ಉಪದೇಶ ನೀಡುವ ಅಮೆರಿಕಾ ಸರ್ಕಾರದ ದೌರ್ಜನ್ಯಗಳಲ್ಲಿ ಅಲೆಂಡೆ ಹತ್ಯೆ ಚಾರಿತ್ರಿಕವಾಗಿ ಬಹಳ ಮಹತ್ವದ್ದು. ಬೇರೆ ರಾಷ್ಟ್ರಗಳ ಜನತೆಯ ಭಾವನೆಗಳಿಗೆ ಎಳ್ಳಷ್ಟೂ ಆದರವಿರದ ನಡತೆಯನ್ನು ಅಮೆರಿಕಾ ತನ್ನ ಲೂಟಿಯ ಕಾರಣಕ್ಕಾಗಿ ಬೆಳೆಸಿಕೊಳ್ಳುತ್ತದೆಂಬ ಅಂಶ ಅಂದು ಬಹಳ ಸ್ಪಷ್ಟವಾಗಿ ತೋರಿಬಂದಿತು. ಅದಕ್ಕೆ ಮುಂಚೆ ಮತ್ತು ಆಮೇಲೆ ಅಮೆರಿಕಾ ಇಂತಹ ಪಾತಕಗಳನ್ನು ನೂರಾರು ಬಾರಿ ಮಾಡಿದೆ. ಎರಡನೆಯದಾಗಿ, ಯಾವುದೇ ರಾಷ್ಟ್ರ ತನ್ನ ಸಂಪನ್ಮೂಲಗಳನ್ನು ರೂಢಿಸಿಕೊಂಡು ಅಭಿವೃದ್ಧಿಯ ಹಾದಿಯಲ್ಲಿ ತನ್ನದೇ ಆದ ರೀತಿಯಲ್ಲಿ ಮುನ್ನಡೆಯುವುದನ್ನು ಅಮೆರಿಕಾ ಸಹಿಸುವುದಿಲ್ಲವೆಂಬುದು ಕೂಡ ಆ ದುರ್ಘಟನೆಯಿಂದ ತಿಳಿಯಿತು. ಅಲೆಂಡೆ ಎಸಗಿದ್ದ ಅಪರಾಧವಾದರೂ ಏನು? ವಿಶ್ವದ ಅಭಿವೃದ್ಧಿ ಹೊಂದುವ ದೇಶಗಳೊಡನೆ ಸೇರಿ ಅಲಿಪ್ತ ನೀತಿಗೆ ಒತ್ತುಕೊಟ್ಟದ್ದು, ಕ್ಯೂಬ ಜೊತೆ ಸ್ನೇಹ ಬೆಳೆಸಿದ್ದು. ಇವೆರಡಕ್ಕಿಂತಲೂ ಮಹತ್ವದ ಇನ್ನೊಂದು ಕಾರಣವಿದೆ. ತಾನು ಹತ್ಯೆಗೊಳ್ಳುವ ಕೆಲವು ತಿಂಗಳುಗಳ ಮುನ್ನ ಅಲೆಂಡೆ ನ್ಯೂ ಯಾರ್ಕಿಗೆ ತೆರಳಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ವಿಶ್ವಶಾಂತಿಗೆ ಅಗತ್ಯವಾದ ಆಯಾಮಗಳನ್ನು ವಿಸ್ತಾರವಾಗಿ ಚರ್ಚಿಸಿದ್ದರು. ಅವರ ಪ್ರಸಿದ್ಧವಾದ ವಾಕ್ಯವೊಂದಿದೆ. ಅದು ಸಾರ್ವತ್ರಿಕವಾಗಿ ಎಲ್ಲ ರಾಷ್ಟ್ರಗಳಿಗೂ ಎಲ್ಲ ಕಾಲಗಳಲ್ಲೂ ಅನ್ವಯವಾಗುವಂಥದು: 'ಚಿಲಿಯ ಪ್ರಸ್ತುತ ಸನ್ನಿವೇಶದಲ್ಲಿ ಶಾಂತಿಯೆಂದರೆ ಚಿಲಿಯ ಜನತೆ, ತನ್ನ ಸಂಪತ್ತಾದ ತಾಮ್ರದ ಮೇಲೆ ಸ್ವಾಮ್ಯವನ್ನು ಹೊಂದಿರುವುದು.' ಆ ಅದ್ಭುತ ಸಂಪತ್ತನ್ನು ಅಮೆರಿಕಾಕ್ಕೆ ಪರಭಾರೆ ಮಾಡಲಾಗಿತ್ತು. ಶ್ರೀಮಂತ ರಾಷ್ಟ್ರವಾಗ ಬಹುದಾಗಿದ್ದ ಚಿಲಿಯಲ್ಲಿ ಜನ ನಿರ್ಗತಿಕರಾಗಿ ಜೀವಿಸುತ್ತಿದ್ದರು; ಸಂಪತ್ತನ್ನು ಸೂರೆ ಗೊಳ್ಳುವ ಅಮೆರಿಕಾ ಭೋಗದ ಹಿಮಾಲಯವನ್ನು ಏರಿತ್ತು. ಅಲೆಂಡೆ ಇದನ್ನು ಕೊನೆಗೊಳಿಸಲಿದ್ದ; ಆದ್ದರಿಂದ ಅಮೆರಿಕಾ ಅವನನ್ನು ಕೊನೆಗೊಳಿಸಿತು. ನಿಕ್ಸನ್ ಎಂಬ ಅಯೋಗ್ಯ ಅಧ್ಯಕ್ಷ, ಪಿನೋಶೆ ಎಂಬ ಫ್ಯಾಸಿಸ್ಟ್ ಸೈನ್ಯಾಧಿಪತಿಯನ್ನು ಅಧಿಕಾರಕ್ಕೆ ತಂದ. ಒಂದೇ ದಿನದಲ್ಲಿ ಸ್ಯಾಂಟಿಯಾಗೊ ನಗರದ

ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ಮಂದಿ ಅಲೆಂಡೆ ಪರವಾದ ಜನರನ್ನು ಬಂಧಿಸಿಡಲಾಯಿತು; ಮೂರು ಸಾವಿರಕ್ಕೂ ಹೆಚ್ಚು ಜನರನ್ನು ಕೊಲ್ಲಲಾಯಿತು. ಅಮೆರಿಕಾದ ಇಂತಹ 'ಮಾದರಿ ಪ್ರಜಾಪ್ರಭುತ್ವ'ವನ್ನು ಕಂಡು ಪಾಬ್ಲೊ ನೆರುದ ರೋಸಿಹೋದ, ಸಿಟ್ಟಿಗೆದ್ದ. ಎರಡು ವಾರದೊಳಗೆ ಅವನ ನಿಗೂಢ ಮರಣ ಸಂಭವಿಸಿತು. ಅಲೆಂಡೆಯ ಹತ್ಯೆಯ ಅನಂತರ ಚಿಲಿಯ ಜನ ತಮ್ಮ ಉದ್ವಿಗ್ನತೆಯನ್ನು ಪ್ರದರ್ಶಿಸಲು ನೆರುದನ ಶವ ಯಾತ್ರೆಯನ್ನು ಫ್ಯಾಸಿಸ್ಟ್ ಪ್ರಕ್ರಿಯೆಗೆ ವಿರೋಧವೆಂಬ ರೀತಿಯಲ್ಲಿ ನಡೆಸಿದರು. ಐದು ಲಕ್ಷಕ್ಕೂ ಹೆಚ್ಚು ಜನ ಪಾಬ್ಲೊ ನೆರುದನ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡು ಪಿನೋಶೆಯ ಮಿಲಿಟರಿ ಸರ್ಕಾರಕ್ಕೆ ಧಿಕ್ಕಾರ ಹೇಳಿದರು. ಎಷ್ಟೋ ವೇಳೆ ನೆರುದನ ತನ್ನ ಕಾವ್ಯ ವಾಚನ ಮಾಡುವ ಸಂದರ್ಭದಲ್ಲಿ ಲಕ್ಷಕ್ಕೂ ಹೆಚ್ಚು ಜನ ಸೇರುತ್ತಿದ್ದುದು ಅಪರೂಪವೇನಲ್ಲ. ನಿಸಾರ್ ಅವರು ಕನ್ನಡಕ್ಕೆ ತಂದುಕೊಟ್ಟಿರುವುದು ಅಂತಹ ಉದ್ದಾಮ ಸಾಹಿತಿಯ ಕೃತಿಗಳನ್ನು ಎಂಬುದನ್ನು ನೆನೆದರೆ ಅವರ ಸಾಹಿತ್ಯ ಕೃಷಿಯ ಸಾಮಾಜಿಕ ಮಹತ್ವವು ಅರಿವಿಗೆ ಬರುತ್ತದೆ.

ಪಾಬ್ಲೊ ನೆರುದನ ಸ್ಮೃತಿಚಿತ್ರಗಳು ಹಾರ್ಡಿ ಮಾರ್ಟಿನ್ನನ ಅನುವಾದದಲ್ಲಿ ಪ್ರಕಟವಾದದ್ದು ೧೯೭೭ರಲ್ಲಿ; ಬೆಂಗಳೂರಿನಲ್ಲಿ ನಾವು ಆ ಪುಸ್ತಕವನ್ನು ಪಡೆದುಕೊಂಡದ್ದು ೧೯೭೮ರಲ್ಲಿ. ಆದರೆ ೧೯೭೪ರ ವೇಳೆಗಾಗಲೇ ಪ್ರೊ. ನಿಸಾರ್ ಅಹಮದ್ ಅವರು ಮಾಸ್ಕೋದಿಂದ ಪ್ರಕಟವಾಗುತ್ತಿದ್ದ 'ನ್ಯೂ ಟೈಮ್ಸ್' ವಾರ ಪತ್ರಿಕೆಯಿಂದ ನೆರುದನ ಸ್ಮೃತಿಚಿತ್ರಗಳ ಒಂದು ಭಾಗವನ್ನು ಬೆಂಗಳೂರಿನ 'ಕೆಂಬಾವುಟ' ವಾರಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅನಂತರದ ವರ್ಷಗಳಲ್ಲಿ ನೆರುದನ ಕವನಗಳನ್ನು ಕನ್ನಡಕ್ಕೆ ತಂದ ನಿಸಾರರು ನೆರುದನನ್ನು ಪರಿಚಯಿಸಿದ ಆದ್ಯರೆನ್ನಲು ಅಡ್ಡಿಯಿಲ್ಲ. ನೆರುದನ ಸಾಮಾಜಿಕ ನಿಷ್ಠೆಯನ್ನು ಅವನ ಕವನಗಳಲ್ಲಿ ಮತ್ತು ಸ್ಮೃತಿಚಿತ್ರಗಳಲ್ಲಿ ಕಾಣಬಹುದು. ನಿಸಾರರು ಈ ಎರಡೂ ಪ್ರಕಾರಗಳಿಂದ ಆಯ್ದ ಭಾಗಗಳನ್ನು ನಮಗೆ ನೀಡಿದ್ದಾರೆ. ೧೯೭೮ರಲ್ಲಿ ಆಗಿನ್ನೂ ವಿದ್ಯಾರ್ಥಿ ದೆಸೆಯಿಂದ ಹೊರಬಂದಿದ್ದ ಶ್ರೀ ಎಸ್. ರಘುನಂದನ್ ಅವರು ನೆರುದನ ಸ್ಮೃತಿಚಿತ್ರಗಳ ಬಗ್ಗೆ ಸಂಕ್ಷಿಪ್ತವಾದ ಪರಿಚಯಾತ್ಮಕ ಟಿಪ್ಪಣಿಯೊಂದನ್ನು ಬರೆದಿದ್ದರು. ಅದರಿಂದ ನೆರುದನ ವ್ಯಾಪ್ತಿ, ಘನತೆ ಮತ್ತು ಕಾಳಜಿಗಳು ವ್ಯಕ್ತವಾಗುತ್ತವೆ. ಅವರ ಟಿಪ್ಪಣಿಯನ್ನು ಯಥಾವತ್ತಾಗಿ ನೀಡುವುದು ಅಪ್ರಸ್ತುತವಾಗಲಾರದೆಂದು ಭಾವಿಸಿ ಅದನ್ನಿಲ್ಲಿ ಉದ್ಧರಿಸಲಾಗಿದೆ:

'ಕಾವ್ಯವೆಂದರೆ ಒಂದು ವೃತ್ತಿ'
(ಪಾಬ್ಲೊ ನೆರೂದನ ಸ್ಮೃತಿಚಿತ್ರಗಳ ಪರಿಚಯ)

'ಆಧುನಿಕ ಬಂಡವಾಳಶಾಹಿ ಪ್ರಪಂಚದಲ್ಲಿ ಕವಿ ಹಾಗೂ ಕಾವ್ಯ ಜನತೆಯಿಂದ ದೂರವಾಗುತ್ತ 'ಕಾವ್ಯ' ಎಂಬುದು ಬುದ್ಧಿಜೀವಿಗಳಿಗೆ ಮಾತ್ರ ಮೀಸಲಾದದ್ದು ಎಂಬ ಭ್ರಮೆ ಇರುವಾಗ ಕವಿಗೂ 'ಸಾಮಾನ್ಯ' ಜನತೆಗೂ ನಡುವೆ ಕಾವ್ಯಸೇತುವೆಯನ್ನು ನಿರ್ಮಿಸಿ ಭದ್ರಪಡಿಸಿದ ಕೆಲವೇ ಕವಿಗಳಲ್ಲಿ ಚಿಲಿಯ ಮಹಾಕವಿ ಪಾಬ್ಲೊ ನೆರೂದ ಒಬ್ಬ.

'೧೯೭೩ರಲ್ಲಿ ಸಾಮ್ರಾಜ್ಯವಾಹಿ ಪ್ರಚೋದಿತ ಅಮಾನುಷ ಫ್ಯಾಸಿಸ್ಟ್ ಪ್ರತಿ

ಕ್ರಾಂತಿಯ ಫಲವಾಗಿ ಚಿಲಿಯನ್ ಜನತೆಯ ನೆಚ್ಚಿನ ನಾಯಕ, ಅಧ್ಯಕ್ಷ ಸಾಲ್ವದೋರ್ ಅಲೆಂಡೆ ಕೊಲೆಯಾಗಿ ಮೂರು ದಿನಗಳಾದರೂ ನೆರೂದ ತನ್ನ 'ಸ್ಮೃತಿಚಿತ್ರಗಳು'ಅಸ್ಖಲಿತ ಛಲದಿಂದ ಬರೆಯುತ್ತಲೇ ಇದ್ದು ಅದೇ ವರ್ಷದ ಸೆಪ್ಟೆಂಬರ್ ೨೩ರಂದು ತಾನೂ ಫ್ಯಾಸಿಸ್ಟ್ ಪಿತೂರಿಗೆ ಬಲಿ ಆದ. ನಮ್ಮ ಶತಮಾನದ ಅತಿ ಶ್ರೇಷ್ಠ ಕವಿಯ ಈ ಸ್ಮೃತಿ ಚಿತ್ರಗಳು ಬರಿಯ ಆತ್ಮಕಥೆಯಲ್ಲ, ಒಂದು ಮಹಾ ಗದ್ಯ ಕಾವ್ಯ.

'ನೆರುದ ಒಣ ಸಿದ್ಧಾಂತದ ಮೂಲಕ ಸಮತಾವಾದಿ ಆಗಲಿಲ್ಲ. ಜೀವನವನ್ನು ಪ್ರಾಮಾಣಿಕವಾಗಿ ಅನುಭವಿಸುತ್ತ, ವಿಶ್ಲೇಷಿಸುತ್ತ ಜನತೆಯ ಹೋರಾಟದಲ್ಲಿ ತನ್ನ ವ್ಯಕ್ತಿತ್ವವನ್ನು ಇಳಿಸಿದವನಾದ್ದರಿಂದ ಸಮತಾವಾದಿ ಆದ, ಸಮತಾವಾದೀ ಕವಿ ಆದ.

'ನೆರುದ ಹುಟ್ಟಿದ್ದು ದಕ್ಷಿಣ ಧ್ರುವಕ್ಕೆ ಹತ್ತಿರವಾದ ಶೀತಲ ವಲಯದ ದಟ್ಟ ಅಡವಿಗಳ ಮಧ್ಯದಲ್ಲಿನ ಟಿಮೂಕೋದಲ್ಲಿ. ನೆರೂದ ಕಾವ್ಯದಲ್ಲಿ ನಮಗೆ ಎಲ್ಲೆಲ್ಲೂ ಕಾಡು, ಕಡಲು, ನೀರು, ಮಳೆ ಮತ್ತು ನಿಸರ್ಗದ ನಿರಂತರ ಚಲನೆಯ ದರ್ಶನವಾಗುತ್ತದೆ. ಹೀಗೆಯೇ ಕಡಲಿನ ನೆನಪೂ ಇವನ ಕಾವ್ಯದ ತುಂಬಾ ಇದೆ.

'ತನ್ನ ೨೩ನೆಯ ವಯಸ್ಸಿಗೇ ರಾಯಭಾರಿ ಆಗಿ ನೇಮಕಗೊಂಡ ನೆರೂದ ಬರ್ಮ, ಶ್ರೀಲಂಕ, ಒಟಾವಿಯಾ, ಸ್ಪೆಯಿನ್ ಇತ್ಯಾದಿ ಕಡೆಗಳಲ್ಲಿ ಸೇವೆ ಸಲ್ಲಿಸಿದ. ೧೯೨೯ರಲ್ಲಿ ಕಲ್ಕತ್ತೆಗೆ ಭೇಟಿ ಕೊಟ್ಟ ನೆರೂದ ಬ್ರಿಟಿಷರ ವಿರುದ್ಧ ದನಿ ಎತ್ತಿದ್ದ: ನಮ್ಮ ದೇಶದ ವಂಗ ಕವಿಗಳ ಬಗೆಗೆ ಮನ ಮುಟ್ಟುವಂತೆ ಬರೆದಿದ್ದಾನೆ.

'ಇವನು ಪೌರ್ವಾತ್ಯ ದೇಶಗಳಲ್ಲಿನ ಬುದ್ಧಾರಾಧನೆ, ಅಫೀಮು ಸೇವನೆಗಳ ಬಗೆಗೆ ಬರೆಯಲಾಗಿರುವ ತೀವ್ರತೆ, ವೈಚಾರಿಕತೆ, ಕಾವ್ಯಮಯತೆ ಅದ್ವಿತೀಯವಾದುವು. ಇಂಥ ಅನೇಕ ಅನುಭವಗಳು ಅವನ ಅಂದಿನ ಮತ್ತು ಅನಂತರದ ಕವಿತೆಗಳಿಗೆ ಬೀಜಗಳಾದುವು

'ನೆರುದ ಸ್ಪೆಯಿನ್‌ಗೆ ಬರುವ ಮುಂಚೆಯೂ ಅವನ ಕಾವ್ಯದಲ್ಲಿ ಜ್ವಲಿಸುವ ತೀವ್ರತೆ, ಉತ್ತಮ ಸಂವೇದನಾಶೀಲತೆ ಇದ್ದರೂ ಅದು ಗೊತ್ತುಗುರಿಯಿಲ್ಲದ ಏಕಾಕಿಯೊಬ್ಬನ ವ್ಯಕ್ತಿಗತ ಅನ್ವೇಷಣೆ ಆಗಿತ್ತು. ಆದರೆ ೧೯೩೬ರಲ್ಲಿ ಸ್ಪೆಯಿನ್‌ನಲ್ಲಿ ನಡೆದ ಫ್ಯಾಸಿಸ್ಟ್ ಪಿತೂರಿ ಇವನ ಪ್ರಿಯ ಸಂಗಾತಿ, ಸ್ಪೆಯಿನಿನ ಶ್ರೇಷ್ಠ ಕವಿ, ಲೋರ್ಕನ ದಾರುಣ ಕೊಲೆ— ಇವುಗಳಿಂದಾಗಿ ನೆರುದನ ಕಾವ್ಯ ಮಾರ್ಗವೇ ಬದಲಾಯಿತು. ಇದರ ಫಲವೇ ಫ್ಯಾಸಿಸಂನ ವಿರುದ್ಧ ಗರ್ಜಿಸುವ ನೆರುದನ ಮೊದಲ 'ಸಾಮಾಜಿಕ ಕವಿತೆ'. ಆದರೆ ನೆರೂದ ತನ್ನ ೩೬ರ ಪೂರ್ವ ಕಾವ್ಯವನ್ನು ಎಂದೂ ತಿರಸ್ಕರಿಸಲಿಲ್ಲ. ಏಕಾಕಿತನ-ಸಾಮಾಜಿಕ ಜೀವನ, ಸುಖ-ದುಃಖ, ವಿಷಾದ-ವಿನೋದ ಇವು ಮನುಷ್ಯನ ಅನುಭವದಲ್ಲಿನ ಅವಿಭಾಜ್ಯ ಅಂಗ ಗಳೆಂಬುದನ್ನು ಅವನು ಚೆನ್ನಾಗಿ ಅರಿತಿದ್ದ. ಕವಿ ಜೀವನದ ಎಲ್ಲ ಮುಖಗಳನ್ನೂ ಚಿತ್ರಿಸ ಬೇಕೆಂಬುದನ್ನು ಅವನು ಚೆನ್ನಾಗಿ ಅರಿತಿದ್ದ. ಕವಿ ಜೀವನದ ಎಲ್ಲ ಮುಖಗಳನ್ನೂ ಚಿತ್ರಿಸಬೇಕೆಂದು ನಂಬಿದ್ದ. 'ಸೃಷ್ಟಿಯ ಸೇಬಿನ ಹಣ್ಣನ್ನು ಎರಡು ಭಾಗ ಮಾಡಿ, ಪ್ರತ್ಯೇಕಿಸೀರಿ, ಜೋಕೆ. ನಮ್ಮ ಹೃದಯಗಳನ್ನು ಕೊಯ್ದು ಸಾಯುವುದು ಬೇಡ. ಕವಿಯು ಬೀದಿಗೆ, ಹೋರಾಟಕ್ಕೆ ಇಳಿಯಬೇಕೆನ್ನುವುದರ ಜತೆಗೆ, ಕತ್ತಲೆಯಲ್ಲಿ ಬೆಳಕಿನಲ್ಲಿ ಸಹ

ನಮ್ಮ ಕೂಡ ಬಾಳಬೇಕೆಂದು ನಾವು ಆಗ್ರಹಿಸಬೇಕು' ಎಂದು ಹೇಳಿದ.

'೧೯೩೬ರ ಅನಂತರ ನೆರೂದ ದುಡಿಯುವ ವರ್ಗದ ವಾಣಿ ಆಗಿ ಲೇಖಕರನ್ನು ಕಲಾವಿದರನ್ನು ಶೋಷಕರ ವಿರುದ್ಧ ಸಂಘಟಿಸುತ್ತಾ, ಜನತೆಯಲ್ಲಿ ತನ್ನ ಕಾವ್ಯವಾಣಿಯನ್ನು ಹರಡುತ್ತಾ ಬಂದ. ತನ್ನ ಕಾವ್ಯವು 'ಜನರ ಖಡ್ಗವಾಗಬೇಕು, ಅವರ ಅಗಾಧ ದುಃಖದ ಬೆವರನ್ನೊರೆಸುವ ಕರವಸ್ತ್ರವಾಗಬೇಕು, ಅವರ ಹೊಟ್ಟೆಪಾಡಿನ ಹೋರಾಟಕ್ಕೆ ನೆರವಾಗುವ ಅಸ್ತ್ರವಾಗಬೇಕು' ಎಂದು ಬಯಸಿದ; ತನ್ನ ಕವಿತೆಗಳನ್ನು ಲಕ್ಷಾಂತರ ಜನರ ಮುಂದೆ ವಾಚಿಸಿದ. ಒಮ್ಮೆ ಸ್ಯಾಂಟಿಯಾಗೋದ ಲೇಗಾ ಎಂಬ ಮಾರುಕಟ್ಟೆಯ ಕೂಲಿಕಾರ ಜನ ನೆರೂದನನ್ನು ಕರೆಯಿಸಿ, ಅವನ ಕಾವ್ಯವನ್ನು ಅವನ ಬಾಯಿಂದಲೇ ಕೇಳಿದರು. ಮಾನ ಮುಚ್ಚಿಕೊಳ್ಳಲು ಗೋಣಿಬಟ್ಟೆ ಬಳಸುವ ಈ ಜನ ಕಾವ್ಯ ವಾಚನವನ್ನು ಶ್ರದ್ಧೆಯಿಂದ ಕೇಳಿದರು, ಅನುಭವಿಸಿ ಅತ್ತರು. ಮತ್ತೊಮ್ಮೆ ಬ್ರಾಜಿಲ್‌ನಲ್ಲಿ ನೆರುದನ ಕಾವ್ಯವಾಚನವನ್ನು ೧,೩೦,೦೦೦ ಜನ ಒಟ್ಟಿಗೇ ಕೂಡಿ ಕೇಳಿದರಂತೆ. 'ಇಂಥ ಅನುಭವ ಪಡೆದುಕೊಂಡ ಕವಿ ಬದಲಾಗದೇ ಉಳಿಯುವುದು ಸಾಧ್ಯವೇ?' ಎಂದು ನೆರೂದ ಕೇಳುತ್ತಾನೆ.

'ಸಾಮ್ರಾಜ್ಯಶಾಹಿ ಹಾಗೂ ಗುತ್ತೇದಾರಿ ಮಾಲಿಕರ ಕೆಳಗೆ ನರಳುತ್ತಿದ್ದ ಚಿಲಿಯ ಉತ್ತರ ಭಾಗದ ಗಣಿ ಕಾರ್ಮಿಕರು ತಮ್ಮ ಕವಿಯನ್ನು ೧೯೪೫ ಮಾರ್ಚ್ ೪ರಂದು ಸೆನೇಟಿಗೆ ಚುನಾಯಿಸಿದರು. ಜನತಾ ಕವಿ ಚುನಾಯಿತ ಹೋರಾಟಗಾರನೂ ಆದ. ಅದೇ ವರ್ಷದ ಜುಲೈ ೧೫ರಂದು ನೆರೂದ ಚಿಲಿಯ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ.

'೧೯೪೮ರ ಚಿಲಿಯ ಪ್ರತಿಗಾಮೀ ಸರಕಾರ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಿದುದರಿಂದ ನೆರೂದ ಭೂಗತವಾಗಿ, ಗಡೀಪಾರಾದ. ಸೋವಿಯತ್ ಒಕ್ಕೂಟ, ಚೀನಾ, ಯುರೋಪ್‌ಗಳಲ್ಲಿ ನಾಲ್ಕು ವರ್ಷ ಕಳೆದ ತನ್ನ 'ಸಾರ್ವತ್ರಿಕ ಹಾಡು' ಎಂಬ ಮಹಾ ಕಾವ್ಯವನ್ನು ಬರೆದು ಮುಗಿಸಿದ. ಇದರಲ್ಲಿ ಸಾಮ್ರಾಜ್ಯಶಾಹಿಯ, ಶೋಷಣೆಯ ಟೀಕೆ ಅಲ್ಲದೆ, ಪ್ರಾಚೀನ ಕಾಲದಿಂದಲೂ ಮನುಷ್ಯನು ನಿಸರ್ಗದ ವಿರುದ್ಧ ನಡೆಸುತ್ತ ಬಂದಿರುವ ಹೋರಾಟದ ಚಿತ್ರಣವಿದೆ. ಮನುಷ್ಯ-ಮನುಷ್ಯರ ನಡುವಣ ಮಾನವೀಯ ಸಂಬಂಧ ಏರ್ಪಡಿಸುವ ಕನಸಿದೆ.

'ನೆರೂದ ಕಾವ್ಯಕ್ಕೆ ಯಾವುದೂ ಹೊರತಲ್ಲ. ಚಿಲಿಯ ಪಕ್ಷಿಗಳನ್ನು ಕುರಿತು, ಕಲ್ಲು-ಬಂಡೆಗಳನ್ನು ಕುರಿತು, ಗಿಡ ಮರಗಳನ್ನು ಕುರಿತು ಹಾಗೂ ಸಾಮಾನ್ಯವಾಗಿ ಕವಿಗಳ ಗಮನಕ್ಕೇ ಬರದಂಥ ವಸ್ತುಗಳಾದ ಉಡುಪು, ತರಕಾರಿ, ಎಣ್ಣೆ, ಗಡಿಯಾರ ಇತ್ಯಾದಿಗಳನ್ನು ಕುರಿತು ಉಜ್ವಲ ಕವಿತೆಗಳ ಪ್ರತ್ಯೇಕ ಸಂಕಲನಗಳನ್ನು ಹೊರಡಿಸಿದ. ಇವು ಬರೀ ವರ್ಣನಾತ್ಮಕ ಕವಿತೆಗಳೂ ಅಲ್ಲ. ನೆರೂದನಿಗೆ ಎಲ್ಲವೂ ಗಾಢ ಯೋಚನೆಯ ವಸ್ತುಗಳಾಗಿದ್ದವು.

' 'ಸ್ಮೃತಿ ಚಿತ್ರಗಳಲ್ಲಿ' ಈ ಶತಮಾನದ ಅನೇಕ ಉತ್ತಮ ಕವಿಗಳು, ಕಲಾವಿದರು, ರಾಜಕಾರಣಿಗಳು, ಜನ ನಾಯಕರು ಸುಳಿದುಹೋಗುತ್ತಾರೆ. ಗಾರ್ಸಿಯ ಲೋರ್ಕ, ಕುರುಬ-ಕವಿ-ಸೈನಿಕ ಮಿಗ್ಯುಯಲ್ ಹರ್ನಾಂಡೆಜ್, ರಾಫೆಲ್ ಆಲ್ಬರ್ಟಿನ, ಸೀಸರ್ ವಾಲ್ಲಜೂ,

ವಿಸೆಂಟ್ ಹುಯಿಡೂಬ್ರೊ, ಅರಗನ್, ಎಲು ಅರ್ಡ್, ಇಲ್ಯಾ ಎಹರನ್‌ಬರ್ಗ್, ನಜೀಮ್ ಹಿಕ್ಮೆತ್‌ರಂಥ ಜಗದ್ವಿಖ್ಯಾತ ಕವಿಗಳ ವ್ಯಕ್ತಿ ಚಿತ್ರಗಳನ್ನು ಈ ಕವಿ ಅಗಾಧ ಪ್ರೀತಿಯಿಂದ ಬರೆದಿದ್ದಾನೆ. ಗಾಂಧಿ, ನೆಹ್ರೂ, ಮಾವೊ, ಸ್ಟಾಲಿನ್, ಚೇ ಗೆವಾರಾ, ಕ್ಯಾಸ್ಟ್ರೊ ಮುಂತಾದ ಶ್ರೇಷ್ಠ ನಾಯಕರ ಚಿತ್ರಗಳೂ ಸಹ ಸಹಾನುಭೂತಿಯಿಂದ, ವಸ್ತುನಿಷ್ಠೆಯಿಂದ ಮೂಡಿ ಬಂದಿವೆ.

'ಗೆರಿಲ್ಲಾ ಯುದ್ಧ ನಡೆಸುವಾಗಲೂ ಸಹ ನೆರೂದ ಕವನ ಸಂಕಲನವೊಂದನ್ನು ತನ್ನ ಚೀಲದಲ್ಲಿ ಇಟ್ಟುಕೊಂಡು ರಾತ್ರಿ ಹೊತ್ತು ಬಿಡಾರದ ಜ್ವಾಲೆಯ ಪಕ್ಕದಲ್ಲಿ ಅವನ ಕಾವ್ಯವನ್ನು ನನ್ನ ಸಂಗಾತಿಗಳಿಗೆ ಓದುತ್ತಿದ್ದನಂತೆ—ಚೇ ಗೆವಾರಾನಂತೆ.

'ನೆರೂದ ಉತ್ತಮ 'ರಾಜಕೀಯ' ಕವಿಯಾಗಿದ್ದ. ಅಂದಮಾತ್ರಕ್ಕೆ ಗಂಟು ಮುಖದ ಸನ್ಯಾಸಿ ಆಗಿದ್ದ ಎಂದಲ್ಲ. ಇವನಿಗೆ ದ್ರಾಕ್ಷಾರಸ ಅಂದರೆ ಪಂಚ ಪ್ರಾಣ. ಇವನ ಪ್ರಣಯ ಸಂವೇದನೆ, ಇವನು ಹೆಣ್ಣಿನ ವಿಷಯದಲ್ಲಿ ಅನುಭವಿಸಿದ ಸುಖ-ದುಃಖ ಅತ್ಯಂತ ತೀವ್ರವಾಗಿ ಗಾಢವಾಗಿ ಸ್ಮೃತಿಚಿತ್ರಗಳಲ್ಲಿ ಮೂಡಿಬಂದಿವೆ.

'ಸಮತಾವಾದಕ್ಕೆ ನಿಷ್ಠಾವಂತರಾಗಿ ಉಳಿಯುವ ವಿಷಯದಲ್ಲಿ ಸಾಹಿತಿಗಳಷ್ಟು ಚಂಚಲತೆ ತೋರುವವರು ಬೇರೆ ಇಲ್ಲ. ಸ್ಟಾಲಿನ್ ಯುಗದ ವಿಪರೀತಗಳನ್ನು ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ೨೦ನೆಯ ಅಧಿವೇಶನವು ಬಯಲುಮಾಡಿ ಅದರ ಕಾರಣಗಳನ್ನು ವಿಶ್ಲೇಷಿಸಿ, ಆ ವಿಪರೀತಗಳನ್ನು ಖಂಡಿಸಿದಾಗ್ಯೂ ಅನೇಕರು ಸಮತಾವಾದದಿಂದ ದೂರ ವಾದರು. ನೆರೂದ ಹೇಳುತ್ತಾನೆ: 'ಮತ್ತೆ ಕೆಲವರು ೨೦ನೆಯ ಅಧಿವೇಶನದಲ್ಲಿ ನಡೆದ ಆ ದಾರುಣ ಸತ್ಯಗಳ ಬಯಲಿಗೆಳೆಯುವಿಕೆ ಒಂದು ಕಮ್ಯುನಿಸ್ಟ್ ಪಕ್ಷದ ಪ್ರಾಮಾಣಿಕತೆಯ ಕುರುಹು ಎಂದೂ ಜಗತ್ತಿಗೆ ಚಾರಿತ್ರಿಕ ಸತ್ಯವನ್ನು ತೋರ್ಪಡಿಸಿ ತನ್ನ ಹೊಣೆಯನ್ನು ಅಂಗೀಕರಿಸುವ ದಿಟ್ಟತನವೆಂದೂ ನಂಬಿದರು.' ಇಂಥ ನಿಷ್ಠಾವಂತ ಸಮತಾವಾದಿಗಳಲ್ಲಿ ನೆರೂದ ಒಬ್ಬನಾಗಿದ್ದ

'ಮನುಷ್ಯನನ್ನು ಪ್ರೀತಿಸಿದ ನೆರೂದ ಈ ಜಗತ್ತಿನ ನಿತ್ಯ ಜೀವನದಲ್ಲಿ ಭಾಗವಹಿಸಿದ್ದರ ಫಲವೇ ಈ ಸ್ಮೃತಿಚಿತ್ರಗಳಲ್ಲಿ ಬರುವ ಪ್ರಕೃತಿಯ, ಮನುಷ್ಯರ, ವಸ್ತುಗಳ, ನಗರಗಳ, ದೇಶಗಳ, ಹವೆಯ ಉಜ್ವಲ ವಿವರಣೆ, ವರ್ಣನೆ. 'ಕಾವ್ಯ ಎಂದರೊಂದು ವೃತ್ತಿ' ಎಂಬ ಅಧ್ಯಾಯವಂತೂ ಕವಿಗಳಿಗೊಂದು ಕೈಪಿಡಿಯೇ ಸರಿ. ಕಾವ್ಯ-ಕವಿಗಳ ಬಗೆಗೆ ಅಂಥ ಮೋಹಕವಾದ, ಆಳವಾದ ವಿಚಾರ ಸರಣಿ ಇಲ್ಲಿದೆ.

'ಚುನಾವಣೆಗಳಲ್ಲಿ, ಕ್ರೀಡಾಂಗಣಗಳಲ್ಲಿ, ಗುಡಿಸಲು ಕೊಂಪೆಗಳಲ್ಲಿ, ಬೀದಿಗಳಲ್ಲಿ ಎಲ್ಲೆಲ್ಲೂ ಕಾವ್ಯ ವಾಚಿಸುತ್ತಾ ಶೋಷಣೆಯ ವಿರುದ್ಧ ಹೋರಾಡಿದ ಈ ಕವಿ, ಹೋರಾಟ ವೆಂದರೇನು? ಸಮರಶೀಲ ಕಾವ್ಯವೆಂದರೇನು ಎಂದು ಚೆನ್ನಾಗಿ ಅರಿತಿದ್ದ. 'ಕಾವ್ಯ ಬರೆಯು ವುದು ಶಾಂತಿ ಸಾರುವ ಕ್ರಿಯೆ, ರೊಟ್ಟಿಯಲ್ಲಿ ಹಿಟ್ಟಿರುವಂತೆ ಕವಿಯಲ್ಲಿ ವಿಶ್ವಶಾಂತಿಗಾಗಿ ಹಂಬಲವಿರುತ್ತದೆ... ನನ್ನ ಪಾಲಿಗೆ ಹೋರಾಟವೆಂದರೆ ಎಲ್ಲ ಹೋರಾಟವನ್ನು ಕೊನೆಗೊಳಿಸುವ ಸಾಧನ' ಎನ್ನುತ್ತಾನೆ.

'ಈ ಕವಿ, ಜೀವನದ ಬಗೆಗೆ ಶ್ರದ್ಧೆ ತೋರುವುದು ಮಾತ್ರವಲ್ಲ, ಜೀವನವನ್ನು ಪ್ರೀತಿಸಿದ್ದ, ಇಂಥವನ ನೆನಪು ಜನ ಜೀವನದಲ್ಲಿ ಸದಾ ಉಳಿಯುತ್ತದೆ.'

ಕವಿ ನಿಸಾರರು ಪರಿಚಯಿಸಿರುವ ಕವಿ ನೆರುದ ಇಂತಹ ಅಮೋಘ ಚಾರಿತ್ರ್ಯದವನು. 'ದಿ ಹೈಟ್ಸ್ ಆಫ್ ಮಚ್ಚುಪಿಚ್ಚು' ಬರೆದಂತಹ ಕವಿಯನ್ನು ಕನ್ನಡಕ್ಕೆ ತಂದುಕೊಟ್ಟ ನಿಸಾರರು ಅಭಿನಂದನೀಯರು, ವಂದ್ಯರು. ತನ್ನ ಮೊದಲ ಕೃತಿ 'ಕ್ರೆಪುಸುಲಾಲಿಯೊ' ೧೯೨೩ರಲ್ಲಿ ಪ್ರಕಟವಾದುದನ್ನು ಕುರಿತು ನೆರುದ ಹೇಳುವುದು ಇದು: 'ಲೇಖಕನ ಕೆಲಸ ಇರುವುದು ನಿಗೂಢತೆ—ಮಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಅಲ್ಲವೆಂಬುದು ನನ್ನ ಯಾವತ್ತಿನ ತಿಳಿವಳಿಕೆ. ಕವಿಯ ಕೆಲಸವಂತೂ ಎಲ್ಲ ಜನರಿಗೂ ಉಪಯುಕ್ತವಾಗುವಂತಹ ದಿಸೆಯಲ್ಲಿ ವೈಯಕ್ತಿಕ ಕ್ರಿಯೆಯಾಗಿರುತ್ತದೆ. ಕಾವ್ಯಕ್ಕೆ ಅತಿ ಸನಿಹದ್ದೆಂದರೆ ಒಂದು ರೊಟ್ಟಿಯ ತುಣುಕು ಒಂದು ಪಿಂಗಾಣಿ ಪಾತ್ರೆ, ಚೆನ್ನಾಗಿ ಕೆತ್ತಲಾದ ಒಂದು ಮರದ ತುಂಡು.' ಇದು ನೆರುದನ ಸಾಮಾಜಿಕ ಒಲವುಗಳ ಸೂಚಕವಾಗಿದೆ. ಭಾರತದ ಜಾತಿ ಪದ್ಧತಿಯನ್ನು ಕುರಿತ ಈ ಮಾತು ನೋಡಿ: 'ಜಾತಿ ಪದ್ಧತಿಯು ಭಾರತದ ಜನರನ್ನು ಹೇಗೆ ವ್ಯವಸ್ಥಿತಗೊಳಿಸುತ್ತದೆ ಗೊತ್ತೆ? ಒಂದು ಬಹಿರಂಗ ರಂಗಭೂಮಿ, ಅಲ್ಲಿ ಸಮಾನಾಂತರವಾದ ಗ್ಯಾಲರಿಗಳು—ಪ್ರೇಕ್ಷಕರು ಕೂಡಲು. ಒಬ್ಬರಿಗಿಂತ ಇನ್ನೊಬ್ಬರು ಎತ್ತರದ ಆಯಕಟ್ಟಿನಲ್ಲಿ. ತುತ್ತತುದಿಯಲ್ಲಿ ದೇವರುಗಳು ಕೂತಿರುತ್ತಾರೆ.' ೧೯೩೬ರ ಸ್ಪೆಯ್ನಿನ ಅಂತರ್ಯುದ್ಧದ ಸಮಯದಲ್ಲಿ ನೆರುದ ಬರೆದ: 'ಸ್ಪೆಯ್ನಿನ ಗಿಟಾರುಗಳನ್ನು ಬಂದೂಕದ ಗುಂಡುಗಳು ನುಚ್ಚುನೂರು ಮಾಡಿದವು. ಸಂಗೀತದ ಬದಲು ಅಲ್ಲಿ ರಕ್ತ ಹೊರಚೆಲ್ಲಿತು. ಮಾನವನ ವೇದನೆಯ ರಸ್ತೆಗಳಲ್ಲಿ ತನ್ನ ಕಾವ್ಯವು ಸತ್ತ ದೆವ್ವದಂತೆ ಸ್ತಂಭೀಭೂತವಾಯಿತು... ಆಗಿನಿಂದಲೂ ನನ್ನ ಕಾವ್ಯವು ಪ್ರತಿಯೊಬ್ಬರ ರಸ್ತೆಯೊಡನೆಯೂ ಕೂಡಿಕೊಳ್ಳುತ್ತಾ ಸಾಗಿದೆ.' ಇದನ್ನೇ ಇನ್ನೊಂದೆಡೆ (ಪು. ೧೯೮) ನೆರುದ ಒಂದು ರೂಪಕದೊಡನೆ ನಿರೂಪಿಸಿದ್ದಾನೆ: 'ಒಬ್ಬ ಲೇಖಕನ ಕೆಲಸವು ಆರ್ಕ್‌ಟಿಕ್ ಪ್ರದೇಶದ ಮೀನು ಹಿಡಿಯುವವನ ಕೆಲಸದ ತೆರನಾದದ್ದು. ಲೇಖಕನು ಮೊದಲಿಗೆ ನದಿಯನ್ನು ಗುರುತಿಸಿಕೊಳ್ಳಬೇಕು; ಅದು ಹಿಮಗಡ್ಡೆಯಾಗಿ ಪರಿವರ್ತನೆ ಹೊಂದಿದರೆ ಅವನು ಅದರಲ್ಲಿ ರಂಧ್ರವನ್ನು ಕೊರೆಯಬೇಕು. ಅದಕ್ಕೆ ಅಪಾರ ಸಹನೆ ಅಗತ್ಯ: ಆ ಹವಾಮಾನ, ಆ ಹಿಮವನ್ನು ಸಹಿಸಿ, ಎಲ್ಲ ಟೀಕೆ-ಔದಾಸೀನ್ಯಗಳನ್ನೂ ಬದಿಗೊತ್ತಿ, ಆಳವಾದ ನೀರಿನ ತಾಣವನ್ನು ಅರಸಬೇಕು. ಸರಿಯಾದ ಗಾಳವನ್ನು ಹಾಕಿ ಎಲ್ಲೋ ಒಮ್ಮೆ ಒಂದು ಚಿಕ್ಕ ಮೀನನ್ನು ಹಿಡಿಯುವ ಆಶಯ ಹೊಂದಬೇಕು.' ನೆರುದನ ಸದಾಶಯ ನಮ್ಮೆಲ್ಲರದೂ ಆಗುವಂಥದು: 'ನಾನು ಬದುಕಲೆಳಸುವ ಪ್ರದಪಂಚದಲ್ಲಿ ಜೀವಿಗಳೆಲ್ಲಾ ಕೇವಲ ಮಾನವರು; ಅವರಿಗೆ ಅದಕ್ಕಿಂತಲೂ ಬೇರೆಯಾದ ಬಿರುದುಗಳಿಲ್ಲ; ಅವರ ತಲೆಗಳಲ್ಲಿ ಆಳ್ವಿಕೆ, ಶಾಸನ, ಹಣೆಪಟ್ಟಿ ಎಂಬ ಕಲ್ಪನೆಗಳಿರುವುದಿಲ್ಲ (ಪು. ೨೨೭). ಕವಿಗೆ ಸಹಜವಾದ ಸುಖವೆಂದರೆ ತನ್ನ ದೇಶದ ಜನಗಳೊಂದಿಗಿರುವುದು, ಅವರ ಹೋರಾಟಗಳಲ್ಲಿ ಭಾಗಿಯಾಗುವುದು ಮತ್ತು ಅವರ ಸುಖಕ್ಕಾಗಿ ಕಾದಾಡುವುದು' ಎನ್ನುತ್ತಾನೆ ನೆರುದ (ಪು. ೨೬೩).

ಈ ಎಲ್ಲ ಆಶಯ-ತವಕಗಳನ್ನೂ ಪ್ರೊ. ನಿಸಾರ್ ಅಹಮದ್ ಅವರು ತಮ್ಮ

ಪಾಬ್ಲೋ ನೆರುಡನ 'ಬರೀ ಮರ್ಯಾದಸ್ಥರೆ' ಎಂಬ ಅನುವಾದಿತ ಕೃತಿಯಲ್ಲಿ (ವಸಂತ ಪ್ರಕಾಶನ, ಬೆಂಗಳೂರು, ಎರಡನೆಯ ಮುದ್ರಣ : ೨೦೦೪) ಪ್ರತಿಫಲಿಸಲು ಸಮರ್ಥರಾಗಿದ್ದಾರೆ. ನಮ್ಮ ದೇಶದ ಪ್ರಸಕ್ತ ಪರಿಸ್ಥಿತಿಯಲ್ಲಿ ನೆರುದನ ಸಾಮಾಜಿಕ ಮತ್ತು ಆರ್ಥಿಕ ತುಡಿತಗಳು ಮಹತ್ತರವಾದ ಆಕಾಂಕ್ಷೆಗಳಿಗೆ ನಮ್ಮನ್ನು ಪ್ರೇರಿಸಬಹುದು, ಪ್ರೇರಿಸಬೇಕು. ನವ ವಸಾಹತುಶಾಹಿಯ ಹಿಡಿತವು ನಮ್ಮ ಆರ್ಥಿಕ-ಸಾಂಸ್ಕೃತಿಕ ಜಗತ್ತನ್ನು ಹಿಂಡಿ ಹಿಪ್ಪೆ ಮಾಡುತ್ತಿರುವಾಗ ನೆರುದನ 'ಯುನೈಟೆಡ್ ಫ್ರೂಟ್ ಕಂಪನಿ'ಯಂಥ ಕವನವು ಹಲವು ನೆಲೆಗಳಲ್ಲಿ ಅರ್ಥಗರ್ಭಿತವಾಗುತ್ತದೆ. (ಇನ್ನು ಮುಂದೆ ಉದ್ಧರಿಸಲಾಗುವುವೆಲ್ಲವೂ ನಿಸಾರರ ಅನುವಾದದಿಂದ.):

'ತುತ್ತೂರಿಗಳು ಮೊಳಗಿ
ಭೂಲೋಕದಲ್ಲಿ ಎಲ್ಲ ಅಣಿಯಾದಾಗ
ಭಗವಂತ ತನ್ನ ಪೃಥ್ವಿಯನ್ನು ವಿಭಾಗಿಸಿದ:
ಅನಕೊಂಡ ಸಂಸ್ಥೆ, ಫೋರ್ಡ್ ಮೋಟಾರುಗಳು,
ಕೋಕಕೋಲ ಕಂಪನಿ—
ಅಂಥವೇ ವಿಶೇಷಗಳ ಹಂಚಿಕೆಗಾಗಿ.

....

'ತಮ್ಮ ಬಡ ಹಿಡುವಳಿದಾರರ
ಮುರಬ್ಬದ ಸವಿಯ ನೆತ್ತರಲ್ಲಿ
ತೊಯ್ದು ತೊಪ್ಪೆಯಾದ ನೊಣಗಳು,
ಜನಭರಿತ ತಿಪ್ಪೆಗಳ ಮೇಲೆ
ಮದೋನ್ಮತ್ತವಾಗಿ ಗುಂಯ್ಗುಡುವ ನೊಣಗಳು :
ನೊಣದ ಸರ್ಕಸ್ಸಿನ ನೊಣ,
ದಬ್ಬಾಳಿಕೆಯಲ್ಲಿ ಗಡಸು ಉಕ್ಕಾದ,
ಹಾಗೆಯೇ ಪಂಡಿತ ಜಾತಿಯ ನೊಣ.' (ಯುನೈಟೆಡ್ ಫ್ರೂಟ್ ಕಂಪೆನಿ)

(ಪು. ೨೦-೨೧)

೧೯೭೩ರಲ್ಲಿ ಅನಕೊಂಡ ಮತ್ತು ಐಟಿಟಿ ಕಂಪನಿಗಳ ಲಾಭ ದಾಹವನ್ನು ಇಂಗಿಸಲು ಅಲೆಂಡೆಯನ್ನು ಕೊಲ್ಲಲಾಯಿತು. ನಮ್ಮ 'ಪಂಡಿತ ಜಾತಿಯ ನೊಣ'ಗಳಂತೆ ಚಿಲಿಯಲ್ಲೂ ಆಗ್ಗೆ ಎಷ್ಟೋ ವಿದ್ವನ್ಮಣಿಗಳು ಅಮೆರಿಕಾದ ಪರವಾಗಿ ನಿಂತು ನಿಕ್ಸನ್ನನ ಬೂಟುಗಳನ್ನು ನೆಕ್ಕಿ ತಮ್ಮ ನಾಲಿಗೆಗಳನ್ನೆಲ್ಲಾ ಕಪ್ಪು ಮಾಡಿಕೊಂಡಿದ್ದರು. ಆದರೆ ನೆರುದ ಈ ಕವನವನ್ನು ಆಗ್ಗೆ ಸುಮಾರು ಎರಡು ದಶಕಗಳಿಗೆ ಹಿಂದೆ ಬರೆದಿದ್ದ. ಅದಕ್ಕೂ ಮುನ್ನ 'ಸ್ಪೇಯ್ನ್ ಇದ್ದ ಸ್ಥಿತಿ' ಎಂಬ ಕವನದಲ್ಲಿ ಸ್ಪೇಯ್ನನ್ನು 'ಘಾತಕ ಹದ್ದುಗಳ ಸುಕ್ಷೇಮ ನೆಲೆ' (ಪು. ೪೦) ಎಂದು ನೆರುದ ಬಣ್ಣಿಸಿದ್ದ. ಅಂದು ಸ್ಪೇಯ್ನಿನಲ್ಲಿ ಫ್ರಾಂಕೊ ನೆತ್ತರು ಹರಿಸಿದ, ಆಮೇಲೆ ಚಿಲಿಯಲ್ಲಿ ನಿಕ್ಸನ್-ಪಿನೋಶೆ ರಕ್ತದ ಕೋಡಿ ಹರಿಸಿದರು. ಅಂತಹ ಸಂದರ್ಭದಲ್ಲಿ ಕಣ್ಣು-ಬಾಯಿ ಮುಚ್ಚಿದ ಬುದ್ಧಿಜೀವಿಗಳನ್ನು, ಕವಿಗಳನ್ನು ನೆರುದ ತೀಕ್ಷ್ಣವಾಗಿ ಮೂದಲಿಸಿದ:

'ನೀವೆಲ್ಲ ತಿಪ್ಪೆ ರಾಶಿಯ ಮೇಲು ಹಕ್ಕಳೆಗಳನ್ನ
ಚಿಲ್ಲರೆಯಾಗಿ ಮಾರಾಟ ಮಾಡಿದಿರಿ.' (ಅದೇ)

[ಪು. xxxvi]

ಇಂತಹ ಕವನಗಳನ್ನು ನೋಡಿ ಕೆಲವು ಸ್ವಯಂಘೋಷಿತ ವಿಮರ್ಶಕರು ನೆರುದನನ್ನು ಪ್ರಚಾರದ ಕವಿಯೆಂದು ಟೀಕಿಸುತ್ತಿದ್ದುದುಂಟು. ಮರ್ಮಾಘಾತ ಉಂಟುಮಾಡುವ ಅವನ ತೀಕ್ಷ್ಣ ಶಬ್ದಗಳು ಅವರಿಗೆ ಕಸಿವಿಸಿಯುಂಟುಮಾಡಿದ್ದರೆ ಆಶ್ಚರ್ಯವಿಲ್ಲ. ಏಕೆಂದರೆ ಅವರಲ್ಲಿ ಹಲವರು ಸ್ವತಃ ಅಮೆರಿಕಾದ ಹಾಗೂ ಫ್ರೂಟ್ ಕಂಪನಿಯಂತಹ ಬಹುರಾಷ್ಟ್ರೀಯ ಕಂಪನಿಗಳ ಸಮರ್ಥಕರಾಗಿರುತ್ತಿದ್ದರು. 'ಏನಿದು ನಿಮ್ಮ ಶುದ್ಧ ಕಾವ್ಯ' ಎಂದು ಹಂಗಿಸಲು, 'ಅಶುದ್ಧ ಕಾವ್ಯ' ಎಂಬ ಮೊನಚಾದ ಲೇಖನವನ್ನು ನೆರುದ ಬರೆದಿದ್ದುದನ್ನು ನಿಸಾರ್ ಅನುವಾದಿಸಿಕೊಟ್ಟಿದ್ದಾರೆ (ಪು. ೧೪೭-೯). 'ನೀವು ಕೇಳುತ್ತೀರಿ' (ಪು. ೬-೯) ಎಂಬ ಕವನದಲ್ಲಿಯೂ ಇಂತಹ ಟೀಕೆಗೆ ಉತ್ತರವಿದೆ. ಸ್ಪೇಯ್ನ್‌ನ ಫ್ಯಾಸಿಸ್ಟ್ ಹಲ್ಲೆಯ ಸಂದರ್ಭ:

'ಬಂದು ನೋಡಿ
ಬೀದಿಗಳಲ್ಲಿ ನೆತ್ತರನ್ನ!
ಹಾಗಿರುವಾಗ,
.... ಅವನ ಪದ್ಯಗಳಲ್ಲಿ
ಲೈಲ್ಯಾಕ್ ಪುಷ್ಪಗಳೆಲ್ಲಿ?
ಅಫೀಮು ಹೂವಲ್ಲಿ ಮುಸುಕು ಹಾಕಿ ಮಲಗಿರುವ ಅಧ್ಯಾತ್ಮವೆಲ್ಲಿ?'

(ನೀವು ಕೇಳುತ್ತೀರಿ)

'ಪ್ರಕೃತಿಯೊಂದಿಗೆ ಏಕಾಂತ' ಎಂಬ ಕಿರು ಲೇಖನದಲ್ಲಿ ಕಾವ್ಯದ ವಿಧಿ-ವಿಧಾನಗಳನ್ನು ಕಟ್ಟುನಿಟ್ಟಾಗಿ ಪ್ರತಿಪಾದಿಸುವ ಸೌಂದರ್ಯಶಾಸ್ತ್ರದ ಬಗ್ಗೆ ತನ್ನ ಅಸಡ್ಡೆಯನ್ನು ಸಹ ನೆರುದ ವ್ಯಕ್ತಪಡಿಸಿದ್ದಾನೆ:

'ಸೌಂದರ್ಯಶಾಸ್ತ್ರ ಚರ್ಚಿತವಾಗುತ್ತಿದ್ದಾಗ ನನಗೆ ಸತ್ತು ಹೋಗುವಷ್ಟು ಭೈರಿಗೆಯಾಗಿ ಕಂಡಿದೆ... ಎಷ್ಟೇ ಮುಖ್ಯವಾದರೂ ಸಾಹಿತ್ಯ ಮೀಮಾಂಸೆ, ಶಾಸ್ತ್ರ, ಸಾಹಿತ್ಯದ ಸ್ಥಾನವನ್ನೇ ಆಕ್ರಮಿಸಿಬಿಡಬಾರದು.'

(ಪು. ೧೨೧)

'ನೆತ್ತರ ಬಗ್ಗೆ ಬರೆದರೆ ಹೌಹಾರುವ ಕಟ್ಟಾ ಶಾಸ್ತ್ರೀಯ ವಿಮರ್ಶಕರು ಅಮೂರ್ತ ಮತ್ತು ಕೃತ್ರಿಮ ವಿಷಯಗಳನ್ನು ಕಾವ್ಯದಲ್ಲಿ ತುರುಕುವ ಕವಿಗಳನ್ನು ಟೀಕಿಸುವುದಿಲ್ಲವೆಂಬುದು ಗಣನೆಗೆ ತೆಗೆದುಕೊಳ್ಳಬೇಕಾದ ಅಂಶವಾಗಿದೆ. ಹಾಗೆಂದು ನೆರೂದ ಕಲೆಯ ಅನುಭೂತಿಯಲ್ಲಿ ಅಪಕ್ವವಾಗಿದ್ದನೆಂದೇನೂ ಇಲ್ಲ. ಉದಾಹರಣೆಗೆ, ಅವನ 'ಪಿಯಾನೊ' ಕವನವನ್ನು ಗಮನಿಸಬಹುದು (ಪು. ೫೦-೫೨):

'..........
ಪಿಯಾನೊ

ಅದರ ವಾದಕ,
ಸಂಗೀತಗೋಷ್ಠಿ
ಆಳಕ್ಕೆ ಜಿಗಿದವು—ವಿಸ್ಮೃತಿಯಲ್ಲಿ;
ಸರ್ವವೂ
ಕೇವಲ ನಾದಮಯವಾಗುವ ತನಕ.
...........' (ಪಿಯಾನೊ)

(ಪು. ೫೧)

ಸಂಗೀತ ನೀಡುವ ಅನುಭವ ಅತ್ಯುಚ್ಚ ಮಟ್ಟದಲ್ಲಿರಬೇಕಾದದ್ದು ಹಾಗೆ. ಇದನ್ನು ಪ್ರೊ. ಎ. ಎನ್. ಮೂರ್ತಿರಾಯರು ವಿವರವಾಗಿ ಚರ್ಚಿಸಿದ್ದಾರೆ. ಅಂತಹ ಅನುಭವ ಯಾವಾಗಲೋ ಒಮ್ಮೊಮ್ಮೆ ಪಡೆದಿದ್ದುದಾಗಿ ಹೇಳಿದ್ದಾರೆ. ಸುತ್ತಣ ಸನ್ನಿವೇಶವು ಇಲ್ಲದಂತಾಗಿ ಮನಸ್ಸಿಗೆ ಏಕಾಗ್ರತೆ ಪರಿಪೂರ್ಣವಾಗಿ ಲಬ್ಧವಾದಾಗ ಇರುವುದೊಂದೇ. 'ಕೇವಲ ನಾದ'. ಬಿರುಸಿನ ಸ್ವರಗಳ ಅಥವಾ ಮೃದಂಗ ವಾದ್ಯದ ಕಸರತ್ತು ಸಾಗುತ್ತಿರುವಾಗ ಲಭ್ಯವಾಗುವ ಅನುಭವ ಇದಲ್ಲ. ತಲ್ಲೀನತೆಯನ್ನು ಅನುಭವಿಸಲು ಶಕ್ತನಾಗಿದ್ದ ನೆರುದ ಕಾವ್ಯ ಮತ್ತು ಕಲೆಯ ಅಸಾಧಾರಣ ಶಕ್ತಿಯನ್ನು ಎಲ್ಲೂ ಅಲ್ಲಗಳೆದಿಲ್ಲ. 'ಸದ್ಯಃ ಪರನಿರ್ವೃತಿ' ಎಂಬುದಕ್ಕಿಂತಲೂ ಹೆಚ್ಚಿನ ಮತ್ತು ಆಚೆಗಿನ ಅನುಭವ ಅದು. ಅದರ ಗುಂಗಿನಲ್ಲಿ ವಾಸ್ತವಿಕ ವಿದ್ಯಮಾನಗಳನ್ನು ಲೆಕ್ಕಿಸದಿರಲು ಮಾತ್ರ ನೆರುದ ಸುತರಾಂ ಸಿದ್ಧನಿರಲಿಲ್ಲ. ತನ್ನ 'ಸ್ಮೃತಿಚಿತ್ರ'ಗಳಲ್ಲಿ ಕರ್ಜಿಯೊ ಮ್ಯಾಲ ಪಾರ್ಟ ಎಂಬಾತ ನೆರುದನನ್ನು ಸಂದರ್ಶಿಸಿದ್ದ ಸಂದರ್ಭದಲ್ಲಿ ಅವನು ನುಡಿದಿದ್ದ ಮಾತುಗಳನ್ನು ನೆರುದ ಉಲ್ಲೇಖಿಸಿರುವುದು ಹೀಗೆ:

'ನಾನು ಕಮ್ಯೂನಿಸ್ಟ್ ಅಲ್ಲ. ಆದರೆ ನಾನು ಚಿಲಿ ದೇಶದ ಕವಿಯಾಗಿದ್ದ ಪಕ್ಷದಲ್ಲಿ, ನೆರುದನ ತರಹ ಕಮ್ಯುನಿಸ್ಟ್ ಆಗಲು ಬಯಸುತ್ತಿದ್ದೆ. ಇಲ್ಲಿ, ಚಿಲಿ ದೇಶದಲ್ಲಿ ಒಬ್ಬ ವ್ಯಕ್ತಿಗೆ ಎರಡೇ ದಾರಿ: ಕ್ಯಾಡಿಲಾಕುಗಳಲ್ಲಿ ಮಜವಾಗಿ ಹಣವಂತರೊಂದಿಗೆ ಸೇರಿಕೊಳ್ಳುವುದು. ಇಲ್ಲವೇ, ಶಾಲೆಗೆ ಹೋಗುವ ಅನುಕೂಲವಿಲ್ಲದ, ಕಾಲಿಗೆ ಷೂಗಳಿಗೂ ಗತಿಯಿಲ್ಲದ ದಟ್ಟ ದರಿದ್ರರ ಜೊತೆ ಹೊಂದಿಕೊಳ್ಳುವುದು.' (ಪು. ೧೧೪)

ಸದ್ಯದ ನಮ್ಮ ದೇಶದ ವಿದ್ಯಮಾನಗಳು ಇದನ್ನೇ ಹೋಲುತ್ತವೆ ಎನಿಸುವುದಿಲ್ಲವೆ? ವಿದೇಶಿ ಮದ್ಯ ಕುಡಿದು ಮತ್ತಿನಲ್ಲಿ ಜೀವಿಸುವುದು ಒಂದೆಡೆ, ಸ್ವದೇಶಿ ಗಂಜಿಗೂ ಕೊರತೆಯಾಗಿ ನಿಶ್ಚೇಷ್ಟರಾಗಿರುವವರು ಇನ್ನೊಂದೆಡೆ. 'ಕ್ಯಾಬರೆ-ಕಂ-ಸ್ಲಂ ಕಲ್ಚರ್' ಎನ್ನುವುದು ಇದನ್ನೇ. ಪ್ರಾಥಮಿಕ ಶಾಲೆಗೆ ಸೇರಲು ಒಂದು ಲಕ್ಷ ರೂಪಾಯಿ ಕೊಡುವ ಹಣಗೂಳಿ ಒಂದೆಡೆ, ಪುಕಸಟ್ಟೆ ಶಾಲೆಗೆ ಸಹ ಹೋಗಲಾಗದೆ ಯಾವುದೋ ಸೈಕಲ್ ಶಾಪಿನಲ್ಲಿ ಹನ್ನೆರಡು ಗಂಟೆ ಕೆಲಸ ಮಾಡುವ ಮಗು ಇನ್ನೊಂದೆಡೆ. ಆ ಮಗುವಿಗೆ ಬ್ರಹ್ಮಸಾಕ್ಷಾತ್ಕಾರದ ಅಗತ್ಯ ಮತ್ತು ವಿಧಾನಗಳನ್ನು ಕುರಿತು ಉಪದೇಶ ನೀಡುವ ಕವಿ, ಮಠಾಧಿಪತಿ ಮತ್ತು ದಾರ್ಶನಿಕ ಉಪನ್ಯಾಸಕ ಶ್ರೇಷ್ಠರ ಬಗ್ಗೆ ಏನು ಹೇಳೋಣ? ನೆರುದನಿಗೆ ವ್ಯಾಕುಲ ತರಿಸುವ

ಪ್ರಸಂಗ ಇದು: ದೇಶದಲ್ಲಿ ಇಷ್ಟೊಂದು ಸಂಪತ್ತಿದೆ, ಆದರೆ ಅದರ ಭೋಗ ದೇಶದ ಜನಕಿಲ್ಲ. ವಿಪರ್ಯಾಸವೆಂದರೆ ಆ ಸಂಪತ್ತು ದೇಶಕ್ಕೆ ದೊಡ್ಡ ಹೊರೆ ಮತ್ತು ಬಾಧೆಯಾಗಿದೆ: ಏಕೆಂದರೆ, ಅದನ್ನು ಲೂಟಿ ಮಾಡಿ ಐಷಾರಾಮ ಜೀವನ ನಡೆಸುವವರನ್ನು ಪ್ರಶ್ನಿಸ ಹೊರಟರೆ ಮಿಲಿಟರಿ ಬಲದಿಂದ ದೇಶವನ್ನು ಬಗ್ಗುಬಡಿಯುತ್ತಾರೆ, ಜನರನ್ನು ನಿರ್ದಯವಾಗಿ ಹಿಂಸಿಸಿ ಕೊಲ್ಲುತ್ತಾರೆ. ಅಂದಿನ ಚಿಲಿ-ಇಂದಿನ ಇರಾಕ್-ಎಂದೆಂದಿನ ಭಾರತ ಇದಕ್ಕೆ ನಿದರ್ಶನಗಳು. ನಿಸಾರರ ಅನುವಾದದಲ್ಲಿ ನೆರುಡನ ಮನ ಮುಟ್ಟುವ ಮಾತುಗಳು ಹೀಗಿವೆ:

'ಈ ಹೆಬ್ಬಯಲಲ್ಲಿ ಕಾಲಿಡುವುದೆಂದರೆ, ಅದರ ಕೊನೆಯಿಲ್ಲದ ಮರಳು ರಾಶಿಯನ್ನು ಮುಖಾಮುಖಿಯಾಗಿ ಎದುರಾಗುವುದೆಂದರೆ, ಚಂದ್ರನ ಅಪರಿಚಿತ ನೆಲದಲ್ಲಿ ಕಾಲಿಟ್ಟಂತೆಯೇ. ಆದರೆ ಈ ಮೃತ, ಚಂದ್ರನಂಥ ಪಾಳು ನೆಲದ ಅಂತರಾಳದಲ್ಲಿ ನನ್ನ ನಾಡಿನ ಸಿರಿ ಅಡಗಿ ಕೂತಿದೆ. ಜನೋಪಯೋಗಿ ಫಲವತ್ಕಾರಿಗಳನ್ನು, ತಾಮ್ರದ ಲೋಹವನ್ನು ತಯಾರಿಸಿಕೊಳ್ಳಲು ಬೇಕಾಗುವ ಅದುರನ್ನು ಆ ಬೆಟ್ಟ ಗುಡ್ಡಗಳ, ಗಾರಾದ ಪ್ರದೇಶದ ಆಳಗಳಿಂದ ಬಿಡಿಸಿಕೊಳ್ಳಬೇಕಾಗಿದೆ. ಇಲ್ಲಿನ ಜೀವನದಲ್ಲಿ ಕಾಣುವಂಥ ಗೋಳು ಮತ್ತು ಸಪ್ಪೆತನ ಜಗತ್ತಿನ ಕೆಲವೇ ಜಾಗಗಳಲ್ಲಿ ಕಾಣಿಸೀತು... ಬ್ರಿಟಿಷರು, ಜರ್ಮನರು, ಸ್ವಲ್ಪದರಲ್ಲಿ ಹೇಳಬಹುದಾದರೆ ಎಲ್ಲಾ ನಮೂನೆಯ ವಿದೇಶೀಯರು, ಈ ಮರುಭೂಮಿಯಲ್ಲಿ ಬೇಲಿ ಕಟ್ಟಿ ಗಣಿಗಳನ್ನು ಸ್ಥಾಪಿಸಿಕೊಂಡು ಅವುಗಳನ್ನು ತಮ್ಮ ದೇಶದ ವ್ಯಾಪಾರೀ ಸಂಸ್ಥೆಗಳ ಹೆಸರಿನಲ್ಲಿ ನಡೆಸುತ್ತಾ ಬಂದಿದ್ದಾರೆ. ಈ ಜನ ಅಲ್ಲಿ ತಮ್ಮ ದೇಶದ ನಾಣ್ಯಗಳನ್ನು ಚಲಾವಣೆಗೆ ತಂದಿರುವುದಲ್ಲದೆ ಸಭೆಗಳ ನಿಷೇಧ, ಎಲ್ಲಾ ರಾಜಕೀಯ ಪಕ್ಷಗಳ ಉಚ್ಚಾಟನೆ ಮತ್ತು ಜನತಾ ಪತ್ರಿಕೆಗಳ ಅಭಿಪ್ರಾಯಗಳನ್ನು ಬುಡಮಟ್ಟ ತೊಡೆದು ಹಾಕಿದ್ದಾರೆ' (ಪು. ೧೧೫). ಬಹುರಾಷ್ಟ್ರೀಯ ಸಂಸ್ಥೆಗಳ ದಲ್ಲಾಳಿಯಾದ ವಿಶ್ವವ್ಯಾಪಾರ ಸಂಸ್ಥೆಯ ಕರಿ ನೆರಳಿನ ಅಡಿಯಲ್ಲಿ ಜಾಗತೀಕರಣವು ಮಾಡುತ್ತಿರುವುದು ಇಂಥದೇ ಕೆಲಸವನ್ನು ಎಂಬುದನ್ನು ಅರಿಯಲು ನಮಗೆ ಸಾಧ್ಯವಾದರೆ, ನಿಸಾರರ ಅನುವಾದ ಸಾರ್ಥಕವಾದಂತೆ. 'ಬಲಪಂಥೀಯ ಪ್ರತಿಗಾಮಿಗಳಿಗೆ ದೌರ್ಜನ್ಯ ಬೇಕೆನ್ನಿಸಿದಾಗ ಅವರು ಚೂರೂ ಪಶ್ಚಾತ್ತಾಪ ಪಡದೆ ಅದನ್ನು ಎಸಗಬಲ್ಲರು' (ಪು. ೧೩೪) ಎಂಬ ನೆರೂದನ ಅನುಭವದ ಮಾತುಗಳನ್ನು ಮರೆಯದಿರೋಣ.

ದೌರ್ಜನ್ಯದ ಮನೋಭಾವ ಮತ್ತು ಕ್ರಿಯೆಗಳನ್ನು ಮುಚ್ಚಿಡಲು ಹಲವು ವಿಧದ ತೆರೆಗಳು ಬಳಕೆಗೆ ಬರುತ್ತವೆ. 'ಒಪ್ಪಿಗೆಯನ್ನು ಸೃಜಿಸುವುದು' ಎಂಬ ನೋಮ್ ಚೋಮ್‌ಸ್ಕಿಯ ಪರಿಕಲ್ಪನೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಮಾಧ್ಯಮಗಳು ಇದಕ್ಕೊಂದು ಸಾಧನವಾದರೆ, ಮತಧರ್ಮದ ಚಿತ್ತಾಪಹಾರಕ ಮರ್ಮಗಳು ಇನ್ನೊಂದು ಸಾಧನ. ವಿಶ್ವದ ವಿಸ್ಮಯಗಳನ್ನು ಅನುಭವಿಸಿ ಉದಾತ್ತ ದೈವೀ ಕಲ್ಪನೆಯತ್ತ ಮರಳುವುದೇ ಬೇರೆ, ಮತ ಧರ್ಮವನ್ನು ಕುತ್ತಿಗೆಗೆ ಹೇರಿಕೊಳ್ಳುವ ಬೀಸುವ ಕಲ್ಲಿನಂತೆ ನಡೆಸಿಕೊಳ್ಳುವುದೇ ಬೇರೆ. ಈ ಎರಡನೆಯ ಮಾದರಿ ನೆರೂದನಿಗೆ ಅಸಾಧ್ಯ ನೋವು ಮತ್ತು ಕೋಪವನ್ನು ಬರಿಸುತ್ತದೆ. 'ಲೈಮಾ ನಗರದಲ್ಲಿ ಮೆರವಣಿಗೆ' ಎಂಬ ಕವನದ ಸಾಲುಗಳನ್ನು ನೋಡಿ:

'ಲವಂಗ ವರ್ಣದ ನಡುವಂಗಿ, ಷೂಸುಗಳು,
ಶ್ಯಾಮಲ ಸುಮುಗಳಿಂದ ಮಸಿ ಹಿಡಿದ ಹ್ಯಾಟುಗಳು,
ಪ್ರಾರ್ಥನಾ ಮಂದಿರದ ಷಂಡ ಗಾಜುಗಳ ಮೇಲೆ
ತಮ್ಮ ಹೊಲಸನ್ನ ಖಾಲಿಗೊಳಿಸುವ ಅಸ್ಪಸ್ಥರಿಂದ,
ಗಂತಿ ರೋಗಿಗಿಗಳಿಂದ ತುಂಬಿ ತುಳುಕಿದ್ದವು ಬೀದಿ.' (ಪು. ೮೫)

'ಚರ್ಚಿನ ಸೇವೆಯಲ್ಲಿ ಸವೆದು ಸೊರಗಿದ
ಹ್ಯಾಪ ಮುಖದ ಕನ್ಯಾಮಣಿಗಳನ್ನ,
ಚುರುಕಿರದ ಚಹರೆಯ ಹಸಿವು ಅಚ್ಚೊತ್ತಿರುವ
ಪ್ರಾಂತೀಯ ಶಾಲಾ ಶಿಕ್ಷಕರನ್ನ.' (ಲೈಮಾ ನಗರದಲ್ಲಿ ಮೆರವಣಿಗೆ)
(ಪು. ೮೬)

—ಇದೇ ದುಗುಡವನ್ನು 'ಎಷ್ಟೊಂದು ದೇವರುಗಳು!' ಎಂಬ ಕವನ ಇನ್ನೂ ಗಾಢವಾಗಿ ಪ್ರಕಟಿಸುತ್ತದೆ. ನಾನೂ ಸೇರಿದಂತೆ, ನಾಲ್ಕು ಮಂದಿಯಾದರೂ ನೆರುದನ ಈ ಕವನವನ್ನು ಕನ್ನಡಕ್ಕೆ ಭಾಷಾಂತರಿಸಿರುವುದು ಒಂದು ರೀತಿಯಲ್ಲಿ ಕವನದ ಆಳವಾದ ಪ್ರಭಾವವನ್ನು ಸೂಚಿಸುತ್ತದೆ. ನಿಸಾರರ ಅನುವಾದದಲ್ಲಿ ಕೆಲವು ಸಾಲುಗಳು ಹೀಗಿವೆ:

'ಚಿತ್ರಹಿಂಸೆ, ಇಲ್ಲವೇ ಪಿಸ್ತೂಲಿನಿಂದ
ಧರ್ಮಶ್ರದ್ಧೆಯನ್ನ ಖರೀದಿಸಬಲ್ಲ,
ಅಥವಾ ನಮ್ಮ ನೆತ್ತರನ್ನ ಉರಿಸಬಲ್ಲ
ದೇವರುಗಳಿವರೆಲ್ಲರು.' (ಎಷ್ಟೊಂದು ದೇವರುಗಳು) (ಪು. ೧೦೬)

ನಮ್ಮ ದೇಶದ ದುರಂತವೆಂದರೆ ಶ್ರೀರಾಮಚಂದ್ರನನ್ನು ಕೂಡ ಕೆಲವು ಕ್ಷುದ್ರ ಹಿತಾಸಕ್ತಿಗಳ ಪೂರೈಕೆಗಾಗಿ 'ನೆತ್ತರನ್ನ ಉರಿಸಬಲ್ಲ' ದೇವರನ್ನಾಗಿ ಮಾರ್ಪಡಿಸಿಬಿಟ್ಟಿರುವುದು. ಅದಕ್ಕೇ ತನ್ನ ಆಕಾಂಕ್ಷೆಯನ್ನು ಸಾರ್ವತ್ರಿಕ ಆಶಯ ಎನ್ನುವ ರೀತಿಯಲ್ಲಿ ನೆರುದ ಪ್ರಕಟಿಸಿರುವುದು ಹೀಗೆ:

'ಲೋಕದಲ್ಲಿನ ಎಲ್ಲ ಬೆಳಕೂ
ಸಾಗರದ ಏಕರೂಪತೆಯನ್ನ
ಉದಾರ ವಿಸ್ತೃತ ಸಂಪೂರ್ಣತೆಯನ್ನ,
ಇಂದು ಚಟಟಟಿಸುವ ಸಜೀವ ಸುಗಂಧವನ್ನ
ಹೊಂದುವವರೆಗೆ—
ಸಂಗತಿಗಳನ್ನ ಒಗ್ಗೂಡಿಸಿ ಹೊಸ ಹುಟ್ಟು ಪಡೆದಂತೆ ಮಾಡಿ,
ಅವುಗಳನ್ನ ಬೆರೆಸಿ ಬತ್ತಲಾಗಿಸಿ
ಗೊಂದಲಗೆಡಿಸುವ ಮನಸ್ಸಾಗಿದೆ ನನಗೆ.'
(ಪು. ೧೧)

ಇಷ್ಟೊಂದು ಗೊಂದಲಗಳು, ಸಂಕಷ್ಟಗಳು, ಸಂಘರ್ಷಗಳು ತುಂಬಿರುವ ಮಾನವ ಜೀವನ ಹೇಗಿರಬೇಕು? ಅಥವಾ ಹೇಗಿರಬಾರದು? ಅದು ಚಲನಶೀಲವಾಗಿರಬೇಕು, ಜೀವ ಧಾತುವಿನಿಂದ ತುಂಬಿ ತುಳುಕುತ್ತಿರಬೇಕು. ಅದನ್ನು ಬಿಟ್ಟು,

'ಚಳಿಗೆ ಸಡೆತು, ನೋವಿಂದ ನರಳಿ ಸಾಯುವುದಕ್ಕೆ—
ಬೇರಿನ ಹಾಗೆ, ಸಮಾಧಿಯ ಹಾಗೆ,
ಏಕಾಕಿ ಸುರಂಗದ ಹಾಗೆ,
ಶವಗಳು ಗಿಡಿದ ನೆಲ ಮಾಳಿಗೆಯ ಹಾಗೆ
ಮುಂದುವರಿಯಲು ನಾನು ಇಚ್ಛಿಸುವುದಿಲ್ಲ.'

(ಪು. ೪೮)

ಎನ್ನುತ್ತಾನೆ ನೆರುದ. ಬರಿಯ ಜೀವನೋತ್ಸಾಹದ ಬರಡು ಮಾತಲ್ಲ ಇದು; ಬದಲಾಗಿ, ಕ್ರಿಯೆಯ ಮೂಲಕ ಬದಲಾವಣೆಗೆ ತಹತಹಿಸುವುದು. ಪ್ರೊ. ನಿಸಾರ್ ಅಹಮದ್ ಅವರು ಕನ್ನಡಕ್ಕೆ ತಂದಿರುವ ನೆರುದನ ಕೃತಿಗಳ ಸಾಮಾಜಿಕ ಮಹತ್ವ ಇದರಲ್ಲಿ ಅಡಗಿದೆ. ಅಂತಹ ಸಾಧನೆಯನ್ನು ತಮ್ಮ ಕಾವ್ಯ ಕಿರೀಟದ ಗರಿಯನ್ನಾಗಿ ಮುಡಿದಿರುವ ನಿಸಾರರಿಗೆ ಅಭಿನಂದನೆ ಸಲ್ಲಿಸುತ್ತಾ ಅವರೇ ಅನುವಾದಿಸಿರುವ ನೆರುದನ 'ಸ್ಮೃತಿಚಿತ್ರ'ಗಳ ಒಂದು ಭಾಗವನ್ನು ಮನನಯೋಗ್ಯವೆಂದು ಉದ್ಧರಿಸಬಯಸುತ್ತೇನೆ:

'ನೋವನ್ನು ಅನುಭವಿಸಲು ಮತ್ತು ಹೋರಾಡಲು, ಹಾಗೆಯೇ ಪ್ರೀತಿಸಲು ಮತ್ತು ಹಾಡಿ ಹರ್ಷಗೊಳ್ಳಲು ನಾನು ಅವಕಾಶವೊದಗಿಸಿಕೊಂಡೆ. ನಾನು ಸೋಲು ಗೆಲವಿನ, ದುರ್ಭಿಕ್ಷ ಸುಭಿಕ್ಷಗಳ ರುಚಿ ಕಂಡಿದ್ದೇನೆ. ಒಬ್ಬ ಕವಿ ಇದಕ್ಕಿಂತ ಹೆಚ್ಚಿನದೇನನ್ನು ತಾನೆ ಆಶಿಸಬಲ್ಲ? ನನ್ನ ಜನರೊಂದಿಗಿನ ಕಣ್ಣೀರಿನಿಂದ ಮದ್ದಿನವರೆಗಿನ, ಏಕಾಂತದಿಂದ ಸಂಸರ್ಗ ದವರೆಗಿನ ನನ್ನ ಸಂಬಂಧದ ಸರ್ವ ಸ್ವರ ಮೇಳವೂ ಆಮೂಲಾಗ್ರವಾಗಿ ನನ್ನ ಕಾವ್ಯದಲ್ಲಿ ಸಜೀವವಾಗಿದೆ. ಅದೇ ರೀತಿ, ನನ್ನ ಕಾವ್ಯ ಹೋರಾಟದಲ್ಲಿ ನನಗೆ ಸ್ಫೂರ್ತಿ ನೀಡಿದೆ. ಚಿಟ್ಟೆಯಂತೆಯೇ ಕ್ಷಣಿಕ ಜೀವಿತದ ಸಾಹಿತ್ಯ ಪ್ರಶಸ್ತಿಗಳು ನನಗೆ ಧಂಡಿಯಾಗಿ ದೊರಕಿವೆ. ಅನೇಕರಿಗೆ ಅಲಭ್ಯವಾದ, ಆದರೆ ಅವರೆಲ್ಲರ ಗೇಲಿಗೆ ಗುರಿಯಾದ, ಪರಮೋತ್ಕೃಷ್ಟ ಪ್ರಶಸ್ತಿಯನ್ನು ನಾನು ದಕ್ಕಿಸಿಕೊಂಡಿದ್ದೇನೆ.

'ಸೌಂದರ್ಯಾಸ್ವಾದನೆಯ ಮತ್ತು ಅನ್ವೇಷಣೆಯ ಕಷ್ಟಸಾಧ್ಯ ಕಲಿಕೆಯ ಮುಖೇನ, ಒಂದಾದ ಮೇಲೊಂದು ಎದುರಾದ ಪದ ವ್ಯೂಹಗಳಲ್ಲಿ ಹೊಕ್ಕು ನಡೆಸಿದ ದೀರ್ಘ ಅಲೆದಾಟಗಳ ಮುಖೇನ ನಾನು ನನ್ನ ಜನತೆಯ ಕವಿಯಾಗಿದ್ದೇನೆ. ಇದೇ ನನ್ನ ಪ್ರಶಸ್ತಿ. ನಾನು ಬರೆದಿರುವ ಗ್ರಂಥ ರಾಶಿಗಿಂತ, ಬೇರೆ ಭಾಷೆಗಳಿಗೆ ತರ್ಜುಮೆಯಾಗಿರುವ ನನ್ನ ಕಾವ್ಯಕ್ಕಿಂತ ಅಥವಾ ನನ್ನ ಕಾವ್ಯವನ್ನು ವಿಮರ್ಶಿಸಲು ರಚಿತವಾದ ಕೃತಿಗಳಿಗಿಂತ ಮಹೋತ್ಕೃಷ್ಟ ಪ್ರಶಸ್ತಿ ಇದು: ಲೋಟ ಪ್ರದೇಶದ ಕಲ್ಲಿದ್ದಲುಗಪ್ಪು ಆಳಗಳಿಂದ, ಫಲವತ್ಕಾರಿ ಅದುರುಗಳ ಕಾರ್ಯಭೂಮಿಗಳಿಂದ, ತಾಮ್ರದ ಗಣಿಗಳಿಂದ ಹೊರ ಬಂದ, ಅಲ್ಲ, ನರಕದಿಂದಲೇ ತೆವಳುತ್ತ ಬಂದನೋ ಅನ್ನುವಂಥ, ಬೆನ್ನು ಮುರಿಯುವಂತೆ ದುಡಿದದ್ದರ ಫಲವಾಗಿ ಮುಖವೆಲ್ಲ ವಿಕೃತವಾದ, ಧೂಳಿನಿಂದ ಕಣ್ಣುಗಳು ಮಲಿನವಾದ, ಅಲ್ಲಿನ ಬಂಜರು ಭೂಮಿಯ ಕ್ರೌರ್ಯ ಕಾಠಿಣ್ಯಗಳಿಂದಲೇ ಸೃಷ್ಟಿಯಾದಂತಿರುವ ಬಲಿಷ್ಠ ಕೊಂಬುಗಳಂಥ ಕೈಗಳ ವ್ಯಕ್ತಿಯೊಬ್ಬ ಕಣ್ಣಲ್ಲಿ ಬೆಳಕು ಚೆಲ್ಲಿಕೊಂಡು: 'ಅಣ್ಣ, ನಿನ್ನನ್ನ ಬಹಳ ಕಾಲದಿಂದ ಬಲ್ಲೆ' ಅಂದಾಗ—ಅಂಥ ಅತ್ಯಪೂರ್ವ ಜೀವನ ಕ್ಷಣಗಳೇ ನನಗೆ ದೊರಕಿರುವ

ಅಮೂಲ್ಯ ಪ್ರಶಸ್ತಿ. ನನ್ನ ಕಾವ್ಯಕ್ಕೆ ಸಮರ್ಪಿತವಾದ ಪುಷ್ಪಮಾಲಿಕೆ ಇಂಥದ್ದು—ಮರುಧರೆಯ ಆಳಕ್ಕೆ ಕೊರೆದ ತೋಡು ದಾರಿ. ಅದರ ಒಳಕ್ಕೆ ಕಾರ್ಮಿಕ ಇಳಿದಂತೆಲ್ಲ ಆಚೆಯ ಚಿಲಿಯ ಗಾಳಿ, ಇರುಳು, ನಕ್ಷತ್ರಗಳು ಮತ್ತೆ ಮತ್ತೆ ಅಭಯ ನೀಡುತ್ತವೆ: 'ನೀನು ಒಬ್ಬಂಟಿಯಲ್ಲ. ನಿನ್ನಂಥವರ ಬಗ್ಗೆ ಕಳಕಳಿ ಪಡಲು ಕವಿಯೊಬ್ಬನಿದ್ದಾನೆ.' (ಪು. ೧೧೮-೧೧೯).

—ಈ ಅಮೂಲ್ಯ ಭಾವದ, ತಾದಾತ್ಮ್ಯದ ಮತ್ತು ಬದ್ಧತೆಯ ಹತ್ತನೆಯ ಒಂದು ಭಾಗದಷ್ಟು ಒಬ್ಬ ಕವಿಯಲ್ಲಿದ್ದರೂ ಅವನು ನಿಶ್ಚಿತವಾಗಿ ಶ್ರೇಷ್ಠ ಕವಿ ಎನಿಸಿಕೊಳ್ಳಬಲ್ಲ. ನಮ್ಮಲ್ಲಿ ಅಂಥವರೆಷ್ಟು ಮಂದಿ ಇದ್ದಾರೆ, ಆಗಿಹೋಗಿದ್ದಾರೆ? ನಿಸಾರರು ಪರಿಚಯಿಸಿರುವುದು ಅಂತಹ ಅನನ್ಯ ಕವಿ ಪಾಬ್ಲೊ ನೆರೂದನನ್ನು. ಜನರ ಆಕಾಂಕ್ಷೆಗಳನ್ನು ತಮ್ಮ ಕಾವ್ಯದಲ್ಲಿ ಹುದುಗಿಸಿಡುವ ಕವಿಗಳು ನಮ್ಮಲ್ಲಿ ಅನೇಕರಿದ್ದಾರೆ; ಅದರ ಜೊತೆ ನಿಷ್ಠಾವಂತ ಕ್ರಿಯಾಶೀಲರಾಗಿ, ಜನಗಳ ನಡುವೆ ಹೋರಾಟದ ಕೊಂಡಿಯಾಗಿ, ಪುರಸ್ಕಾರ ಪಡೆದವರು ಬಹಳ ಮಂದಿ ಇಲ್ಲ. ನೆರೂದನ ಸಾಮಾಜಿಕ ಮಹತ್ವ ಮತ್ತು ಪ್ರಸ್ತುತತೆ ಇರುವುದು ಅಂತಹವರಿಗೆ ಚೈತನ್ಯ ನೀಡುವ ಮಹತ್ಕಾರ್ಯದಲ್ಲಿ.

ಚುನಾವಣೆಯ ಸಿದ್ಧತೆಯ ಎರಡು ಮೂರು ತಿಂಗಳುಗಳ ಕಾಲ ಹಳ್ಳಿಯಿಂದ ದಿಳ್ಳಿಯವರೆಗೆ ಕೆಲಸಗೇಡಿ ಶೋಂಭೇರಿಗಳ ಒಂದು ಮಹಾ ದಂಡೇ ಸೃಷ್ಟಿಯಾಗುತ್ತದೆ. 'ಪಕ್ಷದ ಕಾರ್ಯಕರ್ತರು' ಎಂಬ ಮರ್ಯಾದಸ್ಥ ಹೆಸರಿನ ಮರೆಯಲ್ಲಿ ಇವರು ನಡೆಸದೆ ಇರುವ ಹುನ್ನಾರುಗಳಿಲ್ಲ; ಎಬ್ಬಿಸದೇ ಇರುವ ಅವಾಂತರ ದಾಂಧಲೆಗಳಿಲ್ಲ. ಮುಂದಾಳುಗಳ ಮಿನಿ ನಕಲುಗಳಾದ ಈ ಮರಿ ಪುಢಾರಿಗಳು ಮೊಹಲ್ಲಗಳಲ್ಲಿ ತಮ್ಮದೇ ಪಾಳಯಪಟ್ಟುಗಳನ್ನು ಸ್ಥಾಪಿಸಿ, ಪ್ರಚಾರದ ಸೋಗಿನಲ್ಲಿ ಎಸಗದ ಅನಾಚಾರಗಳಿಲ್ಲ. ಸೀರೆ ಸಾರಾಯಿಗಳಿಂದ ಹಿಡಿದು ಚೈನು ಚೂರಿಗಳವರೆಗಿನ ಸಕಲ ವಿದ್ಯಾಪಾರಂಗತರೂ ಪ್ರಯೋಗ ಪರಿಣತ ಮತಿಗಳೂ ಆದ ಈ ಕುರಿತೋದದ ಚಿತಾವಣೆಗರು ಎಷ್ಟೆಲ್ಲ ಅಮಾಯಕರ ಪೀಡನೆಗೆ, ಕೋಮು ದಳ್ಳುರಿಗೆ, ಆಸ್ತಿಪಾಸ್ತಿಯ ಹಾನಿಗೆ ಕಿಡಿಯ ಮುನ್ನುಡಿಗಳನ್ನು ಬರೆಯುತ್ತಾರೆ ಎನ್ನುವುದೇ ಒಂದು ಮಹಾ ಕಾದಂಬರಿಗೆ ವಸ್ತುವಾದೀತು. ಅಮೂಲ್ಯ ವೇಳೆಯನ್ನು ತಾವೂ ಹಾಳು ಮಾಡಿಕೊಳ್ಳುವುದಲ್ಲದೆ ಪ್ರಚಾರದ ಅಬ್ಬರದಿಂದ ಇತರರ ಸ್ವಾಸ್ಥ್ಯವನ್ನೂ ಭಂಗಗೊಳಿಸುತ್ತಾರೆ ಈ ಮರಿ ಪುಢಾರಿಗಳು.

(ರಾಜಕೀಯ ಚಿತಾವಣೆಗಾರರು)



‘ಬರೀ ಮರ್ಯಾದಸ್ಥರೆ’: ಕವಿ ನೆರುಡನ ಕವನಗಳ ಕನ್ನಡೀಕರಣ

♦ ಶ್ರೀಕಾಂತ

ಕಮ್ಯೂನಿಸ್ಟ್ ಲೋಕದಲ್ಲಿ, ಕ್ರಾಂತಿಕಾರಿ ಸಾಹಿತ್ಯ ಪ್ರಪಂಚದಲ್ಲಿ, ಪ್ರಗತಿಶೀಲ ಸಾಂಸ್ಕೃತಿಕ ಜಗತ್ತಿನಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಹೆಸರು ಪಾಬ್ಲೋ ನೆರುಡ. ರಷ್ಯದ ಮಹಾ ಕ್ರಾಂತಿಕಾರಿ ಕವಿ ಮಾಯ್ಕೋವಸ್ಕಿಯ ಸಾಲಿನಲ್ಲಿ ಉಳಿಯುವ ನೆರುಡ ಜನತೆಯ ಕವಿ. ‘ದಾಸ್ಯದಲ್ಲಿರುವ ಮಾನವತೆಯ ಮುಖವಾಣಿ’, ‘ನೆರುಡನಷ್ಟು ಲೋಕ ಸುತ್ತಿದ ಕವಿ ಪ್ರಾಯಃ ಸಾಹಿತ್ಯೇತಿಹಾಸದಲ್ಲಿ ಇನ್ನೊಬ್ಬನಿಲ್ಲ’, ‘ರಾಜಕೀಯ ಧೋರಣೆಯ ದೆಸೆಯಿಂದಾಗಿ ಅವನೊಬ್ಬ ಸರ್ವೋತ್ಕೃಷ್ಟ ಕವಿ ಅಥವಾ ಕುಕವಿ ಎಂದು ಸಾಧಿಸುವ ಪೈಪೋಟಿ ನಡೆದಿದೆ. ಈ ಕವಿಯ ದ್ರಾಕ್ಷಾ ವನದಲ್ಲಿ ಎಲ್ಲವೂ ಸಮೃದ್ಧ. ತನ್ನ ದೃಷ್ಟಿಗೆ ತಕ್ಕಂತೆ ರಸವತ್ತಾದ ದ್ರಾಕ್ಷಿಗಳನ್ನೋ ಬರಲು ಕಡ್ಡಿಗಳನ್ನೋ ಆರಿಸಿಕೊಂಡು ವಿಮರ್ಶಕ ಸ್ವಸಮರ್ಥನೆಯನ್ನು ಸಾಧಿಸಿಕೊಳ್ಳ ಬಲ್ಲ ಎನ್ನುವ ಒಂದು ಅಭಿಪ್ರಾಯದಿಂದ ವಿಮರ್ಶೆಯ ಎರಡು ಧ್ರುವಗಳ ಅರಿವು ನಮಗಾಗುತ್ತದೆ.’

‘ಹಾಗೆಂದು ನೆರುಡ ತನ್ನ ರಾಜಕೀಯ ಧೋರಣೆ ಬೇರೆ, ಕಾವ್ಯ ಬೇರೆ ಎಂದು ವಾದಿಸಿ ಟೀಕಾಕಾರರೊಂದಿಗೆ ಸಮಜಾಯಿಷಿ ಮಾಡಿಕೊಂಡವನಲ್ಲ. ಅಷ್ಟೇ ಅಲ್ಲ, ತನ್ನ ಕಾವ್ಯದ ಬಗ್ಗೆ ಅಸಹನೆ ತೋರಿಸಿದವರನ್ನು ಅವನ ಹಿತೈಷಿಗಳು ನೆರುಡನ ಕಾವ್ಯ ರಾಜಕೀಯ ತತ್ವಗಳಿಗೆ ಅತೀತವಾದದ್ದು ಮುಖ್ಯವಾಗಿ ಅವನೊಬ್ಬ ದ್ರಷ್ಟಾರ; ಪೂರ್ವಗ್ರಹಿಕೆಗಳಿಲ್ಲದ ಜ್ಞಾನಕ್ಕಾಗಿ ಕಾವ್ಯ

ಹೋರಾಟ ನಡೆಸಬೇಕೆಂಬ ವ್ರತತೊಟ್ಟವನು... ಸತ್ವತಃ ಅವನೊಬ್ಬ ನಿಸರ್ಗ ಕವಿ' ಎಂದು ವಕೀಲಿ ನಡೆಸಿದಾಗ ನೆರುಡ ಅವರನ್ನು ತರಾಟೆಗೆ ತೆಗೆದುಕೊಂಡ.'

'ಆರಾಮಕುರ್ಚಿಗರ ಮೇವಾಗಿ ಪದ್ಯಗಳನ್ನು ತಯಾರಿಸುವುದು ನೆರುಡನ ಜಾಯಮಾನಕ್ಕೆ ಬಂದಿದ್ದಲ್ಲ. ಒಂದು ಹಂತದಲ್ಲಿ ಸಾಮಾನ್ಯನಿಗೂ ತನ್ನ ಕಾವ್ಯ ಖುಷಿ, ಕುತೂಹಲ, ಸಂತೃಕೆ, ಹುರುಪು ನೀಡಬೇಕೆಂಬ ಆಶಯ ಅವನದು. ಆದರೆ ತನ್ನ ರಾಜಕೀಯ ತತ್ವಗಳ ದೆಸೆಯಿಂದ ಕೆಲವು ಪರಿಮಿತಿ, ಶಿಸ್ತು, ಜವಾಬ್ದಾರಿಗಳನ್ನು ಅವನು ತಾನೇ ಹೇರಿಕೊಳ್ಳುತ್ತಾನೆಂಬುದೂ ನಿಜ.'

—ಸುಪ್ರಸಿದ್ಧ ಕನ್ನಡ ಕವಿ ಕೆ. ಎಸ್. ನಿಸಾರ್ ಅಹಮದ್‌ರವರು ಪಾಬ್ಲೊ ನೆರುಡುನ ೪೪ ಉತ್ತಮ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿ ಹೊರ ತಂದ ಕೃತಿಯ ಮುನ್ನುಡಿಯಿಂದ ಈ ಮೇಲಿನ ವಾಕ್ಯಗಳನ್ನು ಆರಿಸಲಾಗಿದೆ. ಈ ಕವನ ಸಂಕಲನದ ಹೆಸರು 'ಬರೀ ಮರ್ಯಾದಸ್ಥರೆ.'

ಸಮಗ್ರವಾಗಿ ಈ ಕವನ ಸಂಕಲನವನ್ನು ಪರಿಶೀಲಿಸಿದಾಗ ಒಂದು ವಿಚಾರದಲ್ಲಿ ಸಂದೇಹವೆನ್ನಿಸುತ್ತದೆ. ಇದು ಭಾಷಾಂತರವೆ? ಅಥವಾ ನೆರುಡನೇ ಕನ್ನಡಿಗರಿಗಾಗಿ ಕನ್ನಡದಲ್ಲಿ ಈ ಕವಿತೆಗಳನ್ನು ರಚಿಸಿದನೆ? ಎಂಬುದೇ ಆ ಸಂದೇಹ. ಅಷ್ಟು ಉತ್ತಮ ಹಾಗೂ ಸರಳವಾಗಿದೆ, ಕನ್ನಡೀಕರಣವಾಗಿದೆ ಈ ಅನುವಾದ.

ಉದಾಹರಣೆಗೆ: 'ನೀವು ಕೇಳುತ್ತೀರಿ' ಎಂಬ ಕವನವನ್ನು ಗಮನಿಸಿ:

'ನೀವು ಕೇಳುತ್ತೀರಿ! ಅವನ ಪದ್ಯಗಳಲ್ಲಿ
ಲೈಲ್ಯಾಕ್ ಪುಷ್ಪಗಳೆಲ್ಲಿ?
ಅಫೀಮು ಹೂವಲ್ಲಿ ಮುಸುಕು ಹಾಕಿ ಮಲಗಿರುವ
ಅಧ್ಯಾತ್ಮವೆಲ್ಲಿ?
ಹಚ್ಚನೆ ಕಣವೆ, ಹಕ್ಕಿಗಳು ಹೊರಹೊಮ್ಮಿ
ನಿಲುವನಕ
ತನ್ನ ಶಬ್ದಗಳನ್ನ ಆಗಿಂದಾಗ್ಗೆ ಜಡಿದ
ಮಳೆಯೆಲ್ಲಿ?' (ನೀವು ಕೇಳುತ್ತೀರಿ)

ಇದಕ್ಕೆ ಉತ್ತರ ನೀಡಿದ ಕವಿ, ಮತ್ತೆ ಹೇಳುತ್ತಾರೆ:

'ಒಂದು ಪ್ರಾತಃಕಾಲ
ಎಲ್ಲವೂ ಉರಿದು ಧಗಧಗಿಸುವ ತನಕ ಹೀಗಿತ್ತು :
ಭೂಮಿಯೊಡಲಿಂದ ಅಗ್ನಿ ಹೊರ ನೆಗೆದು
ಬದುಕಿರುವುದನ್ನೆಲ್ಲ ತಿಂದು ತೇಗಿತ್ತು;
ಅಂದಿನಿಂದ ಬರಿ ಉರಿಯೇ
ಸಿಡಿ ಮದ್ದೇ
ನೆತ್ತರೇ, ಅಂದಿನಿಂದ.
ವಿಮಾನವೇರಿ ಬಂದರು ದರೋಡೆಕೋರರು

ಮೊಹರೆಯುಂಗುರಗಳೊಡನೆ,
ರೊಕ್ಕದ ಸೊಕ್ಕಿನ ಹೆಂಗಸರೊಡನೆ,
ಕಿರಾತರೊಡನೆ;
ಶಿಲುಬೆಯಿಂದ ಸಹಿಯೊತ್ತಿದ ಕಾಳ ರಕ್ಕಸರು, ಠಕ್ಕರು
ಮೋಡದಿಂದಿಳಿದು
ಮುಗ್ಧರ ಹತ್ಯಾಕಾಂಡಕ್ಕೆ:
ಹಸುಗೂಸುಗಳ ರಕ್ತ ಹರಿಯಿತು ಬೀದಿ ಬೀದಿಗಳಲ್ಲಿ,
ಮಕ್ಕಳ ಸ್ವಭಾವದಂತೆಯೇ ಸರಾಗವಾಗಿ.
ಸಮಯಸಾಧಕ ದ್ರೋಹಿಗಳೇ,
ದಂಡ ನಾಯಕರೇ—
ನನ್ನ ಮನೆಯ ವಿನಾಶ ನೋಡಿ,
ಕಣ್ತೆರೆದು ಸ್ಪೈಯಿನಿನ ಮಾರಣಹೋಮ ನೋಡಿ,
ಉರಿದು ಬಿಕೋ ಎನ್ನುವ ಪ್ರತಿ ಮನೆಯಿಂದ
ಹೂವುಗಳ ಬದಲು ಹರಿದಿವೆ
ಉಕ್ಕು ಲೋಹಗಳು.
ಸ್ಪೈಯಿನಿನ ಗಟಾರಗಳಿಂದ
ಹೊರಹೊಮ್ಮುವುದು ಮತ್ತೇನು ಅಲ್ಲ—
ಸ್ಪೈಯಿನ್ ಅಷ್ಟೆ!
ಪ್ರತಿ ಕಂದಮ್ಮನ ಕಗ್ಗೊಲೆಯಿಂದ
ಕಣ್ಣಿರುವ ಕೋವಿ,
ನಿಮ್ಮ ಪ್ರತಿ ಪಾತಕದಿಂದ
ಒಂದು ದಿನ ನಿಮ್ಮೆದೆಗಳಿಗೆ ಗುರಿಯಿಡುವ
ಗುಂಡುಗಳು ಹುಟ್ಟಿಕೊಳ್ಳುತ್ತವೆ.' (ಅದೇ)

—ಈ ಕವನ, ಮರ್ದಕರ ಜಗತ್ತಿನಲ್ಲಿ ಭೂಕಂಪನವನ್ನು ಉಂಟು ಮಾಡುವಷ್ಟು ಶಕ್ತಿಯುಳ್ಳದ್ದು. ಮೂಲದ ಸ್ಫೂರ್ತಿ, ಸತ್ವ ಅನುವಾದದಲ್ಲೂ ಹೇಗೆ ತುಳುಕಾಡುತ್ತದೆ ಎಂಬುದಕ್ಕೆ ಈ ಕವನದ ಒಂದೇ ಸಾಕ್ಷಿ ಸಾಕು.

'ಬರೀ ಮರ್ಯಾದಸ್ಥರೆ' ಎಂಬುದು ಕೂಡಾ ಇಂದಿನ 'ಮರ್ಯಾದಸ್ಥ' ಸಮಾಜದ 'ಪ್ರತಿಷ್ಠಿತ' ಆಷಾಢಭೂತಿಗಳನ್ನು ವ್ಯಂಗ್ಯವಾಗಿ ಬಯಲಿಗೆಳೆಯುವ ಕವನ. ಈ ಕವನ, ಈ ಸಂಗ್ರಹಕ್ಕೊಂದು ಕಿರೀಟ.

ಚಿಲಿ ದೇಶದ ನೆರುಡ ರಂಗೂನಿನಲ್ಲಿದ್ದಾಗ ಭಾರತಕ್ಕೂ ಬಂದಿದ್ದ. ಈ ಎರಡು ದೇಶಗಳ ದೇವರುಗಳನ್ನು ಕುರಿತು ಬರೆದ 'ಎಷ್ಟೊಂದು ದೇವರುಗಳು!' ಕವನ, ಕವಿಯ ಮನೋಭಾವದ ಪ್ರತೀಕ. ಈ ದೇವರುಗಳನ್ನು ಕಂಡು ಕವಿ ವಿಸ್ಮಿತನಾಗುತ್ತಾನೆ. ಅವುಗಳ ವೇಷ ಭೂಷಣಗಳನ್ನು ವರ್ಣಿಸುತ್ತಾನೆ, ಕೊನೆಗೆ ಅನ್ನುತ್ತಾನೆ:

'ಚಿತ್ರಹಿಂಸೆ, ಪಿಸ್ತೂಲಿನಿಂದ
ಧರ್ಮಶ್ರದ್ಧೆಯನ್ನು ಖರೀದಿಸಬಲ್ಲ

ಅಥವಾ ನಮ್ಮ ನೆತ್ತರನ್ನು ಉರಿಸಬಲ್ಲ
ದೇವರುಗಳಿವರೆಲ್ಲರು.
ನಮ್ಮ ಹೇಡಿತನವನ್ನು ಬಚ್ಚಿಡಲು
ನರರು ತಯಾರಿಸಿಕೊಂಡ ಕ್ರೂರ
ದೇವರುಗಳು.' **(ಎಷ್ಟೊಂದು ದೇವರುಗಳು)**

—ಹೀಗೆ, ಪ್ರತಿಯೊಂದು ಕವನವನ್ನೂ ವಿವರಿಸಹೋದರೆ ಅದೇ ಒಂದು ಗ್ರಂಥವಾದೀತು.

ಈ ಸಂಗ್ರಹದಲ್ಲಿ ೨೮ ಪುಟಗಳಷ್ಟು ನೆರುಡನ ರೋಮಾಂಚಕಾರಿ ಜೀವನದ ಇತಿಹಾಸವಿದೆ. ನೆರುಡನ ಜೀವನ ಸ್ಮೃತಿಗಳ ಮುಖ್ಯ ಭಾಗವನ್ನು ೩೫ ಪುಟಗಳಲ್ಲಿ ಕೊಡಲಾಗಿದೆ.

ಇಂದು ಕನ್ನಡದಲ್ಲಿ ಬೇಕಾದಷ್ಟು ಕವನ ಸಂಗ್ರಹಗಳು ಪ್ರಕಟವಾಗುತ್ತಿವೆ. ದಲಿತ-ಬಂಡಾಯ ಇತ್ಯಾದಿ. ಇವುಗಳಲ್ಲಿ ಹೆಚ್ಚಿನ ಕವನಗಳಲ್ಲಿ ಆವೇಶವೇ ಹೊರತು ಸತ್ವವಿಲ್ಲ; ಬೈಗುಳೇ ಹೊರತು ತಿರುಳು ಇಲ್ಲ. ಅಂತಹ ಕವಿಗಳು ಖಂಡಿತಕ್ಕೂ ನೆರುಡನ ಈ ಸಂಕಲನದಿಂದ ಕಲಿಯಬೇಕಾದುದು ತುಂಬಾ ಇದೆ.

ನೆರುಡನ ಕವನವನ್ನು ಓದುವುದೆಂದರೆ ಅದೊಂದು ಅನುಭವ. ಇಂಗ್ಲಿಷ್ ತಿಳಿಯದವರಿಗೆ ಕನ್ನಡದಲ್ಲಿ ವರವಾಗಿ ಬಂದಿದೆ ಈ ಸಂಗ್ರಹ. ನೆರುಡನ ದೃಷ್ಟಿಕೋನವನ್ನು ಇದು ತಿಳಿಸುತ್ತದೆ. ಅವನ ಸಹಾನುಭೂತಿ ಯಾರಿಗೆ ಎಂಬುದನ್ನು ಇದು ತೋರಿಸುತ್ತದೆ. ಆತನ ಅನುಕಂಪದ ಪ್ರತಿರೂಪವಾಗಿದೆ ಈ ಪುಸ್ತಕ.

ಮೂಲಕ್ಕೆ ಎಳ್ಳಷ್ಟೂ ಚ್ಯುತಿಯಿಲ್ಲದೆ, ಕನ್ನಡದ ಮೆರುಗನ್ನು ನೀಡಿ ಕವಿ ನಿಸಾರ್ ಅಹಮದ್ ಈ ಕವನಗಳನ್ನು ಭಾಷಾಂತರಿಸಿದ್ದಾರೆ. ಓದಿ, ತೃಪ್ತಿಯನ್ನು ತರಬಲ್ಲ ಈ ಸಂಗ್ರಹವನ್ನು ಸಾಹಿತ್ಯಾಭಿಮಾನಿಗಳು ಮಾತ್ರವಲ್ಲ, ಪ್ರತಿಯೊಬ್ಬ ದುಡಿಯುವ ಶ್ರಮ ಜೀವಿಯೂ ಓದಿ ತಿಳಿದುಕೊಳ್ಳಬೇಕಾದುದು ಅತ್ಯಗತ್ಯ.


೧೯೮೩

ಇಂದಿನ ಪತ್ರಿಕೆಗಳು ಮತ್ತು ಸುದ್ದಿ ಮಾಧ್ಯಮಗಳು ಎತ್ತಿ ಮೆರೆಸುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿದ್ಯಮಾನಗಳೇ ಪರಮವಲ್ಲ. ಸದ್ಯದ ಜನ ಸಮುದಾಯದ ಪರಿವರ್ತನಶೀಲ ಅಭಿರುಚಿ, ಆವಶ್ಯಕತೆಗಳನ್ನು ತಣಿಸುವ ವಿಷಯ ಮತ್ತು ಸಾಮಗ್ರಿಗಳಿಗೆ ಒಂದು ಬೆಲೆಯಿರುವಂತೆ, ಇವುಗಳನ್ನು ಮೀರಿ ಯಾವತ್ಕಾಲವೂ ಮಾನ್ಯವೆನ್ನಿಸುವ ಸಂಗತಿಗಳಿಗೂ ಒಂದು ಸಾರ್ವತ್ರಿಕ ಮೌಲ್ಯವಿರುತ್ತದೆ. ಅದರ ಅರಿವಿರದೆ ಕೇವಲ ಅದ್ಯತನದಲ್ಲೇ ಪರಮ ಪದವನ್ನು ಕಾಣುವ ಬದುಕು ಅಜ್ಞಾನ ಅವಿವೇಕಗಳ ಕಣ್ಣುಪಟ್ಟಿಯ ಬದುಕು. ಇದನ್ನೇ ವ್ಯಕ್ತಿಗಳ ವಿಷಯಕ್ಕೂ ಅನ್ವಯಿಸಬಹುದು.

(ಪತ್ರಿಕೆಗಳ ಜನಿಸು)

ಭಾಗ–೪

ಆ) ಬಿಡಿ ಗದ್ಯ ಸಂಕಲನ ಗಳ ಸಮಾಲೋಕನ





‘ಇದು ಬರಿ ಬೆಡಗಲ್ಲೋ ಅಣ್ಣ’: ವಿಚಾರ-ಭಾವ ಸಂಪನ್ನ ಗಂಭೀರ ವಿಮರ್ಶೆ

♦ *ಉಷಾ ಪಿ. ರೈ*

ಸನ್ಮಾನ್ಯ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅಂದ ಕೂಡಲೇ ನಮ್ಮ ಮನದ ಪರದೆಯಲ್ಲಿ ಮೂಡಿ ಬರುವುದು ಸದಾ ಸೂಟುಧಾರಿಯಾದ ನವಿರು ನಗುವಿನ ನವೋಲ್ಲಾಸದ ಕವಿ. ನವ್ಯ ಕಾಲದ ಜನಾದರಣೀಯ ಕವಿ. ಅವರಿಗೆ ೭೦ ಆಯಿತೆಂದರೆ ನಂಬುವುದು ಕಷ್ಟ. ಅವರನ್ನು ನೋಡುವಾಗ ‘ಕುರಿಗಳು, ಸಾರ್, ಕುರಿಗಳು’ ಎಂದು, ಇಡೀ ಸಮಾಜವನ್ನೇ ಗೇಲಿ ಮಾಡುವ ಚುರುಕುತನ ಈಗಲೂ ಅವರಲ್ಲಿದೆ ಎಂದೇ ಭಾಸವಾಗುತ್ತದೆ. ಅವರ ‘ನಿತ್ಯೋತ್ಸವ’ವಂತೂ ಎಷ್ಟು ಜನರ ಬಾಯಲ್ಲಿ ನಲಿದು ಹೃದಯವನ್ನು ಕುಣಿಸಿದೆ ಎನ್ನುವುದಕ್ಕೆ ಲೆಕ್ಕವಿಲ್ಲ. ಈ ಲೇಖನ ಬರೆಯುವ ಈ ಕಾರಣದಿಂದ ಅವರ ಗದ್ಯ ಬರಹದ ಕಡೆಗೆ ಗಮನ ಹರಿಸುವ ಅವಕಾಶ ಒದಗಿ ನನಗೆ ನಿಜವಾಗಿಯೂ ಒಂದು ಹೊಸ ಅನುಭವ ಲಭಿಸಿದೆ ಭಾವಾಲೋಚನೆಗಳ ಆಳ ವಿಸ್ತಾರಗಳ ಪರಿಚಯ ಆಗಿದೆ.

ಅಭಿನಂದನ ಗ್ರಂಥಕ್ಕೆ ಅವರ ಯಾವುದಾದರೂ ಗದ್ಯ ಬರಹದ ಬಗೆ ಲೇಖನ ಬರೆದುಕೊಡಿ ಎನ್ನುವ ಪತ್ರ ‘ಸಪ್ನ ಬುಕ್ ಹೌಸಿ’ನಿಂದ ಬಂದಾಗ, ನಾನು ಬರೆಯುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಕಾರು ಅಪಘಾತಕ್ಕೊಳಗಾಗಿ ತೀವ್ರವಾಗಿ ಗಾಯಗೊಂಡು ಹಾಸಿಗೆ ಹಿಡಿದಿದ್ದೆ. ನಾನು ಕವಿತೆಗಳನ್ನು ಬರೆಯಲು ಪ್ರಾರಂಭಿಸಿದ ಹೊಸದರಲ್ಲಿ ಎಲ್ಲರಿಗೂ ಇರುವಂತೆ ನನಗೂ ಒಂದು ಕವನ ಸಂಕಲನ ಪ್ರಕಟಿಸುವ ಆಸೆ

ಉಂಟಾಗಿತ್ತು. ಸುಮಾರು ೧೯೯೧-೯೨ರಲ್ಲಿ ಎಲ್ಲ ಕವನಗಳನ್ನು ಒಟ್ಟು ಸೇರಿಸಿ ಜನಪ್ರಿಯ ಕವಿಯೊಬ್ಬರಿಗೆ ಮುನ್ನುಡಿ ಬರೆಯಲು ಕೊಟ್ಟಾಗ ಅವರು ನಿರಾಕರಿಸಿದ್ದು ಮಾತ್ರವಲ್ಲದೆ, ನನ್ನಲ್ಲಿ ನಿರುತ್ಸಾಹ ಉಂಟು ಮಾಡುವ ಮಾತುಗಳ್ನು ಆಡಿದ್ದರು. ಹೊಸದಾಗಿ ಬರೆಯುವವರಿಗೆ ಈ ಅನುಭವ ಸಾಮಾನ್ಯವೇ ಎನ್ನುವ ಸಮಾಧಾನ ಮಾಡಿಕೊಂಡು ನನಗೇನೇನೂ ಪರಿಚಯವಿಲ್ಲದ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರ ಹತ್ತಿರ ಹೆದರುತ್ತಲೇ ಕೇಳಿದ್ದೆ. ಅವರು ತುಂಬ ಪ್ರೀತಿಯಿಂದ ಮುನ್ನುಡಿ ಬರೆದುಕೊಟ್ಟು, ಪ್ರೋತ್ಸಾಹಿಸಿದ್ದಲ್ಲದೆ 'ಬರಿಯಿರಿ, ಇನ್ನಷ್ಟು ಬರಿಯಿರಿ. ಮುಂದಿನ ಕವನ ಸಂಕಲನ ಇದಕ್ಕಿಂತ ಚೆನ್ನಾಗಿ ಮೂಡಿ ಬರಲಿ' ಎಂದು ಹಾರೈಸಿದ್ದರು. ಅದು ಅವರ ಸಹೃದಯತೆ. ಅವರು ಅಂದು ನೀಡಿದ ಪ್ರೋತ್ಸಾಹವನ್ನು ನಾನೆಂದೂ ಮರೆಯಲಾರೆ.

೧೯೮೦ರಲ್ಲಿ 'ಜ್ಯೋತಿ ಪ್ರಕಾಶನ'ದಿಂದ 'ಇದು ಬರಿ ಬೆಡಗಲ್ಲೋ ಅಣ್ಣ' ಕೃತಿ, ವಿಮರ್ಶಾ ಸಂಕಲನ ಎನ್ನುವ ಹಣೆಪಟ್ಟಿಯೊಡನೆ ಪ್ರಕಟವಾದರೂ ಇದರಲ್ಲಿ ವಿಮರ್ಶೆಗಳ ಜೊತೆಗೆ ನಿಸಾರ್ ಅಹಮದ್ ಅವರ ಕೆಲವು ಸ್ವಚಿಂತನೆಗಳೂ ಸೇರಿವೆ. ಕವಿಯಾಗಿ ಅವರ ಕೆಲವು ವೈಯಕ್ತಿಕ ಅನುಭವಗಳ ಮಾಹಿತಿಗಳೂ ಇಲ್ಲಿ ಲಭ್ಯವಾಗಿವೆ. ಅವರ ಅನುಭವಗಳ, ಅವರು ಕವಿಯಾಗಿ ದಾಟಿರುವ ಹಂತಗಳ ಬಗ್ಗೆ ವಿವರಗಳನ್ನು ನೀಡುವ ಈ ಲೇಖನಗಳು ಮನನಯೋಗ್ಯವಾಗಿವೆ.

ಈ ಕೃತಿಯಲ್ಲಿರುವ ೧೩ ಲೇಖನಗಳನ್ನು ನಾಲ್ಕು ವಿಭಾಗ ಮಾಡಿ ಅವಕ್ಕೆ ಹೊಂದುವ ಸೂಕ್ತವಾದ ಹೆಸರುಗಳನ್ನಿಟ್ಟಿದ್ದಾರೆ. 'ಸ್ವಕೀಯ', 'ಮಂಥನ', 'ಅವಲೋಕನ' ಮತ್ತು 'ವಿವೇಚನ'. ಹೀಗೆ ಅವರ ಉಚಿತ ಶಬ್ದ ಶ್ರೀಮಂತಿಕೆಯ ಪರಿಚಯ ಪುಸ್ತಕ ತೆರೆಯುವಾಗಲೇ ಆಗುತ್ತದೆ.

'ಸ್ವಕೀಯ'ದಲ್ಲಿ ಅವರದ್ದೇ ಅನುಭವಗಳ ನಿವೇದನೆಯಿದೆ. ತನ್ನ ಜಾಯಮಾನ ಹೇಗೋ ಹಾಗೆಯೇ ಸಾಮಾಜಿಕ, ರಾಜಕೀಯ ಒತ್ತಡಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ತನ್ನ ನಿಲವನ್ನು ಪರಿಷ್ಕರಿಸಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ನಿಂತಿರುವ ಇಂದಿನ ಕವಿಯ ಜವಾಬ್ದಾರಿಯುತ ಆಯ್ಕೆಯ ಬಗ್ಗೆ, ಹಿಂದಿನ ಪ್ರಖ್ಯಾತ ಕವಿಗಳ ಆಯ್ಕೆಯ ಹಿನ್ನೆಲೆಯಲ್ಲಿ ಚರ್ಚಿಸುತ್ತಾ, 'ಕವಿ ತನ್ನ ಸ್ವಾಭಿಮಾನ, ಸ್ವಾತಂತ್ರ್ಯಗಳನ್ನು ಯಾವತ್ತೂ ಕಾಪಾಡಿಕೊಳ್ಳುತ್ತಾ, ಜೊತೆಗೇ ಸಮಾಜದಲ್ಲಿ ಒಬ್ಬನಾದ ತನ್ನ ಹೊಣೆಗಾರಿಕೆಗಳನ್ನು ಸರ್ವದಾ ನೆನೆಯುತ್ತ ತನ್ನ ಹಾಗೂ ಇತರರ ಹಿತಕ್ಕೆ ಸರ್ವತ್ರ ದುಡಿಯುತ್ತಾ ಸಾಗುವುದು' ಕವಿಯ ಜವಾಬ್ದಾರಿ ಎನ್ನುವ ಕಿವಿ ಮಾತನ್ನು ಹೇಳುವ 'ಕನ್ನಡ ಕಾವ್ಯದ ಭವಿಷ್ಯ'; 'ಒಬ್ಬ ಕವಿ ತನ್ನೆಲ್ಲ ಕವನಗಳ ರಚನೆಯ ಸಮಯದಲ್ಲೂ ಒಂದೇ ಮನಃಸ್ಥಿತಿಯಲ್ಲಿ, ಒಂದೇ ಹದದಲ್ಲಿ ಇರುತ್ತಾನೆಂದು ಹೇಳಲಾಗದು. ಏಕೆಂದರೆ ಮನಸ್ಸು ಸಚಂಚಲ; ಅವನ ತಹಬಂದಿಗೆ ಮೀರಿದ್ದು' ಎನ್ನುವ ಸತ್ಯದ ಹಿನ್ನೆಲೆಯಲ್ಲಿ ಪದ್ಯರಚನೆಯ ಕೆಲವೊಂದು ಸಮಯದಲ್ಲಿ ಅವನ ಮನಸ್ಸಿನ ತುಡಿತ, ಚಡಪಡಿಕೆಗಳು, ಅವನ ಮೇಲೆ ಪ್ರಭಾವ ಬೀರಿದ ನೈಸರ್ಗಿಕ ಸೌಂದರ್ಯ ಹಾಗೂ ಬದುಕಿನ ಘಟನೆಗಳು ಹೇಗೆ ಅವನನ್ನು ಕಾಡಿಸಿ ಕವಿತೆಯಾಗಿ ಮೂಡಿಬಂದವು; ಅವನು ನಂಬಿರುವ

ಧರ್ಮ, ಹಾಗೂ ಬರೆಯಬೇಕಾಗಿರುವ ಇನ್ನೊಂದು ಸಂಸ್ಕೃತಿಯ ಭಾಷೆ ಎರಡರ ನಡುವೆ ಸಮನ್ವಯತೆ ತರುವಲ್ಲಿ ಅವನು ಎದುರಿಸಿರುವ ಒಳತೋಟಿ, ಜಾಗೃತಿ ಹಾಗೂ ಭಯ— ಇವೆಲ್ಲ ಅನುಭವಗಳನ್ನು ಕಾವ್ಯಮಯವಾಗಿ ಹೇಳಿಕೊಳ್ಳುವ 'ಕವಿಯಾಗಿ ನನ್ನ ಅನುಭವ'; ೧೯೮೦ರವರೆಗೆ, ಅಂದರೆ ೧೯೫೫ರಿಂದ ಸುಮಾರು ೨೫ ವರುಷಗಳಲ್ಲಿ ನಿಸಾರರು ಬರೆದ ಕವನಗಳನ್ನು ಅವಲೋಕಿಸಿ, ತಾವು ಕವಿಯಾಗಿ ಬೆಳೆದ ವಿವಿಧ ಹಂತಗಳನ್ನು, ಅವರು ಎದುರಿಸುವ ಸಂದೇಹ, ಗುಮಾನಿ, ಚಡಪಡಿಕೆಗಳನ್ನು; 'ಹುಮ್ಮಸ್ಸು ವೇಗ ಆರ್ಭಟಗಳಿಂದ ಹೊರಟ ನನ್ನ ಕಾವ್ಯ ಕ್ರಮಿಸಿರುವ ದೂರವನ್ನು, ಅನಿರೀಕ್ಷಿತವಾದ ಏರು ತಗ್ಗುಗಳ ಎದುರು ಮೂಡಿಸಿಕೊಂಡ ಹುಷಾರಿ ಸಮಾಧಾನಗಳನ್ನು, ತಂಗಿದ ಹಂಗಾಮಿ ನಿಲ್ದಾಣಗಳನ್ನು, ಪುನಶ್ಚೇತನಕ್ಕಾಗಿ ಅಲ್ಲಲ್ಲ ಮೈ ಹಿಡಿಸಿಕೊಂಡ ಹೊಸ ಹೊಸ ಸಂವೇದನೆಗಳ ಇಂಧನವನ್ನು, ಹಾಗೆಯೇ ಮುಂದೆ ಅದು ಯಾವ ದಿಕ್ಕಿಗೆ ಹೊರಳಿಕೊಳ್ಳಬಹುದೆಂಬ ಅಂದಾಜುಗಳನ್ನು' ಕಾವ್ಯ ಭಾಷೆಯಲ್ಲಿಯೇ ಹೇಳಿಕೊಂಡಿರುವ 'ನಾನು ಮತ್ತು ನನ್ನ ಕಾವ್ಯ'—ಈ ಲೇಖನ ಗಳನ್ನೊಳಗೊಂಡ 'ಸ್ವಕೀಯ', ಸ್ವಾನುಭವದ ಕಥನಗಳಿಂದ ಮನಸ್ಸನ್ನು ಸೆಳೆಯುತ್ತದೆ. ಕವಿಯಾಗಿ ಅವರು ಬೆಳೆಯುವಾಗ ದಾಟಿದ ವಿವಿಧ ಹಂತಗಳನ್ನು ಹೃದಯಂಗಮವಾಗಿ ಪರಿಚಯಿಸಿಕೊಡುವ 'ನಾನು ಮತ್ತು ನನ್ನ ಕಾವ್ಯ' ತುಂಬ ಮೌಲಿಕವಾದ ಸ್ವಾನುಭವ ಸಮರ್ಥಿತ ಲೇಖನ. 'ಮಂಥನ'ದಲ್ಲಿ 'ಕುವೆಂಪು ಕಾವ್ಯದಲ್ಲಿ ವೈಚಾರಿಕತೆ', 'ಬೇಂದ್ರೆ ಕಾವ್ಯದಲ್ಲಿ ವೈಚಾರಿಕತೆ', 'ಪಂಜೆಯವರ ಕವಿತೆಗಳು', 'ರಾಜರತ್ನಂ ಅವರ ಪದ್ಯಗಳು' ಮತ್ತು 'ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕತೆ' ಎನ್ನುವ ಲೇಖನಗಳಿವೆ.

'ಹಿಂದಿನ ಕಾವ್ಯಮಾರ್ಗದ ಪದ್ಯರಚನೆಗಳಲ್ಲಿ ವೈಚಾರಿಕತೆ ಅನಿವಾರ್ಯ ಲಕ್ಷಣ ವಾಗಿರಲಿಲ್ಲ. ಅಲ್ಲಿ ಇರಲಿಲ್ಲವೆಂದಲ್ಲ; ಅದರ ಪ್ರಮಾಣ ಹಾಗೂ ಅದು ವ್ಯಕ್ತವಾಗುತ್ತಿದ್ದ ರೀತಿ ಬೇರೆಯಾಗಿತ್ತು. ನವೋದಯ ಕಾವ್ಯ ತನ್ನ ಸ್ವರೂಪ ಸತ್ವಗಳಲ್ಲಿ ಮೂಲಭೂತವಾಗಿ ಭಾವನಾತ್ಮಕ ಕಾವ್ಯವಾದದ್ದರಿಂದ ವೈಚಾರಿಕತೆಯೂ ಭಾವನಾತ್ಮಕ ಸ್ವರೂಪದಲ್ಲೇ ವ್ಯಕ್ತವಾಗಬೇಕಿತ್ತು. ವೈಚಾರಿಕತೆಗೂ ವಾಸ್ತವಿಕ ಪ್ರಜ್ಞೆಗೂ ನಿಕಟ ಸಂಬಂಧವಿರುವುದರಿಂದ, ನವೋದಯ ಕಾವ್ಯ ವಾಸ್ತವಿಕತೆಗಿಂತ ಭಾವಾವೇಶಕ್ಕೆ ಹೆಚ್ಚು ಒತ್ತುಕೊಟ್ಟದ್ದರಿಂದ ಸಹಜವಾಗಿಯೇ ವೈಚಾರಿಕ ಅಂಶ ಕಡಿಮೆಯಾಗಿತ್ತು. ಹಾಗಾಗಿ ನವೋದಯ ಕಾವ್ಯದ ವೈಚಾರಿಕತೆ ತನ್ನ ಪರಿಮಿತಾರ್ಥದಲ್ಲಿ ವ್ಯಕ್ತವಾಗುತ್ತದೆ. ಅಲ್ಲದೆ, ನವೋದಯ ಕಾವ್ಯ ನಮ್ಮ ಹಳೆಗನ್ನಡ, ನಡುಗನ್ನಡ ಕಾವ್ಯದಂತೆ ಒಂದು ಮತದ, ಧರ್ಮದ ಪ್ರತಿಪಾದನೆಗೆ ಪರೋಕ್ಷವಾಗಿ ತೊಡಗಿಲ್ಲವಾದದ್ದರಿಂದ ಕತೆ, ನೀತಿಗಳು ಗೌಣವಾಗಿ ವೈಯಕ್ತಿಕ ಸಂವೇದನೆ, ತನ್ಮಯತೆಗಳಿಗೆ ಅಗ್ರ ಪೂಜೆ ದೊರೆತದ್ದರಿಂದ ವೈಚಾರಿಕ ಅಂಶ ಅಪ್ರಮುಖವಾಯಿತು.' ಈ ಪರಿಮಿತತೆಯನ್ನು ಗಮನದಲ್ಲಿಟ್ಟುಕೊಂಡೇ ಆಯಾ ಕಾಲದ ಕಾವ್ಯಗಳನ್ನು ವಿಮರ್ಶಿಸಬೇಕು ಎನ್ನುವುದಕ್ಕೆ ಒತ್ತುಕೊಟ್ಟು, ಕುವೆಂಪುರವರ ಕಾವ್ಯಗಳನ್ನು ವಿಮರ್ಶಿಸುವ ಕೆಲಸವನ್ನು ನಿಸಾರ್ ಅಹಮದ್ ಅವರು ಪ್ರಾಮಾಣಿಕವಾಗಿ ಮಾಡಿದ್ದಾರೆ. ಕುವೆಂಪುರವರು ಅಂತರ್ಮುಖತೆಯಿಂದ ಬಹಿರ್ಮುಖರಾಗಿ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ಕವನಗಳಲ್ಲಿ ಹೇಗೆ ವೈಚಾರಿಕತೆಯನ್ನು ಮೆರೆದಿದ್ದಾರೆ ಎನ್ನುವ ವಿಶ್ಲೇಷಣೆ 'ಕುವೆಂಪು

ಕಾವ್ಯದಲ್ಲಿ ವೈಚಾರಿಕತೆ' ಲೇಖನದಲ್ಲಿದೆ.

'ನವೋದಯ ಕಾವ್ಯದ ಮೂಲಭೂತ ಸತ್ವವನ್ನು ರಕ್ತಗತ ಮಾಡಿಕೊಂಡು ಆ ಮಾರ್ಗದ ಅತ್ಯುತ್ತಮ ಪ್ರತಿನಿಧಿಯಾಗುವ ಬೇಂದ್ರೆ, ಅದರ ಮಿತಿಗೂ ನಿದರ್ಶನವಾಗುತ್ತಾರೆ' ಎನ್ನುವ ವಿಶ್ಲೇಷಣೆಯೊಂದಿಗೆ ಪ್ರಾರಂಭವಾಗುವ 'ಬೇಂದ್ರೆ ಕಾವ್ಯದಲ್ಲಿ ವೈಚಾರಿಕತೆ' ಲೇಖನದಲ್ಲಿ, ಬೇಂದ್ರೆಯವರ ಆಧ್ಯಾತ್ಮಿಕ ಪ್ರೇರಣೆಯಿಂದ ರೂಪಿತವಾದ ಮೂಲ ಕಾವ್ಯಧೋರಣೆ ಕಾಲಾನುಕ್ರಮದಲ್ಲಿ ಜಾನಪದ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡು, ಸಮಕಾಲೀನ ತತ್ವಗಳನ್ನು ಶಕ್ತವಾಗಿ ಅರಗಿಸಿಕೊಂಡು ಏರಿರುವ ಎತ್ತರವನ್ನು ಬೇಂದ್ರೆಯವರ ಕವನಗಳನ್ನು ಮುಂದಿಟ್ಟುಕೊಂಡು ಸೋಜಿಗದಿಂದಲೇ ವಿಶ್ಲೇಷಿಸುತ್ತಾರೆ.

'ಪಂಜೆಯವರ ಕವಿತೆಗಳು' ಲೇಖನದಲ್ಲಿ ಪಂಜೆಯವರು ಅವರ ಸಮಕಾಲೀನ ಕವಿಗಳಿಗಿಂತ ಹೇಗೆ ಭಿನ್ನ ಎನ್ನುವ ವಿಶ್ಲೇಷಣೆಯನ್ನು ಮಾಡಿದ್ದಾರೆ. ಶಿಕ್ಷಕರಾಗಿದ್ದ ಪಂಜೆಯವರ ಮುಖ್ಯ ಉದ್ದೇಶ ಮಕ್ಕಳಲ್ಲಿ ಸಾಹಿತ್ಯಾಭಿರುಚಿಯನ್ನು ಮೂಡಿಸುವುದರ ಜೊತೆಗೆ, ಮಾನಸಿಕ ವಿಕಾಸವನ್ನು ಬೆಳೆಸುವುದು. ಸರಳತೆ ಲಾಲಿತ್ಯ, ಸುಭಗತೆ ಅವರ ಕವನಗಳಲ್ಲಿ ಕಂಡು ಬರುವ ಮೂಲಗುಣ. ಶಿಶುಗೀತೆಗಳ ಹಾಗೂ ಪ್ರೌಢ ಗೀತೆಗಳ ನಡುವಿನಲ್ಲಿ ಹಾಯುವ ಪಂಜೆಯವರ ಕವನಗಳು ಸರಳವಾಗಿ ವೈಚಾರಿಕತೆಯನ್ನು ಬಿಂಬಿಸಿವೆ. ಸಮಕಾಲೀನ ಪ್ರಜ್ಞೆ ಅವರ ಕವನಗಳ ಜೀವ ನಾಡಿ. ಜೀವನವಿಮುಖಿಯಾದ ಅಧ್ಯಾತ್ಮ ಅವರ ಕವನಗಳಲ್ಲಿ ಇಲ್ಲ. ಗೆಲವು, ಉತ್ಸಾಹ, ಜೀವನಾಸಕ್ತಿ ಪಂಜೆಯವರ ಪದ್ಯಗಳಲ್ಲಿ ದಣಿಯದೆ ಕೆಲಸ ಮಾಡುತ್ತವೆ. ಪಂಜೆಯವರದ್ದು ಚಿಕಿತ್ಸಕ ದೃಷ್ಟಿ. ಕಟಕಿ, ಸಿನಿಕತನದ್ದಲ್ಲ ಎನ್ನುವುದನ್ನು ಉದಾಹರಣೆ ಕೊಟ್ಟು ವಿಶ್ಲೇಷಿಸಿದ್ದಾರೆ.

'ವಸ್ತು, ಭಾಷೆ, ಅಭಿವ್ಯಕ್ತಿಗಳಲ್ಲಿ ಅಲೌಕಿಕ ಗಾಂಭೀರ್ಯ, ನಾದಮಯತೆ, ಅಮೂರ್ತತೆಗಳನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ನವೋದಯ ಕಾವ್ಯ ಸಂದರ್ಭದಲ್ಲಿ ನಮ್ಮ ಹಿರಿಯ ಕವಿಗಳು ನಿಸರ್ಗ ಹಾಗೂ ಸಮಾಜದ ಒಟ್ಟಾರೆ ಬದುಕನ್ನು ಕೇಂದ್ರವಾಗಿಸಿಕೊಂಡು ಕಾವ್ಯ ರಚನೆ ಮಾಡುತ್ತಿದ್ದರು. ಆಗ ಬಾಯಿ ಮಾತು ಅಥವಾ ಪಾಮರರ ಭಾಷೆಯನ್ನು ಬಳಸಿದವರು ಬೇಂದ್ರೆಯವರನ್ನು ಬಿಟ್ಟರೆ, ರಾಜರತ್ನಂ ಅವರು. ಈ ಸಂದರ್ಭದಲ್ಲಿ ಲೇವಡಿಗೆ ಸಾಧನವೋ ಗುರಿಯೋ ಆಗಬಹುದಾಗಿದ್ದ ಸಮಾಜದ ಒಂದು ಸ್ತರದ ಬದುಕನ್ನು, ಅವರ 'ಪ್ರಾಕೃತ' ಮಾತುಗಾರಿಕೆಯನ್ನು ಬಳಸಿಕೊಂಡು ಕಾವ್ಯವನ್ನು ಅಮೂರ್ತತೆಯಿಂದ ವಾಸ್ತವದ ಕಡೆಗೆ, ವೈಯಕ್ತಿಕತೆಯ ವಲಯಕ್ಕೆ ತರಲು ಮೊದಲು ಪ್ರಯೋಗ ನಡೆಸಿದವರು ರಾಜರತ್ನಂ ಅವರು.' ಈ ಹಿನ್ನೆಲೆಯಲ್ಲಿ, ಮೂಲತಃ ಗದ್ಯಕಾರರಾಗಿ ಗುರುತಿಸಿಕೊಂಡು ರಾಜರತ್ನಂ ತಮ್ಮತನವನ್ನು ಹೇಗೆ ಮೆರೆಸಿದ್ದಾರೆ ಎನ್ನುವುದನ್ನು 'ರಾಜರತ್ನಂ ಅವರ ಪದ್ಯಗಳು' ಲೇಖನದಲ್ಲಿ, 'ನಾಗನ ಪದಗಳು' ಮತ್ತು 'ರತ್ನನ ಪದಗಳು' ಸಂಗ್ರಹದಿಂದ ಆಯ್ದ ಪದ್ಯಗಳನ್ನು ಉದಾಹರಿಸಿಕೊಂಡು ವಿಶ್ಲೇಷಿಸಿದ್ದಾರೆ. 'ಕನ್ನಡದ ಲಘು ಸ್ವರೂಪವನ್ನು ಅನಾವರಣಗೊಳಿಸಿ, ಪದ್ಯವೆಂದರೆ ಬೆದರಿ ನಿಲ್ಲುವ ಸಾಮಾನ್ಯ ಜನಕ್ಕೂ ಅದರ ನಗು ಮೊಗದ ದರ್ಶನ ಮಾಡಿಸಿದ ಕೀರ್ತಿ ರಾಜರತ್ನಂ

ಅವರಿಗೆ ಸಲ್ಲುತ್ತದೆ' ಎನ್ನುವ ಮಾತಿನೊಂದಿಗೆ ಕೊನೆಗೊಳಿಸುವ ಈ ಲೇಖನ ರಾಜರತ್ನಂ ಅವರ ಪದ್ಯಗಳ ಪರಿಚಯ ಮಾಡಿಕೊಡುವಲ್ಲಿ ಸಫಲವಾಗಿದೆ.

ಹಿರಿಯ ಲೇಖಕರ ಕಾವ್ಯದಲ್ಲಿ ವೈಚಾರಿಕತೆಯನ್ನು ಗುರುತಿಸುವ ಜೊತೆಗೆ ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕತೆಯನ್ನು ಗುರುತಿಸುವ ಕೆಲಸವನ್ನು 'ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕತೆ' ಲೇಖನದಲ್ಲಿ ಮಾಡಿದ್ದಾರೆ. ಪ್ರಾದೇಶಿಕತೆ ಒಂದು ವಿಶೇಷ ಪರಿಸರವುಳ್ಳ ನೆಲದ ಆತ್ಮವೆನ್ನುವುದನ್ನು ವೇದ್ಯ ಮಾಡಿಕೊಂಡು ಹೇಗೆ ಕುವೆಂಪು ಅವರು ಮಲೆನಾಡಿನ ಕಲ್ಲು, ಮಣ್ಣು, ಮರ ಗಿಡ, ಗುಡ್ಡ ಬೆಟ್ಟ, ಪರಿಸರ ಎಲ್ಲದಕ್ಕೂ ಸ್ಪಂದಿಸಿ ಅಲ್ಲಿಯ ಸಮಸ್ತ ಸಾರವಂತಿಕೆಯನ್ನು 'ಕಾನೂರು ಹೆಗ್ಗಡಿತಿ' ಮತ್ತು 'ಮಲೆನಾಡಿನ ಮದು ಮಗಳು' ಕಾದಂಬರಿಗಳಲ್ಲಿ ಸೂರೆಗೊಂಡಿದ್ದಾರೆ ಎನ್ನುವುದನ್ನು ಸಮರ್ಥಿಸಿದ್ದಾರೆ. ವಿಮರ್ಶಕರು ಷೇಕ್ಸ್‌ಪಿಯರ್ ಸಾಹಿತ್ಯ ಕ್ಷೇತ್ರವನ್ನು ಪ್ರತ್ಯೇಕವಾಗಿ 'ಷೇಕ್ಸ್‌ಪಿಯರ್ ಲ್ಯಾಂಡ್' ಎಂದು ಗುರುತಿಸಿರುವಂತೆ ನಮ್ಮಲ್ಲಿ ಪ್ರಾದೇಶಿಕತೆಯ ಸಮಸ್ತ ಸಾಧ್ಯತೆಗಳನ್ನು ಗುರುತಿಸಿಕೊಂಡು ಸಾಹಿತ್ಯ ರಚಿಸಿದ ಇಬ್ಬರು ಕನ್ನಡದ ಮಹತ್ವದ ಲೇಖಕರನ್ನು ಗುರುತಿಸಿ, ಅವರ ಸಾಹಿತ್ಯವನ್ನು 'ಕುವೆಂಪು ಲ್ಯಾಂಡ್' ಮತ್ತು 'ಕಾರಂತ ಲ್ಯಾಂಡ್' ಎಂದು ಗುರುತಿಸ ಬಹುದು ಎಂದು ನುಡಿಯುತ್ತಾರೆ. ಅವರನ್ನು ಪ್ರತ್ಯೇಕಿಸಿದ್ದು ಸಹ್ಯಾದ್ರಿ ಶ್ರೇಣಿ ಎನ್ನುವ ಅವರ ಮುಕ್ತಾಯ ವಾಕ್ಯ, ಈ ಲೇಖನವನ್ನು ಇನ್ನೂ ಹೆಚ್ಚಿನ ತೌಲನಿಕ ಆಲೋಚನೆಗಳಿಗೆ ತೆರೆದು ಕೊಳ್ಳುವಂತೆ ಮಾಡುತ್ತದೆ.

'ಅವಲೋಕನ'ದಲ್ಲಿ ಕೆಲವು ಕೃತಿಗಳ ವಿಮರ್ಶಾ ಲೇಖನಗಳಿವೆ. ಹಿರಿಯ ಕವಿ ಶ್ರೀ ಕೆ.ಎಸ್.ನ. ಅವರ 'ತೆರೆದ ಬಾಗಿಲು' ಕವನ ಸಂಕಲನವನ್ನು ಅವರ ಹಿಂದಿನ ಸಂಕಲನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಅವರು ಭಾವನಾಮತೆಯಿಂದ ವೈಚಾರಿಕತೆಯೆಡೆಗೆ ಬೆಳೆದಿರುವ ರೀತಿಯನ್ನು ವಿಸ್ಮಯದಿಂದ ವಿಶ್ಲೇಷಿಸಿದ್ದಾರೆ. ಸಸ್ಯವಿಜ್ಞಾನಿಯಾದ ಶ್ರೀ ಬಿ.ಜಿ.ಎಲ್. ಸ್ವಾಮಿ ಅವರ ೪೦೨ ಪುಟಗಳ ಬೃಹತ್ ಕೃತಿ 'ಹಸುರು ಹೊನ್ನು'ವಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಸಸ್ಯಾಭ್ಯಾಸಕ್ಕಾಗಿ ಬನ್ ಕಾಡು, ತಿರುವಾಂಕೂರಿನ ಕೆಲವು ಕಾಡುಗಳು, ಆಗುಂಬೆಯ ಕಾಡುಗಳು, ಕೃಸಾಡಿ ದ್ವೀಪ ಹಾಗೂ ರಾಮೇಶ್ವರದ ಸುತ್ತಲಿನ ಕಾಡುಗಳಲ್ಲಿ ಮಾಡಿದ ಸಸ್ಯಾನ್ವೇಷಣೆಯ ಪ್ರಯಾಣಗಳು ಪ್ರವಾಸ ಕಥಾನಕಗಳಂತೆ ಮೂಡಿಬಂದಿವೆ ಯಾದರೂ ಸಸ್ಯವಿಜ್ಞಾನವನ್ನು ಅಲ್ಲಿ ಸಮರ್ಪಕವಾಗಿ ಬಳಸಿ ೬೮ಕ್ಕೂ ಹೆಚ್ಚು ಮರಗಳ ವ್ಯಕ್ತಿತ್ವದ ಪರಿಚಯ ಮಾಡಿ ಒಂದು ಉತ್ತಮವಾದ ಕೃತಿ ರಚಿಸಿ ಓದುಗರ ತಿಳಿವನ್ನು ವಿಸ್ತರಿಸುವಲ್ಲಿ ಹೇಗೆ ಗೆದ್ದಿದ್ದಾರೆ ಎನ್ನುವ ವಿವರಣೆಯಿದೆ. ಶ್ರೀ ಬೇಂದ್ರೆಯವರು ತಮ್ಮ ಹಲವಾರು ಪದ್ಯಗಳಲ್ಲಿ 'ಕೌಟುಂಬಿಕ ಜೀವನದ ಅನುಭವಗಳನ್ನು, ಒಲವಿನ ಹಿರಿಮೆ ಯನ್ನು, ನಯವಂತಿಕೆಯನ್ನು ಮನಃಸ್ಪರ್ಶಿಯಾಗಿ' ಚಿತ್ರಿಸಿದ್ದರೆ, 'ಮನದನ್ನೆ' ಪದ್ಯದಲ್ಲಿ 'ಗಂಡ ಹೆಂಡಿರ ಅಪಾರ್ಥತೆ, ವೈಮನಸ್ಸುಗಳನ್ನು ಕಾಣಿಸಿ ಭಾವಶುದ್ಧಿಯಾಗದೆ, ಹೃದಯ ಸಂವಾದಕ್ಕೆ ಪುಷ್ಟಿ ದೊರಕದೆ, ಪ್ರೇಮದ ಜಗತ್ತು ಪ್ರಕಟವಾಗದೆಂಬ ತಾತ್ವಿಕ ಧೋರಣೆ ಯನ್ನು ಕಲಾತ್ಮಕವಾಗಿ' ಹೇಗೆ ಅಭಿವ್ಯಕ್ತಿಸಿದ್ದಾರೆ ಎನ್ನುವ ವಿಮರ್ಶಾತ್ಮಕ ವಿಶ್ಲೇಷಣೆಯಿದೆ.

ಹಾಗೆಯೇ ಕಡೆಂಗೋಡ್ಲು ಶಂಕರಭಟ್ಟರ ಜೀವನ ದರ್ಶನಕ್ಕೆ ಪ್ರಣಾಳಿಕೆಯಂತೆ ಮೂಡಿ ಬಂದಿರುವ ಮಹಾಭಾರತದ ಒಂದು ಘಟನೆಯಿಂದ ಪ್ರೇರಿತವಾಗಿ ರಚಿತವಾಗಿರುವ 'ಮಾದ್ರಿಯ ಚಿತೆ' ಹೇಗೆ ಒಂದು ಉತ್ತಮ ಕವಿತೆಯಾಗಿದೆ ಎನ್ನುವ ಸ್ಥೂಲವಾದ ವಿಮರ್ಶೆ ಯಿದೆ. ಕೊನೆಯಲ್ಲಿ ಬರುವ 'ವಿವೇಚನೆ'ಯಲ್ಲಿ ಲ್ಯಾಟಿನ್ ಅಮೆರಿಕಾದ ಸಮಕಾಲೀನ ಕವಿ 'ದಾಸ್ಯದಲ್ಲಿರುವ ಮಾನವತೆಯ ಮುಖವಾಣಿ' ಎಂದು ವಿಮರ್ಶಕರಿಂದ ಗುರುತಿಸಲ್ಪಟ್ಟ ಪಾಬ್ಲೋ ನೆರುಡನ ವ್ಯಕ್ತಿ ಪರಿಚಯ, ಜೀವನ ಹಾಗೂ ಅವನ ಕಾವ್ಯಗಳ ಪರಿಚಯಾತ್ಮಕ ಲೇಖನವಿದೆ. ನಮಗೆ ಅಪರಿಚಿತನಾಗಿರುವ ಹೊರ ದೇಶದ ಕವಿಯೊಬ್ಬ ನಮಗೆ ಪರಿಚಿತನಾಗಿ ಆತ್ಮೀಯನಾಗುವಷ್ಟು ಪರಿಣಾಮಕಾರಿಯಾಗಿ ಈ ಲೇಖನ ಮೂಡಿಬಂದಿದೆ.

'ಕವಿಯಾಗಿ ನನ್ನ ಅನುಭವ' ಲೇಖನದಲ್ಲಿ ಅವರೇ ಹೇಳುವಂತೆ 'ಮಾತಿನ ಬಳಕೆಯಲ್ಲಿ ಕವಿ ಗದ್ಯಕರ್ತನಿಗಿಂತ ಹೆಚ್ಚು ಸೃಜನಶೀಲ, ಹೊಣೆಗಾರ, ಸಂವೇದನಶಾಲಿ. ಕವಿಗೆ ಮಾತು ತಪ್ಪಿಲೆಲು, ಮಾಹಿತಿಗಳನ್ನು ಪೇರಿಸುವ ಅಥವಾ ಅರ್ಥವನ್ನು ಸೂಚಿಸಿ ಪಕ್ಕಕ್ಕೆ ಸರಿದು ನಿಲ್ಲುವ ಸಾಧನವಲ್ಲ: ಗದ್ಯಕಾರನಿಗೆ, ಅದರಲ್ಲೂ ವಿಚಾರ ಸಾಹಿತ್ಯದ ಲೇಖಕನಿಗೆ ಶಬ್ದಗಳು ಗಣಿತಶಾಸ್ತ್ರದ ಚಿಹ್ನೆಗಳಂತೆ ನಿಶ್ಚಿತಾರ್ಥ ವಿನೀತವಾದವು. ಆದರೆ ಕವಿಗೆ, ಅವು ಸಜೀವ ವಸ್ತುಗಳು. ಅವುಗಳ ಸಚೇತನ ಸೂಕ್ಷ್ಮಾಂಶಗಳ, ಬಾಗು ಬಳುಕುಗಳ, ಸೆಖೆ ಶೀತಗಳ, ಕುಸುಮತ್ವ ವಜ್ರತ್ವಗಳ ಗುಣಗಳನ್ನು ಗುರುತಿಸುವ, ಅವುಗಳನ್ನು ಇಂಗಿತಕ್ಕೆ ತಕ್ಕಂತೆ ರಸೋಚಿತವಾಗಿ ಉಪಯೋಗಿಸಿಕೊಳ್ಳುವ ರಸಿಕತೆ, ಜಾಣತನ ಕವಿಗೆ ಇರಬೇಕು. ಹಾಗೆಯೇ, ಕವನ ರಚನೆಯ ಕಾಲದಲ್ಲಿ ಆತ ಮಾತಿನ ಬಗ್ಗೆ ತಾಳಬೇಕಾದ ಎಚ್ಚರ, ಗೌರವ ಮಾತಿಗೆ ಮೀರಿದ್ದು' ಎಂದು ಅನುಭವಪೂರ್ಣ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

'ನನ್ನ ಕವನಗಳ ಭಾಷೆಯನ್ನು ನಾನು ಬೆವರು ಸುರಿಸಿ ಸಂಪಾದಿಸಿಕೊಂಡಿದ್ದೇನೆ... ಒಟ್ಟಿನಲ್ಲಿ ಕವಿ ಭಾಷೆಯ ಜೊತೆ ಚೆಲ್ಲಾಟವಾಡಬೇಕಾಗುತ್ತದೆ, ರಮಿಸಬೇಕಾಗುತ್ತದೆ, ಅದರ ಕಟಾಕ್ಷಕ್ಕೆ ಕಂಬನಿಗರೆಯಬೇಕಾಗುತ್ತದೆ. ಸಮಯ ಬಂದರೆ ಬಲ ಪ್ರದರ್ಶನ ಮಾಡಬೇಕಾಗು ತ್ತದೆ. ಅದರ 'ಪ್ಯಾಸಿವ್‌ನೆಸ್' ಅನ್ನು—ಅಂದರೆ ನಿರಾವೇಶತೆಯನ್ನು—ತನ್ನ 'ಪ್ಯಾಶನ್' ಹಾಗೂ ಲಂಪಟತೆಯಿಂದ ಕಾವೇರಿಸಿ ಸುರತಕ್ಕೆ ಸಿದ್ಧಗೊಳಿಸಬೇಕಾಗುತ್ತದೆ. ಆಗಷ್ಟೇ ಅದು ಫಲವಂತವಾಗಲು ಸಾಧ್ಯ.' ಅವರ ಈ ನಿಲವು ಗದ್ಯ ಬರಹದಲ್ಲೂ ಪ್ರತಿಫಲಿಸಿ ಭಾಷೆಯ ಬಳಕೆಯ ಚಾತುರ್ಯವನ್ನು ಮೆರೆಸಿದೆ. ಹೊಸ ಶಬ್ದಗಳ ನಿರ್ಮಾಣದ ಹುಡುಕಾಟದ ಅವರ ಆಸಕ್ತಿ ನಿಜಕ್ಕೂ ಬೆರಗು ಹುಟ್ಟಿಸುವಂತಹದ್ದು.

ಈ ಸಂಕಲನಕ್ಕೆ ಬೇಂದ್ರೆಯವರ ಕವನದ ಒಂದು ಸಾಲನ್ನು ಸೋದ್ದೇಶ್ಯವಾಗಿ ಕೊಂಚ ಮಾರ್ಪಡಿಸಿ ಶೀರ್ಷಿಕೆಯಾಗಿ ಇಟ್ಟು, ಹಿರಿಯ ಲೇಖಕರ ಬರಹಗಳನ್ನು 'ಇದು ಬರಿ ಬೆಡಗಲ್ಲೋ ಅಣ್ಣ' ಎನ್ನುವ ವಿಸ್ಮಯದಿಂದಲೇ ವಿಮರ್ಶೆ ಮಾಡಿ, ಓದುಗನನ್ನು ವಿಸ್ಮಯದಿಂದಲೇ ಈ ಕೃತಿಯನ್ನು ಓದುವ ಜಾಡಿಗೆ ಸೆಳೆಯುವಂತೆ ಮಾಡಿರುವ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರ ಹೆಚ್ಚುಗಾರಿಕೆ ಅಭಿನಂದನೀಯ.



‘ಮನದೊಂದಿಗೆ ಮಾತುಕತೆ’:

ವಿವಿಧ ಅಭಿರುಚಿಯ ಮನಸ್ಸುಗಳೊಂದಿಗೆ ಸಂವಾದಿಸಬಲ್ಲ ಕೃತಿ

♦ *ಡಾ. ಎಚ್. ಎಸ್. ಶಿವಪ್ರಕಾಶ*

ಅಸ್ಸಾಂನ ಪ್ರಸಿದ್ಧ ಹಿರಿಯ ಕವಿ ಶ್ರೀ ನವಕಾಂತ ಬರೂವ ಅವರು ಒಮ್ಮೆ ನನ್ನನ್ನು ಕೇಳಿದರು: ‘ನಿಮ್ಮ ಶಾಲೆ-ಕಾಲೇಜುಗಳಲ್ಲಿ ಅತ್ಯಂತ ಜನಪ್ರಿಯರಾಗಿರುವ ಕನ್ನಡದ ಕವಿ ಯಾರು?’ ನಾನೆಂದೆ, ‘ಪ್ರೊ. ಕೆ. ಎಸ್. ನಿಸಾರ್ ಅಹಮದ್.’ ನಮ್ಮ ಕಾಲೇಜುಗಳಲ್ಲಿ ನಡೆಯುವ ಎಷ್ಟೋ ಸಭೆ-ಸಮಾರಂಭಗಳಲ್ಲಿ ಅವರ ಹಾಡುಗಳನ್ನು ಪ್ರತಿ ವರ್ಷ ಹಾಡುವುದನ್ನು ಕೇಳುತ್ತಲೇ ಇದ್ದೇವೆ. ಅಲ್ಲದೆ ಭಾವಗೀತೆ, ಸುಗಮ ಸಂಗೀತ ಸ್ಪರ್ಧೆಗಳ ಸಂದರ್ಭಗಳಲ್ಲಿ ಇವರ ಹಾಡುಗಳನ್ನು ಅನೇಕರು ಹಾಡಿರುತ್ತಾರೆ. ನಮ್ಮ ಮನೆಯ ಹತ್ತಿರ ಒಂದು ಇಂಗ್ಲಿಷ್ ಮಾಧ್ಯಮದ ಶಾಲೆ ಇದೆ. ಅಲ್ಲಿ ಕೂಡ, ವಿಶೇಷ ಸಮಾರಂಭಗಳಲ್ಲಿ ನಿಸಾರರ ಹಾಡುಗಳನ್ನು ಮಕ್ಕಳು ಅಭ್ಯಾಸ ಮಾಡುತ್ತಿರುತ್ತಾರೆ. ಬಹುಶಃ ಅವರಿಗೆ ಕವಿ ಯಾರೆಂದು ಗೊತ್ತಿದೆಯೋ ಇಲ್ಲವೋ ತಿಳಿದಿಲ್ಲ.’ ಇನ್ನಷ್ಟು ಕೇಳಿದ ಮೇಲೆ ಬರೂವ ಅವರು ಹೇಳಿದರು: ‘ಅಂತಹ ಕವಿಗಳಿಗೆ ಸಮಾಜದಲ್ಲಿ ಹೆಚ್ಚಿನ ಜವಾಬ್ದಾರಿ ಇರುತ್ತೆ. ಯಾಕೆಂದರೆ, ಅಂಥ ಕವಿಗಳ ಬರವಣಿಗೆಯ ಮೂಲಕವೇ ಕಲಿತ ವರ್ಗದವರ ಸೂಕ್ಷ್ಮ ಪ್ರಜ್ಞೆ ರೂಪುಗೊಳ್ಳುವುದು. ಅಲ್ಲದೆ, ಆ ಜಾಯಮಾನದ ಕವಿಗಳೇ ಮಾರ್ಕೆಟ್ಟಿನ ಗಿಜಿಗಿಜಿ ಹಾಗೂ ದಂತಗೋಪುರಗಳ ಮಧ್ಯದ ಕೊಂಡಿಯಾಗಿರುವವರು’

ಕೆಲವು ವರ್ಷಗಳ ಹಿಂದೆ ಪ್ರೊ. ನಿಸಾರ್ ಅಹಮದ್ ಅವರ ‘ಸಮಗ್ರ ಕಾವ್ಯ’ ಬೆಳಕಿಗೆ ಬಂದ ಸಂದರ್ಭದಲ್ಲಿಯೇ

ಅವರ ಗದ್ಯ ಬರಹಗಳ ಸಂಗ್ರಹ 'ಮನದೊಂದಿಗೆ ಮಾತುಕತೆ' (1991) ಕೂಡ ಬಿಡುಗಡೆಯಾಯಿತು.

ಪ್ರೊ. ನಿಸಾರ್ ಅಹಮದ್ ಅವರ ವಿವಿಧ ವಿಷಯಗಳನ್ನು ಕುರಿತ ಪ್ರಬಂಧಗಳು 'ಪ್ರಜಾಮತ'(1990)ದಲ್ಲಿ ಧಾರಾವಾಹಿ ರೂಪದಲ್ಲಿ ಪ್ರಕಟಗೊಂಡಿದ್ದವು. ಇಂಥ ಮೂವತ್ತು ಪ್ರಬಂಧಗಳ ಸಂಗ್ರಹ 'ಮನದೊಂದಿಗೆ ಮಾತುಕತೆ'. ಈ ಲೇಖನ ಮಾಲೆ ಸಾಮಾನ್ಯ ಓದುಗರಿಗೆ ಸಾಕಷ್ಟು ಪ್ರಿಯವಾಗಿದ್ದಲ್ಲಿ ಆಶ್ಚರ್ಯವಿಲ್ಲ. ಯಾಕೆಂದರೆ ವಸ್ತುಗಳ ಆಯ್ಕೆಯಲ್ಲಿ ಅಷ್ಟೊಂದು ವೈವಿಧ್ಯ ಇದೆ. ಕೆಲವು ವೈಯಕ್ತಿಕ ಪ್ರಬಂಧಗಳಾದರೆ, ಇನ್ನು ಕೆಲವು ಬೇರೆ ಬೇರೆ ಥರದ ವಿಮರ್ಶಾತ್ಮಕ ಪ್ರಬಂಧಗಳು. ಕೆಲವು ಜೀವನ ಚರಿತ್ರೆಯ ರೂಪದವು. ಜೊತೆಗೆ ಕೇವಲ ವಿವರಣಾತ್ಮಕ ರೂಪದ ಲೇಖನಗಳೂ ಇದರಲ್ಲಿವೆ.

'ನವ್ಯ'ದಿಂದ ಪ್ರಭಾವಿತರಾಗಿದ್ದೂ ಜನರನ್ನು ಮುಟ್ಟುತ್ತಿರುವಂಥ ಕವಿಯಾಗಿಯೇ ಉಳಿದುಕೊಂಡ ಕೆಲವೇ ಕನ್ನಡ ಕವಿಗಳಲ್ಲಿ ನಿಸಾರ್ ಅಹಮದ್ ಒಬ್ಬರು. ಈಗ ಫ್ಯಾಷನ್ ಎನಿಸಿಕೊಂಡ ವಿಮರ್ಶೆಯೆಂಬ ಧರ್ಮಶಾಸ್ತ್ರದ ಪ್ರಕಾರ ಇಂಥ ಒಂದು ಗುಣ ಕವಿಯ ಸೀಮಿತ ಪ್ರತಿಭೆಗೆ ಉದಾಹರಣೆ ಎಂಬ ಮಾತಿದೆ. ಆದರೆ ಇದೇ ಸೀಮಿತ ಪ್ರತಿಭೆಯೇ ನಿಸಾರರು ಬಹಳ ಮಂದಿ ಓದುಗರಿಗೆ, ಅಂದರೆ ವಿಮರ್ಶಕರ ಗುಂಪಿನಿಂದ ಭೇಷ್ ಅನಿಸಿಕೊಂಡ ಕಾವ್ಯಾತ್ಮಕ ಕಾವ್ಯದ ಬಗ್ಗೆ ನಿರಾಸಕ್ತಿ ಉಳ್ಳಂಥ ಓದುಗರಿಗೆ, ಆಪ್ತರಾಗಲು ಕಾರಣವಾಗಿದೆ. ಇಂಥ ಒಂದು ಗುಣ ಅವರ ಗದ್ಯ ಬರವಣಿಗೆಯಲ್ಲೂ ಹಾಸುಹೊಕ್ಕಾಗಿದೆ. ಈ ಕವಿಗೆ ಪದಗಳೆಂದರೆ ಪ್ರಾಣ. ಶಿಷ್ಟ ಕ್ಲಾಸಿಸಿಸ್ಟ್ ಬರವಣಿಗೆಯ ಶೈಲಿಯಿಂದ ಪ್ರಭಾವಿತರಾಗಿದ್ದರೂ ಇವರ ಬರವಣಿಗೆಯಲ್ಲಿ ಕ್ಲಾಸಿಸಿಸ್ಟೇತರರೂ ಬಳಸಲು ಹೆದರುವಂಥ ಪದಗಳನ್ನು ನಿಸಾರರು ಬಳಸಲು ಹಿಂಜರಿಯುವುದಿಲ್ಲ. ಜೊತೆಗೆ ಹೊಸ ಪದ ಪುಂಜಗಳನ್ನು ಸೃಜಿಸಲು ನಿಸಾರರು ಹಿಂದೇಟು ಹಾಕುವುದಿಲ್ಲ. ಸಂಕ್ಷಿಪ್ತತೆಯಲ್ಲ, ವಿಪುಲತೆ ಅವರ ಪದಗಳ ಸರ್ವವ್ಯಾಪಕ ಗುಣ. ಅವರ ಆಯ್ಕೆಯ ವಿಷಯ ಮತ್ತು ಲೇಖನದ ಶೈಲಿಗಳಲ್ಲಿ ಇದು ಎದ್ದು ಕಾಣುತ್ತದೆ. ಕೆಲವೊಮ್ಮೆ ವಿವರಣಾತ್ಮಕ, ಕೆಲವೊಮ್ಮೆ ಆಲೋಚನಾತ್ಮಕ, ಮತ್ತೆ ಕೆಲವೊಮ್ಮೆ ವಿಶ್ಲೇಷಣಾತ್ಮಕ, ಕೆಲವೊಮ್ಮೆ ವ್ಯಂಗ್ಯ, ಕೆಲವೊಮ್ಮೆ ಪತ್ರಿಕಾ ಶೈಲಿ—ಹೀಗೆ ಈ ಸಂಗ್ರಹ ಬೇರೆ ಬೇರೆ ರೀತಿಯ ಓದುಗರಿಗೆ ಬೇಕಾದ ಬೇರೆ ಬೇರೆ ಆವಶ್ಯಕತೆಗಳನ್ನು ಪೂರೈಸುತ್ತದೆ.

ಇದರಲ್ಲಿ ಉತ್ಕೃಷ್ಟವಾದ ಬವಣಿಗೆಗಳೆಂದರೆ ನಮ್ಮ ಕಾಲದ ಪ್ರಮುಖ ವ್ಯಕ್ತಿಗಳನ್ನು ಕುರಿತ ಲೇಖನಗಳು. ಅದರಲ್ಲೂ, ಒಂದು ಕಾಲದಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರನ್ನು ಕುರಿತದ್ದು. ಇವರು ಸ್ವಾತಂತ್ರ್ಯೋತ್ತರ ಕರ್ನಾಟಕದ ಚರಿತ್ರೆಯಲ್ಲಿ ಪೌರಾಣಿಕ ವ್ಯಕ್ತಿಯೇನೋ ಎನ್ನುವಷ್ಟು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಇವರು ದಿವಾನರ ಹುದ್ದೆಗೆ ಏರಿದ್ದನ್ನು ಕಂಡು ಹಲುಬಿದವರು ಅನೇಕರು. ಹಾಗಾಗಿ ನಿಷ್ಪಕ್ಷಪಾತಿ ಹಾಗೂ ಜಾತ್ಯತೀತರಾದ ಇಂಥವರನ್ನು ಅನೇಕರು ಜನಾಂಗವಾದಿ ಎಂದು ಕರೆದಿದ್ದುಂಟು. ಶಾಲೆಯೊಂದರ ಆವರಣದಲ್ಲಿದ್ದ ಗಣೇಶನ ವಿಗ್ರಹವನ್ನು ತರಗತಿಯೊಂದರೊಳಗೆ

ವರ್ಗಾಯಿಸಿದ ವಿಷಯವನ್ನು ಜಾತಿವಾದಿಗಳು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಂಡು, ಒಂದು ಅಂತರ್ಯುದ್ಧವನ್ನೇ ನಡೆಸಿದ್ದುಂಟು. ಸ್ವಾರ್ಥಿಗಳಾದ ಕುರುಡು ಜಾತಿವಾದಿಗಳು ಹೆಬ್ಬೆಟ್ಟಿನ ಗಾತ್ರದ ವಿಷಯವನ್ನು ಹೇಗೆ ಬೆಟ್ಟ ಮಾಡಿಬಿಡುತ್ತಾರೆ ಎನ್ನುವುದಕ್ಕೆ ಇದೊಂದೇ ಘಟನೆ ಸಾಕ್ಷಿಯಾಗಬಲ್ಲದು. ಜಯಚಾಮರಾಜೇಂದ್ರ ಒಡೆಯರ್ ಅವರು ಪಟ್ಟಕ್ಕೆ ಬಂದ ಮೇಲಂತೂ ಆಧಾರರಹಿತ ಆಪಾದನೆಗಳಿಂದ ಎಂಥ ಬಿಕ್ಕಟ್ಟು ಒದಗಿತೆಂದರೆ, ಅವರು ಇಲ್ಲಿಂದ ಬಿಡುಗಡೆ ಪಡೆದು ತಮ್ಮ ಸೇವೆಯನ್ನು ಭಾರತದ ಇತರ ಭಾಗಗಳಲ್ಲಿ ಸಲ್ಲಿಸಲು ಬಯಸಿದರು. ಜಯಪುರ ಮಹಾರಾಜರ ಆಸ್ಥಾನದಲ್ಲಿ ತಮ್ಮ ಸೇವಾವಧಿಯನ್ನು ಮುಗಿಸಿದರು. ಜಯಪುರದ ಪ್ರಮುಖ ರಸ್ತೆಯೊಂದು ಈಗಲೂ ಅವರ ಹೆಸರಿನಿಂದಲೇ ಕರೆಯಲ್ಪಡುತ್ತದೆ. ತಮ್ಮ ಕಡೆಯ ದಿನಗಳಲ್ಲಿ ಅವರು ಕರ್ನಾಟಕಕ್ಕೆ ಹಿಂತಿರುಗಿದರು. ಅವರ ಶವ ಸಂಸ್ಕಾರದ ದಿನ ಹಿಂದುವೊಬ್ಬ ದಾರುಣವಾಗಿ ಅಳುತ್ತಿದ್ದ. ಆತ ನಗರದ ಕಬ್ಬನ್‌ಪೇಟೆಯವನು. ಒಮ್ಮೆ ತುಂಬು ಬಸುರಿಯಾದ ಅವನ ಹೆಂಡತಿ ಬಹಳ ಕಷ್ಟದಿಂದ ಬಿಂದಿಗೆಯಲ್ಲಿ ಸಾರ್ವಜನಿಕ ನಲ್ಲಿಯಿಂದ ನೀರು ಹೋರುತ್ತಿದ್ದುದನ್ನು ಸರ್ ಮಿರ್ಜಾ ಇಸ್ಮಾಯಿಲ್ ನೋಡಿದರಂತೆ. ಅಂಥವರನ್ನು ನೋಡಿಯೂ ನೋಡದಂತಿರುವ ಅಥವಾ ಅದಕ್ಕೆ ಪರಿಹಾರ ಒದಗಿಸದೆ ಇರುವಂಥ ವ್ಯಕ್ತಿ ಸರ್ ಮಿರ್ಜಾ ಇಸ್ಮಾಯಿಲ್ ಆಗಿರಲಿಲ್ಲ. ಮರು ಕ್ಷಣವೇ ಆಕೆಯ ಮನೆ ಎದುರಿಗೆ ಒಂದು ನಲ್ಲಿಯನ್ನು ಹಾಕಿಸಿಬಿಟ್ಟರು. ಇಂಥ ಅನೇಕ ಮನ ಮಿಡಿಯುವ ಪ್ರಸಂಗಗಳಿಂದ ತುಂಬಿದ ಜೀವನ ಚರಿತ್ರೆ ರೂಪದ ಬರಹಗಳು ಓದುಗರಿಗೆ ತುಂಬಾ ಪ್ರಿಯವಾಗುತ್ತವೆ. ಪೋಪರು ಉಡುಗೊರೆಯಾಗಿ ಕೊಟ್ಟ ಲಿಮೋಸಿನ್ ಕಾರನ್ನು ಮದರ್ ಥೆರೀಸಾ ಐದು ಲಕ್ಷಕ್ಕೆ ಮಾರಿ ಬಂದ ಹಣವನ್ನು ಬಡವರಿಗಾಗಿ ವಿನಿಯೋಗಿಸಿದ್ದು, ಖಾನ್ ಅಬ್ದುಲ್ ಗಫಾರ್ ಖಾನರು ಜೇಲು ವಾಸವನ್ನು ಧೈರ್ಯವಾಗಿ ಎದುರಿಸಿದ್ದು ಮುಂತಾದವು ನಿಜವಾಗಿಯೂ ಮನ ಕಲಕುವಂಥವು.

ಈ ಸಂಗ್ರಹದಲ್ಲಿ ಕೆಲವಾರು ಸಾಹಿತ್ಯಕ ಪ್ರಬಂಧಗಳೂ ಸೇರಿವೆ. ನವೋದಯದ ಪ್ರಮುಖ ಲೇಖಕರಾದ ಮಾಸ್ತಿ, ವಿ.ಸೀ., ಗೋಕಾಕ್ ಹಾಗೂ ಎಂ.ಆರ್.ಶ್ರೀಗಳ ಜೀವನ ಹಾಗೂ ಕೃತಿಗಳ ಬಗ್ಗೆ ಪರಿಶೀಲಿಸಲಾಗಿದೆ. ಇವೆಲ್ಲದರಲ್ಲಿ ಎಂ.ಆರ್.ಶ್ರೀಯವರ ಅಪಾರ ವಿದ್ವತ್ತು ಹಾಗೂ ಅನುಪಮ ಶಾಂತ ವೀರ ಗುಣವನ್ನು ಕುರಿತ ಪ್ರಬಂಧ ಅವಿಸ್ಮರಣೀಯ ವಾಗಿದೆ. ಅನೇಕ ಅಡೆತಡೆ, ತೊಂದರೆ, ತಾಪತ್ರಯಗಳ ನಡುವೆಯೇ ನಿಜವಾದ ಜ್ಞಾನ ಸಂಪಾದನೆಯ ಬಗೆಗಿದ್ದ ಎಂ.ಆರ್.ಶ್ರೀ ಅವರ ಒಲವು ಆಶ್ಚರ್ಯ ಹುಟ್ಟಿಸುವಂಥದು.

ಇನ್ನು ಕೆಲವು ಪ್ರಬಂಧಗಳು ನಮ್ಮ ಕಾಲಕ್ಕೆ ಅಂಟಿರುವ ಕೆಲವೊಂದು ಪಿಡುಗು ಗಳಾದ ಸಾಮಾಜಿಕ ಜೀವನದ ದುರಾಚಾರ, ಪ್ರಕೃತಿ ಮಾಲಿನ್ಯ ಮುಂತಾದ ವಿಷಯಗಳನ್ನು ಕುರಿತು, ಅವುಗಳಿಂದ ಉದ್ಭವವಾಗುವ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತವೆ. ಲೇಖಕರು ಆಗಾಗ್ಗೆ ನೆಹರು ಅವರ ಕಾಲವನ್ನು ನೆನಪಿಸಿಕೊಳ್ಳುತ್ತಿರುತ್ತಾರೆ. ಅವರಿಗೆ ಹೆಚ್ಚು ಪ್ರಿಯರಾಗಿರುವ ಲೇಖಕರು ಕೂಡ ಇದೇ ಆದರ್ಶಗಳನ್ನು ಮೈಗೂಡಿಸಿಕೊಂಡವರು. ಈ ಒಂದು ದೃಷ್ಟಿಕೋನದಿಂದ ನೋಡಿದಾಗ, ನೆಹರೂ ಕಾಲದ ಅನಂತರ ಆದ ಬದಲಾವಣೆ ಗಳನ್ನು ಅಧೋಗತಿ ಎಂದೇ ಹೇಳಬಹುದು. ಹಾಗಾಗಿ ಈ ಬರಹಗಳಲ್ಲಿ ಹಿಂದಿನ ಆ

ದಿನಗಳ ಬಗ್ಗೆ ಸೆಳೆತ ಹಾಗೂ ಇಂದಿನ ಬಗ್ಗೆ ಅಸಮಾಧಾನ ಎದ್ದು ಕಾಣುತ್ತದೆ.

ಈ ಪ್ರಬಂಧಗಳನ್ನು ಕವಿಯೊಬ್ಬರು ಬರೆದಿರುವರಾದ್ದರಿಂದ, ಈ ಗದ್ಯ ಕೃತಿಯಲ್ಲೂ ಅನೇಕ ಉತ್ಕೃಷ್ಟ ಪ್ರತಿಮೆಗಳ ಪ್ರಯೋಗಗಳನ್ನು ಕಾಣಬಹುದು. ನಿಸಾರರು ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಇರುವ ನೂಕುನುಗ್ಗಲನ್ನು 'ತುಂಬಿದ ತಿಪ್ಪೆಗೆ ನೊಣಗಳ ಜಾತ್ರೆ' ಎಂದು ಬಣ್ಣಿಸುತ್ತಾರೆ. ಆಧುನಿಕ ವೈಜ್ಞಾನಿಕ ಬೆಳವಣಿಗೆಯನ್ನು ಎರಡು ತಲೆಯ ಗಂಡಭೇರುಂಡಕ್ಕೆ ಹೋಲಿಸುತ್ತಾರೆ. ಯಾಕೆಂದರೆ ಒಂದು ತಲೆ ಸರ್ವತೋಮುಖಿ ಬೆಳವಣಿಗೆಯ ಪ್ರತೀಕವಾದರೆ, ಇನ್ನೊಂದು ಸರ್ವತೋಮುಖಿ ವಿನಾಶದ ಪ್ರತೀಕದಂತೆ. ಪ್ರಜಾಪ್ರಭುತ್ವವನ್ನು ಮಲಿನಗೊಳಿಸುತ್ತಿರುವ ಭಯೋತ್ಪಾದಕರನ್ನು ಶೇಖ್ ಸಾದಿ ಅವರ ಮಾತುಗಳಲ್ಲಿ ಅತ್ತರಿನ ಕೊಳಕ್ಕೆ ಬೀಳುವ ನಾಯಿಗಳಿಗೆ ಹೋಲಿಸುತ್ತಾರೆ.

ಒಂದು ಮಾತಿನಲ್ಲಿ ಹೇಳಬೇಕೆಂದರೆ, 'ಮನದೊಂದಿಗೆ ಮಾತುಕತೆ' ಎನ್ನುವ ಈ ಕೃತಿ ವಿವಿಧ ಆಸಕ್ತಿ, ಅಭಿರುಚಿಯುಳ್ಳ ಅನೇಕರ ಮನಗಳೊಂದಿಗೆ ಮಾತಾಡಬಲ್ಲುದು.

ಅಂದಹಾಗೆ, ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕೆಡೆಮಿ ೧೯೯೨ರ ಸೃಜನೇತರ ಪುಸ್ತಕ ವಿಭಾಗದಲ್ಲೇ ಸರ್ವಶ್ರೇಷ್ಠ ಗ್ರಂಥವೆಂದು ಮಾನ್ಯ ಮಾಡಿ ಬಹುಮಾನ ನೀಡಿರುವುದು ಗಮನಾರ್ಹ ಹಾಗೂ ಯಥೋಚಿತ ಸಂಗತಿ ಎನ್ನಿಸುತ್ತದೆ.

ಐಹಿಕ ಬಾಳಿನ ಎಲ್ಲದಕ್ಕೂ ಒಂದು ಗುಹ್ಯತರ ಗಹನ ಹೊದಿಕೆಯಿರುವುದನ್ನು ಮನಗಾಣದ ಕವಿ, ಕಾಣಿಸಿಕೆಯ ಪಡಿಯಚ್ಚುಗಳನ್ನು ತಯಾರಿಸುವುದರಲ್ಲಿ ಮಾತ್ರ ಕೃತಾರ್ಥನಾಗಬಲ್ಲ. ತನ್ನ ಒಳನೋಟ ಮತ್ತು ಅಭಿವ್ಯಂಜನೆಯ ಅನನ್ಯತೆಯಿಂದ ಇಂದ್ರಿಯ ಗೃಹೀತ ಆವರಣ ಸತ್ಯದ ಹಾಲಿ ಸ್ವರೂಪವೇ ಬದಲಾಗಿ, ಅದು ಕಾಲ ದೇಶಗಳ ಒದಗೆಯಲ್ಲಿ ಮುಂಬರಿಯುವ ವೇಗವನ್ನು ಪಡೆಯಬಲ್ಲದು. ಅವುಗಳ ಪದೇ ಪದೇ ಓದಿನಿಂದ ನಮಗೆಂದೂ ಬಿಡಿಚಲು ಬಡಿಯುವುದಿಲ್ಲ.

(ಕವಿಯ ರಹಸ್ಯ ಗ್ರಹಿಕೆ)

✧ ✧ ✧

ಇಂದಿನ ಸಮಾಜದ ವಿಘಟಕ ಪ್ರವೃತ್ತಿಗೆ, ಎಕ್ಕಸತ್ಕತೆಗೆ ಸ್ವೇಚ್ಛೆ ಬಹುಮಟ್ಟಿಗೆ ಕಾರಣ. ವಯಃಪರಿಣತರ ವಿವೇಕ ವಚನದ ಚುಕ್ಕಾಣಿ ಬೇಕಿಲ್ಲ; ಅನುಭವದ ಉತ್ತರಮುಖಿ ತ್ಯಾಜ್ಯ. ಗುರುವಿಲ್ಲ, ಗುರಿಯಿಲ್ಲ. ಸ್ವೈರವೇ ಸರ್ವಸ್ವ.

(ಇಂದಿನ ಸಮಾಜ)



‘ಮನದೊಂದಿಗೆ ಮಾತುಕತೆ’:
ಅಂತಃಕರಣಪೂರ್ವಕ ಮಾನವೀಯ ಕಳಕಳಿಯ ಅನುಪಮ ಅಭಿವ್ಯಕ್ತಿ

♦ ಪ್ರೊ. ಎನ್. ಬಿ. ಚಂದ್ರಮೋಹನ್

ಕನ್ನಡ ಕಾವ್ಯ ಕ್ಷೇತ್ರದಲ್ಲಿ ಕವಿ ನಿಸಾರ್ ಅಹಮದ್ ಅವರ ಹೆಸರು ಹಿರಿದಾದದ್ದು. ಕಾವ್ಯದ ಜೊತೆಗೆ ತಮ್ಮ ವಿಮರ್ಶಾ ಲೇಖನಗಳಿಂದ ಮತ್ತು ಷೇಕ್ಸ್‌ಪಿಯರ್ ನಾಟಕಗಳ ಅನುವಾದ ಗಳಿಂದ ಅವರು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತ ಗೊಳಿಸಿದ್ದಾರೆ.

ಪ್ರಸ್ತುತ ‘ಮನದೊಂದಿಗೆ ಮಾತುಕತೆ’ ಕೃತಿ ಪ್ರೊ. ನಿಸಾರರ ವೈಚಾರಿಕ ಲೇಖನಗಳ ಸಂಕಲನ.

‘ಮನದೊಂದಿಗೆ ಮಾತುಕತೆ’ ಶೀರ್ಷಿಕೆಯೇ ಸ್ವತಃ ಅರ್ಥಪೂರ್ಣವಾಗಿದ್ದು, ಲೇಖಕರ ಆಂತರಿಕ ಅಭಿಲಾಷೆಯನ್ನು ಧ್ವನಿಸುತ್ತದೆ. ಅವರದೇ ಅಭಿಪ್ರಾಯವನ್ನು ಉಲ್ಲೇಖಿಸಿ ಹೇಳುವುದಾದರೆ ‘ಇವು ವಿಚಾರಪರ ಮತ್ತು ವಿಮರ್ಶಾತ್ಮಕ ಲೇಖನಗಳ ವರ್ಗಕ್ಕೆ ಸೇರಿದವು. ಲೇಖಕನ ಒಲವು ಓಲುವೆ ಗಳನ್ನು, ಅಭಿರುಚಿಗಳನ್ನು ದಿಕ್ಕುದೆಸೆಗಳನ್ನು ನಿರ್ದೇಶಿಸು ತ್ತವೆ... ಮನಸ್ಸಿನಲ್ಲಿ ಬಹು ಕಾಲದಿಂದ ಅಮೂರ್ತವಾಗಿ ನೆಲೆಸಿದ್ದ ವಿಚಾರ ವಿವೇಚನೆಗಳ ನೆರವಿನಿಂದ ಆಕಾರ ಪಡೆದಿವೆ.’

ತಮ್ಮ ಎಲ್ಲ ಸೃಜನ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಆಳವಾದ ಅಂತರ್ಮುಖತೆಯನ್ನು ಗುರುತಿಸಿಕೊಳ್ಳುವ ಲೇಖಕರು ಗದ್ಯರಚನೆಯಲ್ಲಿ ವೈಚಾರಿಕತೆಯ ಜತೆಗೆ ಭಾವ ತನ್ಮಯತೆ ಇರಬೇಕೆಂದು ಬಯಸುತ್ತಾರೆ. ಈ ಲೇಖನಗಳನ್ನು ಬರೆದಾದ

ಮೇಲೆ ತಮಗೆ ದೊರೆತ ಆನಂದದಲ್ಲಿ ಓದುಗನೂ ಪಾಲುದಾರನಾಗಲೆಂಬ ಅಪೇಕ್ಷೆ ಅವರದು. ಇಲ್ಲಿನ ಬಹಳಷ್ಟು ಲೇಖನಗಳು ಸಾಮಯಿಕವಾಗಿ ಲೇಖಕರ ಮನೋಗತಗಳನ್ನು ವ್ಯಕ್ತಪಡಿಸುವ ರಚನೆಗಳಾಗಿದ್ದರೂ ಸಾರ್ವಕಾಲಿಕ ಪ್ರಸ್ತುತತೆಯನ್ನೂ ಗಳಿಸಿಕೊಳ್ಳುವ ವಿಶಿಷ್ಟತೆಯನ್ನು ಪಡೆದಿವೆ.

ಕನ್ನಡದ ಹಿರಿಯ ಚೇತನಗಳಾದ ಮಾಸ್ತಿ, ಎಂ.ಆರ್.ಶ್ರೀ., ವಿ.ಸೀ. ಮತ್ತು ವಿ. ಕೃ. ಗೋಕಾಕ್‌ರ ಬಗ್ಗೆ; ಹಾಗೆಯೇ ಐತಿಹಾಸಿಕವಾಗಿ ಮತ್ತು ಸಾಮಾಜಿಕವಾಗಿ ಮಹತ್ವದ ವ್ಯಕ್ತಿಗಳೆನ್ನಿಸಿರುವ ಟಿಪ್ಪೂ ಸುಲ್ತಾನ್, ಖಾನ್ ಅಬ್ದುಲ್ ಗಫಾರ್ ಖಾನ್, ಸರ್ ಮಿರ್ಜಾ ಇಸ್ಮಾಯಿಲ್, ಜವಾಹರಲಾಲ ನೆಹರು, ಮದರ್ ತೆರೆಸ ಅವರ ಬಗ್ಗೆ ಲೇಖನಗಳಿದ್ದು, ಅವು ಕೇವಲ ವ್ಯಕ್ತಿಚಿತ್ರಗಳಾಗದೆ ಅವರ ಬದುಕು ಮತ್ತು ಕೃತಿಗಳನ್ನು ಆತ್ಮೀಯ ಶೈಲಿಯಲ್ಲಿ ಬೆಲೆ ಕಟ್ಟುವ ಕೆಲಸವನ್ನೂ ಮಾಡುತ್ತವೆ. 'ವಿನಯವಂತ ವಿ.ಸೀ.', 'ಸದಭಿರುಚಿಯ ಸಾಹಿತ್ಯಕಾರ ಮಾಸ್ತಿ' ಮೊದಲಾದ ಲೇಖನಗಳಲ್ಲಿ ಲೇಖಕರ ವಿಮರ್ಶನ ಪ್ರಜ್ಞೆ ಹಿತಮಿತವಾಗಿ ಮಿಳಿತಗೊಂಡು ಅವರ ಸಾಹಿತ್ಯ ಮತ್ತು ಬದುಕುಗಳೆರಡನ್ನೂ ವಿಶ್ಲೇಷಿಸುತ್ತವೆ. ಹಾಗೆಯೇ ಗೋಕಾಕರ ಸಾಹಿತ್ಯದಲ್ಲಿ ಪೂರ್ಣತೆ ಮತ್ತು ಸಂಕೀರ್ಣತೆಗಳ ವ್ಯಾಪಕತೆಯನ್ನು ನಿಸಾರರು ಗುರುತಿಸುತ್ತಾರೆ.

ಸಾಹಿತ್ಯ ಚಿಂತನೆಯನ್ನೇ ಮುಖ್ಯವಾಗಿಸಿಕೊಂಡ ಲೇಖನಗಳೂ ಕೆಲವಿದೆ. ಆದರೆ ಅಲ್ಲಿಯೂ ಲೇಖಕರ ಗಮನ ಸಾರ್ವತ್ರಿಕ ವಸ್ತು ಮತ್ತು ವಿಷಯಗಳ ಕಡೆಗೇನೇ. 'ಸಾಮಾನ್ಯನಿಗೆ ಸಾಹಿತ್ಯ ಸಮಾರಾಧನೆ' ಲೇಖನದಲ್ಲಿ 'ಒಳ್ಳೆಯ ಸಾಹಿತ್ಯ ಗ್ರಂಥಗಳನ್ನು ಓದುವ, ಓದಿದ್ದನ್ನು ಇತರರಿಗೆ ಹಂಚುವ ಹುಮ್ಮಸ್ಸಿದ್ದ ಕಾಲವೊಂದಿತ್ತು. ಆದರೆ ಬದಲಾಗುತ್ತಿರುವ ಇಂದಿನ ಜೀವನ ವಿಧಾನಕ್ಕೆ ಸಾಹಿತ್ಯದ ಆವಶ್ಯಕತೆ ಇದೆಯೆ?' ಎಂಬ ಪ್ರಶ್ನೆಯನ್ನು ಹಾಕಿಕೊಂಡು ಇಂದಿನ ಅಗತ್ಯಗಳಿಗೆ ಅನುಸಾರವಾಗಿ ಅದನ್ನು ಪೂರೈಸುವ ಬಗೆ ಹೇಗೆಂಬುದನ್ನು ವಿಶ್ಲೇಷಿಸುತ್ತಾರೆ. 'ಬಾಳಿನ ಅನಿತ್ಯತೆ ಮತ್ತು ವಿಜ್ಞಾನದತ್ತ ಸುಖೋಪಭೋಗಗಳ ಕ್ಷಣಿಕತೆಗಳನ್ನು ಮನದಟ್ಟಾಗಿಸಲು, ಆತ್ಮ ಸಂಪತ್ತಿನ ಮೇಲ್ಮೆ ಗಳನ್ನು ಅರಿವಾಗಿಸಲು, ಅರೆ ಮಂಪರಿನ ಸ್ಥಿತಿಯಿಂದ ಎಚ್ಚರಿಸಲು ಸಾಹಿತ್ಯ ಅಗತ್ಯವಾಗು ತ್ತದೆ. ಸಾಹಿತ್ಯಕ್ಕೆ ಇಂಥ ಹೊಣೆಗಾರಿಕೆ ಇರುವುದರಿಂದಲೇ ಬುದ್ಧಿಜೀವಿಗಳ ಜವಾಬ್ದಾರಿ ಹೆಚ್ಚಿದೆ'ಯೆಂದು ಎಚ್ಚರಿಸುತ್ತಾರೆ.

ಇವರ ಎಲ್ಲ ಲೇಖನಗಳಲ್ಲೂ ಮಿಡಿಯುವ ಸಾಮಾನ್ಯ ಕಾಳಜಿಯೆಂದರೆ ಅಂತಃಕರಣಪೂರ್ವಕವಾದ ಮಾನವೀಯ ಕಳಕಳಿ. ಬೌದ್ಧಿಕವಾಗಿ, ನೈತಿಕವಾಗಿ, ಭಾವುಕವಾಗಿ ದಿವಾಳಿಯಾಗುತ್ತಿರುವ ಇಂದಿನ ಬದುಕಿನ ಬಗ್ಗೆ, ಆಧುನಿಕ ಮನುಷ್ಯನ ಬಗ್ಗೆ ಲೇಖಕರು ಚಿಂತಿಸುತ್ತಾರೆ. ವಿಚಾರಗಳನ್ನು ಮಂಡಿಸುವಾಗಲೂ ತಮ್ಮ ಹೃದ್ಗತ ಶೈಲಿಯನ್ನು ಉಳಿಸಿಕೊಂಡೇ ವೈಚಾರಿಕತೆಯ ಮೊನಚನ್ನು ಕಾಯ್ದುಕೊಳ್ಳುತ್ತಾರೆ. ಲೇಖನಗಳಿಗೆ ಅವರು ಕೊಡುವ ಹೆಸರುಗಳು ಕೂಡಾ ಮನ ಸೆಳೆಯುವಂಥವು. 'ಸಾರೊಳಗಿನ ಸೌಟು', 'ತಪಕೊಲ್ಲದುದು ತಾಯ್ತನಕೆ ಸಾಧ್ಯವೆನಿಸಿದ ಮದರ್ ತೆರೆಸ', 'ಮಠಾಧೀಶರ

ಮನೋಗತಗಳಿಗೆ ಸ್ವಾನುಭವದ ಸಿಂಧುತ್ವ', 'ಕರುಬಿನ ಕಡಲಿನ ನಡುವೆ ನೇಹದ ನಡುಗಡ್ಡೆಗಳು' ಮುಂತಾದುವನ್ನು ಈ ದೃಷ್ಟಿಯಿಂದ ಗಮನಿಸಬಹುದು. ಬುದ್ಧಿಯಲ್ಲಿ ಮೆರೆದಷ್ಟೂ ಹೃದಯವಂತಿಕೆಯಲ್ಲದೆ ಬಡವನಾಗಿರುವ ಆಧುನಿಕ ಮನುಷ್ಯನ ಸ್ಥಿತಿಯನ್ನು ಸಂಕೇತಿಸಲು ಕುವೆಂಪು ಅವರ ಪದ್ಯದ ಸಾಲಿನಲ್ಲಿ ಉಲ್ಲೇಖವಾದ 'ಸಾರೊಳಗಿನ ಸೌಟು' ಹೆಸರಿನ ಲೇಖನದಲ್ಲಿ ವಿಶ್ಲೇಷಿಸುತ್ತಾರೆ. ಹಲವು ಹತ್ತು ವಿಷಯಗಳಲ್ಲಿ ತಿಳಿವಳಿಕಸ್ಥನಾಗಿರ ಬಹುದಾದ ಇಂದಿನ ಪ್ರಜ್ಞಾಶಾಲಿ ವ್ಯಕ್ತಿ, ಅಪರಿಪೂರ್ಣನಾಗಿರಬಹುದೆಂಬ ಚರ್ಚೆ ಇಲ್ಲಿದೆ. ಪ್ರಜ್ಞಾವಂತನಾದವನು ಇತರರಿಗೆ ಪ್ರಸನ್ನತೆ ಮತ್ತು ಮುದವನ್ನು ನೀಡುವ ರಸವಂತನೂ ಆಗಿ, ಸ್ನೇಹ-ಸಹವಾಸಗಳನ್ನು ಸವಿಯುವ ರಸಿಕನೂ ಆಗಿರಬೇಕಾಗುತ್ತದೆ. ಇಲ್ಲವಾದಲ್ಲಿ ಬದುಕಿನ ಎಲ್ಲ ಸೊಗಸುಗಳ ಮತ್ತು ಜ್ಞಾನದ ನಡುವೆ ಮರವಟ್ಟ ಸೌಟಾಗುತ್ತಾನೆ. ಹಾಗಾಗದೆ ಅವನು ಪಟುವಾದ ನಾಲಗೆಯಾಗಲೆಂದು ಲೇಖಕರು ಅಪೇಕ್ಷಿಸುತ್ತಾರೆ.

'ನೀನಾರಿಗಾದೆಯೊ ಎಲೆ ಮಾನವ?' ಲೇಖನ, ನಿಸಾರರ ಸ್ವಾನುಭವವೊಂದನ್ನು ಮಾರ್ಮಿಕವಾಗಿ ಪ್ರಸ್ತಾಪಿಸುತ್ತಾ ಮಾನವೀಯ ದುರಂತವನ್ನು ಮನಗಾಣಿಸುತ್ತದೆ. ಕೇವಲ ತಮಟೆ ಹೊಡೆಯಲು ಮಾತ್ರ ಊರೊಳಗೆ ಪ್ರವೇಶ ಮಾಡಲು ಅನುಮತಿಯಿರುವ ಒಬ್ಬ ವ್ಯಕ್ತಿ, ಉಳಿದಂತೆ ಊರೊಳಗೆ ತಲೆ ಹಾಕಲೂ ಹೆದರುತ್ತಾನೆ. ಆದರೆ ಅವನ ನಾಯಿ ಮಾತ್ರ ಸಲೀಸಾಗಿ ಊರಿನ ಎಲ್ಲ ಕಡೆಗೂ ನುಗ್ಗಿ ಬರುತ್ತದೆ. ಲೇಖನದ ಅಂತ್ಯದಲ್ಲಿ ಇನ್ನೆಷ್ಟು ಬುದ್ಧ ಗಾಂಧಿ ಅಂಬೇಡ್ಕರರು ಈ ದೇಶದ ಉದ್ಧಾರಕ್ಕಾಗಿ ಜನ್ಮ ತಾಳಬೇಕೋ ಎಂಬ ಉದ್ಗಾರ ಓದುಗನಲ್ಲೂ ಪ್ರತಿಧ್ವನಿಸುತ್ತದೆ.

'ಮೀನು ಕೊಳೆಯುವುದು ಇತ್ಯಾದಿ' ವೈಚಾರಿಕ ಬರಹದಲ್ಲಿ ತನ್ನ ಲೋಭವನ್ನು ಸಮರ್ಥಿಸುವ ನೌಕರನೊಬ್ಬ 'ಮೀನು ಕೊಳೆಯುವುದು ತಲೆಯಿಂದಲೇ ಹೊರತು ಬಾಲದಿಂದಲ್ಲ' ಎಂದು ಕಾವ್ಯಾತ್ಮಕವಾಗಿ ವಿಶ್ಲೇಷಿಸಿ, ತನ್ನ ಮೇಲಿನವರ ಭ್ರಷ್ಟತೆಯ ಕಡೆಗೆ ಕೈ ತೋರಿಸುತ್ತಾನೆ. ಮೇಲುನೋಟಕ್ಕೆ ಇದು ನಗೆಯನ್ನು ತಂದರೂ ಆಳದಲ್ಲಿ ನಮ್ಮ ಭ್ರಷ್ಟ ಸಮಾಜದ ದುರಂತವನ್ನು, ಸಾರ್ವಜನಿಕ ಜೀವನದ ನೈತಿಕ ಅವನತಿಯನ್ನು ತೋರಿಸುತ್ತದೆ. 'ಅನುಷ್ಠಾನಕ್ಕೆ ಅವಸರಿಸುವ ಅಭ್ಯಾಸಗಳು' ಮತ್ತು 'ಕರುಬಿನ ಕಡಲಿನ ನಡುವೆ ನೇಹದ ನಡುಗಡ್ಡೆಗಳು' ಲೇಖನಗಳು ನಿಸಾರರ ಜೀವನ ಪ್ರೀತಿಯ ಫಲಿತಗಳಾಗಿವೆ.

ಸ್ವತಃ ಶಿಕ್ಷಕರೂ ಆಗಿರುವ ಲೇಖಕರು ಅಧ್ಯಾಪಕರಾಗಿ ದೀರ್ಘಕಾಲದ ಅನುಭವವುಳ್ಳವರು. ಶಿಕ್ಷಣ ಕ್ಷೇತ್ರದ ಬಗೆಗಿನ ಅವರ ಚಿಂತನೆಗಳು 'ತುಂಬಿದ ತಿಪ್ಪೆಗೆ ನೊಣಗಳ ಜಾತ್ರೆ'ಯಲ್ಲಿ ವ್ಯಕ್ತವಾಗುತ್ತವೆ. ಕನ್ನಡ ಮಾಧ್ಯಮದ ಅಗತ್ಯದ ಬಗ್ಗೆ ಅವರು 'ಕನ್ನಡ ಮಾಧ್ಯಮಕ್ಕೆ ತೊಡಕಾಗಿರುವುದು ಇಂಗ್ಲಿಷ್ ಮಾಧ್ಯಮ ಮಾತ್ರವಲ್ಲ, ಕನ್ನಡ ಶಾಲೆಗಳ ಶೋಚನೀಯ ಅವಸ್ಥೆ ಕೂಡ' ಎಂಬ ವಾಸ್ತವ ಸಂಗತಿಯನ್ನೂ ಪ್ರತಿಪಾದಿಸುತ್ತಾರೆ. ಶಿಕ್ಷಣ ಮಾಧ್ಯಮದ ದೆಸೆಯಿಂದಾಗಿ ನಮ್ಮ ಸಮಾಜದಲ್ಲಿ ಉಂಟಾಗಿರುವ ತರತಮ ಭೇದವನ್ನು ಗಮನಿಸುವ ಲೇಖಕರು ಶಿಕ್ಷಣದಿಂದ ಸಾಮಾಜಿಕ ಸಮಾನತೆ ಸಾಧ್ಯವಾಗದ ಹೊರತು ಮುಕ್ತಿಯಿಲ್ಲವೆಂದು ಭಾವಿಸುತ್ತಾರೆ.

ಪ್ರಾಸಂಗಿಕವಾಗಿ 'ಸಾರೊಳಗಿನ ಸೌಟು' ಲೇಖನದಲ್ಲಿ ನಿಸಾರರು ಶಿಕ್ಷಣ ಸಂಸ್ಥೆಗಳ ಬಗ್ಗೆ ಪ್ರಸ್ತಾಪಿಸುವಾಗ 'ಅಂದವಾದ ಕಟ್ಟಡಗಳಿವೆ, ಪ್ರಯೋಗಶಾಲೆಗಳಿವೆ; ಟಿಪ್‌ಟಾಪಾಗಿ ಡ್ರೆಸ್ ಮಾಡುವ ಅಧ್ಯಾಪಕ, ವಿದ್ಯಾರ್ಥಿ ಸಮೂಹವಿದೆ—ಜೀನು, ಲಗಾಮು, ಕಣ್ಣುಪಟ್ಟಿ, ಮೆತ್ತನೆಯ ಆಸನ—ಏನೆಲ್ಲ ಇವೆ; ಜೀವಂತ ಕುದುರೆ ಮಾತ್ರ ಇಲ್ಲ. ಹೀಗಾಗಿ ಹೌಸ್‌ಫುಲ್ ಆಗಿಯೂ ಬಿಕೋ ಎನ್ನಿಸುತ್ತಿವೆ ನಮ್ಮ ವಿದ್ಯಾಲಾಯಗಳು' ಎನ್ನುವ ಮಾರ್ಮಿಕವಾದ ಮಾತುಗಳು ಅರ್ಥಪೂರ್ಣವಾಗಿವೆ.

ಶಿಕ್ಷಣವಾಗಲಿ, ನಿಸರ್ಗವಾಗಲಿ ಎಲ್ಲವೂ ಮನುಷ್ಯನನ್ನು ಪರಿಪೂರ್ಣತೆಯ ಕಡೆಗೆ ಒಯ್ಯುವ ಸಾಧನವಾಗಬೇಕು. ಆಧುನಿಕ ಜಗತ್ತಿನಲ್ಲಿ ಮನುಷ್ಯ ತನಗೆ ದತ್ತವಾಗಿರುವ ನಿಸರ್ಗವನ್ನು ತನ್ನ ಅವಿವೇಕದಿಂದಾಗಿ ಅಸಡ್ಡೆ ಮಾಡಿರುವ ದುರಂತ ಸ್ಥಿತಿ ಒದಗಿದೆ. 'ನಿಸರ್ಗದ ನೋಟ ಕಲಿಸುವ ಪಾಠ'ದಲ್ಲಿ ಆಧುನಿಕ ಮನುಷ್ಯ ಕಳೆದುಕೊಂಡಿರುವ ನಿಸರ್ಗ ಪ್ರೇಮದ ಬಗ್ಗೆ ಯೋಚಿಸುತ್ತಾರೆ. 'ಸರ್ವಂ ಮಾಲಿನ್ಯಮಯಂ ಜಗತ್' ಬರಹದಲ್ಲಿ ವೈಜ್ಞಾನಿಕವಾದ ಹಲವಾರು ವಿಚಾರಗಳನ್ನು ಸರಳವಾಗಿ ತಿಳಿಸುತ್ತಲೇ ನಮ್ಮ ಇಂದಿನ ದುರ್ಗತಿಯ ಬಗೆಗೆ ಚಿಂತಿಸುವ ಪ್ರಯತ್ನ ಇದೆ.

ನಿಸಾರರ ಎಲ್ಲ ಲೇಖನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಒಟ್ಟು ಆಶಯವೆಂದರೆ ಪರಿಪೂರ್ಣತೆಯ ಬಗೆಗಿನ ಹಂಬಲ; ಪರಿಪೂರ್ಣ ಮಾನವನ ಮಾದರಿ ಯೊಂದನ್ನು ಕಂಡುಕೊಳ್ಳುವ ಹಂಬಲ. ವ್ಯಾಧಿಗ್ರಸ್ತ ಸಮಾಜ ಮತ್ತು ಅಸಂಗತ ಶಿಕ್ಷಣ ವ್ಯವಸ್ಥೆ ಇಂಥ ಹಿರಿಯ ಹಂಬಲವನ್ನು ಆಗಗೊಡದಿರುವುದರ ಬಗೆಗೆ ಲೇಖಕರ ತಹತಹ, ಆತಂಕಗಳು ಮನೋವೇಧಕವಾಗಿ ವ್ಯಕ್ತವಾಗುತ್ತವೆ.

ಇಂದಿನ ಜಗತ್ತಿನಲ್ಲಿ ವಿರಳವಾಗುತ್ತಿರುವ ಅಥವಾ ಕೆಲವೇ ಮಂದಿಗೆ ಮಾತ್ರವೆಂದು ಸೀಮಿತವಾಗಿರಬಹುದಾದ ವೈಚಾರಿಕತೆಯನ್ನು ಸರಳವಾಗಿ ಸಿನಿಕತನವಿಲ್ಲದೆ ಅಭಿವ್ಯಕ್ತಿಸು ವುದರಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಇವರ ಕಾವ್ಯಾತ್ಮಕ ಗದ್ಯಶೈಲಿ ವಿಚಾರಗಳನ್ನು ಅವುಗಳ ಒಗರಿಲ್ಲದೆ ಮನ ಮುಟ್ಟಿಸುತ್ತದೆ; ಹಲವು ಹತ್ತು ದೃಷ್ಟಾಂತಗಳನ್ನು ನೀಡುತ್ತಲೂ ವಾಚಕನಿಗೆ ಭಾರವಾಗದಂತೆ ನಾಟಿಸುತ್ತದೆ.

ಸೃಜನಶೀಲ ಪ್ರತಿಭೆಯ ನಿಸಾರರ ಈ ವೈಚಾರಿಕ ಗದ್ಯ ಲೇಖನಗಳು ಅವರ ಅನುಭವದ ಸಮೃದ್ಧಿ ಹಾಗೂ ಮುಕ್ತ ಧಾಟಿಗಳಿಂದಾಗಿ ಮತ್ತು ಓದುಗನನ್ನು ನೇರವಾಗಿ ತಟ್ಟುವ ಹೃದ್ಯ ಶೈಲಿಯಿಂದಾಗಿ ಹಿರಿಮೆಯನ್ನು ಪಡೆಯುತ್ತವೆ. ಇದಕ್ಕಾಗಿ ಪ್ರೊ. ನಿಸಾರರು ಅಭಿನಂದನಾರ್ಹರು.

ಕಾವ್ಯ ಏನೆಲ್ಲವನ್ನೂ ಅಡಕಿಸಿಕೊಳ್ಳಬಲ್ಲ ಹಸುಬೆ ಹಡಪವಲ್ಲ; ವಸ್ತು ಸಾಂಕರ್ಯದ ಕಸದ ಬುಟ್ಟಿಯಲ್ಲ. ಅದಕ್ಕೂ ಸ್ವಧರ್ಮ, ಶಿಸ್ತು, ಎಲ್ಲೆಕಟ್ಟಿವೆ.



‘ಹಿರಿಯರು ಹರಸಿದ ಹೆದ್ದಾರಿ’:

ಸಿಡಿದ ಮನಗಳ ನಡುವೆ ಸೇತುವೆ ನಿರ್ಮಿಸುವ ಸಾರ್ಥಕ ಬರಹಗಳು

♦ ನೀಲತ್ತಹಳ್ಳಿ ಕಸ್ತೂರಿ

೧

ಕೆ.ಎಸ್. ನಿಸಾರ್ ಅಹಮದ್ ನಮ್ಮ ಕಾಲದ ಒಬ್ಬ ಪ್ರಮುಖ ಸಾಹಿತಿ. ಕವಿ ಎಂದು ಖ್ಯಾತರು. ಅವರ ‘ನಿತ್ಯೋತ್ಸವ’, ‘ಕುರಿಗಳು, ಸಾರ್, ಕುರಿಗಳು’ ಮೊದಲಾದ ಅನೇಕ ಕವಿತೆಗಳು ಹಾಡುಗಳಾಗಿ ರಂಜಿಸಿವೆ. ಕ್ಯಾಸೆಟ್‌ಗಳೇ ಮೆರೆದಿವೆ. ಸುಗಮ ಸಂಗೀತ ಎಂಬ ಹೊಸ ಗಾಯನ ಪ್ರಕಾರಕ್ಕೆ ಬಹು ಶೀಘ್ರದಲ್ಲೆ ಜನಾದರಣೆಯನ್ನು, ಜನಾಕರ್ಷಣೆಯನ್ನು ತಂದುಕೊಟ್ಟಿವೆ.

ನಿಸಾರರು ಕವಿಯಷ್ಟೇ ಅಲ್ಲ; ವಿಮರ್ಶೆ, ವಿಚಾರ ಸಾಹಿತ್ಯ, ಅನುವಾದ, ಮಕ್ಕಳ ಸಾಹಿತ್ಯ ಮೊದಲಾದ ಇತರ ಕ್ಷೇತ್ರಗಳಲ್ಲೂ ಸಾರ್ಥಕ ಕೃಷಿಯನ್ನು ಮಾಡಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಗಮನಾರ್ಹ ಕೆಲಸ ಮಾಡಿದರು. ‘ದಶವಾರ್ಷಿಕ’ಗಳ ಸಂಪಾದಕರಾಗಿ ೧೯೭೪-೮೩ರ ಅವಧಿಯ ಸಾಹಿತ್ಯದ ಬೆಳೆಯನ್ನು ಅಳೆದು ತೂಗಿ ಬೆಲೆ ಕಟ್ಟುವ ವಿಶಿಷ್ಟ ಯೋಜನೆಯನ್ನು ನಿರ್ವಹಿಸಿದ್ದಾರೆ.

‘ಹಿರಿಯರು ಹರಸಿದ ಹೆದ್ದಾರಿ’ ಎಂಬ ಅವರ ಕೃತಿ ಇನ್ನೊಂದು ಬಗೆಯದು. ಕವಿ ನಿಸಾರ್ ಅಹಮದ್ ‘ಹೃದ್ಯಮಪ್ಪ’ ಗದ್ಯದಲ್ಲೂ ಮಿಂಚಿರುವುದನ್ನು ಇಲ್ಲಿ ಕಾಣಬಹುದು. ಈ ರಸಾಯನ ಕೃತಿಯಲ್ಲಿ ಧಾರ್ಮಿಕ ಆಧ್ಯಾತ್ಮಿಕ ಚಿಂತನೆ ಇದೆ, ಜಗತ್ತಿನ ಕೆಲವು ಮಹಾ ಪುರುಷರಿಗೆ ಶ್ರದ್ಧಾಂಜಲಿ ಇದೆ. ವೈಚಾರಿಕ ಚಿಂತನೆ ಇದೆ. ಇಲ್ಲಿನ ಗದ್ಯದಲ್ಲಿ ಗೆಲವು

ಪುಟಿಯುತ್ತದೆ. ಪುಸ್ತಕದ ಹಿಂಭಾಗದ ಹೊರ ಮೈಯಲ್ಲಿನ ಕೆಲವು ಮಾತು ಹೀಗಿವೆ—

> 'ನಿಸಾರ್ ಅಹಮದ್ ಅವರು ಗದ್ಯದಲ್ಲಿ ಆಹ್ಲಾದಕರವಾಗಿ ಗಂಭೀರವಾಗಿ ಬರೆಯಬಲ್ಲರು ಎನ್ನುವುದಕ್ಕೆ ಈ ಗ್ರಂಥ ಸಾಕ್ಷಿ. ಅವರ ಗದ್ಯ ಸಂಪ್ರದಾಯದ ಪುಷ್ಟಿದಾಯಕ ಅಂಶಗಳಿಂದ ರೂಪುಗೊಂಡದ್ದು. ವಿಚಾರ ಸಮೃದ್ಧಿ, ಓಜಸ್ಸು, ಹಿತಮಿತ ಕಾವ್ಯಮಯತೆ ಹಾಗೂ ವಿಡಂಬನೆಯ ಮಾರ್ಮಿಕತೆಯಿಂದ ಕಳಕಳಿಸುವಂಥದು. ಇಲ್ಲಿನ ಭಾಷೆಯಲ್ಲಿ ಪರಿಣತಿ, ಸೂತ್ರಪ್ರಾಯ ಕಾವ್ಯರಚನೆ ಮತ್ತು ಪದ ಬಳಕೆಯ ಅನನ್ಯ ಮತ್ತು ಹೃದ್ಯ ಪ್ರಯೋಗವನ್ನು ಎದುರುಗೊಳ್ಳುತ್ತೇವೆ. ವಾಗರ್ಥಗಳ ಸಂಯೋಗ, ಪುನರುಕ್ತಿಗೊಳ್ಳದ ವಿಷಯ, ಗೊಂದಲಗೆಡಿಸದೆ ಪ್ರತಿಪಾದಿತ ವಾಗುವ ವಿಚಾರ ಸರಣಿ ಇಲ್ಲಿನ ಬರೆವಣಿಗೆಯ ವೈಶಿಷ್ಟ್ಯ. ತತ್ತ್ವಗಳಲ್ಲಿ ಕಾಲ್ತೊಡಕಿ ಎಡವುತ್ತ ಸಾಗುವ ಬೌದ್ಧಿಕ ಬರೆವಣಿಗೆಗಳಿಗೆ ಪ್ರತಿಯಾಗಿ ಉದ್ದಕ್ಕೂ ಇಲ್ಲಿ ಹೃದಯವಂತಿಕೆ ಸೆಲೆಯುಕ್ಕುವುದನ್ನು ಕಾಣಬಹುದು.'

೨

ಇಲ್ಲಿ ಹತ್ತು ಲೇಖನ ಇವೆ. ೧೯೯೧ರ ಅನಂತರ ಆಗಿಂದಾಗ್ಗೆ ಪತ್ರಿಕೆಯಲ್ಲಿ ಬರೆದ ಚಿಂತನಕರ ಲೇಖನಗಳು. ಇವುಗಳ ಆಶಯ, ಸ್ವರೂಪ, ಉದ್ದೇಶಗಳನ್ನು ಲೇಖಕರ 'ಮೊದಲ ಮಾತಿ'ನ ಈ ವಾಕ್ಯ ಹೇಳುತ್ತದೆ—

> 'ಇಲ್ಲಿನ ಹಲವು ಲೇಖನಗಳ ಕೇಂದ್ರ ವ್ಯಕ್ತಿಗಳ ಬದುಕು, ಸಾಧನೆ ವೈವಿಧ್ಯಮಯ, ಅನನ್ಯ. ಧರ್ಮ, ಅಧ್ಯಾತ್ಮ, ವಿಜ್ಞಾನ, ಸಂಸ್ಕೃತಿ, ಕಲೆ ಇತ್ಯಾದಿ ಕ್ಷೇತ್ರಗಳಿಗೆ ಹಿರಿಮೆ ಉನ್ನತಿಗಳನ್ನು ದಕ್ಕಿಸಿದಂಥವರು. ಎಣೆ ಯಿಲ್ಲದ ಲೋಕೋಪಕಾರಕ್ಕೆ, ಜೀವನ ಪ್ರೀತಿಗೆ ಅಪೂರ್ವ ಮಾದರಿ ಗಳಾಗಿರುವ ಈ ಮಹದ್ವ್ಯಕ್ತಿಗಳು ಸರ್ವದಾ ಗೌರವಕ್ಕೆ ಪಾತ್ರರಾಗುವಂತಹ ವರು. ಕಾಲ ದೇಶ ಜನಾಂಗ ಮತಗಳ ಎಲ್ಲೆಗಳನ್ನು ದಾಟಿ ಸರ್ವ ಮಾನವ್ಯಕ್ಕೆ ಸೇರಿದವರು. ಅವರು ಕ್ರಮಿಸಿ ಹರಸಿರುವ ಹೆದ್ದಾರಿ ಕಠಿಣ. ಆದರೆ ಅಚಲ ಮನಸ್ಸಂಕಲ್ಪ ಶ್ರದ್ಧೆಗಳಿಂದ ಮುನ್ನಡೆಯುವವನಿಗೆ ಅದು ಶ್ರೇಯಸ್ಸಿನ ಗುರಿಯನ್ನು ಮುಟ್ಟುವ ಭರವಸೆಯನ್ನು ಮನವರಿಕೆ ಮಾಡಿಕೊಡುವಂಥದು.'

ಹಿಂದೆ ಜಿ. ಪಿ. ರಾಜರತ್ನಂ ಒಂದು ಪುಸ್ತಕ ಪ್ರಕಟಿಸಿದ್ದರು, 'ದೊಡ್ಡವರ ದಾರಿ' ಎಂದು. ನಿಸಾರ್, ರಾಜರತ್ನಂ ಅವರ ಶಿಷ್ಯರು, ಪ್ರಿಯ ಶಿಷ್ಯರು. ಸಾಹಿತ್ಯದಲ್ಲಿ ಆ ಮಹಾಗುರುವಿನಿಂದ ಪ್ರೇರಣೆ, ಪೋಷಣೆ ಪಡೆದವರು. ಈ ಕೃತಿಯಲ್ಲಿ ನಾವು ಕಾಣುವುದು ರಾಜರತ್ನಂ ಅವರ ದಾರಿಯಲ್ಲಿ ನಡೆಯುವ ರೀತಿಯನ್ನೇ. ದೊಡ್ಡವರ ದಾರಿಯನ್ನು ಗುರುತಿಸುವ ಪ್ರಯತ್ನವನ್ನು.

ಇಲ್ಲಿ ಮೊದಲು ಸೂಚಿಸಿದಂತೆ ಹತ್ತು ಲೇಖನ ಇವೆ. ಎರಡು ದೀರ್ಘವಾದವು,

ಇಸ್ಲಾಮ್ ಹಾಗೂ ಸೂಫಿ ಪಂಥವನ್ನು ಕುರಿತವು. ಇತರ ಲೇಖನಗಳು—ಏಸು ಸ್ವಾಮಿ, ಶ್ರೀರಾಮಕೃಷ್ಣ ಪರಮ ಹಂಸರ ಜೀವನ ಗಾಥೆ, ಮನುಷ್ಯ ಕ್ರೌರ್ಯ, ವಿಜ್ಞಾನಿ ಡಾರ್ವಿನ್ನನ ಯುಗಪ್ರವರ್ತಕ ಕೃತಿ, ಚಾರ್ಲಿ ಚಾಪ್ಲಿನ್‌ನ ಒಂದು ಸಿನಿಮಾ ಚಿಂತನೆ, ಮಹಾಕವಿ ಷೇಕ್ಸ್‌ಪಿಯರ್, ಉದಾರ ಮನೋಭಾವನೆಯ ಚಿಂತನೆ ಹಾಗೂ ಸಂಸ್ಕೃತಿ ವಿವೇಚನೆಯನ್ನು ಕುರಿತವು.

೩

'ಕನ್ನಡ ನುಡಿ ಮುಡಿಗೆ ಕುರ್‌ಆನ್‌ನ ಸಿರಿ ಕೊಡುಗೆ' ಸುಮಾರು ೩೩ ಪುಟಗಳ ಲೇಖನ. ಕುರ್‌ಆನ್ ಮುಸಲ್ಮಾನರ ಅತ್ಯಂತ ಪವಿತ್ರ ಗ್ರಂಥ. ಪ್ರವಾದಿ ಮಹಮ್ಮದರಿಗೆ ದೈವದೂತನಿಂದ ದತ್ತವಾದ ಜ್ಞಾನ ನಿಧಿ. ನಮ್ಮ ವೇದಗಳು ಇದ್ದ ಹಾಗೆ. ವೇದಗಳನ್ನು ಅಪೌರುಷೇಯ ಎಂದು ನಾವು ಅನೂಚಾನವಾಗಿ ಭಾವಿಸುತ್ತೇವೆ. ಹಾಗೆಯೇ ಮುಸಲ್ಮಾನರಿಗೆ ಕುರ್‌ಆನ್ ಅಪೌರುಷೇಯ. ಧರ್ಮ, ಅಧ್ಯಾತ್ಮ, ಸಂಸ್ಕೃತಿ, ಸಮಾಜ ವ್ಯವಸ್ಥೆ—ಸಕಲ ವಿಷಯಗಳಲ್ಲೂ ಅದೇ ಅವರಿಗೆ ಆಧಾರ, ಅದೇ ಪ್ರಮಾಣ. ಇಹ-ಪರ ಎರಡಕ್ಕೂ ಅದೇ ಮಾರ್ಗದರ್ಶಿ. ಅದು ಮುಸಲ್ಮಾನ ಶ್ರದ್ಧಾಳುಗಳಿಗೆ ಪ್ರಭು ಸಂಹಿತೆ, ಮಿತ್ರ ಸಂಹಿತೆ, ಕಾಂತಾ ಸಂಹಿತೆ—ಮೂರೂ ಸೇರಿದ್ದು. ಸಾವಿರದ ನಾನ್ನೂರು ವರ್ಷಗಳ ಅನಂತರವೂ ಅವರಿಗೆ ಕುರ್‌ಆನ್ ಪ್ರಣೀತ ಜೀವನ ಸಿದ್ಧಾಂತವೇ ನಿರ್ಣಾಯಕ ನೆಲೆಗಟ್ಟು.

ಮುಸಲ್ಮಾನರು ನಮ್ಮ ದೇಶದ ಒಂದು ಮುಖ್ಯ ಅಂಗ. ಜನಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ. ತಮ್ಮ ಸಂಸ್ಕೃತಿ ಕಲೆಗಳಿಂದ, ಜೀವನ ಮೌಲ್ಯಗಳಿಂದ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ಅವರಲ್ಲಿ ಬಹುಪಾಲು ಜನ ಮೂಲತಃ ಭಾರತೀಯರೇ, ಮತಾಂತರಗೊಂಡವರೇ. ಎಷ್ಟೋ ಮುಸಲ್ಮಾನರಿಗೆ ಉರ್ದು ಅಪರಿಚಿತ. ನಮ್ಮಲ್ಲಿಗೆ ಆಕ್ರಮಣಕಾರರಾಗಿ ಬಂದರೂ ಕ್ರಮೇಣ ಇಲ್ಲಿಯೇ ನೆಲೆಸಿ, ಇಲ್ಲಿನ ಭಾವನೆಗಳನ್ನು ಆಚಾರ ಗಳನ್ನು ಆಶಯಗಳನ್ನು ಅಳವಡಿಸಿಕೊಂಡರು, ಭಾರತೀಯರೇ ಆಗಿಹೋದರು. ಅವರ ಕೆಲವು ಪವಿತ್ರ ಕ್ಷೇತ್ರಗಳು ಭಾರತದಿಂದ ಹೊರಗೆ ಇವೆ. ಅತ್ತ ಅವರ ನಿಷ್ಠೆ ಸಹಜವಾಗಿ ಇದೆ ಎಂಬುದನ್ನು ಹೊರತು ಪಡಿಸಿದರೆ, ಉಳಿದಂತೆ ಎಲ್ಲ ವಿಧದಲ್ಲೂ ಅವರು ಭಾರತೀಯರೇ. ಇಲ್ಲಿನ ಇತಿಹಾಸದಲ್ಲಿ, ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಗಣನೀಯ.

ಇಷ್ಟೆಲ್ಲ ಇದ್ದರೂ ಮುಸಲ್ಮಾನರ ಆಚಾರ-ವಿಚಾರ, ರೀತಿ-ರಿವಾಜು ನಮಗೆಲ್ಲ ಸಾಕಷ್ಟು ಪರಿಚಯ ಆಗಿಲ್ಲ ಎನ್ನಬೇಕು. ಕುರ್‌ಆನ್ ನಮ್ಮ ದೇಶೀಯ ಭಾಷೆಗಳಲ್ಲಿ ಬಂದಿದೆ ನಿಜ. ಆದರೆ ಪ್ರಮಾಣ ಕಡಿಮೆ. ಪ್ರಕೃತ ೧೯೯೧ರಲ್ಲಿ 'ಕುರ್‌ಆನ್ ವ್ಯಾಖ್ಯಾನ'ದ ಪ್ರಥಮ ಭಾಗ ಪ್ರಕಟವಾಯಿತು. ಆ ಸಂದರ್ಭವನ್ನು ನೆವವಾಗಿಟ್ಟುಕೊಂಡು, ನಿಸಾರ್ ಅವರು ಕುರ್‌ಆನ್ ಮಹಾ ಗ್ರಂಥದ ಇತಿಹಾಸವನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ, ಈ ಲೇಖನದಲ್ಲಿ. ಪ್ರವಾದಿ ಮುಹಮ್ಮದ್ (ಸ) ಅವರ ವಿಷಯ, ಕುರ್‌ಆನಿನ ವೈಶಿಷ್ಟ್ಯ, ಅದರ ತಿರುಳು, ಮುಸಲ್ಮಾನ ಜಗತ್ತಿನಲ್ಲಿ ಅದಕ್ಕಿರುವ ಸ್ಥಾನಮಾನ, ಕನ್ನಡದಲ್ಲಿ ಕುರ್‌ಆನ್ ಬಗ್ಗೆ ಆಗಿರುವ ಕೆಲಸ, ಕುರ್‌ಆನಿನ ಅಪೌರುಷೇಯತ್ವ, ಅದರ ಭಾಷೆಯ ಸೊಬಗು,

ಭಾವಗೀತಾತ್ಮಕತೆ, ಲಯವಂತಿಕೆ—ಇವೆಲ್ಲವನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ಕುರ್‌ಆನ್‌ನಲ್ಲಿರುವ ಸಹಿಷ್ಣುತೆ, ಶಾಂತಿ ಮುಂತಾದ ಮೌಲ್ಯಗಳನ್ನು ತೋರಿಸಿಕೊಟ್ಟಿದ್ದಾರೆ. ಇಂದಿನ ಪರಸ್ಪರ ಸಂದೇಹದ ಹಾಗೂ ಕಹಿ ವಾತಾವರಣದಲ್ಲಿ ಈ ವಿಚಾರ ತುಂಬ ಮುಖ್ಯ. ಜಗತ್ತಿನಲ್ಲಿ ಎಲ್ಲೆಡೆ ಹಬ್ಬುತ್ತಿರುವ ಭಯೋತ್ಪಾದಕತೆಯ ಬೀಭತ್ಸದಲ್ಲಿ ಮುಸಲ್ಮಾನ ಮತೀಯರದೇ ಹೆಚ್ಚು ಹೆಸರುಗಳು ಕೇಳಿ ಬರುತ್ತಿವೆ. 'ಇಸ್ಲಾಂ' ಎಂದರೆ ಶಾಂತಿ ಎಂಬ ಅರ್ಥ ಎನ್ನಲಾಗಿದೆ. ಆದರೆ ಇಂದು ಅದೇ ಹೆಸರಿನಲ್ಲಿ ಭಯೋತ್ಪಾದಕತೆ, ಭಯಂಕರ ಹಿಂಸಾಚಾರ ನಡೆಯುತ್ತಿರುವುದು ಒಂದು ವಿಪರ್ಯಾಸ. ಜಗತ್ತಿಗೆ ಇಷ್ಟು ಉನ್ನತ ಸಂಸ್ಕೃತಿಯನ್ನು ಕೊಡುಗೆಯಾಗಿ ಇತ್ತಿರುವ ಇಸ್ಲಾಮ್ ಹೆಸರಿಗೆ ಇಂಥ ಪ್ರವೃತ್ತಿ ಕಳಂಕವಾಗುವ ಶಂಕೆಗೆ ಆಸ್ಪದವಾದರೆ ಅದೊಂದು ದುರಂತವೇ ಆದೀತು. ನಿಸಾರರ ಈ ಲೇಖನದಂಥ ಕೃತಿಗಳು ಇಸ್ಲಾಮ್ ಬಗ್ಗೆ ನಮಗೆ ಆದರಣೀಯ ಕಾಣ್ಕೆಯನ್ನು ಒದಗಿಸಿ, ಪರಸ್ಪರ ಅರಿವನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಅರಿವಿನ ಅಭಾವವೇ ಪರಸ್ಪರ ಶಂಕೆ, ಅನಾದರ, ವೈಷಮ್ಯಗಳಿಗೆ ಕಾರಣ. Areas of concordance (ಹೊಂದಾಣಿಕೆಯ ಹರವು) ಹಿಗ್ಗಬೇಕು. Areas of conflict (ಸಂಘರ್ಷದ ಹರವು) ಕುಗ್ಗಬೇಕು. ಈ ಪ್ರಕ್ರಿಯೆಗೆ ಈ ಲೇಖನ ತುಂಬ ಸಹಾಯಕ. ನಮ್ಮ ಜನ ಇದನ್ನು ಓದಬೇಕು. ಕನ್ನಡದಲ್ಲಿನ ಇಸ್ಲಾಮಿ ಸಾಹಿತ್ಯಕ್ಕೆ ಇದು ಒಳ್ಳೆಯ ಕೊಡುಗೆಯೇ ಸರಿ. ಇಲ್ಲೂ ಜಿ. ಪಿ. ರಾಜರತ್ನಂ ನೆನಪಿಗೆ ಬರುತ್ತಾರೆ. ಅವರು 'ಇಸ್ಲಾಂ ಧರ್ಮದ ಪರಿಮಳ' ಎಂಬ ಒಂದು ಪುಸ್ತಕ ಬರೆದರು. ಅಂಥದೇ ಯತ್ನ ನಿಸಾರರದು. ಧರ್ಮ ಸಮನ್ವಯ, ಸೌಹಾರ್ದಗಳಲ್ಲಿ ಆಸಕ್ತರು ಅವಶ್ಯವಾಗಿ ಗಮನಿಸಬೇಕಾದ ಲೇಖನ.

ಇದಕ್ಕೆ ಸಂವಾದಿಯೇ ಆದ ಸೋದರ ಲೇಖನ ಸೂಫಿಗಳನ್ನು ಕುರಿತದ್ದು. ಸೂಫಿ ಪಂಥ ನಮ್ಮ ಭಕ್ತಿ ಪಂಥದ ಹಾಗೆ; ಜಗದ್ವಿಖ್ಯಾತವಾದದ್ದು. ಮತೀಯವಾದಿಗಳು ಸಂಪ್ರದಾಯವಾದಿಗಳು ಮುಂತಾದ ಕಟ್ಟರ್ ಪಂಥದಿಂದ ತುಸು ಬೇರೆಯಾಗಿ ಭಕ್ತಿಗೆ, ಭಾವನೆಗೆ, ಹೃದಯವಂತಿಕೆಗೆ, ಚಿಂತನೆಗೆ, ಆಧ್ಯಾತ್ಮಿಕ ಅನುಭಾವಕ್ಕೆ ಹೆಸರಾದುದು ಸೂಫಿ ಪಂಥ. ಇದು ಮುಸಲ್ಮಾನ ರಾಷ್ಟ್ರಗಳಲ್ಲಿ ಇರುವಂತೆಯೆ ಭಾರತದಲ್ಲೂ ವ್ಯಾಪಕವಾಗಿದೆ. ಕರ್ನಾಟಕದ ಬಿಜಾಪುರ, ಗುಲಬರ್ಗಾ ಮೊದಲಾದ ಎಡೆಗಳಲ್ಲಿ ಸೂಫೀ ಸಂತರು ಇದ್ದುದು ವಿಶೇಷ. ನಿಜಾಮುದ್ದೀನ್, ಖ್ವಾಜಾ ಬಂದೇ ನವಾಜ್, ಖ್ವಾಜಾ ಮೊಯಿನುದ್ದೀನ್ ಚಿಷ್ತಿ, ಬಖ್ತಿಯಾರ್ ಕಾಕಿ ಇತ್ಯಾದಿ ಅನೇಕ ಸೂಫೀ ಸಂತರು ನಮ್ಮಲ್ಲಿ ಆಗಿಹೋಗಿದ್ದಾರೆ. ಅವರು ಮುಸಲ್ಮಾನರಿಗೆ ಮಾತ್ರವಲ್ಲ, ಹಿಂದೂಗಳಿಗೂ ಆದರಣೀಯರಾಗಿದ್ದಾರೆ. ಅವರ ಉರ್ಸ್‌ಗಳಲ್ಲಿ ಸರ್ವಜನಾಂಗೀಯರೂ ಪಾಲುಗೊಳ್ಳುತ್ತಾರೆ. ಪ್ರೀತಿ, ಪ್ರೇಮ, ಭಕ್ತಿ, ಸರಳತೆ, ಪರತತ್ತ್ವ ಚಿಂತನೆ, ಇವು ನಮ್ಮ ಭಕ್ತಿಪಂಥಕ್ಕೆ ಹೇಗೋ ಸೂಫೀ ಪಂಥಕ್ಕೂ ಪ್ರಧಾನವಾದ ಅಂಶಗಳು. ಜಗತ್ತಿನ ಅನುಭಾವ ಸಾಹಿತ್ಯದಲ್ಲಿ ನಮ್ಮ ಭಕ್ತಿಸಾಹಿತ್ಯ (ಶರಣ, ಹರಿದಾಸ, ಆಳ್ವಾರ್ ಇತ್ಯಾದಿ) ಎಷ್ಟು ಮಹತ್ವದ್ದೋ, ಸೂಫೀ ಸಾಹಿತ್ಯವೂ ಅಂಥದೇ. ಶರಣ ಸತಿ-ಲಿಂಗ ಪತಿ ಎಂಬ ಭಾವ ಸೂಫೀ ಸಾಹಿತ್ಯದಲ್ಲೂ ಸೂಸುತ್ತದೆ.

ಸೂಫೀಗಳನ್ನು ಕುರಿತ ಈ ಲೇಖನದಲ್ಲಿ ನಿಸಾರರು ಆ ಪಂಥದ ಆದ್ಯಂತವನ್ನೂ

ಒಳ ಹೊರಗನ್ನೂ ವಿವರಿಸಿದ್ದಾರೆ. ತತ್ತ್ವಚಿಂತನೆ, ಇತಿಹಾಸ, ಭಾಷೆ, ಧ್ವನಿಪೂರ್ಣತೆ, ಆಧ್ಯಾತ್ಮಿಕತೆ; ಸೂಫಿಗಳ ಪರಿಚಯ, ಕ್ಷೇತ್ರಗಳ ವಿವರ, ಪಂಥದ ವೈಶಿಷ್ಟ್ಯ, ನುಡಿಕಟ್ಟುಗಳು, ಪರಿಕಲ್ಪನೆಗಳು, ಸಂಪ್ರದಾಯಗಳು, ಸಂಸ್ಥಾ ಭೇದಗಳು, ಸೂಫಿ ಸಂಗೀತ ಕಾವ್ಯ—ಎಲ್ಲದರ ಬಗ್ಗೆ ಸಮಗ್ರ ಮಾಹಿತಿಯನ್ನು ಇಲ್ಲಿ ಒದಗಿಸಿ ಉಪಕಾರ ಮಾಡಿದ್ದಾರೆ. ನಮ್ಮಲ್ಲಿ ಸೂಫಿ ಕವಿತೆಗಳ ಅನುವಾದ ಅಲ್ಲಲ್ಲಿ ಬಂದಿರಬಹುದು. ಆದರೆ ಸಮಗ್ರ ಲೇಖನ ಇದೇ ಎನ್ನಬಹುದು.

೪

ಮನುಕುಲದ ಹಾದಿಯಲ್ಲಿ ಬೆಳಕು-ಕತ್ತಲೆಯ ಆಟ ಬೇಕಾದಷ್ಟು ನಡೆದಿದೆ. ಕತ್ತಲು ದಟ್ಟೈಸಿದಾಗ ಪಂಜು ಹಿಡಿದವ ಯಾರಾದರೂ ಬರುತ್ತಾನೆ. ದಾರಿಯನ್ನು ಬೆಳಗುತ್ತಾನೆ. ಏಸು ಸ್ವಾಮಿ ಅಂಥ ಒಬ್ಬ ದೀಪಧಾರಿ. ಲೋಕಗುರು. ಲೋಕದ ಸಂಕಟವನ್ನು ತನ್ನದೆಂದೇ ಭಾವಿಸಿ ತಾನೂ ಸಂಕಟ ಅನುಭವಿಸಿದ ಮಹಾತ್ಮ. ಜಗತ್ತಿನ ಸಂಕಟಕ್ಕಾಗಿ ಮರುಗಿದವರು, ಅತ್ತ ಲೋಕದ ಗಮನ ಸೆಳೆದವರು ಹಲವರು. ಮೂವರು ಪ್ರಮುಖರು. ಬುದ್ಧ, ಏಸು ಮತ್ತು ಗಾಂಧೀಜಿ. 'ಆಕಳು ಕರುಣೆಯ ಕಾವ್ಯ' ಎಂದು ಗಾಂಧೀಜಿ ಹೇಳಿದರು. ಏಸು ಸ್ವಾಮಿ, ಅಂತೆಯೇ ಕರುಣೆಯ ಕಾವ್ಯ. ತನ್ನನ್ನು ಅವಮಾನಿಸಿ, ಚಿತ್ರಹಿಂಸೆಗೆ ಗುರಿಮಾಡಿದವರ ಬಗ್ಗೆಯೂ ಕರುಣೆಯನ್ನೇ ಕೋರಿದ. ತನ್ನ ಶಿಲುಬೆಯನ್ನು ತಾನೇ ಹೊತ್ತ. 'ದೇವರೇ ಇವರನ್ನು ಕ್ಷಮಿಸು, ತಾವು ಏನು ಮಾಡುತ್ತಿದಾರೆಯೊ ಅದನ್ನು ಇವರು ಅರಿಯರು' ಎಂದು ಶಿಲುಬೆಯ ಮೇಲೆ ನೇತಾಡುತ್ತಿದ್ದಾಗ ಹೇಳಿದ. 'ಒಂದು ಕೆನ್ನೆಗೆ ಹೊಡೆದರೆ ಇನ್ನೊಂದನ್ನು ತೋರಿಸು', 'ಶತ್ರುವನ್ನೂ ಪ್ರೀತಿಸು', 'ಬಡವರೇ ಧನ್ಯರು, ಅವರಿಗೆ ಸ್ವರ್ಗದ ಬಾಗಿಲು ತೆರೆದಿದೆ,' 'ವಸ್ತ್ರ ಸೆಳೆದುಕೊಂಡವನಿಗೆ ಅಂಗಿಯನ್ನು ಕೊಡು'. 'ಇತರರು ನಿನಗೆ ಏನು ಮಾಡಬೇಕೆಂದು ನೀನು ಬಯಸುವೆಯೋ ಅದನ್ನೇ ಅವರಿಗೆ ಮಾಡು'—ಇಂಥವೆಲ್ಲ ಏಸು ಸ್ವಾಮಿಯ ನುಡಿ ಮುತ್ತುಗಳು. ಮನುಕುಲದ ಕಿರೀಟ ಏಸು. ಅವನನ್ನು ಕುರಿತ ಲೇಖನ 'ಮುಳ್ಳಿನ ಮಕುಟದ ಮಸೀಹ' (ಮಸೀಹ [messaiah] = ಉದ್ಧಾರಕ). ಇದು ಏಸುವಿನ ಜೀವನದ ಮಹತ್ವವನ್ನು, ಆತನ ಬೋಧೆ ತ್ಯಾಗಗಳ ಉನ್ನತಿಯನ್ನು ಆದರದಿಂದ ಚಿತ್ರಿಸುತ್ತದೆ. ಏಸುವಿನ ಬಾಲ್ಯಕ್ಕೂ ಶ್ರೀಕೃಷ್ಣನ ಬಾಲ್ಯಕ್ಕೂ ಇರುವ ಸಾಮ್ಯವನ್ನು ಸೂಚಿಸುತ್ತದೆ. ಕೊನೆಯಲ್ಲಿ ಮಂಜೇಶ್ವರ ಗೋವಿಂದ ಪೈಗಳ ಶ್ರೇಷ್ಠ ಕಾವ್ಯ 'ಗೊಲ್ಗೊಥಾ'ವನ್ನು ಪ್ರಸ್ತಾಪಿಸುತ್ತದೆ. ಕನ್ನಡದಲ್ಲಿನ ಕ್ರಿಸ್ತ ಸಾಹಿತ್ಯ ಸಂಚಯಕ್ಕೆ ನಿಸಾರರ ಈ ಲೇಖನ ಒಂದು ಉತ್ತಮ ಕೊಡುಗೆ. 'ಮಾನವ ಕುಲದ ಒಳಿತಿಗಾಗಿ ಸಾವನ್ನು ಆಲಿಂಗಿಸಿದ ಮಹಾತ್ಮ ಏಸುವಿನ ಬಗೆಗೆ' ಇದು ಸೊಗಸಾದ ಶ್ರದ್ಧಾಂಜಲಿ.

ಮುಂದಿನ ಲೇಖನ, 'ಜೀವನಚರಿತ್ರೆಗಳಲ್ಲಿ ಕಳಶಪ್ರಾಯ'. ಇದು ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿ ಅವರು ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಬಗ್ಗೆ ಬರೆದಿರುವ 'ಯುಗಾವತಾರ ಶ್ರೀ ರಾಮಕೃಷ್ಣ' ಎಂಬ ಬೃಹತ್ ಗ್ರಂಥದ ಪರಿಚಯ ಲೇಖನ. ಪುರುಷೋತ್ತಮಾನಂದಜಿ ಇತ್ತೀಚೆಗೆ ದೈವಾಧೀನರಾದರು. ಅವರೊಬ್ಬ ಅದ್ಭುತ ವ್ಯಕ್ತಿ,

ಚಿಂತಕ, ಗಾಯಕ, ಲೇಖಕ, ಸಾಧಕ, ಪ್ರವಚನಕಾರ, ಸಂಘಟಕ. ಶ್ರೀ ರಾಮಕೃಷ್ಣ ಪಂಥಕ್ಕೆ ಅರ್ಪಿತವಾದ ದಿವ್ಯ ಜೀವಿ. ಪರಮಹಂಸರು, ಸ್ವಾಮಿ ವಿವೇಕಾನಂದರು, ಮಾತೆ ಶಾರದಾ ದೇವಿ ಅವರನ್ನು ಕುರಿತು ಹೆಬ್ಬೊತ್ತಿಗೆಗಳನ್ನು ರಚಿಸಿದ್ದಾರೆ. ತಮ್ಮ ಭಾಷಣ, ಲೇಖನ, ಗಾಯನಗಳಿಂದ ನೂರಾರು ಮಂದಿಗೆ ಪ್ರೇರಣೆಯನ್ನೂ ಸ್ಫೂರ್ತಿಯನ್ನೂ ನೀಡಿ ಆಧ್ಯಾತ್ಮಿಕ ಮಾರ್ಗಕ್ಕೆ ಪ್ರವರ್ತನೆ ಮಾಡಿದ ಮಹಾ ಸಾಧಕರು. ಶ್ರೀ ರಾಮಕೃಷ್ಣ ಪರಮಹಂಸರು ಭಾರತ ಕಂಡ ಅತಿ ಅಪರೂಪದ ವಿಶಿಷ್ಟ ವ್ಯಕ್ತಿ, ದಿವ್ಯಚೇತನ. ತಮ್ಮ ಸರಳತೆ, ಸಾಧನೆ, ಶ್ರದ್ಧೆ, ಭಕ್ತಿಗಳಿಂದ ಭಾರತ ಪುನರುತ್ಥಾನದ ಹೆದ್ದಾರಿಯನ್ನು ತೆರೆದ ಮಹಾ ಪುರುಷ. ಭೌತಿಕತೆಗೆ ಸವಾಲು ಹಾಕಿ ವಿಜ್ಞಾನಿಗಳನ್ನು ದಂಗುಬಡಿಸಿದ ಯೋಗಿವರ್ಯ. ಸ್ವಾಮಿ ವಿವೇಕಾನಂದರಂಥ ಅದ್ಭುತ ಚೇತನವನ್ನು ಗುರುತಿಸಿ, ಹದ ಮಾಡಿ, ರೂಪಿಸಿ ಜಗತ್ತಿಗೆ ಅರ್ಪಿಸಿದ ಮಹಾಸತ್ತ್ವ. ಅವರ ಬಗೆಗಿನ ಪುರುಷೋತ್ತಮಾನಂದಜಿ ಅವರ ಈ ಗ್ರಂಥರಾಜದ ಬಗ್ಗೆ ಆತ್ಮೀಯವಾದ ಪರಿಚಯವನ್ನು ಈ ಲೇಖನ ನೀಡುತ್ತದೆ. 'ಶ್ರೀ ರಾಮಕೃಷ್ಣರ ಬಗ್ಗೆ ಅಸೀಮ ಭಕ್ತಿ ಭಾವವಿದ್ದರೂ ಭಾವಾತಿರೇಕಿಗಳಾಗದೆ, ಗಹನ ವಿಷಯ ಪ್ರತಿಪಾದನೆಯ ಸಮಯದಲ್ಲೂ ತರ್ಕಬುದ್ಧಿಗಳ ವಿಚಾರಣೆಯ ಕ್ರಮವನ್ನು ಕೈಬಿಡದೆ ಪುರುಷೋತ್ತಮಾನಂದರು ಮಾನಸಿಕ ದೂರವನ್ನು ಕಾಪಾಡಿಕೊಂಡು ಬರೆಯುತ್ತಾರೆ. ಎಂದೇ, ಅವರ ಬರೆವಣಿಗೆಗೆ ಒಂದು ಬಗೆಯ ಸಮತ್ವ ಪ್ರಾಪ್ತವಾಗುತ್ತದೆ.' ನಿಸಾರರ ಈ ಮಾತು ಮನನೀಯ. ಭಾವ ಪರವಶತೆ, ಭಕ್ತಿ, ಶ್ರದ್ಧೆ ಎಷ್ಟೇ ಇದ್ದರೂ ಆ ಓಘದಲ್ಲಿ ಕೊಚ್ಚಿ ಹೋಗದೆ, ಬುದ್ಧಿ ವಿಚಾರದ ನೆಲೆಗಟ್ಟನ್ನು ಬಿಡದೆ, ಭಾವ-ವಿಚಾರ ಎರಡರ ಸಮತೋಲನವನ್ನು ಉದ್ದಕ್ಕೂ ಉಳಿಸಿಕೊಂಡು ಕೃತಿ ರಚನೆ ಮಾಡುವುದು ಪುರುಷೋತ್ತಮಾನಂದಜಿ ಅವರ ಹಿರಿಮೆ. ಇದನ್ನು ನಿಸಾರರು ಎತ್ತಿ ತೋರಿಸಿರುವುದು ಉಚಿತವೇ ಆಗಿದೆ. ಸ್ವಾಮಿಜಿಯವರ ಭಾಷೆಯ ಸೊಗಸು, ಕಥನಕಲೆ, ಅಧ್ಯಾಯಗಳ ತಲೆಬರೆಹಗಳ ಸ್ವಾರಸ್ಯ ಇತ್ಯಾದಿಗಳನ್ನು ಬೊಟ್ಟು ಮಾಡಿ ತೋರಿಸಿದ್ದಾರೆ. 'ಇಂಥ ಕೃತಿಯ ಪ್ರಕಟನೆ ಒಂದು ಮಹದ್ಘಟನೆ, ಮಹಾ ಯಜ್ಞ' ಎಂದಿರುವುದರ ಔಚಿತ್ಯವನ್ನು ಎಷ್ಟು ಭಾವಿಸಿದರೂ ಕಡಿಮೆಯೆ.

ಮುಂದಿನ ಲೇಖನ 'ನಾಗರಿಕ ನರ ಪ್ರಾಣಿಯ ನಿಷ್ಕರುಣ ಕಥನ' ಬೇರೆಯೇ ಧಾಟಿಯದು, 'ಮಾನವ ಜನ್ಮ ದೊಡ್ಡದು, ಅದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ದಾಸರು ಹಾಡಿದರು. ನಿಸಾರರ ಈ ಗ್ರಂಥದ ಇತರ ಲೇಖನಗಳು ಮಾನವ ಜನ್ಮದ ದೊಡ್ಡತನಕ್ಕೆ ನಿದರ್ಶನಗಳು. ಆದರೆ ಈ ಲೇಖನ ದಾಸರ ಮಾತಿನ ಉತ್ತರಾರ್ಧಕ್ಕೆ ಉದಾಹರಣೆ. ನಮ್ಮ ನಾಗರಿಕತೆ ಎಷ್ಟೇ ಮುಂದುವರಿದಿದೆ ಎಂದುಕೊಂಡರೂ ನಮ್ಮ ಸಂಸ್ಕೃತಿ ಎಷ್ಟೇ ಉನ್ನತ ಎಂದು ನಾವು ಹೇಳಿಕೊಂಡರೂ ನಮ್ಮ ಎಷ್ಟೋ ಆಚಾರ ನಡೆವಳಿಕೆಗಳು ಕೃತ್ಯಗಳು ಮೃಗೀಯ ಮಟ್ಟಕ್ಕಿಂತ ಮೇಲಿನವೇನಲ್ಲ. ಬಹುಶಃ ಇನ್ನೂ ಕೀಳು. ಮೃಗಗಳು ವಿವೇಕ ಚಿಂತೆ ಇಲ್ಲದವು. ಅವುಗಳ ಕ್ರೌರ್ಯ, ಕೇವಲ ಸಹಜ ಪ್ರತಿಕ್ರಿಯೆ. ಬುದ್ಧಿಪೂರ್ವಕ ಅಪರಾಧವಲ್ಲ. ಮಾನವನೊಬ್ಬನೇ ಬೇಕೆಂದೇ ಬುದ್ಧಿಪೂರ್ವಕವಾಗಿಯೆ ಅಪರಾಧ ಮಾಡುತ್ತಾನೆ. ಎಷ್ಟೋ ಸಲ ಕರುಣೆ ಎಂಬುದೇ ಮಾನವನಿಗೆ ತಿಳಿದಿಲ್ಲವೋ

ಎನಿಸುವಷ್ಟು ಕ್ರೂರ, ಅಮಾನುಷ ಈ ಮಾನವನ ವರ್ತನೆ. ಜೊತೆಯ ಮಾನವರ ಮೇಲೆ, ಪಶು ಪಕ್ಷಿ ಪ್ರಾಣಿಗಳ ಮೇಲೆ, ನೇರವಾಗಿ ಪ್ರಕೃತಿಯ ಮೇಲೆ ಮಾನವ ಎಷ್ಟು ಅಪಚಾರ ಮಾಡುತ್ತಾನೆ, ಎಷ್ಟು ಹಿಂಸೆ ಮಾಡುತ್ತಾನೆ, ಎಷ್ಟು ಕ್ರೌರ್ಯವನ್ನು ಕಾರುತ್ತಾನೆ! ನಾವು ತಲೆ ತಗ್ಗಿಸಬೇಕು. ಮನುಜ ಕುಲ ಬೆಳೆದಂತೆ ಹೇಗೆ ನರಪ್ರಾಣಿ ತನ್ನ ಕ್ರೌರ್ಯವನ್ನೂ ಬೆಳೆಸಿ ಕೊಳ್ಳುತ್ತ ಬಂತು ಎಂಬುದನ್ನು ಈ ಲೇಖನ ಮಾರ್ಮಿಕವಾಗಿ ಚಿತ್ರಿಸುತ್ತದೆ. ಇಲ್ಲಿರುವುದು ಕೇವಲ ಮಂಜುಗಡ್ಡೆಯ ತುದಿ ಮಾತ್ರ. ವಿಶ್ವಯುದ್ಧಗಳು, ಅಣುಬಾಂಬು, ನಾಜಿ ಹಾಗೂ ಕಮ್ಯುನಿಸ್ಟ್ ಶಿಬಿರಗಳು, ವರ್ಣದ್ವೇಷ, ಜಾತಿ ಮತ್ಸರ, ಕೋಮು ಗಲಭೆ, ಜನಾಂಗ ಹತ್ಯೆ, ದುರಾಚಾರ, ಸ್ತ್ರೀ ಬಾಲಕರ ಮೇಲಿನ ಅತ್ಯಾಚಾರ—ಒಂದೇ, ಎರಡೇ? ಇಂಥ ದೈಹಿಕ ಹಿಂಸೆಗಳೇ ಅಲ್ಲದೆ ಆರ್ಥಿಕ ಶೋಷಣೆ, ಸಾಮಾಜಿಕ ವಿಷಮತೆ, ರಾಜಕೀಯ ಸೇಡು, ಧರ್ಮ-ವಿಜ್ಞಾನಗಳ ಹೆಸರಿನಲ್ಲಿ ಪಾತಕಗಳು—ಬೇಕಾದಷ್ಟು ಇವೆ, ಮನುಜ ಪ್ರಾಣಿಯ ಅಪಖ್ಯಾತಿಯ ಪಟ್ಟಿಯಲ್ಲಿ. ಆದರೆ ಹೀಗಿದೆ ಎಂದು ಕೈಚೆಲ್ಲಿ ಕೂತರೆ ಆದೀತೇ? ಈ ಕೃತ್ಯಗಳ ಬಗ್ಗೆ ಮಾನವರ ಅಂತರಂಗವನ್ನು ಮೀಟಿ ಎಚ್ಚರಿಸುವ ಪ್ರಯತ್ನ ಆಗುತ್ತಲೇ ಇರಬೇಕು. ಆಗುತ್ತಲೇ ಇದೆ. ಮಸೀದಿಯ ಉದ್ಘೋಷಕ ಕಾಲ ಕಾಲಕ್ಕೆ ನಮಾಜಿಗೆ ಕರೆ ಕೊಡುವ ಹಾಗೆ, ಇಂಥ ಎಚ್ಚರಿಸುವ ಕಾರ್ಯ ಆಗುತ್ತಲೇ ಇರಬೇಕು ಎನ್ನುತ್ತಾರೆ ಲೇಖಕರು, 'ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ' ಎಂಬ ಗೀತಾವಾಕ್ಯದ ಸಂದೇಶ ಇದೇ ತಾನೇ.

'ಲೈಮ್‌ಲೈಟ್' ಎನ್ನುವುದು ಚಾರ್ಲಿ ಚಾಪ್ಲಿನ್‌ನ ಒಂದು ಜನಪ್ರಿಯ ಚಲನಚಿತ್ರ. ಚಾಪ್ಲಿನ್ ನಗೆಗಾರ ಹೇಗೊ, ಹಾಗೆಯೆ ಕರುಣಾಪಾತ್ರ. ಆತ ಬಾಳಿನಲ್ಲಿ ಪಟ್ಟ ಪಾಡು ಹೇರಳ. ಅದನ್ನೆಲ್ಲ ಆತ ಹಾಸ್ಯದ ನವಿರು ಹೊದಿಕೆಯಲ್ಲಿ ಮುಚ್ಚಿಟ್ಟು ಲೋಕಕ್ಕೆ ಕಚಗುಳಿ ಇಡುತ್ತಿದ್ದ. ಬುದ್ಧಿಗೆ ಷಾಕ್ ಕೊಡುತ್ತಿದ್ದ. 'ಲೈಮ್‌ಲೈಟ್' ಚಿತ್ರದ ಮಾತು, ಸನ್ನಿವೇಶ ಲೇಖಕರಲ್ಲಿ ಚಿಂತನೆಯ ಅಲೆಗಳನ್ನು ಎಬ್ಬಿಸುತ್ತದೆ. ಮಾನವನ ಬದುಕು ಸಾರಹೀನ ವಾಗುತ್ತಿದೆಯೆ? ಕೃತ್ರಿಮ, ಸೋಗು, ವಂಚನೆಗಳಿಗೆ ಒಳಗಾಗುತ್ತಿದೆಯೆ? ತಾನು ತಾನಾಗಿರದೆ ಬೇರೆ ಯಾರನ್ನೋ ಅನುಕರಿಸಲು ಹಲುಬುವ ಪ್ರವೃತ್ತಿ ಮಾನವನ ಹುಂಬತನಕ್ಕೆ, ಅಸ್ವಾಸ್ಥ್ಯಕ್ಕೆ ಕಾರಣವಾಗುತ್ತಿದೆಯೆ?—ಇಂಥ ಚಿಂತನೆ ಕುಡಿವರಿಯುತ್ತದೆ. ಏನೇ ಆಗಲಿ, ನಮ್ಮತನ ನಮಗೆ, ಸ್ವಭಾವೋ ದುರತಿಕ್ರಮಃ. ನಾವು ನಾವಾಗಿರಲು ಕಲಿತು, ಅದರಲ್ಲೆ ನಮ್ಮ ಹಿತವನ್ನು ಕಂಡುಕೊಳ್ಳುವುದು ವಿಹಿತ. ಈ ಇಂಗಿತವನ್ನು ಲೇಖನ ಹೊಮ್ಮಿಸುತ್ತದೆ. 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಗೀತಾವಾಕ್ಯವನ್ನೇ ಲೇಖಕರು ಉದಹರಿಸುವುದು ಅರ್ಥಪೂರ್ಣ. ಚಲನಚಿತ್ರದ ಒಂದು ಮಾತು ಅಥವಾ ಸನ್ನಿವೇಶ ಎಷ್ಟು ಆಲೋಚನೆಗೆ ಹೇತುವಾದೀತು ಎಂಬುದಕ್ಕೆ ಈ ಲೇಖನ ಸಾಕ್ಷಿ. ಆದರೆ ಅದಕ್ಕೆ ಆ ಮನಸ್ಸು ಸಂವೇದನಾಶೀಲವಾಗಿರಬೇಕು. ಇಲ್ಲವಾದರೆ ಗೋರ್ಕಲ್ಲ ಮೇಲೆ ಸುರಿದ ಮಳೆಯೆ!

೬

ಹತ್ತೊಂಬತ್ತನೆಯ ಶತಮಾನದಲ್ಲಿ ಜಗತ್ತಿನ ಆಲೋಚನಾ ಕ್ರಮಕ್ಕೆ, ಜೀವನ ದೃಷ್ಟಿಗೆ ಹೊಸ ತಿರುವನ್ನು ಕೊಟ್ಟವರಲ್ಲಿ ಮೂವರು ಅತಿ ಪ್ರಮುಖರು. ವಿಜ್ಞಾನದಲ್ಲಿ

ಚಾರ್ಲ್ಸ್ ಡಾರ್ವಿನ್, ಮನೋವಿಜ್ಞಾನದಲ್ಲಿ ಸಿಗ್ಮಂಡ್ ಫ್ರಾಯ್ಡ್ ಹಾಗೂ ಅರ್ಥ-ರಾಜಕೀಯದಲ್ಲಿ ಕಾರ್ಲ್ ಮಾರ್ಕ್ಸ್. ಈ ಮೂವರ ಸಂಶೋಧನೆ ಮತ್ತು ಚಿಂತನೆ ಜಗತ್ತಿನ ಇತಿಹಾಸವನ್ನೇ ಬದಲು ಮಾಡಿತು. ವಿಶೇಷವಾಗಿ ಪಾಶ್ಚಿಮಾತ್ಯ ಜಗತ್ತಿನಲ್ಲಿ ಕ್ರಾಂತಿಯನ್ನೇ ಉಂಟು ಮಾಡಿತು. ಮಾನವ ದೈವಸೃಷ್ಟಿಯಲ್ಲ, ನಿಸರ್ಗದ ಕೂಸು, ಪರಿಸರದಿಂದ ರೂಪಿತನಾದವ ಎಂದು ಡಾರ್ವಿನ್ ಸಿದ್ಧಾಂತ ಮಾಡಿದ. ಫ್ರಾಯ್ಡ್ ಮನಸ್ಸಿನ ಒಳ ಪದರಗಳನ್ನು ತಡಕಿ ನೋಡಿ, ಸುಪ್ತ ಮನಸ್ಸಿನ ಭಾವ ತರಂಗಗಳೇ ಮನುಜನ ಚರ್ಯೆಯನ್ನು ರೂಪಿಸುವುವು ಎಂದು ನಿರ್ಣಯವಿತ್ತ. ಕಾರ್ಲ್ ಮಾರ್ಕ್ಸ್ ಆರ್ಥಿಕ-ರಾಜಕೀಯ ಶೋಷಣೆಗೆ ಪರಿಹಾರವಾಗಿ ಸಮತಾವಾದವನ್ನು ಪ್ರತಿಪಾದಿಸಿದ. ದುಡಿಯುವವರ ರಾಜ್ಯ ಎಂಬ ಆದರ್ಶವನ್ನು ಕಟ್ಟಿ ಕೊಟ್ಟ. ಈ ಮೂರೂ ಸಿದ್ಧಾಂತಗಳು ಚರ್ಚೆಗೆ ಒಳಗಾಗಿವೆ, ಪುನರ್ವಿಮರ್ಶೆಗೆ ಪಕ್ಕಾಗಿವೆ. ಪ್ರಾಚೀನ ಭಾರತದ ಆಲೋಚನೆಗಳ ಮೂಸೆಯಲ್ಲಿ ಇವು ಎಷ್ಟೋ ಪಾಲು ಸೋಲು ಕಂಡಿವೆ. ಆದರೆ ಆ ಕಾಲದಲ್ಲಿ ಇವು ಹೊಸ ದಿಕ್ಕನ್ನು ಸೂಚಿಸಿದವು ಎಂಬುದು ಗಮನಾರ್ಹ ಸತ್ಯ ಸಂಗತಿ. 'The Origin of Species' (ಜೀವ ಸಂಕುಲಗಳ ಉಗಮ) ಡಾರ್ವಿನ್ನನ ಆಲೋಚನೆಗಳ ದಾಖಲೆ. ಮಾನವ ದೈವಸೃಷ್ಟಿಯಲ್ಲ, ನಿಸರ್ಗದ ಕೂಸು ಎಂಬುದನ್ನು ಪ್ರತಿಪಾದಿಸುತ್ತದೆ. ಈ ವಿಚಾರಕ್ಕಾಗಿ ಡಾರ್ವಿನ್ ಆಗ ಸಂಪ್ರದಾಯವಾದಿಗಳ ಆಗ್ರಹಕ್ಕೆ ಗುರಿಯಾದ. ಆದರೆ ಆತ ಸೆಣಸಿಗೆ ನಿಲ್ಲದೆ, ನಯ ವಿನಯದಿಂದಲೇ ತನ್ನ ಸಂಶೋಧನಾ ಜನಿತ ಸತ್ಯವನ್ನು ಸಲ್ಲಿಸಿದ. 'Theory of Natural Selection'(ಪ್ರಾಕೃತಿಕ ಆಯ್ಕೆಯ ತತ್ತ್ವ)ವನ್ನು ಪ್ರತಿಪಾದಿಸಿದ. ಇದರಿಂದಾಗಿಯೇ ಮಾನವ ಉಳಿದುಕೊಂಡಿದ್ದಾನೆ ಎಂದು ಹೇಳಿದ. ಗಾಂಧೀಜಿ ಸಹ ಈ ಬಗ್ಗೆ ಚಿಂತನೆ ಮಾಡಿದ್ದಾರೆ. ಮನುಷ್ಯ ಬದುಕಿ ಉಳಿಯಲು, ಸಮಾಜ ಉಳಿದು ಬೆಳೆಯಲು ಶಕ್ತಿ ಬೇಕು, ಸಾಮರ್ಥ್ಯ ಬೇಕು ಎಂದು ಡಾರ್ವಿನ್ ಹೇಳಿದ. ಹೌದು, ಶಕ್ತಿ ಬೇಕು. ಅದು ಆತ್ಮಶಕ್ತಿ, ನೀತಿಯ ಶಕ್ತಿ, ಅದೇ ಮನು ಕುಲದ ಆಧಾರ ಎಂದರು ಗಾಂಧೀಜಿ. ಏನೇ ಆಗಲಿ, ಡಾರ್ವಿನ್ನನ ಗ್ರಂಥ ಮಾನವ ಚಿಂತನೆಗೆ ದಿಕ್ಸೂಚಿ ಆಯಿತು. ಒಂದು ಗ್ರಂಥ ಎಂಥ ವಿಚಾರ ಕ್ರಾಂತಿಗೆ ನಾಂದಿ ಆಗುತ್ತದೆ ಎಂಬುದಕ್ಕೆ ಇದು ಸಾಕ್ಷಿ. ತನ್ನ ಸಿದ್ಧಾಂತವನ್ನು ರೂಪಿಸಲು ಡಾರ್ವಿನ್ ಮಾಡಿದ ಪ್ರಯೋಗಗಳೇನು, ಸಾಹಸಗಳೇನು, ಎದುರಿಸಿದ ಅಪಾಯಗಳೇನು—ಎಲ್ಲವನ್ನೂ ಲೇಖನದಲ್ಲಿ ವಿವರಿಸಿದ್ದಾರೆ, ಶ್ರೀ ನಿಸಾರ್ ಅಹಮದ್. ಅವರೇ ಒಬ್ಬ ವಿಜ್ಞಾನಿ. ಅಂತೆಯೆ ವೈಜ್ಞಾನಿಕ ವಿಷಯವನ್ನು, ಕಾವ್ಯದಷ್ಟೆ ಅಕ್ಕರೆಯಿಂದ ಪ್ರತಿಪಾದಿಸುತ್ತಾರೆ. 'Origin of Species ಲೋಕವಿಖ್ಯಾತ ಕೃತಿಗಳ ಸಾಲಿಗೆ ಸೇರುತ್ತದೆ. ಬಹುಕಾಲ ಈ ಅಂತಸ್ತನ್ನು ಉಳಿಸಿಕೊಳ್ಳುತ್ತದೆ' ಎನ್ನುವ ಭರತವಾಕ್ಯಕ್ಕೆ 'ತಥಾಸ್ತು' ಎನ್ನೋಣ.

೭

ಷೇಕ್ಸ್‌ಪಿಯರ್ ಇಲ್ಲದ ಇಂಗ್ಲಿಷ್ ಊಹೆಗೂ ಅಸಾಧ್ಯ ಎನ್ನುವುದುಂಟು. ನಮ್ಮ ಮಹಾಭಾರತದಲ್ಲಿ ವ್ಯಾಸರು ಜಗತ್ತಿನ ಹಾಗೂ ಸೃಷ್ಟಿಯ ಸಮಸ್ತವನ್ನೂ ಕಟ್ಟಿ, ಮುಟ್ಟಿ ನೋಡಿ ವಿವರಿಸಿದ್ದಾರೆ. ಮಾನವ ಹೃದಯಗಳ ವಿರಾಟ್ ಸ್ವರೂಪ, ರೂಪಭೇದ

ರೂಪಾಂತರಗಳನ್ನು, ಕೃತಿ ವಿಕೃತಿಗಳು ಎಲ್ಲವನ್ನೂ ಜಾಲಾಡಿಬಿಟ್ಟಿದ್ದಾರೆ. ಷೇಕ್ಸ್‌ಪಿಯರ್ ಕೂಡ ಹಾಗೆಯೇ. ವ್ಯಾಸರ ಆಧ್ಯಾತ್ಮಿಕ ಔನ್ನತ್ಯಕ್ಕೆ ಏರದಿದ್ದರೂ ಐಹಿಕ ಮಟ್ಟದಲ್ಲಿ ಮಾನವನ ಒಳಹೊರಗುಗಳ ವಿಶ್ಲೇಷಣೆಯನ್ನು ಅತ್ಯಂತ ಆಳವಾಗಿ ವ್ಯಾಪಕವಾಗಿ ಮಾಡಿದ್ದಾನೆ. ನಿಸಾರ್ ಅಹಮದ್ ಷೇಕ್ಸ್‌ಪಿಯರ್‌ನ ಅಭಿಮಾನಿ. 'ಒಥೆಲೊ', 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕಗಳನ್ನು ಅನುವಾದಿಸಿದ್ದಾರೆ. ಷೇಕ್ಸ್‌ಪಿಯರನ ಹೃದಯ ವನ್ನು ಅರಿತವರು. 'ಮಾನವ ಮನೋಗತಿಯ ಮಹಾ ದಾಖಲೆಗಾರ' ಎಂಬ ಲೇಖನದಲ್ಲಿ ಷೇಕ್ಸ್‌ಪಿಯರ್ ಬಗ್ಗೆ ತಮ್ಮ ಅನಿಸಿಕೆಗಳನ್ನು ಮಂಡಿಸಿದ್ದಾರೆ. ಈ ಶೀರ್ಷಿಕೆಯೆ ಅರ್ಥಪೂರ್ಣ. 'ಮಾನವನ ಮನಸ್ಸಿನ ಅತಿ ಕೋಮಲ ಕಂಪನ ಒಲೆತಗಳನ್ನು, ಬಾಗು ಬಳುಕುಗಳನ್ನು, ಹಾವ ಭಾವಗಳನ್ನು, ಹುತ್ತ ಗುಹೆಗಳನ್ನು, ಕಗ್ಗತ್ತಲ ಕೂಪಗಳ ಮೂಲೆ ಮೊಡಕುಗಳನ್ನು ಪತ್ತೆ ಹಚ್ಚಿ, ಸಂದರ್ಭದೊಂದಿಗೆ ಅವು ಗಳಿಸಿರುವ ಸಂಬಂಧ, ಅರ್ಥ ವಂತಿಕೆಯನ್ನು ಧ್ವನಿಸುವುದರಲ್ಲಿ ಮಿಕ್ಕೆಲ್ಲ ಕವಿಗಳಿಗಿಂತ ಹೆಚ್ಚು ಜಾಣ'—ಈ ಒಂದೇ ವಾಕ್ಯದಲ್ಲಿ ಷೇಕ್ಸ್‌ಪಿಯರ್ ಮಹಾಕವಿಯ ಇಡೀ ಪ್ರತಿಭೆಗೆ ಕನ್ನಡಿ ಹಿಡಿದಿದ್ದಾರೆ. ಷೇಕ್ಸ್‌ಪಿಯರನ ಪಾತ್ರ ಪ್ರಪಂಚ, ವರ್ಣನಾವೈಖರಿ, ಕಾವ್ಯಶೈಲಿ, ಭಾಷೆ, ಮಾನವೀಯ ಎಳೆಗಳು, ಪ್ರಕೃತಿ ವರ್ಣನೆ, ವಿಧಿವಿಲಾಸ, ಮಾನವೋನ್ನತಿಯ ಹಿರಿಮೆಯ ಉದ್ದೇಶ, ಆತನ ಟ್ರಾಜೆಡಿಗಳ ಸೊಗಸು, ಆತನ ಅನ್ಯಾದೃಶ ಪ್ರತಿಭೆಯ ಹಾಸು-ಬೀಸು—ಇದೆಲ್ಲವನ್ನೂ ಲೇಖಕರು ಸಂಕ್ಷೇಪವಾಗಿ, ಆದರೆ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. (ಈ ಎಷ್ಟೋ ಮಾತುಗಳು ಅವರವೇ.) 'ಕರಿಯು ಕನ್ನಡಿಯೊಳಗೆ' ಎಂಬಂತೆ ಈ ಲೇಖನ ಷೇಕ್ಸ್‌ಪಿಯರನಿಗೆ ಕನ್ನಡಿ.

'ಡ್ಯಾಮಿಟ್, ವಾಟ್ ಎ ಫೈನ್ ಷಾಟ್' ಒಂದು ವಿಶೇಷ ರೀತಿಯ ಬರೆಹ. ಬ್ರಿಟಿಷರ ಧ್ವಜವಾಗಿದ್ದ ಯೂನಿಯನ್ ಜಾಕ್‌ಅನ್ನು ಒಬ್ಬ ನಟ ('ಝಾನ್ಸಿ ಕೀ ರಾಣಿ' ಸಿನಿಮಾದಲ್ಲಿ) ಗುಂಡು ಹಾರಿಸಿ ಛಿದ್ರಗೊಳಿಸಿದಾಗ, ಅದನ್ನು ನೋಡಿದ ಒಬ್ಬ ಆಮಂತ್ರಿತ ಆಂಗ್ಲ ಮುತ್ಸದ್ದಿ ಈ ಉದ್ಗಾರ ಎತ್ತಿದನಂತೆ. ಇದು ತನ್ನ ದೇಶದ ಬಾವುಟಕ್ಕೆ ಅವಮಾನ ಮಾಡಿದ್ದಾದರೂ ಆ ಮಹನೀಯ ಕ್ರೀಡಾ ಮನೋಭಾವದಿಂದ ಈ ಕಾರ್ಯ ಕೌಶಲವನ್ನು ಮೆಚ್ಚಿದ್ದು ಶಿಷ್ಟಾಚಾರದ ನಡತೆ, ಸಭ್ಯತೆಯ ಫಲ ಎಂದು ಲೇಖಕರು ವಿವರಿಸಿದ್ದಾರೆ. ಯಾವುದೇ ಒಂದು ಕಾರ್ಯ ಅಥವಾ ವಿಚಾರಕ್ಕೂ ನಾವು ಕಾಣುವುದಕ್ಕೆ ಭಿನ್ನವಾದ ಇನ್ನೊಂದು ಅರ್ಥ, ಉದ್ದೇಶ ಇರಲು ಸಾಧ್ಯ. ಅದನ್ನೂ ಗಣನೆಗೆ ತೆಗೆದುಕೊಳ್ಳದೆ, ನಮ್ಮದೊಂದೇ ದೃಷ್ಟಿಯಿಂದ ನಿರ್ಣಯಕ್ಕೆ ಬಂದರೆ ಸತ್ಯಕ್ಕೆ ಘಾಸಿ ಆಗಬಹುದು; ಎಲ್ಲ ನಿಟ್ಟಿನಿಂದಲೂ ಪರಿಶೀಲಿಸುವುದು ಅಗತ್ಯ. ಇತಿಹಾಸದ ಘಟನೆಗಳಿಂದ ನಾವು ಪಾಠ ಕಲಿಯಬೇಕು. ನಮ್ಮ ನಡೆಯನ್ನು ತಿದ್ದಿಕೊಳ್ಳ ಬೇಕು. ಅದಕ್ಕೆ ಇಂಥ ಪೂರ್ಣ ದೃಷ್ಟಿ, ಸಹಾನುಭೂತಿಪರ ದೃಷ್ಟಿ ಅಗತ್ಯ. ಈ ನಿಲವನ್ನು ಲೇಖಕರು ಇಲ್ಲಿ ವಿವರಿಸುತ್ತಾರೆ.

೮

ಸಂಸ್ಕೃತಿಯನ್ನು ಕುರಿತು ಅನೇಕರು ಚಿಂತನೆ ಮಾಡಿದ್ದಾರೆ. ಸಂಸ್ಕೃತಿ ಎಂದರೆ ಏನು?

ಒಂದೇ ಮಾತಿನಲ್ಲಿ ಹೇಳಲಾರೆವು. ಇಡೀ ಬದುಕಿನ ಸಾರ ಸರ್ವಸ್ವವೇ ಸಂಸ್ಕೃತಿ. ನಮ್ಮ ಆಶಯಗಳು, ಆದರ್ಶಗಳು, ಅಂತರಂಗ ಬಹಿರಂಗಗಳು, ಆಚಾರ ವಿಚಾರ ಉಚ್ಚಾರಗಳು, ಆಲೋಚನೆ ಇರವಿಕೆಗಳು, ಮಾತು ಕಲೆ ಎಲ್ಲ ಸೇರಿವೆ ಅದರಲ್ಲಿ. Civilisation is what we have, culture is what we are ಎಂಬ ಮಾತು ಉಂಟು. ಬಾಹ್ಯ ಲೌಕಿಕ, ಐಹಿಕ ಸಾಧನೆ ಸಮೃದ್ಧಿ ಎಲ್ಲ ನಾಗರಿಕತೆ. ನಮ್ಮ ನೀತಿ, ನಡಾವಳಿ, ನಯ, ಆಂತರಂಗಿಕ ಶುದ್ಧಿ ಇವೆಲ್ಲ ಸಂಸ್ಕೃತಿ. ಮಾತು ಮನಸ್ಸು ಕೃತಿಗಳ ಸಾಮರಸ್ಯವೇ ಸಂಸ್ಕೃತಿ, ತ್ರಿಕರಣ ಶುದ್ಧಿಯೆ ಸಂಸ್ಕೃತಿ ಎಂದೂ ಪಿಂಡೀಕರಿಸಬಹುದು. ವಿನೋಬಾ ಇನ್ನೂ ಸರಳವಾಗಿ ಹೇಳಿದರು— 'ಹಸಿದಾಗ ತಿನ್ನುವುದು ಪ್ರಕೃತಿ, ಹಸಿಯದಿದ್ದರೂ ತಿನ್ನುವುದು ವಿಕೃತಿ, ತಾನು ಹಸಿದಿದ್ದರೂ ಇತರರ ಹಸಿವು ತಣಿಸಲು ತನ್ನ ಅನ್ನವನ್ನಿತ್ತು ತಾನು ಉಪವಾಸವಿರುವುದು ಸಂಸ್ಕೃತಿ'. ಒಂದೇ ಮಾತಿನಲ್ಲಿ ಹೇಳುವುದಾದರೆ 'ಸಂಯಮವೇ ಸಂಸ್ಕೃತಿ' ಎನ್ನಬಹುದು. ಈ ಲೇಖನದ ಹೆಸರು 'ನಯವಂತ ನಡೆವಳಿಕೆ; ಸಂಸ್ಕೃತಿಯ ಹೆಗ್ಗಳಿಕೆ' ಆಚಾರವೇ ಮೊದಲ ಧರ್ಮ ಎಂಬ ಮಾತಿಗೆ ಇದು ಸಂವಾದಿ. ರಾಜಾಜಿ ಅವರ 'ನಮ್ಮ ಸಂಸ್ಕೃತಿ', ಡಿವಿಜಿಯವರ 'ಸಂಸ್ಕೃತಿ' ಎಂಬ ಕಿರು ಪುಸ್ತಕಗಳನ್ನು ಉಲ್ಲೇಖಿಸುತ್ತಾರೆ. ಇವೆರಡೂ ವಿಚಾರದ ಗುಳಿಗೆಗಳು. ವ್ಯಕ್ತಿಗತವಾದ ಒಳ ಹೊರಗಿನ ಪರಿಶುದ್ಧತೆ, ಇಂದ್ರಿಯ ಸಂಯಮ, ಸಾಮಾಜಿಕವಾಗಿ ಸೌಹಾರ್ದ, ಸಮಾಜ ಹಿತಕ್ಕಾಗಿ ವ್ಯಕ್ತಿ ಹಿತವನ್ನು ತಗ್ಗಿಸಿಕೊಳ್ಳುವ ನಯ ವಿನಯ, ಸಮನ್ವಯ ಭಾವ—ಇವು ಸುಸಂಸ್ಕೃತನ ಲಕ್ಷಣಗಳು. ರಾವಣನಿಂದಲೂ ಲಕ್ಷ್ಮಣ ವಿನಯದ ಪಾಠ ಕಲಿತ ಪ್ರಸಂಗವೊಂದನ್ನು ಲೇಖಕರು ಉದಾಹರಿಸಿದ್ದಾರೆ. ಈ ಪ್ರಸಂಗ ಮೂಲ ರಾಮಾಯಣದಲ್ಲಂತೂ ಇಲ್ಲ. ಬೇರೊಂದು ಕೃತಿಯಲ್ಲಿ ಇರಬಹುದು. ಶತ್ರುವಿನಿಂದ ಕೂಡ ಪಾಠ ಕಲಿಯಬಹುದು ಎಂಬುದೂ ಸಂಸ್ಕೃತಿಯ ಒಂದು ರೇಖೆ. ಇನ್ನೊಂದು ಉದಾಹರಣೆ ವರ ನಟ ರಾಜ್‌ಕುಮಾರ್ ಒಮ್ಮೆ ಲೇಖಕರಿಗೆ ತೋರಿದ ನಯವಂತಿಕೆ, ಆತ್ಮೀಯತೆ. ಇದೂ ಉಚಿತವೇ.

೬

ಮೊದಲೇ ಹೇಳಿದ ಹಾಗೆ ಈ ಕೃತಿ ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಆಲೋಚನಾ ಶ್ರೇಷ್ಠತೆಗೂ ಅಭಿವ್ಯಕ್ತಿ ಸಾಮರ್ಥ್ಯಕ್ಕೂ ಸಾಕ್ಷಿ. ಒಳ ತಿರುಳು, ಹೊರ ಮೈ ಮೇಲಿನ ವರ್ಣನೆಯನ್ನು ತಾರ್ಕಣೆಗೊಳಿಸುತ್ತದೆ.

ಇಲ್ಲಿನ ಭಾಷೆಯ ಬನಿ, ಸೊಗಡು, ಸಹಜತೆ ಇನ್ನೊಂದು ಅಂಶ. ತೀರ ಸಾದಾ ಎಂಬ ಶಬ್ದಗಳನ್ನು ಸೂಕ್ತವಾಗಿ ಪ್ರಯೋಗಿಸಿ ಅವಕ್ಕೆ ಅರ್ಥ ತುಂಬುವ ಕೌಶಲ. ಉದಾಹರಣೆಗೆ ಲಕಲಕ, ದಗಾ, ಚಾಲಾಕಿತನ, ಟುಕುಗುಡು, ಗಡಾಣೆ ಇತ್ಯಾದಿ. ತೀರ ಗ್ರಾಂಥಿಕವೂ ಅಲ್ಲದ, ತೀರ ಅಳ್ಳಕವೂ ಅಲ್ಲದ ಭಾಷೆ. ಅಧ್ಯಾತ್ಮ ಚಿಂತನೆ ಸಾಕಷ್ಟು ಇದ್ದರೂ ಅದು ಹೊರೆ ಎನಿಸದೆ, ಬೇಸರ ತರಿಸದೆ, ಕಷ್ಟ ಕೊಡದೆ ಸಲೀಸಾಗಿ ನಮ್ಮ ಮನಸ್ಸನ್ನು ಹೊಕ್ಕು ಹರಡಿಕೊಳ್ಳುತ್ತದೆ.

ನಿಸಾರ್ ಅಹಮದ್, ಜಿ. ಪಿ. ರಾಜರತ್ನಂ ಅವರ ಪ್ರೇರಣೆ ಪಡೆದ ಪುಣ್ಯಶಾಲಿಗಳು.

ಆ ಪ್ರೇರಣೆಯನ್ನು ಸಾರ್ಥಕ ಮಾಡಿಕೊಂಡವರು. ಈ ಸಾಹಿತ್ಯ ಸಾಧನೆಗಾಗಿ ಅವರನ್ನು ಅಭಿನಂದಿಸುತ್ತೇನೆ. ಭಾರತದಲ್ಲಿ ಹಿಂದೂ ಮುಸಲ್ಮಾನರು ಪರಸ್ಪರ ಶಂಕೆ ವೈಮನಸ್ಸುಗಳಿಂದಾಗಿ ದೂರ ದೂರವಾಗುತ್ತಿದ್ದಾರೆ. ಇಂಥ ದುರ್ದಿನಗಳಲ್ಲಿ, ನಿಸಾರರಂಥ ಕವಿ ಮನಸ್ಸಿನ ಪ್ರಜ್ಞಾವಂತರು, ಕುರ್‌ಆನ್, ಸೂಫೀ ಪಂಥ ಲೇಖನಗಳಂಥ ವಿಚಾರಗಳಿಂದ ಪರಸ್ಪರ ಅರಿವು ಮೂಡಿಸಬಲ್ಲರು. ಇದಕ್ಕಾಗಿಯೂ ಅಭಿನಂದನಾರ್ಹರು. ಅವರಿಂದ ಇಂಥ ಸಾಂಸ್ಕೃತಿಕ ಸೇತುವೆ ಕಟ್ಟೋಣಗಳು ಧಂಡಿಯಾಗಿ ಆಗಲಿ ಎಂದು ಹಾರೈಸುತ್ತೇನೆ.

ಸಮರ್ಥ ಕವಿ ಬಲು ಕೋಮಲ ಸಂವೇದಿಯಾಗಿದ್ದು, ಯಾವುದನ್ನೇ ಆಗಲಿ ಅತ್ಯುತ್ಕಟವಾಗಿ ಪರಿಭಾವಿಸುವುದರಿಂದ ಅವನ ಅನಿಸಿಕೆ ಆಲೋಚನೆಗಳು ದಾಖಲೆಯಾಗಿರುವ ಕೃತಿಗಳ ಮೇಲೆ ವಿಶಿಷ್ಟ ವ್ಯಕ್ತಿಮೆಯ ಪರಿಮುದ್ರೆ ಬಿದ್ದಿರಲು ಸಾಧ್ಯ. ಸಾಮಾಜಿಕರಿಗೆ ನೇರವಾಗಿ ಕೈ ವಶವಾಗದ ವಾಸ್ತವ ಸತ್ಯದ ಕೆಲವು ವಿನ್ಯಾಸಗಳು, ಅವನ ಬಗೆಗಣ್ಣಿಗೆ ಪ್ರರೂಪ(Patterns)ಗಳಾಗಿ ಕಾಣಿಸಿಕೊಳ್ಳುವುದುಂಟು. ಅವುಗಳನ್ನು ಬಾಹ್ಯ ಸನ್ನಿವೇಶಗಳಿಂದ ಆಯ್ದು ಸಂದರ್ಭೋಚಿತವಾದ ವಸ್ತು ಪ್ರತಿರೂಪಗಳ ಮೂಲಕ ಅರ್ಥವತ್ತಾದ ಆಕೃತಿ ಮೂಡಿಸಿ ಶಬ್ದಗಳಲ್ಲಿ ಪ್ರತಿ ಸೃಷ್ಟಿ ಮಾಡುವುದರಿಂದ ಆ ಸತ್ಯ ವಿನ್ಯಾಸಗಳ ಮನಗಾಣಿಕೆಯ ಲಾಭ ಇತರರಿಗೂ ಸಾಧ್ಯವಾಗುತ್ತದೆ.

(ಸೃಷ್ಟಿಕ್ರಿಯೆ)

✧ ✧ ✧

ಅಂತಶ್ಚಿತ್ತ ತನಗೆ ತಾನೇ ಒಂದು ಗಹನವಾದ ನಿತ್ಯ ನಿರನ್ವೇಷಿತ ಲೋಕ. ಪ್ರತಿ ಕವನ ಸೃಷ್ಟಿಯ ಸಂದರ್ಭದಲ್ಲೂ ಕವಿ ಅದನ್ನು ಹೊಸದಾಗಿ ತಲಾಷು ಮಾಡಿಕೊಳ್ಳಬೇಕಾಗುತ್ತದೆ. ತನ್ನ ಉದ್ದೇಶ, ಸಾಮರ್ಥ್ಯಗಳಿಗೆ ಅನುಗುಣವಾಗಿ ಅದರಿಂದ ಎಷ್ಟು ಸಾಧ್ಯವೋ ಅಷ್ಟು ಪ್ರದೇಶವನ್ನು ವಶಪಡಿಸಿಕೊಂಡು ತನ್ನ ಪ್ರತಿಭಾ ಪ್ರಾಂತ್ಯಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ.

(ಸೃಷ್ಟಿಕ್ರಿಯೆ)



‘ಅಚ್ಚು ಮೆಚ್ಚು’: ಪರಿಪೂರ್ಣತೆಯನ್ನು ಪ್ರತಿಪಾದಿಸುವ ಪರ್ಯಾಲೋಚನೆಗಳು

♦ *ಚಿರಂಜೀವಿ*

೧

ನನಗೆ ತರಂಗ-ತುಷಾರ-ಉದಯವಾಣಿ ಪತ್ರಿಕೆಗಳ ಸಂಬಂಧ ಬಂದಾಗ, ನನಗೆ ಅತಿ ಪ್ರಿಯವಾದ ಸಾಹಿತ್ಯ ಬರೆಹಗಳನ್ನು ವೈವಿಧ್ಯಮಯವಾಗಿ ಸಂಪಾದಿಸಲು ಪ್ರಯತ್ನಪೂರ್ವಕವಾಗಿ ಶ್ರಮಿಸಿದೆ. ಪತ್ರಿಕೆಯ ಆವಶ್ಯಕತೆಗೆ ಅಗತ್ಯವಾದ ಬರೆಹಗಳನ್ನು ಬರೆದುಕೊಡಲು ಕನ್ನಡದ ಸುಪ್ರಸಿದ್ಧ ಹಿರಿಯ ಸಾಹಿತಿಗಳು ತತ್‌ಕ್ಷಣ ಒಲಿಯದಿದ್ದರೂ ನನ್ನ ನಿರಂತರ ಪ್ರಾರ್ಥನೆ ಮತ್ತು ಭೇಟಿಗಳ ನಿಮಿತ್ತ ಕನ್ನಡ ಸಾಹಿತ್ಯಲೋಕ ನನಗೆ ಒಲಿಯಿತು. ನಾನು ನನ್ನ ಬರೆವಣಿಗೆಯ ಘಟ್ಟದಲ್ಲಿ ಯಾರು ಯಾರನ್ನು ಆರಾಧಿಸುತ್ತಿದ್ದೆನೊ, ಮೆಚ್ಚುತ್ತಿದ್ದೆನೊ ಅವರನ್ನೆಲ್ಲ ನನ್ನ ಪತ್ರಿಕೋದ್ಯಮದ ಘಟ್ಟದಲ್ಲಿ ಭೇಟಿ ಮಾಡಿ, ಮಾತನಾಡಿಸಿ, ಅವರ ಆತ್ಮೀಯ ಸ್ನೇಹ ವಲಯದೊಳಗೂ ಪ್ರವೇಶಿಸಲು ಸಾಧ್ಯವಾಯಿತು. ಹೀಗಾಗಿ, ಇದು ನನ್ನ ಜೀವನದ ಅತ್ಯಂತ ಸಂತಸದ ಸ್ಮರಣೀಯ ಸಂದರ್ಭವೂ ಆಯಿತು.

ಇಂಥದೊಂದು ಆತ್ಮೀಯ ಸ್ನೇಹ, ಭೇಟಿ, ಮಾತುಕಥೆ, ಸಂತಸ ಇಂದಿಗೂ ಮನಸ್ಸಿನಲ್ಲಿ ಮೆಲುಕಾಗಿ ಉಳಿದು, ಸುಖ ಸಂವೇದನೆಗಳನ್ನು ಉಂಟು ಮಾಡುವಂತಾಗಿರುವುದು, ಹಿರಿಯ ಕವಿ, ವಿಮರ್ಶಕ ಪ್ರೊಫೆಸರ್ (ಈಗ ಡಾಕ್ಟರ್ ಸಹ) ಕೆ. ಎಸ್. ನಿಸಾರ್ ಅಹಮದ್ ಅವರ ಪರಿಚಯ.

ನಿಸಾರರಲ್ಲಿ ದೊಡ್ಡಸ್ತಿಕೆಯ ಮುಚ್ಚುಮರೆಯಿಲ್ಲ.

ಥಟ್ಟನೆ ಏನು ಬೇಕಾದರೂ ಹೇಳಿಬಿಡುವಂಥವರು.

ಅವರ ಅಭಿಮಾನಿ ಬಳಗ ಅಚ್ಚರಿಯುಂಟುಮಾಡುವಂಥದು. ಅವರನ್ನು ಗೌರವ, ಪ್ರೀತಿ, ವಿಶ್ವಾಸಗಳಲ್ಲಿ ಮುಳುಗಿಸಿಬಿಡುವಂಥದು. ನಿಸಾರರ ಬದುಕಿಗೆ ಯಾವಾಗಲೂ ಜೀವ ಸೆಲೆಯಾಗಿ ನಿಂತಿದೆ ಈ ಅಭಿಮಾನದ ಮಹಾಪೂರ.

ಈ ಮಹಾಪೂರದ ಒಂದು ಹೊಸ ಬಿಂದುವಾಗಿ ಅವರನ್ನು ಮೊದ ಮೊದಲು ಕವಿತೆ ಅಥವಾ ಲೇಖನಗಳಿಗಾಗಿ ಪತ್ರಗಳ ಮೂಲಕ ಕೋರಿದಾಗ ಈ 'ಜಿಯಾಲಜಿ ಶಿಲೆ' ಕೂಡಲೇ ಕರಗಲಿಲ್ಲ. ಇನ್ನು ಇವರ ಕೋಟೆಗೆ ಲಗ್ಗೆ ಹಾಕುವುದು ಸಾಧ್ಯವೇ ಇಲ್ಲ ಎನಿಸಿದರೂ ಬೆಂಬಿಡದ ಬೇತಾಳನಂತೆ ಅವರ ಮನೆಗೇ ಹೋಗಿ ಮಾತನಾಡಿಸಿದಾಗ ಸ್ವಲ್ಪ ಮೆದು ಧೋರಣೆಯನ್ನು ಪ್ರದರ್ಶಿಸಿದರು. ಆದರೂ ಖಡಕ್ ಉತ್ತರ: 'ಈಗೇನೂ ಬರೆದು ಕೊಡೋದಕ್ಕಾಗೊಲ್ಲ, ಮುಂದೆ ನೋಡೋಣ!'

ಆದರೆ ಈ 'ಮುಂದೆ', ಅದೃಷ್ಟವಶಾತ್ ಬಹು ಬೇಗ ನನ್ನ ಹತ್ತಿರ ಬಂದಿತು. ಅವರೊಂದು ಕವಿತೆ ಕೊಟ್ಟರು—ಅದೂ 'ವಿಶೇಷಾಂಕ' ಎಂದು ಹೇಳಿದುದಕ್ಕಾಗಿ. ಅಲ್ಲಿಂದ ನನ್ನ ಅವರ ಸ್ನೇಹ ಹಿಂತಿರುಗಿ ನೋಡಲಿಲ್ಲ. ಅವರಿಗೆ ಬಲವಂತ ಮಾಡಿ ನನಗೆ ಏನು ಬೇಕೋ ಅದನ್ನು ಬರೆಸಿಕೊಳ್ಳುವ ಕಾಲವೂ ಬಂದಿತು. ಆ ವೇಳೆಗೆ ಅವರು ನಮ್ಮ ಪತ್ರಿಕೆಗಳಿಗೆ ಬೇಕಾದಷ್ಟು ಕವನಗಳನ್ನು ಬರೆದುಕೊಟ್ಟಿದ್ದರು. ಇದರ ಶಿಖರ ಸಂಭ್ರಮ: 'ನವೋಲ್ಲಾಸ' ಕವನಗಳು. 'ತುಷಾರ'ದ ಒಂದೇ ಸಂಚಿಕೆಯಲ್ಲಿ 'ನವೋಲ್ಲಾಸ'ದ ಏಳೆಂಟು ಕವನಗಳನ್ನು ಬಣ್ಣದ ಚಿತ್ರಗಳೊಂದಿಗೆ ಪ್ರಕಟಿಸುವ ಸಂತಸ ನನ್ನದಾಯಿತು. ಬಹುಶಃ, ಒಬ್ಬರೇ ಕವಿಯ ಇಷ್ಟೊಂದು ಕವಿತೆಗಳನ್ನು ಒಂದೇ ಸಂಚಿಕೆಯಲ್ಲಿ ಬೇರೆ ಯಾವ ಪತ್ರಿಕೆಯೂ ಪ್ರಕಟಿಸಿರಲಾರದು!

ಕವಿ ನಿಸಾರರೊಂದಿಗೆ ಮಾತನಾಡುವಾಗಲೆಲ್ಲ ಅವರು ಕನ್ನಡ ಸಾಹಿತ್ಯ ಲೋಕದ ಅನೇಕ ವಿಶೇಷಗಳನ್ನು ಮತ್ತು ತಮ್ಮ ಜೀವನಾನುಭವಗಳನ್ನು ನನ್ನ ಮುಂದಿಡುತ್ತಿದ್ದರು. ಇವನ್ನು ಬೆರಗಿನೊಡನೆ ಕೇಳಿ ಕರಗಿಹೋದರೂ ನನ್ನಲ್ಲಿನ ಪತ್ರಕರ್ತ ಜಾಗೃತನಾಗಿದ್ದ. 'ಮೇಷ್ಟ್ರೆ, ಇವನ್ನೆಲ್ಲ ನೀವು ಲೇಖನವಾಗಿ ಬರೆದುಕೊಡಬೇಕು. 'ತುಷಾರ'ದಲ್ಲಿ ಪ್ರತಿ ತಿಂಗಳೂ ಒಂದೊಂದು ಪ್ರಕಟಿಸಬಹುದು. ನಿಮ್ಮ ಆಳವಾದ ಅಧ್ಯಯನ ಮತ್ತು ನೋಟಗಳಿಗೊಂದು ರೂಪ ಬರುತ್ತದೆ. ಅಲ್ಲದೇ ಓದುಗರಿಗೊಂದು ಉತ್ಕೃಷ್ಟ ಓದಿನ ಅನುಭವವನ್ನೂ ನೀಡಿದಂತಾಗುತ್ತದೆ!'—ಎಂದಿದ್ದೆ. ಎಂದಿನಂತೆ ಅವರು, 'ಅಯ್ಯಯ್ಯೊ, ಅದೆಲ್ಲ ಆಗೋಲ್ಲಪ್ಪ. ದೀರ್ಘವಾಗಿ ಲೇಖನಗಳನ್ನು ಬರೆಯುವ ತಾಳ್ಮೆ ಈಗ ನಂಗಿಲ್ಲ!' ಎಂದುಬಿಟ್ಟರು.

ಈಗ ತಾಳ್ಮೆ ಇಲ್ಲದಿರಬಹುದು. ಆದರೆ ಹಿಂದೆ ಅವರು ದೀರ್ಘ ಲೇಖನಗಳನ್ನು ಬರೆದಿದ್ದಾರೆ. ಅವು ಓದುಗರಿಗೂ ಹಿಡಿಸಿವೆ. ಅನಂತರ ಮೂರು ಉತ್ತಮ ಸಂಕಲನಗಳೂ ಆಗಿವೆ ಎನ್ನುವುದು ನನಗೆ ತಿಳಿದ ವಿಷಯ.

ನಿಸಾರರಿಗೆ ಕೇವಲ ಕವಿತಾರಚನೆಯಲ್ಲಿ ಮಾತ್ರವಲ್ಲ, ದೀರ್ಘ ಲೇಖನಗಳ

ರಚನೆಯಲ್ಲೂ ಹಿಡಿತವಿದೆ ಎನ್ನುವುದಕ್ಕೆ ಅವರ ಮೊದಲ ಮೂರು ಲೇಖನ ಸಂಕಲನಗಳಾದ 'ಇದು ಬರಿ ಬೆಡಗಲ್ಲೋ ಅಣ್ಣ' (೧೯೮೦), 'ಮನದೊಂದಿಗೆ ಮಾತುಕತೆ' (೧೯೯೧), 'ಹಿರಿಯರು ಹರಸಿದ ಹೆದ್ದಾರಿ' (೧೯೯೨)—ಮಾದರಿಯಾಗಿ ಕಾಣುತ್ತವೆ.

ನನಗೆ ಇನ್ನು ಸ್ವಲ್ಪ ವಿಭಿನ್ನವಾದ ನಿಸಾರರ ವಿಮರ್ಶನ ಒಳ ನೋಟಗಳ ಅಭಿವ್ಯಕ್ತಿ ಬೇಕಾಗಿತ್ತು. ಆ ಹೊತ್ತಿಗೆ ಅವರ ಸ್ನೇಹ ಒಂದಿಷ್ಟು ಆತ್ಮೀಯವಾಗಿತ್ತು. ಅವರನ್ನು ಬರೆಯಲು ಒತ್ತಾಯಿಸುತ್ತಿದ್ದೆ.

ದಿಢೀರನೆ ಒಂದು ದಿನ ನಗರ ಸಾರಿಗೆ ಬಸ್‌ನಲ್ಲಿ ಕುಳಿತಿದ್ದಾಗ 'ಅನೌನ್ಸ್' ಮಾಡಿದರು: 'ಸರೀಪ್ಪ, ಪ್ರತಿ ತಿಂಗಳು ಲೇಖನ ಬರೆದುಕೊಡ್ತೀನಿ!'

ಆಗ ನಾನು ಅವರಿಗೆ ಸಂತೋಷದಿಂದ ಹೇಳಿದೆ: 'ನೀವು ಯಾವ ವಿಷಯದ ಬಗ್ಗೆ ಬೇಕಾದರೂ ಬರೆಯಬಹುದು, ಎಷ್ಟು ಪುಟ ಬೇಕಾದರೂ ಬರೆಯಬಹುದು!'

ಅವರಿಗೆ ಅದು ಒಂದು ಸವಾಲೇ ಆಯಿತು. ಅದೇ ಮುಂದೆ ಅವರ ಚಿಂತನೆಗೂ ದಾರಿಯಾಯಿತು. ನಾನು ಅವರಿಗೆ ಮತ್ತೆ ಒತ್ತಾಯಿಸಲಿಲ್ಲ. ಬರೆಯಬೇಕೆಂಬ ಒತ್ತಡ ಹಾಗೂ ಪ್ರಕ್ರಿಯೆ ಅವರಲ್ಲಿ ಪ್ರಾರಂಭವಾಗಿದೆಯೆಂದು ನನಗೆ ಗೊತ್ತಾಯಿತು.

ಒಂದು ಶುಭ ಶುಕ್ರವಾರವೊ, ಗುರುವಾರವೊ ನನ್ನನ್ನು ಕರೆದರು. ಮೊದಲನೆಯ ಲೇಖನವನ್ನು ಕೈಗಿಕ್ಕಿದರು. ಲೇಖನದ ಹೆಸರು 'ಆಸೆ-ಸಂಕಲ್ಪಗಳ ಅನ್ಯೋನ್ಯತೆ'. ನಿಸಾರ್ ಕೇಳಿದರು: 'ಲೇಖನ ಮಾಲೆಗೆ ಏನು ಹೆಸರಿಡುತ್ತೀರಿ?' ಗೆಳೆಯ ಈಶ್ವರಚಂದ್ರ ಹಿಂದೊಮ್ಮೆ ಅಂಕಣ ಬರಹಗಳಿಗೆ ಸೂಚಿಸಿದ್ದ ಹೆಸರನ್ನೇ ಅವರಿಗೆ ಹೇಳಿದೆ: 'ಅಚ್ಚುಮೆಚ್ಚು'. ನಿಸಾರ್ ಯೋಚಿಸಿ ಹೇಳಿದರು: 'ತುಂಬ ಚೆನ್ನಾಗಿದೇರಿ. ಅದೇ ಇರಲಿ!'

'ಅಚ್ಚುಮೆಚ್ಚು' ಅಂಕಣದ ಮೊದಲ ಲೇಖನ 'ಆಸೆ-ಸಂಕಲ್ಪಗಳ ಅನ್ಯೋನ್ಯತೆ' 'ತುಷಾರ'ದ ಅಕ್ಟೋಬರ್ ೧೯೭೨ರ ಸಂಚಿಕೆಯಿಂದ ಪ್ರಾರಂಭವಾಯಿತು. ಎಷ್ಟು ತಿಂಗಳು ನಡೆಸಬೇಕು ಎಂದು ನಾವೂ ಯೋಚಿಸಲಿಲ್ಲ, ಎಷ್ಟು ಕಾಲ ಬರೆದುಕೊಡಲಿ ಎಂದು ಅವರೂ ಕೇಳಲಿಲ್ಲ!

ಕನ್ನಡ ಸಾಹಿತ್ಯ, ಸಾಹಿತಿಗಳ ಕುರಿತು ತುಂಬ ಆಳವಾದ ಒಳನೋಟಗಳನ್ನು ತಳೆದಿರುವ, ಕನ್ನಡ ಭಾಷೆ, ಸಾಹಿತ್ಯ, ಇತಿಹಾಸಗಳ ಬಗ್ಗೆ ದಟ್ಟ ಅಭಿಮಾನವನ್ನು ಹೊಂದಿರುವ, ಬಹು ಪಾಲು ಹಿರಿಯರ ಮಹತ್ವದ ಕೃತಿಗಳನ್ನೆಲ್ಲ ಓದಿರುವ ನಿಸಾರರು, ತಮ್ಮ ಮೆಚ್ಚಿನ ಮಾಸ್ತಿ, ಪುತಿನ, ಕುವೆಂಪು, ಬೇಂದ್ರೆ, ಗೋಕಾಕ್ ಮುಂತಾದವರ ಸಾಹಿತ್ಯದ ಕುರಿತು ಬರೆಯಲು ಪ್ರಾರಂಭಿಸುತ್ತಾರೆ ಅಂದುಕೊಂಡಿದ್ದೆ. ಪತ್ರಿಕೆ ಮತ್ತು ಓದುಗರ ದೃಷ್ಟಿಯಿಂದ ನಾನೂ ಇದನ್ನೇ ಬಯಸಿದ್ದೆ. ಆದರೆ, ನಿಸಾರ್ ಲೇಖನಗಳನ್ನು ಜನಪ್ರಿಯತೆ ಅಥವಾ ಓದುಗರ ದೃಷ್ಟಿಯಿಟ್ಟುಕೊಂಡು ಸರಳಗೊಳಿಸಲಿಲ್ಲ, ಜಾಳುಗೊಳಿಸಲಿಲ್ಲ. ಕ್ಲಿಷ್ಟವಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡು, ಕ್ಲಿಷ್ಟ ಭಾಷೆಯಲ್ಲಿಯೇ ಬರೆದರು.

ಅವರ ಗದ್ಯದ ಭಾಷಾ ಶೈಲಿ ಯಾರನ್ನಾದರೂ ಆಶ್ಚರ್ಯಚಕಿತರನ್ನಾಗಿ ಮಾಡು

ವಂಥದು. ನಿಸಾರರಂಥ ಆಧುನಿಕ ಕವಿ ಇಂಥಾ 'ಪ್ರಬುದ್ಧ ಕರ್ಣಾಟಕ'ದ ಭಾಷೆಯನ್ನು ಉಪಯೋಗಿಸುವುದೆ? ಬಹಳಷ್ಟು ಸಂಸ್ಕೃತಭೂಯಿಷ್ಠವಾಗಿ ಇದೆಯಲ್ಲ, ಕನ್ನಡವನ್ನು ಕಬ್ಬಿಣವಾಗಿಸಿದ್ದಾರಲ್ಲ ಎಂದು ಕೆಲವರು ಕೇಳುವಂತೆ ಅವರ ಬರೆವಣಿಗೆ. ಜೊತೆಗೆ ಪ್ರತಿ ಲೇಖನದ ವ್ಯಾಪ್ತಿ ವಿಶಾಲವಾಗಿತ್ತು. ತಾವು ಬರೆಯಲು ಬಯಸಿರುವ ವಸ್ತುವಿನ ಎಲ್ಲ ಆಯಾಮಗಳನ್ನು ಸಮಗ್ರವಾಗಿ ಗಮನಿಸುವುದೇ ಅವರ ಖಚಿತ ನಿಲವಾಗಿತ್ತು.

ನಿಸಾರರು ಭಾಷಾ ಪ್ರಯೋಗದಲ್ಲಿ ತಮ್ಮ ಸಮಕಾಲೀನರಿಗಿಂತಲೂ ಒಂದಷ್ಟು ಹಿಂದೆ ಸರಿದು ತಾವು ಬಯಸಿದಂತೆ ಪದ ಪ್ರಯೋಗ, ವಾಕ್ಯರಚನೆ, ವಾಕ್ಯಗಳಲ್ಲಿ ಪದಗಳಿಗಿರುವ ಅನ್ಯೋನ್ಯ ಸಂಬಂಧ, ಅರ್ಥಕಲ್ಪನೆ ಇವುಗಳನ್ನೆಲ್ಲ 'ಕಾಪಿ ಬುಕ್ ಸ್ಟೈಲ್' ಎಂಬಂತೆ, ಸಾಂಪ್ರದಾಯಿಕ ಶೈಲಿಯಲ್ಲಿಯೇ ನಿರ್ಮಿಸುತ್ತಿದ್ದರು. ಅವರಿಗೆ ಅವರದೇ ಒಂದು ರೀತಿ. ಬಹುಶಃ ಕೆಲವು ಹಿರಿಯ ಲೇಖಕರ ಬರೆವಣಿಗೆಯ ಶೈಲಿ ಅವರಿಗೆ ಪ್ರಿಯವಾಗಿರುವುದು ಪ್ರಭಾವ ಬೀರಿರುವುದು, 'ಅಚ್ಚುಮೆಚ್ಚು' ಲೇಖನಗಳಲ್ಲಿ ಅಚ್ಚೊತ್ತಿಕೊಂಡಿತ್ತು.

ಹಸ್ತಪ್ರತಿಯ ಮೊದಲ ಓದುಗನಾಗಿ ನನಗೆ ಲೇಖನಗಳೆಲ್ಲ ಮೆಚ್ಚುಗೆಯಾಗಿದ್ದವು. ವಸ್ತು ವೈವಿಧ್ಯ ನನ್ನನ್ನು ಬೆರಗಾಗಿಸಿತ್ತು. ಅದನ್ನು ಅವರು ವಿಸ್ತರಿಸಿಕೊಂಡು ಹೋಗುವ ರೀತಿ ಸುಂದರವಾಗಿತ್ತು. ಲೇಖನ ಓದಿದ ಕೂಡಲೇ ಅವರಿಗೆ ಫೋನ್ ಮಾಡಿ 'ಚೆನ್ನಾಗಿದೆ' ಎಂದು ಹೇಳುತ್ತಿದ್ದೆ. ಲೇಖನದ ವಸ್ತು ಮತ್ತು ಬಗವಣಿಗೆಯ ಶೈಲಿ, ಪದ ಪ್ರಯೋಗ ಸಾಮಾನ್ಯ ಓದುಗರಿಗೆ ಸ್ವಲ್ಪ ಕ್ಲಿಷ್ಟವಾಗಿದ್ದಿರಬಹುದು ಎಂದು ನನಗನ್ನಿಸಿದರೂ ನಿಸಾರ್ ಬರೆಯಲು ಬಯಸುವ ರೀತಿ ನನಗೆ ಗೊತ್ತಿತ್ತು. ಆಲೋಚನೆ, ವಸ್ತು ಮತ್ತು ಶೈಲಿ ಇವುಗಳಲ್ಲಿ ಯಾವುದನ್ನೂ ಅವರು ರಾಜಿ ಮಾಡಿಕೊಳ್ಳಲಾರರು. ಸಾಮಾನ್ಯ ಆಲೋಚನೆ, ಜಾಳು ಅಥವಾ ಅವಸರದ ಬರೆವಣಿಗೆಯನ್ನು ಅವರು ಎಂದೂ ಒಪ್ಪುವುದಿಲ್ಲ. ಜೊತೆಗೆ ಮುಂದೆ ಈ ಲೇಖನಗಳೆಲ್ಲ ಒಂದು ಸಂಕಲನವಾಗಿ ವಿಮರ್ಶಕರ ಅಗ್ನಿ ಪರೀಕ್ಷೆಗೆ ಒಳಪಡುತ್ತದೆ ಎಂದು ಅವರಿಗೆ ಗೊತ್ತಿತ್ತು. ಲೇಖನಗಳು ಒಂದಿಷ್ಟು ಕಬ್ಬಿಣದ ಕಡಲೆಯೇ ಆದವು ಎಂದು ಕೆಲವು ಓದುಗರಿಗಂತೂ ಅನ್ನಿಸಿತು.

ಲೇಖನಗಳು ಒಂದು ಚೌಕಟ್ಟಿನಲ್ಲಿ ಗಟ್ಟಿಯಾಗಿ ಮೂಡುತ್ತಿರುವುದರಿಂದ ಮತ್ತು ನಿಸಾರ್ ಅವರು ಲೇಖನಗಳ ರೂಪುರೇಷೆಯನ್ನು ತಮ್ಮ ಮನಸ್ಸಿನಲ್ಲಿ ಖಚಿತವಾಗಿ ಮೂಡಿಸಿ ಕೊಂಡು ಬಿಟ್ಟಿರುವುದರಿಂದ, ಈ ಘಟ್ಟದಲ್ಲಿ ಓದುಗರ ಭಾವನೆಗಳನ್ನು ಅವರಿಗೆ ಹೇಳಿ ಅವರ ಏಕಾಗ್ರತೆಯನ್ನು ಕದಡುವುದು ನನಗೆ ಇಷ್ಟವಾಗಲಿಲ್ಲ. ಮುಂದೊಂದು ದಿವಸ, ಅಭಿಪ್ರಾಯಗಳು ಹೀಗಿವೆ, ಇದರಿಂದ ಲೇಖನಗಳು ಬದಲಾಗಬೇಕು ಎಂದು ಅಂದು ಕೊಳ್ಳಬೇಕಾಗಿಲ್ಲ; ಈಗಿರುವುದು ಸರಿಯಾಗಿದೆ, ಹೀಗೇ ಬರೆಯುತ್ತ ಹೋಗಿ ಎಂದಷ್ಟೇ ಹೇಳಿದೆ.

ನಿಸಾರ್ ಒಂದೇ ಮನಸ್ಸಿನಿಂದ ಬರೆದರು. ಲೇಖನಗಳು ಅಂಕಣದ ಚೌಕಟ್ಟಿನ ಅರ್ಥವಂತಿಕೆಯನ್ನು ಹೊಸದಾಗಿ ಬರೆಯುವ ಹಾಗೆ ಲೇಖನ ಮಾಲೆಯನ್ನು ಮುಂದುವರಿಸಿದರು. ಹನ್ನೆರಡು ಲೇಖನಗಳು—ಒಂದು ವರ್ಷ ಆದ ಕೂಡಲೇ 'ನಿಲ್ಲಿಸಬೇಡಿ,

ಮುಂದುವರಿಸಿ!' ಎಂದೆ. ಇಪ್ಪತ್ತ ನಾಲ್ಕು ಲೇಖನಗಳು—ಎರಡು ವರ್ಷ ಆದ ಮೇಲೂ ಇದೇ ಮಾತು ಹೇಳಿದೆ. ಈ ಮಾಲೆ ಹೀಗೆ ಶಕ್ತಿ ತುಂಬಿಕೊಂಡು ಉರುಳತೊಡಗಿ ನಲವತ್ತೆರಡು ತಿಂಗಳುಗಳು ಪ್ರಕಟವಾಯಿತು. 'ತುಷಾರ' ಮಾಸಪತ್ರಿಕೆಯ ಒಂದು ಹೆಗ್ಗಳಿಕೆ, ಸಾಧನೆಯೂ ಆಯಿತು.

ಸಾಹಿತ್ಯದ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರೂ ಓದುಗರ ಜನಪ್ರಿಯತೆಗೂ ಪಾತ್ರವಾಗಬೇಕಾಗಿದ್ದಂಥ ಒಂದು ಕನ್ನಡ ಮಾಸ ಪತ್ರಿಕೆಗೆ ಇದೊಂದು ದೊಡ್ಡ ಸಾಹಸವೇ ಆಯಿತು. 'ಹಾರ್ಡ್ ಮ್ಯಾಟರ್' (ಕಬ್ಬಿಣದ ಕಡಲೆ) ಅಂಚಿನಲ್ಲೇ ಇರುತ್ತಿದ್ದ 'ಅಚ್ಚು ಮೆಚ್ಚು' ಲೇಖನಗಳು ಬರ ಬರುತ್ತ ಓದುಗರಿಗೆ ಪ್ರಿಯವಾಗಿ ಹೋದವು. ಸಂಪಾದಕೀಯ ದವರಿಗೊಂದು ಆಪ್ತ ಮನೋಭಾವ ಹುಟ್ಟಿಸಿಬಿಟ್ಟವು. ಮುಂದಿನ ತಿಂಗಳಿನಿಂದ ಇದು ಪ್ರಕಟವಾಗುವುದಿಲ್ಲ ಎಂದಂದುಕೊಳ್ಳಲು ನಮಗೆ ಯಾರಿಗೂ ಸಾಧ್ಯವಾಗಲಿಲ್ಲ.

ಆದರೂ ಒಮ್ಮೆ ಲೇಖನ ಮಾಲೆ ಮುಕ್ತಾಯಗೊಂಡಿತು—ಒಳ್ಳೆಯದೆಲ್ಲವೂ ಒಂದಲ್ಲ ಒಂದು ಸಲ ಮುಕ್ತಾಯ ತಲಪಬೇಕು ಎಂಬಂತೆ!

ಕೊನೆಯ ಲೇಖನದ ಕೊನೆಯಲ್ಲಿ 'ಈ ಲೇಖನ ಮಾಲೆ ಇಲ್ಲಿಗೆ ಮುಗಿಯಿತು' ಎಂದು ನೋವಿನಿಂದಲೇ ಸೂಚಿಸಿದಾಗ, ಮರು ತಿಂಗಳು ನಮಗೆ ಬಂದ ಪತ್ರಗಳ ಧಾರೆ ನಮ್ಮನ್ನು ದಿಜ್ಮೂಢರನ್ನಾಗಿಸಿತು. ನಲವತ್ತೆರಡು ತಿಂಗಳುಗಳು ಸತತವಾಗಿ ಪ್ರಕಟಿಸಿದ್ದರೂ ಇವು ತಮ್ಮ ಹೊಳಪನ್ನು ಕಳೆದುಕೊಳ್ಳಲಿಲ್ಲವಲ್ಲ, ನಿಲ್ಲಿಸದೆ ಮುಂದುವರಿಸಬಹುದಾಗಿತ್ತು ಎಂದೂ ಅನ್ನಿಸದೆ ಇರಲಿಲ್ಲ.

ನನಗಂತೂ ವೈಯಕ್ತಿಕ ನಷ್ಟ. ನಲವತ್ತೆರಡು ತಿಂಗಳುಗಳಲ್ಲಿ ಅವರನ್ನು ನೂರಾರು ಸಲ ಭೇಟಿಯಾಗಿಬಿಟ್ಟಿದ್ದೆ. ಲೇಖನವನ್ನು ಚರ್ಚಿಸಲು ಭೇಟಿ, ಲೇಖನ ಕೊಡಲು ಅವರ 'ಮಣಿಪಾಲ್ ಸೆಂಟರ್' ಕಛೇರಿಯ ಭೇಟಿ, ಈ ನೆಪದಲ್ಲೇ ಸಂಜೆ ಐದರ ಓಡಾಟ, ಮುಂದಿನ ಲೇಖನಗಳ ಚರ್ಚೆ, ಎಲ್ಲಾದರೊಂದು ಕಡೆ ಸಿಹಿ, ದೋಸೆ, ಕಾಫಿ. ಸಂಚಿಕೆ ಪ್ರಕಟವಾದ ಮೇಲೆ ಅದನ್ನು ಅವರಿಗೆ ಸ್ವತಃ ತಲಪಿಸಲು ಭೇಟಿ. ನಡುವೆ ಅವರು ದಿಢೀರ್ ದುಬೈಗೆ ಹೊರಟುಬಿಟ್ಟರು. ಅಲ್ಲಿಂದಲೇ ಎರಡು ಲೇಖನಗಳನ್ನು ಬರೆದು ಕಳುಹಿಸಿದರು.

ಓಹ್, ಎಷ್ಟೊಂದು ಓಡಾಟ, ಎಷ್ಟೊಂದು ಆತ್ಮೀಯ ಮಾತುಕಥೆ, ಸಮ ಸಮವಾಗಿ ಅಭಿಪ್ರಾಯ ಮಂಡನೆಗೆ ಅವಕಾಶ, ಸಲಹೆ ಸೂಚನೆಗಳ ಸ್ವೀಕಾರ! ನನ್ನ ಪಾಲಿಗೆ ಸ್ಮರಣೀಯ ಆ ನಾಲ್ಕು ವರ್ಷಗಳು.

'ಅಚ್ಚುಮೆಚ್ಚು' ಲೇಖನ ಮಾಲೆ ಮುಕ್ತಾಯಗೊಂಡ ಒಂದೆರಡೇ ತಿಂಗಳಲ್ಲಿ ಅದು ಪುಸ್ತಕರೂಪವಾಗಿ ಪ್ರಕಟಗೊಂಡಿತು (ಪ್ರೇಮಸಾಯಿ ಪ್ರಕಾಶನ). ೨೦೦೪ರಲ್ಲಿ ಈ ಬೃಹತ್ಕೃತಿಯ ಒಂದು ಕಿರು ರೂಪವಾಗಿ ಎರಡನೆಯ ಸಲ 'ಅಚ್ಚುಮೆಚ್ಚು' ಮತ್ತೆ ಪ್ರಕಟವಾಯಿತು. ಮೂಲ ಕೃತಿಯ ಅರ್ಧದಷ್ಟು ಲೇಖನಗಳು ಇದರಲ್ಲಿ ಅಡಕಗೊಂಡವು. ಇದೊಂದನ್ನು ವಿದ್ಯಾರ್ಥಿಗಳ ಓದಿಗೆ ಅಳವಡಿಸಬೇಕು ಎನ್ನುವುದರ ಉದ್ದೇಶ ಈ

ಕಿರುರೂಪದ ಪ್ರಯತ್ನವಾಗಿತ್ತು (ವಸಂತ ಪ್ರಕಾಶನ).

೨

'ಅಚ್ಚುಮೆಚ್ಚು' ಮುನ್ನುಡಿಯಲ್ಲಿ ನಿಸಾರ್ ಹೀಗೆ ಬರೆದಿದ್ದಾರೆ:

'ಅಚ್ಚುಮೆಚ್ಚು'ವಿನ ಲೇಖನಗಳು ಪ್ರಮುಖತಃ ವಿಮರ್ಶಾತ್ಮಕ, ವಿಚಾರಾನ್ವೇಷಕ ಸ್ವರೂಪದ್ದೆಂದು ನನ್ನ ಅನಿಸಿಕೆ. ಸಾಹಿತ್ಯ, ವಿಮರ್ಶೆ, ಕಲೆ, ಸಂಸ್ಕೃತಿ, ನಾಗರಿಕತೆ, ರಾಜಕೀಯ, ಧರ್ಮ, ಪುರುಷಾರ್ಥ, ಪ್ರಕೃತಿ, ರಾಷ್ಟ್ರ—ತದಿತರ ಸಂಗತಿಗಳ ಸುತ್ತ ಇಲ್ಲಿನ ಬರಹಗಳು ಪರಿಭ್ರಮಿಸಿದರೂ ಸ್ಥಾಯಿಕೇಂದ್ರ ಮಾತ್ರ ಮನುಷ್ಯ ಜೀವಿತದ ಸಮಷ್ಟಿ ಒಳಿತಿನ ಹಾರೈಕೆಯೇ ಆಗಿದೆ. ದೇಶ, ಭಾಷೆ, ಪ್ರಾಂತ್ಯ, ಜಾತಿ, ಮತ, ಧರ್ಮ, ಪಕ್ಷವಿಪಕ್ಷವೆಂದು ಒಡೆದು ಸಿಡಿದಿರುವ ಮಾನವ ಕುಲದ ನಡುವೆ ಭಾವಾತ್ಮಕ ಸಾಮರಸ್ಯವನ್ನು ಏರ್ಪಡಿಸಲು ಶ್ರಮಿಸಬೇಕಾದ ಕಾಳಜಿ ಪ್ರಸಕ್ತ ಸಂದರ್ಭದಲ್ಲಿ ರಾಷ್ಟ್ರಾದ್ಯಂತ ತೀವ್ರಗೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಬೇಕಾಗಿಲ್ಲ. ದೇಶ-ಜನಾಂಗಗಳ ಒಕ್ಕಟ್ಟಿನ ಹೆಸರಿನಲ್ಲಿ ವಿವಿಧತೆ ವಿಶಿಷ್ಟತೆಗಳನ್ನು ಮೂಲೋತ್ಪಾಟಿಸಿ ಏಕರೂಪವಾದ ಜೀವಿತ ವಿಧಾನ, ಆಲೋಚನೆ, ಆಚರಣೆ, ಆಹಾರ-ವಿಹಾರ ಇತ್ಯಾದಿಗಳನ್ನು ಸಾಧಿಸುವ 'ಐಕ್ಯ' ತಿರುಳಿನಲ್ಲಿ ನಿರಂಕುಶ ಆಳ್ವಿಕೆಯೇ ಆಗಿರುತ್ತದೆ.

'ನಮ್ಮ ಸಮಾಜದ ಹಲವು ಹನ್ನೊಂದು ಶ್ರದ್ಧೆ ಆಚಾರ-ವಿಚಾರ ಜೀವನ ಶೈಲಿಯುಳ್ಳ ಜನಪದದ ನಡುವೆ ನಿರ್ಮತ್ಸರತೆಯ, ಸಹಿಷ್ಣುತೆಯ ಸಮನ್ವಯ ಸೌಹಾರ್ದ ಸ್ಥಾಪಿತವಾಗಬೇಕು. ಎಲ್ಲರೂ ತಮ್ಮ ಭೇದ, ಭಿನ್ನತೆ, ವೈರುದ್ಧ್ಯಗಳನ್ನು ಉಳಿಸಿಕೊಂಡೂ ದೇಶದ ಒಟ್ಟಾರೆ ಹಿತಕ್ಕೆ ಸಹಕಾರಿಯಾಗುವ ಸುಮಧುರ ಸಾಮರಸ್ಯವೊಂದು ಪ್ರತಿಷ್ಠಾಪಿತ ವಾಗಬೇಕು.

'ವೈವಿಧ್ಯದ ನಡುವಣ ಈ ಸಮನ್ವಯ ಸಂಪಾದನೆ, ಮನುಷ್ಯ ಸಮುದಾಯದ ಸಮಗ್ರ ಹಿತ ಸಾಧಕತೆಯ ನಿಟ್ಟಿನಲ್ಲಿ ಜೀವ ಜಲವಿದ್ದ ಹಾಗೆ. 'ಅಚ್ಚುಮೆಚ್ಚು'ವಿನ ಲೇಖನ ಗಳ ಹಿನ್ನೆಲೆಯಲ್ಲಿ ಕ್ರಿಯಾತ್ಮಕವಾಗಿರುವುದು ಇಂಥ ಮಾನವ ಸಾಮರಸ್ಯದ ಹಾರೈಕೆ. ಸಮಗ್ರರೂಪದ ಕಲ್ಯಾಣಾಕಾಂಕ್ಷೆಯ ಕಿಂಚಿತ್ ದರ್ಶನವನ್ನೊ, ಅರಿವನ್ನೊ ಪಡೆಯದೆ ಲೇಖನಗಳನ್ನು ಬಿಡಿಬಿಡಿಯಾಗಿ ಕೇವಲ ಸ್ವಾರಸ್ಯದ ಸಲುವಾಗಿಯೋ ಮತ್ತೊಂದಕ್ಕೋ ಓದಿಕೊಂಡರೆ ಪೂರ್ಣಫಲ ಲಭಿಸದೆಂದು ನಿವೇದಿಸಿಕೊಳ್ಳುತ್ತೇನೆ.'

—'ಅಚ್ಚುಮೆಚ್ಚು' ಕೃತಿಯ ಮುನ್ನುಡಿಯಲ್ಲಿ ಕವಿ ನಿಸಾರರು ತಮ್ಮ ಭಾವಾತ್ಮಕ ಭಾವನೆಗಳನ್ನೆಲ್ಲ ತೆರೆದಿರಿಸಿದ್ದಾರೆ. ಅಲ್ಲಿ ಅವರ ವ್ಯಕ್ತಿತ್ವದ ಒಳತೋಟಿ ಇದೆ, ತಾವಿರುವ ಸಮಾಜದ ಬಗ್ಗೆ ಅತೃಪ್ತಿ, ಕೋಪ, ಬೇಸರ, ರೋಷ, ನೋವು ಇದೆ. ಆಡಳಿತದ ಚುಕ್ಕಾಣಿ ಹಿಡಿದಿರುವವರ ದ್ವಂದ್ವ ನೀತಿ, ಸಮಾಜದ ಜನರಲ್ಲಿ ಬಿತ್ತಿ ಹೋಗಿರುವ ಟೊಳ್ಳುತನ, ಅನುಮಾನಗಳು—ಇವೆಲ್ಲ ಅವರ ವ್ಯಕ್ತಿತ್ವದ ಅಭಿವ್ಯಕ್ತಿಗಳು.

'ಅಚ್ಚುಮೆಚ್ಚು' ಸಂಕಲನದ ಲೇಖನಗಳು ಯಾವುದರಲ್ಲೂ ಕಾಣಬರದ ಸ್ವಕೀಯ

ಪ್ರಖರತೆಗಳನ್ನು ಅವರು ಮುನ್ನುಡಿಯಲ್ಲಿ ಏಕೆ ತೋಡಿಕೊಂಡರೋ ಸ್ಫುಟವಾಗುವುದಿಲ್ಲ. ಆದರೆ. 'ದಟ್ ಈಸ್ ನಿಸಾರ್'—ಯಾವಾಗಲೂ, ಏನಾದರೊಂದು ಕಳವಳದಲ್ಲಿ ತಮ್ಮ ಮನಸ್ಸನ್ನು ಘಾಸಿಗೊಳಿಸಿಕೊಳ್ಳುತ್ತಿರುತ್ತಾರೆ.

ಆದರೆ. 'ಅಚ್ಚುಮೆಚ್ಚು' ಲೇಖನಗಳು ಖಂಡಿತ ಸಮಾಜಮುಖಿಯಾಗಿ ಓದುಗರನ್ನು ಬೇರೊಂದು ಚಿಂತನಾಲೋಕಕ್ಕೇ ಕೊಂಡೊಯ್ಯುತ್ತವೆ. ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಮಹಾನ್ ಸಾಧನಶೀಲರು, ನೆನಪುಗಳು—ಹೀಗೆ 'ಮುನ್ನುಡಿ'ಯಲ್ಲಿ ಭಾವನೆಗಳನ್ನು ಅದುಮಿ ಅದುಮಿ ಸಂಕಟವನ್ನು ಹಿಂಡಿದ ನಿಸಾರ್ ಅವರು, ಲೇಖನಗಳಲ್ಲಿ ತಮ್ಮ ವಿಸ್ತಾರ ವಾದ ಪ್ರತಿಭಾಲೋಕದ ಸಂತಸದ ಆಣಿಮುತ್ತುಗಳನ್ನು ಉರುಳಾಡಿಸಿದ್ದಾರೆ.

'ಅಚ್ಚುಮೆಚ್ಚು' ಲೇಖನಗಳಲ್ಲಿ ಎದ್ದು ಕಾಣುವ ಸೊಗಸಾದ ಬಂಧ, ಮುಕ್ತ ಮನಸ್ಸಿನ ಮೇಲುಮಟ್ಟದ ಚಿಂತನೆಗಳ ಹೊರ ಹರಿವು ಓದುಗರಿಗೆ ಒಂದಿಷ್ಟು ತ್ರಾಸದಂತೆ ಮೊದಮೊದಲು ಅನ್ನಿಸಿದರೂ ಮತ್ತೆ ಮತ್ತೆ ಓದಿಗೆ ಬರೆವಣಿಗೆ ಮತ್ತು ಶೈಲಿಯ ಸೊಗಸು ಮನಸ್ಸನ್ನು ಸೂರೆಗೊಳ್ಳುತ್ತದೆ. ಕನ್ನಡ ಭಾಷೆಯನ್ನು, ಗದ್ಯವನ್ನು, ಇಂಥದೊಂದು ಗಟ್ಟಿ ಬಂಧದಲ್ಲಿ ಅಭಿವ್ಯಕ್ತಿಯಲ್ಲಿ ಅಚ್ಚಿಸಿರುವುದು ಹೆಮ್ಮೆಯೆನಿಸುತ್ತದೆ. ಓದುತ್ತ ಹೋದಂತೆ ಅನೇಕ ಹೊಸ ಪದಗಳು ಕೊಂಡಿಗಳಾಗಿ ಮೆರೆಯುವುದು ಅನುಭವವಾಗುತ್ತದೆ—ಸುಂದರ ಕನ್ನಡ ಪದ ಪ್ರಯೋಗವೊ, ಉರ್ದುವಿನದೊಂದು ಕನ್ನಡತನವೊ ಇಂಗ್ಲಿಷ್ ಭಾಷಾ ಪದವೊಂದರ ಅಚ್ಚಕನ್ನಡ ಅಚ್ಚೊ ಎಂಬಂತೆಲ್ಲ ಯೋಚಿಸುವಂತೆ ಮಾಡುವ ಪದಗಳು—ನಾರಕೀಯ ಕೊಳಗೇರಿ, ಸಂಪತ್ಸಮೃದ್ಧಿಯ ಮಹಲು, ಕಾಲಪೋಷಿತ ಹಣಹದ್ದು, ವಾಗ್ದ್ರೋಹ, ನಾಗರಿಕತೆಗಳ ಬೀಜಾವಾಪ, ಲಿಖಾವಟ್ಟಿಗೆ (ಗಮನೀಯ ಎನ್ನುವ ಹಾಗೆ) ಕಮನೀಯ, ಲಯ ಸೌಕುಮಾರ್ಯ, ವಾಗ್ಜಲಪಾತ, ಪೀಠಲಂಪಟ, ಪತನಾಭಿಮುಖಿ, ಸರಪಣಿ ಸೇದು, ಕವಿ ವಿಮರ್ಶಕ ಸೂನುಗಳು, ಪುನರುಜ್ಜೀವಕ, ಮನೋಧಾತು, ನಿರ್ವಿಶೇಷ ನರಾಕೃತಿ, ಕ್ಷೇಮಂಕರ ದೂರ, ಕಲಕುಮಲಕು, ಪನ್ನತಿಕೆಗಳು, ಸ್ವಪ್ನಲೋಲುಪ ವಯಸ್ಸು, ಹಲವು ಗಾತ್ರ ಭಾರಗಳ ಅಯೋರೇಣುಗಳು, ಏಕಶೈಲಿಗರು, ಸೈದ್ಧಾಂತಿಕ ತಪ್ಪೀಲುಗಳು. (ಕನ್ನಡಕ್ಕೆ) ಉಚ್ಚಮಾನ್ಯತೆ, ಲಾಲ್‌ಬಾಗ್‌ತನಕ್ಕಿಂತ ಅರಣ್ಯತೆ, ಪವಾಡಿಗ, ಸಪ್ರಾಣಿಸಿದಂತೆ, ಆಳುವ ಜೂರತ್ತು, ದಾಸ್ತಾನಿಸಿಕೊಳ್ಳುವ, ಏಕಕಂಠತೆ ಇತ್ಯಾದಿ ಇತ್ಯಾದಿ.

—ಹೀಗೆ 'ಅಚ್ಚುಮೆಚ್ಚು' ಲೇಖನಗಳಲ್ಲಿ ಸಾವಿರಕ್ಕೂ ಹೆಚ್ಚು ಹೊಸ ವಿಶಿಷ್ಟ ಪದ ಪ್ರಯೋಗಗಳು ಸಿಗುತ್ತವೆ. ಸಂಸ್ಕೃತ, ಉರ್ದು, ಹಳಗನ್ನಡ ಮೂಲಗಳ ಪದಗಳನ್ನು ಹೆಕ್ಕಿ ತಮ್ಮ ಬರೆಹಗಳಲ್ಲಿ ಉಪಯೋಗಿಸುವುದು ನಿಸಾರರಿಗೊಂದು ಗೀಳು. ಅದನ್ನು ಅವರು ಉದ್ದೇಶಪೂರ್ವಕವಾಗಿ ಮಾಡುತ್ತಾರೆ ಎನ್ನುವ ದೂರುಗರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಬರೆಯುವಾಗ ತಾನಾಗಿಯೇ (ಅನುಭವದ ಬಲದಿಂದಲೊ, ಅಭ್ಯಾಸದ ಬಲದಿಂದಲೊ) ಮೂಡುವ ಅನೇಕ ಖಚಿತ ಅರ್ಥದ ಪದಗಳು ಲೇಖಕನಿಗೆ ಖುಷಿ ಕೊಡುವಂತೆ ಓದುಗರಿಗೂ ಖುಷಿಕೊಡುತ್ತವೆ. ಓದುಗರು ಇಂಥ 'ನಿಸಾರಿಕೆ'ಗಳನ್ನು ಗಮನಿಸಿದ್ದಾರೆ. ಅವರು ಮೊದಮೊದಲು ಬರೆಯಲು ಪ್ರಾರಂಭಿಸಿದಾಗಲೇ ವಿಮರ್ಶಕರು

ಗಮನಿಸಿದ್ದಾರೆ, ಮೆಚ್ಚಿಕೊಂಡಿದ್ದಾರೆ.

ಮತ್ತೆ, ನಿಸಾರ್ ಈವರೆಗೆ ಸೃಷ್ಟಿಸಿರುವ ಸಾವಿರಾರು ಇಂಥ ಪದಗಳನ್ನು ಸಾಹಿತ್ಯಲೋಕ ಗಮನಿಸಿದೆ. 'ಕನ್ನಡ ವಿಶ್ವವಿದ್ಯಾಲಯ' ತಮ್ಮ ಮಾಸಿಕ ಹೊತ್ತಿಗೆಯೊಂದ ರಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾಣುವ ಹೊಸ ಪ್ರಯೋಗಗಳನ್ನು ಪಟ್ಟಿಮಾಡಿ ಪ್ರಕಟಿಸುತ್ತಿತ್ತು. ಪದದ ಹೆಸರು, ಪ್ರಕಟವಾದ ಲೇಖನ, ಪತ್ರಿಕೆ, ಲೇಖಕರು ಬಳಸಿದ ಅರ್ಥ, ಬಳಕೆ ಸರಿಯೆ, ತಪ್ಪೆ ಎಂದು ಅದರಲ್ಲಿ ಕಾಣಿಸಲಾಗುತ್ತಿತ್ತು. 'ಅಚ್ಚುಮೆಚ್ಚು'ವಿನ ಪ್ರತಿ ಲೇಖನದಿಂದಲೂ ಕೆಲವು ಪದಗಳು ಆ ಪಟ್ಟಿಯಲ್ಲಿ ತಪ್ಪದೆ ಸೇರ್ಪಡೆಯಾಗುತ್ತಿದ್ದವು; ಸ್ವೀಕೃತಿ ಮುದ್ರೆಯನ್ನೂ ಪಡೆಯುತ್ತಿದ್ದವು.

ನಿಸಾರರ ಈ ಪದಗಳು ಬಹುಪಾಲು ಹಳೆಯ ಮೈಸೂರು ಸಂಸ್ಕೃತಿಯ ವ್ಯಕ್ತಿಯೊಬ್ಬರು ಕಟ್ಟಬಹುದಾದಂಥವು ಎಂದನ್ನಿಸಿದೆ ನನಗೆ. ಇಂಥದೇ ಪ್ರಯತ್ನ ಅತ್ಯಂತ ಸೊಗಸಾಗಿ, ನಾಲ್ಕಲ್ಲ ನೂರು ಜನ ಮೆಚ್ಚುವಂತೆ ಮಾಡಿರುವವರು, ಡಾ. ಎಚ್. ಕೆ. ರಂಗನಾಥ್—ಅಪ್ಪಟ ಮೈಸೂರು ಪ್ರಯೋಗ. ಅವರ ಲಘು ಲೇಖನಗಳಲ್ಲಿ ಈ ವಿಶಿಷ್ಟತೆ ಯನ್ನು ನೋಡಬಹುದು.

'ತುಷಾರ'ದಲ್ಲಿ ನಿಸಾರ್ ಅವರು ಬರೆಯುತ್ತಿರುವಾಗ ಇಂಥ ಪ್ರಯೋಗಗಳನ್ನು ಕಾಣುತ್ತ, ಇವು ನನ್ನ ಪತ್ರಿಕೆಗೆ ದಕ್ಕಿತಲ್ಲ ಎಂದು ನಾನು ಸಂತಸಪಟ್ಟಿದ್ದೇನೆ. ನಾನು ಪ್ರಾರಂಭದ ಪುಟಗಳಲ್ಲಿ ಕನ್ನಡ ಸಾಹಿತ್ಯ, ಸಾಹಿತಿಗಳ ಬಗೆಗಿನ ನನ್ನ ಸ್ವಾರಸ್ಯ ಸಮಾಚಾರಗಳಿಗೆ 'ಸಾಹಿತ್ಯದ ಮಿಂಚಿಕೆಗಳು' ಎನ್ನುವ ಅವರು ಬಳಸಿದ ಪದವನ್ನೆ ತಲೆಬರೆಹವಾಗಿಸಿದ್ದೆ.

ಹೀಗೆಂದು, ಇಂಥ ಪದಸೃಷ್ಟಿ ತಮಗೆ ಸಾಧ್ಯವೆಂದು ಅವರು ಪುಂಖಾನುಪುಂಖವಾಗಿ ಉರ್ದುಮಿಶ್ರಿತ, ಆಂಗ್ಲರೂಪಿತ ಪದಗಳನ್ನು ಬರೆದು ಬಿಸಾಡುವುದಿಲ್ಲ. ಅತಿ ಸಂಯಮದ ಬಳಸುವಿಕೆ ಅವರ ಬರೆವಣಿಗೆಯ ಶೈಲಿಗೊಂದು ಹೊಸ ರುಚಿ ಕೊಡುತ್ತದೆ.

ಖಂಡಿತವಾಗಿಯೂ ಈ 'ನಿಸಾರಿಕೆ'ಗಳ ಅಕಾರಾದಿ ಪಟ್ಟಿ ಮಾಡಿ ಒಂದು 'ನಿಸಾರ್ ನಿಘಂಟ'ನ್ನು ರೂಪಿಸಬಹುದಾದ ಸಾಧ್ಯತೆ ಇದೆ. ಯಾರಾದರೂ ಉತ್ಸಾಹಿಗಳು ಮಾಡಬಹುದು.

'ಅಚ್ಚುಮೆಚ್ಚು' ಸಂಕಲನದ ಲೇಖನಗಳಲ್ಲಿ ನಿಸಾರರು 'ಮುಖ್ಯವಾಗಿ ವಿಮರ್ಶಾತ್ಮಕ, ವಿಚಾರಾನ್ವೇಷಕ' ಉದ್ದೇಶದ ಲೇಖನಗಳನ್ನು ಪ್ರಯತ್ನಿಸಿರುವುದಾಗಿ ಹೇಳಿದರೂ ಇದನ್ನೂ ದಾಟಿ ಅವರು ಅನೇಕ ವಿಷಯ, ವಿವರಗಳನ್ನು ಕನ್ನಡ ಓದುಗರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ತಾವು ಈ ಲೇಖನಗಳಲ್ಲಿ, ಸಾಹಿತ್ಯ, ವಿಮರ್ಶೆ, ಕಲೆ, ಸಂಸ್ಕೃತಿ, ನಾಗರಿಕತೆ, ರಾಜಕೀಯ, ಧರ್ಮ, ಪುರುಷಾರ್ಥ, ಪ್ರಕೃತಿ, ರಾಷ್ಟ್ರ—ಹೀಗೆ ವಿಭಿನ್ನ ವಸ್ತುಗಳನ್ನು ಆಳವಾಗಿ ನೋಡಿರುವುದಾಗಿ ಒಂದೆಡೆ ಹೇಳಿದ್ದಾರೆ. ಇದು ದಿಟವಾದರೂ ಅವರು ಬಹು ಆಪ್ತವಾಗಿ ಬರೆದಿರುವುದು, ಸಾಹಿತಿ-ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆ ಗಳನ್ನು ಕುರಿತು.

ಸಾಹಿತ್ಯ ಲೋಕದ ಮಹಾನ್ ಸಾಧಕರು ಮತ್ತು ಸಾಹಿತ್ಯ ವಿಮರ್ಶೆಯನ್ನು ಕುರಿತಾದ ಚಿಂತನೆಗಳ ಬಗ್ಗೆ ಹದಿನೇಳು ಲೇಖನಗಳನ್ನು ಬರೆದಿದ್ದಾರೆ. ಇವು ಬಹುಮಟ್ಟಿಗೆ ಪುಸ್ತಕದ ಅರ್ಧಭಾಗ. ಇನ್ನು ಸಾಮಾಜಿಕ ಚಿಂತನೆಯನ್ನು ಕುರಿತು ಹದಿನಾಲ್ಕು ಲೇಖನಗಳಿವೆ. ಇವೆರಡು ಸೇರಿಯೇ ಮೂವತ್ತೊಂದು ಲೇಖನಗಳಾದವು. ಉಳಿದ ಹನ್ನೆರಡು ಲೇಖನಗಳಲ್ಲಿ—ಸ್ವಕೀಯ ಚಿಂತನೆ (ಮೂರು), ಕಲೆ (ಎರಡು), ಪ್ರಕೃತಿ ಪರಿಸರ (ಎರಡು) ಮತ್ತು ಕೃತಿ ಪರಿಶೀಲನೆ (ಐದು) ಸೇರುತ್ತವೆ.

ಸಾಹಿತ್ಯ ಮತ್ತು ವೈಚಾರಿಕತೆಯನ್ನು ಕುರಿತ ಮೂವತ್ತೊಂದು ಲೇಖನಗಳು ಬಹಳ ಗಂಭೀರವಾದ ಆದರೆ ಮುಕ್ತ ಮನಸ್ಸಿನ ಅಭಿವ್ಯಕ್ತಿಗಳೆನಿಸುತ್ತವೆ. ಹಿರಿಯ ಲೇಖಕರ ಬಗ್ಗೆ ಬರೆಯುವಾಗಿನ ಸಂದರ್ಭಗಳಲ್ಲಿ ಒಂದಿಷ್ಟು ಗೌರವ-ಮೆಚ್ಚುಗೆ ಸೂಚಿತವಾದರೂ ಮಿಕ್ಕೆಲ್ಲ ಲೇಖನಗಳಲ್ಲಿ ಅವರ ಹೃದಯ ಅದುಮಿಟ್ಟಿದ್ದ ವಿಚಾರ ಧಾರೆ ಕಟ್ಟೆಯೊಡೆದ ಕನ್ನಂಬಾಡಿಯಂತೆ ಹರಿದಿದೆ. ಅವರು ಈ ಪ್ರವಾಹವನ್ನು ಧಾರಾಳವಾಗಿ ಪ್ರವಹಿಸಿಬಿಟ್ಟಿದ್ದಾರೆ.

ಕುವೆಂಪು, ಅಡಿಗ, ಎಲ್ಆರ್‌ಕೈ, ಮಾಸ್ತಿ, ಪುತಿನ, ಲೋಹಿಯ, ಎಸ್. ವಿ. ರಂಗಣ್ಣ ಇವರನ್ನೆಲ್ಲ ನೆನಪು ಮಾಡಿಕೊಂಡು ಬರೆದಿರುವುದು, ಎಂದಿನ ಸಂದರ್ಶನ ದಂತೆಯೂ ಪರಿಚಯದಂತೆಯೂ ಇರದೆ, ಆ ಮಹನೀಯರ ಕ್ರಿಯಾದರ್ಶನ ಎನಿಸುತ್ತದೆ. ಇಂತಹ ಲೇಖನಗಳನ್ನು ನಿಸಾರರು ಬೇರೆ ರೀತಿಯಲ್ಲಿಯೆ ಬರೆಯುತ್ತಾರೆ. ನೆನಪುಗಳಿಂದ ಪ್ರಾರಂಭಿಸಿ ಆ ಹಿರಿಯ ಲೇಖಕರ ಉನ್ನತವಾದ ವಾಙ್ಮಯ ಪ್ರತಿಭೆಯ ಒಳಹೊಕ್ಕು ನೋಡುತ್ತಾರೆ. ಆ ಹಿರಿಯರ ಕ್ರಿಯಾಶಕ್ತಿಯ ಹಿಂದೆ ಇರಬಹುದಾದಂಥ ಚಿಂತನೆಯ ಆಯಾಮಗಳನ್ನು ಬಿಡಿಸಿಡುತ್ತಾರೆ. ಮತ್ತೆ ಅವರೆಲ್ಲರ ಮಾನವೀಯ ಮೌಲ್ಯಗಳನ್ನೂ ಕಂಡುಕೊಳ್ಳುತ್ತಾರೆ. ಜೊತೆಗೆ, ಅವರ ಸಾಹಿತ್ಯ ಸೃಷ್ಟಿಯ ಬಲಹೀನ ಕೊಂಡಿಗಳನ್ನೂ ಸ್ಪರ್ಶಿಸದೆ ಇರುವುದಿಲ್ಲ!

ನಿಸಾರ್ ಬಹುವಾಗಿ ಸಾಹಿತ್ಯ ಪ್ರಿಯರು—ಮೊದಲು ಕುತೂಹಲಿ ಓದುಗ. ಅವರ ಕನ್ನಡ ಮತ್ತು ಇಂಗ್ಲಿಷ್ ಕೃತಿಗಳ ಓದಿನ ಪಾತ್ರ ತುಂಬಾ ವಿಸ್ತಾರವಾದದ್ದು. ಸಾಹಿತ್ಯಕ, ಧಾರ್ಮಿಕ, ಇತಿಹಾಸ, ವೈಜ್ಞಾನಿಕ, ಜೊತೆಗೆ ಸಾಮಾಜಿಕ, ರಾಜಕೀಯ ಆಗುಹೋಗುಗಳ ವಿಷಯಗಳು ಅವರಿಗೆ ಅಚ್ಚುಮೆಚ್ಚು. ಒಂದು ಕಡೆ ಕುವೆಂಪು-ಪುತಿನ ಅವರ ಒಂದು ಚೌಕಟ್ಟನ್ನು ಹೃದ್ಯಮಾಡಿಕೊಂಡವರು, ಇನ್ನೊಂದು ಕಡೆ ಲೋಹಿಯ ಅವರ ಹೋರಾಟ, ವಿದೇಶೀ ಏರಾಟಗಳನ್ನೂ ಕುತೂಹಲ ಕಳಕಳಿಗಳಿಂದ ಗಮನಿಸುತ್ತಾರೆ. ಅಂತೆಯೇ ನಿಸಾರರ ಸಾಹಿತ್ಯ ಚಿಂತನೆ ಓದುಗರನ್ನು ಮೇಲೊಂದು ಸ್ತರಕ್ಕೆ ಕೊಂಡೊಯ್ಯುತ್ತದೆ.

ವ್ಯಕ್ತಿ ಲೇಖನಗಳು ಆಯಾ ಮಹನೀಯರ ಬದುಕಿಗೆ, ಬರೆಹಗಳಿಗೊಂದು ಉಚಿತ ಚೌಕಟ್ಟನ್ನು ತೊಡಿಸಿದ ಹಾಗೆಯೇ, ಸಾಹಿತ್ಯದ ಅಭ್ಯಾಸಿಗಳಿಗೆ ವಿದ್ಯಾರ್ಥಿಗಳಿಗೆ, ಗಂಭೀರ ಚಿಂತಕರಿಗೆ, ಅನೇಕ ವಿವರಗಳ ಪರಿಚಯವಿಲ್ಲದವರಿಗೆ ಅವರ ಸಾಹಿತ್ಯಕ, ವಿಮರ್ಶಾತ್ಮಕ, ವಿಚಾರಾನ್ವೇಷಕ ಲೇಖನಗಳು ಬೆರಗು ಬೋಧೆಗಳನ್ನು ಉಂಟುಮಾಡುತ್ತವೆ.

ಶೈಲಿ, ಸಾಹಿತ್ಯ ಸೃಷ್ಟಿ ಪ್ರಕ್ರಿಯೆ, ವಿಜ್ಞಾನ ಮತ್ತು ಸಾಹಿತ್ಯ, ರವೀಂದ್ರರ ಸಾಹಿತ್ಯ ಪರಿಚಯ, ಸಾಹಿತ್ಯ ಮತ್ತು ಲೋಕ ವಾಸ್ತವ, ವಸ್ತು ಸಮಾಲೋಚನೆ, ಕಾವ್ಯಕರ್ಮದ ಪಂಚ

'ಸ' ಕಾರಗಳು, ಮೊದಲಾದ ಲೇಖನಗಳು ನಿಸಾರರ ಸಾಹಿತ್ಯ ಸೃಷ್ಟಿಯ ಮೇಲೊಂದು 'ಕ್ಷ-ಕಿರಣ' ಬೀರುತ್ತವೆ. ಕವಿಯಾಗಿ ಪ್ರಾರಂಭಿಸಿ, ಗಂಭೀರ ಚಿಂತಕರಾಗಿ, ವಿಮರ್ಶಕರಾಗಿ ಅವರು ಬೆಳೆದದ್ದಕ್ಕೆ (ಇಂದಿಗೂ ಅವರು ಹೀಗೊಂದು ಚಿಂತನೆ, ಕುತೂಹಲಗಳನ್ನು ಉಳಿಸಿಕೊಂಡಿದ್ದಾರೆ) ಮೈಲಿಗಲ್ಲುಗಳಂತೆ ಅಧ್ಯಯನ, ಆಲೋಚನೆಗಳು ನೆಲಕ್ಕೆ ನಾಟಿ ನಿಂತಿವೆ. ಅವರು ಇನ್ನೂ ಮೈಲಿಗಲ್ಲುಗಳನ್ನು ಕ್ರಮಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಅವರಿಗೆ ಸವಿ ಮಾತಿಗಿಂತಲೂ ಓದುವ ಸವಿ ಬಹಳ ಪ್ರಿಯ. ಐವತ್ತು ವರ್ಷಗಳ ಅವರ ಓದಿನ ಅಭಿಯಾನ ಈ ಲೇಖನಗಳಲ್ಲಿ ದೊಡ್ಡ ಸಾರ್ಥಕತೆ ಪಡೆದುಕೊಂಡಿದೆ. ಹೊಸ ಹಾಗೂ ಕಿರಿಯ ಬರೆಹಗಾರರಿಗೆ ಮೃಷ್ಟಾನ್ನವೂ ಆಗಿಹೋಗಿದೆ.

ನಿಸಾರರು ಒಂದು ವಿಷಯವನ್ನು ಹೇಳಲು ದೀರ್ಘ ತೆರಪಡೆಯನ್ನೇ ತೆಗೆದು ಕೊಳ್ಳುತ್ತಾರೆ. ಹೇಳುವುದನ್ನು ಅಪೂರ್ಣವಾಗಿಸುವುದಿಲ್ಲ. ಹೇಳಬೇಕಾದನ್ನು ಪರಿಪೂರ್ಣ ವಾಗಿ ಹೇಳಲು ಅವರು ಬಯಸುತ್ತಾರೆ. ಅದು ಅವರ ವ್ಯಕ್ತಿತ್ವದ ಗುಣ. ಬಹುಶಃ ತಾವು ದೀರ್ಘವಾಗಿ, ಆಳವಾಗಿ ಓದಿದಷ್ಟನ್ನೂ ಮುಂದಿನ ಪೀಳಿಗೆಗೆ ಮೊಗಚುವ ಸಂಭ್ರಮ ಇದಾಗಿರಬಹುದು. 'ಅಚ್ಚುಮೆಚ್ಚು' ಲೇಖನಗಳಲ್ಲಿ ಬಹು ಪಾಲು ದೀರ್ಘ ಲೇಖನ ಗಳಾಗಿರುವುದು, ವಿಸ್ತಾರವಾಗಿರುವುದು ಈ ಕಾರಣದಿಂದಲೆ.

ಎಸ್. ವಿ. ರಂಗಣ್ಣ ಅವರ ಬರೆಹ ಶೈಲಿಯನ್ನು ಬಹುವಾಗಿ ಮೆಚ್ಚಿಕೊಂಡಿರುವ (ಬಹುಶಃ, ತಮ್ಮದೂ ಆಗಿಸಿಕೊಂಡಿರುವ) ನಿಸಾರರು, ಸಾಹಿತ್ಯ ಶೈಲಿಯ ಉದ್ದಗಲಗಳನ್ನು ಲೇಖನವೊಂದರಲ್ಲಿ ವಿಶ್ಲೇಷಿಸಿಬಿಟ್ಟಿದ್ದಾರೆ. 'ಶೈಲಿ: ವ್ಯಕ್ತಿತ್ವದ ಕೀಲಿ' ಎಂದು ಎರಡು ಪದಗಳಲ್ಲಿ ಸಮಸ್ತವನ್ನೂ ಅಡಕಗೊಳಿಸಿದ್ದರೂ ಇದನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. 'ಶೈಲಿಯ ಅಧ್ಯಯನವೇ ಇಂದು ಒಂದು ಪ್ರತ್ಯೇಕವಾದ ಶಿಸ್ತಾಗಿ ಬೆಳೆಯುತ್ತಿದೆ. ಶೈಲಿಯ ವ್ಯಾಸಂಗವನ್ನು ಭಾಷಾಶಾಸ್ತ್ರೀಯವಾಗಿ ಮನೋವೈಜ್ಞಾನಿಕವಾಗಿ, ಸಾಹಿತ್ಯ ಮೀಮಾಂಸೆಯ ಆಧಾರದ ಮೇಲೆ—ಹೀಗೆ ಬಹುಮುಖವಾಗಿ ಮಾಡಲಾಗುತ್ತಿದೆ. ಶೈಲಿ ವಿಜ್ಞಾನವೆನ್ನುವ ಒಂದು ಹೊಸ ಆಯಾಮ ತೆರೆಯುತ್ತಿದೆ'—ಎಂದು ಶೈಲಿಯ ಪ್ರಾಮುಖ್ಯವನ್ನು ಬಣ್ಣಿಸುತ್ತಾರೆ.

ಶೈಲಿಯೆಂದರೇನು ಎಂದು ಬರೆದ ಮೇಲೆ, ಶೈಲಿಯನ್ನು ಕುರಿತು ಕನ್ನಡದಲ್ಲಿ ಪ್ರಕಟವಾಗಿರುವ ಅತ್ಯಮೂಲ್ಯ ಹಾಗೂ ಬಹು ಕಾಲ ಬಾಳುವ ವಿದ್ವತ್ಪೂರ್ಣ ಕೃತಿ, ಡಾ. ಎಸ್. ವಿ. ರಂಗಣ್ಣ ಅವರ 'ಶೈಲಿ'ಯ ಬಗ್ಗೆ ಆಳವಾಗಿ ಆಲೋಚಿಸುತ್ತಾರೆ. ಎಲ್ಲರ ಖಾಸಗಿ ಗ್ರಂಥ ಸಂಗ್ರಹಕ್ಕೆ ಗೌರವಪ್ರಾಯವಾಗಿರುವ 'ಶೈಲಿ'ಗೆ ಹೆಗಲೆಣೆಯಾದ ಗ್ರಂಥಗಳೆಂದರೆ ಡಿಎಲ್ಎನ್ ಅವರ 'ಗ್ರಂಥ ಸಂಪಾದನೆ', ತೀನಂಶ್ರೀ ಅವರ 'ಭಾರತೀಯ ಕಾವ್ಯ ಮೀಮಾಂಸೆ' ಮತ್ತು ಕುವೆಂಪು ಅವರ ದಾರ್ಶನಿಕ ವಿಮರ್ಶಾ ಕೃತಿಗಳು ಎನ್ನುತ್ತಾರೆ.

'ಸಾಹಿತ್ಯ ಸೃಷ್ಟಿ ಪ್ರಕ್ರಿಯೆ' ಕುರಿತು ಹೇಳುವಾಗ, ಈ ಕ್ರಿಯೆಯ ಫಲಸ್ವರೂಪವಾದ ಕೃತಿಯ ವ್ಯಾಸಂಗ ನಮ್ಮಲ್ಲಿ ಒಂದಷ್ಟು ತಿಳಿವಳಿಕೆಯನ್ನು ಉಂಟು ಮಾಡಬಹುದು ಎನ್ನುತ್ತ ಕವಿಯ ಮನಸ್ಸು ಹಾಗೂ ಕಾವ್ಯ ಸೃಷ್ಟಿಗಳ ಕ್ರಿಯೆಯನ್ನು ವಿವರಿಸುತ್ತಾರೆ. ಕಾವ್ಯ ಶರೀರ,

ಗದ್ಯ ಶರೀರ ಏನನ್ನು ಒಳಗೊಂಡಿರಬೇಕು ಎಂದು ಕಾಣಿಸುತ್ತಾರೆ. `ತೋಡಿದಂತೆ ನೀರು ತುಂಬಿಕೊಳ್ಳುವ ನದಿ ತಟದ ಮರಳಿನಂತೆ ಅಂತಃಸಮೃದ್ಧವಾದ ಸೃಷ್ಟಿಶೀಲ ವ್ಯಕ್ತಿಯ ಮನಸ್ಸು ಅನವರತ ಅನ್ವೇಷಣೆಗೆ ಒಳಪಟ್ಟದ್ದು. ಒಂದೊಂದು ಕೃತಿ ರಚನೆಯ ಸಮಯದಲ್ಲೂ ಅದು ಹೆಚ್ಚು ಹೊಸದಾಗಿ ಅಪೂರ್ವ ಸಾಧ್ಯತೆಗಳನ್ನು ಮುಂದು ಮಾಡುವಂಥದ್ದು. ಅಕ್ಷಯ ಪಾತ್ರೆಯಂಥ ಅಂತರಾಳದ ಎಷ್ಟೆಷ್ಟನ್ನು ಪಡೆಯಬಹುದು ಎನ್ನುವುದು ಸೃಜನಶೀಲ ಅಳವಿಗೆ ಸಂಬಂಧಿಸಿದ ವಿಷಯ'.

`ವಿಜ್ಞಾನದ ವಿಧಾನ ವಸ್ತುಸತ್ಯವನ್ನು ಅವಲಂಬಿಸಿದ್ದು. ಸಾಹಿತ್ಯದ ರೀತಿ ಭಾವಸತ್ಯದ್ದಾಗಿದ್ದರೂ ಅವು ಪರಸ್ಪರ ವಿರೋಧಿಗಳಾಗಬೇಕಾಗಿಲ್ಲ. ಇವೆರಡರಿಂದಲೂ ನಮ್ಮ ಜಗಜ್ಜೀವನದ ತಿಳಿವಿನ ಮೇರೆ ವಿಸ್ತರಿಸುತ್ತದೆ.

`ಒಳ್ಳೆಯ ಜೀವನ ರೀತಿ, ಒಳ್ಳೆಯ ಸಾಹಿತ್ಯ ನಿರ್ಮಾಣಕ್ಕೆ ಆಕರಪ್ರಾಯ. ಹಾಗೆಯೇ ಒಳ್ಳೆಯ ಸಾಹಿತ್ಯ, ಜೀವನ ಸಂಸ್ಕಾರಕಾರಿ. ಒಳ್ಳೆಯ ಜೀವನ ರೀತಿ ಸಮಾಜದಲ್ಲಿ ಬೇರು ಬೀಳಲುಗಳನ್ನು ಇಳಿಸಲು ವಿಜ್ಞಾನ ತಂತ್ರಜ್ಞಾನಗಳ ಗಾಳಿ ಬೆಳಕು ನೀರು ಗೊಬ್ಬರ ಅತ್ಯಗತ್ಯ...'

`ಲೋಕಾನುಭವದ ವಾಸ್ತವತೆಗೂ ಸಾಹಿತ್ಯದ ಬಹು ಸೂಕ್ಷ್ಮತರವೂ ಭಾವ ನಿಬಿಡವೂ ಆದ ಕಾವ್ಯವೊಂದರಲ್ಲಿ ಆ ವಾಸ್ತವತೆ ಹರಳುಗೊಳ್ಳುವ ಅದರ ಪರಿವರ್ತಿತ ಸ್ವರೂಪಕ್ಕೂ ಅಜ ಗಜಾಂತರವಿರುತ್ತದೆ. ಈ ಎರಡು ತುದಿಗಳ ನಡುವೆ ಅಗಮ್ಯವಾದ ಒಂದು ಮನಃಪ್ರಕ್ರಿಯಾ ಸರಣಿಯೇ ಚಾಚಿಕೊಂಡಿರುತ್ತದೆ. ವಾಸ್ತವಿಕ ಅನುಭವದ ದ್ವಾರ ನಮ್ಮಲ್ಲಿ ಉದ್ಬುದ್ಧಗೊಳ್ಳುವ ರಾಗಾವೇಶಗಳು ನಮ್ಮ ಮನೋಬುದ್ಧಿಗಳ ಪಾಲಿಗೆ ಹೇಗೆ ತಥ್ಯವೊ, ತನ್ನಿಮಿತ್ತವಾಗಿ ಕಾವ್ಯದಲ್ಲಿ ಕುಡಿಯೊಡೆಯುವ ಭಾವ ನಿವಹಗಳು ನಮ್ಮ ಮೇಲೆ ಮೂಡಿಸುವ ಪರಿಣಾಮದ ತರಂಗಗಳು ಹೃದಯಕ್ಕೆ ಅಷ್ಟೇ ಸತ್ಯವೆನ್ನಿಸುತ್ತವೆ'—ಸಾಹಿತ್ಯ ಮತ್ತು ಲೋಕ ವಾಸ್ತವಗಳ ಕುರಿತು ಆಡುವ ಮಾತು.

`ಸಾಹಿತ್ಯವಸ್ತು ಸಮಾಲೋಚನೆ' ಲೇಖನದಲ್ಲಿ ಸಾಹಿತ್ಯ ಕೃತಿಯೊಂದರ ನಾನಾ ಅಂಶಗಳ ಅಂತಸ್ಸಂಬಧ ಹೇಗಿರಬೇಕೆಂದರೆ ಮಾನವ ಶರೀರದ ಹಲವು ಅಂಗಾಂಗಗಳಂತೆ ಆಂತರಿಕ ಸಾವಯವತೆ ಹೊಂದಿರತಕ್ಕದ್ದೆಂಬ ಮತ್ತು ಅವುಗಳೆಲ್ಲದರ ನಡುವೆ ಒಂದು ವಿಹಿತವಾದ ಪ್ರಮಾಣಬದ್ಧ ಸಾಮರಸ್ಯ ಇರಬೇಕಾದದ್ದು ಅಗತ್ಯವೆಂಬ ಅಭಿಪ್ರಾಯವನ್ನು ಹೇಳುತ್ತಾರೆ. ಯಾವುದಕ್ಕೆ ಆದ್ಯತೆ ಸಲ್ಲಬೇಕು—ವಸ್ತುವಿಗೊ, ಇತರ ಪರಿಕರಗಳಿಗೊ?—ಸೊಗಸಾದ ವಾದವನ್ನು ನಿಸಾರ್ ಓದುಗರ ಮುಂದಿಡುತ್ತಾರೆ.

`ಸಾಂದ್ರೀಕರಣ, ಸಮಯಸ್ಫೂರ್ತಿ, ಸ್ಮೃತಿಶಕ್ತಿ, ಸ್ವವಿಶ್ವಾಸ, ಸಂಗಿತತ್ವ'—ಇವು ಸಾಹಿತ್ಯದ ಪಂಚ `ಸ' ಕಾರಗಳು ಎಂದು ಅವರು ಇವನ್ನು ಬಿಡಿಬಿಡಿಯಾಗಿ ವಿಶ್ಲೇಷಿಸುತ್ತಾರೆ. ರಚನೆಯ ಹಿನ್ನೆಲೆಯ ರಹಸ್ಯವನ್ನು, ಬರೆಹದ ಸ್ವರೂಪವನ್ನು, ಕವಿ ಜಾಯಮಾನವನ್ನು ತಿಳಿಯಲು ನೆರವಾಗುತ್ತಾರೆ.

ಅವರ ಸಾಹಿತ್ಯಕ ಚಿಂತನೆಗಳು ಹೀಗೆ ಮಹತ್ವದ ಎತ್ತರಗಳನ್ನು ಬೋಧಿಸಿದರೆ, ಅವರ ಸಾಮಾಜಿಕ ಚಿಂತನೆ ಹಾಗೂ ಕಳಕಳಿ ನಿರ್ದಾಕ್ಷಿಣ್ಯ ಮತ್ತು ಕಠೋರವಾದ ವ್ಯಗ್ರ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಸಮಾಜದ ಯಾವ ಮುಖವೂ ಅವರಿಗೆ ಪರಿಪೂರ್ಣತೆಯ ನೋಟ ಕಾಣಿಸಿಲ್ಲ ಎಂಬಂತೆ ಬೇಸರದ ಲಹರಿಗಳು ಹಾದುಹೋಗುತ್ತವೆ. 'ಪ್ರಜಾಪ್ರಭುತ್ವದ ಸುತ್ತಮುತ್ತ' ಒಂದು ದೀರ್ಘ ಲೇಖನ. ಅನೇಕ ಅಭಿಪ್ರಾಯಗಳು, ನೋಟಗಳು, ಎಚ್ಚರಿಕೆಗಳು ಇಲ್ಲಿವೆ. ಮಾನವನ ದಯಾಶೂನ್ಯ ನಡವಳಿಕೆಯ ವಿವಿಧ ಮುಖಗಳು 'ಅಮಾನವೀಯ ಮಾನವರು' ಲೇಖನದಲ್ಲಿದೆ. 'ಅನ್ಯರ ದುರವಸ್ಥೆ, ದುರಂತಗಳನ್ನು ತಮಾಷೆ ಗೇಲಿಗಳ ವಿಷಯ ಮಾಡಿ ಸಾರ್ವಜನಿಕಗೊಳಿಸುವ ಗೀಳಿನಲ್ಲಿ' ಮನುಷ್ಯ ಮೊದಲ ಸ್ಥಾನಗಳಿಸುತ್ತಾನೆ. 'ಗಾಂಧಿಯಂಥ ಮಹದ್ವ್ಯಕ್ತಿಯನ್ನೇ ಯಾವು ಯಾವುದಕ್ಕೋ ಹೋಲಿಸಿ ನಕ್ಕು ಇತರರನ್ನೂ ನಗಿಸುವ ಚಾಳಿಯುಳ್ಳ ಜನ ಮತ್ತಾವುದನ್ನು ತಾನೇ ಬಿಟ್ಟಾರು?'— ಎಂದೆಲ್ಲ ಹೇಳುವಾಗ, ರಾಷ್ಟ್ರೀಯ ಸಂಕಟ, ನೋವುಗಳಿಗೆ ಸ್ಪಂದಿಸದ, ಹಸನ್ಮುಖವನ್ನು ಕಾಣಿಸುವ ದುರ್ಮುಖರು ನಮ್ಮ ಸುತ್ತ ಇದ್ದಾರೆ ಎನ್ನುತ್ತಾರೆ.

'ಅಂತಃಸಾಕ್ಷಿಯ ಗಮನದಿಂದ ಮಾನವನ ಯಾವ ವಿದ್ಯಮಾನವೂ ಮರೆಗೊಳ್ಳಲಾಗದು; ಗೋಕುಲನಾಥನೆದುರು ಗೋಪಿಕೆಯರ ಗೋಪ್ಯ ಎಷ್ಟು ಸಮಯ ಗುಪ್ತವಾಗಿರಲು ಸಾಧ್ಯ?'—ಹೀಗೆ ಮನಸ್ಸಾಕ್ಷಿಯ ಸೂಕ್ಷ್ಮವನ್ನು ಸೊಗಸಾಗಿ ಬಿಡಿಸುತ್ತಾರೆ. ಪ್ರತಿಯೊಬ್ಬರೂ ಸಾಕ್ಷೀಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕು ಎನ್ನುತ್ತಾರೆ. 'ಹೊಲೆಗೆಟ್ಟ ರಾಜಕೀಯ, ತಲೆತಿರುಕ ಧರ್ಮಾಂಧತೆ, ವಿಘಟನಶೀಲ ಹಾಗೂ ವಿಭಕ್ತ ಕೌಟುಂಬಿಕ ಪರಿಸರದಲ್ಲಿ ವ್ಯಕ್ತಿತ್ವಕ್ಕೆ ಗೌರವ ಘನತೆಗಳನ್ನು ದಯಪಾಲಿಸುವ ಆತ್ಮಸಾಕ್ಷಿಪರ ಜೀವನಾನುಸರಣೆ ಪಲ್ಲವಿಸಬೇಕು'—ಎನ್ನುತ್ತಾರೆ.

—ಹೀಗೆ ಸೊಗಸಾದ, ಅನುಭವಪೂರ್ಣ, ವಿಚಾರಭರಿತ ಅನಿಸಿಕೆಗಳ ಸುಂದರ ತಾವರೆ ಹೂವುಗಳು ತುಂಬಿದ ಕೊಳದಂತೆ, ಚಿಂತನೆಗಳು ಮಹತ್ವದ ಬರೆಹಗಳೆನಿಸುತ್ತವೆ.

ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆಯ ದೊಡ್ಡ ಗ್ರಾಸವನ್ನು ನಮಗೆ ನೀಡಿದ ಮೇಲೆ ನಿಸಾರ್ ಅವರು ಕೆಲವು ಚೆಲುವಾದ, ಸ್ವಾರಸ್ಯಮಯವಾದ, ರಸಪೂರ್ಣ ಬರೆಹಗಳನ್ನು ನೀಡುತ್ತಾರೆ (ಬಹುಶಃ, ಸಂಪಾದಕನ ಫರ್‌ಮಾಯಿಷ್ ಇರಬಹುದು!).

ಸಾಹಿತ್ಯ-ಚಿಂತನ ಬರೆಹಗಳು ವಿಸ್ತಾರವಾಗಿದ್ದು ವಿಶ್ವವಿದ್ಯಾಲಯದ ಸಂಪುಟಗಳನ್ನು ಸೇರುವಂತಿದ್ದರೆ, ಈ ಸ್ವಾರಸ್ಯಪೂರ್ಣ ಬರೆಹಗಳು ಜನಪರವಾದ, ಪತ್ರಿಕಾಪರವಾದ, ಜನಪ್ರಿಯ ಧಾಟಿಯೆಂದುಬಿಡುವ, 'ಫಲಿತ ಹಲಸು ಮಾವು'ಗಳ ಹಾಗೆ ಓದಲು, ಖುಷಿಪಡಲು ಆಕರ್ಷಿಸುವ ರಸಭರಿತ ಫಲವಾಗಿವೆ. ನಿಸಾರ್ ಸಂಪಾದಕನಿಗೆ 'ಬೋನಸ್' ಎನ್ನುವಂತೆ ಈ ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳನ್ನು ಬರೆದಾದ ಮೇಲೆ ಅವರಿಗೂ ಖುಷಿಯಾಯಿತು ಎನ್ನುವುದು ಅನಂತರ ಸಂಪಾದಕನಿಗೂ ತಿಳಿಯಿತು.

ಉತ್ತಮ ಪರಾಮರ್ಶೆ ಎನಿಸುವ, 'ಶತಾಯುಷಿ ಗೆಜೆಟಿಯರಿಗೆ ಹಾರ್ದ ನಮನ', 'ಸ್ವದೇಶಿ ಆಂಗ್ಲನ ಅಸದೃಶ ಭಾರತಪ್ರೇಮ', 'ಲಾರ್ಕನ ಅತೃಪ್ತ ಹೆಣ್ಣುಗಳು', 'ಪ್ರವಾದಿಗಳ

ಪ್ರವಚನದ ಪ್ರಜ್ವಲ ವಜ್ರಗಳು: ಹದೀಸ್'. 'ಮಹಿಳೆ ಊದಿದ್ದಾಳೆ ಮುಕ್ತಿ ಕಹಳೆ' ಮೊದಲಾದ ಲೇಖನಗಳು ಐತಿಹಾಸಿಕ ಅವಲೋಕನ ಆಗುವುದಲ್ಲದೆ, ಅಪ್ರತಿಮ ಕೃತಿಗಳ ಮೆಚ್ಚುಗೆಯ ನೋಟವೂ ಆಗುತ್ತದೆ.

೧೮೮೩ರಲ್ಲಿ ಬರಿಯ ಐನೂರು ಪ್ರತಿಗಳು ಮಾತ್ರ ಮುದ್ರಣಗೊಂಡ, 684 ಪುಟಗಳ, ಅಪೂರ್ವ ಮಾಹಿತಿಗಳ ಬೃಹತ್ 'ಕನ್ನಡದ ಗೆಜೆಟಿಯರ್' (ಆಗ ಬೆಲೆ: ನಾಲ್ಕು ರೂಪೈಗಳು) ಮುಂಬೈ ಸರ್ಕಾರದ ಹುಕುಮಿನಿಂದ ಆದದ್ದು. ಕನ್ನಡ ಅನುವಾದದ ಮಹನಿಯರು, ವೆಂಕಟರಂಗೋ ಕಟ್ಟಿ ಅವರು. ಆಕರ-ಅಂಕಿ ಅಂಶಗಳ ಮಹಾಪೂರವೇ ಇರುವ ಈ ಸಂಪುಟವನ್ನು ಇಂದಿನ ಕನ್ನಡ ಓದುಗರಿಗೆ ಅಭಿಮಾನ, ಹೆಮ್ಮೆಗಳಿಂದ ಪರಿಚಯಿಸಿದ್ದಾರೆ, ನಿಸಾರ್.

ಅದೇ ರೀತಿ ಭಾರತವನ್ನು ಮನದಾಳದಿಂದ ಪ್ರೀತಿಸಿದ ಆಂಗ್ಲೇಯ ಜಿಮ್ ಕಾರ್ಬೆಟ್ ರಚಿಸಿದ ಕೃತಿಗಳನ್ನು (ದಿ ಮ್ಯಾನ್ ಈಟರ್ಸ್ ಆಫ್ ಕುಮಾಂವ್, ದಿ ಮ್ಯಾನ್ ಈಟಿಂಗ್ ಲೆಪರ್ಡ್ ಆಫ್ ರುದ್ರಪ್ರಯಾಗ್, ದಿ ಜಂಗಲ್ ಲೋರ್) ಕನ್ನಡ ಓದುಗರ ಅವಗಾಹನೆಗೆ ತಂದಿದ್ದಾರೆ. ಕೆನೆಗಟ್ಟಿದ ಅರಣ್ಯಾನುಭವ, ಗಂಡಾಂತರಕಾರಿ ಶಿಕಾರಿಗಳ ಅನುಭವ ಓದಲು ರೋಮಾಂಚಕಾರಿ ಎನ್ನುತ್ತಾರೆ, ನಿಸಾರ್. ತಾರುಣ್ಯದಲ್ಲಿ ತಾವು ಓದಿದ ಈ ಪುಸ್ತಕಗಳನ್ನು ಇಂದಿಗೂ ಮರೆಯಲಾಗಿಲ್ಲ ಎನ್ನುತ್ತಾರೆ. ಹಾಗೆಯೇ, ಯೂರೋಪಿನ ಸ್ಪೇಯಿನ್ ದೇಶದ ಗಣ್ಯ ಪ್ರಭಾವಶಾಲಿ ಕವಿ, ನಾಟಕಕಾರ, ಸಂಗೀತಜ್ಞ, ಕಲಾಕಾರ ಫೆಡರಿಕೊ ಗಾರ್ಷಿಯ ಲಾರ್ಕನ ನಾಟಕಗಳ ಅತೃಪ್ತ ಹೆಣ್ಣುಗಳ ಒಳನೋಟಗಳು ಮಾರ್ಮಿಕವಾಗಿವೆ. ಲಾರ್ಕನ ಕೃತಿಗಳ ಕುರಿತು ನಿಸಾರರು ದೀರ್ಘ ಲೇಖನವನ್ನೇ ಬರೆದಿದ್ದಾರೆ. 'ಹದೀಸ್'— ಇಸ್ಲಾಂ ಧರ್ಮಾನುಯಾಯಿಗಳ ಪಾಲಿಗೆ ಶ್ವಾಸಕೋಶಪ್ರಾಯ ಗ್ರಂಥ—'ಕುರ್‌ಆನ್'ನ ಹಾಗೆ ಎನ್ನುತ್ತ, ಹದೀಸ್ ಪರಿಚಯವನ್ನು ಸಾರ್ವತ್ರಿಕಗೊಳಿಸುತ್ತಾರೆ. ಪವಿತ್ರ 'ಕುರ್‌ಆನ್'ನ ಚಿಂತನಯೋಗ್ಯ ಸಾರೋಕ್ತಿಗಳ ಮತ್ತು ಪ್ರವಾದಿವರ್ಯರ ಪರಿಪಾಲನಾರ್ಹ ನೀತಿ ನಿಯಮಗಳ ವ್ಯಾಖ್ಯೆ 'ಹದೀಸ್'—ಸದ್ವಚನಗಳ ವಜ್ರಹಾರ, ಜೀವನಾನುಭವ ಪ್ರಮಾಣಿತ ಜೇಂಗೊಡ ಎನ್ನುತ್ತಾರೆ ಲೇಖಕರು.

'ಅಚ್ಚುಮೆಚ್ಚು' ಮಹಿಳಾ ಚಳುವಳಿಯನ್ನೂ ಒಳಗೊಂಡಿದೆ ಎನ್ನುವುದಕ್ಕೆ ಮಾದರಿ 'ಮಹಿಳೆ ಊದಿದ್ದಾಳೆ ಮುಕ್ತಿ ಕಹಳೆ' ಲೇಖನ. ಮಹಿಳೆಯರ ಚಟುವಟಿಕೆ, ಓಡಾಟ, ಉದ್ಯೋಗ ಸಮರ್ಥ ಶಕ್ತಿಯನ್ನು ಕಾಣಿಸಿದ್ದರೆ, ಪುರುಷ ಪ್ರಧಾನ ವ್ಯವಸ್ಥೆಯ ಪಾರಂಪರಿಕ ಅನ್ಯಾಯ, ಅಸಮಾನತೆಗಳಿಂದ ನವೆಯುತ್ತಿರುವ ಸ್ತ್ರೀ ಸಂಕುಲದ ಬಗ್ಗೆ ಸ್ತ್ರೀಪರವಾದಿ ಲೇಖಕಿಯರ ಕೃತಿಗಳ ಸಮೀಕ್ಷೆ ಇಲ್ಲಿದೆ. ಇದರೊಂದಿಗೆ ಭಾರತೀಯ ನಾರಿ ನಡೆದುಬಂದ ದಾರಿಯ ಮೈಲಿಗಲ್ಲುಗಳ ನೋಟವೂ ಇದೆ.

'ನಿವೃತ್ತರಾದ ಮೇಲೆ ಏನು ಮಾಡುತ್ತೀರಿ?'. 'ಬರೆಯುವುದರ ಬಗ್ಗೆ ಸ್ವವಿವೇಚನೆ'. 'ಅರವತ್ತರ ಅನಿಸಿಕೆಗಳು'. 'ಪರಿಚಿತ ಪರಿಸರ ಮತ್ತು ಹೊಸ ಸಂಜೆಯ ಜೊತೆ ಕೊಂಚ ಹೊತ್ತು'. 'ಪ್ರಿಯ ಬೆಂಗಳೂರು: ಆಪ್ತ ಅನಿಸಿಕೆಗಳು'. 'ಸಂಗೀತಜ್ಞ ಸ್ನೇಹಿತನಿಗೆ ಶುಭ

ಹಾರೈಕೆ', 'ಸುಗಮ ಸಂಗೀತದ ಸಮ್ಮೋಹನಕಾರ'—ಈ ಲೇಖನಗಳೆಲ್ಲ ಒಂದು ರೀತಿ ಅವರ ಸ್ವಕೀಯ ಚಿಂತನೆ ಮತ್ತು ನೆನಪಿನ ಚಿತ್ರಗಳು. ಸರಸ-ಸರಾಗ ಶೈಲಿಯ ನೋಟಗಳು. ಲಲಿತ ಪ್ರಬಂಧದ ಚೌಕಟ್ಟಿಗೂ ಬರುವ ಆಪ್ಯಾಯಮಾನಕರ ಬರೆಹಗಳು.

'ಪರಿಚಿತ ಪರಿಸರ ಮತ್ತು ಹೊಸ ಸಂಜೆಯ ಜೊತೆ ಕೊಂಚ ಹೊತ್ತು', ಮಲೆನಾಡಿನ ಪರಿಸರದಲ್ಲಿ ಈ ಕವಿ ಮನಸ್ಸು ಕರಗಿ ಹೋದ ಕ್ಷಣಗಳ ಸೌಂದರ್ಯ ಲಹರಿಗಳು ಇಲ್ಲಿ ಲಾಸ್ಯವಾಡುತ್ತವೆ. 'ಶಿವಮೊಗ್ಗೆಯ ನಾಲ್ಕೈದು ಮೈಲಿ ಫಾಸಲೆಯಲ್ಲಿರುವ ನನ್ನ ಮಾಜಿ ಪರಿಸರದಲ್ಲಿ ಸಾಯಂಕಾಲದ ಸಂದರ್ಶನದ ಸಲುವಾಗಿ ಒಬ್ಬೊಂಟಿಯಾಗಿ ಹೋದೆ. ಊರಿನಿಂದ ಸುದೂರವಿದ್ದ ಆ ಜಾಗದ ಕನ್ಯಾತ್ವವಿನ್ನೂ ಭಂಗಗೊಂಡಿರಲಿಲ್ಲ. ಅಲ್ಲಲ್ಲಿ ಬರಡು ದಿಬ್ಬ ಮೊರಡಿಗಳಿದ್ದರೂ ಸುತ್ತಮುತ್ತ ತಪೋವನ ತನ್ಮಯಿಯಾದ ಶಕುಂತಲೆ ಯಂತೆ ಅಲ್ಲಿನ ಪ್ರಕೃತಿ ಸ್ವಸಂತೋಷಲೀನವಾಗಿ ರಾರಾಜಿಸಿತ್ತು...'—ಎಂದೆಲ್ಲ ಮನೋಹರ ಚಿತ್ರಗಳನ್ನು ಮೂಡಿಸುವ ಈ ಲೇಖನದಲ್ಲಿ 'ನಿತ್ಯೋತ್ಸವ'ದ ಕವಿ ನಿಸಾರ್ ಕಾಣಿಸುತ್ತಾರೆ. ಬರೀ ಸುಂದರ ಪ್ರಕೃತಿಯ ಉಪಾಸನೆ ಅಲ್ಲದೆ, ಅಲ್ಲಲ್ಲಿ ಪರಿಸರ ಕ್ಷಯದ ಸಂಕಟವೂ ಅವರನ್ನು ಕಳವಳಗೊಳಿಸುತ್ತದೆ. ಸೌಂದರ್ಯವನ್ನು ಆರಾಧಿಸುತ್ತ ಇದ್ದಂತೆಯೆ ಮನಸ್ಸಿನಲ್ಲಿ ಕುರೂಪಗಳ ನೆನಪೂ ಏಳುತ್ತ ಅವರನ್ನು ಕಂಗೆಡಿಸುತ್ತದೆ. ಸಮಾಜದ ಎರಡು ಬದಿಗಳ ದೃಶ್ಯಗಳೂ ಒಂದೇ ಪ್ರಕೃತಿಯಲ್ಲಿ ಅವರ ಮುಂದಾಗುತ್ತದೆ. ಇಡೀ ಸಂಕಲನದ ಅತ್ಯಂತ ಕಾವ್ಯಮಯ ಮತ್ತು ಭಾವುಕ ನೋಟದ್ದು ಈ ಲೇಖನ.

ನಿಸಾರರು ದೇವನಹಳ್ಳಿಯಲ್ಲಿ ಹುಟ್ಟಿದರೂ ಬೆಳೆದದ್ದೆಲ್ಲ ಬೆಂಗಳೂರು. ಬಾಲ್ಯದಿಂದ ಈವರೆಗೆ ಅವರು ವಿಹರಿಸಿದ, ಓಡಾಡಿದ ತಾಣ ಈ ನಗರ. ಬೆಂಗಳೂರನ್ನು ಅರವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ನೋಡಿರುವ ಅವರು ಒಂದು ರೀತಿ ಬೆಂಗಳೂರಿನ ಬದುಕಿನೊಂದಿಗೆ ಬೆಳೆದವರು. ಮಾವಳ್ಳಿ-ಲಾಲ್‌ಬಾಗ್ ಪರಿಸರದ ಮನೆ-ಶಾಲೆ, ಲಾಲ್‌ಬಾಗ್‌ನಲ್ಲಿ ಹುಡುಗಾಟದ ಅಲೆದಾಟಗಳು, ಮಿನರ್ವಾ ಟಾಕೀಸ್‌ನಲ್ಲಿ ಆ ಕಾಲದಲ್ಲಿ ಹಿಂದಿ ಚಿತ್ರಗಳ ದರ್ಶನ, ಮಾವಳ್ಳಿ ಟಿಫನ್ ರೂಂ(ಎಂಟಿಆರ್)ನಲ್ಲಿ ಸಿಹಿ, ಖಾರದ ಮೆಲುಕು—ಎಂದು ಬೆಳೆದ ಅನಂತರ, ಸೆಂಟ್ರಲ್ ಕಾಲೇಜು, ಜಿಯಾಲಜಿ ಓದು, ಕವಿತ್ವ, ಅಸಾಮಾನ್ಯ ಗುರುವರ್ಗ, ಇಂದು ಸುಪ್ರಸಿದ್ಧರಾಗಿರುವ ಜೊತೆ ಪಾಠಿಗರು, ಶಿವಮೊಗ್ಗ ಸರ್ಕಾರಿ ಕಾಲೇಜ್ ಸೇವೆ ಮುಗಿಸಿ ಮತ್ತೆ ಬೆಂಗಳೂರಿಗೆ—ಬಾಡಿಗೆ ಮನೆಗಳಲ್ಲಿದ್ದು, ಕೊನೆಗೆ ಈಗಿರುವ ಸ್ವಂತ ಮನೆ 'ಹಮೀದಾ ಹೈದರ್' ಸೇರಿ, ಅವರು ಬಹು ಕಾಲದ, ಬಹು ಕಾಲಘಟ್ಟದ ಬೆಂಗಳೂರು ವಾಸಿ. ಅನೇಕಾನೇಕ ವಸ್ತುಗಳ ಬಗ್ಗೆ ಬರೆಯುವಾಗ ತನ್ನದೇ ಊರಾದ ಬೆಂಗಳೂರಿನ ಬಗ್ಗೆ ಬರೆಯಲಾಗದಿರುತ್ತದೆಯೇ? ಬಾಲ್ಯದಿಂದ-ವಿಶ್ರಾಂತ ಜೀವನದ ಐದಾರು ದಶಕಗಳ ಸಾವಿರಾರು ನೆನಪುಗಳು, ಚಿತ್ರಗಳು, ಮಿಡಿತಗಳು 'ಪ್ರಿಯ ಬೆಂಗಳೂರು: ಆಪ್ತ ಆಲೋಚನೆ' ಲೇಖನದಲ್ಲಿ ಅಚ್ಚೊತ್ತಿಕೊಂಡಿವೆ.

'ಒಂದು ಊರಿನ ಬಗೆಗಿನ ನಮ್ಮ ಬಾಂಧವ್ಯ ಬರೀ ಭೌತಿಕ ಸ್ವರೂಪದ್ದಾಗಿರದೆ, ಕೇವಲ ಬಾಹ್ಯ ಬದುಕಿನ ಅವಲಂಬನಕ್ಕೆ, ತುತ್ತಿನ ಚೀಲದ ತುರ್ತಿನ ಪೂರೈಕೆಗೆ

ಸೀಮಿತವಾಗಿರದೆ ಹೆಚ್ಚು ಅರ್ಥಪೂರ್ಣವಾಗಿರುವ ತಥ್ಯ ಬಹಳ ಮಂದಿಗೆ ಅರ್ಥವಾಗಿರುವುದಿಲ್ಲ. ಅದು ನಮ್ಮ ಚೇತನದ ಆಳವೂ ನಿಗೂಢವೂ ಆದ ಹಸಿವು ದಾಹಗಳನ್ನು ತಣಿಸುತ್ತಲೂ ತುಡಿಯುತ್ತಿರಬೇಕು: ಆಂತರಿಕ ಅಭಿಲಾಷೆ, ಆದರ್ಶ ಕನಸುಗಾರಿಕೆಗಳ ಸ್ಫೂರ್ತಿಯ ಸೆಲೆಯತ್ತಲೂ ಕಣ್ಣು ಹಾಯಿಸಬೇಕು...'

ತಾನು ನೆಲೆ ನಿಂತ ಊರಿನ ಬಗ್ಗೆ ನಿಸಾರ್ ಇದೇ ಮಾತುಗಳನ್ನು ಹೇಳುತ್ತಾ ಹೋಗುತ್ತಾರೆ. 'ಜನನೀ ಜನ್ಮಭೂಮಿಶ್ಚ' ಎನ್ನುವ ಮಾತನ್ನು ಬೆಂಗಳೂರಿಗೆ ಅನ್ವಯಿಸಿಕೊಂಡು, ತಮ್ಮ ಮತ್ತು ಅದರ ಸಂಬಂಧವನ್ನು ಬಿಡಿಸುತ್ತ ಹೋಗುತ್ತಾರೆ. ಬೆಂಗಳೂರಿನ ಬದಲಾಯಿಸುತ್ತಿರುವ ಪರಿಸರ 'ಗಟಾರದಂತೆ ನಾರುತ್ತಿದೆ' ಅನ್ನಿಸಿದರೂ 'ಹೊರಗಿನ ಅಷ್ಟೆಲ್ಲ ಮಾರ್ಪಾಟು, ಗಡಿಬಿಡಿ, ಆತಂಕ, ಅವಾಂತರಗಳ ನಡುವೆಯೂ ಬೆಂಗಳೂರು ಅಚಲವಾಗಿದೆ—ಮೇಲಿನ ಹೆದ್ದೆರೆಗಳ ಹಾವಳಿಯಿಂದ ನಿರ್ಬಾಧಿತವಾಗಿ, ತನ್ನ ಸೃಷ್ಟಿಪ್ರಕ್ರಿಯೆಯಲ್ಲಿ ತೊಡಗಿರುವ ಕಡಲಿನ ತಳದ ಸ್ವಾತಿಮುತ್ತಿನಂತೆ...' ಎಂದೂ ಹೇಳಿ ತಮ್ಮ ನಗರವನ್ನು ಎದೆಗೆ ಅವಚಿಕೊಳ್ಳುತ್ತಾರೆ.

ಈ ಸಂಕಲನದ ಎರಡು ಅತ್ಯಂತ ಹೃದಯಸ್ಪರ್ಶಿ ಬರೆಹಗಳು, ನಿಸಾರರು ತಾವು ಆತ್ಮೀಯವಾಗಿ ಕಂಡ ಇಬ್ಬರು ಸುಪ್ರಸಿದ್ಧ ಕನ್ನಡ ಸಂಗೀತಜ್ಞರನ್ನು ಕುರಿತು ಬರೆದಿರುವುವು. 'ಸಂಗೀತಜ್ಞ ಸ್ನೇಹಿತನಿಗೆ ಶುಭ ಹಾರೈಕೆ' ಎಂದು ಪದ್ಮಚರಣ್ ಬಗ್ಗೆ ಮತ್ತು 'ಸುಗಮ ಸಂಗೀತದ ಸಮ್ಮೋಹನಕಾರ' ಎಂದು ಮೈಸೂರು ಅನಂತಸ್ವಾಮಿ ಅವರ ಬಗ್ಗೆ ದಾಖಲಿಸಿರುವ ಹೃದಯದಾಳದ ಭಾವನೆಗಳು.

ಬೆಂಗಳೂರು ಮಿನರ್ವಾ ಸರ್ಕಲ್ ಹತ್ತಿರದ 'ಎನ್‌ಎಂಎಚ್' ಹೋಟಲಿನ ಖಾಯಂ ವಾಸಿಯಾಗಿದ್ದ ಪದ್ಮಚರಣ್ ಒಂದು ರೀತಿ ಕನ್ನಡ ಭಾವಗೀತೆಗಳ ಪ್ರಚಾರಿಗರಲ್ಲಿ ಮೊದಲಿಗರು. ಸುಪ್ರಸಿದ್ಧ ಕವಿಗಳ ಮನೋಜ್ಞ ಕವಿತೆಗಳನ್ನು ಆಯ್ದು ಸಂಗೀತ ಸಂಯೋಜಿಸಿ ಅವನ್ನು ಪ್ರಸಿದ್ಧಿಗೊಳಿಸಿದವರು. ಮೈಸೂರಿನಿಂದ ಬೆಂಗಳೂರು ಆಕಾಶವಾಣಿಗೆ ಬಂದು ಅಸಂಖ್ಯಾತ ಭಾವಗೀತೆಗಳಿಗೆ ಸಂಗೀತ ಸಂಯೋಜಿಸಿ ನಿವೃತ್ತರಾದವರು. ಎನ್‌ಎಂಎಚ್‌ನ ಮೂಲೆಯ ಕೊಠಡಿಯೊಂದರಲ್ಲಿ ತಪಸ್ವಿಯಂತೆ ಸೇರಿಕೊಂಡು ಸಂಗೀತ ಸುಧೆಯನ್ನು ಹರಿಸುತ್ತಿದ್ದವರು. ಅಲ್ಲೇ ಅನೇಕ ಜನಪ್ರಿಯ ದನಿ ಸುರುಳಿಗಳು ಸಂಗೀತ ಸಂಯೋಜನೆ ಕಂಡದ್ದು. ಪ್ರಸಿದ್ಧ ಸುಗಮ ಸಂಗೀತ ಗಾಯಕ, ಗಾಯಕಿಯರು ಇಲ್ಲಿ ಬಂದು ಇವರಿಂದ ಸಂಗೀತ ಸಂಯೋಜನೆಗಳ ಅಭ್ಯಾಸ ಮಾಡಿದ್ದಾರೆ. ಪಿಟೀಲು ಹಿಡಿದು ನುಡಿಸುತ್ತ (ಕೊಠಡಿ ಬಾಗಿಲು ಹಾಕಿಕೊಂಡು) ಕುಳಿತರೆ ಘಂಟೆಗಳು ಕಳೆದು ಹೋಗುತ್ತಿದ್ದವು.

ನಿಸಾರರು, ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಘಟ್ಟದಲ್ಲೂ ಇವರನ್ನು ಕಂಡಿದ್ದಾರೆ. ನಿಸಾರರ ಗೀತೆಗಳಿಗೆ ಪದ್ಮಚರಣ್ ಸಂಗೀತ ಸಂಯೋಜಿಸಿದ್ದಾರೆ. 'ಘಜಲ್‌ಗಳಿಗೆ ನಿಕಟವಾದ ನನ್ನ ಮನೋಧರ್ಮಕ್ಕೆ ತಕ್ಕನಾದ ಶಾಸ್ತ್ರೀಯ ರಾಗಗಳನ್ನು ನನ್ನ ಕವನಗಳಿಗೆ ಅಳವಡಿಸಿ, ಭಾವ ಅಭಾವವಾಗಿಬಿಡುವ ಅಬ್ಬರದ ಸಂಗೀತದಿಂದ ಅವುಗಳನ್ನು ಬಚಾವುಗೊಳಿಸಿ ಸರ್ವಾಂಗ ಸಾವಯವತೆಯ ಭಾವನೆ ಕೇಳುಗರಲ್ಲಿ ಉಂಟಾಗುವಂತೆ

ಮಾಡಿರುವ' ಪದ್ಮಚರಣ್ ತಮಗೆ ತುಂಬಾ ಮೆಚ್ಚುಗೆ ಎನ್ನುತ್ತಾರೆ, ನಿಸಾರ್. ಇಪ್ಪತ್ತು-ಇಪ್ಪತ್ತೈದು ವರ್ಷಗಳ ಅವರ ಪರಿಚಯದ ಹೆಗ್ಗುರುತುಗಳನ್ನು ಅವಿಸ್ಮರಣೀಯವಾಗಿ, ಹೃದಯಸ್ಪರ್ಶಿಯಾಗಿ ನಿಸಾರ್ ದಾಖಲಿಸಿದ್ದಾರೆ.

'ಸುಗಮ ಸಂಗೀತದ ಸಮ್ಮೋಹನಕಾರ' ಲೇಖನ ಒಂದು ರೀತಿಯಲ್ಲಿ ಸುಪ್ರಸಿದ್ಧ ಸುಗಮ ಸಂಗೀತ ಗಾಯಕ, ಸಂಯೋಜಕ ಮೈಸೂರು ಅನಂತಸ್ವಾಮಿ ಅವರಿಗೊಂದು ಚರಮಗೀತೆ.

'ದೊರೆ' ಎಂದು ಆತ್ಮೀಯರಿಂದ ಕರೆಸಿಕೊಳ್ಳುತ್ತಿದ್ದ ಅನಂತಸ್ವಾಮಿ ಅವರಿಗೆ ಕವಿ ನಿಸಾರ್ ಎಂದರೆ ಅಚ್ಚುಮೆಚ್ಚು. ಕನ್ನಡದ ಮೊಟ್ಟ ಮೊದಲ ಭಾವಗೀತೆಗಳ ಕ್ಯಾಸೆಟ್ ಹೊರಬಂದದ್ದು, ನಿಸಾರ್-ಅನಂತಸ್ವಾಮಿ ಜೋಡಿಯಿಂದ (1978). ಇವರಿಬ್ಬರೂ ಪರಸ್ಪರ ಚೆನ್ನಾಗಿ ಅರಿತುಕೊಂಡಿರುವವರು. ನಿಸಾರರ ಅನೇಕ ಗೀತೆಗಳಿಗೆ ಅನಂತಸ್ವಾಮಿ ಸಂಗೀತ ಸಂಯೋಜಿಸಿರುವವರು. ದೊರೆಯ ಯೌವನದ ದಿನಗಳಿಂದ ಅಂತಿಮ ದಿನಗಳವರೆಗೂ ಈ ಪರಿಚಯ, ಪರಸ್ಪರ ಗೌರವ ಅವಿಚ್ಛಿನ್ನವಾಗಿ ಸಾಗಿದೆ.

ನಿಸಾರ್ ಅತಿ ಆತ್ಮೀಯವಾಗಿ, ಮುಕ್ತವಾಗಿ ಈ ಸುಗಮ ಸಂಗೀತದ ಸಮ್ಮೋಹನಕಾರನ ಬಗ್ಗೆ ಬರೆಯುತ್ತಾರೆ. ದೊರೆಯ ಅಂತಿಮ ದಿನಗಳಲ್ಲಿ ನಿಸಾರರ ಮೇಲಿನ ಪ್ರೀತಿಯಿಂದ 'ಸುಮಧುರ' ದನಿ ಸುರುಳಿಯ ಸಂಗೀತವನ್ನು ಸಂಯೋಜಿಸಿದರು. ಆದರೆ, ಬಹು ಬೇಗ ಆಸ್ಪತ್ರೆ ಸೇರಿದರು.

'ಆ ದೀಪಾಲಂಕೃತ ವೇದಿಕೆಯೆದುರಿನ ಸಂಗೀತ ಶ್ರೋತೃಗಳ ಕಿಕ್ಕಿರಿಕೆ, ಉತ್ಸಾಹಪ್ರದ ಚಪ್ಪಾಳೆ, ಪ್ರಫುಲ್ಲ ಮುಖಗಳೆಲ್ಲಿ? ಪ್ರಾಣವನ್ನು ಕೊರಳ ತನಕ ದೂಡುತ್ತ ಬರುವ ಈ ದಯನೀಯ ಬಿಮ್ಮೆನಿಸುವ ಭಣಭಣವೆಲ್ಲಿ? ಎಲ್ಲಿ ಆ ಸರಸ ಸಂಗೀತಾವೇಶದ ಹುಚ್ಚು ಹೊಳೆ? ಎಲ್ಲಿ ಈ ನೀರವ, ನೀರಸ ಪ್ರೇತ ಕಳೆ?'—ಆಸ್ಪತ್ರೆಯಲ್ಲಿ ಕೊಳವೆಗಳ ಸಂಕೋಲೆಯಲ್ಲಿ ಕಟ್ಟಿಹಾಕಿಸಿಕೊಂಡು ಪವಡಿಸಿದ್ದ ಅನಂತಸ್ವಾಮಿ ಅವರನ್ನು ಕಂಡಾಗ ಈ ಕವಿಗೆ ಅನಿಸಿದ್ದು ಹೀಗೆ: 'ಲಕ್ಷಾಂತರ ಹೃದಯಗಳನ್ನು ಗೆದ್ದು ಆಳಿದ್ದ ಕಂಠದ ದನಿ ಉಡುಗಿ ಹೋಗಿತ್ತು. ಅವರ ಸ್ಥಿತಿಯನ್ನು ಕಂಡಾಕ್ಷಣ ನನ್ನ ಕಣ್ಣುಗಳಲ್ಲಿ ನೀರುಕ್ಕಿತು. ಕರುಳು ಕಿವುಚಿದಂತಾಗಿ, ಮಾತು ಹೊರಡದೆ ಹೆಚ್ಚು ಸಮಯ ಅಲ್ಲಿ ನಿಲ್ಲಲಾಗದೆ ಹೊರಬಂದೆ.'

ವಿಮರ್ಶಕ, ಟೀಕಾಕಾರ, ಕವಿ, ಸಹೃದಯಿ, ಸಮಾಜಮುಖಿ—ಹೀಗೆ ಕೆಲವಾರು ಪಾತ್ರಗಳನ್ನು ನಿಸಾರ್ 'ಅಚ್ಚುಮೆಚ್ಚು'ವಿನಲ್ಲಿ ಸಮರ್ಥವಾಗಿ ತೂಗಿಸಿದ್ದಾರೆ. ಆಯಾ ಹೇಳಿಕೆಗಳಿಗೆ ತಕ್ಕಂತೆ ಅವರ ಲೇಖನಿ ಕೆಲಸ ಮಾಡಿದೆ. ಹಾಗೆ ನೋಡಿದರೆ, ಇಡೀ ಬರೆವಣಿಗೆ ಅತ್ಯಂತ ವೈಯಕ್ತಿಕ ಎಂಬಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ, ಇದು ಸಾರ್ವತ್ರಿಕ ಅನಿಸಿಕೆಗಳೂ ಸಹ ಆಗಬಹುದು ಎನ್ನಿಸದೆ ಇರದು.

ಕನ್ನಡದಲ್ಲಿ ಹೀಗೆ ಶಕ್ತಿಯುತವಾದ ಶೈಲಿಯಲ್ಲಿ, ದಟ್ಟ ಭಾವನೆ, ಅಭಿಪ್ರಾಯಗಳೊಂದಿಗೆ ಪ್ರಕಟವಾಗಿರುವ ಗದ್ಯ ಲೇಖನಗಳು ಅಪರೂಪವೆನ್ನಬಹುದು. ಇಡೀ ಸಮಾಜವನ್ನು, ಸಾಹಿತ್ಯ ಲೋಕವನ್ನು ಇಷ್ಟು ಆಳವಾಗಿ, ಗಂಭೀರವಾಗಿ ಚಿಂತನೆಗೆ

ಅರ್ಹವಾಗಿಸಿ ಕಾಣಿಸಿರುವ ಸಂಗ್ರಹ ಬಹುಶಃ ನಿಸಾರರದೇ ಇರಬೇಕು. ಜೊತೆಗೆ, ಒಂದೊಂದು ಲೇಖನವೂ ದೀರ್ಘವ್ಯಾಪ್ತಿಯದಾಗಿದ್ದು, ಸುಮಾರು ನಾಲ್ಕು ವರ್ಷ ಒಂದು ಸಲವೂ ತಪ್ಪಿಸದೆ ಪ್ರಕಟವಾದ ಲೇಖನ ಮಾಲೆಯೂ ಇದೇ ಇರಬಹುದು.

'ಅಚ್ಚುಮೆಚ್ಚು'ವಿನ ಹಸ್ತಪ್ರತಿ, ಲೇಖನ, ಸಂಕಲನ—ಈ ಮೂರು ಅವಸ್ಥೆಗಳಲ್ಲೂ ನಾನು ನಿಸಾರರೊಂದಿಗಿದ್ದೆ. ಅವರೊಂದಿಗೆ ಬೇಕಾದಷ್ಟು ಚರ್ಚೆ ಮಾಡಿದ್ದೆ, ಓಡಾಡಿದ್ದೆ. ಇಲ್ಲಿನ ಕೆಲವಾರು ಸಂದರ್ಭಗಳಲ್ಲಿ ನಾನು ಅವರೊಂದಿಗಿದ್ದೆ ಎನ್ನುವುದೇ ನನ್ನ ಸಂತಸ.

ಸಾಹಿತ್ಯ ಕೃತಿ ತಾನು ರೂಪುಗೊಂಡ ಕಾಲ ಮತ್ತು ಪರಿಸರಗಳ ವಿದ್ಯಮಾನಗಳಿಗೆ ವಿಧೇಯವಾಗಿರಬೇಕಾದದ್ದು ಅದರ ಸಹಜ ಧರ್ಮ. ಆಲ, ಕೆಲ ಚದರ ಅಡಿಯಷ್ಟು ಜಾಗದ ನೆಲದಲ್ಲಿ ತನ್ನ ಕಾಂಡವನ್ನು ಬೇರೂರಿಸಿ, ಆ ಪ್ರದೇಶದಿಂದ ಮೇಲಕ್ಕೆ ಏರಿ ಬೆಳೆಯುತ್ತ ಸುತ್ತ ಎಲ್ಲ ದಿಕ್ಕುಗಳಿಗೆ ಪಸರಿಸಿಕೊಳ್ಳುವುದಲ್ಲದೆ, ಬೇರು ಕಾಂಡಗಳಿಂದ ದೂರದ ನೆಲೆಯಲ್ಲಿ ಬಿಳಲುಗಳನ್ನು ಹಬ್ಬಿಸುತ್ತದಷ್ಟೆ? ಇದೇ ರೀತಿ, ಸಾಹಿತ್ಯ ಕೃತಿಯೂ ಸಹ ಸ್ವಕಾಲದ ಪರಿಮಿತ ಅವಧಿಯಲ್ಲಿ ಮೊಳೆತಿದ್ದರೂ ಆ ಕಾಲದ ಆವರಣದ ಆಗುಹೋಗು, ಘಟನೆಗಳ ಪ್ರತಿಫಲಿತವೆನ್ನಿಸಿದರೂ ಅವುಗಳನ್ನು ಕೊಡಹಿ ಮುಂದುವರಿಯಬೇಕು. ಅಂತಹ ಸತ್ವೋತ್ಕರ್ಷ, ಗುಣಾಧಿಕ್ಯ ಅದಕ್ಕಿರಬೇಕು.

(ಕೃತಿ ಕಾಲವನ್ನು ಮೀರಿ ಬೆಳೆಯಬೇಕು)

✧ ✧ ✧

ಹನಿಗವಿತೆ ಮತ್ತು ಸುಗಮ ಸಂಗೀತ—ಗಂಭೀರ ಸಾಹಿತ್ಯ ಮಾರ್ಗದ ಇಬ್ಬದಿಯ ಫುಟ್‌ಪಾತುಗಳು. ಸೀರೆಗೆ ಸೆರಗಿನಂತೆ ಅವುಗಳಿಗೆ ತಮ್ಮ ವ್ಯಾಪ್ತಿಯ ಸೀಮಿತತೆಯ, ಪ್ರಯೋಜನದ ಪರಿಮಿತಿಯ ಅರಿವಿರುವುದು ವಿಹಿತ. ಅಳತೆ ಮೀರಿ ಹಿಗ್ಗಲಿಸಿ ತಂತಾವೇ ಸ್ವೇಚ್ಛೆಯಿಂದ ಮೆರೆಯುತ್ತ ದಾರಿಯನ್ನೇ ಅತಿಕ್ರಮಿಸಿದರೆ, ಅವು ಗತಿಗೇಡಿ ವಿಘ್ನಗಳಾಗಿ ಕಾವ್ಯದ ಮೂಲ ಆಶಯವನ್ನು ಭಂಗಗೊಳಿಸಿದ ಅಪಕೀರ್ತಿಗೆ ಪಕ್ಕಾಗುತ್ತವೆ.

(ಸ್ಥಾನಮಾನದ ಅರಿವು)



‘ವಿಚಾರ ವಿಹಾರ’:
ಬುದ್ಧಿಭಾವಗಳ ವಿದ್ಯುದಾಲಿಂಗನದ ಫಲಶ್ರುತಿ

♦ ಈಶ್ವರಚಂದ್ರ

ಕನ್ನಡದ ಪ್ರಸಿದ್ಧ ಕವಿಗಳ ಪಂಕ್ತಿಯಲ್ಲಿ ಮುಂಚೂಣಿಯಲ್ಲಿರುವ ಸಂವೇದನಾಶೀಲ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅತ್ಯುತ್ತಮ ಗದ್ಯ ಲೇಖಕರೂ ಹೌದು ಎನ್ನುವುದಕ್ಕೆ ಅವರ ಗದ್ಯ ಕೃತಿಗಳೇ ಸಾಕ್ಷಿ. ಮೂಲತಃ ಕವಿ ಚೇತನವನ್ನು ಹೊಂದಿರುವವರು ಗದ್ಯ ಬರೆದರೆ ಅದಕ್ಕೆ ಕಾವ್ಯದ ಸೊಗಡು, ಸೊಬಗು, ಸೊಗಸು ಇರುತ್ತವೆ. ಬೇಂದ್ರೆ, ಕುವೆಂಪು, ಪುತಿನ, ಕೆಎಸ್‌ನ ಮುಂತಾದವರ ಗದ್ಯ ಕೃತಿಗಳನ್ನು ಅವಲೋಕಿಸಿದರೆ ಈ ಮಾತು ವೇದ್ಯವಾಗುತ್ತದೆ. ಈ ಸಾಲಿನಲ್ಲಿ ನಿಸಾರರ ಸಾಧನೆಯೂ ಅಸಾಧಾರಣವಾದದ್ದು. ಅವರ ಗದ್ಯ ಬರಹಗಳು ಮುಖ್ಯವಾಗಿ ವೈಚಾರಿಕ ನೆಲೆಯವು. ಸಾಹಿತ್ಯದ ಬೆಲೆ ಕಟ್ಟುವ ವಿಮರ್ಶಾತ್ಮಕ ಸ್ವರೂಪದವು. ಸಾಮಾಜಿಕ ಜವಾಬ್ದಾರಿಯ ಕಾಳಜಿಗಳು, ಕಾತರಗಳು ಅವರ ಬರಹಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

ನಿಸಾರ್ ಅಹಮದ್ ಅವರ ಐದನೆಯ ಗದ್ಯಕೃತಿ ‘ವಿಚಾರ ವಿಹಾರ’ (೧೯೯೮), ಅವರ ಅರವತ್ಮೂರನೆಯ ಹುಟ್ಟುಹಬ್ಬದ ಸಮಯದಲ್ಲಿ ಬಿಡುಗಡೆಯಾದ ಹತ್ತು ಲೇಖನಗಳ ಸಂಚಯ. ಜನಪ್ರಿಯ ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಇಲ್ಲಿನ ಲೇಖನಗಳು, ಪ್ರಕಟವಾದಂತೆಲ್ಲ ಸಹಸ್ರಾರು ಓದುಗರ ಮೆಚ್ಚುಗೆಯನ್ನೂ ಮನ್ನಣೆಯನ್ನೂ ಗಳಿಸಿ ಅನಂತರ ಪುಸ್ತಕ ರೂಪದಲ್ಲಿ ಸಂಕಲಿತವಾಗಿವೆ.

ಬುದ್ಧಿ ಭಾವಗಳ ಸಂಗಮವಾದ ಇಲ್ಲಿನ ಬರಹಗಳಲ್ಲಿ ವಿಚಾರವೂ ಇದೆ, ವಿಹಾರವೂ ಇದೆ. ಅಲ್ಲಲ್ಲಿ ಲಲಿತ ಪ್ರಬಂಧದ ಸೆಳಕನ್ನೂ ಸಣ್ಣ ಕಥೆಯ ಇಣುಕನ್ನೂ ನೋಡಬಹುದು. ಲೇಖಕರೇ ಸೂಚಿಸಿರುವಂತೆ ಮೊದಲ ಐದು ಲೇಖನಗಳು ವೈಚಾರಿಕ ನೆಲೆಯವಾದರೆ, ಮಿಕ್ಕವು ಸಾಹಿತ್ಯ ಹಾಗೂ ವಿಮರ್ಶೆಗೆ ಸಂಬಂಧಿಸಿದವಾಗಿವೆ. 'ಡಿ.ವಿ.ಜಿ. ಚಿತ್ರಿಸಿದ ಹಾಸ್ಯ ಪ್ರಸಂಗಗಳು' ಎಂಬ ಲೇಖನ ಮಾತ್ರ ಒಂದು ಕೃತಿಯನ್ನು ಕುರಿತ ಸಹೃದಯ ಸ್ಪಂದನ.

ಮೊದಲನೆಯ ಲೇಖನ 'ಕಥೆ ಕೇಳು ಗುಬ್ಬಕ್ಕ, ನಿನ್ನ ವ್ಯಥೆಯ ಕಥೆ ಕೇಳು', ಅನಾಥ ಮುದುಕಿಯೊಬ್ಬಳ ಒಂದು ಕರುಣಾಜನಕ ಪ್ರಸಂಗದಿಂದ ಪ್ರಾರಂಭವಾಗುತ್ತದೆ. ಚಳಿಯಲ್ಲಿ ತತ್ತರಿಸುತ್ತ ರಸ್ತೆಯ ಪಕ್ಕದಲ್ಲಿ ಬಿದ್ದಿದ್ದ ತಬ್ಬಲಿ ಮುದುಕಿಗೆ ಸಹಾಯ ಮಾಡಲು ಪೊಲೀಸ್ ಸ್ಟೇಷನ್ನಿಗೆ ಫೋನ್ ಮಾಡಿದರೆ ಅವರು ಆಕೆಯನ್ನು ಪಕ್ಕದ ಬಡಾವಣೆಯ ಚರಂಡಿಗೆ ಎಸೆದು ಹೋಗಬೇಕೆ? ಬೆಳಗ್ಗೆ ಲೇಖಕರು ಆಕೆಯ ಶವವನ್ನು ನೋಡಿದಾಗ ಮನುಷ್ಯನ ನಿಷ್ಕರುಣೆ ಮತ್ತು ಕ್ರೌರ್ಯ ಮನಸ್ಸನ್ನು ಕಲಕಿ ಭಾವನಾ ತರಂಗಗಳನ್ನೇ ಏಳಿಸುತ್ತದೆ. ಮಾನವ, ಸಹ ಮಾನವರ ಬಗೆಗೇ ಹೀಗೆ ದಾನವೀಯವಾಗಿ ನಡೆದುಕೊಂಡರೆ, ಇನ್ನು ಇತರ ಜೀವಿಗಳ ಬಗೆಗೆ ಹೇಗೆ ನಡೆದುಕೊಂಡಾನು ಎಂಬ ಪ್ರಶ್ನೆ ಅನಂತರ ನಗರದಲ್ಲಿ ಕಣ್ಮರೆಯಾಗುತ್ತಿರುವ ಗುಬ್ಬಚ್ಚಿಗಳ ಕಡೆಗೆ ತಿರುಗುತ್ತದೆ. ಬಾಲ್ಯ ಕಾಲದ ಗುಬ್ಬಚ್ಚಿಯ ನಂಟು ನೆನಪಾಗುತ್ತದೆ. ಕಬ್ಬಿನ ಗದ್ದೆ ಹೊಕ್ಕು ಗಿಲಿಗಿಚ್ಚಿಯಾಗಿಸುತ್ತಿದ್ದದ್ದು, ಜೇಬಿನ ತುಂಬ ಚಿಲ್ಲರೆ ತುಂಬಿಕೊಂಡು ಓಡಿದರೆ ಹೇಗೋ ಹಾಗೆ ಅವುಗಳ ಚಿಲಿಮಿಲಿ ಕಿವಿ ಗಡಚಿಕ್ಕುತ್ತಿದ್ದದ್ದು ನೆನಪಾಗುತ್ತದೆ. ಬೇಂದ್ರೆಯವರ 'ಚಿಟ್ಟ ಗುಬ್ಬಿ ಚಿಂವು ಚಿಂವು', ಕುವೆಂಪು ಅವರ ವಿಚಾರ ಲಹರಿ, ರವೀಂದ್ರನಾಥ ಠಾಕೂರರ ಸೂಕ್ತಿಗಳನ್ನು ಉದಾಹರಿಸಿ, 'ದೇವರ ಮಹಚ್ಛಕ್ತಿಯಿರುವುದು ಲಲಿತತರವಾದ ತಂಗಾಳಿಯಲ್ಲಿ; ಬಿರುಸಿನ ಬಿರುಗಾಳಿಯಲ್ಲಿ ಅಲ್ಲ. ಹಾಗೆಯೇ ಆನೆ, ತಿಮಿಂಗಿಲಗಳಿಗಿಂತ ಗುಬ್ಬಚ್ಚಿಯ ಸೃಷ್ಟಿಯಲ್ಲಿ ಭಗವಂತನ ಮಹಿಮೆ ಹೆಚ್ಚು ಅಡಕವಾಗಿದೆ. ಗೋಮಟೇಶನ ಶಿಲ್ಪದ ಸ್ಥೂಲ ಕಡೆಹಕ್ಕಿಂತ ಶಿಲಾಬಾಲಿಕೆಯಲ್ಲಿ ರೂವಾರಿಯ ಕುಸುರಿ ಕಾರ್ಯದ ನಯವಂತಿಕೆ, ಕೌಶಲಸೂಕ್ಷ್ಮ ಅಧಿಕ ಪ್ರಸ್ಫುಟ' ಎಂಬ ನಿರ್ಣಯಕ್ಕೆ ಬರುತ್ತಾರೆ. ಲೇಖನದ ಕೊನೆಯ ಭಾಗದಲ್ಲಿ ಮನುಷ್ಯನ ಸ್ವಾರ್ಥ ಹಾಗೂ ಮೌಢ್ಯದ ಕಾರಣದಿಂದಾಗಿ ಜೀವ ರಾಶಿಗಳು ನಶಿಸುತ್ತಿರುವ ಬಗೆಗೆ ತೀರದ ಕಳಕಳಿ, ತಳ್ಳಂಕ ವ್ಯಕ್ತಪಡಿಸುವ ಲೇಖಕರು, ಮನುಷ್ಯನ ಕ್ರೌರ್ಯದ ಬ್ರಹ್ಮಾಸ್ತ್ರ ಗುಬ್ಬಿಯ ಮೇಲೆ ಪ್ರಯೋಗವಾಗುತ್ತಿದೆ ಎಂದು ಹಲುಬುತ್ತಾರೆ. 'ಈ ಹಕ್ಕಿಯನ್ನೊಳಗೊಂಡಂತೆ ಅಸಂಖ್ಯ ಮಾನವೇತರ ಜೀವಿಗಳನ್ನು ಕೇವಲ ಚಿತ್ರಗಳಲ್ಲಿ ಕಾಣುವ ದೌರ್ಭಾಗ್ಯ ಭಾವಿ ಜನಾಂಗಕ್ಕೆ ತಟ್ಟದಿರಲೆಂದು ಆಶಿಸೋಣ' ಎಂಬ ಆಶಾಭಾವನೆಯೊಡನೆ ಲೇಖನ ಮುಗಿಯುತ್ತದೆ. ಲೇಖಕರೊಡನೆ ನಾವೂ ದನಿಗೂಡಿಸುತ್ತೇವೆ. ಲೇಖನದುದ್ದಕ್ಕೂ ದೀನ ಜೀವಿಗಳ ಬಗೆಗೆ ಲೇಖಕರ ಸಹೃದಯತೆ, ಮನುಷ್ಯನ ಕ್ರೌರ್ಯದ ಬಗೆಗೆ ಸಾತ್ತ್ವಿಕ ಕೋಪ ಮತ್ತು ಪರಿಸರ ಪ್ರಜ್ಞೆಯ ಕಾಳಜಿ ಮಡುಗಟ್ಟಿದೆ.

'ನಡೀರಿ ಓಗಾನ, ಗಿಡಾ ನೆಡಾನ' ಎಂಬ ಲೇಖನ ಕೂಡ ಪರಿಸರ ಪ್ರಜ್ಞೆಯನ್ನು ಕುರಿತದ್ದೇ. ನಗರ ಪ್ರದೇಶದಲ್ಲಿ ಹಸಿರು ಕಣ್ಮರೆಯಾಗಿ ಕಾಂಕ್ರೀಟ್ ಅರಣ್ಯ ಆವರಿಸುತ್ತಿರು

ವುದು ಒಂದು ಕಡೆಯಾದರೆ, 'ಗೃಹವಾಸಿಗಳು ತಮ್ಮ ಕಾಂಪೌಂಡಿನೊಳಗೆ ಹೆಚ್ಚಾಗಿ ತೆಂಗಿನ ಮರಗಳನ್ನೇ ಬೆಳೆಸಲು ಏಕೆ ಇಷ್ಟಪಡುತ್ತಾರೆ?' ಎಂಬ ಪ್ರಶ್ನೆ ಇನ್ನೊಂದು ಕಡೆ. 'ಮರ ಗಿಡಗಳು ಇರುವುದು ಕೇವಲ ಮನುಷ್ಯನ ಅನುಕೂಲ, ಲಾಭಗಳಿಗೆ ಎನ್ನುವ ನಮ್ಮ ಜನಗಳ ಧೋರಣೆ, ಸಾರ್ವತ್ರಿಕ ನಿಲವು ಬದಲಾಗಬೇಕಿದೆ... ಉರವಲು, ಮರಮುಟ್ಟು, ಹೂ ಕಾಯಿ ಹಣ್ಣುಗಳನ್ನು ಮನುಷ್ಯರಿಗೆ ಸದಾ ಕಾಲಕ್ಕೂ ಸರಬರಾಜಿಸಲು ಸಸ್ಯಸಂತತಿ ಅಸ್ತಿತ್ವದಲ್ಲಿಲ್ಲ' ಎಂದು ಎಚ್ಚರಿಸುತ್ತಾ, ಸಾಲು ಮರದ ತಿಮ್ಮಕ್ಕನ ಮಹತ್ಕಾರ್ಯವನ್ನು ಜ್ಞಾಪಿಸುತ್ತಾರೆ. 'ನಡೀರಿ ಓಗಾನ, ಗಿಡಾ ನೆಡಾನ' ಎಂಬ ಅವಳ ಮಾತು ಸನ್ಮಂತ್ರದಂತೆ ನಮ್ಮನ್ನೆಲ್ಲ ಎಚ್ಚರಿಸಬೇಕು ಎಂದು ಹಾರೈಸುತ್ತಾರೆ.

'ಹುದ್ದೆ ಮುದ್ದೆ ನಿದ್ದೆ: ಬದುಕು ಇಷ್ಟೇನೇ ಪೆದ್ದೆ?' ಶೀರ್ಷಿಕೆಯೇ ಸೂಚಿಸುವಂತೆ, 'ಜೀವನವಿಡೀ ಸ್ವಾರ್ಥ ಸಾಧನೆಯ ಚರಂಡಿಗಳಲ್ಲಿ ಚಕ್ಕಂದವಾಡುತ್ತ ಭೋಗವಿಲಾಸಗಳ ಹೊಂಡದೆಮ್ಮೆಗಳಾಗಿ ಮೋಜು ಮಾಡುತ್ತ, ಇತರರ ಕಷ್ಟಕಾರ್ಪಣ್ಯಗಳತ್ತ ಒಮ್ಮೆಯೂ ದಿಟ್ಟಿ ಹರಿಸದೆ ಮಾನವ ಜೀವಿತದ ಘನವಂತಿಕೆ, ಚರಿತಾರ್ಥಗಳಿಗೆ ಮಸಿ ಬಳಿಯುತ್ತ ಉಸಿರಾಡುತ್ತಿರುವ' ಜನರ ಬಗೆಗೆ ಹರಿಸಿದ ವಿಚಾರಲಹರಿ. 'ಸ್ವಾರ್ಥೈಕಪರಾಯಣರಾದ ಪೈಸಾಕಾಮಿ ಐಷಾರಾಮಿಗಳ' ಸ್ವೈರ ಹಾಗೂ ಅಶಿಸ್ತಿನ ಜೀವನದ ಬಗೆಗೆ ಸಾತ್ತ್ವಿಕ ರೋಷ. 'ಐಸಿರಿಯ ದೊಡ್ಡಸ್ತಿಕೆ, ಹೆಸರು, ಪ್ರತಿಷ್ಠೆ ಜಗಜ್ಜಾಹಿರಾಗಬೇಕೆಂಬ ಕ್ಷುದ್ರ ಬಯಕೆ' ಇರುವ ವ್ಯಕ್ತಿಗಳ ನಾಚಿಕೆಗೆಟ್ಟ ವರ್ತನೆಯ ಬಗೆಗೆ ಆಕ್ರೋಶ. ಸಮಾಜದ ಒಟ್ಟಂದದ ಹಿತಾಭ್ಯುದಯವನ್ನು ಕುರಿತು ಪ್ರಾಮಾಣಿಕವಾಗಿ ಇವರು ಆಲೋಚಿಸುವಂತಾಗಲಿ ಎಂಬ ಕಳಕಳಿ ಈ ಲೇಖನದಲ್ಲಿ ಮಡುಗಟ್ಟಿದೆ.

'ಅನಿರೀಕ್ಷಿತ ಪತ್ರ: ಫಲಿಸದ 'ಪ್ರೇಮ ಮತ್ತು ಸ್ನೇಹ' ಸ್ವಾನುಭವದ ನಿರೂಪಣೆಯ ಲೇಖನ. 'ಜೀವನವೇ ಹಾಗೆ: ಹೊಂಬಿಸಿಲಿನ ಎಳೆಗರು. ಮನಸೋಇಚ್ಛೆ ಹೇಗೆ ಹೇಗೋ ಕುಣಿದು ಕುಪ್ಪಳಿಸುವ ಹುಚ್ಚು ಖೋಡಿ' ಎಂದು ಆರಂಭದಲ್ಲಿಯೇ ಹೇಳುವ ಲೇಖಕರು, 'ಜೀವನವೆನ್ನುವುದು ಆಶ್ಚರ್ಯಕರ ಅನಿರೀಕ್ಷಿತಗಳ, ಅಘಟಿತವೆನ್ನಿಸುವ ಆಗುಹೋಗುಗಳ, ವಿಚಾರಾತೀತ ಆಕಸ್ಮಿಕಗಳ ಅಕ್ಷಯ ಆಗರ' ಎಂದು ಪೀಠಿಕೆ ಹಾಕುತ್ತಾ ಕುತೂಹಲ ಕೆರಳಿಸುತ್ತಾರೆ. ಮುಂಬಯಿಯ ಪ್ರಸಿದ್ಧ ಪತ್ರಿಕೆಯೊಂದು 'ಪ್ರೇಮ ಮತ್ತು ಸ್ನೇಹ'ದ ಬಗೆಗೆ ಲೇಖಕರನ್ನು ಒಂದು ಲೇಖನ ಕೇಳುತ್ತದೆ. ಅಪಾರ ಸಿದ್ಧತೆ, ಪರಿಶ್ರಮ ಮತ್ತು ಚಿಂತನೆಯ ಫಲವಾಗಿ ಲೇಖನ ಸಿದ್ಧವಾದರೂ ಅಂಚೆಗೆ ಹಾಕುವ ಮೊದಲೇ ಲೇಖಕರು ಬೇರೆ ಊರಿಗೆ ತುರ್ತಾಗಿ ಹೋಗಬೇಕಾಗುತ್ತದೆ. ಅಂಚೆಗೆ ಹಾಕುವ ಕೆಲಸವನ್ನು ಸಹೋದ್ಯೋಗಿಗೆ ಒಪ್ಪಿಸಿ ಹೋಗುತ್ತಾರೆ. ಆದರೆ ಲೇಖನ ಮಾತ್ರ ಪ್ರಕಟವಾಗುವುದೇ ಇಲ್ಲ. ಆರೇಳು ತಿಂಗಳಾದ ಮೇಲೆ ಗೊತ್ತಾಗುತ್ತದೆ, ಆ ಸಹೋದ್ಯೋಗಿ ಲಕೋಟೆಯನ್ನು ಹೋಟೆಲೊಂದರಲ್ಲಿ ಮರೆತುಬಿಟ್ಟು, ಮರಳಿ ದೊರಕಿಸಿಕೊಳ್ಳಲಾಗದೆ, ಅಂಚೆಗೆ ಹಾಕಿದ್ದೇನೆಂದು ಲೇಖಕರಿಗೆ ಸುಳ್ಳು ಹೇಳಿಬಿಟ್ಟಿರುತ್ತಾನೆ. ಅದನ್ನು ತಿಳಿಸಿ ಬೇರೆ ಊರಿನಿಂದ ಬರೆದ ಪತ್ರ ಇಪ್ಪತ್ತೇಳು ವರ್ಷಗಳ ಬಳಿಕ ಮತ್ತೆ ಆಕಸ್ಮಿಕವಾಗಿ ಸಿಕ್ಕಿ ಹಿಮ್ಮಿಂಚಿನಲ್ಲಿ ನೆನಪುಗಳು ಬಿಚ್ಚಿಕೊಳ್ಳುವ

ಕ್ರಮದಲ್ಲಿ ಲೇಖನದ ನಿರೂಪಣೆ ಇದೆ. ಲಲಿತ ಪ್ರಬಂಧದ ನಯ ಮತ್ತು ಸಣ್ಣ ಕಥೆಯ ಸೊಗಸು ಎರಡೂ ಸೇರಿ ಕುತೂಹಲಕಾರಿಯಾಗಿ ಬೆಳೆದ ಈ ಲೇಖನ ಕಚಗುಳಿ ಇಡುತ್ತದೆ. ತಮಗೆ ಸಿಗಬೇಕಾದ ಒಂದು ಮಹತ್ವದ ಮನ್ನಣೆ ಮಣ್ಣು ಪಾಲಾದರೂ ಆ ಸಹೋದ್ಯೋಗಿಯನ್ನು ಸಮಾಧಾನಚಿತ್ತದಿಂದ ಕ್ಷಮಿಸುವ ಔದಾರ್ಯವನ್ನು ತೋರಿದ್ದಾರೆ ಲೇಖಕರು. 'ರಾಮಣ್ಣನ ಉಪಕಾರಕ್ಕೆ ಕ್ಷಮಿಸದೆ ಏನು ತಾನೆ ಮಾಡುವ ಹಾಗಿದೆ?' ಎಂಬ ಒಂದೇ ವಾಕ್ಯದಲ್ಲಿ ಹತಾಶೆ, ಅಸಹಾಯಕತೆ, ವಿಧಿಯನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಎಲ್ಲ ಘನೀಭೂತವಾಗಿದೆ.

ವಯಸ್ಸಾಗುವುದರ ಬಗೆಗೆ ಲೇಖಕರು ಹರಿಸಿದ ಯೋಚನಾ ಲಹರಿಯೇ 'ವಯಸ್ಸೆಂಬ ಶಿಕ್ಷಕ'. ಗಂಭೀರ ಪ್ರಬಂಧದಂತಿರುವ ಈ ಲೇಖನದಲ್ಲಿ ವಯಸ್ಸಾಗುವುದರ ಹಿನ್ನೆಲೆಯಲ್ಲಿ ಮನುಷ್ಯನ ಮೇಲಾಗುವ ಮಾನಸಿಕ ದೈಹಿಕ ಪರಿಣಾಮಗಳು, ಅವನ್ನು ಮನುಷ್ಯ ಸ್ವೀಕರಿಸುವ ರೀತಿ, ದೈಹಿಕ ಯೌವನವಂತರಾದರೂ ಮಾನಸಿಕ ವೃದ್ಧರು, ದೈಹಿಕ ವೃದ್ಧರಾದರೂ ಮಾನಸಿಕ ಉತ್ಸಾಹಿಗಳು ಮುಂತಾದವನ್ನೆಲ್ಲ ಚರ್ಚಿಸಿ, ಕೊನೆಯಲ್ಲಿ 'ವಯಸ್ಸಿನ ಎತ್ತರದ ನೆಲೆಯಲ್ಲಿ ನಿಂತು ವಿಚಾರದ ಕಡೆಗೋಲಿನಿಂದ ಬದುಕಿನ ಮಥನದಲ್ಲಿ ತೊಡಗಿ ಅಮೃತ ಕಾಣಬಯಸುವವರು, ಅದರ ಸವಿಯನ್ನು ಅನುಭವಿಸುವ ಪಟುತ್ವವನ್ನು ಬೆಳೆಸಿಕೊಂಡ ಮರ್ಮಸೂಕ್ಷ್ಮಜ್ಞರು ಮಾತ್ರ ನಿಜವಾದ ಕೃತಕೃತ್ಯರು' ಎಂಬ ನಿರ್ಣಯಕ್ಕೆ ಬರುತ್ತಾರೆ.

ಡಿ.ವಿ.ಜಿ. ಅವರ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಇಡೀ ಒಂದು ನಗರವೇ ಇಡುಕಿರಿದಿದೆ. ಅನೇಕ ಭಾವ ಭಣಿತಗಳ ಸಂಗಮ ಈ ಕೃತಿಶ್ರೇಣಿ. ಅದರ ಒಂದು ಮುಖವಾದ ಹಾಸ್ಯವನ್ನು ಪರಿಚಯಿಸುವ ಪ್ರಯತ್ನವೇ 'ಡಿ.ವಿ.ಜಿ. ಚಿತ್ರಿಸಿದ ಹಾಸ್ಯ ಪ್ರಸಂಗಗಳು'. ಕನ್ನಡದ ಶ್ರೇಷ್ಠ ಗದ್ಯಕಾರರಲ್ಲಿ ಒಬ್ಬರಾದ ಡಿ.ವಿ.ಜಿ. ಅವರಿಗೆ ಇನ್ನೊಬ್ಬ ದಕ್ಷ ಗದ್ಯಶಿಲ್ಪಿ ನಿಸಾರ್ ಅಹಮದ್ ಸಲ್ಲಿಸಿದ ಗೌರವ ಈ ಲೇಖನ ಎನ್ನಬಹುದು. ಇಂತಹ ಸಾಹಿತ್ಯ ದಿಗ್ಗಜರ ಕೃತಿ ಸಂಪತ್ತಿನ ಬಗೆಗೆ ವಿಮರ್ಶೆ ತಾಳಿದ ಅಸಡ್ಡೆಯನ್ನು ಕಂಡು ಬೇಸರ ಸೂಚಿಸಿದ ನಿಸಾರರು, ಈ ದೀರ್ಘ ಲೇಖನದ ಮೂಲಕ ಓದುಗರ, ವಿಮರ್ಶಕರ ಗಮನವನ್ನು ಡಿ.ವಿ.ಜಿ. ಅವರ ಹಾಸ್ಯ ದೃಷ್ಟಿಯ ಕಡೆಗೆ ಸೆಳೆದಿದ್ದಾರೆ. ಇಲ್ಲಿ ಉದ್ಧೃತವಾಗಿರುವ ನಗೆ ಚಿತ್ರಗಳು ಹೊಸದಾಗಿ ಓದಿದವರಿಗೆ ಜ್ಞಾಪಕ ಚಿತ್ರಶಾಲೆಯನ್ನು ಓದಲು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಈಗಾಗಲೇ ಓದಿರುವವರನ್ನು ಮತ್ತೊಮ್ಮೆ ಜ್ಞಾಪಕ ಚಿತ್ರಶಾಲೆ ಪ್ರವೇಶಿಸಲು ಪ್ರೇರೇಪಿಸುತ್ತವೆ. ಒಂದು ಉತ್ತಮ ಲೇಖನದ ಸಾರ್ಥಕತೆ ಇದೇ ಅಲ್ಲವೆ?

ಕೊನೆಯ ನಾಲ್ಕು ಲೇಖನಗಳು ನೇರವಾಗಿ ಸಾಹಿತ್ಯ ಮತ್ತು ವಿಮರ್ಶೆಯನ್ನೇ ಕುರಿತವು. 'ಬೈ ವಿಮರ್ಶೆ, ಜೈ ವಿಮರ್ಶೆ' ಪೂರ್ವಾಗ್ರಹ ಪೀಡಿತ ವಿಮರ್ಶಾ ಪದ್ಧತಿಯು ಮಾಡುವ ಅನಾಹುತಗಳನ್ನು ಚರ್ಚಿಸಿದರೆ, 'ಸಾಹಿತ್ಯದ ಸತ್ತ್ವವರ್ಧಕಗಳು' ಲೇಖನ ಇಂದಿನ ಗದ್ಯ ಬರವಣಿಗೆಯಲ್ಲಿನ ಕೊರೆ ಮತ್ತು ಮಂಕನ್ನು ಕುರಿತದ್ದು. ಇಂದಿನ ಬರಹಗಳಲ್ಲಿ ಚಮತ್ಕಾರ ಚಾಕಚಕ್ಯಗಳೇ ಹೆಚ್ಚಾಗಿವೆಯೆಂದೂ ಚಾಕಚಕ್ಯಗಳು ಚೌಕಟ್ಟಿನಂತಿದ್ದು,

ಕನ್ನಡಿಗಿಂತ ಚೌಕಟ್ಟೇ ದೊಡ್ಡದಾಗಿರಬಾರದೆಂದೂ ಸೂಚಿಸುತ್ತದೆ. ಹಿಂದಿನ ತಲೆಮಾರಿನ ಲೇಖಕರ ಬರವಣಿಗೆಯಲ್ಲಿದ್ದ 'ಬಿಗಿ ಬಂಧ, ಶಿಸ್ತು, ಸಂಯಮ, ಭಾಷಾಗೌರವ, ಮಡುಗೊಳ್ಳದ ಸುಳಿ ಸುತ್ತದ ನೇರ ಓಟ, ಅಗ್ಗಗೊಳ್ಳದ ಅಭಿರುಚಿ' ಇಂದು ಏಕೆ ಮರೆಯಾಗುತ್ತಿದೆ? ಎಂದು ಲೇಖಕರು ಕಳವಳಗೊಳ್ಳುತ್ತಾರೆ. 'ಇಂದಿನ ಲೇಖಕರು ಮಾಡಬೇಕಾದ ಮುಖ್ಯ ಕೆಲಸವೆಂದರೆ ಸದ್ಗ್ರಂಥಗಳ ಸತತಾಧ್ಯಯನ ಮತ್ತು ಏಕಾಂತದಲ್ಲಿ ಚಿಂತನ, ಮನನ' ಎಂದು ಸಲಹೆ ಕೊಡುತ್ತಾರೆ. ಇಂದಿನ ಲೇಖಕ ಅಂತರ್ಮುಖತ್ವಕ್ಕೆ ಬೆಂದಿರುಹಿ ಬಾಹ್ಯಲೋಲನಾಗಿರುವುದರಿಂದ ದೀರ್ಘಕಾಲದ ಶ್ರೇಯೋದೃಷ್ಟಿಯಿಂದ ಅಸಂಗತ ಎಂದು ಹೇಳುತ್ತಾರೆ. 'ಇವೊತ್ತು ಮಹತ್ವಪೂರ್ಣ ಹಿರಿಯ ಲೇಖಕರು ನಮ್ಮೊಂದಿ ಗಿಲ್ಲದ್ದರಿಂದ ಅವರ ಪ್ರಭಾವವೂ ಮಸುಳಿಸಿ ಬಿಡಬೇಕೆಂಬ ನಿಯಮವೇನಿಲ್ಲ. ಹಳಬರು ಎನ್ನುವ ಒಂದೇ ಕಾರಣಕ್ಕೆ ಆ ಗಟ್ಟಿ ಕುಳಗಳನ್ನು ಆಧರಿಸಿ ಆದರಿಸದೆ ಪ್ರಸಕ್ತ ಪ್ರಸಿದ್ಧಿಯ ಮರಳು ದಿಬ್ಬಗಳನ್ನು ತಕ್ಕೈಸುವುದರಿಂದ ಯಾವ ಪುರುಷಾರ್ಥವೂ ಸಾಧಿತವಾಗದು' ಎಂದು ಎಚ್ಚರಿಸುತ್ತಾರೆ. ಹಳಬರು ದ್ರಾಕ್ಷಿ, ಅಂಜೂರಗಳಂತೆ. ಅವು ಹಸಿಯಾಗಿದ್ದಾಗ ಹೇಗೋ ಒಣಗಿದ ಸ್ಥಿತಿಯಲ್ಲೂ ಆಸ್ವಾದ್ಯವೇ, ಪುಷ್ಟಿದಾಯಕವೇ ಎಂದು ಕಿವಿಮಾತು ಹೇಳುತ್ತಾರೆ. ಕೊನೆಗೆ 'ಸ್ವಾನುಭವವೇ ಸಾಹಿತ್ಯದ ಸಾರದಾಯಕ ತಾಯಿಬೇರು' ಎಂದು ಸಾರುತ್ತಾರೆ.

'ಆಶಯ ಮತ್ತು ಅಭಿವ್ಯಕ್ತಿ' ಲೇಖನದಲ್ಲಿ, 'ವ್ಯಕ್ತಿ ವಿಶಿಷ್ಟತೆಯ ಪ್ರಕಟನಕ್ಕೆ ಮಾಧ್ಯಮವೊಂದರ ಅಗತ್ಯ ಮುಖ್ಯ... ಮಾಧ್ಯಮದ ಪರಮ ಪ್ರಯೋಜನ ಸಂವಹನತೆ' ಎಂದು ಗುರುತಿಸಿ, ಅಭಿವ್ಯಕ್ತಿಯ ನಾನಾ ಮಾಧ್ಯಮಗಳಾದ ಭಾಷೆ, ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯಗಳ ವೈಶಿಷ್ಟ್ಯ, ವೈವಿಧ್ಯ, ಇತಿಮಿತಿಗಳನ್ನು ಚರ್ಚಿಸುತ್ತಾರೆ. ಕೊನೆಗೆ, 'ಪ್ರಸಕ್ತ ಕಾಲದ ಕವಿ ಸಾಹಿತಿಗಳಿಗೆ, ಕಲಾವಿದರಿಗೆ ಅತ್ಯಾವಶ್ಯಕವೆನ್ನಿಸುವ ವಿಷಯವೆಂದರೆ ಸಾಹಿತ್ಯ ಪ್ರಕಾರಗಳ ಹಾಗೂ ಕಲೆಗಳ ನಡುವೆ ಹಾರ್ದಿಕವಾದ ಸಂಪರ್ಕವೇರ್ಪಡುವಂತೆ ಎಸಗುವುದು. ಅವುಗಳಲ್ಲಿನ ಅನನ್ಯಾಂಶಗಳನ್ನು ಗುರುತಿಸಿ ಔಚಿತ್ಯ ಮೀರದಂತೆ ತಮ್ಮ ಕ್ಷೇತ್ರಗಳಿಗೆ ಹಾಯಿಸಿಕೊಂಡು ಸಮೃದ್ಧವಾದ ಕೃಷಿಯನ್ನು ಕೈಗೊಳ್ಳುವುದು' ಎಂಬ ನಿರ್ಣಯಕ್ಕೆ ಬರುತ್ತಾರೆ.

'ಸಾಹಿತ್ಯದ ನೆಲೆ-ಬೆಲೆ'ಈ ಸಂಕಲನದ ಕೊನೆಯ ಲೇಖನ. ನಲಿವು ಮತ್ತು ತಿಳಿವು ಸಾಹಿತ್ಯದ ಮೂಲೋದ್ದೇಶವೆಂದು ಗುರುತಿಸುತ್ತಾ, 'ದಿನನಿತ್ಯದ ಇಂದ್ರಿಯಾನುಭವಗಳನ್ನು ಸಾಹಿತ್ಯಮಾನ್ಯ ಸಾಮಗ್ರಿಯನ್ನಾಗಿ ಪರಿವರ್ತಿಸುವ' ಪ್ರತಿಭೆಯನ್ನು ಕುರಿತು ಚರ್ಚಿಸುತ್ತಾರೆ. ಪ್ರತಿಭೆಯನ್ನು 'ಬಿಡಿಗಾಳಿನಲ್ಲಿ ಕಂಗೊಳಿಸುವ ಗದ್ದೆಯನ್ನು' ಗುರುತಿಸುವ ಶಕ್ತಿ ಎಂದು ವ್ಯಾಖ್ಯೆ ಮಾಡುತ್ತಾರೆ. ಸ್ವಾನುಭವ ಮತ್ತು ಪರರ ಅನುಭವವನ್ನು ತನ್ನದಾಗಿಸಿಕೊಳ್ಳುವ ಸಂವೇದನೆಯನ್ನು ಚರ್ಚಿಸುತ್ತಾರೆ, 'ಬರಹಗಾರನ ಪಡುಹಗಳಲ್ಲಿ ಈ ತೆರನಾದ ಪರೋಕ್ಷಾನುಭವವೇ ಹೆಚ್ಚಿನ ಪ್ರಮಾಣದ್ದು' ಎಂದು ಹೇಳುತ್ತಾ, 'ಸಾಹಿತ್ಯವಲ್ಲಿ ಸ್ಥಳೀಯತೆ, ಸಕಾಲಿಕತೆಗಳ ಜೊತೆಯಲ್ಲೇ ಸಾರ್ವದೇಶೀಯತೆ, ಸಾರ್ವಕಾಲಿಕತೆಗಳು ಸಂಯೋಗಗೊಂಡಿರ ಬೇಕು' ಎಂದು ಖಚಿತವಾಗಿ ಘೋಷಿಸುತ್ತಾರೆ.

ಈ ಹತ್ತೂ ಲೇಖನಗಳನ್ನು ಒಟ್ಟಂದವಾಗಿ ನೋಡಿದಾಗ ನಿಸಾರರು ತಾವು ಆರಿಸಿಕೊಂಡ ವಸ್ತುವಿನ ಎಲ್ಲ ಮಗ್ಗುಲುಗಳನ್ನೂ ತಲಸ್ಪರ್ಶಿಯಾಗಿ ನೋಡಿ, ಸ್ವೋಪಜ್ಞ ವಿಚಾರಗಳನ್ನು ಮಂಡಿಸುವುದು ಕಂಡುಬರುತ್ತದೆ. ಅವರ ಕಾಳಜಿಗಳು ಪರಿಸರ ರಕ್ಷಣೆಯಾಗಿರಬಹುದು ಅಥವಾ ಸಾಹಿತ್ಯವನ್ನು ಕುರಿತ ಆಳವಾದ ಚಿಂತನೆಗಳಿರಬಹುದು. ಆದರೆ ಅವರು ಮನದಾಳದ ಭಾವನೆಗಳನ್ನು ಪೇರಿಸುತ್ತ ಹೋದಂತೆ ಅನೇಕ ಅನನ್ಯ ಒಳನೋಟಗಳು ಕಾಂತಿಪೂರ್ಣವಾದ ಮತಾಪಿನಂತೆ ಮಿನುಗುತ್ತವೆ. ಅದಕ್ಕಾಗಿ ತಮ್ಮದೇ ಆದ ವಿಶಿಷ್ಟವಾದ ಭಾಷೆಯನ್ನು ಅವರು ಹದವಾಗಿ ರೂಢಿಸಿಕೊಂಡಿದ್ದಾರೆ. ಅದರಲ್ಲಿ ಉರ್ದು, ಪಾರಸಿ, ಸಂಸ್ಕೃತ ಪದಗಳು ಎಗ್ಗಿಲ್ಲದೆ ನುಗ್ಗುತ್ತವೆ. ಮಾಲೆಗಾರ ಬಣ್ಣಬಣ್ಣದ ಹೂವುಗಳನ್ನು ಸೇರಿಸಿ ವೈವಿಧ್ಯಪೂರ್ಣವಾದ ಮಾಲೆಯನ್ನು ಕಟ್ಟುವಂತೆ ಅಥವಾ ಚಿತ್ರ ಕಲಾವಿದ ವಿವಿಧ ವರ್ಣ ಸಂಯೋಜನೆಯಿಂದ ಅದ್ಭುತವಾದ ಕಲಾಕೃತಿಯನ್ನು ರಚಿಸುವಂತೆ ನಿಸಾರರು ಕೃತಿ ರಚನೆ ಮಾಡುತ್ತಾರೆ. ಅವರ ಬರಹಗಳನ್ನು ಓದುತ್ತಿದ್ದರೆ ಪುಷ್ಪಪ್ರದರ್ಶನ ದಲ್ಲಿ ಹಾದು ಬಂದ ಅನುಭವವಾಗುತ್ತದೆ. ಅಲ್ಲಿ ಸೌರಭ ಸೌಂದರ್ಯಗಳೆರಡರ ವೈವಿಧ್ಯವೂ ಉಂಟು. ಅಲ್ಲದೆ, ತಮ್ಮ ಅಗತ್ಯಕ್ಕೆ ತಕ್ಕಂತೆ ಹೊಸ ಹೊಸ ಪದಗಳನ್ನು ಅವರು ಟಂಕಿಸಿಕೊಳ್ಳುತ್ತಾರೆ. ಮನುಷ್ಯನ ಮರಗಡುಕ ಬುದ್ಧಿ, ಸಾರಾಸಗಟಾಗಿ ಸಫಾಯಿಗೊಂಡಿದೆ, ವ್ಯಾಗನ್ನುಗಟ್ಟಲೆ ವಾಗ್ಮಲ, ಗಡಿಯಾರ ವಿಧೇಯ ಊಳಿಗವಂತರು, ನಿಗರಾನಿ, ಸಾಮಾಜಿಕ ತೊಣಚಿ, ಪೈಸಾಕಾಮಿ ಐಷಾರಾಮಿ, ಗೊಟ್ಟಿಗುಣಿತ, ಕ್ಷುದ್ರ ಖಾಯೀಷು ಪಸಂದುಗಳ ಮೆಳೆ, ಅರ್ಧರಾತ್ರಿಯ ಕೊಡೆಹಿಡುಕರು, ಧನೋನ್ಮತ್ತ ದೌಲತ್ತಿಗರು, ನವಾಬೋಪಚಾರ, ಹೆಣಗೊಳಕ ಹೆಡ್ಡಾಚಾರ, ನುಗ್ಗುವ ನೆಗಸು, ಮರ್ಜಿ ಮುರುವತ್ತು, ಸ್ವಾಪ್ನಿಕ ಮಾರ್ದವತೆ ಮೈಯಿಡಿ ಮಲರಿಸಿಕೊಂಡು, ಹೂರಣಹೀನತೆ, ನೊರೆಬಾಳಿಗರು, ಮಾಪುಗೋಲು, ಸಮ ಹದತ್ವ ಸಹ ಮಹತ್ವ, ಲಗತ್ತು, ಲಾಗಾಯ್ತು, ಲಿಖಾವಟ್ಟು, ಮತಿಬಿಂಬ, ಅಭಿವ್ಯಕ್ತಿಯ ಗ್ರೀಷ್ಮತೆ, ಪ್ರತಿಭಾ ಮೈನತೇಯ—ಮುಂತಾದ ನಿಸಾರರು ಮಾತ್ರ ಬಳಸಬಹುದಾದ ಪ್ರಯೋಗಗಳಲ್ಲಿ 'ನಿಸಾರ್'ತನದ ಛಾಪನ್ನು ಗುರುತಿಸಬಹುದು. ಸಹಜ ಕವಿಯಾಗಿರು ವುದರಿಂದ ಪ್ರಾಸಗಳು ತಡಬಡವಿಲ್ಲದೆ ಪುಂಖಾನುಪುಂಖವಾಗಿ ನುಗ್ಗುತ್ತವೆ. ತಮ್ಮ ಭಾವವನ್ನು ಸ್ಫುಟಗೊಳಿಸಲು ಉಪಮೆಗಳನ್ನು ಲೀಲಾಜಾಲವಾಗಿ ಬಳಸಿಕೊಳ್ಳುತ್ತಾರೆ. 'ಜೀವನವೇ ಹಾಗೆ: ಹೊಂಬಿಸಿಲಿನ ಎಳೆಗರು' ಎಂದಾಗ ಅಪೂರ್ವವಾದ ಭಾವಕೋಶವೇ ಪ್ರಕಾಶಿತವಾಗುತ್ತದೆ. 'ಯೌವನವಂತ ಅಯಸ್ಕಾಂತೆ' ಎಂದಾಗ ಕಾಂತೆಯೂ ಅಯಸ್ಕಾಂತವೂ ಸಂಲಗ್ನಗೊಂಡು ಆಕರ್ಷಣೆಯೂ ಯೌವನವೂ ಸೌಂದರ್ಯವೂ ಎಲ್ಲ ಕೂಡಿ ಅಭಿನೀತವಾಗುತ್ತವೆ. 'ವಯಸ್ಸಿನ ಮಹಿಮೆಯೇ ಅಂಥಾದ್ದು; ಅದರ ಪ್ರಭಾವ ಮೈ ಮನಸ್ಸುಗಳ ಮೇಲೆ ಆದ್ಯಂತ ಸುಪ್ರಖರ; ಗುರುತು ನಿಚ್ಚಳ. ಗರಿ ಬಿದ್ದ ಕಚ್ಚುಗಳನ್ನು ಮೈದೋರುವ ತೆಂಗಿನ ಮರದಂತೆ' ಎಂದಾಗ ಮನಸ್ಸಿಗೆ ಗಾಢವಾಗಿ ನಾಟುವ ಚಿತ್ರ ಮೂಡುತ್ತದೆ. 'ಮಾತಿನಲ್ಲಿ ಮಾರ್ಕ್ಸ್, ಮನಸ್ಸಿನಲ್ಲಿ ಮನು', 'ಹೆರಳು ತಳೆಯಲು ಹಂಬಲಿಸದ ಕಂಪಿಲ್ಲದ ಕುಸುಮ', 'ಅರೆ ಬೆಂದ ಅನ್ನದಂಥ ಭಾವನೆ', 'ಅಡೆಯ ಕಾವಿನಲ್ಲಿ ಮಾಯಿಸಿದ ಕಸುಗಾಯಿಯಂಥ ಧಾಟಿ ಧೋರಣೆ', 'ಎಲ್ಲೆಂದರಲ್ಲಿ ಎಡವುಗಲ್ಲಿನಂತೆ',

'ಮಾರ್ಪಟ್ಟಿದ್ದೆಲ್ಲ ಮುತ್ತು, ಗತಕಾಲದ್ದೆಲ್ಲ ಗಾಜು', 'ಬೇಕಾದಂತೆ ಮೋಜು ಮಾಡುವ ಪ್ರವಾಸಿಮಂದಿರವಲ್ಲ, ಅದೊಂದು ಗರ್ಭಗುಡಿ', 'ಕನ್ನಡಿಗಿಂತ ಕಟ್ಟು ದೊಡ್ಡದಾಗಿಬಿಟ್ಟರೆ', 'ಬೆಂಕಿಗೆ ತಾಪದಂತೆ ಸ್ವಭಾವಾಂತರ್ಗತ', 'ಸ್ವಂತ ರೂಹಿಲ್ಲದೆ ಮಂದೆತನದ ಬ್ಯಾ ಬ್ಯಾ'—ಮುಂತಾದ ಮಾತುಗಳು, ಕಡಲ ತಳದಲ್ಲಿ ಕಣ್ಣು ಬಿಟ್ಟಂತೆ ಅದ್ಭುತ ಲೋಕವೊಂದನ್ನೇ ಅನಾವರಣ ಮಾಡುತ್ತವೆ.

ಒಟ್ಟಿನಲ್ಲಿ ಬುದ್ಧಿಗೂ ಭಾವಕ್ಕೂ ಉಲ್ಲಾಸವನ್ನು ಕೊಡುವ, ಮತಿಯನ್ನು ಕೆಣಕಿ ಆಳವಾಗಿ ವಿಚಾರಿಸಲು ಹಚ್ಚುವ 'ವಿಚಾರ ವಿಹಾರ' ಒಂದು ಸಾರ್ಥಕ ಕೃತಿಯಾಗಿದೆ.

ಇವೊತ್ತು ಪತ್ರಿಕೆ ಟಿವಿ ಬಾನುಲಿಗಳ ದ್ವಾರಾ ನಮಗೆ ಥಾಳಾಗಿ ಕಂಗೊಳಿಸಿರುವ ರಾಜಕಾರಣಿ ಶಿಖಾಮಣಿಗಳು ಸಿಂಗಾರದ ಸರಣಿ ಬಲ್ಬುಗಳಂತೆ. ಅವುಗಳ ರಖಂವಾರು ರಂಗು ವಿನ್ಯಾಸಗಳು ಹಾದಿಬೀದಿಗರ ಕಣ್ಣುಗಳನ್ನು ಕೋರೈಸಿ ಸೂರೆಗೊಳ್ಳುತ್ತವೆ. ಉತ್ಸವ ಸಮಾರಂಭ ಮುಗಿಯುವ ತನಕ ಅವುಗಳ ಡೌಲು, ದರ್ಬಾರು. ಸಂತೆ ಮುಗಿದೊಡನೆ ಕಂತೆ ಎತ್ತಬೇಕು; ನೆನೆಗುದಿಗೆ ಸಲ್ಲಬೇಕು. ಮಹಾಪುರುಷರು, ದೇಶಸೇವಾಧುರಂಧರರು ಶಾಶ್ವತ ದೇದೀಪ್ಯ ಮಾನರು, ಅಪ್ರದರ್ಶನ ಜಾಯಮಾನಿಗಳು—ಚಂದ್ರತಾರಾದಿಗಳಂತೆ.

(ರಾಜಕಾರಣಿಗಳು ಮತ್ತು ಮಹಾವ್ಯಕ್ತಿಗಳು)

✧ ✧ ✧

ಮೌಲ್ಯಗಳ ಸ್ವಚ್ಛತೆ ಹಾಗೂ ದೀರ್ಘಕಾಲೀನವಾದ ಆರೈಕೆಗೆ ವರ್ತಮಾನ ಹಿಂದಿನಷ್ಟು ಪ್ರಶಸ್ತವಾಗಿಲ್ಲ. ಸಾವಧಾನ, ವಿವೇಕಾವಿವೇಕ ವಿವೇಚನೆ, ಪರಹಿತಾಕಾಂಕ್ಷೆಯ ಪೀಠವನ್ನು ಭಾವೋದ್ರೇಕ, ಶೀಘ್ರ ಸ್ಖಲನ ಬುದ್ಧಿ, ಸ್ವಲೋಭ ತತ್ಪರತೆಗಳು ಆಕ್ರಮಿಸಿವೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು; ಕೆಲವರು ಹೆಚ್ಚು ಸಮಾನರು—In Democracy all are equal, some are more equal. ಹೀಗಾಗಿ, ಪ್ರಜಾತಂತ್ರದಲ್ಲಿ ಎಲ್ಲವೂ ಅನಿಯಂತ್ರಿತ, ಅತಂತ್ರ: ನಾಲಗೆ, ತಲೆ, ಅಭಿಪ್ರಾಯ, ಸ್ವೇಚ್ಛಾಚಾರ.

(ಪ್ರಜಾಪ್ರಭುತ್ವ ಮತ್ತು ಮೌಲ್ಯಗಳು)



‘ವಿಚಾರ ವಿಹಾರ’ : ಅಂತರಂಗದ ಶೋಧನೆ, ಜೀವನ ಪರಿಷ್ಕಾರ ಆಶಯದ ಲೇಖನಗಳು

♦ ವಿಶ್ವನಾಥ ಹುಲಿಕಲ್
ಕ್ಯುಪರ್ಟಿನೊ (ಕ್ಯಾಲಿಫೋರ್ನಿಯ)

ಕನ್ನಡ ಸಾರಸ್ವತ ಲೋಕದಲ್ಲಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಶಾಶ್ವತ ಸ್ಥಾನವನ್ನು ಅಲಂಕರಿಸಿದ್ದಾರೆ. ಪ್ರಧಾನವಾಗಿ ಕವಿ ಎಂದೇ ಗುರುತಿಸಲ್ಪಟ್ಟಿರುವ ಶ್ರೀಯುತರ ಗದ್ಯ ಸಾಧನೆಯನ್ನು ಪರಿಗಣಿಸದೆ ಇರಲು ಸಾಧ್ಯವಿಲ್ಲ. ಇವರು ಬರೆದ ಹಲವಾರು ಗದ್ಯ ಸಂಕಲನಗಳಲ್ಲಿ ‘ವಿಚಾರ ವಿಹಾರ’ ಎಂಬ ಕೃತಿಯನ್ನು ಪರಿಚಯಿಸಿ, ಪರಿಶೀಲಿಸುವುದು ಈ ಲೇಖನದ ಉದ್ದೇಶ.

ನಿಸಾರರು ಪುಸ್ತಕದ ಪ್ರಾರಂಭದಲ್ಲಿ ಹೇಳಿರುವ ಹಾಗೆ ಈ ಪುಸ್ತಕದಲ್ಲಿನ ಬರಹಗಳು ಪ್ರಧಾನತಃ ವೈಚಾರಿಕ ಮತ್ತು ಸಾಹಿತ್ಯ ವಿಮರ್ಶಾತ್ಮಕ ಸ್ವರೂಪದವು. ಐದು ಲೇಖನಗಳು ವಿಚಾರ ಸಾಹಿತ್ಯದ ಬರಹಗಳಾದರೆ, ಇನ್ನುಳಿದ ಐದು ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟವು.

‘ಕಥೆ ಕೇಳು ಗುಬ್ಬಕ್ಕ, ನಿನ್ನ ವ್ಯಥೆಯ ಕಥೆ ಕೇಳು’ ಈ ಸಂಕಲನದ ಮೊದಲ ಲೇಖನ. ಇದು ಲೇಖಕರ ಸ್ವಾನುಭವಕ್ಕೆ ಬಂದ ಒಂದು ನೈಜ ಘಟನೆಯ ನಿರೂಪಣೆಯಿಂದ ಆರಂಭ ವಾಗುತ್ತದೆ. ದಯನೀಯ ಸ್ಥಿತಿಯಲ್ಲಿದ್ದ ಮುದುಕಿಯೊಬ್ಬಳನ್ನು ಆಸ್ಪತ್ರೆಗೆ ಸೇರಿಸುವೆನೆಂದು ಆಶ್ವಾಸನೆ ನೀಡಿದ ಪೊಲೀಸ್ ಧಫೇದಾರನೊಬ್ಬ, ಆಕೆಯನ್ನು ಸಾಗಿಸಿ ಕಸದ ತೊಟ್ಟಿಯ ಬಳಿ ಎಸೆದು ಹೋಗಿ, ಆಕೆಯ ದುರ್ಮರಣಕ್ಕೆ ಕಾರಣವಾದ ಹೃದಯ ವಿದ್ರಾವಕ ಘಟನೆ ಎಂತಹವರ ಕಣ್ಣಲ್ಲೂ ನೀರು ಬರಿಸುತ್ತದೆ.

ಮಾನವ ತನ್ನ ವರ್ಗದ ಸಹಜೀವಿಯ ಬಗ್ಗೆ ಎಷ್ಟೊಂದು ನಿಷ್ಕರುಣೆಯಾಗಬಲ್ಲ, ಹೃದಯಶೂನ್ಯವಾಗಬಲ್ಲ ಎಂದು ಈ ಘಟನೆ ಎತ್ತಿ ತೋರಿಸುತ್ತದೆ. ಹೀಗೆ, ಸಹಮನುಷ್ಯ ಜೀವಿಯ ಬಗ್ಗೆಯೇ ಇಷ್ಟೊಂದು ಅನಾದರ ತೋರಿಸಿದವನು ಈ ಭೂಮಂಡಲದಲ್ಲಿ ವಾಸವಾಗಿರುವ ಪ್ರಾಣಿ ಪಕ್ಷಿಗಳ ಬಗ್ಗೆ ಅನುಕಂಪೆಯಿಂದ ವರ್ತಿಸಲು ಹೇಗೆ ಸಾಧ್ಯ? ಅತಿಯಾದ ನಾಗರಿಕರಣ ಮತ್ತು ಮಾನವನ ಅನಾದರದಿಂದ ಅವಸಾನದ ಅಂಚಿನಲ್ಲಿರುವ ಗುಬ್ಬಿಯ ಅಳಲನ್ನು ಮನೋಹೃದಯಗಳು ಮರುಗುವಂತೆ ತುಂಬು ಪರಿಣಾಮಕಾರಿಯಾಗಿ ಈ ಲೇಖನದಲ್ಲಿ ನಿರೂಪಿಸಲಾಗಿದೆ. ನಿಸಾರರ ಪ್ರಕೃತಿ ಪ್ರೇಮ ಮತ್ತು ಪ್ರಪಂಚದ ಪ್ರಾಣಿ ಪಕ್ಷಿಗಳ ಬಗೆಗಿನ ಅದಮ್ಯ ಪ್ರೀತಿ ಮತ್ತು ಅನುಕಂಪೆಗಳು ಈ ಲೇಖನದಲ್ಲಿ ಕರುಣಾಪೂರಿತ ಕಳಕಳಿಯಿಂದ ವ್ಯಕ್ತವಾಗಿವೆ. ಅವುಗಳನ್ನು ಉಳಿಸುವುದು, ವರ್ಧಿಸುವುದು ಮನುಷ್ಯನ ಹಿತ ದೃಷ್ಟಿಯಿಂದಲೇ ಪ್ರತಿಯೊಬ್ಬ ಸಾಮಾಜಿಕನ ಗುರುತರ ಜವಾಬ್ದಾರಿ ಎಂಬ ಧ್ವನಿ, ಲೇಖನವನ್ನು ಮುಗಿಸಿದ ಮೇಲೆ ವಾಚಕನಿಗಾದರೆ ಸೋಜಿಗವಲ್ಲ.

'ನಡೀರಿ ಓಗಾನ, ಗಿಡ ನೆಡಾನ' ಸಸ್ಯ ಸಂಪತ್ತನ್ನು ಉಳಿಸಿಕೊಳ್ಳುವ ಆಶಯವುಳ್ಳ ಇನ್ನೊಂದು ಸಮಾಜಪರ ಲೇಖನ. ಅತಿಯಾದ ನಗರಾಭಿವೃದ್ಧಿಯ ದೆಸೆಯಿಂದ ಮನುಷ್ಯರ ಸ್ವಹಿತಕ್ಕಾಗಿ ಬೆಂಗಳೂರಿನಂತಹ ನಗರಗಳಿಂದ ಹೇಗೆ ಕೆರೆ, ಹಳ್ಳ, ಬಯಲು, ತೋಟಗಳೆಲ್ಲಾ ಮಾಯವಾಗಿ, ಆ ಸ್ಥಳದಲ್ಲಿ ನಿರ್ಜೀವವಾದ ಕಾಂಕ್ರೀಟ್ ಕಟ್ಟಡಗಳು, ಅಡ್ಡಾದಿಡ್ಡಿಯಾದ ಆಕಾಶಚುಂಬಿ ಫ್ಲಾಟ್‌ಗಳು ತಲೆ ಎತ್ತುವುದನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಹೀಗೆ ಏಳುವ ಕಿಷ್ಕಿಂಧಾ ಸ್ವರೂಪದ ಅನೇಕ ಮನೆಗಳ ಅಂಗಳದಲ್ಲಿ ಪೌರರು ತೆಂಗಿನ ಮರಗಳನ್ನು ಏಕೆ ವಿಶೇಷವಾಗಿ ಬೆಳೆಸುತ್ತಿದ್ದಾರೆ? ಎಂದು ಲೇಖಕರು ಚಕಿತರಾಗಿದ್ದಾರೆ. ವಿಷಯದ ಕೂಲಂಕಷ ವಿಶ್ಲೇಷಣೆಯಿಂದ, ಈ ಪ್ರವೃತ್ತಿಗೆ ಆರ್ಥಿಕ ಲಾಭವೇ ಏಕಮೇವ ಕಾರಣ ಎಂಬ ಕಟು ಸತ್ಯವನ್ನು ಕಂಡುಕೊಂಡಿದ್ದಾರೆ. ನೈಸರ್ಗಿಕ ಸಂಪತ್ತಿನ ದುರುಪಯೋಗ ಹಾಗೂ ಮಾನವ ಅದನ್ನು ಕೇವಲ ತನ್ನ ಲಾಭಕ್ಕಾಗಿ ಬಳಸುತ್ತಿರುವುದರ ವಿರುದ್ಧ ಲೇಖಕರು ದನಿ ಎತ್ತಿದ್ದಾರೆ. ಬೆಂಗಳೂರಿನ ಸಮೀಪದ ಹುಲಿಕಲ್-ಕುದೂರು ನಡುವಣ ೫ ಕಿ.ಮೀ. ರಸ್ತೆಯ ಎರಡು ಬದಿಗಳಲ್ಲೂ ೨೮೪ ಆಲದ ಸಸಿಗಳನ್ನು ನೆಟ್ಟು, ದೂರದಿಂದ ನೀರನ್ನು ಹೊತ್ತು ತಂದು ತಿಂಗಳಾನುಗಟ್ಟಲೆ ಅವುಗಳಿಗೆ ಎರೆದು ಈಗ ಹೆಮ್ಮರವಾಗಿ ಮಾಡಿರುವ ಮಹಾ ಮಹಿಳೆ ಸಾಲು ಮರದ ತಿಮ್ಮಕ್ಕನ ಕರ್ತವ್ಯಪ್ರಜ್ಞೆಯನ್ನು ಪರೋಪಕಾರ ರೂಪದ ಜನ ಹಿತವನ್ನು ಮೆರೆಯುವ ಒಂದು ನಿದರ್ಶನವೆಂದು ಉಲ್ಲೇಖಿಸಿರುವುದು ಪ್ರಕೃತ ಸಂದರ್ಭದಲ್ಲಿ ಎಷ್ಟೊಂದು ಸಮಂಜಸವಾಗಿದೆ! ನಿಸರ್ಗದ ಉಳಿವಿಲ್ಲದಿದ್ದರೆ ಮಾನವರ ಅಳಿವು ಶತಸ್ಸಿದ್ಧವೆಂಬ ತಥ್ಯವನ್ನು ನಿಸಾರರು ಮನಃಸ್ಪರ್ಶಿಯಾಗಿ ನಿರೂಪಿಸಿದ್ದಾರೆ.

'ಹುದ್ದೆ ಮುದ್ದೆ ನಿದ್ದೆ: ಬದುಕು ಇಷ್ಟೇನೆ ಪೆದ್ದ?' ಎಂಬ ಲೇಖನದಲ್ಲಿ ನಿಸಾರ್ ಅವರು ಜೀವನದಲ್ಲಿ ಸಾರ್ಥಕತೆಯನ್ನು ಸಾಧಿಸುವ ಬಗ್ಗೆ ಉಪಯುಕ್ತ ಚಿಂತನೆಯನ್ನು ನಡೆಸಿದ್ದಾರೆ. ಜೀವನದಲ್ಲಿ ನಿದ್ದೆ ಬಹಳ ಆವಶ್ಯಕ ಹಾಗೂ ಅನಿವಾರ್ಯ. ದೈನಂದಿನ ಚಟುವಟಿಕೆಗಳ ಅನಂತರದ ಈ ದೀರ್ಘ ವಿರಾಮ ನಮ್ಮನ್ನು ಮಾರನೆಯ ದಿನಕ್ಕೆ

ಲವಲವಿಕೆ ಉತ್ಸಾಹಗಳಿಂದ ಸಿದ್ಧಗೊಳಿಸುತ್ತದೆ. ಆದರೆ ಸಮಾಜದಲ್ಲಿ ಉದರಂಭರಣಕ್ಕೆ ಏಗಾಟ ಮಾಡಬೇಕಾದ ಅಗತ್ಯವಿಲ್ಲದೆ ಸುರಕ್ಷಿತವಾದ ಸುಸ್ಥಿತಿಯಲ್ಲಿರುವ ಸ್ಥಿತಿವಂತರು ಹೇಗೆ ಸಮಯದ ಮತ್ತು ಹಣದ ದುರುಪಯೋಗ ಮಾಡುತ್ತಾರೆ ಎಂಬುದರ ಬಗ್ಗೆ ಈ ಬರಹದಲ್ಲಿ ವಿವೇಚಿಸಲಾಗಿದೆ. ವಿಹಾರ, ವಿಲಾಸಗಳಿಗಷ್ಟೇ ತಮ್ಮನ್ನು ತೊಡಗಿಸಿಕೊಂಡು ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವವರು ಇನ್ನು ಮುಂದೆಯಾದರೂ ಸಮಷ್ಟಿ ಸಮಾಜದ ಒಳಿತಿಗಾಗಿ ಕೆಲಸ ಮಾಡುವಂತಾಗಲಿ ಎಂಬ ಆಶಯದೊಂದಿಗೆ ಲೇಖನ ಮುಕ್ತಾಯವಾಗುತ್ತದೆ.

'ಅನಿರೀಕ್ಷಿತ ಪತ್ರ: ಫಲಿಸದ ಪ್ರೇಮ ಮತ್ತು ಸ್ನೇಹ' ಎಂಬ ಲೇಖನದಲ್ಲಿ ತಮ್ಮ ಜೀವನದಲ್ಲಿ ಘಟಿಸಿದ ಘಟನೆಯೊಂದನ್ನು ನೆನೆಸಿಕೊಂಡು ನಿಸಾರರು ಕಥೆಯ ರೂಪದಲ್ಲಿ ಸ್ವಾರಸ್ಯಕರವಾಗಿ ಬರೆದಿದ್ದಾರೆ. ಶ್ರೀಯುತರು ಶಿವಮೊಗ್ಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾಗ, ಅವರಿಗೆ ಇಲಸ್ಟ್ರೇಟೆಡ್ ವೀಕ್ಲಿ (Illustrated Weekly) ಪತ್ರಿಕೆಯ ಸಂಪಾದಕರಿಂದ ಪ್ರೇಮ ಮತ್ತು ಸ್ನೇಹದ ಬಗ್ಗೆ ಇಂಗ್ಲಿಷಿನಲ್ಲಿ ಲೇಖನವೊಂದನ್ನು ಬರೆದುಕೊಡುವಂತೆ ವಿನಂತಿಸಿಕೊಂಡ ಪತ್ರವೊಂದು ಬಂದಿತ್ತು. ಆಗ ಅವರಿಗೆ 'ಸ್ವರ್ಗಕ್ಕೆ ಮೂರೇ ಗೇಣು' ಎನ್ನುವಷ್ಟು ಸಂತೋಷವಾಯಿತು. ಆ ಆಹ್ವಾನವನ್ನೇ ಮನ್ನಣೆ ಎಂದು ಭಾವಿಸಿ, ಮೂರು ವಾರಗಳ ಕಾಲ ಅದರ ತಯಾರಿಯಲ್ಲಿ ಮಗ್ನರಾಗಿ ಲೇಖನವನ್ನು ಸಿದ್ಧಪಡಿಸಿದರು. ಆದರೆ ಆ ದಿನ ದುರದೃಷ್ಟವಶಾತ್ ಅವರ ತಂದೆಯನ್ನು ವೆಲ್ಲೂರಿನ ಆಸ್ಪತ್ರೆಗೆ ಸೇರಿಸಲಾಗಿದೆ ಎಂಬ ತಂತಿ ಸಂದೇಶ ಬಂದದ್ದರಿಂದ, ಆ ಲೇಖನವನ್ನು ಮರುದಿನ ಅಂಚೆಯಲ್ಲಿ ಪೋಸ್ಟ್ ಮಾಡಬೇಕೆಂದು ಅವರ ನಂಬಿಕಸ್ಥ ರಾಮಣ್ಣನಿಗೆ ವಿನಂತಿಸಿಕೊಂಡು, ಅವರು ಕೂಡಲೇ ವೆಲ್ಲೂರಿಗೆ ಧಾವಿಸುತ್ತಾರೆ. ಅನಂತರ ಗುಮಾಸ್ತ ರಾಮಣ್ಣ ಆ ಪತ್ರವನ್ನು ರವಾನೆ ಮಾಡಿರುವುದಾಗಿ ತಿಳಿಸುತ್ತಾನೆ. ಸರಿ, ಆ ಲೇಖನ ಪ್ರತಿಷ್ಠಿತ ವಾರ ಪತ್ರಿಕೆಯಲ್ಲಿ ಪ್ರಕಟವಾಗುವುದನ್ನು ಕುತೂಹಲದಿಂದ ಎದುರು ನೋಡುವ ಸರದಿ ಲೇಖಕರದಾಗುತ್ತದೆ. ಆದರೆ ನಾಲ್ಕೈದು ತಿಂಗಳು ಕಳೆದರೂ ಅವರ ಲೇಖನ ಪ್ರಕಟವಾಗಲೇ ಇಲ್ಲ. ಇದಾದ ಆರೇಳು ತಿಂಗಳ ತರುವಾಯ ಮಡಿಕೇರಿಗೆ ವರ್ಗವಾಗಿ ಹೋದ ರಾಮಣ್ಣನಿಂದ ಕಾಗದ ಬಂದಿತು. ಅದರಲ್ಲಿ ಅವನ ತಪ್ಪೊಪ್ಪಿಗೆ ಇತ್ತು: ಆ ಲೇಖನವನ್ನು ತಾನು ಕಳೆದುಬಿಟ್ಟು, ತಮ್ಮ ಕೋಪಕ್ಕೆ ಪಾತ್ರನಾಗಬಯಸದೆ, ಅದನ್ನು ಕಳಿಸಿಬಿಟ್ಟಿರುವುದಾಗಿ ಸುಳ್ಳು ಹೇಳಿದ ಬಗ್ಗೆ ರಾಮಣ್ಣ ಬರೆದಿದ್ದ. ಕ್ಷಮಾಯಾಚನೆಯೊಂದಿಗೆ ಪತ್ರವನ್ನು ಮುಗಿಸಿದ್ದ. ಹೀಗೆ, ಈ ಘಟನೆಯಿಂದ 'ಜೀವನವೆಂಬುದು ಎಂತಹ ಆಶ್ಚರ್ಯಕರ ಅನಿರೀಕ್ಷಿತಗಳ, ಅಘಟಿತ ಆಗುಹೋಗುಗಳ, ಆಕಸ್ಮಿಕಗಳ ಅಕ್ಷಯದ ಆಗರ' ಎಂದು ಲೇಖಕರು ಚಕಿತರಾಗಿದ್ದಾರೆ.

'ವಯಸ್ಸೆಂಬ ಶಿಕ್ಷಕ' ಎಂಬ ಲೇಖನದಲ್ಲಿ ವಯಸ್ಸಾಗುವ ಪ್ರಕ್ರಿಯೆಯ ಬಗ್ಗೆ ಚಿಂತನೆಯಿದೆ. ಬಾಲ್ಯ, ಯೌವನ, ಮಧ್ಯ ವಯಸ್ಸು ಮತ್ತು ಮುದಿತನಗಳೆಂಬ ಜೀವಿತ ಕಾಲದ ವಿವಿಧ ವಯೋಮಾನದ ಘಟ್ಟಗಳ ಸ್ಥೂಲ ಮಾನಸಿಕ ವಿಶ್ಲೇಷಣೆ ಇದರಲ್ಲಿ ಸಿಗುತ್ತದೆ. ವಯಸ್ಸಿನ ಮಹಿಮೆಯ ವಿವಿಧ ಪ್ರಭಾವಗಳ ಸ್ಥೂಲ ಅವಲೋಕನ ಸಹ

ದೊರೆಯುತ್ತದೆ. ಕೆಲವರು ೩೦ ವರ್ಷ ವಯಸ್ಸಿಗೇ ಉತ್ಸಾಹಹೀನರಾಗಿ ವರ್ತಿಸಿದರೆ, ಇನ್ನು ಕೆಲವರು ವೃದ್ಧಾಪ್ಯದಲ್ಲೂ ಸಹ ಅಮಿತವಾದ, ಅದಮ್ಯವಾದ ಜೀವನೋತ್ಸಾಹವನ್ನು ಪ್ರದರ್ಶಿಸುತ್ತಾರೆ. ವೃದ್ಧಾಪ್ಯದಲ್ಲಿ ಎಂತಹ ಸಮಂಜಸವಾದ ಜೀವನ ದೃಷ್ಟಿಯನ್ನು ಬೆಳೆಸಿ ಕೊಳ್ಳಬೇಕೆಂಬ ಆಶಯದೊಂದಿಗೆ ಲೇಖನ ಮುಕ್ತಾಯವಾಗುತ್ತದೆ.

'ಡಿ.ವಿ.ಜಿ. ಚಿತ್ರಿಸಿದ 'ಹಾಸ್ಯ ಪ್ರಸಂಗಗಳು' ' ಎಂಬುದು ಡಿ.ವಿ.ಜಿ. ಅವರು ಬರೆದ 'ಜ್ಞಾಪಕ ಚಿತ್ರಶಾಲೆ'ಯಿಂದ ಆಯ್ದ ಪ್ರಸಂಗಗಳನ್ನು ನಿರೂಪಿಸುವ ದೀರ್ಘ ಬರಹ. ಅವರ ಸತ್ವಶಾಲಿ ಬರಹವನ್ನು ಪರಿಚಯಿಸುವಂತಹ ಒಂದು ಪ್ರಬುದ್ಧ ವಿಮರ್ಶಾ ಲೇಖನ. 'ಜ್ಞಾಪಕ ಚಿತ್ರಶಾಲೆ'ಯ ಎಂಟು ಸಂಪುಟಗಳು ಡಿ.ವಿ.ಜಿ.ಯವರ ವ್ಯಾಪಕ ಜೀವನಾನು ಭಾವಕ್ಕೆ ಕೈಗನ್ನಡಿ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಮಹತ್ವವುಳ್ಳ ಗ್ರಂಥ ಸಮುಚ್ಚಯ. ಈ ಗ್ರಂಥದಿಂದ ಅನೇಕ ಹಾಸ್ಯ ಪ್ರಸಂಗಗಳನ್ನು ಆರಿಸಿ, ನಿಸಾರರು ತಮ್ಮ ವ್ಯಾಖ್ಯಾನದೊಂದಿಗೆ ಅವುಗಳನ್ನು ಸುಂದರವಾಗಿ ಪೋಣಿಸಿದ್ದಾರೆ. ಡಿ.ವಿ.ಜಿ.ಯವರ ಗದ್ಯರೂಪದ ಈ ಗ್ರಂಥದ ಬಗ್ಗೆ ನಿಸಾರರು ಸೊಗಸಾಗಿ ವಿಮರ್ಶಿಸಿದ್ದಾರೆ. ಗದ್ಯ ಬರವಣಿಗೆ ಯನ್ನು ಹೇಗೆ ವಿಮರ್ಶಿಸಬೇಕೆಂಬುದರ ಬಗ್ಗೆ ಈ ಲೇಖನ ಮಾದರಿಯಾಗಿ ನಿಲ್ಲುತ್ತದೆ. ವಿಮರ್ಶೆ ಯಾವಾಗ ಓದಿದ ಗ್ರಂಥವನ್ನು ಮೀರಿ ನಿಲ್ಲುತ್ತದೆಯೋ, ಆಗಲೇ ಅದಕ್ಕೆ ಅನುರೂಪವಾದ ಬೆಲೆ ಬರುವುದು. ಈ ದೃಷ್ಟಿಯಿಂದ ನಿಸಾರರ ಈ ವಿಮರ್ಶಾತ್ಮಕ ಲೇಖನ ಮೌಲಿಕವಾಗಿದೆ.

'ಬೈ ವಿಮರ್ಶೆ, ಜೈ ವಿಮರ್ಶೆ' ಎಂಬ ಲೇಖನ ವಿಮರ್ಶೆಯ ಪರಿಕಲ್ಪನೆಗೆ ಸಂಬಂಧಿಸಿದೆ. ವಿಮರ್ಶೆ ಮಾಡುವಾಗ ಅದು ಲೇಖಕನಿಗೆ ಬದ್ಧವಾಗಿರಬೇಕೆ? ಅಥವಾ ಕೃತಿಗೆ ನಿಷ್ಠವಾಗಿರಬೇಕೆ? ಎಂಬ ಮೂಲಭೂತ ಪ್ರಶ್ನೆಯನ್ನು ಅದು ಎತ್ತುತ್ತದೆ. ನಿಜವಾದ ವಿಮರ್ಶಕ ಹೇಗೆ ಕೃತಿಯ ವಿಮರ್ಶೆಯನ್ನು ಮಾಡಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡಲಾಗಿದೆ. ಸತ್ವಯುತ ಗ್ರಂಥಗಳನ್ನು ಆಧರಿಸಿ ವಿವೇಚನಾಯುಕ್ತವಾದ ವಿಮರ್ಶೆ ಮಾಡುವುದರ ಬದಲು, ಸಾಮಾಜಿಕವಾಗಿ ವರ್ಚಸ್ಸಿನಿಂದ ಕೂಡಿದ ಲೇಖಕರ ಕೃಪಾಕಟಾಕ್ಷ ವನ್ನು ಅಪೇಕ್ಷಿಸುವಂತಹ ವಿಮರ್ಶೆಯಿಂದ ಹೇಗೆ ಗುಂಪುಗುಳಿತನ ಜನ್ಮತಾಳುತ್ತದೆ ಮತ್ತು ಅಂತಹ ವಿಮರ್ಶೆಯಿಂದ ಆಗುವ ಅಪಾಯಗಳೇನು ಎಂಬುದನ್ನು ಸಹ ಇದರಲ್ಲಿ ಸೂಚಿಸಲಾಗಿದೆ. ಕಾಲಧರ್ಮ ಬದಲಾದಂತೆ ವಿಮರ್ಶೆಯ ಮಾನದಂಡಗಳೂ ಸಹ ಬದಲಾಗಬೇಕು ಎಂಬುದನ್ನು ಒಪ್ಪಿ ಹೇಳಲಾಗಿದೆ. ಕೊನೆಯಲ್ಲಿ ಪಾಶ್ಚಾತ್ಯ-ಭಾರತೀಯ ವಿಮರ್ಶಾ ತತ್ವಗಳ ತುಲನೆ ಸಹ ನಡೆದಿದೆ. ಅವೆರಡನ್ನು ಯಾವ ರೀತಿ ಬದುಕಿಗೆ ಅಳವಡಿಸಿಕೊಳ್ಳಬಹುದೆಂಬ ಸಾಧ್ಯತೆಯನ್ನೂ ನಿಸಾರರು ವಿವೇಚಿಸಿದ್ದಾರೆ.

'ಸಾಹಿತ್ಯದ ಸತ್ವವರ್ಧಕಗಳು' ಎಂಬ ಲೇಖನದಲ್ಲಿ ಸತ್ವಯುತವಾದ ಬರವಣಿಗೆ ಹೇಗಿರಬೇಕೆಂಬುದರ ಬಗ್ಗೆ ಪರಾಮರ್ಶೆ ನಡೆದಿದೆ. ಇಂದಿನ ಗದ್ಯರಚನಕಾರರ ಕೃತಿಗಳಲ್ಲಿ ಕಾಣಬರುವ ಕುಂದು ಕೊರತೆಗಳೇನು? ಎಂಬುದನ್ನು ಪರಿಶೀಲಿಸುತ್ತಲೇ ಇಂದಿನ ಗದ್ಯ ಲೇಖಕರಿಗೆ ಕಿವಿಮಾತನ್ನು ಸಹ ಹೇಳಲಾಗಿದೆ: ಸದ್ಗ್ರಂಥಗಳ ಸತತಾಧ್ಯಯನ ಮತ್ತು

ಏಕಾಂತದಲ್ಲಿ ಚಿಂತನ, ಮನನ. ಯಶಸ್ಸನ್ನು ಬೆನ್ನು ಹತ್ತುವ ಬದಲು, ಶ್ರೇಯಸ್ಸನ್ನು ಅರಸಿಕೊಂಡು ಹೋಗುವುದು ಒಳ್ಳೆಯ ಸಾಹಿತ್ಯಕ, ಸಾತ್ವಿಕ ಮೌಲ್ಯ ಎಂದು ವಾದ ಮಂಡನೆ ಮಾಡಲಾಗಿದೆ. ಸೃಜನಶೀಲ ಸಾಹಿತ್ಯಕ್ಕೆ ಮೂಲಧಾತು ಸ್ವಾನುಭವವೇ. ಅಧ್ಯಯನ, ಚಿಂತನೆಗಳೇನಿದ್ದರೂ ಸ್ವಾನುಭವಕ್ಕೆ ಪೋಷಕವೇ ಹೊರತು ಪರ್ಯಾಯವಲ್ಲ ಎಂಬುದರೊಂದಿಗೆ ಲೇಖನವನ್ನು ನಿಸಾರರು ಮುಗಿಸುತ್ತಾರೆ. ಇದನ್ನು ಸಮರ್ಥಿಸುವಂತೆ ನಿಸಾರರು ಉಣಿಸಿಗೆ ಬದಲಾಗಿ ವಿಟಮಿನ್‌ಅನ್ನು ಮಾತ್ರ ಸೇವಿಸಲಾದೀತೆ? ಎಂದು ಪ್ರಶ್ನಿಸುತ್ತಾರೆ.

'ಆಶಯ ಮತ್ತು ಅಭಿವ್ಯಕ್ತಿ' ಎಂಬ ಲೇಖನದಲ್ಲಿ ತನ್ನನ್ನು ತಾನು ಪ್ರಕಟಗೊಳಿಸಿಕೊಳ್ಳಬೇಕೆನ್ನುವ ತೀವ್ರ ತುಡಿತ ಹಾಗೂ ಆ ಪ್ರಕಟನೆಗೆ ಅಗತ್ಯವಾದ ಮಾಧ್ಯಮದ ಸಂಬಂಧದ ಬಗ್ಗೆ ವಿವೇಚಿಸಲಾಗಿದೆ. ಇಂತಹ ಅಭಿವ್ಯಕ್ತಿಗೆ ಸಾಹಿತ್ಯ ಒಂದು ಮಾಧ್ಯಮವಾದರೆ, ಕಲೆ, ಸಂಗೀತ, ಶಿಲ್ಪ ಇದೇ ರೀತಿಯ ಇತರ ಮಾಧ್ಯಮಗಳು. ಆದರೆ ಅಪೇಕ್ಷಿತವಾದ ಆಶಯ ಯಥಾವತ್ತಾಗಿ ಮಾಧ್ಯಮದಲ್ಲಿ ಪ್ರಕಟವಾಗುತ್ತದೆಂಬ ಧೈರ್ಯ ಎಂತಹ ಕುಶಲಿಯಾದ ಸೃಜನಕರ್ತನಿಗೂ ಇರಲಾರದು. ಇದಕ್ಕೆ ಕಾರಣ, ವ್ಯಕ್ತಿಯ ಅಭಿವ್ಯಕ್ತಿಯಲ್ಲಿನ ಅಸಾಮರ್ಥ್ಯ ಮತ್ತು ಮಾಧ್ಯಮದ ಇತಿ-ಮಿತಿಗಳು. ಇವನ್ನು ವಿವರವಾಗಿ, ಸಮಂಜಸವಾಗಿ ಈ ಲೇಖನದಲ್ಲಿ ವಿವೇಚಿಸಲಾಗಿದೆ.

'ಸಾಹಿತ್ಯದ ನೆಲೆ-ಬೆಲೆ' ಎಂಬ ಲೇಖನದಲ್ಲಿ ಸಾಹಿತ್ಯ ಕೃತಿ ಸೃಷ್ಟಿಯಾಗುವ ಪ್ರಕ್ರಿಯೆ ಹಾಗೂ ಹೀಗೆ ಜನ್ಮ ತಾಳಿದ ಕೃತಿ ಸರ್ವ ಕಾಲಿಕವಾಗಿ, ಸರ್ವದೇಶಗಳಲ್ಲೂ ಮೆಚ್ಚುಗೆ-ಜನಾದರ ಗಳಿಸಬಲ್ಲುದಾಗಿ ರೂಪುಗೊಂಡಾಗ ಅದರ ವಿಶೇಷಗಳ ಬಗ್ಗೆ ಪರ್ಯಾಲೋಚಿಸಲಾಗಿದೆ. ಸಾಮಾನ್ಯವಾಗಿ ಒಂದು ಸಾಹಿತ್ಯ ಕೃತಿಯಿಂದ ಅದರ ವಾಚಕನಿಗೆ ಮನೋರಂಜನೆಯ ನಲಿವು ಮತ್ತು ಬುದ್ಧಿ ಪ್ರಚೋದನೆಯ ತಿಳಿವು ಲಭ್ಯವಾಗಬೇಕು. ಇಂತಹ ಅನುಭವ ಲೇಖಕನಿಗೇ ಮೊದಲು ಆಗದಿದ್ದರೆ, ಅದು ಅವನ ಕೃತಿಯ ಮೂಲಕ ಓದುಗನಿಗೆ ಆಗಲು ಸಾಧ್ಯವಿಲ್ಲ. ಅದೇ ರೀತಿ ಇಂದಿನ ನಮ್ಮ ಸಾಮಾಜಿಕ ಬಾಳ್ವೆಯಲ್ಲಿ ಆಗುತ್ತಿರುವ ಮೌಲ್ಯ ಪತನ ಸಾಹಿತ್ಯದಲ್ಲೂ ಬಿಂಬಿತವಾಗುತ್ತಿದೆ. ಸಾಹಿತ್ಯ ಕೃತಿಯ ಸೃಷ್ಟಿಯಾಗುವುದು ಲೋಕಾನುಭವ ತಾನು ಪ್ರತಿಭೆಯ ಕಾವಿನ ಮೂಲಕ ಪರಿಷ್ಕೃತಗೊಂಡಾಗ ಮಾತ್ರ. ಇಂತಹ ಅನುಭವ ಸ್ವಾನುಭವವಾಗಿರಬಹುದು ಅಥವಾ ಬೇರೆಯವರ ಅನುಭವವಾಗಿರಬಹುದು. ಖಾಸಗಿ ಅನುಭವವನ್ನು ಸಾರ್ವಜನಿಕ ಅನುಭವವನ್ನಾಗಿ ಅರ್ಥೈಸುವ ಪ್ರತಿಭೆಯೇ ಸಾಹಿತ್ಯ ರಚನೆಗೆ ಮೂಲ ಧಾತು. ಹೀಗಾಗಿ ಸತ್ವಶಾಲಿ ಸಾಹಿತ್ಯದಲ್ಲಿ ಸ್ಥಳೀಯತೆ ಸಕಾಲಿಕತೆಗಳು ಸಾರ್ವದೇಶೀಯತೆ ಮತ್ತು ಸಾರ್ವಕಾಲಿಕತೆಗಳನ್ನು ಬಿಂಬಿಸುವಂತಿರುತ್ತವೆ. ಹೀಗೆ, ಇಂತಹ ಅಮೋಘ ಚಿಂತನೆಗಳನ್ನು ಈ ಲೇಖನ ತರ್ಕಬದ್ಧವಾಗಿ ಮಂಡಿಸುತ್ತದೆ.

ಇನ್ನು ಈ ಸಂಕಲನದ ಬಗ್ಗೆ ಸಮಗ್ರ ವಿಮರ್ಶೆ ಮಾಡುವ ಮೊದಲು, ನಿಸಾರರು ವಿಚಾರಾತ್ಮಕ ಮತ್ತು ವಿಮರ್ಶಾತ್ಮಕ ಲೇಖನಗಳ ತುಲನೆ ಮಾಡಿದಾಗ ನನಗನ್ನಿಸಿದ ಒಂದು ಅಂಶ: ನಿಸಾರರ ಗದ್ಯ ಸಮರ್ಥವಾಗಿದೆ, ಪದ ಸಂಪತ್ತು ಶ್ರೀಮಂತವಾಗಿದೆ ಎಂಬ ಬಗ್ಗೆ ಎರಡು ಮಾತಿಲ್ಲ. ನಿಸಾರರ ವಿಮರ್ಶಾತ್ಮಕ ಲೇಖನಗಳು ಅವರ ಸ್ವಾನುಭವ, ದೀರ್ಘ

ಅಧ್ಯಯನ ಮತ್ತು ಚಿಂತನಶೀಲತೆಯಿಂದಾಗಿ ಬಹಳ ಸತ್ವಪೂರ್ಣವಾಗಿವೆ, ಪರಿಣಾಮಕಾರಿಯಾಗಿವೆ. ಆದರೆ ಈ ಕೃತಿಯ ಅವರ ವಿಚಾರಾತ್ಮಕ ಲೇಖನಗಳಲ್ಲಿ ಗಹನವಾದ ವಿಚಾರಗಳನ್ನೇನೂ ಮಂಡಿಸಿಲ್ಲ. ಪ್ರಜ್ಞಾಪೂರ್ಣ ನಾಗರಿಕನೊಬ್ಬ ತಾಳುವಂತಹ ನಿಲವನ್ನು ತಳೆದು, ಅಂತಹ ಬಹು ಚರ್ಚಿತ ವಿಷಯಗಳನ್ನೇ ಸಮರ್ಥವಾಗಿ ಗದ್ಯರೂಪದಲ್ಲಿ ತೋಡಿಕೊಂಡಿದ್ದಾರೆ.

ಕವಿಯಾಗಿ ಎತ್ತರದ ಸ್ಥಾನವನ್ನು ಗಳಿಸಿರುವ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಕಾವ್ಯದಲ್ಲಿ ಹೇಗೋ, ಹಾಗೆಯೇ ಗದ್ಯದ ರಚನೆಗಳಲ್ಲೂ ಸಹ ಸ್ವವಿಶಿಷ್ಟತೆಯ ಅಗ್ಗಳಿಕೆಯನ್ನು ಮೆರೆದಿದ್ದಾರೆ. ಅವರ ಗದ್ಯ ಭಾಷೆಗೆ ತನ್ನತನದ ಅತಿಶಯತೆಯಿದೆ.

ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ವಿಧಾನದಲ್ಲಿ ವಿಚಾರ ಭಾವಗಳ ಉತ್ಕಟತೆ ಮತ್ತು ಅವುಗಳ ನಡುವಿನ ಸಾಮರಸ್ಯದಲ್ಲಿ 'ನಿಸಾರ್‌ತನ'ದ ಛಾಪು ಎದ್ದು ಕಾಣುತ್ತದೆ. ಪ್ರಖರ ಚಿಂತನೆಯ ನಡುವೆಯೂ ಪ್ರೌಢ ಆಲೋಚನೆಗಳ ಮಂಡನೆಯ ಸಮಯದಲ್ಲೂ ಹೃದಂಶವನ್ನು ಕಾಪಾಡಿಕೊಳ್ಳುವ ನಿಸಾರರ ಗದ್ಯ ಅಪೂರ್ವ ಮೆರುಗನ್ನು ಮೈಗೂಡಿಸಿಕೊಂಡಿದೆ.

ಇಂತಹ ವಿಚಾರಗಳು ಕೇವಲ ಪುಸ್ತಕದ ಓದಿನಿಂದ ರೂಪಿತವಾದವಲ್ಲ. ಅವುಗಳಿಗೆ ಸ್ವಾನುಭವ, ಸ್ವಮನನದ ಗಟ್ಟಿ ಆಧಾರವಿದೆ. ಎಂದೇ ಅವು ವಿಮರ್ಶಕರನ್ನು ತಣಿಸುವಂತೆ, ಪ್ರಬುದ್ಧ ವಾಚಕ ವರ್ಗಕ್ಕೂ ಸಮ್ಮತವಾಗುತ್ತವೆ.

ಅಂತರಂಗ ಶೋಧನೆ ಮತ್ತು ಜೀವನ ಪರಿಷ್ಕಾರ ನಿಸಾರರ ಗದ್ಯಪದ್ಯಗಳೆರಡರ ಸಮಾನ ಲಕ್ಷಣವೆನ್ನಿಸುತ್ತದೆ. ಯಾವುದೇ ಪಂಥ, ರಿವಾಜು, ಮತದ ಇರುಕಟ್ಟಿನಲ್ಲಿ ಸಂಕುಚಿಸಿಕೊಳ್ಳಲು ಒಪ್ಪದ ಲೇಖಕರ ನಿರ್ಮುಕ್ತ ಹಾಗೂ ಸರ್ವಗ್ರಾಸಿ ಮನಸ್ಸಿಗೆ ಸಾಕ್ಷ್ಯ ಸಾರುತ್ತವೆ—'ವಿಚಾರ ವಿಹಾರ'ದಲ್ಲಿನ ಬರಹಗಳು.

ಪುರಾತನತೆಯನ್ನು ವರ್ತಮಾನದ ಗಳಿಗೆಯಲ್ಲಿ ಕವಿ ಸಾಕ್ಷಾತ್ಕರಿಸಿಕೊಳ್ಳುವುದು ಇಬ್ಬಗೆಯ ಪ್ರಜ್ಞೆಯ ಮೂಲಕ: ವೈಜ್ಞಾನಿಕ ಮತ್ತು ಧಾರ್ಮಿಕ. ಇವೆರಡೂ ಕವಿಯ ಅಂತಶ್ಚಿತ್ತದ ಆಳದಲ್ಲಿ ಪ್ರಾಚೀನತೆಯೊಡನೆ ಹಾಸುಹೊಕ್ಕನ್ನು ನಿರ್ಮಿಸಿ ಸಂಜೀವಿನಿಯಾಗುವಂಥವು. ಪ್ರಾಚ್ಯ ಸತ್ತ್ವವೇ ಕಾಲದ ಎರಕದಲ್ಲಿ ಅನೇಕ ರೂಪಿಯಾಗಿ, ಜೀವದ ನವೋನವ ನಮೂನೆಯಾಗಿ ತಯಾರಾಗುತ್ತಿರುವ ತಥ್ಯ ಭಾವಗೋಚರವಾಗುವುದು ಜೀವ ವಿಕಾಸದ ಹಲವು ಘಟ್ಟಗಳ ಹಾಗೂ ವಿಧಿ ಆಚರಣೆಗಳ ಗಾಢ ಪ್ರಜ್ಞೆಯಿಂದ. ಮನುಷ್ಯನಿಗೆ ಈ ಪ್ರಜ್ಞೆ ಪ್ರಾಪ್ತವಾದಾಗ, ಕ್ಷಣದ ಮಿತಿಯಲ್ಲಿ ಶಾಶ್ವತ ಹಾದು ಬರುವ, ಪರಿಮಿತ ಬಾಳಿಗೆ ಅಸೀಮ ಕಾಲ ಬೆಸೆದುಕೊಂಡಿರುವ ಅನುಭವ ಪ್ರಬಲಿಸಬಹುದು.

(ಅನುಭವದ ಹೆಚ್ಚುಗಾರಿಕೆ)



‘ಸ-ರಸೋಕ್ತಿಗಳ ಸಂಗಾತಿ’ : ಧನಾತ್ಮಕ ಮೌಲ್ಯಗಳ ಶ್ರದ್ಧೆಯ ಜೀವಸ್ವರ

♦ ಎಸ್. ಆರ್. ರಾಮಸ್ವಾಮಿ

ನಿಸಾರರು ನಾಲ್ಕು ದಶಕಗಳಿಂದ, ಎಂದರೆ ಅವರ ಮೊದ ಮೊದಲ ಕವನಗಳು ಹುಟ್ಟಿದ ಕಾಲದಿಂದ ನನಗೆ ಪ್ರೀತಿಪಾತ್ರರು. ಹೀಗೆ ಅವರಲ್ಲಿ ನನಗೆ ಪಕ್ಷಪಾತ ಬೆಳೆದುಬಂದಿದೆಯೆಂದು ಮೊದಲೇ ಒಪ್ಪಿಬಿಡುವೆ. ಈ ಹಿನ್ನೆಲೆಯಲ್ಲಿ, ನಿಸಾರರ ಗದ್ಯ-ಪದ್ಯ ಬರಹಗಳಲ್ಲಿ ನಾನು ಗುಣಾಂಶಗಳನ್ನೇ ಎತ್ತಿ ಆಡುತ್ತೇನೆಂದು ಆಪಾದಿಸಿದಲ್ಲಿ ಅದನ್ನು ನಮ್ರವಾಗಿ ಸ್ವೀಕರಿಸಿ ತಲೆ ಬಾಗುವೆನಷ್ಟೆ. ಈ ಮಾನಸಿಕ ಒಡನಾಟಕ್ಕೆ ಇನ್ನೊಂದು ಚೋದನೆಯೂ ಇದೆ. ಉಕ್ತಿ ಸೌಂದರ್ಯದಿಂದ ಉಪಕ್ರಮಿಸಿ ಅರ್ಥಸಾಂದ್ರತೆಯೆಡೆಗಿನ ನಿಸಾರರ ಕಾವ್ಯಯಾತ್ರೆಯನ್ನು ಹಂತಹಂತವಾಗಿ ಗಮನಿಸಿ ಆನಂದಿಸುತ್ತ ಬಂದಿರುವೆನಾದ್ದರಿಂದ, ಅದರ ಬಗ್ಗೆ ನನಗೆ ಹೆಚ್ಚಿನ ನಿಕಟತೆ ಉಂಟಾಗಿದೆ. ನಮ್ಮ ನಡುವಿನ ಒಡನಾಡಿಯೊಬ್ಬ ಇಷ್ಟು ಎತ್ತರಕ್ಕೆ ಏರಿರುವನೆಂದರೆ ಯಾರಿಗೆ ತಾನೆ ಹೆಮ್ಮೆಯಾಗದು? ನಿಜ ಸ್ಥಿತಿ ಹೀಗಿರುವುದರಿಂದ, ನಿಸಾರರ ಬಗ್ಗೆ ಇಲ್ಲಿ ಆಡುವ ಮಾತುಗಳು ಪ್ರಶಂಸೆ, ಸ್ವಭಾವೋಕ್ತಿ— ಎರಡೂ ಆಗಿವೆ. ಈ ಎರಡು ಮನೋವೃತ್ತಿಗಳನ್ನು ಪ್ರತ್ಯೇಕಿಸುವ ಸಾಮರ್ಥ್ಯ ನನ್ನಲ್ಲಿಲ್ಲ.

‘ಮರೆತು ಹೃದ್ಬಂಧಗಳ
ಇರುವುದಾದರು ಹೇಗೆ?
ಹಾಗಿರಲು ನಮ್ಮಿರವು ಬರಿಯ ಕೊರಗೆ!’

(ಪುಟ: ೧೦೦)

ನಿಸಾರರ 'ನವಿರಾದ ಸೌಂದರ್ಯದೃಷ್ಟಿ'ಯನ್ನು ಕೆ. ಎಸ್. ನರಸಿಂಹಸ್ವಾಮಿಯವರೂ 'ಅಚ್ಚ ಕನ್ನಡದ ಹೊಸ ರೀತಿಯ ಬರವಣಿಗೆ, ಹೊಸ ರೀತಿಯ ಪಡುಹ'ವನ್ನು ಪು. ತಿ. ನರಸಿಂಹಾಚಾರ್ಯರೂ 'ಸಂಸ್ಕೃತಿಯ ಆಯಾಮಗಳನ್ನು ಹಿಗ್ಗಿಸಬೇಕೆನ್ನುವ ತೀವ್ರಾಸಕ್ತಿ, ಸದಭಿರುಚಿ, ನಯವಂತಿಕೆ'ಗಳನ್ನು ದೇಜಗೌ ಅವರೂ 'ಜೀವನದ ವಿಕಾಸದೊಡನೆ ಸಹಜವಾಗಿ ಒದಗಿ ಬರುವ ಅನುಭವಗಳನ್ನು ತೆರೆದ ಬುದ್ಧಿ ಅಂತಃಕರಣಗಳಿಂದ ಕಾಣುವ ಹಾಗೂ ತೂಗಿ ನೋಡುವ ಕಾಣ್ಕೆ'ಯನ್ನು ವಿ. ಕೃ. ಗೋಕಾಕರೂ 'ಅಭಿವ್ಯಕ್ತಿಗಾಗಿ ಭಾಷೆಯನ್ನು ಸಂಶೋಧಿಸುವ ರೀತಿ'ಯನ್ನು ಗೋಪಾಲಕೃಷ್ಣ ಅಡಿಗರೂ ಹಿಂದೆಯೇ ಗುರುತಿಸಿದ್ದಾರೆ.

ಈ ಭೂಮಿಕೆಯಲ್ಲಿ ನಿಸಾರರ 'ಸ-ರಸೋಕ್ತಿಗಳ ಸಂಗಾತಿ'ಯನ್ನು* ಕುರಿತು ಹಲವು ಮಾತುಗಳನ್ನು ಬರೆಯುವೆ. ಈ ಹಿಂದೆಯೆ ನಿಸಾರರ 'ಸಮಗ್ರ ಗದ್ಯ ಬರಹಗಳು' (೨೦೦೨) ಕೃತಿಯನ್ನೂ ಪ್ರಸಿದ್ಧ 'ನಿತ್ಯೋತ್ಸವ' ಮೊದಲಾದ ಕೃತಿಗಳ ಮರು ಮುದ್ರಣಗಳನ್ನೂ ಒದಗಿಸಿರುವ 'ಸಪ್ನ ಬುಕ್ ಹೌಸ್ ಪ್ರಕಾಶನ ಸಂಸ್ಥೆ'ಯೇ ನಿಸಾರರ ಪ್ರಕೃತ ಉಕ್ತಿಸಂಗ್ರಹವನ್ನೂ ಹೊರ ತಂದು ಕೃತಜ್ಞತೆಗೆ ಭಾಜನವಾಗಿದೆ. ಒಟ್ಟು ಹನ್ನೆರಡು ಕವನ ಸಂಗ್ರಹಗಳಿಂದಲೂ ಐದು ಗದ್ಯ ಕೃತಿಗಳಿಂದಲೂ ಆಯ್ದ ಸುಮಾರು ಒಂದು ಸಾವಿರ ರಸೋಕ್ತಿಗಳು ಇಲ್ಲಿ ಸಂಕಲಿತವಾಗಿವೆ. ಹಲ ಕೆಲವು ಅಪ್ರಕಟಿತ ಬರಹಗಳಿಂದ ಆಯ್ದ ಉಕ್ತಿಗಳೂ ಸೇರಿವೆ.

ನಿಸಾರರಿಗೆ ಅಚ್ಚುಕಟ್ಟುತನ ಸ್ವಭಾವ ಸಹಜ. ಇದು ಅವರ ಎಲ್ಲ ಕೆಲಸಗಳಲ್ಲಿಯೂ ಹೊಮ್ಮುತ್ತದೆ. ಈ ಸಂಕಲನವೂ ಅದಕ್ಕೆ ಹೊರತಲ್ಲ. ಉಕ್ತಿಗಳ ಆಯ್ಕೆಯಲ್ಲಿ ರಸಜ್ಞತೆಯೂ ವಿಂಗಡಣೆಯಲ್ಲಿ ಸುಸಂಯೋಜನೆಯೂ ಇವೆ. 'ನುಡಿ ಗಡಣ' ಎಂಬ ಮೊದಲ ಭಾಗದಲ್ಲಿ ಜೀವನ, ಸಮಾಜ, ವ್ಯಕ್ತಿಗತ, ರಾಷ್ಟ್ರ, ಮತ-ಧರ್ಮ, ರಾಜಕೀಯ, ಇತಿಹಾಸ, ಸಾಹಿತ್ಯ, ಕಲೆ, ಸಂಸ್ಕೃತಿ-ನಾಗರಿಕತೆ, ಶಿಕ್ಷಣ, ವಿಜ್ಞಾನ, ಪ್ರಕೃತಿ, ಕನ್ನಡ ನಾಡು-ನುಡಿ, ಪತ್ರಿಕೆ, ಕೌಟುಂಬಿಕ, ಪ್ರೇಮ-ಸ್ನೇಹ, ನೆನಪು, ಕಾಲ, ತಾತ್ತ್ವಿಕ, ಮೃತ್ಯು—ಈ ಇಪ್ಪತ್ತೊಂದು ವಿಭಾಗಗಳ ರಸೋಕ್ತಿಗಳಿವೆ. 'ಸಾಹಿತ್ಯ' ವಿಭಾಗದಲ್ಲಿ ಭಾಷೆ-ಶೈಲಿ, ಕವಿ ಸಾಹಿತಿ, ಅನುಭವ, ಆಶಯ, ಪ್ರಯೋಜನ, ವಿಮರ್ಶೆ, ವಸ್ತು, ಭಾವ-ವಿಚಾರ, ಸಾಮಾನ್ಯ, ಸೃಷ್ಟಿಕ್ರಿಯೆ—ಎಂಬ ಹತ್ತು ಉಪ ಶೀರ್ಷಿಕೆಗಳಿವೆ. ಮೊದಲ ಭಾಗದ ಉಕ್ತಿಗಳು ಕಿಂಚಿದ್ ವಿಸ್ತಾರ ರೂಪದವಾಗಿದ್ದರೆ, 'ನೆನಹು-ನುಡಿ' ಎಂಬ ಎರಡನೆಯ ಭಾಗದಲ್ಲಿ ಮೇಲಿನವೇ ಶೀರ್ಷಿಕೆ-ಉಪ ಶೀರ್ಷಿಕೆಗಳಡಿ ಸೂತ್ರರೂಪದ (ಬಹುತೇಕ ಒಂದೊಂದೇ ವಾಕ್ಯದ) ಉಕ್ತಿಗಳು ಸಂಕಲನಗೊಂಡಿವೆ.

ಈ ಸಂಕಲನದ ಆಶಯವನ್ನು ಲೇಖಕರೇ ಹೀಗೆ ಸ್ಪಷ್ಟಪಡಿಸಿದ್ದಾರೆ:

'ಬರಹಗಾರನೊಬ್ಬನ ಅಭಿರುಚಿ, ಒಲವು-ನಿಲವು, ದೃಷ್ಟಿಧೋರಣೆಗಳು; ಅವನ ಲೋಕಾನುಭವ, ಅಧ್ಯಯನ-ಚಿಂತನಗಳ ಆಳ ಮತ್ತು ಹರಹುಗಳು; ಅವನ ಭಾಷೆ ಹಾಗೂ ಅಭಿವ್ಯಕ್ತಿಯ ಸಾಮರ್ಥ್ಯ, ಸ್ವಂತತೆ, ಸಂವೇದಕ ಗುಣ ಮತ್ತು ಸೂಕ್ಷ್ಮತೆಗಳು; ಅವನಿಗೆ

---

* ಪ್ರಕಾಶಕರು : ಸಪ್ನ ಬುಕ್ ಹೌಸ್, ಬೆಂಗಳೂರು-560 009, ಪುಟಗಳು: xii+183. 2004.

ಅತಿಯಾಗಿ ಮೆಚ್ಚಾಗಿರುವ ಬದುಕಿನ ಸಂಗತಿಗಳು—ಇಂತಹವೇ ಅನೇಕ ಉಪಯುಕ್ತ ತಪಶೀಲುಗಳನ್ನು ಅರಿಯಲು, ಅವುಗಳತ್ತ ಬೆಳಕು ಹಾಯಿಸಲು ಪ್ರಕೃತ ಪುಸ್ತಕ ಒಂದು ಕೈದೀವಿಗೆಯಾದೀತು.'

ಒಬ್ಬನೇ ಲೇಖಕನ ಕೃತಿಗಳಿಂದ ಆರಿಸಿದ ಉಕ್ತಿಗಳ ಇಂಥ ಸಂಗ್ರಹಗಳು ಈ ಹಿಂದೆ ವಿರಳವಾಗಷ್ಟೆ ಬಂದಿವೆ.

ಕವಿಯಾಗಿ ನಿಸಾರರಿಗೆ ದೊರೆತಿರುವ ಅತಿಶಯ ಜನಾದರಣೆಯಿಂದಾಗಿ ಅವರ ಗದ್ಯ ಬರಹಗಳಿಗೆ ಸಲ್ಲಬೇಕಾದಷ್ಟು ಗಮನ ಈವರೆಗೆ ಬಹುಶಃ ಸಂದಿಲ್ಲ. ಅವರ ಕವನಗಳಲ್ಲಿರುವಂಥ ಸೊಬಗನ್ನೂ ಮಾತಿನ ಲವಲವಿಕೆ-ಹಾರ್ದತೆಗಳನ್ನೂ ಚಿಂತನ ಸೌಷ್ಠವ ವನ್ನೂ ಅವರ ಗದ್ಯ ಬರಹಗಳಲ್ಲಿಯೂ ಧಾರಾಳವಾಗಿಯೆ ಕಾಣುತ್ತೇವೆ. ಗದ್ಯರೂಪ ದಲ್ಲಿಯೂ ವ್ಯಕ್ತವಾಗಿರುವ ಅವರ ಮಾತಿನ ಸೊಬಗನ್ನು ಮೆಲುಕು ಹಾಕಲು ಅವಕಾಶ ಮಾಡಿ ಕೊಟ್ಟಿರುವ ಕಾರಣದಿಂದಲೂ ನಿಸಾರರ 'ಸ-ರಸೋಕ್ತಿಗಳ ಸಂಗಾತಿ' ಒಂದು ಸಂಗ್ರಾಹ್ಯವೂ ಆಸ್ವಾದನೀಯವೂ ಆದ ಸಂಕಲನವಾಗಿದೆ.

ಸನ್ನಿವೇಶವೊಂದರ ವಸ್ತುನಿಷ್ಠ ನಿರೂಪಣೆ ವರದಿಯಷ್ಟೆ ಆದೀತು. ಆ ನಿರೂಪಣೆಯು ಅಭಿಧಾವೃತ್ತಿಜನ್ಯ ವಾಚ್ಯಾರ್ಥಕ್ಕೆ ಮಿತಗೊಳ್ಳದೆ ಹೆಚ್ಚಿನ ಅರ್ಥವಿಶೇಷವನ್ನು ಹೊಮ್ಮಿಸಿದಲ್ಲಿ ಅದಕ್ಕೆ ಕಾವ್ಯತ್ವ ಪ್ರಾಪ್ತವಾಗುತ್ತದೆ. ಇಂಥ ಔಚಿತ್ಯಪೂರ್ವಕ ವಿಸ್ತರಣೆಯೇ ವ್ಯಂಜನಾವೃತ್ತಿ ಅಥವಾ ಧ್ವನಿ ಎನಿಸಿರುವುದು. ಇದು ಗೋಚರಿಸುವುದು ಸಹೃದಯರಿಗೆ. ಇಂಥ 'ಸೂಕ್ತಿ'ಯು 'ಚಂದನ ಧರಿಸಿದ ಶ್ಯಾಮಲೆಯಂತೆ ಜಗಮಗಿಸುತ್ತದೆ' ಎಂದು ಆಲಂಕಾರಿಕರು ವರ್ಣಿಸಿದ್ದಾರೆ. ಕವಿ ವಾಣಿಗೆ ಊರ್ಜಿತತೆ ಬರುವುದು ಇಂಥ ರಸಸಿದ್ಧಿ ಯಿಂದಲೇ. ಕವಿಯು ಯಾವ ಅರ್ಥವನ್ನು ವ್ಯಾವಹಾರಿಕ ತರ್ಕದ ಪರಿಧಿಯಿಂದ ಮುಕ್ತ ಗೊಳಿಸಿ ಉದಾತ್ತಗೊಳಿಸುತ್ತಾನೋ ಅದು ಚಂದ್ರನ ಮೇಲೆ ಬಿದ್ದ ಸೂರ್ಯರಶ್ಮಿಯಂತೆ ಕಾಂತಿಯುತವೂ ರಮಣೀಯವೂ ಆಗಿ ಪರಿಣಮಿಸುತ್ತದೆ—ಎನ್ನಲಾಗಿದೆ.

ಇಂಥ ಶಕ್ತಿವಿಶೇಷವು ನಿಸಾರರ ಕವನಗಳಲ್ಲಿ ನಿಬಿಡವಾಗಿದೆ. ಪದ ಸಂಘಾತ ಅಥವಾ ಗ್ರಂಥನ ಕೌಶಲವನ್ನೂ ವಚೋಲಂಕೃತಿಯನ್ನೂ ಅವರ ಕವನಗಳುದ್ದಕ್ಕೂ ಕಾಣಬಹುದು. ನಿಸಾರರ ಪಾಲಿಗೆ ಕವಿ ಸೃಷ್ಟಿಯು 'ಮೋಜು ಮಾಡುವ ಪ್ರವಾಸಿ ಮಂದಿರವಲ್ಲ. ಅದೊಂದು ಗರ್ಭಗುಡಿ. ನಿರ್ಬಂಧದ ನಡಾವಳಿ, ಶ್ರದ್ಧಾನ್ವಿತ ಗಾಂಭೀರ್ಯ ಅಲ್ಲಿ ಭೂಷಣಪ್ರಾಯ.' (ಪುಟ: ೧೪೬)

ಜೀವನ ಪ್ರೀತಿ, ಸ್ನೇಹ, ವಿಶ್ವಾಸ, ಸೌಮನಸ್ಯ—ಈ ಧನಾತ್ಮಕ ಮೌಲ್ಯಗಳ ಬಗೆಗಿನ ಶ್ರದ್ಧೆಯನ್ನು ನಿಸಾರರ ಎಲ್ಲ ಗದ್ಯ-ಪದ್ಯ ಬರಹಗಳ ಜೀವಸ್ವರವೆನ್ನಬಹುದು. ಸಿನಿಕತನ ಕ್ಕಾಗಲಿ ಭಂಜನೆಗಾಗಲಿ ಇಲ್ಲಿ ಎಡೆಯಿಲ್ಲ. ಸಮನ್ವಯ ಪ್ರಜ್ಞೆ, ರಚನಾತ್ಮಕ ಪರಿಪ್ರೇಕ್ಷ್ಯ—ಇವಕ್ಕೆ ಉನ್ನತ ಸ್ಥಾನವನ್ನು ಇತ್ತಿರುವವರು ನಿಸಾರ್. ಅವರು ಪಡೆದಿರುವ ವಿಶಾಲ ಜನಾದರಣೆಗೂ ಇದೊಂದು ಪ್ರಮುಖ ಕಾರಣವಿದ್ದೀತು. ಕೇವಲ ವಚಸ್ಸೌಂದರ್ಯದಿಂದ ಪ್ರಾಪ್ತವಾಗದ ಸಾರ್ಥಕತೆ ನಿಸಾರರ ರಚನೆಗಳಿಗೆ ಈ ಜೀವನ ಶ್ರದ್ಧೆಯ ಅಂತಃಶ್ರುತಿಯಿಂದ

ಸಿದ್ಧಿಸಿದೆ. ನಿಸಾರರೇ ಹೇಳುವಂತೆ: 'ಬಾಳಿನ ಯಾವುದೇ ಕ್ರಿಯೆ ಇಲ್ಲವೆ ವಸ್ತುವಿಗೆ ಇಂತಹ ಒಂದು ಅವಿಚ್ಛಿನ್ನ ಪರಂಪರೆಯ, ಭಿನ್ನತೆಗಳನ್ನು ಬೆಸೆಯುವ ಏಕಸೂತ್ರತೆಯ ಹಿನ್ನೆಲೆಯಿರುತ್ತದೆ. ಒಂದಕ್ಕೆ ಮತ್ತೊಂದರ ಆಧಾರ, ಒತ್ತಾಸೆಗಳ ಅಗತ್ಯವಿದ್ದೇ ತೀರುತ್ತದೆ. ತಾತ್ತ್ವಿಕ ವಿವೇಚನೆಯ ಸಮಗ್ರ ದೃಷ್ಟಿಗಷ್ಟೆ ಜಗಜ್ಜೀವಿತದ ವಿದ್ಯಮಾನಗಳೆಲ್ಲದರ ಮರೆಯಲ್ಲಿ ಸಾಂಗೋಪಾಂಗವಾದ, ಅಜಸ್ರವಾದ ಸಂಬಂಧವಿರುವ ಮರ್ಮ ವಿದಿತವಾಗಬಲ್ಲದು' (ಪುಟ: ೪). 'ಇತಿಹಾಸವೆನ್ನುವುದು ಕಾಲ ರಾಯನ ಗುಜರಿ' (ಪುಟ: ೧೪೦) ಎಂಬುದನ್ನೂ ಮರೆಯದ ನಿಸಾರರು ಸಮರ್ಥಿಸುವುದು ಅನುಸ್ಯೂತತೆಯನ್ನು:

'ಗತಕಾಲದೊಗಚು, ಹುಳಿ ಸುಳಿವುದೋರದೆ ಮುಂದೆ ಎಂದೆಂದೂ
ನಮ್ಮ ಬಾಳಾಗಲಿ ಬಣ್ಣ, ಪಕ್ವತೆ ಪಡೆದ ತುಂಬೊಲವ ಹಣ್ಣು.'

(ಪುಟ : ೧೨೪)

'ಲೋಕ ಕಾನನದ ಮಿಕ್ಕೆಲ್ಲ ರಾಷ್ಟ್ರಗಳ
ಉರುವಲಿನಸಂಖ್ಯಾತ ವೃಕ್ಷರಾಜಿಯ ಮಧ್ಯೆ
ಈ ನಮ್ಮ ತಾಯಿ ನೆಲ ವಿಶಿಷ್ಟತೆಯ
ವಿರಳತಮ ಶ್ರೀಗಂಧ ತರುವಿರಬಹುದೆ?'

(ಪುಟ : ೪೯)

'ಆಗಿ ಹೋದವರ, ಬೇಗಿ ಕಾದವರ
ನಿರುಪಮ ತ್ಯಾಗದ ಪ್ರಾಣ ಜಲ
ಹೀರುತ ಬೀಗಿರೆ ಮುಕ್ತಿಯ ಹೆಮ್ಮರ,
ತಾಯ್ನೆಲಕಿದೆ ನೂರಾನೆ ಬಲ.'

(ಪುಟ: ೪೧-೪೨)

'ಬುವಿಯ ಹೆಣ್ಣ ಪ್ರೀತಿಪೂರ್ಣ ಕರುಣೆ ಕಣ್ಣ ಮಣಿಯೆನಿಸಿದ
ಈ ಮಣ್ಣಿಗೆ ಚಿರ ಕೃತಜ್ಞ ನಮ್ಮ-ನಿಮ್ಮ ಬಾಳುವೆ.
ಕವಿ ಬಣ್ಣನೆ ಮೀರಿದಂಥ ಇಹ-ಪರಗಳ ಪುರುಷಾರ್ಥದ
ಚೆಲು ನಾಡಿಗೆ ಎಲ್ಲಿರುವುದು ಪೃಥ್ವಿಯಲ್ಲಿ ಹೋಲುವೆ?'

(ಪುಟ: ೩೯)

ನಿಸಾರರ ತಾತ್ತ್ವಿಕ ಅಧಿಷ್ಠಾನ ಗಟ್ಟಿಯಾದದ್ದು, ಆಳವಾಗಿ ಬೇರೂರಿದಂಥದು.

'ಬಾಳಿನಡುಗೆಯ ಮನೆಯ ದಟ್ಟೈಸಿದುರಿ ಹೊಗೆಯ
ಉಸಿರು ಕಟ್ಟಿಸುವಂಥ ಆವರಣದಲಿ
ದೈವ ಸ್ಮರಣೆಯ ಚಿಮಣಿ ನಿತ್ಯ ತೆರೆದಿರಬೇಕು,
ಕರಣ ಗಣವಿರಬೇಕು ಓರಣದಲಿ.' (ಪುಟ : ೧೭೩)

ಭಾವನೆಗೆ ಸ್ವರ ಭಾವ ಕೊಡುವವರಾದರೂ ನಿಸಾರರು ಜಗದ್‌ವ್ಯವಹಾರದ ಸೀಮೆಗಳನ್ನು ಸ್ಪಷ್ಟವಾಗಿಯೆ ಗುರುತಿಸುತ್ತಾರೆ. ಆದರೆ ಈ ಪರಿಧಿಗೊಳಪಟ್ಟೂ ಸಾಧನೀಯ

ವಾದದ್ದನ್ನು ಶ್ರದ್ಧಾಪೂರ್ವಕ ಸಾಧಿಸಲೇಬೇಕೆಂದೂ ಇದೇ ಜೀವನ ಸಾರವೆಂದೂ ಒತ್ತಿ ಹೇಳುತ್ತಾರೆ:

> **'ನಿಶ್ಚಯಿಸಿಕೊಳಬೇಕು ನೇಮಿ ನೆಗೆಯದ ಹಾಗೆ—**
> **ರೆಕ್ಕೆ ಕಸುವಿದ್ದಷ್ಟು ಗಾಳಿ ತೇಲು;**
> **ಸಂಕಲ್ಪ ಮರೆಯದಿರಲೆಂದಿಗೂ ಸಂಯಮದ**
> **ಸಂಕೋಲೆ, ತನ್ನತನದರಿವ ಜೈಲು.'**

(ಪುಟ : ೩೩)

ಅಸ್ಮಿತೆಯ ಬಗ್ಗೆ ನಿಸಾರರದು ನಿತಾಂತ ನಿಷ್ಠೆ. ಇದರ ಬಗ್ಗೆ ಅವರಿಗೆ ಕೊಸರಾಟವಿಲ್ಲ, ರಾಜಿ ಇಲ್ಲವೇ ಇಲ್ಲ.

> 'ಸೋರಿದರೂ ನಾರಿದರೂ ನಮ್ಮ ಗೃಹ, ರಾಷ್ಟ್ರ, ಭಾಷಾಶ್ರಯಗಳು ನಮ್ಮವೇ. ನಮ್ಮ ಬಾಳುವೆ, ಪುರುಷಾರ್ಥ, ಮೋಕ್ಷ—ಸರ್ವಸ್ವವೂ ಅವುಗಳೇ, ಅವುಗಳಲ್ಲೇ. ಆದ್ದರಿಂದ ನಮ್ಮದೆನ್ನುವುದು ನಮಗೆಷ್ಟೇ ಅಹಿತವಾಗಿದ್ದರೂ ಅದನ್ನು ದುರಸ್ತಿಗೊಳಿಸಿ ಭದ್ರಪಡಿಸಿಕೊಳ್ಳುತ್ತ ಏಳಿಗೆಯನ್ನು ಸಾಧಿಸುವುದೇ ನಮ್ಮ ಮುಂದಿರುವ ಉಪಾಯ. ಅನ್ಯ ವೈಭವವೆಲ್ಲ ಹಂಗಿನರಮನೆಯ ಹಂಗಾಮಿ ಲೋಕೋಪಚಾರ ಮಾತ್ರ; ಇಲ್ಲವೇ, ನಮ್ಮ ಕ್ರಿಯಾಶೀಲತೆಯನ್ನು ಕತ್ತು ಹಿಚುಕಿ ಕೊಲ್ಲುವ, ನಿಷ್ಕ್ರಿಯಗೊಳಿಸಿ ಮಾಮೂಲಿತನದ ಹಿಂಡಿಗೆ ದೂಡಿ ನಿರ್ವಿಶಿಷ್ಟಗೊಳಿಸುವ ಸವಿ ಆಮಿಷ ಮಾತ್ರ. ಇದನ್ನು ಆಧ್ಯಾತ್ಮಿಕ, ಧಾರ್ಮಿಕ ಸ್ತರಗಳಲ್ಲಿ ಸಹ ಪರ್ಯಾಲೋಚಿಸುವ ಸಾಧ್ಯತೆಗಳುಂಟು.' (ಪುಟ: ೩೭)

ನಾಗರಿಕತೆಯ ಜಂಜಡವನ್ನು ಕುರಿತು ನಿಸಾರರೆನ್ನುವುದು:

> 'ಯಾವುದರ ಕೊರತೆಯಿದೆಯೋ ಅದನ್ನು ತುಂಬಿಕೊಳ್ಳುವ ಉಪಾಯಗಳನ್ನು ಆಲೋಚಿಸೋಣ. ಆದರೆ ಇರುವುದನ್ನು ನೆನೆದು ಹೆಮ್ಮೆಪಡಲು ಮರೆಯದಿರೋಣ.' (ಪುಟ: ೬)

> 'ಸ್ವಾನುಭವದ ಹೆಸರಿನಲ್ಲಿ ನಾವು ತಪ್ಪು ಅಡಿಗಳನ್ನು ಇಟ್ಟೇ ಮಾರ್ಗಾನ್ವೇಷಣೆ ಮಾಡಬೇಕಿಲ್ಲ, ಅಲ್ಲವೆ?' (ಪುಟ: ೧೪)

ಗತದಲ್ಲಿಯೂ ಲಬ್ಧಸ್ಥಿತಿಯಲ್ಲಿಯೂ ಏನೆಲ್ಲ ಇರವೊಲ್ಲದೇಕೆ. ಆ ಸ್ಥಿತಿಯನ್ನು ಸ್ವೋತ್ಕರ್ಷಾಭಿಮುಖಿಗೊಳಿಸಿಕೊಳ್ಳಬೇಕೆಂಬುದೇ ವ್ಯಕ್ತಿಗೂ ಸಮಾಜಕ್ಕೂ ಇರುವ ಸವಾಲು, ಅವಕಾಶ:

> 'ಅದುರನ್ನು ವಿವಿಧೋಪಾಯಗಳಿಂದ ಸಂಸ್ಕರಿಸಿ ಲೋಹವನ್ನು ಪ್ರತ್ಯೇಕಿಸಿಕೊಂಡ ಬಳಿಕ ಅದು ಪ್ರಯೋಜನಕ್ಕೆ ತಕ್ಕದ್ದಾಗಿರುತ್ತದೆ. ಇದರಂತೆಯೇ ಲೋಕಾನುಭವ ಎಂಬುದನ್ನು ಪ್ರತಿಭೆಯ ಕಾವಿನ ಮೂಲಕ

ಪರಿಷ್ಕಾರ ಮಾಡಿ ಚೊಕ್ಕಗೊಳಿಸಿದ ಮೇಲಷ್ಟೆ ಅದು ಭಾವೋಪಯೋಗಿ ಆಗಲು ಸಮರ್ಥ.' (ಪುಟ: ೧೪೭)

ಇಲ್ಲಿ ವಿವಕ್ಷಿತವಾದದ್ದು ವಿಚಾರ-ಭಾವಗಳ ದಾಂಪತ್ಯ. 'ಜೀವನದಲ್ಲಿ ಹೇಗೋ ಸಾಹಿತ್ಯದಲ್ಲೂ ಹಾಗೆಯೇ ವಿಚಾರ-ಭಾವಗಳದು ಕಾಯ-ಆತ್ಮದ ಸಂಬಂಧ... ಇವು ಸಮುಚಿತ ಪ್ರಮಾಣದಲ್ಲಿ ಸಮನಿತವಾಗಿರಬೇಕು. ಹಾಗಿಲ್ಲದಿದ್ದರೆ ಕಾವ್ಯ ಓದುಗನ ಹೃದಯದಲ್ಲಿ ಸುಗಮ ಪ್ರಚಲನೆಯನ್ನು ಪಡೆಯುವುದು ದುಸ್ತರ.' (ಪುಟ: ೭೦-೭೧)

'ಸಾಮಾನ್ಯರೊಡನೆ ಬೆರೆಯದ ಬುದ್ಧಿಜೀವಿ'ಗಳ ವಂಚಕತೆಯನ್ನು ಕುರಿತು ನಿಸಾರರು ಥಾಟಾಗಿಯೆ ಮಾತನಾಡಲು ಹಿಂಜರಿಯುವುದಿಲ್ಲ.

'ರಾಷ್ಟ್ರಬದುಕಿನ ಪ್ರವಾಹದೆದುರಿನ ವಕ್ರ ಬಂಡೆಗಳು—
ಸಿತಾರು ವಾದನದ ಎದುರು
ಬೊಬ್ಬೆಗರೆಯುವ ಉದ್ದಂಡ ಚಂಡೆಗಳು.
ಕರ್ತವ್ಯ ಬೋಧಿಸುತ್ತಾರೆ ಕರ್ತವ್ಯಗೇಡಿಗಳು;
ನೇರ ನಡಿಗೆಯವರನ್ನು ಛೇಡಿಸುತ್ತಾರೆ
ಈ ವಿಚಿತ್ರ ಏಡಿಗಳು.'

(ಪುಟ : ೩೯)

'ದೇಶಾದ್ಯಂತ ಹೆದ್ದಾರಿ ಗಲ್ಲಿಗಳೆನದೆ ಎಲ್ಲೆಲ್ಲೂ
ಹಿಂಬದಿ ಸವಾರರದೆ ಮೋಜು, ಮೆರೆದಾಟ, ಗುಲ್ಲು.'

(ಪುಟ : ೪೧)

'ಬೆಸ್ಟ್ ಅಲ್ಲದ್ದನ್ನು ಡಸ್ಟ್‌ಗೆ / ಬೆಟರ್ ಅಲ್ಲದ್ದನ್ನು ಗಟರ್‌ಗೆ
ಬಿಸಾಡಿದರೆ, ಸ್ವಾಮಿ,
ಬಾಳಿನಲ್ಲಿ ಬಳಸುವುದಕ್ಕೆ
ಬರುವುದು ಬಹಳ ಕಮ್ಮಿ.'

(ಪುಟ : ೧೨೦)

ವ್ಯಾವಹಾರಿಕದ ಟೈಮ್ ಫ್ರೇಮ್ (ಕಾಲ ಪ್ರಾಕಾರ) ಬೇರೆ, ಕವಿಯದೇ ಬೇರೆ.

'ಹಳೆ ಪಾತ್ರಗಳೊಡಲಿನಿಂದ
ಹೊಸ ಜೀವನ ಪ್ರಾಣಸ್ಪಂದ
ಚಿಗುರಲರಿನ ಚಕ್ಕಂದ
ಪುಟಿಸುವ ನವ ಚಿರೋನ್ಮೇಷ—
ಶೀಲ ಸತ್ತ್ವ ಸಾರವೇ;
ಮುಗಿದರೊಂದು ಉಗುವುದೊಂದು
ನಲುಗಲೊಂದು ನಗುವುದೊಂದು,
ಕೊರೆ ಬೀಳದು ಇಳೆಗೆ ಎಂದೂ;

ಅನಾದಿ ಜಗದನಂತ ಕೃಪಾ—
ಭವನದಸ್ತಿಭಾರವೇ.'

(ಪುಟ : ೧೦೮)

ಈ ದೃಷ್ಟಿ ನಿಸಾರರ ಬರಹಗಳಲ್ಲಿ ಮೇಲಿಂದ ಮೇಲೆ ಅನುವೃತ್ತವಾಗುತ್ತದೆ. ಈಗಿನ ನಾಗರಿಕತೆಯ ಜಟಿಲತೆಯ ಗ್ರಹಿಕೆ ಇಲ್ಲದವರಲ್ಲ ಅವರು:

'ಇಂದಿನ ಮನುಷ್ಯ ಹಿಂದು-ಮುಂದುಗಳೆರಡರ ದೆಸೆಯಿಂದಲೂ ವ್ಯಸ್ತಗೊಂಡಿದ್ದಾನೆ. ಕಾರಣ: ಗತಿಸಿದ್ದರ ಬಗೆಗಿನ ತಿಳಿವಿನ ಅಪೂರ್ಣ ಗ್ರಹಿಕೆ, ಒದಗಲಿರುವುದರ ಬಗೆಗಿನ ಅಮೂರ್ತ ಕಲ್ಪನೆ.' (ಪುಟ: ೨೭-೨೮)

'ಕಂಡಷ್ಟೂ ಸತ್ಯವಿರಬಹುದು,
ಕಂಡಷ್ಟೇ ಸತ್ಯವಲ್ಲ!'

(ಪುಟ : ೧೭೦)

ಸಂತ್ರಸ್ತರ ಬವಣೆಯ ಬಗ್ಗೆ ಕವಿಗೆ ಅಸೀಮ ಅನುಕಂಪವುಂಟು: ಆದರೆ ಇಲ್ಲಿ ಕಹಿಯಾಗಲಿ, ಪಶುಸದೃಶ ಆಕ್ರೋಶದ ದನಿಯಾಗಲಿ ಇರದು. ಪ್ರೇಮವೊಂದೇ ತಾರಕವೆಂಬ ವಿಶ್ವಾಸವುಂಟು.

'ಬೆಳಕ ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ;
ಏನಾಟ ನಡೆದರೂ ನಿನ್ನಡಿಯ ಗಡಿಯಲ್ಲೆ.
ಮರಳಂತೆ ಸಣ್ಣಾಗಿ ಬಾಳ್ದೊರೆಯ ತಡಿಯಲ್ಲೆ
ಸುಡು ಬಿಸಿಲನುಂಡರೂ, ಕೈ ನೀಡಿನೆಡೆಯಲ್ಲೆ
ಹರಿವ ನೀರನು ಕಂಡು ನೀರಡಿಕೆ ಉಲ್ಬಣಿಸಿ
ನಿನ್ನ ಹಳಿಯುವ ಖೋಡಿ ತಿಳಿಗೇಡಿಗಳ ಹರಸಿ—
ತೆಗೆದುಕೊ ಇವರನ್ನೂ ಲೆಕ್ಕಕ್ಕೆ ತಾಯೆ,
ಪರದೆಯೆಳಿ ಇವರೆದೆಯ ದುಃಖಕ್ಕೆ ತಾಯೆ!
ಸವತಿ ಮಕ್ಕಳ ಹಾಗೆ ಕಾಣಬೇಡವ್ವ,
ಸವತಿ ಮಕ್ಕಳ ಹಾಗೆ ಕಾಡಬೇಡ.'

(ಪುಟ : ೪೦)

ದೈನಂದಿನ ಬದುಕಿನ ಇರುಸು ಮುರುಸುಗಳನ್ನು ಹೇಗೆ ನಿರ್ವಹಿಸಬೇಕೆಂಬ ಬಗ್ಗೆ ಕವಿಯ ಹಿತವಾದ ಇದು:

'ಎಸಗಿದರೆ ಸಣ್ಣ ತಪ್ಪೊಂದನ್ನು,
ಬಿಟ್ಟು ಅದರಷ್ಟಕ್ಕೆ ಅದನ್ನು
ತೆಪ್ಪಗಿದ್ದುಬಿಡಿ.
ಸರಿಪಡಿಸಲು ಮುಂದಿಟ್ಟು ಅಡಿ
ಮಾಡಬೇಡಿ ಗಡಿಬಿಡಿ.
ಅದ ತಿದ್ದುವ ಅವಸರದಲ್ಲಿ ದುಡುಕಿ
ಗುಡ್ಡವಾಗಿಸಬೇಡಿ ಹುಡಿಯನ್ನು;

ತೆಗೆಯಹೋಗಿ ಬಿಡಿಗೂದಲ ಹುಡುಕಿ
ಕತ್ತರಿಸಬೇಡಿ ಇಡೀ ಮುಡಿಯನ್ನು.'

(ಪುಟ : ೩೪)

'ಇವೊತ್ತಿನ ಉಧ್ವಸ್ತ ಸ್ಥಿತಿಯನ್ನು ಗಮನಿಸಿದಾಗ... ಎತ್ತರದ ಚೇತನಗಳ ಬರವಿಗಾಗಿ ನಾಡು ಅಣಿಯಾಗುತ್ತಿರಬಹುದೇ ಎಂದೂ ಅನ್ನಿಸುತ್ತದೆ—ಗುಡುಗು ಸಿಡಿಲು ಝಂಝಾವಾತಗಳಿಂದ ತಾಡಿತವಾದ ಕಾರಿರುಳಿನ ಅಧ್ವಾನದ ಅನಂತರ ಮನೋಹರವಾದ ಹೊಚ್ಚ ಹೊಸ ಮುಂಜಾವು ಎವೆ ತೆರೆಯುವಂತೆ, ಪ್ರಕೃತಿಯಲ್ಲಿ ಶಾಂತಿ-ಸಾಮರಸ್ಯಗಳ ಸಮತೋಲನದ ವಿಲಾಸ ಪುನಃಸ್ಥಾಪಿತವಾಗುವಂತೆ.' (ಪುಟ: ೪೫)

'ಲಂಚ' (ಪುಟ: ೭), 'ಲಂಪಟತೆ' (ಪುಟ: ೧೦), 'ಕರುಬುವಿಕೆ', (ಪುಟ: ೧೬), 'ಅಸೂಯೆ' (ಪುಟ: ೨೧), 'ಆಪಾತ ದೈವಭಕ್ತಿ' (ಪುಟ: ೪೭), 'ಚುನಾವಣೆ' (ಪುಟ: ೫೧-೫೨), 'ಮೌಲ್ಯ ಪತನ' (ಪುಟ: ೭೫), 'ಸುದ್ದಿ ಮಾಧ್ಯಮಗಳು' (ಪುಟ: ೯೫-೯೬)—ಇಂಥ ಹತ್ತಾರು ಸಾಮಯಿಕ ಸಂಗತಿಗಳ ಬಗ್ಗೆ ಮೊನಚಾದ ವಿಶ್ಲೇಷಣೆಯನ್ನು ಇಲ್ಲಿ ಕಾಣುತ್ತೇವೆ.

'ವಿಜ್ಞಾನದ ಕಾರ್ಯಫಲ ಶೀಘ್ರ ಸ್ವರೂಪದ್ದು ಮತ್ತು ತತ್ಕಾಲೋಪಯೋಗಿಯಾದದ್ದು. ಸಾಹಿತ್ಯದ್ದೋ ಅತ್ವರಿತ ಹಾಗೂ ಸಾವಧಾನದ್ದು, ದೀರ್ಘ ಪ್ರಯೋಜನಕಾರಿಯಾದದ್ದು' (ಪುಟ: ೮೭); 'ಪಶು ಸಮಾನ ಮನುಷ್ಯನ ಬಾಳ್ವೆ ಬಿದಿರಿಗೆ ಸಮನಾದರೆ, ಅದನ್ನು ಉತ್ತರಿಸಿದ ಕಲಾಸಕ್ತ ಮಾನವನ ಜೀವಿತ ಕೊಳಲಿಗೆ ಸದೃಶ' (ಪುಟ: ೧೧೬); 'ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರನ್ನ ಸ್ವಾದಿಷ್ಟ' (ಪುಟ: ೧೨೭); 'ಹಂದಿಗೇನು ಗೊತ್ತು ಮೆಹಂದಿ ಮಹಿಮೆ?' (ಪುಟ: ೧೨೮); 'ಕಾಲದ ವಕಾಲತ್ತಿನೆದುರು ವಿಮರ್ಶಕರು ತಾಕತ್ತು ಏನೇನೂ ಅಲ್ಲ' (ಪುಟ: ೧೪೮); 'ಸ್ವಾತಂತ್ರ್ಯಪೂರ್ವದ ಸಾಹಿತ್ಯವೆಲ್ಲ ದಾಸ್ಯ ಸಾಹಿತ್ಯವಲ್ಲ. ಆಮೇಲಿನದೆಲ್ಲ ಸ್ವತಂತ್ರ ಮನಸ್ಸಿನ ಸಂಕೇತವಲ್ಲ' (ಪುಟ: ೧೫೧); 'ಸಂಸ್ಕೃತಿ ವ್ಯಕ್ತಿಯ ಅಂತರ್ನಯಪ್ರೇರಕ, ಸಭ್ಯತಾ ಸಂವರ್ಧಕ, ಜೀವನೋದ್ದೀಪಕ; ನಾಗರಿಕತೆ ಮಾನವ ಸಾಹಸಸೂಚಕ, ಸೌಲಭ್ಯಕಾರಕ, ಅಭ್ಯುದಯ ಸಾಧಕ' (ಪುಟ: ೧೫೫); 'ಹಿಂದಿನದರ ಅರ್ಥವಂತ ಅಂತಸ್ಸಾರವನ್ನು ಆರ್ಜಿಸಿ ಆಚರಣೆಗೆ ಹಾಯಿಸುವುದು ಭವಿಷ್ಯತ್ಫಲಕ್ಕೆ ನೇಗಿಲಾಡಿಸಿದಂತೆ' (ಪುಟ: ೧೬೯)—ಇಂಥ ಒಳನೋಟಗಳೂ ಸೂಚ್ಯುಕ್ತಿಗಳೂ ನಿಸಾರರ ಗದ್ಯ-ಪದ್ಯಗಳಲ್ಲಿ ಎಲ್ಲೆಡೆ ಕಾಣಸಿಗುತ್ತವೆ.

'ಕೆದರಿದ ತಲೆಯಂತಿರುವ ಬಾಳುವೆಯಲ್ಲಿ ಕಲೆ ಎನ್ನುವುದು ನೀಟಾದ ಬೈತಲೆ.' (ಪುಟ: ೧೫೪)

'ಕಮಿಟ್‌ಮೆಂಟ್ ಇಲ್ಲದವನ ಬರಹ
ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ.'

(ಪುಟ : ೧೪೪)

'ಕಡು ಬೇಸಿಗೆ ಕೆಂಡದುರಿಗೆ ಬೆಳ್ದಿಂಗಳ ಚಾಮರ;
ಅರಸನನ್ನು ಕವಿಯಾಗಿಸಬಹುದು ಗುಲ್‌ಮೊಹರ್ ಮರ.'

(ಪುಟ : ೧೫೯)

—ಇಂಥ ಉಪಮೆಗಳು ನಿಸಾರರಿಗೇ ವಿಶಿಷ್ಟ.

ನಿಸಾರರ ಕವನಗಳು ಮೇಲ್ನೋಟಕ್ಕೆ ಸರಳ. ಆದರೆ ವೈಚಾರಿಕತೆ ಮತ್ತು ಭಾವ ಸ್ಪಂದಗಳ ನಡುವೆ ಅವರು ಸಾಧಿಸಿರುವ ಹದ ಆಕಸ್ಮಿಕವಲ್ಲ. ಅದು ಸತತ ಅಂತರ್ಮಥನದ ಫಲಿತವೆಂದೇ ಅನಿಸುತ್ತದೆ. ಮಥಿತ ತಾತ್ಪರ್ಯವೆಂದು ಅವರು ಸಾಧಾರಣೀಕರಣದ ಯಾವ ಹಂತದಲ್ಲಿ ವಿರಮಿಸುತ್ತಾರೋ ಅದರಿಂದ ಒಂದೆರಡೇ ಹೆಜ್ಜೆ ಮುಂದೆ ಕ್ರಮಿಸಿದರೂ ಬರಹ ಡೈಡ್ಯಾಕ್ಟಿಕ್ ಅಥವಾ ಸೆಂಟೆನ್ಷಸ್ ಆಗಿಬಿಡುವ ಅಪಾಯವುಂಟು. ನಿಸಾರರು ಪ್ರಜ್ಞಾಪೂರ್ವಕವಾಗಿ ಆ ಸಂಭವವನ್ನು ನಿವಾರಿಸಿಕೊಂಡಿದ್ದಾರೆ. ಅವರ ಈ ಸ್ವವಿಹಿತ ಔಚಿತ್ಯಸಾಧನೆ ಶ್ಲಾಘನೀಯ. 'ಐರಾವತ ಗಾಂಭೀರ್ಯ'ದಿಂದ (ಇದು ನಿಸಾರರದೇ ಮಾತು) ಅವರು ಬೇಕೆಂದೇ ದೂರ ಉಳಿದಿದ್ದಾರೆ. ಆ ಗಾಂಭೀರ್ಯದ ಜಗತ್ತೇ ಬೇರೆ.

ಕಾವ್ಯಕರ್ಮ ಅಪೇಕ್ಷಿಸುವುದು ತರ್ಕ ಕರ್ಕಶವನ್ನಲ್ಲ, ತಾದಾತ್ಮ್ಯವನ್ನು.

'ಒಲವೆಂದೆ ಎನ್ನಿಸದು ಓಲೈಸುವಾಗ,
ಎದೆಗೆ ಎದೆ ಸಮಗೂಡಿ ಮೇಳೈಸುವಾಗ.
ಒಲಿದಿದ್ದು ತಿಳಿದೀತು ಒಲಿದಾದ ಮೇಲೆ—
ಮೊದಲೆ ಕಾರಣ ತಿಳಿಸಲದಕಿಲ್ಲ ವೇಳೆ.'

(ಪುಟ : ೧೬೪)

ಕವಿಕರ್ಮವನ್ನು ಕುರಿತೇ ಇರುವ ಈ ಮಾತು ಅರ್ಥವಂತವಾಗಿದೆ:

'[ಕವಿ] ಏಕಾಕಿಯಾಗಿ ತನ್ನ ಕಸುಬಿನಲ್ಲಿ ಮಗ್ನನಾಗಿರುತ್ತಾನೆ. ಅವನ ವಿನೀತ ವಾಣಿ ದೊಡ್ಡ ಗಂಟಲಿನವರ ಅಬ್ಬರ-ಕಿರುಚುಗಳ ನಡುವೆ ಸದ್ಯಕ್ಕೆ ಮರೆಯಾಗಿದ್ದರೂ ಕಾಲಕ್ರಮೇಣ ಸಮಾಜಕ್ಕೆ ಸಾಂತ್ವನ ನುಡಿಯುವುದರಲ್ಲಿ, ಮೆಲು ಮಾತಿನ ಮಹಾ ಪವಾಡಗಳನ್ನು ಸೃಷ್ಟಿಸುವುದರಲ್ಲಿ ಯಶಸ್ವಿಯಾಗಬಹುದು; ಅವನ ಕೃತಿ ಸಮುದಾಯ ಸಂಸ್ಕೃತಿಯ ಒಂದು ವಿಶಿಷ್ಟ, ಅವಿಭಾಜ್ಯ ಅಂಗವಾಗಿ ಸ್ಥಾಯಿತ್ವ ಪಡೆಯಬಹುದು.' (ಪುಟ:೫೭)

ನಿಸಾರರೇ ಒಂದೆಡೆ ಹೀಗೆಂದಿದ್ದಾರೆ:

'ಕೆಲವು ನಸೀಬುಗಾರ ಪದ್ಯಗಳಾಗುತ್ತವೆ
ಆಗಾಗಿನ ಆಗುಹೋಗಿನ ಮೇವು ಮೆಲುಕಿನ ಹುಲ್ಲು;
ಮತ್ತೆ ಕೆಲವು ಕಾವ್ಯ ಪರಂಪರೆಯ ಹೈವೇಯ ಕಿ.ಮೀ. ಕಲ್ಲು.
ಎಲ್ಲೋ ಒಂದೆರಡು ಸಂಸ್ಕಾರವಂತ ರಚನೆ
ಮಾತ್ರ ಆಗುತ್ತವೆ ಸಂಸ್ಕೃತಿ ಸಾಗರದ ದೀಪ-ಗೋಪುರ—
ನಾಡಿನ ಭವಿಷ್ಯದಾಶೋತ್ತರದ ನೌಕೆಗಳಿಗೆ;
ತಲೆಮಾರುಗಳ ಶ್ರೇಯೋಕಾಂಕ್ಷಿ ಹಾರೈಕೆಗಳಿಗೆ.' **(ಪುಟ : ೬೭)**

—ಇಂಥ ಹಲವಾರು ದೀಪ-ಗೋಪುರಗಳು ನಿಸಾರರ ಕಾವ್ಯೋದ್ಯಾನದಲ್ಲಿ ಇವೆ.



'ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್'
ಅಭಿನಂದನೀಯ ಪ್ರಯತ್ನ

♦ *ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್*

ಆಂಗ್ಲ ಸಾಮ್ರಾಜ್ಯ ಭಾರತೀಯರಿಗೆ ಬಹು ರೀತಿಯಲ್ಲಿ ಕೇಡನ್ನು ತಂದಿತು. ಕೆಲವು ವಿಷಯಗಳಲ್ಲಿ ಒಳ್ಳಿತನ್ನು ಮಾಡಿತು. ಈ ಕೆಲವು ವಿಷಯಗಳಲ್ಲಿ ಅದು ನಮಗೆ ಆಂಗ್ಲ ಸಾಹಿತ್ಯದ ನಿಕಟ ಪರಿಚಯವನ್ನು ಮಾಡಿಕೊಟ್ಟಿತೆನ್ನುವುದು ಒಂದು. ಅದರಲ್ಲಿಯೂ ಕವಿ ಸಾರ್ವಭೌಮ ಷೇಕ್ಸ್‌ಪಿಯರನ ನಾಟಕಗಳ ಅಭ್ಯಾಸವನ್ನು ನಮ್ಮ ವಿದ್ಯೆಯ ಒಂದು ಅಂಗವಾಗಿ ಮಾಡಿತೆನ್ನು ವುದು. ಷೇಕ್ಸ್‌ಪಿಯರ್ ಇಂಥ ಶ್ರೇಷ್ಠ ಕವಿ: ಯಾವ ಜನಾಂಗವೇ ಆದರೂ ಇವನ ನಾಟಕಗಳ ಪ್ರತ್ಯಕ್ಷ ಪರಿಚಯ ವನ್ನು ಪಡೆಯುವ ಒಂದು ಸೌಭಾಗ್ಯಕ್ಕಾಗಿ ಆಂಗ್ಲ ಭಾಷೆಯ ಅಭ್ಯಾಸವನ್ನು ತನ್ನ ಮಕ್ಕಳ ವಿದ್ಯೆಯ ಒಂದು ಭಾಗವಾಗಿ ನಿಯಮಿಸಿದರೆ ಅದು ಅಷ್ಟೇ ಉದ್ದೇಶಕ್ಕಾಗಿ ಯುಕ್ತವಾಗುತ್ತದೆ; ಸಾರ್ಥಕವಾಗುತ್ತದೆ.

ಭಾರತೀಯರಿಗೆ ಆಂಗ್ಲ ಭಾಷೆಯಲ್ಲಿ ವಿದ್ಯೆ ಕಲಿಸುವು ದೆಂದು ನಿಶ್ಚಯಿಸಿದ ಆಂಗ್ಲ ಪ್ರಭು ವರ್ಗದ ಯೋಚನಾ ಪರರಾದ ಜನ, ನಮ್ಮ ವಿದ್ಯಾರ್ಥಿಜನರು ಆಂಗ್ಲ ಭಾಷೆಯನ್ನು ಕಲಿತು ಅದರಿಂದ ಪ್ರೇರಣೆ ಪಡೆದು ಈ ದೇಶದ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿ ನಮ್ಮ ಜನತೆಯ ಏಳ್ಗೆಗೆ ಕಾರಣ ರಾಗುತ್ತಾರೆಂದು ನಿರೀಕ್ಷಿಸಿದರು. ಇದು ಸ್ವಲ್ಪಮಟ್ಟಿಗೆ ನಡೆಯಿತು. ಬಹುಪಾಲು ನಡೆಯಲಿಲ್ಲ. ಸ್ವಲ್ಪಮಟ್ಟಿಗೆ ನಡೆದದ್ದ ರಲ್ಲಿ ಕೆಲವು ಉನ್ನತ ಆಂಗ್ಲಕೃತಿಗಳ ಭಾಷಾಂತರ ಸೇರಿತ್ತು.

ಷೇಕ್ಸ್‌ಪಿಯರ್ ಕವಿಯ ನಾಟಕಗಳ ಭಾಷಾಂತರ ತಕ್ಕ ಪ್ರಮಾಣದಲ್ಲಿ ಸೇರಲಿಲ್ಲ.

ಇದಕ್ಕೆ ಕಾರಣ ಏನು ಎಂದು ಸ್ವಲ್ಪ ದೂರ ಊಹಿಸಬಹುದು; ನಿಶ್ಚಯವಾಗಿ ಹೇಳಬರುವುದಿಲ್ಲ. ಷೇಕ್ಸ್‌ಪಿಯರ್ ನಾಟಕಗಳಲ್ಲಿ ಹಲವನ್ನು ಆಧಾರವಾಗಿ ಇರಿಸಿಕೊಂಡು ನಮ್ಮಲ್ಲಿ ತಕ್ಕಷ್ಟು ಶಕ್ತರಾದ ಲೇಖಕರು ಕೆಲವು ಕೃತಿಗಳನ್ನು ರಚಿಸಿದರು. ನೇರವಾಗಿ ಭಾಷಾಂತರಿಸುವ ಕೆಲಸಕ್ಕೆ ಕೈಹಾಕಲಿಲ್ಲ. ಶ್ರೀ ಡಿ. ವಿ. ಗುಂಡಪ್ಪನವರು ಮಾಡಿದ 'ಮ್ಯಾಕ್‌ಬೆತ್' ಭಾಷಾಂತರವೇ ಇಂಥ ಕ್ರಮವಾದ ಒಂದು ಭಾಷಾಂತರ ಮಾಡಲು ನಡೆದ ಯತ್ನ.

ಈ ಕೆಲಸವನ್ನು ಒಂದು ಪ್ರಮಾಣದಲ್ಲಿ ಮಾಡಬೇಕೆಂದು ಬಹು ಕಾಲದಿಂದ ಯೋಚಿಸುತ್ತಿದ್ದ ನಾನು ಕಾರಣಾಂತರದಿಂದ 'ಹ್ಯಾಮ್ಲೆಟ್' ನಾಟಕವನ್ನು ಭಾಷಾಂತರಿಸಲು ತೊಡಗಿ ಈ ಇಪ್ಪತ್ತು ವರ್ಷಗಳಿಂದೀಚೆಗೆ ಸ್ವಲ್ಪ ಕೆಲಸ ಮಾಡಿ ತಕ್ಕಷ್ಟು ಸಂತೋಷಪಟ್ಟೆನು. ಆದರೆ ಈ ಕೆಲಸ ನಮ್ಮ ಜನರಿಗೆ ಷೇಕ್ಸ್‌ಪಿಯರ್ ಕೃತಿ ಕೆಲವದರ ಪರಿಚಯವನ್ನು ಓದಿನಿಂದ ಪಡೆಯಲು ಅವಕಾಶ ಮಾಡಿತು ಹೊರತು ಇನ್ನೂ ರಂಗದ ಮೇಲೆ ಬಂದು ಸಂತಸ ಪಡಿಸಿಲ್ಲ. ದಿಟದಲ್ಲಿ ನಾಟಕ ಎನ್ನುವ ಒಂದು ಕೃತಿಯ ನಾಟಕತ್ವ ರಂಗದ ಮೇಲೆ ಬರದೆ ಪೂರ್ಣವಾಗಿ ಸಿದ್ಧಿಸುವುದಿಲ್ಲ.

ಪರಿಸ್ಥಿತಿ ಹೀಗಿರುವಲ್ಲಿ ತೀರ ಈಚೆಗೆ ನಮ್ಮ ತರುಣ ಮಿತ್ರರು ಶ್ರೀ ನಿಸಾರ್ ಅಹಮದ್‌ರವರು ಷೇಕ್ಸ್‌ಪಿಯರ್ ಕವಿಯ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಎಂಬ ನಾಟಕವನ್ನು ಕನ್ನಡಿಸಿದ್ದಾರೆ ಎಂಬ ಮಾತು ನನ್ನ ಕಿವಿಗೆ ಬಿದ್ದಿತು. ಈ ನಾಟಕದ ಕೆಲವು ದೃಶ್ಯಗಳನ್ನು ನನ್ನ ಭಾಷಾಂತರ ಕಾರ್ಯದಲ್ಲಿ ನಾನು ಸೇರಿಸಿದ್ದೆನು. ಮಿತ್ರ ನಿಸಾರ್ ಅಹಮದರು ಈ ಭಾಷಾಂತರವನ್ನು ನೋಡಿದ್ದಾರೆಂದು ಸಹ ನನಗೆ ತಿಳಿಯಿತು. ಶಕ್ತರಾದ ತರುಣ ಲೇಖಕರು ಈ ಕೆಲಸದಲ್ಲಿ ತೊಡಗಿದ್ದರೆನ್ನುವುದು ತಿಳಿದು ನನಗೆ ಬಹು ಸಂತೋಷ ಆಯಿತು. ಅಷ್ಟರಲ್ಲೇ ಬೆಂಗಳೂರು ನಗರದ ಸಾಹಸೀ ಕಲೋಪಾಸಕರಾದ ನಮ್ಮ ನಟರಂಗದ ತರುಣ ಮಿತ್ರರು ಶ್ರೀಯುತರ ಭಾಷಾಂತರವನ್ನು ರಂಗದ ಮೇಲೆ ತರುವವರಾಗಿದ್ದಾರೆ ಎಂದು ಕೇಳಬಂದಿತು. ಇನ್ನು ಕೆಲವೇ ದಿನಗಳಲ್ಲಿ ನಾಟಕ ರಂಗದ ಮೇಲೆ ಬಂದಿತು ಎಂದೂ ಸುದ್ದಿ ಪ್ರಕಟವಾಯಿತು. ನಾಟಕವನ್ನು ನೋಡಿದ ಮಹನೀಯರೊಬ್ಬರು ಒಂದು ಇಂಗ್ಲೀಷ್ ಪತ್ರಿಕೆಯಲ್ಲಿ ಪ್ರದರ್ಶನ ಅಷ್ಟೇನೂ ಚೆನ್ನಾಗಲಿಲ್ಲ ಎಂಬ ಅಭಿಪ್ರಾಯವನ್ನು ಪ್ರಕಟಿಸಿದ್ದು ಕಂಡಿತು.

ಈ ಸುಮಾರಿನಲ್ಲಿ ಮಿತ್ರ ನಿಸಾರ್ ಅಹಮದ್‌ರವರು ಒಂದು ದಿನ ನನ್ನನ್ನು ಕಂಡಾಗ ನಾನು ಬಂದು ನಾಟಕವನ್ನು ನೋಡಬೇಕೆಂದು ಬಯಸಿದರು. ನಾನು ಸಂತೋಷದಿಂದ ಒಪ್ಪಿಕೊಂಡೆನು. ಅವರು ಏರ್ಪಡಿಸಿದ ಒಂದು ದಿನ ಹೋಗಿ ನಾಟಕವನ್ನು ನೋಡಿದೆನು. ಅದು ಎಷ್ಟು ಚೆನ್ನಾಯಿತು ಎನ್ನುವುದನ್ನು ಕಂಡು ಆನಂದಪಟ್ಟೆನು, ಆಶ್ಚರ್ಯಪಟ್ಟೆನು. 'ನಟರಂಗ'ದ ಮಿತ್ರರಿಗೆ ಅಂದೇ ಇದನ್ನು ತಿಳಿಸಿ, ಮಿತ್ರ ನಿಸಾರ್ ಅವರನ್ನು ಆಮೇಲೆ ಕಂಡಾಗ ಅವರಿಗೂ ಇದನ್ನು ಅರಿಕೆ ಮಾಡಿದೆನು.

ಶ್ರೀಯುತರು ಕೆಲವು ದಿನಗಳ ಬಳಿಕ ನಾಟಕದ ಆ ಕನ್ನಡ ರೂಪವನ್ನು ಪ್ರಕಟಿಸುವ ಯೋಚನೆ ಮಾಡಿರುವುದಾಗಿ ತಿಳಿಸಿ ನನ್ನಿಂದ ಅದಕ್ಕೆ ಒಂದು ಮುನ್ನುಡಿಯನ್ನು ಬಯಸಿದರು. ಮೆಚ್ಚಿಕೆಯನ್ನು ತಿಳಿಸುವ ನಾಲ್ಕು ಮಾತನ್ನು ಬರೆಯುವುದು ಯುಕ್ತ ಎಂದು ಭಾವಿಸಿ ನಾನು ಅವರ ಬಯಕೆಯನ್ನು ಸಲ್ಲಿಸಲು ಒಪ್ಪಿದೆನು. ಆ ಕೆಲಸವನ್ನು ಈಗ ಸಂತೋಷದಿಂದ ಮಾಡುತ್ತಿದ್ದೇನೆ.

ಶ್ರೀಯುತರು ಈ ಕೃತಿಯಲ್ಲಿ ನಮಗೆ ಕೊಟ್ಟಿರುವುದು ಒಂದು ಭಾಷಾಂತರ ಅಲ್ಲ. ಭಾಷಾಂತರ ಮೂಲದ ಯಾವ ಮಾತನ್ನೂ ಬಿಡಬಾರದು. ಮೂಲಕ್ಕೆ ಯಾವ ಮಾತನ್ನೂ ಸೇರಿಸಬಾರದು. ಮೂಲದ ಯಾವ ಮಾತನ್ನೂ ತೀರ ಬೇರೆ ಮಾಡಬಾರದು. ಇಂಥ ಭಾಷಾಂತರ ಮಾಡಿದ್ದರೆ ಈ ನಾಟಕ ಈ ಕೃತಿಯಲ್ಲಿ ಈಗ ಇರುವಂತೆ ಇರುವುದಿಲ್ಲ. ಪ್ರಾಯಶಃ ಪದ್ಯಭಾಗ ಇಂಗ್ಲೀಷಿನಲ್ಲಿ ಬ್ಲ್ಯಾಂಕ್‌ವರ್ಸ್‌ನಲ್ಲಿರುವುದು ಇಲ್ಲಿ 'ಸರಳ ರಗಳೆ' ಯಲ್ಲಿಯೂ ಅಂತ್ಯ ಪ್ರಾಸದ ಪದ್ಯ ಅಂತ್ಯ ಪ್ರಾಸದ ಸುಮಾರು ಅದೇ ರೀತಿಯ ಛಂದಸ್ಸಿನಲ್ಲಿಯೂ ಗದ್ಯ ಮಾತಿಗೆ ಸರಿಯಾದ ಮಾತಿನ ಗದ್ಯದಲ್ಲೂ ಇರುತ್ತಿತ್ತು. ಶ್ರೀ ನಿಸಾರ್ ಅಹಮದ್‌ರು ಕೆಲವೆಡೆ ಸರಳ ರಗಳೆಯನ್ನೂ ಕೆಲವೆಡೆ ಬೇರೆ ರೂಪದ ಛಂದಸ್ಸಿನ ಪದ್ಯವನ್ನೂ ಬಳಸಿದಾರೆ. ಆಗಾಗ ಮಾತುಗಳನ್ನು ಬಿಟ್ಟಿದಾರೆ; ಬೇರೆ ಮಾತುಗಳನ್ನು ಹಾಕಿದಾರೆ. ಆದರೆ ಹೀಗೆ ಮಾಡುವುದರಲ್ಲಿ ಮೂಲದ ಭಾವಕ್ಕೆ ತೊಂದರೆ ಆಗದಂತೆ ನೋಡಿಕೊಂಡಿದಾರೆ. ಇದರಿಂದ ಈ ಕೆಲಸ ಭಾಷಾಂತರಕ್ಕೆ ಸುಮಾರು ಸಮ ಸಮ ಆದ ಪರಿವರ್ತನ ಆಗಿದೆ. ನಮ್ಮಲ್ಲಿ ಇಂಥ ಪ್ರತಿಕೃತಿಯನ್ನು ಛಾಯಾನುವಾದ ಎನ್ನುತ್ತಾರೆ ಎಂದು ಕಾಣುತ್ತದೆ. ಈ ಕಾರಣದಿಂದ ಮೂಲದೊಂದಿಗೆ ಹೋಲಿಸಿದಾಗ ಇಲ್ಲಿ ಅದರ ಕಾವ್ಯಭಾಗ ಕೆಲವು ಬಿಟ್ಟು ಹೋಗಿದೆ, ಸ್ವಲ್ಪ ಬೇರೆಯಾಗಿದೆ ಎನ್ನಿಸುತ್ತದೆ. ಆದರೂ ರಂಗದ ಮೇಲೆ ನೋಡಿದಾಗ ಪರಿವರ್ತನದ ನೋಟ ಮೂಲದ ಓದಿನಿಂದ ಬರುವ ಸಂತೋಷದ ಬಹು ಭಾಗವನ್ನು ಒದಗಿಸುತ್ತದೆ. ಒಟ್ಟಿನಲ್ಲಿ ಷೇಕ್ಸ್‌ಪಿಯರ್ ಕವಿ ಉದ್ದೇಶಿಸಿದ ಚಿತ್ರದ ಮುಕ್ಕಾಲು ಪಾಲನ್ನು ತೃಪ್ತಿಕರವಾದ ರೀತಿಯಲ್ಲಿ ಪ್ರತಿ ಮಾಡಿರುತ್ತದೆ.

ಶ್ರೀ ನಿಸಾರ್ ಅಹಮದರು ಈ ಮುನ್ನ ಕಾವ್ಯ ರಚನೆಯಲ್ಲಿ ಶ್ಲಾಘ್ಯವಾದ ಸಿದ್ಧಿಯನ್ನು ಗಳಿಸಿದ ಲೇಖಕರು. ಸಾಹಿತ್ಯವನ್ನು ಎಚ್ಚರದಿಂದ ಅಭ್ಯಾಸ ಮಾಡಿರುವ ಉಪಾಸಕರು. ಕಲಿವಿನ ಕನ್ನಡದಂತೆ ಬಳಕೆಯ ಕನ್ನಡವನ್ನು ಬಲ್ಲ ಕನ್ನಡಿಗರು. ಈ ಪರಿವರ್ತನದಲ್ಲಿ ಮಾತು ಅಲ್ಲಲ್ಲಿ ಸ್ವಲ್ಪ ಬೇರೆಯಾಗಿರಬೇಕಾಗಿತ್ತೇನೋ ಎನ್ನಿಸಬಹುದು. ಆದರೆ ಮೊತ್ತದಲ್ಲಿ ಅದು ಯುಕ್ತವಾಗಿಯೇ ಇದೆ. ಮೂಲದಲ್ಲಿನ ಪದ್ಯದ ಒಟ್ಟು ಭಾವ ಇಲ್ಲಿಯೂ ರೂಪು ತಳೆದಿದೆ. ಶಬ್ದ, ಪ್ರಾಸ ಉಚಿತವೆಂದು ಕಾಣುತ್ತದೆ. ಮೊತ್ತದಲ್ಲಿ ಇದು ಷೇಕ್ಸ್‌ಪಿಯರ್ ಕವಿಯ ಮೂಲ ಕೃತಿಯ ಒಂದು ಯಶಸ್ವೀ ಛಾಯಾನುವಾದ ಆಗಿದೆ.

ಛಾಯಾನುವಾದ ಯಶಸ್ವಿಯಾಯಿತೆನ್ನುವುದಕ್ಕೆ ಅದು ರಂಗದ ಮೇಲೆ ಬಂದ ವೇಳೆ ಪ್ರೇಕ್ಷಕರು ಮತ್ತೆ ಮತ್ತೆ ನಕ್ಕದ್ದೂ ನಲಿದುದೂ ಸಾಕ್ಷಿ. ನಾಟಕ ನಡೆದ ಸುಮಾರು ಎರಡು ತಾಸಿನ ಹೊತ್ತು ಸಭೆಗೆ ಸಂತೋಷದ ಹೊತ್ತಾಗಿತ್ತು; ರಸದ ಅನುಭವವನ್ನು ನೀಡುತ್ತಿತ್ತು.

ಶ್ರೀ ಸಿಂಹರವರ ಥೀಸಿಯಸ್ ಪಾತ್ರ, ಶ್ರೀ ಲೋಕೇಶ್‌ರವರ ಬಾಟಂ ಪಾತ್ರ ನೋಡುವವರ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮವನ್ನುಂಟುಮಾಡಿದವು. ಒಟ್ಟು ನಾಟಕ, ನನ್ನಿಷ್ಟಕ್ಕೆ ಹೇಳುವುದಾದರೆ, ನಾನು ನೋಡಿರುವ ಅತ್ಯಂತ ಯಶಸ್ವೀ ನಾಟಕ ಪ್ರಯೋಗಗಳಲ್ಲಿ ಒಂದು ಎನ್ನುವಂತಿತ್ತು.

ಷೇಕ್ಸ್‌ಪಿಯರ್ ಕವಿಯ ಒಂದು ಉತ್ತಮ ಕೃತಿಯನ್ನು ಇಲ್ಲಿ ಕಾಣುವ ಸುಂದರ ಛಾಯಾನುವಾದದಲ್ಲಿ ತಂದಿರುವ ಬಗ್ಗೆ ನಾನು ಶ್ರೀ ನಿಸಾರ್ ಅಹಮದ್‌ರವರನ್ನು ಅಭಿನಂದಿಸುತ್ತೇನೆ. ಅನುವಾದವನ್ನು ಅಷ್ಟು ಯಶಸ್ವಿಯಾಗಿ ರಂಗದ ಮೇಲೆ ತಂದ ಬಗ್ಗೆ 'ನಟರಂಗ'ದ ತರುಣ ಮಿತ್ರರನ್ನು ಅಭಿನಂದಿಸುತ್ತೇನೆ. ಶ್ರೀ ನಿಸಾರ್ ಅಹಮದರೂ ಇತರ ನಮ್ಮ ದಕ್ಷ ಲೇಖಕರೂ, ರಂಗದ ಈ ತರುಣ ಮಿತ್ರರೂ, ಇತರ ಮಿತ್ರರೂ ಷೇಕ್ಸ್‌ಪಿಯರ್ ಕವಿಯ ಇತರ ಕೃತಿಗಳ ಇಂಥ ಛಾಯಾನುವಾದಗಳನ್ನು ಕನ್ನಡದಲ್ಲಿ ರಚಿಸಿ, ರಂಗದ ಮೇಲೆ ತೋರಿ ನಮ್ಮ ಸಾಹಿತ್ಯವನ್ನೂ ರಂಗಭೂಮಿಯನ್ನೂ ಸಮೃದ್ಧ ಮಾಡಲಿ ಎಂದು ಹೃತ್ಪೂರ್ವಕ ಹಾರೈಸುತ್ತೇನೆ.

೧೯೭೪

ಪ್ರಾಜ್ಞ ಅಲ್ಪಸಂಖ್ಯರು ಬೃಹತ್ ಸಮಾಜದ ರೈಲು ಗಾಡಿಯ ಎಂಜಿನ್ನಿನಂತೆ; ಅಪಾರ ಜನಸ್ತೋಮ ಬೋಗಿಗಳ ಹಾಗೆ. ದೂರದಿಂದ ಎಂಜಿನ್ನಿನ ಮುಂಭಾಗ ಹಿಂಭಾಗಗಳನ್ನು ಗುರುತಿಸಲು ಸುಲಭ. ಬೋಗಿಗಳಿಗೋ ಹಿಂದಾವುದು ಮುಂದಾವುದು ಹೇಳುವುದು ಕಷ್ಟ. ಇಂತಹ ಅಜ್ಞ ಸಾಮಾನ್ಯರ ವೈಶಿಷ್ಟ್ಯ ಗಣನೆ ದೃಷ್ಟಿಗ್ರಾಹ್ಯವಾಗುವುದು ದುಸ್ತರ. ಮಂದಿಯಿಂದ ಕಿಕ್ಕಿರಿದ ಮಹತ್ಸಮಾಜದ ಬೋಗಿಗಳನ್ನು ಚಾಲನೆಗೊಳಿಸುವ ಶಕ್ತಿಯನ್ನಲ್ಲದೆ, ಅವು ಉರುಳಿ ಬೀಳದೆ ಸುಕ್ಷೇಮವಾಗಿ ಸಾಗುವ ಗುರುತರ ಹೊಣೆಯನ್ನು ಪಾಲಿಸುವ ಕರ್ತವ್ಯವನ್ನು ಪ್ರಾಜ್ಞ ಜನ ನೆರವೇರಿಸಬೇಕಾಗುತ್ತದೆ.

(ಪ್ರಾಜ್ಞರು—ಜನ ಸಾಮಾನ್ಯರು)

✧ ✧ ✧

ಧರ್ಮ ಮತ್ತು ಅದರ ಅನುಷ್ಠಾನ ವ್ಯಕ್ತಿಯ ಅಭಿರುಚಿ ಊಟೋಪಚಾರ ಉಡಿಗೆ-ತೊಡಿಗೆಯಂತೆ ಸ್ವಂತಿಕೆಯುಳ್ಳದ್ದು, ವೈಯಕ್ತಿಕವಾದದ್ದು. ಅದರ ಅನುಭವ ವ್ಯಕ್ತಿಯ ಮಟ್ಟಕ್ಕೆ ಅವತರಿಸಿ ವಾಸ್ತವವಾಗಬೇಕು. ಹೃದಯಕ್ಕೆ ಸಾರ ರೂಪಿಯಾಗಿ ಹನಿಯಬೇಕು. ಇಲ್ಲವೋ ಅದೊಂದು ಸಾರ್ವತ್ರಿಕ ಮೋಡ; ಅಳವಿಗೆ ಎಟುಕದ ಆಗಸ.

(ಧರ್ಮದ ವೈಯಕ್ತಿಕತೆ)



‘ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ’ ಮತ್ತು ‘ಒಥೆಲೊ’ ನಾಟಕಾನುವಾದಗಳು: ಉತ್ಕೃಷ್ಟತೆಯ ಉಪಮಾತೀತ ಉದಾಹರಣೆಗಳು

♦ ಡಾ. ಪ್ರಧಾನ್ ಗುರುದತ್ತ

೧

‘ನಿತ್ಯೋತ್ಸವ’ದ ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ಶೇಕ್ಸ್ ಪಿಯರ್‌ನ ‘ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್’ ಹಾಗೂ ‘ಒಥೆಲೊ’ ನಾಟಕಗಳನ್ನು ಅನುವಾದಿಸಿದ್ದಾರೆ. ‘ಡ್ರೀಮ್’ನ ಅನುವಾದ ೧೯೭೪ರಲ್ಲಿ ಹೊರ ಬಂದಿದ್ದರೆ. ‘ಒಥೆಲೊ’ನ ಅನುವಾದ ೧೯೭೫ರಲ್ಲಿ ಹೊರ ಬಂದಿದೆ. ಶೇಕ್ಸ್‌ಪಿಯರನತ್ತ ನಿಸಾರ್ ಅಹಮದ್ ಅವರ ಗಮನ ಹರಿಯಲು ಅವನ ಸಾಹಿತ್ಯದ ಶ್ರೇಷ್ಠತೆಯೇ ಕಾರಣವಾಗಿದ್ದಿರಬೇಕು. ಏಕೆಂದರೆ ಇಂಗ್ಲಿಷ್ ಸಾಹಿತ್ಯ ಕ್ಷೇತ್ರದಲ್ಲಿ ಅವನ ಸ್ಥಾನ ಅಷ್ಟು ಹಿರಿದಾದದ್ದು. ಸಮಸ್ತ ಇಂಗ್ಲಿಷ್ ಸಾಹಿತ್ಯವೇ ನಾಶವಾಗಿ ಹೋದರೂ ಮಿಲ್ಟನ್ ಮತ್ತು ಶೇಕ್ಸ್‌ಪಿಯರ್ ಅವರ ಕೃತಿಗಳು ಮತ್ತು ‘ಬೈಬಲ್’ ಉಳಿದುಕೊಂಡರೆ ಇಂಗ್ಲಿಷ್ ಸಾಹಿತ್ಯದ ಹಿರಿಮೆ ಆಚಂದ್ರಾರ್ಕವಾಗಿ ಉಳಿದು ಬರುತ್ತದೆಂದು ಹೇಳಲಾಗಿದೆ.[1] ಹೀಗಾಗಿ, ನಿಸಾರ್ ಅವರ ಗಮನವನ್ನು ಶೇಕ್ಸ್‌ಪಿಯರ್ ಸೆಳೆದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಈ ಎರಡು ನಾಟಕಗಳನ್ನೇ ಆಯ್ದುಕೊಂಡದ್ದಕ್ಕೆ ಅವರು ಕಾರಣವನ್ನೇನೂ ಕೊಟ್ಟಿಲ್ಲ. ಶೇಕ್ಸ್‌ಪಿಯರ್‌ನ ಸಮಗ್ರ ಕೃತಿಗಳ

1. ‘For the teaching and preaching of English literature, Milton ranks with Shakespeare and the Authorised Version’ ಎಂಬುದು ಪ್ರಸಿದ್ಧವಾಗಿರುವ ಒಂದು ಸೂಕ್ತಿ.

ಡೇವಿಡ್ ಬೆವಿಂಗ್‌ಟನ್ ಅವರ ಸಂಪುಟಗಳಿಗೆ ಜೋಸೆಫ್ ಪ್ಯಾಪ್ ಅವರು ಬರೆದಿರುವ ಮುನ್ನುಡಿಗಳಲ್ಲಿ ಈ ನಾಟಕಗಳ ಹಿರಿಮೆ, ಮಹತ್ವಗಳನ್ನು ಸ್ಪಷ್ಟಪಡಿಸಿದ್ದಾರೆ. 'ಡ್ರೀಮ್' ನಾಟಕದ ಮುನ್ನುಡಿಯಲ್ಲಿ ಅವರು ಹೀಗೆಂದು ಹೇಳಿದ್ದಾರೆ: 'This play develops the motif of love as an imaginative journey from reality into a fantasy world created by the artist, ending in a return to a reality that has itself been transformed by the experience of the journey (Shakespeare gives us an eralier tint of such an imaginary sylvan landscape in 'The Two Gentlemen of Verona'). This motif, with its contrasting worlds of social order and imaginative escape, remained an enduring vision for Shakespeare to the very last.'[2] ನಿಸಾರ್ ಅವರು ತಮ್ಮ ಪರಿಚಯಾತ್ಮಕ ಮಾತುಗಳಲ್ಲಿ ಇದೇ ಅರ್ಥದ ಮಾತುಗಳನ್ನು ಆಡಿದ್ದಾರೆಂಬುದು ಗಮನಾರ್ಹ ಸಂಗತಿಯಾಗಿದೆ: 'ಕಟ್ಟುಕಥೆಯಂತೆಯೋ, ಕನಸಿನಂತೆ ಅಸಂಬದ್ಧವೆನಿಸುವಂತೆಯೋ ತೋರುವ 'ಡ್ರೀಮ್' ನಾಟಕದ ಕಥಾವಸ್ತು, ಭಾವಗೀತಾತ್ಮಕತೆ ಯಿಂದ (Lyrical quality) ಪ್ರಾಪ್ತವಾಗುವ ಏಕತೆಯಿಂದ ಒಂದು ಭ್ರಾಮಕ ಜಗತ್ತನ್ನೇ (Fantasy) ನಿರ್ಮಿಸಿ, ಅದನ್ನು ವಾಸ್ತವಿಕ ನೆಲೆಗಟ್ಟಿನಿಂದ ನೋಡುವಂತೆ ನಮ್ಮ ಕಲ್ಪನೆಯನ್ನು ಕೆರಳಿಸುತ್ತದೆ; ಭಾವುಕರನ್ನಾಗಿಸುತ್ತದೆ.'[3] ಅಂತೆಯೇ, ಪ್ಯಾಪ್ ಅವರು 'ಒಥೆಲೊ' ಬಗ್ಗೆ ಈ ಮಾತುಗಳನ್ನಾಡಿದ್ದಾರೆ: 'Othello shares with these other plays ('ಹ್ಯಾಮ್ಲೆಟ್', 'ಕಿಂಗ್ ಲಿಯರ್' ಮತ್ತು 'ಮ್ಯಾಕ್‌ಬೆತ್') a fascination with evil in its most virulent and universal aspect. These plays study the devastating effects of ambitious pride, ingratitude, wrath, jealousy and vengeful hate—the deadly sins of the spirit—with only a passing interest in the political strife... of the four, Othello is the most concentrated upon one particular evil... Othello is a tragic portrait of a marriage.'[4] ನಿಸಾರ್ ಅವರು ಹೇಳುವ ಈ ಮಾತುಗಳ ಸಂವಾದಿತ್ವ ನಮ್ಮನ್ನು ಬೆರಗಾಗಿಸುತ್ತದೆ: ' 'ಒಥೆಲೊ' ಮೂಲತಃ ಗೃಹಸ್ಥ ಧರ್ಮದ ಕೌಟುಂಬಿಕ ಕಥೆ. ಷೇಕ್ಸ್ ಪಿಯರನ ಇತರ ನಾಟಕಗಳ ವಸ್ತುಗಳಂತೆ ರಾಜಕೀಯಕ್ಕೊ, ಇನ್ನಿತರ ಸಾಮಾಜಿಕ ಕಾರಣಕ್ಕೊ ಅಥವಾ ರಾಜ ಯುದ್ಧ, ಅರಮನೆಗೊ ತೆಕ್ಕೆ ಹಾಕಿಕೊಂಡದ್ದಲ್ಲ; ನಮ್ಮ ಸಂವೇದನೆಯ ನಿಲುಕಿಗೆ ದೂರವಾದದ್ದಲ್ಲ. ಅದು ನಮ್ಮ ಪರಿಸರದಲ್ಲಿ ಅರಳಿ ನಿಂತಿರುವ ಕಥೆ. ಒಂದು ಗಂಡು-ಒಂದು ಹೆಣ್ಣು, ಅದರ ನಡುವಣ ತೀರ ಆಳದ ಖಾಸಗಿ ಸಂಬಂಧ, ಸಂದರ್ಭಗಳಿಗೆ ಅವರ

---

2 The Complete Works of William Shakespeare, Vol. II, Ed.: David Bevington with forewords by Joseph Papp; Introduction, P. 1.

3 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್', ಮುನ್ನುಡಿ, ಪು. ix: ಪ್ರ.: ಲಿಪಿ ಪ್ರಕಾಶನ: 1991ರ 3ನೆಯ ಆವೃತ್ತಿ.

ಪ್ರತಿಕ್ರಿಯೆ—ಇದು ಅದರ ಅಕ್ಷ. ಕಥೆಗೂ ನಮಗೂ ಆಪ್ತ ಸಂಬಂಧ ಸ್ವಾಭಾವಿಕವಾಗಿಯೇ ಏರ್ಪಡುವುದರಿಂದ ಉಪಕಥೆ, ಉಪಘಟನೆ ಅದನ್ನು ಬಳಸಾಗಿಸದೆ ಇರುವುದರಿಂದ ಇದು ನೇರವಾಗಿ ನಮ್ಮ ಹೃದಯದಿಂದ ಕನಿಕರ ಮರುಕಗಳನ್ನು ಯಥೇಚ್ಛ ಪ್ರಮಾಣದಲ್ಲಿ ಹಿಂಡಲು ಸಮರ್ಥವಾಗುತ್ತದೆ,[5] ಈ ನಾಟಕದ ಬಗೆಗಿನ ವಿವೇಚನೆಯಲ್ಲಿ ಶೇಕ್ಸ್‌ಪಿಯರನ ಪ್ರತಿಭೆ ನಿಸಾರ್ ಅವರನ್ನು ಸೆರೆ ಹಿಡಿದಿರುವ ಬಗೆ, ಅವರ ಈ ಮಾತುಗಳ ಮೂಲಕ ನಿಚ್ಚಳವಾಗಿ ಅರಿವಾಗುತ್ತದೆ: 'ಷೇಕ್ಸ್‌ಪಿಯರ್‌ನ ಬ್ರಹ್ಮಸದೃಶ ಸೃಷ್ಟ್ಯಾತ್ಮಕ ಶಕ್ತಿ ಒಂದು ನಿತ್ಯಾಗ್ನಿ. ಅದೊಂದು ಸೂರ್ಯ: ಹತ್ತಿರವಾಗಿ ಕಾಣುತ್ತದೆ; ಆದರೆ ದೂರ ನೆಲಸಿರುತ್ತದೆ. ಉಗಮ ಗೊತ್ತಿರದಿದ್ದರೂ ಅದರ ಬೆಳಕಿನ ಸ್ವರೂಪವನ್ನು ಒಂದು ಹಂತದ ತನಕ ಪತ್ತೆ ಹಚ್ಚಿರುವುದು ವ್ಯಾಖ್ಯೆ, ವಿಮರ್ಶೆಯ ಸ್ಪೆಕ್ಟ್ರಾಸ್ಕೋಪು ಎನ್ನುವುದು ಮಹತ್ವದ ಸಂಗತಿ.'[6] ಈ ಮಾತು ನಿಸಾರ್ ಅವರು ಶೇಕ್ಸ್‌ಪಿಯರ್‌ನನ್ನು ಕುರಿತ ವ್ಯಾಖ್ಯೆ ಮತ್ತು ವಿಮರ್ಶೆಗಳನ್ನು ಸಾಕಷ್ಟು ಪ್ರಮಾಣದಲ್ಲಿಯಾದರೂ ಕಣ್ಣಾಡಿಸಿ ನೋಡಿದ್ದಾರೆಂಬುದನ್ನು ಸ್ಪಷ್ಟಪಡಿಸುತ್ತದೆ.

೨

'ಡ್ರೀಮ್' ನಾಟಕಕ್ಕೆ ಮುನ್ನುಡಿಯನ್ನು ಬರೆದಿರುವ ಮಾಸ್ತಿಯವರ ಕೆಲವು ಮಾತುಗಳನ್ನು ಇಲ್ಲಿಯೇ ಉದ್ಧರಿಸುವುದು ಸೂಕ್ತವೆಂದು ತೋರುತ್ತದೆ. ನಿಸಾರ್ ಅವರ ಅನುವಾದವನ್ನು 'ಮೂಲ ಕೃತಿಯ ಒಂದು ಯಶಸ್ವೀ ಛಾಯಾನುವಾದ ಆಗಿದೆ'[7] ಎಂದು ಹೇಳಿದ್ದಾರೆ. ಆದರೆ, ನಿಸಾರ್ ಅವರು ಈ ಅಭಿಪ್ರಾಯವನ್ನು ಒಪ್ಪಿಲ್ಲ: 'ಅದು ಅನುವಾದವೇ ಹೊರತು ಛಾಯಾಕೃತಿಯಾಗದು ಎಂಬುದು ನನ್ನ ಖಚಿತವಾದ ನಂಬಿಕೆ'[8] ಎಂಬುದು ಅವರ ಮಾತು. ಮಾಸ್ತಿಯವರು ತಮ್ಮ ಅಭಿಪ್ರಾಯಕ್ಕೆ ಕೊಟ್ಟಿರುವ ಕಾರಣಗಳು ಹೀಗಿವೆ: 'ಭಾಷಾಂತರ ಮೂಲದ ಯಾವ ಮಾತನ್ನೂ ಬಿಡಬಾರದು. ಮೂಲಕ್ಕೆ ಯಾವ ಮಾತನ್ನೂ ಸೇರಿಸಬಾರದು. ಮೂಲದ ಯಾವ ಮಾತನ್ನೂ ತೀರ ಬೇರೆ ಮಾಡಬಾರದು. ಇಂಥ ಭಾಷಾಂತರ ಮಾಡಿದ್ದರೆ ಈ ನಾಟಕ ಈ ಕೃತಿಯಲ್ಲಿ ಈಗ ಇರುವಂತೆ ಇರುವುದಿಲ್ಲ.'[9] ಮುಂದುವರಿದು ಅವರು ಹೀಗೆ ವಾದಿಸಿದ್ದಾರೆ: 'ಶ್ರೀ ನಿಸಾರ್ ಅಹಮದರು ಕೆಲವೆಡೆ ಸರಳ-ರಗಳೆಯನ್ನೂ ಕೆಲವೆಡೆ ಬೇರೆ ರೂಪದ ಛಂದಸ್ಸಿನ ಪದ್ಯವನ್ನೂ ಬಳಸಿದಾರೆ. ಆಗಾಗ ಮಾತುಗಳನ್ನು ಬಿಟ್ಟಿದಾರೆ; ಬೇರೆ ಮಾತುಗಳನ್ನು ಹಾಕಿದಾರೆ... ನಮ್ಮಲ್ಲಿ ಇಂಥ ಆವೃತ್ತಿಯನ್ನು ಛಾಯಾನುವಾದ ಎನ್ನುತ್ತಾರೆ ಎಂದು ಕಾಣುತ್ತದೆ. ಈ ಕಾರಣದಿಂದ ಮೂಲದೊಂದಿಗೆ ಹೋಲಿಸಿದಾಗ ಇಲ್ಲಿ ಅದರ ಕಾವ್ಯಭಾಗ ಕೆಲವು ಬಿಟ್ಟುಹೋಗಿದೆ, ಸ್ವಲ್ಪ

5. 'ಒಥೆಲೊ', ೨೦೦೪ರ ಜನೆಯ ಸಪ್ನ ಬುಕ್ ಹೌಸ್ ಆವೃತ್ತಿ: 'ಒಥೆಲೊ: ಒಂದು ವಿವೇಚನೆ'. ಪು. 19.

6. ಅದೇ, ಪು. 5-6.

7. 'ಡ್ರೀಮ್' ನಾಟಕದ ಮುನ್ನುಡಿ, ಪು. v.

8. ಅದೇ, ಪು. x.

9. ಅದೇ, ಪು. v.

10. ಅಲ್ಲೇ.

ಬೇರೆಯಾಗಿದೆ ಎನ್ನಿಸುತ್ತದೆ... ಈ ಪರಿವರ್ತನದಲ್ಲಿ ಮಾತು ಅಲ್ಲಲ್ಲಿ ಸ್ವಲ್ಪ ಬೇರೆಯಾಗಿರಬೇಕಾಗಿತ್ತೇನೋ ಎನ್ನಿಸಬಹುದು.'[10] ನಿಸಾರ್ ಅವರು ಇದರ ಬಗ್ಗೆ ನೀಡುವ ಸ್ಪಷ್ಟೀಕರಣ ಹೀಗಿದೆ: 'ಅಂಥ ಅನುವಾದ ಕೇವಲ ಯಾಂತ್ರಿಕ ಕ್ರಿಯೆ ಮಾತ್ರ ಆಗಬಲ್ಲದು. ಷೇಕ್ಸ್‌ಪಿಯರ್ ಮೂರೂವರೆ ಶತಮಾನಕ್ಕೂ ಮುಂಚೆ ಬರೆದ, ನಮ್ಮ ಪರಿಸರಕ್ಕೆ ಅಪರಿಚಿತವಾದ ಕೃತಿಯನ್ನು ಕನ್ನಡಕ್ಕೆ ತರುವಾಗ, ಕೆಲವು ಅನಾವಶ್ಯಕ ಸಂಗತಿಗಳನ್ನು ಕೈಬಿಡುವುದೂ, ಒಂದೆರಡು ಕಡೆ ಅರ್ಥಸ್ಪಷ್ಟತೆಗೋಸ್ಕರ ಒಂದು ವಾಕ್ಯ ಸೇರಿಸುವುದೂ ಅತ್ಯಂತ ಅನಿವಾರ್ಯವಾಗುತ್ತದೆ. ಎಲಿಜಬೆತನ್ ಕಾಲದ ಪ್ರೇಕ್ಷಕರಿಗೆ, ಇಲ್ಲವೇ ಓದುಗರಿಗೆ ಪರಿಚಿತವಾದ ಸಂಗತಿಗಳು ಇವತ್ತಿನ ಆಂಗ್ಲ ಜನತೆಗೇ ಗೊಂದಲವಾಗಿ ಕಂಡುಬರುವಾಗ, ನಮ್ಮ ಕನ್ನಡಿಗರಿಗೆ ಅವು ಇನ್ನೂ ಹೆಚ್ಚು ದೂರವಾಗುವುದು ಸಹಜ. ಆದ್ದರಿಂದ ಇವತ್ತಿನ ಜೀವಂತ ಕನ್ನಡವನ್ನೂ ಬಳಸುವುದರ ಜೊತೆಗೆ, ಒಂದೆರಡು ವಿಷಯಗಳನ್ನು ವಿಶದೀಕರಿಸುವುದೂ ತೀರಾ ಅನಗತ್ಯವಾದ ಒಂದೆರಡನ್ನು ಬಿಡುವುದು ಅಗತ್ಯವಾಗುತ್ತದೆ.[11] ಮಾಸ್ತಿಯವರು ಹೇಳುವ ಮಾತುಗಳು ಸರಿಯೆಂದು ತೋರುವಂತೆಯೇ, ನಿಸಾರ್ ಅವರ ವಾದವೂ ಸಕಾರಣವಾಗಿದೆ ಎಂದು ತೋರುತ್ತದೆ. ಹೋಮರನ ಅನುವಾದದ ಸಂದರ್ಭದಲ್ಲಿ ಮ್ಯಾಥ್ಯೂ ಆರ್ನಾಲ್ಡ್ ಎತ್ತಿದ ಇಂಥ ಆಕ್ಷೇಪಗಳನ್ನು ಹಾಗೂ ಅದಕ್ಕೆ ಅನುವಾದಕರು ಕೊಟ್ಟಿರುವ ವಿವರಣೆಯನ್ನು ನೋಡಿದಾಗ ಇಂಥ ಅನುಭವವಾಗುತ್ತದೆ ಎಂಬ ವಿಮರ್ಶಕರೊಬ್ಬರ ಮಾತು ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುತ್ತಿದೆ. ಈ ವಿಚಾರವನ್ನು ಮುಂದೆ ಪರಿಶೀಲಿಸಬಹುದು.

ಶೇಕ್ಸ್‌ಪಿಯರನ ಕೃತಿಗಳನ್ನು ಅನುವಾದಿಸುವ ಸಂದರ್ಭದಲ್ಲಿ, ಶೇಕ್ಸ್‌ಪಿಯರನ ಕಾಲದಲ್ಲಿ ಆ ಮಾತುಗಳಿಗೆ ಇದ್ದ ಅರ್ಥವೇನೆಂಬುದನ್ನು ಸಮರ್ಪಕವಾಗಿ ಗ್ರಹಿಸುವುದು ಮೊಟ್ಟ ಮೊದಲ ಅಗತ್ಯವಾಗುತ್ತದೆ. ಇದನ್ನು ಅನುವಾದಕನ ಮೊದಲ ಕರ್ತವ್ಯವೆಂದೇ ಭಾವಿಸಲು ಅಡ್ಡಿಯಿಲ್ಲ. ಈ ದೃಷ್ಟಿಯಿಂದಲೇ ಇಂಗ್ಲಿಷ್‌ನಲ್ಲಿ Shakespearean Glossaryಯನ್ನು ಸಿದ್ಧಪಡಿಸಲಾಗಿದೆ. ಈ ಸಂಗತಿಯ ಅರಿವಿಲ್ಲದೆ ಹೋದರೆ, ಅನುವಾದ ದಾರಿ ತಪ್ಪಿ ಹೋಗುತ್ತದೆಂಬುದರಲ್ಲಿ ಅನುಮಾನವೇ ಇಲ್ಲ. ಡೇವಿಡ್ ಬೆವಿಂಗ್‌ಟನ್ ಅವರ ಸಂಪಾದಿತ ಆವೃತ್ತಿಯ ವೈಶಿಷ್ಟ್ಯವೆಂದರೆ ಇಂಥ ಅರ್ಥಗಳೆಲ್ಲವನ್ನೂ ಉದ್ದಕ್ಕೂ ಅಡಿಟಿಪ್ಪಣಿಗಳಾಗಿ ಕೊಟ್ಟುಕೊಂಡು ಹೋಗಿರುವುದು, ನಿದರ್ಶನಾರ್ಥಕವಾಗಿ ಈ ಎರಡು ನಾಟಕಗಳಲ್ಲಿಯೇ ಬರುವ ಇಂಥ ಒಂದೆರಡು ಶಬ್ದಗಳನ್ನು ನೋಡಬಹುದು. ಮೊದಲಿಗೆ 'ಡ್ರೀಮ್'ನಿಂದ:

(i) **Immediately** directly, with nothing intervening (45) (1.1)

(ii) **schooling** admonition (116) (1.1)

(iii) **friends** relatives (139) (1.1)

---

11. ಅದೇ, ಪು. ix-x.

(iv) **confusion** ruin (149) (1.1)

(v) **fold** pen for sheep or cattle (96) (2.1)

(vi) **adamant** lodestone, magnet (with pun on hardhearted, since adamant was also thought to be the hardest of all stones and was confused with the diamond) (195) (2.1)

ಈಗ 'ಒಥೆಲೊ'ನಿಂದ:

(i) **term** respect (40) (1.1)

(ii) **peculiar** particular, personal (62) (1.1)

(iii) **nephews** i.e., grandsons (115) (1.1)

(iv) **check** rebuke (152) (1.1)

(v) **simple** sincere (110) (1.1)

(vi) **odd-even** between one day and the next, i.e.. about midnight (126) (1.1)

ಇವುಗಳಲ್ಲಿ ಕೆಲವೊಂದು ಅರ್ಥಗಳು ಸಾಮಾನ್ಯ ಕೋಶಗಳಲ್ಲಿಯೂ—ಉದಾಹರಣೆಗೆ, **The Concise Oxford Dictionary**ಯಲ್ಲಿ—ದಾಖಲೆಗೊಂಡಿರಬಹುದಾದರೂ ಈ ಅರ್ಥದಲ್ಲಿಯೇ ಅದನ್ನು ಶೇಕ್ಸ್‌ಪಿಯರ್ ಬಳಸಿದ್ದಾನೆಂಬುದು ಖಚಿತವಾಗಿ ತಿಳಿದು ಬರುವುದಿಲ್ಲ; ಕೆಲವು ಅರ್ಥಗಳು ನಮೂದಿತವಾಗದೆಯೂ ಇರಬಹುದು. ಅಷ್ಟೇ ಅಲ್ಲ, ಇದೇ ಇಲ್ಲಿಗೆ ಸಂಗತವಾದ ಅರ್ಥ ಎಂದು ಅನುವಾದಕನ ಮನಸ್ಸು ಯೋಚಿಸದೆಯೂ ಹೋಗಬಹುದು; ಅಥವಾ ತನಗೆ ಪರಿಚಿತವಾಗಿರುವ ಅರ್ಥವನ್ನೇ ಅನ್ವಯಿಸಿಕೊಂಡು ಬಿಡಬಹುದು. **Shakespearen Glossary** ಅಥವಾ ಬೆವಿಂಗ್‌ಟನ್ ಆವೃತ್ತಿ ಇಂಥ ಅಪಾಯ-ಸಂಭವಗಳಿಂದ ನಮ್ಮನ್ನು ಪಾರುಮಾಡುತ್ತದೆ. 'ಡ್ರೀಮ್'ನ ಅನುವಾದಕ್ಕೆ ಯಾವ ಯಾವ ಆವೃತ್ತಿಗಳನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ನಿಸಾರ್ ಅವರು ಸ್ಪಷ್ಟಪಡಿಸಿಲ್ಲವಾದರೂ 'ಒಥೆಲೊ' ಅನುವಾದಕ್ಕೆ ಅವರು Signet, Penguin ಮತ್ತು Arden ಆವೃತ್ತಿಗಳನ್ನು ಬಳಸಿಕೊಂಡಿರುವುದಾಗಿ ತಿಳಿಸಿದ್ದಾರೆ (ಪು. 53). ಈ ಆವೃತ್ತಿಗಳಲ್ಲಿ ವಿಶೇಷಾರ್ಥಗಳನ್ನು ಸೂಚಿಸಲಾಗಿದೆಯೇ ಎಂಬುದನ್ನು ಕಾಲಾವಕಾಶದ ಕೊರತೆಯಿಂದಾಗಿ ನೋಡಲು ಸಾಧ್ಯವಾಗಿಲ್ಲ. ಆದರೆ, ನಿಸಾರ್ ಅವರು ಇಂಥ ವಿಶೇಷಾರ್ಥಗಳನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆಂಬುದಕ್ಕೆ ಅವರ ಈ ಎರಡೂ ಅನುವಾದಗಳು ಸಾಕ್ಷ್ಯವನ್ನು ನುಡಿಯುತ್ತವೆ—ಕೆಲವು ಕಡೆಗಳಲ್ಲಿ ಕಣ್ತಪ್ಪಿಸಿವೆಯಾದರೂ. ಉದಾಹರಣೆಗೆ, 'ಒಥೆಲೊ' ನಾಟಕದ ಈ ವಾಕ್ಯವನ್ನು ನೋಡಬಹುದು:

ಮೂಲ : 'Let her have your voice.' (1.3) 263)

ಅನು. : 'ನಿಮ್ಮೆಲ್ಲರ ಆಶ್ವಾಸನೆ ಈಕೆಗಿರಲಿ.' (ಪು. 85)

ಇಲ್ಲಿ 'voice' ಶಬ್ದಕ್ಕೆ 'ಆಶ್ವಾಸನೆ' ಸರ್ವಥಾ ಅಸಂಗತವಾದ ಪರ್ಯಾಯವಲ್ಲ

ವಾದರೂ ಅದು 'assurance' ಎಂಬ ಅರ್ಥಛಾಯೆಯತ್ತ ನಮ್ಮನ್ನು ಎಳೆದೊಯ್ಯುತ್ತದೆ ಎಂಬುದನ್ನು ಅಲ್ಲಗಳೆಯಲಾಗದು. ಇಲ್ಲಿ ಸಂಗತವಾಗಿರುವ ಅರ್ಥ 'consent' ಎಂಬುದು ಎಂದು ಬೆವಿಂಗ್‌ಟನ್ ಅವರ ಆವೃತ್ತಿಯಲ್ಲಿ ಸ್ಪಷ್ಟವಾಗಿ ಸೂಚಿಸಿರುವುದರಿಂದ 'ಒಪ್ಪಿಗೆ' ಎಂಬ ಶಬ್ದ ಹೆಚ್ಚು ಉಚಿತವಾಗಬಹುದಿತ್ತು ಎನ್ನಿಸುತ್ತದೆ.[12]

ಈಗ ನಿಸಾರ್ ಅವರ ಅನುವಾದವನ್ನು ಒರೆ ಹಚ್ಚಿ ನೋಡುವ ಪ್ರಯತ್ನವನ್ನು ಮಾಡಬಹುದಾಗಿದೆ—'ಕುಂಭೀಪುಲಾತನ್ಯಾಯ'ದಂತೆ. ಶೇಕ್ಸ್‌ಪಿಯರನ ನಾಟಕದಲ್ಲಿ ಸಂಭಾಷಣೆಯ ಬಿಗಿ ಮತ್ತು ಅರ್ಥಪೂರ್ಣತೆ, ಕಾವ್ಯಮಯತ್ವ ಹಾಗೂ ನವುರಾದ ಹಾಸ್ಯ ಬೆರೆತು ಬರುವುದರಿಂದ, ಅಂಥ ಪ್ರಸಂಗಗಳನ್ನೇ ಆಯ್ದುಕೊಂಡು, ಅವರು ಬಿಟ್ಟಿರುವುದೇನನ್ನು, ಸೇರಿಸಿರುವುದೇನನ್ನು, ಬದಲಾಯಿಸಿರುವುದೇನನ್ನು, ಎಲ್ಲೆಲ್ಲಿ ಭಾರತೀಕರಣಗೊಳಿಸಿದ್ದಾರೆ ಎಂಬುದನ್ನು ಪರಿಶೀಲಿಸಬಹುದಾಗಿದೆ. ಮೊದಲಿಗೆ 'ಡ್ರೀಮ್'ಅನ್ನು ನೋಡೋಣ.

ನಿಸಾರ್ ಅವರ ಅನುವಾದ ಬಹುಮಟ್ಟಿಗೆ[13] ಸಹಜವಾದ ಕನ್ನಡದಲ್ಲಿ ಮೈದಳೆದು ನಿಲ್ಲುತ್ತದೆ ಹಾಗೂ ಓದುಗರ ಮನಸ್ಸನ್ನು ಸೆರೆ ಹಿಡಿಯುತ್ತದೆ ಎಂಬುದು ಮೊದಲಿಗೇ ಎದ್ದು ಕಾಣುವ ಸಂಗತಿ. ಈ ಕಾರಣದಿಂದಾಗಿಯೇ ರಂಗಭೂಮಿಯಲ್ಲಿಯೂ ಅದು ಪರಿಣಾಮಕಾರಿಯಾಗುತ್ತದೆ. ಉದಾಹರಣೆಗೆ, ಈ ಭಾಗವನ್ನು ನೋಡಬಹುದು:

'ಥೀಸಿಯಸ್ : ನೀನೇನು ಹೇಳುತ್ತೀಯ ಹರ್ಮಿಯ? ಸರಿಯಾಗಿ
ಆಲೋಚಿಸು ಮುಗ್ಧೆ;
ಹೆಣ್ಣಿಗೆ ತಂದೆ ದೈವ ಸಮಾನ;
ನಿನ್ನ ಅತಿಶಯ ಚೆಲುವಿಕೆಗೆ ರೂವಾರಿಯಾತ—ಹೌದು,
ಮೇಣದಲ್ಲಿ ಅವನೊತ್ತಿದಾಕೃತಿಯ ತೆರ ನೀನು;
ಹಾಗೆಯೇ, ಉಳಿಸಲೊ, ಒಡೆದು ಅಂದಗೊಳಿಸಲೊ
ಹಕ್ಕಿರುವುದಾತನಿಗೆ.
ಅವನಾರಿಸಿದ ಡೆಮಿಟ್ರಿಯಸ್ ಸರ್ವಯೋಗ್ಯ.
ಹರ್ಮಿಯ : ಲೈಸ್ಯಾಂಡರ್ ಕೂಡ.
ಥೀಸಿಯಸ್ : ತನಗೆ ತಾನೇ ಯೋಗ್ಯನೆ;
ಆದರೀ ವ್ಯವಹಾರದಲ್ಲಿ ನಿನ್ನ ತಂದೆಯನುಮತಿಗೆ

---

12. ನೋಡಿ: 263 (1.3).

13. 'Gentleman', 'Noble' ಶಬ್ದಗಳನ್ನು ಇಂಗ್ಲಿಷ್‌ನಲ್ಲಿ ಬಳಸುವಷ್ಟು ಸರಜವಾಗಿ ಮತ್ತು ಸರಳವಾಗಿ ನಮ್ಮ ಸಂಸ್ಕೃತಿಯಲ್ಲಿ ಬಳಸುವುದಿಲ್ಲ. ಹೀಗಾಗಿ. 'ಸಭ್ಯ ಈಗಿಯಸ್' (ಪು. 2). 'ಉದಾತ್ತ ಪ್ರಭು' (ಅಲ್ಲೇ) ಎಂಬಂಥ ಪ್ರಯೋಗಗಳು ಅಷ್ಟಾಗಿ ಹಿತವಾಗಿ ಕಾಣುವುದಿಲ್ಲ. ವಾಸ್ತವವಾಗಿ 'Gentleman' ಶಬ್ದದ ಅರ್ಥಛಾಯೆಗಳನ್ನೊಳಗೊಂಡಿರುವಂಥ ಒಂದು ಸೂಕ್ತ ಶಬ್ದವನ್ನು ನಾವಿನ್ನೂ ಕಂಡುಕೊಂಡಿಲ್ಲ. 'ಆರ್ಯ' ಶಬ್ದ ಆ ಸಂಸ್ಕೃತಿಗೆ ಹೊಂದುವುದಿಲ್ಲ.

ಅಪಾತ್ರನಾದ್ದರಿಂದ ಡೆಮಿಟ್ರಿಯಸ್ ಹೆಚ್ಚು ಯೋಗ್ಯ.'[14] (ಪು. 3)

ಈಗ, ಈ ಭಾಗ ಮೂಲದಲ್ಲಿ ಹೇಗೆ ಬಂದಿದೆ ಎಂಬುದನ್ನು ನೋಡಬಹುದು:

'Theseus : What say you, Hermia? Be advised, fair maid,
To you your father should be as a god—
One that composed your beauties, yea, and one
To whom you are but as a form in wax
By him imprinted, and within his power
To leave the figure or **disfigure it.**
Demetrius is a worthy gentleman.
Hermia : So is Lysander.
Theseus : In himself he is;
But in this kind, wanting your father's voice,
The other must be held the worthier.'

[1.1; (ಸಾಲುಗಳು 46ರಿಂದ 55)]

ಬಹುಶಃ ಅಚ್ಚಿನ ತಪ್ಪಿನಿಂದಾಗಿ 'disfigure' ಎಂಬುದರ ಪರ್ಯಾಯ 'ಅಂದಗೊಳಿಸಲೊ' ('ಅಂದಗೆಡಿಸಲೊ' ಎಂಬುದಕ್ಕೆ ಬದಲಾಗಿ) ಎಂಬುದಾಗಿ ಕಾಣಿಸಿಕೊಂಡಿರುವುದನ್ನು ಬಿಟ್ಟರೆ[15] ಉಳಿದ ಸಂಭಾಷಣೆಯ ಭಾಗ ಸಹಜವಾಗಿ ಮೂಡಿಬಂದಿದೆ ಎಂಬ ಭಾವನೆ ಅನಾಯಾಸವಾಗಿಯೇ ಬರುತ್ತದೆ. 'One that composed your beauties' ಎಂಬುದು 'ಚೆಲುವಿಕೆಯ ರೂವಾರಿ' ಎಂದು ಅಳವಟ್ಟಿರುವುದರಲ್ಲಿ, 'ರೂವಾರಿ' ಶಬ್ದ ಎಷ್ಟು ಅರ್ಥಪೂರ್ಣವಾಗಿದೆ ಎಂಬುದನ್ನು ವಿವರಿಸಬೇಕಾದ ಅಗತ್ಯವೇ ಇಲ್ಲ. ಆದ್ದರಿಂದ ನಿಸಾರ್ ಅವರು ಎಂಥ ದಕ್ಷ ಅನುವಾದಕರೆಂಬುದು ತಾನಾಗಿಯೇ ನಮಗೆ ಮನದಟ್ಟಾಗಿಬಿಡುತ್ತದೆ. ಅವರ ಅನುವಾದದ ಯಶಸ್ಸಿಗೂ ಈ ಭಾಗ ಸಾಕ್ಷಿಯಾಗಿ ನಿಲ್ಲುತ್ತದೆ.

ನಿಸಾರ್ ಅವರ ಕಾವ್ಯಪ್ರತಿಭೆ ಹಾಗೂ ಕನ್ನಡ ಭಾಷೆಯ ಮೇಲಿನ ಹಿಡಿತ ಎಂಥ ಅಂತ್ಯಪ್ರಾಸಬದ್ಧವಾದ ಹಾಗೂ ಸೂಕ್ತ ವಿಶೇಷಣಗಳನ್ನೊಳಗೊಂಡ ಸುಂದರ ಕವನವನ್ನು ಹೆಣೆದು ಬಿಡುತ್ತದೆ ಎಂಬುದಕ್ಕೆ ನಿದರ್ಶನವಾಗಿ ಈ ಭಾಗವನ್ನು ನೋಡಬಹುದು:

'Puck : Yet but three? Come one <u>more;</u>
Two of both kinds makes up <u>four.</u>
Here she comes, curst and <u>sad.</u>

14. ಆಸನ್ನಘಟಕದ (immediate constituent) ಸಮಸ್ಯೆಯಿಂದಾಗಿ, 'ನಿನ್ನ ತಂದೆಯನುಮತಿಗೆ ಅಪಾತ್ರನಾದ್ದರಿಂದ' ಎಂಬ ಮಾತು ಡೆಮಿಟ್ರಿಯಸನಿಗೇ ಅನ್ವಯವಾಗಿಬಿಡುವ ಅಪಾಯದಿಂದಾಗಿ ಅರ್ಥಾಂತರವಾಗಿಬಿಡುವ ಸಂಭವವೂ ಇದೆ—ಸನ್ನಿವೇಶವನ್ನೇ ಸರಿಯಾಗಿ ಅರ್ಥಮಾಡಿಕೊಳ್ಳದೆ ಇದ್ದರೆ. 'ಅವನು' ಎಂಬ ಶಬ್ದವನ್ನು ಹೆಚ್ಚುವರಿಯಾಗಿ ಬಳಸಿದ್ದರೆ, ಈ ತೊಂದರೆಯನ್ನೂ ನಿವಾರಿಸಿಬಿಡಬಹುದಾಗಿತ್ತು.

15. 'ಒಡೆದು' ಎಂಬ ಶಬ್ದ ಬಂದಿರುವುದು, ಇದು 'ಮುದ್ರಾರಾಕ್ಷಸನ ಹಾವಳಿ' ಎಂಬುದನ್ನು ಸಾರಿ ಹೇಳುತ್ತದೆ.

Cupid is a knavish lad,
Thus to make poor females mad.'
(3.2; lines 437-441)

ಇದು ಕನ್ನಡದಲ್ಲಿ ಹೀಗೆ ಮೈದಳೆಯುತ್ತದೆ:

'ಇಲ್ಲಿರುವುದು ಬರಿ ಮೂವರು, ಬೇಕು ಇನ್ನೋರ್ವಳು:
ಎರಡು ಗಂಡು, ಎರಡು ಹೆಣ್ಣು—ಸಾಕು ನಾಲ್ಕಾಗಲು.
ಅಂದಗೆಟ್ಟ, ಮೊಗದ ನೊಂದ ಸುಂದರಿ ಅಗೊ ಬಂದಳು.
ಕ್ರೂರನಿರಲೇಬೇಕು ಆ ಕುಚೋದ್ಯ ಮಾರ.
ನಾರಿಯರಿಗೆ ಮರುಳು ಹಿಡಿಸಿ ಅಳಿಸಿ ನಲಿವ ಜಾರ.' (ಪು. 62)

'ಡ್ರೀಮ್'ನಲ್ಲಿ ಹಾಸ್ಯದ ಹುಚ್ಚು ಹೊಳೆಯೇ ಹರಿಯುತ್ತದೆ—ಸ್ನೌಟ್, ಬಾಟಮ್, ಕ್ವಿನ್ಸ್, ಸ್ಟಾರ್ವ್‌ಲಿಂಗ್ ಅವರ ನಡುವಣ ಸಂಭಾಷಣೆಗಳ ಮೂಲಕ ಈ ಹಾಸ್ಯವನ್ನು ಸ್ವಾರಸ್ಯ ಕುಂದದಂತೆ ಅನುವಾದದಲ್ಲಿಯೂ ತರುವುದು ಅನುವಾದಕನಿಗೆ ಸವಾಲೇ ಆಗುತ್ತದೆ.[16] (ಮೂಲ ಭಾಷೆಯ ಶಬ್ದಗಳಲ್ಲಿ ಕಾಕು, ಧ್ವನಿ, ಶ್ಲೇಷಾರ್ಥಗಳಿದ್ದರೆ, ಬಹುಮಟ್ಟಿಗೆ ಅವು ದುರ್ಲಂಘ್ಯವೇ ಆಗಿಬಿಡುತ್ತವೆ.) ಅಂಥ ಒಂದು ಸಂದರ್ಭವನ್ನು ನೋಡೋಣ:

ಮೂಲ: 'Bottom : There are things in this comedy of Pyramus and Thisbe that will never please. First, Pyramus must draw a sword to kill himself, which the ladies can not abide. How answer you that?

Snout : **By'r lakin,** a parlous fear.[17]

Starveling : I believe, we must leave the killing out, when all is done.

Bottom : Not a whit. I have a device to make all well. Write me a **prologue,** and let the prologue seem to say we will do no harm with our swords, and that Pyramus is not killed indeed; and for the more better assurance, tell them that I, Pyramus, am not Pyramus but

---

16 ರಂಗಭೂಮಿಯ ನಿಕಟ ಪರಿಚಯವಿದ್ದ ಎಂ. ಎಲ್. ಶ್ರೀಕಂಠೇಶ ಗೌಡರು ಈ ದೃಶ್ಯವನ್ನು ಅತ್ಯಂತ ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಾರೆ—ರೂಪಾಂತರಕಾರನ ಸ್ವಾತಂತ್ರ್ಯವನ್ನು ಅರ್ಥಪೂರ್ಣ ರೀತಿಯಲ್ಲಿ ಬಳಸಿಕೊಳ್ಳುವ ಮೂಲಕ. ಆದರೆ ಯಥಾವತ್ತಾದ ಅನುವಾದದಲ್ಲಿ ಇದನ್ನು ಸಾಧಿಸುವಲ್ಲಿ ಅನುವಾದಕನ ಪ್ರತಿಭೆಯೇ ಪರೀಕ್ಷೆಗೊಳಗಾಗಿಬಿಡುತ್ತದೆ.

17. ಇದಕ್ಕೆ ಜೆಪಿಂಗ್‌ಟನ್ ಕೊಡುವ ವಿವರಣೆ ಹೀಗಿದೆ : 'by our ladykin, i.e., Virgin Mary, parlous, alarming.' (3.1) (12).

Bottom the weaver. This will put them out of fear.

Quince : Well, we will have such a prologue, and it shall be written in **eight and six.**[18]

Bottom : No make it two more; let it be written in eight and eight.

Snout : Will not the ladies be afeared of the lion?

Starveling : I fear it, I promise you.

Bottom : Masters, you ought to consider with yourselves, to bring in—**God shield us?**—a lion among ladies is a most dreadful thing. For there is not a more fearful wild foul than your lion living; and we ought to look to it.

Snout : Therefore another **prologue** must tell he is not a lion.

Bottom : Nay, you must name his name, and half his face must be seen through the lion's neck, and he himself must speak through, saying thus...: 'Ladies'—or 'Fair Ladies—I would wish you'—or 'I would request you'—or 'I would entreat you—not to fear, not to tremble; my life for yours... No, I am no such thing; I am a man as other men are'... and tell them plainly he is snug the joiner.

Quince : Well, it shall be so. But there is two hard things: that is, to bring the moonlight into a chamber; for you know, Pyramus and Thisbe meet by moonlight.

Snout : Doth the moonshine that night, we play our play?

Bottom : A calendar, a calendar! Look in the almanac. Find out moonshine, find out moonshine.' (3.1; 8-50)

ಇದನ್ನು ನಿಸಾರ್ ಅವರು ಹೀಗೆ ಕನ್ನಡಕ್ಕೆ ತಂದುಕೊಂಡಿದ್ದಾರೆ:

18. ಇದಕ್ಕೆ ಕೊಡಲಾಗಿರುವ ವಿವರಣೆ : 'alternate lines of eight and six syllables, a common ballad measure.' (3.1) (22).

ಬಾಟಮ್ : ... ಮೊದಲನೆಯದಾಗಿ ಪಿರಮಸ್ ತನ್ನ ಜೀವ ತಕೊಳ್ಳೋಕೆ ಕತ್ತಿ ಹಿರೀತಾನಲ್ಲ—ಅದನ್ನ ಹೆಂಗಸ್ರು ತಡ್ಕೊಳ್ಳೋದು ಕಷ್ಟವೆ. ಅದನ್ನ ಹೇಗಪ್ಪ ನಿವಾರಿಸೋದು?

ಸ್ನೌಟ್ : ನಮ್ಮ ತಾಯಾಣೆಗೂ ಇದು ಭಯ ಬರಿಸುವಂಥದ್ದೆ.

ಸ್ಟಾರ್ವಲಿಂಗ್ : ಪಿರಮಸ್ ತನ್ನ ಜೀವ ತಗೊಳ್ಳೋ ಭಾಗವನ್ನೇ ತೆಗೆದುಹಾಕಿದರೆ ಹೇಗೆ?

ಬಾಟಮ್ : ಖಂಡಿತಾ ಹಾಗೆ ಮಾಡೋಕೆ ಆಗೊಲ್ಲ. ನನಗೊಂದು ಉಪಾಯ ಹೊಳೀತಿದೆ. ನಾಟಕ ಶುರುವಾಗೋಕೆ ಮುಂಚೆನೇ ಪೀಠಿಕಾಪ್ರಾಯವಾಗಿ ಒಂದು ನಾಂದೀ ಪದ್ಯಾನ ಓದ್ಬಿಡೋದು! ನಾವು ಬಳಸೋ ಕತ್ತಿಗಳಿಂದ ಏನೂ ಅನಾಹುತವಾಗೊಲ್ಲ, ಪಿರಮಸ್ ನಿಜವಾಗ್ಲೂ ಅದರಿಂದ ಸಾಯೊಲ್ಲ ಅಂತ. ಅದನ್ನು ಇನ್ನೂ ಹೆಚ್ಚು ಖಚಿತಪಡಿಸಬೇಕಾದ್ರೆ ಪ್ರೇಕ್ಷಕರಿಗೆ ಹೀಗೆ ತಿಳಿಸೋಣ: ನಿಮ್ಮ ಮುಂದೆ ಬರೋನು ನಿಜವಾದ ಪಿರಮಸ್ ಅಲ್ಲ; ಅವನು ನಿಮಗೆಲ್ಲ ಪರಿಚಿತನಾದ ನೇಕಾರ ನಿಕ್ ಬಾಟಮ್ ಅಂತ. ಹೀಗ್ಮಾಡಿದ್ರೆ ಅವರ ಭಯಕ್ಕೆ ಆಸ್ಪದವಿರೋಲ್ಲ.

ಕ್ವಿನ್ಸ್ : ಒಳ್ಳೇ ವಿಚಾರ, ಒಂದು ನಾಂದೀ ಪದ್ಯಾನ ಎಂಟು, ಆರು ಮಾತ್ರಾಗಣಗಳಲ್ಲಿ ಬರೆದು ಓದೋದೆ ಒಳ್ಳೇದು.

ಬಾಟಮ್ : ಇಲ್ಲ, ಇನ್ನೆರಡು ಮಾತ್ರೆ ಸೇರಿಸು: ಎಂಟು, ಎಂಟು.

ಸ್ನೌಟ್ : ಸಿಂಹಾನ ಕಂಡ್ರೆ ಹೆಂಗಸ್ರು ಹೆದರೊಲ್ವೆ?

ಸ್ಟಾರ್ವಲಿಂಗ್ : ಖಂಡಿತ ಹೆದರ್ತಾರೆ, ಸಂದೇಹಾನೆ ಬೇಡ.

ಬಾಟಮ್ : ಗೆಳೆಯರೆ, ಈ ವಿಷಯಾನ ನಿಮ್ಮಲ್ಲೇ ಆಲೋಚಿಸಿ ಒಂದು ನಿರ್ಧಾರಕ್ಕೆ ಬರೋದು ಒಳ್ಳೇದು. ರಂಗದ ಮೇಲೆ ಆ ಪ್ರಾಣೀನ್ನ ತರೋದೊಂದ್ರೆ, ಅದೂ ಹೆಂಗಸ್ರಿರೋವಾಗ—ದೇವ್ರೆ ಕಾಪಾಡ್ಬೇಕು! ತುಂಬಾ ಅಪಾಯದ ಸಮಸ್ಯೆ ಇದು. ಬದುಕಿರೋ ಸಿಂಹಕ್ಕಿಂತ ಭೀಕರ ಪ್ರಾಣಿ ಯಾವುದಿದೆ? ಆದ್ರಿಂದ ಈ ವಿಷಯದಲ್ಲಿ ಎಷ್ಟು ಜಾಗರೂಕತೆ ವಹಿಸಿದ್ರೂ ಸಾಲದು.

ಸ್ನೌಟ್ : ಇನ್ನೊಂದು ನಾಂದೀ ಪದ್ಯ ಬರೆದು, ಇದು ಸಾಚಾ ಸಿಂಹ ಅಲ್ಲ, ನಕಲೀಂತ ಜನಕ್ಕೆ ಮೊದಲೇ ತಿಳಿಸಿಬಿಟ್ರೆ ಹೇಗೆ?

ಬಾಟಮ್ : ಅಷ್ಟೇ ಅಲ್ಲ, ಆ ಸಿಂಹದ ಪಾರ್ಟು ಹಾಕೋನ ಹೆಸ್ರು ಹೇಳಿ, ಸಿಂಹದ ವೇಷ ಹೇಗೆ ಹಾಕ್ಬೇಕು ಅಂದ್ರೆ, ಅದರ ಕುತ್ತಿಗೆಯಿಂದ ಅವನ ಮುಖ ಚೆನ್ನಾಗಿ ಕಾಣಿಸ್ಬೇಕು. ಆ ಸಿಂಹದ ಪಾತ್ರಧಾರೀನೇ ಈ ರೀತಿ ಅಥವಾ ಈ ಅರ್ಥ ಬರೋ ಹಾಗೆ ಮಾತಾಡ್ಬೇಕು: 'ಮಹಿಳೆಯರೇ' ಅಥವಾ 'ಸುಂದರಿಯರೇ'. 'ನಾನು ಹಾರೈಸೋದು' ಅಥವಾ 'ನಾನು ಬೇಡೋದು' ಅಥವಾ 'ನಾನು ಕೈ ಜೋಡಿಸಿ ಪ್ರಾರ್ಥಿಸೋದು ಇಷ್ಟೆ: ಹೆದರ್ಬೇಡಿ.

	ಗಡಗಡ ನಡುಗಬೇಡಿ: ಬೇಕಾದ್ರೆ ನಿಮ್ಮ ಪ್ರಾಣಕ್ಕೆ ನನ್ನ ಪ್ರಾಣಾನ್ನೇ ಪಣ ಇಡ್ತೀನಿ... ನಾನು ಸಿಂಹಾನು ಅಲ್ಲ, ಗಿಂಹಾನು ಅಲ್ಲ. ಎಲ್ರ ಹಾಗೆ ನಾನು ಒಂದು ಮನುಷ್ಯ ಪ್ರಾಣಿ ಅಷ್ಟೆ.' ಹೀಗೆ ಹೇಳಿ ಅವ್ನು ತನ್ನ ನಿಜವಾದ ಹೆಸ್ರನ್ನ ಹೇಳಿಬಿಡ್ಲಿ—ಬಡಗಿ ಸ್ನಗ್ ಅಂತ.
ಕ್ವಿನ್ಸ್ :	ತುಂಬಾ ಒಳ್ಳೆ ಐಡಿಯಾ. ಹಾಗೇ ಮಾಡೋಣ. ಆದ್ರೆ ಇನ್ನೆರಡು ಕಷ್ಟದ ಸಮಸ್ಯೆಗಳಿವೆಯಲ್ಲಪ್ಪ. ಹ್ಯಾಗೆ ಪರಿಹರಿಸೋದು ಅವನ್ನ? ಬೆಳ್ದಿಂಗಳನ್ನ ರಂಗದ ಮೇಲೆ ತರೋದು ಹ್ಯಾಗೆ? ಪಿರಮಸ್ ಮತ್ತು ಥಿಸ್ಬಿ ಭೇಟಿಯಾಗೋದು ಬೆಳ್ದಿಂಗಳಲ್ಲೇ.
ಸ್ನಗ್ :	ನಾವು ನಾಟ್ಕಾನಾ ಆಡೋ ರಾತ್ರಿ ಚಂದ್ರ ಮೂಡ್ತಾನ್ಯೆ?
ಬಾಟಮ್ :	ಕ್ಯಾಲೆಂಡರ್ ತಗೊಂಡ್ಬನ್ನಿ! ಪಂಚಾಗ ನೋಡಿ. ಚಂದ್ರ ಮೂಡ್ತಾನೋ ಇಲ್ವೋ, ಬೇಗ ನೋಡಿ.' (ಪು. 36-38)

ಮೂಲದೊಡನೆ ಹೋಲಿಸಿ ನೋಡಿದರೆ, ಅನುವಾದವನ್ನು ಆದಷ್ಟೂ ಸಹಜವಾದ ಕನ್ನಡದಲ್ಲಿ ಮೂಲದ ಭಾವಕ್ಕೆ ಭಂಗ ತಾರದಂತೆ, ನಾಟಕೀಯತೆಗೆ ಕುಂದಾಗದಂತೆ ತಂದುಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ, ಶಬ್ದಗಳನ್ನು ಯಾಂತ್ರಿಕವಾಗಿ ಅನುವಾದಿಸಿಕೊಳ್ಳದೆ, ಅವುಗಳನ್ನು ಭಾರತೀಯಕರಣಗೊಳಿಸುವುದರ ಮೂಲಕ ಕನ್ನಡದ ಜಾಯಮಾನಕ್ಕೆ ಹೊಂದಿಸಿಕೊಳ್ಳುವ ಪ್ರಯತ್ನ ಮಾಡಿರುವುದನ್ನೂ ಕಾಣಬಹುದಾಗಿದೆ. ಉದಾಹರಣೆಗೆ, 'By'r lakin' ಎಂಬುದರ ಕ್ರೈಸ್ತ ಮತೀಯ ಛಾಯೆಯನ್ನು (ನೋಡಿ : ಅಡಿಟಿಪ್ಪಣಿ 17) ದೂರಮಾಡಿ 'ತಾಯಾಣೆ' ಎಂದೂ 'prologue' ಎಂಬುದನ್ನು 'ಪೀಠಿಕಾ ಪ್ರಾಯವಾಗಿ ಒಂದು ನಾಂದೀ ಪದ್ಯ' ಎಂದೂ 'eight and six' ಎಂಬುದನ್ನು 'ಎಂಟು, ಆರು ಮಾತ್ರಾಗಣಗಳಲ್ಲಿ' ಎಂದೂ[19] 'God shield us' ಅನ್ನು 'ದೇವ್ರೆ ಕಾಪಾಡಬೇಕು' ಎಂದೂ, 'ಪಾರ್ಟು ಹಾಕೋನು',[20] 'ಸಾಚಾ', 'ನಕಲಿ' ಎಂಬಂಥ ಶಬ್ದಗಳನ್ನೂ ಅಳವಡಿಸಿಕೊಂಡಿದ್ದಾರೆ. ವಕ್ರರೇಖೆಯ ಮೂಲಕ ರೇಖಾಂಕನ ಮಾಡಿರುವ ಮಾತುಗಳಷ್ಟೆ ಹೆಚ್ಚಾಗಿ ಬಂದಿವೆ. ಆದರೆ ಅವು ಸಂದರ್ಭಕ್ಕೆ ಅನುಚಿತವಾಗಿಯೇನೂ ತೋರುವುದಿಲ್ಲ. ಮೂಲದಲ್ಲಿ 'cue' (3.1; 71ನೇ ಸಾಲು) ಎಂಬುದಕ್ಕೆ ಬದಲಾಗಿ 'ಕ್ಯಾಚ್ ವರ್ಡ್' ಎಂಬ ರಂಗ ಪರಿಚಿತ ಶಬ್ದವನ್ನು ಬಳಸಿರುವುದೂ ಅವರ ನಾಟಕ ಕ್ಷೇತ್ರದ ಪರಿಚಯದ ನಿದರ್ಶನವೇ ಆಗಿದೆ.

ಭಾರತೀಯಕರಣದ ಅವರ ಪ್ರಯತ್ನದ ಅಂಗವಾಗಿಯೇ 'hempen homespuns' (3.1; 72) ಎಂಬುದಕ್ಕೆ ಬದಲಾಗಿ 'ಗಾಂಪರೊಡೆಯರ ಶಿಷ್ಯರು' ಎಂದೂ

---

19. 'a common ballad measure' ಎಂಬ ವಿವರಣೆಯ ಬೆಳಕಿನಲ್ಲಿ 'ಲಾವಣಿ' ಶಬ್ದವನ್ನು ಬಳಸಬಹುದಾಗಿತ್ತು.

20. 'ಪಾರ್ಟು ಹಾಕೋನು' ಎಂಬ ಜನಭಾಷೆಯ ನುಡಿಗಟ್ಟನ್ನು ಬಳಸಿದವರೇ, ಮುಂದೆ 'ಪಾತ್ರಧಾರಿ' ಎಂದು ಬಳಸಿರುವುದನ್ನೂ ಗಮನಿಸಬಹುದಾಗಿದೆ.

(ಪು. 39). 'fairy Queen'ಗೆ ಬದಲಾಗಿ 'ಯಕ್ಷ ರಾಣಿ' ಎಂಬ ಮಾತುಗಳು ಕಾಣಿಸಿಕೊಂಡಿವೆ. ಇದರ ಇನ್ನೊಂದು ಉಜ್ಜ್ವಲ ನಿದರ್ಶನವನ್ನೂ ಕಾಣಿಸಬೇಕು. ಇದು ನಿಸಾರರಲ್ಲಿರುವ ಕವಿ ಎಚ್ಚರಗೊಂಡು, ತನ್ನ ಭಾಷಾ ಪರಿಜ್ಞಾನದ ನೆರವಿನಿಂದ, ಮೂಲದ ಸ್ವಾರಸ್ಯವನ್ನು ಮೀರುವಂಥ ಚಾತುರ್ಯಪೂರ್ಣ ಸಂಭಾಷಣೆಯನ್ನು ಅಳವಡಿಸಿರುವ ಪ್ರಸಂಗ. ಮೂಲ ಹೀಗಿದೆ:

Bottom: 'Thisbe, the flowers of odious savors sweet'—ಎಂದಾಗ Quince ಅವನನ್ನು ತಿದ್ದುತ್ತ, 'odors, odors' ಎನ್ನಬೇಕೆಂದು ಸೂಚಿಸುತ್ತಾನೆ. ಇದನ್ನು ನಿಸಾರ್ ಅವರು ಹೀಗೆ ಅಳವಡಿಸಿಕೊಂಡಿರುವುದು ಆಶ್ಚರ್ಯವನ್ನೂ ಆನಂದವನ್ನೂ ತರುತ್ತದೆ:

ಬಾಟಮ್ (ಪಿರಮಸ್‌ನ ಪಾತ್ರದಲ್ಲಿ) : 'ಥಿಸ್ಬಿ, ಸುಗಂಧಿತ ಸುಮಗಳು ಮಾರಕವಾಗಿವೆ—

ಕ್ವಿನ್ಸ್ : ಮಾರಕ ಅಲ್ಲೋ, ಮಾರಾಯ, ಮಾದಕ, ಮಾದಕ.'

—ಇಷ್ಟೆಲ್ಲ ಎಚ್ಚರ ವಹಿಸಿರುವುದರಿಂದ, 'ಡ್ರೀಮ್'ನ ನಿಸಾರ್ ಅವರ ಅನುವಾದ ಶೇಕ್ಸ್‌ಪಿಯರನ ನಾಟಕದ ಯಶಸ್ವಿಯಾದ ಅನುವಾದಗಳಲ್ಲಿ ಒಂದಾಗಿ ನಿಲ್ಲುತ್ತದೆ.

೩

ಈಗ 'ಒಥೆಲೊ' ಅನುವಾದವನ್ನು ಪರಿಶೀಲಿಸಬಹುದು. 'ಡ್ರೀಮ್'ಗೆ ಬರೆದಿರುವ ಪರಿಚಯಾತ್ಮಕ 'ಮೊದಲ ಮಾತು' ನಾಲ್ಕು ಪುಟಗಳಿಗೆ ಮಾತ್ರವೇ ಸೀಮಿತವಾಗಿದ್ದರೆ, 'ಒಥೆಲೊ'ಗೆ ಬರೆದಿರುವ ವಿವೇಚನಾತ್ಮಕ ಪರಿಚಯ ನಲವತ್ತು ಪುಟಗಳಷ್ಟು ದೀರ್ಘವಾಗಿ ಪರಿಣಮಿಸಿದೆ. ವಿಜ್ಞಾನ ಪ್ರಾಧ್ಯಾಪಕರೊಬ್ಬರ ಸಾಹಿತ್ಯಿಕ ಸಂವೇದನೆಯ ಸೂಕ್ಷ್ಮಾಂಶಗಳನ್ನು ಅಥವಾ ಸೂಕ್ಷ್ಮ ಸಾಹಿತ್ಯಕ ಸಂವೇದನೆಯ ಕವಿಯೊಬ್ಬನ ನಿಷ್ಕೃಷ್ಟವಾದ ವೈಜ್ಞಾನಿಕ ವಿವೇಚನೆಯನ್ನು ಈ ಪೀಠಿಕೆಯಲ್ಲಿ ಕಾಣಬಹುದಾಗಿದೆ. ಹೀಗಾಗಿ, ಇದು ಸಾಂಪ್ರದಾಯಿಕ ವಾದ ಪೀಠಿಕೆಗಿಂತ ಭಿನ್ನವಾಗಿದ್ದು, ನಿಸಾರರ ಅನೇಕ ಹೊಳಹುಗಳನ್ನು ಮನಗಾಣಿಸುವ ಆಕರ್ಷಣೀಯ ಬರೆಹವೇ ಆಗಿ ಪರಿಣಮಿಸಿದೆ. ಆ ಕಾರಣಕ್ಕಾಗಿ ಈ ಮಾತುಗಳನ್ನು ಗಮನಿಸಬಹುದಾಗಿದೆ: 'ಬದಲಾಗುವುದಲ್ಲ, ಬೆಳೆಯುತ್ತ ಹೋಗುವುದು ನಿಜವಾದ ಕಲಾವಿದನ ಪ್ರಕೃತಿ ಧರ್ಮ: ಕಾಳಜಿಯಿಂದ ಕಾಳಜಿಗೆ ಜಿಗಿಯುವ ಚಿಟ್ಟೆಯಲ್ಲ ಷೇಕ್ಸ್ ಪಿಯರ್. ಇಷ್ಟವಾದ ತಿರುವು, ಅಡ್ಡ ಹಾದಿಗಳಲ್ಲಿ ಅಲೆಯುವ ರಸ್ತೆಯ ಕಾರ್ ಅಲ್ಲ ಷೇಕ್ಸ್‌ಪಿಯರ್. ಆಂತರಂಗಿಕವಾಗಿ ತುಂಬು ಸಾರವಂತಿಕೆ, ಲವಲವಿಕೆ, ಆರೋಗ್ಯ, ಋಷಿಗಳನ್ನು ಹೀರಿಕೊಳ್ಳುತ್ತ ತನ್ನ ಕಾಂಡ, ಕೊಂಬೆ, ಟಿಸಿಲುಗಳನ್ನು ಮಜಬೂತು ಗೊಳಿಸಿಕೊಳ್ಳುತ್ತ, ತತ್ಪರಿಣಾಮವಾಗಿ ಬೆಳವಣಿಗೆಯ ಉಂಗುರಗಳನ್ನು ಹೆಚ್ಚಿಸಿಕೊಳ್ಳುತ್ತ, ಅದರಿರವು ನಮ್ಮ ಅನುಭವಕ್ಕೆ ತಾಕುವಂತೆ ವಿಕಾಸ ಸೂಚಿಸುತ್ತ ಹೋಗುವ ಕಲಾವಿದ ಷೇಕ್ಸ್‌ಪಿಯರ್.' (ಪು. 3) ಈ ವಿವೇಚನೆಯ ಉದ್ದಕ್ಕೂ ಇಂಥ ವಿಶಿಷ್ಟ ಅಭಿವ್ಯಕ್ತಿಗಳು ಕಾಣದೊರೆಯುತ್ತವೆ.

'ಒಥೆಲೊ' ಹೇಳಿ ಕೇಳಿ ಅತ್ಯಂತ ಗಂಭೀರವಾದ ರುದ್ರನಾಟಕ. ಹೀಗಾಗಿ, ಅದು ಅನುವಾದಕನಿಗೆ ಹಲವಾರು ಗಂಭೀರ ಸವಾಲುಗಳನ್ನು ಒಡ್ಡುತ್ತದೆ. ಸಂತೋಷದ ಸಂಗತಿ ಎಂದರೆ ನಿಸಾರರು ಈ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಉಪಾದೇಯ ವಾಗಿರುವಂಥ ಅನುವಾದವನ್ನು ಕೊಟ್ಟಿರುವುದು. ಉದಾಹರಣೆಗೆ, ಡೆಸ್ಡೆಮೋನ ತನ್ನ ದೃಢ ನಿರ್ಧಾರವನ್ನು ಉದ್ಘೋಷಿಸುವ ಪ್ರಸಂಗ ಹೀಗೆ ಕಾಣಿಸಿಕೊಂಡಿದೆ.

'...ನನ್ನ ಭಾಗ್ಯವನ್ನೂ ಲೆಕ್ಕಿಸದೆ
ಎಬ್ಬಿಸಿದ ಅಲ್ಲಕಲ್ಲೋಲ, ಒಥೆಲೊ ಜೊತೆ ಬಾಳಲು
ನಾನು ಅವನನ್ನು ಪ್ರೇಮಿಸಿರುವುದನ್ನು ಲೋಕಕ್ಕೆ
ಡಂಗುರ ಸಾರುತ್ತದೆ.
ನನ್ನ ಪತಿಯ ಶೌರ್ಯದ ಅಪೂರ್ವ ಗುಣಕ್ಕೆ ನಾನು ಮನ ಸೋತೆ.
ಅವನಾಂತರ್ಯದ ಮುಖೇನ ಅವನ ಬಾಹ್ಯ ಚಹರೆಯನ್ನು ಕಂಡೆ.
ಅವನ ಕೀರ್ತಿ ಪ್ರತಿಷ್ಠೆ, ಧೀರ ಸಾಹಸ ಪ್ರವೃತ್ತಿಗಳಿಗೆ
ನನ್ನಾತ್ಮ ಹಾಗೂ ಭವಿಷ್ಯವನ್ನು ಸಮರ್ಪಿಸಿಕೊಂಡೆ.
ಆದ್ದರಿಂದ ಮೆಚ್ಚಿನ ಹಿರಿಯರೇ,
ನೆಮ್ಮದಿಯರಸುವ ಪಾತರಗಿತ್ತಿಯಂತೆ
ನಾನಿಲ್ಲುಳಿದು, ಅವನು ಯುದ್ಧಕ್ಕೆ ತೆರಳಿದರೆ,
ಅವನ ಸೇವೆಯ ಯಾವ ಪವಿತ್ರ ಕರ್ತವ್ಯಕ್ಕೆ
ನಾನವನನ್ನ ಪ್ರೇಮಿಸಿದೆನೋ ಅದರಿಂದ
ವಂಚಿತಳಾಗುವುದರ ಜೊತೆಗೆ
ಮನೋವಿದ್ರಾವಕ ವಿಯೋಗದ ದುಸ್ಸಹನೀಯ ಅವಧಿಯನ್ನು
ನೂಕಬೇಕು. ಎಂದೇ ಅವನೊಂದಿಗೆ ಹೋಗಲು
ಅವಕಾಶ ಕೊಡಿ.'

(ಪು. 84-85)

ಇದರ ಮೂಲ ಇಂತಿದೆ:

'That I did love the Moor to live with him
My downright voilence and storm of fortunes
May trumpet to the world. My heart's subdued
Even to the very quality of my lord.
I saw Othello's visage in his mind,
And to his honors and his valiant ***parts***
Did I my soul and fortunes consecrate.
So that, dear lords, if I be left behind
A ***moth*** *of peace, and he go to the war,*
The ***rites for*** *why I love him are bereft me,*
And I a heavy interim shall support

By his dear absence. Let me go with him.'

(13; ಸಾಲುಗಳು 251-262)

ಇದರಲ್ಲಿ ರೇಖಾಂಕನಗೊಳಿಸಿರುವ ವಾಕ್ಯಗಳು ಮತ್ತು ಶಬ್ದಗಳು ವ್ಯಾಖ್ಯಾನಾಪೇಕ್ಷಿಗಳಾಗಿರುವಂಥವು; ಸುಲಭವಾಗಿ ಅರ್ಥವಾಗದಂಥವು. ಈ ಕಾರಣದಿಂದಾಗಿಯೇ ಬೆವಿಂಗ್‌ಟನ್ **'My... fortunes'** ಎಂಬುದನ್ನು 'my plain and total breach of social custom, taking my future by storm and disrupting my whole life' ಎಂದೂ, **'My heart's... lord'** ಎಂಬುದನ್ನು 'my heart is brought wholly into accord with Othello's virtues; I love him for his virtues' ಎಂದೂ ವಿವರಿಸಿದ್ದಾರೆ; ಅಂತೆಯೇ **'parts'** ಎಂದರೆ 'qualities' ಎಂದೂ, 'rites' ಎಂದರೆ 'rites of love' (with a suggestion of rights, sharing) ಎಂದೂ ಅರ್ಥೈಸಿಕೊಳ್ಳಬೇಕೆಂದು ಸೂಚಿಸಿದ್ದಾರೆ; ಅಂತೆಯೇ 'moth' ಎಂದರೆ 'one who consumes merely' ಎಂದು ಭಾವಿಸಿಕೊಳ್ಳಬೇಕೆಂದೂ ಸೂಚಿಸಿದ್ದಾರೆ. ಈ ವಿವರಣೆಗಳು ಪರ್ಯಾಯವಾಗಿ ಅನುವಾದಕನ ಕಷ್ಟಗಳು ಎಂಥವು ಎಂಬುದನ್ನೂ ಸಾರಿ ಹೇಳುತ್ತವೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ನಿಸಾರ್ ಅವರ ಕವಿಹೃದಯ ಈ ಎಲ್ಲ ಭಾವಗಳನ್ನೂ ಹೇಗೆ ಸಮರ್ಪಕವಾಗಿ ಅರ್ಥೈಸಿಕೊಂಡಿದೆ ಎಂಬುದನ್ನು ನಾವು ಸುಲಭವಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಹೀಗಾಗಿ, ಡೆಸ್ಡೆಮೋನಳ ದೃಢ ನಿಶ್ಚಯದ ಭಾವ ಯಾತ್ರೆಯಲ್ಲಿ ಓದುಗ ಅಥವಾ ಪ್ರೇಕ್ಷಕ ಸಹಜವಾಗಿ ತೇಲಿ ಹೋಗುತ್ತಾನೆ.

ಇಯಾಗೋ ಸ್ತ್ರೀಯರನ್ನು ನಿಂದಿಸುವ ಭಾಗದಲ್ಲಿ ರೂಪಕಮಯವಾದ ಭಾಷೆ ಹೇಗೆ ಸಾಗುತ್ತದೆ ಎಂಬುದನ್ನು ನೋಡಿ (2.1; ಸಾಲುಗಳು 111-114):

'Come on, Come on. You are pictures out of doors,
Bells in your parlors, wild cats in your kitchens,
Saints in your injuries, devils being offended,
Players in your huswifery, and huswives in your beds.'

ಇದನ್ನು ಅಷ್ಟೇ ಶಕ್ತಿಯುತವಾಗಿ ಹಾಗೂ ಪರಿಣಾಮಕಾರಿಯಾಗಿ ನಿಸಾರ್ ಅವರು ಕನ್ನಡಕ್ಕೆ ತಂದುಕೊಳ್ಳಬಲ್ಲವರಾಗಿದ್ದಾರೆ:

'ಇರಲಿ ಬಾ, ಕಂಡಿದ್ದೇನೆ! ಲಲನಾಮಣಿಯರು ನೀವು,
ಹೊಸ್ತಿಲಾಚೆ ಮೂಕ ವರ್ಣಚಿತ್ರಗಳು; ಖಾಸಗಿ ಕೋಣೆಯಲ್ಲಿ
ಇನಿ ದನಿಯ ಗಂಟೆಗಳು; ಅಡಿಗೆ ಮನೆಯಲ್ಲೊ ಭಯಂಕರ
ಕಚ್ಚಾಡುವ ಬೆಕ್ಕುಗಳು; ಹಾನಿಯೆಸಗುವುದರಲ್ಲಿ
ಸಂತರ ಥರ ಶ್ರೀಮದ್ಗಂಭೀರೆಯರು; ಪರರು ನಿಮ್ಮನ್ನು
ಕೆಣಕಿದರೆ ಸಾಕ್ಷಾತ್ ಪಿಶಾಚಿಗಳು; ಮನೆಗೆಲಸದಲ್ಲಿ
ಮಹಾ ಮೈಗಳ್ಳಿಯರು; ಶಯ್ಯೆಯಲ್ಲೋ ಬಿಚ್ಚೋಲೆಗೌರಮ್ಮಗಳು.'

ಪ (17)

ಇಲ್ಲಿ ನಿಸಾರರು ಹೆಚ್ಚಾಗಿ ಬಳಸಿಕೊಂಡಿರುವ ವಿಶೇಷಣಗಳು ಪರಿಣಾಮವನ್ನು ಅತಿಶಯ ಗೊಳಿಸುವಲ್ಲಿ ನೆರವಾಗುತ್ತವೆ. ಅದರಲ್ಲಿಯೂ 'ಕಂಡಿದ್ದೇನೆ', 'ಶ್ರೀಮದ್ಗಂಭೀರೆಯರು', 'ಬಿಚ್ಚೋಲೆಗೌರಮ್ಮಗಳು' ಎಂಬ ನುಡಿಗಟ್ಟುಗಳ ಸ್ವಾರಸ್ಯವನ್ನು ಅರಿಯಬೇಕಾದರೆ ಮತ್ತೆ ಬೆವಿಂಗ್‌ಟನ್ ಅವರ ವಿವರಣೆಗಳನ್ನು ಗಮನಿಸುವುದು ಅಗತ್ಯವಾಗುತ್ತದೆ. ಉದಾಹರಣೆಗೆ: 'in your kitchens' ಎಂಬುದಕ್ಕೆ 'in domestic affairs' ಎಂಬ ಪರ್ಯಾಯವನ್ನು ಕೊಡುವುದರ ಜೊತೆಗೆ 'Ladies would not do the cooking' ಎಂಬ ವಿವರಣೆ ಯನ್ನೂ ಕೊಟ್ಟಿದ್ದಾರೆ; ಅಂತೆಯೇ 'huswives' ಎಂಬುದಕ್ಕೆ 'hussies' ಎಂಬ ಪರ್ಯಾಯವನ್ನು ಕೊಡುವುದೇ ಅಲ್ಲದೆ ('Women are 'busy' in bed, or thrifty in dispensing sexual favours) ಎಂಬ ವಿವರಣೆಯನ್ನೂ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಮಹಾ ಮೈಗಳ್ಳಿಯರು' ಮತ್ತು 'ಬಿಚ್ಚೋಲೆಗೌರಮ್ಮಗಳು' ಎಂಬ ಅನುವಾದಗಳು ಎಷ್ಟು ಧ್ವನಿಪೂರ್ಣವಾಗಿವೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಯೇ ಇಲ್ಲ.

ರೂಪಕಗಳ ಭಾರತೀಯಕರಣದಲ್ಲೂ ತಾವೆಷ್ಟು ನಿಷ್ಣಾತರೆಂಬುದನ್ನು ನಿಸಾರ್ ಹಲವು ಸಂದರ್ಭಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಉದಾಹರಣೆಗೆ, ಇಯಾಗೋನ ಈ ಹೇಳಿಕೆಯನ್ನು ನೋಡಬಹುದು:

'But my ***Muse labors,***
And thus she is delivered:
If she be fair and ***wise,*** *fairness and wit,*
The one's for use, the other useth it.'

(2.1; ಸಾಲುಗಳು 129-132)

ಇದಕ್ಕೆ ವಿವರಣೆಯನ್ನು ನೀಡುತ್ತ ಬೆವಿಂಗ್‌ಟನ್ ಹೀಗೆನ್ನುತ್ತಾರೆ: **'labours,** prepares to deliver a child (with a following pun on delivered...; her cleverness will make use of her beauty.' ಈಗ ನಿಸಾರ್ ಅವರ ಅನುವಾದದ ಸಹಜ ರಮಣೀಯತೆ, ಭಾರತೀಯಕರಣದ ಔಚಿತ್ಯ ನಮಗೆ ಅರಿವಾಗುತ್ತದೆ:

'ಹೀಗಿದ್ದೂ ನನ್ನ ಕಾವ್ಯ ಸರಸ್ವತಿ ಪ್ರಸವ ವೇದನೆಯಿಂದ
ನರಳಿ ಹೆರುವ ಶಿಶು, ಇಗೊ ಹೀಗೆ:
ಹೆಣ್ಣಗಿತ್ತೇ ಬಿಳುಪಿನೊಡನೆ ವಿವೇಚನಾ ಜ್ಞಾನ;
ಬಳಕೆಗೊಂದು, ಮತ್ತೊಂದು ಬಳಸುವುದು ಅದನ್ನ.'

(ಪು. 98)

ಔಚಿತ್ಯವರಿತು ಅವರು ಈ ಪ್ರಕ್ರಿಯೆಯನ್ನು ಬಳಸಿಕೊಳ್ಳುವುದರಿಂದ, 'ಪಡಖಾನೆ ಯಲ್ಲಿ ಗಾಂಪರನ್ನು ನಗಿಸುವ ಓಬೀರಾಯನ ಕಾಲದ ಅಗ್ಗದ ವಿರೋಧಾಭಾಸಗಳಿವು' (ಪು. 99). 'These are old fond paradoxes to make fools laugh in the alehouse' (2.1; ಸಾಲುಗಳು 139-140), 'ಮನ್ಮಥನ ಲಘು ವಿನೋದಗಳು' (disports); 'ಈ ಮೃಗಯಾವಿಹಾರದಲ್ಲಿ ಬೇಟೆ ನಾಯಂತೆ ಮುನ್ನುಗ್ಗದೆ, ಬರೀ

ಬೊಗಳಲು ಬಳಸುವ ನಾಯಿ ತಂಡದ ಜುಜುಬಿ ಜಂತುವಿನಂತೆ ಹಿಂಬಾಲಿಸಿದ್ದೇನೆ' (ಪು. 124) ('I do follow here in the chase, not like a hound that hunts, but one that fills up the cry' (2.3; ಸಾಲುಗಳು 357-358) ಎಂಬಂಥ ಪ್ರಸಂಗಗಳು ಚೇತೋಹಾರಿಯಾಗಿ ಪರಿಣಮಿಸುತ್ತವೆ.

ೞ

ಕೊನೆಯದಾಗಿ, ನಿಸಾರ್ ಅವರ ಈ ಅನುವಾದಿತ ನಾಟಕಗಳ ಬಗ್ಗೆ ಈ ಮಾತುಗಳನ್ನು ಹೇಳಬಹುದೆಂದು ತೋರುತ್ತದೆ. ಶ್ರೀಕಂಠೇಶಗೌಡರಿಂದ ಹಿಡಿದು ಇತ್ತೀಚಿನ ವರೆಗಿನ ಶೇಕ್ಸ್‌ಪಿಯರರ ನಾಟಕಗಳ ಅನುವಾದ ಪರಂಪರೆಯಲ್ಲಿ ನಿಸಾರ್ ಅವರ 'ಡ್ರೀಮ್' ಮತ್ತು 'ಒಥೆಲೊ' ಅನುವಾದಗಳು ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಇದಕ್ಕೆ ಕಾರಣವೇನೆಂದರೆ (i) 'ಶೇಕ್ಸ್‌ಪಿಯರರ ನಾಟಕಗಳ ಬಗ್ಗೆ ಅವರು ವಿಶೇಷ ಅಧ್ಯಯನವನ್ನು ನಡೆಸಿ, ತಮ್ಮ ಅಧ್ಯಯನದ ಹಿನ್ನೆಲೆಯಲ್ಲಿ, ತಾವು ಆಯ್ದುಕೊಂಡ ನಾಟಕಗಳ ಬಗ್ಗೆ ಸೂಕ್ಷ್ಮಾತಿಸೂಕ್ಷ್ಮ ಅಧ್ಯಯನವನ್ನು ನಡೆಸಿ, ಅಲ್ಲಿಯ ಮಾತು, ನುಡಿಗಟ್ಟು ಮತ್ತು ವಾಕ್ಯಗಳ ಸಮರ್ಪಕವಾದ ಆಶಯಗಳನ್ನು ಕಂಡುಕೊಂಡಿರುವುದು; (ii) ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಅವುಗಳನ್ನು ಅಳವಡಿಸಿಕೊಳ್ಳುವ ಜಾಣ್ಮೆಯನ್ನು ತೋರಿರುವುದು; (iii) ಶೇಕ್ಸ್‌ಪಿಯರರ ಕಾಲದಲ್ಲಿ ಅವನು ಬಳಸಿರುವ ಮಾತು, ನುಡಿಗಟ್ಟು, ವಾಕ್ಯಗಳು, ಗಾದೆ ಮಾತುಗಳು ಮತ್ತು ಸಾಮಾಜಿಕ (ಕೆಲವೊಮ್ಮೆ ಐತಿಹಾಸಿಕ) ಸಂದರ್ಭಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ವಿವಿಧ ವಿದ್ವಾಂಸರುಗಳು ನೀಡಿರುವ ವಿವರಣೆಗಳು ಮತ್ತು ಸ್ಪಷ್ಟೀಕರಣಗಳ ಬೆಳಕಿನಲ್ಲಿ ಕವಿಯ ಆಶಯವನ್ನು ಸ್ಪಷ್ಟೀಕರಿಸಿಕೊಂಡಿರುವುದು; (iv) ಮೂಲತಃ ತಾವೇ ಕವಿಯಾಗಿರುವುದರಿಂದ ಶೇಕ್ಸ್‌ಪಿಯರರ ಕವಿ ಹೃದಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲವರಾಗಿರುವುದು; (v) ಭಾವಾನುಗುಣವಾಗಿ ಭಾಷೆ ಮತ್ತು ಛಂದಸ್ಸನ್ನು ಸೂಕ್ತವಾಗಿ ಅಳವಡಿಸಿಕೊಂಡಿರುವುದು; (vi) ಆಶಯಗಳ ಸ್ಪಷ್ಟೀಕರಣದ ದೃಷ್ಟಿಯಿಂದ ಮಾತ್ರವೇ ವಿಸ್ತಾರಕ್ಕೆ ಕೈ ಹಾಕಿರುವುದು; (vii) ಕಾರಣಾಂತರಗಳಿಂದ ಅನಗತ್ಯವೆನಿಸಿದ ಮಾತುಗಳನ್ನು ಕೈಬಿಟ್ಟಿರುವುದು; (viii) ಅವರೇ ಹೇಳಿಕೊಂಡಿರುವಂತೆ, ಎಲ್ಲಿಯೂ ಅತಿಯಾದ ಸ್ವಾತಂತ್ರ್ಯವನ್ನು ವಹಿಸದಿರುವುದು; (ix) ಸಾಧ್ಯವಾದೆಡೆಗಳಲ್ಲೆಲ್ಲ ಭಾವನೆಗಳ ಭಾರತೀಯಕರಣಕ್ಕೆ ಮನಸ್ಸು ಕೊಟ್ಟಿರುವುದು; (x) ಓದುಗನ ಅಥವಾ ಪ್ರೇಕ್ಷಕನ ಬಗ್ಗೆ ವಿಶೇಷವಾದ ಕಾಳಜಿಯನ್ನು ಇರಿಸಿಕೊಂಡು, ಟಿಪ್ಪಣಿಗಳನ್ನು, ಪರಿಚಯಾತ್ಮಕ ಪ್ರಬಂಧಗಳನ್ನು ಒದಗಿಸಿರುವುದು. ಈ ದಶ ಸೂತ್ರಗಳನ್ನು ಅವರು ಪ್ರಜ್ಞಾಪೂರ್ವಕವಾಗಿ ಪಾಲಿಸಿಕೊಂಡು ಬಂದಿರುವುದು ಅವರ ಅನುವಾದಗಳಿಗೆ ವಿಶೇಷ ಪ್ರಾಶಸ್ತ್ಯ ಮತ್ತು ಮಹತ್ವಗಳನ್ನು ತಂದುಕೊಟ್ಟಿದೆ.

ಶೇಕ್ಸ್‌ಪಿಯರ್‌ನ ಕನ್ನಡ ಅನುವಾದಗಳ ಪರಂಪರೆಯಲ್ಲಿ ಡಿ.ವಿ.ಜಿ., ಕುವೆಂಪು ಮತ್ತು ನಿಸಾರ್ ಅವರ ಅನುವಾದಗಳು ವಿಶೇಷ ಗೌರವಕ್ಕೆ ಪಾತ್ರವಾಗುತ್ತವೆ. ಡಿ.ವಿ.ಜಿ. ಅವರು 'ಮ್ಯಾಕ್‌ಬೆತ್'ನ ಅರ್ಥಪೂರ್ಣ ಅನುವಾದವನ್ನು ಸೃಜನಾತ್ಮಕತೆಯ ಮಟ್ಟದಲ್ಲಿ

ನಿರ್ವಹಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಕುವೆಂಪು ಅವರು 'ಹ್ಯಾಮ್ಲೆಟ್'ನ ಶೈಲಿಯಲ್ಲಿ 'ರಕ್ತಾಕ್ಷಿ'ಯನ್ನು ಸೃಜಿಸಿದರೆ, 'ಬಿರುಗಾಳಿ' ಎಂಬ ಹೆಸರಿನಲ್ಲಿ 'ಟೆಂಪೆಸ್ಟ್'ನ ಅತ್ಯಂತ ಕಾವ್ಯಾತ್ಮಕ ಅನುವಾದವನ್ನು ಕೊಟ್ಟು, ಅನುವಾದದ ಒಂದು ಮಾದರಿಯನ್ನೇ ಸೃಷ್ಟಿಸಿ ಬಿಟ್ಟಿದ್ದಾರೆ. ತಮ್ಮ 'ಡ್ರೀಮ್' ಮತ್ತು 'ಒಥೆಲೊ'ಗಳ ಸೃಜನಶೀಲ ಅನುವಾದಗಳ ಮೂಲಕ ನಿಸಾರ್ ಅವರು ಈ ಗೌರವ ಶ್ರೇಣಿಗೆ ಸೇರ್ಪಡೆಯಾಗಿದ್ದಾರೆ. ಈ ಶ್ರೇಷ್ಠ ಅನುವಾದಗಳಿಗಾಗಿ ಅವರನ್ನು ಹಾರ್ದಿಕವಾಗಿ ಅಭಿನಂದಿಸುವುದರ ಜೊತೆಗೆ, ಶೇಕ್ಸ್‌ಪಿಯರನ ಇನ್ನುಳಿದ ಕೃತಿ ರತ್ನಗಳಲ್ಲಿ ಕೆಲವನ್ನಾದರೂ ಕನ್ನಡಕ್ಕೆ ತಂದುಕೊಡುವ ಕೃಪೆಯನ್ನು ಅವರು ಮಾಡಲಿ ಎಂದು ಹಾರೈಸುತ್ತೇನೆ. ಏಕೆಂದರೆ ಪ್ರತಿಭಾವಂತರಿಂದ, ಸಮರ್ಥರಿಂದ ಇಂಥ ಕಾರ್ಯಗಳು ನಡೆದಾಗ ಮಾತ್ರವೇ ಭಾಷೆಯ ಸತ್ವ-ಸಮೃದ್ಧಿಗಳು ಹೆಚ್ಚುತ್ತವೆ. ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರು ಅಂಥ ಶ್ರೇಷ್ಠ ಸಾಹಿತಿಯಾಗಿರುವುದರಿಂದ, ಕನ್ನಡ ನಾಡು ಮತ್ತು ಜನತೆ ಅವರ ಬಗ್ಗೆ ಇಂಥ ನಿರೀಕ್ಷೆಯನ್ನು ಇಟ್ಟುಕೊಳ್ಳುವುದು ಸಹಜವೇ ಆಗಿದೆ.

ಕಾವ್ಯದಲ್ಲಿ ಕಲಾತ್ಮಕ ಅಭಿವ್ಯಂಜನೆಯನ್ನು ಪಡೆದ ಅನುಭವವನ್ನು ಸಿಗಿದು ಶೇಖಡ ಇಷ್ಟು ವಿಚಾರ, ಇಷ್ಟು ಭಾವ ಎಂದು ಹೇಳುವುದು ದೇಹವನ್ನು ಕತ್ತರಿಸಿ ಇಷ್ಟು ಮಾಂಸ, ಇಷ್ಟು ಮೂಳೆ ಎಂದು ಲೆಕ್ಕಾಚಾರ ಹಾಕಿದಷ್ಟೇ ಹಾಸ್ಯಾಸ್ಪದ. ಇಂದ್ರಿಯಾನುಭವವೊಂದು ಎಷ್ಟರ ಮಟ್ಟಿಗೆ ಕಲೆಯಾಗಿ ಮಾರ್ಪಟ್ಟಿದೆ ಎನ್ನುವುದು—ಅಂದರೆ, ಯಾವುದೇ ಕೃತಿಯ ಕಾವ್ಯತ್ವ ಮುಖ್ಯ.

(ವಿಚಾರ-ಭಾವಗಳ ಅಪ್ರತ್ಯೇಕತೆ)

✧ ✧ ✧

ಒಂದು ಕಾಲಕ್ಕೆ ಲಕ್ಷ್ಮೀ ಕಟಾಕ್ಷಿಗಳಿಗಿಂತ ಸರಸ್ವತಿಯ ಅನುಗ್ರಹಕ್ಕೆ ಒಳಗಾದವರಿಗೆ ಸಮಾಜದಲ್ಲಿ ಮನ್ನಣೆಯ ಮೊದಲ ಮಣೆ ಮೀಸಲಾಗಿರುತ್ತಿತ್ತು. ಈಗ ಸರಸ್ವತಿಗೆ ಲಕ್ಷ್ಮೀ ಸಂಸಾರದಲ್ಲಿ ಬಡ ನಂಟಳ ಸ್ಥಾನ. ಸರಸ್ವತಿಯ ಮೂಲಕ ಲಕ್ಷ್ಮಿಯನ್ನು ಅನುನಯಿಸಿಕೊಳ್ಳುವುದಕ್ಕಿಂತ, ಲಕ್ಷ್ಮಿಯ ಮುಖೇನ ವಿದ್ಯಾಸಂಸ್ಥೆಗಳ ದೊಡ್ಡಿಯಿಂದ ಸರಸ್ವತಿಯನ್ನು ಬಲಾತ್ಕಾರದಿಂದ ಹಿಡಿದೆಳೆದು ತರುವುದು ಸುಲಭವೆನ್ನಿಸುತ್ತಿದೆ.

(ವಿದ್ಯೆ ಮತ್ತು ಹಣದ ಪ್ರಭಾವ)

ಸಮರ್ಥ ಅನುವಾದದ ಬಗೆಗಿನ ನಿಸಾರರ ನಿಲವುಗಳು



♦ ಎ. ಎನ್. ಪ್ರಸನ್ನ

ನಿಸಾರ್ ಅಹಮದ್ ಅವರು ಕಾವ್ಯ, ಸಾಹಿತ್ಯ, ವಿಮರ್ಶೆ, ವೈಚಾರಿಕ ಬರಹಗಳು ಮುಂತಾದ ಕ್ಷೇತ್ರಗಳಲ್ಲಿ ಅನೇಕ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಗಮನಾರ್ಹವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಇವಲ್ಲದೆ, ಅವರು ಅನುವಾದ ಕ್ಷೇತ್ರದಲ್ಲೂ ಸಮರ್ಥವಾದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಅವರು ಷೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಮತ್ತು 'ಒಥೆಲೊ' ನಾಟಕಗಳು, ರಷ್ಯದ ಬರಹಗಾರರ 'ಹೆಜ್ಜೆ ಗುರುತು' ಕಥೆಗಳು ಮತ್ತು ಪಾಬ್ಲೊ ನೆರುಡನ 'ಬರೀ ಮರ್ಯಾದಸ್ಥರೆ' ಕವನಗಳನ್ನು ಕನ್ನಡಕ್ಕೆ ತಂದಿದ್ದಾರೆ. ರಷ್ಯದ ಮಹಾನ್ ಲೇಖಕರಾದ ಮ್ಯಾಕ್ಸಿಮ್ ಗಾರ್ಕಿ, ಡಾಸ್ಕೊವಸ್ಕಿ, ಟಾಲ್‌ಸ್ಟಾಯ್ ಚೆಕಾಫ್ ಮುಂತಾದವರ ಕಥೆಗಳಿರುವ 'ಹೆಜ್ಜೆ ಗುರುತು' ಕೃತಿಗೆ ಸೋವಿಯಟ್ ಲ್ಯಾಂಡ್-ನೆಹರು ಅಂತರರಾಷ್ಟ್ರೀಯ ಪುರಸ್ಕಾರ ನಿಸಾರ್ ಅವರಿಗೆ ೧೯೮೧ರಲ್ಲಿ ಲಭಿಸಿದೆ.

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಕನ್ನಡಕ್ಕೆ ತಂದ ಕೃತಿಗಳನ್ನು ಅವಲೋಕಿಸಿದಾಗ ಮತ್ತು 'ಅನುವಾದ'ಕ್ಕೆ ಸಂಬಂಧಿಸಿದಂತೆ ಅವರೊಡನೆ ಚರ್ಚಿಸುವ ಅವಕಾಶ ದೊರೆತಾಗ ಅನೇಕ ಉಪಯುಕ್ತ ಒಳನೋಟ ಮತ್ತು ಆಲೋಚನೆಗಳು ಪ್ರಕಟಗೊಂಡವು.

ಭಾರತೀಯ ಭಾಷೆಯೊಂದರಿಂದ ಕೃತಿಯೊಂದನ್ನು

ಕನ್ನಡಕ್ಕೆ ಅನುವಾದಿಸುವಾಗ ಕೃತಿಯೊಳಗೆ ಅಡಕವಾಗಿರುವ ಸಾಂಸ್ಕೃತಿಕ ನೆಲೆಗಟ್ಟು ಹೆಚ್ಚಿನ ಸಮಸ್ಯೆಯನ್ನು ಒಡ್ಡುವುದಿಲ್ಲ. ನಮ್ಮ ಸಂಸ್ಕೃತಿಗೆ ಹೊರತಾದ ಮತ್ತು ತನ್ನದೇ ಆದ ಸಾಹಿತ್ಯಕ ಪರಿಕಲ್ಪನೆಗಳಿಂದ ಕೂಡಿದ ಬೇರೊಂದು ಭಾಷೆಯ ಕೃತಿ ಕನ್ನಡದಲ್ಲಿ ಅನುವಾದಗೊಂಡಾಗ ಅದನ್ನು ಗ್ರಹಿಸಲು ಇರಬೇಕಾದ ಆವಶ್ಯಕತೆಗಳ ಬಗ್ಗೆ ಅವರಿಗೆ ಸ್ಪಷ್ಟವಾದ ನಿಲವಿದೆ. ಅನುವಾದಿತ ಕೃತಿ ಓದುಗನ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತದೆ ಎನ್ನುವುದಕ್ಕಿಂತ ಮುಖ್ಯವಾಗಿ ಲೇಖಕ ಆ ವಿಭಿನ್ನ ಸಂಸ್ಕೃತಿಯ ಒಳನೋಟ ಗಳನ್ನು, ಸೂಕ್ಷ್ಮತೆಗಳನ್ನು ಸಂಪೂರ್ಣವಾಗಿ ಅಲ್ಲದಿದ್ದರೂ, ಸ್ಥೂಲವಾಗಿ ಅರಿತಿರಬೇಕು. ಪಾಶ್ಚಿಮಾತ್ಯರನ್ನು ತೆಗೆದುಕೊಂಡರೆ ಅವರಲ್ಲಿ ಶೇಕಡ ೭೦-೮೦ರಷ್ಟು ಲೇಖಕರು ಕ್ರಿಶ್ಚಿಯನ್ ಮತಧರ್ಮದ ಕೇಂದ್ರದಿಂದ ಪ್ರಭಾವಿತಗೊಂಡವರು. ಇದು ವಸ್ತುವನ್ನು ಮತ್ತೊಂದು ಕಡೆಗೆ ರವಾನಿಸಿದಂತಲ್ಲ. ಅಲ್ಲದೆ, ಇದು ಕೇವಲ ಸಂವಹನೆಯ ಕೆಲಸವಲ್ಲ, ಸಂವೇದನೆಗೆ ಸಂಬಂಧಪಟ್ಟಿದ್ದು. ಅನುವಾದಕ ಇನ್ನೊಂದು ಪರಕೀಯ ಭಾಷೆಯ ವೈಶಿಷ್ಟ್ಯ ಮತ್ತು ಅದರ ಲಯಗಾರಿಕೆಯನ್ನು ತಿಳಿದಿರಬೇಕಾದದ್ದು ತೀರ ಅಗತ್ಯ. ಕೇವಲ ಭಾಷಾ ಜ್ಞಾನದಿಂದ ಇದು ಸಾಧ್ಯವಿಲ್ಲ. ಏಕೆಂದರೆ ಅನುವಾದ ಎನ್ನುವುದು ಬರಿಯ ಪ್ರತಿಸೃಷ್ಟಿ ಅಷ್ಟೇ ಅಲ್ಲ ಅದೊಂದು ಅನುಸೃಷ್ಟಿ ಎನ್ನುವ ಅಭಿಪ್ರಾಯವನ್ನು ನಿಸಾರ್ ಅವರು ಹೊಂದಿರುವುದರಿಂದಲೇ ಅವರ ಅನುವಾದಿತ ಕೃತಿಗಳು ಮೇಲ್ಮಟ್ಟವನ್ನು ಪಡೆದಿವೆ.

ಕನ್ನಡದಲ್ಲಿ ಅನುವಾದ ಸಾಹಿತ್ಯಕ್ಕೆ ಬಿ.ಎಂ.ಶ್ರೀ., ಡಿ. ವಿ. ಗುಂಡಪ್ಪ, ಮಾಸ್ತಿ, ಕುವೆಂಪು, ಅಡಿಗ ಮುಂತಾದವರು ಹಾಕಿಕೊಟ್ಟ ದೀರ್ಘ ಪರಂಪರೆ ಇದೆ. ಇವರ ಕೃತಿಗಳು ಕೇವಲ ಪರಿಚಯಾತ್ಮಕವಾದದ್ದಲ್ಲ ಎಂದು ಭಾವಿಸುವ ಅವರು, ಆ ಕೃತಿಗಳು ಅನುವಾದ ಕಾರ್ಯದಲ್ಲಿ ನಿರತರಾಗುವ ಇತರರಿಗೆ ಮತ್ತು ಸ್ವತಂತ್ರ ಕೃತಿ ರಚನಕಾರರಿಗೂ ಉಪಯುಕ್ತ ವಾಗಿರುವ ಸಾಧ್ಯತೆಗಳನ್ನು ಗುರುತಿಸುವ ನಿಸಾರರು ಕೆಲವು ಮೂಲಭೂತ ಅಂಶಗಳತ್ತ ದೃಷ್ಟಿ ಹರಿಸುತ್ತ, 'ಈ ಲೇಖಕರೆಲ್ಲ ಸಾರ್ಥಕವಾದ ಮತ್ತು ಅಮೋಘವಾದ ಕೆಲಸವನ್ನು ಮಾಡಿದ್ದಾರೆ. ಅವರು ಅನುವಾದ ಮಾಡಿರುವ ಕೃತಿಗಳನ್ನು ಗಮನಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಅವು ಒಂದು ರೀತಿಯಲ್ಲಿ ಪರಿಚಯಾತ್ಮಕವೂ ಹೌದು ಮತ್ತು ಕನ್ನಡದ ಅನುವಾದ ಸಾಹಿತ್ಯದ ಪ್ರಾಥಮಿಕ ಹಂತದಲ್ಲಿ ಬಂದಂಥವು. ಪಂಜೆ ಮಂಗೇಶರಾಯರು, ಹಟ್ಟಿಯಂಗಡಿ ನಾರಾಯಣರಾಯರು ಮುಂತಾದವರು ಇಂಗ್ಲಿಷ್ ಕವನಗಳನ್ನು ಮತ್ತು ಎಂ. ಎಲ್. ಶ್ರೀಕಂಠೇಶಗೌಡರು ಷೇಕ್ಸ್‌ಪಿಯರ್‌ನ ಬಿಡಿ ಪದ್ಯಗಳನ್ನು ಹಳೆಗನ್ನಡದಲ್ಲಿ ಅನುವಾದ ಮಾಡಿದ್ದಾರೆ. ಆದರೆ ಅವುಗಳನ್ನು ಓದಲು ಕಷ್ಟ. ಕಾರಣ, ಅವರು ತಮ್ಮ ಕಾಲದ ಭಾಷೆಯಲ್ಲಿ ಅನುವಾದಿಸಲಿಲ್ಲ. ಹಳೆಗನ್ನಡ ಭಾಷೆಯಲ್ಲಿದ್ದರೆ ಶ್ರೇಷ್ಠ ಎನ್ನುವ ಭಾವನೆಯಿಂದ ಮತ್ತು ಸಂಸ್ಕೃತಭೂಯಿಷ್ಠ ಭಾಷೆಯಲ್ಲಿ ಮಾಡಿದ್ದಾರೆ. ಆದರೆ ನಮಗೆ ಬೇಕಾದದ್ದು ಅದಲ್ಲ. ಇದಕ್ಕೆ ಮಾಸ್ತಿ ಮತ್ತು ಡಿ.ವಿ.ಜಿ. ಹೊರತಾಗಿದ್ದಾರೆ. ಆದರೆ ಒಂದು ಗುಣ ಅವರಲ್ಲಿ ಇಲ್ಲದೇ ಇರುವುದೇನೆಂದರೆ, ಭಾಷೆಯ ಪ್ರಸ್ತುತತೆ. ಡಿ.ವಿ.ಜಿ. ಯವರ ಷೇಕ್ಸ್‌ಪಿಯರ್‌ನ 'ಮ್ಯಾಕ್ಬೆತ್' ಕೃತಿಯ ಅನುವಾದ ಮೂಲಕ್ಕೆ ತೀರ ಸಮೀಪವಾದದ್ದು. ಷೇಕ್ಸ್‌ಪಿಯರ್ ಮತ್ತು ಡಿ.ವಿ.ಜಿ.ಯವರ ಸಂವೇದನೆಗಳಲ್ಲಿ ಸಾಮ್ಯವಿದ್ದರೂ ಅಲ್ಲಿ

ಭಾಷೆಯ ತೊಡಕಿದೆ. ನಡುಗನ್ನಡ ಮತ್ತು ಹಳೆಗನ್ನಡ ಭಾಷೆಯ ಪಾಂಡಿತ್ಯದ ಜೋರಿದೆ. ಇಷ್ಟಾಗಿಯೂ, ಅವು ಮಾರ್ಗದರ್ಶನ ಸ್ವರೂಪಿಯಾಗಿವೆ. ನಾವು ಬಳಸುವ ಭಾಷೆಯಲ್ಲಿ ಅಂದರೆ, ಆಡುಮಾತಿನ ಭಾಷೆ ಮತ್ತು ಲಯಗಳುಳ್ಳ ಒಂದು ಶಿಷ್ಟ ಭಾಷೆಯಲ್ಲಿ ಬರೆದರೆ ಇಂದಿನ ಜನಕ್ಕೆ ಸಂವಹಿಸಬಹುದು, ಮೆಚ್ಚಿಸಬಹುದು. ಬಿ. ಎಂ. ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತೆಗಳು' ಸಂಕಲನದಲ್ಲಿ ಇಂಗ್ಲಿಷ್ ಕವಿಗಳ ಕವನಗಳನ್ನು ಅನುವಾದಿಸಿ ಒಂದು ನಮೂನೆಯನ್ನು, ಮಾದರಿಯನ್ನು ನಿರ್ಮಿಸುವುದಕ್ಕೆ ಮುಂಚೆ ಅಷ್ಟು ಸಮರ್ಥವಾಗಿ ಯಾರೂ ಮಾಡಿರಲಿಲ್ಲ. ಅವರ ಕೃತಿ ಒಂದು ರೀತಿಯಲ್ಲಿ ಆಗಿನ ಕವಿಗಳಿಗೆ ದೀಪಧಾರಿ ಯಾಯಿತು. ನವೋದಯ ಮತ್ತು ನವ್ಯ ಮಾರ್ಗದ ಸಾಹಿತಿಗಳೆಲ್ಲ ಅದರಿಂದ ಪ್ರಭಾವಿತ ರಾದರು. ಬೇಂದ್ರೆ, ಕುವೆಂಪು ಅವರುಗಳಿಗಿಂತ ಕೆ. ಎಸ್. ನರಸಿಂಹಸ್ವಾಮಿ ಹೆಚ್ಚು ಪ್ರಭಾವಿತ ರಾದರು' ಎನ್ನುತ್ತಾರೆ.

ಸಾಹಿತ್ಯ ಕೃತಿಯೊಂದನ್ನು ಅನುವಾದ ಮಾಡಲು ನಿರ್ಧರಿಸುವಾಗ ಅನುವಾದಕನ ಮನೋಧರ್ಮ ತುಂಬ ಮುಖ್ಯವಾಗುತ್ತದೆ. ಮನೋಧರ್ಮದ ನೆಲೆಯಲ್ಲಿ ಮೂಲತಃ ಕವಿಯಾದ ನಿಸಾರ್ ಅಹಮದ್ ಅವರಿಗೆ ವೈಚಾರಿಕವಾದ ಕೃತಿಗಳನ್ನು ಅನುವಾದ ಮಾಡುವುದು ಕಷ್ಟಸಾಧ್ಯವೆನ್ನಿಸುತ್ತದೆ. ಅಂತಹ ಪ್ರಯತ್ನದ ಬಗ್ಗೆ ಅವರಿಗೆ ಅಧಿಕವಾದ ಒಲವಿಲ್ಲದಿರುವುದು ತೀರ ಸಹಜ. ಆದರೆ ಕಾವ್ಯ ಸಂಬಂಧಿಯಾದ ಮತ್ತು ಭಾವನಾತ್ಮಕ ಕೃತಿಗಳ ಅನುವಾದದ ಕಡೆ ಅವರ ಒಲವು ಹೆಚ್ಚು. ಇದರಿಂದಾಗಿಯೇ ಅವರ ಷೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಮತ್ತು 'ಒಥೆಲೊ' ನಾಟಕಗಳ ಅನುವಾದ ರೂಪುಗೊಂಡಿವೆ. ಮನುಷ್ಯನಲ್ಲಿ ಹುದುಗಿರುವ ಎಲ್ಲ ಬಗೆಯ ಮೂಲ ಭಾವನೆಗಳನ್ನು, ಅವು ಪ್ರಕಟಗೊಳ್ಳಬಹುದಾದ ವಿವಿಧ ಬಗೆಯ ರೀತಿಗಳನ್ನು, ತಲುಪಬಹುದಾದ ಮಟ್ಟಗಳನ್ನು ಬೆರಗುಗೊಳ್ಳುವಂತೆ ಪ್ರಸ್ತುತ ಪಡಿಸುವ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ಅವಕಾಶ ಅನೇಕರಿಗೆ ಒದಗಿರುವಂತೆ, ನಿಸಾರ್ ಅಹಮದ್ ಅವರಿಗೂ ಕಾಲೇಜು ದಿನಗಳಲ್ಲಿ ಲಭಿಸಿತು. ಇಂಟರ್‌ಮೀಡಿಯೆಟ್ ತರಗತಿಯಲ್ಲಿ 'ಮರ್ಚೆಂಟ್ ಆಫ್ ವೆನಿಸ್' ಮತ್ತು ಆನರ್ಸ್‌ನಲ್ಲಿ 'ಕಿಂಗ್ ಲಿಯರ್' ಪಠ್ಯವಾಗಿದ್ದದ್ದರಿಂದ, ಇವುಗಳ ಜೊತೆಗೆ ಷೇಕ್ಸ್‌ಪಿಯರ್‌ನ ಇತರ ನಾಟಕಗಳ ಬಗ್ಗೆ ತೀವ್ರವಾದ ಆಸಕ್ತಿ ಮೂಡಲು ಸಹಾಯವಾಯಿತೆಂದು ಭಾವಿಸುತ್ತಾರೆ. ಶ್ರೀಮಂತ ಕುಟುಂಬದವರ ವಿವಾಹ ಮಹೋತ್ಸವದ ಸಂದರ್ಭದಲ್ಲಿ ಅಭಿನಯಿಸಲು ರಚಿತವಾಗಿದೆ ಎಂದು ಊಹಿಸಲಾದ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕ ಉಲ್ಲಾಸ ಮತ್ತು ರೋಚಕತೆಗಳನ್ನು ಒದಗಿಸುವ ಪರಿಕಲ್ಪನೆಯಿಂದ ರೂಪುಗೊಂಡಿದ್ದೆಂದು ಭಾವಿಸಲು ಕಾರಣಗಳಿವೆ. ಆಗಿನ ಕಾಲದ ಇಂಗ್ಲಿಷ್‌ರಲ್ಲಿ ನಡು ಬೇಸಿಗೆಯ ದಿನ ಫೇರಿಗಳು ಮತ್ತು ಇತರ ಅಲೌಕಿಕ ಶಕ್ತಿಗಳು ಕಾಣಿಸಿಕೊಳ್ಳುತ್ತವೆ ಎನ್ನುವ ರೂಢಿಗತವಾದ ನಂಬಿಕೆಯೊಂದಿತ್ತು. ಎಲ್ಲ ಕಡೆ ಹಬ್ಬದ, ಸಂತೋಷದ ವಾತಾವರಣ ಇರುತ್ತಿತ್ತು. ಅಂದಿನ ದಿನಗಳ ಜನ ಸಮುದಾಯದ ಮಾನಸಿಕ ಸ್ಥಿತಿಯನ್ನು ಪ್ರತಿಫಲಿಸುವ ಉದ್ದೇಶದಿಂದಲೋ ಎನ್ನುವಂತೆ ತಾರ್ಕಿಕತೆಯನ್ನು ಮೀರಿದ ಭ್ರಾಮಕವೆನಿಸುವ ಸಾಂಗತ್ಯ ಮತ್ತು ಅಸಾಂಗತ್ಯಗಳ ಹದವಾದ

ಬೆರಕೆಯ ಹರ್ಷೋಲ್ಲಾಸದ ನಾಟಕ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್'. ಈ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ ದಿನಗಳನ್ನು ನೆನಪಿಸಿಕೊಳ್ಳುತ್ತ, '೭೦ರ ದಶಕದ ಪ್ರಾರಂಭದಲ್ಲಿ ಬಿ. ವಿ. ಕಾರಂತರು ಬೆಂಗಳೂರಿಗೆ ಬಂದು ಒಂದು ಹೊಸ ಆಂದೋಳನ ವನ್ನೇ ಪ್ರಾರಂಭಿಸಿದರು. ಆಗಷ್ಟೇ ಸಿ. ಆರ್. ಸಿಂಹ ಅವರ ಸಂಗಡಿಗರ 'ನಟರಂಗ' ಕೂಡ ಅಸ್ತಿತ್ವಕ್ಕೆ ಬಂದಿತ್ತು. ನಾಟಕ ಪ್ರಯೋಗದ ಚಳವಳಿ ಉಂಟಾಗಿತ್ತು. ಅಲ್ಲಲ್ಲಿ ನಡೆಯುತ್ತಿದ್ದ ಕೆಲವು ಅಪವಾದಗಳನ್ನು ಬಿಟ್ಟರೆ ಹಿಂದಿನ ತರಹ ತಮಾಷೆಯ ನಾಟಕಗಳನ್ನು ಬಿಟ್ಟು ಗಂಭೀರವಾದ, ಚಿಂತನೆಗೆ ಅನುವು ಮಾಡಿಕೊಡುವ ಮತ್ತು ಗಾಢವಾದ ಅನುಭವವನ್ನು ತಂದುಕೊಡುವಂಥ ನಾಟಕಗಳನ್ನು ಪ್ರದರ್ಶಿಸುವ ಹುಮ್ಮಸ್ಸು ಅವರಿಬ್ಬರಲ್ಲಿ ಹುಟ್ಟಿ ಕೊಂಡಿತ್ತು. ಆಗ ಪ್ರದರ್ಶಿತವಾದ ಕೆಲವು ಇಂಗ್ಲಿಷ್ ನಾಟಕಗಳೂ ಪ್ರೇರಣೆಯನ್ನು ಉಂಟು ಮಾಡಿದವು. 'ನಟರಂಗ'ದ ಸಿಂಹ ಮತ್ತು ಚಿಂತಾಮಣಿ ಫ್ಯಾಂಟಸಿಯ ಅಂಶಗಳಿರುವ ಕಾಮಿಡಿ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಅನುವಾದಿಸಲು ನನ್ನನ್ನು ಒತ್ತಾಯಿಸಿ ದರು. ಪ್ರಾರಂಭದಲ್ಲಿ ನಾನು ನಿರಾಕರಿಸಿದರೂ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಪಠ್ಯವಾಗಿ ಆಳವಾಗಿ ಅಭ್ಯಾಸ ಮಾಡಿದ್ದ ಹಿನ್ನೆಲೆಯಲ್ಲಿ ಒಪ್ಪಿದೆ. ಷೇಕ್ಸ್‌ಪಿಯರ್‌ನನ್ನು ಅನುವಾದಿಸುವು ದಕ್ಕೆ ತಕ್ಕುದಾದ ಕಾವ್ಯಾತ್ಮಕ ಗುಣ ನನ್ನಲ್ಲಿ ಇಲ್ಲದೇ ಹೋಗಿದ್ದರೆ ಇದು ಸಾಧ್ಯವಾಗು ತ್ತಿರಲಿಲ್ಲ. ನಾನು ಆ ನಾಟಕವನ್ನು ಕನ್ನಡಕ್ಕೆ ತಂದ ಒಟ್ಟಾರೆ ರೀತಿ 'ನಟರಂಗ'ದವರಿಗೆ, ಮಾಸ್ತಿ, ಎಚ್. ನರಸಿಂಹಯ್ಯ ಮುಂತಾದವರಿಗೆಲ್ಲ ಇಷ್ಟವಾಯಿತು. ಅನಂತರ ಸಿಂಹ ಷೇಕ್ಸ್‌ಪಿಯರ್‌ನ ಟ್ರಾಜಿಡಿಯೊಂದನ್ನು ಅನುವಾದಿಸಿ ಕೊಡಲು ಕೇಳಿದರು. ಅದಕ್ಕಾಗಿ 'ಒಥೆಲೊ'ವನ್ನು ಅನುವಾದಿಸಿದೆ' ಎನ್ನುತ್ತಾರೆ. '...ಡ್ರೀಮ್' ನಾಟಕಕ್ಕೆ ಮುನ್ನುಡಿ ಬರೆದಿರುವ ಮಾಸ್ತಿಯವರು ತಿಳಿಸುವಂತೆ 'ನಾಟಕ ಎನ್ನುವ ಕೃತಿಯ ನಾಟಕತ್ವ ರಂಗದ ಮೇಲೆ ಬರದೆ ಪೂರ್ಣವಾಗಿ ಸಿದ್ಧಿಸುವುದಿಲ್ಲ' ಎನ್ನುವುದನ್ನು ಒಪ್ಪುವ ನಿಸಾರರು ನಾಟಕದ ಅಭ್ಯಾಸದ ದಿನಗಳಲ್ಲಿ ನಿರ್ದೇಶಕ ಸಿಂಹ ಅನುವಾದಕ್ಕೆ ಸಂಬಂಧಿಸಿದಂತೆ ಯಾವ ಸ್ವಾತಂತ್ರ್ಯವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಕೆಲವು ಸಲ ನನ್ನ ಜೊತೆ ಚರ್ಚಿಸಿದ ಅನಂತರ ನಾನು ಅಲ್ಲಲ್ಲಿ ಒಂದು ಕಡಕ್ ಪದ, ಅರ್ಧ ವಾಕ್ಯ ಮುಂತಾದವನ್ನು 'ಅಲಿಟ್ರೇಷನ್'ಗಾಗಿ ಬದಲಾಯಿಸಿದೆ. ಇಡೀ ನಾಟಕ, ಕಾವ್ಯಗುಣ ಹೊಂದಿದ್ದರಿಂದ ಹೆಚ್ಚಿನ ಅವಕಾಶಗಳಿಗೆ ಆಸ್ಪದವಿರಲಿಲ್ಲ. ಇಲ್ಲದಿದ್ದರೆ ಇಡೀ ಕೃತಿಯ ಕಟ್ಟಡವೇ ಕುಸಿದು ಬೀಳುತ್ತಿತ್ತು' ಎಂದು ಹೇಳುವುದು ಯುಕ್ತವೆನಿಸುತ್ತದೆ.

ನಿಸಾರ್ ಅಹಮದ್ ಅವರು '...ಡ್ರೀಮ್' ನಾಟಕವನ್ನು ಅನುವಾದಿಸುವಾಗ ನವ್ಯ ಕಾವ್ಯದ ಮುಕ್ತ ಛಂದಸ್ಸಿನ ಲಯಗಾರಿಕೆಯನ್ನು ಹೆಚ್ಚಾಗಿ ಬಳಸಿದಂತೆ ತೋರುತ್ತದೆ. ಇದಕ್ಕೆ ಉದಾಹರಣೆಯಾಗಿ ಹರ್ಮಿಯ ಹೇಳುವ—

> 'ಲೈಸ್ಯಾಂಡರನ ಪರಿಚಯಕ್ಕೆ ಮುನ್ನ
> ಅಥೆನ್ಸ್ ನನಗಾಗಿತ್ತು ಭೂ ನಂದನ.
> ಆ ನಂದನವನ್ನು ಮಾಡುವಂತೆ ನರಕ ಸುಡುಗಾಡ,
> ಅವನ ಚೆಲು ನೋಟದಲ್ಲಿ ಯಾವುದಿದೆ ಪವಾಡ?'

ಅದಕ್ಕೆ ಉತ್ತರವಾಗಿ ಲೈಸ್ಯಾಂಡರ್ ಹೇಳುವ—

'ನಾಳೆ ರಾತ್ರಿ, ತಿಳಿ ನೀರ ಕನ್ನಡಿಯಲ್ಲಿ ಚಂದ್ರ
ತನ್ನ ರಜತ ಪ್ರತಿಮೆಯನ್ನು ದಿಟ್ಟಿಸುವಾಗ,
ಎಳ ಗರಿಕೆಗೆ ಮುತ್ತು ಹನಿಗಳ ಓಲೆ ತೊಡಿಸುವಾಗ,
ಪ್ರಿಯರು ಕದ್ದೋಡಿದರೂ ಗೊತ್ತಾಗದಿರುವ ವೇಳೆ—
ಅಥೆನ್ಸಿನಿಂದ ಪಾರಾಗುತ್ತೇವೆ ನಾವಿಬ್ಬರೂ ನಾಳೆ.'

ಜೊತೆಗೆ ಹೆಲೆನ್ನಳ—

'ಅತಿ ಹೇಯ, ನಿಕೃಷ್ಟ ವಸ್ತುಗಳು ಕೂಡ
ಒಲವಿಂದ ಏರುತ್ತವೆ ಮಾನ್ಯತೆಯ ಕೋಡ.
ಅನುರಾಗ ನೋಡುವುದು ಕಣ್ಣಿಂದಲಲ್ಲ, ಭಾವನೆಗಳಿಂದ;
ಜನ ಅನ್ನುವುದು ನಿಜ—ಕಾಮ ಅಂಧ.
ಬಿಚ್ಚೇ ಇರುತ್ತವೆ ಅವನ ಭಾವನೆಯ ರೆಕ್ಕೆ:
ಇಂಥ ಧಾವಂತದಲ್ಲಿ ಸುವಿವೇಕಕ್ಕೆ ಧಕ್ಕೆ.'

ಮತ್ತು ಪಕ್ ಹೇಳುವ—

'ತನ್ನ ಪರಿವಾರದಲಿ ಆ ಮಗುವ ಕೂಡಿ
ಕಾಡನಲೆಯುವ ಹೊತ್ತು ಮುಂದಾಳು ಮಾಡಿ
ದೊರೆಗವನ ಪಡೆಯುವ ಹಿರಿಯಾಸೆ ಮೂಡಿ
ರಾಣಿಯನು ಎಷ್ಟೆಷ್ಟೊ ಗೋಗರೆದು ಬೇಡಿ
ವಿಫಲನಾಗಿರುವರಸ ಕೋಪಕ್ಕೆ ಸಂದು
ನೋಡನೆಂದೆಣಿಸಿರುವ ಸತಿಯ ಮುಂದೆಂದೂ.'

—ಇಂಥ ಸಾಲುಗಳನ್ನು ಇಡೀ ನಾಟಕದುದ್ದಕ್ಕೂ ಕಾಣಲು ಸಾಧ್ಯವಿದೆ. ಇವು ಅನುವಾದದಲ್ಲಿ ಬೆಸೆಯಲ್ಪಟ್ಟ ಕಾವ್ಯಗುಣಕ್ಕೆ ಸಂಬಂಧಿಸಿದ್ದು. ಆದರೆ ಮಾಸ್ತಿಯವರು ನಿಸಾರರ ಅನುವಾದವನ್ನು 'ಛಾಯಾನುವಾದ' ಎಂದು ಕರೆದಿರುವ ಬಗ್ಗೆ ಗಮನ ಸೆಳೆದಾಗ ಅವರು ತಮ್ಮ ನಿಲವನ್ನು ಪ್ರಕಟಿಸುತ್ತ, 'ಮಾಸ್ತಿ, ಡಿ.ವಿ.ಜಿ. ಮೊದಲಾದವರು ಕೆಲವು ಸಾರ್ಥಕವಾದ ಕೆಲಸ ಮಾಡಿದ್ದಾರೆ ನಿಜ. ಅವರು ಪರಂಪರಾಗತ ರೀತಿಯ ಯೋಚನೆಯುಳ್ಳವರು. ಪ್ರತಿಯೊಂದೂ ಪರಿಪೂರ್ಣವಾಗಿರಬೇಕೆಂದು ಬಯಸುವವರು. ಯಾವುದೇ ಕೃತಿಯಾಗಲಿ ಅದು ನಾಟಕವಾಗಿದ್ದರೂ ಸರಿಯೆ, ಮೊದಲು ಓದುವುದಕ್ಕೆ ಸರಿಯಾಗಿರಬೇಕೆನ್ನುವುದು ಅವರ ಅಭಿಪ್ರಾಯ. ಅನಂತರ ರಂಗಭೂಮಿಯ ಮೇಲೆ ಪ್ರದರ್ಶಿತಗೊಳ್ಳುವ ವಿಷಯ. ಅಲ್ಲದೆ, ಅವರು ನಾಟಕಗಳನ್ನು ಅನುವಾದ ಮಾಡಿದ ಕಾಲದಲ್ಲಿ ನಾಟಕ ಪ್ರದರ್ಶನ ಅಷ್ಟು ಪ್ರಚಲಿತದಲ್ಲಿ ಇರಲಿಲ್ಲ. ಆಗ ವರದಾಚಾರ್ ಮುಂತಾದವರ ವೃತ್ತಿ ನಾಟಕಗಳು ಮಾತ್ರ ಹೆಚ್ಚಾಗಿ ಪ್ರದರ್ಶಿತವಾಗುತ್ತಿದ್ದವು. ಹೀಗಾಗಿ, ಅವರು ವಾಚನೀಯವಾದ ಅನುವಾದಗಳನ್ನು ಮಾಡಿದ್ದಾರೆ. ನನ್ನ ಅನುವಾದ ಅಲ್ಲಲ್ಲಿ ಕೊಂಚ ಭಿನ್ನವಾಗಿದ್ದರಿಂದ ಅವರಿಗೆ ಹಾಗನ್ನಿಸಿದೆ' ಎಂದು ಮಾಸ್ತಿಯವರ ಮಾತಿನ ಹಿಂದಿರುವ ಆಲೋಚನೆಯನ್ನು ಮುಂದಿಟ್ಟು, 'ನಾನು

ಪದಕ್ಕೊಂದು ಪದ, ವಾಕ್ಯಕ್ಕೊಂದು ವಾಕ್ಯ ಎನ್ನುವಂತೆ ಅನುವಾದ ಮಾಡಿಲ್ಲ. ಹಾಗಿದ್ದರೆ ಅದು ತುಂಬ ಕೃತಕವಾಗುತ್ತಿತ್ತು. ಹಾಗೆ ಮಾಡುವುದು ಅನುವಾದವೇ ಅಲ್ಲ. ನಾನು ಇಡೀ ವಾಕ್ಯಖಂಡವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ನಮ್ಮ ಭಾಷೆಯ ಜಾಯಮಾನಕ್ಕೆ ತಕ್ಕ ಹಾಗೆ ಅನುವಾದಿಸಿದ್ದೇನೆ. ಉದಾಹರಣೆಗೆ, ಅಲ್ಲಿ 'ಮೇ ಪೋಲ್' (May Pole) ಎನ್ನುವ ಮಾತು ಬರುತ್ತದೆ. ಅದು ಷೇಕ್ಸ್‌ಪಿಯರ್‌ನ ಕಾಲದಲ್ಲಿ ಪ್ರಚಲಿತವಾಗಿದ್ದ ಒಂದು ಪದ. ಅದು ಸುಗ್ಗಿಯ ಕಾಲದಲ್ಲಿ ಆಡುವಂಥ ಒಂದು ಬಣ್ಣದ ಕಂಬದ ಆಟ. ಹರ್ಷೋತ್ಸಾಹದ ಪ್ರತೀಕ. ಹರ್ಮಿಯ ಮತ್ತೊಬ್ಬಳನ್ನು ಬೈಯುವುದಕ್ಕೆ ಅದನ್ನು ಬಳಸುತ್ತಾಳೆ. ನಾನು ಮೇ ಪೋಲ್ ಎಂದು ಬರೆದಿದ್ದರೆ, ಇಂದು ಇಂಗ್ಲೀಷಿನವರಿಗೆ ಅರ್ಥವಾಗದ ಆ ಪದ ಮತ್ತು ಅದರ ಹಿನ್ನೆಲೆ, ನಮ್ಮ ಜನರ ದೃಷ್ಟಿಯಿಂದ ಕೃತಕವಾಗುತ್ತಿತ್ತು. ಅದಕ್ಕೆ ನಾನು 'ಬಣ್ಣ ಬಳಿದ ಗರುಡಗಂಬ' ಎಂದು ಬರೆದಿದ್ದೇನೆ. ಇಂಥದನ್ನು ಅವರು ಗಮನಿಸಿ ಅನುವಾದ ನೇರ ವಾಗಿ ಮಾಡಿಲ್ಲ; ಅದರಿಂದಾಗಿ 'ಛಾಯಾನುವಾದ' ಎಂದಿದ್ದಾರೆ. ಆದರೆ ನನಗದು ಪ್ರಮಾದ ವಾಗಿ ಕಂಡಿಲ್ಲ. 'ಗುಡ್ ಮಾರ್ನಿಂಗ್' ಎನ್ನುವುದನ್ನು 'ನಲ್ಬೆಳಗು' ಎಂದು ಅವರು ಅನು ವಾದಿಸುತ್ತಾರೆ. ಅದು ಕೃತಕವೆನ್ನಿಸುತ್ತದೆ. ನಾನು ಇಂಥದನ್ನು 'ನಮಸ್ಕಾರ' ಎಂದು ಮಾಡಿ ದ್ದೇನೆ. ಇದರಲ್ಲಿ ಅಂತರಾರ್ಥ ಮತ್ತು ಭಾವಾರ್ಥ ಮಾತ್ರ ಮುಖ್ಯವಾಗುತ್ತದೆ. ಪದಶಃ ಅರ್ಥ ಮುಖ್ಯವಾಗುವುದಿಲ್ಲ. ಅದೇ ರೀತಿ, ಕುಳ್ಳಿಯಾಗಿದ್ದವಳನ್ನು 'ಪಿಗ್ಮಿ' ಎಂದು ಇರು ವುದನ್ನು 'ಗುಜ್ಜಾರಿ' ಎಂದಿದ್ದೇನೆ. ನಮ್ಮಲ್ಲಿ ಬಳಕೆಯಲ್ಲಿ ಇರುವ ಪದಗಳನ್ನು ಅಂಥವಕ್ಕೆ ಸಂವಾದಿಯಾಗಿ ಬಳಸಿದ್ದೇನೆ' ಎಂದು ಹೇಳಿರುವುದು ಸಮರ್ಥನೀಯವಾಗಿ ಕಾಣುತ್ತದೆ.

ಹಲ ಕೆಲವು ಕವನಗಳನ್ನು ಹೊರತುಪಡಿಸಿದರೆ ಅನ್ಯ ಭಾಷೆಯ ಒಂದೇ ಕೃತಿಯನ್ನು ಬೇರೆ ಬೇರೆಯವರು ಅನುವಾದಿಸಿದ, ರೂಪಾಂತರಿಸಿದ ಉದಾಹರಣೆಗಳು ಷೇಕ್ಸ್‌ಪಿಯರ್ ನಾಟಕಗಳನ್ನು ಬಿಟ್ಟು, ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. 'ಬರೀ ಮರ್ಯಾದಸ್ಥರೆ' ಎನ್ನುವ ಸಂಕಲನದಲ್ಲಿ ನೆರುಡನ ಕವನಗಳನ್ನು ಅನುವಾದಿಸುವಾಗ, ಅವುಗಳನ್ನು ಅನೇಕ ಇತರರು ಇಂಗ್ಲೀಷಿನಲ್ಲಿ ಅನುವಾದಿಸಿದ್ದರಿಂದ ಏನಾದರೂ ಸಮಸ್ಯೆಗಳು ಉಂಟಾದವೆ? ಎನ್ನುವುದಕ್ಕೆ ನಿಸಾರರು ಅದು ಸಮಸ್ಯೆ ಎಂದು ತೋರಲಿಲ್ಲ ಎನ್ನುತ್ತಾರೆ. ನೆರುಡನ ಕವನಗಳ ನಾಲ್ಕೈದಕ್ಕಿಂತ ಹೆಚ್ಚಿನ ಅನುವಾದಗಳನ್ನು ಗಮನಿಸಿದಾಗ ಬೇರೆ ಬೇರೆಯವರು ಬೇರೆ ಅರ್ಥ ಬರುವ ಹಾಗೆ ಅನುವಾದ ಮಾಡಿದ್ದಾರೆಂದು ತಮಗನ್ನಿಸಿತು. ಅವುಗಳ ಧೋರಣೆ ಮತ್ತು ಅರ್ಥ ತಮಗೆ ಪೂರ್ಣ ಒಪ್ಪಿಗೆಯಾಗಲಿಲ್ಲ. ಆದರೆ ಆ ಅನುವಾದಗಳಿಂದ ಉಂಟಾದ ಅನುಕೂಲವೆಂದರೆ ಆ ಕವನಗಳನ್ನು ಕುರಿತು ತಮ್ಮ ಗ್ರಹಿಕೆ ಹೆಚ್ಚು ಸ್ಪಷ್ಟವಾಯಿತು. ಅವುಗಳನ್ನು ಅನುವಾದಿಸುವಾಗ ಮತ್ತೆ ಮತ್ತೆ ತಿದ್ದಿ ಅವುಗಳಿಗೆ ತೀರ ಉಚಿತವೆನ್ನಿಸುವ ಅರ್ಥವನ್ನು, ಲಯಗಾರಿಕೆಗೆ ಹೊಂದಿ ಕೊಳ್ಳುವ ಪದಗಳನ್ನು, ಕಾಪಾಡಲು ಪ್ರಯತ್ನಿಸಿದ್ದೇನೆ ಎನ್ನುವ ಮಾತುಗಳಿಗೆ ಆ ಸಂಕಲನದಲ್ಲಿ ಸಮರ್ಥನೆ ದೊರಕುತ್ತದೆ. ಉದಾಹರಣೆಯಾಗಿ ಶೀರ್ಷಿಕೆಯ ಕವನದಲ್ಲಿ—

'ಜ್ವಲಂತ ಬೇಸಿಗೆಯ ನಾಯಕತ್ವದಲ್ಲಿ
ಸಮಾನ ವ್ಯಥೆಯ ಪ್ರಿಯತಮೆಯರ ಪಡೆ

ಹಂಚಿ ಹೋಗುತ್ತದೆ ಇಬ್ಬಿಬ್ಬರಾಗಿ;
ನರಪೇತಲ ದಢೂತಿಯೊಡನೆ,
ದಿಲ್ಲಗಿಯವ ಅಳುಮೋರೆಯವಳೊಡನೆ;
ಮನೋಹರ ತೆಂಗುಗಳ ಕೆಳಗೆ
ಚಂದ್ರ, ಸಾಗರ ಸಮೀಪ—
ಪ್ಯಾಂಟು, ಉಬ್ಬು ಲಂಗಗಳ ಸರಭರಕ್ಕೆ ಮಿತಿಯೇ ಇಲ್ಲ.'

ಮತ್ತು 'ಮನುಷ್ಯನಾಗಿರುವುದು' ಕವನದಲ್ಲಿ—

'ನಾನು ದ್ವೇಷಿಸುವ ಮನೆ ಬಾಗಿಲುಗಳಲ್ಲಿ
ಗಂಧಕ ವರ್ಣದ ಪಕ್ಷಿಗಳು, ಬೀಭತ್ಸಕರ ಕರುಳ ಮಾಲೆ
ತೂಗಾಡಿವೆ.
ಕಾಫಿ ಬಟ್ಟಲಿನಲ್ಲಿ ಮರೆತು ಇಟ್ಟ ಕೃತಕ ಹಲ್ಲುಗಳಿವೆ,
ನಾಚಿಕೆ ಭೀಕರತೆಗಳಿಂದ ಅತ್ತಿರಬಹುದಾದ
ಕನ್ನಡಿಗಳಿವೆ,
ಎಲ್ಲೆಲ್ಲೂ ಕೊಡೆಗಳು,
ವಿಷಗಳು, ಹೊಕ್ಕಳುಗಳಿವೆ.
....
ಕಛೇರಿಗಳನ್ನು, ಮೂಳೆ ಚಿಕಿತ್ಸೆಯ ಉಡುಪುಗಳಿಂದ
ತುಂಬಿರುವ ಅಂಗಡಿಗಳನ್ನ,
ಒಳ ಚೆಡ್ಡಿ, ಟವೆಲು, ಶರ್ಟುಗಳಲ್ಲಿ ನಿಧಾನವಾಗಿ
ಕೊಳಕು ಕಂಬನಿಗರೆದಿರುವುವೋ ಎಂಬಂಥ
ಬಟ್ಟೆ ಹರವಿದ ತಂತಿಗಳಿರುವ ಅಂಗಳಗಳನ್ನ
ದಾಟಿ ಸಾಗುತ್ತೇನೆ.'

ಬೇರೆ ಭಾಷೆಯ ಕೃತಿಯೊಂದನ್ನು ಅನುವಾದ ಮಾಡುವಾಗ ಅದರ ರಚನೆಯ ಕಾಲ ಯಾವುದಿದ್ದರೂ ಸಮಕಾಲೀನದಲ್ಲಿ ಪ್ರಚಲಿತವಿರುವ ಮತ್ತು ಆಡುಭಾಷೆಯ ಬಳಕೆಯಿಂದ ಆ ಕೃತಿಯ ಸಂವಹನ ಕ್ರಿಯೆ ತುಂಬ ಫಲಕಾರಿಯಾಗುತ್ತದೆ ಎನ್ನುವ ನಿಲವನ್ನು ಹೊಂದಿರುವ ನಿಸಾರರು ರಷ್ಯ ದೇಶದ ಕಥೆಗಳ 'ಹೆಜ್ಜೆ ಗುರುತು' ಸಂಕಲನದಲ್ಲಿಯೂ ಅದನ್ನು ಪ್ರಕಟಿಸಿದ್ದಾರೆ. ಈ ಮಾತುಗಳ ಪೂರಕವಾಗಿ ಡಾಸ್ಟೊವಸ್ಕಿಯ 'ಕ್ರಿಸ್‌ಮಸ್ ವೃಕ್ಷ ಮತ್ತು ಮದುವೆ' ಕಥೆಯಲ್ಲಿ, 'ಮದುವೆಯೇನೋ ದಿವಿನಾಗಿ ನಡೆಯಿತು,' 'ಅಕಸ್ಮಾತ್ ತಲೆ ಹಾಕಿದ್ವ', 'ಬಟ್ಟಲುಗಣ್ಣಿನ ಕಟ್ಬಾಣಿ' ಮತ್ತು ಮ್ಯಾಕ್ಸಿಮ್ ಗಾರ್ಕಿಯ 'ಮಕರ್ ಚುದ್ರ' ಕಥೆಯ 'ಆ ಮನುಷ್ಯ ದುಡಿದು ತನ್ನ ಕಸುವಿನ ಕಣ ಕಣವನ್ನೂ ಬೆವರಾಗಿ ಮಾರ್ಪಡಿಸಿ, ಅದರ ಹನಿ ಹನಿಯನ್ನೂ ನೆಲಕ್ಕೆ ಊಡ್ತಿದಾನೆ' ಎನ್ನುವಂಥ ನಿದರ್ಶನಗಳನ್ನು ಮುಂತಾದ ಕಡೆ ನೋಡಬಹುದು.

ಅನ್ಯ ಭಾಷೆಯ ಕೃತಿಯೊಂದನ್ನು ಕನ್ನಡಕ್ಕೆ ತರುವಾಗ ಅನುವಾದ, ರೂಪಾಂತರ ಮುಂತಾದವುಗಳ ಸೂಕ್ಷ್ಮತರ ಸ್ವರೂಪ ಮತ್ತು ಅವುಗಳ ಅಪೇಕ್ಷಣೀಯತೆಯ ಬಗ್ಗೆ ನಿಸಾರರ ನಿಲವು ಸಾಕಷ್ಟು ಸ್ಪಷ್ಟವಾಗಿ ಕಾಣುವುದು ಈ ಮಾತುಗಳಿಂದ.

'ಅನುವಾದ ಎನ್ನುವುದೇ ಒಂದು ಇಲ್ಯುಸಿವ್ (Illusive) ಅಥವಾ ಭ್ರಾಮಕವಾದ ಪದ. ಏಕೆಂದರೆ, ವಿಭಿನ್ನ ಭಾಷೆಯ ಜಾಯಮಾನ ನಮ್ಮ ಭಾಷೆಗಿಂತ ಬೇರೆಯಾಗಿರುತ್ತದೆ. ಆ ಒಂದು ಭಾಷೆಯಲ್ಲಿ ಫಲಶ್ರುತಿಯಾಗಿ ಮೂಡಿದ ಕೃತಿಯೊಂದನ್ನು ನಮ್ಮ ಭಾಷೆಯಲ್ಲಿ ಮಾಡಿದಾಗ ಕೆಲವೊಂದು ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದಾಗಿ ಅವು ನೇರ ತರ್ಜುಮೆಗಳಾಗುವುದಿಲ್ಲ. ಕೆಲವೊಮ್ಮೆ ರೂಪಾಂತರಗಳಾಗುತ್ತವೆ. ಕುವೆಂಪು 'ಟೆಂಪೆಸ್ಟ್' ನಾಟಕವನ್ನು 'ಬಿರುಗಾಳಿ' ಮತ್ತು ಹ್ಯಾಮ್ಲೆಟ್ ನಾಟಕವನ್ನು 'ರಕ್ತಾಕ್ಷಿ' ಎಂದು ಮಾಡಿಕೊಂಡಿರುವ ಹಾಗೆ. ಇವೆರಡೂ ತುಂಬ ಜನಾದರಣೀಯವಾಗಿವೆ. ರಂಗದ ಮೇಲೆ ಕೂಡ ಯಶಸ್ವಿಯಾಗಿವೆ. ಎಂ. ಎಲ್. ಶ್ರೀಕಂಠೇಶಗೌಡರ 'ಪ್ರಮೀಳಾರ್ಜುನೀಯ' ('ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್'), 'ಪ್ರತಾಪ ರುದ್ರದೇವ' ('ಒಥೆಲೊ') ಮತ್ತು ಕರಿಬಸಪ್ಪ ಶಾಸ್ತ್ರಿಗಳ ರೂಪಾಂತರಗಳೇ ಮೊದಲು ನಮ್ಮಲ್ಲಿ ಇದ್ದದ್ದು. ಸಾರ್ಥಕ ಅನುವಾದ ಎನ್ನುವುದು ಒಂದರಿಂದ ಮತ್ತೊಂದಕ್ಕೆ ಕೇವಲ ಪರಿವರ್ತನೆಯ ಕೆಲಸವಲ್ಲ. ಅದು ನಮ್ಮ ಭಾಷೆಗೆ ಒಗ್ಗಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇನ್ನೊಂದು ರೀತಿಯಲ್ಲಿ 'ತದ್ರೂಪಿ' ಯಾಗುತ್ತದೆ.'

ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಇತರ ಭಾಷೆಗಳಿಗೆ ಕೃತಿಗಳನ್ನು ಅನುವಾದಿಸಿ ಪ್ರಚುರಪಡಿಸುವ ಕಾರ್ಯವನ್ನು ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಮುಂತಾದ ಸಂಸ್ಥೆಗಳು ನಿರ್ವಹಿಸುತ್ತಿವೆ. ಆದರೆ ಇಲ್ಲಿನ ಕೆಲವು ಅನುವಾದ ಕೃತಿಗಳು ಆತುರದ ಅಡುಗೆಗಳಾಗಿವೆ. ಪ್ರಪಂಚದ ಬೇರೆಡೆಯ ಸಾಹಿತ್ಯದ ಮೌಲಿಕ ಕೃತಿಗಳು ಕನ್ನಡಕ್ಕೆ ದೊರಕುವಂಥ ಯಾವುದೇ ಸಾಂಸ್ಥಿಕ ವ್ಯವಸ್ಥೆ ಇಲ್ಲದಿರುವುದರ ಕೊರತೆ ನಿಸಾರರಿಗೆ ಕಂಡಿದೆ.

'ಸದ್ಯಕ್ಕಂತೂ ಇದು ಕೇವಲ ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿದೆ. ತಾವು ಓದಿದ ಮತ್ತು ತಮಗಿಷ್ಟವಾದುದನ್ನು ಕನ್ನಡಕ್ಕೆ ತರುವ ವೈಯಕ್ತಿಕ ಪ್ರಯತ್ನಗಳು ಮಾತ್ರ ಕಾಣಿಸಿಕೊಳ್ಳುತ್ತಿವೆ. ಜಗತ್ತಿನ ಶ್ರೇಷ್ಠ ಮಟ್ಟದ ಕೃತಿಗಳು ಕನ್ನಡಕ್ಕೆ ಬಂದರೆ ನಮ್ಮ ಸಂವೇದನೆಯನ್ನು ಫಲವತ್ತಾಗಿಸುತ್ತವೆ. ಉದಾಹರಣೆಗೆ, ಈ ದಿಕ್ಕಿನಲ್ಲಿ ವಿ.ಸೀ.ಯವರು ಅನುವಾದಿಸಿದ 'ಮಾಬಿ ಡಿಕ್' ಮತ್ತು ಚಿಕ್ಕದಾಗಿದ್ದರೂ ಒಳ್ಳೆಯದಾದ ಹೆಮಿಂಗ್‌ವೇಯ 'ಓಲ್ಡ್ ಮ್ಯಾನ್ ಅಂಡ್ ದ ಸೀ' ಮುಂತಾದ ಕ್ಲಾಸಿಕ್ಕುಗಳಿವೆ. ಇಲ್ಲಿಯವರೆಗೂ ನಮಗೆ ಹೆಚ್ಚಾಗಿ ಇಂಗ್ಲೆಂಡ್ ಮತ್ತು ಅಮೆರಿಕದ ಕೃತಿಗಳು ನಮ್ಮ ಗಮನದಲ್ಲಿವೆ. ಆದರೆ ಲ್ಯಾಟಿನ್ ಅಮೆರಿಕ ಮತ್ತು ಈಸ್ಟ್ ಯೂರೋಪಿಯನ್ ದೇಶಗಳು, ಜಪಾನ್ ಮತ್ತು ಚೀನಾಗಳಲ್ಲಿ ಬಹಳ ಒಳ್ಳೆಯ ಕೃತಿಗಳು ಬರುತ್ತಿವೆ. ಅವುಗಳನ್ನು ಅರಿಯುವುದಕ್ಕೆ ನಮಗೆ ಬಾಗಿಲುಗಳೇ ಇಲ್ಲ. ಅವುಗಳದೇ ಭಾಷೆಯನ್ನು ಕಲಿತು ಅನುವಾದಿಸಿದರಂತೂ ತುಂಬ ಒಳ್ಳೆಯದು. ಕೊನೆಯ ಪಕ್ಷ ಇಂಗ್ಲಿಷ್‌ಗೆ ತರ್ಜುಮೆಗೊಂಡ ಅವುಗಳನ್ನು ಕನ್ನಡಕ್ಕೆ ತರುವುದು ತೀರ ಅಗತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ, ವಿಶ್ವವಿದ್ಯಾಲಯಗಳು ಈ ವಿಷಯದ ಬಗ್ಗೆ ವಿಶೇಷ ಗಮನ ಹರಿಸುವುದು ಒಳ್ಳೆಯದು ಮತ್ತು ಖಾಸಗಿ ಪ್ರಕಾಶಕರು ಇದನ್ನು ಕೈಗೆತ್ತಿಕೊಂಡರೆ ಹೆಚ್ಚು ಅನುಕೂಲ. ಇನ್ನಿತರ ಖಾಸಗಿ ಸಂಸ್ಥೆಗಳೂ ಇದರಲ್ಲಿ ಕೈಗೂಡಿಸಿದರೆ ತುಂಬ

ಒಳ್ಳೆಯದು. ಅನುವಾದಕ್ಕೆ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು, ಬೆಳಸಬೇಕು. ಇದರಿಂದ ನಮ್ಮಲ್ಲಿ ಗಟ್ಟಿಯಾದ ಸಾಹಿತ್ಯ ಮೂಡುವುದು ಸಾಧ್ಯ' ಎನ್ನುತ್ತಾರೆ.

ಸ್ವತಂತ್ರ ಕೃತಿ ರಚನೆ ಮತ್ತು ಅನುವಾದ ಕೃತಿ ರಚನೆ ಇವುಗಳಲ್ಲಿ ವ್ಯತ್ಯಾಸಕ್ಕಿಂತ ಹೆಚ್ಚಿನ ಸಮಾನತೆಯನ್ನು ಕಾಣುವ ನಿಸಾರರು, 'ಎರಡೂ ಸೃಜನಶೀಲ ಕಾರ್ಯಗಳೇ. ಒಳ್ಳೆಯ ಅನುವಾದದಲ್ಲಿ ಪದಕ್ಕೆ ಪದ ಮತ್ತು ವಾಕ್ಯಕ್ಕೆ ವಾಕ್ಯ ಮಾಡಲಾಗುವುದಿಲ್ಲ. ಹಾಗಿದ್ದರೆ ಅದು ತುಂಬ ಸುಲಭವಾಗುತ್ತಿತ್ತು. ಇನ್ನೊಂದರ ಅಂತರಾತ್ಮವನ್ನು ಮತ್ತು ಅಂತರಾರ್ಥವನ್ನು ಆದಷ್ಟೂ ತಿಳಿದುಕೊಂಡು ಪ್ರಯತ್ನಿಸಬೇಕಾಗುತ್ತದೆ. ಇದಕ್ಕೆ ಸಾಕಷ್ಟು ನಿಷ್ಠೆ ಮತ್ತು ಸಿದ್ಧತೆ ಇರಬೇಕು. ಸ್ವತಂತ್ರ ಕೃತಿ ರಚಿಸುವಾಗಲೂ ಸಿದ್ಧತೆ, ಲೋಕಾನುಭವ ಇರದೆ 'ವ್ಯಾಕ್ಯೂಮ್'ನಲ್ಲಿ ಬರೆಯಲು ಸಾಧ್ಯವಿಲ್ಲ. ಜೊತೆಗೆ ಓದು, ಸ್ವಚಿಂತನೆ ಬೇಕು. ಇವಿಲ್ಲದೆ ಸಾಹಿತ್ಯದ ಪಾಕ ಸಾಧ್ಯವಿಲ್ಲ. ಅನುವಾದಕ್ಕೂ ಕೂಡ ಮನಸ್ಸಿದ್ಧತೆ ಬೇಕು. ಇನ್ನೊಂದು ಕೃತಿಯಿಂದ ಸಂತೋಷಪಟ್ಟಿರಬೇಕು. ಇದು ಹೆಚ್ಚಿನ ಜವಾಬ್ದಾರಿಯ ಕೆಲಸ. ಇದಕ್ಕೆ ಯಾವುದೇ ರೀತಿಯ ಬಲವಂತವಿರಬಾರದು. ಜೊತೆಗೆ ಅನುವಾದದಲ್ಲಿ ಕಾರ್ಯ ಪ್ರವೃತ್ತರಾಗಿರುವಾಗಲೇ ತೀವ್ರ ಸ್ವವಿಮರ್ಶೆಯಲ್ಲೂ ತೊಡಗಿರಬೇಕಾಗುತ್ತದೆ. ಸೃಜನ ಶೀಲತೆಯ ಜೊತೆ ತರ್ಕ ಮತ್ತು ಬುದ್ಧಿಯ ಅಂಶಗಳೂ ಕೆಲಸ ಮಾಡಬೇಕಾಗುತ್ತದೆ. ಈ ರೀತಿಯ ಪ್ರಯತ್ನದಲ್ಲಿ ಸಂಪೂರ್ಣ ತೃಪ್ತಿ ಸಿಗದಿದ್ದರೂ ಸರಿಯೆ, ಅಪೂರ್ವವಾದ ಕೃತಿಯೊಂದು ಲಭ್ಯವಾಗುತ್ತದೆ' ಎನ್ನುತ್ತಾರೆ.

ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳ ಜೊತೆಗೆ, ಜನ ಜೀವನಕ್ಕೆ ಅನುಕೂಲವಾಗುವಂಥ ಮತ್ತು ತಿಳಿವಳಿಕೆ ಕೊಡುವಂಥ ಕೃತಿಗಳು ಮುಖ್ಯವಾಗಿ ಇಂಗ್ಲಿಷ್‌ನಲ್ಲಿ ಹೇರಳವಾಗಿ ಲಭ್ಯವಿವೆ. ಅಂಥವುಗಳ ಅನುವಾದದ ಅಗತ್ಯವನ್ನು ಗುರುತಿಸುವ ನಿಸಾರರು ಆ ನಿಟ್ಟಿನಲ್ಲಿ ಹೆಚ್ಚಿನ ಗಮನ ಮತ್ತು ಪ್ರಯತ್ನಗಳು ನಡೆಯಬೇಕು ಮತ್ತು ಜನ ಸಮುದಾಯಕ್ಕೆ ಅನುಕೂಲ ವಾಗಬೇಕೆಂದು ಬಯಸುತ್ತಾರೆ.

ನಮ್ಮ ಬದುಕಿಗೆ ಯಾವುದೆಲ್ಲ ಉಪಯುಕ್ತವೋ, ಸಮೀಪವೋ ಅದನ್ನೆಲ್ಲ ಅನುವಾದ ಮಾಡಬೇಕು. ವಾಙ್ಮಯದ ಆಕರಗಳಲ್ಲಿ ಕೇವಲ ಸಾಹಿತ್ಯ ಮಾತ್ರ ಮುಖ್ಯವಲ್ಲ. ಜೀವನ ವಿಸ್ತಾರದ ಎಲ್ಲ ಕ್ಷೇತ್ರಗಳಲ್ಲಿ ಉಪಯುಕ್ತವಾದ ವಿಷಯದ ಬಗ್ಗೆ ಸರಳ ಮತ್ತು ಸುಲಲಿತವಾದ ತಿಳಿವಳಿಕೆ ಅಗತ್ಯವಿದೆ. ಮನೆ ಬಳಕೆಯ ವಿದ್ಯುಚ್ಛಕ್ತಿ, ವಾಹನದ ದುರಸ್ತಿ, ಹೊಲಿಗೆ ಯಂತ್ರ, ಕಂಪ್ಯೂಟರ್, ವಿವಿಧ ನಿತ್ಯೋಪಯೋಗಿ ಉಪಕರಣಗಳು ಮುಂತಾದವು ಗಳ ಬಗ್ಗೆ ಮಾಹಿತಿ ಮತ್ತು ಅವುಗಳ ಯಶಸ್ವಿ ಕಾರ್ಯಶೀಲತೆಯನ್ನು ಕುರಿತ ಪುಸ್ತಕಗಳು ಅಲ್ಲೊಂದು ಇಲ್ಲೊಂದು ಲಭ್ಯವಿವೆ. ಆದರೆ ಹೆಚ್ಚಿನ ವಿಷಯಗಳನ್ನು ಒಳಗೊಂಡಂತೆ ನಮ್ಮದೇ ಭಾಷೆಯಲ್ಲಿ ಗ್ರಹಿಸಲು ಸಾಧ್ಯವಾಗುವಂಥ ಸಾಕಷ್ಟು ಪುಸ್ತಕಗಳು ಬರಬೇಕಾಗಿದೆ. ವಿಶಾಲವಾದ ಅರ್ಥದಲ್ಲಿ ಅನುವಾದದ ಹಸೆ ವಿಸ್ತರಿಸಬೇಕು, ಹಲವು ದಿಶೆಗಳಲ್ಲಿ ಹಬ್ಬಬೇಕು. ಇದರಿಂದ ಜನರಿಗೆ ಉಪಯೋಗವಾಗುತ್ತದೆ ಮತ್ತು ಭಾಷೆಯ ಬಳಕೆ ಹೆಚ್ಚಾಗುತ್ತದೆ, ವೃದ್ಧಿಯಾಗುತ್ತದೆ ಎನ್ನುವ ಅವರ ಮಾತುಗಳು ಸ್ವಯಂ ವಿವರ ನೀಡುತ್ತವೆ.



‘ಹೆಜ್ಜೆ ಗುರುತು’:
ಉತ್ಸಾಹ ತುಳುಕಿಸುವ ಉತ್ತಮ ಅನುವಾದ

♦ ಜೆ. ಪಿ. ಬಸವರಾಜು

ದಿ. ನಿರಂಜನ ಅವರು ‘ನವಕರ್ನಾಟಕ ಪ್ರಕಾಶನ’ಕ್ಕಾಗಿ ಸಂಪಾದಿಸಿದ ‘ವಿಶ್ವ ಕಥಾಕೋಶ’ ಪ್ರಕಟವಾಗಿ ಸರಿ ಸುಮಾರು ಕಾಲು ಶತಮಾನ ಕಳೆದಿದೆ. ವಿಶ್ವದ ಹಲವು ರಾಷ್ಟ್ರಗಳ, ಭಾಷೆಗಳ, ಸಂಸ್ಕೃತಿಗಳ ಕತೆಗಳನ್ನು ಕನ್ನಡ ಓದುಗರಿಗೆ ಪರಿಚಯಿಸಿದ ಖ್ಯಾತಿ ಈ ಕಥಾಕೋಶಕ್ಕಿದೆ. ಇದೊಂದು ದೊಡ್ಡ ಸಾಹಸವೇ. ಕಥೆಗಳನ್ನು ಆಯ್ಕೆ ಮಾಡುವಲ್ಲಿ ವಿಸ್ತಾರವಾದ ಓದು, ವಿಭಿನ್ನ ಸಂಸ್ಕೃತಿಗಳ ಪರಿಚಯ, ವಿವಿಧ ರಾಷ್ಟ್ರಗಳ ಇತಿಹಾಸ, ಜನ ಜೀವನ, ಅಭಿರುಚಿಗಳ ಬಗೆಗಿನ ಆಳ ಅರಿವು—ಇವೆಲ್ಲ ಈ ಕಥಾಕೋಶದ ಪ್ರಧಾನ ಸಂಪಾದಕ ನಿರಂಜನ ಅವರಿಗೆ ಇದ್ದ ಕಾರಣ ಈ ಕೋಶ ಕನ್ನಡಕ್ಕೆ ಒಂದು ಮಹತ್ವದ ಕೊಡುಗೆ ಯಾಯಿತು. ಈ ಸಾಹಸದಲ್ಲಿ ಕನ್ನಡದ ಮುಖ್ಯ ಲೇಖಕರ ಒಂದು ತಂಡವೇ ನಿರಂಜನರ ಬೆಂಬಲಕ್ಕಿತ್ತು ಎಂಬುದನ್ನು ಮರೆಯುವಂತಿಲ್ಲ. ಈ ತಂಡದಲ್ಲಿದ್ದ ಲೇಖಕರಲ್ಲಿ ಕನ್ನಡದ ಗಣ್ಯ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಪ್ರಮುಖರು.

ನಿಸಾರ್ ಅಹಮದ್ ಅವರು ಅನುವಾದಿಸಿದ್ದು ವಿಶ್ವ ಕಥಾಕೋಶದ ಒಂಬತ್ತನೆಯ ಸಂಪುಟವಾದ ರಷ್ಯದ ಕಥೆಗಳ ಸಂಪುಟವನ್ನು; ಈ ಸಂಪುಟದ ಹೆಸರು—‘ಹೆಜ್ಜೆ ಗುರುತು’. ‘ಹೆಜ್ಜೆ ಗುರುತು’ ರಷ್ಯಾದ ಮಹಾನ್ ಲೇಖಕ ಲಿಯೊ ಟಾಲ್‌ಸ್ಟಾಯ್ ಅವರ ಒಂದು ಕತೆಯ ಹೆಸರು. ಇಷ್ಟೇ ಅಲ್ಲ, ಪ್ರಸ್ತುತ ಸಂಪುಟಕ್ಕೆ ಈ ಹೆಸರು ಅನೇಕ ಅರ್ಥಗಳನ್ನು

ಧ್ವನಿಸುತ್ತದೆ ಕೂಡಾ. ಈ ಕತೆಗಳನ್ನು ಆಯ್ಕೆಮಾಡಿಕೊಂಡಿರುವುದನ್ನು ಗಮನಿಸಿದಾಗಲೂ ಇದು ರಷ್ಯನ್ ಸಾಹಿತ್ಯದ ಪ್ರಮುಖ ಹೆಜ್ಜೆ ಗುರುತಾಗಿಯೂ ಕಾಣಿಸುತ್ತದೆ. ರಷ್ಯದ ಪ್ರಾಚೀನ ಕತೆಗಳಿಂದ, ಅಕ್ಟೋಬರ್ ಕ್ರಾಂತಿಯ ಕಥೆಗಳಿಂದ, ಸೋವಿಯತ್ ರಷ್ಯಾದ ವಿವಿಧ ಗಣ ರಾಜ್ಯಗಳಿಂದ, ರಷ್ಯದ ಎಲ್ಲ ಭೌಗೋಳಿಕ ಭಾಗಗಳಿಂದ ಈ ಕತೆಗಳನ್ನು ಆಯ್ಕೆಮಾಡಿಕೊಂಡಿರುವುದು ಈ ಸಂಪುಟದ ವಿಶೇಷ.

ಮತ್ತೊಂದು ವಿಶೇಷವೆಂದರೆ, ಇಲ್ಲಿನ ವೈವಿಧ್ಯ. ಒಬ್ಬೊಬ್ಬ ಕತೆಗಾರನೂ ದಾಖಲಿಸುವ ಅನುಭವ ಪ್ರಪಂಚ ವಿಭಿನ್ನವಾದದ್ದು; ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯನ್ನು ಪಡೆದದ್ದು. ಕಣ್ಣಿಗೆ ಕಟ್ಟುವ ಭೌಗೋಳಿಕ ವಿವರಗಳು, ಋತು ಪಲ್ಲಟಗಳು, ನದಿ, ಬೆಟ್ಟ, ಜನ ಜೀವನ, ಬೇಟೆ ಇತ್ಯಾದಿಗಳ ಅನೇಕ ವಿವರಗಳನ್ನು ತುಂಬಿಕೊಂಡ ಕತೆಗಳೂ ಇಲ್ಲಿವೆ. ಜೊತೆಗೆ ಮನೋವೈಜ್ಞಾನಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಕತೆಗಳೂ ಇಲ್ಲಿವೆ. ಹಿನ್ನೆಲೆಯ ಸಂಗತಿಗಳು ಏನೇ ಇರಲಿ, ಚಾರಿತ್ರಿಕ ಅಂಶಗಳು ಯಾವುವೇ ಇರಲಿ, ಸಾಂಸ್ಕೃತಿಕ ವಿವರಗಳು ಎಂಥವೇ ಇರಲಿ, ಇಲ್ಲಿನ ಬಹು ಪಾಲು ಕತೆಗಳ ಕೇಂದ್ರ—ಮನುಷ್ಯ ಮತ್ತು ಅವನು ಬದುಕಿನೊಂದಿಗೆ ನಡೆಸುವ ಹೋರಾಟ. ವ್ಯಕ್ತಿಯ ಘನತೆಯನ್ನು, ಸ್ವಾತಂತ್ರ್ಯದ ಮಹತ್ವವನ್ನು ಹೇಳುವ ಕತೆಗಳೂ ಇಲ್ಲಿವೆ. ಇದರ ಜೊತೆಗೆ ರಷ್ಯದ ಮಹಾನ್ ಲೇಖಕರಾದ ಟಾಲ್‌ಸ್ಟಾಯ್, ದಾಸ್ತೊಯೇವ್‌ಸ್ಕಿ, ವ್ಲದಿಮಿರ್ ಕರಲ್ಯೆಂಕ, ಆಂತೋನ್ ಚೆಕಾಫ್, ಮಕ್ಸಿಂ ಗಾರ್ಕಿ, ಮಿಖಯಿಲ್ ಶೋಲಖೆವ್‌ನಂಥವರ ಲೇಖನಿಗಳು ಸೃಜನಶೀಲವಾಗಿ, ಕಲಾತ್ಮಕ ವಾಗಿ ಸ್ಪಂದಿಸುವ ಪರಿ, ಈ ಮಹಾನ್ ಲೇಖಕರು ಬದುಕನ್ನು ಗ್ರಹಿಸುವ ಅದ್ಭುತ ರೀತಿ ಇಲ್ಲಿ ದಾಖಲಾಗಿದೆ. ಮನುಷ್ಯನ ಅಂತರಂಗದ ಆಳಕ್ಕಿಳಿದು, ಅಲ್ಲಿನ ಸೂಕ್ಷ್ಮ ಭಾವಗಳನ್ನು ಎಲ್ಲ ವಿವರಗಳೊಂದಿಗೆ ಹಿಡಿಯುವಂತೆ ಕತೆಗಳನ್ನು ಕೆಲವರು ಕಟ್ಟುತ್ತಾರೆ. ಯಾವುದೋ ಕಾಲದ, ಯಾವುದೋ ಜನಾಂಗದ ಕತೆಯೊಂದನ್ನು ಹೇಳುವಂತೆ ಹೊರಡುವ ಕೆಲವರು ನಿರಂತರವಾಗಿ ಉಳಿದು ಬಂದಿರುವ ಮನುಷ್ಯನ ಶಾಶ್ವತ ಮೌಲ್ಯಗಳನ್ನು ಢಾಳಾಗಿ ಕಾಣಿಸುವಂತೆ ಕತೆಗಳನ್ನು ಕಟ್ಟುತ್ತಾರೆ. ಅನೇಕರು ಬೆಚ್ಚಗಿನ ಭಾವವನ್ನು ಕಾವ್ಯಾತ್ಮಕವಾಗಿಸಿ ಕತೆಗಳನ್ನು ಕಟ್ಟಿದರೆ, ಕೆಲವರು ನೀಡುವ ಕತೆಯ ವಿವರಗಳೇ ಕಾವ್ಯಾತ್ಮಕವಾಗಿಯೂ ಇರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಈ ರೀತಿಯ ವೈವಿಧ್ಯಮಯ ಕತೆಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸುವುದು ಒಂದು ದೊಡ್ಡ ಸವಾಲೇ. ಇದು ಕೇವಲ ಭಾಷೆಯನ್ನು ಅರ್ಥಮಾಡಿಕೊಂಡು ಅನುವಾದಿಸುವ ಸವಾಲಲ್ಲ; ಒಂದು ಸಂಸ್ಕೃತಿಯನ್ನು ಅರ್ಥಮಾಡಿಕೊಂಡು ಅದನ್ನು ಇನ್ನೊಂದು ಸಂಸ್ಕೃತಿಗೆ ತಂದುಕೊಳ್ಳುವ ಸವಾಲು. ಇದನ್ನು ನಿಸಾರ್ ಅಹಮದ್ ಎಷ್ಟು ಸಮರ್ಥವಾಗಿ ಮಾಡಿದ್ದಾರೆಂದರೆ ಈ ಕತೆಗಳು ಅನ್ಯ ಭಾಷೆಯ, ಅನ್ಯ ಸಂಸ್ಕೃತಿಯ ಕತೆಗಳು ಎಂದು ಕನ್ನಡ ಓದುಗರಿಗೆ ಅನಿಸುವುದೇ ಇಲ್ಲ. ಜೊತೆಗೆ, ಒಂದು ಅನುಭವವನ್ನು ಕಟ್ಟಿಕೊಡುವಾಗ ಕೇವಲ ವಿವರಗಳನ್ನು ಮಾತ್ರ ನೀಡದೆ, ಅನುಭವದ ತೀವ್ರತೆಯನ್ನು ತರುವ ಪ್ರಯತ್ನವನ್ನೂ ನಿಸಾರ್ ಅವರು ಮಾಡಿರುವುದಕ್ಕೆ ಈ ಸಂಕಲನದಲ್ಲಿ ಅನೇಕ ಉದಾಹರಣೆಗಳು ಸಿಕ್ಕುತ್ತವೆ.

ನಿದರ್ಶನಕ್ಕೆ, 'ಹೆಜ್ಜೆ ಗುರುತು' ಎಂಬ ಕತೆಯಲ್ಲಿ ಬರುವ ಕರಡಿ ಬೇಟೆಯ ವಿವರಗಳನ್ನೇ ನೋಡಿ:

'ಕರಡಿ ಘೂಂಕರಿಸುತ್ತ ನನ್ನತ್ತ ಬಿರುಗಾಳಿಯಂತೆ ಧಾವಿಸಿ ಬರುತ್ತಿತ್ತು. ಅದರ ನುಗ್ಗುವ ರಭಸಕ್ಕೆ ನನ್ನ ಹತ್ತಿರದವರೆಗೂ ಹಿಮ ಹಾರಿತ್ತು. ನಾನು ನೇರವಾಗಿ ನೋಡುತ್ತ ನಿಂತಿದ್ದೆ. ಕರಡಿ ಭಯೋದ್ವೇಗದಿಂದ ನನ್ನೆದುರು ಚಾಚಿದ್ದ ಹಾದಿಯಲ್ಲಿ ಬಾಣದಂತೆ ಮುನ್ನುಗ್ಗುತ್ತಿತ್ತು. ಅದು ಇನ್ನೇನು ಆರೇಳು ಹೆಜ್ಜೆ ಇದೆ ಎನ್ನುವಾಗ, ಅದರ ಕಪ್ಪುಗಿನ ಎದೆ ಭಾಗ, ಕೆಂಪು ಪಟ್ಟೆಯ ದೊಡ್ಡ ತಲೆ ಸ್ಪಷ್ಟವಾಗಿ ಕಾಣಿಸಿತು. ದಿಕ್ಕೆಟ್ಟಂತೆ ಧಾವಿಸುತ್ತಿದ್ದ ಆ ದೈತ್ಯ ಪ್ರಾಣಿ ಹಿಮವನ್ನು ತುಂತುರಿನಂತೆ ಸುತ್ತ ಎರಚುತ್ತಿತ್ತು. ಅದು ನನ್ನನ್ನು ಗಮನಿಸಿದಂತೆ ಕಾಣಲಿಲ್ಲ. ಹುಚ್ಚು ಹುಚ್ಚಾಗಿ ನುಗ್ಗಿ ನಾನು ನಿಂತಿದ್ದ ಮರದ ಹತ್ತಿರಕ್ಕೆ ಬಂದಿತು. ನಾನು ಕೋವಿ ಹಾರಿಸಿದೆ. ಗುರಿ ತಪ್ಪಿದ ಗುಂಡು ಕರಡಿಯನ್ನು ದಾಟಿ ಹೋಗಿತ್ತು. ನಾನು ಗುಂಡು ಹಾರಿಸಿದ್ದು ಅದಕ್ಕೆ ತಿಳಿದಂತೆ ತೋರಲಿಲ್ಲ. ಅದು ನನ್ನತ್ತ ಧಾವಿಸುತ್ತಲೇ ಇತ್ತು. ಮತ್ತೊಮ್ಮೆ ನಾನು ಅದರ ತಲೆಗೆ ಗುರಿ ಇಟ್ಟು ಗುಂಡು ಹಾರಿಸಿದೆ. ಢಮಾರ್!'

ವ್ಯಕ್ತಿಚಿತ್ರಗಳನ್ನು ರಷ್ಯನ್ ಲೇಖಕರು ಕಟ್ಟಿಕೊಡುವ ವಿಶಿಷ್ಟ ರೀತಿಯನ್ನು ನಿಸಾರ್ ಅಹಮದ್ ಅವರು ಸರಿಯಾಗಿ ಗ್ರಹಿಸಿ ಮೂಲಕ್ಕೆ ಚ್ಯುತಿ ಬಾರದ ರೀತಿಯಲ್ಲಿ, ಕನ್ನಡಕ್ಕೆ ಸಹಜವೆನ್ನಿಸುವ ಹಾಗೆ ಹಿಡಿದುಕೊಡುತ್ತಾರೆ ಎಂಬುದನ್ನು ಮಕ್ಸಿಮ್ ಗಾರ್ಕಿಯ ಕತೆಯ ಕನ್ನಡ ಅನುವಾದದಲ್ಲಿ ಗಮನಿಸಬಹುದು:

'ಜೋಬರ್‌ನ ಮೀಸೆಗಳು ನೀಳವಾಗಿ ಹೆಗಲಿಗೆ ಇಳಿದು, ತಲೆಗೂದಲಿನ ಗುಂಗುರಿನ ಜೊತೆ ಬೆರೆತಿದ್ದವು. ಕಣ್ಣುಗಳು ತಾರೆಗಳಂತೆ ಬೆಳಗುತ್ತಿದ್ದವು. ನಕ್ಕರೆ ಸೂರ್ಯನೇ ಇಳಿದು ಬಂದಂತೆ ತೋರುತ್ತಿತ್ತು. ಅವನೂ ಅವನೇರಿದ್ದ ಕುದುರೆಯೂ ಒಂದೇ ಲೋಹದಿಂದ ರಚಿತವಾದಂತೆ ತೋರುತ್ತಿತ್ತು. ಮುಂದಿದ್ದ ಬೆಂಕಿಯ ಬೆಳಕಿನಲ್ಲಿ ಅವನು ನಿಗಿನಿಗಿ ಕೆಂಡದಂತೆ ಮಿರುಗುತ್ತಿದ್ದ. ಹಲ್ಲುಗಳು ಮೃದುಹಾಸದಲ್ಲಿ ಹೊಳೆಯುತ್ತಿದ್ದವು. ಆಗ ಆತ ಎಷ್ಟು ಆಕರ್ಷಕವಾಗಿ ಕಾಣುತ್ತಿದ್ದನೆಂದರೆ, ನನ್ನೊಡನೆ ಅವನು ಒಂದು ಮಾತನ್ನಾದರೂ ಆಡುವುದಕ್ಕೆ ಮೊದಲೇ, ನನ್ನ ಅಸ್ತಿತ್ವವನ್ನು ಆತ ಗಮನಿಸುವುದಕ್ಕೆ ಮುಂಚೆಯೇ, ಅವನನ್ನು ನನಗಿಂತಲೂ ಹೆಚ್ಚಾಗಿ ನಾನು ಮೆಚ್ಚಿಕೊಂಡೆ!'

ವ್ಲದಿಮೀರ್ ಕರಲ್ಯೆಂಕನ ಒಂದು ಕತೆ 'ಗಂಟೆ ಬಾರಿಸುವ ಮುದುಕ' ಆರಂಭವಾಗುವುದು ಒಂದು ಹಳ್ಳಿಯನ್ನು ವರ್ಣಿಸುವ ಮೂಲಕ. ಈ ವರ್ಣನೆ ಎಷ್ಟು ಜೀವಂತವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿದೆ ಎಂದರೆ:

'ಕತ್ತಲು ಕವಿಯುತ್ತಿತ್ತು...

'ವಸಂತ ಋತುವಿನ ತಾರಾನಿಬಿಡ ಇರುಳಿಗೆ ವಿಶಿಷ್ಟವಾದ ನಸು ಬೆಳಕಿನ ಮಾಯೆಯಲ್ಲಿ ಆ ಹಳ್ಳಿ ಲೀನವಾಗಿತ್ತು. ಅಂಥ ಕಾಲದಲ್ಲಿ ನೆಲದಿಂದ ಎದ್ದ ಕಾವಳ ಕಾಡು ಮರಗಳ ನೆರಳನ್ನು ದಟ್ಟಗೊಳಿಸಿ, ಬಯಲ ತೆರವುಗಳನ್ನು ಬೆಳ್ಳಿ ಹೊಳಪಿನ ನಸು ನೀಲಿ

ಇಬ್ಬನಿಯಿಂದ ತುಳುಕಿಸುತ್ತದೆ... ಸುತ್ತಣ ಸಮಸ್ತವೂ ಸ್ತಬ್ಧವಾಗಿತ್ತು. ದುಃಖಮುದ್ರಿತ ಮುಖದಂತೆ ಪರಿಸರ ಮಂಕಾಗಿತ್ತು. ಹಳ್ಳಿ ನಿರಾಳವಾಗಿ ನಿದ್ದೆ ಹೋಗಿತ್ತು.'

ಈ ಕತೆಯ ಮುಂದುವರಿದ ಭಾಗದಲ್ಲಿ ಒಂದೆಡೆ ಅನುವಾದ ಹೀಗಿದೆ:

'ಮುದುಕ ಗೋಪುರದ ಮೇಲಿನ ತೆರವಾದ ಸ್ಥಳಕ್ಕೆ ಬಂದು, ಅಲ್ಲಿನ ಕಟಕಟೆಗೆ ಒರಗಿ ನಿಂತ. ಕೆಳಗೆ ಮೈಚಾಚಿದ್ದ ಕತ್ತಲಲ್ಲಿ, ಇಗರ್ಜಿಯ ಬಳಿ ಹಳ್ಳಿಯ ಶ್ಮಶಾನವನ್ನು ಆತ ಗುರುತಿಸಿದ. ಅಲ್ಲಿ ಸರಿಯಾಗಿ ನೋಡಿಕೊಳ್ಳದೆ ಅಸ್ತವ್ಯಸ್ತವಾಗಿ ಬಿದ್ದಿದ್ದ ಗೋರಿಗಳನ್ನು ಸಲಹುವ ಅಭಯ ಹಸ್ತದಂತೆ ಹಲವಾರು ಶಿಲುಬೆಗಳಿದ್ದವು. ಅವುಗಳ ಮೇಲೆ ಅಲ್ಲಲ್ಲಿ ಎಲೆ ಕಳಚಿದ ಕೆಲವು ಭೂರ್ಜ ವೃಕ್ಷಗಳು ಬಾಗಿದ್ದವು. ಗೋಪುರದ ಕೆಳಗಿನಿಂದ ತೇಲಿ ಬಂದ ಮೊಗ್ಗುಗಳ ಎಳೆಯ ಪರಿಮಳ ಮಿಹೇಯಿಜ್‌ನನ್ನು ತಡವಿ ಶಾಶ್ವತ ನಿದ್ದೆಯ ಶೋಕ ಭಾರದ ಭಾವವನ್ನು ಅವನಲ್ಲಿ ಕುದುರಿಸುತ್ತಿತ್ತು.'

—ಇಂಥ ಅನೇಕ ಭಾಗಗಳನ್ನು ಈ ಕತೆಯ ಉದ್ದಕ್ಕೂ ನೋಡಬಹುದು. ಹಲವಾರು ಕತೆಗಳಲ್ಲೂ ಅನುವಾದದ ಸೊಗಸು ಅನುರಣಿಸುತ್ತದೆ. ಸುಲಲಿತವಾಗಿ ಹರಿಯುವ ನದಿಯೊಂದರ ನಡೆ, ಗಾಂಭೀರ್ಯ, ಸೌಂದರ್ಯ, ಲಾಲಿತ್ಯಗಳನ್ನು ಸೂಕ್ಷ್ಮವಾಗಿ ಓದುವವರು ಗಮನಿಸಬಹುದಾಗಿದೆ.

ಮತ್ತೆ ಕೆಲವು ಕತೆಗಳಲ್ಲಿ ಆಡುಮಾತು ಹೇಗೆ ಬಳಕೆಯಾಗುತ್ತಿದೆ ಎಂಬುದನ್ನೂ ನೋಡಬಹುದಾಗಿದೆ:

'ನಾಯಿಗೆ ಹುಟ್ಟಿದವನೆ, ಚಾವಟಿಯ ತುದಿಗೆ ಈ ಗುಂಡು ಯಾಕೆ ಕಟ್ಟಿದೆ?' ಎನ್ನುವಲ್ಲಾಗಲಿ,

ಅಥವಾ

'ಕಿಟಕಿ ಹತ್ತಿರ ನಿಂತಿರೋ ಆ ಸೊಬಗಿನ ಕಣಿ ಯಾರಯ್ಯ?' ಎನ್ನುವಲ್ಲಾಗಲಿ,

'ಸಾಕು ಸುಮ್ಮನಿರು ಕೂಸೇ, ಛಡಿ ಏಟು ಬಿದ್ದಾವು' ಎನ್ನುವ ವಾಕ್ಯದಲ್ಲಾಗಲಿ,

'ಲೇ, ಸಾವಿರ ಸಲ ನಿನಗೆ ಹೇಳಿದ್ದೇನೆ, ನನ್ನನ್ನು ಹಂಗಿಸಬೇಡ ಅಂತ, ಆದ್ರೂ ನಿನ್ನ ಚಾಳಿ ನೀನು ಬಿಡೋದಿಲ್ಲ ಅಲ್ವ? ಯಾವಾಗ ನೋಡಿದರೂ ನಾನು 'ಬುದ್ಧಿಯಿಲ್ಲದವ' 'ದಡ್ಡ' ಅಂತಿರ್ತೀಯ... ನೀನು ಹಾಗೆ ಹೇಳಿದಾಗಲೆಲ್ಲ ನನ್ನ ತಲೆ ಮೇಲೆ ಸುತ್ತಿಗೆಯಿಂದ ಬಡಿದ ಹಾಗಾಗ್ತದೆ...' ಎಂದು ಗೊಣಗಿದ.

—ಇಂಥ ಅನೇಕ ಮಾತುಗಳು ಕನ್ನಡದ ವಾತಾವರಣವನ್ನು ಸೃಷ್ಟಿಸಿಕೊಡುತ್ತವೆ: ಕನ್ನಡ ಕೃತಿಯೊಂದನ್ನು ಓದುತ್ತಿರುವ ಅನುಭವವನ್ನು ತಂದು ಕೊಡುತ್ತವೆ. ಭಾಷಾಂತರ ದಲ್ಲಿ ಇಂಥ ಅಂಶಗಳು ಕೃತಿಯ ಅಂದವನ್ನು ಹೆಚ್ಚಿಸಲು ಮಹತ್ವದ ಕೊಡುಗೆಗಳಾಗುತ್ತವೆ.

ಮಕ್ಸಿಮ್ ಗಾರ್ಕಿಯ ಕತೆ 'ಮಕರ್ ಚುದ್ರ'ದಲ್ಲಿ ಬರುವ ಹಾಡುಗಳನ್ನು ನಿಸಾರ್ ಹೇಗೆ ಕನ್ನಡಕ್ಕೆ ತಂದಿದ್ದಾರೆ ಎಂಬುದನ್ನು ಗಮನಿಸಬಹುದು:

'ಗೆಳೆಯರೆ ಏಳಿ ಹಿರಿಹಿರಿ ಹಿಗ್ಗಿ
ಮುಂದಕೆ ಮುಂದಕೆ ಮುಂದಕೆ ನುಗ್ಗಿ
ಆಳದ ಕತ್ತಲ ಹೊದಿಕೆಯ ಹೊದ್ದು
ಬಯಲಿದೆ ಮಾಡದೆ ಚೂರೂ ಸದ್ದು—
ಮೂಡುವ ನೇಸರ ಮುದ್ದಿಗೆ ಕಾದು!
ಹಬ್ಬಿದೆ ಹಕ್ಕಿಯ ಕೊರಲಿನ ಜಾದು!
ಸ್ವಾಗತ ಕೋರಲು ಪ್ರಭಾತ ರವಿಗೆ
ಹಾಯಿರಿ ಬಯಲನು, ಬಾಳಿನ ಸವಿಗೆ.
ನೆಗೆಯುವ ಭರದಲಿ ಕುದುರೆಯೆ ಜೋಕೆ!
ಕೇಸರ ತಟ್ಟೀತು ಚಂದ್ರನ ಮೊಗಕೆ.
ಅಹ, ಅಹ, ಹಹಹ, ಅಹ!'

ಇದರ ಆಚೆಗೂ ಕೆಲವು ಸಂಗತಿಗಳಿರುತ್ತವೆ. ಅವುಗಳನ್ನು ಅನುವಾದಕ ಸರಿಯಾಗಿ ಗ್ರಹಿಸಿ ಅನುವಾದದಲ್ಲಿ ತಂದರೆ ಮಾತ್ರ ಮೂಲ ಕತೆಯ ಆಶಯಗಳು ಓದುಗನಿಗೆ ದಕ್ಕುತ್ತವೆ. ಇಲ್ಲವಾದರೆ ಅನುವಾದ ಮೂಲ ಆಶಯಕ್ಕೆ ಧಕ್ಕೆ ತರುತ್ತದೆ. ನಿಸಾರ್ ಅವರು ಈ ಸೂಕ್ಷ್ಮಗಳನ್ನು ಅರಿತಿರುವುದಕ್ಕೆ ಟಾಲ್‌ಸ್ಟಾಯ್ ಅವರ ಕತೆಯ ಅನುವಾದವನ್ನೇ ನೋಡಬಹುದು. 'ಹೆಜ್ಜೆ ಗುರುತು' ಎನ್ನುವ ಕತೆಯ ಅಂತ್ಯ ಅನುವಾದದಲ್ಲಿ ಹೀಗಿದೆ:

'ಒಂದು ತಿಂಗಳಾದ ಮೇಲೆ ಮತ್ತೆ ನಾವು ಕರಡಿ ಬೇಟೆ ಕೈಗೊಂಡೆವು. ಆದರೆ ಅದನ್ನು ಕೊಲ್ಲುವ ಕಿಂಚಿತ್ ಅವಕಾಶವೂ ನನಗೆ ದೊರೆಯಲಿಲ್ಲ. ಅದು ವೃತ್ತದಾಚೆ ಬಾರದೆ, ಒಳಗೇ ಸುತ್ತು ಹಾಕುತ್ತಿತ್ತು; ಕ್ರೂರವಾಗಿ ಅಬ್ಬರಿಸುತ್ತಿತ್ತು.

'ಕೊನೆಗೆ ದಿಮಿಯಾನ್ ಅದನ್ನು ಕೊಂದುಹಾಕಿದ. ಅದರ ಕೆಳ ದವಡೆ ಮುರಿದಿತ್ತು; ನನ್ನ ಗುಂಡಿಗೆ ಒಂದು ಹಲ್ಲು ಹಾರಿ ಬಿದ್ದಿತ್ತು.

'ಅಚ್ಚಗಪ್ಪಿನ, ಮಿರಮಿರ ಹೊಳೆಯುವ ಮಖಮಲ್ಲಿನಂಥ ನಯವಾದ ತುಪ್ಪುಳವಿದ್ದ ಬೃಹದ್ಗಾತ್ರದ ಪ್ರಾಣಿಯದು.

'ಈಗ ಅದಕ್ಕೆ ಹುಲ್ಲು ತುಂಬಿ ನನ್ನ ಕೋಣೆಯಲ್ಲಿಟ್ಟಿದ್ದೇನೆ. ನನ್ನ ಹಣೆಯ ಗಾಯ ಸಂಪೂರ್ಣ ಮಾಯ್ದು, ಅದರ ಗುರುತು ಕೂಡಾ ಕಾಣದಾಗಿದೆ.'

—ಕತೆಯನ್ನು ಪೂರ್ಣವಾಗಿ ಓದಿದವರಿಗೆ ಟಾಲ್‌ಸ್ಟಾಯ್ ದಾಖಲಿಸುವ ಈ ಕೊನೆಯ ಮಾತಿನ ಧ್ವನಿ ತಿಳಿಯುತ್ತದೆ. ಈ ಧ್ವನಿಯನ್ನು ಅನುವಾದ ಸಮರ್ಥವಾಗಿ ಹಿಡಿದಿದೆ.

ಸಣ್ಣಪುಟ್ಟ ಅರೆಕೊರೆಗಳು ಅಲ್ಲಲ್ಲಿ ಕಾಣಿಸಿಕೊಂಡಿಲ್ಲವೆಂದಲ್ಲ:

ಹಲ್ಲುಗಳ ನಡುವಿನಿಂದ ಸಿಳ್ಳೆ ಹಾಕುತ್ತ ಸುಮ್ಮನೆ ಕುಳಿತಿದ್ದ...

ಪೈನ್ ಮರಗಳ ಕಾಡಿನ ನಡುವೆ ಜುಳುಜುಳಿಸಿದ್ದ ದೂರದ ತೊರೆಯೊಂದರ ಮೇಲೆ ಹಕ್ಕಿಗೂಡಿನಂತೆ ಹಳ್ಳಿಯೊಂದು ಕೂತಿತ್ತು.'

ಕನ್ನಡದಲ್ಲಿ ನಾವು ಸ್ವತಂತ್ರವಾಗಿ ಕತೆ ಬರೆಯುವಾಗ ಹಲ್ಲುಗಳ ನಡುವಿನಿಂದ ಸಿಳ್ಳೆ ಹಾಕುತ್ತ ಎಂದು ಹೇಳುವುದಿಲ್ಲ; ತೊರೆಯೊಂದು, ಹಳ್ಳಿಯೊಂದು ಇತ್ಯಾದಿ ಮಾದರಿಯ ಭಾಷೆಯ ಬಳಕೆಯೂ ಇರುವುದಿಲ್ಲ. ಇವು ದೊಡ್ಡ ದೋಷಗಳಲ್ಲ. ಇವುಗಳನ್ನು ತಿದ್ದುವ ಸಾಧ್ಯತೆ ಇತ್ತು.

ಸುಮಾರು ೨೨೫ ಪುಟಗಳಷ್ಟಿರುವ ಕೆ. ಎಸ್. ನಿಸಾರ್ ಅಹಮದ್ ಅವರ ಈ ಭಾಷಾಂತರದಲ್ಲಿ ಅವರ ಪರಿಶ್ರಮ, ಶ್ರದ್ಧೆ, ಅಚ್ಚುಕಟ್ಟುತನಗಳು ಕಾಣುತ್ತವೆ. ಉತ್ಸಾಹದ ನಡೆ ಕಾಣುತ್ತದೆ. ಹಾಗೆಯೇ ಮೂಲದ ಎಲ್ಲ ಸೊಗಸು, ಆಶಯ, ಸೂಕ್ಷ್ಮಗಳು ಮುಕ್ಕಾಗದಂತೆ ಮುಖ ಎತ್ತಿ ನಿಂತಿವೆ. ಈ ಕಾರಣಕ್ಕಾಗಿ ಈ ಅನುವಾದ ಮಹತ್ವದ ಅನುವಾದವಾಗಿ ಕನ್ನಡದಲ್ಲಿ ಉಳಿಯುತ್ತದೆ. 'ವಿಶ್ವಕಥಾ ಕೋಶ'ದ ಮಿಕ್ಕೆಲ್ಲ ಕಥಾ ಸಂಗ್ರಹಗಳಿಗಿಂತ ಈ ಕೃತಿಗೆ ೧೯೮೧ರ ಸಾಲಿನ ಅಂತರ್ರಾಷ್ಟ್ರೀಯ ಮಟ್ಟದ 'ಸೋವಿಯೆಟ್ ಲ್ಯಾಂಡ್–ನೆಹರು ಪ್ರಶಸ್ತಿ' ಸಿಕ್ಕಿದ್ದು ಸೂಕ್ತವೆನ್ನಿಸುತ್ತದೆ. ಒಳ್ಳೆಯ ಅನುವಾದವನ್ನು ಗುರುತಿಸಿ ಪುರಸ್ಕರಿಸಿದ್ದು ಆ ಪ್ರಶಸ್ತಿಯ ಹಿನ್ನೆಲೆಯಲ್ಲಿದ್ದ ಆಯ್ಕೆಗಾರರ ಗುಣಗ್ರಹಣಮತಿಗೆ ದ್ಯೋತಕವೆನ್ನಿಸುತ್ತದೆ.

ಬಲು ಬೇಗ ಮೋಹಿಸಿ ಬಿಡುವ ತನ್ನ ಸುತ್ತಮುತ್ತಲಿನ ಕ್ಷುದ್ರ ವಿಕ್ಷಿಪ್ತ ರಾಗ ಭಾವಗಳ ಕೊಳೆಗೇರಿಯಲ್ಲಿ ಮನಸ್ಸನ್ನು ನಾಯಲೆಸದೆ, ದುರ್ಗಮವಾದರೂ ಉದಾತ್ತ ಗೋಮಾಳಗಳ ಹಸರಕ್ಕೆ ಕರೆದೊಯ್ದು ಸಾವಕಾಶ ಅಡ್ಡಾಡಿಸಿ ಕೆಚ್ಚಲು ಕರೆದುಕೊಳ್ಳುವ ಜಾಣ್ಮೆ ಕವಿಗಿರಬೇಕು. ತನ್ಮೂಲಕ ತನ್ನ ಮತ್ತು ನೆರೆಯ ಬದುಕುಗಳನ್ನು ರಸಪುಷ್ಟಗೊಳಿಸುವ ವಿವೇಕ ಕಾವ್ಯೋದ್ಯೋಗಿಯಲ್ಲಿ ಎಚ್ಚರವಾಗಿರಬೇಕು.

(ಕವಿಯ ಉನ್ನತ ಆಶಯ)


✧ ✧ ✧

ಬದುಕು ಮನುಷ್ಯರಲ್ಲಿ ಅನೇಕರಿಗೆ ರಖಂವಾರು ಅನುಭವಗಳನ್ನು ನಿಚ್ಚಳವಾಗಿ ಹಂಚಿದರೂ ತೀವ್ರ ಪಡುಹ ಶಕ್ತಿಯನ್ನು ದಯಪಾಲಿಸಿದರೂ ಅವರೆಲ್ಲ ಕಾವ್ಯ ರಚಿಸಲು ಸಾಧ್ಯವಾಗಿಲ್ಲವೆಂಬುದು ಸರ್ವವೇದ್ಯ. ಅದಕ್ಕೊಂದು ವಿಶಿಷ್ಟ ತರಂಗಾಂತರ, ದ್ಯುತಿಗ್ರಾಹಿ ಸಾಮರ್ಥ್ಯ ಅವಶ್ಯ. ಈ ಗುಣಗಳು ಅಪರೂಪ ವಾದದ್ದರಿಂದ, ಅವುಗಳನ್ನು ಹೊಂದಿದವರ ಜವಾಬ್ದಾರಿ ಎಚ್ಚರಗಳು ಯಾವ ಮಟ್ಟದವಾಗಿರಬೇಕು: ಸಮಾಜಕ್ಕೆ ಅಂಥ ವ್ಯಕ್ತಿಗಳ ಮಾದರಿ ಎಂಥದ್ದಿರಬೇಕು ಎನ್ನುವುದು ಮನನಯೋಗ್ಯ.

(ಅನುಭವದ ಹೆಚ್ಚುಗಾರಿಕೆ)

ಭಾಗ-೫

ಅ) ನನ್ನ ದೃಷ್ಟಿಯಲ್ಲಿ ನಿಸಾರ್





ಅಚ್ಚುಮೆಚ್ಚಿನ ಸ್ವಾಭಿಮಾನಿ ಕವಿ

♦ ವಿ. ಎಸ್. ಕೃಷ್ಣಯ್ಯರ್

ಬಹುಮುಖ ಪ್ರತಿಭೆಯ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರು ಬೆಂಗಳೂರಿನ ಹಾಗೂ ಕರ್ನಾಟಕದ ನಾಗರಿಕರಿಗೆ ಕವಿಯಾಗಿ ಚಿರ ಪರಿಚಿತರು. ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರನ್ನು ನಾನು ಕಳೆದ ಮೂವತ್ತು ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. ಅವರು ಒಬ್ಬ ಸರಳ, ಸಜ್ಜನ, ಮಾನವೀಯ ಅನುಕಂಪವಿರುವ ಕವಿಗಳು. ಅವರ 'ನಿತ್ಯೋತ್ಸವ' ಕವನ ಸಂಕಲನ ಹಾಗೂ ಕ್ಯಾಸೆಟ್ಟು ಅಪಾರವಾದ ರೀತಿಯಲ್ಲಿ ಜನ ಮನ್ನಣೆಯನ್ನು ಗಳಿಸಿರುವುದನ್ನು ಕನ್ನಡಿಗರೆಲ್ಲರೂ ಬಲ್ಲರು. ಶ್ರೀ ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಜನ ಸಾಮಾನ್ಯರ ಬಳಿಗೆ ಮೊದಲ ಬಾರಿಗೆ ಕರೆದೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರು ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಜರುಗಿದ ಅನೇಕ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ವಿಚಾರಗೋಷ್ಠಿ, ಸಂವಾದ ಹಾಗೂ ಉಪನ್ಯಾಸ ಮೊದಲಾದ ಕಾರ್ಯಕ್ರಮಗಳ ಜೊತೆಗೆ ಕವಿ ಸಮ್ಮೇಳನಗಳನ್ನು ಕೂಡ ಅವರು ಹಮ್ಮಿಕೊಳ್ಳುತ್ತಿದ್ದರು. ಅಕಾಡೆಮಿ ಅಪ್ಪಿತಪ್ಪಿ ನೆನೆಸಿಕೊಳ್ಳಲೂ ಒಪ್ಪದ ಹಲವು ವರ್ಗಗಳ, ವರ್ಣಗಳ ಉದಯೋನ್ಮುಖ ಅಜ್ಞಾತ ಕವಿಗಳನ್ನು

ಅವರು ವೇದಿಕೆಯೇರಿಸಿ ಬೆಳಕಿನಲ್ಲಿ ಮೆರೆಸಿದರು. ಇದರಿಂದ ನೂರಾರು ಯುವ ಕವಿಗಳಿಗೆ ಪ್ರೋತ್ಸಾಹ ದೊರೆಯಿತು. ಜೊತೆಗೇ, ಜನಸಾಮಾನ್ಯರು ಸಹ ಈ ಕವಿಗೋಷ್ಠಿಗಳಲ್ಲಿ ಮನಃಪೂರ್ವಕವಾಗಿ ಭಾಗವಹಿಸುತ್ತಿದ್ದರು. ಇವರು ಜಿಲ್ಲೆಯ ಮಟ್ಟದಲ್ಲಿ, ತಾಲ್ಲೂಕು ಹಾಗೂ ಹೋಬಳಿಯ ಮಟ್ಟದಲ್ಲಿ ಹಮ್ಮಿಕೊಂಡು ನಡೆಸಿದ ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಆ ನಿಟ್ಟಿನಲ್ಲಿ ಮೊಟ್ಟ ಮೊದಲನೆಯದೆಂಬ ವಿಷಯವನ್ನು ಆ ಕಾಲದ ಪತ್ರಿಕೆಗಳಲ್ಲಿ ಕಂಡು ನನಗೆ ಆದ ಆನಂದ ಅಷ್ಟಿಷ್ಟಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿ ಪ್ರಜೆಗೂ ಸೌಲಭ್ಯಾನುಕೂಲ, ನ್ಯಾಯ, ಶಿಕ್ಷಣ ಇತ್ಯಾದಿಗಳು ಸಮಾನವಾಗಿ ಲಭಿಸಬೇಕೆಂಬ ಉದಾತ್ತವಾದ ಕಲ್ಪನೆ ನನ್ನದು ಮತ್ತು ನಾನು ಒಪ್ಪಿಕೊಂಡಿರುವ ರಾಜಕೀಯ ಪಕ್ಷದ್ದು. ಅಂತಹ ಸಮಾಜೋಪಯೋಗಿಯಾದ, ಪ್ರಜಾಹಿತಪರವಾದ ಕಾರ್ಯಕ್ರಮಗಳನ್ನು ತಮ್ಮ ಮಿತಿಯಲ್ಲೇ ಪ್ರಾಮಾಣಿಕವಾಗಿ ಯೋಜನೆಗೊಳಿಸಿ ನೆರವೇರಿಸಿದ ಕೀರ್ತಿ ನಿಸಾರ್ ಅಹಮದ್ ಅವರಿಗೆ ನಿಜಕ್ಕೂ ಸಲ್ಲುತ್ತದೆ. ಪ್ರೊ. ನಿಸಾರ್ ಅಹಮದ್‌ರವರು ಕವಿತಾ ವಾಚನದಲ್ಲಿ ಸಿದ್ಧಹಸ್ತರು. ಅವರು ಬರೆದಿರುವ ನೂರಾರು ಕವಿತೆಗಳಲ್ಲಿ ಪ್ರಾತಿನಿಧಿಕವಾದವುಗಳನ್ನು ಅವರ ಬಾಯಿಯಿಂದ ಕೇಳುವುದೇ ಒಂದು ರೀತಿಯ ಸೊಗಸು. ಅಂತಹ ಅವಕಾಶ ನನಗೆ ಕೆಲವೊಮ್ಮೆ ದೊರಕಿದೆ. ಉದಾಹರಣೆಗೆ, ನಾಲ್ಕೈದು ವರ್ಷಗಳ ಹಿಂದೆ ಶ್ರೀ ರಾಮಕೃಷ್ಣ ಹೆಗಡೆ ಅವರೂ ನಾನೂ ಏರ್ಪಡಿಸಿದ್ದ 'ನವ ನಿರ್ಮಾಣ ವೇದಿಕೆ'ಯ ಕವಿಗೋಷ್ಠಿಯಲ್ಲಿ ನಿಸಾರರು ಅಧ್ಯಕ್ಷರಾಗಿ ವಾಚಿಸಿದ ಕವಿತೆಗಳು ಮತ್ತು ಮಾಡಿದ ಭಾಷಣ ಅವರ ಪ್ರತಿಭೆಗೆ ಕನ್ನಡಿ ಹಿಡಿಯುವಂತಿದ್ದವು. ಅಂದಿನ ಕವಿಗೋಷ್ಠಿಯಲ್ಲಿ ಕನ್ನಡದ ಅತ್ಯಂತ ಪ್ರತಿಭಾನ್ವಿತ ಹಿರಿಯ ಕವಿಗಳ ಒಂದು ಮೇಳವೇ ಭಾಗವಹಿಸಿದ್ದು ಸ್ವಂತ ಪದ್ಯಗಳನ್ನು ಪ್ರಸ್ತುತಪಡಿಸಿತ್ತು. ನಿಸಾರ್ ಅವರ ಶೈಲಿ, ಧಾಟಿ, ಆಂಗಿಕ ಅಭಿನಯ ಅನನುಕರಣೀಯ.

ಹಿಂದೆ ರಾಷ್ಟ್ರಕವಿ ಡಾ. ಕುವೆಂಪು, ಡಾ. ದ. ರಾ. ಬೇಂದ್ರೆ, ಪ್ರೊ. ವಿ. ಸೀತಾರಾಮಯ್ಯ, ಪ್ರೊ. ಜಿ. ಪಿ. ರಾಜರತ್ನಂ ಮೊದಲಾದವರು ತಮ್ಮ ಕವಿತೆಗಳನ್ನು ನಾವು ವಿದ್ಯಾರ್ಥಿಗಳಿದ್ದಾಗ ವಾಚನ ಮಾಡುತ್ತಿದ್ದರು. ನಾವು ಅನೇಕ ಸಲ ಕನ್ನಡದ ಖ್ಯಾತ ಕವಿಗಳನ್ನು ನೋಡಲು ಹೋಗಿ, ಅವರಿಂದಲೇ ಕವಿತೆಗಳನ್ನು ಕೇಳುವುದಕ್ಕೆ ಹಾತೊರೆಯುತ್ತಿದ್ದೆವು. ಆದರೆ ಈಗ ಕಾಲ ಬದಲಾಗಿದ್ದು ಕ್ಯಾಸೆಟ್ಟು ಮತ್ತು ಸಿ.ಡಿ.ಗಳ ಮೂಲಕ ಕವನಗಳನ್ನು ಕೇಳುವಂತಾಗಿದೆ. ಕವಿಯ ಬಾಯಿಯಿಂದ ಕವಿತೆಗಳನ್ನು ಕೇಳುವುದೇ ಒಂದು ಹೊಸ ಬಗೆಯ ರಸಾನುಭವ, ಒಂದು ಸೌಭಾಗ್ಯ. ಕವಿಗೆ ಕವಿತೆಗಳನ್ನು ಬರೆಯಲು ಒದಗಿದ ಸಂದರ್ಭ ಮತ್ತು ಪ್ರೇರಣೆ, ಅದರಿಂದ ಅವರು ಅಭಿವ್ಯಕ್ತಪಡಿಸಿರುವ ಭಾವ ಮತ್ತು ಚಿಂತನೆಗಳ ಉನ್ನತಿ, ಭಾವನೆ ಹಾಗೂ ಅರ್ಥಗಳಿಗೆ ಅನುಗುಣವಾಗಿ ಎಲ್ಲಿ ಒತ್ತು ನೀಡಬೇಕು, ಎಲ್ಲಿ ನಿಲ್ಲಿಸಬೇಕು, ಎಲ್ಲಿ ಪುನರುಚ್ಚರಿಸಬೇಕು ಎನ್ನುವ ಔಚಿತ್ಯ ಇತ್ಯಾದಿಗಳನ್ನು ಕವಿ ಸ್ವತಃ ತನ್ನ ಕವನವನ್ನು ನಮ್ಮೆದುರು ಓದಿದಾಗ ತಿಳಿಯಲು ಸಾಧ್ಯ. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಮೇಲೆ ಹೇಳಿದ ಹಿರಿಯ ಕವಿಗಳಂತೆ ವಿಶಿಷ್ಟ ಕವಿತಾ ವಾಚನಾ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಅವರ ಕವಿತಾ ವಾಚನದಿಂದ ಕವಿಗೋಷ್ಠಿಗಳು ಕಳೆಗಟ್ಟಿವೆ. ಕೆಲವು ದಶಕಗಳ ಹಿಂದೆ ಕರ್ನಾಟಕದ ವಿವಿಧ ಭಾಗಗಳಲ್ಲಿ

ಏರ್ಪಡಿಸುತ್ತಿದ್ದ ಅನೇಕ ಕವಿ ಸಮ್ಮೇಳನಗಳಲ್ಲಿ ಅವರು ಕವಿತೆಗಳನ್ನು ವಾಚನ ಮಾಡಿ ಕನ್ನಡ ಸಹೃದಯರ ಮನವನ್ನು ಗೆದ್ದಿದ್ದಾರೆ; ಹಿರಿಯ ಕವಿ-ಸಾಹಿತಿಗಳಲ್ಲಿ ಎತ್ತರದ ಸ್ಥಾನದಲ್ಲಿದ್ದಾರೆ.

ಇನ್ನೊಂದು ಸದ್ಗುಣವನ್ನು ನಾನು ನಿಸಾರ್ ಅಹಮದ್ ಅವರಲ್ಲಿ ಗುರುತಿಸಿದ್ದೇನೆ. ತಾತ್ತ್ವಿಕವಾಗಿ ಅವರು ಒಬ್ಬರ ಸಿದ್ಧಾಂತವನ್ನಾಗಲಿ, ವಿಚಾರ ಅಭಿಪ್ರಾಯವನ್ನಾಗಲಿ ಒಪ್ಪದಿರಬಹುದು. ಆದರೆ ಅವರು ಎದುರಾದಾಗ ಅಥವಾ ಸಭೆ ಸಮಾರಂಭಗಳಲ್ಲಿ ಸಂಧಿಸಿದಾಗ, ಅವರೊಂದಿಗೆ ಶಿಷ್ಟಾಚಾರದ ನಡೆ-ನುಡಿಗಳನ್ನು ತೋರಿಸುವುದನ್ನು ಮರೆಯುವುದಿಲ್ಲ. ತನಗೆ, ತನ್ನ ಚಿಂತನೆಗಳಿಗೆ ಭಿನ್ನ ಅಥವಾ ವಿರುದ್ಧವೆಂದು ತಿಳಿದ ವ್ಯಕ್ತಿಗಳನ್ನು ಕಡೆಗಣಿಸುವುದಾಗಲಿ, ಪ್ರೀತಿ ಗೌರವಗಳನ್ನು ತೋರಿಸದೆ ಉದ್ಧಟತನದಿಂದ ವರ್ತಿಸುವುದಾಗಲಿ ಅವರು ಮಾಡುವುದಿಲ್ಲ. ಹಾಗೆಯೇ, ಗುರು ಹಿರಿಯರ ಬಗೆಗೆ ಅವರು ತಳೆದಿರುವ ಗೌರವ, ಅವರನ್ನು ಆದರದಿಂದ ಕಾಣುವ ರೀತಿ ನೋಡಿದವರಿಗೆ ಹರ್ಷ ನೀಡುತ್ತದೆ. ಇದು ನನ್ನ ಸ್ವಂತ ಅನುಭವಕ್ಕೆ ಬಂದಿದೆ. ಅಲ್ಲದೆ ನಿಟ್ಟೂರು ಶ್ರೀನಿವಾಸರಾವ್, ಮಾಸ್ತಿ, ಎ. ಎನ್. ಮೂರ್ತಿರಾವ್, ಪುತಿನ, ಜಿ.ವೆಂಕಟಸುಬ್ಬಯ್ಯ, ಎಚ್. ನರಸಿಂಹಯ್ಯ, ದೇ. ಜವರೇಗೌಡ—ಇನ್ನೂ ಮುಂತಾದ ವಯಸ್ಸಾದ ಮಹನೀಯರನ್ನು ಅವರು ಮನ್ನಿಸುತ್ತಿದ್ದ ರೀತಿಯನ್ನು ನಾನು ಸಭೆ ಸಮಾರಂಭಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಗಮನಿಸಿದ್ದೇನೆ. ಇದು ನಮ್ಮ ಭಾರತೀಯ ಸಂಸ್ಕೃತಿಯ, ಹಾಗೆಯೇ ನಿಸಾರರು ಶ್ರದ್ಧೆಯಿಟ್ಟಿರುವ ಇಸ್ಲಾಂ ಧರ್ಮದ ಅಂತಸ್ಸಾರದ ಸಂಕೇತವೆಂದು ತಿಳಿದಿದ್ದೇನೆ. ಹೀಗೆಂದು ನಿಸಾರ್ ಅವರು ದಾಕ್ಷಿಣ್ಯಕ್ಕೊ, ದೊಡ್ಡವರು ಪ್ರತಿಷ್ಠಿತರು ಎಂಬ ಕಾರಣಕ್ಕೊ ನಿಜವನ್ನು ಮರೆಮಾಚುವುದಿಲ್ಲ ಎಂದೂ ನನಗೆ ಗೊತ್ತಿದೆ. ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ಅವರು ನಡೆದದ್ದು ನನ್ನ ಗಮನಕ್ಕೆ ಬಂದಿಲ್ಲ. ಸರ್ಕಾರದ ಎಷ್ಟೋ ಹುದ್ದೆಗಳು, ನೇಮಕಾತಿಗಳು ಅವರಿಗೆ ಒಂದೆರಡು ದಶಕಗಳಿಂದ ನಿಚ್ಚಳವಾಗಿ ದೊರಕಬಹುದಿತ್ತು—ಅವರು ತಮ್ಮ ಅಂತಸ್ಸಾಕ್ಷಿಗೆ ವಿರುದ್ಧವಾಗಿ ನಡೆದು ರಾಜಕಾರಣಿಗಳನ್ನು, ಸಮಾಜದ ಪ್ರತಿಷ್ಠಿತರನ್ನು, ಇಲ್ಲವೇ ಅಲ್ಪಸಂಖ್ಯಾತ ಎಂಬ ಜಾತಿಯ ಕಾರಣವನ್ನು ಓಲೈಸಿ ನಡೆದಿದ್ದರೆ ಜೀವನದಲ್ಲಿ ಅವರು ಲೌಕಿಕವಾಗಿ ಏರುತ್ತಿದ್ದ ಎತ್ತರವೇ ಬೇರೆ. ಆದರೆ ಅವರು ಆಧ್ಯಾತ್ಮಿಕತೆ, ಧಾರ್ಮಿಕತೆಗಳನ್ನು ಆಳವಾಗಿ ನೆಚ್ಚಿದವರು. ಐಹಿಕವಾದ ಸುಖ ಪ್ರಾಪ್ತಿಯ ಕ್ಷಣಿಕತೆಗಿಂತಲೂ ಬಹುಕಾಲದ ಶ್ರೇಯಸ್ಸು, ಜೀವ ಹಿತ, ಮನಶ್ಶಾಂತಿ ಮುಖ್ಯವೆಂದು ನಂಬಿದವರು.

ಇಲ್ಲಿಯೇ ಒಂದು ಸಂಗತಿಯನ್ನು ನಿವೇದಿಸಿದರೆ ನಿಸಾರ್ ಅವರ ವ್ಯಕ್ತಿತ್ವದ ಹಿರಿಮೆಯ ಅರಿವು ನಮಗಾಗುತ್ತದೆ. ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲಕ್ಕಿಂತ ಮುಂಚೆಯೇ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯ ಜೊತೆಗೆ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಪ್ರಶಸ್ತಿಗಳು ಲಭ್ಯವಾಗಿದ್ದವು. ಹಾಗೆ ಉನ್ನತ ಪ್ರಶಸ್ತಿ ಪಡೆದವರಿಗೆ ನಮ್ಮ ಸರಕಾರ ದೊಡ್ಡ ನಿವೇಶನವನ್ನು ನೀಡುವುದು ವಾಡಿಕೆ. ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಅದೆಷ್ಟು ಜನ ಸಾಹಿತಿಗಳು, ಸಂಗೀತಗಾರರು ಹಾಗೂ ಧೀಮಂತರು ಸೈಟುಗಳನ್ನು ಪಡೆದರೂ! ನಿಸಾರ್ ಅವರಿಗೆ ಹೆಗಡೆಯವರು ಆಪ್ತರಾಗಿದ್ದರು. ಕೇವಲ

ಒಂದು ಸಲ ಅವರಿಗೆ ನಿಸಾರ್ ಅವರು ಸೂಚಿಸಿದ್ದರೂ ಸಾಕು, ವಿಲೇವಾರಿ ಆಗದಿರುವ ದೊಡ್ಡ ಅಳತೆಯ ನಿವೇಶನ—ಅದರಲ್ಲೂ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಕ್ಷಣ ಮಾತ್ರದಲ್ಲಿ ಸಿಕ್ಕುತ್ತಿತ್ತು. ಇದನ್ನು ಅವರ ಅನೇಕ ಸ್ನೇಹಿತರು ಒತ್ತಾಯಿಸಿದ್ದೂ ನನಗೆ ತಿಳಿದಿದೆ. ಆದರೆ ನಿಸಾರ್ ಇದಕ್ಕೆ ಸೊಪ್ಪು ಹಾಕಲಿಲ್ಲ. `ಖಾಸಗಿ ಕೋ-ಆಪರೇಟಿವ್ ಸೊಸೈಟಿಯ ಸಣ್ಣ ಸೈಟಿನಲ್ಲೇ ನಾನು ಎರಡು ವರ್ಷಗಳ ಹಿಂದೆ ಒಂದು ಮನೆಯನ್ನು ಕಟ್ಟಿಸಿದ್ದೇನೆ. ಇರಲು ನನಗೆ ಒಂದು ಸೂರು ಇರುವಾಗ, ಸರ್ಕಾರದಿಂದ ನಿವೇಶನ ಪಡೆಯುವುದು ಸರಿಯಲ್ಲ. ನನ್ನ ಮನಸ್ಸು ಅದಕ್ಕೆ ಸರ್ವಥಾ ಒಪ್ಪದು. ಸೈಟುಗಳಿಲ್ಲದೆ ಲೆಕ್ಕವಿಲ್ಲದಷ್ಟು ಜನ ಪರದಾಡುತ್ತಿದ್ದಾರೆ. ಅಂಥವರ ಪಾಲನ್ನು ನಾನು ಕಸಿದುಕೊಳ್ಳುವುದು ಬಹಳ ಅನ್ಯಾಯ` ಎಂದು ತಮ್ಮ ಅಚಲವಾದ ನಿಲವನ್ನು ತೋರಿದರು. ಇದರಿಂದ ನನಗೆ ಅವರ ಬಗೆಗೆ ಗೌರವ, ಅಕ್ಕರೆ ಹೆಚ್ಚಿದೆ.

ಹೀಗಾಗಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ತುಂಬ ಸ್ವಾಭಿಮಾನಿಯಾದ ಕವಿಗಳು. 'ಕವಿಗೆ ಯಾವುದೇ ಪ್ರಭುತ್ವದ ಅಂಜಿಕೆ ಇಲ್ಲ`ವೆಂಬ ಅರಿಸ್ಟಾಟಲ್‌ನ ಮಾತನ್ನು ಅವರು ಅಕ್ಷರಶಃ ನಿಜವಾಗಿಸಿರುವರು. ಹಾಗೆಯೇ, ಯಾವುದೇ ಪ್ರಶಸ್ತಿಗಳಿಗೆ ಅಥವಾ ಲೌಕಿಕ ಆಮಿಷಗಳಿಗೆ ಅಧಿಕಾರದಲ್ಲಿರುವವರ ಮನೆ ಬಾಗಿಲನ್ನು ಎಂದೂ ತಟ್ಟಿದವರಲ್ಲ. ಕನ್ನಡ ಸಂಸ್ಕೃತಿಯ ವಿಶಿಷ್ಟ ಗುಣವಾದ ಆತ್ಮಗೌರವ ಹಾಗೂ ಪರ ಹಿತ ಮನೋಭಾವ ಅವರಲ್ಲಿ ಬೇರೂರಿದೆ. ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರು ನಮ್ಮ ಪ್ರಾಚೀನ ಕವಿ ಪರಂಪರೆಯನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಯಾವುದೇ ಗುಂಪು, ಜಾತಿ ಪಂಥಗಳನ್ನು ಅವಲಂಬಿಸದೆ ಸ್ವಂತ ಶಕ್ತಿಯಿಂದ ಸಾಹಿತ್ಯದಲ್ಲಿ ಭದ್ರ ಸ್ಥಾನವನ್ನು ಗಳಿಸಿಕೊಂಡ ನಿಸಾರ್ ಅಹಮದ್‌ರಂತಹ ಕವಿಯನ್ನು ಪಡೆದ ಕನ್ನಡ ನಾಡಿನ ಜನತೆ ನಿಜವಾಗಿಯೂ ಭಾಗ್ಯವಂತರು. ಅವರೇ ಕೆಲವೊಮ್ಮೆ ಟಿ.ವಿ.ಗಳಲ್ಲಿ, ವೇದಿಕೆಗಳಲ್ಲಿ ಹೇಳಿದ್ದನ್ನು ಕೇಳಿದ್ದೇನೆ: 'ನಾನು ಮುಸ್ಲಿಮನಾಗಿ ಕನ್ನಡದಲ್ಲಿ ಬರೆಯುತ್ತಿದ್ದೇನೆಂಬ ಕಾರಣಕ್ಕೆ ಯಾವುದೇ ವಿನಾಯಿತಿಯನ್ನೋ ಮೀಸಲಾತಿಯನ್ನೋ ಕೋರಿದವನಲ್ಲ. ಹಾಗೆ ಅಪೇಕ್ಷಿಸುವುದು ನನ್ನ ಮಟ್ಟಿಗೆ ಅಸಾಮರ್ಥ್ಯದ, ನೈಚ್ಯಾನುಸಂಧಾನದ ಸಂಕೇತ. ಮೊದಲಿನಿಂದಲೂ ನಾನು ಅನುಕಂಪೆ, ಸಹಾನುಭೂತಿಗಳನ್ನು ಯಃಕಶ್ಚಿತ್ತಾಗಿ ಪರಿಗಣಿಸಿದವನು. ನನ್ನನ್ನು ನನ್ನಲ್ಲಿರುವ ಗುಣದ, ವಿಶೇಷತೆಯ, ಸತ್ವದ, ಪ್ರತಿಭೆಯ ಕಾರಣಕ್ಕೆ ಮಾತ್ರ ಮನ್ನಣೆ ನೀಡಿ; ಅನ್ಯಥಾ ಬೇಡ`—ಈ ಆತ್ಮಾವಲೋಕನದ ಮಾತುಗಳೇ ನಿಸಾರ್ ಅವರ ಆತ್ಮವಿಶ್ವಾಸವನ್ನೂ, ಪರಿಶ್ರಮಪೂರ್ಣ ಸಾಧನೆಯ ಸಂಕಲ್ಪವನ್ನೂ ಸಾರುತ್ತವೆ. ಅವರು ಯಾವುದೇ ಜವಾಬ್ದಾರಿ ಯನ್ನು ವಹಿಸಿಕೊಂಡರೂ ಅದನ್ನು ನಿಷ್ಠೆ, ಅಚ್ಚುಕಟ್ಟು ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೆಂಬುದನ್ನು ಅವರನ್ನು ಬಲ್ಲ ಎಲ್ಲರಿಗೂ ತಿಳಿದ ವಿಚಾರ. ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರು ಕವಿಯಾಗಿ, ವಿಚಾರಶೀಲ ಧೀಮಂತರಾಗಿ ಕನ್ನಡ ನಾಡಿನ ಜನ ಮನವನ್ನು ಗೆದ್ದಿದ್ದಾರೆ. ವ್ಯಕ್ತಿಯಾಗಿ ಕೂಡ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. ಇಂಥ ಕವಿ ಶತಾಯುಷಿಯಾಗಿ ಬಾಳಲೆಂದು ನಾಡಿನ ಜನತೆಯ ಪರವಾಗಿ ದೇವರಲ್ಲಿ ಪ್ರಾರ್ಥಿಸುತ್ತೇನೆ.



ಅಪರೂಪದ ವ್ಯಕ್ತಿ, ಅಕ್ಕರೆಯ ಲೇಖಕ

♦ ಎಚ್. ಎಸ್. ದೊರೆಸ್ವಾಮಿ

ನಾನು ಅನೇಕ ವರ್ಷಗಳಿಂದ ಹಲವಾರು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಆಗೆಲ್ಲ ಕವಿಗೋಷ್ಠಿಗಳಲ್ಲಿ ಪಾಲ್ಗೊಳ್ಳುವ ಒಬ್ಬ ವಿಶಿಷ್ಟ ವ್ಯಕ್ತಿ ನನ್ನ ಗಮನ ಸೆಳೆಯುತ್ತಿದ್ದರು. ಅವರು ನೀಟಾದ ಸೂಟಿನಲ್ಲಿರುತ್ತಿದ್ದರು. ನೋಡಲು ಸುಂದರವಾಗಿರುತ್ತಿದ್ದರು. ಕವನ ಓದುವ ಅವರ ಶೈಲಿ ಎಂಥವರನ್ನೂ ಅಯಸ್ಕಾಂತದಂತೆ ಅವರತ್ತ ಸೆಳೆಯುತ್ತಿತ್ತು. ಕನ್ನಡದ ಸ್ಪಷ್ಟ ಉಚ್ಚಾರಣೆ, ಕಾವ್ಯದ ವಸ್ತುವಿನ ಆಯ್ಕೆಯಿಂದ ನಾನು ಅವರನ್ನು ಸುಸಂಸ್ಕೃತ ಕನ್ನಡಿಗರೆಂದು ಮನಗಂಡೆ. ಸಾಹಿತ್ಯ ಸಮಾರಂಭ ಮುಗಿದ ಮೇಲೆ ಅವರ ಸುತ್ತ ಕಾವ್ಯಾಭಿಮಾನಿಗಳು ಘೇರಾಯಿಸುತ್ತಿದ್ದರು. ಆಗಲೂ ಈತ ಯಾರೆಂದು ನನಗೆ ತಿಳಿಯಲಿಲ್ಲ. ಬದಲಿಗೆ ಅವರ ಬಗ್ಗೆ ನನಗೆ ಕುತೂಹಲ ಉಂಟಾಯಿತು. ಅವರ ಬಗ್ಗೆ ತಿಳಿಯುವ ಕಾತರ ಹೆಚ್ಚಾಯಿತು. ಕೊನೆಗೆ ಅವರು ಕವಿ ಕೆ. ಎಸ್. ನಿಸಾರ್ ಅಹಮದ್ ಎಂದು ತಿಳಿದು ಅವರ ಬಗ್ಗೆ ನನಗೆ ಗೌರವಾದರಗಳು ಇಮ್ಮಡಿಸಿದವು.

ಕವಿ ನಿಸಾರ್ ಅಹಮದ್ ಅಪರೂಪದ ವ್ಯಕ್ತಿ. ಸದಾ ನಗೆ ಚೆಲ್ಲಿ ಮುದ ನೀಡುವ ಈ ಕವಿ ಎಂಥ ಸೊಗಸಾದ ಕವಿತೆಗಳನ್ನು ಬರೆದಿದ್ದಾರೆ ಎಂದರೆ ಆಶ್ಚರ್ಯವಾಗುತ್ತದೆ. ಅವರದು ಅದಮ್ಯ ಚೇತನ. ಜೀವನೋಲ್ಲಾಸ, ಪ್ರತಿಭೆ, ಕಾವ್ಯ ಪರಿಣತಿ, ಸ್ನೇಹಪರತೆಗಳಿಂದ ಕೂಡಿದ ನಿಸಾರರನ್ನು ಜನ ಇಷ್ಟಪಡು

ವುದರಲ್ಲಿ ಏನಾಶ್ಚರ್ಯ! ಕಾಲೇಜಿನಲ್ಲಿ ಪಾಠ ಮಾಡುತ್ತ, ಕಾವ್ಯ ರಚನೆಯನ್ನು ಮೈಗೂಡಿಸಿ ಕೊಂಡು ಸಾಮಾಜಿಕ ಪ್ರಜ್ಞೆ, ಹೊಣೆಗಾರಿಕೆಗಳನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ.

ನಿಸಾರ್ ಅಹಮದ್ ಅವರ ಕಾವ್ಯವೂ ವೈಶಿಷ್ಟ್ಯಪೂರ್ಣವಾಗಿರುತ್ತದೆ. ಹಿಂದುಗಳ ಮನೆಗಳ ಮುಂದೆ ಹೆಣ್ಣು ಮಕ್ಕಳು ಗುಡಿಸಿ, ಸಾರಿಸಿ ಬಣ್ಣ ಬಣ್ಣದ ರಂಗವಲ್ಲಿಯನ್ನು ಬಿಡಿಸಿರುವುದನ್ನು ಕಂಡು, ಹಾಲು ತರಲು ಮಗನೊಂದಿಗೆ ಹೋಗುತ್ತಿದ್ದಾಗ ಮಗ ಕೇಳುವ ಮುಗ್ಧ ಪ್ರಶ್ನೆಗಳಿಗೆಲ್ಲ ಉತ್ತರಿಸಿ ಕೊನೆಗೆ ಮಗನ ಹೇಳಿಕೆಯಿಂದ ತಾವೇ ಪೆಚ್ಚಾಗುತ್ತಾರೆ. ಇಲ್ಲಿ ಭಿನ್ನ ಸಂಸ್ಕೃತಿಗಳ ಸ್ಪಷ್ಟ ಚಿತ್ರಣವಿದೆ. ನಿಸಾರರು ಎರಡೂ ಸಂಸ್ಕೃತಿಗಳನ್ನು ಗೌರವಿಸುತ್ತಾರೆ, ಪ್ರೀತಿಸುತ್ತಾರೆ. ಈ ಬಗೆಯ ಕವನಗಳು ನನಗೆ ತುಂಬಾ ಮೆಚ್ಚುಗೆಯಾದ ಕಾರಣದಿಂದಲೇ ನಿಸಾರ್ ನನಗೆ ಹತ್ತಿರವಾಗುತ್ತಾರೆ. ನಿಸಾರರಿಗೆ ಮಾಸ್ತಿಯವರ ಬಗ್ಗೆ ಅಪಾರ ಗೌರವ. ಅವರನ್ನು ಹೆಚ್ಚು ಪ್ರೀತಿಸುವ ಕವಿ. ಮಾಸ್ತಿಯವರಿಗೂ ನಿಸಾರರ ಮೇಲೆ ಅಪಾರ ಒಲವು. ಸಂಪ್ರದಾಯಸ್ಥರಾದ ಮಾಸ್ತಿಯವರು ಸಂಜೆಯ ವೇಳೆ ಬಸವನಗುಡಿಯ ಕ್ಲಬ್ಬಿನಲ್ಲಿ 'ಹೋದರಿಪ್ಪತ್ತು, ಬಂದರಿಪ್ಪತ್ತು ನ.ಪೈ.' ಎಂದು ಇಸ್ಪೀಟು ಎಲೆ ಕಲೆಸುವುದನ್ನು ಕಂಡ ನಿಸಾರ್, 'ಮಾಸ್ತಿ' ಕವನದಲ್ಲಿ ಅವರನ್ನು ಅಲ್ಲಿ ಕಂಡ ಪರಿ ಮನೋಜ್ಞವಾಗಿದೆ. ನಿಸಾರ್ ಅಹಮದ್ ಒಬ್ಬ ಶ್ರೇಷ್ಠ ಕವಿ ಎಂಬುದನ್ನು ಇಂಥ ಕವನಗಳು ನಿರೂಪಿಸುತ್ತವೆ.

ನಿಸಾರ್ ಅಹಮದ್ ಅವರಲ್ಲಿ ನಾನು ಕಂಡ ಮುಖ್ಯವಾದ ಗುಣವೆಂದರೆ, ಅವರ ಸರ್ವ ಸಮ ಭಾವನೆಯ ಗುಣ. ಯಾವುದೇ ವಿವಾದಕ್ಕೆ ಅವರು ಸಿಲುಕುವುದಿಲ್ಲ. ಎರಡು ಸಂಸ್ಕೃತಿಗಳನ್ನೂ ಅವರು ಹೃದಯಪೂರ್ವಕವಾಗಿ ಗೌರವಿಸುತ್ತಾರೆ. ಖುರಾನ್ ಬಗ್ಗೆ ಎಷ್ಟು ಕರಾರುವಾಕ್ಕಾಗಿ ಮಾತನಾಡಬಲ್ಲರೋ ಅಷ್ಟೇ ಖಚಿತವಾಗಿ ಭಗವದ್ಗೀತೆಯ ಬಗ್ಗೆ ಮಾತನಾಡಬಲ್ಲರು. ಅವರು ರಾಮಾಯಣ, ಮಹಾಭಾರತ, ಹಿಂದೂ ಸಂಸ್ಕೃತಿಯನ್ನು ಪ್ರತಿನಿಧಿಸುವ ಅನೇಕ ಮೌಲಿಕ ಗ್ರಂಥಗಳನ್ನು ಓದಿದ್ದಾರೆ, ಓದಿ ಜೀರ್ಣಿಸಿಕೊಂಡಿದ್ದಾರೆ. ಇಂಥವರು ತುಂಬಾ ಅಪರೂಪ. ನಿಸಾರರು ಈ ಕಾರಣದಿಂದಾಗಿಯೇ ಎಲ್ಲ ವರ್ಗದ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಕನ್ನಡದ ಬಗ್ಗೆ ಅವರಿಗೆ ಕಳಕಳಿಯಿದೆ. ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕನ್ನಡದ ಬಗ್ಗೆ ನಿರ್ಲಕ್ಷ್ಯ ತಾಳುವವರ ವಿರುದ್ಧ ಸಿಡಿದೆದ್ದು, ನಿರ್ದಾಕ್ಷಿಣ್ಯವಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಅವರು ನಾಡು, ನುಡಿಯ ಸಮಾರಂಭಗಳಲ್ಲಿ ಭಾಗವಹಿಸುತ್ತಾರಷ್ಟೆ? ತಮ್ಮ ಮನಸ್ಸಿಗೆ ಮುಜುಗರ ವಾಗುವಂಥ ಯಾವುದೇ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುವುದಿಲ್ಲ. ಅವರ ಮನೋಗುಣ ಅಂಥದು. ಯಾರನ್ನೂ ನೋಯಿಸದಂಥ ಹೂವಿನ ಮನಸ್ಸು ನಿಸಾರರದು.

ನಿಸಾರ್ ಅಹಮದ್ ಅವರು ಭಾಗವಹಿಸಿದ ಅನೇಕ ಸಮಾರಂಭಗಳಲ್ಲಿ ನಾನೂ ಭಾಗವಹಿಸಿದ್ದೇನೆ. ಅವರೊಂದಿಗೆ ವೇದಿಕೆಯನ್ನು ಹಂಚಿಕೊಂಡಿದ್ದೇನೆ. ಆಗೆಲ್ಲ ಅವರ ಮಾತುಗಳನ್ನು ಕೇಳಿ ಮೂಕ ವಿಸ್ಮಿತನಾಗಿದ್ದೇನೆ. ಅವರ ಜ್ಞಾನ ಭಂಡಾರ ಶ್ರೀಮಂತಿಕೆಯಿಂದ ಕೂಡಿದ್ದು. ಅವರ 'ಸ-ರಸೋಕ್ತಿಗಳ ಸಂಗಾತಿ' ಹೆಸರಿನ ಕೃತಿ ಬಿಡುಗಡೆಯ ಸಂದರ್ಭದಲ್ಲಿ

ನಾನು ಅವರ ಬಗ್ಗೆ ಮಾತನಾಡಿದ್ದೇನೆ. ಆ ಸಂದರ್ಭ ನನಗೆ ಅತ್ಯಂತ ಸಂತಸವನ್ನು ಉಂಟುಮಾಡಿತ್ತು.

ನಿಸಾರ್ ಅಹಮದ್ ಅವರು ಎಲ್ಲ ಕವಿಗಳನ್ನೂ ವಿಮರ್ಶಕರನ್ನೂ ವಿದ್ವಾಂಸರನ್ನೂ ಸಮಾನವಾಗಿ ಗೌರವಿಸುತ್ತಾರೆ, ಪ್ರೀತಿಸುತ್ತಾರೆ. ಅವರೆಲ್ಲರ ಉತ್ತಮ ಕಾರ್ಯಗಳನ್ನು ಗುರುತಿಸಿ, ಸಂದರ್ಭ ಬಂದಾಗ ಮುಕ್ತ ಕಂಠದಿಂದ ಅಂತಹವರ ಗುಣಗಾನ ಮಾಡುತ್ತಾರೆ. ಡಿ.ವಿ.ಜಿ., ಬಿ.ಎಂ.ಶ್ರೀ., ಮಾಸ್ತಿ, ವಿ.ಸೀ., ಬೇಂದ್ರೆ, ಕುವೆಂಪು, ಪು.ತಿ.ನ., ರಾಜರತ್ನಂ—ಇವರೆಲ್ಲರ ಬಗೆಗೆ ನಿಸಾರ್ ಅಹಮದ್ ಅವರಿಗೆ ಅಪಾರ ಗೌರವ.

ನವ್ಯ ಕಾವ್ಯದ ಹರಿಕಾರರಾದ ಗೋಪಾಲಕೃಷ್ಣ ಅಡಿಗರ ಸಾಲಿನಲ್ಲಿ ನಿಲ್ಲಬಲ್ಲ ಸಮರ್ಥ ಕವಿ ನಿಸಾರ್ ಅಹಮದ್.

ನನಗೆ ನಿಸಾರ್ ಅಹಮದ್ ಅವರ ಬಗ್ಗೆ ಅಪಾರ ಗೌರವ ಮತ್ತು ಆದರವಿದೆ. ಅವರೂ ಅದಕ್ಕೆ ಇಮ್ಮಡಿಯಾಗಿ ನನ್ನ ಬಗೆಗೆ ಅಭಿಮಾನ, ವಿಶ್ವಾಸಗಳನ್ನು ಹೊಂದಿದ್ದಾರೆ. ಈ ಸ್ನೇಹ, ಈ ವಿಶ್ವಾಸ ಚಿರಂತನವಾಗಿ ಬೆಳೆಯುತ್ತ ಹೋಗಲಿ. ನಿಸಾರರು ನೂರ್ಕಾಲ ಬಾಳಲಿ. ಅವರ ಕಾವ್ಯಕೃಷಿ ಇನ್ನಷ್ಟು ವೃದ್ಧಿಸಲಿ ಎಂಬುದೇ ನನ್ನ ಹಾರೈಕೆ.

ಅಂದವಾದ ಕಟ್ಟಡಗಳಿವೆ, ಪ್ರಯೋಗಶಾಲೆ ಹಾಗೂ ಗ್ರಂಥಾಲಯಗಳಿವೆ. ಟಿಪ್‌ಟಾಪಾಗಿ ಡ್ರೆಸ್ ಮಾಡುವ ಅಧ್ಯಾಪಕ, ವಿದ್ಯಾರ್ಥಿ ಸಮೂಹವಿದೆ. ಜೀನು, ಲಗಾಮು, ಕಣ್ಣುಪಟ್ಟಿ, ಮೆತ್ತನೆಯ ಆಸನ—ಏನೆಲ್ಲ ಇವೆ. ಜೀವಂತ ಕುದುರೆ ಮಾತ್ರ ಇಲ್ಲ! ಹೀಗಾಗಿ, ಹೌಸ್‌ಫುಲ್ಲಾಗಿಯೂ ಬಿಕೋ ಎನ್ನಿಸುತ್ತಿವೆ ನಮ್ಮ 'ವಿದ್ಯಾ ಲಾಯಗಳು'.

(ಶಿಕ್ಷಣ ಕ್ಷೇತ್ರ)

✧ ✧ ✧

ಒಳ್ಳೆಯ ಜೀವನ ರೀತಿ ಒಳ್ಳೆಯ ಸಾಹಿತ್ಯ ನಿರ್ಮಾಣಕ್ಕೆ ಆಕರಪ್ರಾಯ. ಹಾಗೆಯೇ ಒಳ್ಳೆಯ ಸಾಹಿತ್ಯ ಜೀವನ ಸಂಸ್ಕಾರಕಾರಿ. ಒಳ್ಳೆಯ ಜೀವನ ರೀತಿ ಸಮಾಜದಲ್ಲಿ ಬೇರು ಬಿಳಲುಗಳನ್ನು ಇಳಿಸಲು ವಿಜ್ಞಾನ ತಂತ್ರಜ್ಞಾನಗಳ ಗಾಳಿ ಬೆಳಕು ನೀರು ಗೊಬ್ಬರ ಅತ್ಯಗತ್ಯ. ಅವೆರಡೂ ಅನ್ಯೋನ್ಯ ಸಹಕಾರಿಗಳು.

(ವಿಜ್ಞಾನದ ಉಪಕಾರ)



ಸಜ್ಜನ ಮತ್ತು ಸತ್ವಶಾಲಿ ಜನತೆಯ ಕವಿ

♦ ಜಿ. ನಾರಾಯಣ

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಈ ನಾಡು ಕಂಡ ಓರ್ವ ಅತ್ಯಂತ ಸತ್ವಶಾಲಿ ಲೇಖಕರು. ಅವರ ಕಾವ್ಯ, ಗದ್ಯ ಬರಹಗಳು ಚೈತನ್ಯದಾಯಕವಾದವು. ವಿಶಿಷ್ಟ ವಸ್ತುಗಳನ್ನು ಕುರಿತು ಅವರು ಸುಂದರವಾಗಿ ಕಾವ್ಯ ಬರೆಯಬಲ್ಲರು. ಅವರ ಕಾವ್ಯಗಳಲ್ಲಿ ಲಾಲಿತ್ಯವಿರುತ್ತದೆ. ಅವು ಕೇಳುಗರ ಮನಸ್ಸಿಗೆ ಹಿತವನ್ನುಂಟು ಮಾಡುತ್ತವೆ. ಹಾಗೆಯೇ, ಅವರ ಗದ್ಯದಲ್ಲಿ ವಿಚಾರದ ಜೊತೆಗೆ ಮನಸ್ಸಿಗೆ ಮುದ ಕೊಡುವ ಭಾಷೆಯ ಕುಶಲತೆಯೂ ಇರುತ್ತದೆ.

ನಿಸಾರ್ ಅಹಮದ್ ನನ್ನ ಪ್ರೀತಿಯ ಕವಿ. ಅವರಲ್ಲಿ ಸಮಾಜದ ಎಲ್ಲ ವರ್ಗದ ಜನರನ್ನು ಆಕರ್ಷಿಸುವ ಚುಂಬಕ ಶಕ್ತಿಯಿದೆ. ಆದ್ದರಿಂದಲೇ ಅವರು ಭಾಗವಹಿಸುವ ಸಭೆ, ಸಮಾರಂಭಗಳಲ್ಲಿ ಅಪಾರ ಜನ ಸೇರುತ್ತಾರೆ. ನಿಸಾರ್ ಎಲ್ಲರನ್ನೂ ಸಮಾನ ಭಾವನೆ, ಪ್ರೀತಿ ಆದರದಿಂದ ಕಾಣುತ್ತಾರೆ. ಎಲ್ಲರನ್ನೂ ತಮ್ಮ ಮಮತೆಯ ತೆಕ್ಕೆಗೆ ತೆಗೆದು ಕೊಳ್ಳುತ್ತಾರೆ. ಅವರು ಪರಮ ವಿಶ್ವಾಸಿಗಳು. ಜನಪ್ರಿಯ ಕವಿ ಗಳೆನ್ನಿಸಿಕೊಂಡಿದ್ದರೂ ಬೇಂದ್ರೆಯವರು ಹೇಳಿದಂತೆ ಅವರಲ್ಲಿ 'ಅಹಂ, ಮದ' ಎರಡೂ ಇಲ್ಲದ ಸರಳ, ಸಾತ್ವಿಕ ಜೀವಿಗಳು. ನಾನು ನಿಸಾರ್ ಅಹಮದ್ ಅವರನ್ನು ಹೆಚ್ಚಾಗಿ ಮೆಚ್ಚತೊಡಗಿದ್ದು ಅವರ 'ನಿತ್ಯೋತ್ಸವ'ದ 'ಜೋಗದ ಸಿರಿ ಬೆಳಕಿನಲ್ಲಿ; ತುಂಗೆಯ ತೆನೆ ಬಳುಕಿನಲ್ಲಿ...' ಗೀತೆಯನ್ನು ಶಾಲಾ ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮಧುರ ಕಂಠಗಳಿಂದ

ಕೇಳಿದ ಬಳಿಕ. ಕನ್ನಡ ನಾಡುನುಡಿಗಳ ಬಗೆಗಿನ ಅವರ ಆದರಪೂರ್ವಕ ನಿಲವನ್ನು ತಿಳಿದ ಮೇಲೆ. ನಾನು ಅವರ ಸೌಜನ್ಯಪೂರಿತ ವ್ಯಕ್ತಿತ್ವಕ್ಕೆ ಮಾರುಹೋಗಿದ್ದೇನೆ. ನಿಸಾರ್ ಅಹಮದ್ ಅವರು ಭೂ ವಿಜ್ಞಾನದಲ್ಲಿ ಪದವಿ ಪಡೆದು, ಕಾಲೇಜಿನಲ್ಲಿ ಬೋಧಕರಾಗಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದವರು. ಅವರಿಗೆ ಅಪಾರ ಶಿಷ್ಯರಿದ್ದಾರೆ. ಇಂದು ಅವರ ಶಿಷ್ಯರಲ್ಲಿ ಅನೇಕರು ವಿವಿಧ ಹುದ್ದೆಗಳನ್ನು ಅಲಂಕರಿಸಿ, ದೇಶ ವಿದೇಶಗಳಲ್ಲಿ ನೆಲೆಸಿದ್ದಾರೆ. ಅವರು ಎಲ್ಲೇ ಇದ್ದರೂ ನಿಸಾರ್ ಅಹಮದ್ ಅವರ ಮೇಲಿನ ಪ್ರೀತಿ, ಗೌರವ ಭಾವ ಕುಂದಿಲ್ಲ. ತಮ್ಮ ಪ್ರೀತಿಯ ಮೇಷ್ಟರ ಬಗ್ಗೆ, ಅವರ ಕಾವ್ಯದ ಬಗ್ಗೆ ಒಲವು ತೋರುತ್ತಾರೆ. ಇದು ನಿಸಾರರ ಭಾಗ್ಯ.

ನಿಸಾರ್ ಅಹಮದ್ ಅವರು ಅನೇಕ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಅವರು ಕಾವ್ಯಕ್ಷೇತ್ರಕ್ಕೆ ಅಡಿಯಿಟ್ಟಾಗ ಕನ್ನಡದಲ್ಲಿ ದಿಗ್ಗಜ ಕವಿಗಳಿದ್ದರು. ತಮ್ಮ ಎಡೆಬಿಡದ ಸಾಧನೆಯಿಂದ ಅವರಿಗೆ ಸರಿಸಮನಾಗಿ ನಿಂತ ಹಿರಿಮೆ ನಿಸಾರರದು. ಅದಕ್ಕಾಗಿ ಅವರು ಪೂರ್ವಭಾವಿ ಸಿದ್ಧತೆ ಮಾಡಿಕೊಂಡಿದ್ದೆಷ್ಟು! ಅವರು ಸದಾ ಅಧ್ಯಯನಶೀಲರು. ಕನ್ನಡದ ಪ್ರಾಚೀನ-ಅರ್ವಾಚೀನ ಕೃತಿಗಳನ್ನು ಓದಿ, ಜೀರ್ಣಿಸಿಕೊಂಡಿದ್ದಾರೆ; ಜೊತೆಗೆ ಸಂಸ್ಕೃತ, ಇಂಗ್ಲಿಷ್ ಸಾಹಿತ್ಯದ ಬಗ್ಗೆಯೂ ಮನನ ಮಾಡಿದ್ದಾರೆ. ಈ ಕಾರಣದಿಂದಾಗಿಯೇ ಅವರ ಕಾವ್ಯ ಸತ್ವಪೂರ್ಣವಾಗಿ, ಸಮಕಾಲೀನ ಸಮಾಜದಲ್ಲಿ ಉನ್ನತ ಸ್ಥಾನ ಪಡೆದಿದೆ. ಅವರು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಎರಡು ಬಾರಿ ಕನ್ನಡವನ್ನು ಪ್ರತಿನಿಧಿಸಿದ್ದಾರೆ. ೧೯೭೭ರಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದ ಸಮಾರಂಭದಲ್ಲಿ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ನಿಸಾರ್ ವಹಿಸಿದ್ದರು. ಆಗ ನಾನು ಕ.ಸಾ.ಪ.ದ. ಅಧ್ಯಕ್ಷನಾಗಿದ್ದೆ. ಅವರ ಪ್ರತಿಭೆಯನ್ನು ಗುರುತಿಸಿ ನಾವು ಅವರನ್ನು ಈ ಸ್ಥಾನಕ್ಕೆ ಆರಿಸಿದ್ದೆವು. ವಯಸ್ಸಿನಲ್ಲಿ ಕಿರಿಯರಾಗಿದ್ದ ಅವರು ಅಂದಿನ ಸಮಾರಂಭವನ್ನು ಹೇಗೆ ನಿಭಾಯಿಸುತ್ತಾರೋ ಎಂಬ ಅನುಮಾನ ಅನೇಕರಿಗಿತ್ತು. ಆದರೆ ಆ ದಿವಸ ಅವರು ಮಾಡಿದ ಅಧ್ಯಕ್ಷ ಭಾಷಣ ವಿದ್ವತ್ಪೂರ್ಣವಾಗಿತ್ತು, ಅದ್ಭುತವಾಗಿತ್ತು. ಸಭಿಕರನ್ನು ಮೋಡಿ ಮಾಡಿತ್ತು, ಮರುದಿನದ ಪತ್ರಿಕೆಗಳಲ್ಲಿ ತುಂಬು ಪ್ರಚಾರ ಪಡೆದಿತ್ತು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ದೇಶದ ರಾಜಧಾನಿ ನವ ದೆಹಲಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಬೇಕೆಂಬ ಇರಾದೆ ನನ್ನದಾಗಿತ್ತು. ಕರ್ನಾಟಕದಿಂದ ಹೊರಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಈಚೆಗೆ ವ್ಯವಸ್ಥೆಯಾದದ್ದು ಪ್ರಥಮ ಎನಿಸಿಕೊಳ್ಳಲು ನಿರ್ಧರಿಸಿ ೧೯೭೮ರಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಂಡೆ. ಆಗ ಪ್ರಧಾನಿಯಾಗಿದ್ದ ಮೊರಾರ್ಜಿ ದೇಸಾಯಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ಹೆಸರಾಂತ ಲೇಖಕರೂ ಚಿಂತನಶೀಲರೂ ಆದ ಶ್ರೀ ಜಿ. ಪಿ. ರಾಜರತ್ನಂ ಅವರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ದೆಹಲಿಯಲ್ಲಿರುವ ಕನ್ನಡಿಗರು ಅಪಾರ ಸಂಖ್ಯೆಯಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿದ್ದಲ್ಲದೆ, ಕರ್ನಾಟಕದ ವಿವಿಧ ಕಡೆಯಿಂದ ಒಂದು ರೈಲಿನ ತುಂಬಾ ಬಂದಿದ್ದ ಜನರೂ ನೆರೆದಿದ್ದರು. ಸಮ್ಮೇಳನದ ಅಂಗವಾಗಿ ನಿಯೋಜಿಸಿದ್ದ ಕವಿ ಸಮ್ಮೇಳನದಲ್ಲಿ ಕನ್ನಡದ ಅತ್ಯಂತ ಹಿರಿಯ

ಕವಿಗಳ ಜೊತೆಗೆ ನಿಸಾರ್ ಅಹಮದ್ ಅವರೂ ಭಾಗವಹಿಸಿದ್ದರು. ಎಂದಿನಂತೆ ತಮ್ಮ ನೀಟಾದ ದಿರಿಸಿನಿಂದ ಮೈಕ್ ಮುಂದೆ ಬಂದು ತಮ್ಮ ಎಂದಿನ ಶೈಲಿಯಲ್ಲಿ ಕವನ ವಾಚಿಸಿದರು. ಅದರಲ್ಲೂ ಅವರು ನಾಟಕೀಯವಾಗಿ ಓದಿದ ರಾಜಕೀಯ ವಿಡಂಬನೆಯಿಂದ ಕೂಡಿದ `ಕುರಿಗಳು, ಸಾರ್, ಕುರಿಗಳು` ಕವನ ಕಿಕ್ಕಿರಿದು ನೆರೆದಿದ್ದ ಜನರ ಮನಸನ್ನು ಸೂರೆಗೊಂಡಿತು. ತಮ್ಮ ಮೆಚ್ಚುಗೆಯನ್ನು ಕಿವಿಗಡಚಿಕ್ಕುವ ಚಪ್ಪಾಳೆಯ ಮೂಲಕ ವ್ಯಕ್ತ ಪಡಿಸಿದ್ದರು. ದೆಹಲಿಯಲ್ಲಿರುವ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ(JNU)ದಲ್ಲಿ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಜಿ. ಪಿ. ರಾಜರತ್ನಂ, ನಿಸಾರ್ ಅಹಮದ್ ಮತ್ತು ನಾನು ಆಹ್ವಾನಿತರಾಗಿ ಹೋಗಿ, ಭಾಗವಹಿಸಿದ್ದೆವು. ಕನ್ನಡದ ಬಗ್ಗೆ ಮಾತುಕತೆಗಳಾದ ಅನಂತರ ನಿಸಾರ್ ಅವರು ಅಲ್ಲಿಯೂ `ಕುರಿಗಳು...` ಕವನ ಓದಿದರು. ಅಲ್ಲಿ ನೆರೆದಿದ್ದ ಬುದ್ಧಿಜೀವಿಗಳು ಚಪ್ಪಾಳೆ ಮೂಲಕ ತಮ್ಮ ಹರ್ಷ ವ್ಯಕ್ತಪಡಿಸಿದರು. ವಿವಿಧ ಭಾಷೆಗಳ ಸುಶಿಕ್ಷಿತ ಸಭಿಕರು ಆ ಕವನದ ಅರ್ಥವನ್ನು ತಿಳಿದುಕೊಳ್ಳಲು ಕಾತರ ವ್ಯಕ್ತಪಡಿಸಿದ್ದರು. ಅಪರೂಪಕ್ಕೆ ರಾಜರತ್ನಂ ಅವರು ಮುಕ್ತ ಮನಸ್ಸಿನಿಂದ ತಮ್ಮ ಶಿಷ್ಯರಾಗಿದ್ದ ನಿಸಾರರನ್ನು ಶ್ಲಾಘಿಸಿ ಮಾತನಾಡಿ ಹರಸಿದರು.

ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕೆಂಬ ಕೂಗು ಲಾಗಾಯ್ತಿನಿಂದ ಇತ್ತು. ೧೯೮೦ರ ದಶಕದ ಮೊದಲಿನ ಅವಧಿಯಲ್ಲಿ `ಕನ್ನಡ ಜಾಗೃತಿ ಸಮ್ಮೇಳನ`ವನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ನಾವು ಏರ್ಪಡಿಸಿದ್ದಾಗ ಕನ್ನಡದ ಬಗ್ಗೆ ನಿಸಾರ್ ಅಹಮದ್ ಅಮೋಘವಾಗಿ ಮಾತನಾಡಿದ್ದರು. ಆಗಲೇ ನಾವು ಸಭೆ ಸೇರಿ ಕನ್ನಡದ ಸ್ಥಾನಮಾನದ ಬಗ್ಗೆ ಸರ್ಕಾರದೊಂದಿಗೆ ಚರ್ಚೆ ನಡೆಸಲು ನಿರ್ಧರಿಸಿದೆವು. ಅದು ಒಂದೆರಡು ದಿವಸಗಳಲ್ಲೇ ಗೋಕಾಕ್ ಚಳವಳಿಯ ಪ್ರಥಮ ಜಾತಾಕ್ಕೆ ನಾಂದಿ ಹಾಡಿತು. ನಿಸಾರ್ ಅಹಮದ್ ಅವರು ಕನ್ನಡಕ್ಕಾಗಿ ಟೊಂಕ ಕಟ್ಟಿ ನಿಂತವರು. ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಇಂದಿಗೂ ಅವರ ಕನ್ನಡ ನಾಡು-ನುಡಿಗಳ ಪ್ರೇಮ ಅಚ್ಚಳಿಯದಿದೆ: ಅವರ ಅಭಿಮಾನ ನಿಚ್ಚಳವಾಗಿದೆ.

ನಿಸಾರ್ ಅಹಮದ್ ಅವರಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಬಂದಿವೆ. ಇವೆಲ್ಲ ಅವರನ್ನು ಹುಡುಕಿಕೊಂಡು ಬಂದಂಥವು. ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಇವರು ಬರೆದ `ಹಕ್ಕಿಗಳು` ಕೃತಿಗೆ ಬಹುಮಾನ ಲಭಿಸಿತು. ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಶಿಪ್, ಹಂಪಿ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪ್ರಶಸ್ತಿ, ಧಾರವಾಡ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಹೀಗೆ, ಒಂದೇ ಎರಡೇ! ನಿಸಾರರು ಕನ್ನಡಿಗರ ವಿಶೇಷ ಗೌರವಾದರಗಳಿಗೆ ಪಾತ್ರರಾಗಿರುವ ಉತ್ಕೃಷ್ಟ ಕವಿ ಮತ್ತು ವಿಚಾರವಂತರು.

ಶ್ರೀ ದೇವರಾಜ ಅರಸು ಅವರು ಕರ್ನಾಟಕದ ಮುಖ್ಯಮಂತ್ರಿ ಆಗಿದ್ದಾಗ, ಶ್ರೀ ಬದರೀನಾರಾಯಣ್ ವಿದ್ಯಾ ಸಚಿವರಾಗಿದ್ದರು. ಅವರ ಅಧ್ಯಕ್ಷತೆಯಲ್ಲಿ (೧೯೭೦ರ ದಶಕದ ಮಧ್ಯ ಭಾಗದಲ್ಲಿ) ರಾಜ್ಯ ಸಾಹಿತ್ಯ ಅಕೆಡೆಮಿಯ ಸದಸ್ಯನಾಗಿ ನಾನು, ನಿಸಾರ್

ಅವರ ಜೊತೆ ಇದ್ದೆ. ಆಗ ವಿಶ್ವ ಕನ್ನಡ ಸಮ್ಮೇಳನವನ್ನು ಮಾಡುವ ಯೋಜನೆಯೊಂದನ್ನು ಮುಂದಿಟ್ಟಾಗ ಸರ್ಕಾರ ಅದನ್ನು ಒಪ್ಪಿ, ಆ ಸಮ್ಮೇಳನ ನಡೆಸಬೇಕಾದ ವಿಧಿ ವಿಧಾನಗಳನ್ನು ಅರಿಯಲು ಒಂದು ನಿಯೋಗವನ್ನು ಆಂಧ್ರ ಪ್ರದೇಶದ ರಾಜಧಾನಿ ಆಗಿರುವ ಹೈದರಾಬಾದಿಗೆ ಕಳಿಸಿತು. ಏಕೆಂದರೆ, ತೆಲುಗು ವಿಶ್ವಸಮ್ಮೇಳನ ಒಂದೆರಡು ವರ್ಷಗಳ ಹಿಂದೆ ನಡೆದಿದ್ದು, ಅಲ್ಲಿಂದ ತಿಳಿವಳಿಕೆಯನ್ನು ಪಡೆಯುವುದು ಸೂಕ್ತವೆನ್ನಿಸಿತ್ತು. ಆ ನಿಯೋಗದಲ್ಲಿ ಸರ್ವಶ್ರೀ ಎಚ್. ದೇವಿರಪ್ಪನವರು, ಎನ್. ಎಸ್. ಅನಂತ ರಂಗಾಚಾರ್ಯರು, ನಾನು ಮತ್ತು ನಿಸಾರ್ ಅಹಮದ್ ಇದ್ದೆವು. ಹೈದರಾಬಾದಿನಲ್ಲಿ ನಾವು ಮೂರು ದಿನಗಳ ಕಾಲವಿದ್ದು ಅಲ್ಲಿನ ಸರಕಾರದ ಅತಿಥಿಗಳಾಗಿದ್ದೆವು. ಅನೇಕ ಕಡೆ ನಮ್ಮ ಗೌರವಾರ್ಥವಾಗಿ ಸಭೆಗಳು ನಡೆದವು. ವಿದ್ಯಾಮಂತ್ರಿಗಳಾದಿಯಾಗಿ ತೆಲುಗಿನ ಉದ್ದಾಮ ಲೇಖಕ ಲೇಖಕಿಯರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಆಗ ನಿಸಾರರು ಓದಿದ ಕೆಲವು ಕವನಗಳು ತುಂಬಾ ಪರಿಣಾಮವನ್ನು ಬೀರಿದ್ದವು. ಅವರ 'ನಿತ್ಯೋತ್ಸವ', 'ಕುರಿಗಳು ಸಾರ್...' ಮುಂತಾದ ಕವಿತೆಗಳ ವಾಚನದಿಂದ, ಕನ್ನಡ ತಿಳಿಯದಿದ್ದರೂ ಹಲವು ತೆಲುಗು ಕವಿ-ಸಾಹಿತಿಗಳು ಸಂತೋಷಪಟ್ಟಿದ್ದರು. ಹೀಗೆ, ಕನ್ನಡದ ಹಿರಿಮೆಯನ್ನು ನಿಸಾರ್ ಅಹಮದ್ ಪರ ಭಾಷಿಕರಿಗೂ ಮನದಟ್ಟು ಮಾಡಿಸಿದ್ದರು. ಇದು ನನಗೆ ಬಹಳ ಹೆಮ್ಮೆಯೆನ್ನಿಸಿತ್ತು.

ನಿಸಾರ್ ಅಹಮದ್ ಅವರನ್ನು ೯೦ರ ದಶಕದಲ್ಲಿ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿದಾಗ ನನಗೆ ಆದ ಹರ್ಷ ಅಷ್ಟಿಷ್ಟಲ್ಲ. ಒಬ್ಬ ಸಮರ್ಥ ಹಾಗೂ ಉತ್ಸಾಹಶಾಲಿ ವ್ಯಕ್ತಿಯ ಆಯ್ಕೆಯಾಗಿದೆ ಎಂಬ ಭಾವನೆ ನನಗೆ ಉಂಟಾಗಿತ್ತು. ಆಗ ಅವರು ಮೈಸೂರಿಗೆ ಹೋಗಿ ರಾಷ್ಟ್ರಕವಿ ಕುವೆಂಪು ಅವರ ಆಶೀರ್ವಾದ ವನ್ನು ಪಡೆದು ಬಂದರು. ಬೆಂಗಳೂರಿನ ಹಿರಿಯ ಸಾಹಿತಿಗಳಾದ ಮಾಸ್ತಿಯಂಥವರ ಆಶೀರ್ವಾದವನ್ನೂ ಪಡೆದರು. ಅನೇಕ ಹಿರಿಯ ಸಾಹಿತಿಗಳನ್ನು, ಧೀಮಂತರನ್ನು, ಕಲಾಕಾರರನ್ನು, ಸಮಾಜದ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿ, 'ಅನೌಪಚಾರಿಕ ಸಭೆ'ಯನ್ನು ಕರೆದು ಅವರೆಲ್ಲರ ಜೊತೆ ಅಕೆಡೆಮಿ ನಡೆಸಬೇಕಾದ ಮುಂದಿನ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಗಂಭೀರ ಸಮಾಲೋಚನೆಯನ್ನು ನಡೆಸಿದರು. ಅಂದಿನ ಅಧ್ಯಕ್ಷತೆ ಡಾ. ಮಾಸ್ತಿ ಅವರದು. ನಿಸಾರರು ನನ್ನ ಸಲಹೆಯನ್ನು ಕೇಳಿದಾಗ, ನಾನು 'ನಿಸಾರ್ ಅವರೆ, ನೀವು ಜನರ ಪ್ರೀತಿಯನ್ನು ಗಳಿಸಿದವರು, ಹುಮ್ಮಸ್ಸಿರುವವರು. ಅಕೆಡೆಮಿ ಈವರೆಗೆ ಕೇವಲ ಬೆಂಗಳೂರಿಗೆ ಸೀಮಿತವಾಗಿದೆ ಎಂಬ ಅಪವಾದವಿದೆ. ಇದನ್ನು ಹೋಗಲಾಡಿಸಲು ಪ್ರಯತ್ನಿಸಿ. ನಮ್ಮ ಗ್ರಾಮ ಪ್ರದೇಶಗಳ ಜನಗಳಿಗೆ, ಇತರೇ ಊರುಗಳವರಿಗೆ ನಮ್ಮ ಸಾಹಿತ್ಯ ಸಂಸ್ಕೃತಿಗಳ ತಿಳಿವಳಿಕೆ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ. ಹೆಚ್ಚು ಜನಪರವಾದ ಕೆಲಸಗಳು ನಿಮ್ಮ ಕಾಲದಲ್ಲಿ ನೆರವೇರಲಿ' ಎಂದು ಹಾರೈಸಿದೆ. ನನ್ನ ಈ ಆಸೆಯನ್ನು ನೆರವೇರಿಸಲೋ ಎನ್ನುವಂತೆ ಸತತ ಮೂರು ವರ್ಷಗಳ ಕಾಲ ನಿಸಾರರು 'ಜಿಲ್ಲೆಗೊಂದು ಕಾರ್ಯಕ್ರಮ', 'ತಾಲ್ಲೂಕಿಗೊಂದು ಕಾರ್ಯಕ್ರಮ' ಹೆಸರಿನಲ್ಲಿ ನೂರಾರು ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಅಕೆಡೆಮಿಯ ಕೀರ್ತಿಯನ್ನು ಮೊದಲ ಬಾರಿಗೆ ಎಲ್ಲ

ಕಡೆ ಪಸರಿಸಲು ಶ್ರಮಿಸಿದರು.

ಕನ್ನಡದಲ್ಲಿ ಸುಗಮ ಸಂಗೀತದ ಕ್ಯಾಸೆಟ್ ಸಂಸ್ಕೃತಿಗೆ ನಾಂದಿ ಹಾಡಿದವರು ನಿಸಾರರು. ಅವರ 'ನಿತ್ಯೋತ್ಸವ' ಕನ್ನಡ ಭಾವಗೀತೆಗಳ ಮೊದಲ ಧ್ವನಿ ಸುರುಳಿ. ಇವರ ಭಾವಗೀತೆಗಳ ಧ್ವನಿ ಸುರುಳಿಗಳು ದೇಶ-ವಿದೇಶಗಳ ಕನ್ನಡಿಗರ ಮನೆಗಳಲ್ಲಿ ನಿನದಿಸುತ್ತಿವೆ.

ಗುರು ಹಿರಿಯರ ಬಗೆಗೆ ನಿಸಾರ್ ಅಹಮದ್ ಅವರಿಗೆ ತುಂಬು ಗೌರವವಿರುವಂತೆ, ಎಳೆಯರ ಬಗ್ಗೆ ಅತೀವವಾದ ಅಕ್ಕರೆಯಿದೆ. ಅವರನ್ನು ಉತ್ತೇಜಿಸಬೇಕೆಂಬ ನಿಷ್ಕಳಂಕವಾದ ಅಭಿಲಾಷೆಯಿದೆ. ಈ ಗುಣವೇ ಆಬಾಲ ವೃದ್ಧರೂ ಅವರನ್ನು ಮೆಚ್ಚಿ ಮರ್ಯಾದಿಸಲು ಕಾರಣವೆಂದು ನನಗೆ ಅನ್ನಿಸುತ್ತಿದೆ. ಇದಕ್ಕೆ ಸಾಕ್ಷಿಯೆಂದರೆ ಅವರು ಏರ್ಪಡಿಸುವ ಕಾರ್ಯಕ್ರಮಗಳು. ಅಲ್ಲಿ ಕಿಕ್ಕಿರಿಯುವ ಹಿರಿಯ-ಕಿರಿಯರು ನಿಸಾರರೊಂದಿಗೆ ವ್ಯವಹರಿಸುವ ಪ್ರೀತಿಪೂರ್ವಕ ರೀತಿ ನನಗೆ ಅಚ್ಚರಿ ಬರಿಸಿದೆ. ಅವರ ಸನ್ಮಾನದ, ಪುಸ್ತಕ ಬಿಡುಗಡೆಯ ಹಲವು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ಕಳೆದ ವರ್ಷ ಜರುಗಿದ ಅವರ ೭೦ನೆಯ ಹುಟ್ಟುಹಬ್ಬದ ಅವಿಸ್ಮರಣೀಯ ಸಮಾರಂಭದಲ್ಲಿ ಪಾಲ್ಗೊಂಡು ಅವರ ದನಿ ಸುರುಳಿಯೊಂದನ್ನು ಬಿಡುಗಡೆ ಮಾಡಿದ್ದಲ್ಲದೆ, ಅವರಿಗೆ ಹಾರ್ದಿಕವಾದ ಅಭಿನಂದನೆಯನ್ನು ಸಲ್ಲಿಸಿದ್ದೇನೆ. ನನ್ನ ಬಗೆಗೆ ಮುಂಚಿನಿಂದ ಅವರು ತೋರಿಸುತ್ತ ಬಂದಿರುವ ಪ್ರೀತಿ ಗೌರವಗಳನ್ನು ಮಾತಿನಿಂದ ಅಳೆಯಲು ಸಾಧ್ಯವಿಲ್ಲ. ಇದರಿಂದ ನನಗೆ ಸಂತೋಷ, ಸಂತುಷ್ಟಿ ದಕ್ಕಿವೆ.

ಕೆ. ಎಸ್. ನಿಸಾರ್ ಅಹಮದ್ ಕನ್ನಡಿಗರ ಹೃದಯ ಸಿಂಹಾಸನದಲ್ಲಿ ಅನುಪಮ ಕಾವ್ಯಗಳ ಮೂಲಕ ಗಟ್ಟಿಯಾಗಿ ನೆಲೆಸಿದ್ದಾರೆ. ಇದು ,ಅವರ ಬಗೆಗೆ ನನಗೆ ಹೆಮ್ಮೆ ಮತ್ತು ಅಕ್ಕರೆ ಹೆಚ್ಚುವಂತೆ ಮಾಡಿರುವ ವಿಷಯ. ಅವರಿಗೆ ಒಳಿತಾಗಲಿ.

ಲೋಕಾನುಭವವನ್ನು ಕಲಾನುಭವವನ್ನಾಗಿ, ಅಂದರೆ ಭಾವವಾಗಿ ಪರಿವರ್ತಿಸುವ ಮನಃಕ್ರಿಯೆ ನಿಗೂಢ, ವಾಗತೀತ. ಕುಸುಮ ರಸವೇ ಜೇನಿನಲ್ಲಿ ಶೇಖರವಾಗಿದ್ದರೂ ಅದರ ಮಕರಂದತ್ವ ಮರೆಯಾಗಿ ಮಧುತ್ವ ಲಭ್ಯವಾಗಿರುತ್ತದೆ. ಈ ಮಾರ್ಪಾಡಿನಿಂದ ಪೂರ್ವಾವಸ್ಥೆಯಲ್ಲಿ ಅನುಭವವಾಗದ ಹೊಸ ರುಚಿ, ಬಣ್ಣ, ಕಂಪು, ಪುಷ್ಟಿಗುಣಗಳ ಹೆಚ್ಚಳ ಸೇರ್ಪಡೆಯಾಗಿರುತ್ತದೆ. ಪ್ರಾಪಂಚಿಕಾನುಭವಕ್ಕೂ ಕಾವ್ಯ ಕಲಾದಿಗಳ ಭಾವಾನುಭವಕ್ಕೂ ಇರುವ ವ್ಯತ್ಯಾಸ ಈ ತೆರದ್ದು.

(ಲೋಕಾನುಭವ ಮತ್ತು ಭಾವ)

✧ ✧ ✧

ಕೇವಲ ವಿಶೇಷ ಜ್ಞಾನ ಮಾತ್ರವಲ್ಲ ವಿಜ್ಞಾನ. ಅದೊಂದು ಅನುಭವ ಸಂಪನ್ನ ಜೀವನ ವಿಧಾನ. ಬೌದ್ಧಿಕ ಸಾಹಸದ ಫಲರೂಪಿ ವರದಾನ.

(ವಿಜ್ಞಾನ)



ಹೆಮ್ಮೆಯ ಆತ್ಮೀಯ ಕವಿಮಿತ್ರ ನಿಸಾರ್ ಅಹಮದ್

♦ ಡಾ. ರಾಜ್‌ಕುಮಾರ್

‘ಪರತತ್ತ್ವವನು ಬಲ್ಲ ಪಂಡಿತನು ನಾನಲ್ಲ’ ಎಂಬ ‘ಭಕ್ತ ಕುಂಬಾರ’ ಚಿತ್ರದ ಗೀತೆ ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುತ್ತದೆ. ಏಕೆಂದರೆ ‘ಡಾಕ್ಟರ್’ ಪಟ್ಟ ಪಡೆದಿದ್ದರೂ ‘ಪಂಡಿತನು ನಾನಲ್ಲ!’ ಇಹ-ಪರ ಎರಡರ ತತ್ತ್ವಗಳನ್ನೂ ಅರಿತಿರುವ ಶ್ರೀ ಕೆ. ಎಸ್. ನಿಸಾರ್ ಅಹಮದ್ ನಿಜವಾದ ಪಂಡಿತರು, ಪ್ರಶಂಸನಾರ್ಹರು!

ನಾನು ಓದಿದ್ದು ಮೂರನೇ ಕ್ಲಾಸು! ನಮ್ಮ ಅಪ್ಪಾಜಿಗೆ ‘ನಾನಷ್ಟು ಓದಿದ್ದೇ ಸಾಕು’ ಎನಿಸಿತೇನೋ, ನಾಟಕದ ಕಂಪೆನಿಗೆ ಕರೆದುಕೊಂಡು ಹೋದರು. ಆಗಿನಿಂದಲೇ ಆರಂಭವಾಯ್ತು ನನಗೆ ಸಂಗೀತ-ಸಾಹಿತ್ಯದ ಮೇಲಿನ ಮೋಹ!

ಯಾವುದಾದರೂ ಕೆಲಸವನ್ನು ನಾನು ಮಾಡುವುದಕ್ಕಿಂತ ಮಾಡುವವರನ್ನು ನೋಡುವುದು, ಮಾತನಾಡುವುದಕ್ಕಿಂತ ಮಾತುಗಳನ್ನು ಕೇಳುವುದು ಎಂದರೆ ನನಗೆ ಮೊದಲಿನಿಂದಲೂ ಇಷ್ಟ! ಅಂಥದ್ದರಲ್ಲಿ, ಶ್ರೀ ನಿಸಾರ್ ಅಹಮದ್ ಅವರ ಮಾತು ಗಳೆಂದರೆ ನನಗೆ ಬಲು ಪ್ರಿಯ. ಕಿವಿ ಅಗಲಿಸಿಕೊಂಡು ಕೇಳುವಷ್ಟು ಆಸೆ. ಬಾಯಿ ತೆರೆದುಕೊಂಡು ನೋಡುವಷ್ಟು ಆಸೆ. ಆಳವಾದ ಅಧ್ಯಯನ, ಅಗಾಧವಾದ ಚಿಂತನೆ, ಹೃದಯದಿಂದ ಹೊರ ಬರುವ ಶಬ್ದಗಳು, ಮಾತನಾಡುವ ರೀತಿ, ಭಾಷೆಯ ಮೇಲಿನ ಹಿಡಿತ, ನುಡಿಗಳಲ್ಲಿ ಸ್ಪಷ್ಟತೆ—ಎಲ್ಲವೂ ಶ್ರೀ ನಿಸಾರರ ಸ್ವಂತ ಸ್ವತ್ತು. ಅವರ ಮಾತಿನ ಧಾಟಿ, ಶೈಲಿ ಎಲ್ಲವೂ

ಅನುಕರಣೀಯ. ಅವರು ಮಾತನಾಡುವಾಗ ಅವರ ಕಣ್ಣಿಂದ ಹೊಮ್ಮುವ ಬೆಳಕನ್ನು ಕಂಡೇ ತಿಳಿಯಬೇಕು. ಅದುವೇ ನಾ ಕಂಡ ಶ್ರೀ ನಿಸಾರ್ ಅಹಮದ್.

ನನಗಿದ್ದ ಸಂಗೀತ-ಸಾಹಿತ್ಯಾಭಿಲಾಷೆಯೇ ನಾನು ಸಂಗೀತಗಾರರನ್ನೂ-ಸಾಹಿತಿಗಳನ್ನೂ ಅತ್ಯಂತ ಗೌರವದಿಂದ ಕಾಣುವಂತಾಯ್ತು. ಶ್ರೀ ಬಿಸ್ಮಿಲ್ಲಾ ಖಾನ್, ಪಂಡಿತ್ ಭೀಮಸೇನ ಜೋಷಿ, ಬಾಲಮುರಳೀ ಕೃಷ್ಣ, ಅಹಮದ್ ಹುಸೇನ್ ಅವರಂತಹ ಸಂಗೀತ ವಿದ್ವನ್ಮಣಿಗಳ ಸಹವಾಸವೂ, ಸಾಮೀಪ್ಯವೂ ದೊರಕುವಂತಾಯ್ತು. ಶ್ರೀ ಅನಕೃ, ತರಾಸು, ಪಾಪು ಮತ್ತು ಶ್ರೀ ನಿಸಾರ್ ಅವರಂತಹ ಸಾಹಿತಿಗಳ ಸಖ್ಯವೂ ಸಿಕ್ಕಿತು.

ಶ್ರೀ ನಿಸಾರ್ ಅವರು ನನಗೂ, ನನ್ನ ಕುಟುಂಬಕ್ಕೂ ಆತ್ಮೀಯರು. ಅದಕ್ಕೆ ಕಾರಣ, ಅವರು ನಮ್ಮ ಸಂಸ್ಥೆಯ ಚಿತ್ರಗಳಾದ 'ಆನಂದ್'. 'ಜೀವನ ಚೈತ್ರ'. 'ಜನುಮದ ಜೋಡಿ' ವಿಜಯೋತ್ಸವಗಳಲ್ಲಿ ಭಾಗವಹಿಸಿದಾಗಿನ ಸಂದರ್ಭದಲ್ಲಿ ಕಂಡ ಅವರ ವ್ಯಕ್ತಿತ್ವ, ನಡೆ-ನುಡಿ ಮಾದರಿಯಾಗುವಂಥವು; ಪ್ರೀತಿ ಗೌರವಗಳಿಗೆ ಪಾತ್ರವಾಗುವಂಥವು.

ಅವರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಅವರು ನಾನು ನಟಿಸಿದ ಚಿತ್ರಗಳನ್ನು ನೋಡುವ ಅಭಿಮಾನಿಯಾಗಿದ್ದರಂತೆ. ಅವರ 'ನಿತ್ಯೋತ್ಸವ' ಕೇಳಿದ ಮೇಲೆ ನಾನು ಅವರ ಕಟ್ಟಾ ಅಭಿಮಾನಿ!

ನನ್ನ ಶ್ರೀಮತಿಗೆ ಕಥೆ-ಕವನ-ಕಾದಂಬರಿಗಳನ್ನೋದುವ ಹುಚ್ಚು. ಅದರಿಂದಾಗಿ ಅವಳೂ ಶ್ರೀ ನಿಸಾರರ ಅಭಿಮಾನಿ. ನನ್ನ ಮೊಮ್ಮಗಳು ಸರಸ್ವತಿಗಂತೂ ಅವರನ್ನು ಕಂಡರೆ ಅಪಾರ ಗೌರವ.

'ಪಂಡಿತನು ನಾನಲ್ಲ' ಎಂದು ಈ ಲೇಖನದ ಪ್ರಾರಂಭದಲ್ಲೇ ಹೇಳಿದ್ದೇನೆ. ಶ್ರೀ ನಿಸಾರರ ಕವನಗಳನ್ನು ಮತ್ತು ವಿಮರ್ಶೆಗಳನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿ ನನ್ನಲ್ಲಿಲ್ಲ. ಆದರೆ ಅವರ ಜನಪ್ರಿಯತೆಯನ್ನು ಗಮನಿಸಿದಾಗ, ಅವರ 'ನಿತ್ಯೋತ್ಸವ' ಕ್ಯಾಸೆಟ್ ಮತ್ತು ಸಿ.ಡಿ.ಗಳು ದೇಶ-ವಿದೇಶಗಳಲ್ಲೂ ಪ್ರಸಿದ್ಧವಾಗಿರುವಾಗ ಅವರ ಕೃತಿಗಳು ಎಷ್ಟೊಂದು ಪ್ರಬುದ್ಧವಾಗಿವೆ ಮತ್ತು ಜನಪ್ರಿಯವಾಗಿವೆ ಎಂದು ಅನಿಸದೇ ಇರದು!

ನಾನು ಮುಂಚೆ ಸೂಚಿಸಿದಂತೆ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರು ಕನ್ನಡದ ಸುಪ್ರಸಿದ್ಧ ಕವಿಗಳು. ತಮ್ಮ ಕವಿತೆಗಳ ಮೂಲಕ, ಹಲವು ಧ್ವನಿ ಸುರುಳಿಗಳ ಮೂಲಕ ಕರ್ನಾಟಕ, ಭಾರತದಲ್ಲಿ ಮಾತ್ರವಲ್ಲ, ಅಮೆರಿಕಾ, ಇಂಗ್ಲೆಂಡ್, ದುಬೈ, ಅಬುಧಾಬಿ, ಆಸ್ಟ್ರೇಲಿಯ ಮೊದಲಾದ ದೇಶಗಳಲ್ಲೂ ಚಿರ ಪರಿಚಿತರು. ೨೭ ವರ್ಷಗಳ ಹಿಂದೆ 'ನಿತ್ಯೋತ್ಸವ' ಧ್ವನಿ ಸುರುಳಿ ಬಿಡುಗಡೆಯಾಗಿದ್ದರೂ ಇಂದಿಗೂ ಜನಪ್ರಿಯವಾಗಿಯೇ ಉಳಿದಿದೆ. ನಿಸಾರ್ ಅಹಮದ್‌ರವರಿಗೆ ನನ್ನನ್ನು ಕಂಡರೆ ತುಂಬ ಪ್ರೀತ್ಯಾದರ, ಮಿಗಿಲಾದ ಅಭಿಮಾನಪೂರ್ವಕವಾದ ಅಕ್ಕರೆ. ಅವರು ಒಳ್ಳೆಯ ವಾಗ್ಮಿಗಳು, ವಿಮರ್ಶಕರು ಮತ್ತು ವಿಚಾರವಾದಿಗಳು. ಅವರ ನಿರಂತರ ಕನ್ನಡ ಸೇವೆಯನ್ನು ಕಂಡಾಗ ಈ ಸ್ನೇಹಿತರ ಬಗ್ಗೆ ಹೆಮ್ಮೆ ಎನಿಸುತ್ತದೆ. ಅವರ ಧ್ವನಿ ಸುರುಳಿಗಳಲ್ಲಿ ಉತ್ತಮ ಸಾಹಿತ್ಯ, ರಾಗ ಸಂಯೋಜನೆ ಮತ್ತು ಸಂಗೀತವನ್ನು ಅಳವಡಿಸಿರುವ ಹಾಡುಗಳಿವೆ. ಆ ಹಾಡುಗಳಲ್ಲಿ ದೇಶಭಕ್ತಿ, ಪ್ರೇಮ.

ವಿರಸ, ನಿಸರ್ಗದ ಭಾವನೆಗಳ ಸೆಲೆ ಕಿವಿಗೆ ಇಂಪಾಗಿ ಹರಿದಿದೆ. ಶ್ರೀ ನಿಸಾರ್ ಅಹಮದ್‌ರವರಿಂದ ಇನ್ನೂ ಹೆಚ್ಚು ಹಾಡುಗಳು ಹೊರಹೊಮ್ಮಿ ಕನ್ನಡಿಗರ ಹೃನ್ಮನಗಳನ್ನು ತಣಿಸುತ್ತಿರಲಿ ಎಂದು ಈ ಸಂದರ್ಭದಲ್ಲಿ ಹಾರ್ದಿಕವಾಗಿ ಹಾರೈಸುತ್ತೇನೆ.

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ತಮ್ಮ ೭೦ ವಸಂತಗಳನ್ನು ಈಗಾಗಲೇ ಪೂರೈಸಿ, ೭೧ರಲ್ಲಿ ಮುನ್ನಡೆದಿರುವ ಈ ಶುಭ ಸಂದರ್ಭದಲ್ಲಿ ಮಿತ್ರರಾದ ಅವರಿಗೆ, ಅವರ ಕುಟುಂಬದ ಎಲ್ಲರಿಗೆ ಭಗವಂತನು ಸಕಲ ಆಯುರಾರೋಗ್ಯ ಸನ್ಮಂಗಳ ವನ್ನು ನೀಡಲೆಂದು ಪ್ರಾರ್ಥಿಸುತ್ತೇನೆ. ಅಲ್ಲದೆ, ಅವರ ಈ ಅಭಿನಂದನ ಗ್ರಂಥವನ್ನು ಹೊರ ತರುತ್ತಿರುವ ಎಲ್ಲಾ ಹಿತೈಷಿಗಳಿಗೂ, ಮಾನ್ಯ ಸಂಪಾದಕರಿಗೂ ವಂದನೆ ಮತ್ತು ಅಭಿನಂದನೆ ಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

ಬಿಡುವಿಲ್ಲದ ಚಟುವಟಿಕೆಯ ದೆಸೆಯಿಂದ ಜೀವನದ ಕೌತುಕ, ಲೋಕದ ಅನಂತ ವೈವಿಧ್ಯದ ಚಕಿತತೆ ನಮ್ಮ ಕೈ ಬಿಟ್ಟು ಹೋಗಿದೆ. ಎಂದೇ, ನಮ್ಮ ಜೀವಿತ ವರ್ಣಾಕರ್ಷಣೀಯವಾಗಿದ್ದೂ ನಿರ್ಗಂಧವಾಗಿದೆ; ಮನೋಜ್ಞ ರಚನೆಯ ಹುಟ್ಟಿಯಂತಿದ್ದೂ ಜೇನಿಲ್ಲದೆ ಬಿಮ್ಮನಿಸಿದೆ. ಎವೆ ತೆರೆಯುವ ಪ್ರತಿ ಸ್ವಚ್ಛ ಮುಂಜಾನೆಯೂ ದೇವರ ದಯೆಯೆಂಬ ಭಾವನೆ ಬಲಿಯಬೇಕು, ಪಾವನತರ ಎನ್ನಿಸಬೇಕು. ಪ್ರತಿ ಚಣ, ಗಂಟೆ, ದಿನಮಾನ ನಮ್ಮ ಕೃತಜ್ಞತೆಗೆ ಪಾತ್ರವಾಗಬೇಕು; ಸಾರ್ಥಕತೆಯತ್ತ ಹೊರಳಲು ಹುರಿದುಂಬಿಸುವ ಹಿತೈಷಿಯಂತೆ ನಮಗೆ ಭಾಸವಾಗಬೇಕು. ಕೀಳಾಸೆಗಳ ಕೊಳಕು ಕಾಲುವೆಯಾಗ ಬಾರದು.

(ಉದಾತ್ತತೆಯ ದೃಷ್ಟಿಕೋನ)

✧ ✧ ✧

ತಾತ್ತ್ವಿಕವಾಗಿ ಪೂರ್ಣದೃಷ್ಟಿಯಿಂದ ವಿವೇಚಿಸಿದಾಗ ಜೀವನದಲ್ಲಿ ಎಲ್ಲದಕ್ಕೂ ಸಮಾನ ಪ್ರಾಶಸ್ತ್ಯವಿದೆ. ದೊಡ್ಡದಾಗಿ ಚಿತ್ರಿಸಿದ ಮಾತ್ರಕ್ಕೆ ಒಂದು ವೃತ್ತ ಹಿರಿಮೆಯನ್ನು, ಮೇಲ್ಮೆಯನ್ನು ದಕ್ಕಿಸಿಕೊಳ್ಳುವುದಿಲ್ಲ. ಚಿಕ್ಕದಾದರೂ ಅದರ ದುಂಡುತನ ದೋಷರಹಿತವೆನ್ನಿಸಿದರೆ, ಸಮರ್ಪಕವೆಂಬ ಭಾವನೆ ಮೂಡಿಸಿದರೆ ಅದು ಸಾರ್ಥಕ್ಯವನ್ನು ಪಡೆದೇ ಪಡೆಯುತ್ತದೆ.

(ಸರ್ವ ಸಮಾನ ಭಾವನೆ)



ಸರಸ್ವತಿಯ ಅನುಗ್ರಹ ಪಡೆದ ನಮ್ಮ ಕವಿ

◆ ಡಾ. ಪಾಟೀಲ ಪುಟ್ಟಪ್ಪ

ದೇಶದ ಐತಿಹಾಸಿಕ ಮಹತ್ವದ ಸ್ಥಳಗಳಲ್ಲಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಕೂಡ ಒಂದು. ಅದು, ಸ್ವಾತಂತ್ರ್ಯವೀರ ಟಿಪ್ಪು ಸುಲ್ತಾನನಿಗೆ ಜನ್ಮಕೊಟ್ಟ ಸ್ಥಳ. ಅಲ್ಲಿ, ಕನ್ನಡದ ಕವಿ ನಿಸಾರ್ ಅಹಮದ್‌ರೂ ಜನ್ಮವೆತ್ತಿ ಬಂದಿದ್ದಾರೆ. ದೇವರು ಒಪ್ಪಿದುದನ್ನು ದೇವರು ರುಜು ಮಾಡಿದ್ದಾನೆ ಎಂದು ಕುವೆಂಪು ಹೇಳುತ್ತಾರೆ.

ದೇವನಹಳ್ಳಿಯಲ್ಲಿ ಹುಟ್ಟಿದ ನಿಸಾರ್ ಅಹಮದ್‌ರನ್ನು ದೇವರೂ ಒಪ್ಪಿದ್ದಾನೆ. ಕುವೆಂಪು ಅವರೂ ಒಪ್ಪಿದ್ದಾರೆ. ಕುವೆಂಪು ಅವರು ಒಪ್ಪಿದರೆ ಪ್ರಥಮ ತರಗತಿಯವರಾದವರನ್ನೇ ಒಪ್ಪುತ್ತಾರೆ. ಪ್ರಥಮ ತರಗತಿಯಲ್ಲದ ಯಾವುದನ್ನೂ ಒಪ್ಪುವವರಲ್ಲ. ಕುವೆಂಪು ಅವರಿಂದ ಭಲೆಯೆಂದು ಬಹುಮಾನ ಪಡೆಯ ಬೇಕಾದರೆ ನಿಸಾರ್ ಅಹಮದ್‌ರು ಅಸಾಮಾನ್ಯರಾಗಿರುವುದೇ ಕಾರಣವಾಗಿದೆ.

ಬಹು ದೊಡ್ಡ ಇತಿಹಾಸವನ್ನು ನಿರ್ಮಿಸಿದ ಟಿಪ್ಪು ಸುಲ್ತಾನನನ್ನು ಕೂಡ ಮರೆತು ಕಾಲವು ಅವನನ್ನು ವಿಸ್ಮೃತಿಯ ಕೊಳ್ಳಕ್ಕೆ ತಳ್ಳಬಹುದು. ಆದರೆ 'ನಿತ್ಯೋತ್ಸವ'ದ ಕಡೆಗೆ ತನ್ನ ಜನಾಂಗದ ಕಣ್ಣನ್ನು ಹೊರಳಿಸಿದ ನಿಸಾರ್ ಅಹಮದ್‌ರಂಥ ಕವಿಯ ಹೆಸರು ಜನ ಮಾನಸದಲ್ಲಿ ಶತಮಾನಗಳು ಕಳೆದರೂ ನಿತ್ಯ ನೂತನವಾಗಿಯೇ ಉಳಿಯುತ್ತದೆ. ಪೀಳಿಗೆ ಪೀಳಿಗೆಗಳನ್ನು ಪ್ರಭಾವಿಸುತ್ತ ಅದು ಸದಾಕಾಲವೂ ಅಚ್ಚಳಿಯದಂತೆ ಇರುತ್ತದೆ.

ನಿಸಾರ್ ಅಹಮದ್‌ರು, ಸಮಿ ಸಮೀಪ ಅರ್ಧ ಶತಮಾನದ ತಮ್ಮ ಲೇಖನ ಜೀವನದಲ್ಲಿ ಬಹಳಷ್ಟು ಕಾವ್ಯಕೃಷಿಯನ್ನು ಮಾಡಿದ್ದಾರೆ. ಜಗತ್ತಿನ ಅನೇಕ ಪ್ರಾಚೀನ ಕವಿಗಳ ಕಾಲದಲ್ಲಿ ಆದಂತೆ, ಅವರು ಬರೆದುದರಲ್ಲಿ ಬಹಳಷ್ಟು ಕಳೆದು ಹೋಗಿ ಅವರ 'ನಿತ್ಯೋತ್ಸವ' ಗೀತವೊಂದೇ ಉಳಿದಿದ್ದರೂ ಅವರ ಹೆಸರು ಅಜರಾಮರವಾಗುವುದು ನಿಶ್ಚಯ. ಕನ್ನಡಿಗರ ಪಾಲಿಗೆ ನಿಸಾರ್ ಅಹಮದ್‌ರು 'ನಿತ್ಯೋತ್ಸವ ಕವಿ'ಯೆಂದೇ ಹೆಸರಾಗಿದ್ದಾರೆ.

ಅಂಥ ಕವಿತೆಯೊಂದು ಜನಾಂಗದ ಪುಣ್ಯ ವಿಶೇಷದಿಂದಲೇ ಸೃಷ್ಟಿಯಾಗುತ್ತದೆ. ಜನಾಂಗದ ಮನಸ್ಸು ಮಾಗಿದಾಗಲೇ ಅದು ಒಬ್ಬ ಕವಿಯ ಅಂತರಂಗವನ್ನು ಹೊಕ್ಕು ಹಣ್ಣಾಗಿ ಹೊರಬರುತ್ತದೆ. ಅದು ಈ ಕೆಲಸಕ್ಕೋಸುಗ ನಿಸಾರ್ ಅಹಮದ್‌ರನ್ನು ಆರಿಸಿಕೊಂಡಿದೆ. ಇದು ಅವರಿಗೆ ದೇವರು ನೀಡಿದ ಬಹು ದೊಡ್ಡ ವರ ದಾನ. 'ನಿತ್ಯೋತ್ಸವ' ಗೀತವು, ಕರ್ನಾಟಕದ ಒಳಗೆ ಹಾಗೂ ಹೊರಗೆ, ಕನ್ನಡಿಗರು ಎಲ್ಲೆಲ್ಲಿ ಇರುವರೋ ಅಲ್ಲೆಲ್ಲ ಜನಪ್ರಿಯವಾಗಿದೆ. ಕೆ. ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ'ಯಂಥ ಜನಪ್ರಿಯತೆಯನ್ನು ಕೆ. ಎಸ್. ನಿಸಾರ್ ಅಹಮದ್‌ರ 'ನಿತ್ಯೋತ್ಸವ'ಗಳಿಸಿದೆ. ಅದಕ್ಕೆ ಸಾಕ್ಷಿ ಆ ಕವನ ಸಂಗ್ರಹ, ಕಾಲದ ದೀರ್ಘಾವಧಿ ಸ್ವರೂಪದ ನಿಟ್ಟಿನಿಂದ ನೋಡಿದಾಗ, ತ್ವರಿತ ಸಮಯದಲ್ಲಿ ಹದಿನಾಲ್ಕು ಆವೃತ್ತಿಗಳನ್ನು ಕಂಡು ಇನ್ನೂ ಹೆಚ್ಚು ಅಚ್ಚನ್ನು ಕಾಣುವತ್ತ ದಾಪುಗಾಲು ಹಾಕುತ್ತಿದೆ. ಈ ಕೆ. ಎಸ್. ಎನ್ನುವ ಪದದಲ್ಲಿ ಏನೋ ಒಂದು ರಾಸಾಯನಿಕ ಆಕರ್ಷಣೆ ಇದೆಯೆಂದು ನನಗನ್ನಿಸಿದೆ.

ನಿಸಾರ್ ಅಹಮದ್ ಭೂ ವಿಜ್ಞಾನಕ್ಕೆ, ಶಿಲೆ ಖನಿಜಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ಪಡೆದರು. ಅವರ ಓದಿಗೂ ಸಾಹಿತ್ಯಕ್ಕೂ ಕಾವ್ಯರಚನೆಗೂ ಸಂಬಂಧವಿಲ್ಲ. ಪ್ರೇಮಕ್ಕೂ ಹೂವಿಗೂ ಸಂಬಂಧವಿದೆಯೆಂದು ಹೇಳುತ್ತಾರೆ, ಹೂವಿನಿಂದ ಪ್ರೇಮವನ್ನು ಅರಸುವುದು ಸಹಜ, ಸ್ವಾಭಾವಿಕ. ಆದರೆ ಶಹಜಹಾನನು ತನ್ನ ಪ್ರೇಯಸಿ ಮಮತಾಜಳ ಮೇಲಿನ ಪ್ರೇಮವನ್ನು ಕಲ್ಲಿನಲ್ಲಿ ಅರಳಿಸಿ ತೋರಿಸಿದ. ಕವೀಂದ್ರ ರವೀಂದ್ರನಾಥ ಠಾಕೂರರು ತಾಜ ಮಹಲನ್ನು 'ಚಿರಂತನದ ಕೆನ್ನೆಯ ಮೇಲಣ ಒಂದು ಕಣ್ಣೀರ ಹನಿ' ಎಂದು ವರ್ಣಿಸಿದರು.

ಪ್ರಕೃತಿಪ್ರಿಯರೂ ಅದರ ಪೂಜಕರೂ ಆಗಿದ್ದ ರವೀಂದ್ರರು ಈಗ ಇದ್ದಿದ್ದರೆ, ನಿಸಾರ್ ಅಹಮದ್‌ರು ವರ್ಣಿಸಿದ ಪಚ್ಚೆಯಂತೆ ಕಂಗೊಳಿಸುವ ಹರಿದ್ವರ್ಣದ ಸಹ್ಯಾದ್ರಿಯ ಸೊಬಗನ್ನು ಕಂಡು ಉನ್ಮಾದಗೊಂಡು ಹರ್ಷದಿಂದ ಕುಣಿದಾಡುತ್ತಿದ್ದರು. ಪ್ರಕೃತಿಯ ಆರಾಧನೆಯಲ್ಲಿ ನಿಸಾರ್ ಅಹಮದ್‌ರನ್ನು ಮೀರಿಸಿದವರಿಲ್ಲ.

ಕವಿ ನಿಸಾರ್ ಅಹಮದ್‌ರು ಮುಸ್ಲಿಮರು, ಕನ್ನಡಿಗರು, ಭಾರತೀಯರು—ಎಲ್ಲವೂ ಹೌದು. ಆದರೆ, ಅವರಂಥ ಮುಸ್ಲಿಮರಿಲ್ಲ. ಅವರಂಥ ಕನ್ನಡಿಗರಿಲ್ಲ. ಅವರಂಥ ಭಾರತೀಯರಿಲ್ಲ. ಮುಸ್ಲಿಮರಿದ್ದರೆ ಅವರಂಥ ಮುಸ್ಲಿಂ ಇರಬೇಕು. ಕನ್ನಡಿಗರಿದ್ದರೆ ಅವರಂಥ ಕನ್ನಡಿಗರಿರಬೇಕು. ಭಾರತೀಯರಿದ್ದರೆ ಅವರಂಥ ಭಾರತೀಯರಿರಬೇಕು. ಅವರು ಸ್ನೇಹ ಸಂಸ್ಕೃತಿಗಳ ಸುಂದರ ಸಮನ್ವಯವಾಗಿದ್ದಾರೆ.

ಬಹುಶಃ ಅವರಿಗೆ ಲಭಿಸಿರುವಷ್ಟು ಜನ ಮನ್ನಣೆ ಹಾಗೂ ಪುರಸ್ಕಾರಗಳು, ದೇಶ ವಿದೇಶಗಳಲ್ಲಿ ಬೇರೆ ಯಾವ ಕನ್ನಡ ಕವಿಗಳಿಗೂ ಲಭಿಸಿರಲಾರವು. ಅವರಿಗೆ ಕನ್ನಡಿಗರಿಂದ ಲಭಿಸಿದ ಪ್ರಶಂಸೆ ಎಲ್ಲ ಪ್ರಶಸ್ತಿಗಳಿಗಿಂತಲೂ ದೊಡ್ಡದು. ತಮಗೆ ಎಲ್ಲ ಪ್ರಶಸ್ತಿಗಳಿಗಿಂತಲೂ ತಮ್ಮ ಊರಿನ ಜನರಿಂದ ಸಿಕ್ಕುವ ಪ್ರಶಂಸೆ ಹೆಚ್ಚಿನದೆಂದು ಸಂಗೀತರತ್ನ ಪಂಡಿತ ಮಲ್ಲಿಕಾರ್ಜುನ ಮನ್ಸೂರರು ಹೇಳುತ್ತಿದ್ದರು. ನಿಸಾರ್ ಅಹಮದ್‌ರ ವಿಷಯದಲ್ಲೂ ಇದು ಅಕ್ಷರಶಃ ನಿಜ.

'ಜ್ಞಾನಪೀಠ ಪ್ರಶಸ್ತಿ' ಪಡೆದವರ ಕೃತಿಗಳನ್ನು ತಿಳಿಯದವರು ಇದ್ದಾರೆ. ಆದರೆ 'ನಿತ್ಯೋತ್ಸವ'ದ ಕವಿಯನ್ನು ಅರಿಯದವರಿಲ್ಲ. ಹಸಿರು ಹೊತ್ತ ತಾಯಿಯ ವೈಭವದ ಕಥೆಯನ್ನು ಕೇಳಿ ಕನ್ನಡಿಗರೆಲ್ಲರೂ ಪುಳಕಗೊಂಡಿದ್ದಾರೆ. ಬರೆಯುವ ಕವಿಗಳೆಲ್ಲರಲ್ಲಿ ತಾವು ಬರೆದರೆ, 'ತಾಯಿ ನಿನಗೆ ನಿತ್ಯೋತ್ಸವ'ದಂಥ ಕವನವನ್ನು ಬರೆಯಬೇಕೆನ್ನುವ ಸಹಜ ಅನಿಸಿಕೆ ಇರುತ್ತದೆ. ಬರೆಯಲಾರದವರು, ತಮಗೆ ಬರೆಯಲು ಬರುತ್ತಿದ್ದರೆ ತಾವು 'ನಿತ್ಯೋತ್ಸವ'ದಂಥ ಗೀತವನ್ನೇ ಬರೆಯುತ್ತಿದ್ದರೆನ್ನುವ ಅಭಿಲಾಷೆಯನ್ನು ಹೊತ್ತಿರುತ್ತಾರೆ.

ನಿಸಾರ್ ಅಹಮದ್‌ರಲ್ಲಿ ಓಜಸ್ಸು ಇದೆ, ತೇಜಸ್ಸು ಇದೆ. ಅವರ ಮೇಲೆ ಸರಸ್ವತಿಯ ಅನುಗ್ರಹದ ವರ್ಚಸ್ಸು ಇದೆ. ಅವರು ನಾಡೋಜರು. ಅವರು ಮುಂದೆ ಮುಂದೆ ನಡೆದಂತೆ ಅವರಿಗೆ ಎಲ್ಲ ಬಾಗಿಲುಗಳೂ ತೆರೆಯುತ್ತವೆ. ಅವರಿಗೆ ಜೀವನದಲ್ಲಿ ಮುಂದೆ ನೋಡುವುದು ಇದೆಯಲ್ಲದೆ ಹಿಂದೆ ನೋಡುವುದು ಇಲ್ಲ. ಅವರಿಗೆ ವರ್ತಮಾನದಲ್ಲಿ ನಂಬುಗೆ ಇದೆ. ಸುವರ್ಣಯುಗ ನಿನ್ನೆ ಇದ್ದಿತೆನ್ನುವ ಭಾವನೆಯನ್ನು ಅವರು ಇರಿಸಿಕೊಂಡವರಲ್ಲ. ಸುವರ್ಣ ಯುಗವನ್ನು ಇಂದಿನ ಪೀಳಿಗೆ ಈಗ ಅಲ್ಲದಿದ್ದರೆ ನಾಳೆ ತರಬಲ್ಲದು ಎನ್ನುವ ವಿಶ್ವಾಸ ಅವರದು. ವರ್ತಮಾನ ಕಾಲವು ನಮ್ಮದಾಗಿರುವಂತೆ ಭೂತ ಕಾಲವು ನಮ್ಮದಲ್ಲ. ನಾವು ವರ್ತಮಾನ ಕಾಲದಲ್ಲಿ ಬದುಕಬಲ್ಲೆವು, ಭೂತ ಕಾಲದಲ್ಲಿ ಅಲ್ಲ. ವರ್ತಮಾನವನ್ನು ಚೆನ್ನಾಗಿ ಬದುಕುವವರು ಒಳ್ಳೆಯ ಭವಿಷತ್ತನ್ನು ಕಾಣುತ್ತಾರೆ. ನಿಸಾರ್ ಅಹಮದ್‌ರು ತಮ್ಮ ಬದುಕು ಹಾಗೂ ಬರೆವಣಿಗೆಯಿಂದ ಜ್ವಲಂತ ಆಶಾವಾದವನ್ನು ತಮ್ಮ ಓದುಗರಲ್ಲಿ ಮೂಡಿಸಿ ಜೀವನವನ್ನು, ಜನರನ್ನು ಹಾಗೂ ಜಗತ್ತನ್ನು ಪ್ರೀತಿಸಬೇಕೆನ್ನುವ ಉತ್ಸಾಹ ಆಸಕ್ತಿಗಳನ್ನು ಅವರಲ್ಲಿ ತುಂಬುತ್ತಾರೆ. ಅವರು ನಿತ್ಯೋತ್ಸಾಹವನ್ನು ನಿರಂತರವೂ ನಮ್ಮ ಮೇಲೆ ಧಾರೆ ಎರೆಯುತ್ತಲೇ ಹೋಗುತ್ತಾರೆ. ಶೇಕ್ಸ್‌ಪಿಯರ್ ಹೇಳುವಂತೆ, ಅವರು ಹೆಚ್ಚಿಗೆ ಕೊಟ್ಟಂತೆ ಅದು ಅವರಲ್ಲಿ ಇನ್ನೂ ಹೆಚ್ಚಿಗೆ ಬಂದೇ ಬರುತ್ತದೆ. ಯಾಕೆಂದರೆ, ಅವರೆಡೂ ಅವರಲ್ಲಿ ಅಪರಿಮಿತವಾಗಿವೆ.

ಮನುಷ್ಯ ಸ್ವಭಾವವೆಂಬ ಹಾದಿಯ ಎಡವುಗಲ್ಲುಗಳನ್ನೂ ಜಾರುಕುಳಿಗಳನ್ನೂ ತೊಡೆದು ಹಾಕಿ ಸದ್ವರ್ತನೆಯ ವಾಹನ ಸುಗಮವಾಗಿ ಸಂಚರಿಸುವಂತೆ ಉಪಕರಿಸುವ ನಯಗಾರ ಧಮ್ಮಾಸು ಸಂಸ್ಕೃತಿ.

(ಸಂಸ್ಕೃತಿ)



ಗೆಳೆಯ ಕವಿ ನಿಸಾರ್

ಡಾ. ಯು. ಆರ್. ಅನಂತಮೂರ್ತಿ

ಕೆ. ಎಸ್. ನಿಸಾರ್ ಅಹಮದ್ ಬರೆಯುತ್ತಿರುವ ಕಾಲದ ಇನ್ನೊಬ್ಬ ಲೇಖಕನಾಗಿ ಒಂದೆರಡು ಮಾತುಗಳನ್ನು ಕೇವಲ ಶಿಷ್ಟಾಚಾರಕ್ಕಾಗಿ ನಾನು ಬರೆಯುತ್ತಿಲ್ಲ. ನಾನು ನನಗೆ ಒಳಗಿನಿಂದ ಕಂಡುಕೊಂಡ ಮಾತುಗಳನ್ನು ಬರೆಯುತ್ತಿದ್ದೇನೆ. ಈ ನನ್ನ ಕಾಲದ ಮನೋಜ್ಞವಾದ ಕೆಲವು ಕವನಗಳಲ್ಲಿ ನಿಸಾರ್ ಬರೆದವು ಮುಖ್ಯವಾದ ಪದ್ಯಗಳು. ರಾಮನ್ ಸತ್ತ ಸುದ್ದಿ ಕೇಳಿ ಅವರು ಬರೆದದ್ದು, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂಬ ವ್ಯಾಕುಲದ ಅವರ ಕವನ, ಮುಸ್ಲಿಂ ಸಾಂಸ್ಕೃತಿಕ ಕೌಟುಂಬಿಕ ಪ್ರಜ್ಞೆಯಲ್ಲಿ ಅವರು ರಂಗೋಲಿಗೆ ಸ್ಪಂದಿಸಿದ ರೀತಿ, ಮಾಸ್ತಿ ಬಗ್ಗೆ ಅವರ ಕವನ—ಹೀಗೇ ಪಟ್ಟಿ ಮಾಡಿ ಆಯುವುದು ನನ್ನ ಉದ್ದೇಶವಲ್ಲ. ಇಂಥ ಪದ್ಯಗಳು ನನ್ನ ಅಂತರಂಗ ಕಲಕಿದ ಪದ್ಯಗಳೆಂದು ಉದಾಹರಿಸಲು ಮಾತ್ರ ನಾನು ಕೊಡುವ ಉದಾಹರಣೆಗಳು.

ನನ್ನ ಕಾಲದಲ್ಲಿ ಕಾವ್ಯದ ಬಿಗಿ ಕಳೆಯದಂತೆ ಅತ್ಯುತ್ತಮವಾದ ಗೀತೆಗಳನ್ನು ರಚಿಸಿದವರು ನಿಸಾರರು. ಎಷ್ಟು ಬಾರಿ ಕೇಳಿಸಿಕೊಂಡರೂ ಅವರ 'ನಿತ್ಯೋತ್ಸವ' ನನ್ನಲ್ಲಿ ಅಪಾರವಾದ ಹರ್ಷವನ್ನು ಉಂಟು ಮಾಡುತ್ತದೆ. ನನ್ನ ಸಮಕಾಲೀನರಲ್ಲಿ ಯಾರೂ ಇದಕ್ಕೆ ಸಾಟಿಯಾದ ಇನ್ನೊಂದು ಪದ್ಯ ಬರೆದಿಲ್ಲ.

ಮುಖ್ಯವಾಗಿ ಹೇಳಬೇಕಾದ್ದು ಇದು : ಅಡಿಗರ ಕಾವ್ಯದಿಂದ ನಾವೆಲ್ಲರೂ ಪ್ರಭಾವಿತರು. ಆದರೆ ನಿಸಾರರಷ್ಟು

ಅಡಿಗರ ಬಗೆಯ ಭಾಷಾ ಪ್ರಯೋಗದಲ್ಲಿ ನಿಸ್ಸೀಮರಾದವರು ಕಡಿಮೆ. ನವ್ಯದ ಒಂದು ಮಾದರಿ ಹೀಗೆ ಮುಂದುವರೆದದ್ದು ನಿಸಾರರಲ್ಲಿ ಮಾತ್ರ. ಯಾಕೆಂದರೆ ಕುವೆಂಪು, ಬಿ.ಎಂ.ಶ್ರೀ. ಮತ್ತು ನರಸಿಂಹಸ್ವಾಮಿಯವರನ್ನು ಒಳಗೊಳ್ಳುವಂತೆ ಅವರು ಅಡಿಗರಿಂದ ಕಲಿಯಬೇಕಾದ್ದನ್ನು ಕಲಿತು ಬೆಳೆದರು.

ಹಿಂದಿನ ಮಾತನ್ನು ಮುಂದುವರೆಸಿ ಇನ್ನೊಂದು ಮಾತು. ಬೇಂದ್ರೆ, ಕಂಬಾರ ದೇಸಿ ಕವಿಗಳು. ಇದಕ್ಕೆ ಭಿನ್ನವಾದ ಇನ್ನೊಂದು ಮಾದರಿ ನಿಸಾರರದು. ನಿಸಾರ್ ಅಪ್ಪಟ ಮಾರ್ಗಕವಿ—ಬಿ.ಎಂ.ಶ್ರೀ.ಯಂತೆ; ನರಸಿಂಹಸ್ವಾಮಿಯವರಂತೆ. ಇನ್ನೊಂದು ಮಾತು: ಕನ್ನಡ ಮಾತೃಭಾಷೆಯಲ್ಲದವರು—ಅಂದರೆ ತೆಲುಗು, ತಮಿಳು, ಉರ್ದು, ತುಳು, ಕೊಡವ ಇತ್ಯಾದಿ ಭಾಷೆಗಳನ್ನು ಮಾತಾಡುವವರು—ಕನ್ನಡದಲ್ಲಿ ಬರೆಯುವುದಾದರೆ, ಅತ್ಯಂತ ಮನೋಜ್ಞವಾಗಿ ಧ್ವನಿಪೂರ್ಣವಾಗಿ ಬರೆಯುವುದಾದರೆ ಅವರ ನುಡಿಗಟ್ಟು ಹೇಗಿರಬಹುದೆಂಬುದಕ್ಕೆ ನಮ್ಮ ಕಾಲದ ಅತ್ಯುತ್ತಮ ಮಾದರಿ ನಿಸಾರರದು.

ಗ್ರಾಮೀಣ ಲೋಕದಿಂದ ಬರುವ ಕನ್ನಡಿಗರಿಗೆ ಅವರಿಗೆ ವಿಶಿಷ್ಟವಾದ ನುಡಿಕಟ್ಟು ಇದೆ ಮಾತ್ರವಲ್ಲ ಮಾತಿನ ವಿಶಿಷ್ಟ ಲಯಗಳೂ ಇವೆ. ಆದರೆ ಆಧುನಿಕ ಕಾಲದಲ್ಲಿ ಬರೆಯುವ ನಗರವಾಸಿ ಕನ್ನಡಿಗರು ತಮ್ಮ ನುಡಿಕಟ್ಟನ್ನೂ ಲಯವನ್ನೂ ಹೇಗೆ ಸೃಷ್ಟಿಸಿಕೊಳ್ಳಬಹುದೆಂಬುದಕ್ಕೆ ನಿಸಾರರ ಬರವಣಿಗೆಯನ್ನು ಅಭ್ಯಾಸ ಮಾಡಬೇಕೆಂದು ನನಗನ್ನಿಸುತ್ತದೆ.

ಲಂಕೇಶ್, ನಿಸಾರ್, ರಾಮಚಂದ್ರಶರ್ಮ (ಎಲ್ಲರಿಗಿಂತ ಹಿರಿಯರು. ಆದರೆ ಗೆಳೆಯರು), ಸುಮತೀಂದ್ರ ನಾಡಿಗ್—ಒಟ್ಟಾಗಿ ಬರೆಯುತ್ತಿದ್ದ ಕಾಲ ನೆನಪಾಗುತ್ತದೆ. ನಾನು ಇವರೆಲ್ಲರಿಗೂ ಲೇಖಕನಾಗಿ ಸ್ಪಂದಿಸಿದ್ದೇನೆ. ಕಲಿಯಬೇಕಾದ್ದನ್ನು ಕಲಿತಿದ್ದೇನೆ. ನಮ್ಮ ನಡುವಿನ ಸಂಬಂಧಗಳಲ್ಲಿ ತೊಡಕುಗಳೂ ಇರುತ್ತಿದ್ದವು. ಆದರೆ ಯಾರಾದರೂ ಬರೆದದ್ದು ಚೆನ್ನಾಗಿದೆ ಎಂದು ಕಂಡರೆ ಅದು ನಾನೇ ಬರೆದದ್ದು ಎಂಬ ಸಂತೋಷವೂ ಆಗುತ್ತಿತ್ತು. ನಿಸಾರ್ ಅಹಮದರಿಗೆ ಹೀಗೆ ನಾನು ಇವತ್ತಿಗೂ ಸ್ಪಂದಿಸುತ್ತ ಉಳಿದಿದ್ದೇನೆ. ನಮ್ಮ ಕನ್ನಡ ಸಾರಸ್ವತ ಲೋಕವನ್ನು ಬೆಳಗಿದವರಲ್ಲಿ ನಿಸಾರರು ವಿಶಿಷ್ಟರು: ನನ್ನ ಹೆಮ್ಮೆಯ ಗೆಳೆಯರು.

ಬದುಕಿನ ಬೇರೆ ಬಾಬುಗಳಲ್ಲಿ ಹೇಗೋ ಹಾಗೆಯೇ ಸಾಹಿತ್ಯದಲ್ಲೂ ಸೃಜನಶೀಲ ಸಾಧಕನಿಗೆ ತನ್ನತೆ ಸ್ವಂತತೆಗಳು ಮಹೋನ್ನತಿಗೇರಿಸುವ ಮೆಟ್ಟಿಲು. ಹೆಬ್ಬಯಲಿನಂತಹ ಸಾರ್ವಜನಿಕ ವಸ್ತು, ವೈಯಕ್ತಿಕ ವಸತಿಯ ಖಚಿತ ಆಕಾರವನ್ನು ಪಡೆದು ಮಾನ್ಯವಾಗುವುದು ಲೇಖಕನ ವ್ಯಕ್ತಿ ವೈಶಿಷ್ಟ್ಯರೂಪದ ಕಾಣ್ಕೆಯ ಇಟ್ಟಿಗೆ ಗಾರೆಗಳಿಂದ. ಸಾಹಿತಿಯ ಸ್ವಧರ್ಮ ನಿಷ್ಠೆ ಸದ್ಗೃಹಸ್ಥೆಯಂತೆ: ಸಾಂಕರ್ಯದ ಸವತಿಯನ್ನು ಸರ್ವಥಾ ಸಹಿಸದು.

(ಸಾಹಿತಿಯ ತನ್ನತನ)



ಭಾರತೀಯ ಸಂಸ್ಕೃತಿಯ ಪ್ರತಿನಿಧಿ

ಎಂ. ವೀರಪ್ಪ ಮೊಯಿಲಿ

ಕನ್ನಡದ ಶ್ರೇಷ್ಠ ಜನಪ್ರಿಯ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಮತ್ತು ನನ್ನ ಸ್ನೇಹ ಮೂರು ದಶಕಗಳಷ್ಟು ಹಳೆಯದು. ಶ್ರೇಷ್ಠತೆ ಮತ್ತು ಜನಪ್ರಿಯತೆ ಕವಿಯೊಬ್ಬನಲ್ಲಿ ಮೇಳೈಸಿರುವುದು ಅಪರೂಪ. ಇಂಥ ಅಪರೂಪದ ಕವಿಗಳ ಸಾಲಿಗೆ ಸೇರಿದವರು ನಿಸಾರರು. ಪ್ರಾರಂಭ ಕಾಲದಿಂದ ಇಲ್ಲಿಯ ವರೆಗೂ ಈ ಎರಡು ಗುಣಗಳ ನಂಟನ್ನು ಹದಗೆಡದಂತೆ ಕಾಪಾಡಿಕೊಂಡು ಬಂದಿದ್ದಾರೆ. ಕವಿ ಯಾರೆಂದು ಗೊತ್ತಿಲ್ಲ ದಿದ್ದರೂ 'ಬೆಣ್ಣೆ ಕದ್ದ ನಮ್ಮ ಕೃಷ್ಣ', 'ಎಲ್ಲ ಮರೆತಿರುವಾಗ', 'ಜೋಗದ ಸಿರಿ ಬೆಳಕಿನಲ್ಲಿ', 'ಕನ್ನಡವೆಂದರೆ ಬರಿ ನುಡಿಯಲ್ಲ', 'ಕುರಿಗಳು, ಸಾರ್, ಕುರಿಗಳು'—ಮತ್ತಿತರ ಕವಿತೆಗಳು ಶಿಷ್ಟ ವರ್ಗದ ಮತ್ತು ಸಾಮಾನ್ಯ ಜನರ ಬಾಯಲ್ಲಿ ನಲಿದಾಡುತ್ತಿವೆ. ನಿಜವಾದ ಸಾಹಿತ್ಯದ ಗುರಿ ಇದೇ ಅಲ್ಲವೆ? ಇವೊತ್ತಿನ ಕಂಪ್ಯೂಟರ್ ಯುಗದಲ್ಲೂ ಕೂಡ ನಿಸಾರರ ಕವಿತೆಗಳನ್ನು ಜನ ಮೆಚ್ಚಿ ಓದುತ್ತಾರೆ, ಹಾಡುತ್ತಾರೆ ಎಂದರೆ ಇದು ಅವರ ಹೆಗ್ಗಳಿಕೆಗೆ ಸಾಕ್ಷಿ.

ನಿಸಾರ್ ಅಹಮದ್ ಅವರಿಗೆ, ತಾವು ಕರ್ನಾಟಕದಲ್ಲಿ ಹುಟ್ಟಿ ಕನ್ನಡದಲ್ಲಿ ಬರೆಯುತ್ತಿರುವ ಬಗ್ಗೆ ತುಂಬು ಹೆಮ್ಮೆ; ಜೊತೆಗೆ ಸುಯೋಗ, ಪುಣ್ಯ ಎಂಬ ಭಾವನೆಯಿದೆ. ಭಾರತೀಯತೆ ಇವರ ರಕ್ತದ ಕಣ ಕಣಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ವಾಹಿನಿಯಲ್ಲಿ ಅಲ್ಪಸಂಖ್ಯಾತರು ಬೆರೆಯಬೇಕು

ಎಂಬ ನೈಜ ಕಾಳಜಿಯಿದೆ. ಪ್ರಸ್ತುತ ಭಾರತದಲ್ಲಿ ದೇಶ, ಭಾಷೆ, ಜಾತಿಗಳ ಹಿನ್ನೆಲೆಯಲ್ಲಿ ಮತೀಯ ಗಲಭೆಗಳಾಗುವ ಸಂದರ್ಭದಲ್ಲಿ ಇಂಥ ಮನೋಭಾವದ ಅಗತ್ಯವಿದೆ.

ನನಗೆ ತಿಳಿದ ಮಟ್ಟಿಗೆ ನಿಸಾರರು ಐದು ದಶಕಗಳಿಗೂ ಮೀರಿ ಕವನ ರಚನೆಯಲ್ಲಿ ತೊಡಗಿದ್ದಾರೆ. ಕಾವ್ಯಾಭಿವ್ಯಕ್ತಿ ಇವರ ಪ್ರಧಾನ ಕಾಳಜಿಯಾದರೂ ವೈಚಾರಿಕ ಬರಹಗಳು, ಸಾಹಿತ್ಯ ವಿಮರ್ಶೆ ಮತ್ತು ಅನುವಾದ ಕ್ಷೇತ್ರಗಳಲ್ಲಿಯೂ ಕೂಡ ಆಸಕ್ತಿಯಿದೆ. ಅಲ್ಲೆಲ್ಲ ಮೌಲಿಕವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಇವರ ಬರವಣಿಗೆಗೆ ಇವರದೇ ಆದ ಸ್ವಂತದ ಛಾಪು ಇದೆ. ವಸ್ತು ವೈವಿಧ್ಯವನ್ನು ಮತ್ತು ಬಳಸುವ ರೂಪಕ, ಸಂಕೇತ, ಉಪಮೆ, ಪ್ರತಿಮೆಗಳಲ್ಲಿ ಸ್ವವಿಶಿಷ್ಟತೆಯನ್ನು, ಅಚ್ಚಳಿಯದ ಅತಿಶಯವಾದ ಅನನ್ಯತೆಯನ್ನು ಇವರ ರಚನೆಗಳಲ್ಲಿ ಕಾಣಬಹುದು. ಇವರ ವೈಚಾರಿಕ ಸ್ವೋಪಜ್ಞತೆ, ಧರ್ಮ ನಿರಪೇಕ್ಷತೆ ಕನ್ನಡ ಸಾಹಿತ್ಯಕ್ಕೆ ಬೆಲೆ ಬಾಳುವ ಬಳುವಳಿಯಾಗಿವೆ.

ನಿಸಾರರು ಭಿನ್ನಸಂಸ್ಕೃತಿ ಮತ್ತು ಅನ್ಯ ಪರಂಪರೆಯನ್ನು ಅರಗಿಸಿಕೊಂಡು ತಾಯ್ನುಡಿಯಲ್ಲದ, ಪರಿಸರದ ಭಾಷೆಯಲ್ಲಿ ಸಾಹಿತ್ಯ ಸಾಧನೆಯಲ್ಲಿ ತೊಡಗುವುದು ಎಂದರೆ, ಅನೇಕ ಸವಾಲುಗಳನ್ನು ಎದುರಿಸಬೇಕಾದ ಸಂದರ್ಭವನ್ನು ಆಹ್ವಾನಿಸಿಕೊಂಡಂತೆಯೇ. ಇಂಥ ಸವಾಲುಗಳನ್ನು ಅವರು ನಿಭಾಯಿಸಿದ ಬಗ್ಗೆ, ತಮ್ಮ ಶ್ರದ್ಧೆ ನಂಬಿಕೆಗಳಿಗೆ ಧಕ್ಕೆ ಬರದ ಹಾಗೆ ಎಚ್ಚರ ವಹಿಸಿದ ಬಗ್ಗೆ ನನ್ನಲ್ಲಿ ಕುತೂಹಲ ಆಸಕ್ತಿಗಳು ಮೂಡಿವೆ. ಈ ನಿಟ್ಟಿನಲ್ಲಿ ನಿಸಾರ್ ಅವರು ಮಾಡಿರುವ ಸಮನ್ವಯರೂಪದ ಸಾಧನೆ ಪ್ರಜಾತಂತ್ರವನ್ನು ಒಪ್ಪಿಕೊಂಡಿರುವ ನನಗೆ, ನನ್ನಂಥ ಲೆಕ್ಕವಿರದಷ್ಟು ನಾಗರಿಕರಿಗೆ ಹೆಮ್ಮೆ ಬರಿಸಿದೆ.

ಇಂದಿನ ಕವಿಗಳಲ್ಲಿ ಕೆಲವರು ತಮ್ಮ ಹಿಂದಿನ ತಲೆಮಾರಿನ ಕವಿಗಳನ್ನು ಹಾಗೂ ಸಮಾಜದ ಗಣ್ಯ ವಯೋವೃದ್ಧರನ್ನು ವ್ಯಂಗ್ಯ ವಿಡಂಬನೆಗಳಿಂದ ಕಾಣುವುದೇ ಪ್ರಗತಿಪರವಾದ ಮತ್ತು ಅತ್ಯಾಧುನಿಕವಾದ ದೃಷ್ಟಿ ಎಂದು ಬೀಗುತ್ತಿರುವಾಗ, ನಿಸಾರರು ಈ ಹಿರಿಯರಿಂದ ಕಲಿಯಬೇಕಾದ ಉತ್ತಮಾಂಶಗಳನ್ನೆಲ್ಲ ಗ್ರಹಿಸಿಕೊಂಡು ಮನನ ಮಾಡಿ ತಮ್ಮ ಬದುಕಿಗೆ ಯಾವುದು ಸಂಗತವೋ ಅವುಗಳನ್ನು ಬಳಸಿಕೊಳ್ಳಲು ಹಿಂಜರಿದಿಲ್ಲ. ಈ ಕಾರಣದಿಂದ ಅವರ ಜೀವನದ ಕಾಣ್ಕೆ ವಿಶಾಲವಾಗಿದೆ; ನೋಟ ಸಮಗ್ರವಾಗಿದೆ; ಅವರ ಭಾವಕೋಶ ಶ್ರೀಮಂತವಾಗಿದೆ. ವ್ಯಂಗ್ಯ ವಿಡಂಬನೆಗಳನ್ನು ನಿಸಾರರು ಬಳಸುವುದಿಲ್ಲ ಎಂದಲ್ಲ, ಬಳಸಿದರೂ ಅವು ಸಾಮಾಜಿಕ ಪ್ರತಿಭಟನೆಯ, ನ್ಯೂನತೆಗಳನ್ನು ಗುಣಪಡಿಸುವ ಚಿಕಿತ್ಸಕ ಬುದ್ಧಿಯಿಂದ ಪ್ರೇರಿತವಾಗಿವೆಯೇ ಹೊರತು ಸಿನಿಕತನದ ಪ್ರತೀಕವಾಗಿಲ್ಲ. ಪರಂಪರೆಯ ಬಗ್ಗೆ ಗೌರವವಿದ್ದೂ ಹೊಸ ಹೊಸದನ್ನು ಪ್ರಯೋಗಶೀಲವಾಗಿ ಸಾಧಿಸಬೇಕೆನ್ನುವ ನಿರಂತರ ಹಂಬಲ ಇವರ ಬರವಣಿಗೆಯ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿದೆ; ವ್ಯಾಪಕತೆಗೆ ಮುಖ್ಯ ಕಾರಣವಾಗಿದೆ.

ನಾಡು ನುಡಿಗಳ ಅತಿಶಯವಾದ ಅಕ್ಕರೆ, ಗೌರವಗಳು 'ನಿತ್ಯೋತ್ಸವ'ದಂಥ ಅಪೂರ್ವ ಭಾವಗೀತೆಯನ್ನು ಬರೆಸಿತು. ವಿಚಾರ ದೃಷ್ಟಿ ಮತ್ತು ಭಾವದ ಆರ್ದ್ರತೆಗಳಿಂದ ಮೇಳೈಕೆಗೊಂಡ ಇಂಥ ರಚನೆಗಳು ಒಂದು ಸಮಸ್ಥಿತಿಯನ್ನುಂಟುಮಾಡಿದವು. ಯಾವ

ಪಂಥಕ್ಕೂ ಬದ್ಧರಾಗದೆ, ಕಾವ್ಯ ಜೀವನದುದ್ದಕ್ಕೂ ಆಯ್ಕೆಯ ವಿಷಯದಲ್ಲಿ ತೋರಿರುವ ಧೈರ್ಯ, ಪ್ರಾಮಾಣಿಕತೆ, ಸ್ವಾತಂತ್ರ್ಯ ಶ್ಲಾಘನೀಯವಾದದ್ದು; ಕಿರಿಯ ಕವಿಗಳಿಗೆ ಪರಿಪಾಲನಯೋಗ್ಯ ಎನ್ನಿಸುವಂಥದ್ದು.

ಭಾರತದ ಬಗ್ಗೆ ಹಾಡುವಂತೆ ಕವಿ ಕನ್ನಡ ನಾಡು-ನುಡಿಗಳ ಬಗ್ಗೆ ಸಹ ತುಂಬು ಅಭಿಮಾನದಿಂದ ಹಾಡುತ್ತಾರೆ. ಕನ್ನಡಾಂಬೆಗೆ ನಿತ್ಯ ಉತ್ಸವಗಳನ್ನೇ ಮಾಡುತ್ತಾರೆ. ಕರ್ನಾಟಕದ ಮಹಿಮೆ, ಮೇಲ್ಮೆ ಮತ್ತು ಆಶಯ 'ನಿತ್ಯೋತ್ಸವ' ಕವನದಲ್ಲಿ ಹರಳು ಗಟ್ಟಿದೆ.

ಇವರದು ಮಧ್ಯಮ ವರ್ಗದ ನಗರ ಕೇಂದ್ರಿತ ಬದುಕಾದ್ದರಿಂದ ಈ ವರ್ಗದ ನೋವು, ನಲಿವು, ಆಸೆ, ನಿರಾಸೆ ಇವರ ಕಾವ್ಯವನ್ನು ಪ್ರವೇಶಿಸಿವೆ. ಇವರ ಹಾಗೆ ನಗರದ ಮಧ್ಯಮ ವರ್ಗದ ಬದುಕನ್ನು ನಿಚ್ಚಳವಾಗಿ ಮತ್ತು ಹೃದಯಂಗಮವಾಗಿ ಕಟ್ಟಿಕೊಟ್ಟವರು ಕನ್ನಡ ಕಾವ್ಯದ ಸಂದರ್ಭದಲ್ಲಿ ವಿರಳ.

ನಿಸಾರ್ ಅಹಮದ್ ಅವರ ನಿಜವಾದ ಕಾವ್ಯ ಸಿದ್ಧಿಯಿರುವುದು ಭಾಷಾ ಪ್ರಯೋಗ ದಲ್ಲಿ; ಭಾಷೆಯ ಬಗೆಗಿನ ಅಪಾರವಾದ ಕಾಳಜಿ ಮತ್ತು ಶ್ರದ್ಧಾಪೂರ್ಣ ಗೌರವಗಳ ಅಭಿವ್ಯಕ್ತಿಯಲ್ಲಿ. ಕನ್ನಡ ಭಾಷಾ ಸಂಪತ್ತನ್ನು ವರ್ಧಿಸಬೇಕೆಂಬ ತುಡಿತದಿಂದ ಉರ್ದು, ಅರಬ್ಬೀ, ಫಾರ್ಸಿ, ಇಂಗ್ಲಿಷ್ ಪದಗಳನ್ನು ಬಳಸಿ ತಮ್ಮದೇ ಆದ ಹೆಚ್ಚುಗಾರಿಕೆಯನ್ನು ಮೆರೆದಿದ್ದಾರೆ.

ವಿಷಯ ಎಷ್ಟೇ ಗಹನವಾದದ್ದಾಗಲಿ, ಎಷ್ಟೇ ಸಂಕೇತಪ್ರಾಯದ್ದಾಗಿರಲಿ, ಹೆಚ್ಚು ಜನರಿಗೆ ತಿಳಿಯುವ ಮಾತಿನಲ್ಲಿ ವ್ಯಕ್ತಗೊಳಿಸಬೇಕೆಂಬ ಹಿರಿಯಾಸೆ ಅವರ ಕಾವ್ಯದುದ್ದಕ್ಕೂ ತೋರಿಬಂದಿರುವ ಮುಖ್ಯ ಅಂಶ. ಇದನ್ನು ಇವರು ಸಾಧಿಸಿರುವ ಹಾಗೆ ಇವರ ಜೊತೆಯಲ್ಲಿ ಬರೆಯುತ್ತಿರುವ ಅನೇಕರಿಗೆ ಸಾಧ್ಯವಾಗಿಲ್ಲ ಎಂದರೆ ಅತ್ಯುಕ್ತಿಯಲ್ಲ.

ವ್ಯಕ್ತಿಯಾಗಿ ನಾನು ಕಂಡಂತೆ ನಿಸಾರರು ಸರಳ, ಸಜ್ಜನಿಕೆಯ ಹಾಗೂ ಮಾನವೀಯ ಮೌಲ್ಯಗಳನ್ನು ಹೊಂದಿರುವ ವ್ಯಕ್ತಿ. ಬದುಕಿನ ಚೆಲುವು, ಸಂತೋಷಗಳಲ್ಲಿ ನಿಸಾರರಿಗೆ ಗಾಢವಾದ ಆಸಕ್ತಿ ಇದೆ. ಈ ಗುಣ ಅವರ ವ್ಯಕ್ತಿತ್ವದ ಮೂಲ ಧಾತುವಾಗಿರುವುದರಿಂದ ಅವರ ಕವನಗಳಲ್ಲೂ ಕೂಡ ಈ ಗುಣ ರೂಪಿಸಿರುವ ಮೌಲ್ಯವನ್ನು ಗುರುತಿಸಬಹುದು. ನವೋದಯ, ನವ್ಯ—ಈ ಎರಡೂ ಮಾರ್ಗಗಳಲ್ಲಿ ಸವ್ಯಸಾಚಿಯಂತೆ ಇವರು ಯಶಸ್ವಿ ಯಾಗಿ ಕೆಲಸವನ್ನು ನಿರ್ವಹಿಸಿದ್ದಾರೆ.

ಒಟ್ಟಾರೆ ಹೇಳುವುದಾದರೆ, ನಿಸಾರರು ಸಮಾಜದ ವ್ಯಕ್ತಿಯಾಗಿ, ಸಾಂಸ್ಕೃತಿಕ ವಕ್ತಾರರಾಗಿ, ಭಾರತೀಯ ಸಂಸ್ಕೃತಿಯ ಸಮರ್ಥ ಪ್ರತಿನಿಧಿಯಾಗಿ ನಮ್ಮೆಲ್ಲರ ಪ್ರೀತಿ ಗೌರವ ಗಳಿಗೆ ಪಾತ್ರರಾಗಿದ್ದಾರೆ.



ನೇಹ ಜೀವಿ ನಿಸಾರ್

♦ *ಟಿ. ಮಹಾಬಲೇಶ್ವರ ಭಟ್ಟ*

ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯದ ಬೆಳವಣಿಗೆಯ ಒಂದು ಪರ್ವಕಾಲ. ಈ ಕಾಲದಲ್ಲಿ ಕನ್ನಡ ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಸಂಶೋಧನೆ ಸಾಕಷ್ಟು ಬೆಳವಣಿಗೆಯನ್ನು ಕಂಡಿದೆ. ಬರೆಯುವವರ ಸಂಖ್ಯೆ ಕೂಡ ವಿಪುಲಗೊಂಡಿದೆ. ಗದ್ಯ ಸಾಹಿತ್ಯಕ್ಕೆ ವಿಚಾರಪರ ಲೇಖಕರು ಎಷ್ಟು ಮುಖ್ಯವೋ, ಕಾವ್ಯಕ್ಕೆ ಭಾವ ಶ್ರೀಮಂತ ಕವಿ ಕೂಡ ಅಷ್ಟೇ ಮುಖ್ಯವಾಗುತ್ತಾನೆ. ಕುವೆಂಪು, ಬೇಂದ್ರೆ, ಪು.ತಿ.ನ., ಕೆ. ಎಸ್. ನರಸಿಂಹಸ್ವಾಮಿ, ಚೆನ್ನವೀರ ಕಣವಿ, ಶಿವರುದ್ರಪ್ಪ ಮುಂತಾದ ಕವಿಗಳ ಮೊದಲ ಪಂಕ್ತಿಯಲ್ಲಿ ನಿತ್ಯೋತ್ಸವ ಹಾಡಿದ ಕವಿ, ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರು ನಿಸ್ಸಂದೇಹವಾಗಿ ಸೇರುತ್ತಾರೆ.

ನನ್ನ ಹಾಗೂ ಪ್ರೊ. ಕೆ. ಎಸ್. ನಿಸಾರ್ ಅಹಮದ್ ರವರ ನಿರ್ಮಲ ಸ್ನೇಹ, ಆತ್ಮೀಯ ಭಾವ ಗಟ್ಟಿಯಾಗಿ ಅಂಟಿಕೊಂಡು, ಬಿಡಿಸಲಾರದ ಬಂಧವಾಗಿ ಭದ್ರವಾಗಿದೆ. ಈ ಗಾಢ ಸ್ನೇಹ ಸಂಬಂಧದಿಂದ ನಮ್ಮಿಬ್ಬರ ಪರಿಚಯ ಯಾವಾಗ ಪ್ರಾರಂಭವಾಯಿತು ಎನ್ನುವುದೇ ಮರೆತು ಹೋಗಿದೆ. ಬಹುಶಃ ಅವರು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಅಧ್ಯಾಪಕ ರಾಗಿದ್ದ ಕಾಲದಲ್ಲಿ, ಅವರ ವಸತಿಯಾದ ಮೀನಾಕ್ಷಿ ಭವನದಲ್ಲಿ ಆದಂತೆ ನೆನಪು. ನನ್ನ ಅವರ ಪತ್ರ ವ್ಯವಹಾರ ಒಂದೆರಡು ಪುಟಗಳಲ್ಲಿ ಮುಗಿಯುವ ಹಾಗಿರಲಿಲ್ಲ. ಅವರ ಪತ್ರಗಳ ಕೊನೆಯಲ್ಲಿ ಒಂದೆರಡು ಪದ್ಯಗಳ ತುಣುಕುಗಳಿರುತ್ತಿದ್ದವು.

ಒಂದು ದಿನ ನಾನು ಶಿವಮೊಗ್ಗೆಯ ಅಂದಿನ ಪ್ರಸಿದ್ಧ ಗೋಪಿ ಹೋಟೆಲಿಗೆ ಹೋದಾಗ ನಿಸಾರ್ ಅಹಮದ್ ತಮ್ಮ ಕಾಲೇಜಿನ ಸಹಪಾಠಿಯೊಂದಿಗೆ ಉಪಾಹಾರಕ್ಕೆ ಕುಳಿತಿದ್ದರು. ನನ್ನ ನೋಡಿದೊಡನೆ, 'ಇಲ್ಲೇ ಬನ್ನಿ, ಸಾಗರದಿಂದ ಯಾವಾಗ ಬಂದಿರಿ?' ಎಂದು ಕೇಳಿ ಅವರ ಸಹಪಾಠಿಗೆ ನನ್ನ ಪರಿಚಯವನ್ನು ಮಾಡಿಸಿದರು. ಅವರೊಡನೆ ನನ್ನ ಉಪಾಹಾರವೂ ಮುಗಿಯಿತು. ಹಣ ಕೊಡಲು ಕಿಸೆಗೆ ಕೈ ಹಾಕಿದಾಗ 'ಎಲ್ಲಾದರೂ ಉಂಟೆ! ನೀವು ನಮ್ಮೂರಿಗೆ ಬಂದಿದ್ದೀರಿ. ಈಗ ಸದ್ಯಕ್ಕೆ ಶಿವಮೊಗ್ಗೆಯೇ ನನ್ನ ಊರಾಗಿಬಿಟ್ಟಿದೆ. ಇನ್ನೊಮ್ಮೆ ನೀವು ಊಟ ಕೊಡಿಸುವಿರಂತೆ' ಎಂದರು. ಅಲ್ಲಿಂದ ಹೊರಟು ಮೀನಾಕ್ಷಿ ಭವನದ ಅವರ ಕೊಠಡಿಯ ತನಕ ನಡೆದುಕೊಂಡೇ ಬಂದೆವು. ಹಾದಿಯಲ್ಲಿ ಸಾಕಷ್ಟು ಮನಸ್ಸು ತುಂಬುವಷ್ಟು ಮಾತನಾಡಿದೆವು. ವಿಷಯ ಸಾಹಿತ್ಯವನ್ನು ಕುರಿತದ್ದು ಎಂದು ಬೇರೆಯಾಗಿ ಹೇಳಬೇಕಾದದ್ದಿಲ್ಲ.

ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರಿಗೆ ಈಗ ಎಪ್ಪತ್ತೊಂದು ವರ್ಷ ನಡೆಯುತ್ತಿದೆ. ಇದರಲ್ಲಿ ಐವತ್ತು ವರ್ಷಗಳಷ್ಟು ಕಾಲ ಕಾವ್ಯ ಕಾಸಾರದಲ್ಲಿ ಈಸಾಡಿದ್ದಾರೆ. ಕನ್ನಡ ಕಾವ್ಯ ಪ್ರಪಂಚದಲ್ಲಿ ನಿಸಾರ್ ಅಹಮದ್ ಅತ್ಯಂತ ಜನ ಮೆಚ್ಚುಗೆಯ ಕವಿ. ಅವರ ಕಾವ್ಯ, ಸಾಹಿತ್ಯಪ್ರಿಯರ ಹೃದಯಕ್ಕೆ ಲಗ್ಗೆ ಇಟ್ಟಿದೆ. ಕಾಲೇಜಿನ ವಿದ್ಯಾರ್ಥಿಗಳು ರಸ್ತೆಯಲ್ಲಿ ಹೋಗುವಾಗ 'ಕುರಿಗಳು, ಸಾರ್, ಕುರಿಗಳು' ಎಂದು ಒಂದೆರಡು ಸಾಲುಗಳನ್ನು ಹೇಳಿ ರಸ್ತೆಯ ಜನರನ್ನು ಅಣಕಿಸುವುದನ್ನು ನಾನು ಕೆಲವೊಮ್ಮೆ ಕಂಡು ಮುಗುಳು ನಕ್ಕಿದ್ದೂ ಉಂಟು!:

'ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು,
ಮಾತು, ಮಾತು, ಮಾತು, ಮಾತು,
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.'

ವಿದ್ಯಾರ್ಥಿಗಳ ಗುಂಪು ಹಾದು ಹೋಗುವಾಗ ರಾಜಕೀಯ ವ್ಯಕ್ತಿಗಳು ಹಿಂದಿರುಗಿ ವಿದ್ಯಾರ್ಥಿಗಳ ಕಡೆಗೆ ಕೆಂಗಣ್ಣಿನಿಂದ ನೋಡುವಾಗ, 'ಕುರಿಗಳು, ಸಾರ್, ಕುರಿಗಳು' ಎಂಬ ಸಾಲುಗಳನ್ನು ಪುನಃ ಹೇಳಿ ಮುಂದೆ ಸಾಗಿದ್ದನ್ನು ನೋಡಿ ಸಂತೋಷಪಟ್ಟಿದ್ದೇನೆ. ಮಾನವ ಸಂಬಂಧಗಳಲ್ಲಿಯೂ ಗುಣ ಗೌರವದ ಆಯ್ಕೆಯನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಲ್ಲಿ ನಾನು ಅದೃಷ್ಟವಂತ. ಈ ತನಕ ನನ್ನ ಆಯ್ಕೆ ತಪ್ಪಾಗಿಲ್ಲ. ನನ್ನ ಆತ್ಮೀಯರಾಗಿದ್ದ ಅ. ನ. ಕೃಷ್ಣರಾಯರ ಪರಿಚಯ ಯಾವ ಶುಭ ಗಳಿಗೆಯಲ್ಲಿ ನನಗಾಯಿತೋ, ಅನಂತರ ಸಾಲು ಸಾಲಾಗಿ ಹಿರಿಯರ, ಕಿರಿಯರ, ಸಾಹಿತಿಗಳ ಸಂಗ ನನಗಾಯಿತು. ಅದರಲ್ಲಿ ಕೆ. ಎಸ್. ನಿಸಾರ್ ಅಹಮದ್‌ರವರು ಪ್ರಮುಖರಾಗುತ್ತಾರೆ.

ಒಮ್ಮೆ ಮಿತ್ರ ಕೆ. ವಿ. ಸುಬ್ಬಣ್ಣ ಅವರು ತಮ್ಮ 'ಅಕ್ಷರ ಪ್ರಕಾಶನ'ದಲ್ಲಿ ಪ್ರಕಟವಾದ ನಿಸಾರ್ ಅಹಮದ್‌ರವರ 'ನಾನೆಂಬ ಪರಕೀಯ' ಕವನ ಸಂಕಲನವನ್ನು ನನಗೆ ಕಳಿಸಿ ಕೊಟ್ಟಿದ್ದರು. ಅದು ನನ್ನ ಮೇಜಿನ ಮೇಲೆ ಇತ್ತು. ಇದೇ ಸಂದರ್ಭದಲ್ಲಿ ಜೋಗಕ್ಕೆ ಬಂದಿದ್ದ ಹಿರಿಯ ಕವಿ ಪು.ತಿ.ನ. ಹಾಗೂ ನಿಟ್ಟೂರು ಶ್ರೀನಿವಾಸರಾಯರು ನನ್ನ ಹಳ್ಳಿ ಮನೆ

ಬೇದೂರಿಗೆ ಬಂದರು. ಬೆಳಗಿನಿಂದ ಸಂಜೆಯ ತನಕ ಇಬ್ಬರೂ ನನ್ನಲ್ಲಿಯೇ ಉಳಿದರು. ಮೇಜಿನ ಮೇಲಿದ್ದ 'ನಾನೆಂಬ ಪರಕೀಯ' ಪುಸ್ತಕದ ಮೇಲೆ ಕಣ್ಣು ಹಾಯಿಸಿದ ಪು.ತಿ.ನ. 'ಈತ ತುಂಬಾ ಪ್ರತಿಭಾಸ್ವಿತ ಕವಿ. ಉತ್ತಮ ಕವಿಯಾಗುವ ಎಲ್ಲಾ ಲಕ್ಷಣಗಳನ್ನೂ ಒಂದೆರಡು ಕವನ ಸಂಕಲನದಲ್ಲಿಯೇ ದೃಢಪಡಿಸಿದ್ದಾರೆ. ಭಾಷೆ, ಭಾವ ಬಹಳ ಮುಖ್ಯವಾಗಿ ಕವಿಗೆ ಇರಬೇಕಾದ ಗುಣ. ಅದರ ಜೊತೆಗೆ ವಸ್ತು, ಹೇಳುವ ವಿಧಾನ ಕೂಡ ಜೊತೆಗಿರ ಬೇಕಾಗುತ್ತದೆ. ಅದೆಲ್ಲವೂ ನಿಸಾರ್ ಅಹಮದ್‌ರವರಲ್ಲಿ ಇದೆ' ಎಂದು ಹೃದಯ ತುಂಬಿ ಹೇಳಿದಾಗ ನನಗೆ ಮನಸ್ಸು ತುಂಬಿತು. 'ನಾನೂ ಕೂಡ ಇವರನ್ನು ಮೆಚ್ಚಿಕೊಂಡಿದ್ದೇನೆ. ನಿಸಾರ್ ನನ್ನ ಆತ್ಮೀಯರೂ ಕೂಡ' ಎಂದೆ. ಇದೇ ಸಂದರ್ಭದಲ್ಲಿ ನಿಟ್ಟೂರರವರು ಕೂಡ ನಿಸಾರ್ ಅಹಮದ್‌ರವರ ಕಾವ್ಯವನ್ನು ಕುರಿತು ಒಂದೆರಡು ಒಳ್ಳೆಯ ಮಾತನ್ನು ಆಡಿದರು. ಒಂದೂವರೆ–ಎರಡು ದಶಕಗಳಷ್ಟು ಮುಂಚೆಯಷ್ಟೇ ಕಾವ್ಯ ಕ್ಷೇತ್ರಕ್ಕೆ ಪ್ರವೇಶ ಮಾಡಿದವರು ಇಷ್ಟು ಬೇಗ ಹಿರಿಯರಿಂದ ಪ್ರಶಂಸೆಗೆ ಅರ್ಹರಾದರಲ್ಲ ಎಂಬ ಮೆಚ್ಚುಗೆ ನನ್ನನ್ನು ಸಂತೃಪ್ತಿಗೊಳಿಸಿತು. ಈ ಕವನ ಸಂಕಲನದಲ್ಲಿರುವ 'ರಾಮನ್ ಸತ್ತ ಸುದ್ದಿ'. ನೊಬೆಲ್ ಪ್ರಶಸ್ತಿ ಪಡೆದ ಹಿರಿಯ ವಿಜ್ಞಾನಿ ಡಾ. ಸಿ. ವಿ. ರಾಮನ್ ಅವರು ತೀರಿಕೊಂಡಾಗ ಅವರನ್ನು ಕುರಿತು ಬರೆದ ಸಾಂದರ್ಭಿಕ ಪದ್ಯ:

ಅದರ ಪ್ರಾರಂಭ ಹೀಗಿದೆ:

> **'ರಾಮನ್ ಸತ್ತ ಸುದ್ದಿ ಓದಿದ ಬೆಳಿಗ್ಗೆ ಶಿವಮೊಗ್ಗೆಗೆ**
> **ದರಿದ್ರ ಥಂಡಿ. ಅಸ್ತಿತ್ವದ ಅಸ್ಪಷ್ಟ ಜಿಜ್ಞಾಸೆ, ಗುರುತಿಸಲಾಗದ**
> **ಕಸಿವಿಸಿ, ಮುಜುಗರ ತಾಳದೆ ವಾಕಿಂಗ್ ಹೊರಟೆ. ಬೀದಿ-**
> **ಗದೇ ಮಾಮೂಲು ಭಂಗಿ, ಯಾರೂ ದುಃಖಿಸುತ್ತಿಲ್ಲವೆನ್ನಿಸಿ**
> **ದುಃಖವಾಯಿತು.'**

ಮೇಲಿನ ಸಾಲುಗಳ ಪರಿಣಾಮಶೀಲತೆಗೆ ಮುಖ್ಯ ಕಾರಣ ಬಿಡಿ ಬಿಡಿಯಾಗಿ ಬಿಡಿಸಿರುವ ನೇರ ಸರಳ ಮಾತುಗಳು, ಜಿನುಗುವ ದುಃಖ, ಕಾವ್ಯ ಪ್ರಯೋಗದ ನೆಲೆಯಲ್ಲೇ ಕವಿ ತಾನು ಕಂಡುಕೊಂಡ ಸಾಕ್ಷಾತ್ಕಾರ. ಈ ಮಾದರಿಯ ಕವನಗಳನ್ನು ಸಾಕಷ್ಟು ಬರೆದಿರುವ ಕೆ. ಎಸ್. ನಿಸಾರ್ ಅಹಮದ್‌ರವರು ಕಾವ್ಯ ದರ್ಶನವನ್ನು ಸ್ಪಷ್ಟಪಡಿಸುತ್ತಾರೆ. ನಿಸಾರ್ ರವರು ಜನರೊಡನೆ ಸ್ಪಂದಿಸುವ ಗುಣವನ್ನು ಬೆಳೆಸಿಕೊಂಡಿದ್ದಾರೆ. ಹಾಗಾಗಿ ಅವರ ಸಾಹಿತ್ಯ ವನ್ನು ಕುರಿತು ಚರ್ಚಿಸುವಾಗ ಅವರು ನಮ್ಮ ಮುಂದೆ ಕುಳಿತಿದ್ದರೂ ನಿಸ್ಸಂಕೋಚವಾಗಿ ಮುಕ್ತವಾಗಿ ಚರ್ಚಿಸಬಹುದಾಗಿದೆ. ಅವರ ಕಾವ್ಯದ ಬಗೆಗೆ ಇಂತಹ ಚರ್ಚೆಗಳು, ಸೆಮಿನಾರುಗಳು ಆಗಾಗ, ಅಲ್ಲಲ್ಲಿ ನಡೆದಿವೆ. ಕಾವ್ಯದ ಬಗ್ಗೆ ಸಮಷ್ಟಿದೃಷ್ಟಿಯಿಂದ ಚರ್ಚೆ ನಡೆಯುವಾಗ ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಕೆ. ಎಸ್. ನಿಸಾರ್ ಅಹಮದ್‌ರ ಕಾವ್ಯ, ಕಳೆದ ಶತಮಾನದ ಎಲ್ಲ ಕಾವ್ಯ ಘಟ್ಟಗಳಿಗೂ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸಿದೆ ಎಂಬ ಸಂಗತಿ ಗಮನೀಯ ಎನ್ನಿಸುತ್ತದೆ.

ನಿಸಾರ್‌ರವರ 'ವೈಜಯಂತಿ' ಎನ್ನುವ ಕವಿತೆ ಸಾಮಾಜಿಕವಾದ ಜ್ವಲಂತ ಸಮಸ್ಯೆಯ ಜಟಿಲತೆಯನ್ನು ಮಾರ್ಮಿಕವಾಗಿ ಕಥಾನಕ ವಿಧಾನದ ಮೂಲಕ ಎಷ್ಟೊಂದು ಸುವಿದಿತವಾಗಿ,

ಪರಿಣಾಮಕಾರಿಯಾಗಿ ಹೇಳಲು ಸಾಧ್ಯ ಎಂಬುದನ್ನು ತೋರಿಸುತ್ತದೆ:

'ಹತ್ತು ಕಡೆ ಅಗೆದರೆ ಗೋರಿ;
ಒಂದೆಡೆ ತೋಡುತ್ತಾ ಹೋದರೆ ಬಾವಿ.
ಕಮಿಟ್‌ಮೆಂಟ್ ಇಲ್ಲದವನ ಬರಹ,
ಕಲಗಚ್ಚಿಗೆ ಒಗ್ಗರಣೆ ಹಾಕಿದ ತರಹ.
ಕೆಂಗೇರಿಯಿಂದ ಹಂಗೇರಿಯ ತನಕ,
ಅಂಗೋಲದಿಂದ ಬಂಗಾಲದ ತನಕ ಹಣ ಹದ್ದಿನ ಮೆರೆತ,
ಅದರಡಿಯಲಿ ಅರೆ ಬಟ್ಟೆ, ಬರಿ ಹೊಟ್ಟೆಯ ಮೊರೆತ.
—ಇದಷ್ಟೇ ವಾಸ್ತವಿಕತೆ
ಉಳಿದದ್ದೆಲ್ಲ ಅಡಗೂಲಜ್ಜಿಯ ಕತೆ.'

ಇವರ ಅತ್ಯಂತ ಜನಪ್ರಿಯವಾದ 'ನಿತ್ಯೋತ್ಸವ' ಜನರನ್ನು ನಾಡಿನ ಅಭಿಮಾನದ ಚಿತ್ರಣದ ಮುಖೇನ ಮರುಳು ಮಾಡಿರುವ ಕವಿತೆ. ಆಕಾಶವಾಣಿಯಲ್ಲಿ ವಾರಕ್ಕೊಮ್ಮೆಯೋ, ದಿನಕ್ಕೊಮ್ಮೆಯೋ ಈ ಕವನ ಪ್ರಸಾರವಾಗುತ್ತಿರುವುದನ್ನು ಕೇಳಿ, ಅನಂತರದ ದಿನಗಳಲ್ಲಿ ಈ ಕವನದ ಮೊದಲ ಸಾಲು ಪ್ರಸಾರವಾಗುವುದೇ ತಡ ಶ್ರೋತೃಗಳು ಮುಂದಿನ ಎಲ್ಲ ಸಾಲುಗಳನ್ನು ತಾವೇ ಹಾಡಿಕೊಂಡು ಹೋಗುವುದನ್ನು ನಾನು ಕಂಡಿದ್ದೇನೆ. ಒಮ್ಮೆ ಒಂದು ಸಮಾರಂಭದಲ್ಲಿ ನಾನು ಅತಿಥಿಯಾಗಿ ಹೋದಾಗ 'ನಿತ್ಯೋತ್ಸವ'ದ ಧ್ವನಿ ಸುರುಳಿಯನ್ನು, ಸಮಾರಂಭಕ್ಕೆ ಮುಂಚೆ ಹಾಕಿದರು. ಜನ 'ಈ ಹಾಡು ನಮಗೆಲ್ಲಾ ಬರುತ್ತದೆ, ಬೇರೆ ಹಾಡು ಹಾಕಪ್ಪ' ಎಂದರು. ಜನ ಸಾಮಾನ್ಯರ ಹೃದಯದಲ್ಲಿ 'ಜೋಗದ ಸಿರಿಯ ನಿತ್ಯೋತ್ಸವ'ದ ಹಾಡು ಅಷ್ಟೊಂದು ಅಚ್ಚೊತ್ತಿದೆ. ಮೇಲೆ ಉದ್ಧರಿಸಿದ ಪದ್ಯಗಳಲ್ಲದೆ ನಿಸಾರ್‌ರವರ 'ಮಾಸ್ತಿ', 'ಅಮ್ಮ, ಆಚಾರ, ನಾನು', 'ಖಾಲಿ ಸೈಟುಗಳು', 'ರಂಗೋಲಿ ಮತ್ತು ಮಗ', 'ಹಕ್ಕು', 'ಸ್ವಯಂ ಸೇವೆಯ ಗಿಳಿಗಳು', 'ಬೀದಿಯ ಮಾರಿ'—ಮುಂತಾದ ಕವಿತೆಗಳು ಕಾವ್ಯ ಪ್ರಿಯರನ್ನೂ ವಿಮರ್ಶಕರನ್ನೂ ಏಕ ಕಾಲಕ್ಕೆ ಸಂತೃಪ್ತಿಗೊಳಿಸಿವೆ.

ನಿಸಾರ್ ತುಂಬು ಸ್ನೇಹ ಜೀವಿ. ದೊಡ್ಡವರು, ಚಿಕ್ಕವರು, ಎಲ್ಲರ ಬಗೆಗೂ ಒಂದೇ ಭಾವ. ಎಲ್ಲರೊಡನೆ ಬೆರೆಯುವ ಹೃದಯಸಂಪನ್ನ. ಸಾತ್ವಿಕ ಛಲ, ಸಾಹಸ, ಗುರಿ ಸಾಧನೆಯ ಶ್ರದ್ಧೆ, ಸತ್ಯಪ್ರಿಯತೆ ಅವರ ಜೀವನದ ಉದ್ದಕ್ಕೂ ರೂಢಿಸಿಕೊಂಡು, ಜೋಪಾನ ವಾಗಿ ಕಾಪಾಡಿಕೊಂಡು ಬಂದಿರುವ ಸದ್ಗುಣಗಳು. ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಯಾರೊಡನೆಯೂ ರಾಜಿ ಮಾಡಿಕೊಳ್ಳುವುದಿಲ್ಲ.

ನಿಸಾರ್‌ರವರ ಪತ್ನಿ ಷಾನವಾಜ್ ಬೇಗಂ ಶಾಲೆಯ ಮುಖ್ಯೋಪಾಧ್ಯಾಯಿನಿ ಯಾಗಿದ್ದವರು. ಒಳ್ಳೆಯ ಹೆಸರು ಪಡೆದ ಬೋಧಕಿ. ನಾಲ್ಕು ಜನ ಮಕ್ಕಳು: ಎರಡು ಗಂಡು, ಎರಡು ಹೆಣ್ಣು. ನಿಸಾರ್ ತಮ್ಮ ಮನೆಗೆ ತಾಯಿ ತಂದೆಗಳ ಹೆಸರಾದ 'ಹಮೀದಾ ಹೈದರ್' ಎಂದು ನಾಮಕರಣ ಮಾಡಿದ್ದಾರೆ. ಹನ್ನೆರಡು ವರ್ಷಗಳಿಗೂ ಮಿಕ್ಕೂ ನಿವೃತ್ತ ಜೀವನ ನಡೆಸುತ್ತ ಸಾಹಿತ್ಯಾಧ್ಯಯನ, ಲೇಖನಗಳಲ್ಲಿ ತೊಡಗಿಕೊಂಡಿದ್ದಾರೆ.

ಇಂದಿನ ದಿನಗಳಲ್ಲಿ ಕವನ ಸಂಕಲನಗಳು ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖರ್ಚಾಗುವುದಿಲ್ಲವೆಂಬ ಕೊರಗು ಇರುವಾಗ, ನಿಸಾರ್‌ರವರ ಕೆಲವು ಕವನ ಸಂಕಲನಗಳು ನಾಲ್ಕೈದು ಮುದ್ರಣಗಳನ್ನು ಕಂಡಿವೆ. 'ನಿತ್ಯೋತ್ಸವ' ಸಂಗ್ರಹ ೧೪ನೆಯ ಮುದ್ರಣವನ್ನು ಕಂಡು, ಇನ್ನೂ ಹಲವಾರು ಆವೃತ್ತಿಗಳನ್ನು ಭವಿಷ್ಯದಲ್ಲಿ ಕಾಣುವ ಸೂಚನೆ ತೋರಿಬರುತ್ತಿದೆ. ಕನ್ನಡ ಕಾವ್ಯದ ಮಾರಾಟ ಕ್ಷೇತ್ರದಲ್ಲಿ ಇದೊಂದು ಅಪರೂಪದ ದಾಖಲೆ.

ಸದ್ದು, ಗದ್ದಲ, ಆರ್ಭಟ, ಗುಂಪುಗಾರಿಕೆ, ವ್ಯಕ್ತಿಗಳ ಬಗೆಗೆ ಕಠೋರ ಮಾತು, ನಿಂದನೆ—ಇವು ಯಾವುದರ ಗೋಜಿಗೂ ಹೋಗದೆ ತಮ್ಮನ್ನು ಸಂಪೂರ್ಣವಾಗಿ ಸಾರಸ್ವತ ಕ್ಷೇತ್ರದಲ್ಲಿಯೇ ತೊಡಗಿಸಿಕೊಂಡು ಕಾವ್ಯಪ್ರಿಯರ ಹೃದಯವನ್ನು ಗೆದ್ದ ಕವಿಗೆ ಸಂದಿರುವ ಸನ್ಮಾನ, ಬಹುಮಾನಗಳಿಗೆ ಲೆಕ್ಕವಿಲ್ಲ. ಕರ್ನಾಟಕ ವಿಶ್ವವಿದ್ಯಾಲಯ ಕಳೆದ ಬಾರಿ ಡಾಕ್ಟರೇಟ್ ಗೌರವ ಪದವಿ ನೀಡಿ ಗೌರವಿಸಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರಿಗೆ 'ನಾಡೋಜ' ಪ್ರಶಸ್ತಿ ನೀಡಿದೆ. ಈಚೆಗೆ ಶ್ರೀಯುತರಿಗೆ 'ಅನಕೃ' ಪುರಸ್ಕಾರದ ಜೊತೆಗೆ 'ಮಾಸ್ತಿ' ಪ್ರಶಸ್ತಿಯೂ ದೊರಕಿರುವುದು ಅವರ ಅಸಮಾನ ಪ್ರತಿಭೆಗೆ ಸಾಕ್ಷಿಯಾಗಿದೆ.

ನಿಸಾರ್ ಅಹಮದ್‌ರವರಿಗೆ ಹೃದಯ ಚಿಕಿತ್ಸೆ ಆದ ಅನಂತರ ಕಳೆದ ಮೂರು, ನಾಲ್ಕು ವರ್ಷಗಳಿಂದ ಹೊರ ಊರುಗಳ ಸಾಹಿತ್ಯ ಕಾರ್ಯಕ್ರಮಗಳಿಗೆ, ಸನ್ಮಾನಗಳಿಗೆ ಒಪ್ಪಿ ಕೊಳ್ಳುತ್ತಿರಲಿಲ್ಲ. ನಾನು ಸಂಪಾದಿಸಿದ ರಂಗಕರ್ಮಿ ಕೆ. ವಿ. ಸುಬ್ಬಣ್ಣನವರ ಅಭಿನಂದನ ಗ್ರಂಥ 'ರಂಗ ಧಾಮ'ವನ್ನು ಪ್ರೊ. ಕೆ. ಎಸ್. ನಿಸಾರ ಅಹಮದ್‌ರವರ ಕೈಯಿಂದ ಬಿಡುಗಡೆ ಮಾಡಿಸಬೇಕೆಂದು ಪೂರ್ವ ಆಲೋಚನೆ ನನ್ನದಾಗಿತ್ತು. ಇದಕ್ಕೆ ಸಂಪಾದಕೀಯ ಮಂಡಳಿಯ ಹಿರಿಯರೂ ಒಪ್ಪಿದ್ದರು. ಈ ಕುರಿತು ನಿಸಾರ್‌ರವರನ್ನು ಸಂಪರ್ಕಿಸಿದಾಗ 'ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ನಿಮಗೆ ತಿಳಿದಂತೆ ಹೊರ ಊರಿಗೆ ನಾನು ಪ್ರವಾಸ ಹೋಗುತ್ತಿಲ್ಲ. ನನ್ನ ವೈದ್ಯರೂ ಇದನ್ನೇ ಹೇಳಿದ್ದಾರೆ. ನನ್ನನ್ನು ನಿಮ್ಮ ಸ್ನೇಹ ಬಂಧನದಿಂದ ಇಕ್ಕಟ್ಟಿಗೆ ಸಿಲುಕಿಸಿದ್ದೀರಿ. ನಿಮ್ಮ ಒತ್ತಾಯಕ್ಕೆ ಒಪ್ಪಿದ್ದೇನೆ' ಎಂದರು. ಶಿವಮೊಗ್ಗದ 'ಕುವೆಂಪು ರಂಗ ಮಂದಿರ'ದಲ್ಲಿ ನಡೆದ ಕಾರ್ಯಕ್ರಮಕ್ಕೆ ಬಂದು 'ರಂಗ ಧಾಮ' ಅಭಿನಂದನ ಗ್ರಂಥವನ್ನು ಬಿಡುಗಡೆ ಮಾಡಿ ಬಹಳ ಸೊಗಸಾಗಿ ಮಾತನಾಡಿ, ತಮ್ಮ ಕವನಗಳನ್ನೂ ಓದಿ ಜನರನ್ನು ಖುಷಿ ಪಡಿಸಿದರು. ವೈಯಕ್ತಿಕ ಸಂಬಂಧದ ಘನತೆಯನ್ನು, ಆಪ್ತತೆಯನ್ನು, ಸಂತೋಷವನ್ನು, ಮನೋಲ್ಲಾಸವನ್ನು ಸಾಧ್ಯವಾಗಿಸಿದ ಸಂದರ್ಭದಲ್ಲಿ ನಾವಿಂದು ಇದ್ದೇವೆ ಎಂಬುದು ಸಮಾಧಾನದ ಸಂಗತಿ. ಇಂತಹ ಪ್ರೀತಿ, ವಿಶ್ವಾಸದ ಧಾತುಗಳಿಂದಲೇ ನಮ್ಮೊಳಗಿನ ಚೈತನ್ಯಕ್ಕೆ ಒಂದು ರೂಪ ಮೂಡುವುದು, ಒಂದು ವರ್ಚಸ್ಸು ವರ್ಧಿಸುವುದು ಎಂಬುದನ್ನು ತಿಳಿದು ನಿಸಾರ್ ಅವರಿಗೆ ನಾನು ಒಳಿತನ್ನು ಹಾರೈಸುತ್ತೇನೆ.

ಹೃದಯವನ್ನು ತಣಿಸುವುದಷ್ಟೇ ಅಲ್ಲ, ತಲ್ಲಣಿಸುವುದೂ ಸಾಹಿತ್ಯದ ಕೆಲಸ.

(ಸಾಹಿತ್ಯದ ಕರ್ತವ್ಯ)



ಕವಿ ಹೃದಯದ ಕವಿ

♦ ಮತ್ತೂರು ಕೃಷ್ಣಮೂರ್ತಿ

ಕವಿ ಕೆ. ಎಸ್. ನಿಸಾರ್ ಅಹಮದರ ವೃತ್ತಿ, ಪ್ರವೃತ್ತಿಗಳು ಬೇರೆ. ವೃತ್ತಿಯಲ್ಲಿ ಅವರು ಭೂ ವಿಜ್ಞಾನದ ಪ್ರಾಚಾರ್ಯರು (Geology), ಪ್ರವೃತ್ತಿಯಿಂದ ಕವಿ. 'ನನ್ನ ಕಾವ್ಯ ರಚನೆಯ ಬಗ್ಗೆ ನಾನು ಸದಾ ಅತೃಪ್ತ. ಹಿಂದಿಗಿಂತ ಚೆನ್ನಾಗಿ, ಅರ್ಥಪೂರ್ಣವಾಗಿ ಬರೆಯಬೇಕೆಂಬ ಸಂಕಲ್ಪ, ಹಟ ನನ್ನ ಕಾವ್ಯ ಪ್ರಕ್ರಿಯೆಯ ಮುಖ್ಯಾಂಶ. ಜೀವಂತವಿರುವವರೆಗೂ ಹೇಗೆ ವ್ಯಕ್ತಿ ವಿಕಾಸ ಸಾಧ್ಯವೋ ಹಾಗೆಯೇ ಅದರ ಅಭಿವ್ಯಕ್ತಿಯಾದ ಕಾವ್ಯ ಕೂಡ, ಎನ್ನುವ ನಂಬಿಕೆ ಬಲವಾಗಿರುವ ಯಾರಿಗೇ ಆಗಲಿ ತನ್ನ ಕಾವ್ಯ ಪೂರ್ಣ ಎನ್ನಿಸುವುದು ಅಶಕ್ಯ. ಅಪೂರ್ವವೂ ಮಹತ್ವಪೂರ್ಣವೂ ಆದ ಅನುಭವಗಳು ಭವಿಷ್ಯದಲ್ಲಿರುವುದು ಸಾಧ್ಯವೆನ್ನಿಸುವ ಆಶಾವಾದ ಎಚ್ಚರಿರುವ ತನಕ ಸದ್ಯದ ಕಾವ್ಯ ರಚನೆಯ ಬಗ್ಗೆ ಭ್ರಮೆ ಬೆಳೆಸಿಕೊಳ್ಳಲಾರೆ' ಎನ್ನುವ ಉಜ್ವಲ ಆಶಾವಾದಿ ಕವಿ, ಕಾವ್ಯ ರಸಾನುಭವದಲ್ಲಿ ಇಳಿ ಇಳಿದಂತೆ ಅವರೇ ಹೇಳಿರುವ ಹಾಗೆ, ಉತ್ತಮೋತ್ತಮವಾದ ಕವಿತೆಗಳನ್ನೇ ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ಕೊಟ್ಟಿದ್ದಾರೆ, ತಮ್ಮದೇ ನಂಬಿಕೆಯನ್ನು ನಿಜ ಮಾಡಿ ತೋರಿಸಿದ್ದಾರೆ.

ಸುಮಾರು ಹದಿಮೂರು ಕವನ ಸಂಕಲನಗಳು. ('ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ'. 'ಸುಮುಹೂರ್ತ'. 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ'. 'ಸಿತ್ಯೋತ್ಸವ' ಇತ್ಯಾದಿ), ಷೇಕ್ಸ್‌ಪಿಯರ್‌ನ

'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಹಾಗು 'ಒಥೆಲೊ' ಮತ್ತು ನೆರುಡನ ಕನ್ನಡಾನುವಾದ, ಐದು ವೈಚಾರಿಕ ಮತ್ತು ವಿಮರ್ಶಾ ಕೃತಿಗಳು—ಇವೆಲ್ಲವೂ ಕವಿ-ಸಾಹಿತಿಯಾಗಿ ನಿಸಾರರ ಗಮನಾರ್ಹ ಕೊಡುಗೆಗಳು. ಕವಿಯಾಗಿ ನಿಸಾರರು ಹೆಚ್ಚು ಕಡಿಮೆ ಕಾವ್ಯಪ್ರಿಯರೆಲ್ಲರ ಮನೆ ಮಾತು. ಅವರ ಕವಿತೆ 'ಕುರಿಗಳು, ಸಾರ್, ಕುರಿಗಳು' ಕರ್ನಾಟಕದಲ್ಲಿ ಯಾರಿಗೆ ಗೊತ್ತಿಲ್ಲ? ಅರ್ಥಹೀನ ರಾಜಕೀಯ ವ್ಯವಸ್ಥೆಯಿಂದ ವ್ಯಕ್ತಿಗೆ ಹಾಗೂ ಸಮಾಜಕ್ಕೆ ಒದಗಿ ಬರುವ ದುರಂತವನ್ನು, ತಕ್ಕ ಮಾತುಗಳಲ್ಲಿ ಪ್ರತಿಬಿಂಬಿಸುವ ವ್ಯಂಗ್ಯೋಕ್ತಿಗಳು ಸಮರ್ಥವಾಗಿ ಅದನ್ನು ವಿಡಂಬನೆ ಮಾಡುತ್ತವೆ. ಧ್ವನಿಹೀನ, ಚೈತನ್ಯಹೀನ ಸಮುದಾಯ ಅನೇಕ ಗುರಿಗಳ ಆದರ್ಶದ ಬೆನ್ನು ಹತ್ತುತ್ತ ಅನುಕಂಪ ಮೂಡಿಸುತ್ತದೆ. ಇಂಥ ಕಣ್ತೆರೆಸುವ ಕವನಗಳು ನಿಸಾರರ ಕಾವ್ಯ ಭಂಡಾರದಲ್ಲಿ ಅವೆಷ್ಟೋ ಇವೆ. ಅವರ ಗೀತೆಗಳನ್ನು ತಮ್ಮ ಸುಶ್ರಾವ್ಯ ಕಂಠದಲ್ಲಿ ಹಾಡಿ, ತಮ್ಮದೇ ವಿಶಿಷ್ಟ ರೀತಿಯ ರಾಗ ಸಂಯೋಜನೆಯಿಂದ ಆಯಾ ಕವನಗಳ ಅಂತರಾರ್ಥವನ್ನು ಧ್ವನಿಯಲ್ಲಿಯೇ ಅಭಿವ್ಯಕ್ತಿಸಿ ಮತ್ತೂ ಜನಪ್ರಿಯಗೊಳಿಸಿದ್ದು ಶ್ರೇಷ್ಠ ಸುಗಮ ಸಂಗೀತ ಕಲಾವಿದ ಮೈಸೂರು ಅನಂತಸ್ವಾಮಿ. ಮೈಸೂರು ಅನಂತಸ್ವಾಮಿಯವರು ನಿಸಾರರ ಕಾವ್ಯವನ್ನು ಕನ್ನಡಿಗರ ಮನೆ-ಮನಗಳಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡಿದುದೂ ಸಾಮಾನ್ಯ ವಿಷಯವಲ್ಲ. ಸಾಮಾನ್ಯವಾಗಿ ಕವಿಯೊಬ್ಬನ ಭಾವಗೀತೆಗಳು ಸಾಹಿತ್ಯ ಪ್ರಿಯರಿಗೆ ಸದೈವ ಇಷ್ಟವಾದರೂ ಆ ಕಾವ್ಯಕ್ಕೆ ಸಂಗೀತವನ್ನು ಸೇರಿಸಿ, ಹಾಡುವ ಗೀತೆಗಳಾಗಿಸಿದಾಗ ಅವು ಸಂಗೀತಪ್ರಿಯರಿಗೂ, ಹಾಡುವ ಕಲಾವಿದರಿಗೂ, ಹಾಡು ಕೇಳುವ ಸದಭಿರುಚಿ ಇರುವ ಸಹೃದಯ ಸಾಮಾನ್ಯರಿಗೂ ಸರಾಗವಾಗಿ ತಲಪುತ್ತವೆ. ಮೆಲುಕು ಹಾಕಬಹುದಾದ, ಗುನುಗುನಿಸುತ್ತಿರಬಹುದಾದ ಪ್ರಿಯ ಗೀತೆಗಳಾಗಿ ಜನರ ಬಾಯಲ್ಲಿ ಉಳಿದಾಗ ಆ ಕವನ ಅಥವಾ ಭಾವಗೀತೆ ಮತ್ತು ಕಾವ್ಯ ಬರೆದ ಕವಿಯ ಜನ್ಮ ಸಾರ್ಥಕ. ಬಹುಶಃ ಏಳೆಂಟು ವರ್ಷಗಳ ಕಾಲ ನಮ್ಮೂರಿನ ಹತ್ತಿರದ ಶಿವಮೊಗ್ಗೆಯ ಸಹ್ಯಾದ್ರಿಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ನಿಸಾರರು ಶಿವಮೊಗ್ಗೆಯ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯದ ಸೆರೆಗೆ ಸಿಕ್ಕಿ, ಜೋಗದ ಜಲಪಾತದ ರುದ್ರ ರಮಣೀಯತೆಯ ಮೋಡಿಗೆ ವಶವಾಗಿ ಬರೆದ ಗೀತೆಗಳು ಅವರ ಕವನ ಸಂಕಲನ 'ನಿತ್ಯೋತ್ಸವ'ದಲ್ಲಿವೆ. ಈಗ ಅವುಗಳು ಕೇವಲ ಪುಸ್ತಕದಲ್ಲಿಲ್ಲ, ಸರಿ ಸುಮಾರು ಎಲ್ಲರ ಮನೆ ಮನೆಗಳಲ್ಲಿ 'ನಿತ್ಯೋತ್ಸವ'ದ ಕ್ಯಾಸೆಟ್ ರೂಪದಲ್ಲಿ ಕುಳಿತಿವೆ. ಅನಂತಸ್ವಾಮಿಯವರ ಧ್ವನಿಯಲ್ಲಿನ ನಿಸಾರರ ಕವನಗಳು ಸಹೃದಯರಲ್ಲಿ ಹೃದ್ಯವಾಗಿ ಉಳಿದುಹೋಗಿವೆ! ಇದು ನಾನು ಕಂಡಿರುವಂಥದು. ಹೀಗೆ ತಮ್ಮ ಜನ್ಮ ಸಾರ್ಥಕ ಎನ್ನಿಸುವ ಅವೆಷ್ಟು ಗೀತೆಗಳನ್ನು ನಿಸಾರರು ಬರೆದಿರುವರೋ!

೧೯೭೨ರಿಂದ ೧೯೯೫ರವರೆಗೆ ನಾನು ಭಾರತದಲ್ಲಿ ಇರಲಿಲ್ಲ. ಸುಮಾರು ೨೩-೨೪ ವರ್ಷಗಳ ಕಾಲ ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರದ ಸೇವೆಯ ನಿಮಿತ್ತವಾಗಿ ನಾನು ಲಂಡನ್ನಿನಲ್ಲೇ ಇರಬೇಕಾಯಿತು. ಆದರೂ ಭಾರತದ ಎಷ್ಟೋ ವಿಷಯಗಳನ್ನು ದಿನನಿತ್ಯವೂ ಪತ್ರಿಕೆಗಳ ಮೂಲಕ ತಿಳಿಯುವುದು ರೂಢಿಯಲ್ಲಿ ಇತ್ತು. ಕರ್ನಾಟಕದ ವಿಷಯಗಳೂ ಹಾಗೆಯೇ. ನನ್ನ ಅನೇಕ ಸನ್ಮಾನ್ಯ ಮಿತ್ರರು, ಸ್ವಭಾವತಃ ಸಾಹಿತ್ಯ ಮತ್ತು

ಕಾವ್ಯಪ್ರೇಮಿಯಾಗಿರುವ ನನಗೆ ಇಲ್ಲಿ ಹೊಸದಾಗಿ ಹೊರಬರುವ ಪುಸ್ತಕಗಳನ್ನು ಆಗೀಗ ಕಳುಹಿಸಿಕೊಡುವುದಿತ್ತು. ಹಾಗೆ ನಾನು ತರಿಸಿಕೊಂಡ ಪುಸ್ತಕಗಳಲ್ಲಿ ನಿಸಾರರ ಕವನ ಸಂಕಲನಗಳೂ ಇವೆ. ಅವರ ಎಷ್ಟೋ ಕವನಗಳನ್ನು ಓದಿ ನಾನು ಮನಸಾರೆ ಮೆಚ್ಚಿಕೊಂಡದ್ದಿದೆ. ಹೀಗೆ ಕವನ ಬರೆಯಲು ನನಗೇಕೆ ಸಾಧ್ಯ ಇಲ್ಲವೋ ಎಂದು ಹಪಹಪಿಸಿದ್ದೂ ಇದೆ! ಇಂದಿಗೂ ನನ್ನ ನೆನಪಿನಲ್ಲಿರುವ ಕೆಲವು ಕವನಗಳ ಬಗೆಗೂ ನನಗೆ ಹೇಳಬೇಕೆನಿಸುತ್ತದೆ...

ಗಾಂಧೀಜಿ ಹಾಗೂ ಗಾಂಧೀ ತತ್ತ್ವಗಳನ್ನು ಪೂಜಿಸಿ, ಅನುಸರಿಸಲು ಪ್ರಯತ್ನಿಸುತ್ತಲೇ ಇರುವ ನನಗೆ ಗಾಂಧೀಜಿಯನ್ನು ಕುರಿತ ನಿಸಾರ್ ಅವರ ಕವನ 'ದಾರಿ ದೀಪ' ತುಂಬಾ ಪ್ರಿಯ. ನಿಜಕ್ಕೂ ನಿಸಾರರು ಅಲ್ಲಿ ಗಾಂಧೀಜಿಯ ಅಂತರಂಗ-ಬಹಿರಂಗಗಳನ್ನೂ ಅವರ ಮಾನವೀಯತೆಯನ್ನೂ ಬಹಳ ಸೊಗಸಾಗಿ, ದೇಶದ ಸ್ವಾತಂತ್ರ್ಯ ಮತ್ತು ವಿಭಜನೆಯ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. 'ಸ್ವಯಂ ಸೇವೆಯ ಗಿಳಿಗಳು' ನಾನು ಲಂಡನ್‌ನಲ್ಲಿ ನೆಲೆಸಿರುವ ಎಷ್ಟೋ ಭಾರತೀಯ ಕುಟುಂಬಗಳಲ್ಲಿ ಕಂಡಿರುವ ವೈಫಲ್ಯವನ್ನೇ ಹೇಳುವ ಕವನ. 'ಕುರಿಗಳು, ಸಾರ್, ಕುರಿಗಳು' ಎಲ್ಲರಿಗೂ ಪ್ರಿಯವಾಗಿರುವಂತೆ, ಅದರಲ್ಲಿರುವ ವಿಡಂಬನೆಯಿಂದಾಗಿ ನನಗೂ ಪ್ರಿಯ. 'ಮದುವೆ' ಕವನದಲ್ಲಿನ ಮದುವೆಯ ಚಿತ್ರಣ, ಇಸ್ಲಾಂ ಮತಧರ್ಮದವರಾದರೂ ನಿಸಾರರ ಭಾವನೆಗಳು ಭಾರತೀಯತೆಯನ್ನೂ ಭಾರತೀಯ ಸಂಸ್ಕೃತಿಯ ಬಗೆಗಿನ ಪ್ರೀತಿಯನ್ನೂ ತೋರಿಸುತ್ತವೆ. ಕಿರುಗವನವಾದರೂ ಭಾವ ಸಂಬಂಧದ ನೆಲೆಯನ್ನು ನಿರೂಪಿಸುವ ಶೈಲಿ, ಮದುವೆ ನಮ್ಮ ಮನೆಯಲ್ಲೇ ನಡೆದುದೋ ಎನಿಸುವಂತೆ ಮಾಡುತ್ತದೆ. 'ನವೋದಯ' ಪದ್ಯವಂತೂ ಹೊಸಗನ್ನಡದ ನವೋದಯದ ಸಮಯದಲ್ಲಿ ಬಂದ ಮುದ್ದಣನ ಕೃತಿಗಳಲ್ಲಿ ಅಂದಿನ ಕಾವ್ಯಾಲೋಚನೆಯ ಸವಾಲುಗಳನ್ನು ಎದುರಿಸಿದ ಬಗೆಗಿನ ಸೂಕ್ಷ್ಮ ಸೂಚನೆಗಳನ್ನು ಸೊಗಸಾಗಿ ಹೇಳುತ್ತದೆ. ಇನ್ನು 'ಬೀಜ-ಮರ'ದಲ್ಲಿನ ಸಾಲುಗಳ ಚಿಂತನೆ ಎಂಥದು? 'ವಾಮನತೆಯಿಂದೊಮ್ಮೆಗೆದ್ದು, ವಿಕ್ರಮ ಪದವಿಗೇರುವಾಸೆ! ಕೊಟ್ಟರಾರೀ ಎಳೆಯ ಬೀಜಕ್ಕೆ ಆ ಹಕ್ಕು? ಸುಕ್ಕಾದ ಮುದಿಯ ಮರ, ಮೂಗು ಮುರಿದಿದೆ ನಕ್ಕು... ಆಡಿದರೆ ಬಾಡುವುದೆ ಕಿರಿ ಬೀಜದುತ್ಸಾಹ? ಬೀಜಕಿದೆ ಭೂ ತಾಯ ಚಿರ ಕೃಪೆಯ ಆಧಾರ' ಓಹ್! ನಿಸಾರರೂ ಕವಿಯಾಗಿ ಬೀಜದಿಂದ ಹೀಗೆ ದೊಡ್ಡ ಹೆಮ್ಮರವಾಗಿ ಬೆಳೆದು ತ್ರಿವಿಕ್ರಮರಂತೆ ನಿಂತುಬಿಟ್ಟಿರುವಂತೆ ಭಾಸವಾಗುತ್ತದೆ. ಒಂದೊಂದು ಸಾಲೂ ಜೀವನ ದರ್ಶನವನ್ನು ಮಾಡಿಸುವಂಥದಾಗಿದೆ ಎಂದರೆ ಅತ್ಯುಕ್ತಿಯಲ್ಲ! 'ತೀನಂಶ್ರೀ'ಯವರ ಬಹುಮುಖ ಪ್ರತಿಭೆ, ವ್ಯಕ್ತಿತ್ವದ ಸತ್ವವನ್ನು ಹೇಳುವ, ಅದೇ ಹೆಸರಿನ ಪದ್ಯ ಕವಿಯ ವೈಯಕ್ತಿಕ ಅನಿಸಿಕೆಯ ಆಧಾರದಲ್ಲಿ ತಿ.ನಂ.ಶ್ರೀ. ಬರಹ-ಬೋಧನೆಯ ಬಗೆಗೂ ಹೇಳುತ್ತದೆ. ಇವುಗಳಂತೆಯೇ Bertolt Brecht(ಜರ್ಮನಿಯ ಕವಿ)ನ 'Song of Law Courts'ನ ಕನ್ನಡ ಅನುವಾದ 'ನ್ಯಾಯ', ಫ್ರಾನ್ಸ್‌ನ ಬಾದಿಲೇರ್‌ನ ಕವನದ ಅನುವಾದ 'ಕಡಲ ಹಕ್ಕಿಗಳು', ಸ್ಪೈನ್‌ನ ಲೋರ್ಕನ ಕವನ, 'ವಿಲಾಪ'ದ ರೂಪ ಪಡೆದಿರುವುದು ಅವರ ಅನುವಾದದ ಸಾಮರ್ಥ್ಯವನ್ನೂ ತೋರಿಸುತ್ತವೆ. ಏಕೆಂದರೆ ಈ ಕವನಗಳ ಮೂಲವನ್ನು ನಾನು ಓದಿಲ್ಲ. ಆದರೆ ಅವೆಷ್ಟು ನಮ್ಮ ಕನ್ನಡದ ಕವನಗಳಂತೆಯೇ ಕಂಡವು ಎಂದರೆ, ಈ ಕವನಗಳು ಅನುವಾದಿತ ಎಂದು ತಿಳಿದ ಮೇಲೆಯೇ ಅವು ಬೇರೆ ಭಾಷೆಯಲ್ಲಿ ಮೊದಲು

ಬಂದವು ಎಂದು ಗೊತ್ತಾದದ್ದು. ಅಷ್ಟು ಸಹಜ ಸ್ವಂತಿಕೆ ಇದೆ ಅವುಗಳಲ್ಲಿ. ಮಾಸ್ತಿಯವರ ಮೇಲಿನ 'ಮಾಸ್ತಿ' ಕವನ ನನ್ನ ಅತ್ಯಂತ ಪ್ರಿಯ ಕವನಗಳಲ್ಲಿ ಒಂದು. 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ನಾನೆಂಬ ಪರಕೀಯ', 'ಉಭಯ ಕಷ್ಟ'— ಇವುಗಳು ಬಲು ಸೂಕ್ಷ್ಮವಾಗಿ ಬಹುಸಂಖ್ಯಾತ-ಅಲ್ಪಸಂಖ್ಯಾತರ ನಡುವಿನ ಸಂಬಂಧವನ್ನು ಹೇಳುತ್ತ ಎರಡು ಭಿನ್ನ ಸಂಸ್ಕೃತಿಗಳ ನಡುವೆ ಉಂಟಾಗುವ ವ್ಯತ್ಯಾಸಗಳು ತರುವ ತಳಮಳವನ್ನು, ಅದು ನಾಯಕನ ಪ್ರಾಮಾಣಿಕತೆಯನ್ನೇ ಪ್ರಶ್ನಿಸಿದಂತೆ ಎನ್ನಿಸುವುದು ನಿಸಾರರ ಅರ್ಥೈಕೆಯ ದೇಶದ ರಾಜಕೀಯ ಸ್ಥಿತಿಗಳ ಅಸ್ಥಿರತೆಯ ಸೂಕ್ಷ್ಮಜ್ಞತೆಯನ್ನು ಹೇಳುತ್ತದೆ. ಅವರ ಕವನಗಳ ವಿಷಯ ವೈವಿಧ್ಯ ಇಂಥದು!

—ಹೀಗೇ ಹೇಳುತ್ತ ಹೋದರೆ, ನಿಸಾರರ ಕವಿತೆಯ ಬಗೆಗಿನ ನನ್ನ ಮೆಚ್ಚುಗೆ ಮತ್ತು ಪ್ರೀತಿಯನ್ನು ತಿಳಿಸಲು ಪುಟಗಳ ನಿರ್ಬಂಧ ಸಾಲದಾಗುತ್ತದೆ. ಹೀಗೆ ಹಲವಾರು ಕವನಗಳನ್ನು ಓದಿದ ನಾನು ಒಮ್ಮೆ ನಿಸಾರರು ಅವರ ವೃತ್ತಿಯನ್ನು ಈ ಕವಿ-ಪ್ರವೃತ್ತಿಯ ಜತೆಗೆ ಹೊಂದಿಸಿಕೊಳ್ಳುತ್ತ ಹೇಗೆ ನಿರ್ವಹಿಸುತ್ತಾರೆಯೋ ಎಂದು ಆಶ್ಚರ್ಯಪಡುತ್ತ ಪ್ರಶ್ನಿಸಿಕೊಂಡದ್ದುಂಟು. ನಾನು ಹಾಗೆಂದುಕೊಂಡಿರುವಾಗಲೇ ವಿಶ್ವ ಕನ್ನಡ ಮೇಳ(೧೯೮೫)ದ ಪ್ರಯುಕ್ತ ಪ್ರಕಟಿಸಿದ ಪ್ರೊ. ಎಚ್ಚೆಸ್ಕೆಯವರ ಸಂಪಾದಕತ್ವದಲ್ಲಿ ಹೊರ ಬಂದಿರುವ 'ಅವಲೋಕನ' ಕರ್ನಾಟಕ ಪರಂಪರೆಯ ಸಮೀಕ್ಷೆಯ ಸಂಚಿಕೆಯನ್ನು ನೋಡಿದೆ. ಅಲ್ಲಿ ನಿಸಾರರು ಬರೆದಿರುವ 'ಕರ್ನಾಟಕದ ಶಿಲಾ ರಚನೆಗಳು' ಎಂಬ ಲೇಖನವು ನನ್ನ ಕಣ್ಣಿಗೆ ಬಿದ್ದಿತು. ಒಂದಕ್ಷರವನ್ನೂ ಬಿಡದೆ ಆ ಲೇಖನವನ್ನು ಓದಿದೆ. ಆ ಬಳಿಕ ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು. ಶಿಲೆಗೆ ಸಂಬಂಧಿಸಿದ ಎಷ್ಟು ವಿಚಾರಗಳಿವೆ ಅಲ್ಲಿ! ಅಬ್ಬ! ನಿಸಾರರು ಆ ಲೇಖನದಲ್ಲಿ ಅದೆಷ್ಟು ದಕ್ಷತೆಯಿಂದ, ಸಮರ್ಥವಾಗಿ ತಾವು ವೃತ್ತಿಯಲ್ಲಿ ಬೋಧಿಸುವ ಭೂ ವಿಜ್ಞಾನದ ವಿಷಯವನ್ನು ಹೇಳುತ್ತಾರೆ ಎಂದರೆ ಅದು ಒಬ್ಬ ಅಧ್ಯಾಪಕನಾಗಿ ಅವರ ಅಧ್ಯಯನಶೀಲತೆ ಎಂಥದು ಎಂದೂ, ಗಹನವಾದ ವಿಚಾರಗಳನ್ನು ಮನ ಮುಟ್ಟುವ ಸರಳ ಶೈಲಿಯಲ್ಲಿ ಹೇಗೆ ಹೇಳಬಲ್ಲರು ಎಂದೂ ನಿರೂಪಿಸುತ್ತದೆ.

ನಿಜ, ಕೆ. ಎಸ್. ನಿಸಾರ್ ಅಹಮದರು ಒಬ್ಬ ಶ್ರೇಷ್ಠ ಕವಿ, ಶ್ರೇಷ್ಠ ಸಾಹಿತಿ, ಶ್ರೇಷ್ಠ ಅಧ್ಯಾಪಕ, ಶ್ರೇಷ್ಠ ಪ್ರಾಚಾರ್ಯ. ವೃತ್ತಿ-ಪ್ರವೃತ್ತಿಗಳ ಸಂತುಲನ ಹೊಂದಿದ್ದು, ಎರಡನ್ನೂ ಸ್ವಸಾಮರ್ಥ್ಯದಿಂದ ಸೊಗಸಾಗಿ ನಿರ್ವಹಿಸುತ್ತ ಯಶಸ್ಸು ಕಂಡಿರುವ ಶ್ರೇಷ್ಠ ಕನ್ನಡಿಗ. ಕನ್ನಡ ಸಾಹಿತ್ಯ ಲೋಕ ಕಂಡ ಸಹೃದಯ ಕವಿ, ಜನ ಮೆಚ್ಚುಗೆ ಗಳಿಸಿರುವ ಸಹೃದಯ ವ್ಯಕ್ತಿ.

ಪ್ರಜಾಪ್ರಭುತ್ವದ ತತ್ತ್ವಕ್ಕೆ ಸರ್ವಸೂಕ್ತವೆನ್ನಿಸುವ ಸಂಖ್ಯಾ ವೈಪುಲ್ಯ,
ಬಹುಮತಗಳ ಮಹತ್ವದ ಕಲ್ಪನೆ ಎಲ್ಲ ವಿಷಯಗಳಿಗೂ ಸಮಂಜಸವೆನ್ನಿಸದು.
ನಾಲ್ಮೊಗದ ಬ್ರಹ್ಮನಿಗಿಂತ ಹತ್ತು ತಲೆಯ ಲಂಕಾಧಿಪ ಅಧಿಕ ಮಹಿಮಾ
ಶಾಲಿಯೆ?

(ಪ್ರಜಾಪ್ರಭುತ್ವ)



ಕಾವ್ಯದ ಹುಲುಸು ಬೆಳೆಯ ಗಟ್ಟಿ ಕಾಳು

♦ *ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ*

ಹಲವು ದಶಕಗಳ ಹಿಂದೆ ಒಂದು ಘಟನೆ ನಡೆಯಿತು. ಅದರ ಸ್ವಾರಸ್ಯದಿಂದಾಗಿ ಈಗಲೂ ಅದು ನೆನಪಿನಲ್ಲಿ ಉಳಿದುಕೊಂಡಿದೆ. ಕವಿ ನಿಸಾರರ ನೆನಪು ಬಂದಾಗ, ಆಕಸ್ಮಿಕವಾಗಿ ಅವರು ಎದುರು ಸಿಕ್ಕಾಗ, ಆ ಘಟನೆ ನನ್ನ ಸ್ಮೃತಿಕೋಶದಿಂದ ಎದ್ದು ಬರುತ್ತದೆ.

ಬೆಂಗಳೂರು ಚಾಮರಾಜಪೇಟೆಯ ಯಾವುದೋ ಒಂದು ರಸ್ತೆ; ಆ ರಸ್ತೆಯ ಯಾವುದೋ ಒಂದು ಮನೆಯ ಮೇಲಣ ಅಟ್ಟ. ಅಲ್ಲಿ ಆಗ ತಾನೇ ಕವಿಯಾಗಿ ಹೆಸರು ಮಾಡುವ ದಾರಿಯಲ್ಲಿದ್ದ ಕೆ. ಎಸ್. ನಿಸಾರ್ ಅಹಮದ್ ಅವರ ಕಾವ್ಯವಾಚನ ನಡೆಯುವ (ಕೆಲವೇ ಆಹ್ವಾನಿತರ) ಒಂದು ಖಾಸಗಿ ಕಾರ್ಯಕ್ರಮವಿತ್ತು. ಅದು ಸ್ವರಚಿತ ಕವನಗಳ ವಾಚನ. ಅದಕ್ಕೆ ಏರ್ಪಾಡು ಮಾಡಿದ್ದವರು ಯಾರೋ ತಿಳಿಯದು. ನನ್ನ ಮಿತ್ರ, ತಾನೂ ಕವಿಯಾಗಿ ಹೆಸರಾಗಿದ್ದ ಕ. ವೆಂ. ರಾಜಗೋಪಾಲ ಅವರ ಪ್ರೀತಿಯ ಒತ್ತಾಯದ ಮೇರೆಗೆ ನಾನು ಆ ಕಾರ್ಯಕ್ರಮಕ್ಕೆ ಶ್ರೋತೃವಾಗಿ ಹೋಗಿದ್ದೆ.

ನಿಸಾರ್ ಅವರ ಆ ಕಾವ್ಯ ವಾಚನಕ್ಕೆ ಒಂದು ಹತ್ತು-ಇಪ್ಪತ್ತು ಜನ ಬಂದಿದ್ದರು. ಒಂದೆರಡು ಕವನಗಳನ್ನು ಓದಿ ಮುಗಿಸಿದರು. ಇನ್ನೊಂದು ಕವನವನ್ನು ಓದಲು ಜೇಬಿನಿಂದ ಹಾಳೆಯೊಂದನ್ನು ತೆಗೆದರು. ಓದಿದರು. ಹಾಳೆಯ ಕೊನೆಯ ಸಾಲಿಗೆ ಬಂದಾಗ, ಅದು ಅಪೂರ್ಣ ಎಂದು ತಿಳಿಯಿತು.

ಮುಂದುವರಿದ ಭಾಗಕ್ಕೆ ಮುಂದಿನ ಹಾಳೆಗೆಂದು ಜೇಬಿಗೆ ಕೈಹಾಕಿದರು. ಹಾಳೆ ಇರಲಿಲ್ಲ. ಇನ್ನೊಂದು ಜೇಬಿಗೆ ಕೈ ಹಾಕಿದರು. ಅಲ್ಲಿಯೂ ಇರಲಿಲ್ಲ. ಷರಾಯಿ ಜೇಬಿನಲ್ಲಿ ತಡಕಾಡಿದರು. ಅಲ್ಲಿಯೂ ಏನೂ ಸಿಕ್ಕಲಿಲ್ಲ. ಈಗ ಶ್ರೋತೃಗಳತ್ತ ತಿರುಗಿ, ಪೆಚ್ಚುನಗೆ ನಕ್ಕು, 'ಬರೆದಿದ್ದ ಮುಂದಿನ ಹಾಳೆ ಇಲ್ಲ, ಮರೆತುಬಿಟ್ಟೆ' ಎಂದರು. ಶ್ರೋತೃಗಳು ನಕ್ಕರು. ಕವನದ ಹಾಳೆಗಾಗಿ ಅವರು ಎಳೆಯ ಮಗುವಿನಂತೆ ಹುಡುಕಾಡಿದ ಆ ದೃಶ್ಯ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಇಂಥ ಮರೆವು ಒಳ್ಳೆಯ ಕವಿಗಳಿಗೆ ಸಹಜವೇನೋ! ಭೂಷಣವೂ ಇರಬಹುದೇ?

ಹಳಿಗಳ ಮೇಲೆ ರೈಲು ಹೋಗುವ ಪರಿಯೂ ಕವಿಯೊಬ್ಬನ ಲೇಖನಿಯಿಂದ ಕವನ ನಿರ್ಮಾಣವಾಗುವ ಪರಿಯೂ ತಮಗೆ ವಿಸ್ಮಯಕರವಾದ ವಿದ್ಯಮಾನಗಳೆಂದು ನನ್ನ ಗುರುಗಳಾಗಿದ್ದ ಡಿ. ಎಲ್. ನರಸಿಂಹಾಚಾರ್ಯರು ಒಮ್ಮೆ ಹೇಳಿದ್ದು ನನಗೆ ಆಗಾಗ ನೆನಪಾಗುತ್ತಿರುತ್ತದೆ. ಅಂಥ ವಿಸ್ಮಯಕರ ವಿದ್ಯಮಾನ ನಿಸಾರ್ ಅಹಮದರ ಕಾವ್ಯಕೃಷಿ, ನನ್ನಂಥವನಿಗೆ.

ನಿಸಾರರ ಒಡನಾಟ, ಸ್ನೇಹ ವಿಶ್ವಾಸಗಳು ಸರಳವಾದವು, ಸ್ವಾಭಾವಿಕವಾದವು. ಅವರು ವಯಸ್ಸಿನಲ್ಲಿ ನನಗಿಂತ ಸ್ವಲ್ಪ ಚಿಕ್ಕವರು. ನನ್ನನ್ನು ವಿಶ್ವಾಸದಿಂದ ಕಾಣುತ್ತ ಬಂದಿದ್ದಾರೆ, ವಿದ್ವಾಂಸನೆಂದೂ ಮೆಚ್ಚಿದ್ದಾರೆ. ಈ ವಿಶ್ವಾಸ ಮೆಚ್ಚುಗೆಗಳು ನಾವು ಇರುವಷ್ಟು ಕಾಲ ಹೀಗೆಯೇ ಇರಲಿ ಎಂದು ಮಾತ್ರ ನಾನು ಹಾರೈಸುತ್ತೇನೆ.

ನಿಸಾರ್ ಅವರ ವಿಷಯದಲ್ಲಿ ನನಗೆ ಅಭಿಮಾನವಿರುವುದಕ್ಕೆ ಒಂದು ಹೆಚ್ಚಿನ ಕಾರಣವೂ ಇದೆ: ನನ್ನ ಸ್ವಸ್ಥಳ ಬೆಂಗಳೂರು ಜಿಲ್ಲೆಯ ಕಾನಕಾನಹಳ್ಳಿ (ಈಗ ಕನಕಪುರ). ಈ ತಾಲ್ಲೂಕಿಗೆ ಸೇರಿರುವ ಕೊಕ್ಕರೆ ಹೊಸಹಳ್ಳಿ ನಿಸಾರರ ತಂದೆಯ ಕಡೆಯ ಪೂರ್ವಿಕರ ಸ್ಥಳ ಎಂಬುದು ನನ್ನ ತಿಳಿವಳಿಕೆ. ಅವರ ತಂದೆ ಷೇಕ್ ಹೈದರ್ ಸಾಹೇಬರು ಈ ಸ್ಥಳದವರು ಎಂಬ ಕಾರಣದಿಂದಲೇ ಈ ಕವಿ, ಕೊಕ್ಕರೆ ಹೊಸಹಳ್ಳಿ ಷೇಕ್ ಹೈದರ್ ನಿಸಾರ್ ಅಹಮದ್ ಆಗಿರುವರು ಎಂಬುದೂ ನನ್ನ ಗ್ರಹಿಕೆ. ನಿಸಾರ್ ಹುಟ್ಟಿದ್ದು ದೇವನಹಳ್ಳಿ ಇರಬಹುದಾದರೂ ಪೂರ್ವಿಕರ ಊರು, ತಂದೆಯ ಊರು ನಮ್ಮ ಸ್ಥಳದ ಫಾಸಲೆಯದು ಎನ್ನುವುದು ನನಗೆ ಅಭಿಮಾನದ ಸಂಗತಿ. ಅವರು ಸಹ ಈ ವಿಷಯವನ್ನು ನನಗೆ ಒಮ್ಮೆ ತಿಳಿಸಿದ್ದುಂಟು; ಆದರೆ ನನ್ನ ಹಾಗೆ ಅಭಿಮಾನವನ್ನು ಚಪ್ಪರಿಸಿದ್ದಿಲ್ಲ. ಇದು ಏನೇ ಇರಲಿ, ಈ ಕವಿಯ ವಂಶದ ಬೇರುಗಳು ತಮ್ಮ ಊರಿನಲ್ಲಿವೆ ಎನ್ನುವುದು ಆ ಸ್ಥಳದವರಿಗೆ ತಿಳಿದಿರಲಾರದು: ತಿಳಿಯುವಷ್ಟು ಮಟ್ಟಿಗೆ ನಮ್ಮ ಹಳ್ಳಿಗಾಡುಗಳಲ್ಲಿ ವಿದ್ಯೆ ಸಾಹಿತ್ಯ ಸಂಸ್ಕೃತಿಗಳ ಅರಿವು ಬೆಳೆದಿಲ್ಲ ಎಂಬುದಂತೂ ನಿಜ.

ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ ಹುಟ್ಟಿ (೫-೨-೧೯೩೬) ಹೊಸಕೋಟೆ ಬೆಂಗಳೂರುಗಳಲ್ಲಿ ಬಾಲ್ಯ ವಿದ್ಯಾಭ್ಯಾಸ ಮುಗಿಸಿ ಭೂ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಆ ವಿಜ್ಞಾನವನ್ನೇ ಸರ್ಕಾರಿ ವಿಜ್ಞಾನ ಕಾಲೇಜುಗಳಲ್ಲಿ ಬೋಧಿಸುತ್ತಿದ್ದ ನಿಸಾರ್ ಆ ವಿಭಾಗದ ತಮ್ಮ ಅಧ್ಯಾಪಕರಾದ ಪ್ರೊ. ಬಿ. ಪಿ. ಗೋವಿಂದರಾಜು ಮೊದಲಾದವರನ್ನು

ಗೌರವದಿಂದ ನೆನೆಯುತ್ತಿದ್ದುದನ್ನು ನಾನು ಬಲ್ಲೆ. ಈ ಅಧ್ಯಾಪಕರಲ್ಲಿ ಕೆಲವರನ್ನು ನಾನು ನನ್ನ ಮೈಸೂರು ವಿಶ್ವವಿದ್ಯಾಲಯದ ಸೇವೆಯಲ್ಲಿ, ಅವರ ಸಾಹಿತ್ಯ ಪ್ರೀತಿಗಾಗಿ ಪರಿಚಯ ಮಾಡಿಕೊಂಡಿದ್ದೆ.

ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ನಿಸಾರ್ ಅಹಮದ್ ತಮ್ಮ ಚತುರ ವಾಗ್ಮಿತೆ, ಶಾಸ್ತ್ರ ಪಾಂಡಿತ್ಯಗಳಿಂದ ಜನಪ್ರಿಯತೆ ಗಳಿಸಿದ್ದಿರಬೇಕು, ವಿದ್ಯಾರ್ಥಿಗಳ ಪ್ರೀತಿ ಗೌರವ ಗಳನ್ನೂ ಗಳಿಸಿದ್ದಿರಬೇಕು. ಈ ವಿಷಯ ನನಗೆ ಅಷ್ಟೇನೂ ತಿಳಿಯದು. ಆದರೆ ವೃತ್ತಿಗಿಂತ ಅವರ ಸಾಹಿತ್ಯ ಸಂಸ್ಕಾರ ಪ್ರವೃತ್ತಿಗಳು ಅವರಿಗೆ ತಂದುಕೊಟ್ಟಿರುವ ಹೆಸರು ತುಂಬ ದೊಡ್ಡದು. ಈ ಸಂಸ್ಕಾರ ಪ್ರವೃತ್ತಿಗಳು ಅವರ ವಿದ್ಯಾರ್ಥಿ ದಶೆಯಲ್ಲಿಯೇ ಕುದುರಿ ಬೆಳೆದಿರಬೇಕು. ಅವರಿಗೆ ಅಧ್ಯಾಪಕರಾಗಿದ್ದ ಎಲ್. ಗುಂಡಪ್ಪ, ಜಿ. ಪಿ. ರಾಜರತ್ನಂ ಅಂಥವರು ಅದಕ್ಕೆ ದೋಹದ ಕ್ರಿಯೆ ನಡಸಿದರು ಎಂದು ಕೇಳಿದ್ದೇನೆ.

ಈಚೆಗೆ, ಎಲ್. ಗುಂಡಪ್ಪನವರ ಜನ್ಮ ಶತಾಬ್ದದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಯಾಗಿ ಭಾಗವಹಿಸಿ ಮಾತಾಡುತ್ತ ನಿಸಾರ್ ಅವರು, ಗುಂಡಪ್ಪನವರು ಯಾವುದೋ ಒಂದು ಊರಿನ ಒಂದಾನೊಂದು ಸಭೆಯ ಸಂದಣಿಯಲ್ಲಿ ತಮ್ಮನ್ನು ಗುರುತಿಸಿ, ಇನ್ನೂ ವಿದ್ಯಾರ್ಥಿ ಯಾಗಿ ಚಿಕ್ಕವನಾದ ತಮ್ಮನ್ನು ಹತ್ತಿರ ಕರೆದು, ಬೆನ್ನು ತಟ್ಟಿ, ವರ್ಧಿಷ್ಣು ಕವಿಯೆಂದು ಸಭೆಗೆ ಪರಿಚಯ ಮಾಡಿಕೊಟ್ಟ ಸಂಗತಿಯನ್ನು ಆತ್ಮೀಯತೆಯಿಂದ ನೆನಪು ಮಾಡಿಕೊಂಡರು.

ಕವಿ, ವಿಮರ್ಶಕ, ಪ್ರಬಂಧಕಾರ, ಅನುವಾದಕ, ಗ್ರಂಥ ಸಂಪಾದಕ, ಶಿಶು ಸಾಹಿತ್ಯ ಲೇಖಕ—ಹೀಗೆ ಹಲವು ಮುಖದ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಿಸಾರ್ ನಿರಂತರವಾಗಿ ಶ್ರಮಿಸುತ್ತ ಬಂದಿದ್ದಾರೆ. ಅವರ ಗದ್ಯಕೃತಿಗಳು ಕೂಡ ಪದ್ಯಕೃತಿಗಳ ಹಾಗೆಯೇ ಚೆಲುವಿನ ಚಿತ್ತಾರಗಳು, ಬೆಡಗಿನ ಬಣ್ಣದ ಗೊಂಬೆಗಳು. ಅವರ ಗದ್ಯಪದ್ಯಗಳ ಭಾಷೆ ಶೈಲಿಗಳಿಗೆ ಸಂಸ್ಕೃತ-ಕನ್ನಡ ನುಡಿಗಟ್ಟಿನ ಒಂದು ಕದಂಬ ಕಾಂತಿಯಿದೆ; ಅನನ್ಯತೆ ಯಿದೆ. ಸಹೃದಯರನ್ನು ತಮ್ಮತ್ತ ಸಮ್ಮೋಹಕವಾಗಿ ಸೆಳೆದುಕೊಳ್ಳುವ ಆತ್ಮೀಯತೆಯಿದೆ. ತಮ್ಮ ಪದ್ಯ ಸಂಕಲನಗಳಿಗೆ ಅವರು ಕೊಟ್ಟಿರುವ ತಲೆ ಬರೆಹಗಳೇ ಆಕರ್ಷಕವಾಗಿವೆ. ಕೆ.ಎಸ್.ನ., ಪು.ತಿ.ನ. ಅವರ ಗದ್ಯ ರಚನೆಗಳಂತೆ ಅವರ ಗದ್ಯ ಲೇಖನಗಳು ಕಾವ್ಯರಸ ಪ್ಲಾವಿತಗಳಾಗಿವೆ. ಮಕ್ಕಳಿಗಾಗಿಯೂ ಅವರು ಆಯ್ದ ವಿಷಯಗಳ ಮೇಲೆ ಬರೆದಿದ್ದಾರೆ. ಅವರು ಮಾಡಿರುವ ರಷ್ಯನ್ ಕತೆಗಳ ಅನುವಾದಕ್ಕೆ, ಹಕ್ಕಿಗಳನ್ನು ಕುರಿತ ಪುಸ್ತಕಕ್ಕೆ ಬಹುಮಾನಗಳು ಬಂದಿವೆ. ಕೆಲವು ಷೇಕ್ಸ್‌ಪಿಯರ್ ನಾಟಕಗಳನ್ನು ಅನುವಾದಿಸಿ, ಅವೂ ಜನಪ್ರಿಯವಾಗಿವೆ. ಮಾಸ್ತಿಯವರ ಕಾದಂಬರಿ `ಚಿಕವೀರ ರಾಜೇಂದ್ರ'ದ ಮೇಲೆ ಅವರು ಸಂಪಾದಿಸಿದ ಚಿಂತನ ಗ್ರಂಥ, ಆ ಮಹಾ ಸಾಹಿತಿಗೆ ಅವರು ಸಲ್ಲಿಸಿರುವ ಗೌರವದ ಕಾಣಿಕೆ.

ಹೀಗೆ ಹೇಳುವಾಗ ಒಂದು ಸಂಗತಿ ಇಲ್ಲಿ ನೆನಪಾಗುತ್ತಿದೆ: ಈಗ್ಗೆ ಕೆಲವು ವರ್ಷಗಳ ಹಿಂದೆ, ಪದವಿ-ಪೂರ್ವ ಶಿಕ್ಷಣ ಮಂಡಲಿಯಲ್ಲಿ, ಅದರ ಕನ್ನಡ ಪಠ್ಯ ನಿಯಾಮಕ ಮಂಡಳಿಯ ಒಬ್ಬ ಸದಸ್ಯನಾಗಿ ಕೆಲಸ ಮಾಡುವ ಒಂದು ಅವಕಾಶ ನನಗೆ ಒದಗಿ ಬಂದಿತ್ತು. ಪ್ರಥಮ ಪಿ.ಯು.ಸಿ., ಐಚ್ಛಿಕ ಕನ್ನಡ ಪಠ್ಯದಲ್ಲಿ (`ಸಿರಿಗನ್ನಡ': ೧೯೮೭) ನಿಸಾರ್ ಅವರ

ಒಂದು ಕವನವನ್ನು ಸೇರಿಸಬೇಕೆಂದು ಸದಸ್ಯರು ಅಭಿಪ್ರಾಯಪಟ್ಟರು. 'ಈ ಪದ್ಯ ಆಗಬಹುದೇ', 'ಆ ಪದ್ಯ ಆಗಬಹುದೇ' ಎಂದು ಸದಸ್ಯರು ತಮ ತಮಗೆ ತೋರಿದ ಕವನವನ್ನು ಸೂಚಿಸುತ್ತಿದ್ದರು; ಇತರರಿಗೆ ಅದು ಸಮಾಧಾನ ತರುತ್ತಿರಲಿಲ್ಲ. ಆಗ್ಗೆ ನಾನು ಕನ್ನಡ ನಾಡು ನುಡಿಗಳ ಪ್ರೀತಿಯನ್ನು ಸುಂದರವಾಗಿ ಅಭಿವ್ಯಕ್ತಿಗೊಳಿಸಿರುವ ನಿಸಾರರ 'ನಿತ್ಯೋತ್ಸವ' ಪದ್ಯವನ್ನು ಆಯ್ಕೆಗೆ ಸಲಹೆ ಮಾಡಿದೆ. ಕೂಡಲೇ ಅಧ್ಯಕ್ಷರೂ ಸದಸ್ಯರೂ ಏಕಾಭಿಪ್ರಾಯವಾಗಿ ಅದನ್ನು ಒಪ್ಪಿಕೊಂಡರು. ಈ ಪದ್ಯದ ಜನಪ್ರಿಯತೆ ಈಗ ಮನೆಮಾತಾಗಿದೆ. ಮೈಸೂರು ಅನಂತಸ್ವಾಮಿ ಮೊದಲಾದ ಸುಗಮ ಸಂಗೀತಗಾರರು ನಿಸಾರರ ಕವನಗಳನ್ನು ಸೊಗಸಾಗಿ ಹಾಡಿ, ಅವುಗಳ ಚೆಲುವನ್ನು ಮಲ್ಲಿಗೆಯ ಪರಿಮಳದಂತೆ, ಕಸ್ತೂರಿಯ ಕಂಪಿನಂತೆ ನಾಡಿನಲ್ಲೆಲ್ಲ ಹಬ್ಬಿಸಿರುವುದು ಈಗ ತಿಳಿದ ಸಂಗತಿ. ಬಹುಶಃ ಭಾವಗೀತಗಳ ಧ್ವನಿ ಸುರುಳಿಯ ಯುಗ ಪ್ರವರ್ತಿಸಿದ್ದು ನಿಸಾರರ ಕವನಗಳ ಮೂಲಕವೇ ಎಂದು ತೋರುತ್ತದೆ. ಇದು ನಾನು ಕೇಳಿದ ಸಂಗತಿ. ಬಹುಶಃ ಇದ್ದೀತು.

ಇಲ್ಲಿಯೇ ಇನ್ನೊಂದು ಹಳೆಯ ಸಂಗತಿ ನನ್ನ ನೆನಪಿಗೆ ಬರುತ್ತಿದೆ. ಮೈಸೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯ ಪುಸ್ತಕವೊಂದು ಸಿದ್ಧವಾಗಬೇಕಾಗಿತ್ತು ('ಕಾವ್ಯ ಸಂಚಯ': ೧೯೭೧). ಸಂಪಾದಕ ಸಮಿತಿಯ ಅಧ್ಯಕ್ಷರು ಇಲಾಖೆಯ ಮುಖ್ಯಸ್ಥ ರಾಗಿದ್ದ ಹಾ. ಮಾ. ನಾಯಕರು. ಸದಸ್ಯರಲ್ಲಿ ನಾನೂ ಒಬ್ಬ. ನಾಯಕರಿಗೆ ನಿಸಾರ್ ಪರಿಚಿತರು, ಗೆಳೆಯರು. ಆಗ್ಗೆ ಸ್ವಲ್ಪ ಮೊದಲಲ್ಲಿ ಬರೆದು ಸಾಮಾನ್ಯರನ್ನು ತನ್ನ ವಸ್ತು ವಿಶೇಷದಿಂದಲೂ ಭಾಷೆಯಿಂದಲೂ ಮರಳುಮಾಡಿದ್ದ ಅವರ 'ಕುರಿಗಳು, ಸಾರ್, ಕುರಿಗಳು' ಕವನವನ್ನು ನಾಯಕರು ಪಠ್ಯದಲ್ಲಿ ಸೇರಿಸಲು ಇಷ್ಟಪಟ್ಟಿದ್ದರು. ಅದರ ವಸ್ತುವೂ ತಲೆ ಬರಹವೂ ನವೋದಯ ಕಾವ್ಯಪದ್ಧತಿಯನ್ನೇ ಹೆಚ್ಚಾಗಿ ಮೆಚ್ಚಿಕೊಂಡಿದ್ದ ನನಗೆ ಅಷ್ಟೇನೂ ಇಷ್ಟವಾಗಲಿಲ್ಲ. ನಾಯಕರಿಗೆ ನನ್ನ ಅಸಮಾಧಾನವನ್ನು ಸೂಚಿಸಿದೆ. 'ಯಾಕೋ ವಸ್ತುವೂ ಶೀರ್ಷಿಕೆಯೂ ಇರುಸು ಮುರುಸು ಮಾಡುವಂತಿದೆ; ಹಿತವಾಗಿಲ್ಲ' ಎಂದೆ. ನಾಯಕರು ನಕ್ಕು, 'ಇರಲಿ ಬಿಡಿ ಶಾಸ್ತ್ರಿಗಳೇ, ಈಗ ಇಂಥವೂ ಬೇಕು' ಎಂದುಬಿಟ್ಟರು. ನಾನು ಸುಮ್ಮನಾದೆ.

ಇದು ನಡೆದು ಈಗ ಎಷ್ಟೋ ಕಾಲವಾಗಿದೆ. ಈ ಕವನ ಈಗ ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳ ಲೋಕದಲ್ಲಿ ಮಾಡಿರುವ ಪ್ರಭಾವ ಪರಿಣಾಮಗಳು ಯಾವ ತೆರನಾದವು ಎನ್ನುವುದನ್ನು ಇಲ್ಲಿ ಬಿಡಿಸಿ ಹೇಳಬೇಕಾಗಿಲ್ಲ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ ಮೊದಲಾದ ಗೌರವಗಳಿಗೆ ಪಾತ್ರರಾದ ನಿಸಾರ್ ಅಹಮದ್ ಅವರಿಗೆ ಬಂದಿರುವ ಪದವಿ ಪ್ರಶಸ್ತಿಗಳು ಹೇರಳವಾಗಿದೆ. ಈಚೆಗೆ ಮೈಸೂರಿನಲ್ಲಿ ನಡೆದ ಪ್ರೊ. ವಿ. ಟಿ. ತಾತಾಚಾರಿ ಪ್ರಶಸ್ತಿ ವೈಭವಪೂರ್ಣ ಸಮಾರಂಭದಲ್ಲಿ ನಾನು ಹಾಜರಿದ್ದು, ಅವರ ಕೆಲವು ಅನುಭವಗಳ ನಿವೇದನೆಯನ್ನು ಕೇಳಿ ಸಂತೋಷಿಸಿದೆ. ಅವರು ಕಾವ್ಯಾರಾಮದ ಸುಂದರ ಲತಾಕುಂಜಗಳಲ್ಲಿ ಸರ್ವದಾ ಸಂತೋಷಿಸುವುದು. ಅವರಿಂದ ಕನ್ನಡ ಕಾವ್ಯ ಭಂಡಾರ ನಿರಂತರ ಸಂಪದ್ಭರಿತವಾಗುತ್ತಿರುವುದು ನೆಮ್ಮದಿಯ

ವಿಷಯ. ಈಚೆಗೆ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ರಜತೋತ್ಸವ ನಿಮಿತ್ತ ಏರ್ಪಾಟಾಗಿದ್ದ ಹಿರಿಯ ಕವಿಗಳ ಕವಿಗೋಷ್ಠಿಯಲ್ಲಿ ನನ್ನ ಆಹ್ವಾನದ ಮೇಲೆ ಭಾಗವಹಿಸಿದ್ದನ್ನೂ ನಾನು ನೆನೆಯಬೇಕು.

ಕನ್ನಡ ನವೋದಯದ ಕಾಲ ಘಟ್ಟದಲ್ಲಿ ಮೂರನೆಯ ಹುಲುಸು ಬೆಳೆಯ ಒಂದು ಗಟ್ಟಿ ಕಾಳು, ಕೆ. ಎಸ್. ನಿಸಾರ್ ಅಹಮದ್. ಅವರಿಗೆ ಎಲ್ಲ ಶುಭವನ್ನೂ ನಾನು ಹಾರೈಸುತ್ತೇನೆ.

ಯಾವುದೇ ಕೆಲಸದಲ್ಲಿ ಹಿತಾಹಿತತೆಯ, ಯುಕ್ತಾಯುಕ್ತತೆಯ ಅರಿವು ಪ್ರಖರ ವಾಗಿರಬೇಕು. ಯಾವುದಕ್ಕೆ ಪ್ರಾಮುಖ್ಯ ನೀಡಬೇಕು, ಯಾವುದಕ್ಕೆ ಅಲ್ಲ ಎನ್ನುವುದರ ಜೊತೆಗೆ ಬೆಲೆ, ಅಂತಸ್ತುಗಳನ್ನು ನಿಗದಿಗೊಳಿಸುತ್ತ ಮುಂದು ವರಿಯುತ್ತಿರಬೇಕಾದದ್ದು ವ್ಯಕ್ತಿಗೆ ರೂಢಿಯಾಗಬೇಕು. ಮದನಿಕೆಯ ಕಿರು ವಿಗ್ರಹಕ್ಕೆ ಮೈ ತುಂಬಾ ಅಲಂಕಾರ ನಿಬಿಡ ಕೆತ್ತನೆ ಬೇಕಾಗುವುದನ್ನು ಶಿಲ್ಪಿ ಗ್ರಹಿಸಿದಂತೆ, ಗೊಮ್ಮಟೇಶ್ವರನ ಬೃಹತ್ ಪ್ರತಿಮೆಗೆ ಸಾದಾತನವೇ ಭೂಷಣ ವೆಂಬ ತಥ್ಯವನ್ನು ಅವನು ಮನಗಾಣುವುದೇ ಔಚಿತ್ಯ ಪ್ರಜ್ಞೆ. ಈ ಕಲಾ ತತ್ತ್ವವೇ ಜೀವನಕ್ಕೂ ಅನ್ವಯಿತ—ಜಾರೋ ಬಂಡೆಯ ಮೇಲೆ ಪೋರ ಪೋರಿಯರು ಆಡಿ ನಲಿದರೆ ಅದು ಉಚಿತ; ಮುದುಕಿಯರು ಜಾರಿದರೆ ನಗೆಪಾಟಲು; ನೋಡಲು ಅಹಿತ.

(ಯುಕ್ತಾಯುಕ್ತ ವಿವೇಕ)

✧ ✧ ✧

ನಿಮಗೆ ಗೊತ್ತಿರಬೇಕು: ಸ್ವಂತ ದೇಹದ ಅಂಗವಾಗಿದ್ದರೂ ಬರಿಗೈಯನ್ನು, ಅದಕ್ಕೆ ನಿಕಟವಾಗಿರುವ ಬಾಯಿ ತನ್ನ ಬಳಿಗೆ ಆದರದಿಂದ ಬರಮಾಡಿ ಕೊಳ್ಳುವುದಿಲ್ಲ. ಕೈಯಲ್ಲಿ ಏನಾದರೂ ಇದ್ದರೆ ಮಾತ್ರ ಅದಕ್ಕೆ ಬಾಯಿಯ ಪ್ರವೇಶ. ಮನುಷ್ಯರ ವ್ಯಾವಹಾರಿಕ ಬಾಳಿನ ವಹಿವಾಟುಗಳ ವಿಷಯವೂ ಈ ಬಗೆಯದೇ.

(ವ್ಯಾವಹಾರಿಕತೆ)



ನೆನಪಿನ ಕೈ ಹಿಡಿದು ನಿಸಾರ್ ಜೊತೆ ಹಳೆಗಾಲದ ಒಂದು ಸುತ್ತು

♦ ಎಂ. ಬಿ. ಸಿಂಗ್

ಟೆಲಿಫೋನ್ ಟ್ರಿನ್‌ಗುಡುತ್ತದೆ.

'ಹಲೋ...'

'ನಮಸ್ಕಾರ ಸಿಂಗ್‌ಜಿ...'

ಆ ಕಡೆಯಿಂದ ಕೇಳಿಬರುತ್ತಿದೆ; ಪರಿಚಿತ ದನಿ.

'ಆಲೈಕುಂಮಸ್ ಸಲಾಂ—ಬೊಲೊ ಕ್ಯಾ ಬಾತ್ ಹೈ...'

'ನೀವು ಹೇಗಿದ್ದೀರಿ ಸಿಂಗ್‌ಜೀ, ನಿಮ್ಮ ಮನೆಯವರು ಚೆನ್ನಾಗಿದ್ದಾರಾ...?

'ಸಬ್ ಖೈರಿಯತ್. ಕ್ಯಾ ಹುಕುಂ ಫರಮಾಯಿಯೇ ಜನಾಬ್.'

'ಸಿಂಗ್‌ಜೀ, ನೀವು ಹೇಳಿದ್ದಿರಲ್ಲಾ...'

ಕಳೆದ ಐದು ದಶಕಗಳಿಂದಲೂ ನಮ್ಮ ನಡುವೆ ಮಾತುಕತೆ ಆರಂಭವಾಗುತ್ತಿದ್ದದ್ದು, ಮುಂದುವರಿಯುತ್ತಿದ್ದದ್ದು ಹೀಗೆಯೇ. ನಾನು ಹಿಂದೂಸ್ಥಾನಿಯಲ್ಲಿ; ಅವರು ಕನ್ನಡದಲ್ಲಿ. ಎದುರಿಗಿದ್ದರೆ ಹೂ ನಗೆ ಚೆಲ್ಲುತ್ತಾ, ತಲೆಯಾಡಿಸುತ್ತ ಸಾಗುತ್ತಿದ್ದ ಮಾತುಕತೆ. ನಾನು ಉದ್ದೇಶಪೂರ್ವಕವಾಗಿಯೇ ಮಾತಾಡುತ್ತಿದ್ದದ್ದು ಹಿಂದೂಸ್ತಾನಿಯಲ್ಲಿ. ಅವರು ಅಪ್ಪಿ ತಪ್ಪಿಯೂ ಅವರ ಮನೆ ಮಾತಾದ ಉರ್ದು/ಹಿಂದೂಸ್ತಾನಿ ಯಲ್ಲಿ ಮಾತಾಡಿದವರಲ್ಲ. ಛಲ ಬಿಡದ ತ್ರಿವಿಕ್ರಮನಂತೆ ನನ್ನ

ಹಟ ಮುಂದುವರಿಸುತ್ತಿದ್ದೇನೆ (ಅದು ಅವರಿಗೆ ಗೊತ್ತಿಲ್ಲ), ಅವರ ಬಾಯಿ ಬಿಡಿಸಲು. ಆದರೆ ಒಮ್ಮೆಯೂ ಯಶಸ್ವಿಯಾಗಿಲ್ಲ.

ಕನ್ನಡ ಪ್ರೀತಿಯ ಈ ವ್ಯಕ್ತಿ ಯಾರೆಂದು ನೀವು ಈಗಾಗಲೇ ಊಹಿಸಿರಬೇಕಲ್ಲ. ಹೌದು ಅವರೇ, ನಿಸಾರ್, ನಿಸಾರ್ ಅಹಮದ್, ನಿತ್ಯೋತ್ಸವದ ಕವಿ, ಕನ್ನಡ ಕಾವ್ಯದೇವಿಯನ್ನು ಆರಾಧಿಸಿ ಒಲಿಸಿಕೊಂಡಿರುವ ಕವಿ.

ಹಲವು ದಶಕಗಳ ಹಿಂದೆ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದದ್ದು ಲಾಲ್‌ಬಾಗ್ ಬಳಿಯ ಮಾವಳ್ಳಿಯಲ್ಲಿ. ಸಿದ್ದೇಗೌಡ ಬೀದಿಯಲ್ಲಿ ನನ್ನ ಮನೆ ಇದ್ದದ್ದು. ಮಾವಳ್ಳಿ ಟಿಫನ್ ರೂಂನ ಹಿಂಬದಿಯಲ್ಲಿ. ದಿವಂಗತ ವಿ.ಸೀ., ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ, ಕೆ. ಎಸ್. ನರಸಿಂಹಸ್ವಾಮಿ ಇವರ ಲಾಲ್‌ಬಾಗಿನ ಸಂಜೆ ವಿಹಾರ ಆರಂಭವಾಗುತ್ತಿದ್ದದ್ದು ಯಜ್ಞಪ್ಪನವರ ಎಂಟಿಆರ್ ಹೋಟೆಲಿನಲ್ಲಿನ ಆತಿಥ್ಯದ ಅನಂತರವೇ. ಅಂದು ಈ ತ್ರಿಮೂರ್ತಿಗಳ ಜೊತೆಯಲ್ಲಿ ಒಬ್ಬ ಚಿಗುರು ಮೀಸೆಯ ಯುವಕ. ಅರೇ, ಇವ ನಮ್ಮ ಗಲ್ಲಿ ರಾಜಾ ಅಲ್ಲವೇ? ಇವನಿಗೆ ಇಲ್ಲೇನು ಕೆಲಸ? ವಿ.ಸೀ. ಅವರೇ ಪರಿಚಯಿಸಿದರು ನಿಸಾರ್ ಅವರನ್ನು. ನಾಲ್ಕು ಮೆಚ್ಚುಗೆಯ ಮಾತುಗಳನ್ನೂ ಆಡಿದರು. ಆ ಗಲ್ಲಿ ರಾಜಾ ಇರುತ್ತಿದ್ದದ್ದು ಮಾವಳ್ಳಿಯಲ್ಲೇ. ಆತ ಬರುತ್ತಿದ್ದದ್ದು, ನಮ್ಮ ಮನೆ ನೆರೆಯಲ್ಲೇ ಇದ್ದ ಅವರ ಚಿಕ್ಕಪ್ಪನವರ ಮನೆಗೆ. ಮತ್ತೆ ಕೆಲವು ದಿನಗಳ ಅನಂತರ ಆಗ ಸೆಂಟ್ರಲ್ ಕಾಲೇಜ್ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಕೆ. ನರಸಿಂಹಮೂರ್ತಿ ಅವರನ್ನು ಕಾಣಲು ಹೋಗಿದ್ದೆ. ಅಲ್ಲಿ ಮತ್ತೆ ನಿಸಾರ್ ಪ್ರತ್ಯಕ್ಷ. ನರಸಿಂಹಮೂರ್ತಿಗಳು ನಿಸಾರ್ ಬಗೆಗೆ ಮತ್ತಷ್ಟು ಮಾಹಿತಿ ನೀಡಿದರು. ನಿಸಾರ್ ಅವರ ಬಗೆಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಆಗ ನಾನು ನಿಸಾರ್ ಅವರ ಕವಿತೆಗಳನ್ನು ಓದಿರಲಿಲ್ಲ. ಅವರ ಕುರಿತು ಆಸಕ್ತಿ ಹೆಚ್ಚಿತು. ಗಾಂಧಿ ಬಜಾರ್‌ನಲ್ಲಿದ್ದ ಐಟಿಐನ ಅಧಿಕಾರಿಯಾಗಿದ್ದ ಬಿ. ಕೆ. ಪಾರ್ಥಸಾರಥಿ, ಬರಹಗಾರ ಎಸ್. ರಾಮಸ್ವಾಮಿ ನಮ್ಮಿಬ್ಬರಿಗೂ ಸಮಾನ ಮಿತ್ರರಾಗಿದ್ದವರು. ನಾವು ನಾಲ್ವರು, ಭಾನುವಾರ ಹಾಗೂ ಇತರೆ ರಜಾ ದಿನಗಳಲ್ಲಿ ಕೆಲ ಸಮಯದ ಮಟ್ಟಿಗೆ ಸೇರುತ್ತಿದ್ದೆವು. ನಿಸಾರ್ ಅವರು ತಮ್ಮ ಹೊಸ ಕವಿತೆಗಳನ್ನು ಓದುತ್ತಿದ್ದರು. ಚರ್ಚೆ, ಚರ್ಪು ಜೊತೆಯಲ್ಲೇ ಸಾಗುತ್ತಿದ್ದವು. ಅಂತಹದೊಂದು ಸಂದರ್ಭ. ನಿಸಾರ್ ಷೇಕ್ಸ್‌ಪಿಯರ್‌ನ ನಾಟಕಗಳ ಅನುವಾದ ಪ್ರಾರಂಭಿಸಿದ್ದರು. 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಆ ಅನುವಾದವಾಗಿತ್ತು. ನಿಸಾರ್ ಕವಿತಾರಚನೆಗೆ ಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂದು ನನ್ನ ಆಸೆ. 'ಭಾಷಾಂತರ ಮಾಡಲು ಬಹಳ ಮಂದಿ ಇದ್ದಾರೆ. ಕವಿತಾರಚನೆಗೆ ಗಮನ ಕೊಡಿ' ಎಂದು ಹೇಳಿದೆ. ಗೇಲಿ ಮಾಡಿದೆ. ಕಟುವಾಗಿ ಟೀಕಿಸಿದೆ. ಅಂದೇನೋ ನಾನು ದುಡುಕಿದೆ, ಕಟು ಮಾತಾಡಿದೆ. ನಿಸಾರ್ ಮುಖದಲ್ಲಿ ಎಳ್ಳಷ್ಟು ಬೇಸರವಿಲ್ಲ. ನಗುನಗುತ್ತಲೇ 'ಆಯ್ತು ಬಿಡಿ. ಸಿ. ಆರ್. ಸಿಂಹ ನಾಟಕದ ತಯಾರಿ ನಡೆಸಿದ್ದಾರೆ. ಅದನ್ನು ಒಮ್ಮೆ ನೋಡಿ ಬಿಡಿ' ಎಂದು ಸ್ವಲ್ಪವೂ ಬೇಸರಿಸದೆ, ಸಹಜವಾಗಿ ಹೇಳಿದರು.

ನಾಟಕ ಓದಿದೆ; 'ನಟರಂಗ'ದ ಅಭಿನಯದ ಪ್ರದರ್ಶನ ನೋಡಿದೆ;

ಮೆಚ್ಚುಗೆಯಾಯಿತು. ನನ್ನ ತಪ್ಪಿನ ಅರಿವಾಗಿತ್ತು. ಹೊಗಳಿಕೆ, ತೆಗಳಿಕೆ ಎರಡನ್ನೂ ಸಮಚಿತ್ತದಿಂದ ಸ್ವೀಕರಿಸುವ ಗುಣ, ದೊಡ್ಡ ಗುಣ ನಿಸಾರ್ ಅವರದು.

`ಪ್ರಜಾವಾಣಿ`ಯಲ್ಲಿ ಸಾಪ್ತಾಹಿಕ ಪುರವಣಿ ಆರಂಭವಾಯಿತು. ಸಾಪ್ತಾಹಿಕ ಪುರವಣಿ ಕುಟುಂಬದ ವಾರಾಂತ್ಯದ ಓದಿನ ಆವಶ್ಯಕತೆಗಳನ್ನು ಪೂರೈಸುವಂತೆ ರೂಪಿಸಲಾಗಿತ್ತು. ಅದು ನನ್ನ ಹೊಣೆಗಾರಿಕೆಯೂ ಆಗಿತ್ತು. ಅಂಕಣಗಳು ಆರಂಭವಾದವು. ಬರಹಗಾರರ ಬರ. ಇದ್ದ ಹತ್ತು-ಇಪ್ಪತ್ತು ಮಂದಿಯೇ ಎಲ್ಲ ಪತ್ರಿಕೆಗಳ ಆವಶ್ಯಕತೆಯನ್ನು ಪೂರೈಸುವ ಸನ್ನಿವೇಶ. ಹೊಸ ಬರಹಗಾರರನ್ನು ಬೆಳೆಸುವುದು ಅನಿವಾರ್ಯವಾಯಿತು. ನನ್ನ ಪ್ರಯೋಗದ `ಮೊದಲ ಬಲಿಪಶು'—ಗೆಳೆಯ ನಿಸಾರ್. 'ಕವಿಗಳೇ, ಪುಸ್ತಕ ವಿಮರ್ಶೆ ಮಾಡಲು ಸಾಧ್ಯವೇ?' ಪ್ರಯತ್ನಿಸುವ ಛಲ ನಿಸಾರರದು. ಪುಸ್ತಕಗಳನ್ನು ಕೊಟ್ಟಾಯಿತು, ವಿಮರ್ಶೆ ಬಂದಿತು. ವಿಶ್ವಾಸವಿತ್ತು ತಮ್ಮ ಬರವಣಿಗೆಯಲ್ಲಿ ನಿಸಾರರಿಗೆ. ಪ್ರಕಟಣೆಗೆ ಮುನ್ನ, ನನ್ನ ಹಿರಿಯ ಸಹೋದ್ಯೋಗಿ ವೈಎನ್‌ಕೆ ಅವರಿಗೆ ತೋರಿಸಿದೆ. ವೈಎನ್‌ಕೆ `ಚೆನ್ನಾಗಿದೆ, ಯಾರು ಬರೆದಿದ್ದು' ಎಂದು ಕೇಳಿದರು. `ನಿಸಾರ್' ಎಂದೆ. `ಸಿಂಗ್, ನಿಮ್ಮ ಆಯ್ಕೆ ಒಳ್ಳೆಯದು, ನಿಸಾರ್‌ಗೆ ಪ್ರೋತ್ಸಾಹ ನೀಡಿ' ಎಂದರು. ವಿಮರ್ಶೆಗಳು ಪ್ರಕಟವಾದವು. ಸಾಹಿತ್ಯ ವಲಯಗಳಲ್ಲೂ ಮೆಚ್ಚುಗೆ ಗಳಿಸಿದವು. ನನಗೆ ಆತ್ಮವಿಶ್ವಾಸ ಮೂಡಿತು. ಹೊಸ ಬರಹಗಾರರ ಬೇಟೆಗೆ ತೊಡಗಿದೆ. 'ಪ್ರಜಾವಾಣಿ', 'ಸುಧಾ' ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಗಳು ಆರಂಭವಾದಾಗ, ಮೊದಲು ಪ್ರಕಟವಾದವು, ನಿಸಾರ್ ಬರೆದ ವಿಮರ್ಶೆಗಳೇ. ತಕಳಿ ಶಿವಶಂಕರ ಪಿಳ್ಳೆ ಅವರು ಮಲಯಾಳಂನಲ್ಲಿ ಬರೆದ `ಚೆಮ್ಮೀನ್` ಕಾದಂಬರಿಯ ಕನ್ನಡ ಅನುವಾದ: 'ಕೆಂಪು ಮೀನು`—ಅನುವಾದಕರು ನಾ. ಕಸ್ತೂರಿ. ವಿಮರ್ಶೆ ಮಾಡುವ ಕಾರ್ಯ ನಿಸಾರ್ ಅವರಿಗೆ. ಹಿರಿಯ ಲೇಖಕರ ಕೃತಿಯ ಬಗೆಗೆ ವಿಮರ್ಶೆ ಬರೆಯಲು ನಿಸಾರ್‌ಗೆ ಹಿಂಜರಿಕೆ. ಪ್ರಯತ್ನಿಸಲು ಪ್ರೋತ್ಸಾಹ ನೀಡಿದೆ. ಮಲಯಾಳಂ ಬಲ್ಲವರಿಂದ ಮೂಲ ಕೃತಿಯನ್ನು ಓದಿಸಿ ಕೇಳಿಕೊಂಡರು. ವಿಮರ್ಶೆ ಬರೆದರು. ಭಾಷಾಂತರದ ದೋಷಗಳದ್ದೇ ಒಂದು ದೊಡ್ಡ ಪಟ್ಟಿಯಾಯಿತು. ವಿಮರ್ಶೆಗೆ ಯಾವ ಅಪಸ್ವರವೂ ಕೇಳಿಬರಲಿಲ್ಲ. ನಿಸಾರ್‌ಗೆ ತಮ್ಮ ಬರವಣಿಗೆಯಲ್ಲಿ ಹೆಚ್ಚಿದ ವಿಶ್ವಾಸ, ಬರೆಯುವ ಉತ್ಸಾಹ.

ಪತ್ರಿಕೆಯ ಹಲವಾರು ಬಗೆಯ ಆವಶ್ಯಕತೆಗಳನ್ನೂ ಪೂರೈಸಲು ನಿಸಾರ್ ಅವರ ಗೆಳೆತನವನ್ನು `ದುರುಪಯೋಗ`ಪಡಿಸಿಕೊಂಡಿದ್ದೇನೆ. ಕೆಲವು ಕೋರಿಕೆಗಳಂತೂ ವಿಚಿತ್ರ. ಆ ದಿನಗಳಲ್ಲಿ ಅಂದರೆ ೬೦ರ ದಶಕದ ಆರಂಭದ ಕಾಲದಲ್ಲಿ ಜನಸಂಘ `ದೀಪಧಾರಿ`ಯಾಗಿ, ದೇಶದಾದ್ಯಂತ ಚಟುವಟಿಕೆ ಹರಡಿಕೊಂಡಿತ್ತು. `ದೀಪ` ಕುರಿತು ಕವಿತೆ ಬರೆಯಿರಿ ಎಂದು ಕೇಳಿದೆ. ನಿಸಾರ್ ಪ್ರತಿಕ್ರಿಯೆಯ ರೂಪವಾಗಿ ಚಿಕ್ಕದಾದರೂ ಪರಿಣಾಮಕಾರಿಯಾದ ಕವನ ಬರೆದು ಭೇಷ್ ಎನ್ನಿಸಿಕೊಂಡರು. ಅದು `ಪ್ರಜಾವಾಣಿ` ದೀಪಾವಳಿ ಸಂಚಿಕೆಯಲ್ಲಿ ಅಚ್ಚಾಯಿತು.

ವಾರ್ಷಿಕ ವಿಶೇಷ ಸಂಚಿಕೆಯ ಕೊನೆಯ ಪುಟ ಸಾಮಾನ್ಯವಾಗಿ ಜಾಹೀರಾತಿಗೆ ಮೀಸಲು. ಆ ಪದ್ಧತಿಯನ್ನು ತಪ್ಪಿಸುವ ಉದ್ದೇಶ. ಕೊನೆಯ ಪುಟ, ಕೊನೆಯ ಉಲ್ಲಾಸಕರ

ಓದು ಆಗಬೇಕೆಂದು ನಮ್ಮ ಆಶಯ.

ಅದರಲ್ಲಿ ಕಿಕ್ ಕೊಡುವ ಬರಹ ಪ್ರಕಟಿಸುವ ಉದ್ದೇಶ. ನಿಸಾರ್ ನೆರವನ್ನು ಯಾಚಿಸಿದೆ. ಇದೋ, ಅವರು ಬರೆದ ಮನೋಜ್ಞ ಪದ್ಯದ ಕೆಲವು ಸಾಲುಗಳು:

'ನಗ್ತೀರ ನನ್ ಹಿಂದೆ, ನಗ್ರಯ್ಯಾ ನಗ್ರಿ,
ಸುಮ್ನೆ ಸಿಕ್ಲಿಲ್ಲ ಹೆಸ್ರ್ ಹಿಂದಿನ್ ಡಿಗ್ರಿ.
ಮೂರ್ ವರ್ಷ ಪ್ರೊಫೆಸರ್ರ ನಾಯಿಗೆ ಸ್ನಾನ,
ಹಿರಿ ಮಗನ ಚೌಲಕ್ಕೆ ಮಖ್ಮಲ್ ಜಮ್ಖಾನ,
ಇನ್ನವರ ಮೈದುನನ್ಗೆ ಸಿನಿಮಾ ಗಾನ,
ಒಪ್ಸಿದೀನಿ ಪ್ರತಿ ದಿನಾ ಅಮ್ಮಾವ್ರಿಗೆ ಸ್ಪೋನ—
ನಗ್ತೀರ ನನ್ ಹಿಂದೆ...
'ಪದವಿ ಪಡೆದ್ ಮೇಲೂ ಪಟ್ಟೇದಿನಿ ಕಷ್ಟ
ಇಲ್ದಿದ್ರೆ ಆಗ್ತಿದ್ದೆ ಬೀದಿ ಅಲೆಯೊ ಭ್ರಷ್ಟ.
ಹಿಡಿದಿದ್ದೀನ್ ಎಂಎಲ್ಎ ರಾಮಪ್ಪ ಕಾಲ್ನ
ಕುಡ್ಸಿದೀನಿ ಕೊಡಗಟ್ಲೆ ಖೋಡೇಸ್ ಹಾಲ್ನ—
ಪ್ಯೂನಿಗು ಕೊಡ್ಸಿದೀನಿ ಒಂದ್ಜೊತೆ ಬಾಟಾ,
ಕ್ಲಾರ್ಕಿಗೆ ಬಿರಿಯಾನಿ, ತಂದೂರ್ ಪರೋಟ;
ಟೈಪಿಸ್ಟೊ ಟ್ಯಾಕ್ಸಿಯಲ್ಲಿ ಮಾಡಿದ್ದೆ ಜಲ್ಸ
ಆಫಿಸರ್ಗೆ ಕೊಡ್ಸಿದ್ದು ಹೇಳ್ಬಾರ್ದು ಹೊಲ್ಸ
ಕೂತಲ್ಲೇ ಹುಡುಕ್ಕೊಂಡು ಬರ್ಲಿಲ್ಲ ಕೆಲ್ಸ—
ಗಿಟ್ಸಿದ್ದು ಹತ್ಸಲ ಮೇಲಕ್ಕೆ ಹೆಗ್ರಿ,
ಇದನ್ ತಿಳೀದೆ ನಗ್ತೀರ? ನಗ್ರಯ್ಯಾ ನಗ್ರಿ.'

(ನಗ್ತೀರ ನನ್ ಹಿಂದೆ)

—ಈ ಕವಿತೆ ೪೦ ವರ್ಷಗಳ ಹಿಂದೆ ರಚಿತವಾಗಿದ್ದರೂ ಇಂದಿಗೂ ಜನಪ್ರಿಯ, ಇಂದಿಗೂ ಪ್ರಸ್ತುತ: ಶಿಕ್ಷಣ ಕ್ಷೇತ್ರದ ದುರ್ವಿದ್ಯಮಾನಗಳಿಗೆ ಅಂಕುಶಪ್ರಾಯ; ಕೈಗನ್ನಡಿ.

'ಪ್ರಜಾವಾಣಿ'ಯ ನನ್ನ ಸಹೋದ್ಯೋಗಿ ಕುಶಲಾ ಡಿಮೆಲೊ ಅವರ ಪತಿ ರಸ್ತೆ ಅಪಘಾತದಲ್ಲಿ ಮೃತರಾದರು. ಕ್ಯಾಥೊಲಿಕ್ ಕ್ರೈಸ್ತರ ಸಮಾಧಿಯ ಮೇಲೆ ಶಿಲಾಫಲಕ ಇಟ್ಟು ಒಂದು ಚರಮಗೀತೆ ಇಲ್ಲವೇ, ಚರಮ ವಾಕ್ಯ ಬರೆಯುತ್ತಾರೆ. ನನ್ನ ಸಹೋದ್ಯೋಗಿಗೆ ತನ್ನ ಪ್ರೀತಿಯ ಪತಿಯ ಸಮಾಧಿ ವಿಶೇಷವಾಗಿರಬೇಕೆಂಬ ಆಸೆ. ಲೇಖಕ ರಾಜಶೇಖರ್ ಭೂಸನೂರಮಠ ಅವರ ಭಾವಮೈದುನ ಶ್ರೀ ಜಗದೀಶ್ ಎಂಜಿನಿಯರ್, ಶಿಲಾಶಿಲ್ಪ ತಜ್ಞರು. ಅವರು, ಕ್ರೈಸ್ತರಿಗೆ ಪ್ರಿಯವಾದ 'ಪವಿತ್ರ ಹೃದಯ'ದ ಶಿಲ್ಪ ರಚಿಸಿ ಅದರ ಕೆಳ ಭಾಗದಲ್ಲಿ ಚರಮಗೀತೆಯನ್ನು ಕೆತ್ತುವ ಸಲಹೆ ನೀಡಿದರು. ಟಿ. ಎಸ್. ರಾಮಚಂದ್ರ ರಾವ್, ನಾನು, ಸೂರಿ ಚರಮವಾಕ್ಯವನ್ನು ಬರೆಯಲು ಸಿದ್ಧತೆ ನಡೆಸಿದ್ದೆವು. ಅಷ್ಟರಲ್ಲಿ ಕಛೇರಿಗೆ ಬಂದಿದ್ದ ನಿಸಾರ್ ನಮ್ಮನ್ನು ಕೂಡಿಕೊಂಡರು. ನಿಸಾರ್‌ಗೆ ಡಿಮೆಲೊ ದಂಪತಿಗಳ ಪರಿಚಯವೂ ಇತ್ತು. ಚಿಂತನ ಮಂಥನ ಸಾಗಿದಂತೆ ಚೀಟಿಯೊಂದನ್ನು

ಕೈಗಿತ್ತರು. ಅದರಲ್ಲಿ ಬರೆದಿದ್ದ ಸಾಲುಗಳನ್ನು ಓದುತ್ತಿದ್ದಂತೆ ಕುಶಲಾ ಭಾವೋದ್ವೇಗಕ್ಕೆ ಒಳಗಾದರು, ಕಂಬನಿ ಮಿಡಿದರು:

‘ನಮ್ಮ ನಿಮ್ಮ ನಡುವೆ ನಿಂತು
ತೆರೆ ಎಳೆದರು ಸಾವು,
ಒಂದು ಗಳಿಗೆ ಅನ್ನಿಸಿದರೂ
ಬಾಳು ಬರಿಯ ನೋವು—
ನಲಿಯುತಿರಲು ಹೃದಯದಲ್ಲಿ
ನಿಮ್ಮ ನೆನಪ ಹೂವು,
ಅದರ ಗಂಧ ರಕ್ಷೆಯಲ್ಲಿ
ಸದಾ ಕುಶಲ ನಾವು.’

—ನಿಸಾರ್ ಬರೆದ ಈ ಚರಮಗೀತೆಯ ಕೊನೆಯ ನಾಲ್ಕು ಸಾಲುಗಳು ಸಮಾಧಿಯ ಮೇಲಿನ ಶಿಲೆಯಲ್ಲಿ ಅಮರವಾಗಿವೆ.

ಪ್ರೊ. ವಿ. ಕೃ. ಗೋಕಾಕರಂತಹ ಹಿರಿಯ ಸಾಹಿತಿಗಳ ಪ್ರತಿಭಾ ಸಂದರ್ಶನವಿರಲಿ, ‘ಸುಧಾ’ ಪತ್ರಿಕೆಯ ‘ಗ್ರಂಥಾಂತರಂಗ’ದ ವಿಮರ್ಶೆಗಳಾಗಲಿ, ‘ಪ್ರಜಾವಾಣಿ’ ಬಳಗ ನೀಡಿದ ಅವಕಾಶವನ್ನಾಗಲಿ ನಿಸಾರ್ ಎಂದೂ ದುರುಪಯೋಗಪಡಿಸಿಕೊಳ್ಳಲಿಲ್ಲ. ಅವರಲ್ಲಿ ಪತ್ರಿಕೆ ಇಟ್ಟ ವಿಶ್ವಾಸಕ್ಕೆ ಎಂದೂ ಚ್ಯುತಿ ತರಲಿಲ್ಲ. ನಾನು ನಿರ್ವಹಿಸಿದ ‘ಪ್ರಜಾವಾಣಿ’ ಸಾಪ್ತಾಹಿಕ ಪುರವಣಿ, ‘ಸುಧಾ’ ವಾರ ಪತ್ರಿಕೆ, ‘ಮಯೂರ’ ಮಾಸ ಪತ್ರಿಕೆಗಳ ಬರಹಗಾರರಾಗಿ ನಿಸಾರ್ ಬೆಳೆದವರು. ಕೆ. ಎಸ್. ನಿಸಾರ್ ಅಹಮದ್ ಅಂಥ ಬರಹಗಾರರಿಂದ ಪತ್ರಿಕೆಗಳಿಗೂ ಶೋಭೆ ಬಂದಿತು.

ನಿಸಾರ್ ಈಗಲೂ ಅಪರೂಪಕ್ಕೆ ಸಿಕ್ಕಿದಾಗ, ಗೆಳೆಯರ ಮುಂದೆ ನನ್ನನ್ನು ವಾಚಾಮಗೋಚರ ತೆಗಳುತ್ತಾರೆ. ಆಗ ನನಗೆ ತುಂಬಾ ಮುಜುಗರ: ‘ನನಗೆ ‘ಪ್ರಜಾವಾಣಿ’ ಮತ್ತು ‘ಸುಧಾ’ ಪತ್ರಿಕೆಗಳಲ್ಲಿ ಪ್ರಪ್ರಥಮವಾಗಿ ಎಂಟ್ರಿ ಕೊಟ್ಟ ಸನ್ಮಿತ್ರರು ಎಂ.ಬಿ. ಸಿಂಗ್. ಅನಂತರವೂ ನಿರಂತರವಾಗಿ ಉತ್ತೇಜಿಸುತ್ತ ಬಂದವರು. ಆ ಕಾಲದಲ್ಲಿ, ಅಂದರೆ ಈಗ್ಗೆ ನಲವತ್ತು-ನಲವತ್ತೈದು ವರ್ಷಗಳ ಹಿಂದೆ ಈ ಪತ್ರಿಕೆಗಳಲ್ಲಿ ಕವಿತೆ, ಕತೆ, ಲೇಖನ ಪ್ರಕಟವಾಗುವುದೆಂದರೆ ಸಾಮಾನ್ಯ ವಿಷಯವಾಗಿರಲಿಲ್ಲ. ಒಮ್ಮೆ ಈ ಪತ್ರಿಕೆಗಳಲ್ಲಿ ಹೊಸ ಲೇಖಕರ ಯಾವುದಾದರೂ ರಚನೆ ಅಚ್ಚಾದರೆ, ಅದು ಅತ್ಯಂತ ಪ್ರತಿಷ್ಠೆಯ ಸಂಗತಿ ಯೆನ್ನಿಸುತ್ತಿತ್ತು. ಹೀಗಾಗಿ, ನಾನು ಮತ್ತು ಇವೊತ್ತು ಖ್ಯಾತನಾಮರಾಗಿರುವ ನನ್ನ ಅನೇಕ ಸರೀಕರು ಸಿಂಗ್ ಅವರಿಗೆ ಸದಾ ಕೃತಜ್ಞರಾಗಿರಬೇಕು’ ಎಂದು ಅದೆಷ್ಟು ಸಲ ಹೇಳಿದ್ದಾರೋ. ಅದು ಅವರ ಸಜ್ಜನಿಕೆಗೆ ಹೆಗ್ಗುರುತು. ಹೀಗೆ ಅವರು ಜ್ಞಾಪಿಸಿಕೊಳ್ಳುವ ಇನ್ನಿಬ್ಬರು ಹಿರಿಯ ಪತ್ರಕರ್ತರೆಂದರೆ ‘ಚಿತ್ರಗುಪ್ತ’ ವಾರಪತ್ರಿಕೆಯ ಸಂಪಾದಕ ದಿ. ಎಂ. ಎಸ್. ಭಾರದ್ವಾಜ್ ಮತ್ತು ದಿ. ಎನ್. ಎಸ್. ಸೀತಾರಾಮ ಶಾಸ್ತ್ರಿ ಅವರು.

ಇನ್ನೊಮ್ಮೆ (ಬಹುಶಃ ೬೦ರ ದಶಕದಲ್ಲಿ ಎಂದು ತೋರುತ್ತದೆ) ಕೇಂದ್ರ ಸಿನಿಮಾ ಸೆನ್ಸಾರ್ ಬೋರ್ಡ್‌ನವರು ಸಾಹಿತ್ಯವನ್ನು ಸಮರ್ಪಕವಾಗಿ ಬಲ್ಲ, ವಿವಾದಾತೀತವಾದ ಒಬ್ಬ

ವ್ಯಕ್ತಿಯನ್ನು ಪ್ರಾದೇಶಿಕ ಸಂಸ್ಥೆಗೆ ಸದಸ್ಯನನ್ನಾಗಿ ಮಾಡುವ ಉದ್ದೇಶದಿಂದ ನನ್ನ ಸಲಹೆಯನ್ನು ಕೇಳಿದರು. ನಾನು ಹೆಚ್ಚು ಯೋಚನೆ ಮಾಡದೆ ತಟಕ್ಕನೆ ಸೂಚಿಸಿದ್ದು ನಿಸಾರ್ ಅವರ ಹೆಸರನ್ನು. ಮೂರು ವರ್ಷದ ಅವಧಿಯವರೆಗೆ ಅವರು ಸದಸ್ಯರಾಗಿ ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸಿದರು. ಅದರಿಂದ ನನಗೆ ಹೆಮ್ಮೆ ಎನಿಸಿತ್ತು. ಈ ಸಂಗತಿಯನ್ನು ನಿಸಾರ್ ನನ್ನ ಪರೋಕ್ಷದಲ್ಲಿ ಮಾತ್ರವಲ್ಲ, ನನ್ನೆದುರಿಗೂ ಮಿತ್ರರೊಡನೆ ಪ್ರಸ್ತಾಪಿಸಿ ನನ್ನಲ್ಲಿ ತುಂಬ ಸಂಕೋಚ ಮೂಡಿಸುತ್ತಾರೆ. ಇದು ಅವರ ದೊಡ್ಡ ಗುಣ.

ನಿಸಾರ್‌ಜೀ, ಸಾವಿರವಾಗಲಿ ನಿಮ್ಮಂತಹ ಸಹೃದಯ ಬರಹಗಾರರ ಸಂತತಿ.

ಜನರಿಗೆ ಅರ್ಥವಾಗುವಂತೆ ಬರೆಯುವುದೇ ಮಹಾಪರಾಧ ಎನ್ನುವ, ಜನಾದರಣೆ ಜನಪೂಜ್ಯತೆಯನ್ನು ಗಳಿಸುವುದನ್ನು ಸಸ್ತಾ ಮಾಲಿನ ಜಾಹೀರಾತಿನಂತೆ ಕೀಳಾಗಿ ಎಣಿಸುವ ಮಹಾನುಭಾವರದು ಒಂದು ನಮೂನೆಯ ಸಾರಸ್ವತ ಅಪಾರ್ಥೈಡ್ ಧೋರಣೆ. ಖಾಸಗಿ ಅನುಭವ ಸಾರ್ವಜನಿಕ ಅನುಭವ ಆಗಬಾರದೆಂಬ ಕಾಯ್ದೆ ಎಲ್ಲಿದೆ? ಅದು ಲೇಖಕ, ಕಲೆಗಾರನ ಅಭಿವ್ಯಕ್ತಿಯ, ಸಂವಹನತೆಯ ಸಾಮರ್ಥ್ಯಕ್ಕೆ ಸಂಬಂಧಿಸಿದ ಪ್ರಶ್ನೆ. ಅಭಿಪ್ರಾಯಗಳಲ್ಲಿ ಸಂಯಮರಹಿತ ಸ್ವೇಚ್ಛಾಚಾರ, ದಬಾವಣೆಯ ಏಕಪಕ್ಷೀಯ ಧಾಟಿ ಸಾಹಿತ್ಯ ಕ್ಷೇತ್ರವನ್ನು ವಸಾಹತುಷಾಹಿ ಆಸ್ತಿಯಾಗಿ ಪರಿವರ್ತಿಸುವ ಅಕ್ಷರ ಆಕ್ರಮಣಗಳ ಹುನ್ನಾರು. ಈ ಒಂಟಿ ಸಲಗತನ, ಸ್ವಲೀನನ ಗುಪ್ತಕ್ರಿಯೆಯಂತೆ ಸಮಾಜ ಕಂಟಕ ವಿಕೃತಿಗಳನ್ನು ಮಾತ್ರ ಹೊಸೆಯಬಲ್ಲದು.

(ಅರ್ಥವಾಗುವಂತೆ ಬರೆಯುವಿಕೆ)

✧ ✧ ✧

ಜಬರದಸ್ತಿ ಮಧ್ಯಯುಗದ ಊಳಿಗಮಾನ್ಯ ವ್ಯವಸ್ಥೆಯ ಕಾರ್ಯತಂತ್ರವಿದ್ದೀತು. ಪ್ರಜಾತಂತ್ರಕ್ಕೆ ಅದು ಹೇಳಿ ಮಾಡಿಸಿದ್ದಲ್ಲ. ಮನೋವೈಷಮ್ಯಕ್ಕೆ ಮನವೊಲಿಕೆಯೇ ಮದ್ದು.

(ಸಾಮೋಪಾಯ)



ನೆಲಸಿದೆ ನಿಮ್ಮ ವಕ್ಷದೊಳ್ ಕಾವ್ಯಲಕ್ಷ್ಮಿ

♦ *ಡಾ. ಬಿ. ಎ. ವಿವೇಕ ರೈ*

ಭಾವನೆ ಮತ್ತು ವಿಮರ್ಶೆ—ಇವುಗಳನ್ನು ಸಾಮಾನ್ಯವಾಗಿ ಎರಡು ವಿರುದ್ಧ ನೆಲೆಗಳಲ್ಲಿ ಪರಿಭಾವಿಸಲಾಗುತ್ತದೆ. ಕವಿಗಳಿಗೆ ಸಂಬಂಧಿಸಿದ ಸಂದರ್ಭಗಳಲ್ಲಂತೂ ವೈಚಾರಿಕತೆ ಎನ್ನುವುದಕ್ಕೆ ನಿರ್ದಿಷ್ಟ ಆಲೋಚನಾ ವಿನ್ಯಾಸಗಳ ಅಭಿವ್ಯಕ್ತಿ ಎನ್ನುವ ಸರಳ ತೀರ್ಮಾನವೊಂದು ಪ್ರಚಲಿತವಾಗಿದೆ. ಸಾಂಸ್ಕೃತಿಕ ಭಿನ್ನತೆ ಮತ್ತು ಬಿಕ್ಕಟ್ಟು ಎನ್ನುವ ಚರ್ಚೆಗಳು ಕೂಡ ಎರಡು ವಿರುದ್ಧ ಧ್ರುವಗಳ ಮುಖಾಮುಖಿಯ ಚರ್ಚೆಗೆ ಮಾತ್ರ ಸೀಮಿತವಾಗಿರುತ್ತವೆ. ಬರಹಗಾರರೊಬ್ಬರ ಅಭಿವ್ಯಕ್ತಿಯ ನಿರ್ದಿಷ್ಟ ಕ್ಷೇತ್ರ ಯಾವುದು ಮತ್ತು ಅದನ್ನು ಅವರು ಕಾಲ ಕಾಲಕ್ಕೆ ಹೇಗೆ ಮತ್ತು ಯಾಕೆ ಬದಲಾಯಿಸಿಕೊಳ್ಳುತ್ತಾರೆ ಎನ್ನುವ ಚರ್ಚೆ ಕುತೂಹಲ ಕಾರಿಯಾದುದು. ಅನೇಕ ಬಾರಿ ಸಾಹಿತಿಯೊಬ್ಬರ ಸಾಹಿತ್ಯ ನಿರ್ಮಾಣದ ಹಿಂದಿರುವ ಪ್ರೇರಣೆ, ಪ್ರಭಾವಗಳ ಅನ್ವೇಷಣೆ ಕೂಡ ಯಾಂತ್ರಿಕ ರೂಪದ್ದಾಗಿದ್ದು ಕೃತಿ ಶೋಧದ ದೃಷ್ಟಿಯಿಂದ ಹೆಚ್ಚೇನೂ ಪರಿಣಾಮಕಾರಿಯಾಗಿರುವುದಿಲ್ಲ. ಹೀಗಾಗಿ, ಕವಿ ಮತ್ತು ಕೃತಿಗಳ ಅಧ್ಯಯನಕ್ಕೆ ಸಿದ್ಧವಾದ ಮಾದರಿಗಳನ್ನು ಬಿಟ್ಟು ಲೇಖಕರೊಬ್ಬರ ನೇರ ಸಂಬಂಧ ಮತ್ತು ಕೃತಿ ಸಂಬಂಧಗಳ ಮೂಲಕ ಅರ್ಥೈಸುವ ಅಧ್ಯಯನ ವಿಧಾನವನ್ನು ಕಂಡುಕೊಳ್ಳುವ ಅಗತ್ಯವಿದೆ.

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಕವಿ ಕೆ. ಎಸ್. ನಿಸಾರ್ ಅಹಮದ್ ಅವರನ್ನು ಮತ್ತು ಅವರ ಸಾಹಿತ್ಯವನ್ನು

ಮತ್ತೆ ಹೊಸದಾಗಿ ಪರಿಭಾವಿಸಬಹುದು. ಹೊರಗೆ ಕಾಣುವ ಮತ್ತು ಒಳಗೆ ನಿಜವಾಗಿರುವ ಪ್ರದರ್ಶಕ ಮತ್ತು ದಾರ್ಶನಿಕ ಅಂಶಗಳು ನಮ್ಮ ವಿವರಣೆಗಳಿಗೆ ಮೀರಿ ಇರುತ್ತವೆ ಎನ್ನುವುದಕ್ಕೆ ನಿಸಾರ್ ಅಹಮದ್ ಉತ್ತಮ ನಿದರ್ಶನ. ಸೂಟು ಬೂಟಿನ ಅಪ್ಪಟ ಆಧುನಿಕ ವೇಷಧಾರಿ ನಿಸಾರರು ಕವಿತ್ವದಲ್ಲಿ ಮತ್ತು ಮನುಷ್ಯತ್ವದಲ್ಲಿ ತುಂಬಾ ಅನೌಪಚಾರಿಕ ದೇಸೀ ವ್ಯಕ್ತಿತ್ವದ ಕವಿ. ಹೆಚ್ಚಾಗಿ ಇಂಗ್ಲಿಷನ್ನು ಸಂಭಾಷಣೆಯಲ್ಲಿ ಬಳಸದ, ಆಡು ಮಾತಿನ ಕನ್ನಡದಲ್ಲೇ ಪ್ರೀತಿಸುವ, ರೇಗುವ, ಸಮಜಾಯಿಸುವ ಮತ್ತು ಕೊನೆಗೆ ನಮ್ಮವರಾಗುವ ಶೈಲಿ ನಿಸಾರ್ ಅವರ ಅನನ್ಯತೆ. ಧಾರ್ಮಿಕ ನಿಷ್ಠೆ ಉಳ್ಳ ಮುಸ್ಲಿಮ್ ಆಗಿದ್ದೂ ಎಂದೂ ತನ್ನ ಮತ ಧರ್ಮವನ್ನು ಬಂಡವಾಳವಾಗಿಸಿಕೊಳ್ಳದ ಮತ್ತು ಆ ರೀತಿ ಆಗಿಸಿಕೊಳ್ಳದಿರುವುದನ್ನು ಬಂಡಾಯವೆಂದು ಸಾರಿಕೊಳ್ಳದ ಅಪ್ಪಟ ದೇಸೀ ಕನ್ನಡಿಗ. ಹಾಗಾಗಿ, ಸಂಸ್ಕೃತಿಯ ವಿಮರ್ಶಕರು ಮುಸ್ಲಿಮ್ ಲೇಖಕರನ್ನು ಕುರಿತು ಚರ್ಚೆ ಮಾಡುವಾಗ ನಿಸಾರರು ಅವರ ಕೈಗೆ ಸಿಕ್ಕುವುದಿಲ್ಲ. ಏಕೆಂದರೆ ನಿಸಾರ್ ಅವರಿಗೆ ಸಾಂಸ್ಕೃತಿಕ ಬಿಕ್ಕಟ್ಟು ಎನ್ನುವುದು ಕೇವಲ ಎರಡು ಧರ್ಮಗಳ ನಡುವಿನದ್ದು ಮಾತ್ರವಲ್ಲ. ಪರಂಪರೆ ಮತ್ತು ಆಧುನಿಕತೆ, ನಗರ ಮತ್ತು ಹಳ್ಳಿ, ಇಂಗ್ಲಿಷ್ ಮತ್ತು ಕನ್ನಡ, ವೈಭೋಗ ಮತ್ತು ಸಹಜತೆ, ಗುಂಪುಗಾರಿಕೆ ಮತ್ತು ಒಂಟಿತನ—ಇವುಗಳನ್ನು ನಿರಂತರವಾಗಿ ಎದುರಿಸಿ ಎಲ್ಲರೊಡನಿದ್ದೂ ಎಲ್ಲರಂತಾಗದೆ, ಆದರೆ ಎಲ್ಲರ ಪ್ರೀತಿಯನ್ನು ನಿರಂತರ ಉಳಿಸಿಕೊಂಡವರು ಕವಿ ನಿಸಾರರು. ಇದು ಸಾಧ್ಯವಾದದ್ದು ಕನ್ನಡದ ಧನಾತ್ಮಕ ಪರಂಪರೆಯ ಬಗ್ಗೆ ನಿಸಾರ್ ಅವರಿಗಿದ್ದ ಅಪಾರ ವಿಶ್ವಾಸ ಮತ್ತು ಅದರ ಫಲವಾಗಿ ಪ್ರಾಂಜಲ ಮನಸ್ಸಿನ ಅಧ್ಯಯನದ ನಿಮಿತ್ತವಾಗಿ ಕುವೆಂಪು, ಡಿ.ವಿ.ಜಿ., ಬೇಂದ್ರೆ, ಮಾಸ್ತಿ, ಟಾಗೋರ್ ಅವರಂತಹ ಹಿರಿಯರನ್ನೆಲ್ಲ ಗೌರವಿಸುತ್ತಲೂ ಅಧ್ಯಯನ ಮಾಡುತ್ತಲೂ ವಿಮರ್ಶಿಸುತ್ತಲೂ ಅವರ ಕಾವ್ಯ-ಸಾಹಿತ್ಯಗಳ ಉನ್ನತ ನೆಲೆಗಳನ್ನು ತಮ್ಮದಾಗಿಸಿಕೊಳ್ಳುತ್ತಲೂ ಆಧುನಿಕತೆಯೆಡೆಗೆ ಕನ್ನಡ ಕಾವ್ಯವನ್ನು ಕೊಂಡುಹೋಗುವ ಕೆಲಸವನ್ನು ನಿಸಾರ್ ಮಾಡಿದ್ದಾರೆ. ಇನ್ನೊಂದೆಡೆ ಪಶ್ಚಿಮದ ಹಿರಿಯ ಕವಿಗಳನ್ನು, ನಾಟಕಕಾರರನ್ನು, ದಾರ್ಶನಿಕರನ್ನು ಓದುತ್ತ, ಅನುವಾದ ಮಾಡುತ್ತ ಆ ಕೃತಿಗಳ ಸಾಮಾಜಿಕ ಸನ್ನಿವೇಶಗಳನ್ನು ಬದಲಾಗುತ್ತಿರುವ ಕನ್ನಡ ನಾಡಿನೊಂದಿಗೆ ಗುರುತಿಸುವ ಕೆಲಸವನ್ನು ನಿಸಾರ್ ಸಮರ್ಥವಾಗಿ ಮಾಡಿದ್ದಾರೆ. ಹೀಗಾಗಿಯೇ ಸಂಸ್ಕೃತಿಯ ಒಳಗಿನ ಸೂಕ್ಷ್ಮಗಳನ್ನು ಅರ್ಥಮಾಡಿಕೊಳ್ಳುತ್ತ ತಮ್ಮ ನಿಲವನ್ನು ಖಚಿತಪಡಿಸುತ್ತ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಕಾಲ ಕಾಲಕ್ಕೆ ನಿರ್ಮಾಣವಾದ ಬಿರುಗಾಳಿ, ಸುಂಟರಗಾಳಿಗಳಿಗೆ ಪಕ್ಕಾಗದೆ ತಮ್ಮ ಕೊಡೆಯನ್ನು ಗಟ್ಟಿಯಾಗಿ ನೆಮ್ಮಿಕೊಳ್ಳುತ್ತ ನಡೆದು ಬಂದ ಕವಿ ನಿಸಾರ್ ಅಹಮದ್. ನವ್ಯರ ಕಾಲದಿಂದಲೂ ಅಳುತ್ತಾ ಕೂತ ಕವಿಯಲ್ಲ. ನೋವನ್ನು ನುಂಗಿ ಸಂಭ್ರಮವನ್ನು ಹಂಚುತ್ತ ಬಂದ ಕವಿ. 'ನಿತ್ಯೋತ್ಸವ'ದ ಗುಂಗು, 'ರಾಮನ್ ಸತ್ತ ಸುದ್ದಿ'ಯ ನೋವು, 'ರಂಗೋಲಿ ಮತ್ತು ಮಗ'ದ ದರ್ಶನ—ಇವು ಮೂರೂ ನಿಸಾರರ ತಾತ್ವಿಕತೆಯ ಅವಿನಾಭಾವದ ಅಂಗಗಳು. ಇವುಗಳಲ್ಲಿ ಒಂದಕ್ಕಾಗಿ ಇನ್ನೊಂದನ್ನು ಅವರು ತ್ಯಜಿಸಲಿಲ್ಲ. ಆ ಕಾರಣಕ್ಕಾಗಿಯೇ ಒಳಗೊಳ್ಳುವ ಸಾಂಸ್ಕೃತಿಕ ನಿರ್ಮಾಣವನ್ನು ತಮ್ಮ ಕವನ ಮತ್ತು ಗದ್ಯ ಬರಹಗಳಲ್ಲಿ ಅವರು ಸಾಧಿಸಿದರು. ಸದಾ ಚಡಪಡಿಕೆಯ ಸ್ವಭಾವದವರಂತೆ ಕಾಣುವ

ನಿಸಾರರು ಲವಲವಿಕೆ, ಸೃಜನಶೀಲತೆ, ಪ್ರೀತಿ ಮತ್ತು ಸಿಟ್ಟನ್ನು ಎಂದೂ ಅದುಮಿಟ್ಟು ಕೊಳ್ಳಲಿಲ್ಲ. ಹೀಗಾಗಿಯೇ ಅವರು ಗೂಡಾರದ ಕವಿಯಾಗದೆ, ಬಿಡಾರದ ಕವಿಯಾಗದೆ, ನಾಡಿಗರ ಕವಿಯಾಗಿ ಕನ್ನಡಿಗರ ಪ್ರೀತಿ, ಗೌರವಗಳಿಗೆ ಪಾತ್ರರಾದರು. ಅಂತರಾಳದಲ್ಲಿರುವ ಪ್ರೀತಿ, ವಿಶ್ವಾಸ, ನಂಬಿಕೆಗಳೇ ಸ್ಥಾಯೀ ಭಾವಗಳಾಗಿ, ಸಂಚಾರೀ ಭಾವಗಳಾದ ಸಿಟ್ಟು, ಅಸಹನೆ, ವಿಷಾದಗಳನ್ನು ದಡಕ್ಕೆ ತಳ್ಳಿ, ಸುಖ ಸಾಗರದ ಮೊರೆತವನ್ನು ನಿರಂತರ ಕೇಳಿಸುವಂತೆ ಅವರು ಬದುಕಿದ್ದಾರೆ ಮತ್ತು ಬದುಕುತ್ತಿದ್ದಾರೆ.

ಕನ್ನಡವೇ ಸತ್ಯ ಎಂಬುದು ನಿಸಾರರಿಗೆ ಒಂದು ಘೋಷಣೆಯಲ್ಲ; ಅದು ಅವರ ಬದುಕಿನ ದಾರಿ ಮತ್ತು ಹೆದ್ದಾರಿ ಕೂಡ. ಮೂಲತಃ ಭೂ ವಿಜ್ಞಾನದ ಪ್ರಾಧ್ಯಾಪಕ ಪ್ರೊ. ಕೆ. ಎಸ್. ನಿಸಾರ್ ಅಹಮದ್, ಕನ್ನಡ ಮಾನಸ ಸಮುದಾಯದ ಗರ್ಭದ ಚಿನ್ನ ಬೆಳ್ಳಿ ಗಳನ್ನು, ಮುತ್ತು ರತ್ನಗಳನ್ನು ಕಳೆದ ಸುಮಾರು ಐವತ್ತು ವರ್ಷಕ್ಕೂ ಹೆಚ್ಚಿನ ಕಾಲಾವಧಿ ಯಲ್ಲಿ ಆಯುತ್ತಲೇ ಬಂದಿದ್ದಾರೆ. ಅದು ಅಗೆದಷ್ಟೂ ಮುಗಿಯದುದು. ಕಾವ್ಯ ವಸುಂಧರೆ ಕವಿ ನಿಸಾರರನ್ನು ಎಂದೂ ಅಗಲಲಾರಳು. ಕಾವ್ಯಲಕ್ಷ್ಮಿಯು ರಾಜ್ಯಲಕ್ಷ್ಮಿಗಿಂತ ಮುಖ್ಯಳೂ ಮತ್ತು ಶ್ರೇಷ್ಠಳೂ ಎಂದು ಸದಾ ಭಾವಿಸಿದ ಕಾರಣವೇ ನಿಸಾರರು ಇಂದಿಗೂ ಜನ ಮಾನಸದ ಕವಿ.


ಮಾನವ ತಾನು ಮೇಲೆತ್ತರಿಸಿದ ಸೌಧಕ್ಕೆ ಸತ್ಯ ಮತ್ತು ಸೌಂದರ್ಯದ ಸೇಚನ ವಾದಾಗ ಅದು ತನ್ನ ಕಲ್ಲು ಮರಳು ಇಟ್ಟಿಗೆ ಕಾಂಕ್ರೀಟ್‌ತನದ ಜಡತ್ವವನ್ನು ನೀಗಿಕೊಂಡು ಚೈತನ್ಯಶಾಲಿ ಜ್ಞಾನಕೇಂದ್ರವಾಗಿ ಕಳಕಳಿಸುತ್ತದೆ: ಅನೇಕ ಪೀಳಿಗೆಗಳನ್ನು ಮೌಢ್ಯಾಂಧಕಾರದಿಂದ ಉದ್ಧಾರ ಮಾಡಿ ಕಾಪಿಡುವ ಕೃಪಾ ಹಸ್ತರೂಪದ ವಿದ್ಯಾ ಗಂಗೋತ್ರಿಯಾಗಿ ನಳನಳಿಸುತ್ತದೆ. ನಿಕೃಷ್ಟ ಮತ್ತು ಕಡು ಬಡವ ಎನ್ನಿಸುವ ಹುಲ್ಲು ಜೋಪಡಿಗೆ ಅಧ್ಯಾತ್ಮ, ಧರ್ಮಗಳ ಪರುಷ ಮಣಿ ಸ್ಪರ್ಶವಾದರೆ ಅದು ಆಶ್ರಮದ ಅಗ್ರ ಪದವಿಗೇರುತ್ತದೆ: ತಪೋಭೂಮಿಕೆಯ ಮಹದಂತಸ್ತನ್ನು ಪಡೆಯುತ್ತದೆ.

(ಬದುಕಿಗೆ ಸತ್ಯ ಸೌಂದರ್ಯಗಳ ಸೇಚನ)

✧ ✧ ✧

ರಾಷ್ಟ್ರೀಯ ಭಾವನೆಯಿರದ ಪೌರನ ಅಸ್ತಿತ್ವ ಅರ್ಥಶೂನ್ಯ. ಅವನ ಧನ್ಯ ಬದುಕಿನ ಬೆಳಸಿಗೆ ಆ ಪರಿಕಲ್ಪನೆಯೇ ಹೊಯ್ನೀರು. ಸ್ವಾತಂತ್ರ್ಯ, ರಾಷ್ಟ್ರ ಪ್ರೇಮ ಶ್ವಾಸಕೋಶಗಳಂತೆ. ಮಿಕ್ಕೆಲ್ಲ ಇದ್ದರೂ, ಇವಿಲ್ಲದಿದ್ದರೆ ಉಸಿರಾಡು ವುದು ಜೀವಿಸುವುದು ದುಸ್ತರ.

(ರಾಷ್ಟ್ರೀಯ ಭಾವನೆ)



ಸಾರವತ್ತಾದ ಕವಿ

♦ ಪಿ. ಆರ್. ತಿಪ್ಪೇಸ್ವಾಮಿ

ನಿಸಾರ್ ನೆನಪಾದಾಗಲೆಲ್ಲ ಅವರ ಭಾವಗೀತೆಗಳ ಕ್ಯಾಸೆಟ್ 'ನಿತ್ಯೋತ್ಸವ'ದ ನೆನಪಾಗುತ್ತದೆ. ಇದು ಪ್ರಪ್ರಥಮ ಧ್ವನಿ ಮುದ್ರಿತ ಜನಪ್ರಿಯ ಕ್ಯಾಸೆಟ್. ನಾನು ಹತ್ತಾರು ಸಾರಿ ಕೇಳಿ ಸವಿದ ಕವನ 'ಕುರಿಗಳು, ಸಾರ್, ಕುರಿಗಳು; ಸಾಗಿದ್ದೇ ಗುರಿಗಳು; ಅದರ ಬಾಲ ಇದು ಮೂಸಿ, ಇದರ ಬಾಲ ಅದು ಮೂಸಿ, ದನಿ ಕುಗ್ಗಿಸಿ, ತಲೆ ತಗ್ಗಿಸಿ, ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು' ಇತ್ಯಾದಿ., ಈ ಭಾವ ಗೀತೆಯ ಮೂಲಕ ಮಂದೆಯಲ್ಲಿ ಒಂದಾಗಿ ಬಾಳುವ ಇಂದಿನ ಜನರ ಸಹಜವಾದ ಸ್ವಭಾವದ ವರ್ಣನೆಯಲ್ಲಿ ನಿಸಾರ್ ಅವರು ಯಶಸ್ವಿಯಾಗಿದ್ದಾರೆ.

೧೯೫೯ರ ಸಮಯ. ಬೆಂಗಳೂರು ಆಕಾಶವಾಣಿಯಲ್ಲಿ ಕವಿ ಮೇಳ. ಕುವೆಂಪು ಅವರ ಅಧ್ಯಕ್ಷತೆ. ಮಾಸ್ತಿ, ಪುತಿನ ಅವರ ಸಾಲಿನಲ್ಲಿ ತರುಣ ಕವಿ ನಿಸಾರ್ ಕವನ ಓದುವ ಅಪೂರ್ವ ಅವಕಾಶ. 'ನಿಸಾರ್ ಬಳಸುವ ಕಾವ್ಯ ಪ್ರತಿಮೆಗಳು ಅತ್ಯಂತ ನವೀನವಾಗಿರುವುದಲ್ಲದೆ ಹೃದಯಸ್ಪರ್ಶಿಯಾಗಿರುತ್ತವೆ. ಈಚೆಗೆ ಕೆಲವು ನವ್ಯ ಕವಿಗಳ ರಚನೆಗಳು ತಳಬುಡ ಅರ್ಥವಾಗು ವುದಿಲ್ಲ. ಏನು ಬರೆಯುತ್ತಾರೋ ಕಾಣೆ. ಆದರೆ ಈ ನವ್ಯದಲ್ಲಿ ನಿಸಾರ್ ಒಬ್ಬರೇ ನಾನು ಮೆಚ್ಚಿಕೊಂಡಿರುವುದು. ಅವರ ಕವಿತೆಗಳು ತುಂಬಾ ಆಳವಾಗಿ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ'—ಎಂದು ಕುವೆಂಪು ತಮ್ಮ ಮೆಚ್ಚಿಗೆಯನ್ನು

ಸೂಚಿಸಿದರು; ನಿಸಾರರನ್ನು ಹರಸಿ, ಆಶೀರ್ವದಿಸಿದರು.

ಹೀಗೆ ರಾಷ್ಟ್ರಕವಿ ಕುವೆಂಪು ಅವರು ಮೆಚ್ಚಿಕೊಂಡ ಜನಪ್ರಿಯ ನವ್ಯ ಕವಿ ನಿಸಾರ್ ಅವರ ಕವನಗಳಲ್ಲಿ ನಮ್ಮ ನೆಲದ ಸೊಗಡಿದೆ, ಸೊಗಸಿದೆ, ಸತ್ವವಿದೆ. 'ಮೈಸೂರು ಮಲ್ಲಿಗೆ'ಯ ನರಸಿಂಹಸ್ವಾಮಿಗಳ ಭಾವಗೀತೆಗಳನ್ನು ಕೇಳಿ ಮಂತ್ರಮುಗ್ಧರಾಗುವಂತೆ, ನಿಸಾರ್ ಅವರ ಗೀತೆಗಳಿಗೂ ಜನ ಮೈಮರೆಯುತ್ತಾರೆ. ನಿಸಾರ್ ಅಹಮದರ ಕನ್ನಡ ಭಾಷಾ ಪ್ರಜ್ಞೆ ಅಪ್ರತಿಮವಾದುದು. ನಿಸಾರರು ಬಳಸುವ ಕೆಲವು ಪದಗಳು, ಪದ ಪುಂಜಗಲು, ಅವುಗಳ ಉಚ್ಚಾರವನ್ನು ಕೇಳಿದವರಿಗೆ ಅಚ್ಚರಿಯ ಭಾವನೆ ಉಂಟಾಗುತ್ತದೆ. ನಿಸಾರ್ ಹಿಂದೂ ಸಂಸ್ಕೃತಿಯನ್ನೂ ಚೆನ್ನಾಗಿ ಅಭ್ಯಸಿಸಿದ್ದಾರೆ. ಪುರಂದರದಾಸರನ್ನು ಕುರಿತ ಇವರ ಕವಿತೆ ಇದಕ್ಕೆ ಸಾಕ್ಷಿ.

ತಂದೆ ಕೆ. ಎಸ್. ಹೈದರ್, ತಾಯಿ ಹಮೀದಾ ಬೇಗಮ್. ಸುಸಂಸ್ಕೃತ ಮುಸ್ಲಿಂ ಮನೆತನ. ತಂದೆ ಸಾಹಿತ್ಯ ಸಂಸ್ಕೃತಿಯಲ್ಲಿ ಅಪಾರ ಶ್ರದ್ಧೆ. ಕನ್ನಡದಲ್ಲಿ ಪುತ್ರ ನಿಸಾರರಿಗೆ ಆಸಕ್ತಿ ಮೂಡಿಸಿದ ಪ್ರಥಮ ಗುರು ಇವರ ತಂದೆಯೇ. ಬೆಂಗಳೂರು ಬಳಿಯ ದೇವನಹಳ್ಳಿಯಲ್ಲಿ ನಿಸಾರರು ಫೆಬ್ರವರಿ, ೧೯೩೬ರಲ್ಲಿ ಹುಟ್ಟಿದರು. ಬೆಂಗಳೂರಿನ ಮಾವಳ್ಳಿ ಪ್ರೈಮರಿ ಶಾಲೆಯಲ್ಲಿ ಅಭ್ಯಾಸ. ಶಾಲಾ ಗುರು ಗಂಗಪ್ಪ ಮಾಸ್ತರರು ಕನ್ನಡ ಭಾಷೆಯಲ್ಲಿ ಒಲವು ಮೂಡಲು ಕಾರಣರಾದರು.

ಬೆಂಗಳೂರಿಗೆ ೧೬ ಮೈಲಿ ದೂರದ ಹೊಸಕೋಟೆ ಹೈಸ್ಕೂಲಿನಲ್ಲಿ ವ್ಯಾಸಂಗ. ಕನ್ನಡ ದ್ವಿತೀಯ ಭಾಷೆಯಲ್ಲಿ ಕಲಿಕೆ. ಇಲ್ಲಿ ಒಂದಿಬ್ಬರು ಉಪಾಧ್ಯಾಯರ ಪ್ರೋತ್ಸಾಹ. 'ವನಸುಮ' ಕೈ ಬರಹ ಪತ್ರಿಕೆಯ ಸಂಪಾದಕ. ಸಾಹಿತ್ಯದಲ್ಲಿ ಗಾಢ ಒಲವು. 'ಚಿತ್ರಗುಪ್ತ'ದಲ್ಲಿ ಕವನಗಳ ಪ್ರಕಟಣೆಗೆ ಎಂ. ಎಸ್. ಭಾರದ್ವಾಜರ ಪ್ರೇರಣೆ. ಬೆಂಗಳೂರಿನ ಇಂಟರ್‌ಮೀಡಿಯೆಟ್ ವ್ಯಾಸಂಗದ ವೇಳೆ ಎಲ್. ಗುಂಡಪ್ಪನವರು, ಸೆಂಟ್ರಲ್ ಕಾಲೇಜಿನ ವ್ಯಾಸಂಗದಲ್ಲಿ ಜಿ. ಪಿ. ರಾಜರತ್ನಂ, ವಿ. ಸೀತಾರಾಮಯ್ಯ ಇವರ ವಾತ್ಸಲ್ಯಪೂರ್ವಕ ಉತ್ತೇಜನ. ಕರ್ನಾಟಕ ಸಂಘದ ಕಾರ್ಯದರ್ಶಿ ಪಟ್ಟ. 'ಪದ್ಯಾಂಜಲಿ' ಕವನ ಸಂಕಲನದಲ್ಲಿ ನಿಸಾರ್ ಅಹಮದ್‌ರ ಕವನಗಳೂ ಬೆಳಕು ಕಂಡವು. ಎಂ.ಎಸ್ಸಿ. (ಭೂ ವಿಜ್ಞಾನ) ಪದವಿ ಗಳಿಸಿ ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕರಾದರು.

೧೯೫೫ರಲ್ಲಿ ಪ್ರಪ್ರಥಮ ಸಾರ್ವಜನಿಕ ಕವಿ ಸಮ್ಮೇಳನ. ಇದಕ್ಕೆ ಬೇಂದ್ರೆ ಅಧ್ಯಕ್ಷತೆ. ನಿಸಾರ್ ಅವರಿಗೆ ತಮ್ಮ ಕವನ ಓದುವ ಅವಕಾಶ. ಆಗ ಬೇಂದ್ರೆ 'ಹೆಸರು ನಿಸ್ಸಾರ ಆದ್ರೂ ಈ ಹುಡುಗನ ಕವನ ನಿಸ್ಸಾರ ಅಲ್ಲ, ಸಾರವತ್ತಾಗಿದೆ. ಈತನಿಗೆ ಒಳ್ಳೆಯ ಭವಿಷ್ಯವಿದೆ' ಎಂದು ಹರಸಿದ್ದರು. ಈ ಮಾತು ಸುಳ್ಳಾಗಲಿಲ್ಲ. ಮಾಸ್ತಿ 'ಜೀವನ' ಪತ್ರಿಕೆಯಲ್ಲಿ ನಿಸಾರರ ಕವನಗಳನ್ನು ಪ್ರಕಟಿಸಿ ಬೆನ್ನು ತಟ್ಟಿದರು.

ನಿಸಾರರಿಗೆ ಕಾವ್ಯ ಪ್ರಮುಖ ಮಾಧ್ಯಮವಾದರೂ ಇವರ ಗದ್ಯ ಶೈಲಿ ಸೊಗಸಾದದ್ದು; ಹೃದಯ ಮೋಹಕವೆನ್ನಿಸುವಂಥದ್ದು. 'ಇದು ಬರಿ ಬೆಡಗಲ್ಲೊ ಅಣ್ಣ' ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ ವಿಮರ್ಶಾ ಗ್ರಂಥ. ನಿಸಾರ್ ಅಹಮದರು ಉತ್ತಮ ಅನುವಾದಕರೂ

ಕೂಡ.

ಬೆಂಗಳೂರು ಬಾನುಲಿ ಅನೇಕ ವರ್ಷಗಳಿಂದ ಇವರ ಕವನ, ವಿಮರ್ಶೆ, ಸಂಗೀತ ರೂಪಕ ಹಾಗೂ ವೈಚಾರಿಕ ಉಪನ್ಯಾಸಗಳನ್ನು ಬಿತ್ತರಿಸುತ್ತಾ ಬಂದಿದೆ. ನಾಡಿನಾದ್ಯಂತ ಕವಿ ಸಮ್ಮೇಳನಗಳಲ್ಲಿ ಭಾಗವಹಿಸಿ ಜನರಿಗೆ ಕಾವ್ಯ ಸುಧೆಯನ್ನು ಇವರಷ್ಟು ನೀಡಿದವರು ವಿರಳ. ಎಂಬತ್ತರ ದಶಕದಲ್ಲಿ ಗೋಕಾಕ್ ಭಾಷಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ನಿರ್ಭೀತ ಸ್ಪಷ್ಟ ನಿಲವು ತಾಳಿ ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ. ಕೆಲವರ ಕ್ರೋಧ, ಹಗೆತನಗಳಿಗೂ ಅಂಜದೆ ಕನ್ನಡ ನಾಡು–ನುಡಿಗಳ ಅಭಿವರ್ಧನೆಯನ್ನು ಮನಸಾರ ಹಾರೈಸಿ, ಅದಕ್ಕಾಗಿ ಪ್ರಚಾರ ಬಯಸದೆ ದುಡಿದಿದ್ದಾರೆ. ತಮ್ಮ ಅನೇಕ ಶಿಷ್ಯರಲ್ಲಿ, ಗೆಳೆಯರಲ್ಲಿ, ಕನ್ನಡೇತರರರಲ್ಲಿ ನಮ್ಮ ಭಾಷೆ–ಸಂಸ್ಕೃತಿಗಳ ಬಗ್ಗೆ ಅಭಿಮಾನ, ಒಲವು ತಾಳುವಂತೆ ಪ್ರಚೋದನೆ ನೀಡಿದ್ದಾರೆ.

ನಿಸಾರ್ ಅಹಮದರು ಯಾವ ಆಸೆಗೂ ವೈಪರೀತ್ಯಕ್ಕೂ ಎಡೆ ಕೊಟ್ಟವರಲ್ಲ. ಯಾವ ಗುಂಪಿಗೂ ಸೇರಿದವರಲ್ಲ. 'ಯಾರೊಂದಿಗೂ ನಿಷ್ಠೂರ ಕಟ್ಟಿಕೊಂಡವರಲ್ಲ. ಯಾರ ನಂಬಿಕೆಗಳನ್ನು ಟೀಕಿಸಿದವರಲ್ಲ.' 'ನವ್ಯ ಪಥದಲ್ಲಿ ಕಣ್ತೆರೆದ ನಿಸಾರ್ ಅಹಮದ್ ನಮ್ಮ ಪರಂಪರೆಯನ್ನು ಮರೆಯದ ಕವಿ' ಎಂಬ ಹಿರಿಯರಾದ ಎಚ್ಚೆಸ್ಕೆ ಅವರ ಮಾತು ನಿಸಾರರ ಕವಿತೆಗಳನ್ನು ಅಭ್ಯಸಿಸಿದವರಿಗೆ ನಿಜವೆನಿಸುತ್ತವೆ.

ಅಲ್ಪಸಂಖ್ಯಾತ ವರ್ಗದಿಂದ ಬಂದು ಏಕಾಂಗಿಯಾಗಿ ದಾರಿ ಸಾಗುತ್ತ, ಯಾರ ಕರುಣೆ ಮುಲಾಜೂ ಇಲ್ಲದೆ ಮುಂದೆ ಬಂದು ಪ್ರಖ್ಯಾತ ಕವಿಯಾಗಿದ್ದಾರೆ. ನಿಸಾರ್ ಅಹಮದ್‌ರ ಈ ಸಾಹಸ ಮೆಚ್ಚುವಂತಹದು. ನಗುಮೊಗದ ಸುಂದರ ಆಕರ್ಷಕ ಮುಖಭಾವ, ಸ್ವಚ್ಛ ಸರಳ ಸ್ವಭಾವದ ಉತ್ಸಾಹೀ ಸ್ನೇಹಪರ ಜೀವಿ ನಮ್ಮ ನಿಸಾರ್.

೧೯೮೫

ಆಹಾರ ನಿದ್ರಾ ಮೈಥುನಾದಿಗಳ ಜೊತೆಗೆ ವ್ಯಕ್ತಿ ವಿಶೇಷದ ಪ್ರಕಟನ ಮತ್ತು ಪ್ರಸರಣ ಮಾನವನ ಮೂಲೋದ್ದೇಶಗಳಲ್ಲಿ ಒಂದು. ಅದು ಬೆಂಕಿಗೆ ತಾಪದಂತೆ ಸ್ವಭಾವಾಂತರ್ಗತ. ಮನುಷ್ಯನ ದಿನಂಪ್ರತಿಯ ವ್ಯಾವಹಾರಿಕ ವಹಿವಾಟುಗಳಲ್ಲಿ, ಬೌದ್ಧಿಕ ಚಟುವಟಿಕೆಗಳಲ್ಲಿ ಈ ಆತ್ಮಾಭಿವ್ಯಕ್ತಿಯ ಲಾಳಿಯಾಟ ನಿಲವುಗಾಣದೆ ನಡೆಯುತ್ತಿರುತ್ತದೆ. ಇದು ಪ್ರಜ್ಞಾಪೂರ್ವಕವಾಗಿಯೇ ಸಾಗಬೇಕೆಂಬ ನಿರ್ಬಂಧವೇನಿಲ್ಲ. ಅರಿವಿಗೆ ಬಾರದೆಯೂ ಉಸಿರಾಟದಂತೆ ತಂತಾನೆ ಆಜನ್ಮ ಪರ್ಯಂತ ಜರುಗುತ್ತಿರುವ ಪ್ರಕ್ರಿಯೆ ಇದು.

(ಮನುಷ್ಯನ ಆತ್ಮಾಭಿವ್ಯಕ್ತಿಯ ತುಡಿತ)



ನಿಸಾರ್ ಅಹಮದ್ : ಹಳತಾಗದ ನೆನಪುಗಳು

♦ *ಎಚ್. ಜಿ. ಸೋಮಶೇಖರ ರಾವ್*

೧೯೫೮-೫೯ ಇರಬಹುದೆಂದು ನನ್ನ ನೆನಪು—ಮೈಸೂರಿನಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿದ್ದ ನಾನು ಮೊಟ್ಟ ಮೊದಲಿಗೆ ನಿಸಾರ್ ಅವರನ್ನು ಭೇಟಿಯಾದದ್ದು. ಆಗ ನಾನು ಗೀತಾ ರಸ್ತೆಯಲ್ಲಿದ್ದ ಒಂದು ಮನೆಯ ಮುಂದಿನ ರೂಮಿನಲ್ಲಿ ಬಾಡಿಗೆಗೆ ಇದ್ದೆ. ಆ ಹೊತ್ತಿಗಾಗಲೇ ನಿಸಾರರ ಹೆಸರು ಕೇಳಿದ್ದೆ. ನಮ್ಮ ಭೇಟಿಯಾದದ್ದು ನನ್ನ ಸನ್ಮಿತ್ರ ಮತ್ತು ವಿಮರ್ಶಕ ಪಿ. ಶ್ರೀನಿವಾಸ ರಾವ್ ಮೂಲಕ. ಅವರಿಬ್ಬರೂ ಯಾವುದೋ ಕಾರ್ಯನಿಮಿತ್ತ ಬೆಂಗಳೂರಿನಿಂದ ಮೈಸೂರಿಗೆ ಎರಡು-ಮೂರು ದಿನಗಳ ಮಟ್ಟಿಗೆ ಬಂದಿದ್ದರು. ನಿಸಾರ್ ಆಗಷ್ಟೇ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿದ್ದರೆಂದು ನನ್ನ ನೆನಪು. ನೆನಪಿರುವುದೆಂದರೆ ನಾನು ಮತ್ತು ನಿಸಾರ್ ಹಾಗೂ ನಮ್ಮಿಬ್ಬರಿಗೂ ಸ್ನೇಹಿತನಾಗಿದ್ದ ಪಿ. ಶ್ರೀನಿವಾಸ ರಾವ್ ಜೊತೆಗೆ ಮೈಸೂರಿನ ಬೀದಿ ಬೀದಿ ಸುತ್ತುತ್ತ, ಆಗ ಅಲ್ಲಿದ್ದ ಕವಿಗಳು, ಕತೆಗಾರರು, ಸ್ನೇಹಿತರು—ಅವರೆಲ್ಲರನ್ನೂ ಭೇಟಿ ಮಾಡಲು ಹೊರಟ ಮೆರವಣಿಗೆ. ಇಲ್ಲಿ ತಿಂಡಿ ತಿಂದು, ಅಲ್ಲಿ ಕಾಫಿ ಕುಡಿದು ಹರಟುತ್ತ, ಸಿಗರೇಟು ಸೇದುತ್ತ ತಿರುಗಾಡಿದೆವು. ಈಗ ಪ್ರಸಿದ್ಧ ವಾಗಿರುವ ಯು. ಆರ್. ಅನಂತಮೂರ್ತಿ, ಬಿ.ಎಡ್. ಓದು ತ್ತಿದ್ದ ರಾಮಚಂದ್ರಶರ್ಮ, ಕತೆಗಾರ ಸದಾಶಿವ ಮುಂತಾದವರು ಅಲ್ಲಿದ್ದರು: ಎಚ್. ಎಂ. ಚೆನ್ನಯ್ಯ, ಅ. ರಾ. ಮಿತ್ರ, ಲಕ್ಷ್ಮೀನಾರಾಯಣ ಭಟ್ಟ ವಿದ್ಯಾರ್ಥಿಗಳಾಗಿದ್ದರು. ಇವರಲ್ಲಿ

ಕೆಲವರನ್ನು ನಿಸಾರ್ ಆಗ ಭೇಟಿಯಾದರೆಂದು ನೆನಪು. ಆಗ ಉದಯೋನ್ಮುಖ ಸುಗಮ ಸಂಗೀತಗಾರನಾಗಿ ಕೃಷ್ಣಮೂರ್ತಿಪುರದ ತನ್ನ ಸ್ವಂತ ಮನೆಯಲ್ಲಿ ಮೈಸೂರು ಅನಂತಸ್ವಾಮಿ ಇದ್ದ; ಜೊತೆಗೆ ಕೊಳಲು ವಾದಕ ಗುಣಸಿಂಗ್. ಅವರೊಡನೆ ನನಗೆ ಆಗಲೇ ತುಂಬಾ ಸ್ನೇಹವಿತ್ತು. ಕನ್ನಡದ ಪ್ರಮುಖ ಕವಿಗಳ ಕವನಗಳನ್ನು ಆಯ್ಕೆ ಮಾಡಿ ಅನಂತಸ್ವಾಮಿಗೆ ಕೊಡುವುದು, ಅವನು ಸ್ವರ ಸಂಯೋಜನೆ ಮಾಡಿ ಹಾಡುವುದು, ಅಲ್ಲಿ-ಇಲ್ಲಿ ನಾನು ಕವನವನ್ನು ಅರ್ಥೈಸಿ ಅದನ್ನು ಮತ್ತಷ್ಟು ಭಾವಪೂರ್ಣವಾಗಿಸಲು ಸಲಹೆ ಕೊಡುವುದು, ನಾವು ಮೂರು ಜನ ಹತ್ತಿರದಲ್ಲಿದ್ದ 'ಪ್ರಸಿದ್ಧ' ಬಲ್ಲಾಳ್ ಹೋಟೆಲಿನ 'ಖಾಯಂ ಉದ್ದರಿ' ಗಿರಾಕಿಗಳಾಗಿದ್ದು ಆಗೀಗ ಚೇಷ್ಟೆ ಮಾಡುತ್ತ ಬದುಕಿದ್ದುದ್ದು ನಡೆದಿತ್ತು. ನಿಸಾರ್ ಮೈಸೂರಿನಲ್ಲಿ ಇದ್ದ ಎರಡು-ಮೂರು ದಿನಗಳಲ್ಲಿ ನಮ್ಮ ನಿತ್ಯ ನಡಾವಳಿಗಳ ವೀಕ್ಷಕರಾಗಿ ಖುಷಿಪಟ್ಟಿದ್ದರು. ಯಾವ ಅಂಕೆ-ಅಂಕುಶಗಳಿಲ್ಲದ ನಮ್ಮೆಲ್ಲರ ಬದುಕು ನೂರಕ್ಕೆ ನೂರು ಪಾಲು ಬೊಹಿಮಿಯನ್ ಲೈಫ್! ನಾವು ಮಾಡುತ್ತಿದ್ದ ತರಹಾವಾರಿ ಚೇಷ್ಟೆಗಳಿಗೆ ಕೆಟ್ಟ ಹೆಸರು ಬರಲಿಲ್ಲ. ಯಾಕೆಂದರೆ ನಾನು ಬಿ.ಎ. ಆನರ್ಸ್‌ನಲ್ಲಿ ಮೊದಲ ರ್‍ಯಾಂಕ್ ಪಡೆದು ಬಂಗಾರ ಪದಕ ಪಡೆದವನು; ಅನಂತಸ್ವಾಮಿ ಸೊಗಸಾದ ಹಾಡುಗಾರ; ಗುಣಸಿಂಗ್ ವೇಣು ವಾದನದಲ್ಲಿ genius—ಇಂಥ combination ಸಿಗುವುದಾದರೂ ಎಲ್ಲಿ?

ಇಷ್ಟೆಲ್ಲಾ ಪೀಠಿಕೆಗೆ ಕಾರಣ ಕೆ. ಎಸ್. ನಿಸಾರ್ ಅಹಮದ್ ಅವರು. ಮುಂದೆ ಎಷ್ಟೋ ವರ್ಷಗಳು ನಮ್ಮೊಡನೆ ಇಟ್ಟುಕೊಂಡ/ಬೆಳೆಸಿಕೊಂಡ ಸಂಪರ್ಕ-ಸಂಬಂಧಗಳ ಆಪ್ತತೆ. ಮೊದಲ ಭೇಟಿ, ಮೂರು ದಿನಗಳ ಓಡಾಟ-ಒಡನಾಟ, ಒಂದು ದಿನ ನನ್ನ ಕಿಷ್ಕಿಂಧ ಕೊಠಡಿ ವಾಸ—ಇಷ್ಟರಿಂದಲೇ ನಿಸಾರ್ ಮತ್ತು ನನಗೆ ಒಂದು ರೀತಿಯ ಆಪ್ತವಾದ ಗೆಳೆತನ ಬೆಳೆಯಿತು. ಬಹು ವಚನದ ಸಂಬೋಧನೆ ಏಕ ವಚನಕ್ಕೆ ಏರಿತು! ಈ ಮಾತು ಹೇಳಲು ಕಾರಣ ನಿಸಾರ್ ಎಷ್ಟೊಂದು ಸ್ನೇಹಪರರು, ಸ್ನೇಹ ಧರ್ಮಕ್ಕೆ ಹೊಂದಿಕೊಳ್ಳುವವರು ಎಂದು ತಿಳಿಸಲಿಕ್ಕೆ.

ನಾನು ಅಲ್ಲಿಂದ ನಿಸಾರ್ ಅವರನ್ನು ಆಗಾಗ ಭೇಟಿ ಮಾಡುತ್ತಿದ್ದೆ. ಅವರ ಕೃತಿಗಳನ್ನು ಓದುತ್ತಿದ್ದೆ. ಎಂ.ಎ. ಪದವಿ ಮುಗಿಸಿ, ಸ್ವಲ್ಪ ಕಾಲ ನಿರುದ್ಯೋಗಿಯಾಗಿದ್ದು, ಮೈಸೂರು ಅನಂತಸ್ವಾಮಿಯ ಜೊತೆ ಸೇರಿ Mysore Melody Makers (MMM) ಹುಟ್ಟು ಹಾಕಿ, ಆ ಹೆಸರಿನಲ್ಲಿ ನಾಟಕ, ನೃತ್ಯ, ಸುಗಮ ಸಂಗೀತ ನಡೆಸಿ ನಾವೆಲ್ಲರೂ ದಿನನಿತ್ಯದ ಅನ್ನವನ್ನು ಕಂಡುಕೊಳ್ಳುತ್ತಿದ್ದೆವು. ಮುಂದೆ ಒಂದೆರಡು ವರ್ಷ ಎಲ್ಲರೂ ದಿಕ್ಕಾಪಾಲಾದೆವು.

ನಾನು ನಿರುದ್ಯೋಗಿಯಾಗಿದ್ದ ಸ್ವಲ್ಪ ಸಮಯ ನನ್ನ ಹುಟ್ಟೂರಾದ ಚಿತ್ರದುರ್ಗ ದಲ್ಲಿದ್ದೆ. ಬಹುಶಃ ೧೯೬೧ ಇರಬೇಕು. ನಿಸಾರ್ ಅವರು ಬೆಂಗಳೂರಿನಿಂದ ವರ್ಗವಾಗಿ ನಮ್ಮೂರಿನ ಸರ್ಕಾರಿ ಕಾಲೇಜಿಗೆ ಅಧ್ಯಾಪಕರಾಗಿ ೧೯೬೦ರಲ್ಲಿ ಬಂದಿದ್ದರು. ಅಲ್ಲಿ ನಮ್ಮ ಅಣ್ಣಂದಿರಾದ ಪ್ರೊ. ಎಚ್. ಜಿ. ಸೂರ್ಯನಾರಾಯಣ ರಾವ್ ಇಂಗ್ಲಿಷ್ ಉಪನ್ಯಾಸಕ ರಾಗಿದ್ದರು. ಹೀಗಾಗಿ ನಿಸಾರರ ಭೇಟಿ ನನಗೆ ವಾರಕ್ಕೆ ಒಂದೆರಡು ಸಲವಾದರೂ

ಲಭಿಸುತ್ತಿತ್ತು. ಆಗೆಲ್ಲಾ ಸಾಹಿತ್ಯ, ಇತಿಹಾಸ, ರಾಜಕೀಯ, ಸಂಗೀತ ಮುಂತಾಗಿ ವಿಷಯಗಳ ಬಗೆಗೆ ನಾವು ಗಳಪುತ್ತಿದ್ದೆವು. ವಾಯು ವಿಹಾರದ ವೇಳೆ ಅವರು ಸಿಕ್ಕಿದಾಗ, ನನ್ನ ಕೆಲವು ಜೀವನಾನುಭವಗಳನ್ನೂ ಹಾಸ್ಯ ಚಟಾಕಿಗಳನ್ನೂ ಹೇಳಿ ಅವರನ್ನು ನಗಿಸುತ್ತಿದ್ದುದು ಇನ್ನೂ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ. ನನ್ನ ಜೊತೆಯಲ್ಲಿ ಆಗ ನಿಸಾರ್ ಅವರ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ವಾಸುದೇವರಾವ್ ಸದಾ ಇರುತ್ತಿದ್ದ.

ಅನಂತರ ಅವರಿಗೆ ಮರಳಿ ಬೆಂಗಳೂರಿಗೆ ವರ್ಗವಾದಾಗ, ನಾನು ಆಗಾಗ ನಿಸಾರ್ ಅವರನ್ನು ಭೇಟಿ ಮಾಡುತ್ತಿದ್ದುದು ನಮ್ಮೆಲ್ಲರಿಗೂ ಪ್ರಿಯವಾದ ಗಾಂಧಿ ಬಜಾರಿನಲ್ಲಿ. ಆಗ ಅಲ್ಲಿ ಎರಡು ಜಾಗಗಳು ನಮ್ಮ 'ಸಮ್ಮೇಳನ'ಗಳಿಗೆ ತಾಣವಾಗಿದ್ದವು—ದಾಶರಥಿ ದೀಕ್ಷಿತ್ ಸಹೋದರರ ಮೂಲೆಯಲ್ಲಿದ್ದ ಒಂದು ಅಂಗಡಿ, ಮತ್ತೊಂದು ಮೆಡಿಕೋ ಸರ್ಜಿಕಲ್ಸ್ ಎಂಬ ಔಷಧಿ ಅಂಗಡಿ. ಈ ಎರಡೂ ಕಡೆ ನಾವೆಲ್ಲರೂ ದಿನನಿತ್ಯ ಸಂಜೆ (ಭಾನುವಾರ ಪೂರ್ತಿ) ಸೇರುವುದು, ದೀಕ್ಷಿತ್ ಸಹೋದರರಿಬ್ಬರ ಹಾಸ್ಯ ಚಟಾಕಿಗಳಿಂದಾಗಿ ಬಜಾರ್‌ಗೆಲ್ಲಾ ಕೇಳಿಸುವ ಹಾಗೆ ನಗುವುದು, ಅಲ್ಲಿಂದ ದಾಟಿ ಔಷಧಿ ಅಂಗಡಿ ಮುಂದಣ ಅಂಗಣಕ್ಕೆ ಬಂದರೆ ಕಾಡು ಹರಟೆಗೆ ನೂರು ಕಾಲು ಬರುತ್ತಿತ್ತು. ಹತ್ತಿರದ ಭಟ್ಟರ ಹೋಟೆಲ್, ಇಲ್ಲವೇ ಸರ್ಕಲ್ ಲಂಚ್ ಹೋಂ, ಅಥವಾ ಲೋಕ ಪ್ರಸಿದ್ಧವಾದ ವಿದ್ಯಾರ್ಥಿ ಭವನ—ಒಂದು ಕಡೆ ಅಥವಾ ಎಲ್ಲಾ ಕಡೆಗೆ ಭೇಟಿ ಕೊಡುವುದು ನಡೆದಿರುತ್ತಿತ್ತು. ಗುಂಪು ಒಟ್ಟಾಗಿ ಒಂದಾಗಿ ಹೋಗಬಹುದು, ಬೇರೆ ಬೇರೆ ಗುಂಪುಗಳಾಗಿ ಹೋಗಬಹುದು. ಆದರೆ ಪುನಃ ಅಂಗಡಿಯ ಅಂಗಳಕ್ಕೆ ವಾಪಸ್! ಅಲ್ಲಿ ಶುರುವಾಗುವುದು ಧೂಮಲೀಲೆ! ರಾತ್ರಿ ಅಂಗಡಿ ಮುಚ್ಚಿ ನಮ್ಮ ಗುಂಪಿನವನೇ ಆಗಿದ್ದ ಅಂಗಡಿ ಮಾಲಿಕ ಹೊರಡುವ ತನಕ ನಮ್ಮ ಭಾರೀ ಬೈಠಕ್ ನಡೆಯುತ್ತಿತ್ತು. ನಿಸಾರ್ ಎಲ್ಲರೊಳಗೊಂದಾಗಿ, ಜೋಕುಗಳಿಗೆ ನಗುತ್ತ, ಕೆಲವು ಘಟನೆಗಳ ಬಗ್ಗೆ ದಿಗ್ಭ್ರಮೆಗೊಳ್ಳುತ್ತ, ವಿಶೇಷ ವಿಷಯಗಳ ಚರ್ಚೆಯಾದರೆ ಅವನ್ನೆಲ್ಲಾ ಮನವಿಟ್ಟು ಕೇಳುತ್ತ 'ಸ್ನೇಹಜೀವಿ' ಅನ್ನಿಸಿಕೊಂಡವರು.

ನಾವು ನಿಸಾರ್ ಅವರನ್ನು ಸ್ನೇಹದಿಂದ ಗೇಲಿ ಮಾಡಿದ್ದುಂಟು. ಏನಾದರೂ ತರಲೆ ತೆಗೆದು ನಿಸಾರ್ ಅವರಿಗೆ ನಗುವೋ, ಸಿಟ್ಟೋ ಬರುವ ಹಾಗೆ ಮಾಡುತ್ತಿದ್ದೆ. ಅಂಥವೆಷ್ಟೋ ಪ್ರಸಂಗಗಳು ನಡೆದುಹೋದವು. ಅದರಲ್ಲಿ ಒಂದನ್ನು ಮಾತ್ರ ಇಲ್ಲಿ ತಿಳಿಸುತ್ತೇನೆ.

ಅದೇನೆಂದರೆ, ನಿಸಾರ್ ಅವರ ಪ್ರಸಿದ್ಧವಾದ ಕವನ ಸಂಗ್ರಹ 'ಮನಸು ಗಾಂಧಿ ಬಜಾರು' ಆಗ ತಾನೆ ಬಿಡುಗಡೆ ಆಗಿತ್ತು. ಗೆಳೆತನದಿಂದಾಗಿ ನನ್ನಂಥ ಕೆಲವರಿಗೆ ಅದರ ಒಂದು ಪ್ರತಿ ಕೊಟ್ಟಿದ್ದರು. ನಿತ್ಯವೂ ಭೇಟಿ ನಡೆಯುತ್ತಿರುತ್ತಾಗಿ ನಿಸಾರ್ ಕವನ ಸಂಕಲನ ಕೊಟ್ಟ ಮಾರನೆಯ ದಿನ ನನ್ನನ್ನು ಪುಸ್ತಕದ ಬಗ್ಗೆ ಅಭಿಪ್ರಾಯ ಕೇಳಿದರು. ನಿಸಾರ್ ಅವರನ್ನು ಕೀಟಲೆ ಮಾಡುವ ದೃಷ್ಟಿಯಿಂದ ನಾನು. 'ಮನಸು ಗಾಂಧಿ ಬಜಾರು, ಬರೆದವರು ನಿಸಾರು, ಓದಲು ಬಲು ಬೇಜಾರು...' ಅಂತ ರಾಗವಾಗಿ ಹಾಡಿದೆ! ನನಗಿನ್ನೂ ನೆನಪಿದೆ—ಗಾಂಧಿ ಬಜಾರಿನ ಕೆನರಾ ಬ್ಯಾಂಕ್ ಇರುವ ಜಾಗದಿಂದ ನಗುತ್ತ ನನ್ನನ್ನು ಅಟ್ಟಿಸಿಕೊಂಡು ಬಂದದ್ದು. ಪುಸ್ತಕದ ಬಗ್ಗೆ ನಾನು ಹೇಳಿದ್ದು ಕೇವಲ ತಮಾಷೆಗಾಗಿ ಅನ್ನುವುದನ್ನು

ಪುನರುಚ್ಚರಿಸಿದಾಗ ಅವರ ಅಸಮಾಧಾನ ಶಮನವಾಗಿತ್ತು. ನಾನು ಅವರ ದ್ವಿತೀಯ ಸಂಕಲನವಾದ 'ನೆನೆದವರ ಮನದಲ್ಲಿ'(೧೯೬೪)ಯನ್ನು ಕುರಿತು 'ಗೋಕುಲ' ವಾರಪತ್ರಿಕೆಯಲ್ಲಿ ಬರೆದ ವಿಮರ್ಶಾ ಲೇಖನವನ್ನು ನಿಸಾರ್ ಇವತ್ತಿಗೂ ಮೆಚ್ಚಿ ಮಾತಾಡುತ್ತಾರೆ. 'ಸಾಹಿತ್ಯ ವಿಮರ್ಶೆಯ ಕಡೆ ಮುಂಚಿನಿಂದ ಗಮನ ಕೊಟ್ಟಿದ್ದರೆ ನೀನು ಉತ್ತಮ ವಿಮರ್ಶಕನಾಗುತ್ತಿದ್ದೆ ಕಣೋ ಸೋಮಣ್ಣ' ಎಂದು ಶ್ಲಾಘಿಸುತ್ತಾರೆ.

ಮುಂದೆ ಮೈಸೂರು ಅನಂತಸ್ವಾಮಿ-ನಿಸಾರ್ ಸೇರಿ ಅವರ ಅನೇಕ ಕವನಗಳನ್ನು ಕ್ಯಾಸೆಟ್ ಮಾಡಿಸಿದರು. ನಿಸಾರ್ ಅವರ ಕವನಗಳು ಆಗಿನಿಂದ ನಾಡಿನಾದ್ಯಂತ ಪ್ರಸಿದ್ಧವಾಗಿದೆ. ನಾನೂ ಅನೇಕ ಸಾರ್ವಜನಿಕ ಸಮಾರಂಭಗಳಲ್ಲಿ ಕೇಳಿ ತಲೆದೂಗಿರುವುದಲ್ಲದೆ, ಇತರರೂ ಇಷ್ಟಪಟ್ಟಿದ್ದನ್ನು ನೋಡಿ ಸಂತೋಷ, ಹೆಮ್ಮೆ ಪಟ್ಟಿದ್ದೇನೆ.

ಭೂ ವಿಜ್ಞಾನದ ಉಪನ್ಯಾಸಕರಾಗಿದ್ದು ನಮ್ಮ ನಾಡಿನ ಒಬ್ಬ ಸಮರ್ಥ ಕವಿಯಾಗಿ ಬೆಳೆದಿರುವ ಗೆಳೆಯ ನಿಸಾರ್ ಅವರಿಗೆ ನನ್ನ ಶುಭಾಶಯಗಳನ್ನು ಹೇಳುತ್ತ, ಅವರಿಗೆ ಮತ್ತಷ್ಟು ಪ್ರತಿಷ್ಠಿತ ಪ್ರಶಸ್ತಿಗಳು ಲಭ್ಯವಾಗಲೆಂದು ಹಾರೈಸುತ್ತೇನೆ.

ಮನುಷ್ಯನ ಸ್ವಭಾವಗತವಾದ ಪ್ರಪ್ರಾಚೀನ ಭಾವ ವಿಕಾರಗಳನ್ನು, ಚಿತ್ತವೃತ್ತಿಗಳನ್ನು ಬುಡ ಸಮೇತ ಕಿತ್ತೆಸೆಯುವುದು ಬ್ರಹ್ಮನಿಗೂ ಸಾಧ್ಯವಿಲ್ಲವೇನೋ. ಮನುಷ್ಯನ ಮನೋರಚನೆಯ ಅನೇಕಾನೇಕ ಮೂಲ ಸದಸದ್ ಧಾತುಗಳಲ್ಲಿ ಈ ರಾಗ ವೈಪರೀತ್ಯಗಳೂ ಸೇರ್ಪಡೆಯಾಗಿರುತ್ತವೆ. ಮನುಕುಲದ ಅಸ್ತಿತ್ವವಿರುವ ತನಕ ಅವುಗಳ ಮೂಲೋತ್ಪಾಟನೆ ಸುದೂರದ ಸ್ವಪ್ನವೇ. ಸಮುದ್ರ ಜಲದ ಅಪರಂಪಾರದಿಂದ ಲವಣಾಂಶವನ್ನು ಉಚ್ಚಾಟಿಸುವ ಹುಚ್ಚಾಟದಂತೆಯೇ ನಮ್ಮ ಆಂತರ್ಯದ ಗುಹ್ಯ ಆಳಗಳಿಂದ ಯುಗ ಸಂಚಯಿತ ಮೂಲಭೂತ ರಾಗಭಾವಗಳನ್ನು ಹೊಡೆದಟ್ಟುವ ಕಾಯಕ ಕೂಡ.

(ಚಿತ್ತವೃತ್ತಿಗಳ ನಿಕ್ಷೇಪತೆ)

✧ ✧ ✧

ನಮಗಿಂತ ನೂರು ಪಾಲು ಮಿಗಿಲಾದದ್ದನ್ನು ಅನುಭವಕ್ಕೆ ತಂದುಕೊಂಡಾಗ ನಮ್ಮ ಅಹಂಭಾವ ಬಿಸಿಗಿಟ್ಟ, ಬೆಣ್ಣೆಯಂತೆ ದ್ರವಿಸಿ, ವಿನಯ ಸೌಜನ್ಯಗಳು ನಮ್ಮ ವ್ಯಕ್ತಿಮೆಯನ್ನು ಪರಿಮಳಿಸುತ್ತವೆ.

(ಮಹತ್ತರ ಅನುಭವ)



ನಿಸಾರ್: ಗೆಳೆಯನ ದೃಷ್ಟಿಯಲ್ಲಿ

◆ ಕೆ. ಜಿ. ಸುಬ್ರಹ್ಮಣ್ಯ

ಇನ್ನೊಬ್ಬ ನಿಸಾರ್ ಅಭಿಮಾನಿಯಿಂದ ಮೊದಲೇ ಒಂದು ಸುಳಿವು ಸಿಕ್ಕಿತ್ತಾದರೂ ನಾನು ಅದನ್ನು ಅಷ್ಟು ಗಂಭೀರವಾಗಿ ತೆಗೆದು ಕೊಂಡಿರಲಿಲ್ಲ. ಬರಹಗಾರನೇ ಅಲ್ಲದ ನನ್ನಂಥವನಿಂದ ಏನು ನಿರೀಕ್ಷಿಸಿರಬಹುದು? ಎನ್ನುವ ವಿವಂಚನೆ. ಸ್ವಲ್ಪ ಗಂಭೀರ ಬರ ವಣಿಗೆಯ ಪ್ರಯತ್ನ ಮಾಡಿದ್ದುಂಟಾದರೂ ಆ ಯತ್ನಗಳನ್ನು ಅಲ್ಲಲ್ಲಿಗೇ ಬಿಟ್ಟವನು. ಹೀಗಾಗಿ, ನಾನು ಬರೆಯಬಹುದಾದದ್ದು ನಿಸಾರ್ ಒಂದಿಗಿನ ವೈಯಕ್ತಿಕ ಗೆಳೆತನದ ಬಗ್ಗೆ ಮಾತ್ರ.

ನಿಸಾರ್ ಅವರ ಪರಿಚಯ ನನಗಾದದ್ದು ೧೯೭೨ರಲ್ಲಿ. ಅವರು ಮೊದಲ ಬಾರಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ವರ್ಗವಾಗಿ ಬಂದು ಇಲ್ಲಿ ಮನೆ ಮಾಡಿ ನೆಲೆಸಿದ್ದಾಗ ಆ ವೇಳೆಗಾಗಲೇ ನನಗೆ ಸ್ನೇಹಿತರಾಗಿದ್ದ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರನ್ನು ಶಿವಮೊಗ್ಗ ರೋಟರಿ ಕ್ಲಬ್ಬಿನಲ್ಲಿ ಭಾಷಣಕ್ಕೆ ಕರೆಯಲು ಅವರ ಮನೆಗೆ ಹೋದಾಗ, ಅವರು 'ಕೆ. ಎಸ್. ನಿಸಾರ್ ಅಹಮದ್ ಈಗ ನನ್ನ ಸಹೋದ್ಯೋಗಿ ಶಿವಮೊಗ್ಗಕ್ಕೆ ಬಂದಿದ್ದಾರೆ, ಈಗಾಗಲೇ ಕವಿಯಾಗಿ ಹೆಸರು ಮಾಡಿರುವವರು, ಅವರನ್ನು ಕರೆಯಿರಿ, ನಾನು ಹೇಗೂ ಇದ್ದೇನಲ್ಲ, ಇನ್ನೊಮ್ಮೆ ನಾನು ಬರುತ್ತೇನೆ' ಎಂದು ನಿಸಾರ್ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟರು. ನಿಸಾರ್, ಆಗ ಈಗಿನಂತೆ ಹೆಚ್ಚು ಕೊಸರಾಡದೆ, ಆಹ್ವಾನವನ್ನು ಒಪ್ಪಿಕೊಂಡು ಬಂದು ಕವನ

ವಾಚನ ಮಾಡಿ ಎಲ್ಲ ಸದಸ್ಯರೂ ಸಂತೋಷಪಡುವಂತೆ ಮಾಡಿದರು. ಇದಕ್ಕೆ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರೇ ಕಾರಣ. ಅನಂತರ ನಿಸಾರ್ ಮತ್ತು ನಾನು ಆಗಾಗ್ಗೆ ಭೇಟಿಯಾಗುವ ಸಂದರ್ಭಗಳು ಒದಗುತ್ತಿದ್ದವು. ಅಲ್ಲದೆ, ನಾನೇ ಅವರನ್ನು ನೋಡುತ್ತಿದ್ದೆ. ಹಾಗೆಯೇ ಅವರೂ ನಮ್ಮ ಮನೆಗೆ ಬಂದು ನನ್ನ ಗ್ರಂಥ ಸಂಗ್ರಹವನ್ನು ವೀಕ್ಷಿಸಿ ಪುಸ್ತಕಗಳನ್ನು ಒಯ್ಯುತ್ತಿದ್ದರು. ಅವರೊಡನೆ ಹಾಗೆ ಆಗಾಗ ಸಿಗುತ್ತಿದ್ದ ಇನ್ನೊಬ್ಬ ಗೆಳೆಯ ದಿವಂಗತ ಎಸ್. ರಾಮಸ್ವಾಮಿ—ಕೋಕ ಕೋಲಾ ರಾಮಸ್ವಾಮಿ ಎಂದೇ ಕರೆಯುತ್ತಿದ್ದೆವು. ಅವರು ಜಿಲ್ಲೆಗೆ ಕೋಕಕೋಲಾ ವಿತರಕರಾಗಿದ್ದು, ಪರಿಚಯ ಹೇಳಲು ಸುಲಭವಾಗುವಂತೆ ಈ ಹೆಸರಿನಿಂದ ಕರೆಯುತ್ತಿದ್ದೆವು. ರಾಮಸ್ವಾಮಿ ಸಾಹಿತ್ಯ, ಸಂಗೀತ ಪ್ರೇಮಿಯಾಗಿದ್ದು, ಈ ಕ್ಷೇತ್ರಗಳಲ್ಲಿ ಒಂದಿಷ್ಟು ಕೆಲಸವನ್ನೂ ಮಾಡಿದ್ದವರು. ಒಂದು ಕಾಲಕ್ಕೆ ಬೆಂಗಳೂರಿನಲ್ಲಿ ನಿಸಾರರ ವಿದ್ಯಾರ್ಥಿಗಳೂ ಆಗಿದ್ದವರು. ಅವರ ಮನೆಗೆ ಮೈಸೂರು ಅನಂತಸ್ವಾಮಿ ಬಂದಿದ್ದು, ಅನೇಕ ಘಂಟೆಗಳ ಕಾಲ ಹಾಡಿದ್ದು ಎಲ್ಲ ಈಗ ನೆನಪು ಮಾತ್ರ.

ಸುಮಾರು ಅದೇ ಸಮಯದಲ್ಲೇ ಶ್ರೀ ನಿಟ್ಟೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಕರ್ನಾಟಕ ಸಂಘ ಸನ್ಮಾನ ಸಮಾರಂಭವನ್ನು ಏರ್ಪಡಿಸಿತ್ತು. ನಿಟ್ಟೂರರೂ ಮಾಸ್ತಿ ದಂಪತಿಗಳೂ ಅವರ ಮಕ್ಕಳೂ ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದರು. ಆ ಸಂದರ್ಭದಲ್ಲೂ ನಿಸಾರ್ ನಮ್ಮ ಮನೆಗೆ ಬಂದು ಅವರೊಡನೆ ಕಾಲ ಕಳೆದಿದ್ದರು. ಸನ್ಮಾನ ಸಮಾರಂಭದಲ್ಲಿ ಮಾಸ್ತಿಯವರನ್ನು ಕುರಿತು ತಾವು ಬರೆದಿದ್ದ ಕವನವನ್ನು ಇಲ್ಲಿನ ಕೆಲವು ಹಿತೈಷಿಗಳ ಆಗ್ರಹಪೂರ್ವಕ ಒತ್ತಾಯಕ್ಕೆ ಮಣಿದು ಮಾಸ್ತಿ ಅವರ ಎದುರಿನಲ್ಲೇ ವಾಚಿಸಿದ್ದು, ಮಾಸ್ತಿಯವರು ಅದನ್ನು ಆಸಕ್ತಿಯಿಂದ ಆಲಿಸಿದ್ದು ಇನ್ನೂ ನೆನಪಿನಲ್ಲಿದೆ. ಆ ಸಂದರ್ಭದಲ್ಲಿ ನನ್ನ ಮಾವಂದಿರಾದ ದಿ. ಹಸೂಡಿ ದತ್ತಾತ್ರೇಯ ಶಾಸ್ತ್ರಿಗಳ ಮನೆಗೂ ನಿಸಾರ್ ಬಂದಿದ್ದನ್ನು ಈಗಲೂ ಭೇಟಿಯಾದಾಗಲೆಲ್ಲ ನೆನಪಿಸಿಕೊಳ್ಳುತ್ತಾರೆ. ಅನಂತರವೂ ಒಂದೆರಡು ಬಾರಿ ಶಿವಮೊಗ್ಗೆಯ ರೋಟರಿ ಕ್ಲಬ್ಬಿನಲ್ಲಿ ನನ್ನ ಅಪೇಕ್ಷೆಯ ಮೇರೆಗೆ ಕವನ ವಾಚನ ಮಾಡಿದ್ದಿದೆ.

ನಿಸಾರರ ಪತ್ನಿಯವರೂ ಅಧ್ಯಾಪಿಕೆಯಾಗಿದ್ದು, ಶಿವಮೊಗ್ಗದಲ್ಲಿ ಹೆಚ್ಚು ಕಾಲ ಇರಲಾಗದ ಕಾರಣ, ನಿಸಾರ್ ಹೆಚ್ಚು ಸಮಯ ಒಂಟಿ ಜೀವನ ನಡೆಸಿದ್ದರು. ಅವರಿದ್ದ ಸವಳಂಗ ರಸ್ತೆಯ ಮನೆ ಮತ್ತು ಪಕ್ಕದ ಬೀದಿಯ ರೂಂನಲ್ಲಿ ಐದು ವರ್ಷ ವಾಸಿಸಿದ್ದರು. ಆದರೆ ಅವರು ಇಲ್ಲಿದ್ದ ಕಾಲದಲ್ಲಿಯೇ ಸಾಕಷ್ಟು ಜನ, ಮುಖ್ಯವಾಗಿ ಸಹ್ಯಾದ್ರಿ ಕಾಲೇಜು ಮತ್ತು ದೇಶೀಯ ವಿದ್ಯಾಶಾಲಾ ಕಾಲೇಜುಗಳಲ್ಲಿನ ಅಧ್ಯಾಪಕರನ್ನು ಗೆಳೆಯರನ್ನಾಗಿ ಸಂಪಾದಿಸಿಕೊಂಡಿದ್ದರು. ನಿಸಾರ್ ಅವರ ಪ್ರೇರಣೆಯಿಂದಲೇ ಈಗಲೂ ಶಿವಮೊಗ್ಗದಲ್ಲಿ ಚಟುವಟಿಕೆಯಿಂದಿರುವ 'ಅಭಿನಯ' ನಾಟಕ ತಂಡ ಜನ್ಮ ತಾಳಿತು. ಅವರ ಶಿವಮೊಗ್ಗ ವಾಸದ ಕಾಲದಲ್ಲಿಯೇ 'ರಾಮನ್ ಸತ್ತ ಸುದ್ದಿ', 'ಸಂಜೆ ಐದರ ಮಳೆ', 'ಅಮ್ಮ, ಆಚಾರ, ನಾನು', 'ಹಕ್ಕು', 'ಮಾಸ್ತಿ', 'ಅಮೇರಿಕ ಅಮೇರಿಕ' ಮುಂತಾದ ಅನೇಕ ಚಿರಸ್ಮರಣೀಯ ಕವನಗಳು ರಚಿತವಾದದ್ದು. ಕೆಲವು ಕವಿತೆಗಳನ್ನು ಬರೆದಾದ ಮೇಲೆ ನನಗೋ, ಎಸ್. ರಾಮಸ್ವಾಮಿ ಅವರಿಗೋ ನಿಸಾರರು ಮೊಟ್ಟಮೊದಲು ಓದಿ ತಾತ್ಪರ್ಯ, ಸಂದರ್ಭ

ಇತ್ಯಾದಿಗಳನ್ನು ವಿವರಿಸಿದ್ದೂ ಉಂಟು.

ಅವರು ಭೂ ವಿಜ್ಞಾನದ ಪ್ರಾಧ್ಯಾಪಕರಾದ್ದರಿಂದ, ವರ್ಗವಾಗಬಹುದಾಗಿದ್ದ ಕಾಲೇಜುಗಳ ಸಂಖ್ಯೆ ರಾಜ್ಯದಲ್ಲಿ ಸೀಮಿತವಾಗಿದ್ದು ಜೊತೆಗೇ ಸೀನಿಯರ್ ಒಬ್ಬರ ಆವಶ್ಯಕತೆ ಇಲಾಖೆಗೆ ಇದ್ದುದ್ದರಿಂದ ೧೯೭೭ರಲ್ಲಿ ಎರಡನೆಯ ಬಾರಿ ಶಿವಮೊಗ್ಗಕ್ಕೆ ಬರುವಂತಾಯಿತು. ಎರಡನೆಯ ಬಾರಿಗೆ ಬಂದಾಗ, ಅವರು ರೂಂ ಮಾಡದೇ, ಇಲ್ಲಿಯ 'ಮೀನಾಕ್ಷಿ ಭವನ'ದಲ್ಲಿ ಕೊಠಡಿ ಮಾಡಿಕೊಂಡಿದ್ದರು. ಆ ಕಾರಣ, ನಮ್ಮ ಮನೆಗೆ ಹತ್ತಿರದಲ್ಲೇ ಆ ಹೋಟೆಲು ಇದ್ದುದೂ ಕಾರಣವಾಗಿ, ಆಗಾಗ ಅವರೂ ರಾಮಸ್ವಾಮಿಯವರೂ ಬರುತ್ತಿದ್ದರು. ನಾನೂ ಬಹಳ ಸಲ ಅವರ ಕೊಠಡಿಗೆ ಹೋಗಿ ಅವರ ಹೊಸ ಕವನವನ್ನು ಓದಿಸಿ ಕೇಳಿ, ಸಾಹಿತ್ಯ ಸಂಗೀತಗಳ ಬಗೆಗೆ ಚರ್ಚಿಸಿ ದೋಸೆ ತಿಂದು ಬರುತ್ತಿದ್ದುದುಂಟು.

ಈ ಸಮಯದಲ್ಲಿ, ನಾನು ಶಾಸ್ತ್ರೀಯ ಸಂಗೀತ ಕಛೇರಿಗಳ—ಉತ್ತರಾದಿ ಮತ್ತು ದಕ್ಷಿಣಾದಿ—ಎರಡೂ ಸಂಪ್ರದಾಯಗಳ ಅನೇಕ ಟೇಪುಗಳನ್ನು ಸಂಪಾದಿಸಿಕೊಂಡಿದ್ದೆ. ಸಂಗೀತದಲ್ಲಿ ಆಸಕ್ತರಾದ ಗೆಳೆಯರ ಗುಂಪೊಂದಿತ್ತು. ದಿವಂಗತರಾದ ಆರ್. ಎಂ. ಕೃಷ್ಣಸ್ವಾಮಿ, ಹೊದಿಗ್ಗೆರೆ ಶಿವಕುಮಾರ್, ಎ.ಎಲ್.ಎಸ್. ಮೂರ್ತಿ, ಮರ್ಫಿ ಅಯ್ಯಂಗಾರ್, ಈಗ ಇರುವ ನರಸಿಂಹ ಮೂರ್ತಿ—ಇವರೊಡನೆ ನಾನೂ ನಿಸಾರ್ ಅವರೂ ಕೆಮ್ಮಣ್ಣುಗುಂಡಿ, ಲಕ್ಕವಳ್ಳಿಯಂತಹ ತಾಣಗಳಿಗೆ ಹೋಗಿ ಬೆಳಗಿನಿಂದ ಸಂಜೆಯವರೆಗೂ ಸಂಗೀತದ ಟೇಪುಗಳನ್ನಾಲಿಸಿ ಬಂದ ಸಂದರ್ಭಗಳೂ ಇದ್ದವು. ಹೀಗೆ ಸಂತೋಷದಿಂದ ಕಳೆದ ದಿನಗಳು ಹಲವಾರು. ಅಲ್ಲದೆ, ನಿಸಾರ್ ಅವರನ್ನು ನಾನು ಶಿವಮೊಗ್ಗೆಯ ಡಿ.ವಿ.ಎಸ್. ಕಾಲೇಜಿನ ಸಭಾಂಗಣದಲ್ಲಿ ಜರುಗಿದ ಬಿಸ್ಮಿಲ್ಲಾ ಖಾನರ ಷಹನಾಯ್ ಮತ್ತು ಬಾಲ ಮುರಳೀಕೃಷ್ಣ ಅವರ ಗಾಯನದ ಕಾರ್ಯಕ್ರಮಗಳಿಗೆ ಕರೆದೊಯ್ದಿದ್ದೆ. ಅವರು ತುಂಬು ಆಸಕ್ತಿಯಿಂದ ತದೇಕಚಿತ್ತರಾಗಿ ಸಂಗೀತದ ರಸಾಸ್ವಾದನೆ ಮಾಡಿದ್ದು ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ಉಳಿದಿದೆ.

ಹಾಗೆಯೇ, ನಾನು ಇನ್ನೊಮ್ಮೆ ನಿಸಾರರನ್ನು ಭದ್ರಾವತಿಯಲ್ಲಿ ಏರ್ಪಟ್ಟಿದ್ದ ಹರಿಪ್ರಸಾದ್ ಚೌರಾಸಿಯ ಅವರ ಬಾಂಸುರಿ (ಕೊಳಲು) ವಾದನದ ಕಾರ್ಯಕ್ರಮಕ್ಕೆ ಕರೆದೊಯ್ದು ಮೂರು ಗಂಟೆಯ ಕಾಲ ಸಂಗೀತಾನುಭವದ ಸಂತೋಷಕ್ಕೆ ಕಾರಣವಾದದ್ದನ್ನು ಈಗಲೂ ಅವರು ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುತ್ತಾರೆ. ಚೌರಾಸಿಯ ಅವರಿಗೆ ಕೆಲವೇ ಅಡಿಗಳ ದೂರದಲ್ಲಿ ಕುಳಿತಿದ್ದ ನಿಸಾರರನ್ನು ಆ ಮಹಾನ್ ಸಂಗೀತಗಾರರಿಗೆ ಪರಿಚಯಿಸಿದಾಗ, ಅವರು ತುಂಬು ಆದರದಿಂದ ನಿಸಾರರ ಜೊತೆ ಮಾತಾಡಿದ್ದನ್ನು ನಾನು ಮರೆಯಲಾರೆ.

ನಿಸಾರ್ ಅವರಿಗೆ ಮತ್ತೆ ಬೆಂಗಳೂರಿನ ಕಾಲೇಜಿಗೆ ವರ್ಗವಾದ ಅನಂತರ, ನಾನು ಬೆಂಗಳೂರಿಗೆ ಹೋದಾಗ, ಅವರನ್ನು ಭೇಟಿಯಾಗುತ್ತಿದ್ದುದು ಗಾಂಧಿ ಬಜಾರಿನ ಬಿ. ಕೆ. ಪಾರ್ಥಸಾರಥಿಯವರ (ಈಗ ಆ ಅಂಗಡಿಯಿಲ್ಲ) ಪುಸ್ತಕದ ಅಂಗಡಿಯಲ್ಲಿ. ನಿಸಾರ್ ಅವರಿಗೆ

ಬೇರೆ ಕಾರ್ಯಕ್ರಮವಿಲ್ಲದ ಸಂಜೆಗಳಲ್ಲಿ ಸಾಮಾನ್ಯವಾಗಿ ಈ ಪುಸ್ತಕದ ಅಂಗಡಿಯಲ್ಲಿ ಅವರು ಸಿಕ್ಕುತ್ತಿದ್ದರು. ನಾನೂ ಬನಶಂಕರಿಯಲ್ಲಿ ಇಳಿದುಕೊಳ್ಳುತ್ತಿದ್ದೆನಾಗಿ, ಗಾಂಧಿ ಬಜಾರ್ ಆಗಲಿ, ಪದ್ಮನಾಭನಗರದ ಅವರ ಮನೆಯಾಗಲಿ ದೂರವಿಲ್ಲದ ಕಾರಣ, ಅವರನ್ನು ಭೇಟಿಯಾಗುವುದು ಸುಲಭವಾಗಿತ್ತು. ಆಗೆಲ್ಲ ನಾವು ನಮ್ಮ ಶಿವಮೊಗ್ಗೆಯ ಹಳೆಯ ದಿನಗಳ ಸವಿ ನೆನಪುಗಳನ್ನು ತೋಡಿಕೊಂಡು, ಮತ್ತೆ ಅಂತಹ ಬಂಗಾರದ ದಿನಗಳು ಬರುವುದಿಲ್ಲ ಎಂದು ಹಪಹಪಿಸಿದ್ದುಂಟು.

೧೯೭೯ರಲ್ಲಿ ನಾನೂ ನನ್ನ ಪತ್ನಿ ಪಂಕಜ, ರೋಟರಿಯ ಅಂತರ್‍ರಾಷ್ಟ್ರೀಯ ಅಸೆಂಬ್ಲಿಗಾಗಿ ಅಮೇರಿಕೆಗೆ ಹೋಗಬೇಕಾಗಿ ಬಂದಿತು. ಫ್ಲಾರಿಡಾ ಸಂಸ್ಥಾನದ ಬೊಕಾರಟೋನ್ ಎನ್ನುವ ಊರಿನಲ್ಲಿ ಆ ಸಮಾವೇಶ ಏರ್ಪಾಡಾಗಿತ್ತು. ಏಳು ದಿನಗಳ ಅಸೆಂಬ್ಲಿಗೆ ಮೊದಲು ಮೂರು ದಿನಗಳ ಫ್ಲಾರಿಡಾ ಪ್ರವಾಸವನ್ನು ಅಲ್ಲಿಯ ರೋಟರಿ ಸದಸ್ಯರೊಬ್ಬರು ಪ್ರತಿ ವರ್ಷವೂ ಏರ್ಪಡಿಸುತ್ತಿದ್ದರು. ಆಸಕ್ತಿ ಇದ್ದ ಅನೇಕರು ಈ ಪ್ರವಾಸದಲ್ಲಿ ಪಾಲ್ಗೊಳ್ಳುತ್ತಿದ್ದರು. ಇದರಿಂದ ಎರಡು ಪ್ರಯೋಜನಗಳಿದ್ದವು. ಒಂದು ಸ್ವಂತ ಪರಿಶ್ರಮವಿಲ್ಲದೆ ಫ್ಲಾರಿಡಾದ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು, ಅಂದರೆ ಕೆನಡಿ ಸ್ಪೇಸ್ ಸೆಂಟರ್, ಡಿಸ್ನಿ ವರ್ಲ್ಡ್ (ಎಪ್ಕಾಟ್), ಸೀವರ್ಲ್ಡ್‌ನಂಥವುಗಳನ್ನು ಒಟ್ಟಾಗಿ ನೋಡಬಹುದಾದ ಸೌಕರ್ಯ. ಎರಡನೆಯದು, ಅಸೆಂಬ್ಲಿಗೆ ಮೊದಲೇ ಕೆಲವು ಸದಸ್ಯರೊಡನೆಯಾದರೂ ಸ್ನೇಹವನ್ನು ಸಂಪಾದಿಸಿಕೊಳ್ಳುವ ಅವಕಾಶ. ಹೀಗೆ ಆ ಗುಂಪಿಗೆ ನಾವು ಸೇರ್ಪಡೆಯಾದ ಎರಡನೆಯ ಬೆಳಿಗ್ಗೆಯೇ, ಪಾಕಿಸ್ತಾನದಿಂದ (ಕರಾಚಿಯಿಂದ) ಬಂದಿದ್ದ ಅಬ್ದುಲ್ ಅಜೀಜ್ ದಂಪತಿಗಳ ಪರಿಚಯವಾಯಿತು. ಅಬ್ದುಲ್ ಅಜೀಜ್ ಮೂಲತಃ ಬೆಂಗಳೂರಿನವರಾಗಿದ್ದು, ಸಾಗರ ಮತ್ತು ತರೀಕೆರೆಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸರಕಾರಿ ಅಧಿಕಾರಿಯಾಗಿದ್ದು, ಚೆನ್ನಾಗಿ ಕನ್ನಡ ಬಲ್ಲವರಾಗಿದ್ದರು. ಅವರ ಪತ್ನಿಗೂ ಮಾತಾಡಲಾಗದಿದ್ದರೂ ಮಾತು ಅರ್ಥವಾಗುವಷ್ಟು ಕನ್ನಡದ ಜ್ಞಾನವಿತ್ತು. ಹಾಗಾಗಿ, ಆ ಗುಂಪಿನಲ್ಲಿ ನಾಲ್ಕಾರು ಭಾರತೀಯ ದಂಪತಿಗಳಿದ್ದರೂ ವಿಶೇಷವಾಗಿ ನನ್ನ ಪತ್ನಿಗೆ ಇವರೇ ಹೆಚ್ಚು ಆಪ್ತರಾದರು.

ಅಸೆಂಬ್ಲಿಯ ಕಾಲದಲ್ಲಿ, ಒಂದು ಸಂಜೆ, ಪ್ರತಿನಿಧಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮದ ಏರ್ಪಾಟಿತ್ತು. ಬಹುಶಃ ಪೂರ್ವಸಿದ್ಧತೆಯ ಕೊರತೆಯೇ ಕಾರಣವಾಗಿ, ಭಾರತೀಯ ಗುಂಪಿನ ಹದಿನಾಲ್ಕು ದಂಪತಿಗಳ ಪ್ರದರ್ಶನ ಬಹಳ ಸಪ್ಪೆಯಾಗಿಬಿಟ್ಟಿತು. ನನ್ನ ಪತ್ನಿ ಎರಡು ಹಾಡುಗಳನ್ನು ಹಾಡಿದ್ದು, ನಮ್ಮ ಗುಂಪಿನ ಮರ್ಯಾದೆ ಉಳಿಸಿದ್ದಷ್ಟೇ ಅಲ್ಲ, ಅನೇಕರನ್ನು ಪರಿಚಯ ಮಾಡಿಕೊಳ್ಳಲೂ ದಾರಿಯಾಯಿತು. ಆ ಎರಡು ಹಾಡುಗಳಲ್ಲಿ, ನಿಸಾರರ 'ನಿತ್ಯೋತ್ಸವ' ಅನೇಕರ ಮೆಚ್ಚುಗೆ ಗಳಿಸಿತು. ಕನ್ನಡ ಓದಿ ಬರೆಯಲು ಬಲ್ಲ ಅಬ್ದುಲ್ ಅಜೀಜ್‌ರವರು, ಈ ಗೀತೆಯನ್ನು ಬರೆದ ಕವಿಯ ಬಗ್ಗೆ ವಿಚಾರಿಸಿ, ತಮಗೆ ನಿಸಾರ್ ಅವರ ಒಂದು ಕವನ ಸಂಗ್ರಹ ಬೇಕೆಂದೂ ಕೇಳಿದರು. ನಾವು ಭಾರತಕ್ಕೆ ಹಿಂದಿರುಗಿದ ಅನಂತರ, 'ನಿತ್ಯೋತ್ಸವ'ದ ಪ್ರತಿಯೊಂದನ್ನು ನಾನು ಅವರಿಗೆ ಕಳಿಸಿಕೊಟ್ಟೆ. ನಿಸಾರ್, ಈ ಸಂಗತಿಯಿಂದ ತುಂಬ ಸಂತೋಷಪಟ್ಟುಕೊಂಡರಷ್ಟೇ ಅಲ್ಲದೆ, ಈಗಲೂ

ಆಗಾಗ್ಗೆ ಇದನ್ನು ನೆನಪಿಸಿಕೊಳ್ಳುತ್ತಾರೆ. ಅಂದಹಾಗೆ, ನಿಸಾರ್ ನಮ್ಮ ಊರಿನಲ್ಲಿದ್ದ ಸಮಯದಲ್ಲಿ ಒಮ್ಮೆ ಕುಟುಂಬವನ್ನು ನೋಡಲು ಬೆಂಗಳೂರಿಗೆ ಹೋಗಿದ್ದಾಗ, ಆಕಾಶವಾಣಿಗೆ ತುರ್ತಾಗಿ ಪದ್ಯ ಕಳಿಸಬೇಕಾದ್ದರಿಂದ ಅಲ್ಲಿ 'ನಿತ್ಯೋತ್ಸವ'ವನ್ನು ರಚಿಸಿದರು. ಇದರಲ್ಲಿ ಶಿವಮೊಗ್ಗೆ ಜಿಲ್ಲೆಯದೇ ಮೇಲುಗೈ ಎಂಬ ಹೆಮ್ಮೆ ನನಗಿದೆ!

ಆಮೇಲೆ, ನನ್ನ ಕೊನೆಯ ಮಗಳು ನಿಸಾರ್ ಅವರ ಬೆಂಗಳೂರಿನ ಮನೆಗೆ ಕಾಣುವಷ್ಟೇ ದೂರದಲ್ಲಿ, ಬಾಡಿಗೆ ಮನೆಯೊಂದರಲ್ಲಿ ವಾಸಿಸತೊಡಗಿದಾಗ, ಸಹಜ ವಾಗಿಯೇ ಮಗಳ ಮನೆಗೆ ಹೋದಾಗಲೆಲ್ಲ ನಿಸಾರರನ್ನು ನೋಡುವುದು ಅಭ್ಯಾಸವಾಗಿ ಬಿಟ್ಟಿತು. ಹಾಗೆ ಹೋದಾಗಲೆಲ್ಲ, ಅವರ ಆತಿಥ್ಯವನ್ನು ನಾನೂ ಕೆಲವು ಬಾರಿ ನನ್ನ ಪತ್ನಿಯೂ ಪಡೆದಿದ್ದೇವೆ. ಈಗಲೂ ಅವರ ಮನೆಗೆ ಹೋದಾಗ, ಅವರ ಪತ್ನಿ ಹೊರಕ್ಕೆ ಬಂದು ನನ್ನ ಕ್ಷೇಮ ಸಮಾಚಾರ ವಿಚಾರಿಸುವುದಲ್ಲದೇ ನನ್ನ ಪತ್ನಿಯ ಬಗ್ಗೆಯೂ ವಿಚಾರಿಸುತ್ತಾರೆ. ಹೀಗೆ ಕೌಟುಂಬಿಕ ಸ್ನೇಹ ಎಂದು ಕರೆಯುವ ಮಟ್ಟಿಗೆ ನಮ್ಮ ವಿಶ್ವಾಸ ಬೆಳೆದು ನಿಂತಿದೆ. ಈಚಿನ ಶಿವಮೊಗ್ಗೆಯ ಒಂದು ಕಾರ್ಯಕ್ರಮದಲ್ಲಿ ನಿಸಾರ್, ಸಭಿಕನಾಗಿ ಕುಳಿತಿದ್ದ ನನ್ನ ಕಡೆ ತೋರಿಸಿ, 'ಶಿವಮೊಗ್ಗೆಯಲ್ಲಿ ನಾನು ವಾಸಿಸಿದ್ದಾಗ, ನನ್ನ ಸಾಹಿತ್ಯ ಜೀವನಕ್ಕೆ ಆಮ್ಲಜನಕಪ್ರಾಯರಾದ ಗೆಳೆಯ ಕೆ. ಜಿ. ಸುಬ್ರಹ್ಮಣ್ಯ ಸಹ ಬಂದಿರುವುದು ನನಗೆ ಅತ್ಯಾನಂದ ನೀಡಿದೆ' ಎಂದರು. ಅವರ ಈ ಸ್ನೇಹಪರವಾದ ಮಾತಿಗೆ ನಾನು ಆಭಾರಿ.

ಶಿವಮೊಗ್ಗದಲ್ಲಿದ್ದಾಗಲೂ, ಈಗ ಬೆಂಗಳೂರಿನಲ್ಲಿ ಅವರ ಮನೆಗೆ ಹೋದಾಗಲೂ ಹೊಸದಾಗಿ ಪ್ರಕಟವಾದ ಅವರ ಕವನ ಸಂಕಲನಗಳು, ಗದ್ಯಕೃತಿಗಳು, ಕ್ಯಾಸೆಟ್ಟುಗಳು, ಸಿ.ಡಿ.ಗಳನ್ನು ಕೊಟ್ಟೇ ಕಳಿಸುತ್ತಾರೆ. ಶಿವಮೊಗ್ಗಕ್ಕೆ ಬಂದಾಗ, ನಮ್ಮ ಮನೆಗೆ ಬರದೇ ಹೋಗುವುದಿಲ್ಲ; ಜೊತೆಗೇ ಊಟೋಪಚಾರವನ್ನು ಸ್ವೀಕರಿಸದೆ ಇರುವುದಿಲ್ಲ.

ನಾನು ಕಂಡಂತೆ, ನಿಸಾರ್ ಠಾಕುಠೀಕಾಗಿ ಸೂಟ್, ಟೈಗಳಿಂದ ಅಲಂಕೃತರಾಗದೇ ಯಾವ ಸಮಾರಂಭಕ್ಕೂ ಹೋಗುವುದಿಲ್ಲ. ಇದು ಬಿಟ್ಟರೆ ಬೇರೆ ಯಾವ ಅಭ್ಯಾಸವನ್ನೂ ನಾನು ಅವರಲ್ಲಿ ಕಂಡಿಲ್ಲ. ಆದರೆ ಸುಲಭಕ್ಕೆ ಯಾವ ಆಹ್ವಾನವನ್ನೂ ಒಪ್ಪಿಕೊಳ್ಳುವುದಿಲ್ಲ. ತುಂಬ ಸರಳ ಸಜ್ಜನರಾದರೂ ಈ ವಿಚಾರದಲ್ಲಿ ಕೊಸರಾಟ ಸ್ವಲ್ಪ ಜಾಸ್ತಿಯೇ. ಹೀಗಿದ್ದೂ, ಅವರಿಗಿರುವ ಅಭಿಮಾನಿಗಳ ಸಂಖ್ಯೆ ತುಂಬ ದೊಡ್ಡದು. ಒಮ್ಮೆ ಪರಿಚಯವಾದರೆ ತುಂಬಾ ಆಪ್ತರಾಗಿ ನಡೆದುಕೊಳ್ಳುತ್ತಾರೆ. ಸೇರಿದವರೆಲ್ಲರೊಡನೆ ಸಲಿಗೆಯಿಂದ ವರ್ತಿಸುತ್ತಾರೆ. ಇಷ್ಟಾಗಿ, ನಾನು ಅವರ ವಿಶೇಷ ಅಭಿಮಾನಕ್ಕೆ ಪಾತ್ರನಾಗಿದ್ದೇನೆಂಬುದು ನನಗೆ ಸಂತೋಷದ ಸಂಗತಿ. ಒಂದು ನಿದರ್ಶನ, ನಾನು ಒಮ್ಮೆ ಬೆಂಗಳೂರಿಗೆ ಹೋಗಿದ್ದಾಗ, ಪತ್ರಿಕೆಯಲ್ಲಿ ಆ ಸಂಜೆ ರವೀಂದ್ರ ಕಲಾಕ್ಷೇತ್ರದ ಪಕ್ಕದ 'ಕನ್ನಡ ಭವನ'ದಲ್ಲಿ ಅವರೊಡನೆ ಸಾರ್ವಜನಿಕ ಸಂದರ್ಶನ ಕಾರ್ಯಕ್ರಮವಿದೆಯೆಂದು ಓದಿ, ನನ್ನ ಮಗಳೊಡನೆ ಅಲ್ಲಿಗೆ ಹೋದೆ. ಸಭಾಂಗಣ ಪೂರ್ತಿಯಾಗಿ ತುಂಬಿದ್ದು ನಾವು ಬಾಗಿಲಲ್ಲಿಯೇ ನಿಂತಿದ್ದೆವು. ಸಭೆಯ ಮಧ್ಯ ಭಾಗದಲ್ಲಿ ಕುಳಿತಿದ್ದವರೊಬ್ಬರು ಎದ್ದು ಹೋದೊಡನೆ, ನಾನು ಆ ಕುರ್ಚಿಯನ್ನು ಹಿಡಿದು ಕುಳಿತುಕೊಂಡೆ. ಸಭಿಕರ ಪ್ರಶ್ನೆಗಳಿಗೆ ಉತ್ತರಿಸುತ್ತ ಅವರೊಡನೆ ಸಂಭಾಷಿಸುತ್ತಿದ್ದ ನಿಸಾರ್

ಅಕಸ್ಮಾತ್ತಾಗಿ ನನ್ನನ್ನು ನೋಡಿದರು. ಅಲ್ಲಿಂದಲೇ, ನನ್ನನ್ನು ನೋಡಿದ್ದಾಗಿ ಸೂಚಿಸಿ, ಸಭೆ ಮುಗಿದ ಅನಂತರ ಹತ್ತು ನಿಮಿಷ ಉಳಿದೆಲ್ಲರನ್ನೂ ಬಿಟ್ಟು ನಮ್ಮನ್ನು ಕೊಠಡಿಯೊಂದಕ್ಕೆ ಕರೆದೊಯ್ದು ಮಾತನಾಡಿಸಿದರು. ಇಂಥ ಆತ್ಮೀಯ ವಿಶ್ವಾಸಕ್ಕೆ ಪಾತ್ರ ಎಂದು ನಾನು ಯಾವಾಗಲೂ ಸಂತೋಷಪಟ್ಟಿದ್ದೇನೆ. ನನಗೆ ಪರಿಚಯವಿರುವ ಸಾಹಿತಿಗಳ ಸಂಖ್ಯೆ ಸಾಕಷ್ಟು ದೊಡ್ಡದು. ಕೆಲವರು ಹಿರಿಯರು ತುಂಬ ವಿಶ್ವಾಸವಿಟ್ಟವರಿದ್ದಾರೆ. ಅಂಥ ಅನೇಕರು ಈಗ ಇಲ್ಲ ಎನ್ನುವುದೂ ಸಹಜ ಜೀವನ ಧರ್ಮವಷ್ಟೆ? ಹಿರಿಯರು ಅಭಿಮಾನದಿಂದಿರುವವರು ಸುದೈವಶಾತ್ ಇನ್ನೂ ಇದ್ದಾರೆ. ಕಿರಿಯರಲ್ಲಿ ಅನೇಕರು ನನಗೆ ತುಂಬು ಪ್ರೀತಿ ವಿಶ್ವಾಸ ಗಳನ್ನು ತೋರಿಸುವವರಿದ್ದಾರೆ. ಸಮವಯಸ್ಕರಲ್ಲಿ ಕೆಲವು ಸ್ನೇಹಿತರನ್ನು ಸಂಪಾದಿಸಿರುವ ಭಾಗ್ಯ ನನ್ನದು. ಅಂಥವರಲ್ಲಿ ಪ್ರಧಾನವಾಗಿ ನೆನಪಿಸಿಕೊಳ್ಳಬೇಕಾದವರಲ್ಲಿ ನಿಸಾರ್ ಅಹಮದ್ ಒಬ್ಬರು ಮಾತ್ರವಲ್ಲ, ತುಂಬ ಆಪ್ತರೂ ಹೌದು.

ಕವಿಯಾಗಿ, ಸಾಹಿತಿಯಾಗಿ ನಿಸಾರ್ ಬಗ್ಗೆ ಅನೇಕ ವಿದ್ವಾಂಸರ, ವಿಮರ್ಶಕರ ಲೇಖನಗಳು ಈ ಗ್ರಂಥದಲ್ಲಿರಬಹುದು. ಅವರ ಕವನಗಳಲ್ಲಿ ಇಂದಿಗೂ ನನಗೆ ಅಚ್ಚುಮೆಚ್ಚಾದದ್ದು 'ಮತ್ತದೇ ಸಂಜೆ, ಅದೇ ಬೇಸರ'. ಆದರೆ ತುಂಬ ಜನಪ್ರಿಯವಾದ ಅವರ ಕವನಗಳು 'ನಿತ್ಯೋತ್ಸವ', 'ಬೆಣ್ಣೆ ಕದ್ದ ನಮ್ಮ ಕೃಷ್ಣ', 'ಕುರಿಗಳು, ಸಾರ್, ಕುರಿಗಳು' ಮುಂತಾದವು. ಸಾಧಾರಣವಾಗಿ ಅವರ ಕವನಗಳಲ್ಲಿ ವಿನೋದ ಸಾಮಾನ್ಯ. ಆಸಕ್ತಿ ಹುಟ್ಟಿಸುವ ವಿಷಯಗಳು ಅವರ ಕವಿತೆಗಳಲ್ಲಿ ಬಹಳ ಇವೆ. ಉದಾಹರಣೆಗೆ 'ನಗ್ತೀರ ನನ್ ಹಿಂದೆ, ನಗ್ರಯ್ಯಾ ನಗ್ರಿ', 'ಸ್ವಯಂ ಸೇವೆಯ ಗಿಳಿಗಳು', 'ಶ್ರೀಸಾಮಾನ್ಯನ ಪ್ರತಿನಿಧಿ' ಇತ್ಯಾದಿ ಕವಿತೆಗಳಲ್ಲಿ ಸಾಂದರ್ಭಿಕ ಹಾಸ್ಯ ಪ್ರಜ್ಞೆಯೂ ಸಾಕಷ್ಟಿದೆ.

ಶಿವಮೊಗ್ಗದಲ್ಲಿ ಗದುಗಿನ ಪುಟ್ಟರಾಜ ಗವಾಯಿ ಮತ್ತು ಶಿಷ್ಯರ ಸಂಗೀತ ಕಛೇರಿ ಏರ್ಪಾಡಾಗಿತ್ತು. ನಾನು, ನಿಸಾರ್ ಮತ್ತು ಇತರ ಗೆಳೆಯರು ಅಲ್ಲಿ ಹೋಗಿ ಸಭಾಂಗಣದ ಹೊರಗೆ ಕೂತಿದ್ದೆವು. ಊರಿನ ಹಿರಿಯ ಪ್ರಜೆಯೊಬ್ಬರು ನಮ್ಮೊಡನೆ. 'ಗವಾಯಿಗಳು ಬಾಯಿ ತೆರೆದಿದ್ದನ್ನು ನೋಡಬೇಕು ಎಂದು ಬಂದಿದ್ದೇನೆ, ಬರೇ ಶಿಷ್ಯರಿಂದ ಹಾಡಿಸಿ, ಬಾಜಿಸು ತ್ತಿದ್ದಾರೆ' ಎಂದು ದೂರಿದ್ದಲ್ಲದೆ, ಹಾಡುತ್ತಿದ್ದ ಶಿಷ್ಯನೊಬ್ಬನಿಗೆ ಹೇಳಿಯೇ ಬಿಟ್ಟರು. ಆದಾಗಿ ಕೆಲ ನಿಮಿಷಗಳಲ್ಲೇ ಗವಾಯಿಗಳು ಹಾಡಲು ಉಪಕ್ರಮಿಸಿದರು. ಈ ಹಿರಿಯರು ತಕ್ಷಣವೇ ಹೊರಟು ಹೋದರು. ಒಬ್ಬ ಸ್ನೇಹಿತರು, 'ಇದೇನು, ಅವರೇ ಹೊರಟು ಹೋದರಲ್ಲ' ಎಂದಾಗ ನಿಸಾರ್, 'ಗವಾಯಿಗಳು ಬಾಯಿ ತೆರೆದದ್ದನ್ನು ಅವರಿಗೆ ನೋಡಬೇಕಾಗಿತ್ತು, ನೋಡಿಯಾಯಿತಲ್ಲ, ಅವರಿಗೆ ಇಲ್ಲಿ ಇನ್ನೇನು ಕೆಲಸ? ಹೊರಟರು' ಎಂದು ಅಲ್ಲಿದ್ದವರೆಲ್ಲ ನಗುವಂತೆ ಮಾಡಿದರು. ಇಂತಹ ಸಾಂದರ್ಭಿಕ ಹಾಸ್ಯದ ಸನ್ನಿವೇಶ ಗಳು ಆಗಾಗ್ಗೆ ಬರುತ್ತಿದ್ದವು. ಈಗಲೂ ಆ quick wit ಅವರಲ್ಲಿ ಎಚ್ಚರವಾಗಿರುವುದು ನನ್ನ ಅನುಭವಕ್ಕೆ ಕೆಲವೊಮ್ಮೆ ಬಂದಿದೆ. ಎಪ್ಪತ್ತು ದಾಟಿ ಮುಂದೆ ಸಾಗುತ್ತಿರುವ ಶ್ರೀಯುತರಿಗೆ ಶುಭ ಕೋರುತ್ತೇನೆ.



ಐದು ದಶಕಗಳನ್ನು ಪೂರೈಸಿದ ಗೆಳೆತನ

♦ *ಹೊ. ರಾ. ಸತ್ಯನಾರಾಯಣ ರಾವ್*

ನಿಸಾರ್ ಮತ್ತು ನನ್ನ ಗೆಳೆತನ ಐವತ್ತು ವರ್ಷಗಳಿಗಿಂತಲೂ ಹೆಚ್ಚಿನದು. ನಿಸಾರ್ ಮತ್ತು ನನ್ನ ಪರಿಚಯವಾದಾಗ ಅವನು ಬಸವನಗುಡಿಯ ಗಾಂಧಿ ಬಜಾರಿನ ಸಮೀಪದ ರಾಣೋಜಿ ರಾವ್ ರಸ್ತೆಯಲ್ಲಿದ್ದ. ಅವನ ಮನೆಯ ಸಮೀಪದಲ್ಲೇ ಇದ್ದ ನನ್ನ ಸಹೋದ್ಯೋಗಿ ಗೆಳೆಯ ಶ್ರೀ ಎಂ. ಜಿ. ಶ್ರೀಕಂಠಸ್ವಾಮಿ ನನ್ನನ್ನು ನಿಸಾರ್‌ಗೆ ಪರಿಚಯ ಮಾಡಿಕೊಟ್ಟ. ನಾನು, ನಿಸಾರ್, ಶ್ರೀಕಂಠಸ್ವಾಮಿ ಅಂದಿನಿಂದ ಸ್ನೇಹಿತರಾದೆವು. ಬಹುಶಃ ೧೯೫೫ರ ಏಪ್ರಿಲ್ ಇರಬಹುದು ಅಥವಾ ಅದಕ್ಕಿಂತ ಸ್ವಲ್ಪ ಮುಂಚೆ ನಮ್ಮ ಪರಿಚಯವಾದದ್ದು. ನಾನು ಆ ವೇಳೆಗೆ ಪದವೀಧರನಾಗಿ, ಐಟಿಐನಲ್ಲಿ ಕೆಲಸಕ್ಕೆ ಸೇರಿ ಎರಡು ವರ್ಷಗಳ ಮೇಲಾಗಿತ್ತು. ನಿಸಾರ್ ಸೆಂಟ್ರಲ್ ಕಾಲೇಜಿನಲ್ಲಿ ಜಿಯಾಲಜಿ ಆನರ್ಸ್ ತರಗತಿಯಲ್ಲಿ ಓದುತ್ತಿದ್ದ, ಸುಮಾರು ಇಪ್ಪತ್ತರ ತರುಣ. [ಕೈಲಾಸಂ ಕೂಡಾ ಜಿಯಾಲಜಿ ಓದಿ ಕನ್ನಡ ನಾಟಕಗಳನ್ನು ಬರೆದವರು.] ಕವಿತೆಗಳನ್ನು ಬರೆಯುತ್ತಾನೆಂದು ನಮಗೆ ಅವನನ್ನು ಕಂಡರೆ ಸಹಜವಾಗಿಯೇ ಅಭಿಮಾನ. ಸಾಮಾನ್ಯವಾಗಿ ನಾನೂ ಅವನೂ ವಾರಕ್ಕೆ ಎರಡು ಮೂರು ಬಾರಿಯಾದರೂ ಭೇಟಿಯಾಗುತ್ತಿದ್ದೆವು. ಅವನು ಈಚೆಗೆ ಬರೆದ ಕವಿತೆಗಳನ್ನು ಓದುತ್ತಿದ್ದ. ಅವನು ಬರೆದ ಕವನಗಳನ್ನು ಕೇಳುವುದಕ್ಕಾಗಿಯೇ ನಾನು ಅವನ ಮನೆಗೆ ಹೋಗುತ್ತಿದ್ದೆನೆಂದರೂ ಸಲ್ಲುತ್ತದೆ. ಅವನ ತಂದೆ ದಿ. ಕೆ. ಎಸ್. ಹೈದರ್ ಸಾಹೇಬರು ಶಿರಸ್ತೇದಾರ

ರಾಗಿದ್ದರು. ಚೆನ್ನಾಗಿ ಓದಿಕೊಂಡವರು, ಸಜ್ಜನರು. ತಾಯಿ ಹಮೀದಾ ಬೇಗಂ ಶ್ರೀಮಂತ ಕುಟುಂಬದಿಂದ ಬಂದವರು. ಅವರದು ದೊಡ್ಡ ಕುಟುಂಬ.

ಮೊದಲಿನಿಂದಲೂ ನಿಸಾರ್ ವ್ಯಾಸಂಗಪ್ರಿಯ, ಅಧ್ಯಯನಶೀಲ. ನಾನೂ ಅವನೂ ಚಾಮರಾಜಪೇಟೆಯಿಂದ ಗಾಂಧಿ ಬಜಾರಿನ ಕಡೆ ನಡೆಯುತ್ತಾ ಯಾವುದಾದರೂ ಒಂದು ಪದವನ್ನು ತೆಗೆದುಕೊಂಡು ಅದಕ್ಕೆ ನಮಗೆ ತಿಳಿದಿರುವ ಸಮಾನಾರ್ಥ ಪದಗಳನ್ನು ಹೇಳಿಕೊಳ್ಳುತ್ತಾ ದಾರಿಯನ್ನು ಕ್ರಮಿಸುತ್ತಿದ್ದೆವು. ಅವನಿಗೆ ರಾತ್ರಿಯಲ್ಲಿ ಒಮ್ಮೊಮ್ಮೆ ಎಚ್ಚರವಾದಾಗ ಹಾಸಗೆಯ ಬಳಿ ಠಾಕೂರರ ಕವಿತೆಗಳೊ, 'ಮಂಕುತಿಮ್ಮನ ಕಗ್ಗ'ವೋ, ಯಾವುದಾದರೂ ಇಂಗ್ಲಿಷ್ ಪುಸ್ತಕವೊ, ಇಲ್ಲವೇ ಬೇರೆ ಭಾಷೆಗಳಿಂದ ಇಂಗ್ಲಿಷಿಗೆ ಅನುವಾದವಾದ ಕವಿತೆಗಳ ಸಂಕಲನವೊ—ಹೀಗೆ ಹಾಸಿಗೆಯ ಬಳಿ ಇಟ್ಟುಕೊಂಡಿರುತ್ತಿದ್ದ. ಪುಸ್ತಕಗಳನ್ನು ಅರ್ಧ ಗಂಟೆ-ಒಂದು ಗಂಟೆ ಓದಿಯೇ ಮಲಗುತ್ತಿದ್ದುದು. ಅದರಿಂದಾಗಿ ಅವನು ಸೂರ್ಯವಂಶಿ.

ನನ್ನನ್ನು ತನ್ನ ಮಿತ್ರರಿಗೆ ಪರಿಚಯಿಸುವಾಗ ಒಂದು ಸಂಗತಿಯನ್ನು ನಿಸಾರ್ ಆಗಾಗ್ಗೆ ಹೇಳುತ್ತಿರುತ್ತಾನೆ: 'ನೋಡಿ, ಈತ ಸತ್ಯ, ಉರುಫ್ ಹೊ. ರಾ. ಸತ್ಯನಾರಾಯಣ ರಾವ್ ಅಂತ. ಓಬೀರಾಯನ ಕಾಲದ ನನ್ನ ಸನ್ಮಿತ್ರ. ಕನ್ನಡ ಸಾಹಿತ್ಯಾನ ಚೆನ್ನಾಗಿ ಓದಿಕೊಂಡಿದ್ದಾನೆ. ಜೊತೆಗೆ, ಐಟಿಐ ಸಂಸ್ಥೆಯಲ್ಲಿ ಇಂಜಿನಿಯರ್ ಆಗಿ ರಿಟೈರ್ ಆಗೋ ಹೊತ್ತಿಗೆ, ಖಯಾಲಿಗೋಸ್ಕರ ಕನ್ನಡ ಎಂ.ಎ. ಮಾಡಿಕೊಂಡಿದ್ದಾನೆ.'

ಜೊತೆಗೇ ಇದನ್ನೂ ಅನೇಕ ಬಾರಿ ಹೇಳಿ ನನ್ನಲ್ಲಿ ಸಂಕೋಚ ಮೂಡಿಸಿದ್ದಾನೆ: 'ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದ್ತಿದ್ದಾಗ ಇವನು, ನಾನು ಹೊಸದಾಗಿ ಬರೆದ ಪದ್ಯಾನ ಓದೋಕೆ ಚಾಮರಾಜಪೇಟೆಯಿಂದ ಬಸವನಗುಡಿಯ ನಮ್ಮ ಮನೆಗೆ ಬರ್ತಿದ್ದ. ಓದಿದ ಮೇಲೆ ಸಂತೋಷ ಪಟ್ಟು ಗಾಂಧಿ ಬಜಾರಿನ 'ವಿದ್ಯಾರ್ಥಿ ಭವನ'ದಲ್ಲಿ ಮಸಾಲೆ ದೋಸೆ, ಕಾಫಿ ಕೊಡಿಸ್ತಿದ್ದ. ಹೀಗೆ, ಲೆಕ್ಕವಿಲ್ಲದಷ್ಟು ಸಲ ಇಂಥ ಮೆಹರ್ಬಾನಿ ಮಾಡಿದ್ದಾನೆ.'

ದಿಬ್ಬೂರು ಶ್ರೀನಿವಾಸರಾಯರೆಂದು ಸಾಹಿತ್ಯ/ಗಮಕ ವಲಯದಲ್ಲಿ ಪರಿಚಿತರಾದ ದಿ. ಡಿ. ಎಸ್. ಶ್ರೀನಿವಾಸರಾಯರು ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರು. ಇವರು ಶಂಕರಪುರದ ಪೊಲೀಸ್ ಸ್ಟೇಷನ್ ಬಳಿಯ ಮನೆಯಲ್ಲಿರುತ್ತಿದ್ದರು. ಇವರ ಮನೆಯ ಸಮೀಪವೇ ಇವರ ಬಹಳ ಪರಿಚಯದ ದೇವುಡು ನರಸಿಂಹಶಾಸ್ತ್ರಿಗಳಿದ್ದರು. ದಿಬ್ಬೂರರು ಕಾಳಿದಾಸ, ಭಾಸರನ್ನು ಓದಿಕೊಂಡಿದ್ದಂತೆಯೇ ಕನ್ನಡದ ಷಡಕ್ಷರಿ, ಕುಮಾರವ್ಯಾಸರನ್ನೂ ಅಧ್ಯಯನ ಮಾಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಷಡಕ್ಷರಿಯ 'ಶಬರ ಶಂಕರ ವಿಳಾಸ'ದ ಅನುವಾದವನ್ನು ಮಾಡಿಕೊಟ್ಟಿದ್ದಾರೆ. ನಾನೂ, ನಿಸಾರ್ ಶ್ರೀನಿವಾಸರಾಯರ ಬಳಿ ಷಡಕ್ಷರಿಯ 'ರಾಜಶೇಖರ ವಿಳಾಸ'ವನ್ನು ವ್ಯಾಸಂಗ ಮಾಡಿದೆವು. ಕೆಲವು ಕಾಲದ ಅನಂತರ ದಿ. ಬಿ. ಕೆ. ಶ್ರೀನಿವಾಸಮೂರ್ತಿಯವರು (ಐ.ಟಿ.ಐ.) ನಮ್ಮೊಡನೆ ಸೇರಿಕೊಂಡರು. ಈ ವ್ಯಾಸಂಗಗೋಷ್ಠಿಯ ಮುಕ್ತಾಯ ಸಮಾರಂಭವನ್ನು ಏರ್ಪಡಿಸಿದ್ದೆವು.

ವಿದ್ವಾಂಸರಾದ ಚೆನ್ನಪ್ಪ ಎರೆಸೀಮೆಯವರು ಆ ದಿನದ ಕಾರ್ಯಕ್ರಮದಲ್ಲಿ ಅತಿಥಿಗಳಾಗಿದ್ದು ಶ್ರೀನಿವಾಸರಾಯರನ್ನು ಸನ್ಮಾನಿಸಿದರು. ಇವರಲ್ಲಿ ಕೆಲವು ಸಮಯ ನಾವು 'ಪಂಪ ಭಾರತ'ವನ್ನೂ ವ್ಯಾಸಂಗ ಮಾಡಿದೆವು. ಹಿರಿಯರಾದ ದಿ. ಅ. ನ. ಸುಬ್ಬರಾಯರೊಡನೆ ಗಾಂಧಿ ಬಜಾರಿನ ಅವರ 'ಕಲಾಮಂದಿರ'ದಲ್ಲಿ ನಾನೂ ನಿಸಾರ್ ತೀ. ನಂ. ಶ್ರೀಕಂಠಯ್ಯ ನವರ 'ಭಾರತೀಯ ಕಾವ್ಯ ಮೀಮಾಂಸೆ'ಯನ್ನು ವ್ಯಾಸಂಗ ಮಾಡಿದೆವು. ನಿಸಾರ್, ರಾಣೋಜಿರಾವ್ ರಸ್ತೆಯ ಮನೆಯಿಂದ ಜಯನಗರದ ಮನೆಗೆ ಬಂದ ಮೇಲೆ, ಅವನ ಮನೆಯ ಬಿಸಿಲು ಮಚ್ಚಿನ ಮೇಲೆ ಕುಳಿತು ಕುವೆಂಪು 'ರಾಮಾಯಣ ದರ್ಶನಂ' ಕಾವ್ಯವನ್ನು ಓದಿ ಆನಂದಿಸಿದೆವು. ಹಾಗೆಯೇ ಎರಡು ಮೂರು ಬಾರಿ ಓದಿದ ಕವಿತೆಯೆಂದರೆ ಕಡೆಂಗೋಡ್ಲು ಶಂಕರಭಟ್ಟರ 'ಮಾದ್ರಿಯ ಚಿತೆ'.

ನಿಸಾರ್ ಬರೆದ ಪದ್ಯಗಳನ್ನು ನನಗೂ ಅವನಿಗೂ ಗುರುಗಳಾದ, ಚಾಮರಾಜ ಪೇಟೆಯಲ್ಲೇ ನಮ್ಮ ಮನೆಯ ಬಳಿ ಇದ್ದ, ವಿ.ಸೀ. ಅವರಿಗೆ ತೆಗೆದುಕೊಂಡು ಹೋಗಿ ಕೊಟ್ಟೆವು. ಮುದ್ದಾಗಿ, ದುಂಡಾಗಿ ಎಕ್ಸರ್‌ಸೈಜ್ ಪುಸ್ತಕದಲ್ಲಿ ಬರೆದಿದ್ದ 'ವಿಯತ್ತಳದಿ ರಾರಾಜಿಸುವ ತಪನ ನೀನು, ನಾನು ಅದರಲ್ಲೊಂದು ಕಿರಿಯ ಕಿರಣ,' ರಾಮಕೃಷ್ಣಾಶ್ರಮದ ಪ್ರಕಟಣೆಯ ಕವಿತೆಯೊಂದರ ಅನುವಾದ; ಗುರುಗಳಾದ ಎಲ್. ಗುಂಡಪ್ಪನವರನ್ನು ಕುರಿತ ಪದ್ಯ; ಆಗ ಕೆಲವು ದಿನಗಳ ಹಿಂದೆಯಷ್ಟೇ ನಿಧನನಾಗಿದ್ದ ಅವನ ತಮ್ಮನನ್ನು ಕುರಿತ ಕವಿತೆ—ಮುಂತಾದ ಕೆಲವು ಪ್ರಾರಂಭದಲ್ಲಿ ಬರೆದ ಪದ್ಯಗಳಿದ್ದವು. ಇವು ರೊಮ್ಯಾಂಟಿಕ್ ಮಾದರಿಯಲ್ಲಿ ಬರೆದ ಪದ್ಯಗಳು. ನವ್ಯ ಮಾರ್ಗದ ಪದ್ಯಗಳನ್ನು ಆಮೇಲೆ ಬರೆದ. ಕೆಲವು ದಿನಗಳಾದ ಮೇಲೆ, ವಿ.ಸೀ. ಅವರು ಅದನ್ನು ಓದಿ ಹಿಂದಿರುಗಿಸುವಾಗ ಕೆಲವು ಸೂಕ್ತ ಸಲಹೆಯ ಮಾತುಗಳನ್ನು ಹೇಳಿದರು.

ಚಾಮರಾಜಪೇಟೆಯಲ್ಲಿ ನಾವು 'ವಿಚಾರವಾಹಿನಿ' ಎಂಬ ಸಂಸ್ಥೆಯನ್ನು ನಡೆಸುತ್ತಿದ್ದೆವು. ಇದರಲ್ಲಿ ನಾವು ಹದಿನಾಲ್ಕು-ಹದಿನೈದು ಸದಸ್ಯರಿದ್ದೆವು. ಶ್ರೀ ಬಿ. ಎಸ್. ವಿಶ್ವನಾಥ್ ಅಧ್ಯಕ್ಷರು, ಶ್ರೀ ಎಂ. ಜಿ. ಶ್ರೀಕಂಠಸ್ವಾಮಿ ಕಾರ್ಯದರ್ಶಿ, ದಿ. ಎಂ. ಎಸ್. ನಂಜುಂಡರಾವ್, ದಿ. ಎಚ್. ಎಂ. ರಂಗನಾಥ್, ಗೋಪಿನಾಥ್, ಎಸ್. ನಾರಾಯಣ ಸ್ವಾಮಿ—ಮುಂತಾದವರಿದ್ದರು. ಕೆಲವು ಕಾಲ ನಮ್ಮ ಮನೆಯೇ ಕಾರ್ಯಾಲಯ. ಕೆಲವು ಕಾಲ ಚಾಮರಾಜಪೇಟೆಯ ನಾಲ್ಕನೆಯ ರಸ್ತೆಯಲ್ಲಿ ಸಾಹಿತಿ ಎಂ. ಆರ್. ಶ್ರೀನಿವಾಸ ಮೂರ್ತಿಯವರ ಮನೆಯ ಎದುರು ಮನೆಯ ಕೊಠಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿದೆವು. 'ವಿಚಾರವಾಹಿನಿ' ೧೮.೧೦.೧೯೫೫ರಂದು ತರುಣ ಕವಿಗಳ ಕವಿ ಸಮ್ಮೇಳನ ವನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿತ್ತು. ೧೭ ಜನ ಹೊಸ ಕವಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಕವಿತೆಗಳನ್ನು ವಾಚಿಸಿದರು. 'ಮೈಸೂರು ಮಲ್ಲಿಗೆ'ಯ ಜನಪ್ರಿಯ ಕವಿ ಕೆ. ಎಸ್. ನರಸಿಂಹಸ್ವಾಮಿಯವರು ಇದರ ಅಧ್ಯಕ್ಷತೆಯನ್ನು ವಹಿಸಿ. '...ನಿಮ್ಮ ಕಡೆಯಿಂದ ಅವರಿಗೆ ಉತ್ಸಾಹ, ಉತ್ತೇಜನ ತುಂಬಿ ಬರಲಿ... ಅವರ ಸಂಪತ್ತನ್ನು ನೋಡಿದ್ದೀರಿ, ಅಲ್ಲ; ನಿಮ್ಮ ಸಂಪತ್ತು ಅವರು' ಎಂದು ಹೇಳಿದರು. ಆ ದಿನ ಪಿ. ಲಂಕೇಶ,

ಕೆ. ಎಸ್. ನಿಸಾರ್ ಅಹಮದ್, ಸುಮತೀಂದ್ರ ನಾಡಿಗ್, ಕೆ. ಶಿವರಾಮ ಐತಾಳ, ವಿ. ಕೃಷ್ಣ ಶೆಟ್ಟಿ, ಆರ್. ಎನ್. ಗೋಪಾಲನ್, ಆಶಾಲತಾ ಪಡಿಯಾರ್, ಮುಂತಾದವರು ಅವರ ಕವಿತೆಗಳನ್ನು ಓದಿದರು. ಆ ದಿನದ ಕಾರ್ಯಕ್ರಮಕ್ಕೆ ಜಿ. ಪಿ. ರಾಜರತ್ನಂ, ವಿ.ಸೀ., ಜಿ. ವೆಂಕಟಸುಬ್ಬಯ್ಯ (ಆಗ ಪರಿಷತ್ತಿನ ಕಾರ್ಯದರ್ಶಿಗಳು) ಮುಂತಾದ ಹಿರಿಯರು ಆಗಮಿಸಿದ್ದರು. ವಿ.ಸೀ.ಯವರು ('ಕನ್ನಡ ನುಡಿ'ಯ ಸಂಪಾದಕರು) ಅಂದು ಓದಿದ ಎಲ್ಲ ಕವಿತೆಗಳನ್ನೂ ನವೆಂಬರ್ ೧೯೫೫ರ 'ಕನ್ನಡ ನುಡಿ'ಯಲ್ಲಿ ಪ್ರಕಟಿಸಿದ್ದೇ ಅಲ್ಲದೆ, ಸಂಪಾದಕೀಯವನ್ನೂ ಬರೆದರು. ಜಿ. ಪಿ. ರಾಜರತ್ನಂರವರು ಕಾರ್ಯಕ್ರಮ ಮುಗಿದ ಮೇಲೆ, 'ಲಾಕ್ಟೋಮೀಟರ್ ತಂದಿದ್ದೆ. ಪರವಾಗಿಲ್ಲ, ಮಂದವಾಗಿಯೇ ಇವೇ' ಎಂದು ತಮ್ಮದೇ ರೀತಿಯಲ್ಲಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ತಮ್ಮ ವಿದ್ಯಾರ್ಥಿಗಳೇ ಆಗಿದ್ದ ನಾಡಿಗ್, ನಿಸಾರ್, ಲಂಕೇಶ, ಎಲ್. ಜಿ. ಸುಮಿತ್ರ, ಜಿ. ಶ್ರೀನಿವಾಸಮೂರ್ತಿ ಇವರ ಆಯ್ದ ಕೆಲವು ಕವಿತೆಗಳನ್ನು ಸೆಂಟ್ರಲ್ ಕಾಲೇಜ್‌ನ ಕರ್ನಾಟಕ ಸಂಘದಿಂದ 'ಪದ್ಯಾಂಜಲಿ' ಹೆಸರಿನಲ್ಲಿ ಪ್ರಕಟಿಸಿದರು. 'ಭೂ ವಿಜ್ಞಾನಿ ಮತ್ತು ಇತರ ಕವಿತೆಗಳು' ಎನ್ನುವುದು ನಿಸಾರ್ ಪದ್ಯಸಂಕುಲದ ಹೆಸರು ಎಂದು ನೆನಪು. ಅನಂತರ ಆಕಾಶವಾಣಿಯವರು ಇವನ ಕವಿತೆಗಳನ್ನು ೧೯೫೭ರಲ್ಲಿ ಪ್ರಸಾರ ಮಾಡಿದರು. ಹೀಗೆ ಜನಪರಿಚಿತನಾದ ಕವಿ ನಿಸಾರ್.

ನಿಸಾರ್ ಸುಮಾರು ೧೯೬೦ರ ವರೆಗೂ ಬರೆದ ಕವಿತೆಗಳ ಬಹುಪಾಲನ್ನು ಅವು ಪತ್ರಿಕೆಯಲ್ಲಿ ಪ್ರಕಟವಾಗುವ ಮೊದಲೇ ಓದಿದ್ದೆ ಎಂದು ಹೇಳಬಹುದೇನೋ. ಮುದ್ದಾದ ಸ್ಫುಟವಾದ ದಪ್ಪ ಅಕ್ಷರಗಳಲ್ಲಿ ಬರೆಯುತ್ತಿದ್ದ. ಬರೆದದ್ದನ್ನು ಕೂಡಲೇ ಅಚ್ಚಿಗೆ ಕಳುಹಿಸುತ್ತಿರಲಿಲ್ಲ. ಅದನ್ನು ಮತ್ತೊಮ್ಮೆ ಓದಿ ಸುಧಾರಣೆ ಮಾಡಿ ಕಳುಹಿಸುತ್ತಿದ್ದ. ಬೇಂದ್ರೆಯವರ ೬೦ನೆಯ ವರ್ಷದ ಹುಟ್ಟುಹಬ್ಬವನ್ನು ನಾವು ಆಚರಿಸಿದೆವು. 'ವಿಚಾರ ವಾಹಿನಿ' ಮತ್ತು ಕಥೆಗಾರ ದಿ. ವೆಂಕಟರಾಜ ಪಾನಸೆ ('ಚಿತ್ರಗುಪ್ತ' ವಾರಪತ್ರಿಕೆಯ ಸಂಪಾದಕೀಯದಲ್ಲಿದ್ದರು; ಚಾಮರಾಜಪೇಟೆಯ ಎರಡನೆಯ ರಸ್ತೆಯಲ್ಲಿ ವಾಸಿಸು ತ್ತಿದ್ದರು,) ಇನ್ನು ಕೆಲವು ಸ್ನೇಹಿತರು ಷಷ್ಟ್ಯಬ್ದಿಯ ಸಮಾರಂಭವನ್ನು ಏರ್ಪಡಿಸಿದ್ದೆವು. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕವಿಗೋಷ್ಠಿ ನಡೆಯಿತು. ನಿಸಾರರ ಸರದಿ ಬಂದಾಗ ಬೇಂದ್ರೆಯವರು 'ನಿಸ್ಸಾರ ಅಹಮ್ಮದ' ಎಂದು ಒತ್ತಿ ಹೇಳಿದರು. ನಿಸಾರ್ ಕವಿತಾ ವಾಚನವನ್ನು ಮುಗಿಸಿದ ಮೇಲೆ 'ಕವಿತೆ ಸಾರವತ್ತಾಗಿವೆ' ಎಂದು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ನಮ್ಮ ಗೆಳೆಯರ ಗುಂಪು ಕನ್ನಡದ, ಕನ್ನಡ ಸಾಹಿತ್ಯದ ಕೆಲಸವನ್ನು ಬೇರೆ ಬೇರೆ ಹೆಸರುಗಳಿಂದ ಬೇರೆ ಬೇರೆ ಕ್ಷೇತ್ರಗಳಲ್ಲಿ ಮಾಡಿತು: 'ವಿಚಾರವಾಹಿನಿ', 'ಹೊಂಬೆಳಗು' (ಮಾಸಪತ್ರಿಕೆ—ಸಂಪಾದಕರು ಶ್ರೀ ಎಂ. ಜಿ. ಶ್ರೀಕಂಠಸ್ವಾಮಿ), 'ವನಸುಮ ಪ್ರಕಾಶನ', 'ಜ್ಯೋತಿ ಪ್ರಕಾಶನ', 'ಧ್ರುವ' (ಮಾಸಪತ್ರಿಕೆ—ಸಂಪಾದಕರು ದಿ. ಎಂ. ನಾಗರಾಜ್). ವನಸುಮ ಪ್ರಕಾಶನದಿಂದ 'ಸ್ಪಂದನ' ಎನ್ನುವ ಕಥಾಸಂಕಲವನ್ನು ಪ್ರಕಟಿಸಿದೆವು. ಈ ಕಥಾ ಸಂಕಲನದ ಬಿಡುಗಡೆಯ ಸಮಾರಂಭಕ್ಕೆ ಶ್ರೀ ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷ

ರಾಗಿದ್ದರು. ಕೆ. ಎಸ್. ನಿಸಾರ್ ಅಹಮದ್ ಪುಸ್ತಕವನ್ನು ಬಿಡುಗಡೆ ಮಾಡಿದ.

'ಜ್ಯೋತಿ ಪ್ರಕಾಶನ'ದಿಂದ ನಿಸಾರನ ಮೊದಲ ಗದ್ಯ ಬರಹ ಸಂಕಲನ 'ಇದು ಬರಿ ಬೆಡಗಲ್ಲೊ ಅಣ್ಣ'ವನ್ನು ಪ್ರಕಟಿಸಿದೆವು. ಐ.ಬಿ.ಎಚ್. ಪ್ರಕಾಶನದ ಶ್ರೀ ಅನಂತರಾಮ್ ಅವರು ಇದರ ಮುದ್ರಣ, ವಿನ್ಯಾಸ ಇತ್ಯಾದಿಗಳನ್ನು ನೋಡಿಕೊಂಡರು. ದಿ. ಎಂ. ಎಸ್. ನಂಜಂಡರಾವ್, ಶ್ರೀ ಯು. ಎಸ್. ಕೃಷ್ಣಮೂರ್ತಿಯವರ ಆಸಕ್ತಿ, ಶ್ರಮಗಳ ಫಲವಾಗಿ ಈ ಕೃತಿ ಪ್ರಕಟವಾಯಿತು. ನಾವು ಪ್ರಕಟಿಸಿದ ಈ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿತು. ಇದು ನಿಸಾರ್‌ಗೆ ದೊರೆತ ಮೊದಲನೆಯ ಅಕಾಡೆಮಿ ಪ್ರಶಸ್ತಿ. ಇದಾದ ಅನಂತರ ಒಂದಾದ ಮೇಲೊಂದು ಪ್ರಶಸ್ತಿ ಗೌರವಗಳು ಅವನಿಗೆ ಲಭಿಸುತ್ತಲೇ ಇವೆ. 'ಕಾಲು ಶತಮಾನದಿಂದ ಒಂದೇ ಬಗೆಯ ಅಕ್ಕರೆಯಿಂದ ನನ್ನನ್ನು ಕಂಡಿರುವ, ಹುರಿದುಂಬಿಸಿರುವ 'ವಿಚಾರವಾಹಿನಿ'ಯ ಗೆಳೆಯ ಹೊ. ರಾ. ಸತ್ಯನಾರಾಯಣ ರಾವ್ ಅವರಿಗೆ' — ಎಂದು ಈ ಕೃತಿಯನ್ನು ನನಗೆ ಅರ್ಪಿಸಿ ಪ್ರೀತಿಯನ್ನು ತೋರಿದ್ದಾನೆ. ನಿಸಾರ್‌ಗೆ ಈ ಬಹುಮಾನ ದೊರೆತುದು ನಮ್ಮ ಗೆಳೆಯರೆಲ್ಲರಿಗೂ ಸಂತಸವಾಯಿತು.

ನಿಸಾರ್ ಶಿವಮೊಗ್ಗ ಕಾಲೇಜಿನಲ್ಲಿದ್ದ. 'ಧ್ರುವ' ಪತ್ರಿಕೆಗಾಗಿ ಪಾಬ್ಲೊ ನೆರುಡನ ಕೆಲವು ಕವಿತೆಗಳನ್ನು ಅನುವಾದ ಮಾಡಿ ಕಳುಹಿಸಿದ.

೧೯೮೪ರಲ್ಲಿ ನಿಸಾರ್‌ನನ್ನು ಸರಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನನ್ನಾಗಿ ನೇಮಿಸಿತು. ಆಗ ನಮ್ಮ ಸ್ನೇಹಿತರ ಸಂಘದ ಆತ್ಮೀಯನೊಬ್ಬ ಅಧ್ಯಕ್ಷನಾದದ್ದು ನಮ್ಮ ಸದಸ್ಯರೊಬ್ಬೊಬ್ಬರೂ ತಾವೇ ಅಧ್ಯಕ್ಷರಾದಂತೆ ಸಂಭ್ರಮಿಸಿ ಸಂತೋಷಪಟ್ಟೆವು. ಆಗ ನಾವು 'ಹೋಟೆಲ್ ಪರಾಗ್'ನಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದೆವು. ಈ ಕಾರ್ಯಕ್ರಮ ಕೇವಲ ಸಂತೋಷಕ್ಕಾಗಿ ಏರ್ಪಡಿಸಿದ್ದೇ ಹೊರತು, ಯಾವ ಉದ್ದೇಶದಿಂದಲೂ ಪ್ರೇರಿತವಾದುದಲ್ಲ. ಇವನು ಅಧ್ಯಕ್ಷನಾಗಿದ್ದಾಗ 'ಚಂದನ' ಎಂಬ ಪತ್ರಿಕೆಯನ್ನು ಆರಂಭಿಸಿದ. ಮೊದಲು ಒಂದೆರಡು ಸಂಚಿಕೆಗಳ ಕರಡಚ್ಚು ತಿದ್ದುವ ಇತ್ಯಾದಿ ಕೆಲಸಗಳಲ್ಲಿ ನಾನೂ ಪ್ರೊ. ಡಿ. ಲಿಂಗಯ್ಯನವರೊಡನೆ ಸಹಕರಿಸಿದೆ.

ಕನ್ನಡದ ಮೇಲೆ ಅವನ ಮಮತೆ ಪ್ರೇಮಗಳು ಅಸೀಮವಾದವು. ಕನ್ನಡ ನಾಡು, ನುಡಿಯನ್ನು ಕುರಿತು ಅನೇಕ ಕವಿತೆಗಳನ್ನು ಬರೆದಿದ್ದಾನೆ. ಹಾಗೆಯೇ ಕನ್ನಡಕ್ಕಾಗಿ ಕೆಲಸ ಮಾಡಿದವರನ್ನು ಕುರಿತು ಅನೇಕ ಕವಿತೆಗಳನ್ನೂ ರಚಿಸಿದ್ದಾನೆ. 'ಕನ್ನಡ ತಾಯಿಗೆ ನುಡಿ ನಮನ' ಎನ್ನುವ ಕವಿತಾ ಸಂಕಲನವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿತು. ಇದರ ಸಹ ಸಂಪಾದಕ ನಾನು. ಇದರಲ್ಲಿ ನಿಸಾರ್‌ನ 'ನಿತ್ಯೋತ್ಸವ'. 'ಕನ್ನಡ ರಾಜೇಶ್ವರಿ'. 'ಅಭಿಮಾನವತಿ' ಎಂಬ ಕನ್ನಡ ನಾಡು ನುಡಿಗಳ ಪರವಾದ ಕವಿತೆಗಳು ಪ್ರಕಟವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ (ಬೆಂಗಳೂರು ನಗರ ಜಿಲ್ಲೆ) ನಾನು ಸಂಪಾದಿಸಿದ 'ಕನ್ನಡ ನುಡಿ ಮಲ್ಲಿಗೆ'ಯಲ್ಲಿ 'ಹಿರಿಮೆ' ಎಂಬ ಕವಿತೆಯನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಸಹಕರಿಸಿದ.

ಬೇರೆ ಭಾಷೆಯಲ್ಲಿ ತಮ್ಮ ಸಂಸ್ಥೆಯ ನಾಮ ಫಲಕಗಳನ್ನು ಹಾಕುವವರನ್ನು ಕಂಡರೆ

ನಿಸಾರ್‌ಗೆ ಬಹಳ ಕೋಪ. 'ನನ್ನೊಡನೆ ಜನ ಬರುವುದಾದರೆ ಬೇರೆ ಭಾಷೆಯಲ್ಲಿರುವ ಫಲಕಗಳಿಗೆ ಕಪ್ಪು ಬಣ್ಣವನ್ನು ಬಳಿಯಲು ಮುಂದಾಗುತ್ತೇನೆ' ಎಂದು ನನ್ನೊಡನೆ ಅನೇಕ ಬಾರಿ ಹೇಳಿದ್ದಾನೆ.

ಅವನು ಭಾಷಣಗಳಿಗೆ, ಸಮಾರಂಭಗಳಿಗೆ, ಕಾಲೇಜಿಗೆ ಹೋಗುತ್ತಿದ್ದಾಗ ಸೂಟ್, ಟೈ ಧರಿಸಿ ಹೋಗುತ್ತಿದ್ದ. ತಮ್ಮ ಕವಿತೆಗಳನ್ನು ವಾಚನ ಮಾಡಿದ ಅನೇಕ ಕವಿಗಳ ಕವಿತಾ ವಾಚನವನ್ನು ನಾನು ಕೇಳಿದ್ದೇನೆ. ದ. ರಾ. ಬೇಂದ್ರೆಯವರು, ಗೋಪಾಲಕೃಷ್ಣ ಅಡಿಗರು, ರಾಮಚಂದ್ರ ಶರ್ಮರು ಸ್ವರಚಿತ ಕವನಗಳನ್ನು ಬಹಳ ಚೆನ್ನಾಗಿ ವಾಚನ ಮಾಡುತ್ತಿದ್ದರು. ನಿಸಾರ್ ಒಳ್ಳೆಯ ಪದ್ಯಗಳನ್ನು ಬರೆದಿರುವಂತೆಯೇ ಭಾವಪೂರ್ಣವಾಗಿ, ಅರ್ಥ ಸ್ಫುರಣೆ ಯಾಗುವಂತೆ, ಆಕರ್ಷಕವಾಗಿ ಕೇಳುಗರ ಮನ ತಟ್ಟುವಂತೆ ತನ್ನ ಕವಿತೆಗಳನ್ನು ವಾಚಿಸುತ್ತಾನೆ.

ಅವನ ಮನೆಗೆ ನಾನು ಹೋಗುತ್ತಿದ್ದಾಗ ತಿಂಡಿ-ತೀರ್ಥಗಳನ್ನು ತೆಗೆದುಕೊಳ್ಳುವಂತೆ ನನ್ನನ್ನು ಬಲವಂತಪಡಿಸುತ್ತಿರಲಿಲ್ಲ. ತಮಾಷೆಗೆ ಒಮ್ಮೊಮ್ಮೆ ಅವನ ತಂಗಿಯರು, 'ಏನು ನೀವು, ನಮ್ಮ ಮನೆಯಲ್ಲಿ 'ಅವರು' ತಿನ್ನುತ್ತಾರೆ, 'ಇವರು' ತಿನ್ನುತ್ತಾರೆ, ನೀವೇಕೆ ತಿನ್ನುವುದಿಲ್ಲ?' ಎಂದು ಕೇಳಿದರೂ, ಅವರ ತಂದೆಯವರು ಬಲವಂತ ಮಾಡುವುದು ಬೇಡವೆಂದು ಹೇಳುತ್ತಿದ್ದರು. ನಾನೂ ನಿಸಾರ್ ಭೇಟಿಯಾದಾಗ ಒಂದೊಂದು ಸಲ ಯಾವುದಾದರೂ ಮುಸ್ಲಿಂ ಹೋಟೆಲಿಗೆ ಹೋಗುತ್ತಿದ್ದೆವು. ಅವನು ಬೇಕಾದುದನ್ನು ತಿನ್ನುವವರೆಗೂ ನಾನು ಯಾವುದಾದರೂ ಪುಸ್ತಕವನ್ನು ಓದುತ್ತಾ ಕುಳಿತಿರುತ್ತಿದ್ದೆ. ಆಮೇಲೆ ನಾವು ಸಸ್ಯಾಹಾರಿ ಉಪಾಹಾರ ಗೃಹಕ್ಕೆ ಹೋಗಿ, ನಾನು ತಿಂಡಿ ಕಾಫಿ ತೆಗೆದುಕೊಳ್ಳುತ್ತಿದ್ದೆ.

೧೯೬೩-೬೪ರಲ್ಲಿ ಇರಬೇಕು, ಬೆಂಗಳೂರು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಜಿಯಾಲಜಿ ಲೆಕ್ಚರರ್ ಆಗಿದ್ದ ನಿಸಾರ್. ಆಗ ಅವನು ಅಲ್ಲಿ ಎನ್.ಸಿ.ಸಿ. ಅಧಿಕಾರಿ ಸಹ. ವಿದ್ಯಾರ್ಥಿಗಳಿಗೆ ಡ್ರಿಲ್ ಮಾಡಿಸುತ್ತಿದ್ದ ಮಿಲಿಟರಿ ತರಬೇತಿದಾರನ ಹತ್ತಿರ ನಿಂತು ಕವಾಯತ್ತನ್ನು ಪರೀಕ್ಷಿಸುತ್ತಿದ್ದ. ಕೆಡೆಟ್ಸ್ ಸರಿಯಾಗಿ ಹೆಜ್ಜೆ ಹಾಕದೆ ಇದ್ದಾಗ ನಿಸಾರ್, 'Don't walk like Pregnant ducks, walk like soldiers' ಎಂದು ಅವರನ್ನು ತಿದ್ದುತ್ತಿದ್ದ. ಎರಡನೆಯ ಬಾರಿಯೋ ಏನೋ ಅವನಿಗೆ ಶಿವಮೊಗ್ಗಕ್ಕೆ ವರ್ಗವಾಯಿತು. ನಾನು, 'ಏನಯ್ಯಾ, ಪುನಃ ನಿನಗೆ ಶಿವಮೊಗ್ಗಕ್ಕೆ ವರ್ಗವಾಯಿತಂತೆ' ಎಂದು ಕೇಳಿದಾಗ, ಅವನು ತುಸು ಅಸಮಾಧಾನದಿಂದಲೇ, 'The bloody Director mistakenly thinks that I am a native of Shimoga' ಎಂದು ಹೇಳಿದ.

೧೯೬೭ರ ಏಪ್ರಿಲ್ ತಿಂಗಳಿನಲ್ಲಿ ಆದ ಅವನ ಮದುವೆಗೆ ನಾನು ಹೋಗಿದ್ದೆ. ಆಗ ಅವನು ಇದ್ದ ಜಯ ನಗರದ ನಾಲ್ಕನೆಯ 'ಟಿ' ಬ್ಲಾಕ್‌ನ ೧೬ನೇ ಮುಖ್ಯ ರಸ್ತೆಯ ಸಮೀಪದಲ್ಲಿ ನಡೆಯಿತು. ಸ್ನೇಹಿತರು ಯಾರು ಯಾರು ಬಂದಿದ್ದರು ಎನ್ನುವುದು ನನಗೆ ಪೂರ್ತಿ ನೆನಪಿಲ್ಲ. ಆದರೆ ನಿರಂಜನ, ಅನುಪಮ ನಿರಂಜನ, ವೈಯೆನ್ಕೆ, ಎಂ. ಬಿ. ಸಿಂಗ್, ಎಂ. ಶಂಕರ್, ನವರತ್ನ ರಾಂ, ಪಿ. ಲಂಕೇಶ್, ಎ. ಎಸ್. ಮೂರ್ತಿ: ಅವನ ಕಾಲೇಜಿನ

ಮತ್ತು ಎನ್.ಸಿ.ಸಿ.ಯ ಹಿರಿಯ, ಕಿರಿಯ ಅಸಂಖ್ಯ ಸಹೋದ್ಯೋಗಿಗಳು ಬಂದಿದ್ದದ್ದು ಚೆನ್ನಾಗಿ ಜ್ಞಾಪಕವಿದೆ. ಒಮ್ಮೆ ಅವರ ಅತ್ತೆಯ ಮನೆಗೆ (ಸಿಟಿ ಮಾರ್ಕೆಟ್-ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯನ್ನು ಕೂಡಿಸುತ್ತಿದ್ದ ಒಂದು ಸಣ್ಣ ರಸ್ತೆಯ) ಸಮೀಪದಲ್ಲಿದ್ದ ಒಂದು ಅಂಗಡಿ, ಎಲೆಕ್ಟ್ರಿಕ್ ಷಾಪ್ ಎಂದು ಕಾಣುತ್ತದೆ—ಅಲ್ಲಿಗೆ ಹೋದೆವು. ಆ ಅಂಗಡಿಯ ಮಾಲೀಕರು ಬ್ರಾಹ್ಮಣರು ಮತ್ತು ಅವರ ಜೊತೆಗಿದ್ದ ಇತರರು ಮಲೆಯಾಳಿ ಮಾತನಾಡುವ ಮುಸಲ್ಮಾನರು. ಮಾಲೀಕರು ಆಗ ರಾಮಾಯಣವನ್ನು ಓದುತ್ತಿದ್ದರು. ನಿಸಾರನನ್ನು ಕಂಡೊಡನೆಯೇ 'ಪ್ರೊಫೆಸರ್ ಬಂದರು' ಎಂದು ಎದ್ದು ನಿಂತು ಗೌರವ ಸೂಚಿಸಿದರು.

ಒಂದು ದಿನ ನಾನೂ ನಿಸಾರ್ ನೆಟ್ಕಲ್ಲಪ್ಪ ಸರ್ಕಲ್ ಕಡೆಯಿಂದ ನರಸಿಂಹ ರಾಜ ಕಾಲೋನಿ ಕಡೆಗೆ ಬರುತ್ತಿದ್ದೆವು. ಸುಮಾರು ಏಳು-ಏಳೂವರೆಯ ಸಮಯ. ಕತ್ತಲಾಗಿತ್ತು. ಒಂದು ಆಟೊ ಬಂದಿತು. ಆಟೊ ನಮ್ಮನ್ನು ದಾಟಿ ಮುಂದೆ ಹೋಗಿ ತಟಕ್ಕನೆ ನಿಂತಿತು. ಪ್ರಯಾಣಿಕರು ಯಾರೂ ಇರಲಿಲ್ಲ. ಆಟೊ ಡ್ರೈವರ್ ಕೆಳಗೆ ಇಳಿದು ಬಂದವನೇ ನಿಸಾರನ ಕಾಲುಗಳಿಗೆ ಅಡ್ಡಬಿದ್ದು ನಮಸ್ಕಾರ ಮಾಡಿದ. ನಿಸಾರ್, 'ರ್ರೀ, ಏನ್ರೀ ಇದೆಲ್ಲಾ? ಬೇಡಿ, ಬೇಡಿ' ಎಂದರೂ ಕೇಳಲಿಲ್ಲ. ಅವನ ಅಭಿಮಾನಿಗಳಲ್ಲಿ ಯಾವ ಯಾವ ವರ್ಗ, ವಯಸ್ಸಿನವರು, ವೃತ್ತಿಗಳವರು ಇದ್ದಾರೋ ದೇವರೇ ಬಲ್ಲ!

ನನ್ನ ಮತ್ತು ನಿಸಾರನ ಕಾಮನ್ ಫ್ರೆಂಡ್ಸ್ ಹೆಚ್ಚು ಜನರಿದ್ದರು. ಅವರಲ್ಲಿ ನನ್ನ ಬಾಲ್ಯಮಿತ್ರ ಜಿ. ಬಿ. ಗೋಪಿನಾಥ್ ರಾವ್ (ಒಳ್ಳೆಯ ಗಮಕಿ. ರೇಡಿಯೊ, ದೂರದರ್ಶನ ಗಳಲ್ಲಿ ಕಾರ್ಯಕ್ರಮಗಳನ್ನು ನೀಡಿರುತ್ತಾನೆ. ಹಳಗನ್ನಡ ಸಾಹಿತ್ಯವನ್ನು ಓದಿಕೊಂಡವನು), ಶ್ರೀ ಜಿ. ಆರ್. ಭೀಮಸೇನರಾವ್ (ಗಾಂಧಿ ಬಜಾರ್ ಹೆಚ್. ಬಿ. ಸಮಾಜದ ಎದುರು ಮನೆ), ಕೆ. ಟಿ. ಚಂದ್ರಶೇಖರ್, ಕೆ. ರಾಮಸ್ವಾಮಿ (ಐಟಿಐ, ಪದ್ಮನಾಭನಗರ) ಮುಂತಾದವ ರಲ್ಲದೆ 'ವಿಚಾರವಾಹಿನಿ', 'ವನಸುಮ', 'ಹೊಂಬೆಳಗು', 'ಧ್ರುವ' ಸಂಸ್ಥೆಗಳಲ್ಲಿ ಸದಸ್ಯ ರಾಗಿದ್ದ ಮಿತ್ರರಿದ್ದರು. ಅವರಿಗೆಲ್ಲಾ ನಿಸಾರ್ ಅಂದರೆ ತುಂಬು ಪ್ರೀತಿ, ಹೆಮ್ಮೆ ಮತ್ತು ಅಪಾರ ಮೆಚ್ಚುಗೆ.

ನಿಸಾರನ ಜೊತೆಯಲ್ಲಿದ್ದಾಗ ಒಂದೆರಡು ಬಾರಿ ಸುಗಮ ಸಂಗೀತ ಗಾಯಕ ಮೈಸೂರು ಅನಂತಸ್ವಾಮಿಯವರನ್ನು ಪರಿಚಯ ಮಾಡಿಸಿದ್ದ. ಒಂದು ಸಲ ಅವರು ಗವೀಪುರದ ಮನೆಯಲ್ಲಿದ್ದಾಗ ನಿಸಾರ್ ಜೊತೆಯಲ್ಲಿ ಅವರ ಮನೆಗೆ ಹೋಗಿದ್ದೆ. ನಾನು ನಿಸಾರನ ಜೊತೆಯಲ್ಲಿ ಒಂದೆರಡು ಬಾರಿ ಮಾಸ್ತಿಯವರ ಮನೆಗೆ ಸಹ ಹೋಗಿದ್ದೆ. 'ಮನೆ ಕಟ್ಟಿ ನೋಡು' ಎನ್ನುವ ಗಾದೆಯಂತೆ ಪದ್ಮನಾಭನಗರದ ಮನೆಯನ್ನು ಕಟ್ಟಿಸುವಾಗ ಹಣಕ್ಕಾಗಿ ಕಷ್ಟಪಟ್ಟಿರಬೇಕು. ಹಣ ಹೊಂದಿಸುವುದು ಕಷ್ಟವಾದಾಗ, ತನ್ನ ಮನೆಯನ್ನು 'ವೈಟ್ ಎಲಿಫೆಂಟ್' (ಮನೆಯ ಹೊರಗಡೆ ಬಿಳಿ ಬಣ್ಣವನ್ನು ಹಚ್ಚಿಸಿದ್ದ) ಎಂದು ಕರೆಯು ತ್ತಿದ್ದ. ಅವನು ಆ ಮನೆಗೆ ಹೋದ ಮೇಲೆ ನಾವು ಭೇಟಿಯಾಗುವುದು ಕಷ್ಟವಾಗುತ್ತಿತ್ತು. ಗಾಂಧಿ ಬಜಾರಿನಲ್ಲಿದ್ದ ನಮ್ಮ ಸ್ನೇಹಿತ ಬಿ. ಕೆ. ಪಾರ್ಥಸಾರಥಿಯ ಸ್ಟೇಷನರಿ

ಸ್ಪೋರ್ಸ್‌ನಲ್ಲಿ ಭೇಟಿಯಾಗುತ್ತಿದ್ದೆವು. ಈಗ ನಾನೂ ನಿಸಾರ್ ಎಪ್ಪತ್ತನ್ನು ದಾಟಿದ್ದೇವೆ. ಮೊದಲಿನಂತೆ ಸಲೀಸಾಗಿ ಭೇಟಿಯಾಗುವುದು ಸಾಧ್ಯವಾಗುತ್ತಿಲ್ಲ. ಆದರೆ ಭೇಟಿಯ ಅಂತರ ಎಷ್ಟೇ ಇದ್ದರೂ ಪ್ರೀತಿ, ವಿಶ್ವಾಸಗಳು ಒಂದೇ ತೆರನಾಗಿದೆ. ಈಗಲೂ ನಾವು ೧೯೫೦ರ ದಶಕದ ಸತ್ಯ—ನಿಸಾರರೇ! ಅಂದಿನ ದಿನಗಳನ್ನು ನೆನಸಿಕೊಂಡಾಗ, ಅವು ಮರುಕಳಿಸ ಬಾರದೆ? ಎಂದು ಮನಸ್ಸು ಹಪಹಪಿಸುತ್ತದೆ. ಕಾಲ ಅಮೂಲ್ಯವಾದ ಎಷ್ಟೊಂದನ್ನು ನಮ್ಮಿಂದ ಕಸಿದುಕೊಂಡಿದೆ ಎಂದು ಬಿಸುಸುಯ್ಯುವಂತಾಗುತ್ತದೆ. ಆದರೆ ನೆನಪುಗಳನ್ನು ಮಾತ್ರ ಕಿತ್ತುಕೊಳ್ಳಲು ಅದಕ್ಕೆ ಸಾಧ್ಯವಾಗದಿರುವುದು ಸಮಾಧಾನದ ಸಂಗತಿ.

ಇತರರಿಗಾದ ಅನುಭವ ತನಗೆ ಆಗಿಲ್ಲವಾದದ್ದರಿಂದ ಅದು ಅಸಿಂಧುವೆಂದು ಭಾವಿಸುವುದು ನಿಜಕ್ಕೂ ಅನುಚಿತ, ಅಪ್ರಬುದ್ಧತೆಯ ದ್ಯೋತಕ. ಸ್ವತಃ ಷಾಕ್ ಹೊಡೆಸಿಕೊಳ್ಳದೆ ವಿದ್ಯುಚ್ಛಕ್ತಿಯ ಸ್ವಭಾವವನ್ನು ಅರ್ಥ ಮಾಡಿಕೊಳ್ಳಲಾರೆ ನೆಂದು, ತಾನೇ ಎಡವದೆ ಇತರರಿಗಾಗಿರುವ ಸಂಕಟವನ್ನು ನಂಬೆನೆಂದು ಹಿಡಿಯುವ ಹಟ ಸ್ವಂತಕ್ಕೆ ಅನರ್ಥಕಾರಿ, ಪರರ ಪಾಲಿಗೆ ಆತಂಕದಾಯಕ. ವ್ಯಕ್ತಿ ಬಾಳ್ವೆಯ ಅಪನಂಬಿಕೆ, ಅಶ್ರದ್ಧೆ ಮತ್ತು ವ್ಯಕ್ತಿ ವಿಲಕ್ಷಣತೆಗಳ ಅಡಿಪಾಯದ ಮೇಲೆ ಸ್ವಸ್ಥ ಸಮಾಜದ ಭವ್ಯ ಭವನ ತಲೆಯೆತ್ತಿ ಮೆರೆಯಲಾರದು.

(ಸ್ವಾನುಭವದ ಮಿತಿ)

✧ ✧ ✧

ಮಹಾತ್ಮರು ದೂರದರ್ಶಿಗಳು. ಅವರ ಧ್ಯೇಯವೆಲ್ಲಾ ಜೀವೋನ್ನತಿಯ ಸಾರ್ಥಕ್ಯ ಸಂಪಾದನೆಯ ಕಡೆಗೆ ಧಾವಿಸಿರುತ್ತದೆ. ಜನ ಸಾಮಾನ್ಯರಂತೆ ಅವರು ಸಣ್ಣಪುಟ್ಟ ಹಂಬಲಗಳಲ್ಲಿ ತಂಗುತ್ತ ಬಾಳಿನ ಸಮಯ ಹಾಗೂ ಮೌಲ್ಯವನ್ನು ವೃಥಾ ಅಪವ್ಯಯಿಸುವುದಿಲ್ಲ. ಎಕ್ಸ್‌ಪ್ರೆಸ್ ಟ್ರೈನುಗಳು ಸಣ್ಣಪುಟ್ಟ ನಿಲ್ದಾಣ ಗಳಲ್ಲಿ ನಿಲ್ಲವು. ದೂರಗಾಮಿತ್ವ ಅವುಗಳ ಏಕಮೇವ ಗುರಿ.

(ಮಹಾ ಪುರುಷರ ವೈಶಿಷ್ಟ್ಯ)



ಅವಿನಾಭಾವ ಸಂಬಂಧ
(ಡಾ. ರಾಜ್ ಮತ್ತು ಪ್ರೊ. ನಿಸಾರ್ ಸ್ನೇಹಗಾಥೆ)

♦ ಅ. ನಾ. ಪ್ರಹ್ಲಾದ ರಾವ್

ಇದು ಇಬ್ಬರು ಸರಳ ಸಜ್ಜನಿಕೆಯ ಮಹನೀಯರ ನಡುವಿನ ಅವ್ಯಾಜ ಪ್ರೀತಿ ವಿಶ್ವಾಸಗಳ ದಾಖಲೆ. ಒಬ್ಬರು ತಮ್ಮ ಅಪ್ರತಿಮ ಅಭಿನಯದಿಂದ ಕನ್ನಡಿಗರ ಹೃದಯ ಸಿಂಹಾಸನದಲ್ಲಿ ಪೀಠಸ್ಥರಾದ ನಟವರ್ಯರಾದರೆ, ಮತ್ತೊಬ್ಬರು ತಮ್ಮ ಸುಮಧುರ ಕಾವ್ಯ ಸುಧೆಯನ್ನು ಹರಿಸಿ ಕನ್ನಡಿಗರ ಹೃದಯವನ್ನು ಗೆದ್ದ ಕವಿವರ್ಯರು. ಆಕಾಶದೆತ್ತರಕ್ಕೆ ಏರಿದ ಡಾ. ರಾಜಕುಮಾರ್ ಸಾಹಿತ್ಯ ಹಾಗೂ ಸಾಹಿತಿಗಳನ್ನು ಪ್ರೀತಿಸುತ್ತಿದ್ದ ಪರಿಗೆ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರೇ ಜ್ವಲಂತ ಸಾಕ್ಷಿ. ಡಾ. ರಾಜಕುಮಾರ್ ಅವರು ತಮ್ಮ ಪ್ರೀತಿಯ ಬಂಧದಲ್ಲಿ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನು ಬೆಸೆದ ರೀತಿ ವರ್ಣಿಸಲು ಅಸದಳ. 'ದೇವರು ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ಸಾಹಿತ್ಯ ರಚಿಸುವ ವಿಶೇಷ ಶಕ್ತಿಯನ್ನು ಕೊಟ್ಟಿದ್ದಾನೆ. ಅವರು ತುಂಬಾ ದೊಡ್ಡ ಮನುಷ್ಯರು' ಎಂದೇ ಯಾವಾಗಲೂ ಡಾ. ರಾಜಕುಮಾರ್ ಹೇಳುತ್ತಿದ್ದರು. ಈ ಕವಿವರ್ಯರ ಬಗ್ಗೆ ಡಾ. ರಾಜಕುಮಾರ್ ಸದಾ ಗೌರವ, ಪ್ರೀತಿ, ಅಕ್ಕರೆಗಳನ್ನು ಹೃದಯದ ತುಂಬಾ ತುಂಬಿರಿಸಿಕೊಂಡಿರುತ್ತಿದ್ದರು. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನು ಮಾತನಾಡಿಸುವ ಸಂದರ್ಭದಲ್ಲಿ, ಅವರ ಬಗ್ಗೆ ಮಾತನಾಡುವ ಸಂದರ್ಭಗಳಲ್ಲಿ ಡಾ. ರಾಜಕುಮಾರ್ ಅವರಲ್ಲಿ ಪ್ರೀತ್ಯಾದರದ ಸುಧೆ ಧಾರೆಯಾಗಿ ಹರಿಯುತ್ತಿತ್ತು. ಈ

ಇಬ್ಬರ ನಡುವಿನದು ಅನನ್ಯ ಹಾಗೂ ಅವಿನಾಭಾವದ ಆತ್ಮ ಸಂಬಂಧ.

೨೧ ವರ್ಷಗಳ ಹಿಂದೆ ಊಟಿಯಲ್ಲಿ 'ಯಾರಿವನು?' ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲಿ ನಡೆದ ಅಹಿತಕರ ಘಟನೆಯಿಂದ ಇಡೀ ಕನ್ನಡಿಗರು ತಳಮಳಗೊಂಡಿದ್ದರು. ನೆರೆ ರಾಜ್ಯದ ಕೆಲವು ಅವಿವೇಕಿ ಭಾಷಾಂಧ ಪುಂಡರು ಏಕಾಏಕಿ ಡಾ. ರಾಜಕುಮಾರ್ ಅವರ ಮೇಲೆ ಹಲ್ಲೆ ನಡೆಸಿದ್ದರು. ಆ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಊಟಿಯ ಘಟನೆಯನ್ನು ಖಂಡಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ 'ಕನ್ನಡ ಕಾವಲು ಸಮಿತಿ'ಯ ವತಿಯಿಂದ ಸಭೆಯೊಂದು ನಡೆಯಿತು. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಆಗ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಹಾಗೂ ಆ ಕಾವಲು ಸಮಿತಿಯ ಸದಸ್ಯರಾಗಿ ಆ ಸಭೆಯಲ್ಲಿ ಪಾಲ್ಗೊಂಡಿದ್ದರು. ಕನ್ನಡ ಭಾಷೆ ಹಾಗೂ ಡಾ. ರಾಜಕುಮಾರ್ ಶಕ್ತಿಯಾಗಿ ಕನ್ನಡ ನಾಡಿಗೆ ಹೇಗೆ ಅನಿವಾರ್ಯ ಎಂಬ ಬಗ್ಗೆ ನಿಸಾರ್ ಆ ಸಭೆಯಲ್ಲಿ ನಿರರ್ಗಳವಾಗಿ ಮಾತನಾಡಿದ್ದರು. ಸೂಟು, ಬೂಟು, ಟೈ ಧರಿಸಿ ತನ್ನ ಬಗ್ಗೆ ಹೀಗೆ ಆವೇಶಭರಿತರಾಗಿ ಮಾತನಾಡುತ್ತಿರುವುದು ಯಾರು ಎಂದು ಚಕಿತರಾಗಿ ನೋಡಿದ್ದರು ಡಾ. ರಾಜಕುಮಾರ್. ಪಕ್ಕದವರಲ್ಲಿ 'ಯಾರಿವರು?' ಎಂದು ಕೇಳಿ ವಿವರಗಳನ್ನು ಪಡೆದಿದ್ದರು. ಸಭೆ ಮುಗಿದ ಮೇಲೆ ಮೊದಲ ಬಾರಿಗೆ ಇಬ್ಬರ ಸಮಾಗಮವಾಯಿತು. 'ವಿದ್ಯಾರ್ಥಿ ದೆಸೆಯಿಂದಲೇ ನಿಮ್ಮ ಚಿತ್ರಗಳನ್ನು ನೋಡಿ ಪುಳಕಿತಗೊಂಡಿದ್ದೇನೆ' ಎಂದರು ನಿಸಾರ್. 'ಜೋಗದ ಸಿರಿ ಬೆಳಕಿನಲ್ಲಿ ಗೀತೆಯನ್ನು ಕೇಳಿ ನಾನು ನಿಮ್ಮ ಬಗ್ಗೆ ಅಪಾರ ಗೌರವ ಬೆಳೆಸಿಕೊಂಡಿದ್ದೇನೆ' ಎಂದರು ಡಾ. ರಾಜಕುಮಾರ್. ಹೀಗೆ ಪರಸ್ಪರ ಪ್ರೀತಿಸುತ್ತಿದ್ದ ಅಪೂರ್ವ ಕವಿ, ಕಲಾವಿದರಿಬ್ಬರು ಪರಸ್ಪರ ಸ್ನೇಹದಿಂದ ಸಮಾಗಮಗೊಂಡರು. ಈ ಇಬ್ಬರ ನಡುವೆ ಅಂದು ಅಭಿವ್ಯಕ್ತಗೊಂಡ ಪ್ರೀತ್ಯಾದರ ಹೆಮ್ಮರವಾಗುತ್ತ ಹೋಯಿತು.

ಹನುಮಂತ ನಗರದಲ್ಲಿ ವಾಸಿಸುತ್ತಿದ್ದ ಕನ್ನಡದ ಖ್ಯಾತ ಸಾಹಿತಿಗಳಾದ ಪ್ರೊ. ಎಂ. ವಿ. ಸೀತಾರಾಮಯ್ಯನವರು ನಿಸಾರ್ ಅವರಿಗೆ ೧೯೫೧-೫೨ನೆಯ ಇಸವಿಯಲ್ಲಿ ಬೆಂಗಳೂರಿನ ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡದ ವಿದ್ಯಾ ಗುರುಗಳು. ೧೯೮೫ರಲ್ಲಿ ಅವರು ನಿಧನರಾದಾಗ ಅಂತಿಮ ದರ್ಶನವನ್ನು ಪಡೆಯಲು ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಎಂ.ವಿ.ಸೀ. ಅವರ ಮನೆಗೆ ಹೋಗಿದ್ದರು. ದರ್ಶನದ ಅನಂತರ ಹೊರ ಬಂದ ನಿಸಾರ್ ಅವರಿಗೆ ಗಾಯಕ ಮಿತ್ರ ಮೈಸೂರು ಅನಂತಸ್ವಾಮಿ ಸಿಕ್ಕಿದರು. ಇಬ್ಬರೂ ರಸ್ತೆಯ ಬದಿ ನಿಂತು ಮಾತನಾಡುತ್ತಿದ್ದರು. ಆ ಸಮಯದಲ್ಲಿ ಎಂ.ವಿ.ಸೀ. ಅವರ ಪಾರ್ಥಿವ ಶರೀರದ ಕೊನೆಯ ದರ್ಶನವನ್ನು ಪಡೆದು ಡಾ. ರಾಜ್‌ಕುಮಾರ್ ಕಾರಿನಲ್ಲಿ ಕುಳಿತು ಮರಳಿ ಹೊರಟವರು ಒಂದು ಫರ್ಲಾಂಗ್ ದೂರ ಮುಂದಕ್ಕೆ ಹೋಗಿ ಗಕ್ಕನೆ ಕಾರ್ ನಿಲ್ಲಿಸಿ ಪುನಃ ಹಿಂದಕ್ಕೆ ಬರಲಾರಂಭಿಸಿದ್ದನ್ನು ನಿಸಾರ್ ಗಮನಿಸಿದರು. ಕಾರು ಹಿಂದಕ್ಕೆ ಬಂದು ಇವರ ಮುಂದೆಯೇ ನಿಂತಿತು. ಕಾರಿನ ಕಪ್ಪು ಗಾಜು ತೆರೆದುಕೊಂಡಿತು. ನಿಸಾರ್ ಅವರಿಗೆ ಅಲ್ಲಿ ಕಾಣಿಸಿದವರು ಡಾ. ರಾಜಕುಮಾರ್ ಮತ್ತು ಜೊತೆಗಿದ್ದ ಸಿ.ವಿ.ಎಲ್. ಶಾಸ್ತ್ರಿ, ಭಗವಾನ್ ಮುಂತಾದವರು. ಅವರೊಂದಿಗೆ ಕೆಳಗಿಳಿದ

ಡಾ. ರಾಜಕುಮಾರ್ ನಿಸಾರರ ಬಳಿ ಬಂದರು. 'ಹೇಗಿರುವಿರಿ? ಸೌಖ್ಯವೇ' ಎಂದು ಆತ್ಮೀಯವಾಗಿ ವಿಚಾರಿಸಿದರು. ಆಗಲೇ ಅಲ್ಲಿ ಡಾ. ರಾಜಕುಮಾರ್ ಬಂದಿದ್ದಾರೆ ಎಂಬುದನ್ನು ತಿಳಿದ ಜನ ಕುತೂಹಲದಿಂದ ಗುಂಪು ಸೇರಿದ್ದರು. ಕಾರು ಹಿಂದೆ ಬಂದದ್ದನ್ನು ನೋಡಿ ಜನ ಕಾರಿನ ಬಳಿ ಸೇರತೊಡಗಿದರು. 'ಒಮ್ಮೆ ದಯಮಾಡಿ ಮನೆಗೆ ಬನ್ನಿ, ಆರಾಮಾಗಿ ಕುಳಿತು ಮಾತಾಡೋಣ' ಎಂದು ಡಾ. ರಾಜಕುಮಾರ್, ಕವಿ ನಿಸಾರ್ ಅವರನ್ನು ಆಹ್ವಾನಿಸಿ, ಸರಸರನೆ ಕಾರನ್ನೇರಿ ಹೊರಟರು. ಈ ಘಟನೆಯನ್ನು ನಿಸಾರ್ ಅವರು ತಮ್ಮ 'ಹಿರಿಯರು ಹರಸಿದ ಹೆದ್ದಾರಿ' ಗದ್ಯ ಸಂಗ್ರಹ(೧೯೯೨)ದಲ್ಲಿ ದಾಖಲಿಸಿದ್ದಾರೆ. ಸುಸಂಸ್ಕೃತ ವ್ಯಕ್ತಿಯೊಬ್ಬನ ಸೌಹಾರ್ದಯುತ ನಡೆನುಡಿಗಳಿಗೆ ಒಂದು ನಿದರ್ಶನವಾಗಿ ಇದನ್ನು ಉಲ್ಲೇಖಿಸಿದ್ದಾರೆ.

ಒಮ್ಮೆ ಡಾ. ರಾಜಕುಮಾರ್ ಅವರ ಹೃದಯ ಬಂಧದಲ್ಲಿ ಸಿಲುಕಿಕೊಂಡರೆ ಸಾಕು, ಆಪ್ತ ಸಂಬಂಧದಿಂದ ಪುನಃ ಬಿಡಿಸಿಕೊಳ್ಳಲಾಗದಷ್ಟು ಅಗಾಧ ಪ್ರೀತಿಯನ್ನು ತೋರುವುದು ಡಾ. ರಾಜಕುಮಾರ್ ಅವರ ಸದ್ಗುಣ. ಹೀಗೆಯೇ ನಿಸಾರ್ ಅವರನ್ನು ಮತ್ತಷ್ಟು ಪ್ರೀತಿಯ ಜಾಲದಲ್ಲಿ ಬಂಧಿಸುವ ಅವಕಾಶಕ್ಕಾಗಿ ಡಾ. ರಾಜಕುಮಾರ್ ಕಾಯುತ್ತಿದ್ದರೆಂದು ಕಾಣುತ್ತದೆ. ಶಿವರಾಜಕುಮಾರ್ ಅಭಿನಯದ ಮೊದಲ ಚಲನಚಿತ್ರ 'ಆನಂದ್' ಶತ ದಿನವನ್ನು ಆಚರಿಸಿ ಕೊಂಡ ಅದ್ದೂರಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲು ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ಆದರದ ಆಹ್ವಾನ ತಲಪಿತು. ಎಸ್. ಎ. ಚಿನ್ನೇಗೌಡರು ನಿಸಾರ್ ಅವರ ಕಾಲೇಜಿಗೆ ಬಂದು ಡಾ. ರಾಜಕುಮಾರ್ ಅವರ ಪರವಾಗಿ ಈ ಪ್ರೀತಿಯ ಅಕ್ಷತೆಯನ್ನು ನೀಡಿದರು. ಚಲನಚಿತ್ರ ಕ್ಷೇತ್ರದೊಂದಿಗೆ ಹೇಳಿಕೊಳ್ಳುವಂತಹ ಯಾವುದೇ ನಂಟನ್ನು ಇರಿಸಿಕೊಳ್ಳದ ನಿಸಾರ್ ಅವರು ಈ ಆಹ್ವಾನವನ್ನು ಒಪ್ಪಲು ಹಿಂದೆ ಮುಂದೆ ನೋಡಿದರು. 'ಸ್ವತಃ ಅಣ್ಣಾವರು ತುಂಬು ಪ್ರೀತಿ ಹಾಗೂ ಮೆಚ್ಚುಗೆಯಿಂದ ಕಳುಹಿಸಿರುವ ಆಹ್ವಾನ ಇದು' ಎಂದು ಚಿನ್ನೇಗೌಡರು ಸ್ಪಷ್ಟಪಡಿಸಿದ ಮೇಲೆ ನಿಸಾರ್ ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿದ್ದರು. ಸಮಾರಂಭದಲ್ಲಿ ನಿಸಾರರು, ಡಾ. ರಾಜಕುಮಾರ್ ಅವರನ್ನು ಸಿನಿಮಾ ಜಗತ್ತಿನ 'ಶಕ ಪುರುಷ' ಎಂದು ಕರೆದಾಗ, ಇಡೀ ಸಭಾಮಂದಿರ ಹರ್ಷೋದ್ಗಾರಗಳಿಂದ ಅನುರಣಿಸಿತ್ತು. ಈ ಸಮಾರಂಭ ಡಾ. ರಾಜಕುಮಾರ್ ಹಾಗೂ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ನಡುವಿನ ಗೆಳೆತನವನ್ನು ಮತ್ತಷ್ಟು ಗಾಢಗೊಳಿಸಿತು. ಆ ದಿನ ಡಾ. ರಾಜಕುಮಾರ್ ಅವರ ಮನೆಯಲ್ಲಿ ಭೋಜನವಾದ ಬಳಿಕ ಸುಮಾರು ಮೂರು-ನಾಲ್ಕು ಗಂಟೆಗಳ ಕಾಲ ಅವರಿಬ್ಬರೂ ಸಂಭಾಷಣೆಯಲ್ಲಿ ತೊಡಗಿದ್ದರು. ನಿಸಾರರ ಮನೆಯವರೆಲ್ಲರೂ ಶ್ರೀಮತಿ ಪಾರ್ವತಮ್ಮನವರ ಮತ್ತು ಅವರ ಕುಟುಂಬದವರ ಜೊತೆ ಅನ್ಯೋನ್ಯವಾಗಿ ಅಂದು ಕಳೆದ ಕಾಲ ತುಂಬ ಸಂಭ್ರಮಯುತ ಮತ್ತು ಸ್ಮರಣೀಯವಾಗಿತ್ತು. ಇಂತಹ ದೀರ್ಘ ಸಮಯದ ಬೈಠಕ್ಕುಗಳು ಮುಂದೆ ಡಾ. ರಾಜಕುಮಾರ್ ಅವರ ಮನೆಯಲ್ಲಿ ಮಾತ್ರದವಲ್ಲದೆ, ನಿಸಾರರ ಸ್ವಗೃಹದಲ್ಲೂ ಹಲವು ಬಾರಿ ಜರುಗಿದವು.

ಡಾ. ರಾಜಕುಮಾರ್ ಅಭಿನಯದ 'ಜೀವನ ಚೈತ್ರ' ಚಿತ್ರದ ಶತದಿನೋತ್ಸವ

ಸಮಾರಂಭಕ್ಕೂ ಮತ್ತೊಮ್ಮೆ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನೇ ಅಧ್ಯಕ್ಷರನ್ನಾಗಿ ಆಹ್ವಾನಿಸಲಾಯಿತು ಎಂದಾಗ ಈ ಎರಡು ಚೇತನಗಳ ನಡುವಿನ ಅದಮ್ಯ ಪ್ರೀತಿಯ ಅರಿವಾಗುತ್ತದೆ. ಈ ಸಮಾರಂಭದಲ್ಲಿ ನಿಸಾರರು ಮಾಡಿದ ಮಾಹಿತಿನಿಬಿಡ ಭಾಷಣದಿಂದ ಡಾ. ರಾಜಕುಮಾರ್ ಅವರು ನಿಸಾರರಲ್ಲಿನ ವಿದ್ವತ್ತು, ವಾಗ್ಮೀಯ ಕೌಶಲ ಹಾಗೂ ನಿರಾಡಂಬರ ವ್ಯಕ್ತಿತ್ವವನ್ನು ಮತ್ತೊಮ್ಮೆ ಹತ್ತಿರದಿಂದ ಕಂಡು ಸಂತೋಷಿಸಿದ್ದಲ್ಲದೆ, ಅವರನ್ನು ಮನಸಾರೆ ಶ್ಲಾಘಿಸಿ, ತಮ್ಮ ಕುಟುಂಬದ ನಿಕಟ ಬಳಗದಲ್ಲಿ ಒಬ್ಬರನ್ನಾಗಿ ಪರಿಗಣಿಸಿದರು.

ಕೆಲ ಸಮಯದ ತರುವಾಯ ಶಿವರಾಜಕುಮಾರ್ ಅಭಿನಯದ 'ಜನುಮದ ಜೋಡಿ' ಚಿತ್ರದ ನೂರನೆಯ ದಿನದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಲು ನಿಸಾರರಿಗೆ ಪುನಃ ಆಹ್ವಾನ ಬಂದಿತು. ಡಾ. ರಾಜಕುಮಾರ್ ಅವರ ಕುಟುಂಬದ ಪ್ರತಿ ಸಮಾರಂಭಕ್ಕೆ ಹೋಗಿ ಪಾಲ್ಗೊಳ್ಳಲು ನಿಸಾರರಿಗೆ ಸಂಕೋಚ. ಅದನ್ನು ಡಾ. ರಾಜಕುಮಾರ್ ಎದುರು ವ್ಯಕ್ತಪಡಿಸಿದರು ಸಹ. 'ನೀವು ನಮ್ಮ ಕುಟುಂಬ ವರ್ಗದ ಆಪ್ತರು, ನೀವು ಬಂದು ಶುಭ ಹಾರೈಸದಿದ್ದರೆ ಹೇಗೆ? ಸಂಕೋಚ ಬಿಟ್ಟು ಕಾರ್ಯಕ್ರಮಕ್ಕೆ ಬನ್ನಿ' ಎಂದು ಸ್ವತಃ ಡಾ. ರಾಜಕುಮಾರ್ ಅವರೇ ಬಲವಂತ ಮಾಡಿದರು. ಅಂದು ನಿಸಾರ್ ಅಹಮದ್ ಅವರು ಮಾಡಿದ ಭಾಷಣ ಸಭಿಕರನ್ನು ಮಾತ್ರವಲ್ಲ, ಸ್ವತಃ ಡಾ. ರಾಜಕುಮಾರ್ ಅವರ ಹೃದಯವನ್ನೂ ಸೂರೆಗೊಂಡಿತು.

ಸಾಮಾನ್ಯವಾಗಿ ಡಾ. ರಾಜಕುಮಾರ್ ಕುಟುಂಬದವರು ಏರ್ಪಡಿಸುತ್ತಿದ್ದ ಇಂತಹ ಕಾರ್ಯಕ್ರಮಗಳು ಬೆಳಗಿನ ಹತ್ತು ಗಂಟೆಗೆ ಆರಂಭವಾಗಿ ಮಧ್ಯಾಹ್ನದ ಊಟದ ವೇಳೆಗೆ ಮುಗಿಯುತ್ತಿದ್ದವು. ಸಮಾರಂಭದ ಅನಂತರ ಪ್ರೊ. ಕೆ. ಎಸ್. ನಿಸಾರ್ ಅಹಮದ್ ದಂಪತಿಗಳನ್ನು ಯಥಾಪ್ರಕಾರ ಆತ್ಮೀಯ ಒತ್ತಾಯದಿಂದ ಡಾ. ರಾಜಕುಮಾರ್ ಅವರು ಮನೆಗೆ ಭೋಜನಕ್ಕೆ ಕರೆದೊಯ್ಯುತ್ತಿದ್ದರು. ಅಂತಹ ದಿವಸಗಳಲ್ಲೆಲ್ಲ ಸಂಜೆಯವರೆಗೂ ನಿಸಾರರು ಅವರ ಮನೆಯಲ್ಲಿದ್ದು, ಡಾ. ರಾಜಕುಮಾರ್ ಹಾಗೂ ಅವರ ಕುಟುಂಬ ದವರೊಂದಿಗೆ ಪ್ರೀತಿಯ ಸಂಭಾಷಣೆಯಲ್ಲಿ ನಿರತರಾಗುತ್ತಿದ್ದದ್ದು ಸಾಮಾನ್ಯ. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ನೆನಪಿನ ಶಕ್ತಿಯನ್ನು ಕಂಡು ಡಾ. ರಾಜ ಕುಮಾರ್ ವಿಸ್ಮಯಗೊಳ್ಳುತ್ತಿದ್ದರು.

ಡಾ. ರಾಜಕುಮಾರ್ ಹಾಗೂ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಹಲವಾರು ಬಾರಿ ಜೊತೆ ಜೊತೆಯಲ್ಲಿ ಒಂದೇ ವೇದಿಕೆಯನ್ನು ಮುಖ್ಯ ಅತಿಥಿಗಳಾಗಿ ಹಂಚಿಕೊಂಡಿರುವುದುಂಟು. ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ 'ಸಾಹಿತ್ಯ ಹಾಗೂ ಚಲನಚಿತ್ರ ಮಾಧ್ಯಮಗಳ ನಡುವಿನ ಸಂಬಂಧ'ವನ್ನು ಕುರಿತ ವಿಚಾರ ಸಂಕಿರಣದ ಉದ್ಘಾಟನ ಸಮಾರಂಭದಲ್ಲಿ ಈ ಇಬ್ಬರು ದಿಗ್ಗಜರೂ ಪಾಲ್ಗೊಂಡಿದ್ದರು. ಅಂದಿನ ಭಾಷಣದಲ್ಲಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಮಾತನಾಡುತ್ತ 'ಡಾ. ರಾಜಕುಮಾರ್ ಜೀವನದಲ್ಲಿ ಹೇಗೆ ಏಕಪತ್ನಿ ವ್ರತಸ್ಥರೋ ಹಾಗೆಯೇ, ವೃತ್ತಿ ಜೀವನದಲ್ಲಿ

ಸಹ ಕನ್ನಡವನ್ನು ಬಿಟ್ಟು ಪರಭಾಷಾ ಚಿತ್ರಗಳಲ್ಲಿ ಅಭಿನಯಿಸದೇ ಏಕನಿಷ್ಠೆಯನ್ನು ತೋರಿದರು. ಈ ಕಾರಣಕ್ಕೆ ಅವರು ನನ್ನ ಪ್ರೀತಿ ಗೌರವಗಳಿಗೆ ಭಾಜನರು' ಎಂದಾಗ ಡಾ. ರಾಜಕುಮಾರ್ ಅವರ ಹೃದಯ ತುಂಬಿಬಂದಿತ್ತು. ಮುಂದೊಮ್ಮೆ ಅವರಿಬ್ಬರು ಪುರಭವನದಲ್ಲಿ ನೆರವೇರಿದ ಕನಕದಾಸರ ಜಯಂತ್ಯುತ್ಸವದಲ್ಲೂ ಪಾಲ್ಗೊಂಡಿದ್ದರು. ಕನಕದಾಸರ ಹಿರಿಮೆಯನ್ನು ಮುಕ್ತವಾಗಿ ಶ್ಲಾಘಿಸಿದ್ದರು.

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಆತ್ಮೀಯ ಕರೆಗೆ ಓಗೊಟ್ಟ ಡಾ. ರಾಜಕುಮಾರ್ ಅವರು, ಪದ್ಮನಾಭನಗರದಲ್ಲಿನ ನಿಸಾರರ ಮನೆಗೆ ಪತ್ನಿ ಶ್ರೀಮತಿ ಪಾರ್ವತಮ್ಮ ರಾಜಕುಮಾರ್ ಹಾಗೂ ಸಹೋದರ ವರದಪ್ಪನವರ ಜೊತೆ ಒಂದು ದಿನ ಮಧ್ಯಾಹ್ನ ಬಂದು, ಊತಣ ಮುಗಿಸಿ ವಿರಾಮವಾಗಿ ಕುಳಿತು ಹಲವಾರು ವಿಷಯಗಳನ್ನು ಚರ್ಚೆ ಮಾಡಿದರು. ಡಾ. ರಾಜಕುಮಾರ್ ಅವರ ದರ್ಶನಕ್ಕೆ ಆಸುಪಾಸಿನಲ್ಲಿದ್ದ ಅಸಂಖ್ಯ ಸಂಸಾರವೊಂದಿಗರು ಅನಾಹ್ವಾನಿತರಾಗಿದ್ದರೂ ಜೇನು ನೊಣಗಳಂತೆ ಮುತ್ತಿಕೊಂಡು ಬಿಟ್ಟಿದ್ದರು. ಎಲ್ಲರೊಡನೆ ಸದಾಚಾರ ಸಂಪನ್ನರಾಗಿ ಡಾ. ರಾಜ್ ವ್ಯವಹರಿಸಿದ್ದನ್ನು ಕಂಡು, ನೆರೆದಿದ್ದ ಜನರು ಆನಂದದಿಂದ ಮೈಮರೆತು ಹೋಗಿದ್ದರು. ತಾನೇನೂ ಅರಿಯದವ ಎನ್ನುತ್ತಲೇ ನಿಸಾರರಿಂದ ಬಹಳಷ್ಟು ವಿಷಯಗಳನ್ನು ಕೇಳಿ ತಿಳಿದುಕೊಂಡರು ಡಾ. ರಾಜಕುಮಾರ್. ನಿಸಾರರ ಮನೆಯಲ್ಲಿನ ಅಂದಿನ ಹಬ್ಬದ ಸಂಭ್ರಮವನ್ನು, ನಿಸಾರರು ಸಿಕ್ಕಾಗಲೆಲ್ಲ ಡಾ. ರಾಜಕುಮಾರ್ ನೆನಪಿಸಿಕೊಳ್ಳುತ್ತಿದ್ದರು. ನಿಸಾರರು ಡಾ. ರಾಜಕುಮಾರ್ ಅವರಿಗೆ ತಮ್ಮ ಮನೆಗೆ ದಯಮಾಡಿಸಿದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿ ಪತ್ರವೊಂದನ್ನು ಬರೆದಿದ್ದರು. ಕೂಡಲೇ ಡಾ. ರಾಜಕುಮಾರ್ ಅವರಿಂದ ನಿಸಾರರಿಗೆ ಬಂದ ಪತ್ರ ಅತ್ಯಂತ ಹೃದಯಸ್ಪರ್ಶಿಯಾಗಿತ್ತು. ಆ ಪತ್ರ ನಿಸಾರರಿಗೆ ದಿನಾಂಕ ೨೭.೦೫.೧೯೯೬ರಂದು ತಲಪಿತು.

ಆ ಪತ್ರದ ಪೂರ್ಣಪಾಠವನ್ನು ನನಗೆ ನಿಸಾರರು ದಯಪಾಲಿಸಿದರು. ಅದು ಹೀಗಿದೆ:—

> *'ಆತ್ಮೀಯರಾದ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರಿಗೆ, ನಿಮ್ಮ ಸಕ್ಕರೆಯಂಥಾ ಅಕ್ಕರೆಯಿಂದ ಹೊಮ್ಮುತ್ತಿರುವ ಒಲುಮೆಯ ಒಕ್ಕಣೆಯ ಪತ್ರ ಓದಿ ಆನಂದವಾಯಿತು. ನಿಮ್ಮಂತಹ ಹೃದಯ ಸಂಪನ್ನರ, ವಿರಳ ವಾಗ್ಮಿಗಳ, ಉನ್ನತ ವಿದ್ಯಾವಂತರ ಸ್ನೇಹ ಸಾಮೀಪ್ಯದಲ್ಲಿ ಕೆಲ ಘಂಟೆಗಳನ್ನಾದರೂ ಕಳೆಯಬೇಕೆಂಬ ನನ್ನ ಬಹು ಕಾಲದ ಕನಸು ನನಸಾಯ್ತು. ಬರಗಾಲದ ಬಿಸಿಲಿನ ಬೇಗೆಯಿಂದ ಬಿರುಕು ಬಿಟ್ಟ ಭೂಮಿಯ ಮೇಲೆ ಬಿದ್ದ ಮೊದಲ ಮಳೆ ಹನಿಗಳು, ಆ ಬಿರುಕುಗಳಲ್ಲಿ ಹರಿದಾಗ, ಆ ಭೂಮಿ ಅನುಭವಿಸುವ ತಂಪಿನ ಹಿತವಾದ ಅನುಭವ, ಅಂದು ನಿಮ್ಮೊಂದಿಗಿದ್ದ ನನಗೂ ಆಯಿತು. ನಿಮ್ಮ ಮಡದಿ, ಮಕ್ಕಳು ಮತ್ತು ಮುದ್ದಿನ ಸೊಸೆ ಆ ದಿನ ನಮ್ಮನ್ನೆಲ್ಲ ಆದರಿಸಿದ ರೀತಿ, ನೀಡಿದ ಆತಿಥ್ಯ, ಸ್ನೇಹಪೂರಿತ ಸತ್ಕಾರ ಎಲ್ಲವೂ, ನಿಮ್ಮ ಪದಗಳನ್ನೇ*

ಬಳಸುವುದಾದರೆ, 'ವಿರಳಾತಿವಿರಳ', 'ಪರಿಪಾಲನಯೋಗ್ಯ'. ನನ್ನ ಅಂದಿನ ಒಡನಾಟದಿಂದ ನಿಮ್ಮವರೆಲ್ಲರೂ ಸಂತುಷ್ಟರಾಗಿದ್ದರೆ ನಾನು ಧನ್ಯ! ಈ ಸಂತಸ, ಸಂಭ್ರಮಗಳಿಗೆ 'ನಾನು' ಖಂಡಿತಾ ಕಾರಣನಲ್ಲ! ಎಲ್ಲವೂ ತಮ್ಮಂತಹವರ ಸಹವಾಸ, ಸಂಪರ್ಕ, ಮಾರ್ಗದರ್ಶನದಿಂದ ಕಂಡುಕೊಂಡಿದ್ದು. ಒಟ್ಟಿನಲ್ಲಿ ನನ್ನ ಜೀವನದಲ್ಲಿ ನಿಮ್ಮೊಂದಿಗಿದ್ದ ಆ ಒಂದು ದಿನ ಅವಿಸ್ಮರಣೀಯ. ಇಂತಹ ಮತ್ತೊಂದು ಅವಕಾಶಕ್ಕಾಗಿ ಎದುರು ನೋಡುತ್ತಿದ್ದೇನೆ. ಅದು ನಮ್ಮ ಮನೆಯಲ್ಲಾಗಲಿ. ನನ್ನ ಈ ಸಂತೋಷವನ್ನು ಹಂಚಿಕೊಂಡ ನನ್ನ ಶ್ರೀಮತಿ ಹಾಗೂ ನನ್ನ ಸೋದರ ವರದರಾಜ್ ತಮಗೆ ಅಭಿನಂದಿಸುವುದರಲ್ಲಿ, ಹಾಗೂ ವಂದಿಸುವುದರಲ್ಲಿ ನನ್ನೊಡನೆ ಸಹಭಾಗಿಗಳು.

ಇಂತು ಹೃದಯಪೂರ್ವಕ ವಂದನೆಗಳೊಂದಿಗೆ,

ರಾಜಕುಮಾರ್

ಡಾ. ರಾಜಕುಮಾರ್ ದಂತಚೋರ ವೀರಪ್ಪನ್‌ನ ಕಪಿಮುಷ್ಟಿಯಿಂದ ಪಾರಾಗಿ ಕಾಡಿನಿಂದ ನಾಡಿಗೆ ಮರಳಿದಾಗ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಕುಟುಂಬ ಸಮೇತರಾಗಿ ಡಾ. ರಾಜಕುಮಾರ್ ಅವರ ಮನೆಗೆ ತೆರಳಿ, ಅವರಿಗೆ ಶುಭ ಕೋರಿ ಆರೋಗ್ಯವನ್ನು ವಿಚಾರಿಸಿ ಸಂತಸವನ್ನು ಹಂಚಿಕೊಂಡರು. ಕಾಡಿನ ಅನುಭವಗಳನ್ನು ಡಾ. ರಾಜಕುಮಾರ್ ನೆನಪಿಸಿಕೊಳ್ಳುತ್ತಿದ್ದರೆ, ನಿಸಾರರು ಮೂಕವಿಸ್ಮಿತರಾಗಿ ಆಲಿಸುತ್ತಾ ಕುಳಿತಿದ್ದರು. ಆಮೇಲೆ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಮೊಮ್ಮಗನ ಹುಟ್ಟುಹಬ್ಬದ ದಿನದಂದು ಡಾ. ರಾಜಕುಮಾರ್ ಅವರು ಮಗಳು ಲಕ್ಷ್ಮಿ, ಪುನೀತ್ ರಾಜಕುಮಾರ್ ಮತ್ತು ಮೊಮ್ಮಕ್ಕಳ ಸಮೇತರಾಗಿ ನಿಸಾರರ ಮನೆಗೆ ರಾತ್ರಿಯ ವೇಳೆ ಬಂದು ಹಲವು ತಾಸುಗಳಷ್ಟು ಕಾಲ ಕಳೆದು ಸಂತಸಪಟ್ಟಿದ್ದರು.

ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ೨೦೦೦ನೆಯ ಜೂನ್ ತಿಂಗಳಿನ ಕೊನೆಯ ವಾರದಲ್ಲಿ ಹೃದಯದ ತೊಂದರೆಯಿಂದ ಮಣಿಪಾಲ್ ಆಸ್ಪತ್ರೆಯಲ್ಲಿ ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ವಿಷಯ ತಿಳಿದ ಒಡನೆ ಡಾ. ರಾಜಕುಮಾರ್ ತಮ್ಮ ಪತ್ನಿಯವರೊಂದಿಗೆ ಆಸ್ಪತ್ರೆಗೆ ಧಾವಿಸಿ ಬಂದಿದ್ದರು. ಪುನಃ ಶಸ್ತ್ರಚಿಕಿತ್ಸೆಯ ಸಮಯಕ್ಕೆ ಆಸ್ಪತ್ರೆಗೆ ಬಂದ ಡಾ. ರಾಜಕುಮಾರ್ ಒಂದು ಗಂಟೆಯ ಕಾಲ ಆಸ್ಪತ್ರೆಯಲ್ಲೇ ಉಳಿದರಲ್ಲದೆ, ವೈದ್ಯ ಡಾ. ದೇವಿಪ್ರಸಾದ್ ಶೆಟ್ಟಿ ಅವರನ್ನು ಕಂಡು ನಿಸಾರರ ಆರೋಗ್ಯದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದರು. ಶಸ್ತ್ರಚಿಕಿತ್ಸೆಯಾಗಿ ನಿಸಾರರು ತೀವ್ರ ನಿಗಾ ಘಟಕದಲ್ಲಿ ನಿಶ್ಚೇಷ್ಟಿತರಾಗಿ ಮಲಗಿದ್ದಾಗ ಮತ್ತೊಮ್ಮೆ ಶ್ರೀಮತಿ ಪಾರ್ವತಮ್ಮ ಅವರೊಡನೆ ಬಂದು ಯೋಗಕ್ಷೇಮವನ್ನು ವಿಚಾರಿಸಿದ್ದರು. ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅನಂತರ ಹಲವಾರು ಸಭೆ ಸಮಾರಂಭಗಳಲ್ಲಿ ಡಾ. ರಾಜಕುಮಾರ್ ಅವರ ಈ ಔದಾರ್ಯದ ಬಗ್ಗೆ ಆತ್ಮೀಯವಾಗಿ ಪ್ರಸ್ತಾಪಿಸುತ್ತಿದ್ದರು. ಅವರಿಗೆ ಹೃದಯದಾಳದ

ಕೃತಜ್ಞತೆಯನ್ನು ಸಲ್ಲಿಸುತ್ತಿದ್ದರು.

ಪ್ರೊ. ಕೆ. ಎಸ್. ನಿಸಾರ್ ಅಹಮದ್ 'ತರಂಗ' ವಾರ ಪತ್ರಿಕೆಗಾಗಿ ಜುಲೈ ೧೯೯೭ರಲ್ಲಿ ಬರೆದ ಲೇಖನದಲ್ಲಿ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿದ್ದಾರೆ. ಡಾ. ರಾಜ ಕುಮಾರ್ ರುಚಿಕರವಾದ ಪುಷ್ಕಳ ಭೋಜನದ ಅನಂತರ ಸಾಬೂನು ಹಚ್ಚಿ ಕೈ ತೊಳೆದು ಕೊಳ್ಳುತ್ತಿರಲಿಲ್ಲ. ಎಷ್ಟೋ ಸಮಯದ ತನಕ ಕೈಗೆ ಅಂಟಿದ ಊಟದ ವಾಸನೆಯನ್ನು ಆಗಾಗ ಮೂಸುತ್ತಾ 'ಭಗವಂತ ಎಂತಹ ರುಚಿಯಾದ ಊಟ ಕೊಟ್ಟೆಯಪ್ಪ' ಎನ್ನುತ್ತಿದ್ದರಂತೆ. ಅಲ್ಲದೆ ಕೆಳಗೆ ಬಿದ್ದ ಒಂದು ಅನ್ನದ ಅಗುಳನ್ನು ಎತ್ತಿ ಕಣ್ಣಿಗೆ ಒತ್ತಿಕೊಂಡು ತಟ್ಟೆಗೆ ಹಾಕಿದ್ದರು ಎನ್ನುತ್ತಾರೆ ನಿಸಾರರು. ಇದು ಡಾ. ರಾಜಕುಮಾರ್ ಅವರಲ್ಲಿದ್ದ 'ಅನ್ನಬ್ರಹ್ಮ' ಭಾವನೆಗೆ ಸಾಕ್ಷಿ ಎಂದೂ ನಿಸಾರರು ಹೇಳುತ್ತಾರೆ. 'ಚಲನಚಿತ್ರಗಳಲ್ಲಿ ನಟಿಸುವ ಬಹಳಷ್ಟು ನಟನಾಮರು ನಿಜ ಜೀವನದಲ್ಲಿಯೂ ನಖರಾ ಮಾಡುವುದನ್ನೇ ಅಭ್ಯಾಸ ಮಾಡಿಕೊಂಡಿರು ವಾಗ, ಡಾ. ರಾಜಕುಮಾರ್ ಯಾವುದೇ ಬಿಂಕ ಬಿಮ್ಮುಗಳಿಲ್ಲದೆ ಮರ್ಯಾದಸ್ಥರಾಗಿ, ಮುಖ್ಯವಾಗಿ ಮನುಷ್ಯರಂತೆ ಸಹಜವಾಗಿ ಬಾಳುತ್ತಿರುವ ಸಂಗತಿ ಚೇತೋಹರವೆನ್ನಿಸುತ್ತದೆ' ಎಂದೂ ನಿಸಾರರು ಈ ಲೇಖನದಲ್ಲಿ ಹೇಳುತ್ತಾರೆ. ಡಾ. ರಾಜಕುಮಾರ್ ಅವರ ಮಾತು ಗಳನ್ನು ಸೂಕ್ಷ್ಮವಾಗಿ ಗಮನಿಸಿರುವ ನಿಸಾರರು, ಡಾ. ರಾಜಕುಮಾರ್ ಸಂಭಾಷಿಸುವಾಗ ಅಪ್ಪಿ ತಪ್ಪಿ ಪರರನ್ನು ಹಳಿಯುವುದನ್ನೇ ಆಗಲಿ, ತಮ್ಮನ್ನು ಬಣ್ಣಿಸಿಕೊಳ್ಳುವುದನ್ನೇ ಆಗಲಿ ತಮ್ಮ ಅಸಂಖ್ಯಾತ ಭೇಟಿಗಳಲ್ಲಿ ಒಮ್ಮೆಯೂ ಕಂಡಿಲ್ಲ ಎಂದೂ ಸ್ಪಷ್ಟವಾಗಿ ಹೇಳುತ್ತಾರೆ. ಡಾ. ರಾಜಕುಮಾರ್ ಅವರು ತಮ್ಮ ಸ್ವೋಪಜ್ಞ ಪ್ರತಿಭಾ ಸಾಮರ್ಥ್ಯ ಮಾತ್ರದಿಂದಲೇ ಯಶಸ್ಸಿನ ಗೌರಿಶಂಕರ ಏರಿದರೆಂಬುದನ್ನು ನಿಸಾರರು ಈ ಲೇಖನದಲ್ಲಿ ವಿಶದಪಡಿಸುತ್ತಾರೆ. ಅವರ 'ಅವ್ಯಾವಹಾರಿಕ ಮುಗ್ಧತೆ'ಯನ್ನು ನಿದರ್ಶನಪೂರ್ವಕವಾಗಿ ನಿರೂಪಿಸುತ್ತಾರೆ. ಐದು ನೂರು ರೂಪಾಯಿಯ ನೋಟು ಚಲಾವಣೆಯಲ್ಲಿರುವುದೂ ತಿಳಿಯದಷ್ಟು ಮಟ್ಟಿನ ಅಮಾಯಕ ಮುಗ್ಧ ಮನಸ್ಸು ಅವರದು ಎನ್ನುತ್ತಾರೆ ನಿಸಾರ್.

ಡಾ. ರಾಜಕುಮಾರ್ ವೀರಪ್ಪನ್‌ನ ಕಪಿಮುಷ್ಠಿಯಿಂದ ಬಿಡುಗಡೆಯಾಗಿ ಬಂದ ಸಮಯದಲ್ಲಿ ಪ್ರೊ. ಕೆ. ಎಸ್. ನಿಸಾರ್ ಅಹಮದ್, ೨೦೦೦ದ ನವೆಂಬರ್‌ನ 'ಸುಧಾ' ವಾರ ಪತ್ರಿಕೆಯಲ್ಲಿ ಬರೆದ ಲೇಖನವಂತೂ ಅತ್ಯಂತ ಹೃದಯಸ್ಪರ್ಶಿಯಾಗಿದೆ. 'ಈಗ ಗ್ರಹಣ ಬಿಟ್ಟಿದೆ, ಗಂಡಾಂತರ ಹಿಮ್ಮೆಟ್ಟಿದೆ, ನಾಡು ಸಮಾಧಾನದ ನಿಟ್ಟುಸಿರು ಬಿಟ್ಟಿದೆ' ಎಂದು ನಿಸಾರರು ಲೇಖನವನ್ನು ಆರಂಭಿಸುತ್ತಾರೆ. ಡಾ. ರಾಜಕುಮಾರ್ ಕಾಡಿನಲ್ಲಿದ್ದ ಆ ದಿನಗಳನ್ನು ನೆನೆದರೇ ನಡುಕವುಂಟಾಗುತ್ತದೆ, ಪರಿಭಾವಿಸಿಕೊಂಡರೆ ಜೀವ ಬಾಯಿಗೆ ಬಂದಂತಾಗುತ್ತದೆ ಎಂದು ನಿಸಾರರು ಭಯಾನಕ ಯಾತ್ರೆಯ ಆ ದಿನಗಳನ್ನು ಕಲ್ಪಿಸಿ ಕೊಳ್ಳುತ್ತಾರೆ. ಡಾ. ರಾಜಕುಮಾರ್ ವಿನಯಶೀಲರು ಎಂದು ಹೇಳುತ್ತಾ, ಕವಿ ರವೀಂದ್ರನಾಥ ಠಾಕೂರರ ಸೂಕ್ತಿಯೊಂದನ್ನು ನೆನಪಿಸಿಕೊಳ್ಳುತ್ತಾರೆ. 'We come nearest to the great, when we are great in humility' ಎನ್ನುವ ವಿಶ್ವಕವಿಯ ಒಳ್ನುಡಿಯಂತೆ, ಡಾ. ರಾಜಕುಮಾರ್ 'ಸ್ವತಃ ದೊಡ್ಡವರಾದರೂ ಬೇರೆಯವರಲ್ಲಿನ ದೊಡ್ಡತನವನ್ನು ಗುರುತಿಸಿ ಗೌರವಿಸುವಂತಹ ದೊಡ್ಡ ವ್ಯಕ್ತಿಯಾಗಿದ್ದರು' ಎನ್ನುತ್ತಾರೆ ನಿಸಾರ್. 'ಡಾ. ರಾಜಕುಮಾರ್

ಅಗ್ನಿದಿವ್ಯದಲ್ಲಿ ಪರೀಕ್ಷಿತರಾಗಿ, ಗಂಡಾಂತರದಿಂದ ಪಾರಾಗಿ ಬಂದಿರುವ ಈ ಶುಭ ಮುಹೂರ್ತದಲ್ಲಿ ನನ್ನ ಮನಸ್ಸು ತತ್‌ಕ್ಷಣಕ್ಕೆ ಅನುಭವಿಸಿರುವ ಸಂಭ್ರಮ ಸಂತೋಷ ಗಳನ್ನು ನಿವೇದಿಸಿಕೊಳ್ಳುವುದು ಹೆಚ್ಚು ಸಂದರ್ಭೋಚಿತ ಎನಿಸುತ್ತದೆ' ಎನ್ನುವ ಮೂಲಕ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಡಾ. ರಾಜಕುಮಾರ್ ಅವರ ಮೇಲಿನ ಅನಂತ ಪ್ರೀತಿಯನ್ನು ಅಂತಃಕರಣಪೂರ್ವಕವಾಗಿ ತೋಡಿಕೊಳ್ಳುತ್ತಾರೆ.

ಕನ್ನಡದ ಕವಿಗಳಲ್ಲಿ ಡಾ. ರಾಜಕುಮಾರ್ ಅವರು ನಿಸಾರರಿಗೆ ಉನ್ನತವಾದ ಸ್ಥಾನವನ್ನು ನೀಡಿದ್ದರು. ನಿಸಾರರ 'ನಿತ್ಯೋತ್ಸವ' ಧ್ವನಿ ಸುರುಳಿ ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ, ವಿದೇಶೀಯ ಕನ್ನಡಿಗರ ಮನೆಗಳಲ್ಲಿ ಅಲಂಕರಿಸಿದೆ ಎಂಬ ಅಭಿಮಾನ ಡಾ. ರಾಜಕುಮಾರ್ ಅವರಲ್ಲಿ ಮನೆ ಮಾಡಿತ್ತು. ಈ ವಿಷಯವನ್ನು ಡಾ. ರಾಜಕುಮಾರ್ ಅವರೇ ಎಷ್ಟೋ ಬಾರಿ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಲ್ಲಿ ಹೇಳಿದ್ದುಂಟು. ನಿಸಾರರು ಒಮ್ಮೆ ತಮ್ಮ 'ನಿತ್ಯೋತ್ಸವ'ದ ಸಾಂದ್ರಿಕೆ(CD)ಯನ್ನು ಡಾ. ರಾಜಕುಮಾರ್ ಅವರ ಮನೆಯಲ್ಲಿ ಅವರಿಂದಲೇ ಲೋಕಾರ್ಪಣೆ ಮಾಡಿಸಿದ್ದರು. ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಎಪ್ಪತ್ತು ವಸಂತಗಳನ್ನು ಪೂರೈಸಿದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆಸಿದ ಅದ್ದೂರಿ ಸಮಾರಂಭದಲ್ಲಿ ನಿಸಾರರ ವಿಭಿನ್ನ ಹಾಡುಗಳನ್ನು ಒಳಗೊಂಡ 'ಹೊಂಬೆಳಗು' ದನಿ ಸುರುಳಿ ಮತ್ತು ಸಾಂದ್ರಿಕೆಯನ್ನು ಹೊರ ತರಲಾಯಿತು. ಇವುಗಳಿಗಾಗಿ ಡಾ. ರಾಜಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಮೇಲಿನ ಪ್ರೀತಿಯನ್ನು ಭಾವನಾತ್ಮಕವಾಗಿ ವ್ಯಕ್ತಪಡಿಸಿ, ಹೃದಯ ತುಂಬಿ ನಿಸಾರರನ್ನು ಅಭಿನಂದಿಸಿದ್ದಾರೆ.

ಡಾ. ರಾಜಕುಮಾರ್ ಅವರಿಗೆ ಕರ್ನಾಟಕ ಸರ್ಕಾರ ನೀಡಿದ ಅದ್ದೂರಿ ಅಭಿನಂದನೆಯ ಸಾರ್ಥಕ ಸುವರ್ಣದ ಸಂದರ್ಭದಲ್ಲಿ, ಸರ್ಕಾರ ನನ್ನಿಂದ ಡಾ. ರಾಜಕುಮಾರ್ ಅವರ ಜೀವನ ಹಾಗೂ ಸಾಧನೆಯನ್ನು ಕುರಿತ 'ಬಂಗಾರದ ಮನುಷ್ಯ' ಹೆಸರಿನ ಪುಸ್ತಕವನ್ನು ಬರೆಸಿತು. ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಡಲು ನಾನು ಹಾಗೂ ಪತ್ರಕರ್ತ ಮಿತ್ರ ಶ್ರೀ ವೈ. ಜಿ. ಗಿರಿಶಾಸ್ತ್ರಿ ಅವರು ನಿಸಾರರ ಮನೆಗೆ ಹೋಗಿ ಕವಿಗಳನ್ನು ಕೇಳಿಕೊಂಡೆವು. ಮೊದಲಿಗೆ 'ಆಗುವುದೇ ಇಲ್ಲ' ಎಂದವರು, ನಾನು ಒತ್ತಾಯಿಸಿದಾಗ 'ಡಾ. ರಾಜಕುಮಾರ್ ಅವರ ಮೇಲಿನ ಪ್ರೀತಿಯಿಂದ ಬರೆಯುತ್ತೇನೆ' ಎಂದು ಒಪ್ಪಿಕೊಂಡರು. ಬರೆದ ಮುನ್ನುಡಿ ಕಿರಿದಾದರೂ ಅದರ ಪ್ರೌಢಿಮೆ ಹಿರಿದು. 'ಕನ್ನಡ ಚಿತ್ರರಂಗದ, ಅಷ್ಟೇ ಏಕೆ ಭಾರತೀಯ ಚಿತ್ರ ಜಗತ್ತಿನ ಸರ್ವಾಂಗೀಣ ಪುರೋಭಿವೃದ್ಧಿಯನ್ನು ಪರಿಶೀಲಿಸುವಾಗ ಅನಿವಾರ್ಯವಾಗಿ ಡಾ. ರಾಜಕುಮಾರ್ ಅವರ ಹೆಸರನ್ನು ಒಂದು ಮಹತ್ತರ ಮೈಲಿಗಲ್ಲಿನಂತೆ ಪರಿಗಣಿಸಬೇಕಾಗುತ್ತದೆ. ಕನ್ನಡ ಚಲನಚಿತ್ರ ಕ್ಷೇತ್ರದ ಇತಿಹಾಸ ವನ್ನು ಸಮಾಲೋಕಿಸಿದಾಗ ಆ ಇತಿಹಾಸ ಬೇರೆ ಹಾಗೂ ರಾಜಕುಮಾರ್ ಬೇರೆ ಎನ್ನಿಸದ ಅವಿನಾಭಾವ ಮೂಡುವುದು ಸಹಜ' ಎಂಬ ಐದು ಸಾಲಿನಲ್ಲಿ ಡಾ. ರಾಜಕುಮಾರ್ ಅವರ ಮೇರು ವ್ಯಕ್ತಿತ್ವವನ್ನು ಅಡಕಗೊಳಿಸುವ ಮೂಲಕ ನಿಸಾರರು ಡಾ. ರಾಜಕುಮಾರ್ ಅವರ ಒಟ್ಟಾರೆ ಸಾಧನೆಯನ್ನು ಅನಾವರಣಗೊಳಿಸಿದ್ದಾರೆ. 'ಸಾರ್ವಜನಿಕ ಸತ್ಕಾರ್ಯ ಮತ್ತು

ವೈಯಕ್ತಿಕ ಚಾರಿತ್ರ್ಯಗಳನ್ನು ಸಮನ್ವಯಿಸಿಕೊಂಡ ಅನೇಕ ಮಹಾನುಭಾವರು ನಮ್ಮ ನಡುವೆ ಇದ್ದಾರೆ. ತತ್‌ಕ್ಷಣಕ್ಕೆ ನನ್ನ ನೆನಪಿಗೆ ಹೊಳೆಯುತ್ತಿರುವವರು ಡಾ. ಎಚ್. ನರಸಿಂಹಯ್ಯ ಮತ್ತು ಡಾ. ರಾಜಕುಮಾರ್' ಎನ್ನುವ ಮೂಲಕ ನಿಸಾರರು ಈ ಮುನ್ನುಡಿಯಲ್ಲಿ ಡಾ. ರಾಜ ಕುಮಾರ್ ಅವರ ವ್ಯಕ್ತಿತ್ವದ ರಹಸ್ಯವನ್ನು ಬಿಚ್ಚಿಟ್ಟಿದ್ದಾರೆ. ನಾನು, ಡಾ. ರಾಜಕುಮಾರ್ ಹಾಗೂ ಶ್ರೀಮತಿ ಪಾರ್ವತಮ್ಮ ರಾಜಕುಮಾರ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ 'ಬಂಗಾರದ ಮನುಷ್ಯ' ಕೃತಿಯನ್ನು ಅರ್ಪಿಸಿದಾಗ, ಡಾ. ರಾಜಕುಮಾರ್ ಅವರು ಪುಸ್ತಕದ ಬಗ್ಗೆ ಮಾತ್ರವಲ್ಲದೆ, ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಮುನ್ನುಡಿಯ ಬಗ್ಗೆ ಸಹ ಮೆಚ್ಚುಗೆ ವ್ಯಕ್ತಪಡಿಸಿದ್ದು ವಿಶೇಷವಾಗಿತ್ತು.

ಡಾ. ರಾಜಕುಮಾರ್ ಅವರು ಬಹುವಾಗಿ ಮೆಚ್ಚಿಕೊಂಡಿದ್ದ ತಮ್ಮ ಪುತ್ರ ಶಿವರಾಜ ಕುಮಾರ್ ಅಭಿನಯಿಸಿದ್ದ 'ಜೋಗಿ' ಚಿತ್ರವನ್ನು ಡಾ. ರಾಜಕುಮಾರ್ ಅವರೊಂದಿಗೆ ಕುಳಿತು ವೀಕ್ಷಿಸುವ ಸದವಕಾಶ ತಪ್ಪಿಹೋದ ಬಗ್ಗೆ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ವಿಷಾದವಿದೆ. 'ವಿಜಯ ಕರ್ನಾಟಕ' ಪತ್ರಿಕೆಯ ಅಂಕಣಕಾರ ಎ. ಆರ್. ಮಣಿಕಾಂತ್ ಅವರು ದಿನಾಂಕ ೩.೬.೨೦೦೬ರ ಪತ್ರಿಕೆಯಲ್ಲಿ 'ಯೋಗಿ ಜೊತೆ ಜೋಗಿ ನೋಡೋ ಯೋಗ ಇರಲಿಲ್ಲ' ಶೀರ್ಷಿಕೆಯ ಅಡಿಯಲ್ಲಿ ಬರೆದ ಲೇಖನ ಹೃದಯಸ್ಪರ್ಶಿ ಯಾಗಿತ್ತು. ಈ ವಿಶೇಷ ವರದಿಯ ಪಾಠ ಹೀಗಿದೆ:—

'ವರನಟ ಡಾ. ರಾಜಕುಮಾರ್ ಅವರು ವಿಧಿವಶರಾದ ಮೂರು ತಿಂಗಳು ಮುಂಚೆ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್, ಡಾ. ರಾಜ್‌ರನ್ನು ಅವರ ಸದಾಶಿವನಗರದ ಮನೆಯಲ್ಲಿ ಭೇಟಿಯಾಗಿದ್ದರು. ಆಗಿನ್ನೂ ಡಾ. ರಾಜ್‌ರ ಪ್ರೀತಿಯ ಸಹೋದರ ವರದಪ್ಪ ತೀರಿಕೊಂಡಿರಲಿಲ್ಲ. ಡಾ. ರಾಜ್ ಅವರಿಗೆ ಮಂಡಿ ನೋವಿನ ವಿನಾ ಗಂಭೀರವಾದ ದೈಹಿಕ ಅಸ್ವಾಸ್ಥ್ಯ ತಲೆದೋರಿರಲಿಲ್ಲ. ಪತ್ನಿ ಪಾರ್ವತಮ್ಮ ಸ್ಲಿಪ್ ಡಿಸ್ಕ್ ಆಗಿ ಬೆನ್ನು ನೋವಿನಿಂದ ನರಳುತ್ತಿದ್ದರು. ಅವರು ಕೆಲವು ದಿನ ಹಾಸಿಗೆಯಲ್ಲೇ ಮಲಗಿರಬೇಕಾದುದು ಅನಿವಾರ್ಯ ವಾಗಿತ್ತು. ರಾಜ್ ಅವರನ್ನು ತಮ್ಮ ಮಂಡಿ ನೋವಿಗಿಂತ ಮಡದಿಯ ವೇದನೆಯೇ ಹೆಚ್ಚು ಬಾಧಿಸಿತ್ತು.

'ರಾಜ್ ಮತ್ತು ನಿಸಾರ್ ಅವರು ಸಂಭಾಷಣೆಯಲ್ಲಿ ತೊಡಗಿದ್ದಾಗ, ಶಿವರಾಜ್ ಕುಮಾರ್ ಪ್ರವೇಶಿಸಿ ನಿಸಾರರಿಗೆ ನಮಸ್ಕಾರ ಮಾಡಿ ಒಂದೆಡೆ ಕುಳಿತರು. ಆಗ ನಿಸಾರ್, ಶಿವರಾಜ್‌ರನ್ನು ಉದ್ದೇಶಿಸಿ 'ಶಿವಣ್ಣ, ಯಾವ ಪತ್ರಿಕೆ ನೋಡಿದರೂ 'ಜೋಗಿ' ಸಿನಿಮಾದ್ದೇ ಸುದ್ದಿ. ಬೀದಿಯಲ್ಲೂ ಆ ಚಿತ್ರದ ಹಾಡುಗಳದ್ದೇ ಭರಾಟೆ. ಯಶಸ್ವಿಯಾಗಿ ನಡೀತಿರ ಬೇಕಲ್ಲವೇ ಆ ಮೂವಿ' ಎಂದರು.

ಶಿವರಾಜ್ 'ಹೌದು ಅಂಕಲ್, ಚೆನ್ನಾಗಿ ನಡೀತಿದೆ. ನೀವು ಆ ಚಿತ್ರ ನೋಡಿದ್ರ?' ಎಂದು ಪ್ರಶ್ನಿಸಿದಾಗ, ನಿಸಾರ್, 'ಇಲ್ಲ. ನಿಜ ಹೇಳಬೇಕೆಂದರೆ ನಾನು ಥಿಯೇಟರ್‌ಗೆ ಹೋಗಿ ಯುಗಗಳೇ ಆಗಿವೆ' ಎಂದು ಉತ್ತರಿಸಿದರು. ಶಿವರಾಜ್ ಆಗ, 'ಇನ್ನೂ ಕೆಲವು ದಿನ 'ಜೋಗಿ' ಓಡುತ್ತೆ. ನೀವು ಬಿಡುವಾಗಿರುವ ದಿನ ನನಗೆ ಫೋನ್ ಮಾಡಿ ತಿಳಿಸಿದರೆ,

ಕಂಟೋನ್ಮೆಂಟ್‌ನ ಐನಾಕ್ಸ್ ಥಿಯೇಟರ್‌ನಲ್ಲಿ 'ಜೋಗಿ' ಪ್ರದರ್ಶನಕ್ಕೆ ಏರ್ಪಾಡು ಮಾಡಿಸ್ತೀನಿ' ಎಂದರು.

'ಆಗ ರಾಜ್ ಅವರು ಮಗನಿಗೆ, 'ಶಿವಣ್ಣ, ಐನಾಕ್ಸ್‌ನಲ್ಲಿ ಬೇಡ. ಕಪಾಲಿ ಟಾಕೀಸಿನಲ್ಲಿ ವ್ಯವಸ್ಥೆ ಮಾಡಿಸಪ್ಪ. ನಿಸಾರ್ ಅವರ ಜತೆಯಲ್ಲಿ ನಾನೂ ನೋಡ್ತೀನಿ' ಅಂದರು. ನಿಸಾರ್, 'ನೀವು ಈಗಾಗಲೇ ಖ್ಯಾತ ನಟ ರಜನಿಕಾಂತ್ ಅವರ ಜೊತೆ 'ಜೋಗಿ' ಚಿತ್ರ ನೋಡಿ ಬಂದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ ಹಾಗಿತ್ತಲ್ಲ' ಅಂದಾಗ, 'ಹೌದು, ನೋಡಿದ್ದೆ. ಇನ್ನೊಮ್ಮೆ ನಿಮ್ಮ ಜತೆ ನೋಡೋ ಅವಕಾಶ ಸಿಕ್ಕಿದರೆ ಯಾಕೆ ಬಿಡಬೇಕು? ಚಿತ್ರ ಚೆನ್ನಾಗಿದೆ' ಎಂದರು, ರಾಜ್. ಈ ಮಾತಿನಿಂದ ಭಾವಪರವಶರಾದ ನಿಸಾರ್, 'ರಾಜ್‌ಕುಮಾರ್ ಅವರೇ, ನೀವು ನನ್ನ ಜತೆ ಬಂದು ಚಿತ್ರ ನೋಡೋದು ನನ್ನ ಭಾಗ್ಯ ಅಂತ ಭಾವಿಸ್ತೀನಿ' ಎಂದರು.

'ಆಮೇಲೆ, ಮಂಡಿ ನೋವಿದ್ದರೂ ನಿಸಾರ್ ಎಷ್ಟೇ ಬೇಡ ಬೇಡವೆಂದರೂ ಕೇಳದೆ, ಯಥಾಪ್ರಕಾರದಂತೆ, ಶಿವರಾಜ್ ಅವರ ಹೆಗಲ ಮೇಲೆ ಕೈ ಹಾಕಿ, ಗೇಟಿನವರೆಗೆ ಬಂದು ಬೀಳ್ಕೊಟ್ಟರು. ಹೋಗುವ ಮುನ್ನ ಮತ್ತೊಮ್ಮೆ, 'ನಿಮಗೆ ಅನುಕೂಲವಾದಾಗ ಶಿವಣ್ಣನಿಗೆ ಫೋನ್ ಮಾಡಿ ತಿಳಿಸಿ. ನಾವಿಬ್ರೂ ಜತೆಯಾಗಿ 'ಜೋಗಿ' ನೋಡಿ ಬರೋಣ' ಎಂದರು ಡಾ. ರಾಜ್. 'ಖಂಡಿತವಾಗಿಯೂ. ನನಗೂ ನೋಡಬೇಕೆನ್ನುವ ಆಸೆ ಇದೆ' ಎಂದು ನಮಸ್ಕರಿಸಿ ನಿಸಾರ್ ಬೀಳ್ಕೊಂಡರು.

'ಮುಂದಿನ ದಿವಸಗಳಲ್ಲಿ, ಯಾವ ಯಾವುದೋ ಕೆಲಸ, ಕಾರ್ಯಕ್ರಮಗಳ ಒತ್ತಡದಿಂದ ಆ ವಿಷಯ ನಿಸಾರರ ಮರೆವಿಗೆ ಸಂದಿತು. ಹೀಗಾಗಿ, 'ಜೋಗಿ' ಚಿತ್ರವನ್ನು ತಮ್ಮ ಮೆಚ್ಚಿನ ನಟವರ್ಯ, ಮಿತ್ರನ ಜೊತೆ ನೋಡಲು ಸಾಧ್ಯವಾಗಲಿಲ್ಲ. ಡಾ. ರಾಜ್ ದೈವಾಧೀನರಾದ ಮೇಲೆ, ಅದನ್ನು ನೆನೆದು ನಿಸಾರ್ ಅದೆಷ್ಟು ಪೇಚಾಡಿಕೊಂಡರೋ, ಕಸಿವಿಸಿ ವಿಷಾದದ ಕಹಿ ಅನುಭವಿಸಿದರೋ, ಅದೆಷ್ಟು ಜನ ಗೆಳೆಯರೆದುರು ಇದನ್ನು ತೋಡಿಕೊಂಡು ಪಶ್ಚಾತ್ತಾಪಪಟ್ಟರೋ... ಅದನ್ನು ಮಾತಲ್ಲಿ ವಿವರಿಸಲು ಸಾಧ್ಯವಿಲ್ಲ.

'ಈ ಸಂಗತಿಯನ್ನು ಪ್ರಸ್ತಾಪಿಸಿದ ನಿಸಾರ್—'ಛೆ! ಹಾಳು ಮರೆವಿನಿಂದ ಎಂಥ ಕೆಲಸ ಮಾಡಿಬಿಟ್ಟೆ? ಸ್ವತಃ ರಾಜ್ ಅವರೇ ವ್ಯಕ್ತಪಡಿಸಿದ್ದ ಒಂದು ಅಪೂರ್ವ ಬಯಕೆ ನೆರವೇರದೇ ಹೋಯಿತಲ್ಲ? ಅಂತಹ ಮೇರು ನಟನ ಜತೆ ಕೂತು ಸಿನಿಮಾ ನೋಡಿದೆ ಎನ್ನುವ ಹೆಮ್ಮೆ ನನ್ನ ಪಾಲಿಗೆ ದಕ್ಕದೇ ಹೋಯಿತಲ್ಲ' ಎಂದು ಮಮ್ಮಲ ಮರುಗುತ್ತಾ ಮಾತು ಮುಗಿಸಿದರು.'

ಸರಳ ಸಜ್ಜನಿಕೆಯ ಇಬ್ಬರು ಮಹಾನುಭಾವರ ಒಡನಾಟದಲ್ಲಿ ಕನ್ನಡಿಗರು ಸಂಭ್ರಮಿಸಬಹುದಾದ ಇನ್ನೂ ಅನೇಕ ಘಟನೆಗಳಿವೆ. ಈ ಇಬ್ಬರ ನಡುವಿನ ಸ್ನೇಹ, ವಿಶ್ವಾಸಗಳು ಒಂದು ಗಣನೀಯ ದಾಖಲೆಯಾಗಿ ಪರಿಣಮಿಸಬಲ್ಲವು. ಅಭಿನಯದಿಂದ ಕನ್ನಡಿಗರ ಹೃನ್ಮನಗಳಲ್ಲಿ ಚಿರಂತನವಾಗಿ ವಿರಾಜಮಾನರಾಗಿರುವ ಒಬ್ಬ ಮಹಾನ್ ನಟ

ಹಾಗೂ ಅವಿಸ್ಮರಣೀಯ ಕವನಗಳ ಸೃಷ್ಟಿಯಿಂದ ಕನ್ನಡಿಗರ ಮನ, ಮನೆಗಳಲ್ಲಿ ನೆಲೆಗೊಂಡಿರುವ ಸಾಧನಶೀಲ ಸತ್ವಶಾಲಿ ಕವಿ—ಈ ಇಬ್ಬರೂ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಗಳಿಗೆ ಅನನ್ಯ ಕಾಣಿಕೆಯನ್ನು ಸಲ್ಲಿಸಿದ ಮಹಾನುಭಾವರು ಹಾಗೂ ರಸ ಸಾಮ್ರಾಜ್ಯದ ರಾಯಭಾರಿಗಳು ಎಂಬುದರಲ್ಲಿ ಸಂದೇಹವಿಲ್ಲ.

ಮನುಷ್ಯನನ್ನು ಮುನ್ನೆಚ್ಚರಿಸುವಂತೆ ಕರುಬಿನ ಕಡಲಿನ ನಡುವೆಯೂ ನೇಹದ ನಡುಗಡ್ಡೆಗಳು ಬದುಕಿನಲ್ಲಿ ಆಗೀಗ ಎದುರಾಗುತ್ತವೆ. ಅವು ಅಪರೂಪ ವಾದರೂ ಅಸ್ಪಷ್ಟ ಗೋಚರವಲ್ಲ. ಮಾಮೂಲಾದದ್ದು ಮಸ್ತಾಗಿರುವಂತೆ ಮೇಲ್ಮೆಯುಳ್ಳದ್ದು ಮಿತ. ವಿಶಿಷ್ಟತೆ ವಿರಾಜಿಸುವುದು ವಿರಳತೆಯಲ್ಲಿ. ನಿರಾತಂಕವಾಗಿ ತಂಗಲು ಉಸಿರಾಡಲು ವಿಹರಿಸಲು ಸುಮನಸತೆ, ಪ್ರೀತಿ ವಿಶ್ವಾಸಗಳ ದ್ವೀಪಗಳು ಬದುಕಿಗೆ ಇರದಿದ್ದಲ್ಲಿ, ಮನುಷ್ಯ ಅಸಹಿಷ್ಣುತೆ ಅಸೂಯೆಗಳ ಅಲೆಯೊತ್ತಡದ ಅಡಕತ್ತರಿಯಲ್ಲಿ ತತ್ತರಿಸಿ ಕುಸಿಯುತ್ತಿದ್ದ— ಅವನ ಜೀವನೋತ್ಸಾಹ ಮತ್ತು ಹೆಗ್ಗುರಿ ಮೊಳಕೆಯಲ್ಲೇ ಜಲ ಸಮಾಧಿ ಯನ್ನು ಹೊಂದಿರುತ್ತಿದ್ದವು.

(ಕರುಬು-ಸ್ನೇಹ)

✧ ✧ ✧

ಅಂತರ್ಜಲದ ಮಟ್ಟ ಎಲ್ಲ ಕಡೆಗೂ ಸಮಾನವಾಗಿ ಇರದಿರುವಂತೆ, ನೀರಿನಲ್ಲೂ ಸಿಹಿ ಸವುಳುಗಳಿರುವಂತೆ ಯೋಜಿಸಿರುವುದು ಮತ್ರ್ಯಾತೀತ ಸತ್ತ್ವ. ವಾಸ್ತವತೆಯನ್ನು ಒಪ್ಪಿ, ತಕ್ಕಂತೆ ನಡೆದುಕೊಳ್ಳುವುದೇ ಮನುಷ್ಯ ಧರ್ಮ. ಜೊತೆಯಲ್ಲಿದ್ದರೂ ಸಮಾನ ಕೆಲಸದಲ್ಲಿ ಪ್ರವೃತ್ತರಾದರೂ ತನ್ನ ಪ್ರತಿಭೆ ಯಶಸ್ಸುಗಳ ಗಾಳಿಪಟ ಇನ್ನೊಬ್ಬನಂತೆ ಮೇಲೇಳಲಿಲ್ಲವೆಂದು ಅಸೂಯೆ ಯಿಂದ ಕುದಿದರೆ, ಒಳಗೊಳಗೇ ನಂಜೇರಿಸಿಕೊಂಡರೆ ಅದು ಮುಂದೊಮ್ಮೆ ತನ್ನನ್ನೇ ಮುಗಿಸಿಬಿಡುತ್ತದೆ ಎನ್ನುವ ವಿವೇಕ ವ್ಯಕ್ತಿಗಳಿಗಿರ ಬೇಕು.

(ವಾಸ್ತವತೆಯ ಅರಿವು)



ಒಡಲಾಳದಲ್ಲಿ ಪ್ರೀತಿಯನ್ನು ಬೈತಿಟ್ಟುಕೊಂಡ ಸಂಗಾತಿಗೆ

♦ ಡಾ. ವಿಜಯಾ

'...ಬುದ್ಧಿ, ಆಲೋಚನೆಗಳ ಉಪಕಾರಕ ಗುಣ, ವಿಸ್ತೀರ್ಣವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸತ್ಯವನ್ನು ಇಡಿಯಾಗಿ ಗ್ರಹಿಸಲಿಕ್ಕೆ ನೆರವಾದೀತು. ಮನುಷ್ಯ ತಾನು ಕಂಡದ್ದರ ಮಾನದಂಡದಿಂದ ಅದೃಶ್ಯವಾದದ್ದನ್ನು ಊಹಿಸಿಕೊಂಡು ಚಿತ್ರಿಸಿಕೊಳ್ಳುವ, ಮುಂದೊಮ್ಮೆ ಅದನ್ನು ತನ್ನ ಜೀವನದ ಮೂಲಭೂತ ತತ್ವ, ದರ್ಶನವನ್ನಾಗಿ ಮಾರ್ಪಡಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರುವುದು ಈ ಬುದ್ಧಿ, ವಿಚಾರಗಳಿಂದ...'

'...ಪರಿಸರದ ಸತ್ಯವನ್ನು ನಾವು ತದ್ವತ್ತಾಗಿ ಗ್ರಹಿಸುತ್ತೇವೆಂಬುದು ಎಷ್ಟು ನಿಜ? ನಮ್ಮ ಕಣ್ಣು, ಕಿವಿ, ಮೂಗು ಇತ್ಯಾದಿ ಇಂದ್ರಿಯಗಳು ತಮ್ಮ ಅಳವಿಗೆ ದಕ್ಕಿದಷ್ಟನ್ನು ಮಾತ್ರ ತಿಳಿಯಬಲ್ಲವು. ಅದಕ್ಕಿಂತ ಮೀರಿದ್ದು ಎರವಾಗಿಯೇ ಉಳಿಯುತ್ತದೆ...'

'...ದೃಶ್ಯ ಜಗತ್ತಿನ ಯಾವುದೇ ಶಿಸ್ತು, ಕ್ರಿಯೆಯ ಬಗ್ಗೆ ನಮ್ಮದೇ ಆದ ತೀರ್ಮಾನಗಳನ್ನು ನಾವು ಪೂರ್ವಭಾವಿಯಾಗಿ ಮಾಡಿಕೊಂಡಿರುತ್ತೇವೆ. ಹೀಗಿರುವಾಗ, ಯಾವುದೇ ಲೋಕಾನುಭವವನ್ನು ನಾವು ಭಾವ ರಾಗಗಳಿಂದ ಕಲುಷಿತಗೊಳಿಸದೇ ಯಥಾಸ್ಥಿತಿಯಲ್ಲೇ ಪಡೆಯುತ್ತೇವೆಂಬ, ಅಭಿವ್ಯಕ್ತಿಸುತ್ತೇವೆಂಬ ಖಾತ್ರಿ ಎಲ್ಲಿದೆ?... ನಾವು ಅತ್ಯಂತ ವಾಸ್ತವವೆಂದು ಗ್ರಹಿಸುವ ಅನುಭವ ಕೂಡ ತನ್ನ ನಿಜ ಸ್ವರೂಪದಲ್ಲಿ ಬೇರೆಯೇ ಆಗಿರುತ್ತದೆ...'

—ಇವು ನಿಸಾರ್ ಅಹಮದ್ ಅವರು ಹಿಂದೊಮ್ಮೆ ಪು.ತಿ.ನ. ಅವರೊಟ್ಟಿಗೆ ನಡೆಸಿದ ಮಾತುಕತೆಯಲ್ಲಿಂದ ಆಯ್ದ ಕೆಲವು ತುಣುಕುಗಳು. ಪ್ರತಿಯೊಂದನ್ನು ತೂಗಿ ತೂಗಿ ನೋಡುವ, ಆಳಕ್ಕಿಳಿದು ಬಗೆದು ತಂದದ್ದನ್ನು ಮತ್ತೆ ಮತ್ತೆ ಒರೆ ಹಚ್ಚುವ ಜಾಯಮಾನ ದವರು ನಿಸಾರ್. ಇಂಥ ಅವರ ಅಭಿಪ್ರಾಯಗಳನ್ನು ನಮ್ಮದೇ ಅನುಭವವೆಂಬಂತೆ ಸ್ವೀಕರಿಸಿ ಚಿಂತಿಸುವಂತೆ ಮಾಡುತ್ತಾರೆ. ಅವರ ಗದ್ಯ-ಪದ್ಯಗಳೆರಡೂ ಈ ಕೆಲಸವನ್ನು ಮಾಡಿವೆ; ಮಾಡುತ್ತಿವೆ. ಮೇಲು ನೋಟಕ್ಕೆ ಸರಳ ಎನ್ನಿಸಬಹುದಾದ ಸಾಲುಗಳ ಗರ್ಭದಲ್ಲೂ ಸೆಳೆ ಮಿಂಚುಗಳಿರುತ್ತವೆ; ಹೆಕ್ಕಿಕೊಳ್ಳುವವನ ಶಕ್ತ್ಯನುಸಾರ ದಕ್ಕುತ್ತವೆ. ಇಂಥ ಕಾರಣಕ್ಕಾಗಿಯೇ ನಮ್ಮ ನಡುವಿನ ಅನೇಕ ಸಾಹಿತ್ಯಾಸಕ್ತರು ಹಾಗೂ ಸಾಹಿತಿಗಳು ನಿಸಾರರ ಬಗ್ಗೆ ಗಟ್ಟಿಯಾಗಿ ಮಾತನಾಡದಿದ್ದರೂ ಒಳಗೊಳಗೇ ನಿಸಾರರನ್ನು ಓದಿಕೊಳ್ಳುತ್ತಾರೆಂದು ನನಗೆ ಗೊತ್ತಿದೆ.

ನಿಸಾರರ ಬರಹಗಳು ಖುಷಿ ಕೊಡುತ್ತವೆ; ಅಲ್ಲಲ್ಲಿ ಇಣುಕುವ ವ್ಯಂಗ್ಯ ಅಣಕು ಚುಚ್ಚು ಏನೇ ಅನ್ನಿ, ಅವು ಒಳಗೊಳಗೆ ಸಣ್ಣದೊಂದು ಮೆಲುಕಿಗೆ ಹಾಗೂ ಮುಗುಳ್ನಗೆಗೂ ಎಡೆಮಾಡಿರುತ್ತವೆ. ನಿಸಾರ್ ಬಳಸುವ ಕೆಲವು ಪದ ಗುಚ್ಛಗಳು ಅರೆ, ಇವು ನಮ್ಮ ಜೋಳಿಗೆಯಲ್ಲಿ ಇದ್ದುವಲ್ಲ, ನಾವೇಕೆ ಬಳಸಿಯೇ ಇಲ್ಲ ಎಂದು ಪ್ರಶ್ನಿಸಿಕೊಳ್ಳುವಂಥವು. ಆದರೆ ನಮ್ಮ ಜೋಳಿಗೆಯಲ್ಲೂ ಇದ್ದಿರಬಹುದಾದ ಆ ಪದಗಳನ್ನು ನಿಸಾರರ ಹಾಗೆ ಕೋದುಕೊಡುವ ಕಸುಬುಗಾರಿಕೆ ಎಲ್ಲರಿಗೂ ಸಿದ್ಧಿಸಿದ್ದಲ್ಲ. ಆ ಪದಗಳು ಎಷ್ಟು ಚಂದವಾಗಿ ಕಾಣುತ್ತವೆ, ಕಣ್ಣಾಮುಚ್ಚಾಲೆಯಾಡುತ್ತವೆಂದರೆ ಆ ಪದ ಗುಚ್ಛಗಳ ಸಡಗರದ ನಡುವೆ ನಿಸಾರರ ನಿಶಿತ-ಖಚಿತ ವಿಚಾರಗಳೂ ಸರಸವಾಡುತ್ತಲೇ ಆಲೋಚಿಸುವಂತೆ ಮಾಡಿರುತ್ತವೆ.

ನನಗೆ ನಿಸಾರರ ಪರಿಚಯ ಸುಮಾರು ೩೫-೪೦ ವರ್ಷಗಳ ಹಿಂದಿನದು. 'ಕಲಾಮಂದಿರ'ದ ಅ. ನ. ಸುಬ್ಬರಾಯರಿಂದ ಪರಿಚಯ ಪ್ರಾರಂಭವಾದದ್ದಾದರೆ, ಎ. ಎಸ್. ಮೂರ್ತಿ ದಂಪತಿಗಳಿಗೆ ಅತ್ಯಂತ ಆತ್ಮೀಯರಾಗಿ ನಿಸಾರರ ಇನ್ನೊಂದು ಮುಖದ ಪರಿಚಯವೂ ಆಗಿತ್ತು. ನಿಸಾರರೊಂದಿಗೆ ಮಾತನಾಡುವುದೇ ಒಂದು ಸಂತೋಷದ ಸಂಗತಿ. ಇರುವುದು, ಉಡುವುದು, ತೊಡುವುದು, ಮಾತುಕತೆ ಎಲ್ಲದರಲ್ಲೂ ಏನೋ ಒಂದು ಅಚ್ಚುಕಟ್ಟು, ಒಂದು ವ್ಯವಸ್ಥಿತ ನಿರ್ವಹಣೆ. ಒಂದು ಕ್ಷಣವೂ ನಿರ್ಲಕ್ಷ್ಯ ತೋರದ, ಉಡಾಫೆ ಅನ್ನಿಸದ ಹಾಗೆ ನಗುನಗುತ್ತಲೇ ಸಿಹಿ, ಸಿಹಿಲೇಪಿತ ಕಹಿಯೂ ಇರುವಂಥ ಮಾತುಗಳ ಮಧ್ಯೆಯೂ ತುಂಬಿ ಬರುವ ವಾತ್ಸಲ್ಯ ಭಾವಕ್ಕಾಗಿ ನಿಸಾರ್ ಪ್ರಿಯವಾಗುತ್ತಾರೆ.

ನನ್ನ ವೈಯಕ್ತಿಕ ಸಂಗತಿಗಳು, ವೃತ್ತಿ, ಸಾರ್ವಜನಿಕ ಕಾರ್ಯಕ್ಷೇತ್ರ—ಈ ಎಲ್ಲ ನೆಲೆಯಲ್ಲೂ ನಿಸಾರ್ ನನ್ನ ಪ್ರಿಯ ಸಂಗಾತಿ. ಈಚೆಗೆ ವರ್ಷಗಟ್ಟಲೆ ನಾವು ಪರಸ್ಪರ ಭೇಟಿಯೇ ಆಗದೆಯೂ ಅಂತರ್ಯದಲ್ಲಿ ಅದೇ ಆರ್ದ್ರತೆ-ಮಾರ್ದವ ಉಳಿಸಿಕೊಂಡು ಬಂದಿದ್ದೇವೆ. ನಿಸಾರ್‌ಗೆ ಯಾರೋ ಸನ್ಮಾನ ಮಾಡಿದರೆ, ಯಾವುದೋ ಪ್ರಶಸ್ತಿ ಬಂತೆಂದರೆ ಮನಸ್ಸು ಅರಳಿಕೊಳ್ಳುತ್ತದೆ. ಜೊತೆಗೆ, ನಿನ್ನೆ-ಮೊನ್ನೆಗಳ ನೆನಪುಗಳ ವರ್ಣಮಯ ಚಿತ್ತಾರವೊಂದು ಕಣ್ಣ ಮುಂದೆ ನರ್ತಿಸತೊಡಗುತ್ತದೆ. ನಿಸಾರ್ ನಮ್ಮ ಸೂತ್ರದ ಬೊಂಬೆಯಾಟದ ಬಗ್ಗೆ ಕುತೂಹಲ ತೋರಿದ್ದನ್ನು ಹೇಳಲೆ? ಮುದ್ರಣಾಲಯದಲ್ಲಿ ಕೂತು

ಪ್ರಕಾಶನದ ಪುಸ್ತಕಗಳ ಮುಖಪುಟದ ಚಂದವನ್ನು ಕುರಿತು ಚರ್ಚಿಸುತ್ತಿದ್ದುದನ್ನು ಹೇಳಲೆ?

ನನ್ನದೊಂದು ನಾಟಕ 'ಬಂದರೋ ಬಂದರು' ಪ್ರಕಟಿಸಿದ್ದೆ. ಎ. ಎಂ. ಪ್ರಕಾಶ್ ಮುಖ ಪುಟ ರಚಿಸಿದ್ದರು. 'ರಕ್ಷಾಪುಟದ ಸೌಂದರ್ಯವನ್ನು ನೋಡಿ ಕೈಗೆತ್ತಿಕೊಳ್ಳು ವಂತಿರಬೇಕು. ಇದೇನು ಹೀಗೆ ಮಾಡಿದ್ದೀ?' ಎಂಬ ಆಕ್ಷೇಪ ನಿಸಾರ್‌ದು. ನಾಟಕದ ಪಾತ್ರದ ಒಳಗಿನ ಸ್ವಭಾವವನ್ನು ಆ ಚಿತ್ರ ಹೇಳುತ್ತಿದೆ, ಎಲ್ಲವೂ ನೀವು ಹೇಳುವ ಸುಂದರ ಜಗತ್ತಲ್ಲ. ಬೀದಿ ನಾಟಕ ಯಾವಾಗಲೂ ಮುಖವಾಡವನ್ನು ಕಳಚಿ, ಅಡಗಿಸಿಟ್ಟ ವಿಕೃತಿಯನ್ನೇ ತೋರಿಸುತ್ತದೆ ಎಂಬುದು ನನ್ನ ವಾದ. ವಾದ–ಪ್ರತಿವಾದ ಏನೇ ಇದ್ದರೂ ನಿಸಾರ್‌ರನ್ನು ಒಪ್ಪಿಸುವುದು ಮಾತ್ರ ನನಗೆ ಎಂದೂ ಸಾಧ್ಯವಾಗಿಯೇ ಇಲ್ಲ. 'ಏನೋಮ್ಮ ನಿನ್ನಿಷ್ಟ' ಎಂದು ಗೊಣಗಿ, ಮುಖ ತಿರುಗಿಸಿದಾಗಲೂ ನಿಸಾರ್ ನಮ್ಮನ್ನೆಲ್ಲ ಪ್ರೀತಿಸುವ ಸಂಗಾತಿ ಯಾಗಿಯೇ ಕಾಣುತ್ತಾರೆ. ಚಿಕ್ಕವರಿದ್ದಾಗ ನನ್ನ ಇಬ್ಬರು ಮಕ್ಕಳಿಗೂ ನಿಸಾರ್ ಎಂದರೆ ಬಲು ಮೆಚ್ಚು. ಅವರ 'ನಿತ್ಯೋತ್ಸವ'ದ ಗೀತೆಗಳನ್ನು ಹಾಡುವುದರಲ್ಲೊಂದು ಸಂತೋಷ. ಇಂದಿಗೂ, ನಿಸಾರ್–ಅನಂತಸ್ವಾಮಿ ನಮ್ಮ ಮನೆಗೆ ೧೯೭೮ರಲ್ಲಿ ಒಂದು ಇಳಿ ರಾತ್ರಿಯ ವೇಳೆಯಲ್ಲಿ ಬಂದದ್ದನ್ನು; 'ನಿತ್ಯೋತ್ಸವ' ಧ್ವನಿ ಸುರುಳಿಯನ್ನು ಹೊರತರುವ ಸಿದ್ಧತೆ, ಆರ್ಥಿಕ ಅನನುಕೂಲಗಳ ಬಗ್ಗೆ ಮಾತಾಡಿದ್ದನ್ನು ನಿಸಾರ್ ಈಗಲೂ ನೆನೆಯುತ್ತಾರೆ. ಆ ಕ್ಷಣದ ನಿಸಾರರ ಆತಂಕ, ದುಗುಡ ತುಂಬಿದ ಮುಖವನ್ನು ನಾನು ಮರೆತಿಲ್ಲ.

'ನಿತ್ಯೋತ್ಸವ' ಧ್ವನಿ ಸುರುಳಿಗಾಗಿ ಮರುದಿನವೇ ನನ್ನ ಆಪ್ತಮಿತ್ರರಿದ್ದ ಬ್ಯಾಂಕಿನಲ್ಲಿ ಒಂದಿಷ್ಟು ವಶೀಲಿ ಮಾಡಿ ಸಾಲ ಕೊಡಿಸಿದ್ದೆ. ಕನ್ನಡದ ಮೊಟ್ಟ ಮೊದಲ ಭಾವಗೀತೆಗಳ ಧ್ವನಿ ಸುರುಳಿಗೆ ನನ್ನದೂ ದೇಣಿಗೆ ಉಂಟು ಎಂಬ ಸಮಾಧಾನವಿದೆ ಇಂದಿಗೂ. ನಿಸಾರ್ ಸಹ ಈ ಮಾತನ್ನು ಮರೆತಿಲ್ಲ. ಕೆಲವೊಮ್ಮೆ ಸಾರ್ವಜನಿಕ ವೇದಿಕೆಯ ಮೇಲಿನಿಂದ, ಟಿ.ವಿ.ಯ ಸಂದರ್ಶನದಲ್ಲಿ ಇದನ್ನು ಉಪಯೋಗಿಸಿ ನನ್ನನ್ನು ಸಂಕೋಚಕ್ಕೆ ಈಡುಮಾಡುತ್ತಾರೆ.

* * *

ನಿಸಾರ್ ಅವರು ಒಂದು ಅಭಿಪ್ರಾಯಕ್ಕೆ ಬಂದರೆಂದರೆ ಅದು ಉಡದ ಪಟ್ಟು. ಆ ಅಭಿಪ್ರಾಯ ಬದಲಾಗಲು ಹರ ಸಾಹಸ ಬೇಕು. ೧೯೮೪ರಲ್ಲಿ ಮಂಡ್ಯದಲ್ಲೊಂದು ಸಾಹಿತ್ಯ ಸಮ್ಮೇಳನ. ಸಮ್ಮೇಳನಾಧ್ಯಕ್ಷರು ನಿಸಾರ್ ಅಹಮದ್. ಬೆಂಗಳೂರಿನಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶೂದ್ರ ಶ್ರೀನಿವಾಸ್ ಮೊದಲಾಗಿ ಹಲವರು ಆ ಸಮ್ಮೇಳನಕ್ಕೆ ಬಂದಿದ್ದರು. ಸಮಾರಂಭಕ್ಕೆ ಮೊದಲು ನಡೆದ ಚಹಾಗೋಷ್ಠಿಯ ವೇಳೆ, ಸಾಹಿತ್ಯದ ಪ್ರಸ್ತಾಪ ಬಂದು ಚರ್ಚೆ ಕೊಂಚ ಕಾವೇರಿತ್ತು. 'ಮಹಿಳೆಯರ ಸಾಹಿತ್ಯ ಸಂಖ್ಯೆಯಲ್ಲಿ ಅಧಿಕವಾಗು ತ್ತಿದೆ, ಮೌಲ್ಯದಲ್ಲಲ್ಲ' ಎಂಬ ವಾದವನ್ನು ಮುಂದಿಟ್ಟ ನಿಸಾರ್, 'ಕುವೆಂಪು, ಬೇಂದ್ರೆ ತರಹ ನೀವ್ಯಾರಾದರೂ ಬರೀತಿದೀರಾ?' ಎಂದು ತುಂಬ ನಿಷ್ಠುರವಾಗಿಯೇ ಕೇಳಿದರು.

'ಪುರುಷರಲ್ಲಿ ಎಷ್ಟು ಮಂದಿ ಬೇಂದ್ರೆ, ಕುವೆಂಪು ಎತ್ತರದ ಬರಹಗಾರರಿದ್ದೀರಿ?' ಎಂಬುದು ನನ್ನ ಮರು ಪ್ರಶ್ನೆ. ಇವೆಲ್ಲ ಕೊನೆ ಮಟ್ಟದ ವಾದಗಳು. ಅನುಪಮಾ ನಿರಂಜನರು ನಿಸಾರ್ ಜೊತೆ ಇಂಥದೇ ವಾದವನ್ನು ಎತ್ತಿ, ಒಂದರ್ಥದಲ್ಲಿ ಜಗಳವೇ

ಆಗಿತ್ತಂತೆ. `ಮಧ್ಯಮ ವರ್ಗದ ಸ್ತ್ರೀಯರ ಬದುಕನ್ನು ಮಾತ್ರ ಹೇಳುತ್ತ, ಅಲ್ಲೂ ಬೇಡವಾದ ಅಂಶಗಳನ್ನೇ ವೈಭವಿಸುವ ನಿಮಗೆ, ಶ್ರಮಜೀವಿಗಳ ಬೆವರಿನ ಬದುಕು ಗೊತ್ತೇ ಇಲ್ಲ` ಎಂದ ನಿಸಾರರಿಗೆ ಉತ್ತರವೆಂಬಂತೆ ಅನುಪಮಾ ನಿರಂಜನರು, `ಕೊಳಚೆ ಕೊಂಪೆಯ ದಾನಿಗಳು` ಎಂಬ ಕೃತಿಯನ್ನೇ ರಚಿಸಿ ನಿಸಾರ್‌ಗೆ ಕಳಿಸಿದ್ದರಂತೆ. ಇಷ್ಟೆಲ್ಲ ಚರ್ಚೆಗಳಾದಮೇಲೂ ನಿಸಾರ್ ಆ ದಿನದ ಅಧ್ಯಕ್ಷ ಭಾಷಣದಲ್ಲಿ ಈ ಪ್ರಸ್ತಾಪವನ್ನೇ ಎತ್ತಿ (ಅನುಪಮಾರ ಹೆಸರು ಹೇಳದೆ) 'ಲೇಖಕಿಯೊಬ್ಬರ ಸವಾಲು, ಅನಂತರ ಅವರು ಕೊಟ್ಟ ಕೃತಿಯನ್ನು ಓದಿದಮೇಲೂ ಲೇಖಕಿಯರು ಮೌಲಿಕ ಬರಹಗಳನ್ನು ಬರೆದಿದ್ದಾರೆಂದು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ` ಎಂತಲೇ ಅಭಿಪ್ರಾಯ ಪಟ್ಟರು.

ನನ್ನ ಹಾಗೂ ಅವರ ಚರ್ಚೆ ವಿರಾಮದ ವೇಳೆಯಲ್ಲೂ ಮುಂದುವರಿದೇ ಇತ್ತು. ಈ ಕಿತ್ತಾಟವನ್ನು ನೋಡುತ್ತಿದ್ದ ಗೊರೂರರು ನನಗೆ, `ನೀನು ಸಾಂಸ್ಕೃತಿಕ ಲೋಕದ ಗೂಂಡೀ` ಎಂದಿದ್ದರು. ಮುಂದೆ ಈ ಮಾತನ್ನು `ಶೂದ್ರ` ತಮ್ಮ ಪತ್ರಿಕೆಯಲ್ಲಿ ದಾಖಲಿಸಿಯೂ ಬಿಟ್ಟರು! ಈ ಕಾರಣಗಳಿಂದಾಗಿ ನಿಸಾರ್ ಮಹಿಳಾ ವಿರೋಧಿ ಎನ್ನಲಾರೆ. ಅವರೆಂದೂ ಹಾಗೆ ನಡೆದುಕೊಂಡವರೂ ಅಲ್ಲ; ಬರೆದವರೂ ಅಲ್ಲ.

'...ಸ್ತ್ರೀಪರ ಚಳವಳಿಯೆಂದರೆ ಅದೊಂದು ಅಖಂಡವೂ ಗತಿಶೀಲವೂ ಆದ ಸಂಘಟನೆಯ ತುಂಬು ಸ್ರೋತ. ನಿರಂತರತೆ ಅದರ ಮುಖ್ಯಲಕ್ಷಣ. ಮಹಿಳೆಗೆ ಸ್ವಾತಂತ್ರ್ಯ ನೀಡಿದರೆ ಸಾಲದು; ಆಕೆ ಅದನ್ನು ಸ್ವೀಕರಿಸುವಂಥ, ಉಳಿಸಿಕೊಳ್ಳುವಂಥ ಸಾಮರ್ಥ್ಯವನ್ನು ಪಡೆಯುವಂತೆ ಆಕೆಗೆ ತರಬೇತಿ ನೀಡಬೇಕು...` ಎಂಬ ಅಭಿಪ್ರಾಯ ಅವರ ಅಂಕಣ ಬರಹದಲ್ಲಿ ಮೂಡಿ ಬರುತ್ತದೆ. ಇದರ ಹಿಂದೆ ಇರುವ ಕಳಕಳಿ ಅರ್ಥವಾಗುವಂಥದ್ದು. ಅವರು ಒಂದು ಹಟ ಮಾಡುವ ಮಗು—ಅನ್ನಿಸುತ್ತದೆ, ಒಮ್ಮೊಮ್ಮೆ.

* * *

ನಾನೊಂದು ಲೇಖನಗಳ ಸಂಕಲನವನ್ನು ಹೊರತಂದಿದ್ದೆ. `ಸಂಕುಲ` ಎಂದು ಕರೆದಿದ್ದೆ. ಮುಂದೊಮ್ಮೆ ಲಲಿತ ಕಲೆಗಳನ್ನು ಕುರಿತ ಬರಹಗಳಿಗಾಗಿಯೇ, ` `ಸಂಕುಲ` ಪತ್ರಿಕೆ ಪ್ರಾರಂಭಿಸಿದೆ. `ಸಂಕುಲ` ಎಂದೇಕೆ ಕರೆಯುತ್ತೀ? ಜೀವ ವಿಜ್ಞಾನದ `ಸ್ಪೀಸೀಸ್` (Spicies) ಅಂತ ಆಗುತ್ತೆ, ಅದು ಹೊಂದುತ್ತಾ?` ಎನ್ನುತ್ತಲೇ ಇದ್ದರು. ಆದರೆ ಅವರಿಗೆ 'ಸಂಕುಲ` ಪತ್ರಿಕೆಯ ಬಗ್ಗೆ ಮೆಚ್ಚಿಕೆಯಿತ್ತು. ಕಲೆಗಳ ಬಗ್ಗೆ ಗೌರವವಿದ್ದರೂ ಅವರೂ ಎಲ್ಲ ಸಾಹಿತಿಗಳ ಹಾಗೆ ಸಾಹಿತ್ಯವೇ ಅಂತಿಮ–ಶ್ರೇಷ್ಠ ಎಂಬ ನಿಲವಿನವರು. ಈ ಸಂಬಂಧವಾಗಿ ಆಗಾಗ ಚರ್ಚೆ, ಅಭಿಪ್ರಾಯ ಭೇದ ನಮ್ಮ ನಡುವೆ ಇದ್ದೇ ಇತ್ತು. ಅದೆಂದೂ ನಮ್ಮ ಸ್ನೇಹವನ್ನು ಮೊಟಕು ಮಾಡದೇ ಆರೋಗ್ಯಕರ ಸಂವಾದ–ಮಥನಕ್ಕೆ ಕಾರಣವಾಯಿತೆಂಬುದು ಮುಖ್ಯ.

ನಿಸಾರ್ ಅವರು, ವಿವಿಧ ಕಲಾ ಪ್ರಕಾರಗಳಿಗೂ ಸಾಹಿತ್ಯಕ್ಕೂ ಇರುವ ಅಂತಃ ಸಂಬಂಧ ಅತ್ಯಂತ ಜಟಿಲ, ಸುಲಭಗ್ರಾಹ್ಯವಲ್ಲ ಎಂದು ಭಾವಿಸುವವರು. ನಿಸಾರ್ `ವಿವಿಧ ಕಲಾ ಪ್ರಕಾರಗಳಿಗೂ ಸಾಹಿತ್ಯಕ್ಕೂ ಅಭಿವ್ಯಕ್ತಿ ಕ್ರಮ ಹಾಗೂ ಗ್ರಹಿಕೆಯ ರೀತಿಯಲ್ಲಿ ತನ್ನದೇ

ಆದ ವೈಶಿಷ್ಟ್ಯಗಳಿವೆ' ಎಂದು ಸರಿಯಾಗಿಯೇ ಗ್ರಹಿಸುತ್ತಾರೆ. 'ಗ್ರಹಿಕೆಯಲ್ಲಿ ಶೀಘ್ರತೆ ಸುಗಮತೆಗಳು ನಮ್ಮ ಸಂವೇದನಾ ಸಾಮರ್ಥ್ಯದ ಹಾಗೆಯೇ, ಆಯಾ ಕಲೆಗಳ ಜಾಯಮಾನವನ್ನೂ ಅವಲಂಬಿಸಿರುತ್ತವೆ' ಎಂದು ಭಾವಿಸುತ್ತಾರೆ. 'ಸಂಗೀತ ಇಲ್ಲವೇ ಕವಿತೆ ನಮ್ಮನ್ನು ರಸಸ್ಥಿತಿಗೆ ಏರಿಸುವಷ್ಟು ಬೇಗ ಮತ್ತು ಅನಾಯಾಸವಾಗಿ ಒಂದು ವಾಸ್ತುಶಿಲ್ಪ ಇಲ್ಲವೇ ವರ್ಣಚಿತ್ರ ಎಸಗುವುದು ಅಶಕ್ಯ. ಏಕಕಾಲಕ್ಕೆ ಅವನ್ನು ಗ್ರಹಿಸಿ ರಸಾಸ್ವಾದಿಸುವ ಅವಕಾಶವನ್ನು ಸಾಹಿತ್ಯ ಕಲ್ಪಿಸುತ್ತದೆ. ಆದರೆ ಕಲಾ ಮಾಧ್ಯಮ ಇದನ್ನು ನೆರವೇರಿಸುವುದು ಅಸಂಭವ...' ಎಂಬ ನಿಲವಿಗೆ ಒಮ್ಮೆಲೇ ಬಂದು ಬಿಡುತ್ತಾರೆ. ನಿಸಾರ್ ಅವರ ಇಂಥ ಅಭಿಪ್ರಾಯಗಳು, ಕಲಾಮಾಧ್ಯಮಗಳ ಬಗ್ಗೆ ಬೇರೆಯದೇ ನಿಲವು ತಳೆದಿರುವ ನಮ್ಮಂಥವರಿಗೆ ಸಾಹಿತ್ಯದ ಏಕಮೇವಾದ್ವಿತೀಯವೆಂಬ ಪ್ರತಿಷ್ಠೆ ಎನ್ನಿಸಿಬಿಡಬಹುದು. ಇಂಥ ಅನೇಕ ಸಂಗತಿಗಳು ವಾದ ವೇದಿಕೆಯನ್ನೇ ಸೃಷ್ಟಿಸುತ್ತವೆ. ಆದರೆ ನಿಸಾರ್ ಅವರು ತಮ್ಮ ನಿಲವನ್ನು ಸುಲಭದಲ್ಲಿ ಬಿಟ್ಟು ಕೊಡುವವರಲ್ಲ ಎಂಬುದೂ ಗೊತ್ತು. ನಿಸಾರ್ ಮತ್ತೆ ಮತ್ತೆ ಪ್ರತಿಪಾದಿಸುವ 'ಸಾಹಿತ್ಯ ಕಲೆಗಳ ಸೃಷ್ಟಿಗೆ ಒಂದು ತೆರನಾದ ಅಂತರ್ಮುಖತೆ, ಮಾನಸಿಕ ಏಕಾಂತ ಅತ್ಯಾವಶ್ಯಕ' ಎಂಬುದಾಗಲಿ, 'ಬದುಕನ್ನು ನೋಡುವ ಹೊಸ ದೃಷ್ಟಿ, ನಿಲವುಗಳನ್ನು, ನಮ್ಮ ಜೀವಿತವನ್ನು ಪುನರ್ವಿಮರ್ಶಿಸಿಕೊಂಡು ಮುನ್ನಡೆಯುವ ಚೇತನವನ್ನು ಕಾವ್ಯ ಕಲೆಗಳು ನಮಗೆ ನೀಡುತ್ತವೆ' ಎಂಬ ಸಂಭಾವ್ಯ ನಿಲವಿನಿಂದಾಗಿ ನಿಸಾರ್ ಅವರ ಬಗ್ಗೆ ಇರುವ ಯಾವುದೇ ಭಿನ್ನಾಭಿಪ್ರಾಯ ಕರಗಿ, ಅವರು ನಮಗೆ ಆಪ್ತವಾಗಿಬಿಡುತ್ತಾರೆ. ನಿಸಾರ್ ಅವರು ಅತ್ಯಂತ ಸಹಜವಾದ ಮಾತುಕತೆಯ ನಡುವೆಯೇ ಇಂಥ ಗಂಭೀರವಾದ ವಿಚಾರಗಳನ್ನು ಥಟ್ಟನೆ ಹೇಳಿಬಿಡುತ್ತಾರೆ. ಅದಕ್ಕಾಗಿ ಅವರಿಗೆ ಯಾವ ಪೂರ್ವಸಿದ್ಧತೆಯೂ ಬೇಕಿಲ್ಲ. ಅವರು ಹಾಗೆಯೇ ಬದುಕುವವರು. ಅವರಿಗೆ ಮಾತಿಗಾಗಿ ಮಾತಲ್ಲ, ಮಾತೇ ಒಂದು ಅನುಭವ!

ದೆಹಲಿಯ ನಾಟಕ ಶಾಲೆಯಿಂದ ಪ್ರಸನ್ನ ಬಂದರು. ಅವರ ಬರವಿಗಾಗಿ ಕಾಯುತ್ತಿದ್ದ ಕನ್ನಡ ರಂಗಭೂಮಿ ಮತ್ತೆ ರೆಕ್ಕೆ ಕಟ್ಟಿಕೊಳ್ಳಲು ಸಡಗರಿಸುತ್ತಿತ್ತು. ಆಗ ಪ್ರಸನ್ನ 'ಹುತ್ತವ ಬಡಿದರೆ' ನಾಟಕ ಮಾಡಿದರು. 'ಸಮುದಾಯ' ಹುಟ್ಟುವ ಸಮಯ. ಏನೇನೋ ಯೋಜನೆಗಳು. ಖರ್ಚಿಗೆ ಹಣಬೇಕು. ನೂರು ರೂಪಾಯಿಯಂತೆ ಎಲ್ಲರೂ ಸಂಗ್ರಹಿಸತೊಡಗಿದೆವು. ಆಗ ನಿಸಾರ್ ಅವರಿಂದಲೂ ಆಗಿನ ಕಾಲಕ್ಕೇ ನೂರು ರೂಪಾಯಿ ವಸೂಲು ಮಾಡಿದ್ದೆ. 'ನಾನು ಹಾಗೆಲ್ಲ ಹಣ ಕೊಡೋದಿಲ್ಲ. ನೀನು ಬಂದಿದೀ, ಏನಾದರೂ ಮಾಡ್ತೀ ಅಂತ ನಂಬಿಕೆ ಇದೆ. ಕೆಲಸ ಮಾಡಿದರೆ ಮಾತಿಲ್ಲ. ಇಲ್ಲದೇ ಹೋದರೆ, 'ರಾಜ್ಯೋತ್ಸವ, ಅಣ್ಣಮ್ಮ, ಗಣೇಶ ಅಂತ ವಸೂಲ್ಮಾಡೋ ಹಾಗೆ ಮಾಡಿದೀ' ಅಂತ ನಿನ್ನನ್ನ ಬಜಾರ್‌ನಲ್ಲಿ ನಿಲ್ಲಿಸಿ ಬೈತೀನಿ. ಹಣ ವಾಪಸ್ ಪಡೀತೀನಿ. ಛೆ, ನೀ... ನೇ...ನಮ್ಮ ಇಂಥದೆಲ್ಲ ಕಟ್ ಕೊಂಡು...' ಅಂತ ಸಿಡಿಮಿಡಿ ಮಾಡುತ್ತಲೇ ನೂರು ರೂಪಾಯಿ ಕೊಟ್ಟರು. 'ಹಿಂತಿರುಗಿಸು' ಅಂತ ಎಂದೂ ಕೇಳಲಿಲ್ಲ. 'ಸಮುದಾಯ' ಉಪಯುಕ್ತವಾದ ಕೆಲಸ ಮಾಡಿದೆ ಅಂತ ಅನ್ನಿಸಿರಬೇಕು. ಇದೆಲ್ಲ ಸ್ವಭಾವ ನೋಡಿ ನಸನಸೆ ಮಾಡ್ತಾರೆ ಅಂದುಕೋಬೇಕಿಲ್ಲ. ಪ್ರತಿಯೊಂದೂ ಉಪಯುಕ್ತವಾಗಿ, ಜನಾಭಿಮುಖಿಯಾಗಿ ಹೋಗಬೇಕೇ ವಿನಾ ಯಾರದೋ

ಖುಷಿಗಾಗಿ ಅಲ್ಲ ಎಂಬ ಖಚಿತ ನಿಲವು ಅವರನ್ನು ನಿಷ್ಠುರರಾಗಿ ಮಾಡಿದ್ದುಂಟು. ಅವೆಲ್ಲ ನನಗೆ ಎಂದೂ ಮುಜುಗರ ತಂದಿಲ್ಲ. ಇಂಥ ಪ್ರತಿಯೊಂದು ಸಂದರ್ಭದಲ್ಲೂ ನನಗವರು ಮತ್ತಷ್ಟು ಹತ್ತಿರವೇ ಆದರು.

*   *   *

ಅದು ಬಿ. ವಿ. ಕಾರಂತರ ವಿಜೃಂಭಣೆಯ ಕಾಲ. ಎಲ್ಲೆಲ್ಲೂ ನಾಟಕ ಪ್ರದರ್ಶನದ ಉತ್ಸವ-ಜಾತ್ರೆ. ಆ ದಿನಗಳಲ್ಲೇ ನಿಸಾರ್ ಷೇಕ್ಸ್‌ಪಿಯರ್‌ನನ್ನು ಕನ್ನಡಕ್ಕೆ ತಂದರು. 'ನಟರಂಗ' ರಂಗದ ಮೇಲೆ ತಂದ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಪ್ರಯೋಗದ ಉದ್ದಕ್ಕೂ ಪ್ರತಿ ಸಾಲಿನಲ್ಲೂ ನಿಸಾರ್ ಪ್ರತ್ಯಕ್ಷವಾಗಿದ್ದು ಕುಣಿಯುತ್ತಿದ್ದಾರೆನ್ನಿಸಿತು. ಅದೇನು ಸಂತಸ ತಂದ ನಾಟಕ—ಜೀವಂತ ಸಾಲುಗಳವು! ನಿಸಾರ್ ರಂಗಭೂಮಿಗೆ ಕೊಟ್ಟ ಈ ಬಳುವಳಿ ಕನ್ನಡಿಗರ ಭಾಗ್ಯವೇ ಸರಿ. ಇದಾದ ಬಳಿಕ ಅವರು ಭಾಷಾಂತರಿಸಿದ 'ಒಥೆಲೊ' ದುರಂತ ನಾಟಕ ಸಹ ರಂಗದ ಮೇಲೆ ಯಶಸ್ವಿಯಾಗಿ ವಿಜೃಂಭಿಸಿತು.

*   *   *

ವಿ. ಕೃ. ಗೋಕಾಕರಿಗೆ ನಾನು ಮಾನಸಪುತ್ರಿ. ನನ್ನ-ಗೋಕಾಕರ ಸಂಬಂಧದ ಅನನ್ಯತೆಗೆ ಅಕ್ಷರಗಳಲ್ಲಿ ವಿವರಗಳಿಲ್ಲ. ನನ್ನಷ್ಟೇ, ನಿಸಾರ್ ಕೂಡಾ ಗೋಕಾಕರಿಗೆ ಬೇಕಾದ ಕವಿ. ಗೋಕಾಕರು 'ಭಾರತ ಸಿಂಧುರಶ್ಮಿ' ಮಹಾಕಾವ್ಯ ಬರೆದಿದ್ದರು. ವಾರದಲ್ಲಿ ೨-೩ ದಿನ ಬಿಡುವು ಮಾಡಿಕೊಂಡು ನಾವೆಲ್ಲ ಹೋಗಬೇಕಿತ್ತು. ಅವರ ಮಹಾಕಾವ್ಯದ ವಾಚನ ನಡೆಯುತ್ತಿತ್ತು. ನಾವು ಶ್ರೋತೃಗಳು. ಗೋಕಾಕರು ಅವರದೇ ಆದ ರೀತಿಯಲ್ಲಿ ಗಾಯನ ವಾಚನದಂಥ ರೀತಿಯಲ್ಲಿ ಮಹಾಕಾವ್ಯ ಓದುತ್ತಿದ್ದರು. ನಾನು, ನಿಸಾರ್, ಎಸ್. ಆರ್. ಎಕ್ಕುಂಡಿ, ಆರ್. ಜಿ. ಕುಲಕರ್ಣಿ ಖಾಯಂ ಶ್ರೋತೃಗಳು. ಆಗ-ಈಗ ಇತರರೂ ಸೇರುತ್ತಿದ್ದರು. ನಾವಿದ್ದಷ್ಟು ಹೊತ್ತು ಅರ್ಧ ಗಂಟೆಗೊಮ್ಮೆ ಶಾರದಾ ಗೋಕಾಕರು ಟೀ, ಪಾನಕ ಇತ್ಯಾದಿ ಸರಬರಾಜು ಮಾಡುತ್ತಿದ್ದರು. ಗೋಕಾಕರನ್ನು ತರಲೆ ಪ್ರಶ್ನೆ ಕೇಳಿ ಹಿಂಸೆ ಮಾಡಿದ್ದೂ ಉಂಟು. ನನ್ನ-ನಿಸಾರರ ಕೆಲವು ಪ್ರಶ್ನೆಗಳು, ತರ್ಕಗಳು ಗೋಕಾಕರಿಗೆ ಇರಿಸುಮುರಿಸು ತಂದಾಗ, ಮುಲಾಜಿಲ್ಲದೆ ಮಾತನಾಡಿದ್ದಕ್ಕೆ ನಾವು ಬೀಗಿದ್ದೇ ಬೀಗಿದ್ದು. 'ಭಾರತ ಸಿಂಧುರಶ್ಮಿ' ಓದು ಮುಗಿದ ಮೇಲೊಂದು ದಿನ ನಮ್ಮನ್ನೆಲ್ಲ ಕರೆದು ಪುಷ್ಕಳವಾಗಿ ತಿನ್ನಿಸಿ, ಬೆಳ್ಳಿಯ ಲೋಟದ ಉಡುಗೊರೆ ಕೊಟ್ಟರು. ಗೋಕಾಕ್ ಕಾವ್ಯಕ್ಕೆ ಕಿವಿಯಾಗಿದ್ದಕ್ಕೆ ಈ ರಜತ ಬಹುಮಾನ ಎಂದು ನಗೆಯಾಡಿಕೊಂಡು ನಾನು-ನಿಸಾರ್ ಗೋಕಾಕ್ ದಂಪತಿಗಳನ್ನು ಕೀಟಲೆ ಮಾಡಿದ್ದೆವು. ನಮ್ಮ ಈ ಚೇಷ್ಟೆಗಳಿಗೆಲ್ಲ ಎಕ್ಕುಂಡಿಯವರ ಮುಗುಳುನಗೆಯ ಸಹಕಾರವಂತೂ ಇರುತ್ತಿತ್ತು.

'ಉದಯವಾಣಿ' ದೀಪಾವಳಿ ಸಂಚಿಕೆಗೆ ನಿಸಾರ್ ಗೋಕಾಕರನ್ನು ಸಂದರ್ಶಿಸಿದರು. ನಿಸಾರ್ ಸಂದರ್ಶನ ಮಾಡಲು ಒಪ್ಪುವುದು ಕಷ್ಟ. ಆದರೆ ಒಪ್ಪಿದರೆ ಅದೊಂದು ಅಪರೂಪದ ಮಾತುಕತೆ ಅನ್ನಿಸುವಷ್ಟು ಚಂದ. ಆ ದಿನ ಗೊಕಾಕರೊಂದಿಗೆ ಮನೆಯೆಲ್ಲ ಓಡಾಡಿ ಫೋಟೋಗಳನ್ನು ತೆಗೆಸಿಕೊಂಡಿದ್ದೇನು? ಶಾರದಾ ಗೋಕಾಕರನ್ನು ಕೀಟಲೆ

ಮಾಡಿದ್ದೇನು? ಅವೆಲ್ಲ ಸದಾ ಮನಸ್ಸನ್ನು ಅರಳಿಸುವ ರಸಮಯ ಕ್ಷಣಗಳು. ಆಗೆಲ್ಲ ನಾನು, ನಿಸಾರ್ ಇಬ್ಬರೂ ಜೊತೆಗಿದ್ದೆವೆಂಬುದೇ ಖುಷಿಯ ಸಂಗತಿ.

* * *

ನಿಸಾರ್ ಅವರು ಒಮ್ಮೆ ವಿಧ್ಯಾರ್ಥಿಯೊಬ್ಬನಿಗೆ ಭಾಷೆಯ ಬಗ್ಗೆ ತಿಳಿ ಹೇಳಿದ ಪ್ರಸಂಗವೊಂದನ್ನು ನನ್ನ ಬಂಧುವೊಬ್ಬರು ವಿವರಿಸಿದ್ದನ್ನು ಇಲ್ಲಿ ನೆನೆಯಬಯಸುತ್ತೇನೆ. ಅದು ಅರುವತ್ತರ ಪ್ರಾರಂಭಿಕ ದಶಕದ ಕಾಲವಿರಬೇಕು. ಚಿತ್ರದುರ್ಗದಲ್ಲಿ ವಾಸ್ತವ್ಯ. ಅವನೊಬ್ಬ ತರುಣ ವಿದ್ಯಾರ್ಥಿ, ಹೆಸರು ಮೆಹರ್ ಅಲಿ. ಗೋವೆಯ ಕಡೆಯವನು. ಅವನ ಇಂಗ್ಲಿಷ್ ಕೂಡಾ ಗೋವನ್ ಇಂಗ್ಲಿಷ್. ಆತ ಆಗ ಈಗ ಚುಟುಕು ಪದ್ಯಗಳನ್ನು ಬರೆಯುತ್ತಿದ್ದನಂತೆ. ಒಮ್ಮೆ .ತಾನು ಬರೆದ ಒಂದು ಸಣ್ಣ ಪದ್ಯವನ್ನು ನಿಸಾರ್ ಮೇಷ್ಟ್ರ ಮುಂದಿಟ್ಟ. ಆತ ಬಳಸಿದ 'ಮನ್ಮಥಿನಿ' ಎಂಬ ಪದ ನಿಸಾರ್‌ಗೆ ಹಿಡಿಸಲಿಲ್ಲ. ಅದು ರತಿ ಎಂಬರ್ಥದಲ್ಲಿ ಒಂದು ಅಣಕಿಗಾಗಿ ಬಳಸಿದ ಪದವಾಗಿತ್ತು. ನಿಸಾರ್ 'ಇದು ಸಾಧುವಲ್ಲ, ಸ್ವೀಕೃತವೂ ಅಲ್ಲ' ಅಂದುಬಿಟ್ಟರು. ಹುಡುಗನ ಉತ್ಸಾಹ ಗಾಳಿ ಬಿಟ್ಟ ಬೆಲೂನಿನಂತಾಗಿ ಮುಖ ಕೆಳಗೆ ಹಾಕಿ ನಿಂತ. ನಿಸಾರ್ ಆ ಹುಡುಗನಿಗೆ ಸಮಾಧಾನ ಹೇಳಿ, 'ಕನ್ನಡ ಸಾಹಿತ್ಯ ದಲ್ಲಿ ಕುವೆಂಪು, ಪು.ತಿ.ನ., ಬೇಂದ್ರೆಯಂತಹ ಮಹಾ ಕವಿಗಳಿದ್ದಾರೆ. ಅಂಥವರ ಮಾರ್ಗ ದಲ್ಲಿ ನಡೆಯಬೇಕು. ಅವರನ್ನ ಓದಿ, ಅರಗಿಸಿಕೊಂಡು ಅನಂತರ ನಮ್ಮದೇ ಆದ ಶೈಲಿಯನ್ನು ರೂಪಿಸಿಕೊಳ್ಳಬೇಕು. ಒಮ್ಮೆಲೇ ಹೀಗೆ ಪದಗಳನ್ನು ರೂಪಿಸಿ ಬಳಸುವುದರಲ್ಲಿ ತನ್ನತನ ಇರೋದಿಲ್ಲ, ಆಟವಾಗುತ್ತೆ. ದೊಡ್ಡವರು ವಿನಾಕಾರಣ ಇಂಥ ಪದ ಬಳಕೆ ಆದರೆ ಒಪ್ಪುವುದಿಲ್ಲ. ಎಲ್ಲರಿಗೂ ಒಪ್ಪಾಗುವಂಥ ಶೈಲಿಯನ್ನು ರೂಢಿಸಿಕೊಂಡು ಅನಂತರ ಸಂಭಾವ್ಯವೆನ್ನಿಸುವ ಹೊಸ ಪದಗಳನ್ನು ಟಂಕಿಸಿದರೆ ಮಾನ್ಯವಾಗುತ್ತೆ. ಜೀವನಾನುಭವ, ಮಾಗುವಿಕೆ, ವಿನಮ್ರತೆ ಇದ್ದರೆ ಎಲ್ಲವೂ ದಕ್ಕುತ್ತೆ.' ಎಂದು ಬುದ್ಧಿವಾದ ಹೇಳಿದ್ದರಂತೆ. ನಿಸಾರ್ ಹೇಳಿದಂತೆ, ತಾವೂ ನಡೆದುಕೊಂಡರು. ಕನ್ನಡ ಸಾಹಿತ್ಯದಲ್ಲಿ ನಿಸಾರ್ ಬಳಸಿಕೊಂಡ ಹಾಗೆ ಪದಗಳನ್ನು ಬೇರೆ ಯಾರಾದರೂ ಬಳಸಿದ್ದನ್ನು ಕಾಣೆ. ಹೊಸದಾದ, ಕೆಲವೊಮ್ಮೆ ಅನ್ಯಭಾಷಾ ಪದಗಳಿಗೂ ಪ್ರತ್ಯಯಗಳನ್ನು ಸೇರಿಸಿ ಕನ್ನಡದ ಜಾಯಮಾನಕ್ಕೆ ಒಗ್ಗಿಸುವ ಕಸುಬುದಾರಿಕೆ ಅವರದು. ಅವರಿಗೆ ಅವರೇ ಸಾಟಿ ಎನ್ನುವಷ್ಟು ಚಂದವಾಗಿ ಬಳಸಿ ಬಿಡುತ್ತಾರೆ ಪದಗಳನ್ನು. ಅವು ಕೇಳಲೊಂದು ಚಂದ, ನಿತ್ಯ ನೂತನ, ಒಮ್ಮೊಮ್ಮೆ 'ಅರೆ! ಭೇಷ್!' ಎಂಬ ಉದ್ಗಾರ ತೆಗೆಯುವಂಥವು.

ಇತ್ತೀಚೆಗೆ ಅವರಿಗೆ 'ಮಾಸ್ತಿ ಪ್ರಶಸ್ತಿ' ಬಂದಿತು. ಸಮಾರಂಭದಲ್ಲಿ ಮಾತಾಡುತ್ತಾ, 'ಹಿರಿಯರಿಗೆ, ಅವರ ಅಜಸ್ರ ಪ್ರೀತಿಗೆ ನಾನು ಋಣಿ' ಅಂದರು. 'ಅಜಸ್ರ' ಎಂದರೆ ಯಾವಾಗಲೂ ಎಂಬ ಅರ್ಥ ಗೊತ್ತು. ಆದರೆ ಹೀಗೆ ಯಾರೂ ಬಳಸಿರಲಿಲ್ಲ. ಆ ಕ್ಷಣಕ್ಕೆ ಅಲ್ಲಿಯ ಸಂದರ್ಭ, ಹಿರಿಯರ ವಾತ್ಸಲ್ಯ ತುಂಬಿದ ಮಾತಿಗೆ ಉತ್ತರವಾಗಿ ಈ ಪದ ಬಳಸಿದ ನಿಸಾರ್ ಅವರ ಜಾಣ್ಮೆ ನೋಡಿ ಖುಷಿ ಎನ್ನಿಸಿತು. ಅವರ ಈ ಯಾವ ಪದ ಬಳಕೆಯೂ ಪೂರ್ವ ನಿಯೋಜಿತವಲ್ಲ, ತಂತಾನೇ ಉರುಳಿಬಿಡುತ್ತವೆ. ಅವೆಂಥ ಚಂದವಾದ ಪದಗಳು

ಅನ್ನಿಸುತ್ತಿರುತ್ತವೆ. ಹೀಗಾಗಿ, ನಿಸಾರ್ ಮಾತಾಡಿದರೆ, ಬರೆದರೆ ನನ್ನಂಥವರ ಕಿವಿ–ಕಣ್ಣುಗಳು ಈ ಹೊಸ ಪದಗಳಿಗಾಗಿ ಸದಾ ಎಚ್ಚರವಾಗಿರುತ್ತವೆ, ಖುಷಿ ಪಡುತ್ತವೆ. ನಿಸಾರ್ ಅವರ ಪದಗಳೊಂದಿಗೆ ಜೂಟಾಟವೇ ರಸಿಕರಿಗೆ ಒಂದು ಅನಿರ್ವಚನೀಯ ಅನುಭವ.

* * *

'ಉದಯವಾಣಿ'ಗೆ, 'ತುಷಾರ'ಕ್ಕೆ ಅವರು ಬರೆಯಲಿ ಬಿಡಲಿ, ವಿಶೇಷ ಸಂಚಿಕೆಗಳನ್ನು ತಪ್ಪದೆ ಅವರಿದ್ದಲ್ಲಿಗೆ ಒಯ್ದು ತಲಪಿಸುತ್ತಿದ್ದೆ. ಅವರ ಪದ್ಯ ಇಲ್ಲದ ಸಂಚಿಕೆ ಬಂದಾಗ 'ಕ್ಷಮಿಸಮ್ಮ, ನೀನು ಕೇಳಿದರೂ ಬರೆಯಲಾಗಲಿಲ್ಲ' ಎಂದು ಮತ್ತೆ ಮತ್ತೆ ಸಂಕೋಚದಿಂದ ಹೇಳುತ್ತಿದ್ದರು.

ಅ. ರಾ. ಮಿತ್ರರಿಂದ ನಿಸಾರರ ಒಂದು ಸಂದರ್ಶನವನ್ನು 'ಉದಯವಾಣಿ'ಗೆ ಮಾಡಿಸಿದ್ದೆ. ಅವರು ಕರ್ನಾಟಕ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷ(೧೯೮೪)ರಾದ ಸಂದರ್ಭ. ಅದೊಂದು ಅಪರೂಪದ ಸಂವಾದ. ನಿಸಾರ್‌ರನ್ನು ಸಂದರ್ಶಿಸಿದರೂ ಅವರು ಸಂದರ್ಶಿತ ರಾದರೂ ಅದು ಎಂದೂ ಕೇವಲ ಪ್ರಶ್ನೋತ್ತರ ಆಗುವುದಿಲ್ಲ. ಅದೊಂದು ರೀತಿಯ ವಿಚಾರಗಳ ಮಂಥನವೇ! ಹೊರಡುವುದು ನವನೀತವೇ!

* * *

ನಿಸಾರ್, ನಾನು ಎಲ್ಲೇ ಕೆಲಸ ಮಾಡುವಾಗಲೂ ತಮ್ಮದೇ ಆದ ರೀತಿಯಲ್ಲಿ ಸಹಕರಿಸಿದರು. 'ಮಲ್ಲಿಗೆ' ಪತ್ರಿಕೆಗೂ ಪದ್ಯ ಕೊಟ್ಟರು, 'ಉದಯವಾಣಿ'ಗೂ ಇಲ್ಲ ಎನ್ನದೆ ಬರೆದರು. 'ಉದಯವಾಣಿ'ಯಲ್ಲಿ ಅಧಿಕೃತವಾಗಿ ಕೆಲಸಕ್ಕೆ ಸೇರುವ ಮೊದಲಿನಿಂದಲೂ ಅಲ್ಲಿ ಕೆಲಸ ಮಾಡುತ್ತಿದ್ದ ನನ್ನ ತಮ್ಮ ಗುರುರಾಜನ ಸಲುವಾಗಿ ಅವರ ದೀಪಾವಳಿ ಸಂಚಿಕೆಗಾಗಿ ಕೆಲಸ ಮಾಡುತ್ತಿದ್ದೆ. ಹಾಗೆ ನಾನು ಕೆಲಸ ಮಾಡಿದ ಒಂದು ಸಂಚಿಕೆ(೧೯೭೧) ಗಾಗಿ ನಿಸಾರ್ ಬರೆದ ಒಂದು ಪದ್ಯ 'ಭಾಷೆಗೆ ಭಾಷೆ ಕೊಡು'. ಅದು ಅನಂತರ ಅವರ 'ನಾನೆಂಬ ಪರಕೀಯ' (೧೯೭೨) ಕವನ ಸಂಗ್ರಹದಲ್ಲಿ ಸೇರ್ಪಡೆಗೊಂಡಿತು. ಆ ಪದ್ಯ ಅವರ ಪ್ರಾತಿನಿಧಿಕ ಕವಿತೆಯೇನಲ್ಲ. ಆದರೆ ಆ ದಿನಗಳಲ್ಲಿ ಆ ಪದ್ಯ ನನ್ನ ಮನಸ್ಸನ್ನು ಗೆದ್ದು ಕೊಂಡಿತ್ತು. ಒಂದಲ್ಲ ಹತ್ತು ಬಾರಿ ಓದಿದ್ದೆ. ನಾಲ್ಕು ಭಾಗಗಳಲ್ಲಿ ಮೂಡಿ ಬಂದ ಪದ್ಯ. ಅದು ಕಳೆಯುವ, ಕೂಡುವ, ತೊಡುವ, ವಾಗ್ದಾನ ಮಾಡುವ ಸಂವಿಧಾನ. ಒಂದು ರೀತಿಯಲ್ಲಿ ಶಬ್ದ ಚಮತ್ಕಾರ ತುಂಬಿದ ಪದ್ಯ. ಆದರೂ ಅದರೊಳಗಿನ ಆಶಯ, ಪದ್ಯ ಕಟ್ಟುವ ಬಗೆ ಇಷ್ಟವಾಗಿತ್ತು. ಥಟ್ಟನೆ ಅಡಿಗರ 'ಪ್ರಾರ್ಥನೆ' ಪದ್ಯವನ್ನು ನೆನಪಿಸುವಂತಿತ್ತು. ಭಾಷೆಯೊಂದಿಗೆ ಸೆಣಸಾಡುತ್ತ ತನ್ನತನ, ತನ್ನದೇ ಶೈಲಿ, ತನ್ನದೇ ಭಾವವನ್ನು ಕಟ್ಟಿಕೊಡಲು ಹೊಸ ಭಾಷೆಗಾಗಿ ತಡಕಾಡುವ ಬಗೆಯನ್ನು ಹೇಳುತ್ತಿತ್ತು ಆ ಪದ್ಯ. ಭಾವ–ಭಾಷೆಗಾಗಿ ಹಪಹಪಿಸುವ ಕವಿಯ ಹುಡುಕಾಟವದು:

'...ಭಾವದ ಮಟ್ಟದಲ್ಲೇ ಸದೇಹಿಸುವ ದೇವಿಪಟ್ಟದ ಮೂದೇವಿಯು,
ಸದಾ ಶರಾಬಿಸಿ ಮದಿಸಿದ ಶಹಜಾದಿಯು, ತಳ್ಳು ಹಾದಿಗೆ—ಬೆವರುಗಳ್ಳಿಯು—

ಹುಲುಗಬ್ಬಿಗರ ಉಸಿರು ಕಟ್ಟಿಸುವ ಖಾಸಗೀ ಅಗ್ರಹಾರಗಳಿಂದ
ಕ್ಲೀನರ್ ಬಾಷಾ, ಮೆಕ್ಯಾನಿಕ್ ಜೋಸೆಫರ ಬಳಿಗೆ...'

ಎಂಬ ಸಾಲುಗಳ ಹಿಂದೆ, ವೈಭವೀಕರಣವನ್ನು ಬಿಟ್ಟು ಶ್ರಮಜೀವಿಗಳ ಹತ್ತಿರ ಹೋಗಬೇಕೆಂಬ ಅಂತರಾಳದ ಭಾವಕ್ಕೆ ಅದಾಗಲೇ ಇರುವ ಚೌಕಟ್ಟನ್ನು ದಾಟಿ ಅಭಿವ್ಯಕ್ತಿ ಕೊಡಬೇಕೆಂಬ ಕವಿಯ ತುಡಿತವಿತ್ತು. ಮುಂದಿನ ಭಾಗದಲ್ಲಿ ಚಿಂತನೆ ಅಥವಾ ಭಾವ ಆಕಾರ ತಳೆಯುವುದೇ ಭಾಷೆಯಲ್ಲಿ. ಅದು 'ಉಸಿರು ತಂತಾನೆ ಶರೀರಿಸಿಕೊಳ್ಳುವಂತೆ' ಇರುತ್ತದೆ. ಅದು ಆಳದಲ್ಲಿರುವ ನಿಕ್ಷೇಪ, ಪೊಳ್ಳಾಗದ ಹಾಗೆ ಭಾಷೆ–ಭಾವಗಳ ಸಮತೋಲವನ್ನು ಸಾಧಿಸಬೇಕೆಂಬ ಆಶಯವನ್ನಿಡುತ್ತ ಭಾಷೆಯ ಅನನ್ಯತೆಯು 'ಸ್ವಸ್ವಭಾವದ ಮಾವು ಹಾಗಲದೊಂದಿಗೆ ಸಂಭವಿಸ'ಬೇಕೆನ್ನುತ್ತಾರೆ.

ಮುಂದುವರೆದು ಭಾಷೆಗೆ ಒಂದು ಪರಂಪರೆ ಇದೆ ಎಂದು ವ್ಯಾಸ, ಪಂಪ, ರನ್ನ, ಹರಿಹರ, ಮುದ್ದಣ, ನವೋದಯ, ನವ್ಯದವರೆಗೆ ಹಾದುಬಂದ ದಾರಿಯನ್ನು ಗುರುತಿಸುತ್ತ, ಅಲ್ಲಿಯ ಒಳ್ಳೆಯದನ್ನು ಮಾತ್ರ ಅರಗಿಸಿಕೊಳ್ಳುತ್ತ ಬುರುಗನ್ನು ಬಿಡಿಸಿಕೊಂಡು ಹೊಸದನ್ನು ಕಟ್ಟುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಅನಂತರ 'ಭಾಷೆಗೆ ಭಾಷೆ ಕೊಡು'ವ ಸಂಭ್ರಮದಲ್ಲಿ ರತಿ ಭಾವಕ್ಕೆ ಬರುತ್ತ:

'...ಮುದ್ದು ಮಾತಲ್ಲೇ ಮೈ
ದ್ರವಿಸಿದರೆ ಸಾಲದು; ಭಗಿಸುವೆ ನಿನ್ನ ನಗಿಸುವೆ ಸ
ತಾಯಿಸುವೆ ಸಾಕಪ್ಪ ಸಾಕು ನರಳಿಸುವೆ ಗಂಡಾಗಿ ಅಪ್ಪ
ಳಿಸುವೆ ಕಾಡ, ಬೇಡ ಎನ್ನಿಸಿ ಮುಗಿಸುವೆನೆಂದು...'

ಎನ್ನುತ್ತ—

'...ಆನುವಂಶಿಕತನದ ಅನನ್ಯ ವಂಶವಾಹೀ ಜೇನು
ಹೂಡು; ಕುದುರಿಸು ಪ್ರಾಗ್ಭಾವವ; ಟಾರ್ಗೆಟ್ಟಿಸು; ತಟ್ಟು;
ಅವಳಲ್ಲಿ ನೀನೇ ಮರುಹುಟ್ಟು; ಭಾಷೆಗೆ ಕೊಡು ಭಾಷೆಯ...'

ಎಂಬಲ್ಲಿಗೆ ಸಂವಹನಕ್ಕೆ ಬೇಕಾದ ಭಾಷೆಗಾಗಿ ಹುಡುಕುವ ಕವಿ ಮನಸ್ಸಿನ ಕಸರತ್ತು ಸಾಗಿ ಬರುತ್ತದೆ.

'ಉದಯವಾಣಿ'ಯಲ್ಲಿ ಈ ಪದ್ಯ (೧೯೭೧) ಪ್ರಕಟವಾದಾಗ ನಮಗೆಲ್ಲ ಸುಗ್ಗಿ. ಅಲ್ಲಿಯ ಶಬ್ದವನ್ನು, ರೂಪಕಗಳನ್ನು, ಆ ಭಾಷೆಯ ಚಮತ್ಕಾರದ ಜೊತೆ ಮತ್ತೆ ಮತ್ತೆ ಓದಿದ್ದೇ ಓದಿದ್ದು... ಅದಕ್ಕೊಂದು ವಿಶೇಷ ಲಯ ಸೇರಿಸಿ ಕೈ ತಟ್ಟಿ ಕುಣಿಯುತ್ತ ಹಿಗ್ಗಿದ್ದೇ ಹಿಗ್ಗಿದ್ದು. ಹಾಗೆ ನೋಡಿದರೆ, ಇದೇನು ನಿಸಾರರ ಶ್ರೇಷ್ಠ ಪದ್ಯವಲ್ಲ. ಆ ದಿನಗಳಲ್ಲಿ ಇಂಥ ಲಯ ಶಬ್ದಗಳೊಂದಿಗಿನ ಜೂಟಾಟ ಎಲ್ಲ ಕಡೆ ನಡೆದಿತ್ತು. ಓದುವವರಿಗೂ ಅದೊಂದು ಖುಷಿಯ ಸಂಗತಿಯಾಗಿತ್ತು. ಏನೇನೋ ಹೋಲಿಕೆ, ಗುರುತಿಸುವಿಕೆಯ ಸೂಕ್ಷ್ಮಗಳೂ ನಡೆಯುತ್ತಿದ್ದವು. ನಿಸಾರ್ ಇಲ್ಲಿಗೇ ನಿಂತವರಲ್ಲ. ಅವರು ಏರಿದ ಎತ್ತರ ಬೇರೆ, ಅವರಿಗೆ ನಿಲುಕಿದ ಕಾವ್ಯ ಕನ್ಯೆಯೇ ಬೇರೆ... ಬಹಳಷ್ಟು ಬೆಳೆದು ನಿಂತರು ನಿಸಾರ್. ಅವರದೇ ಆದ

ತುಂಟತನ, ಛೇಡಿಕೆಯ ನಡುವೆಯೂ 'ನಿಸಾರ್ ಬೇಕು' ಬೇಕೆಂಬಂತೆ ಬೆಳೆದರು.

* * *

ಕವಿಗಳಿಗೆ ಕಣ್ಣುಗಳ ಮೇಲೆ ಬಲು ಪ್ರೀತಿ. ಗೆಲವು ಉತ್ಸಾಹ ನಿಶಿತತೆಗಳನ್ನು ತುಂಬಿಕೊಂಡ ಆಕರ್ಷಕ ಕಣ್ಣುಗಳನ್ನು ಕಂಡಾಗೆಲ್ಲ, 'ಇವೇಕೆ ನನ್ನ ಕಾವ್ಯಕ್ಕೆ ಸ್ಫೂರ್ತಿಯಾಗ ಬಾರದು?' ಅಂದು ಕೊಂಡದ್ದರಲ್ಲಿ ದೋಷವೇನಿಲ್ಲ. ಆದರೆ, ಕಾಲಗರ್ಭದಲ್ಲಿ ಆ ಕಣ್ಣುಗಳೂ ಸೊರಗಿ ಜೀವರಾಹಿತ್ಯ ಸ್ಥಿತಿಗೂ ಹೋಗಿರಬಹುದು. ಹೀಗಿದ್ದರೂ ಅವುಗಳ ಸ್ಫೂರ್ತಿಯಿಂದ ಹೊರಟ ಪದಗಳಿಗೆ, ಉಂಟಾದ ಪದ್ಯಗಳಿಗೆ ಇಂದಿಗೂ ಅದೇ ಜೀವಂತಿಕೆ, ಅದೇ ಲವಲವಿಕೆ ಉಳಿದಿದೆ. ನಿಸಾರರಂಥ ಕವಿಗಳು ನಶ್ವರವನ್ನೂ ಶಾಶ್ವತಗೊಳಿಸುವ ಕಲೆಗಾರರು ಎಂಬುದೇ ಮುಖ್ಯ.

ನಿಸಾರ್ ಬರೆದ ಒಂದು ಪದ್ಯ ಒಮ್ಮೆ ನನ್ನನ್ನು ಕೆರಳಿಸಿತ್ತು. ಸೆರಗು ಕಟ್ಟಿ ಜಗಳ ಮಾಡಲೆಂದೇ ಮುಖಾಮುಖಿಯಾದೆ. 'ಏನ್ರೀ ಹೀಗೆಲ್ಲ ಪದ್ಯ ಬರೆಯೋದ?'

'ಇಲ್ಲಪ್ಪ... ಅದು ಹಾಗೆ ಅರ್ಥವಲ್ಲ. ಹೀಗೆ...'

—ಬಡ ಪೆಟ್ಟಿಗೆ ಬಗೆ ಹರಿದಿರಲಿಲ್ಲ ಆ ಕದನ.

ಇತ್ತೀಚೆಗೆ, ಒಂದು ಸಭೆಯಲ್ಲಿ ಆ ಗುಟ್ಟನ್ನೂ ಹೊರ ಹಾಕಿ ಒಳಗೊಳಗೇ ನಕ್ಕಿದ್ದರು ನಿಸಾರ್. ಆದರೆ ಅವೆಲ್ಲ ನಿಮಿತ್ತಗಳು. ಕಾರ್ಯ–ಕಾರಣ ಸಂಬಂಧವೇನೇ ಇರಲಿ, ಹಾಗೆ ಹುಟ್ಟಿದ ಕವಿತೆಯೂ ಎಲ್ಲ ಕಾಲದಲ್ಲೂ ಹೊಸ ಹೊಸ ಅರ್ಥಗಳನ್ನು ಮೈದುಂಬಿಕೊಳ್ಳುತ್ತಾ ಒಂದು ಕಲಾಕೃತಿಯಾಗಿ ಉಳಿದುಬಿಡುವುದರಲ್ಲೇ ಇರುವುದು ವಿಶೇಷ. ಅಂಥ ಕುಶಲತೆ, ಶಿಲ್ಪಚಾತುರ್ಯದ ಕವಿ ನಿಸಾರ್. ಆದ್ದರಿಂದಲೇ ಅವರ ಕವಿತೆಗಳಲ್ಲಿ ಸಾಂದರ್ಭಿಕವೂ ಸಾರ್ವತ್ರಿಕ ಸತ್ಯವನ್ನು ತುಂಬಿಕೊಂಡು ಸಂಭ್ರಮಿಸಿ ಬಿಡುತ್ತದೆ!

* * *

ನನ್ನ ಎರಡನೆಯ ಮಗನ ಮದುವೆ. ನಿಸಾರ್ ಬಂದರು. ಆ ದಿನ ತುಂಬಿದ ಗದ್ದಲದಲ್ಲಿ ನನಗೆ ಬಂದ ಮುಖ್ಯರನ್ನೆಲ್ಲ ಸರಿಯಾಗಿ ಮಾತಾಡಿಸಲೂ ಆಗುತ್ತಿಲ್ಲ. 'ನೀನು ಯೋಚಿಸಬೇಡ, ನಾನೊಂದಿಷ್ಟು ಭಾರ ಕಡಿಮೆ ಮಾಡುವೆ' ಎಂದ ನಿಸಾರ್, ನಿಜಕ್ಕೂ ಕೆಲವರನ್ನು ಪ್ರೀತಿಯಿಂದ ಮಾತಾಡಿಸಿ ನಿರ್ವಹಿಸಿದ್ದರು. ಅದರಲ್ಲಿ ಮುಖ್ಯವಾದವರು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್. ಆಕೆಗೆ ನಿಸಾರರ ಮಾತು, ವಿಶ್ವಾಸದ ನುಡಿ ಎಷ್ಟು ಇಷ್ಟವಾಯಿತೆಂದರೆ, ನಾನು ಆಕೆಯನ್ನು ವಿಚಾರಿಸಿಕೊಳ್ಳುವುದು ತಡವಾದರೂ ಲಕ್ಷಿಸದೇ ಬಹಳ ಸಮಯ ನಿಸಾರರ ಜೊತೆಗೇ ಹರಟುತ್ತ ಊಟ ಮುಗಿಸಿದ್ದರು. ಅನಂತರವೂ ಪಾರ್ವತಮ್ಮನವರು ನಿಸಾರ್ ಬಗ್ಗೆ ತುಂಬ ಗೌರವಾದರಗಳಿಂದ ಮಾತನಾಡುತ್ತಿದ್ದರು. ನಿಸಾರ್ ಅವರು ರಾಜ್‌ಕುಮಾರ್ ಅವರ ಚಿತ್ರಗಳ ನೂರನೆಯ ದಿನದ ಸಮಾರಂಭದ ಅತಿಥಿಯಾಗಿ ಬಂದು ಸೊಗಸಾಗಿ ಮಾತಾಡಿದ್ದರು. ರಾಜ್ ಅವರ ಪ್ರೀತಿಯ ಗೆಳೆಯನೇ ಆಗಿಬಿಟ್ಟರು. ಅವರ ಮನೆಗೆ ಇವರು, ಇವರ ಮನೆಗೆ ಅವರು ಬಂದು ಹೋಗುವ, ಬಗೆ

ಬಗೆಯ ಬಾಡೂಟದ ವಿನಿಮಯ ಇತ್ಯಾದಿಯಷ್ಟು ಹತ್ತಿರವಾದರು. ನಿಸಾರ್ ಅನಾರೋಗ್ಯ ದಿಂದ ಮಲಗಿದಾಗ, ರಾಜ್ ಹೋಗಿ ಸಾಂತ್ವನ ಹೇಳುವವರೆಗೆ ಸ್ನೇಹ ಬೆಳೆಯಿತು. ನಿಸಾರರ ತಮಾಷೆಯ ಮಾತುಗಳು, ಪದ್ಯ ಓದುವ ಬಗೆ ರಾಜಕುಮಾರ್‌ಗೆ ಖುಷಿ ತರುತ್ತಿದ್ದವು. ನಿಸಾರ್ ನಿಜಕ್ಕೂ ರಾಜ್ ನಿಧನದಿಂದ ಬಹಳಷ್ಟನ್ನು ಕಳೆದುಕೊಂಡಿದ್ದಾರೆ. ಆ ವ್ಯಥೆ ಅವರ ಮಾತು–ಮುಖ ಭಾವದಲ್ಲಿ ಕಾಣುತ್ತದೆ. ನಿರ್ವ್ಯಾಜ ಸ್ನೇಹವೇ ಹಾಗೆ.

* * *

ನಿಸಾರ್ ಆಗ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು. ಅವರ ಎಲ್ಲ ಕೆಲಸಗಳಿಗೂ ಇಲ್ಲಿ ಕಡೆಯಿಂದ ಬೆಂಬಲ ಸಿಕ್ಕಿತೆನ್ನಲಾರೆ. ಆಗಾಗ ನಿಸಾರ್ ಖಿನ್ನರಾಗುತ್ತಿದ್ದರು. ಕನಸುಗಳು ಸಾಕಾರಗೊಳ್ಳಬೇಕಾದರೆ ಹತ್ತು ಜೋಡಿ ಕೈಗಳು ಸಹಕರಿಸಬೇಕು, ಆದರೆ ಹಾಗಾಗಲಿಲ್ಲ. ಅವರ ಮಹತ್ವದ ಯೋಜನೆಗಳು ಕೆಲವು ಕಾರ್ಯಗತಗೊಳ್ಳಲಿಲ್ಲ. ನಿಸಾರ್ ತಾನು ಅಂದು ಕೊಂಡದ್ದನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗದೇ ಹೋದರೆ ಒಳಗೇ ಕುದ್ದುಕೊಳ್ಳುವ ಸ್ವಭಾವದವರು. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆಯ ಅವಧಿಯಲ್ಲಿ ಇಂಥ ನೋವುಗಳು ಬಹಳಷ್ಟು ಎದುರಾದವು. ಅದೇ ಅವಧಿಯಲ್ಲಿ ಗೋಕಾಕ್ ಚಳವಳಿಯ ಭರಾಟೆ ಪ್ರಾರಂಭ ವಾಯಿತು. ಅಕಾಡೆಮಿಯ ಅಧ್ಯಕ್ಷರಾಗಿ ಸರ್ಕಾರವನ್ನೇ ವಿರೋಧಿಸಿ ನಿಲ್ಲುವುದು ಸರಳವಾದ ಮಾತಾಗಿರಲಿಲ್ಲ. ತಟಸ್ಥವಾಗಿಯೂ ಇರುವಂತಿಲ್ಲ. ಗುಂಡೂರಾಯರ ಸರ್ಕಾರ ಸಾಹಿತಿಯ ಇಕ್ಕಟ್ಟನ್ನು, ಭಾಷೆಯ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದೂ ಸಾಧ್ಯವಿರಲಿಲ್ಲ. ಆದರೂ ನಿಸಾರ್ ಚಳವಳಿಗೆ ಬಂದು ಭಾಗವಹಿಸಿದರು. ಅದು ಅವರ ಕನ್ನಡ ಪ್ರೀತಿ. ಅಧಿಕಾರಕ್ಕಾಗಿ ಹಪಹಪಿಸಿ ಒಪ್ಪಂದ ಮಾಡಿಕೊಳ್ಳಲಿಲ್ಲ. ಅವರ ಅವಧಿಯಲ್ಲಿ 'ಸಾಲು ದೀಪಗಳು' ಕೃತಿಯ ಯೋಜನೆಯನ್ನು ಹಾಕಿದರು. ಮಹತ್ವಾಕಾಂಕ್ಷೆಯ ಅದು ಸಕಾಲದಲ್ಲಿ ಪೂರ್ತಿಯಾಗಲಿಲ್ಲ. ಅನಂತರ ಜಿ.ಎಸ್.ಎಸ್. ಅಧ್ಯಕ್ಷತೆಯ ಅವಧಿಯಲ್ಲಿ ಯೋಜನೆ ಪೂರ್ತಿಯಾಯಿತು. ಆದರೆ 'ಸಾಲು ದೀಪಗಳು' ಬಗ್ಗೆ ನಿಸಾರ್ ಕಂಡ ಕನಸು, ಪ್ರಾರಂಭಿಸಿದ ಕೆಲಸ ಒಂದು ದಿವ್ಯವೇ ಸರಿ.

ರಾಮಕೃಷ್ಣ ಹೆಗಡೆಯವರ ಸರ್ಕಾರ ಅಧಿಕಾರಕ್ಕೆ ಬಂದಿತು. ನಿಸಾರ್ ಅವರ ಅಧ್ಯಕ್ಷತೆಗೇನೂ ತೊಡಕು ಬರಲಿಲ್ಲ. ಗುಂಡೂರಾಯರ ಭವ್ಯವಾದ ಕನಸಾಗಿದ್ದ 'ವಿಶ್ವ ಕನ್ನಡ ಸಮ್ಮೇಳನ'ವನ್ನು ಒಂದಿಷ್ಟೂ ಕುಂದು ಬರದ ಹಾಗೆ ಹೆಗಡೆ ಅವರು ನೆರವೇರಿಸಿ ದರು. ಅದೊಂದು ಅಭೂತಪೂರ್ವ ಸಮಾರಂಭ. ಪರ–ವಿರೋಧಗಳ ನಡುವೆಯೂ ಸೊಗಸಾಗಿ ನೆರವೇರಿತ್ತು. 'ಅವರ ಕನಸಿದು, ಅವರ ಉಪಸ್ಥಿತಿ ಮುಖ್ಯ' ಎಂದು ಗುಂಡೂರಾಯರನ್ನೇ ಕರೆಸಿ ಹೆಗಡೆಯವರು ನಡೆಸಿದ ಕಾರ್ಯಕ್ರಮ; ಕುವೆಂಪು, ಶಿವರಾಮ ಕಾರಂತರ ಉಪಸ್ಥಿತಿ— ಒಂದಕ್ಕಿಂತ ಒಂದು ಸಂತೋಷ ತರುವ ಸಂಗತಿಗಳಾಗಿದ್ದವು. ಆಗ ಸಂಸ್ಕೃತಿ ಇಲಾಖೆ ಪ್ರಕಟಿಸಿದ ಪುಸ್ತಕಗಳಿಗೂ ಗುಂಡೂರಾಯರ ಮುನ್ನುಡಿಯೇ ಇತ್ತು.

ಎಲ್ಲ ಅಕಾಡೆಮಿಗಳು ವಿಚಾರ ಸಂಕಿರಣ ಇತ್ಯಾದಿಗಳನ್ನು ಹಮ್ಮಿಕೊಂಡವು. ನಾನು ಸಾಹಿತ್ಯ ಅಕಾಡೆಮಿಯ ವಿಚಾರ ಸಂಕಿರಣದಲ್ಲೂ ಒಂದು ಪ್ರಬಂಧವನ್ನು ಮಂಡಿಸಬೇಕಿತ್ತು.

ಸಮ್ಮೇಳನವನ್ನು ವಿರೋಧಿಸಿ ಪ್ರತಿಭಟಿಸಿದ ಕೆಲವು ಕನ್ನಡ ಕಾರ್ಯಕರ್ತರನ್ನು ಬಂಧಿಸ ಲಾಗಿತ್ತು. ನಮ್ಮ ಸಂಘಟನೆಗಳು ಸಭೆ ಸೇರಿ, ಬೀದಿ ನಾಟಕವನ್ನು ಮಾಡಿ ವೇದಿಕೆಯಲ್ಲಿ ಅವಕಾಶ ಇರುವ ಎಲ್ಲರೂ ಒಕ್ಕೊರಲಿನಿಂದ `ಬಂಧಿತರೂ ಕನ್ನಡ ಪ್ರೇಮಿಗಳು. ಅವರಿಲ್ಲದೆ ಉತ್ಸವ ನಡೆಸಬಾರದು. ಅವರನ್ನು ಬಿಡುಗಡೆ ಮಾಡಲೇಬೇಕು` ಎಂದು ಘೋಷಣೆಯನ್ನು ಕೂಗಿ ಸಭೆಯಿಂದಲೇ ಒತ್ತಾಯ ಬರುವ ಹಾಗೆ ಮಾಡಬೇಕೆಂಬ ನಿರ್ಣಯ ತೆಗೆದುಕೊಳ್ಳ ಲಾಗಿತ್ತು.

ಮಧ್ಯಾಹ್ನ ವಿಚಾರ ಸಂಕಿರಣ ಪ್ರಾರಂಭ ಆಗಬೇಕು. ಸಭೆಗೆ ಬರಬೇಕಿದ್ದ ಮುಖ್ಯ ಮಂತ್ರಿಗಳು ತಡ ಮಾಡಿದರು. ಅದರಿಂದಾಗಿ ಪ್ರಬಂಧಕಾರರಿಗೆ ನಿಮ್ಮ ಭಾಷಣಗಳ ಅವಧಿ ಕಡಿಮೆ ಮಾಡಿಕೊಳ್ಳಿ ಎಂದರು. ೩೦ ನಿಮಿಷ ಇದ್ದದ್ದು ೧೫, ೧೦, ಕಡೆಗೆ ೫ ನಿಮಿಷಕ್ಕೆ ಬಂದಿತು. ನಿಸಾರರ ಈ `ಆದೇಶ`ದಿಂದ ನನಗೆ ಸಿಟ್ಟು ಬಂದಿತ್ತು. ಮಂತ್ರಿಗಳು ತಡ ಮಾಡಿದರೆಂದು ಹೇಳಬೇಕಾದದ್ದನ್ನು ಹೇಳಲಾಗದ ಸ್ಥಿತಿ ಯಾಕೆ ಏರ್ಪಡಬೇಕೆಂಬ ಸಿಟ್ಟು ಅದು. ನನ್ನ ಸರದಿ ಬಂದಾಗ ಬಂಧಿತ ಕನ್ನಡ ಕಾರ್ಯಕರ್ತರ ಬಿಡುಗಡೆಗೆ ಒತ್ತಾಯಿಸಿ ಘೋಷಣೆ ಕೂಗಿದೆ. ಲಿಖಿತ ಪ್ರಬಂಧದ ಒಂದೇ ಪುಟ ಓದಿ ಭಾಷಣ ನಿಲ್ಲಿಸಿದೆ. ಅದೂ ಒಂದು ಪ್ರತಿಭಟನೆಯ ಹಾಗೆ ಭಾಸವಾಗಿತ್ತು. ನಿಸಾರ್‌ಗೆ ವಿಪರೀತ ಕೋಪ ಬಂದಿರಬೇಕು. ಅದಾದ ಕೆಲವು ದಿನಗಳ ಅನಂತರ ಅವರು `ಕಲಾಮಂದಿರ`ಕ್ಕೆ ಬಂದಾಗ ಅಲ್ಲಿದ್ದ ನನ್ನನ್ನು ತರಾಟೆಗೆ ತೆಗೆದುಕೊಂಡರು. ಇಬ್ಬರೂ, ಹಿಂದೆ–ಮುಂದೆಯೂ–ಎಂದೂ ಸಂಭವಿಸಲಾರದ ಹಾಗೆ ಪರಸ್ಪರ ಬೈದಾಡಿಕೊಂಡೆವು. ಪ್ರಾಯಃ ಇನ್ನೆಂದೂ ನಾವು ಮಾತೂ ಆಡುವುದಿಲ್ಲ ವೇನೋ ಅಂದುಕೊಂಡಿದ್ದೆ. ಹಾಗಾಗಲಿಲ್ಲ. `ಎಲ್ಲ ಮರೆತಿರುವಾಗ...` ಎಂಬ ಅವರ ಕವಿತೆಯ ಸಾಲಿನ ಹಾಗೆ ಮತ್ತದೇ ಆತ್ಮೀಯತೆ, ಸ್ನೇಹದಿಂದ ನಡೆದು ಬಂದರು. ಇದನ್ನಲ್ಲವೇ ನಿಷ್ಕಳಂಕ ಪ್ರೀತಿ ಅನ್ನುವುದು? ಎಂಥ ಪ್ರೀತ್ಯಾದರಗಳನ್ನು ಪಡೆದ ಭಾಗ್ಯವಂತೆ ನಾನು!

* * *

ಇದೇ ಸಂದರ್ಭದಲ್ಲಿ ನೆನಪಿಗೆ ಬರುವ ಮತ್ತೊಂದು ಮುಖ್ಯ ಸಂಗತಿಯೆಂದರೆ, ನಿಸಾರ್‌ರಂಥ ಲವಲವಿಕೆಯ ಕವಿಯೂ ಕೆಲ ಕಾಲ ಚಿಪ್ಪಿನೊಳಗೆ ಸೇರಿ ಹೋಗುವ ಹಾಗೆ ಮಾಡಿದ ಒಂದು ಪ್ರಸಂಗ. ಅದು, ತಾನು ನಂಬಿದವರು ಅಂದರೆ, ಮಿತ್ರ ಬಳಗವೇ ವಿಚಿತ್ರ ವಾಗಿ ವರ್ತಿಸಿದಾಗಿನ ದಿಗ್ಭ್ರಮೆಯಿರಬೇಕು.

ಒಮ್ಮೆ `ಯವನಿಕಾ` ಸಭಾಂಗಣದ ಮೇಲ್ಮಹಡಿಯಲ್ಲಿ ನಿಸಾರ್ ಒಂದು ಸಭೆಯನ್ನು ಕರೆದರು. ಎಲ್ಲ ಸಾಹಿತಿಗಳೂ ಮಾತನಾಡಿದರು. ಅದೊಂದು ಸಮಾಲೋಚನಾ ಸಭೆ. ನಿಸಾರ್ ತುಂಬ ಭಾವುಕರಾಗಿದ್ದರು. ಗದ್ಗದಿಸಿ ಮಾತಾಡಿದ್ದರು. ಹಾ. ಮಾ. ನಾಯಕ್ ಮೊದಲಾದವರು ಮಾತನಾಡಿ ಹಲವು ಸಲಹೆ ಸೂಚನೆಗಳನ್ನು ಕೊಟ್ಟರು. ಆ ಸಭೆಯಲ್ಲಿದ್ದ ಶೂದ್ರ ಶ್ರೀನಿವಾಸ್‌ಗೆ ಏನೋ ಇಷ್ಟವಾಗಿರಲಿಲ್ಲ. ನಿಸಾರ್ ಅವರಿಗೆ ಒಂದು ಬಹಿರಂಗ ಪತ್ರವನ್ನು ಬರೆದರು. ಅಷ್ಟೇನೂ ಹಿತ ತರುವ ಮಾತುಗಳಿರಲಿಲ್ಲ. ನಾನೂ `ಶೂದ್ರ`ಕ್ಕೆ ಪತ್ರ

ಬರೆದೆ. ಇಂಥ ವರ್ತನೆಗಳಿಂದಲೇ ನಿಸಾರ್ ಅಂಥವರು 'ನಾನೆಂಬ ಪರಕೀಯ'ದಂಥ ಪದ್ಯ ಬರೆಯಬೇಕಾಯಿತು, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ಅವಲತ್ತುಕೊಳ್ಳಬೇಕಾಯಿತು ಎಂದೆಲ್ಲ ವಾದಿಸಿದ್ದಂತೆ ನೆನಪು. ಸಾಹಿತಿಗಳಲ್ಲಿ ವಿಚಿತ್ರ ಗುಂಪುಗಾರಿಕೆ ಇತ್ತು. ನಿಸಾರ್ ವಿರುದ್ಧ ಪಿತೂರಿ ಮಾಡಿದ ಗುಂಪೂ ಇತ್ತು. ಅವರೆಲ್ಲ ಏನು ಮಾಡಿದರು, ನಿಸಾರ್ ಅಂಥವರ ಮನಸ್ಸನ್ನು ಹೇಗೆ ನೋಯಿಸಿದರೆಂಬ ವಿವರಗಳನ್ನು ಇಲ್ಲಿ ಹೇಳುವುದಿಲ್ಲ. ಆದರೆ ನಿಸಾರ್ ಅವರ ನಗುಮುಖ, ಅರಳುಗಣ್ಣು ಮಂಕಾಯಿತು; ಮತ್ತೆ ಮತ್ತೆ ಅಂತರ್ಮುಖಿಯಾಯಿತು. ನಿಸಾರ್ ಬಹುತೇಕ ಒಂಟಿಯಾಗಿ ಎಲ್ಲವನ್ನೂ ತೀರಾ ಖಾಸಗಿ ಮಾಡಿಕೊಳ್ಳುತ್ತಾ ಹೋದರು ಎಂಬುದನ್ನೂ ಗಮನಿಸಿದ್ದೇನೆ. ಆಗೆಲ್ಲ ನಾನೂ ನೊಂದಿದ್ದೇನೆ.

* * *

ಈಚೆಗೆ ತಾರೆ ಜಯಮಾಲಾ ಅವರ ದೇವಸ್ಥಾನ ಪ್ರವೇಶದ ವಿವಾದ ಸುದ್ದಿಯಲ್ಲಿದೆ. ಈಗಲೂ ಥಟ್ಟನೆ ನನಗೆ ನೆನಪಾಗುವುದು ನಿಸಾರ್ ಅವರೇ. ಬೆಂಗಳೂರಿನ ನಮ್ಮ ಮಿತ್ರರಾದ ದಿವಂಗತ ಸಿ. ಆರ್. ರಾವ್‌ಅವರು ಒಂದು ಜಾಹೀರಾತು ಸಂಸ್ಥೆ ನಡೆಸುತ್ತಿದ್ದರು. ಕೇರಳದ ಒಂದು ಸೋಪಿನ ಜಾಹೀರಾತಿಗೆ ಮಾಡೆಲ್ ಆಗಿ ಜಯಮಾಲಾರನ್ನು (೧೯೭೭ರಲ್ಲಿ) ಆಯ್ಕೆ ಮಾಡಿದೆವು. ಫೋಟೋ ಸೆಷನ್ ಇತ್ತು. ಆ ದಿನ ನಮ್ಮೊಂದಿಗೆ ನಿಸಾರ್ ಕೂಡ ಇದ್ದರು. ಆಕೆ ಆ ಸೋಪಿಗೆ ಮಾಡೆಲ್ ಆಗಿ, ಕೆಲವು ಮಾತೂ ಹೇಳಬೇಕಿತ್ತು. ಆ ಸಾಲುಗಳನ್ನು ನಿಸಾರ್ ಇನ್ನಷ್ಟು ಚಂದ ಮಾಡಿ ಬರೆದುಕೊಟ್ಟರು. ಮಾತಿನ ಮಧ್ಯೆ 'ಹೌದು, ನಿಜಕ್ಕೂ ನೀವು ಯಾವ ಸೋಪು ಬಳಸುತ್ತೀರಿ?' ಎಂದ ನಿಸಾರ್ ಪ್ರಶ್ನೆಗೆ ಜಯಮಾಲಾ ನಕ್ಕು ತಲೆ ತಗ್ಗಿಸಿದರು. ಅನಂತರ ನಿಧಾನವಾಗಿ 'ಸ್ಸಾರ್... ನನಗೆ ಸೋಪು ಇತ್ಯಾದಿ ಎಲ್ಲ ಅಲರ್ಜಿ ಸಾರ್. ನಾನು ಬರೀ ಕಡಲೇ ಹಿಟ್ಟು ಹಾಕ್ತೀನಿ' ಎಂದಿದ್ದರು ನಾಚುತ್ತಲೇ.

—ಈಗ ತಮಾಷೆ ಮಾಡುವ ಸರದಿ ನಿಸಾರ್ ಅವರದ್ದು. ಅವರ ಕೈಗೆ ಇಂಥದೇನಾದರೂ ಸಿಕ್ಕರೆ ಫಜೀತಿ ಎಬ್ಬಿಸಿ ಬಿಡುತ್ತಾರೆ. ಆ ದಿನ ಜಯಮಾಲಾಗೆ ಆಟ ಆಡಿಸಿಬಿಟ್ಟರು. ಈಗಿನ ಸಂದರ್ಭದಲ್ಲಿ ಆಕೆ ನಿಸಾರ್ ಅವರನ್ನು ಭೇಟಿ ಆಗಿದ್ದರೆ, ಆಕೆಯ ಈ ಕ್ಷಣದ ದುಗುಡವೆಲ್ಲ ಕರಗಿ ಹೋಗುತ್ತಿತ್ತೇನೋ!

* * *

'ನೀನೇಕೆ ಕೂತು ಗಟ್ಟಿಯಾದ ಬರಹದಲ್ಲಿ ತೊಡಗೋಲ್ಲ' ಎಂಬ ನಿಸಾರರ ಆಕ್ಷೇಪ ಸದಾ ನನ್ನ ಕಿವಿಯಲ್ಲಿ ಮೊರೆಯುತ್ತಲೇ ಇರುತ್ತದೆ. ಹೌದು ಬರೆದದ್ದೆಲ್ಲ ಆ ಸಂದರ್ಭಕ್ಕೆ, ತುರ್ತಿಗೆ. ಎಲ್ಲವೂ ಸಾಮಯಿಕ ಸಾಹಿತ್ಯ. ವರದಿ, ವಿವರಣೆ, ವಿಮರ್ಶೆ, ಸಂದರ್ಶನ—ಅಬ್ಬಬ್ಬಾ, ಎಂದರೆ ಒಂದಷ್ಟು ನಾಟಕಗಳು... ಇದಿಷ್ಟೇ ನನ್ನ ಬರಹದ ಪ್ರಪಂಚ. ಅದೇ ಸರ್ವಸ್ವವೂ ಅಲ್ಲ. ಜಗಿದೇಳಬೇಕು, ಅಂತರಂಗದ ಮಾತಿಗೆ ಶಬ್ದಗಳ ರೂಪ ಕೊಡಬೇಕು. ಆದರೆ ಸಾಧ್ಯವೇ ಆಗಲಿಲ್ಲ. ಕಳೆದುದೆಲ್ಲ ವೇಗದ ಬದುಕು, ಕಾಲದ ಜೊತೆಗಿನ ಸೆಣಸಾಟ. ಸವಾಲುಗಳ ಮಧ್ಯದ ಬೆಳಗು–ಬೈಗುಗಳು. ಆಗಲೂ 'ತುಷಾರ'ದಲ್ಲಿ ಬರೆಯುತ್ತಿದ್ದ 'ಮಾತಿ

ನಿಂದ ಲೇಖನಿಗೆ'ಯ ಕೆಲವು ವಿಷಯಗಳನ್ನು ನಿಸಾರ್ ಮೆಚ್ಚಿದ್ದರು.

ಭಿಕ್ಷುಕಳ ಮಗುವೊಂದರ ಮೊಗ್ಗಿನ ಜಡೆಯ ಆಸೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆದ ಒಂದು ಬರಹವಂತೂ ಅವರಿಗೆ ತುಂಬ ಮೆಚ್ಚಿಕೆಯಾಗಿತ್ತು. 'ಮನಸ್ಸು ತಟ್ಟುವಂಥ ಬರಹ ನಿನಗೆ ಸಾಧ್ಯ ಇದೆ. ಕೃಷಿ ಮಾಡ್ತಿಲ್ಲ. ಗಮನ ಕೊಡಮ್ಮ ವಿಜಯಾ. ನಾನು ಹೀಗೆ ಹೇಳಿದೇಂತ ಬೇಜಾರು ಮಾಡಿಕೋಬೇಡ. ಬರವಣಿಗೆಯ ಶಕ್ತಿ ಸೋರಿ ಹೋಗಬಾರದು...' ಎಂದು ಎಚ್ಚರಿಸುವ ನಿಸಾರ್ ಸದಾ ನನ್ನ ಆತ್ಮೀಯ ಸಂಗಾತಿ. ತಿಳಿವಳಿಕೆ, ಯುಕ್ತಾಯುಕ್ತ ಪರಿಜ್ಞಾನ, ಜೀವನವನ್ನು ಯಾರೂ ಕಡೆಗಣಿಸರು; ಸೌಂದರ್ಯ ದರ್ಶನವನ್ನು ನಿರಾಕರಿಸರು...

'ಕೃತಿ ನಿರ್ಮಾಣ ಮಾಡುವವನಿಗೆ ಅಕಲುಷಿತ ಸಮಾಜ, ನೆಮ್ಮದಿಯುತ ಆಡಳಿತ ವ್ಯವಸ್ಥೆ, ಹೃದಯಸಂಪನ್ನ ವಾಚಕ ವರ್ಗ ಮಿಗಿಲಾದ ಸ್ಫೂರ್ತಿ, ಹುಮ್ಮಸ್ಸನ್ನು ಕೊಡುತ್ತವೆ. ಕವಿಯ ಸ್ವಭಾವ ಕೋಮಲ ಸಂವೇದಿಯಾದದ್ದರಿಂದ ಸುತ್ತಮುತ್ತಲಿನ ಸ್ವಾಸ್ಥ್ಯದ ಸ್ಥಿತಿಗತಿಗಳಲ್ಲಿ ಕೊಂಚ ಏರುಪೇರಾದರೂ ಅವನು ಅಸ್ವಸ್ಥನಾಗುತ್ತಾನೆ; ಕ್ರಿಯಾತ್ಮಕತೆ ಯಲ್ಲಿ ತಡವರಿಸುತ್ತಾನೆ...' ಎಂಬ ನಿಸಾರರ ಮೌಲಿಕ ಮಾತುಗಳನ್ನು ನೆನೆಯುತ್ತ, ಅಂಥ ಆತ್ಮೀಯ ಸಂಗಾತಿ ಬಹು ಕಾಲ ಇಂಥದೇ ಪ್ರೀತಿ–ಸ್ನೇಹವನ್ನು ಸಿಂಚನಗೈಯುತ್ತ ಇರಲಿ ಎಂದು ಆಶಿಸುತ್ತೇನೆ.


ಎಲ್ಲರ ಸಖ, ಯಾರ ಸಖನೂ ಅಲ್ಲ. ಅಂತಹ ವಿರಾಟ್ ಸಾಮರ್ಥ್ಯ, ಯೋಗ್ಯತೆ ವಿರಳಾತಿವಿರಳ. ನಮ್ಮ ಅನೇಕ ಆಸಕ್ತಿಗಳ ಒತ್ತಡ, ಭಾರಗಳನ್ನು ಮನಸ್ಸು ತಾಳಲಾರದು. ಮನಸ್ಸಿನ ನಿರ್ಬಲತೆ ಆಸಕ್ತಿಗಳ ಪಾಲಿಗೆ ಸಹ್ಯವಾಗದು. ತಾಳಮೇಳ ರಹಿತ ತಕರಾರಿನ ದಾಂಪತ್ಯ ಎಣ್ಣೆ ಸೀಗೆಯಂತೆ ಅಪಥ್ಯ. ಕಾಳಜಿಗೆ ತಕ್ಕ ಕಸುವು ನಮ್ಮ ಮನೋರಚನೆಯಲ್ಲಿ, ಅಂತಶ್ಚೇತನ ದಲ್ಲಿ ಇರಬೇಕು. ಅದೊಂದು ಯೋಗಾಯೋಗ. ಪಂಚ ಪತಿವಲ್ಲಭೆ ಪಾಂಚಾಲಿಗೆ ಪಾತಿವ್ರತ್ಯದ ಪಟ್ಟವೇ ಹೊರತು ಪಾಮರ ಪತ್ನಿಯರ ಪಾಲಿಗೆ ಅದು ಪಂಚ ಪಾತಕ!

(ಹಲವು ಆಸಕ್ತಿಗಳು)

✧ ✧ ✧

ಸಂಸ್ಕೃತಿ ವ್ಯಕ್ತಿ ಸಂಬಂಧಗಳನ್ನು ಉತ್ತಮಪಡಿಸಿ ಸೊಗಸುಗೊಳಿಸುವ ಉಪಕಾರಿ. ನಾಗರಿಕತೆ ಸಮಾಜ ಹಿತವನ್ನು ಸಾಧಿಸಿ ಮುನ್ನಡೆಸುವ ಸಹಚಾರಿ.

(ಸಂಸ್ಕೃತಿ-ನಾಗರಿಕತೆ)



ನಿಸಾರರ ಅಧ್ಯಕ್ಷತೆಯ ಕಾಲದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ

♦ ಬಿ. ಟಿ. ಲಲಿತಾ ನಾಯಕ್

೧೯೮೩-೮೪ರ ಸಮಯ. ಆಗ ನಾನು ರಾಯಚೂರು ನಿವಾಸಿ. ಪತಿ, ಮಕ್ಕಳೊಡನೆ ಖುಷಿಯಿಂದ ಬಾಳುತ್ತ ಅಷ್ಟಿಷ್ಟು ಕಥೆ, ಕಾದಂಬರಿ, ಕವನ ಬರೆದು ಸಂತೋಷಗೊಳ್ಳುತ್ತ, 'ಲಂಕೇಶ್ ಪತ್ರಿಕೆ'ಗಷ್ಟು ವರದಿ ಮಾಡುತ್ತ 'ಹಿಂದುಳಿದ ಜಿಲ್ಲೆಗೆ ನನ್ನಂಥವರೇ ಮುಂದು' ಎನ್ನುವ ಭ್ರಮೆಯ ಭಾವದಲ್ಲಿ ತೇಲಾಡುತ್ತ ಇದ್ದ ನಿರಾಳ, ನೆಮ್ಮದಿಯ ದಿನಗಳು.

ಜೊತೆಗೆ ಬಂಡಾಯ ಸಾಹಿತ್ಯ ಸಂಘಟನೆ, 'ಸಮುದಾಯ', ದಲಿತ ಸಂಘಟನೆ, ಕನ್ನಡ ಸಂಘಟನೆ, ಮಹಿಳಾ ಸಂಘಟನೆ ಹಾಗೂ ಸಣ್ಣದಾಗಿ ರಾಜಕೀಯ ಪಕ್ಷದ ಸಹವಾಸ—ಇವುಗಳೆಲ್ಲಾ ನನ್ನನ್ನು, ನನ್ನ ಕುಟುಂಬವನ್ನು ರೂಪಿಸುತ್ತಿದ್ದ ಕಾಲ.

ಇಂತಹ ಸಂದರ್ಭದಲ್ಲಿ ದಿನಾಂಕ ೨೧-೪-೧೯೮೪ರಂದು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಎಸ್. ಟಿ. ಬಾದಾಮಿಯವರಿಂದ ನನಗೊಂದು ಅನಿರೀಕ್ಷಿತ ಪತ್ರ ಬರುತ್ತದೆ: 'ದಿನಾಂಕ ೧೬-೪-೧೯೮೪ರಂದು ಸಮಾವೇಶಗೊಂಡ ಕರ್ನಾಟಕ ಸಾಹಿತ್ಯ ಅಕಾಡೆಮಿಯು ತಮ್ಮನ್ನು ಸಹ ಆಯ್ಕೆ ಸದಸ್ಯ(co-opted member)ರನ್ನಾಗಿ ಮಾಡಿಕೊಂಡಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ತಾವು ಈ ಸದಸ್ಯತ್ವವನ್ನು ಒಪ್ಪಿಕೊಂಡು ಅಕಾಡೆಮಿಯೊಂದಿಗೆ ಸಹಕರಿಸಬೇಕಾಗಿ ಕೋರಿಕೆ. ಒಪ್ಪಿಗೆ ತಿಳಿಸಿ.'

ರಾಯಚೂರು ಜಿಲ್ಲೆಯ ಪ್ರತಿನಿಧಿಯಾಗಿ ನೇಮಕಗೊಂಡಿದ್ದಕ್ಕೆ ಸಂಭ್ರಮಿಸುತ್ತ ಒಪ್ಪಿಗೆ ಪತ್ರವನ್ನು ಬರೆದು ಅಂಚೆಗೆ ಹಾಕಿದೆ. ಮುಂದಿನ ಮೂರು ವರುಷದ ಅವಧಿಯ ವರೆಗೆ ಅದೇ ಸಂತಸ, ಉತ್ಸಾಹ ಮುಂದುವರೆಯಿತು. ಅದಕ್ಕೆ ಕಾರಣ: ಅಧ್ಯಕ್ಷರಾದ ಕವಿ ಕೆ. ಎಸ್. ನಿಸಾರ್ ಅಹಮದ್‌ರವರು ಮತ್ತು ಕನ್ನಡ ಸಾಹಿತ್ಯದ ದಿಗ್ಗಜಗಳೆನ್ನಿಸಿದ ಸದಸ್ಯರುಗಳಾದ ಚದುರಂಗ, ಯು. ಆರ್. ಅನಂತಮೂರ್ತಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಟಿ. ಸುನಂದಮ್ಮ, ಗೀತಾ ಕುಲಕರ್ಣಿ, ಕಯ್ಯಾರ ಕಿಞ್ಞಣ್ಣ ರೈ, ಟಿ. ಕೆ. ರಾಮರಾವ್, ಸಿ. ಕೆ. ನಾಗರಾಜ ರಾವ್, ಕೋ. ಚೆನ್ನಬಸಪ್ಪ, ವಿವೇಕ ರೈ, ಬೆಸಗರಹಳ್ಳಿ ರಾಮಣ್ಣ, ಆಲನಹಳ್ಳಿ ಕೃಷ್ಣ, ಎಚ್. ಜೆ. ಲಕ್ಕಪ್ಪಗೌಡ, ಬರಗೂರು ರಾಮಚಂದ್ರಪ್ಪ, ದಲಿತ ಕವಿ ಸಿದ್ಧಲಿಂಗಯ್ಯ, ಪುಂಡಲೀಕ ಶೇಟ್ ಮುಂತಾದವರು. ಇಂತಹ ಅಪೂರ್ವ ಘನತೆವೆತ್ತ ಕವಿ-ಸಾಹಿತಿಗಳ ತಂಡ ಅಕಾಡೆಮಿಯ 'ಆಸ್ತಿ'ಯಾಗಿ ಕಂಗೊಳಿಸಿತ್ತು. ಇಂಥ ಪ್ರತಿಷ್ಠಿತ ಹಾಗೂ ಹಿರಿಯ ಕವಿ-ಸಾಹಿತಿಗಳ ಮೇಳ ಇದಕ್ಕೂ ಮುಂಚೆಯಾಗಲಿ ಆಮೇಲಾಗಲಿ ಇರಲಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಆಗಾಗ ಬೆಂಗಳೂರಿಗೆ ಬಂದು ಮೀಟಿಂಗ್‌ನಲ್ಲಿ ಭಾಗವಹಿಸಿ, ಬಂದಷ್ಟು ಸಂಭಾವನೆಯನ್ನು ಪಡೆದು ಊರಿಗೆ ಹಿಂದಿರುಗುವಂತಹ ವಾತಾವರಣವಿದ್ದಿದ್ದರೆ ಬಹುಶಃ ಈ ಲೇಖನ ಬರೆಯಲು ವಿಷಯ ವೇನೂ ಇರುತ್ತಿರಲಿಲ್ಲ. ಆದರೆ ಪ್ರೊ. ನಿಸಾರ್ ಅಧ್ಯಕ್ಷರಾಗಿದ್ದ ಮೂರು ವರ್ಷಗಳ (೧೯೮೪-೧೯೮೭) ಕಾಲದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಷಹರುಗಳ 'ಸರಸ್ವತೀ ಪುತ್ರ'ರ ಸ್ವತ್ತಾಗಿ ಜರೀ ಶಲ್ಯಗಳಲ್ಲಿ ಅಡಗಿ ಕೂರದೆ, ರಾಜಧಾನಿಯ ಮಟ್ಟದಿಂದ ಕೆಳಗಿಳಿದು ಜಿಲ್ಲೆ, ತಾಲ್ಲೂಕು, ಹೋಬಳಿ, ಕುಗ್ರಾಮಗಳವರೆಗೂ ಬಿಡುಬೀಸಾಗಿ ಹರಿದಾಡಿ, ನನ್ನಂಥವರ ಬದುಕಿನಲ್ಲಿ ಸಾಹಿತ್ಯದ ಹೊಚ್ಚ ಹೊಸ ಝಲಕ್‌ಅನ್ನು ಕಾಣಿಸುವ 'ಕ್ಷ' ಕಿರಣವಾಗಿ ಮಾರ್ಪಟ್ಟಿತು. ತನ್ನ ಕಾರ್ಯಕ್ರಮಗಳ ಗುಣಮಟ್ಟವನ್ನು ತಗ್ಗಿಸಿಕೊಳ್ಳದೆಯೂ ಶ್ರೀ ಸಾಮಾನ್ಯರ, ಗ್ರಾಮೀಣ ಜನಪದದ ಬಳಿಗೂ ಸಾಗಿತು.

ಪ್ರತಿವಾರ, ಪ್ರತಿ ತಿಂಗಳು ಅಕಾಡೆಮಿಯ ಕಾರ್ಯಕ್ರಮಗಳು ಅಡೆ ತಡೆ ಇಲ್ಲದೆ ನಡೆ ಯುತ್ತಿದ್ದವು. ಅವುಗಳಲ್ಲಿ ಭಾಗವಹಿಸಲು ಮತ್ತು ಸೂಕ್ತ ಕಂಡಂತೆ ಸಲಹೆ ನೀಡಲು ಪ್ರತಿ ಸದಸ್ಯರಿಗೂ ಅವಕಾಶವಿತ್ತು. ಜೊತೆಗೇ ನಮ್ಮ ನಮ್ಮ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸುವ, ನಾಯಕತ್ವವನ್ನು ವಹಿಸಿಕೊಳ್ಳುವ ಸದವಕಾಶಗಳನ್ನು ಅಧ್ಯಕ್ಷರು ಒದಗಿಸಿಕೊಟ್ಟಿದ್ದರು. ಅದನ್ನು ಸಂಪೂರ್ಣವಾಗಿ ಸದುಪಯೋಗಗೊಳಿಸಿಕೊಂಡವ ರಲ್ಲಿ ನಾನೂ ಒಬ್ಬಳು ಎಂದು ಹೇಳಲು ನನಗೆ ಹೆಮ್ಮೆಯಾಗುತ್ತದೆ. ಅಧ್ಯಕ್ಷರ ಸಲಹೆಯ ಮೇರೆಗೆ ಜಿಲ್ಲೆ, ತಾಲ್ಲೂಕು ಮಟ್ಟದ ವಚನ ಗಾಯನ, ಭಾವಗೀತೆ, ತತ್ವ ಪದ, ಕವಿಗೋಷ್ಠಿ, ವಿಚಾರ ಸಂಕಿರಣಗಳನ್ನು ಇತರ ಕೆಲವು ಸದಸ್ಯರಂತೆ ನಾನೂ ಏರ್ಪಡಿಸಿದ್ದೆ. ಆಗ ಸ್ಥಳೀಯ ಬರಹಗಾರರಿಗೆ ಆದ್ಯತೆಯನ್ನು ಕೊಡಲಾಯಿತು. ಕವಿ ಸಿದ್ದಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ಡಾ. ಹಾ. ಮಾ. ನಾಯಕ, ಶಾಂತರಸರಂತಹ ಹಿರಿಯ ಬರಹಗಾರರು ನನ್ನ ಕರೆಗೆ ಓಗೊಟ್ಟು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಿಸಿಕೊಟ್ಟರು. ಇದರಿಂದ ನನಗೂ ಸದಸ್ಯಳಾಗಿ ಕರ್ತವ್ಯವನ್ನು ನಿರ್ವಹಿಸಿದ ಸಂತೃಪ್ತಿ ದೊರಕಿತು.

ತಾವು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಅಕಾಡೆಮಿ ಸದಸ್ಯರಲ್ಲದ ಅನೇಕ ಹಿರಿಯ ಸಾಹಿತಿಗಳನ್ನು, ಸಾಹಿತ್ಯಾಸಕ್ತರನ್ನು, ಕಲಾವಿದರನ್ನು, ಪತ್ರಕರ್ತರನ್ನು, ಸಮಾಜದ ಶಿಷ್ಟ ಗಣ್ಯ ವ್ಯಕ್ತಿಗಳನ್ನು ಅನೌಪಚಾರಿಕ ಸಭೆಗೆ ಆಹ್ವಾನಿಸಿ ಮುಂದೆ ನಡೆಸಬೇಕಾದ ಸಮಾಜೋಪಯೋಗಿ ಕಾರ್ಯಕ್ರಮಗಳ ಬಗೆಗೆ ಹಾಗೂ ಸಂಗೀತ, ಜಾನಪದ ಇತ್ಯಾದಿಗಳ ಬಗ್ಗೆ ಚರ್ಚಿಸುವ ಸತ್‌ಸಂಪ್ರದಾಯವನ್ನು ಅಧ್ಯಕ್ಷ ಪ್ರೊ. ನಿಸಾರರು ಹುಟ್ಟು ಹಾಕಿದರು. ಇದು ಹಿಂದೆ ನಡೆದಿರಲಿಲ್ಲ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶ್ರೀರಂಗ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಗೋಪಾಲಕೃಷ್ಣ ಅಡಿಗ, ಕೆ. ಎಸ್. ನರಸಿಂಹಸ್ವಾಮಿ, ಜಿ. ವೆಂಕಟಸುಬ್ಬಯ್ಯ, ಜಿ. ನಾರಾಯಣ, ಸಿದ್ಧಯ್ಯ ಪುರಾಣಿಕ, ಪರ್ವತವಾಣಿ ಮುಂತಾದ ಹಿರಿಯರನ್ನು ಕಾಣುವ, ಅವರ ವಿಚಾರಧಾರೆಯನ್ನು ಕೇಳುವ ಅವಕಾಶವನ್ನು ನಿಸಾರರು ನಮಗೆ ಒದಗಿಸಿಕೊಟ್ಟಿದ್ದರು. ಹಿಂದಿನ ಅಧ್ಯಕ್ಷರಾಗಿದ್ದ ಡಾ. ಹಾ.ಮಾ.ನಾ. ಅವರನ್ನು ಆಹ್ವಾನಿಸಲು ನಿಸಾರ್ ಅವರು ಮರೆಯಲಿಲ್ಲ. ಒಟ್ಟಿನಲ್ಲಿ ಅಂದಿನ ಸಭೆ ಫಲಪ್ರದವೆನ್ನಿಸಿತು.

ರಾಜಧಾನಿಗಷ್ಟೇ ಆವರೆಗು ಕೇಂದ್ರಿತವಾಗಿದ್ದ ಸಾಹಿತ್ಯ ಸಮಾವೇಶಗಳು, ವಿಚಾರ ಗೋಷ್ಠಿಗಳು ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ, ಕೊಲಕೊತ್ತ, ಮುಂಬಯಿಯಂತಹ ಹೊರ ನಗರಗಳಿಗೂ ವಿಸ್ತರಿಸಿದ್ದಲ್ಲದೆ ಗಡಿ ಭಾಗಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ವಿಕೇಂದ್ರೀಕರಣಗೊಂಡು ಮೂರು ವರುಷಗಳ ಅವಧಿಯಲ್ಲಿ ೩೦೦ ಕಾರ್ಯಕ್ರಮಗಳು ಜರುಗಿದ್ದು ಒಂದು ದಾಖಲೆ ಅಭೂತಪೂರ್ವ ಎನ್ನಿಸುತ್ತದೆ. ಕರ್ನಾಟಕ ಸಾಹಿತ್ಯ ಅಕೆಡೆಮಿ ಹೆಸರಿನ ಸಾಹಿತ್ಯ-ಸಂಸ್ಕೃತಿ ಪ್ರೋತ್ಸಾಹಕ ಸಂಸ್ಥೆ ಒಂದಿದೆ ಎಂಬುದು ಬಹುಶಃ ಜನರ ಗಮನಕ್ಕೆ ಬಂದಿದ್ದು ಪ್ರೊ. ನಿಸಾರ್ ಅಹಮದ್ ಅವರ ಕಾಲದಲ್ಲೇ ಎನ್ನುವುದು ಉತ್ಪ್ರೇಕ್ಷೆಯಲ್ಲ. ಇವೆಲ್ಲವೂ ಒಂದು ಜಾತ್ರೆಯ ಮಾದರಿಯಲ್ಲಿ ನಡೆದು ಹೋಗಿದ್ದರೆ ಅದಕ್ಕೆ ಯಾವ ಮಹತ್ವವೂ ಇರುತ್ತಿರಲಿಲ್ಲ. ಪ್ರತಿಭಾವಂತರನ್ನು ಗುರುತಿಸಿ ಬೆಳಕಿಗೆ ತರುವುದರೊಂದಿಗೆ (ಪತ್ರಕರ್ತ ರವಿ ಬೆಳಗೆರೆ, ನರಸಿಂಹಲು ವಡವಾಟಿ ಇವರುಗಳು ಸಹ ಅಕಾಡೆಮಿಯ ಸಹಕಾರದಿಂದ ಆ ಕಾಲದಲ್ಲಿ ಜನತೆಗೆ ಹತ್ತಿರವಾದವರು) ಕರ್ನಾಟಕದ ಆಚೆಯ ಅಜ್ಞಾತ ಸ್ಥಳಗಳಲ್ಲಿಯೂ ಸಾಮಾನ್ಯ ಜನತೆಗಳಿಗೆ ತಲಪಬಹುದಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.

ಒಟ್ಟಿನಲ್ಲಿ, ಇಂದು ನಾವು ಯಾವುದನ್ನು ಜನಪರ, ಸಮಾಜಮುಖಿ ಎಂದು ಘೋಷಿಸುತ್ತೇವೋ ಅದು ಆ ಕಾಲಕ್ಕೆ, ಅಂದರೆ ಎರಡು ದಶಕಗಳಿಗೂ ಮುಂಚೆ ಕಾರ್ಯಶೀಲವಾಯಿತೆಂಬುದು ಗಮನಾರ್ಹ ವಿಷಯ. ದ್ರಾವಿಡ ಭಾಷಾ ಸಾಹಿತ್ಯದ ಅಂಗವಾಗಿ ತಮಿಳು, ತುಳು, ಮಲೆಯಾಳಂ, ತೆಲುಗು ಭಾಷಾ ವಿಚಾರ ಸಂಕಿರಣ ನಡೆಯಿತು. ಡಾ. ಶಿವರಾಮ ಕಾರಂತರು ಉದ್ಘಾಟಿಸಿದ ಈ ವಿಶಿಷ್ಟವಾದ ಇಡೀ ದಿವಸದ ಕಾರ್ಯಕ್ರಮ ದಲ್ಲಿ ನೆರೆ ರಾಜ್ಯಗಳ ಸಾಹಿತ್ಯಾವಲೋಕನ, ಚರ್ಚೆಗಳು ನಡೆದದ್ದಲ್ಲದೆ ಒಂದು ರಾಜ್ಯ ಮಟ್ಟದ ಕವಿಗೋಷ್ಠಿಯೂ ನಡೆದು, ಅನ್ಯ ಭಾಷಿಗರೂ ಅದರಲ್ಲಿ ಪಾಲ್ಗೊಂಡದ್ದು ಒಂದು ವಿಶೇಷ. ಕೆಲವು ಪ್ರದೇಶಗಳಲ್ಲಿ ಹಳ್ಳಿಯ ರೈತ ಜನಗಳು ಎತ್ತಿನ ಬಂಡಿಗಳನ್ನು ಕಟ್ಟಿಕೊಡು

ಅಕಾಡೆಮಿಯ ಕಾರ್ಯಕ್ರಮಗಳಿಗೆ ಪ್ರೀತಿಯಿಂದ ಧಾವಿಸಿ ಬರುತ್ತಿದ್ದರು. ನಮ್ಮ ಹಿರಿಯ ಕವಿಗಳ ಹಾಡುಗಳನ್ನು, ನೃತ್ಯ ಇತ್ಯಾದಿಗಳನ್ನು ರಾತ್ರಿ ಹನ್ನೊಂದರವರೆಗೂ ಆಸಂದಿಸಿ ಹೋಗುತ್ತಿದ್ದರು. ಇದರಿಂದ ಆ ಸಂಸ್ಥೆಯ ಮಹದಾಶಯವೇನಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.

ಕಾವ್ಯ, ವಿಮರ್ಶೆಗಳಿಗೆ ಸೀಮಿತವಾಗಿದ್ದ ವಾರ್ಷಿಕ ಪ್ರಕಟನೆಗಳನ್ನು ಪ್ರಬಂಧ, ಸಣ್ಣಕಥೆ, ಮಕ್ಕಳ ಸಾಹಿತ್ಯಗಳಿಗೂ ವಿಸ್ತರಿಸಿದ್ದು ನಿಸಾರರ ಅಗ್ಗಳಿಕೆ. ಅಲ್ಲದೆ, ನಿಸಾರರು ಮತ್ತೂ ಒಂದು ಹೆಜ್ಜೆ ಮುಂದುವರೆದು ದಶವಾರ್ಷಿಕ ಕಾವ್ಯ, ವಿಮರ್ಶೆ, ಸಣ್ಣ ಕಥೆ, ಪ್ರಬಂಧಗಳ ಹೆಬ್ಬೊತ್ತಿಗೆಗಳನ್ನು ಪ್ರಥಮ ಬಾರಿಗೆ ಹೊರ ತಂದದ್ದು ಅಕೆಡೆಮಿಯ ಇತಿಹಾಸದಲ್ಲೊಂದು ಮೈಲಿಗಲ್ಲಾಗಿದೆ. ಅಕಾಡೆಮಿಯ ಮುಖವಾಣಿಯಾಗಿ ಕನ್ನಡ-ಇಂಗ್ಲಿಷ್ 'ಚಂದನ' ತ್ರೈಮಾಸಿಕಗಳನ್ನು ಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದದ್ದು ಇವರ ಅಧ್ಯಕ್ಷಾವಧಿ ಯಲ್ಲಿ. ಗಡಿ ಪ್ರದೇಶಗಳಲ್ಲೂ ವಿಜ್ಞಾನ, ಕಾವ್ಯ, ನಾಟಕ ಕಮ್ಮಟಗಳು ನಡೆದವು. ಅದೇ ಸಂದರ್ಭದಲ್ಲಿ ದೂರದರ್ಶನ ಚಾನೆಲ್ ಪ್ರಾರಂಭವಾಗಿ ಅಕಾಡೆಮಿಯ ಕಾರ್ಯ ಚಟುವಟಿಕೆಗಳ ಪರಿಚಯ ನಾಡಿನ ಮೂಲೆ ಮೂಲೆಗೂ ತಲಪುವಂತಾಗಿ ಅದಕ್ಕೊಂದು ಹೊಸ ಆಯಾಮ ದೊರಕಿತು.

ಆಗಿನ ಮುಖ್ಯ ಮಂತ್ರಿಗಳಾಗಿದ್ದ ಹಾಗೂ ಸಾಹಿತ್ಯ ಸಂಸ್ಕೃತಿಯ ಬಗೆಗೆ ನಿಜವಾದ ಕಳಕಳಿ ಇದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಕನ್ನಡ ಸಂಸ್ಕೃತಿ ಸಚಿವರಾಗಿದ್ದ ಡಾ. ಜೀವರಾಜ ಆಳ್ವರವರು ಅಕಾಡೆಮಿಗೆ ಹಣದ ಕೊರತೆಯುಂಟಾಗದಂತೆ ಹೆಚ್ಚಿನ ಅನುದಾನ ನೀಡಿ ಸಹಕರಿಸಿದರು. ಯಾವುದೇ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಾಗಲೂ ಪತ್ರ ಬರೆದು ಶ್ಲಾಘಿಸಿ ಉತ್ತೇಜಿಸಿದರು. ಇದರಿಂದಾಗಿ ನಾಡಿನ ಉದ್ದಗಲಕ್ಕೂ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ಅಕಾಡೆಮಿಯನ್ನು ಉನ್ನತ ಮಟ್ಟಕ್ಕೊಯ್ಯಲು ನಿಸಾರರಿಗೆ ಸಾಧ್ಯವಾಯಿತು. ಆಗಿನ ಕಾಲದಲ್ಲಿ ಅನುದಾನದ ಕೊರತೆಯಿಂದಾಗಿ ರದ್ದುಗೊಳ್ಳುವ ಹಂತದಲ್ಲಿದ್ದ ಕೆಲವು ರಂಗಸಂಸ್ಥೆಗಳೂ ಆರ್ಥಿಕ ಸಂಕಷ್ಟದಿಂದ ಪಾರಾಗಿ ಮರು ಜೀವವನ್ನು ಪಡೆದವು. ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುವಾಗ, ವ್ಯವಸ್ಥೆ ಮಾಡುವಾಗ ಅಕೆಡೆಮಿಯ ಮಾನ್ಯ ಸದಸ್ಯರುಗಳ ಸಂಪೂರ್ಣ ಬೆಂಬಲ ನಿಸಾರರಿಗಿತ್ತು.

೧೯೮೫ರಲ್ಲಿ ಮೈಸೂರಿನಲ್ಲಿ ಪ್ರಪ್ರಥಮವಾಗಿ ವಿಶ್ವ ಕನ್ನಡ ಸಮ್ಮೇಳನ ನಡೆದಾಗ, ಕಲಾಮಂದಿರದ ಉದ್ಘಾಟನೆಯೂ ಸಹ ಕರ್ನಾಟಕ ಸಾಹಿತ್ಯ ಅಕೆಡೆಮಿಯ ನೇತೃತ್ವದಲ್ಲಿ ಮೂರು ದಿನಗಳ ಕಾರ್ಯಕ್ರಮಗಳು ನಡೆದದ್ದು ಒಂದು ಅಪೂರ್ವ ಘಟನೆ. ಮಹಾಕವಿ ಕುವೆಂಪುರವರ ಘನ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಕವಿಗೋಷ್ಠಿ ನಡೆದಾಗ ರಾಮಕೃಷ್ಣ ಹೆಗಡೆ, ನಜೀರ್ ಸಾಹೇಬ್, ಜೀವರಾಜ ಆಳ್ವ, ಬಿ. ರಾಚಯ್ಯ ಮತ್ತು ಅಂತರ್ರಾಷ್ಟ್ರೀಯ ಖ್ಯಾತಿ ಇಂಗ್ಲಿಷ್ ಮತ್ತು ಫ್ರೆಂಚ್ ಸಾಹಿತಿ ಹಾಸನದ ರಾಜಾರಾವ್ ಮೊದಲಾದ ಗಣ್ಯರು ಸಹ ಸಭಿಕರ ಸಾಲಿನಲ್ಲಿ ಕುಳಿತು ಕಾರ್ಯಕ್ರಮವನ್ನು ವೀಕ್ಷಿಸಿದ್ದು ಮರೆಯುವ ವಿಚಾರವಲ್ಲ. ಸಾಮಾನ್ಯವಾಗಿ ಯಾವುದೇ ಕಾರ್ಯಕ್ರಮಕ್ಕೂ ಬರಲು ನಿರಾಕರಿಸುತ್ತಿದ್ದ ರಾಷ್ಟ್ರಕವಿ ಕುವೆಂಪು

ಅವರ ಮನವೊಲಿಸಿ ಕರೆ ತಂದವರು ನಿಸಾರ್ ಅಹಮದ್. ಅದರಿಂದ ನಮ್ಮ ಅಕೆಡೆಮಿಯ ಹೆಮ್ಮೆ ಗೌರವಗಳು ನೂರ್ಮಡಿಸಿದವು. ಅಂದು ಸಭಾಂಗಣದಲ್ಲಿ ಜಾಗ ಸಿಕ್ಕದೆ ಜನ ಕ್ರುದ್ಧರಾಗಿ ಗಲಾಟೆ ಮಾಡಿದ್ದರಿಂದ ಪೊಲೀಸರು ಲಘು ಲಾಠಿ ಪ್ರಹಾರವನ್ನೂ ಮಾಡ ಬೇಕಾಯಿತು. ಕವಿ ಸಮ್ಮೇಳನದ ಪ್ರವೇಶಕ್ಕೆ ಇಂಥ ಘಟನೆ ನಡೆದದ್ದು ಜಗತ್ತಿನಲ್ಲೇ ಅಪರೂಪ ಎನ್ನಿಸುತ್ತದೆ! ಕುವೆಂಪು ಅವರ ಉಪಸ್ಥಿತಿ ಇದಕ್ಕೆ ಬಹು ಮಟ್ಟಿಗೆ ಕಾರಣ ವಾದರೂ ಕನ್ನಡದ ಅತ್ಯಂತ ಪ್ರಖ್ಯಾತ ಮತ್ತು ಶ್ರೇಷ್ಠ ಕವಿಗಳನ್ನು ಕಾಣಲು ಮತ್ತು ಅವರ ಕವಿತೆಗಳನ್ನು ಕೇಳಲು ಸಹ ಜನ ಕಾತರಿಸಿದ್ದರು ಎನ್ನುವ ಸಂಗತಿ ಸಹ ಸ್ವಯಂವೇದ್ಯ.

ನಿಸಾರರ ಮತ್ತೊಂದು ಸಾಧನೆ ಎಂದರೆ (ವರುಷದ ಕೊನೆಯಲ್ಲಿ ಪ್ರಶಸ್ತಿ ಪ್ರದಾನದ ದಿವಸ, ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಾತ್ರ ರಾಜಕಾರಣಿಗಳನ್ನು ಆಹ್ವಾನಿಸು ತ್ತಿದ್ದುದನ್ನು ಬಿಟ್ಟರೆ) ಅಕಾಡೆಮಿಯಲ್ಲಿ ಅವರುಗಳನ್ನು ಓಲೈಸುವ ಪರಿಪಾಠವೇನೂ ಇರಲಿಲ್ಲ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಮೈಸೂರಿನ ದೊಡ್ಡ ಕೆರೆ ಮೈದಾನದಲ್ಲಿ ಏರ್ಪಾಟಾಗಿದ್ದ ವಸ್ತುಪ್ರದರ್ಶನದಲ್ಲಿ ಪ್ರಥಮ ಬಾರಿಗೆ ಅಕಾಡೆಮಿಯ ಪುಸ್ತಕ ಪ್ರದರ್ಶನ ವನ್ನೂ ಏರ್ಪಡಿಸಿದ್ದು ಸಹ ನಮ್ಮ ಅಕಾಡೆಮಿಯ ಅಗ್ಗಳಿಕೆಯೇ. 'ಸಾಲು ದೀಪಗಳು' ಎಂಬ ಪ್ರತಿಷ್ಠಿತ ಪ್ರಕಟನೆಯನ್ನು ಹಮ್ಮಿಕೊಂಡು, ಅದರ ಕಲ್ಪನೆಯ ರೂಪುರೇಷೆಗಳು ನಿರ್ಧರಿತವಾಗಿ, ಸಂಬಂಧಪಟ್ಟ ಲೇಖಕರನ್ನು ಬರಹಗಳಿಗಾಗಿ ಒಪ್ಪಿಸಿದ್ದು ನಿಸಾರರ ಕಾಲದಲ್ಲೇ. ಅಧ್ಯಕ್ಷರಾಗಿ ನಿಸಾರರ ಆಗಮನಕ್ಕೆ ಮುನ್ನ ಅಕಾಡೆಮಿಯ ಗ್ರಂಥಾಲಯದಲ್ಲಿ ಉತ್ತಮ ಪುಸ್ತಕಗಳು ಲಭ್ಯವಿಲ್ಲದೆ ಪರದಾಡುವ ಸ್ಥಿತಿ ಇತ್ತು. ಇದ್ದ ಪುಸ್ತಕಗಳಿಗೆ ಭದ್ರತೆ ಇಲ್ಲದೇ ಯಾರು ಬೇಕಾದರೂ ಹೊತ್ತೊಯ್ಯ ಬಹುದಾಗಿತ್ತು. ಇದನ್ನು ಗಮನಿಸಿದ ಅಧ್ಯಕ್ಷರು ಪುಸ್ತಕಗಳಿಗೆ ಅಂಕೆ ಸಂಖ್ಯೆಯನ್ನು ದಾಖಲು ಗೊಳಿಸಿ, ಅವು ಕಳೆಯದಂತೆ, ಬರೆಯುವವರಿಗೆ ಕೂಡಲೇ ಕೈಗೆಟುಕುವಂತೆ ಜೋಪಾನ ಗೊಳಿಸುವ ವ್ಯವಸ್ಥೆಯನ್ನು ಮಾಡಿದರು.

ಅದೇ ರೀತಿ, ಅಕಾಡೆಮಿಯ ಹಿಂದಿನ ಅಧ್ಯಕ್ಷರುಗಳು ಚಾಲ್ತಿಗೆ ತಂದಿದ್ದ ಒಂದು ಉಪಯುಕ್ತ ಯೋಜನೆ ದುರ್ದೈವದಿಂದ ದುರುಪಯೋಗವಾಗುತ್ತಿದ್ದುದನ್ನು ತಪ್ಪಿಸಿ, ಒಂದು ಕ್ರಮವನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಆಸಕ್ತ ಲೇಖಕರನ್ನು ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಿ ಅಲ್ಲಿನ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಬರೆಯಿಸುವ ಯೋಜನೆ ಏನೋ ಚೆನ್ನಾಗಿತ್ತು. ಆದರೆ ವಹಿಸಿಕೊಂಡ ಜವಾಬ್ದಾರಿಯನ್ನು ನಿರ್ವಹಿಸದೆಯೇ, ಹಣವನ್ನು ಜೇಬಿಗೆ ಹಾಕಿಕೊಳ್ಳುವ ಕೆಲವೊಂದು ಪ್ರಕರಣಗಳು ನಡೆದಿರುವುದನ್ನು ಗಮನಿಸಿದ ನಿಸಾರರು, ಅಕಾಡೆಮಿಯ ಹಣ ಈ ರೀತಿ ಪೋಲಾಗದಂತೆ ಬಂದೋಬಸ್ತು ಮಾಡಿದರು. ನ್ಯಾಯವಾಗಿ ಕೆಲಸ ಮಾಡುವಂತೆ ಅವರುಗಳ ಮನವೊಲಿಸಿದರು. ಪಡೆದ ನೆರವಿಗೆ ತಕ್ಕದಾದ ಶ್ರಮ ವಹಿಸಿ ಪ್ರವಾಸ ಗ್ರಂಥ ಬರೆದು ಅಕಾಡೆಮಿಗೆ ಒಪ್ಪಿಸುವಂತೆ ಮಾಡಿದರು.

ನನ್ನ ನೆನಪಿನಲ್ಲಿ ಹಸುರಾಗಿ ಉಳಿದಿರುವ ಮತ್ತೊಂದು ಘಟನೆಯೆಂದರೆ—೧೯೮೭ರ ಫೆಬ್ರವರಿ ಮಾಹೆಯ ೧೪ ಮತ್ತು ೧೫ರಂದು ಅಕಾಡೆಮಿ ೨ ದಿನಗಳವರೆಗೆ ನವ

ದೆಹಲಿಯಲ್ಲಿ ನಡೆಸಿದ 'ಸಮಕಾಲೀನ ಭಾರತೀಯ ಸಾಹಿತ್ಯ'(Contemporary Indian Literature)ವನ್ನು ಕುರಿತ, ಪರ ಭಾಷೆಯವರಿಗೆ ಅರ್ಥವಾಗಬೇಕೆಂಬ ಉದ್ದೇಶದಿಂದ ಪ್ರೇರಿತವಾದ ರಾಷ್ಟ್ರೀಯ ವಿಚಾರ ಸಂಕಿರಣ. ಇದೊಂದು ಅಭೂತಪೂರ್ವ ಸಮಾವೇಶ.

ಸಮ್ಮೇಳನವು ಪಾಲ್ಗೊಂಡವರ ಅನುಕೂಲಕ್ಕಾಗಿ ಇಂಗ್ಲಿಷ್ ಭಾಷೆಯಲ್ಲೇ ನಡೆಯಿತು. ಇದೊಂದು ಅಭೂತಪೂರ್ವ ಸಮಾವೇಶ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ವಿ. ಕೃ. ಗೋಕಾಕರು ಅಧ್ಯಕ್ಷತೆ ವಹಿಸಿದ್ದರು, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಉದ್ಘಾಟಿಸಿದರು. ನವ ದೆಹಲಿಯ 'ಕರ್ನಾಟಕ ಭವನ'ದಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ಭಾರತದ ಬೇರೆ ಬೇರೆ ಭಾಷೆಗಳ ಖ್ಯಾತ ಲೇಖಕರಲ್ಲದೆ, ಕನ್ನಡದಿಂದಲೂ ಪ್ರತಿಷ್ಠಿತ ಲೇಖಕರು ಬಂದಿದ್ದರು. ಎ. ಎನ್. ಮೂರ್ತಿರಾವ್, ಆರ್. ಸಿ. ಹಿರೇಮಠ, ಪ್ರಭುಶಂಕರ ಮುಂತಾದವರು ಪಾಲ್ಗೊಂಡಿದ್ದರು. ಕೊನೆಯ ದಿವಸ ನಡೆದ ಅಂತರಭಾಷಾ ಕವಿಗೋಷ್ಠಿ ಒಂದು ಮರೆಯಲಾಗದ ಸಂತೋಷಕರ ಅನುಭವವಾಗಿತ್ತು. ವಿಚಾರ ಗೋಷ್ಠಿಯಲ್ಲಿ 'ಬಂಡಾಯ ಸಾಹಿತ್ಯ'ದ ಬಗ್ಗೆ, 'ದಲಿತ ಸಾಹಿತ್ಯ'ದ ಬಗ್ಗೆ ಸಹ ಪ್ರಬಂಧ ಮಂಡನೆ, ಚರ್ಚೆ ನಡೆದದ್ದು ಆ ಕಾಲದಲ್ಲೇ ಒಂದು ವಿಶೇಷ.

ಹೆಚ್ಚು ಕಡಿಮೆ ಎಲ್ಲಾ ಸದಸ್ಯರು, ಸಿಬ್ಬಂದಿ ವರ್ಗದವರು ರೈಲಿನಲ್ಲಿ ಪ್ರಯಾಣ ಬೆಳೆಸಿ ನವದೆಹಲಿ ತಲಪಿದ್ದೆವು. ಎಲ್ಲರಿಗೂ ಅಶೋಕ ಯಾತ್ರಿ ನಿವಾಸದಲ್ಲಿ ವಸತಿಯನ್ನು ಕಲ್ಪಿಸಲಾಗಿತ್ತು. ಊಟ, ತಿಂಡಿ, ವಾಹನ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಅಧ್ಯಕ್ಷರು ಎರಡು ದಿನ ಮುಂಚೆಯೇ ವ್ಯವಸ್ಥೆ ಮಾಡುವುದಕ್ಕಾಗಿ ವಿಮಾನದ ಮೂಲಕ ಬಂದಿಳಿದಿದ್ದರು. ಇಂತಹ ರಾಷ್ಟ್ರೀಯ ಕಾರ್ಯಕ್ರಮದ ಪರಿಕಲ್ಪನೆ ಮತ್ತು ಅದನ್ನು ನಡೆಸಬೇಕಾದರೆ ಬೇಕಾಗುವ ಅಗಾಧ ಪೂರ್ವ ತಯಾರಿ ನಮ್ಮ ಆತ್ಮೀಯ ಅಧ್ಯಕ್ಷ ನಿಸಾರರ ಮೆದುಳಿನ ಕೂಸು. ಅಂತಹ ರಾಷ್ಟ್ರಮಟ್ಟದ ಯಶಸ್ವಿ ಸಮ್ಮೇಳನ ಮತ್ತೆ ಅಕೆಡೆಮಿಯಿಂದ ನಡೆದದ್ದು ನನಗೆ ನೆನಪಿಲ್ಲ.

ನಮ್ಮ ಸದಸ್ಯರಲ್ಲಿ ಕೆಲವರು ದೆಹಲಿಯನ್ನೂ ನೋಡಿರಲಿಲ್ಲ. ಅವರಿಗೆ ಒಂದು ಒಳ್ಳೆಯ ಪ್ರವಾಸಾನುಭವವಾದದ್ದಲ್ಲದೆ ಆಸಕ್ತರಿಗೆ ದೆಹಲಿ, ಆಗ್ರಾ ಮುಂತಾದ ಕಡೆಯ ಚಾರಿತ್ರಿಕ ಸ್ಮಾರಕಗಳ, ದೈವಭಕ್ತಿಯುಳ್ಳವರಿಗೆ ಹೃಷಿಕೇಶ ಹರಿದ್ವಾರಗಳ ದರ್ಶನವೂ ಆದದ್ದು ಒಂದು ಬೋನಸ್ ರೂಪದ ಲಾಭ ಎನ್ನಬೇಕು! ಅದಕ್ಕಾಗಿ ಸಹ ನಮ್ಮ ಅಧ್ಯಕ್ಷರಾದ ನಿಸಾರರಿಗೆ ನಾವು ಧನ್ಯವಾದ ಸಲ್ಲಿಸಬೇಕು.

ಸಿಬ್ಬಂದಿ ವರ್ಗದ ಅವಿಸ್ಮರಣೀಯ ಶ್ರಮ, ಸರಕಾರದ ಸಹಕಾರ, ಸದಸ್ಯರ ಅಮೂಲ್ಯ ಸಲಹೆ ಸೂಚನೆಗಳನ್ನು ಪಡೆದು ಮೂರು ವರ್ಷಗಳ ಕಾಲ ಬಿಡುವಿಲ್ಲದಂತೆ ದೇಶದ ನಾನಾ ಕಡೆಗಳಲ್ಲಿ ಈ ಎಲ್ಲಾ ಸಭೆ-ಸಮಾರಂಭ, ಗೋಷ್ಠಿ, ಕಮ್ಮಟ, ಪುಸ್ತಕ ಪ್ರಕಟಣೆ, ಪುಸ್ತಕ ಪ್ರದರ್ಶನ ಏನೆಲ್ಲಾ ಕಾರ್ಯಕ್ರಮಗಳು ಸಮಾಜೋಪಯೋಗಿ, ಯಶಸ್ವಿ ಯಾಗಿ ಜರುಗಿದವು. ಇದನ್ನು ಸ್ವಂತದ ಕೆಲಸವೋ ಎಂಬಂತೆ ಹಗಲಿರುಳು ಶ್ರಮಿಸಿ, ಬೇರೆಯವರಿಗೂ ಉತ್ತೇಜನ ನೀಡಿ ನಿಭಾಯಿಸಿದ ಕವಿ ನಿಸಾರರು, ಸಾಹಿತ್ಯ

ಅಕಾಡೆಮಿಯನ್ನು ಆಧಾರವಾಗಿಸಿಕೊಂಡು ನಾಡಿನ ಜನತೆಯ ಮನೆ-ಮನಗಳಲ್ಲಿ ನಿತ್ಯೋತ್ಸವದ ಛಾಪು ಒತ್ತಿದರು.

ಗಂಟೆ ಘಳಿಗೆಗಳ ಲೆಕ್ಕವಿಡದೆ ಮನೆಮಾರು ಮರೆತು ಅಕಾಡೆಮಿಯ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ತಮ್ಮ ಪ್ರಾಧ್ಯಾಪಕ ವೃತ್ತಿಗೂ ನ್ಯಾಯವನ್ನು ಸಲ್ಲಿಸಿದರು. ಅವರಿಗೆ ನಾವೆಲ್ಲಾ 'ಫುಲ್‌ಟೈಂ ಪ್ರೆಸಿಡೆಂಟ್' ಎಂದು ತಮಾಷೆ ಮಾಡುತ್ತಿದ್ದೆವು. ಅವರ ಶಿಸ್ತಿನ, ಜರ್ಬಿನ ಅಧಿಕಾರವನ್ನು ಕಂಡವರು 'President Rule' ಹೇಗಿದೆ ಸಾರ್?' ಎಂದು ಛೇಡಿಸುತ್ತಿದ್ದರು. ಪರೋಕ್ಷವಾಗಿ ಪ್ರಶಂಸಿಸುತ್ತಿದ್ದರು.

ಕರ್ನಾಟಕ ಸಾಹಿತ್ಯ ಅಕೆಡೆಮಿಯ ಬಗೆಗೆ ಓದುಗರ ಅರಿವಿಗಾಗಿ, ಕೆಲವು ವಿಷಯಗಳನ್ನು ಉಲ್ಲೇಖಿಸಿದರೆ ಅಪ್ರಸ್ತುತವಾಗಲಾರದೆಂದು ಭಾವಿಸುತ್ತೇನೆ. ಈ ಅಕೆಡೆಮಿ ಶುರುವಾಗಿದ್ದು ೧೯೬೧ರಲ್ಲಿ. ಆಗ ಇದರ ಹೆಸರು 'ಮೈಸೂರು ರಾಜ್ಯ ಸಾಹಿತ್ಯ ಅಕೆಡೆಮಿ'. ೧೯೭೩ರಲ್ಲಿ ಅದಕ್ಕೆ ಇಂದು ಪ್ರಚಲಿತವಿರುವ 'ಕರ್ನಾಟಕ ಸಾಹಿತ್ಯ ಅಕೆಡೆಮಿ' ಹೆಸರು ಬಂದಿತು. ಆಗ ಅದರ ಕಾರ್ಯಚಟುವಟಿಕೆಗಳು ತುಂಬಾ ಸೀಮಿತವಾಗಿದ್ದವು. ಅದರ ಹಿಂದಿನ ಅಧ್ಯಕ್ಷರಾಗಿದ್ದ ಮಹನೀಯರೆಂದರೆ—ಶ್ರೀಯುತರಾದ ಎಸ್. ಆರ್. ಕಂಠಿ (ವಿದ್ಯಾಮಂತ್ರಿ—೧೯೬೧-೬೬), ಕೆ. ವಿ. ಶಂಕರೇಗೌಡ (ವಿದ್ಯಾಮಂತ್ರಿ—೧೯೬೮-೭೦). ಅ.ನ.ಕೃ. (೧೯೭೧), ಆದ್ಯ ರಂಗಾಚಾರ್ಯ (೧೯೭೧-೭೨), ಎ. ಆರ್. ಬದರೀನಾರಾಯಣ್ (ವಿದ್ಯಾಮಂತ್ರಿ ೧೯೭೩-೭೪), ಎಂ. ಮಲ್ಲಿಕಾರ್ಜುನ ಸ್ವಾಮಿ (ವಿದ್ಯಾಮಂತ್ರಿ ೧೯೭೪-೭೬), ಆರ್. ಗುಂಡೂರಾವ್ (ಮುಖ್ಯಮಂತ್ರಿ—೧೯೭೬), ಕೆ. ಎಚ್. ಶ್ರೀನಿವಾಸ್ (ವಾರ್ತಾ ಮತ್ತು ಪ್ರಚಾರ ಇಲಾಖೆ—೧೯೭೬), ಡಾ. ಎಂ. ಶಿವರಾಮ್ ('ರಾಶಿ' ೧೯೭೭-೮೦), ಡಾ. ಹಾ. ಮಾ. ನಾಯಕ (೧೯೮೦-೮೪), ಪ್ರೊ. ಕೆ. ಎಸ್. ನಿಸಾರ್ ಅಹಮದ್ (೧೯೮೪-೮೭).

ಅವರು ೭೦ ವರುಷಕ್ಕೆ ಅಡಿಯಿಟ್ಟ ಸಂದರ್ಭದಲ್ಲಿ (೨೦೦೫), 'ನಿಸಾರ್-೭೦' ಕಾರ್ಯಕ್ರಮದ ಕವಿಗೋಷ್ಠಿಯಲ್ಲಿ ಭಾಗವಹಿಸುವ ಅಪೂರ್ವ ಅವಕಾಶ ನನಗೆ ಲಭ್ಯವಾಯಿತು. ಅಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಪ್ರಾರಂಭವಾಗಿ ಕಿಕ್ಕಿರಿದಿದ್ದ ಪ್ರೇಕ್ಷಕರೆಲ್ಲಾ ನಿಸಾರರನ್ನು ಎದುರುನೋಡುತ್ತಿದ್ದರು.

ಮುಕ್ಕಾಲು ಗಂಟೆ ಕಳೆದರೂ ಅವರು ಬಾರದಿದ್ದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಸಭಿಕರೊಬ್ಬರು ನನ್ನ ಕಿವಿಯಲ್ಲಿ, 'ನಿಸಾರ್‌ರವರು ಟೈಮಿಗೆ ಸರಿಯಾಗಿ ಕಾರ್ಯಕ್ರಮಕ್ಕೆ ಬಂದಿದ್ದರಂತೆ ಮೇಡಂ. ಪುನಃ ಯಾಕೋ ಗೊತ್ತಿಲ್ಲ, ಮನೆಗೆ ಹೋದರಂತೆ!' ಎಂದು ಪಿಸುಗುಟ್ಟಿದರು.

ಅವರು ವೇದಿಕೆಗೆ ಬರುವವರೆಗೂ ಸುಮ್ಮನೆ ಕುಳಿತಿರಲಾಗದೆ ನಿಸಾರರನ್ನು ಕುರಿತು ತಮಾಷೆ ಮಾಡಬೇಕೆನ್ನಿಸಿತು ನನಗೆ. ಆಗ ಹೊಸೆದದ್ದು ಈ ಆಶು ಕವನ. ಇದನ್ನು ಆಗ ಓದಿದಾಗ ಸಮಯೋಚಿತವೆನ್ನಿಸುವ ಹಾಗೆ, ಅವರು ಎಪ್ಪತ್ತು ವಸಂತಗಳನ್ನು ಪೂರೈಸಿ ೭೧ರಲ್ಲಿ ಮುನ್ನಾಗುತ್ತಿರುವ ಸಂದರ್ಭದಲ್ಲಿ ಹೊರ ಬರುತ್ತಿರುವ ಗೌರವ ಗ್ರಂಥಕ್ಕೂ ಸೂಕ್ತವೆಂದು ನನಗನ್ನಿಸಿದೆ. ಆ ದಿಢೀರ್ ಪದ್ಯವನ್ನು ನಿಮ್ಮೆದುರಿಗೆ ನಿವೇದಿಸಿ, ಈ

ಬರಹವನ್ನು ಮುಗಿಸುತ್ತೇನೆ.

ಸಾರ್... ನಿಸಾರ್...
ಸಾರ್... ಸಾರ್... ಸಾರ್...
ಕಾಣುವಲ್ಲರಲ್ಲ ಇಲ್ಲಿ ನಾಡೋಜ ನಿಸಾರ್
ಕವನ ವಾಚನ ಅವರಿಗಾಗಿ,
ಕೇಳುವಲ್ಲರಲ್ಲ ಕುಂತು.
ವರ್ಷ ೭೦ ಕಳೆದರೂನು ಹುಡುಗಾಟ್ಕೆ ಬಿಡರು ನೋಡು,
ಹಿಡಿದಿರಬೇಕು ಈಟೊತ್ತಿಗಾಗ್ಲೆ
ಇವರ್ ಗಾಡಿ ಬನಶಂಕ್ರಿ ರೋಡು.
ಮನಿ ಸಂಸಾರ ಎಲ್ಲಿ ಹೋಗ್ತದ, ಈವತ್ತಾರ ಜರಾ ಬರ್ರಿ;
ವಯಸ್ಸು ಮಾತ್ರ ನಿಂದ್ರುವಲ್ದು ಓಡುತಿರತದ ಖೋಡಿ.
ಅಭಿಮಾನಿಗಳೆಲ್ಲ ಜಮಾಯ್ಸಿದೇವಿ ಬರ್ರಿ ನಮ್ಮ ಜೋಡಿ
ಅಭಿನಂದನೆ ತಿಳಿಸಲಿಕ್ಕ ಹತ್ತೇವಿ
ದಯವಿಟ್ಟು ಸ್ವೀಕಾರ ಮಾಡ್ರಿ.
ನಿಮ್ಮ ಜೋಡಿ ಜೋಡಿ ಬರಲಿಕ್ಕ ಹತ್ತೇವಿ
ಚಿಂತಿ ಬಿಟ್ಟು ಬಿಡ್ರಿ.
ಎರಡೂ ಧರ್ಮದ ಕೊಂಡಿ ನೀವು
ಹೆಮ್ಮೆ ಪಡತೇವಿ ನೋಡ್ರಿ.
ಹಿರಿಯೋರ್ ಕಿರಿಯೋರ್ ಹಾರೈಸ್ತೀವಿ
ಲೇಖನಿ ಗಟ್ಟಿ ಹಿಡೀರಿ;
ನಾಡ ಜನರ ಹಾಡು ಪಾಡು
ಬರಿಯೂದ್ ಮರಿಬ್ಯಾಡ್ರಿ.

ಅನೀತಿಯುತ ಕುಟಿಲೋಪಾಯಗಳಿಂದ, ತಗಲೂಫಿ ವಿದ್ಯೆಗಳಿಂದ ದಕ್ಕುತ್ತಿರುವ ಅಂತಸ್ತು, ಸ್ವಪ್ರತಿಷ್ಠೆ, ಸಂಪತ್ತು; ಎಲ್ಲೆಲ್ಲೂ ವಿಕಟಾಟ್ಟಹಾಸ ಮಾಡಿರುವ ರುಷುವತ್ತು, ದಗಾಕೋರ ಪ್ರವೃತ್ತಿ ನರನನ್ನು 'ನರ ಪ್ರಾಣಿ'ಯ ಮಟ್ಟಕ್ಕೆ ಇಳಿಸಿವೆ. ದೇವರುಗಳನ್ನೇ ಕದ್ದು ಪರ ದೇಶಗಳಿಗೆ ಗಡೀಪಾರು ಮಾಡಿ ಮಾರುತ್ತಿರುವಾಗ ದೇವರಿಗೆ ಒದಗಿರುವ ಪರದೇಶಿತನ, ಅಸಹಾಯಕತೆ ಮನುಷ್ಯನಿಂದಲೂ ಬಗೆಹರಿಸಲು ಸಾಧ್ಯವಿಲ್ಲ! ಈ ದಿನಂಪ್ರತಿಯ ತರಕಟಾಲು ಆಗುಹೋಗುಗಳೆದುರು ಸಾಮಾಜಿಕನ ಸದಸದ್ವಿವೇಕ, ಮೌಲ್ಯಪ್ರಜ್ಞೆ ಗಟ್ಟಿಯಾಗಿ ನೆಲೆಯೂರಲು ಹೇಗೆ ತಾನೆ ಶಕ್ಯ? ಇವುಗಳನ್ನು ಹಾಲಿ ಬದುಕಿನಲ್ಲಿ ಹುಡುಕಹೋಗುವುದು ಅಡವಿಯಲ್ಲಿ ಒಂಟೆಯನ್ನು ಬೆದಕುವಂತೆ ಅರಣ್ಯ ರೋದನವಾದೀತು.

(ಹೊಲೆಗೆಟ್ಟ ಬದುಕು)



ಪ್ರತಿಭೆಯನ್ನು ಪ್ರೋತ್ಸಾಹಿಸುವ ಗುಣವಂತ

♦ *ಭವಾನಿ ಗಂಗಾಧರ್*

ಯಾರ ಬಗ್ಗೆಯಾದರೂ ಮಾತನಾಡುವಾಗ ಜನರು ಹೇಳುವುದನ್ನು ಕೇಳಿದ್ದೇನೆ. 'ಅವರು ಒಳ್ಳೆಯವರಿಗೆ ಒಳ್ಳೆಯವರು, ಕೆಟ್ಟವರಿಗೆ ಕೆಟ್ಟವರು' ಅಂತ. ಆದರೆ, ನಮ್ಮ ನಿಸಾರ್ ಅಹಮದ್ ಅವರು ಮಾತ್ರ ನನ್ನ ಅನುಭವಕ್ಕೆ ಬಂದಂತೆ, 'ಒಳ್ಳೆಯವರಿಗೂ ಒಳ್ಳೆಯವರು; ಕೆಟ್ಟವರಿಗೂ ಒಳ್ಳೆಯವರು.'

ನಿಸಾರ್ ಅವರಲ್ಲಿ ಬರೀ ಮಾನವೀಯತೆಯಲ್ಲ; ದೈವಿಕತೆ ಇದೆ. ಅವರನ್ನು ನೆನೆದಾಗ ನನ್ನ ಮನಸ್ಸಿನಲ್ಲಿ ಆತ್ಮೀಯ ಬಾಂಧವ್ಯದ ಒರತೆ ಜಿನುಗುತ್ತದೆ. ಅವರ ಬಗ್ಗೆ ಶುಭ ಭಾವನೆಗಳ ಸಂಕಲ್ಪಗಳು ಉತ್ಪತ್ತಿಯಾಗುತ್ತವೆ. ೨೫-೨೬ ವರ್ಷಗಳ ಹಿಂದಿನ ಆತ್ಮೀಯತೆಯ ಅನುಬಂಧವೇ ಇಂದೂ ಇದೆ. ಅದು 'out of sight is out of mind' ಆಗಲಿಲ್ಲ. [ಕೆಲವೊಮ್ಮೆ ಆರು ತಿಂಗಳು ಯಾ ವರ್ಷಕ್ಕೊಮ್ಮೆ ಭೇಟಿ ಯಾದರೂ ಕೂಡ.]

ಎಲ್ಲರೊಂದಿಗೂ ಆ ಚೇತನದ ಸ್ನೇಹವೇ ಅಂತಹುದು. ಪ್ರತಿಯೊಬ್ಬರಿಗೂ 'ನಮಗೆ ಇವರು ತುಂಬಾ ಹತ್ತಿರದವರು' ಎಂದು ಅನ್ನಿಸುವಂತಹ ನಡವಳಿಕೆಯ ಅಪೂರ್ವ ವ್ಯಕ್ತಿತ್ವ; ಅಪರೂಪದ ಸಜ್ಜನಿಕೆ.

ಸರಳತೆಯ ಜೀವನ, ವಿಶಾಲ ದೃಷ್ಟಿಕೋನ; ಸರ್ವರಿಗೂ ಅಪ್ಯಾಯಮಾನ. ಅವರಲ್ಲಿ ಒಂದು ದಿನವೂ ನಾನು ಅಹಂಭಾವದ ನಡವಳಿಕೆಯನ್ನು ಕಂಡಿದ್ದಿಲ್ಲ. ಮನೆಗೆ

ಹೋದರೂ ಅಷ್ಟೇ, ಸಭೆ, ಸಮಾರಂಭಗಳಲ್ಲಾದರೂ ಅಷ್ಟೇ. ಪ್ರೀತಿಯನ್ನು, ವಿಶ್ವಾಸವನ್ನು ಗುರುತಿಸಿ ಗೌರವ ಕೊಡುವ ಬೆಚ್ಚನೆಯ ಸಹೃದಯಿ.

ನನಗೆ ಅವರ ಮೊದಲ ಭೇಟಿಯಾದದ್ದು ೧೯೭೭-೧೯೭೭ಲರಲ್ಲಿ; ಆಚಾರ್ಯ ಪಾಠಶಾಲಾ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಗ. ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಅಂತರಕಾಲೇಜು ಕವಿಗೋಷ್ಠಿ ಏರ್ಪಡಿಸಿದ್ದರು: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಬಳಿಯಿರುವ ಒಂದು ಹಳ್ಳಿಯಿಂದ ಪಿ.ಯು.ಸಿ. ಮುಗಿಸಿದ ನನ್ನನ್ನು, ಇಲ್ಲೇ ನೌಕರಿಯಲ್ಲಿದ್ದ ನಮ್ಮ ಅಣ್ಣ ಪದವಿ ಓದಿಸಲು ಬೆಂಗಳೂರಿಗೆ ಕರೆತಂದಿದ್ದರು. ನಾನೇನೂ ಕನ್ನಡವನ್ನು ಪ್ರಮುಖ ವಿಷಯವಾಗಿಯೂ ತೆಗೆದುಕೊಂಡಿರಲಿಲ್ಲ; ಅಥವಾ ನಾನು ಏನಾದರೂ ಬರೆಯುತ್ತೇನೆ ಅನ್ನುವುದೂ ಈ ಕಾಲೇಜಿನವರಿಗೆ ಗೊತ್ತಿರಲಿಕ್ಕಿಲ್ಲ. ಆದರೂ ಅದೇಕೋ ನನ್ನ ಹೆಸರನ್ನು ಕಳಿಸಿದ್ದರು. ಆದರೆ ಈ ಘಟನೆ ಒಂದು ಆತ್ಮೀಯ ಋಣಾನುಬಂಧದ ಬುನಾದಿಯಾಗಲಿದೆ ಎಂಬುದು ಪೂರ್ವನಿರ್ಧರಿತ ವಿಧಿ ಲಿಖಿತವಾಗಿತ್ತು.

ಎರಡು ದಿನದ ಸಮಯಾವಕಾಶವಿತ್ತು—ಕವನದ ರಚನೆಗೆ. ಆಂಧ್ರದಲ್ಲಿ ಆಗಷ್ಟೇ ಅಪ್ಪಳಿಸಿದ್ದ ಚಂಡ ಮಾರುತದ ಭೀಕರ ಸುದ್ದಿ ಎಲ್ಲರನ್ನೂ ತಲ್ಲಣಗೊಳಿಸಿತ್ತು. ಅದರ ಬಗ್ಗೆಯೇ ಬರೆದೆ.

‘ರಕ್ಕಸನಂತೆ ಬಂತು ಚಂಡ ಮಾರುತ
ಪ್ರಮದದಿಂದ ಪ್ರತ್ಯರ್ಥಿಯಂತೆ
ಪ್ರಧ್ವಂಸ ಮಾಡುವೆ ಎನ್ನುತ||’

ಈ ರೀತಿಯಲ್ಲಿ ಆರಂಭಗೊಂಡ ಕವಿತೆಯನ್ನು ರಚನೆ ಮಾಡಿ ಸಭೆಯಲ್ಲಿ ಓದಿದೆ. ಅಧ್ಯಕ್ಷತೆ ವಹಿಸಿದ್ದವರೇ ಪ್ರೊ. ಕೆ. ಎಸ್. ನಿಸಾರ್ ಅಹಮದ್. ಆಮೇಲೆ ತಮ್ಮ ಭಾಷಣದಲ್ಲಿ ಅವರು ‘ಪ್ರಸಕ್ತ ವಿದ್ಯಾರ್ಥಿಗಳು ಪ್ರಸ್ತುತ ವಿದ್ಯಮಾನಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೂ ಅಲ್ಲದೆ, ಆ ಬಗ್ಗೆ ಎಷ್ಟು ಉತ್ತಮವಾಗಿ ಬರೆಯಬಲ್ಲರು ಎಂಬುದಕ್ಕೆ ಭವಾನಿಯವರು ಬರೆದ `ಚಂಡ ಮಾರುತ' ಕವನ ಒಳ್ಳೆಯ ಉದಾಹರಣೆ' ಎಂದು ಶ್ಲಾಘಿಸಿ ಪ್ರೋತ್ಸಾಹಿಸಿದರು. ಅಲ್ಲಿ ಮೊದಲ ಭೇಟಿಯಲ್ಲೇ ಅವರು ನನ್ನ ಮನಸ್ಸಿನಲ್ಲಿ ಒಂದು ಆತ್ಮೀಯ ಸದ್ಭಾವನೆಯನ್ನು ಸ್ಫುರಿಸಿದ್ದರು.

ತದನಂತರ ಇನ್ನೊಂದೆರಡು ಸಲ ಬಸ್ಸಿನಲ್ಲಿ ಕಾಣಸಿಕ್ಕಿದಾಗಲೂ ಹೆಸರಿನ ಸಮೇತ ಗುರುತು ಹಿಡಿದು ಮಾತನಾಡಿಸಿದ್ದರು. ನಾನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನಲ್ಲಿ ಉದ್ಯೋಗಿಯಾಗಿ ಸೇರಿದ ಮೇಲೆ ಬ್ಯಾಂಕಿನ ಕನ್ನಡ ಬಳಗದ ಆಶ್ರಯದಲ್ಲಿ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರನ್ನು ಸನ್ಮಾನಿಸುವ ಸಂದರ್ಭದಲ್ಲಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರೂ ಆಹ್ವಾನಿತರಾಗಿದ್ದರು. ಅವರನ್ನು ಆಹ್ವಾನಿಸಲು ಬಳಗದ ವತಿಯಿಂದ ನಾನು ಮತ್ತು ನಮ್ಮ ಇನ್ನೋರ್ವ ಸಹೋದ್ಯೋಗಿ ಶ್ರೀ ಶೃಂಗೇಶ್ವರ ಶರ್ಮ ಹಾಗೂ ಇನ್ನೂ ಕೆಲವರು ನಿಸಾರ್ ಅವರ ಮನೆಗೆ ಹೋಗಿದ್ದೆವು. ಅತ್ಯಂತ ಪ್ರೀತಿಪೂರ್ವಕವಾಗಿ ನಮ್ಮನ್ನು ಬರಮಾಡಿಕೊಂಡದ್ದಲ್ಲದೆ, ತಮ್ಮ ಮನೆಯವರೆಲ್ಲರ ಪರಿಚಯವನ್ನೂ

ಮಾಡಿಕೊಟ್ಟಿದ್ದರು. 'ಇಷ್ಟು ಖ್ಯಾತಿವೆತ್ತ ಕವಿ ಇಷ್ಟೊಂದು ಸರಳವಾಗಿದ್ದಾರಲ್ಲ' ಎಂದೆನ್ನಿಸಿ ನಮಗೆಲ್ಲಾ ಆಶ್ಚರ್ಯ. ಈ ರೀತಿ ಪ್ರಾರಂಭವಾದ ಪರಿಚಯ ಆಗಾಗ ನಡೆಯುತ್ತಿದ್ದ ಭೇಟಿಯಿಂದ ಉಳಿದು, ಬೆಳೆದು ವಿಶ್ವಾಸದ ನಂಟಾಗಿ ಇಂದಿನವರೆಗೂ ನಿಂತಿದೆ.

ಕನ್ನಡ ಭವನದ 'ನಯನ' ಸಭಾಂಗಣದಲ್ಲಿ ಹಿಂದೊಮ್ಮೆ ನಿಸಾರ್ ಅಹಮದ್ ಅವರ ಜೊತೆಗೆ 'ಮನೆಯಂಗಳದಲ್ಲಿ ಮಾತುಕತೆ' ನಡೆಯುತ್ತಿತ್ತು. ಪ್ರಶ್ನೋತ್ತರ ಕಾರ್ಯ ಕ್ರಮದಲ್ಲಿ ಸಭಿಕರಿಂದ ಒಂದು ಪ್ರಶ್ನೆ ಬಂದಿತು. 'ಸರ್, ನಿಮ್ಮ ಕವನಗಳಲ್ಲಿ ಆಧ್ಯಾತ್ಮಿಕತೆ ಯನ್ನು ಬಿಂಬಿಸುವಂತಹವು ಯಾವುದಿವೆ?' ಕವಿ ನೆನಪಿಸಿಕೊಂಡು 'ಚೇತನಾಚೇತನದ ತಿರುಳು ನೀನಾಗಿರುವೆ' ಅಂತ ಒಂದು ಕವನವನ್ನು ಹೆಸರಿಸಿದರು. ಸಭೆಯಲ್ಲಿ ಆಸನಗಳು ಭರ್ತಿಯಾಗಿದ್ದು ನಾನು ಹಿಂದೆ ಒಂದು ಮೂಲೆಯಲ್ಲಿ ನಿಂತಿದ್ದೆ. ನನಗೂ ಒಂದು ನೆನಪಾಯಿತು. 'ಓ! ಅಸೀಮ ಶಕ್ತಿಯೆ' ಅಂತ ಇನ್ನೊಂದು ಕವನದ ಹೆಸರು ಹೇಳಿದೆ. ನನ್ನ ಧ್ವನಿಯಿಂದಲೇ ನಿಸಾರ್ ಅವರು 'ನನ್ನ ಸೋದರಿ ಭವಾನಿಯವರು ನನಗೆ ನೆನಪಿಸುತ್ತಿದ್ದಾರೆ' ಅಂತ ಗುರುತಿಸಿ ಹೇಳಿದರು.

ಇನ್ನೊಂದು ಸಲ ನಿಸಾರರ 'ಸ-ರಸೋಕ್ತಿಗಳ ಸಂಗಾತಿ' ಪುಸ್ತಕದ ಬಿಡುಗಡೆಯ ಸಮಾರಂಭಕ್ಕೆ ಹೋಗಿದ್ದೆ. ನಿಸಾರರು ತಮ್ಮ ಭಾಷಣದ ಸಮಯದಲ್ಲಿ 'ನನ್ನ ಆತ್ಮೀಯರು ಅನೇಕ ಮಂದಿ ಬಂದಿದ್ದಾರೆ'—ಅಂತ ದೊಡ್ಡ ದೊಡ್ಡವರ ಹೆಸರುಗಳನ್ನು ಹೇಳಿ, 'ಹಾಗೆಯೇ ನನ್ನ ಸೋದರಿ ಭವಾನಿಯವರು ಬಂದಿದ್ದಾರೆ' ಅಂತ ಹೇಳಿದರು. ಇದೇ ರೀತಿ ಇನ್ನೊಮ್ಮೆ 'ಇಸ್ರೋ'(ISRO)ದ ಒಂದು ಸಮಾರಂಭದಲ್ಲೂ ನನ್ನನ್ನು ಗುರುತಿಸಿ ಹೆಸರು ಹೇಳಿದರು. ಹೀಗೆ, ಅವರು ನನ್ನನ್ನು ಗುರುತಿಸಿ ಹೆಸರಿಸುವುದು ಹೆಮ್ಮೆ, ಖುಷಿಯನ್ನು ತರುತ್ತಿದ್ದರೂ ಧನ್ಯತಾಭಾವವನ್ನುಂಟುಮಾಡುತ್ತಿದ್ದರೂ 'ಛೇ! ಅಷ್ಟು ದೊಡ್ಡ ಕವಿ, ಏನೂ ಅಲ್ಲದ ನನಗೆ ಯಾಕಿಷ್ಟೊಂದು ಆದರ ತೋರಿಸ್ತಾರೆ?' ಅಂತ ಆಶ್ಚರ್ಯದ ಜೊತೆಗೆ ಸಂಕೋಚ ವನ್ನೂ ಪಡುತ್ತಿದ್ದೆ. ಅವರೊಂದಿಗಿನ ಕಾಲು ಶತಮಾನದಷ್ಟು ದೀರ್ಘ ಒಡನಾಟದಲ್ಲಿ ಅರಿವಾಯಿತು—ಅವರು ಯಾವುದೇ ಪದವಿಗೆ, ಆಡಂಬರಕ್ಕೆ, ಬಾಹ್ಯ ತೋರುಗಾಣಿಕೆಗೆ ಮಣೆ ಹಾಕುವವರಲ್ಲ; ಅಂತಃಸತ್ವಕ್ಕೆ, ವಿಶ್ವಾಸಕ್ಕೆ, ಸ್ನೇಹಕ್ಕೆ ಗೌರವ ಕೊಡುವಂತಹವರು ಎಂದು.

ನಮ್ಮಲ್ಲೇನಾದರೂ ಪ್ರತಿಭೆ ಇದ್ದರೆ ಅದನ್ನು ಗಮನಿಸಿ ಪ್ರೋತ್ಸಾಹಿಸುವುದು ದೊಡ್ಡವರ ದೊಡ್ಡತನ. ನಿಸಾರರಲ್ಲಿ ಈ ಗುಣ ಧಾರಾಳವಾಗಿ ಇದೆ. ಕೆಲವು ವರ್ಷಗಳ ಹಿಂದೆ ಬಿ.ಎನ್.ಎಮ್. ಕಾಲೇಜಿನಲ್ಲಿ ಕವಿಗೋಷ್ಠಿಯನ್ನು ಏರ್ಪಡಿಸಿದ್ದರು. ನಿಸಾರರ ಅಧ್ಯಕ್ಷತೆ. 'ಕವಿಗೋಷ್ಠಿಯ ನಿರೂಪಣೆ ನೀವು ಮಾಡೀಮ್ಮಾ' ಅಂತ ನಿಸಾರರು ನನಗೆ ಅವಕಾಶ ಕೊಟ್ಟರು. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೂ ನಿರೂಪಕಿಯಾಗಿ ಅನುಭವ ಇರಲಿಲ್ಲ. 'ನೀವು ಮಾಡ್ತೀರಿ ಅನ್ನೋ ಭರವಸೆ ನನಗಿದೆ, ಮಾಡಿ. ಕವಿಗಳ ಫೋನ್ ನಂಬರ್ ಕೊಡ್ತೀನಿ. ಅವರ ವಿವರಗಳನ್ನು ಅವರಿಂದಲೇ ಕೇಳಿ ಮಾತನಾಡಿ' ಅಂದರು. ಕೆಲವರದ್ದನ್ನು ಅವರೇ ಕೊಟ್ಟರು. ಸರಿ, ಕವಿಗೋಷ್ಠಿ ಬಹಳ ಚೆನ್ನಾಗಿ ನಡೆಯಿತು. ನಿರೂಪಕಿಯಾಗಿ ನಾನೂ ತಡವರಿಸಲಿಲ್ಲ. ಆ ಕೆಲಸವನ್ನು ಧೈರ್ಯವಾಗಿಯೇ ಮಾಡಿದೆ.

ನಿಸಾರರ ಅಭಯ ಹಸ್ತ ನನ್ನ ಮೇಲಿತ್ತಲ್ಲಾ? ಕೊನೆಗೆ ನಿಸಾರರು ತಮ್ಮ ಭಾಷಣದಲ್ಲಿ 'ಭವಾನಿಯವರು ಎಷ್ಟು ಸೊಗಸಾಗಿ ನಿರೂಪಣೆ ಮಾಡಿದ್ದಾರೆ. ಅವರ ಭಾಷೆ, ಉಚ್ಚಾರಣೆ ಎಷ್ಟು ಸ್ಪಷ್ಟ, ಶುದ್ಧವಾಗಿದೆ' ಅಂತ ಪ್ರಶಂಸೆಯ ಮಾತಾಡಿದರು. ಕವಿಗೋಷ್ಠಿಯ ನಿರ್ವಾಹಕರೂ ಬಿ.ಎನ್.ಎಂ. ಕಾಲೇಜಿನ ಪ್ರಿನ್ಸಿಪಾಲರೂ ಕೂಡಾ 'ನಿರೂಪಣೆ ಮಾಡೋದು ಹೇಗೆ ಅಂತ ನಮ್ಮ ವಿದ್ಯಾರ್ಥಿಗಳಿಗೆ ಬಂದು ಕಲಿಸಿ ಕೊಡಿ' ಎಂದು ಹೇಳಿ ನನ್ನನ್ನು ಅಭಿನಂದಿಸಿದರು.

'ಯವನಿಕಾ'ದಲ್ಲಿ ನಿಸಾರರ 'ಸಮಗ್ರ ಗದ್ಯ ಬರಹಗಳು' ಸಂಪುಟದ ಬಿಡುಗಡೆಯ ಸಮಾರಂಭದಲ್ಲಿ ನನಗೆ ಪ್ರಾರ್ಥನಾ ಗೀತೆ ಹಾಗೂ ಮತ್ತೊಂದೆರಡು ಹಾಡು ಹಾಡುವ ಅವಕಾಶವನ್ನು ಕೊಟ್ಟಿದ್ದರು. ನಾವು ನಾಲ್ಕೈದು ಜನ ಗಾಯಕಿಯರಿಗೆ ಆ ಸಭೆಯಲ್ಲಿ ಹಾಡುವ ಭಾಗ್ಯ ದೊರೆಯಿತು. ಹಾಗೆಯೇ, ೧೦ ವರ್ಷಗಳ ಹಿಂದೆ ದೇವನಹಳ್ಳಿ ತಾಲೂಕಿನ ವಿಜಯಪುರದಲ್ಲಿ ಅವರು ಅಧ್ಯಕ್ಷತೆ ವಹಿಸಿದ್ದ ೪ನೆಯ ಬೆಂಗಳೂರು ಜಿಲ್ಲೆ ಗ್ರಾಮಾಂತರ ಸಾಹಿತ್ಯ ಸಮ್ಮೇಳನದಲ್ಲೂ ಕೂಡಾ ನಮಗೆ ಅವರ ಹಾಡುಗಳನ್ನು ಹಾಡಲು ಅವಕಾಶವನ್ನು ಕಲ್ಪಿಸಿಕೊಟ್ಟರಲ್ಲದೆ, ನಮ್ಮ ಊಟ-ತಿಂಡಿಯ ವಿಚಾರದಲ್ಲೂ ಅತ್ಯಂತ ಕಳಕಳಿಯಿಂದ ವಿಚಾರಿಸಿಕೊಳ್ಳುತ್ತಿದ್ದರು. ಅವರನ್ನು ದೊಡ್ಡ ಮೆರವಣಿಗೆಯಲ್ಲಿ ಊರಲ್ಲಿ ಮೆರೆಸಿ ಅಲ್ಲಿನ ಜನ ತುಂಬು ಅಕ್ಕರೆಯನ್ನು ತೋರಿದರು. ಆದರೂ ನಿಸಾರರ ಮುಖದಲ್ಲಿ, ಚಹರೆಯಲ್ಲಿ ಆ ವೈಭವದ ಸ್ಥಾನದ ಕೊಂಚವಾದರೂ ನಶೆ ಏರಿದ್ದನ್ನು ನಾನು ಗಮನಿಸಲಿಲ್ಲ. ಅವರ ತಿಳಿಯಾದ ಕಣ್ಣುಗಳಲ್ಲಿ, ಸರಳ ನಡವಳಿಕೆಯಲ್ಲಿ, 'ತನ್ನದೇನೂ ಇಲ್ಲ; ಎಲ್ಲ ಆ ಶಕ್ತಿಯದು' ಅನ್ನುವ ನಿರ್ಲಿಪ್ತ ಭಾವನೆ. ಇದನ್ನು ಅವರ ಅನೇಕ ಸನ್ಮಾನ ಕಾರ್ಯಕ್ರಮ ಗಳಲ್ಲಿ ನಾನು ಗಮನಿಸಿದ್ದೇನೆ; ಹೃದಯ ತುಂಬಿ ಬಂದು ಸಂತೋಷಪಟ್ಟಿದ್ದೇನೆ.

ಅವರನ್ನು ಯಾರಾದರೂ ಹೊಗಳುತ್ತಿದ್ದರೆ, ಆ ಸಂದರ್ಭದಲ್ಲಿ ತಕ್ಷಣ ಮೇಲೆ ನೋಡಿ ಕೈಯನ್ನು ಕೆನ್ನೆಗೊತ್ತಿ, ಆ ಅಗೋಚರ ಶಕ್ತಿಗೆ ಒಪ್ಪಿಸುತ್ತಿದ್ದರು. ಅವರೇ ಬರೆದಿರುವಂತೆ 'ಕಾಣದಿದ್ದರೂ ಕಾಯುತಿರುವ ನೇತ್ರ'ಕ್ಕೆ ನಮಿಸುತ್ತಿದ್ದರು. ಆ ಅಸೀಮ ಶಕ್ತಿಯಲ್ಲಿ, ಆತನ ಅನಂತ ಲೀಲೆಯಲ್ಲಿ ಅಚಲ ನಂಬಿಕೆಯುಳ್ಳವರು, ನಮ್ಮ ಸಚ್ಚಾರಿತ್ರದ ಸಹೃದಯ ಕವಿ.

ಕೆಲವು ವರ್ಷಗಳ ಹಿಂದೆ ಅವರಿಗೆ ಹೃದಯದ ಬೈಪಾಸ್ ಆಪರೇಷನ್ ಆಗಬೇಕಾಗಿದೆ ಎಂದು ಗೊತ್ತಾದಾಗ ಮನಸ್ಸಿಗೆ ಸಹಿಸಲು ಕಷ್ಟವಾದ ತಳಮಳವಾಗುತ್ತಿತ್ತು. ನೋಡಿ ಮಾತಾಡಿಸಲೆಂದು ಹೋದಾಗ ಅವರೂ ಕೊಂಚ ಅಧೀರರಾಗಿ ಭಾಸವಾಗುತ್ತಿದ್ದರು. ಕವಿ ಹೃದಯ ಘಾಸಿಗೊಂಡಿದ್ದು ಸಹಜವೇ. ಆದರೆ ಆಪರೇಷನ್ ಆದ ಮೇಲೆ ನೋಡಲು ಹೋದಾಗ ತೃಪ್ತಿಯ ನಿಟ್ಟುಸಿರು ಹೊಮ್ಮುತ್ತಿತ್ತು. ಮಾತ್ರವಲ್ಲ, ಶಸ್ತ್ರಚಿಕಿತ್ಸೆ ಮಾಡಿದ ಡಾ. ದೇವಿಪ್ರಸಾದ್ ಶೆಟ್ಟಿಯವರನ್ನು ಅತ್ಯಂತ ಕೃತಜ್ಞತೆಯಿಂದ ನೆನೆಸಿಕೊಂಡರು.

ನಿಸಾರರ ಆಪ್ತ ಬಳಗದಲ್ಲಿ ನನಗೂ ಒಂದು ಪುಟ್ಟ ಜಾಗ ಕೊಟ್ಟಿದ್ದಾರೆ. ಅಂತೆಯೇ ಅವರ ಮನೆಗೆ ಯಾವಾಗ ಬೇಕಾದರೂ ಹೋಗಿ ಬರುವ ಸ್ವಾತಂತ್ರ್ಯವನ್ನೂ ಕೊಟ್ಟಿದ್ದಾರೆ.

(ಆದರೆ ನಾನು ಅದನ್ನು ದುರುಪಯೋಗ ಪಡಿಸಿಕೊಂಡಿಲ್ಲವೆಂಬುದು ಬೇರೆ ಮಾತು.) ಫೋನ್ ಮಾಡಿಯೇ ಹೋಗುತ್ತಿದ್ದೆ.

ಕನ್ನಡ ಚಿತ್ರರಂಗದ ಮೇರು ನಟ ಡಾ. ರಾಜ್‌ಕುಮಾರ್ ಅವರೊಂದಿಗೆ ನಿಸಾರರ ಆತ್ಮೀಯ ಸ್ನೇಹ, ಆ ಮಹಾನ್ ಕಲಾವಿದರು ಕವಿಯ ಮನೆಗೆ ಆಗಾಗ ಭೇಟಿ ನೀಡುವಂತೆ ಮಾಡಿತ್ತು. ನಿಸಾರರು ನನಗೆ ಫೋನ್ ಮಾಡಿ ಮುಂಚೆಯೇ ತಿಳಿಸುತ್ತಿದ್ದರು: 'ಜಾಸ್ತಿ ಯಾರಿಗೂ ಗೊತ್ತಾಗುವುದು ಬೇಡಮ್ಮ, ನೀವು ಮಕ್ಕಳನ್ನು ಕರೆದುಕೊಂಡು ಬನ್ನಿ' ಅಂತ. ಕನ್ನಡ ನಾಡಿನ ಅತ್ಯಂತ ಶ್ರೇಷ್ಠ, ಅನನ್ಯ ನಟನನ್ನು ನೋಡುವ, ಮಾತಾಡಿಸುವ ಅವಕಾಶ ನನಗೆ ಮತ್ತು ನನ್ನ ಮಕ್ಕಳಿಗೆ ನಿಸಾರರ ಮೂಲಕ ದೊರಕಿತು. ಅದಕ್ಕಾಗಿ ನಿಸಾರರಿಗೆ ನಾನು ಆಭಾರಿ.

ಇನ್ನೊಂದು ಘಟನೆ ನೆನಪಾಗುತ್ತಿದೆ: ಆ ದಿನ ಬೆಂಗಳೂರು ಬಂದ್. ನಾನು ಅಕಸ್ಮಾತ್ ನನ್ನ ದ್ವಿಚಕ್ರ ವಾಹನದಲ್ಲಿ ನಿಸಾರರ ಪದ್ಮನಾಭ ನಗರದ ಮನೆಯ ಮುಂದಿನ ರಸ್ತೆಯಲ್ಲಿ ಹಾದು ಹೋಗುತ್ತಿದ್ದೆ. ಕವಿಗಳು ಸೂಟು ಬೂಟು ಹಾಕಿಕೊಂಡು ಮಹಡಿಯ ಮೇಲೆ ನಿಂತಿದ್ದರು. ಅಲ್ಲಿಂದಲೇ ವಂದಿಸಿದೆ. 'ಬನ್ನೀಮ್ಮಾ' ಅಂತ ಕರೆದರು; ಗಾಡಿ ನಿಲ್ಲಿಸಿ ಮೇಲೆ ಹೋದೆ. 'ಎಲ್ಲೋ ಹೊರಟಿದ್ದೀರಲ್ಲಾ ಸಾರ್?' ಅಂದೆ. 'ಹೌದಮ್ಮಾ, ಇವೊತ್ತು ಎಂ.ಜಿ. ರೋಡಿನಲ್ಲಿರುವ 'ಉದಯವಾಣಿ' ಕಛೇರಿಗೆ ಹೋಗಬೇಕಾಗಿತ್ತು. ಚಿರಂಜೀವಿ ಅಲ್ಲಿ ನನಗಾಗಿ ಕಾಯ್ತಾ ಇರ್ತಾರೆ—ಆದರೆ ಬಸ್ಸುಗಳ, ಆಟೋಗಳ ಮುಷ್ಕರ ಅಂತ ಗೊತ್ತಿರಲಿಲ್ಲ. ಏನು ಮಾಡೋದು?' ಅಂತ ಪೇಚಾಡಿದರು. ನಾನು ಮೆಲ್ಲನೆ 'ಸರ್, ನಿಮ್ಮ ಅಭ್ಯಂತರವಿಲ್ಲದಿದ್ದರೆ, ನನ್ನ ದ್ವಿಚಕ್ರ ವಾಹನದಲ್ಲಿ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ' ಅಂದೆ. ಧೈರ್ಯದಿಂದಲೇ ಒಪ್ಪಿದರು. ಆದರೆ ಅವರ ಮನೆಯವರಿಗೆ, ಮಕ್ಕಳಿಗೆ ಧೈರ್ಯ ಸಾಕಾಗುತ್ತಿಲ್ಲ. 'ಆಗುತ್ತಾ ಆಂಟಿ, ನಿಮಗೆ ಡಬಲ್ ರೈಡ್ ಅಭ್ಯಾಸ ಇದೆಯಾ? ಹುಷಾರಾಗಿ ಕರ್ಕೊಂಡು ಹೋಗ್ತೀರಾ?' ಅಂತ ಅನುಮಾನ ವ್ಯಕ್ತಪಡಿಸುತ್ತಿದ್ದರೆ. ಆದರೆ ನನಗೆ ನನ್ನ ರೈಡಿಂಗ್ ಮೇಲೆ ೧೦೦% ವಿಶ್ವಾಸ. 'ಅತ್ಯಂತ ವೇಗವಾದ ಸ್ಕೂಟರ್ ಚಾಲಕಿ' ಅಂತ ಏನಾದರೂ ಸ್ಪರ್ಧೆ ಏರ್ಪಡಿಸಿ ಬಹುಮಾನ ಇಟ್ಟರೆ ಅದು ನನಗೇ ಬರುತ್ತೆ ಅನ್ನುವ ಅತಿಯಾದ ಆತ್ಮವಿಶ್ವಾಸ ನನಗಿದೆ. ('ಈ ಅತಿಯಾದ ವಿಶ್ವಾಸ ಒಳ್ಳೆಯದಲ್ಲ—ಗಾಡಿಯನ್ನು ನಿಧಾನಕ್ಕೆ ಓಡಿಸು' ಅಂತ ಮನೆಯವರಿಂದ ನೂರಾರು ಸಲವಾದರೂ ಬೈಯಿಸಿಕೊಂಡಿದ್ದೇನೆ.) ಸರಿ, ನನ್ನ ಮೇಲೆ ನಂಬಿಕೆಯಿಟ್ಟು ಕವಿಗಳು ನನ್ನ ಗಾಡಿಯಲ್ಲಿ ಬಂದರು. ಅವರ ನಂಬಿಕೆ ಹುಸಿಯಾಗಲಿಲ್ಲ. 'ಚೆನ್ನಾಗಿ ಡ್ರೈವ್ ಮಾಡ್ತೀಯಮ್ಮ' ಎಂಬ ಶಾಬಾಸ್‌ಗಿರಿಯೂ ಅವರಿಂದ ಸಿಕ್ಕಿತು.

ನಿಸಾರರು ತಮ್ಮ ಮನೆಯ ಕುಟುಂಬದ ಸದಸ್ಯರ ಜೊತೆಗೂ ಅತ್ಯಂತ ಸೌಹಾರ್ದ ಯುತವಾಗಿ ವ್ಯವಹರಿಸುತ್ತಾರೆ. ಆದರೆ ಕಮಲದೆಲೆಯ ಹನಿಯಂತೆ- -ಸಂಸಾರದಲ್ಲೇ ಇದ್ದರೂ ಅದರ ಜಂಜಾಟದಲ್ಲಿ ಮುಳುಗಿ ಹೋಗುವುದಿಲ್ಲ. ಕಾವ್ಯಕ್ಕೆ ಅಗತ್ಯವಾದ ತಾಟಸ್ಥ್ಯವನ್ನು ಕಾಪಾಡಿಕೊಂಡಿದ್ದಾರೆ. ತಮ್ಮ ಪತ್ನಿ, ಮಗ, ಮಗಳು, ಸೊಸೆ ಇವರುಗಳನ್ನು

ತಮ್ಮ ಅನೇಕ ಸಭೆ, ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗುತ್ತಿದ್ದರಲ್ಲದೆ, ಅವರ ಬರುವಿಕೆಯಿಂದ ತಮಗೆ ಸಂತೋಷವಾಗಿದೆ ಅನ್ನುವುದನ್ನು ಕೂಡಾ ತಮ್ಮ ಭಾಷಣದ ಮಧ್ಯೆ ವ್ಯಕ್ತಪಡಿಸುತ್ತಿದ್ದರು.

ಜೀವನದ ಖುಷಿಯ, ಸಾಧನೆಯ ಕ್ಷಣಗಳನ್ನು ತಮ್ಮ ಆಪ್ತ ಬಳಗದ ಜೊತೆಗೆ ನಿಸಾರರು ಹಂಚಿಕೊಳ್ಳಲು ಬಯಸುತ್ತಾರೆ. ಅವರ ಹುಟ್ಟುಹಬ್ಬದ ದಿನಗಳಂದು ಅವರ ಮನೆ ಆತ್ಮೀಯರಿಂದ ತುಂಬಿ ತುಳುಕಿರುತ್ತದೆ.

ಹಂಪಿ ವಿಶ್ವವಿದ್ಯಾಲಯದ 'ನಾಡೋಜ ಪ್ರಶಸ್ತಿ' ಪ್ರದಾನ ನಿಸಾರರ ಮನೆಯಲ್ಲೇ, ಆತ್ಮೀಯರ ಸಮ್ಮುಖದಲ್ಲೇ ನೆರವೇರಿತು. ಅಂತಹ ದಿನಗಳಲ್ಲೂ ಕವಿಗಳು ಆತ್ಮೀಯರಿಗೊಂದು ಫೋನ್ ಮಾಡುವುದನ್ನು ಮರೆಯುವುದಿಲ್ಲ. ಎಷ್ಟು ಮಂದಿಯ ಶುಭ ಹಾರೈಕೆಗೆ ಈ ಕವಿ ಪಾತ್ರರಾಗಿದ್ದಾರೆ ಎಂದು ನೆನೆದಾಗ ನಿಜಕ್ಕೂ ಹೆಮ್ಮೆ, ಅಚ್ಚರಿ ಒಟ್ಟೊಟ್ಟಿಗೆ ಆಗುತ್ತದೆ. ಇದು ನಿಜವಾಗಿಯೂ ಒಂದು ಭಾಗ್ಯ.

ಅವರ ಕಾರ್ಯಕ್ರಮಗಳಲ್ಲಿ ಅವರ ಅಭಿಮಾನಿಗಳ, ಹಿತೈಷಿಗಳ ದಂಡೇ ನೆರೆದಿರುತ್ತದೆ. ಇಂತಹ ಒಂದು ವಿಶೇಷವನ್ನು ಇತರರಲ್ಲಿ ಕಂಡದ್ದು ಅಪರೂಪ. ಅವರ ಭಾಷಣಗಳಲ್ಲಿ ಕೇವಲ ಮಾತಿನ ಮೋಡಿ ಅಥವಾ ಬರಿಯ ಪಾಂಡಿತ್ಯವಷ್ಟೇ ತುಂಬಿರುವುದಿಲ್ಲ. ಮಾನವೀಯ ಮೌಲ್ಯದ, ಸಾಮಾಜಿಕ ಕಳಕಳಿಯ, ಸತ್ವಭರಿತ ಸಾಹಿತ್ಯದ, ಅಂತರಾಳದ ಚಿಂತನೆಯ ಸೆಳಕುಗಳಿರುತ್ತವೆ. ಅವರ ವಿಶಿಷ್ಟವಾದ ಆಕರ್ಷಣೀಯ ಧ್ವನಿಯ ಗತ್ತು, ಸಮ್ಮೋಹಕ ನಗೆಯ ಅರ್ಥಗರ್ಭಿತ ಭಾವ, ಜೊತೆಗೆ ಎಲ್ಲರನ್ನೂ ಆತ್ಮೀಯ ಮಾತುಗಳಿಂದ ತನ್ನವರನ್ನಾಗಿಸಿಕೊಳ್ಳುವ ವಿಶೇಷ ಸಂಸ್ಕಾರ ಇರುತ್ತದೆ. ಅವರ ಸಕಾರಾತ್ಮಕ ಚಿಂತನೆ, ಸುಲಭ ಲಭ್ಯತೆ, ಸ್ನೇಹಪರತೆ ಅವರನ್ನು ಜನಪ್ರಿಯ ವ್ಯಕ್ತಿಯಾಗಿ ರೂಪಿಸುವಲ್ಲಿ ಕೆಲಸ ಮಾಡಿವೆ.

ಅವರ ಮನಮೋಹಕ, ಮಧುರ ಗೀತೆಗಳಿಂದ ನಾಡಿನ ಉದ್ದಗಲಕ್ಕೂ ಅವರ ಖ್ಯಾತಿ ಹರಡಿದೆ. ಅವುಗಳಲ್ಲಿ ನನಗೆ ಕೆಲವು ಗೀತೆಗಳು ಅಚ್ಚುಮೆಚ್ಚು; ಉದಾ: 'ಎಲ್ಲಿರುವೆಯೋ ನೀನೀಗ ನನ್ನ ಚಿನ್ನ—ಮರೆಯಲಾರೆನು ನಾನು ನಿನ್ನ ತುಂಬೊಲವನ್ನ', 'ಈ ದಿನಾಂತ ಸಮಯದಲಿ, ಈ ವನದೇಕಾಂತದಲಿ—ಬರದೆ ಹೋದೆ ನೀನು', 'ಬರುವನೇನೆ ಸಖಿ ಚೆಲುವ' ಇತ್ಯಾದಿ. ಇಂತಹವುಗಳಲ್ಲಿ ಕವಿ ತನ್ನೊಳಗೆ ಒಂದು ಒಲವಿನ-ನೋವಿನ ಗುಟ್ಟನ್ನು ಬಚ್ಚಿಟ್ಟುಕೊಂಡಿದ್ದಾರೆ ಅಂತ ಅನ್ನಿಸುತ್ತದೆ. ಅವರ ಬಳಿ ಹಾಗಂತ ಹೇಳಿದೆ ಕೂಡ; ಅದಕ್ಕೆ ಅವರು ನಸು ನಕ್ಕು 'ಏನಿಲ್ಲ, ಅವೆಲ್ಲ ಸುಮ್ಮನೆ ಕಲ್ಪಿಸಿಕೊಂಡು ಬರೆದದ್ದು' ಅಂದರು. ಅದು ಸಟೆಯೋ, ದಿಟವೋ ಏನೇ ಇರಲಿ, ಆ ಕವನಗಳಲ್ಲಿರುವ ತುಡಿತ ಪ್ರತಿಯೊಬ್ಬರ ಅಂತರಂಗಕ್ಕೂ ಅನುಭವವಾಗುತ್ತದೆ, ಇಷ್ಟವಾಗುತ್ತದೆ.

ನಿಸಾರರಿಗೆ ಒಂದು ಕೊರಗು. ಜನಗಳು ತಮ್ಮ ಕೆಲವೇ ಕವನಗಳನ್ನು ಅತಿಯಾಗಿ ಮೆಚ್ಚಿದ್ದಾರೆ. ತಮ್ಮ ಹಲವಾರು ವೈವಿಧ್ಯಮಯವಾದ, ಗಂಭೀರತರವಾದ ಕವನಗಳನ್ನಾಗಲಿ, ಬರಹಗಳನ್ನಾಗಲಿ ಹೆಚ್ಚಾಗಿ ಲಕ್ಷಿಸಿಲ್ಲ—ಅಂತ. ನನಗೂ ಹೇಳುತ್ತಿದ್ದರು—'ಸಮಗ್ರ ಗದ್ಯ

ಬರಹಗಳು' ಪುಸ್ತಕದಲ್ಲಿ ಅವರ ಸಹಿ ಹಾಕಿಸಿಕೊಳ್ಳುವಾಗ 'ಸುಮ್ನೆ ಕೊಂಡ್ಕೊಂಡು ಇಟ್ಕೋಬೇಡಿ; ಓದಬೇಕು' ಅಂತ.

ನೆನಪಿನ ಬುತ್ತಿ ಬಿಚ್ಚಿದ್ದೇನೆ. ತೆಗೆದಷ್ಟೂ ಬರುತ್ತಲೇ ಇದೆ, ಅಕ್ಷಯ ಪಾತ್ರೆಯಂತೆ. ನಾವು ಬೆಂಗಳೂರಿನಲ್ಲಿ ಒಂದು ಸೈಟು ಖರೀದಿಸಿ, ಮನೆ ಕಟ್ಟಿ—ಪ್ರವೇಶೋತ್ಸವಕ್ಕೆ ನಿಸಾರ್ ಅವರ ಕುಟುಂಬವನ್ನು ಆಹ್ವಾನಿಸಿದ್ದೆವು. ಬರುತ್ತಾರೆ ಅನ್ನುವ ಭರವಸೆ ಇರಲಿಲ್ಲ. ಆದರೆ ಆ ದಿನ ಸಂಜೆ ಅಲ್ಲ, ರಾತ್ರಿ ೮ ಗಂಟೆಗೆ ನಿಸಾರರು ಪತ್ನೀಸಮೇತ ನಮ್ಮ ಹೊಸ ಮನೆಗೆ ಬಂದರು. ಕುಮಾರಸ್ವಾಮಿ ಲೇಔಟ್‌ಗೆ ಅಂದರೆ, ಈಗಲೂ ಆಟೋದವರು ಅಲ್ಲಿಗೆ ಬರುವುದಿಲ್ಲ. ೭ ವರ್ಷಗಳ ಹಿಂದೆ ಹೇಗಿರಬಹುದು ಅಂದಾಜು ಮಾಡಿಕೊಳ್ಳಿ. ಅಂಥದ್ದರಲ್ಲಿ (ಅವರು ಬರುವುದು ಗೊತ್ತಿದ್ದರೆ ನಾವೇ ಹೋಗಿ ಕರೆದುಕೊಂಡು ಬರುತ್ತಿದ್ದೆವು—ಅದು ಬೇರೆ ಮಾತು) ಕೊನೆಗೂ ಒಬ್ಬ ಆಟೋದವನು ಇವರನ್ನು ಗುರುತಿಸಿ 'ಸಾರ್, ನಿಮ್ಗೆ ಆಗಲ್ಲ ಅಂತೀನಾ?' ಎಂದು ಹೇಳಿ, ಪಾಪ ಅವನಿಗೂ ಸರಿಯಾಗಿ ದಾರಿ ಗೊತ್ತಾಗದೆ ತುಂಬಾ ಸುತ್ತಾಡಿ, ಸುತ್ತಾಡಿ ೬:೩೦ಕ್ಕೆ ಹೊರಟು ೮ ಗಂಟೆಗೆ ನಮ್ಮ ಮನೆಗೆ ತಲಪಿಸಿದ್ದ. ಬೇರೆಯವರಾಗಿದ್ದರೆ ವಾಪಸ್ಸು ಮನೆಗೆ ಮರಳುತ್ತಿದ್ದರು. ಆದರೆ ನಿಸಾರ್ ಅವರು ಹಾಗೆ ಮಾಡಲಿಲ್ಲ; ಅಷ್ಟೇ ಅಲ್ಲದೆ, ತುಂಬಾ ತಡ ಮಾಡಿ ಬಂದದ್ದಕ್ಕೆ ಕ್ಷಮೆಯನ್ನು ಯಾಚಿಸಿದ್ದರು. ಅದನ್ನು ನೆನೆದರೆ ಈಗಲೂ ಅವರ ಆ ಪ್ರೀತಿ, ವಿಶ್ವಾಸಕ್ಕೆ ಮಾತೇ ಹೊರಡುವುದಿಲ್ಲ; ಕಣ್ಣು ತುಂಬಿ ಬರುತ್ತದೆ.

ಹ್ಞಾ! ಈ ವಿಶ್ವಾಸದ ಮಾತು ಬಂದಾಗ ಅವರು ಏನು ಹೇಳುತ್ತಾರೆ, ಗೊತ್ತೇ? 'ಛೇ, ನಿಮ್ಮ ಅಕ್ಕರೆ, ಮಮತೆಯ ಮುಂದೆ ಇದೆಲ್ಲ ಯಾವ ಲೆಕ್ಕ ಬಿಡೀಮ್ಮಾ' ಇದಕ್ಕೆ ಏನನ್ನಬೇಕೋ ನನಗೆ ಹೊಳೆಯುವುದಿಲ್ಲ.

ನಿಸಾರರ ಇನ್ನೊಂದು ದೊಡ್ಡ ಗುಣ, ಎಲ್ಲೇ ಭೇಟಿಯಾದರೂ ಅಥವಾ ಫೋನ್ ಮಾಡಿದರೂ ನನ್ನ ಯಜಮಾನರು, ಮಕ್ಕಳು ಎಲ್ಲರ ಕುಶಲವನ್ನೂ ಮರೆಯದೆ ವಿಚಾರಿಸುತ್ತಾರೆ—ತಮಗೆ ಅನಾರೋಗ್ಯವಿದ್ದಾಗಲೂ ಕೂಡ. ಅದರ ಬಗ್ಗೆ ನಾವಾಗಿಯೇ ಗಮನಿಸಿ ಕೇಳಿದರೆ, 'ಹ್ಞಾ, ಸ್ವಲ್ಪ ಹುಷಾರಿಲ್ಲ—ಅಷ್ಟೇ' ಅಂದುಬಿಡುತ್ತಾರೆ. ಸದಾ ಬೇರೆಯವರಿಗೆ ತುಡಿಯುವ ಮೃದು ಮನಸ್ಸು ಅವರದು.

ತಮಗೋಸ್ಕರ ಏನೂ ಅತಿಯಾದ ಆಸೆಗಳಿಲ್ಲದೆ, ಇದುವರೆಗೂ ಬಸ್ಸಿನಲ್ಲೇ ಓಡಾಡಿಕೊಂಡು; ಮಕ್ಕಳು ವಿದೇಶದಲ್ಲಿದ್ದರೂ ತಾನೂ ಹೊರ ದೇಶಗಳಿಗೆ ಹೋಗಿ ಬಂದಿದ್ದರೂ ಯಾವುದೇ ಐಷಾರಾಮದ, ವೈಭವೋಪೇತ ಜೀವನದ ವ್ಯಾಮೋಹವಿಲ್ಲದೆ, ಇದ್ದುದರಲ್ಲಿ ಸಂತೃಪ್ತವಾಗಿ 'ತಾನಾಯಿತು, ತನ್ನ ಚಿಂತನೆ, ಬರವಣಿಗೆಯಾಯಿತು; ಜೊತೆಗೆ ಒಂದಷ್ಟು ಮಂದಿ ಆಪ್ತ ಸ್ನೇಹಿತರು ಇದ್ದರಾಯಿತು' ಎಂದು ಬದುಕುತ್ತಿರುವ, ಸರಳ ಹಾಗೂ ಇತಿಮಿತಿಗಳ ಅರಿವುಳ್ಳ ಹೃದಯವಂತ ಕವಿ ಹಾಗೂ ಕೃತಾರ್ಥ ಚೇತನ ನನ್ನ ಪ್ರೀತಿಯ ನಿಸಾರ್ ಅವರ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ತೋಡಿಕೊಂಡಿದ್ದೇನೆ. ಆದರೆ ಹೇಳುವುದು ಇನ್ನೂ ಅಗಾಧವಿದೆ.

ಖ್ಯಾತನಾಮರಾದ ಹಿರಿಯ ವಿದ್ವಾಂಸರ, ಧೀಮಂತರ ಬರಹಗಳ ಮಧ್ಯೆ, ನನ್ನಂಥ ಒಬ್ಬ ಅಪ್ರಖ್ಯಾತಳ ಮನದಾಳದ ತೋಡಿಕೆಗೂ ಎಡೆ ಸಿಕ್ಕಿದ್ದು ಸುಕೃತವೆಂದು ಭಾವಿಸುತ್ತೇನೆ.

'ಅಣ್ಣ ನಿಸಾರ್, ನಿನಗೆ ಸರಿಸಮಾನರಾರ್?
ಮಾನವೀಯತೆಯಲ್ಲಿ, ಅಂತಃಕರಣದಲ್ಲಿ |
ಸುಸ್ನೇಹ ಪ್ರೀತಿಯ ಮಧುರ ಬಾಂಧವ್ಯದಲ್ಲಿ ||
ನಿಷ್ಕಪಟ ಭಾವದ ಸಹಜ ಹೂ ನಗೆಯಲ್ಲಿ |
ವಿದ್ವತ್ತು, ಪಾಂಡಿತ್ಯ, ಶಬ್ದ ಜೋಡಣೆಯಲ್ಲಿ |
ನಿಸಾರ್, ನಿನಗೆ ಸರಿಸಮಾನರಾರ್?
ನೀನು ಕೂಡಿಡಲಿಲ್ಲ ಧನ ಆಸ್ತಿಪಾಸ್ತಿ |
ಭಗವಂತ ನಿನಗಿತ್ತ ಅವಿನಾಶಿ ಪ್ರಾಪ್ತಿ ||
ಬರದಿದ್ದರೇನಂತೆ ಜ್ಞಾನಪೀಠ ಪ್ರಶಸ್ತಿ |
ವಿಶ್ವಮಾನವ ನೀನು, ಕನ್ನಡದ ಆಸ್ತಿ ||
ಅಣ್ಣ ನಿಸಾರ್, ನಿನಗೆ ಸರಿಸಮಾನರಾರ್?

ನಮ್ಮ ಕಟ್ಟಡಗಳಿಗೆ ಮಣ್ಣು ಸಾಲದೆ? ಹತ್ತಿರವೇ ಇತರರ ಖಾಲಿ ಸೈಟುಗಳಿವೆಯಲ್ಲ, ಗೆಬರಿಕೊಂಡರಾಯಿತು. ಇದು ಬೇಡವೆಂದರೆ ಸರ್ಕಾರಿ ಜಮೀನಿಗೇನು ಧಾಡಿಯೆ? ಮಣ್ಣನ್ನು ಕದ್ದೊಯ್ಯುವಾಗ ನಮಗೆ ಎರಡು ಟ್ರ್ಯಾಕ್ಟರ್‌ನಷ್ಟು ಅಗತ್ಯವಿದ್ದಾಗ ಐದಾರು ಟ್ರ್ಯಾಕ್ಟರ್‌ನಷ್ಟು ದೋಚೋಣ. ಮಿಕ್ಕಿದ್ದನ್ನು ರಸ್ತೆ ಪಕ್ಕಕ್ಕೆ ಒಗಾಯಿಸಿದರೆ ಆಯಿತು. ಸರಿಯೆ, ಆದರೆ ಆ ನಿವೇಶಿಗನ ಗತಿ? ಅವನೂ ನಾಳೆ ನಮ್ಮಂತೆ ಮನೆ ಕಟ್ಟಿಸಬೇಡವೆ? ನಾವು ತೋಡಿರುವ ಕೊರಕಲನ್ನು ಮುಚ್ಚಿಸಬೇಕಾದರೆ ಅವನ ಹೆಣ ಬಿದ್ದು ಹೋಗುವುದಲ್ಲ! ಅದನ್ನು ಕಟ್ಟಿಕೊಂಡು ನಮಗೆ ಆಗಬೇಕಾದ್ದಾದರೂ ಏನು? ಈ ಉದಾಹರಣೆಗಳು ಸಾರ್ವತ್ರಿಕ ಅನ್ನದ ತಪ್ಪಲೆಯ ಬಿಡಿ ಅಗುಳುಗಳು ಮಾತ್ರ. ಬಾಳಿನ ಇತರೇ ಬಾಬುಗಳ ಝುಡ್ತಿ ನಡಸಿದರೆ ಇಂತಹ ಅಕ್ರಮಗಳ, ಪೋಲುಗಾರಿಕೆಯ ಹಲವಾರು ಹೆಡೆಗಳು ನಿಮಿರಿ ನಿಂತಾವು. ಇಂದಿನ ಜೀವನ ಶೈಲಿಯ ಸ್ವಾರ್ಥೈಕ ದೃಷ್ಟಿ, ಪರ ಹಿತದ ಅವಜ್ಞೆ ನಮ್ಮ ಈ ಕ್ರಿಯೆಗಳನ್ನು ನೇಪಥ್ಯದಲ್ಲಿ ರೂಪಿಸುವ ಅಂಶಗಳು.

(ಸಾಮಾಜಿಕ ಬೇಜವಾಬ್ದಾರಿ)



ನಿಸಾರ್, ನಿಮಗೆ ನಮಸ್ಕಾರ

♦ ಡಾ. ಎ. ಕುಮಾರ್

ವೃತ್ತಿಯಿಂದ ನಾನು ಒಬ್ಬ ದಂತ ವೈದ್ಯ. ಹಿರಿಯ ಕಿರಿಯ ಸಾಹಿತಿಗಳ, ಲೇಖಕರ ಬರವಣಿಗೆಯನ್ನು ಓದಿ ಬಲ್ಲೆನೇ ಹೊರತು ಇಲ್ಲಿಯತನಕ ಉದ್ದೇಶಪೂರ್ವಕವಾಗಿ ಏನನ್ನೂ ಬರೆದವನಲ್ಲ. ವಿದ್ಯಾಭ್ಯಾಸದಲ್ಲಿ ಕೊನೆಯ ಸಲ ಕನ್ನಡವನ್ನು ಕಲಿತದ್ದು ೧೯೬೪-೧೯೬೫, ಪಿ.ಯು.ಸಿ. ಪರೀಕ್ಷೆಗಾಗಿ. ಆಗ ಪರೀಕ್ಷೆಯಲ್ಲಿ ಗಳಿಸಿದ್ದು ೩೬% ಅಂಕ. ನಪಾಸಾಗುವುದನ್ನು ಅದೃಷ್ಟವಶಾತ್ ಬಹಳ ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದ್ದೆ. ಇಂತಹ ಅನರ್ಹತೆಗಳಿದ್ದೂ ಕರ್ನಾಟಕದ ತುಂಬು ಜೀವಂತಿಕೆಯ ಹಿರಿಯ ಕವಿ, ಖ್ಯಾತ ಸಾಹಿತಿ ಹಾಗೂ ವಿಮರ್ಶನಕಾರರಾದ ಮಾನ್ಯ ಕೆ. ಎಸ್. ನಿಸಾರ್ ಅಹಮದ್ ಅವರ ಬಗ್ಗೆ ಹೇಳಲು ಅಥವಾ ಬರೆಯಲು ಹೊರಟ ನನ್ನ ಮೊಂಡು ಧೈರ್ಯಕ್ಕೆ ನನಗೇ ಆಶ್ಚರ್ಯವಾಗುತ್ತಿದೆ. ನಾನು ಹೇಳಲು ಹೊರಟಿರುವುದು ಕವಿ ನಿಸಾರರ ಕಾವ್ಯದ ಬಗ್ಗೆಯಲ್ಲ, ಅವರ ಗದ್ಯ ಸಾಹಿತ್ಯದ ಬಗ್ಗೆಯಲ್ಲ, ಅವರ ವಿಮರ್ಶನ ಚತುರತೆಯ ಬಗ್ಗೆಯೂ ಅಲ್ಲ. ಅವರ ಸ್ನೇಹಪರತ್ವದ ಬಗ್ಗೆ, ಅವರ ಹೃದಯವಂತಿಕೆಯ ಬಗ್ಗೆ, ಅವರ ಹಾಸ್ಯ ಪ್ರಜ್ಞೆಯ ಬಗ್ಗೆ.

ಕವಿ ನಿಸಾರರ ಬಗ್ಗೆ ನನ್ನ ಗಮನ ಹರಿದಿದ್ದು ೧೯೭೭-೧೯೭೮ರಲ್ಲಿ. ಆಗ ನಾನು ರಾಯಚೂರಿನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿನ ಒಂದು ಹವ್ಯಾಸಿ ನಾಟಕ ತಂಡದವರು ತಾವು ಅಭಿನಯಿಸಿದ ಒಂದು ನಾಟಕದಲ್ಲಿ ಕವಿ ನಿಸಾರ್ ಅವರ

`ಕುರಿಗಳು, ಸಾರ್, ಕುರಿಗಳು` ಪದ್ಯವನ್ನು ಬಳಸಿದ್ದರು. ಅದನ್ನು ಕೇಳಿದ ಮೇಲೆ ಆ ಪದ್ಯ ಬರೆದವರು ಯಾರು, ಅವರು ಇನ್ನೂ ಏನೇನು ಬರೆದಿದ್ದಾರೆ? ಎಂಬ ಕುತೂಹಲ ಹುಟ್ಟಿ, ಆ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳು ಸಿಕ್ಕಬೇಕಾದರೆ ಸಾಕಷ್ಟು ವರ್ಷಗಳೇ ಕಳೆದುವು. ೧೯೭೪ರಲ್ಲಿ ಬೆಂಗಳೂರಿಗೆ ಬಂದು ಇಲ್ಲಿಯೇ ನಿಂತು ಒಂದು ಸಣ್ಣ ಕ್ಲಿನಿಕ್‌ಅನ್ನು ತೆರೆದ ಸ್ವಲ್ಪ ಸಮಯದ ಅನಂತರ, ಒಂದು ಸಂಜೆ ಒಬ್ಬ ಪರಿಚಿತರು ಬಂದು ಅವರ ಪರಿಚಿತರೊಬ್ಬರಿಗೆ ನನ್ನ ಸಹಾಯ ಬೇಕಾಗಿದೆಯೆಂದೂ ನೀಡಲು ನಾನು ತಯಾರಿದ್ದೇನೆಯೇ ಎಂದೂ ವಿಚಾರಿಸಿದರು. ಅವರ ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು, ಇಲ್ಲ ಎಂದು ಹೇಳಲಾರದೆ ಅರ್ಧ ಮನಸ್ಸಿನಿಂದ, ಅವರು ನನ್ನ ತಲೆಗೆ ಕಟ್ಟಲು ಪ್ರಯತ್ನಿಸುತ್ತಿದ್ದ ಕೆಲಸಕ್ಕೆ ಅವರನ್ನು ಒಳಗೇ ಶಪಿಸುತ್ತ ಒಪ್ಪಿಕೊಂಡೆ. ಆಗ ತಿಳಿಯಿತು, ಆ ನನ್ನ ಪರಿಚಿತರ ಪರಿಚಿತರು ಮತ್ತಾರೂ ಅಲ್ಲ, ಕವಿ ನಿಸಾರ್ ಅಹಮದ್ ಅವರು ಎಂದು. ಅವರಿಗೆ ಬೇಕಾಗಿದ್ದದ್ದು ಸಣ್ಣ ವೈದ್ಯಕೀಯ ಸಹಾಯ. ಮೊದಲೇ ಅವರ ಗುರುತು ತಿಳಿಸದೆ ಇದ್ದುದಕ್ಕೆ ನನ್ನ ಪರಿಚಿತರನ್ನು ಮತ್ತೊಮ್ಮೆ ಶಪಿಸುತ್ತ, ಗುರುತು ತಿಳಿದ ಮೇಲೆ ಸಂತೋಷದಿಂದ ಒಪ್ಪಿಕೊಂಡ ನನ್ನ ಮನಸ್ಸಿಗೇ ಛೀಮಾರಿ ಹಾಕಿದೆ—ಈ ರೀತಿ ಭೇದಭಾವ ತೋರಿಸಿದ್ದಕ್ಕೆ. ಆ ಸಮಯದಲ್ಲಿ ನಿಸಾರ್ ಅವರಿಗೆ ಭುಜದಲ್ಲಿ ಒಂದು ರಕ್ತದ ಕುರು ಆಗಿ ಅದರ ನೋವಿನಿಂದ ಬಹಳ ಕಷ್ಟ ಪಡುತ್ತಿದ್ದರು. ನನ್ನ ಚಿಕಿತ್ಸಾಲಯಕ್ಕೆ ಸಮೀಪವಿದ್ದ ಅವರಲ್ಲಿಗೆ ದಿನವೂ ಹೋಗಿ ಒಂದು ಚುಚ್ಚು ಮದ್ದನ್ನು ಕೊಡುವುದು ನನ್ನ ಪಾಲಿಗೆ ಬಂದ ಕೆಲಸ. ಆ ಕಾರಣದಿಂದ ಮೊದಲಾಯಿತು ನನ್ನ ಮತ್ತು ಅವರ ಬಾಂಧವ್ಯ.

ಅನಂತರದ ವರ್ಷಗಳಲ್ಲಿ ನಮ್ಮ ಈ ಬಾಂಧವ್ಯ ಇನ್ನೂ ಸುದೃಢವಾಗಿ ಬೆಳೆಯಿತು. ನನಗೆ ತಿಳಿಯದ ಎಷ್ಟೋ ವಿಷಯಗಳನ್ನು ಅವರಿಂದ ಅರಿತಿದ್ದೇನೆ. ಅವರ ಬರವಣಿಗೆಯ ವೈವಿಧ್ಯಕ್ಕೆ ಮಾರುಹೋಗಿದ್ದೇನೆ. ಅವರ ಪಾಂಡಿತ್ಯಕ್ಕೆ, ಭಾಷೆಯ ಮೇಲಿನ ಅವರ ಸ್ವಾಮಿತ್ವಕ್ಕೆ ತಲೆ ಬಾಗಿಸಿದ್ದೇನೆ. ಎಷ್ಟೋ ಸಂದರ್ಭಗಳಲ್ಲಿ ಅವರೇ ಹುಟ್ಟು ಹಾಕಿ, ಅವರ ಬರವಣಿಗೆಗಳಲ್ಲಿ ಲೀಲಾಜಾಲವಾಗಿ ಉಪಯೋಗಿಸಿರುವ ಕೆಲವಾರು ಪದಗಳ ಸಾಂದರ್ಭಿಕ ಔಚಿತ್ಯಕ್ಕೆ ಆಶ್ಚರ್ಯಚಕಿತನಾಗಿದ್ದೇನೆ. ಅವರ ಓದಿನ ವ್ಯಾಪ್ತಿಯನ್ನು, ವಿಶಾಲತೆಯನ್ನು ಗ್ರಹಿಸಲು ಸಾಧ್ಯವಾಗದೆ ಸುಸ್ತಾಗಿದ್ದೇನೆ. ಅವರಿಗೆ ತಿಳಿಯದ ವಿಷಯ ಏನಾದರೂ ಇದೆಯೇ ಎಂದರೆ ನಂಬಲು ಅಸಾಧ್ಯ. ನನಗೆ ಯಾವುದೇ ವಿಷಯದ ಬಗ್ಗೆ ಪೂರಾ ವಿವರ ತಕ್ಷಣ ತಿಳಿಯದಿದ್ದಲ್ಲಿ ಅದು ಯಾವ, ಯಾರ ಬರವಣಿಗೆಯಲ್ಲಿ, ಎಲ್ಲಿ ಸಿಗುತ್ತದೆಂದು ವಿವರಿಸಿ, ಅಂತಹ ಪುಸ್ತಕವನ್ನು ಅವರೇ ಹುಡುಕಿಕೊಟ್ಟು, ನನ್ನ ವಿಷಯದ ದಾಹವನ್ನು ತಣಿಸಿದ್ದಾರೆ. ಒಮ್ಮೆ ಸೂಫಿ ಮತದ ಮತ್ತು ಅದರ ಅನುಯಾಯಿಗಳ ಬಗ್ಗೆ ಸರಿಯಾದ ವಿವರ ತಿಳಿಯಲು ಹೆಣಗುತ್ತಿದ್ದಾಗ ಅದರ ಬಗ್ಗೆ ಒಂದು ಪುಸ್ತಕವನ್ನು ಎರವಲಾಗಿ ಕೊಟ್ಟು ಸಹಾಯ ಮಾಡಿದ್ದರು. ಇದೇ ರೀತಿ ಇನ್ನೊಮ್ಮೆ ವಿಷ್ಣು ಪುರಾಣದ ಬಗ್ಗೆಯೂ ಅವರ ಸಹಾಯ ದೊರಕಿತ್ತು. ಎಷ್ಟೋ ಸಲ ನನಗೆ ಬೇಕಾಗಿದ್ದ ಪುಸ್ತಕಗಳನ್ನು ತಾವೇ ತರಿಸಿಕೊಟ್ಟಿದ್ದಾರೆ. ಮಾಸ್ತಿಯವರ ಎಲ್ಲ ಪುಸ್ತಕಗಳನ್ನೂ ಜಿ. ಪಿ. ರಾಜರತ್ನಂ ಅವರ ಸಂಪೂರ್ಣ ಕೃತಿ ಸಮುಚ್ಚಯವನ್ನೂ ನಾನು ಕೊಳ್ಳಲು ಅಪೇಕ್ಷಿಸಿದಾಗ, ಅವುಗಳು ಲಭ್ಯವಾಗುವಂತೆ

ನೆರವಾದವರು ನಿಸಾರ್.

ಅವರ ಸೂಕ್ಷ್ಮ ದೃಷ್ಟಿಗೆ ಬೀಳದ್ದು, ಹರಿತವಾದ ಲೇಖನಿಗೆ ವಸ್ತುವಾಗಲಾರದ್ದು ಏನೂ ಇಲ್ಲ ಎಂದೇ ಹೇಳಬಹುದು. ಬೆಂಗಳೂರಿನಲ್ಲಿ ಈಚೆಗೆ ನಿಶ್ಶೇಷವಾಗಿರುವ ನಿರುಪದ್ರವಿ ಚಿಲ್ಪಾರಿ ಹಕ್ಕಿ ಗುಬ್ಬಚ್ಚಿಯಾಗಲಿ, ಇವರ ಮನೆಯ ಮಾಡಿನ ಮೇಲಿನಿಂದ ಹಿಂದೆ ಕಾಣುತ್ತಿದ್ದ ಅನೇಕ ತೆಂಗಿನ ಮರಗಳಾಗಲಿ ಅಥವಾ ಇವರ ಮನೆಯ ಮುಂದಿನ ನಿತ್ಯ ಮಲ್ಲಿಗೆ ಬಳ್ಳಿಯಾಗಲಿ ಇವರ ಲೇಖನಿಗೆ ಸಮೃದ್ಧಿಯಾದ ಸಾಮಗ್ರಿಯೇ. ಸಾಮಾನ್ಯನಿಗೆ ಏನೂ ವಿಶೇಷತೆ ಕಾಣದ ದಿನ ನಿತ್ಯದ ನೋಟಗಳೇ ಈ ಕವಿಗೆ ಸ್ಫೂರ್ತಿ. ಕರ್ನಾಟಕದಲ್ಲಿ ದಿವಂಗತ ಎಂ. ಎಸ್. ಸುಬ್ಬುಲಕ್ಷ್ಮಿಯವರ 'ಶ್ರೀ ವೆಂಕಟೇಶ್ವರ ಸುಪ್ರಭಾತ'ವನ್ನು ಕೇಳಿಲ್ಲದ ಜನ ವಿರಳವಾಗಿ ದೊರೆಯಬಹುದೇನೋ. ಆದರೆ ಕವಿ ನಿಸಾರರ 'ತಾಯಿ ನಿತ್ಯೋತ್ಸವ, ನಿನಗೆ ನಿತ್ಯೋತ್ಸವ'ವನ್ನು ಕೇಳದ, ಒಂದು ಬಾರಿಯಾದರೂ ಗುನುಗದ ಜನ ಇಲ್ಲವೆಂದೇ ಹೇಳಬಹುದು. ನನ್ನ ಮಟ್ಟಿಗೆ ಅವರಲ್ಲಿ ಗೌರವ ಭಾವನೆ ಹೆಚ್ಚುವಂತೆ ಮಾಡಿದ್ದು ಅವರ 'ಯೋ ವೈ ಭೂಮ ತತ್ಸುಖಂ' ಎಂಬ ಶೀರ್ಷಿಕೆಯ ಗದ್ಯ ಲೇಖನ.

ಕವಿ ನಿಸಾರ್ ಅವರು ಭಾಗವಹಿಸುವ ಯಾವುದೇ ಕಾರ್ಯಕ್ರಮದಲ್ಲಿ ನಾನೂ ಒಬ್ಬ ಖಾಯಂ ಆಹ್ವಾನಿತ. ಕಾರ್ಯಕ್ರಮದ ಹಿಂದಿನ ದಿನಗಳಲ್ಲಿ ಒಮ್ಮೆಯಾದರೂ ಒಂದು ಕರೆಯೋಲೆಯೊಂದಿಗೆ ಬರುವ ನಿಸಾರ್ ಅವರು ತಮ್ಮ ಕಾರ್ಯಕ್ರಮಕ್ಕೆ ಈ ಬಾರಿಯಾದರೂ ತಪ್ಪದೆ ಹಾಜರಾಗಬೇಕೆಂದು ಒತ್ತಾಯಪೂರ್ವಕವಾಗಿ ಆಮಂತ್ರಿಸುತ್ತಾರೆ. ಕೆಲಸದ ಒತ್ತಡದಿಂದ ನಾನು ವಾರದ ದಿನಗಳಲ್ಲಿ ಯಾವ ಕಾರ್ಯಕ್ರಮಕ್ಕೂ ಬರಲು ಆಗುವುದಿಲ್ಲವೆಂದು ಅವರಿಗೆ ತಿಳಿದಿದ್ದರೂ ನನಗೆ ಆಹ್ವಾನವನ್ನು ನೀಡುವುದನ್ನು ಅವರು ತಪ್ಪಿಸುವುದಿಲ್ಲ. ಕಾರ್ಯಕ್ರಮಕ್ಕೆ ಯಥಾಪ್ರಕಾರ ನಾನು ಗೈರುಹಾಜರಿಯಾಗುತ್ತೇನೆ. ಅನಂತರದ ದಿನಗಳಲ್ಲಿ ನಿಸಾರ್ ಅವರು ಬರುವುದು, ನನ್ನ ಗೈರುಹಾಜರಿಯನ್ನು ಸಾಕಷ್ಟು ಆಗ್ರಹಪೂರ್ವಕವಾಗಿ ತಮ್ಮದೇ ಶೈಲಿಯಲ್ಲಿ ಖಂಡಿಸುವುದು, ನಾನು ನನ್ನ ಅಸಹಾಯಕತೆಯನ್ನು ಎಂದಿನಂತೆ ವಿವರಿಸಲು ಪ್ರಯತ್ನಿಸುವುದು—ಸುಮಾರು ದಿನಗಳಿಂದ ಅವ್ಯಾಹತವಾಗಿ ನಡೆದೇ ಇದೆ. ಅವರ ಕಾರ್ಯಕ್ರಮಗಳಲ್ಲಿ ನನ್ನನ್ನು ಭಾಗಿಯಾಗಿಸಲು ಅವರು ಸತತವಾಗಿ ನಡೆಸುತ್ತಿರುವ ಪ್ರಯತ್ನ ನನಗೆ 'ಚಂದಮಾಮ' ಮಾಸಿಕದ 'ಛಲ ಬಿಡದ ತ್ರಿವಿಕ್ರಮ'ನನ್ನು ನೆನಪಿಗೆ ತರುತ್ತದೆ.

ಒಮ್ಮೆ ಬೆಂಗಳೂರಿನ ಬಳಿಯ ಹೆಸರುಘಟ್ಟದಲ್ಲಿರುವ ಕೇಂದ್ರ ತೋಟಗಾರಿಕೆ ಸಂಶೋಧನ ಕಾರ್ಯಾಲಯದ ಕನ್ನಡ ರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಬರಲು ಹೇಗಾದರೂ ಮಾಡಿ ಅವರನ್ನು ಒಪ್ಪಿಸಬೇಕೆಂದು ಆ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ಕೆಲಸ ಮಾಡುತ್ತಿರುವ ನನ್ನ ತಮ್ಮ ಎ. ಭಾನುವಿನ ಒತ್ತಾಯ ಬಂದಿತು. ಈ ವಿಷಯಕ್ಕೆಂದು ಅವರ ಆಫೀಸಿನ ಕಾರ್ಯಕರ್ತರು ಸತತವಾಗಿ ಮೂರು ವರ್ಷ ಪ್ರಯತ್ನಿಸಿ ತಮ್ಮ ಸೋಲನ್ನೊಪ್ಪಿ ಕೊಂಡಿದ್ದರು. ಪ್ರತಿ ವರ್ಷ ಕವಿವರ್ಯರನ್ನು ಒಪ್ಪಿಸಲು ಅವರು ಬಂದಾಗಲೂ ಮುಂದಿನ

ವರ್ಷ ನೋಡ್ಡೋಣವೆಂದು ಬಹು ಚಾಕಚಕ್ಯತೆಯಿಂದ ಬರಿಗೈಯಲ್ಲಿ ಹಿಂದಿರುಗುವಂತೆ ಮಾಡಿದ್ದರು. ಆ ಸಂದರ್ಭದಲ್ಲಿ ನಿಸಾರ್ ಅವರನ್ನು ನೋಡಿದಾಗ, ಒಂದು ಷರತ್ತಿನ ಮೇಲೆ ತಮ್ಮ ಒಪ್ಪಿಗೆ ಕೊಟ್ಟರು—ನಾನು ಅವರ ಸಾರಥಿಯಾದರೆ ಮಾತ್ರ ತಾವು ಅಲ್ಲಿಗೆ ಬರುತ್ತೇನೆಂದು. ಅಂದಿನ ಕಾರ್ಯಕ್ರಮ ನಿಸಾರರ 'ನಿತ್ಯೋತ್ಸವ' ಗೀತೆಯೊಂದಿಗೆ ಮೊದಲಾದಾಗ ಆ ಗೀತೆಯನ್ನು ಒಂದೂ ತಪ್ಪಿಲ್ಲದೆ ಸುಶ್ರಾವ್ಯವಾಗಿ ಹಾಡಿದ ತಂಡದವರನ್ನು ಅವರು ಬಹಳ ಮೆಚ್ಚಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಅವರು ಅಂದು ಆಡಿದ ಕನ್ನಡ ನಾಡು-ನುಡಿಗಳ ಅಭಿಮಾನದ ಮಾತುಗಳು ಇಂದಿಗೂ ನನ್ನ ನೆನಪಿನಲ್ಲಿವೆ. ಅವರ ಮಾತುಗಳನ್ನು ಕೇಳಿ ಸಂತೋಷ ಪಡದವರು ಅಲ್ಲಿ ಯಾರೂ ಇರಲಿಲ್ಲ. ಆ ಮಾತುಗಳ ಮಧ್ಯೆ ತಮ್ಮ ಕೆಲವು ಹರಿತವಾದ ವಾಗ್ಬಾಣಗಳನ್ನು ನನ್ನ ಕಡೆ ಹಾರಿಸಿ ಸಭಿಕರು ಇನ್ನೂ ಹೆಚ್ಚು ನಗುವಂತೆ ಮಾಡಿದ್ದರು. ಸಭೆ ಮುಗಿದ ಮೇಲೆ ಅಲ್ಲಿನ ಅಧಿಕಾರಿಗಳೊಡನೆ ಅವರ ತೋಟಗಾರಿಕೆಯ ವ್ಯಾಪ್ತಿಯನ್ನೆಲ್ಲ ಸುತ್ತಿ, ಅಲ್ಲಿ ನಡೆದಿರುವ ಅಮೋಘವಾದ ವೈಜ್ಞಾನಿಕ ಪ್ರಯೋಗಗಳನ್ನು ತಿಳಿದು, ಅದನ್ನು ಅವರು ಸುವ್ಯವಸ್ಥಿತವಾಗಿ ನಡೆಸುತ್ತಿರುವ ಕ್ರಮವನ್ನು ಶ್ಲಾಘಿಸಿದ್ದರು. ವಿಜ್ಞಾನದ ಬಗೆಗೆ ಅವರಿಗಿರುವ ಸಹಜ ಶ್ರದ್ಧಾಸಕ್ತಿಯ, ಕುತೂಹಲದ ಬಗ್ಗೆ ಅಂದು ನಮಗೆ ಪುರಾವೆ ನೀಡಿದರು.

ಇಂತಹುದೇ ಇನ್ನೊಂದು ಸುಸಂದರ್ಭವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದು ಇಂದಿರಾ ನಗರದಲ್ಲಿ ಕವಿ ನಿಸಾರರ ಒಂದು ಪುಸ್ತಕದ ಬಿಡುಗಡೆಯ ಸಮಾರಂಭವನ್ನು ಅವರ ಸ್ನೇಹಿತರೊಬ್ಬರು ಏರ್ಪಡಿಸಿದ್ದರು. ಅದಕ್ಕೆ ನನ್ನನ್ನು ಆಹ್ವಾನಿಸಲು ಬಂದಾಗ ಹಿಂದಿನಂತೆಯೇ ನನ್ನ ಸಾರಥ್ಯವನ್ನು ಕೋರಿದ್ದರು. ಕನ್ನಡ ಸಾಹಿತ್ಯದಲ್ಲಿ ಬಹಳ ಹೆಸರು ಗಳಿಸಿರುವ ಅನೇಕ ಹಿರಿಯರು ಭಾಗವಹಿಸಿದ್ದ ಸಮಾರಂಭ ಅದು. ಅಂದು ಕವಿ ನಿಸಾರರು ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಸ್ವಪ್ರಯತ್ನದಿಂದ ತಮ್ಮದಾಗಿಸಿಕೊಂಡಿದ್ದ ಸ್ಥಾನ ಎಷ್ಟು ಹಿರಿದೆಂದು ಊಹಿಸಲು ಸಾಧ್ಯವಾಯಿತು. ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ತಮ್ಮ ಎಂದಿನ ವಾಕ್ಚಾತುರ್ಯದಿಂದ ಸಭಿಕರ ಗಮನ ಬೇರೆತ್ತಲೂ ಸುಳಿಯದಂತೆ ಬಹಳ ರಸವತ್ತಾಗಿ ಭಾಷಣ ಮಾಡಿದ್ದರು. ಹಾಗೂ ವಿಶೇಷವಾಗಿ ನನ್ನ ಕಡೆ ತೂರಿದ ತಮ್ಮ ವಾಗಸ್ತ್ರಗಳಿಂದ ಸಭಿಕರೆಲ್ಲರೂ ಹೊಟ್ಟೆ ಹಿಡಿದು ನಗುವ ಹಾಗೆ ಮಾಡಿದ್ದರು.

ಸಾವಿರಾರು ಮಂದಿ ಇರುವ ಸಭೆಗಳನ್ನು ನಿರಾಯಾಸವಾಗಿ, ಗಂಭೀರವಾಗಿ ಎದುರಿಸಬಲ್ಲ ನಿಸಾರರು ತಮ್ಮ ಆರೋಗ್ಯದ ವಿಷಯದಲ್ಲಿ ಮಾತ್ರ ಸ್ವಲ್ಪ ಭಯಸ್ಥರು. ಇಂದೇ ಮಾಡಬೇಕಾದ ಚಿಕಿತ್ಸೆಯನ್ನು ಅತಿ ಜಾಣತನದಿಂದ ಅದೂ ಇದೂ ಕಾರಣಗಳನ್ನು ಕೊಟ್ಟು ಸಾಧ್ಯವಾದಷ್ಟು ಮುಂದೂಡುವುದರಲ್ಲಿ ಸಿದ್ಧಹಸ್ತರು. ಇಂತಹ ಕಾರಣಗಳನ್ನು ಹುಡುಕಲು ಅವರು ಹೆಚ್ಚೇನೂ ಕಷ್ಟಪಡಬೇಕಾಗಿಲ್ಲ. ಅವರನ್ನು ಪುರಸ್ಕರಿಸಲು ಕಾದಿರುವ ಸಂಘ ಸಂಸ್ಥೆಗಳು ಹತ್ತಾರು. ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲು ನಾ ಮುಂದು ತಾ ಮುಂದು ಎಂದು ಸಾಲುಗಟ್ಟಿ ನಿಂತಿರುವ ಸಮಿತಿಗಳು ಅಸಂಖ್ಯ. ಅವರು ಬೇಕೆಂದರೆ

ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ತಮ್ಮ ವೇಳೆಯನ್ನೆಲ್ಲಾ ಕಳೆಯಬಹುದು. ಹೀಗಾಗಿ ಅವರಿಗೆ ಕೂಡಲೇ ನಡೆಸಬೇಕಾಗಿದ್ದ ದಂತ ಚಿಕಿತ್ಸೆಯೂ ಇಂದು ನಾಳೆ ಎಂದೆನ್ನುತ್ತಾ ಮುಂದೆ ಮುಂದೆ ಹೋಯಿತು. ಕೊನೆಗೂ ಪರಿಸ್ಥಿತಿ ಕೈಮೀರಿ ವಿಧಿಯಿಲ್ಲದೆ ಕಾಲಾವಕಾಶ ಮಾಡಿಕೊಂಡು ಚಿಕಿತ್ಸೆಗೆ ಒಪ್ಪಿ ಅವರು ಬಂದಾಗ ನಿಜವಾಗಿಯೂ ತಡವಾಗಿತ್ತು. ತೃಪ್ತಿಕರವಾಗಿ ಅವರಿಗೆ ಚಿಕಿತ್ಸೆ ಮಾಡಲು ಸಾಧ್ಯವಾಗಲಿಲ್ಲ. ಆ ಕೆಲಸ ಇನ್ನೂ ಬಾಕಿ ಉಳಿದಿದೆ!

ದಿನವೂ ಸಂಜೆ ಅವರು ವಾಯು ಸೇವನೆಗಾಗಿ ಹಾಗೂ ತಮ್ಮ ಸ್ನೇಹಿತರನ್ನು ಭೇಟಿಮಾಡಲು ಗಾಂಧಿ ಬಜಾರಿಗೆ ಹೋಗುವುದು ಬಹಳ ವರ್ಷಗಳ ವಾಡಿಕೆ. ಅವರ ದಾರಿ ನನ್ನ ಚಿಕಿತ್ಸಾಲಯದ ಮುಂದೆಯೇ ಇರುವುದರಿಂದ ವಾರಕ್ಕೆ ಒಂದೆರಡು ಬಾರಿಯಾದರೂ ಅವರು ನನ್ನನ್ನು ಮಾತನಾಡಿಸಲು ಒಳಗೆ ಬರುತ್ತಾರೆ. ವಾರದಲ್ಲಿ ಒಮ್ಮೆಯಾದರೂ ಅವರು ಬರದಿದ್ದರೆ ನನಗೂ ಒಂದು ಬಗೆಯ ಅಸಮಾಧಾನ ಹಾಗೂ ಅವರು ಏಕೆ ಬರಲಿಲ್ಲ ಎಂಬ ಕಾತರ. ಪದ್ಮನಾಭನಗರದ ನಿವಾಸಿಗಳೆಲ್ಲರಿಗೂ ಅವರು ಚಿರ ಪರಿಚಿತ ವ್ಯಕ್ತಿಯಾದ್ದರಿಂದ ನನ್ನಲ್ಲಿಗೆ ಬಂದಾಗ ಅವರು ಮಾತನಾಡಿಸುವುದು ನನ್ನೊಬ್ಬನನ್ನೇ ಅಲ್ಲ—ನನ್ನ ಚಿಕಿತ್ಸಾಲಯದಲ್ಲೇ ತಮ್ಮ 'ಕ್ಲಿನಿಕ್ಕ'ನ್ನೂ ತೆರೆದಿರುವ ಶಾರೀರಿಕ ವೈದ್ಯ ಮಿತ್ರರಾದ ಡಾ. ಎಚ್. ವಿ. ಜಯಪ್ರಸಾದ್ ಅವರನ್ನು ಮತ್ತು ಅಲ್ಲಿ ಚಿಕಿತ್ಸೆಗಾಗಿ ಬಂದು ತಮ್ಮ ಸರದಿಯನ್ನು ಕಾಯುತ್ತ ಕುಳಿತಿರುವ ಮುಕ್ಕಾಲು ಭಾಗ ಜನರನ್ನು. ಅವರಿಗೆ ಕೆಲವು ಸಾಂತ್ವನದ ಮಾತುಗಳನ್ನು ಹೇಳಿ, ತಮ್ಮ ನೆನಪಿನಲ್ಲಿರುವ ಕೆಲವು ಚಿಕಿತ್ಸಾ ಸಮಯದ ಸ್ವಾನುಭವಗಳನ್ನು ಅವರೊಂದಿಗೆ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಹಂಚಿಕೊಂಡು ಅವರ ಕಳವಳ, ಕಾತರ ಮತ್ತು ಅಗೋಚರ ಭಯದಿಂದ ಚಿಂತಾಕ್ರಾಂತವಾಗಿರುವ ಅವರ ಮುಖಗಳ ಮೇಲೆ ಮುಸಿ ನಗು ಸುಳಿಯುವಂತೆ ಮಾಡಿ, ಅವರಲ್ಲಿ ಧೈರ್ಯ ತುಂಬಿಯೇ ಅವರು ಹೊರಡುವುದು. ತಮ್ಮ ಸ್ನೇಹಿತರ ಒಡನಾಟವನ್ನು ಮುಗಿಸಿ ಅವರು ಮನೆಗೆ ಮರಳುವ ವೇಳೆಗೆ ನಾನು ಸಾಮಾನ್ಯವಾಗಿ ಕೆಲಸ ಮುಗಿಸಿ ಬಾಗಿಲು ಮುಚ್ಚುತ್ತಿರುತ್ತೇನೆ. ಸಂಜೆಯ ಸಮಯ ಭೇಟಿಯಾಗಲು ಸಾಧ್ಯವಾಗದಿದ್ದ ದಿನಗಳಲ್ಲಿ ರಾತ್ರಿಯಲ್ಲಾದರೂ ಐದು-ಹತ್ತು ನಿಮಿಷ ಕಾಲ ನನ್ನನ್ನು ಮಾತನಾಡಿಸಿಯೇ ಅವರು ಮನೆಗೆ ಹೋಗುವುದು. ಅವರ ಹಲವಾರು ಸ್ನೇಹಿತರನ್ನು ನನಗೆ ಪರಿಚಯಿಸಿದ್ದಾರೆ. ಕನ್ನಡ ಸಾಹಿತ್ಯ ಲೋಕದ ಕೆಲವು ಹಿರಿಯರು ನನಗೆ ಗುರುತಾಗಿದ್ದು ಇವರಿಂದಲೇ. ಇವರನ್ನೆಲ್ಲ ನಾನು ಹಿಂದೆ ದೂರದಿಂದ ನೋಡಿದ್ದೆನಷ್ಟೆ. ಖ್ಯಾತ ಚುಕ್ಕಿಚಿತ್ರ ಕಲಾವಿದ ಶ್ರೀ ಮೋಹನ್ ವರ್ಣೇಕರ್ ಇಂತಹರೊಬ್ಬರು.

ಇಂಥ ವಿಶಿಷ್ಟವಾದ ವ್ಯಕ್ತಿತ್ವವುಳ್ಳ, ಸಾಮಾನ್ಯರಂತೆ ಕಂಡರೂ ಅಸಾಮಾನ್ಯ ಗುಣಗಳುಳ್ಳ, ನನ್ನ ಮಟ್ಟಿಗೆ ಅಣ್ಣನಂತಿರುವ ಕವಿ ನಿಸಾರ್ ಅವರನ್ನು ನಾವು ಎಂದಾದರೂ ಮರೆಯಬಹುದೆ? ಮರೆಯಲು ಸಾಧ್ಯವೆ? ಅವರಂತಹ ಒಬ್ಬ ಶ್ರೇಷ್ಠ ಸಾಹಿತಿ, ಕವಿ, ವಿಮರ್ಶನಕಾರ ನಮ್ಮ ನಡುವೆ ಇಂದು ಇರುವುದು ನಮ್ಮ ಭಾಗ್ಯವಲ್ಲದೆ ಮತ್ತೇನು?

ಓ ನಮ್ಮ ನಲ್ಮೆಯ ನಿಸಾರ್,

ಇದೋ ನಿಮಗೆ ನನ್ನ ನಮನ.

ಈ ಸ್ಮರಣ ಸಂಚಿಕೆಯಲ್ಲಿ ಬಹಳಷ್ಟು ಹಿರಿಯ ಬರಹಗಾರರ ಲೇಖನಗಳು ಸೇರಿರುತ್ತವೆ ಎನ್ನುವುದರಲ್ಲಿ ನನಗೆ ಸಂದೇಹವೇ ಇಲ್ಲ. ಇವುಗಳ ಮಧ್ಯೆ, ಸುಂದರವಾದ ಜಿಂಕೆಗಳ ಹಿಂಡಿನಲ್ಲಿ ನುಸುಳಲು ಹವಣಿಸುತ್ತಿರುವ ಮೇಕೆಯಂತೆ ಕಾಣುವ ಈ ನನ್ನ ಪ್ರಯತ್ನ ಹಾಸ್ಯಾಸ್ಪದವಾಗಿ ಕಾಣದಿರಲೆಂದು ಹಾರೈಕೆ. ಮತ್ತೊಮ್ಮೆ ನಿಸಾರರಿಗೆ ಹಾರ್ದಿಕ ವಂದನೆಗಳು.

ನಮ್ಮ ಕಳಕಳಿಗಳನ್ನು, ಜೀವಿತಾಸಕ್ತಿಗಳನ್ನು ನಮ್ಮ ಜಾಯಮಾನ, ಅಳವುಗಳಿಗೆ ಅನುರೂಪರಾಗಿ ಅಳವಡಿಸಿಕೊಳ್ಳುವುದರಲ್ಲಿ ನಮ್ಮ ವಿವೇಕ ಅಡಗಿದೆ. ನೆಮ್ಮದಿಯನ್ನು ಗಳಿಸಿಕೊಳ್ಳುವಲ್ಲಿ ಏಕಧ್ಯೇಯ ನಿಷ್ಠೆ, ಅನಾಮಿಷ ಪ್ರವೃತ್ತಿ, ಅಚಪಲ ಗತಿ ಮನುಷ್ಯನಿಗಿರಬೇಕಾದದ್ದು ಅತ್ಯಗತ್ಯ. ಹಲವೆಡೆ ಚದುರಿರುವ ನಮ್ಮ ಕಾಳಜಿಯ ಕಿರಣಗಳನ್ನು ದೃಢ ಆದರ್ಶದ ಭೂತಗನ್ನಡಿಯಲ್ಲಿ ಕೇಂದ್ರೀಕರಿಸಿ ಏಕಮುಖಗೊಳಿಸಿದಾಗ ಅದರಿಂದ ಜೀವೋತ್ತೇಜಕ ಕಾವು ಉತ್ಪತ್ತಿಯಾಗಬಲ್ಲದು. ಇದಕ್ಕಾಗಿ ನಮ್ಮ ಶಕ್ತಿಯ ಅಳವಿನ ಮೇರೆಗಳನ್ನು ಮೊದಲು ಖಚಿತಪಡಿಸಿಕೊಳ್ಳಬೇಕಾದದ್ದು ಅವಶ್ಯ. ಬಾಳಿನಲ್ಲಿ ಹಿತದ ಏರುವೆಗೆ ಮಿತಿಯರಿವೇ ಮೊದಲ ಮೆಟ್ಟಿಲು.

(ಏಕ ಧ್ಯೇಯತೆ)

✧ ✧ ✧

ರೈಲ್ವೆ ಬೋಗಿಗಳು ಹಳಿಗಳ ಮೇಲೆ ನಿಂತಿದ್ದರೂ ಸ್ವಯಂ ಚಲಿಸುವ ಶಕ್ತಿ ಅವಕ್ಕೆ ಇರುವುದಿಲ್ಲ. ಹತ್ತಾರು ಬೋಗಿಗಳನ್ನು ಮುನ್ನಡೆಸುವ ಬಲ ಸಾಮರ್ಥ್ಯಗಳಿರುವುದು ಎಂಜಿನ್ನಿಗೆ ಮಾತ್ರ. ಬಹುಮತೀಯ ಶ್ರೀಸಾಮಾನ್ಯರ ಬೋಗಿಗಳು, ಅಲ್ಪಸಂಖ್ಯೆಯ ಪ್ರಾಜ್ಞ ಎಂಜಿನ್ನನ್ನು ಹೊಂದಿರುವ ನಮ್ಮ ಸಮಾಜದ ಉಗಿ ಬಂಡಿ ನಿರ್ವಿಘ್ನವಾಗಿ ಅಂತಃಸಾಕ್ಷಿ ನಿರ್ದೇಶಿತ ಬದುಕಿನ ಗುರಿಯನ್ನು ತಲಪುವಂತಾಗಲಿ.

(ಸಮಾಜವೆಂಬ ರೈಲು ಗಾಡಿ)



ನಡೆನುಡಿಯ ನೇರವಂತಿಕೆಯ ನೇಹಿಗ ನಿಸಾರ್

♦ ಶೇಷನಾರಾಯಣ

ಗೆಳೆಯ ನಿಸಾರ್ ಅಹಮದ್ ಅವರ ಪರಿಚಯ ನನಗೆ ಯಾವಾಗ ಆಯಿತು? ವರುಷ ವರುಷಗಳ ಹಿನ್ನೋಟವನ್ನು ಹರಿಸಬೇಕಾಗುತ್ತದೆ.

ಐದು ದಶಕಗಳಿಗೂ ಹಿಂದಿನ ಮಾತು. ಆಗೆಲ್ಲ ನಮಗೆ ಯಾರಿಗೂ ಮದುವೆ ಆಗಿರಲಿಲ್ಲ. ನಿರಂಜನರಿಗೂ ಸಹ. ನಾನು ಆಗ 'ಚಿತ್ರಗುಪ್ತ' ವಾರ ಪತ್ರಿಕೆಯಲ್ಲಿ ಉಪ ಸಂಪಾದಕನಾಗಿದ್ದೆ. 'ತಾಯಿನಾಡು'ವಿನಿಂದ ಪ್ರತ್ಯೇಕವಾದ 'ಚಿತ್ರಗುಪ್ತ', ಕನ್ನಡ ಸಾಹಿತ್ಯ ಪರಿಷತ್ತಿನ ಎದುರಿಗೆ ಇದ್ದದ್ದು, ಆಮೇಲೆ ಅನಕೃ ಅವರ ಮನೆಯ ಸಮೀಪದ ವಿಶ್ವೇಶ್ವರಪುರಕ್ಕೆ ವರ್ಗಾವಣೆಯಾಗಿತ್ತು; ಎಂದರೆ ಸಜ್ಜನರಾವ್ ಸರ್ಕಲ್ ಬಳಿಯ ಮಹಡಿಗೆ.

ಸಂಪಾದಕ ಎಂ. ಎಸ್. ಭಾರದ್ವಾಜರು ಮೃದು ಹೃದಯಿಗಳು, ಸ್ನೇಹಶೀಲ ಸಜ್ಜನರು. ಯಾವಾಗಲೂ ಯಾರಿಗಾದರೂ ತಮ್ಮ ಕೈಯಲ್ಲಾದಷ್ಟು ಸಹಾಯ ಮಾಡಬೇಕು ಎನ್ನುವ ದೊಡ್ಡ ಮನಸ್ಸುಳ್ಳವರು. 'ಚಿತ್ರಗುಪ್ತ' ನಿಂತು ಹೋದಾಗ ನಾವೆಲ್ಲ ನಿರುದ್ಯೋಗಿಗಳು ಆಗುತ್ತೇವೆ ಎಂದು ಕಣ್ಣು ತುಂಬಿಕೊಂಡ ಆ ದಯಾರ್ದ್ರ ಹೃದಯಿಯ ದೃಶ್ಯ ಈಗಲೂ ನನ್ನ ಕಣ್ಣ ಮುಂದೆ ನಿಲ್ಲುತ್ತದೆ.

ಭಾರದ್ವಾಜರ ಬಳಿ ಯಾವಾಗಲೂ ಲೇಖಕರ ಹಿಂಡು. ಅದರಲ್ಲೂ ಉದಯೋನ್ಮುಖ ಲೇಖಕರೇ ಜಾಸ್ತಿ. ಹಿರಿಯರು, ಕಿರಿಯರು ಎಂಬ ಭೇದವಿಲ್ಲದೆ, ಎಲ್ಲರೊಂದಿಗೆ ಹರಟೆ

ಹೊಡೆಯುವುದರಲ್ಲಿ ಭಾರದ್ವಾಜರು ನಿಸ್ಸೀಮರು. ಆಗ ನಿಸಾರ್, ಲಂಕೇಶ್ ಮುಂತಾದವರಿಗೆ 'ಚಿತ್ರಗುಪ್ತ' ಪತ್ರಿಕೆಯಲ್ಲಿ (೧೯೫೫) ಪುಸ್ತಕ ಪರಿಚಯವನ್ನು ಮಾಡುವ ಅವಕಾಶವನ್ನು ಭಾರದ್ವಾಜರು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸಿದ್ದರು. ಆಗಿನ್ನೂ ಇವರುಗಳು ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು.

ಈಗಿನ ಪತ್ರಿಕಾ ಕಾರ್ಯಾಲಯಗಳ ವೈಖರಿಯೇ ಬೇರೆ. ಎಲ್ಲವೂ ವ್ಯಾಪಾರಿ ರೀತಿ. ಸಾಹಿತ್ಯ-ಸಂವಾದ ಮುಂತಾದವು ಎಲ್ಲವೂ ಬೆಟ್ಟ ಹತ್ತಿ ಭದ್ರವಾಗಿ ಕುಳಿತು ಬಿಟ್ಟಿವೆ. ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕ ಕ್ಯಾಬಿನ್‌ಗಳು; ಕಂಪ್ಯೂಟರ್‌ಗಳು; ಸೌಲಭ್ಯಗಳು. ಒಂದು ಮಾತಾಡಲೂ ಪುರುಸೊತ್ತಿಲ್ಲ. ವೇಗ, ಅತಿ ವೇಗ. ಹರಟೆಗೆ ಚರ್ಚೆಗೆ ವಿಮರ್ಶೆಗೆ ಅವಕಾಶವೇ ಇಲ್ಲ. ಚರ್ಚೆ ಇಲ್ಲದಿದ್ದಮೇಲೆ ಆತ್ಮೀಯತೆ ಎಲ್ಲಿರುತ್ತದೆ?

ಭಾರದ್ವಾಜರಲ್ಲಿಗೆ ಬರುತ್ತ ಇದ್ದವರು ತರುಣರೇ ಜಾಸ್ತಿ. ಎಲ್ಲರೂ ಹೆಚ್ಚು ಕಡಿಮೆ ಕಾಲೇಜು ಇತ್ಯಾದಿಗಳಲ್ಲಿ ವ್ಯಾಸಂಗ ಮಾಡುತ್ತ ಇದ್ದವರೇ. ಕೆಲಸಗಳಿಗೆ ಹೋಗುತ್ತ ಇದ್ದವರು ಕಡಿಮೆ. ಲಂಕೇಶ್, ನಿಸಾರ್, ಕ. ವೆಂ. ರಾಜಗೋಪಾಲ, ನಾಡಿಗ—ಹೀಗೆ. ಈ ಗುಂಪಿನಲ್ಲಿ ಹೆಚ್ಚಿನವರು ಬೆಂಗಳೂರಿನಲ್ಲಿಯೇ ವಾಸವಾಗಿದ್ದವರು.

'ಚಿತ್ರಗುಪ್ತ'ಕ್ಕೆ ಬರೆಯುತ್ತ ಇದ್ದವರೂ ಗದ್ಯವೇ ಆಗಲಿ ಪದ್ಯವೇ ಆಗಲಿ, ಆಗ ಹೆಚ್ಚು ಕಡಿಮೆ ನಮ್ಮ ವಯಸ್ಸಿನವರೇ ಆಗಿರುತ್ತ ಇದ್ದರು ಇಲ್ಲವೇ, ನಮಗಿಂತ ನಾಲ್ಕಾರು ವರುಷಗಳು ದೊಡ್ಡವರು ಅಥವಾ ಚಿಕ್ಕವರು ಇದ್ದಿರಲೂ ಬಹುದು. ಎಂ.ವಿ.ಸೀ., ನಿರಂಜನ, ಕಟ್ಟೀಮನಿ, ಕೋ.ಚೆ, ಎಲ್.ಎಸ್.ಎಸ್., ಸೇವ ನಮೀರಾಜಮಲ್ಲ, ಕುಲವರ್ಮ ಬಾಲಕೃಷ್ಣ, ವೆಂಕಟರಾಜ ಪಾನಸೆ, ಸಿ. ಎಚ್.ಪ್ರಹ್ಲಾದ ರಾವ್—ಇತ್ಯಾದಿ.

ನಾನೂ ವೆಂಕಟರಾಜ ಪಾನಸೆಯವರೂ ಆ ಪತ್ರಿಕೆಯ ಉಪ ಸಂಪಾದಕರಾಗಿ ಇದ್ದೆವು. ನಿಸಾರ್ ಆ ಕಾಲದಿಂದಲೂ ಯಾರ ಮನಸ್ಸೂ ನೋವಾಗದ ಹಾಗೆ ಬರವಣಿಗೆಯನ್ನು ಮುಂದುವರಿಸುತ್ತಾ ಬಂದವರು. ಪೋಲಿ ಮಾತುಗಳನ್ನು, ಅಸಹ್ಯಕರ ಸಂಗತಿಗಳನ್ನು ಸೇರಿಸದ ಶುದ್ಧ ಬರವಣಿಗೆ. ಈ ವಿಚಾರದಲ್ಲಿ ಅವರು ಲಂಕೇಶರಿಗಿಂತ ತೀರಾ ಭಿನ್ನ. ಲಂಕೇಶ್ ಧೋರಣೆಯೇ ಬೇರೆ; ಧಾಟಿಯೇ ಬೇರೆ: ಪುತಿನ ಕವಿ ಅಲ್ಲವೇ ಅಲ್ಲ, ನಿರಂಜನರ ವಿಮರ್ಶೆ ಎಂಥಾದ್ದು? ಅದು ಏನು ವಿಮರ್ಶೆಯೋ?—ಈ ರೀತಿ.

ಆಗ ನಾನು ತಿರುಗಿ ಬೀಳುತ್ತ ಇದ್ದೆ. ಸರಿ, ಮಾತಿಗೆ ಮಾತು. ಜಗಳ, ಜಗಳ, ಜಗಳ.

ನಿಸಾರ್ ಇದಕ್ಕೆ ತದ್ವಿರುದ್ಧ. ಯಾರನ್ನೂ ಲಘುವಾಗಿ ಕಾಣದ ನಡವಳಿಕೆ. ಹಾಗಾಗಿ ಅವರು ಗಂಭೀರ ಮುಖ ಮುದ್ರೆಯನ್ನೇ ಹೊತ್ತವರೂ ಅಲ್ಲ. ಸಂದರ್ಭಕ್ಕೆ ತಕ್ಕ ಹಾಗೆ ಲಘು ಚಾಟಿ ಏಟು. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ನೀಡೋಣ.

ಆದ್ಯ ರಾಮಾಚಾರ್ಯರು ನನ್ನಿಂದ ಹುಬ್ಬಳ್ಳಿಯಿಂದಲೋ ಬಿಜಾಪುರದಿಂದಲೋ ಪ್ರಕಟವಾಗುತ್ತ ಇದ್ದ ಒಂದು ಪತ್ರಿಕೆಗೆ—ಯಾವ ಊರು, ಯಾವ ಪತ್ರಿಕೆ ಎನ್ನುವುದು ಈಗ ಮರೆತು ಹೋಗಿದೆ—ನನ್ನಿಂದ ಒಂದು ಕಥೆಯನ್ನು ಬರೆಯಿಸಿದರು. ಅದಕ್ಕೆ ಮುನ್ನುಡಿ

ರೂಪದಲ್ಲಿ ನನ್ನ ಪರಿಚಯದ ಸಲುವಾಗಿ ನಾಲ್ಕು ಮಾತು ಬರೆದಿದ್ದರು.

ಆಗ ನನ್ನ ಒಂದೇ ಕಾದಂಬರಿ ಪ್ರಕಟವಾಗಿತ್ತು, ಅದೇ 'ಮೂಲಾ ನಕ್ಷತ್ರ'. ಪರಿಚಯ ರೂಪದ ಆ ಕಾದಂಬರಿಯ ಹೆಸರು ಮುದ್ರಣ ದೋಷದಿಂದ 'ಡೂಲಾ ನಕ್ಷತ್ರ' ಆಗಿ ಹೋಗಿತ್ತು. ಹಾಗೆಯೇ, ನನ್ನ ಹೆಸರೂ ಸಹ ವಿರೂಪಗೊಂಡಿತ್ತು. ಆಗೆಲ್ಲ ಕೈಯಿಂದ ಮೊಳೆ ಜೋಡಿಸಿ ಮುದ್ರಣ ಮಾಡುವ ವಿಧಾನ. ಈಗಿನ ಹಾಗೆ ಡಿಟಿಪಿ ಮುಂತಾದ ಯಾವ ಸೌಲಭ್ಯಗಳೂ ಆಗ ಇರಲಿಲ್ಲ.

ನಿಸಾರ್ ಅದನ್ನು ನೋಡಿ ಬಿದ್ದು ಬಿದ್ದು ನಕ್ಕಿದ್ದರು. 'ಏನು ಡೂಲಾ ನಕ್ಷತ್ರದ ಶೇಹ ನಾರಾಯಣರೇ...' ಎಂದು ಹಾಸ್ಯ ಮಾಡುತ್ತ ಇದ್ದರು. ಈಗಲೂ ಆ ಸಂಬೋಧನೆಯನ್ನು ನಿಸಾರರು ಮರೆತಿಲ್ಲ! ನೆನಪಿನಲ್ಲಿ ಉಳಿಸಿಕೊಂಡಿದ್ದಾರೆ.

ನಿಸಾರ್ 'ಚಿತ್ರಗುಪ್ತ' ಕಾರ್ಯಾಲಯಕ್ಕೆ ಬರುವುದಕ್ಕೆ ಮೊದಲೇ ಕವಿಯಾಗಿ ನನಗೆ ಪರಿಚಯ ಆಗಿ ಹೋಗಿದ್ದರು. ನನ್ನ ಊಹೆಯಂತೆ ಎಕ್ಕುಂಡಿ, ಜಿಎಸ್‌ಎಸ್, ನಿಸಾರ್ ಮುಂತಾದವರ ಕವಿತೆಗಳೆಲ್ಲವೂ ಮಾಸ್ತಿಯವರ 'ಜೀವನ'ದಲ್ಲಿ ಪ್ರಕಟವಾಗುತ್ತ ಇದ್ದುವು. ಅಂತೂ ಕವಿಯಾಗಿ ನಿಸಾರರ ಪರಿಚಯ ನನಗೆ ಆದದ್ದು ಮಾಸ್ತಿಯವರ 'ಜೀವನ' ಪತ್ರಿಕೆಯಿಂದಲೇ. ಇದು ಖಚಿತವಾಗಿ ನೆನಪಿನಲ್ಲಿದೆ.

ಆ ಕಾಲದಲ್ಲಿ 'ಜೀವನ' ಮೇಲುಮಟ್ಟದ ಒಂದು ಸಾಹಿತ್ಯ ಪತ್ರಿಕೆ. ಮಾಸ್ತಿಯವರು ಬರೆಯುತ್ತ ಇದ್ದ ಸಂಪಾದಕೀಯವನ್ನು ಆಗ ಓದಿ ಮೆಚ್ಚದವರೇ ಇರಲಿಲ್ಲ. ಎಲ್ಲ ವಿಷಯಗಳ ಮೇಲೂ ಮಾಸ್ತಿಯವರು ನಿರಾಳವಾಗಿ ಬರೆಯುತ್ತ ಓದುಗರಿಗೆ ಮೋಡಿ ಹಾಕಿದ್ದರು. ಈ ಮೋಡಿಗೆ ನಿಸಾರರೂ ಒಳಗಾಗಿರಬೇಕು. ಆದುದರಿಂದಲೇ ರಸ್ತೆ ಬದಿಯ ಫುಟ್‌ಪಾತಿನಲ್ಲಿ ಮಾಸ್ತಿಯವರು ಕ್ಲಬ್ಬಿಗೆ ಇಸ್ಪೀಟು ಆಟಕ್ಕೆ ಹೋಗುವ ಪರಿಯನ್ನು ಸೊಗಸಾಗಿ ಚಿತ್ರಿಸಿ ಕವನ ಬರೆದಿದ್ದಾರೆ. ಮಾಸ್ತಿಯವರನ್ನು ಕುರಿತ ಕವನಗಳಲ್ಲಿ ಇಷ್ಟೊಂದು ಸುಂದರವಾದ ಕವಿತೆ ಮತ್ತೊಂದಿಲ್ಲ.

ಬೆಳೆದರು ಬೆಳೆದರು ಬೆಳೆದರು, ನಿಸಾರ್ ಎತ್ತರದ ವ್ಯಕ್ತಿಯಾಗಿ, ಉಹೂಂ, ಕವಿಯಾಗಿ ಬೆಳೆದೇ ಬೆಳೆದರು. ನಾಡಿನ ಪ್ರಮುಖ ಕವಿಗಳ ಸಾಲಿನಲ್ಲಿ ಸೇರಿಕೊಂಡರು. ಉದ್ದಕ್ಕೂ ನಿಸಾರ್ ನಮಗೆ ಹೇಗೆ ಕಾಣುತ್ತಾರೆ ನೆನಪಾಗುತ್ತಾರೆ ಎನ್ನುವುದಕ್ಕೆ ಒಂದೆರಡು ನಿದರ್ಶನಗಳನ್ನು ಹೇಳೋಣ:

ನಾವು ನಮ್ಮ ಹಳ್ಳಿಗೆ ಹೋಗಿದ್ದಾಗ ಅಥವಾ ಹೋಗುವಾಗ, ಬಸ್ಸಿನಲ್ಲಿ ಕುಳಿತಿದ್ದಂತೆ, ದಾರಿಯನ್ನೂ ಬಿಡದೆ ಕುರಿ ಹಿಂಡು ರಸ್ತೆ ಪೂರಾ ವ್ಯಾಪಿಸಿಕೊಂಡಿರುವ ದೃಶ್ಯ. ಸಾಮಾನ್ಯವಾಗಿ ಹಳ್ಳಿಗಳ ಪರಿಚಯ ಇರುವವರಿಗೆ ಈ ನೋಟ ಅತಿಶಯವೇನೂ ಅಲ್ಲ. ಆ ಕುರಿ ಮಂದೆಯನ್ನು ನಿಯಂತ್ರಿಸುವವ ಹಚ್ಕ್ ಹಚ್ಕ್ ಹಚ್ಕ್ ಎಂದು ಆ ಮಂದೆಯನ್ನು ಎರಡು ಭಾಗ ಮಾಡಿ ಬಸ್ ಮುಂದೆ ಹೋಗಲು ಬಿಡುವಾಗ, ನೂರಿನ್ನೂರು ಸಂಖ್ಯೆಯಲ್ಲಿ ಇರುವ ಆ ಕುರಿ ಮಂದೆ, ಇದರ ಬಾಲ ಅದು ಮೂಸುತ್ತ, ಅದರ ಬಾಲ ಇದು ಮೂಸುತ್ತ

ದಾರಿ ಬಿಡುವಾಗ, ನಿಸಾರ್ ನಮ್ಮ ಮುಂದೆ ಬಂದೇ ಬರುತ್ತಾರೆ—'ಕುರಿಗಳು, ಸಾರ್, ಕುರಿಗಳು' ಎನ್ನುತ್ತಾರೆ.

ಎಷ್ಟೋ ಸಲ ನಾನು ಜೋಗಿಗೆ ಹೋಗಿದ್ದೇನೆ. ಶರಾವತಿಯ ಮುಂದೆ ನಿಂತಿದ್ದೇನೆ. ಆಗ ಬೆಡಗಿನ ರಾಣಿಯಂತೆ ರಾಜ ರಾಣಿ ಎನ್ನುವ ಹೆಸರಿನಲ್ಲಿ ಧುಮ್ಮಿಕ್ಕುವ ನೀರು ಹನಿ ಹನಿಯಾಗಿ ಮುತ್ತಿನ ಮಣಿಗಳಾಗಿ ಚಿಮ್ಮುವಾಗ, 'ನಿತ್ಯೋತ್ಸವ ತಾಯೆ, ನಿತ್ಯೋತ್ಸವ'ವನ್ನು ನಮಗೆ ತಿಳಿಯದಂತೆಯೇ ನಮ್ಮ ಬಾಯಿ ಗುಣುಗುಣಿಸುತ್ತದೆ.

ಹಾಗೆಯೇ, ಗಾಂಧಿ ಬಜಾರಿಗೆ ಹೋಗುವಾಗ, ನಾವು ಬಹುವಾಗಿ ಮೆಚ್ಚಿಕೊಂಡಿರುವ, ಪ್ರೀತಿಸುವ ಮಾಸ್ತಿ, ರಸ್ತೆಯಲ್ಲಿ ಒಂದು ಹೆಜ್ಜೆಯನ್ನೂ ಇಡದೆ ಕ್ರಮವಾಗಿ ನಿಯಮಬದ್ಧ ವಾಗಿ ಫುಟ್‌ಪಾತ್‌ನಲ್ಲೇ ಕ್ಲಬ್ಬಿಗೆ ಸಾಗುವ ಒಂದು ಸುಂದರ ದೃಶ್ಯ ಥಟ್ಟನೆ ನೆನಪಿಗೆ ಬರುತ್ತದೆ.

ಇಲ್ಲಿ ನಿಸಾರರ ಎಲ್ಲ ಕವಿತೆಗಳನ್ನೂ ವಿಮರ್ಶೆ ಮಾಡುವುದಕ್ಕೆ ಇದು ಸಮಯವೂ ಅಲ್ಲ; ಸ್ಥಳವೂ ಅಲ್ಲ. ಆದರೆ ಜನ ಮನದಲ್ಲಿ ಈ ಕವಿ ಹೇಗೆ ಭದ್ರವಾಗಿ ಸ್ಥಿರವಾಗಿಬಿಟ್ಟಿದ್ದಾರೆ ಎನ್ನುವುದನ್ನು ಹೇಳುವುದೇ ನನ್ನ ಉದ್ದೇಶ.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟದಲ್ಲಿ ಮೇನೇಜರಾಗಿದ್ದಾಗ ನಿಸಾರ್ ಅವರ 'ಸುಮುಹೂರ್ತ' (೧೯೬೬) ಕವನ ಸಂಕಲನವನ್ನು ಅಚ್ಚು ಮಾಡುವ ಅವಕಾಶವೂ ನನಗೆ ಒದಗಿ ಬಂದಿತ್ತು. ಮುದ್ರಕನಾಗಿ ನಿಸಾರರ ಆ ಒಂದು ಕವನ ಸಂಕಲನವನ್ನು ಮಾತ್ರ ನಾನು ಅಚ್ಚು ಮಾಡಿದ್ದೇನೆ. ಹಂಪ ನಾಗರಾಜಯ್ಯನವರು ಇದನ್ನು ಪ್ರಕಟಿಸಿದ್ದರು.

ನಿಸಾರ್ ನನ್ನ ಪಾಲಿಗಂತೂ ಉದ್ದಕ್ಕೂ ಆತ್ಮೀಯವಾಗಿ ಗೆಳೆಯರಾಗಿ ಮುಂದುವರಿದಿದ್ದಾರೆ. ಎಷ್ಟೋ ಸಲ ನಾನು ಏನು ಏನೋ ಕೆಲಸಗಳಿಗಾಗಿ ಆ ಕಡೆ ಎಂದರೆ, ಪದ್ಮನಾಭನಗರದ ಕಡೆಗೆ ಹೋದಾಗ ತಪ್ಪದೆ ಅವರ ಮನೆಗೆ ಹಾಜರಾಗುವುದೂ ಉಂಟು. ಫೋನ್ ಮಾಡದೆಯೇ ಹೋಗಿ ಬರುವುದೂ ಉಂಟು. ಬೆಂಗಳೂರಿನಲ್ಲಿ ಫೋನ್ ಮಾಡದೆ ಒಬ್ಬರ ಮನೆಗೆ ಹೋಗುವುದು ಅಪಾಯ. ಹಾಗೆ ಹೋದರೆ ಬಾಗಿಲು ಮುಚ್ಚಿರುತ್ತದೆ.

ನಾನು ಹೋದಾಗ ನಿಸಾರರು ಸಿಕ್ಕಿದರೆ ಬಹಳ ಹೊತ್ತು ಏನೇನೋ ಮಾತಾಡುತ್ತ ಕುಳಿತುಕೊಳ್ಳುವುದು ಉಂಟು. ಎರಡು ಒಂದೆರಡು ಸಲ ಟೀ ಕುಡಿಯುವುದೂ ಉಂಟು.

ಹೀಗೆ, ಒಂದು ಸಂದರ್ಭದಲ್ಲಿ ನಾನು ಅವರ ಮನೆಗೆ ಹೋಗಿದ್ದಾಗ, ಅವರು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದೂ ಇದೆ. ಅದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಕೆಡವಿದ ಕಾಲ. ಆ ಸಮಯದಲ್ಲಿಯೇ ನಾನು 'ಅಯೋಧ್ಯೆಯಲ್ಲಿ ರಾಮನಿಲ್ಲ!' ಎನ್ನುವ ರಾಜಕೀಯ ಕಾದಂಬರಿಯನ್ನು ಬರೆದಿದ್ದೆ. ಆ ಬಗ್ಗೆ ಕೆಲವು ತಾಲೀಬಾನಿಗಳು ನನಗೆ ಬೆದರಿಕೆಯ ಪತ್ರವನ್ನು ಬರೆದಿದ್ದರು. 'ನೀನು ಕಥೆ, ಕಾದಂಬರಿ ಬರೆಯುವುದನ್ನು ನಿಲ್ಲಿಸಿಬಿಡು, ಜಾಗ್ರತೆ' ಎಂದಿದ್ದರು.

ಈ ವಿಷಯವನ್ನು ನಿಸಾರರೊಂದಿಗೆ ಪ್ರಸ್ತಾಪಿಸಿದಾಗ 'ಹೌದೂರೀ, ನನ್ನ ಮನೆ ಸುತ್ತ

ಇರೋದು ಎಲ್ಲ ಮುಸ್ಲಿಮೇತರರ ಮನೆಗಳೇ, ತುಂಬಾ ಪ್ರೀತಿ ವಿಶ್ವಾಸ ಮರ್ಯಾದಸ್ಥ ಜನ. ಆದರೂ ಯಾಕೋ ಬಾಬರಿ ಮಸೀದಿಯ ಅನಂತರದ ಕೋಮು ಗಲಭೆಗಳು ನಡೆದಾಗ ನನಗೆ ಹೆದರಿಕೆಯಾಗಿ ಹೋಯ್ತು. ವಾತಾವರಣ ಚೆನ್ನಾಗಿಲ್ಲ ಅಂತ, ಈ ವಿಷಯವನ್ನು ನನ್ನ ಆಪ್ತ ಹಿರಿಯ ಪೊಲೀಸ್ ಅಧಿಕಾರಿಯೊಂದಿಗೆ ಪ್ರಸ್ತಾಪಿಸಿದಾಗ ಅವರು ದೊಡ್ಡದಾಗಿ ನಕ್ಕು 'ಹಾಗೆಲ್ಲ ಹೆದರುವ ಅಗತ್ಯವಿಲ್ಲ ಸಾರ್, ನೆಮ್ಮದಿಯಾಗಿರಿ' ಎಂದರು.'

ಜನ ಮನದಲ್ಲಿ ಭೀತಿಯನ್ನು ಹುಟ್ಟಿಸಿ ರಾಜಕೀಯ ಲಾಭ ಪಡೆದುಕೊಳ್ಳುವ ಈ ಜನ, ಕೋಮುವಾದೀ ಜನ, ಎಲ್ಲಿ ಭಾರತವನ್ನು ತಾಲೀಬಾನ್ ಮಾಡಿಬಿಡುತ್ತಾರೋ ಎಂದು ನಾವು ಆಗ ಮಾತಾಡಿಕೊಂಡದ್ದೂ ಉಂಟು.

ಆದರೆ ಭಾರತ ಎಂದಿಗೂ ತಾಲೀಬಾನ್ ಆಗುವುದು ಸಾಧ್ಯವೇ ಇಲ್ಲ. ಪ್ರಜಾಪ್ರಭುತ್ವದ ರೀತಿಯಲ್ಲಿಯೇ ಅದು ಮುಂದುವರಿಯುತ್ತದೆ; ಮುಂದುವರಿಯಬೇಕು.

ನಿಸಾರ್ ಹೇಗೆ ನಮ್ಮ ಕನ್ನಡದ ಶ್ರೇಷ್ಠ ಕವಿಯೋ, ಹಾಗೆಯೇ ಗದ್ಯ ಬರವಣಿಗೆಯಲ್ಲಿ ಸಹ ಗಣನೀಯರು. ಅವರದು ಸೊಗಸಾದ ಗಾಂಭೀರ್ಯಪ್ರದ ಗದ್ಯ. ಪ್ರೌಢ ಬರವಣಿಗೆ. ಮಾಸ್ತಿಯವರ ಹೆಜ್ಜೆಯ ಹಾಗೆ, ವಿಷಯವನ್ನು ಬಿಟ್ಟು ಆ ಕಡೆ ಈ ಕಡೆ ಜಾರುವವರು ಅಲ್ಲ. ತುಂಬಿದ ನದಿಯಂತೆ ಸರಾಗವಾಗಿ ಓಡುವ ಓಟ. ಗದ್ಯವೂ ಪದ್ಯದ ಹಾಗೆ ಸಾಗುವ ರೀತಿ ಸುಲಲಿತ, ಸುಭಗ, ಸರಾಗ.

ಇನ್ನು ಪ್ರಶಸ್ತಿಗಳೋ?

ನಿಸಾರರಿಗೆ ಅವು ಬೆಟ್ಟ ಬೆಟ್ಟವಾಗಿ ಬಂದಿದೆ. ರಾಜ್ಯೋತ್ಸವ, ಸೋವಿಯತ್ ಲ್ಯಾಂಡ್, ಭಾರತ ಸರಕಾರದ ಎನ್.ಸಿ.ಇ.ಆರ್.ಟಿ—ಹೀಗೆ, ಒಂದು ಅಟ್ಟ ತುಂಬುವಷ್ಟು. ಈಗ 'ಮಾಸ್ತಿ ಪ್ರಶಸ್ತಿ'ಯ ಗರಿಯೂ ಸೇರಿಕೊಂಡಿದೆ. ಮುಂದೆ ಮತ್ತಾವ ಪುರಸ್ಕಾರಗಳು ಅವರಿಗಾಗಿ ಕಾದಿವೆಯೊ?

ಈ ಕವಿಯ ಬಗ್ಗೆ ನಮ್ಮ ಮೇರು ನಟ ರಾಜಕುಮಾರರಿಗೂ ತುಂಬು ಅಭಿಮಾನ. ಒಂದು ಸಲ ನಿಸಾರರ ಮನೆಗೆ ರಾಜಕುಮಾರರು ಊಟಕ್ಕೆ ಹೋಗಿದ್ದುದೂ ಉಂಟು.

ನನಗಿಂತ ಒಂಬತ್ತು ವರ್ಷಗಳಿಗೆ ಚಿಕ್ಕವರಾದ (೧೯೩೬) ನಿಸಾರರ ಬಗ್ಗೆ ನನ್ನ ಅನಿಸಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಒಂದು ಸಂದರ್ಭ ಒದಗಿ ಬಂದದ್ದಕ್ಕಾಗಿ ನನಗೆ ತುಂಬಾ ಸಂತೋಷವಾಗಿದೆ. ಅದು ಮಧುರವಾಗಿಯೂ ಇದೆ. ಆ ಮಾಧುರ್ಯ ನಿಮಗೂ ರುಚಿಸಿದೆ ಎಂದೇ ನನ್ನ ಭಾವನೆ.

Men of letters ಆಗಿರುವುದರ ಜೊತೆಗೆ ಕೆಲವು ಮಹಾನುಭಾವರು Men of anonymous letters ಕೂಡ ಆಗಿರುತ್ತಾರೆ. ಇದರಿಂದ ಆ ಕುಹಕಿಗಳಿಗೆ ಮೋಜು, ತೃಪ್ತಿ. ಸಜ್ಜನರಿಗೆ, ಷೂಸಿನಲ್ಲಿ ಸೇರಿಕೊಂಡ ಮರಳು ಕಣದಂತೆ ಕಿರಿಕಿರಿ.

(ಕುಹಕಿಗಳ ಕಿರುಕುಳ)



ನನ್ನ ಆದರ್ಶದ ವ್ಯಕ್ತಿ ಪ್ರೊ. ನಿಸಾರ್

♦ *ಎಸ್. ಜಗನ್ನಾಥ ರಾವ್ ಬಹುಳೆ*

ಮಾಧ್ಯಮಿಕ ಶಾಲೆಯಲ್ಲಿ ನಾನು ಓದುತ್ತಿದ್ದ ಎಪ್ಪತ್ತರ ದಶಕದ ಆರಂಭದ ದಿನಗಳು. ಆನೇಕಲ್‌ನಂತಹ ಬೆಂಗಳೂರಿನ ಸಮೀಪದ ಸಣ್ಣ ಊರಿನಲ್ಲಿ ಮನೆ ಮತ್ತು ಶಾಲೆಗಳೇ ನಮ್ಮ ದಿವ್ಯ ಸನ್ನಿಧಿಗಳು. ಹೆಚ್ಚೆಂದರೆ ಆಟದ ಬಯಲು, ಇಲ್ಲವೆ ಹಿರಿಯರೊಂದಿಗೆ ಅಪರೂಪಕ್ಕೆ ಒಂದು ನಾಟಕ-ಸಿನಿಮಾ ನೋಡುವುದು, ರೇಡಿಯೊ ಕೇಳುವುದು. ಬೆಳಗಿನ ಬೆಲ್ಲು ಹೊಡೆದಾಗ ಕೂಡಲೇ ಶಾಲೆಯ ಕೋಣೆ ಸೇರಿದ ಮೇಲೆ ಪಾಠ ಪ್ರವಚನಗಳೊಂದಿಗೆ ಖುದ್ದು ಉಪಾಧ್ಯಾಯರೇ ಅಂದಿನ ವೃತ್ತ ಪತ್ರಿಕೆಯನ್ನು ತಂದು ಮುಖ್ಯಾಂಶಗಳನ್ನು ಓದಿ ಹೇಳುತ್ತಿದ್ದರು. ವೃತ್ತ ಪತ್ರಿಕೆಯನ್ನು ಓದುವ ಹಂಬಲ ತುಂಬುತ್ತಿದ್ದರು. ವಾರದ ಕೊನೆಯಲ್ಲಿ ಶನಿವಾರದ ಕೊನೆಯ ತರಗತಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲು. ಶಾಲೆಯ ಎಲ್ಲ ತರಗತಿಗಳ ವಿದ್ಯಾರ್ಥಿಗಳು ದೊಡ್ಡ ಹಾಲ್‌ನಲ್ಲಿ ಸೇರಬೇಕಾಗಿತ್ತು. ಪೂರ್ವ ಯೋಜಿತವಾಗಿ ಹೆಸರು ನೀಡಿದವರು ತಮ್ಮ ಆಸಕ್ತಿದಾಯಕ ಚಟುವಟಿಕೆಗಳನ್ನು ಪ್ರದರ್ಶಿಸಲು ಒಂದು ಅವಕಾಶ. ಶಾಲೆಯ ಎಲ್ಲ ಉಪಾಧ್ಯಾಯರು ಮುಖ್ಯೋಪಾಧ್ಯಾಯರ ಸಹಿತ ನೆರೆದಿರುತ್ತಿದ್ದರು. ಹಾಲ್‌ನ ಒಂದು ಬದಿ ವೇದಿಕೆ. ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ. ಏಕಪಾತ್ರಾಭಿನಯ, ಹಾಡು, ಆಶು ಭಾಷಣ. ನಾವು ಸಹ ಅಂದಿನ ಸಿನಿಮಾ, ನಾಟಕಗಳಿಂದ ಪ್ರಭಾವಿತರಾಗಿ ಕೆಲವು ಘಟನೆಗಳನ್ನು ಆಧರಿಸಿದ ಸಣ್ಣ ಪುಟ್ಟ

ನಾಟಕ ರೂಪಕಗಳನ್ನು ನೀಡುತ್ತಿದ್ದೆವು. ವಿಶೇಷ ಉಪನ್ಯಾಸಗಳನ್ನು ಉಪಾಧ್ಯಾಯರಿಂದ ಆಲಿಸಿದ ಬಳಿಕ ಸಾಮೂಹಿಕ ಭಜನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತಿತ್ತು. ಲಾಂಗ್‌ಬೆಲ್ ಕೇಳುತ್ತಲೇ ಮನೆಯ ಕಡೆ ಓಟ. ಇದಿಷ್ಟು ವಾರದ ಕೊನೆಯ ಪ್ರಮುಖ ಆಕರ್ಷಣೆಯಾಗಿತ್ತು. ಈ ಸಾಂಸ್ಕೃತಿಕ ಚಟುವಟಿಕೆಯ ಸಂದರ್ಭದಲ್ಲಿ ಒಬ್ಬ ವಿದ್ಯಾರ್ಥಿ ಸಖತ್ತಾಗಿ ಮಿಂಚಿ ಬಿಡುತ್ತಿದ್ದ. ಅವನು ಒಳ್ಳೆಯ ಹಾಡುಗಾರ. ರಾಗವಾಗಿ ಹಾಡುತ್ತಿದ್ದರೆ, ಇಡೀ ಸಭೆ ಮಂತ್ರಮುಗ್ಧವಾಗಿ ತಲೆದೂಗುತ್ತಿತ್ತು. ಬಿ. ಪಿ. ಸತೀಶನೆಂಬ ಸಹಪಾಠಿ ಹಾಡುತ್ತಿದ್ದ ಗೀತೆ ಕವಿ ಕೆ. ಎಸ್. ನಿಸಾರ್ ಅಹಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ' ಎಂದು ಪ್ರಾರಂಭವಾಗುವ 'ನಿತ್ಯೋತ್ಸವ'.

ಆ ಕಾಲಕ್ಕೇ 'ನಿತ್ಯೋತ್ಸವ' ದನಿ ಸುರುಳಿಯ ಗೀತೆಗಳು ಪಡೆದಿದ್ದ ಜನಪ್ರಿಯತೆಗೆ ಸಾಟಿಯೇ ಇಲ್ಲ. ಬಹು ಶ್ರಾವ್ಯವಾಗಿ ಹಾಡುತ್ತಿದ್ದ ಈ ಗೀತೆಯ ಸಾಲುಗಳು ಇಂದಿಗೂ ನಮ್ಮ ಕಿವಿಗಳಲ್ಲಿ ಅನುರಣಿಸುತ್ತಲೇ ಇದೆ. ಗೀತೆಯನ್ನು ಬರೆದ ಮಹಾನುಭಾವರಾದ ಕವಿ ನಿಸಾರರ ಪರೋಕ್ಷ ಪರಿಚಯ ನನಗಾದದ್ದು ಈ ಬಗೆಯಲ್ಲಿ. ನನ್ನ ವಿದ್ಯಾಭ್ಯಾಸವೇ ನಿಂತು ಹೋಗಬೇಕಾದ ಪರಿಸ್ಥಿತಿಯಲ್ಲಿ ನೆರವಿಗೆ ಬಂದು ಮುನ್ನಡೆಸಿದಾತ ಈ ಸತೀಶ. 'ಜೋಗದ ಸಿರಿಯ ಬೆಳಕಿನಲ್ಲಿ' ಕಂಡ ಗೆಳೆಯ ಭವಿಷ್ಯಕ್ಕೂ ಗುರಿಯ ಬೆಳಕು ಕಾಣಿಸಿದ ಬಗೆ ಇಂಥದು. ಮುಂದೆ 'ನಿತ್ಯೋತ್ಸವ' ಬರೆದ ಈ ಕವಿಗಳೇ ನನ್ನನ್ನು ಸಾರಸ್ವತ ಲೋಕದಲ್ಲಿಯೂ ಹರಸಿ ಮುನ್ನಡೆಸಿದರೆಂಬ ವಿಷಯ ನನ್ನ ಬದುಕಿನ ಅಮೂಲ್ಯ ಸಂಗತಿಯೆನ್ನಿಸಿದೆ.

ಕಾಲೇಜು, ಉದ್ಯೋಗ, ಸಂಸಾರ—ಹೀಗೆ ಜೀವನ ವಿಭಿನ್ನ ಆಯಾಮಗಳನ್ನು ಪಡೆದುಕೊಂಡಾಗ ನನ್ನ ಮೇಲೆ ಪ್ರಭಾವ ಬೀರಿದ ಅನೇಕ ಮಹನೀಯರುಗಳಲ್ಲಿ ವರ ನಟ ಡಾ. ರಾಜ್‌ಕುಮಾರ್ ಸಹ ಪ್ರಮುಖರು. ಆ ಹೊತ್ತಿಗೆ ಶುರುವಾಯಿತು 'ಪ್ರಜಾಮತ'ದಲ್ಲಿ 'ಸಾಹಿತಿಗಳು ಕಂಡ ನಟಸಾರ್ವಭೌಮ' ಮಾಲಿಕೆಗೆ ನನ್ನ ತಾಲೀಮು. ಸಂಪಾದಕರೇ ನೀಡಿದ ಸಾಹಿತಿಗಳ ಪಟ್ಟಿ ದೊಡ್ಡದಿತ್ತು. ಅಲ್ಲಿದ್ದವರು ಪ್ರಮುಖವಾಗಿ ಪ್ರೊ. ಕೆ. ಎಸ್. ನಿಸಾರ್ ಅಹಮದ್. ನಾಡಿನಾದ್ಯಂತ ಸಂಚರಿಸಿ ಸಾಹಿತಿಗಳ ಸಂದರ್ಶನಗಳನ್ನು ಪಡೆದ ನಡುವೆಯೇ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿದ್ದ ನಿಸಾರ್‌ರನ್ನು ಕಂಡು ವಿಚಾರ ತಿಳಿಸಿದೆ. ಮಾಲಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ತಮ್ಮ ಅಭಿಪ್ರಾಯಗಳನ್ನು ನೀಡಿದರು. ಅದು ಪ್ರಕಟವೂ ಆಯಿತು. ನಾಡಿನ ಮೂಲೆ ಮೂಲೆಯಿಂದ ಈ ಮಾಲಿಕೆಯನ್ನು ಮೆಚ್ಚಿ ಪತ್ರಗಳು ಬಂದವು.

ಸಾಹಿತ್ಯಾತ್ಮಕವಾದ ಅನೇಕ ಸಭೆಗಳಲ್ಲಿ ನಿಸಾರರ ಭಾಷಣಗಳನ್ನು ಆಲಿಸುವ ಸುಯೋಗ ದೊರೆತಾಗಲೆಲ್ಲ, ಇಷ್ಟು ಸೊಗಸಾಗಿ ಶುದ್ಧವಾಗಿ ಕನ್ನಡವನ್ನು ಬಳಸಬಹುದೆ? ಎಂಬ ಅಚ್ಚರಿಯೂ ಮೂಡಿ, ನನ್ನಲ್ಲಿನ ಭಾಷಾ ಶುದ್ಧಿಗೆ ಇಂಬು ಮೂಡುತ್ತಿತ್ತು. ಕನ್ನಡವನ್ನು ಅಪಭ್ರಂಶಗೊಳಿಸದೆ ಪರಿಪೂರ್ಣವಾಗಿಯೂ ಆಪ್ಯಾಯಮಾನವಾಗಿಯೂ ಬಳಸುವ ಕೆಲವೇ ಮಂದಿ ಕನ್ನಡದ ಲೇಖಕ ಮಹನೀಯರಲ್ಲಿ ನಿಸಾರ್ ಅಗ್ರಗಣ್ಯರು ಎಂಬುದು ನಿರ್ವಿವಾದ.

ಹಿರಿಯ ಅಧಿಕಾರಿಗಳಾದ ಎಸ್. ಗೋಪಾಲ್ ಅವರ ಸಹಕಾರದಿಂದ ನನ್ನ ಮೊದಲ

ಕವನ ಸಂಕಲನ 'ಮುತ್ತಿನ ಹನಿಗಳು' ೨೦೦೦ದಲ್ಲಿ ಪ್ರಕಟಿತವಾಯಿತು. ಕೃತಿಗೆ ನಿಸಾರರಿಂದ ಮುನ್ನುಡಿ ಬರೆಸಬೇಕೆಂಬುದು ನನ್ನ ಹೆಬ್ಬಯಕೆ. ಅವರಿಗೆ ಮೊದಲು ಈ ಬಗ್ಗೆ ಪತ್ರ ಬರೆದು ಭೇಟಿಗೆ ಅವಕಾಶ ಕೋರಿದೆ. ನನ್ನ ಮೇಲಿನ ಅವರ ಪ್ರಭಾವಗಳನ್ನು ಸಹ ಹೇಳಿಕೊಂಡಿದ್ದೆ. ನಿಸಾರರಿಂದ ಕೆಲವೇ ದಿನಗಳಲ್ಲಿ ಮಾರುತ್ತರ ಬಂದಿತು. ಅದು ಒಂದು ಪುಟದ ಪತ್ರ. ನನಗಾದರೋ ಹಿರಿಹಿರಿ ಹಿಗ್ಗು. ಕವನೋದ್ಯಮವನ್ನು ನನ್ನ ವ್ಯಕ್ತಿತ್ವದೊಂದಿಗೆ ಸಮೀಕರಿಸಿ ಹಾರೈಸಿದ್ದರು. ಅನುವಾದ ಕಾರ್ಯವೊಂದರ ನಿಮಿತ್ತ ಬಿಡುವಿಲ್ಲದ್ದನ್ನು ಪ್ರಿಯವಾಗುವಂತೆ ಬರೆದಿದ್ದರು. ಪತ್ರದಲ್ಲಿನ ಅವರ ಹಸ್ತಾಕ್ಷರಗಳು ನೀಲಿ ಆಗಸದಲ್ಲಿನ ಬೆಳ್ಳಿ ಚುಕ್ಕಿಗಳಂತೆ ಕಂಗೊಳಿಸುತ್ತಿದ್ದವು. ಆ ಪತ್ರವನ್ನು ನಾನು ಇಂದಿಗೂ ಪ್ರಶಸ್ತಿ ಪತ್ರದಂತೆ ಜೋಪಾನ ಮಾಡಿಕೊಂಡಿದ್ದೇನೆ. ಅತ್ಯಂತ ಎತ್ತರದ ಸ್ಥಾಯಿಯಲ್ಲಿನ ಸಾಹಿತಿಯಾಗಿ ಕಿರಿಯ ಲೇಖಕರಿಗೆ ಆಪ್ಯಾಯಮಾನವಾಗಿ ಉತ್ತರಿಸಿದ ಬಗೆ ಅಪರೂಪದ ವಿಚಾರ. ನಿಸಾರರು ಸ್ಮರಣೀಯರಾಗಿ ನನ್ನ ಬದುಕಿನಲ್ಲಿ ದಾಖಲಾಗಿ ಬಿಟ್ಟಿದ್ದರು. ಅವರ ಕವನ ಸಂಕಲನಗಳ ಅನೇಕ ಗೀತೆಗಳಿಗೆ ಮಿತ್ರ ವೇಣು ರಾಗ ಸಂಯೋಜಿಸಿದ್ದಾನೆ. ನಿಸಾರರ ಸಮ್ಮುಖದಲ್ಲಿ ಒಮ್ಮೆ ಈ ಗೀತೆಗಳನ್ನು ಹಾಡಿಸಬೇಕೆಂಬ ಮಹದಾಸೆ ಇದೆ. ಮಾನವತಾವಾದಿ ನಿಸಾರರೊಂದಿಗೆ ಆತ್ಮೀಯವಾಗಿ ಬೆರೆಯುವ ಸಂದರ್ಭವನ್ನು ಭಗವಂತ ನನಗೆ ಒದಗಿಸಿಕೊಟ್ಟ. ಅದು ಅವಿಸ್ಮರಣೀಯ ವಾಯಿತಷ್ಟೇ ಅಲ್ಲ, ಪೂರ್ಣ ಚಂದ್ರನಂತೆ ಬೆಳೆಯಿತು ಸಹ.

ಸುಮಾರು ಎರಡು ದಶಕಗಳಿಂದ ನಾನು ನಾಡಿನ ಪತ್ರಿಕೆಗಳಲ್ಲಿ ಬರೆದ ವರ ನಟ ಡಾ. ರಾಜ್‌ಕುಮಾರರನ್ನು ಕುರಿತ ಲೇಖನಗಳನ್ನೆಲ್ಲ ಒಂದೆಡೆ ಸೇರಿಸಿ ಪುಸ್ತಕ ತರುವ ವಿಚಾರಕ್ಕೆ ಚಾಲನೆ ದೊರೆಯಿತು. ಬೆಂಗಳೂರಿನ 'ಸಾಧನಾ ಪ್ರಕಾಶನ'ದಿಂದ ೪೫೦ ಪುಟಗಳ ಬೃಹತ್ ಹೊತ್ತಗೆ ಸಿದ್ಧವಾಯಿತು. ನನ್ನ ಮಾನಸ ಗುರುಗಳಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರಿಂದಲೇ ಕೃತಿ ಬಿಡುಗಡೆ ಮಾಡಿಸಬೇಕೆಂದು ಸಂಕಲ್ಪಿಸಿ ಅವರನ್ನು ಕರೆಯಲು ಪ್ರಕಾಶಕರೊಂದಿಗೆ ಅವರ ಮನೆಗೆ ತೆರಳಿದೆ. ದೇಹಾಲಸ್ಯದಿಂದ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳದ ನಿಸಾರರು ನನ್ನ ಬಗೆಗಿನ ವಾತ್ಸಲ್ಯದಿಂದ ನಮ್ಮ ಆತ್ಮೀಯ ಕರೆಯನ್ನು ಮನ್ನಿಸಿದರು.

೧-೬-೨೦೦೫ರಂದು ಬೆಂಗಳೂರಿನ 'ನಯನ ಸಭಾಂಗಣ'ದಲ್ಲಿ ಗಣ್ಯರ ಸಮ್ಮುಖ ದಲ್ಲಿ 'ವರ ನಟ' ಎಂಬ ನನ್ನ ಪುಸ್ತಕ ನಿಸಾರರಿಂದ ಬಿಡುಗಡೆಯಾಯಿತು. ಅವರು ಅಂದು ಕೃತಿ ಮತ್ತು ಕೃತಿಕಾರನ ಬಗ್ಗೆ ಹೃದಯ ತುಂಬಿ ಮಾತನಾಡಿ ನನ್ನ ಪರಿಶ್ರಮಕ್ಕೆ ಪನ್ನೀರನ್ನು ಎರೆದರು. ನಾನು ಕಷ್ಟಪಟ್ಟು ಸಂಗ್ರಹಿಸಿರುವ ಮಾಹಿತಿಗಳು ಮತ್ತು ಅವುಗಳ ವ್ಯವಸ್ಥಿತ ಹಾಗೂ ಸುಲಭತರ ಭಾಷಾಭಿವ್ಯಕ್ತಿಯ ಬಗೆಗೆ ತಮ್ಮ ಮುಕ್ತ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಕೃತಿ ರಚನೆಯ ಹಿಂದಿನ ಶ್ರದ್ಧೆ ಶ್ರಮಗಳನ್ನು ಪ್ರಸ್ತಾಪಿಸಿ ಈ ಕೃತಿಗೆ ಖಂಡಿತ ವಾಗಿಯೂ ಡಾಕ್ಟರೇಟ್ ನೀಡುವ ಯೋಗ್ಯತೆ ಇದೆ. ಲೇಖಕರಿಗೆ ಭವಿಷ್ಯದಲ್ಲಿ ಉನ್ನತ ಪ್ರಶಸ್ತಿ ಗೌರವಗಳು ಸಿಗಲಿ ಎಂದು ಹಾರೈಸಿದರು. ಕನಸಿನಲ್ಲಿಯೂ ಎಣಿಸಿರದ

ಸೌಭಾಗ್ಯವದು. ಮನದುಂಬಿ ಹಾರೈಸಿದ ನಿಸಾರರ ಮಾತುಗಳು ಹೃದಯದಲ್ಲಿ ಅಚ್ಚಾದವು. ವೈಯಕ್ತಿಕ ಸಾಧನೆಯನ್ನು ಸಾರ್ವತ್ರಿಕ ಪರಿಣಾಮದೊಂದಿಗೆ ಬೆಸೆದ ನಿಸಾರರು ಸರ್ಕಾರಿ ಸೇವೆಯಲ್ಲಿ ಸೃಜನಾತ್ಮಕವಾಗಿ ಬರಹಗಾರ ಉಳಿದುಕೊಳ್ಳಲು ಯಾವ ರೀತಿ ಹೆಣಗಾಡ ಬೇಕೆಂಬ ಬಗ್ಗೆ ಮಾರ್ಮಿಕವಾಗಿ ನುಡಿದು ನನ್ನ ಪ್ರವೃತ್ತಿಯ ಆಕಾಂಕ್ಷೆಗಳಿಗೆ ಆನೆ ಬಲವನ್ನು ತುಂಬಿದರು. ರಾಜ್ ಕುರಿತಂತೆ ಬರೆಯಲು ಕೊರತೆ ಇದ್ದ ದಿನಗಳಲ್ಲಿ ಉಪಯುಕ್ತವಾದ ಬೃಹತ್ ಮಾಹಿತಿಗಳ ಸಂಚಯ ನೀಡಿದ ಗೌರವವನ್ನು ಅಂದು ಸುನಾಯಾಸವೆಂಬಂತೆ ನಿಸಾರ್ ನನಗೆ ದೊರಕಿಸಿ ಕೊಟ್ಟು ಬದುಕಿನಲ್ಲಿ ಮರೆಯಲಾಗದ ಸಂದರ್ಭವನ್ನು ಕೃಪೆ ಮಾಡಿದರು.

ಕೆಲ ತಿಂಗಳ ಅಂತರದಲ್ಲಿ ನಿಸಾರರು ೭೦ನೆಯ ವರ್ಷಕ್ಕೆ ಅಡಿಯಿಟ್ಟ ಅಂಗವಾಗಿ ೨೦೦೫ರಲ್ಲಿ ಪತ್ರಿಕೆಯೊಂದಕ್ಕೆ ಲೇಖನ ಸಿದ್ಧಪಡಿಸಲು ಅವರ ನಿವಾಸದಲ್ಲಿ ಸಂದರ್ಶಿಸಿದೆ. ನಾನು ಸಂಕೋಚದ ಮುದ್ದೆಯಾಗಿ ಕುಳಿತಿದ್ದೆ. ಕನ್ನಡದ ಶಬ್ದ ಸಂಪತ್ತು ಒಂದೊಂದಾಗಿ ಅವರಿಂದ ಹೊಮ್ಮಲಾರಂಭಿಸಿತು. ಮಾತಾಡುವುದೆಲ್ಲ ಮುತ್ತುಗಳೇ. ವಿಷಯದ ವ್ಯಾಪ್ತಿಗೆ ಹೊಂದಿಕೊಂಡಂತೆಯೇ ಆಳಕ್ಕೆ ಇಳಿಯುವ ಅವರ ಕುಶಾಗ್ರಮತಿ ಹಾಗೂ ತೀಕ್ಷ್ಣತೆ ಪರಮಾದ್ಭುತ. ಅದನ್ನು ಅರಿತು ಬರಹಕ್ಕೆ ತೆಗೆದುಕೊಳ್ಳುವಲ್ಲಿ ಎಲ್ಲಿ ನಮ್ಮಿಂದಲೇ ನಿಧಾನ ವಾಗುವುದೋ ಎಂಬಂತೆ ಅವರ ದಣಿವರಿಯದ ಲಹರಿ. ನನಗಾದರೋ ಅಂದು ಅದ್ಭುತ ಅನುಭವ. ಅವರ ಬಾಲ್ಯ, ಬೆಳವಣಿಗೆ, ವಿದ್ಯಾಭ್ಯಾಸ, ಬೆಂಗಳೂರಿನ ನಂಟು ಹಾಗೂ ಸಂಬಂಧಗಳ ಸಂಕೀರ್ಣತೆ, ಮೌಲ್ಯಗಳ ಪತನ, ಜೀವನ ದೃಷ್ಟಿ—ಹೀಗೆಲ್ಲ ನಡೆದ ಅವಿಚ್ಛಿನ್ನ ಸಂವಾದ, ಲೇಖನ ರೂಪದಲ್ಲಿ ಅವರ ಜನ್ಮದಿನದಂದೇ ಪ್ರಕಟವಾಯಿತು. ಅಂದೇ ಅವರಿಗೆ ಬೆಂಗಳೂರಿನಲ್ಲಿ ಅದ್ದೂರಿ ಸನ್ಮಾನವೂ ನಡೆಯುವುದಿತ್ತು. ಕಾರ್ಯಕ್ರಮಕ್ಕೆ ಗೆಳೆಯ ರೊಂದಿಗೆ ಹೋಗಿದ್ದೆ. ತುಂಬಿದ ಸಭೆಯಲ್ಲಿ ಅಲಂಕೃತ ವಿಶಾಲ ವೇದಿಕೆಗೆ ನಿಸಾರ್ ದಂಪತಿಗಳನ್ನು ಪೂರ್ಣಕುಂಭ ಸ್ವಾಗತ ನೀಡಿ ಕರೆತರಲಾಗುತ್ತಿತ್ತು. ನಿಸಾರ್ ತಮ್ಮೆಲ್ಲ ಮಿತ್ರರನ್ನು, ಹಿತೈಷಿಗಳನ್ನು ಗುರುತಿಸಿ ಮಾತನಾಡಿಸುತ್ತ, ಶುಭಾಶಯವನ್ನು ಸ್ವೀಕರಿಸುತ್ತಾ ಸಾಗಿ ಬರುತ್ತಿದ್ದರು. ನಿಸಾರರ ಕಣ್ಣು ಆ ಜನ ಜಂಗುಳಿಯಲ್ಲಿಯೂ ನನ್ನ ಮೇಲೆ ಬಿತ್ತು. ಹೂ ನಗೆ ಚೆಲ್ಲಿದರು. 'ಬೆಳಿಗ್ಗೆಯೇ ನಿಮ್ಮ ಲೇಖನ ಓದಿದೆ. ಚೆನ್ನಾಗಿ ಬಂದಿದೆ' ಎಂದರು. ಆ ಕ್ಷಣಕ್ಕೆ ನನಗಾದ ಆನಂದ ಅವರ್ಣನೀಯ. ಸಾಹಿತ್ಯ ದಿಗ್ಗಜರು ಮತ್ತು ಸಾಹಿತ್ಯಾಭಿಮಾನಿಗಳ ಮಧ್ಯೆ ಕಿರು ಬರಹಗಾರರನ್ನು ಗುರುತಿಸುವ ನಿಸಾರರ ಆಕರ್ಷಕ ಶಕ್ತಿ ಅನಾವರಣಗೊಳ್ಳುವುದು ಇಂತಹ ಪ್ರಸಂಗಗಳಲ್ಲಿಯೇ.

ಕರ್ನಾಟಕ ವಿಶ್ವವಿದ್ಯಾಲಯದಿಂದ ಕಳೆದ ವರ್ಷ ನಿಸಾರರಿಗೆ ಗೌರವ ಡಾಕ್ಟರೇಟ್ ಸಂದಿತು. ಕಾರಣಾಂತರದಿಂದ ಅದನ್ನು ಸ್ವೀಕರಿಸಲು ಅವರು ಹೋಗಿರಲಿಲ್ಲ. ಹೀಗಾಗಿ ಪದವಿಯನ್ನು ನಿಸಾರರ ಮನೆಯಲ್ಲಿಯೇ ಪ್ರದಾನ ಮಾಡುವುದಿತ್ತು. ಈ ಸಂದರ್ಭಕ್ಕೆ ಕೆಲವೇ ಮಂದಿ ಆಹ್ವಾನಿತರಿದ್ದರು. ನಿಸಾರರು ದೂರವಾಣಿ ಮೂಲಕವೇ ನನ್ನನ್ನು ಆಮಂತ್ರಿಸಿದ್ದರು. ಪದ್ಮನಾಭನಗರದ ಅವರ ಮನೆಯಲ್ಲಿ ಅಂದು ಸಾಹಿತಿಗಳು,

ಹಿತೈಷಿಗಳು, ಪತ್ರಕರ್ತರುಗಳ ಪುಟ್ಟ ಗುಂಪೇ ಸೇರಿತ್ತು. ನಿಸಾರ್ ಅಲ್ಲಿದ್ದವರಿಗೆ ನನ್ನ ಪರಿಚಯ ಮಾಡಿಸಿ ರಾಜ್‌ಕುಮಾರ್ ಬಗ್ಗೆ ದೊಡ್ಡ ಪುಸ್ತಕ ಬರೆದವರೆಂದು ಹೇಳುತ್ತಿದ್ದರು. ಅಲ್ಲಿದ್ದ ಅಮೇರಿಕಾದ ಕನ್ನಡಿಗ ಡಾ. ರಾಘವ ರೆಡ್ಡಿ ಎಂಬುವರಂತೂ ನನ್ನ ಪರಿಚಯದಿಂದ ಹಿಗ್ಗಿಬಿಟ್ಟರು. ಕಾರಣವೆಂದರೆ ನನ್ನ `ವರ ನಟ' ಪುಸ್ತಕ ನಿಸಾರರ ಮೂಲಕ ಅಮೇರಿಕಾದ ಒಂದೆರಡು ಕನ್ನಡ ಸಂಘಗಳಿಗೆ ತಲಪಿತ್ತು. ರಾಘವ ರೆಡ್ಡಿ ಈ ಹಿಂದೆಯೇ ಅಮೇರಿಕಾದಿಂದ ಈ ಬಗ್ಗೆ ನನ್ನ ವಿಳಾಸಕ್ಕೆ ಪತ್ರ ಬರೆದು ಖುಷಿಯನ್ನು ವ್ಯಕ್ತಪಡಿಸಿದ್ದರು. ನಿಸಾರರ ಮನೆಯಲ್ಲಿ ಅಂದು ನನಗೆ ಇನ್ನೊಂದು ಅಚ್ಚರಿ ಕಾದಿತ್ತು. ಬಂದಿದ್ದ ಎಲ್ಲ ಹಿತೈಷಿಗಳನ್ನು ನಿಸಾರರು ವಿಶ್ವವಿದ್ಯಾಲಯದವರಿಗೆ ಪರಿಚಯ ಮಾಡಿಸಿಕೊಡುತ್ತಿದ್ದರು. ನನ್ನ ಸರದಿ ಬಂದಾಗ `ಡಾಕ್ಟರೇಟ್‌ಗೆ ಅರ್ಹವಿರುವ ರಾಜ್‌ಕುಮಾರ್ ಕುರಿತ ಗ್ರಂಥವನ್ನು ಬರೆದವರು' ಎಂದು ಪರಿಚಯಿಸಿಕೊಟ್ಟಾಗ ನಾನು ದಿಙ್ಮೂಢನಾಗಿ ನಿಂತುಬಿಟ್ಟೆ. ಎಲ್ಲಿಯ ನಿಸಾರರು? ಎಲ್ಲಿಯ ನಾನು? ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಬಂದವರಿಗೆ ನನ್ನನ್ನೂ ಗುರುತಿಸುವಂತೆ ಮಾಡಿದ್ದು ಅವರ ನಿಷ್ಕಲ್ಮಶ ಮಹಾನ್ ವ್ಯಕ್ತಿತ್ವಕ್ಕೆ ದ್ಯೋತಕವೇ ಹೌದು.

ಒಮ್ಮೆ ಕುಟುಂಬದವರೆಲ್ಲ ತಿರುಪತಿಗೆ ಹೋಗಿದ್ದೆವು. ಅಪಾರ ಜನಸ್ತೋಮದ ನಡುವೆ ವೆಂಕಟೇಶ್ವರನ ದರ್ಶನ ಪಡೆದು ಹೊರ ಬಂದೆವು. ಮೊಬೈಲ್‌ಗೆ ಕರೆ ಬಂತು. ನಿಸಾರ್ ಅಹಮದ್‌ರು ಲೈನ್‌ನಲ್ಲಿದ್ದರು. ನಾನು ಬರೆದಿದ್ದ ನಿಸಾರ್ ಜನ್ಮದಿನ ಲೇಖನ ಹಾಗೂ ಅವರಿಗೆ ಸಮರ್ಪಿಸಿದ್ದ ಕವಿತಾ ರಚನೆಯ ಬಗ್ಗೆ ಮಾತನಾಡಿ ಹಾರೈಸಿದರು. ತಿರುಪತಿ ತಿಮ್ಮಪ್ಪನ ದರ್ಶನ ಪಡೆದಷ್ಟೆ ಮನಸ್ಸಿಗೆ ದಿವ್ಯ ಅನುಭೂತಿಯಾಯಿತು. ಬರೆಯುವ ಕ್ರಿಯಾಶೀಲ ಭಾವನೆಗಳಲ್ಲಿ ಚೈತನ್ಯ ತುಂಬುವ ಜೀವ ಜಲವಾಗಿರುವ ನಿಸಾರ್ ಅವರು ನನ್ನಲ್ಲಿ ಅನವರತ ಸ್ಫೂರ್ತಿದಾತರಾಗಿ ಮತ್ತಾವ ಮಹತ್ವದ ಕೈಂಕರ್ಯಕ್ಕೆ ಸಂಕಲ್ಪವಾಗುತ್ತಾರೊ? ಎಂದು ಮನಸ್ಸಿೀ ಮಂಥಿಸಿಕೊಂಡೆ.

ಮತ್ತೊಂದು ಸಂದರ್ಭ. `ಮರಾಠಾ ಮಹಾಸಭಾ ಕರ್ನಾಟಕ ಸಂಸ್ಥೆ'ಯವರು ಛತ್ರಪತಿ ಶಿವಾಜಿ ರಾಜ್ಯ ಪ್ರಶಸ್ತಿಯಿಂದ ಪುರಸ್ಕರಿಸುವ ಸಲುವಾಗಿ ಕಳೆದ ವರ್ಷ ನನ್ನನ್ನು ಸಂಪರ್ಕಿಸಿದರು. ಪ್ರಶಸ್ತಿಗಾಗಿ ನನ್ನನ್ನು ಸೂಚಿಸಿದವರು ಅದೇ ಸಾಲಿನಲ್ಲಿ ಪ್ರಶಸ್ತಿ ಪಡೆಯಲಿದ್ದ ಕವಿ ನಿಸಾರರೇ ಆಗಿದ್ದರು. ಗಣ್ಯರ ಸಾಲಿನಲ್ಲಿ ಕುಳಿತು ಪ್ರಶಸ್ತಿ ಪಡೆದ ನನ್ನ ಸಂತಸಕ್ಕೆ ಎಣೆಯೇ ಇರಲಿಲ್ಲ. ವೇದಿಕೆಯಲ್ಲಿ ನನ್ನ ಪರಿಚಯ ನೀಡಿದ ಕೂಡಲೇ ಎದ್ದು ನಿಸಾರರ ಪಾದಗಳನ್ನು ಮುಟ್ಟಿ ನಮಸ್ಕರಿಸಿದ ಬಳಿಕವೇ ನಾನು ಪ್ರಶಸ್ತಿಯನ್ನು ಸ್ವೀಕರಿಸಿದ್ದು. ಮಾನಸ ಗುರುಗಳು ಶಿಷ್ಯನಿಗೂ ತಮ್ಮೊಂದಿಗೆ ಸಮಾನ ಗೌರವವನ್ನು ಕಲ್ಪಿಸಿದ ಬಗೆಯೇ ನಿಸಾರರ ವಿಭಿನ್ನ ವ್ಯಕ್ತಿತ್ವದ ಅಪರೂಪದ ಆಯಾಮಕ್ಕೆ ರನ್ನಗನ್ನಡಿಯಾಗುತ್ತದೆ. ನಾನು ಹೇಳುತ್ತಲೇ ಇರುತ್ತೇನೆ: `ಸರ್, ಈ ಪ್ರಶಸ್ತಿಯನ್ನು ಸಂಸ್ಥೆಯವರು ನೀಡಿದ್ದರೂ ಅದು ನಿಮ್ಮಿಂದಲೇ ದಕ್ಕಿದ್ದು ಎಂದು ಭಾವಿಸಿರುವೆ.'

ಕವಿ ನಿಸಾರರು ಯಾವ ಶುಭ ಮುಹೂರ್ತದಲ್ಲಿ ಹರಸಿ ಬಿಡುಗಡೆ ಮಾಡಿದರೊ, ನನ್ನ `ವರ ನಟ' ಕೃತಿಗೆ ೧೨ ಪ್ರಶಸ್ತಿಗಳು ಸಂದವು: ಅದೂ ಎರಡು ವರ್ಷಗಳ ಅಂತರದಲ್ಲಿ.

೧೨ ಪ್ರಶಸ್ತಿಗಳ ವಿವರಗಳನ್ನು ಸ್ಮರಣ ಫಲಕದಲ್ಲಿ ಅಳವಡಿಸಿ ನೆನಪಿನ ಕಾಣಿಕೆಯಾಗಿ ಡಾ. ರಾಜ್ ದಂಪತಿಗಳಿಗೆ ನೀಡಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಸನ್ಮಾನಿಸುವಂತೆ ಸತ್ಕರಿಸುವವರು ಯಾರು? ಇನ್ನಾರು? 'ವರ ನಟ' ಕೃತಿಯನ್ನು ತಮ್ಮ ಮಗುವಿನಂತೆ ಅಕ್ಕರೆಯಿಂದ ಆಯ್ಕೆ ಮಾಡಿ ಹಾರೈಸಿರುವ ನಿಸಾರರಲ್ಲದೆ ಮತ್ತಾರು? ಅವರಲ್ಲಿ ಮನವಿ ಮಾಡಿದೆ. ಅವರ ರಂಜಾನ್ ತಿಂಗಳಿನ ಉಪವಾಸ ಮುಗಿದ ಬಳಿಕದ ದಿನ ನಿಗದಿಯಾಯಿತು. ನಿಸಾರರ ನೇತೃತ್ವದಲ್ಲಿ ಸೋದರ ವೇಣು ಮತ್ತು ಕೆಲವು ಆತ್ಮೀಯರೊಂದಿಗೆ ರಾಜ್ ನಿವಾಸ ತಲಪಿದೆವು. ನಿಸಾರರನ್ನು ಕಾಣುತ್ತಲೇ ರಾಜ್ ಅವರ ಮೊಗವರಳಿತು. ನಿಸಾರರ ಕುಶಲವನ್ನು ವಿಚಾರಿಸಿದರು. ನಮ್ಮೊಂದಿಗೆ ಖುಷಿಯಾಗಿ ಬೆರೆತರು. 'ನೀವೆಲ್ಲ ವಿಶ್ವವಿದ್ಯಾಲಯದಲ್ಲಿ ಓದಿಕೊಂಡ ಜನ' ಎಂದು ಗೌರವ ತೋರಿದರು. ನಿಸಾರರೊಂದಿಗೆ ನಿಂತಿದ್ದ ನಾನು ರಾಜ್‌ರನ್ನು ಉದ್ದೇಶಿಸಿ 'ನಾವು ವಿಶ್ವವಿದ್ಯಾಲಯದಲ್ಲಿ ಓದಿರಬಹುದು. ಆದರೆ ನೀವೇ ಒಂದು ವಿಶ್ವವಿದ್ಯಾಲಯವಾಗಿದ್ದೀರಿ. ನಿಮ್ಮನ್ನು ನೋಡುತ್ತಾ ಬೆಳೆದವರು ನಾವು' ಎಂದೆ. ತಕ್ಷಣವೇ ರಾಜ್ 'ನನ್ನ ವಿಶ್ವವಿದ್ಯಾಲಯ ಅಲ್ಲಿದೆ ನೋಡಿ' ಎಂದು ತಂದೆಯವರ ಚಿತ್ರ ಪಟವನ್ನು ತೋರಿದರು. ರಾಜ್ ಒಳ್ಳೆಯ ಮೂಡ್‌ನಲ್ಲಿದ್ದರು. ಇದಕ್ಕೆ ಕಾರಣ ಅವರು ಅತ್ಯಂತ ಗೌರವ ತೋರುವ ಸಜ್ಜನ ನಿಸಾರರು ಅವರ ಬದಿಯಲ್ಲಿ ಕುಳಿತಿದ್ದದ್ದು. ಪುತ್ರ ಶಿವರಾಜ್ ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್, ನಿರ್ದೇಶಕ ಭಗವಾನ್ ಸಹ ಬಂದು ಕಲೆತರು. ಆ ಸಂದರ್ಭದಲ್ಲಿ ನಿಸಾರರು ಪುಟ್ಟ ಮಗುವನ್ನು ಹತ್ತಿರ ಕರೆಯುವ ಬೆಚ್ಚನೆಯ ಅನುಭವದ ಅಪ್ಪನ ತೆರದಲ್ಲಿ 'ಬಹುಳೆ ಬಾರಪ್ಪ' ಎಂದು ಕರೆದು ತಮ್ಮ ಸನಿಹದಲ್ಲಿಯೇ ಕುಳ್ಳಿರಿಸಿಕೊಂಡರು. ಅವರ ವಾತ್ಸಲ್ಯಪೂರಿತ ನಡವಳಿಕೆಯನ್ನು ಕಂಡು ಸ್ವಯಂ ರಾಜ್ ಅವರೇ 'ಬಹುಳೆಯವರು ಉತ್ತಮ ಕೃತಿಯನ್ನು ಬರೆದಿದ್ದಾರೆ. ಉತ್ತಮ ಕೃತಿಗಳನ್ನು ಜನ ಆದರದಿಂದ ಬರಮಾಡಿಕೊಳ್ಳುತ್ತಾರೆ' ಎಂದರು ಹೃದಯಾಂತರಾಳದಿಂದ. ರಾಜ್ ದಂಪತಿಗಳಿಗೆ ನೆನಪಿನ ಕಾಣಿಕೆ ನೀಡಿ ನಿಸಾರರ ಮೂಲಕ ಸನ್ಮಾನಿಸಲಾಯಿತು. ನಿಸಾರರು ಸ್ವಯಂ ರಾಜ್ ದಂಪತಿಗಳಿಗೆ ಸಿಹಿ ತಿನ್ನಿಸಿ ಸಂದರ್ಭವನ್ನು ಸ್ಮರಣೀಯವನ್ನಾಗಿಸಿದರು. ಪ್ರತಿಯಾಗಿ ರಾಜ್ ನನಗೆ ಸಿಹಿ ತಿನ್ನಿಸಿ ಶಾಲು ಹೊದೆಸಿ ಸ್ಮರಣಿಕೆ ನೀಡಿ ಶುಭ ಹಾರೈಸಿದರು. ನನ್ನ ಬದುಕಿನ ಮಹತ್ವದ ದಿನ ಅದು.

ಇನ್ನು ನಾನು ಕಂಡಂತೆ ನಿಸಾರರ ಕಾಯವೇ ಅವರ ಶಿಸ್ತು ಸಂಯಮಗಳನ್ನು ಸಾರುತ್ತದೆ. ಉಕ್ಕಿನ ತಂತಿಯಂತೆ ನಡೆದಾಡುವ ಅವರಲ್ಲಿನ ಸ್ಮರಣ ಶಕ್ತಿ ಪರಮಾದ್ಭುತ. ಅವರು ಸೃಜನಶೀಲ ಸಾಹಿತಿಯಾಗಿಯಷ್ಟೇ ನಾಡಿನಲ್ಲಿ ಮಾನ್ಯರಲ್ಲ, ಸೃಜನಶೀಲ ಓದುಗ ರಾಗಿಯೂ ಸಾಹಿತ್ಯದ ಪ್ರೇರಣೆಯನ್ನು ಯಶಸ್ವಿಯಾಗಿ ಹಂಚುತ್ತಾರೆ. ದಂತ ಗೋಪುರದಲ್ಲಿ ಉಳಿದು ಬರೆಯದೆ, ಸಾಮಾನ್ಯರ ಬದುಕಿನಲ್ಲಿ ಒಡನಾಡಿರುವ ಅವರ ವಿಪುಲ ಸಾಹಿತ್ಯ ಈ ದೃಷ್ಟಿಯಿಂದ ಅಧ್ಯಯನಾರ್ಹ. ಕಾವ್ಯದಲ್ಲಿ ತೋರಿರುವ ನಿಸರ್ಗ ರಮಣೀಯತೆ ಹಾಗೂ ಮಾನವೀಯ ಕಳಕಳಿಯನ್ನು ಉಳಿಸಿಕೊಂಡೇ ಬದುಕಿಗೆ ಹಾದಿ ತೋರುವ ವಿಚಾರ ಸಾಹಿತ್ಯವನ್ನು ಅತ್ಯಂತ ಸುಕೋಮಲ ಹಾಗೂ ಅನುರೂಪವಾದ ಭಾಷೆಯಲ್ಲಿ ಬರೆದು ಜನ ಮಾನಸಕ್ಕೆ ತಲಪಿಸಿದ ಧವಳ ಕೀರ್ತಿ ಅವರದು. ಅವರೇ ಹೇಳುವಂತೆ: 'ನನ್ನ ಸೃಜನ

ಪ್ರಕ್ರಿಯೆಯ ನೇಪಥ್ಯದಲ್ಲಿ ಕ್ರಿಯಾಶೀಲವಾಗಿ ತೊಡಗಿರುವುದು ಅಂತರ್ಮುಖಿ ಸ್ವಭಾವ. ಎಂದೇ ನನ್ನ ಬರವಣಿಗೆ ವಿಚಾರಪರ ಮತ್ತು ವಿಮರ್ಶಾತ್ಮಕ ಆಗಿರುವ ಜೊತೆಗೇ ಭಾವ ತನ್ಮಯ ಗುಣವನ್ನು ಆರ್ಜಿಸಿಕೊಂಡಿದೆ. ಬೌದ್ಧಿಕ ಗ್ರಾಸದೊಡನೆ ಹೃದ್ಯತೆಯ ಅಂಶವೂ ಸಂಲಗ್ನಗೊಂಡಿದೆ. ಹಾಗೆಯೇ ನುಡಿಗಾರಿಕೆಯೂ ವಿಷಯಕ್ಕೆ ಅನುಗುಣವಾಗಿ ನಿರೂಪಣಾತ್ಮಕವೊ, ಸೂಚ್ಯವೊ, ಸಮೃದ್ಧವೊ, ಸರಳವೊ ಆಗಿರುವುದು ಸ್ವಾಭಾವಿಕ ವಾಗಿದೆ.'—ನಿಸಾರರ ಈ ಸ್ವಗತದಲ್ಲಿ ಅವರ ಬರಹಗಳ ಆಶಯದ ಸ್ವರೂಪವನ್ನು ಮನಗಾಣಬಹುದಾಗಿದೆ.

ನಿಸಾರರ 'ಸಮಗ್ರ ಗದ್ಯಬರಹ'ಗಳನ್ನು ನಾನು ಅಧ್ಯಯನಕ್ಕೆಂದೇ ಮೀಸಲಿರಿಸಿ ಕೊಂಡು ಮನನ ಮಾಡುತ್ತಾ ಬಂದಿದ್ದೇನೆ. ಖಂಡಿತವಾಗಿಯೂ ಇದರಿಂದ ನಿಚ್ಚಳ ದಾರಿ ಕಾಣುವ, ಆತ್ಮವಿಶ್ವಾಸವನ್ನು ಪಡೆಯುವ ಇರಾದೆಯೂ ನನ್ನದಾಗಿದೆ. ನನ್ನಲ್ಲಿನ ಹಲವು ಸುಪ್ತ ಭಾವನೆಗಳು ನಿರ್ದಿಷ್ಟ ಹಾಗೂ ನಿಶ್ಚಿತ ಭಾಷಾ ಸ್ವರೂಪವಾಗಿ ಹೊರ ಬರಲು ತವಕಿಸುತ್ತಿದ್ದ, ಪ್ರಯತ್ನಿಸುತ್ತಿದ್ದ ಪ್ರಮೇಯಗಳಲ್ಲಿ ಜ್ಞಾನೋದಯವೂ ಆಗಿದೆ.

ನನ್ನ ಹುಟ್ಟೂರಿನೊಂದಿಗೆ ನನ್ನದು ಅವಿನಾಭಾವ ಸಂಬಂಧ. ಇಲ್ಲಿನ ಇತಿಹಾಸ, ಸಾಧನೆ, ಭವಿಷ್ಯಗಳ ಬಗ್ಗೆ ಆಕರ್ಷಣೆ ಕುತೂಹಲ ಉಳಿಸಿಕೊಂಡವನು ನಾನು. ನಮ್ಮ ಊರಿನ ಬಗ್ಗೆ ನಾನು ವೈಚಾರಿಕವಾಗಿ ಆಲೋಚಿಸತೊಡಗಿದಾಗೆಲ್ಲ, ನನಗೆ ನಿಸಾರರು ಬಾಲ್ಯದಿಂದ ತಮ್ಮ ಕರ್ಮಕ್ಷೇತ್ರವಾದ ಬೆಂಗಳೂರಿನ ಬಗೆಗೆ 'ಸಮಗ್ರ ಗದ್ಯ ಬರಹಗಳು' ಕೃತಿಯಲ್ಲಿ ಆಡಿರುವ ಮಾತುಗಳು ಸಾರ್ವತ್ರಿಕ ಅರ್ಥವನ್ನು ಪಡೆದ ಚಿಂತನೆಗಳಂತೆ ಭಾಸವಾಗುತ್ತವೆ. ಅವುಗಳನ್ನು ಇಡಿಯಾಗಿ ಉದ್ಧರಿಸದ ಹೊರತು ನನಗೆ ಸಮಾಧಾನವಿಲ್ಲ.

'ತಾನು ಉಸಿರಾಡಿ ಬಾಳುವ ಪರಿಸರದ ಆಂತರ್ಯವನ್ನು ಹೊಗದ, ಅಲ್ಲಿನ ಅಗಮ್ಯಾನುಭೂತಿಗೆ ಹಾತೊರೆಯದ ಬದುಕು ಬದುಕೇ ಅಲ್ಲ. ಅದೊಂದು ಜೀವಚ್ಛವ. ತನ್ನ ಊರು, ತನ್ನ ಪರಿಸರದ ನಂಟು ಒಂದು ಘಳಿಗೆಯಲ್ಲಿ ಗಾಢಗೊಂಡು, ಮತ್ತೊಂದು ಕ್ಷಣದಲ್ಲಿ ಬೆಸೆತ ಕಳೆದುಕೊಳ್ಳುವಂಥದ್ದಲ್ಲ; ಅದೊಂದು ತ್ರಿಕಾಲಬದ್ಧನಿತ್ಯಾನುಭೂತಿ. ಜೀವನದ ಒಂದು ಘಟ್ಟದಲ್ಲಿ ಉತ್ಕಟಗೊಂಡು, ಕ್ರಮೇಣ ಕ್ಷಯಿಸುವಂಥದ್ದಲ್ಲ ವ್ಯಕ್ತಿ ಮತ್ತು ಊರಿನ ಸಂಬಂಧ: ಆಜೀವಪರ್ಯಂತ ನಮ್ಮ ಸಂಗಾತಿಗಾಗಿ, ನಮ್ಮ ಅಳಿವು ಉಳಿವುಗಳೊಂದಿಗೇ ತಕ್ಕೈಸಿಕೊಂಡಿರುವಂಥದ್ದು. ಶಿಶುವಿಗೆ ತಾಯಿಯ ವಾತ್ಸಲ್ಯಮಯ ಪೋಷಣೆಯಾಗಿ, ಯೌವನಿಗನಿಗೆ ಮಮತೆಯ ಮಡದಿಯಾಗಿ, ವೃದ್ಧಾಪ್ಯದಲ್ಲಿ ಕೈ ನೆರ ವಾಗುವ ಮಕ್ಕಳ ಪ್ರೀತಿಯಾಗಿ ಜೊತೆಗೂಡಿ ಬರುವಂಥದ್ದು ಮನುಷ್ಯ ಮತ್ತು ಅವನ ಪರಿಸರದ ಅಂತಸ್ಸಂಬಂಧ. ಅದು ಕೊಡು-ಕೊಳ್ಳುವ ಲೆಕ್ಕಾಚಾರವನ್ನು ಮೀರಿದ್ದು; ಆಡಂಬರ, ತೋರುಗಾಣಿಕೆ, ಪ್ರದರ್ಶನಕಾತರಗಳಂಥ ಕ್ಷುಲ್ಲಕ ಆಮಿಷಗಳನ್ನು ಕಡೆಗಣಿಸಿದ್ದು. ವನಸ್ಪತಿಗಳಂತೆ, ಮೇಘಗಳಂತೆ, ಸಂಧ್ಯಾರಾಗಗಳಂತೆ ನಿಶ್ಶಬ್ದವಾಗಿ ಮೂಡಿ, ವರ್ಧಿಸಿ, ನಿಬಿಡಗೊಂಡು ಪರಿಣಾಮ ಬೀರುವಂಥದ್ದು'. ಹಾಗೆಯೇ—

'ಹೃದಯ ಸಂಪನ್ನನಿಗೆ, ಸೂಕ್ಷ್ಮ ಸಂವೇದಿಗೆ ನಗರವೆಂದರೆ ಕೇವಲ ಕಟ್ಟಡ, ಜನ,

ಜಾನುವಾರು, ಕಾರ್ಖಾನೆ, ವಾಹನ, ಗದ್ದಲಗಳ ಕಲಸುಮೇಲೋಗರದ ಮೊತ್ತವಲ್ಲ. ಈ ಎಲ್ಲ ಹೊರಗಣ ದೈಹಿಕ ಉಪಾಧಿಗಳನ್ನು ಮೀರಿದ ಅಖಂಡವೂ ಅಗಮ್ಯವೂ ಆದ ಆಂತರಿಕ ಘನ ಸತ್ವ; ಅವಿನಾಶಿ ಸ್ವರೂಪದ ಆತ್ಮ. ಅದರ ಕಿಂಚಿತ್ ಅರಿವಾದರೂ ಆಗಬೇಕಾದರೆ ಉತ್ಕಟ ಚಿಂತನೆ ಧ್ಯಾನಗಳಿಂದ ಮಾತ್ರ ಸಾಧ್ಯ. ವ್ಯಾವಹಾರಿಕ ಬುದ್ಧಿಯ ಎದುರಿಗೆ ಅದು ಅಪ್ರಾಪ್ಯ. ಅದು ನನಗೆ ಹೇಗೋ ಹಾಗೆಯೇ ನನ್ನ ಹಿಂದಿನ ಐವತ್ತು ವರ್ಷಗಳಲ್ಲಿ ಬದುಕಿದ್ದ ವ್ಯಕ್ತಿ ಮತ್ತು ನನ್ನ ಅನಂತರದ ಐವತ್ತು ವರ್ಷಗಳಲ್ಲಿ ಬಾಳಲಿರುವ ಮನುಷ್ಯನಿಗೆ ಸಮಾನ ರೀತಿಯದು ಎನ್ನಿಸುವಂಥದ್ದು'. ಇದರೊಂದಿಗೆ—

'ನಗರದ ದೈಹಿಕ ಲಾಭ ಲೋಭಗಳ ಪ್ರಯೋಜನ ಬಹುತರ ಎಲ್ಲ ನಿವಾಸಿಗಳಿಗೂ ಶಕ್ಯ; ಆದರೆ ಅದರ ಉಪಯೋಗ-ನಿರಪೇಕ್ಷ ಅಂತರಾತ್ಮದರ್ಶನ ವಿರಳರಿಗೂ ದುರ್ಲಭ. ಹಾಗೆ ಧನ್ಯರಾದವರೂ ಆ ಆತ್ಮ ಸ್ವರೂಪವನ್ನು ಅಂತರನುಭವಿಸುವರೇ ವಿನಾ ಬುದ್ಧಿ ಮೂಲವಾದ ಭಾಷೆಯ ದ್ವಾರಾ ಅದನ್ನು ರೇಖಿಸಲಾರರು.'

—ಅಬ್ಬಾ! ಎಂತಹ ನುಡಿ ರತ್ನಗಳು. ನನ್ನ ಮನದಾಳದಲ್ಲಿ ದಾಖಲಾಗಿ ಹೋಗಿರುವ ಈ ಭಾಗಗಳನ್ನು ಸ್ವಯಂ ನಾನು ಇಲ್ಲಿ ಕಾಪಿ ಮಾಡುವಾಗಲೂ ಪುಳಕಿತ ನಾಗಿದ್ದೇನೆ. ಮೊದಲು ಓದಿದಾಗ ಪಡೆದ ಧನ್ಯತೆಯನ್ನೇ ಮತ್ತೆ ಮತ್ತೆ ಪ್ರತಿ ಓದಿನಲ್ಲಿಯೂ ಪಡೆದು ಸಂತೋಷಿಸಿದ್ದೇನೆ.

ನಿಸಾರರು ಇಂಟರ್‌ಮೀಡಿಯೆಟ್ ಓದುತ್ತಿದ್ದ ೧೯೫೨ನೆಯ ಅವಧಿಯಲ್ಲಿ ಅವರ ತಂದೆ ಆನೇಕಲ್‌ನಲ್ಲಿ ಸರ್ಕಾರಿ ಸೇವೆಯಲ್ಲಿರುವಾಗ ಕೆಲ ದಿನಗಳು, ಅಂದರೆ ಅವರ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ಆದರೂ, ರಜಾ ದಿನಗಳಲ್ಲಿ ತಂದೆಯ ಬಳಿ ಬರುತ್ತಿದ್ದಾಗ ಕನ್ನಡದ ಶ್ರೇಷ್ಠ ಕೃತಿಗಳನ್ನು ತಂದು ಆನೇಕಲ್ಲಿನ ನಿಶ್ಶಬ್ದ ತಾಣಗಳಲ್ಲಿ ಕುಳಿತು ಓದಿ ಕೊಳ್ಳುತ್ತಿದ್ದ ಸುಖವನ್ನು ಅವರು ಹೇಳಿಕೊಳ್ಳುವಾಗ ನಾವೇ ಅವುಗಳನ್ನು ಓದಿದಂತಾಗು ತ್ತದೆ. ಐವತ್ತು ವರ್ಷಗಳ ಹಿಂದಿನ ಆನೇಕಲ್‌ನ ಪರಿಸರವನ್ನು, ನಿಸರ್ಗ ರಮಣೀಯತೆ ಯನ್ನು, ಅಂದಿನ ಅವರ ತಾರುಣ್ಯಪೂರ್ವ ಕಾಲದ ಗೆಳೆಯರನ್ನು ಅತ್ಯಂತ ಖಚಿತವಾಗಿಯೂ ಸುಸ್ಪಷ್ಟವಾಗಿಯೂ ನೆನಪಿಸಿಕೊಳ್ಳುವ ಅನನ್ಯ ರೀತಿ ವೈಯಕ್ತಿಕವಾಗಿ ನನಗೆ ಅಪಾರ ಬೆರಗುಗೊಳಿಸಿದೆಯಷ್ಟೇ ಅಲ್ಲ, ಪರಿಸರದೊಂದಿಗೆ ಬಾಂಧವ್ಯವನ್ನು ಬೆಸೆದು ಬೆಳೆದಿರುವ ಅವರ ಸ್ನೇಹಶೀಲ ವ್ಯಕ್ತಿತ್ವ ನನಗೆ ಅನುದಿನವೂ ಮಾರ್ಗದರ್ಶಕವಾಗಿದೆ.

ನನ್ನಂತಹ ಅದೆಷ್ಟು ಮಂದಿಗೆ ಸ್ಫೂರ್ತಿದಾತರಾಗಿದ್ದಾರೋ ಅದು ಗಣತಿಗೆ ನಿಲುಕುವ ವಿಚಾರವಲ್ಲ. ಅವರ ಬದುಕು ತೆರೆದ ಪುಸ್ತಕ. ಓದಿದಷ್ಟೂ ತಿಳಿಯುವ ಅಪಾರ ಜ್ಞಾನ ರಾಶಿ ಅಲ್ಲಿದೆ. ಖಂಡಿತವಾಗಿಯೂ ಅದರ ಜಾಡಿನಲ್ಲಿ ನಾವು ಸತ್ಪ್ರಜೆಗಳಾಗುವುದರೊಂದಿಗೆ ಮಾನವತಾವಾದಿಗಳಾಗಿ ರೂಪಾಂತರ ಹೊಂದುತ್ತೇವೆ.



ಹಾಲು ಜೇನಿನಂಥ ಸಂಬಂಧ

♦ *ಶಾಂತ ಮೈಸೂರು ಅನಂತಸ್ವಾಮಿ*

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನು ಜ್ಞಾಪಿಸಿಕೊಂಡಾಗ ಅನಿವಾರ್ಯವಾಗಿ ಬೆಂಗಳೂರಿನ ಗಾಂಧಿ ಬಜಾರ್ ಮನಸ್ಸಿನ ಎದುರು ಮೂಡುತ್ತದೆ. ಗಾಂಧಿ ಬಜಾರ್ ಜ್ಞಾಪಕಕ್ಕೆ ಬಂದೊಡನೆ ಅಲ್ಲಿನ ಎರಡು ಕಲಾ ಪೋಷಕ ತಾಣಗಳು ಕಣ್ಣಿನ ಮುಂದೆ ಮೈತಳೆಯುತ್ತವೆ. ಒಂದು 'ಮೆಡಿಕೊ-ಸರ್ಜಿಕಲ್' ಅಂಗಡಿಯ ಮುಂಗಟ್ಟಿನ ವಿಶಾಲವಾದ ಎಡೆ; ಇನ್ನೊಂದು ಪಕ್ಕದಲ್ಲೇ ಇದ್ದ ಅ. ನ. ಸುಬ್ಬರಾಯರ 'ಕಲಾಮಂದಿರ.'

ಮೊದಲನೆಯ ಸ್ಥಳದಲ್ಲಿ ಈಗ್ಗೆ ೪೦-೪೨ ವರ್ಷಗಳ ಹಿಂದೆ ಯೌವನಕ್ಕೆ ಅಡಿಯಿಟ್ಟ ಆಪ್ತ ಸ್ನೇಹಿತರ ಬಳಗವೊಂದು ಸಂಜೆಯ ವೇಳೆ ಜಮಾಯಿಸುತ್ತಿತ್ತು. ಸರ್ಕಲ್ ಲಂಚ್ ಹೋಂನಲ್ಲಿ ಆಗಾಗ್ಗೆ ಕಾಫಿ-ಟೀ ಹೀರುತ್ತ, ಸಿಗರೇಟ್ ಸೇದುತ್ತ ಆ ಮಿತ್ರರು ಮಾತನಾಡದ ವಿಷಯಗಳಿರಲಿಲ್ಲ. ಸ್ವಂತದ ಸಂಗತಿಗಳಿಂದ ಹಿಡಿದು ಸಂಗೀತ, ಸಾಹಿತ್ಯ, ರಾಜಕೀಯ, ಚಲಚ್ಚಿತ್ರ, ಕ್ರೀಡೆಗಳು ಅವರ ಸಂಭಾಷಣೆಯ ಮೇವಾಗುತ್ತಿದ್ದವು. ಜೊತೆಗೇ ಜೋಕುಗಳ ಸುರಿಮಳೆ ಹಾಗೂ ಒಬ್ಬರನ್ನೊಬ್ಬರು ಛೇಡಿಸುವುದು, ಹಾದಿಯಲ್ಲಿ ಹೋಗುವವರು ತಿರುಗಿ ನೋಡುವಂತೆ ಜೋರಾಗಿ ನಗುವುದು—ಇದು ಆಗಿನ ನಿತ್ಯೋತ್ಸವದ ವರ್ಷಾನುಗಟ್ಟಲೆಯ ದೃಶ್ಯ. ಈ ದೈನಂದಿನ ನಾಟಕದ ಖಾಯಂ ಪಾತ್ರಧಾರಿಗಳು: ಮೈಸೂರು ಅನಂತಸ್ವಾಮಿ, ಕೆ. ಎಸ್. ನಿಸಾರ್ ಅಹಮದ್, ಕೆ. ಎನ್. ಕೃಷ್ಣಸ್ವಾಮಿ,

ಜಯತೀರ್ಥ ರಾವ್, ಸಾಣಿ, ರಾಮು, ನಾಗ, ಸುಂದರ ರಾವ್. ಅಪರೂಪಕ್ಕೆ ಮೈಸೂರಿನಿಂದ ಕೆಲವು ದಿವಸಗಳಿಗಾಗಿ ಬರುತ್ತಿದ್ದ ಅನಂತಸ್ವಾಮಿಯವರ ಆಪ್ತರಾದ ನಾಗರಾಜ ಮತ್ತು ಆತನ ತಮ್ಮ ಹಾಗೂ ಎಚ್. ಜಿ. ಸೋಮಶೇಖರ ರಾವ್, ಗುಣಸಿಂಗ್, ಸುಬ್ಬರಾಮು ಮತ್ತಿತರರು. ಮೇಲೆ ಹೆಸರಿಸಿದ ಪ್ರಭೃತಿಗಳು ವೃತ್ತಿ-ಪ್ರವೃತ್ತಿಗಳಿಂದ ಬೇರೆಯಾಗಿದ್ದರೂ ಒಬ್ಬರನ್ನೊಬ್ಬರು ಸ್ನೇಹ ವಿಶ್ವಾಸಗಳಿಂದ ಕಾಣುವುದರಲ್ಲಿ ಸಮಾನರು. ಇವರಲ್ಲಿ ಒಬ್ಬ ಸಂಗೀತಗಾರ, ಒಬ್ಬ ಕವಿ, ಒಬ್ಬ ಅಧ್ಯಾಪಕ, ಒಬ್ಬ ವ್ಯಾಪಾರಿ, ಒಬ್ಬ ಉದ್ಯಮಿ ಹಾಗೂ ಮತ್ತೊಬ್ಬ ಕಾರ್ಖಾನೆಯ ಶ್ರಮ ಜೀವಿ.

ಸಾಮಾನ್ಯವಾಗಿ ನನ್ನ ಪತಿ ಮೈಸೂರು ಅನಂತಸ್ವಾಮಿ ತಾವು ಕೆಲಸ ಮಾಡುತ್ತಿದ್ದ ಎಲ್.ಆರ್.ಡಿ.ಇ.ಯಿಂದ ಮಧ್ಯಾಹ್ನದ ವೇಳೆಗೆ ಮನೆಗೆ ಮರಳಿ ಯಾವುದಾದರೂ ಒಂದು ಭಾವಗೀತೆಗೆ ರಾಗವನ್ನು ಸಂಯೋಜಿಸಿ ಸಂಜೆ ಆ ಮಿತ್ರರ ಆಗ್ರಹದ ಮೇರೆಗೆ ಅದರ ಸ್ಯಾಂಪಲ್ಲನ್ನು ತಮ್ಮ ಮಧುರ ದನಿಯಲ್ಲಿ ಗುನುಗಿ ಅಭಿಪ್ರಾಯವನ್ನು ನಿರೀಕ್ಷಿಸುತ್ತಿದ್ದರು. ಆ ಗೆಳೆಯರು 'ಶಾಸ್ತ್ರಿ, ಹೆಂಗಮ್ಮ ಇದೆ ದೊರೆಯ ಈ ಟ್ಯೂನು?' ಎಂದು ನಿಸಾರರನ್ನು ಕೇಳುವುದು, ಅವರು ಪ್ರಾಮಾಣಿಕವಾಗಿ ಅದರ ವಿಮರ್ಶೆ ಮಾಡಿ ಅಭಿಪ್ರಾಯ ಸೂಚಿಸುವುದು—ಇದು ಅನೇಕ ಸಲ ನಡೆದಿದೆ. ಜೊತೆಗೇ, ನಿಸಾರ್ ಅವರು ನಮ್ಮ ಕನ್ನಡದ ಅನೇಕ ಹಿರಿಯ ಕವಿಗಳ ಉತ್ತಮ ಕವನಗಳ ಬಗ್ಗೆ ಅನಂತಸ್ವಾಮಿ ಅವರಿಗೆ ಮನವರಿಕೆ ಮಾಡಿಕೊಟ್ಟು, ಅವುಗಳಲ್ಲಿ ಅನೇಕ ರಚನೆಗಳಿಗೆ ರಾಗ ಸಂಯೋಜನೆ ಮಾಡಲು ಪ್ರೇರಕರಾದದ್ದನ್ನೂ ಇಲ್ಲಿ ನೆನೆಯಬೇಕು. ಎಷ್ಟೋ ಸಲ ನಿಸಾರ್ ಅಹಮದ್ ನಮ್ಮ ಮನೆಗೆ ಬಂದು ಅನಂತಸ್ವಾಮಿ ರಾಗ ಹಾಕುವಾಗ, ಹಾರ್ಮೋನಿಯಂನಲ್ಲಿ ಸಂಗೀತವನ್ನು ನುಡಿಸುವಾಗ ಸಲಹೆ ಸೂಚನೆಗಳನ್ನು ನೀಡಿದ್ದೂ ಉಂಟು. ಕೆಲವು ವಿಶೇಷ ಸಂದರ್ಭಗಳಲ್ಲಿ ಮೈಸೂರಿನಲ್ಲೋ, ಶಿವಮೊಗ್ಗೆಯಲ್ಲೋ ಅಥವಾ ಬೇರೆ ಊರುಗಳಲ್ಲೋ ಹಾಡಬೇಕಾಗಿ ಬಂದಾಗ, ಅನಂತಸ್ವಾಮಿ ನಿಸಾರರ ಮನಸ್ಸನ್ನು ಒಲಿಸಿ, ಪುಸಲಾಯಿಸಿ ಕವಿತೆಗಳನ್ನು ಬರೆಸಿದ್ದೂ ಉಂಟು. ಸಾಮಾನ್ಯವಾಗಿ ಸ್ವಯಂಸ್ಫೂರ್ತಿಯಿಂದ ಅಲ್ಲದೆ ಮತ್ತೆ ಯಾರ ಒತ್ತಾಯಕ್ಕೂ ಪದ್ಯಗಳನ್ನು ರಚಿಸಲು ಒಪ್ಪದೇ ಇದ್ದ ನಿಸಾರ್ ಅವರು, ಅನಂತಸ್ವಾಮಿಗೆ 'ಅಸ್ತು' ಅನ್ನುತ್ತಿದ್ದುದು ನನಗೆ ಇನ್ನೂ ಕಗ್ಗಂಟಾಗಿಯೇ ಉಳಿದಿದೆ. ಬಹುಶಃ ಅವರಿಬ್ಬರ ನಡುವೆ ಇದ್ದ ಹೃದಯದ ಬಾಂಧವ್ಯ ಇದಕ್ಕೆ ಕಾರಣವಿರಬಹುದು. ಹೀಗೆ, ನಿಸಾರರಿಂದ ಮುಖ್ಯ ಸಂದರ್ಭಗಳಿಗೆಂದೇ ಅನಂತಸ್ವಾಮಿ ಬರೆಸಿದ ಕೆಲವು ರಚನೆಗಳು ನನ್ನ ನೆನಪಿನಲ್ಲಿವೆ: 'ಬೆಣ್ಣೆ ಕದ್ದ ನಮ್ಮ ಕೃಷ್ಣ', 'ಗಣೇಶ ಗಾಥಾ', 'ಭೀಮನ ಕೊಲ್ಲಿಯ ಕಪಿಲೆಯ ದಡದಲಿ' ಎಂದು ಶುರುವಾಗುವ ಮಲೆ ಮಹದೇಶ್ವರನನ್ನು ಕುರಿತ ಹಾಡು, ಓಟಿನ ಬಗೆಗಿನ ಜನಪ್ರಿಯ ಗೀತೆ.

'ಮೆಡಿಕೋ-ಸರ್ಜಿಕಲ್' ಅಂಗಡಿಯನ್ನು ಬಿಟ್ಟರೆ, 'ಕಲಾಮಂದಿರ' ಅವರಲ್ಲಿ ಕೆಲವರ ಠಿಕಾಣೆ. ಅಲ್ಲಿ ನಾಟಕದ ಪ್ರಾಕ್ಟಿಸ್ ಪ್ರತಿನಿತ್ಯ ಸಾಗುತ್ತಿತ್ತು. ಅ. ನ. ಸುಬ್ಬರಾವ್ ಅವರೊ, ಎ. ಎಸ್. ಮೂರ್ತಿಯೊ, ದಾಶರಥಿ ದೀಕ್ಷಿತರೊ—ನಾಟಕದ ಪ್ರಾಕ್ಟೀಸಿನ ಪರಿಶ್ರಮದ ಆಯಾಸವನ್ನು ನಿವಾರಿಸಿಕೊಳ್ಳಲು—'ಒಂದೆರಡು ಹಾಡು ಹೇಳ್ರಿ,

ಅನಂತಸ್ವಾಮಿ' ಎಂದಾಗ, ಅವರು ಅಲ್ಲೇ ಇದ್ದ ಹಾರ್ಮೋನಿಯಂ ಹಿಡಿದು ಹಾಡಲು ಶುರುವಿಟ್ಟರೆಂದರೆ, 'ಇನ್ನೊಂದು ಹಾಡಿ, ಮತ್ತೊಂದು ಹಾಡಿ' ಎಂದು ಮುಕ್ಕಾಲು-ಒಂದು ಗಂಟೆಯ ಕಾರ್ಯಕ್ರಮ ಆಗಿಬಿಡುತ್ತಿತ್ತು. ಎಲ್ಲರೂ ಕಮಕ್ ಕಿಮಿಕ್ಕನ್ನದೆ ತನ್ಮಯರಾಗಿ ಆಲಿಸುತ್ತಿದ್ದರು. ಹಾಗೆ ಅನಂತಸ್ವಾಮಿ ಹಾಡುವ ಮುಂಚೆ ನಿಸಾರರನ್ನು 'ಯಾವ ಯಾವ ಹಾಡು ಹಾಡ್ಲಯ್ಯ?' ಎಂದು ಕೇಳುವುದು, ಅವರು ದೊಡ್ಡ ಕವಿಗಳ ರಚನೆಗಳನ್ನು ಸೂಚಿಸುವುದು ಸರ್ವೇಸಾಧಾರಣವಾಗುತ್ತಿತ್ತು. ಕೆಲವು ಸಲ, ನಿಸಾರರನ್ನು ತಮ್ಮ ಪರಿಚಯಸ್ಥರಿಗೆ ಅನಂತಸ್ವಾಮಿ ಪರಿಚಯಿಸುವಾಗ 'ಈತ ಕಾಲೇಜಿನಲ್ಲಿ ಮಾತ್ರ ಮೇಷ್ಟರಲ್ಲ, ನನ್ನ ಸಂಗೀತದ ಪಾಲಿಗೂ ಮೇಷ್ಟ್ರೆ. ನಾನು ಯಾವುದೇ ಕವಿಗಳ ಹಾಡಿಗೆ ರಾಗ ಹಾಕುವುದಕ್ಕೆ ಮುಂಚೆ ನಿಸಾರ್‌ನನ್ನು ಆ ಹಾಡಿನ ಅರ್ಥ, ಭಾವ, ಸಂದರ್ಭಗಳ ಬಗ್ಗೆ ವಿಚಾರಿಸಿ, ಅವನ ಸಲಹೆ ಪಡೆಯುತ್ತೇನೆ. ಇದರಿಂದ ಆ ಕವನಕ್ಕೆ ತಕ್ಕ ನಾದ ರಾಗವನ್ನು ಹಾಕಲು ನನಗೆ ಸಹಾಯವಾಗುತ್ತದೆ' ಎನ್ನುತ್ತಿದ್ದರು.

ಅಂತೂ ಈ ಗೆಳೆಯರ ಮೇಳದಿಂದ ಪರಸ್ಪರರಿಗೆ ಕಲಾರಾಧನೆಯ ಹಾಗೂ ಹೆಚ್ಚಿನ ತಿಳಿವಳಿಕೆಯ ಲಾಭವಾಗುತ್ತಿತ್ತು. ಅವರ ಉತ್ಸಾಹ, ಲವಲವಿಕೆಗಳಿಗೆ ಕಳೆಯೇರುತ್ತಿತ್ತು. ಎಲ್ಲ ಲೌಕಿಕ ನಿರ್ಬಂಧಗಳನ್ನೂ, ಪ್ರತ್ಯೇಕತೆಗಳನ್ನೂ ಮೀರಿ ಅವರು ಹೃದಯಗಳ ಸ್ನೇಹಪೂರ್ಣ ಬೆಸುಗೆಗೆ, ಸೋದರತ್ವ ಮತ್ತು ಮಾನವೀಯತೆಗೆ ಹೆಚ್ಚಿನ ಬೆಲೆಯನ್ನು ಕೊಡುತ್ತಿದ್ದರು. ಈಗ ಅಂತಹ ವಾತಾವರಣ ಎಲ್ಲಿದೆ?

ನಾನು ಅನಂತಸ್ವಾಮಿಯವರನ್ನು ಕೈ ಹಿಡಿಯುವುದಕ್ಕೆ ಆರೇಳು ವರ್ಷಗಳಿಗಿಂತ ಮುಂಚಿನಿಂದಲೂ ಅವರು ಮತ್ತು ನಿಸಾರ್ ಅಹಮದ್ ಅನ್ಯೋನ್ಯ ಗೆಳೆಯರಾಗಿದ್ದರು. ಭಾರತದ ಮೇಲೆ ಚೀನಿಯರ ಆಕ್ರಮಣದ ಅನಂತರ ನಿಸಾರ್ ಅವರು ಬರೆದ ಅನೇಕ ಯುದ್ಧ ಗೀತೆಗಳನ್ನು ಬೆಂಗಳೂರು, ಮೈಸೂರು ಮುಂತಾದ ಊರುಗಳ ಸಾರ್ವಜನಿಕ ಸಮಾರಂಭಗಳಲ್ಲಿ ಅನಂತಸ್ವಾಮಿ ಹಾಡುತ್ತಿದ್ದರು. ಮೈಸೂರಿನಲ್ಲಿ ಜರುಗಿದ ನಮ್ಮ ಮದುವೆಗೆ ನಿಸಾರ್‌ಅಹಮದ್ ಒಂದು ದಿವಸ ಮುಂಚೆಯೇ ಬೆಂಗಳೂರಿನಿಂದ ಬಂದಿದ್ದರು. ಅನಂತಸ್ವಾಮಿ ಅವರ ತಾಯಿ, ತಂದೆ, ಅಣ್ಣ, ತಂಗಿಯರಲ್ಲದೆ ಬಂಧು ವರ್ಗದ ಅನೇಕರಿಗೆ ಮತ್ತು ಮಿತ್ರರಾದ ಬಲ್ಲಾಳ್, ಗುಣ ಸಿಂಗ್ ಮುಂತಾದವರಿಗೆ ನಿಸಾರರು ಅಲ್ಪ ಸಮಯದಲ್ಲೇ ಆಪ್ತರಾಗಿಬಿಟ್ಟರು. ಅನಂತಸ್ವಾಮಿಯವರ ತಾಯಿ, ತಂಗಿಯರು, ಚಿಕ್ಕಮ್ಮ ಅವರಿಂದ ಹಾಡು ಹೇಳಿಸಿ ಆನಂದಿಸಿದರು. ತಾವೊಬ್ಬ ಹೆಸರು ಗಳಿಸಿದ ಕವಿಯೆಂಬ ಬಿಂಕ ಬಿಗುಮಾನಗಳಿಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಆತ್ಮೀಯತೆಯಿಂದ ಬೆರೆತರು. ಅಂದು ನಡೆದ ಅದ್ದೂರಿ ಆರತಕ್ಷತೆಯ ಕಾರ್ಯಕ್ರಮಕ್ಕೆ ಬಂದಿದ್ದ ಅನೇಕ ಗಾಯಕರು—ಪಿ. ಕಾಳಿಂಗ ರಾವ್ ಅವರನ್ನೂ ಒಳಗೊಂಡು—ಒಂದೊಂದು ಹಾಡನ್ನು ಹಾಡಿ, ವಧೂವರರನ್ನು ಅಭಿನಂದಿಸಿದರು. ನಿಸಾರ್ ಅವರು ನಮ್ಮ ವಿವಾಹಕ್ಕೆಂದೇ ರಚಿಸಿದ 'ಮದುವೆ' ಕವಿತೆಯನ್ನು ವಾಚಿಸಿ, ಅದರ ಪ್ರತಿಯನ್ನು ಉಡುಗೊರೆಯೊಂದಿಗೆ ನಮಗೆ ಸಲ್ಲಿಸಿದ್ದನ್ನು ನೆನೆದಾಗ ನನಗೆ ನಿಜಕ್ಕೂ ಹೆಮ್ಮೆಯೆನ್ನಿಸುತ್ತದೆ (ಆ ಕವಿತೆ ಅವರ 'ನಿತ್ಯೋತ್ಸವ' ಕವನ

ಸಂಗ್ರಹದಲ್ಲಿದೆ. ಅದಕ್ಕೂ ರಾಗ ಹಾಕಿ ಅನಂತಸ್ವಾಮಿ ಬೇರೆಯವರ ಲಗ್ನದ ರಿಸೆಪ್ಷನ್ ಸಮಾರಂಭಗಳಲ್ಲಿ ಹಾಡಿದ್ದರು).

ನಿಸಾರ್ ಅವರನ್ನು ಕಂಡರೆ ಅನಂತಸ್ವಾಮಿ ಅವರ ಬಳಗಕ್ಕೆ ಕೇವಲ ಪ್ರೀತಿ ಅಕ್ಕರೆಗಳೇ ಅಲ್ಲ, ಗೌರವವೂ ಇತ್ತು. ಇದಕ್ಕೆ ಕಾರಣ ಅವರು ಕವಿಯೆಂಬುದು ಮಾತ್ರವಲ್ಲ. ಅನೇಕ ವಿಷಯಗಳಲ್ಲಿ ಅವರಿಗಿದ್ದ ಜ್ಞಾನ ಮತ್ತು ಹಲವಾರು ಶ್ರೇಷ್ಠ ಗ್ರಂಥಗಳನ್ನು ಓದಿ ಅವುಗಳ ಸ್ವಾರಸ್ಯ, ಸಾರವನ್ನು ಆಗಾಗ ಹೇಳುತ್ತಿದ್ದುದು. ಅಲ್ಲದೆ, ಅವರ ಯಾವುದಾದರೂ ಹೊಸ ರಚನೆಗೆ ನಮ್ಮವರು ರಾಗ ಸಂಯೋಜಿಸಿ ಹಾಡಿದರೆ ಅದನ್ನು ಈ ಬಳಗ ಮೆಚ್ಚಿ ನಿಸಾರರನ್ನು ಹುರಿದುಂಬಿಸುತ್ತಿದ್ದುದು ಒಂದು ವಿಶೇಷ.

ನಿಸಾರ್ ನಮ್ಮ ಮನೆಗೆ ಬಂದಾಗ ಗಂಟೆಗಟ್ಟಲೆ ಅನಂತಸ್ವಾಮಿಯವರ ಸಂಗೀತಾಭ್ಯಾಸದಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರಿಗೆ ಬಿಸಿ ಬಿಸಿಯಾದ ಟೀ ಮಾಡಿ ಕೊಡುವುದು ನನ್ನ ರೂಢಿಯಾಗಿತ್ತು. 'ಶಾಂತಾ, ಎಷ್ಟು ಸೊಗಸಾದ ಟೀ ಮಾಡ್ತೀಯಮ್ಮ ನೀನು, ಒಳ್ಳೇ ಮುಸ್ಲಿಂ ಹೋಟೆಲ್ ಟೀ ಇದ್ದ ಹಾಗಿದೆ' ಎಂದು ಮೆಚ್ಚುಗೆ ಸೂಚಿಸು ತ್ತಿದ್ದರು. ನನ್ನ ಮತ್ತು ನನ್ನ ಮಕ್ಕಳ ಯೋಗಕ್ಷೇಮವನ್ನು ವಿಚಾರಿಸದ ಸಂದರ್ಭವಿರಲಿಲ್ಲ. ಅಲ್ಲದೆ, ನಾನು ಶಾಲಾ ಶಿಕ್ಷಕಿಯಾಗಿದ್ದುದರಿಂದ ನನ್ನ ವೃತ್ತಿಯ ಬಗ್ಗೆ, ಶಾಲೆಯ ಸ್ಥಿತಿಗತಿಗಳ ಬಗ್ಗೆ ಆಗಾಗ್ಗೆ ಕೇಳುತ್ತಿದ್ದುದೂ ಉಂಟು. ಈ ಹಿತಾಕಾಂಕ್ಷೆಯ ಅವರ ಸ್ವಭಾವ ನಮಗೆಲ್ಲ ತುಂಬು ಮೆಚ್ಚಾಗುತ್ತಿತ್ತು. ನಿಸಾರ್ ಅವರು ೧೯೭೮ರಲ್ಲಿ ಹೊರ ತಂದ ಕನ್ನಡದ ಮೊದಲನೆಯ ದನಿ ಸುರುಳಿ 'ನಿತ್ಯೋತ್ಸವ'ಕ್ಕೆ ಅನಂತಸ್ವಾಮಿಯ ಸಂಗೀತದ ಕೊಡುಗೆ ಅಪಾರವೆಂದು ನಿಸಾರ್ ಸಭೆ-ಸಮಾರಂಭಗಳಲ್ಲಿ ಕೃತಜ್ಞತೆಯಿಂದ ನೆನೆಯುವುದಲ್ಲದೆ, 'ನನ್ನ ಕವನಗಳಿಗೆ ರೆಕ್ಕೆ ಪುಕ್ಕ ಕೊಟ್ಟವ ಗೆಳೆಯ ಅನಂತಸ್ವಾಮಿ. ಅವನಂಥ ಅದ್ವಿತೀಯ ಪ್ರತಿಭಾವಂತ ಹಾಡುಗಾರ, ರಾಗ ಹಾಗೂ ಸಂಗೀತ ಸಂಯೋಜಕ ನನ್ನ ಬದುಕಿನಲ್ಲಿ ಪ್ರವೇಶಿಸಿದ್ದು ಒಂದು ಅದೃಷ್ಟ, ಯೋಗಾಯೋಗ' ಎಂದು ಭಾವಪೂರ್ಣವಾಗಿ ನುಡಿಯು ವುದೂ ಉಂಟು. ಇದು ಪರಸ್ಪರ ಉಭಯತ್ರರ ವಿಷಯದಲ್ಲೂ ನಿಜವೇ. ನಿಸಾರ್ ಅವರ 'ನಿತ್ಯೋತ್ಸವ', 'ಕುರಿಗಳು, ಸಾರ್, ಕುರಿಗಳು', 'ಬೆಣ್ಣೆ ಕದ್ದ ನಮ್ಮ ಕೃಷ್ಣ', 'ನಾಡ ದೇವಿಯೆ ಕಂಡೆ ನಿನ್ನ ಮಡಿಲಲ್ಲಿ', 'ಮತ್ತದೇ ಬೇಸರ, ಅದೆ ಸಂಜೆ, ಅದೆ ಏಕಾಂತ', 'ನನ್ನ ನಲವಿನ ಬಳ್ಳಿ', 'ಬರುವನೇನೆ ಸಖಿ ಚೆಲುವ', 'ಕನ್ನಡವೆಂದರೆ ಬರಿ ನುಡಿಯಲ್ಲ', 'ಈ ಗಳಿಗೆಯೆ ಮೈತಾಳಿತೊ ಎನುವಂತಿದೆ ಲೋಕ', 'ಚೇತನಾಚೇತನದ ತಿರುಳು ನೀನಾಗಿರುವೆ'—ಇತ್ಯಾದಿ ಭಾವಾರ್ಥಪೂರ್ಣ ಗೀತೆಗಳನ್ನು ಹಾಡಿದ್ದರಿಂದ ಅನಂತಸ್ವಾಮಿ ಯವರ ಜನಪ್ರಿಯತೆಗೂ ಕೋಡು ಮೂಡಿದಂತಾಯಿತು. ಸದಭಿರುಚಿಯ ಕವನಗಳನ್ನು ಆಯ್ಕೆ ಮಾಡಿಕೊಂಡು ರಾಗ ಹಾಕಿ ಹಾಡಿದ, ಹಾಡಿಸಿದ ಕೀರ್ತಿಯೂ ಲಭಿಸಿತು.

ಇವರಿಬ್ಬರ ನಡುವೆ ಕೆಲ ಸಮಯ—ಬೇರೆ ಒಂದಿಬ್ಬರ ಚಿತಾವಣೆ ಮತ್ತು ಕರುಬಿನ ದೆಸೆಯಿಂದ—ಭಿನ್ನಾಭಿಪ್ರಾಯ ಮೂಡಿ ವಿರಸತೆಯ ಬಿರುಕು ತೋರಿದ್ದುಂಟು. ಇಷ್ಟಾಗಿಯೂ ಅನಂತಸ್ವಾಮಿ ನಿಸಾರರ ಗೀತೆಗಳನ್ನು ಸಮಾರಂಭಗಳಲ್ಲಿ ಹಾಡದೇ ಇರುತ್ತಿರಲಿಲ್ಲ.

ನಿಸಾರರು ತಮ್ಮ ಪುಸ್ತಕಗಳ ಬಿಡುಗಡೆಯ ಕಾರ್ಯಕ್ರಮಗಳಲ್ಲಿ ಅನಂತಸ್ವಾಮಿಯನ್ನು ನೆನೆಯದೇ ಇರುತ್ತಿರಲಿಲ್ಲ. ಅನಂತಸ್ವಾಮಿ ತಮ್ಮ ಕೊನೆಗಾಲದಲ್ಲಿ ಅಸ್ವಸ್ಥರಾಗಿ ಮಣಿಪಾಲ್ ಆಸ್ಪತ್ರೆಗೆ ಸೇರಿದ್ದಾಗ, ನಿಸಾರ್ ಅಹಮದ್ ಅವರು ತಮ್ಮ ಮಿತ್ರರಾದ ಚಿರಂಜೀವಿಯೊಂದಿಗೆ ಹೋಗಿ ಶುಭ ಕೋರಿ ಬಂದಿದ್ದಲ್ಲದೆ, ಅತ್ಯಂತ ಹೃದಯಸ್ಪರ್ಶಿಯಾದ, ಪ್ರೀತಿಯ ಅಂತಸ್ಸಾರವನ್ನೇ ಹರಿಸಿದಂತಿರುವ ಒಂದು ಲೇಖನವನ್ನು ಬರೆದರು. (ಅದು ಅವರ `ಅಚ್ಚುಮೆಚ್ಚು` ಗದ್ಯ ಗ್ರಂಥದಲ್ಲಿದೆ).

ಅದಕ್ಕೂ ಹಿಂದೆ, ಕೆಲವು ತಿಂಗಳುಗಳ ಮುಂಚೆ ಅನಂತಸ್ವಾಮಿ ಅವರು ತಮ್ಮ ಬದುಕಿನ ಕೊನೆಯ ದನಿ ಸುರುಳಿಯಾದ ನಿಸಾರರ 'ಸುಮಧುರ'ಕ್ಕೆ ರಾಗ ಸಂಯೋಜಿಸಿದ್ದರು. ಆ ರಾಗಗಳನ್ನು ನಿಸಾರರಿಗೆ ದೂರವಾಣಿಯಲ್ಲಿ ಕೇಳಿಸಿ, ಮನೆಗೆ ಬರಬೇಕೆಂದು ಕೋರಿದರು. ನಿಸಾರ್, ಚಿರಂಜೀವಿ ಮತ್ತು `ಮಾಧುರಿ ಆಡಿಯೊ ಸಂಸ್ಥೆ`ಯ ಮಾಲೀಕ ಎಂ. ಎಸ್. ಡಿ. ಸ್ವಾಮಿ ಆ ರಾತ್ರಿ ಬಹಳ ಹೊತ್ತಿನ ತನಕ ರಾಗ ಹಾಕಿದ ಗೀತೆಗಳನ್ನು ಆಲಿಸಿ, ತಲೆದೂಗುತ್ತ ಕುಳಿತಿದ್ದರು. ನಿಸಾರ್ ಕೆಲವು ಸಲಹೆಗಳನ್ನು ನೀಡಿದ ಬಳಿಕ ಅಂತಸ್ವಾಮಿ 'ಸುಮಧುರ' ಕ್ಯಾಸೆಟ್ಟನ್ನು ಸಿದ್ಧಪಡಿಸಿದರು. ದುಬೈ ಮತ್ತು ಅಬುದಾಭಿ ಪಟ್ಟಣಗಳ ಕರ್ನಾಟಕ ಸಂಘಗಳಲ್ಲಿ ಅದು ಬಿಡುಗಡೆಗೊಂಡು ಇಂದಿಗೂ ಜನ ಮನ್ನಣೆ ಪಡೆದಿದೆ. ಹೀಗೆ, ಕನ್ನಡದ ದನಿ ಸುರುಳಿಯೊಂದು ವಿದೇಶದಲ್ಲಿ ಬಿಡುಗಡೆಗೊಂಡ ಮೊಟ್ಟಮೊದಲ ನಿದರ್ಶನ ಇದು.

ಸೋಜಿಗದ ವಿಷಯವೆಂದರೆ, ನಿಸಾರರ ಮೊದಲನೆಯ ದನಿ ಸುರುಳಿ `ನಿತ್ಯೋತ್ಸವ`ದಲ್ಲಿ ಹಾಡಿದ, ಹಾಡಿಸಿದ ಅನಂತಸ್ವಾಮಿ, ಅವರದೇ `ಸುಮಧುರ'ದಲ್ಲಿ ಕೊಟ್ಟ ಕೊನೆಯದಾಗಿ ಹಾಡಿದ್ದು, ಹಾಡಿಸಿದ್ದು! ಇದು ನಿಜಕ್ಕೂ ಒಂದು ಅಪೂರ್ವ ಘಟನೆ.

ನಿಸಾರ್-ಅನಂತಸ್ವಾಮಿಯ ಸ್ನೇಹ ಮತ್ತು ಸಂಗೀತ-ಸಾಹಿತ್ಯಗಳ ನಂಟಿನ ಬಗೆಗೆ ಹೇಳುವುದು ಇನ್ನೂ ಎಷ್ಟೋ ಇದೆ. ಲೇಖನ ತುಂಬಾ ಬೆಳೆದು ಬಿಡುವ ಅಳುಕಿನಿಂದ ಅದೆಲ್ಲವನ್ನು ನಿರೂಪಿಸಲು ಸಾಧ್ಯವಿಲ್ಲ.

ನಿಸಾರ್ ಅವರಿಗೆ ನನ್ನ ಬಗ್ಗೆ ಮೊದಲಿನಿಂದಲೂ ಹಿರಿಯಣ್ಣನ ಅಕ್ಕರೆ. ನನ್ನ ಮಕ್ಕಳ—ಅದರಲ್ಲೂ ರಾಜು, ಸುನೀತಾ, ಅನಿತಾ—ಸಂಗೀತದ ಅಭಿರುಚಿಯ, ಶ್ರದ್ಧೆಯ ಬಗ್ಗೆ ಅವರಿಗೆ ತುಂಬು ಮೆಚ್ಚುಗೆ.

ನಿಸಾರ್-ಅನಂತಸ್ವಾಮಿಗಳಿಬ್ಬರ ಅಪೂರ್ವ ಸ್ನೇಹದಿಂದ ಕನ್ನಡದ ಸುಗಮ ಸಂಗೀತಕ್ಕೆ ಎಂತಹ ಹಿರಿಮೆ, ಮೇಲ್ಮೆ, ವೈವಿಧ್ಯ, ಕೀರ್ತಿ ಬಂದಿತೆಂದು ಒತ್ತಿ ಹೇಳ ಬೇಕಾಗಿಲ್ಲ. ಈ ಬಗ್ಗೆ ಅನಂತಸ್ವಾಮಿಯವರ ಪತ್ನಿಯೆಂಬ ಹೆಮ್ಮೆ ನನಗಿದೆ. ಜೊತೆಗೇ ನಿಸಾರ್ ಅವರಂತಹ ಪ್ರತಿಭಾವಂತ ಕವಿಗಳ ಪ್ರೀತಿಗೆ ಪಾತ್ರಳಾಗಿರುವ ಹಿಗ್ಗು ಸಹ ನನಗಿದೆ. ಎಪ್ಪತ್ತೊಂದರ ಹರಯದ ನಿತ್ಯೋತ್ಸವ ರೂಪದ ಜನ ಮೆಚ್ಚುಗೆಯ ಕವಿಗೆ ನನ್ನ ಅಭಿನಂದನೆ ಮತ್ತು ಶುಭ ಕಾಮನೆಗಳು.



ನನ್ನ ಮೆಚ್ಚಿನ ವ್ಯಕ್ತಿತ್ವದ ಪ್ರೊ. ನಿಸಾರ್

♦ ಎಂ. ಎನ್. ಮಂಜೇಗೌಡ

ಪ್ರೊ. ನಿಸಾರ್ ಅಹಮದ್ ಅವರ ಮತ್ತು ನನ್ನ ನೇಹದ ನಂಟು ೧೮ ವರ್ಷಗಳಷ್ಟು ಹಿಂದಿನದು. ಆಗ ಅವರು ಬೆಂಗಳೂರಿನ ನೃಪತುಂಗ ರಸ್ತೆಯ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಭೂ ವಿಜ್ಞಾನ ವಿಭಾಗದ ಮುಖ್ಯಸ್ಥರು. ಜೊತೆಗೇ ಕವಿಗಳಾಗಿ ಪ್ರಸಿದ್ಧರು. ಅವರನ್ನು ಭೇಟಿಯಾಗಿ ಮಾತನಾಡಿಸುವ ಹಂಬಲ ನನ್ನಲ್ಲಿ ಬಹಳ ಹಿಂದೆ ಬೇರೂರಿದ್ದರೂ ಕಾರಣಾಂತರಗಳಿಂದ ಅದು ನೆರವೇರಿರಲಿಲ್ಲ. ನಿಸಾರ್ ಅವರು ಬೋಧಿಸುತ್ತಿದ್ದ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೆ ಆಗ ಬೆಂಗಳೂರಿನಲ್ಲೇ ಹೆಸರುವಾಸಿ. ಪರೀಕ್ಷೆಯ ಕಾಲದಲ್ಲಂತೂ ಅಲ್ಲಿ ವಿದ್ಯಾರ್ಥಿಗಳ ಅಶಿಸ್ತಿನ ಮತ್ತು ಅವ್ಯವಹಾರಗಳ ಹಾವಳಿ ವಿಪರೀತ. ಇದರಿಂದ ಪ್ರಿನ್ಸಿಪಾಲ್ ಆದಿಯಾಗಿ ಎಲ್ಲ ಅಧ್ಯಾಪಕ ವೃಂದಕ್ಕೆ ತುಂಬ ಬೇಸರವಾಗಿತ್ತು; ಬಗೆ ಹರಿಸಲಾಗದ ತಲೆನೋವಾಗಿತ್ತು.

ನಾನು ಆಗ, ಈ ಕಾಲೇಜಿನ ಪರಿಮಿತಿಯಲ್ಲಿರುವ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದೆ. ಕೊಂಚಮಟ್ಟಿಗೆ tough master ಎನ್ನುವ ಕುಖ್ಯಾತಿಯನ್ನೂ ಪಡೆದಿದ್ದೆನೆನ್ನಿ. ಆದ್ದರಿಂದ ವಿದ್ಯಾರ್ಥಿಗಳನ್ನು ನಿಯಂತ್ರಿಸಲು ನನ್ನನ್ನು ನಿಸಾರ್ ಅವರ ಕಾಲೇಜಿಗೆ ಕರ್ತವ್ಯವನ್ನು ನಿರ್ವಹಿಸಲು ಕಳಿಸುತ್ತಿದ್ದರು. ಹೀಗಾಗಿ, ಕೆಲವೊಮ್ಮೆ ಒಂದು ವಾರದ ಕಾಲ ಬೆಳಿಗ್ಗೆಯಿಂದ ಸಂಜೆಯವರೆಗೆ ಆ ಕಾಲೇಜಿನಲ್ಲಿ ಇರಬೇಕಾಗಿ ಬರುತ್ತಿತ್ತು. ಆಗ ನನಗೆ ಪರಿಚಯ

ವಾದ ಕೆಲವು ಅಧ್ಯಾಪಕರಲ್ಲಿ ಕವಿ ನಿಸಾರ್ ಅಹಮದ್ ಅವರೂ ಒಬ್ಬರು. ಮೊದಲ ಭೇಟಿಯಲ್ಲೇ ಅವರು ತಮ್ಮ ಸ್ನೇಹಶೀಲ ಮಾತುಗಳಿಂದ ಮತ್ತು ಸಜ್ಜನವಾದ ನಡತೆಯಿಂದ ನನ್ನ ಮನಸ್ಸನ್ನು ಗೆದ್ದರು. ನನಗೂ ಅಷ್ಟಿಷ್ಟು ಸಾಹಿತ್ಯದ ಅಭಿರುಚಿ ಇದ್ದದ್ದರಿಂದ ಈ ಸ್ನೇಹ ಮುಂದೆ ಬಲವಾಗಿ ಬೆಳೆದು ಇಂದಿನ ತನಕ ಅಚ್ಚಳಿಯದೆ ಉಳಿದಿದೆ.

ನಿಸಾರ್ ಅವರು ಕೆಲವು ಪ್ರೊಫೆಸರುಗಳಂತೆ reserved ಅಲ್ಲ. ಎಲ್ಲರೊಂದಿಗೂ ಬೆರೆಯುವ ಸರಳ ಸ್ವಭಾವದವರು. ಅದರಲ್ಲೂ, ಯಾರಲ್ಲಾದರೂ ಒಂದು ವಿಶೇಷ ಗುಣವೊ ಕೌಶಲವೊ ಇದೆಯೆಂದು ಗೊತ್ತಾದರೆ, ಅವರ ಬಗ್ಗೆ ಅತಿಶಯವಾದ ಅಕ್ಕರೆ-ಆಸ್ಥೆ ಯನ್ನು ವಹಿಸುವ ಜಾಯಮಾನದವರು. ನಾನೂ ಕೂಡ ಆಗಾಗ (ನಮ್ಮ ಇಲಾಖೆಯಲ್ಲಿ ಬಿಡುವು ಸಿಕ್ಕುವುದೇ ಅಪರೂಪ) ಕೆಲವು ಪದ್ಯಗಳನ್ನು ಬರೆಯುತ್ತಿದ್ದೆ. ಆದರೆ ನಿಸಾರರಂಥ ಸುಪ್ರಸಿದ್ಧ ಕವಿಗಳಿಗೆ ತೋರಿಸಲು ಅಳುಕು. ಒಮ್ಮೆ ಅಂಜುತ್ತಲೇ, 'ಸಾರ್! ನಾನೂ ಒಂದೆರಡು ಕವನಗಳನ್ನು ರಚಿಸಿದ್ದೇನೆ' ಎಂದಾಗ, 'ಅರೆರೆ! ಹೌದಾ, ಗೌಡರೆ! ನನಗೆ ತಂದು ತೋರಿಸಿ' ಎಂದರು. ಇದು ಈಚೆಗೆ, ಅಂದರೆ ಏಳೆಂಟು ವರ್ಷಗಳ ಕೆಳಗೆ ನಾನು ಹನುಮಂತನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮತ್ತು ಮುಖ್ಯಸ್ಥನಾಗಿದ್ದಾಗ ಅವರಿಗೆ ಹೇಳಿದ್ದು.

ಆಮೇಲೆ ಅವರು ನನ್ನ ಪದ್ಯಗಳನ್ನು ಆದ್ಯಂತವಾಗಿ ನೋಡಿದ್ದಲ್ಲದೆ, ಅಲ್ಲಲ್ಲಿ ಕೈಯಾಡಿಸಿ ಪರಿಷ್ಕಾರ ಮಾಡಿಕೊಟ್ಟರು. ಅವುಗಳನ್ನು ಪ್ರಕಟಿಸಲು ಹಿಂದೇಟು ಹಾಕುತ್ತಿದ್ದಾಗ ಬೆನ್ನು ತಟ್ಟಿ, ಸ್ವತಃ ತಾವೇ ಕೆಲವು ಮೆಚ್ಚು ನುಡಿಗಳನ್ನು ಬರೆದು ಉತ್ತೇಜಿಸಿದರು. ಇದರಿಂದ ನನಗೆ ಸಾಹಿತ್ಯ ವಲಯದ ಇನ್ನೂ ಕೆಲವು ಮಹನೀಯರ ಪರಿಚಯ ಹಾಗೂ ಮೆಚ್ಚಿಗೆ ಲಭಿಸಿತು. ಇದರ ದೆಸೆಯಿಂದ ನನ್ನ ಎರಡು ಕವನ ಸಂಗ್ರಹಗಳು ('ಭಾವನದಿ' ಮತ್ತು 'ಚೈತನ್ಯದ ಚಿಗುರು') ಹಾಗೂ ದನಿ ಸುರುಳಿ ಮತ್ತು ('ಹೃದಯವೀಣೆ', 'ಚಿಗುರುಮಲ್ಲಿಗೆ', 'ಕಂಪು-ಇಂಪು') ಬೆಳಕನ್ನು ಕಂಡಿವೆ. ನಿಸಾರರ ಈ ಪ್ರೋತ್ಸಾಹಕ್ಕೆ ನಾನು ಕೃತಜ್ಞ ಎಂದು ಹೇಳಿದರೆ ಅದೊಂದು ಉಪಚಾರದ ಮಾತಾದೀತು.

ಈಗಲೂ, ನನ್ನ ಎಡೆಬಿಡದ ಕರ್ತವ್ಯ ನಿರ್ವಹಣೆಯ ಬಿಡುವಿಲ್ಲದ ವಹಿವಾಟುಗಳ ಮಧ್ಯೆಯೂ ನಿಸಾರರನ್ನು ನಾನು ತಿಂಗಳಿಗೆ ಕನಿಷ್ಠ ಒಂದೆರಡು ಬಾರಿ ನೋಡದೆ, ಮಾತನಾಡಿಸದೆ ಇರುವುದಿಲ್ಲ. ನನ್ನ ವೈಯಕ್ತಿಕ ಕಷ್ಟ ನಷ್ಟಗಳನ್ನು, ಆಗುಹೋಗುಗಳನ್ನು ಮುಚ್ಚುಮರೆಯಿಲ್ಲದೆ ಅವರ ಬಳಿ ತೋಡಿಕೊಳ್ಳುತ್ತೇನೆ. ಅವರಿಂದ ಸಲಹೆ ಪಡೆಯುತ್ತೇನೆ. ಹೀಗಾಗಿ ನಿಸಾರರು ನನ್ನ ಬದುಕಿನ ಒಂದು ಭಾಗವಾಗಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಇದೇ ರೀತಿ ನಮ್ಮ ಮನೆಯವರಿಗೂ ಅವರು ಆತ್ಮೀಯರು.

ನನಗೆ ನಿಸಾರ್ ಅವರ ಭಾವಗೀತೆಗಳ ದನಿ ಸುರುಳಿಗಳನ್ನು ಕೇಳುವುದೆಂದರೆ ಬಲು ಇಷ್ಟ. ಅವರ ಕವನದ ಕೆಲವು ಸಾಲುಗಳಂತೂ ಮನಸ್ಸಿನಿಂದ ಮರೆಯಲಾಗದಂಥವು. ಅವುಗಳ ಇಂಪು ಮತ್ತು ಶಬ್ದಗಳ ಜೋಡಣೆ ನನ್ನ ಹೃದಯವನ್ನು ಸೂರೆಗೊಂಡಿವೆ. ಈ ಗೀತೆಗಳ ಜೊತೆಗೆ, ಅವರೇ ಕವಿಗೋಷ್ಠಿಗಳಲ್ಲಿ ನಾಟಕೀಯವಾಗಿ ಓದುವ ನವ್ಯ ಕವಿತೆಗಳ

ಸೊಗಸು ಮತ್ತು ಅರ್ಥವಂತಿಕೆಯನ್ನು ಕೇಳಿಯೇ ಅನುಭವಿಸಬೇಕು. ಅವರು ವೇದಿಕೆಯ ಮೇಲಿನಿಂದ ಆಡುವ ಮಾತುಗಳೂ ಅಷ್ಟೆ: ಒಳ್ಳೆಯ ಮೂಡ್ ಇದ್ದಾಗ ಆ ಮಾತುಗಳ ವರಸೆಯನ್ನು ನೋಡಬೇಕು. ಅವು ಸಭಿಕರಲ್ಲಿ ಹೊಮ್ಮಿಸುವ ಪ್ರತಿಕ್ರಿಯೆಯನ್ನು ಗಮನಿಸಬೇಕು. ಎಷ್ಟೊಂದು ವಿಚಾರಗಳು! ಎಷ್ಟೊಂದು ಹೋಲಿಕೆ ದೃಷ್ಟಾಂತಗಳು! ಎಷ್ಟೊಂದು ಕನ್ನಡ ಮತ್ತು ಇಂಗ್ಲಿಷ್ ಕವಿತೆಗಳ ಸಾಲುಗಳ ಸಮಯೋಚಿತ ಉದ್ಧರಣೆಗಳು! ಜೊತೆಗೇ ಅವರ ಹಾಸ್ಯಪ್ರವೃತ್ತಿ ಮತ್ತು ಕೆಲವು ಅಪರೂಪದ ಪದಗಳ ಬಳಕೆ ನಿಜಕ್ಕೂ ಮಿಗಿಲಾದ ಮುದ ನೀಡುತ್ತವೆ.

ಮೃದು ಸ್ವಭಾವದವರಾದರೂ ತಮಗೆ ಸರಿ ತೋಚದ ವಿಚಾರಗಳಿಗೆ, ಯಾರೆಷ್ಟೇ ಒತ್ತಾಯಿಸಿದರೂ ಜಗ್ಗದ ಹಠದ ಸ್ವಭಾವದವರು. ಕೆಲವೊಮ್ಮೆ ಬಹಳ ಬೇಗ ಸಿಡುಕು ಸೆಡವುಗಳನ್ನು ವ್ಯಕ್ತಪಡಿಸುತ್ತಾರೆ. ಮುಲಾಜಿಲ್ಲದೆ ತಮಗೆ ಅಹಿತವಾದದ್ದನ್ನು ಟೀಕಿಸುತ್ತಾರೆ. ಅವರ ಅನೇಕ ಕಾರ್ಯಕ್ರಮಗಳಿಗೆ ಹೋಗಿದ್ದೇನೆ. ಅಪ್ಪಿತಪ್ಪಿಯೂ ವಿಷಯಕ್ಕೆ ಸಂಬಂಧ ಪಡದ ವ್ಯಕ್ತಿಗಳನ್ನು ಅವರು ಆಹ್ವಾನಿಸುವುದಿಲ್ಲ. ಅಂದರೆ ಕೇವಲ ಪ್ರಚಾರಕ್ಕಾಗಿಯೋ, ಯಾವುದಾದರೂ ಪ್ರಯೋಜನಕ್ಕಾಗಿಯೋ ಹಲವರು ಕರೆಯುವ ರಾಜಕಾರಣಿಗಳನ್ನೊ ಧರ್ಮಾಧಿಕಾರಿಗಳನ್ನೊ, ಸಮಾಜದಲ್ಲಿನ ಉಳ್ಳವರನ್ನೊ ನಿಸಾರರು ಅತಿಥಿಗಳಾಗಿ ಕರೆದ ಉದಾಹರಣೆಗಳನ್ನು ನಾನು ಕಂಡಿಲ್ಲ. ಅದು ಅವರ ದೊಡ್ಡ ಗುಣ. ಹಾಗೆಯೇ, ಸರಕಾರದ ಯಾವುದಾದರೊಂದು ಹುದ್ದೆಯ ನೇಮಕಾತಿಗೊ, ಪ್ರಶಸ್ತಿಗೊ ಅವರು ರಾಜಕಾರಣಿಗಳ, ಇಲ್ಲವೇ ಅಧಿಕಾರಿಗಳ ಮನೆಗಳಿಗೆ ಎಡತಾಕುವ ಜಾಯಮಾನದವರಲ್ಲ. ಅವರನ್ನು ಹತ್ತಿರದಿಂದ ಬಲ್ಲವರಿಗೆಲ್ಲ ಅವರ ಗುಣ ಗೊತ್ತಿರುವಂಥದ್ದೆ.

ಸಮೂಹ ಮಾಧ್ಯಮದವರು 'ಮೀಡಿಯೋಕರ್'ಗಳಿಗೆ ಇನ್ನಿಲ್ಲದ ಪ್ರಾಶಸ್ತ್ಯವನ್ನು ಕೊಡುವುದನ್ನು, ಗಟ್ಟಿ ಕುಳಗಳನ್ನು ಗುರುತಿಸದೆ ಇರುವುದನ್ನು ಕಂಡು ಅವರು ಹಲವು ಸಲ ಸಿಡಿಮಿಡಿಗೊಂಡಿರುವುದನ್ನು ನಾನು ಗಮನಿಸಿದ್ದೇನೆ. ಕೆಲವೊಮ್ಮೆ ಪ್ರಶಸ್ತಿಗಳನ್ನೊ ಬಹುಮಾನಗಳನ್ನೊ ನೇಮಕಾತಿಗಳನ್ನೊ ಸರಕಾರವೊ, ಖಾಸಗಿ ಸಂಸ್ಥೆಗಳೊ ಅನರ್ಹರಿಗೊ, ಅಲ್ಪ ಯೋಗ್ಯರಿಗೊ ನೀಡಿದ್ದನ್ನು ಅವರು ತಿಳಿದಾಗ, ಕೇವಲ ಜಾತಿ ಧರ್ಮಗಳ ಆಧಾರ ಇಟ್ಟುಕೊಂಡು ವ್ಯಕ್ತಿಗಳಿಗೆ ಮೇಲಂತಸ್ತುಗಳ ಜಾಗಗಳನ್ನು ದಾನ ಮಾಡುವುದೋ ಅವರ ದೃಷ್ಟಿಗೆ ಬಿದ್ದಾಗ ತುಂಬಾ ನೊಂದುಕೊಂಡಿದ್ದಾರೆ. ಅದರಲ್ಲೂ ಪ್ರತಿಷ್ಠಿತರೊ, ಧೀಮಂತರೊ, ಸಮಾಜಕ್ಕೆ ಮಾದರಿಯಾಗಬೇಕಾದಂಥವರೊ ವಶೀಲಿಬಾಜಿಗೆ ತೊಡಗಿದಾಗ, ತಾವು ನೇರವಾಗಿ ಅಲ್ಲದಿದ್ದರೂ ಚೇಲಾಗಳ ಮೂಲಕ ಎಸಗಿದಾಗ ನಿಸಾರರು ತುಂಬಾ ಜುಗುಪ್ಸೆ ವ್ಯಕ್ತಪಡಿಸಿದ್ದೂ ಇದೆ.

ನಿಸಾರರು ತಪ್ಪದೇ ಸಂಜೆಯ ಹೊತ್ತು ಗಾಳಿ ಸಂಚಾರಕ್ಕೆ ಹೋಗುವ ರೂಢಿಯನ್ನು ಬೆಳೆಸಿಕೊಂಡರು. ಇದು ವರ್ಷಾನುಗಟ್ಟಲೆಯ ಹವ್ಯಾಸ. ಈಚಿಗೆ ಕೆಲವು ತಿಂಗಳುಗಳಿಂದ ತಪ್ಪಿದೆ. ಅವರಿಗೆ ಪ್ರಿಯವಾದ ಗಾಂಧಿ ಬಜಾರ್‌ನ ಬಳಿಯ ಕೆಲವು ಬೀದಿಗಳಲ್ಲಿ ಅವರೊಬ್ಬರೇ ರಾತ್ರಿಯ ವೇಳೆ ವಾಕ್ ಹೋಗುತ್ತಿದ್ದುದನ್ನು ನಾನು ಅನೇಕ ಸಲ

ಗಮನಿಸಿದ್ದೇನೆ. ಆಗೆಲ್ಲ ಅಪರಿಚಿತರೂ ಗುರುತಿನವರೂ ಸಿಕ್ಕಾಗ ಅವರೊಡನೆ ಗೆಲವಾಗಿ ಮಾತನಾಡುತ್ತಾರೆ, ಕ್ಷೇಮ ಸಮಾಚಾರ ವಿಚಾರಿಸುತ್ತಾರೆ. ಈ ವಾಕಿಂಗ್‌ನ ವೇಳೆ ಕೇವಲ ದೈಹಿಕ ವ್ಯಾಯಾಮಕ್ಕೇ ಮೀಸಲಾದದ್ದಲ್ಲ. ಅವರ ಗದ್ಯ-ಪದ್ಯಗಳ ಆಲೋಚನೆಗಳಿಗೂ ಅದು ಸೂಕ್ತವಾದ ಮುಹೂರ್ತ.

ನಾನು ನೋಡಿದಂತೆ ನಿಸಾರ್ ಅಹಮದ್ ಅವರ ಸ್ನೇಹಿತರ, ಅಭಿಮಾನಿಗಳ, ಹಿತೈಷಿಗಳ ಬಳಗ ಬಹಳ ದೊಡ್ಡ ವ್ಯಾಪ್ತಿಯದು: ಕವಿ-ಸಾಹಿತಿಗಳು, ಕಲಾಕಾರರು, ಅಧ್ಯಾಪಕರು, ನಟರು, ಪತ್ರಕರ್ತರು, ವಕೀಲರು, ವೈದ್ಯರು, ಇಂಜಿನಿಯರ್‌ಗಳು, ಅಧಿಕಾರಿಗಳು, ವ್ಯಾಪಾರಿಗಳು, ವಿದ್ಯಾರ್ಥಿಗಳು, ಉದ್ಯಮಿಗಳು, ಪ್ರಕಾಶಕರು, ರಾಜಕೀಯಸ್ಥರು, ಇತ್ಯಾದಿ ಇತ್ಯಾದಿ—ಇಂಥವರು ಇದ್ದಾರೆ, ಇಂಥವರು ಇಲ್ಲ ಎನ್ನುವ ಹಾಗಿಲ್ಲ! ಅವರಿಗೆ ತಕ್ಕನಾದ ಆಸಕ್ತಿಯ ಮಾತುಕತೆ, ಸ್ಥಾನಮಾನ, ಸಮಯ ವಿನಿಯೋಗ ಮಾಮೂಲು.

ನಿಸಾರರದು ನೆರವು ನೀಡುವ ಸ್ವಭಾವ. ಯಾರಿಗಾದರೂ ಆತ್ಮೀಯರಿಗೆ ಸನ್ಮಾನ ಸಮಾರಂಭ ಏರ್ಪಡಬೇಕೆನ್ನಿ. ಅವರೇ ಹಲವು ಸ್ನೇಹಿತರನ್ನು ಕೂಡಿಸಿ, ಸೂಕ್ತ ಹಿತೈಷಿಗಳನ್ನು ಕಲೆಹಾಕಿ ಕಾರ್ಯಕ್ರಮಕ್ಕೆ ಪರೋಕ್ಷವಾಗಿ ನೆರವಾಗುತ್ತಾರೆ. ಇದೇ ರೀತಿ ಕವಿಗೋಷ್ಠಿಗಳಲ್ಲಿ ಎಂತೆಂತಹ ಅರ್ಹರು ಸೇರಬೇಕು ಎನ್ನುವುದರಲ್ಲಿ ಅವರು ಪರಿಣತರು. ಅವರದೇ ಅಂತಿಮ ತೀರ್ಮಾನ. ಕೆಲವರು ಬೇಸರ ಮಾಡಿಕೊಂಡರೂ ಅವರದೇ ನಿಷ್ಠುರ ನಿರ್ಧಾರವಿರುತ್ತದೆ. ಮೊದಲು ಗುಣಕ್ಕೆ ಮಣೆ; ಆಮೇಲೆ ದಾಕ್ಷಿಣ್ಯ, ಸ್ನೇಹಗಳು. ಒಮ್ಮೆ ಕನ್ನಡದ ಮೇರು ನಟರಾದ ಪದ್ಮಭೂಷಣ ಡಾ. ರಾಜ್‌ಕುಮಾರ್ ಅವರು ಕಾಡಿನಿಂದ ಬಂದ ಮೇಲೆ ಪ್ರೊ. ನಿಸಾರ್ ಅವರ ಮನೆಗೆ ಭೇಟಿ ಮಾಡುವ ದಿನ. ನನಗೂ 'ಸಂಜೆ ಬನ್ನಿ ಗೌಡರೇ, ಅಣ್ಣಾವ್ರು ಬರುತ್ತಿದ್ದಾರೆ. ಯಾರಿಗೂ ಹೇಳಿಲ್ಲ' ಎಂದು ಅವರ ಮನಸ್ಸಿಗೆ ಬಹಳ ಹಿತವಾದವರನ್ನು ಹತ್ತಿರಕ್ಕೆ ಕರೆಸಿಕೊಳ್ಳುವ ಸ್ವಭಾವ ಇದು: ಅವರ ಸಜ್ಜನಿಕೆ, ಸರಳತನಕ್ಕೆ ಸಾಕ್ಷಿಯಾಗಿದೆ. ಅವರ ಮತ್ತೊಂದು ವಿಶೇಷವೇನೆಂದರೆ, ಸ್ನೇಹಿತರಾಗಲಿ, ಹಿತೈಷಿಗಳಾಗಲಿ ಕಷ್ಟದಲ್ಲಿ ನೋವನ್ನು ಅನುಭವಿಸುತ್ತಿದ್ದರೆ, ಅದನ್ನು ತನ್ನದೇ ನೋವೆಂದು ಭಾವಿಸಿ ಕೈಯ್ಯಲ್ಲಾದರೆ ನೆರವಾಗುವುದು ಇಲ್ಲವೇ ಮನಸ್ಸಿಗೆ ಸಾಂತ್ವನ ಸಮಾಧಾನ ಹೇಳುವುದು. 'ಬಿಡಿ, ದೇವರಿದ್ದಾನೆ. ಎಲ್ಲರಿಗೂ ಕಷ್ಟ ಸ್ವಾಭಾವಿಕವಾಗಿ ಬಂದೇ ಬರುತ್ತದೆ: ಧೈರ್ಯವಾಗಿರಿ. ಎಲ್ಲವೂ ದೇವರ ದಯದಿಂದ ಸರಿಯಾಗಿ ನಡೆಯುತ್ತದೆ' ಎಂದು ಸ್ಥೈರ್ಯವನ್ನು ತುಂಬಿ ಕಷ್ಟವನ್ನು ಸುಲಭವಾಗಿ ಪರಿಹರಿಸುವ ಮಾರ್ಗವನ್ನು ಸೂಚಿಸುತ್ತಾರೆ. ಈ ಕಾರಣಕ್ಕೆ ಅವರು ಎಲ್ಲರಿಗೂ ಹಿತವಾಗುತ್ತಾ ಹತ್ತಿರವಾಗುತ್ತಾರೆ.

ಪರಿಚಿತರನ್ನು ಮತ್ತೊಬ್ಬ ಪರಿಚಿತರಿಗೆ ಪರಿಚಯಿಸುವಾಗ ಸಾಮಾನ್ಯವಾಗಿ 'ನಮಸ್ಕಾರ' ಅಥವಾ 'ಹಲೋ' ಎಂದು ಹೇಳಿ ಸುಮ್ಮನಾಗುತ್ತೇವೆ. ಆದರೆ ಇವರು ವಿವರವಾಗಿ 'ಮನೆಯಲ್ಲೆಲ್ಲಾ ಚೆನ್ನಾಗಿದ್ದಾರ? ಮಕ್ಕಳೆಲ್ಲ ಏನು ಓದುತ್ತಿದ್ದಾರೆ?' ಎಂದು ಪರಿಪರಿಯಾಗಿ ವಿಚಾರಿಸುವುದರಿಂದ ನಿಸಾರ್ ಅವರ ಬಗ್ಗೆ ಹೊಸಬರಿಗೆ ಸದ್ಭಾವನೆ ಹೆಚ್ಚುತ್ತದೆ. ಯಾರಾದರೂ ತಮ್ಮ ಸಾಧನೆಯಲ್ಲಿ ಪ್ರಾಮಾಣಿಕವಾಗಿ ಮುಂದುವರಿದಿದ್ದರೆ

ಅವರನ್ನು ಪ್ರಶಂಸಿಸುವುದರಲ್ಲಿ ನಿಸಾರರು ಎತ್ತಿದ ಕೈ. ಪ್ರೊ. ನಿಸಾರ್ ಅವರು, ತಮ್ಮಲ್ಲಿ ಏನೇ ನೋವುಗಳಿದ್ದರೂ ಹೇಳಿಕೊಳ್ಳುವ ಸ್ವಭಾವದವರಲ್ಲ. ತಮ್ಮಲ್ಲೇ ಪರಿತಪಿಸುತ್ತಾರೆ ಮಾತ್ರವಲ್ಲ, ಕಾಲ ಎಲ್ಲವನ್ನೂ ಸರಿಪಡಿಸುತ್ತದೆ ಎಂದು ಸಮಾಧಾನವನ್ನು ಹೇಳಿಕೊಳ್ಳುವ ಮನೋಭಾವದವರು.

ಕನ್ನಡಿಗರ ಬಗ್ಗೆ, ತಾಯ್ನಾಡಿನ ಮೇಲೆ ಅಪಾರ ಅಭಿಮಾನ, ಗೌರವವನ್ನು ಇಟ್ಟುಕೊಂಡಿರುವ ಅಪರೂಪದ ಕವಿ ಪ್ರೊ. ನಿಸಾರ್. ಹಾಗೆಯೇ ನಮ್ಮ ಸಂಸ್ಕೃತಿ-ಕಲೆಗಳ ಬಗ್ಗೆಯೂ ಅಗಾಧವಾದ ಅಕ್ಕರಾಸ್ಥೆ. ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಮಾತ್ರ ಕನ್ನಡತನವನ್ನು ಮೆರೆಯುವ ಜನರ ಬಗ್ಗೆ ತುಂಬಾ ಬೇಸರವನ್ನು, ನೋವನ್ನು ಆಗಾಗ್ಗೆ ವ್ಯಕ್ತಪಡಿಸುತ್ತಿರುತ್ತಾರೆ. ಸಮಯ ದೊರಕಿದಾಗೆಲ್ಲ ನಾಡು-ನುಡಿಗಳ ಹಿರಿಮೆ ಗರಿಮೆಗಳ ಪ್ರಸ್ತಾಪ ಮಾಡುತ್ತಾರೆ. ಯುವಕರಿಗೆ ಕನ್ನಡ-ಕರ್ನಾಟಕಗಳ ಬಗೆಗೆ ಅಕ್ಕರೆಯನ್ನು ಹೆಚ್ಚಿಸಿಕೊಳ್ಳಲು ಸಲಹೆ ಮಾಡುತ್ತಾರೆ. ನಮ್ಮ ನಾಡಲ್ಲಿ ನೆಲಸಿರುವ ಬೇರೆ ರಾಜ್ಯಗಳ ಜನ ಕನ್ನಡದಲ್ಲಿ ವ್ಯವಹರಿಸುವುದಷ್ಟೇ ಅಲ್ಲ, ಇಲ್ಲಿನ ಸಂಸ್ಕೃತಿ ಇತಿಹಾಸ ಹಾಗೂ ಸಾಮಾಜಿಕ ಶಿಷ್ಟಾಚಾರಗಳನ್ನೂ ಮರ್ಯಾದೆಯಿಂದ ಕಾಣಬೇಕಾದದ್ದು ಆದ್ಯವಾದ ಅಗತ್ಯ ಎಂದು ಘೋಷಿಸುತ್ತಾರೆ.

ನಿಸಾರರ ಮತ್ತೊಂದು ದೊಡ್ಡ ಗುಣವೆಂದರೆ, ತಮ್ಮ ಪುಸ್ತಕ ಇಲ್ಲವೆ ದನಿ ಸುರುಳಿಯ ಸಮಾರಂಭದಲ್ಲೋ, ಕವಿಮೇಳ ಇಲ್ಲವೆ ಸನ್ಮಾನದ ಕಾರ್ಯಕ್ರಮದಲ್ಲೋ ಯಾರಾದರೂ ಪ್ರಾರ್ಥನಾಗೀತೆಗಾಗಿ ಅವರ ಲೋಕ ಪ್ರಸಿದ್ಧ ಗೀತೆ `ಜೋಗದ ಸಿರಿ ಬೆಳಕಿನಲ್ಲಿ...' ಆಯ್ಕೆ ಮಾಡಿಕೊಂಡರೆ ತಕ್ಷಣ ತಡೆದು, ರಾಷ್ಟ್ರಕವಿ ಕುವೆಂಪು ಅವರ `ಓ! ನನ್ನ ಚೇತನ'ವನ್ನೋ, ಬಿ.ಎಂ.ಶ್ರೀ. ಅವರ `ಕರುಣಾಳು ಬಾ ಬೆಳಕೆ' ಪದ್ಯವನ್ನೋ ಹಾಡಿ ಎಂದು ಒತ್ತಾಯಿಸುತ್ತಾರೆ. ಇದನ್ನು ಒಂದಲ್ಲ, ಹಲವು ಬಾರಿ ನಾನು ಗಮನಿಸಿದ್ದೇನೆ.

ನಿಸಾರರು ಅಮೇರಿಕ, ಕೊಲ್ಲಿ ರಾಷ್ಟ್ರಗಳಿಗೆ ಹೋಗಿದ್ದಾಗ ಅಲ್ಲಿನ ಸ್ನೇಹಿತರು, ಹಿತೈಷಿಗಳು ಕನ್ನಡ ನಾಡಿನ ಬಗ್ಗೆ ತೋರಿದ ಅಕ್ಕರೆಯನ್ನು ಯಾವಾಗಲೂ ಮೆಲುಕು ಹಾಕುತ್ತಿರುತ್ತಾರೆ. ಅಲ್ಲಿನ ಜನರು ಭಾವಗೀತೆಗಳನ್ನು ಕೇಳಲು, ಕಲಿಯಲು ಉತ್ಸುಕರಾಗಿ ಇರುವುದನ್ನು ನೋಡಿ ನಮ್ಮ ನಾಡಿನ ಅನೇಕ ಕನ್ನಡಿಗರಿಗೆ ಏಕೆ ಇಂತಹ ಒಂದು ಉತ್ಸಾಹ, ಶ್ರದ್ಧೆ ಇಲ್ಲ? ಎಂದು ಮನ ನೊಂದುಕೊಳ್ಳುತ್ತಾರೆ. ಅಮೇರಿಕದಂತಹ ಹೊರ ದೇಶದ ಹಿತೈಷಿಗಳು ಹಾಗೂ ಕನ್ನಡದ ಸೇವಾಕರ್ತರು ನಮ್ಮ ನಾಡಿಗೆ ಬಂದಾಗ ಅವರಿಗೆ ಸತ್ಕಾರ ಸಮಾರಂಭಗಳನ್ನು ಏರ್ಪಡಿಸಿ ಗೌರವ ತೋರಿಸಲು ಮರೆಯುವುದಿಲ್ಲ.

ನಾನು ಒಮ್ಮೆ ಹನುಮಂತನಗರದ ಪೊಲೀಸ್ ಠಾಣೆಯಲ್ಲಿ ಮುಖ್ಯಸ್ಥ ಆಗಿದ್ದಾಗ ಅವರು ಅಲ್ಲಿಗೆ ಭೇಟಿ ನೀಡಿದ್ದರು. ಮುಗುಳ್ನಗುತ್ತ. `ಪೊಲೀಸ್ ಠಾಣೆಗೆ ಬರುವುದಕ್ಕೆ ಭಯ' ಅಂದರು. ಭೇಟಿ ಮಾಡಿದ ಅನಂತರ ಅಲ್ಲಿನ ಸ್ಥಿತಿಗತಿಯನ್ನು, ಪರಿಸರವನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿದರು. `ನಾವು ದೂರದಿಂದ ಊಹೆ ಮಾಡುವುದರ ಬದಲು ಪ್ರತ್ಯಕ್ಷವಾಗಿ ನೋಡಿದರೆ ನಿಮ್ಮ ಕಷ್ಟ ಅರಿವಾಗುತ್ತದೆ. ಎಷ್ಟೊಂದು ಜನರು ತಮ್ಮ ಕಷ್ಟ

ಕಾರ್ಪಣ್ಯಗಳನ್ನು ಪರಿಹರಿಸಲೆಂದು ಪೊಲೀಸ್ ಠಾಣೆಗೆ ಬರುತ್ತಾರೆ. ಅವರ ಸಮಸ್ಯೆಗಳನ್ನು, ನೋವುಗಳನ್ನು ಪರಿಹರಿಸುವಲ್ಲಿ ನೀವು ಭಾಗಿಯಾಗಿರುತ್ತೀರಿ. ಹೊರಗಡೆ ಪೊಲೀಸರ ಬಗ್ಗೆ ಜನ ತಳೆದಿರುವ ಅಭಿಪ್ರಾಯ ಮರ್ಯಾದೆ ಬರಿಸುವಂಥದ್ದಲ್ಲ. ಒಳಹೊಕ್ಕು ನೋಡಿದಾಗ ಮಾತ್ರ ಅವರ ಸಂಕಷ್ಟ, ಪರಿಶ್ರಮ ಅರ್ಥವಾಗುತ್ತದೆ. ನೀವೂ ಕೂಡ ಮನುಷ್ಯರೇ. ನಿಮ್ಮಲ್ಲೂ ಬೇರೆಯವರಂತೆ ಒಳ ನೋವು, ಕಷ್ಟನಷ್ಟಗಳು ಇವೆ. ಅವುಗಳಿಗೆ ಮಿಡಿಯುವ ಹೃದಯವಿದೆ' ಎಂದರು. ಹಿತೈಷಿಗಳ ಬಗೆಗೆ ಒಂದೆರಡು ಸಮಾಧಾನದ ಮಾತುಗಳನ್ನು ಆಡುವುದರಿಂದ ನಿಸಾರರು ನಿಜಕ್ಕೂ ವಿಶಾಲವಾದ ಹೃದಯ ಮತ್ತು ದೊಡ್ಡತನವನ್ನು ಹೊಂದಿದ್ದಾರೆ ಅನ್ನಿಸುತ್ತದೆ.

ನಿಸಾರ್ ಅವರನ್ನು ಆಗಾಗ್ಗೆ ಭೇಟಿಯಾಗುವುದೇ ಒಂದು ಅದೃಷ್ಟವೆಂದು ನಾನು ಭಾವಿಸಿದ್ದೇನೆ. ಭೇಟಿಯಾದ ತಕ್ಷಣ, 'ನಿಮ್ಮ ಸ್ನೇಹಿತರು ಹೇಗಿದ್ದಾರೆ? ಎಚ್. ಲಿಂಗರಾಜು, ಕೆ. ಎಚ್. ಖಾನ್, ಹನುಮಂತೇಗೌಡರು ಸಿಕ್ಕಿದ್ದರೆ?'—ಹೀಗೆ ಸ್ನೇಹಜೀವಿಯಾಗಿ ಯೋಗಕ್ಷೇಮ ವಿಚಾರಿಸುವುದು ಅವರ ಸ್ವಭಾವ.

ನಿಸಾರ್ ಅವರ ಲೇಖನಿಯಿಂದ ಪದ್ಯ, ವೈಚಾರಿಕ ಬರಹಗಳು, ವಿಮರ್ಶೆ ಮತ್ತು ಆತ್ಮಕಥನ ಮೊದಲಾದ ರಚನೆಗಳು ಹೆಚ್ಚಾಗಿ ಹೊರ ಬರಲಿ. ಕನ್ನಡ ಜನತೆಗೆ ಮಾದರಿಯಾಗಿ ಅವರು ಹೆಚ್ಚು ಕಾಲ ನಮ್ಮೊಂದಿಗೆ ಇರಲಿ ಎಂದು ನನ್ನಂತಹ ಹಿತೈಷಿಗಳ ಹಾರೈಕೆ.

ವಿದ್ಯೆ ಸಂಸ್ಕೃತಿಗಳ ಗಂಧ ಗಾಳಿ ಇರದವನನ್ನೂ ಹಣ ಸನ್ಮಾನ್ಯರ ಪಟ್ಟಿಗೆ ಏರಿಸುತ್ತದೆ. ಸೈಟು, ಬಂಗಲೆ, ಕಾರು, ವಿಸಿಆರ್, ಅಲ್ಸೆಷಿಯನ್ ಮತ್ತು ಪೊಮೆರಿಯನ್ ಸಂಖ್ಯೆಯ ಮೇಲೆ ಒಬ್ಬ ಮತ್ತೊಬ್ಬನಿಗಿಂತ ಅಧಿಕ ಪ್ರತಿಷ್ಠಿತ ನೆನ್ನಿಸುವ ಅಳತೆಗೋಲನ್ನು ಸಮಾಜದ ಮಿಕ್ಕ ವರ್ಗಗಳು ಒಪ್ಪುವಂತೆ ಹಣ ಒತ್ತಾಯ ಹೇರುತ್ತದೆ. ಹೀಗೆ ದಕ್ಕಿದ ಸಾಮಾಜಿಕ ಮೇಲ್ಮೆ ಅವನ ಅಹಂಕಾರವನ್ನು ಬಲೂನಿಸುತ್ತಾ ಹೋಗುವುದರಿಂದ ಅವನು ಸಹಜವಾಗಿಯೇ ಉದ್ಧಟ ಮತ್ತು ದರ್ಪಶೀಲನಾಗುತ್ತಾನೆ.

(ಹಣದ ಮಹಿಮೆ)

✧ ✧ ✧

ಜೀವನಾಶ್ವದ ನಿಟ್ಟೋಟಕ್ಕೆ ಅದರ ಮುಂದೆ ಮನುಷ್ಯ ಹಿಡಿದಿರುವ ಭವಿಷ್ಯದ ಬಗೆಗಿನ ಸುಮನೋಹರ ಕಲ್ಪನೆ, ಸಂಕಲ್ಪ, ನಿರೀಕ್ಷಣೆಗಳ ಹಚ್ಚನೆಯ ಹಿಡಿ ಮೇವೇ ಇಂಧನ—ಬೀಚಿಯವರ ಪುಸ್ತಕಗಳ ಮುಖ ಪುಟದ ಚಿತ್ರಗಳಲ್ಲಿರುವ ಹಾಗೆ.

(ಬದುಕಿಗೆ ಇಂಧನ)



ಕವಿವರ ನಿಸಾರ್ ಅವರ ಅನುಪಮ ಸಾಧನೆ

♦ ಬಿ. ವಿ. ಕೆದಿಲಾಯ

ಹೊಸಗನ್ನಡದ ಮಹತ್ವದ ಕವಿಗಳಲ್ಲಿ ಗಣ್ಯರಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ಈ ವರ್ಷ(೨೦೦೬)ದ ಪ್ರತಿಷ್ಠಿತ ಮಾಸ್ತಿ ಪ್ರಶಸ್ತಿ ದೊರೆತಿರುವುದು ಸಾಹಿತ್ಯ ಪ್ರೇಮಿಗಳಿಗೆಲ್ಲ ಸಂತೋಷದ ಸಂಗತಿ. ಕಳೆದ ಅರ್ಧ ಶತಮಾನದಿಂದ ಅವ್ಯಾಹತವಾಗಿ ಸತ್ವಪೂರ್ಣವೂ, ಮೌಲಿಕವೂ ಆದ ಕಾವ್ಯಕೃಷಿಯನ್ನು ಮಾಡುತ್ತ ಉತ್ತಮ ಫಸಲನ್ನು ನೀಡಿದ ಕೀರ್ತಿ ಕವಿ ನಿಸಾರ್ ಅಹಮದ್ ಅವರದು. ನಿಸಾರ್ ಅವರು ಸಹಜ ಕವಿ. ಅವರು ಯಾವುದೇ ಪಂಥ, ವಾದ, ಸಿದ್ಧಾಂತಗಳ ಕಟ್ಟಿಗೆ ಸಿಲುಕಿಕೊಳ್ಳದೆ ಬದುಕಿನ ವಿಭಿನ್ನ ಸ್ತರದ ಅನುಭವಗಳನ್ನೂ ಭಾವಗಳನ್ನೂ ಯಥಾವತ್ತಾಗಿ ಸ್ವೀಕರಿಸಿ, ಅವುಗಳನ್ನು ತಮ್ಮದೇ ಆದ ವಿಶಿಷ್ಟ ಭಾಷೆಯ ಕಾವ್ಯರೂಪದಲ್ಲಿ ಪುನಃ ಸೃಷ್ಟಿಸುವುದರಲ್ಲಿ ಸಫಲರಾಗಿದ್ದಾರೆ. ಅವರ ಕಾವ್ಯದಲ್ಲಿ ಕಂಡು ಬರುವ ವಸ್ತು ವೈವಿಧ್ಯ, ಭಾವ ವೈವಿಧ್ಯ, ವಿಚಾರ ವೈವಿಧ್ಯ, ಅನುಭವ ವೈವಿಧ್ಯ, ಛಂದೋ ವೈವಿಧ್ಯಗಳು ಓದುಗರನ್ನು ಬೆರಗುಗೊಳಿಸುವಂಥವು. ಅವರು ಬಳಸುವ ಕನ್ನಡ ಭಾಷೆಯಲ್ಲಿ ಕಂಡು ಬರುವ ವಿಶೇಷತೆ, ಸೂಕ್ಷ್ಮತೆ, ಪ್ರಯೋಗಶೀಲತೆ, ರೋಚಕತೆ ಅಸಾಧಾರಣವಾದವು. ನವ್ಯದ ಉಚ್ಛ್ರಾಯ ಕಾಲದಲ್ಲಿ ಅಡಿಗರ ದೈತ್ಯಪ್ರತಿಭೆಯ ಪ್ರಖರ ಪ್ರಭೆಯಲ್ಲಿ ಅನೇಕ ಸಮರ್ಥ ಕವಿಗಳೂ ಕೊಂಚ ನಿಸ್ತೇಜರಾಗಿ ಕಂಡಾಗಲೂ ನಿಸಾರ್ ಅವರ ಕಾವ್ಯ ದೇದೀಪ್ಯಮಾನವಾಗಿ ತನ್ನ ಬೆಳಕನ್ನು ಬೀರುತ್ತಲೇ ಇತ್ತು.

ನವೋದಯದ ಪ್ರಜ್ಞೆಯೊದಿಗೆ ನವ್ಯಪ್ರಜ್ಞೆಯನ್ನೂ ರೂಢಿಸಿಕೊಳ್ಳುವುದರಲ್ಲಿ ಯಶಸ್ವಿಯಾದ ಅವರು ತಮ್ಮ ಸಾಂಸ್ಕೃತಿಕ ಹಿನ್ನೆಲೆಯ ವಿಶಿಷ್ಟ ಅನುಭವಗಳನ್ನೂ ಸಂವೇದನೆಗಳನ್ನೂ ಉರ್ದು ಭಾಷೆಯ ಸೊಗಡನ್ನೂ ಅತ್ಯಂತ ಪರಿಣಾಮಕಾರಿಯಾಗಿ, ಅರ್ಥವತ್ತಾಗಿ ಬಳಸಿ ಕೊಂಡು ಉತ್ತಮ ಕಾವ್ಯವನ್ನು ನೀಡುವುದರಲ್ಲಿ ಅಪೂರ್ವ ಯಶಸ್ಸನ್ನು ಪಡೆದಿದ್ದಾರೆ. ಅವರ 'ನಿತ್ಯೋತ್ಸವ', 'ಎಲ್ಲ ಮರೆತಿರುವಾಗ' ಮುಂತಾದ ಅನೇಕ ಸುಂದರ, ಸುಕೋಮಲ ಭಾವಗೀತೆಗಳು ಸಹೃದಯ ಓದುಗರನ್ನಷ್ಟೇ ಅಲ್ಲ, ಸುಗಮ ಸಂಗೀತಗಾರರ ಕಂಠಗಳಿಂದಲೂ ಕ್ಯಾಸೆಟ್‌ಗಳ ಮೂಲಕ ದೇಶ ವಿದೇಶಗಳಲ್ಲಿರುವ ಲಕ್ಷಾಂತರ ಕನ್ನಡಿಗರ ಹೃದಯಗಳನ್ನು ತಲಪಿವೆ, ತಣಿಸಿವೆ. ಹಾಗೆಯೇ ಅವರ ವ್ಯಂಗ್ಯ ಜಾಯಮಾನದ ವಿಡಂಬನಾತ್ಮಕ ಧಾಟಿಯ ಕವನಗಳೂ ಸೂಕ್ಷ್ಮ, ಸಂಕೀರ್ಣ ಅನುಭವಗಳ ಸಮರ್ಥ ಅಭಿವ್ಯಕ್ತಿಗಳಾಗಿರುವ ಗಂಭೀರ, ಚಿಂತನಶೀಲ ಕವನಗಳೂ ಯಶಸ್ವೀ ರಚನೆಗಳಾಗಿ ಓದುಗರ ಮೇಲೆ ಗಾಢ ಪ್ರಭಾವವನ್ನು ಬೀರುತ್ತವೆ.

ನಿಸಾರ್ ಅವರ ಕವಿತಾ ಸಂಗ್ರಹಗಳ ಶೀರ್ಷಿಕೆಗಳೇ ಅವರ ಕಾವ್ಯದ ವ್ಯಾಪಕತೆಯನ್ನು, ವಸ್ತು ವೈವಿಧ್ಯವನ್ನು ಸೂಚಿಸುತ್ತವೆ. ಕಾವ್ಯದಲ್ಲಿ ವೈಯಕ್ತಿಕ ಅನುಭವ ವನ್ನು ಸಾರ್ವತ್ರಿಕಗೊಳಿಸುವ ಸಾಮರ್ಥ್ಯವನ್ನು ಅವರ ಕವನಗಳಲ್ಲಿ ನೋಡಬಹುದು. ಉದಾಹರಣೆಗೆ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂಬ ಅವರ ಪ್ರಸಿದ್ಧ ಕವನವನ್ನೇ ಗಮನಿಸಬಹುದು. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವ ಕವಿಯ ವಿಶಿಷ್ಟ ಅನುಭವ ಈ ಕವನದ ಮೂಲ ದ್ರವ್ಯವಾದರೂ ಜಾತಿ ವ್ಯವಸ್ಥೆಯಿಂದ ವಿಭಜಿತರಾಗಿರುವ ನಮ್ಮ ದೇಶದ ಯಾವುದೇ ವ್ಯಕ್ತಿಗೆ ಈ ಅನುಭವ ಅನ್ವಯವಾಗುವುದರಿಂದ ಕವನಕ್ಕೆ ಒಂದು ವಿಶೇಷವಾದ ಸಾರ್ವತ್ರಿಕತೆ ಹಾಗೂ ಧ್ವನಿ ಶ್ರೀಮಂತಿಕೆ ಬಂದಿದೆ. ಒಂದು ಜಾತಿಗೆ ಸೇರಿದ ಜನರ ಕೂಟ ದಲ್ಲಿ ಬೇರೊಂದು ಜಾತಿಗೆ ಸೇರಿದ ವ್ಯಕ್ತಿ ಭಾಗವಹಿಸಬೇಕಾಗಿ ಬಂದಾಗ, ಆ ಸನ್ನಿವೇಶದಲ್ಲಿ ಆತನ ಮನಸ್ಸಿನಲ್ಲಿ ಉಂಟಾಗುವ ಪರಕೀಯ ಪ್ರಜ್ಞೆಯ ಭಾವನೆಗಳು ಇಲ್ಲಿ ತುಂಬ ಸೂಕ್ಷ್ಮ ವಾಗಿ, ಪರಿಣಾಮಕಾರಿಯಾಗಿ, ಸಂವೇದನಾತ್ಮಕವಾಗಿ ಪಡಿಮೂಡಿವೆ. ಇದು ಒಂದು ಉದಾ ಹರಣೆಯಷ್ಟೆ. ನಿಸಾರ್ ಅವರ ಕಾವ್ಯದಲ್ಲಿ ಈ ಗುಣ ಸಮೃದ್ಧವಾಗಿದೆ. ಬುದ್ಧಿ, ಭಾವಗಳ; ವಾಸ್ತವ, ಕಲ್ಪನೆಗಳ ವಿದ್ಯುದಾಲಿಂಗನವನ್ನು ಕವಿ ಇಲ್ಲಿ ಯಶಸ್ವಿಯಾಗಿ ಸಾಧಿಸಿದ್ದಾರೆ.

ವ್ಯಂಗ್ಯ ವಿಡಂಬನೆಗಳ ಸಮರ್ಥ ಬಳಕೆಯಿಂದ ಸಾಮಾಜಿಕ ಸಮಸ್ಯೆಗಳ, ಪ್ರಸ್ತುತತೆಯ ವಿಷಯಗಳ ಬಗೆಗೆ ಉಜ್ವಲ ಕವನಗಳನ್ನು ಸೃಷ್ಟಿಸುವುದರಲ್ಲೂ ನಿಸಾರ್ ಅವರು ಬಹಳ ಯಶಸ್ವಿಯಾಗಿದ್ದಾರೆ. ಅವರ 'ಕುರಿಗಳು, ಸಾರ್, ಕುರಿಗಳು', 'ಖಾಲಿ ಸೈಟುಗಳು', 'ಫುಟ್‌ಪಾತುಗಳು', 'ಸ್ವಜನೋದ್ಧಾರಕರು' ಮುಂತಾದ ಕವನಗಳನ್ನು ನಿದರ್ಶನಾರ್ಥವಾಗಿ ಉದಾಹರಿಸಬಹುದು. 'ಖಾಲಿ ಸೈಟುಗಳು' ಕವನದ ಈ ಸಾಲುಗಳನ್ನು ನೋಡಿ:

> 'ಮಾಟಾದ ಸೌಧಗಳ ನೀಟು ದಂತಾವಳಿಯ ನಡುವೆ
> ಕಣ್ಣು ಸಿರಿಯುತ್ತವೆ ಅಲ್ಲೊಂದು ಇಲ್ಲೊಂದು ಹಲ್ಲಿರದ ಸಂದು.
> ಪಾರ್ಥೇನಿಯಂನ ದಟ್ಟ ತೋಟಗಳು,

ಬಾಡಿಗೆ ನಿವಾಸಿಗಳ ಕಣ್ಣಿನ ಕಾಲಕೂಟಗಳು
ಸೆಟ್ಟರ, ಸೇಟುಗಳ, ನರಾಕೃತಿವೆತ್ತ ನೋಟುಗಳ
ಸುಲಭ ಕಮಾಯಿಯ ಬತ್ತದೂಟೆಗಳು
ದಿನೇ ದಿನೇ ದಿವಕ್ಕೇರುವ ರೇಟುಗಳು—ಖಾಲಿ ಸೈಟುಗಳು!'

ಇಲ್ಲಿ ಕವಿ ಸಾಧಿಸಿರುವ ವಾಗರ್ಥ ಪ್ರತಿಪತ್ತಿಯ ಯಶಸ್ಸು ಸ್ವಯಂವೇದ್ಯ; ಶ್ಲಾಘನೀಯ.

ನಿಸಾರರ ಕಾವ್ಯಪ್ರಜ್ಞೆ ಆಳವೆಷ್ಟೋ, ಅಷ್ಟೇ ವಿಶಾಲವೂ ಆಗಿದೆ. ಮಹತ್ತು, ಬೃಹತ್ತುಗಳನ್ನು ಗಮನಿಸುವಷ್ಟೇ ಸಂವೇದನಶೀಲತೆಯಿಂದ ಅವರು ಯಃಕಶ್ಚಿತ್ ವಿದ್ಯಮಾನ ಗಳಿಗೂ ನವಿಲುಗರಿಯಂತೆ ಪ್ರತಿಸ್ಪಂದಿಸುವ ಸಾಮರ್ಥ್ಯ ಮತ್ತು ಹೃದಯವಂತಿಕೆಯನ್ನು ತೋರುತ್ತಾರೆ. ಬಸವಣ್ಣ, ಗಾಂಧಿ, ಪರಮಹಂಸ, ಏಸು, ಅರಬಿಂದೊ, ಮಾಸ್ತಿಯವರಂತಹ ಪ್ರಸಿದ್ಧರ ಬಗ್ಗೆ ಕವನಿಸುವಂತೆ, ಶ್ರೀರಂಗಪಟ್ಟಣದ ಭಗ್ನಾವಶೇಷದ ಸಮಾಧಿಗಳಲ್ಲಿ ಮಲಗಿರುವ 'ಪರದೇಶದಲ್ಲಿ ಜನಿಸಿ, ಪರಾಧೀನರಾಗಿ, ಪರದೇಶಿಗಳಾಗಿ ಸತ್ತ ಅಜ್ಞಾತ ಅನಾಮಿಕ ಆಂಗ್ಲರ' ಕುರಿತೂ ಗಾಢ ವಿಷಾದದಿಂದ ಬರೆಯುತ್ತಾರೆ. ಅವರೇ ಹೇಳುವಂತೆ 'ಗೋಚರ, ಶ್ರಾವ್ಯ ಮತ್ತು ಸ್ಪರ್ಶ ಜಗತ್ತಿನ ಸಕಲ ದ್ರವ್ಯಗಳೂ ವಹಿವಾಟುಗಳೂ ತಾನು ಉಸಿರಾಡುತ್ತಿರುವ ನೆಲದಿಂದ ಅಲಾಯಿದಗೊಳಿಸಲಾಗದ, ಕಡೆಗಣಿಸಲಾಗದ ಅಪೂರ್ವ ಅನುಭೂತಿಯ ಬಳುವಳಿಗಳೆಂದೂ ಸಜೀವ ಸಂತೋಷಗಳೆಂದೂ ಆಟಿಕೆಗಳ ನಡುವಿನ ಹಸುಳೆಯಂತೆ ಅವುಗಳಲ್ಲಿ ಮಗ್ನನಾಗಿ' ಅವುಗಳನ್ನು ಕಾವ್ಯ ವಿನ್ಯಾಸದಲ್ಲಿ ಸಾಕ್ಷಾತ್ಕರಿಸುವುದು ಅವರ ಸಾಧನೆಯ ವೈಶಿಷ್ಟ್ಯ.

ಎಲ್ಲ ಸಮರ್ಥ ಕವಿಗಳಂತೆ, ನಿಸಾರ್ ಸಹ ಬದುಕಿನ ಅತ್ಯಂತ ಸೂಕ್ಷ್ಮ ನೋಟವನ್ನು, ದನಿಗಳನ್ನು, ವಾಸನೆಗಳನ್ನು; ಕೋಮಲ, ಸಂಕೀರ್ಣ, ನಿಗೂಢ ಅನುಭವ ಗಳನ್ನೂ ಗ್ರಹಿಸಿ ಅವಕ್ಕೆ ಸೂಕ್ತವಾದ ಭಾಷೆ, ಶಬ್ದ, ಉಪಮೆ, ರೂಪಕ, ಪ್ರತಿಮೆಗಳ ಮುಖಾಂತರ ಧ್ವನಿಪೂರ್ಣ ಸಂವಹನಶೀಲವಾದ ರೂಪವನ್ನು ಕೊಡುತ್ತಾರೆ. ಅವರ ಉಪಮೆ, ರೂಪಕ, ಪ್ರತಿಮೆಗಳಲ್ಲಿ ಕಂಡು ಬರುವ ತಾಜಾತನ, ಸ್ವೋಪಜ್ಞತೆ, ವೈವಿಧ್ಯ, ಔಚಿತ್ಯ ಬೆರಗುಗೊಳಿಸುವಂಥದ್ದು.

ನಿಸಾರ್ ಅವರು ಉತ್ತಮ ಕವಿಯಷ್ಟೇ ಅಲ್ಲ, ಸೊಗಸಾದ ಕಾವ್ಯಗಂಧಿಯಾದ ಗದ್ಯಲೇಖಕರೂ ಹೌದು. ಅವರ 'ಅಚ್ಚುಮೆಚ್ಚು', 'ಇದು ಬರಿ ಬೆಡಗಲ್ಲೋ ಅಣ್ಣ' ಮುಂತಾದ ಐದು ಗ್ರಂಥಗಳು ಪ್ರಕಟವಾಗಿವೆ. ತನ್ನದೇ ಆದ ವಿಶಿಷ್ಟ ಕಾವ್ಯ ಭಾಷೆಯನ್ನೂ ಗದ್ಯ ಭಾಷೆಯನ್ನೂ ರೂಪಿಸಿಕೊಳ್ಳುವುದರಲ್ಲಿ ನಿಸಾರ್ ಅವರ ಸಾಧನೆ ಅನನ್ಯವಾದುದೆಂದು ಹೇಳಬೇಕು. ತಮ್ಮ ಮುಸ್ಲಿಂ ಸಮಾಜದ ಹಿನ್ನೆಲೆಗೆ ಸಹಜವಾದ (ದೌಲತ್ತು, ಮುಲಾಖಾತು, ಮಜಬೂತು, ಖುವ್ವತ್ತು, ನೌಬತ್ತು, ಬರ್‌ಬಾದು, ಮುಂತಾದ) ನೂರಾರು ಉರ್ದು, ಹಿಂದಿ, ಪಾರ್ಸಿ ಪದಗಳನ್ನು ಸೂಕ್ತ ರೀತಿಯಲ್ಲಿ ಬಳಸುವುದರೊದಿಗೆ ಅಪರೂಪದ ಸಂಸ್ಕೃತ ಪದಗಳನ್ನೂ ಸಮರ್ಥವಾಗಿ ಬಳಸುವುದರಲ್ಲೂ ಅವರು ಅನನ್ಯರಾಗಿದ್ದಾರೆ. ತನ್ನ ಸಾಂಸ್ಕೃತಿಕ ಹಿನ್ನೆಲೆಗೆ ಅನ್ಯವಾದ, ಭಿನ್ನವಾದ ಸಂಸ್ಕೃತ ಭಾಷೆಯ ಪದಗಳ ಬಳಕೆಯಲ್ಲಿ ಅವರು

ತೋರುವ ನೈಪುಣ್ಯ ಅಚ್ಚರಿ ಹುಟ್ಟಿಸುತ್ತದೆ. ಇದು ತನ್ನ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆಯ ಮಿತಿಗಳನ್ನು ಮೀರಿ ಸಂಸ್ಕೃತ ಶಬ್ದ ಸಂಪತ್ತನ್ನು ತನ್ನದಾಗಿ ಮಾಡಿಕೊಂಡು, ಅದನ್ನು ತನ್ನ ಅಭಿವ್ಯಕ್ತಿಯ ಅದ್ಭುತ ಸಾಧನವನ್ನಾಗಿ ಮಾಡಿಕೊಂಡ ಮಹಾಕವಿ ಕುವೆಂಪು ಅವರ ಸಾಧನೆಯನ್ನು ನೆನಪಿಸುತ್ತದೆ. ಹೊಸ ತಲೆಮಾರಿನ ಬಹುತೇಕ ಕುವೆಂಪು ಭಕ್ತರೂ ಅವರ ಈ ಸಾಧನೆಯನ್ನು ನಿರ್ಲಕ್ಷಿಸಿದ್ದಾರೆ. ಸಂಸ್ಕೃತದ ಬಗ್ಗೆ ತಿರಸ್ಕಾರ ಭಾವನೆಯನ್ನು ತಳೆದಿದ್ದಾರೆ. ಆದರೆ ನಿಸಾರ್ ಕುವೆಂಪುರವರಂತೆ ತಮ್ಮ ಹಿನ್ನೆಲೆಯ ಮಿತಿಗಳನ್ನು ಮೀರಿ, ಕನ್ನಡದ ಶಕ್ತಿವಂತಿಕೆಗಾಗಿ ಸಂಸ್ಕೃತ ಪದಗಳನ್ನು ದುಡಿಸಿಕೊಂಡಿರುವುದು ನಿಜವಾಗಿಯೂ ಶ್ಲಾಘನೀಯ. ಕೃತಿನಿಷ್ಠ ವಿಮರ್ಶೆಯ ಹೆಸರಿನಲ್ಲಿ ಕವಿಯ ಸಾಂಸ್ಕೃತಿಕ ಹಿನ್ನೆಲೆಯನ್ನು ಸಂಪೂರ್ಣ ಅಲಕ್ಷಿಸುವುದು ಸಾಧುವಲ್ಲ. ಈ ದೃಷ್ಟಿಯಿಂದ ನೋಡಿದರೆ ನಿಸಾರ್ ಅವರ ಸಾಧನೆಗೆ ಮೆಚ್ಚುಗೆ ಸಲ್ಲಲೇಬೇಕಾಗುತ್ತದೆ. ಇದು ನಾವು ಅವರಿಗೆ ನೀಡುವ ವಿಶೇಷ ರಿಯಾಯಿತಿಯೇನಲ್ಲ. ಯಾವುದೇ ರಿಯಾಯಿತಿಯ ಅಗತ್ಯವಿಲ್ಲದೆ, ಅವರು ತಮ್ಮ ಸಾಧನೆ-ಸಿದ್ಧಿಗಳ ಗುಣಮಟ್ಟದಿಂದಲೇ ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ಉನ್ನತ ಸ್ಥಾನದಲ್ಲಿ ಸ್ಥಿರವಾಗಿ ನಿಂತಿದ್ದಾರೆ. ಯಾವ ಗುಂಪಿಗೂ ಸೇರದೆ, ಯಾವ ಅಲೆಗೂ ಬಲಿಯಾಗದೆ ತಮ್ಮದೇ ಆದ ಮಾರ್ಗದಲ್ಲಿ ಎತ್ತರಕ್ಕೆ ಏರಿದ್ದಾರೆ.

ಅನುವಾದಕರಾಗಿಯೂ ನಿಸಾರ್ ಅವರ ಸಾಧನೆ ಗಣನೀಯ. ಷೇಕ್ಸ್‌ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್', 'ಒಥೆಲೊ' ನಾಟಕಗಳ ಅವರ ಅನುವಾದ, ಮಾಸ್ತಿಯಂಥ ದಿಗ್ಗಜರ ಮೆಚ್ಚುಗೆಯನ್ನು ಪಡೆದಿದೆ. ಅವರು ಮಾಡಿರುವ ರಷ್ಯನ್ ಕತೆಗಳ ಹಾಗೂ ಸ್ಪಾನಿಶ್ ಕವಿ ಪಾಬ್ಲೊ ನೆರುಡನ ಕವನಗಳ ಅನುವಾದಗಳೂ ಯಶಸ್ವೀ ಭಾಷಾಂತರಗಳೆಂದು ಪರಿಗಣಿತವಾಗಿವೆ. ಹಾಗೆಯೇ, ಮಕ್ಕಳ ಸಾಹಿತ್ಯ ನಿರ್ಮಾಣದಲ್ಲೂ ನಿಸಾರ್ ಅಹಮದ್ ಸಾಧನೆ ಮಾಡಿದ್ದಾರೆ. ಅವರ 'ಹಕ್ಕಿಗಳು' ಕೃತಿಗೆ ರಾಷ್ಟ್ರೀಯ ಹಾಗೂ ರಾಜ್ಯ ಪ್ರಶಸ್ತಿ ಬಂದಿದೆ.

ನಿಸಾರ್ ಅವರಿಗೆ ಸಂದ ಪ್ರಶಸ್ತಿಗಳ ಪಟ್ಟಿ ತುಂಬ ದೊಡ್ಡದು. ಕೇಂದ್ರ, ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ಪ್ರಶಸ್ತಿ, ಗೊರೂರು ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಅನಕೃ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ನಾಡೋಜ ಪ್ರಶಸ್ತಿ—ಇವು ಅವುಗಳಲ್ಲಿ ಕೆಲವಷ್ಟೆ. ಮಾಸ್ತಿ, ಪುತಿನ, ಗೋಕಾಕ, ಅಡಿಗರಂಥ ಶ್ರೇಷ್ಠ ಕವಿಗಳ ಮೆಚ್ಚಿಗೆಯನ್ನು ಗಳಿಸಿದ್ದರೂ ನಿಸಾರ್ ಅವರ ಕಾವ್ಯದ ಬಗ್ಗೆ ಸಮಗ್ರ, ಸಮರ್ಥ ಅಧ್ಯಯನ, ವಿಶ್ಲೇಷಣೆ, ವಿಮರ್ಶೆ ಸಾಕಷ್ಟು ಆಗಿಲ್ಲ. ಇತ್ತೀಚೆಗೆ ಆ ಪ್ರಯತ್ನ ಆರಂಭವಾಗಿದೆ ಎಂದು ತಿಳಿದು ಬಂದಿದೆ. ಅದು ಸರ್ವಥಾ ಸ್ವಾಗತಾರ್ಹ. ಪ್ರತಿಷ್ಠಿತ 'ಮಾಸ್ತಿ ಪ್ರಶಸ್ತಿ' ವಿಜೇತರಾಗಿರುವ ಕವಿವರ ನಿಸಾರ್ ಅವರಿಗೆ ಹಾರ್ದಿಕ ಅಭಿನಂದನೆಗಳು. ಅವರು ಇನ್ನೂ ಬಹಳ ಕಾಲ ನಮ್ಮೊಡನಿದ್ದು ಕನ್ನಡ ಸಾಹಿತ್ಯಕ್ಕೆ ತಮ್ಮ ಕಾಣಿಕೆಗಳನ್ನು ನೀಡುತ್ತಿರಲಿ ಎಂದು ಹಾರೈಸೋಣ.



ಉದಯೋನ್ಮುಖರನ್ನು ಉತ್ತೇಜಿಸುವ ಉದಾರ ಜೀವಿ

♦ ಜಯಾ ಮಂಡೀರ ಅಪ್ಪಣ್ಣ

ಕೆ.ಎಸ್. ನಿಸಾರ್ ಅಹಮದ್ ಅವರ ಹೆಸರನ್ನು ಕೇಳದ ಕನ್ನಡಿಗರುಂಟೆ? ಸಮಾಜದ ಬೇರೆ ಬೇರೆ ವಿಭಾಗದ, ವೃತ್ತಿಯ, ಮನೋಧರ್ಮದ ಜನಗಳಿಗೆ ನಿಸಾರರ ಮತ್ತು ಅವರ ಗೀತೆಗಳ ಪರಿಚಯ ಹಾಗೂ ಪ್ರೀತಿಯಿರುವುದನ್ನು ಅರಿಯಬೇಕಾದರೆ, ಅವರ ಪುಸ್ತಕದ ಬಿಡುಗಡೆಯ ಅಥವಾ ಸನ್ಮಾನದ ಸಮಾರಂಭಕ್ಕೆ ಹೋಗಬೇಕು. ಅಲ್ಲಿ ಬಂದವರಲ್ಲಿ ಅಧ್ಯಾಪಕರು, ಕವಿ-ಸಾಹಿತಿಗಳು, ವಕೀಲರು, ವೈದ್ಯರು, ಇಂಜಿನಿಯರರು, ಗೃಹಿಣಿಯರು, ವಿದ್ಯಾರ್ಥಿಗಳು, ಹೋಟೆಲಿನ ಮಾಲೀಕರು, ವ್ಯಾಪಾರಿಗಳು, ಪೊಲೀಸ್ ಅಧಿಕಾರಿಗಳು, ಸಿನಿಮಾ ಮತ್ತು ಟಿ.ವಿ.ಯ ನಟರು, ಪತ್ರಿಕಾಕರ್ತರು, ಕೆಲವೊಮ್ಮೆ ಮೌಲ್ವಿಗಳು!—ಈ ಪಟ್ಟಿ ಇನ್ನೂ ಒಂದೆರಡು ಸಾಲುಗಳಷ್ಟು ಮುಂದುವರಿಯುತ್ತದೆ. ಇಷ್ಟೊಂದು ವಿವಿಧ ಬಗೆಯ ಸಾಮಾಜಿಕರ ಪ್ರೀತಿ-ಸ್ನೇಹಗಳನ್ನು, ಅಮಿತವಾದ ಅಕ್ಕರೆಯನ್ನು ಸಂಪಾದಿಸಿರುವ ಈ ಕವಿಯ ಗುಟ್ಟೇನಿರಬಹುದು? ಎಂದು ಹಲವು ಸಲ ನಾನು ಯೋಚಿಸಿದ್ದೇನೆ. ಆದರೆ ಸಮರ್ಪಕ ಮತ್ತು ಸೂಕ್ತ ಅರ್ಥ ನನಗೆ ಈತನಕ ಹೊಳೆದಿಲ್ಲ.

ಸುಮಾರು ಹತ್ತು ವರ್ಷಗಳಿಂದ ಅವರ ಅಸಂಖ್ಯಾತ ಕಾರ್ಯಕ್ರಮಗಳಿಗೆ ಹೋಗಿರುವ ನನಗೆ, ಈಚೆಗಷ್ಟೇ ದಿವಂಗತರಾದ ನನ್ನ ಪತಿವರ್ಯ ಅಪ್ಪಣ್ಣನವರಿಗೆ ಮತ್ತು ನನ್ನ ಮಗ ವಿವೇಕನಿಗೆ ನಿಸಾರರ ಸೌಹಾರ್ದಯುತವಾದ ಸದ್ವರ್ತನೆ,

ಹಸನ್ಮುಖದ ಪ್ರೀತ್ಯಾದರದ ಮಾತು, ಒಮ್ಮೆ ಕಂಡರೆ ಎಂದೆಂದೂ ಮರೆಯದೆ ಗುರುತಿಸುವ ಆತ್ಮೀಯತೆ ಮತ್ತು ಅವರ ಸತ್ವಪೂರ್ಣವೂ ಹೃದಯ ಪರವಶಗೊಳ್ಳುವ ಶಕ್ತಿಯುಳ್ಳವೂ ಆದ ಕವಿತೆಗಳು—ಅವರ ಜನಾದರಣೆಯ ರಹಸ್ಯಕ್ಕೆ ಮುಖ್ಯ ಕಾರಣ ಎನ್ನಿಸಿದೆ. ಬೇರೆ ಬೇರೆ ಮನೋಭಾವದವರಾಗಿದ್ದರೂ ಅವರ ಜೀವನದ ಯಾವುದಾದರೊಂದು ಘಟ್ಟದ ಅನುಭವಕ್ಕೆ ನಿಸಾರ್ ಅಹಮದ್ ಅವರ ಕವನಗಳು ಸಂವಾದಿಯಾಗಿ ಸಂವೇದಿಸುವುದರಿಂದ ಈ ಕವಿಯ ಬಗ್ಗೆ ಬುದ್ಧಿ ಜೀವಿಗಳ ವರ್ಗಕ್ಕೆ ಹೇಗೋ ಹಾಗೆಯೇ ಜನ ಸಾಮಾನ್ಯರಿಗೂ ಅತಿಶಯವಾದ ಅಕ್ಕರೆ, ಗೌರವ. ಜಾತಿ ಮತಗಳನ್ನು ಮೀರಿ, ಎಲ್ಲರಿಗೂ ನಿಸಾರರು ನಮ್ಮವರೆಂಬ ಆಪ್ತ ಭಾವನೆ. ಅವರ ಪರಿಚಯ ನನ್ನ ಬಾಳಿನ ಸೌಭಾಗ್ಯಗಳಲ್ಲಿ ಒಂದು ಎಂದು ನಾನು ಮೊದಲಿನಿಂದ ಭಾವಿಸಿದ್ದೇನೆ. ಅವರ ಗದ್ಯ-ಪದ್ಯಗಳನ್ನು ಓದಿ ಸುಖ ಪಟ್ಟಿದ್ದೇ ಅಲ್ಲದೆ, ನಾನು ಅವರಿಂದ ಅನೇಕ ವಿಷಯಗಳನ್ನು ಕಲಿತಿದ್ದೇನೆ. ಅವರ ಪ್ರಭಾವ ನನಗೆ ಲಾಭದಾಯಕವಾಗಿ ಪರಿಗಣಿಸಿದೆ. ನಿಸಾರರಿಗೆ ಪ್ರಾಪ್ತವಾಗಿರುವ ಕಾವ್ಯರಚನೆಯ ಸಾಮರ್ಥ್ಯ ಶಾರದೆಯ ವರವೆಂದರೆ ಅತಿಶಯೋಕ್ತಿಯಲ್ಲ.

ನಾನು ನಿಸಾರ್ ಅಹಮದ್ ಅವರ ಹೆಸರನ್ನು ಬಹಳ ಹಿಂದೆಯೇ ಕೇಳಿದ್ದರೂ ಅವರ ಕೆಲವು ಪ್ರಖ್ಯಾತ ಹಾಡುಗಳನ್ನು ಸಭೆ ಸಮಾರಂಭಗಳಲ್ಲಿ ಗಾಯಕ-ಗಾಯಕಿಯರು ಹಾಡುವುದನ್ನು ಆಲಿಸಿದ್ದರೂ ಅನೇಕ ಕವಿಗೋಷ್ಠಿಗಳಲ್ಲಿ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಷಣ ಮಾಡುವಾಗ ಕಂಡಿದ್ದರೂ ಅವರ ಪ್ರತ್ಯಕ್ಷ ಪರಿಚಯವಾದದ್ದು ೧೯೬೭ರಲ್ಲಿ, ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ. ಅವರು ದಸರಾ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದಾಗ, ನಾನು ಒಂದು ಕೊಡವ ಭಾಷೆಯ ಪದ್ಯವನ್ನೂ ಅದರ ಕನ್ನಡಾನುವಾದವನ್ನೂ ವಾಚಿಸಿದ್ದೆ. ಆ ದಿನ ಅವರು ತಮ್ಮ ಒಂದೆರಡು ಕವಿತೆಗಳನ್ನು ನಾಟಕೀಯವಾಗಿ ಓದಿದ್ದಲ್ಲದೆ, ಪ್ರಬುದ್ಧ ವಿಚಾರಗಳನ್ನು ಒಳಗೊಂಡ ಭಾಷಣವನ್ನೂ ಮಾಡಿದರು. ಸಭಿಕರು ಮಂತ್ರಮುಗ್ಧರಾಗಿ ಅವರ ಮಾತುಗಳನ್ನು ಆಲಿಸಿದ್ದಲ್ಲದೆ, ಕೊನೆಯಲ್ಲಿ ದೀರ್ಘ ಕರ ತಾಡನ ಮಾಡಿ ತಮ್ಮ ಮೆಚ್ಚುಗೆಯನ್ನು ತೋರ್ಪಡಿಸಿಕೊಂಡಿದ್ದರು. ನನ್ನ ಪತಿ ಅಪ್ಪಣ್ಣ ನವರಿಗಂತೂ ನಿಸಾರರ ವಾಗ್ಝರಿ ಮತ್ತು ವಿಚಾರ ಧಾರೆ ಮನ ಸೂರೆಗೊಂಡಿತ್ತು. ಕಾರ್ಯಕ್ರಮ ಮುಗಿದ ಮೇಲೆ ವೇದಿಕೆಗೆ ಹೋಗಿ ನಿಸಾರರಿಗೆ ತಮ್ಮ ಪರಿಚಯವನ್ನು ಮಾಡಿಸಿ, ಹೃದಯಪೂರ್ವಕವಾಗಿ ಶ್ಲಾಘಿಸಿದರು. ನನ್ನನ್ನೂ ನಿಸಾರರಿಗೆ ಪರಿಚಯಿಸಿದರು. 'ಕೊಡಗಿನ ವೈಶಿಷ್ಟ್ಯವನ್ನು ಮತ್ತು ಹಿರಿಮೆಯನ್ನು ಕುರಿತ ನಿಮ್ಮ ಪದ್ಯ ಸೊಗಸಾಗಿದೆ. ಅದರಲ್ಲಿನ ಸೂಕ್ಷ್ಮ ವಿವರಗಳು ನನಗೆ ಹಿಡಿಸಿದವು' ಎಂದು ನನ್ನ ಬಗ್ಗೆ ಉತ್ತೇಜನಕಾರಿಯಾದ ನುಡಿಗಳನ್ನು ಆಡಿದರು. ಕೀರ್ತಿಶಾಲಿ ಕವಿಯೊಬ್ಬರ ಈ 'ಸರ್ಟಿಫಿಕೇಟ್'ನಿಂದ ನಾನು ಉಬ್ಬಿ ಹೋದೆ. ಅವರಿಗೆ ಮನಸ್ಸಿನಲ್ಲಿಯೇ ವಂದಿಸಿದೆ.

ಅಂದಿನಿಂದ ಈಗಿನವರೆಗೂ ಅವರ ಸರಿಸುಮಾರು ಎಲ್ಲ ಕಾರ್ಯಕ್ರಮಗಳಿಗೂ ನಾನು ಹಾಜರಾಗಿದ್ದೇನೆ. ನನಗೆ ತಪ್ಪದೇ ಕರೆಯೋಲೆ ತಲುಪುತ್ತದೆ. ಅರ್ಧಗಂಟೆ ಮುಂಚಿತವಾಗಿ ನಾನೂ ನನ್ನ ಪತಿ ಮತ್ತು ಮಗ ಅಲ್ಲಿಗೆ ಹೋದರೂ ಆಗಲೇ ಸಭಾಂಗಣ ತುಂಬಿರುತ್ತದೆ: ಕುಳಿತುಕೊಳ್ಳಲು ಪರದಾಡಬೇಕು.

ನಿಸಾರರು ವೇಷಭೂಷಣಗಳಲ್ಲಿ ವಿದೇಶೀಯರಾಗಿ ಠಾಕುಠೀಕಿನಿಂದ ಮೇಲುನೋಟಕ್ಕೆ ಕಂಡರೂ ಅವರ ಅಂತರಂಗ ಮಾತ್ರ ಅಚ್ಚ ಭಾರತೀಯ. ಹಿರಿಯರ ಬಗೆಗಿನ ಅವರ ಗೌರವ, ಸಮ ವಯಸ್ಕರೊಂದಿಗೆ ಸ್ನೇಹ, ಕಿರಿಯರ ಜೊತೆಗಿನ ಮಮತೆ ಅಕ್ಕರೆಗಳು ಎಂಥವರನ್ನೂ ಸೆರೆ ಹಿಡಿದು, ಅವರ ಬಗೆಗೆ ಪ್ರೀತಿ-ಮರ್ಯಾದೆಗಳು ಹೆಚ್ಚುವಂತೆ ಮಾಡಿಬಿಡುತ್ತವೆ. ಎಲ್ಲರನ್ನೂ ಸಮಾನ ಆದರದಿಂದ ಮಾತನಾಡಿಸುತ್ತ, ಎಲ್ಲರೊಡನೆ ಭೇದ ಭಾವ, ಬಿಂಕ ಬಿಗುಮಾನಗಳಿಲ್ಲದೆ ಬೆರೆತು ಬಿಡುವ ನಿಸಾರರ ಮಗುವಿನಂಥ ಸ್ವಭಾವ ಬೇರೆಯವರಿಗೆ ಒಂದು ಪಾಲನಯೋಗ್ಯ ನಿದರ್ಶನ.

ಅವರ ಕವನಗಳಲ್ಲಿ ಅನೇಕವನ್ನು ನಾನು ಓದಿದ್ದೇನೆ, ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಮೊದಲನೆಯ ಓದಿಗೇ ಮೆಚ್ಚುಗೆಯಾಗುವ ಅವರ ಕವಿತೆಗಳು ಮತ್ತೆ ಮತ್ತೆ ಓದಿ ಚಿಂತಿಸಿದಾಗ, ಎಷ್ಟೆಲ್ಲಾ ಗಹನ ತಾತ್ತ್ವಿಕ ವಿಷಯಗಳನ್ನು, ಸೂಕ್ಷ್ಮವಾದ ಜೀವನಾನುಭವಗಳನ್ನು ನಿರೂಪಿಸುತ್ತವೆ ಎಂದು ನಾನು ಹಲವು ಸಲ ಸೋಜಿಗ ಪಟ್ಟಿದ್ದೇನೆ. ಅವರ ಪದ್ಯಗಳಲ್ಲಿ ಹೇಗೋ ಹಾಗೆ ಅವರ ಗದ್ಯ ಸಾಹಿತ್ಯದಲ್ಲೂ ಉನ್ನತವಾದ ಆಲೋಚನೆಗಳು, ಗಂಭೀರ ತತ್ತ್ವಗಳು ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ಮಾನವೀಯತೆಯ ಗುಣ ಪುನರಾವರ್ತಿಸುತ್ತದೆ. ಇಂಥವನ್ನು ಸೃಷ್ಟಿಸಿದ ಈ ಸಾಹಿತ್ಯಕಾರನ ಅಂತಃಕರಣ ಎಷ್ಟು ಕುರುಣಾರ್ದ್ರವಾದದ್ದು, ಧೀಶಕ್ತಿ ಮೇಲ್ಮಟ್ಟದ್ದು ಎಂಬ ಅಂಶ ವಿದಿತವಾಗಿ, ಅವರ ಬಗೆಗೆ ಗೌರವಾದರ ಅಧಿಕವಾಗುತ್ತದೆ. ನಿಸಾರರು ಬಳಸುವ ಕನ್ನಡ ಭಾಷೆಯ ಪ್ರೌಢಿಮೆ, ವೈವಿಧ್ಯ, ಸಮ್ಮೋಹಕತೆ ಮತ್ತು ಪ್ರಯೋಗಶೀಲತೆ ಅನ್ಯರಿಗೆ ದುರ್ಲಭವೆನ್ನಿಸುವಂತಹ ವೈಖರಿಯದು. ಇದು ಅವರ ಅಧ್ಯಯನಶೀಲತೆ, ಮನನ, ಸತತಾಭ್ಯಾಸ ಮತ್ತು ಸೂಕ್ಷ್ಮ ಗ್ರಹಣಶಕ್ತಿಗಳ ಸತ್ಫಲ. ಅವರ ಸಾಹಿತ್ಯ ಸಾಧನೆಯ ಹಿಂದೆ ತಪಸ್ಸಿನ ಪರಿಶ್ರಮವಿದೆ ಎನ್ನಿಸುತ್ತದೆ.

ಅವರೊಂದಿಗೆ ಅವರ ಮನೆಯಲ್ಲಿ ಕುಳಿತು ಅನೇಕ ಸಲ ಖಾಸಗಿಯಾಗಿ ಬಲು ಹೊತ್ತಿನವರೆಗೆ ನಾನೂ ನನ್ನ ಯಜಮಾನರೂ ಸಂಭಾಷಣೆ ನಡೆಸಿದ್ದೇವೆ. ಅವರು ಮುಚ್ಚು ಮರೆಯಿಲ್ಲದೆ ನಿವೇದಿಸುವ ಅವರ ಜೀವನದ ಘಟನೆಗಳು, ನಡುವೆ ಹಾರಿಸುವ ಹಾಸ್ಯ ಚಟಾಕಿಗಳು, ಆಗಾಗ್ಗೆ ಉದ್ಧರಿಸುವ ಕನ್ನಡ, ಇಂಗ್ಲಿಷ್ ಕವಿ-ಸಾಹಿತಿಗಳ ಸ್ವಾರಸ್ಯಕರ ಸೂಕ್ತಿಗಳು ಎಂಥವರನ್ನೂ ಮುಗ್ಧಗೊಳಿಸಿಬಿಡುತ್ತವೆ. ಮತ್ತೆ ಮತ್ತೆ ಅವರ ಮಾತುಗಳನ್ನು ಆಲಿಸಬೇಕೆಂಬ ಹಂಬಲವನ್ನು ತೀವ್ರವಾಗಿಸುತ್ತವೆ.

ನಿಸಾರರು ಕೊಡಗು, ಕೊಡವರ ಬಗ್ಗೆ ಬಹಳ ಅಭಿಮಾನ, ಹೆಮ್ಮೆ ಬೆಳೆಸಿಕೊಂಡವರು. ಅಲ್ಲಿನ ನಿಸರ್ಗ ಸೌಂದರ್ಯ, ವಿಶಿಷ್ಟವಾದ ಬದುಕಿನ ವಿಧಾನ, ಕೊಡವ ಜನಾಂಗದ ಕೆಚ್ಚೆದೆತನ ಹಾಗೂ ಸಾಹಸ ಪ್ರವೃತ್ತಿ ನಿಸಾರರಿಗೆ ಮೆಚ್ಚು. ೧೯೭೪ರಲ್ಲಿ ಅವರು ಸಾಮಾನ್ಯ ವಿಜ್ಞಾನ(General Science)ವನ್ನು, ಮಡಿಕೇರಿಯ ಸರ್ಕಾರಿ ಕಾಲೇಜಿನಲ್ಲಿ ಡಿಗ್ರಿ ವಿದ್ಯಾರ್ಥಿಗಳಿಗೆ ಬೋಧಿಸುವ ಸಲುವಾಗಿ ಬೆಂಗಳೂರಿನಿಂದ ಹದಿನೈದು ದಿವಸಗಳ ಮಟ್ಟಿಗೆ ಡೆಪ್ಯೂಟ್ ಆಗಿ ಹೋದಾಗಿನಿಂದ ಅವರಿಗೆ ಕೊಡಗಿನ ಬಗೆಗೆ ಅತೀವ ಆಸಕ್ತ. ಆಗ ಅವರು ಕಳೆದ ದಿನಗಳ ಸವಿ ನೆನಪುಗಳನ್ನು ಮೆಲುಕು ಹಾಕುತ್ತಿರುತ್ತಾರೆ. ಆಗ ಪ್ರಿನ್ಸಿಪಾಲರಾಗಿದ್ದ ರಸಾಯನ ವಿಜ್ಞಾನದ ಪ್ರಾಧ್ಯಾಪಕ ವೆಂಕಟಾಚಲ ಅವರೂ ಭೌತವಿಜ್ಞಾನದ ಪ್ರೊ. ಬಾಳಿಗ

ಅವರೂ ನಿಸಾರರಿಗೆ ಏರ್ಪಡಿಸಿದ್ದ ಬೀಳ್ಕೊಡಿಗೆ ಸಮಾರಂಭದ ಆತ್ಮೀಯ ವಾತಾವರಣವನ್ನು, ಕೊಡಗಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪ್ರೀತಿ ವಿಶ್ವಾಸದ ನಡವಳಿಕೆಯನ್ನು ನಿಸಾರರು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಆಮೇಲೆ ಅವರು ಏಳೆಂಟು ಸಲ ಮಡಿಕೇರಿ ಮತ್ತು ಕೊಡಗಿನ ಇತರ ಊರುಗಳಿಗೆ ಕವಿ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೋ, ಭಾಷಣಕ್ಕೋ ಹೋದಾಗ ಪಟ್ಟ ಆನಂದಾನುಭವಗಳನ್ನು ಮುಕ್ತವಾಗಿ ವರ್ಣಿಸುತ್ತಾರೆ. ಭಾರತೀಯ ಸೇನೆಗೆ ಯೋಧರಾಗಿ ಸೇರಿ ರಾಷ್ಟ್ರದ ಸುರಕ್ಷತೆ ಭದ್ರತೆಗಳನ್ನು ಕಾಪಾಡುತ್ತಿರುವ ಕೊಡವ ಯುವಕರಿಂದ ನಮ್ಮ ಕರ್ನಾಟಕಕ್ಕೆ ಹೆಮ್ಮೆಯ ಹೆಗ್ಗಳಿಕೆ ಲಭಿಸಿರುವುದನ್ನು ಅವರು ತುಂಬು ಉತ್ಸಾಹದಿಂದ ನೆನೆಯುತ್ತಾರೆ.

ಕಳೆದ ಶತಮಾನದ ಒಂನೆಯ ದಶಕದಲ್ಲಿ ಡಾ. ಸಿದ್ಧಯ್ಯ ಪುರಾಣಿಕರು ಕೊಡಗಿನ ಜಿಲ್ಲಾಧಿಕಾರಿಗಳಾಗಿದ್ದಾಗ ಒಂದು ಅಪೂರ್ವವಾದ ರಾಜ್ಯ ಮಟ್ಟದ ಕವಿ ಸಮ್ಮೇಳನವನ್ನು, ಕರ್ನಾಟಕ ಸರ್ಕಾರದ ಕ್ಷೇತ್ರಾಧಿಕಾರಿಗಳಾಗಿದ್ದ ವೆಂಕೋಬರಾವ್ ಅವರ ನೆರವಿನಿಂದ ಏರ್ಪಡಿಸಿದ್ದಾಗ, ಬೆಂಗಳೂರಿನಿಂದ ಕೆ.ಎಸ್.ನ. ಮತ್ತು ನಿಸಾರರು ಆಹ್ವಾನಿತರಾಗಿ ಹೋಗಿದ್ದರಂತೆ. ಅಂದಿನ ಅಧ್ಯಕ್ಷತೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರದು. ಮಡಿಕೇರಿಯ ಪುರ ಭವನ ಸಭಿಕರಿಂದ ಕಿಕ್ಕಿರಿದು ಹೋಗಿತ್ತು. ಸುದೈವವಶಾತ್ ನಿಸಾರ್ ಅವರಿಗೆ ಜನರಲ್ ಕಾರ್ಯಪ್ಪನವರ ಪಕ್ಕದಲ್ಲಿ ಕೂರುವ ಸುಯೋಗ ಒದಗಿತ್ತು. ಆಗ ಅವರು ಕಾಲೇಜಿನ ಅಧ್ಯಾಪನದ ಜೊತೆಗೆ ಎನ್.ಸಿ.ಸಿ. ಅಧಿಕಾರಿಯೂ ಆಗಿದ್ದರು. ಯೌವನವಂತರಾಗಿ ಕಳೆಕಳೆಯಾಗಿದ್ದರು. ಆ ಇಳಿ ವಯಸ್ಸಿನಲ್ಲೂ ಕಾರ್ಯಪ್ಪನವರು ಅತ್ಯಂತ ಠಾಕುಠೀಕಾಗಿ ಸೂಟು ಟೈ ಧರಿಸಿ, ಸಮಯಕ್ಕೆ ಸರಿಯಾಗಿ ಸಭೆಗೆ ಆಗಮಿಸಿದ್ದರು. ನಿಸಾರರಿಗೆ ಅವರೊಂದಿಗೆ ಮಾತಾಡುವ ತವಕ; ಆದರೆ, ಎಲ್ಲೋ ಭಯ, ಸಂಕೋಚ. ಚೀಣೆಯರ ದಾಳಿ ನಮ್ಮ ದೇಶದ ಮೇಲೆ ಆಗಿ ಒಂದೆರಡು ವರ್ಷ ಮಾತ್ರ ಆಗಿತ್ತು. ನಿಸಾರರು ಯುದ್ಧಗೀತೆಯೊಂದನ್ನು ಆಂಗಿಕ ಅಭಿನಯದೊಂದಿಗೆ ಆವೇಶಭರಿತರಾಗಿ ನಾಟಕೀಯವಾಗಿ ಓದಿದರು. ಶ್ರೋತೃಗಳು ಮೆಚ್ಚಿ ಚಪ್ಪಾಳೆಯ ಮಳೆ ಸುರಿಸಿದ್ದರು. ಗಂಭೀರವಾಗಿ ಕುಳಿತಿದ್ದ ಕಾರ್ಯಪ್ಪನವರು 'You recited the poem very well, keep it up, young man' ಎಂದರು. ನಿಸಾರರಿಗೆ ಸ್ವರ್ಗ ಒಂದು ಗೇಣು ದೂರದಲ್ಲಿದ್ದಂತೆ ಭಾಸವಾಗಿ, ಅವರಿಗೆ ಪ್ರಣಾಮ ಮಾಡಿ, 'Thank you very much Sir. ನಿಮ್ಮಂಥವರು ಮೆಚ್ಚುವುದೆಂದರೆ, ಅದಕ್ಕಿಂತ ಬೇರೆ ಭಾಗ್ಯ ಯಾವುದಿದೆ?' ಎಂದರು. ನಿಸಾರರು, ತಾವು ಎನ್.ಸಿ.ಸಿ.ಯ ಸೆಕೆಂಡ್ ಲೆಫ್ಟಿನೆಂಟ್ ಆಗಿರುವುದನ್ನು ಸಂಕೋಚದಿಂದಲೇ ಕಾರ್ಯಪ್ಪನವರಿಗೆ ತಿಳಿಸಿದಾಗ, 'Oh! I see, another feather of pride in your cap, apart from poetry' ಎಂದರು. ಕೊಂಚ ಸಮಯದ ಬಳಿಕ, ಕವಿ ಸಮ್ಮೇಳನ ಮುಗಿಯುವ ಹೊತ್ತಿಗೆ, 'Sir, how come, you still dress so neatly and meticulously?' ಎಂದು ನುಡಿದ ನಿಸಾರ್ ಮುಂದುವರಿದು, 'ನೀವು ವೇದಿಕೆಯ ಮೇಲೆ ಕೂತಿದ್ದಾಗ ನಿಮ್ಮ ಷೂಸ್‌ಗಳನ್ನು ನೋಡಿದೆ. ಅವುಗಳಲ್ಲಿ ನನ್ನ ಮುಖ ಕಾಣಿಸಿತು'. ಎಂದಾಗ, ಕಾರ್ಯಪ್ಪನವರು 'Thank you' ಎಂದವರೆ, ಇಂಗ್ಲಿಷ್ ಧಾಟಿಯ ಕನ್ನಡದ ವಿರಳ ಉಚ್ಚಾರಣೆಯಲ್ಲಿ 'ನೀವೂ ಚೆನ್ನಾಗಿ ಡ್ರೆಸ್

ಮಾಡಿದೀರಿ' ಎಂದರು. ಜನರಲ್ ಕಾರ್ಯಪ್ಪನವರಂಥ ಮಹಾನ್ ವ್ಯಕ್ತಿಯ ಜೊತೆ ಮಾತಾಡಿದ್ದು, ಮತ್ತು ಅವರ ಸಮ್ಮುಖದಲ್ಲಿ ಪದ್ಯವನ್ನು ಓದಿ ಮೆಚ್ಚುಗೆಯನ್ನು ಸಂಪಾದಿಸಿದ್ದು ತಮ್ಮ ಬದುಕಿನ ಬಹು ದೊಡ್ಡ ಯೋಗ ಮತ್ತು ಸಾಧನೆ ಎಂದು ನಿಸಾರ್ ಭಾವೋದ್ವೇಗದಿಂದ ನುಡಿಯುತ್ತಾರೆ.

ಫೀ. ಮಾ. ಕಾರ್ಯಪ್ಪನವರ ಜನ್ಮಶತಾಬ್ದಿಯ ಅಂಗವಾಗಿ ನಡೆದ ಸಮಾರಂಭದಲ್ಲಿ ಬಿಡುಗಡೆಗೊಳ್ಳಲು ನಾನು ಆ ಹಿರಿಯ ಚೇತನವನ್ನು ಕುರಿತು ಕೊಡವ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಕೆಲವು ಬರಹಗಳನ್ನು ರಚಿಸಿ ಪುಸ್ತಕ ರೂಪದಲ್ಲಿ ಹೊರ ತರಲು ಆಶಿಸಿದ್ದೆ. ಅದಕ್ಕೆ ನಿಸಾರ್ ಅವರಿಂದ ಒಂದು ಮುನ್ನುಡಿಯನ್ನು ಬರೆಸುವ ಹಂಬಲ ವಾಯಿತು. ನನಗೆ ಸುಪರಿಚಿತರಾಗಿದ್ದರೂ ಕೇಳಲು ಏನೋ ಸಂಕೋಚ. ಧೈರ್ಯ ಮಾಡಿ 'ಸಾರ್, ನಾನು ರಚಿಸುತ್ತಿರುವ ಪುಸ್ತಕ ಕೊಂಚ ವಿಶೇಷವಾಗಿರುತ್ತದೆ. ನಿಮ್ಮಂಥ ಹಿರಿಯರು ಮುನ್ನುಡಿ ಬರೆದು ಹರಸಬೇಕು' ಎಂದು ಕೇಳಿದಾಗ, 'ಆಯಿತು. ದೀರ್ಘವಾದ ಮುನ್ನುಡಿ ಯನ್ನು ಬರೆಯಲು ಸಮಯವಿಲ್ಲ' ಎಂದು ಹೇಳಿದ್ದರೂ ಕ್ಲುಪ್ತ ಕಾಲದಲ್ಲಿ ಸೊಗಸಾದ ಮಾತುಗಳನ್ನು ಬರೆದು ಕೊಟ್ಟು ಶುಭ ಹಾರೈಸಿದರು. ಎಷ್ಟೋ ಜನ ಯುವ ಲೇಖಕ ಲೇಖಕಿಯರಿಗೆ ಅವರು ನಕಾರ ಸೂಚಿಸಿದ್ದನ್ನು ನಾನು ಬಲ್ಲೆ. ಆದರೆ ನನ್ನ ಬಗ್ಗೆ, ಮಹಾನ್ ಜೀವ ಕಾರ್ಯಪ್ಪನವರ ಬಗ್ಗೆ ನಿಸಾರರಿಗೆ ಇರುವ ಪ್ರೀತಿ ಅಕ್ಕರೆಗಳಿಂದಾಗಿ ಅವರು ನಾಲ್ಕು ನಲ್ನುಡಿಗಳನ್ನು ಬರೆದರು. ಅದರಲ್ಲಿ ಕೊಡಗಿನ ಜನರ ಶೌರ್ಯ ಸಾಹಸಗಳನ್ನು, ಸಂಸ್ಕೃತಿ ವಿಶಿಷ್ಟತೆಯನ್ನು ನಿರ್ಮುಕ್ತವಾಗಿ ಹೊಗಳಿದ್ದರು. ಜೊತೆಯಲ್ಲೇ ಕೆಲವು ಕೊಡವ ಬಾಂಧವರು ಪ್ರತ್ಯೇಕ ರಾಜ್ಯವನ್ನು ಬೇಡಿ ಪ್ರತಿಭಟನೆ ನಡೆಸುತ್ತಿರುವುದಕ್ಕೆ ತುಂಬು ವಿಷಾದ, ನೋವು, ಆತಂಕಗಳನ್ನು ವ್ಯಕ್ತಪಡಿಸಿದ್ದರು. ಅವರು ಹೀಗೆ ಭಿನ್ನ ಧ್ವನಿಯನ್ನು ಎತ್ತಲು ಕಾರಣಗಳೇನು ಎಂದು ತಪಾಸಣೆ ನಡೆಸಿ, ಅವರ ಕುಂದು ಕೊರತೆಗಳನ್ನು ಸಹಾನುಭೂತಿ ಯಿಂದ ಅರಿತು, ಕೊನೆಗಾಣಿಸುವುದು ನಮ್ಮ ಸರಕಾರದ ಪ್ರಧಾನ ಹೊಣೆಯೆಂದೂ ಸೂಚಿಸಿದರು.

ಒಮ್ಮೆ ನಿಸಾರರಿಂದ ನನ್ನ ಪತಿ ಅಪ್ಪಣ್ಣನವರಿಗೆ ದೂರವಾಣಿಯ ಕರೆ ಬಂದಿತು. ಪರಸ್ಪರ ಕುಶಲ ವಿಚಾರಿಸಿದ ಬಳಿಕ, 'ಮಿಸ್ಟರ್ ಅಪ್ಪಣ್ಣ, ಭಾಗೀರಥಿ ನಾರಾಯಣರಾವ್ ಮಾನೆ ಕಾಲೇಜಿನವರು ಏರ್ಪಡಿಸಿರುವ ಕವಿಗೋಷ್ಠಿಯಲ್ಲಿ ಜಯ ಅವರು ನಾಡಿದ್ದು ಭಾಗವಹಿಸಬೇಕಿದೆ. ಅವರಿಗೆ ಮರೆಯದೇ 'ಸೀರೆ' ತನ್ನಿ ಎಂದು ಹೇಳಿ' ಎಂದರು. ನಮ್ಮ ಯಜಮಾನರಿಗೆ ತಲೆ ಬುಡ ಅರ್ಥವಾಗಲಿಲ್ಲ. 'ಕವಿಗೋಷ್ಠಿಯಲ್ಲಿ ಭಾಗವಹಿಸುವುದಕ್ಕೆ ಸೀರೆಯ ಅಗತ್ಯವೇನು? ಅಲ್ಲದೆ, ಆಕೆ ನಮ್ಮ ಕೊಡಗಿನ ಶೈಲಿಯಲ್ಲಿ ಸೀರೆ ಧರಿಸಿ ತಾನೆ ಯಾವಾಗಲೂ ಬರುವುದು?' ಎಂದರು. ನಿಸಾರ್ ಅವರಿಗೆ ತಮ್ಮ ಮಾತಿನ ತಪ್ಪು ಅರಿವಾಗಿ, 'ಓ, ಐ ಆ್ಯಮ್ ಸಾರಿ. ನಾನು ಹಾಗಲ್ಲ ಅಂದಿದ್ದು. ಅವರು ಮೂರು ತಿಂಗಳ ಹಿಂದೆ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ 'ಸೀರೆ' ಎಂಬ ಸೊಗಸಾದ ಕವನ ಓದಿದ್ದರು. ಅದರಲ್ಲಿ ಪುರಾಣ ಕಾಲದಿಂದ ಈವರೆಗೂ ಸೀರೆಯ ಕಾರಣದಿಂದ ನಡೆದ ಕೆಲವು ಪ್ರಕರಣ ಗಳನ್ನು, ಅಚ್ಚ ಭಾರತೀಯ ಉಡುಪಾದ ಅದರ ಮಹತ್ವವನ್ನು ಅಪರೂಪವಾದ ರೀತಿಯಲ್ಲಿ

ಬಣ್ಣಿಸಿದ್ದರು. ಅದಕ್ಕೆ ಸಭಿಕರಿಂದ ಒಳ್ಳೆಯ ಪ್ರತಿಕ್ರಿಯೆ ಬಂದಿತ್ತು. ಹೀಗಾಗಿ ಆ 'ಸೀರೆ' ಪದ್ಯವನ್ನು ತರಲು ಹೇಳಿ ಎನ್ನುವುದಕ್ಕೆ ಬದಲಾಗಿ ಆತುರದಲ್ಲಿ 'ಸೀರೆ' ತರಬೇಕೆಂದು ತಿಳಿಸಿದೆ, ಕ್ಷಮಿಸಿ' ಎಂದಾಗ, ನಮ್ಮ ಯಜಮಾನರು ನಕ್ಕಿದ್ದೇ ಅಲ್ಲದೆ, ಆಗಾಗ್ಗೆ ಅದನ್ನು ನೆನಪಿಸಿಕೊಳ್ಳುತ್ತಿದ್ದರು. ನಿಸಾರರು ನನಗೆ ಅನೇಕ ಸಲ ಕವಿತೆಯನ್ನು ವಾಚಿಸುವ ಸದವಕಾಶ ವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸಿದ್ದಾರೆ. ನಾನು ಕೊಡವ ಹೆಣ್ಣುಮಗಳಾಗಿ ಕನ್ನಡ ಪದ್ಯಗಳನ್ನು ಬರೆಯುತ್ತಿರುವುದು ಅವರಿಗೆ ಹೆಮ್ಮೆಯ ವಿಷಯ.

ಇನ್ನೊಂದು ಸಂದರ್ಭವೂ ಜ್ಞಾಪಕಕ್ಕೆ ಬರುತ್ತಿದೆ. ಮಡಿಕೇರಿಯಲ್ಲಿ ೧೯೮೨ರಲ್ಲಿ ಕ.ಸಾ.ಪ.ದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಜರುಗಿತಷ್ಟೆ. ನಿಸಾರ್ ಅಹಮದ್ ಅವರು ಕೊಡಗಿನ ವಿಶಿಷ್ಟ ಸಂಸ್ಕೃತಿಯನ್ನು ಸಾರುವ ವಸ್ತುಗಳನ್ನು ಮತ್ತು ಮಾಹಿತಿಗಳನ್ನು ಒಳ ಗೊಂಡ ದಾಖಲೆಗಳ ಪ್ರದರ್ಶನಾಲಯವನ್ನು ಉದ್ಘಾಟಿಸಬೇಕಾಗಿತ್ತು. ಅವಜ್ಞೆಯಿಂದಲೊ, ಸಮಯಾಭಾವದಿಂದಲೊ, ಮತ್ತಾವ ಕಾರಣದಿಂದಲೊ ಅದನ್ನು ಪೂರ್ಣಗೊಳಿಸಲಾಗಲಿಲ್ಲ. ಖಾಲಿಯಾಗಿ ಯಾಕಿರಬೇಕೆಂದು ಊಹಿಸಿ, ಅಲ್ಲಿ ಒಬ್ಬ ಕೊಡಗಿನ ಹರಯದ ಚೆಲುವೆಯನ್ನು ಉಸ್ತುವಾರಿಗೆ ಕೂರಿಸಿದ್ದರು. ನಿಸಾರ್ ಅವರು ಭಾಷಣ ಮಾಡುತ್ತ 'ನನ್ನನ್ನು ಕೊಡವರ ಸಂಸ್ಕೃತಿಯನ್ನು ಪರಿಚಯಿಸುವ ತುಂಬ ಮಹತ್ತರವಾದ ಪ್ರದರ್ಶನಾಲಯವನ್ನು ಉದ್ಘಾಟಿಸುವಂತೆ ಈ ಸಮ್ಮೇಳನದ ವ್ಯವಸ್ಥಾಪಕರು ಕೋರಿದ್ದರು. ನಾನೂ ಹೆಮ್ಮೆ, ಸಂತೋಷಗಳಿಂದ ಒಪ್ಪಿಕೊಂಡೆ. ಅಲ್ಲಿಗೆ ಹೋದರೆ ಏನಿದೆ? ಬರೀ ಮಳಿಗೆ. ಅಲ್ಲಿ ಕೊಡಗಿನ ಯೌವನಸ್ಥೆ ಚೆಂದುಳ್ಳಿ ಚೆಲುವೆಯೊಬ್ಬಳು ವೈಯ್ಯಾರದಿಂದ ಕುಳಿತಿದ್ದಾಳೆ. ಈಗ ನೀವೇ ಹೇಳಿ, ನಾನು ಏನನ್ನು ಉದ್ಘಾಟಿಸಲಿ?' ಅಂದರು. ಅವರ ಮಾತಿನ ಇಂಗಿತವನ್ನು ಅರಿತ ಸಾವಿರಾರು ಮಂದಿಯಿಂದ ತುಂಬಿ ಹೋಗಿದ್ದ ಸಭೆ 'ಹೋ' ಎಂದು ನಕ್ಕು ನಲಿಯಿತು. ಆ ಸಭೆಯಲ್ಲಿ ನಾನೂ ಉಪಸ್ಥಿತಳಿದ್ದು ಸೂಟು ಬೂಟು ಧರಿಸಿ ಕಳಕಳಿಸಿದ್ದ ನಿಸಾರರನ್ನು, ಅವರ ಮಾತಿನ ವೈಖರಿ ಹಾಗೂ 'ಕವಿಮೇಳದಲ್ಲಿ 'ಕುರಿಗಳು, ಸಾರ್, ಕುರಿಗಳು' ಕವನವನ್ನು ವಾಚಿಸಿದ ಸ್ವಾರಸ್ಯಕರವಾದ ರೀತಿಯನ್ನು ಮೊದಲ ಬಾರಿಗೆ ನೋಡಿ, ಕೇಳಿ ಅನುಭವಿಸಿದ್ದೆ. ಮುಂದೊಮ್ಮೆ ಈ ಖ್ಯಾತನಾಮರು ನನಗೆ ಆಪ್ತರಾಗುತ್ತಾರೆಂದು ಆಗ ಕನಸು-ಮನಸಿನಲ್ಲಿಯೂ ಎಣಿಸಿರಲಿಲ್ಲ.

ನಿಸಾರರ ಮನೆಯವರಿಗೂ ನನಗೂ ಮಿಗಿಲಾದ ಆತ್ಮೀಯತೆ. ಅವರ ಮಡದಿ ಷಹನವಾಜ್ ಬೇಗಂ, ಸೊಸೆ ರೂಮಾನ್ ನವೀದ್, ಮಗಳು ಫರ್ಹೀನ್ ಫಾತಿಮಾ ಎಲ್ಲರಿಗೂ ನನ್ನನ್ನು ಕಂಡರೆ ಅಕ್ಕರೆ. ಅವರ ಅನ್ಯೋನ್ಯ ದಾಂಪತ್ಯವನ್ನು, ಮತಾತೀತವಾದ ಉದಾರ ನಡೆ ನುಡಿಗಳನ್ನು ಮತ್ತು ಸುಸಂಸ್ಕೃತ ಜೀವನ ರೀತಿಯನ್ನು ನಾನು ಬಹುವಾಗಿ ಮೆಚ್ಚಿದ್ದೇನೆ. ನಿಸಾರರು ಕನ್ನಡಮ್ಮನ ನುಡಿ ಬೊಕ್ಕಸಕ್ಕೆ ನೀಡಿರುವ ಬೆಲೆಯುಳ್ಳ ಕಾವ್ಯದ ಬಂಗಾರದ ನಾಣ್ಯಗಳ ಕಾಣಿಕೆ, ಹೊಸ ಹೊಸ ಶಬ್ದಗಳ ಮತ್ತು ವಾಕ್ಯಗಳ ಅಮೂಲ್ಯ ನಿಧಿಯ ಕೊಡುಗೆ ಕನ್ನಡಿಗರ ಪಾಲಿಗೆ ಅತ್ಯಂತ ಶ್ರೀಮಂತವಾದದ್ದು. ನಿಸಾರರಂಥ ಕವಿ ವರ್ಯರು ವಿರಳಾತಿವಿರಳರೆಂದು ನಂಬಿರುವ ಅಸಂಖ್ಯಾತ ಕನ್ನಡ ಅಭಿಮಾನಿಗಳಲ್ಲಿ ನಾನೂ ಒಬ್ಬಳು.

ವಿನಯವಂತ ವರ್ತನೆಯ ಲೇಖಕ ನಿಸಾರ್ ಅಹಮದ್



♦ ಎನ್. ಡಿ. ವೆಂಕಟೇಶ್

ಶ್ರೀ ನಿಸಾರ್ ಅಹಮದರು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಅರವತ್ತರ ದಶಕದಲ್ಲಿ ಅಧ್ಯಾಪಕರಾಗಿದ್ದರು. ಆ ಸಮಯದಲ್ಲಿ ಕೆಲವು ವರ್ಷಗಳು ನಾನು ಶಿವಮೊಗ್ಗೆಯಲ್ಲಿ ವಕೀಲನಾಗಿದ್ದೆ. ಅವರು ಆ ಕಾಲದಲ್ಲಿಯೇ ಮುನ್ನಡೆ ಸಾಧಿಸುತ್ತ ಸಾಗಿರುವ ಕವಿ ಎಂದು ಪ್ರಸಿದ್ಧರಾಗಿದ್ದರು.

ಕುವೆಂಪು ಮೈಸೂರಿನಲ್ಲಿ ವಾಸವಿದ್ದರೂ ಮಲೆನಾಡಿಗೆ ವರುಷದಲ್ಲಿ ಒಂದೆರಡು ಬಾರಿ ಬರುತ್ತಿದ್ದರು. ಆಗ, ಶಿವಮೊಗ್ಗೆಯಲ್ಲಿ ದೇವಂಗಿ ರಾಮಣ್ಣ ಗೌಡರ ಮಕ್ಕಳೂ ಕುವೆಂಪು ಅವರ ಭಾವಮೈದುನರೂ ಪ್ರಖ್ಯಾತ ವ್ಯಾಪಾರಸ್ಥರೂ ಆಗಿದ್ದ ಶ್ರೀ ಡಿ. ಆರ್. ರತ್ನಾಕರ ಗೌಡರ ಮನೆಯಲ್ಲಿ ತಂಗುತ್ತಿದ್ದರು. ನಿತ್ಯ ಸಂಜೆ ಕುವೆಂಪು ಅವರು ಊರಾಚೆಗೆ ಕೆಲ ಕಾಲ ವಾಕಿಂಗ್ ಹೋಗುವುದು ಅಭ್ಯಾಸ. ಹಾಗೆ ಅವರು ವಾಕಿಂಗ್ ಹೋಗುವಾಗ ನಾನೂ ಅವರೊಂದಿಗೆ ಹೋಗುತ್ತಿದ್ದೆ. ಆ ಸಲುವಾಗಿ ಒಂದು ಸಂಜೆ ಕುವೆಂಪುರವರು ವಾಕಿಂಗ್ ಹೊರಡುವ ಸ್ವಲ್ಪ ಸಮಯ ಮೊದಲೇ ನಾನು ಶ್ರೀ ರತ್ನಾಕರರ ಮನೆಗೆ ಹೋಗಿದ್ದೆ. ವಾಕಿಂಗ್ ಹೋಗುವ ತುಸು ಮೊದಲು ನಿಸಾರರು ಕುವೆಂಪುರವರನ್ನು ಕಾಣಲು ಬಂದರು. ಬಹುಶಃ ಅವರಿಗೆ ಕುವೆಂಪುರವರ ಪರಿಚಯ ಮೊದಲೇ ಇತ್ತು ಎಂದು ತೋರುತ್ತದೆ. ನಾನು ನಿಸಾರರನ್ನು ಮೊದಲು ಕಂಡದ್ದು ಆ ಸಂದರ್ಭದಲ್ಲಿಯೇ. ಆ ಸಂದರ್ಭ ಮೂವತ್ತು-ನಲವತ್ತು ವರ್ಷಗಳ

ಹಿಂದಿನದಾದರೂ ನನ್ನ ನೆನಪಿನಲ್ಲಿ ಇನ್ನೂ ನೆಲೆಸಿರುವ ಕಾರಣವೆಂದರೆ ಶ್ರೀ ನಿಸಾರರು ಕುವೆಂಪು ಅವರೊಂದಿಗೆ ಸಾಹಿತ್ಯ-ಸಾಹಿತ್ಯ ವಿಮರ್ಶೆಯನ್ನು ಕುರಿತು ಚರ್ಚಿಸಿದ್ದು ಮತ್ತು ಕುವೆಂಪುರವರು ವಿಮರ್ಶೆಯ ಸಂದರ್ಭದಲ್ಲಿ ಹೇಳುತ್ತಿದ್ದ ದರ್ಶನ-ಧ್ವನಿ, ರಸ-ಧ್ವನಿ ಪದ ಸಮೂಹಗಳ ಬಗ್ಗೆ ಇನ್ನೂ ಹೆಚ್ಚಿನ ವಿವರಣೆಯನ್ನು ಕುವೆಂಪುರವರಿಂದ ಬಯಸಿದ್ದು. ಆಗ ನನಗೆ ನಿಸಾರರ ಉನ್ನತತರ ಸಾಹಿತ್ಯದ ಬಗೆಗಿದ್ದ ಆಸಕ್ತಿ ಕಳಕಳಿಗಳ ಸುಳಿವು ಸಿಕ್ಕಿತ್ತು. ಜೊತೆಗೇ ಅವರ ವಿನೀತ ನಡೆನುಡಿಯ ಪರಿಚಯ ಸಹ ನನಗೆ ಆಗಿತ್ತು. ಕುವೆಂಪು ಈ ಕುರಿತು ಕೆಲ ಕಾಲ ಸಂಭಾಷಿಸಿದ ಅನಂತರ ಇದನ್ನೆಲ್ಲ ತಾನು ಇನ್ನೂ ವಿಶದವಾಗಿ ತಮ್ಮ ವಿಮರ್ಶಾ ಕೃತಿಗಳಲ್ಲಿ ಈಗಾಗಲೇ ವಿವರಿಸಿರುವುದನ್ನು ನಿಸಾರ್ ಅವರ ಗಮನಕ್ಕೆ ತಂದರು.

ಮೇಲಿನ ಸಂದರ್ಭದ ಬಳಿಕ ನಾನು ಶ್ರೀ ನಿಸಾರರನ್ನು ಮತ್ತೆ ಹತ್ತಿರದಿಂದ ಕಂಡಿದ್ದು ಹಾಗೂ ಮಾತನಾಡಿದ್ದು ಎಂಬತ್ತರ ದಶಕದಲ್ಲಿ. ಆಗ ನಾನು ಹೈಕೋರ್ಟ್‌ನಲ್ಲಿ ನ್ಯಾಯಾಧೀಶನಾಗಿದ್ದೆ. ಮಂಡ್ಯದಲ್ಲಿ ಕುವೆಂಪು ಸಾಹಿತ್ಯವನ್ನು ಕುರಿತ ಒಂದು ಸಮಾರಂಭ ನಡೆಯಿತು. ಶ್ರೀ ನಿಸಾರರನ್ನು ಮತ್ತು ನನ್ನನ್ನು ಆ ಸಭೆಗೆ ಅತಿಥಿಗಳಾಗಿ ಆಹ್ವಾನಿಸಿದ್ದರು. ಅಂದಿನ ಸಭೆಯಲ್ಲಿ ಶ್ರೀ ಕೆ. ವಿ. ಶಂಕರೇಗೌಡರೂ ಡಾ. ದೇ. ಜವರೇಗೌಡರೂ ಇದ್ದರು. ಸಭೆ ಮುಗಿದ ಅನಂತರ ನಾವಿಬ್ಬರೂ ಒಂದೇ ವಾಹನದಲ್ಲಿ ಬೆಂಗಳೂರಿಗೆ ಮರು ಪ್ರಯಾಣ ಮಾಡಿದೆವು. ಉದ್ದಕ್ಕೂ ನಿಸಾರರೊಂದಿಗೆ ಸಾಹಿತ್ಯ, ಭಾಷೆ, ಸಾಮಾಜಿಕ ಹಾಗೂ ರಾಜಕೀಯ ವಿದ್ಯಮಾನಗಳು—ಇತ್ಯಾದಿಗಳನ್ನು ಕುರಿತು ಮಾತುಕತೆ ನಡೆಸಿದ ಸವಿ ನೆನಪು ಇನ್ನೂ ಅಚ್ಚಳಿಯದೆ ಮನಸ್ಸಿನಲ್ಲಿ ಉಳಿದಿದೆ.

ಈ ನಡುವೆ ಅವರನ್ನು ನೆನಪಿಗೆ ತರುತ್ತಿದ್ದುದು 'ಕುರಿಗಳು, ಸಾರ್, ಕುರಿಗಳು' ಎಂಬ ಶೀರ್ಷಿಕೆಯ ಅವರ ಕವನ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರತಿ ವಯಸ್ಕನಿಗೂ ಓಟಿನ ಹಕ್ಕು ಇದ್ದು ವಿವೇಚನೆಯಿಂದ ವಿಚಾರಮಾಡಿ ತಮ್ಮ ಓಟಿನ ಹಕ್ಕನ್ನು ಚಲಾಯಿಸಿದರೆ ತಮ್ಮ ಸಮುದಾಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಆದರೆ ವಿಚಾರ ವಿವೇಚನೆಯ ಗಂಧವೇ ಇಲ್ಲದೆ ಜನ ಹೇಗೆ ಮುಂದಾಳುಗಳು ಎನ್ನುವವರ ಹಿಂಬಾಲಕರಾಗಿ ಮೋಸ ಹೋಗುತ್ತಿದ್ದಾರೆ ಎನ್ನುವುದನ್ನೂ ನಾವು ನೋಡುತ್ತಿದ್ದೇವೆ. ಹೀಗೆಯೇ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ವರ್ತಿಸುತ್ತಿರುವವರ ವರ್ತನೆಯನ್ನು ಸ್ವಾರಸ್ಯವಾಗಿ ವಿಡಂಬನೆಯ ಚುಚ್ಚು ನುಡಿಗಳಿಂದ ಎಚ್ಚರಿಸುತ್ತದೆ ಈ ಕವನ. ಇದನ್ನು ನಿಸಾರ್ ಅವರು ಬರೆದು ನಾಲ್ಕು ದಶಕಗಳ ಮೇಲಾಗಿದ್ದರೂ ಅದು ಇವೊತ್ತಿಗೂ ಅತ್ಯಂತ ಪ್ರಸ್ತುತ ಎನ್ನಿಸುತ್ತಿದೆ. ಇದಕ್ಕೆ ಕಾರಣ, ಅಂದಿನ ಸ್ಥಿತಿಗತಿಯೇ ಇಂದೂ ಸಹ ಮುಂದುವರೆದಿರುವುದು. ಹೆದ್ದಾರಿಗಳ ಪಕ್ಕದ ಮೈದಾನಗಳಲ್ಲಿ ಮೇಯುತ್ತಿರುವ ಕುರಿಗಳ ಹಿಂಡುಗಳನ್ನು ಕಂಡವರಿಗೆ, ಅವುಗಳ ವರ್ತನೆಯನ್ನು ನೋಡಿದವರಿಗೆ ಮಾನವನಲ್ಲಿರುವ ಕುರಿ ಬುದ್ಧಿಯ ಅಮಾಯಕತೆ, ಅಜ್ಞಾನ, ಅಸ್ವತಂತ್ರತೆಗಳು ಅರ್ಥವಾದಾವು. ಮತ್ತು ಈ ಕವನ ಸ್ವಲ್ಪವಾದರೂ ಪ್ರಜ್ಞೆ ಇರುವ ಜನರನ್ನು ಎಚ್ಚರಿಸಬಲ್ಲದು ಎಂದು ಗೋಚರ ವಾಗುತ್ತದೆ.

ಇತ್ತೀಚೆಗೆ ಕುವೆಂಪು ಜನ್ಮಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ಕುಪ್ಪಳಿಯಲ್ಲಿ ನಡೆಸಲು ಸರ್ಕಾರ ಉದ್ದೇಶಿಸಿದ್ದು ಆ ದಿಶೆಯಲ್ಲಿ ಶಿವಮೊಗ ಜಿಲ್ಲೆಯ ಕುಪ್ಪಳಿಯಲ್ಲಿ ನಡೆಯಬೇಕಾದ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಂತಿಮ ಗೊಳಿಸುವ ಸಲುವಾಗಿ ಕನ್ನಡ ಭವನದಲ್ಲಿ ಏರ್ಪಡಿಸಿದ್ದ ಸಭೆಗೆ ಶ್ರೀ ನಿಸಾರರೂ ಆಹ್ವಾನಿತ ರಾಗಿ ಬಂದಿದ್ದರು. ಕುವೆಂಪು ಜನ್ಮಸ್ಥಳದ ಕಾರ್ಯಕ್ರಮಗಳಲ್ಲಿ ಕೆಲವು ಶಿವಮೊಗ್ಗೆಯಲ್ಲಿ ನಡೆದರೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಲು ಅವಕಾಶವಿರುತ್ತದೆಯದ್ದಾರಿಂದ ಕೆಲವನ್ನಾದರೂ ಶಿವಮೊಗ್ಗ ಪಟ್ಟಣದಲ್ಲಿ ನಡೆಸುವುದು ಸೂಕ್ತವೆಂದು ಅವರು ಅಭಿಪ್ರಾಯಪಟ್ಟರು. ಈ ರೀತಿಯಿಂದ ಕುವೆಂಪು ಅವರ ಸಾಹಿತ್ಯ ಇನ್ನೂ ಹೆಚ್ಚಾಗಿ ಜನತೆಗೆ ತಲಪಬೇಕಾದ ಆಶಯವನ್ನು ವ್ಯಕ್ತಪಡಿಸಿದ್ದರು.

ಭಾಷಾವಾರು ಪ್ರಾಂತ ರಚನೆಯ ಆವಶ್ಯಕತೆಯನ್ನು ಮನಗಂಡ ಭಾರತ ಸರ್ಕಾರವು ರಾಜ್ಯಗಳ ಪುನರ್ ವಿಂಗಡನೆ ಮಾಡಿದ್ದು ಅದರಂತೆ ೧.೧೧.೧೯೫೬ರಲ್ಲಿ. ಅಂದು ನೂತನ ಕರ್ಣಾಟಕ ರಾಜ್ಯ ಉದಯವಾಯಿತು. ೫೦ ವರ್ಷಗಳು ತುಂಬಿರುವ ಈ ಹೊಸ ರಾಜ್ಯದ ಸುವರ್ಣ ಮಹೋತ್ಸವವನ್ನು ವರ್ಷವಿಡೀ ನಡೆಸಲು ಕರ್ಣಾಟಕ ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿದೆ. ಈ ಸುವರ್ಣ ಮಹೋತ್ಸವದ ವರ್ಷದಲ್ಲಿಯೇ ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಿವಮೊಗ್ಗೆಯಲ್ಲಿ ನಡೆಸುವುದೆಂದು ತೀರ್ಮಾನಿಸಿದ್ದು, ಆ ಸಮ್ಮೇಳನದ ಅಧ್ಯಕ್ಷರಾಗುವಂತೆ ಖ್ಯಾತ ಕವಿಗಳಲ್ಲೊಬ್ಬರಾದ ಹಾಗೂ ಜನಪರ ಕಾಳಜಿಯಿರುವ ಪ್ರೊ. ಕೆ. ಎಸ್. ನಿಸಾರ್ ಅಹಮದ್‌ರವರನ್ನು ಕೇಳಿಕೊಂಡಿದ್ದು ಸರ್ವೋಚಿತವಾಗಿದೆ. ನಾಡುನುಡಿಗಳ ಬಗ್ಗೆ ಪ್ರಾಮಾಣಿಕವಾಗಿ ಹಲವು ವರ್ಷಗಳಿಂದ ಏಕ ಪ್ರಕಾರವಾದ ಅಭಿಮಾನ, ಶ್ರದ್ಧಾಸಕ್ತಿಗಳನ್ನು ತೋರುತ್ತಿರುವ ಶ್ರೀಯುತರ ಆಯ್ಕೆ ಸರ್ವಸಮ್ಮತ ಮತ್ತು ಸಂತೋಷದ ಸಂಗತಿಯಾಗಿದೆ. ಶ್ರೀಯುತರು ತಮ್ಮ ಒಪ್ಪಿಗೆ ಸೂಚಿಸಿರುವ ವಿಷಯ ನನಗೆ ವೈಯಕ್ತಿಕವಾಗಿ ಹರ್ಷವನ್ನುಂಟುಮಾಡಿದೆ. ಅವರಿಗೆ ಒಳಿತಾಗಲಿ.

ಅರ್ಥಮಾತ್ರದಿಂದ ಅನರ್ಥಕ್ಕೆ ಅಸ್ತಿವಾರ ಬೀಳಬಹುದೆಂಬ ಯಥಾರ್ಥ ಹಲವರಿಗೆ ಅನುಭವಸಿದ್ಧವಾದ ಹೊರತು ಬುದ್ಧಿ ಬರುವುದಿಲ್ಲ. ನಿಸ್ತೇಜ ಮೋರೆಗಳು, ಅಸ್ತವ್ಯಸ್ತಗೊಂಡ ಮನಸ್ಸುಗಳು, ಗರಿ ಸುಟ್ಟು ಕರಿಕಾದ ಉತ್ಸಾಹಗಳು ನಮ್ಮನ್ನು ಸುತ್ತುವರಿದಿವೆ. ಸ್ವಭಾವದ ನಸನಸೆ, ವರ್ತನೆಯ ಮುಟ್ಟಿದರೆ ಮುನಿತನ ನಮ್ಮ ಬಾಳಿನ ಹಾದಿ ಬೀದಿಗಳ ನಿತ್ಯ ದೃಶ್ಯಗಳಾಗಿವೆ. ಸಾರ್ವಜನಿಕದಲ್ಲಿ ನಮ್ಮನ್ನು ಗಳಿಗೆ ಗಳಿಗೆಗೂ ಕೆಕ್ಕರಿಸಿ ನೋಡಿವೆ. ಸ್ವಕೀಯವಾದ ಸಂಕಷ್ಟ, ದಂದುಗಗಳ ಝಳ ಹೆರರಿಗೂ ಹಾಯ್ದು ಬಿಸಿ ಮುಟ್ಟಿಸುವುದರಲ್ಲಿ ಸಫಲವಾಗಿದೆ.

(ಬದುಕಿನ ದಾರುಣತೆ)



ನಿಸಾರರ ಒಡನಾಟದ ಇಣುಕುನೋಟ

◆ ವ. ರಾ. ಕುಲಕರ್ಣಿ

ಕವಿ ನಿಸಾರವರನ್ನು ನೆನಪಿಸಿಕೊಂಡಾಗಲೆಲ್ಲ ಕಣ್ಣ ಮುಂದೆ ಬರುವುದು ಅವರ ನಗೆಮುಖ, ಹೊಳೆಯುವ ಕಣ್ಣುಗಳು ಮತ್ತು ಅವರ ಅಚ್ಚುಕಟ್ಟು ಉಡುಪು. ಅವರ ನಗೆಯಲ್ಲಿ ಸ್ನೇಹದ ಮಾರ್ದವ ಇದೆ. ಅವರು ಒಂಟಿಯಾಗಿ ಕಾಣುವುದೂ ಅಪರೂಪ. ಸದಾ ಸ್ನೇಹಿತರೊಂದಿಗೆ ಇರುವ ನಿಸಾರ್ ಸಹೃದಯರು. ಯಾರ ಮನಸ್ಸನ್ನೂ ನೋಯಿಸುವುದಿಲ್ಲ. ಹೀಗೆಂದ ಮಾತ್ರಕ್ಕೆ ಅವರನ್ನು ತೀರ ಸೀದಾಸಾದಾ ಮುಗ್ಧ ವ್ಯಕ್ತಿಯೆಂದು ಯಾರೂ ಭಾವಿಸಬಾರದು. ದೊಡ್ಡವರೆನ್ನಿಸಿ ಕೊಳ್ಳುವ ಕೆಲವು ವ್ಯಕ್ತಿಗಳ ಕೃತ್ರಿಮತೆಯನ್ನು ಅನುಕರಣೆ ಮಾಡಿ ತೋರಿಸುವಲ್ಲಿ ಮತ್ತು ಸಂದರ್ಭ ಬಂದರೆ ತುಂಟತನ ತೋರುವಲ್ಲಿ ನಿಸಾರ್ ನಿಸ್ಸೀಮರು. ಈ ಪುಟ್ಟ ಲೇಖನದಲ್ಲಿ ನಾನು ಅವರ ಸಾಹಿತ್ಯ ಕುರಿತು ಬರೆಯುವ ಬದಲು ನನ್ನ ಮತ್ತು ಅವರ ಒಡನಾಟದ ಕೆಲವು ಇಣುಕು ನೋಟಗಳನ್ನು ಚಿತ್ರಿಸಲು ಯತ್ನಿಸುವೆ. ಇವು ಅವರ ಸ್ನೇಹಪರತೆ ಮತ್ತು ಸರಳತೆಯನ್ನು ಬಿಂಬಿಸುತ್ತವೆಯೆಂದು ಭಾವಿಸುತ್ತೇನೆ.

ವಿಶ್ವ ಕನ್ನಡ ಸಮ್ಮೇಳನದ ಸಿದ್ಧತೆಯಲ್ಲಿ ತೊಡಗಿದ್ದಾಗ ೧೯೮೫ರಲ್ಲಿ ನನಗೆ ಅವರ ಪರಿಚಯವಾಯಿತು. ಆಗ ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ನನ್ನ ಹಿರಿಯ ಅಧಿಕಾರಿಗಳಾಗಿದ್ದ ಶ್ರೀ ಕೆ. ಜಯಾಚಾರ್ಯರನ್ನು ಅವರು ಭೇಟಿಯಾಗಲು ಬರು

ತ್ತಿದ್ದರು. ಆಗವರು ನಮ್ಮ ಕಚೇರಿಯ ಪಕ್ಕದಲ್ಲಿಯೇ ಇದ್ದ ಸರ್ಕಾರಿ ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಆಗ ರಾಜಕೀಯ ವಲಯದಲ್ಲಿ ಉಂಟಾದ ಸ್ಥಿತ್ಯಂತರಗಳು ತುಂಬ ಉತ್ಸಾಹದಿಂದ ಸಿದ್ಧತೆಯಲ್ಲಿ ತೊಡಗಿದ್ದ ನಮ್ಮನ್ನು ನಿರಾಶೆಗೊಳಿಸಿದ್ದವು. ವಿಶ್ವ ಕನ್ನಡ ಸಮ್ಮೇಳನ ನಿಂತು ಹೋಯಿತು. ನಾವೆಲ್ಲ ಅಲ್ಲಿಂದ ಚದುರಿದೆವು.

೧೯೮೩-೮೭ರ ಅವಧಿಯಲ್ಲಿ ನಾನು ಆಗಿನ ಮುಖ್ಯ ಮಂತ್ರಿಗಳಾಗಿದ್ದ ದಿವಂಗತ ರಾಮಕೃಷ್ಣ ಹೆಗಡೆಯವರ ಕಚೇರಿಯಲ್ಲಿ ಕೆಲಸ ಮಾಡತೊಡಗಿದೆ. ಇದೇ ಅವಧಿಯಲ್ಲಿ ಶ್ರೀ ನಿಸಾರ್ ಅವರು ಕರ್ನಾಟಕ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾದರು.

ಸ್ವಲ್ಪ ಸಮಯದ ಹಿಂದಷ್ಟೇ, ೧೯೭೮-೮೦ರ ಅವಧಿಯಲ್ಲಿ ನಾನು ಆಗಿನ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಸಹಾಯಕ ಕಮೀಶನರಾಗಿ ಕೆಲಸ ಮಾಡಿದ್ದರಿಂದ ಆ ಊರಿನ ಸಾಹಿತಿ ಸ್ನೇಹಿತರೊಬ್ಬರು ಅಲ್ಲಿಯ ಫಿಲೋಮಿನಾ ಕಾಲೇಜಿನ ಕನ್ನಡ ಸಂಘದ ಕಾರ್ಯಕ್ರಮವೊಂದಕ್ಕೆ ಶ್ರೀ ನಿಸಾರ್ ಅಹಮದರನ್ನು ಕರೆತರಬೇಕೆಂದು ಒತ್ತಾಯಿಸಿದರು. ನಾನು ಅವರನ್ನು ಈ ವಿಷಯ ಕುರಿತು ಸಂಪರ್ಕಿಸಿದಾಗ ಅವರು ತಮ್ಮ ಒಪ್ಪಿಗೆ ನೀಡಿದರು. ಕಾರ್ಯಕ್ರಮದ ಮುನ್ನಾದಿನ ನಿಸಾರರು ನಾನು ಮತ್ತು ನಮ್ಮಿಬ್ಬರ ಆತ್ಮೀಯ ಸ್ನೇಹಿತರಾದ ಮತ್ತು ಈಗ ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಇಲಾಖೆಯ ಕಾರ್ಯದರ್ಶಿಗಳಾಗಿರುವ ಶ್ರೀ ಐ. ಎಮ್. ವಿಠ್ಠಲಮೂರ್ತಿಯವರು ಜೊತೆಯಾಗಿ ಪ್ರಯಾಣಿಸುವುದೆಂದು ಗೊತ್ತಾಗಿತ್ತು. ಕಾರ್ಯಕ್ರಮದ ೩-೪ ದಿನಗಳ ಮೊದಲು ಶ್ರೀ ನಿಸಾರರು ನನಗೆ ದೂರವಾಣಿ ಮಾಡಿ ಕೆಲಸದ ಒತ್ತಡ ತುಂಬ ಹೆಚ್ಚಾಗಿರು ವುದರಿಂದ ಪುತ್ತೂರಿನ ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ತಾವು ರದ್ದುಪಡಿಸಬಹುದೆ? ಎಂದು ಕೇಳಿದರು. ನನಗೆ ತುಂಬ ಆತಂಕವಾಯಿತು. ಪುತ್ತೂರಿನ ಸಾಹಿತ್ಯಾಸಕ್ತರು ಎಷ್ಟು ಉತ್ಸಾಹದಿಂದ ನಿಸಾರರ ಆಗಮನವನ್ನು ನಿರೀಕ್ಷಿಸುತ್ತಿದಾರೆಂಬುದನ್ನು ಹೇಳಿ, ಅದು ಮಹತ್ವದ ಕಾರ್ಯಕ್ರಮವಾಗಿರುವುದರಿಂದ ಅಕಾಡಮಿಯ ದೃಷ್ಟಿಯಿಂದಲೂ ತಾವು ಬರುವುದನ್ನು ನಿಲ್ಲಿಸಬಾರದೆಂದು ನಾನು ಕೋರಿದೆ. ಅನಂತರ, ಪ್ರಯಾಣದ ಸಮಯದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಹೊರಡುವುದೆಂದು ನಿರ್ಧಾರವಾಯಿತು.

ಮುಂದೆ ನಡೆದದ್ದೆಲ್ಲ ಒಂದು ಸುಂದರ ಅನುಭವ. ದಾರಿಯುದ್ದಕ್ಕೂ ಕವಿ ನಿಸಾರರು ತುಂಬ ನಿರರ್ಗಳವಾಗಿ ಹರಟಿದರು. ದಿವಂಗತ ಕವಿ ಕೆ. ಎಸ್. ನರಸಿಂಹಸ್ವಾಮಿ ಅವರನ್ನು ಕುರಿತಂತೆ ತುಂಬ ಆತ್ಮೀಯ ವಿಷಯಗಳನ್ನು ಹೇಳಿದರು. ಅವರ ಸಾಹಿತ್ಯವನ್ನು ಕುರಿತು ತುಂಬ ಸೌಹಾರ್ದದಿಂದ ಮಾತನಾಡಿದರು. ದಿವಂಗತರಾದ ಮಾಸ್ತಿ ಮತ್ತು ಪು.ತಿ.ನ.ರ ಬಗ್ಗೆ ತುಂಬ ಅಭಿಮಾನದಿಂದ ಮಾತನಾಡಿದರು. ಅಂತೂ ದೂರದ ಪ್ರಯಾಣದ ಆಯಾಸವಾಗಲಿ, ಬೇಸರವಾಗಲಿ ಉಂಟಾಗಲಿಲ್ಲ. ಪುತ್ತೂರಿನಲ್ಲಿ ತುಂಬ ಆದರದ ಆತ್ಮೀಯ ಸ್ವಾಗತ ಕಾದಿದ್ದಿತು ಎಂದು ಹೇಳಲೇ ಬೇಕಿಲ್ಲ. ಸಭೆಯ ಅನಂತರ ಅನೇಕ ಜನ ಸಾಹಿತಿಗಳು ಮತ್ತು ಕಲಾವಿದರು ಶ್ರೀ ನಿಸಾರರನ್ನು ಭೇಟಿಯಾದರು. ಸಾಹಿತ್ಯ ಅಕಾಡಮಿಯ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಅರ್ಥಪೂರ್ಣ ಚರ್ಚೆಗಳು ನಡೆದವು. ಅಂತೂ, ಅಂದಿನ ಪ್ರವಾಸ ನಮಗೆ

ಮರೆಯದ ಅನುಭವವಾದರೆ, ಶ್ರೀ ನಿಸಾರರಿಗೆ ಸಂತೋಷ ತಂದಿತೆಂದು ನಾನು ಭಾವಿಸಿದೆ.

ಈ ಮಧ್ಯದಲ್ಲಿ ನಮ್ಮಿಬ್ಬರಿಗೂ ತುಂಬ ಆತ್ಮೀಯರಾಗಿದ್ದ ದಿವಂಗತ ವೇಣುಗೋಪಾಲ ಸೊರಬರವರು ಬೆಂಗಳೂರಿಗೆ ಬಂದು ಎನ್.ಎಮ್.ಕೆ.ಆರ್.ವಿ. ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಈ ವಿಷಯ ನನಗೆ ತಿಳಿದಿರಲಿಲ್ಲ. ಒಂದು ದಿನ ಸಂಜೆ ಅವರು ನಮ್ಮ ಮನೆಯಲ್ಲಿ ದಿಢೀರನೆ ಪ್ರತ್ಯಕ್ಷವಾದಾಗಲೇ ಅದು ನನಗೆ ತಿಳಿದದ್ದು. ಅಂದು ಮಧ್ಯರಾತ್ರಿಯವರೆಗೂ ಸಾಹಿತ್ಯ ವಿಷಯಗಳನ್ನು ಮತ್ತು ಸಾಹಿತಿಗಳನ್ನು ಕುರಿತು ಮಾತನಾಡುತ್ತಿದ್ದಾಗ ಪುನಃ ಶ್ರೀ ನಿಸಾರರ ಪ್ರಸ್ತಾಪ ಬಂದಿತು. ಅವರಿಬ್ಬರೂ ಆಗಲೇ ಆತ್ಮೀಯ ಸ್ನೇಹಿತರಾಗಿದ್ದ ವಿಷಯ ನನಗೆ ತಿಳಿದದ್ದು ಆಗ. ದಾಖಲಿಸಬಹುದಾದ ಮುಂದಿನ ಬೆಳವಣಿಗೆಯೆಂದರೆ ೧೯೯೩ರಲ್ಲಿ ನಾನು ಪುನಃ ಕನ್ನಡ ಸಂಸ್ಕೃತಿ ಇಲಾಖೆಗೆ ನಿರ್ದೇಶಕನಾಗಿ ಬಂದಾಗ ಶ್ರೀ ನಿಸಾರರ ಒಡನಾಟ ನನಗೆ ದೊರಕಿದ್ದು. ಅನೇಕ ಸಂದರ್ಭಗಳಲ್ಲಿ ಅವರನ್ನು ಕಂಡಿದ್ದೇನೆ, ಅನೇಕ ಸಲಹೆಗಳನ್ನು ಪಡೆದಿದ್ದೇನೆ.

ಇದೇ ಅವಧಿಯಲ್ಲಿ ನಮ್ಮಿಬ್ಬರಿಗೂ ತುಂಬ ದುಃಖ ಉಂಟುಮಾಡಿದ ಘಟನೆಯೊಂದು ನಡೆಯಿತು. ನಮ್ಮ ಪ್ರಿಯ ಮಿತ್ರರೂ ಕವಿಗಳೂ ಆದ ವೇಣುಗೋಪಾಲ ಸೊರಬ ಮೃತರಾದರು. ಅವರ ಮರಣ ಸಂಭವಿಸಿದ ಸನ್ನಿವೇಶ ಕೂಡ ತುಂಬ ಹೃದಯ ವಿದ್ರಾವಕ ಘಟನೆಯಾಗಿದ್ದಿತು. ದಕ್ಷಿಣ ಭಾರತದ ಪ್ರವಾಸದಿಂದ ಹಿಂದಿರುಗುವಾಗ ಅವರು ಬಸ್ಸಿನಲ್ಲಿಯೇ ಕೊನೆಯುಸಿರು ಎಳೆದಿದ್ದರು. ಸಂಕೋಚ ಪ್ರವೃತ್ತಿಯ, ಅತ್ಯಂತ ಸಾಧು ಸ್ವಭಾವದ ಈ ಬಹು ಸೂಕ್ಷ್ಮ ಹೃದಯಿಯನ್ನು ಮರೆಯುವುದು ಸುಲಭವಾಗಿರಲಿಲ್ಲ. ವೇಣುಗೋಪಾಲರು ಬದುಕಿರುವಾಗಲೂ ಶ್ರೀ ನಿಸಾರರು ಅವರ ಪ್ರತಿಭೆಗೆ ತಕ್ಕ ಜನ ಮನ್ನಣೆ ಇನ್ನೂ ದೊರೆತಿಲ್ಲವೆಂದು ಅನೇಕ ಸಲ ನನ್ನಲ್ಲಿ ಪ್ರಸ್ತಾಪಿಸಿದ್ದರು. ಅವಕಾಶ ಬಂದಾಗಲೂ ತಮ್ಮ ಪ್ರತಿಭೆಯನ್ನು ಕೆಲ ಮಟ್ಟಿಗಾದರೂ ಪ್ರದರ್ಶಿಸಲು ಅವರು ಮುಂದಾಗುವುದಿಲ್ಲ ಎಂಬುದು ಶ್ರೀ ನಿಸಾರರ ಕೊರಗಾಗಿದ್ದಿತು. ಸತತ ಅಭ್ಯಾಸಿ, ಪ್ರತಿಭಾವಂತ ಕವಿ ಮತ್ತು ಸಮರ್ಥ ವಿಮರ್ಶಕರಾಗಿದ್ದರೂ ಆಪ್ತ ವಲಯದ ಹೊರಗೆ ಅವರು ಅನಾಮಧೇಯ ರಾಗಿಯೇ ಉಳಿದರು. ೧೯೭೦ರಿಂದಲೇ ಪ್ರಬುದ್ಧ ವಿಮರ್ಶೆಗಳನ್ನು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಬರೆಯಲು ಪ್ರಾರಂಭಿಸಿದರು. ಕವಿ ನಿಸಾರ್‌ರ ಹಲವು ಮಹತ್ವದ ಕವನಗಳ ವಿಮರ್ಶೆಯನ್ನು ಅವರು ಬರೆದಿದ್ದಾರೆ. ಅಷ್ಟೇ ಅಲ್ಲ, ನಿಸಾರರ ಕಾವ್ಯರಚನೆಯ ಪ್ರಾರಂಭಿಕ ಅವಧಿಯಲ್ಲಿ ಅವರ ಪದ್ಯವೊಂದರ ಪ್ರಾಯೋಗಿಕ ವಿಮರ್ಶೆಯನ್ನು ಬರೆದು, ಅನೇಕ ಸೂಕ್ಷ್ಮ ಒಳ ನೋಟಗಳನ್ನು ಕಾಣಿಸಿದ ಪ್ರಥಮ ವಿಮರ್ಶಕ ಶ್ರೀ ವೇಣುಗೋಪಾಲ ಸೊರಬ ಅವರು. ಪ್ರಾಯಶಃ ಕನ್ನಡದ ಎಲ್ಲ ಪ್ರಮುಖ ಸಾಹಿತಿಗಳ ಕೃತಿಗಳನ್ನು ಕುರಿತು ಅವರು ಅನಂತರ ಬರೆದಿದ್ದಾರೆ.

ದಿವಂಗತ ಸೊರಬರ ನೆನಪು ಉಳಿಸುವ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದು ನಮ್ಮ ಕರ್ತವ್ಯವಾಗಿದ್ದಿತು. ಅವರ ಬರಹಗಳಿಂದ ಆಯ್ದ ಲೇಖನಗಳ ಒಂದು ಕೃತಿ ಪ್ರಕಟಿಸುವುದೆಂದು ನಿರ್ಧಾರ ಮಾಡಿದೆವು. ಈ ಕೃತಿಯ ಸಂಪಾದನೆಗೆ ಕನಕಪುರದ

ಕಾಲೇಜಿನಲ್ಲಿ ಸಹೋದ್ಯೋಗಿಗಳಾಗಿದ್ದ ಮತ್ತು ಸೊರಬರ ನಿಕಟವರ್ತಿಗಳೂ ಆಗಿದ್ದ ಶ್ರೀ ಮಲ್ಲೇಪುರಂ ಜಿ. ವೆಂಕಟೇಶರ ಹೆಸರನ್ನು ಶ್ರೀ ನಿಸಾರ್‌ರು ಸೂಚಿಸಿದರು. ಈ ಕೃತಿ ಪ್ರಕಟವಾಗುವ ಮೊದಲೇ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಸಂಸ್ಮರಣ ಕಾರ್ಯಕ್ರಮ ಏರ್ಪಡಿಸಿದ ಸಂದರ್ಭದಲ್ಲಿ ದಿ.ಚಿ.ನ. ಮಂಗಳಾರವರು ಅವರ ಕಾಲೇಜಿನ ವತಿಯಿಂದ ವೇಣುಗೋಪಾಲರ ಕೊನೆಯ ಕವನ ಸಂಕಲನ 'ಹೂ ಹಿಗ್ಗು' ಪ್ರಕಟಿಸಿದರು. ಅಂದಿನ ಸಭೆಯಲ್ಲಿ ಶ್ರೀ ನಿಸಾರ್‌ರು ಅಗಲಿದ ಗೆಳೆಯನಿಗೆ ತುಂಬು ಹೃದಯದ ಕಂಬನಿ ಮಿಡಿದರೆಂದು ನನ್ನ ನೆನಪು. ಮುಂದೆ ೧೯೯೫ರ ಡಿಸೆಂಬರಿನಲ್ಲಿ 'ವೇಣುಗೋಪಾಲ ಸೊರಬ ಅವರ ಆಯ್ದ ಲೇಖನಗಳು' ಪ್ರಕಟವಾಯಿತು. ಆಗ ನಿಸಾರರಿಗಾದ ಸಂತಸ ಅಷ್ಟಿಷ್ಟಲ್ಲ.

ಶ್ರೀ ನಿಸಾರರು ಕನ್ನಡದ ತುಂಬ ಜನಪ್ರಿಯ ಕವಿಗಳೆಂಬುದರಲ್ಲಿ ವಿವಾದವೇ ಇಲ್ಲ. ರಮ್ಯ, ಪ್ರಾಸಬದ್ಧ ಭಾವಗೀತೆಗಳಿಗೆ ಹೆಸರಾಗಿರುವ ಈ ಕವಿ ವೈವಿಧ್ಯಮಯ ಕಾವ್ಯರಚನೆ ಮಾಡಿದ್ದಾರೆ. 'ನಿತ್ಯೋತ್ಸವ' ಎಲ್ಲರೂ ಗುಣಗುಣಿಸುವ ಹೃದಯಂಗಮ ನಾಡಗೀತೆ ಯಾದರೆ, 'ಕುರಿಗಳು, ಸಾರ್, ಕುರಿಗಳು' ಅತ್ಯಂತ ಜನಪ್ರಿಯ ವಿಡಂಬನೆ. ಅವರ ಕವನಗಳಲ್ಲಿ ಹಾಸ್ಯ ಸೂಕ್ತ ಸ್ಥಾನ ಪಡೆದಿದೆ. ಮನೆಯಲ್ಲಿನ ಮುಸ್ಲಿಮ್ ಸಂಪ್ರದಾಯ ದೊಂದಿಗೆ ಮನೆಯಾಚಿನ ಭಾರತದ ಮತ್ತು ಕನ್ನಡ ಸಂಸ್ಕೃತಿಯನ್ನು ಶ್ರೀ ನಿಸಾರ್‌ರು ಹದವಾಗಿ ರೂಢಿಸಿಕೊಂಡಿದ್ದಾರೆ. ಹಿರಿಯ ಪ್ರಾಯದ ನಿಸಾರ್‌ರು ಈಗ ಪ್ರಬುದ್ಧ ಕವಿ. ಅವರಿಗೆ ಕನ್ನಡ ಸಾಹಿತ್ಯದ ಹಿರಿಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ. ತರುಣ ಕವಿಗಳಿಗೆ ಅವರು ಆದರ್ಶವಾಗಿದ್ದಾರೆ. ಅವರು ರಚಿಸಿದ ವಿಪುಲ ಸಾಹಿತ್ಯದ ಆಳವಾದ ಅಭ್ಯಾಸ, ಚಿಂತನೆ, ವಿಮರ್ಶೆ ಮತ್ತು ಮೌಲ್ಯಮಾಪನದ ಅಗತ್ಯವಿದೆ. ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಬಹಳ ಹಿಂದೆಯೇ ಮಾಡಿರುವ ದಿ. ವೇಣುಗೋಪಾಲ ಸೊರಬರು ತಮ್ಮ 'ಹೊಸ ಆವಿಷ್ಕಾರದ ಕವಿ: ನಿಸಾರ್ ಅಹಮದ್' ಎಂಬ ಲೇಖನದಲ್ಲಿ ಹೀಗೆ ಬರೆಯುತ್ತಾರೆ: 'ಭಾವಗೀತಾತ್ಮಕವಾದ ಯಾವುದೇ ಒಂದು ಭಾವವನ್ನು ನೇರವಾಗಿ ರೂಪಿಸುವುದೇ ಇವರ ಮೂಲ ಕವನಗಳ ಗುಣ. ಆಡು ಭಾಷೆಯನ್ನು ಬಹಳವಾಗಿ ಬಳಸಿ, ಆಡುಮಾತಿನ ಲಯಕ್ಕೆ ತಮ್ಮ ಸಾಲುಗಳನ್ನು, ಪದಪುಂಜಗಳನ್ನು ಪಳಗಿಸಿ, ಆತ್ಮೀಯ ಕಂಪನ್ನು ತಮ್ಮ ಕವನಗಳಲ್ಲಿ ಸಾಧಿಸಿದ್ದಾರೆ.'

ಶ್ರೀ ನಿಸಾರ್ ಅಹಮದ್‌ರ ಕಾವ್ಯದ ನಿಜವಾದ ಕಾಳಜಿಗಳನ್ನು ಗುರುತಿಸುವ ಪ್ರಯತ್ನದಲ್ಲಿ ದಿ. ವೇಣುಗೋಪಾಲ ಸೊರಬರು ಈ ಅಭಿಪ್ರಾಯ ತಳೆಯುತ್ತಾರೆ. 'ಕೊನೆಯದಾಗಿ, ನಿಸಾರ್ ಅವರ ಈಚಿನ ಮುಖ್ಯ ಕವಿತೆಗಳನ್ನು ಗಮನಿಸಿದಾಗ, ಸ್ವಂತಿಕೆ ಯನ್ನು ಸಾಧಿಸುವ ಚಪಲವೊಂದೇ ಅವರ ಗುರಿಯಾಗಿಲ್ಲ—ಎಂಬುದು ದೃಢಪಡುತ್ತದೆ. ಎರಡನೆಯದಾಗಿ, ತನ್ನ ಮತ್ತು ಹೊರಗಿನ ಸಂಸ್ಕೃತಿಗಳ ಸಮನ್ವಯ ಸಾಧ್ಯವಿಲ್ಲವೆಂದು ಭಾವಿಸಿದರೂ ಎರಡೂ ವಿರೋಧಿ ಶಕ್ತಿಗಳ, ಬಣಗಳ ಸಮನ್ವಯ, ಹಾಗೂ ಪರಸ್ಪರ ಮುಖಾಮುಖಿಗಳಿಂದಲೇ ಹೊಸದರ ಆವಿಷ್ಕಾರ ಸಾಧ್ಯ ಎಂದು ಅವರು ಭಾವಿಸಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ. ಮೂರನೆಯದಾಗಿ, ಈ ಕವಿ ತನ್ನ ಪರಿಸರದಿಂದಾಗಿ,

ಬೇರೆಯೆಲ್ಲ ಸಮಕಾಲೀನ ಕವಿಗಳಿಗಿಂತ ಹೆಚ್ಚಾಗಿ—ವೈಜ್ಞಾನಿಕ ದೃಷ್ಟಿಕೋನ, ಅದರ ಅನ್ವೇಷಣೆ ಮತ್ತು ವಿಚಕ್ಷಣೆ—ಇವುಗಳಿಂದ ಪ್ರಭಾವಿತರಾಗಿದ್ದಾರೆ ಎಂದು ತಿಳಿದು ಬರುತ್ತದೆ. ಇಂತಹ ಕವಿಯ ಮುಂದಿನ ಬೆಳವಣಿಗೆಯನ್ನು ನಾವು ಕುತೂಹಲದಿಂದ ಎದುರು ನೋಡುವುದು ನಮ್ಮ ಕರ್ತವ್ಯವೇ ಆಗಿದೆ. ಈ ಮಾತುಗಳನ್ನು ಬರೆದು, 'ಸಾಕ್ಷಿ' ಪತ್ರಿಕೆ ಯಲ್ಲಿ ಪ್ರಕಟಿಸಿ ಹಲವು ವರ್ಷಗಳೇ ಗತಿಸಿವೆ. ಆದರೆ, ಅವು ಇಂದೂ ಪ್ರಸ್ತುತವಾಗಿವೆ ಎಂದು ಭಾವಿಸುತ್ತೇನೆ. ಈ ಕವಿಪುಂಗವರ ಸಾರಥ್ಯದಲ್ಲಿ ಶಿವಮೊಗ್ಗೆಯಲ್ಲಿ ಡಿಸೆಂಬರ್ ಮಾಹೆಯಲ್ಲಿ ಜರುಗಲಿರುವ ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ತುಂಬ ಯಶಸ್ವಿಯಾಗಿ ನಡೆಯಲೆಂದು ಹಾರೈಸುವೆ.

ಯಾವಜ್ಜೀವವೂ ಬಾಳ್ವೆಯನ್ನು ತುದಿಗಾಣದ ಸಂಗ್ರಾಮ ಕಣವೆಂದು ಸ್ವೀಕರಿಸುವ, ನಿಸ್ತೀರವಾದ ಏಗಾಟಗಳ ಅಲ್ಲೋಲ ಕಲ್ಲೋಲವೇ ಜೀವಿತ ಶೈಲಿಯಾಗಿ ಒಪ್ಪಿರುವ ಹಾಗೂ ಹಣದ ಮುಗ್ಗಟ್ಟಿನಿಂದ ತತ್ತರಿಸುವ ವ್ಯಕ್ತಿ ಮತ್ತು ಸಮಾಜ ಉನ್ನತ ಮಟ್ಟದ ಆತ್ಮವಿಕಾಸವನ್ನು ರೂಢಿಸಿಕೊಂಡಿರುವ ಉದಾಹರಣೆಗಳು ವಿರಳಾತಿವಿರಳ. ಆದ್ದರಿಂದ ಬಾಹ್ಯ ಸಮೃದ್ಧಿ, ಸ್ವಾತಂತ್ರ್ಯ, ಸ್ವಾಸ್ಥ್ಯಪರ ಆವರಣ ನಮ್ಮ ರಾಷ್ಟ್ರ ಜೀವನದಲ್ಲಿ ಮುಪ್ಪುರಿಗೊಳ್ಳಬೇಕು. ಅದನ್ನು ಆಗಗೊಳಿಸುವುದು ಧರ್ಮದ ಧ್ಯೇಯವಾಗಬೇಕು; ತಲೆಯೊಡೆಯು ವುದಲ್ಲ.

(ಧರ್ಮದ ಕರ್ತವ್ಯ)

✧ ✧ ✧

ಹಿಂದಿನವರ, ಹೆರವರ ಅನುಭವಗಳೆಂದರೆ ಎಷ್ಟೋ ತಪ್ಪು ಹೆಜ್ಜೆಗಳನ್ನಿಟ್ಟು ಕೊನೆಗೆ ಸರಿಯಾದ ಜಾಡನ್ನು ಹಿಡಿದುಕೊಂಡಿರುವುದೇ ಆಗಿದೆ. ಹೀಗೆ ಹಾದಿ ಸಿದ್ಧವಿದ್ದರೂ ಸ್ವಾನುಭವದ ಹೆಸರಿನಲ್ಲಿ ನಾವು ತಪ್ಪು ಅಡಿಗಳನ್ನು ಇಟ್ಟೇ ಮಾರ್ಗಾನ್ವೇಷಣೆ ಮಾಡಬೇಕಿಲ್ಲ ಅಲ್ಲವೆ? ಇತರರ ಅನುಭವದಿಂದ ನಮ್ಮ ದೈಹಿಕ, ಮಾನಸಿಕ ಪ್ರಯಾಸ ಪರಿಶ್ರಮಗಳನ್ನು, ಸಮಯವನ್ನು ತಗ್ಗಿಸಿಕೊಳ್ಳ ಬಹುದು. ಒಳ್ಳೆಯ ಮನುಷ್ಯರಾಗಿ, ಪೌರರಾಗಿ ನಮ್ಮನ್ನು ಪರಿವರ್ತಿಸು ವುದರಲ್ಲಿ ಸಹ ಬೇರೆಯವರ ಅನುಭವಗಳು ಕೈದೀವಿಗೆಯಾಗಬಲ್ಲವು. ಹಿಂದಿನಿಂದ ಅನೂಚಾನವಾಗಿ ಬಂದಿರುವ ಅನುಭವ ಪರಂಪರೆಯೇ ನಮ್ಮ ಕಲೆ ಸಾಹಿತ್ಯ ವಿಜ್ಞಾನ ಸಂಸ್ಕೃತಿ ಸಭ್ಯತೆಗಳ ಬೆಳವಣಿಗೆಗೆ ಜೀವ ಜಲವಾಗಿದೆ.

(ಬೇರೆಯವರ ಅನುಭವ)



ದುಬೈನಲ್ಲಿ ಕನ್ನಡದ ಕಂಪನ್ನು ಪಸರಿಸಿದ ಕವಿ ವರೇಣ್ಯ

♦ ರಮಾ ರಾಮನ್
(ದುಬೈ, ಯುಎಇ)

೧೯೯೪ರ ಆಗಸ್ಟ್ ತಿಂಗಳಿನಲ್ಲಿ ನಮ್ಮ ಮಮತೆಯ ಕನ್ನಡ ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ಕೊಲ್ಲಿ ರಾಷ್ಟ್ರದ ದುಬೈ ಪಟ್ಟಣಕ್ಕೆ ಬರುತ್ತಿರುವುದಾಗಿ ನಮ್ಮ ಕುಟುಂಬದ ಸ್ನೇಹಿತರೊಬ್ಬರಿಂದ ತಿಳಿದು ಬಂದಿತು. ನನ್ನ ಪತಿ ಇ.ಪಿ.ಎಸ್. ರಾಮನ್ ಮತ್ತು ನಾನು ಈ ಸುದ್ದಿಯಿಂದ ಬಹಳ ಸಂತೋಷಪಟ್ಟೆವು. ಈ ಕವಿಗಳ ನೇರವಾದ ಪರಿಚಯ ನಮಗಿಲ್ಲದಿದ್ದರೂ ಅವರ ಕವನಗಳ ಮೂಲಕ, ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಅವರ ಭಾವಚಿತ್ರ ಮತ್ತು ಬರಹಗಳ ಮೂಲಕ ಅವರು ನಮಗೆ ಚಿರಪರಿಚಿತರಾಗಿದ್ದರೆಂದೇ ಹೇಳಬೇಕು.

ದುಬೈನ ಕರ್ನಾಟಕ ಸಂಘದಲ್ಲಿ ಅವರ 'ಸುಮಧುರ' ಮತ್ತು 'ನವೋಲ್ಲಾಸ' ಹೆಸರಿನ ದನಿ ಸುರುಳಿಗಳು ಸೆಪ್ಟೆಂಬರ್ ತಿಂಗಳಿನಲ್ಲಿ ಬಿಡುಗಡೆಯಾಗುತ್ತಿರುವುದಾಗಿಯೂ ಕವಿಗಳಿಗೆ ಆತ್ಮೀಯ ಸನ್ಮಾನ ಏರ್ಪಡಿಸಿರುವುದಲ್ಲದೆ ಅವರ ಗೀತೆಗಳನ್ನು ನಮ್ಮ ನಗರದ ಕೆಲವು ಕನ್ನಡ ಕುಟುಂಬಗಳು ಹಾಡುತ್ತಿರುವುದಾಗಿಯೂ ಸನ್ಮಾನವನ್ನು ಇಲ್ಲಿನ ಪ್ರತಿಷ್ಠಿತ ಮತ್ತು ಪ್ರಖ್ಯಾತವಾದ ದುಬೈ ಇಂಟರ್ ಕಾಂಟಿನೆಂಟಲ್ ಹೋಟೆಲಿನಲ್ಲಿ ನಡೆಸುವುದಾಗಿಯೂ ನಮಗೆ ಗೊತ್ತಾಯಿತು. ಅವರನ್ನು ನಮ್ಮ ಮನೆಗೂ ಕರೆದು ಅವರ ಕವನಗಳನ್ನು ಮತ್ತು ಮಾತುಗಳನ್ನು ಕೇಳುವ ಆಸೆ ನಮಗಿತ್ತು.

ನಿಸಾರರನ್ನು ಅವರ ತಂಗಿ ಶ್ರೀಮತಿ ಷಹನಾಜ್ ಮತ್ತು

ಲೆಬನೀಸ್ ಮೂಲದ ಅವರ ಪತಿವರ್ಯರಾದ ಜಿ. ದಾಘರ್ ಅವರು ಕರೆಸಿ, ಅವರ ಮನೆಯಲ್ಲಿ ಉಳಿಸಿಕೊಂಡಿದ್ದರು. ನಮಗೆ ಅವರ ಹೆಚ್ಚಿನ ಪರಿಚಯವಿಲ್ಲದಿದ್ದರೂ ನಿಸಾರರ ಮತ್ತೊಬ್ಬ ಸಹೋದರಿ ಶ್ರೀಮತಿ ದಿಲ್‌ಷಾದ್ ಅವರು ಚೆನ್ನಾಗಿ ಗೊತ್ತಿದ್ದರು. ಅವರ ಪತಿ ಶ್ರೀನಿವಾಸ್ (ಸನ್ನು) ಮತ್ತು ಮಗ ಸಂದಿಲ್ ನಮ್ಮ ಮನೆಗೆ ಆಗೀಗ ಬಂದು ಹೋಗುತ್ತಿದ್ದರು. ಮುಂದೆ ಇವರ ಮೂಲಕ ನಮಗೆ ನಿಸಾರರ ನೇರ ಪರಿಚಯವಾಗಿ, ಅವರು ನಮ್ಮ ಕುಟುಂಬಕ್ಕೆ ಅತ್ಯಂತ ಆಪ್ತರಾದರು.

ಪೂರ್ವಭಾವಿಯಾಗಿ ನಮ್ಮ ಕುಟುಂಬದ ಬಗೆಗೆ ಒಂದೆರಡು ಸ್ವಕೀಯ ವಿಷಯಗಳನ್ನು ನಿವೇದಿಸಿಕೊಂಡರೆ ಅಪ್ರಸ್ತುತವಾಗಲಾರದೆಂದು ಭಾವಿಸುತ್ತೇನೆ. ನಮ್ಮ ಪತಿ ಇ.ಪಿ.ಎಸ್. ರಾಮನ್ ಬೆಂಗಳೂರಿನ ಮಲ್ಲೇಶ್ವರದವರು. ಬಿ.ಇ. ಸಿವಿಲ್ ಡಿಗ್ರಿ ಮುಗಿಸಿದವರು. ವಿದ್ಯಾರ್ಥಿ ದೆಸೆಯಿಂದಲೂ ಅವರಿಗೆ ಸಾಹಿತ್ಯದಲ್ಲಿ ಬಹಳ ಆಸಕ್ತಿ. ದುಬೈಗೆ ಬಂದ ಮೇಲೂ ನಮ್ಮ ನಾಡಿನ ಆಗು-ಹೋಗುಗಳ ಬಗೆಗೆ ಇನ್ನಿಲ್ಲದ ಕಳಕಳಿ. ಸಾಮಾಜಿಕ ಮತ್ತು ರಾಜಕೀಯಗಳಿಗೆ ಸಂಬಂಧಿಸಿದ ವಿಷಯಗಳ ಬಗೆಗೆ ಅವರು 'ಪ್ರಜಾವಾಣಿ' ಪತ್ರಿಕೆಯ ವಾಚಕರ ವಾಣಿಗೆ ಆಗಾಗ ಓಲೆಗಳನ್ನು ಕಳಿಸುತ್ತಿದ್ದರು. ದುಬೈ ಕರ್ನಾಟಕ ಸಂಘದ ಸ್ಥಾಪನೆಯಲ್ಲಿ ಪಾಲ್ಗೊಂಡಿದ್ದ ಆರಂಭದ ಕನ್ನಡಿಗರಲ್ಲಿ ಇವರದೂ ಹಿರಿಯ ಪಾಲು. ವೈಯಕ್ತಿಕ ಕಾರಣಗಳಿಂದ ಈಚೆಗೆ ಆ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸು ತ್ತಿಲ್ಲ. ಆದರೆ ಕೊಲ್ಲಿ ರಾಷ್ಟ್ರಗಳಲ್ಲಿ ಕನ್ನಡದ ಪುರೋಭಿವೃದ್ಧಿಗಾಗಿ ಸದಾ ಹಾರೈಸುತ್ತಿರು ವವರು. ಇನ್ನು ನನ್ನ ಬಗ್ಗೆ: ಮೂಲತಃ ಮೈಸೂರಿನವಳಾದ ನನಗೂ ನನ್ನ ಪತಿ ರಾಮನ್ ರವರ ತರಹವೇ ಸಾಹಿತ್ಯದಲ್ಲಿ ಅತೀವ ಮಮತೆ. ಜೊತೆಗೆ ಸಂಗೀತದಲ್ಲೂ ಕೂಡ. ಸಂಸ್ಕೃತ ಎಂ.ಎ. ಮುಗಿಸಿದ ರಾಮನ್ ಅವರ ಕೈಹಿಡಿದ ಮೇಲೆ, ಉದ್ಯೋಗದ ನಿಮಿತ್ತ ಅವರು ೭೫ರ ದಶಕದಲ್ಲೇ ದುಬೈಗೆ ಬಂದು 'ಅಲ್ ಅಹ್ಮದಿಯ ಕಂಟ್ರಾಕ್ಟಿಂಗ್ ಕಂಪೆನಿ'ಯನ್ನು ಸೇರಿಕೊಂಡರು.

ಆಗ ಇಲ್ಲಿಗೆ ಬಂದ ಕನ್ನಡ ಕುಟುಂಬಗಳು ಹೆಚ್ಚಿರಲಿಲ್ಲ. ಬಂದಿದ್ದವರಲ್ಲಿ ದಕ್ಷಿಣ ಕನ್ನಡದವರು ಅಧಿಕ ಮಂದಿ. ಉಳಿದಂತೆ ಭಾರತೀಯರಲ್ಲಿ ಮಲೆಯಾಳಿಗಳದೇ ಹಾವಳಿ. ಪರ ರಾಷ್ಟ್ರದಲ್ಲಿದ್ದು ತಾಯ್ನಾಡು, ತಾಯ್ನುಡಿಯ ಬಗೆಗೆ ಕಳಕಳಿಯನ್ನು ಉಳಿಸಿಕೊಳ್ಳುವ ಹಂಬಲ ನಮ್ಮಲ್ಲಿ ಕೆಲವರಿಗೆ ಉತ್ಕಟವಾಗಿ ನಾವೆಲ್ಲ ಕೆಲವು ದಿನಗಳಿಗೆ ಒಮ್ಮೆ ಸೇರಿ ಕನ್ನಡದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೆವು. ನಮ್ಮಲ್ಲಿ, ನಮ್ಮ ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ವ್ಯಕ್ತಪಡಿಸುವ ಅವಕಾಶವನ್ನು ಕಲ್ಪಿಸಿಕೊಂಡೆವು. ಆಗ ನಮಗೆ ಒಂದು ವಿಶಾಲವಾದ ಕಟ್ಟಡವಾಗಲಿ ಸುಸಜ್ಜಿತವಾದ ವೇದಿಕೆಯಾಗಲಿ ಇರಲಿಲ್ಲ. ಹೀಗಾಗಿ ಸರದಿಯ ಪ್ರಕಾರ ನಮ್ಮ ನಮ್ಮ ಮನೆಗಳಲ್ಲೇ ಸಭೆ ಸೇರುತ್ತಿದ್ದೆವು: ಅತಿಥಿಗಳಿಗೆ ಸತ್ಕಾರ ಏರ್ಪಡಿಸುತ್ತಿದ್ದೆವು. ಅಪರೂಪಕ್ಕೆ ಯಾರಾದರೂ ಗಾಯಕರೊ, ಸಿನಿಮಾ ಅಥವಾ ರಂಗ ಕಲಾವಿದರೊ ಬಂದರೆ ಅವರನ್ನು ಆಮಂತ್ರಿಸಿ ಕಾರ್ಯಕ್ರಮ ನಡೆಸಿ ಯಥಾಮತಿ ಸನ್ಮಾನ ಮಾಡುತ್ತಿದ್ದೆವು. ಇಷ್ಟನ್ನು ಬಿಟ್ಟರೆ, ಇವೊತ್ತಿನ ಹಾಗೆ ದುಬೈ ಕರ್ನಾಟಕ ಸಂಘ ನೂರಾರು ಸದಸ್ಯರನ್ನು ಒಳಗೊಂಡು ಸುಸಂಘಟಿತವಾಗಿ ಆಗ ಇರಲಿಲ್ಲ. ಅದ್ದೂರಿಯಾಗಿ ಸಭೆ

ಸಮಾರಂಭಗಳನ್ನು ಪಂಚತಾರಾ ಹೋಟೆಲುಗಳಲ್ಲೋ ಭಾರಿ ಸಾರ್ವಜನಿಕ ಭವನಗಳಲ್ಲೋ ನಡೆಸುತ್ತಿರಲಿಲ್ಲ. ವರ್ಷಕ್ಕೊಮ್ಮೆ ಬಹು ಸಂಖ್ಯೆಯ ಸದಸ್ಯರ ಕುಟುಂಬಗಳು ವಿಹಾರಾರ್ಥ (ಪಿಕ್ನಿಕ್)ವಾಗಿ ಪ್ರೇಕ್ಷಣೀಯ ಧಾಮಗಳಿಗೆ ಹೋಗಿ ಬರುತ್ತಿರಲಿಲ್ಲ. ಒಟ್ಟಿನಲ್ಲಿ ಆ ಕಾಲದಲ್ಲೂ 'ಬಡವ ನೀನು ಮಡಗಿದ ಹಾಗಿರು' ಎನ್ನುವಂತಹ ಸ್ಥಿತಿ ನಮ್ಮ ಕರ್ನಾಟಕ ಸಂಘ ಮತ್ತು ಕನ್ನಡಿಗರದು.

ಆಗ ಇಲ್ಲಿನ ಕನ್ನಡಿಗರಿಗೆ, ಕರ್ನಾಟಕದೊಡನೆ ಇದ್ದ ಬಹು ಮುಖ್ಯ ಕೊಂಡಿಗಳೆಂದರೆ 'ಪ್ರಜಾವಾಣಿ', 'ಉದಯವಾಣಿ', 'ಸುಧಾ', 'ಮಯೂರ', 'ತರಂಗ', 'ತುಷಾರ'ಗಳೇ. ತಾಯ್ನಾಡಿನ ಜೊತೆಗೆ ಸಂಬಂಧವನ್ನು ಸ್ಥಿರವಾಗಿಸಿಕೊಳ್ಳುವುದರಲ್ಲಿ ಈ ಪತ್ರಿಕೆಗಳು ನಮಗೆ ನೆರವಾದದ್ದನ್ನು ಕೃತಜ್ಞತೆಯಿಂದ ನೆನೆಯಬೇಕು. ಈ ಪತ್ರಿಕೆಗಳು ದೂರದ ಕಾರಣದಿಂದ ನಮಗೆ ಆಗ ಕೊಂಚ ತಡವಾಗಿ ಬರುತ್ತಿದ್ದರೂ ಅವುಗಳನ್ನು ಓದಲು ತವಕಪಡುತ್ತಿದ್ದುದನ್ನು ಮರೆಯುವಂತಿಲ್ಲ. ಇವೊತ್ತಿನ ಕೊಲ್ಲಿ ರಾಷ್ಟ್ರದ ನಿವಾಸಿಗಳಿಗೆ ಈ ತವಕ, ಸಂಭ್ರಮ, ಸಂತೋಷಗಳ ಅರಿವಾಗುವ ಸಂಭವ ಕಡಮೆ. ಏಕೆಂದರೆ ಈಗ ಭಾರತದ ಯಾವುದೇ ದಿನಪತ್ರಿಕೆ ಅಲ್ಲಿನವರಿಗೆ ಸಿಕ್ಕುವ ಹಲವಾರು ತಾಸುಗಳ ಮುಂಚೆಯೇ ನಮಗೆ ಅಂತರ್ವಾಹಿನಿ (ಇಂಟರ್‌ನೆಟ್ ಮೂಲಕ), ಟಿ.ವಿ.ಗಳ ವಿವಿಧ ಛಾನೆಲ್ಲುಗಳ ಮೂಲಕ ಹಲವಾರು ಸಂಗತಿಗಳು ವೇದ್ಯವಾಗಿರುತ್ತವೆ. ನಮ್ಮ ದುಬೈ ಮತ್ತು ಸುತ್ತಮುತ್ತಲಿನವರಿಗೆ ಪ್ರಪಂಚದ ಹಲವು ಭಾಷೆಗಳ, ಅದರಲ್ಲೂ ಕನ್ನಡವನ್ನೂ ಒಳಗೊಂಡಂತೆ ಭಾರತದ ಬೇರೆ ಬೇರೆ ಪ್ರಾಂತ್ಯಗಳ ಪತ್ರಿಕೆಗಳನ್ನು ಒದಗಿಸುತ್ತಿದ್ದ ಏಕೈಕ ಅಂಗಡಿಯೆಂದರೆ ಪಾಕಿಸ್ತಾನೀ ಮೂಲದ 'ಮಾಲಿಕ್ ಅಂಡ್ ಕಂಪೆನಿ'. ಅದು ನಮ್ಮ ಮನೆಗೆ ವರ್ತನೆಯಾಗಿ 'ಪ್ರಜಾವಾಣಿ' ಆದಿಯಾಗಿ ಅನೇಕ ಕನ್ನಡ ಪತ್ರಿಕೆಗಳನ್ನು ಸರಬರಾಜು ಮಾಡುತ್ತಿತ್ತು. ಆಸುಪಾಸಿನ ಕೆಲವು ಕನ್ನಡ ಕುಟುಂಬಗಳು ನಮ್ಮಿಂದ ಆ ಪತ್ರಿಕೆಗಳನ್ನು ಪಡೆದು ಓದುತ್ತಿದ್ದುದೂ ಉಂಟು.

ದುಬೈ, ಷಾರ್ಜಾ ಮತ್ತು ಆಸುಪಾಸಿನಲ್ಲಿದ್ದ ಕನ್ನಡದ ಕುಟುಂಬಗಳಲ್ಲಿ ಆಪ್ತತೆಯನ್ನು ನಿಕಟಗೊಳಿಸುತ್ತಿರುವುದೆಂದರೆ ಪ್ರಧಾನವಾಗಿ ಕರ್ನಾಟಕ ಸಂಘ. ಎಷ್ಟೋ ವೇಳೆ ಅಮೇರಿಕ, ಕೆನಡ, ಯೂರೋಪ್‌ಗಳಿಗೆ ಭೇಟಿ ನೀಡುತ್ತಿದ್ದ ನಮ್ಮ ಕರ್ನಾಟಕದ ಬರಹಗಾರರು, ಕಲಾವಿದರು, ಆಡಳಿತಗಾರರು, ರಾಜಕಾರಣಿಗಳು ದುಬೈಯಲ್ಲಿ 'ಟ್ರಾನ್ಸಿಟ್ ಪ್ಯಾಸಿಂಜರ್'ಗಳಾಗಿ ಒಂದೆರಡು ದಿನ ತಂಗಿದ್ದಾಗಲೂ ಅವರನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದೆವು. ಆಗಲೂ ನಾವು ಕನ್ನಡದ ಜನ ಒಗ್ಗೂಡಿ ನಮ್ಮ ಸಂಬಂಧಗಳನ್ನು ಹೆಚ್ಚು ಆಪ್ತಗೊಳಿಸಿಕೊಳ್ಳಲು ಅವಕಾಶ ದೊರೆಯುತ್ತಿತ್ತು. ಅಂತೂ, ಕನ್ನಡ ನಾಡು-ನುಡಿಗಳ ಅಭಿಮಾನ ಗೌರವಗಳು ಪರ ದೇಶದ ಈ ಮರುಧರೆ ಸದೃಶವಾದ ಪರಿಸರದಲ್ಲಿ ಇಂಗಿಹೋಗದಂತೆ, ಓಯಸಿಸ್ಸಿನ ಥರ ಸದಾ ನಮ್ಮ ಮನೋಮಂದಿರಗಳಲ್ಲಿ ಕಂಗೊಳಿಸುವಂತೆ ಅಳಿಲು ಸೇವೆ ಸಲ್ಲಿಸಿದ ಹಲವರಲ್ಲಿ ನಾನೂ ನನ್ನ ಪತಿ ಇ.ಪಿ.ಎಸ್. ರಾಮನ್ ಅವರೂ ಸೇರಿರುವೆವು ಎನ್ನುವ ಹೆಮ್ಮೆ, ಅಗ್ಗಳಿಕೆ ನಮಗಿದೆ.

ನಿಸಾರರ ಸಹೋದರಿಯರಾದ ಷಹನಾಜ್ ಮತ್ತು ದಿಲ್‌ಷಾದ್ ತುಂಬಾ

ಸ್ನೇಹಪರರು. ಅವರದು ಅನ್ಯೋನ್ಯವಾದ ದಾಂಪತ್ಯ ಜೀವನ. ಕನ್ನಡದ ಕಾರ್ಯಕ್ರಮಗಳಿಗೆ ಬಿಡುವಿದ್ದಾಗ ಬಂದು ಪಾಲ್ಗೊಳ್ಳುತ್ತಿದ್ದರು. ಕೆಲವೊಮ್ಮೆ ನಮ್ಮ ಮನೆಗೂ ಬರುತ್ತಿದ್ದರು. ದುಬೈ ಕರ್ನಾಟಕ ಸಂಘದಲ್ಲಿ ನಿಸಾರರನ್ನು ಗೌರವಿಸುವ ಮತ್ತು ಕ್ಯಾಸೆಟ್ ಲೋಕಾರ್ಪಣದ ಸಮಾರಂಭ ಮುಗಿದು, ಅವರನ್ನು ಇಲ್ಲಿನ ಮತ್ತು ಈ ದೇಶದ ಇತರ ವೀಕ್ಷಣೀಯ ಸ್ಥಳಗಳನ್ನು ತೋರಿಸಿಯಾದಮೇಲೆ, ನಮ್ಮ ಮನೆಗೆ ಊಟಕ್ಕೆ ಕರೆ ತರಬೇಕೆಂದು ಷಹನಾಜ್ ಮತ್ತು ದಿಲ್‌ಷಾದ್ ಅವರನ್ನು ದೂರವಾಣಿಯ ಮೂಲಕ ವಿನಂತಿಸಿಕೊಂಡೆವು. ಅವರು ನಿಸಾರರನ್ನು ಒಪ್ಪಿಸಿ ಕರೆತರುವುದಾಗಿ ಆಶ್ವಾಸನೆ ನೀಡಿದಾಗ ನಮಗೆ ಆದ ಆನಂದಕ್ಕೆ ಪಾರವೇ ಇರಲಿಲ್ಲ. ನಿಸಾರರ ಸಂದರ್ಶನವನ್ನು ಇಲ್ಲಿನ ಪ್ರತಿಷ್ಠಿತ ದಿನಪತ್ರಿಕೆಯಾದ The Khaleej Times ಮಾಡಿದ ಮೇಲಂತೂ ಅವರು ಅನೇಕರ ಆಸಕ್ತಿಯ ಕೇಂದ್ರವಾದರು. ಹಲವರ ಮನೆಗಳಿಂದ ತಮ್ಮ ಪ್ರೀತಿಯ ಕವಿಗೆ ಆಹ್ವಾನ ಬಂದಿತು. ಆದರೆ, ಮೊದಲು ನಮ್ಮ ಮನೆಗೆ ಬಂದ ಬಳಿಕ ಇತರರ ಮನೆಗಳಿಗೆ ಅವರು ಹೋಗಲು ಸಮ್ಮತಿಸಿದ್ದು ನಮಗೆ ಹೆಮ್ಮೆಯೆನ್ನಿಸಿತ್ತು.

ನಾವು, ನಮ್ಮ ನಿಕಟ ಪರಿಚಯದ ಕೆಲವು ಕುಟುಂಬಗಳನ್ನು ನಮ್ಮ ಮನೆಯಲ್ಲಿ ನೆರವೇರುವ ನಿಸಾರರ ಕಾರ್ಯಕ್ರಮಕ್ಕೆ ಕರೆದೆವು. ನವರಾತ್ರಿಯ ಹಬ್ಬದಂದು ಕವಿಗಳು ನಮ್ಮ ಮನೆಗೆ ಬಂದು ಸಂತೋಷ ಉತ್ಸಾಹಗಳಿಂದ ಪಾಲ್ಗೊಂಡರು. ಬಂದಿದ್ದವರನ್ನು ಉದ್ದೇಶಿಸಿ ವಿದ್ವತ್ಪೂರ್ಣ ಹಾಗೂ ಸ್ವಾರಸ್ಯವಾದ ಭಾಷಣವನ್ನು ಮಾಡಿದ್ದಲ್ಲದೆ, ಅವರ ಕೆಲವು ಪದ್ಯಗಳನ್ನು ವಾಚಿಸಿ ಹರ್ಷಗೊಳಿಸಿದರು. ಊಟೋಪಚಾರದ ಅನಂತರ ಬೀಳ್ಕೊಡುವುದಕ್ಕೆ ಮುಂಚೆ ನಾವು ರೂಪಾಯಿಯಗಲದ 'ಪೆಂಡೆಂಟ್' ಇರುವ ಚಿನ್ನದ ಸರವನ್ನು ನಮ್ಮ ವಿನಮ್ರ ಕಾಣಿಕೆಯಾಗಿ ನೀಡಿದೆವು. 'ಇದೇನು ಮಿಸ್ಟರ್ ರಾಮನ್, ಈ ಅಮೂಲ್ಯವಾದ ಉಡುಗೊರೆ? ನೀವು ನೀಡಿದ ರುಚಿಕರವಾದ ಔತಣದ ಸತ್ಕಾರ, ಆಡಿದ ಸವಿಯಾದ ಶ್ಲಾಘನೆಯ ಮಾತುಗಳ ಬಳುವಳಿಯೇ ಸಾಲದಾಗಿತ್ತೆ? ಕೊಸರಿಗೆ ಇದನ್ನು ಬೇರೆ ಕೊಟ್ಟು ನಿಮ್ಮ ಋಣದ ಭಾರವನ್ನು ನನ್ನ ಮೇಲೆ ಮತ್ತಷ್ಟು ಹೊರಿಸಿದ್ದೀರಿ. ನಿಮಗೆ ಕೃತಜ್ಞತೆ ಸಲ್ಲಿಸಲು ನನ್ನಲ್ಲಿ ಮಾತುಗಳಿಲ್ಲ. ಹೀಗಿದ್ದರೂ ನಿಮ್ಮ ಈ ಸ್ನೇಹೋಪಚಾರಕ್ಕೆ ನಾನು ಆಭಾರಿ' ಎಂದಾಗ ನಿಸಾರರು ಭಾವೋದ್ವೇಗಕ್ಕೆ ಒಳಗಾಗಿದ್ದರು. 'ನಿಮ್ಮಂತಹ ಹಿರಿಯ ಕವಿಗಳು ನಮ್ಮ ಮನೆಗೆ ಬಂದದ್ದರ ಮುಂದೆ, ಇದು ಯಾವ ಮಹಾ ಬಿಡಿ ಸಾರ್, ಇಲ್ಲಿ ಸೇರಿರುವವರಿಗೆಲ್ಲ ನೀವು ಆಡಿದ ಮಾತುಗಳಿಂದ, ಪದ್ಯಗಳಿಂದ ಆಗಿರುವ ಆನಂದ ಬಹಳ ಕಾಲ ನಮ್ಮ ಮನಸ್ಸಿನಲ್ಲಿ ಉಳಿಯುತ್ತದೆ' ಎಂದರು, ನನ್ನ ಪತಿ ರಾಮನ್. ನಿಸಾರರು ನನ್ನಿಂದ ಒಂದೆರಡು ಹಾಡುಗಳನ್ನೂ ಹೇಳಿಸಿ ಸಂತೋಷಪಟ್ಟರು. ತಮ್ಮನ್ನು ದುಬೈಗೆ ಕರೆಸಿಕೊಂಡ ಅಕ್ಕರೆಯ ತಂಗಿ ಷಹನಾಜ್ ಮತ್ತು ಭಾವ ದಾಫರ್ ಅವರಿಗೆ ಹಾಗೂ ದುಬೈ, ಫ್ಯುಜೆರಾ, ಷಾರ್ಜಾ, ಮಸಾಫಿ ಮುಂತಾದ ಊರುಗಳ ಪ್ರೇಕ್ಷಣಾರ್ಹ ತಾಣಗಳನ್ನು ತೋರಿಸಿ ಮುದ ನೀಡಿದ ಸಹೋದರಿ ದಿಲ್‌ಷಾದ್, ಸನ್ನು, ಸಂದಿಲ್‌ರವರಿಗೆ ಕೃತಜ್ಞತೆ ಸಲ್ಲಿಸಿ ಸ್ಮರಿಸುವುದನ್ನು ಮರೆತಿರಲಿಲ್ಲ.

ಆಮೇಲೆ ಅಬೂದಾಭಿ ಪಟ್ಟಣದ ಪ್ರಮುಖ ವಾಣಿಜ್ಯೋದ್ಯಮಿ, ಕನ್ನಡ ನಾಡು-

ನುಡಿಗಳ ಅಮಿತ ಪ್ರೇಮಿ ಮತ್ತು ಪೋಷಕರಾದ, ಕುಂದಾಪುರ ಮೂಲದ ಶ್ರೀ ಬಿ. ಆರ್. ಶೆಟ್ಟಿಯವರಿಂದ ಕ್ಯಾಸೆಟ್ ಬಿಡುಗಡೆ ಮತ್ತು ನಿಸಾರರ ಸನ್ಮಾನ ಕಾರ್ಯಕ್ರಮ [illegible]ದಲ್ಲಿ ಏರ್ಪಟ್ಟು ಅದ್ದೂರಿಯಾಗಿ ಜರುಗಿತು. ಒಟ್ಟಿನಲ್ಲಿ ಅವರ ಮೂರು ತಿಂಗಳುಗಳ ಇಲ್ಲಿನ ಪ್ರವಾಸ ತೃಪ್ತಿ, ಸಂತೋಷಗಳನ್ನು ಅವರಿಗೆ ಹೇಗೋ ಹಾಗೆ ನಮಗೆಲ್ಲರಿಗೆ ನೀಡಿತ್ತು. ಆದರೆ ಈ ಮಧ್ಯೆ ಒಂದು ಖೇದದ ಸಂಗತಿಯೂ ನಡೆದುಹೋಯಿತು. ಅದೆಂದರೆ, ಮಹಾಕವಿ ಕುವೆಂಪು ಅವರ ನಿಧನ. ನಿಸಾರರಿಗೆ ಅತ್ಯಂತ ಪ್ರಿಯರೂ ಪೂಜನೀಯರೂ ಆಗಿ, ಅವರ ಬದುಕು-ಬರಹಗಳ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದ ಕುವೆಂಪು ಅವರು ೧೦.೧೧.೧೯೯೪ರಂದು ದೈವಾಧೀನರಾದ ಸುದ್ದಿಯಿಂದ ಅವರಿಗೆ ಅತೀವ ನೋವಾಗಿತ್ತು. ಹರ್ಷಚಿತ್ತರಾಗಿ ಗೆಲವಾಗಿದ್ದ ಅವರ ದಿನಚರಿಯಲ್ಲಿ ಇದ್ದಕ್ಕಿದ್ದಂತೆ ನಿರುತ್ಸಾಹದ ಮಂಕು ಕವಿದಿತ್ತು. ಇದನ್ನು ಅವರು ತಮ್ಮ 'ಅಚ್ಚುಮೆಚ್ಚು' ಹೆಸರಿನ ಕೃತಿಯಲ್ಲಿ 'ಮಹಾಕವಿಗೆ ನೆನಪಿನ ನಮನ' ಎಂಬ ಲೇಖನದಲ್ಲಿ ಮನ ಮಿಡಿಯುವಂತೆ ನಿರೂಪಿಸಿದ್ದಾರೆ.

ಕುವೆಂಪು ಅವರು ಕಾಲವಶವಾದ ಸುದ್ದಿಯನ್ನು ನಿಸಾರರ ಕೋರಿಕೆಯ ಮೇರೆಗೆ ನನ್ನ ಪತಿ ರಾಮನ್ ಅವರು ಮೈಸೂರಿನ ಪರಿಚಯಸ್ಥರಿಗೆ ಫೋನ್ ಮಾಡಿ ಖಚಿತ ಪಡಿಸಿಕೊಂಡರು. ನಮ್ಮ ಮನೆಯಲ್ಲಿ ಶ್ರದ್ಧಾಂಜಲಿಯ ಕಾರ್ಯಕ್ರಮವನ್ನು ಏರ್ಪಡಿಸಲು ನಮ್ಮನ್ನು ನಿಸಾರರು ಕೇಳಿಕೊಂಡಾಗ, ನಾವು ಒಪ್ಪಿ ದುಬೈನ ಕೆಲವು ಕನ್ನಡಿಗರನ್ನು ಸಂಪರ್ಕಿಸಿ ಬರಮಾಡಿಕೊಂಡು ೧೧.೧೧.೧೯೯೪ರ ಸಂಜೆ ನಮ್ಮ ಮನೆಯಲ್ಲಿ ಸಭೆ ಸೇರಿದೆವು. ರಾಮನ್ ಅವರು ಹಿಂದೊಮ್ಮೆ ವಾರ ಪತ್ರಿಕೆಯೊಂದರಲ್ಲಿ ಅಚ್ಚಾಗಿದ್ದ ಕುವೆಂಪು ಅವರ ತೇಜೋನ್ವಿತ ಮುಖಮುದ್ರೆಯ ಭಾವಚಿತ್ರವನ್ನು ಕಂಪ್ಯೂಟರ್ ಮೂಲಕ ದೊಡ್ಡದು ಮಾಡಿಸಿ, ಅದನ್ನು ಮುಂದಿಟ್ಟುಕೊಂಡು ಅಶ್ರುತರ್ಪಣವನ್ನು ಸಲ್ಲಿಸಿದೆವು. ನಿಸಾರ್, ರಾಮನ್ ಮತ್ತು ಆಹ್ವಾನಿತರಲ್ಲಿ ಒಬ್ಬರು ಕುವೆಂಪು ಅವರ ಜೀವನ ಮತ್ತು ಸಾಹಿತ್ಯ ಸಾಧನೆಯ ಮಹತ್ವವನ್ನು ಕುರಿತು ಮಾತನಾಡಿದರು. ಕುವೆಂಪು ಅವರ ಗೀತೆಗಳನ್ನು ಹಾಡಿಸಿದರು. ಭಾವಚಿತ್ರಕ್ಕೆ ವಂದಿಸಿ, ಅವರ 'ವಿಶ್ವಮಾನವ ಸಂದೇಶ'ವನ್ನು ಪಠಿಸಿದೆವು. ದೂರದ ಸಾಗರೋತ್ತರ ಅರಬ್ ದೇಶವೊಂದರಿಂದ ಕುವೆಂಪು ಅವರ ಆತ್ಮಕ್ಕೆ ನಾವು ಸಲ್ಲಿಸಿದ ಶಾಂತಿ ಅವರ ಅಭೌತ ಚೇತನಕ್ಕೆ ಲಭ್ಯವಾಗಲೆಂದು ಹಾರೈಸಿದೆವು. ಸಭೆಯಲ್ಲಿ ಒಂದು ಗೊತ್ತುವಳಿಯನ್ನು ಸಿದ್ಧಗೊಳಿಸಿ ಅದನ್ನು ಓದಿದ ಬಳಿಕ ಅದನ್ನು ಮೈಸೂರಿಗೆ, ಸಂಬಂಧಪಟ್ಟವರಿಗೆ ಕಳಿಸುವುದೆಂದು ನಿರ್ಧರಿಸಲಾಯಿತು.

ಹೀಗೆ ತುರ್ತಾಗಿ, ಅತ್ಯಲ್ಪ ಸಮಯದಲ್ಲಿ ಕುವೆಂಪು ನಮನ ಸಭೆಯನ್ನು ಏರ್ಪಡಿಸಿ ಯಶಸ್ವಿಯಾಗಿ ನೆರವೇರಿಸಿದ್ದಕ್ಕೆ ನನಗೆ, ನನ್ನ ಪತಿಯವರಿಗೆ ನಿಸಾರರು ಮುಂದೆ ಅದೆಷ್ಟು ಸಲ ಕೃತಜ್ಞತೆ ಸಲ್ಲಿಸಿದರೋ, ಲೆಕ್ಕವಿಲ್ಲ. ಇಲ್ಲಿನ ಕರ್ನಾಟಕ ಸಂಘ ಮಾಡಬೇಕಾಗಿದ್ದ ಕೆಲಸವನ್ನು ನಾವು ಸಕಾಲಿಕವಾಗಿ ನಮ್ಮ ಮನೆಯಲ್ಲಿ ನೆರವೇರಿಸಿದ ತೃಪ್ತಿ, ಧನ್ಯತೆ ನನ್ನಲ್ಲಿ ಮತ್ತು ನನ್ನ ಪತಿ ಇ.ಪಿ.ಎಸ್. ರಾಮನ್ ಅವರಲ್ಲಿ ಮೂಡಿತ್ತು. ಇಷ್ಟೆಲ್ಲ ಆಗಿದ್ದರೂ ನಿಸಾರರು 'ಕುವೆಂಪು ಅವರ ಅಂತಿಮ ದರ್ಶನವನ್ನು ಪಡೆಯುವ ಭಾಗ್ಯ ನನ್ನದಾಗಲಿಲ್ಲವಲ್ಲ. ಈ ವೇಳೆಯಲ್ಲಿ ದುಬೈಗೆ ಬಂದು ಕೂತೆನಲ್ಲ' ಎಂದು ಬಹುವಾಗಿ

ಅಲವತ್ತುಕೊಂಡು, ಪರಿತಪಿಸಿದರು. ಇದರಿಂದ ಅವರು ಕುವೆಂಪು ಅವರನ್ನು ಎಷ್ಟೊಂದು ಗೌರವಿಸುತ್ತಿದ್ದರು, ಅವರ ಪ್ರಭಾವ ನಿಸಾರರ ಮೇಲೆ ಎಷ್ಟೊಂದು ಗಾಢವಾಗಿತ್ತು ಎಂಬ ಸಂಗತಿ ಸುವೇದ್ಯವಾಗುತ್ತದೆ.

ಮುಂದೊಮ್ಮೆ ೧೯೯೯ರಲ್ಲಿ ತಂಗಿ ಷಹನಾಜ್ ದಾಫುರ್ ಅವರ ಆಗ್ರಹಪೂರ್ವಕವಾದ ಆಮಂತ್ರಣಕ್ಕೆ ಮಣಿದು ನಿಸಾರರು ತಮ್ಮ ಮಗಳೊಂದಿಗೆ ದುಬೈಗೆ ಬಂದು ಎರಡು ತಿಂಗಳು ಕಾಲ ಇದ್ದರು. ಆಗಲೂ ಹಿಂದಿನ ವಿಶ್ವಾಸ, ಪ್ರೀತಿ, ಅಕ್ಕರೆಗಳಿಂದ ನಮ್ಮ ಜೊತೆ ವ್ಯವಹರಿಸಿದರು, ನಮ್ಮ ಆಮಂತ್ರಣದ ಮೇರೆಗೆ ಮನೆಗೆ ಬಂದರು. ಪ್ರೀತ್ಯರ್ಥವಾಗಿ ಅವರು ರಚಿಸಿದ ಅಮೂಲ್ಯ ಕೃತಿಗಳನ್ನು ಕೊಟ್ಟರು. ಅವು ಈಗಲೂ ನಮ್ಮಲ್ಲಿ ಜೋಪಾನವಾಗಿ ಇವೆ—ಪ್ರೀತಿಯ ಕವಿಗಳು ನಮ್ಮೊಂದಿಗೆ ಕಳೆದ ದಿವಸಗಳ ನೆನಪುಗಳನ್ನು ಪದೇ ಪದೇ ಮನಸ್ಸಲ್ಲಿ ಮೂಡಿಸುತ್ತಾ, ಮುದವನ್ನು ಊಡಿಸುತ್ತಾ.

ಕಲಾವಿದ ತನ್ನ ಕಲಾಕೃತಿಯ ಸೃಷ್ಟಿ ಸಮಯದಲ್ಲಿ ಪಡೆದ ರಸಾಹ್ಲಾದ ಕಲಾಭಿಮಾನಿಗಳ ಅಂತರಂಗದಲ್ಲಿ ಅದೇ ತೀವ್ರತೆಯಿಂದ ಪುನರ್ಭವಿಸಬೇಕು; ಅದನ್ನು ಅವರು ಅದೇ ತದೇಕತೆಯಿಂದ ಪುನರನುಭವಿಸಬೇಕು. ಕಣ್ಣು ಸ್ರವಿಸಿ ತೇವಗೊಳ್ಳಬೇಕು. ಹೃದಯ ದ್ರವಿಸಿ ಭಾವವಶವಾಗಬೇಕು. ಸುಖಾರ್ದ್ರ ಸಂವೇದನೆಗಳಿಂದ ಹಸನುಗೊಳಿಸುವುದು, ಮೌಲ್ಯ ಮಹತ್ತರತೆಗಳನ್ನು ಕೂಡಿಸುವುದು ಕಲೆ ಜನ ಜೀವನಕ್ಕೆ ಎಸಗುವ ಮಹದುಪಕಾರ.

(ಕಲೆಯ ಪ್ರಯೋಜನ)

✧ ✧ ✧

ಸಾಂತವಾದ ಅರ್ಥ ವಲಯವನ್ನು ಉತ್ತರಿಸಿ ಅಂತರಾರ್ಥದ ಸನ್ನೆ ಸೂಕ್ಷ್ಮಗಳನ್ನು, ಹೊಳಹುಗಳನ್ನು ಪ್ರಾದೇಶಿಕತೆ ನಮಗೆ ಎಷ್ಟೆಷ್ಟು ನಿಚ್ಚಳವಾಗಿ ಮಾಡಿಕೊಡುತ್ತದೋ ಅಷ್ಟಷ್ಟು, ಆ ಸಾಹಿತ್ಯ ಕೃತಿ ಕಾಲದೊಂದಿಗೆ ಹೆಜ್ಜೆ ಗೂಡಿಸಿ ಮುನ್ನಡೆಯುತ್ತದೆ; ತನಗೆ ಸಂತತ ವರ್ತಮಾನವನ್ನು ಸೃಷ್ಟಿಸಿಕೊಳ್ಳುತ್ತದೆ. ನಮ್ಮ ಸಂವೇದನೆಯನ್ನು ಫಲವತ್ತಾಗಿಸುವ ಅಂತಹ ಕೃತಿಗಳು ಅತ್ಯತಿ ವಿರಳ.

(ಸಾಹಿತ್ಯದಲ್ಲಿ ಪ್ರಾದೇಶಿಕತೆ)



ನನ್ನ ಪ್ರೀತಿಯ ಪ್ರತಿಭಾವಂತ ವಿದ್ಯಾರ್ಥಿ

♦ ಆನೇಕಲ್ಲು ಆರ್. ನಾಗರಾಜ್
(ನಿಸಾರರ ಪ್ರೌಢಶಾಲೆಯ ವಿದ್ಯಾಗುರುಗಳು)

ನಾನು ಕಂಡ ೧೨-೧೩ ವರ್ಷದ ಹೈಸ್ಕೂಲ್ ಬಾಲಕ ೭೦ ವರ್ಷವನ್ನು ದಾಟಿದ್ದಾರೆ ಎಂಬುದು ನಂಬಲಿಕ್ಕೆ ಆಗುತ್ತಿಲ್ಲ. ಬೇರಾವ ದೃಷ್ಟಿಯಿಂದಲೂ ನಾನು ಅವರಿಗಿಂತ ಹಿರಿಯ ಎಂದು ಹೇಳುವುದು ಸರಿಯಲ್ಲ. ಆದರೂ 'ನಿಸಾರ್: ಹಿರಿಯರು ಕಂಡಂತೆ' ಎಂಬ ಶೀರ್ಷಿಕೆಯ ಅಡಿ ಒಂದು ಲೇಖನ ಬರೆಯಿರಿ ಎಂದು ಅಭಿನಂದನ ಗ್ರಂಥದ ಗೌರವ ಸಂಪಾದಕರು ಕೇಳಿರುವಾಗ 'ಒಲ್ಲೆ' ಎನ್ನಲು ಸಾಧ್ಯವಿಲ್ಲ.

ನನ್ನ ಇಡೀ ೫೫ ವರ್ಷಗಳ ಹಿಂದಿನ ನೆನಪಿನಲ್ಲಿ ನಿಸಾರ್ ಈಗಲೂ ಅಚ್ಚ ಹಸಿರಾಗಿ ಉಳಿದಿದ್ದಾರೆ. ಇಷ್ಟು ದೀರ್ಘ ಕಾಲವೂ ಅವರು ನೆನಪಿನಲ್ಲಿದ್ದಾರೆಂಬುದೇ ಅವರ ಆಕರ್ಷಕ ವ್ಯಕ್ತಿತ್ವಕ್ಕೆ, ಅದು ಸೂಸುವ ಬೆಳಕಿಗೆ ಪ್ರಮಾಣ ವಾಗಿದೆ.

ಈಗ ೧೯೫೦ನೆಯ ಇಸವಿಗೆ ಹೋಗೋಣ: ಬೆಂಗಳೂರು ನಗರಕ್ಕೆ ಅಂಟಿಕೊಂಡಂತಿರುವ ಹೊಸಕೋಟೆ ಯಲ್ಲಿ ಒಂದು ಮುನಿಸಿಪಲ್ ಪ್ರೌಢಶಾಲೆ ಇತ್ತು. ಅದು ಅಸ್ತಿತ್ವದಲ್ಲಿದ್ದದ್ದು ಸೂಲಿಬೆಲೆ ರಸ್ತೆಯ ಒಂದು ಹಳೆಯ ಮುಸಾಫಿರ್ ಖಾನೆಯಲ್ಲಿ. ಆ ಕಾಲಕ್ಕೆ ಅದೇ ಆ ರಸ್ತೆಯಲ್ಲಿನ ಕೊನೆಯ ಕಟ್ಟಡ. ಅದರ ಹಿಂದುಗಡೆ ದೃಷ್ಟಿ ಸೋಲುವವರೆಗೆ ಆ ಊರಿನ ತಿಗಳ ಜನಾಂಗದವರ ವಿಶಾಲವಾದ ಹಚ್ಚಹಸುರಿನ ತೋಟ ಮತ್ತು ಗದ್ದೆಗಳು. ಇಂತಹ ಪ್ರಶಾಂತವಾದ

ಸ್ಥಳದಲ್ಲಿದ್ದ ಹೈಸ್ಕೂಲಿನಲ್ಲಿ ನಾನು ಜೀವ ವಿಜ್ಞಾನದ ಅಧ್ಯಾಪಕ. ಅದರೊಂದಿಗೆ ಆಂಗ್ಲ ಭಾಷೆಯನ್ನೂ ಬೋಧಿಸುತ್ತಿದ್ದೆ. ಆ ಕಾಲದಲ್ಲಿ ಏಕೋ, ಏನೋ ಆಂಗ್ಲ ಭಾಷೆಯನ್ನು, ಅದರಲ್ಲೂ ವ್ಯಾಕರಣ, ವಾಕ್ಯರಚನೆ ಮುಂತಾದವನ್ನು ಬೋಧಿಸಲು ಅನೇಕ ಅಧ್ಯಾಪಕರು ಹಿಂಜರಿಯುತ್ತಿದ್ದರಿಂದ, ನಮ್ಮ ಮುಖ್ಯೋಪಾಧ್ಯಾಯರಾಗಿದ್ದ ಶ್ರೀಮಾನ್ ಎಂ. ಅಳಸಿಂಗ್ರಾಚಾರ್ ಅವರ ಸೂಚನೆಯ ಮೇರೆಗೆ ನಾನು ಆ ಭಾಷೆಯನ್ನು ಬೋಧಿಸಲು ಆರಂಭಿಸಿದೆ. ಅದಕ್ಕೂ ಹಲವು ದಶಕಗಳ ಮಂಚೆ ಬಿ.ಎಂ.ಶ್ರೀ.ಯವರು 'ಇಂಗ್ಲಿಷ್ ಗೀತೆಗಳು' ಗ್ರಂಥವನ್ನು ಪ್ರಕಟಿಸಿದ್ದರು. ಅದರಲ್ಲಿ ಕೆಲವು ಇಂಗ್ಲಿಷ್ ಕಾವ್ಯಗಳನ್ನು ಕನ್ನಡಕ್ಕೆ ಸಮರ್ಥವಾಗಿ ತರ್ಜುಮೆ ಮಾಡಿದ್ದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, 'ಕರುಣಾಳು ಬಾ ಬೆಳಕೆ' ('Lead kindly light'), 'ಕಾರಿ ಹೆಗ್ಗಡೆಯ ಮಗಳು' ('Lord Ullin's daughter'), 'ಹರಿದಾರಿ, ಹರಿದಾರಿ ಮುಂದೆ' ಎಂಬ ಕವನಗಳನ್ನು ಬೋಧಿಸುವಾಗ ಮೂಲ ಆಂಗ್ಲ ಕವಿತೆಗಳನ್ನೂ ಓದಿ ವಿವರಿಸುತ್ತಿದ್ದೆ. ಇದರಿಂದ ಆಂಗ್ಲ ಮತ್ತು ಕನ್ನಡ ಕಾವ್ಯಗಳ ಪರಿಚಯ ನನಗೆ ಆಗಿ, ಮಾಹಿತಿಗಳು ಅಂಕಿ ಅಂಶಗಳು ವಿವರಣೆಗಳು ಗಿಡಿದು ಹೋಗಿದ್ದ ವಿಜ್ಞಾನವನ್ನು ಬೋಧಿಸುವುದಕ್ಕಿಂತ, ಕಾವ್ಯಗಳನ್ನು ಬೋಧಿಸುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ಮೂಡುವಂತೆ ಮಾಡಲು ಸಾಧ್ಯವೆಂದು ಅರಿತೆ.

ಆ ಕಾಲದಲ್ಲೇ ಇನ್ನೊಂದು ಘಟನೆ ನಡೆಯಿತು. ಅಂದಿನ ಶಿಕ್ಷಣ ಇಲಾಖೆಯ ಮುಖ್ಯಸ್ಥರಾದ ಶ್ರೀ ಕೆ. ಗುರುದತ್, ಐ.ಎ.ಎಸ್., ಅವರು ನಮ್ಮ ಶಾಲೆಗೆ ಭೇಟಿ ಕೊಟ್ಟು, ಅಧ್ಯಾಪಕರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಯಾರು ಯಾರು ಎಷ್ಟು ಪುಸ್ತಕಗಳನ್ನು ಗ್ರಂಥ ಭಂಡಾರದಿಂದ ಪಡೆದು ಓದುತ್ತಾರೆ ಎಂದು ಪ್ರಶ್ನಿಸಿದರು. ಆಗ ಬಂದ ಪ್ರತಿಕ್ರಿಯೆಯಿಂದ ಅವರಿಗೆ ನಿರಾಶೆಯಾಯಿತು. ಬಹು ಮಂದಿ ಉಪಾಧ್ಯಾಯರು ಕೇವಲ ಎರಡು-ಮೂರು ಪುಸ್ತಕಗಳನ್ನು ಮಾತ್ರ ತೆಗೆದುಕೊಂಡಿದ್ದರು. ಆದರೆ ನಾನು ಅದೃಷ್ಟವಶಾತ್ ಇಪ್ಪತ್ತು-ಇಪ್ಪತ್ತೆರಡು ಪುಸ್ತಕಗಳನ್ನು ಗ್ರಂಥ ಭಂಡಾರದಿಂದ ತೆಗೆದುಕೊಂಡಿದ್ದೆ. ಅವುಗಳಲ್ಲಿ ಡಿ.ವಿ.ಜಿ., ಶಿವರಾಮ ಕಾರಂತ, ಕುವೆಂಪು, ಜಿ. ಪಿ. ರಾಜರತ್ನಂ ಮುಂತಾದವರ ಕೃತಿಗಳು ಸೇರಿದ್ದವು. ಇತರ ಗ್ರಂಥಕರ್ತರ ಹೆಸರುಗಳು ವಯಸ್ಸಿನ ದೆಸೆಯಿಂದ ಮರೆತುಹೋಗಿವೆ. ಪುಸ್ತಕಗಳನ್ನು ನಮ್ಮ ಶಾಲೆಯ ಬಳಿಯೇ ಇದ್ದ ನನ್ನ ರೂಮಿನಲ್ಲಿ ವಿರಾಮವಿದ್ದಾಗ ಓದುತ್ತಿದ್ದೆ. ಆಗ ನಿಸಾರ್ ಅಹಮದ್ ನನ್ನ ಮೆಚ್ಚಿನ ಶಿಷ್ಯ. ಶಾಲೆ ಬಿಟ್ಟ ಅನಂತರ ನನ್ನ ರೂಮಿಗೆ ಬಂದು ನನಗೆ ಬೇಕಾದ ಕಾಫಿ ಟೀ ಮುಂತಾದವುಗಳನ್ನು ತಂದುಕೊಡುವುದನ್ನು ಮಾಡುತ್ತಿದ್ದ. ನಾನು ಗ್ರಂಥಾಲಯದಿಂದ ತಂದ ಪುಸ್ತಕಗಳನ್ನು ತಾನೂ ಓದುತ್ತಿದ್ದ. ಗ್ರಂಥಕರ್ತರಲ್ಲಿ ಯಾರು ಶ್ರೇಷ್ಠರು? ಯಾರ ಪುಸ್ತಕಗಳು ಉತ್ತಮ ದರ್ಜೆಯವು? ಯಾರ ಗ್ರಂಥಗಳನ್ನು ಓದಿದರೆ ನಮಗೆ ಕವಿತಾಸ್ಫೂರ್ತಿ ಉಂಟಾಗುತ್ತದೆ? ಗ್ರಂಥ ರಚನೆಗೆ ಯಾರು ಮಾರ್ಗದರ್ಶಕರು? ಪ್ರಾಸ, ಛಂದಸ್ಸುಗಳು ಮುಖ್ಯವೆ? ಎಂದೆಲ್ಲ ನನ್ನನ್ನು ಪ್ರಶ್ನಿಸುತ್ತಿದ್ದ.

ನಿಸಾರ್ ಜೊತೆಗೆ ಸಿ. ದೇವಣ್ಣ ಎಂಬ ವಿದ್ಯಾರ್ಥಿಯೂ ಇರುತ್ತಿದ್ದ ಎಂದು ನನ್ನ ನಂಬಿಕೆ. ದೇವಣ್ಣ ಅನಂತರ ಡಾಕ್ಟರ್ ಆದನೆಂದು ಗೊತ್ತಾಯಿತು.

ನಿಸಾರ್ ಅವರಿಗೆ ಕನ್ನಡದಲ್ಲಿ ಆಸಕ್ತಿ ಇದೆ ಎಂದು ಆಗಲೇ ನನಗೆ ಮನವರಿಕೆ

ಯಾಗಿತ್ತು. ನಿಸಾರ್ ಕಥೆ, ಪದ್ಯ, ಲೇಖನಗಳನ್ನು ಬರೆಯಲು ನನ್ನ ಮಿತ್ರ ಹಾಗೂ ಸಹೋದ್ಯೋಗಿ ಕೇಶವ ಮೂರ್ತಿ ಅವರೂ ಕಾರಣರು. ಅವರೂ ಸಹ ಕಥೆಗಳನ್ನು ಬರೆಯುತ್ತಿದ್ದರು. ಅವರ ಒಂದೆರಡು ಕತೆಗಳು 'ಕಥೆಗಾರ' ಹೆಸರಿನ ಪ್ರಖ್ಯಾತ ಮಾಸಿಕದಲ್ಲಿ ಪ್ರಕಟವಾದಂತೆ ನೆನಪು. ಅವರು ನಿಸಾರ್ ರಚಿಸಿದ ಬರಹಗಳಿಗೆ ಉತ್ತೇಜನ ನೀಡುತ್ತಿದ್ದರು. ನನ್ನ ಇನ್ನೊಬ್ಬ ಮಿತ್ರ ಎಚ್. ವಿ. ನಾಗರಾಜಯ್ಯ ಮಾತ್ರ ನಿಸಾರ್‌ನ ಸಾಹಿತ್ಯ ಕೃಷಿಗೆ ಅಷ್ಟೇನೂ ಪ್ರೋತ್ಸಾಹ ನೀಡುತ್ತಿರಲಿಲ್ಲವೆಂದು ನನ್ನ ಅನ್ನಿಸಿಕೆ.

ಅವರು, 'ಏನು ನಾಗರಾಜ್, ಈ ಮುಸ್ಲಿಂ ಬಾಲಕನಿಗೆ ಕನ್ನಡ ಸಾಹಿತ್ಯದ ಬಗ್ಗೆ ಬಹಳ ಆಸಕ್ತಿ ಇದ್ದ ಹಾಗಿದೆ. ಯಾವಾಗಲೂ ಕನ್ನಡ ಪುಸ್ತಕಗಳನ್ನು ಹಿಡಿದಿರುತ್ತಾನೆ. ಪಠ್ಯ ಪುಸ್ತಕಗಳನ್ನು ಇವನು ಓದುವುದು ಯಾವಾಗ? ಪರೀಕ್ಷೆಯಲ್ಲಿ ಪಾಸಾಗುವುದು ಈ ಜನ್ಮದಲ್ಲಿ ಸಾಧ್ಯವಿಲ್ಲ' ಎಂದು ನಾಗರಾಜಯ್ಯ ನುಡಿಯುತ್ತಿದ್ದರಲ್ಲದೆ 'ಇವನ ಈ ಆಸಕ್ತಿ ತಾತ್ಕಾಲಿಕವೊ? ಶಾಶ್ವತವೊ? ಗೊತ್ತಿಲ್ಲ. ಇವರ ತಂದೆ ಕೆ. ಎಸ್. ಹೈದರ್ ಸಾಹೇಬರನ್ನು ನಾನು ಬಲ್ಲೆ. ಅವರು ನಿಜವಾದ ಸಾಹಿತ್ಯಾಸಕ್ತರು. ಇವನು ಪಂಡಿತ ಪುತ್ರ ಅಷ್ಟೇ' ಎಂದು ಹಾಸ್ಯ ಮಾಡುತ್ತಿದ್ದರು.

ಆ ಕಾಲದಲ್ಲಿ ನಮ್ಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಎಂ. ಅಳಸಿಂಗ್ರಾಚಾರ್, ಅಧ್ಯಾಪಕರಾದ ಕೇಶವ ಮೂರ್ತಿ, ಸುಬ್ರಹ್ಮಣ್ಯ ಮತ್ತು ನಾನು ಮಾತನಾಡಿಕೊಳ್ಳುತ್ತಿದ್ದೆವು: ನಿಸಾರ್ ಈಗೇನೋ ಬಾಲಕ; ಮುಂದೆ ಪ್ರಸಿದ್ಧ ಲೇಖಕ ನಾಗಬಹುದು. ಕನ್ನಡ ಭಾಷೆಯಲ್ಲಿ ಮಾತನಾಡುವಾಗ, ಬರೆಯುವಾಗ, ಓದುವಾಗ ಆತನೊಬ್ಬ ಅಚ್ಚ ಕನ್ನಡಿಗ. ಆತನ ಮಿತ್ರರಲ್ಲೂ ಕನ್ನಡದ ಬಳಕೆಯೇ ಹೆಚ್ಚು. ಆತ ಮುಸ್ಲಿಂ ಹುಡುಗರ ಜೊತೆ ಸೇರುವುದೇ ಅಪರೂಪ. ಅವರ ತಂದೆ ಹೈದರ್ ಸಾಹೇಬರೂ ಅಚ್ಚ ಕನ್ನಡದವರೇ. ಅವರು ಕನ್ನಡ, ಸಂಸ್ಕೃತ, ಇಂಗ್ಲಿಷನ್ನು ತಕ್ಕಮಟ್ಟಿಗೆ ಬಲ್ಲವರು. ಭಗವದ್ಗೀತೆಯ ಶ್ಲೋಕಗಳನ್ನು, ಲಕ್ಷ್ಮೀಶನ ಕಾವ್ಯಪಂಕ್ತಿಗಳನ್ನು ಅಲ್ಲಲ್ಲಿ ಉದಾಹರಿಸಿ ಮಾತನಾಡುತ್ತಿದ್ದರು. ಅವರದು ಅಚ್ಚ ಕನ್ನಡದ ಸಂಸ್ಕೃತಿ ಎಂದು ಸಾರ್ವಜನಿಕರು ಹೇಳುತ್ತಿದ್ದುದನ್ನು ನಾನು ಆಲಿಸಿದ್ದೆ.

ನಿಸಾರ್‌ನ ಮಿತ್ರ ವೃಂದ ದೊಡ್ಡದಾಗಿತ್ತು. ಅವನ ಅನೇಕ ಆಪ್ತರ ಹೆಸರುಗಳು ಮರೆತು ಹೋಗಿವೆ. ಕೆಲವರಷ್ಟೇ ನೆನಪಿನಲ್ಲಿ ಉಳಿದಿದ್ದಾರೆ: ಸತ್ಯನಾರಾಯಣ ಸಿಂಗ್, ನಾರಾಯಣ ರಾವ್, ಸಿ. ದೇವಣ್ಣ, ಷಣ್ಮುಖಯ್ಯ. ನಾನು ಇವರ ತರಗತಿಯಲ್ಲಿ ಜೀವ ವಿಜ್ಞಾನ ಪಾಠವನ್ನು ಮುಗಿಸಿ ಹೊರ ಬಂದ ಅನಂತರ ಮುಖ್ಯೋಪಾಧ್ಯಾಯರಾದ ಎಂ. ಅಳಸಿಂಗ್ರಾಚಾರ್ಯರು ತರಗತಿಗೆ ಬರುತ್ತಿದ್ದರು. ಈ ೪-೫ ನಿಮಿಷಗಳ ಅವಧಿಯಲ್ಲಿ ನಿಸಾರ್ ತಮ್ಮ ಸ್ನೇಹಿತರ ಪಟಾಲಂ ಜೊತೆ ಶಾಲೆಯಿಂದ ಹೊರ ಬಂದು, ಶಾಲೆಯ ಹಿಂಭಾಗದ ಗೋಡೆಯ ಬಳಿ ಯಾರಿಗೂ ಕಾಣದಂತೆ ಹೊಗೆಬತ್ತಿಯನ್ನು ಸೇದಿ ಬಾಯಿ ತೊಳೆದುಕೊಂಡು ತರಗತಿಗೆ ಬಂದು ಮೌನ ವಹಿಸಿ ಕುಳಿತಿರುತ್ತಿದ್ದ. ಆದರೂ ಹೊಗೆಯ ವಾಸನೆ ಮುಖ್ಯೋಪಾಧ್ಯಾಯರ ಮೂಗಿಗೆ ಬಡಿದು ಅವರು ಕೆಂಡಾಮಂಡಲವಾಗುತ್ತಿದ್ದರು. 'ಯಾವ

ನೀಚರು ಬೀಡಿ ಸಿಗರೇಟ್ ಸೇದಿ ಇಲ್ಲಿಗೆ ಬರುವವರು? ಇದನ್ನು ಒಪ್ಪಿಕೊಂಡರೆ ಸರಿ. ಇಲ್ಲದಿದ್ದಲ್ಲಿ ಮೂಳೆ ಮುರಿಯುತ್ತೇನೆ' ಎಂದು ಗದರಿಸುತ್ತಿದ್ದರು.

ಈ ವಿಷಯ ನಿಸಾರ್ ಮತ್ತು ಅವರ ಮಿತ್ರರ ಮೂಲಕ ನನಗೆ ತಿಳಿದು ಇದಕ್ಕೊಂದು ಪರಿಹಾರ ಸೂಚಿಸಿದೆ: 'ನೋಡ್ರೋ, ನಿಮ್ಮ ಚಟ ಬಿಡುವುದು ಕಷ್ಟ. ಕೊನೆಯ ಪಕ್ಷ ಧೂಮ ಪಾನ ಮಾಡಿದ ಅನಂತರ ಬಾಯನ್ನು ಚೆನ್ನಾಗಿ ತೊಳೆದು ಏಲಕ್ಕಿ, ಲವಂಗ ಮುಂತಾದವನ್ನು ತಿಂದರೆ ಮುಖ್ಯೋಪಾಧ್ಯಾಯರಿಗೆ ತಿಳಿಯುವುದಿಲ್ಲ. ಅಲ್ಲದೆ, ಹಿಂದಿನ ಬೆಂಚಿನಲ್ಲಿ ಕುಳಿತುಕೊಳ್ಳಿ. ಅವರ ಕಣ್ಣಿಗೆ ಬೀಳಬೇಡಿ. ಗೊತ್ತಾಯ್ತ?' ನಿಸಾರ್ ಈ ಸಲಹೆಯನ್ನು ಒಪ್ಪಿ ಇತರರಿಗೂ ತಿಳಿಸಿ ಅಳಸಿಂಗ್ರಾಚಾರ್ಯರ ಕೋಪಾಗ್ನಿಯಿಂದ ಪಾರಾಗಿದ್ದ.

ಒಮ್ಮೆ ನಾನು ಅಳಸಿಂಗ್ರಾಚಾರ್ಯರಲ್ಲಿ 'ನಿಸಾರ್ ಪುಸ್ತಕಗಳನ್ನು ಓದುವ ಅಭ್ಯಾಸ ಮಾಡಿಕೊಂಡಿದ್ದಾನೆ. ಭವಿಷ್ಯದಲ್ಲಿ ಉತ್ತಮ ಲೇಖಕನಾಗಬಹುದು' ಎಂದು ತಿಳಿಸಿದಾಗ ಅವರು ಬಹಳ ಸಂತೋಷಪಟ್ಟು, 'ಆತನಿಗೆ ನಮ್ಮ ಶಾಲೆಯ ವತಿಯಿಂದ ನೀಡಬಹುದಾದ ಎಲ್ಲಾ ಸೌಲಭ್ಯಗಳನ್ನು ನೀಡಿ. ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಆತನು ಪದ್ಯಗಳನ್ನು ಓದಲಿ' ಎಂದು ಪ್ರೋತ್ಸಾಹಿಸಿದರು.

ನಿಸಾರ್ ಮತ್ತು ಅವನ ಸ್ನೇಹಿತರು ಆ ಕಾಲಕ್ಕೆ ಒಂದು ಹಸ್ತಲಿಖಿತ ದ್ವೈಮಾಸಿಕ ಪತ್ರಿಕೆಯನ್ನು ಹೊರತರುತ್ತಿದ್ದು, ಅದರಲ್ಲಿ ಆತ ಬರೆದ ಒಂದು ಪದ್ಯವನ್ನು (ಜಲಪಾತವನ್ನೊ, ನದಿಯನ್ನೊ ಕುರಿತದ್ದೆಂದು ನೆನಪು) ನನಗೆ ತೋರಿಸಿದ್ದ. ನನಗೆ ಅದರ ಛಂದಸ್ಸು ಮೆಚ್ಚುಗೆಯಾಗಿ ಅವನನ್ನು ಹೊಗಳಿದ್ದೆ. ಜೊತೆಗೇ ಕೆಲವು ಅಮೂಲ್ಯವಾದ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳನ್ನೂ ಓದಲು ಸಲಹೆ ಮಾಡಿದ್ದೆ. ದಶಕಗಳ ತರುವಾಯ ಮುಂದೊಮ್ಮೆ ಸಿಕ್ಕಿದಾಗ, 'ಆಗ ನೀವು ನೀಡಿದ ಶಾಬಾಸ್‌ಗಿರಿ ಮತ್ತು ಸಲಹೆ ನನ್ನ ಬರವಣಿಗೆಯ ಬದುಕಿನಲ್ಲಿ ಮರೆಯಲಾಗದ್ದು ಸಾರ್' ಎಂದಾಗ, ನನಗೆ ಈ ಶಿಷ್ಯನ ಬಗ್ಗೆ ಹೆಮ್ಮೆ ಮೂಡಿತ್ತು.

೧೯೫೫ರಲ್ಲಿ ನನಗೆ ಹೊಸಕೋಟೆ ಪ್ರೌಢಶಾಲೆಯಿಂದ ನನ್ನ ಸ್ವಂತದ ಸ್ಥಳವಾದ ಆನೇಕಲ್ ಶಾಲೆಗೆ ವರ್ಗವಾಯಿತು. ಆನೇಕಲ್ಲಿಗೆ ಬಂದ ಸ್ವಲ್ಪ ಕಾಲದಲ್ಲೇ ನಿಸಾರ್ ಆನೇಕಲ್‌ನಲ್ಲಿ ಭೇಟಿಯಾದರು. 'ಏನ್ ನಿಸಾರ್ ಆನೇಕಲ್ಲಿಗೆ ಬಂದಿರಿ? ಸಾಹಿತ್ಯ ಕೃಷಿ ಹೇಗೆ ಸಾಗಿದೆ?' ಎಂದು ಪ್ರಶ್ನಿಸಿದೆ. ಅವರ ತಂದೆ ಷೇಖ್ ಹೈದರ್ ಸಾಹೇಬರಿಗೆ ಆನೇಕಲ್‌ನ ತಾಲ್ಲೂಕು ಕಛೇರಿಗೆ ವರ್ಗವಾಗಿದೆ ಎಂದೂ, ತಾನು ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಸೇರಿರುವುದಾಗಿಯೂ, ರಜೆಯನ್ನು ಕಳೆಯಲು ಆನೇಕಲ್ಲಿಗೆ ಬಂದಿರುವುದಾಗಿಯೂ ತಿಳಿಸಿದರು. ಆಗ್ಗೆ ತಾವು ಬರೆದಿದ್ದ ಕೆಲವು ಕವನಗಳನ್ನು ತೋರಿಸಿದರು. ಆನೇಕಲ್ಲಿನಲ್ಲೂ ನಿಸಾರ್ ಮತ್ತು ಮಿತ್ರವೃಂದ ಸಾಹಿತ್ಯ ಕಾರ್ಯಕ್ರಮಗಳನ್ನು ಆರಂಭಿಸಿದರು. ಕಾವ್ಯರಚನೆ, ನಾಟಕ ಪ್ರದರ್ಶನ ಇತ್ಯಾದಿ. ಇಲ್ಲೂ ನಿಸಾರ್ ಅವರೇ ಈ ಚಟುವಟಿಕೆಗಳ ಕೇಂದ್ರ. ನನಗೆ ತಿಳಿದ ಮಟ್ಟಿಗೆ ನಿಸಾರರ ಸ್ನೇಹ ವಲಯದಲ್ಲಿ ಅವರಿಗಿಂತ ಕೊಂಚ ಹಿರಿಯರಾದ ಸೂರ್ಯನಾರಾಯಣ ರಾವ್ (ಆಮೇಲೆ ಖ್ಯಾತ ಸಿನಿಮಾ ನಟ ಉದಯಕುಮಾರ್).

ಬೃಂದಾವನ ಹೋಟೆಲಿನ ಸುಬ್ಬರಾವ್, ಶರ್ಮ, ವಿಶ್ವನಾಥ ಶಾಸ್ತ್ರಿ, ಬಷೀರ್, ಗುಂಡಣ್ಣ, ಶ್ರೀನಿವಾಸ್ ಮುಂತಾದವರು ಇದ್ದರು.

ಈಗ್ಗೆ ೫೫ ವರ್ಷಗಳ ಹಿಂದೆ ಆನೇಕಲ್ಲು, ಹೊಸಕೋಟೆ ಮುಂತಾದ ಊರುಗಳು ಅಷ್ಟೇನೂ ಮುಂದುವರಿಯದ ಗ್ರಾಮಾಂತರ ಪ್ರದೇಶಗಳು. ಅಲ್ಲಿನ ಶಿಕ್ಷಣ ಎಸ್.ಎಸ್.ಎಲ್.ಸಿ.ಗೆ ಸೀಮಿತವಾಗಿತ್ತು. ಈಗಿನಂತೆ ಸರ್ಕಾರಿ ಇಲ್ಲವೇ ಖಾಸಗಿ ಕಾಲೇಜು ಗಳು ಇರಲಿಲ್ಲ. ಅಲ್ಲಿ ಓದಲು ಪುಸ್ತಕಗಳಾಗಲೀ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ಮಾರ್ಗದರ್ಶನವನ್ನು ಪಡೆಯಲು ಸಾಹಿತಿಗಳಾಗಲೀ ಇರಲಿಲ್ಲ. ಬೆಂಗಳೂರೇ ಆಗ ಸಾಹಿತ್ಯ ಕೇಂದ್ರ. ಅಂತಹ ಗ್ರಾಮಾಂತರ ಪರಿಸರದಲ್ಲಿ ಬೆಳೆದ ನಿಸಾರ್ ಲಭ್ಯವಾಗುತ್ತಿದ್ದ ಗ್ರಂಥಗಳನ್ನು ಅಧ್ಯಯನ ಮಾಡಿ ತಮ್ಮಲ್ಲಿ ಸುಪ್ತವಾಗಿದ್ದ ಸಾಹಿತ್ಯ ಪ್ರತಿಭೆಯನ್ನು ಬೆಳಕಿಗೆ ತಂದು ನಾಡಿನ ಸಾಹಿತಿಗಳ ಅಗ್ರ ಪಂಕ್ತಿಯಲ್ಲಿ ಒಂದು ಸ್ಥಾನವನ್ನು ಗಳಿಸಿಕೊಂಡು, ನನ್ನಂತಹ ಹಳ್ಳಿಯ ಉಪಾಧ್ಯಾಯನಿಗೆ ಪರಮಾಶ್ಚರ್ಯದ, ಸಂತೋಷ ಹೆಮ್ಮೆಗಳ ಪ್ರತೀಕವಾಗಿದ್ದಾರೆ.

ನಿಸಾರ್ ಎಸ್.ಎಸ್.ಎಲ್.ಸಿ. ಮುಗಿಸಿ, ಇಂಟರ್‌ಮೀಡಿಯೆಟ್ ದಾಟಿ ಬಿ.ಎಸ್‌ಸಿ. ಆನರ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಭೂ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ (ಎಂ.ಎಸ್ಸಿ.) ಪಡೆದು ಕಾಲೇಜು ಉಪನ್ಯಾಸಕರಾದುದು ತಿಳಿಯಿತು. ಅವರು ಅಧ್ಯಾಪಕ ವೃತ್ತಿಯನ್ನು ಕೈಗೊಂಡಿದ್ದು ನನಗೆ ನಿಜಕ್ಕೂ ಆನಂದ ಉಂಟುಮಾಡಿತು. ನಮ್ಮ ಸಾಹಿತಿ ಗಳಲ್ಲಿ ಬಹು ಮಂದಿ ಅಧ್ಯಾಪಕರಾದವರು. ಹೀಗಾಗಿ, ನಿಸಾರರ ಸಾಹಿತ್ಯ ಚಟುವಟಿಕೆಗಳಿಗೆ ಅಧ್ಯಾಪನ ವೃತ್ತಿ ಪೂರಕವೆಂದು ನಾನು ಭಾವಿಸಿದೆ.

ಬಿ.ಎಂ.ಶ್ರೀ., ಟಿ. ಎಸ್. ವೆಂಕಣ್ಣಯ್ಯ, ತೀ.ನಂ.ಶ್ರೀ., ಕುವೆಂಪು, ಜಿ. ಪಿ. ರಾಜರತ್ನಂ, ದೇ.ಜ.ಗೌ., ವಿ.ಸೀ. ಮಂದಲಾದವರು ಉತ್ತಮ ಅಧ್ಯಾಪಕರಾಗಿ, ಅಂತೆಯೇ ಶ್ರೇಷ್ಠ ಸಾಹಿತಿಗಳಾಗಿ ವಿಜೃಂಭಿಸಿದರು. ಈ ಮಹನೀಯರಲ್ಲಿ ಸಾಹಿತ್ಯದ ಬೋಧನೆ ಮತ್ತು ಸಾಹಿತ್ಯ ರಚನೆ ಜೊತೆ ಜೊತೆಯಾಗಿ ನಡೆದವು. ಆದರೆ ನಿಸಾರರಲ್ಲಿ ಒಂದು ವಿಶೇಷ. ಇವರದು, ಒಂದಕ್ಕೊಂದು ನಿಕಟ ಸಂಬಂಧವಿಲ್ಲದ ವೃತ್ತಿ ಮತ್ತು ಪ್ರವೃತ್ತಿಯನ್ನು ಏಕಕಾಲದಲ್ಲಿ ನಡೆಸುತ್ತಿದ್ದುದು. ಒಂದು ವಿಜ್ಞಾನ, ಮತ್ತೊಂದು ಸಾಹಿತ್ಯ—ಎರಡೂ ನಿಸಾರರಲ್ಲಿ ಮೇಳೈಸಿರುವುದು ವಿಸ್ಮಯಕಾರಿಯಾದದ್ದು.

ಕಳೆದ ಶತಮಾನದ ಅರವತ್ತರ ದಶಕದ ಪ್ರಾರಂಭದ ಅವಧಿಯಲ್ಲಿ ನಿಸಾರ್ ಅವರು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾಗ ಅವರನ್ನು ಆನೇಕಲ್‌ನ ಪ್ರೌಢಶಾಲೆಗೆ ಕರೆಸಿ, ವಿದ್ಯಾರ್ಥಿ ಸಂಘದಲ್ಲಿ ಅವರು ಭಾಷಣ ಮಾಡುವ ಕಾರ್ಯಕ್ರಮ ವನ್ನು ವ್ಯವಸ್ಥೆ ಮಾಡಿದ್ದೆ. ತಾವು ರಚಿಸಿದ ಕೆಲವು ಕವನಗಳನ್ನೂ ವಾಚಿಸಿದರು. ಅವುಗಳಲ್ಲಿ ಕೆಲವು ಸಮಯದ ಮುಂಚೆ ರಚಿಸಿದ್ದ, ಇಂದಿಗೂ ಪ್ರಖ್ಯಾತವಾಗಿರುವ 'ಕುರಿಗಳು, ಸಾರ್, ಕುರಿಗಳು' ಕವನವನ್ನು ನಾಟಕೀಯವಾಗಿ ಓದಿದ್ದು ನೆನಪಿದೆ. ಅದರ ರಚನೆಗೆ ಅವರಿಗೆ ದೊರೆತ ಸ್ಫೂರ್ತಿಯ ಬಗ್ಗೆ ಮಾತನಾಡಿದರು. 'ನಾವು ಜನ ಸಾಮಾನ್ಯರೊಡನೆ ಒಂದಾಗಿ

ಸೇರಿ ಅವರ ನಿತ್ಯದ ಸಂತಸ ದುಃಖಗಳನ್ನು ಮಾನವೀಯ ದೃಷ್ಟಿಯಿಂದ ಕಂಡು ಕಾವ್ಯ ರಚನೆ ಮಾಡುವುದು ಸಹಜ. ಜನ ಸಾಮಾನ್ಯರಿಂದ ನಾನು ಪ್ರತ್ಯೇಕವೆಂದು ಭಾವಿಸಬಾರ'ದೆಂದು ನುಡಿದರು. ಕವನ ರಚನೆಯ ಆರಂಭದ ಕಾಲದಲ್ಲಿ ನಾನು ಅವರನ್ನು ಪ್ರೋತ್ಸಾಹಿಸಿದ್ದನ್ನು ಹೇಳಲು, ಕೃತಜ್ಞತೆ ಸಲ್ಲಿಸಲು ಮರೆತಿರಲಿಲ್ಲ.

ನಾನು ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಉಪನ್ಯಾಸಕನಾಗಿ ಬೇರೆ ಬೇರೆ ಊರುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದುವ ಸಮಯದಲ್ಲಿ ಬೆಂಗಳೂರಿನ ಒಂದು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ.

ಆ ವೇಳೆಗೆ ನಿಸಾರ್‌ರವರು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ನಮ್ಮ ಊರಿನ ಕಡೆಯ ವಿದ್ಯಾರ್ಥಿಗಳು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ 'ಆನೇಕಲ್ಲು' ಎಂಬ ಹೆಸರನ್ನು ಕೇಳಿದ ಕೂಡಲೇ ನನ್ನನ್ನು ಜ್ಞಾಪಿಸಿಕೊಂಡು, 'ನಮ್ಮ ಮಾಸ್ಟರು ಹೇಗಿದ್ದಾರೆ? ಆರೋಗ್ಯ ಹೇಗಿದೆ?' ಎಂದೆಲ್ಲಾ ವಿಚಾರಿಸುತ್ತಿದ್ದರು. ಹೃದಯ ದಿಂದ ತುಂಬಿ ಬರುತ್ತಿದ್ದ ಅವರ ವಿಶ್ವಾಸದ ಮಾತುಗಳನ್ನು ನಾನು ಹೇಗೆ ಮರೆಯಲಿ? ಈ ವೇಳಾಗಾಗಲೇ ಅವರ ಸಾಹಿತ್ಯ ರಚನೆಯ ಕಾರ್ಯ ಅವಿರತವಾಗಿ ಮುಂದುವರೆದು ಅವರಿಗೆ ಪ್ರತಿಷ್ಠಿತ ಪ್ರಶಸ್ತಿಗಳು ಬರಲಾರಂಭಿಸಿದ್ದವು. ಅವರ ಸಾಹಿತ್ಯ ಸಾಧನೆಯನ್ನು ಗುರ್ತಿಸಿ ಸರ್ಕಾರ ಅವರನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಅವರ ನೇತೃತ್ವದಲ್ಲಿ ಅಕಾಡೆಮಿ ಉತ್ತಮ ಕಾರ್ಯವನ್ನು ನೆರವೇರಿಸಿತು. ಈ ಸಮಯದಲ್ಲಿ (೧೯೮೫) ಮೈಸೂರಿನಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಯಿತು. ನನ್ನನ್ನು ಸಮ್ಮೇಳನಕ್ಕೆ ಆಹ್ವಾನಿಸಿ ಅದರ ಕಲಾಪಗಳನ್ನು ವೀಕ್ಷಿಸಲು ಅವಕಾಶ ಮಾಡಿಕೊಡಲು ತುಂಬಾ ಆಸಕ್ತಿ ವಹಿಸಿದ್ದರು. ಆದರೆ ನನ್ನ ಆರೋಗ್ಯ ಚೆನ್ನಾಗಿಲ್ಲದ ಕಾರಣದಿಂದ ನಾನು ಸಮ್ಮೇಳನಕ್ಕೆ ಹೋಗಲಾಗಲಿಲ್ಲ.

ನಾನು ಬೆಂಗಳೂರಿನ ವಾಣೀ ವಿಲಾಸ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಒಂದು ಪ್ರಸಂಗ ನಡೆಯಿತು. ಆ ಕಾಲೇಜಿನಲ್ಲಿ ಸರ್ಕಾರಿ ಉದ್ಯೋಗಸ್ಥರಿಗೆ ಅಗತ್ಯವಾದ ಅಕೌಂಟ್ಸ್ ಹೈಯರ್ ಪರೀಕ್ಷೆ ನಡೆಯುತ್ತಿತ್ತು. ಆ ಪರೀಕ್ಷೆಯ ವ್ಯವಸ್ಥೆ ಯನ್ನು ನಾನು ಮಾಡಿ ಪರೀಕ್ಷಾ ಕೊಠಡಿಗಳಿಗೆ ಹೋಗಿ ಬರುತ್ತಿದ್ದಾಗ ಒಂದು ಕೊಠಡಿಯಲ್ಲಿ ನಿಸಾರ್ ಅಹಮದ್ ಕುಳಿತು ಉತ್ತರ ಬರೆಯುತ್ತಿದ್ದರು. ನಾನು ಅವರಿಗೆ ನಮ್ಮ ಆಫೀಸ್‌ನ ಅಧೀಕ್ಷಕರಾಗಿದ್ದ ತಿಪ್ಪೇಸ್ವಾಮಿಯವರ ಕೈಯಲ್ಲಿ ಚಹ ಪಾನೀಯವನ್ನು ಕಳಿಸಿ, ಪರೀಕ್ಷೆಯ ಅನಂತರ ಕರೆಸಿಕೊಂಡು `ಏನ್ ನಿಸಾರ್, ಕನ್ನಡ ಕವಿಶ್ರೇಷ್ಠರಿಗೂ ಅಕೌಂಟ್ಸ್ ಹೈಯರಿಗೂ ಏನು ಸಂಬಂಧ?' ಎಂದೆ. ಅವರು ಬಾಯಿ ತುಂಬಾ ನಕ್ಕು `ಪ್ರೊಫೆಸರಾಗಿ ಮುಂಬಡ್ತಿ ಪಡೆಯಲು ಈ ಪರೀಕ್ಷೆಯಲ್ಲಿ ನಾನು ಪಾಸಾಗಲೇಬೇಕಂತೆ ಸಾರ್' ಎಂದರು.

ನಿಸಾರ್ ಅವರ ಆಕರ್ಷಕ ವ್ಯಕ್ತಿತ್ವ, ಹಾಸ್ಯಮಿಶ್ರಿತ ಮಾತು ಮತ್ತು ಸಜ್ಜನಿಕೆ ಎಲ್ಲರಿಗೂ ವಿಸ್ಮಯವನ್ನುಂಟುಮಾಡಿತು. ನಮ್ಮ ಸಹೋದ್ಯೋಗಿ ವರ್ಗಕ್ಕೆಲ್ಲ ನಿಸಾರ್ ರವರನ್ನು ಪರಿಚಯಿಸಿದೆ. ಅನಂತರ ಪರೀಕ್ಷಾ ಫಲಿತಾಂಶ ಹೊರಬಿತ್ತು. ನಿಸಾರ್ ಖುದ್ದಾಗಿ

ನಮ್ಮ ಕಾಲೇಜಿಗೆ ಬಂದು ಸಿಹಿ ಹಂಚಿ ನಮ್ಮನ್ನೆಲ್ಲಾ ಸಂತೋಷಪಡಿಸಿದರು.


ನನ್ನ ೪೫ ವರ್ಷಗಳ ಅವಧಿಯ ಅಧ್ಯಾಪಕ ವೃತ್ತಿಯಲ್ಲಿ ಅನೇಕ ಶಿಷ್ಯರು ವಿವಿಧ ಕ್ಷೇತ್ರಗಳಲ್ಲಿ ಪ್ರತಿಭಾವಂತರಾಗಿ ಪ್ರಸಿದ್ಧರಾಗಿದ್ದಾರೆ. ಒಬ್ಬರು ವಿಶ್ವವಿದ್ಯಾನಿಲಯದ ನಿವೃತ್ತ ಉಪ ಕುಲಪತಿಗಳು, ಮತ್ತೊಬ್ಬರು ಬಹಳ ದೊಡ್ಡ ವಿಜ್ಞಾನಿಗಳು. ಅಮೆರಿಕದ ಬಾಸ್ಟನ್ ನಗರದ ವಿಶ್ವವಿಖ್ಯಾತ ಎಂ.ಐ.ಟಿ. ಸಂಸ್ಥೆಯಲ್ಲಿ ಒಬ್ಬರು ಇಲಾಖೆಯ ಮುಖ್ಯಸ್ಥರಾಗಿದ್ದಾರೆ. ಅನೇಕ ಇಂಜನಿಯರುಗಳು, ಡಾಕ್ಟರುಗಳು, ಪ್ರೊಫೆಸರುಗಳು, ಮಾಜಿ ಮಂತ್ರಿಗಳು ನನ್ನ ಅಚ್ಚುಮೆಚ್ಚಿನ ಶಿಷ್ಯರು. ಬಹು ಭಕ್ತಿ ಆದರಗಳಿಂದ ನನ್ನನ್ನು ಕಾಣುವವರು. ಈ ಶಿಷ್ಯ ವೃಂದದಲ್ಲಿ ನಿಸಾರ್‌ರವರದು ಒಂದು ಅನನ್ಯವಾದ ಸ್ಥಾನ. ಯಾವುದೋ ಗ್ರಾಮಾಂತರ ಪ್ರದೇಶದಲ್ಲಿ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಬಾಲಕನೊಬ್ಬ ಕನ್ನಡ ಕವಿಗಳ ಮೊದಲ ಪಂಕ್ತಿಯಲ್ಲಿ ಸ್ಥಾನವನ್ನು ಗಳಿಸಿ ಅನೇಕ ಪದವಿ ಪಾರಿತೋಷಕಗಳನ್ನು ಪಡೆದು ತಮ್ಮ ಕವನಗಳ ಮೂಲಕ, ಗೀತೆಗಳ ಕ್ಯಾಸೆಟ್ಟುಗಳ ಮೂಲಕ ಮನೆ ಮಾತಾಗಿರುವುದು ಅಸಾಧಾರಣವಾದದ್ದು.

೫೫ ವರ್ಷಗಳ ಹಿಂದಿನ ನಿಸಾರ್ ಈಗಲೂ ನನಗೆ ಅಂದಿನ ನಿಸಾರ್‌ರಾಗಿಯೇ ಉಳಿದಿದ್ದಾರೆ. ನಾನು ತೀವ್ರ ಅನಾರೋಗ್ಯದಿಂದ ಅಂಗವಿಕಲನಾಗಿ ಮಲಗಿದ್ದಾಗ ಆ ವಿಷಯವನ್ನು ಕೇಳಿದ ನಿಸಾರ್, 'ನಮ್ಮ ಪ್ರೀತಿಯ ಮೇಷ್ಟ್ರ ಆರೋಗ್ಯ ಸರಿ ಹೋಗುವುದಕ್ಕೆ ನಾನು ಏನನ್ನೂ ಮಾಡಲು ಸಾಧ್ಯವಾಗುತ್ತಿಲ್ಲವಲ್ಲ' ಎಂದು ಮಮ್ಮಲ ಮರುಗಿದರಂತೆ. ತಮ್ಮ ಅಸಹಾಯಕತೆಗೆ ಬಹಳ ನೊಂದುಕೊಂಡರಂತೆ.

ಇದೆಂಥ ಹೃದಯಸಂಪನ್ನತೆ! ಇಂತಹ ಅಂತರಂಗದ ಸಂಬಂಧವನ್ನು ವರ್ಣಿಸುವುದು ಕಷ್ಟ. ನಮ್ಮ ನಿಸಾರ್‌ರವರಿಗೆ ೭೦ ವರ್ಷ ತುಂಬಿ ೭೧ರಲ್ಲಿ ದಾಪುಗಾಲಿಟ್ಟು ಮುನ್ನಡೆಯುತ್ತಿದ್ದಾರೆ. ಹಾಗೆಯೇ ಶತಾಯುಷಿಗಳಾಗಿ ಬಾಳಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

ಧರ್ಮದ ತಿರುಳನ್ನು ಅರಿಯದೆ ಕೇವಲ ಕಂದಾಚಾರಿಗಳಾಗಿರುವವರು ಹಾಗೂ ಅದನ್ನು ಮತ್ತು ದೇವರನ್ನು ತಮ್ಮ ಅನ್ಯಾಯ ಅಕೃತ್ಯಗಳ ವಿದ್ಯಮಾನಗಳಿಗೆ ಗುರಾಣಿಯಾಗಿ ಬಳಸಿಕೊಳ್ಳುವ ಕರ್ಮಠ ಜಡರಿಗಿಂತ ಸುವಿಚಾರಪರರೂ ಹೊರ-ಒಳಗೆ, ನುಡಿನಡೆಗಳಲ್ಲಿ ಪರಿಶುದ್ಧರೂ ಮನಸ್ಸಾಕ್ಷಿ ವಿಧೇಯರೂ ಆದ ನಾಸ್ತಿಕರು ಹೆಚ್ಚು ಗೌರವಾರ್ಹರೂ ವಿಶ್ವಾಸಪರರೂ ಎಂದು ಪರಿಗಣಿತರಾಗುತ್ತಾರೆ. ಭಕ್ತಿಭಾವಗಳ ಅಜ್ಞಾನಜನ್ಯ ನಿಲವೂ ಅವರ ಧರ್ಮರಕ್ಷಕ ಸೋಗೂ ನಾಟಕದ ವೇಷಭೂಷವಲ್ಲದೆ ನಿಜವಾದುವಲ್ಲ. ಇಂಥವರ ಅಂತರ್ಮುಖತೆ ಅಂತರ್ಮೂರ್ಖತೆಗೆ ಮತ್ತೊಂದು ಹೆಸರಷ್ಟೆ.

(ಅಜ್ಞಾನಿ ಧಾರ್ಮಿಕರು)



ಎಲ್ಲರಂಥವನಲ್ಲವೀ ನನ್ನ ಸನ್ಮಿತ್ರ

♦ ಪ್ರೊ. ಜಿ. ಟಿ. ನಾರಾಯಣರಾವ್
(ಸಹೋದ್ಯೋಗಿ)

ಪೂರ್ವ ಕಥೆ

೧೯೨೬ರಲ್ಲಿ ಮಡಿಕೇರಿಯ ಶಿಶುವಾಗಿ ನನ್ನ ಜನನ. ೧೯೬೨ರ ತನಕ ನನ್ನ 'ಬದುಕು ಜಟಕಾ ಬಂಡಿ'. ನಾನೊಲಿದ ವೃತ್ತಿ, ಪ್ರವೃತ್ತಿ ಮತ್ತು ಹವ್ಯಾಸದ ವಲಯಗಳಲ್ಲಿ ಶಾಂತವಾಗಿ ಉರುಳುತ್ತ ಜೀವನವೊಂದು ಸುಂದರ ಕಾವ್ಯವಾಗಿತ್ತು. ೧೯೪೭ರಿಂದ ಕಾಲೇಜಿನಲ್ಲಿ ಗಣಿತೋಪನ್ಯಾಸಕನಾಗಿ ವೃತ್ತಿ ಪ್ರವೇಶ. ಸಂಗೀತ ಮತ್ತು ಸಾಹಿತ್ಯ ವಲಯಗಳಲ್ಲಿ ಸ್ವೇಚ್ಛಾ ವಿಹಾರದ ಪ್ರವೃತ್ತಿ ಮತ್ತು ಹವ್ಯಾಸ. ೧೯೫೨ರಿಂದ ಭಾಗಕಾಲಿಕ ಎನ್‌ಸಿಸಿ ಅಧಿಕಾರಿಯಾಗಿ ಕೂಡ ಸೇವೆ. ವರ್ತಮಾನದ (೨೦೦೫) ಅನುಕೂಲ ಮಂಚಿಕೆಯಿಂದ ಹಿಂತಿರುಗಿ ಸಿಂಹಾವಲೋಕಿಸಿದಾಗ ನನ್ನ ಬಾಳ ಬಂಡಿ ಹೂಡಿದ ಜಾಡಿನ ಸೂತ್ರವಿದು. 'ಸಂಗೀತವೆನ್ನುಸಿರು, ಸಾಹಿತ್ಯವೆನ್ನೊಡಲು, ವಿಜ್ಞಾನವೆನ್ನಶನ.'

ಅದೇ (೧೯೬೨) ಡಿಸೆಂಬರಿನಲ್ಲಿ ಚೈನಾ ದೇಶ ಹಠಾತ್ತನೆ ಹಿಮಾಲಯದ ಕಡು ತಣ್ಪಿನಲ್ಲಿ ಜ್ವಾಲಾಮುಖಿಯ ಲಾವಾ ಪ್ರವಾಹ ಹರಿಸಿತು. ಕನಸಿನ ಸುಂದರ ಶಿಶಿರ ನಿದ್ರೆಯಿಂದ (hibernation) ದೇಶ ವಾಸ್ತವದ ಕಠಿಣ ಭವಕ್ಕೆ ಕೆಡೆಯಲ್ಪಟ್ಟಿತು. ಆಗ ರಾಷ್ಟ್ರ ಕೈಗೊಂಡ ಅನೇಕ ದೇಶ ರಕ್ಷಣ ಯೋಜನೆಗಳ ಪೈಕಿ ಸೇನಾಬಲಗಳ ಬೃಹದ್ವಿಸ್ತರಣೆ ಮತ್ತು ವಿದ್ಯಾರ್ಥಿಗಳಿಗೆ ಕಡ್ಡಾಯ ಎನ್‌ಸಿಸಿ ಶಿಕ್ಷಣ ಬೋಧನೆ ಕೂಡ

ಸೇರಿದ್ದುವು. ಪರಿಣಾಮವಾಗಿ ರಕ್ಷಣಾವಿಭಾಗ ಅಲ್ಲಿಯ ತನಕ ಎನ್‌ಸಿಸಿ ಘಟಕಗಳನ್ನು ನಿರ್ವಹಿಸುತ್ತಿದ್ದ ಸೇನಾಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಂಡು ಆ ಸ್ಥಳಗಳಿಗೆ ಎನ್‌ಸಿಸಿ ಅಧಿಕಾರಿಗಳನ್ನು ಆಹ್ವಾನಿಸಿ ಅವರಿಗೆ ಪೂರ್ಣಕಾಲಿಕ ಸೇವಾವಕಾಶವನ್ನು ಒದಗಿಸಿತು.

ಸೇನಾವರಿಷ್ಠರ ದೃಷ್ಟಿಯಲ್ಲಿ ನಾನೊಬ್ಬ ಯಶಸ್ವೀ ಅಧಿಕಾರಿ. ಹೀಗಾಗಿ ಅವರು ನನ್ನ ಮನವೊಲಿಸಿ ಪೂರ್ಣಕಾಲಿಕ ಎನ್‌ಸಿಸಿ ಹುದ್ದೆಗೆ ಔಪಚಾರಿಕ ಅರ್ಜಿಯನ್ನು ಸಲ್ಲಿಸುವಂತೆ ಪುಸಲಾಯಿಸಿದರು. ಹೀಗೆ ನಾನು ನನ್ನ ಪ್ರೀತಿಯ ವೃತ್ತಿಯಿಂದ ತಾತ್ಕಾಲಿಕ ವಿಮೋಚನೆ ಪಡೆದು, ದೇಶ ಸೇವೆಯೆಂಬ ಅಮಲಿನಲ್ಲಿ, ಅರಿಯದ ಮತ್ತು ದೂರದ ಬಳ್ಳಾರಿಯಲ್ಲಿ ಹೊಸ ಜಾಡು ಹೂಡುತ್ತ ಹೊಸತೇ ಧಾಟಿ ಹಾಡುವುದು (೧೯೬೩) ಅನಿವಾರ್ಯವಾಯಿತು: 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯ ನಮಗಿರಲಿ' ಎಂಬುದು ಸದಾ ನನ್ನ ಮಂತ್ರ.

ಈ ಕ್ಷೇತ್ರದಲ್ಲಿ ತನ್ಮಯತೆಯಿಂದ ಸೇವಾಮಗ್ನನಾಗಿದ್ದಾಗಲೇ ನನ್ನಲ್ಲೊಂದು ಅಪರಾಧೀಪ್ರಜ್ಞೆ ಜಾಗೃತವಾಯಿತು: ಇರುವ ಮತ್ತು ಅರಿತ ವೃತ್ತಿಯಲ್ಲಿ ಇನ್ನಷ್ಟು ಸೇವೆಯೊಪ್ಪಿಸುವುದೇ ಋಜು ದೇಶ ಸೇವೆ, ಇಲ್ಲದ ಮತ್ತು ಅರಿಯದ ನೆಲೆಯಲ್ಲಿ ಬೆವರು ಹರಿಸುವುದಲ್ಲ! ಒಳಗಿನ ಸಂಗೀತ ಸೆಲೆ ಹಿಂಗಿತು, ಸಾಹಿತ್ಯ ಗಂಧ ಮಾಸಿತು ಮತ್ತು ವಿಜ್ಞಾನ ವಿಸ್ತಾರ ಕುಗ್ಗಿತು. ನಾನೊಬ್ಬ ದಕ್ಷ ರೈಫಲ್ ಆಗುತ್ತಿದ್ದೇನೋ ಏನೋ ಎಂಬಂಥ ವಿಚಿತ್ರಾನುಭವದಿಂದ ನಡುಗಿದೆ.

ನಡು ತೊರೆಯಲ್ಲಿ ಅಂಬಿಗನನ್ನು ಬದಲಿಸಬೇಡವೆಂಬ ಗಾದೆ ನೆನಪಾಯಿತು. ನಾನೋ ಖುದ್ದು ಹರಿಗೋಲನ್ನೇ ಬದಲಿಸಿದ್ದೆ! ಮೊದಲಿನದು ಜೀವನ ಪಥವನ್ನು ವ್ಯತ್ಯಯಿಸಿದರೆ, ಎರಡನೆಯದು ಬಾಳನ್ನು ನೇರ ಪ್ರಪಾತಕ್ಕೆ ಹೊನಲಿನ ರಭಸದಿಂದ ತಳ್ಳುತ್ತಿತ್ತು. ಪೂರ್ಣಕಾಲಿಕ ಹುದ್ದೆಯ ಮರುಭೂಮಿಯಿಂದ ಮೂಲ ವೃತ್ತಿಯ ನಂದನ ವನಕ್ಕೆ ಮರಳುವುದೊಂದೇ ಶರಣು. ಹೀಗೆ ೧೯೬೫ರ ಮಾರ್ಚ್ ಕೊನೆಯ ವೇಳೆಗೆ ನಾನು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ (Government Arts and Science College, ಕುಹಕಿಗಳ ವ್ಯಂಗ್ಯ ನುಡಿಯಲ್ಲಿ GAS College) ಮತ್ತೆ ಗಣಿತೋಪನ್ಯಾಸಕನಾಗಿ ಮರುವುಟ್ಟು ಪಡೆದೆ. ಅದೇ ತರುಣದಲ್ಲಿ ಪುನಃ ಭಾಗಕಾಲಿಕ ಎನ್‌ಸಿಸಿ ಅಧಿಕಾರಿಯಾಗಿಯೂ ಮುಂದುವರಿಯಲು ಒತ್ತಾಯದ ಆಹ್ವಾನ ಕೂಡ ಬಂದಿತು. ಇವೆಲ್ಲ ವಿವರಗಳೂ ಮಂಗಳೂರು ಅತ್ರಿ ಬುಕ್ ಸೆಂಟರಿನ ಪ್ರಕಟಣೆ 'ಎನ್‌ಸಿಸಿ ದಿನಗಳು' (೧೯೭೨, ಪುಟ ೯೬) ಪುಸ್ತಕದಲ್ಲಿವೆ.

ಸುಮಾರು ೨೦೦೦ ವಿದ್ಯಾರ್ಥಿಗಳ ಜೇನುಗೂಡು ನಮ್ಮ ಕಾಲೇಜು. ಉಪನ್ಯಾಸಕರ ಸಂಖ್ಯೆ ೧೦೦ಕ್ಕೂ ಹೆಚ್ಚು. ಇಡೀ ಕಾಲೇಜಿಗೇ ಒಂದು ಎನ್‌ಸಿಸಿ ಘಟಕ ಮೀಸಲಾಗಿತ್ತು: ೧೨ನೆಯ ಮೈಸೂರು ಎನ್‌ಸಿಸಿ ಬೆಟಾಲಿಯನ್. ಇದರಲ್ಲಿ ತಲಾ ೨೦೦ ಕ್ಯಾಡೆಟುಗಳ ಎಂಟು ಕಂಪೆನಿಗಳು, ಒಂದೊಂದರ ಮುಖ್ಯಸ್ಥ ಒಬ್ಬೊಬ್ಬ ಭಾಗಕಾಲಿಕ ಎನ್‌ಸಿಸಿ ಅಧಿಕಾರಿ. ಇವರೆಲ್ಲರ ಮೇಲೆ ಒಬ್ಬ ದ್ವಿತೀಯಾಧಿಕಾರಿ (Second-in-Command). ಈ ಬೃಹತ್ಸೌಧದ ಯಜಮಾನ ಮೇಜರ್ ದರ್ಜೆಯ ಒಬ್ಬ ಪೂರ್ಣಕಾಲಿಕ ಸೇನಾಧಿಕಾರಿ

(Officer Commanding). ನಮ್ಮ ಕಂಪೆನಿಯ ಎಂಟು ಭಾಗಕಾಲಿಕ ಅಧಿಕಾರಿಗಳಿಗಿಂತಲೂ ಸೇವಾಜ್ಯೇಷ್ಠತೆಯಲ್ಲಿ ಹಿರಿಯನಾಗಿದ್ದ ನನಗೆ ದ್ವಿತೀಯಾಧಿಕಾರಿ ಪಟ್ಟ ದೊರೆಯಿತು!

ಕವಿಕ್ರತು ದರ್ಶನ

ಬಳ್ಳಾರಿಯಲ್ಲಿದ್ದಾಗ ಸಂಗೀತ ಕುರಿತಂತೆ ನನಗೆ ರೇಡಿಯೊ ಒಂದೇ ಗತಿ. ಇನ್ನು ಸಾಹಿತ್ಯ? ಪುಸ್ತಕಗಳು, ದೈನಿಕಗಳು, ಮಾಸ ಪತ್ರಿಕೆಗಳು ಇತ್ಯಾದಿ. ಅಂದು 'ಕೈಲಾಸ' ಎಂಬ ಮಾಸ ಪತ್ರಿಕೆಯಲ್ಲಿ ಹೊಸ ಕೋಗಿಲೆಯೊಂದರ ನೂತನ ಧಾಟಿ ಕೇಳಿ ಹರ್ಷಿಸಿದ್ದೆ. ಕವಿಯ ಹೆಸರೂ ಅಷ್ಟೇ ಕುತೂಹಲಕಾರಿ: ಕೆ. ಎಸ್. ನಿಸಾರ್ ಅಹಮದ್. 'ಕುರಿಗಳು, ಸಾರ್, ಕುರಿಗಳು' ಶೀರ್ಷಿಕೆಯ ಕವನದಿಂದ ಇವರು ಕನ್ನಡ ನಾಡಿನ ಉದ್ದಗಲ ಸುಪರಿಚಿತರಾಗಿದ್ದರು. ನಮ್ಮ ಕಾಲೇಜಿನಲ್ಲಿ ಅವರೊಬ್ಬ ಉಪನ್ಯಾಸಕ ಮತ್ತು ಎನ್‌ಸಿಸಿ ಅಧಿಕಾರಿಯೆಂಬ ಸಿಹಿ ಸುದ್ದಿಯನ್ನು ಪರಿಚಿತ ಸಾಹಿತ್ಯ ಪ್ರೇಮಿಯೊಬ್ಬರಿಂದ ತಿಳಿದು ಹರ್ಷಿತನಾದೆ. ಆದರೆ ಆಗ ಕಾಲೇಜಿಗೆ ಬೇಸಗೆ ರಜೆ.

ಜೂನ್ ಕೊನೆಯಲ್ಲಿ (೧೯೬೫) ಕಾಲೇಜ್ ಆರಂಭ. ನಿಸಾರ್ ದರ್ಶನಾರ್ಥ ಅವರ ಇಲಾಖೆಯತ್ತ (ಭೂ ವಿಜ್ಞಾನ ವಿಭಾಗ) ದಾಪುಗಾಲಿಟ್ಟೆ. ಅದೇ ವೇಳೆ ಅವರೂ ನನ್ನ ಕೊಠಡಿಯತ್ತ (ಗಣಿತ ವಿಭಾಗ) ಬರುತ್ತಿದ್ದರಂತೆ. ಕಾಲೇಜಿನ ಪರಿಸರದಲ್ಲಿ ಅಪರಿಚಿತ ವ್ಯಕ್ತಿಯಾಗಿದ್ದ ನನ್ನನ್ನು ಅವರು ಗುರುತಿಸಿ ನನ್ನ ಬಳಿ ಬಂದು, 'ತಾವು ಯಾರು ಸಾರ್? ಇಲ್ಲಿ ತಾವು ಯಾರನ್ನು ನೋಡ ಬಯಸುತ್ತೀರಿ?' ಎಂದು ಆತ್ಮೀಯವಾಗಿ ಮಾತಾಡಿಸಿದರು. ಪ್ರವರ ಹೇಳಿದೆ.

'ಓಹೋಹೋ! ಕಾಶಿಗೆ ಹೋಗುತ್ತಿದ್ದಾಗ ಸಾಕ್ಷಾತ್ ಭಾಗೀರಥಿಯೇ ಎದುರು ಬಂದಂತಾಯಿತಲ್ಲ ಸಾರ್!' ಅವರ ಉದ್ಗಾರ.

'ನೀವು ಯಾರು?' ನನ್ನ ಪೆದ್ದು ಪ್ರಶ್ನೆ.

'ನಾನು ನಿಸಾರ್ ಅಹಮದ್, ಇಲ್ಲೇ ಒಬ್ಬ ಉಪನ್ಯಾಸಕ.'

'ಇದು ಸೃಷ್ಟಿ, ಕಪಿ ಮುಷ್ಟಿ, ಮಂತ್ರ ಮರೆತಲಿಬಾಬನೆದುರಲ್ಲಿ ಮುಚ್ಚಿರುವ ಗವಿ ಬಾಗಿಲು' ಎಂಬ ಮಾಂತ್ರಿಕ ಸಾಲುಗಳ ಕರ್ತೃ ನೀವು! ಈ ತೆರನಾಗಿ ನೀವು 'ಸಿಸೇಮೆ ತೆರೆ' ಮಂತ್ರ ಪಠಿಸಿ ನನ್ನ ಗವಿ ಬಾಗಿಲು ತೆರೆದಿರುವುದು ಎಂಥ ಆಶ್ಚರ್ಯ ಮತ್ತು ಸಂತೋಷ!'

ಒಬ್ಬ ಸೃಜನಶೀಲ ಲೇಖಕನ ವಾಙ್ಮಯವನ್ನು ಓದಿ, ಗ್ರಹಿಸಿ ಆತನ ಭೌತಾಕಾರ ಮತ್ತು ವರ್ತನೆಯನ್ನು ಕುರಿತು ನಾವು ಕಲ್ಪಿಸಿಕೊಳ್ಳುವ ಚಿತ್ರಣಕ್ಕೂ ವಾಸ್ತವ ದರ್ಶನಕ್ಕೂ ನಡುವೆ ಎಂಥ ವ್ಯತ್ಯಾಸವೆಂದು ವಿಸ್ಮಿತನಾದೆ. ನಡು ಹರೆಯ ಮೀರಿದ್ದ ಗಂಭೀರ ವದನ, ಮಂದ ಗಮನದ ಪುರುಷನನ್ನು ನಿರೀಕ್ಷಿಸಿದಲ್ಲಿ ನಾನು ಕಂಡದ್ದು ಹದಿ ಹರೆಯವಿನ್ನೂ ಮಾಸದ ಪಾದರಸ ಚಟುಲತೆಯ ವ್ಯಕ್ತಿಯನ್ನು! ಆ ಗಳಿಗೆ ಅವರಿಗೆ ನನಗಿಂತಲೂ ಹೆಚ್ಚು ಆಶ್ಚರ್ಯವಾಗಿತ್ತೆಂದು ಮುಂದೊಂದು ದಿನ ಅವರಿಂದಲೇ ತಿಳಿದೆ. ನಿವೃತ್ತಿಯ

ಅಂಚಿನಲ್ಲಿರುವ ಒಬ್ಬ ಗೂನು ಬೆನ್ನನ್ನು ಅವರು ನಿರೀಕ್ಷಿಸಿದ್ದರಂತೆ!

ಇಂಗ್ಲಿಷಿನಲ್ಲಿ ಹೇಳುವಂತೆ It was a case of love at first sight. ಪ್ರಥಮ ದರ್ಶನದಲ್ಲೇ ಪ್ರೇಮಾಂಕುರ. ಅವರು ಪೂರ್ವಭಾಷಿ, ಪ್ರಿಯಭಾಷಿ ಮತ್ತು ಮಿತಭಾಷಿ. ನಾನು? ಪೂರ್ವಭಾಷಿ ಹೌದು. ಉಳಿದೆರಡು ಗುಣಗಳಲ್ಲಿ ತದ್ವಿರುದ್ಧ.

ಎನ್‌ಸಿಸಿಯ ಕಡ್ಡಾಯದ ಗುಡಿ

ಎನ್‌ಸಿಸಿ ವಿದ್ಯಾರ್ಥಿ ಸೇನಾಶಿಕ್ಷಣ, ವ್ಯವಸ್ಥೆಯ ಒಂದು ಅಂಗ. ಕಡ್ಡಾಯತನ ಇದರ ಜೀವಾಳ. ಇತ್ತ ಯಾವುದೇ ಸೃಜನಶೀಲ ರಚನೆಯ ಮೂಲಧಾತು ಕುತೂಹಲ. ಕಡ್ಡಾಯದ ಗುಡಿಯಲ್ಲಿ ಕುತೂಹಲ ಮೊದಲ ಬಲಿ. ಪಂಜರದೊಳಗಿನ ಹಕ್ಕಿ ಹಾಡಲಾರದು, ಹಾಡು ಹಕ್ಕಿ ಬಯಸುವುದು ಸ್ವಾತಂತ್ರ್ಯ ಅಲ್ಲವೆ? ಹೀಗಿರುವಾಗ ನಿಸಾರ್ ಎಂಬ ಹಕ್ಕಿಯನ್ನು ಎನ್‌ಸಿಸಿ ಎಂಬ ಪಂಜರದೊಳಗೆ ಕೂಡಿ ಹಾಕುವುದು ಸಾಧ್ಯವೆ? ಅಂದಿನ ತುರ್ತು ಸನ್ನಿವೇಶದಲ್ಲಿ ಸಾಧ್ಯವಾಗಿತ್ತು. ಎನ್‌ಸಿಸಿಯಲ್ಲಿ ಅವರೊಬ್ಬ ದಕ್ಷ ಮತ್ತು ಸುಟಿ ಅಧಿಕಾರಿಯೂ ಆಗಿದ್ದರು.

ಕವಾಯತಿ ರಂಗದಲ್ಲಿ ನಿಸಾರ್ ತಮ್ಮ ಕ್ಯಾಡೆಟುಗಳ ಜೊತೆ ವರ್ತಿಸುತ್ತಿದ್ದ ಪರಿ ಎಂದೂ ಪ್ರಭುಸಮ್ಮಿತವಲ್ಲ. ಅದು ಮಾತೃಸಮ್ಮಿತ. ಸೇನಾ ಶಿಕ್ಷಣದಲ್ಲಿ ಹುಕುಂ, ತತ್‌ಕ್ಷಣ ಪಾಲನೆ, ಸುಟಿತನ, ಮೂಕ ವಿಧೇಯತೆ ಮುಂತಾದ ಯಾಂತ್ರಿಕ ವಿಧಿಗಳು ಮಾಮೂಲು. ಕವಿ ಹೃದಯದ ಮತ್ತು ಕೋಮಲ ಸ್ವಭಾವದ ನಿಸಾರರ ಪ್ರವೃತ್ತಿಗೆ ಇವೆಲ್ಲ ಎಂದೂ ಒಗ್ಗದ ಕಟ್ಟುಪಾಡುಗಳು. ಎನ್‌ಸಿಸಿಯ ಸಮಗ್ರ ಚೌಕಟ್ಟಿನಲ್ಲಿ ವೈಯಕ್ತಿಕ ಸಂದೇಹ, ಪ್ರಶ್ನೆ, ಚರ್ಚೆ ಮುಂತಾದ 'ಪ್ರಜಾಸತ್ತಾತ್ಮಕ' ವಿಧಾನಗಳಿಗೆ ಅವಕಾಶವಿರಲಿಲ್ಲ. 'ಒಂದು ಹುಕುಂ = ಒಂದು ಜಾರಿ'—ಇದು ಸೈನ್ಯದ ಕಾರ್ಯಾಚರಣೆಯಲ್ಲಿ ಅನುಸರಿಸುವ ತಳ ತತ್ತ್ವ. ಎಂದೂ 'ಕಿಂ ಕರ್ಮ ಕಿಮ ಕರ್ಮೇತಿ' (ಏನನ್ನು ಮಾಡಲಿ, ಮಾಡದಿರಲಿ; ಇದು ಸರಿಯೇ, ಅಲ್ಲವೇ ಮುಂತಾದ ಜಿಜ್ಞಾಸೆ) ಅಲ್ಲ. ಕವಿ ಮನೋಧರ್ಮವಾದರೋ ತದ್ವಿರುದ್ಧ.

ಹೀಗಾಗಿ ಪ್ರತಿ ಪೆರೇಡಿನಲ್ಲಿಯೂ ನಿಸಾರರು ಒಂದು ಬಗೆಯ ದ್ವಂದ್ವ ಪೀಡಿತರಾಗಿದ್ದುದು ನನ್ನ ಅರಿವಿಗೆ ಆಗಾಗ ಬರುತ್ತಿತ್ತು. ಪ್ರತ್ಯಕ್ಷ ಶಿಕ್ಷಣ ರಂಗದಲ್ಲಿ ಇದೆಂದೂ ಪ್ರಕಟವಾದದ್ದಿಲ್ಲ, ಅಥವಾ ಕಂಪೆನಿಯ ಸಾಮೂಹಿಕ ಶಿಸ್ತಿನ ಉಲ್ಲಂಘನೆಗೆ ಕಾರಣವಾದದ್ದಿಲ್ಲ. ಹಾಗಾದರೆ ಅವರೇಕೆ ಆರ್ಮಿ ಕವಾಯತಿಯ ಕಸಾಯಿಖಾನೆಗೆ ತಮ್ಮನ್ನು ಒಪ್ಪಿಸಿಕೊಂಡರು? ದೀರ್ಘಕಾಲಿಕ ಸಾಹಚರ್ಯದಿಂದ ಇದರ ಗುಟ್ಟು ತಿಳಿದುಕೊಂಡೆ: ಅದು ಅಂದಿನ ತಾತ್ಕಾಲಿಕ ದೇಶಪ್ರೇಮೋದ್ದೀಪಿತ ಕವಿ ಹೃದಯದ ಗುಂಗು ನನ್ನನ್ನೂ ತತ್ಪೂರ್ವ ಆವರಿಸಿದ್ದಂತೆ. ಕಾವ್ಯದಲ್ಲಿಯ ಯುದ್ಧ ವರ್ಣನೆಗೂ ವಾಸ್ತವದ ಶಿಕ್ಷಣ ನೀತಿಗೂ ನಡುವಿನ ಕಮರಿಯನ್ನು ಈ ಗುಂಗು ಮರೆಮಾಡಿತ್ತು. ಪ್ರತ್ಯಕ್ಷ ಪ್ರಯೋಗದಲ್ಲಿ ಇದು ಸ್ಪಷ್ಟವಾದಾಗ ಕಾಲ ಮೀರಿತ್ತು. ನಿಸಾರರು ತುರ್ತು ಪರಿಸ್ಥಿತಿಯ ಅನಿವಾರ್ಯತೆಗೆ ಹೊಂದಿಕೊಂಡಿದ್ದರು.

ಅವರೊಬ್ಬ ದಕ್ಷ ಮತ್ತು ಉತ್ಸಾಹೀ ಅಧಿಕಾರಿಯಾಗಿದ್ದರು.

ಇದಕ್ಕೊಂದು ನಿದರ್ಶನ `ಎನ್‌ಸಿಸಿ ದಿನಗಳು` ಕೃತಿಯಲ್ಲಿದೆ. ನಮ್ಮ ಕಂಪೆನಿಯ ಆಯ್ದ ಒಂದು ತಂಡ ನನ್ನ ಹಿರಿತನದಲ್ಲಿ ಕುದುರೆ ಮುಖ ಶಿಖರಾರೋಹಣಕ್ಕೆ ಹೋದ ಸಾಹಸ ಯಾತ್ರೆಯ ಸಂದರ್ಭವದು (೧೯೬೭). ಅದರಲ್ಲಿ ನಿಸಾರರೂ ಇದ್ದರು! ಆ ಮೊದಲು ನಾನು ಅವರ ಮುಂದೆ `ಪಡುವಣ ಕಡಲಿನ ತೆಂಗಿನ ಮಡಿಲಿನ ಮರೆಯಲಿ ಮೆರೆಯುವ` ದಕ್ಷಿಣ ಕನ್ನಡ ಜಿಲ್ಲೆಯ ಪ್ರಕೃತಿ ಸೌಂದರ್ಯವನ್ನು ನನ್ನ `ಅನುಭವದಡುಗೆ`ಗೆ ಸಾಕಷ್ಟು ಕಲ್ಪನೆಯ ಒಗ್ಗರಣೆ ಹಾಕಿ ಕಾವ್ಯಶೈಲಿಯಲ್ಲಿ ವರ್ಣಿಸಿದ್ದೆ. ಜೊತೆಗೆ `ನೀವೆಂಥ ಕವಿಗಳಯ್ಯ! ವಾಯುನಿರ್ಬಂಧಿತ ಕೊಠಡಿಯಲ್ಲಿ ಐಷಾರಾಮವಾಗಿ ಕುಳಿತು ಹಿಮಾಲಯದ ಆ ತಣ್ಪಿನಲ್ಲಿ ಶತ್ರುಗಳ ಆ ಹೊಡೆತದಲ್ಲಿ ದೇಶ ರಕ್ಷಣೆಗಾಗಿ ಪ್ರಾಣಾರ್ಪಣೆಗೈಯುತ್ತಿರುವ ಆ ಸೈನಿಕನ ಬಗ್ಗೆ ಕವನ ಹೊಸೆದು ಬೀಗುವುದು?` ಎಂದು ಛೇಡಿಸುತ್ತಿದ್ದೆ. `ನಿದ್ರಿಸದಿರು ವೀರಾ! ತಾಯ್ನಾಡಿನ ಧೀರಾ!` ಇದು ಇವರೇ ಅಂದು ಬರೆದ ಒಂದು ದೇಶಭಕ್ತಿ ಕವನದ ಪಲ್ಲವಿ. ಇನ್ನೊಂದು ಚರಣ:

‘ಅಲ್ಲಿ ನಾಡಿನುತ್ತರದಲಿ
ಪರ್ವತಗಳ ಎತ್ತರದಲಿ
ಹಿಮದ ಚಿರ ವಿಲಾಪದಲ್ಲಿ
ಕಾದಾಡುವ ವೀರರೇ,
ಇದೊ ವಂದನೆ ನಿಮಗೆ—ಅಭಿ
ವಂದನೆ ನಿಮಗೆ.’

ನಿಸಾರರು ಸ್ವಂತೇಚ್ಛೆಯಿಂದ ನಮ್ಮ ತಂಡವನ್ನು ಸೇರಿದರು ಮಾತ್ರವಲ್ಲ, ಹೊಸ ಹುಮ್ಮಸ್ಸಿನಿಂದ ದುಡಿದು ಶಿಬಿರಕ್ಕೆ ವಿಶೇಷ ಮೆರುಗು ನೀಡಿದರು ಕೂಡ. ಆದರೆ ಅಂತಿಮ ಶಿಖರಾರೋಹಣಕ್ಕೆ ಬರಲು ಹಿಂಜರಿದರು—ಭೌತ ಔನ್ನತ್ಯದ ಭೀತಿ! ಆ ದಿನಗಳಂದು ತಳ ಶಿಬಿರಾಧಿಪತಿಯಾಗಿ ಸಮರ್ಥ ಸೇವೆ ಸಲ್ಲಿಸಿದರು.

ಕನ್ನಡದ ಜನಪ್ರಿಯ ವಿಜ್ಞಾನ ವಾಙ್ಮಯ ಕರ್ತೃ

೧೯೬೯ರ ಪೂರ್ವಾರ್ಧದಲ್ಲಿ ನಾನು ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಮನ್ನಿಸಿ ಬೆಂಗಳೂರನ್ನೂ ಹಳೆಯ ಹುದ್ದೆಯನ್ನೂ (ಗಣಿತೋಪನ್ಯಾಸಕ) ಬಿಟ್ಟು ಮೈಸೂರಿಗೆ ಹೋದೆ (ಬಂದೆ). ಆಗ ಸಹಜವಾಗಿ ಎನ್‌ಸಿಸಿಯಿಂದಲೂ ವಿಮೋಚಿತನಾದೆ. ಮುಂದೆ ೧೯೮೭ರಲ್ಲಿ ನಿವೃತ್ತನಾಗುವ ತನಕ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿ ಹೊಸ ಹಸುರಿನಲ್ಲಿ ಹೊಸ ಹುರುಪಿನಿಂದ ದುಡಿದು ಹೊಸಬನೇ ಆದೆ. ಆಧುನಿಕ ವಿಜ್ಞಾನದ ಪರಿಕಲ್ಪನೆಗಳನ್ನು ಕನ್ನಡದಲ್ಲಿ ನಿರೂಪಿಸುವುದು ಆಗ ನನ್ನ ಹೊಣೆ.

೧೯೪೯ರಿಂದಲೂ ನಾನು ಕನ್ನಡದ ಜನಪ್ರಿಯ ವಿಜ್ಞಾನ ವಾಙ್ಮಯ ಕೃಷಿಯಲ್ಲಿ ಸಾಕಷ್ಟು ಕೈಯಾಡಿಸುತ್ತಿದ್ದೆ. ಇದು ನನ್ನ ಒಂದು ಪ್ರಿಯ ಹವ್ಯಾಸ. ಇದನ್ನು ಗುರುತಿಸಿದ ಐಬಿಎಚ್ ಪ್ರಕಾಶನ(ಬೆಂಗಳೂರು)ದ ಶ್ರೀ ಜಿ. ಕೆ. ಅನಂತರಾಮ್ ಅವರು ನನ್ನೆದುರು

ಮೂರು ಆಕರ್ಷಕ ಸವಾಲುಗಳನ್ನು ಹಂತಹಂತವಾಗಿ ಒಡ್ಡಿದರು. ಮೊದಲಿನ ಎರಡು ಎಂದರೆ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ. ಈ ಮಾಲೆಗಳ ಪ್ರಧಾನ ಸಂಪಾದಕನಾಗಿ ನಾನು ನನಗೆ ಇಷ್ಟ ಬಂದ ಸಂಪಾದಕರನ್ನು ಆಯುವ ಸ್ವಾತಂತ್ರ್ಯವಿತ್ತು. ಮೂರನೆಯದು ತುಸು ಭಿನ್ನ: ಕನ್ನಡದಲ್ಲೇ ಮಕ್ಕಳ ಸಚಿತ್ರ ವಿಜ್ಞಾನ ಪುಸ್ತಕಗಳ ಯೋಜನೆ ಮತ್ತು ರಚನೆ. ಈ ಮಾಲೆಯ ಹೆಸರು 'ವಿಜ್ಞಾನ ನೋಡು ಕಲಿ'.

ಪ್ರೀತಿಯ ಈ ಹವ್ಯಾಸವನ್ನು ಕಾರ್ಯಗತಗೊಳಿಸಲು ನಾನೊಂದು ಪೂರ್ವಭಾವೀ ಸಭೆಯನ್ನು ಕರೆದೆ. ಇದರ ಒಬ್ಬ ಸಕ್ರಿಯ ಸದಸ್ಯ ನನ್ನ ಮಾಜಿ ಸಹೋದ್ಯೋಗಿ ಕೆ. ಎಸ್. ನಿಸಾರ್ ಅಹಮದ್. ಇವರನ್ನು ಒಬ್ಬ ಭೂ ವಿಜ್ಞಾನ ಪರಿಣತರಾಗಿ ಆಹ್ವಾನಿಸಿದ್ದೆ. ಇತರರು ಪ್ರಸಿದ್ಧ ವಿಜ್ಞಾನ ಲೇಖಕರಾಗಿರುವ ಜೆ. ಆರ್. ಲಕ್ಷ್ಮಣರಾವ್ (ರಸಾಯನ ವಿಜ್ಞಾನ), ಅಡ್ಯನಡ್ಕ ಕೃಷ್ಣಭಟ್ಟ (ಭೌತ ವಿಜ್ಞಾನ), ಕೆ. ಬಿ. ಸದಾನಂದ (ಜೀವ ವಿಜ್ಞಾನ) ಮತ್ತು ಹಾ. ಬ. ದೇವರಾಜ ಸರ್ಕಾರ್ (ಪ್ರಾಣಿ ವಿಜ್ಞಾನ). ಆ ಸಭೆಯಲ್ಲಿ ಕೈಗೊಂಡ ಒಂದು ನಿರ್ಣಯದ ಪ್ರಕಾರ ನಿಸಾರರು 'ಶಿಲೆಗಳು ಮತ್ತು ಖನಿಜಗಳು' ಕುರಿತ ಕಿರು ಹೊತ್ತಗೆ ರಚಿಸಲು ಒಪ್ಪಿದರು. ಅಡ್ಯನಡ್ಕರದು 'ಮನುಕುಲದ ಕಥೆ'. ಸರ್ಕಾರ್ 'ಕೀಟಗಳು' ಮತ್ತು ನಾನು 'ಆಕಾಶದ ಅದ್ಭುತಗಳು' ಬರೆಯುವುದೆಂದು ತೀರ್ಮಾನಿಸಲಾಯಿತು. ನಿಸಾರ್ ತಾವೇ ಮುಂದೆ ಬಂದು 'ಹಕ್ಕಿಗಳು' ಬಗ್ಗೆ ಕೂಡ ಬರೆಯುವ ಇಚ್ಛೆಯನ್ನು ವ್ಯಕ್ತಪಡಿಸಿದರು.

'ನಾವು ಪ್ರತಿಯೊಬ್ಬರೂ ತಾಕತ್ತಿನ ತಾಣದಿಂದ ಬರೆಯಬೇಕೆಂಬುದು ನನ್ನ ಖಚಿತ ನಿಲವು. ಹಕ್ಕಿಗಳ ವೈಜ್ಞಾನಿಕ ಅಧ್ಯಯನ ನಿಮ್ಮ ಕ್ಷೇತ್ರವೆ?' ಎಂದು ಸಂದೇಹ ಸೂಚಿಸಿದೆ. ಅವರು ಹೌದೆಂದರು.

ಯಥಾ ಕಾಲದಲ್ಲಿ ಐದು ಹಸ್ತಪ್ರತಿಗಳು ನನ್ನ ಕೈಸೇರಿದುವು: ನಿಸಾರರದು ಎರಡು, ಕೃಷ್ಣಭಟ್ಟ, ಸರ್ಕಾರ್ ಮತ್ತು ನನ್ನದು ತಲಾ ಒಂದು. ಇವನ್ನು ಸಂಪಾದಿಸಿ, ಯುಕ್ತ ವರ್ಣಚಿತ್ರಗಳನ್ನು ಅಳವಡಿಸಿ, ಮುದ್ರಣ ಪ್ರತಿಗಳನ್ನು ತಯಾರಿಸಿ ಆಯಾ ಲೇಖಕರಿಗೆ ಅಂತಿಮ ಪರಿಷ್ಕರಣೆಯ ಸಲುವಾಗಿ ರವಾನಿಸಿದೆ. 'ಹಕ್ಕಿಗಳು' ಮೂಲ ಪ್ರತಿಯನ್ನು ಮಿತ್ರ ಸದಾನಂದರ ನೆರವಿನಿಂದ ನೇರ್ಪುಗೊಳಿಸಿದ್ದೆ.

'ನನ್ನ ಶೈಲಿಯನ್ನು ನೀವು ಬದಲಾಯಿಸಿಬಿಟ್ಟಿದ್ದೀರಿ. ನಾನಿದನ್ನು ಹೇಗೆ ಒಪ್ಪಲಿ?' ನಿಸಾರರಿಂದ ಸಿಡಿದ ನುಡಿ ಕ್ಷಿಪಣಿ.

'ಇಲ್ಲಿ ನಿಮ್ಮ ಶೈಲಿ, ನನ್ನ ಶೈಲಿ ಎಂಬ ವಿಭೇದೀಕರಣವಿಲ್ಲ. ನಮ್ಮ ಮಾಲೆಯ ಒಟ್ಟು ಧೋರಣೆಗೆ ಅನುಸಾರವಾಗಿ ಎಲ್ಲ ಹಸ್ತಪ್ರತಿಗಳನ್ನೂ ಸಂಪಾದಿಸಿದ್ದೇನೆ: ಇಲ್ಲಿ ಅಂದು ನಾವೆಲ್ಲರೂ ಒಪ್ಪಿಕೊಂಡಂತೆ ಚಿತ್ರಗಳನ್ನು 'ನೋಡು'ವುದಕ್ಕೆ ಆದ್ಯತೆ, ಅವನ್ನು ಕುರಿತ ಯುಕ್ತ 'ಕಲಿ'ಕೆಗೆ ಎರಡನೆಯ ಸ್ಥಾನ. ನಿಮ್ಮ ಹೆಸರಿನಲ್ಲೇ ಮುದ್ರಣವಾಗುವ ಈ ಪುಸ್ತಿಕೆಯಲ್ಲಿ ತಾಂತ್ರಿಕ ಅಥವಾ ಪರಿಕಲ್ಪನಾತ್ಮಕ ದೋಷವೇನಾದರೂ ನುಸುಳಿದ್ದರೆ ದಯವಿಟ್ಟು ತೋರಿಸಿ. ಸರಿಪಡಿಸುತ್ತೇನೆ.'

'ಸರಿ, ಇಲ್ಲಿಯೂ ಎನ್‌ಸಿಸಿ ಕವಾಯತಿಯೇ!' ಎಂದು ನಕ್ಕರು.

ಈ ಐದು ಪುಸ್ತಿಕೆಗಳನ್ನೂ ಮುಂದೊಂದು ದಿವಸ ಐಬಿಎಚ್ ಪ್ರಕಾಶನದವರು ಮುದ್ರಿಸಿ ಲೋಕಾರ್ಪಣೆಗೈದರು. ಇವುಗಳ ಆಕರ್ಷಕ ತೋರಣ ಮತ್ತು ಅಷ್ಟೇ ಭದ್ರ ಹಾಗೂ ಸುಲಲಿತ ಹೂರಣ ಆ ಕ್ಷಣವೇ ಜನ ಮನ್ನಣೆ ಗಳಿಸಿದುವು. ಜೊತೆಗೆ ಇವುಗಳ ಇಂಗ್ಲಿಷ್ ಅವತರಣಿಕೆಗಳನ್ನು ಕೂಡ ಪ್ರಕಟಿಸಿದ್ದಾಯಿತು. ಇದೊಂದು ನಿರಂತರ ಮಾಲೆಯಾಗಬೇಕೆಂಬುದು ಪ್ರಕಾಶಕ (ಮುಖ್ಯವಾಗಿ ಐಬಿಎಚ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಜಿ. ಕೆ. ಅನಂತರಾಮ್)ರ ಆಶಯ, ನನ್ನ ಹಂಬಲ ಕೂಡ. ಹೊಸ ಲೇಖಕರ ಅನ್ವೇಷಣೆಗೆ ಮತ್ತು ಕನ್ನಡದ ವಿಸ್ತರಣೆಗೆ ಇಲ್ಲೊಂದು ವಿನೂತನ ಅವಕಾಶ ಪ್ರಾಪ್ತವಾಗಿತ್ತು. ಮುಂದಿನ ಐದು ಶೀರ್ಷಿಕೆಗಳನ್ನು ಮುದ್ರಣ ಹಂತದವರೆಗೂ ಸಿದ್ಧಪಡಿಸಿದ್ದೆ. ಆದರೆ ಪ್ರಕಾಶಕರು ಈ ಅತ್ಯುಪಯುಕ್ತ ಶೈಕ್ಷಣಿಕ ಯೋಜನೆಯನ್ನು ಅಲ್ಲಿಗೇ ಕೈದುಗೊಳಿಸಬೇಕಾಯಿತು: ಬಾಹ್ಯ ಅಶೈಕ್ಷಣಿಕ ಅಡೆತಡೆಗಳಿಂದಾಗಿ. ಅವು ಇಲ್ಲಿ ಅಪ್ರಸ್ತುತ.

ಹೆಚ್ಚು ಕಡಿಮೆ ಒಂದು ವರ್ಷ ಸಲ್ಲುವಾಗ ನಮ್ಮ ಮಾಲೆಗೆ ಎರಡು ಅನಿರೀಕ್ಷಿತ ತುರಾಯಿಗಳು ಲಭಿಸಿದುವು: ದೆಹಲಿಯ ಎನ್‌ಸಿಇಆರ್‌ಟಿ ಸಂಸ್ಥೆ 'ಹಕ್ಕಿಗಳು' ಮತ್ತು 'ಕೀಟಗಳು' ಪುಸ್ತಿಕೆಗಳಿಗೆ ರಾಷ್ಟ್ರೀಯ ಪುರಸ್ಕಾರ ನೀಡಿದುವು. ಜೊತೆಗೇ 'ಹಕ್ಕಿಗಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಅದೇ ವರ್ಷ ಘೋಷಿತವಾಯಿತು. 'ಮನುಕುಲದ ಕಥೆ'ಗೆ ರಾಜ್ಯ ಸರ್ಕಾರ ಬಹುಮಾನ ಘೋಷಿಸಿತು. ಒಡನೆ ನಾನು ಆಯಾ ಲೇಖಕರಿಗೆ ನನ್ನ ಹಾರ್ದಿಕ ಅಭಿನಂದನೆಗಳನ್ನು ಕಳಿಸಿದೆ.

ಬೆಂಗಳೂರು ಆಕಾಶವಾಣಿಯಿಂದ ಆ ಸಂದರ್ಭದಲ್ಲಿ ಪ್ರಸಾರವಾದ ಸಂದರ್ಶನದಲ್ಲಿ ನಿಸಾರ್ ತಮ್ಮ ಸಾಧನೆ ಬಗ್ಗೆ ಸಾಕಷ್ಟು ವಿವರಣೆಯಿತ್ತರು. ನನ್ನ ಪಾತ್ರವನ್ನೂ ಸ್ಮರಿಸಿದರು. ಕೃಷ್ಣಭಟ್ಟ ಮತ್ತು ಸರ್ಕಾರ್ ನನಗೆ ಹೇಳಿದ ಮಾತುಗಳಲ್ಲಿ ಮಿಡಿದ ಭಾವ ಒಂದೇ. 'ವಸ್ತುತಃ ಇದು ನಿಮ್ಮ ಯಶಸ್ಸು. ನಮಗೆ ಬರಲಿರುವ ಬಹುಮಾನದ ಮೊತ್ತವನ್ನು ನಾವು ಹೇಗೆ ವಿನಿಯೋಗಿಸಬೇಕೆಂಬುದನ್ನು ನೀವು ನಿರ್ದೇಶಿಸಬೇಕು.'

—ಈ ಮೂರೂ ಸಭ್ಯರ ನಿಲವುಗಳನ್ನು ಮೆಚ್ಚುತ್ತ, 'ಇದು ನಿಮಗೆ ಅಯಾಚಿತವಾಗಿ ಬಂದಿರುವ ಪುರಸ್ಕಾರ. ಇದರ ವಿಲೇವಾರಿ ನಿಮ್ಮ ಖಾಸಗಿ ನಿರ್ಧಾರಕ್ಕೆ ಬಿಟ್ಟದ್ದು' ಎಂದು ಬರೆದೆ. ಮತ್ತೆ ಕೆಲವು ತಿಂಗಳು ಸಂದಾಗ ನನ್ನ ಉದ್ಯೋಗ ಕೇಂದ್ರದಲ್ಲಿ (ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ) ಏರ್ಪಡಿಸಲಾಗಿದ್ದ ಒಂದು ಕನ್ನಡ ಹಬ್ಬಕ್ಕೆ ನಿಸಾರ್ ಅಹಮದ್ (ಬೆಂಗಳೂರಿನಿಂದ) ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಆ ಸಭೆಯಲ್ಲಿ ನಾನು ಎಂದಿನಂತೆ ನಾಲ್ಕನೆಯ ಸಾಲಿನಲ್ಲಿ ಕುಳಿತಿದ್ದೆ.

'ಈಚೆಗೆ ನಾನು ರಚಿಸಿದ ಒಂದು ಕವನವನ್ನು ಈಗ ನಿಮ್ಮ ಮುಂದೆ ವಾಚಿಸಲಿದ್ದೇನೆ. ಹಿಂದೆ ಮಾಸ್ತಿಯವರನ್ನು ಕುರಿತು 'ಸದಾ ಇವರು ಹೀಗೆಯೇ' ಎಂಬ ಕವನದಲ್ಲಿ ಆ ಮಹಾ ಪುರುಷನ ವ್ಯಕ್ತಿತ್ವವನ್ನು ನನಗೆ ಕಂಡಂತೆ ಕುಂಚಿಸಿದ್ದೆ. ಪ್ರಸ್ತುತ ಕವನ ಯಾರ ಬಗ್ಗೆ? ಆಲಿಸಿ, ನಿಮಗೇ ಹೊಳೆಯುತ್ತದೆ!'

ಕವನದ ಶೀರ್ಷಿಕೆ 'ಬದಲಾಗುವುದಿಲ್ಲ ಜಿಟಿಎನ್!' ಈ ಮೂಲಕ ಅವರು ನನ್ನನ್ನು ಮಾಸ್ತಿಯವರ ಹಿರಿಯ ಎತ್ತರಕ್ಕೆ ಏರಿಸಿ ಹರ್ಷಿಸಿದ್ದರು. ಅವರ ನಿರ್ಮಲ ಮುಗ್ಧ ಹೃದಯವಂತಿಕೆಗೆ ನಮೋ ಎನ್ನುತ್ತೇನೆ. ಇದಕ್ಕೆ ಉತ್ತರವಾಗಿ 'ಬದಲಾಗಬೇಕೇಕೆ ಜಿಟಿಎನ್?' ಎಂಬ ಕೆಲವು ಸಾಲುಗಳನ್ನು ಅದೇ ಧಾಟಿಯಲ್ಲಿ ಬರೆದೆ:

'ಸಾಹಿತ್ಯ ರಂಗದಲಿ ಚಣಚಣವು ಬಗೆಬಗೆಯ
ರಂಗುಗಳ ಚಿಮ್ಮುತ್ತ ಸ್ವಾರ್ಥವನು ಸಾಧಿಸುವ
ಅವಕಾಶವಾದಿಗಳ ಕಂಡಾಗ ಬದಲಾಗಬೇಕೇಕೆ ಜಿಟಿಎನ್?'

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನಿಸಾರರನ್ನು ಸರ್ಕಾರ ನೇಮಿಸಿದಾಗ 'ಅರ್ಹತೆಗೆ ಸಕಾಲದಲ್ಲಿ ಸಂದ ಸುಯೋಗ್ಯ ಗೌರವ' ಎಂದು ಅವರಿಗೆ ನನ್ನ ಅಭಿನಂದನೆಗಳನ್ನು ಬರೆದು ಕಳಿಸಿದ್ದೆ. ಅವರ ಅಧಿಕಾರದ ಮೊದಲನೆಯ ವರ್ಷವೇ ನನ್ನ 'ನಕ್ಷತ್ರ ವೀಕ್ಷಣೆ' ಪುಸ್ತಕಕ್ಕೆ ಅಕಾಡೆಮಿ ಪ್ರಶಸ್ತಿ ಅಯಾಚಿತವಾಗಿ ಮತ್ತು ಅನಿರೀಕ್ಷಿತವಾಗಿ (ಏಕೆಂದರೆ ನಾನು ಯಾವುದೇ ಸ್ಪರ್ಧೆಗೆ ಅರ್ಜಿ ಸಲ್ಲಿಸಿರಲಿಲ್ಲ) ಬಂದಾಗ ನಿಸಾರರ ಹೃದಯವಂತಿಕೆಗೆ ಮಾರುಹೋದೆ.

ಭ್ರಮರ ಪ್ರಶಸ್ತಿ ಪುರಸ್ಕೃತ

ಮೈಸೂರಿನಲ್ಲಿರುವ 'ವೈ.ಟಿ. ಮತ್ತು ಮಾಧುರಿ ತಾತಾಚಾರಿಯವರ ಭ್ರಮರ ಟ್ರಸ್ಟ್' ಕೆಲವು ವರ್ಷಗಳ ಹಿಂದೆ ಕನ್ನಡದ ಒಬ್ಬ ಪ್ರೌಢ ಕವಿಯನ್ನು ಗೌರವಿಸಿ ಹಮ್ಮಿಣಿಯನ್ನು ಪ್ರದಾನಿಸಲು ತೀರ್ಮಾನಿಸಿ ಡಾ. ದೇಜಗೌ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರೂಪಿಸಿತು. ಜಿಎಸ್ಎಸ್, ಕಣವಿ ಮೊದಲಾದ ಹಿರಿಯ ಕವಿಗಳು ಇದರ ಸದಸ್ಯರು. ಸಮಿತಿಯ ಒಮ್ಮತದ ಆಯ್ಕೆ ನಮ್ಮ ನಿಸಾರರಿಗೆ ಬಂದಾಗ ನನಗೆ ಪರಮ ಸಂತೋಷವಾಯಿತು. ಮೈಸೂರಿನಲ್ಲೇ ನಡೆದ ಪ್ರದಾನ ಸಮಾರಂಭಕ್ಕೆ ಹೋಗಿದ್ದೆ. ಆಗ ಕಂಡದ್ದೇನು? ಹಿಂದಿನ ಪಾದರಸ ಚಟುಲತೆಯ ಹರ್ಷವದನ ನಿಸಾರರನ್ನಲ್ಲ, ಚಿಂತಾಕ್ರಾಂತರಾಗಿ ತುಸು ಕುಗ್ಗಿ ಗಂಭೀರ ಅಂತರ್ಮುಖಿಯಾಗಿದ್ದ ಮಿತ್ರನನ್ನು. ಆರೋಗ್ಯ ಚೆನ್ನಾಗಿಲ್ಲವೆಂದರು. ಬದಲಾಗದಿದ್ದುದು ಅದೇ ಹಿಂದಿನ ನಲ್ಮೆ! ನಿಜ, ಸದಾ ಇವರು (ನಿಸಾರ್) ಹೀಗೆಯೇ, 'ಕರುಣೆಗೊಂದು ಕೋಡವನ್, ಎದೆಯೊಲುಮೆಗೆ ತಾಣವನ್!' (ಕುವೆಂಪು)

ಕನ್ನಡ ಭಾಷೆಯ ಸಂವಹನ ಸಾಮರ್ಥ್ಯವನ್ನು ವೃದ್ಧಿಗೊಳಿಸಿರುವ, ಕಾವ್ಯಕ್ಷೇತ್ರಕ್ಕೆ ಹೊಸ ಆಯಾಮ ನೀಡಿರುವ, ಸದಾ ನಲ್ಮೆಯ ಹೊಂಬೆಳಕನ್ನು ಸೂಸುತ್ತಿರುವ ಮತ್ತು ಬಳಿಸಾರ್ದವರಿಗೆ ಪ್ರೀತಿಯ ಹೊನಲನ್ನೇ ಧಾರೆಯೆರೆಯುತ್ತಿರುವ ನಿಸಾರರ ಬಗ್ಗೆ ನಾನು ಹೇಳಬಹುದಾದ ಮಾತು:

'ಎಲ್ಲರಂಥವನಲ್ಲವೀ ನನ್ನ ಮಿತ್ರ—
ಮೃದುಭಾಷಿ, ಸ್ಮಿತವದನ, ವಿಶ್ವಾಸಪಾತ್ರ.
ಕೊಡುತಿಹನು ಜೀವನಕೆ ಹೊಸ ಒಂದು ಸೂತ್ರ
ಸೃಜಿಸುತ್ತ ಸದಾ ಚರ ನವಕ್ಷೇತ್ರ!'



ಕನ್ನಡದ ಕಟ್ಟಾ ಅಭಿಮಾನಿ

♦ ಪ್ರೊ. ಜೆ. ಎಂ. ಬಸವರಾಜ್
(ಸಹೋದ್ಯೋಗಿ)

ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚಿಗೆ ಎನಿಸಬಹುದಾದ ಎತ್ತರ, ನೋಟಕ್ಕೆ ಸಿಕ್ಕ ಅಪರೂಪವಾದದ್ದನ್ನೆಲ್ಲ ಅನ್ವೇಷಿಸುವಂಥ ಕಣ್ಣುಗಳು, ಸದಾ ಮಾತನಾಡಲು ಹವಣಿಸುತ್ತಿದ್ದ ಆತ್ಮೀಯವೆನ್ನಿಸುವ ಹಸನ್ಮುಖಿ ಸ್ವಭಾವ, 'ಏನಪಾ... ಏನಪಾ' ಎನ್ನುವ ಸಂಬೋಧನೆಯೊಂದಿಗೆ ಗೆಳೆಯರನ್ನೆಲ್ಲಾ ಮಾತಿಗೆಳೆದು ಸಂತೋಷಪಡಿಸುತ್ತಿದ್ದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ, ನಾಡಿನ ಶ್ರೇಷ್ಠ ಅಧ್ಯಾಪಕರೆಂದೇ ಗೌರವ ಪಡೆದಿದ್ದ ಶ್ರೀ ಜಿ. ಪಿ. ರಾಜರತ್ನಂರವರ 'ಮಾನಸ ಪುತ್ರ' ಎನ್ನುವಷ್ಟರ ಮಟ್ಟಿಗೆ ಕಾಲೇಜ್ ಕ್ಯಾಂಪಸ್‌ನಲ್ಲಿ ಗುರುತಿಸಿಕೊಂಡಿದ್ದ ಎತ್ತರದ ಮಿತ್ರ, ಪ್ರೊ. ಕೆ. ಎಸ್. ನಿಸಾರ್ ಅಹಮದ್, ಸಾಧನೆಯ ಎತ್ತರಗಳನ್ನೆಲ್ಲಾ ಏರಿ ನಿಲ್ಲಲು ಸಮರ್ಥರಾಗಿದ್ದವರೇ ಆಗಿದ್ದರು. ನಾನು, ಸಾಮಾನ್ಯ ಎತ್ತರಕ್ಕಿಂತ ಸ್ವಲ್ಪ ಕಡಿಮೆ ಎತ್ತರವಿರುವುದರಿಂದ ಇವರನ್ನು ತಲೆ ಎತ್ತಿ ನೋಡುತ್ತಿದ್ದೆ. ಹೌದು! ಈಗಲೂ ನನ್ನಂತೆ ಲಕ್ಷಾಂತರ ಕನ್ನಡಿಗರು, ಸಾಹಿತಿಗಳು, ಸಾಹಿತ್ಯಾಭಿಮಾನಿಗಳು, ವಿದ್ಯಾರ್ಥಿಗಳು ಇವರನ್ನು ತಲೆ ಎತ್ತಿ ನೋಡುತ್ತಿದ್ದಾರೆ. ವಿಜ್ಞಾನ, ಜೀವನ, ಧರ್ಮ, ಸಮಾಜ, ಸಂಸ್ಕೃತಿ, ರಾಜಕೀಯ ಮುಂತಾದ ಎಲ್ಲಾ ಆಯಾಮಗಳಲ್ಲಿನ ನಿಲವುಗಳನ್ನು ಪ್ರಾಜ್ಞಿಕ ದೃಷ್ಟಿಯಲ್ಲಿ ಕಂಡುಕೊಂಡು ಸಾಹಿತ್ಯದಲ್ಲಿ ಸೃಜನಾತ್ಮಕ ಬರಹಗಳಿಗೆ ವಿಶಾಲವಾದ ನೆಲೆಯನ್ನು ಒದಗಿಸಿದ 'ನಿತ್ಯೋತ್ಸವ'ದ ಕವಿಯ ನಿಲವುಗಳು

ಅನನ್ಯ. ಅವು ಓದುಗರನ್ನು, ವಿಮರ್ಶಕರನ್ನು ವ್ಯಾಪಕವಾಗಿ ಆಕರ್ಷಿಸಿವೆ.

ನನ್ನ ಮತ್ತು ಪ್ರೊ. ನಿಸಾರ್ ಅಹಮದ್‌ರವರ ನಂಟು ಬೆಳೆದದ್ದು ಸೆಂಟ್ರಲ್ ಕಾಲೇಜಿನಲ್ಲಿ. ೧೯೫೨-೫೫ರ ಸಮಯದಲ್ಲಿ ನಾನು ಪ್ರಾಣಿ ವಿಜ್ಞಾನದ ವಿದ್ಯಾರ್ಥಿ. ಇವರದು ಭೂ ವಿಜ್ಞಾನದ ಬಿ.ಎಸ್‌ಸಿ., ಆನರ್ಸ್ ತರಗತಿ. (ಆಗಿನ ಕಾಲದಲ್ಲಿ ಇಂಟರ್‌ಮೀಡಿಯಟ್ ಅನಂತರ ಮೂರು ವರ್ಷಗಳವರೆಗಿದ್ದ ಕೋರ್ಸ್ ಇದಾಗಿತ್ತು. ಉಳಿದ ಪದವಿಗಳು ಬಿ.ಎ., ಬಿ.ಎಸ್‌ಸಿ., ಬಿ.ಕಾಂ. ಮುಂತಾದವು ಎರಡು ವರ್ಷದ ಅವಧಿಯದಾಗಿದ್ದವು.) ಸನ್ಮಾನ್ಯ ಜಿ. ಪಿ. ರಾಜರತ್ನಂರವರು 'ಕರ್ನಾಟಕ ಸಂಘ'ವನ್ನು ಕಾಲೇಜಿನಲ್ಲಿ ವರ್ಧಿಸಿ ಅದಕ್ಕೆ ಸದಸ್ಯತ್ವವನ್ನು ಪಡೆಯಲು ಎಂಟಾಣೆ ಶುಲ್ಕ ವಿಧಿಸಿ ಎಲ್ಲ ವಿದ್ಯಾರ್ಥಿಗಳು ಸದಸ್ಯರಾಗುವಂತೆ ಸೂಚಿಸಿದ್ದರು. ಕನ್ನಡ ವಿದ್ಯಾರ್ಥಿಗಳಿಗೆ ಸೆಂಟ್ರಲ್ ಕಾಲೇಜಿನ ಗ್ಯಾಲರಿಯಲ್ಲಿ ಪಾಠ ನಡೆಯುತ್ತಿತ್ತು. ತರಗತಿಗೆ ಬಂದಿದ್ದ ರಾಜರತ್ನಂರವರು ಸದಸ್ಯತ್ವ ಶುಲ್ಕವನ್ನು ಕೊಟ್ಟಿರದ ವಿದ್ಯಾರ್ಥಿಗಳ ಬಗ್ಗೆ ಬೇಸರಗೊಂಡು, 'ನಾನು ಇನ್ನು ಮುಂದೆ ಪ್ರೀತಿ ವಿಶ್ವಾಸದಿಂದ ನಿಮಗೆ ಪಾಠ ಮಾಡಲಾರೆ, ಈಗ ಅಭಿಮನ್ಯುವಿನ ಪಾಠ ಮಾಡುತ್ತೇನೆ.'—

'ಅಭಿಮನ್ಯು ಇದ್ದನ್, ಬಿದ್ದನ್, ಸತ್ತನ್...'

ಎಂದು ಹೇಳುತ್ತಾ, 'ಪಾಠ ಮುಗಿಯಿತು' ಎಂದು ಬಿಟ್ಟರು. ಆಗ ನಾವೆಲ್ಲಾ ವಿದ್ಯಾರ್ಥಿಗಳು ಸೇರಿ ಅವರನ್ನು ಬೇಡಿಕೊಂಡು, ಅವರ ಮನವೊಲಿಸಿ ಕೊನೆಗೂ ಎಂಟಾಣೆಯನ್ನು ಕೊಟ್ಟೆವು. ಆಮೇಲೆ ಸೊಗಸಾದ ಪಾಠವನ್ನು ನಾವು ಕೇಳಿದೆವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಸಂಘದ ವತಿಯಿಂದ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ನಮಗೆ, ನಮ್ಮ ಜೊತೆಗಾರರಾಗಿದ್ದ ವಿದ್ಯಾರ್ಥಿ ಮಿತ್ರರಿಗೆ ಅಮಿತ ಆಸಕ್ತಿ. ಕನ್ನಡ ಭಾಷೆಯ ಬಗ್ಗೆ, ಕನ್ನಡದಲ್ಲಿ ವಿಜ್ಞಾನ ವಿಷಯಗಳ ಬಗ್ಗೆ ಲೇಖನಗಳನ್ನು ಬರೆಯಲು ಕರ್ನಾಟಕ ಸಂಘದಲ್ಲಿ ಪ್ರೋತ್ಸಾಹ ಸಿಗುತ್ತಿತ್ತು. ಜೊತೆಗೇ ಕವಿತೆಗಳನ್ನು ರಚಿಸಿ ಓದಲು ಅವಕಾಶಗಳಿದ್ದವು. ಈ ಸಂದರ್ಭದಲ್ಲಿ ಗುರುಗಳ ದೃಷ್ಟಿಗೆ ಬಿದ್ದವರು ಮಿತ್ರ ನಿಸಾರ್. ಅವರು ಒಂದು ಪ್ರಬಂಧವನ್ನು ರಚಿಸಿ ರಾಜರತ್ನಂ ಅವರಿಗೆ ಮೆಚ್ಚಿನವರಾದರು. ಆಗಿನ ಎಲ್ಲ ಅವಕಾಶಗಳಲ್ಲಿ ಸಶಕ್ತರಾಗಿ ಬೆಳವಣಿಗೆ ಕಂಡದ್ದು ಈಗಲೂ ನನ್ನ ನೆನಪಿನಲ್ಲಿ ಉಳಿದಿದೆ. ಅವರ ಅಂತರಂಗದ ಸುಪ್ತ ಪ್ರತಿಭೆಯನ್ನು ನಮ್ಮ ಗುರುಗಳು, ಇತರ ಇಬ್ಬರು ಮೂವರು ಪ್ರತಿಭಾವಂತರೊಂದಿಗೆ ಬಹಿರಂಗಕ್ಕೆ ತರುವ ಹಾದಿ ತೋರಿಸಿದ್ದು, ಆ ಹಾದಿಯಲ್ಲಿ ನಿಸಾರ್ ನಿಷ್ಠೆಯಿಂದ ನಡೆದು ಬಂದದ್ದು ಮುಂದಿನ ಅವರ ಎಲ್ಲ ಸಾಧನೆಗಳಿಗೆ ಶುಭೋದಯವಾದಂತಿತ್ತು.

ಸೆಂಟ್ರಲ್ ಕಾಲೇಜಿನ ಆಗಿನ ದಿವಸಗಳು ತುಂಬಾ ಪ್ರಶಾಂತವಾದವು. ಅದರ ಎದುರುಗಡೆಯಾಗಲಿ ಹಿಂದೆಯಾಗಲಿ ಈಗಿನಂತೆ ವಿಧವಿಧ ವಾಹನಗಳ, ಜನಗಳ ದಟ್ಟನೆಯ ಸಂಚಾರ, ಗದ್ದಲ ಗಲಾಟೆಗಳಿರಲಿಲ್ಲ. ಬಸವನಗುಡಿ, ಶಂಕರಪುರ, ಚಾಮರಾಜ ಪೇಟೆಯ ಕಡೆಯಿಂದ ಆರಾಮಾಗಿ ವಿದ್ಯಾರ್ಥಿಗಳು ಅವೆನ್ಯೂ ರಸ್ತೆಯ ಮೂಲಕ ಸೈಕಲ್ಲುಗಳ ಮೇಲೆ ಕಾಲೇಜಿಗೆ ಬಂದು ಹೋಗುತ್ತಿದ್ದರು. ಕೆಲವು ವಿದ್ಯಾರ್ಥಿಗಳು ನಿರಾಳವಾಗಿ, ಅಡಚಣೆಯಿಲ್ಲದೆ ಅಲ್ಲಿನ ಉದ್ದನೆಯ ಕಾರಿಡಾರುಗಳಲ್ಲೋ, ಎದುರಿಗಿದ್ದ ಬಯಲಿನಲ್ಲೋ ಕುಳಿತು

ಪ್ರಾಕ್ಟಿಕಲ್ ರೆಕಾರ್ಡ್ ಬರೆಯುವುದೊ, ನೋಟ್ಸ್‌ಅನ್ನು ನಕಲಿಸುವುದೊ ಸಾಮಾನ್ಯ ದೃಶ್ಯವಾಗಿತ್ತು. ಕೆಲವು ಸಲ ಗೆಳೆಯ ನಿಸಾರ್ ಅವರು ಅಲ್ಲಿ ಯಾವುದಾದರೂ ಇಂಗ್ಲಿಷ್ ಅಥವಾ ಕನ್ನಡದ ಸಾಹಿತ್ಯ ಕೃತಿಯನ್ನು ಓದುವುದರಲ್ಲಿ ಮಗ್ನರಾಗುತ್ತಿದ್ದುದನ್ನು ನಾನು ಹಲವು ಸಲ ಗಮನಿಸಿದ್ದೆ. ಆದರೆ ಅವರ ಏಕಾಗ್ರತೆಗೆ ಭಂಗ ಬರಬಹುದೆಂಬ ಕಾರಣದಿಂದ ಮಾತನಾಡಿಸುತ್ತಿರಲಿಲ್ಲ. ಕೇವಲ ಸಾಹಿತ್ಯವಷ್ಟೆ ಅಲ್ಲ, ನಮ್ಮ ಕಾಲೇಜಿನಲ್ಲಿ ವಿಜ್ಞಾನದ ಪ್ರದರ್ಶನಗಳೂ ಜರುಗುತ್ತಿದ್ದವು. ಕೆಲವೊಮ್ಮೆ ಇಲಾಖೆಗಳ ವತಿಯಿಂದ, ಮತ್ತೆ ಕೆಲವೊಮ್ಮೆ ಎಲ್ಲ ವಿಜ್ಞಾನ ವಿಭಾಗಗಳೂ ಒಟ್ಟಿಗೆ ಕೂಡಿ. ಒಂದೆರಡು ದಿವಸ ನಮಗೆಲ್ಲ ಹಬ್ಬದ ಸಂಭ್ರಮ, ಸಡಗರ. ಬೆಂಗಳೂರಿನ ಇತರೆ ಕಾಲೇಜಿನ ಅಧ್ಯಾಪಕರು, ವಿದ್ಯಾರ್ಥಿಗಳಲ್ಲದೆ, ಬೆಂಗಳೂರಿನ ಹಲವು ಸುಶಿಕ್ಷಿತ ನಾಗರಿಕರೂ ಸಹ ನಮ್ಮ ವಸ್ತು ಪ್ರದರ್ಶನವನ್ನು ವೀಕ್ಷಿಸಲು ಬರುತ್ತಿದ್ದರು. ಆಗ ಇಂಥ ವಿಶೇಷಗಳೇ ನಗರದವರಿಗಿದ್ದ ಮುಖ್ಯ ಆಕರ್ಷಣೆ. ಆಗ ವಿದ್ಯಾರ್ಥಿಗಳಲ್ಲಿ ಕೆಲವರು—ನಾನೂ ನಿಸಾರ್ ಅವರೂ ಸೇರಿದಂತೆ ಕೆಲವರು—ಸ್ವಯಂಸೇವಕರಾಗಿ ದುಡಿಯುತ್ತಿದ್ದೆವು; ನಮ್ಮ ಉಪನ್ಯಾಸಕರಿಂದ ಶಹಬಾಸ್‌ಗಿರಿಯನ್ನು ಪಡೆಯುತ್ತಿದ್ದೆವು.

ಆಮೇಲೆ ಸಹೋದ್ಯೋಗಿಯಾಗಿ ಪ್ರೊ. ನಿಸಾರ್ ಅವರೊಡನೆ ಕಳೆದ ದಿನಗಳಂತೂ ಚಿರ ಸ್ಮರಣೀಯ.

೧೯೬೭ರಲ್ಲಿ ಮತ್ತೆ ನನ್ನ ಮತ್ತು ನಿಸಾರ್‌ರವರ ಮುಖಾಮುಖಿ ಬೆಸುಗೆಯಾದದ್ದು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ. ಅವರು ಭೂ ವಿಜ್ಞಾನದ ಅಧ್ಯಾಪಕರಾಗಿದ್ದರೆ ನಾನು ಪ್ರಾಣಿ ವಿಜ್ಞಾನದ ಅಧ್ಯಾಪಕ. ಅಲ್ಲದೆ ನಮ್ಮ ನಮ್ಮ ವಿಭಾಗಗಳಿಗೆ ನಾವು ಮುಖ್ಯಸ್ಥರು ಬೇರೆ. ಆ ದಿನಗಳಂತೂ ನನ್ನ ಪಾಲಿಗೆ ಅವಿಸ್ಮರಣೀಯವಾದವು. ಮೊದಲಿಗಿಂತಲೂ ಹೆಚ್ಚು ಹೆಸರು ಗಳಿಸಿ, ಕಾವ್ಯ ರಚನೆಯಲ್ಲಿ ಅಧಿಕ ಪ್ರಬುದ್ಧತೆಯನ್ನು ಹೊಂದಿದ್ದ ನಿಸಾರ್ ಅವರು, ಅಷ್ಟೇ ಸರಳವಾಗಿದ್ದರು. ಮಾತಿಗೆಳೆಯುವ ಹವ್ಯಾಸ ಮೊದಲಿಗಿಂತ ಸ್ವಲ್ಪ ಹೆಚ್ಚಾಗಿತ್ತು. ಆದರೆ ಆ ಮಾತುಗಳು ಬರಿಯ ಕಾಲ ಹರಣದ ಒಣ ಹರಟೆಯ ಮಾತುಗಳಾಗುತ್ತಿರಲಿಲ್ಲ. ಶಿಕ್ಷಣ, ಶಿಕ್ಷಣ ಕ್ರಮ, ಪಠ್ಯಗಳಲ್ಲಿನ ವಿಷಯಗಳು: ವಿದ್ಯಾರ್ಥಿಗಳ ಆಸಕ್ತಿ, ಒಲವುಗಳನ್ನು ಉತ್ತೇಜಿಸುವ ಆಲೋಚನೆಗಳ ಜೊತೆಗೆ ಕೆಲವೊಂದು ಯೋಜನೆಗಳನ್ನು ಕುರಿತ ವ್ಯಾಪಕ ಚಿಂತನೆಗಳಾಗಿರುತ್ತಿದ್ದವು.

ರಜೆಯ ದಿವಸಗಳಲ್ಲಿ ಸಮಯ ಸಿಕ್ಕಾಗಲೆಲ್ಲ ಶಿವಮೊಗ್ಗದ ಸುತ್ತಮುತ್ತ ಅದೆಲ್ಲೆಲ್ಲೋ ಕಾಡುಗುಡ್ಡಗಳಲ್ಲಿ ವಿದ್ಯಾರ್ಥಿಗಳ ಜೊತೆ ಅಲೆದಲೆದು ರಾಶಿಗಟ್ಟಲೆ ಶಿಲೆಗಳ, ಖನಿಜಗಳ ತುಣುಕುಗಳನ್ನು ತಂದು, ಸ್ವಚ್ಛಗೊಳಿಸಿ ಅವುಗಳಿಗೆಲ್ಲ ವ್ಯವಸ್ಥಿತವಾಗಿ ಹೆಸರನ್ನು ಬರೆಸಿ ನಿಸಾರರು ಬೆಳೆಸಿದ್ದ ಭೂ ವಿಜ್ಞಾನ ವಸ್ತು ಸಂಗ್ರಹಾಲಯ ಕಾಲೇಜಿಗೆ ಘನತೆಯನ್ನು ತಂದುಕೊಟ್ಟಿತ್ತು. ಜೊತೆಗೇ ಚೆನ್ನಾಗಿ ಚಿತ್ರ ಬರೆಯುವವರಿಂದ ಪಳೆಯುಳಿಕೆಗಳ, ಭೂ ವಿಜ್ಞಾನದ ಇತರ ಮುಖ್ಯ ಪಠ್ಯ ವಿಷಯಗಳ ಅನೇಕ ಚಿತ್ರಪಟಗಳನ್ನು, chartsಗಳನ್ನು ಹಾಗೂ ನಕ್ಷೆಗಳನ್ನು ತಿಂಗಳಾನುಗಟ್ಟಲೆ ಹಗಲು ರಾತ್ರಿ ಎನ್ನದೆ ಶ್ರದ್ಧಾಸಕ್ತಿಗಳಿಂದ ನಿಸಾರ್

ಅವರು ತಮ್ಮ ಸಹೋದ್ಯೋಗಿಗಳ ನೆರವಿನಿಂದ ಸಿದ್ಧಪಡಿಸಿ ಅವರ ವಿಭಾಗದ ಮ್ಯೂಸಿಯಂನಲ್ಲಿ ತೂಗು ಹಾಕಿದ್ದಂತೂ ಅಮೋಘ ಹಾಗೂ ಅಭೂತಪೂರ್ವವಾದ ಕೆಲಸ. ಆಗ ಅವರಿಗೆ ಕೈ ಜೋಡಿಸುತ್ತಿದ್ದವರು ಅವರ ಕಿರಿಯ ಸಹೋದ್ಯೋಗಿಗಳಾದ ಡಾ. ಎಸ್. ಡಿ. ಖಣದಾಳಿ ಮತ್ತು ಒಂದು ಕಾಲಕ್ಕೆ ನಿಸಾರರ ವಿದ್ಯಾರ್ಥಿಯಾಗಿದ್ದ ಪ್ರೊ. ಎಂ. ಎಚ್. ರಾಜಶೇಖರಪ್ಪ ಅವರು. ಕಾವ್ಯರಚನೆಯ ಜೊತೆಜೊತೆಗೇ ತಮ್ಮ ವೃತ್ತಿಯ ಬಗೆಯೂ ತುಂಬು ಕಳಕಳಿ ತೋರುತ್ತಿದ್ದ ನಿಸಾರ್ ಅವರು ಕಾಲೇಜ್ ಕೌನ್ಸಿಲ್ ಮೀಟಿಂಗ್‌ಗಳಲ್ಲಿ ತಮ್ಮ ಇಲಾಖೆಯ ಅಗತ್ಯಗಳ ಪರವಾಗಿ 'ಗ್ರಾಂಟ್ಸ್' ಪಡೆಯುವ ಸಲುವಾಗಿ ಇತರ ಇಲಾಖೆಗಳ ಮುಖ್ಯಸ್ಥರೊಡನೆ ಜಗಳ ಆಡಿದ್ದನ್ನೂ ಕಂಡಿದ್ದೇನೆ: ಅಸಮಾಧಾನ, ಕೋಪಗಳನ್ನು ವ್ಯಕ್ತಪಡಿಸಿದ್ದನ್ನೂ ನೋಡಿದ್ದೇನೆ.

ನಿಸಾರ್‌ರವರಿಗೆ ಕೇವಲ ಭೂವಿಜ್ಞಾನವಷ್ಟೇ ಪ್ರಧಾನ ಎನಿಸಿರಲಿಲ್ಲ. ನಾನು ಓದಿದ್ದ ಪ್ರಾಣಿ ಶಾಸ್ತ್ರವಲ್ಲದೇ, ವಿಜ್ಞಾನದ ಇತರೇ ಕ್ಷೇತ್ರಗಳ ವಿಷಯಗಳಲ್ಲೂ ಅವರು ತಿಳಿವನ್ನು ಪಡೆದಿದ್ದರು; ಇನ್ನೂ ಹೆಚ್ಚು ತಿಳಿದುಕೊಳ್ಳಲು ಹವಣಿಸುತ್ತಿದ್ದರು. ಅವರ ನೈಜ ಆಸಕ್ತಿ ನಿಜವಾಗಿಯೂ ಅಭಿನಂದನೀಯವಾದದ್ದು.

ಪ್ರಾಣಿ ವಿಜ್ಞಾನ ಹಾಗೂ ಭೂ ವಿಜ್ಞಾನಕ್ಕೆ ಸಂಬಂಧಿಸಿದ ಎರಡು ಮುಖ್ಯವಾದ ವಿಷಯಗಳು: ಪಳೆಯುಳಿಕೆಗಳು ಮತ್ತು ಖಂಡಾಂತರ ಚಲನೆಗಳು (Continental Drifts). ಈ ವಿಷಯಗಳ ಬಗ್ಗೆ ನಾವು ಬಹು ದೀರ್ಘವಾಗಿ ಚರ್ಚಿಸಿದ್ದೆವು. ಪರಿಣಾಮವೆಂದರೆ ನಾನೂ ಭೂ ವಿಜ್ಞಾನದ ಬಗ್ಗೆ ಅಧಿಕವಾಗಿ ತಿಳಿಯಲು ಸಾಧ್ಯವಾದದ್ದು. ಒಬ್ಬ ಪರಿಣಾಮಕಾರಿಯಾದ ವ್ಯಕ್ತಿಯ ಸಖ್ಯ ಎಲ್ಲರ ಮೇಲೂ ತನ್ನ ಪರಿಣಾಮದ ಅಚ್ಚೊತ್ತುತ್ತದೆ ಎಂಬುದಕ್ಕೆ ಮಾದರಿಯಾಗಿದ್ದವರೆಂದರೆ ನನ್ನ ಮಿತ್ರ ನಿಸಾರ್‌ರವರು. ಅವರು 'ಜಿಯಲಾಜಿಕಲ್ ಫೋರಂ'ಅನ್ನು ಹುಟ್ಟುಹಾಕಿ, ನಮ್ಮಂತಹ ವಿಜ್ಞಾನದ ಉಪಾಧ್ಯಾಯರಿಂದ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಜೊತೆಗೆ ತಾವೂ ಭೂ ವಿಜ್ಞಾನದ ಮೇಲೆ ಸ್ವಾರಸ್ಯಕರವಾದ ಭಾಷಣಗಳನ್ನು ಮಾಡುತ್ತಿದ್ದರು. ಹೆಸರಿಗೆ ಅದು ಭೂ ವಿಜ್ಞಾನದ ವೇದಿಕೆ. ಆದರೆ ನಿಸಾರ್ ಅವರು ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಚಿರ ಪರಿಚಿತರಾಗಿದ್ದುದರಿಂದ, ಮಾನವಿಕ (Arts) ವಿಭಾಗದ ಎಲ್ಲ ಇಲಾಖೆಗಳ ಹುಡುಗ ಹುಡುಗಿಯರೂ ಉಪಾಧ್ಯಾಯರೂ ಸಹ ಉಪನ್ಯಾಸಗಳ ವೇಳೆ ತುಂಬಿ ತುಳುಕುವಂತೆ ಸೇರುತ್ತಿದ್ದರು.

ಪಠ್ಯ ವಿಷಯಗಳಷ್ಟೇ ಆಸಕ್ತಿಯನ್ನು ಪಠ್ಯೇತರ ವಿಷಯಗಳಲ್ಲಿ ನಿಸಾರ್‌ರವರು ತೋರುತ್ತಿದ್ದ ಕಾಳಜಿಯನ್ನು ಇಲ್ಲಿ ನೆನೆಯಬೇಕು. ಇಲ್ಲದಿದ್ದರೆ ನನ್ನ ಬರಹ ಅಪೂರ್ಣವಾಗುತ್ತದೆ. ಸಹ್ಯಾದ್ರಿಯ ಘಟ್ಟಗಳಿಂದ ಧುಮುಕುವ ಶರಾವತಿ ನದಿಯ ನೀರಿನ ಭೋರ್ಗರೆತವನ್ನು ಕಣಿವೆಗೆ ಜಿಗಿದು ಪ್ರವಹಿಸುವಾಗಿನ ಅದರ ಮಂಜುಳ ರವವನ್ನು, ಜೋಗದ ಸಿರಿಯ ಸೊಬಗನ್ನು ಪದಗಳಲ್ಲಿ ಬಂಧಿಸಿದ ಕವಿ ಮಿತ್ರ ನಿಸಾರ್‌ರವರ 'ನಿತ್ಯೋತ್ಸವ'ದ ವೃಂದಗಾನವಿಲ್ಲದ ಯಾವ ಕಾರ್ಯಕ್ರಮಗಳೂ ನಡೆಯುತ್ತಿರಲಿಲ್ಲ. ಇದು

ಕಾಲೇಜಿಗಷ್ಟೇ ಅಲ್ಲ, ಶಿವಮೊಗ್ಗ ಮತ್ತು ಆ ಊರಿನ ಸುತ್ತಮುತ್ತಲಿನ ಊರುಗಳಿಗೂ ಅನ್ವಯಿಸಿತ್ತು. 'ಸಾಂಸ್ಕೃತಿಕ' ಕಾರ್ಯಕ್ರಮಗಳಿಗೆಲ್ಲ ನಿಸಾರರ ಕಾವ್ಯ ಸ್ಪರ್ಶ ಇದ್ದೇ ಇರುತ್ತಿತ್ತು. ಒಟ್ಟಿನಲ್ಲಿ ಇವರ ಕವಿತೆಗಳ ಗಾಯನವಿಲ್ಲದ ಕಾರ್ಯಕ್ರಮಗಳು ನಡೆದದ್ದು ನನ್ನ ಗಮನಕ್ಕೆ ಬಂದಿಲ್ಲ.

ನಿಸಾರ್ ಅವರ ಕನ್ನಡ ಪ್ರೇಮ ಅನುಪಮವಾದದ್ದು. ಈ ಪ್ರಸಂಗವನ್ನು ನಾನೊಮ್ಮೆ ಬೆಂಗಳೂರಿನ 'ಯವನಿಕಾ' ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ವೇದಿಕೆ ಯಿಂದ ಮಾತನಾಡುವಾಗ ಉಲ್ಲೇಖಿಸಿದ್ದೇನೆ.

ಶಿವಮೊಗ್ಗದಲ್ಲಿ 'ಉರ್ದು ಭಾಷಾ ಸಂಘ'ದವರು ಒಮ್ಮೆ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅಲ್ಲಿ ಹೆಚ್ಚಾಗಿ ಬಂದವರೆಲ್ಲಾ ಉರ್ದು ಭಾಷೆಯನ್ನು ಮಾತನಾಡುವವ ರಾಗಿದ್ದರು. ಅಲ್ಲಿಗೆ ಮಿತ್ರ ನಿಸಾರ್‌ಗೆ ಆಮಂತ್ರಣವಿದ್ದುದರಿಂದ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋದರು. ಅಲ್ಲಿ ಎಲ್ಲರೂ ವೇದಿಕೆಯ ಮೇಲೆ ಉರ್ದುವಿನಲ್ಲೇ ಮಾತನಾಡಿದರು. ನಿಸಾರ್‌ರವರು ಮಾತನಾಡುವ ಸಂದರ್ಭ ಬಂದಾಗ ಇವರು ಮಾತ ನಾಡಿದ್ದು ಕನ್ನಡದಲ್ಲಿ. ಅಲ್ಲಿ ಪ್ರತಿರೋಧ ಒಡ್ಡಿದ ಕೆಲವರು, 'ನೀವು ಉರ್ದುವಿನಲ್ಲಿ ಮಾತನಾಡಿ' ಎಂದು ಒತ್ತಡ ಮಾಡಿದರು. ಆಗ ನಿಸಾರ್ 'ನಾನು ಕನ್ನಡ ಬಿಟ್ಟು ಬೇರೆ ಭಾಷೆಯಲ್ಲಿ ಮಾತನಾಡಲಾರೆ. ಬೇಕಿದ್ದರೆ ಕೇಳಿ, ಇಲ್ಲವಾದ್ರೆ ಇಗೋ ಹೊರಡ್ತೇನೆ' ಎಂದು ಅಲ್ಲಿಂದ ನಿರ್ಗಮಿಸಲು ಅನುವಾದರು. ಆಗ ಸಭೆಯಲ್ಲಿ ಒಂದು ರೀತಿಯ ಗೊಂದಲ ವುಂಟಾಯಿತು. ನಾನೂ ಸಹ ನಿಸಾರ್‌ರವರಿಗೆ ಉರ್ದುವಿನಲ್ಲೇ ಮಾತಾಡಿ ಎಂದೆ. ಆದರೆ ಅವರು ಒಪ್ಪದೆ, 'ಇಲ್ಲ ನಾನು ಕನ್ನಡದಲ್ಲಿಯೇ ಮಾತನಾಡುತ್ತೇನೆ' ಎಂದು ತಮ್ಮ ಎಲ್ಲ ವಿಚಾರಗಳನ್ನೂ ಕನ್ನಡದಲ್ಲಿ ಮಂಡಿಸಿದರು. ಇದನ್ನು ಈಗಲೂ ಸಹ ನಾನು ಆಗಾಗ ನೆನಪಿಸಿಕೊಂಡು ಅಭಿಮಾನ ಪಡುತ್ತಿರುತ್ತೇನೆ.

ಪ್ರೊ. ನಿಸಾರ್ ಮತ್ತು ಅವರೊಂದಿಗೆ ನಾನು ಭಾಗವಹಿಸಿದ ಕಾರ್ಯಾಗಾರಗಳ ಬಗ್ಗೆ ಪ್ರಸ್ತಾಪಿಸಿದರೆ, ಅವರ ಆಸಕ್ತಿಯ ಇನ್ನೊಂದು ಮಗ್ಗುಲಿನ ಪರಿಚಯವಾಗುತ್ತದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡದ ಪ್ರಾಧ್ಯಾಪಕ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಹಾ. ಮಾ. ನಾಯಕರು ಶಿವಮೊಗ್ಗದಲ್ಲಿ ಇಂಟರ್ ಮೀಡಿಯೆಟ್ ಓದುತ್ತಿದ್ದಾಗ ನನ್ನ ಸಹಪಾಠಿಯಾಗಿದ್ದವರು. ನಾಯಕರು ನಿರ್ದೇಶಕ ರಾಗಿದ್ದಷ್ಟು ಕಾಲವೂ ಕನ್ನಡದ ಸರ್ವತೋಮುಖಿಯಾದ ಕಾರ್ಯಕ್ರಮಗಳಿಗೆ ವಸಂತ ಕಾಲ. ಅವು ಸಾಹಿತ್ಯಕ್ಕೆ ಸಂಬಂಧಿಸಿರಲಿ, ಜಾನಪದಕ್ಕೆ ಸಂಬಂಧಿಸಿರಲಿ, ವಿಜ್ಞಾನಕ್ಕೇ ಸಂಬಂಧಿಸಿರಲಿ ಹಾ. ಮಾ. ನಾಯಕರು ಅವುಗಳ ಬಗ್ಗೆ ವಿಚಾರ ಸಂಕಿರಣಗಳನ್ನು, ಚರ್ಚೆಗಳನ್ನು, ಕಮ್ಮಟ ಗಳನ್ನು ಹಮ್ಮಿಕೊಳ್ಳುತ್ತಿದ್ದ ರೀತಿ ಈಗ ನೆನೆದರೆ ಆಶ್ಚರ್ಯ ಹುಟ್ಟಿಸುತ್ತದೆ. ಅವರ ಬಗ್ಗೆ ಪ್ರೀತಿ ಗೌರವಗಳು ಇಮ್ಮಡಿಸುತ್ತವೆ. ಅಂಥ ಕಾಲ ಈಗೆಲ್ಲಿ ಎಂದು ನಿಟ್ಟುಸಿರು ಬಿಡುವಂತಾಗುತ್ತದೆ. ಆಗ ಕುಲಪತಿಗಳಾಗಿದ್ದ ಪ್ರೊ. ದೇ.ಜ.ಗೌ. ಅವರೂ ಇಂತಹ ಕನ್ನಡದ ಕೆಲಸಗಳಿಗೆ ಧಾರಾಳವಾಗಿ ಹಣವನ್ನು ಮಂಜೂರು ಮಾಡಿ ಪ್ರೋತ್ಸಾಹಿಸುತ್ತಿದ್ದರು. ೧೯೭೦ರ

ದಶಕದಲ್ಲಿ ಡಾ. ನಾಯಕರು ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಕುರಿತ ಬೋಧನೆಯ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದರು. ಅದರ ನಿರ್ದೇಶಕರಾಗಿ ಪ್ರೊ. ಜೆ. ಆರ್. ಲಕ್ಷ್ಮಣ್ ರಾವ್ ಮತ್ತು ನಿಸಾರ್ ಅಹಮದ್ ನೇಮಕಗೊಂಡಿದ್ದರು. ಈ ಕಾರ್ಯಕ್ರಮಕ್ಕೆ ನನ್ನ ಮಿತ್ರರಾಗಿದ್ದ ಪ್ರೊ. ಮಹದೇವ ಶಂಕರಪ್ಪ, ಡಾ. ಎಚ್. ಬಿ. ದೇವರಾಜ ಸರ್ಕಾರ್ ಮತ್ತು ಉಳಿದ ಹಲವಾರು ವಿಜ್ಞಾನ ಬೋಧನೆಯ ಮಿತ್ರರನ್ನೆಲ್ಲಾ ಮೈಸೂರಿಗೆ ನಿಸಾರ್ ಕರೆಸಿ, ಸುಮಾರು ಹತ್ತು ದಿವಸಗಳ ಕಾಲ ನಮ್ಮಿಂದ ಕನ್ನಡದಲ್ಲಿ ವಿಜ್ಞಾನ ವಿಷಯಗಳ ಬರವಣಿಗೆ ಮಾಡಿಸಿದರು; ಚರ್ಚೆಗಳಲ್ಲಿ ಭಾಗವಹಿಸುವಂತೆ, ಸಚಿತ್ರವಾದ ಉಪನ್ಯಾಸಗಳನ್ನು ಕೊಡುವಂತೆ ನಮ್ಮನ್ನು ಪ್ರೇರೇಪಿಸಿದರು. ಆ ಹತ್ತು ದಿವಸಗಳು ಹತ್ತು ಗಂಟೆಗಳ ಹಾಗೆ ಕಳೆದಿದ್ದವು. ತುಂಬಾ ಉಪಯುಕ್ತವಾದ ಮತ್ತು ಜ್ಞಾನಾರ್ಜನೆಯ ಸಾರ್ಥಕ ಕಾಲ ಅದು. ಅತಿಥಿ ಉಪನ್ಯಾಸಕರಾಗಿ ಡಾ. ಶಿವರಾಮ ಕಾರಂತರು ನಮ್ಮ ಕಮ್ಮಟಕ್ಕೆ ಬಂದಿದ್ದು ನನಗೆ ಇನ್ನೂ ನೆನಪಾಗುತ್ತಿರುತ್ತದೆ. ಡಾ. ಹಾ.ಮಾ.ನಾ. ತಾವೂ ಸಭಿಕರಾಗಿ ಬಂದು ಕೂತು ಕುತೂಹಲಾಸಕ್ತಿಗಳಿಂದ ವಿಜ್ಞಾನದ ವಿದ್ವಾಂಸರ ಚರ್ಚೆಗಳನ್ನು ಆಲಿಸುತ್ತಿದ್ದರು. ಕನ್ನಡದಲ್ಲಿ ವಿಜ್ಞಾನವನ್ನು ಪಠ್ಯ ಪುಸ್ತಕಗಳ ರೂಪದಲ್ಲಿ ಬರೆಯುವ, ಪಾಠ ಮಾಡುವ ಅಭ್ಯಾಸವನ್ನು ಈ ಕಮ್ಮಟ ನಮ್ಮೆಲ್ಲರಲ್ಲೂ ಕುದುರಿಸಿತ್ತು.

ನಾನು 'ಜೀವ ಕೋಶ' (Cell) ಹಾಗೂ 'ಜಂತು'(Peripatus)ಗಳ ಬಗ್ಗೆ ಮೊದಲ ಬಾರಿಗೆ ಕನ್ನಡದಲ್ಲಿ ಬರೆದಿದ್ದೆ. ಬರೆದದ್ದನ್ನು ನಿಸಾರ್ ಅವರು ಸ್ವತಃ ತಿದ್ದಿದರು. ಜೊತೆಗೇ ಇನ್ನಷ್ಟು ಲೇಖನಗಳನ್ನೆಲ್ಲ ಸೇರಿಸಿ ಕೃತಿಯನ್ನು ಪ್ರಕಟಿಸಲು ಅನುವಾದದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಕನ್ನಡದ ಬೆಳವಣಿಗೆಗೆ, ಅದರ ಜೀವಂತಿಕೆಗೆ ಸದಾ ಹಪಹಪಿಸುತ್ತಿದ್ದ ನಿಸಾರ್ ಇಂತಹ ಹಲವಾರು ಕಾರ್ಯಾಗಾರಗಳಲ್ಲಿ, ವಿಜ್ಞಾನದ ಕಾರ್ಯಕ್ರಮಗಳಲ್ಲಿ ದುಡಿದಿದ್ದಾರೆ. ಜೊತೆಗೇ, ಅವರು ಎಂಬತ್ತರ ದಶಕದಲ್ಲಿ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷರಾಗಿದ್ದಾಗ ರಾಜ್ಯಮಟ್ಟದ ವಿಜ್ಞಾನ ಕಮ್ಮಟವನ್ನು ಬೆಂಗಳೂರಿನಲ್ಲಿ ನಡೆಸಿದ್ದನ್ನೂ ನಾನು ನೆನೆಯಲೇಬೇಕು. ಅದರ ನಿರ್ದೇಶಕರಲ್ಲಿ ಒಬ್ಬರಾಗಿ ಹಿಂದೊಮ್ಮೆ ಅವರ ಸಹೋದ್ಯೋಗಿಯಾಗಿದ್ದ ಪ್ರೊ. ಜಿ. ಟಿ. ನಾರಾಯಣರಾವ್ ಅವರನ್ನು ನಿಸಾರ್ ನೇಮಿಸಿದ್ದರು. ಡಾ. ಎಚ್. ನರಸಿಂಹಯ್ಯ ಮುಂತಾದ ಗಣ್ಯರು ಪಾಲ್ಗೊಂಡಿದ್ದರು. ಅದು ತುಂಬು ಯಶಸ್ಸನ್ನು ಪಡೆಯಿತೆಂದು ಅನೇಕರಿಂದ ಕೇಳಿದ್ದೇನೆ.

ನಾನು ನಿವೃತ್ತಿಯಾಗುವ ಒಂದೆರಡು ವರ್ಷಗಳು ಉಳಿದಿದ್ದಾಗ ಪ್ರಾಯಶಃ ೧೯೯೧ರಲ್ಲಿ ಚಿತ್ರದುರ್ಗದ ಪ್ರಥಮ ದರ್ಜೆ ಸೈನ್ಸ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿದ್ದೆ. ಆಗ ಈ ಕಾಲೇಜಿಗೆ ಎರಡನೆಯ ಬಾರಿಗೆ ವರ್ಗವಾಗಿ ಬಂದ ನಿಸಾರ್‌ರವರು ಇಷ್ಟೊತ್ತಿಗೆ ಒಬ್ಬ ಮುತ್ಸದ್ದಿಯಾಗಿ ರೂಪುಗೊಂಡಿದ್ದರು ಎಂದು ತಿಳಿಸಲು ತುಂಬ ಹೆಮ್ಮೆ ಎನ್ನಿಸುತ್ತದೆ. ಆಗ ನನಗಾಗಿದ್ದ ಸಂತೋಷ ಅಷ್ಟಿಷ್ಟಲ್ಲ. ಆದರೆ, ನಿಸಾರ್‌ರವರಿಗೆ ಅನಾರೋಗ್ಯದ ಜೊತೆಗೆ, ಮನೆಗೆ ಸಂಬಂಧಿಸಿದ ವಿಷಯಗಳು ಚಿತ್ರದುರ್ಗದಲ್ಲಿ ವಾಸಿಸಲು ಅಡ್ಡಿಯಾದವು. ಅವರು ಆಗಾಗ್ಗೆ ರಜೆ ಹಾಕಬೇಕಾಗಿತ್ತು. ಇಂತಹದರಲ್ಲೂ ನಮ್ಮ ಮಾತುಕತೆಯ ವಿಚಾರಗಳಿಗೆ ಚ್ಯುತಿ ಬರಲಿಲ್ಲ. ಅದೇ ಕುತೂಹಲ, ಶ್ರದ್ಧೆ, ಆಸಕ್ತಿ ನಮ್ಮನ್ನು

ಒಂದುಗೂಡಿಸಿದ್ದವು. ನೀತಿ ಆಧಾರಿತ ಉತ್ತಮ ಶಿಕ್ಷಣ ಸಮಾಜದ ಎಲ್ಲ ವರ್ಗಕ್ಕೂ ಲಭ್ಯವಾದರೆ ನಮ್ಮ ನಾಡಿನ ಮುನ್ನಡೆ ಹೆಚ್ಚಿ ಈಗಿನ ವ್ಯವಸ್ಥೆ ಸುಧಾರಿಸುತ್ತದೆ ಎಂಬ ಆಶಯ ನಮ್ಮಿಬ್ಬರ ಆಲೋಚನೆಗಳಲ್ಲೂ ಸದಾ ಸೆಲೆಯಂತೆ ಉಕ್ಕುತ್ತಲೇ ಇತ್ತು.

ಮಾತಿನಂತೆ, ಸೃಜನಶೀಲ ಬರಹಗಳಲ್ಲೂ ಮುತ್ಸದ್ದಿಯಾಗಿ ಕನ್ನಡ ನಾಡು ಹಾಗೂ ನಾಡಿನಾಚೆಗೂ ಹೆಸರು ಗಳಿಸಿರುವ, ಹಲವಾರು ಸಾಧನೆಗಳನ್ನು ನೆರವೇರಿಸಿರುವ ಕವಿಮಿತ್ರ ಮತ್ತು ಸಹೋದ್ಯೋಗಿ ಪ್ರೊ. ನಿಸಾರ್ ಅಹಮದ್‌ರವರಿಗೆ ಸಂದ ಪುರಸ್ಕಾರಗಳು ಅನೇಕ.

ಕವಿಯಾಗಿರುವ ಜೊತೆಗೆ ಆಧುನಿಕ ಚಿಂತಕರಾದ ನಿಸಾರ್‌ರವರು ನನ್ನ ಮಿತ್ರರು ಎಂಬುದೇ ನನಗೆ ಘನತೆ, ಹೆಮ್ಮೆಗಳನ್ನು ದಕ್ಕಿಸುವ ಅತಿಶಯ ವಿಷಯ. ಅವರೊಂದಿಗೆ ಕಳೆದ ಹಳೆಯ ದಿವಸಗಳ ನೆನಪು ನನ್ನ ಪಾಲಿಗೊಂದು ನಲಿವಿನ ನಿಧಿ. ಅವರಿಗೆ ಆರೋಗ್ಯ, ಭಾಗ್ಯ, ಸಂಪತ್ತು ಪ್ರಾಪ್ತವಾಗಲೆಂದು ತುಂಬು ಮನಸ್ಸಿನಿಂದ ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ.

ನಮ್ಮ ದೇಶದ ಆಧುನಿಕ ತಂತ್ರಜ್ಞಾನದ ಅಭಿವರ್ಧನೆ ಮತ್ತದರ ಸೌಲಭ್ಯಶೀಲ ಜೀವನೋಪಯೋಗ ಕೌಶಲದ ವರಸೆಯ ಪರಿ—ಪರರ ಬಿಕ್ಕೆಯ ಸಿರಿ, ಬಡವೆಯ ಕಡದ ಒಡವೆಯ ಬಡಿವಾರ. ಸ್ವಯಾರ್ಜಿತ ಸಂಪತ್ತಿನ ಸಂಗತಿ ಸ್ವಪ್ನದ ಸಂಡಿಗೆಯಾಗಿದೆ. ಲೋಕಾದ್ಯಂತ ತಿಳಿವಿನ ತುಂಬನ್ನು ಹೊನಲು ಕ್ಕೆಸಿದ್ದ ನಾಡೀಗ ಹಾಲಿಂಗಿದ ತಾಯ್ಮೊಲೆ. ಹೋಮಾಗ್ನಿ ಕುಂಡವಾಗಿದ್ದ ಮೇಧಾಶೀಲ ಮನಸ್ಸು ದೈನೇಸಿ ಕಂಗಾಲರ ಕೂಳ್ಕುದಿವ ಬೀದಿಯೊಲೆ. ಹಲವು ಸ್ಥಿತಿವಂತ ರಾಷ್ಟ್ರಗಳ ಋಣಗೂಳಿನ ವಾರಾನ್ನಿಗರಾಗಿ ಮೈ ಬಲಿಸುವ ಪರಿಸ್ಥಿತಿ ನಮ್ಮದಾಗಿದೆ.

(ರಾಷ್ಟ್ರದ ಪರಾವಲಂಬನ ದುಃಸ್ಥಿತಿ)

✧ ✧ ✧

ಒಂದು ದೃಷ್ಟಿಯಿಂದ ಒಳಗುದಿ ವೇದನೆಗಳ ತೀವ್ರತೆ ಜೀವ ಸಂಸ್ಕರಣಕ್ಕೆ ಅಗತ್ಯವೇನೋ. ನಲಿವು ನೆಮ್ಮದಿಗಳ ಇಂಪನ್ನು ಅದು ಇಮ್ಮಡಿಸಬಹುದು: ಕಾಡಿನ ಒರಟು ಬಿದಿರನ್ನು ಚಾಕು ಕೊಯ್ದು ಹೆರೆದು, ಹಲವು ರಂಧ್ರಗಳನ್ನಾಗಿ ಕೊರೆದು ಘಾಸಿಗೊಳಿಸದಿದ್ದಲ್ಲಿ ಅದೊಂದು ಮೋಹಕ ಮುರಳಿಯಾಗಿ ಸಮ್ಮೋಹನ ಸ್ವರವನ್ನು ಹೊಮ್ಮಿಸಲು ಸಾಧ್ಯವಾಗುತ್ತಿತ್ತೆ?

(ಜೀವ ಸಂಸ್ಕಾರಿ ವೇದನೆ)



ನಿಸಾರರ ಜೊತೆಗೊಂದು ನೆನಪಿನ ವಿಹಾರ

♦ ಡಾ. ಕೆ. ವಿ. ಸೋಮಶೇಖರ್
(ಇಂಟರ್ ಮೀಡಿಯಟ್ ತರಗತಿಯ ಸಹಪಾಠಿ ಮತ್ತು ಸಹೋದ್ಯೋಗಿ)

ನಾಡೋಜ ಪ್ರೊಫೆಸರ್ ಕೆ. ಎಸ್. ನಿಸಾರ್ ಅಹಮದ್ ಅವರ ಮತ್ತು ನನ್ನ ಸ್ನೇಹ ಸಂಬಂಧ ೫೪ ವರ್ಷಗಳ ಹಿಂದಿನದು. ನಾನು ಮತ್ತು ನಿಸಾರ್ ಅಹಮದ್ ಅವರು ೧೯೫೨ರಲ್ಲಿ ಬೆಂಗಳೂರಿನ ಸರ್ಕಾರಿ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಜ್ಯೂನಿಯರ್ ಇಂಟರ್‌ಮೀಡಿಯಟ್ ತರಗತಿಯಿಂದ ಸಹಪಾಠಿಗಳಾಗಿದ್ದು, ಅನಂತರ ಅಧ್ಯಾಪಕ ಸಹೋದ್ಯೋಗಿಗಳಾಗಿಯೂ ಜೊತೆಗಿದ್ದು ನಿವೃತ್ತರಾದವರು.

ಆಗಲೇ ನಿಸಾರ್ ಅಹಮದ್ ಸಣ್ಣಪುಟ್ಟ ಕವಿತೆಗಳನ್ನು ರಚಿಸಿ, ಆಗಿನ ಮಾಸಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ನನಗೆ ಆಗ ಕನ್ನಡ ಕವಿತೆಗಳಲ್ಲಿ ಹೆಚ್ಚಿನ ಆಸಕ್ತಿ ಹಾಗೂ ಅನುಭವವಿರದಿದ್ದರೂ ಸ್ನೇಹಿತರೆಂಬ ಕಾರಣಕ್ಕೆ ಅವುಗಳನ್ನು ಓದಿ ಸಂತೋಷಪಡುತ್ತಿದ್ದೆ.

ಇಂಟರ್ ಮುಗಿಸಿದ ತಕ್ಷಣ ಕಾರಣಾಂತರಗಳಿಂದ ಮುಂದಿನ ಬಿ.ಎಸ್ಸಿ. (ಆನರ್ಸ್) ಮತ್ತು ಎಂ.ಎಸ್ಸಿ. ತರಗತಿಗಳಲ್ಲಿ ನಾವಿಬ್ಬರೂ ಜೊತೆಯಲ್ಲಿರಲಿಲ್ಲ. ಅವರು ಒಂದು ವರ್ಷ ನನಗಿಂತ ಮುಂದೆ ಇದ್ದರು. ಆಗ ಅವರ, ನನ್ನ ಸಂಬಂಧ ಸ್ವಲ್ಪ ಸಮಯ ಕಡಿಮೆಯಾಗಿತ್ತು. ಅವರು ಎಂ.ಎಸ್ಸಿ. ಮುಗಿಸುವ ಹೊತ್ತಿಗಾಗಲೇ ಕವಿಯೆಂದು ಪರಿಗಣಿತರಾಗಿದ್ದರು.

ನಾನು ೧೯೬೦ರಲ್ಲಿ ಎಂ.ಎಸ್ಸಿ. (ಭೂವಿಜ್ಞಾನಶಾಸ್ತ್ರ) ಮುಗಿಸಿದೆ. ಅವರಾಗಲೇ ೧೯೫೯ರಲ್ಲಿ ಎಂ.ಎಸ್ಸಿ. ಮುಗಿಸಿ

ಸೆಂಟ್ರಲ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ನಾನು ಮತ್ತು ನಿಸಾರ್ ಅಹಮದ್ ಅವರು ಸರ್ಕಾರಿ ವಿಜ್ಞಾನ ಕಾಲೇಜಿನ ಭೂ ವಿಜ್ಞಾನ ವಿಭಾಗದಲ್ಲಿ ಜೊತೆಯಲ್ಲೇ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದೆವು. ಸಹೋದ್ಯೋಗಿಗಳಾಗಿ ಕೆಲಸ ಮಾಡುವಾಗ ನಾವಿಬ್ಬರೂ ಸದಾ ಜೊತೆಯಲ್ಲಿರುತ್ತಿದ್ದೆವು. ನಮ್ಮ ಪಾಠಗಳ ವಿಚಾರವಾಗಿ ಚರ್ಚಿಸುತ್ತಿದ್ದೆವು. ನಿಸಾರ್ ಅವರು ಭೂ ವಿಜ್ಞಾನದಲ್ಲಿ ಪರಿಣತಿಯನ್ನು ಹೊಂದಿದ್ದರೂ ಪ್ರತಿ ಸಲ ತರಗತಿಗೆ ಹೋಗುವಾಗಲೂ ಸಾಕಷ್ಟು ಸಿದ್ಧತೆಯನ್ನು ಮಾಡಿ ತಯಾರಾಗುತ್ತಿದ್ದರು. ಅವರು ಕವಿಗಳಾದರೂ ಭೂ ವಿಜ್ಞಾನದಲ್ಲೂ ಒಳ್ಳೆಯ ಉಪನ್ಯಾಸಕರೆಂಬ ಹೆಸರು ಗಳಿಸಿದ್ದರು. ಆಗಿನ ಕಾಲಕ್ಕೇ ನಿಸಾರ್ ಅವರನ್ನು ಹಲವು ಸಂಘ ಸಂಸ್ಥೆಗಳು ಉಪನ್ಯಾಸಗಳನ್ನು ನೀಡಲು ಆಹ್ವಾನಿಸುತ್ತಿದ್ದವು. ಅವರು ನನ್ನನ್ನೂ ಅನೇಕ ಕಡೆ ಸಮಾರಂಭಗಳಿಗೆ ಕರೆದೊಯ್ಯುತ್ತಿದ್ದರು. ಹೂವಿನ ಜೊತೆಗೆ ನಾನೂ ಸ್ವರ್ಗಕ್ಕೆ ಹೋದ ಹಾಗೆ ನನಗೆ ಬಹಳ ಸಂತೋಷವಾಗುತ್ತಿತ್ತು.

ನಾನು ನಿವೃತ್ತನಾಗುವುದಕ್ಕೆ ಕೆಲವು ವರ್ಷಗಳ ಮೊದಲು ನಿಸಾರ್ ನಮ್ಮ ಕಾಲೇಜಿನ ಭೂ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದರು. ತಮ್ಮ ಸಹೋದ್ಯೋಗಿಗಳೊಂದಿಗೆ ಒಳ್ಳೆಯ ಸಂಬಂಧವಿರಿಸಿಕೊಂಡಿದ್ದರು. ನಾವಿಬ್ಬರೂ ಕೆಲವೊಮ್ಮೆ ಮುಂಗೋಪದ ಕಾರಣ ಜಗಳವಾಡಿದರೂ ಅದು ಕ್ಷಣಮಾತ್ರದ್ದಾಗಿರುತ್ತಿತ್ತು. ತಕ್ಷಣ ಮತ್ತೆ ಜೊತೆಯಾಗುತ್ತಿದ್ದೆವು.

ನಿಸಾರ್ ಅವರಿಗೆ ದೂರದ ಊರುಗಳಿಂದಲೂ ಭಾಷಣ ಮಾಡಲು ಆಹ್ವಾನ ಬರುತ್ತಿತ್ತು. ಅವರೂ, ನಾನು ಒಮ್ಮೆ ಬಾದಾಮಿ(ಬಿಜಾಪುರ ಜಿಲ್ಲೆ)ಗೆ ಪ್ರಯಾಣ ಮಾಡಿದ್ದೆವು. ಅಲ್ಲಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಾದಾಮಿ ಗುಹಾಲಯಗಳನ್ನು ನೋಡಿ ಬಂದೆವು. ನಿಸಾರ್ ಅವರು ಆ ಗುಹೆಗಳನ್ನು ಕೂಲಂಕಷವಾಗಿ ವೀಕ್ಷಿಸಿ ಅವುಗಳ ಇತಿಹಾಸ ಮತ್ತಿತರ ವಿಚಾರಗಳನ್ನು ಮೊದಲೇ ಓದಿ ಎಲ್ಲರಿಗೂ ವಿಶದವಾಗಿ ವಿವರಿಸುತ್ತಿದ್ದರು. ಆಮೇಲೆ ಬಾದಾಮಿ ಹತ್ತಿರದ ಪಟ್ಟದಕಲ್ಲು, ಐಹೊಳೆಗಳಿಗೆ ಭೇಟಿ ಕೊಟ್ಟೆವು. ಪಟ್ಟದಕಲ್ಲಿನ ದೇವಾಲಯಗಳ ಗೋಪುರಗಳನ್ನು ಕಂಬಗಳನ್ನು ಮತ್ತು ಶಿಲ್ಪಕಲೆಯನ್ನು ಅಧ್ಯಯನ ಮಾಡಿ ಕೆಲವು ವಿಚಾರಗಳನ್ನು ಗುರುತು ಹಾಕಿಕೊಳ್ಳುತ್ತಿದ್ದರು. ಮರುದಿನ ನಿಸಾರ್ ಅವರು ಬಾದಾಮಿಗೆ ಬಂದಿರುವುದನ್ನು ತಿಳಿದು ಹತ್ತಿರದ ಗುಳೇದಗುಡ್ಡದ ಕಾಲೇಜಿನಿಂದ ಕರೆ ಬಂದಿತು. ಅಲ್ಲಿನ ಜನರು ನಿಸಾರ್ ಅವರ ಬಗ್ಗೆ ತೋರಿದ ಪ್ರೀತಿ ವಿಶ್ವಾಸಗಳನ್ನು ವರ್ಣಿಸಲು ಅಸಾಧ್ಯ. ಇಂತಹ ಅನೇಕ ಅನುಭವಗಳು ನನಗೆ ಆಗಿವೆ. ಅವರ ಸಂಗದಿಂದ ನನಗೆ ಕೆಲವು ಉತ್ತಮ ಕವಿಗಳ ಪರಿಚಯವೂ ಆಗಿದೆ. ಅದಕ್ಕೆ ಅವರಿಗೆ ನಾನು ಋಣಿ.

ನಾವು ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜಿನಲ್ಲಿ ಸೇವೆಯಲ್ಲಿರುವಾಗ ನಿಸಾರ್ ಅವರು ದಕ್ಷ ಎನ್‌ಸಿಸಿ ಅಧಿಕಾರಿಗಳಾಗಿದ್ದರು. ಇವರೂ, ಇನ್ನಿತರ ಅಧಿಕಾರಿಗಳೂ ಕಾಲೇಜಿನ ಅಧ್ಯಾಪಕರಿಗೆ ರೈಫಲ್ ತರಬೇತಿಯನ್ನು ಕೊಟ್ಟು ನಮಗೆಲ್ಲ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದು ಇನ್ನೂ ನೆನಪಿದೆ.

ನಿಸಾರ್ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಅಲ್ಲಿನ

ಸಹೋದ್ಯೋಗಿಗಳೊಡನೆ ಚರ್ಚಿಸಿ, ನಮ್ಮ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಸಾಹಿತ್ಯದ ಜೊತೆಗೆ ಕೆಲವೊಮ್ಮೆ ವಿಜ್ಞಾನದ ವಿಷಯಗಳ ಮೇಲೂ ಅವರು ಕಾರ್ಯಕ್ರಮಗಳನ್ನು ನಡೆಸುತ್ತಿದ್ದುದರಿಂದ ನಮಗೆಲ್ಲ ಅವರ ಬಗ್ಗೆ ಪ್ರೀತಿ, ಮೆಚ್ಚುಗೆ ಹೆಚ್ಚುವಂತೆ ಮಾಡಿತ್ತು.

ನನ್ನ ಮತ್ತು ನಿಸಾರ್ ಅವರ ಸ್ನೇಹ ಹೆಚ್ಚಾಗಿ ಬೆಳೆಯುತ್ತಾ ಹೋದ ಹಾಗೆ, ಅವರ ತಂದೆ ಮತ್ತು ತಾಯಿಯವರಿಗೂ ನಾನು ಪ್ರೀತಿಪಾತ್ರನಾದೆ, ಅವರ ತಂದೆ ಶ್ರೀ ಹೈದರ್ ಅವರು ಸ್ನೇಹಶೀಲರೂ ಜ್ಞಾನಾಪೇಕ್ಷಿಗಳೂ ಆಗಿದ್ದರು. ತಾಯಿ ಶ್ರೀಮತಿ ಹಮೀದಾ ಬೇಗಂ ಅವರು ನನ್ನ ಸ್ವಂತ ತಾಯಿಯಂತೆ ನನ್ನನ್ನು ಪ್ರೀತಿಸುತ್ತಿದ್ದರು. ಅವರ ಮನೆಗೆ ಹೋದಾಗಲೆಲ್ಲ ಒಂದು ಹಣ್ಣನ್ನಾದರೂ ಕೊಡದೆ ಕಳಿಸುತ್ತಿರಲಿಲ್ಲ.

ನಿಸಾರ್ ಅವರು ನಮ್ಮ ಕುಟುಂಬಕ್ಕೆ ಬಹಳ ಆಪ್ತರು. ನನ್ನ ಮಕ್ಕಳಿಗೆ ಬಹಳ ಪ್ರೀತಿಯಿಂದ ಮಾತನಾಡಿಸಿ ಆಶೀರ್ವದಿಸುತ್ತಿದ್ದರು. ನನ್ನ ತಾಯಿಯವರನ್ನು ಕಂಡರೆ ಅವರಿಗೆ ಬಹಳ ಮರ್ಯಾದೆ. ಅವರ ಆಶೀರ್ವಾದ ಪಡೆಯಲು ಆಗಾಗ ನಮ್ಮ ಮನೆಗೆ ಬರುತ್ತಿದ್ದರು. ನನ್ನ ಮಡದಿ ಉಮಾ ಪುಸ್ತಕ ಪ್ರಿಯೆ. ಅದನ್ನು ಗಮನಿಸಿದ್ದ ನಿಸಾರರು ತುಂಬಾ ಸಂತೋಷಪಟ್ಟು ಹೊಗಳುತ್ತಿದ್ದುದಲ್ಲದೆ ತಮ್ಮ ಕೆಲವು ಪುಸ್ತಕಗಳನ್ನೂ ಕಾಣಿಕೆಯಾಗಿ ಕೊಟ್ಟು ಉತ್ತೇಜಿಸುತ್ತಿದ್ದರು.

ನಾನು ಅಮೇರಿಕೆಗೆ ೧೯೬೮ರಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಹೊರಟಾಗ ಬಹಳ ಪ್ರೀತಿಯಿಂದ ಪ್ರೋತ್ಸಾಹಿಸಿ ಕಳಿಸಿದ್ದರು. ಅಲ್ಲಿಂದ ವಾಪಸ್ಸು ಬಂದು ಅಲ್ಲಿನ ಕೆಲವು ವಿಷಯಗಳನ್ನು ತಿಳಿಸಿದಾಗ ಅವುಗಳ ಬಗ್ಗೆ ದಿಢೀರ್ ಕವಿತೆಗಳನ್ನು ಸೃಷ್ಟಿಸಿ ಆಶ್ಚರ್ಯ ಪಡಿಸುತ್ತಿದ್ದರು. ಹಾಗೆ ಬರೆದ ಒಂದು ಕವನ ಅವರ 'ಅನಾಮಿಕ ಆಂಗ್ಲರು' ಹೆಸರಿನ ಸಂಗ್ರಹದಲ್ಲಿದೆ. ಅದನ್ನು ಇಲ್ಲಿ ಉದ್ಧರಿಸಿದ್ದೇನೆ:

ಅಮೇರಿಕದಲ್ಲಿ

ಅಮೇರಿಕದಲ್ಲಿ
ಕೆಲ ಕಾಲ ಕಳೆದ ಗೆಳೆಯ
ಆ ಇಳೆಯ
ಉದ್ದಗಲ ಬಾಳಿನ ಹೊಳೆಯ
ಸಂಸ್ಕೃತಿ ಸುಭಿಕ್ಷತೆಯ ಹೆಬ್ಬೆಳೆಯ
ಕಳಕಳಿಯಿಂದ ಬಣ್ಣಿಸಿದ;
ಸಮಸ್ತವನ್ನೂ ಹೊನ್ನಿಸಿದ.
ಅಲ್ಲಿ ದಿಳ್ಳಿಯಿಂದ ಹಳ್ಳಿಯ ತನಕ
ಕಸಬರಿಗೆ
ಯಿಂದ ದಿನ ನಿತ್ಯದಲ್ಲ ಸರಕಿನ ವರೆಗೆ
ಒಂದೇ ರೇಟು.
ಇಲ್ಲಿನ ಹಾಗೆ ಬಿಡಿ ಬಿಡಿಯಾಗಿ

ಸಿಗದು ಸಿಗರೇಟು.
ಕೊಂಡರೆ ಪ್ಯಾಕು,
ಇಲ್ಲವೇ ಒಂದೆರಡನ್ನ
ಅವರಿವರಿಂದ ಎಗರಿಸಬೇಕು.
ನಮ್ಮಂತೆ ಅಂಗಡಿಯವ
ಕಡಿಮೆ ಕೊಟ್ಟಿಲ್ಲವ?
ಕೊಯಮತ್ತೂರಿನದಲ್ಲವ?
ಎಂದು ಎವೆ ಮುಚ್ಚಿ ತೆರೆವುದರಲ್ಲಿ
ನೋಟಿನ ಎಣಿಕೆ
ಶಬ್ದದ ತನಿಖೆ
ನಡೆಸುವ ತರಲೆ;
ಡಾಲರ್ ಕೊಟ್ಟರೆ
ನಿಕಲ್ ಸೆಂಟಿನ ಚಿಲ್ಲರೆ
ಮರಳಿಸುವ ರಿವಾಜಿನ ಗೋಳೇ
ಇಲ್ಲ.
ಓದಿ ಬೆಲೆ ಪಟ್ಟಿ
ನಿಗದಿಸಿದ ಹಣ ಹೆಟ್ಟಿ
ಗುಂಡಿಯೊತ್ತಿದರೆ ಸಾಕು
ಯಂತ್ರವಕ್ಷ
ದಿಂದಪ್ರತ್ಯಕ್ಷ
ಮುದ್ದಾದ ಪ್ಯಾಕು.
ವಿಚಿತ್ರ
ಇದು ನೋಡಿ
ಎಂದು ಮುಗಿಸಿದ ಮಿತ್ರ;
ಚಾರ್ಮಿನಾರ್ ಘಾಟಿನ ಪಾಲ್‌ಮಾಲ್ ಇರಲಿ
ಗೋಲ್ಡ್ ಫ್ಲೇಕ್ ರುಚಿಯ ಕೆಂಟ್ ಇರಲಿ
ಏಕ ನೆಲೆ—
ಎಲ್ಲ ಬ್ರ್ಯಾಂಡಿಗೂ ಒಂದೇ ಬೆಲೆ.
ನನಗೆ ವಿನೋದ
ಅನ್ನಿಸಿತು
ಕ್ಯಾಪಿಟಲಿಸಮ್ಮಿನ
ದಮ್ಮಿನ
ಸಾಮಗ್ರಿಯ ಸಮತಾವಾದ.

೨೦೦೨ನೆಯ ಇಸವಿ ಆಗಸ್ಟ್ ತಿಂಗಳಲ್ಲಿ ಅವರು ಅಮೇರಿಕೆಯ ಕನ್ನಡ ಸಂಘಗಳ ಆಹ್ವಾನದ ಮೇರೆಗೆ ಅಲ್ಲಿನ ಎಲ್ಲಾ ಸಂಸ್ಥಾನಗಳಿಗೂ ಮತ್ತು ಪ್ರಮುಖ ಪಟ್ಟಣಗಳಿಗೂ ಭೇಟಿ ನೀಡಿ ಅಲ್ಲಿನ ಕನ್ನಡಿಗರ ಅಕ್ಕರೆ, ಗೌರವಗಳಿಗೆ ಪಾತ್ರರಾಗಿದ್ದಾರೆ. ಇತ್ತೀಚೆಗೆ ನಾನು

ಅಮೇರಿಕೆಯಲ್ಲಿರುವ ನನ್ನ ಮಕ್ಕಳನ್ನು ನೋಡಲು ಹೋಗಿದ್ದಾಗ, ಎಲ್ಲಿ ಹೋದರೂ ಶ್ರೀ ನಿಸಾರ್ ಅವರ ಹೆಸರೇ ಕೇಳಿ ಬರುತ್ತಿತ್ತು. ಈಗ ಅವರ ಹೆಸರು ಪ್ರಪಂಚದ ಹಲವು ದೇಶಗಳ ಕನ್ನಡ ಸಂಸ್ಥೆಗಳಲ್ಲಿ, ಮನೆಗಳಲ್ಲಿ ಪ್ರಸಿದ್ಧವಾಗಿರುವುದು ನನಗೆ ಹೆಮ್ಮೆಯ ವಿಷಯ.

ಇಂಥ ಬಹುರೂಪದ ಕನ್ನಡದ ಅಗ್ರಮಾನ್ಯ ಕವಿಶ್ರೇಷ್ಠರನ್ನು ನಾನು ಮಿತ್ರರಾಗಿ, ಸಹೋದ್ಯೋಗಿಗಳಾಗಿ ಪಡೆಯಲು ಅದೃಷ್ಟ ಮಾಡಿದ್ದೇನೆ. ಅವರು ಇನ್ನೂ ಹೆಚ್ಚಿನ ಸತ್ಕೀರ್ತಿಯ ಹೆಮ್ಮರವಾಗಿ ಬೆಳೆಯಲೆಂದು ನಾನೂ ಮತ್ತು ನನ್ನ ಕುಟುಂಬದವರು ಹಾರೈಸುತ್ತೇವೆ.

ಔಪಚಾರಿಕ ಎನ್ನಿಸಬಹುದಾದ ನನ್ನ ಈ ಕಿರು ಲೇಖನವನ್ನು ಮುಗಿಸುವ ಮುಂಚೆ ಒಂದು ಸ್ವಾರಸ್ಯಕರ ಪ್ರಸಂಗವನ್ನು ಹೇಳಬೇಕೆನ್ನಿಸಿದೆ. ನಾನೂ ನಿಸಾರ್ ಅವರೂ ಬೆಂಗಳೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ (೧೯೬೨-೬೭) ನಲವತ್ತು ವರ್ಷಗಳ ಹಿಂದೆ ನಡೆದದ್ದು.

ನಮ್ಮ ಕಾಲೇಜಿನ ಭೂ ವಿಜ್ಞಾನ ವಿಭಾಗದಲ್ಲಿ ಒಬ್ಬ ಸೀನಿಯರ್ ಲೆಕ್ಚರರ್ ಇದ್ದರು. ಅವರ ಹೆಸರು ಗಿರಿಯಪ್ಪ ಎಂದು ಇಟ್ಟುಕೊಳ್ಳೋಣ. ಅವರೀಗ ದೈವಾಧೀನರಾಗಿದ್ದಾರೆ. ಅವರು ಕೆಲಸಕ್ಕೆ ಸೇರಿದ ಲಾಗಾಯ್ತು ಸುಮಾರು ಹದಿನೈದು ವರ್ಷಗಳಿಂದ ಒಮ್ಮೆಯೂ ಬೇರೆ ಊರಿಗೆ ವರ್ಗಾವಣೆಯಾಗದೆ ಬೆಂಗಳೂರಿನಲ್ಲೇ ತಳವೂರಿದ್ದರು. ಅವರ ಜೊತೆಗಾರರಲ್ಲಿ ಅನೇಕ ಉಪನ್ಯಾಸಕರು ಚಿತ್ರದುರ್ಗ, ಶಿವಮೊಗ್ಗ, ತುಮಕೂರುಗಳಿಗೆ ವರ್ಗವಾಗಿ ಐದಾರು ವರ್ಷಗಳ ಅವಧಿಯವರೆಗೆ ಅಲ್ಲಿದ್ದು ವಾಪಸ್ಸು ಬಂದಿದ್ದರೂ, ಗಿರಿಯಪ್ಪ ಮಾತ್ರ ಇಲ್ಲೇ ಝೂಂಡಾ ಊರಿದ್ದರು. ಅಂತಹವರಿಗೆ ಒಮ್ಮೆ ಶಿವಮೊಗ್ಗೆಗೆ ಎತ್ತಂಗಡಿಯಾಯಿತು. ಮೇಲು ನೋಟಕ್ಕೆ ಅವರ ಸರೀಕ ವಯಸ್ಸಿನ ಅಧ್ಯಾಪಕರೂ ಕೊಂಚ ಕಿರಿಯರೂ ಅವರಿಗೆ, 'ಛೆ! ಪಾಪ, ನಿಮಗೆ ಟ್ರಾನ್ಸ್‌ಫರ್ ಆಗಬಾರದಿತ್ತು. ಅದೂ ಇಷ್ಟು ಸೇವೆ ಸಲ್ಲಿಸಿದ ಅನಂತರ. ನಿಜಕ್ಕೂ ನಮಗೆ ಬೇಜಾರಾಗಿದೆ. ನಿಮ್ಮ ಸಖ್ಯ, ಸಹವಾಸ ನಮಗೆ ಇನ್ನು ಕೆಲವು ವರ್ಷಗಳ ಕಾಲ ಲಭ್ಯವಾಗುವುದಿಲ್ಲ ಎಂಬ ಕೊರಗು ನಮ್ಮ ಮನಸ್ಸನ್ನು ಕೊರೆಯಹತ್ತಿದೆ' ಎಂದು ಮುಖದ ಎದುರು ನುಡಿದರೆ, ಹಿಂದುಗಡೆ ಮಾತ್ರ 'ನಾವೆಲ್ಲ ಆ ಹಾಳು ಕೊಂಪೆಗಳಿಗೆ ಹೋಗಿ ಆರೇಳು ವರ್ಷ ಒದ್ದಾಡಿ ಬಂದಿದ್ದರೆ ಈ ಆಸಾಮಿ ವರ್ಗವನ್ನು ತಪ್ಪಿಸಿಕೊಂಡು ಬೆಂಗಳೂರಿನಲ್ಲೇ ಆರಾಮಾಗಿ ಠಿಕಾಣಿ ಹೂಡಿದ್ದ. ಈತನಿಗೆ ಈಗ ವರ್ಗವಾಗಿದ್ದು ತುಂಬಾ ಸೂಕ್ತ. ನಾವು ಪಟ್ಟ ಪಾಡು ಈ ಮನುಷ್ಯನಿಗೆ ತಿಳಿಯುತ್ತೆ' ಎಂದು ಮಾತನಾಡಿಕೊಳ್ಳುತ್ತಿದ್ದರು.

ಶಿವಮೊಗ್ಗೆಗೆ ಹೋಗಿ ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳಲು ಒಂದು ವಾರ ಕಾಲಾವಕಾಶವಿತ್ತು. ಅವರು ನಾಲ್ಕು ದಿನಗಳ ಮೇಲೆ ರಿಲೀವ್ ಮಾಡಿಸಿಕೊಳ್ಳುತ್ತೇನೆಂದು ತಿಳಿಸಿ, ಶಿವಮೊಗ್ಗೆಗೆ ಹೋಗುವ ಪೂರ್ವಭಾವಿ ಸಿದ್ಧತೆಗೆ ಎಂದು ತಿಳಿಸಿ ರಜೆ ಹಾಕಿದರು. ಅವರು ತಮ್ಮ ಬಗ್ಗೆ ಅನುಕಂಪೆ ತೋರಿಸಿದ ಸಹೋದ್ಯೋಗಿಗಳಿಗೆ, 'ನೀವು ನನ್ನ ಬಗೆಗೆ

ಆಡಿರುವ ಪ್ರೀತಿ ವಿಶ್ವಾಸದ ಮಾತುಗಳಿಗೆ ನಾನು ಕೃತಜ್ಞ. ಪಾಪ, ನೀವೆಲ್ಲಾ ಹೋಗಿ ಬಂದಿಲ್ಲವೆ? ಮೂರು ವರ್ಷ ಹಾಗೋ ಹೀಗೋ ಕಳೆದು ಬರುತ್ತೇನೆ. ಸರ್ಕಾರಿ ಉದ್ಯೋಗದಲ್ಲಿ ಸೇವೆ ಮುಖ್ಯ ಅಲ್ಲವೆ? ನನ್ನ ಸುಖ ಸೌಕರ್ಯಗಳಿಗಿಂತ ವಿದ್ಯಾರ್ಥಿಗಳ ಹಿತ ಮುಖ್ಯ' ಎಂದರು.

ನಮ್ಮ ಇಲಾಖೆಯ 'ಜ್ಯೂನಿಯರ್ ಮೋಸ್ಟ್' ಸಹೋದ್ಯೋಗಿಗಳೂ, ಒಂದು ಕಾಲಕ್ಕೆ ಗಿರಿಯಪ್ಪನವರ ಪರಮಾಪ್ತ ವಿದ್ಯಾರ್ಥಿಗಳೂ ಆಗಿದ್ದ ನಾಗಬಸವಪ್ಪನವರು ನಿಸಾರ್ ಅಹಮದ್ ಮತ್ತು ನಾನು ಕೂರುತ್ತಿದ್ದ ರೂಮಿಗೆ ಬಂದು, ಗಿರಿಯಪ್ಪನವರಿಗೆ ಒಂದು ಅದ್ಧೂರಿಯಾದ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸುವ ಹಂಬಲವನ್ನು ತೋಡಿಕೊಂಡರು. ನಿಸಾರ್ ಅವರು 'ಖಂಡಿತಾ ತುಂಬಾ ಒಳ್ಳೆಯ ಕೆಲಸ. ನಮಗೂ ನಿಮ್ಮ ಹಾಗೆಯೇ ನೆನ್ನೆ ಈ ಆಲೋಚನೆ ಬಂದಿತ್ತು. ನೀವು ವ್ಯವಸ್ಥೆ ಮಾಡಿ. ನಾನು, ನನ್ನ ಕೈಲಾದಷ್ಟು ಹಣದ ನೆರವು ನೀಡುತ್ತೇನೆ. ಹಾಗೆಯೇ ಇತರ ಅಧ್ಯಾಪಕರಿಗೂ ಸಹಕರಿಸಲು ಹೇಳೋಣ. ಕಾರ್ಯಕ್ರಮಕ್ಕೆ ನಮ್ಮ ಸಿ.ಬಿ.ಜಿ., ಪಿ.ಎಂ.ಜಿ. ವಿದ್ಯಾರ್ಥಿಗಳೂ ಬರಲಿ. ಎಷ್ಟೇ ಆದರೂ ಗಿರಿಯಪ್ಪ ನಮ್ಮ ಸೀನಿಯರ್ ಸಹೋದ್ಯೋಗಿಗಳಲ್ಲವೆ? ಅವರು ನಮ್ಮಿಂದ ದೂರ ಹೋಗುತ್ತಿರುವಾಗ ಅವರಿಗೆ ವಿಜೃಂಭಣೆಯ ಕಾರ್ಯಕ್ರಮವನ್ನು ಏರ್ಪಡಿಸಿ ಕಳಿಸಿಕೊಡುವುದು ತುಂಬಾ ಸೂಕ್ತ' ಎಂದರು. ನಾನು ನಿಸಾರರನ್ನು ಅನುಮೋದಿಸಿದೆ. ನಾವಿಬ್ಬರೂ ಅಲ್ಲದೆ, ನಮ್ಮ ಭೂ ವಿಜ್ಞಾನ ಇಲಾಖೆಯ ಉಳಿದ ನಾಲ್ಕೈದು ಜನ ಅಧ್ಯಾಪಕರೂ ಉದಾರವಾಗಿ ಧನ ಸಹಾಯ ಮಾಡಿ, ಮಿಕ್ಕ ಸಹಕಾರವನ್ನೂ ನೀಡಿದರು.

ನಾಲ್ಕು ದಿನಗಳ ಅನಂತರ ನಮ್ಮ ಜಿಯಾಲಜಿ ಲೆಕ್ಚರ್ ಹಾಲ್‌ನಲ್ಲಿ ಕಾರ್ಯಕ್ರಮ ಏರ್ಪಟ್ಟಿತ್ತು. ಆಗಷ್ಟೇ ನಮ್ಮ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಬಂದಿದ್ದ ಆರ್. ಆರ್. ಉಮರ್ಜಿಯವರು ಅಧ್ಯಕ್ಷತೆ ವಹಿಸಿದ್ದರು. ಸೆಂಟ್ರಲ್ ಕಾಲೇಜಿನಿಂದಲೂ ನಮ್ಮ ಭೂ ವಿಜ್ಞಾನ ವಿಭಾಗದ ನಾಲ್ಕೈದು ಅಧ್ಯಾಪಕರೂ ಆಗಮಿಸಿದ್ದಲ್ಲದೆ, ನಮ್ಮ ಕಾಲೇಜಿನ ಇತರೆ ವಿಭಾಗಗಳ ಏಳೆಂಟು ಜನ ಲೆಕ್ಚರರುಗಳೂ ಬಂದಿದ್ದರು. ಬೆಳಗ್ಗೆ ಎಲ್ಲೋ ಹೊರಗೆ ಹೋಗಿದ್ದ ಗಿರಿಯಪ್ಪನವರೂ ಸರಿಯಾದ ಸಮಯಕ್ಕೆ ಆಗಮಿಸಿದರು. ವಿದ್ಯಾರ್ಥಿಗಳಿಂದ ಉಪನ್ಯಾಸ ಮಂದಿರ ಕಿಕ್ಕಿರಿದಿತ್ತು. ವರ್ಣಾಕರ್ಷಕ ಬಂಟಿಂಗ್ ಮತ್ತು ತೋರಣಗಳೂ 'ವಸಂತ ವಿಹಾರ'ದಿಂದ ತರಿಸಿದ್ದ ರುಚಿಕರ ತಿಂಡಿಯೂ ಕಾರ್ಯಕ್ರಮಕ್ಕೆ ಅತಿಶಯ ಶೋಭೆಯನ್ನು ನೀಡಿದ್ದವು. ನಿಸಾರರು ಸ್ವಾಗತ ಕೋರುವುದಾಗಿಯೂ ನಾನು ವಂದನಾರ್ಪಣೆ ಮಾಡುವುದಾಗಿಯೂ ನಿರ್ಧಾರವಾಗಿತ್ತು. ಅಂದಿನ ಕಾರ್ಯಕ್ರಮದ ಪೂರ್ಣ ಉಸ್ತುವಾರಿ, ಹೊಣೆಗಳನ್ನು ಹೊತ್ತಿದ್ದ ಶಿಷ್ಯ ನಾಗಬಸಪ್ಪನವರು ತಮ್ಮ ಗುರುಗಳ ಬಗ್ಗೆ ಪ್ರಶಂಸಾ ಭಾಷಣವನ್ನು ಮಾಡುವುದಾಗಿ, ಇಲಾಖೆಯ ಮುಖ್ಯಸ್ಥರಾಗಿದ್ದ ಎ. ಮೊಹಮ್ಮದ್ ಖಾನ್ ಅವರು ಗಿರಿಯಪ್ಪನವರನ್ನು ಸನ್ಮಾನಿಸುವುದಾಗಿ ವ್ಯವಸ್ಥೆ ಮಾಡಲಾಗಿತ್ತು. ಗಿರಿಯಪ್ಪನವರು ನೀಟಾದ ಸೂಟು ಟೈಗಳಲ್ಲಿ ಮಿಂಚುತ್ತಿದ್ದರು. ನಿಸಾರರು, ತಮ್ಮ ಎಂದಿನ ತಿಳಿಯಾದ ಹಾಸ್ಯಭರಿತ ಶೈಲಿಯಲ್ಲಿ ಸ್ವಾಗತ ಕೋರಿದರು. ನಾಗಬಸಪ್ಪನವರಂತೂ ಗಿರಿಯಪ್ಪನವರಂಥ ಪ್ರಾಮಾಣಿಕ ಹಾಗೂ ನೇರ ನಡೆ ನುಡಿಗಳ ಸಮರ್ಥ ಉಪನ್ಯಾಸಕರು ಕಣ್ಣಲ್ಲಿ ಕಣ್ಣಿಟ್ಟು

ಹುಡುಕಿದರೂ ನಮ್ಮ ವಿಶ್ವವಿದ್ಯಾಲಯದಲ್ಲಿ ಸಿಕ್ಕುವುದಲ್ಲ ಎಂದು 'ವಾಚಾಮಾಗೋಚರ'ವಾಗಿ ಹೊಗಳಿದರು. ಅವರ ಅಗಲಿಕೆಯಿಂದ ವೈಯಕ್ತಿಕವಾಗಿ ತಮಗೆ ಆಗಿರುವ ನೋವು ಮತ್ತು ಬೇಸರವನ್ನು ಮಾತುಗಳಿಂದ ಬಣ್ಣಿಸಲು ಅಸದಳ, ಹಾಗೆ ಹೀಗೆ—ಎಂದು ಸುಮಾರು ಸಮಯ ಗುಣಗಾನ ಮಾಡಿದರು. ಅವರ ಕಣ್ಣಂಚಿನಲ್ಲಿ ಹನಿಗಳು ಮೂಡಿ, ಗಂಟಲು ಗದ್ಗದವಾಗಿತ್ತು.

ಎ. ಮೊಹಮ್ಮದ್ ಖಾನ್ ಅವರು ಗಿರಿಯಪ್ಪನವರನ್ನು ಸನ್ಮಾನಿಸಲು ಮುಂದಾದಾಗ ಗಿರಿಯಪ್ಪ ಎದ್ದುನಿಂತು 'ನಿಮಗೆಲ್ಲ ಅನಂತಾನಂತ ಧನ್ಯವಾದಗಳು. ನೀವು ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಗಳಿಗೆ ಮಾರು ಹೋಗಿದ್ದೇನೆ. ನನ್ನ ಸಹೋದ್ಯೋಗಿಗಳು ನನ್ನ ವರ್ಗದ ವಿಷಯ ತಿಳಿದಾಗ ತುಂಬಾ ಬೇಜಾರು ಮತ್ತು ನೋವನ್ನು ತೋಡಿಕೊಂಡರು. ಅವರನ್ನು ನಾನು ಅಗಲುತ್ತಿರುವುದರಿಂದ ಅವರ ವೃತ್ತಿ ಜೀವನದಲ್ಲಿ ಒಂದು ಬಗೆಯ ಶೂನ್ಯ ಕವಿದಿದೆ ಎಂದರು. ಇಂತಹ ಸಜ್ಜನ ಸಹೋದ್ಯೋಗಿಗಳನ್ನು ಬಿಟ್ಟು ಹೋಗುವುದು ನನಗೂ ತುಂಬಾ ನೋವಿನ ವಿಚಾರ. ಅವರಿಗೆ ದುಃಖವನ್ನು ಉಂಟು ಮಾಡಲು ನನಗೆ ಯಾವ ಅಧಿಕಾರವಿದೆ? ಅವರ ಜೊತೆಯನ್ನು ಬಿಟ್ಟು ಹೋಗಲೇಬಾರದು ಎನ್ನಿಸುತ್ತಿದೆ. ಅಲ್ಲದೆ, ನನ್ನ ಪ್ರಿಯ ವಿದ್ಯಾರ್ಥಿಮಿತ್ರ ಮತ್ತು ಮೆಚ್ಚಿನ ಸಹೋದ್ಯೋಗಿ ನಾಗಬಸಪ್ಪ ನನ್ನ ಈ ಸಮಾರಂಭದ ಏರ್ಪಾಟಿಗೆ ನಾಲ್ಕೈದು ದಿನಗಳಿಂದ ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ಈಗಷ್ಟೇ ಮಾತನಾಡುತ್ತ ತಮ್ಮ ದುಃಖದ ಭಾವನೆಯನ್ನು ತಾಳಲಾರದೆ ಅತ್ತುಬಿಟ್ಟರು. ಪಾಪ, ನನ್ನ ದೆಸೆಯಿಂದ ಅವರು ಯಾಕೆ ನರಳಬೇಕು? ಇವೊತ್ತಿನ ಈ ಶಾಲು, ಫಲ ತಾಂಬೂಲ, ನೆನಪಿನ ಕಾಣಿಕೆಗಳಿಗೆ ನಾನು ಎಷ್ಟು ಅರ್ಹನೋ ಗೊತ್ತಿಲ್ಲ. ಇವೆಲ್ಲಾ ಸಲ್ಲಬೇಕಾದದ್ದು ನನಗಲ್ಲ, ನಾಗಬಸಪ್ಪನಿಗೆ'—ಎಂದು ಮೊಹಮ್ಮದ್ ಖಾನರ ಕೈಯಿಂದ ಶಾಲು, ಹಾರಗಳನ್ನು ತೆಗೆದುಕೊಂಡು ನಾಗಬಸಪ್ಪನವರಿಗೆ ಹಾಕಿದರು. ನಾವೆಲ್ಲ ಅವಾಕ್ಕಾದೆವು. ಗಿರಿಯಪ್ಪನವರ ಈ ವರ್ತನೆ ಎಷ್ಟು ಸರಿ ಎಂದು ನಮ್ಮನಮ್ಮಲ್ಲೇ ಗುಸುಗುಸು ಮಾತಾಡಿಕೊಂಡು ಅಸಮಾಧಾನಪಟ್ಟೆವು. ಗಿರಿಯಪ್ಪನವರು ತಮ್ಮ ಕೋಟಿನ ಒಳ ಕಿಸೆಗೆ ಕೈ ಹಾಕಿ ಒಂದು ಕಾಗದವನ್ನು ತೆಗೆದು ಸಾವಕಾಶವಾಗಿ ಓದುತ್ತಾ ಹೋದರು. ನಾವು ದಂಗುಬಡಿದವರಂತೆ ಕೂತಿದ್ದೆವು. ನಾಗಬಸಪ್ಪನವರ ಮುಖ ಬಿಳಿಚಿಹೋಗಿತ್ತು. ಗಿರಿಯಪ್ಪನವರು ತಮ್ಮ ವರ್ಗಾವಣೆ ರದ್ದಾದ ಸರ್ಕಾರಿ ಆದೇಶದ ಮುಂಗಡ ಪ್ರತಿಯನ್ನು ಮಡಚಿ ಜೇಬಿನಲ್ಲಿಡುತ್ತ 'ಈ ಅಡ್ವಾನ್ಸ್ ಕಾಪಿಯನ್ನು ನನಗೆ ಗುರುತಿರುವವರು ವಿಧಾನ ಸೌಧದಿಂದ ತಂದುಕೊಟ್ಟರು. ನಾಳೆ ಇದರ ಮೂಲ ಪ್ರತಿ ನಮ್ಮ ಮಾನ್ಯ ಪ್ರಿನ್ಸಿಪಾಲರಿಗೆ ಬರುತ್ತದೆ. ನನ್ನ ಬದಲು ನಾಗಬಸಪ್ಪನವರಿಗೆ ಶಿವಮೊಗ್ಗೆಗೆ ಟ್ರಾನ್ಸ್‌ಫರ್ ಆಗಿದೆ' ಎಂದರು. ಮುಂದೆ ಹೇಳುವುದೇನಿದೆ? ಈ ಘಟನೆಯಿಂದ ನಗಬೇಕೋ ಅಳಬೇಕೋ ಎನ್ನುವುದು ಅಲ್ಲಿದ್ದ ಯಾರಿಗೂ ತಿಳಿಯಲಿಲ್ಲ!



ಸಹೃದಯಿ ಸಹೋದ್ಯೋಗಿ ಯೊಂದಿಗಿನ ಸವಿ ಸ್ಮರಣೆಗಳು

◆ *ಪ್ರೊ. ಜೆ. ಎಸ್. ಪರಶಿವ ಮೂರ್ತಿ*
(ಸಹೋದ್ಯೋಗಿ)

ಪ್ರಸಿದ್ಧಿಯ ಉತ್ತುಂಗ ಶೃಂಗದಲ್ಲಿರುವವರನ್ನು ಕುರಿತು ಎಂದೋ ಅವರ ಜೊತೆಗಿದ್ದ ಅನಾಮಿಕ ವ್ಯಕ್ತಿ ನಾಲ್ಕು ಮಾತು ಬರೆಯುವುದು ಸುಲಭದ ಕೆಲಸವಲ್ಲ. ೧೯೬೦ರಲ್ಲಿ ನಾನು, ಇಂದು ಕರ್ನಾಟಕದ ಕವಿಗಳ ಸಹ ಪಂಕ್ತಿಯಲ್ಲಿ ಕುಳಿತಿರುವ ಶ್ರೇಷ್ಠ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಸಹೋದ್ಯೋಗಿ ಹೌದು. ನನ್ನ ಎಪ್ಪತ್ತು ವರ್ಷಗಳ ಜೀವನದಲ್ಲಿ ಎದುರಾದ, ಹತ್ತಿರ ಬಂದ ಸಾವಿರಾರು ಜನರಲ್ಲಿ ಇದುವರೆಗೂ ನನ್ನಿಂದ ದೂರವಾಗದೆ ಉಳಿದಿರುವ ಬೆರಳೆಣಿಕೆಯ ವ್ಯಕ್ತಿಗಳ ಸಾಲಿನಲ್ಲಿ ಪ್ರೊ. ನಿಸಾರ್ ಅಹಮದ್ ಕೂಡ ಒಬ್ಬರು. ಈ ಜೀವನದ ಸಂಧ್ಯೆಯಲ್ಲೂ 'ಏನಯ್ಯಾ-ಬಾರಯ್ಯ' ಸ್ನೇಹ ಉಳಿಸಿಕೊಂಡಿರುವವರು ನಾವು. ಬಹುಶಃ ನಮ್ಮ ಈ ಸ್ನೇಹವನ್ನು ತಿಳಿದ ಶ್ರೀ ನಿಸಾರ್ ಅವರ ಅಭಿನಂದನ ಗ್ರಂಥ ಸಮಿತಿಯ ಮಿತ್ರರು ನನ್ನನ್ನು ಸಂಪರ್ಕಿಸಿ 'ಚಿತ್ರದುರ್ಗ ಕಾಲೇಜಿನಲ್ಲಿ ನೀವು ಅವರ ಸಹೋದ್ಯೋಗಿ. ಅವರನ್ನು ಹತ್ತಿರದಿಂದ ಬಲ್ಲಿರಿ. ಇಷ್ಟು ದಿನ ಅವರ ಮಿತ್ರರಾಗಿ ಉಳಿದಿದ್ದೀರಿ; ಆತ್ಮೀಯತೆಯನ್ನು ಇಟ್ಟುಕೊಂಡಿದ್ದೀರಿ. ಆದ್ದರಿಂದ ಅಂದಿನ ಕಾಲೇಜು ಜೀವನದ ಬಗೆಗೆ ನಾಲ್ಕು ಮಾತು ಬರೆದು ಕೊಡಿ' ಎಂದು ವಿನಂತಿಸಿದರು. ಸುಮಾರು ಒಂದು ತಿಂಗಳು ಮೌನಿಯಾದೆ. ಆದರೆ ಅವರು ಬಿಡುವಂತೆ ತೋರಲಿಲ್ಲ. ಹಾಗಾಗಿ ಈ ಅನುಭವ ಕಥನ.

೧೯೫೯ರಲ್ಲಿ ಇಡೀ ಕರ್ನಾಟಕದಲ್ಲಿದ್ದ ೧೦-೧೧

ಸರ್ಕಾರಿ ಕಾಲೇಜುಗಳಲ್ಲಿ ಚಿತ್ರದುರ್ಗದ ಕಾಲೇಜೂ ಒಂದು. ಕಾಲೇಜು ಎರಡು ವರ್ಷದ ಇಂಟರ್, ಎರಡು ವರ್ಷದ ಡಿಗ್ರಿ ಪದ್ಧತಿಯಿಂದ ಒಂದು ವರ್ಷದ ಪಿ.ಯು.ಸಿ., ಮೂರು ವರ್ಷದ ಡಿಗ್ರಿ ಕಾಲೇಜಾಗಿ ಪರಿವರ್ತಿತವಾಗಿತ್ತು. ಕಾಲೇಜಿಗೆ ಎರಡು ಸೀಳುಗಳು. ಒಂದು ಊರ ಮುಂದಿನ ರಂಗಯ್ಯನ ಬಾಗಿಲ ಬಳಿಯ ಕೋಟೆಯ ಹೊರ ಭಾಗದಲ್ಲಿಯ ಹಳೆಯ ಕಟ್ಟಡ, ಮತ್ತೊಂದು ಸೀಳು ದುರ್ಗದ ಸೀರಾ ಕಡೆಯಿಂದ ಬರುವ ಟೋಲ್‌ಗೇಟ್ ಬಳಿಯ ಹೊಸ ಕಟ್ಟಡ. ಎರಡೂ ಕಡೆ ತರಗತಿಗಳು ನಡೆಯುತ್ತಿದ್ದುವು. ಒಂದು ಕಡೆ ಚಿತ್ರದುರ್ಗದ ಕೋಟೆ ಹಿನ್ನೆಲೆಯಾಗಿದ್ದರೆ ಮತ್ತೊಂದು ಕಡೆ ಚಿತ್ರದುರ್ಗದ ಬೆಟ್ಟಗಳ ಹಿನ್ನೆಲೆ. ಆಗಿನ್ನೂ ಚಿತ್ರದುರ್ಗ ಬೆಳೆದಿರಲಿಲ್ಲ. ಕರ್ನಾಟಕದ ಮ್ಯಾಂಚೆಸ್ಟರ್ ಎನ್ನಿಸಿಕೊಂಡಿದ್ದ ದಾವಣಗೆರೆ ನಗರದ ಸ್ಥಾನಮಾನವನ್ನು ಹೊಂದಿತ್ತು. ಜಿಲ್ಲಾ ಕೇಂದ್ರವಾಗಿದ್ದರಿಂದ ಜಿಲ್ಲೆಯ ಎಲ್ಲ ಹಿರಿಯ ಅಧಿಕಾರಿಗಳು ಮತ್ತು ಅವರ ಕಛೇರಿಗಳು ದುರ್ಗದಲ್ಲಿದ್ದುವು. ಆಗಿನ ಅತಿ ಗಣ್ಯರ ಪಂಕ್ತಿಯಲ್ಲಿ ಸರಿ ಗಣನೆಗೆ ಪಾತ್ರರಾದವರಲ್ಲಿ ಕಾಲೇಜು ಅಧ್ಯಾಪಕರೂ ಇದ್ದರು. ಸಾಮಾನ್ಯ ಜನರಲ್ಲಿ ಗಣ್ಯರು ವ್ಯವಹಾರ ಇಟ್ಟುಕೊಳ್ಳಬಾರದಾಗಿದ್ದುದರಿಂದ ಜಿಲ್ಲೆಯ ಅಧಿಕಾರಿಗಳಿಗೆ ನಾವು ಮಿತ್ರರು, ಅವರು ನಮಗೆ ಮಿತ್ರರು. ಇದ್ದ ಒಂದು ಅಧಿಕಾರಿಗಳ ಕ್ಲಬ್ಬಿನಲ್ಲಿ ಸಂಜೆಯ ಕಾಲಯಾಪನೆ. ಟೆನಿಸ್, ಕೇರಂ, ಬಿಲಿಯರ್ಡ್ಸ್, ಇಲ್ಲವೇ ಆಯ್ದ ಕೆಲವರು ಇಸ್ಪೀಟು ಆಡುತ್ತಿದ್ದರು. ದೋಸೆ, ವಡೆ, ಕಾಫಿ, ಟೀ ಸಮಾರಾಧನೆ. ಆಗ ನಮ್ಮ ಅಧ್ಯಾಪಕರಲ್ಲಿ ಬಹಳ ಜನ ಅವಿವಾಹಿತರು. ಆಗಾಗ ಕದ್ದು ಕದ್ದು ರಾತ್ರಿ ಎರಡನೆಯ ಷೋ ಸಿನಿಮಾ ನೋಡುವುದು. ರೇಡಿಯೋ ಬಿಟ್ಟರೆ ಬೇರೆ ಮನರಂಜನೆ ಇಲ್ಲ. ಆದರೆ ಅದೂ ಕೂಡ ಎಲ್ಲರಿಗೂ ಅಲಭ್ಯ; ಸ್ಥಿತಿವಂತರ ಲಕ್ಷುರಿ. ನಾವೆಲ್ಲ ಹೊಸಬರಾಗಿದ್ದುದರಿಂದ ತರಗತಿಗಳಿಗೆ ಹಲವು ಗ್ರಂಥಗಳನ್ನು ಓದಿ ಸಿದ್ಧರಾಗಬೇಕಾಗಿತ್ತು.

ಶ್ರೀ ನಿಸಾರ್ ಅಹಮದ್ ಅವರು ಭೂವಿಜ್ಞಾನದ ಅಧ್ಯಾಪಕರಾಗಿ ಬೆಂಗಳೂರಿಂದ ವರ್ಗವಾಗಿ ೧೯೬೦ರಲ್ಲಿ ದುರ್ಗಕ್ಕೆ ಬಂದರು. ಅವರು ಪ್ರಸಿದ್ಧ ಸೆಂಟ್ರಲ್ ಕಾಲೇಜು ವಿದ್ಯಾರ್ಥಿ. ನಾನು ಮೈಸೂರು ಮಹಾರಾಜ ಕಾಲೇಜಿನಿಂದ ಬಂದವನು. ನಿಸಾರ್ ಆಗಲೆ ಕವಿಯಾಗಿದ್ದುದರಿಂದ ಸಹಜವಾಗಿ ಸಾಹಿತ್ಯ ವಿಷಯಗಳ ಉಪನ್ಯಾಸಕರ ಸಖ್ಯವಾಯಿತು. ಅವರ ಚೊಚ್ಚಲ ಕವನ ಸಂಗ್ರಹ 'ಮನಸು ಗಾಂಧಿ ಬಜಾರು' ವರ್ಷದ ಹಿಂದೆ ಪ್ರಕಟವಾಗಿ, ಅದರ ಒಂದು ಪ್ರತಿಯನ್ನು ನನಗೆ ನೀಡಿದ್ದರು. ಅಲ್ಲದೆ, ಅವರೂ ನಮ್ಮಂತೆ ಬ್ರಹ್ಮಚಾರಿ ಗುಂಪಿಗೆ ಸೇರಿದವರು, ನಮ್ಮಂತೆ 'ಲೋಕಲ್ ಕ್ಯಾಂಡಿಡೇಟ್ಸ್' ವರ್ಗಕ್ಕೆ ಸೇರಿದವರು. ಆಗ ಕಾಲೇಜು ಅಧ್ಯಾಪಕರನ್ನೆಲ್ಲ ಕರ್ನಾಟಕ ಸಾರ್ವಜನಿಕ ಸೇವಾ ಆಯೋಗದವರೇ ಆಯ್ಕೆ ಮಾಡುತ್ತಿದ್ದರು. ಏನು ಕಾರಣವೋ, ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ಖಾಯಂ ಅಧ್ಯಾಪಕರ ಆಯ್ಕೆಯ ಕ್ರಿಯೆ ನಡೆಯದೆ ಲೋಕಲ್ ಕ್ಯಾಂಡಿಡೇಟ್‌ಗಳ ನೇಮಕ ಜಾರಿಗೆ ಬಂದಿತ್ತು. ಆಗ ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿತ್ತು. ಚಿತ್ರದುರ್ಗ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಅರುವತ್ತು ಜನರಲ್ಲಿ ನಲವತ್ತಕ್ಕಿಂತ ಹೆಚ್ಚು ಜನ ಈ 'ಲೋಕಲ್ ಕ್ಯಾಂಡಿಡೇಟ್'ಗಳು. ಜೂನ್ ತಿಂಗಳಲ್ಲಿ ನೇಮಕ, ಮಾರ್ಚ್ ಕೊನೆಯ ದಿನ ಬಿಡುಗಡೆ. ಇದು ಪುನರಾವರ್ತನೆಯಾಗುತ್ತಿತ್ತು.

ಎಲ್ಲರಿಗೂ ತಿಂಗಳಿಗೆ ಇನ್ನೂರು ರೂಪಾಯಿ ಸಂಬಳ! ನಮಗಿಂತ ಹಿಂದೆ ನೂರ ಎಂಭತ್ತಿತ್ತಂತೆ. ವರ್ಷಕ್ಕೆ ಹತ್ತು ರೂ. ಸಂಬಳ ಬಡ್ತಿ, ಅದೂ ಖಾಯಂ ಅಧ್ಯಾಪಕರಿಗೆ ಮಾತ್ರ.

ನಮ್ಮ ಕಾಲೇಜಿನ ಪ್ರಿನ್ಸಿಪಾಲರು ಪ್ರೊ. ಎಸ್. ಎಲ್. ರಾಮರಾವ್. ಮೂಲತಃ ಬೆಂಗಳೂರಿನವರು. ವಾಣಿಜ್ಯ ಶಾಸ್ತ್ರದ ಮಾಸ್ಟರ್ ಪದವಿಯನ್ನು ಲಂಡನ್ನಿನ ಪ್ರತಿಷ್ಠಿತ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಪಡೆದು ಬಂದಿದ್ದರು. ಎತ್ತರದ, ಪರಂಗಿಯವರನ್ನೂ ಮೀರಿಸಿದಂತೆ ಕೆಂಪಗಿದ್ದ, ಅದಕ್ಕಿಂತ ಹೆಚ್ಚಾಗಿ ಇಂಗ್ಲಿಷರಿಗೇ ಇಂಗ್ಲಿಷ್ ಹೇಳಿಕೊಡುವಷ್ಟು ಭಾಷಾ ಪ್ರೌಢಿಮೆಯನ್ನು ಹೊಂದಿದ್ದರು. ಅವರು ಗೃಹಸ್ಥರಾದರೂ ದುರ್ಗದಲ್ಲಿ ಒಂಟಿ. ಅವರ ಮನೆ ಸಂಜೆ ಹೊತ್ತು ಕ್ಲಬ್ಬಾಗಿ ಮಾರ್ಪಾಡಾಗುತ್ತಿತ್ತು. ಇಸ್ಪೀಟು ಆಡುವುದು ಗೊತ್ತಿದ್ದ ಹಿರಿಯ ಕಿರಿಯ ಅಧ್ಯಾಪಕರೆಲ್ಲ ಅಲ್ಲಿ ಸೇರುತ್ತಿದ್ದರು. ಲೆಕ್ಕ ಬರೆದುಕೊಂಡು ಇಸ್ಪೀಟು ಆಡುತ್ತಿದ್ದರು. ಆಗಾಗ ಮಂಡಕ್ಕಿ, ವಡೆ, ಪಕೋಡ, ಕಾಫಿ, ಟೀಗಳ ಉಪಚಾರ. ಆದರೆ ಕಾಲೇಜಿನಲ್ಲಿ ಮಾತ್ರ ಮಹಾ ಶಿಸ್ತಿನ ಮನುಷ್ಯ. ಕಿರಿಯ ಅಧ್ಯಾಪಕರಿಗೆ ಮುಕ್ತವಾದ ಸಹಾಯ, ಪ್ರೋತ್ಸಾಹ ಧಾರಾಳವಾಗಿ ದೊರೆಯುತ್ತಿತ್ತು. ಅಂದು ನಮ್ಮ ಜೊತೆ ಇದ್ದ ಹಲವು ಹಿರಿಯ ಕಿರಿಯ ಅಧ್ಯಾಪಕರನ್ನು ಸ್ಮರಿಸಿಕೊಳ್ಳಲೇಬೇಕು. ಇವರಲ್ಲಿ ಕೆಲವರು ನಮ್ಮನ್ನು ಅಗಲಿದ್ದಾರೆ. ಎಚ್. ಜಿ. ಸೂರ್ಯನಾರಾಯಣರಾವ್, ಕೆ. ಚಂದ್ರಶೇಖರರಾವ್, ಸೇತೂರಾವ್, ಕೆ. ಶ್ರೀನಿವಾಸನ್, ಬಗರೆ, ತೇಲ್ಕರ್, ಪಾಲಯ್ಯ, ಸುಬ್ಬರಾವ್, ವಸಂತ ಕುಮಾರ್, ಜಿ. ಗುಂಡಣ್ಣ, ನಾಗೇಂದ್ರಪ್ಪ, ಮರಿಸ್ವಾಮಿ, ಪರಮೇಶ್ವರಪ್ಪ, ಅಬ್ದುಲ್ ಜಲೀಲ್, ಸಿ. ಮಹಾದೇವ ಶಂಕರಪ್ಪ, ನಾಗಪ್ಪ, ಶ್ರೀರಾಮರೆಡ್ಡಿ, ಜಯಶೇಖರ್, ಎಸ್. ಆರ್. ವಿಜಯ್, ವೈ. ಆರ್. ಮೋಹನ್, ಶಿವಶಂಕರ ಪಿಳ್ಳೆ, ದಾಸಪ್ಪ, ಶಿವಪ್ಪ, ಗೋವಿಂದೇಗೌಡ ಮುಂತಾದವರು.

ಅಲ್ಲಿನ ಮದಕರಿ ನಾಯಕರ ಕೋಟೆ, ಮುರುಘರಾಜೇಂದ್ರ ಮಠ, ಅಂಕಳಿ ಮಠ, ಚಂದ್ರವಳ್ಳಿ ನಿವೇಶನ; ಶ್ರೀ ಎಸ್. ನಿಜಲಿಂಗಪ್ಪ, ಕೊಂಡಜ್ಜಿ ಬಸಪ್ಪ, ಪ್ರಸಿದ್ಧ ವಕೀಲ ಓ. ವೀರಬಸಪ್ಪ, ಭೀಮಪ್ಪ ನಾಯಕ ಇವರುಗಳಿಂದ ಚಿತ್ರದುರ್ಗ, ಜನತೆಗೆ ಪರಿಚಿತವಾಗಿತ್ತು. `ಲೋಕಲ್ಸ್' ಅಧ್ಯಾಪಕರಲ್ಲಿ ಬಹು ಮಂದಿ ಇಪ್ಪತ್ತನಾಲ್ಕರಿಂದ ಮೂವತ್ತರ ಮಧ್ಯಮ ವಯಸ್ಸಿನವರು. ಅಂದಿನ ಅಧ್ಯಾಪಕರ ಕೊಠಡಿ ಸ್ಮರಣೀಯ. ತರಗತಿ ಮುಗಿಸಿ ಬಂದವರು ಸಿಗರೇಟು ಸೇದುತ್ತ, ತರಗತಿಗೆ ಹೋಗುವವರು ಪುಸ್ತಕ, ನೋಟ್ಸ್ ಜೋಡಿ ಸಿಟ್ಟುಕೊಳ್ಳುತ್ತ, ಮುಂದಿನ ತರಗತಿಗೆ ಹೋಗುವವರು ಮೂಲೆ ಕುರ್ಚಿಯಲ್ಲಿ ಕುಳಿತು ಇಂಗ್ಲಿಷ್ ಮಾಧ್ಯಮದ ಬೋಧನೆಗೆ ಬಾಯಿಪಾಠ ಮಾಡಿಕೊಳ್ಳುತ್ತ ಕಣ್ಮುಚ್ಚಿ ಮಂತ್ರ ಜಪಿಸುವಂತೆ ತುಟಿ ಅಲುಗಿಸುತ್ತಿದ್ದ ದೃಶ್ಯ ರಮಣೀಯ ಮಾತ್ರವಲ್ಲ, ನಗೆ ಉಕ್ಕಿಸು ವಂಥದು. ಆದರೆ ಈ ಎಲ್ಲ ಪೀಡೆಗಳಿಂದ ಕೊಂಚ ದೂರ ಇದ್ದವರು ಕನ್ನಡ ವಿಭಾಗದವರು. ಇವರೂ ಕೂಡ ಒಮ್ಮೊಮ್ಮೆ ಅರ್ಥಗಳಿಗಾಗಿ ತಡಕಾಡುತ್ತ, ವಿದ್ಯಾರ್ಥಿಗಳು ಕೇಳಬಹು ದಾಗಿದ್ದ ಪ್ರಶ್ನೆಗಳಿಗೆ ಸಿದ್ಧವಾಗುತ್ತಿದ್ದ ದೃಶ್ಯ ಎದುರಾಗುತ್ತಿತ್ತು. ಇಂತಹ ತುಂಟ ಅಧ್ಯಾಪಕರ ಗುಂಪಿಗೆ ಹೊಸ ಸೇರ್ಪಡೆಯಾಗಿ ಬಂದವರು ಶ್ರೀ ಕೆ. ಎಸ್. ನಿಸಾರ್ ಅಹಮದ್. ಭೂ

ವಿಜ್ಞಾನ ವಿಭಾಗಕ್ಕಿಂತ ಕನ್ನಡ ವಿಭಾಗಕ್ಕೆ ಹತ್ತಿರವಾಗಿದ್ದವರು. ಅವರದು ಏಕವ್ಯಕ್ತಿ ಚಕ್ರಾಧಿಪತ್ಯ, ಎಂದರೆ ಅವರ ಇಲಾಖೆಯ 'ಹೆಡ್', 'ಟೈಲ್' ಎಲ್ಲಾ ಅವರೇ! ಅವರಿಗೆ ತಕ್ಕ ಶಿಷ್ಯ ಅಟೆಂಡರ್ ನೀಲಕಂಠ. ನಾವು ಬಹುತೇಕ ಸಮ ವಯಸ್ಕರಾಗಿದ್ದುದರಿಂದ 'ಏನಯ್ಯಾ, ಬಾರಯ್ಯಾ, ಏನೋಮ್ಮಾ, ಬ್ರದರ್' ಸಂಬೋಧನೆಗಳೇ ಹೆಚ್ಚು. ಇದರಿಂದಾಗಿ ಆತ್ಮೀಯತೆ ಹೆಚ್ಚಿತ್ತು. ನಿಸಾರರು ಅಧ್ಯಾಪಕರಿಗೆ ಹೆಚ್ಚು ನಿಕಟವಾಗಲು ಕಾರಣ ಇಲಾಖೆಯಲ್ಲಿದ್ದ ಅವರ ಕೋಣೆ ವಿಶಾಲವಾಗಿದ್ದುದರಿಂದ ಮತ್ತು ಅವರೊಬ್ಬರೇ ಇದ್ದುದರಿಂದ ಬಿಡುವಿನ ವೇಳೆಯಲ್ಲಿ ನಮಗೆ ಅದು ಅನಧಿಕೃತ ಸ್ಟಾಫ್ ರೂಂ ಆಗಿದ್ದುದು.

ಆಗಿನ ಕಾಲೇಜುಗಳ ಅಧ್ಯಾಪಕರೆಂದರೆ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿರುತ್ತಿದ್ದರು. ಹಿಂದಿನ ಒಂದೆರಡು ವರ್ಷವಷ್ಟೇ ಹುಡುಗರಲ್ಲಿ ಮಹಾ ತುಡುಗರಾಗಿ ಅಧ್ಯಾಪಕರನ್ನು ಗೋಳು ಹೊಯ್ದುಕೊಳ್ಳುತ್ತಿದ್ದವರು ಮಾಸ್ಟರ್ಸ್ ಪದವಿ ಪಡೆದು ಅಧ್ಯಾಪಕ ಎಂಬ ಆದೇಶ ಪಡೆಯುತ್ತಿದ್ದಂತೆ ಪೂರ್ತಿ ಬದಲಾಗಬೇಕಿತ್ತು. ವೇಷ ಭೂಷಣಗಳಲ್ಲಿ, ನಡೆ ನುಡಿಯಲ್ಲಿ, ಆಚಾರ ವಿಚಾರಗಳಲ್ಲಿ, ಊಟ ತಿಂಡಿಗಳಲ್ಲಿ ಈ ವ್ಯತ್ಯಾಸ ಎದ್ದು ಕಾಣಬೇಕಿತ್ತು. ಹೀಗಾಗಿ ಬಹುಪಾಲು ಅಧ್ಯಾಪಕರು ಸೂಟುಧಾರಿಗಳು. ಒಮ್ಮೊಮ್ಮೆ ಕೆಲವರು ಟೈ ಕಟ್ಟದೆಯೂ ಇರುತ್ತಿದ್ದರು. ಬೆಳಗ್ಗೆ ಹಾಕಿದ ಸೂಟು, ಬೂಟು, ಟೈಗಳು ಚಿತ್ರದುರ್ಗದಂತಹ ಉರಿಯ ಉಗ್ರಾಣದಲ್ಲೂ ಸಂಜೆಯ ತನಕ ಅನಿವಾರ್ಯವಾಗಿದ್ದವು. ಶ್ರೀ ನಿಸಾರ್ ನಮ್ಮ ಸರ್ ಎಂ.ವಿ.ಯವರಂತೆ ಎಂದೂ ಸೂಟು ಟೈ ಇಲ್ಲದೆಯೇ ಸಾರ್ವಜನಿಕವಾಗಿ ಕಾಣಿಸಿಕೊಂಡದ್ದೇ ಇಲ್ಲ. ನಮ್ಮೆಲ್ಲರಂತೆ ಅವರೂ ತರುಣರು. ಕೆಂಪಗೆ ನಕ್ಕಾಗ ಕುಳಿ ಬೀಳುವ ಕೆನ್ನೆ ಹೊಂದಿದ್ದ ಇವರು, ಸಿನಿಮಾ ನಟರಂತೆ ಆಕರ್ಷಕ ವ್ಯಕ್ತಿಯಾಗಿದ್ದರು. ಅದೃಷ್ಟವೋ ದುರದೃಷ್ಟವೋ ಇವರ ಆಯ್ಕೆಯ ವಿಷಯ ಭೂ ವಿಜ್ಞಾನ. ಅಂದಿನ ದಿನಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅಚ್ಚುಮೆಚ್ಚಿನ ವ್ಯಾಸಂಗದ ಆಯ್ಕೆಯ ವಿಷಯ ಸಿ.ಬಿ.ಜಡ್. (ಕೆಮಿಸ್ಟ್ರಿ-ಬಾಟನಿ-ಜೂಆಲಜಿ). ಸುಂದರ ತರುಣ ತರುಣಿಯರೆಲ್ಲ ಈ ತರಗತಿಗಳಿಗೆ ಮುಗಿಬೀಳುತ್ತಿದ್ದರು. ಹೀಗಾಗಿ ನಮ್ಮ ನಟ ನಿಸಾರ್‌ನ ಬೆನ್ನು ಬಿದ್ದ ಹುಡುಗಿಯರು ನಮಗೆ ಗೊತ್ತಾಗಲಿಲ್ಲ!

ಚಿತ್ರದುರ್ಗದ ಏಳು ಸುತ್ತಿನ ಕೋಟೆ ಸುಪ್ರಸಿದ್ಧ. ಅಲ್ಲಿನ ಇಂಗಳದಾಳು, ಜೋಗಿ ಮಟ್ಟಿ, ಮಾರಿ ಕಣಿವೆ, ಮುರುಘಾ ಮಠ, ಬೆಟ್ಟ—ಇವು ಪ್ರಖ್ಯಾತ. ನಿಸಾರರು ಓದಿದ ವಿಷಯ ಭೂ ವಿಜ್ಞಾನ—ಅಂದರೆ ಶಿಲಾಶಾಸ್ತ್ರ ಮತ್ತು ಅದರೊಳಗಿನ ಖನಿಜಗಳ ಕುರಿತಾದ ವಿಷಯಗಳು. ಬಹುಪಾಲು ಜನ ತಾವು ಓದಿದ ವಿಷಯದಂತೆಯೇ ಮನೋವೃತ್ತಿಯನ್ನು ಬೆಳೆಸಿಕೊಂಡಿರುತ್ತಾರೆ. ಇವರು ಅದಕ್ಕೆ ತದ್ವಿರುದ್ಧ. ನಿಸಾರ್ ಅತ್ಯಂತ ಮೃದು ಹೃದಯ ಹೊಂದಿರುವವರು, ಮಗುವಿನಂತಹ ಮನಸ್ಸು, ಕಳಂಕವಿಲ್ಲದ ತುಂಬು ನಗೆ, ಬಾಯಿ ತುಂಬ ಅಕ್ಕರೆಯಿಂದ ಮಾತಾಡಿಸುವ ಸಹಜ ಗುಣ; ಸರಳ, ಸಜ್ಜನಿಕೆ; ಅಂತೆಯೇ ಉದಾರಿ, ನಿರ್ಮತ್ಸರ ಸ್ವಭಾವ. ಈ ಎಲ್ಲ ಗುಣಗಳನ್ನು ಹೊಂದಿದ ಕಾರಣದಿಂದಲೇ ಈತ ಮಹಾನ್ ಕವಿಯಾದ, ಸಾಹಿತಿಯಾದ. ನಾನು ಆಗ ಸಾಹಿತ್ಯವನ್ನು ಓದಿ ವಿದ್ಯಾರ್ಥಿಗಳಿಗೆ ಅರ್ಥೈಸಿ ಹೇಳುತ್ತಿದ್ದ ಪ್ರವಾಚಕ ಮಾತ್ರ. ಅಂದು ನಮ್ಮ ಮಧ್ಯೆಯೇ ಈ ಶತಮಾನ ಕಂಡ ಶ್ರೇಷ್ಠ

ಕವಿಗಳಲ್ಲಿ ಒಬ್ಬ ನಮ್ಮ ಪಕ್ಕದ ಕುರ್ಚಿಯಲ್ಲೇ ಕುಳಿತು ಅಜರಾಮರ ಕಾವ್ಯ ರಚಿಸುತ್ತಿದ್ದಾನೆಂಬುದು ನಮಗೆ ಅರಿವಿಲ್ಲದಾಯಿತು. ಕಾಲೇಜಿನಲ್ಲಿ ನಡೆಯುತ್ತಿದ್ದ ವ್ಯಾಸಂಗ ಗೋಷ್ಠಿಯಲ್ಲಿ ನಿಸಾರ್ ಅವರು ತಮ್ಮ 'ಮನಸು ಗಾಂಧಿ ಬಜಾರು' ಕವನ ಸಂಕಲನದಿಂದ ಹಲವು ಪದ್ಯಗಳನ್ನು ನಮಗೆ ವಾಚಿಸಿ ವಿವರಿಸಿದ್ದಾರೆ. ಅವರ ಓದು ಮತ್ತು ವಿವರಣೆ ನಮ್ಮನ್ನು ತೃಪ್ತಿಪಡಿಸಿದ್ದು ಹೌದು.

ಚಿತ್ರದುರ್ಗ ಹಿಂದು-ಮುಸ್ಲಿಮರ ಸಹಬಾಳ್ವೆಯ ತವರು. ಅಲ್ಲಿಯ ಮುಸ್ಲಿಮರು ಉರ್ದುವಿಗಿಂತ ತುಂಬ ಚೆನ್ನಾಗಿ ಕನ್ನಡ ಬರೆದು, ಓದಿ, ಮಾತಾಡುತ್ತಾರೆ. ಅವರಾಡುವ ಕನ್ನಡ ಭಾಷೆ ಮತ್ತು ಅವರು ಹಾಕುವ ವೇಷಭೂಷಣಗಳಲ್ಲಿ ಹಿಂದು-ಮುಸ್ಲಿಮರಿಗೆ ಯಾವ ವ್ಯತ್ಯಾಸವೂ ಇರುತ್ತಿರಲಿಲ್ಲ. ರಹೀಮಣ್ಣ, ರೆಹಮಾನಪ್ಪ, ಇಮಾಮಣ್ಣ, ಫಾತಿಮಾ ಅಕ್ಕ, ನೂರ್‌ಜಹಾನ್ ಅಮ್ಮ—ಹೀಗೆ ಅಪ್ಪ, ಅಮ್ಮ, ಅಕ್ಕ, ತಂಗಿ, ಅಣ್ಣ, ತಮ್ಮ ಸೇರಿಸಿಯೇ ಸಂಬೋಧಿಸುತ್ತಾರೆ. ನಾವೆಲ್ಲ ಬ್ರಹ್ಮಚಾರಿಗಳು ಎಂದು ಮೊದಲೇ ಹೇಳಿದ್ದೆನಷ್ಟೆ? ಮನೆ ಮಾಡಿಕೊಂಡು, ಕೋಣೆಗಳನ್ನು ಬಾಡಿಗೆಗೆ ಪಡೆದು ವಾಸಿಸುತ್ತಿದ್ದೆವು. ಆಗ ತಿಂಗಳಿಗೆ ಮೂವತ್ತು ರೂಪಾಯಿ ಕೊಟ್ಟರೆ ಬೆಳಿಗ್ಗೆ, ರಾತ್ರಿ ಊಟ ಹಾಕುತ್ತಿದ್ದರು. ಒಂದು ರೂಪಾಯಿ ಖರ್ಚು ಮಾಡಿದರೆ ತಿಂಡಿಯಾಗುತ್ತಿತ್ತು. ದಿನವೂ ಹೋಟೆಲಿಗೆ ಹೋಗುತ್ತಿದ್ದ ನಮ್ಮ ಗುಂಪಿನ ಯಾರಿಗಾದರೂ ಆರೋಗ್ಯ ವ್ಯತ್ಯಾಸವಾದರೆ 'ಶ್ಯಾಮಪ್ರಸಾದ್ ಎಕ್ಸ್‌ರೇ ಕ್ಲಿನಿಕ್'ಗೆ ಹೋಗುತ್ತಿದ್ದೆವು. ಅಲ್ಲಿನ ವೈದ್ಯರು ಡಾ. ರಾಮಕೃಷ್ಣ ರೆಡ್ಡಿ. ಇವರ ಸ್ನೇಹಿತರು ವಕೀಲರೂ ರಾಯಲ್ ಮೋಟಾರ್ಸ್ ಮಾಲೀಕರೂ ಆದ (ಆಮೇಲೆ ರಾಜಕಾರಣಿ) ಶ್ರೀ ಸಿ. ಆರ್. ಮೊಹಮ್ಮದ್ ಸೈಫುದ್ದೀನ್, ಮತ್ತು ಅವರ ತಮ್ಮ ಜಹೀರ್‌ಉದ್ದೀನ್. ಕೆಲವು ತಿಂಗಳಲ್ಲೇ ನಿಸಾರ್, ನಾನು, ಜಯಶೇಖರ್, ನಾಗಪ್ಪ ಎಲ್ಲ ಡಾ. ರೆಡ್ಡಿ ಮತ್ತು ಸೈಫುದ್ದೀನ್‌ರ ಸ್ನೇಹಿತರಾದೆವು. ನಾವು ಹೋಟೆಲುಗಳಲ್ಲಿ ತಿನ್ನುವುದು ಇವರಿಗೆ ಗೊತ್ತಿತ್ತು. ಶ್ರೀಮತಿ ರೆಡ್ಡಿಯವರು, ಶ್ರೀಮತಿ ಸೈಫುದ್ದೀನ್ ಅವರು ಆಗಾಗ ಹಬ್ಬದ ನೆಪದಲ್ಲಿ ನಮ್ಮನ್ನೆಲ್ಲ ಮನೆಗೆ ಕರೆದು ಬಗೆ ಬಗೆಯ ಭಕ್ಷ್ಯಗಳನ್ನು ತಯಾರಿಸಿ ಬಡಿಸುತ್ತಿದ್ದರು. ಶ್ರೀಮತಿ ರೆಡ್ಡಿ ಮತ್ತು ಶ್ರೀಮತಿ ಸೈಫುದ್ದೀನ್‌ರವರ ವಾತ್ಸಲ್ಯ, ಸಹೋದರ ಪ್ರೇಮ ನಮ್ಮನ್ನು ಇಂದಿಗೂ ಋಣಿಗಳನ್ನಾಗಿಸಿದೆ. ಶ್ರೀಮತಿ ಸೈಫುದ್ದೀನ್ ಶಾಲಾ ಅಧ್ಯಾಪಕಿ. ಬೆಂಗಳೂರಿನ ಶ್ರೀಮಂತ ಕುಟುಂಬದಿಂದ ಬಂದ ಹೆಣ್ಣುಮಗಳು. ತಂಗಿಯನ್ನೇ ತನ್ನ ದೇವರ್(ಗಂಡನ ತಮ್ಮ)ಗೆ ತಂದು ಕೊಂಡಿದ್ದರು. ಮನೆ ತುಂಬ ಮೈದುನರು, ಮಕ್ಕಳು. ಗಂಡನ ಮನೆಯವರೂ ಅಷ್ಟೇ ಶ್ರೀಮಂತರು; ಬಸ್ ಮಾಲೀಕರು, ಜಮೀನ್ದಾರರು, ಉನ್ನತ ವ್ಯಾಸಂಗ ಮಾಡಿ ವಕೀಲರಾಗಿ ಹೆಸರು ಮಾಡಿದ್ದರು. ಗರ್ವ ಪಡಬೇಕಾದ ಎಲ್ಲ ಅರ್ಹತೆ ಇದ್ದರೂ ನಿಗರ್ವಿಗಳಾಗಿ, ಸಪ್ರೇಮ ವಾತ್ಸಲ್ಯಗಳಿಂದ ಹಬ್ಬಗಳಲ್ಲಿ ಮನೆಗೆ ಕರೆದು ಆತ್ಮೀಯವಾಗಿ ಉಣಬಡಿಸುತ್ತಿದ್ದರು. ಇಂತಹ ಊಟ ಕೂಟಗಳಲ್ಲಿ ನಿಸಾರ್ ಅವರಿಗೆ ಅಗ್ರಸ್ಥಾನ. ಏಕೆಂದರೆ ಇವರು ತ್ರಿಭಾಷಿಗಳು. ಉರ್ದು, ಕನ್ನಡ, ಇಂಗ್ಲಿಷ್‌ಗಳಲ್ಲಿ ನಗೆ ಚಾಟಿಕೆ ಎಬ್ಬಿಸುತ್ತಿದ್ದರು; ಅವು ನಿಜಕ್ಕೂ ಸ್ಮರಣೀಯ ದಿನಗಳು.

ಪ್ರೊ. ನಿಸಾರ್ ಸ್ಕೌಟ್ ಮಾಸ್ಟರ್ ಕೂಡ. ಕಾಲೇಜಿನಲ್ಲಿ ಪ್ರಾಣಿ ವಿಜ್ಞಾನದ

ವಿಭಾಗದ ಮಹಾದೇವ ಶಂಕರಪ್ಪ, ರಸಾಯನ ವಿಜ್ಞಾನದ ಸಿ. ಚಂದ್ರಶೇಖರ ರಾವ್, ಇಂಗ್ಲಿಷ್ ವಿಭಾಗದ ತೇಲ್ಕರ್, ಭೌತ ವಿಜ್ಞಾನದ ವಸಂತ ಕುಮಾರ್, ಭೂ ವಿಜ್ಞಾನದ ನಿಸಾರ್ ಅಹಮದ್, ಅರ್ಥಶಾಸ್ತ್ರದ ಪಾಲಯ್ಯ, ಎಸ್. ಆರ್. ವಿಜಯ್ ಜೊತೆಗೇ ಆಗತಾನೆ ಹೊಸದಾಗಿ ಈ ಜಾತಿಗೆ ಸೇರಿದ ನಾನು ಮತ್ತು ನಾಗಪ್ಪ ಮತ್ತಿತರ ಅಧ್ಯಾಪಕರನ್ನು ಖಾಕಿ ನಿಕ್ಕರ್ ಮತ್ತು ಷರ್ಟುಗಳಲ್ಲಿ ನೋಡುವುದೇ ಒಂದು ಮೋಜು. ಸ್ಕೌಟ್ ಕ್ಯಾಂಪ್‌ಗಳಾದ ಮಾರಿಕಣಿವೆ, ಜೋಗಿಮಟ್ಟಿ, ಹೊಸಪೇಟೆ-ಹಂಪೆಗಳಿಗೆ ವಿದ್ಯಾರ್ಥಿಗಳ ಜೊತೆ ಹೋಗಿ, ಹಾಡಿ ಕುಣಿಯುತ್ತ ನಲಿದ ಪ್ರವಾಸದ ನೆನಪು ಅಳಿಸಲಾರದಂತಹುದು. ಈ ಚಟುವಟಿಕೆಗಳಲ್ಲೆಲ್ಲ ಶ್ರೀ ನಿಸಾರ್ ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರು. ವಾಹನಗಳ ಏರ್ಪಾಟು, ಕ್ಯಾಂಪ್‌ಗೆ ಬೇಕಾದ ಖಾದ್ಯ ಸಾಮಗ್ರಿಗಳ ಸಂಗ್ರಹ, ಕ್ಯಾಂಪಿನ ಕಾರ್ಯಕ್ರಮದ ವೇಳಾಪಟ್ಟಿಯ ಸಿದ್ಧತೆ; ಅಧ್ಯಾಪಕರಿಗೆ, ಅತಿಥಿಗಳಿಗೆ, ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಊಟ ತಿಂಡಿ ತೀರ್ಥಗಳ ಏರ್ಪಾಟು ಮತ್ತು ಪ್ರೇಕ್ಷಣೀಯ ಸ್ಥಳಗಳ ಭೇಟಿಯ ವ್ಯವಸ್ಥೆ—ಈ ಎಲ್ಲ ಕೆಲಸಗಳಲ್ಲಿ ಶ್ರೀ ನಿಸಾರ್ ಅವರು ಮಹಾದೇವ ಶಂಕರಪ್ಪನವರ ಬಲಗೈ ಆಗಿ ದಣಿವಿಲ್ಲದೆ ಕೆಲಸ ಮಾಡುತ್ತಿದ್ದರು.

ಇಂತಹುದೇ ಒಂದು ಕ್ಯಾಂಪಿಗಾಗಿ ಇಂಗಳದಾಳು ತಾಮ್ರದ ಗಣಿ ಪ್ರದೇಶವನ್ನು ನೋಡಲು ನಿಸಾರ್ ಕರೆದುಕೊಂಡು ಹೋಗಿದ್ದರು. ಜಗತ್ತಿನ ಅಪರೂಪದ ತಾಮ್ರಗಣಿಗಳಲ್ಲಿ ಇದೂ ಒಂದು. ತಮ್ಮ ಇಲಾಖಾ ಸಂಬಂಧದಿಂದ ವಿಶೇಷ ಅನುಮತಿಯನ್ನು ಪಡೆದು ಗಣಿಯನ್ನು ತೋರಿಸಿದರು. ಬೇಸರವಿಲ್ಲದೆ ಆಕರ್ಷಕ ರೀತಿಯಲ್ಲಿ ಗಣಿಯ ವಿವಿಧ ಮಜಲುಗಳನ್ನು ಪರಿಚಯಿಸಿಕೊಟ್ಟರು. ಭೂಮಿಯು ರೂಪ ತಾಳಿರುವ ಪದರ ಪದರಗಳನ್ನು ವಿವರಿಸಿದರು. ನಲವತ್ತೈದು ವರ್ಷಗಳಾದರೂ ಈಗ ನೋಡಿದಂತಿದೆ. ಆಗ ಅಲ್ಲಿ ಅಧಿಕಾರಿಗಳಾಗಿದ್ದವರು ಭೂ ವಿಜ್ಞಾನಿಗಳೂ ನಿಸಾರರ ಆಪ್ತಮಿತ್ರರೂ ಆದ ಗುರುರಾಜ ರಾವ್. ಅವರ ವಿನಯವಂತ ನಡವಳಿಕೆ ಮತ್ತು ಗಣಿಗಾರಿಕೆಯ ಬಗೆಗಿನ ಜ್ಞಾನಾಸಕ್ತಿಗಳು ನಿಜಕ್ಕೂ ವಿಸ್ಮಯಗೊಳಿಸಿದ್ದವು. ವಿದ್ಯಾರ್ಥಿಗಳೂ ಸೇರಿದಂತೆ ನೂರೈವತ್ತು ಸಂಖ್ಯೆಯ ನಮ್ಮನ್ನೆಲ್ಲ ಸೊಗಸಾದ ಆದರೋಪಚಾರ ಮಾಡಿದ ಆ ಸದ್ವ್ಯಕ್ತಿ ಈಗ ಎಲ್ಲಿದ್ದಾರೊ!

ಪ್ರೊ. ನಿಸಾರ್ ತುಂಬ ಮೋಹಕ ಭಾಷಣಕಾರರು. ವರ್ಷದಲ್ಲಿ ಮೂರು ಬಾರಿ ಭಾಷಣಕಾರರ ಬೇಡಿಕೆ ತೀವ್ರವಾಗುತ್ತದೆ. ಶಾಲಾಕಾಲೇಜುಗಳ ಸಾಹಿತ್ಯ ಸಂಘಗಳ ಮತ್ತು ವಿದ್ಯಾರ್ಥಿ ಸಂಘಗಳ ಆರಂಭ: ಅಂದರೆ ಜುಲೈ-ಆಗಸ್ಟ್-ಸೆಪ್ಟೆಂಬರ್ ತಿಂಗಳುಗಳು; ಅನಂತರ ಮುಕ್ತಾಯ ಸಮಾರಂಭಗಳು: ಜನವರಿ-ಫೆಬ್ರವರಿ ತಿಂಗಳುಗಳಲ್ಲಿ. ಈ ಮಧ್ಯೆ ಗಣೇಶೋತ್ಸವ ಸಮಾರಂಭಗಳು. ಹೀಗಾಗಿ ಕಾಲೇಜಿನ ಭಾಷಾ ವಿಭಾಗಗಳ ಅಧ್ಯಾಪಕರುಗಳಿಗೆ ಬೇಡಿಕೆ ಹೆಚ್ಚು. ಅಪರೂಪಕ್ಕೆ ಅಲ್ಲೊಬ್ಬ ಇಲ್ಲೊಬ್ಬ ಬೇರೆ ವಿಷಯಗಳ ಅಧ್ಯಾಪಕರು ಒಳ್ಳೆಯ ಭಾಷಣಕಾರರಾಗಿರುತ್ತಾರೆ. ಅಂತಹ ಅಪರೂಪದ ಗುಂಪಿನಲ್ಲಿ ಪ್ರೊ. ನಿಸಾರ್ ಕೂಡ ಒಬ್ಬರು. ಚಿತ್ರದುರ್ಗ ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ಮೂರು ಜನ, ಇಂಗ್ಲಿಷ್ ವಿಭಾಗದಲ್ಲಿ ಮೂರು ಜನ—ಇವರಲ್ಲಿ ಇಬ್ಬರು ತರಗತಿ ಮತ್ತು ಮನೆ ಪಾಠದ

ಉಪನ್ಯಾಸಕರು ಮಾತ್ರ. ಸಂಸ್ಕೃತ ವಿಭಾಗದಲ್ಲಿ ಒಬ್ಬರು. ಅಂದರೆ, ಇಡೀ ಜಿಲ್ಲೆಗೆ ಶ್ರೀ ನಿಸಾರ್ ಅವರೂ ಸೇರಿ ಸಾರ್ವಜನಿಕ ಸಮಾರಂಭಕ್ಕೆ ಆಗ ಸಿಗುತ್ತಿದ್ದವರು ಐದು ಜನ ಮಾತ್ರ! ಯಾವುದೇ ಸಂದರ್ಭವಾದರೂ ಭಾಷಣಕಾರ ಬೇಕು. ಒಮ್ಮೆ ಕುಟುಂಬ ಯೋಜನೆಯನ್ನು ಕುರಿತು ಕಾಲೇಜಿನ ಎನ್‌ಎಸ್‌ಎಸ್ ವಿಭಾಗ ಕಾರ್ಯಕ್ರಮ ಏರ್ಪಡಿಸಿತ್ತು. ಅದರ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು! ಇವರು ಅರ್ಧ ಡಜನ್‌ಗಿಂತ ಹೆಚ್ಚು ಮಕ್ಕಳನ್ನು ಪಡೆದವರು. ಮತ್ತಿಬ್ಬರು ನಾನು ಮತ್ತು ನಿಸಾರ್—ಇಬ್ಬರೂ ಬ್ರಹ್ಮಚಾರಿಗಳು! ಇಂತಹ ಔಚಿತ್ಯರಹಿತ ಸಮಾರಂಭಗಳಲ್ಲೂ ನಾವು ಭಾಗವಹಿಸಬೇಕಿತ್ತು.

ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ ಊರು, ಅಲ್ಲಿನ ತರಳಬಾಳು ಮಠದಿಂದ, ಅದರ ಸಾಹಿತ್ಯ ಸಂಸ್ಕೃತಿ ಚಟುವಟಿಕೆಗಳಿಂದ ಸುಪ್ರಸಿದ್ಧ. ಅಂದಿನ ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಮಹಾನ್ ಸಂಸ್ಕೃತ, ಕನ್ನಡ ವಿದ್ವಾಂಸರು. ಶಿಸ್ತಿನ ಸಿಪಾಯಿ. ವಚನಕಾರರ, ಅದರಲ್ಲೂ ಬಸವಾದಿ ಶರಣರ ನಡೆ-ನುಡಿಗಳನ್ನು ಚಾಚೂ ತಪ್ಪದೆ ಆಚರಣೆಗೆ ತಂದಿದ್ದವರು. ಸಿರಿಗೆರೆಯ ಮಠದಲ್ಲಿ ನಿತ್ಯ ವಚನ ಗಾಯನ, ಉಪನ್ಯಾಸ ನಡೆಯುತ್ತಿರುತ್ತವೆ. ರಾತ್ರಿ ಊಟ ಮುಗಿದ ಮೇಲೆ ಸಭೆ ಆರಂಭ. ಶ್ರೀ ಶ್ರೀಗಳ ಅಧ್ಯಕ್ಷತೆ. ಭಾಷಣಕಾರರಿಗೆ ಸಮಯದ ಕಟ್ಟುಪಾಡಿರುತ್ತಿರಲಿಲ್ಲ. ಅವನಿಗೆ ಸಾಕೆನ್ನಿಸುವಷ್ಟು ಕಾಲ ಮಾತಾಡಲು ಅವಕಾಶ. ಪ್ರೇಕ್ಷಕರೆಲ್ಲ ಅನುಭಾವಿಗಳು. ಅವರಲ್ಲಿ ಹಲವರು ಉಪನ್ಯಾಸಕಾರ ಸಣ್ಣ ತಪ್ಪು ಮಾಡಿದರೂ ಎದ್ದು ನಿಂತು ತಿದ್ದುವಷ್ಟು ಸಮರ್ಥರಿದ್ದರು. ಇಂತಹ ಒಂದು ಸಭೆಗೆ ಶ್ರೀ ನಿಸಾರ್ ಮತ್ತು ನಾನು ಭಾಷಣ ಕಾರ್ಯಕ್ರಮಕ್ಕಾಗಿ ಹೋಗಿದ್ದೆವು. ಶ್ರೀ ನಿಸಾರ್ ಅಂದು ಕಾವ್ಯವನ್ನು ಕುರಿತು ಮಾತಾಡಿದರು. ನಿರರ್ಗಳವಾಗಿ, ಓತಪ್ರೋತವಾಗಿ ಸಂಸ್ಕೃತಭೂಯಿಷ್ಠವಾದ ಕನ್ನಡ ಮಾತುಗಳು ಪ್ರವಾಹದಂತೆ ಹರಿದು ಬಂದುವು. ಶ್ರೀಶ್ರೀಗಳು ಬೆರಗಾಗಿ ಹೋದರು. ತುಂಬ ಮೆಚ್ಚಿಕೊಂಡರು. ಬೆಳಗ್ಗೆ ನಮ್ಮನ್ನು ಅವರ ಪೂಜೆಯ ಕೋಣೆಗೆ ಕರೆಸಿಕೊಂಡು ಬೆಳ್ಳಿಯ ಅಗಲವಾದ ತಾಟುಗಳಲ್ಲಿ ಉಪಾಹಾರವನ್ನು ಕೊಡಿಸಿ ತಾವೂ ಜೊತೆಯಲ್ಲೇ ಪ್ರಸಾದವನ್ನು ಸ್ವೀಕರಿಸಿದರು. ಶ್ರೀ ನಿಸಾರ್ ಆಗಲಿ, ನಾನಾಗಲಿ ಕೇವಲ ಒಂದು ಕಾಲೇಜಿನ ಅಧ್ಯಾಪಕರು ಮಾತ್ರ ಆಗಿದ್ದೆವು. ನಮ್ಮಂತಹ ನೂರಾರು ಜನ ಮಠಕ್ಕೆ ಬಂದು ಹೋಗುತ್ತಿದ್ದರು. ಇಂತಹ ಒಂದು ಸುಯೋಗ ನಮಗೆ ಲಭಿಸಿತ್ತು. ಬಹು ವರ್ಷಗಳ ಕಾಲ ಶ್ರೀ ನಿಸಾರ್ ಈ ವಿಷಯವನ್ನು ಪ್ರಸ್ತಾಪಿಸುತ್ತಲೇ ಇದ್ದರು. ಶ್ರೀಶ್ರೀಗಳ ಗೌರವಾನ್ವಿತ ಅಭಿಮಾನಿಗಳೂ ಆದರು.

ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗ ಪ್ರತಿ ವರ್ಷ ಒಂದೊಂದು ಕಾಲೇಜಿನಲ್ಲಿ ಎಂಜಿಎಸ್ ಟೂರ್ನಮೆಂಟ್ ನಡೆಸುತ್ತಿತ್ತು. ಇಂತಹ ಒಂದು ಕ್ರೀಡಾಮಹೋತ್ಸವ ಚಿತ್ರದುರ್ಗದ ಕಾಲೇಜಿನಲ್ಲಿ ಹೊಸದಾಗಿ ಕಟ್ಟಿಸಿದ್ದ ಶ್ರೀ ಮುರುಘರಾಜೇಂದ್ರ ಪೆವಿಲಿಯನ್ ಮತ್ತು ಕ್ರೀಡಾಂಗಣದಲ್ಲಿ ನಡೆಯಿತು. ನೂರಾರು ಕ್ರೀಡಾ ಪಟುಗಳು ರಾಜ್ಯದ ಎಲ್ಲೆಡೆಯಿಂದ ಸ್ಪರ್ಧೆಗೆ ಬಂದಿದ್ದರು. ಈ ಕ್ರೀಡಾ ಉತ್ಸವದ ಪ್ರಮುಖ ಏರ್ಪಾಡುಗಾರರಲ್ಲಿ ಶ್ರೀ ನಿಸಾರ್ ಸಹ ಒಬ್ಬರಾಗಿದ್ದರು. ಅವರ ಅಚ್ಚುಕಟ್ಟುತನ, ಶಿಸ್ತು, ಕಾರ್ಯಕ್ರಮಗಳ ಒಪ್ಪ ಓರಣ

ಸ್ಮರಣೀಯವಾಗಿತ್ತು; ಜೊತೆಗೇ, ಅವರ ಕನ್ನಡ ನಿರೂಪಣೆ ಮತ್ತು ಮಿತ್ರ ಎಸ್. ಆರ್. ವಿಜಯ್‌ನ ಇಂಗ್ಲೀಷ್ ಕಾಮೆಂಟ್ರಿ ಕೇಳುಗರಿಗೆ ಖುಷಿ ನೀಡುತ್ತಿದ್ದವು.

ರಾಜಕಾರಣಿಗಳ ತೌರಿನಲ್ಲಿ ಸಾಮಾನ್ಯ ಜನರಿಗೆ, ಅದರಲ್ಲೂ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ದೇಗುಲಗಳಾದ ವಿಧಾನ ಸಭೆ, ಲೋಕ ಸಭೆ ಕಾರ್ಯಕಲಾಪಗಳನ್ನು ಪರಿಚಯ ಮಾಡಿಕೊಡಲು 'ಅಣುಕು ಲೋಕ ಸಭೆ' ನಡೆಸಿದೆವು. ಕರ್ನಾಟಕ ವಿಶ್ವವಿದ್ಯಾ ನಿಲಯದ ಕುಲಪತಿ ರ್‍ಯಾಂಗ್ಲರ್ ಡಿ. ಸಿ. ಪಾವಟೆಯವರು ಬಂದು ಉದ್ಘಾಟಿಸಿದರು. ಇಡೀ ದಿನ ಅತ್ಯಪೂರ್ವವಾಗಿ ಲೋಕಸಭೆ ನಡೆದು ವಿದ್ಯಾರ್ಥಿಗಳ, ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ಇದನ್ನು ಏರ್ಪಡಿಸುವಲ್ಲಿ ಶ್ರೀ ಎಸ್. ಆರ್. ವಿಜಯ್, ಶ್ರೀ ಕೆ. ಎಸ್. ನಿಸಾರ್ ಅಹಮದ್ ಮುಖ್ಯ ಭೂಮಿಕೆ ವಹಿಸಿದ್ದರು.

ಶ್ರೀ ನಿಸಾರ್ ಅವರಲ್ಲಿ ನಾನು ಗುರುತಿಸಿದ ಒಂದು ಹಿರಿಯ ಗುಣವೆಂದರೆ ಅವರ ಗುಣಗ್ರಾಹಿಮತಿತ್ವ ಹಾಗೂ ಗುಣ ಕಂಡಾಗ ಅದರ ಮುಕ್ತ ಪ್ರಶಂಸೆ. ಒಂದು ಸಲ ನಾನು ನಮ್ಮ ಕೆಮಿಸ್ಟ್ರಿ ಬ್ಲಾಕ್‌ನ ಎದುರು ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮವೊಂದರಲ್ಲಿ ಭಾಷಣ ಮಾಡಿದೆ. ಸಾಧಾರಣವಾಗಿ ನಾವು ತೊಡುತ್ತಿದ್ದ ಸೂಟು-ಬೂಟು ಹಾಕದೆ ಅಚ್ಚ ಭಾರತೀಯ ದಿರಿಸಿನಲ್ಲಿ—ಕಚ್ಚೆಪಂಚೆ, ಜುಬ್ಬದಲ್ಲಿ—ಬಂದಿದ್ದೆ. ನನ್ನ ಭಾಷಣದ ಅನಂತರ, ನಿಸಾರ್ ನನ್ನನ್ನು ಬಿಗಿದಪ್ಪಿ 'ಮೂರ್ತಿ, ಎಂಥ ಅದ್ಭುತ ಭಾಷಣ ಮಾಡಿದೆಯಪ್ಪ! You are great. ಕೇವಲ ಮಾತುಗಳಲ್ಲ, ವಿಚಾರಗಳಲ್ಲ ನೀನು ಹೇಳಿದ್ದು—ಅಡೆತಡೆಯಿಲ್ಲದ ಶ್ರೀಮಂತ ವಾಕ್ಪ್ರವಾಹ. ಎಷ್ಟು ದಿವಸ ಆಗಿತ್ತೋ ಇಂಥ ಭಾಷಣವನ್ನು ಕೇಳಿ. I wholeheartly congratulate you' ಎಂದಿದ್ದಲ್ಲದೆ, 'ಈ ಡ್ರೆಸ್‌ನಲ್ಲಿ ಒಳ್ಳೇ ದೊರೆ ಮಗನ ಥರ ಕಾಣಿಸ್ತೀಯಪ್ಪ. ದಿನಾ ಇದನ್ನೇ ಹಾಕಿಕೊಂಡರೆ, ಈ ಊರಿನ ಅದೆಷ್ಟು ಜನ ಹೆಣ್ಣುಮಕ್ಕಳ ತಂದೆಯರು ನಿಮ್ಮ ತಂದೆತಾಯಿಗಳನ್ನು ಕಾಂಟಾಕ್ಟ್ ಮಾಡ್ತಾರೋ' ಎಂದಿದ್ದರು.

ನಾವು ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕರಾದ ಶುಭ ಗಳಿಗೆಯೋ ಅಥವಾ ಕಾಲ ಕೂಡಿ ಬಂದಿತ್ತೋ ಹದಿನಾಲ್ಕು ವರ್ಷಗಳಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದ ಕಾಲೇಜು ಅಧ್ಯಾಪಕರನ್ನು ಶ್ರೀ ಸಾಹುಕಾರ್ ಚನ್ನಯ್ಯ ಮತ್ತು ಶ್ರೀ ಅಣ್ಣಾರಾವ್ ಗಣಮುಖಿ (ವಿದ್ಯಾಮಂತ್ರಿ)ಯವರುಗಳ ದೃಢ ನಿಲವಿನಿಂದಾಗಿ ನಾವು ನೇಮಕವಾದ ದಿನದಿಂದಲೇ ನಮ್ಮನ್ನು ಖಾಯಂಗೊಳಿಸಲಾಯಿತು. ಆ ಹೊತ್ತಿಗೆ ಕೊಲಿಜಿಯೇಟ್ ಡೈರಕ್ಟರೇಟ್ ಅಸ್ತಿತ್ವಕ್ಕೆ ಬಂದಿತು. ಗಣಿತ ವಿಜ್ಞಾನದ ಕರ್ನಾಟಕದ ಮತ್ತೊಬ್ಬ ರ್‍ಯಾಂಗ್ಲರ್ ಶ್ರೀ ವಿ. ಹೆಚ್. ನಾಗಪ್ಪ ನಿರ್ದೇಶಕರಾಗಿದ್ದರು.

ಹುದ್ದೆ ಖಾಯಂ ಆಗುತ್ತಿದ್ದಂತೆ ಮುಂದಿನದು ಮದುವೆ. ಹಂಗಾಮಿ ಬ್ರಹ್ಮಚಾರಿಗಳೆಲ್ಲ ಮದುವೆಯ ಸಿದ್ಧತೆ ನಡೆಸಿದರು. ನನ್ನ ಮದುವೆಯೂ ಗೊತ್ತಾಯಿತು. ಸಾಂಪ್ರದಾಯಿಕ ಕುಟುಂಬದಿಂದ ಬಂದವನಾದರೂ ನಾನು ಆಧುನಿಕತೆಯನ್ನು ಮೈಗೂಡಿಸಿಕೊಂಡಿದ್ದ ಗುಂಪಿಗೆ ಸೇರಿದವನು. ಆಗ, ಮದುವೆ ಕನಿಷ್ಠ ಮೂರು ದಿವಸದಿಂದ ವಾರದವರೆಗೂ ನಡೆಯುತ್ತಿತ್ತು. ಆದರೆ ನಮ್ಮ ಮದುವೆ ಒಂದು ದಿನಕ್ಕೆ ಸೀಮಿತವಾಯಿತು.

ಮದುವೆಯ ಬೆಳಿಗ್ಗೆ ಸಿರಿಗೆರೆಯ ಶ್ರೀಶ್ರೀಶಿವಕುಮಾರ ಸ್ವಾಮಿಗಳವರಿಂದ ಶಿವಧ್ವಜಾರೋಹಣ. ಅನಂತರ ದಂಪತಿಗಳು ಶಿವ ಪೂಜೆ, ಶ್ರೀಗಳ ಪಾದ ಪೂಜೆ, ಶ್ರೀಗಳಿಂದ ಆಶೀರ್ವಚನಪೂರಕ ಹಾರಗಳನ್ನು ಬದಲಾಯಿಸಿಕೊಂಡೆವು. ಅಲ್ಲಿಗೆ ಮದುವೆ ಮುಗಿಯಿತು. ಅನಂತರ ಬಂದಿದ್ದವರ ಸಂತೋಷಕ್ಕಾಗಿ ಧಾರಾ ಮಂಟಪ. ನನಗೆ ಮೊದಲು ಧಾರೆ ಎರೆದವರು ಡಾ. ರಾಮಕೃಷ್ಣ ರೆಡ್ಡಿ ಮತ್ತು ಶ್ರೀಮತಿ ಮತ್ತು ಶ್ರೀ ಸಿ. ಆರ್. ಮೊಹಮ್ಮದ್ ಸೈಫುದ್ದೀನ್ ಮತ್ತು ಅವರ ಧರ್ಮಪತ್ನಿ ಹಾಗೂ ಶ್ರೀ ನಿಸಾರ್ ಅಹಮದ್ ಮತ್ತು ನನ್ನ ಸಹೋದ್ಯೋಗಿ ಅಧ್ಯಾಪಕ ಮಿತ್ರರು. ನನ್ನ ಮದುವೆ ನಡೆದದ್ದು ತಿಪಟೂರು ಬಳಿಯ ನನ್ನ ಪತ್ನಿಯ ತೋಟದ ಮನೆಯಲ್ಲಿ. ಚಿತ್ರದುರ್ಗದಿಂದ ನನ್ನ ನಿರೀಕ್ಷೆಗೂ ಮೀರಿ ಗೆಳೆಯರ ದಂಡು ಬಂದಿದ್ದುದು ನನಗೆ ನಿಜಕ್ಕೂ ಸೋಜಿಗವೆನ್ನಿಸಿತ್ತು. ಪ್ರೊ. ನಿಸಾರ್ ಈ ಮದುವೆಯನ್ನೂ ಅಲ್ಲಿ ಪಡೆದ ಆದರೋಪಚಾರ ಮತ್ತು ಆತ್ಮೀಯ ಸ್ನೇಹಶೀಲ ವಾತಾವರಣವನ್ನೂ ತುಂಬ ಸ್ಮರಿಸಿಕೊಳ್ಳುತ್ತಾರೆ. ಅಕಸ್ಮಾತ್, ನನ್ನ ಮದುವೆಯ ದಿನವೇ ಪ್ರೊ. ನಾಗಪ್ಪನವರು ಚಿತ್ರದುರ್ಗ ಕಾಲೇಜಿಗೆ ಭೇಟಿ ನೀಡಿ, ಅಲ್ಲಿದ್ದ ನಾಲ್ಕೈದು ಜನ ಹಿರಿಯ ಅಧ್ಯಾಪಕರನ್ನು ಬಿಟ್ಟು ಉಳಿದವರಾರು ಇಲ್ಲದ್ದನ್ನು ತಿಳಿದು, ಅಂದು ರಜೆಯನ್ನೂ ಹಾಕದೆಯೇ ಪ್ರಿನ್ಸಿಪಾಲ್ ಎಸ್. ಎಲ್. ರಾಮರಾಯರ ಒಪ್ಪಿಗೆಯನ್ನು ಪಡೆದು ಮದುವೆಗೆ ಹೋದ ವಿಷಯ ಗೊತ್ತಾಗಿ, ಬೆಂಗಳೂರಿಗೆ ಹೋದವರೇ ನಮ್ಮನ್ನೆಲ್ಲಾ ದಿಕ್ಕಾಪಾಲಾಗಿ ವರ್ಗ ಮಾಡಿಬಿಟ್ಟರು. ಇದಾದ ಅನಂತರ ನಾವು ಮತ್ತೆ ಒಂದು ಕಡೆ ಕೆಲಸ ಮಾಡುವ ಅವಕಾಶ ಸಿಗಲಿಲ್ಲ.

೧೯೬೦ರಿಂದ ೬೨ರ ವರೆಗೆ ನಾವು ಆತ್ಮೀಯ ಸ್ನೇಹಿತರಾಗಿದ್ದೆವು. ಅದಕ್ಕೆ ಅಂದಿನ ನಮ್ಮ ಸ್ಥಾನಮಾನಗಳು ಕಾರಣವಾಗಿದ್ದುವು. ಆಗ ಅಗಲಿದ ಮಿತ್ರರು ಅವರವರು ಆಯ್ಕೆ ಮಾಡಿಕೊಂಡ ವೃತ್ತಿಗಳಲ್ಲಿ ಯಶಸ್ವಿಗಳಾದರು, ಉನ್ನತ ಹುದ್ದೆಗಳಿಗೆ ಹತ್ತಿದರು, ದೇಶ ವಿದೇಶಗಳಲ್ಲಿಯೂ ಪ್ರಖ್ಯಾತರಾದರು. ಅಂದು 'ಮನಸು ಗಾಂಧಿ ಬಜಾರು' ಕವಿ ನಿಸಾರ್ ಒಬ್ಬ ಸಾಮಾನ್ಯಯುತ ಕವಿಯಾಗಿದ್ದ. ಅನಂತರ ಅವರು ಏರಿದ ಏಣಿ ಯಾರಿಂದಲೂ ಊಹಿಸಲು ಅಸಾಧ್ಯವಾಗಿತ್ತು. ಐದು ಕೋಟಿ ಕನ್ನಡಿಗರ ಮನೆ, ಮನಗಳಲ್ಲಿ ಬೆಚ್ಚಗೆ ಕುಳಿತಿರುವ ಈ ತೆಳ್ಳನೆಯ ವ್ಯಕ್ತಿ ನಮ್ಮ ನಿಸಾರರೆ? ಎಂದು ಆಶ್ಚರ್ಯ ಪಟ್ಟಿದ್ದೇನೆ. ಅವರ ಸಾಹಿತ್ಯ ಸಾಧನೆಯ ಬಗೆಗೆ ನಾನು ಏನೂ ಹೇಳಲಾರೆ. ಮೊನ್ನೆ ಪತ್ರಿಕೆಯ ಅಂಕಣ ಒಂದರಲ್ಲಿ ಕನ್ನಡ ಸಂಘದ ಪ್ರತಿನಿಧಿಯೊಬ್ಬರು 'ಕುವೆಂಪು ಹೋದ ಮೇಲೆ 'ರಾಷ್ಟ್ರಕವಿ' ಎಂದು ಯಾರನ್ನೂ ಕರೆದಿಲ್ಲ. ಎಲ್ಲ ಅರ್ಹತೆ ಇರುವ ಪ್ರೊ. ನಿಸಾರ್ ಅಹಮದ್ ಅವರಿಗೆ ರಾಷ್ಟ್ರಕವಿ ಪದವಿ ನೀಡಿ' ಎಂದು ಒತ್ತಾಯಿಸಿ ಬರೆದಿದ್ದರು. ಅವರ ಸಹೋದ್ಯೋಗಿಯಾಗಿ, ಸಾಹಿತ್ಯದ ವಿದ್ಯಾರ್ಥಿಯಾಗಿ, ಬೋಧಕನಾಗಿ, ಕರ್ನಾಟಕದ ಒಬ್ಬ ಅವರ ಅಭಿಮಾನಿಯಾಗಿ ನಾನೂ ಆ ಅಂಕಣಕಾರರ ಜೊತೆ ಧ್ವನಿಗೂಡಿಸುತ್ತೇನೆ. ಕಳೆದ ಹಲವು ದಶಕಗಳಿಂದ 'ನಿತ್ಯೋತ್ಸವ' ಗೀತೆ ಕೇಳುತ್ತಿದ್ದೇನೆ. ಪ್ರತಿ ಬಾರಿ ಕೇಳಿದಾಗಲೂ ನನ್ನ ಮನಸ್ಸು ತುಂಬಿ ಬರುತ್ತದೆ, ರೋಮಾಂಚನವಾಗುತ್ತದೆ. ನನಗನ್ನಿಸಿರುವಂತೆ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು', 'ಜೈ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'—

ಈ ನುಡಿ ನಮನಗಳಿಗೆ ಸರಿ ಮಿಗಿಲಾಗಿರುವ ಗೀತೆ ಎಂದರೆ 'ನಿತ್ಯೋತ್ಸವ'. 'ಕಾಳಿದಾಸನ ಎಲ್ಲ ಗ್ರಂಥಗಳು ನಾಶವಾಗಿ 'ಶಾಕುಂತಲ' ಒಂದು ಉಳಿದರೆ, ಅದರಲ್ಲೂ ನಾಲ್ಕು ಶ್ಲೋಕಗಳು ಉಳಿದರೂ ಆತ ಚಿರಂಜೀವಿ' ಎನ್ನುವ ಮಾತಿಗೆ—ಪ್ರೊ. ನಿಸಾರರ ಎಲ್ಲ ಸಾಹಿತ್ಯ ಕೃಷಿಯೂ ಕಾಲನ ಗರ್ಭದಲ್ಲಿ ಮರೆಯಾದರೂ ಅವರ 'ನಿತ್ಯೋತ್ಸವ' ಒಂದೇ ಅವರನ್ನು ಚಿರಂಜೀವಿಯಾಗಿಸುತ್ತದೆ. ಈಗ ನಾವಿಬ್ಬರೂ ಎಪ್ಪತ್ತು ದಾಟಿದ್ದೇವೆ. ನಾನು ಮೈಸೂರನ್ನು ಬಿಟ್ಟು ಈಗ ಬೆಂಗಳೂರಿನ ನಿವಾಸಿಯಾಗಿದ್ದೇನೆ. ಚಿತ್ರದುರ್ಗ ಕಾಲೇಜಿನಲ್ಲಿ ಸೇರಿದ ಮೊದಲ ದಿನ ಹೇಗಿದ್ದೆವೋ ಈಗಲೂ ಹಾಗೆಯೇ ಇದ್ದೇವೆ. ಅದೇ 'ಏನಯ್ಯಾ, ಬಾರಯ್ಯ' ಸಂಬೋಧನೆ, ಅದೇ ಬಾಯಿ ತುಂಬ ದೂರವಾಣಿಯ ಮೂಲಕ ಯೋಗಕ್ಷೇಮ ವಿಚಾರ. ಪ್ರೊ. ನಿಸಾರ್ ಪ್ರಯತ್ನಿಸಿದ್ದರೆ ಕುಲಪತಿಯಾಗಬಹುದಿತ್ತು, ಶಾಸಕನಾಗ ಬಹುದಿತ್ತು, ಸ್ವಲ್ಪ 'ಕಾಶ್ಮೀರಿ ಲಾಬಿ' ಮಾಡಿದ್ದರೆ 'ಜ್ಞಾನಪೀಠ'ವೂ ಈಗಾಗಲೇ ಪಡೆಯ ಬಹುದಿತ್ತು. ಬಂದದ್ದನ್ನು ಮಾತ್ರ ವಿನಮ್ರತೆಯಿಂದ ಸ್ವೀಕರಿಸಿ ಎಂದಿನ ಮಗುವಿನ ಸ್ವಭಾವವನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದಾರೆ. ಇದು ನಿಜಕ್ಕೂ ಶ್ಲಾಘನೀಯ.


ನಾನು ಕುವೆಂಪು ಅವರ ಶಿಷ್ಯ. ಅಂತೆಯೇ ತೀ.ನಂ.ಶ್ರೀ., ಡಿ.ಎಲ್.ಎನ್., ತ.ರಾ.ಸು.ರವರ ಶಿಷ್ಯನೂ ಹೌದು. ಕೆಲವು ವರ್ಷಗಳ ಕಾಲ ಜ್ಞಾನಪೀಠರ ಸ್ನೇಹಿತನೂ ಆಗಿದ್ದವನು. ಈ ಎಲ್ಲ ಹೆಮ್ಮೆಯ ಜೊತೆಗೆ ಪ್ರೀತಿಯ ನಿಸಾರ್ ಅವರ ಸ್ನೇಹಿತನೂ ಬಂಧುವೂ ಆಗಿ ಉಳಿದಿದ್ದೇನೆ. ಇದು ನನ್ನ ತೃಪ್ತಿಗೆ ಕಾರಣ. ನಿತ್ಯೋತ್ಸವದ ಕವಿ ಚಿರಂಜೀವಿ ಯಾಗಲಿ.

ವ್ಯಕ್ತಿಮೆಯ ಮಾಗುವಿಕೆಯೇ ಸಂಸ್ಕೃತಿ. ಸಂಸ್ಕೃತಿಯೆಂಬ ಈ ಅಮೂರ್ತವಾದ ಮೋಡ ಮೋಡವಾದ ಭಾವನೆ ಮನುಷ್ಯನ ಮೂರ್ತ ಅನುಭವಕ್ಕೆ—ಭೂಮಿಗೆ ಆಕಾಶದಷ್ಟೇ—ಅನಿವಾರ್ಯವಾದದ್ದು. ದೂರವಿದೆ ಎಂದುಕೊಂಡರೆ ನೆಲದ ಜೀವನದ ಅಸ್ತಿತ್ವದೊಂದಿಗೇ ಹಾಸುಹೊಕ್ಕಾಗಿರುವಂಥದ್ದು.

(ಸಂಸ್ಕೃತಿಯ ಅನಿವಾರ್ಯತೆ)

ಕತೆ ಕಾದಂಬರಿ ಕವಿತೆ ಇತ್ಯಾದಿಗಳನ್ನು ರಚಿಸುವ ಪ್ರತಿಭಾವಂತರು ಅನೇಕರಿದ್ದಾರೆ. ಅವರಿಗೆ ಸಮಯ ಸ್ಫೂರ್ತಿ ದೊರೆಯುವ ಸಂದರ್ಭಗಳೂ ಹಲವಾರಿವೆ. ಪ್ರಾಚೀನ ಕೃತಿಗಳನ್ನು ಕಾಲದ ಸೆಳೆಖಾನೆಯಲ್ಲಿ ಬಚ್ಚಿಡದೆ, ಇಂದಿನ ಜನಕ್ಕೆ ಅವುಗಳ ಮಹತ್ವ ಸ್ವಾರಸ್ಯಗಳನ್ನು ಮಾಡಿಕೊಡಬೇಕಾದ, ಅವುಗಳನ್ನು ದೋಷರಹಿತವಾಗಿ ಸಂಪಾದಿಸಬೇಕಾದ ಹೊಣೆಗಾರಿಕೆಯೂ ಕೆಲವರ ಮೇಲಿದೆ. ಇದಕ್ಕೆ ತಾಳ್ಮೆ, ಪರಿಶ್ರಮ, ಶೀಘ್ರ ಕಾಮನೆಗೆ ಆಶಿಸದ ಆತ್ಮ ಪ್ರತ್ಯಯ, ಸಂಶೋಧನಾತ್ಮಕ ಮನಸ್ಸು, ಶಾಸ್ತ್ರೀಯ ಶಿಸ್ತುಗಳ ಅಗತ್ಯವಿದೆ. ಇದು ಒಂದು ಜೀವಮಾನವನ್ನೇ ಮುಡಿಪಾಗಿಸುವ ತ್ಯಾಗಶೀಲ ಧ್ಯೇಯೋನ್ನತಿ.

(ಪ್ರಾಚೀನ ಕೃತಿ ಸಂಪಾದನೆ)



ಪ್ರತಿಭಾಶಾಲಿ ಪ್ರಿಯ ಮಿತ್ರ ನಿಸಾರ್

♦ ಎಸ್. ಆರ್. ವಿಜಯ್
(ಸಹೋದ್ಯೋಗಿ)

ಕರ್ನಾಟಕದ ಸುಪ್ರಸಿದ್ಧ ಕವಿಗಳೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಆದ ಕೆ. ಎಸ್. ನಿಸಾರ್ ಅಹಮದ್ ಅವರು ನನ್ನ ಸಹೋದ್ಯೋಗಿ ಹಾಗೂ ಆತ್ಮೀಯ ಮಿತ್ರರು ಎಂದು ಹೇಳಿಕೊಳ್ಳಲು ನನಗೆ ತುಂಬಾ ಹೆಮ್ಮೆಯೆನಿಸುತ್ತದೆ. ೧೯೫೯ರಲ್ಲಿ ಚಿತ್ರದುರ್ಗದ ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕನಾಗಿ ನನ್ನ ವೃತ್ತಿಯನ್ನು ಆರಂಭಿಸಿದ ಸಮಯದಲ್ಲಿಯೇ, ನಿಸಾರರು ಕೂಡ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅದೇ ವರ್ಷ (೧೯೫೯) ಭೂ ವಿಜ್ಞಾನದ ಅಧ್ಯಾಪಕರಾಗಿ ವೃತ್ತಿಯನ್ನು ಪ್ರಾರಂಭಿಸಿ, ೧೯೬೦ರಲ್ಲಿ ಚಿತ್ರದುರ್ಗಕ್ಕೆ ವರ್ಗವಾಗಿ ಬಂದರು. ಅಲ್ಲಿ ನಾವು ಪರಿಚಿತರಾಗಿ ಎರಡು ವರ್ಷಗಳ ಕಾಲ ಒಡನಾಡಿಗಳಾಗಿ ಅನ್ಯೋನ್ಯವಾಗಿ ಕಳೆದ ಸಮಯ ಅತ್ಯಂತ ಸ್ಮರಣಾರ್ಹ ಹಾಗೂ ಸಂಭ್ರಮದ್ದು. ನಿಸಾರರು ಅತ್ಯಂತ ಸ್ನೇಹಪರರು ಮಾತ್ರವಲ್ಲ, ಭಿನ್ನ ಮನೋಭಾವದ ಜನಗಳ ಜೊತೆಯೂ ತುಂಬ ಹೊಂದಾಣಿಕೆಯ ಸ್ವಭಾವದವರು.

ನಮ್ಮಿಬ್ಬರದು ಅನೇಕ ವಿಚಾರಗಳಲ್ಲಿ ಧ್ರುವಗಳಷ್ಟು ಅಂತರವಿದ್ದರೂ ನಾವಿಬ್ಬರು ಅದು ಹೇಗೆ ಅಷ್ಟೊಂದು ಆಪ್ತಗೆಳೆಯರಾದೆವು ಎಂಬುದೇ ನನಗೆ ಆಶ್ಚರ್ಯದ ವಿಷಯ. ಎರಡು ವರ್ಷಗಳ ನಮ್ಮ ಸಹವಾಸದಲ್ಲಿ ಮೊದಲಿನಿಂದ ಅದು ಹೇಗೆ ಸಾಮರಸ್ಯ, ಸೌಹಾರ್ದದಿಂದ ಇದ್ದೆವೋ ಎಂದು ನನಗೆ ಈಗಲೂ ಅರ್ಥವಾಗದ ವಿಷಯ. ನಾನಾದರೋ ಅಮೆರಿಕನ್

ಮತ್ತು ಕ್ರಿಶ್ಚಿಯನ್ ಮಿಷನರಿ ಶಾಲೆ, ಕಾಲೇಜುಗಳಲ್ಲಿ ಓದಿ ಪಾಸಾದವನು. ಬಹಳಷ್ಟು ಮಟ್ಟಿಗೆ ಪಾಶ್ಚಾತ್ಯೀಕರಿಸಲ್ಪಟ್ಟವನು. ನನ್ನ ಇಂಗ್ಲಿಷ್ ಭಾಷೆಯ ಉಚ್ಚಾರ, ಮಾತನಾಡುವ ರೀತಿ ನಿಸಾರರಿಗಿಂತ ತೀರಾ ಭಿನ್ನವಾಗಿತ್ತು. ಮಾತ್ರವಲ್ಲದೆ ದಿ. ಪ್ರೊ. ಸಿ. ಡಿ. ನರಸಿಂಹಯ್ಯನವರ ನೆಚ್ಚಿನ ಶಿಷ್ಯರಲ್ಲೊಬ್ಬನಾಗಿ ಇಂಗ್ಲಿಷ್ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿಯನ್ನೂ ಹೊಂದಿದವನಾಗಿದ್ದೆ. ಆದರೆ ನಿಸಾರರು ಸದಾ ಕನ್ನಡ ಸಾಹಿತ್ಯದಲ್ಲಿ ಮುಳುಗಿದವರಾಗಿದ್ದರು. ನಾನು ಇಂಗ್ಲಿಷಿನಲ್ಲಿ ಸಂಭಾಷಣೆ ಪ್ರಾರಂಭಿಸಿದರೆ, ಅವರಿಗೆ ಚೆನ್ನಾಗಿ ಆ ಭಾಷೆಯಲ್ಲಿ ಮಾತನಾಡಲು ಬರುತ್ತಿದ್ದರೂ ಬೇಕುಬೇಕಾಗಿ ಕನ್ನಡದಲ್ಲೇ ವ್ಯವಹರಿಸುತ್ತಿದ್ದರು. ಕೆಲವೊಮ್ಮೆ ವಿಧಿಯಿಲ್ಲದೆ ನಾನು ಹರಕು ಮುರುಕು ಹಾಗೂ outlandish ಕನ್ನಡದಲ್ಲಿ ಮಾತನಾಡುತ್ತಿದ್ದೆ. ನಾವಿಬ್ಬರೂ ಅಂತಹ ಸ್ನೇಹಿತರಾಗಲು ಏನು ಕಾರಣವಾಗಿರಬಹುದು? ಎಂದು ಆಗಾಗ ನನಗೆ ವಿಸ್ಮಯವಾಗುತ್ತಿತ್ತು. ಒಂದೇ ಸರಕಾರಿ ಕಾಲೇಜಿನಲ್ಲಿ ತರುಣ ಸಹೋದ್ಯೋಗಿಗಳಾಗಿದ್ದುದೇ ಅಥವಾ ಚಿತ್ರದುರ್ಗದ ಒಂದೇ ಲಾಡ್ಜ್‌ನಲ್ಲಿ (ಮೆಜೆಸ್ಟಿಕ್ ಹೋಟೆಲ್) ಇಬ್ಬರೂ ವಾಸಿಸುತ್ತಿದ್ದುದೇ, ಅಥವಾ ಕಾಲೇಜಿನ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳಲ್ಲಿ ಇಬ್ಬರೂ ಕ್ರಿಯಾತ್ಮಕವಾಗಿ ಆಸಕ್ತರಾಗಿದ್ದುದೇ?

ಈಗಂತೂ ಅದರ ಬಗ್ಗೆ ಆಶ್ಚರ್ಯ ಉಳಿದಿಲ್ಲ. ಈಗ ನನಗೆ ಅರಿವಾಗಿದೆ: ಬದುಕು ಹಾಗೂ ವ್ಯಕ್ತಿಗಳ ಬಗೆಗಿನ ನಮ್ಮಿಬ್ಬರ ವಿಶಾಲ ದೃಷ್ಟಿಕೋನ ಮತ್ತು ಉದಾರ ಮೌಲ್ಯಗಳ ಬಗ್ಗೆ ನಮಗಿದ್ದ ಗೌರವಯುತ ಒಲವು ನಮ್ಮ ನಡುವಣ ನಂಟಿಗೆ ಮೂಲ ಕಾರಣವೆಂಬ ತಿಳಿವಳಿಕೆ ಮೂಡಿದೆ. ನಮ್ಮ ಆ ದಿನಗಳನ್ನು ಮರುಕಳಿಸಿಕೊಂಡಾಗ ನನಗೆ ಚೆನ್ನಾಗಿ ನೆನಪಾಗುತ್ತಿದೆ. ನಾವಿಬ್ಬರೂ ಧರ್ಮ, ಜಾತಿ, ಭಾಷೆ ಅಥವಾ ಭೌಗೋಳಿಕ ಪಕ್ಷಪಾತ ಮತ್ತು ತತ್ಸಂಬಂಧವಾದ ಸಂಕುಚಿತ ವಿಚಾರಗಳ ಬಗ್ಗೆ ಮಾತನಾಡುವುದಿರಲಿ, ಯೋಚನೆ ಕೂಡಾ ಮಾಡುತ್ತಿರಲಿಲ್ಲ. ನನಗೆ ಕನ್ನಡ ಭಾಷೆ ಅಥವಾ ಸಾಹಿತ್ಯದ ಬಗ್ಗೆ ಬಹುತೇಕ ಉಪೇಕ್ಷೆ, ಅಜ್ಞಾನಗಳಿದ್ದವು ಎಂಬುದು ನಿಸಾರರಿಗೆ ಗೊತ್ತಿಲ್ಲದೇ ಇರಲಿಲ್ಲ. ನಾನು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಮಹಾಕವಿ ಕುವೆಂಪು ಅವರು ನಮ್ಮ ಪ್ರಿನ್ಸಿಪಾಲರಾಗಿದ್ದರೆಂದು ಜಂಭದಿಂದ ಹೇಳಿದರೆ, ನಿಸಾರರು 'ಅನೇಕ ಕನ್ನಡ ಸಾಹಿತಿಗಳನ್ನು ಸೃಷ್ಟಿಸಿದ ಮಹಾರಾಜಾ ಕಾಲೇಜಿನಂಥ ಪ್ರತಿಷ್ಠಿತ ವಿದ್ಯಾಲಯದ ಸ್ನಾತಕೋತ್ತರ ಪದವಿಯನ್ನು ಪಡೆದೂ ಕೂಡ ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯದ ಬಗ್ಗೆ ಇಷ್ಟೊಂದು ಸೀಮಿತ ತಿಳಿವು ಮತ್ತು ಅಲಕ್ಷ್ಯವಿರುವುದೆಂದರೆ ಬಹಳ ಅವಮಾನಕರ' ಎಂದು ನನ್ನನ್ನು ಆಕ್ಷೇಪಪೂರ್ವಕವಾಗಿ ಛೇಡಿಸುತ್ತಿದ್ದರು. ಆಗ ನಾನೂ ಸುಮ್ಮನಿರುತ್ತಿರಲಿಲ್ಲ. 'ಇಷ್ಟೆಲ್ಲಾ ಕನ್ನಡದ ಬಗ್ಗೆ ಒಲವಿದ್ದರೂ ಭೂ ವಿಜ್ಞಾನವನ್ನು ಆರಿಸಿಕೊಳ್ಳುವ ಅವರ ಆಸಕ್ತಿಯ ಗುಟ್ಟಿನ ಬಗ್ಗೆ ಕೆಣಕುತ್ತಿದ್ದೆ. ಸಾಲದ್ದಕ್ಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಚಿನ್ನ ಮತ್ತು ಅಮೂಲ್ಯ ಖನಿಜಗಳ ಬಗೆಗೆ ಹೆಚ್ಚಿನ ಆಕರ್ಷಣೆ ಕನ್ನಡದ ಒಲವಿಗಿಂತ ಇದಕ್ಕೆ ಕಾರಣವೆ?' ಎಂದು ರೇಗಿಸುತ್ತಿದ್ದೆ. ಅದಕ್ಕೆ ಅವರ ಸುಪರಿಚಿತ ಮುಗುಳು ನಗುವಿನ ಹೊರತಾಗಿ ಬೇರೆ ಉತ್ತರವಿರುತ್ತಿರಲಿಲ್ಲ.

ಜೀವನದ ಅನೇಕ ಪ್ರಶ್ನೆಗಳಿಗೆ ಮನುಷ್ಯನಲ್ಲ, ಕಾಲವೊಂದೇ ಉತ್ತರಿಸಲು ಸಮರ್ಥ. ಈ ಪ್ರಶ್ನೆಯನ್ನು ಕೇಳಿ ೪೪ ವರ್ಷಗಳಾಗಿರಬಹುದು. ಪ್ರತಿಯೊಂದು ಗತಿಸಿದ ವರ್ಷವೂ ಅವರ ಹೃನ್ಮನಗಳು ಎಲ್ಲಿ ನೆಲೆಸಿವೆ ಅನ್ನುವುದನ್ನು ರುಜುವಾತು ಪಡಿಸಿವೆ. ಕನ್ನಡ ಸಾಹಿತ್ಯಕ್ಕೆ ದೀರ್ಘಕಾಲ ಉಳಿಯುವಂಥ ಅತ್ಯಮೂಲ್ಯ ಕೊಡುಗೆಗಳನ್ನು ಅವರು ನೀಡಿರುವ ಬಗ್ಗೆ ನಾನು ತೀವ್ರಾಸಕ್ತ. ಅಷ್ಟೇ ಅಲ್ಲ, ಅವುಗಳಿಂದ ಕೊಂಚ ಮಟ್ಟಿಗೆ ಪ್ರಭಾವಿತನೂ ಆಗಿದ್ದೇನೆ. ನಾನು ಬಹಳವಾಗಿ ಮೆಚ್ಚಿರುವ ಅವರ ಹಲವೊಂದು ಕವನಗಳಲ್ಲಿ 'ಕುರಿಗಳು, ಸಾರ್, ಕುರಿಗಳು', 'ಅಮೇರಿಕ, ಅಮೇರಿಕ', 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ', 'ಅನಾಮಿಕ ಆಂಗ್ಲರು' ಬಹಳ ಗಮನಾರ್ಹ ಅನ್ನಿಸುತ್ತವೆ.

ಅವರ ಬರಹಗಳ ಸೃಜನಶೀಲ ಗುಣವನ್ನು ಅನೇಕ ಮೇಧಾವಿಗಳು ಪ್ರಶಂಸಿಸಿ ಆನಂದಿಸುತ್ತಿದ್ದಾರೆ. ನಾನು ಕನ್ನಡದ ಹಿರಿಯ ಬರಹಗಾರರಾದ ಡಾ. ದೇಜಗೌ ಅವರು ನಿಸಾರರ ಸಾಧನೆಯ ಬಗ್ಗೆ ಬೇರೊಂದು ಸಂದರ್ಭದಲ್ಲಿ ನುಡಿದಿರುವ ಬೆಲೆಯುಳ್ಳ ಈ ಮಾತುಗಳನ್ನು ಹೃದಯಪೂರ್ವಕವಾಗಿ ನಾನು ಅನುಮೋದಿಸುತ್ತೇನೆ: 'ತಮ್ಮದೇ ಆದ ವಿನೂತನ ಸತ್ತ್ವ ಸಂಪತ್ತನ್ನು ಸಾಹಿತ್ಯಕ್ಕೆರೆದು, ಭಾರತೀಯ ಸಂಸ್ಕೃತಿಯ ಆಯಾಮಗಳನ್ನು ಹಿಗ್ಗಿಸಬೇಕೆನ್ನುವ ತೀವ್ರಾಸಕ್ತಿ, ಸದಭಿರುಚಿ, ನಯವಂತಿಕೆ ನಿಸಾರ್ ಅವರ ಸಹಜ ಗುಣ. ಸಂಸ್ಕೃತಿ ವಾಹಕ ಚೇತನರಲ್ಲಿ ಅವರದು ಗಣ್ಯ ಪಾತ್ರ. ಪರಂಪರೆಯನ್ನು ಬಿಡದೆ ಹೊಸತನವನ್ನು ಸಾಧಿಸಿದ್ದು, ಸ್ವಂತಿಕೆಯನ್ನು ಛಾಪಿಸಿದ್ದು ಅವರ ಹಿರಿಮೆ... ಕವಿ ನಿಸಾರರ ಭಾಷಾ ಶೈಲಿಯಲ್ಲಿ ವೈಶಿಷ್ಟ್ಯವಿದೆ, ವಿನೂತನತೆಯಿದೆ: ವೈಚಿತ್ರ್ಯವೂ ಇದೆ. ಕನ್ನಡ ಪದಗಳಿಗೆ ಹೊಸ ಭಾವಾರ್ಥ ತುಂಬುತ್ತಾರೆ... ಹೊಸ ಪದಗಳನ್ನು ಟಂಕಿಸುವಲ್ಲಿ, ಅವುಗಳಿಗೆ ನೂತನ ಚೈತನ್ಯವನ್ನು ತುಂಬುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಆದ್ದರಿಂದ ಕವಿ ನಿಸಾರರು ಕನ್ನಡಕ್ಕೆ ವಿಶಿಷ್ಟರಾಗಿದ್ದಾರೆ, ಭಾಗ್ಯದಾತರಾಗಿದ್ದಾರೆ; ಕನ್ನಡಿಗರು ಹೆಮ್ಮೆಪಡಬಹುದಾದ ಸಾರಸತ್ವವಾಗಿದ್ದಾರೆ'—ಇಂತಹ ಪ್ರತಿಭಾವಂತ ನನ್ನ ಮಿತ್ರ.

ನಾನು ಮಾನಸಿಕವಾಗಿ ಕುಗ್ಗಿದ ಸಂದರ್ಭದಲ್ಲೊ, ಚಿಂತಾವಶನಾದ ವೇಳೆಯಲ್ಲೊ ಅವರ ಕೆಲವು ಕೃತಿಗಳನ್ನು ಅವಲೋಕಿಸುತ್ತೇನೆ. ಅಂತಹ ಸಮಯದಲ್ಲಿ ನನ್ನ ವಿಷಣ್ಣತೆಯನ್ನೂ ವಿಹ್ವಲತೆಯನ್ನೂ ದೂರವಾಗಿಸಲು ಅವು ಯಾವತ್ತೂ ಅಸಫಲವಾಗಿಲ್ಲ. ಅಷ್ಟೆ ಅಲ್ಲ, ನಾನು ನಿರೀಕ್ಷಿಸಿದ ಶಾಂತಿ, ಸಮಾಧಾನ ನೀಡಿವೆ. ಅವರ ಗದ್ಯ ಬರಹಗಳಾದ 'ಮನದೊಂದಿಗೆ ಮಾತುಕತೆ', 'ಹಿರಿಯರು ಹರಸಿದ ಹೆದ್ದಾರಿ'ಯ ಕೆಲವು ಚಿಂತನಾತ್ಮಕ ಲೇಖನಗಳು ಮನಸ್ಸಿಗೆ ಸಾಂತ್ವನ ನೀಡಿರುವುದಕ್ಕೆ ನಾನು ಋಣಿಯಾಗಿದ್ದೇನೆ.

ನಿಸಾರರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ, ಬಹುಶಃ ಎರಡು ದಶಕಗಳ ಹಿಂದೆ, ಮಾಡುತ್ತಿದ್ದ ಕಾರ್ಯಕ್ರಮಗಳ ಸಚಿತ್ರ ವರದಿ ಪ್ರತಿ ದಿನ ಪತ್ರಿಕೆ, ಟಿ.ವಿ.ಗಳಲ್ಲಿ ಮೆರೆಯುತ್ತಿತ್ತು. ಅವರ ಭೇಟಿ ದುರ್ಲಭವಾದರೂ ಅದನ್ನು ನೋಡಿ ಸಂತೋಷಿಸುತ್ತಿದ್ದೆ. ಹಾಗೆಯೇ, ಹಳಗಾಲದ ನೆನಪುಗಳನ್ನು ಆಹ್ವಾನಿಸಿ ಚಪ್ಪರಿಸುತ್ತ ನನ್ನನ್ನು ನಾನು ಮರೆಯುತ್ತಿದ್ದೆ. ಅನೇಕ ರೀತಿಯ ಗೌರವಗಳಿಗೂ ನಿಸಾರರು ಪಾತ್ರರಾಗಿದ್ದಾರೆಂಬುದು

ನನಗೆ ಅತ್ಯಂತ ಸಂತಸದ ಸಂಗತಿ.

ನಾನೂ ನಿಸಾರ್ ಇಬ್ಬರೂ ನಿವೃತ್ತರಾಗಿದ್ದೇವೆ. ನಾಲ್ಕು ದಶಕಗಳಿಗೆ ಮುಂಚೆಯೇ ನಮ್ಮಿಬ್ಬರ ದಾರಿ ಕವಲೊಡೆದಿದೆ. ನಾನು ಸರಕಾರಿ ಆಡಳಿತದಲ್ಲಿ ತೊಡಗಿಸಿಕೊಂಡು ಮಂಡ್ಯ, ಮೈಸೂರುಗಳಲ್ಲಿ ಡೆಪ್ಯುಟಿ ಕಮೀಷನರ್ ಆಗಿ ಜನಗಳ ಕುಂದುಕೊರತೆ, ಆಶೋತ್ತರ, ದೈನಂದಿನ ಸಮಸ್ಯೆಗಳ ನಿರ್ವಹಣೆಯಲ್ಲಿ ತೊಡಗಿಕೊಂಡೆ. ಆಮೇಲೆ ಬೆಂಗಳೂರಿಗೆ ಮರಳಿ ಕನ್ನಡ-ಸಂಸ್ಕೃತಿ ನಿರ್ದೇಶನಾಲಯದ ಕಾರ್ಯದರ್ಶಿ, ಬಿ.ಡಿ.ಎ. ಅಧ್ಯಕ್ಷನಾಗಿ ಸೇವೆ ಸಲ್ಲಿಸಿದೆ. ನಿಸಾರರು ಮತ್ತೊಂದು ರೀತಿಯಲ್ಲಿ—ನನಗಿಂತ ಮಿಗಿಲಾದ ಭಾವಾತ್ಮಕ ರೀತಿಯಲ್ಲಿ—ಜನೋಪಕಾರದ ಕಾರ್ಯವನ್ನು ಅನನ್ಯ ರೀತಿಯಲ್ಲಿ ನಿಭಾಯಿಸಿದ್ದಾರೆ. ದಾರಿ ಬೇರೆಯಾದರೂ ಇಬ್ಬರ ಗುರಿಯೂ ಒಂದೇ ಎನ್ನಿಸುತ್ತದೆ. ಈ ಸಂದರ್ಭದಲ್ಲಿ ನಮ್ಮ ಕನ್ನಡ ನಾಡಿನ ಅಪ್ರತಿಮ ಚಿಂತಕರೂ ವಿದ್ವತ್ಕವಿಗಳೂ ಆದ ಡಿ.ವಿ.ಜಿ.ಯವರ ಮಾತು ನೆನಪಾಗುತ್ತದೆ: 'ರಾಮಣೀಯಕವೆಂದು ಬಿಸುಸುಯ್ಯಲದು ಕವಿತೆ/ಭೂಮಿಗದ ನೆಟುಕಿಸುವೆನೆಂಬೆಸಕ ರಾಜ್ಯಕತೆ.'

ಇನ್ನೆಲ್ಲಿ ಆ ಕಾಲ? ನಾನೂ ನಿಸಾರರೂ ಸೇರಿದಂತೆ ಹಲವಾರು ಯುವಕ ಅಧ್ಯಾಪಕರು ತಮ್ಮ ವಿವಾಹಪೂರ್ವ ದಿನಗಳಲ್ಲಿ ಸುಭವಿಷ್ಯದ ಬಗೆಗೆ ಆಹ್ಲಾದಕರವಾದ ಕನಸುಗಳನ್ನು ಹೆಣೆಯುತ್ತಿದ್ದ, ಆದರ್ಶಗಳನ್ನು ರೂಪಿಸಿಕೊಳ್ಳುತ್ತಿದ್ದ ಹರಯದ ಮಾಂತ್ರಿಕ ಕಾಲ? ಈಗಿನಂತೆ ಆಗ ಟಿ.ವಿ.ಗಳ, ವಿಡಿಯೊ ಸಿ.ಡಿ.ಗಳ ದಾಂಧಲೆ ಇರಲಿಲ್ಲ. ಮನರಂಜನೆಗೆ ತತ್ವಾರ. ಆಗಿನ ಚಿತ್ರದುರ್ಗ ಸಂಜೆಯಾದರೆ ಸಾಕು ನೀರವತೆಯನ್ನು ತಳೆಯುತ್ತಿತ್ತು; ವಾಹನಗಳ, ಜನಗಳ ವಿರಳತೆಯಿಂದ ರಸ್ತೆ, ಬೀದಿಗಳೆಲ್ಲ ನಿರಾಳವನ್ನು ಮೆರೆಯುತ್ತಿದ್ದವು. ನಾನೂ ನಿಸಾರ್ ಆಗಾಗ್ಗೆ ಸಂಜೆ ಕಾಲೇಜಿನ ಕಡೆ ವಾಕಿಂಗ್ ಹೋಗುತ್ತಿದ್ದೆವು. ಅದೇ ಊರಿನಲ್ಲಿ ಹುಟ್ಟಿ ಬೆಳೆದ ನಮ್ಮ ಹಿರಿಯ ಮಿತ್ರ ಮತ್ತು ಸಹೋದ್ಯೋಗಿ ಪ್ರೊ. ಪಾಲಯ್ಯ ನಮ್ಮಿಬ್ಬರ 'ಅಣಕು ಭಾಷಣ'ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಿದ್ದರು. ನಾನು ಗಡುಸಾದ ದೊಡ್ಡ ಗಂಟಲಲ್ಲಿ ಸರ್ಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಮಿಸ್ಟರ್ ಖಾನ್‌ರನ್ನು ಇಂಗ್ಲಿಷಿನಲ್ಲೇ ಅನುಕರಿಸಿ ಭಾಷಣ ಮಾಡಿದರೆ, ನಿಸಾರ್ ನಮ್ಮ ಪ್ರಿನ್ಸಿಪಾಲರಾಗಿದ್ದ ಪ್ರೊ. ಎಸ್. ಎಲ್. ರಾಮರಾಯರನ್ನು ಕನ್ನಡದಲ್ಲಿ ನಕಲಿಸಿ ಮಾತಾಡುತ್ತಿದ್ದರು. ಪಾಲಯ್ಯ ಕೆಲವೊಮ್ಮೆ ಗಹಗಹಿಸಿ ನಕ್ಕು 'ಪ್ರಚಂಡರಪ್ಪ ನೀವಿಬ್ಬರು. ಥೇಟ್ ಅವರಿಬ್ಬರ ಥರಾನೇ ನಟಿಸ್ತೀರಲ್ಲ. ನಿಮ್ಮ ಹೋಟೇಲ್ ರೂಂಗಳಲ್ಲಿ ದಿನವೂ ಪ್ರಾಕ್ಟಿಸ್ ಮಾಡ್ತೀರೋ ಹೇಗೆ?' ಎಂದು ಪ್ರಶಂಸಿಸುತ್ತಿದ್ದರು.

ನಾನು ಕೆ.ಎ.ಎಸ್. ಪರೀಕ್ಷೆಗಾಗಿ ಅಧ್ಯಯನದ ತಯಾರಿ ನಡೆಸುತ್ತಿರುವ ವೇಳೆ ನಿಸಾರರ ಜೊತೆ ವಾಕ್ ಹೋಗುವಾಗ ಕನ್ನಡ ಮತ್ತು ಇಂಗ್ಲಿಷ್ ನವ್ಯ ಸಾಹಿತ್ಯದ ಬಗೆಗೆ ಚರ್ಚಿಸುತ್ತಿದ್ದೆ. ಹುಮ್ಮಸ್ಸಿನಿಂದ ಅವರು ಆಗ ಎಲಿಯೆಟ್, ಆಡೆನ್, ಪೌಂಡ್ ಬಗ್ಗೆ, ಕನ್ನಡದ ಅಡಿಗರ ಬಗ್ಗೆ ನಿರರ್ಗಳವಾಗಿ ಮಾತಾಡುತ್ತಿದ್ದುದು ನನ್ನ ತಿಳಿವಿನ ಪರಿಧಿಯನ್ನು ವಿಸ್ತರಿಸಿ, ಪರೀಕ್ಷೆಯ ದೃಷ್ಟಿಯಿಂದಲೂ ಲಾಭದಾಯಕವಾಯಿತು.

ಅಂದಿನ ಚಿತ್ರದುರ್ಗ! ಓಹ್, ಈಗೆಲ್ಲಿ? ಜೋಗಿ ಮರಡಿ ಕಾಡಿನಿಂದ ಹೆಬ್ಬುಲಿ ಊರಿನ ಅಂಚಿಗೆ ಬಂದು ಕುರಿ, ಕತ್ತೆಗಳ ಆಮಿಷಕ್ಕೆ ಒಳಗಾಗಿ ಪೊಲೀಸ್ ಕಾನ್ಸ್‌ಟೇಬಲ್‌ನ ಗುಂಡೇಟಿಗೆ ಬಲಿಯಾದದ್ದು; ಲಾರಿಯಲ್ಲಿ ಅದನ್ನು ಹೇರಿ ಊರಿನಲ್ಲಿ ಮೆರವಣಿಗೆ ಮಾಡಿದ್ದು; ವೆಂಕಟೇಶ್ವರ ಬಡಾವಣೆಯ ಬದಿಯ ಹೆದ್ದಾರಿಯಲ್ಲಿ ಜೋಳದ ಹೊರೆ ಹೊತ್ತು ಬರುತ್ತಿದ್ದ ರೈತ ಹೆಣ್ಣುಗಳ ಮೇಲೆ ಮುಸ್ಸಂಜೆಯ ವೇಳೆ ಎರಡು ಮೂರು ಕರಡಿಗಳು ಒಮ್ಮೆಗೇ ಹಲ್ಲೆ ನಡೆಸಿ ಕಂಗಾಲಾಗಿಸಿದ್ದು—ಎಲ್ಲಿ ಈಗ ಆ ಚಿತ್ರದುರ್ಗ! ನೆನೆದಾಗ, ಏನೋ ಕಳೆದುಕೊಂಡಂತೆ ಭಾಸವಾಗುವುದರ ಜೊತೆಗೆ ಮನಸ್ಸನ್ನು ತೀವ್ರ ಸಂವೇದನೆಗೆ ಒಳಪಡಿಸುತ್ತದೆ.

ಕಳೆದ ಶತಮಾನದ ಅರವತ್ತರ ದಶಕದ ಪ್ರಾರಂಭದ ನಮ್ಮ ಚಿತ್ರದುರ್ಗದ ವಾಸದ ಇನ್ನೂ ಕೆಲವು ಸ್ಮೃತಿಗಳು ಕೆಲವೊಮ್ಮೆ ಮನಸ್ಸಿನ ತೆರೆಯ ಮೇಲೆ ಹಾದು ಹೋಗುತ್ತವೆ. ನಾವೆಲ್ಲ ಉಪನ್ಯಾಸಕರು ಸೇವಾವಧಿಯ ದೃಷ್ಟಿಯಿಂದ ಹಿರಿಯರೋ ಕಿರಿಯರೋ, ಎಲ್ಲರೂ ಖಾಕಿ ಷರಟು, ನಿಕ್ಕರ್ ಹೊಲಿಸಿ ಸ್ಕೌಟುಗಳ ಅವತಾರ ತಳೆದದ್ದು ಅಲ್ಲಿನ ಕಾಲೇಜಿನ ಒಂದು ವಿಶೇಷ. ಕೆಲವೊಂದು ಬಾರಿ ಅಧ್ಯಾಪಕರು ಯಾರು, ವಿದ್ಯಾರ್ಥಿಗಳು ಯಾರು? ಎನ್ನುವ ಗೊಂದಲ ಮೂಡುತ್ತಿತ್ತು. ನಾವಿದ್ದ ಭರತಿ ಎರಡು ವರ್ಷ ಅದೇನು ಸಂಭ್ರಮ, ಅದೇನು ಸಡಗರ, ಅದೇನು ಕಾರ್ಯಕ್ರಮಗಳು, ಅದೇನು ಪ್ರವಾಸಗಳು! ಅಧ್ಯಾಪಕರ-ವಿದ್ಯಾರ್ಥಿಗಳ ಆ ನಿಕಟತೆ, ಆಪ್ತತೆ ಅನ್ಯೋನ್ಯತೆಗಳಿಗೆ ಅದೆಷ್ಟು ಸದವಕಾಶಗಳು. ಅವರಲ್ಲಿದ್ದ ಪ್ರತಿಭೆಯನ್ನು ಬೆಳಕಿಗೆ ಹಿಡಿದು ಪ್ರದರ್ಶಿಸಲು ಅದೆಷ್ಟು ಸುಸಂಧಿಗಳು. ಜೋಗಿ ಮರಡಿ ಅರಣ್ಯ ಪ್ರದೇಶ, ಇಂಗಳದ ಹಾಳಿನ ಎತ್ತರದ ಬೋಳು ಗಿರಿಗಳ ಗಣಿ ಪ್ರದೇಶ, ಮಾರಿ ಕಣಿವೆ—ಎಷ್ಟೆಲ್ಲ ಜಾಗಗಳಿಗೆ ನಾವೆಲ್ಲಾ ದಂಡುಗಟ್ಟಿ ಹೋಗಿ ನಡೆಸಿದ ಕ್ಯಾಂಪುಗಳು, ಶಿಬಿರಾಗ್ನಿಗಳ ಲೆಕ್ಕವೆಷ್ಟು? ಅಲ್ಲೆಲ್ಲ ತಪ್ಪದೆ ನಿಸಾರರು ತಾವು ಬರೆದ ಕವನಗಳನ್ನು-ಅದರಲ್ಲೂ ಹಾಸ್ಯ ಭರಿತ ರಚನೆಗಳನ್ನು—ಪರಿಣಾಮಕಾರಿಯಾಗಿ ಓದಿ ಎಲ್ಲರನ್ನೂ ರಂಜಿಸುತ್ತಿದ್ದುದು ಇನ್ನೂ ಚಿತ್ತದಲ್ಲಿ ನಾಟಿದೆ.

ಆಗಿನ ಕಾಲದಲ್ಲಿ ಎಂ.ಜಿ.ಎಸ್. (ಪ್ರೊ. ಎಂ. ಜಿ. ಶ್ರೀನಿವಾಸರಾವ್ ಸ್ಮಾರಕ) ಮೆಮೋರಿಯಲ್ ರಾಜ್ಯ ಮಟ್ಟದ ಕ್ರೀಡೆಗಳು ಪ್ರತಿ ವರ್ಷ ನಡೆಯುತ್ತಿದ್ದವು. ಮೂರು ದಿವಸಗಳ ಆ ಜಾತ್ರೆಯಂತಹ ವಿವಿಧ ಬಗೆಯ ಕ್ರೀಡೆಗಳ ಆಕರ್ಷಕ ಕಾರ್ಯಕ್ರಮ ನಾವಿದ್ದಾಗ ೧೯೬೧ರಲ್ಲಿ ಜರುಗಿತು. ನಮ್ಮ ಕಾಲೇಜಿನ ಕ್ರೀಡಾಂಗಣ ಮದುಮಗಳ ಕಳೆ, ಸಿಂಗಾರ ತಳೆಯಿತು. ರಾಜ್ಯದ ವಿವಿಧ ಭಾಗಗಳ ಕಾಲೇಜುಗಳ ಖ್ಯಾತ ವಿದ್ಯಾರ್ಥಿ ವಿದ್ಯಾರ್ಥಿನಿ ಕ್ರೀಡಾ ಪಟುಗಳು ಪಾಲ್ಗೊಂಡಿದ್ದರು. ಬೇರೆ ಯಾವುದೇ ಮನೋರಂಜನೆ ಇರದಿದ್ದ ಆ ಕಾಲದಲ್ಲಿ ಊರಿನವರಿಗೆ ಮೂರು ದಿವಸವೂ ಹಿಗ್ಗಿನ ಸುಗ್ಗಿ. ಬೆಳಿಗ್ಗೆಯಿಂದ ಸಂಜೆವರೆಗೆ ಕ್ರೀಡೆಗಳ ನೋಟ ಮತ್ತು ಹರ್ಷೋದ್ಗಾರ. ರಾತ್ರಿ ಹತ್ತು-ಹನ್ನೊಂದರ ತನಕ ನಾಟಕ, ಹಾಡು ಇತ್ಯಾದಿ ರಂಜನೆಯ ಮೇಲೋಗರ. ಆಗ, ಕ್ರೀಡೆಗಳ ನಿರೂಪಣೆಯನ್ನು ಇಂಗ್ಲಿಷಿನಲ್ಲಿ ನಾನು, ಕನ್ನಡದಲ್ಲಿ ನಿಸಾರ್ ಮಾಡುತ್ತಿದ್ದೆವು. ಮಧ್ಯೆ ಆಗೀಗ ನಮ್ಮಿಂದ

ಯಾವು ಯಾವುದೋ ಜೋಕುಗಳು, ತಮಾಷೆಯ ಸಂದರ್ಭೋಚಿತ ಮಾತುಗಳು. ಅವುಗಳನ್ನು ಆಲಿಸಿ ನಕ್ಕು ನಲಿದವರಿಂದ ನಮಗೆ ಹೊಗಳಿಕೆಯ ಹೊನ್ನ ಶೂಲ!

ಇನ್ನೊಂದು ಸಂಗತಿ ಸಹ ಜ್ಞಾಪಕವನ್ನು ಕೆದಕುತ್ತಿದೆ: ನಿಸಾರ್ ಅವರದು ಏಕವ್ಯಕ್ತಿ ಇಲಾಖೆ. ಅಂದರೆ ಅವರೇ ಹೆಡ್ಡು, ಅವರೇ ಟೈಲು. ಅವರ ಕೊಠಡಿ ವಿಶಾಲವಾಗಿ ಇದ್ದದ್ದರಿಂದ ಮತ್ತು ಕಾಲೇಜಿನ ಕಟ್ಟಡದ ಎಡ ಭಾಗದ ಕೊನೆಯಲ್ಲಿ ಇದ್ದು ವಿದ್ಯಾರ್ಥಿಗಳ ಗದ್ದಲ ಇರದೆ ನಿಶಬ್ದವಾಗಿ ಇರುತ್ತಿದ್ದರಿಂದ, ಅದು ಭಾಷಾ ಹಾಗೂ ಕಲಾ ವಿಭಾಗದ ಅಧ್ಯಾಪಕರ ಪಾಠಗಳ ಸಿದ್ಧತೆ, ಹರಟೆಗಳಿಗೆ ಅನಧಿಕೃತ general staff room ಆಗಿತ್ತು. ಅಲ್ಲಿ ಅನೇಕ ಬಾರಿ ನಾನೂ ನಿಸಾರ್ ಬೇರೆ ಅಧ್ಯಾಪಕರಿಗೆ—ಅದರಲ್ಲೂ ಕನ್ನಡದ ಜಿ. ಗುಂಡಣ್ಣ, ಹಿಂದಿಯ ರಾಮಚಂದ್ರ ಮುಂತಾದ ಹಿರಿಯ ಅಧ್ಯಾಪಕರಿಗೆ—ತಮಾಷೆ ಮಾಡಿ ಗೋಳು ಹುಯ್ದುಕೊಳ್ಳುತ್ತಿದ್ದೆವು. ಅವರು ನಮ್ಮ ಕಿರುಕುಳಕ್ಕೆ ಬೇಸರಪಟ್ಟು ಶಾಪ ಹಾಕಿದರೂ ಕೆಲವೇ ಸಮಯದಲ್ಲಿ ಅದನ್ನೆಲ್ಲ ಮರೆತು ನಮ್ಮೊಂದಿಗೆ ಹೊಂದಿಕೊಂಡು ಬಿಡುತ್ತಿದ್ದರು. ನಿಸಾರರ ಕೊಠಡಿಗೆ ಅಂಟಿಕೊಂಡು ಜುಆಲಜಿ ಲ್ಯಾಬೊರೇಟರಿ. ಒಂದು ದಿನ ಆ ವಿಭಾಗದ ಪರಮೇಶಿ ಅನ್ನುವ ಅಟೆಂಡರ್ ಒಂದು ಮರಿ ನಾಗರ ಹಾವನ್ನು ಕಾಲೇಜಿನ ಆವರಣದಲ್ಲಿ ಹಿಡಿದು ತಂದು ಗಾಜಿನ ಪಾರದರ್ಶಕ ಜಾಡಿಯಲ್ಲಿಟ್ಟ. ಅದನ್ನು ಅಧ್ಯಾಪಕ ರಾದಿಯಾಗಿ ವಿದ್ಯಾರ್ಥಿಗಳು ಕುತೂಹಲಕ್ಕಾಗಿ ಬಂದು ನೋಡುತ್ತಿದ್ದರು. ಮಂತ್ರಿಗಳ ಸುಪುತ್ರಿ ಆಗಿನ ವಿದ್ಯಾರ್ಥಿನಿಯರಲ್ಲಿ ಒಬ್ಬಳು. ಆಕೆ ಗೆಳತಿಯರೊಂದಿಗೆ ಆ ನಾಗರವನ್ನು ನೋಡುತ್ತ, ಅದಕ್ಕೆ ಹೊರಗಿನಿಂದಲೆ ಕೀಟಲೆ ಮಾಡುತ್ತ ಇದ್ದಾಗ ಅಕಸ್ಮಾತ್ ಆ ಜಾಡಿ ಕೆಳಗೆ ಬಿದ್ದು ಒಡೆದು ಹೋಗಿ ನಾಗರ ಹಾವು ಅಲ್ಲಿಂದ ತಪ್ಪಿಸಿಕೊಂಡು ಅಲ್ಲಿದ್ದ ಬೀರುಗಳ ಕೆಳಗೆ ನುಸುಳಿಕೊಂಡಿತು. ಆ ಹುಡುಗಿಯರು ಇದಾವುದನ್ನೂ ಹೊರಗೆಡಹದೆ ಭಯಾತಂಕ ಗಳಿಂದ ಮೆಲ್ಲಗೆ ಅಲ್ಲಿಂದ ಕಾಲು ಕಿತ್ತರು. ಕೊಂಚ ಹೊತ್ತಿನ ಬಳಿಕ ಪರಮೇಶಿ ಬಂದು ನೋಡುತ್ತಾನೆ! ಅವನ ಜಂಘಾಬಲವೇ ಉಡುಗಿ ಹೋಯಿತು. ಆಗಲೇ ಸಂಜೆ ಸಮೀಪಿಸಿದ್ದ ರಿಂದ ಅವನು ಬೇರೆಯವರ ಸಹಾಯ ಪಡೆದು ಭಾರವಾದ ಅಲಮಾರುಗಳನ್ನು ಸರಿಸಿ ನೋಡುವಂತಿಲ್ಲ. ಹಾಗೇ ಬಿಟ್ಟರೆ ದಿಗಿಲಿನ ವಾತಾವರಣ ಸೃಷ್ಟಿ, ಜೊತೆಗೆ ಅಪಾಯ. ಇದನ್ನು ತಿಳಿಸಲು ಜುಆಲಜಿ ವಿಭಾಗದ ಮುಖ್ಯಸ್ಥರು ಆಗಲೇ ಮನೆಗೆ ಹೋಗಿದ್ದಾರೆ. ಅಂಥದ್ದರಲ್ಲೂ ಕೆಲವು ಕಾರಕೂನರನ್ನು, ಬೇರೆ ಇಲಾಖೆಗಳ ಅಟೆಂಡರುಗಳನ್ನು ದಮ್ಮಯ್ಯಗುಡ್ಡೆ ಹಾಕಿ ಕರೆದು ಕಷ್ಟದಿಂದ ಕೆಲವು ಅಲಮಾರುಗಳನ್ನು ಸರಿಸಿ ನೋಡಿದರೆ, ಆ ಜಂತುವಿನ ಉರುವೇ ಇಲ್ಲ. ಹತಾಶನಾಗಿ ಪರಮೇಶಿ ಲ್ಯಾಬ್‌ಗೆ ಬೀಗ ಹಾಕಿ ಮನೆಗೆ ಹೊರಟುಹೋದ.

ಮಾರನೆಯ ದಿವಸ ನಿಸಾರರ (ಜೊತೆಗೆ ನಮ್ಮೆಲ್ಲರ) ಸ್ಟಾಫ್ ರೂಮಿಗೆ ಕೂರಲು ಬಂದ ಅಧ್ಯಾಪಕರಿಗೆ ಭಯವೋ ಭಯ! ಏಕೆಂದರೆ ಮುಂಚೆ ತಿಳಿಸಿದಂತೆ, ಅದು ಪ್ರಾಣಿಶಾಸ್ತ್ರದ ಲ್ಯಾಬೊರೇಟರಿಗೆ ಅಂಟಿಕೊಂಡೇ ಇತ್ತು. ಸುತ್ತ ಇಣುಕು ನೋಟ ಬೀರಿ, ಕುರ್ಚಿಗಳ ಮೇಜಿನ ಕೆಳಗಡೆ ತಪಾಸಣೆ ನಡೆಸಿದ್ದಲ್ಲದೆ, ಇಸ್ತ್ರಿ ಕೆಡುವುದನ್ನೂ ಲೆಕ್ಕಿಸದೆ ಕಾಲುಗಳನ್ನು ಮೇಲೆತ್ತಿ ಚಕ್ಕಳ ಬಕ್ಕಳ ಹಾಕಿಕೊಂಡು ಕುರ್ಚಿಯ ಮೇಲೆ ಕೂತಿದ್ದ; ಆಗಾಗ್ಗೆ

ಕೆಳಗೆ ಹಾಗೂ ಅತ್ತಿತ್ತ ತನಿಖೆಯ ನೋಟವನ್ನೂ ಹರಿಸುತ್ತ, ಬೆಲ್ ಹೊಡೆದು ಈ ಕೊಠಡಿಯಿಂದ ಪಾಠದ ಸಿದ್ಧತೆ ಮುಗಿಸಿಕೊಂಡು ಎದ್ದು ಹೋದರೆ ಸಾಕು ಎಂದು ಕಾತರದಿಂದ ಇದ್ದ; ಇನ್ನು ಕೆಲವರು ಒಳಗಡೆ ಬರದೆ, ಕಾರಿಡಾರಿನಲ್ಲೇ ಠಳಾಯಿಸುತ್ತಿದ್ದ ದೃಶ್ಯ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಕೊನೆಗೂ ಪರಮೇಶಿಯ ಆ ಕಿರಿಯ ಬೇಟೆ ಕೈ ಹತ್ತಲಿಲ್ಲ. ಬಹುಶಃ ರಾತ್ರಿಯೇ ಅದು ಲ್ಯಾಬ್‌ನ ಬಾಗಿಲು ಸಂದಿಯಿಂದ ತನ್ನ ಸ್ವಸ್ಥಾನವಾದ ಬಯಲಿನತ್ತ ಸರಿದಿರಬೇಕು.

ಅಂತೂ ಆಗಿನ ನಮ್ಮ ಚಿತ್ರದುರ್ಗ, ಹೊರಗಿನಿಂದ ವರ್ಗವಾಗಿ ಬಂದ ನನ್ನಂಥ, ನಿಸಾರರಂಥ ಅಧ್ಯಾಪಕರ ಸ್ವರ್ಗ!

ಈ ನೆನಹು–ಬರಹವನ್ನು ಮುಂಚೆ—ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾದ ನಿಸಾರರು, ಅವರ ಕುಟುಂಬ ವರ್ಗವಾದ ಮತ್ತು ನನ್ನಂತಹ ಸ್ನೇಹಿತರ ಜೊತೆ ದೀರ್ಘ ಕಾಲ ಆನಂದಮಯವಾದ ತುಂಬು ಜೀವನವನ್ನು ನಡೆಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ವಸ್ತುವಿನ ನಿಭಾವಣೆಯಲ್ಲಿ ನೈಪುಣ್ಯ ಮುಖ್ಯ. ಯಾವ ಆಶಯಪೂರ್ತಿಗಾಗಿ ವಸ್ತುವಿನ ಯಾವ ಅಂಶ, ಸ್ವರೂಪವನ್ನು ಅಭಿವ್ಯಂಜನಗೊಳಿಸಿಕೊಳ್ಳುವುದೆಂಬ ಅಭ್ಯಾಸಜನ್ಯ ಅರಿವೇ ಔಚಿತ್ಯ. ಕಾಲಿಗೆ ಕೈಗವುಸನ್ನು, ಕೈಗೆ ಕಾಲುಚೀಲವನ್ನು ತೊಡುವುದೊ: ಕುದುರೆಗೆ ಅಂಕುಶ, ಆನೆಗೆ ಚಾವಟಿಯನ್ನು ಬಳಸುವುದೊ—ಅನೌಚಿತ್ಯ. ವಸ್ತುವಿನ ವ್ಯಾಪ್ತಿ, ಸ್ವರೂಪ, ಗುಣ ಲಕ್ಷಣಗಳಿಗೆ ಅನುಸಾರವಾಗಿ ಅದನ್ನು ತನ್ನ ವೈಯಕ್ತಿಕ ಅಗತ್ಯಗಳೊಂದಿಗೆ ಹೊಂದಿಸಿಕೊಳ್ಳುವ ಕಲೆಗಾರಿಕೆ ಲೇಖಕನಿಗೆ ಸಿದ್ಧಿಸಬೇಕಾದದ್ದು ಅತ್ಯಗತ್ಯ.

(ವಸ್ತುವಿನ ಔಚಿತ್ಯಪೂರ್ಣ ಉಪಯೋಗ)

ಅಂತಿಮ ಧ್ಯೇಯದಲ್ಲಿ ಸಾಹಿತ್ಯ ಮೌಲ್ಯಗಳ ಜೊತೆ ವ್ಯವಹರಿಸುತ್ತದೆ: ಮೌಲ್ಯಗಳನ್ನು ಸೃಷ್ಟಿಸುತ್ತದೆ. ಜ್ಞಾನ ಸಂಪತ್ತಿಗೆ ವಿಜ್ಞಾನದ ದೇಣಿಗೆ ಅಸಾಧಾರಣವಾಗಿದ್ದರೂ ಲೇಖಕನ ಜಗತ್ತು ಹೆಚ್ಚು ಮಹತ್ವದ್ದು, ವಿಸ್ತೃತವಾದದ್ದು. ಅದು ಕೇವಲ ಐಂದ್ರಿಯಿಕ ಮತ್ತು ಬಹಿರವಯವಗಳ ಸಾಹಸ ಮಾತ್ರವಾಗಿರದೆ ಆತ್ಮೀಯ ಮತ್ತು ಆಂತರಂಗಿಕ ಪಡುಹಗಳ ಸಂವೇದನಶೀಲ ಮನನವೂ ಆಗಿದೆ.

(ಸಾಹಿತ್ಯ-ವಿಜ್ಞಾನಗಳ ಹೋಲಿಕೆ)



ನಿಸಾರ್: ಅಜಾತಶತ್ರು

♦ *ಡಾ. ಸಾ. ಶಿ. ಮರುಳಯ್ಯ*
(ಸಹೋದ್ಯೋಗಿ)

ಕಲೆ ಮತ್ತು ವಿಜ್ಞಾನಗಳು ಸನಾಭಿ ಸತ್ತ್ವಗಳು. ಒಂದು ಮತ್ತೊಂದರ ಪೂರಕ ಹಾಗೂ ಪೋಷಕ ಶಕ್ತಿಗಳು. ಇವೆರಡರ ಅವಿನಾಭಾವವನ್ನು ಗುರುತಿಸಿದ ಜಗದ್ವಿಖ್ಯಾತ ದಾರ್ಶನಿಕ ಸಾಹಿತಿ ಲಿಯೋ ಟಾಲ್ಸ್‌ಟಾಯ್ ಹೇಳುತ್ತಾರೆ: 'ಕಲೆ ಮತ್ತು ವಿಜ್ಞಾನಗಳು ಮಾನವ ದೇಹದಲ್ಲಿನ ಹೃದಯ ಮತ್ತು ಶ್ವಾಸ ಕೋಶಗಳು' (Art and science are just heart and lungs in a body). ಅದರ ಅರ್ಥ ಇವೆರಡೂ ಪರಸ್ಪರ ಪ್ರಭಾವಿತಗಳೂ ಎಂದು. ಸ್ಥೂಲದೃಷ್ಟಿಗೆ ಬೇರೆ ಬೇರೆಯಾಗಿ ಕಂಡರೂ ಪರಿಣಾಮದಲ್ಲಿ ಎರಡೂ ಒಂದೇ ಗುರಿ ಉಳ್ಳವಾಗಿವೆ. ಅಂದರೆ, ಎರಡೂ ನಿಸರ್ಗದ ನಿಗೂಢ ಶಕ್ತಿಯನ್ನು ಭೇದಿಸುವ ಅಥವಾ ಸಾಕ್ಷಾತ್ಕರಿಸಿಕೊಳ್ಳುವ ಉದ್ದೇಶವುಳ್ಳವಾಗಿವೆ. ವಿಜ್ಞಾನದ್ದು ವಿಭಜನಾತ್ಮಕ (analytical) ದೃಷ್ಟಿ; ಕಲೆಯದು ಸಂಯೋಜನಾತ್ಮಕ (synthetic) ಸೃಷ್ಟಿ. ಅಣುವಿನಲ್ಲಿ ಅಣು ಪರಮಾಣು. ಎಲೆಕ್ಟ್ರಾನ್, ನ್ಯೂಟ್ರಾನ್, ಪ್ರೋಟಾನ್, ಪಾಸಿಟ್ರಾನ್‌ಗಳವರೆಗೂ ವಿಭಜಿಸಿಕೊಂಡು ಹೋಗಿ ನಿಸರ್ಗ ಸೂಕ್ಷ್ಮಾತ್‌ಸೂಕ್ಷ್ಮತಮ ವಸ್ತುವಿನಲ್ಲಿ ವಿಶ್ವ ವಿಕಾಸಕ್ಕೆ ಅಥವಾ ನಾಶಕ ಕ್ರಿಯೆಗೆ ಅತ್ಯದ್ಭುತ ಶಕ್ತಿಯನ್ನು ಹೇಗೆ ತನ್ನಲ್ಲಿ ಗರ್ಭೀಕರಿಸಿಕೊಂಡಿದೆ ಎಂಬುದನ್ನು ವಿಜ್ಞಾನಿ ಪ್ರಾಯೋಗಿಕವಾಗಿ ಪ್ರತ್ಯಕ್ಷೀಕರಿಸಿದರೆ, ಕವಿ ಅಥವಾ ಕಲಾವಿದ ತನ್ನ ಕೈಯಾರ ಸೃಷ್ಟಿಯ ಯಾವುದನ್ನೂ ಮುಟ್ಟದೆ, ಅದನ್ನು ಅಖಂಡವಾಗಿ

ದರ್ಶಿಸಿ, ತನಗಾದ ಅನುಭೂತಿಯನ್ನು ಸಾಕ್ಷೀಕರಿಸುತ್ತಾನೆ. ಇವನು ಸಸ್ಯಶಾಸ್ತ್ರಜ್ಞನಂತೆ ಹೂವೊಂದನ್ನು ಗಿಡದಿಂದ ಅಥವಾ ಬಳ್ಳಿಯಿಂದ ಕಿತ್ತು ತಂದು ಮೇಜಿನ ಮೇಲಿಟ್ಟು, ಅದರ ದಳಗಳನ್ನು ಕಿತ್ತು, ಕೇಸರವನ್ನು ಕೆಣಕಿ, ಅಂಡಾಶಯವನ್ನು ಕಿತ್ತು ಅವಾಂತರಗೊಳಿಸು ವುದಿಲ್ಲ. ಅದೇ ಹೂವನ್ನು ಕವಿ ದೂರದಿಂದಲೇ ವೀಕ್ಷಿಸಿ, 'ಓಹ್! ಸೌಂದರ್ಯಕೆಲ್ಲಂತ್ಯ?' ಎಂದು ತನಗೆ ತಾನೇ ಪ್ರಶ್ನಿಸಿ ಆ ಸ್ವಾದವನ್ನು 'ದರ್ಶನ'ದ ಮೂಲಕ ಪ್ರದರ್ಶಿಸುತ್ತಾನೆ. ಪ್ರಾಣಿ ವಿಜ್ಞಾನಿಯಂತೆ ಇವನು ಚಿಟ್ಟೆಯೊಂದನ್ನು ಹಿಡಿದು ತಂದು ಮೇಜಿನ ಮೇಲಿಟ್ಟು, ಅದರ ಪುಕ್ಕ ಕಿತ್ತು ಹೊಟ್ಟೆಯನ್ನು ಸೀಳುವುದಿಲ್ಲ. ಹೂವಿನ ಮುಂದೆ ತನ್ನ ಬಣ್ಣದ ರೆಕ್ಕೆಗಳನ್ನು ಕೆದರಿ ನವಿಲಿನಂತೆ ಜಾಗರವಾಡಿ ಹೂವನ್ನು ನಲಿಸಿ, ಒಲಿಸಿ ಅದರೆದೆಯ ಬದುವಿನಲ್ಲಿ ಕುಳಿತು ಮಧುವನ್ನು ನಲಿಯುವ ದುಂಬಿಯನ್ನು 'ಪಾತರಗಿತ್ತಿ ಪಕ್ಕ ನೋಡಿದೇನೆ ಅಕ್ಕ' ಎಂದು ಅಕ್ಕನನ್ನೂ ಅಕ್ಕಪಕ್ಕದವರನ್ನೂ ಕರೆದು ಅವರೊಡನೆ ಆನಂದವನ್ನು ಹಂಚಿಕೊಳ್ಳುತ್ತಾನೆ.

ಹೀಗೆ ವಿಜ್ಞಾನಿ ಸೂರ್ಯನಲ್ಲಿ ಕಿರಣಗಳನ್ನು, ಕಿರಣಗಳಲ್ಲಿ ಬಣ್ಣಗಳನ್ನು, ಎಲ್ಲ ಬಣ್ಣಗಳೂ ಬೆರೆತು ಆದ ಬಣ್ಣವಲ್ಲದ ಬಿಳಿ ಬಣ್ಣವನ್ನು, ಬಿಳಿ ಬಣ್ಣದಲ್ಲಿ ಬೆಳಕನ್ನು ಹೆಕ್ಕಿ ತೆಗೆಯುತ್ತಾನೆ. ಸಕಲ ಜೀವಕೋಟಿಗಳಿಗೂ ಸಸ್ಯವರ್ಗಕ್ಕೂ ಅತ್ಯಗತ್ಯವಾದ ಸೂರ್ಯ ಕಿರಣ ಗಳಲ್ಲಿರುವ Infra Red Raysಗಳನ್ನು ಗುರುತಿಸಿ, ಅವು ಜೀವಿಗಳ ದೇಹಾರೋಗ್ಯಕ್ಕೆ ಎಷ್ಟು ಅವಶ್ಯ ಎಂಬ ವೈಜ್ಞಾನಿಕ ವಿವರವನ್ನು ಕೊಟ್ಟರೆ, ಕವಿ ಅಥವಾ ಕಲಾವಿದ 'ಮೂಡಲ ಮನೆ'ಯ ಮುತ್ತಿನ ನೀರಿನ ಎರಕವ ಹೊಯ್ದ ಆ ಚೆಂಬೆಳಕನ್ನು ಕುರಿತು 'ಇದು ಬರಿ ಬೆಳಗಲ್ಲೋ ಅಣ್ಣ!' ಎಂದು ಸಹೃದಯರನ್ನು ಅಧ್ಯಾತ್ಮ ಲೋಕಕ್ಕೆ ಕೊಂಡೊಯ್ಯುತ್ತಾನೆ.

'ಭೂರ್ಭುರ್ಭುಸ್ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧೀಯೋ ಯೋನಹಃ ಪ್ರಚೋದಯಾತ್' ಎಂದು ದೇವತಾರೋಪ ಮಾಡಿ ಸೂರ್ಯನನ್ನು ಪ್ರಾರ್ಥಿಸಿ ಮನಃ ಪ್ರಾಂಜಲಗೊಳಿಸುತ್ತಾನೆ.

ವಿಜ್ಞಾನಿ ಕಲಾವಿದರ ಮಾರ್ಗಗಳು ಬೇರೆಯಾದರೂ ನಾವು ಮೊದಲೇ ನೋಡಿದಂತೆ ಇಬ್ಬರೂ ಭಿನ್ನ ವ್ಯಕ್ತಿತ್ವ ಉಳ್ಳವರಲ್ಲ. ಇಬ್ಬರೂ ಸಮ ಪ್ರಮಾಣದ ಪ್ರತಿಭಾಸಂಪನ್ನರು. ವಿಜ್ಞಾನಿಯಲ್ಲಿ ಕಲಾವಿದ ಕುಳಿತು ಕೆಲಸ ಮಾಡುತ್ತಾನೆ. ಕಲಾವಿದನಲ್ಲಿ ವಿಜ್ಞಾನಿ ಕುಳಿತು ಕೊರಗುತ್ತಾನೆ. ವಿಧಾನ ಸೌಧವನ್ನು ಕಟ್ಟುವ ವಿಜ್ಞಾನಿ, ಡ್ರಾಯಿಂಗ್ ಬರೆದುಕೊಂಡ ಕೂಡಲೇ ಅವನಲ್ಲಿ ಕಲಾವಿದ ಕೆಲಸ ಮಾಡುತ್ತಿರುತ್ತಾನೆ. ಶಿಲೆಯಲ್ಲಿ ಬೇಲೂರು ಶಿಲಾಬಾಲಿಕೆಯನ್ನು ಬಿಡಿಸುವ ಶಿಲ್ಪಿ, ಶಿಲ್ಪಶಾಸ್ತ್ರ ಅಥವಾ ಶಿಲ್ಪವಿಜ್ಞಾನವನ್ನು ಚೆನ್ನಾಗಿ ತಿಳಿದೇ ಇರುತ್ತಾನೆ. ವಿಜ್ಞಾನಿಯದು ಸಾಮೂಹಿಕ (collective art) ಕಲೆ, ಕಲಾವಿದನದು ಏಕಾಂತ ಧ್ಯಾನ ಸಮಾಧಿಯ ಸಿದ್ಧಿ. ವಿಜ್ಞಾನಿ ಲೌಕಿಕ ಅನುಕೂಲಗಳನ್ನು ಒದಗಿಸಿ ಬದುಕನ್ನು ಸುಗಮಗೊಳಿಸಿದರೆ, ಕಲಾವಿದ ಆತ್ಮಾನಂದ ಪ್ರದಾನಗೈಯುತ್ತಾನೆ. ವಿಜ್ಞಾನಿ ಪ್ರಚುರಪಡಿಸು ವುದು ನಾಗರಿಕತೆ(civilization)ಯನ್ನು; ಕಲಾವಿದ ಪ್ರಸಾರ ಮಾಡುವುದು ಸಂಸ್ಕೃತಿ (culture)ಯನ್ನು.

ಇಂತಹ ಕಲಾವಿದ ಮತ್ತು ವಿಜ್ಞಾನಿಗಳಿಬ್ಬರೂ ಏಕೀಭವಿಸಿ ಆದ ವ್ಯಕ್ತಿ ಕನ್ನಡದ ಕವಿ ಕೆ. ಎಸ್. ನಿಸಾರ್ ಅಹಮದ್. ನಿಸಾರ್ ಲೇಖಣಿ ಹಿಡಿದಾಗ ಕವಿ, ಚಾಣ ಹಿಡಿದಾಗ ಭೂ ವಿಜ್ಞಾನಿ. ಈತ ಭೂ ಗರ್ಭದ ಪದರ ಪದರಗಳ ಒಳಗಿಳಿದು, ಮಣ್ಣಿನ ಗುಣವನ್ನು ಗುರುತಿಸಿದ್ದಾನೆ. ಆತ್ಮದಾತ್ಮದೊಳಗೆ ಪ್ರವೇಶಿಸಿ ಮಾನವತೆಯ ಸೊಗಡು ಸವಿದು, ಅದರ ಹಿರಿತನವನ್ನು ಎತ್ತಿ ಹಿಡಿದಿದ್ದಾನೆ. ಇಂತಹ ವಿಶಿಷ್ಟ ವ್ಯಕ್ತಿತ್ವದ ನಿಸಾರ್ ಕಲೆ–ವಿಜ್ಞಾನಗಳ ಸವ್ಯಸಾಚಿ.

ನನ್ನ ಮತ್ತು ನಿಸಾರ್ ಸ್ನೇಹ ಪ್ರಾಚೀನವೂ ಅಲ್ಲ, ಅರ್ವಾಚೀನವೂ ಅಲ್ಲ. ಮೈಸೂರಿನಿಂದ ಬೆಂಗಳೂರಿಗೆ ಬಂದಾಗಲೆಲ್ಲಾ ಹಿರಿಯರೂ, ಪೂಜ್ಯರೂ ಆದ ಜಿ. ಪಿ. ರಾಜರತ್ನಂರವರನ್ನು ನೋಡಲು ಸೆಂಟ್ರಲ್ ಕಾಲೇಜಿಗೆ ಹೋಗುತ್ತಿದ್ದೆ. ಆಗಾಗ ನಿಸಾರ್‌ನ ಭೇಟಿ ಆಗುತ್ತಿತ್ತು. ಆದರೆ ಹೆಚ್ಚಿನ ಪರಿಚಯ ಆಗಿರಲಿಲ್ಲ. ನಾವಿಬ್ಬರೂ ಆತ್ಮೀಯರಾದದ್ದು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ. ನಿಸಾರ್ ಹಾಗೂ ಇನ್ನೂ ಕೆಲವರು ಅಧ್ಯಾಪಕರು ಶಿವಮೊಗ್ಗೆಯ 'ಗೋಪಿ ಹೋಟೆಲ್'ನಲ್ಲಿದ್ದರು. ನಾನು ಆ ಹೋಟೆಲ್ ಹಿಂಭಾಗದ ರಸ್ತೆಯಲ್ಲಿದ್ದೆ. ಸಂಜೆ ಸಾಮಾನ್ಯವಾಗಿ ಹೋಟೆಲ್‌ನಲ್ಲಿ ಇನ್ನಿತರ ಸ್ನೇಹಿತರು ನಾವು ಸೇರುತ್ತಿದ್ದೆವು. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ನಿಸಾರ್ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದು ಎಂದರೆ ಅತಿಶಯೋಕ್ತಿಯಲ್ಲ.

ನಿಸಾರ್ ಸ್ನೇಹಪರ ಜೀವಿ. ಸ್ನೇಹಿತರೆಂದರೆ ಆತನಿಗೆ ಪಂಚಪ್ರಾಣ. ಹೊಸದಾಗಿ ಒಬ್ಬ ವ್ಯಕ್ತಿಯ ಪರಿಚಯ ಮಾಡಿದರೆ, ಆತನ ಜೊತೆಯಲ್ಲೂ ನಿಸಾರ್ ನಮ್ಮೊಡನೆ ಮಾತಾಡುವಷ್ಟೇ ರೀತಿಯಲ್ಲಿ ಚಿರ ಪರಿಚಿತನೋ ಎಂಬಂತೆ ವಿಶ್ವಾಸದಿಂದ ಮಾತನಾಡಿಸುವ, ನಡೆಸಿಕೊಳ್ಳುವ ಸಜ್ಜನಿಕೆ. ಇಂತಹ ಆತ್ಮೀಯ ಗುಣವನ್ನು ನಾನು ಆತನಲ್ಲಿ ಗುರುತಿಸಿದ್ದೇನೆ. ಸ್ನೇಹ ವರ್ಧಿಸಿ ಸಲುಗೆಯ ರೂಪು ತಳೆದ ಮೇಲಂತೂ ಸ್ನೇಹಿತನಿಗಿಂತ ಹೆಚ್ಚಾಗಿ ಸೋದರನೇ ಆಗಿಬಿಡುತ್ತಾನೆ. ಮಾಸ್ತಿಯವರನ್ನು ಕುರಿತು ಆತ ಬರೆದ ಪದ್ಯವನ್ನು ಹತ್ತು ಬಾರಿ ಓದಿ ಹೇಳಿದ್ದಾನೆ. ನನ್ನ ರಮ್ಯ ಗೀತೆಗಳನ್ನು ಕೇಳಿ, 'ನಿನ್ನ ಕವಿತೆಗಳಲ್ಲಿ ತುಂಬಾ ಪ್ರಸಾದ ಗುಣ ಇದೆ' ಎಂದು ಮೆಚ್ಚುಗೆ ಸೂಚಿಸಿದ್ದಾನೆ. ನನ್ನ ನವ್ಯ ಕವನಗಳ ಬಗ್ಗೆ, 'ಇದೇನಯ್ಯ ಇವು, ಚೆನ್ನಾಗೇನೋ ಇವೆ! ಆದರೆ ಕೆಲವು ದಲಿದಂರ್ ಕಾ ಗಾನ!' ಎಂದು ಗೇಲಿ ಮಾಡಿದ್ದೂ ಉಂಟು.

ಒಮ್ಮೆ, ಅಂದರೆ ೧೯೬೮ರಲ್ಲಿ, ನನ್ನ ವಿದ್ಯಾರ್ಥಿ ಮಿತ್ರ ಕೆಮ್ಮಣ್ಣುಗುಂಡಿಯಲ್ಲಿ ಒಂದು ವಿಶಿಷ್ಟ ಸಾಹಿತ್ಯಿಕ ಕಾರ್ಯಕ್ರಮ ಏರ್ಪಡಿಸಿದ್ದ. ನಾನು ನಿಸಾರ್ ಅತಿಥಿಗಳು. ಶಿವಮೊಗ್ಗ, ತರೀಕೆರೆ, ಲಿಂಗದ ಹಳ್ಳಿಯ ಸುತ್ತಣ ಮುತ್ತಣ ಗ್ರಾಮೀಣ ಕವಿಗಳು, ಕಾವ್ಯಾಸಕ್ತರು ಪ್ರೇಕ್ಷಕರು. ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು. ಒಬ್ಬ ಹುಡುಗಿ, ಬಹಳ ಬೇಡಿ ನಿಸಾರ್ ರಚಿತ 'ಜೋಗದ ಸಿರಿ ಬೆಳಕಿನಲ್ಲಿ' ಹಾಡಿದಳು. ನಿಸಾರ್, ಆಕೆಯನ್ನು ಪಕ್ಕಕ್ಕೆ ಕರೆದು 'ನೋಡಮ್ಮಾ ಹಾಡೋಕೆ ಬರದಿದ್ದರೆ, ಓದುವುದನ್ನು ಚೆನ್ನಾಗಿ ಕಲಿತು ಓದು. ಹೀಗೆ ಕೆಟ್ಟದಾಗಿ ಹಾಡಿದರೆ ನಿನ್ನ ಗೌರವಕ್ಕೆ ಕಮ್ಮಿ. ಬೇಜಾರು ಮಾಡಿಕೋ ಬೇಡ. ಚೆನ್ನಾಗಿ ಓದು, ಕಂಠಪಾಠ ಮಾಡು. ಒಳ್ಳೆಯ ಸುಗಮ ಸಂಗೀತ ಬಲ್ಲವರಿಂದ ರಾಗ ಹಾಕಿಸಿ ಚೆನ್ನಾಗಿ ಹಾಡು.

ತಗೋ, ಈ ಕವಿತೆ ಇರೋ ಪುಸ್ತಕ ನಿನ್ನಲ್ಲಿರಲಿ, ನಿನಗೆ ಒಳ್ಳೆಯದಾಗಲಿ' ಎಂದು ಮೃದುವಾದ ಮಾತುಗಳಲ್ಲಿ, ಕೆಟ್ಟದಾಗಿ ಹಾಡಿದವಳಿಗೆ ಖುಷಿ ಬರಿಸಿ ಕಳುಹಿಸಿದ್ದುಂಟು.

ಇದೇ ರೀತಿ ನಾವು ಯಾರಾದರೂ ತಪ್ಪು ಮಾಡಿದರೆ, ಆಡಿದರೆ ಮುಖಾ ಮುಲಾಜಿಲ್ಲದೆ ನೇರವಾಗಿ ಖಂಡಿಸುವ ಸ್ವಭಾವ ನಿಸಾರನದು.

ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ನಾವು ಕೆಲವರು ಸೇರಿ ಒಂದು 'ಸ್ಟಡಿ ಸರ್ಕಲ್' ಮಾಡಿಕೊಂಡೆವು. ಪ್ರತಿ ವಾರವೂ ಒಬ್ಬೊಬ್ಬರ ಮನೆಯಲ್ಲಿ ಸಂಜೆ ಸೇರಿ ಒಂದೊಂದು ಕೃತಿಯನ್ನು ಕುರಿತು ಸಂವಾದ ನಡೆಸುವುದು. ನಮ್ಮ ಮನೆಯಲ್ಲಿ, ಡಾ. ಟಿ. ಎಸ್. ಕೃಷ್ಣಮೂರ್ತಿಯವರ ಮನೆಯಲ್ಲಿ, ಮಿಕ್ಕಂತೆ ನಿಸಾರ್ ರೂಂನಲ್ಲಿ—ಹೀಗೆ ಅಧ್ಯಯನ ವ್ಯವಸ್ಥೆ. ಮೊದಲೆತ್ತಿಕೊಂಡದ್ದು ರಾಮಾಯಣ. ವಾಲ್ಮೀಕಿಯ ವೈದಿಕ ರಾಮಾಯಣ, ಬೌದ್ಧ ರಾಮಾಯಣ, ಜೈನ ರಾಮಾಯಣ, ತುಲಸಿ ದಾಸ, ಕಂಬರ್, ನಾಗಚಂದ್ರ, ಮಾಸ್ತಿ, ಕುವೆಂಪು—ಎಲ್ಲರೂ ನಮ್ಮ ಚರ್ಚೆಯಲ್ಲಿ ವಸ್ತುವಾದರು. ಸಂಸ್ಕೃತ ಪ್ರಾಧ್ಯಾಪಕ ಡಾ. ಟಿ. ಎಸ್. ಕೃಷ್ಣಮೂರ್ತಿಯವರು ಮೂಲ ರಾಮಾಯಣವನ್ನು ಓದಿ ವಿವರಿಸಿದ ಮೇಲೆ ಪ್ರತಿ ವಾರವೂ ಒಂದೊಂದು ರಾಮಾಯಣವನ್ನು ತೌಲನಿಕವಾಗಿ ನೋಡುತ್ತಿದ್ದೆವು. ಈ ಸತ್ ಸಲಹೆಯನ್ನು ಕೊಟ್ಟಾತ ನಿಸಾರ್.

ನಮ್ಮ ಶಿವಮೊಗ್ಗೆಯ ಸ್ನೇಹ ಜೀವನ ನಮ್ಮಿಬ್ಬರನ್ನೂ ಬಹಳವಾಗಿ ಬೆಸೆಯಿತು. ಆತ ಅಲ್ಲಿದ್ದಾಗಲೇ 'ನಿತ್ಯೋತ್ಸವ' ಗೀತೆ ಬರೆದದ್ದು. ನಾನೂ ಅದೇ ವೇಳೆಯಲ್ಲಿ 'ಔಪಾಸನೆ' ಎಂಬ ಕವಿತೆ ರಚಿಸಿದ್ದು. ನಾವಿಬ್ಬರೂ ಬೆಂಗಳೂರಿಗೆ ಬಂದ ಮೇಲೆ ಆಗ ತಾನೆ ಆರಂಭಗೊಂಡ ಬೆಂಗಳೂರು ದೂರದರ್ಶನ ನಿಸಾರ್ ವಿರಚಿತ 'ಜೋಗದ ಸಿರಿ ಬೆಳಕಿನಲ್ಲಿ' ಮತ್ತು ನನ್ನ 'ಸುಮ ಸುಂದರ ತರು ಲತೆಗಳ ಬೃಂದಾವನ ಲೀಲೆ' ಎಂಬ ಎರಡೂ ಹಾಡುಗಳನ್ನು ಒಂದೇ ಟೇಪಿನಲ್ಲಿ ಸೆರೆ ಹಿಡಿದು, ಇಂದಿಗೂ ಆಗಾಗ ಟೆಲಿಕಾಸ್ಟ್ ಮಾಡುತ್ತಾರೆ. ಈ ಜೋಡಿ ಕವನಗಳು ಇಂದಿಗೂ, ಎಂದೆಂದಿಗೂ ನಮ್ಮಿಬ್ಬರ ಸ್ನೇಹಕ್ಕೆ ಸಾಕ್ಷಿ ಹೇಳುತ್ತಿವೆ!

'ಕವಿಗೆ ಕವಿ ಮುನಿವಂ' ಎಂಬ ಮಾತಿದೆ ಹಳಗನ್ನಡದಲ್ಲಿ. ಕವಿ ನಿಸಾರ್ ಅದಕ್ಕೆ ಅಪವಾದ. ಈತ 'ಕವಿಗೆ ಕವಿ ಮಣಿವಂ' ಎಂಬ ಪಾಠಾಂತರ ಹುಡುಕಿದಾತ. ಇದಕ್ಕೊಂದು ನಿದರ್ಶನ.

ಒಮ್ಮೆ ಕೋಲಾರ ಜಿಲ್ಲೆಯ ಒಂದೆಡೆ ಒಂದು ಭಾರಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ. ಬೆಂಗಳೂರಿನಿಂದ ನಾನು, ನಿಸಾರ್, ಶಿವಮೊಗ್ಗ ಸುಬ್ಬಣ್ಣ ಮೊದಲಾಗಿ ಒಂದು ಬಸ್ ಜನ ಸಾಹಿತಿಗಳು ಹೋದೆವು. ಬಸ್‌ನಲ್ಲಿ ನಮ್ಮದೇ ಹಾಡು ಹರಟೆ. ಈ ಲಗ್ಗೆಯಲ್ಲಿ ದಾರಿ ಸಾಗಿದ್ದೇ ಗೊತ್ತಾಗಲಿಲ್ಲ. ಚಿಂತಾಮಣಿ ದಾಟಿ ಬಹುದೂರ ಹೋದ ಮೇಲೆ ನಿಸಾರ್‌ಗೆ ಯಾರೋ ನೆನಪಾದರು. ಕೂಡಲೇ ಛಂಗನೆ ಜಿಗಿದು. 'ಏನಪ್ಪಾ ಮರುಳಯ್ಯ ಚಿಂತಾಮಣಿ ಬಂದ ಕೂಡಲೇ ಹೇಳು' ಎಂದ. ಎಲ್ಲರೂ 'ಹೊ ಹೊ ಹೊ ಹೊ, ಚಿಂತಾಮಣಿ ಹೋಗಿ ಅರ್ಧ ಗಂಟೆ ಆಯ್ತು' ಎಂದು ಒಕ್ಕೊರಲಲ್ಲಿ ಕೂಗಿಕೊಂಡರು.

ನಿಸಾರ್ 'ಛೇ! ಎಂಥಾ ಕೆಲಸ ಆಯ್ತುರಯ್ಯ. ಅಲ್ಲೊಬ್ಬ Budding ಕವಿ ಇದ್ದಾನೆ, ಕಾಲೇಜಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದಾತ. ಬಿ. ಆರ್. ಲಕ್ಷ್ಮಣರಾವ್ ಅಂತಾ ಪ್ರತಿಭಾವಂತ. ಎಳೇ ಚಿಗುರು. ಆತನನ್ನೂ ಕರೆದುಕೊಂಡು ಹೋಗೋಣ ಅಂದುಕೊಂಡೇ ಬಂದೆ. ಮರೆತೇಬಿಟ್ಟೆ' ಎಂದು ಒದ್ದಾಡಿಕೊಂಡದ್ದು ಕವಿ ನಿಸಾರ್‌ಗೆ ಕವಿ ಮಿತ್ರರ ಬಗೆಗೆ, ಸಾಹಿತಿ ಸೋದರರ ಬಗೆಗೆ ಹಿಡಿದ ಕನ್ನಡಿ.

ನಿಸಾರ್ ಅಜಾತಶತ್ರು. ಆತ ಎಲ್ಲರ ಅಭಿಮಾನದ ಮೂರ್ತಿ. ಎಲ್ಲರ ಪ್ರೀತ್ಯಾದರದ ಬಂಧು. ಶಿವಮೊಗ್ಗೆಯಲ್ಲಿ ಯಾರ ಮನೆಗೆ ಕರೆದರೂ ನಿಸಾರ್ ಪ್ರೀತಿಯಿಂದ ಹೋಗುತ್ತಿದ್ದುದುಂಟು. ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದುದುಂಟು. ಶಿವಮೊಗ್ಗೆಯ ಹಿರಿ-ಕಿರಿಯರೆಲ್ಲರೂ ನಿಸಾರರ ಪ್ರೀತಿಯಲ್ಲಿ ಪಾಲುದಾರರು.

ನಿಸಾರ್ ಕುಳಿತು ಬರೆಯುತ್ತಿದ್ದ ಪದ್ಮನಾಭನಗರದ ಮನೆಯ ಮಹಡಿಯ ಕೊಠಡಿ ಬಾಗಿಲು ಸದಾ ತೆರೆದಿರುತ್ತಿತ್ತು. ಹೋದಾಗಲೆಲ್ಲಾ ನನ್ನಂತೆ ಎಲ್ಲರನ್ನೂ ಆತ್ಮೀಯತೆಯಿಂದ ಬರಮಾಡಿಕೊಂಡು, 'ತುಂಬಾ ಸಂತೋಷ ಈಗ ಮಾತಿಗೆ ಮೊದಲು ಒಂದು ಸ್ಪೆಷಲ್ ಟೀ' ಎಂದು ಟೀ ಮೂಲಕ ಕಾರ್ಯಕ್ರಮ ಆರಂಭಿಸುವುದು ಆತನಿಟ್ಟುಕೊಂಡಿರುವ ಪರಿಪಾಠ.

ನಿಸಾರ್ ಕಲೆ ಮತ್ತು ವಿಜ್ಞಾನಗಳಲ್ಲಿ ಸಾಮರಸ್ಯ ಸಾಧಿಸಿದಂತೆ, ಜೀವನದಲ್ಲೂ ಎಲ್ಲರೊಡನೆ ಸಾಮರಸ್ಯ ಸಾಧಿಸಿದಾತ.

ಈ ಅಭಿಮಾನದ ಮೂರ್ತಿ ಶತಾಯುವಾಗಲಿ; ಕೀರ್ತಿ ದಿಗಂತ ವಿಶ್ರಾಂತವಾಗಲಿ.

ಕವಿಯ ಜಾಯಮಾನ, ಹೃದಯ ಪರಿಷ್ಕಾರ, ವ್ಯಾಸಂಗಕ್ಕೆ ಅನುಗುಣವಾಗಿ ಭಾಷೆಯೂ ಮಾತಿನ ಮಾಂತ್ರಿಕತೆ ವೈಣಿಕತೆಗಳಲ್ಲಿ, ಅಭಿನಯಶೀಲತೆ ಒನಪು ಒಯ್ಯಾರಗಳಲ್ಲಿ ಬೇರೆಯಾಗುವ ಸಾಧ್ಯತೆಗಳನ್ನು ಹೊಂದಿರುತ್ತದೆ. ಹೀಗಾಗಿ, ನಿಜವಾದ ಕವಿ ತನ್ನ ಉತ್ತರಾಧಿಕಾರಿಗೆ ಸವಾಲಾಗುತ್ತಾನೆ. ಆತನ ಭಾಷೆಯ ಬಳಕೆಯ ಸಾಧ್ಯತೆಗಳನ್ನು ಕಡಮೆಗೊಳಿಸಿ ಅವನನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾನೆ. ಭಾಷೆಯ ಬಳಕೆ ಕವಿಯ ಮನೋಧರ್ಮಕ್ಕೆ ಹಾಗೂ ವರ್ಗೀಕರಣಕ್ಕೆ ಕೈ ಮರವಾಗುವ ನಿದರ್ಶನಗಳಿಗೆ ಕಾವ್ಯ ಜಗತ್ತಿನಲ್ಲಿ ಕೊರತೆಯಿಲ್ಲ.

(ಕವಿಯ ಭಾಷೆ)

✧ ✧ ✧

ಜನಪ್ರಿಯತೆ ಚ್ಯೂಯಿಂಗ್ ಗಂ ತರಹ. ಮೊದಮೊದಲು ರುಚಿಯಾಗಿದ್ದು ಖುಷಿ ನೀಡುತ್ತ ಬಂದದ್ದು, ಬರಬರುತ್ತ ಯಾಂತ್ರಿಕವಾದ ಅಗಿಯುವಿಕೆ ಸಪ್ಪೆ ಎನ್ನಿಸುವುದಲ್ಲದೆ ಬೇಸರ ಬರಿಸುತ್ತದೆ.

(ಜನಪ್ರಿಯತೆ)



ಶಿಲಾಕಠಿಣ ಶಿಸ್ತಿನ ಮೃದು ಮನಸ್ಸಿನ ಸಹೋದ್ಯೋಗಿ ಕವಿ

♦ ***ಪ್ರೊ. ಎಸ್. ಶ್ರೀನಿವಾಸ್***
(ಸಹೋದ್ಯೋಗಿ)

೧೯೬೭ನೆಯ ಇಸವಿ ಜೂನ್ ತಿಂಗಳಿನಲ್ಲಿ ನನಗೆ ನಿಸಾರ್ ಅಹಮದ್ ಅವರ ಪರಿಚಯವಾಯಿತು. ಗುಲ್ಬರ್ಗ ಸರ್ಕಾರಿ ಕಾಲೇಜಿನಿಂದ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿಗೆ ಆಗ ತಾನೇ ನನಗೆ ವರ್ಗವಾಗಿತ್ತು. ಕಾಲೇಜು ಪ್ರಿನ್ಸಿಪಾಲರಿಗೆ ಡ್ಯೂಟಿ ರಿಪೋರ್ಟ್ ಮಾಡಿಕೊಂಡು ಅಧ್ಯಾಪಕರ ಕೊಠಡಿಗೆ ಬಂದೆ. ಅಲ್ಲಿ ನನ್ನ ಸಹೋದ್ಯೋಗಿಗಳು ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಂಡರು. ಆಗ ನನಗೆ ನಿಸಾರ್ ಅವರ ಪರಿಚಯ ವಾಯಿತು. ಅವರನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಆದರೆ ಅವರ ಕೆಲವು ಕವನಗಳನ್ನು ಓದಿ ಖುಷಿ ಪಟ್ಟಿದ್ದೆ. ಅವರ ಕವನ ಸಂಕಲನ 'ಮನಸು ಗಾಂಧಿ ಬಜಾರು' ಮತ್ತು 'ನೆನೆದವರ ಮನದಲ್ಲಿ' ನನಗೆ ತುಂಬಾ ಮೆಚ್ಚುಗೆಯಾಗಿದ್ದವು. 'ಮುಸ್ಲಿಮ್ ಇಷ್ಟು ಚೆನ್ನಾಗಿ ಬರೆದಿದ್ದಾನಲ್ಲಾ!' ಎಂದು ಆಶ್ಚರ್ಯಪಟ್ಟು ಕೊಂಡಿದ್ದೆ. ಈಗ ಆ ಕವಿಯೇ ನನ್ನ ಸಹೋದ್ಯೋಗಿ ಎಂದು ಪರಿಚಯವಾದಾಗ ನನಗೆ ತುಂಬಾ ಸಂತೋಷವಾಯಿತು.

ಕಾಲೇಜಿನಲ್ಲಿ ತರಗತಿಗಳು ಪ್ರಾರಂಭವಾಗುವ ಮುಂಚೆ ಹಾಗು ಬಿಡುವಿನ ವೇಳೆಯಲ್ಲಿ ಅಧ್ಯಾಪಕರ ಕೊಠಡಿಯಲ್ಲಿ ಕುಳಿತು, ನಾವೆಲ್ಲ ಲೋಕಾಭಿರಾಮವಾಗಿ ಮಾತಾಡುವುದರ ಜೊತೆಗೆ ನಮ್ಮ ನಮ್ಮ ಪಠ್ಯದ ವಿಚಾರಗಳನ್ನು ಮತ್ತು ಸ್ವಂತ ವಿಷಯಗಳನ್ನು ಹೇಳಿಕೊಳ್ಳುತ್ತಿದ್ದೆವು. ಹೀಗೆ ಕ್ರಮೇಣ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶ

ವಾಯಿತು. ನಿಸಾರ್ ಅವರಿಗೆ ಅವರದೇ ಇಲಾಖೆಯ ಬೇರೆ ಕೊಠಡಿ ಇದ್ದರೂ ಸಾಮಾನ್ಯ ಕೊಠಡಿ(general staff room)ಗೆ ಆಗಾಗ್ಗೆ ಬಂದು ಇತರ ಸಹೋದ್ಯೋಗಿಗಳೊಂದಿಗೆ ಬೆರೆತು, ತಮ್ಮ ನಯ ವಿನಯ ಸಂಪನ್ನ ನಡೆ ನುಡಿಗಳಿಂದ ಎಲ್ಲರ ಪ್ರೀತಿ, ವಿಶ್ವಾಸವನ್ನು ಗಳಿಸಿದ್ದರು.

ಕಾಲೇಜಿನಿಂದ ಸ್ವಲ್ಪ ದೂರದಲ್ಲಿ ಒಂದು ಚಿಕ್ಕ ಕ್ಯಾಂಟಿನ್ ಇತ್ತು. ಬಿಡುವಿನ ವೇಳೆಯಲ್ಲಿ ನಾವು ಅಲ್ಲಿಗೆ ಚಹಾ ಕುಡಿಯಲು ಹೋಗುತ್ತಿದ್ದೆವು. ಆಗಲೂ ನಾವು ಅದೂ ಇದೂ ಮಾತಾಡುತ್ತಾ, ಪರಸ್ಪರರನ್ನು ಅರಿತುಕೊಳ್ಳಲು ಅವಕಾಶವಾಯಿತು. ನಿಸಾರ್ ಪ್ರತಿಭಾವಂತ ಕವಿಯಾಗಿದ್ದರೂ ತಮ್ಮ ಸಹೋದ್ಯೋಗಿಗಳ ಜೊತೆಯಲ್ಲಿ 'ಮಂದೆಯಲಿ ಒಂದಾಗಿ' ಚಹಾದ ಅಂಗಡಿಗೆ ಸಾಗುತ್ತಿದ್ದರು. ಅವರ ನಗು ಮುಖ, ತಿಳಿ ಹಾಸ್ಯ ಸಂಗಡಿಗರಿಗೆ ಚಹದ ಜೊತೆ ಚುರಮುರಿಯಂತೆ ಇರುತ್ತಿತ್ತು. ಸಂಗಡಿಗರೊಂದಿಗೆ ಪರಸ್ಪರ ಎಷ್ಟು ಸಲಿಗೆ ಇತ್ತೆಂದರೆ 'ಶ್ರೀನಿವಾಸ್, ಟೀ ಕೊಡಿಸಲ್ವಾ?' ಎಂದು ನಿಸಾರ್ ಕೇಳಿದರೆ, 'ನಿಂಗೇನಪ್ಪಾ ಕವಿ; ಸಹ್ಯಾದ್ರಿಯ ಸೌಂದರ್ಯ ನೋಡ್ತಾಯಿದ್ರೆ ಹೊಟ್ಟೆ ತುಂಬುತ್ತೆ; ನಮ್ಮಂತಹ ಬಡಪಾಯಿಗಳಿಗೆ ಭಟ್ಟರಂಗಡಿ ಟೀನೇ ಗತಿಯಲ್ವಾ? ಕೊಡಿಸ್ತೀನಿ' ಎಂದು ಚುಡಾಯಿಸುವ ಮಟ್ಟಿಗೆ ನಮ್ಮಲ್ಲಿ ಸಲುಗೆ ಪ್ರೀತಿ ಬೆಳೆಯಿತು.

ನಿಸಾರ್ ವಯಸ್ಸಿನಲ್ಲಿ ನನಗಿಂತ ಎರಡು-ಮೂರು ವರ್ಷ ಕಿರಿಯರು. ಆದರೆ ಅವರು ಗುಣದಲ್ಲಿ ಕಸ್ತೂರಿ; ಪ್ರತಿಭೆಯಲ್ಲಿ ಸಹ್ಯಾದ್ರಿ, ನಾನಾದರೋ ಶ್ರೀಸಾಮಾನ್ಯ!

ನಾನು ಅರ್ಥಶಾಸ್ತ್ರದ ಅಧ್ಯಾಪಕ; ಅವರು ಭೂ ವಿಜ್ಞಾನದ ಅಧ್ಯಾಪಕರು. ಅವರಿಗೂ ನನಗೂ ಯಾವುದೇ ಹೋಲಿಕೆ ಇರಲಿಲ್ಲ. ಆದರೂ ನಮ್ಮಿಬ್ಬರಲ್ಲಿ ಸ್ನೇಹ, ಆತ್ಮೀಯತೆ ಹುಟ್ಟಿ ಬೆಳೆದದ್ದು, ವಿಚಿತ್ರವೆನಿಸಬಹುದಾದರೂ ಅದು ಹೃದಯದ ಅತಿ ಆರ್ದ್ರವಾದ ಸಂಬಂಧ. ಬಹುಶಃ ಶಿವಮೊಗ್ಗೆಯಲ್ಲಿ ಆ ಕಾಲಕ್ಕೆ ಅವರಿಗೆ ಅತ್ಯಂತ ನಿಕಟವಾಗಿದ್ದವರು ಕೆಲವರೇ: ಎಸ್. ರಾಮಸ್ವಾಮಿ, ಕೆ. ಜಿ. ಸುಬ್ರಹ್ಮಣ್ಯ, ಎಚ್. ಶಿವರಾಮ ಭಟ್ಟ, ಕನ್ನಡದ ಅಧ್ಯಾಪಕಿ ಶ್ರೀಮತಿ ಲೀಲಾ ಬೆನ್ನೂರು, ಶಿವಮೊಗ್ಗ ಸುಬ್ಬಣ್ಣ ಮತ್ತು ನಾನು.

ಶಿವಮೊಗ್ಗೆಯ ದುರ್ಗಿಗುಡಿಯಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೆ. ನಿಸಾರ್ ಅವರೂ ಹತ್ತಿರದಲ್ಲೇ ಇದ್ದ ಹುತಾತ್ಮ ಶಿವಮೂರ್ತಿ ವೃತ್ತದ ಒಂದು ಮನೆಯಲ್ಲಿ ಒಬ್ಬರೇ ವಾಸಿಸುತ್ತಿದ್ದರು. ಅವರ ಮಡದಿ ಬೆಂಗಳೂರಿನಲ್ಲಿ ಶಾಲೆಯ ಹೆಡ್‌ಮಿಸ್ಟ್ರೆಸ್ ಆಗಿದ್ದರು. ನಾವಿಬ್ಬರೂ ಪ್ರತಿ ದಿನ ಬೆಳಿಗ್ಗೆ ಸುಮಾರು ಮೂರು ಮೈಲಿ ದೂರ ನವುಲೆ ಗ್ರಾಮವನ್ನು ದಾಟಿ ರಾಗಿ ಗುಡ್ಡದವರೆಗೆ 'ವಾಕ್' ಹೋಗುತ್ತಿದ್ದೆವು. ಮೊದಮೊದಲು ನಾವು ನಿಧಾನವಾಗಿ ನಡೆಯುತ್ತಿದ್ದವರು, ಬರಬರುತ್ತಾ ವೇಗವಾಗಿ ನಡೆಯಲಾರಂಭಿಸಿದೆವು. ನಮ್ಮಿಬ್ಬರಲ್ಲಿ ವೇಗವಾಗಿ ನಡೆಯುವ ಸ್ಪರ್ಧೆಯೇ ಉಂಟಾಗಿ ಅದು ನಡಿಗೆ ಅಲ್ಲ, ಓಟ ಎನ್ನುವ ಹಾಗಾಯಿತು. ಸಾಮಾನ್ಯವಾಗಿ ಹೆಚ್ಚು ಸಲ ಅವರೇ ಗೆಲ್ಲುತ್ತಿದ್ದರು. ನಾನೂ ಒಮ್ಮೊಮ್ಮೆ ನನಗಿಲ್ಲದ ಮೀಸೆಯನ್ನು ತಿರುವುತ್ತಿದ್ದೆ. ಇಷ್ಟಕ್ಕೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು; ಆದರೆ 'ವಾಕಿಂಗ್' ಮುಗಿಸಿ ವ್ಯಾಯಾಮ ಮಾಡಲು ಶುರುಮಾಡಿದೆವು; ಅದರಲ್ಲೂ

ಸ್ಪರ್ಧೆಯೇ! ಪ್ರತಿ ದಿನದ ವ್ಯಾಯಾಮದಲ್ಲೂ ದಂಡೆ, ಬಸ್ಕಿಗಳ ಸುರಿಮಳೆ ಆಗುತ್ತಿತ್ತು. ಯಥಾಪ್ರಕಾರ ಅವೆಲ್ಲದರಲ್ಲೂ ಅವರು ನನ್ನನ್ನು ಮೀರಿಸುತ್ತಿದ್ದರು. ಹೀಗೆ ಕೆಲವು ದಿನಗಳು ನಡೆಯಿತು. ಒಂದು ಬೆಳಿಗ್ಗೆ ನಿಸಾರ್ 'ವಾಕಿಂಗ್'ಗೆ ಬರಲಿಲ್ಲ. ನನಗೆ ಆತಂಕವಾಗಿ ಅವರ ಕೊಠಡಿಗೆ ಹೋಗಿ ನೋಡಿದೆ. ವಿಪರೀತ ಜ್ವರ ಬಂದು ಮಲಗಿದ್ದರು. 'ಮೈ ಕೈ ಬಹಳ ನೋವಾಗುತ್ತಿದೆ, ಮೇಲಕ್ಕೇಳಲು ಆಗುವುದಿಲ್ಲ' ಎಂದರು. ಡಾಕ್ಟರನ್ನು ಕರೆದು ತಂದು ತೋರಿಸಿ, ಸೂಕ್ತ ಔಷಧೋಪಚಾರ ಮಾಡಿದ ಮೇಲೆ ನಾಲ್ಕೈದು ದಿನಗಳಲ್ಲಿ ಗುಣವಾದರು.

ನಾವು ಪುನಃ ವಾಕಿಂಗ್ ಸ್ಪರ್ಧೆಯನ್ನಾಗಲಿ, ವ್ಯಾಯಾಮ ಸ್ಪರ್ಧೆಯನ್ನಾಗಲಿ ಮಾಡುವ ಧೈರ್ಯ ಬರಲಿಲ್ಲ. ಆದರೂ ಅವರು ಬೆಳಗಿನ 'ವಾಕಿಂಗ್'ನಿಂದ ಸ್ಫೂರ್ತಿ ಗೊಂಡು ಚೆಂದದ ಕವನಗಳನ್ನೇ ಬರೆದರು. ಅದರಲ್ಲಿ ಇಂದಿಗೂ ನಾಲ್ಕು ದಶಕಗಳು ಕಳೆದಿದ್ದರೂ ಕೆಲವು ಸುಪ್ರಸಿದ್ಧವಾಗಿವೆ. ಉಲ್ಲೇಖನೀಯ ಕವಿತೆಗಳೆಂದರೆ 'ರಾಮನ್ ಸತ್ತ ಸುದ್ದಿ', 'ಮಾಸ್ತಿ'. 'ಗಾಡಿ ಮತ್ತು ನಾಯಿ'. 'ನಾಡ ದೇವಿಯೇ ಕಂಡೆ ನಿನ್ನ ಮಡಿಲಲ್ಲಿ'. 'ಆಹಾ! ಪ್ರಾತಃಕಾಲದ ಸ್ಪರ್ಶಕೆ'.

ತಾನು ಪ್ರಸಿದ್ಧ ಕವಿ ಎಂಬ ಹೆಮ್ಮೆ ಬೀಗುಗಳನ್ನು ಎಂದೂ ಅವರಲ್ಲಿ ನಾನು ಕಾಣಲಿಲ್ಲ. ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆಯುತ್ತಿದ್ದರು. ಅವರ ಆಸಕ್ತಿಯ ವಿಷಯಗಳನ್ನು ಚರ್ಚಿಸುತ್ತಿದ್ದರು. ಎಲ್ಲರಿಂದಲೂ ಏನಾದರೊಂದು ವಿಶೇಷವನ್ನು ಕಲಿಯಬೇಕಾಗಿದೆ: ಯಾರನ್ನೂ ಅವಜ್ಞೆ ಮಾಡುವಂತಿಲ್ಲ ಎಂಬ ವಿಚಾರದಲ್ಲಿ ಅವರದು ಬಲವತ್ತರವಾದ ನಂಬಿಕೆ. ಹೀಗಾಗಿಯೇ ಅವರ ಗದ್ಯ-ಪದ್ಯ ಬರಹಗಳಿಗೆ ಅವರ ಸರೀಕ ಕವಿಗಳಲ್ಲಿ ಕಾಣದಿರುವ ವಿವಿಧತೆ, ಆಳ-ಅಗಲಗಳು ಮತ್ತು ವಾಕ್ಕಿನ ವ್ಯಾಪ್ತಿ ನಮಗೆ ಮನೋವೇದ್ಯವಾಗುವುದು. ಬರಿಯ ಧೀಮಂತ ವರ್ಗದ ಜೊತೆಗೇ ಅವರ ಒಡನಾಟ ಸಂಪರ್ಕಗಳು ಮುಗಿದಿದ್ದರೆ, ಅವರು ಇಂದು ಈ ಎತ್ತರದ ಮಟ್ಟಕ್ಕೆ ಮತ್ತು ಶಿಷ್ಟ ಜನರ ಮನ್ನಣೆಗೆ ಪಾತ್ರವಾಗುತ್ತಿರಲಿಲ್ಲ. ಅಷ್ಟಾದರೂ ನಿಸಾರ್ ಅಹಮದ್ 'ತಮ್ಮತನ'ವನ್ನು: ಚಿಂತನೆ, ಅನನ್ಯ ದೃಷ್ಟಿ ಧೋರಣೆ, ಹೃದಯವಂತಿಕೆ ಹಾಗೂ ಪ್ರಾಮಾಣಿಕತೆಗಳನ್ನು ಎಂದೂ ಬಿಡುತ್ತಿರಲಿಲ್ಲ.

ಅವರನ್ನು ಪ್ರತಿಭೆ ತಾನೇ ಸ್ವಯಂ ಸಮ್ಮತಿಸಿ ಕೈಹಿಡಿದಿದೆಯೇನೋ ಎನ್ನುವಂತೆ ಅವರು ತಮ್ಮ ಬರವಣಿಗೆ, ಭಾಷಣ, ಖಾಸಗಿ ಮಾತುಕತೆಗಳಲ್ಲಿ ಅಪೂರ್ವತನ ಮತ್ತು ನವ ನವೋನ್ಮೇಷತೆಯನ್ನು ವ್ಯಕ್ತಗೊಳಿಸುತ್ತಿದ್ದರು. ಅವರ ಕವನಗಳಲ್ಲಿ ಆ ಪ್ರತಿಭೆಯ ಪ್ರಭೆ ಚೆನ್ನಾಗಿ ಹೊಳೆಯುತ್ತದೆ.

ತಾನು ಪ್ರಸಿದ್ಧ ಕವಿಯೆಂದು ಏಕಾಂತದ ಗೂಡು ಕಟ್ಟಿಕೊಂಡು ಕುಳಿತುಕೊಳ್ಳಲಿಲ್ಲ ನಿಸಾರ್. ತಮ್ಮ ಸ್ವಂತದ ಸಾಧನೆ, ಮಹತ್ವಾಕಾಂಕ್ಷೆಗಳ ಕೂಪದಲ್ಲೇ ಸರ್ವ ಸಾರ್ಥಕ್ಯವನ್ನು ಕನಸುವ ಭಾವಜೀವಿಯಾಗಿ ಸ್ವಾರ್ಥಪರರಾಗಲಿಲ್ಲ. ಇತರರಲ್ಲಿರುವ ಗುಣವಿಶೇಷಗಳನ್ನು ಗುರುತಿಸಿ, ಅವರ ಹವ್ಯಾಸಗಳನ್ನು ಅರಿತು ಮುನ್ನಾಗಲು ಮಾರ್ಗದರ್ಶನವನ್ನು ನೀಡಿದರು. ಅದರಲ್ಲೂ ಕಾಲೇಜಿನ ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿ ಹುದುಗಿರುವ ಮೇಧಾ

ಕೌಶಲವನ್ನು, ಪ್ರತಿಭೆಯನ್ನು ಗುರುತಿಸಿ ಅವರಿಗೆ ಕವಿಗಳಾಗಲು, ಗಾಯಕ, ಗಾಯಕಿಯರಾಗಲು, ಕಲಾಕಾರರಾಗಲು, ವಾಗ್ಮಿಗಳಾಗಲು ಪ್ರೋತ್ಸಾಹ ನೀಡಿ, ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಟ್ಟರು. 'ಸಗ್ಗದ ಸಿರಿ ಬಂತು ನಮ್ಮೂರಿಗೆ', 'ನನ್ನ ನಲವಿನ ಬಳ್ಳಿ', 'ಎಲ್ಲ ಮರೆತಿರುವಾಗ', 'ಬೆಣ್ಣೆ ಕದ್ದ' ಮುಂತಾದ ಕವನಗಳನ್ನು ನಿತ್ಯೋತ್ಸವ ಕ್ಯಾಸೆಟ್ ಬರುವುದಕ್ಕೆ ಏಳೆಂಟು ವರ್ಷಗಳ ಮುಂಚೆಯೇ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತುಂಬಾ ಮಧುರವಾಗಿ ಹಾಡುತ್ತಿದ್ದರು. ಶಿವಮೊಗ್ಗೆ ಮತ್ತು ಆಸುಪಾಸಿನ ಹಲವಾರು ಊರುಗಳಲ್ಲೂ ಗಾಯನ ಮಾಡಿ ತಾವೂ ಮನ್ನಣೆ ಗಳಿಸಿದ್ದಲ್ಲದೆ, ನಿಸಾರರಿಗೂ ಗೌರವವನ್ನು ತಂದಿದ್ದರು. ಅವರ ಶಿಷ್ಯರಲ್ಲಿ ಶ್ರೀನಿವಾಸ ಉಡುಪ, ಅನಸೂಯ, ಶಾಂತಾ, ವಿಜಯ, ಮಹೇಶ್ವರಯ್ಯ ಅವರನ್ನು ಹೆಸರಿಸಬಹುದು. ನಿಸಾರ್, ಅವರಿಗೆಲ್ಲ ಸೂಕ್ತ ತರಬೇತಿ ನೀಡಿ ಹುರಿದುಂಬಿಸುತ್ತಿದ್ದರು ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಕನ್ನಡ ನಾಡಿನ ಹೆಸರಾಂತ ಗಾಯಕರಾದ ಮೈಸೂರು ಅನಂತಸ್ವಾಮಿ ಅವರಿಂದ ಅನೇಕ ಕವನಗಳನ್ನು ಹಾಡಿಸಿ 'ರಿಕಾರ್ಡ್' ಮಾಡಿಸಿದರು. ಅಂತಹ ಒಂದು ಕಾರ್ಯಕ್ರಮ ನನ್ನ ಮನೆಯಲ್ಲೇ ನಡೆಯಿತೆಂಬುದು ನನಗೆ ಹೆಮ್ಮೆಯ ವಿಚಾರ. ಇದು ನಿಸಾರ್ ಅವರು ನನ್ನ ಬಗ್ಗೆ ಇಟ್ಟಿರುವ ಪ್ರೀತಿ, ಆತ್ಮೀಯತೆಯ ಕುರುಹು ಎಂದೇ ಭಾವಿಸುತ್ತೇನೆ.

ನಮ್ಮ ಸಹ್ಯಾದ್ರಿ ಕಾಲೇಜಿನ ಬೆಳ್ಳಿ ಹಬ್ಬದ ಸಂಭ್ರಮದ ಆಚರಣೆ ನಡೆಸಬೇಕೆಂದು ಕಾಲೇಜಿನ ಪ್ರಿನ್ಸಿಪಾಲರೇ ಅಲ್ಲ, ಶಿವಮೊಗ್ಗೆಯ ಅನೇಕ ಪ್ರಖ್ಯಾತ ವ್ಯಕ್ತಿಗಳೂ ಆಶಿಸಿದ್ದರು. ಆ ಫಾಸಲೆಗೆಲ್ಲ ಮೊದಲನೆಯ ಕಾಲೇಜು ನಮ್ಮ ಈ ಸರಕಾರಿ ವಿದ್ಯಾಲಯ. ಆಗಿನಿಂದ ಈಗಿನ ತನಕ ಶಿವಮೊಗ್ಗ ಜಿಲ್ಲೆಯ ದೂರ ದೂರದ ಊರು ಮತ್ತು ಹಳ್ಳಿಗಳಿಂದ ಈ ಕಾಲೇಜಿಗೆ ಬಂದು ವ್ಯಾಸಂಗ ಮಾಡಿ, ಇಂದು ತಮ್ಮ ತಮ್ಮ ಉದ್ಯೋಗ ಕ್ಷೇತ್ರಗಳಲ್ಲಿ ಹೆಸರು ಗಳಿಸಿರುವ ವಿದ್ಯಾವಂತರು ಅದೆಷ್ಟು ಮಂದಿ ಇದ್ದಾರೊ! ಸರ್ಕಾರಿ ಕಾಲೇಜೊಂದಕ್ಕೆ ಆ ಸೀಮೆಯ ಪರ್ವತಾವಳಿಯ ಹೆಸರನ್ನು ಇಟ್ಟಂತೆ, ಆಗಿನ ಕಾಲಕ್ಕೆ ಇತರೆ ಜಿಲ್ಲಾ ಮಟ್ಟದ ನಗರಗಳಿಗೆ ಅಲ್ಲಿನ ವೈಶಿಷ್ಟ್ಯವೊಂದರ ಹೆಸರನ್ನು ಯಾರೂ ಇಟ್ಟಿರಲಿಲ್ಲವೆಂದು ನನ್ನ ಎಣಿಕೆ. ಅದೃಷ್ಟವಶಾತ್ ರಾಷ್ಟ್ರಕವಿ ಕುವೆಂಪು ಅವರ ಕೃಪೆಯಿಂದ 'ಸಹ್ಯಾದ್ರಿ' ಎನ್ನುವ ನಾಮಧೇಯ ಆ ಭದ್ರವಾದ ಕಲ್ಲು ಕಟ್ಟಡಕ್ಕೆ ಪ್ರಾಪ್ತವಾದದ್ದಲ್ಲದೆ, ಅದೊಂದು ವಿದ್ಯಾ ದಾನದ ಪವಿತ್ರ ಧಾಮವಾಗಿ ಶೋಭಿಸಿತು. ಬೆಳ್ಳಿ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ನಮ್ಮ ಕಾಲದಲ್ಲಿ ಆಚರಿಸಿದ್ದು ಸುಕೃತವೆಂದೇ ಅನೇಕರು ಭಾವಿಸಿದ್ದೆವು. ವಿವಿಧ ಬಗೆಯ ಕಾರ್ಯಕ್ರಮಗಳ ಜೊತೆಗೆ ಊರಿನಲ್ಲಿ ವಾಸವಾಗಿದ್ದ ಅನೇಕ ಹಳೆಯ ವಿದ್ಯಾಥಿ-ವಿದ್ಯಾರ್ಥಿನಿಯರು (ಹೆಚ್ಚು ಕಡಿಮೆ ಬಹಳ ಜನ ನಡುವಯಸ್ಕರು) ಕೆಲವು ಭಾವಗೀತೆಗಳನ್ನು ಸುಮಧುರವಾಗಿ ವೃಂದ ಗಾನವಾಗಿ ಹಾಡಿ ಸಭಿಕರನ್ನು ರಂಜಿಸಿದರು. ಆ ದಿವಸ ತುಂಬಾ ಯಶಸ್ಸನ್ನು ಗಳಿಸಿದ ವೃಂದಗಾನಗಳೆಂದರೆ ನನ್ನ ಮಿತ್ರ ನಿಸಾರ್ ಅಹಮದ್ ಅವರ 'ಸಗ್ಗದ ಸಿರಿ ಬಂತು ನಮ್ಮೂರಿಗೆ' ಮತ್ತು ಸಹೋದ್ಯೋಗಿ ಸಾ. ಶಿ. ಮರುಳಯ್ಯ ಅವರ 'ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ'. ಆಮೇಲಂತೂ ನಾನು ಆ ಕಾಲೇಜಿನಲ್ಲಿ ಬೋಧಿಸುತ್ತಿರುವ ವರೆಗೆ ಈ ಹಾಡುಗಳನ್ನು ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ಕ್ಲಾಸ್

ಸೋಷಿಯಲ್ಸ್‌ಗಳಲ್ಲಿ, ಕನ್ನಡ ಸಂಘದ ಇತರೆ ಕಾರ್ಯಕ್ರಮಗಳಲ್ಲಿ ಅದೆಷ್ಟು ಸಲ ಹಾಡಿದ್ದಾರೊ! ಬಹುಮಾನ ಗಿಟ್ಟಿಸಿದ್ದಾರೊ!

ರಜಾ ದಿನಗಳಲ್ಲಿ ನಿಸಾರ್ ಅವರು ತಮ್ಮ ಭೂ ವಿಜ್ಞಾನದ ವಿದ್ಯಾರ್ಥಿಗಳನ್ನು, ಸಹೋದ್ಯೋಗಿಗಳನ್ನು ಕರೆದುಕೊಂಡು ಸಹ್ಯಾದ್ರಿಯ ಘಟ್ಟಗಳಲ್ಲಿ ಸುತ್ತಾಡಿ ಅಲ್ಲಿನ ಶಿಲೆ, ಖನಿಜಗಳ ಅಧ್ಯಯನವನ್ನು ನೆರವೇರಿಸುತ್ತಿದ್ದರಲ್ಲದೆ, ರಮಣೀಯ ಸೌಂದರ್ಯವನ್ನು ಸಹ ಸವಿಯಲು ಅನುವು ಮಾಡಿಕೊಡುತ್ತಿದ್ದರು. ಆಗೆಲ್ಲಾ ವಿದ್ಯಾರ್ಥಿಗಳೊಡನೆ ಜೋಕ್ ಮಾಡುತ್ತ, ಅವರನ್ನು ನಯವಾಗಿ ಕೀಟಲೆ ಮಾಡುತ್ತ ಸುಖವಾಗಿ ಸಮಯ ಕಳೆಯುತ್ತಿದ್ದುದನ್ನು, ಒಂದೆರಡು ಸಲ ಅವರೊಡನೆ ನಾನೂ ಹೋಗಿದ್ದರಿಂದ, ಪ್ರತ್ಯಕ್ಷವಾಗಿ ಕಂಡಿದ್ದೇನೆ. ಆ ಕಾಡುಮೇಡುಗಳಲ್ಲಿ ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ಉತ್ಸಾಹ, ಲವಲವಿಕೆ, ಆಸಕ್ತಿಗಳನ್ನು ತಳೆದು ಅವರು ನಲಿಯುತ್ತಿದ್ದುದು ಇನ್ನೂ ನೆನಪಿನಲ್ಲಿ ಹಸಿರಾಗಿದೆ. ವಾಕ್ ಹೋಗುತ್ತಿದ್ದಾಗ ನಿಸಾರರು ಕೆಲವೊಮ್ಮೆ ಕಬ್ಬಿನ ಗದ್ದೆಯ ಎದುರೊ, ಕಾಲುವೆಯ ಬದಿಯಲ್ಲೊ, ಸೂರ್ಯೋದಯದ ಸಮಯದ ಪೂರ್ವಾಕಾಶದ ಮೋಡಗಳ ಬಣ್ಣದಾಟದ ಮೋಹಕ ನೋಟದಲ್ಲೊ ಪೂರ್ತಿ ತಲ್ಲೀನರಾಗಿ ಹಲವಾರು ನಿಮಿಷಗಳ ಕಾಲ ಮೌನವಾಗಿರುತ್ತಿದ್ದುದನ್ನು ನಾನು ಅನುಭವಿಸಿದ್ದೇನೆ. ಆಗ ಅವರನ್ನು ಈ ಸ್ಥಿತಿಯಿಂದ ಎಚ್ಚರಿಸದೆ, ಅವರಾಗಿಯೇ 'ಹೊತ್ತಾಯಿತು, ಹೊರಡೋಣ' ಎನ್ನುವವರೆಗೆ ಸುಮ್ಮನಿರುತ್ತಿದ್ದೆ. ಇನ್ನೊಮ್ಮೆ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಅವರು ಕಾಲೇಜಿನ 'ಟ್ರಾನ್ಸ್-ಲೋಕೋ ಅಸೋಸಿಯೇಷನ್'ನ ಅಧ್ಯಕ್ಷರಾಗಿ, ಆಗುಂಬೆ, ತೀರ್ಥಹಳ್ಳಿ ಮುಂತಾದ ಸ್ಥಳಗಳಿಗೆ ಕರೆದೊಯ್ದಾಗ ನನ್ನನ್ನೂ ಆಹ್ವಾನಿಸಿದ್ದರು. ಆಗ ಆಗುಂಬೆಯ ನೆತ್ತಿಯಲ್ಲಿ ಕುಳಿತು, ಪಡುವಣ ದಿಕ್ಕಿನ ದೂರದ ಅರಬ್ಬೀ ಸಮುದ್ರದಲ್ಲಿ ಸಂಜೆ ಸೂರ್ಯ ನಿಧಾನವಾಗಿ ಮುಳುಗುತ್ತಾ ತನ್ನ ಕಿರಣಗಳಿಂದ ಸಹ್ಯಾದ್ರಿಯ ಗಿರಿ ಕಂದರ, ವನ ವನಾಂತರಕ್ಕೆಲ್ಲ ಚಿನ್ನದ ಲೇಪನ ಮಾಡಿದ್ದ ಅಪೂರ್ವ ಸಮ್ಮೋಹಕ ದೃಶ್ಯವನ್ನು ನಾವೆಲ್ಲಾ ನೋಡಿ ಪುಳಕಿತರಾಗಿದ್ದೆವು.

ನಿಸಾರ್ ಅವರ ಅನುಗ್ರಹದಿಂದ ನಾನು ಮಹಾಕವಿ ಕುವೆಂಪು ಅವರ ಕುಪ್ಪಳಿಯ ಮನೆಯಲ್ಲಿ ಒಂದು ರಾತ್ರಿ ತಂಗಿ ಬಂದ ಸಾರ್ಥಕ ಸ್ಮೃತಿ ಹೃದಯಾಂತರಾಳದಲ್ಲಿ ಇನ್ನೂ ನೆಲಸಿದೆ. ಬದುಕಿನ ಇಂದಿನ ಜಂಜಡದಲ್ಲಿ ಶಾಂತಿ, ನೆಮ್ಮದಿಗಳನ್ನು ಕರುಣಿಸುವ ದಿವ್ಯಾಮೃತದಂತಿದೆ. ಕಲಾ ವಿಭಾಗದ ಸಹೋದ್ಯೋಗಿ ಶ್ರೀ ಡಿ. ಕೆ. ಶಿವಣ್ಣನವರನ್ನೂ ಅವರು ಕರೆದೊಯ್ದಿದ್ದರು. ಅಲ್ಲದೆ ನಮ್ಮ ಜೊತೆಗೆ ಭೌತ ವಿಜ್ಞಾನದ ಕೃಷ್ಣೇಗೌಡ ಸಹ ಬಂದಿದ್ದರು. ಕುವೆಂಪು ಅವರು ಬಾಲ್ಯದಲ್ಲಿ ಬೆಳೆದ ಅಡ್ಡಾಡಿದ ಕಾಡು-ಮೇಡುಗಳನ್ನು, ಆ ರಸ ಋಷಿಯನ್ನು ಬೆಳೆಸಿದ ಸುಂದರ ತಾಣಗಳನ್ನು ನೋಡುತ್ತಾ ನಾವೂ ಮೈ ಮರೆತೆವು. ಮಲೆನಾಡಿನ ಸೌಂದರ್ಯ ಹೇಗೋ ಹಾಗೆಯೇ ಅಲ್ಲಿನ ಜನರ ನಿರ್ಮಲ ಹೃದಯ, ಮುಗ್ಧತೆ, ಅತಿಥಿ ಸತ್ಕಾರ ನಗರವಾಸಿಗಳಾದ ನಮ್ಮನ್ನು ನಾಚಿಕೊಳ್ಳುವಂತೆ ಮಾಡಿತ್ತು. ಕುವೆಂಪು ಅವರ ಆ ಸುವಿಖ್ಯಾತ ಮನೆಯಲ್ಲಿ ಅವರ ಭಾವಚಿತ್ರ ಇಲ್ಲದಿರುವುದನ್ನು ಗಮನಿಸಿ ನಿಸಾರರು, ಮೈಸೂರಿನ ಸ್ಟುಡಿಯೊ ಒಂದರಿಂದ ಅದನ್ನು ಕಲಾವಿದ ಪಿ. ಆರ್.

ತಿಪ್ಪೇಸ್ವಾಮಿಯವರ ಮೂಲಕ ತರಿಸಿ, ಕುಪ್ಪಳಿಗೆ ಕಳಿಸಿದ್ದರು. ಆ ದೊಡ್ಡ ಭಾವಚಿತ್ರವನ್ನು ತೆಗೆಸಿ ಕಳಿಸುವ ವ್ಯವಸ್ಥೆಗೆ ನಾವೂ ಸಹ ಸಹಾಯ ನೀಡಿದ್ದನ್ನು ನೆನೆದರೆ 'ನಾವು ನಿಜಕ್ಕೂ ಭಾಗ್ಯವಂತರು' ಅನ್ನಿಸುವ ಹೆಮ್ಮೆ ಮೂಡುತ್ತದೆ. ತಾವು ಪ್ರಸಿದ್ಧ ಕವಿಯಾಗಿದ್ದರೂ ಭೂ ವಿಜ್ಞಾನದ ಮುಖ್ಯಸ್ಥರಾಗಿ ತಮ್ಮ ವೃತ್ತಿಯ ಕರ್ತವ್ಯವನ್ನು ಚಾಚೂ ತಪ್ಪದೆ ನಿರ್ವಹಿಸುತ್ತಿದ್ದರು. ತರಗತಿಗೆ ಪ್ರವೇಶಿಸುವ ಮುಂಚೆ, ಸಾಕಷ್ಟು ಅಧ್ಯಾಪನದ ಅನುಭವವಿದ್ದರೂ ಪೂರ್ವ ತಯಾರಿ ಮಾಡಿಕೊಳ್ಳದೆ ಇರುತ್ತಿರಲಿಲ್ಲ. ಈ ಮಾತನ್ನು ನನ್ನ ಪ್ರತ್ಯಕ್ಷಾನುಭವದಿಂದ ನುಡಿಯುತ್ತಿದ್ದೇನೆ. ಅವರ ವಿದ್ಯಾರ್ಥಿಗಳು ಅವರ ಶಿಸ್ತಿನ ನಡವಳಿಕೆಯನ್ನು ಕಂಡು ಅವರ ಬೆನ್ನಿನ ಹಿಂದೆ 'ಕವಿ ಹೃದಯದ ಕಲ್ಲಿನ ಮನುಷ್ಯ' ಎನ್ನುತ್ತಿದ್ದರು. ನಾನೂ ಒಮ್ಮೆ ಸಹ್ಯಾದ್ರಿ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಾಪಕ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದೆ. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸ್ಥಾನ ಮುಳ್ಳಿನ ಹಾಸಿಗೆ ಎನ್ನುವುದು ಎಲ್ಲರೂ ತಿಳಿದಿರುವ ವಿಷಯ. ಅಂತಹ ಜವಾಬ್ದಾರಿಯನ್ನು ನಾನು ಯಶಸ್ವಿಯಾಗಿ ನಿರ್ವಹಿಸಲು, ಉಪಯುಕ್ತ ಕಾರ್ಯಕ್ರಮಗಳನ್ನು ಜರುಗಿಸಲು ನಿಸಾರ್ ಕೊಟ್ಟ ಬೆಂಬಲ, ಸಲಹೆಗಳನ್ನು ನಾನು ಮರೆಯಲಾರೆ.

ಸುಮಾರು ನಾಲ್ಕು ವರ್ಷಗಳ ಕಾಲ ನಾನೂ ನಿಸಾರ್ ಆ ಕಾಲೇಜಿನಲ್ಲಿ ಒಟ್ಟಿಗಿದ್ದೆವು. ಅವರ ಸ್ನೇಹ, ಸಹವಾಸದಲ್ಲಿ ಆ ಅವಧಿ ನಾಲ್ಕು ನಿಮಿಷಗಳಂತೆ ಕಳೆದು ಹೋಯಿತು. ಇಂದಿಗೂ, ಈ ನನ್ನ ವೃದ್ಧಾಪ್ಯದಲ್ಲಿ ನಾನು ಅವರೊಡನೆ ಅನುಭವಿಸಿದ ರಸ ನಿಮಿಷಗಳನ್ನು ಮರೆತಿಲ್ಲ. ಅವರ ಹೃದಯವಂತಿಕೆ, ಸ್ನೇಹ, ಮಮತೆಯನ್ನು ನೆನಪಿಸಿಕೊಂಡಾಗ ಈ ನನ್ನ ಬಾಳಿನ ಅಂತ್ಯದ ಚಳಿಗಾಲದಲ್ಲೂ ನನ್ನ ಹೃದಯ ತುಂಬಿ ಬಂದು, ಬೆಚ್ಚಗಾಗುತ್ತದೆ. ನಿಸಾರ್ ಅವರು ಮೈಸೂರಿನ ಸಮೀಪದ ನಮ್ಮ ಹಳ್ಳಿಗೂ ಆಗಮಿಸಿ ನಮ್ಮ ಕುಟುಂಬದೊಂದಿಗೆ ಅವಿಸ್ಮರಣೀಯ ಕ್ಷಣಗಳನ್ನು ಕಳೆದದ್ದಕ್ಕೆ ನಾನು ಅವರಿಗೆ ಆಭಾರಿ. ಆಮೇಲೆ ನಾನು ಹುಣಸೂರಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲನಾಗಿದ್ದಾಗ, ಸುಮಾರು ಮೂವತ್ತೈದು ವರ್ಷಗಳ ಹಿಂದೆ ವಿಶೇಷ ಸಮಾರಂಭಗಳಿಗೆ ಮುಖ್ಯ ಅತಿಥಿಗಳಾಗಿ ಅವರನ್ನು ಆಮಂತ್ರಿಸಿದ್ದೆ. ಮತ್ತೊಮ್ಮೆ ನನ್ನ ನೆಚ್ಚಿನ ವಿದ್ಯಾರ್ಥಿ ಕಿ. ರಂ. ನಾಗರಾಜ ಮತ್ತು ಅವನ ಮಡದಿ ಕೆ. ಎನ್. ವಿಜಯಲಕ್ಷ್ಮಿ ಅವರ ಜೊತೆ ನಿಸಾರರು ಹುಣಸೂರಿಗೆ ಬಂದು ಎರಡು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡದ್ದಲ್ಲದೆ, ನನ್ನ 'ಪುಣ್ಯ ಭೂಮಿ' ಎಸ್ಟೇಟಿಗೂ ಬಂದು ಒಂದು ರಾತ್ರಿ ಕಳೆದು, ನಾನು ಅಲ್ಲಿ ಏರ್ಪಡಿಸಿದ್ದ ಗೌರವ ಸಮಾರಂಭದಲ್ಲಿ ಭಾಗವಹಿಸಿ ನನಗೆ ಮತ್ತು ನನ್ನ ಕುಟುಂಬ ಹಾಗೂ ಕಾಲೇಜಿನ ಅಧ್ಯಾಪಕ ವರ್ಗಕ್ಕೆ ಹರ್ಷ ನೀಡಿದ್ದರು. ಇಂತಹವೇ ಇನ್ನೂ ಅನೇಕ ಅನುಭವಗಳು ನನ್ನ ನೆನಪಿನ ಭಂಡಾರದಲ್ಲಿ ಅಮೂಲ್ಯವಾಗಿ ನೆಲೆಗೊಂಡಿದೆ. ಅವುಗಳನ್ನು ಚಪ್ಪರಿಸುತ್ತಾ, ಗತ ಕಾಲದ ಯಾನ ಮಾಡುವುದು ನನ್ನ ಪಾಲಿನ ಭಾಗ್ಯ ವಿಶೇಷ.

ದೇವರು ನಿಸಾರ್ ಅವರಿಗೆ ಆಯುರಾರೋಗ್ಯ ಕೊಟ್ಟು ಅವರ ಕಾವ್ಯಪ್ರತಿಭೆ ನೂರ್ಕಾಲ ಬೆಳಗುವಂತೆ ಮಾಡಲಿ; ಅವರ ಕುಟುಂಬದವರಿಗೆ ಸರ್ವದಾ ಶುಭವಾಗಲಿ.



ಎನ್.ಸಿ.ಸಿ.ದಿನಗಳ ನೆನಪಿನ ಜಾಡು ಹಿಡಿದು...

♦ ಪ್ರೊ. ಎಸ್. ಕೆಂಡಗಣ್ಣಸ್ವಾಮಿ
(ಸಹೋದ್ಯೋಗಿ)

೧೯೬೧-೬೨ರಲ್ಲಿ ನಾನು ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇವೆಯಲ್ಲಿದ್ದ ಸಮಯದಲ್ಲಿ ಗೋವ ವಿಮೋಚನೆಗೊಂಡಿತು. ಆ ಸಂಭ್ರಮವನ್ನು ಆಚರಿಸುತ್ತಲೇ ಇರುವಾಗ ಕಾಲೇಜಿಗೆ ಬೇಸಿಗೆ ರಜೆ ಕೊಡಲಾಯಿತು. ಆ ರಜೆಯ ಕಾಲ ಮುಗಿದು, ೧೯೬೨-೬೩ನೇ ಶೈಕ್ಷಣಿಕ ವರ್ಷದಲ್ಲಿ, ಅಂದರೆ ಜುಲೈ, ೧೯೬೨ರಲ್ಲಿ, ನಾನು ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿಗೆ ಮರು ನೇಮಕಗೊಂಡೆ. ಈ ಕಾಲೇಜು ಇಡೀ ರಾಜ್ಯದಲ್ಲೇ ದೊಡ್ಡದಾದ ಕಾಲೇಜು ಎಂದು ಹೆಸರು ಮಾಡಿತ್ತು. ಕಾಲೇಜಿನ ಶಿಕ್ಷಕ ವೃಂದವೂ ಹೆಸರಾಂತ ವಿದ್ವಾಂಸರಿಂದ ಕೂಡಿದ್ದು, ಅಂತಹವರ ಸಮೂಹದಲ್ಲಿ ಸೇವೆ ಸಲ್ಲಿಸುವುದು ಸೌಭಾಗ್ಯವೇ ಸರಿ ಎಂದು ಹೆಮ್ಮೆ ಪಟ್ಟು, ಅವರ ಸ್ನೇಹವನ್ನು ಗಳಿಸಿಕೊಳ್ಳಲು ತೊಡಗಿದೆ. ಮೊದಲು ಸಹಜವಾಗಿ ನನ್ನ ವಯೋಮಾನದವರೇ ಆಗಿದ್ದ ಕೆಲವು ಸಹೋದ್ಯೋಗಿಗಳ ಪರಿಚಯವಾಯಿತು. ಅಂತಹವರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿದ್ದ ದಿ. ಪಿ. ಲಂಕೇಶ್ ಅವರು ಮೊದಲ ಗೆಳೆಯರಾದರು. ಅಂದೇ ಅವರಿಗೆ ಕವಿಗಳು ಎಂಬ ದೊಡ್ಡ ಹೆಸರಿತ್ತು. ಅದೇ ಸಮಯದಲ್ಲಿ ಅಧ್ಯಾಪಕರ ಕೊಠಡಿಯಲ್ಲಿ ಎಲ್ಲರೊಡನೆ ವಿಶ್ವಾಸದಿಂದ ವರ್ತಿಸುತ್ತಿದ್ದ ಇನ್ನೊಬ್ಬ ಮಿತ್ರರೆಂದರೆ ಪ್ರೊ. ಎಂ. ಎಚ್. ಕೃಷ್ಣಯ್ಯನವರು. ಕನ್ನಡ ಸಾಹಿತ್ಯ ಮಾತ್ರವಲ್ಲದೆ, ಸಂಗೀತ,

ನಾಟಕ, ಚಿತ್ರಕಲೆ ಮುಂತಾದ ವಿಷಯಗಳಲ್ಲಿಯೂ ಆಳವಾದ ಅಧ್ಯಯನ ಮಾಡಿ, ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ಪ್ರತಿಭೆ ಇದೆ ಎಂದು ಗುರುತಿಸಿದರೆ, ಅವರಿಗೆ ಪ್ರೋತ್ಸಾಹ ಕೊಡುತ್ತಿದ್ದರು. ನನ್ನಿಂದಲೂ ನಾಟಕವನ್ನು ಬರೆಸಿ, ಕಾಲೇಜಿನ ವಾರ್ಷಿಕೋತ್ಸವ ದಲ್ಲಿ ಶಿಕ್ಷಕ ಮಿತ್ರರಿಂದ ಅದನ್ನು ಆಡಿಸಿದ್ದರು. ನಾನು ಅವರ ಬಹಳ ಹತ್ತಿರದ ಮಿತ್ರನಾದೆ. ಇದೇ ರೀತಿ ಇನ್ನೂ ಅನೇಕ ಸಹೋದ್ಯೋಗಿಗಳ ಪರಿಚಯವಾಯಿತು.

ಇದೇ ಸಮಯದಲ್ಲಿ ನವ್ಯ ಕವಿತೆಗಳ ಜೊತೆಗೆ ಭಾವಗೀತೆಗಳನ್ನು ಬರೆದು ಕವಿಗಳಾಗಿ ದೊಡ್ಡ ಹೆಸರು ಮಾಡಿದ್ದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಯುವ ಉಪನ್ಯಾಸಕರಾಗಿದ್ದರು; ಅದೂ ಭೂ ವಿಜ್ಞಾನ ವಿಭಾಗದಲ್ಲಿ! ಇದೇನು ಕಲ್ಲು, ಬಂಡೆ, ಅದಿರುಗಳ ಬಗ್ಗೆ ಪಾಠ ಹೇಳುವ ಇಲಾಖೆಯಲ್ಲಿ ಈ ಕವಿವರ್ಯ ಎಂದು ಆಶ್ಚರ್ಯದಿಂದ ಅವರನ್ನು ಕಾಣಲು ಅವರಲ್ಲಿಗೆ ಹೋದಾಗ, ಸೊಗಸಾಗಿ ಸೂಟ್ ಹಾಕಿಕೊಂಡು ಬಹಳ 'ಟ್ರಿಮ್' ಆಗಿದ್ದ ನಿಸಾರ್ ಅಹಮದ್ ಅವರು ನನ್ನನ್ನು ಬಹಳ ಆತ್ಮೀಯವಾಗಿ ಬರಮಾಡಿಕೊಂಡರು. ಅಲ್ಲಮ ಹೇಳುವಂತೆ 'ಎತ್ತಣ ಮಾಮರ—ಎತ್ತಣ ಕೋಗಿಲೆ' ಎಂದು ಅವರ ಬಗ್ಗೆ ಕಲ್ಪನೆ ಮಾಡಿಕೊಂಡಿದ್ದ ನನಗೆ, ಜೀವನೋಲ್ಲಾಸದಿಂದ ತುಂಬಿ ತುಳುಕುತ್ತಿದ್ದ ಯುವ ಪ್ರತಿಭೆಯ ಸ್ನೇಹ ಸಿಕ್ಕಿತು—ಅದೂ ಶಾಶ್ವತವಾಗಿ. ಭೂಮಿಯಲ್ಲಿರುವ ಖನಿಜ ಸಂಪತ್ತಿನಿಂದ ತಾನೆ ವಜ್ರ, ಚಿನ್ನ, ಬೆಳ್ಳಿ ಮುಂತಾದ ಅಮೂಲ್ಯ ಸಂಪತ್ತು ಹೊರ ಬಂದು ಜನತೆಯ ಕೈಸೇರುವುದು! ನಿಸಾರ್ ಅವರು ಏನೇ ಮಾಡಲಿ ಅಚ್ಚುಕಟ್ಟಾಗಿ, ಶ್ರದ್ಧೆಯಿಂದ ಮಾಡುತ್ತಿದ್ದರು. ಬಹಳ ಒಳ್ಳೆಯ ಉಪನ್ಯಾಸಕರಾಗಿದ್ದರು. ತಮ್ಮ ವಿದ್ಯಾರ್ಥಿಗಳ ಗೌರವವನ್ನು ಸಂಪಾದಿಸಿದ್ದರು; ಸಹೋದ್ಯೋಗಿಗಳ ಸ್ನೇಹ ಗಳಿಸಿದ್ದರು; ಸಾಹಿತಿಗಳ ಮನ್ನಣೆ ಗಳಿಸಿದ್ದರು. ಆ ಸಣ್ಣ ವಯಸ್ಸಿನಲ್ಲೇ ಅನೇಕ ಕವಿತೆಗಳು, ಭಾವಗೀತೆಗಳು ಮತ್ತು ಲೇಖನಗಳನ್ನು ಪ್ರಕಟಿಸಿದ್ದರು. ಅವರು ರಚಿಸಿದ ಅಂದಿನ ಕವನಗಳನ್ನು ಹಾಡಿ ಅನೇಕ ಗಾಯಕರು, ಗಾಯಕಿಯರು ಖ್ಯಾತಿ ಪಡೆದಿದ್ದರು. ಅರವತ್ತರ ದಶಕದ ಆರಂಭದಲ್ಲಿ ಅವರು ರಚಿಸಿದ 'ಮನಸು ಗಾಂಧಿ ಬಜಾರು'—ಎಂಬ ಹೊಸ ಬಗೆಯ ಕವನಗಳು ಆಗಲೇ ಚರ್ಚಿತವಾಗತೊಡಗಿದ್ದವು. ಅವರ ಸ್ನೇಹ ನನ್ನ ಮೇಲೆ ಎಷ್ಟು ಪರಿಣಾಮ ಬೀರಿತೆಂದರೆ, ನಾನೂ ಕವಿಯಾಗಲು ಪ್ರಯತ್ನ ಮಾಡಿದ್ದುಂಟು. ಚುಟುಕಗಳನ್ನು ಬರೆದು ಅವರಿಗೆ ತೋರಿಸಿ ತಿದ್ದಿಸಿಕೊಂಡದ್ದುಂಟು; ಗೇಲಿ ಮಾಡಿಸಿಕೊಂಡದ್ದೂ ಇತ್ತು. ಒಂದೆರಡು ಚುಟುಕಗಳಿಗೆ ಅವರಿಂದ 'ಶಹಭಾಸ್' ಎನ್ನಿಸಿಕೊಂಡದ್ದೂ ಉಂಟು.

ಅನಂತರದ ದಿನಗಳಲ್ಲಿ ನಮ್ಮ ಗುಂಪಿಗೆ ಮತ್ತೊಬ್ಬ ಯುವಕ ಕವಿ ಪ್ರೊ. ಕೆ. ಎಸ್. ಶಿವಪ್ಪನವರೂ ಸೇರಿಕೊಂಡರು. ಇವರು ಕನ್ನಡ ವಿಭಾಗಕ್ಕೆ ಹೊಸದಾಗಿ ನೇಮಕ ಗೊಂಡಿದ್ದರು. ಆಗಲೇ ಕೆಲವು ಕವನಗಳನ್ನು ಬರೆದು ಒಳ್ಳೆಯ ಅಭಿರುಚಿಯ ಕವಿ ಎಂದು ಹೆಸರು ಮಾಡಿದ್ದರು. ಸದಾ ಹರ್ಷದಿಂದ ನಮ್ಮ ಜೊತೆಯಲ್ಲಿದ್ದು, ಯಾವುದಕ್ಕೂ ತಲೆ ಬಿಸಿ ಮಾಡಿಕೊಳ್ಳದ ಇವರು ಸ್ಥಿತಪ್ರಜ್ಞರು.

ನಮ್ಮ ಗುಂಪಿನ ಸಂಭ್ರಮದಲ್ಲಿ ಕೆಲವು ಹಿರಿಯ ಸಹೋದ್ಯೋಗಿಗಳೂ

ಪಾಲುಗೊಳ್ಳುತ್ತಿದ್ದರು. ಬಿಡುವು ಸಿಕ್ಕಿದಾಗ ನಾವು ಎಂ. ಜಿ. ರಸ್ತೆಯಲ್ಲಿ ಅದೆಷ್ಟು ಇಂಗ್ಲಿಷ್ ಸಿನಿಮಾ ನೋಡಿದ್ದೆವೊ—ಲೆಕ್ಕಕ್ಕೆ ಸಿಗುತ್ತಿಲ್ಲ. ಕೆಲವು ಸಾರಿ ನಾವೆಲ್ಲಾ ನನ್ನ ಹಾಸ್ಟೆಲ್ ರೂಮಿನಲ್ಲಿ 'ಪಾಯಿಂಟ್' ಒಂದಕ್ಕೆ ಒಂದು ಪೈಸೆಯಂತೆ 'ರಮ್ಮಿ' ಆಡುತ್ತಿದ್ದೆವು ಕೂಡ. ಆ ಸಮಯದಲ್ಲಿ ನಾವು ಚರ್ಚಿಸದ ವಿಷಯಗಳೇ ಇರಲಿಲ್ಲ. ಆದರೆ ಈ ಆಟದಲ್ಲಿ ಕೃಷ್ಣಯ್ಯನವರು ಕೇವಲ ಪ್ರೇಕ್ಷಕರು; ಆಟಕ್ಕೆ ಎಂದೂ ಸೇರುತ್ತಿರಲಿಲ್ಲ. ಇಂತಹ ಸಡಗರದ ದಿನಗಳಲ್ಲಿ ಕೆಲವು ಸಾರಿ ಸಣ್ಣ ಪುಟ್ಟ ವಿಷಯಗಳಲ್ಲೂ ಭಿನ್ನಾಭಿಪ್ರಾಯ ತಾಳಿ, ನಾವು ಮುನಿಸಿಕೊಳ್ಳುತ್ತಿದ್ದುದು, ಆದರೆ ಒಂದೆರಡು ದಿನಗಳಲ್ಲೇ ರಾಜಿಮಾಡಿಕೊಳ್ಳುತ್ತಿದ್ದುದು—ಎಂದೂ ಮರೆಯಲಾಗದ ಸವಿ ನೆನಪು.

ಇಂತಹ ಸಂತಸದ ದಿನಗಳಲ್ಲೇ ಚೀನಾ ದೇಶ ನಮ್ಮ ದೇಶದ ಮೇಲೆ ೧೯೬೨ರ ಅಕ್ಟೋಬರ್‌ನಲ್ಲಿ ಆಕ್ರಮಣ ಮಾಡಿ, ನಮ್ಮ ಗಡಿ ಪ್ರದೇಶಗಳನ್ನು ಸ್ವಾಹಾ ಮಾಡಿಕೊಂಡಿತ್ತು. 'ಹಿಂದಿ-ಚೀನಿ ಭಾಯಿ-ಭಾಯಿ' ಎಂದುಕೊಂಡೇ ನಮ್ಮ ಭಾರತದ ಬೆನ್ನಲ್ಲಿ ಚೂರಿ ಹಾಕಿತ್ತು; ನಂಬಿಕೆ ದ್ರೋಹ ಮಾಡಿತ್ತು. ನವೆಂಬರ್ ತಿಂಗಳಲ್ಲಿ ತಾನಾಗಿಯೇ ಏಕಪಕ್ಷೀಯವಾಗಿ ಕದನ ವಿರಾಮವನ್ನೂ ಪ್ರಕಟಿಸಿತು. ದೇಶದ ಜನತೆಗೆ ಬರ ಸಿಡಿಲು ಬಡಿದಂತಾಗಿತ್ತು. ಇಂತಹ ಸಂದರ್ಭದಲ್ಲಿ ಇಡೀ ದೇಶವೇ ಎಚ್ಚೆತ್ತುಕೊಂಡು, ರಾಷ್ಟ್ರ ಗೌರವವನ್ನು ಕಾಪಾಡಲು ಜನತೆ ಒಂದಾಯಿತು. ಅದರಲ್ಲೂ ಯುವ ಜನಾಂಗವಂತೂ ಸರ್ವ ತ್ಯಾಗಕ್ಕೂ ತಯಾರಾಗಿದ್ದು ದೇಶದ ಮೇಲಾಗಿದ್ದ ಚೀನೀ ಆಕ್ರಮಣವನ್ನು ಎದುರಿಸಲು ತಮ್ಮ ತುದಿಗಾಲಿನಲ್ಲಿ ನಿಂತಿದ್ದಿತು. ಇಂತಹ ಪರ್ವ ಕಾಲದಲ್ಲಿ, ಭಾರತ ಕೇಂದ್ರ ಸರ್ಕಾರ ತ್ವರಿತ ಗತಿಯಲ್ಲಿ ಕೆಲವು ಪ್ರಮುಖ ನಿರ್ಧಾರಗಳನ್ನು ಪ್ರಕಟಿಸಿತು. ಅವುಗಳಲ್ಲಿ ಒಂದು—ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಶೈಕ್ಷಣಿಕ ವರ್ಷದಿಂದಲೇ ಎನ್.ಸಿ.ಸಿ.—ಸೈನಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವುದು.

ಈ ಸಮಯದಲ್ಲಿ ಎನ್.ಸಿ.ಸಿ. ಶಿಕ್ಷಣವನ್ನು ಕಡ್ಡಾಯಗೊಳಿಸಿ ಆದೇಶವನ್ನೇನೋ ಹೊರಡಿಸಲಾಯಿತಾದರೂ ಅದಕ್ಕೆ ಬೇಕಾದ ಮುಖ್ಯ ಸೌಲಭ್ಯಗಳು ಇರಲಿಲ್ಲವಾದ್ದರಿಂದ, ಅತ್ಯಂತ ತರಾತುರಿಯಲ್ಲಿ ಈ ಬಗ್ಗೆ ಗಮನ ಕೊಡಬೇಕಾಗಿತ್ತು. ಆ ಸಮಯದಲ್ಲಿದ್ದ ಕೆಲವೇ ಕೆಲವು ಎನ್.ಸಿ.ಸಿ. ಅಧಿಕಾರಿಗಳಿಂದ ಇಡೀ ವಿದ್ಯಾರ್ಥಿ ಸಮುದಾಯಕ್ಕೇ ಈ ರೀತಿಯ ಶಿಕ್ಷಣ ಕೊಡಲು ಸಾಧ್ಯವಿರಲಿಲ್ಲ. ಆದ್ದರಿಂದ ಬಹು ಸಂಖ್ಯೆಯಲ್ಲಿ ಶಿಕ್ಷಕ-ಶಿಕ್ಷಕಿಯರಿಗೆ ಆ ಬೇಸಿಗೆ ರಜದ ಸಮಯದಲ್ಲಿ ಟ್ರೈನಿಂಗ್ ಕೊಡಿಸಿ ಅವರನ್ನು ಅಣಿಗೊಳಿಸುವ ಏರ್ಪಾಡಾಗಬೇಕಿತ್ತು. ಈ ಎಲ್ಲಾ ಕೆಲಸ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕಿತ್ತು.

ಇಂತಹ ಸನ್ನಿವೇಶದಲ್ಲಿ, ನಾವು ಕೆಲವು ಸಹೋದ್ಯೋಗಿಗಳು ಎನ್.ಸಿ.ಸಿ. ಟ್ರೈನಿಂಗ್ ಪಡೆಯಲು ಸಂಕಲ್ಪಿಸಿದೆವು. ಅವರಲ್ಲಿ ಸರ್ವಶ್ರೀ ಕೆ. ಚಂದ್ರಶೇಖರ ರಾವ್, ದಿ. ಟಿ. ವೈ. ರಾಮಚಂದ್ರ, ಕೆ. ಎಸ್. ನಿಸಾರ್ ಅಹಮದ್ ಮತ್ತು ನಾನು ಅರ್ಜಿಗಳನ್ನು ಸಲ್ಲಿಸಿದೆವು. ತಕ್ಷಣ ೧೨ನೆಯ ಮೈಸೂರು ಎನ್.ಸಿ.ಸಿ. ಬೆಟಾಲಿಯನ್‌ನಿಂದ ಕರೆ ಬಂದಿತು. ಆಗ ಈ

ಬೆಟಾಲಿಯನ್ ಇಡೀ ರಾಜ್ಯದಲ್ಲೇ ಅತಿ ದೊಡ್ಡದೆನಿಸಿತ್ತು; ಬಹಳ ಹೆಸರು ಮಾಡಿತ್ತು. ನಮ್ಮ ಕಾಲೇಜಿನ ಎನ್.ಸಿ.ಸಿ. ಚಟುವಟಿಕೆಗಳನ್ನು ಈ ಬೆಟಾಲಿಯನ್ ನಿರ್ವಹಿಸುತ್ತಿತ್ತು. ಬೆಟಾಲಿಯನ್ ಆಫೀಸಿಗೆ ಕಮಾನ್‌ಡೆಂಟ್ ಸಾಹೇಬರನ್ನು ಭೇಟಿಯಾಗಲು ತೆರಳಿ ಅಲ್ಲಿ ನೋಡುತ್ತೇವೆ—ಸೈನ್ಯದ ಸಮವಸ್ತ್ರದಲ್ಲಿ, ಅಂದಿನ ಇಂಗ್ಲಿಷ್‌ನ ಮೇರು ನಟ 'ಯೂಲ್ ಬ್ರಿನ್ನರ್'ನನ್ನು ಹೋಲುವ ಹಿರಿಯರೊಬ್ಬರು ಕುಳಿತಿದ್ದಾರೆ! ಅದೇ ತರದ ಬೋಳು ತಲೆ; ನುಣ್ಣಗಿನ ಮುಖ. ಆಮೇಲೆ ನಮಗೆ ಗೊತ್ತಾದದ್ದು ಅಂದರೆ, ಅವರು ಎರಡನೆಯ ಮಹಾ ಯುದ್ಧದಲ್ಲಿ, ಬರ್ಮದಲ್ಲಿ ಯುದ್ಧ ಕೈದಿಯಾಗಿದ್ದಾಗ, ನಮ್ಮ ಇಡೀ ತಲೆ ಕೂದಲು ಮತ್ತು ಗಡ್ಡ ಮೀಸೆಗಳನ್ನು ಕಳೆದು ಕೊಂಡಿದ್ದರು. ಅವರು ಗಂಭೀರ ವದನರಾಗಿ, ಆದರೆ ಅತ್ಯಂತ ಸ್ನೇಹಪರತೆಯಿಂದಲೆ ಬರಮಾಡಿಕೊಂಡರು. ಅವರೇ ಅಚ್ಚಕನ್ನಡಿಗರಾದ ಬೆಟಾಲಿಯನ್ ಕಮಾಂಡರ್ ಮೇಜರ್ ಎಂ. ಆರ್. ನಾರಾಯಣಸಿಂಗ್. ಮುಂದಿನ ದಿನಗಳಲ್ಲಿ ನಮ್ಮ ನಾಯಕರಾಗಿ ಅವರು ನಮಗೆಲ್ಲಾ ಪ್ರಾತಃಸ್ಮರಣೀಯರೆನಿಸಿದರು. ಭೇಟಿ ಮಾಡಿದ ಅನಂತರ, ಸಾಹೇಬರು ನಮ್ಮೆಲ್ಲರ ಅರ್ಜಿಗಳನ್ನು ತಮ್ಮ ಶಿಫಾರಸ್‌ನೊಡನೆ ಮೈಸೂರು ವಿಶ್ವ ವಿದ್ಯಾಲಯಕ್ಕೆ ಕಳುಹಿಸಿ ಕೊಟ್ಟರು. (ಆ ದಿನಗಳಲ್ಲಿ ಇನ್ನೂ ನಮ್ಮ ಬೆಂಗಳೂರು ವಿಶ್ವ ವಿದ್ಯಾಲಯದ ಸ್ಥಾಪನೆಯಾಗಿರಲಿಲ್ಲ.) ಅಲ್ಲಿ ನಮ್ಮ ಸಂದರ್ಶನವನ್ನು ಏರ್ಪಾಡು ಮಾಡಲಾಗಿತ್ತು. ಅಂದಿನ ಕುಲಪತಿಯವರು ನಮ್ಮನ್ನೆಲ್ಲಾ ಆಯ್ಕೆ ಮಾಡಿದರು. ಬೇಸಿಗೆಯ ರಜದಲ್ಲಿ, ಅಂದರೆ ೧೯೬೩ನೆಯ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ, ನಮ್ಮನ್ನು ಎನ್.ಸಿ.ಸಿ. ಟ್ರೈನಿಂಗ್‌ಗೆ ಸಿಕಂದರಾಬಾದಿಗೆ ಕಳಿಸಿಕೊಡುವ ಬಗ್ಗೆ ಸರ್ಕಾರದಿಂದಲೂ ಅನುಮತಿ ದೊರಕಿತು.

ಎನ್.ಸಿ.ಸಿ. ಬೆಟಾಲಿಯನ್ ಆಫೀಸಿನಿಂದ ನಾವು ಪ್ರಯಾಣ ಮಾಡಬೇಕಾದ ದಿನವನ್ನು ತಿಳಿಸಲಾಯಿತು. ನಾವು ಟ್ರೈನಿಂಗ್‌ಗೆ ಪ್ರಯಾಣ ಮಾಡುವ ಮುನ್ನ ತೆಗೆದುಕೊಳ್ಳಬೇಕಾದ ಬಟ್ಟೆಗಳು, ಸಮವಸ್ತ್ರ, ಟೋಪ್ಪಿಗಳು, ಶೂಸ್‌ಗಳು ಮುಂತಾದ ಎಲ್ಲಾ ವಿವರಗಳನ್ನು ಪಟ್ಟಿಮಾಡಿ ತಿಳಿಸಲಾಗಿತ್ತು. ಅವುಗಳನ್ನು, ಅಂದು ಬಹಳ ಹೆಸರು ಮಾಡಿದ್ದ 'ಆರ್ಮಿ ಸ್ಟೋರ್'ನಲ್ಲಿ ಖರೀದಿಸಿದೆವು. ಪ್ರಯಾಣದ ಸಮಯ ಬಂದೇ ಬಿಟ್ಟಿತು. ರೈಲು ಪ್ರಯಾಣಕ್ಕೆ ಬೆಟಾಲಿಯನ್‌ನಿಂದಲೇ ರಿಸರ್ವ್ ಮಾಡಿಸಿದ್ದರು. ಸಿಕಂದರಾಬಾದಿಗೆ ತಲಪಲು ಅಂದಿನ ರೈಲಿಗೆ ಒಂದು ದಿನ ಮತ್ತು ಇಡೀ ರಾತ್ರಿ ಬೇಕಿತ್ತು! ಅಲ್ಲಿಗೆ ತಲಪಿದಾಗ ಬೆಳಗ್ಗೆ ಸುಮಾರು ೫-೬ರ ಸಮಯ. ರೈಲ್ವೆ ನಿಲ್ದಾಣದಲ್ಲಿ ನಮ್ಮನ್ನು ಟ್ರೈನಿಂಗ್ ಕ್ಯಾಂಪ್‌ನ ಕಮಾನ್‌ಡೆಂಟ್ ಅವರ ಪರವಾಗಿ ಬರಮಾಡಿಕೊಳ್ಳಲಾಯಿತು. ಅವರ ಮಿಲಿಟರಿ ಟ್ರಕ್ಕು ಗಳಲ್ಲಿ ನಮ್ಮ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿದ್ದರು. ಉಸ್ಮಾನಿಯಾ ವಿಶ್ವವಿದ್ಯಾಲಯದ ಸುಂದರವಾದ ಕ್ಯಾಂಪಸ್‌ನಲ್ಲಿ ನಮ್ಮ ಟ್ರೈನಿಂಗ್‌ಅನ್ನು ಏರ್ಪಡಿಸಿದ್ದರು. ನಮ್ಮ ವಾಸ್ತವ್ಯಕ್ಕೆ ಅಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿ ಅವಕಾಶ ಮಾಡಿಕೊಟ್ಟಿದ್ದರು.

ಪ್ರಯಾಣದ ಆಯಾಸವನ್ನು ನಿವಾರಿಸಿಕೊಳ್ಳೋಣ; ಸ್ವಲ್ಪ ವಿಶ್ರಮಿಸೋಣ ಎಂದು ಕೊಂಡಿದ್ದಾಗಲೇ ನಮ್ಮ ಕೊಠಡಿಗಳಿಗೆ ಮಿಲಿಟರಿ ಸಮವಸ್ತ್ರದಲ್ಲಿದ್ದ ಅಧಿಕಾರಿಗಳನ್ನು ಕಳುಹಿಸಿ, ನಾವೆಲ್ಲಾ ಬೆಳಿಗ್ಗೆ ೧೦-೩೦ಕ್ಕೆ ಸರಿಯಾಗಿ ಪೆರೇಡ್ ಮೈದಾನದಲ್ಲಿ ಹಾಜರಾಗ

ಬೇಕೆಂದು ಆದೇಶ ನೀಡಲಾಯಿತು. ಅಲ್ಲಿ ಬೆಟಾಲಿಯನ್ ಅಧಿಕಾರಿಗಳೆಲ್ಲಾ ಸಮಯಕ್ಕೆ ಸರಿಯಾಗಿ ಹಾಜರಾಗಿದ್ದರು. ನಾವೂ ಸರಿಯಾಗಿ ಬೆಳಿಗ್ಗೆ ೧೦-೩೦ ಗಂಟೆಗೆ ಹಾಜರಿರುವಂತೆ ಅಧಿಕಾರಿಗಳು ನೋಡಿಕೊಂಡರು. ಸಮಯದ ಕ್ಲುಪ್ತವಾದ ಪರಿಪಾಲನೆ ಮತ್ತದರ ಸರಿಯಾದ ಉಪಯೋಗವನ್ನು ಮನವರಿಕೆ ಮಾಡಿಕೊಳ್ಳಬೇಕಾದರೆ ಸೈನ್ಯದ ತರಬೇತಿಗೆ ಸೇರಿಕೊಳ್ಳಬೇಕು. ನಮ್ಮನ್ನು 'ಸ್ಕ್ವಾಡ್'ಗಳಾಗಿ ವಿಂಗಡಿಸಲಾಯಿತು. ಪ್ರತಿಯೊಬ್ಬರಿಗೂ ಒಂದೊಂದು ನಂಬರ್ ಕೊಡಲಾಯಿತು. ಇನ್ನು ಮುಂದೆ ನಮ್ಮ ಪರಿಚಯವನ್ನು 'ಸ್ಕ್ವಾಡ್ ಮತ್ತು ನಂಬರ್' ಹೇಳುವ ಮೂಲಕ ಮಾಡಿಕೊಳ್ಳಬೇಕೆಂದು ತಿಳಿಸಲಾಯಿತು. ನಮ್ಮ ಈ ತಂಡಗಳಿಗೆ ಮಿಲಿಟರಿ ಟ್ರೈನಿಂಗ್ ಕೊಡುವ ಅಧಿಕಾರಿಗಳು ಯಾರು? ನಮ್ಮ ತಂಡಕ್ಕೆ ನಮ್ಮಲ್ಲೇ ಯಾರು ನಾಯಕರು? ಎಂದು ಅಪ್ಪಣೆ ಕೊಡುವಂತೆ ತಿಳಿಸಲಾಯಿತು. ಸೋಮವಾರದಿಂದ ಶನಿವಾರದ ಮಧ್ಯಾಹ್ನದ ಅವಧಿಗೆ ನಮ್ಮ ಮಿಲಿಟರಿ ಕಸರತ್ತಿನ ಕಾರ್ಯಕ್ರಮಗಳ ವಿವರಗಳನ್ನು ತಿಳಿಸಲಾಯಿತು. ಮುಂದಿನ ವಾರಗಳಲ್ಲಿ ಈ ತರಬೇತಿಯ ಕಾರ್ಯಕ್ರಮಗಳನ್ನು ನೋಟೀಸ್ ಬೋರ್ಡ್ ನೋಡಿಕೊಂಡು, ಅದರಂತೆ ತಪ್ಪದೆ ನಡೆದುಕೊಳ್ಳಬೇಕು; ಕ್ಯಾಂಪ್‌ನಲ್ಲಿ ನೀಡುವ ಎಲ್ಲಾ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸಬೇಕು ಎಂದು ಕಮಾನ್‌ಡೆಂಟ್ ಸಾಹೇಬರು ತಮ್ಮ ಮಿಲಿಟರಿ ಗತ್ತಿನಲ್ಲಿ ತಿಳಿಸಿದರು. ಕೊನೆಯಲ್ಲಿ 'ಸ್ನೇಹಿತರೆ, ಈ ದಿನ 'ಲಂಚ್' ಆದ ತಕ್ಷಣ ನಿಮ್ಮ ಹೇರ್‌ಸ್ಟೈಲ್‌ಗಳನ್ನು ಮಿಲಿಟರಿ ಸ್ಟೈಲ್‌ಗೆ ಬದಲಾಯಿಸಿಕೊಳ್ಳಬೇಕು. ಅದಕ್ಕಾಗಿ ನಿಮ್ಮ ರೂಂಗಳ ಮುಂದೆಯೇ ಏರ್ಪಾಡು ಮಾಡಲಾಗಿದೆ. ಇದು ಸರ್ವರಿಗೂ ಕಡ್ಡಾಯ' ಎಂದು ತಮ್ಮ ಮಾತುಗಳನ್ನು ಮುಗಿಸಿದರು. ಆ ದಿನ ನಮ್ಮ ಕೇಶ ರಾಶಿಗೆ ಮಿಲಿಟರಿ ಟ್ರೈನಿಂಗ್‌ನ ಮಿಶಿನ್ ಕಟ್ಟಿಂಗ್‌ನ ದಬ್ಬಾಳಿಕೆ ನಡೆಯಿತು. ನಮ್ಮ ಕೆಡೆಟ್-ಆಫೀಸರ್ ನಿಸಾರ್ ಅಹಮದ್ ಅವರ ಗುಂಗುರು ತಲೆಗೂದಲುಗಳು ಕಂಗೆಟ್ಟು ನೆಲಕ್ಕುರುಳಿದವು. ಅವರನ್ನು ನಾನು ನೋಡಿ ಗಹಗಹಿಸಿ ನಕ್ಕರೆ, ಅವರು 'ಯಾವ ಸರ್ಕಸ್‌ನಿಂದ ತಪ್ಪಿಸಿಕೊಂಡು ಬಂದೆಯೋ ಸ್ವಾಮಿ' ಎಂದು ಹೊಟ್ಟೆ ಹುಣ್ಣಾಗುವಷ್ಟು ನಕ್ಕರು. ಹೀಗೆಯೇ, ಒಬ್ಬರನ್ನೊಬ್ಬರು ತಮಾಷೆ ಮಾಡಿ ನಗುವುದೇ ಆಯಿತು ಆ ದಿನವೆಲ್ಲಾ. ಯುವಕರಾದ ನಿಸಾರ್ ಮತ್ತು ನನ್ನೊಂದಿಗೆ ಡಾ. ಪ್ರಭುಶಂಕರ, ಪ್ರೊ. ಅಮೀರ್ ಅಹಮದ್ ಅಂಥ ಹಿರಿಯ ಅಧ್ಯಾಪಕರು ಸಹ ಕೆಡೆಟ್‌ಗಳಾಗಿ ಇದ್ದದ್ದು ಒಂದು ವಿಶೇಷ.

ನಮಗೆ ತರಬೇತಿದಾರರಾಗಿ ಬಂದವರಲ್ಲಿ ಜಾಟ್ ರೆಜಿಮೆಂಟ್, ಮರಾಠ ಲೈಟ್ ಇನ್‌ಫೆಂಟ್ರಿ, ಸಿಖ್ ರೆಜಿಮೆಂಟ್, ಘೂರ್ಕಾ ರೈಫಲ್ಸ್‌ಗಳ ಯೋಧರೇ ಹೆಚ್ಚು. ಇವರಲ್ಲಿ ಬಹುತೇಕ ವ್ಯಕ್ತಿಗಳು ಹಿಮಾಲಯದ ದುರ್ಗಮ ಪ್ರದೇಶಗಳಲ್ಲಿ ವರ್ಷದ ಹಿಂದೆಯಷ್ಟೇ ಚೀಣೀಯರ ಜೊತೆ ಕಾದಾಡಿ, ಮಂಜುಗಡ್ಡೆಯ ಕಡಿತ(Frost bite)ದಿಂದ ಕಾಲು ಕೈ ದೇಹಗಳನ್ನು ಹಾನಿಗೊಳಿಸಿಕೊಂಡು ಮರಳಿದವರು. ಹೈದರಾಬಾದಿನಲ್ಲಿ ಬೇಸಿಗೆಯಲ್ಲಿ ಪ್ರಖರವಾದ ಬಿಸಿಲಿರುವುದರಿಂದ, ಗುಣಮುಖರಾಗುವ ದೃಷ್ಟಿಯಿಂದ ನಮ್ಮ ತರಬೇತಿ ಕ್ಯಾಂಪ್‌ಗೆ ಕಳಿಸಿದ್ದರು. ಅತ್ಯಂತ ಕಠಿಣವಾದ ತರಬೇತಿಯನ್ನು ಅವರು ನಿಷ್ಠುರವಾಗಿ

ನೀಡಿದರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಮರು ದಿನದಿಂದ ಶುರುವಾಯಿತು ತುಂಬಾ ಶ್ರಮದಾಯಕವಾಗಿದ್ದ ಟ್ರೈನಿಂಗ್ ತರಗತಿಗಳು. ಬೆಳಗ್ಗೆ ೬ ಗಂಟೆಗೆ ಟೀ; ೬-೩೦ಕ್ಕೆ ಬನಿಯನ್, ಖಾಕಿ ನಿಕ್ಕರ್, ಕ್ಯಾನ್‌ವಾಸ್ ಶೂಸ್ ಹಾಕಿಕೊಂಡು ಪಿ.ಟಿ. ಕ್ಲಾಸ್‌ಗಳಿಗೆ ಹಾಜರಾಗಬೇಕು; ಡ್ರಿಲ್ ಕ್ಲಾಸುಗಳನ್ನು ತಪ್ಪಿಸುವಂತಿಲ್ಲ. ಅನಂತರ ೮-೩೦ ಗಂಟೆಗೆ 'ಬ್ರೆಕ್‌ಫಾಸ್ಟ್'. ತದನಂತರ, ಯೂನಿಫಾರಂ, ಅಂದರೆ ಬೂದಿ ಬಣ್ಣದ ಶರ್ಟು (ಮಜ್ರಿ), ಖಾಕಿ ಪ್ಯಾಂಟು, ಬೆಲ್ಟ್, ಖಾಕಿ ಸಾಕ್ಸ್, ಮಿಲಿಟರಿಯವರ ತರದ ಲೆದರ್ ಬೂಟುಗಳನ್ನು ಹಾಕಿಕೊಂಡು, ರೈಫಲ್ಸ್‌ಗಳನ್ನು ಇಟ್ಟಿದ್ದ ಸ್ಟೋರ್‌ಗೆ ಕ್ರಮವಾಗಿ ಮಾರ್ಚ್ ಮಾಡುತ್ತಾ ಹೋಗಿ, ಅಲ್ಲಿ '೩೦೩' ಹೆಸರಿನ ರೈಫಲ್ ಪಡೆದುಕೊಂಡು ಪೆರೇಡ್ ಗ್ರೌಂಡ್‌ಗೆ ಸಾಗಬೇಕು. ನಮ್ಮ ತಂಡಗಳಿಗೆ ನಿಗದಿಪಡಿಸಿದ ಸ್ಥಳಗಳಲ್ಲಿ, ನಮಗೆ ಕೊಟ್ಟಿರುವ ನಂಬರ್‌ಗಳ ಪ್ರಕಾರ ಹಾಜರ್ ಆಗಬೇಕು. ಅನಂತರ ಮಿಲಿಟರಿ ಅಧಿಕಾರಿಗಳು ನಮ್ಮ ಹಾಜರಾತಿಯನ್ನು ವೀಕ್ಷಿಸುತ್ತಾರೆ. ಗೌರವ ವಂದನೆ ಪಡೆದ ಅನಂತರ, ತಮ್ಮ ಆ ದಿನದ ಆದೇಶವನ್ನು ಕೊಡುತ್ತಾರೆ. ಅದರಂತೆ ದಿನಪೂರ್ತಿ ಮಿಲಿಟರಿ ಟ್ರೈನಿಂಗ್ ನಡೆಯುತ್ತದೆ. ರೈಫಲ್‌ಗಳನ್ನು ಹಿಡಿದುಕೊಂಡು ಯಾವ ರೀತಿ ಡ್ರಿಲ್ ಮಾಡುವುದು, ಮಾರ್ಚ್ ಮಾಡುವುದು ಮುಂತಾದ ತರಬೇತಿಯನ್ನು ಕೊಡುತ್ತಾರೆ. ಒಂದೊಂದು ಗಂಟೆಯ ತರಬೇತಿಯ ಅನಂತರ ಸ್ವಲ್ಪ ವಿರಾಮ ಕೊಡುತ್ತಾರೆ. ಆ ಸಮಯದಲ್ಲಿ ಬಹಳ ಉದಾರವಾಗಿ 'ನೀವು ಬೇಕಾದರೆ 'ಸಿಗರೇಟ್ ಹಚ್ಚಿರಿ' ಎಂದು ಅವಕಾಶ ಮಾಡಿಕೊಡುತ್ತಾರೆ. ಅವರೂ ಸಿಗರೇಟು ಹಚ್ಚುತ್ತಾರೆ. ಅನಂತರ ತರಗತಿಗಳು ಶುರುವಾದರೆ ಮಿಲಿಟರಿಗೆ ಸಂಬಂಧಪಟ್ಟ ಕಾರ್ಯಾಚರಣೆಗಳು, ಎದುರಾಳಿಗಳನ್ನು ಹೇಗೆ ಮಣಿಸುವುದು; ವೈರಿಗಳ ಚಲನವಲನಗಳ ಬಗ್ಗೆ ಮಾಹಿತಿ ಪಡೆಯುವುದು ಹೇಗೆ—ಮುಂತಾದ ವಿಷಯಗಳ ಬಗ್ಗೆ ಅಧಿಕಾರಿಗಳು ಪಾಠ ಮಾಡುತ್ತಾರೆ. ಅವರು ಪಾಠ ಮಾಡುವ ಗತ್ತೇ ಗತ್ತು! ವಾರಕ್ಕೊಮ್ಮೆ ಹೊರಾಂಗಣದಲ್ಲಿ ಕ್ರಾಸ್ ಕಂಟ್ರಿ ಮಾರ್ಚೋ, ಅಣಕು ಸಮರ ತಯಾರಿಯೋ, ರೈಫಲ್ ಶೂಟಿಂಗ್ ಥರದ ಬೇರೆಯೋ ಇರುತ್ತಿತ್ತು. ಡಾಕ್ಟರ್ ಅವರ ಸರ್ಟಿಫಿಕೇಟ್ ಇಲ್ಲದೆ ರಜ ಕೊಡುತ್ತಿರಲಿಲ್ಲ. ಯಾವುದೇ ತಪ್ಪಾದರೂ ತಕ್ಷಣ ಅದಕ್ಕೆ ಸೂಕ್ತ ಪ್ರಮಾಣದ ದಂಡನೆಯನ್ನು ವಿಧಿಸಲಾಗುತ್ತಿತ್ತು. ಸಣ್ಣಪುಟ್ಟ ತಪ್ಪು ಮಾಡಿದರೂ ಸರಿ; ಇಡೀ ಪೇರೆಡ್ ಗ್ರೌಂಡ್ ಸುತ್ತಲೂ ನಾಲ್ಕಾರು ಸಾರಿ ಓಡಿ ಬರಬೇಕು; ರೈಫಲ್‌ಅನ್ನು ಎರಡೂ ಕೈಗಳಲ್ಲಿ ಮೇಲೆತ್ತಿಕೊಂಡು ನಿಲ್ಲಿಸು ಎಂದು ಹೇಳುವವರೆಗೂ ನಿಂತಿರಬೇಕು. ಆ ಉರಿ ಬಿಸಿಲಿನಲ್ಲಿ ಕಷ್ಟತಮವಾಗಿದ್ದ ದೈಹಿಕ ಶ್ರಮವನ್ನು ಅನುಭವಿಸುವುದು ಶಿಕ್ಷಕ ವೃಂದಕ್ಕೆ ಬಾಯಿಯಲ್ಲಿ ಹಾಕಿಕೊಂಡ ಬಿಸಿ ತುಪ್ಪದಂತಾಗಿತ್ತು. ನಾನು ನಿಸಾರ್ ಅಹಮದ್ ಅವರಿಗೆ ಪದೇ ಪದೇ ಹೇಳುತ್ತಿದ್ದೆ: 'ಇದೇನು ನರಕವಯ್ಯ? ನಮ್ಮನ್ನು ಏನು ಸೈನಿಕ ಪೇದೆಗಳು ಎಂದು ತಿಳಿದಿದ್ದಾರಾ? ಅಥವಾ ನಾವು ಕಾಲೇಜು ಉಪನ್ಯಾಸಕರು ಎನ್ನುವುದನ್ನು ಮರೆತು ಈ ರೀತಿ ನಡೆಸಿಕೊಳ್ಳುತ್ತಿದ್ದಾರಾ ಈ ಪಿಷ್ಟಗಳು?' ತರಬೇತಿದಾರರಿಗೆ ಶಾಪ ಹಾಕಿದ್ದೇ ಹಾಕಿದ್ದು. ಆ ಮೂರು ತಿಂಗಳೂ ಯಾವ ಮುಲಾಜು ಇಲ್ಲದಂತೆ, ಅವರ ಮಾತಿನಲ್ಲೇ ಹೇಳುವುದಾದರೆ, 'ರಗಡೋ ರಗಡೋ' ಎಂದು ಶಿಕ್ಷಣ ಕೊಟ್ಟರು; ನಮ್ಮ ಬೆಂಡೆತ್ತಿದರು; ನಮ್ಮ

ಎಲ್ಲರ ದೇಹಗಳ 'ಶೇಪ್' ತೆಗೆದುಬಿಟ್ಟಿದ್ದರು. ಮಿಲಿಟರಿ ಟ್ರೈನಿಂಗ್ ಅಂದರೆ ಅಷ್ಟು ಕಟ್ಟುನಿಟ್ಟು, ಬಿಗಿ, ಶ್ರಮದಾಯಕ ಎಂದು ಅದು ಮುಕ್ತಾಯಗೊಂಡ ಅನಂತರ ನಮಗೆ ಅನ್ನಿಸಿತು. ಆಮೇಲೆ ಅದನ್ನು 'ಮಿಸ್' ಮಾಡಿಕೊಂಡೆವು ಎಂದುಕೊಂಡದ್ದೂ ಹೌದು. ತರಬೇತಿ ಮುಗಿದು, 'ಪಾಸಿಂಗ್ ಔಟ್ ಪೆರೇಡ್'ನಲ್ಲಿ ನಮಗೆ ಸೆಕೆಂಡ್ ಲೆಫ್ಟಿನೆಂಟ್ ಎಂಬ ರ್‍ಯಾಂಕ್‌ಅನ್ನು ಪ್ರದಾನ ಮಾಡಲಾಯಿತು. ಅದಾದ ಅನಂತರ, ನಮ್ಮನ್ನು ಟ್ರೈನಿಂಗ್ ಸಮಯದಲ್ಲಿ ಪ್ರಾಣ ಹಿಂಡುತ್ತಿದ್ದ ಮಿಲಿಟರಿಯ ಶಿಕ್ಷಕರು ನಮಗೇ 'ಸೆಲ್ಯೂಟ್' ಹೊಡೆಯುತ್ತಿದ್ದ ರೀತಿ ಹಿಂದಿನ ಕಹಿ ನೆನಪುಗಳನ್ನು ಮರೆಸಿ, ನಮ್ಮ ಮುಖದಲ್ಲಿ ಮಂದಹಾಸವನ್ನು ತಂದಿತ್ತು. ಅವರು ನಮ್ಮನ್ನು 'ಸಾಬ್' ಎಂದು ಕರೆಯಲು ಶುರುಮಾಡಿದಾಗ, ನಮಗೂ ಮಿಲಿಟರಿ ಗತ್ತುಗಾರಿಕೆ ಮೂಡಲು ಶುರುವಾಗಿತ್ತು. ಈ ಶಿಕ್ಷಣ ಮುಗಿದಾಗ ನಮ್ಮ ಮಿಲಿಟರಿ ಶಿಕ್ಷಕರಿಗೆ ಸಣ್ಣಪುಟ್ಟ ನೆನಪಿನ ಕಾಣಿಕೆಗಳನ್ನು ಅರ್ಪಿಸಿ, 'ಬೆಂಗಳೂರಿಗೆ ಬಂದಾಗ ಭೇಟಿಯಾಗಿರಿ' ಎಂದು ಹೃದಯ ತುಂಬಿ ಹೇಳಿ, ಅನಂತರ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳಸಿದೆವು. ಪ್ರಯಾಣದುದ್ದಕ್ಕೂ ನಾವು ಹೈದ್ರಾಬಾದಿನಲ್ಲಿ ನೋಡಿದ ವಿವಿಧ ಸ್ಥಳಗಳು, ನಮ್ಮ ಕ್ಯಾಂಪಿಗೆ ಭೇಟಿಕೊಟ್ಟಿದ್ದ ಜನರಲ್ ಕಾರಿಯಪ್ಪನವರ ಹಿತ ನುಡಿಗಳು, ನಮ್ಮನ್ನು ಚೆನ್ನಾಗಿ ನೋಡಿಕೊಂಡಿದ್ದ ಮೆಸ್‌ನಲ್ಲಿನ ಸಿಬ್ಬಂದಿ ವರ್ಗ, ಬೇರೆ ಬೇರೆ ಸ್ಥಳಗಳಿಂದ ಬಂದಿದ್ದು ಕ್ಯಾಂಪ್‌ನಲ್ಲಿ ಆಪ್ತಮಿತ್ರರಾಗಿದ್ದವರು—ಹೀಗೆ, ಅನೇಕ ನೆನಪುಗಳನ್ನು ಮಾಡಿಕೊಳ್ಳುತ್ತಾ ಬೆಂಗಳೂರಿಗೆ ಹಿಂತಿರುಗಿದೆವು. ಒಟ್ಟಿನಲ್ಲಿ ಹೇಳುವುದಾದರೆ, ಮಿಲಿಟರಿ ಟ್ರೈನಿಂಗ್ ನಮ್ಮ ವ್ಯಕ್ತಿತ್ವವನ್ನು ಪರಿವರ್ತಿಸಿತ್ತು. ನಮಗೆ ಆತ್ಮಗೌರವ ಮತ್ತು ಗತ್ತುಗಾರಿಕೆಯನ್ನು ತಂದುಕೊಟ್ಟಿತ್ತು.

೧೯೬೩ರ ಬೇಸಿಗೆ ರಜೆ ಮುಗಿದು, ನಮ್ಮಕಾಲೇಜು ಜುಲೈ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಯಿತು. ಒಬ್ಬೊಬ್ಬ ಎನ್.ಸಿ.ಸಿ. ಅಧಿಕಾರಿಗೂ ಸುಮಾರು ೨೦೦ ವಿದ್ಯಾರ್ಥಿಗಳಿದ್ದ ಒಂದೊಂದು ತಂಡ('ಕಂಪೆನಿ')ವನ್ನು ವಹಿಸಿಕೊಟ್ಟರು. ಅಧಿಕಾರಿಗಳಾದ ನಮ್ಮನ್ನು 'ಕಂಪೆನಿ ಕಮಾಂಡರ್' ಎಂದು ಕರೆಯಲಾಗುತ್ತಿತ್ತು. ನಮ್ಮ ತಂಡದ ಸದಸ್ಯರಿಗೆ, ಅಂದರೆ 'ಕೆಡೆಟ್'ಗಳಿಗೆ ಸಮವಸ್ತ್ರಗಳನ್ನು ವಿತರಿಸಬೇಕಿತ್ತು. ಅವರ ಹಾಜರಾತಿ ತೆಗೆದುಕೊಂಡು, ಅವರ ಉಪಾಹಾರದ ಏರ್ಪಾಡು ಮಾಡಿಸಬೇಕಿತ್ತು. ನಮ್ಮ ಕೆಡೆಟ್‌ಗಳಿಗೆ ಕಡ್ಡಾಯವಾಗಿ ವಾರಕ್ಕೆ ಎರಡು ದಿನಗಳು ಡ್ರಿಲ್, ಮಾರ್ಚಿಂಗ್, ರೈಫಲ್ ಟ್ರೈನಿಂಗ್; ಸೈನ್ಯದ ಅಂಗ ರಚನೆ, ಕಾರ್ಯಾಚರಣೆ ಮುಂತಾದ ವಿಷಯಗಳ ಬಗ್ಗೆ ಶಿಕ್ಷಣ ಕೊಡಿಸಬೇಕಿತ್ತು. ನಾವೂ ಲೆಕ್ಚರ್ ಕೊಡಬೇಕಾಗಿತ್ತು. ಎನ್.ಸಿ.ಸಿ. ಅಧಿಕಾರಿಗಳೆಲ್ಲಾ ಪೆರೇಡ್‌ಗಳಿಗೆ ಕಡ್ಡಾಯವಾಗಿ ಹಾಜರಾಗಿ ಎಲ್ಲಾ ಉಸ್ತುವಾರಿ ನೋಡಿಕೊಳ್ಳಬೇಕಿತ್ತು.

ಎನ್.ಸಿ.ಸಿ. ಕೆಡೆಟ್‌ಗಳು ಒಂದೇ ಬಗೆಯವರಾಗಿರುತ್ತಿರಲಿಲ್ಲ. ಕೆಲವು ವಿದ್ಯಾರ್ಥಿಗಳು ತುಂಬಾ ಆಸಕ್ತಿ ತೋರಿ, ಶ್ರಮಪಟ್ಟು ಶಿಕ್ಷಣ ಪಡೆದು ಅಧಿಕಾರಿಗಳೆಲ್ಲರ ಮೆಚ್ಚುಗೆಗೆ ಪಾತ್ರರಾಗುತ್ತಿದ್ದರು. ಇನ್ನು ಕೆಲವು ವಿದ್ಯಾರ್ಥಿಗಳು ಸೋಮಾರಿಗಳಾಗಿ, ಪೆರೇಡ್‌ಗಳಿಗೆ ಚಕ್ಕರ್ ಹೊಡೆದು, ಹಾಜರಾತಿ ಇಲ್ಲದೆ, ಪರೀಕ್ಷೆಗೆ ಕೂರಲಾಗದೆ, ಪರದಾಡುತ್ತಿದ್ದರು. ಲೆಫ್ಟಿನೆಂಟ್ ನಿಸಾರ್ ಅಹಮದ್ ಅವರ 'ಕಂಪೆನಿ'ಯಲ್ಲಿ ಸಾಧಾರಣವಾಗಿ ಧಾಂಡಿಗರು,

ತುಂಟರೇ ಜಾಸ್ತಿಯಾಗಿ ಕೆಡೆಟ್‌ಗಳಾಗಿದ್ದರೂ ಅವರನ್ನೆಲ್ಲಾ ಲೆ. ನಿಸಾರ್ ಅಹಮದ್ ಅವರು ಬಹಳ ಚಾಕಚಕ್ಯತೆಯಿಂದ ನಿಭಾಯಿಸುತ್ತಿದ್ದರು; ಪಳಗಿಸುತ್ತಿದ್ದರು. ಅವರ ಕಂಪೆನಿಯಲ್ಲಿ ತರಬೇತಿ ಪಡೆದ ಅಂತಹ ಅನೇಕ ಕೆಡೆಟ್‌ಗಳು ಎನ್.ಸಿ.ಸಿ.ಯಲ್ಲಿ ಮುಂಬಡ್ತಿ ಪಡೆದು ಕೊಂಡು ವಿದ್ಯಾರ್ಥಿ ನಾಯಕರಾದರು. ಇನ್ನು ಕೆಲವರು ಎನ್.ಸಿ.ಸಿ.ಯಲ್ಲಿ ಗಳಿಸಿದ್ದ ಒಳ್ಳೆಯ ಸರ್ಟಿಫಿಕೇಟ್‌ಗಳಿಂದ ಪೊಲೀಸ್ ಇಲಾಖೆಯಲ್ಲಿ ಕೆಲಸ ಗಳಿಸಿಕೊಂಡು ದಕ್ಷ ಅಧಿಕಾರಿಗಳಾದರು. ಕೆಲವರು ಸೈನ್ಯಕ್ಕೂ ಸೇರಿ ಹಿರಿಯ ಅಧಿಕಾರಿಗಳಾಗಿ ಹೆಸರು ಮಾಡಿದರು. ಸರಿಯಾಗಿ ನಡೆದುಕೊಳ್ಳದಿದ್ದ ಕೆಡೆಟ್‌ಗಳನ್ನು ಲೆ. ನಿಸಾರ್ ಅಹಮದ್ ಅವರು 'ಕತ್ತೆ ಸ್ವರೂಪಗಳೇ' ಎಂದು ಬೈಯ್ಯುತ್ತಿದ್ದರು. ಒಳ್ಳೆಯ ಕೆಡೆಟ್‌ಗಳು ಅವರಿಂದ 'ಶಾಭಾಸ್‌ಗಿರಿ'ಯನ್ನು ಪಡೆಯುತ್ತಿದ್ದರು. ಅವರ ಈ ರೀತಿಯ ನಾಯಕತ್ವದ ಗುಣ ನಿಜವಾಗಿ ಬೇರೆಯವರಿಗೆ ಮಾದರಿ ಎನ್ನಿಸುತ್ತಿತ್ತು.

೧೨ನೆಯ ಮೈಸೂರು ಬೆಟಾಲಿಯನ್ ತನ್ನ ನಿರಂತರವಾದ ಕಾರ್ಯಕ್ರಮಗಳಿಂದಾಗಿ ಇಡೀ ರಾಜ್ಯದಲ್ಲಿ ತುಂಬಾ ಕೀರ್ತಿ ಗಳಿಸಿತ್ತು. ಕಾಲೇಜು ಮಟ್ಟದ, ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಅನೇಕ ಶಿಬಿರಗಳನ್ನು ಅತ್ಯಂತ ಯಶಸ್ವಿಯಾಗಿ ಏರ್ಪಡಿಸಿ, ಕೇಂದ್ರದ ಎನ್.ಸಿ.ಸಿ. ಡೈರೆಕ್ಟರೆಟ್, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರದಿಂದಲೂ ಮೆಚ್ಚುಗೆ ಪಡೆದಿತ್ತು. ಅನೇಕ ಸ್ಥಳಗಳಲ್ಲಿ ವಾರ್ಷಿಕ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದ ಪೆರೇಡ್‌ಗೆ ತರಬೇತಿ ಕೊಡಲು ನಮ್ಮ ರಾಜ್ಯದ ಕೆಡೆಟ್‌ಗಳಿಗೆ ಏರ್ಪಡಿಸುತ್ತಿದ್ದ ಶಿಬಿರಗಳಿಗೂ ೧೨ನೇ ಮೈಸೂರು ಬೆಟಾಲಿಯನ್ ನೇತೃತ್ವ ವಹಿಸಿಕೊಳ್ಳುತ್ತಿತ್ತು. ಬೆಂಗಳೂರು ವಿಶ್ವವಿದ್ಯಾಲಯ ಏರ್ಪಡಿಸಿಕೊಳ್ಳುತ್ತಿದ್ದ ಘಟಿಕೋತ್ಸವ ಮುಂತಾದ ಪ್ರಮುಖವಾದ ಕಾರ್ಯಕ್ರಮಗಳಿಗೆ ನಮ್ಮ ಎನ್.ಸಿ.ಸಿ. ಬೆಟಾಲಿಯನ್‌ನ ಕೆಡೆಟ್‌ಗಳು ಮತ್ತು ಅಧಿಕಾರಿಗಳು ಗೌರವ ರಕ್ಷೆ (Guard of honour) ಕೊಡುತ್ತಿದ್ದರು; ಉಸ್ತುವಾರಿ ನೋಡಿಕೊಳ್ಳುತ್ತಿದ್ದರು.

೧೯೬೫-೬೬ನೆಯ ಶೈಕ್ಷಣಿಕ ವರ್ಷ ನಮ್ಮ ಕಾಲೇಜಿನ ಎನ್.ಸಿ.ಸಿ.ಯ ಇತಿಹಾಸದಲ್ಲಿ ಬಹಳ ಸ್ಮರಣೀಯವಾದ ಮತ್ತು ಸಡಗರದ ಕಾಲ. ೧೯೬೫ರ ಜೂನ್ ತಿಂಗಳಲ್ಲಿ ಕಾಲೇಜಿಗೆ ಮೇಜರ್ ಜಿ. ಟಿ. ನಾರಾಯಣರಾವ್ ಅವರು ವರ್ಗವಾಗಿ ಬಂದರು. ಅವರು ೧೨ನೆಯ ಮೈಸೂರು ಬೆಟಾಲಿಯನ್‌ನಲ್ಲಿ ಮೇಜರ್ ಎಂ. ಆರ್. ನಾರಾಯಣ ಸಿಂಗ್ ಅವರ 'ಸೆಕೆಂಡ್-ಇನ್-ಕಮಾಂಡ್' ಆಗಿಯೂ ಅಧಿಕಾರ ವಹಿಸಿಕೊಂಡರು. ಮೇ. ಜಿ. ಟಿ. ನಾರಾಯಣರಾಯರು ವೃತ್ತಿಯಲ್ಲಿ ಗಣಿತಶಾಸ್ತ್ರದ ಶಿಕ್ಷಕರು; ಪ್ರವೃತ್ತಿಯಲ್ಲಿ ಖಗೋಳಶಾಸ್ತ್ರ ತಜ್ಞರು; ನಕ್ಷತ್ರ ಲೋಕದ ಆರಾಧಕರು. ಅತ್ಯುತ್ತಮ ಶಿಕ್ಷಕ ಮಿತ್ರರು; ವಾಗ್ಮಿಗಳು; ದಕ್ಷ ಆಡಳಿತಗಾರರು; ಹೆಸರಾಂತ ಲೇಖಕರು. ಎಲ್ಲಕ್ಕಿಂತ ಮಿಗಿಲಾಗಿ ಅವರೊಬ್ಬ ಆದರ್ಶವಾದಿ ಮಾನವರು. ಅವರು ಕಾಲೇಜಿಗೆ ಬಂದ ಅನಂತರ ನಮ್ಮ ಎನ್.ಸಿ.ಸಿ. ಚಟುವಟಿಕೆಗಳಿಗೆ ಇನ್ನೂ ಹೆಚ್ಚಿನ ಮೆರುಗು ಮತ್ತು ಹುಮ್ಮಸ್ಸು ಕಾಣಿಸಿ ಕೊಂಡಿತು. ಎನ್.ಸಿ.ಸಿ. ಎಂದರೆ ಬರಿಯ 'ಡ್ರಿಲ್' ಮತ್ತು 'ಮಾರ್ಚಿಂಗ್' ಅಲ್ಲ; ಅನೇಕ ಇತರ ಚಟುವಟಿಕೆಗಳೂ ಇರುತ್ತವೆ ಎಂದು ತೋರಿಸಿಕೊಟ್ಟರು. ಕಾಲೇಜಿನ ಎಲ್ಲಾ ಆಸಕ್ತ

ಶಿಕ್ಷಕರಿಗೆ 'ಸಿವಿಲ್ ಡಿಫೆನ್ಸ್ ಟ್ರೈನಿಂಗ್', 'ರೈಫಲ್ ಶೂಟಿಂಗ್', 'ಫಸ್ಟ್‌ಏಡ್' ಮುಂತಾದ ಉಪಯುಕ್ತವಾದ ಶಿಕ್ಷಣವನ್ನು ರಜಾ ದಿನಗಳಲ್ಲಿ ಕೊಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು. ಅನೇಕ ಹಿರಿಯ ಶಿಕ್ಷಕರೂ ಆಸಕ್ತಿಯಿಂದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಈ ಕಾರ್ಯ ಚಟುವಟಿಕೆಗಳಿಗೆ ಲೆ. ನಿಸಾರ್ ಅಹಮದ್ ಅವರು ಎಲ್ಲರನ್ನೂ ಹುರಿದುಂಬಿಸಿ, ತಾವು ಮುಂದೆ ನಿಂತು ಮಾಡಿ ತೋರಿಸಿ, ತಮ್ಮ ಸಹೋದ್ಯೋಗಿಗಳ ಮೆಚ್ಚುಗೆ ಮತ್ತು ಅಭಿಮಾನಗಳನ್ನು ಗಳಿಸಿಕೊಂಡರು. ಜಿ.ಟಿ.ಎನ್. ಅವರು ನಿಸಾರ್ ಅವರನ್ನು 'ಏನು ಹೇಳ್ತೀರಿ ಕವಿಗಳೆ' ಎಂದು ಆಗಾಗ ವಿಚಾರಿಸುತ್ತಿರಬೇಕು; ನಿಸಾರ್ ಅವರು 'ಇದು ಹೀಗೇ-ಅದು ಹಾಗೆ' ಎಂದು ವಿವರಿಸಿ ಹೇಳಬೇಕು. ಅಚ್ಚ ಕನ್ನಡದ ಸೊಗಸನ್ನು ನಾವೆಲ್ಲಾ ಕಿವಿಕೊಟ್ಟು ಕೇಳುತ್ತಿರಬೇಕು. ಆ ಎನ್.ಸಿ.ಸಿ. ದಿನಗಳೇ ಹಾಗೆ—ಬಲು ಚೆಂದ.

೧೯೬೭ರ ಫೆಬ್ರುವರಿ ತಿಂಗಳು ನಮ್ಮ ಎನ್.ಸಿ.ಸಿ. ವಿಭಾಗದ ಕಾರ್ಯ ಚಟುವಟಿಕೆಗಳ ಇತಿಹಾಸದಲ್ಲಿ ಚಿರಸ್ಮರಣೀಯ ಸಮಯ. ಮೇಜರ್ ನಾರಾಯಣ ಸಿಂಗ್ ಮತ್ತು ಮೇಜರ್ ನಾರಾಯಣ ರಾವ್ ಅವರು ಪರಸ್ಪರ ಚರ್ಚಿಸಿ, ಇಡೀ ಬೆಟಾಲಿಯನ್ ಹಾಗೂ ಕಾಲೇಜಿಗೆ ಕೀರ್ತಿ ತರುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ತೀರ್ಮಾನಿಸಿ, ಬೆಂಗಳೂರು ವಿಶ್ವವಿದ್ಯಾಲಯದ ನೆರವು ಪಡೆದು, ಪ್ರಪ್ರಥಮವಾಗಿ ಕುದುರೆಮುಖ ಪರ್ವತಾರೋಹಣ ಶಿಬಿರವನ್ನು ಏರ್ಪಾಡು ಮಾಡಿದರು. ಇವೊತ್ತು ಕಾರ್ಯಶೀಲವಾಗಿರುವ ನಾಡಿನ ನಾನಾ ಚಾರಣ ಸಂಸ್ಥೆಗಳಿಗೆ, ಅದರ ಕಲಾಪಗಳಿಗೆ ಈ ನಮ್ಮ ಯೋಜನೆಯೇ ಮೊಟ್ಟ ಮೊದಲ ಪ್ರೇರಣೆ. ಕುದುರೆಮುಖ ಕನ್ನಡ ನಾಡಿನ ಎರಡನೆಯ ಅತಿ ಎತ್ತರದ ಪರ್ವತ. ಆ ಸಮಯದಲ್ಲಿ ಅದು ದಟ್ಟಕಾಡು; ಅನೇಕ ಕಾಡು ಪ್ರಾಣಿಗಳ ಆವಾಸ ಸ್ಥಾನ. ಅದರಲ್ಲೂ ಕಾಡೆಮ್ಮೆ ಹಿಂಡುಗಳ ತವರು. ಆಗ ಇನ್ನೂ ಅಲ್ಲಿ ಗಣಿಗಾರಿಕೆ ಪ್ರಾರಂಭವಾಗಿರಲಿಲ್ಲ. ಅಂತಹ ದಿನಗಳಲ್ಲಿ, ೧೯೬೭ರ ಫೆಬ್ರುವರಿ-ಮಾರ್ಚಿನಲ್ಲಿ, ಆ ಬೆಟ್ಟವನ್ನು ಏರಿ, ಕಾಲೇಜು ಹಾಗೂ ಬೆಟಾಲಿಯನ್‌ನ ಪತಾಕೆಯನ್ನು ಅದರ ಶಿಖರದ ಮೇಲೆ ಹಾರಿಸಿ ಬರಲು ಬೆಟಾಲಿಯನ್ ಕಮಾಂಡರ್ ಸಾಹೇಬರ ಮಾರ್ಗದರ್ಶನದಲ್ಲಿ, ಮೇಜರ್ ಜಿ. ಟಿ. ನಾರಾಯಣ ರಾವ್ ಅವರ ನಾಯಕತ್ವದಲ್ಲಿ, ಲೆ. ಕೆ. ಎಸ್. ನಿಸಾರ್ ಅಹಮದ್, ಲೆ. ಕೆ. ಎನ್. ಶಿವಪ್ಪ ಮತ್ತು ನಾನು ಮುಂದಾಗಿ ತಯಾರಾದೆವು. ನಮ್ಮ ಜೊತೆಯಲ್ಲಿ ನಾಲ್ಕು ಜನ ಸೈನ್ಯ ಖಾತೆಯ ಅಧಿಕಾರಿಗಳು, ನಾಲ್ಕು ವಿದ್ಯಾರ್ಥಿ-ಎನ್.ಸಿ.ಸಿ. ಅಂಡರ್ ಆಫೀಸರ್‌ಗಳು, ಇಬ್ಬರು ನುರಿತ ಲಾರಿ ಚಾಲಕರು, ಇಬ್ಬರು ಅಡುಗೆ ಭಟ್ಟರು, ಒಬ್ಬ ಸಹಾಯಕ, ಮೂವತ್ತೆರಡು ಅತ್ಯಂತ ದಕ್ಷ ಹಾಗೂ ಶ್ರಮಸಹಿಷ್ಣು ವಿದ್ಯಾರ್ಥಿ-ಕೆಡೆಟ್‌ಗಳು, ಬೆಟಾಲಿಯನ್‌ಗೆ ಸೇರಿದ್ದ ಎರಡು ಮಿಲಿಟರಿ ಟ್ರಕ್ಕುಗಳು ಕುದುರೆಮುಖ ಪರ್ವತಾರೋಹಣಕ್ಕೆ ಹೊರಟೇ ಬಿಟ್ಟೆವು. ಕಾಲೇಜಿನ ಶಿಕ್ಷಕ ವೃಂದ ನಮಗೆ ಶುಭ ಹಾರೈಸಿ ಕಳುಹಿಸಿಕೊಟ್ಟರು.

ಸುಮಾರು ಏಳು ದಿನಗಳ ಕಾಲ ನಡೆದ ಶಿಬಿರದಲ್ಲಿ, ಕುದುರೆಮುಖ ಪರ್ವತದ ತಪ್ಪಲಿನಲ್ಲಿ, ಬೆಳ್ತಂಗಡಿಯಿಂದ ಸುದೂರವಿದ್ದ ನಾವೂರು ಕಾಡು ಪ್ರದೇಶದಲ್ಲಿ, ನಮ್ಮ 'ಬೇಸ್ ಕ್ಯಾಂಪ್' ಅನ್ನು ನಿರ್ಮಿಸಿಕೊಂಡೆವು. ಅಲ್ಲಿ ಒಂದು ಹಳೆಯ ಮನೆ ಇದ್ದಿತು. ಇಲ್ಲಿ

ಹಾವುಗಳ ವಿಪರೀತ ಕಾಟ. ಪಕ್ಕದಲ್ಲೇ ಇದ್ದ ನೀರಿನ ಹೊಂಡವೊಂದರಿಂದ ನಿಸಾರ್ ಮತ್ತು ನಾನು ನೀರನ್ನು ತುಂಬಿಸಿಕೊಳ್ಳಲು ನಮ್ಮ ವಾಟರ್ ಬಾಟಲ್‌ಗಳನ್ನು ಇಟ್ಟಾಗ, ಎಲ್ಲಿದ್ದವೋ ಗೊತ್ತಿಲ್ಲ, ಏಕ್‌ದಂ ಐವತ್ತು-ಅರವತ್ತು ಹಾವುಗಳು ನಮ್ಮತ್ತ ಧಾವಿಸಿ ಬಂದದ್ದು, ನಾವು ಹೆದರಿ ಹಿಂತಿರುಗಿದ್ದು ಇನ್ನೂ ನೆನಪಿನಲ್ಲಿ ಹಸಿರಾಗಿದೆ. ರೈಫಲ್ಸ್, ಆಹಾರ ಪದಾರ್ಥಗಳು, ಔಷಧಿಗಳು ಮುಂತಾದುವನ್ನು ಸುರಕ್ಷತೆಯ ಸಲುವಾಗಿ ಅಲ್ಲಿ ಇಡುತ್ತಿದ್ದೆವು. ಅಡುಗೆ ಭಟ್ಟರು ಟೆಂಟ್‌ಗಳಲ್ಲಿ ಅಡುಗೆಗೆ ವ್ಯವಸ್ಥೆ ಮಾಡಿಕೊಂಡರು. ಅಲ್ಲಿನ ಕಾಡುಮೇಡುಗಳಲ್ಲಿ ದಿನವೂ ಓಡಾಡಿ ಜಾಗಗಳ ತಪಾಸಣೆ ಮಾಡಿ, ಅಕ್ಕಪಕ್ಕದಲ್ಲಿದ್ದ ಗುಡ್ಡಗಳನ್ನು ಏರಿ ಇಳಿದು, ಅನಂತರ ಐದನೆಯ ದಿನ ಕುದುರೆಮುಖ ಪರ್ವತವನ್ನು ಏರುವ ತೀರ್ಮಾನಕ್ಕೆ ಬರಲಾಯಿತು. ಸ್ಥಳದ ಪರಿಚಯವಿರುವ ಸ್ಥಳೀಯರ ನೆರವು ಪಡೆದು (ಅವರಲ್ಲೊಬ್ಬ ಮುದುಕನ ಹೆಸರು ಮಿಂಗಲ ಶೇಣವ-Michael Shenoy), ಯಶಸ್ವಿಯಾಗಿ ಆರನೆಯ ದಿನ ಪರ್ವತವನ್ನು ಏರಿ, ಅದರ ಶಿಖರದಲ್ಲಿ ಕಾಲೇಜಿನ ಮತ್ತು ಬೆಟಾಲಿಯನ್‌ನ ಕೀರ್ತಿ ಪತಾಕೆಯನ್ನು ಹಾರಿಸಿ, ತಂಡದವರೆಲ್ಲಾ ಸುಕ್ಷೇಮವಾಗಿ 'ಬೇಸ್ ಕ್ಯಾಂಪ್'ಗೆ ಹಿಂತಿರುಗಿ ಬಂದರು. ಏಳನೆಯ ದಿನ ಕ್ಯಾಂಪ್ ಮುಕ್ತಾಯಗೊಂಡಾಗ ಎನ್.ಸಿ.ಸಿ. ಶಿಕ್ಷಣದಲ್ಲಿ ಹೊಸದೊಂದು ಅಧ್ಯಾಯ ಪ್ರಾರಂಭ ವಾಗಿತ್ತು. ತಂಡದ ಎಲ್ಲರಲ್ಲೂ ಒಂದು ಧನ್ಯತಾಭಾವ ಎದ್ದು ಕಾಣುತ್ತಿತ್ತು.

ಕುದುರೆಮುಖದ ಕ್ಯಾಂಪ್ ಮುಗಿಸಿ, ತಂಡದ ಎಲ್ಲರೂ ಕಾಲ್ನಡಿಗೆಯಲ್ಲೇ ಧರ್ಮಸ್ಥಳಕ್ಕೆ ಬಂದು, ದೇವರ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿ, ಅಲ್ಲಿಂದ ಪುತ್ತೂರಿಗೆ ಹೊರಟೆವು. ಅಲ್ಲಿ ಸಾಹಿತ್ಯ ಲೋಕದ ಮೇರು ಪರ್ವತ ಡಾ. ಶಿವರಾಮ ಕಾರಂತರ ದರ್ಶನ ಪಡೆದು, ಅನಂತರ ಸಂಭ್ರಮದಿಂದ ಕಾಲೇಜಿಗೆ ಹಿಂತಿರುಗಿದಾಗ ನಮಗೆ ಅಲ್ಲಿ ಭವ್ಯ ಸ್ವಾಗತ ಕಾದಿತ್ತು. ಈ ಪರ್ವತಾರೋಹಣದ ಸಾಹಸವನ್ನು ಮೇಜರ್ ಜಿ. ಟಿ. ನಾರಾಯಣ ರಾವ್ ಅವರು ಬರೆದಿರುವ 'ಕುದುರೆಮುಖದೆಡೆಗೆ' ಎಂಬ ಪುಸ್ತಕದಲ್ಲಿ ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. ಇದನ್ನು ಬೆಂಗಳೂರು ವಿಶ್ವವಿದ್ಯಾಲಯ ತನ್ನ ಪ್ರಪ್ರಥಮ ಪುಸ್ತಕವನ್ನಾಗಿ ಪ್ರಕಟಿಸಿ ಗೌರವಿಸಿದೆ.

೧೯೬೭ರ ಏಪ್ರಿಲ್ ತಿಂಗಳಲ್ಲಿ ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬೇರೆ ಹುದ್ದೆಗೆ ನೇಮಕಗೊಂಡೆನಾದ್ದರಿಂದ ನನ್ನ ಮತ್ತು ಎನ್.ಸಿ.ಸಿ.ಯ ನಂಟು ಕೊನೆಗೊಂಡಿತು. ಹಾಗೆಯೇ ಅದೇ ವರ್ಷ ಪ್ರೊಫೆಸರ್ ನಿಸಾರ್ ಅಹಮದ್ ಅವರಿಗೂ ಶಿವಮೊಗ್ಗಕ್ಕೆ ವರ್ಗವಾಗಿ, ಅಲ್ಲಿ ಅವರೂ ಕೆಲ ಸಮಯದ ಬಳಿಕ ಎನ್.ಸಿ.ಸಿ. ನಂಟನ್ನು ಕಳೆದುಕೊಂಡರು. ಆದರೂ ನಾವಿಬ್ಬರೂ ಆಗಾಗ ಭೇಟಿಯಾದಾಗ ಅತ್ಯಂತ ಸಂತೋಷದಿಂದ ನಮ್ಮ ಎನ್.ಸಿ.ಸಿ. ದಿನಗಳನ್ನು ನೆನಪಿಸಿಕೊಳ್ಳುತ್ತೇವೆ. ಅವರು ಈಗ ಕನ್ನಡ ಸಾಹಿತ್ಯದಲ್ಲಿ ಹಿರಿಯ ಕವಿವರ್ಯರು. ಇದೀಗ ಅವರಿಗೆ ಹಂಪೆಯ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಿದೆ. ಜೊತೆಗೆ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದೆ. ಈಗ ಅವರು 'ಲೆಫ್ಟಿನೆಂಟ್'

ಬದಲು 'ಡಾಕ್ಟರ್' ಕೆ. ಎಸ್. ನಿಸಾರ್ ಅಹಮದ್. ಈ ಕವಿವರ್ಯ ಮಿತ್ರರಿಗೆ ರಾಷ್ಟ್ರಮಟ್ಟದಲ್ಲಿ ಸಿಕ್ಕಲೇಬೇಕಿರುವ ಸನ್ಮಾನಗಳು ಮತ್ತು ಪುರಸ್ಕಾರಗಳನ್ನು ಎದಿರು ನೋಡುತ್ತಿರುವ ಅವರ ಅಪಾರ ಅಭಿಮಾನಿಗಳಲ್ಲಿ ನಾನೂ ಒಬ್ಬ, ಅವರ ಹಳೆಯ ಗೆಳೆಯ.

ಕರುಬು ಹುಳಿಯಂತೆ. ಮನುಷ್ಯನ ಹಲವು ಸದ್ಗುಣಗಳ ಹಂಡೆ ಹಾಲನ್ನು ಹಾಳುಗೊಳಿಸಲು ಒಂದು ತೊಟ್ಟು ಸಾಕು. ಅದರ ಕಾರ್ಯರೀತಿಯಲ್ಲಿ ಮೇಲುನೋಟಕ್ಕೆ ಒಂದು ತರ್ಕದ ಎಳೆಯೂ ಸೇರಿರುವುದು ಮೋಜಿನ ಸಂಗತಿಯಾಗಿದೆ. ಶ್ರಮಿಕ, ರೈತ, ಕಾರ್ಮಿಕ ಮೈ ಕೈ ಬಗ್ಗಿಸಿ ಚಳಿ ಮಳೆಯೆನ್ನದೆ ದುಡಿಯುವಾಗ, ಕಾಲೇಜಿನ ಪ್ರಾಧ್ಯಾಪಕ ಯಾಕೆ ಕುಡಿದ ನೀರು ಅಲುಗದಂತೆ ಸುಖೀ ಜೀವನ ಸಾಗಿಸಬೇಕು? ಆಡಳಿತಗಾರನಿಗೆ ಯಾಕೆ ವಸ್ತು, ವಾಹನ ಸೌಲಭ್ಯ? ಮನುಷ್ಯರೆಲ್ಲ ಸಮಾನರೆಂದು ಘೋಷಿಸಿದಾಗ, ದಿನಗೂಲಿಯಂತೆ ಆಳರಸರೂ ಕಾಲು ನಡಿಗೆಯಲ್ಲಿ ಯಾಕೆ ತಮ್ಮ ಕಛೇರಿಗಳಿಗೆ ಹೋಗಬಾರದು? ಇಂಥ ತಾತ್ತ್ವಿಕ ಸ್ವರೂಪದ ತರ್ಕದ ಸತತ ಪ್ರಚಾರ ಬಹು ಜನರನ್ನು ಆಕರ್ಷಿಸಿ ಮುಂದೊಮ್ಮೆ ಸಾಮೂಹಿಕ ಅಸಹನೆ, ಅಸೂಯೆಗಳಿಗೆ ಇಂಧನವೆರೆಯಬಹುದು.

(ಅಸೂಯೆ)

✧ ✧ ✧

ಅವ್ಯವಹಾರಗಳನ್ನು ಬುಡ ಸಮೇತ ಕಿತ್ತು ಹಾಕುವುದು ಯಾರಿಂದಲೂ ಸಾಧ್ಯವಾಗಿಲ್ಲ. ಆಡಳಿತಗಾರರಿಗೆ ಅದು ಅಪಥ್ಯ. ಸಾಮಾನ್ಯ ಜನರಿಗೆ ಅಸಾಧ್ಯ—ಏಕೆಂದರೆ ಅವರು ಅಸಂಘಟಿತರು, ಅಧಿಕಾರವಿಹೀನರು. ಕಾನೂನು ಸಹ ಬಲಿಷ್ಠರನ್ನು, ವರಿಷ್ಠರನ್ನು ಕಂಡರೆ ಲಾಂಗೂಲ ಪ್ರದರ್ಶನ ಮಾಡುತ್ತದೆ. ಸಣ್ಣ ದೀಪಕ್ಕೆ ಗಾಳಿ ಶತ್ರುವಾದರೆ, ದೊಡ್ಡ ಬೆಂಕಿಗೆ ಮಿತ್ರನಾಗುತ್ತದೆ.

(ಸಾಮಾನ್ಯರ ಅಸಹಾಯಕತೆ)



ಲಾಲ್‌ಬಾಗಿನಲ್ಲಿ ಆನೆಗೆ ಚೆಡ್ಡಿ ತೊಡಿಸಿದ್ದು ಇತ್ಯಾದಿ...

♦ *ಲಕ್ಷ್ಮೀಪತಿ ಮಾವಳ್ಳಿ*
(ಪ್ರಾಥಮಿಕ, ಮಾಧ್ಯಮಿಕ ಶಾಲೆಯ ಸಹಪಾಠಿ)

ನನ್ನ ಮತ್ತು ಕೆ. ಎಸ್. ನಿಸಾರ್ ಅಹಮದ್ ಅವರ ಸ್ನೇಹ ಪ್ರಾರಂಭವಾದದ್ದು ಸುಮಾರು ಅರವತ್ತು ನಾಲ್ಕು ವಸಂತಗಳ ಹಿಂದೆ.

ನಾನು ಮತ್ತು ನಿಸಾರ್‌ರವರು ಸಹಪಾಠಿಗಳಾಗಿ ಸೇರಿದ್ದು, ವ್ಯಾಸಂಗ ಮಾಡಿದ್ದು ಬೆಂಗಳೂರು ನಗರದ ಹಳೆಯ ಪ್ರದೇಶಗಳಲ್ಲಿ ಒಂದಾದ ದೊಡ್ಡ ಮಾವಳ್ಳಿಯ ಸರ್ಕಾರಿ ಪ್ರಾಥಮಿಕ ಕನ್ನಡ ಶಾಲೆಯಲ್ಲಿ (೧೯೪೦-೪೪). ಈ ಶಾಲೆ ಈಗಲೂ ಲಾಲ್ ಬಾಗ್ ಹೆಸರಿನ ಕೆಂಪು ತೋಟದ ರಸ್ತೆಯ ಮಸೀದಿಯ ಎದುರಿನಲ್ಲಿದೆ. ಆಗ ತರಗತಿಯಲ್ಲಿ ಉದ್ದನೆಯ ಮರದ ಹಲಗೆಯ ಮೇಲೆ ನಾವು ಕೂರುತ್ತಿದ್ದೆವು. ಹೆಣ್ಣು ಮಕ್ಕಳು ಸಹ ನಮ್ಮ ಜತೆಯಲ್ಲೇ ವ್ಯಾಸಂಗ ಮಾಡುತ್ತಿದ್ದರು. ಮೇಷ್ಟ್ರುಗಳು ಧರಿಸುತ್ತಿದ್ದ ಅಂದಿನ ಉಡುಪು ಕಚ್ಚೆ ಪಂಚೆ, ಕ್ಲೋಸ್ ಕಾಲರ್ ಕೋಟು, ತಲೆಗೆ ಪೇಟ ಅಥವಾ ಕರಿ ಬಣ್ಣದ ಟೋಪಿ, ಕೈಯ್ಯಲ್ಲೊಂದು ಬೆತ್ತ. ಶಾಲೆಯ ಬೆಲ್ಲಾದರೆ ಸಾಕು ಒಬ್ಬರ ಮೇಲೊಬ್ಬರು ನುಗ್ಗಿ ಎದ್ದು ಬಿದ್ದು ಓಡುವುದು ಹುಡುಗರ ಆಗಿನ ಹುಚ್ಚು ಹುಮ್ಮಸ್ಸು. ನಮ್ಮ ಶಾಲೆಯ ಮುಂದೆಯೇ ಈಗಿನ ಪ್ರತಿಷ್ಠಿತವಾದ ಎಂ.ಟಿ.ಆರ್. ಹೋಟೆಲ್ (ಮಾವಳ್ಳಿ ಟಿಫನ್ ರೂಂ) ಇದ್ದದ್ದು. ಆ ಕಾಲಕ್ಕೆ ತುಂಬಾ ಚಿಕ್ಕದಾದ ಹೋಟೆಲ್ ಅದು. ನೀರು ಕುಡಿಯಲು ನಾವು ಹೋಟೆಲ್‌ಗೆ ನುಗ್ಗುವಾಗ ಅದರ ಮಾಲೀಕರಾದ ದಿ. ಯಜ್ಞಪ್ಪ

ನವರು 'ಯಾಕ್ರೋ ಓಡಿ ಬರ್ತೀರ? ಸೈಕಲ್ಲುಗಳು ಬರ್ತಿರುತ್ವೆ ನೋಡಿಕೊಂಡು ಬನ್ನಿ. ನೀರು ಇಂಗಿ ಹೋಗುತ್ತದ' ಎಂದು ಗದರಿಸುತ್ತಿದ್ದರು. ಅವರು ಚಿನ್ನದ ಹತ್ತಕಡಕು ಹಾಕಿಕೊಂಡು ಗುಂಗುರು ಕೂದಲಿನ ಕ್ರಾಪು ಬಿಟ್ಟು ಕನ್ನಡಕದ ಶ್ವೇತಧಾರಿ ಸೌಜನ್ಯ ಮೂರ್ತಿಯಂತಿದ್ದರು. ನಲವತ್ತರ ದಶಕದ ಆರಂಭದಲ್ಲೇ ಅವರು ಹಡಗಿನ ಮೂಲಕ ಇಂಗ್ಲೆಂಡಿಗೆ ಹೋಗ ಬಂದರೆಂದು ಪ್ರತೀತಿ. ಎಲ್ಲರಂತೆ, ಬಾಲಕರಾದ ನಮಗೂ ಮಹದಾಶ್ಚರ್ಯ ಜೊತೆ ಅನಿರ್ವಚನೀಯ ಗೌರವ. ಅವರು ಅಲ್ಲಿಂದ ತಂದಿದ್ದರೆನ್ನಲಾದ 'ಐಸ್‌ಕ್ರಷರ್' (ಮಂಜುಗಡ್ಡೆಯನ್ನು ಪುಡಿಮಾಡುವ) ಯಂತ್ರವನ್ನು ಗಲ್ಲಾಪೆಟ್ಟಿಗೆಯಿದ್ದ ಮೇಜಿನ ಮೇಲೆ ಇಟ್ಟಿದ್ದರು. ಆ ಕಾಲಕ್ಕೆ, ಇಂದು ಅತಿ ಸಾಧಾರಣವೆನ್ನಿಸುವ ಆ ಯಂತ್ರ ಒಂದು ಅದ್ಭುತ.

ನಿಸಾರರು ಮಾವಳ್ಳಿಯ ಮಸೀದಿಯ ಹಿಂಭಾಗದ ರಸ್ತೆಯಲ್ಲಿ ಲಾಲ್‌ಬಾಗ್ ಕಾಂಪೌಂಡಿಗೆ ಬಹಳ ಸಮೀಪದಲ್ಲಿಯೇ ವಾಸಿಸುತ್ತಿದ್ದರು. ಇವರ ಮನೆಯ ಮುಂದೆಯೇ ಒಂದು ಸಾರ್ವಜನಿಕ ನಲ್ಲಿ. ಇದರ ಪಕ್ಕದಲ್ಲಿಯೇ ಹಕೀಮ್ ಸಾಸೇಬರ ಯುನಾನಿ ಔಷಧಾಲಯವಿತ್ತು. ನಮಗೆ ನೆಗಡಿ, ಕೆಮ್ಮು, ಜ್ವರ ಬಂದಾಗ ಇವರಲ್ಲಿಗೆ ಹೋಗುತ್ತಿದ್ದೆವು. ಆ ಕಾಲಕ್ಕೆ ಈಗಿನ ಹಾಗೆ, ಬೀದಿಗೊಂದು ಮೆಡಿಕಲ್ ಷಾಪ್ ಇರಲಿಲ್ಲ. ಈ ಪ್ರದೇಶದಲ್ಲಿ ಸುಮಾರು ಐನೂರು ಆರುನೂರು ಮುಸ್ಲಿಂ ಹುಡುಗರು ವ್ಯಾಸಂಗಕ್ಕೆ ಉರ್ದುವನ್ನೇ ಆಯ್ಕೆ ಮಾಡಿಕೊಂಡಿದ್ದರೂ ನಿಸಾರರ ತಂದೆ, ಮುಂದೆ ಸರ್ಕಾರಿ ಕೆಲಸ ಸಿಗಬೇಕಾದರೆ ಕನ್ನಡ ಭಾಷೆ ಮುಖ್ಯವೆಂದು ಆಗಲೇ ಮುಂದಾಲೋಚನೆ ಮಾಡಿ ನಿಸಾರರಿಗೆ ಮತ್ತು ಅವರ ತಮ್ಮ ಸಫೀರ್ ಅಹಮದ್‌ಗೆ ಕನ್ನಡ ಮೀಡಿಯಂ ಶಾಲೆಗೆ ಸೇರಿಸಿದ್ದರು. ನಾನೂ ಪಕ್ಕದ ಗಲ್ಲಿಯಲ್ಲೇ ವಾಸಿಸುತ್ತಿದ್ದ ಕಾರಣ 'ಯಾವ ಜನ್ಮದ ಮೈತ್ರಿಯೋ' ಎಂಬಂತೆ ನಾವಿಬ್ಬರೂ ಆತ್ಮೀಯ ಸ್ನೇಹಿತರಾದೆವು. ಶಾಲೆಗೆ ಹೋಗುವಾಗ, ಬರುವಾಗ ಮತ್ತು ಎಲ್ಲಿಗೆ ಹೋಗಬೇಕಾದರೂ ಜತೆ ಜತೆಯಾಗಿಯೆ ಹೋಗಿ ಬರುತ್ತಿದ್ದೆವು. ನಿಸಾರರು ಯಾವಾಗಲೂ ಖಾಕಿ ನಿಕ್ಕರ್, ಖಾಕಿ ಷರ್ಟ್ ಇನ್ ಮಾಡಿಕೊಂಡು ಪುಸ್ತಕಗಳ ಬ್ಯಾಗನ್ನು ಹೆಗಲಿಗೆ ಹಾಕಿಕೊಂಡು ಗುಂಗುರು ಕೂದಲಿನ ಕ್ರಾಪ್ ಬಾಚಿಕೊಂಡು ನೀಟಾಗಿ ಶಾಲೆಗೆ ಬರುತ್ತಿದ್ದನ್ನು ಮರೆಯುವಂತಿಲ್ಲ. ಹಾಗೆಯೇ ಎಲ್ಲರೊಂದಿಗೂ ಸವಿ ಮಾತಿನ ಸ್ನೇಹಮಯಿಯಾಗಿದ್ದರು. ಯಾರೊಂದಿಗೂ ಜಗಳ, ವಿರಸ ಮಾಡಿಕೊಳ್ಳುತ್ತಿರಲಿಲ್ಲ. ಇದು ಗೆಳೆಯ ನಿಸಾರರ ಸಹಜ ಸ್ವಭಾವ.

ಬಿಡುವಿನ ವೇಳೆಯಲ್ಲಿ ನಾವು ಕಾಲವನ್ನು ಕಳೆಯಲು ಸಮೀಪದ ಲಾಲ್‌ಬಾಗ್‌ಗೆ ಹೋಗುತ್ತಿದ್ದೆವು. ಲಾಲ್‌ಬಾಗಿಗೆ ಈಗಿರುವಂತೆ ಕೋಟೆಯಂತಹ ಕಲ್ಲಿನ ಕಾಂಪೌಂಡ್ ಆ ಕಾಲಕ್ಕೆ ಇರಲಿಲ್ಲ. ಆಗ ಸುಮಾರು ಐದು ಅಡಿ ಎತ್ತರದ ಕಬ್ಬಿಣದ ಸರಳುಗಳೇ ಕಾಂಪೌಂಡು. ಎರಡು ಸರಳುಗಳ ಮಧ್ಯೆ ತಲೆ ತೂರಿಸಿ, ದೇಹ ಬಗ್ಗಿಸಿ ಲಾಲ್‌ಬಾಗ್ ಒಳಕ್ಕೆ ಸಲೀಸಾಗಿ ನುಗ್ಗುತ್ತಿದ್ದೆವು. ಲಾಲ್‌ಬಾಗ್ ಮುಖ್ಯ ದ್ವಾರದಿಂದ ಹೋಗುತ್ತಲೇ ಇರಲಿಲ್ಲ. ಅಲ್ಲಿನ ಮಾವಿನ ಮರ, ಹುಣಸೆ ಮರ, ಕೊಬ್ಬರಿಕಾಯಿ ಮರಗಳಿಗೆ ಕಲ್ಲು ಹೊಡೆದು ಆ ಕಾಯಿಗಳನ್ನು ಜೇಬಿಗೆ ತುಂಬಿಕೊಂಡು ಬರುತ್ತಿದ್ದೆವು. ಅದನ್ನು ಶಾಲೆಯ ಹೆಣ್ಣು ಮಕ್ಕಳಿಗೆ

ಬಳಪ, ಮೋಟು ಪೆನ್ಸಿಲ್‌ಗಳಿಗೆ ವಿನಿಮಯ ಮಾಡುತ್ತಿದ್ದೆವು. ನಮ್ಮ ಪಕ್ಕದ ಗಲ್ಲಿಯ ಒಂದು ಮನೆಯಲ್ಲಿ ಎಲಚಿ ಹಣ್ಣಿನ ಮರವಿತ್ತು. ಅದರ ಲಗ್ಗೆ ಮಾಡದ ದಿನವಿರುತ್ತಿರಲಿಲ್ಲ.

ಒಮ್ಮೆ ನಿಸಾರರು ನನ್ನನ್ನು ಕುರಿತು 'ಲಾಲ್‌ಬಾಗಿಗೆ ಹೋಗೋಣ ಬಾರೋ' ಎಂದು ಕರೆದರು. 'ಆಯ್ತು' ಎಂದು ಇಬ್ಬರೂ ಒಬ್ಬರ ಹೆಗಲ ಮೇಲೆ ಒಬ್ಬರು ಕೈ ಹಾಕಿಕೊಂಡು ಲಾಲ್‌ಬಾಗ್‌ಗೆ ಹೊರಟೆವು. ಈಗಿನ ಚಾಮರಾಜ ಒಡೆಯರ ಪ್ರತಿಮೆ ಇರುವ ಸಮೀಪದಲ್ಲೇ ಗಿಡ ಮರಗಳ ಒಂದು ಪೊದೆ ಇದ್ದಿತು. ಅಲ್ಲಿನ ಮರದ ಕೆಳಗಿದ್ದ ಕಲ್ಲಿನ ಬೆಂಚಿನ ಮೇಲೆ ಕುಳಿತೆವು. ನಿಸಾರರು ಮಾತಿಗೆ ಪ್ರಾರಂಭಿಸಿ 'ನಾನೊಂದು ಪುಟ್ಟ ಕಥೆ ಬರೆದಿದ್ದೇನೆ. ಅದಕ್ಕೆ ಚಿತ್ರ ಬೇಕಾಗಿದೆ. ಚಿತ್ರ ಹೇಗಿರಬೇಕೆಂದರೆ, ಒಂದು ಪಾಳು ಮಂಟಪ, ಅಲ್ಲಿ ಒಬ್ಬ ಮಚ್ಚು ಹಿಡಿದು ನಿಂತಿರಬೇಕು. ಸುತ್ತಲೂ ಮರ ಗಿಡಗಳಿರಬೇಕು, ಇಂತಹ ಒಂದು ಚಿತ್ರ ಬರೆದು ಕೋಡೋ, ನಿನಗೆ ಮಸಾಲೆ ದೋಸೆ ಕೊಡಿಸುತ್ತೇನೆ' ಎಂದು ಹೇಳಿದ್ದರು. ಆಗ ನನಗೂ ಸ್ವಲ್ಪ ಚಿತ್ರ ಬರೆಯುವ ಹವ್ಯಾಸವಿತ್ತು. ಯಥಾಶಕ್ತಿ ಬರೆದು ಕೊಟ್ಟೆ. ಈಗ ಬ್ಯಾಂಡ್ ಹೌಸ್ ಇರುವ ಸಮೀಪದ ರೋಜದ ತೋಟದ ಬಳಿ ಒಂದು ಹೆಂಚಿನ ಛಾವಣಿ ಇದ್ದ ಹೋಟೆಲ್ ಇದ್ದಿತು. ನಿಸಾರ್ ಅವರು ನನಗೆ ಆ ದಿನ ಕೊಡಿಸಿದ ದೋಸೆ, ಕಾಫಿಯ ರುಚಿ ಇನ್ನೂ ನೆನಪಿನಲ್ಲಿ ಉಳಿದಿದೆ.

ಲಾಲ್‌ಬಾಗಿನ ಈ ವರ್ಣಮಯ ಹಾಗೂ ಹರಿದ್ವರ್ಣದ ಸುಂದರ ಪ್ರಕೃತಿಯ ಉಲ್ಲಾಸಕರ ಮಡಿಲಲ್ಲೇ ನಾವು ಹೆಚ್ಚು ಕಾಲ ಕಳೆಯುತ್ತಿದ್ದರಿಂದ ನಿಸಾರರ ಭಾವನಾ ಲೋಕಕ್ಕೆ ಪುಷ್ಟಿ ದಕ್ಕಿದಂತಾಗಿತ್ತು. ಈ ಕಣ್ಮನವನ್ನು ತಣಿಸುವ ಪ್ರಕೃತಿಯ ಒಡನಾಟವೇ ಮುಂದೆ ನಿಸಾರರು ಪ್ರಕೃತಿಯ ಬಗೆಗೆ ಬರೆದ ಹೃದಯಸ್ಪರ್ಶಿ ಕವನಗಳಿಗೆ ಪ್ರಮುಖ ಕಾರಣವೆಂದು ಭಾವಿಸುತ್ತೇನೆ. ಅವರ ಗದ್ಯ ಸಾಹಿತ್ಯ ಸ್ಫೂರ್ತಿಗೂ ಇದು ಪೂರಕವೆಂದು ತಿಳಿಯುತ್ತದೆ. ಬಾಲ್ಯದ ನಮ್ಮ ಸ್ನೇಹ ಬಳಗದಲ್ಲಿ ಟಿ. ಜಿ. ಬಸವಾರಾಧ್ಯ, ವೆಂಕಟಸ್ವಾಮಿ, ರಾಮಚಂದ್ರ, ಚಂದ್ರಶೇಖರ್ ಬನಶೆಟ್ಟಪ್ಪ ಹಾಗೂ ಇನ್ನೂ ಕೆಲವು ಗೆಳೆಯರಿದ್ದರು.

ನಾವು ಮಿನರ್ವ ಸರ್ಕಲ್‌ನಲ್ಲಿದ್ದ ಮಿಡ್ಲ್ ಸ್ಕೂಲನ್ನು ಸೇರಿದ ಮೇಲೆ, ನಿಸಾರರು ಶಾಲೆಗೆ ಹೋಗುವಾಗ ನನ್ನನ್ನು ಕರೆಯಲು ನಮ್ಮ ಮನೆಯ ಹತ್ತಿರ ಬರುತ್ತಿದ್ದರು. ನಾನು ಮತ್ತು ನಿಸಾರರು ಆತ್ಮೀಯ ಸ್ನೇಹಿತರು ಎಂಬುದು ನಮ್ಮ ತಂದೆಯವರಿಗೆ ತಿಳಿದಿತ್ತು. ಒಂದು ಬಾರಿ ನಮ್ಮ ಮನೆಯಲ್ಲಿ ಯಾವುದೋ ಮಾತಿನ ಮಧ್ಯೆ ನಿಸಾರರ ವಿಷಯ ಬಂದಿತು. ಆಗ ನಮ್ಮ ತಂದೆಯವರು 'ನೋಡೋ, ನಿನ್ನ ಸ್ನೇಹಿತ ಮುಸ್ಲಿಂ ಹುಡುಗನಾದರೂ ಕನ್ನಡ ಎಷ್ಟು ಚೆನ್ನಾಗಿ, ಸ್ಪಷ್ಟವಾಗಿ ಮಾತನಾಡುತ್ತಾನೆ. ನೀವೂ ಇದ್ದೀರ ದಂಡಪಿಂಡಗಳು. ಈ ಚಿಕ್ಕ ವಯಸ್ಸಿನಲ್ಲೇ ಕಥೆ, ಕವನ ಬರೆಯುತ್ತಾನೆ. ಅವನನ್ನು ನೋಡಿ ಕಲಿಯಿರಿ' ಎಂದು ಛೀಮಾರಿ ಹಾಕಿದ್ದನ್ನು ನಾನು ಇನ್ನೂ ಮರೆತಿಲ್ಲ. ಆದರೆ ಅವರು ನನ್ನನ್ನು ಅಂದು ಬೈದದ್ದು ಒಂದು ದೃಷ್ಟಿಯಲ್ಲಿ ಒಳ್ಳೆಯದೇ ಆಯಿತು ಎಂದು ಈಗ ಅನ್ನಿಸುತ್ತಿದೆ. ಏಕೆಂದರೆ ಅಂದಿನಿಂದಲೆ ಕನ್ನಡದ ಬಗ್ಗೆ ನನ್ನಲ್ಲಿ ಒಲವು ಮೂಡಲು ಮತ್ತು ಕನ್ನಡಕ್ಕಾಗಿ ಏನಾದರೂ ಮಾಡಬೇಕೆಂಬ ಛಲ ನನ್ನ ಮನಸ್ಸಿನಲ್ಲಿ ಹುಟ್ಟಲು ಆ ಬೈಗುಳ ಪ್ರಚೋದನೆ

ಯಾಯಿತೆನ್ನಬೇಕು. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಬಾಲ್ಯದ ಸ್ನೇಹ ಬಹಳ ರೋಚಕವಾಗಿತ್ತು. ಒಂದು ದಿನವೂ ನಾವು ಜಗಳವಾಡಿದವರಲ್ಲ. ನಿಜ ಹೇಳಬೇಕೆಂದರೆ ನಿಸಾರರು ಸದಾ ಹಸನ್ಮುಖಿ. ಸರಳ ಸಜ್ಜನಿಕೆಯನ್ನು ಅವರಲ್ಲಿ ಕಾಣಬಹುದಾಗಿತ್ತು. ಎಲ್ಲರಿಗೂ ಪ್ರೀತಿಯ ಗೆಳೆಯನಾಗಿದ್ದ ಎಂದರೆ ಅತಿಶಯೋಕ್ತಿ ಯಾಗಲಾರದು.

ಈ ಸಂದರ್ಭದಲ್ಲಿ ಒಂದು ಸಂಗತಿ ನೆನಪಾಗುತ್ತಿದೆ. ಇದನ್ನು ನಿಸಾರರೂ ಅಲ್ಲಲ್ಲಿ ಪ್ರಸ್ತಾಪಿಸಿದ್ದಾರೆ. ೧೯೪೩ನೆಯ ಇಸ್ವಿಯ ಒಂದು ದಿವಸ ನಾವು ಹುಡುಗರು ಮಧ್ಯಾಹ್ನ ಊಟಕ್ಕೆಂದು ನಮ್ಮ ಶಾಲೆಯಿಂದ ಮನೆಗೆ ಹೊರಟಿದ್ದೆವು. ಸಾಮಾನ್ಯವಾಗಿ ಗುಂಪು ಗುಂಪಾಗಿ 'ಹೋ' ಎಂದು ಗದ್ದಲವೆಬ್ಬಿಸುತ್ತ ಹೋಗುವುದು ನಮ್ಮ ಚಾಳಿ. ಸೈಕಲ್ಲಿನಲ್ಲಿ ಬರುತ್ತಿದ್ದ ಒಬ್ಬ ಯುವಕ 'ಲೇ ಹುಡುಗರಾ, ಬೇಗ ಹೋಗ್ರೋ. ಲಾಲ್‌ಬಾಗ್‌ನ ಗ್ಲಾಸ್ ಹೌಸ್ ಹತ್ರ ಸರ್ಕಾರದೋರು ಆನೆಗಳಿಗೆ ರೇಷ್ಮೆ ನಿಕ್ಕರ್ ತೊಡಿಸ್ತಿದಾರೆ. ಅದನ್ನ ನೋಡೋಕೆ ಸ್ವತಃ ಮಹಾರಾಜರೇ ಬಂದಿದ್ದಾರೆ' ಎಂದ. ಹೀಗೆಂದಿದ್ದೇ ತಡ, ನಾವು, ಸುಮಾರು ಮೂವತ್ತು-ನಲವತ್ತು ಹುಡುಗರು ನಾಗಾಲೋಟದಿಂದ ಕೆಲವೇ ನಿಮಿಷಗಳಲ್ಲಿ ಗಾಜಿನ ಮನೆಯೆದುರು ಪ್ರತ್ಯಕ್ಷವಾದೆವು. ಏದುಸಿರು, ಆಯಾಸ, ಬೆವರನ್ನೂ ಲೆಕ್ಕಿಸದೆ ಅಲ್ಲಿನ ಆಸುಪಾಸನ್ನೆಲ್ಲ ತಪಾಸಿಸಿದೆವು. ಎಲ್ಲೂ ಕೂಡ ಮಹಾರಾಜರಿರಲಿ, ಆನೆಗಳಿರಲಿ, ನರರ ಸುಳಿವೂ ಇರಲಿಲ್ಲ. ನಿರಾಶೆಯಿಂದ ಮರಳಬೇಕು ಎನ್ನುವಾಗ, ಕುರುಪೆಯಿಂದ ಹುಲ್ಲನ್ನು ಕೊಯ್ಯುತ್ತಿದ್ದ ಮುದಿ ಮಾಲಿಯೊಬ್ಬ ಕಾಣಿಸಿದ. ಆತನನ್ನು ವಿಚಾರಿಸಲಾಗಿ, ಅವನು ನಗುತ್ತ, 'ಅಯ್ಯೋ ಹುಚ್ಚು ಮುಂಡೇವ, ಎಲ್ಲಾದ್ರೂ ಆನೆಗೆ ಚೆಡ್ಡಿ ಹಾಕ್ತಾರೇನ್ರೊ? ಅದನ್ನ ನೋಡೋಕೆ ಮಹಾರಾಜರು ಮೈಸೂರಿನಿಂದ ಬರ್ತಾರೇನ್ರೊ? ಯಾರೋ ಘಟಿಂಗ ನಿಮ್ಮನ್ನ ಯಾಮಾರಿಸಿರ್ಬೇಕು' ಎಂದ. ನಮಗೋ ಅವಮಾನ, ಸಿಟ್ಟು ಒಟ್ಟಿಗೇ ಬಂದು, ನಮಗೆ ಮೋಸ ಮಾಡಿದ ಅಪರಿಚಿತನ ಮೇಲೆ ಕೆಟ್ಟ ಕೆಟ್ಟ ಬೈಗುಳಗಳ ಮಳೆಯನ್ನು ಸುರಿಸುತ್ತ, ಜೊತೆಗೇ ಒಬ್ಬರಿಗೊಬ್ಬರು ತಮಾಷೆ ಮಾಡುತ್ತ ಮನೆ ಕಡೆ ಮರಳಿದೆವು. ನಾನೂ ನಿಸಾರರೂ ಭೇಟಿಯಾದಾಗ, ಈ ವಿಷಯವನ್ನು ಅವರು ತಮ್ಮ ಮಿತ್ರರೆದುರು ಪ್ರಸ್ತಾಪಿಸುವುದು ನನ್ನ ಅನುಭವಕ್ಕೆ ಎರಡು ಮೂರು ಸಲ ಬಂದಿದೆ.

ಅನಂತರ ಬದುಕಿನಲ್ಲಿ ನಾವು ಅನಿವಾರ್ಯವಾಗಿ ದೂರವಾಗಬೇಕಾಯಿತು. ಆದರೆ ಸ್ನೇಹಕ್ಕೆ ಮಾತ್ರ ಈವರೆಗೆ ಯಾವುದೂ ಅಡ್ಡಿ ಬಂದಿಲ್ಲ. ವರ್ಷಗಳು ನಮಗೆ ಅರಿವಿಲ್ಲದೆ ಉರುಳಿ ಹೋದವು. ನಿಸಾರರು ವಿದ್ಯಾಭ್ಯಾಸವನ್ನು ಮುಗಿಸಿ ಲೆಕ್ಚರರ್ ಆಗಿ ಸೇರಿಕೊಂಡರೆ, ನಾನು ರಾಜ್ಯದ ಲೋಕೋಪಯೋಗಿ ಇಲಾಖೆಗೆ ಸೇರಿಕೊಂಡೆ. ನಿಸಾರರು ಸಾಹಿತ್ಯ ಕೃಷಿಯಲ್ಲಿ ನಿಷ್ಠೆಯಿಂದ ತಮ್ಮನ್ನು ತಾವು ತೊಡಗಿಸಿಕೊಂಡು ಅಪೂರ್ವ ಸಾಧನೆಯ ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಲು ಪ್ರಾರಂಭಿಸಿದರು. ಈಗ ಅವರು ಆಧುನಿಕ ಕನ್ನಡ ಸಾಹಿತ್ಯದ ಖ್ಯಾತ ವ್ಯಕ್ತಿಗಳಲ್ಲಿ ಒಬ್ಬರಾಗಿರುವುದು ನನಗೆ ಸಂತೋಷದ, ಹೆಮ್ಮೆಯ ಸಂಗತಿಯಾಗಿದೆ. ನನಗೂ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ, ಅಭಿಮಾನವಿದ್ದರೂ ಮುಂದುವರೆಯಲು ಸಾಧ್ಯವಾಗಲಿಲ್ಲ. ಅವಕಾಶಗಳನ್ನು ನಿರೀಕ್ಷಿಸುತ್ತಿದ್ದೆ.

ಕನ್ನಡದ ರಕ್ಷಣೆಗೆ ಹೋರಾಟ ನಡೆಸುವುದಕ್ಕಾಗಿ ಕಾದಂಬರಿ ಸಾರ್ವಭೌಮ ದಿ. ಅ.ನ.ಕೃ. ಮತ್ತು ಖ್ಯಾತ ಸಾಹಿತಿ ಮ. ರಾಮಮೂರ್ತಿಯವರ ನಾಯಕತ್ವದಲ್ಲಿ ಪ್ರಾರಂಭಿಸಿದ ಕನ್ನಡ ಚಳವಳಿಯ ಸಂಯುಕ್ತ ರಂಗದಲ್ಲಿ ಪಾಲ್ಗೊಂಡು ಕನ್ನಡಕ್ಕಾಗಿ ಕಾದಾಡುವ ಅವಕಾಶ ದೊರಕಿತು. ಈ ಹೋರಾಟಗಳಲ್ಲಿ ಪೊಲೀಸರ ಲಾಠಿಯ ರುಚಿಯನ್ನು ತಿನ್ನಬೇಕಾಯಿತು. ಇದೇ ಸಂದರ್ಭದಲ್ಲಿ ಕನ್ನಡಕ್ಕೆ ಆಗುತ್ತಿದ್ದ ಅನ್ಯಾಯಗಳ ಬಗ್ಗೆ ಪತ್ರಿಕೆಗಳಿಗೆ ಲೇಖನ ಬರೆಯುವ ಹವ್ಯಾಸ ಬೆಳೆಸಿಕೊಂಡೆ. ಈ ಮೂಲಕ ಸಣ್ಣಕಥೆ ಕವನ ಬರೆಯುವ ಸ್ಫೂರ್ತಿ ನನಗೆ ಬಂದಿತು. ಜತೆಗೇ ನಾವು ಆಗೀಗ ಭೇಟಿಯಾದಾಗ ನಿಸಾರರ ಬೆಂಬಲದ ಮಾತುಗಳು ಮನದಲ್ಲಿ ಯಾವಾಗಲೂ ಮಾರ್ದನಿಸಿ, ಬರವಣಿಗೆ ಮಾಡಲು ಒತ್ತಾಯಿಸುತ್ತಿದ್ದವು..

ಈ ದಿಸೆಯಲ್ಲಿ ನನ್ನ ಪ್ರಥಮ ಕಥಾ ಸಂಕಲನ 'ಬೆಳದಿಂಗಳು' ೧೯೬೭ರಲ್ಲಿ ಹೊರ ಬಂದಿತು. ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಕೊಡಲು ಮಿತ್ರ ನಿಸಾರರನ್ನು ಭೇಟಿ ಮಾಡಿ ಕೇಳಿಕೊಂಡಾಗ ನಿಸಾರರು 'ಲಕ್ಷ್ಮೀಪತಿ, ನನಗೆ ಒಂದು ನಿಮಿಷವೂ ಬಿಡುವಿಲ್ಲ. ನಾನು ಯಾರಿಗೂ ಮುನ್ನುಡಿ ಬರೆಯುವುದಿಲ್ಲ. ಈಗ ನಾನು ಯಾವ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಆದರೂ ನೀನು ನನ್ನ ಬಾಲ್ಯ ಸ್ನೇಹಿತನಾದ ಕಾರಣ ಇಲ್ಲ ಎನ್ನದೇ ಬರೆದು ಕೊಡುತ್ತೇನೆ' ಎಂದು ಅವರ ಕಾಲೇಜಿನ ಕಛೇರಿಯಲ್ಲೇ ಕುಳಿತು ನನ್ನ ಚೊಚ್ಚಲು ಪುಸ್ತಕಕ್ಕೆ ನಲ್ನುಡಿಯನ್ನು ಬರೆದು 'ಕೆಲವು ವ್ಯಾಕರಣದ ತಪ್ಪುಗಳನ್ನು ತಿದ್ದಿಕೊ. ಬರೆಯುವುದನ್ನು ಬಿಡಬೇಡ' ಎಂದು ಮನದುಂಬಿ ಹಾರೈಸಿದರು.

ಪುಸ್ತಕದ ನಲ್ನುಡಿಯಲ್ಲಿ ನನ್ನ ಬಗ್ಗೆ ಹಾಗೂ ಕಥಾವಸ್ತುವಿನ ಬಗ್ಗೆ ನಿಸಾರರು ಬರೆದ ಮಾತುಗಳು ಹೃದಯಸ್ಪರ್ಶಿಯಾಗಿದ್ದು, ಬಹಳ ಉತ್ಕೃಷ್ಟವಾದ ವಿಚಾರಗಳನ್ನು ಒಳಗೊಂಡಿವೆ. ನನ್ನ ಪಾಲಿಗೆ ಮಾರ್ಗದರ್ಶಕಪ್ರಾಯವಾಗಿವೆ. ಅವರ ವಿಮರ್ಶಾತ್ಮಕ ಶಕ್ತಿಗೆ ಕನ್ನಡಿ ಹಿಡಿದಂತಿವೆ. ಅವರ ಈ ಪ್ರೀತಿಯ ಉತ್ತೇಜನಕ್ಕೆ ನನ್ನ ಹೃದಯಾಂತರಾಳದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇನ್ನೊಂದು ವಿಷಯ ನೆನಪಿಗೆ ಬರುತ್ತಿದೆ. ನಾನು ಚಿತ್ರಕಲೆಯನ್ನು ಕಲಿಯಲು ಗಾಂಧಿ ಬಜಾರಿನ ದಿ. ಅ. ನ. ಸುಬ್ಬರಾಯರ ಕಲಾಮಂದಿರಕ್ಕೆ ಹೋಗುತ್ತಿದ್ದಾಗ ನಿಸಾರರು ಆಗಾಗ್ಗೆ ಅಲ್ಲಿಗೆ ಬರುತ್ತಿದ್ದರು. ಅಲ್ಲಿ ಬೀದಿ ನಾಟಕಕಾರ ಎ. ಎಸ್. ಮೂರ್ತಿ, ನವರತ್ನರಾಮ್, ದಾಶರಥಿ ದೀಕ್ಷಿತ್ ಮತ್ತಿತರರೊಂದಿಗೆ ಅನೇಕ ಪ್ರಸ್ತುತ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದುದನ್ನು ಅನೇಕ ಬಾರಿ ನಾನು ಆಲಿಸಿದ್ದೇನೆ. ಮಾತುಗಳ ನಡುವೆ ಅವರು ವ್ಯಕ್ತಪಡಿಸುತ್ತಿದ್ದ ಆಲೋಚನೆಗಳನ್ನು ಕೇಳಿ, ಅವರ ಪುಸ್ತಕ ವ್ಯಾಸಂಗ, ಸ್ವಂತ ಚಿಂತನೆಯ ಆಳ ಮತ್ತು ವಿಸ್ತಾರವನ್ನು ಗ್ರಹಿಸಿ ವಿಸ್ಮಯಪಟ್ಟಿದ್ದೇನೆ.. ಗಾಂಧಿ ಬಜಾರ್ ಅವರಿಗೆ ಪ್ರಿಯವಾದ ಕೇಂದ್ರ ಸ್ಥಳ. ನಿಸಾರರ ಸರಳ ಸ್ವಭಾವ, ಸಜ್ಜನಿಕೆ, ಮುಚ್ಚುಮರೆಯಿಲ್ಲದ ಮಾತುಗಾರಿಕೆಯ ಮನೋಭಾವ ಎಲ್ಲರನ್ನೂ ಆಕರ್ಷಿಸುವ ಅಯಸ್ಕಾಂತವೆಂದರೆ ತಪ್ಪಾಗಲಾರದು. ಅವರ ಕವಿತಾ ರಚನೆಗಳು ದೇಶ ವಿದೇಶಗಳಲ್ಲಿ ಜನಪ್ರಿಯವಾಗಲು ಅವರ ಸಾಮಾಜಿಕ ಕಳಕಳಿ ಹಾಗೂ ಜನಪರವಾದ ಪ್ರಸಕ್ತ ವಿಚಾರಗಳ ಅವಲೋಕನದ ತುಡಿತ

ಮುಖ್ಯ ಕಾರಣ ಎಂದು ನನ್ನ ಅನ್ನಿಸಿಕೆ.

ಅಂದಹಾಗೆ ಮರೆಯುವುದಕ್ಕೆ ಮುಂಚೆ ಒಂದು ಅನುಭವವನ್ನು ಹೇಳಬೇಕು. ನಾವು ಪ್ರೈಮರಿ–ಮಿಡ್ಲ್ ಶಾಲೆಗಳಲ್ಲಿ ಓದುತ್ತಿದ್ದಾಗ ಲಾಲ್‌ಬಾಗ್‌ನ ಕೆರೆಯಲ್ಲಿ ಈಜಬಾರದೆಂಬ ನಿಯಮವಿದ್ದರೂ, ಕಣ್ಣು ತಪ್ಪಿಸಿ ಈಜುವುದು ವಾಡಿಕೆ. ಒಂದು ಸಲ ನಾವೆಲ್ಲರೂ ಮತ್ತು ನಿಸಾರರ ನೆರೆಮನೆಯಲ್ಲಿ ವಾಸವಾಗಿದ್ದ ಅವರ ಆತ್ಮೀಯ ದೋಸ್ತುಗಳಾದ ಹಾಷಮ್ ಸೇಟ್, ಅಹ್ಮದ್ ಸೇಟ್, ಸರ್ದಾರ್ ಮೊದಲಾದವರು ಮರಕೋತಿ ಆಟವಾದ ಮೇಲೆ, ಕೆರೆಯಲ್ಲಿ ಈಜಾಡುತ್ತಿದ್ದೆವು. ಆಗೆಲ್ಲಾ ನಾವು ಹುಟ್ಟಿದ ಅವಸ್ಥೆಯಲ್ಲಿ ನೀರಿಗಿಳಿಯುತ್ತಿದ್ದೆವು. ಆ ಕಾಲದಲ್ಲಿ ಲಾಲ್‌ಬಾಗಿನಲ್ಲಿ ಮಧ್ಯಾಹ್ನದ ವೇಳೆಯಲ್ಲಿ ಜನ ಅಡ್ಡಾಡುತ್ತಿದ್ದುದು ವಿರಳ. ಹೀಗಾಗಿ, ನಾವು ನಮ್ಮ ಬಟ್ಟೆ ಬರೆಗಳನ್ನು ದಡದ ಮೇಲಿಟ್ಟು, ಧೈರ್ಯದಿಂದ ಬೆತ್ತಲೆಯಾಗಿ ಈಜಲು ತೊಡಗುತ್ತಿದ್ದೆವು. ನಾವು ಸಂತೋಷದಿಂದ ಮೈಮರೆತು, ಅರಚಾಡುತ್ತ ಈಜುತ್ತಿರುವಾಗ, ಅಲ್ಲಿನ ಮಾಲಿಯೊಬ್ಬ ನಮ್ಮ ವಸ್ತ್ರಾಪಹರಣವನ್ನು ಮಾಡಿ ವೇಗವಾಗಿ ತೋಟಗಾರಿಕೆಯ ಇಲಾಖೆಯ ಕಡೆ ಓಡುತ್ತಿದ್ದುದನ್ನು ನಮ್ಮಲ್ಲೊಬ್ಬ ಗಮನಿಸಿ ಕಿರುಚಿದಾಗಲೇ ನಮ್ಮ ತನ್ಮಯತೆಗೆ ಭಂಗ ಬಂದಿದ್ದು. ನಾವು ಎದ್ದೇವೊ, ಬಿದ್ದೆವೊ ಎಂದು ಓಡುತ್ತ, ಯಾರಾದರೂ ಕಂಡಾರೆಂದು ನಾಚುತ್ತ ಗಾಬರಿ ಆತಂಕಗಳಿಂದ ಧಾವಿಸಿದೆವು. ಆ ಮಾಲಿ ಕಛೇರಿಯನ್ನು ಹೊಕ್ಕಿದ್ದನ್ನು ಗಮನಿಸಿ, ನಾವೂ ಒಳಗೋಡಿದೆವು. ನಿಮಗೆ ಗೊತ್ತಿದ್ದಂತೆ ಆಗ ಸ್ವಾತಂತ್ರ್ಯಪೂರ್ವದ ಕಾಲ. ಆಂಗ್ಲರ ಆಳ್ವಿಕೆಯ ದೆಸೆಯಿಂದ ಎಲ್ಲೆಲ್ಲೂ ಆ ಅಧಿಕಾರಿಗಳದೇ ಅಟ್ಟಹಾಸ. ನಾವು ಕಛೇರಿಯ ಒಳಗಡೆ ದಿಗಿಲು ಮತ್ತು ಚಳಿಯಿಂದ ನಡುಗುತ್ತ ನಿಂತಿದ್ದಾಗ, ಬಿಳಿಯ ಅಧಿಕಾರಿಯೊಬ್ಬ ಬಿದಿರಿನ ಬೆತ್ತವೊಂದರಿಂದ ನಮ್ಮನ್ನು ಬಾರಿಸತೊಡಗಿದ. ನಾವು ನೋವು ಅವಮಾನಗಳಿಂದ ಕಿವಿಗಡಚಿಕ್ಕುವಂತೆ ರೋದಿಸುತ್ತಿದ್ದೆವು. ಆಮೇಲೆ ನಮ್ಮ ಪೂರ್ವೋತ್ತರಗಳನ್ನು ತಿಳಿದು, ಎಚ್ಚರಿಕೆ ನೀಡಿ, ಮತ್ತೊಮ್ಮೆ ಈಜಾಡಿ ಸಿಕ್ಕಿ ಬಿದ್ದರೆ ಶಾಲೆಯಿಂದ ಸಸ್ಪೆಂಡ್ ಮಾಡಿಸುವುದಲ್ಲದೆ, ಜೈಲಿಗೂ ಹಾಕಿಸುವುದಾಗಿ ಬೆದರಿಸಿ, ಮಾಲಿಗೆ ಸನ್ನೆ ಮಾಡಿದ. ಅವನು ನಮ್ಮೆಲ್ಲರ ಬಟ್ಟೆಗಳನ್ನು ತಂದು ಹೊರಗಡೆ ಬಿಸಾಡಿದ. ನಾವು 'ಬದುಕಿದೆವು' ಎಂದುಕೊಂಡು, ಅಳುತ್ತಲೇ ಅವುಗಳನ್ನು ಎತ್ತಿಕೊಂಡು ಮುಖ್ಯ ದ್ವಾರದವರೆಗೂ ದೌಡಾಯಿಸಿ, ಅಲ್ಲಿನ ಮರವೊಂದರ ಮರೆಯಲ್ಲಿ ಉಟ್ಟುಕೊಂಡೆವು. ನಾವು ಗುಂಪಾಗಿ ಓಡಿ ಬರುತ್ತಿರುವಾಗ ಕೆಲವರು ನಮ್ಮನ್ನು ನೋಡಿ ನಕ್ಕು, ಗೇಲಿ ಮಾಡಿದ್ದರೂ ನಾವು ಲೆಕ್ಕಿಸಿರಲಿಲ್ಲ. ಸದ್ಯ, ಇಲ್ಲಿಂದ ಪಾರಾದರೆ ಸಾಕು ಎನ್ನಿಸಿತ್ತು. ಜೊತೆಗೆ ಆ ಬಿಳಿಯನ ಛಡಿ ಏಟಿನ ತಾಳಲಾರದ ಸಂಕಟ ಬೇರೆ ಜೀವವನ್ನು ಕಿತ್ತು ತಿನ್ನುತ್ತಿತ್ತು. ಆಮೇಲೆ ನಾವು ಎಷ್ಟೋ ತಿಂಗಳುಗಳವರೆಗೆ ಆ ಕೆರೆಯ ಸಮೀಪ ಕೂಡ ಸರಿದಿರಲಿಲ್ಲ.

ನಿಸಾರರು ಭಾಗವಹಿಸುತ್ತಿದ್ದ ಸಭೆ ಸಮಾರಂಭಗಳಲ್ಲಿ ಅವರನ್ನು ಭೇಟಿಯಾದಾಗ, ನನ್ನನ್ನು ಇತರೆ ಗಣ್ಯರೊಂದಿಗೆ ಪರಿಚಯಿಸುವಾಗ ವೈನೋದಿಕವಾಗಿ 'ಇವರು ನನ್ನ ಚಡ್ಡಿ ದೋಸ್ತ್' ಎಂದು ಪರಿಚಯಿಸುತ್ತಿದ್ದರು. ಅವರ ಅಭಿಮಾನಕ್ಕೆ ನನ್ನ ಎದೆ ತುಂಬಿ ಬರುತ್ತಿತ್ತು. ತುಂಬಿದ ಸಭೆಯಲ್ಲಿ 'ಬಹಳ ವರ್ಷಗಳ ಹಳೆಯ ಸ್ನೇಹಿತರೊಬ್ಬರು ಬಂದಿದ್ದಾರೆ' ಎಂದು ವೇದಿಕೆಯಲ್ಲಿ ನಿಂತು ಹೇಳುತ್ತಿದ್ದುದುಂಟು. ಅವರ ಪ್ರತಿಯೊಂದು

ಸಮಾರಂಭಕ್ಕೂ ಆಹ್ವಾನ ಪತ್ರಿಕೆಯನ್ನು ತಮ್ಮ ಸ್ವಹಸ್ತದಿಂದಲೇ ವಿಳಾಸ ಬರೆದು ಕಳುಹಿಸುತ್ತಾರೆ. ನಾನೂ ಸಹ ಮಿತ್ರರೊಡಗೂಡಿ ತಪ್ಪದೆ ಸಮಾರಂಭಕ್ಕೆ ಹೋಗುತ್ತೇನೆ. ಪ್ರಾಥಮಿಕ ಶಾಲೆಯ ನಮ್ಮ ಗೆಳೆತನವನ್ನು ಮರೆಯದಿರುವುದು ಅವರ ದೊಡ್ಡತನ.

ಅವರು ಟಿ.ವಿ.ಗಳಲ್ಲಿ ಪಾಲ್ಗೊಳ್ಳುವ ಪ್ರತಿಯೊಂದು ಕಾರ್ಯಕ್ರಮವನ್ನೂ ತಪ್ಪದೆ ನೋಡುತ್ತೇನೆ. ಬಾಲ್ಯದ ಸ್ನೇಹಿತರೊಬ್ಬರು ಇಷ್ಟೊಂದು ಎತ್ತರಕ್ಕೆ ಬೆಳೆದಿರುವುದು ವಿಶೇಷವಲ್ಲವೆ?

ಶ್ರೀಕೃಷ್ಣ-ಕುಚೇಲರ ಕಥೆಯಂತೆ ನಮ್ಮಿಬ್ಬರ ಸಾಹಿತ್ಯ ಸಂಬಂಧ. ಬಾಲ್ಯದಲ್ಲಿ ಶ್ರೀಕೃಷ್ಣನ ಸಹಪಾಠಿಯಾಗಿದ್ದ ಕುಚೇಲ ಒಮ್ಮೆ ಶ್ರೀಕೃಷ್ಣನನ್ನು ನೋಡಲು ದ್ವಾರಕಾ ಪಟ್ಟಣಕ್ಕೆ ಪ್ರೀತಿಯ ತಿನಿಸು ಅವಲಕ್ಕಿ-ಬೆಲ್ಲದ ಗಂಟನ್ನು ಹಿಡಿದು ಹೋದಂತೆ, ಕನ್ನಡ ಸಾಹಿತ್ಯ ಕ್ಷೇತ್ರದ ಉತ್ತುಂಗ ಶಿಖರದಲ್ಲಿ ಪ್ರಜ್ವಲಿಸುತ್ತಿರುವ ನಾಡಿನ ಖ್ಯಾತ ಕವಿಗಳಾದ ಡಾ. ಕೆ. ಎಸ್. ನಿಸಾರ್ ಅಹಮದ್ ಅವರಲ್ಲಿ ನನ್ನ ಅಂಬೆಗಾಲಿನ ಬರವಣಿಗೆಯ ಗಂಟನ್ನು ಮುಂದಿಟ್ಟಿದ್ದೇನೆ. ಎಂದಿನಂತೆ ಅವರ ಮಾರ್ಗದರ್ಶನವನ್ನು ಬಯಸುತ್ತೇನೆ. ಹಿಂದೆ ಅದು ನನಗೆ ಧಾರಾಳವಾಗಿ ಸಿಕ್ಕಿದೆ. ಅದಕ್ಕಾಗಿ ಅವರಿಗೆ ಆಭಾರಿ. ಅವರು ಆಗಾಗ್ಗೆ ತಿಳಿಸುವಂತೆ ಅಕಸ್ಮಾತ್ ಮುಂದಿನ ಜನ್ಮವಿದ್ದರೆ (ಅವರಿಗೆ ಜನ್ಮಗಳಲ್ಲಿ ನಂಬಿಕೆಯಿಲ್ಲ!) ನಿಸಾರರು ಬೆಂಗಳೂರಿನ ಗಾಂಧಿ ಬಜಾರಿನಲ್ಲೇ ಹುಟ್ಟುವಂತಾಗಲಿ, ಲಾಲ್‌ಬಾಗ್ ಪರಿಸರ ಅವರಿಗೆ ಲಭ್ಯವಾಗಲಿ. ಏಕೆಂದರೆ ಗಾಂಧಿ ಬಜಾರ್ ಮತ್ತು ಲಾಲ್‌ಬಾಗ್ ಇವರ ಸಾಹಿತ್ಯ ಸ್ಫೂರ್ತಿಗೆ ಮೂಲ ತಾಣಗಳು; ಅವರೇ ಕೆಲವು ಸಲ ಪತ್ರಿಕೆ, ಟಿ.ವಿ.ಗಳಲ್ಲಿ ಹೇಳಿರುವಂತೆ ಅವರ ಸಾಹಿತ್ಯ ಜೀವನದ ಶ್ವಾಸಕೋಶಗಳು.

ದೈವದ ಮೊಗವಾಡದ ಮರೆಯಲ್ಲಿ ಮನುಷ್ಯನ ಮೃಗೀಯತೆ ಮತ್ತೊಮ್ಮೆ ಮಾರ್ಮಲೆಯತೊಡಗಿದೆ. ಭಾವಾವೇಷಿಗಳ ಅಮಲಿಗ ಮಾತುಗಳಿಂದ ಮಾನವ ಮನಸ್ಸುಗಳು ಮತ್ತೇರಿದ ಮದ ಗಜಗಳಾಗಿವೆ. ಶಾಂತಿ ಸಹಬಾಳ್ವೆ ಯೆಂಬ ರಾಷ್ಟ್ರ ಬದುಕಿನ ಸುಂದರತಮವೂ ನಾಜೂಕು ನಯಸಂಪನ್ನವೂ ಆದ ಗಾಜಿನ ಅಂಗಡಿಯನ್ನು ಹೊಕ್ಕು ತೊತ್ತಳದುಳಿದಿವೆ. ಪರಿಶುದ್ಧ ಮನಸ್ಕರು, ಸರ್ವೇಜನ ಸುಖಿನೋಭವಂತು ಎಂಬ ಮಂತ್ರವನ್ನು ಪಠಿಸುವವರು ಎನ್ನಿಸಿ ಕೊಂಡವರ ಅಂತಸ್ಸಾಕ್ಷಿಗೆ ಲಕ್ವ ಬಡಿದಿದೆ. ಒಳಹೊರಗುಗಳು ಮತಿರಹಿತ ಮತದ್ವೇಷದ ಕೊಳಕು ಮಂಡಲಗಳಾಗಿ ಮಾರ್ಪಟ್ಟಿವೆ.

(ಮತ ವೈಷಮ್ಯ)



'ಮೂರು ರೂಪಾಯಿ ಪಗಾರದವನು ನೂರು ರೂಪಾಯಿಯವರನ್ನು ಬೈಯ್ಯಬಹುದೆ?'

♦ *ಡಾ. ಕೆ. ಸತ್ಯನಾರಾಯಣ ಸಿಂಗ್*
(ಪ್ರೌಢಶಾಲೆಯ ಸಹಪಾಠಿ)

೧೯೪೯ನೆಯ ಇಸವಿ. ಒಂದು ದಿನ ಬೆಳಿಗ್ಗೆ ೧೦.೩೦ ಗಂಟೆ. ಪ್ರಾರ್ಥನೆಯ ಬೆಲ್ ಹೊಡೆದಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅವರವರ ಸಾಲುಗಳಲ್ಲಿ ನಿಂತು ಪ್ರಾರ್ಥನೆಯನ್ನು ಮುಗಿಸಿದರು. ಅಂದೇಕೋ ಪ್ರೇಯರ್ ಮುಗಿದ ಮೇಲೆ ಅಸಹಜ ನಿಶ್ಶಬ್ದ. ಎಲ್ಲರೂ ಹೆಡ್‌ಮಾಸ್ಟರ್ ಎಂ. ಎ. ಅಳಸಿಂಗ್ರಾಚಾರ್ ಅವರ ಕಡೆ ನೋಡುತ್ತಿದ್ದರು. ಅವರು ಕೋಪೋದ್ವಿಗ್ನರಾಗಿ ಒಂದು ಕೈಯಲ್ಲಿ ಚೀಟಿ, ಮತ್ತೊಂದು ಕೈಯಲ್ಲಿ ಬೆತ್ತ ಹಿಡಿದುಕೊಂಡಿದ್ದರು. ಅಂದು ಅವರ ಕಣ್ಣು, ಹಣೆಯ ಮೇಲಿನ ನಾಮಕ್ಕಿಂತ ಕೆಂಪಗಾಗಿತ್ತು. ಚೀಟಿಯಲ್ಲಿದ್ದ ಒಂದೊಂದೇ ಹೆಸರನ್ನು ಓದುತ್ತಾ ಇದ್ದರು. ಸಂಬಂಧಪಟ್ಟ ವಿದ್ಯಾರ್ಥಿಗಳು ತಲೆ ತಗ್ಗಿಸಿಕೊಂಡು ಸಾಲಾಗಿ ನಿಂತಿದ್ದರು. 'ನೀವೇನ್ಮಾಡಿದ್ರಿ ಅಂತ ನಿಮ್ಗೆಲ್ಲಾ ಗೊತ್ತಿದೆ ತಾನೇ?' ಎಂದು ಗದರಿದರು ಮುಖ್ಯೋಪಾಧ್ಯಾಯರು. ಯಾರೂ ಮಾತನಾಡಲಿಲ್ಲ. 'ನೀವು ಮಾಡಿದ್ದು ತಪ್ಪಲ್ವ? ಹೂಂ ಹೇಳಿ' ಎಂದರು. ನಿಶ್ಶಬ್ದ ಮುಂದುವರಿದಿತ್ತು. 'ಅಂದ್ರೆ, ನೀವೆಲ್ಲಾ ನಿಮ್ಮ ತಪ್ಪನ್ನು ಒಪ್ಕೊಂಡಾಗ್ಹಾಯ್ತು. ಅದಕ್ಕೆ ಈ ಶಿಕ್ಷೆ, ನಿಮ್ಮ ಕೈಗಳನ್ನು ಮುಂದಕ್ಕೆ ಚಾಚಿ' ಎಂದರು. ನಿಂತಿದ್ದ ಪ್ರತಿಯೊಬ್ಬರೂ ಕೈ ಚಾಚಿದರು. ಹೆಡ್‌ಮಾಸ್ತರರ ಬೆತ್ತ ಮೇಲಕ್ಕೆ ಹೋಯಿತು. ಇನ್ನೇನು ಇಳಿಯಬೇಕು, ಆಗ 'ಸಾರ್' ಎನ್ನುವ ಒಂದು ಧ್ವನಿ. ಎಲ್ಲರ ಕಣ್ಣುಗಳೂ ಆ ಧ್ವನಿಯ ಕಡೆಗೆ ಹೋದವು. 'ಏನದು?'

ಗುಡುಗಿದರು ಹೆಡ್‌ಮಾಸ್ತರು. 'ಅಲ್ಲಾ ಸಾರ್, ಅವ್ನು ಮೂರು ರೂಪಾಯಿ ಸಂಬಳದ ಜವಾನ. ನೀವು ನೂರು ರೂಪಾಯಿಯ ಹೈಸ್ಕೂಲು ಹೆಡ್‌ಮಾಸ್ಟ್ರು. ನಿಮ್ಮನ್ನು ಬೈದರೆ ನಾವು ಕೇಳಿಸಿಕೊಂಡು ಸುಮ್ಮನಿರಬೇಕಾ ಸಾರ್? ನಿಮಗೆ ಬುದ್ಧಿಯಿಲ್ಲ ಅಂತ ಅನ್ನಬಹುದ ಸಾರ್? ಅದಕ್ಕೇ ಕೋಪ ಬಂದು ನಾವು ಹಾಗ್ ಮಾಡಿದ್ದು.' ಹೆಡ್‌ಮಾಸ್ತರರ ಕೋಪ ಸರ್‍ರೆಂದು ಇಳಿದು ಹೋಯಿತು. ಈ ಘಟನೆ ನಡೆದದ್ದು ಹಿಂದಿನ ದಿನ ನಾವು ಮುನಿಸಿಪಲ್ ಪಾರ್ಕ್‌ನಲ್ಲಿ ಸೂರು ಚೆಂಡು ಆಡುತ್ತಾ ಇದ್ದಾಗ, ಆ ಚೆಂಡು ಜವಾನ ಗಂಗನಿಗೆ ತಗುಲಿ, ಜಗಳ ಆಗಿ ಆತ ಹೆಡ್‌ಮಾಸ್ತರರಿಗೆ ಕಂಪ್ಲೇಂಟ್ ಮಾಡಿದ್ದ.

ಅವರ ಮುಖದಲ್ಲಿ ಸಣ್ಣಗೆ ಮಂದಹಾಸವೊಂದು ಮಿಂಚಿ ಮಾಯವಾಯಿತು. 'ಏನೇ ಆದರೂ ನೀವು ಮಾಡಿದ್ದು ತಪ್ಪೇ. ಇನ್ಮೇಲೆ ಹಾಗ್ ಮಾಡಿ ಸ್ಕೂಲಿಗೆ ಕೆಟ್ಟ ಹೆಸರು ತರಬೇಡಿ' ಅಂತ ಹೇಳಿ ಎಲ್ಲರನ್ನೂ ಮಾಫ್ ಮಾಡಿದರು. ಇಂತಹ ಗಂಭೀರ ಪರಿಸ್ಥಿತಿಯನ್ನು ತಿಳಿ ಹಾಸ್ಯದಲ್ಲಿ ಬದಲಿಸಿ ಗೆಳೆಯರನ್ನು ಶಿಕ್ಷೆಯಿಂದ ತಪ್ಪಿಸಿದವರು ಮತ್ತಾರೂ ಅಲ್ಲ, ತುಂಟತನ ಚಾಲಾಕಿಗಳಿಗೆ ಹೆಸರಾಗಿದ್ದ ನನ್ನ ಪ್ರಾಣಮಿತ್ರ ಕೆ. ಎಸ್. ನಿಸಾರ್ ಅಹಮದ್. ಈ ಘಟನೆ ನಡೆದದ್ದು ಹೊಸಕೋಟೆಯ ಮುನಿಸಿಪಲ್ ಪ್ರೌಢಶಾಲೆಯಲ್ಲಿ. ಆಗ ನಾವು ಸುಮಾರು ೧೨–೧೩ ವರ್ಷ ವಯಸ್ಸಿನವರಿರಬೇಕು. ನಿಸಾರ್ ಅವರ ವ್ಯಕ್ತಿತ್ವದ ಒಂದು ಎಳೆ ಎನ್ನಿಸುವ ಕೆಚ್ಚೆದೆ ಮತ್ತು ಹಾಸ್ಯಪ್ರವೃತ್ತಿಯ ಒಂದು ಮಿರುಗನ್ನು ಇಲ್ಲಿ ಗುರುತಿಸಬಹುದು.

ನಮ್ಮ ಗೆಳೆತನ ಗಾಢವಾಗಲು ಕಾರಣ, ನಾವು ಮೊದಲನೆಯ ಬೆಂಚಿನಲ್ಲಿ ಜೊತೆ ಜೊತೆಯಾಗಿ ಮೂರು ವರ್ಷಗಳ ಕಾಲ ಹೈಸ್ಕೂಲಿನಲ್ಲಿ ಕಳೆದದ್ದು. ನಮ್ಮೂರಿನ ಆಂಜನೇಯನ ದೇವಸ್ಥಾನದಿಂದ ಹಿಡಿದು ವಿಠೋಬನ ದೇವಸ್ಥಾನದವರೆಗೂ ಈ ಕಡೆ ಚಿಕ್ಕ ಕೆರೆಯಿಂದ ಹಿಡಿದು ದೊಡ್ಡ ಕೆರೆಯವರೆಗೂ ನಮ್ಮ ಜುರಿಸ್‌ಡಿಕ್ಷನ್. ನಾವು ತುಳಿಯದ ಜಾಗವಿರಲಿಲ್ಲ. ಈಜಾಡದೆ ಇದ್ದ ಕೊಳ, ಬಾವಿ, ಕಾರಂಜಿಗಳಿರಲಿಲ್ಲ. ನೋಡದ ತೋಟಗಳಿರಲಿಲ್ಲ. ನಾವು ಸಾಮು ಮಾಡದ ಗರಡಿ ಮನೆಗಳಿರಲಿಲ್ಲ.

ಹೈಸ್ಕೂಲಿನ ನಮ್ಮ ತರಗತಿಯಲ್ಲಿ ನಾವೇ ತೀರಾ ಕುಳ್ಳರು, ಮತ್ತು ವಯಸ್ಸಿನಲ್ಲಿ ಕಿರಿಯರು; ಮಾತು, ಗಲಾಟೆ, ಚೇಷ್ಟೆ ಜಾಸ್ತಿ. ನಮ್ಮ ಸಹಪಾಠಿಗಳಾಗಿ ನಮಗಿಂತ ತೀರಾ ಹಿರಿಯರು ಅನೇಕರಿದ್ದರು. ಅವರೆಲ್ಲ ಸುತ್ತಮುತ್ತಲಿನ ಹಳ್ಳಿಗಳಿಂದ ಬರುತ್ತಿದ್ದವರು. ಕೆಲವರು ಸೈಕಲ್‌ಗಳಲ್ಲಿ, ಕೆಲವರು ಕಾಲ್ನಡಿಗೆಯಲ್ಲಿ, ಕೆಲವರು ಬಸ್ಸುಗಳಲ್ಲಿ. ಇವರೆಲ್ಲರ ವೈಯಕ್ತಿಕ ಪರಿಚಯ ನಿಸಾರ್ ಅಹಮದ್‌ರಿಗೆ ಮಾತ್ರ ಇತ್ತು. ಎಲ್ಲರೊಡನೆ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದ ಸ್ವಭಾವ ಇವರದು. ಇವರು ಮಾತನಾಡುತ್ತಿದ್ದ ಸ್ಪಷ್ಟ, ಸ್ವಚ್ಛ ಕನ್ನಡ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಈಗಲೂ ಇವರು ಅಂದಿನ ಅನೇಕ ಮಿತ್ರರ ಹೆಸರುಗಳನ್ನು ಜ್ಞಾಪಕದಲ್ಲಿ ಇಟ್ಟಿದ್ದಾರೆ. ಕೆಲವು ಸಂಗಾತಿಗಳಿಗಷ್ಟೇ ಅಲ್ಲ, ಶಾಲಾ ಶಿಕ್ಷಕರ ನೆಚ್ಚಿನ ವಿದ್ಯಾರ್ಥಿಯೂ ಆಗಿದ್ದರು. ಇವರಿಗೆ ಅಂದಿನಿಂದಲೇ ಸಾಹಿತ್ಯದ ಕಡೆಯ ಒಲವು ಅಂಕುರವಾಗುತ್ತಿದ್ದುದನ್ನು ನಮ್ಮ ಶಿಕ್ಷಕರು ಸಹ ಗಮನಿಸುತ್ತಿದ್ದರು. ಅಂತಹವರಲ್ಲಿ

ಒಬ್ಬರು ಆರ್.ಎಸ್. ಮೇಷ್ಟ್ರು (ಆರ್. ನಾಗರಾಜ್ ಅಥವಾ ಆನೇಕಲ್ಲು ನಾಗರಾಜ್). ಒಮ್ಮೆ ಅವರು ಶಾಲಾ ಪ್ರತಿಭಾ ದಿನೋತ್ಸವದಂದು ನಿಸಾರರಿಗೆ ಕನ್ನಡದಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟರು. ಆದರೆ ನಿಸಾರರು ಮಾಡಿದ್ದು ಎಲ್ಲರಿಗೂ ದಂಗು ಬಡಿಸಿತ್ತು. ಆಗ ತುಂಬಾ ಜನಪ್ರಿಯವಾಗಿದ್ದ ಹಿಂದಿ ಚಿತ್ರದ ಹಾಡು `ಏಕ್ ದಿಲ್ಕೆ ತುಕಡೇ ಹಜಾರ್ ಹುವೇ, ಕೋಹಿ ಯಹಾಂ ಗಿರಾ, ಕೋಹಿ ವಹಾಂ ಗಿರಾ` ಎಂಬ ಜನಪ್ರಿಯ ಹಿಂದಿ ಗೀತೆಯ ಪೂರ್ಣ ಕನ್ನಡ ಅನುವಾದವನ್ನು ಸಭೆಯ ಮುಂದೆ ಹಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿಬಿಟ್ಟರು.

ಶಾಲೆಯಲ್ಲಿ ಕೇವಲ ಪಠ್ಯ ವಿಷಯಗಳಿಗೆ ಅಲ್ಲದೇ ಪಠ್ಯೇತರ ವಿಷಯಗಳಿಗೂ ನಮ್ಮ ಕಾಲವನ್ನು ಮೀಸಲಾಗಿಡುತ್ತಿದ್ದೆವು. ಅವುಗಳಲ್ಲಿ ಮುಖ್ಯವಾದದ್ದು ಅಂದಿನ ತುಂಬಾ ಜನಪ್ರಿಯವಾಗಿದ್ದ ಸಾಪ್ತಾಹಿಕ 'ಪ್ರಜಾಮತ', 'ಚಿತ್ರಗುಪ್ತ' ಪತ್ರಿಕೆಗಳಿಗೆ ಸಾಮಾಜಿಕ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವುದು: ಪ್ರಶ್ನೆಗಳಿಗೆ ಉತ್ತರ ಪ್ರಕಟವಾದಾಗ ಎಲ್ಲರೊಡನೆ ನಮ್ಮ ಆನಂದವನ್ನು ಹಂಚಿಕೊಳ್ಳುತ್ತಿದ್ದೆವು. ಈ ಸಮಯದಲ್ಲೇ ನಾವು ಮೂರು–ನಾಲ್ಕು ಜನ ಗೆಳೆಯರು ಯಾಕೆ ಒಂದು ಹಸ್ತಲಿಖಿತ ಪತ್ರಿಕೆಯನ್ನು ತರಬಾರದು? ಎಂದು ಆಲೋಚಿಸಿ ಕೊನೆಗೆ 'ವನಸುಮ' ಅನ್ನುವ ಇಪ್ಪತ್ತೆದು ಮೂವತ್ತು ಪುಟಗಳ ಕೈ ಬರಹದ ಪತ್ರಿಕೆಯನ್ನು ಪ್ರಾರಂಭಿಸಿದೆವು. ಅದರ ಸಂಪಾದಕ ನಿಸಾರ್. ನಮ್ಮ ಗುಂಪಿನಲ್ಲಿ ವಿಟ್ಠಲರಾವ್ ಎನ್ನುವ ಸಹಪಾಠಿ ಇದ್ದರು. ಅವರ ಕೈಬರಹ ಮುತ್ತಿನಂತೆ ಇತ್ತು. ಅವರಿಂದ ಕೆಲವು ಪ್ರತಿಗಳನ್ನು ಬರೆಸಿ ನಮ್ಮ ಊರಿನ ಮುನಿಸಿಪಲ್ ರೀಡಿಂಗ್ ರೂಂಗೆ, ಮಿಡ್ಲ್ ಸ್ಕೂಲ್ ಹೈಸ್ಕೂಲುಗಳಿಗೆ, ಬೇರೆ ಊರಿನ ಶಾಲೆಗಳಿಗೆ ಕಳಿಸುತ್ತಿದ್ದೆವು. ನನಗೆ ತಿಳಿದ ಮಟ್ಟಿಗೆ ನಿಸಾರರು 'ವನಸುಮ'ಕ್ಕಾಗಿ ಬರೆದ `ಜಲಪಾತ' ಎನ್ನುವುದೇ ಅವರ ಚೊಚ್ಚಲು ಪದ್ಯ. ಅದು ನಮ್ಮ ಶಾಲೆಯ ವಿದ್ಯಾರ್ಥಿಗಳಿಂದ, ಮೇಸ್ಟ್ರುಗಳಿಂದ ಮೆಚ್ಚುಗೆ ಗಳಿಸಿತ್ತು. ಬಹುಶಃ `ವನಸುಮ`ವನ್ನು ನಿಸಾರರು, ನಮ್ಮೆಲ್ಲರ ಸತತ ಸಹಕಾರದೊಂದಿಗೆ ಒಂದು ವರ್ಷ ಕಾಲ ನಡೆಸಿದಂತೆ ನೆನಪು. ಅದನ್ನು ಅಷ್ಟು ದೀರ್ಘ ಕಾಲ ಅದು ಹೇಗೆ ನಡೆಸಿದೆವೋ ದೇವರಿಗೇ ಗೊತ್ತು. ಈಗ ನೆನೆದರಂತೂ ನಿಜಕ್ಕೂ ವಿಸ್ಮಯವಾಗುತ್ತದೆ.

ನಿಸಾರ್ ಅಹಮದ್‌ರವರ ಬಳಗದ ಬೈಠಕ್ಕು ಯಾವ ಒಂದು ನಿಗದಿತ ಸ್ಥಳಕ್ಕೂ ಸೀಮಿತವಾಗಿರಲಿಲ್ಲ. ಅದು ಕ್ಷೌರಿಕ ಅಣ್ಣಯ್ಯನವರ ಅಂಗಡಿಯಾಗಿರಬಹುದು: ಶಿವರುದ್ರ ಉರುಫ್ `ತಾತಾ` ಅವರ ಹೋಟೆಲ್‌ನ ಕತ್ತಲೆಯ ಕೋಣೆ ಆಗಿರಬಹುದು: ಅಥವಾ ಟೈಲರ್ ಶಂಕರ ಸಾ ಅವರ ಅಂಗಡಿಯಾಗಿರಬಹುದು, ಇಲ್ಲವೇ ಮುನಿಸಿಪಲ್ ಪಾರ್ಕ್‌ನ ಪಾದರಿ ವೃಕ್ಷದ ಅಡಿಯಲ್ಲಿರಬಹುದು.

ನಾವು ಸಾಹಿತ್ಯದ ಮಂಪರಿನಲ್ಲೇ ಇದ್ದಾಗ, ನಿಸಾರರ ಮನೆಯ ಹಿಂಭಾಗದಲ್ಲಿ ಒಬ್ಬ ಖ್ಯಾತ ಪೈಲ್ವಾನ ಇದ್ದ. ಆತನ ಹೆಸರು ನರಸು. ಆತ ನಾಲ್ಕೂವರೆ-ಐದು ಅಡಿಗಿಂತ ಎತ್ತರ ವಾಗಿರಲಿಲ್ಲ. ಆದರೆ ಆತ ಆಗಿನ ಕಾಲಕ್ಕೆ ನಮ್ಮೂರಿನ `ಟೆರರ್`. ಅವನ ಬದ್ಧವೈರಿ ಎಂದರೆ ಗಂಟಲು ಮೂಗು ರಾಮ ಅಂತ. ಅವರಿಬ್ಬರ ನಡುವೆ ವರ್ಷಾನುಗಟ್ಟಲೆ ಜಿದ್ದಾಜಿದ್ದಿನ ಮಾರಾಮಾರಿ ನಡೆದೇ ಇತ್ತು. ನರಸುವಿಗೆ ಪಡಖಾನೆಗಳಿಂದ, ಅಂಗಡಿಗಳಿಂದ ಪ್ರತಿ ರಾತ್ರಿ

ಹಣ, ಸಾರಾಯಿ ಸಂದಾಯವಾಗುತ್ತಿತ್ತು. ಹಗಲು ರಾತ್ರಿ 'ಅಮಲುದಾರ'ನಾಗಿಯೇ ಇರುತ್ತಿದ್ದ, ಈ ಪ್ರಭೃತಿ. ಅವನನ್ನು ಮಾತಾಡಿಸಲು ಜನ ಹೆದರುತ್ತಿದ್ದರು. ಆದರೆ ಅದೇಕೋ ಗೊತ್ತಿಲ್ಲ, ನಿಸಾರರನ್ನು ಮತ್ತು ನನ್ನನ್ನು ಕಂಡರೆ ಅವನಿಗೆ ವಿಶೇಷವಾದ ಅಕ್ಕರೆ. ಅವನು ನಮ್ಮಿಬ್ಬರನ್ನು ಶಿಷ್ಯರನ್ನಾಗಿ ಪರಿಗಣಿಸಿ ಕುಸ್ತಿಯ ಕೆಲವು ಪಟ್ಟುಗಳನ್ನು ಹೇಳಿಕೊಟ್ಟಿದ್ದ. ಅವನ ಸಹವಾಸದಿಂದ ನಿಸಾರ್ ಮತ್ತು ನಾನು ಪೈಲ್ವಾನರ ಹಾಗೆ ಕತ್ತಿಗೆಗೆ ಕುರಿಯ ದಾರವನ್ನು ಕಟ್ಟಿದ್ದೆವು. ಒಂದು ವಾರದೊಳಗೆ ಅದನ್ನು ತೆಗೆದು ಬಿಸುಡಬೇಕಾಯಿತು. ಇದಕ್ಕೆ ಕಾರಣ, ನಮ್ಮ ಮನೆಯವರ ಛೀಮಾರಿ ಮತ್ತು ಸ್ಕೂಲಿನ ಸಹಪಾಠಿಗಳ ಗೇಲಿ.

ನರಸು ನಮ್ಮನ್ನು ಹೊಸಕೋಟೆಯ ಟೆಂಟ್ ಸಿನಿಮಾ ಪಕ್ಕದ ಅಖಾಡದಲ್ಲಿ ಪ್ರದರ್ಶನದ ಕುಸ್ತಿಯಲ್ಲೂ ಭಾಗವಹಿಸುವುದಕ್ಕೆ ತರಬೇತಿ ಕೊಟ್ಟಿದ್ದ. ನಾವೇನೋ ರೆಡಿಯಾಗಿದ್ದೆವು. ಆದರೆ ನಮ್ಮ ಮನೆಯವರಿಗೆ ಗೊತ್ತಾಗಿ ದೊಡ್ಡ ರಂಪವಾದದ್ದರಿಂದ ಅದನ್ನು ಕೈಬಿಟ್ಟೆವು. ನರಸುವಿಗೆ ಮಹಾ ಕೋಪ ಬಂದಿತ್ತು. ಅವನ ಕಣ್ಣು ತಪ್ಪಿಸಿ ತಿಂಗಳ ತನಕ ದೂರವಿದ್ದ ಮೇಲೆಯೇ ಅವನ ಕೋಪ ಶಮನವಾಗಿ ನಮ್ಮನ್ನು ಕ್ಷಮಿಸಿದ್ದು.

ನಿಸಾರ್ ಅಹಮದ್‌ರ ಮತ್ತೊಂದು ಗುಣ ಅಂದರೆ, ಅವರು ಯಾವುದನ್ನೂ ಲಘುವಾಗಿ ಪರಿಗಣಿಸದಿರುವುದು. ತಮ್ಮಲ್ಲಿ ತಮಗೆ ಅಪಾರ ನಂಬಿಕೆ, ಸ್ವವಿಶ್ವಾಸ. ಪ್ರತಿಯೊಂದನ್ನೂ ಒಂದು ಸವಾಲೆಂದು ಭಾವಿಸುತ್ತಿದ್ದರು. ಇದಕ್ಕೆ ಒಂದು ನಿದರ್ಶನ. ನಾವು ಎಸ್.ಎಸ್.ಎಲ್.ಸಿ.ಯಲ್ಲಿ ಇದ್ದಾಗ ನಡೆದ ಒಂದು ಘಟನೆ. ಆಗ ನಮಗೆ ಗಣಿತ ಅಷ್ಟೊಂದು ಕಠಿಣವಲ್ಲದಿದ್ದರೂ ಸರಳವಂತೂ ಆಗಿರಲಿಲ್ಲ. ಹೀಗಿರುವಾಗ ನಮ್ಮ ಗಣಿತದ ಮೇಷ್ಟ್ರು ಸ್ವಲ್ಪ ಗಂಭೀರ ಪ್ರವೃತ್ತಿಯವರು, ಜೊತೆಗೇ ಕೊಂಚ ಜಂಬದವರು ಸಹ. ಅವರ ಹೆಸರು ಎಚ್. ವಿ. ನಾಗರಾಜಯ್ಯ (ಎಚ್.ವಿ.ಎನ್.). ಅವರನ್ನೊಂದು ಬಾರಿ ನಿಸಾರರು 'ಸಾರ್, ಮ್ಯಾಥ್ಸ್ ಟ್ಯೂಷನ್‌ಗೆ ಬರ್‍ಲಾ' ಎಂದು ಕೇಳಿದರು. ಅದಕ್ಕೆ ಅವರು, ಯಾವ ಮೂಡಿನಲ್ಲಿದ್ದರೋ ಏನೋ, 'ನಿನಗೆ ಟ್ಯೂಷನ್ ಬೇರೆ ಕೇಡು, ಒನಕೆ ಚಿಗುರುತ್ತೇನೋ?' ಎಂದು ಹೀಯಾಳಿಸಿ ಮಾತಾಡಿದರು. ಒಂದು ಕ್ಷಣವೂ ಅಲ್ಲಿ ನಿಲ್ಲದೆ ಹೊರಟು ಬಂದ ನಿಸಾರ್, ಸ್ನೇಹಿತರ ಜೊತೆ ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಲು ಹೋಗಲಿಲ್ಲ. ಈ ವಿಷಯ ಮರೆತು ಹೋಗಿರಬಹುದು ಎಂದು ಎಲ್ಲರೂ ಅಂದುಕೊಂಡಿದ್ದೆವು. ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದು ಫಲಿತಾಂಶ ಬಂತು. ನಾವಿಬ್ಬರೂ ಪಾಸಾಗಿದ್ದೆವು. ಯಾರಿಗೂ ಹೇಳದೆ, ನನ್ನೊಬ್ಬನನ್ನೇ ಕರೆದುಕೊಂಡು ಮ್ಯಾಥ್ಸ್ ಮೇಷ್ಟ್ರ ಹತ್ತಿರ ಹೋಗಿ, ಅವರಿಗೆ ಮಾತನಾಡುವುದಕ್ಕೂ ಅವಕಾಶ ಕೊಡದೆ 'ನೋಡಿ ಸಾರ್, ಒನಕೆ ಚಿಗುರಿದೆ; ಅಷ್ಟೇ ಅಲ್ಲ, ಮುಂದೆ ಹಣ್ಣು ಬಿಟ್ಟಾಗ ತಿನ್ನುವುದಕ್ಕೆ ನಿಮಗೆ ತಂದು ಕೊಡ್ತೀನಿ' ಎಂದು ಗಂಭೀರವಾಗಿ ಹೇಳಿ ಬಂದರು. ಮೇಷ್ಟರಿಗೂ ತಬ್ಬಿಬ್ಬು. ಏನು ಹೇಳಲೂ ತೋಚದೆ ಗರ ಬಡಿದವರಂತೆ ನಿಂತಿದ್ದರು. ಈ ವಿಷಯ ನಮ್ಮ ಶಾಲೆಯಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಆದರೆ ನಿಸಾರ್‌ರವರು ಮಾತ್ರ ಅದಕ್ಕೆ ಸ್ವಲ್ಪವೂ ಪ್ರತಿಕ್ರಿಯಿಸದೆ, ಏನೂ ನಡೆದಿಲ್ಲವೆನ್ನುವಂತೆ

ಸುಮ್ಮನಿದ್ದರು.

ಇಂತಹದೇ ಮತ್ತೊಂದು ಪ್ರಸಂಗ. ನಿಸಾರ್‌ರವರ ಮನೆಯ ಬೀದಿಯ ಸಾಲಿನಲ್ಲೇ ಒಂದು ಹಿಟ್ಟಿನ ಗಿರಣಿ ಇತ್ತು. ಇಡೀ ಊರಿಗೆ ಇದ್ದದ್ದೇ ಅದೊಂದು. ರತನ್‌ಸಿಂಗ್ ಅದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಆತನಿಗೆ ಒಂದು ಕಾಲು ಕೊಂಚ ಕುಂಟು. ಕಾಲನ್ನೆಳೆದುಕೊಂಡು, ಹೆಗಲ ಮೇಲೆ ಟವೆಲ್ ಹಾಕಿಕೊಂಡು ತುಂಬಾ ರೋಪಾಗಿ ಮಾತನಾಡುತ್ತಿದ್ದರು. ಗಿರಣಿಯ ಮೋಟರಿನ ಪಕ್ಕದಲ್ಲಿ ಅಡ್ಡಲಾಗಿದ್ದ ಒಂದು ತೊಲೆಯ ಮೇಲೆ ಆತ ಕೂತಿರುತ್ತಿದ್ದರು. ಈತನಿಗೆ ನಮ್ಮ ಧೂಮಪಾನದ ಚಟದ ಬಗ್ಗೆ ಹೇಗೋ ಗೊತ್ತಾಗಿತ್ತು. ಆಗಾಗ್ಗೆ ಕರೆದು ಬೀಡಿ ಸಿಗರೇಟುಗಳಿಗೆ ಸತಾಯಿಸುತ್ತಾ ಇದ್ದರು. ಇಲ್ಲದಿದ್ದರೆ, ನಮ್ಮ ಮನೆಯವರಿಗೆ ನಮ್ಮ ಚಟದ ಬಗ್ಗೆ ತಿಳಿಸುತ್ತೇನೆಂದು ಬೆದರಿಸುತ್ತಿದ್ದರು. ಇದನ್ನು ತಪ್ಪಿಸುವುದಕ್ಕೆ ನಿಸಾರರು ಒಂದು ಪ್ಲಾನ್ ಹಾಕಿದರು. ಅಂದು ಶಾಲೆ ಮುಗಿಸಿಕೊಂಡು ಬರುತ್ತಾ ಇದ್ದೆವು. ರತನ್‌ಸಿಂಗ್ ಕರೆದರು. ನಿಸಾರರು ಪ್ರತಿ ಮಾತನಾಡದೆ, ಜೇಬಿನಿಂದ ಒಂದು ಬೀಡಿಯನ್ನು ತೆಗೆದು ಕೊಟ್ಟರು. ಸರಿ, ಆತ ಅದನ್ನು ಸ್ಟೈಲ್ ಆಗಿ ಬಾಯಲ್ಲಿ ಕಚ್ಚಿಕೊಂಡು ಬೆಂಕಿ ಕಡ್ಡಿ ಗೀರಿ, ಬೀಡಿಯ ಬಳಿ ತಂದು ತಾಕಿಸಿ, ದೀರ್ಘವಾಗಿ ದಮ್ ಎಳೆಯುತ್ತಿದ್ದಾಗ ನಾವು ಅಲ್ಲಿಂದ ಓಟ ಕಿತ್ತೆವು. ದೂರದಿಂದ ದೃಷ್ಟಿ ಹಾಯಿಸಿದೆವು. 'ಢಂ' ಎನ್ನುವ ಶಬ್ದದ ಜೊತೆಯಲ್ಲೇ ರತನ್ ಸಿಂಗ್ ಸಹ ಮರದ ತೊಲೆಯ ಮೇಲಿನಿಂದ ಕೆಳಕ್ಕೆ ಬಿದ್ದುಬಿಟ್ಟರು. ಅದೇ ಕೊನೆ, ಮತ್ತೆಂದೂ ಅವರು ನಮ್ಮ ತಂಟೆಗೆ ಬರುತ್ತಿರಲಿಲ್ಲ. ಬೀಡಿಯಲ್ಲಿ ಕಿರು ಪಟಾಕಿಯೊಂದು ತಲೆ ಮರೆಸಿಕೊಂಡಿದ್ದುದು ಪಾಪ, ರತನ್ ಸಿಂಗ್ ಅವರಿಗೆ ಹೇಗೆ ತಾನೇ ಮುಂಚೆ ತಿಳಿಯಬೇಕು?

ಪ್ರೌಢಶಾಲೆಯಲ್ಲಿ ನಾವು ಓದುತ್ತಿದ್ದಾಗಿನ ಒಂದು ವಿಪರ್ಯಾಸದ ಘಟನೆಯನ್ನು ಬರೆಯಬೇಕೆನ್ನಿಸುತ್ತದೆ. ಆ ಕಾಲಕ್ಕೆ ಆ ಊರಿನ ಬಸ್ ಸ್ಟಾಂಡ್ ಬಳಿ ಒಬ್ಬ ಅವಿವಾಹಿತೆ ನಡುವಯಸ್ಕ ಮಹಿಳೆ ಒಂದು ಅಂಗಡಿಯನ್ನು ಇಟ್ಟುಕೊಂಡಿದ್ದಳು. ಆಕೆಯ ಹೆಸರು ರುದ್ರಮ್ಮ ಎಂದು ಇಟ್ಟುಕೊಳ್ಳೋಣ. ರುದ್ರಮ್ಮನನ್ನು ಕಂಡರೆ ಎಂಥವರಿಗೂ ಭಯ. ಕಟ್ಟುಮಸ್ತಾದ ಆಕೆಯ ಬಗ್ಗೆ ಜನರಲ್ಲಿ ಏನೇನೋ ಕಥೆಗಳು ಪ್ರಚಲಿತವಿದ್ದವು. ಅವುಗಳಲ್ಲಿ ಮುಖ್ಯವಾದದ್ದು, ಅವಳು ಯೌವನದಲ್ಲಿ ಗಂಡಸರ ಜೊತೆ ನಡೆಸಿದ ಚೆಲ್ಲಾಟಗಳು. ಅವಳ ಸಂಗಕ್ಕಾಗಿ ಹಾತೊರೆಯುತ್ತಿದ್ದ ಹಲವಾರು 'ಯಜಮಾನರು'ಗಳಲ್ಲಿ ಅವಳು ಕೇವಲ ಶ್ರೀಮಂತರನ್ನಷ್ಟೇ ಅಲ್ಲ, ಒಳ್ಳೆಯ ದೃಢಕಾಯರನ್ನು ಮತ್ತು ಹೆಚ್ಚು ವಯಸ್ಸಾಗದವರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಳೆಂದು ಪ್ರತೀತಿ. ತನ್ನ ಪ್ರತಿಷ್ಠಿತ 'ಗಿರಾಕಿ'ಗಳಿಂದ ಸಂಪತ್ತೇನೋ ದೊರಕುತ್ತದೆ, ಜೊತೆಗೆ ತನ್ನ ದೈಹಿಕ ತೃಪ್ತಿಯೂ ಸಿಕ್ಕಬೇಕಲ್ಲ. ಅದಕ್ಕಾಗಿ ಈ ಆಯ್ಕೆ. ಆಕೆಗೆ ಒಬ್ಬಳು ಸಾಕುಮಗಳು. ರುದ್ರಮ್ಮನಷ್ಟೇ ಸ್ಫುರದ್ರೂಪಿ. ಹಾಗೆಯೇ ತಾಯಿಯಷ್ಟೇ ಜಗಳಗಂಟಿ, ಬಾಯಾಳಿ. ಅವರ ಜೊತೆ ಜಗಳ ಕಾಯಲು ಜನ ಹೆದರುತ್ತಿದ್ದರು. ಇಷ್ಟೆಲ್ಲ ಇದ್ದರೂ ರುದ್ರಮ್ಮ ಬಡಬಗ್ಗರನ್ನು, ಭಿಕ್ಷುಕರನ್ನು ಪ್ರಾಣಿಪಕ್ಷಿಗಳನ್ನು ಕಂಡರೆ ಮಹಾ ಕನಿಕರ. ಆಕೆಯ ಅಂಗಡಿಯ ಎದುರು ಒಂದೊಂದು ಸಲ ಕೋತಿಗಳು, ಹಸುಗಳು, ಕಾಗೆಗಳು ಮತ್ತು

ಕಂಗಾಲರ ಜಾತ್ರೆಯೇ ನೆರೆಯುತ್ತಿತ್ತು. ರುದ್ರಮ್ಮನಾಗಲಿ ಆಕೆಯ ಮಗಳಾಗಲಿ ಯಾವತ್ತೂ ಚೆನ್ನಾಗಿ ಉಟ್ಟು ತೊಟ್ಟು ಮೆರೆಯುತ್ತಿದ್ದರು. ಅವರ ಮೈಮೇಲಿನ ಒಡವೆಗಳ ಸಮೃದ್ಧಿಯನ್ನು ಕಂಡು ಕೆಲವರು ಅವರನ್ನು 'ನಡೆದಾಡುವ ಕೆ.ಜಿ.ಎಫ್.ಗಳು' ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು.

ನಾನು ಈ ಲೇಖನದಲ್ಲಿ ತಿಳಿಸಿದಂತೆ, 'ಚಿತ್ರಗುಪ್ತ' ಪತ್ರಿಕೆಗೆ ನಿಸಾರರು ಪ್ರಶ್ನೆಗಳನ್ನು ಕಳಿಸುತ್ತಿದ್ದರು. ಇವರ ಜೊತೆಗೆ ಇನ್ನಿಬ್ಬರು—ಕ್ಷೌರದ ಅಂಗಡಿಯ ಅಣ್ಣಯ್ಯ ಮತ್ತು ಅಂಚೆ ಪೇದೆ ನಾಯ್ಡು ಸಹ ಪ್ರಶ್ನೆಗಳನ್ನು ಆ ಪತ್ರಿಕೆಗೆ ರವಾನೆ ಮಾಡುತ್ತಿದ್ದರು. ತಮ್ಮ ಹೆಸರಿನಲ್ಲಿ ಅವು ಪ್ರಕಟವಾಗಿ, ಸಂಪಾದಕರು ಚತುರವಾದ ಉತ್ತರವನ್ನು ಕೊಟ್ಟಾಗ ನಮಗೆಲ್ಲ ಆಗುತ್ತಿದ್ದ ಖುಷಿ ಅಷ್ಟಿಷ್ಟಲ್ಲ. ಪ್ರತಿ ವಾರ ಆ ವಾರಪತ್ರಿಕೆ ನೋಡುವುದು, ಬರೆದವರ ಹೆಸರಿದ್ದರೆ ಸಂಭ್ರಮಿಸುವುದು, ಇಲ್ಲದಿದ್ದರೆ ನಿರಾಸೆಯಿಂದ ಪೆಚ್ಚು ಮೋರೆ ಹಾಕಿಕೊಂಡು ಮೌನವಾಗಿರುವುದು—ತಿಂಗಳಾನುಗಟ್ಟಲೆ ನಡೆದಿತ್ತು. ಹೀಗೆ, ಪತ್ರಿಕೆಗೆ ಬರೆಯುವುದು ಸಾಕಷ್ಟು ಜನರಿಗೆ ತಿಳಿದಿತ್ತು.

ಒಂದು ಸಲ 'ಚಿತ್ರಗುಪ್ತ'ದ ಪ್ರಶ್ನೋತ್ತರ ವಿಭಾಗದಲ್ಲಿ ಮೊದಲನೆಯ ಪ್ರಶ್ನೆ ಹೀಗಿತ್ತು: 'ಬಂಡವಾಳ ಹೂಡದೆ ಲಾಭವನ್ನು ಕಮಾಯಿಸುವ ಕಸುಬು ಯಾವುದು ಸಾರ್?' ಇದಕ್ಕೆ ಸಂಪಾದಕರ ಉತ್ತರ: 'ಸೂಳೆಗಾರಿಕೆ.' ಇಷ್ಟೇ ಆಗಿದ್ದರೆ ಯಾರೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಈ ಪ್ರಶ್ನೆಯನ್ನು 'ಕೇಳಿದವರ' ಹೆಸರು, ಊರು ಮೇಲೆ ನಮೂದಾಗಿತ್ತು: ಬಸ್ ಸ್ಟಾಂಡ್ ರುದ್ರಮ್ಮ, ಹೊಸಕೋಟೆ. ಈ ಸುದ್ದಿ ಅನೇಕ ಕುಹಕಿಗಳ ಹರಟೆಯ ಮೇವಾಗಿದ್ದಲ್ಲದೆ ಊರಲ್ಲೆಲ್ಲ ಹಬ್ಬಿತು. ಒಬ್ಬ ಅಮಾಯಕ ಸಾಕ್ಷಾತ್ ರುದ್ರಮ್ಮನ ಬಳಿ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ 'ರುದ್ರಮ್ಮ ನಿನ್ನ ಹೆಸರು ಪೇಪರಿನಲ್ಲಿ ಬಂದೈತೆ ನೋಡು', ಎಂದು ಅವಳಿಗೆ ತೋರಿಸಿದ. ಪ್ರೈಮರಿ ಶಾಲೆ ಓದಿರಬಹುದಾದ ಅವಳಿಗೆ ತನ್ನ ಹೆಸರು ಮತ್ತು ಅದರ ಅಡಿಯಲ್ಲಿನ ಪ್ರಶ್ನೆ ಮತ್ತು ಉತ್ತರಗಳನ್ನು ಓದಲು ಕಷ್ಟವೇನೂ ಆಗಲಿಲ್ಲ. ಅವಳ ಮುಖ ಕಪ್ಪಿಟ್ಟಿಲ್ಲದೆ, ಈ ಘನಂದಾರಿ ಸುದ್ದಿಯನ್ನು ಅರುಹಿದ ಅಪರಿಚಿತನನ್ನು ತನ್ನಲ್ಲಿದ್ದ ಅತ್ಯಂತ ಅಶ್ಲೀಲ ಬೈಗುಳಗಳ 'ಸ್ಟಾಕು' ಮುಗಿಯುವವರೆಗೂ ಮಂಗಳಾರತಿ ಮಾಡಿ, ಹಣ್ಣುಗಾಯಿ–ನೀರುಗಾಯಿ ಆಗುವಂತೆ ಅವನ ದೇಹಕ್ಕೆ ಝಾಡಿಸಿದಳು. ಮೊದಲೇ ಬಸ್ ಸ್ಟಾಂಡ್, ಹಾಡುಹಗಲು ಬೇರೆ. ಜನ ಜಮಾಯಿಸುವುದಕ್ಕೆ ಧಾಡಿಯೇ? ಜೊತೆಗೆ ಕೆಲವರಲ್ಲಿ, ಈಗಲಾದರೂ ಧೈರ್ಯವಾಗಿ ರುದ್ರಮ್ಮನ ಮಗಳ ಹೆಸರುವಾಸಿಯಾದ ವಕ್ಷಸುಭಿಕ್ಷತೆಯನ್ನು ದರ್ಶಿಸಿ ಪಾವನವಾಗಬಹುದೆಂಬ ದುರ್ವಾಂಛೆ ಬೇರೆ. ರುದ್ರಮ್ಮನ ರೌದ್ರಾವತಾರ ಹತೋಟಿಗೆ ಬರಬೇಕಾದರೆ ಪಕ್ಕದಲ್ಲೇ ಇದ್ದ ಪೊಲೀಸ್ ಠಾಣೆಯ ಕುಖ್ಯಾತದ ದಫೇದಾರ್ ಈರಣ್ಣನೇ ಬರಬೇಕಾಯಿತು. 'ಈ ಕುಚೋದ್ಯ ಮಾಡಿದವನನ್ನು ಪತ್ತೆ ಹಚ್ಚಿ ನನಗೆ ಸುದ್ದಿ ಮುಟ್ಟಿಸು. ಅವನು ಹುಟ್ಟಲಿಲ್ಲಾ ಅನ್ನಿಸಿ ಬಿಡುತ್ತೇನೆ' ಎಂದು ತನ್ನ 'ಮಾಮೂಲು ಗಿರಾಕಿ' ರುದ್ರಮ್ಮನಿಗೆ ಭಾಷೆ ಕೊಟ್ಟ ಮೇಲೆಯೇ ಅವಳ ಬಾಯಿ ಬಂದಾದದ್ದು. ಸರಿ, ಅಲ್ಲಿದ್ದವರಲ್ಲಿ ಯಾರೋ ಒಬ್ಬ ಮಹಾನುಭಾವ

ಗುಮಾನಿಗೆ ಒಳಗಾದ. ಅಪರಾಧಿಗಳ ಮೂರು ಹೆಸರುಗಳನ್ನು ರುದ್ರಮ್ಮನ ಕಿವಿಯಲ್ಲಿ ಪಿಸುಗುಟ್ಟಿದ. ಮಾರನೆಯ ದಿವಸ ಪತ್ರಿಕೆಯನ್ನು ಹಿಡಿದುಕೊಂಡು ನಿಸಾರ್ ಅವರನ್ನು `ವಿಚಾರಿಸಿಕೊಳ್ಳಲು` ಸ್ಕೂಲಿಗೆ ಬಂದಳು. ಆ ವೇಳೆಗಾಗಲೇ ಈ ಸುದ್ದಿ ಮಿಂಚಿನಂತೆ ಸಣ್ಣ ಊರಾದ ಹೊಸಕೋಟೆಯ ಉದ್ದಗಲಕ್ಕೂ ಹಾಯ್ದು ಹರಡಿತ್ತು. ನಮಗೆ ಅಂದರೆ, ನಿಸಾರರ `ಪಟಾಲಂ`ಗೆ ಹಿಂದಿನ ರಾತ್ರಿಯೇ ಇದು ತಿಳಿಯಿತು. ಅವರು ಈ ಅಪರಾಧವನ್ನು ಮಾಡಿಲ್ಲ ವೆಂಬುದು ನಮಗೆಲ್ಲಾ ಗೊತ್ತಿತ್ತು. ರುದ್ರಮ್ಮ, ಇನ್ನೇನು `ಬಿಸ್‌ಮಾರ್ಕ್` ಬಿರುದಾಂಕಿತ ಮಹಾ ಶಿಸ್ತುಗಾರರಾದ ಹೆಡ್‌ಮಾಸ್ಟರ್ ಎಂ. ಎ. ಅಳಸಿಂಗ್ರಾಚಾರ್ ಅವರ ಕೊಠಡಿಯನ್ನು ಪ್ರವೇಶಿಸಬೇಕು, ಆಗ ನಾವು ಮೂರು-ನಾಲ್ಕು ಜನ ಸ್ನೇಹಿತರು, ಆಕೆಯನ್ನು ಮೆತ್ತಗೆ ಪುಸಲಾಯಿಸಿ ಸ್ಕೂಲಿನ ಹಿಂಭಾಗದ ಏಕಾಂತಕ್ಕೆ ಕರೆದೊಯ್ದು, `ಇದನ್ನು ನಿಸಾರ್ ಅನ್ನುವ ಹುಡುಗ ಮಾಡಿಲ್ಲಮ್ಮ. ಅವನಿಗೆ ಆ ಧೈರ್ಯ ಎಲ್ಲಿ ಬರಬೇಕು? ಅಲ್ಲದೆ, ನಿಮ್ಮ ಬಗ್ಗೆ ಅವನಿಗೆ ಬಹಳ ಗೌರವವಿದೆ. ಸ್ಕೂಲಿನಿಂದ ಮನೆಗೆ ಹೋಗಿ ಬರುವಾಗ ಎಷ್ಟೋ ಸಲ ಅವನೂ ನಾವೂ ನಿಮಗೆ ನಮಸ್ಕಾರ ಮಾಡಿದ್ದೇವೆ. ತಾಯಿ ಸಮಾನರಾದ ನಿಮ್ಮ ಬಗ್ಗೆ ಹೀಗೆಲ್ಲಾ ಮಾಡುವುದುಂಟೆ? ಪಾಪ, ಆ ಹುಡುಗ ಹೆದರಿ ಸ್ಕೂಲಿಗೇ ಬಂದಿಲ್ಲ. ಇನ್ನು, ನೀವು ಹೆಡ್ಮಾಸ್ಟರಿಗೆ ಕಂಪ್ಲೇಂಟ್ ಕೊಟ್ಟರೆ, ಈ ವಿಷಯ ಈ ಶಾಲೆಯ ಮುನ್ನೂರು-ನಾನ್ನೂರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ ಗೊತ್ತಾಗಿ ಮತ್ತಷ್ಟು ಅವಮಾನ ಆಗೋಲ್ಲವೆ? ಯೋಚಿಸಿ ನೋಡಮ್ಮ` ಎಂದು, ಗುಟ್ಟು ಹೇಳುವವರಂತೆ 'ಇದನ್ನು ಗ್ಯಾರಂಟಿಯಾಗಿ ಮಾಡಿರೋರು ಅಣ್ಣಯ್ಯ ಮತ್ತು ನಾಯ್ಡು. ಇಬ್ಬರೂ ಸೇರಿಕೊಂಡು ಇದನ್ನ ಮಾಡಿದ್ದಾರೆ. ನಾವು ಹೇಳಿದೆವು ಅಂತ ಮಾತ್ರ ಯಾರಿಗೂ ಹೇಳಬೇಡಮ್ಮ' ಎಂದು ಸಮಾಧಾನ ಮಾಡಿ, ರುದ್ರಮ್ಮನನ್ನು ವಾಪಸ್ಸು ಕಳಿಸಿ ಒದಗಲಿದ್ದ ಗಂಡಾಂತರದಿಂದ ನಿಸಾರರನ್ನು ಪಾರು ಮಾಡಿದ್ದೆವು. ರುದ್ರಮ್ಮ ಶಾಲೆಗೆ ಮುತ್ತಿಗೆ ಹಾಕಬಹುದೆಂಬ ಗುಮಾನಿ ನಮಗೆ ಬಂದು, ಮುಂದಾಲೋಚನೆಯಿಂದ ನಿಸಾರರನ್ನು ಪಾರ್ಕಿನಲ್ಲಿ ತಲೆ ಮರೆಸಿ ಕೊಂಡಿರಲು ತಿಳಿಸಿದ್ದೆವು. ನಮ್ಮ `ಪ್ಲಾನು` ಫಲಕಾರಿಯಾದ ತಕ್ಷಣ ಓಡೋಡಿ ಬಂದು ನಿಸಾರರಿಗೆ ತಿಳಿಸಿದೆವು. `ಸದ್ಯ ಬಚಾವಾದೆವಲ್ಲ` ಎಂದು ಕೊಂಡು `ದಮ್` ಎಳೆಯುತ್ತಿದ್ದಾಗ, ನಿಸಾರ್ `ಎಲ್ಲ ಸರಿ ಕಣ್ರಯ್ಯ, ಪಾಪ ಆ ಅಣ್ಣಯ್ಯ ಮತ್ತು ನಾಯ್ಡು ಗತಿ ಏನಾಗಬೇಕು? ಅವರು ಇದನ್ನು ಬರೆದಿದ್ದಾರೊ, ಅಥವಾ ಇನ್ನ್ಯಾರು ಬರೆದಿದ್ದಾರೊ? ಎಂದಾಗ, ನಾನು `ಅಲ್ಲಯ್ಯ, ಇದ್ದ ಮೂವರಲ್ಲಿ ಕದ್ದೋರು ಯಾರು? ಅಂದ ಹಾಗೆ, ನೀನು ಮಾಡಿಲ್ಲ ಅಂದಮೇಲೆ, ಅವರೇ ಮಾಡಿರಬೇಕು` ಎಂದೆ. ನಿಸಾರ್ ಊಹಿಸಿದಂತೆ, ನಾಯ್ಡು-ಅಣ್ಣಯ್ಯ ದ್ವಯರಿಬ್ಬರಿಗೂ ಹುಟ್ಟಿದಾರಭ್ಯ ನೆರವೇರಿರದಿದ್ದ ಮಂತ್ರೋಚ್ಚಾರ ಮತ್ತು ಸಾರ್ವಜನಿಕ ರುದ್ರಾಭಿಷೇಕ ಹಾಗೂ ಪೂಜೆ ಆದದ್ದನ್ನು ನಮ್ಮ ಒಂದಿಬ್ಬರು ಪ್ರತ್ಯಕ್ಷದರ್ಶಿ ಪರಿಚಿತರಿಂದ ತಿಳಿದು ನಮಗೆ ನೋವು-ನಗು ಒಮ್ಮೆಗೇ ಹೊಮ್ಮಿದ್ದವು. ಇದನ್ನು ಸಮರ್ಥಿಸುವಂತೆ, ಶ್ರೀಮಾನ್ ಅಣ್ಣಯ್ಯನವರ ಆಯುಷ್ಕರ್ಮಶಾಲೆ ಮೂರು-ನಾಲ್ಕು ದಿವಸ ಮುಚ್ಚಿತ್ತು ಮತ್ತು ಸನ್ಮಾನ್ಯ ನಾಯ್ಡು ಅವರು ರಜೆ ಹಾಕಿ ದೇಶಾಂತರ ಹೊರಟು ಹೋಗಿದ್ದರು. ನಿಸಾರರನ್ನು ಒಳಗೊಂಡಂತೆ ನಾವು ಹದಿನೈದು-ಇಪ್ಪತ್ತು ದಿವಸ

ರುದ್ರಮ್ಮನ ಅಂಗಡಿಯಿದ್ದ ನೇರವಾದ ರಾಜಾ ರಸ್ತೆಯನ್ನು ತ್ಯಜಿಸಿ, ಬಳಸು ಗಲ್ಲಿಗಳಲ್ಲಿ ಅಂಡಲೆದಿದ್ದು ಈಗ ಬಲು ಮೋಜಾಗಿ ಕಾಣುತ್ತದೆ. ಕೊನೆಗೂ, ರುದ್ರಮ್ಮನ ಹೆಸರಿನ ಆ ವಿವಾದಾತ್ಮಕ ಪ್ರಶ್ನೆಯನ್ನು ಕೇಳಿದವರು ಯಾರು ಎನ್ನುವುದು ಚಿದಂಬರ ರಹಸ್ಯವಾಗಿಯೇ ಉಳಿಯಿತು.

ನಮ್ಮ ಬಾಲ್ಯದಲ್ಲಿ ಇಂತಹ ಹಲವಾರು ಘಟನೆಗಳು ನಡೆದಿವೆ. ನಿರೂಪಿಸುತ್ತಾ ಹೋದರೆ ಅದೇ ಒಂದು ಕಿರು ಪುಸ್ತಕವಾದೀತು. ನಮ್ಮ ಬಳಗದಲ್ಲಿ ಆತ್ಮೀಯರಾಗಿದ್ದವರು—ಆರ್ಮುಗಂ, ರಾಮಮೂರ್ತಿ, ನಾರಾಯಣರಾವ್, ಸಿ. ದೇವಣ್ಣ, ನಂಜುಂಡಯ್ಯ, ಪಿಳ್ಳಭೈರಪ್ಪ, ಪಾಣಿ, ವಿಟ್ಠಲ್ ರಾವ್, ಷಣ್ಮುಖಯ್ಯ, ಆಂಜನಪ್ಪ. ನಮಗಿಂತ ಸೀನಿಯರ್‌ಗಳ ಪೈಕಿ ಕೇವಲವಾಗಿದ್ದವರು ವೆಂಕೋಬರಾವ್, ಅನಂತಸ್ವಾಮಿ ಅಯ್ಯರ್, ಹನುಮಾನ್ ಸಿಂಗ್. ನಿಸಾರರಿಗೆ ಅವರ ತರಗತಿಯ ಹಿಂದಿನ ಮತ್ತು ಮುಂದಿನ ತರಗತಿಗಳ ಅನೇಕ ಸ್ನೇಹಿತರ ಹೆಸರುಗಳು ಈಗಲೂ ನೆನಪಿವೆ. ಆದರೆ ನನಗೆ ಜ್ಞಾಪಕಕ್ಕೆ ಬರುವುದಿಲ್ಲ.

ಐವತ್ತರ ದಶಕದ ಮೊದಲನೆಯ ಭಾಗದಲ್ಲಿ ನಾವು ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಬೇಕಾದರೆ ಹೊಸಕೋಟೆಯಿಂದ ಬೆಂಗಳೂರಿಗೆ ಬರಬೇಕಾಗಿತ್ತು. ಈಗಿನ ಹಾಗೆ ಮೈಲಿಗೊಂದೊಂದು ಪರೀಕ್ಷಾ ಕೇಂದ್ರಗಳು ಇರಲಿಲ್ಲ. ಆಗ ನಮ್ಮ ವಸತಿಯನ್ನು ನಾವೇ ಮಾಡಿಕೊಳ್ಳಬೇಕಾಗಿತ್ತು. ನಾನೂ ನಿಸಾರರು ಬಳೆಪೇಟೆ ಸರ್ಕಲ್‌ನಲ್ಲಿರುವ ಶ್ರೀ ಉಡುಪಿ ಕೃಷ್ಣ ಭವನದಲ್ಲಿ ಮಹಡಿಯ ಮೇಲೆ ರೂಂ ಮಾಡಿದೆವು. ಚರಿತ್ರೆ ಮತ್ತು ಭೂಗೋಳದ ಪರೀಕ್ಷೆಯ ದಿನ ನಾವು ರಾಜಕಪೂರನ 'ಆವಾರ' ಸಿನಿಮಾದ ಎರಡನೆಯ ಷೋ ಅನ್ನು ಮೆಜೆಸ್ಟಿಕ್ ಥಿಯೇಟರ್‌ನಲ್ಲಿ ನೋಡಿಕೊಂಡು ಬಂದು ಪರೀಕ್ಷೆ ಬರೆದಿದ್ದೆವು. ನನ್ನ ಪರೀಕ್ಷಾ ಕೇಂದ್ರ ಯುನೈಟೆಡ್ ಮಿಷನ್ ಹೈಸ್ಕೂಲ್; ನಿಸಾರರದು ಮೈಸೂರು ಬ್ಯಾಂಕ್ ವೃತ್ತದ ಬಳಿಯ ಸೆಂಟ್ರಲ್ ಹೈಸ್ಕೂಲು. ಒಮ್ಮೆ ಮರೆತು ನಿಸಾರರ ಹಾಲ್ ಟಿಕೇಟನ್ನು ನಾನು ತೆಗೆದುಕೊಂಡು ಹೋದೆ. ನಿಸಾರರು ಅಂದು ಹಾಲ್ ಟಿಕೇಟನ್ನು ನನ್ನ ಸೆಂಟರ್‌ಗೆ ಓಡಿ ಬಂದು ತೆಗೆದುಕೊಂಡು ಹೋದರು. ಆಗ ಅವರು ಯಾವ ರೀತಿಯ ಉದ್ವೇಗವನ್ನೂ ವ್ಯಕ್ತಪಡಿಸದೆ ಸಾವಧಾನವಾಗಿ ಅದನ್ನು ತೆಗೆದುಕೊಂಡು ಹೋದ ದೃಶ್ಯ ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತಿದೆ. ಎಂತಹ ವಿಷಮ ಹಾಗೂ ಸಂದಿಗ್ಧ ಸಮಯದಲ್ಲೂ ಅವರು ತೋರುತ್ತಿದ್ದ ತಾಳ್ಮೆ, ಮನಃಪ್ರಸನ್ನತೆ,ಸ್ಥೈರ್ಯ ನಿಜಕ್ಕೂ ಆಶ್ಚರ್ಯ ಬರಿಸುತ್ತಿತ್ತು; ನಮ್ಮಲ್ಲಿ ಹೆಮ್ಮೆಯ ಭಾವನೆಯ ಜೊತೆಯಲ್ಲೇ ಕರುಬನ್ನು ಪ್ರಚೋದಿಸುತ್ತಿತ್ತು.

ಅನಂತರ ನಾವು ಬೆಂಗಳೂರಿಗೆ ಬಂದೆವು. ನಾನು ಬಸಪ್ಪ ಇಂಟರ್‌ಮೀಡಿಯೆಟ್ ಕಾಲೇಜ್(ಇಂದಿನ ರೇಣುಕಾಚಾರ್ಯ ಕಾಲೇಜು)ಗೆ ಸೇರಿದ್ದೆ. ನಿಸಾರರು ಗೌರ್ನಮೆಂಟ್ ಇಂಟರ್‌ಮೀಡಿಯೆಟ್ ಕಾಲೇಜು ಸೇರಿದರು. ವಾರಕ್ಕೊಮ್ಮೆ, ಹದಿನೈದು ದಿನಗಳಿಗೊಮ್ಮೆ ನಾವು ಭೇಟಿ ಆಗುತ್ತಿದ್ದೆವು. ಕಬ್ಬನ್ ಪಾರ್ಕ್, ಲಾಲ್‌ಬಾಗ್‌ಗಳಲ್ಲಿ ಕೂತು ಆಗ ಘಂಟೆಗಟ್ಟಲೆ ಮಾತನಾಡಿ ಕಳೆದ ಕಾಲ ಅವಿಸ್ಮರಣೀಯ.

ಫೈನಲ್ ಇಂಟರ್‌ಮೀಡಿಯೆಟ್‌ನಲ್ಲಿ ಇಬ್ಬರೂ ಕೆಂಗಲ್ ಹನುಮಂತಯ್ಯ ರಸ್ತೆಯ

(ಡಬಲ್ ರೋಡ್)ಬಳಿಯಿರುವ ಕೊಳದ ಮಠದಲ್ಲಿ ಬಾಡಿಗೆಗೆ ರೂಂ ಮಾಡಿ (combined study) ಜೊತೆಯಾಗಿ ಓದಿದೆವು. ನಿಸಾರರ ಪ್ರಾಥಮಿಕ ಶಾಲೆಯ ಸಹಪಾಠಿ ಟಿ. ಜಿ. ಬಸವಾರಾಧ್ಯರ ನೆರವಿನಿಂದ ನಮಗೆ ಆಗಿನ ಆ ಪ್ರಶಾಂತ ಪ್ರದೇಶದಲ್ಲಿ ಕೊಠಡಿ ಸಿಕ್ಕಿತ್ತು. ಆಗಿನ್ನೂ ಕೊಳದ ಮಠದ ಪ್ರದೇಶ ಇಂದಿನ ಹಾಗೆ ಅಭಿವೃದ್ಧಿ ಆಗಿರಲಿಲ್ಲ. ಹಗಲಿನ ಹೊತ್ತೇ ಬಿಕೋ ಎನ್ನುತ್ತಿತ್ತು. ರಾತ್ರಿಯ ವೇಳೆ ಶ್ಮಶಾನ ಮತ್ತು ತೋಟಗಳನ್ನು ದಾಟಿ ಅಲ್ಲಿಗೆ ಹೋಗಬೇಕಾದರೆ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹೋಗಬೇಕಿತ್ತು, ಅಲ್ಲ ಓಡಬೇಕಿತ್ತು.

ನಿಸಾರರು ನನಗೊಬ್ಬನಿಗೇ ಆತ್ಮೀಯರಾಗಿರಲಿಲ್ಲ. ನಮ್ಮ ಮನೆಯವರೆಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ನಮ್ಮ ತಂದೆ, ಭಾವ, ಭಾವನ ಮಕ್ಕಳು, ಅಕ್ಕಂದಿರು, ನನ್ನ ಭಾವ ಮೈದುನರು, ನನ್ನ ಸಹೋದರರು—ಹೀಗೆ ಎಲ್ಲರಿಗೂ ಮೆಚ್ಚಿನವರಾಗಿದ್ದರು. ಚಿರಪರಿಚಿತರಾಗಿದ್ದರು. ಇವರು ನನ್ನ ಗೆಳೆಯರಾಗಿ, ನನ್ನ ತಮ್ಮ ಮತ್ತು ಭಾವಮೈದುನರಿಗೆ ಪ್ರಾಧ್ಯಾಪಕರಾಗಿದ್ದಾಗ ಇದ್ದ ಅಂದಿನ ಪ್ರೀತಿ, ವಿಶ್ವಾಸ, ಆತ್ಮೀಯತೆಗಳನ್ನು ಈವರೆವಿಗೂ ಹಂಚಿಕೊಂಡು ಬಂದಿದ್ದಾರೆ.

ಇಂತಹ ಒಬ್ಬ ತುಂಟತನದ, ಹಾಸ್ಯಪ್ರವೃತ್ತಿಯ, ಸಜ್ಜನತೆಯ ಸನ್ಮಿತ್ರ ನನ್ನ ಪಾಲಿಗೆ ದೊರೆತದ್ದು ದೈವಕೃಪೆಯೆಂದು ಭಾವಿಸುತ್ತೇನೆ. ಅವರು ಮಾಡಿರುವ ಸಾಹಿತ್ಯ ಸಾಧನೆಯನ್ನು, ಏರಿರುವ ಉನ್ನತ ನೆಲೆಯನ್ನು ನೆನೆದಾಗ ನನಗಾಗುವ ಆನಂದ ಮತ್ತು ಹೆಮ್ಮೆಗಳನ್ನು ಬಣ್ಣಿಸಲು ಪದಗಳು ಸಾಲವು. ಅವರಿಗೆ ನನ್ನ ಶುಭಕಾಮನೆಗಳು.

ಆಚಾರ ವಿಚಾರಗಳಲ್ಲಿ ಬೇರೆಯಾದರೂ ಭಾವಾತ್ಮಕವಾಗಿ ಒಂದಾಗಿ ಬೆಸೆಯಲು, ಹೊಸೆದು ಹುರಿಗೊಳ್ಳಲು ಈ ದೇಶದಲ್ಲಿರುವಷ್ಟು ಪ್ರಭಾವಗಳು, ಉದಾಹರಣೆಗಳು ಮತ್ತು ಪ್ರೇರಣೆಗಳು ಜಗತ್ತಿನ ಯಾವೆಡೆಯೂ ಇಲ್ಲ. ನಿದರ್ಶನಗಳಿಗೆ ಕೊರತೆಯಿಲ್ಲ, ಆಚರಣೆಗೇ ತತ್ವಾರ. 'ಬೆಳೆಯೇನೋ ಬೇಕಾದಷ್ಟಿದೆ, ಕುಯ್ಯುವವರು ಕಡಿಮೆ'. ನಾವು ದಿಗ್ಗೆಡದಂತೆ ಎಚ್ಚರಿಸುವ ಸಮನ್ವಯತೆ ಹಾಗೂ ಸಮರಸತೆಯ ಎಷ್ಟೊಂದು ಗೋಪುರ ದೀಪಗಳಿಲ್ಲ! ಆದರೆ ದೈನಂದಿನ ಏಗಾಟದ ವಿಕ್ಷುಬ್ಧ ಅಲೆಗಳ ಭೋರ್ಗರೆತದಲ್ಲಿ ಮನ ನೆಟ್ಟ ನಮಗೆ ಬೆಳಕಿನ ಭಾಗ್ಯದ ಅರಿವಿಲ್ಲ.

(ಭಾವ ಸಾಮರಸ್ಯ)



ವಿಶಿಷ್ಟ ವ್ಯಕ್ತಿತ್ವದ ಕಾಲೇಜ್ ಸಹಪಾಠಿ

♦ *ಸಾವಕಾರ್ ರಾಮಕೃಷ್ಣ*
(ಆನರ್ಸ್ ತರಗತಿಯ ಸಹಪಾಠಿ)

ನನ್ನ ಅನೇಕ ಸಹಪಾಠಿಗಳಲ್ಲಿ ಈಗ್ಗೆ ಐವತ್ತೂರು ವರ್ಷ ಕಳೆದರೂ ಸಹ ಹೆಚ್ಚು ನೆನಪಿಗೆ ಬರುವವರು ಕೆಲವರಷ್ಟೆ. ಅದರಲ್ಲಿಯೂ ವಿಭಿನ್ನ ಮತ್ತು ವಿಶಿಷ್ಟ ವ್ಯಕ್ತಿತ್ವದ ಪ್ರತಿಭಾವಂತ ಗೆಳೆಯ ಶ್ರೀ. ಕೆ. ಎಸ್. ನಿಸಾರ್ ಅಹಮದ್ ಸುಸ್ಮರಣೀಯ. ಇಂದಿಗೂ ನನ್ನನ್ನು ನನ್ನ ಮೊದಲನೆಯ ಹೆಸರಾದ ರಾಮಕೃಷ್ಣ ಎಂದು ಪ್ರೀತಿ ಸಲಿಗೆಯಿಂದ ಸಂಬೋಧಿಸುವುದು ಆತನೊಬ್ಬನೇ. ನನ್ನ ಮತ್ತು ಆತನ ಐದೂಕಾಲು ಶತಕದ ಹಿಂದಿನ ಮೊದಲ ಭೇಟಿ ಮರೆಯಲಾಗದ ಒಂದು ಸಂದರ್ಭ. ಅದೇ ತಾನೆ ನಾನು ಧಾರವಾಡದಿಂದ ಇಂಟರ್‌ಮೀಡಿಯೆಟ್ ಕೋರ್ಸ್ ಮುಗಿಸಿ ಭೂ ವಿಜ್ಞಾನ ವಿಷಯದ ಬಿ.ಎಸ್ಸಿ. ಆನರ್ಸ್ ಸೇರಲು ಬಂದಿದ್ದೆ. ಇಂಟರ್‌ಮೀಡಿಯೆಟ್‌ನಲ್ಲಿ ನನಗೆ ದ್ವಿತೀಯ ಭಾಷೆ ಸಂಸ್ಕೃತಕ್ಕೆ ಸಂಬಂಧಿಸಿದ ಅರ್ಧ ಮಾಗಧಿ ಎಂಬ ಹೆಚ್ಚು ಪ್ರಚಲಿತತೆಯಿಲ್ಲದ ಪ್ರಾಚೀನ ಭಾಷೆ ಆಗಿತ್ತು. ಆ ವಿಷಯ ಸೆಂಟ್ರಲ್ ಕಾಲೇಜಿನ ಆನರ್ಸ್ ಕೋರ್ಸ್‌ನಲ್ಲಿ ಇರಲಿಲ್ಲ. ಅದರಿಂದಾಗಿ ನನ್ನ ಆನರ್ಸ್ ತರಗತಿಯ ಪ್ರವೇಶ ತೊಡಕಾಗಿತ್ತು. ಈ ಸಮಸ್ಯೆಯಿಂದ ನನಗೆ ದಾರಿ ತೋಚದಿದ್ದಾಗ ನನ್ನ ನೆರವಿಗೆ ಬಂದವರು ಆಗ ತಾನೇ ಪರಿಚಯವಾದ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರು. ನಿಸಾರ್‌ಗಿದ್ದ ಸಾಹಿತ್ಯಾಸಕ್ತಿ ಮತ್ತು ಆಗಲೇ ಪದ್ಯ ಬರೆಯುತ್ತಿದ್ದ ಹವ್ಯಾಸ ಆತನನ್ನು ಕನ್ನಡದ ಅಧ್ಯಾಪಕರಾದ ಶ್ರೀ ಜಿ. ಪಿ. ರಾಜರತ್ನಂ

ಅವರಿಗೆ ಹತ್ತಿರವಾಗಿಸಿತ್ತು. ಆ ಒಂದು ಸಂಬಂಧ ನನ್ನ ನೆರವಿಗೆ ಬಂದಿತು. ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆಯನ್ನು ವ್ಯಾಸಂಗದ ವಿಷಯವನ್ನಾಗಿ ಹೊಂದಿದ್ದ ಸಂಗತಿಯನ್ನು ತಿಳಿದ ಶ್ರೀ ರಾಜರತ್ನಂ ಅವರು ನನ್ನ ಪ್ರವೇಶಕ್ಕೆ ಸಹಾಯ ನೀಡಿದರು.

ಅಂದು ನಿಸಾರ್ ಅಹಮದ್ ನನಗೆ ಆನರ್ಸ್‌ನಲ್ಲಿ ಪ್ರವೇಶ ದೊರಕಿಸಲು ಪರೋಕ್ಷವಾಗಿ ನೀಡಿದ ನೆರವು ಆತನನ್ನು ನನ್ನ ಗಳಸ್ಯ ಕಂಠಸ್ಯ ಮಿತ್ರನನ್ನಾಗಿಸಿತು. ಯಾರಿಗಾದರೂ ತನ್ನ ಕೈಯ್ಯಲ್ಲಾದ ಮಟ್ಟಿಗೆ ಸಹಾಯ ಮಾಡಬೇಕೆಂಬ ಪ್ರವೃತ್ತಿ ಇದ್ದ ನಿಸಾರ್ ಸ್ನೇಹಜೀವಿ, ಬಹಳ ಒಳ್ಳೆಯ ವ್ಯಕ್ತಿ. ಆದರೆ ಕೀಟಲೆ ಮತ್ತು ಹಾಸ್ಯ ಪಜ್ಞೆ ಅವನಲ್ಲಿ ಸದಾ ಕ್ರಿಯಾಶೀಲವಾಗಿರುತ್ತಿತ್ತು. ಆಗ ನಮಗೆ ಭೂ ವಿಜ್ಞಾನವನ್ನು ಬೋಧಿಸುತ್ತಿದ್ದ ಪ್ರಾಧ್ಯಾಪಕರೊಬ್ಬರು ಒಂದು ರೀತಿಯ ವಿಲಕ್ಷಣ ಸ್ವಭಾವದವರಾಗಿದ್ದರು. ಯಾರಿಗಾದರೂ ಅವರನ್ನು ಛೇಡಿಸಬೇಕು ಅನ್ನಿಸುತ್ತಿತ್ತು. ಮಹಾ ಮುಂಗೋಪಿಗಳು. ಸಣ್ಣ ವಿಷಯಕ್ಕೆಲ್ಲಾ ಆಕಾಶವೇ ಕಳಚಿ ಬಿದ್ದಂತೆ ಅರಚಾಡುತ್ತಿದ್ದರು. ಅವರಿಗೆ ನಿಸಾರ್ ಬಗ್ಗೆ ಅಕ್ಕರೆ ಇದ್ದರೂ ಒಮ್ಮೊಮ್ಮೆ ಅನಿವಾರ್ಯ ಕಾರಣಗಳಿಂದ ಒಂದೆರಡು ನಿಮಿಷ ತಡವಾಗಿ ತರಗತಿಗೆ ಬಂದರೆ ಆಕ್ಷೇಪಿಸಿ ರೇಗುತ್ತಿದ್ದರು. ಅವರಿಗೆ ನಿಸಾರ್ ಮಾಡುತ್ತಿದ್ದ ಕೀಟಲೆ ನಮಗೆಲ್ಲ ಖುಷಿ ನೀಡುತ್ತಿತ್ತು. ಆತ ಮಾಡುತ್ತಿದ್ದ ತಮಾಷೆ ಈಗಲೂ ನೆನಪಿಗೆ ಬಂದು ನಗು ಉಕ್ಕಿಸುತ್ತದೆ. ಆತನಿಗಿದ್ದ ಹಾಸ್ಯಪ್ರವೃತ್ತಿ ಮತ್ತು ಸ್ನೇಹಪರತೆಯಿಂದ ನನ್ನಂತಹ ಹಲವಾರು ಸಹಪಾಠಿ ಮಿತ್ರರಿಗೆ ಸದಾ ಕೇಂದ್ರ ಬಿಂದುವಾಗಿರುತ್ತಿದ್ದ. ಆಗಿನ ಕಾಲದಲ್ಲಿ ವಿದ್ಯಾರ್ಥಿಗಳು ಮೋಟರ್‌ಬೈಕಿನಲ್ಲಿ ಓಡಾಡುವುದೆಂದರೆ ಅದೊಂದು ದೊಡ್ಡ ಲಕ್ಷುರಿಯೇ. ನಾನು ಮತ್ತು ನನ್ನ ಇನ್ನೊಬ್ಬ ಮಿತ್ರ ಹಾಗೂ ಹಾಸ್ಟೆಲ್‌ನ ರೂಂಮೇಟ್ ಮೋಹನ್‌ದಾಸ್ ಇಬ್ಬರೂ ಸೇರಿ ಒಂದೂವರೆ ಸಾವಿರ ರೂ.ಗಳನ್ನು ಕೂಡಿಸಿ ಒಂದು ಮೋಟರ್ ಸೈಕಲ್ ಕೊಂಡುಕೊಂಡಿದ್ದೆವು. ಆ ಮೋಟರ್ ಸೈಕಲ್ ಮೇಲೆ ನಿಸಾರ್‌ನನ್ನು ಕೂರಿಸಿಕೊಂಡು ಸುತ್ತುತ್ತಿದ್ದೆ. ಅನೇಕ ಬಾರಿ ಅವರ ಮನೆಗೆ ಡ್ರಾಪ್ ಮಾಡಲೆಂದು ಹೋದಾಗ ಅವರ ಮನೆಯಲ್ಲಿ ಊಟೋಪಚಾರ ನಡೆಯುತ್ತಿತ್ತು. ಅವರ ಕುಟುಂಬದ, ಅದರಲ್ಲೂ ಅವರ ದಿವಂಗತ ತಾಯಿ ಅವರ ಸ್ನೇಹಪರತೆ ಮತ್ತು ವಾತ್ಸಲ್ಯಮಯ ಆತಿಥ್ಯ ನನಗೆ ಮತ್ತು ನಿಸಾರರ ಅನೇಕ ಗೆಳೆಯರಿಗೆ ತುಂಬಾ ಮುದ ನೀಡುತ್ತಿತ್ತು. ನನ್ನ ಮೋಟರ್ ಸೈಕಲ್‌ನಲ್ಲಿ ನಾವು ಇಬ್ಬರೂ ಅನೇಕ ಸಾಹಿತ್ಯ ಸಮಾರಂಭಗಳಿಗೆ ಹೋಗುತ್ತಿದ್ದುದುಂಟು. ಹಾಗಾಗಿ ನನಗೂ ಸಾಹಿತ್ಯದಲ್ಲಿ ಅಲ್ಪಸ್ವಲ್ಪ ಆಸಕ್ತಿ ಉಂಟಾಯಿತು. ನಿಸಾರ್ ಅನೇಕ ಖ್ಯಾತ ಸಾಹಿತಿಗಳನ್ನು ನನಗೆ ಪರಿಚಯ ಮಾಡಿಸಿದ್ದ. ಚಾಮರಾಜಪೇಟೆಯಲ್ಲಿದ್ದ ಪ್ರೊ. ವಿ. ಸೀತಾರಾಮಯ್ಯನವರ ಮನೆಗೆ ಆಗಾಗ್ಗೆ ಹೋಗುತ್ತಿದ್ದುದು ಈಗಲೂ ನೆನಪಿದೆ.

ನಾನು ಸೆಂಟ್ರಲ್ ಕಾಲೇಜಿನ ಹಾಸ್ಟೆಲ್‌ನಲ್ಲಿದ್ದೆ. ಆಗ ನನಗೆ ಕ್ರೀಡೆಯಲ್ಲಿ ಬಹಳ ಆಸಕ್ತಿ. ಒಳ್ಳೆಯ ಆಟಗಾರನೂ ಆಗಿದ್ದೆ. ಅಲ್ಲದೇ ಸ್ಪೋರ್ಟ್ಸ್ ಸೆಕ್ರೆಟರಿ ಕೂಡ ಆಗಿದ್ದೆ. ನನ್ನ ಪಕ್ಕದ ಕೋಣೆಯಲ್ಲಿ ಇಂಗ್ಲಿಷ್ ಆನರ್ಸ್ ಓದುತ್ತಿದ್ದ ಶ್ರೀ ಪಿ. ಲಂಕೇಶ್ ಇದ್ದರು. ಅವರು ಹಾಸ್ಟೆಲಿನ ಸಾಹಿತ್ಯ ಸಂಘದ ಕಾರ್ಯದರ್ಶಿ ಆಗಿದ್ದರು. ನನ್ನ ರೂಮಿಗೆ ಬರುತ್ತಿದ್ದ ನಿಸಾರ್, ಲಂಕೇಶ್ ಜೊತೆಯಲ್ಲಿ ಸಂಭಾಷಣೆಯಲ್ಲಿ ತೊಡಗಿರುತ್ತಿದ್ದ. ಅವರಿಬ್ಬರೂ ಗಳಸ್ಯ

ಕಂಠಸ್ಥರು. ಮತ್ತು ಅವರು ಹೆಚ್ಚಾಗಿ ಮಾತನಾಡುತ್ತಿದ್ದುದು ಸಾಹಿತ್ಯದ ವಿಚಾರ. ಕೆಲವೊಮ್ಮೆ ಅದು ಮಾತಿನ ಜಗಳದಲ್ಲಿ ಪರಿಣಮಿಸುತ್ತಿತ್ತು. ಒಂದೊಂದು ಸಲ ನಾನೂ ಅವರಿಬ್ಬರ ಜೊತೆ ಸಂಭಾಷಣೆಯಲ್ಲಿ ಭಾಗಿಯಾಗಿರುತ್ತಿದ್ದೆ.

ವಿದ್ಯಾರ್ಥಿಯಾಗಿದ್ದ ನಿಸಾರ್‌ಗೆ ಆ ಕಾಲದಲ್ಲಿ ಸಮತಾವಾದ, ಸಮಾಜವಾದಗಳಲ್ಲಿ ಉತ್ಕಟವಾದ ಒಲವಿತ್ತು. ಶ್ರೀಮಂತರ ಶೋಷಣೆ ದಬ್ಬಾಳಿಕೆಗಳ ಧೋರಣೆಗಳನ್ನು ಆತ ಸಹಿಸುತ್ತಿರಲಿಲ್ಲ. ನಾನು ವಿನಾಕಾರಣ ಹೆಚ್ಚು ಖರ್ಚು ಮಾಡಿದರೆ ಅದು ತಪ್ಪು ಎಂದು ವಾದಿಸುತ್ತಿದ್ದ. ನಮ್ಮ ಹಾಸ್ಟೆಲಿನಲ್ಲಿ ಒಮ್ಮೊಮ್ಮೆ ವಿದ್ಯಾರ್ಥಿಗಳಲ್ಲಿ ತೆಲುಗು ಮತ್ತು ಕನ್ನಡ ಭಾಷಾ ಆಧಾರದ ಮೇಲೆ ಚುನಾವಣೆ ನಡೆಯುತ್ತಿತ್ತು. ಉಳಿದ ಸಮಯದಲ್ಲಿ ಮಾತ್ರ ಎಲ್ಲರೂ ಕನ್ನಡವನ್ನು ಪ್ರೀತಿಸುತ್ತಿದ್ದರು. ಅಂಥ ಸಂದರ್ಭದಲ್ಲಿ ನಮ್ಮಲ್ಲಿದ್ದ ಸ್ನೇಹಿತರ ದಂಡು ಎಷ್ಟೋ ಸಲ ಕನ್ನಡಪರವಾದ ಹೋರಾಟದಲ್ಲಿ ತೊಡಗಿದ್ದ ಸಂದರ್ಭಗಳೂ ಇದ್ದವು. ಆಗೆಲ್ಲಾ ನಿಸಾರ್ ನಮ್ಮನ್ನು ಹುರಿದುಂಬಿಸುತ್ತಿದ್ದ. ನಮ್ಮಲ್ಲಿ ಧೈರ್ಯ ಮತ್ತು ವಿಶ್ವಾಸ ತುಂಬುತ್ತಿದ್ದ.

ಸಾಹಿತ್ಯಾಸಕ್ತ ನಿಸಾರ್ ಯಾವ ಆಟವನ್ನು ಆಡದಿದ್ದರೂ ನಾವು ಆಡುವಾಗ ಜೊತೆಯಲ್ಲಿದ್ದು ಪ್ರೋತ್ಸಾಹ ನೀಡುತ್ತಿದ್ದ. ಹಾಗೆಯೇ ಆತ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡುವಾಗ ನಮ್ಮೆಲ್ಲರ ಬೆಂಬಲ ಅವನಿಗಿತ್ತು. ಒಟ್ಟಾರೆ ವಿದ್ಯಾರ್ಥಿಯಾಗಿದ್ದಾಗ ಭೂ ವಿಜ್ಞಾನ ವಿಷಯದ ಜೊತೆಗೇ ಸಾಹಿತ್ಯದಲ್ಲೂ ತುಂಬು ಆಸಕ್ತಿ ಅವನಿಗಿತ್ತು.

ಓದಿದ ಅನಂತರ ೧೯೫೮ರಲ್ಲಿ ಆಗಿನ ಮೈಸೂರು ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕೆಲ ಸಮಯ ಭೂವಿಜ್ಞಾನಿಯಾಗಿ ಆಯ್ಕೆಯಾಗಿ ಗುಲ್ಬರ್ಗದಲ್ಲಿ ಸೇವೆ ಸಲ್ಲಿಸಿದ. ಅಲ್ಲಿಯೇ ಮುಂದುವರೆದಿದ್ದರೆ ನಮ್ಮೆಲ್ಲರ ಸಹೋದ್ಯೋಗಿ ಆಗಿ ಇಲಾಖೆಯ ನಿರ್ದೇಶಕ ಆಗಿ ನಿವೃತ್ತನಾಗಬಹುದಿತ್ತು. ಆದರೆ ಆತನಿಗಿದ್ದ ಸಾಹಿತ್ಯಾಸಕ್ತಿ, ಕನ್ನಡ ಭಾಷಾ ಪ್ರೀತಿ ಅವನನ್ನು ಭೂ ವೈಜ್ಞಾನಿಕ ಅನ್ವೇಷಣೆಗಳಲ್ಲಿ ಹೆಚ್ಚು ಕಾಲ ತೊಡಗಿಸಲಿಲ್ಲ. ಗುಲ್ಬರ್ಗ ಜಿಲ್ಲೆಯ ಅಜ್ಞಾತ ಪ್ರದೇಶಗಳ ಕ್ಯಾಂಪುಗಳಲ್ಲಿಯೂ ಆತ ಸಮಯವನ್ನು ಪೋಲು ಗೊಳಿಸದೆ ಸಾಹಿತ್ಯಾಧ್ಯಯನಗಳಲ್ಲಿ ತೊಡಗಿರುತ್ತಿದ್ದ. ತನ್ನ ಸಾಹಿತ್ಯದ ಸಹಜ ಪ್ರವೃತ್ತಿಯನ್ನು ಹೊಟ್ಟೆಪಾಡಿನ ವೃತ್ತಿಯ ಸವಲತ್ತುಗಳಿಗೋಸ್ಕರ ನಿಸಾರ್ ಬಲಿಗೊಡಲು ಸಿದ್ಧನಿರಲಿಲ್ಲ. ಹಾಗಾಗಿ ಹೆಚ್ಚು ಸಂಬಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ತ್ಯಜಿಸಿ ಆತ ೧೯೬೯ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಕಡಿಮೆ ವೇತನದ ಅಧ್ಯಾಪಕನಾಗಿ ಸೇರಿಕೊಂಡ. ಅಲ್ಲಿ ಮತ್ತು ಬೆಂಗಳೂರಿನ ಅನೇಕ ಕಡೆಗಳಲ್ಲಿ ಅವನಿಗೆ ಸಾಹಿತ್ಯದ ಅನೇಕ ಗಣ್ಯರ ಮತ್ತು ಮಿತ್ರರ ಜೊತೆ ಸಿಕ್ಕಿತು. ಬರವಣಿಗೆಗೆ ಹೆಚ್ಚಿನ ಉತ್ತೇಜನ, ಪ್ರೇರಣೆ ದಕ್ಕಿತು. ಹೀಗಾಗಿ ನಿಸಾರ್ ಮೊದಲಿನಿಂದ ಕಾರು, ಬಂಗಲೆ, ಸೇವೆ ಮಾಡುವ ಸಿಬ್ಬಂದಿಗಿಂತ ಲಾಲ್‌ಬಾಗಿನ ಪ್ರಶಾಂತ ವಾತಾವರಣದಲ್ಲಿ ಪುಸ್ತಕಗಳನ್ನು ಓದಿ ಅರಿವನ್ನು ಹೆಚ್ಚಿಸಿಕೊಳ್ಳುವ, ಕವನಗಳನ್ನು ಬರೆದು ಸ್ವತಃ ಸಂತೋಷಪಡುವುದರ ಜೊತೆಗೇ,

ಸಮಾಜ ಮತ್ತು ನಾಡು-ನುಡಿಗಳ ಸೇವೆಯಲ್ಲಿ ಬದುಕನ್ನು ಅರ್ಥವತ್ತಾಗಿ ಮಾಡಿಕೊಳ್ಳುವ ಜೀವನ ರೀತಿಗೆ ಒಲಿದಾತ. ಆಚೆಯ ಸುಖೋಪಭೋಗಗಳಿಗಿಂತ ಆಂತರಂಗಿಕ ನೆಮ್ಮದಿ, ಶಾಂತಿ, ಹಿತಗಳಿಗೆ ಹೆಚ್ಚಿನ ಬೆಲೆ ಕೊಟ್ಟಾತ. ಮೊದಲಿನಿಂದಲೂ ಒಂದು ನಿಶ್ಚಿತವಾದ ಧ್ಯೇಯವನ್ನು ರೂಪಿಸಿಕೊಂಡು ಅದನ್ನು ಪೋಷಿಸಿ ಬೆಳೆಸಿಕೊಂಡು ಮುಂದುವರಿದಾತ. ಹೀಗಿರುವುದರಿಂದಲೇ ಆತನಿಗೆ ಇವೊತ್ತು ನಮ್ಮ ನಾಡಿನಲ್ಲಿ ಮಾತ್ರವಲ್ಲದೆ ದೇಶ ವಿದೇಶ ಗಳಲ್ಲೂ ಒಂದು ಅಪೂರ್ವವಾದ ಸ್ಥಾನಮಾನ ದೊರಕಿದೆ. ಇದರಿಂದ ಆತನ ಸಹಪಾಠಿ ಗಳಾದ ನಮಗೆಲ್ಲ ಆನಂದದ ಜೊತೆಗೆ ಹೆಮ್ಮೆಯೂ ಆಗಿದೆ.

ಇಲ್ಲಿ ಒಂದು ಸಂಗತಿಯನ್ನು ಉಲ್ಲೇಖಿಸಬೇಕು ಅನ್ನಿಸುತ್ತದೆ. ನಿಸಾರ್ ತಾನು ಕೆಲಸಕ್ಕೆ ಸೇರಿ ಮೊದಲನೆಯ ತಿಂಗಳಿನ ಪಗಾರವನ್ನು ಪಡೆದಂದಿನಿಂದ ಇಂದಿನ ತನಕ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿ, ತನಗೆ ಸನ್ಮಾನ ಮಾಡುವ ಸಮಾರಂಭದಲ್ಲಿ ಪಾಲ್ಗೊಳ್ಳಲಿ, ಮದುವೆಯೋ ಗೃಹಪ್ರವೇಶವೋ—ಖಾಸಗಿ ಸಂಭ್ರಮ ಗಳಲ್ಲಿ ಹಾಜರಾಗಲಿ ಅಥವಾ ಟಿ.ವಿ.ಯ ಸಂದರ್ಶನಗಳಲ್ಲಿ ಕಾಣಿಸಲಿ, ಸೂಟನ್ನು ಧರಿಸಿ ಸದಾ ನೀಟಾಗಿ ಕಾಣಿಸುತ್ತಾನೆ. ಇಂದಿನ ಆತನ ಮಾಗಿದ ವಯಸ್ಸನ್ನೂ ಮರೆಸುವಂತೆ ಕಂಗೊಳಿಸುತ್ತಾನೆ. ಬಹುಶಃ ಹೀಗೆ ಕನ್ನಡ ಸಾಹಿತ್ಯ ಸಂಸ್ಕೃತಿ ವಲಯಗಳಲ್ಲಿ ಠಾಕುಠೀಕಾಗಿ ಮೆರೆಯುವ ಪ್ರಖ್ಯಾತ ವ್ಯಕ್ತಿಯೆಂದರೆ ನಿಸಾರ್ ಅಹಮದ್ ಒಬ್ಬನೇ. ಆತ ೧೯೫೯ರಲ್ಲಿ ಸೆಂಟ್ರಲ್ ಕಾಲೇಜಿನ ಉಪನ್ಯಾಸಕ ಹುದ್ದೆಗೆ ಸೇರಿಕೊಳ್ಳುವ ದಿವಸ, ಅರ್ಧ ಗಂಟೆ ಮುಂಚೆ ಕಾಲೇಜ್ ಹಾಸ್ಟೆಲಿನ ನನ್ನ ರೂಮಿಗೆ ಬಂದು ಭೇಟಿಯಾದ. ಹೊಸ ಉದ್ಯೋಗದ ಬಗ್ಗೆ ತಿಳಿಸಿದ. ಆಗಿನ ಕಾಲದಲ್ಲಿ ಟೈ ಸೂಟು ಧರಿಸದೆ ಕಾಲೇಜಿಗೆ ಬಾರದಿದ್ದ ಲೆಕ್ಚರರ್‌ಗಳೇ ವಿರಳವೆಂದರೆ ಅತಿಶಯೋಕ್ತಿಯಲ್ಲ. ಆದರೆ ಈ ನನ್ನ ಮಿತ್ರ ಷರಟನ್ನು ಪ್ಯಾಂಟಿನಲ್ಲಿ ಟಕ್ ಮಾಡಿ ಸಾಧಾರಣನಂತೆ ಬಂದಿದ್ದ. ನಾನೂ ನನ್ನ ರೂಂಮೇಟ್ ಗೆಳೆಯ ಮೋಹನದಾಸ್ ಅವರೂ ಈ ದಿರಿಸಿನಲ್ಲಿ duty report ಮಾಡುವುದು ಸೂಕ್ತವಲ್ಲವೆಂದು, ನಾನು ವಿಶೇಷ ಸಮಾರಂಭಗಳಿಗೆ ಮಾತ್ರ ವರ್ಷಕ್ಕೆ ಒಂದೆರಡು ಸಾರಿ ಬಳಸುತ್ತಿದ್ದ ನನ್ನ ಟೈಯನ್ನು ಕೊರಳಿಗೆ ಬಿಗಿದು, ನನ್ನ ಕೋಟು ತೊಡಿಸಿ 'ಈಗ ನೋಡಪ್ಪ, ನೀನು ಲೆಕ್ಚರರ್ ಥರಾ ಕಾಣ್ತೀಯ' ಎಂದು ಶುಭ ಕೋರಿ ಕೆಲಸಕ್ಕೆ ಸೇರಲು ಕಳಿಸಿಕೊಟ್ಟೆವು. ಮಹಾರಾಯ ನಿಸಾರ್, ಈ ಸಣ್ಣ ಹಾಗೂ ಮಾಮೂಲಿ ಸಂಗತಿಯನ್ನು ನಾನು ಏನೋ ಮಹಾ ಉಪಕಾರ ಮಾಡಿದವನಂತೆ ವರ್ಷಗಳು ಕಳೆದರೂ ಸಿಕ್ಕಿದಾಗೆಲ್ಲ ಥ್ಯಾಂಕ್ಸ್ ಹೇಳುತ್ತಿದ್ದ. ಜೊತೆಗೇ, ನನ್ನ ಯಾರೇ ಸಹೋದ್ಯೋಗಿ ಅಥವಾ ಮಿತ್ರ ಭೇಟಿಯಾದಾಗಲೂ ಜ್ಞಾಪಿಸಿಕೊಳ್ಳುತ್ತಿದ್ದ. ಹೀಗೆ, ಯಃಕಶ್ಚಿತ್ ನೆರವಾದವರನ್ನೂ ತಪ್ಪದೇ ನೆನೆಯುವ, ಕೃತಜ್ಞತೆಯನ್ನು ಸಲ್ಲಿಸುವ ದೊಡ್ಡ ಗುಣ ಈ ನನ್ನ ಸ್ನೇಹಿತನದು. ಈ ಕಾರಣಕ್ಕಾಗಿಯೇ ಅವನು ಸಂಪಾದಿಸಿರುವ ಸಮಾಜದ ವಿವಿಧ ವರ್ಗಗಳ ಜನಗಳ ಸ್ನೇಹ ವಿಸ್ಮಯ ಬರಿಸುವಂತಹದು. ಇವನ ಯಾವುದೇ ಕಾರ್ಯಕ್ರಮಕ್ಕೆ ಸಭಿಕರು ಕಿಕ್ಕಿರಿದು ನೆರೆಯುವುದರ ಮರ್ಮವೂ ಇದೇನೇ.

ನಿಸಾರ್ ಲೆಕ್ಚರರ್ ಆಗಿ ಸೆಂಟ್ರಲ್ ಕಾಲೇಜನ್ನು ಸೇರಿದ ಬಳಿಕ ನನ್ನ ಮತ್ತು ಅವನ ಸಂಪರ್ಕ ಕಡಿಮೆ ಆಯಿತು. ಈತನ ಹಾಗೆಯೇ ಭೂ ವಿಜ್ಞಾನದ ಅಧಿಕ ಸೌಲಭ್ಯ-

ಸೌಕರ್ಯಗಳ ಹುದ್ದೆಯನ್ನು ಬಿಟ್ಟವರೆಂದರೆ ಖ್ಯಾತ ನಾಟಕಕಾರರಾದ ದಿವಂಗತ ಟಿ. ಪಿ. ಕೈಲಾಸಂ. ಮೊದಲು ನಿಸಾರರಂತೆಯೇ, ಮೈಸೂರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದ ಕೈಲಾಸಂ ಅವರು ತರುವಾಯ ಆ ಇಲಾಖೆಯನ್ನು ಬಿಟ್ಟು ಸಾಹಿತ್ಯ ಸಾಧನೆಮಾಡಿ 'ಕನ್ನಡಕ್ಕೊಬ್ಬನೇ ಕೈಲಾಸಂ' ಎನ್ನಿಸಿಕೊಂಡರು. ಹಾಗೆಯೇ ನಮ್ಮೆಲ್ಲರ ಅಚ್ಚುಮೆಚ್ಚಿನ ಸನ್ಮಿತ್ರ ನಿಸಾರ್ ಕೂಡ ಕಾವ್ಯಕ್ಷೇತ್ರದಲ್ಲಿ ಬಹು ದೊಡ್ಡ ಹೆಸರು ಮಾಡಿದ್ದಾನೆ. ಕನ್ನಡಿಗರ ಮನೆ-ಮನದಲ್ಲಿ ನೆಲಸಿದ್ದಾನೆ. ಇದರಿಂದ ಆಪ್ತ ಸ್ನೇಹಿತರಾದ ನಮಗೆಲ್ಲ ಆತನ ಬಗೆಗೆ ಅಮಿತವಾದ ಆದರಾಭಿಮಾನ ಮೂಡಿದೆ. ವೃತ್ತಿಯಲ್ಲಿ ಬೇರೆ ಆಗಿ, ನಾವು ಪರಸ್ಪರ ಭೇಟಿ ಮಾಡುವ ಸಂದರ್ಭಗಳು ಅಪರೂಪವಾದರೂ ನನಗೆ ಈಗಲೂ ಆತನ ಕೈ ಬರಹದಲ್ಲಿ ವಿಳಾಸ ಬರೆದ ಆತನ ಎಲ್ಲ ಸಾಹಿತ್ಯ ಸಮಾರಂಭಗಳ ಆಹ್ವಾನಪತ್ರಗಳೂ ತಪ್ಪದೇ ತಲಪುತ್ತವೆ. ನಾನು ಎಲ್ಲಕ್ಕೂ ಹಾಜರಾಗದಿದ್ದರೂ ಕೆಲವು ಸಂದರ್ಭಗಳಲ್ಲಿ ಭೇಟಿಯಾಗಿ ಗತ ಕಾಲದ ನೆನಪುಗಳನ್ನು ಆತನೊಂದಿಗೆ ಹಂಚಿಕೊಳ್ಳುತ್ತೇನೆ. ಎಪ್ಪತ್ತರ ದೀರ್ಘ ವಯಸ್ಸನ್ನು ಅರ್ಥಪೂರ್ಣವಾಗಿ ಮತ್ತು ಸಾಧನಾನಿಷ್ಠನಾಗಿ ಪೂರೈಸಿ ಮುನ್ನಾಗುತ್ತಿರುವ ನಿಸಾರ್ ಕೊನೆಯುಸಿರಿನ ತನಕ ನಾಡು-ನುಡಿಗಳ ಸೇವೆಯಲ್ಲಿ ತೊಡಗಿರಲಿ, ತನ್ನ ಸಾಹಿತ್ಯ ರಚನೆಯಿಂದ ಕನ್ನಡ ಕುಲಕೋಟಿಯ ಹೃದಯ ಮತ್ತು ಮನಸ್ಸುಗಳನ್ನು ಅರಳಿಸುತ್ತಿರಲಿ ಎಂಬ ಕಳಕಳಿಯ ಹಾರೈಕೆಯಿಂದ ಈ ಲೇಖನವನ್ನು ಮುಗಿಸುತ್ತಿದ್ದೇನೆ.

ಚಾಣಾಕ್ಷತೆಯಂತೆ ಪ್ರಾಮಾಣಿಕತೆ ಏಕ್‌ದಂ ಫಸಲು ನೀಡುವ ಬೆಳೆಯಲ್ಲ. ಮತಾಪಿನಂತೆ ಕಣ್ಣುಗಳನ್ನು ಕೋರೈಸಿ, ಮರು ಕ್ಷಣ ನಿಶ್ಶೇಷವಾಗುವ ಗುಣ ಅದಕ್ಕಿಲ್ಲ. ಅದು ವರ್ಧಿಸಬೇಕಾದರೆ ಸಾವಧಾನ, ಆರೈಕೆ, ಸಮಯಾವಕಾಶ ಅಗತ್ಯ. ಈ ಪರಿಶ್ರಮಕ್ಕೆ ತಕ್ಕ ಲಾಭವೂ ಅದರಿಂದ ಉಂಟು. ಸಮಾಜ ದೀರ್ಘಕಾಲೀನ ಸಮೃದ್ಧಿ, ಭಾಗ್ಯಗಳನ್ನು ಹೊಂದುತ್ತದೆ: ಸಂಪನ್ನಗೊಳ್ಳುತ್ತದೆ. ಪ್ರಾಮಾಣಿಕ ಬದುಕಿನ ಫಸಲು ಬಹೂಪಕಾರಿ: ಕಲ್ಪವೃಕ್ಷದಂತೆ. ಎಳನೀರು, ತೆಂಗಿನಕಾಯಿ, ಒಣ ಕೊಬ್ಬರಿ, ಎಣ್ಣೆ; ತಡಿಕೆ ಚಪ್ಪರಗಳ ಗರಿ, ನಾರು, ಉರುವಲು—ಒಂದೇ ಎರಡೇ? ಎಲ್ಲ ಆ ಮರದ ಕೃಪೆ, ಕರುಣೆ. ಇದೇ ರೀತಿ ರಾಜಕೀಯ, ಆಡಳಿತ, ಸಾಮಾಜಿಕ ಕ್ಷೇತ್ರಗಳಲ್ಲಿ ನಿಸ್ಪೃಹ ವ್ಯಕ್ತಿಗಳ ಹಿರಿಮೆ. ತಮಗಿಂತ ಪರರಿಗೆ ಆಗುವ ಲಾಭವೇ ಜೀವನ ಸಾರ್ಥಕ್ಯದ ಮಾನದಂಡ.

(ಚಾಲಾಕಿತನ—ಪ್ರಾಮಾಣಿಕತೆ)



ಇನ್ನೆಲ್ಲಿ ಆ ಕಾಲ!

♦ ಡಾ. ಸಿ. ವಿ. ವಿಶ್ವೇಶ್ವರ
(ಆನರ್ಸ್ ತರಗತಿಯ
ಸಹಪಾಠಿ)

೧೯೫೪ನೆಯ ಇಸವಿ. ನಾನು ಸ್ನಾತಕೋತ್ತರ ಪದವಿಗಾಗಿ ಆಗ ತಾನೆ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಸೇರಿದ್ದೆ. ಆ ಕಾಲದಲ್ಲಿ ವಿಜ್ಞಾನ ಕಲಿಯಲು ಆಸಕ್ತರಾದ ವಿದ್ಯಾರ್ಥಿಗಳು ಬಿ.ಎಸ್ಸಿ. ಆನರ್ಸ್ ಕೋರ್ಸನ್ನು ಆಯ್ದುಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಇಂಟರ್‌ಮೀಡಿಯೆಟ್‌ನಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಆನರ್ಸ್ ಕೋರ್ಸ್‌ಗೆ ಸೇರುತ್ತಿದ್ದರು. ಇದು ೩ ವರ್ಷ ಅವಧಿಯ ವ್ಯಾಸಂಗ. ಮೂರನೆಯ ವರ್ಷದಲ್ಲಿ ಐಚ್ಛಿಕ ವಿಷಯದಲ್ಲಿ ವಿಶೇಷವಾದ ತರಬೇತಿ ನೀಡಲಾಗುತ್ತಿತ್ತು. ಮೊದಲ ಎರಡು ವರ್ಷಗಳಲ್ಲಿ ನಾವು ನಮ್ಮ ಐಚ್ಛಿಕ ವಿಷಯಗಳ ಜೊತೆಗೆ ಇಂಗ್ಲಿಷ್ ಮತ್ತು ಕನ್ನಡವನ್ನು ಕಲಿಯಬೇಕಾಗಿತ್ತು. ಈ ಭಾಷೆಗಳ ತರಗತಿಗಳು ನಡೆಯುವ ಸಮಯದಲ್ಲೇ ನಾನು ನನ್ನ ಪ್ರಿಯ ಮಿತ್ರರಾದ ಕೆ. ಎಸ್. ನಿಸಾರ್ ಅಹಮದ್‌ರ ಬಗ್ಗೆ ತಿಳಿದುಕೊಂಡಿದ್ದು ಮತ್ತು ಅವರನ್ನು ಪ್ರಥಮತಃ ಭೇಟಿಯಾಗಿದ್ದು.

ನನ್ನ ಅಭ್ಯಾಸದ ವಿಶೇಷ ವಿಷಯ ಭೌತವಿಜ್ಞಾನ. ನಿಸಾರರದ್ದು ಭೂ ವಿಜ್ಞಾನ. ಈ ಎರಡು ವಿಷಯಗಳೂ ಪರಸ್ಪರ ಭಿನ್ನವಾಗಿದ್ದವು. ನಾವು ಈ ವಿಷಯಗಳನ್ನು ಅಭ್ಯಸಿಸಲು ಮುಖ್ಯ ಕಾರಣವೆಂದರೆ, ಒಂದು: ನಮಗೆ ಅದರಲ್ಲಿದ್ದ ಸಹಜವಾದ ಆಸಕ್ತಿ, ಇನ್ನೊಂದು: ನಾವು ನಮ್ಮ ಮುಂದಿನ ಜೀವನವನ್ನು ಇದರ ಮೂಲಕ ರೂಪಿಸಬೇಕಾಗಿದ್ದ ಅನಿವಾರ್ಯತೆ.

ಹೀಗಿದ್ದೂ ಭಾಷೆಯನ್ನು ಕಲಿಯುವುದು—ಅದರಲ್ಲೂ ಒಂದು ವೇಳೆ ಸಾಹಿತ್ಯದಲ್ಲಿ ಅಭಿರುಚಿಯಿದ್ದರೆ—ಒಂದು ಅದ್ಭುತ ಅನುಭವ. ನಾನು ಮತ್ತು ನಿಸಾರ್ ಅಹಮದ್ ಇಬ್ಬರೂ ಸಾಹಿತ್ಯದಲ್ಲಿ ಆಳವಾದ ಅಭಿರುಚಿಯಿದ್ದು ಸಮಾನಮನಸ್ಕರಾಗಿದ್ದೆವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ನಾವು ನಿಜವಾಗಿ ತುಂಬಾ ಅದೃಷ್ಟವಂತರು. ಯಾಕೆಂದರೆ ನಮಗೆ ದೊರೆತಿದ್ದವರು ಬಹಳ ಅಪರೂಪ ಬಗೆಯ ಅಧ್ಯಾಪಕರು. ಉದಾಹರಣೆಗೆ, ನಮ್ಮ ಕನ್ನಡದ ಪ್ರೊಫೆಸರ್‌ಗಳು. ಮೊದಲನೆಯದಾಗಿ ಪ್ರೊ. ವಿ. ಸೀತಾರಾಮಯ್ಯ; ಎಲ್ಲರಿಗೂ ಗೊತ್ತಿರುವ ವಿ.ಸೀ. ಅವರು. ಯಾವಾಗಲೂ ಕಲೆಯಿಲ್ಲದ ಅಚ್ಚ ಬಿಳುಪಿನ ಕಚ್ಚೆಪಂಚೆ, ಬಿಳಿಯ ಶರ್ಟ್, ಕೆನೆಯ ಬಣ್ಣದ ಮುಚ್ಚು ಕೋಟು, ಮತ್ತೆ ಬಿಳಿಯ ಮೈಸೂರು ಧರಿಸುತ್ತಿದ್ದರು. ಅವರು ನಮಗೆ ಶರಚ್ಚಂದ್ರ ಚಟರ್ಜಿಯವರ 'ವಿಪ್ರದಾಸ' ಕಾದಂಬರಿಯನ್ನು ಬೋಧಿಸುತ್ತಿದ್ದರು. ಇದು ನಮ್ಮ ನಾನ್-ಡಿಟೈಲ್ ಪಠ್ಯವಾಗಿತ್ತು. ಇದೊಂದು ಅಸಾಮಾನ್ಯವಾದ, ಅತ್ಯುತ್ತಮ ಪಾತ್ರ ಪೋಷಣೆಯ ಹಾಗೂ ಮನುಷ್ಯನ ಅಂತರಂಗದ ಆಳವಾದ ಭಾವನೆಗಳನ್ನು ಅನುಭೂತಿ ಮಾಡಿಸುವ ಸಾಹಿತ್ಯ ಕೃತಿಯಾಗಿತ್ತು. ವಿ.ಸೀ. ಅವರಿಗೆ ಕನ್ನಡ ಸಾಹಿತ್ಯದ ಅನೇಕ ವಿಷಯಗಳನ್ನು, ಭಾವ ವಿಚಾರಗಳನ್ನು ಇಂಗ್ಲಿಷಿನಲ್ಲಿ ವಿವರಿಸುವ ಅಭ್ಯಾಸ ಮೊದಲಿನಿಂದ ಇದ್ದದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿತ್ತು. ಮೊದಮೊದಲು ನಮಗಿದು 'ವಿಚಿತ್ರ' ವೆನ್ನಿಸಿದರೂ ಬರಬರುತ್ತ ಅವರ ಪಾಠ ಕ್ರಮಕ್ಕೆ ನಾವು ಒಗ್ಗಿಕೊಂಡೆವು. ಅಷ್ಟು ಮಾತ್ರವಲ್ಲ, ಅವರು ತಮ್ಮನ್ನು ಕೇವಲ ಪಠ್ಯಕ್ಕಾಗಲಿ, ಕನ್ನಡ ಸಾಹಿತ್ಯಕ್ಕಾಗಲಿ ಸೀಮಿತಗೊಳಿಸಿಕೊಂಡಿರ ಲಿಲ್ಲ. ಎಲ್ಲಾ ಬಗೆಯ ಜ್ಞಾನ ಮೂಲಗಳ ವಿಚಾರಗಳ ಬಗ್ಗೆಯೂ ಬೋಧಿಸುತ್ತಿದ್ದರು. ಉದಾ: ಸಮಾಜ ಶಾಸ್ತ್ರ, ನೀತಿ ಶಾಸ್ತ್ರ, ರಾಜಕೀಯ ಶಾಸ್ತ್ರ, ತತ್ತ್ವ ಶಾಸ್ತ್ರ, ಅರ್ಥ ಶಾಸ್ತ್ರ ಮುಂತಾದವುಗಳನ್ನು ಕುರಿತು ಮಾತನಾಡುತ್ತಿದ್ದರು. ಇವೆಲ್ಲಾ ಪಠ್ಯೇತರವಾಗಿದ್ದರೂ ನಮಗೆ ಇಷ್ಟ ಆಗುತ್ತಿದ್ದವು. ಅಲ್ಲದೆ ಎಲ್ಲ ವಿದ್ಯಾರ್ಥಿಗಳೂ ಅವರ ತರಗತಿಗಾಗಿ ಎದುರು ನೋಡುವಂತೆಯೂ ತೋರುತ್ತಿತ್ತು.

ಇವರಂತೆಯೆ ಇನ್ನೊಬ್ಬ ಕನ್ನಡದ ಗುರುಗಳು ಪ್ರೊ. ಜಿ. ಪಿ. ರಾಜರತ್ನಂ. ಅವರು 'ರತ್ನ ಪದ'ಗಳನ್ನು ರಚಿಸಿದ ಕವಿಯಾಗಿ ಅತ್ಯಂತ ಪ್ರಸಿದ್ಧರಾಗಿದ್ದರು. ಮಕ್ಕಳಿಗಾಗಿ ಅನೇಕ ಕಥೆ, ಕವನಗಳನ್ನೂ ಬರೆದಿದ್ದರು. ಇದರೊಂದಿಗೆ ಅವರೊಬ್ಬ ದೊಡ್ಡ ವಿದ್ವಾಂಸರು. ಅವರ ಸಾಹಿತ್ಯಜ್ಞಾನ ತಲಸ್ಪರ್ಶಿ ಸ್ವರೂಪದ್ದಾಗಿತ್ತು. ಜಿ. ಪಿ. ರಾಜರತ್ನಂ ಅವರ ಉಲ್ಲೇಖನೀಯ ಅಪರೂಪದ ಸಂಗತಿಯೆಂದರೆ, ಅವರ ಪಾಲಿ ಭಾಷೆಯ ಆಳವಾದ ಜ್ಞಾನ. ಇದರ ಮುಖೇನ ಅವರು ಮೂಲ ಗ್ರಂಥಗಳಿಂದ ಬೌದ್ಧಮತವನ್ನು ಅಭ್ಯಸಿಸಲು ಕಲಿತುಕೊಂಡಿದ್ದರು. ನಮ್ಮ ಮನೆಯಲ್ಲಿ ಅವರ 'ಜಾತಕ ಕಥೆಗಳು' ಮತ್ತು 'ಮಿಲಿಂದ ಪ್ರಶ್ನೆ' ಎಂಬ ಪುಸ್ತಕಗಳಿದ್ದವು. ಇವನ್ನು ನಾನು ಚಿಕ್ಕಂದಿನಿಂದಲೂ ತುಂಬಾ ಆಸ್ಥೆಯಿಂದ, ಪ್ರೀತಿಯಿಂದ ಓದುತ್ತಿದ್ದೆ. ದೃಢ ನಿಲವಿನ, ಅಚ್ಚ ಬಿಳಿಯ ಖಾದಿಯ ಅರ್ಧ ತೋಳಿನ ಕಾಲರ್ ಇಲ್ಲದ ಅಂಗಿ ಮತ್ತು ದಟ್ಟಿ ಪಂಚೆಯ ರಾಜರತ್ನಂ ಅವರು ಸದಾ ಲವಲವಿಕೆಯಿಂದ, ನಗುನಗುತ್ತಾ ವಿದ್ಯಾರ್ಥಿಗಳನ್ನು

ಬಹಳ ಅಕ್ಕರೆಯಿಂದ ಮಾತನಾಡಿಸುತ್ತಿದ್ದರು. ಅವರು ನಮಗೆ 'ರಾಮಾಯಣ' ಆಧಾರಿತ, ಸಂಸ್ಕೃತ ಕವಿ ದಿಙ್ನಾಗನ 'ಕುಂದಮಾಲೆ'ಯ ಕನ್ನಡಾನುವಾದ ಆಗಿದ್ದ ಒಂದು ನಾಟಕವನ್ನು ಕಲಿಸುತ್ತಿದ್ದರು. ಅವರು ಗೊತ್ತುಪಡಿಸಿದ್ದ ಈ ಪಠ್ಯದ ಬಗ್ಗೆ ಅಷ್ಟೊಂದು ಗಮನ ಕೊಡುತ್ತಿರಲಿಲ್ಲ. ಸಾಮಾನ್ಯವಾಗಿ ಅವರು ರಾಮಾಯಣದ ಬೇರೆ ಪ್ರಸಂಗಗಳ ಜೊತೆಗೆ ಹೋಲಿಸುತ್ತಿದ್ದರಲ್ಲದೆ, ಆ ಮಹಾಕಾವ್ಯದಲ್ಲಿ ಬರುವ ಇತರೇ ವಿಷಯಗಳ ಬಗ್ಗೆಯೂ ಪಾಠ ಹೇಳುತ್ತಿದ್ದರು. ಅವರಿಗೆ ಒಳ್ಳೆಯ ಹಾಸ್ಯಪ್ರಜ್ಞೆಯಿತ್ತು. ನಾವೆಲ್ಲರೂ ಅವರ ಅದ್ಭುತ ಸ್ಫೂರ್ತಿದಾಯಕ ಶೈಲಿಗೆ ಹಾಗೂ ಅವರ ಕಂಚಿನ ಕಂಠಕ್ಕೆ ಮಾರುಹೋಗಿದ್ದೆವು. ಅಧ್ಯಾಪಕ ವೃತ್ತಿಯ ಜೊತೆ ಜೊತೆಗೇ ಜಿ. ಪಿ. ರಾಜರತ್ನಂ ಅವರು ಕನ್ನಡದ ಅಭ್ಯುದಯಕ್ಕಾಗಿ ಸಮರ್ಪಿಸಿಕೊಂಡಿದ್ದರು. 'ಕರ್ನಾಟಕ ಸಂಘ'ವನ್ನು ಹೆಚ್ಚು ಕಡಿಮೆ ತಾವೊಬ್ಬರೇ ನಿಭಾಯಿಸುತ್ತಿದ್ದರು. ಅದರ ಮೂಲಕ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಬರೆಯಲು ಪ್ರೋತ್ಸಾಹ ನೀಡುತ್ತಿದ್ದರು. ಅವರು ಪ್ರಖ್ಯಾತ ಕವಿ-ಸಾಹಿತಿಗಳ ಒಳ್ಳೆಯ ಕೃತಿಗಳನ್ನು ಆ ಪ್ರತಿಷ್ಠಿತ ಕರ್ನಾಟಕ ಸಂಘದ ಮೂಲಕ ಪ್ರಕಟಿಸುತ್ತಿದ್ದುದಲ್ಲದೆ, ವಿದ್ಯಾರ್ಥಿಗಳ ಕವಿತೆಗಳನ್ನು, ಗದ್ಯ ಬರಹಗಳನ್ನು ತಿದ್ದಿ ಪರಿಷ್ಕರಿಸಿ ಬೆಳಕನ್ನು ಕಾಣಿಸುತ್ತಿದ್ದರು. ಅವರ ಉಸ್ತುವಾರಿ ಮತ್ತು ಮಾರ್ಗದರ್ಶನದಲ್ಲಿ ಮೇಲೇರಿ ಮೆರೆದಿರುವ ಬರಹಗಾರರು ಅದೆಷ್ಟಿದ್ದಾರೊ!

೧೯೫೫ರಲ್ಲಿ ಎಂದು ತೋರುತ್ತದೆ. ಪ್ರೊ. ರಾಜರತ್ನಂ ಅವರು ಐದು ಜನ ವಿದ್ಯಾರ್ಥಿಗಳ 'ಪದ್ಯಾಂಜಲಿ' ಹೆಸರಿನ ಪುಸ್ತಕವನ್ನು ಅಚ್ಚು ಹಾಕಿಸಿ ಹೊರತಂದರು. ಅವರಲ್ಲಿ ನನ್ನ ಮಿತ್ರ ಮತ್ತು ಸಹಪಾಠಿ ಕೆ. ಎಸ್. ನಿಸಾರ್ ಅಹಮದ್ ಸಹ ಒಬ್ಬರು. ಆ ಕವನ ಸಂಗ್ರಹದಲ್ಲಿ ಇನ್ನಿಬ್ಬರು ಕವಿಗಳು ಇಂದಿನ ಕಾಲದಲ್ಲಿ ಪ್ರಸಿದ್ಧರಾಗಿದ್ದಾರೆ.

ಅಲ್ಲದೆ, ನಿಸಾರ್ ಅಹಮದ್ ಅವರನ್ನು ಪ್ರೊ. ಜಿ. ಪಿ. ರಾಜರತ್ನಂ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದ್ದು ಸಹ ಗುಣಕ್ಕೆ ಮಾತ್ರ ಮಣೆ ಹಾಕಿಯೇ ಹೊರತು ಬೇರಾವುದೇ ಕಾರಣಗಳಿಗಾಗಿ ಅಲ್ಲ. ಮುಲಾಜೆ, ದಾಕ್ಷಿಣ್ಯಗಳಿಗೆ ಕಟ್ಟು ಬೀಳುವ ಜಾಯಮಾನದವರಲ್ಲ ರಾಜರತ್ನಂ ಅವರು. ನನಗೆ ನೆನಪಿರುವಂತೆ 'ಬಾಯಿ ಇದ್ದವ ಬದುಕಿದ' ಎಂಬ ಪ್ರಬಂಧದ ವಿಷಯವನ್ನು ಸೂಚಿಸಿ ಬರೆಸಿದ ಹಲವಾರು ಆನರ್ಸ್ ತರಗತಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳಲ್ಲಿ ನಿಸಾರ್ ಅಹಮದ್ ಅವರ ಪ್ರಬಂಧ ಮೇಲ್ಮಟ್ಟದ್ದೆಂದು ಪರಿಗಣಿತವಾಗಿ ಅವರು ಆರಿಸಲ್ಪಟ್ಟಿದ್ದರು. ಇದರಿಂದ ನಮ್ಮ ವಿದ್ಯಾರ್ಥಿ ವೃಂದದಲ್ಲಿ ನಿಸಾರರ ಹೆಸರು ತಕ್ಕಷ್ಟು ಜನಪ್ರಿಯವಾಯಿತು. ಅಂತಹ ಗುರುವರ್ಯರು ಈಗ ಅದೆಷ್ಟು ಜನರಿದ್ದಾರೋ, ನನಗೆ ತಿಳಿಯದು.

ವಿ.ಸೀ. ಮತ್ತು ರಾಜರತ್ನಂ ಅವರ ತರಗತಿಗಳಲ್ಲಿನ ಬೋಧನಾಕ್ರಮ ಭಿನ್ನ, ವಿಶಿಷ್ಟ. ಬೇರೆ ಭಾಷೆಯ, ಅಂದರೆ ಸಂಸ್ಕೃತವನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳನ್ನೂ ಆಕರ್ಷಿಸುವಂತೆ ಮಾಡಿತ್ತು. ಇಂತಹ ಗುರುಗಳ ಸಮ್ಮುಖದಲ್ಲಿ ನಾವು ಕಲಿತೆವೆಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆ, ಗೌರವ. ಇಂದು ಅಂತಹ ಉದ್ದಾಮ ವಿದ್ವತ್ತಿನ ವ್ಯಕ್ತಿಗಳು ಎಷ್ಟು ವಿದ್ಯಾರ್ಥಿಗಳಿಗೆ ಸಿಕ್ಕುವುದು ಸಾಧ್ಯ? ಕನ್ನಡದಲ್ಲಿ ಮಾತ್ರವಲ್ಲದೆ

ಇಂಗ್ಲಿಷ್ ತರಗತಿಗಳಲ್ಲೂ ನಾನೂ ನಿಸಾರ್ ಅಹಮದ್ ಮತ್ತು ಇನ್ನೂ ಅನೇಕ ಮಿತ್ರರು ಭೇಟಿಯಾಗುತ್ತಿದ್ದೆವು. ನಮಗೆ ಕೆಲವು ಉತ್ತಮ ಇಂಗ್ಲಿಷ್ ಅಧ್ಯಾಪಕರೂ ಇದ್ದದ್ದು ನಮ್ಮ ಅದೃಷ್ಟವೆನ್ನಬೇಕು. ಅವರಲ್ಲಿ ಒಬ್ಬರು ಪ್ರೊ. ಕೆ. ನರಸಿಂಹ ಮೂರ್ತಿಯವರು. ಅವರ ವ್ಯಾಸಂಗದ ವ್ಯಾಪ್ತಿ, ತಿಳಿವಿನ ಗ್ರಹಿಕೆ ನಿಜಕ್ಕೂ ಆಶ್ಚರ್ಯಜನಕ. ಅವರ ಇಂಗ್ಲಿಷ್ ಸಾಹಿತ್ಯದ ಜ್ಞಾನ ಅತ್ಯಂತ ಅಸಾಧಾರಣ. ನಮಗೆ ಕೀಟ್ಸ್, ಶೆಲ್ಲಿ, ಬೈರನ್, ಕೋಲ್‌ರಿಡ್ಜ್, ವರ್ಡ್ಸ್‌ವರ್ತ್ ಮುಂತಾದವರ ಉತ್ಕೃಷ್ಟ ಕವಿತೆಗಳನ್ನು ಅಭ್ಯಸಿಸುವ ಅವಕಾಶವೇನೋ ಇತ್ತು. ಆದರೆ ನಮಗೆ ನವ್ಯಕಾವ್ಯದ ಪರಿಚಯ ಆಗಲೇ ಇಲ್ಲ ಅನ್ನಬೇಕು. ಟಿ. ಎಸ್. ಎಲಿಯೆಟ್, ಎಜ್ರಾ ಪೌಂಡ್ ಅವರ ಕವನಗಳು ನಮ್ಮ ಪಠ್ಯದಲ್ಲಿ ಗೊತ್ತಿಪಡಿಸಿರಲಿಲ್ಲ. ಅವು ಮತ್ತು ಇನ್ನಿತರ ನವ್ಯ ಕವಿಗಳ ರಚನೆಗಳು ನಮಗೆ ಇದ್ದಿದ್ದರೆ ಕೆ. ನರಸಿಂಹ ಮೂರ್ತಿಯವರಿಂದ ಇನ್ನೂ ಹೆಚ್ಚು ಜ್ಞಾನವನ್ನು ಪಡೆಯಬಹುದಿತ್ತು ಅನ್ನಿಸುತ್ತದೆ. ಆ ಹೊತ್ತಿಗೆ ಕನ್ನಡ ನವ್ಯಕಾವ್ಯದ ಪ್ರಭಾವಶಾಲಿ ಕವನ ಸಂಕಲನವಾದ ಗೋಪಾಲಕೃಷ್ಣ ಅಡಿಗರ 'ಚಂಡೆ ಮದ್ದಳೆ' ಪ್ರಕಟವಾಗಿ ಕಾವ್ಯ ಪ್ರಪಂಚದಲ್ಲಿ ಕೋಲಾಹಲವೆಬ್ಬಿಸಿತ್ತು. ಅದಕ್ಕೆ ಅತ್ಯಮೂಲ್ಯ ಮುನ್ನುಡಿ ಬರೆದಿದ್ದವರು ನಮ್ಮ ಮೆಚ್ಚಿನ ಗುರುಗಳಾದ ಪ್ರೊ. ಕೆ. ನರಸಿಂಹ ಮೂರ್ತಿ ಅವರು. ಅವರ ಆಂಗ್ಲ ನವ್ಯಕಾವ್ಯದ ಬಗೆಗಿನ ಅತ್ಯಂತ ಆಳವಾದ ಒಳನೋಟಗಳು, ವಿದ್ವತ್ಪೂರ್ಣ ಗ್ರಹಿಕೆಗಳು ಅಚ್ಚರಿ ಬರಿಸುತ್ತಿದ್ದವು. ಹೀಗಿದ್ದರೂ, ಕೆ. ನರಸಿಂಹ ಮೂರ್ತಿ ಅವರ ರೊಮ್ಯಾಂಟಿಕ್ ಕವಿತೆಗಳ ವಿವರಣೆ ಮತ್ತು ವಿಶ್ಲೇಷಣೆಗಳನ್ನು ಕೇಳುವುದೇ ಒಂದು ಆನಂದದ ಅನುಭವವಾಗಿತ್ತು. ಕವನಗಳ ಜೊತೆಗೇ ನಾವು ಷೇಕ್ಸ್‌ಪಿಯರ್‌ನ ಒಂದು ಇಡೀ ನಾಟಕವನ್ನೂ ಓದಬೇಕಾಗಿತ್ತು.

ನಿಸಾರ್ ಅಹಮದ್ ಮತ್ತು ನಾನು ಸೆಂಟ್ರಲ್ ಕಾಲೇಜಿನಲ್ಲಿದ್ದಾಗ 'ಕಿಂಗ್ ಲಿಯರ್'ಅನ್ನು ಅವಶ್ಯಕವಾಗಿ ಓದಲೇಬೇಕಾಗಿತ್ತು. 'ಲಿಯರ್'ನನ್ನು ಓದಿಸುವಾಗ ಕೆ.ಎನ್. ಅವರು ಒಳ್ಳೆಯ ಹುರುಪಿನಲ್ಲಿರುತ್ತಿದ್ದರು. ಷೇಕ್ಸ್‌ಪಿಯರ್‌ನನ್ನು ಓದುವಾಗ ಅವರಿಗೆ ತಮ್ಮ ಮುಂದೆ ವಿದ್ಯಾರ್ಥಿಗಳ ಒಂದು ಸಮೂಹ ಇದೆ ಅನ್ನುವುದೇ ಮರೆತು ಹೋಗುತ್ತಿತ್ತೇನೋ ಎಂದು ನಮಗೆ ಅನ್ನಿಸುತ್ತಿತ್ತು. ಅವರು ಆ ನಾಟಕವನ್ನು ಸ್ವಸಂತೋಷಕ್ಕಾಗಿ ಜೋರಾಗಿ ಓದಿಕೊಳ್ಳುತ್ತಿದ್ದರೇನೋ ಎನ್ನಿಸುವಂತಹ ಭಾವನೆ ಮೂಡುತ್ತಿತ್ತು. ಬಹುಶಃ ಅವರು ಆ ನಾಟಕದ ಎಲ್ಲಾ ಪಾತ್ರಗಳನ್ನು ತಾವೇ ರಂಗದ ಮೇಲೆ ಅಭಿನಯಿಸುತ್ತಿರುವಂತೆ ಕಲ್ಪಿಸಿಕೊಳ್ಳುತ್ತಿದ್ದರೇನೋ. ಬೇರೆ ತರಗತಿಯ ಇತರ ವಿದ್ಯಾರ್ಥಿಗಳೂ ಕೂಡ ಹಿಂಡು ಹಿಂಡಾಗಿ ಕೆ.ಎನ್. ಅವರ ಪಾಠ ಕೇಳಲು ಕಿಕ್ಕಿರಿಯುತ್ತಿದ್ದರು. ಅಂತಹ ವಿದ್ವನ್ಮಣಿಗಳಿಂದ ನಿಸಾರ್, ನಾನು ಮತ್ತು ನನ್ನ ಸಹಪಾಠಿಗಳು ಕಲಿತದ್ದರಿಂದಲೇ ಇಂದಿಗೂ ನಮ್ಮಲ್ಲಿ ಸಾಹಿತ್ಯಾಸಕ್ತಿ ಉಳಿದಿದೆ. ನಿಸಾರ್ ಅವರು ಅನಂತರದ ಕಾಲದಲ್ಲಿ ಅನುವಾದ ಮಾಡಿ ಕೀರ್ತಿ ಸಂಪಾದಿಸಿದ ಷೇಕ್ಸ್‌ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ' ಮತ್ತು 'ಒಥೆಲೊ'ಗಳ ಮೇಲೆ ಕೆ.ಎನ್. ಅವರ ತಕ್ಕಮಟ್ಟಿನ ಪ್ರಭಾವ ಇರಬೇಕು ಎಂದು ನನಗೆ ತೋರುತ್ತದೆ. ಕೆ.ಎನ್. ಅವರು ಅನಂತರ ಐ.ಎ.ಎಸ್. ಪಾಸು ಮಾಡಿ ದೊಡ್ಡ ಹುದ್ದೆಯಲ್ಲಿದ್ದಾಗ ನಿವೃತ್ತರಾದರು. ಅವರಿಗೆ ಅದರಿಂದ ಹಿರಿಮೆ ದಕ್ಕಿರಬಹುದು.

ಆದರೆ ಶಿಕ್ಷಣ ಪ್ರಪಂಚಕ್ಕೆ ಆದ ನಷ್ಟ ಮಾತ್ರ ಅಪಾರ.

ಈಚಿನ ವರ್ಷಗಳಲ್ಲಿ ಕೆ.ಎನ್.ರವರು ಆಕಸ್ಮಿಕಕ್ಕೆ ಬಲಿಯಾದರು. ಇದರಿಂದ ಒಬ್ಬ ವ್ಯಕ್ತಿ ಇನ್ನಿಲ್ಲವಾದದ್ದು ಮಾತ್ರ ಅಲ್ಲ, ಜೀವನಪೂರ್ತಿ ಶೇಖರಿಸಿದ್ದ ಅಮೂಲ್ಯ ಜ್ಞಾನ ಮತ್ತು ಮೇಧಾವಿತನದ ಜಲಾಶಯವನ್ನೇ ಅವರು ತಮ್ಮೊಂದಿಗೆ ಒಯ್ದರು. ಹೀಗಾಗಿ, ಅದೊಂದು ವ್ಯಕ್ತಿ ರೂಪದ ಸಂಸ್ಥೆಯ ಅಂತ್ಯ ಕೂಡಾ ಆಗಿತ್ತು.

ಕನ್ನಡ ಮತ್ತು ಇಂಗ್ಲಿಷ್ ಭಾಷಾ ತರಗತಿಗಳಲ್ಲಿ ಮತ್ತು ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ನಾನು ನಿಸಾರರನ್ನು ಹಲವು ಸಲ ಭೇಟಿಯಾಗುತ್ತಿದ್ದೆ. ನಮ್ಮ ಪಾಠ ಪ್ರವಚನಗಳ ಜೊತೆಗೇ ನಾವು ಸಾಹಿತ್ಯ ಪ್ರಪಂಚದ ಆಗುಹೋಗುಗಳನ್ನು ಚರ್ಚಿಸುತ್ತಿದ್ದೆವು. ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳಂತೆ ನಾವೂ ಕೂಡ ನಮ್ಮ ಅಧ್ಯಾಪಕರ ಹಾಗೂ ಸಹಪಾಠಿಗಳ ಬಗ್ಗೆ ಆರೋಗ್ಯಕರ ಟೀಕೆ, ವಿಮರ್ಶೆಗಳನ್ನು ಮಾಡುತ್ತ ಖುಷಿಯಲ್ಲಿ ಕಾಲ ಕಳೆಯುವುದೂ ಇತ್ತು. ಪರಸ್ಪರ ತಮಾಷೆಯನ್ನು ಸಹ ಮಾಡುತ್ತಿದ್ದೆವು. ನಿಸಾರರು ಆಗ ತಾವು ಬರೆಯುತ್ತಿದ್ದ ಕವನಗಳ ಬಗ್ಗೆ ನನ್ನಲ್ಲಿ ಪ್ರಸ್ತಾಪಿಸುತ್ತಿದ್ದರು. ನನಗೆ ಚೆನ್ನಾಗಿ ನೆನಪಿದೆ, ಒಂದು ಸಂಜೆ ಆಕಾಶ ನವಿಲಿನ ಕತ್ತಿನ ಮನಮೋಹಕ ಬಣ್ಣವನ್ನು ತಳೆದಿತ್ತು. ಮರು ದಿನ, ನಿಸಾರರು ತಾವು ಯಾವ ರೀತಿಯಲ್ಲಿ ಆಕಾಶದ ವರ್ಣನೆಯನ್ನು ತಮ್ಮ ಕವನದಲ್ಲಿ ಮೂಡಿಸಿದೆ ಎಂದು ವರ್ಣಿಸಿದರು. ಅವರು ಆ ಕವನವನ್ನು ಪೂರ್ತಿ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಬಹುಶಃ ಅದೂ ಈಗ ಒಂದು ಸುಪ್ರಸಿದ್ಧ ಕವನ ರಚನೆಯೇ ಆಗಿರಬಹುದೇನೋ! ಸೆಂಟ್ರಲ್ ಕಾಲೇಜಿನ ವ್ಯಾಸಂಗದ ಅನಂತರ ನಮ್ಮಿಬ್ಬರ ಪಥಗಳು ಬೇರೆಯಾದವು. ನಾನು ಭೌತ ವಿಜ್ಞಾನದ ಪ್ರೌಢ ಅಭ್ಯಾಸಕ್ಕೆಂದು ಬಹಳ ಕಾಲ ವಿದೇಶಕ್ಕೆ ಹೊರಟುಹೋದೆ. ನಿಸಾರರು ಭೂ ವಿಜ್ಞಾನದ ಜೊತೆಗೇ ಕಾವ್ಯದ ದಾರಿಯಲ್ಲೂ ಮುನ್ನಾಗಿದ್ದು ತುಂಬಾ ಒಳ್ಳೆಯ ನಿರ್ಧಾರ. ಹೊಟ್ಟೆ ಪಾಡಿಗೆ ವೃತ್ತಿಯ ಜೊತೆಗೇ, ಹೃನ್ಮನಗಳನ್ನು ಸಂತೃಪ್ತಿಗೊಳಿಸುವ ಪ್ರವೃತ್ತಿಯನ್ನೂ ಅವರು ಉಳಿಸಿಕೊಂಡರು, ಬೆಳೆಸಿಕೊಂಡರು. ನಾವು ಸೆಂಟ್ರಲ್ ಕಾಲೇಜಿನಲ್ಲಿ ಏನು ಕಲಿತೆವೋ ಅದು ನಮ್ಮಿಬ್ಬರಿಗೂ ಉತ್ತಮ ಅಡಿಪಾಯವನ್ನು ನಿರ್ಮಿಸಿತು ಎಂದೇ ನನ್ನ ದೃಢವಾದ ನಂಬುಗೆ. ನಮ್ಮಲ್ಲಿ ಕೆಲವರಿಗಾದರೂ ಸೆಂಟ್ರಲ್ ಕಾಲೇಜಿನಲ್ಲಿ ಕಳೆದ ಆ ಅವಿಸ್ಮರಣೀಯ ದಿನಗಳು ಬರಿಯ ಜೀವನ ನಿರ್ವಹಣೆಗಾಗಿ ಕಲಿತ ವಿದ್ಯೆಯಾಗಿ ಉಳಿದಿಲ್ಲ; ಅದು ಹೊಸದೊಂದು ಅಸ್ತಿತ್ವಕ್ಕೆ ಬೀಜಾಂಕುರ ಮಾಡಿಸಿತು. ನವ ಲೋಕವೊಂದರ ಪ್ರವೇಶಕ್ಕೆ ನಾಂದೀಸ್ವರೂಪವಾಗಿ ಪರಿಣಮಿಸಿತು.

ನಾವು ಹಿಂದಿನ ಶತಮಾನದ ಐವತ್ತರ ದಶಕದಲ್ಲಿ ಸೆಂಟ್ರಲ್ ಕಾಲೇಜಿನ ನಮ್ಮ ವಿದ್ಯಾರ್ಥಿ ಜೀವನದ ಅವಧಿಯಲ್ಲಿ ಸಂತೋಷಕರ ಮತ್ತು ತುಂಬ ಸಾರ್ಥಕ ಕ್ಷಣಗಳನ್ನು ಕಳೆದೆವು ಎಂಬ ನನ್ನ ಅಭಿಪ್ರಾಯವನ್ನು ನನ್ನ ಸ್ನೇಹಿತ ಕೆ. ಎಸ್. ನಿಸಾರ್ ಅಹಮದ್ ಅವರು ಅನುಮೋದಿಸುತ್ತಾರೆಂದು ಖಂಡಿತಾ ನಂಬಿದ್ದೇನೆ. ಆ ದಿನಗಳನ್ನು ಈಗ ನೆನೆದರೆ, 'ಇನ್ನೆಲ್ಲಿ ಆ ಕಾಲ!' ಎಂಬ ಉದ್ಗಾರ ತಂತಾನೆ ಬಾಯಿಯಿಂದ ಹೊಮ್ಮುತ್ತದೆ.



ಸಹ ವಿದ್ಯಾರ್ಥಿಯ ಬಗೆಗಿನ ಬರಹದ ಕಾರಣ ಸಂದ ಕಾಲಕ್ಕೊಂದು ಸವಿ ನೆನಪಿನ ಚಾರಣ

♦ *ಡಾ. ಎಲ್. ಜಿ. ಸುಮಿತ್ರ*

೧೯೫೦ರ ದಶಕದ ಪ್ರಾರಂಭದಲ್ಲಿ, ಎರಡು ವರ್ಷಗಳ ಇಂಟರ್ ಮೀಡಿಯಟ್ ಓದಿನ ಅನಂತರ, ಐಚ್ಛಿಕ ವಿಷಯಗಳ ಮೂರು ವರ್ಷಗಳ ಆನರ್ಸ್ ಕೋರ್ಸ್‌ಗಳನ್ನು ಮಾಡಿ, ಆಮೇಲೆ ಒಂದು ವರ್ಷದ ಎಮ್.ಎಸ್‌ಸಿ. ಮಾಡುವ ಅವಕಾಶ ಇತ್ತು. ವಿಜ್ಞಾನ ವಿಷಯಗಳ ಎಲ್ಲ ಆನರ್ಸ್ ಕೋರ್ಸ್‌ಗಳೂ ಮತ್ತು ಇಂಗ್ಲಿಷ್ ಆನರ್ಸ್ ಕೋರ್ಸ್ ಆಗ ಮೈಸೂರು ವಿಶ್ವ ವಿದ್ಯಾಲಯಕ್ಕೆ ಸೇರಿದ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ನಡೆಯುತ್ತಿದ್ದವು. ನಾನು ಗಣಿತದ ಆನರ್ಸಿನಲ್ಲಿ ಓದುತ್ತಿದ್ದಾಗ ಕೆ. ಎಸ್. ನಿಸಾರ್ ಅಹಮದ್ ಅವರು ಭೂ ವಿಜ್ಞಾನದ ಆನರ್ಸಿನಲ್ಲೂ; ಲಂಕೇಶ್, ಸುಮತೀಂದ್ರ ನಾಡಿಗ್ ಅವರು ಇಂಗ್ಲಿಷ್ ಆನರ್ಸ್‌ನಲ್ಲೂ ಓದುತ್ತಿದ್ದರು. ಮೊದಲಿಗೆ ನನಗೆ ಇವರುಗಳ ಪರಿಚಯ ಇರಲಿಲ್ಲ. ಮುಂದೆ ನಮ್ಮೆಲ್ಲರ ನೆಚ್ಚಿನ ಗುರುಗಳಾದ ಜಿ. ಪಿ. ರಾಜರತ್ನಂ ಅವರು, ನಾನೂ ಸೇರಿದಂತೆ ನಾವು ನಾಲ್ಕು ಜನರ ಮತ್ತು ಫಿಸಿಕ್ಸ್ ಆನರ್ಸ್‌ನಲ್ಲಿ ಓದುತ್ತಿದ್ದ ಶ್ರೀ ಗೊರೂರು ಶ್ರೀನಿವಾಸಮೂರ್ತಿ ಅವರ ಕವಿತೆಗಳನ್ನು 'ಪದ್ಯಾಂಜಲಿ' ಎಂಬ ಹೆಸರಿನ ಕವನ ಸಂಗ್ರಹವಾಗಿ ಪ್ರಕಟಿಸಿದಾಗ ಇವರುಗಳ ಪರಿಚಯ ಅವರ ಪದ್ಯಗಳ ಮೂಲಕ ನನಗೆ ಆಯಿತು. ಆಗಾಗ ಇವರುಗಳು ಕಾಲೇಜಿನ ಆವರಣದ ಮರಗಳ ಕೆಳಗೆ ನಿಂತು ಹರಟೆ ಹೊಡೆಯುತ್ತಿದ್ದದ್ದನ್ನು ಕಾಣುತ್ತಿದ್ದೆ. ಆದರೆ ಅಂದಿನ ಸೆಂಟ್ರಲ್ ಕಾಲೇಜಿನ ಹುಡುಗಿಯರಿಗೆ ಈ ರೀತಿ ಮರಗಳ ಕೆಳಗೆ

ನಿಂತು ಹರಟೆ ಹೊಡೆಯುವ ಭಾಗ್ಯ ಇರಲಿಲ್ಲ. ಹುಡುಗಿಯರು ಕ್ಲಾಸು ಮುಗಿದ ಬಳಿಕ `ಲೇಡೀಸ್ ರೂಮಿ`ನಲ್ಲಿ ಇರಬೇಕು. ಇದ್ದದ್ದವರಲ್ಲಿ ಇಂಗ್ಲಿಷ್ ಆನರ್ಸಿನ ವಿದ್ಯಾರ್ಥಿನಿಯರು ಸ್ವಲ್ಪ ಧೈರ್ಯಸ್ಥೆಯರು. ಆಗಾಗ ಬಿಡುಬೀಸಾಗಿ ಕಾರಿಡಾರ್‌ಗಳಲ್ಲಿ ಮಾತಿಗೆ ನಿಲ್ಲುತ್ತಿದ್ದರು. ಶಿಕ್ಷಕರಲ್ಲಿ ಕೆಲವರಾದರೂ ಇದರ ಬಗ್ಗೆ ಹುಬ್ಬುಗಂಟಿಡುತ್ತಿದ್ದದ್ದು ಗೊತ್ತಿದೆ. ಅಂತೂ ಒಂದೇ ಕಾಲೇಜಿನಲ್ಲಿ ಒಂದೇ ಸಮಯದಲ್ಲಿ ಓದುತ್ತಿದ್ದರೂ ಇವರೆಲ್ಲರ ಪರಿಚಯವಾಗಲಿ, ಇವರೊಂದಿಗೆ ವಿಚಾರ ವಿನಿಮಯವಾಗಲಿ ಸಾಧ್ಯವಾಗಲಿಲ್ಲ. ಆಗಲೇ ನಾನು, ವಿಮಲ, ಕಮಲ ಜಾನಪದ ಗೀತೆಗಳ ಹಾಗೂ ಕನ್ನಡದ ಹಿರಿಯ ಕವಿಗಳಾದ ಕುವೆಂಪು, ಬೇಂದ್ರೆ, ಪುತಿನ ಅವರ ಕವಿತಾರಚನೆಗಳ ಗಾಯನದಲ್ಲಿ ಸಾಕಷ್ಟು ಹೆಸರು ಗಳಿಸಿದ್ದರಿಂದ, ಈ ನನ್ನ ಸಹ ವಿದ್ಯಾರ್ಥಿಗಳಿಗೆ ನಮ್ಮ ದೂರದ ಪರಿಚಯ ಇದ್ದಿರಬೇಕು. ನನ್ನ ತಂಗಿ ವಿಮಲ ಇಂಗ್ಲಿಷ್ ಆನರ್ಸಿನಲ್ಲಿ ಇದ್ದುದರಿಂದ ಅವಳಿಗೆ ಇವರೆಲ್ಲರ ಪರಿಚಯ ಇದ್ದಿರಬಹುದು. ಮುಂದೆ ಕೂಡ ನಾವೆಲ್ಲ ಬೆಂಗಳೂರಿನಲ್ಲೇ ಇದ್ದರೂ ಸಾಹಿತ್ಯ ವಲಯದ ಸಂಪರ್ಕ ಇದ್ದರೂ ಕಾಫೀ ಹೌಸು, ಗಾಂಧಿ ಬಜಾರುಗಳ ಯುವ ಲೇಖಕರ ಬೌದ್ಧಿಕ ಚರ್ಚೆಗಳಲ್ಲಿ ಭಾಗವಹಿಸುವ ಸಾಧ್ಯತೆ ಇಲ್ಲದೆಯೇ ಯುವ ಲೇಖಕಿಯರು ಬೆಳೆಯಬೇಕಾಗಿತ್ತು.

ಮುಂದೆ ನಾನು ಒಂದು ಕವನ ಸಂಕಲನವನ್ನು ಹೊರ ತಂದು, ಅನಂತರ ಗಣಿತದಿಂದಲೂ ಕನ್ನಡ ಸಾಹಿತ್ಯ ಕ್ಷೇತ್ರದಿಂದಲೂ ದೂರವಾಗಿ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕಿ ಆಗಿ ಸೇರಿಕೊಂಡೆ. ಅಲ್ಲಿನ ಅಂದಿನ ಆಡಳಿತ ವ್ಯವಸ್ಥೆ ನನ್ನನ್ನು ನಡೆಸಿಕೊಂಡ ರೀತಿಯಿಂದ ನನ್ನ ಕವಿ ಜೀವನ, ಗಾಯಕಿಯ ಜೀವನ ಕೊನೆಗೊಂಡಿತು. ನಾನು ಕನ್ನಡದ ಬರವಣಿಗೆ ಏನೇ ಮಾಡಿದರೂ ನಮ್ಮ ತಂದೆ ಎಲ್. ಗುಂಡಪ್ಪನವರ ಹೆಸರು, ಸಹಾಯಗಳನ್ನು ಬಳಸಿಯೇ ಮಾಡಿದ್ದು ಎಂಬಂತೆ ಮಾತು ಬರುತ್ತಿದ್ದದ್ದರಿಂದಲೂ ಸಾಹಿತ್ಯ ಕ್ಷೇತ್ರ ಬೇಡವೆಂಬ ಭಾವನೆ ಬಲವಾಗುತ್ತಿತ್ತು. ಅಷ್ಟು ಹೊತ್ತಿಗೆ `ಪದ್ಯಾಂಜಲಿ`ಯ ಇತರ ಮೂರು ಮಂದಿ—ನಿಸಾರ್, ಲಂಕೇಶ್, ನಾಡಿಗ್—ಕವಿಗಳಾಗಿ ಬೆಳೆಯುತ್ತಿದ್ದರು. ಗೊರೂರು ಶ್ರೀನಿವಾಸಮೂರ್ತಿ ಅವರು ದೂರವಾಣಿ ಇಲಾಖೆಯನ್ನು ಸೇರಿಕೊಂಡು ಮುಂದೆ ಬೆಂಗಳೂರು ಟೆಲಿಫೋನ್ಸ್‌ನ ಜನರಲ್ ಮ್ಯಾನೇಜರ್‌ನ ಹಿರಿಯ ಹುದ್ದೆಯಿಂದ ನಿವೃತ್ತಿ ಹೊಂದಿದರು. ಅವರುಗಳಂತೆ ನಾನು ಶಿಕ್ಷಣ ಕ್ಷೇತ್ರದಲ್ಲೇ ಇದ್ದಿದ್ದರೆ ಚೆನ್ನಾಗಿತ್ತು ಎಂದುಕೊಳ್ಳುತ್ತಿದ್ದೆ. ವ್ಯವಸ್ಥೆಯನ್ನು ಅನುನಯಿಸುವ ಸ್ವಭಾವ ಇಲ್ಲದ್ದರಿಂದ ಒಂದು ಬಗೆಯ ನಿರ್ವೇದ ಭಾವವನ್ನು ಬೆಳೆಸಿಕೊಂಡು, ಪ್ರಸಾರ ವ್ಯವಸ್ಥೆಯಿಂದ ಕಲಿಯಬಹುದಾದುದರ ಕಡೆಗೆ ಪೂರ್ತಾ ಗಮನ ಹರಿಸಿದ್ದಾಯಿತು. ಪ್ರಸಾರ ಕಾರ್ಯದಲ್ಲಿ ನಿಸಾರರ ಭೇಟಿ ಆಗಾಗ ಆಗುತ್ತಿತ್ತು.

೧೯೬೨ರಿಂದ ೬೪ರವರೆಗೆ ನಾನು ಹೈದರಾಬಾದ್‌ನ ಆಕಾಶವಾಣಿ ನಿಲಯದಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಆಗ (೧೯೬೩) ನಿಸಾರ್ ಎನ್.ಸಿ.ಸಿ. ಆಫೀಸರುಗಳ ತರಬೇತಿ ಪಡೆಯುವುದಕ್ಕೆ ಅಲ್ಲಿಗೆ ಬಂದಿದ್ದರು. ಉಸ್ಮಾನಿಯಾ ಕಾಲೇಜಿನ `ಬಿ' ಹಾಸ್ಟೆಲಿನಲ್ಲಿ ಮೂರು ತಿಂಗಳು ಕಾಲ ಇದ್ದರು. ಜೊತೆಗೆ ಡಾ. ಪ್ರಭುಶಂಕರ್ ಅವರೂ

ನಿಸಾರರ ಸಹ ಕೇಡೆಟ್ ಆಗಿದ್ದರೆಂದು ನೆನಪು. ಅವರನ್ನು ಆಕಾಶವಾಣಿಗೆ ಆಹ್ವಾನಿಸಲು ಹೋದೆ. ಆಗಲೇ ನಿಸಾರರು ಹೆಸರಾಂತ ಕವಿಯಾಗಿದ್ದರು. ಅಂದಿನ ಅವರ ಸಂಕೋಚ ಸ್ವಭಾವವನ್ನು ಇಂದಿಗೂ ನಾನು ಮರೆತಿಲ್ಲ. ಕಾರ್ಯಕ್ರಮ ನಿರ್ವಾಹಕಿಯಾಗಿ ಜನಗಳನ್ನು ಭೇಟಿ ಮಾಡುವುದು ನನಗೆ ದಿನನಿತ್ಯದ ಕೆಲಸವಾಗಿತ್ತು. 'ಇವರು ಏಕೆ ಹೀಗೆ ಸಂಕೋಚ ಪಡುತ್ತಾರೆ?' ಎಂದುಕೊಳ್ಳುತ್ತಿದ್ದೆ. ವಿ. ಕೃ. ಗೋಕಾಕರು ಆಗ ಅಲ್ಲೇ ಇದ್ದರು. ಅವರು ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಇಂಗ್ಲಿಷ್‌ನ ನಿರ್ದೇಶಕರಾಗಿದ್ದರು. ಅವರ ಮನೆಯಲ್ಲಿ ಕವಿಗೋಷ್ಠಿಯಲ್ಲೂ ನಿಸಾರರನ್ನು ನೋಡಿದ್ದೆನೆಂದು ಜ್ಞಾಪಕ. ನಿಸಾರರು ಅಂದೂ ಇಂದೂ ಸೌಮ್ಯ ಸ್ವಭಾವದವರೇ. ಕೀರ್ತಿ ಪ್ರಶಸ್ತಿಗಳು,ಅಪಾರ ಜನಪ್ರಿಯತೆ ಅವರ ಸರಳತೆಯನ್ನು ಇನ್ನೂ ಹೆಚ್ಚಿಸಿದಂತೆ ಕಾಣುತ್ತದೆ. ಇಂದು ನಿಸಾರ್ ಸದಾ ಶಿಸ್ತಾಗಿ ಸೂಟನ್ನು ಧರಿಸಿರುವ ನಗು ಮುಖದ ವ್ಯಕ್ತಿ. ಹೊಗಳಿಕೆಗೆ ನಾಚುವ ಶಕ್ತಿಯನ್ನು ಇನ್ನೂ ಉಳಿಸಿಕೊಂಡ ವ್ಯಕ್ತಿ. ಸಂಸಾರದಲ್ಲೂ ಸಾಮರಸ್ಯವನ್ನು ಸಾಧಿಸಿರುವ ನಿಸಾರ್ ದಂಪತಿಗಳ ಸಾಧನೆ ಮೆಚ್ಚುವಂತಹದ್ದೇ ಸರಿ.

ಇವೆಲ್ಲಕ್ಕಿಂತ ಮೊದಲೇ, ಹೈಸ್ಕೂಲನ್ನು ಮುಗಿಸಿ ಕಾಲೇಜಿಗೆ ಸೇರಿದ್ದ ಕೆಲವು ದಿನಗಳಲ್ಲೇ ಆನೇಕಲ್ಲಿನಲ್ಲಿ ಜನಪದ ಗೀತೆಗಳನ್ನು ಹಾಡಲು ನಾವು ಹೋದಾಗ, ಮುತ್ಯಾಲ ಮಡುವಿನ ಮಾರ್ಗದಲ್ಲಿ ನಮ್ಮ ತಂದೆಯವರನ್ನು ಕಂಡದ್ದನ್ನು ನಿಸಾರರು ನೆನಪಿಸಿಕೊಳ್ಳುತ್ತಾರೆ. ನಿಸಾರರು ಅಲ್ಲಿಯವರೆಗೆ ಬರೆದ ಕವಿತೆಗಳನ್ನು ಅವರಿಗೆ ಬೆಂಗಳೂರಿನ ಸರ್ಕಾರಿ ಇಂಟರ್ಮೀಡಿಯಟ್ ಕಾಲೇಜಿನಲ್ಲಿ ಕೊಟ್ಟಿದ್ದರಂತೆ. ಅಲ್ಲಿ ನಮ್ಮ ತಂದೆ ಕನ್ನಡ ಅಧ್ಯಾಪಕರಾಗಿದ್ದರು. ಅಂದು ಸಂಜೆ ಆನೇಕಲ್ಲಿನಲ್ಲಿ ವೇದಿಕೆಯಿಂದ ಭಾಷಣ ಮಾಡಿದಾಗ ನಮ್ಮ ತಂದೆ ಹೇಳಿದ ಮಾತುಗಳನ್ನು 'ಎಪ್ಪತ್ತರ ಹೊಸ್ತಿಲಲ್ಲಿ ನಿತ್ಯೋತ್ಸವದ ಕವಿ' ಎಂಬ ಲೇಖನದಲ್ಲಿ ಹೀಗೆ ಬರೆಯುತ್ತಾರೆ: 'ಎಲ್. ಗುಂಡಪ್ಪ ಅಂತ ಗುರುಗಳಿದ್ದರು. ನಮ್ಮ ಎಲ್. ಜಿ. ಸುಮಿತ್ರಾ, ವಿಮಲಾ, ಕಮಲಾ ಅವರ ತಂದೆ. ತುಂಬ ಸಜ್ಜನರು. ಕಾಲೇಜಿನಲ್ಲಿ ನನಗೆ ನೇರ ಗುರುಗಳಲ್ಲದಿದ್ದರೂ ಅವರಿಗೆ ನನ್ನ ಪದ್ಯಗಳನ್ನು ತೋರಿಸಿದ್ದೆ. ಅವರೊಂದು ದಿನ ಆನೇಕಲ್ಲಿನಲ್ಲಿ ನಾಡ ಹಬ್ಬದಲ್ಲಿ ಭಾಷಣ ಮಾಡುತ್ತ 'ನಿಸಾರ್ ಅಹಮದ್ ಅಂತ ಮುಸ್ಲಿಂ ಹುಡುಗ ಎಷ್ಟು ಚೆನ್ನಾಗಿ ಪದ್ಯ ಬರೆಯುತ್ತಾನೆ. ಆತ ನಮ್ಮಲ್ಲೇ ಓದುತ್ತಿದ್ದಾನೆ' ಎಂದು ಹೇಳಿದಾಗ, ಗೆಳೆಯನೊಬ್ಬ 'ಅವರು ಇಲ್ಲೇ ಇದ್ದಾರೆ ಸಾರ್' ಅಂತ ನನ್ನನ್ನು ಮುಂದಕ್ಕೆ ತಳ್ಳಿದ. ಎಲ್ಲರ ಚಪ್ಪಾಳೆಯ ಮಧ್ಯೆ ಒಂದು ಹೊಸ ಜಗತ್ತಿಗೆ ಬಂದ ಹುರುಪು. ಆವತ್ತಿನ ಆ ಅನಾವರಣ ನನ್ನ ಮೇಲೆ ತುಂಬ ಪರಿಣಾಮ ಬೀರಿತು.'

ಈಗ್ಗೆ ಎರಡು ವರ್ಷಗಳ ಹಿಂದೆ ನಮ್ಮ ತಂದೆಯವರ ಜನ್ಮ ಶತಮಾನದ ಸಂದರ್ಭದಲ್ಲಿ ನಿಸಾರರ ಮಾತುಗಳನ್ನು ಧ್ವನಿ ಮುದ್ರಿಸಿಕೊಳ್ಳಲು ಅವರ ಮನೆಗೆ ಹೊರಟಿದ್ದೆವು. ರಿಕ್ಷಾ ಚಾಲಕ ಸುಮಾರು ಓದಿದ್ದವ. ನಿಸಾರರ ಮನೆ ಬರುತ್ತಲೇ ಭಾವಪರವಶನಾದ—'ಇದು 'ನಿತ್ಯೋತ್ಸವ'ದ ಕವಿಯ ಮನೆಯೆ? ಇದನ್ನು ನೋಡಿದ್ದೇ ನನ್ನ ಪುಣ್ಯ' ಎಂದು ಸಂತೋಷದ ಸಂವೇದನೆಗೆ ಒಳಗಾದ. ನಾವು ಈತನ ರಿಕ್ಷಾ ಹತ್ತುವುದಕ್ಕೆ ಮುಂಚೆ, ಈತ


ಒಂದು ಪುಸ್ತಕ ಓದುತ್ತ ಇದ್ದುದನ್ನು ನೋಡಿದ್ದೆವು. ನಿಸಾರರ ಕವಿತೆಗಳ ಕ್ಯಾಸೆಟ್ಟುಗಳನ್ನು ಕೇಳುವುದೇ ಅಲ್ಲದೆ, ಅವರ ಕೆಲವು ಪುಸ್ತಕಗಳನ್ನೂ ಓದಿದ್ದನಂತೆ. ಕೆ. ಎಸ್. ನರಸಿಂಹಸ್ವಾಮಿಯವರಂತೆಯೇ ನಿಸಾರರೂ ಜನ ಮನವನ್ನು ಗೆದ್ದ ಕವಿ. ಎಲ್ಲ ವರ್ಗಗಳ, ಎಲ್ಲ ವಯೋಮಾನದವರ ಮನಸ್ಸನ್ನು ಮುಟ್ಟುವಂತಹ ಸಹಜ ಕವಿ.

ನಾನು ಬೆಂಗಳೂರು ಆಕಾಶವಾಣಿಗೆ ಹಿಂತಿರುಗಿ 'ಸಾಹಿತ್ಯ ಸಂಚಿಕೆ'ಯ ಪ್ರಸಾರ ನಿರ್ವಹಣೆಯನ್ನು ಮಾಡುವ ಹೊತ್ತಿಗೆ ಲಂಕೇಶ್, ನಿಸಾರ್, ಸುಮತೀಂದ್ರ ನಾಡಿಗ್ ಸಾಹಿತ್ಯಕವಾಗಿ ಬೇರೆ ಬೇರೆ ದಿಕ್ಕುಗಳಲ್ಲಿ ಬೆಳೆದಿದ್ದರು. ನವ್ಯ ಕಾವ್ಯದ ಸಾರ್ವಭೌಮ ಕಾಲ ಅದು. ನಿಸಾರರಿಗೆ ಸಿಗಬೇಕಾದಷ್ಟು ಮನ್ನಣೆ ಸಿಕ್ಕಿರಲಿಲ್ಲ ಅನ್ನಿಸುತ್ತಿತ್ತು ನನಗೆ. ಮೊನ್ನೆ ಮೊನ್ನೆ ವಿಮರ್ಶಕರೊಬ್ಬರು ಬರೆದ ಹಾಗೆ ಎಕ್ಕುಂಡಿ ಮುಂತಾದ ಕವಿಗಳನ್ನೂ ಸರಿಯಾಗಿ ಗುರುತಿಸದಿದ್ದ ಕಾಲ ಅದು. ಆದರೂ ಕಾಲೇಜಿನಲ್ಲಿ ಜಿಯಾಲಜಿ ಪಾಠವನ್ನು ಹೇಳುತ್ತಲೇ ನಿಸಾರರು ಕವಿಯಾಗಿ, ವಿಮರ್ಶಕರಾಗಿ ಗಮನಾರ್ಹವಾಗಿ ಬೆಳೆದಿದ್ದರು. ಮುಂದೆ ಅವರು ಎಷ್ಟು ಬೆಳೆದರು ಎಂಬುದಕ್ಕೆ ಅವರು ಗಳಿಸಿರುವ ಪ್ರಶಸ್ತಿ ಸನ್ಮಾನಗಳ ನಿಡಿದಾದ ಯಾದಿಯೇ ಸಾಕ್ಷಿ.

ನಿಸಾರ್ 'ನಿತ್ಯೋತ್ಸವ'ದ ಭಾವುಕ ಕವಿ. 'ಕುರಿಗಳು ಸಾರ್'ನ ಚಿಂತಕ. ಆಂಧ್ರದಲ್ಲಿ ಹೆಸರಾಂತ ಕವಿಗಳು ಗೇಯ ಗುಣವುಳ್ಳ ಕವಿತೆಗಳನ್ನು ಸಿನಿಮಾಗಳಿಗೆ ಬರೆದುಕೊಟ್ಟೂ ಉತ್ತಮಿಕೆಯ ಹೆಸರು ಮಾಡುತ್ತಿದ್ದ ಕಾಲದಲ್ಲಿ, ಇಲ್ಲಿ ಕರ್ನಾಟಕದಲ್ಲಿ ಗೇಯಗುಣ ಉಳ್ಳ ಕವಿತೆಗಳನ್ನು ಬರೆದವರು ಉತ್ತಮ ಕವಿಗಳೇ ಅಲ್ಲ ಎನ್ನುವಂತೆ ವ್ಯಂಗ್ಯ ಮಾಡಿದವರುಂಟು. ಅತಿರೇಕದ, ವ್ಯಂಗ್ಯದ ಮಾತುಗಳು ಬಹಳ ಕಾಲ ನಿಲ್ಲುವುದಿಲ್ಲ. ನಿಸಾರರ ಒಟ್ಟು ಸಾಹಿತ್ಯ ಹಾಗೂ ಅದರ ಒಂದು ಮುಖ್ಯ ಭಾಗವಾದ ಗೇಯತೆಯ ಕಾವ್ಯ ಗುಣಕ್ಕಾಗಿ ಅವರಿಗೆ ವಿದ್ವತ್ ಮನ್ನಣೆ, ಅನುಪಮ ಜನಪ್ರಿಯತೆ ಎರಡೂ ಸಂದಿವೆ. ಮೆಲು ಮಾತಿನಲ್ಲೂ ಚಿಂತನೆಯ ಸಾಧ್ಯತೆಗಳನ್ನು ಕಂಡುಕೊಂಡಿರುವ ನಿಸಾರರದು ಮನುಜ ಮತ. ಅವರಿಂದ ಇನ್ನೂ ಎತ್ತರದ ಸಾಹಿತ್ಯ ರಚನೆಯನ್ನು ಅವರ ಸಹ ವಿದ್ಯಾರ್ಥಿನಿಯಾಗಿದ್ದ ನಾನು ನಿರೀಕ್ಷಿಸುತ್ತೇನೆ, ಹಾರೈಸುತ್ತೇನೆ. ಅವರಿಗೆ ಕನ್ನಡ ತಾಯಿಯ ಕೃಪಾಶೀರ್ವಾದ ಇರಲಿ. ಅವರಿಗೆ ಶುಭವನ್ನು ಕೋರುತ್ತೇನೆ.

ರೈಲು ಗಾಡಿ ನಿರ್ವಿಘ್ನವಾಗಿ ಸಾಗಬೇಕಾದರೆ ಹೇಗೆ ಜೋಡಿ ಹಳಿ ಅಗತ್ಯವೋ ಮತ್ತು ಅವು ಒಂದನ್ನೊಂದು ತಕ್ಕೈಸಿಕೊಳ್ಳದೆ ಒಂದು ನಿರ್ದಿಷ್ಟ ಅಳತೆಯ ಸಮಾನ ದೂರತೆಯನ್ನು ಕಾಪಾಡಿಕೊಳ್ಳಬೇಕೋ ಹಾಗೆಯೇ ಕಾವ್ಯದಲ್ಲಿ ವಿಚಾರ-ಭಾವಗಳ ಸಹಗೂಡಿಕೆಯ ವಿಷಯ ಕೂಡ. ವಿಭಿನ್ನ ಸ್ವಭಾವಿಗಳಾದ ಇವು ಸಮುಚಿತ ಪ್ರಮಾಣದಲ್ಲಿ ಸಮನಿತವಾಗಿರಬೇಕು. ಹಾಗಿಲ್ಲದಿದ್ದರೆ ಕಾವ್ಯ ಓದುಗನ ಹೃದಯದಲ್ಲಿ ಸುಗಮ ಪ್ರಚಲನೆ ಪಡೆಯುವುದು ದುಸ್ತರ.

(ವಿಚಾರ-ಭಾವ ಬಾಂಧವ್ಯ)



ನಮ್ಮನ್ನು ರೂಪಾರಿಸಿದ ಗುರುವರ್ಯ ನಿಸಾರ್

◆ *ಪ್ರೊ. ಎಸ್. ಬಿ. ರಂಗನಾಥ್*
(ವಿದ್ಯಾರ್ಥಿ)

೧೯೫೯-೬೦ರಲ್ಲಿ ನಾನು ಚಿತ್ರದುರ್ಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ. ವಿದ್ಯಾರ್ಥಿ. ದಾವಣಗೆರೆಯ ಡಿ.ಆರ್.ಎಂ. ಕಾಲೇಜಿನಲ್ಲಿ ಪಿ.ಯು.ಸಿ. ಮುಗಿಸಿದ್ದ ನಾನು ದುಬಾರಿ ಹಾಗೂ ವ್ಯಾಪಾರೀ ನಗರವೆಂದು ದಾವಣಗೆರೆಯನ್ನು ಬಿಟ್ಟು ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವೆಂದು ಚಿತ್ರದುರ್ಗಕ್ಕೆ ಹೋಗಿದ್ದೆ. ಕುಗ್ರಾಮವೊಂದರ ಶುದ್ಧ ಹಳ್ಳಿ ಹುಡುಗನಾಗಿದ್ದ ನನಗೆ ದಾವಣಗೆರೆ-ಚಿತ್ರದುರ್ಗಗಳೇ ಬೆಂಗಳೂರು-ಮೈಸೂರುಗಳಾಗಿದ್ದ ಕಾಲವದು.

ಅದು ಜಿಲ್ಲೆಯ ಒಂದೇ ಸರ್ಕಾರಿ ಕಾಲೇಜಾಗಿದ್ದುದರಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತ್ತು. ಕಾಲೇಜಿನ ಹೊಸ ಕಟ್ಟಡ ಪೂರ್ತಿ ಆಗಿರಲಿಲ್ಲ. ಹೀಗಾಗಿ ನಮ್ಮ ಕೆಲವು ತರಗತಿಗಳು ಈಗಿನ ನಗರಸಭಾ ಕಟ್ಟಡ(ಆಗಿನ ಕೆಮಿಸ್ಟ್ರಿ ಬ್ಲಾಕ್)ದಲ್ಲಿ ನಡೆಯುತ್ತಿದ್ದವು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಪದವಿ ಪಡೆದು ಬಂದಿದ್ದ ಪ್ರೊ. ಎಲ್. ಎಸ್. ರಾಮರಾವ್ ಅವರು ನಮ್ಮ ಪ್ರಿನ್ಸಿಪಾಲರು. ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರದ ವಿದ್ಯಾರ್ಥಿಗಳಾಗಿದ್ದ ನಾವು ಉತ್ತಮ ಉಪನ್ಯಾಸಕ ವರ್ಗವನ್ನು ಹೊಂದಿದ್ದ ಅದೃಷ್ಟಶಾಲಿಗಳಾಗಿದ್ದೆವು. ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದ ಶ್ರೀ ಕೆ. ಬಿ. ಪಾಲಯ್ಯನವರು, ಶ್ರೀ ಎಸ್. ಆರ್. ವಿಜಯ್ ಅವರು (ಇವರು ಅನಂತರ ಐ.ಎ.ಎಸ್.

ಪಾಸು ಮಾಡಿ ಉನ್ನತ ಸರ್ಕಾರಿ ಅಧಿಕಾರಿಗಳಾದವರು) ರಾಜ್ಯಶಾಸ್ತ್ರದ ಶ್ರೀ ನಾರಾಯಣ್ ಅವರು, ಇಂಗ್ಲಿಷ್‌ನ ಶ್ರೀ ಎಚ್. ಜಿ. ಸೂರ್ಯನಾರಾಯಣ ರಾವ್ ಅವರು, ಶ್ರೀ ಜಿ. ಪುಟ್ಟಸ್ವಾಮಿ ಅವರು, ಕನ್ನಡದ ಶ್ರೀ ಜಿ. ಗುಂಡಣ್ಣನವರು ಮತ್ತು ಶ್ರೀ ಕೆ. ನಾಗೇಂದ್ರಪ್ಪನವರು ಹಾಗೂ ಶ್ರೀ ಜೆ. ಎಸ್. ಪರಶಿವಮೂರ್ತಿ ಅವರು ಥಟ್ಟನೆ ನೆನಪಾಗುತ್ತಾರೆ. ಈ ಗುಂಪಿಗೆ ೧೯೬೦ರಲ್ಲಿ ವರ್ಗವಾಗಿ ಬಂದು, ಭೂ ವಿಜ್ಞಾನಶಾಸ್ತ್ರದ ಉಪನ್ಯಾಸಕರಾಗಿ ಸೇರ್ಪಡೆಗೊಂಡವರೇ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು.

ಆಗಿನ ಪಠ್ಯ ನಿಯಮದ ಪ್ರಕಾರ ಹೆಚ್ಚುವರಿ ವಿಷಯವಾಗಿ ಕಲಾ ವಿಭಾಗದ ವಿದ್ಯಾರ್ಥಿಗಳು ಸಾಮಾನ್ಯ ವಿಜ್ಞಾನವನ್ನೂ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಸಾಮಾಜಿಕ ವಿಜ್ಞಾನವನ್ನೂ ಓದಬೇಕಾಗಿತ್ತು. ನಮಗೆ ಪ್ರೊ. ನಿಸಾರ್ ಅಹಮದ್ ಅವರು ಭೂ ವಿಜ್ಞಾನದ ಪಾಠ ಮಾಡಿದ್ದು ಕೆಲವೇ ತಿಂಗಳು ಮಾತ್ರ. ಆದರೂ ಅವರು ಎಷ್ಟು ಆಕರ್ಷಕವಾಗಿ ಪಾಠ ಹೇಳುತ್ತಿದ್ದರೆಂದರೆ ನಾನು ಎಂದೂ ಅವರ ತರಗತಿಗೆ ಚಕ್ಕರ್ ಹೊಡೆದ ನೆನಪಿಲ್ಲ. ಅತ್ಯಂತ ಕ್ಲಿಷ್ಟ ವಿಷಯಗಳನ್ನೂ ಅವರು ನಮಗೆ ಮನದಟ್ಟು ಮಾಡಿಸುತ್ತಿದ್ದ ರೀತಿ ಅಷ್ಟು ಪರಿಣಾಮಕಾರಿಯಾಗಿರುತ್ತಿತ್ತು. ಭೂಕಂಪ, ಜ್ವಾಲಾಮುಖಿ, ಶಿಲಾ ಪ್ರಭೇದಗಳು ಮುಂತಾದ ವಿಷಯಗಳನ್ನು ಅವರು ಆರ್ಟ್ಸ್ ವಿದ್ಯಾರ್ಥಿಗಳಾಗಿದ್ದ ನಮ್ಮ ಹೆಡ್ಡ ತಲೆಗಳಲ್ಲಿ ಅತ್ಯಂತ ಕೌಶಲದಿಂದ ತುಂಬುತ್ತಿದ್ದರು—ನೋವಾಗದಂತೆ ಕಿವಿ ಚುಚ್ಚುವ ಅಕ್ಕಸಾಲಿಗನಂತೆ!

ಆಗಿನ್ನೂ ನಿಸಾರರಿಗೆ ಕೇವಲ ಇಪ್ಪತ್ತೆರಡೋ, ಇಪ್ಪತ್ತಮೂರೋ ವರ್ಷ. 'ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯದ ಗುಂಗು ಹಚ್ಚಿಕೊಂಡವರು; ಹದಿ ವಯಸ್ಸಿನಲ್ಲೇ ಕವಿ ಸಮ್ಮೇಳನದಲ್ಲಿ ಪದ್ಯ ಓದಿ ವರ ಕವಿ ಬೇಂದ್ರೆಯವರಿಂದ ಬೆನ್ನು ತಟ್ಟಿಸಿಕೊಂಡವರು'—ಮುಂತಾಗಿ ವಿದ್ಯಾರ್ಥಿಗಳು ಅವರನ್ನು ಕುರಿತು ಮಾತಾಡಿಕೊಳ್ಳುತ್ತಿದ್ದರು. ಸಾಹಿತ್ಯದಲ್ಲಿ ಸ್ವಲ್ಪ ಆಸಕ್ತಿ ಇದ್ದ ನಾನು ಸಹಜವಾಗಿಯೇ ಅವರತ್ತ ಆಕರ್ಷಿತನಾಗಿದ್ದೆ. ಆಗ ನಮಗೆ ಪಠ್ಯವಾಗಿದ್ದ ಕುವೆಂಪು ಅವರ ವಿಮರ್ಶಾ ಲೇಖನಗಳ ಸಂಕಲನ 'ತಪೋನಂದನ' ನಮ್ಮ ಪಾಲಿಗೆ ಕಬ್ಬಿಣದ ಕಡಲೆಯಾಗಿತ್ತು. ನಾನು ನನ್ನ ಗೆಳೆಯರೊಡನೆ ನಿಸಾರರ ಕೊಠಡಿಗೆ ಹೋದಾಗ 'ತಪೋನಂದನ'ದ ಬಗ್ಗೆ ಅವರು ವಿವರಿಸಿದುದನ್ನು ಕಂಡು ನಾವು ದಂಗಾಗಿ ಹೋಗಿದ್ದೆವು! ಉರ್ದು ಮನೆ ಮಾತಾದ ಮುಸ್ಲಿಂ ಯುವಕ—ಓದಿರುವುದು ಭೂವಿಜ್ಞಾನ—ಅದಮ್ಯ ಆಸಕ್ತಿ ಸಾಹಿತ್ಯದಲ್ಲಿ!—ಇದು ಆಗ ಕನ್ನಡದಲ್ಲಿ ಮುಸ್ಲಿಂ ಜನಾಂಗದ ಕೇವಲ ಒಂದಿಬ್ಬರಷ್ಟೇ ಲೇಖಕರಿದ್ದ ಕಾಲದಲ್ಲಿ ನಮಗೆ ಬಿಡಿಸಲಾಗದ ಒಗಟಾಗಿತ್ತು. ಪ್ರೊ. ನಿಸಾರರ ಜೊತೆ ಸಂಜೆ ಸುತ್ತಾಡಲು ಹೋಗುತ್ತಿದ್ದಾಗ ಈ ಬಗ್ಗೆ ನಮ್ಮ ಪ್ರಶ್ನೆಗಳಿಗೆ ಅವರು ಗಂಭೀರವಾಗಿ ಉತ್ತರಿಸುತ್ತಿದ್ದರು— 'ನನಗೆ ಚಿಕ್ಕಂದಿನಲ್ಲೇ ಸಾಹಿತ್ಯದತ್ತ ಆಕರ್ಷಣೆ ಹುಟ್ಟುವಂತೆ ಮಾಡಿದವರು ನನ್ನ ತಂದೆಯವರು. ಸರ್ಕಾರೀ ನೌಕರಿಯಲ್ಲಿದ್ದ ಅವರು ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತವನ್ನು ತಕ್ಕಮಟ್ಟಿಗೆ ಬಲ್ಲ ಸುಸಂಸ್ಕೃತರು. ಅವರೇ ನನ್ನ ಮೊದಲ ಸಾಹಿತ್ಯದ ಗುರು. ಅವರು ಬಣ್ಣಿಸುತ್ತಿದ್ದ

'ಅರೇಬಿಯನ್ ನೈಟ್ಸ್' ಕಥೆಗಳಿಂದ ನನ್ನ ಕಲ್ಪಕ ಶಕ್ತಿ ವೃದ್ಧಿಸಿತು.'

ಅತ್ಯಂತ ಸುಸಂಸ್ಕೃತರೂ ಮೃದುಭಾಷಿಗಳೂ, ಸೌಜನ್ಯ-ಸೌಮ್ಯತೆಯ ಸರಳ ಸಜ್ಜನರೂ ಆಗಿದ್ದ ನಿಸಾರ್ ಅವರು ಹಳ್ಳಿಗಳಿಂದ ಬಂದಿದ್ದ ನಮ್ಮಂತಹ ಹುಡುಗರಿಗೆ ಆದರ್ಶ ವ್ಯಕ್ತಿಯಾಗಿ ಕಂಡಿದ್ದರು. ಕಾಲೇಜಿನ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವರದು ಸಕ್ರಿಯ ಪಾತ್ರ. ಸ್ಕೌಟ್ ಅವರಿಗೆ ಪ್ರಿಯವಾಗಿತ್ತು. ಆಗ ಪ್ರಚಲಿತವಿದ್ದ ಎಂ.ಜಿ.ಎಸ್. ಸ್ಮಾರಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವರು ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಿದ್ದರು. ಇತರ ಕೆಲವು ಉಪನ್ಯಾಸಕರಂತೆ ಅವರು ವಿದ್ಯಾರ್ಥಿಗಳೊಡನೆ ಎಂದೂ ಲಘುವಾಗಿ ವರ್ತಿಸಿದವರಲ್ಲ.

ಉತ್ತಮ ಭಾಷಣಕಾರರಾಗಿದ್ದ ಅವರನ್ನು ಸಭೆ ಸಮಾರಂಭಗಳಿಗೆ ಬರಬೇಕೆಂದು ಸಂಘಟಕರು ಬಂದು ಕಾಡುತ್ತಾ ಗಂಟು ಬೀಳುತ್ತಿದ್ದರೂ ಅವರು ಒಪ್ಪಿಕೊಳ್ಳುತ್ತಿದ್ದುದು ಕೇವಲ ಕೆಲವನ್ನು ಮಾತ್ರ. ಅವರು ಚಿತ್ರದುರ್ಗದಲ್ಲಿದ್ದ ಎರಡು ವರ್ಷಗಳಲ್ಲಿ (೧೯೬೦-೬೨) ಜಗಳೂರು, ಹಿರಿಯೂರು, ಚಳ್ಳಕೆರೆ, ಯರಬಳ್ಳಿ ಮುಂತಾದ ಕಡೆ ಸಭೆ ಸಮಾರಂಭಗಳಿಗೆ ಹೋಗಿದ್ದ ನೆನಪು. ೧೯೬೧ರಲ್ಲಿ ಚಿತ್ರದುರ್ಗ ನಗರ ಸಭಾಧ್ಯಕ್ಷ(ಶ್ರೀ ಶಾಮರಾವ್)ರೊಡನೆ ಹಾಗೂ ಸಹೋದ್ಯೋಗಿಗಳಾಗಿದ್ದ ಶ್ರೀ ಜೆ. ಎಸ್. ಪರಶಿವಮೂರ್ತಿ ಯವರೊಡನೆ ಅವರು ಸಿರಿಗೆರೆಗೆ ಹೋದಾಗ ಮಾಡಿದ್ದ ಭಾಷಣ ಅತ್ಯಂತ ರೋಚಕವಾಗಿ ತ್ತೆಂದು ಅನಂತರದ ಕಾಲದಲ್ಲಿ, ನಾನು ಆ ಊರಿನಲ್ಲಿ ಅಧ್ಯಾಪಕನಾಗಿ ಸೇರಿಕೊಂಡಾಗ ತಿಳಿದು ಬಂದಿತ್ತು.

ನಾನು ಅಧ್ಯಾಪಕನಾಗಿ ವೃತ್ತಿಜೀವನ ಆರಂಭಿಸಿದ ಮೇಲೆ ಬೇರೆ ಬೇರೆ ಕಡೆ ಹೋದಂತೆಯೇ ನಿಸಾರರು ಬೆಂಗಳೂರು, ಶಿವಮೊಗ್ಗ ಮುಂತಾದ ಕಡೆ ಕೆಲಸದ ಬೆನ್ನು ಹತ್ತಿ ಓಡಾಡಿದರು. ಅವರ ಕವನ ಸಂಕಲನಗಳು ಪ್ರಕಟವಾಗುತ್ತಿದ್ದಂತೆ ಹೆಚ್ಚುತ್ತಿದ್ದ ಅವರ ಜನಪ್ರಿಯತೆಯನ್ನು ಕಂಡು ನಾವು ಒಳಗೊಳಗೇ ಹಿಗ್ಗುತ್ತಿದ್ದೆವು. ನಾವು ಕೆಲಸ ಮಾಡಿದ ಶಾಲೆ-ಕಾಲೇಜುಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಂತೂ ಅವರ ಸುಪ್ರಸಿದ್ಧ ಕವನ 'ನಿತ್ಯೋತ್ಸವ' ('ಜೋಗದ ಸಿರಿ ಬೆಳಕಿನಲ್ಲಿ...') ಇದ್ದೇ ಇರುತ್ತಿತ್ತು. ಸಾಹಿತ್ಯ ಸಮ್ಮೇಳನಗಳಲ್ಲಿ, ಕವಿಗೋಷ್ಠಿಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಅವರನ್ನು ನೋಡಲು, ಅವರ ಕವನ ವಾಚನ ಕೇಳಲು ಸಿಕ್ಕ ಅವಕಾಶಗಳನ್ನು ನಾನು ಎಂದೂ ಕಳೆದು ಕೊಳ್ಳುತ್ತಿರಲಿಲ್ಲ. ಮಡಿಕೇರಿ ಸಾಹಿತ್ಯ ಸಮ್ಮೇಳನ(೧೯೮೧)ದ ಸಂದರ್ಭದಲ್ಲಿ ನಾನು ಅವರೊಡನೆ ತೆಗೆಸಿಕೊಂಡ ಫೋಟೋದಲ್ಲಿ ಸೊಗಸಾದ ಸೂಟಿನಲ್ಲಿರುವ ಅವರು ನವ ಯುವಕರನ್ನೂ ಮೀರಿಸುವಂತಿದ್ದಾರೆ! ನಮ್ಮ ಮನೆಗೆ ಹಾಗೂ ನನ್ನ ಮಗನ ಮದುವೆಗೆ ಅವರು ಬಂದಾಗ ತೆಗೆಸಿರುವ ಫೋಟೋಗಳನ್ನು ನನ್ನ ಮಕ್ಕಳು, ಮೊಮ್ಮಕ್ಕಳು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿಕೊಂಡಿದ್ದಾರೆ. ಕೆಲವು ಶಿಕ್ಷಕ ಮಿತ್ರರಂತೂ ತರಗತಿಗಳಲ್ಲಿ ನಿಸಾರರ ಪದ್ಯಗಳನ್ನು ಮಾಡುವಾಗ ಆ ಭಾವಚಿತ್ರಗಳನ್ನು ಪಾಠೋಪಕರಣಗಳನ್ನಾಗಿ ಬಳಸಲೂ ಹಿಂದೆಗೆಯುತ್ತಿರಲಿಲ್ಲ!

ತಮ್ಮ ತಂದೆಯವರು ಮತ್ತು ತಮ್ಮ ಗುರುಗಳಾದ ಶ್ರೀ ಎಲ್. ಗುಂಡಪ್ಪ, ಶ್ರೀ ಜಿ. ಪಿ. ರಾಜರತ್ನಂ, ಶ್ರೀ ವಿ.ಸೀ. ಅವರು ನಿಸಾರರಲ್ಲಿ ಕನ್ನಡ ಕಾವ್ಯಾಸಕ್ತಿ ಬೆಳೆಯಲು ಕಾರಣ ರಾದಂತೆ, ನನ್ನಂತಹ ಅನೇಕರಲ್ಲಿ ಸಾಹಿತ್ಯಾಭಿರುಚಿ ಬೆಳೆಯಲು ಪ್ರೊ. ನಿಸಾರರು ಕಾರಣ ರಾಗಿದ್ದಾರೆ. ಅವರ ಸ್ಫೂರ್ತಿ-ಮಾರ್ಗದರ್ಶನ ಇಲ್ಲದಿದ್ದಲ್ಲಿ ಖಂಡಿತವಾಗಿಯೂ ಪದವಿ ತರಗತಿಯಲ್ಲಿ ಕನ್ನಡ ವಿಷಯವನ್ನು ಪ್ರಧಾನವಾಗಿ ಓದದ ನಾನು, ಅದನ್ನು ಬಾಹ್ಯ ವಿದ್ಯಾರ್ಥಿಯಾಗಿ ಅಭ್ಯಸಿಸಿ, ಸ್ನಾತಕೋತ್ತರ ಪದವಿ ಪಡೆದು ಕನ್ನಡದ ಮೇಷ್ಟ್ರು ಆಗಿ ಪರಿವರ್ತನೆ ಹೊಂದುತ್ತಿರಲಿಲ್ಲ. ನನ್ನ ಮೇಲಿನ ಪ್ರೊ. ನಿಸಾರರ ಶಿಷ್ಯ ವಾತ್ಸಲ್ಯದ ಆಳ ಹಾಗೂ ಹರವು ಅಗಾಧ. ಸಿಕ್ಕಾಗಲೆಲ್ಲ, 'ಏನಯ್ಯಾ, ವಿದ್ಯಾರ್ಥಿಮಿತ್ರಾ, ಹೇಗಿದ್ದೀಯಪ್ಪಾ?' ಎಂದು ಮಾತಿಗಾರಂಭಿಸಿ ನನ್ನ ಸ್ನೇಹಿತರ ಹಾಗೂ ನನ್ನ ಕುಟುಂಬದ ಸದಸ್ಯರೆಲ್ಲರ ಹೆಸರು ಹೇಳಿ ಅವರ ಕುಶಲ ವಿಚಾರಿಸಿದಾಗಲೇ ಅವರಿಗೆ ತೃಪ್ತಿ. ಸೆಂಟ್ರಲ್ ಕಾಲೇಜಿನಲ್ಲಿ ಅವರಿಗೆ ಭೂ ವಿಜ್ಞಾನದ ಪಾಠ ಹೇಳಿದ್ದ ಪ್ರೊ. ಗುರಪ್ಪನವರೊಡನೆ ನಮ್ಮ ನೆಂಟಸ್ತನವಾದ ಮೇಲೆ ನಿಸಾರರಿಗೆ ನನ್ನ ಕುಟುಂಬದ ಎಲ್ಲ ಸದಸ್ಯರ ನಿಕಟ ಪರಿಚಯ ಉಂಟಾಗಿತ್ತು.

ಸಭೆ ಸಮಾರಂಭಗಳಿಗೆ ಬರಲು ನಾನು ನೀಡುತ್ತಿದ್ದ ಆಹ್ವಾನವನ್ನು ಮೊದ ಮೊದಲು ನಯವಾಗಿ ನಿರಾಕರಿಸುತ್ತಿದ್ದ ಅವರು, ನನ್ನ ಒತ್ತಾಯಕ್ಕೆ ಮಣಿದು ಕೊನೆಗೆ ಒಪ್ಪಿಕೊಳ್ಳುತ್ತಿದ್ದರು—ಅಥವಾ ನಾನು ಅವರನ್ನು ಒಪ್ಪಿಸದೇ ಬಿಡುತ್ತಿರಲಿಲ್ಲ ಎನ್ನುವುದೇ ಹೆಚ್ಚು ಸೂಕ್ತ! ೧೯೭೯ರಲ್ಲಿ ಸಿರಿಗೆರೆಯಲ್ಲಿ ನಡೆದ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಭಿಷೇಕದ ಸಂದರ್ಭದಲ್ಲಿ ಏರ್ಪಡಿಸಿದ್ದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರಲ್ಲದೆ, ಚನ್ನಗಿರಿಯಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವ, ಬೆಂಗಳೂರು ತರಳಬಾಳು ಕೇಂದ್ರದಲ್ಲಿ ನಡೆದ ಬೆಳುದಿಂಗಳ ಕವಿಗೋಷ್ಠಿ ಮುಂತಾದ ಹಲವಾರು ಕಾರ್ಯಕ್ರಮಗಳಲ್ಲಿ ಅವರು ಭಾಗಿಗಳಾಗಿದ್ದಾರೆ.

ನನ್ನ ಸಾಹಿತ್ಯ ಕೃತಿಗಳ ಪ್ರಕಟಣೆಗೆ ಬೆನ್ನೆಲುಬಾದವರು ಪ್ರೊ. ನಿಸಾರರು. ಅವರ ಪ್ರೋತ್ಸಾಹ-ಮಾರ್ಗದರ್ಶನವಿಲ್ಲದಿದ್ದರೆ ನನ್ನ ಅನುವಾದಿತ ಕಾದಂಬರಿ 'ಟಿಪ್ಪು ಸುಲ್ತಾನನ ಖಡ್ಗ' (Sword of Tipu Sultan) (೧೯೯೦) ಖಂಡಿತವಾಗಿಯೂ ಬೆಳಕು ಕಾಣುತ್ತಿರಲಿಲ್ಲ. ಅದಕ್ಕೆ ನಿಸಾರರು ಬರೆದಿರುವ ಮುನ್ನುಡಿ ಅತ್ಯಂತ ಮೌಲಿಕವಾದುದು. ಇದನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ-ಲೇಖಕ ಡಾ. ರಹಮತ್ ತರೀಕೆರೆ ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ ಬಳಸಿಕೊಂಡಿರುವ ನೆನಪು. ಶ್ರೀ ತರಳಬಾಳು ಜಗದ್ಗುರು ಬೃಹನ್ಮಠವು ಪ್ರೊ. ನಿಸಾರರ ಮಹತ್ವಾಕಾಂಕ್ಷಿ ಕೃತಿ 'ಸಮಗ್ರ ಕವಿತೆಗಳು' (೧೯೯೧) ಅನ್ನು ಪ್ರಕಟಿಸಿದಾಗ ನನ್ನಿಂದಾದ ಕಡ್ಡಿಯಷ್ಟು ನೆರವನ್ನೇ ಗುಡ್ಡವೆಂಬಂತೆ ಹೊಗಳಿ ಅಟ್ಟಕ್ಕೇರಿಸಿದ ಅವರ ಔದಾರ್ಯಕ್ಕೆ ಎಣೆಯುಂಟೆ? ಕವಯತ್ರಿ ಎಂ.ಆರ್. ಕಮಲ, ನಿಸಾರರು '...ಬೇರೆಯವರಂತಲ್ಲ! ಹೊಗಳಿಕೆ... ಹೇರುವವರು' ಎಂದು ಹೇಳಿ ನಿಸಾರರ ನಿಕಟವರ್ತಿಗಳೆಲ್ಲರ ಭಾವನೆಗಳಿಗೆ ಸರಿಯಾಗಿ ದನಿ ನೀಡಿದ್ದಾರೆ.

ಪ್ರೊ. ನಿಸಾರರು ಕನ್ನಡ ಕಾವ್ಯ, ವಿಮರ್ಶೆ, ವಿಚಾರ ಸಾಹಿತ್ಯ, ಅನುವಾದ, ಮಕ್ಕಳ ಸಾಹಿತ್ಯ, ಸಂಪಾದನೆ ಕ್ಷೇತ್ರಗಳಿಗೆ ಅಚ್ಚಳಿಯದ ಕೊಡುಗೆ ನೀಡಿದ್ದಾರೆ. ನವೋದಯ ಮತ್ತು ನವ್ಯ ಕಾವ್ಯ ಪರಂಪರೆಗೆ ಗಣನೀಯ ಸತ್ವವನ್ನು ಸೇರಿಸಿದ ಹೆಗ್ಗಳಿಕೆ ಅವರದು. ಕನ್ನಡ ಸಾರಸ್ವತ ಲೋಕದಲ್ಲಿ ಸಕ್ರಿಯವಾಗಿರುವ ಕೆಲವೇ ಹಿರಿಯರಲ್ಲಿ ಅವರದು ಎದ್ದು ಕಾಣುವ ವ್ಯಕ್ತಿತ್ವ. ಪ್ರಾಧ್ಯಾಪಕ ವೃತ್ತಿಯಿಂದ ಅವರು ನಿವೃತ್ತಿಗೊಂಡು ಹನ್ನೆರಡು ವರ್ಷ ಮುಗಿದಿದ್ದರೂ ಸಾಹಿತ್ಯ ಕೃಷಿಯಲ್ಲಿ ಸದಾ ಪ್ರವೃತ್ತರು. ನಿವೃತ್ತಿಯನ್ನೂ ಒಂದು ಪ್ರವೃತ್ತಿಯನ್ನಾಗಿ ಮಾರ್ಪಡಿಸಿಕೊಳ್ಳುವ ಕಲೆಗಾರಿಕೆ ಅವರಿಗೆ ಕರಗತವಾಗಿದೆ. ನಿವೃತ್ತಿಯನ್ನು ಕುರಿತು ಅವರ ನಿಲವು ಅತ್ಯಂತ ಸುಸ್ಪಷ್ಟ—'ಮಹಾಚೇತನರಿಗೆ, ಬಾಳನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಅನುಭವಿಸುವ ಅಭ್ಯಾಸವುಳ್ಳವರಿಗೆ ತೇಜಶ್ಶಾಲಿ ಕವಿ ಕಲೆಗಾರರಿಗೆ ನಿವೃತ್ತಿಯ ಕಾಲವೇ ಅತ್ಯಂತ ವೃತ್ತಿಪರ ಕಾಲವೆಂಬುದಕ್ಕೆ ಲೋಕ ಚರಿತ್ರೆಯಲ್ಲಿ ಅಸಂಖ್ಯ ಉದಾಹರಣೆಗಳು ಸಿಕ್ಕುತ್ತವೆ. ಪ್ರಶಮನಗೊಂಡ ಪ್ರವೃತ್ತಿಗಳ ಪ್ರಕಾಶಕ್ಕೆ ನಿವೃತ್ತಿಗಿಂತ ಪ್ರಶಸ್ತವಾದ ಪ್ರವರ್ಧಮಾನ ಕಾಲ ಮತ್ತೊಂದಿಲ್ಲ. ಸಮಾಜದ ದಿನಂಪ್ರತಿಯ ಸಂಸರ್ಗ, ವಿಧಿ ನಿಯಮಗಳ ಕೋಳಗಳಿಂದ ಬಿಡುತೆಗೊಂಡು ಸಂಗವಿದೂರವಾದ ಚೇತನ ಏಕಾಂತದ ನಿಸ್ತರಂಗಾವಸ್ಥೆಯಲ್ಲಿ ಮುಂಚಿಗಿಂತ ಹೆಚ್ಚು ತಿಳಿಗೊಳ್ಳುತ್ತದೆ; ಸಾಂದ್ರವಾಗಿ ಹುರಿಗೊಂಡು ಸೃಜನಶೀಲವಾಗುತ್ತದೆ.'

ಎಪ್ಪತ್ತೊಂದರಲ್ಲಿ ಸಾಗುತ್ತಿರುವ ಈ ಧೀಮಂತ ಕವಿ ಚೇತನಕ್ಕೆ ಅವರ ಅಪಾರ ಅಭಿಮಾನಿಗಳು ಹಾಗೂ ಶಿಷ್ಯವರ್ಗದಿಂದ ಇದೀಗ ಅಭಿನಂದನೆ ಹಾಗೂ ಅಭಿನಂದನ ಗ್ರಂಥ ಸಮರ್ಪಣೆ. ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಂದ ಪುರಸ್ಕೃತರಾಗಿರುವ ನಾಡೋಜ ಪ್ರೊ. ನಿಸಾರರಿಗೆ ಈಗಿನದು ಇವೆಲ್ಲಕ್ಕಿಂತ ಭಿನ್ನವಾದ ಪುರಸ್ಕಾರ. ಬನ್ನಿ ನಾವೂ ಈ ಸಂಭ್ರಮದಲ್ಲಿ ಭಾಗಿಗಳಾಗೋಣ; ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸೋಣ; ಕವಯತ್ರಿ ಎಂ.ಆರ್. ಕಮಲ ಅವರ ಜೊತೆಗೂಡಿ ನಾವೂ ಅವರಿಗೆ ಅಭಿನಂದನೆ ಸಲ್ಲಿಸೋಣ—'ಎಪ್ಪತ್ತರ ದಶಕದಲ್ಲಿ ಇಪ್ಪತ್ತರ ಹುಡುಗಿಯ / ಮನದಂಗಳದಲ್ಲಿ ಕಾವ್ಯದ ಬಳ್ಳಿ / ನೆಟ್ಟ ನಿಸಾರರು ಎಪ್ಪತ್ತರ ಹೊಸ್ತಿಲಲ್ಲಿ! / ಬನ್ನಿ ಶುಭ ಕೋರೋಣ ನಿತ್ಯೋತ್ಸವದ ಕವಿಗೆ.'

ತನ್ನದೇ ಮಾಳ್ಕೆಯ ಗೂಡಿನ ಸೆರೆಗತ್ತಲೆಯಿಂದ ಚಿಟ್ಟೆ ಹುಳು ಕೊರೆದುಕೊಂಡು ಹೊರಹೊಮ್ಮುವವರೆಗೆ ಅದಕ್ಕೆ ಅಂದ ಚೆಂದದ ರೆಕ್ಕೆಗಳಾಗಲಿ, ಬಾಹ್ಯಾವರಣದ ರಂಗುರಂಗಿನ ಪುಷ್ಪ ರಾಜಿಯಾಗಲಿ ದಕ್ಕುತ್ತಿದ್ದವೆ? ನಿರ್ವಿಣ್ಣನಾದ ಮನುಷ್ಯ ತನ್ನ ಸ್ವಕಲ್ಪಿತ ಅಂತರ್ಮುಖತೆಯ ಮಾರಕ ಚಿಪ್ಪಿನಿಂದ ಎಷ್ಟು ಬೇಗ ಕೊಡವಿಕೊಂಡು ಲೋಕ ವ್ಯವಹಾರಗಳಲ್ಲಿ ತಲ್ಲೀನನಾಗುತ್ತಾನೆಯೋ ಅಷ್ಟು ಬೇಗ ಅವನ ವ್ಯಕ್ತಿತ್ವ ಗುಣಮುಖವಾಗುತ್ತದೆ; ಶೋಭಾಯಮಾನವಾಗಿ ಕಳಕಳಿಸುತ್ತದೆ.

(ಲೋಕ ಸಂಪರ್ಕ)



ಒಲವಿನ ಮೇಷ್ಟ್ರಿಗೊಂದು ಆತ್ಮೀಯ ಒಕ್ಕಣೆ

♦ *ವೈ. ಜಿ. ಗಿರಿಶಾಸ್ತ್ರಿ*
(ವಿದ್ಯಾರ್ಥಿ)

ಪ್ರೀತಿಯ ಮೇಷ್ಟ್ರಿಗೆ ನಮಸ್ಕಾರ.

ಹೃದಯ ಬಿಚ್ಚಿ ನಿಮಗೊಂದು ಸುದೀರ್ಘ ಪತ್ರ ಬರೆಯಬೇಕೆಂಬ ಇರಾದೆ ಬಹಳ ದಿನಗಳಿಂದ ಇತ್ತು. ಅದೀಗ ಕೈಗೂಡಿದೆ. ನನಗಂತೂ ತುಂಬಾ ಸಂತೋಷವಾಗಿದೆ. ಸಾರ್, ನಾನು ೧೯೬೪ರಲ್ಲಿ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಿಮ್ಮ ವಿದ್ಯಾರ್ಥಿಯಾಗಿದ್ದೆ. ಭೂ ಗರ್ಭಶಾಸ್ತ್ರದ ಬಗ್ಗೆ ಪಾಠ ಮಾಡುತ್ತಿದ್ದ ನೀವು ನನಗೆ ವಿಶಿಷ್ಟ ವ್ಯಕ್ತಿಯಾಗಿ ಕಂಡುಬಂದಿರಿ. ನೀವು ಮಾಡುವ ಪಾಠಕ್ಕಿಂತಲೂ ನನ್ನನ್ನು ಹೆಚ್ಚಾಗಿ ಆಕರ್ಷಿಸಿದ್ದು ನಿಮ್ಮ ಕವನ. ಪಾಠದ ನಡುವೆಯೂ ಪೂರಕವಾಗಿ ಕವನಗಳ ಮೆರವಣಿಗೆ ಸಾಗುತ್ತಿತ್ತು. ರಸ್ತೆಯಲ್ಲಿ ಬಿದ್ದಿದ್ದ ಕಲ್ಲುಗಳನ್ನು ತಂದು ಅದರ ಗುಣ, ಲಕ್ಷಣಗಳನ್ನು ವಿವರಿಸುತ್ತಿದ್ದಿರಿ. ಪ್ಯಾಂಟಿನ ಎರಡೂ ಜೇಬಿನಲ್ಲಿ ಕೈಗಳನ್ನಿರಿಸಿಕೊಂಡು ಹೇಳುತ್ತಿದ್ದ ಪಾಠದ ವೈಖರಿ ಇಂದೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಅಗ್ನಿಪರ್ವತದೊಳಗೆ ಕುದಿಯುವ ಶಿಲಾರಸವನ್ನು ಪಾಯಸಕ್ಕೆ ಹೋಲಿಸುತ್ತಿದ್ದಿರಿ. ಉಪಮೆಗಳಿಲ್ಲದೆ ನೀವು ಪಾಠ ಮಾಡುತ್ತಿರಲಿಲ್ಲ. ವಿದ್ಯಾರ್ಥಿಗಳನ್ನು ಪ್ರೀತಿಯ ತೆಕ್ಕೆಯಲ್ಲಿ ಬಂಧಿಸಿಡುತ್ತಿದ್ದಿರಿ. ಬೆಲ್ಲಕ್ಕೆ ಇರುವೆ ಮುತ್ತುವ ಹಾಗೆ ಸದಾ ನಿಮ್ಮ ಹಿಂದೆ ಹುಡುಗ-ಹುಡುಗಿಯರಿರುತ್ತಿದ್ದರು. ಆಗೆಲ್ಲ ನಿಮ್ಮ ಕವನಗಳು ಪತ್ರಿಕೆಗಳಲ್ಲಿ, ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದವು. ಅರವತ್ತರ ದಶಕದಲ್ಲಿ ನೀವು ಕವಿಯಾಗಿ ಉತ್ತುಂಗ

ದಲ್ಲಿದ್ದಿರಿ. ನಿಮ್ಮ ಕವನಗಳು ಎಲ್ಲ ವರ್ಗದ ಜನರನ್ನು ಅಯಸ್ಕಾಂತದಂತೆ ಆಕರ್ಷಿಸುತ್ತಿದ್ದವು. ಪಾಠದ ಬಗ್ಗೆ, ಕವನದ ಬಗ್ಗೆ ವಿದ್ಯಾರ್ಥಿಗಳ ತರಳೆ ಪ್ರಶ್ನೆಗಳಿಗೆ ನೀವೂ ತರಳೆ ಉತ್ತರ ನೀಡಿ ಅವರ ಬಾಯಿ ಮುಚ್ಚಿಸುತ್ತಿದ್ದಿರಿ.

ಕಾಲೇಜಿನಲ್ಲಿ ನೀವು ಎನ್.ಸಿ.ಸಿ. ಅಧಿಕಾರಿ. ನಾನೂ ಎನ್.ಸಿ.ಸಿ. ಕೆಡೆಟ್ ಆಗಿ ಸೇರಿದ್ದೆ. ಬೂದಿ ಬಣ್ಣದ ಮಜರಿ ಡ್ರೆಸ್ಸು, ಮಣ ಭಾರದ ಬೂಟುಗಳನ್ನು ನನ್ನ ಸಣ್ಣ ಶರೀರ ತಡೆಯುತ್ತಿರಲಿಲ್ಲ. ಕವಾಯತಿನಲ್ಲಿ ಭಾಗವಹಿಸಿ ಏದುಸಿರು ಬಿಡುತ್ತಿದ್ದೆ. ಜೊತೆಗೆ ರೈಫಲ್ ಬೇರೆ. ಒಂದೊಂದು ಸಲ ಕವಾಯಿತಿನಲ್ಲಿ ರೈಫಲ್ ಹೊತ್ತು ಮಾರ್ಚ್‌ಪಾಸ್ಟ್ ಮಾಡುವಾಗ ನಾನು ಪಡುತ್ತಿದ್ದ ಪಾಡನ್ನು, ಅವಸ್ಥೆಯನ್ನು ಕಂಡು, 'ಲೋ, ಪುಳ್ಚಾರ್, ನಿನ್ಕೈಲಾಗೊಲ್ಲ, ಮರದ ಕೆಳಗೆ ಆರಾಮವಾಗಿ ಕೂತ್ಕೊ' ಎಂದು ನನಗೆ ರಿಯಾಯಿತಿ ತೋರಿಸುತ್ತಿದ್ದಿರಿ. ಆಗ ನನಗಾಗುತ್ತಿದ್ದ ಖುಷಿ ಅಷ್ಟಿಷ್ಟಲ್ಲ. ಮನಸ್ಸಿನಲ್ಲೇ ನಿಮಗೆ 'ಥ್ಯಾಂಕ್ಸ್' ಹೇಳಿದ್ದೆ.

ಮೇಷ್ಟ್ರೇ, ನಾನು ಓದುವ ಸಂದರ್ಭದಲ್ಲಿ ಕೆಲವು ಹಾಡುಗಳನ್ನು ಬರೆದೆ. ಇದಕ್ಕೆ ಪ್ರೇರಣೆ ನನ್ನ ಪೂಜ್ಯ ದೊಡ್ಡಪ್ಪನವರಾದ ದಿವಂಗತ ವೈ. ಎಸ್. ಗುಂಡಪ್ಪನವರು. ಅವರು ಕನ್ನಡ ನಾಡಿನ ಪ್ರತಿಷ್ಠಿತ ಲೇಖಕರು. ಪ್ರತಿ ವಾರ ತಪ್ಪದೆ ಹಲವಾರು ದಶಕಗಳ ಕಾಲ ಚಿಂತಾಮಣಿಯಲ್ಲಿ 'ಸಾಹಿತ್ಯ ಕೂಟ' ಸ್ಥಾಪಿಸಿ ಸಾಹಿತ್ಯ ಕಾರ್ಯಕ್ರಮಗಳನ್ನು ಏರ್ಪಡಿಸಿ ದಾಖಲೆ ಮಾಡಿದವರು. ಅವರ ಸಾಹಿತ್ಯ ಸ್ಫೂರ್ತಿಯಿಂದ ನನಗೂ ಬರವಣಿಗೆಯಲ್ಲಿ ಆಸಕ್ತಿ ಮೂಡಿತು. ವಿವಿಧ ದೇವರುಗಳನ್ನು ಕುರಿತು ದೇವರ ನಾಮಗಳನ್ನು ರಚಿಸಿದೆ. ಪಲ್ಲವಿ, ಅನು ಪಲ್ಲವಿ, ಚರಣ, ಪ್ರಾಸಗಳಿಂದ ಕೂಡಿದ ಹಾಡುಗಳನ್ನು ನಿಮಗೆ ತೋರಿಸಿ, ಬೆನ್ನು ತಟ್ಟಿಸಿಕೊಳ್ಳಬೇಕೆಂಬ ಆಸೆ. ಅದಕ್ಕಾಗಿ ಕಾದು ಬಸವಳಿದೆ. ನೀವು ಏಕಾಂಗಿಯಾಗಿ ಒಮ್ಮೆಯೂ ನನಗೆ ಸಿಗುತ್ತಿರಲಿಲ್ಲ. ಯಾರಾದರೂ ನಿಮ್ಮ ಜತೆಯಲ್ಲಿ ಇದ್ದೇ ಇರುತ್ತಿದ್ದರು. ಒಂದು ದಿನ ನನಗೆ ಅದೃಷ್ಟ ಒಲಿದಿತ್ತು. ನೀವೊಬ್ಬರೇ ಸ್ಟಾಫ್ ರೂಮಿನಲ್ಲಿದ್ದಾಗ, ಭಂಡ ಧೈರ್ಯದಿಂದ ನುಗ್ಗಿ ನಾನು ಬರೆದ ಹಾಡುಗಳನ್ನು ನಿಮಗೆ ನೀಡಿ, ಪರಿಶೀಲಿಸಲು ಕೇಳಿಕೊಂಡೆ. ಒಮ್ಮೆ ಅವುಗಳನ್ನು ನೋಡಿ ಮುಗುಳ್ನಗೆ ನಕ್ಕು 'ಎರಡು ದಿನಗಳಾದ ಮೇಲೆ ಬಂದು ನೋಡು' ಎಂದು ಹೇಳಿದ್ದಿರಿ. ಆ ಎರಡು ದಿನಗಳಲ್ಲಿ ನನ್ನನ್ನು ನಾನೇ ದೊಡ್ಡ ಕವಿಯೆಂದು ಭ್ರಮಿಸಿಕೊಂಡೆ. ನೀವು 'ಭೇಷ್' ಎಂದು ಬೆನ್ನು ತಟ್ಟಿದ ಕನಸು! ನನಗೆ ನಗು. ಎರಡು ದಿನಗಳ ಅನಂತರ ನಿಮ್ಮನ್ನು ಕಂಡಾಗ, 'ಏನಯ್ಯ, ಪುರಂದರದಾಸರು, ಕನಕದಾಸರಾಗಲು ಹೊರಟಿರುವೆ. ಚೆನ್ನಾಗಿ ಬರೆದಿದ್ದೀಯ. ಆದರೆ ಕಾವ್ಯ ರಚನೆಗೆ ಬೇರೆ ದಾರಿ ಕಂಡುಕೋ' ಎಂದಿರಿ. ಈ ಮಾತುಗಳು ನನಗೆ ಚೇತೋಹಾರಿಯಾದವು. ಆದರೆ ಮುಂದೆ ನಾನು ಕವಿಯಾಗುವ ಕಡೆಗೆ ಮನಸ್ಸು ಹರಿಯ ಬಿಡಲಿಲ್ಲ. ನನ್ನ ದಿಕ್ಕೇ ಬದಲಾಯಿತು.

ನೀವೇ ಬರೆದಂತೆ, 'ಯಾವುದೇ ವರ್ಗಕ್ಕೆ ಸೇರಿರಲಿ ನೌಕರ, / ಒಮ್ಮೆಯಾದರೂ ವರ್ಗವಾಗಬೇಕು; / ಮಲೆನಾಡೋ ತಲಕಾಡೋ ಮೇಲಿನವನದು ಮರ್ಜಿ / ಗಂಟು ಮೂಟೆಯನೊಮ್ಮೆ ಕಟ್ಟಬೇಕು.' ನೀವೂ ಗಂಟುಮೂಟೆ ಕಟ್ಟಿಕೊಂಡು ಮಲೆನಾಡಾದ ಶಿವಮೊಗ್ಗಕ್ಕೆ ವರ್ಗವಾದಿರಿ. ನಾವು ಭಾಗ್ಯವಂಚಿತರಾದೆವು; ಶಿವಮೊಗ್ಗ ಹೆಮ್ಮೆ ಪಟ್ಟಿತು, ನಿಮ್ಮ

ಆಗಮನದಿಂದ. ನಾನು ಕಾಲೇಜಿನ ಓದಿಗೆ ತಿಲಾಂಜಲಿ ನೀಡಿ ಕೆಲಸದ ಬೇಟೆಗೆ ತೊಡಗಿದೆ.

ಶಿವಮೊಗ್ಗದಲ್ಲಿ ನಿಮ್ಮ ಕಾವ್ಯ ಲಹರಿ ಸುಗಮವಾಗಿ ಹರಿಯಿತು. ನಿಮ್ಮ ದೃಷ್ಟಿಯಲ್ಲಿ ನವುಲೆಯ ಹನುಮ, ರಾಮನ್ ಸತ್ತ ಸುದ್ದಿಗೆ ಸ್ಪಂದಿಸಲಿಲ್ಲ. ಮಾಸ್ತಿಯವರು ಕ್ಲಬ್ಬಿನಲ್ಲಿ ಎಲೆ ಕಲೆಸುವುದನ್ನು ವಿಶಿಷ್ಟ ರೀತಿಯಲ್ಲಿ ಕಂಡಿರಿ. ವೇದವಲ್ಲಿ ಬಿಡಿಸಿದ ರಂಗವಲ್ಲಿಯ ಬಗ್ಗೆ ಮಗ ಕೇಳಿದ ಪ್ರಶ್ನೆಗಳಿಂದ ತಬ್ಬಿಬ್ಬುಗೊಂಡಿರಿ. ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ ತಾಯಿಗೆ ನಿತ್ಯೋತ್ಸವಗೈದು ಧನ್ಯರಾದಿರಿ. ಶಿವಮೊಗ್ಗದಲ್ಲಿ ಇದ್ದಷ್ಟು ಕಾಲವೂ ಎಂಥ ಸೊಗಸಾದ, ಅರ್ಥಪೂರ್ಣವಾದ, ಮನೋಜ್ಞ ವಾದ ಕವನಗಳು ನಿಮ್ಮಿಂದ ಬಂದವು. ಓಹ್! ಅದೊಂದು ಸ್ಮರಣೀಯ ಅವಧಿ. ಅಲ್ಲಿ ಅನೇಕ ಮೌಲಿಕ ಕವನಗಳು ಹುಟ್ಟಿಕೊಂಡವು. ಆ ಕವನಗಳನ್ನು ಓದುತ್ತಿದ್ದರೆ ಮೈ ರೋಮಾಂಚನಗೊಳ್ಳುತ್ತದೆ. ಸಾರ್, ಈ ಕವನಗಳನ್ನೆಲ್ಲ ಓದುವಾಗ ನನಗೆ ಎಂಥದೋ ಅನಿರ್ವಚನೀಯ ಖುಷಿ, ಆನಂದ. ನನಗಿನ್ನೂ ನೆನಪಿದೆ. ಗಾಂಧಿ ಬಜಾರಿನ ಸರ್ಕಲ್ ಲಂಚ್ ಹೋಂನಲ್ಲಿ ನೀವು, ಅಡಿಗರು, ವೈಎನ್ಕೆ, ರಾಮಚಂದ್ರ ಶರ್ಮ ಕೆಲವೊಮ್ಮೆ ಎಂ.ಬಿ. ಸಿಂಗ್ ಸೇರಿ ಸಾಹಿತ್ಯ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಮಾತನಾಡುವಾಗ ನಾನು ಸುಮ್ಮನೆ ಕೇಳುತ್ತಿದ್ದೆ. ಆಗ ನೀವು ನನ್ನೆಡೆ ನಗೆ ಬೀರಿ, ಅರ್ಥವಾಗಲಿಲ್ಲವೇ? ಎನ್ನುವಂತೆ ನೋಡುತ್ತಿದ್ದಿರಿ. ನಾನು ಪೆಚ್ಚು ನಗೆ ನಗುತ್ತಿದ್ದೆ. ಇಂಗ್ಲಿಷ್ ಲೇಖಕರ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಿದ್ದ ವೈಎನ್ಕೆಯವರು, ಅದಕ್ಕೆ ದನಿಗೂಡಿಸುತ್ತಿದ್ದ ಅಡಿಗರು ಅದೇನು ಹೇಳಿದರೆಂದು ನನಗೆ ಹೇಗೆ ತಾನೇ ಅರ್ಥವಾಗಬೇಕು?

ನಾನು ನಿಮಗೆ ಪ್ರತಿ ವರ್ಷ ಕವನ ರೂಪದಲ್ಲಿ ಯುಗಾದಿಯ ಶುಭಾಶಯ ಕೋರುತ್ತಿದ್ದೆ. ನೀವು ಅದನ್ನು ಮೆಚ್ಚಿಕೊಂಡು, ನಿಮಗೆ ಸಿಕ್ಕ ಪರಿಚಿತರೊಡನೆಲ್ಲ ಹೆಮ್ಮೆಯಿಂದ 'ನನ್ನ ಶಿಷ್ಯ ಬರೆದಿದ್ದಾನೆ' ಎಂದು ಹೇಳುತ್ತಿದ್ದಿರಿ. ಇಂಥ ಪ್ರೀತಿ, ಎಲ್ಲಿ ಸಿಗುತ್ತದೆ ಸಾರ್. ಕೆಲ ಕಾಲ ನಮ್ಮಿಬ್ಬರ ನಡುವೆ ಸಂಪರ್ಕವೇರ್ಪಡಲಿಲ್ಲ.

ಮೊದಲಿನಿಂದಲೂ ಪತ್ರಕರ್ತನಾಗಬೇಕೆಂಬ ಆಸೆ ನನಗಿತ್ತು. 'ಪ್ರಜಾಮತ' ಸೇರುವ ಮೂಲಕ ನನ್ನ ಆಸೆ ಕೈಗೂಡಿತು. 'ಪ್ರಜಾಮತ' ಸೇರಿದ ಮೇಲೆ ಮತ್ತೆ ನನ್ನ, ನಿಮ್ಮ ಸಂಪರ್ಕವೇರ್ಪಟ್ಟಿತು. ನಿಮ್ಮ ಸಾಹಿತ್ಯ ರಚನೆಗೆ ಪ್ರೇರಕಶಕ್ತಿಯಾದ ಗಾಂಧಿ ಬಜಾರಿನಲ್ಲಿಯೇ 'ಪ್ರಜಾಮತ' ಕಚೇರಿ ಇದ್ದುದರಿಂದ ಆಗಾಗ ಭೇಟಿಯಾಗುತ್ತಿದ್ದೆವು. ನೀವು ಶಿವಮೊಗ್ಗದಿಂದ ವರ್ಗವಾಗಿ ಮತ್ತೆ ಬೆಂಗಳೂರಿಗೆ ವಾಪಸಾಗಿದ್ದಿರಿ. ಸಂಜೆಯ ವೇಳೆ ಗಾಂಧಿ ಬಜಾರಿನಲ್ಲಿ ಕಾಲೇಜಿನಿಂದ ಬಂದು ಹಳೆಯ ಗೆಳೆಯರೊಡನೆ ಉಭಯ ಕುಶಲೋಪರಿ ಸಂಭಾಷಣೆ. ಸೊಪ್ಪು ಮಾರುವವರಿಂದ ಹಿಡಿದು ಬ್ಯಾಂಕ್ ಮೇನೇಜರ್ ವರೆಗೆ ಎಲ್ಲರಿಗೂ ನೀವು ಬೇಕಾದವರು. ನಿಸಾರ್ ಅಹಮದ್ ಎಂದರೆ ಇಡೀ ಗಾಂಧಿ ಬಜಾರ್ ಹರ್ಷಿಸುತ್ತದೆ.

ಬೆಂಗಳೂರಿನಲ್ಲಿ ನಡೆದ ಕವಿ ಸಮ್ಮೇಳನಗಳಲ್ಲಿ ಆಗಾಗ ನಿಮ್ಮನ್ನು ಕಾಣುವ ಸೌಭಾಗ್ಯ ನನ್ನದಾಗಿತ್ತು. ಒಮ್ಮೆ ಪುರಭವನದಲ್ಲಿರಬೇಕು, ಸರಿಯಾಗಿ ನೆನಪಿಲ್ಲ, ಕವಿ

ಸಮ್ಮೇಳನ ನಡೆಯಿತು. ಬೇಂದ್ರೆ, ಪುತಿನ, ಕೆಎಸ್‌ನ, ಕ. ವೆಂ. ರಾಜಗೋಪಾಲ, ಶಿವರುದ್ರಪ್ಪ, ನೀವು, ಇನ್ನಿತರರು ಕವನಗಳನ್ನು ವಾಚಿಸಿದಿರಿ. ಕಾವ್ಯ ವಾಚನ ವಿಷಯ ವೈವಿಧ್ಯದಿಂದ ಕೂಡಿತ್ತು. ನಿಮ್ಮ ಸರದಿ ಬಂತು. ಮೈಕಿನ ಮುಂದೆ ಬಂದು ಕವನ ಓದಿದಿರಿ. ನೀವು ಕವನ ವಾಚಿಸುವ ಶೈಲಿಯೇ ವಿಶಿಷ್ಟವಾದುದು. ಸ್ಪಷ್ಟ ಉಚ್ಚಾರಣೆ, ಆಂಗಿಕ ಅಭಿನಯ—ಕೇಳುಗರನ್ನು, ನೋಡುಗರನ್ನು ಮೋಡಿ ಮಾಡಿಬಿಡುತ್ತಿತ್ತು. ಅಂದು ಕವಿ ಸಮ್ಮೇಳನ ಮುಗಿದ ಮೇಲೆ 'ಮುಷೈರಾ' ಕಾರ್ಯಕ್ರಮ. ನೀವು ಬೇಂದ್ರೆಯವರನ್ನು ರೇಗಿಸಲು, 'ಸಾರ್, ಮುಷೈರಾಕ್ಕೆ ಇರೊಲ್ಲವೇ?' ಎಂದಾಗ ಅವರು ಧಾರವಾಡದ ನಗೆ ನಕ್ಕದ್ದು ನನ್ನ ನೆನಪಿನಲ್ಲಿದೆ. ಮತ್ತೊಮ್ಮೆ ಆಕಾಶವಾಣಿ ಕವಿ ಸಮ್ಮೇಳನದಲ್ಲಿ 'ಗೀತ-ಗಾಯನ' ಕಾರ್ಯಕ್ರಮ ನಡೆಯಿತು. ನಾಡಿನ ಶ್ರೇಷ್ಠ ಕವಿಗಳೆಲ್ಲ ಭಾಗವಹಿಸಿದ್ದರು. ನೀವು ಅಂದು ಆ ಕಾರ್ಯಕ್ರಮದಲ್ಲಿ ಓದಿದ, 'ನಾಡದೇವಿಯೆ ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ' ಕವನವನ್ನು ಸುಗಮ ಸಂಗೀತ ಗಾಯಕರು ಮಧುರವಾಗಿ ಹಾಡಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದರು. ನಾನಂತೂ ಈ ಗೀತೆಯನ್ನು ಕೇಳಿ ಪುಳಕಗೊಂಡೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕವಿಗೋಷ್ಠಿಯೊಂದು ನಡೆಯಿತು. ನೀವು ಅಲ್ಲಿ ಕವಿ ಮುದ್ದಣನನ್ನು ಕುರಿತು, 'ಕೊಕ್ಕೊಕ್ಕೊ ನವೋದಯದ ನಗಾರಿ; ಚಲಿಸಿತು ಪರಂಪರೆ ಒಂದೆರಡು ಡಿಗ್ರಿ' ಮಾಡಿದ ಕವನ ವಾಚನ ಅತ್ಯಂತ ಮನೋಜ್ಞ. ಆದರೆ ಕವಿ ಸಮ್ಮೇಳನಗಳಿಗೆ ನೀವು ನಿಗದಿತ ಸಮಯಕ್ಕೆ ಬರುತ್ತಿರಲಿಲ್ಲ, ಸ್ವಲ್ಪ ಲೇಟಾಗಿಯೇ ಬರುತ್ತಿದ್ದಿರಿ, ಬಂದೊಡನೆ ಸಭೆಗೆ ಕಳೆ ಕಟ್ಟುತ್ತಿತ್ತು; ಒಂದು ರೀತಿಯ ಲವಲವಿಕೆ ಸಂಚಾರವಾಗುತ್ತಿತ್ತು.

ಸಾರ್, ಬೋರಾಯಿತೆ? ಹಳೆಯದನ್ನೆಲ್ಲ ಕೆದಕಿದ್ದು ಬೇಸರ ಉಂಟುಮಾಡಿತೆ? ಅಂತರಂಗದ ಅನಿಸಿಕೆಗಳನ್ನು ವ್ಯಕ್ತಪಡಿಸುವ ಆಸೆಯಿಂದ ಈ ದೀರ್ಘ ಪತ್ರ. ಅನ್ಯಥಾ ಭಾವಿಸಬೇಡಿ. ಪ್ರೀತಿಯ ಮೇಷ್ಟ್ರೇ, ನಾನು 'ಪ್ರಜಾಮತ'ದಲ್ಲಿದ್ದಾಗ, ದಿವಂಗತ ಕೆ. ಎಸ್. ನಾರಾಯಣಸ್ವಾಮಿ ಸಹ ಸಂಪಾದಕರಾಗಿದ್ದರು. ಆಗ ನಾವು ನಿಮ್ಮಿಂದ ಒಂದು ಅಂಕಣವನ್ನು ಬರೆಸಲು ನಿರ್ಧರಿಸಿದೆವು. ಕವಿಯೊಬ್ಬರಿಂದ ಅಂಕಣ ಬರಹಕ್ಕೆ ನಾಂದಿಯಾಗಲಿ ಎನ್ನುವುದು ನಮ್ಮ ಆಶಯ. ಈ ಕುರಿತು ನಿಮ್ಮೊಡನೆ ಮಾತುಕತೆ ನಡೆಸಿದಾಗ, ಮೊದಲು ನೀವು ಬಿಲ್‌ಕುಲ್ ಒಪ್ಪಲಿಲ್ಲ, 'ಪ್ರತಿ ವಾರ ಬರೆಯುವುದು ನನ್ನಿಂದ ಸಾಧ್ಯವಾಗದು' ಎಂದು ಬಿಟ್ಟಿರಿ. ಪಟ್ಟು ಬಿಡದ ನಾವು ನಿಮ್ಮನ್ನು ಒಪ್ಪಿಸುವಲ್ಲಿ ಕೊನೆಗೂ ಯಶಸ್ವಿಯಾದೆವು. 'ಮನದೊಂದಿಗೆ ಮಾತುಕತೆ' ಅಂಕಣ 'ಪ್ರಜಾಮತ'ದಲ್ಲಿ ಪ್ರಾರಂಭವಾಯಿತು. ಓದುಗರ ಮೆಚ್ಚುಗೆಗೆ ಪಾತ್ರವಾಯಿತು. ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸುತ್ತೇನೆ. ಬೇಸರಿಸಿಕೊಳ್ಳ ಬೇಡಿ ಸಾರ್. ನೀವು ಕೆಲವು ವಾರಗಳು ಉತ್ಸಾಹದಿಂದ ಅಂಕಣವನ್ನು ಬರೆದಿರಿ. ಬರುಬರುತ್ತಾ ಕಾರ್ಯಭಾರದ ಒತ್ತಡದಿಂದಾಗಿ ಪ್ರತಿ ವಾರ ಬರೆಯುವುದು ನಿಮಗೆ ಕಷ್ಟವಾಗಿರಬಹುದು. ಸಾಮಾನ್ಯವಾಗಿ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ 'ಡೆಡ್ ಲೈನ್' ಇರುತ್ತದೆ. ನಿಗದಿತ ಸಮಯಕ್ಕೆ ಪತ್ರಿಕೆಯನ್ನು ಮುದ್ರಣಕ್ಕೆ ಕಳುಹಿಸುವುದು ಸಂಪಾದಕ ಮಂಡಲದ ಜವಾಬ್ದಾರಿ. ನೀವು ಕೆಲವು ಸಂದರ್ಭದಲ್ಲಿ 'ಡೆಡ್ ಲೈನ್' ಮೀರುವಂತೆ ಮಾಡಿಬಿಡುತ್ತಿದ್ದಿರಿ. ನಿಮಗೆ ಫೋನ್ ಮಾಡಿ 'ಮ್ಯಾಟರ್ ಅರ್ಜೆಂಟಾಗಿ ಬೇಕಾಗಿದೆ'

ಎಂದಾಗ, `ಈ ವಾರ ಏನೂ ಹೊಳೆಯುತ್ತಿಲ್ಲ, ಅಂಕಣ ನಿಲ್ಲಿಸಿ ಬಿಡಯ್ಯ' ಎಂದು ಹೇಳುತ್ತಿದ್ದಿರಿ. ಕಾಲೇಜು, ಕಾವ್ಯದ ನಡುವೆ ಕ್ರಮಬದ್ಧವಾಗಿ ಅಂಕಣ ಬರೆಯುವುದು ಕಷ್ಟವೆಂದು ನನಗೂ ಗೊತ್ತು. `ಅದು ಹೇಗೆ ಸಾಧ್ಯ ಸಾರ್? ಅಂಕಣ ಬರಹವನ್ನು ಏಕಾಏಕಿ ನಿಲ್ಲಿಸುವಂತಿಲ್ಲ. ದಯವಿಟ್ಟು ಬರೆಯಿರಿ' ಎಂದು ಕೋರಿದಾಗ, 'ಹಾಗಾದರೆ ಏಳು ಗಂಟೆಗೆ ಬರ್ತೀನಿ, ಅಲ್ಲೀವರೆಗೆ ಆಫೀಸಿನಲ್ಲಿರು' ಎಂದು ಆದೇಶಿಸುತ್ತಿದ್ದಿರಿ. ನಾನು ಮತ್ತು ಕೆ. ಎಸ್. ನಾರಾಯಣ ಸ್ವಾಮಿ ನಿಮಗಾಗಿ ಕಾದಿರುತ್ತಿದ್ದೆವು. ನೀವು ಬಂದು ಮೌಲ್ಯಭರಿತವಾದ ಅಂಕಣ ಬರಹ ನೀಡಿ, 'ಸಾರಿ ಮಗು. ತುಂಬಾ ಕಾಯಿಸ್ಬಿಟ್ಟೆ' ಎಂದು ಬೆನ್ನು ಸವರಿದಾಗ, ಕಾದ ಬೇಸರ ಕ್ಷಣದಲ್ಲಿ ಮಾಯ. ಇದು ನಿಮ್ಮ ಪ್ರೀತಿಯ ಪರಿ. ಬರಹ ಕೊಟ್ಟು ಒಂದು ಎಚ್ಚರಿಕೆಯ ಮಾತನ್ನೂ ಹೇಳುತ್ತಿದ್ದಿರಿ, `ಪ್ರೂಫ್ ಕರೆಕ್ಟಾಗಿ ನೋಡಯ್ಯ, ಸ್ವಲ್ಪವೂ ತಪ್ಪಿರಬಾರದು'. ಕಾಯಿಸಿದ ತಪ್ಪಿಗಾಗಿ `ವಿದ್ಯಾರ್ಥಿ ಭವನ'ಕ್ಕೆ ಕರೆದುಕೊಂಡು ಹೋಗಿ ಮಸಾಲೆ ದೋಸೆ ಕೊಡಿಸುತ್ತಿದ್ದಿರಿ. ಇದಲ್ಲವೇ ನಿಮ್ಮ ಅವ್ಯಾಜ ಪ್ರೇಮ. ಬಸ್ ಹತ್ತಿ ಮನೆಗೆ ಹೋಗುವಾಗ, `ಮುಂದಿನ ವಾರಕ್ಕೆ ಈಗಿನಿಂದಲೇ ರೆಡಿ ಮಾಡಿಕೊಳ್ಳಿ ಸಾರ್' ಎಂದಾಗ'. 'ಇರಯ್ಯ, ಈಗ ತಾನೆ ಉಸಿರು ಬಿಡ್ತಾ ಇದ್ದೀನಿ' ಎನ್ನುತ್ತಿದ್ದುದೂ ಇನ್ನೂ ನೆನಪಿದೆ. `ಪ್ರಜಾಮತ'ದಲ್ಲಿ ಒಂದು ವರ್ಷ ಕಾಲ ನೀವು ಬರೆದ ಅಮೂಲ್ಯ ಅಂಕಣ ಬರಹಗಳು `ಮನದೊಂದಿಗೆ ಮಾತುಕತೆ', 'ಹಿರಿಯರು ಹರಸಿದ ಹೆದ್ದಾರಿ' ಹೆಸರಿನ ಎರಡು ಕೃತಿಗಳು ಹೊರ ಬಂದು, ಓದುಗರ ಮನ್ನಣೆಯನ್ನು ಪಡೆದವು. ಈ ಎರಡು ಕೃತಿಗಳೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಪುರಸ್ಕಾರಕ್ಕೆ ಪಾತ್ರವಾದವು. ಸಾರ್, ಪ್ರಜಾಮತದಲ್ಲಿ ನಾನು ನಿಮಗಾಗಿ ಕಾದಾಗ ಮನಸ್ಸಿಗೆ ಮುಜುಗರವಾದರೂ ನೀವು ಬಂದ ಅನಂತರ ಆ ಬೇಸರ ನೀಗಿ, ಅಲ್ಲಿ ಪ್ರೀತಿಯ ಸಿಂಚನವಾಗುತ್ತಿತ್ತು. ನಿಮ್ಮ ಒಲವಿನ ಸವಿಯುಂಡ ನಾನಲ್ಲವೇ ಭಾಗ್ಯಶಾಲಿ!

ನಿಮಗೆ ನನ್ನ ಬಗ್ಗೆ ಅಪಾರ ಪ್ರೀತಿಯಿದೆ. ನೀವು ಭಾಗವಹಿಸುವ ಯಾವುದೇ ಸಭೆ, ಸಮಾರಂಭಗಳಲ್ಲಿ ನಾವು ನಾಲ್ಕೈದು ಮಂದಿ ಕಡ್ಡಾಯವಾಗಿ ಹಾಜರಿರಬೇಕು. ಸಮಾರಂಭದ ಆಹ್ವಾನ ಪತ್ರಿಕೆ ತಲಪುವ ಮುನ್ನವೆ. `ಆವತ್ತು ಬೇರೆ ಯಾವ ಪ್ರೋಗ್ರಾಮೂ ಇಟ್ಕೋಬೇಡಯ್ಯ. ಖಂಡಿತ ಬರಬೇಕು, ಸಬೂಬು ಹೇಳಬೇಡ' ಎನ್ನುವ ತಾಕೀತು ಫೋನ್ ಮೂಲಕ. ನಾನು, ಚಿರಂಜೀವಿ, ಬಿ. ಕೆ. ಪಾರ್ಥಸಾರಥಿ, ಎಂ. ಕೆ. ಗೋಪಿನಾಥ್, ಪ್ರೊ. ಎಚ್. ಪಿ. ರಾಜಶೇಖರ ಶೆಟ್ಟಿ, ಪ್ರೊ. ಕೆ. ಆರ್. ಇಕ್ಬಾಲ್ ಅಹಮದ್ ಕಡ್ಡಾಯವಾಗಿ ಸಮಾರಂಭದಲ್ಲಿರಬೇಕು. ಅಲ್ಲಿ ನೀವು ನಮ್ಮನ್ನು ನೋಡಿ ಹರ್ಷಿಸುತ್ತಿದ್ದಿರಿ. ಕೆಲವೊಮ್ಮೆ ಸಭೆಯಲ್ಲಿ ನಮ್ಮ ಇರವನ್ನು ಪ್ರಸ್ತಾಪಿಸುತ್ತಿದ್ದಿರಿ, ನಮ್ಮ ಬಗ್ಗೆ ಒಳ್ಳೆಯ ಮಾತುಗಳನ್ನು ಆಡುತ್ತಿದ್ದಿರಿ. ಎಂಥ ಹೃದಯ ವೈಶಾಲ್ಯ ಸಾರ್ ನಿಮ್ಮದು.

ಸಾರ್, ನಿಮ್ಮೊಡನೆ ದೋಸೆ ತಿಂದಿದ್ದೇನೆ, ವಾಕಿಂಗ್‌ನಲ್ಲಿ ಜತೆಯಾಗಿ ಕಡಲೆ ಬೀಜ, ಚಾಕೊಲೇಟ್ ತಿಂದಿದ್ದೇನೆ. ರಸ್ತೆಯಲ್ಲಿ ನಡೆಯುವಾಗ ಎಷ್ಟೊಂದು ವಿಷಯಗಳನ್ನು ತಿಳಿಸುತ್ತಿದ್ದಿರಿ! ಡಿ.ವಿ.ಜಿ., ಬೇಂದ್ರೆ, ಕಾರಂತ, ವಿ.ಸೀ., ಕುವೆಂಪು, ಅಡಿಗರ ಬಗ್ಗೆ ನಿಮ್ಮಿಂದ ಅನೇಕ ವಿಷಯಗಳನ್ನು ಅರಿತಿದ್ದೇನೆ. ನೀವು ನಡೆದಾಡುವ ವಿಶ್ವಕೋಶ ಸಾರ್. ನಿಮ್ಮ

ಶಿಷ್ಯನಾಗಿದ್ದು, ನಿಮ್ಮೊಡನೆ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಸಂಪರ್ಕದಿಂದಿರುವುದು ನನ್ನ ಪೂರ್ವ ಜನ್ಮದ ಸುಕೃತ. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ. ತಸ್ಮೈ ಶ್ರೀ ಗುರುವೇ ನಮಃ.

ಜೀವನ ಚಕ್ರ ಚಲನೆಗೆ ಸುಖ ಸಾಧನೆಗಳ ಗಳಿಕೆ, ದ್ರವ್ಯ ಸಂಪಾದನೆ ಕೀಲೆಣ್ಣೆಯಂತೆ. ಅಹಂಪೋಷಣೆ, ಸ್ವಾರ್ಥಸಾಧನೆ ಒಂದು ಮಿತಿಯವರೆಗೆ ಮನುಷ್ಯನ ಬಾಳ್ವೆಗೆ ಅತ್ಯನಿವಾರ್ಯ. ಅದು ರೆಕ್ಕೆಗೆ ಗಾಳಿಯಂತೆ. ಐಹಿಕ ಐಸಿರಿಯ, ಪದಾರ್ಥಗಳ ಆರ್ಜನೆಯನ್ನು ಜೀವನಾವಶ್ಯಕತೆಗೆ ಎಷ್ಟು ಬೇಕೋ ಅಷ್ಟನ್ನು ಮಾಡಿಕೊಳ್ಳದವನು ಮಂಕುದಿಣ್ಣೆ. ಅಂಥವನಿಗೆ ಬವಣೆ ಕಟ್ಟಿಟ್ಟ ಬುತ್ತಿ. ಪ್ರಾಪಂಚಿಕತೆ ಎನ್ನುವುದು ಹರಿಗೋಲಿಗೆ ನೀರಿದ್ದಂತೆ. ಅದರ ಸುತ್ತ ನೀರು ಹರಡಿಕೊಂಡಿರುವುದು ಸ್ವಾಭಾವಿಕ, ವಾಸ್ತವ. ಆದರೆ ಹರಿಗೋಲಿನಲ್ಲಿ ನೀರು ತುಂಬಿಕೊಳ್ಳಬಾರದು. ಆ ಹುಷಾರಿ ಇಲ್ಲದಿದ್ದರೆ ಅದರ ಕಥೆ ಮುಗಿದಂತೆಯೆ. ಈ ಮುನ್ನೆಚ್ಚರ, ಮಿತಿ ವಿವೇಕವನ್ನು ಮತಿವಂತರೂ ಮರೆಯುತ್ತಿರುವುದೇ ಮನುಷ್ಯ ಮನುಷ್ಯರ ಮಧ್ಯದ ಮನಸ್ತಾಪ ಮಾತ್ಸರ್ಯಗಳು ಮುಗಿಲು ಮುಟ್ಟುತ್ತಿರುವುದಕ್ಕೆ ಕಾರಣ.

(ಪ್ರಾಪಂಚಿಕತೆ)

✧ ✧ ✧

ಮಾನವ ಜೀವನ ಇಂದ್ರಿಯ ಚಾಲಿತ, ಇಂದ್ರಿಯ ನಿಯಂತ್ರಿತ. ಇಂದ್ರಿಯಗಳನ್ನು ತಣಿಸದೆ ವಿಧಿಯಿಲ್ಲ, ನಿಸ್ತಾರವಿಲ್ಲ. ಸುಂಕ ಕಟ್ಟಿದ್ದಲ್ಲದೆ ಪುರ ಪ್ರವೇಶವಿಲ್ಲ. ಇಂದ್ರಿಯಗಳನ್ನು ತೃಪ್ತಿಗೊಳಿಸುವುದರಿಂದ ನಮಗೆ ಸಿಗುವ ಸುಖ ಅಲಕ್ಷ್ಯಣೀಯವಲ್ಲ, ನಿಜ. ಆದರೆ ಅದೇ ಎಲ್ಲ ಅಲ್ಲ; ಅದರಿಂದಷ್ಟೇ ಬದುಕು ಸಾರ್ಥಕಗೊಳ್ಳುವುದಿಲ್ಲ. ಅದರಿಂದ ಪಾಶವೀ ಜೀವನದ ಮಾದರಿ ಸಿದ್ಧವಾಗಬಹುದು.

(ಇಂದ್ರಿಯ ತೃಪ್ತಿಯ ಮಿತಿ)

✧ ✧ ✧

ಸೃಜನಶೀಲ ಪ್ರಕ್ರಿಯೆ ಸಂಯೋಜನೆ, ಸಮನ್ವಯ, ಸಮಗ್ರೀಕರಣಗಳ ಮುಪ್ಪುರಿ ಫಲ. ಪ್ರಜ್ಞೆ-ಸುಪ್ತ ಪ್ರಜ್ಞೆಗಳ ಬೆಳಕು ನೆಳಲುಗಳ ಕಣ್ಣುಮುಚ್ಚಾಲೆ ಆಟ.



ವಿಜ್ಞಾನ ಕಲೆ ಮೇಳವಿಸೆ...

♦ *ಡಾ. ವೈ. ಲಿಂಗರಾಜು*
(ವಿದ್ಯಾರ್ಥಿ)

ಭೂವಿಜ್ಞಾನಿ, ಕವಿ, ಲೆಫ್ಟಿನೆಂಟ್, ಅಧ್ಯಾಪಕ ಎಲ್ಲವೂ ಓರ್ವ ವ್ಯಕ್ತಿ ಆಗಿರಲು ಸಾಧ್ಯವೆ? ಹೌದು, ಆಗಿದ್ದುಂಟು. ಅಂತಹ ಅಪರೂಪದ ವ್ಯಕ್ತಿ ನನಗೆ ಆತ್ಮೀಯರಾಗಿರುವುದು ನನ್ನ ಭಾಗ್ಯ. ಈಗ್ಗೆ ಸುಮಾರು ೪೩ ವರ್ಷಗಳ ಹಿಂದೆ ಬೆಂಗಳೂರಿನ ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ನಾನು. ನನ್ನ ಐಚ್ಛಿಕ ವಿಷಯ ಭೂ ವಿಜ್ಞಾನವಾದರೂ ಕನ್ನಡ ಸಾಹಿತ್ಯ ಕೂಡ ನನ್ನ ಆಸಕ್ತಿಯ ವಿಷಯವಾಗಿತ್ತು. ಆಗ ನಮ್ಮ ಆ ಸರ್ಕಾರಿ ಕಾಲೇಜಿನಲ್ಲಿ ಬಹಳಷ್ಟು ಅಧ್ಯಾಪಕರು ಚೆನ್ನಾಗಿ ಪೂರ್ವ ತಯಾರಿ ನಡೆಸಿ ತರಗತಿಗೆ ಬರುವ, ಮನಸ್ಸಿಟ್ಟು ಪಾಠ ಹೇಳುವ ಅತ್ಯುತ್ತಮ ಬೋಧಕರಾಗಿದ್ದರು. ಅಂಥವರ ಪಾಠ ಕೇಳುತ್ತಿದ್ದುದೇ ವ್ಯಾಸಂಗದಲ್ಲಿ ಆಸಕ್ತರಾಗಿದ್ದ ವಿದ್ಯಾರ್ಥಿಗಳಿಗೆ ಮರೆಯಲಾಗದ ಸಂತೋಷದ ಅನುಭವ. ಊರಿದ್ದಲ್ಲಿ ಹೊಲಗೇರಿ ಇರುವುದಷ್ಟೆ? ಅದೇ ರೀತಿ ಕೆಲವು ಹುಡುಗರು ಗಮನವಿಟ್ಟು ಪಾಠ ಕೇಳುವುದಕ್ಕಿಂತ ಕೀಟಲೆಯಲ್ಲಿ ತೊಡಗಿರುತ್ತಿದ್ದದ್ದೇ ಹೆಚ್ಚು. ಆದರೆ ಕೆಲವು ಅಧ್ಯಾಪಕರ ಕ್ಲಾಸುಗಳಲ್ಲಿ ಮಾತ್ರ ಅಂತಹ ಘಟಿಂಗರೂ ಗಪ್‌ಚಿಪ್ ಆಗಿಬಿಡುತ್ತಿದ್ದರು. ಅಂತಹ ಶಿಸ್ತುಗಾರರ ಪೈಕಿ ನನ್ನ ಪ್ರೀತಿಯ ಮೇಷ್ಟ್ರು ಕೆ. ಎಸ್. ನಿಸಾರ್ ಅಹಮದ್ ಅವರೂ ಒಬ್ಬರು.

ಇಂಗ್ಲಿಷ್ ಸಾಹಿತ್ಯ ಬೋಧಿಸುತ್ತಿದ್ದ ಶ್ರೀಯುತರಾದ ಡಿಸೋಜ, ಸಂಪತ್ ಐಯ್ಯಂಗಾರ್, ಪಿ. ಲಂಕೇಶ್, ಎಚ್. ಜಿ.

ಸೂರ್ಯನಾರಾಯಣ ರಾವ್; ಕನ್ನಡ ಪಾಠ ಹೇಳುತ್ತಿದ್ದ ಶ್ರೀಯುತರಾದ ಶ್ರೀಮಂತ ಕಂಠದ ಎಮ್. ಎಚ್. ಕೃಷ್ಣಯ್ಯ, ಮೃದುವಾಗಿ ಭಾಷಿಸುತ್ತಿದ್ದ ಶ್ರೀ ಎಂ. ವಿ. ಸೀತಾರಾಮಯ್ಯ, ಶ್ರೀಮತಿ ಎಂ. ಎಲ್. ಲಲಿತಮ್ಮ; ನೀಟಾದ ದಿರಿಸಿನಿಂದ ಆಕರ್ಷಿಸುತ್ತಿದ್ದ ಸಮಾಜಶಾಸ್ತ್ರದ ಶ್ರೀ ಕೆಂಡಗಣ್ಣಸ್ವಾಮಿ ಮುಂತಾದವರು ನನ್ನ ಉಪಾಧ್ಯಾಯರು. ನನಗೆ ಪಾಠ ಹೇಳದಿದ್ದರೂ ಎನ್.ಸಿ.ಸಿ.ಯಲ್ಲಿ ಸೀನಿಯರ್ ಅಧಿಕಾರಿಯಾಗಿದ್ದ, ಸದಾ ಲವಲವಿಕೆ, ಚಟುವಟಿಕೆಗಳಿಂದ ಕೂಡಿರುತ್ತಿದ್ದ ಗಣಿತದ ಅಧ್ಯಾಪಕರು ಈಗಲೂ ನೆನಪಿಗೆ ಬರುವುದುಂಟು. ಅವರೇ ಜಿ. ಟಿ. ನಾರಾಯಣರಾವ್. ಇವರೆಲ್ಲರ ಪೈಕಿ ತುಂಬಾ ಆತ್ಮೀಯರಾಗಿ, ಈಗಲೂ ನನ್ನನ್ನು 'ನನ್ನ ನೆಚ್ಚಿನ ವಿದ್ಯಾರ್ಥಿಮಿತ್ರ' ಎಂದು ಎಂತಹ ದೊಡ್ಡ ಸಮಾರಂಭದಲ್ಲಿಯೂ ಎಲ್ಲೋ ಮೂಲೆಯಲ್ಲಿ ಕುಳಿತಿದ್ದರೂ ಸಭೆಗೆ ಪರಿಚಯಿಸುವ; ನಾನು ನನ್ನದೇ ಆದ ವೃತ್ತಿಪರ ಅನ್ಯಲೋಕದ ಸಂಶೋಧನೆ-ಅನ್ವೇಷಣೆಗಳಲ್ಲಿ ಮಗ್ನನಾಗಿದ್ದರೂ ಬಿಡದೆ ಆಗಾಗ ನನ್ನ ಮನ ಸೆಳೆಯುವ; ಪ್ರಖ್ಯಾತರಾದರೂ ನನ್ನ ಹೃದಯದಲ್ಲಿ ಆತ್ಮೀಯರಾಗಿ ಚಿರವಾಗಿ ನೆಲೆಸಿಬಿಟ್ಟಿರುವ ವ್ಯಕ್ತಿಯೆಂದರೆ—ನನಗೆ ಭೂ ವಿಜ್ಞಾನವನ್ನು ಐದು ವರ್ಷ ಬೋಧಿಸಿದ್ದ ಮತ್ತು ಎನ್.ಸಿ.ಸಿ.ಯಲ್ಲಿ ಲೆಫ್ಟಿನೆಂಟ್ ಸಹ ಆಗಿದ್ದ ಶ್ರೀ ಕೆ. ಎಸ್. ನಿಸಾರ್ ಅಹಮದ್ ಅವರು.

ಆಗ ನಾವು ಓದುತ್ತಿದ್ದ ಹಲವಾರು ವಿಷಯಗಳಲ್ಲಿ ಭೂ ವಿಜ್ಞಾನ ಕೂಡ ಒಂದು ಮುಖ್ಯ ವಿಷಯವಾಗಿತ್ತು. ನನ್ನ ಭವಿಷ್ಯವನ್ನು ರೂಪಿಸುವ ಐಚ್ಛಿಕ ವಿಷಯ ಅದಾಗಿತ್ತು. ಹಾಗಾಗಿ ಭೂ ವಿಜ್ಞಾನದ ಪೀರಿಯಡ್ಡುಗಳಿಗೆ ಕಾತರನಾಗಿ ಕಾಯುತ್ತಿದ್ದೆ. ಅದರಲ್ಲಿಯೂ ನಿಸಾರ್‌ರವರ ಕ್ಲಾಸುಗಳಿಗಾಗಿ ಹೆಚ್ಚು ಕಾತರಿಸುತ್ತಿದ್ದೆ. ಇದಕ್ಕೆ ಕಾರಣ, ನಿಸಾರ್ ಕೇವಲ ಭೂ ವಿಜ್ಞಾನದ ಅಧ್ಯಾಪಕರಾಗಿರದೆ, ಆಗಿನ ಎಲ್ಲರ ಗಮನ ಸೆಳೆಯುತ್ತಿದ್ದ ಕನ್ನಡದ ಯುವ ಕವಿ ಕೂಡ ಆಗಿದ್ದರು. ಭೂ ವಿಜ್ಞಾನದಲ್ಲಿದ್ದ ಶ್ರದ್ಧೆ ಮತ್ತು ನನ್ನ ಕನ್ನಡಾಸಕ್ತಿ, ಭೂ ವಿಜ್ಞಾನಿ ಮತ್ತು ಕವಿ ಎರಡೂ ಆಗಿದ್ದ ನಿಸಾರ್‌ರವರನ್ನು ಆಗಲೇ ನನಗೆ ಆತ್ಮೀಯರನ್ನಾಗಿಸಿಬಿಟ್ಟಿತ್ತು. ೧೯೬೨ರ ಅವಧಿಯಲ್ಲಿ ಬೆಂಗಳೂರು ಬಾನುಲಿಯಲ್ಲಿ ಸರಿ ಸುಮಾರು ಪ್ರತಿ ದಿವಸ ಬೆಳಗ್ಗೆಯ ಸಮಯದಲ್ಲಿ ನಿಸಾರರ 'ನೆಲ ನಮ್ಮದು, ಜಲ ನಮ್ಮದು', 'ಹಿಗ್ಗಿ ನಡೆ, ನುಗ್ಗಿ ನಡೆ' ಮುಂತಾದ ಯುದ್ಧಗೀತೆಗಳು ಪಿ. ಕಾಳಿಂಗರಾವ್, ಎಂ. ಎಸ್. ರಾಮನ್, ಸಿ. ಕೆ. ತಾರಾ ಮುಂತಾದ ಗಾಯಕ-ಗಾಯಕಿಯರಿಂದ ಪ್ರಸಾರವಾಗಿ ಜನಪ್ರಿಯತೆಯನ್ನು ಗಳಿಸಿದ್ದವು. ಆಗಷ್ಟೇ ಚೀಣಿಯರು ಭಾರತದ ಮೇಲೆ ಆಕ್ರಮಣ ಮಾಡಿದ್ದರು. ಅದರ ನಿಮಿತ್ತ ಅವರಿಂದ ಹಲವು ಯುದ್ಧ ಗೀತೆಗಳು ಹೊಮ್ಮಿದ್ದವು. ಹೀಗಾಗಿ ಮೇಷ್ಟ್ರ ಬಗೆಗೆ ನಮಗೆಲ್ಲ ಆದರಾಭಿಮಾನ ಹೆಚ್ಚಿತ್ತು.

ಈಗಿನಂತೆಯೇ ಆಗಲೂ ನೀಟಾಗಿ ಸೂಟು ಧರಿಸಿ ಕಾಲೇಜಿಗೆ ಬರುತ್ತಿದ್ದ ಇವರು ಮೇಲ್ನೋಟಕ್ಕೆ ಮುನಿಸನ್ನು ವ್ಯಕ್ತಪಡಿಸಿ ಸ್ಟ್ರಿಕ್ಟಾಗಿ ಕಾಣಿಸುತ್ತಿದ್ದರು. ಅದಿಲ್ಲದಿದ್ದರೆ ಪುಂಡ ವಿದ್ಯಾರ್ಥಿಗಳನ್ನು ತಹಬಂದಿಗೆ ತಂದು ಪಾಠ ಹೇಳಲು ಸಾಧ್ಯ ಆಗುತ್ತಿರಲಿಲ್ಲ. ಅವರು ಎಷ್ಟೇ ಕೋಪ ವ್ಯಕ್ತಪಡಿಸಿದರೂ ಅವರ ಪ್ರಯತ್ನಕ್ಕೂ ಮೀರಿ ಅದುಮಿಡಲಾಗದ ನಗೆ ಮಿಂಚು ನುಸುಳಿ ಬರುತ್ತಿತ್ತು. ತರಗತಿಯಲ್ಲಿ ಭೂ ವಿಜ್ಞಾನವನ್ನು ಬೋಧಿಸುವಾಗ, ಶಿಲೆಗಳ

ಗುಣಗಳನ್ನು ತಿಳಿಸುವಾಗ, ಪರಿಸರದಲ್ಲಿ ಆಗುತ್ತಿರುವ ಭೂ ವೈಜ್ಞಾನಿಕ ಪ್ರಕ್ರಿಯೆಗಳನ್ನು ವಿವರಿಸುವಾಗ ಎಲ್ಲೋ ಅವರ ಕವಿತ್ವ ಅಚಾನಕ್ಕಾಗಿ ಬಳಕೆಯಾಗಿ ಬಿಡುತ್ತಿತ್ತು. ಕಠಿಣ ಶಿಲೆಗಳ ಬಗ್ಗೆ ಹಾಗೂ ಅವುಗಳಲ್ಲಿ ಅಡಗಿರುವ ಖನಿಜ ಸೌಂದರ್ಯ ಹಾಗೂ ಗಹನವಾದ ವೈಜ್ಞಾನಿಕ ವಿಚಾರಗಳನ್ನು ಸರಳೀಕರಿಸಿ ಅಂದವಾಗಿ ನಮ್ಮ ಮನಸ್ಸಿನಲ್ಲಿ ಉಳಿಯುವ ರೀತಿಯಲ್ಲಿ ಹೇಳುತ್ತಿದ್ದದ್ದು ಅವರ ಬೋಧನೆಯ ವಿಶಿಷ್ಟತೆ. ಅವರು 'ಐಬಿಎಚ್ ಪ್ರಕಾಶನ'ದ ಮೂಲಕ ಪ್ರಕಟಿಸಿದ 'ಶಿಲೆಗಳು ಮತ್ತು ಖನಿಜಗಳು' ಇದಕ್ಕೆ ಒಳ್ಳೆಯ ಉದಾಹರಣೆ. ಈ ಪುಸ್ತಕಕ್ಕೆ ಅವರಿಗೆ ಪ್ರಶಸ್ತಿ ಸಹ ಬಂದಂತೆ ನೆನಪು. ವಿಜ್ಞಾನ ವಿಷಯವನ್ನು ಕಾವ್ಯಮಯ ಶೈಲಿಯಲ್ಲಿ ನಿರೂಪಿಸುತ್ತಿದ್ದದ್ದು ಅವರ ಜಾಯಮಾನವಾಗಿದ್ದಂತೆ, ಅವರ ಕವನಗಳಲ್ಲೂ ಹಲವಾರು ಬಾರಿ ವೈಜ್ಞಾನಿಕ ಸಂಗತಿಗಳ ತುಣುಕುಗಳು ನುಸುಳಿರುವುದನ್ನು ನಾವು ಗಮನಿಸಬಹುದು. ಅವರ ಪ್ರಸಿದ್ಧ ಕವನ 'ನಿತ್ಯೋತ್ಸವ'ದಲ್ಲಿ ಸಹ್ಯಾದ್ರಿ ಗಿರಿ ಶ್ರೇಣಿಯ ನೈಸರ್ಗಿಕ ಸಂಪನ್ಮೂಲಗಳ ವೈಭವವನ್ನು ವರ್ಣಿಸುತ್ತಾ, 'ಲೋಹದದಿರ ಉತ್ತುಂಗದ ನಿಲುಕಿನಲ್ಲಿ' ಎನ್ನುವ ಸಾಲು ಭೂ ವಿಜ್ಞಾನದ ಕೊಡುಗೆಯಲ್ಲದೆ ಮತ್ತೇನು? ಇದು ವಾಸ್ತವವಾಗಿ ಕುದುರೆಮುಖದ ವರ್ಣನೆ.

ತರಗತಿಗಳಲ್ಲಿ ಖನಿಜಗಳನ್ನು ಗುರುತಿಸುವ ಮತ್ತು ಅವುಗಳ ಗುಣಗಳನ್ನು ನೆನಪಿಡಲು ಅವರು ಬಳಸುತ್ತಿದ್ದ ಉಪಮೆಗಳು ಬಹಳ ಉಪಯುಕ್ತವಾಗುತ್ತಿದ್ದವು. ಮುಂದೆ ನಾನು ಭೂ ವಿಜ್ಞಾನಿಯಾಗಿ, ಜನಪ್ರಿಯ ವಿಜ್ಞಾನದ ಹವ್ಯಾಸಿ ಲೇಖಕನಾಗಿದ್ದು ಅವರಿಗೆ ಹೆಮ್ಮೆ ತಂದ ವಿಷಯವಾಗಿತ್ತು. ನಾನು ಬರೆದ ಲೇಖನಗಳು ಮತ್ತು ಅವುಗಳಿಗೆ ನಾನು ನೀಡುತ್ತಿದ್ದ ಕಾವ್ಯಾತ್ಮಕ ಶೀರ್ಷಿಕೆಗಳಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಪ್ರೋತ್ಸಾಹಿಸು ತ್ತಿದ್ದರು. ನಾನು ಕಳೆದ ಶತಮಾನದ ಎಂಬತ್ತರ ದಶಕದ ಆದಿ ಭಾಗದಲ್ಲಿ ಸಂಪಾದಿಸಿದ 'ಹೊಸ ಚಿಗುರು' ಎಂಬ ಜನಪ್ರಿಯ ವಿಜ್ಞಾನ ಲೇಖನಗಳ ಸಂಕಲನಕ್ಕೆ ಬೆನ್ನುಡಿಯನ್ನು ನಿಸಾರರು ಬರೆದು ಆಶೀರ್ವದಿಸಿದ್ದರು. ಜಲವಿದ್ಯುತ್ ಯೋಜನೆಗಳಿಗೆ ಕಾರಣವಾಗುವ ನಮ್ಮ ನದಿಗಳು ಉಗಮವಾದ ಬಗ್ಗೆ ಬರೆದ 'ಬೆಳಕು ನೀಡುವ ಡೊಂಕು ನದಿಗಳು' ಎನ್ನುವ ನನ್ನ ಲೇಖನಕ್ಕೆ ಸ್ಫೂರ್ತಿ ಅವರ ಕವನದ ಸಾಲು 'ಜೋಗದ ಸಿರಿ ಬೆಳಕಿನಲ್ಲಿ...'. ಇದು ನಮಗಿಬ್ಬರಿಗೂ ಖುಷಿ ತಂದ ವಿಚಾರವಾಗಿದೆ.

ತರುವಾಯ ಕಾಲ ಕಳೆದಂತೆಲ್ಲ ಎಡೆಬಿಡದ ಪ್ರವಾಸ ಹಾಗೂ ಕಾರ್ಯಭಾರದ ದೆಸೆಯಿಂದ ನಾನು ಅವರನ್ನು ಭೇಟಿಯಾಗುವುದೇ ಅಪರೂಪವಾದರೂ ಅವರು ನನ್ನನ್ನು ನೆನೆಯದೆ, ಕೆಲವೊಮ್ಮೆ ಹೇಳಿ ಕಳಿಸದೆ ಬಿಡುತ್ತಿರಲಿಲ್ಲ. ನನ್ನ ಪ್ರಗತಿಯ ಬಗ್ಗೆ ವಿಚಾರಿಸುತ್ತಲೇ ಇದ್ದರು. ನಾನು ಪಿಎಚ್‌ಡಿ. ಪಡೆದದ್ದು, ಉಪಗ್ರಹ ಮಾಹಿತಿ ಚಿತ್ರಗಳನ್ನು ಬಳಸಿ ನೈಸರ್ಗಿಕ ಸಂಪನ್ಮೂಲಗಳ ನಕ್ಷೆ ತಯಾರಿಸುವ ಕೇಂದ್ರಕ್ಕೆ ನಿರ್ದೇಶಕನಾಗಿದ್ದು ಅವರಿಗೆ ಬಹಳ ಸಂತೋಷ, ಹೆಮ್ಮೆಯ ವಿಷಯವಾಗಿತ್ತು. ಆಗ ನಾನು ತಯಾರಿಸುತ್ತಿದ್ದ ನಕ್ಷೆಗಳನ್ನು ನೋಡಿ ತೃಪ್ತಿ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಬೆನ್ನು ತಟ್ಟುತ್ತಲೇ ಬಂದರು. ಅವರಿಂದ ಕಲಿತ ನಿಸರ್ಗಪ್ರಿಯತೆ ನನ್ನ ವೈಜ್ಞಾನಿಕ ಚಟುವಟಿಕೆಗಳಲ್ಲಿ ಒಂದಾಗಿರುವುದು, ಈಗ ನಾನು ಸೇವೆಯಿಂದ ನಿವೃತ್ತನಾದ ಅನಂತರವೂ ನನ್ನ

ಚಟುವಟಿಕೆಗಳಲ್ಲಿ ಅನುವಾಗುತ್ತಿವೆ. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಕಾರ್ಯಕ್ರಮಗಳನ್ನು ನಿರೂಪಿಸುವಾಗ, ಜನರಿಗೆ ಅವುಗಳ ಸಂರಕ್ಷಣೆಯ ಬಗ್ಗೆ ವಿವರಿಸುವಾಗ ಎಲ್ಲೋ ನಿಸಾರ್ ಅವರ ಕವನದ ಸಾಲುಗಳು ಬಳಕೆಯಾಗಿ ಬಿಡುತ್ತವೆ. ಇತ್ತೀಚೆಗಷ್ಟೇ, ಪ್ರಸಿದ್ಧ ಪರಿಸರವಾದಿ ಮತ್ತು ಅರಣ್ಯಶಾಸ್ತ್ರಜ್ಞ ಶ್ರೀ ಎ. ಎನ್. ಎಲ್ಲಪ್ಪರೆಡ್ಡಿ ಯವರೊಂದಿಗೆ ತಜ್ಞರ ಸಮಿತಿಯ ಸದಸ್ಯನಾಗಿ ಮಲೆನಾಡಿನ ಹೃದಯ ಭಾಗದಲ್ಲಿ ಸಂಚರಿಸುತ್ತಿದ್ದಾಗ ನಮ್ಮ ನೆನಪಿಗೆ ಬರುತ್ತಿದ್ದದ್ದು ಕುವೆಂಪು ಅವರ ಕಾದಂಬರಿಯ ಮತ್ತು ನಿಸಾರರ ಕವನದ ಸಾಲುಗಳು. ನಿಸಾರರ ಅಂತರ್ಯದಲ್ಲಿ ಈಗಲೂ ಸೆಲೆಯಾಗಿರುವ ಬತ್ತದ ಉತ್ಸಾಹ, ಶ್ರದ್ಧಾಪೂರ್ಣ ಅಧ್ಯಯನ, ನಿಸರ್ಗ ಮತ್ತು ಜೀವನದಲ್ಲಿ ಅವರಿಗಿರುವ ವಿವರಪ್ರದ ಆಪ್ಯಾಯನತೆ ಮತ್ತು ಕುತೂಹಲಾಸಕ್ತಿ ನನಗೆ ಮಾರ್ಗದರ್ಶಿಯಾಗಿವೆ.

ಭೂ ವಿಜ್ಞಾನಕ್ಕೂ ಶ್ರಮಜೀವನಕ್ಕೂ ಬಿಡಿಸಲಾಗದ ನಂಟು. ನಾನು ವಿದ್ಯಾರ್ಥಿ ಯಾಗಿದ್ದಾಗ ಎನ್.ಸಿ.ಸಿ. ಕಡ್ಡಾಯ ಆಗಿತ್ತು. ಜೊತೆಗೇ ನನಗೆ ಇಷ್ಟವಾಗಿದ್ದ ಚಟುವಟಿಕೆಯೂ ಆಗಿತ್ತು. ಅಲ್ಲದೇ ನಿಸಾರ್ ಅಹಮದ್ ಅವರು ದೇಶಭಕ್ತಿ ಗೀತೆಗಳನ್ನು ರಚಿಸಿದ ಲೆಫ್ಟಿನೆಂಟ್ ಹುದ್ದೆಯ ಅಧಿಕಾರಿ ಆಗಿ ನೇತೃತ್ವ ವಹಿಸಿದ್ದ ಮೈಸೂರು ೧೨ನೆಯ ಬೆಟಾಲಿಯನ್ನಿನ ಕಂಪೆನಿಯೊಂದರ ಕೆಡೆಟ್ ಆಗಿದ್ದೆ. ಆಗ ನಾವು ಧರಿಸುತ್ತಿದ್ದ ಸಮವಸ್ತ್ರಕ್ಕೆ ಗಂಜಿ ಹಾಕಿ, ಚೆನ್ನಾಗಿ ಇಸ್ತ್ರಿ ಮಾಡಿ ಉಡಬೇಕಾಗಿತ್ತು. ಉಡುಗೆ-ತೊಡುಗೆ, ಬೆಲ್ಟು, ಬೆರ್ರಿ ಕ್ಯಾಪ್, ಅಮ್ಯುನಿಷನ್ ಬೂಟುಗಳು, ಹೆಕಲ್ ಮುಂತಾದವುಗಳ ಸ್ವಚ್ಛತೆ, ನೀಟುಗಾರಿಕೆಗಳ ಬಗ್ಗೆ ನಿಸಾರರು ತೀವ್ರವಾದ ಗಮನ ನೀಡಿ ಉಸ್ತುವಾರಿ ವಹಿಸುತ್ತಿದ್ದರು. ನಿಸಾರ್ ಅವರು ಪ್ರವೃತ್ತಿಯಿಂದ ಕವಿಯಾದರೂ ಸುಕುಮಾರ ಹಾಗೂ ದಯಾರ್ದ್ರ ಸ್ವಭಾವದವರಾಗಿದ್ದರೂ ಕವಾಯತನ್ನು ಕಲಿಸುವ ಕಠಿಣ ಕಾಯಕದಲ್ಲಿ ಗಂಟೆಗಟ್ಟಲೆ ಚಳಿ ಬಿಸಿಲೆನ್ನದೆ ತೊಡಗುತ್ತಿದ್ದದ್ದು ಒಂದು ವಿಶಿಷ್ಟ ಸಂದರ್ಭವಾಗಿರುವಂತೆಯೇ ಅವರ ಶಿಷ್ಯರಾಗಿದ್ದ ನಮಗೆ ಸೋಜಿಗದ ಸಂಗತಿಯೂ ಆಗಿತ್ತು. ಅಂದರೆ, ಅವರು ಮನಃಪೂರ್ವಕವಾಗಿ ಸಮ್ಮತಿಸಿದ ಯಾವುದೇ ಕಾರ್ಯವಾಗಲಿ, ಅದನ್ನು ತದೇಕಚಿತ್ತತೆಯಿಂದ ನೆರವೇರಿಸುವುದು ಅವರ ಹುಟ್ಟುಗುಣವಾಗಿತ್ತು. ಇದು ನನ್ನಂತಹ ಅನೇಕ ಕೆಡೆಟ್ಟುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಮುಂದಿನ ಬಾಳಿನಲ್ಲಿ ಕೈದೀವಿಗೆಯಾದದ್ದನ್ನು ಕೃತಜ್ಞತೆಯಿಂದ ನೆನೆಯಬೇಕು.

ಆಗ ನಾನು ಪರ್ವತಾರೋಹಣದ ಅಡ್ವೆಂಚರ್ (ಸಾಹಸಾನ್ವೇಷಣೆ) ಕೋರ್ಸ್‌ಗೆ ಆಯ್ಕೆಗೊಂಡು, ಒಬ್ಬ ಭೂ ವಿಜ್ಞಾನದ ವಿದ್ಯಾರ್ಥಿಯಾಗಿ ಹಿಮಾಲಯದಲ್ಲಿ ಪರ್ವತಾ ರೋಹಣ ಮತ್ತು ಸಾಹಸಗಳ ಅಭ್ಯಾಸ ಮಾಡಲು ಸಾಧ್ಯವಾಗಿದ್ದಕ್ಕೆ ಮತ್ತು ರಮಣೀಯ ದೃಶ್ಯಗಳನ್ನು ಮನಸಾರೆ ಅನುಭವಿಸಿ ಆನಂದಿಸಿದ್ದಕ್ಕೆ ನಿಸಾರ್ ಅಹಮದರೇ ಮೂಲ ಕಾರಣ. ಈ ಸಂಗತಿ ನನ್ನ ವೃತ್ತಿ ಜೀವನವನ್ನು ಯಶಸ್ವಿಯಾಗಿ ನಿರ್ವಹಿಸಲು ಕಾರಣವಾಗಿದೆ ಎನ್ನುವುದು ಅತಿಶಯೋಕ್ತಿ ಅಲ್ಲ.

ಇಲ್ಲಿ ಎನ್.ಸಿ.ಸಿ.ಯ ಕ್ಯಾಂಪ್ ಒಂದರ ಅನುಭವವೊಂದು ಹೇಳಬೇಕೆನಿಸಿದೆ. ಅದು ನಡೆದದ್ದು ಈಗ್ಗೆ ನಲವತ್ತೆರಡು ವರ್ಷಗಳ ಹಿಂದೆ. ನಮ್ಮ ೧೨ನೆಯ ಮೈಸೂರು

ಎನ್.ಸಿ.ಸಿ. ಬೆಟಾಲಿಯನ್ ಮೇಜರ್ ನಾರಾಯಣ ಸಿಂಗ್ ಅವರ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಒಂದು ಕಾರ್ಯ ಶಿಬಿರವನ್ನು ನಡೆಸಿತು. ನಮ್ಮ ಕಾಲೇಜಿನ ಎಲ್ಲ ಎನ್.ಸಿ.ಸಿ. ಅಧಿಕಾರಿಗಳು ಹಾಗೂ ಕೆಡೆಟ್‌ಗಳು ನಮಗೆ ಮೀಸಲಾದ ವಿಶೇಷ ರೈಲಿನಲ್ಲಿ ದಾವಣಗೆರೆಗೆ ಹೋದೆವು. ಅಲ್ಲಿ ಡಿ.ಆರ್.ಎಂ. ಕಾಲೇಜಿನ ಹಿಂಬದಿಯಲ್ಲಿ ಆ ಕಾಲದಲ್ಲಿದ್ದ ಹೆಬ್ಬಯಲಿನಲ್ಲಿ ನಾವು ಬೀಡು ಬಿಟ್ಟೆವು. ನಮ್ಮೆಲ್ಲರ ವಾಸ್ತವ್ಯಕ್ಕೆ ಅಲ್ಲಿ ಅನುಕೂಲಕರವಾದ ಕಟ್ಟಡಗಳಿದ್ದವು. ಅಡಿಗೆಯ ಸರಕನ್ನು ದಾಸ್ತಾನಿಸುವ ಹಾಗೂ ಬಡಸಾಣಿಕೆಯ ಸೌಕರ್ಯಕ್ಕಾಗಿ ಹಲವು ಜಿಂಕ್ ಷೀಟು(Zinc sheets)ಗಳಿಂದ ತಯಾರಿಸಿದ ಬೃಹತ್ ಷೆಡ್ಡುಗಳನ್ನು ನಿರ್ಮಿಸಿದ್ದರು. ಒಟ್ಟಿನಲ್ಲಿ ಒಳ್ಳೆಯ ತಂಪಾದ ಹಿತಕರವಾದ ವಾತಾವರಣ ನಮಗೆಲ್ಲ ಮುದವನ್ನು ನೀಡಿತ್ತು. ಎರಡು ಮೂರು ದಿವಸಗಳು ನಮ್ಮ ಕವಾಯತಿನ, ರೈಫಲ್ ತರಬೇತಿಯ ಮಾಮೂಲಿ ಚಟುವಟಿಕೆಯ ಜೊತೆಗೆ, ಕೆಲವು ಮೈಲಿಗಳ ದೂರದಲ್ಲಿರುವ ದೊಡ್ಡಬಾತಿಗೆ ಎಂಬ ಊರಿಗೆ ರೂಟ್ ಮಾರ್ಚ್ ಹಾಗೂ ಅಲ್ಲಿನ ಗುಡ್ಡದ ಆರೋಹಣ ಇತ್ಯಾದಿ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು.

ಆಗ ದಾವಣಗೆರೆ ನಗರದಲ್ಲಿ ತುಂಬ ಖ್ಯಾತಿ ಪಡೆದಿದ್ದ 'ಶಂಕರ್ ಟೆಕ್ಸ್‌ಟೈಲ್ ಮಿಲ್ಸ್'ನ ಮಾಲೀಕರು ಮತ್ತು ಅಧಿಕಾರಿ ವರ್ಗ ನಮ್ಮ ಬೆಟಾಲಿಯನ್ನನ್ನು ಅತಿಥಿ ಭೋಜನಕ್ಕೆ ಆಹ್ವಾನಿಸಿತು. ನಮ್ಮ ಶಿಬಿರದಿಂದ ಸಾಕಷ್ಟು ದೂರವಿದ್ದ ಮಿಲ್‌ಗೆ ಸಂಜೆ ಆರೂವರೆಗೆ ಎಲ್ಲರೂ ನಡೆದರು. ಶಿಬಿರದ ಉಸ್ತುವಾರಿಗೆ ನಮ್ಮ ಸ್ಕ್ವಾಡ್‌ನ ಅಧಿಕಾರಿಗಳಾದ ನಿಸಾರ್ ಅಹಮದ್ ಹಾಗೂ ನಾವು ಕೆಲವು ಕೆಡೆಟ್‌ಗಳು ಹಿಂದೆ ಉಳಿದೆವು. ಅದಕ್ಕೆ ಇನ್ನೊಂದು ಕಾರಣವೂ ಇತ್ತು. ಆ ದಿನ ಬೆಳಗಿನಿಂದಲೇ ನಿಸಾರ್ ಅವರು ನೀರಿನ ಇನ್‌ಫೆಕ್ಷನ್‌ನ ದೆಸೆಯಿಂದ ಕೆಮ್ಮುತ್ತಿದ್ದರು. ಜೊತೆಗೆ ಅವರ ಮೈ ಸಹ ಬೆಚ್ಚಗಾಗಿದ್ದರಿಂದ ನಮ್ಮ ಕ್ಯಾಂಪ್ ಕಮಾಂಡೆಂಟ್ ನಾರಾಯಣ ಸಿಂಗ್ ಅವರು ನಿಸಾರರನ್ನು ಶಿಬಿರದಲ್ಲೇ ಉಳಿದು ಉಸ್ತುವಾರಿಕೆಯ ಕಾರ್ಯವನ್ನು ನಿರ್ವಹಿಸಲು ಸೂಚಿಸಿದ್ದರು.

ಆ ದಿನ ಬೆಳಗಿನಿಂದಲೇ ವಿಪರೀತ ಸೆಖೆ. ಸಂಜೆಯಾದ ಮೇಲೆ ಎಂಟು ಗಂಟೆಯ ಹೊತ್ತಿಗೆ ರಣ ಮಳೆ ಸುರಿಯತೊಡಗಿ, ಮಿಂಚು ಗುಡುಗುಗಳ ಭರಾಟೆ ಅವ್ಯಾಹತವಾಗಿ ಒಂಬತ್ತರ ತನಕ ಮುಂದುವರಿಯಿತು. ಆಮೇಲೆ ಅದೆಲ್ಲಿತ್ತೋ ಆ ಭಯಂಕರ ಬಿರುಗಾಳಿ, ವೇಗವಾಗಿ ಬೀಸತೊಡಗಿ ಕ್ಯಾಂಪಿನ ದೀಪಗಳೆಲ್ಲ ಆರಿ, ಜಿಂಕ್ ಷೀಟುಗಳು ಗಾಳಿಯಲ್ಲಿ ಪಟದಂತೆ ತೇಲುತ್ತಾ ಅರ್ಧ ಫರ್ಲಾಂಗಿಗಿಂತ ದೂರದಲ್ಲಿ ಬಿದ್ದವು. ಅಡಿಗೆಮನೆ, ದಾಸ್ತಾನಿನ ಹಾಗೂ ಊಟದ ವ್ಯವಸ್ಥೆಯ ಜಾಗವೆಲ್ಲ ಕೇವಲ ಹತ್ತು ನಿಮಿಷಗಳಲ್ಲಿ ಬಟಾಬಯಲಾಗಿ ಹೋಯಿತು. ಒಳಗಿದ್ದ ಅಡಿಗೆಯ ಮತ್ತು ಪರಿಚಾರಿಕೆಯ ಸಿಬ್ಬಂದಿಯ ಆಕ್ರಂದನ ಮತ್ತು ಭಯಭರಿತ ದಿಕ್ಕಾಪಾಲಿನ ಓಟದಿಂದ ನಾವೆಲ್ಲ ಕಂಗಾಲಾದೆವು. ನಮ್ಮ ನೆರವಿಗೆ ಬರಲು ಯಾವ ಸ್ಥಳೀಯರೂ ಬಳಿಯಿರಲಿಲ್ಲ. ಓಡುತ್ತಿದ್ದ ಕೆಲವರು ಉರುಳಿ ದೂರ ಬಿದ್ದಿದ್ದ ಪಾತ್ರೆ ಪರಡಿ ಹಾಗೂ ಇತರ ಸಾಮಾನುಗಳನ್ನು ಎಡವಿ ಬಿದ್ದು ಮೈ ಕೈಯೆಲ್ಲ ಗಾಯ ಮಾಡಿಕೊಂಡು ಚಡಪಡಿಸುತ್ತಿದ್ದರು. ಅವರನ್ನು ರಕ್ಷಿಸೋಣವೆಂದರೆ ನಮ್ಮ ಬಳಿ ಟಾರ್ಚ್ ಸಹ ಇರಲಿಲ್ಲ. ನಮ್ಮ ಕಟ್ಟಡದಿಂದ ಹೊರಗೆ ಬರುವುದೇ ತುಂಬಾ ದುಸ್ತರವಾಗಿತ್ತು. ಗಾಳಿಯ

ರಭಸಕ್ಕೆ ನಾವು ತಳ್ಳಿಕೊಂಡು ದೂರ ಹೋಗಿ ಬೀಳುವ ಭಯದಿಂದ ವಿಹ್ವಲರಾಗಿದ್ದಾಗ, ನಮ್ಮ ಅಧಿಕಾರಿ ನಿಸಾರ್ ಅಹಮದ್ ಧೈರ್ಯ ತಂದು ಕೊಂಡು 'ಕಮಾನ್ ಕೆಡೆಟ್ಸ್, ವಿ ವಿಲ್ ಹೆಲ್ಪ್ ದೋಸ್ ಪೂರ್ ಗಯ್ಸ್' ಎಂದು, ಕೆಮ್ಮಿಕೊಂಡೇ ಕತ್ತಲಲ್ಲಿ ಮುನ್ನುಗ್ಗಿದರು. ನಮಗೆ ಇಷ್ಟವಿಲ್ಲದಿದ್ದರೂ ಅವರ ಅಣತಿಯನ್ನು ಮೀರದೆ ನಾವೂ ಧಾವಿಸಿದೆವು.

ನಿತ್ರಾಣವಾಗಿ ಬಿದ್ದಿದ್ದ ಕೆಲವರನ್ನು ಪ್ರಯಾಸಪೂರ್ವಕವಾಗಿ ಎಳೆದು ತಂದು ಕ್ಷೇಮದ ಎಡೆಯನ್ನು ತಲಪಿದೆವು. ಈತನ್ಮಧ್ಯೆ ನಮ್ಮ ಕೆಡೆಟ್‌ಗಳಲ್ಲಿ ಒಬ್ಬನಾಗಿದ್ದ ಗಿರಿಸ್ವಾಮಿ ನಾಪತ್ತೆಯಾಗಿದ್ದ. ಈ ಬಿರುಮಳೆ, ಗಾಳಿ, ಗುಡುಗು ಸಿಡಿಲುಗಳ ಆರ್ಭಟದಲ್ಲಿ ಎಲ್ಲಿ ಹುಡುಕುವುದು ಎಂದು ದಿಕ್ಕು ಕಾಣದೆ ನಿಂತೆವು. ಜೊತೆಗೇ, ಎಲ್ಲರೂ ಒಕ್ಕೊರಲಿನಿಂದ ಅವನ ಹೆಸರನ್ನು ಹಿಡಿದು ಜೋರಾಗಿ ಏಳೆಂಟು ಬಾರಿ ಕೂಗಿದೆವು. ಆದರೆ ಉತ್ತರವಿಲ್ಲ. ಮಳೆ ಮತ್ತು ಗಾಳಿ ಅವನನ್ನು ಎಲ್ಲಿ ತಳ್ಳಿಕೊಂಡು ಹೋಗಿದೆಯೋ ಎಂಬ ಭಯ ನಮ್ಮನ್ನು ಆವರಿಸಿತ್ತು. ನಿಸಾರ್ ಅಹಮದ್ ಅವರಿಗೆ ಮೊದಲೇ ಕೊಂಚ ಜ್ವರವಿದ್ದು ಈಗ ಮಳೆಯಲ್ಲಿ ನೆನೆದದ್ದರಿಂದ ಚಳಿಯಾಗಿ ಗಡಗಡ ನಡುಗಹತ್ತಿದರು. 'ನೀವು ಒಳಗೆ ಹೋಗಿ ಬೆಚ್ಚಗೆ ಹೊದ್ದು ಮಲಗಿ ಸಾರ್. ನಾವು ಹುಡುಕಿ ಕೊಂಡು ಬರುತ್ತೇವೆ' ಎಂದು ಬಲವಂತ ಮಾಡಿದರೂ ನಿಸಾರ್ ಅಹಮದ್ ಒಪ್ಪದೆ ನಮ್ಮ ಜೊತೆಯಲ್ಲೇ ಹೊರಗೆ ಧಾವಿಸಿದರು. ಅಡುಗೆಮನೆ ಮತ್ತು ಮೆಸ್‌ಗಳಿದ್ದ ಜಾಗದೆಡೆಗೆ ಎಡವುತ್ತ ತಡವುತ್ತ ಕತ್ತಲಲ್ಲಿ ಮುಂದೆ ಸಾಗಿದೆವು. ನಮಗೆ ಇನ್ನೊಂದು ದಿಗಿಲೂ ಆವರಿಸಿತ್ತು. ಅದೆಂದರೆ, ಮಳೆ ಗಾಳಿಯ ದೆಸೆಯಿಂದ ಬಿದ್ದ ವಿದ್ಯುತ್ತಂತಿಗಳಿಂದ ಎಲ್ಲಿ ಕರೆಂಟು 'ಗ್ರೌಂಡ್' ಆಗಿದೆಯೋ ಎಂದು. 'ಸಾರ್, ನೀವು ಹಿಂದೆ ಬನ್ನಿ, ನಾವು ಮುಂದೆ ಸಾಗುತ್ತೇವೆ' ಎಂದು ನಿಸಾರರಿಗೆ ಹೇಳಿದಾಗ, 'ನೋ, ನೋ, ಐ ಮಸ್ಟ್ ಲೀಡ್ ಯೂ ಬೀಯಿಂಗ್ ಅನ್ ಆಫೀಸರ್. ಪ್ಲೀಸ್ ಫಾಲೋ ಮಿ' ಎಂದು, ಪ್ರಾಣಭಯವನ್ನೂ ಲೆಕ್ಕಿಸದೆ ಮುಂದೆ ನಡೆದರು.

ಅಲ್ಲೆಲ್ಲ ಹುಡುಕಿದರೂ, ಕೂಗಿದರೂ ಗಿರಿಸ್ವಾಮಿಯ ಅಡ್ರೆಸ್ಸಿಲ್ಲ. ಅವನ ಜೀವನಕ್ಕೆ ಏನಾದರೂ ಅಪಾಯವಾಗಿರಬಹುದು ಎಂದು ನಾವು ಹತಾಶರಾಗಿ ಹಿಂದಿರುಗಲು ಶುರುಮಾಡಿದಾಗ, ಐದಾರು ಗಜ ದೂರದಲ್ಲಿ ಏನೋ ಸದ್ದಾದಂತೆ ಭಾಸವಾಯಿತು. ತಡವರಿಸುತ್ತ ಅಲ್ಲಿಗೆ ಹೋಗಿ ಮಿಂಚಿನ ಬೆಳಕಿನಲ್ಲಿ ನೋಡಿದರೆ ಗಿರಿಸ್ವಾಮಿ ಟೇಬಲನ್ನು ತನ್ನ ಮೇಲೆ ಆಸರೆಯಾಗಿ ಬೋರಲು ಹಾಕಿಕೊಂಡು ಏನನ್ನೋ ಬಾಯಿ ತುಂಬಾ ಜಗಿಯುತ್ತ ಕೂತಿದ್ದಾನೆ! ಅವನನ್ನು ಜಪ್ತಿ ಮಾಡಿದರೆ ಅಡುಗೆಗಾಗಿ ತಂದಿದ್ದ ಒಣ ಕೊಬ್ಬರಿ, ಗೋಡಂಬಿ, ಒಣ ದ್ರಾಕ್ಷಿ, ಇತ್ಯಾದಿಗಳ ರಾಶಿಯೇ ಅವನ ಬಳಿ ಬಿದ್ದಿದೆ. 'ಅಯ್ಯೊ! ಪ್ರಳಯಾಂತಕ! ಪ್ರಪಂಚಾನೇ ನಾಶವಾಗ್ತಿರೋವಾಗ ಹೊಟ್ಟೆ ತುಂಬ ಗೋಡಂಬಿ, ದ್ರಾಕ್ಷಿಗಳನ್ನು ಮೆಲ್ಲುತ್ತಾ ಇಲ್ಲಿ ಸುಖವಾಗಿ ಕುಳಿತಿದ್ದೀಯಲ್ಲೋ. ಥೂ ನಿನ್ನ! ಎದ್ದು ಬಾ' ಎಂದು ನಿಸಾರರು ಛೀಮಾರಿ ಹಾಕಿ ಅವನನ್ನು ಕಟ್ಟಡದ ಕಡೆ ನಡೆಸಿದರು. ಆ ಭೀಕರ ಸನ್ನಿವೇಶದಲ್ಲೂ ನಮಗೆ ನಗೆ ತಡೆಯದಾಗಿತ್ತು. ಈ ಸಂಗತಿಯನ್ನು 'ಶಂಕರ್ ಮಿಲ್ಸ್'ನಿಂದ ವಾಪಸ್ಸು ಬರುವ ಯಾರಿಗೂ ಹೇಳಬಾರದೆಂದು ನಿರ್ಧರಿಸಿದೆವು.

ಪ್ರಕೃತಿ ವಿಜ್ಞಾನ ಮತ್ತು ಪ್ರಕೃತಿ ಪ್ರಿಯ ಸಾಹಿತ್ಯ—ಎರಡೂ ಅವಿಭಾಜ್ಯ ಎಂದು

ನನಗನ್ನಿಸುತ್ತದೆ. ಶ್ರೀ ಕೆ. ಎಸ್. ನಿಸಾರ್ ಅಹಮದ್ ಈ ಎರಡನ್ನೂ ಜೀವನದಲ್ಲಿ ಅಳವಡಿಸಿಕೊಂಡಿರುವ ಶ್ರೇಷ್ಠ ಕವಿ. ಅವರ ಕಾರ್ಯ ಶ್ರದ್ಧೆಯ ತುಣುಕೊಂದನ್ನು ನಾನು ಪಡೆದು ನನ್ನ ವೃತ್ತಿ ಮತ್ತು ಪ್ರವೃತ್ತಿಯಲ್ಲಿ ಧನ್ಯನಾಗಿದ್ದೇನೆ. ಇದೆಲ್ಲ ಕಾರಣಕ್ಕಾಗಿ 'ಗುರುವೆ ತಸ್ಮೈ ನಮಃ'.

ಕಾಗದದ ಮೇಲೆ ಅಕ್ಷರ ಮೂಡಿಸುವುದು ಲೇಖನಿಯಾದರೂ ಅದು ತಂತಾನೆ ಸ್ವತಂತ್ರವಾಗಿ ಚಲಿಸಿ ಬರೆಯಲು ಸಾಧ್ಯವಾಗದು. ಅದಕ್ಕೆ ಹೆಬ್ಬೆರಳು, ತೋರು ಬೆರಳು, ಹಸ್ತ; ಹಸ್ತಕ್ಕೆ ತೋಳು, ತೋಳಿಗೆ ಒಡಲು, ಒಡಲಿಗೆ ಮನಸ್ಸು ಪ್ರಾಣಗಳ ಅವಲಂಬನ ಅಗತ್ಯ. ಬಾಳಿನ ಯಾವುದೇ ಕ್ರಿಯೆ ಇಲ್ಲವೇ ವಸ್ತುವಿಗೆ ಇಂತಹ ಒಂದು ಅವಿಚ್ಛಿನ್ನ ಪರಂಪರೆಯ ಭಿನ್ನತೆಗಳನ್ನು ಬೆಸೆಯುವ ಏಕಸೂತ್ರತೆಯ ಹಿನ್ನೆಲೆಯಿರುತ್ತದೆ. ಒಂದಕ್ಕೆ ಮತ್ತೊಂದರ ಆಧಾರ, ಒತ್ತಾಸೆಗಳ ಅಗತ್ಯವಿದ್ದೇ ತೀರುತ್ತದೆ. ತಾತ್ತ್ವಿಕ ವಿವೇಚನೆಯ ಸಮಗ್ರ ದೃಷ್ಟಿಗಷ್ಟೇ ಜಗಜ್ಜೀವಿತದ ವಿದ್ಯಮಾನಗಳೆಲ್ಲದರ ಮರೆಯಲ್ಲಿ ಸಾಂಗೋಪಾಂಗವಾದ, ಅಜಸ್ರವಾದ ಸಂಬಂಧವಿರುವ ಮರ್ಮ ವಿದಿತವಾಗ ಬಲ್ಲದು.

(ಬದುಕಿನ ಬಗ್ಗೆ ತಾತ್ತ್ವಿಕ ದೃಷ್ಟಿ)

✧ ✧ ✧

'ವೃತ್ತಿ' ಪದದ ನಿಷ್ಪತ್ತಿ ವ್ಯುತ್ಪತ್ತಿಗಳೇನೇ ಇರಲಿ; ನನ್ನ ಮಟ್ಟಿಗೆ 'ವೃತ್ತಿ' ಎಂದರೆ ಇದು: ಅಬಾಧಿತ ಮತ್ತು ಸುರಕ್ಷಿತ ಜೀವನ ನಿರ್ವಹಣೆಯ ಸಲುವಾಗಿ ದಿನ ನಿತ್ಯದ ವೃತ್ತವನ್ನು ಎಡೆ ಬಿಡದೆ ಸುತ್ತುವ ಧಂದೆ. ಅಂದರೆ, ಪುನರಾವರ್ತನೆಯ ವೃತ್ತವನ್ನು ಪ್ರದಕ್ಷಿಸುವ ಮನುಷ್ಯ ಕರ್ಮ ಅಥವಾ ಲೌಕಿಕ ಧರ್ಮ—ವೃತ್ತಿ. ನಿಯತವಾದ ಮತ್ತು ನಿರಂತರವಾದ ಇಂತಹ ಕರ್ತವ್ಯ ಪಾಲನೆಯ ಹೊರೆಗಳಚಿಕೊಂಡ ನಿರಾಳ ಭಾವವನ್ನು ಮನುಷ್ಯನ ಮನಸ್ಸು ಪಡೆಯುವ ಸಿದ್ಧ ಸ್ಥಿತಿಯನ್ನು 'ನಿವೃತ್ತಿ' ಎನ್ನಬಹುದು.

(ವೃತ್ತಿ-ನಿವೃತ್ತಿ)



ಗುರುವೆ ತಸ್ಮೈ ನಮಃ

♦ ಎಸ್. ಸೀತಾರಾಮು
(ವಿದ್ಯಾರ್ಥಿ)

ಭೂವಿಜ್ಞಾನವನ್ನೇ ಓದಬೇಕೆನ್ನುವ ಹಂಬಲ ಹೊತ್ತ ನಾನು ೧೯೬೨ರಲ್ಲಿ ಬೆಂಗಳೂರಿನ ಸರಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ, ಅಂದರೆ ಹಿಂದಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಪ್ರೀ ಯೂನಿವರ್ಸಿಟಿಗೆ ಸೇರಿದೆ. ಆಗಿನ ಕಾಲಕ್ಕೆ ಬೆಂಗಳೂರಿನಲ್ಲಿ ಭೂ ವಿಜ್ಞಾನವನ್ನು ಬೋಧಿಸುತ್ತಿದ್ದ ಕಾಲೇಜು ಅದೊಂದೇ ಆಗಿತ್ತು. ಸರಕಾರಿ ಕಾಲೇಜಿನಲ್ಲಿ ಪಾಠ ಪ್ರವಚನ ಗಳು ಅಷ್ಟಕ್ಕಷ್ಟೇ ಮತ್ತು ಹುಡುಗರ ಗಲಾಟೆಗಳೂ ಜಾಸ್ತಿ ಅನ್ನುವ ಮಾತು ಆಗ ಸಾಮಾನ್ಯವಾಗಿ ಕೇಳಿಬರುತ್ತಿತ್ತು. ಸ್ವಲ್ಪ ಭಯದಿಂದಲೇ ಕಾಲೇಜು ಮೆಟ್ಟಿಲು ಹತ್ತಿ ನಮ್ಮ ಡಿಪಾರ್ಟ್‌ಮೆಂಟ್ ಸೇರಿದ್ದೆ. ಹೈಸ್ಕೂಲು ಮುಗಿಸಿ ಪ್ರೀ ಯೂನಿವರ್ಸಿಟಿಗೆ ಸೇರಲು ಬಂದಿದ್ದ ನನ್ನಂತಹ ಇನ್ನೂ ಕೆಲವು ಹುಡುಗರು ಅಲ್ಲಿ ನಿಂತಿದ್ದರು. ಸ್ವಪರಿಚಯ ಮಾಡಿಕೊಂಡು ಎಲ್ಲರೂ ನಮ್ಮ ಮೊದಲನೆಯ ಪೀರಿಯಡ್ ನಡೆಯಬೇಕಾಗಿದ್ದ ತರಗತಿಗೆ ಬಂದು ಉಪನ್ಯಾಸಕರಿಗಾಗಿ ಕಾಯುತ್ತಾ ಕುಳಿತೆವು.

ಕ್ಲುಪ್ತ ಸಮಯಕ್ಕೆ ಸರಿಯಾಗಿ ನೀಟಾದ ಸೂಟು, ಟೈ ತೊಟ್ಟ ಒಬ್ಬ ಸ್ಫುರದ್ರೂಪಿಯಾದ ವ್ಯಕ್ತಿ ಒಳಗೆ ಬಂದು ಹಸನ್ಮುಖದಿಂದ ಕುಳಿತುಕೊಳ್ಳಲು ಹೇಳಿ, ತಮ್ಮ ಹೆಸರು ಕೆ. ಎಸ್. ನಿಸಾರ್ ಅಹಮದ್ ಎಂದು ತಿಳಿಸಿ ಪರಿಚಯ ಮಾಡಿಕೊಂಡರು. ಅವರನ್ನು ನೋಡಿ ನಮಗೆ ಅವರು

ಉಪನ್ಯಾಸಕರು ಅನ್ನುವುದಕ್ಕೆ ಬದಲಾಗಿ ಹಿಂದಿ ಚಿತ್ರದ ಹಿರೋವಿನಂತೆಯೇ ಕಂಡರು. ಆ ನಮ್ಮ ಕಾಲೇಜು ಕೇವಲ ಹುಡುಗರ ಕಾಲೇಜಾಗಿದ್ದದ್ದು ನಮ್ಮ ಈ ಗುರುಗಳ ಅದೃಷ್ಟ ಎಂದುಕೊಂಡೆವು. ಅದು ಮೊದಲುಗೊಂಡು ನಾನು ಆ ಕಾಲೇಜಿನಲ್ಲಿ ಇದ್ದ ನಾಲ್ಕು ವರುಷಗಳಲ್ಲಿ ಅವರಲ್ಲಿ ಅದೇ ಒಪ್ಪ, ಓರಣ, ಶಿಸ್ತು ಮತ್ತು ಹಸನ್ಮುಖವನ್ನು ಕಾಣುತ್ತಾ ಬಂದಿದ್ದೇನೆ.

ಕಾಲೇಜಿನ ವಾತಾವರಣಕ್ಕೆ ಒಗ್ಗಿಕೊಂಡಂತೆಲ್ಲ ಆ ಕಾಲೇಜಿನ ಹಿರಿಮೆ ಗರಿಮೆಗಳ ಪರಿಚಯವಾಗುತ್ತಾ ಹೋಯಿತು. ಆಗಿನ ಕಾಲಕ್ಕೆ ಆ ಕಾಲೇಜಿನಲ್ಲಿದ್ದ ಪ್ರಾಧ್ಯಾಪಕರು ಉದ್ದಾಮ ಪಂಡಿತರೂ, ಶ್ರೇಷ್ಠ ಬೋಧಕರೂ ಆಗಿದ್ದಂತಹವರು: ಗಣಿತವಿಜ್ಞಾನದ ಪ್ರೊ. ನರೋನ್ಹ, ಪ್ರೊ. ಜಿ. ಟಿ. ನಾರಾಯಣ ರಾವ್, ಭೂ ವಿಜ್ಞಾನದ ಪ್ರೊ. ಎ. ಮೋಹಮ್ಮದ್ ಖಾನ್, ಪ್ರೊ. ನಿಸಾರ್ ಅಹಮದ್, ಸಸ್ಯವಿಜ್ಞಾನದ ಪ್ರೊ. ಪಂಚಗಾವಿ, ಭೌತವಿಜ್ಞಾನದ ಪ್ರೊ. ಚಂದ್ರಶೇಖರ್, ರಸಾಯನ ವಿಜ್ಞಾನದ ಪ್ರೊ. ಕೆ. ಎಸ್. ಲಕ್ಷ್ಮಣ ರಾವ್. ಅವರೆಲ್ಲರ ಪ್ರವಚನಗಳನ್ನು ಕೇಳುವುದೆಂದರೆ ನಮಗೆ ಬೌದ್ಧಿಕ ರಸದೌತಣ. ನಮ್ಮ ಮುಂದೆ ಅವರು ತೆಗೆದಿರಿಸುತ್ತಿದ್ದ ವಿಶಾಲವಾದ, ವಿಸ್ಮಯವಾದ ವಿಜ್ಞಾನ ಲೋಕ ನಮ್ಮನ್ನೆಲ್ಲಾ ಸೆರೆ ಹಿಡಿದು ಬಿಡುತ್ತಿತ್ತು. ಕಾಲ ಕಳೆದಂತೆ ನನಗೆ ಅರಿವಾದದ್ದು ನಮ್ಮ 'ಗ್ಯಾಸ್' ಕಾಲೇಜ್ (ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್) ಕಲಿಯಲು ಇಚ್ಛಿಸುವವರಿಗೆ ಒಂದು ಸ್ವರ್ಗ ಎಂದು.

ನಾನು ಇತರೆ ವಿಷಯಗಳನ್ನು ಅಧ್ಯಯನ ಮಾಡುತ್ತಿದ್ದರೂ ವಿಶೇಷವಾಗಿ ಇಷ್ಟ ಪಡುತ್ತಿದ್ದ ವಿಷಯ ಭೂ ವಿಜ್ಞಾನವಾದ್ದರಿಂದ, ಅಲ್ಲಿದ್ದ ಅಧ್ಯಾಪಕರುಗಳ, ಆ ಇಲಾಖೆಯ ಮ್ಯೂಸಿಯಂನ ಮತ್ತು ಲೈಬ್ರರಿಯ ನೆನಪು ನಲವತ್ತು ವರುಷಗಳಾದರೂ ಹಚ್ಚ ಹಸಿರಾಗಿಯೇ ಇದೆ. ನಮ್ಮ ಇಲಾಖೆಯ ಮುಖ್ಯಸ್ಥರಾಗಿದ್ದವರು ಪ್ರೊ. ಎ. ಮೋಹಮ್ಮದ್ ಖಾನ್, ನೋಡಲಿಕ್ಕಷ್ಟೇ ಅಲ್ಲದೇ ನಿಜವಾಗಿಯೂ ತೂಕದ ಮನುಷ್ಯ. ನಿಧಾನವಾಗಿ ಅವರು ಪಾಠ ಮಾಡುತ್ತಿದ್ದ ರೀತಿಯಿಂದ ಅದು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಇರುತ್ತಿತ್ತು. ಇತರ ಪ್ರಾಧ್ಯಾಪಕರೆಂದರೆ ಜಿ. ಆರ್. ಚಂದ್ರಶೇಖರ್, ಕೆ. ಎಸ್. ನಿಸಾರ್ ಅಹಮದ್, ಎಮ್. ರಾಮಚಂದ್ರ, ಕೆ. ವಿ. ಸೋಮಶೇಖರ್.

ಇವರಲ್ಲೆಲ್ಲಾ ನಮ್ಮ ನೆಚ್ಚಿನ ಅಧ್ಯಾಪಕರೆಂದರೆ ಪ್ರೊ. ನಿಸಾರ್ ಅಹಮದ್. ತಮ್ಮ ಠಾಕು-ಠೀಕು ಸೂಟಿನಿಂದಷ್ಟೇ ಅಲ್ಲದೆ, ಶಿಷ್ಯರೊಡನೆ ಅವರು ಸ್ನೇಹ ಭಾವದಿಂದ ವ್ಯವಹರಿಸುತ್ತಿದ್ದ ರೀತಿ, ಮನಸ್ಸಿಗೆ ಚೆನ್ನಾಗಿ ತಿಳಿಯುವಂತಿದ್ದ ಅವರ ಬೋಧನ ಕ್ರಮ ಅವರನ್ನು ನಮಗೆ ನಿಕಟವಾಗಿಸಿತ್ತು. ಅವರು ನಮ್ಮ ಹೀರೋ ಆಗಲು ಮತ್ತೊಂದು ಬಹು ಮುಖ್ಯ ಕಾರಣ ಎಂದರೆ ಆ ಕಾಲಕ್ಕಾಗಲೇ ಅವರು ಕನ್ನಡದ ಒಬ್ಬ ಉದಯೋನ್ಮುಖ ಶ್ರೇಷ್ಠ ಕವಿ ಎಂದು ಗುರುತಿಸಲ್ಪಟ್ಟದ್ದು. ಕವಿಗಳೆಂದರೆ ಕುವೆಂಪು, ದ. ರಾ. ಬೇಂದ್ರೆ, ಪುತಿನ ಎಂದು ಓದಿದ್ದ ನಮಗೆ ನಮ್ಮ ಮೆಚ್ಚಿನ ಅಧ್ಯಾಪಕರು ಒಬ್ಬ ಕವಿ ಎನ್ನುವುದು ತುಂಬಾ ಸಂತೋಷವನ್ನು ನೀಡುತ್ತಿತ್ತು.

ಡಿಗ್ರಿ ಕ್ಲಾಸಿಗೆ ಭೂ ವಿಜ್ಞಾನದ ಪಠ್ಯಕ್ರಮದಲ್ಲಿ ಅನೇಕ ವಿಷಯಗಳು ಇರುತ್ತಿದ್ದವು. ಉದಾಹರಣೆಗೆ: ಪೆಟ್ರೋಲಜಿ (ಶಿಲಾವಿಜ್ಞಾನ), ಕ್ರಿಸ್ಟಲೋಗ್ರಫಿ (ಹರಳುಗಳ ಸ್ವರೂಪಗಳ ಅಧ್ಯಯನ), ಪೇಲಿಯಂಟಾಲಜಿ (ಪಳೆಯುಳಿಕೆಗಳ ಅಧ್ಯಯನ), ಮಿನರಾಲೋಜಿ (ಖನಿಜಗಳ ಅಧ್ಯಯನ)—ಹೀಗೆ. ಅವುಗಳಲ್ಲಿ ನಿಸಾರ್ ಅಹಮದ್‌ರವರು ನಮಗೆ ಪೆಟ್ರೋಲಜಿ ಮತ್ತು ಕ್ರಿಸ್ಟಲೋಗ್ರಫಿಯನ್ನು ಕಲಿಸುತ್ತಿದ್ದರು. ಥಿಯರಿ ಹಾಗೂ ಪ್ರಾಕ್ಟಿಕಲ್ಸ್ ಎರಡನ್ನೂ ಅವರೇ ತೆಗೆದುಕೊಳ್ಳುತ್ತಿದ್ದರು. ಪೆಟ್ರೋಲಜಿಯಲ್ಲಿ ನಾನಾ ತರಹದ ಶಿಲೆಗಳ ಉಗಮ, ವಿನ್ಯಾಸ, ನಮ್ಮ ರಾಜ್ಯದಲ್ಲಿ ಅವುಗಳು ಸಿಗುವ ಸ್ಥಳ ಮುಂತಾದವನ್ನೆಲ್ಲ ಸವಿಸ್ತಾರ ವಾಗಿ ತಿಳಿಸುತ್ತಿದ್ದರು. ವಿವಿಧ ಬಗೆಯ ಗ್ರಾನೈಟ್ಸ್ ಬಗ್ಗೆ ತಿಳಿಸುತ್ತಾ ಆ ಶಿಲೆಗಳು ಸಿಗುವ ಜಾಗಗಳನ್ನು ನೋಡಿ ಬರಲು ಪ್ರೋತ್ಸಾಹಿಸುತ್ತಿದ್ದರು. ಉದಾಹರಣೆಗೆ: ಸೂಕ್ಷ್ಮ ಕಣಗಳ ಗ್ರಾನೈಟ್—ಬೆಟ್ಟ ಹಲಸೂರು, ಕೆಂಪು ಗ್ರಾನೈಟ್—ರಾಮನಗರ, ಗ್ರಾನಿಟಿಕ್ ನೈಸಸ್—ಲಾಲ್ಬಾಗ್ ಗುಡ್ಡ.

ಪೆಟ್ರೋಲಜಿಯ ಪ್ರಾಕ್ಟಿಕಲ್ಸಿನಲ್ಲಿ ನಾವು ಶಿಲೆಗಳ ಚೂರನ್ನು ಕೈಯಲ್ಲಿ ಹಿಡಿದು ಅವುಗಳ ಬಣ್ಣ, ಗಡಸುತನ (ಹಾರ್ಡ್ನೆಸ್), ಅದರಲ್ಲಿನ ಸೂಕ್ಷ್ಮ ಬಿರುಕುಗಳು (ಕ್ಲೀವೇಜ್) ಮುಂತಾದುವನ್ನೆಲ್ಲ ಅಧ್ಯಯನ ಮಾಡುತ್ತಿದ್ದೆವು. ಈ ಶಿಲೆಗಳ ಅತಿ ತೆಳುವಾದ ಪದರ ತೆಗೆದು ಮಾಡಿದ ಸ್ಲೈಡುಗಳನ್ನು ಸೂಕ್ಷ್ಮದರ್ಶಿನಿಯಲ್ಲಿ ತೋರಿಸಿ ಅದರಲ್ಲಿನ ಖನಿಜಗಳ ವಿವರ, ಅವುಗಳ ಪರಸ್ಪರ ಜೋಡಣೆ, ಅವುಗಳಲ್ಲಿನ ಬೆಳಕಿನ ಪ್ರತಿಫಲನ ಮುಂತಾದು ವನ್ನೆಲ್ಲ ಅವರು ವಿವರಿಸುತ್ತಿದ್ದರು. ಪ್ರತಿಯೊಂದು ಸ್ಲೈಡೂ ಒಂದು ಅದ್ಭುತ ವರ್ಣರಂಜಿತ ಪೇಂಟಿಂಗ್‌ನಂತೆ ಕಾಣುತ್ತದೆ. ಪ್ರಕೃತಿ ಕುಂಚಿಸಿದ ಕ್ಯೂಬಿಸಮ್ ಅಥವಾ ಆಬ್‌ಸ್ಟ್ರಾಕ್ಟ್ ಮಾದರಿಯ ಚಿತ್ರಗಳವು. ನಾನು ರಚಿಸಿರುವ ನನ್ನ ಹಲವಾರು ಚಿತ್ರಗಳಿಗೆ ಅದರಿಂದ ಸ್ಫೂರ್ತಿ ಪಡೆದಿದ್ದೇನೆ. ನಿಸಾರ್ ಅಹಮದ್‌ರವರಲ್ಲಿನ ಕವಿ, ಭೂ ವಿಜ್ಞಾನದ ಈ ಜ್ಞಾನವನ್ನು ಉಪಯೋಗಿಸಿಕೊಂಡಿರುವುದನ್ನು ಅವರ ಹಲವಾರು ಕವನಗಳಲ್ಲಿ ಕಾಣಬಹುದು. ಉದಾಹರಣೆಗೆ, ಅವರ 'ಸ್ವರೂಪ' ಕವನದ ಕೆಲವು ಸಾಲುಗಳನ್ನು ನೋಡೋಣ:

'ಗೊತ್ತಿದೆ ದೇವಾ—
ಶಿಲೆಯಲ್ಲಿ ವಿಲೀನವಾದ
ಗುಂಪಿನ ಅಜ, ಈ ಖನಿಜ:
ಪ್ರತ್ಯೇಕತೆಯಲ್ಲಿ ಪಾರದರ್ಶಕತ್ವ,
ಗಡಸುತನ, ಅನನ್ಯ ರಾಸಾಯನಿಕತ್ವ.
—ಇವೂ ಪ್ರಮಾಣವಲ್ಲವೆಂಬುದೂ
ಗೊತ್ತಿದೆ ದೇವಾ,
ಅದರ ಸ್ವಗುಣ ಬೆಳಕಿನ ಜೊತೆಗಿನ
ಸಂಬಂಧದಲ್ಲಿದೆ: ಒಳ ನೆಯ್ಗೆಯ ಚಂದದಲ್ಲಿದೆ, ಅದರ
ಕಣ್ಣಾಚೆಗಿನ ಛಂದ, ವರ್ಣಗಳ ಚಕ್ಕಂದದಲ್ಲಿದೆ: ಅದ ವರ್ಧಿಸುವ
ನಿನ್ನ ಕರುಣೆಯ

ಸೂಕ್ಷ್ಮ ಸಲಕರಣೆಯ
ಕೊಡು. ನಿಮ್ಮ ದರ್ಪಣದ ಬಿಡಿ ಬಿಡೀ ಕಿರಣಗಳ
ಧ್ರುವೀಕರಿಸು ನಿಶ್ಚಿತ ದಿಕ್ಕಲ್ಲಿ—ಖನಿಜಕ್ಕೆ ಹರಿಸು.' ('ಸ್ವರೂಪ')

ತಮ್ಮ ಅಂತರ್‌ದೃಷ್ಟಿಯಿಂದ ಜಗತ್ತನ್ನು, ಪ್ರಕೃತಿಯನ್ನು ಕಾಣಬಯಸುವ ವಿಜ್ಞಾನಿ ಹಾಗೂ ಕವಿಯ ಸಮ ದರ್ಶನವನ್ನು ನಾವಿಲ್ಲಿ ಕಾಣಬಹುದು.

ನಿಸಾರ್ ಅಹಮದ್ ಅವರು ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸುತ್ತಿದ್ದರು. ನಮ್ಮ ಕಾಲೇಜಿನಲ್ಲಿ ಮೊಟ್ಟಮೊದಲ ಬಾರಿಗೆ ೧೯೬೪ರಲ್ಲಿ 'ಸೈನ್ಸ್ ಫೋರಂ' ಆರಂಭ ಆದಾಗ ಭೂ ವಿಜ್ಞಾನದ ಪ್ರತಿನಿಧಿಯಾಗಿ ಭಾಗವಹಿಸಲು ನನಗೆ ಪ್ರೋತ್ಸಾಹ ನೀಡಿ, ಮಾರ್ಗದರ್ಶನ ಮಾಡಿದ್ದರು.

ನಿಸಾರ್ ಅಹಮದ್ ನಮಗೆ ಬೋಧಿಸುತ್ತಿದ್ದ ಇನ್ನೊಂದು ವಿಷಯ ಕ್ರಿಸ್ಟಲೋಗ್ರಫಿ. ಪ್ರತಿ ಖನಿಜವೂ ತನ್ನ ರಾಸಾಯನಿಕ ವಸ್ತುವಿಗೆ ಅನುಸಾರವಾಗಿ, ಭೂಮಿಯೊಳಗಿನ ಶಾಖ ಮತ್ತು ಒತ್ತಡಕ್ಕೆ ಒಳಗಾದಾಗ ಒಂದು ನಿರ್ದಿಷ್ಟ ಹಂತದಲ್ಲಿ ಹರಳುಗಳಾಗಿ ಪರಿವರ್ತಿತ ವಾಗುತ್ತದೆ. ಈ ಹರಳುಗಳ ಅಧ್ಯಯನ ಅವುಗಳನ್ನು ಕೈಗಾರಿಕೋದ್ಯಮಗಳಲ್ಲಿ ಉಪಯೋಗಿಸಲು, ರತ್ನಗಳಂತೆ ಬಳಸಲು ಸಹಕಾರಿಯಾಗಿರುತ್ತದೆ. ನಮ್ಮ ಕಾಲೇಜಿನಲ್ಲಿ ಅವುಗಳ ಒಳ್ಳೆಯ ಸಂಗ್ರಹವಿತ್ತು. ಹರಳುಗಳ ವಿವಿಧಾಕೃತಿಗಳು—ಚತುಷ್ಕೋಣ, ಷಟ್ಕೋಣ, ದ್ವಾದಶ ಕೋಣ ಇತ್ಯಾದಿ; ಅವುಗಳ ಬಣ್ಣ, ಪಾರದರ್ಶಕತೆ, ಅದರೊಳಗಿನ ಕಲ್ಮಶ, ಸೂಕ್ಷ್ಮ ಬಿರುಕುಗಳು; ಬೆಳಕು ಅವುಗಳ ಮೇಲೆ ಬಿದ್ದಾಗ ಕಿರಣಗಳ ಪ್ರತಿಫಲನ ಮುಂತಾದುವುಗಳನ್ನು ಗಮನಿಸಿ ಹರಳುಗಳನ್ನು ಗುರುತಿಸುವ ವಿಧಾನವನ್ನು ತುಂಬಾ ಮನದಟ್ಟಾಗುವಂತೆ ನಿಸಾರ್ ಅವರು ವಿವರಿಸುತ್ತಿದ್ದರು. ಒಮ್ಮೆ ಕ್ವಾರ್ಟ್ಸ್ ಕ್ರಿಸ್ಟಲ್ಸ್ (ಬೆಣಚು ಹರಳುಗಳು) ಬಗ್ಗೆ ಹೇಳುತ್ತ, ಬೆಂಗಳೂರಿಗೆ ಹತ್ತಿರವಿದ್ದ ವಸಂತಪುರದ (ಈಗ ಅದು ಬೆಂಗಳೂರಿನ ಭಾಗವೇ ಆಗಿದೆ) ವಸಂತ ವಲ್ಲಭರಾಯಸ್ವಾಮಿ ದೇವಸ್ಥಾನವಿರುವ ಬೆಟ್ಟದ ಹಿಂಭಾಗದ ಕೆಮ್ಮಣ್ಣಿನ ಗುಡ್ಡ, ಕೊರಕಲುಗಳಲ್ಲಿ ಸಿಗುತ್ತಿದ್ದ ಕ್ವಾರ್ಟ್ಸ್ ಕ್ರಿಸ್ಟಲ್ಸ್ ಬಗ್ಗೆ ತಿಳಿಸಿ ನಮಗೆ ಅಲ್ಲಿಗೆ ಹೋಗಿ ಅವನ್ನು ಹುಡುಕುವಂತೆ ತಿಳಿಸಿದ್ದರು. ಸರಿ ನಾನು, ನನ್ನ ಗೆಳೆಯರಾದ ರಾಜಣ್ಣ, ಮಾಧು, ಶೆಟ್ಟಿ ಎಲ್ಲರೂ ನಮ್ಮ ಬೈಸಿಕಲ್ಲುಗಳ ಮೇಲೆ ವಸಂತಪುರಕ್ಕೆ ಹೋಗಿ ಅವರು ತಿಳಿಸಿದ ಗುಡ್ಡ, ಕೊರಕಲುಗಳಲ್ಲಿ ಸುತ್ತಾಡಿ ಸ್ಫಟಿಕದ ಹರಳುಗಳನ್ನು, ಹರಳುಗಳ ಗುತ್ತಿಗಳನ್ನು ಹೆಕ್ಕಿ ತೆಗೆದಾಗ ನಮಗೆ ವಜ್ರ ಸಿಕ್ಕಿದಷ್ಟೇ ಸಂತೋಷವಾಗಿತ್ತು. ನನಗೆ ದೊರೆತ ಸುಮಾರು ೩ ಅಂಗುಲ ಅಗಲ ೪ ಅಂಗುಲ ಎತ್ತರದ ನಸು ಗುಲಾಬಿ ಬಣ್ಣದ ಹರಳನ್ನು ನಮ್ಮ ಇಲಾಖೆಯ ಮ್ಯೂಸಿಯಮ್ಮಿಗೆ ತಂದುಕೊಟ್ಟಿದ್ದನ್ನು ನೋಡಿ ನಿಸಾರ್‌ರವರು ಬಹಳ ಖುಷಿಪಟ್ಟಿದ್ದರು. ಹರಳುಗಳೊಳಗಿನ ಪ್ರತಿಫಲನ ಕ್ರಿಯೆಯೂ ಅವರ ಕವನಗಳಲ್ಲಿ ನುಸುಳಿದ್ದನ್ನು ಕಾಣಬಹುದು. ಅವರ 'ನಾ ಕನಸುವ ಲೋಕ'ದಲ್ಲಿನ ಕೆಲವು ಸಾಲುಗಳನ್ನು ನೋಡಿ:

'ನಾ ಕನಸುವ ಲೋಕದಲ್ಲಿ

ಪ್ರತಿ ವ್ಯಕ್ತಿ ಮುಖ ಕೆತ್ತಿದ ಹರಳು.
ತಕ್ಕ ಲೋಹದಲ್ಲಿ, ಅದಕ್ಕೆ ತಕ್ಕ
ದೇಹದಲ್ಲಿ ಪ್ರತಿಷ್ಠಾಪಿತ;
ಒಟ್ಟಂದದ ಪ್ರೋತ್ಸಾಹಕ,
ಬಿಡಿಯಾಗಿ ಸ್ವಗುಣ ಪ್ರಕಾಶಕ.
ವಾಕ್ಯ ರಚನೆ ಸ್ಫಟಿಕ ಹಾಯ್ದು ರಶ್ಮಿ,
ಒಳ ಬದುಕುಗಳ ನಮನ, ಪ್ರತಿಫಲನದ ನಿರೂಪ.' ('ನಾ ಕನಸುವ ಲೋಕ')

ನಿಸಾರ್ ಅಹಮದ್‌ರವರು ನಮ್ಮ ಎನ್.ಸಿ.ಸಿ. ಆಫೀಸರ್ ಕೂಡ ಆಗಿದ್ದರು. ಆಗ ನಮ್ಮ ಎನ್.ಸಿ.ಸಿ. ಬೆಟಾಲಿಯನ್‌ನ ಕಮಾಂಡೆಂಟ್ ಆಗಿದ್ದವರು ಮೇಜರ್ ನಾರಾಯಣ ಸಿಂಗ್. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಮೈಸೂರು ಲ್ಯಾನ್‌ಸರ್ಸ್‌ನಲ್ಲಿ ಸೇವೆ ಸಲ್ಲಿಸಿದ್ದು, ಜಪಾನಿಯರ ವಿರುದ್ಧದ ಬ್ರಿಟಿಷರ ಯುದ್ಧದಲ್ಲಿ ಬರ್ಮಾದಲ್ಲಿ ಪಾಲ್ಗೊಂಡು ಕೆಲ ವರ್ಷಗಳ ಕಾಲ ಜಪಾನಿಯರ ಸೆರೆಯಾಳಾಗಿದ್ದವರು. ನೀಳ ಹಾಗೂ ಆಜಾನುಬಾಹು ವ್ಯಕ್ತಿ. ಕಟ್ಟುನಿಟ್ಟಿಗೆ ಹೆಸರಾದವರು. ಯಾವಾಗಲೂ ಗಂಜಿ ಹಾಕಿ, ಇಸ್ತ್ರಿ ಮಾಡಿದ ಯೂನಿಫಾರಂ, ಮಿರಮಿರ ಹೊಳೆಯುವ ಬೂಟುಗಳು, ಆಫೀಸರ್ಸ್ ಪೀ ಕ್ಯಾಪ್ ಧರಿಸಿ ಸ್ಮಾರ್ಟ್ ಆಗಿ ಬರುತ್ತಿದ್ದ ನಿಸಾರ್ ಅಹಮದ್‌ರವರು ಮೇಜರ್ ನಾರಾಯಣ ಸಿಂಗ್ ಅವರ ಅಚ್ಚುಮೆಚ್ಚಿನ ಆಫೀಸರ್. ಅದರಿಂದಾಗಿ ನಮಗೂ ನಿಸಾರ್ ಅಹಮದ್ ಅವರನ್ನು ಕಂಡರೆ ಹೆಚ್ಚಿನ ಆದರ. ತಾವು ಪಾಲಿಸುತ್ತಿದ್ದ ಶಿಸ್ತನ್ನು ನಮ್ಮಲ್ಲೂ ಕಾಣಬಯಸುತ್ತಿದ್ದರು. ಯಾವಾಗಲೂ ಶಾಂತ ಸ್ವಭಾವದ ಅವರು ಒಮ್ಮೆ ಮಾತ್ರ ನಮ್ಮ ಮೇಲೆ ಕೋಪಿಸಿಕೊಳ್ಳುವಂತಹ ಕೆಲಸ ಮಾಡಿದ್ದೆವು. ಹೊಸದಾಗಿ ಎನ್.ಸಿ.ಸಿ.ಗೆ ಸೇರಿದ ಹುಡುಗರಿಗೆ ಯೂನಿಫಾರಂ ಕೊಟ್ಟು ಅವರ ಹೆಸರು, ತರಗತಿ ಇತರ ವಿವರಗಳನ್ನು ರಿಜಿಸ್ಟರ್‌ನಲ್ಲಿ ಬರೆದಿಡುವ ಕೆಲಸವನ್ನು ನಮಗೆ ವಹಿಸಿದ್ದರು. ನಮ್ಮ ಗ್ಯಾಂಗ್, ಅಂದರೆ ಸಾರ್ಜೆಂಟ್ ರಾಜಣ್ಣ, ಕಾರ್ಪೊರಲ್ ನಾನು, ಮಾಧು, ಶೆಟ್ಟಿ ಕೆಲಸ ಶುರುಮಾಡಿ ಮುಗಿಸುವಾಗ ತೀರಾ ಕತ್ತಲಾಗಿ ಹೋಯಿತು. ಅಲ್ಲದೆ, ಕರೆಂಟ್ ಕೂಡ ಹೋಗಿ ನಾವು ಮೇಣದ ಬತ್ತಿಯನ್ನು ಇಟ್ಟುಕೊಂಡು ಕೆಲಸ ಬೇಗ ಮುಗಿಸುವ ಹುಮ್ಮಸ್ಸಿನಿಂದ ವಿವರಗಳನ್ನು ಬರೆದು ಎಸೆದೆವು. ಬರೆದವ ನಾನು. ಮಾರನೆಯ ದಿವಸ ಆ ರಿಜಿಸ್ಟರ್‌ಅನ್ನು ಓದಿದ ನಿಸಾರ್ ಅಹಮದ್ ಅವರಿಗೆ ಎಲ್ಲಿಲ್ಲದ ಕೋಪ. 'ಏನ್ರಯ್ಯ, ಹೀಗಾ ಗೀಚೋದು? ಯಾವ ಬ್ರಹ್ಮನಿಗೆ ಓದೋಕೆ ಆಗುತ್ತೆ ಇದನ್ನ? ಎಲ್ಲಾ ಬೇಕಾಬಿಟ್ಟಿ ಕೆಲಸ ಮಾಡಿದ್ದೀರಿ, ನಾಲಾಯಖ್ ಫೆಲೋಸ್' ಅಂತ ಬೈದರು. ನಮಗೆಲ್ಲ ಒಳಗೊಳಗೇ ನಗು. ಯಾಕೆಂದರೆ ಅವರಿಗೆ ಬೈಯುವುದಕ್ಕೆ ಬರುತ್ತಿದ್ದದ್ದು ಅಷ್ಟೇ.

೧೯೬೪ನೆಯ ಇಸವಿಯಲ್ಲಿ ನಮ್ಮ ಎನ್.ಸಿ.ಸಿ. ಕ್ಯಾಂಪ್ ದಾವಣಗೆರೆಯಲ್ಲಿ ನಡೆಯಿತು. ಆ ಕ್ಯಾಂಪಿನಲ್ಲಿ ನಮ್ಮ ಕಾಲೇಜಲ್ಲದೆ, ಕರ್ನಾಟಕದ ಇನ್ನೂ ಐದು ಕಾಲೇಜುಗಳು ಭಾಗವಹಿಸಿದ್ದವು. ಸುಮಾರು ಸಾವಿರಕ್ಕೂ ಮಿಕ್ಕ ಕೆಡೆಟ್‌ಗಳು ಪಾಲುಗೊಂಡಿದ್ದವು. ದೊಡ್ಡ ಶಿಬಿರ ಅದಾಗಿತ್ತು. ಅಲ್ಲಿ ನಡೆದ ಸ್ಪರ್ಧೆಗಳಲ್ಲಿ ನಮ್ಮ ಕಾಲೇಜು ಹಲವಾರು ಪ್ರಶಸ್ತಿಗಳನ್ನು ಪಡೆಯುವಲ್ಲಿ ಪ್ರೊ. ನಿಸಾರ್‌ರವರ ಮುತುವರ್ಜಿ, ಮಾರ್ಗದರ್ಶನ ಬಹಳ

ಮುಖ್ಯವಾಗಿತ್ತು. ಅಷ್ಟೇ ಅಲ್ಲದೆ, ಭಾಗವಹಿಸಿದ ಕಾಲೇಜಿನ ಎಲ್ಲ ಆಫೀಸರುಗಳಲ್ಲಿ ಅವರು ಅತ್ಯುತ್ತಮ ಆಫೀಸರ್ ಪ್ರಶಸ್ತಿ ಪಡೆದದ್ದು ನಮ್ಮ ಹರ್ಷವನ್ನು ಇಮ್ಮಡಿಯಾಗಿಸಿತ್ತು. ಒಟ್ಟಿನಲ್ಲಿ ಠಾಕು-ಠೀಕಿನ, ಶಿಸ್ತಿನ ಹಾಗೂ ಕರ್ತವ್ಯ ನಿಷ್ಠೆಯ ಎನ್.ಸಿ.ಸಿ. ಅಧಿಕಾರಿಯೆಂದು ನಿಸಾರ್ ಅವರು ಕೀರ್ತಿ ಗಳಿಸಿದ್ದರು.

೧೯೬೫ರಲ್ಲಿ ಬೆಂಗಳೂರಿನ ಮಾಗಡಿ ಊರಿಗೆ ಹೋಗುವ ರಸ್ತೆಯಲ್ಲಿದ್ದ ಭಿಕ್ಷುಕರ ಕಾಲೋನಿಯಲ್ಲಿ ಏಳೆಂಟು ದಿನಗಳ ಒಂದು ಎನ್.ಸಿ.ಸಿ. ಶಿಬಿರ ನಡೆಯಿತು. ಆಗ ಅದು ಬೆಂಗಳೂರು ನಗರ ವಲಯಕ್ಕಿಂತ ಹತ್ತು ಹನ್ನೆರಡು ಮೈಲಿ ಆಚೆ. ಹಗಲಿನ ಹೊತ್ತೂ ಹೆಚ್ಚು ಜನ ಸಂಚಾರವಿರುತ್ತಿರಲಿಲ್ಲ. ಸುತ್ತ ಮುತ್ತ ಗುಡ್ಡಗಳ ಪ್ರದೇಶ. ಹಾವುಗಳ, ಚೇಳುಗಳ ಕಾಟ ಹೇಳತೀರದು. ಆಫೀಸರುಗಳು ಆದಿಯಾಗಿ ಎಲ್ಲರಿಗೂ ಟೆಂಟ್(ಗುಡಾರ)ಗಳಲ್ಲಿ ವಾಸ. ಒಂದೂವರೆ ಸಾವಿರಕ್ಕೂ ಮಿಕ್ಕು ಕೆಡೆಟ್‌ಗಳು ಭಾಗವಹಿಸಿದ್ದ ಬೃಹತ್ ಶಿಬಿರ ಇದಾಗಿತ್ತು. ಬೆಂಗಳೂರಿನ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ಮಹಾ ಮೇಳವೇ ಅಲ್ಲಿ ನೆರೆದಿತ್ತು. ಅವರನ್ನೆಲ್ಲ ನಿಭಾಯಿಸುವುದು, ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಾಮಾನ್ಯವಾದ ಕೆಲಸವಾಗಿರಲಿಲ್ಲ. ಅದರಲ್ಲೂ, ಸರದಿಯ ಮೇಲೆ ಸಂರಕ್ಷಣಾಧಿಕಾರಿ (ಸೆಕ್ಯೂರಿಟಿ ಆಫೀಸರ್)ಗಳಾಗಿ ಪ್ರತಿ ದಿನ ನೇಮಕವಾಗುತ್ತಿದ್ದ ಎನ್.ಸಿ.ಸಿ. ಅಧಿಕಾರಿ-ಕಮ್-ಅಧ್ಯಾಪಕರ ಜವಾಬ್ದಾರಿಯಂತೂ ಬಹಳ ಗುರುತರವಾಗಿರುತ್ತಿತ್ತು. ಒಂದು ಬಾರಿ ನಿಸಾರ್ ಅಹಮದ್ ಅವರಿಗೆ ಈ ಹೊಣೆಗಾರಿಕೆ ಹೆಗಲಿಗೆ ಬಿದ್ದಿತ್ತು. ಇಡೀ ರಾತ್ರಿ ಎಚ್ಚರವಾಗಿದ್ದು ಶಿಬಿರದ ಕೆಡೆಟ್‌ಗಳ ಹಾಗೂ ಅಧಿಕಾರಿಗಳ ಟೆಂಟುಗಳ, ಮೆಸ್‌ನ ಹಾಗೂ ಅಲ್ಲಿದ್ದ ಹಲವಾರು ಬಗೆಯ ಸಾಮಾನು ಸರಂಜಾಮುಗಳ ಪೂರ್ಣ ಉಸ್ತುವಾರಿ ನಿಸಾರರದಾಗಿತ್ತು. ಕೆಡೆಟ್‌ಗಳು ರಾತ್ರಿಯ ವೇಳೆ ಯಾವುದಾದರೂ ಕಾರಣಕ್ಕೆ ಕ್ಯಾಂಪಿನಿಂದ ನುಸುಳಿ ಹೋಗದಂತೆ ಅವರ ಹಾಜರಾತಿಯ ಬಗ್ಗೆ ಕಾಳಜಿ ವಹಿಸುವುದೂ ನಿಸಾರರ ಕರ್ತವ್ಯವಾಗಿತ್ತು.

ಹೀಗಿರುವಾಗ ಒಂದು ದಿನ ಬಿ.ಎಂ.ಎಸ್. (BMS) ಇಂಜಿನಿಯರಿಂಗ್ ಕಾಲೇಜಿನ ಮುಂಬೈ ಮೂಲದ ಒಬ್ಬ ಕೆಡೆಟ್ ತಪ್ಪಿಸಿಕೊಂಡಿರುವುದು ತಿಳಿದು ಬಂದಿತು. ಕ್ಯಾಂಪಿನಲ್ಲಿ ಆತಂಕ ದಟ್ಟವಾಗತೊಡಗಿತು. ಅವನ ಆಪ್ತ ಸ್ನೇಹಿತರನ್ನು ತೀವ್ರವಾಗಿ ಪ್ರಶ್ನೆಗಳಿಗೆ ಒಳಪಡಿಸಿದಾಗ, ತಪ್ಪಿಸಿಕೊಂಡ ಹುಡುಗ ಕನ್ನಿಂಗ್‌ಹ್ಯಾಂ ರಸ್ತೆಯ ಅವನ ಬಂಧು ಒಬ್ಬರ ಬಂಗಲೆಯಲ್ಲಿ ಅಡಗಿಕೊಂಡಿರುವುದಾಗಿ ತಿಳಿದು ಬಂತು. ಆ ವೇಳೆಗಾಗಲೇ ಅರ್ಧರಾತ್ರಿ ಕಳೆದಿತ್ತು. ನಿಸಾರರು ತುಂಬಾ ಉದ್ವಿಗ್ನರಾಗಿದ್ದರು. ತಕ್ಷಣ ಅವರು ಒಂದಿಬ್ಬರು ಎನ್.ಸಿ.ಸಿ. ಅಧಿಕಾರಿಗಳು, ಒಬ್ಬ ಸುಬೇದಾರ್ ಮತ್ತು ನಾನೂ ಒಳಗೊಂಡಂತೆ ಕೆಲವು ಕೆಡೆಟ್‌ಗಳ ಜೊತೆ ಟ್ರಕ್ ಏರಿ ಕನ್ನಿಂಗ್‌ಹ್ಯಾಂ ರಸ್ತೆಯ ಬಂಗಲೆಯನ್ನು ಪತ್ತೆ ಹಚ್ಚಿ ಒಳಹೊಕ್ಕರು. ತೋಳಗಳಂಥ ಎರಡು ಮೂರು ಅಲ್ಸೇಷಿಯನ್ ನಾಯಿಗಳು ಮೇಲೇರಿ ಬಂದರೂ ಲೆಕ್ಕಿಸದೆ ಮುಂದುವರೆದಾಗ, ಮನೆಯಾತ ಯಾರೋ ಡಕಾಯಿತರಿರಬೇಕೆಂದು ಬಂದೂಕಿನ ಸಮೇತ ಬಾಗಿಲಿನ ಬಳಿ ಬಂದು, ಒಂದು ಹೆಜ್ಜೆ ಮುಂದಿಟ್ಟರೆ ಗುಂಡು ಹಾರಿಸುವುದಾಗಿ ಬೆದರಿಸಿದ. ನಿಸಾರರು ಬಂದ ಉದ್ದೇಶವನ್ನು ಕಿರುಚಿ ಹೇಳಿದರೂ ಮನೆಯ ಒಡೆಯ ಜಪ್ಪಯ್ಯ ಎನ್ನದೆ

ಕೋವಿಯನ್ನು ನಮ್ಮತ್ತ ಗುರಿಯಿಟ್ಟು 'ಬೇಗ ಇಲ್ಲಿಂದ ತೊಲಗದಿದ್ದರೆ ಕೊಲ್ಲುತ್ತೇನೆ' ಎಂದು ಅಬ್ಬರಿಸತೊಡಗಿದ. ಆದದ್ದಾಗಲೆಂದು ನಿಸಾರರು ಇಲ್ಲದ ಧೈರ್ಯ ತಂದುಕೊಂಡು ಮುನ್ನುಗ್ಗಿಯೇ ಬಿಟ್ಟರು. ನಿಜಕ್ಕೂ ಇದೊಂದು ಸಿನೀಮೀಯ ಸನ್ನಿವೇಶದಂತಿತ್ತು. ಮನೆಯಾತನಿಗೆ ಏನು ತೋಚಿತೋ, ಕೋವಿಯನ್ನು ಕೆಳಗಿರಿಸಿ ಇಷ್ಟು ಅಪರಾತ್ರಿಯಲ್ಲಿ ಬಂದು ನಿದ್ದೆಗೆಡಿಸಿದ್ದಕ್ಕೆ ಪೊಲೀಸರಿಗೆ ದೂರು ನೀಡುವುದಾಗಿ ಬೆದರಿಸಿದ. ಆಗ ಅವನಿಗೆ ಸಖತ್ ರೋಪ್ ಹಾಕಿ, 'ಕೆಡೆಟ್‌ನನ್ನು ಎಲ್ಲಿ ಬಚ್ಚಿಟ್ಟದ್ದೀಯ? ನಿನ್ನ ಮೇಲೆ ಅಪಹರಣದ ಕೇಸ್ ಬುಕ್ ಮಾಡುತ್ತೇವೆ' ಎಂದಾಗ ಅವನ ಮುಖ ಕುಂದಿತು. ಕೊನೆಯತನಕ 'ಇಲ್ಲಿ ಯಾವ ಕೆಡೆಟ್ಟೂ ಬಂದಿಲ್ಲ' ಎಂದು ಸಾಧಿಸಿದ. ನಾವು ಧೈರ್ಯಮಾಡಿ ಮನೆಯೊಳಗೆ ನುಗ್ಗಿ ಜಾಲಾಡತೊಡಗಿದೆವು. ಕೊನೆಗೆ ಟಾರ್ಚ್ ಬಿಟ್ಟು ತಡಕಾಡಿದಾಗ ಹಿತ್ತಲಿನ ಸ್ಟೋರ್ ರೂಮಿನ ಮೂಲೆಯ ಕೋಳಿ ಗೂಡಿನಲ್ಲಿ ಪಿಳಿಪಿಳಿ ಕಣ್ಣು ಬಿಡುತ್ತ ಮುದುಡಿಕೊಂಡು ಕುಳಿತಿದ್ದ ಆ ಪ್ರಭೃತಿ. ನಮ್ಮನ್ನು ಕಂಡೊಡನೆ ಮನೆಯ ಚಾವಣಿ ಹಾರಿ ಹೋಗುವಂತೆ ಕಿರುಚುತ್ತಾ, ಹತ್ತಿರ ಬಂದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿದ. ಅವನ ಕೈಯಲ್ಲಿ ಚಾಕು ಇತ್ತು. ಅವನನ್ನು ಹಾಗೂ ಹೀಗೂ ಒಲಿಸಿ ಕ್ಯಾಂಪ್‌ಗೆ ಕರೆತರಬೇಕಾದರೆ ನಮಗೆಲ್ಲಾ ಸಾಕುಸಾಕಾಯಿತು. ನಿಸಾರರು ದೀರ್ಘವಾದ ನಿಟ್ಟುಸಿರುಬಿಟ್ಟು ನಮ್ಮಗೆಲ್ಲ ಥ್ಯಾಂಕ್ಸ್ ಹೇಳಿದಾಗ ಬೆಳಗಿನ ಝಾವ ಸಮೀಪಿಸಿತ್ತು.

ನಿಸಾರ್ ಅಹಮದ್ ಅವರು ಪಾಠ ಮಾಡುವಾಗ ಕಾಲ ಹರಣ ಮಾಡುತ್ತಿರಲಿಲ್ಲ. ತರಗತಿಯಲ್ಲಿ ನಿಶ್ಯಬ್ದ ಹಾಗೂ ವಿದ್ಯಾರ್ಥಿಗಳ ತದೇಕತೆಯನ್ನು (concentration) ಅಪೇಕ್ಷಿಸುತ್ತಿದ್ದರು. ತಾವು ಮಾಡಬೇಕಾದ ಪಾಠವನ್ನು ಚೊಕ್ಕವಾಗಿ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ಮಾಡಿ ಮುಗಿಸುತ್ತಿದ್ದರು. ಪಾಠ ಮಾಡುವಾಗ ಅವರು ಕನ್ನಡ ಪದಗಳನ್ನು ಉಪಯೋಗಿಸುತ್ತಿರಲಿಲ್ಲ. ತರಗತಿಗೆ ಬರುವುದಕ್ಕೆ ಮುನ್ನ ಲೈಬ್ರರಿಯಲ್ಲಿ ಅಥವಾ ಅವರ ಕೊಠಡಿಯಲ್ಲಿ ಕುಳಿತು ತಯಾರಿ ನಡೆಸುತ್ತಿದ್ದುದನ್ನು ನಾನು ಹಲವಾರು ಬಾರಿ ಕಂಡಿದ್ದೇನೆ. ನನ್ನ ಬಹಳ ಸಹಪಾಠಿಗಳಿಗೆ ಆಗ ನಿಸಾರ್‌ರವರು ಒಬ್ಬ ಗಣನೀಯ ವ್ಯಕ್ತಿ ಎನ್ನುವ ಕಾರಣಕ್ಕಾಗಿ ಅವರ ಬಗ್ಗೆ ವಿಶೇಷವಾದ ಹೆಮ್ಮೆ ಗೌರವಗಳಿದ್ದವು. ನಿಸಾರ್ ಅವರ ನೇತೃತ್ವ ದಲ್ಲಿ ತಯಾರಾದ ಕೆಲವರು ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಕೆಡೆಟ್‌ಗಳು ಭಾರತೀಯ ಸೇನೆಯಲ್ಲಿ, ಪರಮಾಣು ಶಕ್ತಿ ಆಯೋಗ ಸಂಸ್ಥೆ(Atomic Energy Commission)ಯಲ್ಲಿ, ಭಾರತೀಯ ಭೂ ವಿಜ್ಞಾನ ಸರ್ವೇಕ್ಷಣ ನಿರ್ದೇಶನಾಲಯದಲ್ಲಿ (GSI) ಹಾಗೂ ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ ರಾರಾಜಿಸಿದ್ದಾರೆ.

ನಮ್ಮ ನಾಡಿನ ಹೆಸರಾಂತ ಗಾಯಕರಾಗಿದ್ದ ಪಿ. ಕಾಳಿಂಗ ರಾಯರು ನಿಸಾರ್ ಅಹಮದ್ ಅವರನ್ನು ನೋಡಲು ಆಗಾಗ್ಗೆ ಕಾಲೇಜಿಗೆ ಬರುತ್ತಿದ್ದರು. ಆಗ ವಿದ್ಯಾರ್ಥಿ ಗಳಿಗೆಲ್ಲ ಸಂತೋಷದ ಸಂಭ್ರಮ. ಅವರನ್ನು ಜೇನುನೊಣಗಳಂತೆ ಮುತ್ತಿಕೊಳ್ಳುತ್ತಿದ್ದರು. ಒಮ್ಮೆ ನಮ್ಮ ಕೋರಿಕೆಯ ಮೇಲೆ, ರಾಯರು ಅಷ್ಟು ದೊಡ್ಡ ಗಾಯಕರಾಗಿದ್ದರೂ ಹಾಡೊಂದನ್ನು ಹಾಡಿದ್ದು ಇನ್ನೂ ನೆನಪಿದೆ. ೧೯೬೫ರಲ್ಲಿನ ಇಂಡಿಯ-ಪಾಕಿಸ್ತಾನ ಯುದ್ಧದ ಸಮಯದಲ್ಲಿ ನಿಸಾರ್ ಅಹಮದ್‌ರವರು ಬರೆದಿದ್ದ ಒಂದೆರಡು ದೇಶಭಕ್ತಿ ಗೀತೆಗಳನ್ನು

ಪಿ. ಕಾಳಿಂಗ ರಾಯರು ಭಾವಪೂರ್ಣವಾಗಿ ಹಾಡಿದ್ದನ್ನು ಕನ್ನಡಿಗರು ಕೇಳಿ ಸಂತೋಷಪಟ್ಟಿದ್ದರು. ಆಗ ಇಂದಿನ ಹಾಗೆ ಟಿ.ವಿ.ಗಳಾಗಲಿ, ಇತರೇ ರೇಡಿಯೊ ಛಾನೆಲ್‌ಗಳಾಗಲಿ ಇರಲಿಲ್ಲ. 'ಆಲ್ ಇಂಡಿಯಾ ರೇಡಿಯೊ' ಒಂದೇ ಇದದ್ದು. ಅದರಲ್ಲಿ ಏನೇ ಬಂದರೂ, ನಾಡಿನ ತುಂಬಾ ಹೆಸರುವಾಸಿಯಾಗುತ್ತಿತ್ತು. ನನಗೆ ಚೆನ್ನಾಗಿ ನೆನಪಿರುವ ಹಾಗೆ ೧೯೬೨ರಲ್ಲಿ ಚೀಣೀಯರ ಆಕ್ರಮಣ ನಮ್ಮ ದೇಶದ ಮೇಲೆ ಆದಾಗ, ನಿಸಾರರ 'ಆತ್ಮಾರ್ಪಣ' ಎಂಬ ಒಂದೂವರೆ ಗಂಟೆಗಳ ಸಂಗೀತ ರೂಪಕ ಪ್ರಸಾರವಾಗಿ ಕೀರ್ತಿ ಗಳಿಸಿತ್ತು. ಅದರಲ್ಲಿ ಯುದ್ಧಕ್ಕೆ ಹೊರಡುವವನ ಪಾತ್ರ ಪಿ. ಕಾಳಿಂಗ ರಾಯರದು, ಅವರ ತಾಯಿಯ ಪಾತ್ರ ಖ್ಯಾತ ಶಾಸ್ತ್ರೀಯ ಸಂಗೀತ ಗಾಯಕಿ ಎಮ್.ಎನ್. ರತ್ನ ಅವರದ್ದು. ೧೯೬೩ರಿಂದ ಐದಾರು ವರ್ಷಗಳ ಕಾಲ ಬೆಂಗಳೂರು ಆಕಾಶವಾಣಿ ಆಗಿಂದಾಗ್ಗೆ ಪ್ರಸಾರ ಮಾಡುತ್ತಿದ್ದ ಯುದ್ಧ ಗೀತೆಗಳಲ್ಲಿ ನಿಸಾರರ 'ನೆಲ ನಮ್ಮದು, ಜಲ ನಮ್ಮದು', 'ಅಭಿವಂದನೆ ನಿಮಗೆ'. ಕೆಎಸ್‌ನ ಅವರ 'ಧ್ವಜ ವಂದನೆ', ಕಾವ್ಯಾನಂದರ 'ಯುದ್ಧಸ್ವ' ಬಹಳ ಜನಪ್ರಿಯವಾಗಿದ್ದವು.

ಕನ್ನಡದ ಬಹಳಷ್ಟು ಕವಿಗಳು ಕನ್ನಡ ಅಥವಾ ಇಂಗ್ಲಿಷ್ ಅಧ್ಯಾಪಕರಾಗಿದ್ದವರು. ನಿಸಾರ್ ಅವರಂತೆ ವಿಜ್ಞಾನದ ಅಧ್ಯಾಪಕರು ಕವಿಯಾಗಿ ಇರುತ್ತಿದ್ದದ್ದು ವಿರಳ. ಕವಿಗೆ ಅವನ ಅಧ್ಯಯನದ ಅನುಭವಗಳೇ ಅವನ ಕಾವ್ಯಕ್ಕೆ ವಸ್ತುವನ್ನು ಒದಗಿಸುವುದು ಎಂದು ನನ್ನ ಭಾವನೆ. ತನ್ನ ಸುತ್ತಲಿನ ಪ್ರಕೃತಿಯ, ಜನರ, ಸಮಾಜದ ಓರೆಕೋರೆಗಳನ್ನು, ಘನತೆ ಗಾಂಭೀರ್ಯವನ್ನು, ಸೌಂದರ್ಯವನ್ನು ಕವನಿಸುವಾಗ ನಿಸಾರ್ ಅಹಮದ್ ಅವರಲ್ಲಿನ ಕವಿ ಹೃದಯ ಕೆಲಸ ಮಾಡುವಂತೆ, ಅವರಲ್ಲಿನ ವಿಜ್ಞಾನಿಯೂ ಕೆಲಸ ಮಾಡುವುದನ್ನು ಕಾಣುತ್ತೇವೆ. ಸೃಷ್ಟಿಯಲ್ಲಿನ ಎಲ್ಲ ವಸ್ತುವಿಗೂ ಅದರದೇ ಸ್ಥಾನವಿದೆ. ದೊಡ್ಡವನೆಂಬ ಗರ್ವ ಬೇಡ, ಚಿಕ್ಕವನೆಂಬ ಕೀಳರಿಮೆ ಬೇಡ ಎನ್ನುವುದನ್ನು ವಿವರಿಸಲು ಅವರು ಭೂವಿಜ್ಞಾನದ ಒಂದು ನೈಸರ್ಗಿಕ ಪ್ರಕ್ರಿಯೆಯನ್ನೇ (ಸವಕಲೀಕರಣ-weathering). ಬಳಸಿಕೊಳ್ಳುತ್ತಾರೆ. ಅವರ 'ಬಂಡೆ ಮತ್ತು ಕಲ್ಲಿನ ಚೂರುಗಳು' ಕವನ ಹೇಳುತ್ತದೆ—ಘಟ್ಟಿಗ, ಆ ಕಾಲದ ಕಲ್ಲುಕುಟ್ಟಿಗ. ಮಳೆ ಬಿಸಿಲು, ಹಿಮಗಾಳಿಗಳ ಉಳಿ, ಹತ್ಯಾರುಗಳ ಸುದೀರ್ಘಾವಧಿಯ ಎಡೆಬಿಡದ ಪೆಟ್ಟುಗಳಿಂದ ದೈತ್ಯ ಹೆಬ್ಬಂಡೆಯನ್ನು ಕಲ್ಲು ಚೂರಾಗಿಸಿ ಅನಂತರ ಮರಳು ಕಣಗಳಾಗಿಸುತ್ತಾನೆ. ತಾನು ಸಣ್ಣವನೆಂದು ವಿಷಾದಿಸುವ ಮರಳ ಕಣಕ್ಕೆ ಪುಟ್ಟ ಹಕ್ಕಿಯೊಂದು ಸಾಂತ್ವನ ನೀಡುತ್ತದೆ—

'ಕುಸಿಯಬೇಕಿಲ್ಲ ನೀವು ಕೀಳರಿಮೆ ಕೂಪದ ತಳಕ್ಕೆ,
ಉಣಿಸಾಗಬೇಕಿಲ್ಲ ನಿತ್ಯ ಅವಹೇಳನದ ಹುಳಕ್ಕೆ,
ನಿಮ್ಮ ಇರುವಿಕೆ ಹೆಬ್ಬಂಡೆಗಿಂತಲೂ ಧನ್ಯ,
ಸರ್ವಂಸಹೆ ಪ್ರಕೃತಿಯ ದೃಷ್ಟಿಯಲಿ
ನೀವೂ ಸಹ ನಿರತಿಶಯ ಸನ್ಮಾನ್ಯ.' ('ಬಂಡೆ ಮತ್ತು ಕಲ್ಲಿನ ಚೂರುಗಳು')

ಪ್ರೊ. ನಿಸಾರ್‌ರವರು ಭೂ ವಿಜ್ಞಾನದ ಜೊತೆಗೆ ನಮಗೆ ಶಿಸ್ತನ್ನೂ ಕಲಿಸಿದವರು. ಅಲ್ಲದೇ, ಕನ್ನಡ ಕಾವ್ಯದ ರುಚಿಯನ್ನೂ ಹಚ್ಚಿಸಿದವರು. ಅವರು ಉತ್ತಮ ಕಾವ್ಯಗಳನ್ನು

ಓದಲು ಪ್ರೋತ್ಸಾಹಿಸುತ್ತಿದ್ದರು. ಆದರೆ ಎಂದೂ ಅವರ ಕವನಗಳ ಬಗ್ಗೆ ಹೇಳುತ್ತಿರಲಿಲ್ಲ. ಬೆಂಗಳೂರಿನಲ್ಲಿ ನಾನು ಬೆಳೆದ ಪರಿಸರಗಳಾದ ಶಂಕರಪುರ, ಬಸವನಗುಡಿ, ಗಾಂಧಿ ಬಜಾರ್, ಚಾಮರಾಜಪೇಟೆ ಮುಂತಾದ ಬಡಾವಣೆಗಳು ನಿಸಾರ್‌ರವರ 'ಮನಸು ಗಾಂಧಿ ಬಜಾರು', 'ಸಂಜೆ ಐದರ ಮಳೆ' ಮುಂತಾದ ಕವನ ಸಂಗ್ರಹಗಳ ವಸ್ತುಗಳ ತಾಣವೂ ಆಗಿದ್ದರಿಂದ, ಅವರ ಕವಿತೆಗಳಲ್ಲಿ ನನಗೆ ಆಸಕ್ತಿಯುಂಟಾಗಿತ್ತು. ಮತ್ತೆ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಬರುತ್ತಿದ್ದ ಅವರ ಕವನಗಳನ್ನು ಓದಿ ಕಾವ್ಯಾಸ್ವಾದದ ಹಾಗೂ ರಚನೆಯ ಗೀಳು ನನಗೂ ಹತ್ತಿತ್ತು. ಹೀಗಾಗಿ, ಬ್ಯಾಂಕೊಂದರಲ್ಲಿ ಜವಾಬ್ದಾರಿಯುತವಾದ ಹಿರಿಯ ಅಧಿಕಾರಿಯ ಕರ್ತವ್ಯವನ್ನು ನಿಭಾಯಿಸುವುದರ ಜೊತೆಗೆ ನನ್ನ ಒಂದೆರಡು ಪುಸ್ತಕಗಳನ್ನೂ ಹೊರತಂದಿದ್ದೇನೆ. ಅವುಗಳಲ್ಲಿ ಒಂದು ಕವನ ಸಂಗ್ರಹಕ್ಕೆ ನನ್ನ ಪ್ರೀತಿಯ ಗುರುಗಳು, ಬಿಡುವಿನ ಕೊರತೆಯಿದ್ದಾಗಲೂ ನಾಲ್ಕು ನಲ್ನುಡಿಯ ಮಾತುಗಳನ್ನು ಬರೆದು ಹರಸಿರುವುದು ನನ್ನ ಭಾಗ್ಯ.

ಸಮಸ್ತ ಕನ್ನಡಿಗರ ಮನವನ್ನು ಗೆದ್ದಿರುವ ಹಿರಿಯ ಕವಿ ನಾಡೋಜ ಡಾ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ಹಾಗೂ ನಾನು ಮೆಚ್ಚಿದ ಒಬ್ಬ ಆದರ್ಶ ಗುರುವಿಗೆ ನನ್ನ 'ಲಾಲ್ಬಾಗ್' ಕವನದ ಎರಡು ಸಾಲುಗಳಿಂದ ನಮನ ಸಲ್ಲಿಸುತ್ತೇನೆ:

'ಹಸಿರು ಹಾಸಿನ ಮೇಲೆ ಕುಳಿತು,
ಸಿಗರೇಟಿನ ಧೂಮ ವೃತ್ತಗಳಲ್ಲಿ,
ಕಾವ್ಯ ಛಂದೋವೃತ್ತಗಳ ಹೊಸೆವ ನಿಸಾರ್,
ಭುವಿಯಿಂದ ಆಗಸಕೆ ಬೆಳೆದು ನಿಂತ ದೇವದಾರ್.'

ಯಾವುದನ್ನು ಯಾವಾಗ ಮಾಡಬೇಕೆಂಬುದೇ ಬದುಕಿನಲ್ಲಿ ಮನುಷ್ಯ ಕಂಡುಕೊಳ್ಳಬೇಕಾದ ವಿವೇಕ. ತತ್‌ಕ್ಷಣ ಮಾಡಬೇಕಾದದ್ದನ್ನು ಮುಂದೂಡುವುದು ಹೇಗೆ ಅವಿಹಿತವೋ ಹಾಗೆಯೇ ತಡವಾಗಿ ಮಾಡಬೇಕಾದುದನ್ನು ಮುಂಚೆಯೇ ಮಾಡಿಬಿಟ್ಟರೆ ಅದರಿಂದ ಕಾರ್ಯಸಿದ್ಧಿಯಾಗದು. ಮಾತ್ರವಲ್ಲ, ಅನರ್ಥವೂ ಆದೀತು. ಚೊಂಬು ಸೋರುತ್ತದೆಂದು ಮೊದಲೇ ತೊಳೆದುಕೊಂಡು ಮಲ ವಿಸರ್ಜನೆಗೆ ಕೂರುವುದರಲ್ಲಿ ಯಾವ ಜಾಣತನವಿದೆ? ಮತಿವಂತರು ಮೊದಲೇ ಚೊಂಬಿನ ದೋಷವನ್ನು ಸರಿಪಡಿಸಿಕೊಂಡು, ಕ್ರಿಯೆಯ ಅನಂತರ ಕಾರ್ಯಾಚರಿಸುವುದು ನೈರ್ಮಲ್ಯ, ಆರೋಗ್ಯಗಳ ದೃಷ್ಟಿಯಿಂದ ಅತ್ಯಂತ ಸೂಕ್ತ.

(ಸಮಯೌಚಿತ್ಯ)



ನಿಸಾರ್ ಕಾವ್ಯದ ಬಗ್ಗೆ :
ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ

♦ *ರಘುನಾಥ ಚ. ಹ.*

ಸಾಹಿತ್ಯದಲ್ಲಿ ಮೀಸಲಾತಿ ಬೇಕೆ? ಇಂಥದೊಂದು ಪ್ರಶ್ನೆ ಆಗಾಗ ಮಿಂಚಿ ಮಾಯವಾಗುತ್ತಲೇ ಇರುತ್ತದೆ. ಮೀಸಲಾತಿ ಬೇಕೇ ಬೇಡವೇ ಎನ್ನುವ ಬಗ್ಗೆ ಚರ್ಚೆಗಳು ನಡೆದು ಕಾವು ಕಳೆದು ಕೊಳ್ಳುತ್ತವೆ. ಇಷ್ಟಕ್ಕೂ ಮೀಸಲಾತಿ ಕಲ್ಪಿಸಲಿಕ್ಕೆ ಸಾಹಿತ್ಯವೇನು ಒಂದು ಸಮಾಜವಲ್ಲ; ಅದೊಂದು ಸಾಧನ. ಇಲ್ಲಿ ಕಾಯುವ ಕುರುಬನೂ ಇಲ್ಲ. ಅಂಡಲೆಯುವ ಕುರಿಗಳೂ ಇಲ್ಲ. ಸಾರಸ್ವತ ಲೋಕದ್ದು ಏಕರೂಪಿ ನಾಗರಿಕ ಸಂಹಿತೆ. ಇಲ್ಲಿ ಎಲ್ಲರೂ ಅರಸರು, ರಸಿಕರು. ಹೀಗಿದ್ದೂ, ಕೆಲವರು ತಮಗೆ ತಾವೇ ಮೀಸಲಾತಿಯನ್ನು ಕಲ್ಪಿಸಿಕೊಳ್ಳುತ್ತಾರೆ, ಸಮುದಾಯಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಆ ಮೀಸಲಾತಿ-ಸಮುದಾಯಗಳ ಕತ್ತಿ-ಗುರಾಣಿಯ ಮೂಲಕವೇ ಜನಪ್ರಿಯತೆಯ ಬೆಳಕು-ಪದವಿಗೆ ಹತ್ತಿರವಾಗಲು ಹವಣಿಸುತ್ತಾರೆ.

ಮಹಿಳಾ ಸಾಹಿತಿ ಅಂತಲೋ, ಬಂಡಾಯ-ದಲಿತ ಅಂತಲೋ, ಅಲ್ಪ ಸಂಖ್ಯಾತ ಅಂತಲೋ—ಲೇಬಲ್ ಹಚ್ಚಿ ಕೊಂಡ, ಆ ಲೇಬಲ್ಲನ್ನೇ ನೆಚ್ಚಿಕೊಂಡ ಸಾಹಿತಿಗಳಿಗೆ ಕನ್ನಡ ಸಂದರ್ಭದಲ್ಲಿ ಬರವಿಲ್ಲ. ಅಂಥವರ ಬಂಡಾಯ ಕಾಂಟೆಸ್ಸಾದಲ್ಲಿ ಕರಗಿದ್ದನ್ನು, ವಿಶ್ವವಿದ್ಯಾಲಯಗಳಲ್ಲಿ-ಪರಿಷತ್ತುಗಳಲ್ಲಿ ಐಕ್ಯವಾದುದನ್ನು ಕನ್ನಡಿಗರು ಬಲ್ಲರು. ಆದರೆ, ನಿಜವಾದ ದಲಿತ-ಬಂಡಾಯ ಸಾಹಿತ್ಯ ಸೃಷ್ಟಿಸಿದ ದೇವನೂರು ಮಹಾದೇವ ರಂಥ ಪ್ರತಿಭಾವಂತ ಹಾಗೂ ಸಂಕೋಚದ ಬರಹಗಾರರು

ಅಪರೂಪಕ್ಕೆ ಕಾಣಸಿಗುತ್ತಾರೆ. ಅವರಿಗೆ ಮೀಸಲಾತಿ ಬೇಕಿಲ್ಲ. ಪದವಿ ಪ್ರಭಾವಳಿಗಳ ಹಂಗಿಲ್ಲ. ಪ್ರಚಾರಕ್ಕಾಗಿ ಅಡ್ಡದಾರಿ ಹಿಡಿಯಬೇಕಾದ ಜರೂರತ್ತೂ ಇಲ್ಲ. ಬರವಣಿಗೆಯೇ ಅವರ ಬಂಡವಾಳ. ಓದುಗರೇ ಜೀವಾಳ. ಈ ವರ್ಗದಲ್ಲಿ ಹೆಚ್ಚಿನ ಜನ ಕಾಣ ಸಿಗಲಿಕ್ಕಿಲ್ಲ.

ಇಂಥ ಅಪರೂಪದ ವರ್ಗಕ್ಕೆ ಸೇರಿದವರು ಕೆ. ಎಸ್. ನಿಸಾರ್ ಅಹಮದ್. ದೇವನೂರು ಕತೆಗಾರ, ನಿಸಾರ್ ಹೆಸರು ಮಾಡಿದ್ದು ಕಾವ್ಯಕ್ಷೇತ್ರದಲ್ಲಿ.

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಎಂದು ಜನಪ್ರಿಯರಾದ ಕೊಕ್ಕರೆ ಹೊಸಹಳ್ಳಿ ಷೇಕ್ ಹೈದರ್ ನಿಸಾರ್ ಅಹಮದ್ ಹದಿನಾರಾಣೆ ಕವಿ. ಪದ್ಯದೊಂದಿಗೆ ಗದ್ಯ, ವಿಮರ್ಶೆ, ಅನುವಾದ, ಅಂಕಣ—ಹೀಗೆ ಕಾಲಕಾಲಕ್ಕೆ ಕಾಡಿದ್ದನ್ನು ನಿಸಾರ್ ಬರೆದಿದ್ದರಾದರೂ ಅವರ ಎಲ್ಲ ಸೃಜನಶಕ್ತಿಯನ್ನು ಹೀರಿಕೊಂಡಿದ್ದು ಕಾವ್ಯ ಪ್ರಕಾರ ಮಾತ್ರ. ಬರವಣಿಗೆಯಲ್ಲಿ ಎದ್ದು ಕಾಣುವುದು ಪದ್ಯ. ನಿಸಾರ್ ಕವಿತೆ ಪಕ್ಕದ ಮನೆಯ ಹುಡುಗಿಯಂತೆ; ಮುಗಿಲ ಮಲ್ಲಿಗೆ ಅನ್ನಿಸಿದಷ್ಟು ಹತ್ತಿರ, ತೋರುಕೈಗಳ ಮುಲಾಜಿಲ್ಲದೆ ನೇರ ಓದುಗನಿಗೇ ನಿಲುಕುವಷ್ಟು ಆಪ್ತ. ಆದರೆ ಅವರ ಗದ್ಯ ಅಪರಿಚಿತ ಯುವತಿಯಂತೆ ಕೊಂಚ ಗಂಭೀರ. ಪದ್ಯದ ಸರಳತೆ ಗದ್ಯದಲ್ಲಿ ಕಾಣುವುದಿಲ್ಲ. ಇದಕ್ಕೆ ಉದಾಹರಣೆಯಾಗಿ 'ಅಚ್ಚುಮೆಚ್ಚು' ಪುಸ್ತಕದ ಲೇಖನಗಳನ್ನು ನೋಡಬಹುದು. ಹೂರಣ ಹಾಗೂ ಭಾಷೆಯ ಮಟ್ಟಿಗೆ 'ಅಚ್ಚುಮೆಚ್ಚು' ಲೇಖನಗಳು ಅಚ್ಚುಕಟ್ಟು ನಿಜ, ಆದರೆ ಅವು ಆಪ್ತ ಅನ್ನಿಸುವುದಿಲ್ಲ. ಅಂದರೆ, ನಿಸಾರ್ ವಿಫಲ ಲೇಖಕರು ಎಂದಲ್ಲ. ಅವರ ಪದ್ಯದ ಗುಂಗಿನಲ್ಲಿರುವ ನಮಗೆ ಗದ್ಯ ರುಚಿಸುವುದಿಲ್ಲ, ಅಷ್ಟೇ. ಇಷ್ಟಕ್ಕೂ, ನಮಗೆ ಕವಿ ನಿಸಾರ್ ಆಪ್ತರೇ ಹೊರತು, ಲೇಖಕ ನಿಸಾರರಲ್ಲ.

'ಅನ್ಯರೊರೆದುದನೆ, ಬರೆದುದನೆ ನಾ ಬರೆಬರೆದು / ಬಿನ್ನಗಾಗಿದೆ ಮನವು; ಬಗೆಯೊಳಗನೇ ತೆರೆದು / ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ / ಪನ್ನತಿಕೆ ಬರುವನಕ ನನ್ನ ಬಾಳಿದು ನರಕ' ಎಂದು ಕೊರಗಿದ ಗೋಪಾಲಕೃಷ್ಣ ಅಡಿಗರಂತೆಯೇ, ಪದ್ಯದ ನಂಟಿನ ಮೊದಲ ದಿನಗಳಿಂದಲೂ ತನ್ನತನಕ್ಕಾಗಿ ಹಾತೊರೆದ ಕವಿ ನಿಸಾರ್. 'ನನ್ನ ದನಿ, ನನ್ನದೇ ಆದ ದನಿ, ನನ್ನೆದೆಯ ಜೀವಮಣಿ / ಎಲ್ಲಿರುವುದೊ! ಹೃದಯಗಹ್ವರದಾವ ಹಳಸುಗತ್ತಲೆಯಲ್ಲಿ / ಕೆಡೆಯುತಿಹುದೊ! / ಭೂ ತಳದ ಶಿಲೆಯಲ್ಲಿ ಗೆರೆಯಾದ ಜಲದಂತೆ / ಯಾವೆಡೆಯ ತಡಿಯಲ್ಲಿ ಸೆಡೆಯುತಿಹುದೊ' ಎನ್ನುವ ತುಡಿತ ಹಾಗೂ 'ನಾನು— ದಿಗ್ದಿಗಂತದ ಬೆಳ್ಳಿ ಗೆರೆಗೆ ಆಶಿಸಿದವನು / ಕಲ್ಲಲ್ಲಿ ಸಿರಿ, ನೆಲದಲ್ಲಿ ಝರಿ, ಕಾಡೊಳಗು ದಾರಿಯನು ಕನಸಿದವನು / ನಗುವ ಭಡವರ ನಡುವೆ ಎಡವಿ ಬಿದ್ದರು, ಎದ್ದು / ಗೆದ್ದೆ ಬರುವೆನು ಎಂದು ಕಾರವಾನಿನ ಸೇನೆ ಜೊತೆಗೆ ಹೊರಟವನು' ಎನ್ನುವ ಮಹತ್ವಾಕಾಂಕ್ಷೆ ನಿಸಾರರ ಕವಿತೆಗೆ ಕಸುವು ತುಂಬಿದೆ. 'ಮಣ್ಣಿನಲಿ ಬೇರಿರುವ ಸ್ವಂತಿಕೆಯೆ ಸಾಕೆನಗೆ / ಹೆಮ್ಮೆಯಲಿ ತುಳಿಯುವೆನು ನನ್ನ ದಾರಿ' ಎನ್ನುವ ಕವಿಗೆ ತನ್ನ ಸ್ಪಷ್ಟ ಗುರಿಯ ಅರಿವಿದೆ.

ಅನೇಕ ಜನಪ್ರಿಯ ಕವಿಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿ ಹಾಗೂ ಅರ್ಥವಾಗುವಂತೆ ಪದ್ಯ ಬರೆದಿರುವುದು ನಿಸಾರರ ಅಗ್ಗಳಿಕೆ. ಅವರ ಪದ್ಯಗಳಲ್ಲಿ ಎದ್ದು ಕಾಣುವುದು ಜೀವನ ಪ್ರೀತಿ ಹಾಗೂ ಮುಗ್ಧತೆ. ಸರ್‌ಸಿ. ವಿ. ರಾಮನ್ ಸತ್ತ ದಿನ ಬರೆದ ಸಾಂದರ್ಭಿಕ

ಪದ್ಯವನ್ನು ನೆನಪಿಸಿಕೊಳ್ಳಿ. ರಾಮನ್ ಸಾವು ಗದ್ದೆಯ ಜೀತದಾಳಿನ ಮೇಲೆ ಯಾವುದೇ ರೀತಿಯ ಪರಿಣಾಮವನ್ನು ಉಂಟು ಮಾಡದೆ ಇರುವ ಬಗೆಗೆ ಬೆರಗುಗೊಳ್ಳುತ್ತಾ ಬರೆಯುವ ಕವಿ, ನಮಗೆ ಅರಿವಿಲ್ಲದಂತೆಯೇ ವಿಷಾದವೊಂದನ್ನು ದಾಟಿಸಿಬಿಡುತ್ತಾರೆ. ಕಾಂಪೌಂಡಿನಲ್ಲಿ ಬಿದ್ದ ರಸ್ತೆಯಲ್ಲಿನ ತೆಂಗಿನ ಮರದ ನೆರಳು ಹಾಗೂ ಆ ಮರದ ನೆರಳಿನಲ್ಲಿ ನಿಂತ ಯಾರದೋ ಕಾರು ಕವಿಯ ಚಿಂತನೆಗೆ ಗ್ರಾಸವಾಗುತ್ತದೆ. ಜಾಗತಿಕ ದೊಡ್ಡಣ್ಣ ಅಮೇರಿಕ ವನ್ನು ಕುರಿತು ಅಮಲು-ಮೆಚ್ಚುಗೆ-ಟೀಕೆಗಳನ್ನು ಕಾವ್ಯವಾಗಿಸುವಷ್ಟೇ ಸಮರ್ಥವಾಗಿ, 'ಕನ್ನಡವೆಂದರೆ ಬರಿ ನುಡಿಯಲ್ಲ; ಹಿರಿದಿದೆ ಅದರರ್ಥ' ಎಂದು ನಿಸಾರ್ ಬರೆಯುತ್ತಾರೆ. ಸಹದ್ದುಗಳಿಲ್ಲದ ಆಕಾಶದಂತೆ, ಚೌಕಟ್ಟುಗಳಿಲ್ಲದ ಕವಿಯಾಗಿ ನಿಸಾರ್ ಕಾಣಿಸುತ್ತಾರೆ.

'ನಿಸಾರ್ ಸಹಜ ಕವಿ' ಎನ್ನುವುದು ಪುತಿನ ಹಾಗೂ ಅಡಿಗರ ಹೇಳಿಕೆ. ನಿಸಾರ್ ಅವರ ಕಾವ್ಯದ ಜೀವ ದನಿ ವಿಡಂಬನೆ ಎನ್ನುವುದು ವಿಮರ್ಶಕರ ಸಂಶೋಧನೆ. ನಿಸಾರ್ ರಸಿಕ ಕವಿಯೂ ಹೌದು ಎನ್ನುವುದು ಅವರ ಕವಿತೆಗಳಲ್ಲಿ ಒಡೆದು ಕಾಣುವ ಗುಟ್ಟು. ನಿಸಾರರ ಸಹಜ ಕಾವ್ಯ ಹಾಗೂ ವಿಡಂಬನೆಯ ಕಾವ್ಯದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಅವರ ಕಾವ್ಯದ ಒಂದು ಭಾಗವಾದ ತುಂಟತನ ಮತ್ತು ರಸಿಕತೆಗಳು ಮರೆಯಲ್ಲೇ ಉಳಿದಿವೆ. ಅವರ ಸಮಕಾಲೀನ ಕವಿಗಳು ತಾಯ್ತನವನ್ನು ಬಣ್ಣಿಸುತ್ತಾ, ಹೆಣ್ಣಿನ ಮತ್ತೊಂದು ಮುಖವನ್ನು ಚಿತ್ರಿಸುವುದು ಪಾಪ ಎಂದು ನಂಬಿದ್ದ ಸಂದರ್ಭದಲ್ಲಿ ನಿಸಾರ್ ಹರಯದ ಆಕರ್ಷಣೆಯನ್ನು, ಮನಸ್ಸಿನ ಚಾಂಚಲ್ಯವನ್ನು ಪದಗಳಲ್ಲಿ ಹಿಡಿದಿಟ್ಟರು. ಅವರ ಪದ್ಯದಲ್ಲಿ ಕಾಮ ಕಣ್ಣು ಕುಕ್ಕುವಂತಹುದಲ್ಲ; ಅಶ್ಲೀಲವೂ ಅಲ್ಲ. ಅದು ಕಲೋದ್ಯಾನದಲ್ಲಿ ಅರಳಿದ ಕಾಮಕಸ್ತೂರಿ. ಹೂವಿನ ಅಂದ ಕೆಡದಂತೆ ಬಾಯಿ ತುಂಬ ಜೇನು, ಕಾಲುಗಳಿಗೆ ಪರಾಗ ರೇಣು ಕಚ್ಚಿಸಿಕೊಂಡು ಹಾರುವ ದುಂಬಿಯಂತಹದು ನಿಸಾರರ ಕಾವ್ಯ. ಅವರ ಈ ರಸಿಕತೆ ಅರ್ಥವಾಗಲಿಕ್ಕೆ 'ಮನೋರಮಾ', 'ಪ್ರಾಯ', 'ವೈಜಯಂತಿ', 'ಎಲ್ಲಿದ್ದೀಯೋ ಹುಡುಗ', 'ನಕ್ಷತ್ರಿಕ', 'ಪವಾಡ', 'ನಿರೂಪಣೆ ಎಂದರೆ ಕತ್ತಿನ ಹಿಂಭಾಗ'ದಂಥ ಕವಿತೆಗಳನ್ನು ಓದಬೇಕು. ಕವಿಯ ತುಂಟತನದ ಒಂದು ಉದಾಹರಣೆ ನೋಡಿ: 'ಇಕ್ಕಟ್ಟು ಸಂದಿಯಲಿ ದಿಕ್ಕೆಟ್ಟ ಮೊಲ ಹೊಕ್ಕು / ಕಚಗುಳಿಯನಿಟ್ಟಂಥ ಮುಲುಮುಲಾಟ / ಅಮ್ಮ ಕುಚ್ಚಿಸಿಕೊಂಡ ಕೈಯ ಮೆಲಿನ ಕೆರೆತ. / ಕಾಂಪೌಂಡು ಪಾತಿಯಲಿ ಕೋತಿ ಕಾಟ'. ಈ ಕವಿತೆಯಲ್ಲಿ ನಿಸಾರ್ ಹೊಸತಾಗಿ ಕಾಣುತ್ತಾರೆ ಅಲ್ಲವೇ?

'ಮನೋರಮಾ' ಪದ್ಯದಲ್ಲಿನ ಪುಟಿಯುವ ಜೀವಂತಿಕೆಯನ್ನು ನೋಡಿ: 'ಮನೋರಮಾ, ಮನೋರಮಾ: / ಸಾಲದೇನೆ ನಿನ್ನ ಹೆಸರೆ? ಮಲಗೋಬದ ಗಮಗಮ / ತುಟಿಯಗಲಿಸಿ ನಕ್ಕೆ: / ಮುಂಜಾವದ ಐದಕ್ಕೆ / ಮಿಂಚಾದವೆ ಕೆರೆಯಂಚಿಗೆ ಹಾಲಕ್ಕಿಯ ರೆಕ್ಕೆ?'. ಈ ಕವಿತೆಯನ್ನು ಅದರ ಬಾಗು ಬಳುಕು, ಚಮತ್ಕಾರಗಳೊಂದಿಗೆ ಗಟ್ಟಿಯಾಗಿ ಓದಿಕೊಂಡರೆ ಹೇಗಿರುತ್ತದೆ? ಆ ಸುಖವನ್ನು ಓದಿಯೇ ಅನುಭವಿಸಬೇಕು. ವಿಪರ್ಯಾಸ ನೋಡಿ: ತುಂಟತನ, ಲವಲವಿಕೆಯ ಈ ಪದ್ಯ ಸಾಕಷ್ಟು ಜನರಿಗೆ ಗೊತ್ತೇ ಇಲ್ಲ. 'ಗೋಪಿ ಮತ್ತು ಗಾಂಡಲೀನ'ಳನ್ನು ಪಾರ್ಟಿಗಳಲ್ಲಿ ಚಪ್ಪರಿಸುವವರಿಗೆ 'ಮನೋರಮಾ'ಳ

ಪರಿಚಯವೂ ಇಲ್ಲ. ಬಹುಶಃ ವಿಮರ್ಶಕರು ಮೆಚ್ಚಿ ಮುಂದಿಟ್ಟದ್ದನ್ನೇ ಒಪ್ಪುವ ಪರಾವಲಂಬನೆಯ ಗುಣವೇ ಇಂಥ ಪದ್ಯಗಳು ಮರೆಯಲ್ಲಿ ಉಳಿಯಲಿಕ್ಕೆ ಕಾರಣವಿರಬೇಕು. 'ಮೈಸೂರು ಮಲ್ಲಿಗೆ'ಯ ನರಸಿಂಹಸ್ವಾಮಿ ಅವರ ಕವಿತೆಗಳಲ್ಲಿನ ಆದರ್ಶ ಪ್ರೇಮವನ್ನು ಮೆಚ್ಚುವವರು, ತರುಣ ತರುಣಿಯರ ಒಳ ತೋಟಿಗೆ ನಿಸಾರರು ಸಹಜ ದನಿಯಾದುದನ್ನು ಗುರ್ತಿಸಿದಂತಿಲ್ಲ.

ನಿಸಾರ್ ಅವರ ಕಾವ್ಯವನ್ನು ಪೊರೆದ ಪ್ರಜ್ಞೆಗಳಲ್ಲಿ 'ನಗರ ಪ್ರಜ್ಞೆ'ಯೂ ಒಂದು. ನಗರ ಅವರ ಪಾಲಿಗೆ ಅಸ್ಪೃಶ್ಯವಲ್ಲ. ನರಕವೂ ಅಲ್ಲ. ಹಾಗೆಂದು ನಗರದ ಕುರಿತು ಅವರು ಭಾವುಕತೆಯಿಂದ ಮಾತನಾಡುವುದೂ ಇಲ್ಲ. 'ಬಿಟ್ಟ ಊರಿನ ನೆನಪು ಸುಟ್ಟರೂ ಸಾಯದು / ಸಿಕ್ಕಲಾರದು ಹುಡುಕಿ ಬಂದ ಜಾಡು' ಎನ್ನುವ ಹಳಹಳಿ ಇದ್ದಾಗಲೂ ನಗರ ಜೀವನದ ಜಂಜಡಗಳ ನಡುವೆಯೂ ಅಲ್ಲಿನ ಆಹ್ಲಾದಕರ ಮುಖಗಳನ್ನು ಕವಿ ಚಿತ್ರಿಸುವುದು ವಿಶೇಷ. ಗಾಂಧಿ ಬಜಾರಿನ ಜೀವಂತಿಕೆಯೊಂದಿಗೆ ಮಾಸ್ತಿಯನ್ನು, ಲಾಲ್‌ಬಾಗ್‌ನ ಸಮೃದ್ಧಿಯೊಂದಿಗೆ ಎಚ್ಚೆನ್ ಅವರನ್ನು ನಿಸಾರ್ ಚಿತ್ರಿಸುತ್ತಾರೆ. ಕವಿಯ ಪಾಲಿಗೆ ಮಾಸ್ತಿ ಹಾಗೂ ಎಚ್ಚೆನ್ ವ್ಯಕ್ತಿತ್ವ ಕೂಡ ಉದ್ಯಾನದಷ್ಟೇ ವಿಸ್ತೃತವಾದುದು, ಉದಾತ್ತವಾದುದು. ನಗರದ ಖಾಲಿಸೈಟು, ಮನೆಯ ಅಂಗಳ, ಅಂಗಳದಲ್ಲಿನ ತೆಂಗಿನ ಮರ, ರಸ್ತೆ, ರಸ್ತೆಯಲ್ಲಿನ ಕಾರು, ಬಡಾವಣೆಯಲ್ಲೊಂದು ಮಧ್ಯಾಹ್ನ—ಎಲ್ಲವೂ ನಿಸಾರರ ಕಾವ್ಯಕ್ಕೆ ನೆಪವಾಗುತ್ತವೆ. ನಗರದಲ್ಲಿ ಅಭ್ಯಾಗತನಂತೆ ಸುಳಿಯುವ ಸಂಜೆ ಮಳೆಗೆ 'ಸಂಜೆ ಐದರ ಮಳೆ' ಎಂದು ನಾಮಕರಣ ಮಾಡಿದವರು ಇದೇ ನಿಸಾರ್.

ಎಲ್ಲ ಕವಿಗಳಂತೆಯೇ ನಿಸಾರರನ್ನೂ ಸಾವು ಮಾಯೆಯಂತೆ ಕಾಡಿದೆ. ಈ ಸಾವನ್ನು ಅವರು ಬದುಕಿನ ಸಾರ್ಥಕ ಕ್ಷಣಗಳಿಗೆ ಮುಖಾಮುಖಿಯಾಗಿಸುವುದು, ಸಾವಿನ ಘಟನೆಗಳ ಮೂಲಕ ಬದುಕಿನ ಅರ್ಥಶೋಧವನ್ನು ನಡೆಸುವುದು ಹೊಸತಾಗಿದೆ. ಈ ಹಿನ್ನೆಲೆಯಲ್ಲಿ 'ಅಂತರ', 'ಮೃಗಾಯಣ', 'ಮೈಲಿ ಮೊಗದ ಮಹಾರಾಯ', 'ಭೀಮಪ್ಪ ಮಾಸ್ತರರು' ಕವಿತೆಗಳನ್ನು ಓದಬಹುದು. ಈ ಸಾಲಿಗೆ ಸೇರಿದ 'ರಾಮನ್ ಸತ್ತ ಸುದ್ದಿ' ಸಾಕಷ್ಟು ಜನಪ್ರಿಯತೆ ಗಳಿಸಿದ ಕವಿತೆ. ಬೀಚಿ ಹಾಗೂ ಬಿ.ಜಿ.ಎಲ್. ಸ್ವಾಮಿ ಅವರ ಅಗಲಿಕೆಯ ನೆನಪಿನ 'ಸಾವಿಗೆ ಅತಿಥಿ ಪರಿಚಯ' ಅಪ್ಪಟ ನಿಸಾರ್ ಛಾಪಿನ ಕವಿತೆ. ಸಾವಿನೊಂದಿಗೆ ಸಂವಾದ ನಡೆಸುವ ಕವಿ, ಈ ನೆಲದ ಶೀತೋಷ್ಣಮಾಪಿಗಳಾದ ಬೀಚಿ ಹಾಗೂ ಬಿ.ಜಿ.ಎಲ್. ಅವರನ್ನು ಮೃತ್ಯುವಿಗೆ ಪರಿಚಯಿಸುತ್ತಾರೆ. ವ್ಯಕ್ತಿಚಿತ್ರ, ಚಿರಸ್ಮರಣೆ, ಜಿಜ್ಞಾಸೆ ಯಾವುದು ಬೇಕಾದರೂ ಆಗಬಹುದಾದ ಸಾರ್ಥಕ ಕವಿತೆಯಿದು.

ಸಮಕಾಲೀನರಂತೆ ನಿಸಾರ್ ಪೊಯೆಟ್ರಿ ಮಾರ್ಕೆಟಿಂಗ್‌ನಲ್ಲಿ ನುರಿತಿಲ್ಲ. ಆದರೂ ಜನಪ್ರಿಯತೆಯ ಮಟ್ಟಿಗೆ ಅವರು ಅದೃಷ್ಟವಂತ ಕವಿ. ಅವರ 'ನಿತ್ಯೋತ್ಸವ' ಗೀತೆ ಪರ್ಯಾಯ ನಾಡಗೀತೆ ಅನ್ನುವಷ್ಟು ಜನಪ್ರಿಯ. 'ನಿತ್ಯೋತ್ಸವ' ಧ್ವನಿಸುರುಳಿ ನಿಸಾರ್ ಕವಿತೆಗಳನ್ನು ಅಕ್ಷರವಿಮುಖರಿಗೂ ಮುಟ್ಟಿಸಿದೆ. ಅದು ಕನ್ನಡ ಭಾವಗೀತೆಗಳ ಮೊಟ್ಟ ಮೊದಲ ಧ್ವನಿಸುರುಳಿ. 'ಕುರಿಗಳು, ಸಾರ್, ಕುರಿಗಳು' ಕವಿತೆಯನ್ನು ಗಟ್ಟಿಯಾಗಿ

ಹಾಡಿಕೊಂಡು ಚಪ್ಪರಿಸುವ ಕಾವ್ಯಪ್ರೇಮಿಗಳ ಸಂಖ್ಯೆ ಯಾವ ಕಾಲಕ್ಕೂ ಇದ್ದೇ ಇದೆ.

ಕವಿತೆಗಳಲ್ಲಿ ಕವಿಯ ಜಾತಕವನ್ನು ಹುಡುಕುವುದು ವಿಮರ್ಶಕ ಲೋಕದ ಕೆಟ್ಟ ಚಾಳಿಗಳಲ್ಲೊಂದು. ಅದರಲ್ಲೂ ಬರಹಗಾರ ದಲಿತನೋ, ಮುಸ್ಲಿಂ ಸಮುದಾಯಕ್ಕೆ ಸೇರಿದ ವ್ಯಕ್ತಿಯೋ ಆಗಿದ್ದರೆ ಮುಗಿದೇಹೋಯಿತು; ಆತನ ಬರಹಗಳಲ್ಲಿ ಆತನ ಹುಟ್ಟಿನ ಪ್ರಭಾವದ ಕುರಿತು ಘನ ಕೃತಿಗಳೇ ಪ್ರಕಟವಾಗಿಬಿಡುತ್ತವೆ. ದಲಿತ ವರ್ಗಕ್ಕೆ ಸೇರದ ಲೇಖಕ ದಲಿತ ಬದುಕನ್ನು ಕುರಿತು ಉತ್ತಮ ಕೃತಿ ರಚಿಸಿದರೆ ಅದರ ಬಗ್ಗೆ ಅನುಮಾನ ವ್ಯಕ್ತ ಪಡಿಸುವ, ದಲಿತ ಹಿನ್ನಲೆಯ ಲೇಖಕನ ಸಾಧಾರಣ ಕೃತಿಯನ್ನೂ ಮಹತ್ವದ್ದೆಂದು ನಂಬಿಸುವ ಪ್ರಯತ್ನಗಳು ಆಗಾಗ ನಡೆಯುತ್ತವೆ. ಇಂಥ ಪ್ರಯತ್ನ ನಿಸಾರ್ ಕುರಿತೂ ನಡೆದಿದೆ. ಅವರ ಕವಿತೆಗಳಲ್ಲಿ ಮುಸ್ಲಿಂ ಸಮಾಜವನ್ನು ಕಾಣಲು ಕೆಲವು ವಿಮರ್ಶಕರು ಭೂತಗನ್ನಡಿ ಇಟ್ಟು ಹುಡುಕಿದ್ದಿದೆ. 'ಅಮ್ಮ, ಆಚಾರ, ನಾನು', 'ರಂಗೋಲಿ ಮತ್ತು ಮಗ', 'ಇಬ್ಬಂದಿ', 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ಸವತಿ ಮಕ್ಕಳ ಹಾಗೆ' ಎನ್ನುವ ಕೆಲವು ಕವಿತೆಗಳ ವಿನಾ ನಿಸಾರ್ ಕವಿಗಳಲ್ಲಿ ಮುಸ್ಲಿಂ ಸಂವೇದನೆಯೇ ಸೊನ್ನೆ ಎಂದು ನಿರಾಶರಾಗಿ ಗೊಣಗಿದ್ದೂ ಇದೆ. ಆದರೆ ನಿಸಾರ್ ಮಾತ್ರ ಇದಾವುದಕ್ಕೂ ತಲೆ ಕೆಡಿಸಿಕೊಂಡವರಲ್ಲ. ಅವರು ತಮ್ಮ ಪಾಡಿಗೆ ತಾವು ಪದ್ಯ ಬರೆಯುತ್ತಾ ಹೋದ ಕವಿ. ಕನ್ನಡದ ಬರಹಗಾರ ಎಂದು ಗುರ್ತಿಸಿಕೊಳ್ಳುವುದರಲ್ಲೇ ಅವರಿಗೆ ಹಿತವೇನೋ ಅನ್ನಿಸುತ್ತದೆ.

ತುಮಕೂರಿನಲ್ಲಿ ನಡೆದ ೬೯ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಚರ್ಚೆಯಾದ ಹೆಸರುಗಳಲ್ಲಿ ನಿಸಾರ್ ಹೆಸರೂ ಸೇರಿತ್ತು. ಅವರು ಅಧ್ಯಕ್ಷ ರಾಗುವುದು ಖಚಿತ ಎನ್ನುವ ಗುಲ್ಲು ಸಾಹಿತ್ಯ ವಲಯದಲ್ಲಿ ದಟ್ಟವಾಗಿತ್ತು. ಕೊನೆಯ ಕ್ಷಣದಲ್ಲಿ ಆದದ್ದೇ ಬೇರೆ. ಏನದು? ನಿಸಾರ್ ಪ್ರತಿಕ್ರಿಯಿಸಲಿಲ್ಲ. ಅಧ್ಯಕ್ಷ ಪದಕ್ಕೆ ಯು. ಆರ್. ಅನಂತಮೂರ್ತಿ ಆಯ್ಕೆ ಸರಿಯಾದದ್ದು ಎಂದಷ್ಟೇ ಹೇಳಿ ಮೌನವಾದರು. ಆದರೆ, ಅನಗತ್ಯವಾಗಿ ತಮ್ಮ ಹೆಸರು ಪ್ರಸ್ತಾಪವಾದದ್ದು ಅವರಿಗೆ ನೋವು ತಂದಿತ್ತು. ಆ ನೋವಿಗೆ ಮದ್ದೇನೋ ಎನ್ನುವಂತೆ ಅಮೇರಿಕದ ಡೆಟ್ರಾಯಿಟ್‌ನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನ (೨೦೦೪)ದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುವ ಅವಕಾಶ ಅವರಿಗೆ ದೊರೆಯಿತು.

ಈ ವರ್ಷ, ಅಂದರೆ ೨೦೦೬ರ ಡಿಸೆಂಬರ್ ಮಾಹೆಯಲ್ಲಿ ಶಿವಮೊಗ್ಗೆಯಲ್ಲಿ ನಡೆಯಲಿರುವ ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಅವರಿಗೆ ಅಯಾಚಿತವಾಗಿ ಸರ್ವಾನುಮತದಿಂದ ಲಭಿಸಿರುವುದು ತಡವಾಗಿಯಾದರೂ ಅವರಿಗೆ ನ್ಯಾಯ ದೊರಕಿಸಿದಂತಾಗಿದೆ. ಅವರ ಮೆಚ್ಚಿನವರಿಗಷ್ಟೇ ಅಲ್ಲದೆ ಎಲ್ಲ ಕನ್ನಡ ಜನತೆಗೆ ಇದೊಂದು ಸಂತಸದ ಸಂಗತಿ.

ನಿಸಾರ್ ಕವಿತೆಗಳಲ್ಲಿ ಕೆಲವು ಉಜ್ವಲ ವ್ಯಕ್ತಿಚಿತ್ರಗಳಿವೆ. ಅಂಥ ವ್ಯಕ್ತಿಚಿತ್ರಗಳಲ್ಲಿ ಮಾಸ್ತಿ ಅವರನ್ನು ಕುರಿತ ಕವಿತೆಯೂ ಒಂದು. 'ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ / ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ' ಎಂದು ಮಾಸ್ತಿಯವರನ್ನು ಕುರಿತು ಅವರು ಬರೆದಿದ್ದಾರೆ. ಈ ಪ್ರಸನ್ನ ಭಾವ ನಿಸಾರರ ಎಲ್ಲ ಕವಿತೆಗಳ ಜೀವವಾಗಿ

ಕಾಣುತ್ತದೆ. ವ್ಯಕ್ತಿಯಾಗಿಯೂ 'ಮಾಸ್ತಿ ಗರಡಿ'ಗೆ ಸೇರಿದವರೇ ಆದ ನಿಸಾರ್, ಕಿಡಿಯಿಲ್ಲದ ಆರೋಗ್ಯಕರ ವಿಡಂಬನೆಯನ್ನೂ ಕಾವ್ಯಕ್ಕೇ ಸೀಮಿತಗೊಳಿಸಿದ ಸಜ್ಜನರು. 'ಇಪ್ಪತ್ತನೆಯ ಶತಮಾನದ ಕೊಲಂಬಸ್' ಕವಿತೆಯಲ್ಲಿ 'ನಾನಿಷ್ಟೆ ಲೋಕಕ್ಕೆ: ತೇದಂತೆ ಕರಗುವ ಗಂಧದೊಂದು ಚಕ್ಕೆ' ಎನ್ನುತ್ತಾರೆ ನಿಸಾರ್. ಹೌದು, ಅವರು ಗಂಧದ ಚಕ್ಕೆ; ಕನ್ನಡ ಕಾವ್ಯಾಕಾಶದ ಮಿನುಗು ಚುಕ್ಕೆಯೂ ಸಹ. ಈ ಅಪರೂಪದ ಕವಿಯೊಂದಿಗೆ ನಮ್ಮನ್ನು ಗುರ್ತಿಸಿಕೊಳ್ಳುವುದು, ಅವರ ಕವಿತೆಗಳಿಗೆ ಮುಖಾಮುಖಿಯಾಗುವುದು ಖುಷಿಯ ಸಂಗತಿ.

ಜನನ ಮರಣದೊಳಗಣ ಮಹಾಚಕ್ರದ ಒಳಗಿನ ಉಪಚಕ್ರದಂತೆ ವೃತ್ತಿ-ನಿವೃತ್ತಿಗಳ ಸಂಬಂಧ. ಬಾಳೆ ಗಿಡ ಗೊನೆ ತಳೆದು ಮಾಗುವ ಕಾಯಕ: ವೃತ್ತಿ; ಅದು ಹಣ್ಗೊಂಡು ಭಾರವಿಳಿಸಿಕೊಂಡ ಬಳಿಕದ ಅವಸ್ಥೆ ನಿವೃತ್ತಿ. ಈ ನೆಲೆಯಲ್ಲಿ, ಇಳಿಸಿದ ಗೊನೆಯ ಸಂಗಡವೇ ಗಿಡದ ಅಸ್ತಿತ್ವವೂ ಮುಗಿದು ಹೋಗದು. ಬರಡಾದ ಮೇಲೂ ಅದು ಕಾಲದಲ್ಲಿ ಉಸಿರಾಡುತ್ತ ಹಸಿರಾಡಿಸುತ್ತ ತನ್ನ ಇರುವಿಕೆಯನ್ನು ಪ್ರತ್ಯಕ್ಷಪಡಿಸಿಕೊಳ್ಳುತ್ತದೆ. ಪಶುಪಕ್ಷಿ ಮಾನವಾದಿ ಜಂಗಮರೂಪಿ ಜೀವಿಗಳಿಗೂ ಇದೇ ಸೂತ್ರ ಅನ್ವಯಿತ. ಸಂತಾನ ಸಾಧ್ಯತೆ ತೀರಿದೊಡನೆ ಅವುಗಳ ಜೀವಿತ ಅಂತ್ಯಗೊಳ್ಳುವುದಿಲ್ಲ.

(ವೃತ್ತಿ-ನಿವೃತ್ತಿ)


✧ ✧ ✧

ಎಷ್ಟೇ ಬುಕ್ಕಿದರೂ ಇನ್ನಷ್ಟು, ಮತ್ತಷ್ಟು ಎಂದು ಹಾತೊರೆಯಿಸುವ ಮತ್ತು ಅಜೀರ್ಣವಾಗದಿರುವ ಏಕಮೇವ ಭಕ್ಷ್ಯ—ಲಂಚ. ಸ್ತ್ರೀ ಸುಖದ ವಾಂಛೆಗಿಂತ ಇದು ಅಧಿಕಾಧಿಕ ತೀವ್ರತರ. ಒಂದು ರತಿಕ್ರೀಡೆಯ ಮತ್ತು ಮತ್ತೊಂದರ ಮಧ್ಯೆ ಸ್ವಲ್ಪ ಸಮಯದ ವಿರಾಮ ಅನಿವಾರ್ಯ. ಅಷ್ಟೇ ಅಲ್ಲದೆ ದಿನಗಳೆದಂತೆ, ವಯಸ್ಸಾದಂತೆ ಲೈಂಗಿಕ ಸುಖದ ಉತ್ಕಟತೆ, ಸವಿ, ಹೊಳಪು ತಗ್ಗುತ್ತಾ ಹೋಗುತ್ತವೆ. ಲಂಚದ ಬಗೆಗೆ ಈ ಕಟ್ಟುಪಾಡು- ಗಳಿಲ್ಲ. ಅದು ಅವಿಶ್ರಾಂತ, ನಿತ್ಯ ನವೀನ ಕಾಮಗಾರಿ. ಸಾಗಿದಷ್ಟೂ ಸಾಗುತ್ತಲೇ ಇರಬೇಕೆನ್ನುವ ದಣಿವರಿಯದ ಕುದುರೆ ಸವಾರಿ.

(ಲಂಚದ ಅವಿರಾಮತೆ)

ಭಾಗ–೩

ಆ) ಅಮೇರಿಕನ್ನರ ದೃಷ್ಟಿಯಲ್ಲಿ ನಿಸಾರ್





ಅಮೇರಿಕನ್ನಡಿಗರ ಅಚ್ಚುಮೆಚ್ಚಿನ ಕವಿ

♦ ಸಿ. ಕೃಷ್ಣಶಾಸ್ತ್ರಿ
ಸೀಡರ್ ಫಾಲ್ಸ್ (ಅಯೋವಾ ಪ್ರಾಂತ್ಯ)

ಕನ್ನಡದ ಪ್ರಖ್ಯಾತ ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ೨೦೦೨ರಲ್ಲಿ ಡೆಟ್ರಾಯಿಟ್ ನಗರದಲ್ಲಿ ನಡೆಯಲಿರುವ `ಅಕ್ಕ'ದ ವಿಶ್ವ ಕನ್ನಡ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಬೆಂಗಳೂರಿನಿಂದ ಬರುತ್ತಿರುವುದಾಗಿಯೂ ಅವರು ಅಮೇರಿಕದಲ್ಲಿ ಇರಬಹುದಾದ ಮೂರೂವರೆ ತಿಂಗಳಿನ ಅವಧಿಯಲ್ಲಿ ಇಲ್ಲಿನ ವಿವಿಧ ರಾಜ್ಯಗಳ ಕನ್ನಡ ಕೂಟಗಳಲ್ಲಿ ಮತ್ತು ಮನೆಗಳಲ್ಲಿ ಅವರ ಉಪನ್ಯಾಸ ಹಾಗೂ ಸ್ವರಚಿತ ಕವನಗಳನ್ನು ಓದುವ ಏರ್ಪಾಟನ್ನು ಮಾಡಬೇಕಾಗಿರು ವುದಾಗಿಯೂ ನನ್ನ ಸಹಪಾಠಿ ಮಿತ್ರ ಕ್ಯಾಲಿಫೋರ್ನಿಯದ ಶ್ರೀ ಎಂ. ಕೃಷ್ಣಮೂರ್ತಿಯವರು ದೂರವಾಣಿಯ ಮೂಲಕ ತಿಳಿಸಿದರು. ನಿಸಾರ್ ಅಹಮದ್ ಅವರ ವೈಯಕ್ತಿಕ ಪರಿಚಯ ನನಗೆ ಇಲ್ಲದಿದ್ದರೂ ಅವರ ಜನಪ್ರಿಯ ಗೀತೆಗಳನ್ನು ಹಲವಾರು ಬಾರಿ ಕೇಳಿ ಸಂತೋಷಪಟ್ಟಿದ್ದೆ. ಅಲ್ಲದೆ ಕಳೆದ ಶತಮಾನದ ಅರವತ್ತರ ದಶಕದ ಪ್ರಾರಂಭದ ಭಾಗದಲ್ಲಿ ನಾನು ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನ ಬಿ.ಇ. ವಿದ್ಯಾರ್ಥಿಯಾಗಿದ್ದಾಗ ನಿಸಾರ್ ಅವರನ್ನು ನನ್ನ ಮೇಷ್ಟ್ರು ಕೆ. ಎನ್. ಕೃಷ್ಣಸ್ವಾಮಿಯವರ ಜೊತೆಯಲ್ಲಿ ಕೆಲವು ಸಲ ಗಾಂಧಿ ಬಜಾರಿನಲ್ಲಿ ಕಂಡಿದ್ದೆ. ಇಷ್ಟನ್ನು ಬಿಟ್ಟರೆ ವೈಯಕ್ತಿಕವಾಗಿ ಅವರ ಪರಿಚಯ ನನಗಿರಲಿಲ್ಲ.

ಅವರು ಅಮೇರಿಕಕ್ಕೆ ಬರುತ್ತಿರುವ ಸುದ್ದಿಯನ್ನು ತಿಳಿದು

ನನಗೆ ಖುಷಿಯಾಗಿತ್ತು. ಆದರೆ ಕೃಷ್ಣಮೂರ್ತಿ ಈ ಸಿಹಿ ಸುದ್ದಿಯ ಜೊತೆಗೇ ಒಂದು ಗುರುತರ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿದ್ದರು. ಅದೆಂದರೆ, ನಿಸಾರರು ಅಮೇರಿಕಕ್ಕೆ ಬರುವವರೆಗೂ ಅವರ ವೀಸಾ, ವಿಮಾನ ಪ್ರಯಾಣ, ಹೊರಡಬೇಕಾದ ದಿನಾಂಕ, ಪ್ರಯಾಣದ ವೇಳೆಯಲ್ಲಿ ಮತ್ತು ಇಲ್ಲಿ ಉಳಿದುಕೊಳ್ಳುವ ಅವಧಿಯಲ್ಲಿ ಮಾಡಿಕೊಳ್ಳಬೇಕಾದ ಅಗತ್ಯ ಪೂರ್ವಭಾವಿ ಸಿದ್ಧತೆ ಇತ್ಯಾದಿಗಳಲ್ಲದೆ, ಅಮೇರಿಕಕ್ಕೆ ಬಂದ ಮೇಲೆ ಅವರು ಬೇರೆ ರಾಜ್ಯಗಳಿಗೆ ಹೋಗಲು ಮಾಡಿಕೊಡಬೇಕಾದ ಸೌಕರ್ಯ, ಅನುಕೂಲಗಳನ್ನು ನಿರ್ವಹಿಸುವ ಹೊಣೆಯನ್ನು ನಾನು ನಿಭಾಯಿಸಬೇಕೆಂದು ಪ್ರೀತಿಯಿಂದ ಆಗ್ರಹಿಸಿದರು. ನನ್ನ ಮೇಲಿನ ಈ ವಿಶ್ವಾಸಕ್ಕೆ ಗೆಳೆಯ ಕೃಷ್ಣಮೂರ್ತಿಗೆ ಆಭಾರಿಯಾಗಿದ್ದರೂ ನಿರ್ವಹಿಸಬೇಕಾದ ಕೆಲಸಗಳ ಅಗಾಧತೆಯನ್ನು ನೆನೆದು ಕೊಂಚ ಹಿಂಜರಿದೆ. ಆದರೆ ಕೃಷ್ಣಮೂರ್ತಿ ನನ್ನ ಕಾರ್ಯನಿರ್ವಾಹಕ ಸಾಮರ್ಥ್ಯವನ್ನು ಹೊಗಳಿ ಪುಸಲಾಯಿಸಿದ್ದರಿಂದ ನಿರ್ವಾಹವಿಲ್ಲದೆ ಒಪ್ಪಿಕೊಂಡೆ.

ನಿಸಾರರನ್ನು ಎರಡು ತಿಂಗಳು ಮುಂಚಿನಿಂದಲೇ ದೂರವಾಣಿಯಲ್ಲಿ ಖುದ್ದಾಗಿ, ಬೆಂಗಳೂರಿನಲ್ಲಿರುವ ನನ್ನ ಬಂಧು ರವಿ ಶಂಕರ್ ಮೂಲಕ ಪರೋಕ್ಷವಾಗಿ ಸಂಪರ್ಕಿಸಿ ಅವರಿಗೆ ಸಕಾಲಿಕವಾದ ಸಲಹೆ ಸೂಚನೆಗಳನ್ನು ನೀಡಿದೆ. ಆಗ, ಅವರೊಂದಿಗೆ ಮಾತನಾಡುವ ಅವಕಾಶ ನನಗೆ ಲಭಿಸಿತ್ತು. ಅವರು 'ಅಕ್ಕ' ಸಮ್ಮೇಳನದಲ್ಲಿ ಭಾಗವಹಿಸುವ ಮೂರು ದಿವಸಗಳವರೆಗೆ ಅವರ ಸಮಗ್ರವಾದ ಪರಿಚಯವನ್ನು ಅಮೇರಿಕನ್ನಡಿಗರಿಗೆ ಮಾಡಿಕೊಡುವ ಉದ್ದೇಶದಿಂದ 'ನಿಸಾರ್ ಅಹಮದ್ ಅವರ ಅಮೇರಿಕ ಪ್ರವಾಸ' ಎನ್ನುವ ಫಲಕದ ಅಡಿಯಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸುವ ಅಪೇಕ್ಷೆ ನನ್ನ ಮನಸ್ಸಿನಲ್ಲಿ ಅಂಕುರಿಸಿತು. ಇದಕ್ಕಾಗಿ ಅವರಿಂದ ಅವರ ಎಲ್ಲ ಪುಸ್ತಕ, ದನಿ ಸುರುಳಿ, ಸಿ.ಡಿ.ಗಳನ್ನೂ ಪ್ರಶಸ್ತಿ ಪತ್ರಗಳು, ಮುಖ್ಯವಾದ ಭಾವಚಿತ್ರಗಳು ಇನ್ನಿತರ ಅಮೂಲ್ಯ ಮಾಹಿತಿಗಳನ್ನೂ ಅವರಿಂದ ಪೂರ್ವಭಾವಿಯಾಗಿ ತರಿಸಿಕೊಂಡೆ.

ನಿಸಾರರ ಪ್ರಯಾಣ ಅನುಕೂಲಕರವಾಗಿರುವಂತೆ ಅವರನ್ನು ಕೊಂಚ ದುಬಾರಿಯಾದರೂ, ಫ್ರಾಂಕ್‌ಫರ್ಟ್‌ನಲ್ಲಿ ಮಾತ್ರ ಒಂದು ನಿಲುಗಡೆಯಿರುವ ಲುಫ್ತಾನ್ಸ ವಿಮಾನದಲ್ಲಿ ಬರಮಾಡಿಕೊಳ್ಳಲು ಆಲೋಚಿಸಿದ್ದಾಯಿತು. ಭಾರತದಿಂದ ಅಮೇರಿಕಕ್ಕೆ ನಿಗದಿತ ಸಮಯಕ್ಕೆ ಯಾನ ಮಾಡುವ ಆ ವಿಮಾನದ ಟಿಕೇಟುಗಳು ಮುಗಿದದ್ದರಿಂದ ನಿಸಾರರು ಒಂದು ವಾರದ ಮುಂಚೆಯೇ, ಅಂದರೆ, ೨೩.೮.೨೦೦೨ರಂದು ಡೆಟ್ರಾಯಿಟ್‌ಗೆ ಬಂದು 'ಅಕ್ಕ'ದ ಅಧ್ಯಕ್ಷ ಅಮರನಾಥ ಗೌಡರ ಮನೆಯಲ್ಲಿ ಉಳಿಯಬೇಕಾಯಿತು. ಸಮ್ಮೇಳನವಿದ್ದದ್ದು ಆಗಸ್ಟ್ ೩೦, ೩೧ ಮತ್ತು ಸೆಪ್ಟೆಂಬರ್ ೧ರಂದು. ನಾನು ಅಯೋವಾದಿಂದ ಸಮ್ಮೇಳನಕ್ಕೆ ಆಗಮಿಸಿದ್ದು ೨೯ರಂದು. ಆವರೆಗೂ ನಿಸಾರರ ವೈಯಕ್ತಿಕ ಪರಿಚಯ ನನಗಾಗಲಿಲ್ಲ.

ಸಮ್ಮೇಳನದ ಮೂರು ದಿವಸಗಳಲ್ಲಿ ಅವರ ಮತ್ತು ನನ್ನ ಆಪ್ತತೆ ಎಷ್ಟು ಗಾಢವಾಯಿತೆಂದರೆ ಬಹುಶಃ ಹಲವಾರು ದಶಕಗಳಿಂದ ಗಳಸ್ಯ ಕಂಠಸ್ಯರಾಗಿದ್ದೆವೇನೋ

ಎಂದು ಬೇರೆಯವರಿಗೆ ಅನ್ನಿಸುತ್ತಿತ್ತು. ಪ್ರದರ್ಶನದ ವ್ಯವಸ್ಥಿತ ಏರ್ಪಾಟನ್ನು ಕಂಡ ನಿಸಾರರು, 'ಶಾಸ್ತ್ರಿಗಳೆ, ನನ್ನ ಬಗೆಗಿನ ಇಂತಹ ಒಂದು ಮಾಹಿತಿನಿಬಿಡ ಸಾರ್ವಜನಿಕ ಕಾರ್ಯಾವಳಿಯನ್ನು ನನ್ನ ಸಾಹಿತ್ಯಕ ಜೀವನದ ನಾಲ್ಕೈದು ದಶಕಗಳಿಂದ ನಾನು ಕಂಡಿಲ್ಲ. ನಾನು ಯಾರು? ನೀವು ಯಾರು? ಎತ್ತಣಿಂದೆತ್ತ ಸಂಬಂಧ? ಎಷ್ಟೆಲ್ಲ ಶ್ರದ್ಧೆ ವಹಿಸಿ ನಿಮ್ಮದೇ ಪ್ರದರ್ಶನ ಆಗುತ್ತಿದೆಯೇನೋ ಎಂಬಂಥ ಅಚ್ಚುಕಟ್ಟು, ಅಂದಚಂದ ಹಾಗೂ ಉತ್ಸಾಹದಿಂದ ಇದನ್ನು ಏರ್ಪಡಿಸಿದ್ದೀರಿ. ನಿಮಗೆ ಹೇಗೆ ತಾನೆ ನನ್ನ ಋಣವನ್ನು ತೀರಿಸಲಿ?' ಎಂದು ನನ್ನ ಕೈ ಹಿಡಿದುಕೊಂಡು ಭಾವಗದ್ಗದಿತರಾಗಿ ನುಡಿದಾಗ ನಾನು, 'ಸಾರ್, ನೀವು ಹೀಗೆಲ್ಲಾ ಹೇಳಬಾರದು. ನಿಮ್ಮಂಥ ಹಿರಿಯ ಕವಿಗಳ, ಕನ್ನಡಕ್ಕೆ ಅವಿರತ ವಾಗಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಸಾಧನೆಯನ್ನು ಜನಕ್ಕೆ ಪರಿಚಯ ಮಾಡಿಕೊಡುವುದು ನನ್ನ ಅದೃಷ್ಟ ಎಂದುಕೊಂಡಿದ್ದೇನೆ. ಈ ಪ್ರದರ್ಶನ ನಿಮಗೆ ತೃಪ್ತಿ ನೀಡಿದರೆ ಅದೇ ನನಗೆ ಸಿಕ್ಕಿದ ಸತ್ಫಲವೆಂದು ಭಾವಿಸುತ್ತೇನೆ' ಎಂದು ನುಡಿದೆ. ಆಗ ನಿಸಾರ್ ಅವರು ತಮ್ಮ ಹೃದಯವಂತಿಕೆಯ ಹಿರಿಯ ಗುಣವನ್ನು ಪ್ರದರ್ಶಿಸುವಂತೆ, 'ಶಾಸ್ತ್ರಿಗಳೇ, ನಾನು ಜನ್ಮಗಳನ್ನು ನಂಬುವುದಿಲ್ಲ. ಅಕಸ್ಮಾತ್ ಅವು ಇದ್ದಲ್ಲಿ, ಹಿಂದಿನ ಯಾವುದೋ ಜನ್ಮದಲ್ಲಿ ನೀವು ನನ್ನ ಸಹೋದರರಾಗಿರಬೇಕು. ಅಲ್ಲದೆ, 'ದೈವಂ ಮಾನುಷ ರೂಪೇಣ' ಅನ್ನುವ ಮಾತಿಗೆ ನಿಮಗಿಂತ ಅನುರೂಪವಾದ ನಿದರ್ಶನ ನನ್ನ ಭಾಗ್ಯಕ್ಕೆ ಎಲ್ಲಿ ದೊರಕೀತು?' ಎಂದಿದ್ದಾಗ ನಾನು ಮಾತು ಕಳೆದುಕೊಂಡವನಂತೆ ಮೂಕನಾದೆ.

ಪ್ರದರ್ಶನವನ್ನು ನೋಡಿದವರಿಗೆ ನಿಸಾರರ ಸಾರಸ್ವತ ಸಾಧನೆಯ ಪರಿಚಯ ವಾದಂತಾಗಿ, ತಮ್ಮ ಪ್ರೀತಿಯ ಕವಿಯೊಂದಿಗೆ ಫೋಟೊ ತೆಗೆಸಿಕೊಂಡದ್ದೇನು? ಅವರ ಸಹಿಯನ್ನು ಪಡೆದದ್ದೇನು? ಅವರ ಕವಿತೆಗಳ ಓದು ಮತ್ತು ಹಾಡಿನ ರೂಪದ ಕೇಳುವಿಕೆ ಯಿಂದ ತಾವು ಈ ತನಕ ಪಡೆದ ಸಂತೋಷವನ್ನು ತೋಡಿಕೊಂಡಿದ್ದೇನು? ಇಷ್ಟೊಂದು ಪ್ರೀತಿ-ವಿಶ್ವಾಸಗಳನ್ನು ಅಮೇರಿಕನ್ನಡಿಗರಿಂದ ಗಳಿಸಿದ ಕವಿ-ಸಾಹಿತಿ ಮತ್ತೊಬ್ಬನಿರಲಾರ. ಇದು ಇಷ್ಟಕ್ಕೇ ಮುಗಿಯಲಿಲ್ಲ. ನಿಸಾರರ ೧೦೨ ದಿನಗಳ ಅಮೇರಿಕದ ದಾಖಲೆ ನಿರ್ಮಿಸಿದ ಪ್ರವಾಸ ಕಾಲದಲ್ಲಿ ಅವರು ಜನರಿಂದ—ಗಂಡು, ಹೆಣ್ಣು, ಮಕ್ಕಳು, ವೃದ್ಧರು, ಯುವಕರು ಎಂಬ ವ್ಯತ್ಯಾಸವಿಲ್ಲದೆ—ಪಡೆದ ಅಕ್ಕರೆ ಪ್ರಾಯಃ ಮಾತಿಗೆ ನಿಲುಕದ್ದು. ನಿಸಾರರ ಭಾಷಣ, ಕವನ ವಾಚನ ಜನರಿಗೆ ಮೋಡಿ ಹಾಕಿದ್ದಿರಲಿ, ಅವರ ಸರಳವಾದ ಸ್ನೇಹಮಯವಾದ ನಡೆ ನುಡಿಗಳಿಗೆ ಮಾರುಹೋದವರು ಅದೆಷ್ಟು ಜನರೋ. ವರ್ಷಗಳು ಕಳೆದರೂ ಇದನ್ನು ನೆನೆಸಿಕೊಂಡು ನಾನು ಪ್ರತ್ಯಕ್ಷವಾಗಿ ಭೇಟಿಯಾದಾಗಲೋ, ದೂರವಾಣಿಯ ಮೂಲಕವೋ ಸುಖವನ್ನು ಹಂಚಿಕೊಂಡವರಿಗೆ ಲೆಕ್ಕವಿಲ್ಲ. ಅಮೇರಿಕದ ೨೭ ರಾಜ್ಯಗಳ ೪೫ಕ್ಕೂ ಹೆಚ್ಚು ನಗರಗಳಿಗೆ ಅವರು ಭೇಟಿ ನೀಡಿದ್ದರು. ಈ ಪ್ರವಾಸ ನ ಭೂತೋ ನ ಭವಿಷ್ಯತಿ ಅಂದರೆ ಅತಿಶಯೋಕ್ತಿಯಲ್ಲ. ಈ ಕಠಿಣ ಪ್ರವಾಸದಲ್ಲಿ ಯಾವ ಅಡ್ಡಿ ಆತಂಕವೂ ಎದುರಾಗದೆ ಎಲ್ಲವೂ ಸುಸೂತ್ರವಾಗಿ ನಡೆದ್ದು ದೈವ ಸಂಕಲ್ಪವೆಂದು ನನ್ನ ಭಾವನೆ. ಏಕೆಂದರೆ ಎರಡು ವರ್ಷಗಳ ಹಿಂದೆ ಅವರಿಗೆ ಹೃದಯದ ಶಸ್ತ್ರ ಚಿಕಿತ್ಸೆಯಾಗಿತ್ತು. ಹೀಗಾಗಿ ತೀರಾ ಆಯಾಸ ಮಾಡಿಕೊಳ್ಳಬಾರದಿತ್ತು.

ಪ್ರದರ್ಶನದ ಆಯೋಜನೆ, ನಿರ್ವಹಣೆ ನನ್ನದಾದರೂ ನಿಸಾರರನ್ನು ಅಮೇರಿಕಕ್ಕೆ 'ಸ್ಪಾನ್ಸರ್' ಮಾಡಿ ಕರೆದುಕೊಂಡ ಹಲವಾರು ಮಿತ್ರರ (ಇವರಲ್ಲಿ ನಾನೂ ಒಬ್ಬ ಎಂದು ಅತಿ ವಿನಮ್ರವಾಗಿ, ಆದರೆ ಹೆಮ್ಮೆಯಿಂದ ಹೇಳಿಕೊಳ್ಳಬಹುಹು) ಮತ್ತು ಸಂಘ ಸಂಸ್ಥೆಗಳ ಪ್ರೇರಣೆ ಮತ್ತು ಶ್ಲಾಘನೆ ಅದರ ಹಿನ್ನೆಲೆಯಲ್ಲಿದ್ದುದನ್ನು ನಾನು ಮರೆಯುವಂತಿಲ್ಲ. ಬಹಳ ಮುಖ್ಯವಾಗಿ ನೆನೆಯಬೇಕಾದವರು ಬಾಸ್ಟನ್‌ನ ಡಾ. ಡಿ. ಆರ್. ಗೋವಿಂದರಾಜು, ಫೀನಿಕ್ಸ್‌ನ ಶ್ರೀ ವಿ. ಸೀತಾರಾಮಯ್ಯ, ಕ್ಯಾಲಿಫೋರ್ನಿಯದ ಸನ್ಮಿತ್ರ ಶ್ರೀ ಎಂ. ಕೃಷ್ಣಮೂರ್ತಿ, ಅಮರ ನಾಥ ಗೌಡ. ಬೆಳಿಗ್ಗೆಯಿಂದ ರಾತ್ರಿ ಹನ್ನೊಂದು-ಹನ್ನೆರಡು ಗಂಟೆಯ ತನಕ ಮೂರೂ ದಿವಸ ಪ್ರದರ್ಶನದ ಉಸ್ತುವಾರಿಯಲ್ಲಿ ನನ್ನ ಜೊತೆ ಸಹಕರಿಸಿದವರು ನನ್ನ ಪತ್ನಿ ಶಾಂತಾ, ಮಗಳು ಮಾಲಾ, ಅಳಿಯ ರವಿ, ಅಣ್ಣ ಶೈಲ ಶಾಸ್ತ್ರಿ, ಭಾವಮೈದುನ ನರಸಿಂಹಸ್ವಾಮಿ ಮತ್ತು ಆತನ ಪತ್ನಿ ವಿಶಾಲು. ನನ್ನ ಮಾತೃಶ್ರೀಗಳಾದ ದಿವಂಗತ ಸುಬ್ಬಲಕ್ಷ್ಮಮ್ಮನವರೂ ಒಮ್ಮೊಮ್ಮೆ ನೆರವಾದದ್ದುಂಟು. ನಿಸಾರರು ಇವರೆಲ್ಲ ರನ್ನೂ ಮನ ದುಂಬಿ ಧನ್ಯವಾದಗಳನ್ನು ಹೇಳಿದ್ದು ಅದೆಷ್ಟು ಬಾರಿಯೊ! ಅಂದ ಹಾಗೆ, ನಮ್ಮ ೮೭ ವಯಸ್ಸಿನ ತಾಯಿಯವರಿಗೆ ನಿಸಾರರ ಕವನಗಳೆಂದರೆ ಬಹಳ ಮಮತೆ. ಅದರಲ್ಲೂ 'ಬೆಣ್ಣೆ ಕದ್ದ', 'ಚೇತನಾಚೇತನದ ತಿರುಳು' ಎಂದರೆ ಪ್ರಾಣ.

ನಿಸಾರ್ ಅಹಮದ್ ಅವರು ಮುಖ್ಯ ಅತಿಥಿಯಾಗಿ ಕನ್ನಡ ಸಮ್ಮೇಳನದಲ್ಲಿ ಮಾಡಿದ ಉಪನ್ಯಾಸ ಸಹ ಒಂದು ದಾಖಲೆಯೆನ್ನಬೇಕು. ಕನ್ನಡ ನಾಡು-ನುಡಿಗಳ ಪ್ರಾಚೀನತೆ, ಹಿರಿಮೆ ಮುಂತಾದ ವಿಷಯಗಳನ್ನು ಕೇಳರಿಯದ ಹಲವಾರು ಉದಾಹರಣೆ ಗಳೊಂದಿಗೆ ನಿರರ್ಗಳವಾಗಿ ನಿರೂಪಿಸಿದ ನಿಸಾರ್ ಅವರ ಮಾತುಗಾರಿಕೆಗೆ ಸಹಸ್ರಾರು ಸಭಿಕರು ಮಂತ್ರಮುಗ್ಧರಾಗಿದ್ದು, ಇಡೀ ಸಭೆಯೇ ಎದ್ದು ನಿಂತು ಒಂದೆರಡು ನಿಮಿಷಗಳ ಕಾಲ ಕರ ತಾಡನ ಮಾಡಿ (standing ovation) ಗೌರವ ಹಾಗೂ ಮೆಚ್ಚುಗೆ ಸೂಚಿಸಿದ್ದು ಇಂದಿಗೂ ನನ್ನ ಕಣ್ಣಿಗೆ ಕಟ್ಟಿರುವ ಹೃದಯಾಹ್ಲಾದಕಾರಿ ಅಪೂರ್ವ ದೃಶ್ಯ! ನಮ್ಮ ಈ ಪ್ರೀತಿಯ ಕವಿವರ್ಯರಿಗೆ ನಾನೂ ವೈಯಕ್ತಿಕವಾಗಿ ಪ್ರೀತ್ಯಾದರಗಳನ್ನು ಸೂಚಿಸಿದ್ದೆ: ಶಾಲು ಹೊದಿಸಿ, ಪ್ರಶಸ್ತಿ ಫಲಕ ನೀಡುವುದರ ಮೂಲಕ.

ನಾನು ಮರೆಯಲಾಗದ ಮತ್ತೊಂದು ಸೋಜಿಗದ ಸಂಗತಿಯೆಂದರೆ, ಸಮ್ಮೇಳನಕ್ಕೆ ಬಂದಿದ್ದ ವಿವಿಧ ರಾಜ್ಯದ ಮಹಿಳೆಯರಲ್ಲಿ ಕೆಲವರು ತಮ್ಮ ಪುಟ್ಟ ಮಕ್ಕಳ ಬಾಯಿಯಿಂದ 'ಬೆಣ್ಣೆಕದ್ದ'. 'ನಿತ್ಯೋತ್ಸವ'. 'ನನ್ನ ನಲವಿನ ಬಳ್ಳಿ' ಮೊದಲಾದ ಪದ್ಯಗಳನ್ನು ನಿಸಾರರ ಮುಂದೆಯೇ ಹೇಳಿಸಿ ಆನಂದಪಟ್ಟಿದ್ದು! ಸೋಜಿಗ ಏಕೆಂದರೆ, ಅಮೇರಿಕದಲ್ಲಿ ಪರಿಸ್ಥಿತಿಗೆ ಅನಿವಾರ್ಯವಾಗಿ ಬಹಳ ಜನ ಕನ್ನಡಿಗರ ಮಕ್ಕಳು ಕನ್ನಡವನ್ನು ತಿಳಿಯದವರು; ಮನೆಯ ಹೊರಗಡೆ, ಒಳಗೆ ಇಂಗ್ಲಿಷನ್ನು ದಿನವಹಿ ಬಳಸುವವರು. ಅಂತಹ ಕೆಲವು ಪೋರ, ಪೋರಿಯರು ಹಾಡುವಾಗ ನಗೆ ಪಾಟಲಾಗದಂತೆ ಕನ್ನಡವನ್ನು ಉಚ್ಚರಿಸಿದ್ದು. ಬಹುಶಃ ಇದು ಅವರ ತಾಯಂದಿರ ಶ್ರಮದಿಂದ ಸಾಧ್ಯವಾಗಿರಬೇಕು. ಅಂಥವರಿಗೆ ನನ್ನ ನಮನ ಸಲ್ಲಿಸುತ್ತೇನೆ.

ನಿಸಾರರ 'ನಿತ್ಯೋತ್ಸವ' ಕವನವನ್ನು ಅಮೇರಿಕದ ಸರಿ ಸುಮಾರು ಎಲ್ಲ ಕನ್ನಡ ಕೂಟಗಳ ಕಾರ್ಯಕ್ರಮಗಳಲ್ಲಿ ಪ್ರಾರ್ಥನಾಗೀತೆಯಾಗಿ ಅನೇಕ ವರ್ಷಗಳಿಂದ ಹಾಡಿಸುವುದು ವಾಡಿಕೆ. ಅಮೇರಿಕನ್ನಡಿಗರಿಗೆ ಆ ಕವನದಷ್ಟು ಬಾಯಿಗೆ ಬರುವ ಗೀತೆ ಮತ್ತೊಂದು ಇರಲಾರದು. ಅದನ್ನು ಅನುಕರಿಸಿ ಸಹ ಕೆಲವು ಪದ್ಯಗಳು ಲಘು ಧಾಟಿಯಲ್ಲೋ ಗಂಭೀರ ರೀತಿಯಲ್ಲೋ ಸೃಷ್ಟಿಯಾಗಿರುವುದೂ ನನ್ನ ಗಮನಕ್ಕೆ ಬಂದಿದೆ. ಅಂತಹ ಒಂದು ಅನುಕರಣ ಗೀತವನ್ನು ಗಂಭೀರವಾದ ಭಾವಾರ್ಥದೊಂದಿಗೆ ಡಾ. ರಾಘವ ರೆಡ್ಡಿ ('ಕನ್ನಡ ದಾಸ') ಅವರು ಅನೇಕ ಸಮಾರಂಭಗಳಲ್ಲಿ ಹಾಡಿ ಸಭಿಕರ ಮೆಚ್ಚುಗೆಯನ್ನು ಪಡೆದಿದ್ದಾರೆ. ಇವರು ವಾಷಿಂಗ್ಟನ್ ಪ್ರಾಂತ್ಯದ ಸಿಯಾಟಲ್ ಪಟ್ಟಣದ ವಾಸಿಗಳು. ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುವುದು ಲಾಸ್ ಆಂಜಲೀಸ್‌ನಲ್ಲಿ. ಸಿಯಾಟಲ್‌ನ ಕನ್ನಡ ಕೂಟದ ಅಧ್ಯಕ್ಷರು. ಕವನದ ಹೆಸರು 'ವಿಜಯೋತ್ಸವ'—ನಿಸಾರರನ್ನು ಅಭಿನಂದಿಸಿ ಬರೆದದ್ದು. ಈ ಸಂದರ್ಭದಲ್ಲಿ ಅದು ಸೂಕ್ತವೆಂದು ಭಾವಿಸಿ ಅದರ ಪಾಠವನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

ವಿಜಯೋತ್ಸವ

೧

ಡೆಟ್ರಾಯಿಟ್ ನಗರದಲ್ಲಿ ನೆರೆದ ಮಹಾ ಮೇಳದಲ್ಲಿ
ಮಿಷಿಗನ್ನಿನ ಪಂಪ ಕೂಟ ಹೆಸರ ಸುಮೋದ್ಯಾನದಲ್ಲಿ
ವಿಶ್ವದೆಲ್ಲ ಕನ್ನಡ ನುಡಿ ಸೇವೆಗೈವ ಸಂಸ್ಥೆಗಳಲಿ
ವಿಜಯೋತ್ಸವ ನಿಮಗೆ ನಿಸಾರ್, ವಿಜಯೋತ್ಸವ ನಿಮಗೆ.

೨

ಮಿನ್ನೆಸೋಟ, ಇಂಡಿಯಾನ, ಅಯೋವಾದ ಗೋಷ್ಠಿಗಳಲಿ
ಬಾಸ್ಟನ್ನು, ವಾಷಿಂಗ್‌ಟನ್ನು, ನ್ಯೂಯಾರ್ಕಿನ ಕೂಟಗಳಲಿ
ಹ್ಯೂಸ್ಟನ್ನು, ಶಿಕಾಗೋ, ಸಿಯಾಟಲ್‌ಗಳ ಸಂಘಗಳಲಿ
ವಿಜಯೋತ್ಸವ ನಿಮಗೆ ನಿಸಾರ್, ವಿಜಯೋತ್ಸವ ನಿಮಗೆ.

೩

ಮತಗಳೆಲ್ಲ ದೈವಕೆನಿತೊ ಪಥಗಳೆಂಬ ಮಹಿಮರೆ,
ಆತ್ಮಜ್ಞಾನ ನಿರತ ಕವಿ ಕೃತಾರ್ಥ ಸಾರ್ವಭೌಮರೆ,
ಮುನ್ನಡೆದಿಹ ಕನ್ನಡಕ್ಕೆ ಸ್ಫೂರ್ತಿ ಸೂತ್ರಧಾರರೆ
ವಿಜಯೋತ್ಸವ ನಿಮಗೆ ನಿಸಾರ್, ವಿಜಯೋತ್ಸವ ನಿಮಗೆ.

(೨೦೦೨)

ಪ್ರೊ. ನಿಸಾರ್ ಅಹಮದ್ ಅವರ ಸ್ನೇಹ ಬಾಂಧವ್ಯ ನನ್ನ ಪಾಲಿಗೆ ಭಾಗ್ಯದ ಸಿರಿ. ಅವರ ನಿರಾಡಂಬರತೆ, ಮುಗ್ಧ ಮನಸ್ಸು, ವಿಶಾಲ ಮನೋಭಾವ ನನಗೆ ಪ್ರೇರಣೆಯ ಚೇತನವಾಗಿದೆ. ಅವರ ಜೊತೆ ಕಳೆದ ದಿನಗಳನ್ನು ಆಗಾಗ್ಗೆ ಮೆಲುಕು ಹಾಕಿ ಹರ್ಷ ಪಡುತ್ತಿರುತ್ತೇನೆ. ೧೦೨ ದಿವಸಗಳ ಅವರ ಎಡೆಬಿಡದ ಪ್ರವಾಸ ಮತ್ತು ಕಾರ್ಯಕ್ರಮಗಳ ಯೋಜನೆಯನ್ನು ಸುವ್ಯವಸ್ಥಿತವಾಗಿ ರೂಪಿಸುವಾಗಿನ ತೃಪ್ತಿ ಸಂತೋಷಗಳನ್ನು ನಾನು ಹೇಗೆ

ತಾನೆ ಮರೆಯಲು ಸಾಧ್ಯ? ಕಂಪ್ಯೂಟರ್‌ನ ಮೂಲಕ ಪ್ರತಿ ದಿನವೂ ಬೇರೆ ಬೇರೆ ರಾಜ್ಯಗಳ ಸಂಬಂಧಪಟ್ಟ ವ್ಯಕ್ತಿಗಳನ್ನು ಸಂಪರ್ಕಿಸುವಾಗ, ಕೆಲವು ಸಲ ಅವರಿಂದಲೇ ಅಯಾಚಿತವಾಗಿ ನಿಸಾರರಿಗೆ ತಮ್ಮ ಊರಿಗೆ ಆಹ್ವಾನಿಸುವ ಕರೆಗಳು ಬಂದಾಗ ನನಗೆ ಆಗುತ್ತಿದ್ದ ಆನಂದ, ಹೆಮ್ಮೆ ಮಾತಿಗೆ ಮೀರಿದ್ದು. ನಿಸಾರರ ನಿಮಿತ್ತದಿಂದ ಅಮೇರಿಕದಂಥ ಬೃಹತ್ ರಾಷ್ಟ್ರದ ದೂರ ದೂರದ ಪ್ರದೇಶಗಳಲ್ಲಿ ವಾಸವಾಗಿರುವ ಅದೆಷ್ಟು ಕನ್ನಡಿಗರ ಪರಿಚಯ, ಸ್ನೇಹ ನನಗಾಯಿತೋ!

ನಿಸಾರ್ ತಮ್ಮ ಊರಿಗೆ ಬಂದಾಗ, ನೂರಿನ್ನೂರು ಮೈಲಿ ಫಾಸಲೆಯಲ್ಲಿದ್ದ ಲೋಕ ಪ್ರಸಿದ್ಧ ನೈಸರ್ಗಿಕ ಇಲ್ಲವೇ ಮನುಷ್ಯ ನಿರ್ಮಿತ ಸ್ಥಳಗಳಿಗೂ ಅವರನ್ನು ಕರೆದುಕೊಂಡು ಹೋಗಿ ದರ್ಶನ ಮಾಡಿಸಬೇಕೆಂಬುದೂ ಕೂಡ ಅಮೇರಿಕಾದ್ಯಂತದ ಪ್ರವಾಸದ ಉದ್ದೇಶ ವಿತ್ತು. ನಾನು ಎಣಿಸಿದ್ದಕ್ಕಿಂತ ಇನ್ನೂ ಹೆಚ್ಚಾಗಿ, ಯಶಸ್ವಿಯಾಗಿ ಅದು ನೆರವೇರಿದ್ದು ನನಗೆ ಅತ್ಯಂತ ಹಿಗ್ಗನ್ನು ನೀಡಿತ್ತು. ನಿಸಾರ್ ಅವರು ಬಾಲ್ಯದಲ್ಲೇ The Book of Knowledgeನಲ್ಲಿ ಕೆಲವು ಮಹತ್ತರ ಪ್ರೇಕ್ಷಣೀಯ ಸ್ಥಳಗಳ ಚಿತ್ರಗಳನ್ನು ನೋಡಿದ್ದರಂತೆ. ಅವುಗಳನ್ನು ಪ್ರತ್ಯಕ್ಷ ಕಂಡಾಗಲಂತೂ ಧನ್ಯತೆಯ ಭಾವನೆಯಿಂದ ಆನಂದ ಪಟ್ಟಿದ್ದರು.

ಡೆಟ್ರಾಯಿಟ್‌ನ 'ಅಕ್ಕ'ದ ವಿಶ್ವ ಕನ್ನಡ ಮಹಾಧಿವೇಶನದಲ್ಲೇ ಅನೇಕರು ನಿಸಾರ ರನ್ನು ತಮ್ಮಲ್ಲಿಗೆ ಆಮಂತ್ರಿಸಲು ನಾ ಮುಂದು, ತಾ ಮುಂದು ಎಂದು ದಿನಾಂಕಗಳನ್ನು ಗೊತ್ತು ಪಡಿಸಲು, ಮುಂಗಡವಾಗಿ ತಮ್ಮ ಕೋರಿಕೆಯನ್ನು ದಾಖಲಿಸಲು ನನ್ನನ್ನು ಸಂಪರ್ಕಿಸಿದ್ದರು. ಇದನ್ನು ಅರಿತ ಇತರರು ಆಮೇಲಿನ ದಿನಗಳಲ್ಲಿ ನನ್ನ ಜೊತೆ ದೂರವಾಣಿ ಯಲ್ಲಿ ಮಾತನಾಡಿ ಆಹ್ವಾನವನ್ನು ನೀಡಲು ಮುಂದಾದರು. ಆದರೆ ನಿಸಾರ್ ಅವರಿಗೆ ಕಾಲಾವಕಾಶ ಕಡಿಮೆ ಇದ್ದದ್ದರಿಂದ ಹಲವರ ವಿಜ್ಞಾಪನೆಯನ್ನು ನಿರಾಕರಿಸಬೇಕಾಯಿತು.

ನಿಸಾರರು ಬಹುಶಃ ಅಮೇರಿಕದ ಸರಿ ಸುಮಾರು ಎಲ್ಲ 'ಏರ್‌ಲೈನ್ಸ್'(ವಿಮಾನ ಸಂಸ್ಥೆಗಳು)ಗಳ ವಿಮಾನಗಳಲ್ಲೂ ಪಯಣಿಸಿರಬೇಕು. ಇಂತಹ ಪ್ರಯಾಣ ಬೇಸರವಾದಾಗ, ಕಾರಿನಲ್ಲೊ, ಟ್ರೈನಿನಲ್ಲೊ, ಬಸ್ಸಿನಲ್ಲೊ ಪ್ರವಾಸ ಮಾಡುವ ಇಂಗಿತವನ್ನು ವ್ಯಕ್ತಪಡಿಸು ತ್ತಿದ್ದರು. ಹೀಗಾಗಿ, ಅವರು ನ್ಯೂಜೆರ್ಸಿಯಿಂದ ಬಾಸ್ಟನ್ ನಗರಕ್ಕೆ ರೈಲಿನಲ್ಲಿ (Amtrak) ಮತ್ತು ಚಿಕಾಗೊನಿಂದ ಪಿಯೋರಿಯಕ್ಕೆ ಗ್ರೇ ಹೌಂಡ್ (Greyhound) ಬಸ್ಸಿನಲ್ಲಿ ಸಂಚರಿಸಿ ದ್ದರು. ನನ್ನ ಜೊತೆ ಕಾರಿನಲ್ಲಿ ಹಲವು ಸಲ ಪ್ರಯಾಣ ಮಾಡಿದ್ದರು. ಪ್ರತಿ ಬಾರಿ ಕಾರಿನಲ್ಲಿ ಕುಳಿತಾಗಲೂ ಅವರಿಗೆ ನಾನು 'ಸಾರ್, ದಯವಿಟ್ಟು ಸೀಟ್ ಬೆಲ್ಟ್ ಧರಿಸಿ. ಇಲ್ಲಿ ಇದು ಕಡ್ಡಾಯ' ಎಂದು ಎಚ್ಚರಿಸುತ್ತಿದ್ದೆ. ಆಗ ಅವರು ನಕ್ಕು 'ಇದೊಳ್ಳೇ ಕಥೆಯಾಯ್ತಲ್ಲ ಶಾಸ್ತ್ರಿಗಳೇ, ಪ್ರತಿ ಸಲ ಕಾರಿನಲ್ಲಿ ಕೂತಾಗಲೂ ಈ ಜನಿವಾರ ಧರಿಸೋ ಕಷ್ಟ' ಎಂದಾಗ ನಾನೂ ಅವರ ನಗೆಯಲ್ಲಿ ಪಾಲುದಾರನಾಗುತ್ತಿದ್ದೆ. ಅವರ ಜೊತೆಗಿನ ಇಂತಹ ಪ್ರವಾಸಗಳಲ್ಲಿ, ಉಪನ್ಯಾಸಗಳಲ್ಲಿ, ಖಾಸಗಿ ಮಾತುಕತೆ ಮತ್ತು ಚರ್ಚೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ನಿಸಾರ್ ಅವರು ತಮ್ಮ ಗದ್ಯ ಹಾಗೂ ಪದ್ಯಗಳ ಸ್ಮರಣೀಯ ಸಾಲುಗಳನ್ನು ಧಾರಾಳವಾಗಿ ಬಳಸುತ್ತಿದ್ದರು. ಕೇಳಿದವರಿಗೆ ಅವರ ಜ್ಞಾಪಕ ಶಕ್ತಿ ವಿಸ್ಮಯ ಉಂಟು

ಮಾಡುತ್ತಿತ್ತು. ನನ್ನಂಥ ಸ್ನೇಹಿತರ, ಅನೇಕ ಅಮೇರಿಕನ್ನಡಿಗರ ಕೋರಿಕೆಯ ಮೇರೆಗೆ ಅವರು ಎರಡು ವರ್ಷಗಳ ತರುವಾಯ (೨೦೦೪) ಚಿಂತನಪರ ವಾಕ್ಯಗಳ ಸಂಕಲನವನ್ನು 'ಸ-ರಸೋಕ್ತಿಗಳ ಸಂಗಾತಿ' ಎಂಬ ಹೆಸರಿನಿಂದ ಪ್ರಕಟಿಸಿದರು. ಅಲ್ಲದೆ, ಅವರು ಉಪಕಾರ ಸ್ಮರಣೆಯ ನಿಮಿತ್ತವಾಗಿ, ಅದರ ಒಂದು ಪ್ರತಿಯನ್ನು ಅಮೇರಿಕದ ವಿವಿಧ ನಗರಗಳಲ್ಲಿ ತಮ್ಮನ್ನು ಬರ ಮಾಡಿಕೊಂಡು ಆದರಿಸಿದ ಮಹನೀಯರಿಗೆ ಕಳಿಸಲು ಮರೆಯಲಿಲ್ಲ. ಇದಲ್ಲವೆ ಅವರ ದೊಡ್ಡ ಗುಣ!

ಜೊತೆಗೇ, ಇಲ್ಲಿ ಇಂತಹುದೇ ಇನ್ನೊಂದು ಸಂಗತಿಯನ್ನು ನಿವೇದಿಸಬೇಕು. ಉಪಕಾರವನ್ನು ನೆನೆದು ಕೃತಜ್ಞತೆಯನ್ನು ತಪ್ಪದೇ ಸಲ್ಲಿಸುವ, ಇತರರು ತೋರಿದ ಪ್ರೀತಿ ವಿಶ್ವಾಸಗಳನ್ನು ಸ್ಮರಿಸುವ, ಸಹಾಯವನ್ನು ನೀಡಿದ ವ್ಯಕ್ತಿಗಳಿಗೆ ವಿನಮ್ರತೆಯಿಂದ ಅದನ್ನು ಮನವರಿಕೆ ಮಾಡುವ ನಿಸಾರ್ ಅಹಮದ್ ಅವರ ಉದಾತ್ತ ಗುಣಕ್ಕೆ ನಿದರ್ಶನಪೂರ್ವಕ ವಾದ ವಿಷಯವನ್ನು ನಿಮಗೆ ತಿಳಿಸಬೇಕು. ಅವರು ಅಮೇರಿಕ ಪ್ರವಾಸವನ್ನು ಮುಗಿಸಿ ಬೆಂಗಳೂರಿಗೆ ಮರಳಿದ ಒಂದು ವಾರದೊಳಗೆ ವಿವಿಧ ರಾಜ್ಯಗಳ ಸುಮಾರು ೧೨೦ ಜನ ಅಮೇರಿಕನ್ನಡಿಗರಿಗೆ ತಮ್ಮ ಕೃತಜ್ಞತಾಪೂರ್ವಕ ಪತ್ರವನ್ನು ನನ್ನ ಮೂಲಕ ರವಾನೆ ಮಾಡಿದ್ದರು. ಅದರಲ್ಲಿ ಅವರ ಅಂತಃಕರಣ, ಸ್ನೇಹದ ಪಾವಿತ್ರ್ಯ ಹಾಗೂ ಹೃದಯವಂತಿಕೆ ಗಳೇ ಮೈತಳೆದಂತಿವೆ. ಅದರ ಅನುಭವವಾಗಬೇಕಾದರೆ ಆ ಕಾಗದವನ್ನು ಇಡಿಯಾಗಿ ಪರಾಂಬರಿಸಬೇಕು. ಆ ಕಾರಣಕ್ಕೆ ಅದನ್ನು ಇಲ್ಲಿ ಸಮಗ್ರವಾಗಿ ಉಲ್ಲೇಖಿಸುತ್ತೇನೆ:

ಬೆಂಗಳೂರು
೯-೧೨-೨೦೦೨

ಆತ್ಮೀಯರೆ,

ಡೆಟ್ರಾಯಿಟ್ ನಗರದಲ್ಲಿ 'ಅಕ್ಕ'ದ ವತಿಯಿಂದ ದಿನಾಂಕ ೩೦, ೩೧ ಆಗಸ್ಟ್ ಮತ್ತು ೧ ಸೆಪ್ಟೆಂಬರ್ ೨೦೦೨ರಂದು ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ನಾನು ಬೆಂಗಳೂರಿನಿಂದ ಬಂದಿದ್ದ ಸಂದರ್ಭದಲ್ಲಿ, ಅಮೇರಿಕದ ವಿವಿಧ ನಗರಗಳ ಕನ್ನಡ ಸಂಘ ಸಂಸ್ಥೆಗಳು ನನ್ನನ್ನು ಆಹ್ವಾನಿಸಿ, ಉಪನ್ಯಾಸಗಳನ್ನು ಏರ್ಪಡಿಸಿ ಆದರಿಸಿದ್ದು ನನ್ನ ಪಾಲಿಗೆ ಅಪೂರ್ವ ಗೌರವ ಎನ್ನಿಸಿದೆ.

ಅಮೇರಿಕದ ಎಲ್ಲ ಪ್ರಮುಖ ಪಟ್ಟಣಗಳಲ್ಲಿ ಮಾತ್ರವಲ್ಲದೆ, ಒಳ ನಾಡಿನ ಅನೇಕ ಊರುಗಳಿಗೂ ಹೋಗಿ ಅಲ್ಲಿನ ಕನ್ನಡ ಕೂಟಗಳು ಏರ್ಪಡಿಸಿದ್ದ ಸಾರ್ವಜನಿಕ ಸಮಾರಂಭ ಗಳಲ್ಲಿ ಮತ್ತು ಮನೆಗಳಲ್ಲಿ ಒಟ್ಟು ೩೮ ಭಾಷಣಗಳನ್ನು ಮಾಡಿದ್ದಲ್ಲದೆ, ಸ್ವಂತ ಕವನಗಳ ವಾಚನವನ್ನೂ ಮಾಡಿದ್ದು ನಿಮ್ಮಂತಹ ಹೃದಯವಂತರ ಸಹಕಾರ ಮತ್ತು ಉತ್ತೇಜನದಿಂದ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದು ಅಭೂತಪೂರ್ವ ಎನ್ನಿಸಿರುವುದಲ್ಲದೆ, ಹೆಮ್ಮೆ ಹರ್ಷಗಳಿಗೂ ನಿಮಿತ್ತವಾಗಿದೆ.

ನಾನು ನಿಮ್ಮ ನಗರಕ್ಕೆ ಬಂದಿದ್ದಾಗ ನೀವು ನನ್ನ ಬಗ್ಗೆ ವ್ಯಕ್ತಪಡಿಸಿದ ಅಮಿತ ಪ್ರೀತಿ

ವಿಶ್ವಾಸ, ನೀಡಿದ ಸಂತೃಪ್ತಿದಾಯಕ ಆದರೋಪಚಾರ ಹಾಗೂ ನಾನು ಬೇರೆಯಲ್ಲ, ನಿಮ್ಮವನೇ ಎನ್ನಿಸುವಂತಹ ನಿಮ್ಮ ವಿನಯಸಂಪನ್ನ ಆಪ್ತ ನಡವಳಿಕೆ—ಇವುಗಳು ನಾನು ಬದುಕಿನಲ್ಲಿ ಕಂಡರಿಯದ ಭಾಗ್ಯ ವಿಶೇಷಗಳು. ಇವುಗಳ ಸವಿ ನೆನಪು ಸದಾ ಕಾಲ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಇರುವುದಲ್ಲದೆ, ನಿಮ್ಮನ್ನು ಬಹು ಕಾಲ ಕೃತಜ್ಞತೆಯಿಂದ ಸ್ಮರಿಸುತ್ತಿರುವಂತೆ ಪ್ರೇರಿಸುತ್ತಿರುತ್ತದೆ.

ಮೂರು ತಿಂಗಳು ಹನ್ನೆರಡು ದಿವಸಗಳ ಅಮೇರಿಕ ಪ್ರವಾಸದ ಆ ಸುದೀರ್ಘ ಸಮಯ ನಿರಾಯಾಸವಾಗಿ ಅಷ್ಟು ಬೇಗ ಕಳೆದುಹೋದದ್ದಕ್ಕೆ ಮುಖ್ಯ ಕಾರಣ: ನಿಮ್ಮ ಒಲವಿನ ಒಡನಾಟ ಮತ್ತು ಅಕ್ಕರೆಯ ಆತಿಥ್ಯ. ಇದಕ್ಕಾಗಿ ನಿಮಗೆ ಅಂತಃಕರಣಪೂರ್ವಕ ಧನ್ಯವಾದ ಗಳನ್ನು ಸಲ್ಲಿಸುತ್ತೇನೆ.

ಇದೇ ಸಮಯದಲ್ಲಿ, ನನ್ನನ್ನು ಅಮೇರಿಕಕ್ಕೆ ಬರಮಾಡಿಕೊಳ್ಳಲು ನೆರವಾದ ಎಲ್ಲ ಮಾನ್ಯ ಮಿತ್ರರಿಗೆ ಮತ್ತು ಕನ್ನಡ ಸಂಘ ಸಂಸ್ಥೆಗಳಿಗೆ; ವಿಶೇಷವಾಗಿ ಅಯೋವಾ ರಾಜ್ಯ ನಿವಾಸಿಗಳಾದ ಸಹೃದಯ ಸ್ನೇಹಿತ ಶ್ರೀ ಸಿ. ಕೃಷ್ಣಶಾಸ್ತ್ರಿ ಅವರಿಗೆ ನಾನು ಚಿರ ಆಭಾರಿ ಆಗಿದ್ದೇನೆ.

ನಿಮ್ಮ ಹಾಗೂ ಅಮೇರಿಕದ ಇತರ ಕನ್ನಡ ಬಂಧು-ಭಗಿನಿಯರ ನಾಡು ನುಡಿಗಳ ಕಳಕಳಿ, ಉತ್ಸಾಹಗಳನ್ನು ಕಂಡು ನಾನು ಬೆರಗಾಗಿದ್ದೇನೆ. ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು.

ದೇವರು ನಿಮಗೆ, ನಿಮ್ಮ ಕುಟುಂಬದ ಎಲ್ಲರಿಗೆ ಆಯುರಾರೋಗ್ಯ ಸನ್ಮಂಗಳ ಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ. ನನ್ನಿಂದ ನಿಮಗೆ ಆಗಿರಬಹುದಾದ ತೊಂದರೆ ಮತ್ತು ಅನನುಕೂಲಗಳಿಗೆ ಕ್ಷಮೆ ಯಾಚಿಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

ಮತ್ತೊಮ್ಮೆ ವಂದನೆಗಳೊಂದಿಗೆ,

ನಿಮ್ಮ ವಿಶ್ವಾಸಿ,

ಕೆ. ಎಸ್. ನಿಸಾರ್ ಅಹಮದ್

ನಿಸಾರ್ ಅವರನ್ನು ನಾನು ಸಮ್ಮೇಳನದ ತರುವಾಯ ಭೇಟಿಯಾದದ್ದು ಒಂದು ವಾರದ ಬಳಿಕ ಚಿಕಾಗೊದಲ್ಲಿ. ಅವರು ತಮ್ಮ ಹಿರಿಯ ಮಗಳು ತಸ್ವೀರ್ ಫಾತಿಮಾಳ ಮನೆಯಲ್ಲಿ ತಂಗಿದ್ದರು. ಅದು ನಾನಿದ್ದ ಸೀಡರ್ ಫಾಲ್ಸ್‌ಗೆ ೨೫೦ ಮೈಲಿ ದೂರ. ನನ್ನ ಭಾವಮೈದುನ, ಕಿರಿಯ ಮಗಳು ಇಲ್ಲಿರುವುದರಿಂದ ಆ ನಗರ ನನಗೆ ಹೆಚ್ಚು ಬಳಕೆ. ನಿಸಾರ್ ಅವರನ್ನು ನನ್ನ ಕಾರಿನಲ್ಲಿ ಚಿಕಾಗೊ ದರ್ಶನ ಮಾಡಿಸಿದೆ. ಅಲ್ಲಿನ ಮುಖ್ಯ ಸ್ಥಳಗಳ ಭೇಟಿಯ ಸಲುವಾಗಿ ಎರಡು ದಿವಸ ಮೀಸಲಾಗಿ ಇಡಬೇಕಾಯಿತು.

ನಿಸಾರ್ ಅವರು ಡೆಟ್ರಾಯಿಟ್‌ನ ಡೌನ್‌ಟೌನ್‌ನಲ್ಲಿ ಸಮ್ಮೇಳನ ನಡೆದ ಕೋಬೋ ಹಾಲ್ ಅನ್ನು ಕಂಡು. 'ಎಷ್ಟು ವಿಶಾಲವಾಗಿದೆ ಈ ಕಟ್ಟಡ, ಶಾಸ್ತ್ರಿಗಳೇ. ಏನಿಲ್ಲವೆಂದರೆ

ಐದಾರು ಸಾವಿರ ಜನ ಅನಾಯಾಸವಾಗಿ ಇದರಲ್ಲಿ ಸೇರಬಹುದು' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದರು. ಆಗ ನಾನು, 'ಚಿಕಾಗೊನಲ್ಲಿ ಇದರ ಏಳೆಂಟು ಪಟ್ಟು ದೊಡ್ಡದಿರುವ ಕಟ್ಟಡವನ್ನು ಮುಂದೆ ತೋರಿಸುತ್ತೇನೆ. ಆಗ ನಿಮಗೆ ಇನ್ನೂ ಹೆಚ್ಚಿನ ವಿಸ್ಮಯ ಆಗದಿದ್ದರೆ ಹೇಳಿ' ಎಂದೆ. ಆ ಸಮಯ ಸನ್ನಿಹಿತವಾಗಿತ್ತು. ಅಲ್ಲಿ ಆಗ ವಿಶ್ವದ ಅನೇಕ ಮುಂದುವರಿದ ರಾಷ್ಟ್ರಗಳ ತಾಂತ್ರಿಕ ಸಂಶೋಧನ ಕೌಶಲದ ನಾನಾ ಬಗೆಯ ಭೂತಾಕಾರದ ಯಂತ್ರಗಳ ಮೇಳ ನಡೆದಿತ್ತು. ನಾನು ಕೆಲಸ ಮಾಡುತ್ತಿರುವ ಜಗದ್ವಿಖ್ಯಾತ ಟ್ರ್ಯಾಕ್ಟರ್ ಕಂಪೆನಿಯಾದ 'ಜಾನ್ ಡೀರ್' ಸಹ ಈ ವೈಜ್ಞಾನಿಕ ಅದ್ಭುತಗಳ ಪ್ರದರ್ಶನದಲ್ಲಿ ಭಾಗವಹಿಸಿತ್ತು. ಆದ್ದರಿಂದ ನನಗೆ ಅಧಿಕೃತವಾದ ರಜೆ ಮತ್ತು ಪಂಚತಾರಾ ಹೋಟೆಲಿನ ವಾಸ್ತವ್ಯದ ಸೌಲಭ್ಯ ಸಿಕ್ಕಿತ್ತು. ನಿಸಾರರನ್ನು ಜೊತೆಗೊಯ್ದು ತೋರಿಸಲು ಇದು ಸಹಕಾರಿಯಾಗಿತ್ತು. ತಾಂತ್ರಿಕ ಪ್ರದರ್ಶನ ನಡೆಯುತ್ತಿದ್ದುದು ಮ್ಯಾಕ್ ಕಾರ್ಮಿಕ್ (McCormic Building) ಕಟ್ಟಡದಲ್ಲಿ. ಅದರ ಬೃಹತ್ತು ಮತ್ತು ಉಪ್ಪರಿಗೆಗಳನ್ನುಳ್ಳ ಸಮುಚ್ಚಯದ ವಿಸ್ತಾರ ಊಹಿಸಲೂ ಅಶಕ್ಯ. ನಿಸಾರರು ಆ ಕಟ್ಟಡದ ಭೂಮತೆಯನ್ನು ಮತ್ತು ಪ್ರದರ್ಶನದ ವೈವಿಧ್ಯ, ಅಚ್ಚುಕಟ್ಟು, ಜನ ಸಂದಣಿ, ಮಾಹಿತಿಗಳನ್ನು ನೀಡುವ ಕೇಂದ್ರಗಳು ಹಾಗೂ ಸಿಬ್ಬಂದಿಯ ನೆರವಾಗುವ ಶ್ರದ್ಧಾಸಕ್ತಿ ಇನ್ನಿತರ ಸಂಗತಿಗಳನ್ನು ನೋಡಿ ಅವಾಕ್ಕಾದರು. ಅವರು ಕೇವಲ ಕವಿಯಲ್ಲದೆ, ವಿಜ್ಞಾನದ ಬೋಧಕರೂ ಆಗಿದ್ದರಿಂದ ಇಲ್ಲಿ ಜಮಾವಣೆ ಆಗಿದ್ದ ವಿಜ್ಞಾನದ ಅತ್ಯಾಧುನಿಕ ಆವಿಷ್ಕಾರಗಳ ತಿಳಿವನ್ನು ಪಡೆಯಲು ಅತಿಶಯವಾದ ಕುತೂಹಲಾಸಕ್ತಿಯನ್ನು ವ್ಯಕ್ತಗೊಳಿಸಿದ್ದರು.

'ನಿಸಾರ್ ಅವರೆ, ನಿಮಗೆ ಏನನ್ನುಸ್ತೆ ಇದೆಲ್ಲಾ ನೋಡಿ? ಬೋರ್ ಆಗ್ಲಿಲ್ಲ ತಾನೆ?' ಎಂದು ಪ್ರಶ್ನಿಸಿದೆ. 'ಏನು ಶಾಸ್ತ್ರಿಗಳೇ, ಹೀಗಂತೀರಿ? ಇಂಥದ್ದನ್ನು ನೋಡೋದಕ್ಕೆ, ನೋಡಿ ಸಂತೋಷ ಪಡೋದಕ್ಕೆ ಅದೃಷ್ಟ ಬೇಕು. ಈ ವಿಶಾಲ ಜಗತ್ತಿನಲ್ಲಿ ಏನೆಲ್ಲ ಸಂಶೋಧನೆಗಳು ನಡೀತಿವೆ ಅನ್ನೋದರ ಕಿಂಚಿತ್ ಕಲ್ಪನೆಯಾದರೂ ಮನುಷ್ಯನಿಗೆ ಆಗಬೇಕಾದರೆ ಇದನ್ನು ನೋಡಬೇಕು. ಸಮಯ ಇದ್ದಿದ್ದರೆ ಇಡೀ ದಿವಸ ಇಲ್ಲೇ ಕಳೆದು ಬಿಡ್ತಿದ್ದೆ. ನಮ್ಮ ದೇಶದಲ್ಲಿ ಇಂತಹ ಆವಿಷ್ಕಾರಗಳನ್ನು ಸಾಧಿಸಬೇಕಾದರೆ ಇನ್ನೆಷ್ಟು ವರ್ಷಗಳು ಬೇಕೋ' ಎಂದರು. ನನಗೆ, ಅವರನ್ನು ಇಲ್ಲಿಗೆ ಕರೆತಂದದ್ದು ಸಾರ್ಥಕವೆನ್ನಿಸಿತ್ತು.

ಅಲ್ಲಿಂದ ಅವರಿಗೆ ತುಸು ದೂರದಲ್ಲಿರುವ ಸಮುದ್ರಸದೃಶ ಮಿಷಿಗನ್ ಸರೋವರದ ಬಳಿ ಅಡ್ಡಾಡಿಸಿದೆ. ಅವರು ಹೈಸ್ಕೂಲಿನಲ್ಲಿದ್ದಾಗ ಪಂಚ ಮಹಾ ಸರೋವರಗಳೆಂದು ಪ್ರಸಿದ್ಧಿ ಪಡೆದಿದ್ದ ನೀರಿನ ತಾಣಗಳಲ್ಲಿ ಮಿಷಿಗನ್ ಹೆಸರನ್ನು ಕೇಳಿ ಅದರ ವಿಸ್ತಾರವನ್ನು ಮನಸ್ಸಿನಲ್ಲೇ ಕಲ್ಪಿಸಿಕೊಂಡಿದ್ದರಂತೆ. ಹಾಗೆಯೇ ಚಿಕಾಗೊ ಬಗ್ಗೆಯೂ ಭೂಗೋಳದ ಪಾಠದಲ್ಲಿ ಕೆಲವು ವಿಷಯಗಳನ್ನು ಓದಿದ್ದರಂತೆ. ಮುಖ್ಯವಾಗಿ, ಈ ನಗರದಲ್ಲಿ ಗಾಳಿಯ ರಭಸದ ಬೀಸುವಿಕೆ ಅತಿ ಹೆಚ್ಚು. ಹೀಗಾಗಿ ಇದು windy city ಎಂದು ಪ್ರಖ್ಯಾತ. ಜೊತೆಗೇ ದನದ ಮಾಂಸ(beef)ವನ್ನು ಸಂಸ್ಕರಿಸಿ ಪ್ರಪಂಚದಾದ್ಯಂತ ರವಾನೆ ಮಾಡುವುದರಲ್ಲಿ ಇದಕ್ಕೆ ವಿಶ್ವದಲ್ಲೇ ಪ್ರಥಮ ಸ್ಥಾನವಿತ್ತು. ಅಲ್ಲದೆ, ಆ ಕಾಲಕ್ಕೆ ಜಗತ್ತಿನ

ಅತ್ಯಂತ ಎತ್ತರದ ಕಟ್ಟಡ ಸೀಯರ್ಸ್ ಟವರ್ (Sears Tower) ಇರುವುದು ಈ ನಗರದಲ್ಲಿ. ಈಗಲೂ ಅದು ಜನಾಕರ್ಷಣೆಯ ಕೇಂದ್ರವಾಗಿಯೇ ಇದೆ. ಆದರೆ ಅದರ ಸ್ಥಾನವನ್ನು ಜಗತ್ತಿನ ಇತರ ಭಾಗಗಳ ನಿರ್ಮಿತಿಗಳು ಆಕ್ರಮಿಸಿ ಬಿಟ್ಟಿವೆ. ಇದರ ಜೊತೆಗೇ ನಿಸಾರರಿಗೆ ಫೀಲ್ಡ್ ಮ್ಯೂಸಿಯಂ ಅನ್ನು ತೋರಿಸಿದೆ. ಅಮೇರಿಕದ ಹಲವಾರು ಬೃಹತ್ ಮ್ಯೂಸಿಯಂಗಳಲ್ಲೇ ಇದು ಹೆಸರುವಾಸಿ. ಇಲ್ಲಿರುವ ಡೈನೋಸಾರ್‌ನ ಅಸ್ಥಿಪಂಜರವನ್ನು ನೋಡಿದಾಗ ಅದರ ಉದ್ದ ಮತ್ತು ಅಗಲಕ್ಕೆ ದಂಗು ಬಡಿದು ನಿಲ್ಲುವಂತಾಗುತ್ತದೆ. ಹಾಗೆಯೇ ಈಜಿಪ್ಟ್‌ನ ಅಮೂಲ್ಯವಾದ ಹಲವಾರು ಪ್ರಾಚೀನ ಅವಶೇಷಗಳು ಹಾಗೂ ಅವುಗಳನ್ನು ವ್ಯವಸ್ಥಿತವಾಗಿ ಇಟ್ಟಿರುವ ರೀತಿಯಿಂದ ಪ್ರೇಕ್ಷಕರು ಎರಡು-ಮೂರು ಸಾವಿರ ವರ್ಷಗಳ ಹಿಂದಕ್ಕೆ ಹೋದಂತೆ ಅನುಭವವಾಗುತ್ತದೆ. ಇವುಗಳ ಜೊತೆಗೆ ಅಲ್ಲಿರುವ ಶಿಲೆಗಳು, ಖನಿಜಗಳು, ಅಮೇರಿಕದ ಹಳೆಯ ಐತಿಹಾಸಿಕ ವಿಶೇಷಗಳು ಕುತೂಹಲಭರಿತ ವಾಗಿವೆ. ಇವೆಲ್ಲವನ್ನೂ ಸರಸರನೆ ನೋಡಬೇಕಾದದ್ದರಿಂದ ನಿಸಾರರಿಗೆ ಅಸಮಾಧಾನ ವಾದದ್ದು ನಿಜ. ಆದರೆ ಇಷ್ಟಾದರೂ ಲಭ್ಯವಾಯಿತಲ್ಲ ಎನ್ನುವ ತೃಪ್ತಿಯೂ ಮೂಡದೇ ಇರಲಿಲ್ಲ.

ಇವೆಲ್ಲಕ್ಕಿಂತ ನಿಸಾರರು ಪದೇ ಪದೇ ನನ್ನನ್ನು ತೋರಿಸುವಂತೆ ಕೇಳುತ್ತಿದ್ದದ್ದು ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸ್ವಾಮಿ ವಿವೇಕಾನಂದರು ವಿಶ್ವ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಮಾಡಿದ್ದ ಭಾಷಣದ ಐತಿಹಾಸಿಕ ಮಹತ್ವದ ಜಾಗ. ಅದು ಮತ್ತೊಂದು ಮ್ಯೂಸಿಯಂನ ಒಂದು ವೈಶಿಷ್ಟ್ಯವಿಲ್ಲದ ಸಾಧಾರಣ ಭಾಗ ವಾಗಿರುವುದನ್ನು ಕಂಡು ನಿಸಾರರು ತುಂಬಾ ವ್ಯಥೆಪಟ್ಟರು. ತುಂಬ ಚಿಕ್ಕದಾದ ಲೋಹದ ಫಲಕದಲ್ಲಿ 'ಈ ಜಾಗದಲ್ಲಿ ಭಾರತದ ಸಂನ್ಯಾಸಿ ವಿವೇಕಾನಂದ ಅವರು ಸರ್ವಧರ್ಮ ಸಮ್ಮೇಳನವನ್ನು ಉದ್ದೇಶಿಸಿ ಭಾಷಣ ಮಾಡಿದರು' ಎಂದು ಬರೆದಿದ್ದಾರೆ. ಮುಂದುಗಡೆ ಆ ಕಾಲದಲ್ಲಿ ಇದ್ದಿರಬಹುದಾದ ವಿಶಾಲ ಸಭಾಂಗಣವೂ ಇಲ್ಲ. ಅಂದಿನ ನೆನಪನ್ನು ಜೀವಂತ ವಾಗಿ ಉಳಿಸುವ ಯಾವ ಕುರುಹೂ ಇಲ್ಲ. ನಾನು ಆ ಫಲಕದ ಫೋಟೊ ತೆಗೆದೆ. ಅದರಲ್ಲೂ ಕೂಡ ಅಕ್ಷರಗಳು ಸ್ಫುಟವಾಗಿ ಮೂಡಿರಲಿಲ್ಲ. ಆ ಫಲಕದ ಎದುರುಗಡೆ ಉದ್ದನೆಯ ಗೋಡೆ ಎದ್ದಿದೆ.

'ಈ ಊರಿನಲ್ಲಿ ಎಷ್ಟೆಲ್ಲ ಭಾರತೀಯರಿದ್ದಾರೆ. ಅವರಲ್ಲಿ ಯಾರೂ ಕೂಡ ಈ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು ನಿಜಕ್ಕೂ ನನಗೆ ಆಶ್ಚರ್ಯದ ಜೊತೆಗೆ ವಿಷಾದವೂ ಆಗುತ್ತದೆ. ಕೊನೆಯ ಪಕ್ಷ, ಇಲ್ಲಿ ಹೊರಗಡೆ ಹಾಗೂ ಒಳಗಡೆ ಈ ಸ್ಥಳದ ಮಹಿಮೆಯನ್ನು ಸಾರುವ ದೊಡ್ಡ ಫಲಕಗಳನ್ನು ಹಾಕಿಸಿ, ಮ್ಯೂಸಿಯಂ ಎದುರುಗಡೆ ಸ್ವಾಮಿ ವಿವೇಕಾನಂದರ ಒಂದು ಪ್ರತಿಮೆಯನ್ನು ನಿಲ್ಲಿಸಿದರೆ ಪ್ರವಾಸಿಗಳಿಗೆ, ಇಲ್ಲಿನ ಇತರೇ ಜನರಿಗೆ ಅಂದಿನ ಮಹತ್ವದ ಕೊಂಚ ತಿಳಿವಳಿಕೆಯಾದರೂ ಮೂಡೀತು. ನಮ್ಮ ದೇಶದವರಿಗೆ ಹೆಮ್ಮೆ ಮೂಡೀತು' ಎಂದು ನಿಸಾರರು ತುಂಬಾ ನೊಂದು ನುಡಿದರು. ಅಲ್ಲಿಂದ ಹೊರಡುವಾಗ ಆ ಕಟ್ಟಡದ ಕಡೆ ಪದೇ ಪದೇ ಹಲವಾರು ಸಲ ಹಿಂತಿರುಗಿ ನೋಡುತ್ತ ಮೌನ ತಳೆದಿದ್ದರು.

ಅಲ್ಲಿಂದ ಅವರಿಗೆ ನಮ್ಮ ಕನ್ನಡ ಕವಿ ಎ. ಕೆ. ರಾಮಾನುಜಂ ಕೆಲಸ ಮಾಡುತ್ತಿದ್ದ ಚಿಕಾಗೊ ವಿಶ್ವವಿದ್ಯಾಲಯದ ಹಾಗೂ ನಮ್ಮ ಭಾರತೀಯರು ಹಾಗೂ ಪಾಕಿಸ್ತಾನಿಗಳು ಹೆಚ್ಚಾಗಿ ಇರುವ ಡಿವೋನ್ (Devon Street) ಬೀದಿಯಲ್ಲಿ ಕರೆದೊಯ್ದೆ. ಇಲ್ಲಿ ಮಹಾತ್ಮ ಗಾಂಧಿ ಹೆಸರಿನ, ಮಹಮ್ಮದ್ ಅಲಿ ಜಿನ್ನಾ ಹೆಸರಿನ ಉಪ ಬೀದಿಗಳಿವೆ. ಹಾದಿಯ ಇಕ್ಕೆಲದಲ್ಲಿ ಒಂದೆರಡು ಮೈಲಿಯ ತನಕ ನಮ್ಮ ಭಾರತೀಯ ಹೋಟೆಲ್‌ಗಳು, ಅದರಲ್ಲೂ ಉಡುಪಿ ಹೋಟೆಲ್, ಮೈಸೂರು ಕೆಫೆ ಇವೆ. ಹಾಗೆಯೇ, ಪಾಕಿಸ್ತಾನದ ರುಚಿಕರವಾದ ಮಾಂಸಾಹಾರಿ ಹೋಟೆಲ್‌ಗಳೂ ಇವೆ. ಚಿಕಾಗೊ ಸುಮಾರು ಎಪ್ಪತ್ತು ಮೈಲಿಗಳ ತನಕ ಹರಡಿರುವ ನಗರ. ಹಿಂದೊಮ್ಮೆ ಅಮೇರಿಕದ ಪೋಲಿಸ್ ಇಲಾಖೆಯನ್ನೇ ನಡುಗಿಸಿದ ಅಲ್ ಕಪೋನ್ (Al Capone) ಎಂಬ ಕುಖ್ಯಾತ ಭೂಗತ ದೊರೆಯ ಕಾರುಬಾರುಗಳ ಸ್ಥಾನ ವಾಗಿತ್ತು. ಈಗಲೂ ಅಲ್ಲಿ ಆಫ್ರಿಕನ್ ಅಮೇರಿಕನ್(ನೀಗ್ರೊ)ಗಳ ನಡುವೆ ಗುಂಡಿನ ಚಕಮಕಿ, ಕೊಲೆ, ದರೋಡೆಗಳು ಸಾಮಾನ್ಯ.

ಒಮ್ಮೆ ನನ್ನ ಕುಟುಂಬದ ಸದಸ್ಯರೊಡನೆ ಚಿಕಾಗೊಗೆ ಕಾರ್ಯಾರ್ಥವಾಗಿ ಬಂದಿದ್ದೆ. ಆಗ ನಮ್ಮ ಜೊತೆ ನಿಸಾರ್, ಅವರು ಮಗಳು, ಅಳಿಯ ಹಾಗೂ ಡೆಟ್ರಾಯಿಟ್‌ನ ನನ್ನ ಆಪ್ತಮಿತ್ರರಾದ ಶ್ರೀರಾಮ ಭಟ್ಟರು ಮಧ್ಯಾಹ್ನದ ಔತಣ ಕೂಟಕ್ಕೆ ಆಹ್ವಾನಿತರಾಗಿ ಸೇರಿಕೊಂಡರು. ರುಚಿ ಭೇದ ಮತ್ತು ವೈವಿಧ್ಯವಿರಲೆಂದು ಥಾಯ್ಲೆಂಡ್ ದೇಶದ ತಿನಿಸು ಗಳಿರುವ ಹೋಟೆಲಿಗೆ ಹೋದೆವು. ನಮ್ಮ ಕುಟುಂಬ ಮತ್ತು ಭಟ್ಟರು ನೂಡಲ್ಸ್, ಬೇಯಿಸಿದ ತರಕಾರಿ, ಸಸ್ಯಾಹಾರಿ ಭಕ್ಷ್ಯಗಳನ್ನು ತಿಂದೆವು. ನಿಸಾರರ ಮಗಳ ಇಷ್ಟದ ಮೇರೆಗೆ ಮೆನು ಕಾರ್ಡ್‌ನಲ್ಲಿದ್ದ ಮೀನನ್ನು ಆರ್ಡರ್ ಮಾಡಿದೆವು. ಇತರ ಉಣಿಸುಗಳನ್ನು ನಾವು ಮುಗಿಸಿದ ಮೇಲೆ ತುಂಬ ತಡವಾಗಿ ಬೇರರ್ ಮೀನನ್ನು ತಂದಿಟ್ಟ. ಅದನ್ನು ನೋಡಿ ನಿಸಾರ್ ಅವರಲ್ಲದೆ, ಅಲ್ಲಿದ್ದವರೆಲ್ಲ ಹೌಹಾರಿದರು. ನೋಡುತ್ತೇವೆ: ಹಬೆಯೇಳುವಂತೆ ಬೇಯಿಸಿ ಮಸಾಲೆಗಳನ್ನು ಗಿಡಿದ ಒಂದು ಇಡೀ ಮೀನು! ಮೂರು ಅಡಿಗಳಷ್ಟು ಉದ್ದ, ಮುಕ್ಕಾಲು ಅಡಿಗಳಷ್ಟು ದಪ್ಪ. ಈ ಪೆಂಡಭೂತವನ್ನು ಕಂಡು ಬೆಚ್ಚಿದ ನಿಸಾರ್, ಬೇರರ್‌ಗೆ 'Please take it away. We want very small one' ಎಂದಾಗ, 'Sorry Sir. we serve such fish only. It is our Thai Special' ಎಂದ. ಚಮಚೆಯಿಂದ ಆ ಮೀನಿನ ಸಣ್ಣ ತುಣುಕನ್ನು ಹೆರೆದು ಬಾಯಿಗಿಟ್ಟು ನಿಸಾರರ ಮಗಳು, 'ಥೂ! ಕೆಟ್ಟ ವಾಸನೆ' ಎಂದು ಅದನ್ನು ತಟ್ಟೆಯಲ್ಲಿ ಉಗಿದಳು. ಆರ್ಡರ್ ಮಾಡಿದ ತಪ್ಪಿಗೆ ಆ 'ಮರಿ ತಿಮಿಂಗಿಲ'ವನ್ನು ಪ್ಯಾಕ್ ಮಾಡಿಸಿ ಹೊತ್ತೊಯ್ದು ತನ್ನ ಮನೆಯ ನಾಯಿಗೆ ಮೃಷ್ಟಾನ್ನ ಭೋಜನ ಮಾಡಿಸಿದಳು ನಿಸಾರರ ಮಗಳು. ಅದನ್ನು ಆಮೇಲೆ ನಾವು ಜ್ಞಾಪಿಸಿಕೊಂಡು ಎಷ್ಟು ನಕ್ಕೆವೋ ಕಾಣೆ.

ಚಿಕಾಗೊನ 'ವಿದ್ಯಾರಣ್ಯ ಕನ್ನಡ ಕೂಟ'ದಲ್ಲಿ, ಶ್ರೀ ಸಿದ್ಧಲಿಂಗಯ್ಯ-ಜಯಮ್ಮ ಅವರ ಮತ್ತು ಶ್ರೀಮತಿ ಶಾರದಾ ಬೈಯಣ್ಣ ಅವರ ಮನೆಗಳಲ್ಲಿ ನಿಸಾರರ ಭಾಷಣ ಮತ್ತು ಸನ್ಮಾನ ಕಾರ್ಯಕ್ರಮಗಳು ಜರುಗಿದವು. ಅದಾದ ಅನಂತರ ಅವರನ್ನು ಸೆಪ್ಟೆಂಬರ್ ೮ನೆಯ ತಾರೀಕಿನಂದು ನಮ್ಮ ಊರಾದ ಸೀಡರ್ ಫಾಲ್ಸ್‌ಗೆ ನನ್ನ ಕಾರಿನಲ್ಲಿ ಕರೆದೊಯ್ದೆ.

ಮಾರನೆಯ ದಿವಸ ನಿಸಾರರು ನಮ್ಮ ರಾಜ್ಯದ ಅಯೋವಾ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಇಲಾಖೆಯ ವತಿಯಿಂದ ನಡೆದಿರುವ ವಿಶ್ವ ಲೇಖಕರ ಸಮ್ಮೇಳನದಲ್ಲಿ Why do I write? (ನಾನೇಕೆ ಬರೆಯುತ್ತೇನೆ?) ಎಂಬ ವಿಷಯವಾಗಿ ಉಪನ್ಯಾಸವನ್ನು ನೀಡಬೇಕಿತ್ತು.

ದಾರಿಯಲ್ಲಿ ಮಾಲಿನ್ (Maulin) ಎಂಬ ಊರಿನಲ್ಲಿರುವ ನಮ್ಮ ಟ್ರ್ಯಾಕ್ಟರ್ ಕಂಪೆನಿ(John Deere)ಯ ಮೂಲ ಕಛೇರಿಯನ್ನು ತೋರಿಸಿಕೊಂಡು ಬಂದೆ. ಅಲ್ಲಿದ್ದ ದೈತ್ಯಾಕಾರದ ಟ್ರ್ಯಾಕ್ಟರ್ ಮಾದರಿಗಳನ್ನು ನೋಡಿ ಅವಾಕ್ಕಾದ ನಿಸಾರರು ಅವುಗಳಲ್ಲಿ ಕೆಲವುಗಳ ಎದುರು ನಿಂತು, ಒಳಗೆ ಕುಳಿತು ಫೋಟೊ ತೆಗೆಸಿಕೊಂಡರು. ಟ್ರಾಕ್ಟರ್‌ಗಳ ಚಕ್ರಗಳ ಎತ್ತರವೇ ಒಂದು-ಒಂದೂವರೆ ಆಳಿನಷ್ಟು. ಇನ್ನು ಆ ಯಂತ್ರದ ಗಾತ್ರ ಎತ್ತರಗಳ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕೆ? ಜಾನ್ ಡೀರ್ ಎಂಬ ಸಾಮಾನ್ಯ ರೈತ ಹಾಗೂ ಕುಲುಮೆ ಕೆಲಸ ಬಲ್ಲ ವ್ಯಕ್ತಿ ಶತಮಾನದ ಹಿಂದೆ, ಕೃಷಿಗೆ ಸಹಾಯಕವಾಗುವ ಟ್ರ್ಯಾಕ್ಟರ್‌ನ ರೂಕ್ಷ ಮಾದರಿಯನ್ನು ರೂಪಿಸಿದ. ಇಂದು ಸಹಸ್ರಾರು ಜನರಿಗೆ ಉದ್ಯೋಗ ನೀಡಿರುವ ಈ ಕಂಪೆನಿಯ ಶಾಖೆಗಳು ಅಮೇರಿಕಾದ್ಯಂತ ಮಾತ್ರವಲ್ಲದೆ ಯುರೋಪ್, ಮೆಕ್ಸಿಕೊ, ಭಾರತ, ಚೈನಾ ಮುಂತಾದ ರಾಷ್ಟ್ರಗಳಲ್ಲಿವೆ. ಪ್ರಪಂಚದ ಅತ್ಯಂತ ಸುಧಾರಿತ ಮತ್ತು ಬಾಳಿಕೆಯ ಟ್ರ್ಯಾಕ್ಟರ್ ಎಂದು ಜಾನ್ ಡೀರ್ ಹೆಸರು ಗಳಿಸಿದೆ.

ಅಲ್ಲಿಂದ ಕೆಲವು ಮೈಲಿಗಳ ದೂರದಲ್ಲಿ, ನಿಸಾರರು ತನ್ಮಯತೆ ಮತ್ತು ಧನ್ಯತಾಭಾವದಿಂದ ಪರವಶರಾಗಿಬಿಟ್ಟ ವಿಶ್ವದ ಮಹಾ ನದಿ ಮಿಸಿಸಿಪ್ಪಿಯ ಮಹದ್ದರ್ಶನವನ್ನು ಮಾಡಿಸಿದೆ. ಅದನ್ನು ನೋಡುತ್ತಲೇ ನಿಸಾರ್ ಅವರು ಮೌನವನ್ನು ಧರಿಸಿದರು; ಮೈ ಮರೆತು ಅಮೇರಿಕದ ಜೀವ ನಾಡಿಯಂತಿರುವ ಆ ಭವ್ಯ ನದಿಯನ್ನೇ ನೋಡುತ್ತ ನಿಂತುಬಿಟ್ಟರು. 'ಶಾಸ್ತ್ರಿಗಳೆ, ಇದರ ಹೆಸರನ್ನು ಮಿಡ್ಲ್ ಸ್ಕೂಲ್‌ನಲ್ಲಿ ಓದುತ್ತಿರುವಾಗಿನಿಂದ ಈತನಕ ಅದೆಷ್ಟು ಬಾರಿ ಕೇಳಿದ್ದೆನೊ. ಈ ನದಿಯ ಬಗ್ಗೆ ಅದೆಷ್ಟು ಸಂಗತಿಗಳನ್ನು ಕುತೂಹಲದಿಂದ ತಿಳಿದಿದ್ದೆನೊ. ಅಂಥ ಮಹಾನ್ ನದಿಯ ದರ್ಶನ ನಿಮ್ಮಿಂದಾಗಿದೆ. ಇದಕ್ಕಾಗಿ ನಿಮಗೆ ಧನ್ಯವಾದ' ಎಂದು ಕೃತಜ್ಞತೆ ಸಲ್ಲಿಸಿದ್ದಲ್ಲದೆ, ಇದರ ಬಗ್ಗೆ ಅಮೇರಿಕದ ಅಗ್ರೇಸರ ಹಾಸ್ಯ ಬರಹಗಾರ ಮಾರ್ಕ್ ಟ್ವೈನ್ ಒಮ್ಮೆ ವಿನೋದದಿಂದ ಹೇಳಿದ ಮಾತುಗಳನ್ನು ಸ್ಮರಿಸಿದರು. ಮಾರ್ಕ್ ಟ್ವೈನ್‌ಅನ್ನು, ಈ ನದಿಯ ಬಗ್ಗೆ ಹೆಮ್ಮೆತಳೆದಿದ್ದ ಒಂದು ಊರಿನ ವ್ಯಕ್ತಿಯೊಬ್ಬ ಕೇಳಿದನಂತೆ: 'Well Mr. Mark Twain, what do you think of our great river Mississippi?' ಅವನು ಪ್ರಶಂಸಾತ್ಮಕ ಉತ್ತರವನ್ನು ನಿರೀಕ್ಷಿಸಿದ್ದಾಗ, ವಿದಗ್ಧತೆ(wit)ಗೆ ಹೆಸರಾಂತ ಮಾರ್ಕ್ ಟ್ವೈನ್, ಹೀಗೆಂದನಂತೆ: 'It is too thick to drink and too thin to plough' (ಇದನ್ನು [ಅಂದರೆ ನೀರನ್ನು] ಕುಡಿಯೋಣವೆಂದರೆ ತುಂಬಾ ಮಂದ, ಬಿತ್ತನೆ ಮಾಡೋಣವೆಂದರೆ ಬಹಳ ತೆಳು.)

ಆ ನದಿಯಲ್ಲಿ ಈ ಜಾಗದಲ್ಲಿ ಏಳೆಂಟು ದಶಕಗಳ ಹಿಂದೆಯೇ ಅಮೇರಿಕದ ತಂತ್ರನಿಪುಣರು Lock and Dam ಎಂಬ ಒಂದು ವೈಜ್ಞಾನಿಕ ಅದ್ಭುತವನ್ನು ಮಾಡಿದ್ದಾರೆ.

ಆಳ ಕಡಿಮೆಯಿರುವ ಪಾತ್ರದಲ್ಲಿ, ಇನ್ನೊಂದು ಕಡೆ ತೋಡಿದ ಆಳದಿಂದ ನೀರನ್ನು ಶೇಖರಿಸಿಟ್ಟು, ಅಲ್ಲಿ ಸರಕು ಸಾಗಣೆಯ ಬೃಹತ್ ಹಡಗುಗಳು ಸಲೀಸಾಗಿ ಸಾಗುವಂತೆ, ನಿಲ್ಲುವಂತೆ ಮಾಡಿದ್ದಾರೆ. ಜೊತೆಗೇ ಜಲ ವಿದ್ಯುತ್ತನ್ನೂ ತಯಾರಿಸುತ್ತಾರೆ. ಹಾಗೆಯೇ ಸುತ್ತಮುತ್ತಲಿನ ಜಮೀನು ಹಾಗೂ ಊರುಗಳಿಗೂ ಯಥೇಚ್ಛವಾಗಿ ಎಲ್ಲ ಋತುಗಳಲ್ಲಿಯೂ ನೀರಿನ ಸರಬರಾಜು ಆಗುವಂತೆ ನೋಡಿಕೊಂಡಿದ್ದಾರೆ. ಈ ಬಹೂಪಯೋಗಿ ನದಿ, ಅಮೇರಿಕದ ಹಲವಾರು ರಾಜ್ಯಗಳಲ್ಲಿ ಹರಿಯುವುದರಿಂದ ಅದು ಎಸಗಿರುವ, ಎಸಗುತ್ತಿರುವ ಮಾನವೋಪಕಾರ ಅಷ್ಟಿಷ್ಟಲ್ಲ. ಬಹಳ ಹೊತ್ತು ಆ ನದಿಯ ಸಮ್ಮುಖದಲ್ಲೇ ಇದ್ದ ನಿಸಾರರನ್ನು ಮನಸ್ಸಿಲ್ಲದ ಮನಸ್ಸಿನಿಂದ ಅಲ್ಲಿಂದ ಎಳೆದು ತರಬೇಕಾಯಿತು.

ಅಲ್ಲಿಂದ ಅಯೋವಾದ ಗಡಿ ದಾಟಿದ ಮೇಲೆ ಮೈಲಿಗಟ್ಟಲೆ ಹರಡಿರುವ ಜೋಳ, ಸೋಯಾ, ಹತ್ತಿ, ಸೂರ್ಯಕಾಂತಿ ಮತ್ತಿತರ ಸಸ್ಯ ಸಮೃದ್ಧಿಯನ್ನು ನಿಸಾರರಿಗೆ ವಿಸ್ತರಿಸುತ್ತ ಡ್ರೈ ಮಾಡಿ ಊರು ಸೇರಿದ್ದೇ ಗೊತ್ತಾಗಲಿಲ್ಲ. ನಾನಿರುವ ಅಯೋವಾ ರಾಜ್ಯವನ್ನು 'ಅಮೇರಿಕದ ಉಣಿಸಿನ ಬೋಗುಣಿ'(Food bowl of America)ಯೆಂದು ಕರೆಯುತ್ತಾರೆ. ಇಲ್ಲಿ ಹಾಗೂ ನೆರೆ ರಾಜ್ಯಗಳಾದ ಮಿನ್ನೆಸೋಟ ಮತ್ತು ವಿಸ್ಕಾನ್ಸಿನ್‌ಗಳಲ್ಲಿ ಒಬ್ಬ ಸಾಮಾನ್ಯ ರೈತನಿಗೆ ಕನಿಷ್ಠ ನಾನ್ನೂರು-ಐನೂರು ಎಕರೆ ಹೊಲವಿರುತ್ತದೆ. ಆ ಹೊಲದ ಮಧ್ಯದಲ್ಲೇ ಸುಸಜ್ಜಿತ ಮನೆ, ಲಿಂಗಾಕೃತಿಯ ದೊಡ್ಡ ಧಾನ್ಯಾಗಾರ, ಜಾನುವಾರುಗಳು, ಕಾರು, ಟ್ರ್ಯಾಕ್ಟರ್, ಮೋಟಾರ್‌ಬೈಕ್‌ಗಳು ಹಾಗೂ ಬೃಹನ್ನಗರಗಳಲ್ಲಿ ಲಭ್ಯವಾಗುವ ಎಲ್ಲ ಸುಖೋಪಭೋಗದ ವಸ್ತುಗಳೂ ಇರುತ್ತವೆ. ಒಬ್ಬ ರೈತ ಮತ್ತವನ ಒಂದಿಬ್ಬರು ಮಕ್ಕಳು ನೂರಾರು ಎಕರೆಗಳನ್ನು ಉತ್ತು, ಬಿತ್ತಿ ಅತ್ಯಧಿಕ ಇಳುವರಿಯನ್ನು ಪಡೆಯುವುದು ಒಂದು ಪವಾಡವೆನ್ನಿಸುತ್ತದೆ.

ಅಯೋವಾದ ಹಿರಿಮೆ ಮತ್ತು ಸುಭಿಕ್ಷತೆಯನ್ನು ಮನಸಾರ ಅನುಭವಿಸಿದ ಕವಿ ನಿಸಾರರು ಅದನ್ನು ಮುಂದೊಮ್ಮೆ ನೆನೆದು ಪುಳಕಿತರಾಗಿ ಬರೆಯಬಹುದಾದ ಕವನದ ಪ್ರಾರಂಭಿಕ ಸಾಲುಗಳು ಹೀಗಿರಬಹುದೆ?:

'ಜೋಳದ ತೆನೆ ಬಳುಕಿನಲ್ಲಿ
ಮಿಸಿಸಿಪ್ಪಿಯ ಸಿರಿ ಬೆಳಕಿನಲ್ಲಿ
ನಿತ್ಯೋತ್ಸವ, ಅಮೇರಿಕದ ತಾಯಿ, ನಿತ್ಯೋತ್ಸವ ನಿನಗೆ.'

ಅಯೋವಾದ ಚಿಕ್ಕ ಊರು ಸೀಡರ್ ಫಾಲ್ಸ್‌ನ ನಮ್ಮ ಮನೆಗೆ ನಿಸಾರರನ್ನು ಕರೆದೊಯ್ದ ಮೇಲೆ ಅಲ್ಲಿನ ಒಂದಿಬ್ಬರು ಕನ್ನಡಿಗರ ಕುಟುಂಬಗಳ ಪರಿಚಯವನ್ನು ಮಾಡಿಸಿದೆ. ನಮ್ಮ ಮನೆಯ ಎದುರಿಗಿರುವ ಹಾದಿಯ ಬದಿಯ ಹಲವಾರು ಸಾಲು ಮರಗಳ ಒಂದೆರಡು ಮರಗಳಲ್ಲಿ ಗಿಡಿದು ಹೋಗಿದ್ದ ಸೇಬು ಮತ್ತು ಪೀಚ್ ಹಣ್ಣುಗಳನ್ನು ವೀಕ್ಷಿಸಿದ ನಿಸಾರರು ದಂಗಾಗಿ ನಿಂತುಬಿಟ್ಟರು. ರಸ್ತೆಯಲ್ಲಿ ಸಂಚರಿಸುವ ಯಾರೂ ಕೂಡ ಅವುಗಳತ್ತ ದೃಷ್ಟಿ ಹಾಯಿಸುತ್ತಿರಲಿಲ್ಲ. ಅವುಗಳನ್ನು ದೋಚಿಕೊಂಡು ಹೋಗಲು ಹವಣಿಸಿರಲಿಲ್ಲ. ಆ ಸಾರ್ವಜನಿಕ ಮರಗಳು ಯಾರ ಮನೆಯ ಮುಂದಿವೆಯೋ ಅವರಿಗೆ ಅವುಗಳ ಮೇಲೆ ಹಕ್ಕು.

ಅವರು ಕಿತ್ತರೆ ಸರಿ, ಇಲ್ಲದಿದ್ದರೆ ಅವು ಹಾಗೆಯೇ ಬಾಡಿಯೊ, ನೆಲದ ಮೇಲೆ ಬಿದ್ದು ಕೊಳೆತೊ ಕೊನೆಗಾಣ ಬೇಕು. ಅವರು ಅವುಗಳನ್ನು ಕಿತ್ತಾಗ ನೆರೆಯ ಮನೆಗಳಿಗೆಲ್ಲ ಬುಟ್ಟಿಗಟ್ಟಲೆ ಹಣ್ಣುಗಳನ್ನು ಕಾಣಿಕೆಯಾಗಿ ಕೊಡುವುದು ಸರ್ವೇ ಸಾಧಾರಣ.

ನಮ್ಮ ಮನೆಯಲ್ಲೂ ನಿಸಾರರ ಭಾಷಣದ ಕಾರ್ಯಕ್ರಮವೇರ್ಪಡಿಸಿ, ಆಸುಪಾಸಿನಲ್ಲಿದ್ದ ಕೆಲವು ಕನ್ನಡಿಗರ ಕುಟುಂಬಗಳನ್ನು ಆಹ್ವಾನಿಸಿದೆ. ನಮ್ಮ ತಾಯಿಯವರ ಅಭಿಲಾಷೆಯ ಮೇರೆಗೆ ನಿಸಾರರು 'ಚೇತನಾಚೇತನದ ತಿರುಳು' ಪದ್ಯವನ್ನು ಭಾವಪೂರ್ಣ ವಾಗಿ ಓದಿದ್ದು ಇನ್ನೂ ನೆನಪಿನಲ್ಲಿ ಮಾಸದೆ ಉಳಿದಿದೆ.

ಸೆಪ್ಟೆಂಬರ್ ೯ರಂದು ಅಯೋವಾ ವಿಶ್ವವಿದ್ಯಾಲಯದಲ್ಲಿ ನಿಸಾರರು, ಬೇರೆ ಬೇರೆ ರಾಷ್ಟ್ರಗಳಿಂದ ಆಮಂತ್ರಿತವಾದ ಅನ್ಯಭಾಷೆಗಳ ಲೇಖಕರ ಸಮಕ್ಷ ತಮ್ಮ 'Why do I write?' ಪ್ರಬಂಧವನ್ನು ಮಂಡಿಸಿದರು. ಪ್ರಶ್ನೋತ್ತರಗಳು ಸ್ವಾರಸ್ಯಕರ ಮತ್ತು ಬೋಧಪ್ರದವಾಗಿದ್ದವು. ಸಾಯಂಕಾಲದ ಕಾರ್ಯಕ್ರಮದಲ್ಲಿ ಅವರು ತಮ್ಮ ಪದ್ಯ ಗಳನ್ನು—'ಅಮೇರಿಕ, ಅಮೇರಿಕ', 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ', 'ಹಕ್ಕು', 'ಅನಾಮಿಕ ಆಂಗ್ಲರು'—ಮುಂತಾದ ಪದ್ಯಗಳನ್ನು ಕನ್ನಡದಲ್ಲಿ ನಾಟಕೀಯವಾಗಿ ವಾಚಿಸಿದರು. ಅವುಗಳ ಸಂದರ್ಭವನ್ನು ಇಂಗ್ಲಿಷಿನಲ್ಲಿ ವಿವರಿಸಿದರು. ಒಬ್ಬ ಪಂಜಾಬ್ ಮೂಲದ ಇಂಗ್ಲಿಷ್ ಲೇಖಕಿ ಈ ಪದ್ಯಗಳ ಆಂಗ್ಲಾನುವಾದಗಳನ್ನು ಓದಿ ನೆರೆದಿದ್ದವರ ಹೃನ್ಮನಗಳನ್ನು ತಣಿಸಿದರು.

ಅದಕ್ಕೂ ಮುಂಚೆ ವಿಶ್ವವಿದ್ಯಾಲಯದ ವಿವಿಧ ಕಟ್ಟಡಗಳ ಅವಲೋಕನ ಮಾಡಿದೆವು. ಮೊದಲೇ ನಿಗದಿತವಾಗಿದ್ದಂತೆ ನಿಸಾರರ ಬೋಧನೆಯ ವಿಷಯವಾಗಿದ್ದ ಭೂವಿಜ್ಞಾನ ಇಲಾಖೆಗೆ ಭೇಟಿಕೊಟ್ಟು ಅಲ್ಲಿ ಕ್ಯುರೇಟರ್ ಆಗಿದ್ದ ಮಹಿಳೆಯೊಂದಿಗೆ ಆ ವಿಜ್ಞಾನವನ್ನು, ಸ್ಥಳೀಯ ಭೂವೈಜ್ಞಾನಿಕ ಮಹತ್ವದ ಸ್ಥಳಗಳನ್ನು ಕುರಿತು ವ್ಯಾಪಕ ಚರ್ಚೆ ನಡೆಸಿದರು. ಭೂವಿಜ್ಞಾನದ ಬಗೆಗೆ ಅವರಿಗೆ ಇರುವ ಆಸಕ್ತಿ ನಿಜಕ್ಕೂ ಗಾಢವಾದದ್ದು ಎಂಬ ಅಂಶ ನನಗೆ ಮನವರಿಕೆಯಾದದ್ದು ಆ ಸಂದರ್ಭದಲ್ಲೇ.

ಮಾರನೆಯ ದಿವಸ ನಿಸಾರರನ್ನು ಕಾರಿನಲ್ಲಿ ಕರೆದೊಯ್ದು ನೆರೆಯ ಮಿನ್ನೆಸೋಟ ರಾಜ್ಯದ ಸೆಯಿಂಟ್ ಪಾಲ್ ನಗರದ ಬಳಿಯ 'ಅಮೇರಿಕನ್ ಮಾಲ್' ಹೆಸರಿನ ಮಳಿಗೆಗಳ ಬೃಹತ್ ಸಂಕೀರ್ಣವನ್ನು ತೋರಿಸಿದೆ. ಒಂದು ಕಾಲಕ್ಕೆ ಅದು ಜಗತ್ತಿನಲ್ಲೇ ಅತ್ಯಂತ ದೊಡ್ಡ ವಾಣಿಜ್ಯ ಸಮುಚ್ಚಯ ಆಗಿತ್ತು. ಅಲ್ಲಿಂದ, ವುಡ್ಸ್‌ಬರಿ ಎಂಬ ಊರಿನಲ್ಲಿ ಶ್ರೀಮತಿ ವತ್ಸಲಾ ಅವರ ಮನೆಯಲ್ಲಿ ಆತಿಥ್ಯ ಸ್ವೀಕರಿಸಿ, ಅಲ್ಲಿನ ಕನ್ನಡ ಸಂಘದ ವತಿಯಿಂದ ಇನ್ನೊಬ್ಬ ಮಿತ್ರರ ಮನೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಿಸಾರರು ಮಾತನಾಡಿದರು.

ಮಾರನೆಯ ದಿವಸ ಬೆಳಿಗ್ಗೆ ಅಲ್ಲಿಂದ ವಿಸ್ಕಾನ್ಸಿನ್ ರಾಜ್ಯದ ಡಾಡ್ಜ್‌ವಿಲ್‌ನಲ್ಲಿರುವ 'ಹೌಸ್ ಆನ್ ದಿ ರಾಕ್' ಹೆಸರಿನ ವಸ್ತು ಸಂಗ್ರಹಾಲಯಕ್ಕೆ ನಿಸಾರರನ್ನು ಕರೆದುಕೊಂಡು ಹೋದೆ. ಜನ ವಿರಳವಾದ ಮತ್ತು ಮರಗಿಡಗಳಿಂದ ಆವೃತವಾದ ಬೃಹದಾಕಾರದ

ಬಂಡೆಗಲ್ಲಿನ ಕೋಡಿನ ಮೇಲೆ ಇಲ್ಲಿ ಒಂದು ಅದ್ಭುತವಾದ ಸಂಗ್ರಹಾಲಯ ನಿರ್ಮಿತವಾಗಿದೆ. ಅದನ್ನು ವಿವರವಾಗಿ ವೀಕ್ಷಿಸಲು ಸುಮಾರು ಎರಡು ಮೂರು ದಿನಗಳಾದರೂ ಬೇಕು. ಅದರಲ್ಲಿ ಅತ್ಯಂತ ಅಪರೂಪದ ಮತ್ತು ಕೌತುಕದ ವಿಶ್ವದ ಹಲವೆಡೆಗಳಿಂದ ಸಂಗ್ರಹಿಸಿದ ವಸ್ತುಗಳು ವಿಜೃಂಭಿಸಿವೆ. ಇದು ನಮ್ಮ ನೆರೆಯ ರಾಜ್ಯದ ಹೈದರಾಬಾದ್ ಪಟ್ಟಣದಲ್ಲಿರುವ ಸಾಲಾರ್‌ಜಂಗ್ ಮ್ಯೂಸಿಯಂ ಥರವೇ ಏಕವ್ಯಕ್ತಿಯ ವರ್ಷಾನುಗಟ್ಟಲೆಯ ಪರಿಶ್ರಮಪೂರ್ಣ ಶೇಖರಣೆಯ ಅತ್ಯಪೂರ್ವ ಸಂಗ್ರಹಗಳ ಶಾಲೆ. ಇದನ್ನು ನೋಡಿ ಹೊರ ಬದಾಗ ಮಯನ ಅರಮನೆಯನ್ನು ಹೊಕ್ಕು ಬಂದಂತೆ ಭಾಸವಾಗುತ್ತದೆ—ಎಲ್ಲವೂ ಅಷ್ಟು ಅಯೋಮಯ, ಸಂಕೀರ್ಣ ಹಾಗೂ ಹಾದಿ ತಪ್ಪಿಸುವ ಜಾಣಿನ ಪ್ರವೇಶ—ನಿರ್ಗಮನಗಳ ಚಕ್ರಬಂಧ.

ಇದಾದ ಬಳಿಕ ಮತ್ತೆ ಮಿಸಿಸಿಪ್ಪಿ ನದಿಯ ದರ್ಶನ. ಅದರಲ್ಲೂ, ವಿಸ್ಕಾನ್ಸಿನ್ ರಾಜ್ಯದ ಒಂದು ಆಳದ ಮತ್ತು ಸುವಿಶಾಲವಾದ ಕಣಿವೆಯಲ್ಲಿ ಅದರ ಪಾತ್ರ ಹತ್ತಿಪ್ಪತ್ತು ಮೈಲಿಗಳ ತನಕ ಹರಡಿಕೊಂಡಿರುವ ದೃಶ್ಯ ಅತ್ಯಂತ ಮನಮೋಹಕವಾದದ್ದು. ಅದು ಪ್ರೈರಿ ಡುಚಿ (Praire Duchi) ಎಂಬ ತಾಣದಲ್ಲಿದೆ. ಅದನ್ನು ಪ್ರವಾಸಿಗರ ತಾಣವನ್ನಾಗಿ ಅಲ್ಲಿನ ಸರ್ಕಾರ ಪರಿವರ್ತಿಸಿದೆ. ಎತ್ತರದ ಎಡೆಯಿಂದ, Pike's peak ಎನ್ನುವ ಜಾಗದಿಂದ, ಆ ಮಹಾ ನದಿಯ ಮಹದ್ವಿಸ್ತೀರ್ಣವನ್ನು, ದೂರದ ಹಿನ್ನೆಲೆಯಲ್ಲಿರುವ ಬೆಟ್ಟಗಳ ಮುಂದೆ ಆ ಜಲರಾಶಿಯ ಲೀಲೆಯನ್ನು ವೀಕ್ಷಿಸುವುದೇ ಒಂದು ಆನಂದದಾಯಕ ನೋಟ. ಲ ಕ್ರಾಸ್ (Le Cross) ಎಂಬಲ್ಲಿಂದ ಈ ತಾಣದವರೆಗೆ ಅರಣ್ಯಾವೃತ ಗಿರಿಗಳ ಬದಿಯಲ್ಲಿ ಈ ನದಿ, ಅದರ ಪಕ್ಕದಲ್ಲಿ ಅಮೇರಿಕದ ಅತ್ಯಂತ ಹಳೆಯದಾದ ರೈಲು ಮಾರ್ಗದ ಅನುಪಯುಕ್ತ ಹಳಿಗಳು ಮತ್ತು ಅದರ ನೆರೆಯಲ್ಲಿ ಇವುಗಳಿಗೆ ಅನುಗುಣವಾಗಿ ಚಾಚಿದ ದೀರ್ಘವಾದ ನಿರ್ಜನ ರಸ್ತೆಯಲ್ಲಿ ಸಂಚರಿಸುವಾಗ ನಿಸಾರ್ ಅವರು ಅನುಭವಿಸುತ್ತಿದ್ದ ಹರ್ಷದ ಸೆಳಕನ್ನು ಅವರ ಮುಖದ ಮೇಲಿನ ಪ್ರಸನ್ನತೆಯಿಂದ ಗುರುತಿಸಬಹುದಿತ್ತು. ಅಂತೂ, ನಮ್ಮ ಈ ಎರಡು ದಿನಗಳ ಕಾರಿನ ಪ್ರಯಾಣ ಕೊಂಚವೂ ಆಯಾಸ, ಬೇಸರಗಳಿಗೆ ಕಾರಣವಾಗದಿರಲು ನಿಸರ್ಗದ ವೈವಿಧ್ಯಮಯ ದೃಶ್ಯಾವಳಿ ಬಹಳ ಮಟ್ಟಿಗೆ ಸಹಕಾರಿಯಾಗಿತ್ತು.

ಅಲ್ಲಿಂದ ಅಯೋವಾ ರಾಜ್ಯಕ್ಕೆ ನಮ್ಮ ಕಾರು ಹೊಕ್ಕ ಕೊಂಚ ಸಮಯದಲ್ಲೇ ನಾನು ಹಳ್ಳಿಯೊಂದರ ಎದುರು ಒಂದು ಫಲಕವನ್ನು ಗಮನಿಸಿ ಕಾರನ್ನು ನಿಲ್ಲಿಸಿದೆ. ಅದರಲ್ಲಿ 'Politicians please note! Hogs do not vote' ಎಂದು ಬರೆದಿತ್ತು. ಅದರ ಹಿನ್ನೆಲೆಯನ್ನು ನಿಸಾರರಿಗೆ ವಿವರಿಸುತ್ತ ಈ ರೀತಿ ನುಡಿದೆ: 'ಈ ಗ್ರಾಮದಲ್ಲಿ ಒಂದು ಬಹು ದೊಡ್ಡ ಹಂದಿ ಸಾಕಣೆಯ ಕೇಂದ್ರ(Pig breading centre)ವನ್ನು ಸ್ಥಾಪಿಸಲು ಸರ್ಕಾರ ಯೋಜನೆ ಹಾಕಿತ್ತು. ಅದರಿಂದ ಉದ್ಭವವಾಗುವ ಅನೇಕ ಬಗೆಯ ಕೇಡುಗಳನ್ನು ಅಲ್ಲಿನ ನಿವಾಸಿಗಳು ಅರಿವಿಗೆ ತಂದುಕೊಂಡಿದ್ದರು: ಗಲೀಜು, ದುರ್ವಾಸನೆ, ನೊಣ ಮತ್ತಿತರ ಕ್ರಿಮಿ ಕೀಟಗಳ ಹೆಚ್ಚಳ, ಮಾರಕ ರೋಗ ಇತ್ಯಾದಿಗಳು. ಎಂದೇ, ಆ ಯೋಜನೆಯನ್ನು ಕೈಬಿಡಬೇಕೆಂದು ಜನರು ತಮ್ಮ ವಿರೋಧವನ್ನು ಈ ರೀತಿ ಸೌಮ್ಯವಾಗಿ, ಶಾಂತಿಯುತವಾಗಿ

ವ್ಯಕ್ತಪಡಿಸಿ ಪ್ರತಿಭಟಿಸಿದ್ದರು. ಇನ್ನೇನು ಚುನಾವಣೆ ಹತ್ತಿರವಾಗುತ್ತಿರುವುದರಿಂದ ರಾಜಕಾರಣಿಗಳಿಗೆ 'ಜಾಗರೂಕರಾಗಿರಿ' ಎಂದು ಮೊಗುಮ್ಮಾಗಿ ಅಲ್ಲಿನ ಸ್ಥಳೀಯರು ಎಚ್ಚರಿಸಿದ್ದರು. 'ನಿಮ್ಮನ್ನು ಆರಿಸುವವರು ನಾವೇ ಹೊರತು, ಇಲ್ಲಿನ ಜನಗಳೇ ಹೊರತು ನೀವು ಸಾಕಲೆಳಸಿರುವ ಹಂದಿಗಳಲ್ಲ' ಎಂದು ಸೂಕ್ಷ್ಮವಾಗಿ ಸೂಚಿಸಿದ್ದರು. ಅಮೇರಿಕದ ಸುಶಿಕ್ಷಿತ ರಾಜಕಾರಣಿಗಳಿಗೆ ಇಂತಹ ಮಾರ್ಮಿಕವಾದ ಮುನ್ನೆಚ್ಚರಿಕೆಯೇ ಸಾಕು. ನಮ್ಮ ದೇಶದಲ್ಲಿ ಈ ಬಗೆಯಲ್ಲಿ ಪ್ರತಿಭಟಿಸಿದರೆ ಅದು ಪರಿಣಾಮಕಾರಿಯಾಗಲು ಸಾಧ್ಯವೇ ಇಲ್ಲ. ಅಲ್ಲಿ ಗಲಭೆ ಗದ್ದಲ, ಮಾರಾಮಾರಿ, ಮುಷ್ಕರ ಇತ್ಯಾದಿಗಳು ನಡೆಯಲೇಬೇಕು. ಇಷ್ಟಾದರೂ ನಮ್ಮ ರಾಜಕಾರಣಿಗಳು ತಮ್ಮ ಕುಂಭಕರ್ಣಾವಸ್ಥೆಯಿಂದ ಎಚ್ಚೆತ್ತುಕೊಳ್ಳುವುದು ಅಸಂಭವ.' ಇದರ ಬಗ್ಗೆ ನಾನು ನಿಸಾರ್ ಅವರೊಡನೆ ಸುಮಾರು ಹೊತ್ತು ಚರ್ಚಿಸಿದೆ.

ನಿಸಾರರ ಮೇಲೆ ಈ ಫಲಕ ತುಂಬಾ ಪರಿಣಾಮ ಬೀರಿರಬೇಕು. ಎಷ್ಟಾದರೂ ಕವಿ ಹೃದಯ ತಾನೆ? ಅವರು ಈ ಸಂಗತಿಯನ್ನು ಮರೆತಿರಬೇಕು ಎಂದುಕೊಂಡಾಗ, ಬೆಂಗಳೂರಿಗೆ ಹೋದ ಬಳಿಕ ಒಂದೂವರೆ ವರ್ಷದ ಅನಂತರ ನನ್ನ ಇ-ಮೆಯಿಲ್‌ಗೆ ಒಂದು ಪದ್ಯವನ್ನು ರವಾನಿಸಿದರು. ಅದರ ಶಿರೋನಾಮೆ 'ರಾಜಕಾರಣಿಗಳಿಗೆ ಶಾಲಿನಲ್ಲಿಟ್ಟು...'. ತೀರಾ ಸಾಧಾರಣವಾದ ಭಾಷೆಯಲ್ಲಿ, ಆ ಫಲಕದ ಬರಹವನ್ನು ನೆವವಾಗಿಟ್ಟುಕೊಂಡು ಒಂದು ಅದ್ಭುತವಾದ, ಪರಿಣಾಮಕಾರಿಯಾದ ಪದ್ಯವನ್ನು ರಚಿಸಿದ್ದರು. ಅದನ್ನು ನಾನು ೨೦೦೪ರಲ್ಲಿ ಫ್ಲಾರಿಡಾ ರಾಜ್ಯದ ಆರ್ಲಂಡೊ ನಗರದಲ್ಲಿ ಜರುಗಿದ 'ಅಕ್ಕ'ದ ವಿಶ್ವ ಕನ್ನಡ ಸಮ್ಮೇಳನದ ವತಿಯಿಂದ ಪ್ರಕಟವಾದ ವಿಶೇಷ ಸಂಚಿಕೆಗೆ ಕಳಿಸಿಕೊಟ್ಟೆ. ಅದಕ್ಕೆ ಇಲ್ಲಿ ಹಲವರಿಂದ ಉತ್ತಮ ಪ್ರತಿಕ್ರಿಯೆ ಬಂದಿದ್ದನ್ನು ಗಮನಿಸಿದಾಗ ನನ್ನ ಮನಸ್ಸು ಮುದದಿಂದ ಅರಳಿತ್ತು. ಆ ಕವಿತೆಯ ಪೂರ್ಣಪಾಠವನ್ನು ನಿಮ್ಮೆದುರು ಹರವಿದ್ದೇನೆ. ಕವಿ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವೂ ಆಗಬಹುದು.

ರಾಜಕಾರಣಿಗಳಿಗೆ ಶಾಲಿನಲ್ಲಿಟ್ಟು...

೧

ಅಮೇರಿಕದ ಅಯೋವಾದ ಕೃಷ್ಣಶಾಸ್ತ್ರಿಗಳೆಂದು
ಸಾರಥಿಯಾಗಿ ಕಾರಿನಲಿ ಕರೆದೊಯ್ದರೆನ್ನನ್ನು
ಭೇಟಿ ಮಾಡಿಸಲೆಂದು ಮಿನ್ನೆಸೋಟ, ವಿಸ್ಕಾನ್ಸಿನ್
ಪ್ರಾಂತ್ಯಗಳ ಹೆಸರಾಂತ ಚೆಲು ನೋಟದೆಡೆಗಳನ್ನು.
ನೂರಾರು ಮೈಲಿಗಳು ದಿಟ್ಟೆ ದಣಿಯುವವರೆಗೆ
ದಾರಿಯಿಕ್ಕೆಲದಲ್ಲಿ ಜೋಳ, ಸೋಯಾ, ಹತ್ತಿ,
ಸೂರ್ಯಕಾಂತಿಯ ಹೊಲಗಳಚ್ಚ ಹಸುರಿನ ನಿರಿಗೆ.
ನಡುವೆ ಆಗೀಗ ಒಂಟಿ ವಾಸದ ಸೂರು.
ಫೋರ್ಡು, ಮೋಟಾರು ಬೈಕು, ಜಾನ್ ಡೀರ್ ಟ್ರಾಕ್ಟರು,
ಜಿರಾಯ್ತಿದಾರರ ಜೊತೆಗೆ ಪೊಗದಸ್ತು ಜಾನುವಾರು,

ಲಿಂಗದಾಕಾರದ ಅತ್ಯಾಧುನಿಕ ಧಾನ್ಯಾಗಾರ—
ಇವನೆಲ್ಲ ತಕ್ಕೈಸಿರುವ ಓಕ್ ಪಟ್ಟಿಗಳ ಪಾಗಾರ
ಇತ್ಯಾದಿಗಳ ಅಚ್ಚುಕಟ್ಟನ್ನು ರಸಾನಂದಿಸುತ್ತ
ಮುಂದೆ ಸಾಗಿರುವಾಗ ಹರಟಿ
ಹೊಸ ದೃಶ್ಯಗಳ ಸಂಧಿಸುತ್ತ
ಗಮನ ಹೊರಳಿತು ಗ್ರಾಮವೊಂದ-
ರೆದುರಿನ ಸೌಮ್ಯ ಫಲಕದತ್ತ.

೨

ಆ ಹಳ್ಳಿಯಲ್ಲೊಂದು ಹಂದಿ ಸಾಕಣೆ ಕೇಂದ್ರ
ತೆರೆವ ಘನ ಉದ್ದೇಶ ಸರಕಾರಕಿರುವುದನು ತಿಳಿದು
ಅದರ ಗಬ್ಬು ಗಲೀಜು, ಹೊಲಸು ನಾತದ ರೊಪ್ಪ, ಲಾಯ,
ನೊಣ, ರೋಗ ರುಜಿನಗಳ ಸಂತತ ಅಪಾಯ
ಆ ಹಳ್ಳಿಗರ ಮನಕೆ ಮುಂಗಡವಾಗಿ ಹೊಳೆದು
ದೊಂಬಿ ಹರತಾಳಗಳ ಅಬ್ಬರದ ಮಾರ್ಗವನ್ನುಳಿದು,
ಪ್ರತಿಭಟಿಸಿರುವ ಮಾರ್ಮಿಕ ವಿಧಾನವನು
ಮುನ್ನೆಚ್ಚರಿಕೆಯಂತೆ ಮೆರೆಸಿ ಸಾರಿತ್ತು ಫಲಕ:
ಆ ಹಳ್ಳಿ ಹೆಸರಿನ ಮುತ್ತೈದೆ ಹಣೆ ತಿಲಕ.
'ರಾಜಕಾರಣಿಗಳೆ, ದಯವಿಟ್ಟು ಆಲಿಸಿ,
ತತ್‌ಕ್ಷಣವೆ ಬದಲಾಯಿಸಿ ಈ ನಿಮ್ಮ 'ಪಾಲಿಸಿ.'
ನಿಮಗೆ ಮತ ಕೊಡುವವರು ನಾವು ಹಳ್ಳಿಯ ಮಂದಿ
ನಿಮ್ಮ ದುರ್ಗಂಧಿ ಬಂಧುಗಳಲ್ಲ,
ಅರ್ಥಾತ್ ಕೊಳಕು ಹಂದಿ!'

೩

'ನಮ್ಮ ಇಂಡಿಯಾದಲ್ಲು, ಪ್ರತಿಭಟಿಸಬಾರದೇ
ಹೀಗೆ ಮೊಗುಮ್ಮಾಗಿ,
ಅವಾಚ್ಯ ಬೈಗುಳಗಳ ಮೆರೆಸದೆ,
ಕಿರುಚಾಡಿ ದನಿಯನೆತ್ತರಿಸದೆ?'
ಎಂದಾಗ ಸ್ನೇಹಿತರು, ನಾನುತ್ತರಿಸಿದೆ:
'ಸ್ವಾಮಿ ಶಾಸ್ತ್ರಿಗಳೆ, ಹಾಳಾದ್ದು—
ನಮ್ಮ ಆಳ್ವಿಕೆಗಾರ, ರಾಜಕಾರಣಿಗಳದ್ದು
ಘೇಂಡಾಮೃಗದ ಚರ್ಮ, ಹೃದಯವೋ ಕಬ್ಬಿಣ;
ಸೂಜಿ ಸಾಕಾಗುವುದೆ ಹೇಳಿ? ಬೇಕದಕೆ ದಬ್ಬಣ.'

ಮತ್ತೊಂದು ವಿಷಯವನ್ನು ಬರೆಯಲು ಮನಸ್ಸು ಒತ್ತಾಯಿಸುತ್ತಿದೆ: ಹಲವು ವರ್ಷಗಳ ಹಿಂದೆ ಮೈಸೂರಿನ ನಿವಾಸಿಯಾಗಿದ್ದ ಡಿ. ಟಿ. (ಗುಪ್ತನಾಮ) ಎಂಬುವರು ಆರೆಗನ್ (Oregon) ರಾಜ್ಯದ ಪೋರ್ಟ್‌ಲೆಂಡ್ (Portland) ಎಂಬ ನಗರದಿಂದ ನನಗೆ

ದೂರವಾಣಿಯ ಕರೆ ಮಾಡಿದರು. ಅವರು ನನಗೆ ಅಪರಿಚಿತರು. ಮೈಸೂರಿನಲ್ಲಿ ಹಲವು ವೃತ್ತಿಗಳಲ್ಲಿ ತೊಡಗಿದ್ದವರಂತೆ. ಜೀವನ ಯಾಪನೆಗಾಗಿ ಕೆಲ ಕಾಲ ಆಟೋರಿಕ್ಷಾ ಸಹ ಓಡಿಸಿದ್ದರಂತೆ. ಜೊತೆಯಲ್ಲೇ ಕಷ್ಟಪಟ್ಟು ಎಂ.ಎ. ತರಗತಿಗೂ ಸೇರಿ ಓದು ಮುಂದುವರಿಸಿದ್ದರಂತೆ. ಆಗ ಅಲ್ಲಿಗೆ ಯಾವುದೋ ಸಂಶೋಧನಾರ್ಥವಾಗಿ ಬಂದಿದ್ದ ಮಿಸ್. ಕ್ಯಾರೊಲಿನ್ ಎನ್ನುವ ಅಮೇರಿಕನ್ ಮಹಿಳೆಯ ಪರಿಚಯವಾಗಿ, ಅನಂತರ ಪ್ರೇಮ ಅಂಕುರಿಸಿ ವಿವಾಹವಾಗಿ ಐದಾರು ವರ್ಷಗಳಿಂದ ಪೋರ್ಟ್‌ಲೆಂಡ್‌ನಲ್ಲಿ ವಾಸವಾಗಿದ್ದಾರೆ. ಅವರು ಕನ್ನಡ ಗೀತೆಗಳನ್ನು ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಡುವಾಗ ನಿಸಾರರ 'ನಿತ್ಯೋತ್ಸವ' ದನಿ ಸುರುಳಿಯ ಗೀತೆಗಳನ್ನೂ ಗಾಯನ ಮಾಡುತ್ತಿದ್ದರಂತೆ. ಅವರು ನಿಸಾರರನ್ನು ನೋಡಿರಲಿಲ್ಲ. ಅವರ ಕವನಗಳೆಂದರೆ, ಅದರಲ್ಲೂ 'ನಾಡದೇವಿಯೆ', 'ನಿತ್ಯೋತ್ಸವ', 'ಕುರಿಗಳು, ಸಾರ್...'ಗಳೆಂದರೆ ಪ್ರಾಣ. ತಮ್ಮ ಪ್ರೀತಿಯ ಕವಿ ಅಮೇರಿಕಕ್ಕೆ ಬಂದಿರುವುದನ್ನು ತಿಳಿದ ಡಿ.ಟಿ. ಅವರು ಯಾರ ಮೂಲಕವೋ ನಾನು ನಿಸಾರರ ಪ್ರವಾಸದ ಉಸ್ತುವಾರಿಯನ್ನು ಹೊಂದಿರುವುದನ್ನೂ ತಿಳಿದು, ಅವರಿಂದ ನನ್ನ ಫೋನ್ ನಂಬರ್ ಪಡೆದು ಸಂಪರ್ಕಿಸಿದ್ದರು. ನಿಸಾರ್ ಅವರಿಗೆ ತಮ್ಮ ಪ್ರೀತಿಪೂರ್ವಕ ಕೃತಜ್ಞತೆಯನ್ನು ಸಲ್ಲಿಸಲು, ಅವರ ಊರಿಗೆ ಕಳಿಸಿಕೊಡಲು ಮನವಿ ಮಾಡಿದರು. ನಾನು ನಿಸಾರರ ಬಿಡುವಿಲ್ಲದ ಕಾರ್ಯಕ್ರಮಗಳನ್ನು ತಿಳಿಸಿ, ಡಿ.ಟಿ. ಅವರಿಗೆ ಒಂದು ಸಲಹೆಯನ್ನು ಕೊಟ್ಟೆ. ಅವರ ಊರಿಗೆ ೪೦೦ ಮೈಲಿ ದೂರವಿರುವ ವಾಷಿಂಗ್ಟನ್ ರಾಜ್ಯದ ಸಿಯಾಟಲ್ ಪಟ್ಟಣಕ್ಕೆ ನಿಸಾರರು ಅಕ್ಟೋಬರ್ ತಿಂಗಳಲ್ಲಿ ಬರುತ್ತಿರುವುದಾಗಿಯೂ ಆಗ ಅಲ್ಲಿನ 'ಡಾ. ರಾಜಕುಮಾರ್ ಕನ್ನಡ ಕೂಟ'ದ ಅಧ್ಯಕ್ಷರಾದ ಡಾ. ರಾಘುವ ರೆಡ್ಡಿಯವರನ್ನು ಸಂಪರ್ಕಿಸಿ, ನಿಸಾರರನ್ನು ಒಂದು ದಿನದ ಮಟ್ಟಿಗೆ ತಮ್ಮ ಊರಿಗೆ ಕರೆಸಿಕೊಳ್ಳಬೇಕಾಗಿ ತಿಳಿಸಿದೆ.

ಡಿ.ಟಿ. ಅವರ ಆಸೆ ಫಲಿಸಿತ್ತು. ಅವರು ಪತ್ನಿ ಸಮೇತ ಸಿಯಾಟಲ್ ನಗರಕ್ಕೆ ಹೋಗಿ ನಿಸಾರರನ್ನು ತಮ್ಮ ಊರಿಗೆ ಕರೆ ತಂದು ತಮ್ಮ ಮನೆಯಲ್ಲಿ ತುಂಬು ಉಪಚಾರ ನೀಡಿ ಸತ್ಕರಿಸಿದರು; ಕಾಣಿಕೆಯನ್ನೂ ನೀಡಿದರು. ಜೊತೆಗೇ ದಾರಿಯಲ್ಲಿ ಸಿಕ್ಕುವ ಸೇಯಿಂಟ್ ಮೌಂಟ್ ಹೆಲೆನ ಎಂಬ ಕ್ರಿಯಾಶೀಲ ಜ್ವಾಲಾಮುಖಿಯ ದರ್ಶನವನ್ನೂ ಕೊಲಂಬಿಯಾ ನದಿಯ ಮಹಾ ಕಂದರ(Gorge)ವನ್ನೂ ಟೇಬರ್ ಹೆಸರಿನ ಮೃತ ಜ್ವಾಲಾಮುಖಿಯನ್ನೂ ತೋರಿಸಿದರು. ಅವರ ಮಡದಿ ಕ್ಯಾರೊಲಿನ್ ಭಾರತದ ಬಗೆಗೆ ತುಂಬು ಪ್ರೀತಿ ಗೌರವವುಳ್ಳ ಹೆಣ್ಣುಮಗಳು. ಅಲ್ಲದೆ ಪುಸ್ತಕ ಪ್ರೇಮಿ. ಅವರ ಮನೆಯಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಪುಸ್ತಕಗಳ ಒಂದು ಬೃಹತ್ ಭಂಡಾರವೇ ಇದೆ. ಆಕೆ ನಿಸಾರರ ಇಂಗ್ಲಿಷ್ ಸಾಹಿತ್ಯ ಪ್ರೇಮಕ್ಕೆ ಸಂತೋಷಪಟ್ಟು, ಅಲ್ಲಿನ ಅತಿ ದೊಡ್ಡ ಪುಸ್ತಕದ ಅಂಗಡಿಯೊಂದರಿಂದ ಹಲವಾರು ಅಮೂಲ್ಯವಾದ ಪುಸ್ತಕಗಳನ್ನು ಕೊಂಡು, ನಿಸಾರರು ಬೇಡವೆಂದರೂ ಕೇಳದೆ, ಉಡುಗೊರೆ ನೀಡಿದರು. 'ನಮ್ಮ ನೆನಪಿಗಾಗಿ ಇವು ನಿಮ್ಮ ಬಳಿ ಇರಲಿ' ಎಂದು ತಮ್ಮ ಹಂಬಲವನ್ನು ವ್ಯಕ್ತಪಡಿಸಿದರು. ಆಮೇಲೆ ನಿಸಾರರನ್ನು ಈ ದಂಪತಿಗಳು ಸಿಯಾಟಲ್ ನಗರಕ್ಕೆ ತಮ್ಮ

ಕಾರಿನಲ್ಲಿ ವಾಪಸ್ಸು ಬಿಟ್ಟು ಬಂದರು. ಡಿ.ಟಿ.ಯವರಿಗೆ ತಮ್ಮ ಬದುಕಿನ ಬಹು ಮುಖ್ಯವಾದ ಆಸೆಯೊಂದು ಪೂರೈಸಿದ ಧನ್ಯತೆ ಮೂಡಿದ್ದರೆ, ನಿಸಾರರಿಗೆ 'ಇಂಥ ಅಭಿಮಾನಿಗಳೂ ಇದ್ದಾರಲ್ಲ!' ಎಂಬ ಮಹದಾಶ್ಚರ್ಯ ಆಗಿತ್ತು.

ನಿಸಾರ್ ಅವರು ಡಿಸೆಂಬರ್ ಮೊದಲನೆಯ ವಾರದಲ್ಲಿ ಬೆಂಗಳೂರಿಗೆ ಮರಳ ಬೇಕಾಗಿದ್ದದ್ದರಿಂದ, ನಾನು ಅವರನ್ನು ಚಿಕಾಗೊ ನಗರದ ಅಡಿಸನ್ ಪ್ರದೇಶದಲ್ಲಿ ವಾಸವಾಗಿದ್ದ ಅವರ ಮಗಳ ಮನೆಯಿಂದ ಡೆಟ್ರಾಯಿಟ್‌ಗೆ ಕಾರಿನಲ್ಲಿ ಕರೆದೊಯ್ದೆ. ಉದ್ದಕ್ಕೂ ನಾವು ಹಲವಾರು ವಿಷಯಗಳನ್ನು ಕುರಿತು ಗೆಲವಾಗಿ ಮಾತಾಡುವಂತೆ ಮೇಲೆ ಕಂಡರೂ ನಮ್ಮಿಬ್ಬರಲ್ಲೂ ಒಳಗೆ ಒಂದು ಹೇಳಲಾಗದ ಅಗಲಿಕೆಯ ನೋವು ಕುಟುಕುತ್ತಿತ್ತು. ಕೆಲವೇ ದಿವಸಗಳಲ್ಲಿ ನಾವು ಊಹಿಸಲೂ ಆಗದಷ್ಟು ಆಪ್ತರಾಗಿದ್ದೆವು. ಯಾವುದೋ ಅಗೋಚರ ಶಕ್ತಿಯೊಂದು ನಮ್ಮ ಆತ್ಮಗಳನ್ನು ಬೆಸೆದಂತೆ ಭಾಸವಾಗುತ್ತಿತ್ತು.

ನಡುವೆ, ದಾರಿಯಲ್ಲಿ ಕಲಮಾಜು ಎಂಬ ಊರಿನಲ್ಲಿ ಡಾ. ರಾಮಕೃಷ್ಣ ಮತ್ತು ಡಾ. ಉಷಾ ಅವರ ಮನೆಯಲ್ಲಿ ಮಧ್ಯಾಹ್ನದ ಭೋಜನ ಮಾಡಿದೆವು. ಅವರಿಬ್ಬರೂ ನಿಸಾರರ ತುಂಬು ಅಭಿಮಾನಿಗಳು. ರಾಮಕೃಷ್ಣ ಅವರು ಬೆಂಗಳೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗಿನಿಂದಲೇ ನಿಸಾರರನ್ನು ಬಲ್ಲವರಾಗಿದ್ದರೆ, ಉಷಾ ಅವರು, ನಿಸಾರರ ತುಂಬು ಆತ್ಮೀಯ ಗೆಳೆಯರೂ, ಒಂದು ಕಾಲದಲ್ಲಿ ಅವರ ಸಹೋದ್ಯೋಗಿಗಳೂ ಆಗಿದ್ದು, ಈಗ ಸದ್ಯದಲ್ಲಿ ಅಲಬಾಮಾದ ಟಸ್ಕಲೂಸದಲ್ಲಿರುವ, 'ಅಮೇರಿಕಾಯಣ' ಬೃಹದ್ಗ್ರಂಥದ ಬರಹಗಾರ ಡಾ. ವೈ. ಆರ್. ಮೋಹನ್ ಅವರ ಸಹೋದರಿ. ಅವರಿಬ್ಬರು, 'ಶಾಸ್ತ್ರಿಗಳೆ, ನಿಸಾರರ ಕಾರ್ಯಕ್ರಮಗಳನ್ನು ಇಂಟರ್‌ನೆಟ್ ಮೂಲಕ ನೋಡುತ್ತಿದ್ದೆವು. ಬಹುಶಃ ಇವರಷ್ಟು ಅಮೇರಿಕದ ಬೇರೆ ಬೇರೆ ಸ್ಥಳಗಳನ್ನು ನೋಡಿದ ಕನ್ನಡ ಲೇಖಕ ಇಲ್ಲವೇನೋ. ನಿಜ ಹೇಳಬೇಕೆಂದರೆ, ನಾನು ಇಲ್ಲಿ ಮೂವತ್ತು ವರ್ಷಗಳಿಂದ ವಾಸವಾಗಿದ್ದೇನೆ. ನಿಸಾರರು ಭೇಟಿಯಾಗಿರುವ ಅರ್ಧದಷ್ಟು ಜಾಗಗಳನ್ನೂ ನೋಡಿಲ್ಲ. ಇದು ನಿಮ್ಮ ವಿಚಕ್ಷಣತೆ ಹಾಗೂ ವ್ಯವಸ್ಥಿತ ಯೋಜನೆಯ ಫಲ' ಎಂದು ನನ್ನನ್ನು ಶ್ಲಾಘಿಸಿದರು. 'ನಾನು ನನ್ನ ಕೈಲಾದ ಮಟ್ಟಿಗೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದೇನೆಂಬ ನಂಬಿಕೆಯಿದೆ. ಆದರೆ, ನಿಸಾರರಿಗೆ ಇನ್ನೂ ಕೆಲವು ಕಡೆಗಳಿಂದ ಬಂದ ಆಹ್ವಾನವನ್ನು ಮನ್ನಿಸಲು ಸಾಧ್ಯವಾಗದ್ದಕ್ಕೆ ನನ್ನ ಬಗ್ಗೆ ನನಗೇ ಅಸಮಾಧಾನವಿದೆ. ಅಂದ ಹಾಗೆ, ನಾನೂ ಕಳೆದ ಮೂರು ದಶಕಗಳಿಂದ ಈ ನಾಡಿನಲ್ಲಿದ್ದರೂ ಇವರಷ್ಟು ಸ್ಥಳಗಳನ್ನು ನೋಡಲಾಗಲಿಲ್ಲವೆಂದು ಒಪ್ಪಿಕೊಳ್ಳಬೇಕು' ಎಂದೆ.

ಅವರನ್ನು ಬೀಳ್ಕೊಟ್ಟು ಡೆಟ್ರಾಯಿಟ್ ಸೇರಬೇಕಾದರೆ ಸಂಜೆ ಸಮೀಪಿಸಿತ್ತು. ನನ್ನ ಹಿರಿಯ ಮಗಳು ಮಾಲಾಳ ಮನೆಗೆ ಹೋಗಿ, ಅಲ್ಲಿಂದ ಮುಂಬರಲಿರುವ ಕ್ರಿಸ್‌ಮಸ್‌ನ ಸಲುವಾಗಿ ಸರ್ಕಾರದಿಂದ ಏರ್ಪಾಟಾಗಿದ್ದ ವಿದ್ಯುದ್ದೀಪೋತ್ಸವದ ವರ್ಣಾಕರ್ಷಕ ದೃಶ್ಯಗಳನ್ನು ನಿಸಾರರಿಗೆ ತೋರಿಸಿ ಅವರು ಎರಡು ದಿವಸದವರೆಗೆ ಅತಿಥಿಗಳಾಗಿ ತಂಗಬೇಕಾಗಿದ್ದ ಇಂಜಿನಿಯರ್ ತೇಜೋಮೂರ್ತಿ ಕರ್ತಾಳ್ ಅವರ ಮನೆಯಲ್ಲಿ ಬಿಟ್ಟು ಮರು ದಿವಸ ಊರಿಗೆ ಮರಳಿದೆ. ಅಗಲುವಾಗ ನಮ್ಮಿಬ್ಬರ ಹೃದಯಗಳು ಭಾರವಾಗಿದ್ದವು, ದನಿ

ಗದ್ಗದಿತವಾಗಿತ್ತು.

ನಾನು ಕೆಲಸ ಮಾಡುತ್ತಿರುವ 'ಜಾನ್ ಡೀರ್' ಕಂಪೆನಿಯ ಕೆಲಸದ ನಿಮಿತ್ತ ಕಳೆದ ವರ್ಷ, ಅಂದರೆ ೨೦೦೫ರಲ್ಲಿ ಚೀನಾ ದೇಶಕ್ಕೆ ಹೋಗಿದ್ದವನು ಅಲ್ಲಿಂದ ವಾಪಸ್ಸಾಗುವಾಗ ಬೆಂಗಳೂರಿನಲ್ಲಿ ಮೂರು-ನಾಲ್ಕು ದಿನಗಳು ಇರುವ ಆಸೆ ಮೂಡಿ, ಅಲ್ಲಿಗೆ ಹೋದೆ. ನಾನು ಬರುವ ಸುದ್ದಿಯನ್ನು ನಿಸಾರರಿಗೆ ವಾರದ ಮುಂಚೆಯೇ ತಿಳಿಸಿದ್ದೆ. ಅವರು ನನಗೊಂದು ಅಚ್ಚರಿಯನ್ನು ಕಾದಿರಿಸಿದ್ದರು. ನಾನು ಬೆಂಗಳೂರಿಗೆ ಬಂದ ಮರು ದಿವಸ ಬಸವನಗುಡಿಯ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನನ್ನಿಂದ ಚೀನಾ ದೇಶದ ಬಗ್ಗೆ ಭಾಷಣ ಹಾಗೂ ನನ್ನ ಸನ್ಮಾನವನ್ನು ಏರ್ಪಡಿಸಿದ್ದರು. ಮಾನ್ಯ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದ ಆ ಸಮಾರಂಭಕ್ಕೆ ಸಾಹಿತ್ಯ ಲೋಕದ ಅನೇಕ ದಿಗ್ಗಜಗಳು ಬಂದಿದ್ದಲ್ಲದೆ ನನ್ನ ನೆಂಟರಿಷ್ಟರ ಒಂದು ದಂಡು ಆಗಮಿಸಿತ್ತು. ದಿವಂಗತ ಪೂಜ್ಯ ನಿಟ್ಟೂರು ಶ್ರೀನಿವಾಸರಾಯರು ಸಭಿಕರಲ್ಲಿ ಒಬ್ಬರಾಗಿ ಮುಂದಿನ ಸಾಲಿನಲ್ಲಿ ಕೂತಿದ್ದರು. ನಿಸಾರರೂ ಸಹ ಇತರ ಸಭಿಕರ ಜೊತೆಯಲ್ಲೇ ಆಸೀನರಾಗಿದ್ದರು. ಆ ದಿನ ನನಗೆ ಬಿನ್ನವತ್ತಳೆ, ದೇವರ ವಿಗ್ರಹ ಹಾಗೂ ಉಡುಗೊರೆಯ ಜೊತೆಗೆ ಶಾಲು, ಫಲ ತಾಂಬೂಲದ ಸನ್ಮಾನ ನೆರವೇರಿತು. ಅಮೇರಿಕದಲ್ಲಿ ನಾನು ಮಾಡಿದ ಕೊಂಚ ಮಟ್ಟಿನ ಸೇವೆಗೆ ಇಂತಹ ಹಿರಿಯ ಗೌರವ ಲಭಿಸಿದ್ದನ್ನು ನಿಸಾರರಿಗೆ ವಿನಮ್ರವಾಗಿ ಸೂಚಿಸಿದಾಗ, 'ಶಾಸ್ತ್ರಿಗಳೇ, ನಾನು ಮಾಡಿರುವುದು ಕೇವಲ ಕುಚೇಲಾತಿಥ್ಯ. ನಿಮ್ಮ ಉಪಕಾರಕ್ಕೆ ಇದು ಯಾವುದೇ ರೀತಿಯಲ್ಲಿ ಸರಿ ಸಮಾನವಲ್ಲ. ಏನಾದರೂ ಲೋಪವಾಗಿದ್ದರೆ ಮನ್ನಿಸಿ' ಎಂದಾಗ, ಅವರ ಪ್ರೀತಿಪೂರ್ವಕ ಹೃದಯ ಸಂಪನ್ನತೆಗೆ ಮಾರುಹೋದೆ. ಕಾರ್ಯಕ್ರಮದ ಅನಂತರ, ನನ್ನ ಬಂಧು ಬಳಗ ಸೇರಿದಂತೆ ಸುಮಾರು ನೂರೈವತ್ತು ಜನರಿಗೆ ಭೋಜನದ ವ್ಯವಸ್ಥೆಯನ್ನೂ ನಿಸಾರರು ಗಾಂಧಿ ಬಜಾರ್‌ನ ಪ್ರಸಿದ್ಧ ಹೋಟೆಲ್‌ನಲ್ಲಿ ಮಾಡಿಸಿದ್ದರು.

ನಿಸಾರರ ಒಟ್ಟು ಸಾಹಿತ್ಯದ ಬಗೆಗೆ, ಅವರ ಕಾವ್ಯ ಮತ್ತು ಗದ್ಯ ಬರವಣಿಗೆಯ ವಿಶೇಷತೆಯ ಬಗೆಗೆ ಮಾತನಾಡಲು ನಾನು ಸಮರ್ಥನಲ್ಲ. ಅಲ್ಲದೆ, ನಾನು ಅವರ ಎಲ್ಲ ಪುಸ್ತಕಗಳನ್ನು ಓದಿದವನೂ ಅಲ್ಲ. ಓದಿರುವುದಷ್ಟನ್ನು ಪೂರ್ತಿ ಅರ್ಥಮಾಡಿಕೊಂಡಿದ್ದೇನೆಂಬ ವಿಶ್ವಾಸವೂ ನನಗಿಲ್ಲ. ಹೀಗಿದ್ದರೂ ಅವರ ಕೆಲವು ಗೀತೆಗಳನ್ನು ಓದಿ, ಅವರಿಂದಲೇ ಕೇಳಿ, ಹಾಡುಗಳ ಮೂಲಕ ಆಲಿಸಿ ಆನಂದಪಟ್ಟಿದ್ದೇನೆ. ಅವರೊಬ್ಬ ಅಸಾಧಾರಣ ಬರಹಗಾರರು ಹೇಗೋ ಹಾಗೆಯೇ ಒಬ್ಬ ಅನನ್ಯ ವ್ಯಕ್ತಿ. ಇವೆಲ್ಲಕ್ಕಿಂತ ಹೆಚ್ಚಾಗಿ ನನ್ನ ಪರಮಾಪ್ತ ಪ್ರಾಣ ಸ್ನೇಹಿತರು. ಬದುಕಿನಲ್ಲಿ ಅಸಂಖ್ಯ ಜನರು ಸಖ್ಯವನ್ನು ಬೆಳೆಸಿ ಕೊಂಚ ಕಾಲ ಜೊತೆಗಿದ್ದು ಅಗಲಿ ಹೋಗುತ್ತಾರೆ. ಇನ್ನು ಕೆಲವರು ಮಾತ್ರ ಕಣ್ಮುಂದೆ ಇರಲಿ, ಇಲ್ಲವೇ ದೂರವಿರಲಿ ಸಮಶೀತೋಷ್ಣ ಸ್ನೇಹಭಾವದಿಂದ ಕೃತಕೃತ್ಯತೆಯನ್ನು ಧಾರಾಳವಾಗಿ ಜೀವಕ್ಕೆ ಕರುಣಿಸಿರುತ್ತಾರೆ. ಅಂಥ ವಿರಳರಲ್ಲಿ ನನ್ನ ಪಾಲಿಗೆ ನಿಸಾರ್ ಅಹಮದ್ ಅವರು ಒಬ್ಬರು.



ಕವಿಯೊಂದಿಗೆ ಕರುಳಿನ ನಂಟು

♦ ಡಾ. ಡಿ. ಆರ್. ಗೋವಿಂದರಾಜು
ಬಾಸ್ಟನ್ (ಮ್ಯಾಸಚ್ಯುಸೆಟ್ಸ್)

ಎಲ್ಲ ಭಾವನೆ, ಕಾರ್ಯ ಮತ್ತು ಸಂಬಂಧಗಳಿಗೂ ಉಗಮ ಬಿಂದುಗಳಿರುತ್ತವೆ. ಪ್ರೊಫೆಸರ್ ಕೆ. ಎಸ್. ನಿಸಾರ್ ಅಹಮದ್ ಮತ್ತು ನನ್ನ ಸಂಬಂಧಕ್ಕೆ ಉಗಮ ಬಿಂದು ಯಾವುದು? ಎಂದು ಊಹಿಸಲು ಕಷ್ಟ. ಆದರೂ ನಾನು ಸುಮಾರು ಅರವತ್ತರ ದಶಕದಲ್ಲಿ ಬೆಂಗಳೂರಿನ ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯ ದಲ್ಲಿ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ, ನಿಸಾರರ 'ಮನಸು ಗಾಂಧಿ ಬಜಾರು' ಕವನ ಸಂಗ್ರಹವನ್ನು ನೋಡಿದ್ದೆ. ಆದರೆ ಓದಿರಲಿಲ್ಲ. ಕಾರಣ ಇಷ್ಟೇ—ಮಹಾಕವಿ ಕುವೆಂಪು ಅವರ ಕವನಗಳಿಗೆ, ಅವರ ಸಂಗ್ರಹಗಳ ಶೀರ್ಷಿಕೆಗಳಿಗೆ ಮಾರು ಹೋಗಿದ್ದ ನನಗೆ 'ಮನಸು ಗಾಂಧಿ ಬಜಾರು' ಶೀರ್ಷಿಕೆಯಿದ್ದ ಪುಸ್ತಕದಲ್ಲಿ ಅದೆಂಥ ಕವನಗಳಿರಬಹುದು? ಎಂದುಕೊಂಡು ಓದಲಿಲ್ಲ! ಜೊತೆಗೆ, ಅರವತ್ತರ ದಶಕದಲ್ಲಿ ಅನೇಕ ನವ್ಯ ಕವಿಗಳು ವಾಂತಿ ಮಾಡುತ್ತಿದ್ದ ಕವನಗಳು ನನ್ನ ಯೌವನ ಪೂರ್ವ ವಯೋಮಾನದ ಮನಸ್ಸಿಗೆ ಅರ್ಥವಾಗುತ್ತಿರಲಿಲ್ಲ (ಅರ್ಥ ಮಾಡಿಕೊಳ್ಳುವ ಗೋಜಿಗೂ ಹೋಗಲಿಲ್ಲ ಅನ್ನಿ). ಈ ಮನಃಸ್ಥಿತಿ ಯಲ್ಲಿದ್ದ ನಾನು ಆಕಸ್ಮಿಕವಾಗಿ ನಿಸಾರರ ಬಗ್ಗೆ ವಿಮರ್ಶಕ ನೊಬ್ಬ ('ಪ್ರಜಾವಾಣಿ' ಪುರವಣಿ ಎಂದುಕೊಂಡಿ ದ್ದೇನೆ) ಈ ಕೆಳಗಿನ ಸಾಲುಗಳನ್ನು ಉದ್ಧರಿಸಿದ್ದನ್ನು ನೋಡಿದೆ:

'ಇಳೆಯ ಕೊಳೆಯನು ತೊಳೆಯಲಿಲ್ಲ ಳಿದು ಬಂದಿರುವ
ದೇವರೂರಿನ ಸೋಪು—ನೀನು ಬಾಪು.'

ಈ ಪದಪುಂಜಗಳು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತುಬಿಟ್ಟವು. ಅಂದು ಖಂಡಿತವಾಗಿ ನಿಸಾರ್‌ರವರು ನನ್ನ ಭಾವ ಪ್ರಪಂಚವನ್ನು ಪ್ರವೇಶಿಸಿ, ಲಗ್ಗೆ ಹಾಕಿ ನೆಲೆಸಿಯೇ ಬಿಟ್ಟರು—ಬಿಡಲೇ ಇಲ್ಲ—ನಾನೂ ಸಹ ಬೀಳ್ಕೊಡಲೂ ಇಲ್ಲ!

ಈ ಮಧ್ಯದಲ್ಲಿ ನಾನೂ ಸಹ ಕವನಗಳನ್ನು ಗೀಚುವ ಪ್ರಯತ್ನ ಮಾಡುತ್ತಿದ್ದೆ. ಅದನ್ನು ಗಮನಿಸಿದ ನನ್ನ ಸಹೃದಯ ಗೆಳೆಯರೊಬ್ಬರು. 'ನೋಡಿ, ನಿಸಾರ್ ಅಹಮದ್ ವಿಜ್ಞಾನಿ. ಅವರು ಕನ್ನಡ ಸಾಹಿತಿ. ನೀವೂ ಹೀಗೆಯೇ ಬರೆಯಲು ಪ್ರಯತ್ನಿಸಿ' ಎಂದರು. ನಿಸಾರರ ಕಾವ್ಯ ಪ್ರತಿಭೆ ನನ್ನಲ್ಲಿರಲಿಲ್ಲ. ಅದನ್ನು ಗುರುತಿಸಿಕೊಂಡು ನಿಸಾರರ ಕವನಗಳನ್ನು ಓದಿಕೊಂಡರೇ ಸಾಕು, ನೆಮ್ಮದಿ ಸಿಗುತ್ತದೆ ಎಂದು ತೀರ್ಮಾನಿಸಿಕೊಂಡೆ. ಆ ತೀರ್ಮಾನ ನನಗೆ ಸಾರ್ಥಕತೆಯನ್ನು ತಂದಿದೆ. ಆ ಸಮಯದಲ್ಲಿ ನಿಸಾರರನ್ನು ಎನ್.ಸಿ.ಸಿ.ಯ ಕ್ಯಾಂಪಿನಲ್ಲಿ ನೋಡಿದ್ದ ಜ್ಞಾಪಕ.

ಎಪ್ಪತ್ತರ ದಶಕದ ಆದಿ ಭಾಗದಲ್ಲಿ ನಾನು ಬಹೂದಕ ಜಂಗಮ ಜೀವನದಿಂದ ಆಕರ್ಷಿತನಾಗಿ ಅಮೇರಿಕಕ್ಕೆ ಬಂದೆ. ಬರುವಾಗ ನನ್ನ ಜತೆಯಲ್ಲಿ ಕನ್ನಡದ ಕವಿಗಳನ್ನೂ ಕರೆದುಕೊಂಡು ಬಂದೆ. ಅಂದರೆ, ಸುಮಾರು ೨೫೦-೩೦೦ ಪುಟಗಳಷ್ಟು ಇರುವ ಡೈರಿ ಒಂದರ ಪೂರ್ತಿ ಕುವೆಂಪು, ಬೇಂದ್ರೆ, ರಾಜರತ್ನಂ, ಕೆ. ಎಸ್. ನರಸಿಂಹಸ್ವಾಮಿ, ಅಡಿಗ, ಶಿವರುದ್ರಪ್ಪ ಮತ್ತು ನಿಸಾರ್ ಅಹಮದ್‌ರವರ ಕವನಗಳನ್ನು ಬರೆದುಕೊಂಡು ತಂದಿದ್ದೆ. ಆ ದಿನಗಳಲ್ಲಿ ಈ ದೇಶದಲ್ಲಿ ಇಂದಿನಂತೆ ಬಹಳ ಜನ ಭಾರತೀಯರೋ, ಅದರಲ್ಲೂ ಕನ್ನಡಿಗರೋ ಇರಲಿಲ್ಲ. ರಜೆ ದಿನಗಳಲ್ಲಿ ಎಲ್ಲ ಕಡೆಗಳಂತೆ ಅಮೇರಿಕದ ವಿದ್ಯಾರ್ಥಿಗಳೂ ಸಹ ಅವರವರ ಊರುಗಳಿಗೆ ಹೋಗುತ್ತಾರೆ. ಆಗ ಇಡೀ ವಿಶ್ವವಿದ್ಯಾಲಯ ಭಣಭಣ ಗುಟ್ಟುತ್ತದೆ, ಏಕಾಂತತೆ 'ಧಿಕ್' ಎಂದು ಗುದ್ದುತ್ತದೆ. ಕ್ರಿಸ್‌ಮಸ್, ಬೇಸಗೆ ಮುಂತಾದ ದೀರ್ಘ ರಜೆಗಳಲ್ಲಿ ನಾನು ಆಗ ಓದುತ್ತಿದ್ದ ವಿಶ್ವವಿದ್ಯಾಲಯದ ಗ್ರಂಥಾಲಯದ ಮೆಟ್ಟಲುಗಳ ಮೇಲೆ ಒಬ್ಬನೇ ಕೂತು ಕನ್ನಡದ ಈ ಸುಪುತ್ರರ ಕವನಗಳನ್ನು ಗುನುಗುತ್ತಿದ್ದೆ. ಇವರ ಕವನಗಳನ್ನು ತಲೆ ತುಂಬ, ಎದೆ ತುಂಬ ತುಂಬಿಕೊಂಡು ಏಕಾಂತವನ್ನು ಮರೆಯುತ್ತಿದ್ದೆ. ಅಂಥ ಸಮಯಗಳಲ್ಲಿ ಈ ಕವನಗಳು ನನ್ನನ್ನು ಮೈಸೂರು ಜಿಲ್ಲೆಯ ಕುಗ್ರಾಮವೊಂದರಲ್ಲಿ, ಕಾವೇರಿಯ ಕಣಿವೆಯಲ್ಲಿ ರಾಮನ ಬೈಲಿನಲ್ಲಿ, ದೀಪಾವಳಿಯ ಸಮಯದ ಭತ್ತದ ಗದ್ದೆಗಳಲ್ಲಿ, ಹುಚ್ಚೆಳ್ಳು ಹೂವು ತುಂಬಿದ ಹೊಲಗಳ ಮಧ್ಯದಲ್ಲಿ ತಂದು ನಿಲ್ಲಿಸಿ ಬಿಡುತ್ತಿದ್ದವು. ಕುವೆಂಪು ಆಡಿದ್ದ 'ನೀ ಮೆಟ್ಟುವ ನೆಲ, ಅದೆ ಕರ್ನಾಟಕ' ಎಂಬ ಕಾವ್ಯಾತ್ಮಕ ಮಾತುಗಳು ಅಕ್ಷರಶಃ ಸತ್ಯವಾಗುತ್ತಿದ್ದವು.

ಎಂಭತ್ತರ ಆದಿ ಭಾಗದಲ್ಲಿ ವಿದ್ಯಾರ್ಥಿ ದೆಸೆಯನ್ನು ಮುಗಿಸಿ ಗೃಹಸ್ಥಾಶ್ರಮವನ್ನು ಸ್ವೀಕರಿಸಲು ಬೆಂಗಳೂರಿಗೆ ಬಂದೆ. ಆಗ ನನ್ನ ಹಿತೈಷಿಗಳಾದ ಕನ್ನಡದ ಉಪನ್ಯಾಸಕ ಶ್ರೀ ನರಸಿಂಹೇಗೌಡರು ಒಂದು ಸಾರಿ ನಿಸಾರ್ ಅವರನ್ನು ಪರಿಚಯ ಮಾಡಿಕೊಟ್ಟರು. ಆಗ ಅವರು ಕರ್ನಾಟಕ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷರಾಗಿದ್ದರು. ಮಾತಿನ ಮಧ್ಯದಲ್ಲಿ 'ನಾನು ಪಾಬ್ಲೊ ನೆರುದನ ಪದ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸುತ್ತಿದ್ದೇನೆ' ಎಂದರು. ನಾನು

ಸಂತೋಷದಿಂದ ಪಾಬ್ಲೋ ನೆರುದ ನನ್ನ ನೆಚ್ಚಿನ ಕವಿ. ನೀವು ಅವನ ನೊಬೆಲ್ ಭಾಷಣ ವನ್ನು ಓದಿದ್ದೀರಾ?' ಎಂದು ಕೇಳಿದೆ. ಆಗ ನಿಸಾರರು, ನನಗೆ ಸಾಹಿತ್ಯ ಮತ್ತು ಸಾಹಿತಿಗಳ ಬಗ್ಗೆ ಇರುವ ಗೌರವ ಮತ್ತು ತಿಳಿವಿಗೆ ಸಂತೋಷಪಟ್ಟಿದ್ದರು. ಅಂದೇ ಅವರಿಗೆ ನನ್ನ ಮದುವೆಯ ಕರೆಯೋಲೆಯನ್ನು ನೀಡಿದ್ದೆ. ಕಾರ್ಯಬಾಹುಳ್ಯದ ದೆಸೆಯಿಂದ ನನ್ನ ಮದುವೆಗೆ ಅವರು ಬರಲಿಲ್ಲ. ಆದರೆ ತಂತಿಯ ಮೂಲಕ ಆಶೀರ್ವದಿಸಿದ್ದರು. 'ತಂತಿ ಮೂಲಕ ಆಶೀರ್ವಾದ ಬಂದರೆ, ನಿಸಾರ್ ಬಂದ ಹಾಗಾಯಿತೆ?' ಎಂದು ಮುಜುಗರವಾದರೂ ನನ್ನನ್ನು ನೆನೆಸಿಕೊಂಡರಲ್ಲಾ ಎನ್ನುವ ಸಮಾಧಾನವಾಯಿತು.

ನನ್ನ ವಿದ್ಯಾರ್ಥಿ ದೆಸೆಯ ದಿನಗಳಿಂದಲೂ ಕನ್ನಡ ಕವಿಗಳಿಂದ ಮಾನಸಿಕ ಚಿಕಿತ್ಸೆಯನ್ನು ಪಡೆಯುತ್ತಿರುವ ನಾನು, ಅವರಿಗೆ ಹೇಗಾದರೂ ಗೌರವ ಸೂಚಿಸಲೇಬೇಕು ಎನ್ನುವ ಕಳಕಳಿಯಿಂದ, ಬೆಂಗಳೂರಿಗೆ ಬಂದಾಗಲೆಲ್ಲ ನನ್ನ ನೆಚ್ಚಿನ ಕವಿಗಳನ್ನು 'ದರ್ಶನ' ಮಾಡುವ ತೀರ್ಮಾನಕ್ಕೆ ಬಂದು ಕುವೆಂಪು, ಕೆ. ಎಸ್. ನರಸಿಂಹಸ್ವಾಮಿ ಮತ್ತು ಶಿವರುದ್ರಪ್ಪ ಅವರನ್ನು ಆಗಲೇ ಭೇಟಿ ಮಾಡಿ ಬಂದಿದ್ದೆ. ನಾನು ೨೦೦೧ರಲ್ಲಿ ಮತ್ತೊಮ್ಮೆ ಬೆಂಗಳೂರಿಗೆ ಬಂದಾಗ ನಿಸಾರ್ ಅವರನ್ನು ಭೇಟಿ ಮಾಡಲೇಬೇಕೆಂಬ ಉತ್ಕಟ ಇಚ್ಛೆ ನನಗಾಯಿತು. ಒಂದು ದಿನ, ರಾಮಕೃಷ್ಣ ಆಶ್ರಮದ ಪಕ್ಕದಲ್ಲಿರುವ ಒಂದು ಅಂಗಡಿಯಿಂದ ಫೋನ್ ಮಾಡಿ, ಅವರನ್ನು ಭೇಟಿ ಮಾಡಲು ಅನುಮತಿ ಪಡೆದುಕೊಂಡೆ. ಅಂದು ಸಂಜೆ ಸುಮಾರು ೬:೦೦ ಘಂಟೆಗೆ ಅವರ ಮನೆಗೆ ನಾನು ನನ್ನ ಕುಟುಂಬದ ಸಹಿತ ಹೋದೆ. ಪ್ರೊಫೆಸರ್ ನಿಸಾರ್ ಅಹಮದ್ ಮತ್ತು ಅವರ ಪತ್ನಿ ತುಂಬ ಗೌರವದಿಂದ, ಆದರದಿಂದ ನಮ್ಮನ್ನು ಉಪಚರಿಸಿದರು. ನನ್ನ ಒಂದು ವರ್ಷದ ಮಗ ಅವರ ಮನೆಯಲ್ಲಿ ಅಂಬೆಗಾಲಿಡುತ್ತಿದ್ದು, ನನ್ನ ಇಬ್ಬರು ಹೆಣ್ಣುಮಕ್ಕಳು ಅವರೊಡನಿದ್ದುದು ನನಗೆ ತುಂಬ ಸಂತೋಷವನ್ನು ತಂದಿತು. ಇನ್ನೇನು ಹೊರಡಬೇಕು ಎಂದುಕೊಳ್ಳುತ್ತಿರುವಾಗ ನಾನು, 'ಸಾರ್, ನೀವು ಅಮೇರಿಕಾಕ್ಕೆ ಬಂದಿದ್ದೀರಾ? ಎಂದು ಕೇಳಿದೆ. ಈ ಪ್ರಶ್ನೆಗೆ ಅವರು ಸ್ವಲ್ಪ ಖಿನ್ನರಾಗಿ 'ಇಲ್ಲ ಗೋವಿಂದ ರಾಜು, ಆ ಯೋಗ ಇನ್ನೂ ಬಂದಿಲ್ಲ' ಎಂದರು. ಈ ಮಾತಿನಿಂದ ನನಗೆ ಬರೆ ಎಳೆದಂತಾಯಿತು. ನಾನು ಹೇಳಿದೆ, 'ಏನ್ಸಾರ್, ಈಗ ಅಲ್ಲಿಗೆ ಎಲ್ಲರೂ ಬರ್‍ತಾರೆ, ಎಲ್ರನ್ನೂ ಕರಿಸ್ತಾರೆ, ನೀವ್ ಬಂದಿಲ್ಲಾ ಅಂದ್ರೆ ಆಶ್ಚರ್ಯ ಆಗ್ತಾ ಇದೆ.' ಅದಕ್ಕವರು ಪ್ರತಿಕ್ರಿಯಿಸದೆ ಬರೀ ಮುಗುಳ್ನಕ್ಕರು. ತಕ್ಷಣ ನನಗೆ ಹೊಳೆದದ್ದು, ೨೦೦೨ರಲ್ಲಿ ನಡೆಯಲು ಸಿದ್ಧಗೊಳ್ಳುತ್ತಿದ್ದ 'ಅಕ್ಕ' ಸಂಸ್ಥೆ ವತಿಯ ವಿಶ್ವ ಕನ್ನಡ ಸಮ್ಮೇಳನ ಮತ್ತು ಅದನ್ನು ವ್ಯವಸ್ಥೆ ಮಾಡುತ್ತಿದ್ದ ನನ್ನ ಸ್ನೇಹಿತರುಗಳಾದ ಶ್ರೀ ಅಮರನಾಥ ಗೌಡ ಮತ್ತು ಶ್ರೀ ಎಂ. ಕೃಷ್ಣಮೂರ್ತಿ ಅವರು. ಅವರುಗಳಿಗೆ, ನಿಸಾರ್ ಅಹಮದ್ ಅವರನ್ನು ಸಮ್ಮೇಳನಕ್ಕೆ ಆಹ್ವಾನಿಸಿ ಎಂದರೆ ನನ್ನ ಮಾತನ್ನು ತಳ್ಳಿಹಾಕುವುದಿಲ್ಲ ಎನ್ನುವ ಮೊಂಡು ಧೈರ್ಯದಿಂದ, 'ಸಾರ್, ನಾನು ನಿಮಗೆ ಮಾತು ಕೊಡಲಾರೆ. ಆದರೆ ನಿಮ್ಮನ್ನು ಮುಂದಿನ ವಿಶ್ವ ಕನ್ನಡ ಸಮ್ಮೇಳನಕ್ಕೆ ಆಹ್ವಾನಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ' ಎಂದೆ. ಅವರು ಅಂಥ ಉತ್ಸಾಹವನ್ನು ತೋರಿಸಿದರೋ ಇಲ್ಲವೋ ಗೊತ್ತಿಲ್ಲ—ಮರೆತಿದ್ದೇನೆ.

ಅಮೇರಿಕಾಕ್ಕೆ ನಾನು ಹಿಂದಿರುಗಿದ ತಕ್ಷಣವೇ ಎಂ. ಕೃಷ್ಣಮೂರ್ತಿ ಮತ್ತು

ಅಮರನಾಥ ಗೌಡರಿಗೆ ಫೋನ್ ಮಾಡಿ ನನ್ನ ಬೇಡಿಕೆಯನ್ನು ಅವರ ಮುಂದಿಟ್ಟೆ. ಅಮರನಾಥ ಗೌಡರು, 'ಗೋವಿಂದರಾಜು, ನಾನು ಈ ವಿಷಯವನ್ನು ಕಾರ್ಯಕಾರಿ ಸಮಿತಿಯ ಮುಂದಿಡುತ್ತೇನೆ. ಅವರು ಒಪ್ಪಿಗೆ ಕೊಟ್ಟರೆ ಮತ್ತು ನೀವು ನಿಸಾರ್ ಅಹಮದ್ ಅವರ ಪ್ರಯಾಣಕ್ಕೆ ಹಣವನ್ನು ಹೊಂಚಿಸುವುದಾದರೆ, ಅವರನ್ನು ಕರೆಸಲು ನನ್ನ ಪೂರ್ತಿ ಸಮ್ಮತಿ ಇದೆ' ಎಂದರು. ನನಗೆ ಧೈರ್ಯ ಮೂಡಿತು. ಈ ವಿಷಯವನ್ನು ನಿಸಾರ್ ಅವರಿಗೆ ದೂರವಾಣಿಯ ಮೂಲಕ ತಿಳಿಸಿದೆ. ಎಂ. ಕೃಷ್ಣಮೂರ್ತಿ ಮತ್ತು ನಾನು ಹಣದ ವ್ಯವಸ್ಥೆ ಯನ್ನು ಮಾಡಲು ಮಾತನಾಡಿಕೊಳ್ಳುತ್ತಿದ್ದ ಸುದ್ದಿಯನ್ನು ತಿಳಿದ ಫೀನಿಕ್ಸ್ ನಗರದ ವಿ. ಸೀತಾರಾಮಯ್ಯನವರು ನಮಗಿಂತಲೂ ಹೆಚ್ಚು ಉತ್ಸಾಹವನ್ನು ತೋರಿ ಹಣ ನೀಡಿದರು. ಆಮೇಲೆ ನಿಸಾರರ ಪ್ರವಾಸಕ್ಕೆ ತಗಲುವ ವೆಚ್ಚದ ಬಗ್ಗೆ ನಮಗೆ ಚಿಂತೆಯೇ ಆಗಲಿಲ್ಲ. ಅಮರನಾಥ ಗೌಡರ ಹಾದಿ ಸುಗಮವಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಒಮ್ಮತದಿಂದ ನಿಸಾರ್‌ರವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ನಿರ್ಧರಿಸಿದ ವಿಷಯವನ್ನು ಕೃಷ್ಣಮೂರ್ತಿಗಳು ನನಗೆ ತಿಳಿಸಿದರು. ಅಂದೇ, ನಾನು ನಿಸಾರ್ ಅವರಿಗೆ ಫೋನ್ ಮಾಡಿ 'ಸಾರ್, ನಿಮ್ಮನ್ನು ವಿಶ್ವ ಕನ್ನಡ ಸಮ್ಮೇಳನಕ್ಕೆ ಆಹ್ವಾನಿಸಲು ತೀರ್ಮಾನಿಸಿ ದ್ದಾರೆ. ನಿಮಗೆ ಕೃಷ್ಣಮೂರ್ತಿ ಹಾಗೂ ಅಮರನಾಥ ಗೌಡರಿಂದ ಆಮಂತ್ರಣ ಬರುತ್ತದೆ. ನಿರೀಕ್ಷಿಸಿ' ಎಂದೆ. ಹಾಗೆಯೇ, ಆಗಾಗ್ಗೆ ಅವರ ಪ್ರಯಾಣದ ಸಿದ್ಧತೆಗಳ ಬಗ್ಗೆ ವಿಚಾರಿಸು ತ್ತಿದ್ದೆ.

ಇಷ್ಟೆಲ್ಲ ಆದ ಮೇಲೆ, ಅಮೇರಿಕಾದಲ್ಲಿ ನೆಲೆಸಿರುವ 'ಸನ್ನಿವೇಶ ಷಿಕಾರಿ'ಯೊಬ್ಬ ನನ್ನನ್ನು ಹಲವು ಬಾರಿ ಫೋನ್ ಮಾಡಿ, 'ನಿಸಾರ್ ಅಹಮದ್ ಅವರನ್ನು ಕರೆಸಿ, ಇಲ್ಲಿ ಅವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ನುಡಿದರು. ಆ ವ್ಯಕ್ತಿಯ ಧೂರ್ತತೆಯನ್ನು ಮನಗಂಡಿದ್ದ ನಾನು ಅವರ ಆಕಾಂಕ್ಷೆಗೆ ಸೊಪ್ಪು ಹಾಕಲಿಲ್ಲ. ಈ ಮಧ್ಯೆ ನನಗೆ ಅಯೋವಾ ರಾಜ್ಯದ ಶ್ರೀ ಸಿ. ಕೃಷ್ಣಶಾಸ್ತ್ರಿಗಳು, 'ಇಲ್ಲಿಗೆ ನಿಸಾರರು ಬಂದಾಗ ಅವರಿಗೆ ಒಂದು ಬಿನ್ನವತ್ತಳೆಯನ್ನು ನೀಡಬೇಕೆಂದುಕೊಂಡಿದ್ದೇನೆ' ಎಂದು ತಿಳಿಸಿ, ಬಿನ್ನವತ್ತಳೆಯನ್ನು ಅಚ್ಚು ಹಾಕಿಸಿರುವ ಪ್ರತಿಯೊಂದನ್ನು ನನಗೆ ಕಳಿಸಿ ಕೊಟ್ಟಿದ್ದರು. ಇದೆಲ್ಲ ನನಗೆ ಹೊಳೆದೇ ಇರಲಿಲ್ಲ. ಯಾವ ಅಥವಾ ಯಾರ ಪ್ರೇರಣೆಯೂ ಇಲ್ಲದೆ ಇಂತಹ ಪ್ರಯತ್ನ ಮಾಡಿರುವ ವ್ಯಕ್ತಿ ನಿಃಸ್ವಾರ್ಥಿ ಮತ್ತು ಪ್ರಾಮಾಣಿಕರಾಗಿರಬಹುದು ಎಂದು ಭಾವಿಸಿಕೊಂಡೆ. ಎಂ. ಕೃಷ್ಣಮೂರ್ತಿಯವರ ಜೊತೆ ಈ ಬಗ್ಗೆ ಪ್ರಸ್ತಾಪಿಸಿದೆ. ಜೊತೆಗೆ ಶಾಸ್ತ್ರಿಗಳ ಬಗ್ಗೆ ವಿಚಾರಿಸಿದೆ. ಮೂರ್ತಿಗಳೂ ಶಾಸ್ತ್ರಿಯವರೂ ಹಳೆಯ ಸ್ನೇಹಿತರೆಂದೂ ಸಹಪಾಠಿಗಳೆಂದೂ ತಿಳಿದು ಬಂದಿತು. ಕೃಷ್ಣಶಾಸ್ತ್ರಿಯವರನ್ನು 'ದಯವಿಟ್ಟು, ಹಾಗೆಯೇ ಮಾಡಿ' ಎಂದು ಹೇಳುವುದರ ಜೊತೆಗೆ ಒಂದು ಉಪಕಾರವನ್ನೂ ಮಾಡಲು ಕೇಳಿಕೊಂಡೆ. 'ಶಾಸ್ತ್ರಿಗಳೇ, ನಿಮಗೆ ನಿಸಾರ್‌ರವರ ಮೇಲಿರುವ ಅಭಿಮಾನ ನನಗೆ ತುಂಬಾ ಹಿಡಿಸಿತು. ಜೊತೆಗೆ ನನಗೆ ನಿಮಗಿರುವಂಥ ತಾಳ್ಮೆಯಾಗಲಿ, ಅನುಭವವಾಗಲಿ, ಸ್ನೇಹಿತರ ಬಳಗವಾಗಲಿ ಇಲ್ಲ. ಆದ್ದರಿಂದ, ನೀವು ನಿಸಾರ್ ಅಹಮದ್‌ರವರು ಅಮೇರಿಕಾಕ್ಕೆ ಬಂದ ಮೇಲೆ ಅವರ ಯೋಗಕ್ಷೇಮ ಮತ್ತು ಸಂಚಾರ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು' ಎಂದು ಕೋರಿದೆ.

ಜೊತೆಗೆ ಗೆಳೆಯ ಕೃಷ್ಣಮೂರ್ತಿ ಅವರಿಂದಲೂ ಹೇಳಿಸಿದೆ. ಶಾಸ್ತ್ರಿಗಳು ವಿನಮ್ರತೆಯಿಂದಲೇ 'ಆಗಲಿ' ಎಂದು ಒಪ್ಪಿಕೊಂಡರು. ಅವರ ಒಪ್ಪಿಗೆ ನಿಸಾರ್‌ರವರ ಪಾಲಿನ ಅದೃಷ್ಟ ಎಂದು ತಿಳಿದಿದ್ದೇನೆ. ಶ್ರೀ ಸಿ. ಕೃಷ್ಣಶಾಸ್ತ್ರಿಯವರಂಥ ನಿಃಸ್ವಾರ್ಥಪರರಾದ ಹಾಗೂ ಉದಾರ ಮನಸ್ಸಿನ ಕನ್ನಡಿಗರು ಅಥವಾ ಮನುಷ್ಯರು ಬಹಳ ವಿರಳ. ನಿಜಕ್ಕೂ ಅವರೊಬ್ಬ ದೊಡ್ಡ ವ್ಯಕ್ತಿ.

ಪ್ರೊಫೆಸರ್ ನಿಸಾರ್ ಅಹಮದ್‌ರವರು ಡೆಟ್ರಾಯಿಟ್ ನಗರಕ್ಕೆ ೨೦೦೨ರ ಆಗಸ್ಟ್ ೨೬ರಂದು ಆಗಮಿಸಿದಾಗ ಶ್ರೀ ಅಮರನಾಥ ಗೌಡರು, ವಿಮಾನ ನಿಲ್ದಾಣದಿಂದ ಕರೆದು ಕೊಂಡು ಬಂದು ಅವರನ್ನು ತಮ್ಮ ಮನೆಯಲ್ಲೇ ಇರಿಸಿಕೊಂಡಿದ್ದರು. ಫೋನ್ ಕರೆಯ ಮೂಲಕ ನಿಸಾರರ ಯೋಗಕ್ಷೇಮವನ್ನು ವಿಚಾರಿಸಿದೆ. ಮತ್ತೆ ನಿಸಾರರನ್ನು ಮುಖತಃ ಭೇಟಿ ಯಾದದ್ದು ಸಮ್ಮೇಳನದಲ್ಲಿ. ಅಲ್ಲಿ ಅವರು ಅಕ್ಷರಶಃ ಅಮೇರಿಕನ್ನಡಿಗರ ಕಣ್ಮಣಿ ಯಾಗಿದ್ದರು. ಅವರ ಸುತ್ತಲೂ ಸದಾ ಕನ್ನಡಿಗರ ಗುಂಪು. ಅಮರನಾಥ ಗೌಡರ ಅಧ್ಯಕ್ಷ ಭಾಷಣ ತುಂಬ ಚುಟುಕಾಗಿತ್ತು. ಆದರೆ ಮುಖ್ಯ ಅತಿಥಿಗೆ ಹೆಚ್ಚು ಕಾಲಾವಕಾಶ ಕೊಡಲಿಲ್ಲ ಎಂಬ ಅಸಮಾಧಾನ ಉಂಟಾಗಿ, ಕೋಪಿಸಿಕೊಂಡು ಅಮರನಾಥ ಗೌಡರ ಮೇಲೆ ಕಿಡಿ ಕಾರಿದೆ. ಅದು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ.

ಡೆಟ್ರಾಯಿಟ್ ಸಮ್ಮೇಳನ ಮುಗಿದ ಅನಂತರ, ಶ್ರೀ ಕೃಷ್ಣಶಾಸ್ತ್ರಿಗಳು ನಿಸಾರರ ಅಮೇರಿಕದ ಪ್ರವಾಸದ ಏರ್ಪಾಟನ್ನು ಅತ್ಯಂತ ಸಮಂಜಸವಾಗಿ ನಿರ್ವಹಿಸುತ್ತಿದ್ದರು. ನಾನು ನಿಸಾರರ ಆರೋಗ್ಯದ ಮತ್ತು ಪ್ರವಾಸದ ಬಗ್ಗೆ ಅವರನ್ನು ದೂರವಾಣಿಯಲ್ಲಿ ಮಾತಾಡಿಯೋ ಅಥವಾ ಶಾಸ್ತ್ರಿಗಳನ್ನು ವಿಚಾರಿಸಿಯೋ ತಿಳಿದುಕೊಳ್ಳುತ್ತಿದ್ದೆ. ನಾನು ಶಾಸ್ತ್ರಿಗಳಿಗೆ ಕರೆ ಮಾಡಿ ನಿಸಾರ್‌ರವರನ್ನು ನಮ್ಮ ಊರಾದ ಬಾಸ್ಟನ್‌ಗೆ ತಿಂಗಳಿನ ಮಧ್ಯ ಭಾಗದಲ್ಲಿ ಕಳಿಸಿಕೊಡಿ ಎಂದು ಕೋರಿಕೊಂಡಿದ್ದೆ. ಅಕ್ಟೋಬರ್ ತಿಂಗಳಿನ ಮಧ್ಯ ಭಾಗದಲ್ಲಿ (ಸುಮಾರು ಎರಡು ಮೂರು ವಾರಗಳ ಕಾಲ) ಉತ್ತರ ಅಮೇರಿಕಾದ ಬಹು ಭಾಗಗಳಲ್ಲಿ, ಅದರಲ್ಲೂ ಅಮೇರಿಕಾದ ಈಶಾನ್ಯ ಭಾಗದಲ್ಲಿ, ಮರದ ಎಲೆಗಳು ಹಣ್ಣಾಗಿ, ಇಡೀ ಬೆಟ್ಟಗುಡ್ಡ ಬಯಲು ಹಿರಿ ದಾರಿ, ಕಿರುದಾರಿ, ಹಳ್ಳಕೊಳ್ಳ, ಕೊರಕಲುಗಳು ಕೆಂಪು, ಕಿತ್ತಳೆ, ಕಂದು, ಹಳದಿ ಬಣ್ಣದಿಂದ ಸಿಂಪಡಿಸಿದಂತಾಗಿ, ಕಣ್ಣು ಹಾಯುವ ತನಕ ಎಲ್ಲೆಲ್ಲೂ ಬಣ್ಣಗಳ ದರ್ಬಾರೇ ನಡೆದಿರುತ್ತದೆ. ಮಾಗಿ ಕಾಲದ ಅಥವಾ 'ಫಾಲ್'(Fall)ನ ಮನಮೋಹಕ ಸಮ್ಮೋಹಕತೆ ಅಂತಹದು. ನನ್ನ ಐದು ವರ್ಷದ ಮಗಳು ಒಂದು ಸಾರಿ ಈ ಬಣ್ಣಗಳನ್ನು ನೋಡಿ ಹೇಳಿದ್ದಳು: 'ದೇವರು ರಾತ್ರಿ ಹೊತ್ತು ಈ ಋತುವಿನಲ್ಲಿ ಮರಗಿಡ ಬಳ್ಳಿಗಳಿಗೆ ಕುಂಚದಿಂದ ಬಣ್ಣ ಹಚ್ಚಿ ಹೋಗುತ್ತಾನೆ' ಎಂದು. ಅಂತೂ ವಿಸ್ಮಯಾನಂದಕರ ದೃಶ್ಯ. ಇಂತಹ ದೃಶ್ಯ ಕವಿ ಹೃದಯಕ್ಕೆ ಆಪ್ಯಾಯಮಾನವಾಗಬಹುದು ಎನ್ನುವ ಆಸೆಯಿಂದ ಈ ಅವಧಿಯಲ್ಲಿ ನಿಸಾರ್‌ರವರನ್ನು ಬಾಸ್ಟನ್ ನಗರಕ್ಕೆ ಆಹ್ವಾನಿಸಿದ್ದೆ. ಅದರಂತೆ ಪ್ರೊಫೆಸರ್ ನಿಸಾರ್ ಅಹಮದ್ ಅವರು ನಮ್ಮ ಮನೆಯಲ್ಲಿ ತಂಗಿದರು.

ನಮ್ಮ ಮನೆ ಬಾಸ್ಟನ್ ನಗರದಿಂದ ಹತ್ತು ಮೈಲಿ ದೂರದಲ್ಲಿರುವ ಲೆಕ್ಸಿಂಗ್‌ಟನ್

(Lexington) ಎನ್ನುವ ಸಣ್ಣ ಊರಿನಲ್ಲಿದೆ. ಈ ಊರಿನಲ್ಲೇ ಅಮೇರಿಕಾದ ಸ್ವಾತಂತ್ರ್ಯ ಘೋಷಣೆ, ೧೭೭೫ರ ಏಪ್ರಿಲ್ ೧೯ರಂದು ಆಗಿದ್ದು. ಕೇವಲ ಕೈಬೆರಳೆಣಿಕೆಯಷ್ಟು ಪೌರರು ಬಲಶಾಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಿ ಕಾದಿದ್ದರು.

ಏಳೋ ಎಂಟೋ ಜನ ದೇಶಪ್ರೇಮಿಗಳು ರಕ್ತ ತರ್ಪಣ ನೀಡಿದರು. ಅಮೇರಿಕದ ಸ್ವಾತಂತ್ರ್ಯ ಹೋರಾಟ ಆ ಶುಭ ದಿವಸ ಅಂಕುರಗೊಂಡಿತು! ಈ ಕದನದ ಬಗ್ಗೆ ಆಗಿನ ಅಮೆರಿಕನ್ ಕವಿ ಹೆನ್ರಿ ವಾಡ್ಸ್‌ವರ್ತ್ ಲಾಂಗ್‌ಫೆಲೋ (Henry Wadsworth Longfellow), 'Paul Revere's Ride' ಎನ್ನುವ ಒಂದು ಅಮರಗೀತೆಯನ್ನು ರಚಿಸಿದ್ದಾನೆ. ಈ ಕದನ ನಡೆದ ಜಾಗವನ್ನು ಮತ್ತು ಇದೇ ಊರಿನಲ್ಲಿ ಇರುವ ಪ್ರಖ್ಯಾತ ಭಾಷಾಶಾಸ್ತ್ರಜ್ಞ ಮತ್ತು ಬುದ್ಧಿಜೀವಿ 'ನೋಮ್ ಚೋಮ್‌ಸ್ಕಿ'(Noam Choamsky)ಯ ಮನೆಯನ್ನೂ ನಿಸಾರರಿಗೆ ತೋರಿಸಿದೆ. ಅನಂತರ ಹತ್ತಿರದಲ್ಲೇ ಇರುವ ಕಾಂಕರ್ಡ್ (Concord) ಎಂಬ ಊರಿಗೆ ಕರೆದುಕೊಂಡು ಹೋಗಿ, ಬಾಸ್ಟನ್‌ನ ಋಷಿ ಎಂದು ಖ್ಯಾತಿ ಪೆತ್ತಿದ್ದ ಎಮರ್‌ಸನ್(Emerson)ರವರಿದ್ದ ಮನೆ, ಹಾಗೂ ಲೇಖಕರಾದ ನ್ಯಾಥನಿಯಲ್ ಹಾಥಾರ್ನ್ (Nathanial Hawthorne) ಮತ್ತು ಲುಯಿಸಾ ಆಲ್ಕಾಟ್(Louisa Alcott)ರವರು ವಾಸಿಸುತ್ತಿದ್ದ ಮನೆಗಳನ್ನು ತೋರಿಸಿದೆ. ತರುವಾಯ ಕಾಂಕರ್ಡ್‌ಗೂ ಲೆಕ್ಸಿಂಗ್‌ಟನ್‌ಗೂ ಮಧ್ಯೆ ಇರುವ ವಾಲ್ಡನ್ ಪಾಂಡ್ (Walden Pond) ಎನ್ನುವ ಕೊಳವಿರುವ ಜಾಗಕ್ಕೆ ಕರೆದೊಯ್ದು, ಆ ಕೊಳದ ಬಳಿ ಸ್ವಲ್ಪ ಹೊತ್ತು ತಿರುಗಾಡಿಸಿದೆ. ಈ ನಿರ್ಜನ ಕೊಳದ ಬಳಿ ಹೆನ್ರಿ ಡೇವಿಡ್ ಥರೊ (Henry David Thoreau) ಹೆಸರಿನ ತಾತ್ತ್ವಿಕ ವ್ಯಕ್ತಿ ವರ್ಷವಿಡೀ ಒಂದೇ ಕೊಠಡಿಯಿರುವ ಸಣ್ಣ ಕುಟೀರವೊಂದನ್ನು ಕಟ್ಟಿಕೊಂಡು ವಾಸಿಸಿದ್ದ. ಈ ಸಮಯದಲ್ಲಿ ತನಗಾದ ಅನುಭವಗಳನ್ನು ತನ್ನ 'Walden Pond' ಎನ್ನುವ ಪುಸ್ತಕದಲ್ಲಿ ನಿರೂಪಿಸಿದ್ದಾನೆ. ಕೇವಲ ನಲವತ್ತೈದು ವರ್ಷಗಳು ಮಾತ್ರ ಬದುಕಿದ್ದ. ಅವನ ಮಿತ ವ್ಯಯ ಹಾಗೂ ಅಸಹಕಾರ ಚಳುವಳಿಯ ಧೋರಣೆಗಳು ಗಾಂಧಿಜಿಯವರನ್ನೂ ಪ್ರೇರೇಪಿಸಿದ್ದುವು. ಇಂದಿಗೂ ಪ್ರಕೃತಿ ಸಂರಕ್ಷಣೆ, ಪರಿಸರ ವಿಜ್ಞಾನಿಗಳಿಗೆ ಈ ಮಹಿಮವಂತ ಸ್ಥಳ ಒಂದು ಪವಿತ್ರ ಕಾಶಿ. ಅಲ್ಲಿ ನಿಸಾರ್ ಅವರು ಬಹಳ ಹೊತ್ತು ಕಳೆದರು. ಥರೋನ ಪ್ರತಿಮೆಯ ಬಳಿ ಭಾವಚಿತ್ರವನ್ನು ತೆಗೆಸಿಕೊಂಡರು. ಇನ್ನೊಂದು ವಿಷಯ: ಥರೋ ಮತ್ತು ಎಮರ್‌ಸನ್ ಇಬ್ಬರೂ ಅಮೇರಿಕಾಕ್ಕೆ ಉಪನಿಷತ್ತು ಮತ್ತು ಭಗವದ್‌ಗೀತೆಯನ್ನು ಪರಿಚಯಿಸಿದವರು.

ಇದಾದ ಅನಂತರ ನಿಸಾರ್ ಅವರನ್ನು ವಿಶ್ವವಿಖ್ಯಾತ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿರುವ 'ಪೀಬಡಿ' (Peabody) ಪ್ರದರ್ಶನಾಲಯಕ್ಕೆ ಕರೆದುಕೊಂಡು ಹೋದೆ. ಅಲ್ಲಿಯೇ ಇರುವ ಭೂವಿಜ್ಞಾನದ ಕಟ್ಟಡವನ್ನು ನೋಡಿ 'ನನ್ನ ಭಾವಚಿತ್ರವನ್ನು ಈ ಕಟ್ಟಡದ ಎದುರು ತೆಗೆಯಿರಿ. ಇದು ನನ್ನ ತವರು ಮನೆಯ ಹಾಗೆ' ಎಂದು ಹೇಳಿದ್ದು ಜ್ಞಾಪಕ. ಪೀಬಡಿ ಪ್ರದರ್ಶನಾಲಯದಲ್ಲಿ ಜರ್ಮನಿಯ ತಂದೆ ಮತ್ತು ಮಗ ಅತ್ಯಂತ ಕುಶಲತೆಯಿಂದ ನಿರ್ಮಿಸಿರುವ ಗಿಡ, ಮರ ಮತ್ತು ಹೂಗಳ ಗಾಜಿನ ಪ್ರತಿಕೃತಿಗಳನ್ನು ನೋಡಿ ನಿಸಾರ್ ಬಹಳ ವಿಸ್ಮಯಗೊಂಡರು. ಆ ನಾಜೂಕಿನ ಕಲಾಕೃತಿಗಳು ಎಂಥವರನ್ನೂ

ನಿಬ್ಬೆರಗಾಗಿಸುತ್ತವೆ. ಅನಂತರ ಖನಿಜ, ಶಿಲೆ, ಪಳೆಯುಳಿಕೆ ಮುಂತಾದವುಗಳನ್ನು ನೋಡಿ ಸಂತೋಷಪಟ್ಟರು. ಕಟ್ಟಡದಿಂದ ಹೊರಗಡೆ ಬಂದಾಗ ಅಕಸ್ಮಾತ್ ನನ್ನ ಆರಾಧ್ಯ ವಿಜ್ಞಾನಿ ರಿಚರ್ಡ್ ಲುವಾಂಟಿನ್ ಕಾರಿಗೆ ಹತ್ತುತ್ತಿದ್ದರು. ನಾನು ಓಡಿಹೋಗಿ ಅವರನ್ನು ತಡೆದು 'ಡಿಕ್, ನಾನು ನಿಮಗೆ ಭಾರತದ ಪ್ರತಿಭಾವಂತ ಕವಿಯೊಬ್ಬರನ್ನು ಪರಿಚಯಿಸಿಕೊಡಬೇಕು' ಎಂದೆ. ಅವರು ತುಂಬಾ ಸುಸಂಸ್ಕೃತ ವ್ಯಕ್ತಿ. ತಕ್ಷಣ ಕೆಳಗಿಳಿದು ನಿಸಾರರ ಪರಿಚಯ ಮಾಡಿಕೊಂಡರು. [ಲುವಾಂಟಿನ್ (Richard Lowontin) ಬಗ್ಗೆ ನಾನು ಇಲ್ಲಿ ಹೇಳದಿದ್ದಲ್ಲಿ ನನಗೆ ಸಮಾಧಾನವಾಗುವುದಿಲ್ಲ. ಈ ಮನುಷ್ಯ ಸುಮಾರು ೨೫ ವರ್ಷಗಳ ಕಾಲ ಆನುವಂಶೀಯ ವಿಜ್ಞಾನವನ್ನು (Genetics) 'ಆಳಿದ' ಸರದಾರ; ಪ್ರಗಲ್ಭ ವಿಜ್ಞಾನಿ. ಜೊತೆಗೇ, ಎಪ್ಪತ್ತರ ದಶಕದಲ್ಲಿ ಮನುಷ್ಯನ ವಿವಿಧ ಪಂಗಡಗಳ ಮಧ್ಯೆ ಜಾಣಾಕ್ಷತೆ(Intelligence)ಯ ತಾರತಮ್ಯ ಇದೆ ಎನ್ನುವ ಸಾಂಪ್ರದಾಯಿಕ ವಾದವನ್ನು ಬಗ್ಗು ಬಡಿದು ಅದೊಂದು ತಳಬುಡವಿಲ್ಲದ, ಅರ್ಥಹೀನ ವಿಜ್ಞಾನ ಪರಿಕಲ್ಪನೆ ಎಂದು ಘೋಷಿಸಿದ ಧೀರರು.] ಆಶ್ಚರ್ಯವೆಂದರೆ, ನಿಸಾರ್‌ರವರನ್ನು ನೋಡಿ, ಅವರೊಡನೆ ಸಂಭಾಷಿಸಿ ಅವರೇ ಬಹಳ ನಮ್ರತೆಯಿಂದ ವರ್ತಿಸಿದರು. ಅವರ ಜೊತೆ ಒಂದು ಫೋಟೋ ತೆಗೆದುಕೊಂಡೆವು. ಅನಂತರ ಅವರು ಕಾರನ್ನು ಹೊಕ್ಕು ಬಾಗಿಲು ಮುಚ್ಚಿ ಸ್ಟಾರ್ಟ್ ಮಾಡಿದರು. ಮತ್ತೆ ಸರಸರನೆ ಇಳಿದು ನನ್ನ ಹತ್ತಿರ ಬಂದು, 'ನೀವು ಗಾಜಿನ ಹೂವಿನ ಗಿಡಮರಗಳಿರುವ ಪ್ರದರ್ಶನಾಲಯಕ್ಕೆ ಇವರನ್ನು ಕರೆದುಕೊಂಡು ಹೋಗಿ' ಎಂದು ಹೇಳಿದರು. 'ನಾವು ಆಗಲೇ ಹೋಗಿದ್ದೆವು' ಎಂದಾಗ, 'ಬಹಳ ಒಳ್ಳೆಯದಾಯಿತು' ಎಂದು ಹೇಳಿ ಹೊರಟರು. ಕಾಕತಾಳೀಯವೆಂದರೆ, ಲುವಾಂಟಿನ್ ಹಾಗೆಯೇ ನಿಸಾರ್ ಸಹ ಮಾನವ—ಮಾನವರ ನಡುವಿರುವ ಅಂತರಗಳು ನಾವೇ ಸೃಷ್ಟಿಸಿರುವ ಕೃತಕ ಕಂದರಗಳು ಎಂದು ಜೀವನದುದ್ದಕ್ಕೂ ಸಾಹಿತ್ಯ ರಚನೆಯ ಮೂಲಕ ಸಾರುತ್ತಾ ಬಂದಿದ್ದಾರೆ. ಹಾಗೆಯೇ ನಡೆಯುತ್ತಲೂ ಇದ್ದಾರೆ!

ಹಾರ್ವರ್ಡ್ ವಿಶ್ವವಿದ್ಯಾಲಯವನ್ನು ವೀಕ್ಷಿಸಿದ ಅನಂತರ ನಿಸಾರರನ್ನು ಲಾಂಗ್‌ಫೆಲೋನ ಮನೆ, ಬಾಸ್ಟನ್‌ನ ಹಳೆಯ ಪ್ರದೇಶಗಳು ಮತ್ತು ಐತಿಹಾಸಿಕ ಮಹತ್ವದ 'ಬಾಸ್ಟನ್ ಟೀ ಪಾರ್ಟಿ' ನಡೆದ ಜಾಗ, ರಾಮಕೃಷ್ಣ ಆಶ್ರಮ ಹಾಗೂ ಬಾಸ್ಟನ್‌ನಲ್ಲೇ ಇರುವ ಜಾನ್ ಎಫ್. ಕೆನಡಿ ಮ್ಯೂಸಿಯಂ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗಿದ್ದೆ.

ಬಾಸ್ಟನ್ ಪಟ್ಟಣದ ವೀಕ್ಷಣೆಯ ಅನಂತರ, ಅವರನ್ನು ಬಾಸ್ಟನ್‌ನಿಂದ ಸುಮಾರು ಎರಡು ಘಂಟೆಯ ಪ್ರಯಾಣದ ದೂರದಲ್ಲಿರುವ ಆಮ್‌ಹರ್‌ಸ್ಟ್ (Amherst) ಎಂಬ ಊರಿಗೆ ಕಾರಿನಲ್ಲಿ ಕರೆದೊಯ್ದೆ. ಜೊತೆಗೆ ನನ್ನ ಕಿರಿಯ ಮಗಳೂ ಬಂದಿದ್ದಳು. ಅಲ್ಲಿ ಎಮಿಲಿ ಡಿಕಿನ್‌ಸನ್ (Emily Dickinson) ಮತ್ತು ರಾಬರ್ಟ್ ಫ್ರಾಸ್ಟ್ (Robert Frost) ವಾಸವಾಗಿದ್ದ ಮನೆಗಳಿಗೆ ಭೇಟಿ ನೀಡಿದೆವು. ಅಲ್ಲೇ ಆ ಅಮೇರಿಕದ ಅದ್ವಿತೀಯ ಕವಯತ್ರಿ ಎಮಿಲಿ ಡಿಕಿನ್‌ಸನ್‌ಳ ಗೋರಿಯೂ ಇದೆ. ಅಲ್ಲಿಗೂ ನಿಸಾರ್‌ರವರನ್ನು ಕರೆದುಕೊಂಡು ಹೋಗಿದ್ದೆ. ಅವರು ಬಹಳ ಮೌನಿಯಾಗಿದ್ದರು. ಅದೇ ದಿನ ವರ್ಮಾಂಟ್

(Vermont) ಸಂಸ್ಥಾನದಲ್ಲಿರುವ ಒಂದು ಪ್ರಕೃತಿ ರಮ್ಯ ತಾಣಕ್ಕೆ ಕರೆದೊಯ್ದಿದ್ದೆ. ವರ್ಮಾಂಟ್‌ನಲ್ಲಿರುವ ಬೆಟ್ಟಗುಡ್ಡಗಳಲ್ಲಿನ ಸಸ್ಯರಾಜಿಯನ್ನು ಮಾಗಿ ಕಾಲದಲ್ಲಿ (ಫಾಲ್) ನೋಡಲು ಎರಡು ಕಣ್ಣು ಸಾಲವು. ಅಲ್ಲಿನದು ಬಹಳ ಮನೋಹರ ದೃಶ್ಯ. ಅಂದು ಸಂಜೆ ನಿಸಾರರ ಅಭಿಮಾನಿಗಳಾದ ಶ್ರೀಮತಿ ಜಮುನ ಹಾಗೂ ಶ್ರೀ ಮಂಜುನಾಥ್‌ರವರು ನಮ್ಮೆಲ್ಲರನ್ನೂ ಚೈನೀಸ್ ಹೋಟೆಲ್‌ಗೆ ಭೋಜನದ ಸಲುವಾಗಿ ಕರೆದುಕೊಂಡು ಹೋಗಿದ್ದರು. ತುಂಬ ಸಂತೋಷದಿಂದ ಅಂದಿನ ಸಂಜೆಯನ್ನು ಕಳೆದೆವು.

ಸಂಜೆಯ ಹೊತ್ತು ನನ್ನ ಸ್ನೇಹಿತರ ಹಾಗೂ ಅವರ ಅಭಿಮಾನಿಗಳ ಜೊತೆ ನಿಸಾರ್‌ರು ಬಹಳ ಹೊತ್ತು ಮಾತನಾಡುತ್ತಿದ್ದರು. ಈ ಸಂಭಾಷಣೆಗಳಲ್ಲಿ ಕುವೆಂಪುರವರ ಪ್ರಭಾವ, ಕುವೆಂಪುರವರು ನಿಸಾರ್ ಅಹಮದ್‌ರವರ ಪ್ರತಿಭೆಯನ್ನು ಗುರ್ತಿಸಿ ಮೈಸೂರಿನಲ್ಲಿ ನಡೆದ ದಸರಾ ಕವಿಗೋಷ್ಠಿಗೆ ೧೯೫೯ರಲ್ಲಿ ಆಹ್ವಾನಿಸಲು ಪ್ರೇರಕವಾದದ್ದು, ಅಲ್ಲಿ ಕುವೆಂಪು ಅವರು ತೋರಿದ ಔದಾರ್ಯ ಹಾಗೂ ಎಲ್ಲರೆದುರಿಗೂ ಹೊಗಳಿದ್ದನ್ನು ಭಾವುಕರಾಗಿ ನಿಸಾರರು ನಿರೂಪಿಸುತ್ತಿದ್ದರು. ಮೊತ್ತಮೊದಲ ಬಾರಿಗೆ ಇವರಲ್ಲಿದ್ದ, ಬೆಳೆಯುತ್ತಿದ್ದ ಕಾವ್ಯ ಪ್ರತಿಭೆಯನ್ನು ಗುರ್ತಿಸಿದ್ದ ಕಾಲೇಜ್ ಅಧ್ಯಾಪಕರಾದ ಪ್ರೊ. ಎಲ್. ಗುಂಡಪ್ಪ. (ಡಿ.ವಿ.ಜಿ. ಅಲ್ಲ) ಪ್ರೊ. ಜಿ. ಪಿ. ರಾಜರತ್ನಂ ಮೊದಲಾದ ಗುರುಗಳನ್ನು ನೆನೆದರು. ಹೀಗೆಯೇ ಮಾತುಕತೆಗಳಾಗುತ್ತಿದ್ದಾಗ, ಅವರು ವರನಟ ಡಾ. ರಾಜ್‌ಕುಮಾರ್‌ರವರ ಮೇಲಿರುವ ತಮ್ಮ ಪ್ರೀತಿ, ಅಭಿಮಾನ ಮತ್ತು 'ಅಣ್ಣಾವ್ರ' ಸಾದಾಸೀದ ಸರಳತೆ ಮತ್ತು ಸ್ನೇಹಶೀಲತೆಗಳನ್ನು ಉಲ್ಲೇಖಿಸಿದರು.

ಇನ್ನೊಂದು ದಿನ ಅವರ ಭಾಷಣವನ್ನು, ವಿದ್ಯಾ ಪ್ರಪಂಚದಲ್ಲಿ ಹೆಸರುವಾಸಿಯಾದ ಎಂ.ಐ.ಟಿ.(Massachussette Institute of Technology)ಯ ತರಗತಿಯ ಕೊಠಡಿಯೊಂದರಲ್ಲಿ ನಾನು ಏರ್ಪಡಿಸಿದ್ದೆ. ಅವರ ಭಾಷಣದಲ್ಲಿ ಎಂ.ಐ.ಟಿ.ಯಲ್ಲಿ ಕನ್ನಡಿಗರನ್ನು ಕನ್ನಡದಲ್ಲಿ ಸಂಬೋಧಿಸಲು ಅವಕಾಶವಾದದ್ದಕ್ಕೆ ಹಾಗೂ ಅವರು ಬಾಲ್ಯದಲ್ಲಿ ಕೇವಲ ಪುಸ್ತಕದಲ್ಲಿ ಓದಿ ತಿಳಿದಿದ್ದ ಈ ಮಹಾ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಲು ಏರ್ಪಾಟು ಮಾಡಿದ್ದಕ್ಕೆ ನನಗೆ ತುಂಬು ಧನ್ಯವಾದಗಳನ್ನು ಸಲ್ಲಿಸಿದರು. ಎಂ.ಐ.ಟಿ.ಯ ಭಾರತೀಯ ವಿದ್ಯಾರ್ಥಿ ವೃಂದರಿಂದ ನಿಸಾರರಿಗೆ ಒಂದು ನೆನಪಿನ ಫಲಕವನ್ನು ನೀಡಲಾಯಿತು. ಭಾಷಣದ ಮಧ್ಯದಲ್ಲಿ ನಿಸಾರರು ದಿವಂಗತ ಡಾ. ಎಂ. ಎಚ್. ಮರಿಗೌಡ (ತೋಟಗಾರಿಕೆಯ ನಿರ್ದೇಶಕ)ರು ೧೯೫೨ರಲ್ಲೇ ಲಾಲ್‌ಬಾಗಿನಲ್ಲಿದ್ದ ಮರಗಿಡಗಳಿಗೆ ಇಂಗ್ಲಿಷ್ ಫಲಕಗಳ ಜೊತೆಗೆ ಕನ್ನಡದ ಫಲಕಗಳನ್ನೂ ಅಳವಡಿಸಿದ್ದನ್ನು, ಆಗಿನ ಮತ್ತು ಈಗಿನ ಕನ್ನಡದ ಸ್ಥಿತಿ, ದುಃಸ್ಥಿತಿಗಳನ್ನು ಮನಮುಟ್ಟುವಂತೆ ನಿರೂಪಿಸಿದರು. ಆದರೆ ನಾನು ವೈಯಕ್ತಿಕವಾಗಿ, ಕನ್ನಡದ ಅದ್ವಿತೀಯ ಕವಿಯ ಭಾಷಣಕ್ಕೆ ನೆರೆದಿದ್ದ ಜನರ ಸಂಖ್ಯೆಯನ್ನು ನೋಡಿ ನೋವಿನಿಂದ ನರಳಿದೆ. ಇದರ ದೆಸೆಯಿಂದ ಅಂದಿನಿಂದ ಇದುವರೆಗೂ ನಾನು ಇಲ್ಲಿನ ಯಾವ ಕನ್ನಡ ಕಾರ್ಯ ಕಲಾಪಗಳಿಗೂ ಹೋಗಿಲ್ಲ.

ಅಂದು ಸಂಜೆ ನನ್ನ ಮನೆಯಲ್ಲಿ ಹಬ್ಬದ ವಾತಾವರಣ. ಎಂ. ಎಚ್. ಮರಿಗೌಡರ

ಹಿರಿಯ ಮಗ ಶ್ರೀ ದಿವ್ಯ ಅವರ ಕುಟುಂಬ, ಶ್ರೀಮತಿ ಹಾಗೂ ಶ್ರೀ ಮಂಜುನಾಥ್ ಮತ್ತು ಅನೇಕ ಸ್ನೇಹಿತರು ಮನೆಯಲ್ಲಿ ಸೇರಿ, ಹಾಡುಗಳನ್ನು ಹೇಳಿ ರಂಜಿಸಿದರು. ಮರುದಿನ ಅವರು ಮೂರು ಸಾವಿರ ಮೈಲಿ ದೂರದ ಸಿಯಾಟಲ್ ನಗರಕ್ಕೆ ಪ್ರಯಾಣ ಬೆಳಸಿದರು. ಬೀಳ್ಕೊಡಲು ಹೋಗಿದ್ದೆ. ವಿಮಾನ ನಿಲ್ದಾಣದ ಕಟ್ಟಡವನ್ನು ಹೊಕ್ಕು ತಪಾಸಣೆಯ ಬಾಗಿಲಿನ ಮೂಲಕ ಹಾದು ಹೋಗಲು ಸರತಿ ಸಾಲಿನಲ್ಲಿ ನಿಸಾರರು ನಿಂತಿದ್ದಾಗ ಅವರ ಮುಖದಲ್ಲಿ ಮಡುಗಟ್ಟಿದ್ದ ಭಾವೋದ್ವೇಗವನ್ನು, ನಮ್ಮೆಲ್ಲರನ್ನು ಅಗಲಬೇಕಾದ ಮನೋ ವ್ಯಥೆಯನ್ನು ಬಣ್ಣಿಸಲು ನನಗೆ ಶಬ್ದಗಳು ಸಾಲವು. ನೋವು, ಸಂಕಟಗಳು ಕವಿಗಳ ಮುಖದಲ್ಲಿ ಮಡುಗಟ್ಟಿದ್ದವು.

ಅವರು ನನ್ನ ಮನೆಯಲ್ಲಿ ಇದ್ದದ್ದು ಐದು ದಿನಗಳು. ಈ ದಿನಗಳಲ್ಲಿ ನಿಸಾರರು ಅಜ್ಜರಿಲ್ಲದ ನನ್ನ ಮಕ್ಕಳಿಗೆ ಅಜ್ಜನಾದರು; ನಮ್ಮ ಮನೆಗೆ ಹಿರಿಯರಾದರು; ದಾರ್ಶನಿಕರಾಗಿ ಆಶೀರ್ವದಿಸಿದರು. ಅವರು ಮಾತಾಡುತ್ತಿದ್ದಾಗ, ಕನ್ನಡ ಬರಹಗಾರರ ಪರಿಷತ್ತೇ ನಮ್ಮ ಮನೆಯಲ್ಲಿ ಸೇರಿದಂತೆ ಭಾಸವಾಗುತ್ತಿತ್ತು.

ಪ್ರೊಫೆಸರ್ ನಿಸಾರ್ ಅಹಮದ್‌ರವರು ಅತ್ಯಂತ ಸರಳ ಹಾಗೂ ಸಂಭಾವಿತ ವ್ಯಕ್ತಿ. ಅವರ ನಮ್ರತಾ ಸ್ವಭಾವ ಮತ್ತು ಮುಗ್ಧತೆಗಳು ಅನೇಕ ಬಾರಿ ನನ್ನನ್ನು ದಂಗುಬಡಿಸಿವೆ. ಅನೇಕ ಸಲ ನನ್ನ ಮನಸ್ಸಿನಲ್ಲಿ 'ಇಂಥ ಸರಳತಮ ವ್ಯಕ್ತಿ, ಇಂಥ ಚಿರಂತನ ಸಾಹಿತ್ಯವನ್ನು ಹೇಗೆ ಸೃಷ್ಟಿಸಿದರು?' ಎನ್ನುವ ಭಾವನೆಗಳೂ ನನ್ನ ಮನದಲ್ಲಿ ಹೊರಳಿವೆ. ಒಟ್ಟಿನಲ್ಲಿ, ನಿಸಾರ್‌ರವರು ಗಟ್ಟಿ ಸಾಹಿತ್ಯವನ್ನು ಐವತ್ತು ವರ್ಷಗಳಿಂದ ರಚಿಸುತ್ತಲೇ ಬಂದಿದ್ದಾರೆ. ಅವರ ಸಾಹಿತ್ಯದಲ್ಲಿ ಸುಲಲಿತತೆ, ಪಾರದರ್ಶಕತೆ, ಮನಸ್ಸಿನಿಂದ ಮನಸ್ಸಿಗೆ ನೇರವಾಗಿ ಸಾಗಿ ನಾಟುವಂಥ ಭಾಷೆ ಮತ್ತು ಪ್ರತಿಮೆಗಳು ಸಾಲುಸಾಲಾಗಿ ಮೆರೆದಿವೆ. ಬಹುಶಃ ಆ್ಯಂಟನ್ ಚೆಕೋವ್ (Anton Chekov) ಹೇಳುವಂತೆ ಸಾಹಿತಿಗೆ ಇರಬೇಕಾದದ್ದು ಮೂರೇ ಗುಣಗಳು: ಪ್ರಾಮಾಣಿಕತೆ, ಪ್ರಾಮಾಣಿಕತೆ ಮತ್ತು ಪ್ರಾಮಾಣಿಕತೆ. ಇಂಥ ಪ್ರಾಮಾಣಿಕ ಸಾಹಿತ್ಯದ ಸಾಂದ್ರ ಪ್ರತೀಕ—ನಿಸಾರ್.

ನಿಸಾರರ ಕವನಗಳನ್ನು ಅನೇಕ ಬಾರಿ ನನ್ನ ಮಕ್ಕಳಿಗೆ ಓದಿ ಹೇಳಿದ್ದೇನೆ. ಭಾಷಾಂತರ ಮಾಡಿ ಅರ್ಥೈಸಿದ್ದೇನೆ. ಕೇವಲ ಕೆಲವು ದಿನಗಳ ಹಿಂದೆಯಷ್ಟೆ ಅಂಥದೊಂದು ಸಂದರ್ಭ ಒದಗಿತ್ತು. ವಿಕಾಸ ವಿಜ್ಞಾನಿಯಾದ ನಾನು, ಈ ಕವಿಯ 'ಚೇತನಾಚೇತನದ ತಿರುಳು ನೀನು' ಕವನವನ್ನು ಓದುತ್ತಿದ್ದೆ. ಆ ಕವನದಲ್ಲಿರುವ 'ತಂಗೊಳವ ಮೀಟಿರುವ ಬೆಳಕ ಬೆರಳಲ್ಲಿ', 'ಅಣು ಅಣುವಿನಾಳಗಳ ದಿನನಿತ್ಯ ಸಂಚಾರಿ' ಸಾಲುಗಳನ್ನು ಓದಿ, ನನ್ನ ಮಗಳಿಗೆ ಹೇಳಿದೆ: 'ಅವ್ವ, ಇಂಥ ಸಾಲುಗಳ ಮತ್ತು ಪ್ರತಿಮೆಗಳ ಮುಂದೆ ಡಾರ್ವಿನ್ ನಿಶ್ಚಲವಾಗಿ ನಿಲ್ಲುತ್ತಾನೆ'. ನನ್ನ ಮಗಳು ನನಗೆ ಹೀಗೆ ಪ್ರತ್ಯುತ್ತರ ನೀಡಿದಳು : 'ಇಲ್ಲ ಅಪ್ಪ, ಇಡೀ ವಿಜ್ಞಾನವೇ ನಿಶ್ಚಲವಾಗಿ ನಿಲ್ಲುತ್ತದೆ'. ಅಮೇರಿಕದಲ್ಲೇ ಹುಟ್ಟಿ ಬೆಳೆದ ಕನ್ನಡಿಗರ ಮಕ್ಕಳ ಮನಸ್ಸುಗಳಲ್ಲಿ ಇಂಥ ಶಾಶ್ವತ ಪ್ರತಿಮೆಗಳನ್ನು ಐಂದ್ರಜಾಲಿಕವಾಗಿ ನಿಸಾರ್ ಸೃಷ್ಟಿಸುತ್ತಾರೆ. ಕನ್ನಡದ ಅಭಿಮಾನದ ಬೀಜವನ್ನು ಈ ಮಕ್ಕಳ ಎದೆಯಲ್ಲೂ ಬಿತ್ತುತ್ತಾರೆ. ಕನ್ನಡವೆಂದರೆ 'ದೂರದ ದೇಶದ, ಕೇವಲ ನಿಮ್ಮ ತಂದೆ ತಾಯಂದಿರ ಆಸ್ತಿಯಲ್ಲ; ಜನ ಜಂಗುಳಿಯಲ್ಲ;

ಅದು 'ರವಿ ಶಶಿ ತಾರೆಯ ನಿತ್ಯೋತ್ಸವ, ಅದು ಸರಸತಿ ವೀಣೆಯ ಸೊಲ್ಲು' ಎಂದು ಎಚ್ಚರಿಸುತ್ತಾರೆ, ಹುರಿದುಂಬಿಸುತ್ತಾರೆ.

'ಕಳಶ ಶಿಲುಬೆ ಬಿಳಿ ಮಿನಾರು
ಧರ್ಮದುಸಿರು ಒಂದೇ...
ಆಂಗ್ಲ ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೇ...
ಬಾಣ, ಬಿರುಸು, ಕುಂಡ, ಹಣತೆ
ಬೆಳಕ ಸತ್ವ ಒಂದೇ...
ಕೃಷ್ಣ, ಬುದ್ಧ, ಮೊಹಮ್ಮದೇಸು
ಭಗವದಂಶ ಒಂದೇ...' (ಒಂದೇ)

ಎಂದು ಸಾರುತ್ತಿರುವ, ಬೋಧಿಸುತ್ತಿರುವ,

'ಭೇದವಳಿದು ಮಾನವತೆಯ ಮೇಲಕೆತ್ತಿ ಮೆರೆಸಿರಿ
ವಿಶ್ವಭಾವ ಮಹಾಪೂರ ಮನ ಮನದಲಿ ಹರಿಸಿರಿ.' (ಎಲ್ಲೆಲ್ಲಿಯು ಬರಿಯ ಚಿಹ್ನೆ)

—ಎಂದು ಮಾನವ ಸಂಕುಲವನ್ನೇ ಕಳಕಳಿಯಿಂದ ಕೋರಿಕೊಂಡ ಕವಿ, ಕನ್ನಡದ ಸುಪುತ್ರ ನಿಸಾರ್ ಅವರು ನನ್ನೊಡನಿದ್ದು ನನ್ನ ಮನೆ, ಮಡದಿ ಮಕ್ಕಳನ್ನು ಹರಸಿದ್ದು ನನ್ನ ಸುಕೃತವೆಂದು ತಿಳಿದಿದ್ದೇನೆ.

ನಿಸಾರ್ ಅವರು ಅಮೇರಿಕಕ್ಕೆ ಬರಲು ನಾನು ಒಂದು ಕಾರಣ ಎಂದು ಅವರು ಅನೇಕ ಕಡೆ ಹೇಳಿದ್ದಾರೆ. ಅದು ಅವರ ದೊಡ್ಡತನ—ನನಗಿಲ್ಲ ಆ ಭ್ರಮೆ!

ಅವರೇ ಹೇಳಿರುವ ಹಾಗೆ,

'ದೇವರಿಗೆ ಮುಡಿಪಾಗಲೆಂದು ಹುಟ್ಟದು ಹೂವು.
ಸೃಷ್ಟಿ ನಿಯಮದ ಯಾವ ಸಲಿಕೆಗಾಗಿಯೋ ಅರಳಿ
ದೇವನಡಿ ಸೇರಿದರೆ ಅದರಿರವು ಪುಣ್ಯತಮ;
ಆ ಪುಣ್ಯವಾಕಸ್ಮಿಕ.' (ಕರ್ಮ)

—ಅದು ಹೂವಿನ ಸಾರ್ಥಕತೆ. ಅಂಥದೊಂದು ಆಕಸ್ಮಿಕತೆಯಿಂದ ನನಗೆ ಸಾರ್ಥಕತೆ ದಕ್ಕಿದರೆ, ಅದು ಹೂವುಗಳಿಗೆ ದಕ್ಕಿದಂಥ ಸಾರ್ಥಕತೆ ಎನ್ನುವ ಸಮಾಧಾನ ನನ್ನದು.

ಪ್ರೊಫೆಸರ್ ಕೆ. ಎಸ್. ನಿಸಾರ್ ಅಹಮದ್ ಅವರು ಕೇವಲ ಕನ್ನಡದ, ಅಪರೂಪದ ಪ್ರತಿಭಾವಂತ ಬರಹಗಾರ ಮತ್ತು ಕವಿ ಮಾತ್ರವೇ ಅಲ್ಲ, ವಿಶ್ವದ ಯಾವುದೇ ಭಾಷೆಯ ಸಾಹಿತ್ಯದ ಮೌಲ್ಯಗಳ ದೃಷ್ಟಿಯಿಂದಲೂ ವಿಶಿಷ್ಟ ಹಾಗೂ ವಿರಳತೆಯ ಬರಹಗಾರ ಮತ್ತು ಬಹು ಎತ್ತರದ ವ್ಯಕ್ತಿ. ಮಾನವ-ಮಾನವರ ನಡುವಣ ಸಾಮರಸ್ಯ ಸಂಬಂಧ ಮತ್ತು ಸೋದರತ್ವವನ್ನು ಅವರ ಜೀವನವಿಡೀ ಸಾರಿದ, ಸಾರುತ್ತಿರುವ, ಬದುಕಿನಲ್ಲಿ ಸಾಧಿಸಿ ತೋರಿಸಿರುವ ದಾರ್ಶನಿಕ—ನಿಸಾರ್! ಶ್ರೀ ಕುವೆಂಪು ಆಶಿಸಿದ ವಿಶ್ವಮಾನವ ಸಂತತಿಯ, ಸಿರಿ ನುಡಿ ಕನ್ನಡದ ಹಿರಿಯ ಮಗ—ನಿಸಾರ್! ವಿಶ್ವಪಥವನ್ನು ನಿರ್ದೇಶಿಸುತ್ತಿರುವ ಶಕ್ತಿಗಳೆಲ್ಲ ಒಂದೆಡೆ ಸೇರಿ ಕವಿ ನಿಸಾರರನ್ನು ಹರಸಲಿ!



ನಿಸಾರರಿಗೊಂದು ಅಮೆರಿಕಾದ ಪತ್ರ

◆ *ಡಾ. ಎಚ್. ವೈ. ರಾಜಗೋಪಾಲ್*
ಫಿಲಡೆಲ್ಫಿಯ (ಪೆನ್ಸಿಲ್ವೇನಿಯ ಪ್ರಾಂತ್ಯ)

ಪ್ರಿಯ ನಿಸಾರರೆ,

ನೀವು ಎಪ್ಪತ್ತನ್ನು ಮುಗಿಸಿ, ಎಪ್ಪತ್ತೊಂದರಲ್ಲಿ ಸಾಗಿದ್ದೀರಿ ಎಂಬ ಶುಭ ಸಮಾಚಾರ ತಲಪಿ ಬಹಳ ಸಂತೋಷ ವಾಯಿತು. ಕನ್ನಡದ ಪ್ರಮುಖ ಕವಿಗಳಲ್ಲೊಬ್ಬರೂ ಹೃದಯ ವಂತಿಕೆ, ಸಹಜ ಸ್ನೇಹ ಪರತೆಗಳಿಂದ ಜನರಿಗೆ ಪ್ರಿಯರಾದವರೂ ನಮ್ಮ ಜನಪದವನ್ನು ಕನ್ನಡ ತಾಯಿಯ ನಿತ್ಯೋತ್ಸವದಲ್ಲಿ ತೊಡಗಿಸಿದವರೂ ಆದ ನಿಮಗೆ ಈ ಸಂದರ್ಭದಲ್ಲಿ ನಮ್ಮೆಲ್ಲರ ಹಾರ್ದಿಕ ಶುಭಾಶಯವನ್ನು ಸಲ್ಲಿಸುವುದು ಒಂದು ಅತ್ಯಂತ ಸಂತೋಷದ ಕೆಲಸ.

ವಯಸ್ಸಿನಲ್ಲಿ ಒಂದು ಘಟ್ಟ ಮುಟ್ಟಿದ ಒಂದು ಸಂದರ್ಭದಲ್ಲಿ ನನಗೆ ನನ್ನ ಹಿರಿಯ ಮಿತ್ರರೊಬ್ಬರು 'The View is better from this side' ಎಂದಿದ್ದರು. ಜೀವನ ವನ್ನು ನಾನಾ ದೃಷ್ಟಿಗಳಿಂದ ಕಾಣುವ, ಕಂಡದ್ದನ್ನು ಇತರರಿಗೂ ಕಾಣಿಸುವ ಕವಿ ಹೃದಯವುಳ್ಳ ನೀವು ಎಪ್ಪತ್ತರ ಆಚೆ ಕಡೆಯ ನೋಟವನ್ನು ಚೆನ್ನಾಗಿ ಸವಿಯುತ್ತೀರಿ ಎಂದೇ ನನಗನ್ನಿಸುತ್ತದೆ.

ನಾಲ್ಕು ವರ್ಷಗಳ ಹಿಂದೆ ನೀವು ಇಲ್ಲಿಗೆ ಬಂದಿದ್ದಿರಿ. ೨೦೦೨ರಲ್ಲಿ ಡೆಟ್ರಾಯಿಟ್ ನಗರದಲ್ಲಿ ನಡೆದ 'ವಿಶ್ವ ಕನ್ನಡ ಸಮ್ಮೇಳನ' ನಿಮ್ಮನ್ನು ಕರೆಸಿಕೊಂಡಿತ್ತು. ಸಮ್ಮೇಳನದ ಜನ ಜಂಗುಳಿಯಲ್ಲಿ ನಿಮ್ಮ ಕಾರ್ಯಕ್ರಮವನ್ನು ನಿರ್ವಹಿಸಿದವರ ಅನನುಭವ, ಅಶ್ರದ್ಧೆಗಳಿಂದ ನಿಮಗೆ ಆಗ ಮನಸ್ಸಿಗೆ ಕೊಂಚ

ಅಸಮಾಧಾನವಾದದ್ದು ಇಲ್ಲಿನ ಎಲ್ಲ ಕನ್ನಡಿಗರಿಗೂ ಖೇದವುಂಟುಮಾಡಿತ್ತು. ಆದರೆ ನೀವು ನಿಮ್ಮ ಅಸಮಾಧಾನವನ್ನು ಬಹು ಬೇಗ ಹಿಂದೆ ಹಾಕಿದಿರಿ. ನಮ್ಮ ಗೆಳೆಯ ಶ್ರೀ ಕೃಷ್ಣಶಾಸ್ತ್ರಿಯವರು ದೇಶಾದ್ಯಂತ ಏರ್ಪಡಿಸಿದ ನಾನಾ ಕನ್ನಡ ಕೂಟಗಳ ಸಭೆಗಳಿಗೆ ಹೋಗಿಬಂದಿರಿ. ಹೋದಲ್ಲೆಲ್ಲಾ ನಿಮ್ಮ ಚೆಲುವಾದ ವ್ಯಕ್ತಿತ್ವ, ನಯವಾದ ಮಾತುಗಾರಿಕೆ, ನವಿರಾದ ಹಾಸ್ಯಗಳಿಂದ ಜನರ ಮನಸ್ಸನ್ನು ಗೆದ್ದಿರಿ. ಅವರಿಗೆ ನಿಮ್ಮ ಕವನಗಳ ಪರಿಚಯ ಮಾಡಿಸಿದಿರಿ. ಅವುಗಳ ಸೊಬಗನ್ನು ಉಣಿಸಿದಿರಿ. ಅವುಗಳಲ್ಲಿ ಹುದುಗಿದ ಆಲೋಚನೆಗಳ ಬೆಳಕು ಕಾಣಿಸಿದಿರಿ. ಒಳ್ಳೆಯ ಕನ್ನಡದ ಮಾತು, ಬರಹ ಹೇಗಿರುತ್ತದೆ ಎಂಬುದನ್ನು ತೋರಿಸಿದಿರಿ. ಆಗ ನೀವು ಇಲ್ಲಿ ಓಡಾಡಿದಷ್ಟು ಕರ್ನಾಟಕದಿಂದ ಬಂದ ಇನ್ನಾವ ಸಾಹಿತಿಯೂ ಓಡಾಡಿರಲಾರರು. ಅದೊಂದು ಗಮನಾರ್ಹ ದಾಖಲೆಯೆಂದೇ ನನ್ನ ಅನಿಸಿಕೆ. ಮೂರೂವರೆ ತಿಂಗಳಿನ ಅವಧಿಯಲ್ಲಿ ಸುಮಾರು ೪೦ ಕಡೆ ನೀವು ಭಾಷಣ ಮಾಡಿದಿರಿ ಎಂದು ಕೃಷ್ಣಶಾಸ್ತ್ರಿಗಳು ಹೇಳಿದ ನೆನಪು.

ಅದೇ ಸಂದರ್ಭದಲ್ಲಿ ನೀವು ಫಿಲಿಡೆಲ್ಫಿಯಾ ಬಳಿಯಲ್ಲಿ ನಾವಿರುವ ಮೀಡಿಯ ಎಂಬ ಉಪ ನಗರಕ್ಕೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಿದ್ದು ನಮಗೊಂದು ಸವಿನೆನಪಾಗಿ ಉಳಿದಿದೆ. ನನ್ನಾಕೆ ಡಾ. ವಿಮಲ ರಾಜಗೋಪಾಲ್ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಿಮ್ಮ ಸಹಪಾಠಿ. (ಆಗ ಆಕೆ ಎಲ್.ಜಿ. ವಿಮಲ.) ಅವರ ತಂದೆ ಶ್ರೀ ಎಲ್. ಗುಂಡಪ್ಪನವರು ಇಂಟರ್‌ಮೀಡಿಯೆಟ್‌ನಲ್ಲಿ ನಿಮಗೆ ಕನ್ನಡದ ಗುರು. ನಿಮ್ಮ ಮೊದಲ ಕನ್ನಡ ಕವಿತೆಗಳನ್ನು ಅವರಿಗೆ ಪರಿಶೀಲನೆಗೆ ಕೊಟ್ಟಿದ್ದಿರಿ. ಆಗಲೇ ಅವರು ನಿಮ್ಮ ಪ್ರತಿಭೆಯನ್ನು ಗುರುತಿಸಿ ನಿಮ್ಮ ಭವಿಷ್ಯವನ್ನು ಕಂಡಿದ್ದರು. ಅವರಿಂದ ದೊರೆತ ಪ್ರೋತ್ಸಾಹ ವನ್ನು ನೀವು ವಿನಯದಿಂದ ಸ್ಮರಿಸಿದ್ದಿರಿ. ಎಲ್ಲ ಕಡೆಯೂ ಹೇಳಿದ್ದಿರಿ. ಇಷ್ಟೆಲ್ಲಾ ಇದ್ದಾಗ ನಿಮ್ಮನ್ನು ನಮ್ಮ ಮನೆಗೆ ಬರಮಾಡಿಕೊಳ್ಳುವುದು ಒಂದು ಸಂಭ್ರಮದ ಮಾತಲ್ಲದೆ ಇನ್ನೇನು? ಉಳಿದದ್ದು ಒಂದೇ ಕೊರತೆ; ನಿಮ್ಮನ್ನು ಇನ್ನಷ್ಟು ಕಾಲ ಇರಿಸಿಕೊಳ್ಳಲಾಗಲಿಲ್ಲ ವಲ್ಲ ಎಂಬುದು.

ನಮ್ಮ ಮನೆಗೆ ನೀವು ಬಂದದ್ದು ನಾವು ಇಲ್ಲಿ ನಡೆಸುತ್ತಿರುವ 'ಪ್ರಸ್ತಾಪ' ಎಂಬ ಒಂದು ಅನೌಪಚಾರಿಕ ಸಾಹಿತ್ಯ ಗೋಷ್ಠಿ ಮತ್ತು ಇಲ್ಲಿನ ಕನ್ನಡ ಕೂಟ 'ತ್ರಿವೇಣಿ'ಯ ಆಶ್ರಯದಲ್ಲಿ ನಿಮ್ಮ ಕಾವ್ಯವಾಚನ, ಭಾಷಣವನ್ನು ನೆರವೇರಿಸುವುದಕ್ಕೆ. ಬೆಳಿಗ್ಗೆ ಸುಮಾರು ೧೧-೧೨ ಗಂಟೆಗೆ ವಾಷಿಂಗ್ಟನ್ ಡಿ.ಸಿ. ಕಡೆಯಿಂದ ನಮ್ಮ ಮನೆಗೆ ಬಂದಿರಿ. ಬಂದೊಡನೆ ಸ್ವಲ್ಪ ಕಾಫಿ, ತಿಂಡಿ. ಅನಂತರ ಊಟವಾದ ಮೇಲೆ ನಿಮ್ಮ ಮಧ್ಯಾಹ್ನದ ನಿದ್ದೆಗೂ ಸಾಕಷ್ಟು ಅವಕಾಶವಿಲ್ಲದಂತೆ ನಿಮ್ಮನ್ನು ಓಡಿಸಿಕೊಂಡು ನ್ಯೂಜೆರ್ಸಿಯ ಬರ್ಲಿನ್ ಎಂಬಲ್ಲಿ ಏರ್ಪಡಿಸಿದ್ದ ಸಭೆಗೆ ಹೋಗಬೇಕಾಯಿತು. ದಾರಿಯಲ್ಲಿ ಸಾಗುವಾಗ ನಮ್ಮ ಮಗಳು ಚೇತನಾ ತಾನು ಬರೆದ ಹಲವಾರು ಇಂಗ್ಲಿಷ್ ಕವನಗಳ ಪೈಕಿ, 'ಭಾರತ' ಮತ್ತಿತರ ಕೆಲವನ್ನು ವಾಚಿಸಿದಳು. ಅವು ನಿಮ್ಮ ಮನಸ್ಸಿಗೆ ಎಷ್ಟು ಹಿಡಿಸಿದ್ದುವೆಂದರೆ, ನೀವು ಆಮೇಲೆ ನಾವು ಮಾತನಾಡಿದಾಗೆಲ್ಲಾ ಅವನ್ನು ನೆನಪಿಸಿಕೊಂಡಿರಿ, ಆಕೆಯ ಬಗ್ಗೆ ವಿಚಾರಿಸಿದ್ದಿರಿ. ಆಕೆ ಆಫ್ರಿಕನ್-ಅಮೇರಿಕನ್ (ಕಪ್ಪು) ಜನಾಂಗದ ಬದುಕು ಬವಣೆ ಆಚಾರಗಳ ಬಗ್ಗೆ ಬರೆದ

ಪದ್ಯಗಳಲ್ಲಿ ಮಾನವೀಯ ಮನೋಭೂಮಿಕೆ ಮತ್ತು ಸಹಾನುಭೂತಿಶೀಲ ಧೋರಣೆಯನ್ನು ಮನಸಾರ ಮೆಚ್ಚಿ ಉತ್ತೇಜಿಸಿದಿರಿ. ಆ ವಿಶ್ವಾಸ ನಮಗೆ ತುಂಬಾ ಸಂತೋಷ ಕೊಟ್ಟಿದೆ. ಸಭೆಯಲ್ಲಿ ಅಂದು ನೆರೆದಿದ್ದ ಜನಕ್ಕೆ ನಿಮ್ಮೊಂದಿಗೆ ಕಳೆದ ಕಾಲ ಬಹಳ ಆಪ್ಯಾಯವಾಗಿತ್ತು. ನಗುನಗುತ್ತಲೇ ನೀವು ನಮಗೆ ಸಾಹಿತ್ಯದ, ಜೀವನದ ಒಳ ಪದರಗಳನ್ನು, ಗಂಭೀರ ಮುಖಗಳನ್ನು ಕಾಣಿಸಿದಿರಿ. ನಿಮ್ಮ ಪ್ರೀತಿ ಅವರನ್ನು ಆವರಿಸಿದಂತೆಯೇ ಅವರ ಪ್ರೀತಿಯೂ ನಿಮ್ಮನ್ನು ಪೂರ್ತಿ ಆವರಿಸಿತ್ತು.

ನಿಮ್ಮೊಂದಿಗೆ ಮಾತನಾಡುತ್ತ ಒಂದು ಸಂದರ್ಭದಲ್ಲಿ ನನ್ನ ಮಡದಿ ಡಾ. ಎಲ್.ಜಿ. ವಿಮಲ ಇಲ್ಲಿನ 'University of Pennsylvania'ದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗದಲ್ಲಿ ಕನ್ನಡ ಕಲಿಯಲು ಇರುವ ಅವಕಾಶದ ಬಗ್ಗೆ ತಿಳಿಸಿದಳು. ಆಕೆ ಅಲ್ಲಿಯೇ ಕಳೆದ ಏಳೆಂಟು ವರ್ಷಗಳಿಂದ ಕನ್ನಡ ಕಲಿಸುತ್ತಿರುವುದು. ಅಮೆರಿಕದಲ್ಲಿ ಈ ರೀತಿ ಕ್ರಮವಾಗಿ ಹಲವಾರು ವರ್ಷಗಳಿಂದ ಕನ್ನಡವನ್ನು ಒಂದು ಅಧ್ಯಯನದ ವಿಷಯವಾಗಿ ಆರಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿ ಅದರಲ್ಲಿ ತರಗತಿಗಳನ್ನು ನಡೆಸುತ್ತಿರುವ ವಿಶ್ವವಿದ್ಯಾಲಯ ಇದೊಂದೇ. (ಈಚೆಗೆ ಅಯೋವಾ ವಿಶ್ವವಿದ್ಯಾಲಯದಲ್ಲೂ ಕನ್ನಡ ಶಿಕ್ಷಣ ಪ್ರಾರಂಭಿಸಿದ್ದಾರೆ.) ಆ ಬಗ್ಗೆ ಈ ವಿಭಾಗದಲ್ಲಿ ದ್ರಾವಿಡ ಭಾಷೆಗಳ ಪ್ರಾಧ್ಯಾಪಕರಾಗಿರುವ ಡಾ. ಹೆರಾಲ್ಡ್ ಷಿಫ್‌ಮನ್ ಅವರ ವಿಡಿಯೋ ಭಾಷಣವನ್ನು ಡೆಟ್ರಾಯಿಟ್‌ನ ವಿಶ್ವ ಕನ್ನಡ ಸಮ್ಮೇಳನದಲ್ಲಿ ವಿಮಲ ಪ್ರಸ್ತುತ ಪಡಿಸುವ ಏರ್ಪಾಡಾಗಿತ್ತು. ಆದರೆ ಅಲ್ಲಿನ ಕಾರ್ಯಕ್ರಮಗಳ ಏರುಪೇರಿನಿಂದ ಆಗ ಅದು ನಡೆಯಲಿಲ್ಲ. ಅದನ್ನು ವಿಮಲ ನಿಮಗೆ ತಿಳಿಸಿದಾಗ ಇಲ್ಲಿನ ಕನ್ನಡ ಕೋರ್ಸಿನ ಬಗ್ಗೆ ತುಂಬಾ ಆಸಕ್ತಿ ತೋರಿದ ನೀವು ಪ್ರೊ. ಹೆರಾಲ್ಡ್ ಷಿಫ್‌ಮನ್‌ರನ್ನು ಭೇಟಿ ಮಾಡುವ ಆಸೆಯನ್ನು ವ್ಯಕ್ತಪಡಿಸಿದಿರಿ. ವಿಮಲನ ಸಹಾಯದಿಂದ ಆ ಕೆಲಸವೂ ನೆರವೇರಿತು. ಹೆರಾಲ್ಡ್ ಷಿಫ್‌ಮನ್‌ರನ್ನು ಭೇಟಿಯಾದ ಮೇಲೆ ಮಿತ್ರರಾದ ಡಾ. ಸಿ. ರಂಗಾಚಾರ್ ಅವರು, ನೀವು ಮತ್ತು ನಾನು ಫಿಲಿಡೆಲ್ಫಿಯಾದ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೋದೆವು. (ನೀವು ಆಗ ಡಾ. ರಂಗಾಚಾರ್ ಅವರ ಮನೆಯಲ್ಲಿ ಉಳಿದಿದ್ದಿರಿ ಅವರು ಹಿರಿಯ ಕವಿ ಡಾ. ಪು.ತಿ.ನ. ಅವರ ಅಳಿಯಂದಿರು; ಶ್ರೀಮತಿ ಪದ್ಮ ಅವರ ಪತಿವರ್ಯರು.) ವಿಮಲನಿಗೆ ಬೇರೆ ಕೆಲಸವಿದ್ದುದರಿಂದ ಈ ಸುತ್ತಾಟಕ್ಕೆ ನಮ್ಮೊಂದಿಗೆ ಬರಲಾಗಲಿಲ್ಲ. ಅಂದು ನಿಮ್ಮೊಂದಿಗೆ ನೋಡಿದ ಸ್ಥಳಗಳನ್ನೆಲ್ಲ ಮತ್ತೆ ನೆನಪಿಸಿಕೊಳ್ಳುತ್ತಿದ್ದೇನೆ.

ಅಮೆರಿಕಾದಲ್ಲಿ ಚಾರಿತ್ರಿಕವಾಗಿ ಅತ್ಯಂತ ಹಿರಿಮೆಯುಳ್ಳ ಸ್ಮಾರಕವೆಂದರೆ ಇಲ್ಲಿನ 'Independence Hall' ('ಸ್ವಾತಂತ್ರ್ಯ ಮಂದಿರ'). ಈ ದೇಶದಲ್ಲಿ ಎಲ್ಲಿ ನೋಡಿದರೂ ಮೋಡಗಳಲ್ಲಿ ತೂರಿಹೋಗುವಷ್ಟು ಎತ್ತರದ ಅಗಾಧ ಸೌಧಗಳು; ಹೊಳೆಯುವ ಗಾಜಿನ, ಉಕ್ಕಿನ, ಕಾಂಕ್ರೀಟಿನ ಕಟ್ಟಡಗಳು... ಆದರೆ ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿ ಕಟ್ಟಿದ ಈ ಜಾರ್ಜಿಯನ್ ವಾಸ್ತುಶಿಲ್ಪದ ಕಟ್ಟಡ ಕೇವಲ ಎರಡು ಅಂತಸ್ತಿನದು. ಅದರಿಂದ ಇನ್ನೂ ಸ್ವಲ್ಪ ಮುಂದುಗಡೆ ಗಂಟೆಯ ಗೋಪುರ (bell fry) ಇರುವ ಒಂದು ಸುಂದರವಾದ ಕೆಂಪು ಇಟ್ಟಿಗೆಯ ಕಟ್ಟಡ. ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ಹುಟ್ಟಿದ್ದು ಈ

ಮನೆಯಲ್ಲಿಯೇ. ಇಲ್ಲಿಯೇ ಆಗಿನ ಹದಿಮೂರು ಇಂಗ್ಲಿಷ್ ವಸಾಹತುಗಳ ಪ್ರತಿನಿಧಿಗಳು ಜಾರ್ಜ್ ವಾಷಿಂಗ್ಟನ್‌ನ ನಾಯಕತ್ವದಲ್ಲಿ Second Continental Congress ಎಂಬ ಸಭೆ ಸೇರಿ ಜುಲೈ ೪, ೧೭೭೬ರಂದು ಇಂಗ್ಲೆಂಡಿನ ದೊರೆ ಮೂರನೆಯ ಜಾರ್ಜ್‌ನ ಸಾಮಂತಿಕೆಯಿಂದ ಬೇರೆ ಆಗುವ ಅಂತಿಮ ನಿರ್ಧಾರವನ್ನು ಕೈಗೊಂಡದ್ದು. ವರ್ಜೀನಿಯಾದ ಪ್ರತಿನಿಧಿ ಕೇವಲ ೩೩ ವರ್ಷ ವಯಸ್ಸಿನ ಥಾಮಸ್ ಜೆಫರ್ಸನ್ ತಯಾರಿಸಿದ ಸ್ವಾತಂತ್ರ್ಯ ಘೋಷಣೆಯ ಪತ್ರಕ್ಕೆ ಸಹಿ ಹಾಕಿದ್ದು, ಆಮೇಲೆ ಅದನ್ನು ಬಹಿರಂಗವಾಗಿ ಓದಿದ್ದು. ಮುಂದೆ ೧೭೮೭ರಲ್ಲಿ ವಿವಿಧ ಸಂಸ್ಥಾನಗಳ ಪ್ರತಿನಿಧಿಗಳು ಸೇರಿ ರಾಷ್ಟ್ರದ ಸಂವಿಧಾನವನ್ನು ಬರೆದು ಅಂಗೀಕರಿಸಿದ್ದು ಈ ಭವನದಲ್ಲೇ. ಅದಕ್ಕೆ ಮೊದಲು ತಿಂಗಳುಗಟ್ಟಲೆ ಅದರ ಬಗ್ಗೆ ಚರ್ಚೆಗಳು ನಡೆದು ಕಡೆಗೂ ಒಂದು ಒಪ್ಪಂದಕ್ಕೆ ಬಂದಾಗ ಪೆನ್ಸಿಲ್ವೇನಿಯಾದ ಪ್ರತಿನಿಧಿ ಬೆಂಜಮಿನ್ ಫ್ರಾಂಕ್ಲಿನ್ ಹೇಳಿದ ಮಾತು ಮಾರ್ಮಿಕವಾಗಿದೆ. ಸಭಾಧ್ಯಕ್ಷ ವಾಷಿಂಗ್ಟನ್ (ಆಗಿನ್ನೂ ಅವನು ರಾಷ್ಟ್ರಾಧ್ಯಕ್ಷನಾಗಿರಲಿಲ್ಲ) ಕುಳಿತಿದ್ದ ಕುರ್ಚಿಯ ಬೆನ್ನಿನಲ್ಲಿ ಒಂದು ಅರ್ಧ ಸೂರ್ಯನ ಕೆತ್ತನೆ ಇದೆ (ಅದನ್ನು ಈಗಲೂ ನೋಡಬಹುದು). ಅದನ್ನು ತೋರುತ್ತ ಫ್ರಾಂಕ್ಲಿನ್ ಹೇಳಿದನಂತೆ, 'ಎಷ್ಟೋ ಸಲ... ಈ ಚರ್ಚೆಗಳು ಏಳುತ್ತ ಬೀಳುತ್ತ ಸಾಗಿದಂತೆ, ಈ ಸೂರ್ಯನ ಕಡೆ ನೋಡಿ ಇದೇನು ಮುಳುಗುತ್ತಿರುವ ಸೂರ್ಯನೋ ಅಥವಾ ಉದಯಿಸುತ್ತಿರುವ ಸೂರ್ಯನೋ ಎಂದು ಚಿಂತಿಸುತ್ತಿದ್ದೆ. ಆದರೆ ಈಗ, ಇಷ್ಟು ದಿನದ ಮೇಲೆ ಇದು ಉದಯಿಸುತ್ತಿರುವ ಸೂರ್ಯ, ಮುಳುಗುತ್ತಿರುವ ಸೂರ್ಯನಲ್ಲ ಎಂಬುದು ತಿಳಿದು ಮನಸ್ಸಿಗೆ ನೆಮ್ಮದಿಯಾಗಿದೆ.' ಜಗತ್ತಿನ ಇತಿಹಾಸದಲ್ಲಿ ಒಂದು ಹೊಸ ರಾಜ್ಯ ಪದ್ಧತಿಗೆ ಅದು ನಾಂದಿಯಾಯಿತು.

ಅಮೆರಿಕನ್ನರ ಸ್ವಾತಂತ್ರ್ಯಪ್ರಿಯತೆಯನ್ನು ಇಡೀ ಜಗತ್ತಿಗೆ ಘೋಷಿಸುವ ಸಂಕೇತ 'Liberty Bell' ಈ ಭವನದ ಪಕ್ಕದಲ್ಲಿಯೇ ಇದೆ. ಸ್ವಾತಂತ್ರ್ಯ ಘೋಷಣೆಯ ಸಮಯದಲ್ಲಿಯೂ ಅಲ್ಲಿಂದ ಮುಂದೆ ಕೆಲವು ವರ್ಷಗಳವರೆಗೂ ಉಪಯೋಗಿಸಿದ ಈ ಗಂಟೆ ಬಿರುಕು ಬಿಟ್ಟು ಉಪಯೋಗಕ್ಕೆ ಬಾರದೇ ಹೋದರೂ ಅದೊಂದು ರಾಷ್ಟ್ರೀಯ ಸಂಕೇತವಾಗಿ ಉಳಿದಿದೆ. ಇಂಗ್ಲೆಂಡಿನಲ್ಲಿ ಎರಕ ಹೊಯ್ದ ಆ ಗಂಟೆಯಲ್ಲಿ ಕಾಣಿಸಿಕೊಂಡ ಬಿರುಕು ಇಂಗ್ಲೆಂಡಿಗೂ ಅದರ ಅಮೆರಿಕನ್ ವಸಾಹತುಗಳಿಗೂ ನಡುವೆ ಉಂಟಾದ ಬಿರುಕಿನ ಸಂಕೇತವೋ ಎನ್ನುವಂತಿದೆ.

ಅಲ್ಲಿಂದ ಮುಂದೆ ನಾವು ಬೆಂಜಮಿನ್ ಫ್ರಾಂಕ್ಲಿನ್ ವಾಸಿಸುತ್ತಿದ್ದ ಮನೆ, ಅವನ ಅಚ್ಚಿನ ಮನೆಗಳಿದ್ದ ಜಾಗ ನೋಡಿದೆವು. ಇದು ಫ್ರಾಂಕ್ಲಿನ್ನನ ಊರು. ಎಲ್ಲಿ ನೋಡಿದರೂ ಅವನು ಸ್ಥಾಪಿಸಿದ ಸಂಸ್ಥೆಗಳು; ಅವನ ಹೆಸರಿನ ಸ್ಮಾರಕಗಳು. ಮಿಂಚು, ಆಕಾಶದ ಮೋಡಗಳಲ್ಲಿ ನಡೆಯುವ ವಿದ್ಯುತ್‌ಕ್ರಿಯೆ ಎಂಬುದನ್ನು ವೈಜ್ಞಾನಿಕವಾಗಿ ಸ್ಥಾಪಿಸಿ, ಸಿಡಿಲಿನ ಹೊಡೆತದಿಂದ ಕಟ್ಟಡಗಳನ್ನು ರಕ್ಷಿಸುವ ವಿಧಾನವನ್ನು ನಿಯೋಜಿಸಿದ್ದು ಅವನ ಅತ್ಯಂತ ಲೋಕಪ್ರಸಿದ್ಧ ವಾದ ಕೊಡುಗೆಯಾದರೂ ಅವನದು ಬಹುಮುಖ ಪ್ರತಿಭೆ. ಅವನೊಬ್ಬ ವಿಶಿಷ್ಟ ವ್ಯಕ್ತಿ. ಸ್ವಪ್ರಯತ್ನದಿಂದ ವಿದ್ಯಾರ್ಜನೆ ಮಾಡಿ ವಿಜ್ಞಾನಿಯಾಗಿ, ಸಂಶೋಧಕನಾಗಿ,

ಅನೇಕಾನೇಕ ಉಪಕರಣಗಳನ್ನು ಸಂಯೋಜಿಸಿದವನಾಗಿ, ಮುದ್ರಕ-ಪ್ರಕಾಶಕನಾಗಿ, ರಾಜ ನೀತಿಜ್ಞನಾಗಿ, ಮುತ್ಸದ್ದಿಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಅಮೇರಿಕತ್ವದ ಮನೋಭಾವವನ್ನು ಮೂಡಿಸಿ ರೂಪಿಸಿದ ಗಣ್ಯ ಇವನು. ಅವನ ಮುನ್ನೂರನೆಯ ಹುಟ್ಟುಹಬ್ಬ ಈ ವರ್ಷ. ಅದಕ್ಕಾಗಿ ಈ ಊರಿನಲ್ಲಿ ಅನೇಕ ಕಾರ್ಯಕ್ರಮಗಳು ಸಿದ್ಧವಾಗಿವೆ.

ಈ ಸ್ವಾತಂತ್ರ್ಯ ಭವನ, ಅದರ ಸುತ್ತುಮುತ್ತಿನ ಸುಮಾರು ಒಂದು ಚದರ ಮೈಲಿ ವಿಸ್ತೀರ್ಣದ ಜಾಗ ಅಮೇರಿಕದ ಅತ್ಯಂತ ಚರಿತ್ರಾರ್ಹ ಸ್ಥಳ. ಇಲ್ಲಿನ ಚರಿತ್ರೆಯೆಲ್ಲ ಕೇವಲ ಐನೂರು ವರ್ಷಗಳ ಈಚಿನದಷ್ಟೆ; ಅದರಲ್ಲೂ ಮುಖ್ಯವಾದದ್ದು ಕಳೆದ ಮುನ್ನೂರು ವರ್ಷದ್ದು. ಆ ಹೊತ್ತಿಗೆ ಕಾಗದ, ಮುದ್ರಣಗಳ ಬಳಕೆ ಚೆನ್ನಾಗಿ ವ್ಯಾಪಿಸಿತ್ತು. ದಾಖಲೆ ಗಳಾಗಿದ್ದವು. ಆದ್ದರಿಂದ ಅಲ್ಲಿನ ಚರಿತ್ರೆಯನ್ನು ಬರೆಯಲು ಬೇಕಾದಷ್ಟು ಆಧಾರಗಳು ಸಿಕ್ಕುತ್ತವೆ. ಎಷ್ಟೆಷ್ಟೋ ಬದಲಾವಣೆಗಳಾಗುತ್ತಿದ್ದರೂ ಇಲ್ಲಿನವರು ತಮ್ಮ ಚಾರಿತ್ರಿಕ ಸ್ಮಾರಕ ಗಳನ್ನು ಬಹಳ ಆಸ್ಥೆಯಿಂದ ಕಾಪಾಡಿಕೊಂಡು ಬರುತ್ತಾರೆ. ಈಚೆಗೆ ಅದರಲ್ಲಿ ಬಿಳಿಯರ ಶೋಷಣೆಗೆ ಒಳಗಾಗಿದ್ದ ಕಪ್ಪು ಜನರಿಗೆ, ಇಲ್ಲಿನ ಮೂಲ ನಿವಾಸಿಗಳಿಗೆ ಸ್ಥಾನಮಾನ ಸಿಕ್ಕಿರುವುದು. (ಇಲ್ಲಿನ ಅಲಬಾಮಾ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕ ರಾಗಿ ನಿವೃತ್ತರಾಗಿರುವ ಮಿತ್ರ ಟಸ್ಕಲೂಸ ನಿವಾಸಿಗಳಾದ ಡಾ. ವೈ. ಆರ್. ಮೋಹನ್‌ರವರು ಬರೆದಿರುವ 'ಅಮೇರಿಕಾಯಣ' ಗ್ರಂಥವನ್ನು ನೀವು ನೋಡಿರಬಹುದು.) ಇದಕ್ಕೆ ಹೋಲಿಸಿದರೆ, ಸಾವಿರಾರು ವರ್ಷಗಳ ನಮ್ಮ ಚರಿತ್ರೆ ಹಿಮಾಲಯದಷ್ಟು ಅಗಾಧವಾದದ್ದು. ಅದು ಇಡೀ ಮಾನವ ಜನಾಂಗದ ಚರಿತ್ರೆಯೇ ಎನ್ನಬಹುದಾದಷ್ಟು ವೈವಿಧ್ಯಮಯ. ಆದರೆ ನಮಗೆ ಅದೊಂದು ಅಗ್ಗದ ವಸ್ತು. ಯಾವುದು ಅತಿಯಾಗಿ ದೊರೆಯುವುದೋ ಅದಕ್ಕೆ ಮಾರುಕಟ್ಟೆಯಲ್ಲಿ ಬೆಲೆಯಿಲ್ಲ ಅಲ್ಲವೇ? ನಮ್ಮ ಶಾಲೆಗಳಲ್ಲಿ ಚರಿತ್ರೆಯಷ್ಟು ನೀರಸ ವಿಷಯ ಜೀವನದಲ್ಲಿ ಮತ್ತೊಂದಿಲ್ಲ ಎಂಬಂತೆ ಹೇಳಿಕೊಡುತ್ತಾರೆ. ಈಗಂತೂ ಜಾತಿ ಮತಗಳ ರಾಜಕೀಯದಿಂದ ನಮ್ಮ ಇತಿಹಾಸ ಏನಿದ್ದಿರಬಹುದು ಎಂದು ತಿಳಿಯುವುದು ಕಷ್ಟವಾಗಿದೆ.

ಆ ಮಧ್ಯಾಹ್ನ ಈ ದೇಶದ ಜನನ ಚರಿತ್ರೆಯ ಮುಖ್ಯ ಘಟ್ಟಗಳನ್ನು ನೆನೆದು, ಅವು ನಡೆದ ಕೆಲವು ಸ್ಥಳಗಳನ್ನು ಕಂಡು ದಣಿದಿದ್ದ ನಾವು ಅಲ್ಲೇ, ಎರಡನೆಯ ರಸ್ತೆಯ ಮೂಲೆಯಲ್ಲೇ ಬಹು ಕಾಲದಿಂದಲೂ ಇರುವ ಪಬ್ ಒಂದರಲ್ಲಿ ಕುಳಿತು ದಣಿವಾರಿಸಿಕೊಂಡೆವು. ಮಾತು, ನಮ್ಮ ಪ್ರಿಯ ಮಿತ್ರರು ಹಾಗೂ ಕನ್ನಡದ ಕಡೆ ತಿರುಗಿತು. ಗತಿಸಿದ ನಮ್ಮ ಪ್ರಿಯ ಸ್ನೇಹಿತ, ಉತ್ತಮ ಇಂಗ್ಲಿಷ್ ಮತ್ತು ಕನ್ನಡ ವಿದ್ವಾಂಸ, ಲೇಖಕ, ವಿಮರ್ಶಕ ಪಿ. ಶ್ರೀನಿವಾಸ ರಾವ್‌ನನ್ನು ನೆನೆಸಿಕೊಂಡೆವು. ಅವನು ಅಮೆರಿಕದಲ್ಲಿ ಇದ್ದ ಸುಮಾರು ೩೫ ವರ್ಷ ಕಾಲವೂ ಈ ಊರಿನಲ್ಲೇ ಇದ್ದದ್ದು. ಇಲ್ಲಿನ 'Lasalle University' ಎಂಬಲ್ಲಿ ಪಾಠ ಹೇಳಿ ನಿವೃತ್ತಿ ಪಡೆದಿದ್ದ ಪ್ರತಿಭಾವಂತ. ಸ್ನೇಹಪರ ವ್ಯಕ್ತಿ. ದುರದೃಷ್ಟವಶಾತ್ ಸ್ವಂತ ಜೀವನದ ಹಲವಾರು ಸಿಕ್ಕುಗಳ ರಗಳೆಯಲ್ಲಿ ಕಮರಿಹೋದ. ಅವನ ಮತ್ತು ನಿಮ್ಮ ೧೯೬೦ಂಕ್ಕೂ ಮುಂಚಿನ ಮತ್ತು ಅನಂತರದ ಗಾಢ ಗೆಳೆತನ,

ಒಡನಾಟದ ಕೆಲವು ಆತ್ಮೀಯ ವಿಷಯಗಳನ್ನು ನಿಮ್ಮಿಂದ ತಿಳಿದದ್ದು ನಿಜಕ್ಕೂ ಒಂದು ಹರ್ಷಪ್ರದವಾದ ಮಾರ್ದವಾನುಭವ.

ಅವನು ಬರೆದ ಪ್ರಬಂಧ ಸಂಕಲನವೊಂದರ ಶೀರ್ಷಿಕೆ 'ಪ್ರಸ್ತಾಪ'. ಆ ಹೆಸರನ್ನೇ ನಮ್ಮ ಅನೌಪಚಾರಿಕ ಸಾಹಿತ್ಯಕೂಟಕ್ಕೆ ಇಟ್ಟುಕೊಂಡಿರುವುದು. ಅದರ ಆಶ್ರಯದಲ್ಲೇ ನಿಮ್ಮ ಭಾಷಣವನ್ನು ಬರ್ಲಿನ್ ಎಂಬಲ್ಲಿ ಏರ್ಪಡಿಸಿದ್ದುದು. ಆ ಕೂಟ ಈಗಲೂ ನಡೆಯುತ್ತಿದೆ. ಇದೀಗ ನಮ್ಮ ಕೂಟ ಆರನೆಯ ವರ್ಷದಲ್ಲಿ ಕಾಲಿಡುತ್ತಿದೆ.

ಕನ್ನಡ ಕವಿಯಾಗಿ ನಿಮಗೆ ಪ್ರಿಯವಾಗುವ ವಿಷಯವೆಂದರೆ, ಅಮೇರಿಕದಲ್ಲಿ ನೆಲಸಿರುವ ಕನ್ನಡಿಗರು ತಮ್ಮ ಕನ್ನಡ ತಾಯಿಯನ್ನು ಮರೆತಿಲ್ಲ ಎಂಬುದು. ಆ ತಾಯಿಯ ನಿತ್ಯೋತ್ಸವ ಸಂಭ್ರಮದಿಂದ ನಡೆಯುತ್ತಿದೆ. ದಿನ ದಿನಕ್ಕೆ ಕನ್ನಡದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳು ಹೆಚ್ಚುತ್ತಿವೆ. ಇಲ್ಲಿನವರು ಬರೆದು ಪ್ರಕಟಿಸುತ್ತಿರುವ ಪುಸ್ತಕಗಳ ಸಂಖ್ಯೆ ಗಣನೀಯವಾಗಿ ಏರುತ್ತಿದೆ. ಇಲ್ಲಿನ ಕನ್ನಡಿಗರ ಸಾಹಿತ್ಯಾಸಕ್ತಿಗಳನ್ನು ಪೋಷಿಸುವ ಸಲುವಾಗಿಯೇ ೨೦೦೦ರಲ್ಲಿ 'ಕನ್ನಡ ಸಾಹಿತ್ಯ ರಂಗ' ಸ್ಥಾಪನೆಯಾಯಿತು. ಸಾಹಿತ್ಯಕ್ಕೇ ಮೀಸಲಾದ ಏಕೈಕ ರಾಷ್ಟ್ರೀಯ ಮಟ್ಟದ ಸಂಸ್ಥೆ ಇದು. ಇದುವರೆಗೆ ಎರಡು ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದೆ. 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ವೈಚಾರಿಕ ಗ್ರಂಥವನ್ನೂ 'ಆಚೀಚೆಯ ಕಥೆಗಳು' ಎಂಬ ಕಥಾ ಸಂಕಲನವನ್ನೂ ಹೊರತಂದಿದೆ. ಇಲ್ಲಿ ನಡೆಯು ತ್ತಿರುವ ಕನ್ನಡ ಚಟುವಟಿಕೆಗಳ ಬಗ್ಗೆ ಒಂದು ದೀರ್ಘ ವರದಿಯನ್ನೇ ಬರೆಯಬಹುದು. ಆದರೆ ಅದಕ್ಕೆಲ್ಲ ಕೈ ಹಾಕುವುದು ಪ್ರಸ್ತುತ ಸಂದರ್ಭಕ್ಕೆ ಸೂಕ್ತವಾಗುವುದಿಲ್ಲ.

ನೀವು ಮತ್ತೆ ಇಲ್ಲಿಗೆ ಬರುವುದೆಂದು? ನಿಮ್ಮಂತಹವರು ಬಂದು ಹೋದರೆ ಹೊಸ ಗಾಳಿ ಬೀಸಿದಂತೆ. ಅದರಿಂದ ಮನಸ್ಸಿಗೊಂದು ಉಲ್ಲಾಸ. ಅಮೆರಿಕಾದ ಕನ್ನಡಿಗರೆಲ್ಲರೂ ನಿಮ್ಮನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ.

ಒಂದು ವೈಯಕ್ತಿಕ ಮಾತು. ಬಹಳ ದಿನಗಳಿಂದ ಹೇಳಬೇಕೆಂದಿದ್ದೆ: ನಿಮ್ಮ 'ನಿತ್ಯೋತ್ಸವ' ಕೇಳಿದಾಗ ಬಂಕಿಮರ 'ವಂದೇ ಮಾತರಂ' ಕೇಳಿದಾಗ ಆಗುವ ಪುಳಕವೇ ಆಗುತ್ತದೆ. ಕನ್ನಡ ತಾಯಿಯ ಬಗ್ಗೆ ಬರೆದಿರುವ ಅತ್ಯುತ್ತಮ ಗೀತೆಗಳಲ್ಲಿ ಒಂದು ಅದು.

ಕನ್ನಡ ನಿತ್ಯೋತ್ಸವ ನಿರಂತರವಾಗಿ ನಡೆಯಲಿ! ಅಮೆರಿಕಾದ ಕನ್ನಡ ಜನಪದ ದೊಂದಿಗೆ ನಿಮ್ಮ ಸಂಪರ್ಕ ನಿತ್ಯವಾಗಿರಲಿ!

ಅದೃಶ್ಯದ ಕೈವಾಡವಿಲ್ಲದೆ ಸಚಂಚಲ ಆಸೆಯ ಮತ್ತು ಅವಿಚಲ ಸಂಕಲ್ಪದ ಸಂಯೋಗ ಘಟಿಸದು, ದಾಂಪತ್ಯ ಏರ್ಪಡದು. ವಿದ್ಯುತ್ತು ಮತ್ತು ತಂತಿಗಳ ಸಾಹಚರ್ಯದಂತೆ ಅವುಗಳ ನಡುವಣ ನಂಟಸ್ತಿಕೆ.

(ಆಸೆ ಮತ್ತು ಸಂಕಲ್ಪ)



ನಿಸಾರರ ಒಡನಾಟದಲ್ಲಿ ಒಂದೆರಡು ದಿವಸಗಳು

♦ *ಡಾ. ಛಾಯಾಪತಿ ಮಿರ್ಲೆ*

ಅಮೆರಿಕದ ಡೆಟ್ರಾಯಿಟ್‌ನಲ್ಲಿ 'ಅಕ್ಕ' ಸಂಸ್ಥೆ ಆಯೋಜಿಸಿದ ವಿಶ್ವ ಕನ್ನಡ ಸಮಾವೇಶಕ್ಕೆ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ೨೦೦೨ನೆಯ ಆಗಸ್ಟ್‌ನ ಮೂರನೆಯ ವಾರ ಬಂದಿಳಿದಿದ್ದರು. ಬಂದು ೪ ದಿನಗಳಾದರೂ ಅವರನ್ನು ಕರೆಸಿಕೊಂಡವರಿಗೆ ಕನ್ನಡ ಸಮ್ಮೇಳನದ ಏರ್ಪಾಟುಗಳ ಭರಾಟೆಯಲ್ಲಿ ನಿಸಾರರನ್ನು ಅವರು ಉಳಿದುಕೊಂಡಿದ್ದ ಮನೆಯಿಂದ ಬೇರೆ ಎಲ್ಲೂ ಕರೆದುಕೊಂಡು ಹೋಗಲು ಬಿಡುವಾಗಿರಲಿಲ್ಲ. ಪ್ರೊ. ನಿಸಾರರಿಗೆ ಫೋನ್ ಮಾಡಿ ನಾನು 'ನೀವಿರುವ ಜಾಗಕ್ಕೆ ಬರಲೆ?' ಎಂದು ಕೇಳಿದೆ. ತತ್‌ಕ್ಷಣಕ್ಕೆ ಅವರಿಗೆ ನನ್ನ ಗುರುತು ಸಿಕ್ಕದಿದ್ದರೂ 'ಫೋನ್ ಮಾಡಿದ್ದಕ್ಕೆ ಧನ್ಯವಾದ. ಮಧ್ಯಾಹ್ನ ಬನ್ನಿ, ಬಿಡುವಾಗಿದ್ದೀನಿ' ಅಂದರು.

ಬೆಂಗಳೂರಿನಲ್ಲಿ ಕಾಲು ಶತಮಾನದ ಹಿಂದೆ ಎಸ್.ಎಲ್.ಎನ್. ಕಾಲೇಜಿನಲ್ಲಿ ಪ್ರಿನ್ಸಿಪಾಲನಾಗಿದ್ದ ನಾನು ಆ ಕಾಲದ ಅಲ್ಲಿನ ರಾಜಕೀಯ ವಿದ್ಯಮಾನಗಳಿಗೆ ಬೇಸತ್ತು ರಾಜೀನಾಮೆ ಸಲ್ಲಿಸಿ ಕೆಲ ಸಮಯದ ಅನಂತರ ಅಮೇರಿಕಕ್ಕೆ ಬಂದು ಡೆಟ್ರಾಯಿಟ್ ಬಳಿಯ ಟ್ರಾಯ್ ಎಂಬ ಊರಿನಲ್ಲಿ ನೆಲಸಿದ್ದೇನೆ. ಇಲ್ಲಿ ಆಡಿಟರ್ ಆಗಿದ್ದೇನೆ. ನನ್ನ ಮಡದಿ ಶ್ರೀಮತಿ ವೇದಾ ಮೈಸೂರಿನ ಪ್ರತಿಷ್ಠಿತ ಬಿ. ವಿ. ಪಂಡಿತರ ಕುಟುಂಬಕ್ಕೆ ಸೇರಿದವಳು. ಸಂಸ್ಕೃತ ಎಂ.ಎ. ಮಾಡಿದ್ದಾಳೆ ಹಾಗೂ ಆಕೆಗೆ ಸಂಗೀತದಲ್ಲಿ ಗಾಢವಾದ ಆಸಕ್ತಿ. ನಿಸಾರರ

ಭಾವಗೀತೆಗಳು ಆಕೆಗೆ ಬಾಯಿ ಪಾಠ.

ನಿಸಾರರನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆ; ಊಟ ಮಾಡುತ್ತಿದ್ದಾಗ ಔಪಚಾರಿಕವಾಗಿ ಕೇಳಿದೆ: 'ನೀವು ಇಲ್ಲಿಗೆ ಬಂದು ನಾಲ್ಕು ದಿನಗಳಾಯಿತಲ್ಲ. ಯಾವ ಯಾವ ಜಾಗಗಳನ್ನು ನೋಡಿದಿರಿ?' ಪ್ರೊ. ನಿಸಾರರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತ 'ಅವನ್ನೆಲ್ಲ ತೋರಿಸಲು ನನಗೆ ಇಲ್ಲಿ ಯಾರಿದ್ದಾರೆ? ಅಮರನಾಥ ಗೌಡರಿಗೆ ಕನ್ನಡ ಸಮ್ಮೇಳನದ ವ್ಯವಸ್ಥೆಯ ಕಾರಣದಿಂದ ಚೂರೂ ಪುರುಸೊತ್ತಿಲ್ಲ. ಇವೊತ್ತು, ನಾಳೆ ಕಳೆದರೆ ನಾಡಿದ್ದರಿಂದ ಮೂರು ದಿವಸ ಸಮ್ಮೇಳನದ ಸಡಗರ. ಅದಾದ ಮರು ದಿನವೇ ಈ ಊರನ್ನು ಬಿಟ್ಟು ಚಿಕಾಗೊಗೆ ಪ್ರಯಾಣ ಮಾಡಬೇಕು. ಹೀಗಿರುವಾಗ ನಾನು ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದಾದರೂ ಹೇಗೆ?' ಎಂದು ಅಳಲನ್ನು ತೋಡಿಕೊಂಡರು. ನಾನು 'ಸರಿ, ಹಾಗಾದರೆ ಒಂದು ಕೆಲಸ ಮಾಡೋಣ. ಈಗ ಊಟವಾದ ಕೂಡಲೆ, ಮೂವತ್ತು ಮೈಲಿ ದೂರವಿರುವ ಜಗದ್ವಿಖ್ಯಾತ ಫೋರ್ಡ್ ಮೋಟಾರ್ಸ್‌ನ ಸಾಮ್ರಾಜ್ಯವಾದ ಡಿಯರ್ ಬಾರ್ನ್ ಹೆಸರಿನ ಊರಿಗೆ ಹೋಗೋಣ. ನಾಳೆ ಬೆಳಿಗ್ಗೆಯೇ ಹೊರಟು ಕೆನಡಾದ ಕಡೆಯಿಂದ ನಯಾಗರ ಜಲಪಾತ ನೋಡಿ ಬರೋಣ. ಅಲ್ಲಿಗೆ ಮಿಚಿಗನ್ ರಾಜ್ಯದ ಬಹು ಮುಖ್ಯವಾದ ಎರಡು ದರ್ಶನೀಯ ಸ್ಥಳಗಳನ್ನು ನೋಡಿದ ಹಾಗಾಗುತ್ತೆ' ಎಂದೆ. 'ನಿಜಕ್ಕೂ ಇದೊಂದು ಅನಿರೀಕ್ಷಿತ ಮತ್ತು ಅಯಾಚಿತವಾಗಿ ಒದಗಿದ ಸದವಕಾಶ' ಎಂದು ನಿಸಾರರು ಸಂತೋಷ ವ್ಯಕ್ತಪಡಿಸಿದರು. ನಿಸಾರರಿಗೆ ಕೆಲವು ಕಡೆ ಔತಣ ಸಮಾರಂಭದ ವಿಶೇಷ ಆಮಂತ್ರಣ ವಿದ್ದರೂ ಅದನ್ನು ಬಿಟ್ಟು ನನ್ನ ಆಹ್ವಾನವನ್ನು ಮನ್ನಿಸಿ, ಜೊತೆಗೆ ಬಂದರು.

ಡಿಯರ್‌ಬಾರ್ನ್ ಕಳೆದ ಶತಮಾನದ ಮುಮ್ಮೊದಲ ಭಾಗದಲ್ಲಿ ಒಂದು ಸಣ್ಣ ಅನಾಮಧೇಯ ಹಳ್ಳಿ. ಈಗ ಅದೊಂದು ವಿಶ್ವವಿಖ್ಯಾತ ಊರು; ಅದು ಕಾರು ತಯಾರಕ ಹೆನ್ರಿ ಫೋರ್ಡ್‌ನ ಹುಟ್ಟೂರು. ನೂರು ವರ್ಷಗಳ ಹಿಂದೆ ಹೇಗಿತ್ತೋ ಹಾಗೆಯೇ ಅದನ್ನು ಇಂದಿಗೂ ಕಾಪಾಡಿ ಅದನ್ನೊಂದು ಹೃದಯಸ್ಪರ್ಶಿ ಪ್ರದರ್ಶನಾಲಯವನ್ನಾಗಿ ಮಾರ್ಪಡಿಸಿ ದ್ದಾರೆ. ಪ್ರತಿನಿತ್ಯ ಜಗತ್ತಿನ ವಿವಿಧ ಕಡೆಯಿಂದ ಸಹಸ್ರಾರು ಪ್ರವಾಸಿಗಳು ಅಲ್ಲಿಗೆ ಭೇಟಿ ನೀಡುತ್ತಾರೆ. ಹೀಗಾಗಿ, ವೀಕ್ಷಕರ ಪಾಲಿಗೆ ಅದೊಂದು ಯಾತ್ರಾಸ್ಥಳ. ಕಾರುಗಳ ವಿನ್ಯಾಸ ಮತ್ತು ತಯಾರಿಕೆಯಲ್ಲಿ ವಿಶ್ವದಾಖಲೆಯನ್ನು ಸೃಷ್ಟಿಸಿ, ಇಂದಿಗೂ ಮುನ್ನಡೆಯನ್ನು ಸಾಧಿಸಿರುವ ಫೋರ್ಡ್ ಸಂಸ್ಥೆಯ ವಿಶ್ವ ಕೇಂದ್ರ ಕಛೇರಿ ಇರುವುದು ಇಲ್ಲೇ. ಇದರ ಜೊತೆಗೆ ಇನ್ನೊಂದು ಅದ್ಭುತವಾದ ಪ್ರೇಕ್ಷಣೀಯ ಜಾಗವೆಂದರೆ ಫೋರ್ಡ್ ಮ್ಯೂಸಿಯಂ. ಆಬಾಲವೃದ್ಧರಿಗೆ ಇದೊಂದು ಕೌತುಕದಾಯಕ ಹಾಗೂ ಮುದ ನೀಡುವ ಅತ್ಯನನ್ಯ ಪ್ರದರ್ಶನ ಶಾಲೆ. ಫೋರ್ಡ್ ಮೋಟಾರಿನ ಮೊಟ್ಟಮೊದಲನೆಯ ಕಾರಿನಿಂದ ಹಿಡಿದು ಇವೊತ್ತಿನ ಅತ್ಯಾಧುನಿಕ ಕಾರ್‌ನವರೆಗೂ ಅನೇಕ ಮಾದರಿಗಳು ಇಲ್ಲಿ ಕಣ್ಮನಗಳನ್ನು ಸೆಳೆಯುತ್ತವೆ. ಅಲ್ಲದೆ, ಜಾನ್ ಎಫ್. ಕೆನಡಿ ಹಾಗೂ ಇನ್ನೊಬ್ಬ ಅಮೇರಿಕದ ಅಧ್ಯಕ್ಷ, ಪಯಣಿಸುತ್ತಿರುವ ವೇಳೆ ಹತ್ಯೆಯಾದ ಕಾರುಗಳೂ ಇಲ್ಲಿವೆ. ಜೊತೆಗೇ ದೈತ್ಯಾಕಾರದ ರೈಲ್ವೆ ಎಂಜಿನ್ನು ಸಹ ನೋಡುಗರನ್ನು ಭಯಾಶ್ಚರ್ಯಗಳಿಂದ ಬೆಕ್ಕಸ ಬೆರಗಾಗಿಸುತ್ತದೆ. ಕಳೆದ ಹಾಗೂ ಅದಕ್ಕೆ ಮುಂಚಿನ ಶತಮಾನದ ಇಂತಹವೇ ಅನೇಕಾನೇಕ ಕುತೂಹಲಕಾರಿ

ವಸ್ತುಗಳು ಇಲ್ಲಿ ಸಂಗ್ರಹವಾಗಿವೆ. ಭವಿಷ್ಯದಲ್ಲಿ ನಿರ್ಮಿಸಬಹುದಾದ, ಕಡಿಮೆ ಜಾಗವನ್ನು ಬಳಸಿಕೊಂಡು ಅತ್ಯಧಿಕ ಸೌಕರ್ಯಗಳನ್ನು ನೀಡುವ ಬಹೂಪಯೋಗಿ ಮನೆಯೊಂದರ ಮಾದರಿ ಹೃದಯಾಹ್ಲಾದಕಾರಿಯಾಗಿದೆ. ಸಂಗ್ರಹಾಲಯ ಮುಚ್ಚುವುದಕ್ಕೆ ಅತ್ಯಲ್ಪ ಸಮಯ ವಿದ್ದುದರಿಂದ ಪ್ರತಿಯೊಂದನ್ನು ಸರಸರನೆ ನೋಡಿದ್ದಾಯಿತು. ಹೀಗಿದ್ದರೂ, ಈ ಸಂಗ್ರಹಾಲಯದ ಹಲವು ಅಪರೂಪದ ವಸ್ತುಗಳನ್ನು ನೋಡಿ ನಿಸಾರರು ಬೆರಗಾಗಿ 'ಇಂಥಹವನ್ನು ನೋಡದೇ ಇದ್ದಿದ್ದರೆ ನಾನು ಎಷ್ಟೆಲ್ಲವನ್ನು ಕಳೆದುಕೊಳ್ಳುತ್ತಿದ್ದೆನಲ್ಲ' ಎಂದು ಉದ್ಗರಿಸಿ ತಕ್ಷಣವೇ ನನಗೆ ಧನ್ಯವಾದ ಹೇಳಿ ಕೃತಜ್ಞತೆ ಸಲ್ಲಿಸಿಬಿಡುತ್ತಿದ್ದರು.

ಮುಂದೆ ಇದರ ಜೊತೆಯಲ್ಲೇ ನಿಸಾರರ ಮಾತಿನಲ್ಲಿ ಹೇಳುವುದಾದರೆ, 'ಬೋನಸ್ ರೂಪದ ಅಪೂರ್ವ ಕಾಣ್ಕೆ ನನಗೆ ಲಭ್ಯವಾಯಿತು.' ಅದೆಂದರೆ ಐಮ್ಯಾಕ್ಸ್ (IMAX) ಚಲಚ್ಚಿತ್ರ ದರ್ಶನ. ಇದು ಒಂದು ಅತ್ಯದ್ಭುತ ಆಧುನಿಕ ತಂತ್ರಜ್ಞಾನದ ಸಾಧನೆ. ಅಮೇರಿಕಾ ದಲ್ಲಿ ಚಾಲ್ತಿಗೆ ಬಂದು ದಶಕಗಳೇ ಕಳೆದಿವೆ. ಭಾರತೀಯರಲ್ಲಿ ಅನೇಕರಿಗೆ ಈ ಹೆಸರಿನ ಪರಿಚಯ ಇರಲಿಕ್ಕಿಲ್ಲ. ಈ ಚಲಚ್ಚಿತ್ರದ ಪ್ರೇಕ್ಷಕಾಂಗಣ ಗ್ಯಾಲರಿ ರೂಪದಲ್ಲಿದ್ದು ಸುಮಾರು ಏಳು ನೂರು-ಎಂಟು ನೂರು ಜನರು ಕೂರುವಷ್ಟು ವಿಶಾಲವಾಗಿದೆ. ಅದರ ತೆರೆಯ ಉದ್ದಗಲವೇ ನಮ್ಮ ಚಲನಚಿತ್ರದ ಪರದೆಗಿಂತ ನಾಲ್ಕೈದು ಪಟ್ಟು ಹಿರಿದಾಗಿದ್ದು ಅದರ ಮೇಲೆ ಮೂಡುವ ದೃಶ್ಯಗಳು ಅತ್ಯಂತ ಬೃಹದಾಕಾರವಾಗಿರುತ್ತವೆ. ಅದರ ಶಬ್ದಾಭಿವ್ಯಕ್ತಿ ಯಲ್ಲಿನ ಸೂಕ್ಷ್ಮತೆ, ಸ್ಪಷ್ಟತೆಗಳು ವಿಸ್ಮಯ ಮೂಡಿಸುವಂಥವು. ಒಂದು ಜೇನು ಹುಳದ ಝೇಂಕಾರ, ಇಲ್ಲವೇ ಗಾಳಿಗೆ ಅಲುಗಾಡುತ್ತ ಎಲೆಯೊಂದು ಸೂಸುವ ಶಬ್ದ ನಮ್ಮ ಪಕ್ಕದಲ್ಲೇ ಆಗುತ್ತಿರುವುದೆಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಪರದೆಯ ಮೇಲಿನ ಪಾತ್ರ ವೊಂದರ ಎದುರು ಗುಂಯ್‌ಗುಡುವ ಕಣಜ ನಿಮ್ಮ ಮೂಗಿನ ತುದಿಗೆ ಢಿಕ್ಕಿ ಹೊಡೆಯುತ್ತಿದೆಯೋ ಎನ್ನುವಂತೆ, ಇಲಿಯೊಂದು ನಿಮ್ಮ ಪ್ಯಾಂಟ್‌ನ ಕೆಳ ಭಾಗದಿಂದ ಮೊಣಕಾಲಿನ ಕಡೆ ಓಡುತ್ತಿದೆಯೋ ಎನ್ನುವಂತೆ ಭಾಸವಾಗಿ ಇಡೀ ಥಿಯೇಟರಿನಲ್ಲಿ ನೋಟಕರ ಭಯವಿಹ್ವಲ ಕಿರುಚಾಟ ಅನುರಣಿಸುತ್ತದೆ. ಅನಂತರ ಈ ಭ್ರಮೆಯಿಂದ ಪಾರಾದ ಮೇಲೆ ನಗು, ಚಪ್ಪಾಳೆಗಳ ಹರ್ಷದಾಯಕ ಉದ್ಗಾರ ಕಿವಿಡೆಬ್ಬಿಸುವಂಥದ್ದು. ಅಂದು ನನ್ನೊಂದಿಗೆ ನಿಸಾರರು IMAX ಥಿಯೇಟರಿನಲ್ಲಿ ನೋಡಿದ ಚಿತ್ರ ಹದಿನೆಂಟನೆಯ ಶತಮಾನದಲ್ಲಿ Clark and Louis ಎಂಬ ಸಾಹಸಿಗರು ಅಮೇರಿಕದ ಅಸಂಶೋಧಿತ ಪಶ್ಚಿಮ ಪ್ರದೇಶವನ್ನು ನದಿಯ ಮೂಲಕ ಸಾಗಿ, ಕಂಡು ಹಿಡಿದದ್ದು. ಅವರು ಮಾರ್ಗದಲ್ಲಿ ಅನುಭವಿಸಿದ ಗಂಡಾಂತರಗಳು, ಪಟ್ಟ ಪಾಡುಗಳು ನಮ್ಮೆದುರಿಗೆ ಇಂದೇ ನಡೆದಷ್ಟು ನಿಜವಾಗಿ ಗೋಚರವಾಗುತ್ತವೆ. ನಾವೇ ಆ ಸಾಹಸಿಗಳೊಂದಿಗೆ ಸಂಚರಿಸುತ್ತ ಇದ್ದೇವೇನೋ ಎಂಬ ಭ್ರಮೆಯನ್ನು ದಟ್ಟಗೊಳಿಸುತ್ತದೆ. ನಿಸಾರರಂತೂ 'ಐಮಾಕ್ಸ್ ಚಿತ್ರ ದರ್ಶನ ನನ್ನ ಪಾಲಿಗೆ ಅಪ್ರತಿಮ ಹಾಗೂ ತುಂಬು ಸಂತಸ ನೀಡಿದ ಒಂದು ಅತ್ಯಪೂರ್ವ ಘಟನೆ' ಎಂದು ಮನಸಾರೆ ಆನಂದಿಸಿ ನುಡಿದರು.

ಇವೆಲ್ಲವನ್ನೂ ಪೂರೈಸಿ ನಾವು ಡೆಟ್ರಾಯಿಟ್‌ಗೆ ಮರಳಿದಾಗ ರಾತ್ರಿ ಏಳೂವರೆ ಘಂಟೆ. ಕಾರಿನಲ್ಲಿ ಉದ್ದಕ್ಕೂ ನಾನು ಭಾರತಕ್ಕೆ ಹೋಲಿಸಿದಂತೆ ಅಮೇರಿಕದ ಜೀವನದ

ವೈಶಿಷ್ಟ್ಯಗಳನ್ನು ನಿರೂಪಿಸುತ್ತ ಬಂದೆ. ಡೆಟ್ರಾಯಿಟ್‌ಗೆ ಬಂದು ತಲಪಿದ ಮೇಲೆ ನನಗನ್ನಿಸಿತು: 'ನಿಸಾರರು ಮನೆಯಲ್ಲಿ ಮಾಂಸಾಹಾರಿಗಳು. ನಮ್ಮ ಮನೆಯಲ್ಲಿ ಅದರ ಬಳಕೆ ಇಲ್ಲದ್ದರಿಂದ ಅವರಿಗೆ ನಮ್ಮ ಭಾರತೀಯ ಹೋಟೆಲೊಂದರಲ್ಲಿ ಭೋಜನ ಕೊಡಿಸಬೇಕು' ಎಂಬುದಾಗಿ. ನಿಸಾರರಂತೂ 'ಖಂಡಿತಾ ಬೇಡವೇ ಬೇಡ' ಎಂದು ನಿರಾಕರಿಸಿದರು. ಆದರೂ ಕೂಡಾ, 'ನಾನು ಕಂಪೆನಿ ಕೊಡ್ತೀನಿ, ಸಸ್ಯಾಹಾರವನ್ನು ತಿನ್ನುತ್ತೇನೆ' ಎಂದು ಹೇಳಿ ಅವರನ್ನು ಒಪ್ಪಿಸಿ ಅವರಿಗಿಷ್ಟವಾದ ಮಾಂಸಾಹಾರದ ಭೋಜನದ ವ್ಯವಸ್ಥೆ ಮಾಡಿಸಿ, ಊಟವಾದ ಅನಂತರ ಮನೆಗೆ ಬಿಟ್ಟು ಬಂದೆ.

ನಯಾಗರ ಜಲಪಾತಕ್ಕೆ ದೂರದ ಪ್ರಯಾಣವಾದ್ದರಿಂದ ಮರುದಿವಸ ಬೆಳಿಗ್ಗೆಯೇ ಹೊರಟೆವು. ನಾಲ್ಕೈದು ಗಂಟೆಗಳ ಆ ವೇಗದ ಪಯಣ ನಿಸಾರರಿಗೆ ಅಮಿತವಾದ ಖುಷಿಯನ್ನು ನೀಡಿತ್ತು. ಉದ್ದಕ್ಕೂ ನಮ್ಮ ಸಂಭಾಷಣೆ, ಹಿಂದಿನ ಬೆಂಗಳೂರಿನ ಜೀವನದ ವ್ಯಕ್ತಿಗಳ ನೆನಕೆ, ಜೊತೆಗೇ ಯಾವುಯಾವುದೋ ಸಂಗತಿಗಳು, ಜೋಕುಗಳು. ಕಾಲ ಕಳೆದದ್ದೇ ಗೊತ್ತಾಗಿರಲಿಲ್ಲ. ಅಮೇರಿಕದ ಗಡಿ ದಾಟಿ, ಕೆನಡವನ್ನು ಪ್ರವೇಶಿಸುವಾಗ ನಿಸಾರರು ದೆಹಲಿಯ ಕಾನ್ಸುಲೇಟ್‌ನಿಂದ ಪಡೆದ ಒಂದೇ ಒಂದು ಪ್ರವೇಶದ ವೀಸಾ ಕೆಲಸಕ್ಕೆ ಬಂದಿತು. ಗಡಿಯಲ್ಲಿನ ತಪಾಸಣೆಗಾರ ವಿವರವಾಗಿ ನಿಸಾರರನ್ನು ಪ್ರಶ್ನಿಸಿದ. ಅವರ ಪಾಸ್‌ಪೋರ್ಟ್ ಮತ್ತಿತರ ದಾಖಲೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದ. ಎಲ್ಲ ಮುಗಿದ ಮೇಲೆ ಅವರ ಕೈ ಕುಲುಕುತ್ತ: 'Have a nice day. Hope you will enjoy the journey and the waterfall' ಎಂದ. ಅವನಿಗೆ ವಂದನೆ ಸಲ್ಲಿಸಿ ಮುಂದುವರಿದೆವು. ರಸ್ತೆ ಇಬ್ಬದಿಗೆ ಜೋಳ, ಸೋಯಾ, ಹತ್ತಿಯ ಹೊಲಗಳು. ನಡುನಡುವೆ ದಟ್ಟ ವೃಕ್ಷಗಳ ಸಮೃದ್ಧಿ. ಹೆದ್ದಾರಿಯುದ್ದಕ್ಕೂ ಬಿಡುವಿಲ್ಲದೆ ಚಲಿಸುವ ಸರಕು ಸಾಗಣೆಯ ಭೂತಾಕಾರದ ಟ್ರಕ್ಕುಗಳ, ಪ್ರವಾಸಿಗಳ ಮತ್ತು ಹತ್ತಿರದ ನಿವಾಸಿಗಳ ಶರ ವೇಗದ ಕಾರುಗಳ ಓಟ ಮುಂದುವರಿದಿತ್ತು. ಅಮೇರಿಕ ಮತ್ತು ಕೆನಡದ ವೈಶಿಷ್ಟ್ಯಗಳಲ್ಲಿ ಒಂದೆಂದರೆ ಅಲ್ಲಿನ ಕೆಲವು ಊರುಗಳ ಹೆಸರುಗಳು. ತಾವು ಇಲ್ಲಿಗೆ ವಲಸೆ ಬರುವುದಕ್ಕೆ ಮುಂಚೆ ಇದ್ದ ಯೂರೋಪಿನ ತವರು ನೆಲದ ಲೆಕ್ಕವಿರದಷ್ಟು ಊರುಗಳ ಹೆಸರನ್ನು ಅವರು ಇಲ್ಲಿ ಹೊಸದಾಗಿ ಸ್ಥಾಪಿಸಿದ ನಗರ ಹಾಗೂ ಗ್ರಾಮಗಳಿಗೂ ಇಟ್ಟಿದ್ದಾರೆ. ಅಮೇರಿಕದಲ್ಲಂತೂ ಈ ತವರಿನ ಮರುಕಳಿಕೆಯನ್ನು ಎಡೆಬಿಡದೆ ಕಾಣಬುದು. ನಾವು ಪಯಣಿಸುತ್ತಿರುವ ಕೆನಡದ ಈ ಪ್ರದೇಶದಲ್ಲೂ ಪ್ಯಾರಿಸ್, ಲಂಡನ್, ಬರ್ಮಿಂಗ್ಹಂ, ಲೆಕ್ಸಿಂಗ್ಟನ್ ಇತ್ಯಾದಿಗಳಲ್ಲದೆ ಡೆಲ್ಹಿ ಮತ್ತು ಅರಕೋನಂ ಎಂಬ ಊರೂ ಇತ್ತು! ಆದರೆ ಇಲ್ಲಿನವರು ಡೆಲ್ಹಿಯನ್ನು ಡೆಲ್ಹೈ ಎಂಬುದಾಗಿ ಸಂಬೋಧಿಸುತ್ತಾರೆ. ಜೊತೆಗೆ ಅದು ನಮ್ಮ ಭಾರತದ ಡೆಲ್ಲಿಯ ನೆನವರಿಕೆಯ ಊರಾಗಿರಲಿಲ್ಲ. ಆ ಹೆಸರನ್ನು ಹೋಲುತ್ತಿತ್ತು ಅಷ್ಟೆ.

ಪ್ರಯಾಣದ ವೇಳೆ ನಮಗೆ ಜಗತ್‌ಪ್ರಖ್ಯಾತವಾದ ಒಂದೆರಡು ಸಮುದ್ರ ಸದೃಶ ದಂತಿದ್ದ ಸಿಹಿ ನೀರಿನ ಸರೋವರಗಳು ಗೋಚರಿಸಿದವು. ಅವು ಪಂಚ ಮಹಾಸರೋವರಗಳೆಂದು ಪರಿಗಣಿತವಾಗಿರುವ ಸುಪೀರಿಯರ್, ಆಂಟೋರಿಯೊ ಮುಂತಾದವುಗಳು. ಇಲ್ಲೊಂದು ಕುತೂಹಲಕರ ಸಂಗತಿಯನ್ನು ನಿಸಾರರಿಗೆ ತಿಳಿಸಿದೆ. ಅದೆಂದರೆ, ನಾವು

ಸಾಗುತ್ತಿರುವ ಹೆದ್ದಾರಿಯಿಂದ ಸುಮಾರು ಮೂವತ್ತು ಮೈಲಿ ಬಲಕ್ಕೆ ಹೋದರೆ ಅಲ್ಲೊಂದು ಊರು ಸಿಕ್ಕುತ್ತದೆ. ಅದರ ಹೆಸರು ಸ್ಟ್ರಾಟ್‌ಫರ್ಡ್ (Stratford). ಪಕ್ಕಾ ಕೆನೆಡಿಯನ್ ಮಾದರಿಯ ಊರು. ಅದಕ್ಕೊಂದು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮಹತ್ವ ಇದೆ. ಜೊತೆಗೇ ರಂಗಭೂಮಿಯಲ್ಲೂ ದಾಖಲೆ ಮಾಡುವಂತಹ ಒಂದು ವಿಶೇಷವಾದ ಪರಂಪರೆಯಿದೆ. ಅದೆಂದರೆ, ಅನೇಕ ವರ್ಷಗಳಿಂದ ಈ ಊರಿನಲ್ಲಿ ಬೇಸಿಗೆಯ ಕಾಲದಲ್ಲಿ ಸ್ಥಳೀಯ ಕಲಾವಿದರು ಪ್ರತಿನಿತ್ಯ ಷೇಕ್ಸ್‌ಪಿಯರ್ ರಚಿತ ನಾಟಕಗಳನ್ನು ತಪ್ಪದೆ ಆಡುತ್ತಾ ಬಂದಿದ್ದಾರೆ. ಅದೊಂದು ನಾಟಕದ ನಿತ್ಯೋತ್ಸವ. ಷೇಕ್ಸ್‌ಪಿಯರ್‌ನ ಅಮರ ಪಾತ್ರಗಳ ಅವಿಚ್ಛಿನ್ನ ಕಲರವ ಇದರ ಆಸುಪಾಸಲ್ಲೆಲ್ಲ ಪ್ರತಿಧ್ವನಿಸುತ್ತದೆ. ದೂರದ ಪ್ರವಾಸಿಗಳು ಹಾಗಿರಲಿ, ಸುತ್ತಮುತ್ತಲಿನ ಜನರು ಮತ್ತು ದಿನನಿತ್ಯ ನಯಾಗರದಂತಹ ವಿಶ್ವವಿಶ್ರುತ ನೈಸರ್ಗಿಕ ನೀರ್ಬೀಳವನ್ನು ನೋಡಲು ಬರುವ ಪ್ರಯಾಣಿಕರು ಆ ಮಹಾಕವಿಯ ಒಂದೆರಡು ರಚನೆಗಳನ್ನು ನೋಡಿ ಆನಂದಿಸದೆ ಮುಂದೆ ಸಾಗುವುದಿಲ್ಲ. ಬಹುಶಃ ಜಗತ್ತಿನಲ್ಲೇ ಇದೊಂದು ಅದ್ಭುತ ಸಾಂಸ್ಕೃತಿಕ ಘಟನೆ ಎನ್ನಿಸುತ್ತದೆ. ನನಗೆ ತಿಳಿದ ಮಟ್ಟಿಗೆ ಷೇಕ್ಸ್‌ಪಿಯರ್‌ನ ಹುಟ್ಟೂರಾದ ಇಂಗ್ಲೆಂಡಿನ ಸ್ಟ್ರಾಟ್‌ಫರ್ಡ್(ಆನ್ ಏವನ್)ನಲ್ಲಿ ಬಿಟ್ಟರೆ ಆ ಮಹಾಕವಿಯ ನಿತ್ಯಾರಾಧನೆ ಹೀಗೆ ಜಗತ್ತಿನಲ್ಲಿ ಇನ್ನೆಲ್ಲೂ ನಡೆಯುವುದಿಲ್ಲ.

ನಾನು ಇಲ್ಲಿಗೆ ಹಲವು ಸಲ ಬಂದಿದ್ದೇನೆ. ಸ್ನೇಹಿತರು ಭಾರತದಿಂದ ಬಂದಾಗ, ಮತ್ತೆ ಕೆಲವೊಮ್ಮೆ ಅಮೇರಿಕದ ದೂರದ ಪ್ರಾಂತ್ಯದಲ್ಲಿರುವ ನಮ್ಮ ನೆಂಟರೋ, ಸ್ನೇಹಿತರೋ ನಮ್ಮಲ್ಲಿಗೆ ಬಂದಾಗ ಷೇಕ್ಸ್‌ಪಿಯರ್‌ನನ್ನು ಚಿರಂತನವಾಗಿಸಿರುವ ಈ ಊರಿಗೆ ಕರೆ ತರುತ್ತೇನೆ. ಇದರಿಂದ ಇಬ್ಬಗೆಯ ಸಾರ್ಥಕ್ಯ: ಇತರರಿಗೆ ಈ ಅಪೂರ್ವ ಕಲಾ ಸಂಘಟನೆಯನ್ನು ಪರಿಚಯಿಸುವುದು, ಆ ನಿಮಿತ್ತದಿಂದ ನಾನೂ ರಸಾನಂದ ದಕ್ಕಿಸಿಕೊಳ್ಳುವುದು. ಹಿಂದೊಮ್ಮೆ ೮೦ರ ದಶಕದಲ್ಲಿ ಕವಿ ಗೋಪಾಲಕೃಷ್ಣ ಅಡಿಗ ಮತ್ತು ಅವರ ಪತ್ನಿಯವರಿಗೆ ನಯಾಗರ ತೋರಿಸಿದ ಸಮಯದಲ್ಲೂ ಇಲ್ಲಿಗೆ ಕರೆತಂದಿದ್ದೆ. ನಾನು ಇದನ್ನೆಲ್ಲ ಬಣ್ಣಿಸುತ್ತಿದ್ದ ಹಾಗೆ ಈ ಊರು ಮತ್ತು ಇಲ್ಲಿನ ರಂಗಸ್ಥಳದ ಚಿತ್ರ ನಿಸಾರರ ಮನಸ್ಸಿನಲ್ಲಿ ಗೂಡು ಕಟ್ಟಲಾರಂಭಿಸಿದ್ದವೆಂದು ಕಾಣುತ್ತದೆ. ಏಕೆಂದರೆ ಅವರು ಷೇಕ್ಸ್‌ಪಿಯರ್‌ನ ಕಟ್ಟಾ ಅಭಿಮಾನಿ. ಅವನ ಎರಡು ನಾಟಕಗಳನ್ನು ಇವರು ತರ್ಜುಮೆ ಮಾಡಿ ಬೆಂಗಳೂರಿನ 'ನಟರಂಗ' ಅಭಿನಯಿಸಿದ್ದನ್ನು ನಾನು ಎಪ್ಪತ್ತರ ದಶಕದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ವೀಕ್ಷಿಸಿದ್ದೆ. ಹೀಗಾಗಿ ಆ ಊರನ್ನು ನೋಡಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದರು. ಆದರೆ ಒಂದು ಆತಂಕ ಎದುರಾಯಿತು. ಈಗಲೇ ಹೋಗೋಣವೆಂದರೆ ಅಲ್ಲಿ ನಾಟಕ ಶುರುವಾಗಿರುವುದಿಲ್ಲ. ನಯಾಗರವನ್ನು ನೋಡಿ ಮರಳುವಾಗ ಹೋಗೋಣವೆಂದರೆ ನಾಟಕ ನೋಡಿ ಮುಗಿಸುವ ಹೊತ್ತಿಗೆ ರಾತ್ರಿ ಬಹು ವೇಳೆಯಾಗಿ ಡೆಟ್ರಾಯಿಟ್‌ನ್ನು ಸೇರುವುದು ಮರು ದಿವಸ ಬೆಳಗಿನ ಜಾವವಾದರೂ ಆದೀತು. 'ಏನು ಮಾಡೋಣ ಹೇಳಿ, ನಾನೇನೋ ಯಾವುದಕ್ಕೂ ಸಿದ್ಧ' ಎಂದು ನಿರ್ಣಯವನ್ನು ಅವರಿಗೇ ಬಿಟ್ಟೆ. ಆದರೆ ನಿಸಾರರಿಗೂ ಏನು ಮಾಡುವುದೆಂದು ತೋಚದೆ ಸುಮ್ಮನಿದ್ದರು. ಆಗ ನಾನೇ ಒಂದು ಸಲಹೆ ಕೊಟ್ಟೆ. 'ನಯಾಗರ ಜಲಪಾತ, ಅದರ ಬಳಿಯ ಉದ್ಯಾನ ವನ ಮತ್ತು ಊರನ್ನು ನೋಡಲು

ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ. ಈಗ ನೇರವಾಗಿ ಅಲ್ಲಿಗೆ ಹೋಗಿ, ನಮ್ಮ ಆ ಮುಖ್ಯ ಉದ್ದೇಶವನ್ನು ಈಡೇರಿಸಿಕೊಂಡು ವಾಪಸ್ಸು ಬರುವಾಗ ಬೇರೊಂದು ಹಾದಿಯಿಂದ ಆ ಊರಿಗೆ ಹೋಗಿ ನಾಟಕವನ್ನು ನೋಡದಿದ್ದರೂ ಆ ಸ್ಥಳವನ್ನಾದರೂ ಪರಿಚಯಿಸಿಕೊಂಡು ಬರೋಣ' ಎಂದೆ. 'ರೈಟೊ, ಇದು ಒಳ್ಳೆಯ ಆಲೋಚನೆ' ಎಂದರು. ಆದರೆ, ಮರಳಿ ಬರುವಾಗ ತುಂಬಾ ಆಯಾಸವಾಗಿದ್ದರಿಂದ ಮತ್ತು ಸಾಕಷ್ಟು ಸಮಯ ಸಂದಿದ್ದರಿಂದ ಈ ಆಸೆ ಕೈಗೂಡಲಿಲ್ಲ. 'ಯಾವುದಕ್ಕೂ ಯೋಗವಿರಬೇಕು ಅನ್ನುವುದು ಅದಕ್ಕೇನೇ' ಅಂದರು ನಿಸಾರರು. ಅಲ್ಲದೆ ಈಗ ಅನ್ನಿಸುತ್ತಿದೆ: 'ಆಯಾಸ, ತಡ ಯಾವುದನ್ನೂ ಲೆಕ್ಕಿಸದೆ ಆಗ ಆ ಊರಿನ ದರ್ಶನ ಮಾಡಬೇಕಿತ್ತು. ಆ ನೆವದಿಂದಲಾದರೂ ಆ ಲೋಕವಿಖ್ಯಾತ ಅಮರ ಪ್ರತಿಭಾವಂತನಿಗೆ ನಿಸಾರರ ಜೊತೆಯಲ್ಲಿ ನಮನ ಸಲ್ಲಿಸಿ ಬರಬಹುದಿತ್ತು' ಎಂದು. ಆದರೆ ಈ ಸಂಕಲ್ಪ ಮತ್ತು ವಿವೇಕ ಬುದ್ಧಿ ದೀರ್ಘ ಪ್ರಯಾಣದ ಆಯಾಸದ ವೇಳೆ ಹೇಗೆ ತಾನೆ ಹೊಳೆಯಬೇಕು?

ನಯಾಗರ ಊರು ಸಮೀಪಿಸುತ್ತಿದ್ದಂತೆ, ನಿಸಾರರ ತವಕ ಅತಿಯಾಗತೊಡಗಿತು. ಕಾರಣ, ಅವರು ಹೈಸ್ಕೂಲಿನಲ್ಲಿದ್ದಾಗ ಭೂಗೋಳದ ಪಾಠದ ವೇಳೆ ಅವರ ಮೇಷ್ಟರು, ಅದನ್ನು ತಾವೇ ಸ್ವತಃ ಕಂಡಂತೆ ಬಾಯಿ ತುಂಬಾ ರಸವತ್ತಾಗಿ ಬಣ್ಣಿಸಿದ್ದರಂತೆ. 'ಅದನ್ನು ನೋಡುವುದಕ್ಕೂ ಪುಣ್ಯ ಬೇಕು' ಎಂದಿದ್ದರಂತೆ. ಬಿಟ್ಟ ಬಾಯಿ ಬಿಟ್ಟಂತೆ ವಿದ್ಯಾರ್ಥಿಗಳು ಅದನ್ನು ತದೇಕಚಿತ್ತರಾಗಿ ಆಲಿಸುತ್ತ ಮೈಮರೆತಿದ್ದ ಪ್ರಸಂಗವನ್ನು ನಿಸಾರ್ ನೆನಪಿಸಿ ಕೊಂಡರು. 'ಆಗಿನಿಂದ ಅಮೆರಿಕದ ಬಗೆಗೆ ಏನೇ ಓದಲಿ, ನಯಾಗರದ ಸ್ವಕಲ್ಪಿತ ಚೇತೋಹಾರಿ ಚಿತ್ರ ಕಣ್ಣಿಗೆ ಕಟ್ಟುತ್ತಿತ್ತು' ಎಂದು ಬಣ್ಣಿಸಿದರು.

ಅದನ್ನು ಸಮೀಪಿಸಿದಾಗ ಆಗಸದಿಂದ ಬೀಳುತ್ತಿದ್ದ ಸೋನೆ ಮಳೆಯಲ್ಲೂ, ಜರ್ಕಿನ್ ಧರಿಸಿದ್ದರೂ ಮೈಯನ್ನು ಕೊರೆಯುತ್ತಿದ್ದ ಚಳಿಯಲ್ಲೂ ದೇಹ ಬೆಚ್ಚಗಾದಂತೆ, ನೊಚ್ಚಗಾದಂತೆ ಭಾಸವಾಗುತ್ತಿತ್ತು. ನಿಡಿದಾದ ಹಾಗೂ ಸುವಿಶಾಲ ಅಗಲದ ದೊಡ್ಡ ಕೊರಕಲಿನಲ್ಲಿ ಆ ಜಲಪಾತ ಕಿವಿಡೆಬ್ಬಿಸುವಂತೆ ಅಬ್ಬರಿಸುತ್ತ ೧೭೭ ಅಡಿ ಎತ್ತರದಿಂದ ಬಿದ್ದು ಭೋರ್ಗರೆಯುತ್ತ, ನೊರೆ ಹಾಗೂ ತುಂತುರನ್ನು ದೂರದವರೆಗೆ ಎರಚುತ್ತ ಸಾಗುವ ಭೀಷಣರಮ್ಯ ಭೂಮ ದೃಶ್ಯ ಅಲ್ಲಿ ನೆರೆದಿದ್ದ ಸಹಸ್ರಾರು ವಿದೇಶಿ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಎತ್ತರದಲ್ಲಿನ ಕಟಕಟೆಯ ಬಳಿ ನಿಂತು ವೀಕ್ಷಿಸಿದಾಗ ಜಲಪಾತವಾಗುವ ಮುಂಚೆ ನದಿ ಬಳುಕಿದಂತೆ ತೀವ್ರವಾದ ತಿರುವನ್ನು ಪಡೆಯುವ ದೃಶ್ಯವಂತೂ ಅಭೂತಪೂರ್ವ ಹಾಗೂ ಮನಸ್ಸನ್ನು ಮೋಡಿ ಹಾಕಿ ಸೆಳೆಯುವಂತಹದ್ದು. ಆ ನೀರಿನ ರಭಸ, ಅದರ ಹುಚ್ಚು ಜಿಗಿತ, ಅದು ಮಳೆಬಿಲ್ಲಿನ ಕೋಟ್ಯಂತರ ಮರಿಗಳನ್ನು ಹುಟ್ಟು ಹಾಕುವ ಪರಿ; ಈ ಮಹಾ ಜಲೋದ್ಘೋಷದ ಕ್ರಾಂತಿಯಾವೇಶದ ಸಂಕ್ಷೋಭೆಯ ನಡುವೆಯೂ ನಿರಾಳವಾಗಿ ತಮ್ಮ ಪಾಡಿಗೆ ತಾವು ರೆಕ್ಕೆಗೂಡಿಸುತ್ತ ಚಕ್ಕಂದವಾಡುವ ಪಕ್ಷಿ ಸಂಕುಲ; ಮೂಲ ಜಲಪಾತಕ್ಕೆ, ವಂದಿಮಾಗಧರಂತೆ ಅನತಿ ದೂರದಲ್ಲಿ ಕವಲೊಡೆದು ಪ್ರತ್ಯೇಕಗೊಂಡು ಉಲಿಯುತ್ತಿರುವ ತೆಳು ನೀರಿನ ಎಳೆಗಳು, ತುಂತುರಿನ ಇರಚಲಿನಿಂದ ಮೈ ತೋಯಿಸಿಕೊಳ್ಳುತ್ತ ನೆರೆದಿರುವ ಪ್ರವಾಸಿಗ ಗಂಡು ಹೆಣ್ಣು ಹಸುಳೆಗಳ ಹರ್ಷೋದ್ಗಾರ

ಮತ್ತು ಮುಖದ ಮೇಲೆ ಗೆರೆಯೊಡೆದಂತೆ ಬರೆದ ನಿಬ್ಬೆರಗು—ಇವನ್ನೆಲ್ಲಾ ಸಚಿತ್ರ ಕಲ್ಪಿಸಿಕೊಳ್ಳಬಲ್ಲಿರಾದರೆ ಬಹುಶಃ ಆ ರಸಾನುಭವದ ಆನಂದ ಕಿಂಚಿತ್ತಾದರೂ ನಿಮಗೂ ಲಭ್ಯವಾದೀತು.

ನಯಾಗರದ ಪಕ್ಕಕ್ಕೆ ಹೆದ್ದಾರಿ, ಅದರ ಪಕ್ಕ ಚಿಕ್ಕ ಉದ್ಯಾನ, ಅದರ ಹಿಂದೆ ಎತ್ತರದಲ್ಲಿ ಗಗನಚುಂಬಿ ದುಬಾರಿ ಹೋಟೆಲ್‌ಗಳು ಮತ್ತು ನಯಾಗರದ ಚಿತ್ರವಿರುವ ಸ್ಮರಣಿಕೆ, ಪುಸ್ತಕ, ಬಟ್ಟೆಬರೆ ಇತ್ಯಾದಿಗಳ ಮಳಿಗೆ ಮತ್ತು ಕೆಫೆ. ಎಲ್ಲಿ ನೋಡಿದರೂ ವರ್ಣಾಕರ್ಷಕ ಉಡುಪುಗಳನ್ನು ಧರಿಸಿದ ದೇಹಗಳ ಸಂಭ್ರಮೋತ್ಸಾಹದ ಸಮಾವೇಶ. ಆ ಹೋಟೆಲ್‌ಗಳಲ್ಲಿ ದೂರದಿಂದಲೇ ಗಮನವನ್ನು ಸೆಳೆಯುವುದೆಂದರೆ ಸಿಯಾಟಲ್ ನಗರದ ಭವ್ಯಗೋಪುರದ ಮಹೋನ್ನತ 'ಆಕಾಶ ಸೂಜಿ'(Sky-needle)ಯನ್ನು ಹೋಲುವ ಚಿತ್ತಾಪಹಾರಿ ನಿರ್ಮಿತಿ. ಸಿಯಾಟಲ್‌ನಲ್ಲಿ ಹೇಗೋ ಹಾಗೆಯೇ ಈ ತ್ರಿಶಂಕು ಕಟ್ಟಡದ ಶಿರಃಸ್ಥಾನದಲ್ಲಿ ನಿಧಾನ ತಿರುಗುವ ರೆಸ್ಟೊರಾ ಇದೆ. ಅಲ್ಲಿ ಕುಳಿತು ಹೊಟ್ಟೆ ತುಂಬಿಸಿ ಕೊಳ್ಳುತ್ತ ಹೊರಗಡೆ ನೋಡಿದರೆ ಹತ್ತಾರು ಮೈಲಿಗಳ ಕೆನಡಿಯನ್ ಭೂದೃಶ್ಯ ಮನಾಹ್ಲಾದಕಾರಿಯಷ್ಟೇ ಅಲ್ಲ, ಮೂಗಿನ ಮೇಲೆ ಬೆರಳಿಡಿಸುವಂತಹದು. ಆದರೆ ಆ ಎತ್ತರದ ನೆಲೆಯನ್ನು ದಕ್ಕಿಸಿಕೊಳ್ಳಬೇಕಾದರೆ ನಮ್ಮ ಕಿಸೆ ಬಸುರಿಯಾಗಿರಬೇಕು. ನಯಾಗರ ಜಲಪಾತವನ್ನು ಕೆನಡ ರಾಜ್ಯದ ಕಡೆಯಿಂದ ನೋಡಿದರೇನೇ ಅದರ ಭೂಮತ್ವ, ಭೀಷಣ ಭವ್ಯ ರಮಣೀಯತೆ, ಸಾಮೀಪ್ಯದ ಅನುಭವ ನಮಗಾಗುವುದು. ಆ ಜಲಪಾತದಿಂದ ಅರ್ಧ ಮೈಲಿ ದೂರದ ಕೊರಕಲಿನ ಮೇಲಿನ ಎತ್ತರದಲ್ಲಿ ಅಮೇರಿಕ ದೇಶದ ಉತ್ತರೋತ್ತರ ಪಟ್ಟಣ ಬಫೆಲೋ(Buffalo) ಇದೆ. ಆ ದಿಕ್ಕಿನಿಂದಲೂ ಸಾವಿರಾರು ಪ್ರವಾಸಿಗರು ಬಂದು ಜಲಪಾತದ ದರ್ಶನ ಮಾಡುತ್ತಾರೆ. ಆದರೆ, ಕೆನಡಾದ ಕಡೆಯಿಂದ ಪಡೆಯುವ ಸಂತೋಷಾನುಭವದ ಅರ್ಧದಷ್ಟಾದರೂ ಅವರಿಗೆ ದಕ್ಕುವುದೆಂಬ ಖಾತ್ರಿಯಿಲ್ಲ.

ಲಕ್ಷಾಂತರ ವರ್ಷಗಳ ಕಾಲ, ಸಮತಟ್ಟಾದ ಆ ಬಲಿಷ್ಠ ಶಿಲಾಸಮೃದ್ಧ ನೆಲವನ್ನು ನದಿ ತನ್ನ ನೀರ್‌ಚಾಣದಿಂದ ಕೆತ್ತಿ ಕಡೆದಿರುವ ಭವ್ಯಾದ್ಭುತ ದೃಶ್ಯ ಎಂತಹವನಿಗೂ ಹೆಬ್ಬೆರಗನ್ನು ಉಂಟುಮಾಡುವಂತಹದು. ಈ ದೃಶ್ಯವನ್ನು ವೀಕ್ಷಿಸುತ್ತಾ ನಿಸಾರರು ತಮ್ಮ ಅಭಿಪ್ರಾಯ ವನ್ನು ಹೀಗೆ ವ್ಯಕ್ತಪಡಿಸಿದರು: 'ನಮ್ಮ ಜೋಗದ ಜಲಪಾತವನ್ನು ಕೆಲವರು ನಯಾಗರ ದೊಂದಿಗೆ ಹೋಲಿಸಿ ಅವುಗಳ ನಡುವೆ ತಮ್ಮ ಪೂರ್ವಾಗ್ರಹಪೂರ್ವಕ ಮೇಲೆಣಿಕೆ-ಕೀಳೆಣಿಕೆ ಗಳ ಬೆಲೆ ಬಟವಾಡೆ ಮಾಡುವುದುಂಟು. ನನಗೆ ಈ ಧೋರಣೆ ಸರಿಯೆನ್ನಿಸುವುದಿಲ್ಲ. ಹುಲಿಯ ಭಯೋತ್ಪಾದಕ ಚೆಲ್ವಿಕೆಯೇ ಬೇರೆ, ಸಿಂಹದ ಶ್ರೀಮದ್ಗಾಂಭೀರ್ಯದ ಬೆಡಗಿನ ಬೆವರಿಡಿಸುವ ದರ್ಶನವೇ ಬೇರೆ. ಆಕಾಶದ ಮಹಾ ಶೂನ್ಯದ ಅನಂತತೆಯ ಅನುಭವ ಒಂದು ತೆರದ್ದಾದರೆ, ಮಹಾ ಸಾಗರದ ತುಂಬು ಅಪರಂಪಾರದ ಪಡುಹವೇ ಇನ್ನೊಂದು ತರಹ. ಇವೆರಡನ್ನೂ ಹೋಲಿಸುವುದು ನನ್ನ ಮಟ್ಟಿಗೆ ಅರ್ಥಹೀನ ಅಷ್ಟೇ ಅಲ್ಲ, ಅನರ್ಥಕಾರಕವೂ ಹೌದು'.

ನಯಾಗರದ ಜಲಪಾತದ ಮುಂಚಿನ ತಿರುವಾಗಲಿ, ಅದರ ನಿಡಿದಾದ ಹರಡಿಕೆ

ಯಾಗಲಿ, ನಮ್ಮ ಮೆಚ್ಚಿನ ತಡಸಲಾದ ಗೇರುಸೊಪ್ಪೆಗಿಲ್ಲ. ಇದಕ್ಕೆ ಇರುವ ಮಹೌನ್ನತ್ಯ ಮತ್ತು ಜಲ ರಾಶಿಯ ಕವಲೊಡೆದ ಸೀಳುಗಳ ಮನಮೋಹಕ ಸೌಂದರ್ಯ ನಯಾಗರಕ್ಕಿಲ್ಲ. ಆದರೆ ಅವು ನಮ್ಮಲ್ಲಿ ಮೂಡಿಸುವ ಭೂಮಾನುಭೂತಿ ಮತ್ತು ಪ್ರಕೃತಿಯ ಮಹಾನತೆಯ ಎದುರು ಮನುಷ್ಯ ಜೀವಿಯ ಅಲ್ಪತೆಯ ಭಾವನೆ ಇವೆರಡಕ್ಕೂ ಸಮ ಸಮ. 'ನಾನು ನಮ್ಮ ಭಾರತ ದೇಶದ ಪ್ರೇಕ್ಷಣೀಯ ತಾಣಗಳಿಗೆ ಅನ್ವಯಿಸುವಂತೆ ಒಂದೆರಡು ಸಂಗತಿಗಳನ್ನು ನಿವೇದಿಸಿದರೆ ಅದು ಅನುಚಿತ ಎನ್ನಿಸದು' ಎಂದು ನುಡಿಯುತ್ತಾ ನಿಸಾರರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. 'ಅಮೆರಿಕ, ಕೆನಡಗಳಂತಹ ವಿದೇಶಗಳಲ್ಲಿ ಒಂದು ನಿಯಮವೋ ಎನ್ನುವಂತೆ ಇಲ್ಲಿನ ಸ್ಥಳೀಯ ಸರ್ಕಾರ ಹಾಗೂ ಆಡಳಿತ ವರ್ಗ ಪರಿಪಾಲಿಸುವ ಅಚ್ಚುಕಟ್ಟು, ಪ್ರವಾಸಿ ದರ್ಶಕರಿಗೆ ಒದಗಿಸುವ ಮೂಲಭೂತ ಸೌಲಭ್ಯ ಮತ್ತು ಇಲ್ಲಿನ ತಾಣಗಳನ್ನು ಶುಭ್ರವಾಗಿ, ಆಕರ್ಷಣೀಯವಾಗಿ ಇಟ್ಟಿರುವ ರೀತಿ ನಮ್ಮ ದೇಶಕ್ಕೆ ಮಾದರಿಯಾಗುವಂಥದ್ದು. ಜೋಗಕ್ಕೆ ನಾವು ಹೋದರೆ ಅಲ್ಲಿ ಜನ ಸಾಮಾನ್ಯರಿಗೆ ಇಳಿದುಕೊಳ್ಳಲು ವಾಸ್ತವ್ಯದ ಏರ್ಪಾಟಿರಲಿ, ಕೊನೆಗೆ ಊಟ ತಿಂಡಿಗಳ ಹೋಟೆಲ್‌ಗಳೂ ನಿರ್ಮಿತವಾಗದಿರುವುದು, ಹೆಂಗಸರಿಗೆ ಅಗತ್ಯವಾದ ಗೌಪ್ಯಸ್ಥಾನವೋ, ನಿರ್ಮಲವಾದ ಶೌಚಾಲಯವೋ ಇಲ್ಲದಿರುವುದು ಎದ್ದು ಕಾಣುವ ಅಂಶ. ಜೊತೆಗೇ ತ್ಯಾಜ್ಯ ವಸ್ತುಗಳ ಬೇಕಾಬಿಟ್ಟಿ ಚೆಲ್ಲಾಟ ಹಾಗೂ ಸಿನಿಮಾ ಹಾಡುಗಳನ್ನು ವಿಸರ್ಜಿಸುವ ಟ್ರಾನ್ಸಿಸ್ಟರ್ ರೇಡಿಯೋಗಳ ಕಿವಿಡೆಬ್ಬಿಸುವ ಆರ್ಭಟ. ಅಮೇರಿಕಾದಲ್ಲಿ ನಾನು ತಿಳಿದಂತೆ, ಪಶ್ಚಿಮ ವರ್ಜಿನಿಯಾದಂಥ ತೀರಾ ಹಿಂದುಳಿದ ಪ್ರದೇಶದಲ್ಲಿನ ದೂರದ ಅಜ್ಞಾತ ಪ್ರೇಕ್ಷಣೀಯ ಎಡೆಗಳಲ್ಲೂ ಒಂದು ಶುಚಿಯಾದ ಹೋಟೆಲ್, ತಂಗುದಾಣ ಮತ್ತು ಅಲ್ಲಿನ ವೈಶಿಷ್ಟ್ಯಗಳನ್ನು ಬಿಂಬಿಸುವ ಪುಸ್ತಕಗಳು, ಸ್ಮರಣಿಕೆಗಳು, ವಿಡಿಯೊ ಮತ್ತು ಸಿ.ಡಿ. ಕ್ಯಾಸೆಟ್‌ಗಳು ನಮಗೆ ಲಭ್ಯವಾಗುತ್ತವೆ. ಜೊತೆಗೆ, ಬೆಟ್ಟದ ಮೇಲಿನಿಂದ ಆಳದ ಕಣಿವೆಗಿಳಿದು ಅಲ್ಲಿನ ನೈಸರ್ಗಿಕ ಸೌಂದರ್ಯವನ್ನು ನೋಡಿ ಆಸ್ವಾದಿಸಲು ಟ್ರಾಲಿಯ ವ್ಯವಸ್ಥೆ ಕೂಡಾ ಇರುತ್ತದೆ. ತಂದೆ ತಾಯಿಗಳ ಜೊತೆಗೆ ಬರುವ ಮಕ್ಕಳಿಗೂ ರಂಜನೆಯೊದಗಿಸುವ ಕೆಲವು ಕ್ರೀಡೆಗಳನ್ನು ಇಲ್ಲಿಯ ಸರಕಾರ ಏರ್ಪಡಿಸಿರುತ್ತದೆ. ಇದರಿಂದಾಗಿ ಇಲ್ಲಿ ಅತ್ಯಂತ ಅಜ್ಞಾತ ಪ್ರದೇಶದಲ್ಲೂ ದರ್ಶನೀಯ ಸ್ಥಳಗಳಿಗೆ ಪ್ರವಾಸಿಗಳ ದಂಡು ದಿನನಿತ್ಯ ನೆರೆದಿರುತ್ತದೆ. ವ್ಯವಸ್ಥಿತವಾಗಿ ಪ್ರವಾಸವನ್ನು ಏರ್ಪಡಿಸಿ, ಜನರು ತೃಪ್ತಿಪಟ್ಟು ಮರಳುವ ಏರ್ಪಾಟು ಸಹ ಇಲ್ಲಿದೆ. ನಮ್ಮ ದೇಶದಲ್ಲಿರುವ ಅಸಂಖ್ಯ ಐತಿಹಾಸಿಕ, ನೈಸರ್ಗಿಕ, ಸಾಂಸ್ಕೃತಿಕ ಸ್ಥಳಗಳನ್ನು ನೆನೆದಾಗ, ಅವುಗಳನ್ನು ವಿಶ್ವದ ವಿವಿಧ ಭಾಗಗಳ ಜನಗಳಿಗೆ ಪರಿಚಯಿಸುವ, ಅದರಿಂದ ಆರ್ಥಿಕ ಲಾಭವನ್ನು ಪಡೆದು ದೇಶದ ಸಂಪತ್ತನ್ನು ಹೆಚ್ಚಿಸುವ ಮಾರ್ಗೋಪಾಯಗಳನ್ನು ಸುವ್ಯವಸ್ಥಿತವಾಗಿ ನಾವು ಇನ್ನೂ ಕಂಡುಕೊಂಡಿಲ್ಲವಲ್ಲ ಎಂದು ಅತೀವ ವ್ಯಥೆ ಆಗುತ್ತದೆ. ಬೆಳೆಯೇನೋ ಬೇಕಾದಷ್ಟಿದೆ. ಕುಯ್ಯುವವರು ಕಡಮೆ!' ಎಂದು ನಿಸಾರರು ವಿಷಾದದಿಂದ ನುಡಿದರು. ನಿಜಕ್ಕೂ ಇದು ಚಿಂತಿಸಬೇಕಾದ ವಿಷಯ ಎಂದು ನನಗೂ ಅನ್ನಿಸಿತು.

ನಯಾಗರ ಪ್ರದೇಶದ ಕಣಿವೆಗೆ ಇಳಿದು, ಅಲ್ಲಿಂದ ಜಲಪಾತದ ಅತ್ಯಂತ ಸಮೀಪ ಸಾಗಿ, ಅದರ ರುದ್ರಭೀಷಣ ಚರ್ಯೆಯನ್ನು ನೋಡಿ ಬೆಚ್ಚಿ ಬೀಳುವ ಅನುಭವವನ್ನು

ನೀಡಲು 'ಹಿಮ ಕನ್ಯೆ' (Maid of the Mist) ಎಂಬ ಯಂತ್ರಚಾಲಿತ ದೊಡ್ಡ ದೋಣಿಯ ವ್ಯವಸ್ಥೆಯಿದೆ. ಅದರಲ್ಲಿ ಹೋಗಲು ಜನಗಳ ನೂಕುನುಗ್ಗಲು. ಒಂದೊಂದು ಸಲಕ್ಕೆ ಕನಿಷ್ಠ ನೂರೈವತ್ತರಿಂದ ಇನ್ನೂರು ಮಂದಿಯಾದರೂ ದೋಣಿ ಹತ್ತುತ್ತಾರೆ. ಜಲಪಾತ ಉಂಟುಮಾಡುವ ನೀರಿನ ತುಂತುರಾವಿಯಿಂದ ಉಟ್ಟ ಬಟ್ಟೆಗಳು ತೊಯ್ಯದಿರಲಿ ಎನ್ನುವ ಕಾರಣಕ್ಕೆ ದೋಣಿ ನಡೆಸುವ ಸಂಸ್ಥೆ, ಎಲ್ಲ ಪ್ರವಾಸಿಗಳಿಗೆ ಪ್ಲಾಸ್ಟಿಕ್ ಮಳೆಯಂಗಿಯನ್ನು ನೀಡುತ್ತದೆ. ಜಲಪಾತ ಸನಿಹವಾಗುತ್ತಿದ್ದಂತೆ ಪ್ರವಾಸಿ ಪ್ರೇಕ್ಷಕರ ಎದೆ ಡವಡವಿಸಲು ಶುರುವಾಗುತ್ತದೆ. ಕಣ್ಣು ಮಂಜಾಗಿ ತಲೆ ಸುತ್ತಿದಂತೆ ಭಾಸವಾಗುತ್ತದೆ. ಸುತ್ತಲಿನ ನೀರು ಎಲ್ಲಿ ನಮ್ಮನ್ನು ನುಂಗಿ ನೊಣೆದು ಬಿಡುವುದೋ ಎಂಬ ಆತಂಕ ಮನಸ್ಸನ್ನು ಆಕ್ರಮಿಸುತ್ತದೆ. ಹಾಗಾಗದಿದ್ದರೆ ಜಲಪಾತವನ್ನು ನೋಡಿದ್ದು ವ್ಯರ್ಥವೆಂಬ ಭಾವನೆ ನಾವು ಕಣಿವೆಯಿಂದ ಮೇಲಕ್ಕೆ ಬಂದಾಗ ನಮಗೆ ಅನ್ನಿಸಿದರೆ ಅಚ್ಚರಿಯಿಲ್ಲ.

ಅಂದ ಹಾಗೆ, ಈ ಜಲಪಾತ ಈಗಿರುವ ಸ್ಥಳದಿಂದ ಎಷ್ಟೋ ಫರ್ಲಾಂಗುಗಳಷ್ಟು ಮುಂದೆ ಇತ್ತಂತೆ. ಕಾಲಾನಂತರದಲ್ಲಿ ಅದು ಹಿಂಜರಿದು ದೂರ ಸರಿದಿದೆಯಂತೆ. ಹೀಗಾಗಿ ಈಗಿರುವ ಜಾಗ ತಲಪಿದೆಯಂತೆ. ಶತಮಾನಗಳ ಅವಧಿಯಲ್ಲಿ ಬಿರುಸಿನಿಂದ ಕೊಚ್ಚುವ ನದಿಯ ನೀರು ಬಂಡೆಗಳನ್ನು ಕೊರೆದು ಸವೆಸಿ ಉರುಳಿಸಿದ್ದರಿಂದ ಜಲಪಾತ ಹಿಮ್ಮೆಟ್ಟಿ ಈಗಿರುವ ಜಾಗವನ್ನು ತಲಪಿದೆ. ಮುಂದೆಯೂ ಇದೇ ಶಿಲಾಶಿಥಿಲೀಕರಣ (Erosion) ಪ್ರಕ್ರಿಯೆ ಎಡೆಬಿಡದೆ ಜರುಗಲಿದೆಯೆಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ನಯಾಗರ ಭವಿಷ್ಯದಲ್ಲಿ ಇನ್ನೂ ಹಿಂದಕ್ಕೆ ಸರಿಯುವುದೆಂದು ತಿಳಿಸುತ್ತಾರೆ. ನಿಸಾರರಂತೂ 'ನನಗೆ ನಯಾಗರದ ಈ ಭವ್ಯತೆಯನ್ನು ಗಂಟೆಗಟ್ಟಲೆ ನೋಡಿ ರಸಾನಂದಿಸುತ್ತ ಕೂತುಬಿಡೋಣ ಎನ್ನಿಸುತ್ತದೆ. ಅದನ್ನು ಬಿಟ್ಟು ಬರಲು ಮನಸ್ಸು ಒಪ್ಪುತ್ತಿಲ್ಲ' ಎನ್ನುತ್ತಿದ್ದರು. ಅವರ ಏಕಾಗ್ರತೆಗೆ ಭಂಗ ತರಲು ನನಗೂ ಮನಸ್ಸಾಗದಿದ್ದರೂ ನಾವಿನ್ನೂ ಅಲ್ಲಿನ ಪಾರ್ಕ್ ಮತ್ತು ಸ್ಥೂಲವಾಗಿಯಾದರೂ ಈ ಊರಿನ ದರ್ಶನವನ್ನು ಮಾಡುವುದಿತ್ತು. ಯಾವುದಕ್ಕೂ ಕಾಲ ಅತ್ಯಂತ ಕಡಿಮೆಯಿತ್ತು. ಇದನ್ನೆಲ್ಲ ಮುಗಿಸಿ ನಾವು ಊರಿನ ದಾರಿ ಹಿಡಿಯಬೇಕಾದರೆ ಸಂಜೆಯಾಗುತ್ತದೆ. ರಾತ್ರಿಯ ವೇಳೆ ಹೆದ್ದಾರಿಯಲ್ಲಿ ಡ್ರೈವ್ ಮಾಡುವುದು ಕೊಂಚ ದುಸ್ತರವೇ. ಹಾಗಾಗಿ ನಾವು ಬೇಗ ಹೊರಡುವುದು ಸೂಕ್ತ ಎಂದು ಎಚ್ಚರಿಸಬೇಕಾಯಿತು.

ಕಾರಿನಲ್ಲಿ ದಾರಿಯುದ್ದಕ್ಕೂ ನಯಾಗರದ ಬಗೆಗೆ, ಈ ಊರಿನ ಕೆಲವೊಂದು ವಿಶೇಷಗಳ ಬಗೆಗೆ ಮಾತಾಡುತ್ತಾ ಸಾಗಿದೆವು. ಕೊರಕಲಿನ ಪಕ್ಕದಲ್ಲೇ ಸರ್ಪಾಕಾರದಲ್ಲಿ ಹೋಗುವ ಹಾದಿಯಲ್ಲಿ ಸಾಗಿ ಕೆಲ ಸಮಯದ ಬಳಿಕ ಉದ್ಯಾನವನವೊಂದಕ್ಕೆ ಬಂದೆವು. ಅಲ್ಲೊಂದು ಸಸ್ಯನಿರ್ಮಿತ ಗಡಿಯಾರ(Floral Clock)ವಿದೆ. ಆ ಪಾರ್ಕಿನ ಆಕರ್ಷಣೆಯೇ ಅದು. ಅದನ್ನು ನೋಡಿ ನಿಸಾರರು—'ಈಚೆಗೆ ನಮ್ಮ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಇದರದೇ ರೀತಿಯ ಗಡಿಯಾರವನ್ನು ನಿರ್ಮಿಸಿದ್ದಾರೆ. ಆದರೆ ನಯಾಗರ ಊರಿನ ಈ ಗಡಿಯಾರಕ್ಕೂ ಆ ಕೆಂಪು ತೋಟದಕ್ಕೂ ವ್ಯತ್ಯಾಸ ಆನೆ-ಆಡುಗಳ ನಡುವಣದ್ದು. ಇಲ್ಲಿ ಸಂಸಾರಿಗಳು ಮಕ್ಕಳೊಂದಿಗೆ ಪಿಕ್‌ನಿಕ್ ಆಚರಿಸುತ್ತಿದ್ದಾರೆ. ಮಕ್ಕಳಿಂದ ಹಿಡಿದು ದೊಡ್ಡವರ

ವರೆಗೂ ಐಸ್‌ಕ್ರೀಮ್, ಸ್ಯಾಂಡ್‌ವಿಚ್, ಕೇಕ್, ಮಫಿನ್, ಬರ್ಗರ್ ಇತ್ಯಾದಿಗಳನ್ನು ಮೆಲ್ಲುತ್ತಿದ್ದರೂ ಚೂರುಪಾರುಗಳನ್ನೋ, ಅವುಗಳನ್ನು ಸುತ್ತಿದ ಕಾಗದವನ್ನೋ ಅಲ್ಲಿಯೇ ಬಿಸುಡದೆ, ಗುಡ್ಡೆ ಮಾಡಿ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಕೊಂಚ ದೂರದಲ್ಲಿನ ಕಸದ ತೊಟ್ಟಿಗೆ ಹಾಕಿದ್ದನ್ನು ನೋಡಿದರೆ ಸಂತೋಷವಾಗುತ್ತದೆ. ಇಲ್ಲಿಯ ಜನಗಳು ಸಾರ್ವಜನಿಕ ಸ್ಥಳಗಳನ್ನು ತಮ್ಮ ಸ್ವಂತ ಮನೆಯೆಂಬಂತೆ ಚೊಕ್ಕಟವಾಗಿ ಇಡುವ ರೀತಿಯನ್ನು ನೋಡಿ ಹೆಮ್ಮೆಯಾಗುತ್ತದೆ. ಬಸ್ಸು, ರೈಲು, ರಸ್ತೆ, ಕಛೇರಿ, ಪಾರ್ಕ್ ಎಲ್ಲೆಂದರಲ್ಲಿ ಸಿಗರೇಟು, ಬೀಡಿ ತುಂಡುಗಳು, ಖಾಲಿ ಪ್ಯಾಕುಗಳು, ಕಡಲೇಕಾಯಿ, ಬಾಳೆಹಣ್ಣು ಸಿಪ್ಪೆ, ಕಸ-ಕಡ್ಡಿ, ಗುಟ್ಕಾ ಪಾನ್‌ಪರಾಗ್ ಉಗುಳು, ಸಿಂಬಳ, ಮೂತ್ರಾದಿಗಳಿಂದ ಗಬ್ಬೆಬ್ಬಿಸುವ ನಮ್ಮ ದೇಶದ ಬೇಜವಾಬ್ದಾರಿಯುತ ಬಹುತೇಕ ರಾಷ್ಟ್ರಕರಿಗೆ ಈ ವಿದೇಶೀಯ 'ಮೆಟೀರಿಯಲಿಸ್ಟಿಕ್ಕರು' ಮೇಲ್ಪಂಕ್ತಿಯಾಗಬೇಕೆಂದು ನನಗೆ ಅನ್ನಿಸುತ್ತಿದೆ' ಎಂದು ಕಳಕಳಿಯಿಂದ ನುಡಿದರು. ನಿಜವೇ.

ನಾವು ಪ್ರಯಾಣ ಮುಗಿಸಿ, ಡೆಟ್ರಾಯಿಟ್ ಮುಟ್ಟಿ ಅಲ್ಲಿಂದ ಕೊಂಚ ದೂರವಿರುವ ಟ್ರಾಯ್ ಉಪನಗರದಲ್ಲಿರುವ ನಮ್ಮ ಮನೆಯನ್ನು ಸೇರಿದಾಗ ಸಮಯ ಸಂಜೆ ಏಳೂವರೆಯಾಗಿತ್ತು. ಕೊಂಚ ಹೊತ್ತಿನ ಬಳಿಕ ಅಯೋವಾ ರಾಜ್ಯದಿಂದ ಮಗಳು ಶ್ರೀಮತಿ ಮಾಲಾಳ ಮನೆಗೆ ಕುಟುಂಬ ಪರಿವಾರ ಸಮೇತ ಬಂದಿದ್ದ ಶ್ರೀ ಸಿ. ಕೃಷ್ಣಶಾಸ್ತ್ರಿಗಳ ಮೊಟ್ಟ ಮೊದಲನೆಯ ಭೇಟಿ ನಿಸಾರರ ಜೊತೆ ನಮ್ಮ ಮನೆಯಲ್ಲೇ ಆಯಿತು. ಮೊದಲ ಭೇಟಿಯಲ್ಲೇ ಕೃಷ್ಣಶಾಸ್ತ್ರಿಗಳ ಮೆಲು ಮಾತಿನ ವಿನಮ್ರತೆ; ಅಕ್ಕರೆ, ವಿಶ್ವಾಸಗಳನ್ನು ಹೊಮ್ಮಿಸುವ ಸುಸಂಸ್ಕೃತ ನಡಾವಳಿ ನಿಸಾರರಿಗೆ ಮೋಡಿ ಹಾಕಿದವೆಂಬುದನ್ನು ಅವರ ಕಣ್ಣುಗಳು ಹೊರಸೂಸುತ್ತಿದ್ದವು. ನನಗೆ ಮತ್ತು ನನ್ನ ಪತ್ನಿ ವೇದಾಗೆ ಧನ್ಯವಾದಗಳನ್ನು ಹೇಳಿ ನಿಸಾರರು ಕೃಷ್ಣಶಾಸ್ತ್ರಿಗಳ ಕಾರನ್ನೇರಿ ಅವರ ಮಗಳು ಮಾಲಾಳ ಮನೆಗೆ ಹೊರಟರು. ನಿಸಾರರ ಜೊತೆ ಕಳೆದ ಆ ಎರಡು ದಿವಸಗಳು ನನ್ನ ಪಾಲಿಗೆ ನಿಜಕ್ಕೂ ಸಂತೋಷ ದಾಯಕವಷ್ಟೇ ಅಲ್ಲ, ಸಾಹಿತ್ಯ, ಸಂಸ್ಕೃತಿ, ಸಂಗೀತ ಇತ್ಯಾದಿ ವಿಷಯಗಳ ಬಗೆಗಿನ ನನ್ನ ತಿಳಿವಿನ ಪರಿಧಿಯನ್ನೂ ವಿಸ್ತರಿಸಿದ್ದವು. ಎರಡೇ ದಿನಗಳಲ್ಲಿ ನಾವು ತಿಂಗಳಾನುಗಟ್ಟಲೆಯ ಮೈತ್ರಿಯ ಸುಖವನ್ನು ಅನುಭವಿಸಿದೆವು.

ಎಪ್ಪತ್ತರ ದಶಕದಲ್ಲಿ ನಾನು ಬೆಂಗಳೂರಿನಲ್ಲಿದ್ದಾಗ ನನಗೆ ಅತ್ಯಂತ ಆಪ್ತರಾದ ಹಿರಿಯ ಚೇತನ ಅಡಿಗರ ದರ್ಶನ ಮಾಡಲು ಗಾಂಧಿ ಬಜಾರ್‌ಗೆ ಸಾಯಂಕಾಲದ ವೇಳೆ ಆಗಾಗ್ಗೆ ಹೋಗುತ್ತಿದ್ದೆ. ಹಿಂದೆ ಅಲ್ಲಿದ್ದ ಸನ್ಮಾನ್ ಹೋಟೆಲಿನಲ್ಲೊ, ಲಿಪಿ ಮುದ್ರಣ ದಲ್ಲೊ ಅವರು ತಮ್ಮ ಸಾಹಿತ್ಯ ಪರಿವಾರದೊಂದಿಗೆ ಮಾತುಕತೆ, ಚರ್ಚೆಗಳಲ್ಲಿ ತೊಡಗಿರು ತ್ತಿದ್ದರು. ನಾನು ಮೌನವಾಗಿ ಪ್ರೇಕ್ಷಕ ಮಾತ್ರವಾಗಿ ಅವರೆಲ್ಲರೂ ನಡೆಸುತ್ತಿದ್ದ ಸಂಭಾಷಣೆ ಯನ್ನು ಮೈಮರೆತು ಕೇಳುತ್ತಿದ್ದೆ. ಆಗ ನಿಸಾರರನ್ನು ಹಲವಾರು ಬಾರಿ ಕಂಡಿದ್ದೆ; ಕೆಲವೊಮ್ಮೆ ಮಾತನಾಡಿಸಿಯೂ ಇದ್ದೆ. ಆಗಿನ ಅವರ ಉತ್ಸಾಹ, ವಿಷಯಗಳನ್ನು ತಿಳಿಯಬೇಕೆನ್ನುವ ಸಹಜ ಕುತೂಹಲಾಸಕ್ತಿ ಮತ್ತು ಸ್ನೇಹಪರ ಸ್ವಭಾವ ಈಗಲೂ, ಅವರ ಈ ವಯಸ್ಸಿನಲ್ಲೂ

ಇರುವುದನ್ನು ಗಮನಿಸಿ ಅಚ್ಚರಿ ಹಾಗೂ ಸಂತಸ ಪಟ್ಟೆ. ನಿಸಾರರು ಕವಿಯಾಗಿ, ಗದ್ಯದ ಬರಹಗಾರರಾಗಿ ಎಷ್ಟು ಉದಾತ್ತರೋ ಮನುಷ್ಯರಾಗಿ, ಸ್ನೇಹಿತರಾಗಿ ಅಷ್ಟೇ ಸರಳರು, ಸುಲಭಲಭ್ಯರು ಮತ್ತು ಸಹೃದಯರು. ಅವರ ಗೆಳೆತನ ನನಗೆ ಸಂತುಷ್ಟಿ ನೀಡಿದೆ, ಧನ್ಯತೆಯನ್ನು ದಯಪಾಲಿಸಿದೆ.

ಅಂದಹಾಗೆ, ನಿಸಾರರು ಮೂರೂವರೆ ತಿಂಗಳುಗಳ ಅಮೇರಿಕದ ವ್ಯಾಪಕವಾದ ಪ್ರವಾಸವನ್ನು ಮುಗಿಸಿ, ಹೋದೆಡೆಯಲ್ಲೆಲ್ಲ ಕನ್ನಡದ ಕಂಪನ್ನು ಪಸರಿಸುವ ಉಪನ್ಯಾಸ ಗಳನ್ನು ನೀಡಿ, ಭಾರತಕ್ಕೆ ಮರಳಲು ಡೆಟ್ರಾಯಿಟ್ ನಗರಕ್ಕೆ ಮರಳಿ ಬಂದರು. ಆಗ ಅವರು, ಸಾಹಿತ್ಯಾಸಕ್ತರೂ ನಿಸಾರ್ ಅವರ ಅಭಿಮಾನಿಗಳೂ ಆದ ಡಾ. ತೇಜೋಮೂರ್ತಿ ಕರ್ತಾಳ್ ಮತ್ತು ಡಾ. ನಂದಿನಿಯವರ ಮನೆಯಲ್ಲಿ ಒಂದೆರಡು ದಿನ ತಂಗಿದ್ದರು. ಅಲ್ಲಿ ಮತ್ತೆ ಅವರ ಸಾರಸ್ವತ ಲೋಕದ ಬಗೆಗಿನ ವಿಚಾರಗಳನ್ನು ಆಲಿಸುವ ಮತ್ತು ಸ್ವರಚಿತ ಕವನಗಳನ್ನು ಭಾವಪೂರ್ಣ ಹಾಗೂ ನಾಟಕೀಯವಾಗಿ ರಸಾನುಭವಿಸುವ ಸದವಕಾಶ ನನಗೆ ದೊರಕಿತು.

ಇದಲ್ಲದೆ, ನಾನು ಕಳೆದ ವರ್ಷ ಬೆಂಗಳೂರಿಗೆ ಹೋಗಿದ್ದಾಗ ಅವರ ಮನೆಗೆ ಹೋಗಿ ಅವರನ್ನು ಭೇಟಿ ಮಾಡಿ ಒಂದೆರಡು ತಾಸು ಕಾಲ ಕಳೆದು ಬಂದೆ. ಆ ದಿವಸ ಅವರ ಸವಿ ಮಾತುಗಳ ಜೊತೆಗೆ, ನೀಡಿದ ಆತಿಥ್ಯ ನಿಜಕ್ಕೂ ಚಿರ ಸ್ಮರಣೀಯ. ನಿಸಾರರಂಥ ಸಜ್ಜನರು ನೂರು ಕಾಲ ಬಾಳಲಿ, ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಲಿ.

ಕಷ್ಟ, ನಷ್ಟಗಳು ಅಮರಿಕೊಂಡಾಗ ಮಾತ್ರ ಮನುಷ್ಯರು ಧರ್ಮಿಷ್ಠರಾಗುತ್ತಾರೆ; ದೇವರನ್ನು ಪೂಜಿಸಿ ಪ್ರಾರ್ಥಿಸುತ್ತ ಮೊರೆ ಹೋಗುತ್ತಾರೆ. ಉಳಿದಂತೆ ಅವರಿಗೆ ಭಗವಂತನ ನೆನಪು ಕೂಡ ಮೂಡದು—ಎನ್ನುತ್ತಾರೆ ದೊಡ್ಡವರು. ನರರ ಈ ನಡತೆ ನೂರಕ್ಕೆ ನೂರರಷ್ಟು ತಪ್ಪು ಎನ್ನಲು ಸಾಧ್ಯವೆ? ವ್ಯಾಧಿ ವಿಷಮಿಸ ದಿದ್ದರೆ ವಿನಾಕಾರಣ ವೈದ್ಯನನ್ನು ಕಾಣಲು ಯಾರು ತಾನೆ ಹೋಗುತ್ತಾರೆ? ವಾಸಿಗೊಳಿಸು ಎಂದು ಅಲವತ್ತುಕೊಳ್ಳುತ್ತಾರೆ? ಸ್ಕೂಟರ್ ಕೆಟ್ಟು ತ್ರಾಸ ನೀಡದಿದ್ದರೆ ಮೆಕ್ಯಾನಿಕ್‌ನ ನೆನಪು ಯಾರಿಗೆ ಬರುತ್ತದೆ?

(ಸಂಕಟ ಬಂದಾಗ ವೆಂಕಟರಮಣ—ವರ್ತನೆ ತಪ್ಪೆ?)

✧ ✧ ✧

ಮನುಷ್ಯನ ಧರ್ಮಾನುಸರಣೆಯೊಂದೇ ಮುಖ್ಯವಲ್ಲ. ಅದು ಯಾವುದೇ ಇದ್ದೀತು. ಎಲ್ಲ ಶ್ರದ್ಧಾವಿಶ್ವಾಸಗಳ, ಮತಧರ್ಮಗಳ ಕೊನೆಯ ಗಂತವ್ಯ ಮನುಷ್ಯನ ಉತ್ತಮಿಕೆಯೆ, ಸತ್ಯ ದರ್ಶನವೆ, ಪರ ಸತ್ತ್ವಾನುಸಂಧಾನವೇ.

(ಧರ್ಮದ ಗುರಿ)



ತುಂಬು ಪ್ರೀತ್ಯಾದರದ ಶ್ರೇಷ್ಠ ಕವಿ ನಿಸಾರ್

♦ *ಸಂಧ್ಯಾ ರವೀಂದ್ರನಾಥ್*
ಮಿಲ್‌ಪಿಟಾಸ್ (ಕ್ಯಾಲಿಫೋರ್ನಿಯ)

ಎಪ್ಪತ್ತರ ದಶಕದ ಕೊನೆಯಲ್ಲಿ ಕೆನಡಾದ ಅಟ್ಟಾವಾ (ottawa) ನಗರದಲ್ಲಿ ಮನೆ ಹೂಡಿದ್ದ ನಮಗೆ ಕನ್ನಡದ ಸಂಪರ್ಕ ಸಂಪೂರ್ಣವಾಗಿ ಕಡಿದು ಹೋಗಿತ್ತು ಎಂದೇ ಹೇಳಬಹುದು. ಆಗ ನನಗೆ ಕನ್ನಡ ಓದಲು ಸಿಗುತ್ತಿದ್ದುದು ಹದಿನೈದು ದಿನಗಳಿಗೊಮ್ಮೆ ತಪ್ಪದೆ ಬರುತ್ತಿದ್ದ ಅಮ್ಮನ ಪತ್ರದ ನೀಲಿಯ ಏರ್‌ಮೆಯಿಲ್ ಮಾತ್ರ. ಪತ್ರವನ್ನು ಕಂಡ ಕೂಡಲೆ ಹೃದಯ ಹಿಗ್ಗಿ, ಮುಖವರಳುತ್ತಿತ್ತು. ಹೀಗೆ ಒಮ್ಮೆ ಅಮ್ಮ ಗೌರಿ ಹಬ್ಬಕ್ಕೆಂದು ಒಂದು ಪಾರ್ಸೆಲ್ ಕಳಿಸಿದಾಗ, ಅದರಲ್ಲಿರುವ ಅರಿಶಿಣ, ಕುಂಕುಮ, ಸೀರೆಯ ಜೊತೆಗೆ ಒಂದು ಧ್ವನಿ ಸುರುಳಿಯೂ ಇತ್ತು. 'ನಿತ್ಯೋತ್ಸವ' ಎಂಬ ಹೆಸರಿನ ಕನ್ನಡದ ಮೊಟ್ಟ ಮೊದಲ, ಸುಗಮ ಸಂಗೀತದ ಧ್ವನಿ ಸುರುಳಿ! ಸುಗಮ ಸಂಗೀತ ಪ್ರೇಮಿಯಾದ ನನಗೆ ಇದು ಅಮ್ಮನ ಕಾಗದದಷ್ಟೇ ಆಪ್ಯಾಯಮಾನವಾಗಿಬಿಟ್ಟಿತು. ತವರನ್ನು, ಕನ್ನಡವನ್ನು ಮತ್ತೆ ಮತ್ತೆ ನನಗೆ ನೆನಪು ಮಾಡಿಕೊಡಲು ಸಾಧನವಾಯಿತು ಈ ಧ್ವನಿ ಸುರುಳಿ. ತವರಿನ ತುಣುಕನ್ನು ಸುಮಧುರವಾದ ಹಾಡಿನ ರೂಪದಲ್ಲಿ ಕೊಡುಗೆಯಾಗಿ ತಂದಿತ್ತ ಈ ಧ್ವನಿ ಸುರುಳಿಯನ್ನು ಇಂದಿಗೂ ನಾನು ಜತನದಿಂದ ಕಾಪಾಡಿಕೊಂಡು ಬಂದಿದ್ದೀನಿ ಮತ್ತು ಅದರಲ್ಲಿನ ಹಾಡುಗಳನ್ನು ಕೇಳಿ, ಕಲಿತು, ಹಾಡಿ ಗಂಟೆಗಟ್ಟಲೆ ಬೇಸರವನ್ನು ನಿವಾರಿಸಿಕೊಂಡಿದ್ದೀನಿ.

ರೇಡಿಯೋ, ಟಿ.ವಿ. ಮುಂತಾದ ಮಾಧ್ಯಮದಲ್ಲಿ ಕನ್ನಡ

ಕಾಣದಿದ್ದ/ಕೇಳದಿದ್ದ ನಮಗೆ, ಅಂದರೆ ಹೊರ ನಾಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರಿಗೆ, ಈ ಧ್ವನಿ ಸುರುಳಿಯ ಸಂಗೀತ ತವರೂರಿಗೆ ಒಂದು ಸೇತುವೆಯನ್ನು ನಿರ್ಮಿಸಿತು. ಪ್ರಾಯೋಗಿಕ ವಾದ ಆ ಧ್ವನಿ ಸುರುಳಿ ನಮಗೊಂದು ವರದಂತೆ ಒದಗಿ ಬಂತು. ಅದನ್ನು ಕನ್ನಡಕ್ಕೆ ಬಳುವಳಿ ನೀಡಿದವರು. ಪ್ರೊ|| ನಿಸಾರ್ ಅಹಮದ್ ಮತ್ತು ಮೈಸೂರು ಅನಂತ ಸ್ವಾಮಿ ಅವರು. ಹೀಗೆ ಪ್ರಾರಂಭವಾದ ಈ ಪ್ರಯೋಗ ಸುಗಮ ಸಂಗೀತದ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿತು. ಅದರ ಹರಿಕಾರ ನಿಸಾರ್ ಅಹಮದ್ ಅವರಿಗೆ ಹೊರ ನಾಡ ಕನ್ನಡತಿಯಾದ ನನ್ನ ಧನ್ಯವಾದಗಳನ್ನು ಸಲ್ಲಿಸಲೇಬೇಕು.

ಇಂತಹ 'ನಿತ್ಯೋತ್ಸವ'ದ ನಿಸಾರ್ ಅವರನ್ನು ನಾನು ಭೇಟಿಯಾಗಿದ್ದು ೨೦೦೨ರಲ್ಲಿ. ಈಗ ನಮ್ಮ ವಾಸಸ್ಥಾನ ಕ್ಯಾಲಿಫೋರ್ನಿಯಾದ 'ಮಿಲ್ಪಿಟಾಸ್' (Milpitas) ನಗರವಾಗಿದೆ. ಅಂದು ಸಂಜೆ ನಮ್ಮ ಮನೆಯಲ್ಲಿ ಎಲ್ಲಿಲ್ಲದ ಸಂಭ್ರಮ. ೨೦೦೨ರ ವಿಶ್ವಕನ್ನಡ ಸಮ್ಮೇಳನಕ್ಕೆ ವಿಶೇಷವಾಗಿ ಆಹ್ವಾನಿತಗೊಂಡಿದ್ದ ನಿಸಾರ್ ಅವರು ಸ್ಯಾನ್‌ಫ್ರಾನ್ಸಿಸ್ಕೋ ನಗರದ ಪ್ರದೇಶದಲ್ಲಿ ಕೆಲವು ದಿನಗಳನ್ನು ಕಳೆಯಲು ಬಂದಿದ್ದರು. ಅವರ ಜೊತೆ ಸಮಯ ಕಳೆಯಲೆಂದು ನಮ್ಮ ಕೆಲವು ಕನ್ನಡದ ಸ್ನೇಹಿತರನ್ನು ಕರೆದು ಸಂತೋಷ ಕೂಟವೊಂದನ್ನು ಏರ್ಪಡಿಸಿದ್ದೆ. ನಮ್ಮಲ್ಲಿ ಯಾರಿಗೂ ನಿಸಾರ್ ಅವರ ಮುಖತಃ ಪರಿಚಯವಿರಲಿಲ್ಲ. ಕೇವಲ ಅವರ ಗೀತೆಗಳ ಪರಿಚಯವಿತ್ತು ಅಷ್ಟೆ. ಕನ್ನಡ ಕೂಟದಲ್ಲಿ ಕನ್ನಡಾಭಿಮಾನವನ್ನು ಎತ್ತಿ ಹಿಡಿದಿದ್ದ ಅವರ ಭಾಷಣವನ್ನು ಕೇಳಿ ನಾವೆಲ್ಲ ಮಾರುಹೋಗಿದ್ದೆವು. ಅವರನ್ನು ಕಂಡೊಡನೆ ನನಗಂತೂ ನಮಗೆ ಆಪ್ತರಾದ, ಮನೆಯಲ್ಲಿ ಎಲ್ಲರ ಪ್ರೀತಿ ಆದರ ಗೌರವಗಳಿಗೆ ಪಾತ್ರರಾಗಿ ರುವ, ನಿಕಟ ಸಂಬಂಧಿಯಾದ ಹಿರಿಯ ವ್ಯಕ್ತಿಯಂತೆ ಕಂಡು ಬಂದಿದ್ದರು ಅವರು. ತಲೆ ಬಾಗಿ ವಿನೀತಳಾಗಿ ವಂದನೆ ಮಾಡುವಂತಹ ಭಾವನೆಯನ್ನು ಹೊರಹೊಮ್ಮಿಸಿತ್ತು ಅವರ ನಡವಳಿಕೆ, ಮಾತುಕತೆ ಮತ್ತು ರೀತಿ ನೀತಿ.

ಊಟವಾದ ಅನಂತರ ಅವರೊಡನೆ ಸ್ನೇಹಪರ ಮಾತುಕತೆ ನಡೆಯುತ್ತಿರುವಾಗ, ಅವರಿಗೆ ಕನ್ನಡದಲ್ಲಿ ಆಸಕ್ತಿ ಹುಟ್ಟಿಸಿದ, ಅಭಿರುಚಿ ಕೆರಳಿಸಿದ ವ್ಯಕ್ತಿಗಳ ಬಗ್ಗೆ ಹೇಳಿದರು. 'ತಂಪು ಹೊತ್ತಿನಲ್ಲಿ ಅವರನ್ನು ನೆನೆಯುತ್ತೇನೆ' ಎಂದರು. ಅವರ ಒಂದೆರಡು ಕವನಗಳ ವಾಚನವೂ ಆಯಿತು. ಆಗ ಯಾರೋ ಹಾಡುಗಳನ್ನು ಹೇಳಲು ಕೇಳಿದರು. ಸರಿ, ನಮ್ಮಲ್ಲಿ ಕೆಲವರು ಅವರ 'ನಿತ್ಯೋತ್ಸವ'ವನ್ನು ಹೇಳೋಣ ಎಂದು ನಿರ್ಧರಿಸಿ, ಅದನ್ನು ಶುರುಮಾಡಿದೆವು. ಆ ಹಾಡಿನ ಪಲ್ಲವಿಯನ್ನು ಶುರು ಮಾಡಿದ್ದವರು ೫-೬ ಜನರಾದರೂ ಹಾಡುತ್ತಾ ಹಾಡುತ್ತಾ ಧ್ವನಿಗೆ ಧ್ವನಿ ಸೇರಿ, ಕಡೆಗೆ ಅಲ್ಲಿ ನೆರೆದಿದ್ದ ೫೦-೬೦ ಜನರೆಲ್ಲಾ ಧ್ವನಿಗೂಡಿಸಿ, 'ಜೋಗದ ಸಿರಿ'ಯನ್ನು ಹಾಡಿದೆವು. ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಒಮ್ಮನಸ್ಸಿನಿಂದ, ಒಕ್ಕೊರಲಿನಿಂದ ಎಲ್ಲರೂ ಹಾಡಿದೆವು. ಭಾವೈಕ್ಯದಿಂದ ಹಾಡಿದ ಈ ಸಮೂಹ ಗಾನ ಎಲ್ಲರಿಗೂ ತೃಪ್ತಿ ನೀಡಿತ್ತು. ಹೃದಯ ತುಂಬಿ ಬಂದ ನಿಸಾರ್ ಅವರ ಕಣ್ಣುಗಳೂ ತುಂಬಿ ಬಂದಿದ್ದವು. ಇದು ನಾವು ಯಾರೂ ಸ್ಕೂಲು, ಕಾಲೇಜಿನಲ್ಲಿ ಕಲಿತ ಗೀತೆ ಯಲ್ಲ. ಅಥವಾ ಎಲ್ಲರಿಗೂ ತಿಳಿದಿರುವ ಭಕ್ತಿಗೀತೆಯೋ, ರಾಷ್ಟ್ರಗೀತೆಯೋ ಅಲ್ಲ. ಆದರೂ ನಮ್ಮೆಲ್ಲರಿಗೂ ಈ ಕವಿತೆಯ ಪ್ರತಿ ಪದವೂ ಗೊತ್ತಿತ್ತು. ಈ ಗೀತೆಯ ರಾಗ, ಹಾಡುವ

ಕ್ರಮ ತಿಳಿದಿತ್ತು. ಯಾರೂ ಘೋಷಿಸದೆಯೇ, ಯಾರ ಒತ್ತಾಯವೂ ಇಲ್ಲದೆಯೇ ಈ ಗೀತೆ ಸ್ವತಃ 'ನಾಡಗೀತೆ'ಯಾಗಿ ಬಿಟ್ಟಿದೆ—ಎನ್ನಿಸಿತು. ಇದು ನನಗೆ ವಿಸ್ಮಯದ ಸಂಗತಿಯಾಗಿತ್ತು. ಈ ಕವಿತೆಗೆ ಹೊಂದುವಂತೆ, ಚಿರ ಕಾಲ ನಮ್ಮ ಮನದಲ್ಲಿ ಉಳಿಯುವಂತೆ ರಾಗ ಸಂಯೋಜನೆ ಮಾಡಿದವರು ಮೈಸೂರು ಅನಂತ ಸ್ವಾಮಿಯವರು. ಇಂತಹ ಸ್ಫೂರ್ತಿದಾಯಕವಾದ, ಅವಿಸ್ಮರಣೀಯವಾದ ಗೀತೆಯನ್ನು ನಮಗೆ ನೀಡಿದ ನಿಸಾರ್ ಅಹಮದ್ ಮತ್ತು ಅನಂತಸ್ವಾಮಿ ಜೋಡಿಗೆ ಹೊರ ನಾಡ ಕನ್ನಡಿಗರ ಪರವಾಗಿ ಅನಂತ ನಮನಗಳು.

ಅಂದು ಮಾತನಾಡುತ್ತ ನಿಸಾರ್ ಅವರು, ತಾವು ಶಿವಮೊಗ್ಗದಲ್ಲಿ ಕಳೆದ ದಿನಗಳ ಬಗ್ಗೆ ಪ್ರಸ್ತಾಪಿಸಿದರು. 'ಶಿವಮೊಗ್ಗ ನನ್ನ ಸೃಜನಶೀಲ ಚಟುವಟಿಕೆಗಳ ಕಣ ಹಾಗೂ ನಾನು ನನ್ನ ಹೆಚ್ಚಿನ ಕಾಲೇಜು ಅಧ್ಯಾಪನದ ದಿನಗಳನ್ನು ಅಲ್ಲಿ ಕಳೆದಿದ್ದೀನಿ. ಅಲ್ಲಿನ ಪರಿಸರಕ್ಕೆ ನಾನು ಸದಾ ಆಭಾರಿ' ಎಂದರು. ಶಿವಮೊಗ್ಗ ಮತ್ತು ಅದರ ಸುತ್ತಮುತ್ತಲಿನ ಪರಿಸರ ನಿಸಾರ್ ಅವರಿಗೆ ಬಹಳಷ್ಟು ಸ್ಫೂರ್ತಿದಾಯಕವಾಗಿದೆ. 'ಜೋಗದ ಸಿರಿ ಬೆಳಕಿನಲ್ಲಿ' ಎನ್ನುವ ಮೂರು ಪದಗಳಲ್ಲಿ ಜೋಗದ ಜಲಪಾತವಿದೆ, ಅಲ್ಲಿಯ 'ಟರ್ಬೈನ್'ಗಳು ಉತ್ಪತ್ತಿ ಮಾಡುವ ವಿದ್ಯುಚ್ಛಕ್ತಿ ಇದೆ, ಅದರಿಂದ ಕರ್ನಾಟಕದ ಊರು, ಕೇರಿ, ಮನೆ ಮನೆಗಳನ್ನು ಬೆಳಗುವ ಸಿರಿ ಬೆಳಕಿದೆ. ಅಂತೆಯೇ 'ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ' ಎನ್ನುವಾಗ ಕೇವಲ ಎತ್ತರದ ಬೆಟ್ಟಗಳ ಶ್ರೇಣಿಯ ನೆನಪಷ್ಟೇ ಅಲ್ಲ, ಅದರಲ್ಲಿ ಹುದುಗಿರುವ ಕಬ್ಬಿಣದ ಅದಿರು, ಅದನ್ನು ಕಬ್ಬಿಣದ ಸರಳು, ಸಲಾಕೆ ಮತ್ತಿತರ ನಿತ್ಯೋಪಯೋಗದ ಸಾಧನಗಳಾಗಿಸುವ ಭದ್ರಾವತಿಯ ಕಾರ್ಖಾನೆ ಎಲ್ಲ ನೆನಪಾಗುತ್ತವೆ. ಇಂತಹ ಅರ್ಥಗರ್ಭಿತ, ಚಮತ್ಕಾರಭರಿತ ಪದ ಪುಂಜಗಳನ್ನು ಬಳಸುವ ನಿಸಾರ್ ಅವರ 'ನಾನು ಮತ್ತು ನನ್ನ ಕಾವ್ಯ' ಹೆಸರಿನ ಲೇಖನದಲ್ಲಿ, ಶಿವಮೊಗ್ಗದಲ್ಲಿ ಅವರು ಕಳೆದ ದಿನಗಳನ್ನು 'ಬದುಕೇ ಭಾವಗೀತವಾದ ನನ್ನ ಸೃಜನಾತ್ಮಕತೆಯ ಮಧುಗಾಲ' ಎನ್ನುತ್ತಾರೆ. 'ಮುಂದೆ ಬೆಂಗಳೂರಿಗೆ ಮರಳಿದಾಗ, ಈ ನಗರದ ಧಾವಂತದ, ಹೆಜ್ಜೆಹೆಜ್ಜೆಗೂ ಎದೆ ಡವಡವಿಸುವ, ಮನವನ್ನು ಮರ್ಕಟವಾಗಿಸುವ ಜೀವನದ ನಟ್ಟನಡುವಿದ್ದೂ ನೆಮ್ಮದಿಯ ಚಿತ್ತೈಕಾಗ್ರತೆಯನ್ನು ದಕ್ಕಿಸಿಕೊಳ್ಳುವ ಮಾನಸಿಕ ಸಾಧನವೊಂದನ್ನು ನನಗರಿಯದೆಯೇ ಶಿವಮೊಗ್ಗೆಯಿಂದ ಹೊತ್ತು ತಂದಿದ್ದೆ—'ಹಲಸಿನ ಹಣ್ಣನ್ನು ಬಿಡಿಸುವ ಮುಂಚೆ ಕೈಗಳಿಗೆ ಎಣ್ಣೆ ಹಚ್ಚಿಕೊಂಡಂತೆ' ಎಂದಿದ್ದಾರೆ.

ಈ ಮಾತು ತಾಯ್ನಾಡಿನಿಂದ ದೂರವಾದ ವಿದೇಶದಲ್ಲಿ ಬಾಳುತ್ತಿರುವ ನನಗೆ ಚೆನ್ನಾಗಿ ಅರ್ಥವಾಗುತ್ತದೆ. ದ್ವಂದ್ವ ಜೀವನ ನಡೆಸುವಾಗ ಹೀಗೆ ಹಲಸಿನ ಅಂಟು ತಟ್ಟದಂತೆ ಎಣ್ಣೆ ಹಚ್ಚಿಕೊಳ್ಳುವಂತಹ ಉಪಾಯವನ್ನು ಕಂಡುಹಿಡಿದುಕೊಳ್ಳಬೇಕಾಗುತ್ತದೆ. ಇದನ್ನೇ ನಾನು 'ಟೆಫ್ಲಾನ್ ಕೋಟಿಂಗ್' (Teflaan quoting) ಎನ್ನುತ್ತೇನೆ. ನಮ್ಮ ನಾಡು, ಭಾಷೆ ಸಂಸ್ಕೃತಿಯಿಂದ ಬಲು ದೂರ, ಹೊಸ ದೇಶವೊಂದರಲ್ಲಿ ವಾಸಿಸುವಾಗ ಇಂತಹ 'ಎಣ್ಣೆ'ಯ ಪದರ ಅವಶ್ಯಕವಾಗುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಕನ್ನಡ ಸಾಹಿತ್ಯ, ಸುಗಮ ಸಂಗೀತ ಹಾಗೂ ಕ್ಯಾಲಿಫೋರ್ನಿಯಾದ ಅಪ್ರತಿಮ ಪ್ರಕೃತಿ ಸೌಂದರ್ಯ ನನಗೆ ಈ ಬಗೆಯ ಸಾಧನವಾಗಿದೆ.

ಇಂತಹ ಸ್ಥಳಗಳಿಗೆ ಒಂದೆರಡು ದಿನ ಹೋಗಿ ಬಂದರೆ ಸಿಲಿಕಾನ್ ವ್ಯಾಲಿಯ ಗಡಿಬಿಡಿಯ ಜೀವನದ ಧಾವಂತವನ್ನು ತಡೆದುಕೊಳ್ಳುವ ಶಕ್ತಿ ಸಿಗುತ್ತದೆ. ಆ 'ಟ್ರಿಪ್ಪಿ'ನಲ್ಲಿ ಕನ್ನಡದ ಸುಗಮ ಸಂಗೀತ ಕೇಳುತ್ತಿದ್ದರಂತೂ ಪಯಣಿಸಿದ ದಣಿವು ತೋರುವುದೇ ಇಲ್ಲ.

ನಿಸಾರರ ಕವಿತೆಗಳ ಕೆಲವು ಧ್ವನಿ ಸುರುಳಿಗಳೆಂದರೆ 'ನಿತ್ಯೋತ್ಸವ', 'ಸುಮಧುರ', 'ನವೋಲ್ಲಾಸ' ಮತ್ತು ಇತ್ತೀಚಿನ 'ಹೊಂಬೆಳಗು'. ಇಲ್ಲಿಯ ಕವನಗಳಲ್ಲಿ ಮೂಡಿರುವ ಭಾವನೆಗಳು ಅನೇಕ ರೀತಿಯವು. ಇಲ್ಲಿ ಸಂಗಾತಿಯನ್ನು ಸೇರುವ ಕಾತರವಿದೆ, ಜೊತೆಯಲ್ಲಿ ಇಲ್ಲದಿದ್ದಾಗ ತೋರಿ ಬರುವ ಬೇಸರವಿದೆ, ಕಷ್ಟಪಟ್ಟರೂ ಮರೆಯಲಾಗದ ನೆನಪುಗಳಿವೆ. ಬೆಣ್ಣೆಗಳ್ಳ ಕೃಷ್ಣನ ಬೆರಳಂಚಿನಲ್ಲಿ ಮೆತ್ತಿರುವ ಬೆಣ್ಣೆ ಇದೆ; ಅದನ್ನು ನೋಡಿ ಕಾಳಿಯಂತಾದ ತಾಯಿ ಇದ್ದಾಳೆ. ಪ್ರಕೃತಿಯ ವರ್ಣನೆ ಇದೆ; ಬೇಸರದ ಸಂಜೆ ಇದೆ; ಕುರಿಗಳ ಮಂದೆ ಇದೆ; ಸಗ್ಗದ ಸಿರಿಯ ನಿತ್ಯೋತ್ಸವವಿದೆ.

ನಿಸಾರರ ಪದ ಪ್ರಯೋಗದಲ್ಲಿ ನನ್ನ ಮನಸ್ಸಿನಲ್ಲಿ ಉಳಿದಿರುವ ಕೆಲವು ಪದಗಳು: 'ಸಿತಾರಿಣಿ', 'ರಮ್ಯೋದ್ಯಾನ', 'ನಗರೋಪವನ' ಇತ್ಯಾದಿ. ಅಂತೆಯೇ 'ಹಚ್ಚನೆ ಹಸುರಿಗೆ ಹಸೆ ಇಡುತಿರುವೀ ಖಗ ಗಾನ' 'ಉಷೆ ಬಿಡಿಸಿದ ರಂಗೋಲಿಯ ಚುಕ್ಕಿ', 'ಕೊಳದೆದೆಯಲಿ ಅಲೆಗಾಗಿದೆ ಹೊಂಬೆಳಕಿನ ಜಳಕ', 'ನೆಲವೆಣ್ಣಿನ ಮೈ ಗರಿಕೆಗೆ ಇಬ್ಬನಿಗಳ ಪುಳಕ'—ಇವೇ ಮೊದಲಾದುವುಗಳಲ್ಲಿ ಹೊಸತನವಿದೆ. ಪ್ರಕೃತಿಯ ಚೆಲುವನ್ನು ಒಂದು ಚಿತ್ರದ ಮಾದರಿಯ ಚೌಕಟ್ಟಿನಲ್ಲಿ ಹಿಡಿದು ಇಡುವ ಚಾತುರ್ಯ ಇದೆ.

ರಾಜಕೀಯ ವಿಡಂಬನೆಯಾದ 'ಕುರಿಗಳು, ಸಾರ್, ಕುರಿಗಳು' ಬರೆದು ನಾಲ್ಕಕ್ಕೂ ಹೆಚ್ಚು ದಶಕಗಳೇ ಕಳೆದಿದ್ದರೂ ಇಂದಿಗೂ ಅದು ಪ್ರಸ್ತುತವೆನ್ನಿಸುವ ಪದ್ಯ. ಇದು ಮೇಲ್ನೋಟಕ್ಕೆ ವಿಡಂಬನ ಕವಿತೆಯಂತೆ ಕಂಡರೂ ಆ ಕುರಿಗಳ ಅರ್ಥಾತ್ ನಮ್ಮ ಜನಗಳ ಸ್ಥಿತಿಗತಿಗಳನ್ನು ನೋಡಿ ಅಯ್ಯೋ ಎನ್ನಿಸುತ್ತದೆ, ವಿಷಾದವೆನಿಸುತ್ತದೆ, ವ್ಯಸನವಾಗುತ್ತದೆ. ಹಾಸ್ಯಕ್ಕೂ, ವಿಷಾದಕ್ಕೂ ಇರುವ ಅಂತರ ಒಂದು ತೆಳ್ಳನೆಯ ಗೆರೆ ಮಾತ್ರ. ನಮ್ಮ ಮನೆಗೆ ಅವರು ಬಂದಿದ್ದಾಗ ನಾನು ಬರೆದ ಒಂದು ಪದ್ಯವನ್ನು ಕೇಳಿ ಈ ಮಾತನ್ನೇ ಅವರು ನುಡಿದರು. (ನನ್ನ ಪದ್ಯ ಬೆಂಗಳೂರಿನಲ್ಲಿ ಕನ್ನಡದ ಅವಸ್ಥೆಯನ್ನು ಕುರಿತು ಬರೆದದ್ದು: ಅಪ್ಪ, ಅಮ್ಮ ಹೋಯ್ತು; ಡ್ಯಾಡಿ, ಮಮ್ಮಿ ಬಂತು; ಅಜ್ಜಿ ಮಾತಿನಲ್ಲೂ ಪ್ಲೀಸ್ ಥ್ಯಾಂಕ್ಯೂ ಕೇಳಿ ಬಂತು; ಅಂಕಲ್ ಆಂಟಿ ಎನುತ ಕೆಲಸದವಳೂ ಕೂಡ ಇಂಗ್ಲಿಷಲ್ಲೆ ಕ್ಲೀನ್ ಮಾಡೋ ಕಾಲವಿಂದು ಬಂತು......ಇತ್ಯಾದಿ.....ಇತ್ಯಾದಿ.)

ನಿಸಾರ್ ಅವರ ಕವಿತೆಗಳನ್ನು ಕೇಳಿ ಆನಂದಿಸಿದ್ದಷ್ಟೇ ಅಲ್ಲದೆ, ನಾನು ಮತ್ತು ನನ್ನ ಪತಿ ರವಿ, ಹಲವಾರು ಬಾರಿ ಅವುಗಳನ್ನು ಇಲ್ಲಿನ ಕನ್ನಡ ಕೂಟದಲ್ಲಿ ಹಾಡಿದ್ದೇವೆ; ಸಂತೋಷಪಟ್ಟಿದ್ದೇವೆ. ಕೆನಡಾದಲ್ಲಿದ್ದಾಗ ಮೊಟ್ಟಮೊದಲ ಬಾರಿಗೆ ಕನ್ನಡಿಗರೆಲ್ಲ ಸೇರಿ ಯುಗಾದಿ ಹಬ್ಬವನ್ನು ಆಚರಿಸಿದೆವು. ಆಗ ಹಾಡಿದ ಗೀತೆಗಳಲ್ಲಿ, ಅಮ್ಮ ಕಳಿಸಿದ 'ನಿತ್ಯೋತ್ಸವ' ಧ್ವನಿ ಸುರುಳಿಯಿಂದ ಕಲಿತ ಗೀತೆ 'ಮತ್ತದೇ ಬೇಸರ'ವೂ ಒಂದು. 'ಗಜಲ್'ಗಳಷ್ಟೇ ಸುಂದರವಾದ ಕನ್ನಡದ ಗೀತೆಗಳು ಎಂಬ ಹೆಮ್ಮೆಯಿಂದ, ಮೆಚ್ಚುಗೆ

ಯಿಂದ ಈ ಗೀತೆಗಳನ್ನು ಇನ್ನೂ ಹಾಡುತ್ತಿದ್ದೇವೆ.

ಪ್ರೇಮ, ವಿರಹ, ಕಾಡುವ ನೆನಪು ಇಂತಹ ಭಾವವೇ ಆದರೂ ಅದನ್ನು ರಾಗ ರಾಗ ವಾಗಿ, ರಂಗುರಂಗಾಗಿ ಹಾಡಲು ಆಗ್ರಹಿಸುವ ಹುರುಪು, ಜಾಣ್ಮೆ ನಿಸಾರರ ಕವನಗಳಲ್ಲಿದೆ. ಕವನಗಳಷ್ಟೇ ಏಕೆ, ಕೇವಲ ಶೀರ್ಷಿಕೆಗಳನ್ನೇ ಜೋಡಿಸಿದರೆ ಒಂದು ಕವನವಾಗಬಹುದು! ಇವರ ಆಯ್ದ ಗೀತೆಗಳ ಕೆಲವು ಶೀರ್ಷಿಕೆಗಳನ್ನು ಹೆಣೆದು ಒಂದು ಪದ್ಯ ಮಾಡುವ ಸಾಹಸ ಮಾಡಿದ್ದೀನಿ.


1) ನಿನ್ನ ನೆರವಿಲ್ಲದೆಯೆ
ನನ್ನ ನಲವಿನ ಬಳ್ಳಿ
ಮತ್ತದೇ ಬೇಸರದಲ್ಲಿ ನಲುಗುತ್ತಿರಲು
ನಿನ್ನಿಂದ ನಾನೆಂದು
ನಿನ್ನ ಸಂಗ ಬಯಸಿ ಬಂದೆ
ನಾ ನಿನ್ನ ಕಂಡಾಗ
ನೀ ನುಡಿಯದಿರಲೇನು
ನನ್ನ ಬಾಳಿಗೆ ಸವಿಯ ತಂದ
ನಿನ್ನ ಅನುರಾಗದಿಂದಾಯ್ತು
ಪ್ರೇಮೋತ್ಸವ!

2) ನಿನ್ನ ನೆನಪು ಕಾಡದಂತೆ
ಎಲ್ಲ ಮರೆತಿರುವಾಗ
ಈ ಗಳಿಗೆಯೆ ಮೈ ತಾಳಿತು ಎನುವಂತೆ
ಬಾಗಿಲಿಗೆ ನೀ ಬಂದು ಒಲವಿಂದ ಕರೆದಂದು
ದಿನ ಬದುಕಿನಲಾಯ್ತು ಕಾವ್ಯ
ನಿನ್ನ ಅರೆ ಗಳಿಗೆಯೂ ನಾನು ಬಿಟ್ಟಿರಲಾರೆ
ಇದೇ ನಿತ್ಯೋತ್ಸವ!

—ಕನ್ನಡ ಕಾವ್ಯಕ್ಕೆ ಹೆಚ್ಚುಗಾರಿಕೆಯನ್ನು ಮೂಡಿಸಿ, ಸುಗಮ ಸಂಗೀತ ಭಂಡಾರಕ್ಕೆ ಉತ್ತಮ ಗೀತೆಗಳನ್ನಿತ್ತು ಅದನ್ನು ಶ್ರೀಮಂತಗೊಳಿಸಿದ ಪ್ರೊ|| ಕೆ. ಎಸ್. ನಿಸಾರ್ ಅಹಮದ್ ಅವರಿಗೆ ವಂದನೆಗಳು, ಹೃತ್ಪೂರ್ವಕ ಅಭಿನಂದನೆಗಳು.

ದೀರ್ಘ ಕವಿತೆಯಲ್ಲಿ ಹೇಗೋ ಹಾಗೆಯೇ ಹನಿಗವನದಲ್ಲೂ ಮೂರ್ತಿಮಂತ ವಾದ ಭಾವನೆಯ ಮನೋಲ್ಲಾಸದ ಮರೆಗೆ ಒಂದು ತಾತ್ತ್ವಿಕತೆಯ, ಜೀವನ ಕಾಣ್ಕೆಯ ಸೂಚನೆ ಮನೆ ಮಾಡಿದ್ದರೆ, ಶರೀರದಲ್ಲಿ ಜೀವ ಸಪ್ರಾಣಿಸಿದಂತೆ ಅದು ಚೈತನ್ಯಶೀಲವಾಗುತ್ತದೆ.

(ಹನಿಗವನ)



ಹಾಡು ಕೇಳಿ ಕಂಬನಿದುಂಬಿ ಶ್ಲಾಘಿಸಿದ ಭಾವುಕ ಕವಿ

♦ ಡಾ. ಅಲಮೇಲು ಅಯ್ಯಂಗಾರ್
ಸಾರಟೋಗ (ಕ್ಯಾಲಿಫೋರ್ನಿಯ)

ವಿಶ್ವ ಕನ್ನಡಿಗರ ಮನಗಳಲ್ಲಿ ತಮ್ಮ ಸೊಗಸಾದ ಕವಿತೆಗಳಿಂದ ಶಾಶ್ವತ ಸ್ಥಾನವನ್ನು ಪಡೆದಿರುವ ಸುಪ್ರಸಿದ್ಧ ಕವಿ—ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನು ನಾನು ಚಿಕ್ಕಂದಿನಿಂದ ನೋಡಿದ್ದೇನೆ. ನನ್ನ ತಂದೆ ಡಾ. ಪು.ತಿ.ನ. ಅವರ ಆಪ್ತರೂ ಅಭಿಮಾನಿಗಳೂ ಆದ ಅವರನ್ನು ಹತ್ತಿರದಿಂದ ನೋಡುವ ಅನೇಕ ಸಂದರ್ಭಗಳು ನನಗೆ ಅನಾಯಾಸವಾಗಿ ಒದಗುತ್ತಿದ್ದವು. ನಿಸಾರ್ ಅವರಿಗೂ ನನ್ನ ತಂದೆಯವರನ್ನು ಕಂಡರೆ ಅಪಾರವಾದ ಪ್ರೀತಿ ಮತ್ತು ಗೌರವ. ಅಣ್ಣನಿಗೂ ಅಷ್ಟೇ—(ನನ್ನ ತಂದೆಯವರನ್ನು ನಾವೆಲ್ಲ ಅಣ್ಣಾ ಎಂದೇ ಕೂಗುತ್ತಿದ್ದೆವು) ನಿಸಾರ್ ಎಂದರೆ ಬಹಳ ಪ್ರೀತಿ. ತಮ್ಮ ಹೊಸ ಪುಸ್ತಕಗಳು ಪ್ರಕಟವಾದಾಗಲೆಲ್ಲ ಅದನ್ನು ಖುದ್ದಾಗಿ ಅಣ್ಣನಿಗೆ ನಿಸಾರ್ ಅವರು ತಂದುಕೊಡು ತ್ತಿದ್ದರು. ಅಣ್ಣ ಅದನ್ನು ತಾನು ಓದಿಯಾದಮೇಲೆ ನನ್ನನ್ನು ಕರೆದು 'ಮಗು, ನೋಡು, ನಿನ್ನ ಮೆಚ್ಚಿನ ಕವಿಯ ಹೊಸ ಪುಸ್ತಕ ಬಿಡುಗಡೆಯಾಗಿದೆ' ಎಂದು ನನ್ನ ಕೈಗೆ ಕೊಡುತ್ತಿದ್ದರು. ನಾನು ಓದಿಯಾದಮೇಲೆ ನನಗೆ ಮೆಚ್ಚುಗೆಯಾದ ಕವಿತೆಗಳು ಯಾವುವು? ಮತ್ತು ಅದು ಏಕೆ ನನಗೆ ಮೆಚ್ಚುಗೆಯಾದವು? ಎಂಬುದನ್ನು ಅವರಿಗೆ ಹೇಳಬೇಕಾಗುತ್ತಿತ್ತು. ಮೊದಲಿನಿಂದಲೂ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿದ್ದ ನನಗೆ ಅಣ್ಣನ ಜೊತೆ ನಡೆಯುತ್ತಿದ್ದ ಈ ಸಾಹಿತ್ಯ ಸಲ್ಲಾಪ ಅತ್ಯಂತ ಪ್ರಿಯವಾದ ಘಳಿಗೆಗಳಾಗಿದ್ದುವು. ಮದುವೆ

ಯಾಗಿ ದೂರದ ಅಮೇರಿಕೆಗೆ ಬಂದ ಮೇಲಂತೂ ನಿಸಾರ್ ಅವರ 'ನಿತ್ಯೋತ್ಸವ' ಕವಿತೆ ನನ್ನ ನಿತ್ಯ ಗೀತೆಯೇ ಆಗಿಹೋಯ್ತು. ಅವರು ಹಳೆಯ ನೆನಪಿನ ಮೇಲೆ ಬರೆದಿರುವ ಕವಿತೆಗಳು ಒಂದಲ್ಲ ಒಂದು ರೀತಿಯಲ್ಲಿ ನನ್ನ ಮನವನ್ನು ಮುತ್ತಿ... ಸದಾ ಅವನ್ನೇ ಗುನುಗುಟ್ಟಿಸುವಂತೆ ಮಾಡಿದವು. 'ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ / ಹೂಡಿ ಬರದಿರು ಮತ್ತೆ ಹಳೆಯ ನೆನಪೆ'. 'ನೆನಪಾಗಿ ಬಾರದಿರು ಮಣ್ಣುಗೂಡಿದ ಒಲವೆ'. 'ನೆನಪೆಲ್ಲಿ ಮಾಸುತ್ತೆ ಪ್ರಿಯೆ?' ಮುಂತಾದ, ಮನಸ್ಸನ್ನು ಆರ್ದ್ರಗೊಳಿಸುವ ಕವನಗಳಿಗೆ ಸುಂದರ ಸ್ವರ ಸಂಯೋಜನೆಯನ್ನು ಮೂಡಿಸಿ, ಕಲಾವಿದರಿಂದ ಇಂಪಾಗಿ ಹಾಡಿಸಿ ಕನ್ನಡ ಕಾವ್ಯ ಪ್ರಪಂಚಕ್ಕೆ ಮಾತ್ರವಲ್ಲ, ಸುಗಮ ಸಂಗೀತ ಕ್ಷೇತ್ರಕ್ಕೂ ಅತ್ಯುನ್ನತ ಕೊಡುಗೆಗಳನ್ನು ಕೊಟ್ಟಿದ್ದಾರೆ ನಿಸಾರ್ ಅವರು. ನನಗೆ ಸುಮಾರು ಏಳು ವರ್ಷಗಳಾಗಿದ್ದಾಗ ಅವರು ಮತ್ತೊಬ್ಬ ಹಿರಿಯ ಕವಿ ಎಂ. ಗೋಪಾಲಕೃಷ್ಣ ಅಡಿಗರೊಡನೆ ಔತಣಕ್ಕೆ ನಮ್ಮ ಮನೆಗೆ ಬಂದ ನೆನಪು ಮಸುಕು ಮಸುಕಾಗಿದೆ. ಆಗ ತೆಗೆದ ಫೋಟೋ ಒಂದನ್ನು ಈ ಗ್ರಂಥದಲ್ಲಿ ನೋಡಬಹುದು.

ನಿಸಾರರ ಬಗೆಗಿನ ನನ್ನ ಬಾಲ್ಯದ ನೆನಪುಗಳು ಮಾಸುತ್ತ ಬಂದಂತೆಲ್ಲ, ಪ್ರತಿ ಬಾರಿ ಭಾರತಕ್ಕೆ ಭೇಟಿ ಕೊಟ್ಟಾಗಲೂ ಹೊಸ ಹೊಸ ನೆನಪಿನ ಬುತ್ತಿ ನನ್ನದಾಗುತ್ತಿತ್ತು. 1993ರಲ್ಲಿ ರಾಷ್ಟ್ರೀಯ ಪುಸ್ತಕ ಪ್ರದರ್ಶನದ ಸಮಾರಂಭವೊಂದಕ್ಕೆ ಅಣ್ಣ ಅಧ್ಯಕ್ಷರಾಗಿಯೂ ನಿಸಾರರು ಮುಖ್ಯ ಅತಿಥಿಗಳಾಗಿಯೂ ಆಹ್ವಾನಿತರಾಗಿದ್ದರು. ನಾನು ಆ ವೇಳೆಗೆ ಬೆಂಗಳೂರಿನಲ್ಲಿದ್ದೆ. ನಾನು ಊರಿಗೆ ಹೋದಾಗಲೆಲ್ಲ ಅಣ್ಣ ಯಾವುದೇ ಕಾರ್ಯಕ್ರಮಕ್ಕೆ ಹೋದರೂ ನಾನೂ ಅವರ ಜೊತೆ ತಪ್ಪದೇ ಹೋಗುತ್ತಿದ್ದೆ. ಅಂತಹುದರಲ್ಲಿ ನನ್ನ ಮೆಚ್ಚಿನ ಕವಿ ಭಾಗವಹಿಸುವ ಈ ಕಾರ್ಯಕ್ರಮಕ್ಕೆ ತಪ್ಪಿಸಿಕೊಳ್ಳುವುದುಂಟೆ? ಸಮಯಕ್ಕೆ ಸರಿಯಾಗಿ ಕಾರ್ ಒಂದು ಮನೆಯ ಮುಂದೆ ನಿಂತಿತು. ಅದರೊಳಗಿನಿಂದ ಸೌಜನ್ಯವೇ ಸಾಕ್ಷಾತ್ಕರಿಸಿದಂತೆ ಕೆಳಗಿಳಿದರು ನಿಸಾರ್ ಅವರು. 'ನಿಮ್ಮನ್ನು ನಾನೇ ಕರೆದುಕೊಂಡು ಹೋಗೋಣ ಅಂತ ಬಂದೆ ಸಾರ್' ಎಂದು ಅವರು ನನ್ನ ತಂದೆಯವರ ಬಳಿ ಬಂದು ನಮಸ್ಕರಿಸಿದಾಗ, ಅವರ ವಿನಯಕ್ಕೆ ನಾನು ವಿಸ್ಮಯಗೊಂಡೆ. ಆ ವೇಳೆಗೆ ಕಣ್ಣು ಅಷ್ಟಾಗಿ ಕಾಣಿಸದಿದ್ದ ಅಣ್ಣ ವೇದಿಕೆಯ ಮೇಲೆ ಹೇಗೆ ನಿಭಾಯಿಸುವರೋ ಎಂದು ನನ್ನನ್ನು ಕಾಡುತ್ತಿದ್ದ ಆತಂಕ, ಅಣ್ಣನನ್ನು ಕೈಹಿಡಿದು ಕಾರು ಹತ್ತಿಸುತ್ತಿದ್ದ ನಿಸಾರ್ ಅವರನ್ನು ನೋಡಿ ಪರಿಹಾರವಾಯಿತು. ದಾರಿಯುದ್ದಕ್ಕೂ ಅಮೇರಿಕದ ಕನ್ನಡಿಗರ ಚಟುವಟಿಕೆಗಳ ಬಗ್ಗೆ ಬಹಳ ಆಸ್ಥೆಯಿಂದ ವಿಚಾರಿಸಿದರು. ಅಮೇರಿಕದ ಬಗ್ಗೆಯಂತೂ ಅವರಿಗೆ ಇನ್ನಿಲ್ಲದ ಕುತೂಹಲ. ಅಂದಿನ ಸಂಜೆ ಅಣ್ಣನನ್ನು ಸ್ವಂತ ತಂದೆಯಂತೆ ಜಾಗರೂಕರಾಗಿ ನೋಡಿಕೊಂಡು ಸಮಾರಂಭ ಮುಗಿದ ಮೇಲೆ ಮತ್ತೆ ಮನೆಗೆ ತಂದು ಮುಟ್ಟಿಸಿದ ನಿಸಾರ್ ಅವರ ಸೌಜನ್ಯ ನನ್ನ ನೆನಪಿನಲ್ಲಿ ಹಚ್ಚಹಸುರಾಗಿದೆ. ಅದಾದಮೇಲೆ ಮತ್ತೆ ನನ್ನ ಮತ್ತು ನಿಸಾರ್ ಅವರ ಭೇಟಿಯಾದದ್ದು ಅವರು 2002ರ ವಿಶ್ವ ಸಮ್ಮೇಳನಕ್ಕೆ ಡೆಟ್ರಾಯಿಟ್‌ಗೆ ಬಂದಾಗ. ಕಾರಣಾಂತರಗಳಿಂದ ನನಗೆ ಸಮ್ಮೇಳನಕ್ಕೆ ಹೋಗಲು ಆಗಿರಲಿಲ್ಲ. ಅವರನ್ನು ನೋಡುವ ಅವಕಾಶ ತಪ್ಪಿಹೋಯಿತಲ್ಲಾ ಎಂದು ನೊಂದುಕೊಳ್ಳುತ್ತಿದ್ದಾಗ ಅವರು ಕ್ಯಾಲಿಫೋರ್ನಿಯಾಗೆ ಬರಲಿರುವ ಸುದ್ದಿಯನ್ನು

ತಿಳಿದು ತುಂಬಾ ಸಂತೋಷವಾಯಿತು. ಕನ್ನಡ ಕೂಟದ ಆಗಿನ ಅಧ್ಯಕ್ಷರಾಗಿದ್ದ ಶ್ರೀ ರಾಮಪ್ರಸಾದ್ ಅವರು ನಿಸಾರ್ ಅವರ ಒಂದು ಕಾರ್ಯಕ್ರಮವನ್ನು ಏರ್ಪಡಿಸಲು ನನ್ನ ಸಹಾಯವನ್ನು ಕೋರಿದರು. ನನ್ನ ಹೊಸ ನಾಟಕವೊಂದರ ತಯಾರಿಯಲ್ಲಿ ಬಿಡುವಿಲ್ಲದೆ ಸಿಕ್ಕಿ ಹಾಕಿಕೊಂಡಿದ್ದ ನಾನು ಗೆಳತಿ ಸಂಧ್ಯಾಳ ಸಹಾಯವನ್ನು ಕೋರಿ ಅವರ ಮನೆಯಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದೆವು. ಆ ಸಂಜೆ ನಿಸಾರ್ ಅವರು ಬಂದು ಕೂತೊಡನೆ ಅಲ್ಲಿ ನೆರೆದಿದ್ದ ಸುಮಾರು ನಲವತ್ತು-ಐವತ್ತು ಜನ ಕನ್ನಡಿಗರು ಒಕ್ಕೊರಲಿನಿಂದ ಅವರ 'ನಿತ್ಯೋತ್ಸವ' ಕವಿತೆಯನ್ನು ಹಾಡಿದಾಗ ಆ ಮೃದು ಹೃದಯದ ಭಾವುಕ ಕವಿ ಕಂಬನಿದುಂಬಿ ಗದ್ಗದಿತರಾದರು. 'ಕವಿಗೆ ಇದಕ್ಕಿಂತ ಉತ್ತಮವಾದ ಕೊಡುಗೆ ಇನ್ನೊಂದಿಲ್ಲ' ಎಂದು ಅವರು ತುಂಬು ಮನದಿಂದ ನಮ್ಮೆಲ್ಲರನ್ನು ಹರಸಿದಾಗ ಆ ಸಂಜೆ ನಮ್ಮ ಬದುಕಿನ ಸುವರ್ಣ ಕ್ಷಣಗಳ ಸಂಜೆ ಎನ್ನಿಸಿತು.

ನಾನು ಮತ್ತೆ ೨೦೦೩ರಲ್ಲಿ ನನ್ನ ನಾಟಕಗಳ ಸಂಕಲನ 'ಹೈಟೆಕ್ ಹಯವದನಾಚಾರ್ ಮತ್ತು ಇತರ ನಾಟಕಗಳು' ಪುಸ್ತಕದ ಬಿಡುಗಡೆಯ ಸಮಾರಂಭಕ್ಕೆ ಆಹ್ವಾನ ಕಳಿಸಿದಾಗ, ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ತಾವು ಇನ್ನೂ ಹಲವಾರು ಸಮಾರಂಭಗಳಿಗೆ ಹೋಗಬೇಕಾಗಿದ್ದರೂ ಹಲವು ನಿಮಿಷಗಳ ಕಾಲ ಬಂದು ನನ್ನನ್ನು ಆಶೀರ್ವದಿಸಿದ ಆ ಹಿರಿಯ ಕವಿಯ ಪ್ರೀತಿಗೆ, ಅವರ ವಿಶ್ವಾಸಕ್ಕೆ ಮಣಿಯುತ್ತ, ಎಪ್ಪತ್ತು ದಾಟಿ ಎಪ್ಪತ್ತೊಂದರಲ್ಲಿ ಸಾಗಿರುವ ಅವರಿಗೆ ಮುಂದಿನ ಹುಟ್ಟುಹಬ್ಬಕ್ಕೆ ಮುಂಗಡವಾಗಿ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸಿ, ನಮ್ಮ ನೆಚ್ಚಿನ ಕವಿಯ ನೂರು ಹುಟ್ಟುಹಬ್ಬಗಳನ್ನು ಆಚರಿಸುವ ಸಂಭ್ರಮ-ಸೌಭಾಗ್ಯ ನಮಗೆ ಒದಗಿಬರಲೆಂದು ಹಾರೈಸುತ್ತೇನೆ.

ಹಲವರಿಗೆ ವಸ್ತು, ವ್ಯಕ್ತಿ ಹಾಗೂ ದೃಶ್ಯಗಳ ಸಂಪರ್ಕದಲ್ಲಿ ಹೊರಗಿನ, ದೈಹಿಕ ಸ್ವರೂಪದ ವಾಸ್ತವಿಕ ಚೌಕಟ್ಟು ಗೋಚರಿಸುತ್ತದೆಯೇ ವಿನಾ ಆಂತರಿಕ ಆತ್ಮ ಬಿಂಬದ ಕಾಣ್ಕೆ ಲಭಿಸುವುದಿಲ್ಲ. ಇಂಥವರಿಗೆ ಮರವೆಂದರೆ ಹೂ ಹಣ್ಣಿನ ಹೊರೆಯಿಂದ ಕಣ್ಣೂರೆಗೊಳಿಸುವ, ಭಾವಾವೇಗಿಸುವ ವರ ರೂಪಿ ಸಜೀವ ಚೆಲುವಿನ ಚಿಲುಮೆಯಲ್ಲ. ಅದು ಒಲೆಗೆ ಸೌದೆ, ಮನೆಗೆ ಮರಮುಟ್ಟು, ಮಂಚ ಮೇಜು ಬೀರುಗಳ ಕಚ್ಚಾ ಮಾಲು.

(ಹೊರಗಿನ ಮೆರುಗಿನ ಮೋಡಿ)

✧ ✧ ✧

ತುಂಬಿದ ಕೆರೆಗಷ್ಟೇ ಕೋಡಿ ಸಾಧ್ಯ. ಹಾಗೆಯೇ ಅನುಭವ ಸಮೃದ್ಧ ಚೇತನಕ್ಕೆ ತನ್ನನ್ನು ಅಭಿವ್ಯಕ್ತಿಸಿಕೊಳ್ಳುವ ಸಹಜ ರಹದಾರಿ ನಿರ್ಮಿತಗೊಂಡಿರುತ್ತದೆ.

ನಿಸರ್ಗದ ನಾಡಿನ ನಮ್ಮ ನಗರದಲ್ಲಿ ನಲ್ಮೆಯ ನಿಸಾರ್



♦ *ಡಾ. ಜಿ. ಹರೀಶ್*
ಚಾರ್ಲ್ಸ್‌ಟನ್ (ಪಶ್ಚಿಮ ವರ್ಜಿನಿಯ)

ನಮಗೆಲ್ಲ ತುಂಬು ಆತ್ಮೀಯರಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರನ್ನು ಕುರಿತು ನನ್ನ ಅನ್ನಿಸಿಕೆಗಳನ್ನು ಮತ್ತು ಕೆಲ ದಿವಸಗಳ ಒಡನಾಟವನ್ನು ಬರೆಯುವುದಕ್ಕೆ ಪೂರ್ವ ಪೀಠಿಕೆಯಾಗಿ ನನ್ನ ಹಾಗೂ ನನ್ನ ಊರಿನ ಬಗೆಗೆ ನಾಲ್ಕು ಮಾತುಗಳನ್ನು ಹೇಳುವುದು ಉಚಿತವೆನ್ನಿಸುತ್ತದೆ.

ನಾನೂ ನನ್ನ ಮಡದಿ ವನಿತಾ ಕಳೆದ ಮೂವತ್ತು ವರ್ಷಗಳಿಂದ ಈ ಊರಿನಲ್ಲಿ, ಅಂದರೆ ಚಾರ್ಲ್ಸ್‌ಟನ್ ಹೆಸರಿನ ಪುಟ್ಟ ಪಟ್ಟಣದಲ್ಲಿ ವಾಸಿಸಿದ್ದೇವೆ. ವೃತ್ತಿಯಿಂದ ನಾನು ವೈದ್ಯ, ಬಳ್ಳಾರಿ ಜಿಲ್ಲೆಯವನು. ಚಾರ್ಲ್ಸ್‌ಟನ್, ಪಶ್ಚಿಮ ವರ್ಜಿನಿಯ ಪ್ರಾಂತದಲ್ಲಿದೆ. ಅತ್ಯಂತ ಸುಭಿಕ್ಷ ದೇಶವಾದ ಅಮೇರಿಕದ ಬಡತನದ ರಾಜ್ಯಗಳಲ್ಲಿ ಪಶ್ಚಿಮ ವರ್ಜಿನಿಯ ಕೂಡ ಒಂದು. ಆದರೆ ಇದರ ನೈಸರ್ಗಿಕ ಸೌಂದರ್ಯಕ್ಕೆ ಸಾಟಿ ಎನ್ನಿಸುವಂಥ ಪ್ರಾಂತ ಅಮೇರಿಕದಲ್ಲಿ ಅತಿ ವಿರಳ. ಈ ರಾಷ್ಟ್ರದ ೨೭೦ ದಶಲಕ್ಷ ಜನಸಂಖ್ಯೆಯ ಪೈಕಿ ಪಶ್ಚಿಮ ವರ್ಜಿನಿಯದಲ್ಲಿ ೧.೮ ದಶಲಕ್ಷ ಜನ ವಾಸವಾಗಿದ್ದಾರೆ. ಅಂದರೆ, ಬಹಳ ಕಡಮೆ ಜನಸಂಖ್ಯೆಯ ಪ್ರಾಂತ ಇದು. ಕಾಡುಮೇಡು, ಅಪಲಾಚಿಯನ್ (Appalachian mountains) ಹೆಸರಿನ ಪರ್ವತಪಂಕ್ತಿ, ಕಂದರ, ನದಿ ಝರಿಗಳಿಂದ ಸಮೃದ್ಧವಾದ ಈ ಪ್ರಾಂತ ಕಲ್ಲಿದ್ದಲಿಗೆ ಹೇಗೋ ಹಾಗೆಯೇ ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಪ್ರಸಿದ್ಧಿ ಪಡೆದಿತ್ತು. ವಿಯೆಟ್ನಾಂ ಯುದ್ಧದಲ್ಲಿ

ಮಡಿದ ಈ ರಾಜ್ಯದ ಯೋಧರ ಸಂಖ್ಯೆ ಏಳು ನೂರಕ್ಕೂ ಹೆಚ್ಚು. ಅಂದರೆ, ಮಿಕ್ಕೆಲ್ಲ ರಾಜ್ಯಗಳಿಗಿಂತ ಅತ್ಯಧಿಕ.

ಚಾರ್ಲ್ಸ್‌ಟನ್ ಊರಿನಲ್ಲಿ ಮತ್ತು ಆಸುಪಾಸಿನಲ್ಲಿ ಸುಮಾರು ಮೂವತ್ತು ಕನ್ನಡ ಮಾತನಾಡುವ ಕುಟುಂಬಗಳಿವೆ. ಬಹುತೇಕ ಎಲ್ಲರೂ ಡಾಕ್ಟರರೋ, ಇಂಜಿನಿಯರರೋ ಆಗಿರುವುದು ಸಾಮಾನ್ಯ. ನಮ್ಮ ನಾಡು-ನುಡಿಗಳ ಬಗೆಗಿನ ಅರಿವನ್ನು ಮನವರಿಕೆ ಮಾಡಿಸಲು, ನಮ್ಮ ಸಂಸ್ಕೃತಿ-ಸಾಹಿತ್ಯಗಳ ತಿಳಿವನ್ನು ಪಡೆಯಲು 'ಕನ್ನಡ ಮಲ್ಲಿಗೆ ಬಳಗ' ವೆಂಬ ಸಂಸ್ಥೆಯನ್ನು ಕಟ್ಟಿ ಆಗಾಗ್ಗೆ ಸ್ಥಳೀಯರಿಂದ ಕಾರ್ಯಕ್ರಮಗಳನ್ನು ನಡೆಸುವುದಲ್ಲದೆ, ಕರ್ನಾಟಕದಿಂದ ಬರುವ ಪ್ರಖ್ಯಾತ ಕವಿ-ಸಾಹಿತಿ, ಸಂಗೀತಗಾರರಿಂದ ಸಹ ರಸವತ್ತಾದ ಕಾರ್ಯಕ್ರಮಗಳನ್ನು ಜರುಗಿಸುತ್ತೇವೆ.

ದೇವರ ಕೃಪೆಯಿಂದ ನಮ್ಮ ಮನೆ ದೊಡ್ಡದಾಗಿದ್ದು ಹಿತ್ತಲಿಗೆ ಅಂಟಿಕೊಂಡೇ ಈ ಪ್ರದೇಶದ ಜೀವನಾಡಿಯಂತಿರುವ ಕನಹ್ವ (Kanahwa) ನದಿ ಹರಿದಿದೆ. ಇದು ಕೇವಲ ರಮಣೀಯವಾದ ದೃಶ್ಯವನ್ನು ನೀಡಿರುವ ನದಿ ಮಾತ್ರವಾಗಿರದೆ ದಿನನಿತ್ಯ ಸರಕು ಸಾಗಾಣಿಕೆಗೆ ಸಹಾಯಕವಾಗಿರುವ ಜಲಮಾರ್ಗವೂ ಆಗಿದೆ. ಹೀಗಾಗಿ, ಆವಿ ಚಾಲಿತ ದೋಣಿಗಳು, ಬಾರ್ಜ್ (Barge) ಹೆಸರಿನ ನೀಳವಾದ ನೌಕೆಗಳು ನಿರಂತರವಾಗಿ ಕನಹ್ವ ನದಿಯಲ್ಲಿ ಸಾಗುತ್ತಿರುತ್ತವೆ. ನಮ್ಮ ಮನೆಯ ಎಲ್ಲ ದಿಕ್ಕಿನಲ್ಲೂ ಎತ್ತರವಾದ ಬೆಟ್ಟಗಳ ಸಾಲುಗಳು ನಿಮಿರಿ ನಿಂತಿವೆ. ನಮ್ಮ ಊರಿನಲ್ಲಿ ಅಮೇರಿಕದ ಇತರ ನಗರಗಳಂತೆ ವಿವಿಧ ಬಗೆಯ ವಾಹನಗಳ, ಜನ ಸಂದಣಿಯ ಓಡಾಟ, ಗದ್ದಲ ಹೆಚ್ಚಾಗಿಲ್ಲ. ನಮ್ಮ ಮನೆಯಂತೂ ಪ್ರಶಾಂತತೆಯ ತಾಯ್ಮಡಿಲಿನಲ್ಲಿ ಪವಡಿಸಿರುವ ಶಿಶುವಿನಂತಿದೆ; ಶಾಂತಿ ನೆಮ್ಮದಿಗಳ ತವರಿನಂತಿದೆ—ಇದಿಷ್ಟು ನಾನು ವಾಸಿಸುವ ಊರಿನ ಬಗೆಗಿನ ಸಂಕ್ಷಿಪ್ತ ವಿವರ.

ಮಿಚಿಗನ್ ಪ್ರಾಂತದ ಡೆಟ್ರಾಯಿಟ್ ನಗರದಲ್ಲಿ ೨೦೦೨ರಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನ ಹಲವಾರು ಕಾರಣಗಳಿಂದ ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿದಿದೆ. ಕವಿ ಪ್ರೊ. ನಿಸಾರ್ ಅಹಮದ್ ಅವರು ಮುಖ್ಯ ಅತಿಥಿಗಳಾಗಿ ಆ ವೇದಿಕೆಯನ್ನು ಬೆಳಗಿದರು. ಅವರೆಗೆ ನನಗೆ ಅವರ ಪರಿಚಯ ಅವರ ಕವನಗಳ ಮೂಲಕ ಅಷ್ಟೆ. ಹಿಂದೇಟು ಹೊಡೆಯುತ್ತ ಅವರನ್ನು ನಮ್ಮ ಚಿಕ್ಕ ನಗರ ಚಾರ್ಲ್ಸ್‌ಟನ್‌ಗೆ ಆಮಂತ್ರಿಸುವ ಧೈರ್ಯವನ್ನು ಮಾಡಿದೆ. ಈ ಮುಂಚೆಯೆ ತಿಳಿಸಿದಂತೆ ನಮ್ಮ ಊರು ಮತ್ತು ಅದರ ಆಸುಪಾಸು ನಿಸರ್ಗ ಸೌಂದರ್ಯದ ಆಗರವೇ ಸರಿ. ಆದರೆ ಕನ್ನಡ ಸಂಸ್ಕೃತಿ–ಸಾಹಿತ್ಯಗಳ ದೃಷ್ಟಿಯಿಂದ ಆಲೋಚಿಸಿದರೆ ಮರಳುಗಾಡು. ಈ ಮರುಧರೆಯಲ್ಲಿ ಕನ್ನಡದ ಜೀವ ಜಲ ಸುರಿಸಲು ಒಪ್ಪಿದ ನಿಸಾರ್ ಅವರಿಗೆ ನಮ್ಮೂರಿನ ಕನ್ನಡಿಗರೆಲ್ಲರೂ ಆಜೀವ ಆಭಾರಿಗಳು. ನಮ್ಮೊಡನೆ ಅವರ ಒಡನಾಟ ಮೂರೇ ದಿವಸಗಳು, ನಿಜ. ಆದರೆ ಅದರ ನೆನಪು ಮಾತ್ರ ಚಿರಂತನ. ಅವರ ಸರಳತೆ, ಚಿಂತನಶೀಲ ಮನೋಭಾವ, ಹೊಸ ಅನುಭವಗಳ ಲವಲವಿಕೆ ಆದರ್ಶನೀಯ.

ಪ್ರೊ. ನಿಸಾರ್ ಅಹಮದ್ ಅವರು ವಾಷಿಂಗ್ಟನ್ ಡಿ.ಸಿ.ಯಿಂದ ಪುಟ್ಟ ವಿಮಾನದಲ್ಲಿ ನಮ್ಮ ಊರಿಗೆ ಆಗಮಿಸಿದರು. ಅವರನ್ನು ಮೇರಿಲ್ಯಾಂಡ್‌ನ ಸುರೇಶ್ ರಾಮಚಂದ್ರ ಅವರು

ಡಲ್ಲೆಸ್ ಏರ್‌ಪೋರ್ಟ್‌ನಿಂದ ವಿಮಾನ ಹತ್ತಿಸಿ ಕಳಿಸಿದ್ದರು. ಅವರು ನಮ್ಮ ಊರಿಗೆ ಹೋಗುತ್ತಿರುವುದಾಗಿ ಒಂದೆರಡು ದಿನ ಮುಂಚೆ ತಿಳಿಸಿದಾಗ ಅಲ್ಲಿನ 'ಕಾವೇರಿ ಕನ್ನಡ ಕೂಟ'ದ ಒಂದಿಬ್ಬರು ಸದಸ್ಯರು, 'ಅಯ್ಯೊ! ಅಲ್ಲಿ ಹೋಗೋಕೆ ಯಾಕೆ ಒಪ್ಪಿಕೊಂಡಿರಿ? ಅದೊಂದು ಬಿಕೋ ಅನ್ನುವ ಕಗ್ಗಾಡಿನ ಕೊಂಪೆ. ಕಾಡುಮೇಡು ಬಿಟ್ಟರೆ ನೋಡೋದಿಕ್ಕೆ ಅಲ್ಲೇನಿದೆ ಮಣ್ಣು? ಬಹಳ ಹಿಂದುಳಿದ ಪ್ರದೇಶ. ನಿಮಗೆ ಬೋರ್ ಹೊಡಿದಿದ್ದರೆ ಹೇಳಿ' ಎಂದು ಉತ್ಸಾಹಗುಂದಿಸಲು ಪ್ರಯತ್ನಿಸಿದರಂತೆ. 'ಅಲ್ಲಿನವರಿಗೆ ಒಪ್ಪಿಗೆ ಕೊಟ್ಟಾಗಿದೆ, ತಪ್ಪಿಸಿ ಕೊಳ್ಳುವಂತಿಲ್ಲ. ಎರಡು ದಿವಸ ತಾನೆ, ಹೋಗಿ ಬಂದರಾಯಿತು' ಎಂದು ನಿಸಾರರು ಜವಾಬಿಸಿದರಂತೆ. ನಮ್ಮ ಊರು ಸಮೀಪಿಸುತ್ತಿದ್ದ ಹಾಗೆ ಅವರು ವಿಮಾನದಿಂದ ಕೆಳಗಡೆ ನೋಡಿದಾಗ ಪ್ರಕೃತಿಯ ಆ ದುಂದುಗಾರಿಕೆಯನ್ನು ಕಂಡು ಸ್ತಂಭೀಭೂತರಾದರಂತೆ. ಮಹೋತ್ತುಂಗವಾದ ಅಪಲಾಚಿಯನ್ ಪರ್ವತಾವಳಿಯ ಒಂದಾದ ಮೇಲೊಂದು ಒತ್ತರಿಸಿ ಬರುವ ಅರಣ್ಯ ಸಮೃದ್ಧ ಗಿರಿ ಶ್ರೇಣಿಗಳು. ಮುಗಿವೇ ಇಲ್ಲವೇನೋ ಎಂಬಂತೆ ಎದುರಾಗುವ ಕಂದರ ಕಣಿವೆಗಳು. ಕಣ್ಣು ಹಾಯಿಸಿದಷ್ಟೂ ಹಲವು ಬಗೆಯ ಹಸುರಿನ ಛಾಯೆಗಳ ಆಹ್ಲಾದಕರ ದೃಶ್ಯ. ನಡುವೆ ಅಲ್ಲಿಷ್ಟು ಇಲ್ಲಿಷ್ಟು ಕೆಂಪು, ಕಂದು, ಹಳದಿ, ಕಿತ್ತಳೆ ಬಣ್ಣದ ಎಲೆಗಳ ತೇಪೆ. ವಿಶ್ವ ಕಲಾವಿದ, ತನ್ನ ಮಾಗಿ(Fall)ಯೆಂಬ ಕುಂಚದಿಂದ ಕಲಾಕೃತಿಯನ್ನು ರಚಿಸುವ ಮೊದಲು ಅನೇಕ ಬಣ್ಣಗಳನ್ನು ಮಿಶ್ರಮಾಡಿ ಅಲ್ಲಲ್ಲಿ ಕಲಕಿ ಪರೀಕ್ಷಿಸುತ್ತಿರುವ ನೇನೋ ಎನ್ನುವಂತಹ ಮನಮೋಹಕ ಮಾಂತ್ರಿಕ ವರ್ಣಮಯತೆಯ ಲೇಪನ. ನಿಸಾರರು ನಮ್ಮ ಕರ್ನಾಟಕದ ಅಗ್ಗಳಿಕೆಗಳಲ್ಲಿ ಒಂದಾದ ಮಲೆನಾಡಿನ ಸೊಬಗಿಗೆ ಮಾರಿ ಹೋದವರು. ಹೋದೆಡೆಯಲ್ಲೆಲ್ಲ ಅದರ ಗುಣಗಾನ ಮಾಡಿದವರು. ಆದರೆ, ಪಶ್ಚಿಮ ವರ್ಜೀನಿಯದ ಈ ಗಿರಿ ವನ ವೈಭವದ ಸಾರ್ವಭೌಮಿಕ ಆಳ್ವಿಕೆಯನ್ನು ದರ್ಶಿಸಿದಾಗ, ಭವ್ಯತೆಯ ಅನುಭವ ವನ್ನು ಇದರಷ್ಟು ಧಾರಾಳವಾಗಿ ನೀಡುವ ಮತ್ತೊಂದು ಪ್ರದೇಶ ಲೋಕದಲ್ಲಿ ಇದೆಯೋ ಇಲ್ಲವೋ ಎಂದು ಉದ್ಗರಿಸಿದ್ದರು. 'ಬೇರೆಯವರ ಮಾತು ಕೇಳಿ ಇಲ್ಲಿಗೆ ಚಕ್ಕರ್ ಹಾಕಿದ್ದರೆ ಎಂತಹ ಭೂಮಾನುಭವವನ್ನು ಕಳೆದುಕೊಳ್ಳುತ್ತಿದ್ದೆ!' ಎಂದು ಹೇಳಿಕೊಂಡರಂತೆ—ಈ ಸಂಗತಿಯನ್ನು ಅವರು ಅನಂತರ ನಮ್ಮೂರಿನಲ್ಲಿ ಭಾಷಣ ಮಾಡಿದ ಸಂದರ್ಭದಲ್ಲಿ ನಿವೇದಿಸಿದ್ದು. ಒಟ್ಟಿನಲ್ಲಿ ವರಕವಿ ಬೇಂದ್ರೆಯವರ 'ನಂದನದ ತುಣುಕೊಂದು ಬಿದ್ದಿದೆ / ನೋಟ ಸೇರದು ಯಾರಿಗೆ?' ಎಂಬ ಕವನದ ಪಂಕ್ತಿಗಳನ್ನು ಸಾಕಾರಗೊಳಿಸುವ ಚೇತೋಹಾರಿ ಯಾದ ಪ್ರಶಾಂತವಾದ ಪಶ್ಚಿಮ ವರ್ಜೀನಿಯದ ಶಿರೋಮಣಿ ನಮ್ಮ ಚಾರ್ಲ್ಸ್‌ಟನ್ ಊರು.

ವಿಮಾನ ನಿಲ್ದಾಣದಲ್ಲಿ ನಿಸಾರರನ್ನು ಬರಮಾಡಿಕೊಂಡು ಮನೆಗೆ ಕರೆದೊಯ್ದೆ. ಉದ್ದಕ್ಕೂ ಅವರೊಡನೆ ಅಮೇರಿಕದ ಈವರೆಗಿನ ಪ್ರವಾಸದ ಬಗೆಗೆ ವಿಚಾರಿಸಿದೆ. ಅದಕ್ಕೆ ಉತ್ತರಿಸುತ್ತ, ನಡುವೆ ಹೊರಗಣ ರಮಣೀಯ ದೃಶ್ಯಕ್ಕೆ ಹರ್ಷೋದ್ಗಾರದಿಂದ ಪ್ರತಿಕ್ರಿಯಿ ಸುತ್ತ ನಿಸಾರರು ತುಂಬ ಉಲ್ಲಸಿತರಾಗಿದ್ದಂತೆ ತೋರಿತ್ತು. ನಮ್ಮ ಮನೆಯೆದುರು ಕಾರು ನಿಲ್ಲಿಸಿ ಅವರ ಲಗೇಜನ್ನು ನಾನು ಒಳ ಸಾಗಿಸುತ್ತಿರುವಾಗ, ನಿಸಾರರು 'ಡಾಕ್ಟರ್ ಹರೀಶ್. 'what a magnificient Villa you have!' ಎಂದು ಒಳಗಡೆಗೆ ಹೋಗುವಾಗ, ನನ್ನಾಕೆ ಪ್ರತ್ಯಕ್ಷವಾಗಿ 'ವೆಲ್‌ಕಮ್ ಸರ್!' ಎಂದು ಹೇಳುತ್ತ ಹೊಸಿಲಲ್ಲೇ ತಡೆದು ಅರಿಶಿನ

ಕುಂಕುಮದ ನೀರಿನಿಂದ ದೃಷ್ಟಿ ನಿವಾಳಿಸಿದಳು. 'ಆಶೀರ್ವಾದ ಮಾಡಿ' ಎಂದು ಕಾಲಿಗೆ ಎರಗಿದಳು. ಈ ಕ್ರಿಯೆಗೆ ನಿಸಾರರ ಕಣ್ಣು ಹನಿದುಂಬಿದವು, ಮಾತು ತಡವರಿಸತೊಡಗಿತು. ನನ್ನಾಕೆಗೆ ಕೃತಜ್ಞತೆ ಸಲ್ಲಿಸುತ್ತ ಒಳಗೆ ನಡೆದವರೆ, ತಟಕ್ಕನೆ ನಿಂತರು. ನಾನು ಹಿಂದಿರುಗಿ ನೋಡಿದರೆ, ಅವರ ದೃಷ್ಟಿ ತೂಗುದೀಪದ ಮೇಲೆ ತದೇಕವಾಗಿ ನೆಟ್ಟಿತ್ತು. ಅದರ ಬೃಹತ್ತು, ವೈವಿಧ್ಯ, ಅಲಂಕಾರ ಹಾಗೂ ಮೋಹಕವಾದ ಆಕಾರಕ್ಕೆ ನಿಸಾರರು ಅವಾಕ್ಕಾಗಿ ನಿಂತಿದ್ದರು. ಎಚ್ಚೆತ್ತವರಂತೆ, 'ಇಂಥಾ ಅಪೂರ್ವವಾದ 'ಚಾಂಡೆಲಿಯರ್'ಅನ್ನು ನಾನು ಪ್ರತ್ಯಕ್ಷವಾಗಿ ಈ ತನಕ ನೋಡಿರಲಿಲ್ಲ. What a rare and expensive possession' ಎಂದು ಅದರ ಬೆಲೆ, ತಯಾರಾದ ದೇಶ ಇತ್ಯಾದಿ ವಿವರಗಳನ್ನು ಕುತೂಹಲದಿಂದ ಕೇಳಿ ಸುಖ ಅನುಭವಿಸಿದರು.

ಎರಡು ಅಂತಸ್ತಿನ ನಮ್ಮ ಸುವಿಶಾಲವಾದ ಮನೆಯಲ್ಲಿ ನಾನೂ ನನ್ನ ಹೆಂಡತಿ ವನಿತಾ ಇಬ್ಬರೇ ಇರುವುದನ್ನು ತಿಳಿದು ಅವರಿಗೆ ಇನ್ನಷ್ಟು ಅಚ್ಚರಿಯಾಯಿತು. ನನ್ನ ಮಕ್ಕಳು ಉನ್ನತ ಶಿಕ್ಷಣದ ಸಲುವಾಗಿ ದೂರದ ನಗರಗಳಲ್ಲಿ ಇರುವುದರಿಂದ ನಾವು ಇಬ್ಬರೇ ವಾಸಿಸುತ್ತಿರುವುದನ್ನು ತಿಳಿಸಿದೆ. ನಮ್ಮ ಮನೆಯ ಮುಂದೆ ಮತ್ತು ಹಿತ್ತಲಿನಲ್ಲಿ ಖಾಲಿ ಬಿಟ್ಟಿರುವ ಜಾಗ ಮತ್ತು ಬೆಳೆಸಿರುವ ಗಿಡ ಮರಗಳ ಬಗ್ಗೆಯೂ ಮೆಚ್ಚಿಗೆ ಸೂಚಿಸಿ ನಸುನಗುತ್ತ, ಬಸವೇಶ್ವರರ 'ಉಳ್ಳವರು ಶಿವಾಲಯವ ಮಾಡುವರು' ಎಂದರು.

ನಿಸಾರರಿಗೆ ನಾವು ನಮ್ಮ ಹಿತ್ತಲಿನ ಹೂವಿನ ಗಿಡಗಳು, ಬದಿಯಲ್ಲೇ ಹರಿಯುತ್ತಿರುವ ಕನಹ್ವ (Kanahwa) ನದಿ, ಅದರ ಹಿಂಬದಿಯ ರಸ್ತೆ ಹಾಗೂ ಎತ್ತರದ ಸಸ್ಯಾವೃತ ಬೆಟ್ಟದ ಸಾಲು ಕಾಣುವ ಒಂದು ಪ್ರತ್ಯೇಕ ಹಾಗೂ ವಿಶಾಲವಾದ ಸುಸಜ್ಜಿತ ಕೊಠಡಿಯನ್ನು ಬಿಟ್ಟುಕೊಟ್ಟಿದ್ದೆವು. ಅವರು ಇಲ್ಲಿರುವ ಮೂರು ದಿನಗಳವರೆಗೂ ಸುಂದರವಾದ ಪ್ರಕೃತಿಯ ದೃಶ್ಯಗಳು ಅವರ ಕಣ್ಣಿಗೆ ಬೀಳುತ್ತಿರಬೇಕು, ಅವರ ಕವಿ ಹೃದಯ ಪ್ರಫುಲ್ಲಿತವಾಗಿರಬೇಕು ಎಂಬುದು ನಮ್ಮ ಉದ್ದೇಶ. ಇನ್ನೊಂದು ವಿಶೇಷವೂ ಆ ಕೊಠಡಿಗಿದ್ದದ್ದು ನಿಸಾರರಿಗೆ ಬಹಳ ಸಂತೋಷ ನೀಡಿತ್ತು: ಕಲ್ಲಿನ ಭಿತ್ತಿಗಳ ಬದಲು ಪಂಚಕೋನಾಕೃತಿಯ ಪಾರದರ್ಶಕ ಗಾಜಿನ ಗೋಡೆ ಇದ್ದು ಹೊರಗಣ ದೃಶ್ಯ ನಿಚ್ಚಳವಾಗಿ ಗೋಚರಿಸುತ್ತಿತ್ತು. ನಿಸಾರರು ಆಚೆಯ ಪ್ರಕೃತಿ ರಮಣೀಯತೆಯನ್ನು ಸವಿಯುತ್ತ ಒಬ್ಬರೇ ಬಹಳ ಹೊತ್ತು ಕೂರುತ್ತಿದ್ದುದನ್ನು ಗಮನಿಸಿದ್ದ ನಾವು ಅವರ ಶಾಂತಿಯನ್ನು ಭಂಗ ಮಾಡದೆ, ಅವರ ಪಾಡಿಗೆ ಅವರನ್ನು ಬಿಟ್ಟುಬಿಡುತ್ತಿದ್ದೆವು.

ಆ ದಿವಸ ಮಧ್ಯಾಹ್ನದ ವೇಳೆಗೆ ನಿಸಾರರನ್ನು ನಮ್ಮ ಪುಟ್ಟ ಊರಿನ ದರ್ಶನಕ್ಕೆಂದು ಕರೆದೊಯ್ದೆ. ಕೆಲವು ಜಾಗಗಳಲ್ಲಿ ಅವರು 'ಇಲ್ಲಿ ನಮ್ಮ ಮಡಿಕೇರಿಯಂತಿದೆ. ಅಲ್ಲಿನ ಹಾಗೆಯೇ ಗುಡ್ಡಗಳ ಮೇಲೆ ಮನೆಗಳು. ವಾಯುಗುಣವೂ ಅಷ್ಟೇ ತಂಪು, ಹಿತಕರ' ಎಂದಿದ್ದರು. ಅವರಿಗೆ ಕ್ಯಾಪಿಟಲ್ ಕಟ್ಟಡದ ನಮೂನೆಯ ಆಡಳಿತ ಕಛೇರಿ, ಗ್ರಂಥಾಲಯ ಮತ್ತು ವಿಯಟ್ನಾಂ ಯುದ್ಧದಲ್ಲಿ ಮಡಿದ ವೀರರ ಸ್ಮಾರಕವನ್ನು, ಅಲ್ಲಿ ಬೆಳಗುತ್ತಿರುವ ನಿತ್ಯ ಜ್ಯೋತಿಯನ್ನು ತೋರಿಸಿದೆ. 'ಅಮೇರಿಕ ಮಾಡಿದ ಮಹಾ ಪಾತಕಕ್ಕೆ ಬಲಿಪಶುಗಳಾದವರು

ಈ ಅಮಾಯಕ ಯುವ ಯೋಧರು. ವಿಯಟ್ನಾಂನಂಥ ಪುಟ್ಟದಾದ ಮತ್ತು ತನಗೆ ಸಂಬಂಧಿಸದ ದೂರದ ರಾಷ್ಟ್ರದ ಮೇಲಿನ ದುರಾಕ್ರಮಣರೂಪದ ಅತ್ಯಾಚಾರಕ್ಕೆ ಮನಸ್ಸಿಲ್ಲದಿದ್ದರೂ ಹೋಗಿ ಮಣ್ಣುಗೂಡಿದ ಈ ವೀರರು ಇನ್ನೂ ಅದೆಷ್ಟು ಕಾಲ ಬಾಳಿ ಬದುಕನ್ನು ಸವಿಯಬೇಕಿತ್ತೋ, ಪಾಪ!' ಎಂದು ನುಡಿದು ನಿಡುಸುಯ್ದರು. ನಿಜಕ್ಕೂ ಅವರ ಕವಿ ಮನಸ್ಸು ವಿಹ್ವಲಗೊಂಡಂತಿತ್ತು. ಆಮೇಲೆ ನಮ್ಮ ಊರಿನ ಮಾಲ್(Mall)ಗೆ ಕರೆದೊಯ್ದೆ. ಏನೆಲ್ಲವೂ ಒಂದೆಡೆಯಲ್ಲಿ ಸಿಕ್ಕುವ ಆ ಮಾರಾಟದ ಮಳಿಗೆಯ ಸಂಕೀರ್ಣದ ವಾಸ್ತುವಿನ ಅಂದಚೆಂದ, ಚೊಕ್ಕಟತನವನ್ನು ನೋಡಿ ಆನಂದಿಸಿದರು. ಅಲ್ಲಿನ ಕಾರಂಜಿಯ ಪಾರದರ್ಶಕ ನೀರಿನಲ್ಲಿ ಅಮೇರಿಕದ ಪೋರ-ಪೋರಿಯರು ಮೋಜಿಗಾಗಿ ಎಸೆದಿದ್ದ ಲಕ್ಷಾಂತರ ಬಿಡಿಗಾಸು(ಪೆನ್ನಿ)ಗಳನ್ನು ನೋಡಿ, 'ಇವುಗಳನ್ನು ಯಾರೂ ಅಪಹರಿಸದೇ ಇರುವುದು ಆಶ್ಚರ್ಯ! ನಮ್ಮ ದೇಶದಲ್ಲಾದರೆ...', ಎನ್ನುತ್ತಿದ್ದಾಗ ನಾನು, 'ಇಂತಹ ಕಾರಂಜಿಗಳು ಸಹಸ್ರಾರು ಸಂಖ್ಯೆಗಳಲ್ಲಿ ಅಮೇರಿಕದ ಉದ್ದಗಲದ ಮಾಲ್‌ಗಳಲ್ಲಿ, ಮನರಂಜನಾ ಸ್ಥಳಗಳಲ್ಲಿ, ಪಾರ್ಕು, ಆಸ್ಪತ್ರೆ, ಮ್ಯೂಸಿಯಂ ಮುಂತಾದ ತಾಣಗಳಲ್ಲಿ ಇವೆ. ಅಲ್ಲೆಲ್ಲ, ಇದೇ ರೀತಿ ಚಿಲ್ಲರೆ ನಾಣ್ಯಗಳನ್ನು ಎಸೆಯುವುದು ಸಾಮಾನ್ಯ. ನಾವು ತೀರ್ಥ ಯಾತ್ರೆಗೆ ಹೋದಾಗ, ನದಿಗಳಿಗೆ ಕಾಸು ಬಿಸುಡುವುದಿಲ್ಲವೇ, ಹಾಗೆ. ಇವನ್ನೆಲ್ಲ ತಿಂಗಳು, ಎರಡು ತಿಂಗಳಿಗೆ ಒಂದು ಸಲ ಆರಿಸಿ ಸಾಲ್ವೇಷನ್ ಆರ್ಮಿ(Salvation Army)ಗೆ ಕಳಿಸಿ, ಅಲ್ಲಿಂದ ಕೈಲಾಗದ ನಿರ್ಗತಿಕರ, ಕಂಗಾಲರ ಕಲ್ಯಾಣಕ್ಕೆ ಬಳಸುತ್ತಾರೆ. ಮಹಾ ನಗರಗಳ ಟೆಲಿಫೋನ್ ಬೂತ್‌ಗಳಲ್ಲೂ ಕೆಲವೊಮ್ಮೆ ಇಂಥ ಚಿಲ್ಲರೆಯನ್ನು ಚೆಲ್ಲಿರುತ್ತಾರೆ. ಇಷ್ಟೇ ಅಲ್ಲ, ಸ್ಥಿತಿವಂತರು ತಾವು ಬಳಸದ, ಇಲ್ಲವೇ ಹಳೆಯದಾದ ಬಟ್ಟೆಬರೆಗಳನ್ನೂ ತಮ್ಮ ಊರುಗಳ ನಿಗದಿತ ಜಾಗಗಳಲ್ಲಿ ಗುಡ್ಡೆ ಹಾಕಿರುತ್ತಾರೆ. ಅವುಗಳನ್ನೂ ಸಹ ದೀನ ದುರ್ಬಲರಿಗೆ, ಬಡ ದೇಶಗಳಿಗೆ ತಲಪಿಸುತ್ತಾರೆ' ಎಂದಾಗ, ನಿಸಾರರು 'ಇದು ನಿಜಕ್ಕೂ ತುಂಬಾ ಮೆಚ್ಚತಕ್ಕ, ಶ್ರೇಯಸ್ಕರ ಕಾರ್ಯ' ಎಂದು ಶ್ಲಾಘಿಸಿದರು. 'ಈ ಮಾಲ್‌ಗಳಲ್ಲಿ, ದೊಡ್ಡ ನಗರಗಳಾದ ನ್ಯೂಯಾರ್ಕ್ ಇರಲಿ, ಮಯಾಮಿ ಇರಲಿ, ಸಿಯಾಟ್ಲ್ ಇರಲಿ, ಚಿಕಾಗೊ ಇರಲಿ, ಇಲ್ಲವೇ ಅಜ್ಞಾತವಾದ ಹಳ್ಳಿಕೊಂಪೆಯೇ ಇರಲಿ, ಎಲ್ಲೇ ಕೊಂಡರೂ ಯಾವುದೇ ಪದಾರ್ಥದ ಬೆಲೆ ಒಂದೆ: ಹೆಚ್ಚು ಕಡಿಮೆ ಇಲ್ಲ. ಉದಾಹರಣೆಗೆ: ನೀವು ಎಲ್ಲೇ ಹೋಗಿ ಯಾವುದೇ ಬ್ರಾಂಡಿನ ಸಿಗರೇಟನ್ನು ಕೊಳ್ಳಿ. ಅವೆಲ್ಲಕ್ಕೂ ಒಂದೇ ಬೆಲೆ!' ಎಂದೆ. 'ಅರೆ! ಈ ವಿಷಯವನ್ನು ಎರಡೂವರೆ ದಶಕಗಳ ಹಿಂದೆ ನನ್ನ ಅಮೇರಿಕನ್ ರಿಟರ್ನ್ಡ್ ಸಹೋದ್ಯೋಗಿಯೊಬ್ಬರು ತಿಳಿಸಿದ್ದರು. ಆಗ ನಾನು ಆಶ್ಚರ್ಯಪಟ್ಟು ಒಂದು ಪದ್ಯ ಬರೆದಿದ್ದೆ' ಎಂದರು.

ಆ ರಾತ್ರಿ ನಿಸಾರ್ ಅವರನ್ನು ಒಂದು ಭಾರತೀಯ (ಪಂಜಾಬಿ) ಹೋಟೆಲ್‌ಗೆ ಊಟಕ್ಕೆ ನಾನೂ ವನಿತಾ ಕರೆದೊಯ್ದೆವು. ನಾನು ಈ ಊರಿಗೆ ಬಂದಾಗಿನಿಂದ, ಅಂದರೆ ೩೦ ವರ್ಷಗಳಿಂದ ನನಗೆ ಆಪ್ತಮಿತ್ರನಾಗಿರುವ ಪಾಕಿಸ್ತಾನಿ ವಕೀಲನನ್ನೂ ಆಮಂತ್ರಿಸಿದೆ. ಆತನ ಹೆಸರು ನಿಸಾರ್ ಕಲ್ಪರ್. ಆತನ ಕುಟುಂಬಕ್ಕೂ ನಮ್ಮದಕ್ಕೂ ಬಲವಾದ ಸ್ನೇಹದ ನಂಟು. ನಮ್ಮ ಪ್ರಿಯ ಕವಿಗಳ ಬಗೆಗೆ ಆತನಿಗೆ ಸಾಕಷ್ಟು ವಿಷಯಗಳನ್ನು ತಿಳಿಸಿದ್ದೆ. ಅವರನ್ನು

ಭೇಟಿಯಾಗಿ ವಿಚಾರ ವಿನಿಮಯ ಮಾಡಲು ಆತನೂ ಉತ್ಸುಕನಾಗಿದ್ದ. ನಾವು ಎಷ್ಟೋ ಸಂಗತಿಗಳನ್ನು ಚರ್ಚಿಸಿದೆವು. ಸಾಹಿತ್ಯ, ಸಂಸ್ಕೃತಿ, ರಾಷ್ಟ್ರ, ರಾಜಕೀಯ, ಧರ್ಮಗಳ ಬಗ್ಗೆ ಮುಕ್ತವಾಗಿ ಮಾತಾಡಿದೆವು. ಕೆಲವೊಂದು ವಿಚಾರಗಳಲ್ಲಿ ಭಿನ್ನತೆಯಿದ್ದರೂ ಒಟ್ಟಾರೆಯಾಗಿ ಆಲೋಚಿಸಿದಾಗ ನಾವೆಲ್ಲರೂ ಮಾನವೀಯತೆ, ಸೋದರತ್ವ, ಸೌಹಾರ್ದಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದು ಮನವರಿಕೆಯಾಯಿತು. ಭಾರತ ಮತ್ತು ಪಾಕಿಸ್ತಾನದ ಸಂಬಂಧ ಹಳಸಿ ಇಂದಿನ ಹಗೆತನದ ಪರಾಕಾಷ್ಠೆಗೆ ಏರಿರುವ ಕಾರಣಗಳನ್ನು ಬೆದಕಿದೆವು. ರಾಜಕಾರಣದ ಕುಟಿಲತೆ, ಧರ್ಮದ ಅಪಾರ್ಥದ ಅರ್ಥೈಕೆಗಳೇ ಮೂಲ ಕಾರಣವೆಂಬುದನ್ನು ಮನಗಂಡೆವು. ನೆರೆಹೊರೆಯಾಗಿರುವ ನಮ್ಮ ಎರಡೂ ದೇಶಗಳು ಪರಸ್ಪರ ಶಂಕಿಸಿ ದೂಷಿಸುವುದನ್ನು, ಕಾದಾಡುವುದನ್ನು ಬಿಟ್ಟು ಒಮ್ಮತ, ಒಗ್ಗಟ್ಟನ್ನು ಸಾಧಿಸುವುದರಲ್ಲಿ ಪರಸ್ಪರರ ಹಿತವಡಗಿದೆ ಎಂದು ನಮಗೆ ಅನ್ನಿಸಿತು. ಅಲ್ಲದೆ ಭಯೋತ್ಪಾದನೆಯೆಂಬ ಸಾರ್ವತ್ರಿಕ ಪಿಡುಗಿನ ಮುಖ್ಯ ಕಾರಣಗಳನ್ನು ಕಂಡು ಹಿಡಿದು, ಅದನ್ನು ತೊಡೆದು ಹಾಕಲು ಎಲ್ಲರೂ ಪಣ ತೊಡುವುದು ಇಂದಿನ ಬಹು ಮುಖ್ಯ ಕರ್ತವ್ಯವಾಗಿದೆ ಎಂಬ ಅಭಿಪ್ರಾಯವನ್ನು ತಳೆದೆವು. ನನ್ನ ಪಾಕಿಸ್ತಾನಿ ಮಿತ್ರನಿಗೆ ನಿಸಾರರ ವಿಚಾರಗಳು, ಅವರ ನಿರಾಡಂಬರ ವ್ಯಕ್ತಿತ್ವ ಇಷ್ಟವಾದವೆಂದು ತೋರುತ್ತದೆ. ಅವರನ್ನು ಭೇಟಿ ಮಾಡಿ ಮಾತಾಡಿದ್ದು ತನಗೆ ಲಾಭದಾಯಕವಾಯಿತು, ಅವರಿಂದ ಹಲವು ವಿಷಯಗಳನ್ನು ತಿಳಿದೆನೆಂದು ಅನಂತರ ತನ್ನ ಸಂತೃಪ್ತಿಯನ್ನು ವ್ಯಕ್ತಪಡಿಸಿದ. ಆ ಹೋಟೆಲಿನ ಸರದಾರಜಿ ಸಪ್ಲೈಯರನ ಆಲಸ್ಯ ಮತ್ತು ಅನವಧಾನತೆಯನ್ನು ನಾವು ಲೇವಡಿ ಮಾಡಿ, ರೇಗಿಸಿ ನಕ್ಕಿದ್ದು ಮರೆಯಲಾಗದ ಪ್ರಸಂಗ.

ಮಾರನೆಯ ದಿವಸ ಬೆಳಿಗ್ಗೆ ನಿಸಾರ್ ಅವರನ್ನು ಪ್ರಕೃತಿಯ ಚೆಲುವಿಗೆ ಹೆಸರುವಾಸಿಯಾದ ಸ್ಥಳವೊಂದಕ್ಕೆ ಕರೆದುಕೊಂಡು ಹೋದೆ. ಅದು ಚಾರ್ಲ್ಸ್‌ಟನ್‌ನಿಂದ ಸುಮಾರು ಐವತ್ತು ಮೈಲಿ ದೂರದಲ್ಲಿದೆ. ದಾರಿಯುದ್ದಕ್ಕೂ ಯಥಾಪ್ರಕಾರ ಬೆಟ್ಟಗುಡ್ಡ ಮರಗಿಡ ಕಣಿವೆ ತಿರುವುಗಳು. ನಾನು, ವನಿತಾ ಮತ್ತು ನನ್ನ ಭಾವಮೈದುನ ಮಂಜುನಾಥ್ ಅವರು ನಿಸಾರರಿಗೆ ಪ್ರಶ್ನೆಗಳನ್ನು ಹಾಕುತ್ತ, ಅವರು ಅದಕ್ಕೆ ನೀಡುತ್ತಿದ್ದ ಸ್ವಾರಸ್ಯಕರ ಮತ್ತು ವಿಚಾರಪರ ಉತ್ತರಗಳನ್ನು ಕೇಳಿ ಆನಂದಿಸುತ್ತ ಹಾದಿಯನ್ನು ಕಳೆದಿದ್ದೇ ಗೊತ್ತಾಗಲಿಲ್ಲ. ಕೊನೆಗೆ ನಾನು ತೋರಿಸಬೇಕಾಗಿದ್ದ ವನ ವಿಹಾರದ ಧಾಮ ಎದುರಾಯಿತು. ಅದೊಂದು ವಿಶಾಲವಾದ ಪಾರ್ಕ್‌ನಂಥ ಸ್ಥಳ. ವಾರಾಂತ್ಯದ ಪ್ರವಾಸಿಗರ ಅತಿ ಮೆಚ್ಚಿನ ತಾಣ. ಅನೇಕ ಕುಟುಂಬಗಳು ಶನಿವಾರ, ಭಾನುವಾರದಂದು ಇಲ್ಲಿಗೆ ಬಂದು ನಲಿದಾಡಿ ಹೊಸ ಗೆಲವು ಉತ್ಸಾಹಗಳನ್ನು ತಾಳಿ ಮರಳುತ್ತಾರೆ. ಈ ವನ ಧಾಮದ ಹೆಸರು ‘Hawk's nest park’ (‘ಗಿಡುಗದ ಗೂಡಿನ ಉಪವನ’). ಅದಕ್ಕೆ ಅಂಟಿಕೊಂಡಂತೆ ಆಳದ ಕಂದರದಲ್ಲಿ ರಭಸ ಮತ್ತು ಭೋರ್ಗರೆತಕ್ಕೆ ಹೆಸರಾದ ‘New river’ (ಹೊಸ ನದಿ) ದುರ್ಗಮ ಪರ್ವತಗಳ ನಡುವಿನ ಅನೇಕ ಇಕ್ಕಟ್ಟಿನ ಎಡೆಗಳ ಮಧ್ಯೆ ಹಲವಾರು ತಿರುವುಗಳಲ್ಲಿ ನುಗ್ಗಿ ಶರ ವೇಗದಿಂದ ಪ್ರವಹಿಸುತ್ತದೆ. ಇದು ವಿಶ್ವದ ಜಲಮಾರ್ಗಗಳಲ್ಲೇ ಎರಡನೆಯದೆಂಬ ಖ್ಯಾತಿ ಪಡೆದಿದೆ. ಶತ ಶತಮಾನಗಳಿಂದ ‘ನ್ಯೂ ರಿವರ್’ ಜಿಗಿಯುತ್ತ, ಎದುರು ಸೆಟೆದ ಶಿಲಾಖಂಡಗಳನ್ನು ಸವೆಸಿ ಶಿಥಿಲಗೊಳಿಸುತ್ತ ರಚಿಸಿರುವ ಮಹಾ ಕಂದರವನ್ನು ‘ಹಾಕ್ಸ್ ನೆಸ್ಟ್

ಪಾರ್ಕ್‌ನ ಎತ್ತರದ ಅಂಚಿನಿಂದ ನೋಡಿದರೆ ಬವಳಿ ಬರಿಸುತ್ತದೆ; ಕಾಲು ನಡುಗುತ್ತವೆ. ಈ ನದಿಯ ಜೊತೆಯಲ್ಲೇ 'ಗ್ರೀನ್ ಬ್ರಯರ್' (Green brier) ಹೆಸರಿನ ಮತ್ತೊಂದು ದೊಡ್ಡ ನದಿಯೊಂದು ಅರಣ್ಯ ಪ್ರದೇಶವನ್ನು ಛೇದಿಸುತ್ತ, ಸರ್ಪಗತಿಯಲ್ಲಿ ಧಾವಿಸುತ್ತದೆ. ಈ ಎರಡೂ ನದಿಗಳ ಜಲರಾಶಿಯ ಓಟದ ಭಯಕಾರಕ ನೋಟ ಭೀಷಣ-ರಮ್ಯವಾದದ್ದು. ಮನುಷ್ಯ ಈ ಭೂಮಿಯಲ್ಲಿ ಕಾಲಿಟ್ಟದ್ದಕ್ಕಿಂತ ಎಷ್ಟೋ ಮಿಲಿಯಾಂತರ ವರ್ಷಗಳಿಂದ ಹರಿಯುತ್ತಿರುವುದನ್ನು ಕಲ್ಪಿಸಿಕೊಂಡಾಗ ನಮಗಾಗುವ ಭವ್ಯಾನುಭವ ಮಾತುಗಳಿಗೆ ಮಿಗಿಲಾದದ್ದು. ಹಾಗೆಯೇ, ಈ ಎರಡು ನದಿಗಳೂ ಅಲ್ಲಿರುವ ತುಂಬಾ ಹಳೆಯದಾದ ಉಕ್ಕಿನ ನೀಳ ಸೇತುವೆಯೂ ಬೆಟ್ಟ ಕಣಿವೆಗಳೂ ಅಮೇರಿಕದಿಂದ ಮಾತ್ರವಲ್ಲದೆ, ಜಗತ್ತಿನ ಇತರ ಕಡೆ ಗಳಿಂದ ವರ್ಷಂಪ್ರತಿ ಧಾವಿಸಿ ಬರುವ ಅಸಂಖ್ಯಾತ ಸಾಹಸಿಗರಿಗೆ, ಚಾರಣಿಗರಿಗೆ, ಪರ್ವತಾರೋಹಿಗಳಿಗೆ, ಜಿಗಿತದ ಕ್ರೀಡೆಗಳಲ್ಲಿ ಪಾಲ್ಗೊಳ್ಳುವರಿಗೆ ನಿಜಕ್ಕೂ ಸ್ವರ್ಗಸದೃಶ. ಇಂತಹ ಕ್ರೀಡೆಗಳಲ್ಲಿ ನೀಳವಾದ ಹಾಗೂ ಎತ್ತರವಾದ ಉಕ್ಕಿನ ಸೇತುವೆಯಿಂದ ಜಿಗಿಯುವ ಸ್ಪರ್ಧೆ ಅತ್ಯಂತ ಜನಪ್ರಿಯ ಹಾಗೂ ರೋಮಾಂಚನಕಾರಿ. ಪ್ರತಿ ವರ್ಷ ಸಹಸ್ರಾರು ಜನಗಳ ಮಹಾ ಜಾತ್ರೆಯೇ ಇಲ್ಲಿ ನೆರೆದು ಮೂರು-ನಾಲ್ಕು ದಿವಸಗಳ ಪರ್ಯಂತ ಉತ್ಸವದ ವಾತಾವರಣ ನಿರ್ಮಿತವಾಗುತ್ತದೆ. ಈ ನಿರ್ಜನ ಹಾಗೂ ನೀರವ ಗುಡ್ಡಗಾಡಿನ ಪ್ರದೇಶಕ್ಕೆ ದೊಡ್ಡ ನಗರದ ಕಳೆ ಮೂಡುತ್ತದೆ.

ಸಾಹಸಮಯ ಕ್ರೀಡೆಗಳಿಗಾಗಿಯೇ ರಚಿತವಾಗಿರುವ ಮೂರು ಬೃಹತ್ ಉದ್ಯಾನ ವನ (parks)ಗಳೆಂದರೆ—ನ್ಯೂ ರಿವರ್ ಗಾರ್ಜ್ ನ್ಯಾಷನಲ್ ರಿವರ್ ಪಾರ್ಕ್, ಬ್ಲೂಸ್ಟೋನ್ ನ್ಯಾಷನಲ್ ಸೀನಿಕ್ ರಿವರ್ ಪಾರ್ಕ್, ಗೌಲೆ ರಿವರ್ ನ್ಯಾಷನಲ್ ರಿಕ್ರಿಯೇಷನ್ ಏರಿಯಾ ಪಾರ್ಕ್. ಇವುಗಳ ಜೊತೆಯಲ್ಲೇ ಮೀನು ಹಿಡಿಯುವುದಕ್ಕೆ, ಬೇಟೆಯಾಡುವುದಕ್ಕೆ ಇಲ್ಲಿ ಪ್ರಶಸ್ತವಾದ ತಾಣಗಳೂ ಇವೆ.

ಇಷ್ಟೇ ಅಲ್ಲದೆ, ಇಂಥ ಜನ ವಿದೂರವಾದ ಅಜ್ಞಾತ ಪ್ರದೇಶದಲ್ಲಿ ಪ್ರವಾಸಿಗರ ಮೋಜು ಹಾಗೂ ಸೌಕರ್ಯಕ್ಕಾಗಿ ಇಲ್ಲಿನ ವೈಶಿಷ್ಟ್ಯವನ್ನು ಬಿಂಬಿಸುವ ಸ್ಮರಣಿಕೆಗಳು, ಸಿ.ಡಿ.ಗಳು, ಪುಸ್ತಕಗಳೂ ಸಿಕ್ಕುತ್ತವೆ. ಒಳ್ಳೆಯ ಉಣಿಸನ್ನು ವಿತರಿಸುವ ಒಂದು ಕ್ಯಾಂಟೀನ್ ಸಹ ಇಲ್ಲಿದೆ. ಆ ಕ್ಯಾಂಟೀನಿನಲ್ಲಿ ಪರಿಚಾರಿಕೆಯಾಗಿ ಎಪ್ಪತ್ತು ವಯಸ್ಸನ್ನು ದಾಟಿದ ಸಿಂಡಿ ಹೆಸರಿನ ಮಹಿಳೆಯ ಭೇಟಿಯಾಯಿತು. ಈ ವಯಸ್ಸಿನಲ್ಲೂ ಅವಳ ಚುರುಕು, ಲವಲವಿಕೆ, ಹುರುಪುಗಳನ್ನು ಕಂಡು ನಿಸಾರರಿಗೆ ಹೇಗೋ ಹಾಗೆ ನಮಗೂ ವಿಸ್ಮಯವಾಯಿತು. ವಿಚಾರಿಸ ಲಾಗಿ ಆಕೆ ಈ ಕ್ಯಾಂಟೀನಿನಲ್ಲಿ ಕಳೆದ ಮೂವತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದಾಳೆ. ನಗುನಗುತ್ತಾ ಆತ್ಮೀಯವಾಗಿ ವ್ಯವಹರಿಸುವ ಆಕೆಯ ಮುಂದೆ ಯುವಕರೂ ನಾಚಬೇಕು. 'ಈ ಇಳಿ ವಯಸ್ಸಿನಲ್ಲೂ, ಹೀಗೆ ಜಿಂಕೆಯಂತೆ ಜಿಗಿದಾಡುತ್ತ ದುಡಿಯುತ್ತಿರುವೆಯಲ್ಲ, ನಿನಗೆ ಸುಸ್ತೋ ಬೇಸರವೋ ಆಗುವುದಿಲ್ಲವೆ?' ಎಂದು ನಿಸಾರರು ತಮಾಷೆಗಾಗಿ ಕೇಳಿದಾಗ, ಸಿಂಡಿ 'ಯಾಕಾಗಬೇಕು. ಮೈಮನಸ್ಸು ಎರಡನ್ನೂ ಕರ್ತವ್ಯದಲ್ಲಿ ಮಗ್ನಗೊಳಿಸಿಕೊಂಡರೆ ಉತ್ಸಾಹ, ಹರ್ಷ ತಾನಾಗಿ ಮೂಡುತ್ತದೆ. ಕಳೆದ ಮೂವತ್ತು ವರ್ಷಗಳಿಂದ ಈ ತಥ್ಯ ನನ್ನ ಅನುಭವಕ್ಕೆ ಬಂದಿದೆ' ಎಂದು ಉತ್ತರಿಸಿದಳು ಆ ವೃದ್ಧಮಾತೆ.

ನಿಸಾರರಿಗೆ ನಾನು ಕಾಣಿಕೆಯ ರೂಪದಲ್ಲಿ ಇಲ್ಲಿನ ನಿಸರ್ಗದ ಅಸಾಮಾನ್ಯ ಚೆಲ್ವಿಕೆಯ ಬಗೆಗಿನ ಒಂದು ಸಚಿತ್ರ ಪುಸ್ತಕವನ್ನೂ ನ್ಯೂ ರಿವರ್ ಸೇತುವೆಯ ಮೇಲಿನಿಂದ ಧುಮುಕುವ ಸ್ಪರ್ಧೆಗಳ ಮಹಾ ಮೇಳದ ಒಂದು ವಿಡಿಯೊ ಕ್ಯಾಸೆಟ್ಟನ್ನೂ ಕೊಡಿಸಿದೆ. ನಿಸಾರರು ಮಾತುಗಳ ಮಧ್ಯೆ ಆಗೀಗ ಕೆಲವು ಕವನ ಪಂಕ್ತಿಗಳನ್ನು ಉಲ್ಲೇಖಿಸುತ್ತಿದ್ದರು. ನಾನೂ ಯಾವಾಗಲಾದರೂ ಒಂದೊಂದು ಸಲ ಪದ್ಯ ರಚನೆ ಮಾಡುತ್ತಿದ್ದುದರಿಂದ, 'ಅರಣ್ಯ ರೋದನ' ಹೆಸರಿನ ಒಂದು ಕಿರು ಕವನ ಸಂಗ್ರಹ ಹೊರತಂದಿದ್ದರಿಂದ, ಕೆಲವು ಸಾಲುಗಳನ್ನು ಉದ್ಧರಿಸುತ್ತಿದ್ದೆ. ನಿಸಾರರಿಗೆ ಇದರಿಂದ ಬಹಳ ಖುಷಿಯಾದಂತಿತ್ತು. ಕೆಲವನ್ನು ಮೆಚ್ಚಿ ನನ್ನನ್ನು ಅಭಿನಂದಿಸುತ್ತಿದ್ದರು. ನಮ್ಮ ನಾಡಿನ ಒಬ್ಬ ಹಿರಿಯ ಕವಿ ನನ್ನ ಕವನಗಳನ್ನು ಇಷ್ಟಪಟ್ಟದ್ದನ್ನು ಈಗ ನೆನಪಿಸಿಕೊಂಡರೆ ಮನಸ್ಸಿಗೆ ಮುದ ಮೂಡುತ್ತದೆ; ಹೆಮ್ಮೆಯಿಂದ ಜೀವ ತಣಿಯುತ್ತದೆ.

ಇಲ್ಲಿನ ನಿಸರ್ಗದ ಆಪ್ಯಾಯಮಾನವಾದ ಮಡಿಲಲ್ಲಿ ನಲಿದಾಡಿ ನಾವು ಹಾಕ್ಸ್ ನೆಸ್ಟ್ ಪಾರ್ಕ್ ಅಥವಾ ಪೈಪ್‌ಸ್ಟೆಮ್(Pipestem)ನ ತುದಿಯಿಂದ ಸಾವಿರಾರು ಅಡಿ ಕೆಳಗಿನ ಪ್ರಪಾತಕ್ಕೆ ಟ್ರಾಲಿ ಅಥವಾ ಟ್ರಾಮ್ ಮೂಲಕ ಇಳಿದೆವು. ನೇರವಾಗಿ ಹಾಗೂ ನಿಧಾನವಾಗಿ ಇಳಿಯುವ ಲಿಫ್ಟಿನಂತಹ ಆ ಗೂಡಿನಿಂದ ಹೊರಗೆ ಇಣುಕಿದಾಗ ಜೀವ ಝಿಲ್ಲೆನ್ನುತ್ತದೆ, ರಕ್ತದ ಚಲನೆ ಹೆಚ್ಚಾಗತೊಡಗುತ್ತದೆ. ಹೆದರಿಕೆಯಿಂದ ಕಣ್ಣುಗಳನ್ನು ಮುಚ್ಚಿಕೊಳ್ಳುವ ಹಾಗೆ ಆಗುತ್ತದೆ. ಅಂತಹ ನೋಟವನ್ನು ತಾವೆಂದೂ ನೋಡಿಲ್ಲವೆಂದು ಮತ್ತು ಅಷ್ಟು ಎತ್ತರದಿಂದ ಕೆಳಗಡೆಯ ಮಹಾ ಕಂದರಕ್ಕೆ ಇಳಿಯಲಿಲ್ಲವೆಂದು ನಿಸಾರ್ ಅವರು ಹೇಳುತ್ತ 'ಇದೊಂದು ಮರೆಯಲಾಗದ ಮಹದನುಭವ' ಎಂದರು. ಆ ಟ್ರಾಲಿಯ ಚಾಲಕ ಒಂದು ಬ್ಯಾಡ್ಜ್ ಧರಿಸಿದ್ದ: 'Vietnam Veteran.' ಅಂದರೆ, 'ವಿಯಟ್ನಾಂ ಯುದ್ಧದಲ್ಲಿ ಕಾದಾಡಿದ ಖ್ಯಾತಿವಂತ' ಎಂದು ಅದರ ಅರ್ಥ. ಅವನು ಇಲ್ಲಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾನೆ. ತಾನು ಸಮರದಲ್ಲಿ ಭಾಗಿಯಾದದ್ದಕ್ಕೆ ಸರಕಾರ ಈ ಹುದ್ದೆಯನ್ನು ನೀಡಿ ಅವನನ್ನು ಗೌರವಿಸಿದೆ. ಅವನು ವಿಯಟ್ನಾಮಿನ ಒಂದೆರಡು ಅನುಭವಗಳನ್ನು ರೋಚಕವಾಗಿ ನಿರೂಪಿಸಿದ. 'ಇವರು ಇಂಡಿಯದಿಂದ ಬಂದಿದ್ದಾರೆ' ಎಂದು ನಿಸಾರರನ್ನು ಪರಿಚಯಿಸಿದಾಗ, ಖುಷಿಪಟ್ಟು ತಾನು ಯಾರಿಂದಲೋ ಕಲಿತ ಮುರುಕು ಹಿಂದಿಯಲ್ಲಿ 'ಆಪ್ ಕೊ ಧನ್ಯವಾದ್' ಎಂದು ನಮ್ಮನ್ನು ರಂಜಿಸಿದ.

ಅಲ್ಲಿಂದ ಮತ್ತೊಂದು—ಶತಮಾನದ ಹಿಂದೆ ತುಂಬ ಪ್ರಖ್ಯಾತವಾಗಿದ್ದ—ಕಲ್ಲಿದ್ದಲ್ಲಿನ ಗಣಿ ಪ್ರದೇಶಗಳಿಗಿರುವ ರಸ್ತೆಯಿಂದ ಮರಳಿದೆವು. ನಿಸಾರರು ರಸ್ತೆಯುದ್ದಕ್ಕೂ ಪುಂಖಾನುಪುಂಖವಾಗಿ, ಅವಿಚ್ಛಿನ್ನವಾಗಿ ಒಂದಾದ ಮೇಲೊಂದರಂತೆ ಎಡೆಬಿಡದೆ ಎದುರಾಗುತ್ತಿದ್ದ ಅಪಲಾಚಿಯನ್ ಪರ್ವತ ಪಂಕ್ತಿಯ ಭೀಷಣ ಭವ್ಯ ದೃಶ್ಯಗಳನ್ನು ನೋಡುತ್ತ ಮೈ ಮರೆತಿದ್ದರು. ಅವರಲ್ಲಿ ಮಾತು ಉಡುಗಿ ಮಹಾಮೌನವೊಂದು ಆವರಿಸಿ ದಂತೆ ತೋರುತ್ತಿತ್ತು. ಸೋಪಾನಪ್ರಾಯವಾಗಿ ತರಂಗಿತ ಹೆದ್ದೆರೆಗಳಂತೆ, ಪ್ರಕೃತಿ ಪ್ರದರ್ಶನಕ್ಕೆ ಇಟ್ಟಿರುವ ಪರಮೋನ್ನತ ಹಸ್ತಕೌಶಲದ ಮಹದ್ವಸ್ತುಗಳಂತೆ ದೈತ್ಯ ಗಿರಿಪಂಕ್ತಿಗಳು ಭಯಾಶ್ಚರ್ಯಕರ ರೂಪವನ್ನು ತಳೆದು ಕಣ್ಣೆದುರು ನಿಮಿರುತ್ತಿದ್ದವು. ನಿಸಾರರನ್ನು

ಮಾತನಾಡಿಸಿದಾಗ ಅವರು ಹೊರಗಿನ ದೃಶ್ಯಾವಳಿಯಿಂದ ದೃಷ್ಟಿಯನ್ನು ಕೀಳದೆ, 'ಮಾತಿಲ್ಲಿ ಮೈಲಿಗೆ, ಸುಮ್ಮನಿರಿ ಮಿತ್ರರಿರ' ಎಂಬ ಮಹಾಕವಿ ಕುವೆಂಪು ಅವರ ಸಾಲುಗಳನ್ನು ಉದ್ಧರಿಸಿದ್ದಲ್ಲದೆ, 'ಮಹತ್ಕೃತಿ ಮಹನ್ಮೌನಿ' ಎಂಬ ಪ್ರಾಕೃತಿಕ ಸತ್ಯ ಮನೋವೇದ್ಯವಾಗುವುದು ಇಂತಹ ಭೂಮ ಅನುಭವದ ಪ್ರದೇಶಗಳಲ್ಲೇ' ಎಂದರು.

ನಾವು ಚಾರ್ಲ್ಸ್‌ಟನ್ ಸಮೀಪಿಸಿದಾಗ ಮಳೆ ಹನಿಗಳು ಬೀಳತೊಡಗಿದವು. ಸ್ವಲ್ಪ ಹೊತ್ತಿನಲ್ಲೇ ಆಗಸ ಕಾರ್ಮುಗಿಲುಗಳಿಂದ ಕಪ್ಪಾಗತೊಡಗಿತು. ಮಳೆ ಜೋರಾಗಿ ಬರುವ ಸೂಚನೆ ಕಂಡಿದ್ದರಿಂದ ನನಗೆ ಸಾಯಂಕಾಲದ ನಿಸಾರರ ಕಾರ್ಯಕ್ರಮ ಸಾಂಗವಾಗಿ ಜರುಗುವುದೋ ಇಲ್ಲವೋ ಎಂಬ ತಳಮಳ ಶುರುವಾಯಿತು. ಬೇಗ ಮನೆ ತಲಪಿ ಬಟ್ಟೆ ಬದಲಾಯಿಸಿ ಸುದೂರದಲ್ಲಿದ್ದ ನನ್ನ ಪ್ರಿಯಮಿತ್ರ ಡಾ. ಮಲ್ಲಿನಾಥ ಕಾಯಿ ಮತ್ತು ಶ್ರೀಮತಿ ಉಮಾ ಕಾಯಿ ಅವರ ಮನೆ ತಲಪಬೇಕಾದರೆ ಆಗಲೆ ಸಂಜೆ ಏಳು ಗಂಟೆಯ ಸಮಯ. ಅಷ್ಟಿಷ್ಟು ಮಳೆ ಹುಯ್ದರೂ ಸುದೈವದಿಂದ ಮಲ್ಲಿನಾಥರ ಮನೆ, ಸಭಿಕ– ಕುಟುಂಬಗಳಿಂದ ತುಂಬಿ ತುಳುಕಿತ್ತು. ನನಗೆ ಇದರಿಂದ ನಿಜಕ್ಕೂ ನಿರಾಳವಾಗಿತ್ತು. ಏಕೆಂದರೆ ಈ ಊರಲ್ಲಿ ನಿಸಾರರ ಕಾರ್ಯಕ್ರಮದ ಏರ್ಪಾಟನ್ನು ಮಾಡಿದ್ದವ ನಾನು. ನಮ್ಮ 'ಕನ್ನಡ ಮಲ್ಲಿಗೆ ಬಳಗ'ದ ಸದಸ್ಯರಲ್ಲಿ ಕೆಲವರು ನಲವತ್ತು ಮೈಲಿ ದೂರದಿಂದ ಬರಬೇಕಿತ್ತು. ಅಕಸ್ಮಾತ್ ಬಾರದೆ ಹೋದರೆ, ಸಭಿಕರ ಸಂಖ್ಯೆ ಕಡಮೆಯಾದರೆ, ನಿಸಾರರಿಗೆ 'ಈ ಭಾಗ್ಯಕ್ಕೆ ಇಷ್ಟು ದೂರ ನಾನು ಉಪನ್ಯಾಸ ನೀಡಲು ಬರಬೇಕಿತ್ತೆ?' ಎಂಬ ಜುಗುಪ್ಸಾ ಭಾವನೆ ಮೂಡುವುದಿಲ್ಲವೆ? ಎಂಬ ಆತಂಕ ನನ್ನ ತಲೆಯನ್ನು ತಿಂದಿತ್ತು. ಆದರೂ ಮೇಲೆ ತೋರಿಸಿಕೊಳ್ಳದೆ ನಗು ನಗುತ್ತಲೇ ಇದ್ದೆ. ಸುಮಾರು ನಲವತ್ತು-ಐವತ್ತು ಗಂಡಸರು-ಹೆಂಗಸರು ಆಗಮಿಸಿದ್ದರು. ಗಂಡಸರಲ್ಲಿ ಹಲವರು ಸೂಟು ಟೈ ಧರಿಸಿ ಲಕ್ಷಣವಾಗಿ ಕಾಣುತ್ತಿದ್ದರೆ, ಹೆಂಗಸರು ಸೊಗಸಾಗಿ ಶೃಂಗಾರ ಮಾಡಿಕೊಂಡು, ಬಹುತೇಕ ಎಲ್ಲರೂ ಬಣ್ಣಬಣ್ಣದ ಸೀರೆಯುಟ್ಟು ಕಂಗೊಳಿಸಿದ್ದರು. ಒಟ್ಟಾರೆ ಹಬ್ಬದ, ಮದುವೆಯ ಮನೆಯ ವಾತಾವರಣ ನಿರ್ಮಾಣವಾಗಿತ್ತು. ಇದರೊಂದಿಗೆ ಡಾ. ಮಲ್ಲಿನಾಥ ಮತ್ತು ಅವರ ಮಡದಿ ಉಮಾ ಅವರ ಆತಿಥ್ಯೋಪಚಾರವೂ ಆಹ್ಲಾದಕರವಾಗಿತ್ತು.

ನಿಸಾರರಿಗೆ ಅಲ್ಲಿ ಬಂದಿದ್ದವರ ಪರಿಚಯದ ಅನಂತರ 'ಕನ್ನಡ ಮಲ್ಲಿಗೆ ಬಳಗ'ದ ಪರವಾಗಿ ಒಂದು ಕಿರಿದಾದ ಗೌರವ ಸಮರ್ಪಣೆ ನಡೆಯಿತು. 'ವಿಶ್ವ ಸಾಹಿತ್ಯಕ್ಕೆ ಕನ್ನಡದ ಕೊಡುಗೆ' ಎಂಬ ವಿಷಯವಾಗಿ ನಿಸಾರ್ ಸುಮಾರು ಒಂದೂ ಮುಕ್ಕಾಲು ಗಂಟೆ ಓತಪ್ರೋತವಾಗಿ, ನಿರರ್ಗಳವಾಗಿ ಮಾತಾಡಿದರು. ಕನ್ನಡ ಸಾಹಿತ್ಯದ ವೈಶಿಷ್ಟ್ಯ ಅನನ್ಯತೆಗಳನ್ನು ಪ್ರಾಚೀನ ಕಾಲದಿಂದ ಆಧುನಿಕ ಕಾಲದ ತನಕ ಸೋದಾಹಣವಾಗಿ ಪ್ರಸ್ತಾಪಿಸಿದರು. ವಚನ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಹೇಗೆ ಜಗತ್‌ಸಾಹಿತ್ಯದಲ್ಲೇ ಅದ್ವಿತೀಯ, ಮಹತ್ತರ ಎಂಬುದನ್ನು ಹಲವಾರು ಸ್ವಾರಸ್ಯಕರ ನಿದರ್ಶನಗಳೊಂದಿಗೆ ಪ್ರತಿಪಾದಿಸಿದರು. ಅವರ ಮಾತಿನ ಓಘ ಮತ್ತು ಸ್ವಾರಸ್ಯಕರ ಸಾಲುಗಳ ಉಲ್ಲೇಖದ ಪ್ರವಾಹದಲ್ಲಿ ಅಲ್ಲಿದ್ದವರೆಲ್ಲ ಬೆಕ್ಕಸ ಬೆರಗಾಗಿ ಕೊಚ್ಚಿ ಹೋದರು. ಈ ಹಿಂದೆ 'ಕನ್ನಡ ಮಲ್ಲಿಗೆ ಬಳಗ'ದಲ್ಲಿ ಇಂತಹ ವಿದ್ವತ್ಪೂರ್ಣ ಹಾಗೂ ರುಚಿಕಟ್ಟಾದ ಭಾಷಣವನ್ನು ನಾವು ಯಾರೂ ಕೇಳಿರಲಿಲ್ಲ. ನಿಜಕ್ಕೂ

ಅಭೂತಪೂರ್ವವೆನ್ನಿಸುವ ಅನುಭವ ನಮಗಾಗಿತ್ತು. ಇದಾದ ಮೇಲೆ ಕನ್ನಡಕ್ಕೆ ಹೇಗೆ ಹಿಂದಿ ಮತ್ತು ಆಂಗ್ಲ ಭಾಷೆಗಳಿಂದ ಆಘಾತಕಾರಿ ಕುತ್ತು ಒದಗುತ್ತಿದೆ ಎನ್ನುವುದನ್ನು ಮನ ಮುಟ್ಟು ವಂತೆ ನಿರೂಪಿಸಿದರು. ಅವರ ವಿಷಯ ಗಂಭೀರ ಸ್ವರೂಪದ್ದಾಗಿದ್ದರೂ ಅದನ್ನು ವ್ಯಕ್ತಗೊಳಿ ಸುವ ವಿನೋದದ ಶೈಲಿ ಅನೇಕರನ್ನು ನಗಿಸುತ್ತಿದ್ದಂತೆ, ವೈಚಾರಿಕವಾಗಿ ಕೆರಳಿಸಿತ್ತು. ಇದಾದ ಮೇಲೆ ಕೊಸರು ಎನ್ನುವ ಹಾಗೆ ತಮ್ಮ ಸ್ವಂತ ಕವನಗಳನ್ನು ನಿಸಾರ್ ತಮ್ಮದೇ ಆದ ಅಭಿನಯಶೀಲ ಧಾಟಿಯಲ್ಲಿ ವಾಚಿಸಿ ಅಲ್ಲಿದ್ದ ಎಲ್ಲರನ್ನೂ ಮಂತ್ರಮುಗ್ಧಗೊಳಿಸಿದರು. ಎರಡೂ ಕಾಲು ಗಂಟೆಗೂ ಹೆಚ್ಚು ಸಮಯವನ್ನು ಅವರು ಬಳಸಿದ್ದರೂ ಯಾರೂ ಕಮಕ್ ಕಿಮಕ್ ಎಂದಿರಲಿಲ್ಲ, ಮೇಲೆದ್ದು ಹೋಗಿರಲಿಲ್ಲ. ಇನ್ನೂ ಅರ್ಧಗಂಟೆ ಮಾತಾಡಿದ್ದರೂ ಯಾರೂ ಅವರನ್ನು ಬೇಡವೆನ್ನುತ್ತಿರಲಿಲ್ಲ. ಅವರ ಕಾರ್ಯಕ್ರಮದ ನಡುವೆ ಸಭಿಕರು ಅದೆಷ್ಟು ಬಾರಿ ಕರ ತಾಡನ ಮಾಡಿದರೊ, ಮುಗಿದ ಬಳಿಕ ಅದೆಷ್ಟು ಸಲ ಗಂಡಸರು, ಹೆಂಗಸರು ಅವರ ಜೊತೆ ಫೋಟೊ ಹಿಡಿಸಿಕೊಂಡರೊ! ಅವರಿಗೆ ವಿಶ್ರಾಮ ಕೊಡದೆ ಮುತ್ತಿಕೊಂಡು ಅವರನ್ನು ಅಭಿನಂದಿಸಿದವರು ಅದೆಷ್ಟು ಮಂದಿಯೊ!

ನನಗೆ ಎಲ್ಲರಿಗಿಂತ ಹೆಚ್ಚು ಸಂತೋಷ, ತೃಪ್ತಿ ಆಗಿತ್ತು. ಅವರನ್ನು ಇಲ್ಲಿಗೆ ಕರೆ ತಂದಿದ್ದಕ್ಕೆ ಸಾರ್ಥಕತೆಯ ಭಾವ ಮೂಡಿತ್ತು. ಊಟದ ಅನಂತರ ರಾತ್ರಿ ಸಾಕಷ್ಟು ವೇಳೆಯಾಗಿದ್ದರೂ ದೂರದ ಪ್ರಯಾಣವಿದ್ದರೂ ಲೆಕ್ಕಿಸದೆ ನಿಸಾರರೊಂದಿಗೆ ಕೆಲವರು ಮಾತಿಗಿಳಿದಾಗ ನಾನು ತಡೆದು 'ನಾಳೆ ಬೆಳಿಗ್ಗೆ ನಿಸಾರ್ ಅವರು ವಾಷಿಂಗ್ಟನ್‌ಗೆ ಮರಳಬೇಕಿದೆ. ಆದ್ದರಿಂದ ಮನೆಗೆ ಹೋಗಿ ವಿಶ್ರಾಂತಿ ಪಡೆಯಲು ಅವಕಾಶ ಮಾಡಿಕೊಡಿ' ಎಂದು ಬೇಡಿಕೊಂಡು ಅವರನ್ನು ಅಲ್ಲಿಂದ ಹೊರಡಿಸಿದೆ. ಇವೊತ್ತಿನ ಕಾರ್ಯಕ್ರಮದ ಯಶಸ್ಸಿನಿಂದ ನನಗಂತೂ ಮಾತೇ ಹೊರಡದಂತಾಗಿತ್ತು. 'ಅಲ್ಲ ನಿಸಾರ್ ಅವರೆ, ಎರಡು ದಿವಸಗಳಿಂದ ನನ್ನ ಜೊತೆ ಇದ್ದೀರಿ. ಅಪ್ಪಿ ತಪ್ಪಿ ಕೂಡ ನೀವು ಇಷ್ಟೆಲ್ಲಾ ವಿಷಯಗಳನ್ನು ತಿಳಿದಿದ್ದೀರಿ, ಇಷ್ಟು ಸೊಗಸಾಗಿ ಮಾತಾಡಬಲ್ಲಿರಿ ಎಂಬ ಗುಟ್ಟನ್ನು ಬಿಟ್ಟುಕೊಡಲಿಲ್ಲವಲ್ಲ! ನಿಜಕ್ಕೂ ಬಹಳ ಸಮಯದವರೆಗೂ ನಿಮ್ಮ ಕಾರ್ಯಕ್ರಮವನ್ನು ನಾವು ನೆನೆಯುತ್ತಿರುತ್ತೇವೆ. ನಿಮಗೆ ಅನಂತ ಧನ್ಯವಾದಗಳು' ಅಂದೆ. ಅವರು ಸೌಜನ್ಯದಿಂದ 'ಛೆ! ದೊಡ್ಡ ಮಾತು. ಹಾಗೆಲ್ಲ ಹೊಗಳಬೇಡಿ. ನನಗೇ ಇನ್ನೂ ಎಷ್ಟೋ ತಿಳಿದುಕೊಳ್ಳುವುದಿದೆ, ಕಲಿಯುವುದಿದೆ. ಕನ್ನಡಕ್ಕೆ ಅವಕಾಶವಿಲ್ಲದ ಇಂತಹ ದೇಶದಲ್ಲಿ ನೀವು ತೋರಿಸುತ್ತಿರುವ ಕನ್ನಡದ ಪ್ರೀತಿಯ ಮುಂದೆ ನನ್ನ ಮಾತು ಎಷ್ಟರದು! ನಿಜಕ್ಕೂ ಹೊಗಳಿಕೆಗೆ ತಕ್ಕವರು ನಿಮ್ಮಂತಹ ಅಮೇರಿಕನ್ನಡ ಸಹೃದಯರು' ಎಂದರು.

ಡಾ. ಮಲ್ಲಿನಾಥರ ಮನೆಯಲ್ಲಿ ನಡೆದ ಒಂದು ಸಣ್ಣ ಪ್ರಸಂಗ ಜ್ಞಾಪಕಕ್ಕೆ ಬರುತ್ತಿದೆ. ಅವರು 'ಪ್ರಾತಿನಿಧಿಕ ಕವಿತೆಗಳು' ಎಂಬ ತಮ್ಮ ಪುಸ್ತಕದಿಂದ ಕವನಗಳನ್ನು ಓದಿದ್ದರು. ಅವು ಅಲ್ಲಿದ್ದವರಿಗೆ ತುಂಬಾ ಹಿಡಿಸಿದ್ದವಷ್ಟೆ? ನಿಸಾರರು ಊಟ ಮಾಡಿ ಎದ್ದಾಗ ಹಿಂದುಗಡೆಯ ಮೇಜಿನ ಮೇಲೆ ಇಟ್ಟಿದ್ದ ಪುಸ್ತಕ ನಾಪತ್ತೆಯಾಗಿತ್ತು. ಯಾರನ್ನು ಕೇಳುವು ದೆಂದು ಅವರು ಸಂಕೋಚದಿಂದ ಚಡಪಡಿಸುತ್ತಿರುವಾಗ, ನಾನು 'ನಿಸಾರರ ಕವನ ಸಂಗ್ರಹ ಇಲ್ಲೆಲ್ಲೊ ಕಳೆದು ಹೋಗಿದೆ. ಯಾರ ಕಣ್ಣಿಗಾದರೂ ಬಿದ್ದರೆ ದಯಮಾಡಿ ತಂದು ಕೊಡಿ'

ಎಂದು ಕೋರಿದೆ. ಆಗ ಮನೆಯ ಒಡೆಯ ಡಾ. ಮಲ್ಲಿನಾಥ ಅವರು ನಸುನಗುತ್ತ 'ಅದನ್ನು ನಿಮ್ಮ ಅನುಮತಿಯಿಲ್ಲದೆ ನಾನು ಎತ್ತಿಟ್ಟುಕೊಂಡಿದ್ದೆ. ಇಲ್ಲಿ ಅದು ದೊರಕುವುದಿಲ್ಲ ಎನ್ನುವುದೇ ಅದಕ್ಕೆ ಕಾರಣ. ನೀವು ಓದಿದ ಕವನಗಳನ್ನು ನಾನು ಪದೇ ಪದೇ ಓದಿ ಸಂತೋಷಪಡಬೇಕೆಂದುಕೊಂಡಿದ್ದೇನೆ' ಎಂದಾಗ, 'ನಿಮ್ಮ ಪ್ರೀತಿ ವಿಶ್ವಾಸಗಳಿಗೆ ನಾನು ನಿಜಕ್ಕೂ ಋಣಿ. ಆದರೆ ಸದ್ಯಕ್ಕೆ ನನ್ನಲ್ಲಿ ಇರುವುದು ಅದೊಂದೇ ಪ್ರತಿ. ಬೆಂಗಳೂರಿಗೆ ನಾನು ಹೋದ ಮೇಲೆ, ಈ ಕಡೆಯವರು ಯಾರಾದರೂ ಸಿಕ್ಕಿದರೆ ಅವರ ಕೈಯಲ್ಲಿ ನಿಮಗೆ ಈ ಪುಸ್ತಕದ ಪ್ರತಿಯೊಂದನ್ನು ಕಳಿಸುತ್ತೇನೆ' ಎಂದೆ. ಅವರಿಗೆ ಕೃತಿಯನ್ನು ಕೊಡಲು ಇಷ್ಟವಿಲ್ಲ. 'ಬೆಳಿಗ್ಗೆ ಜೆರಾಕ್ಸ್ ಮಾಡಿಸಿ ನಿಮಗೆ ತಲಪಿಸಲೆ?' ಎಂದಾಗ, ನಾನು 'ಅವರು ಬೆಳಿಗ್ಗೆಯೇ ವಿಮಾನ ಹತ್ತಬೇಕಿದೆ. ಬೆಂಗಳೂರಿಗೆ ಹೋದ ಮೇಲೆ ಕಳಿಸುತ್ತೇನೆ ಅಂದಿದ್ದಾರಲ್ಲ. ಈಗ ಕೊಟ್ಟುಬಿಡಿ' ಎಂದು ಒತ್ತಾಯಿಸಿದಾಗ, ಮಲ್ಲಿನಾಥರು ಮನಸ್ಸಿಲ್ಲದ ಮನಸ್ಸಿನಿಂದ ಅದನ್ನು ನಿಸಾರರ ಕೈಗಿತ್ತರು. ಅಕಸ್ಮಾತ್ ಅವರು ಈ ಪುಸ್ತಕವನ್ನು ತೆಗೆದುಕೊಂಡದ್ದನ್ನು ತಿಳಿಸದೇ ಹೋಗಿದ್ದರೆ, ಮುಂದಿನ ಪ್ರವಾಸಗಳಲ್ಲಿ ಅದೆಷ್ಟು ನಗರಗಳ ಅದೆಷ್ಟು ಶ್ರೋತೃಗಳಿಗೆ ನಿಸಾರರ ವಾಚನದ ಕಾವ್ಯಾನಂದ ಖೋತಾ ಆಗುತ್ತಿತ್ತೊ! ಅಂತೂ ನಿಜವನ್ನು ಹೇಳಿ ಮಲ್ಲಿನಾಥರು ನಿಜಕ್ಕೂ ಪುಣ್ಯ ಕಟ್ಟಿಕೊಂಡರು ಎನ್ನಿಸಿತು.

ಮಾರನೆಯ ದಿವಸ ಬೆಳಿಗ್ಗೆ ನಾನೂ ವನಿತಾ, ನಿಸಾರ್ ಅವರನ್ನು ವಿಮಾನ ಹತ್ತಿಸಿ ಮರಳಿದೆವು. ತೀರಾ ಹತ್ತಿರದ ಬಂಧುವೊಬ್ಬ ಅಗಲಿ ದೂರ ಹೋದಂತೆ ಮನಸ್ಸು ಭಣಭಣ ಗುಡುತ್ತಿತ್ತು. ಅವರೊಡನೆ ಕಳೆದ ಮೂರು ದಿನಗಳು ನಮ್ಮೆಲ್ಲರ ಪಾಲಿಗೆ ಚಿರಸ್ಮರಣೀಯ. ಅವರ ಭಾಷಣವನ್ನು ಕೇಳಿದ ಮೇಲೆ ಕನ್ನಡ ನುಡಿಯ, ಸಾಹಿತ್ಯದ ಮೇಲೆ ಆಸಕ್ತಿ ಗೌರವ ಹೆಚ್ಚಿಸಿಕೊಂಡ ನನ್ನ ಗೆಳೆಯರನ್ನು ನಾನು ಬಲ್ಲೆ. ನಿಸಾರರು ನಮ್ಮೊಡನೆ ಕಳೆದ ಆ ದಿನಗಳ ಮತ್ತು ಅವರ ಬಹುಮುಖ ಪ್ರತಿಭೆಯ ನೆನಪಾದಾಗಲೆಲ್ಲ 'ನಾನು ಕನ್ನಡಿಗ' ಎಂದು ಹೆಮ್ಮೆಯಿಂದ ಬೀಗುವಂತಾಗುತ್ತದೆ. ಈ ಉಪಕಾರಕ್ಕೆ ನಾನು ಅವರಿಗೆ ಕೃತಜ್ಞ.

ಪುರೋಹಿತಶಾಹಿ ಪುಢಾರಿಗಿಂತ ಹೆಚ್ಚು ಸೂಕ್ಷ್ಮ, ಅಧಿಕ ಚಾಣಾಕ್ಷ. ಜನರ ನಡುವೆ ತರತಮಾಂತರದ ಸ್ತರಗಳನ್ನು ನಿರ್ಮಿಸಿ, ಅವರು ಸದಾ ಕಚ್ಚಾಡುವ ವ್ಯವಸ್ಥೆಯನ್ನು ಹುಟ್ಟು ಹಾಕಿ ತಾನು ಅನಪಾಯಕರವಾದ ಮೇಲಿನ ಅಂತಸ್ತಿನಲ್ಲಿ ಆಸೀನನಾಗಿ ಹಿಗ್ಗಿನ ಬದುಕನ್ನು ಸಾಗಿಸಿರುತ್ತಾನೆ. ಜೇನು ಹುಟ್ಟಿಗೆ ಪಂಜು ತಾಕಿಸಿ, ಕಂಬಳಿ ಹೊದ್ದು ಸ್ವರಕ್ಷಣೆ ಮಾಡಿಕೊಳ್ಳುವ ಖದೀಮ ಆತ.

(ಪುರೋಹಿತಶಾಹಿಯ ಅಪಾಯ)



ಮನವನು ಗೆದ್ದ ಮೋಡಿಗಾರ ಕವಿ

♦ *ಶಾರದಾ ಬೈಯಣ್ಣ*
ಚಿಕಾಗೊ (ಇಲಿನಾಯ್ ಪ್ರಾಂತ್ಯ)

ನನ್ನ ಪ್ರೀತ್ಯಾದರದ ಕವಿ ಮತ್ತು ವಿಮರ್ಶಕರಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಒಡನಾಟದ ಬಗೆಗೆ ಬರೆಯುವ ಮೊದಲು ನನ್ನ ಕಿರು ಪರಿಚಯವನ್ನು ಓದುಗರಿಗೆ ಮಾಡುವುದು ಸಂದರ್ಭೋಚಿತವೆನ್ನಿಸುತ್ತದೆ.

ಯಲಹಂಕ ನಾಡಪ್ರಭು ಮಾಗಡಿ ಕೆಂಪೇಗೌಡರ ವಂಶವೃಕ್ಷದ ಕುಡಿಯಲ್ಲೊಬ್ಬಳಾದ ನಾನು ಮೂವತ್ತನಾಲ್ಕು ವರ್ಷಗಳ ಹಿಂದೆ ತಾಯ್ನಾಡನ್ನು ಬಿಟ್ಟು ಪರದೇಶಿಯಾಗಿ ಇಲ್ಲಿಗೆ ಬಂದ ಅನಂತರ ನನಗೂ ನನ್ನ ಕನ್ನಡ ನುಡಿಗೂ ಮಧ್ಯದಲ್ಲಿ ಅಂತರ್ಪಟ ಜಾರಿ ನನ್ನ ತಾಯ್ನುಡಿಯ ಜಾಗದಲ್ಲಿ ಆಂಗ್ಲ ಭಾಷೆ ಸ್ಥಿರವಾಗಿ ನೆಲೆಸಿಬಿಟ್ಟಿತ್ತು. ಮೂರು ದಶಕಗಳ ಹಿಂದೆ ದೂರವಾಣಿಯ ಸಂಪರ್ಕ ಕೂಡಾ ಇಲ್ಲದಿದ್ದ ನನಗೆ ತವರು ನಾಡಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಪತ್ರ ವ್ಯವಹಾರ ಬಿಟ್ಟರೆ ಅನ್ಯ ಮಾರ್ಗವೇ ಇರಲಿಲ್ಲ. ಆರು ದಶಕಗಳನ್ನು ದಾಟಿದ್ದ ತಂದೆಯವರಿಗೆ ತೋಟ, ಹೊಲ, ಗದ್ದೆಯ ಬಿಡುವಿಲ್ಲದ ಕೆಲಸ ಕಾರ್ಯಗಳ ಮಧ್ಯೆ ಕಾಗದ ಬರೆಯಲು ಸಮಯದ ಅಭಾವ. ಅಕ್ಷರಾಭ್ಯಾಸ ಇಲ್ಲದಿದ್ದ ತಾಯಿಗೆ ಬರೆಯುವ ಸಾಮರ್ಥ್ಯದ ಅಭಾವ!

ಬೆಂಗಳೂರಿನಲ್ಲಿ ತಳ ಊರಿದ್ದ ನಮ್ಮ ಬಾಳ ಬಳ್ಳಿಯನ್ನು ಬೇರು ಸಹಿತ ಕಿತ್ತು ತಂದು ಬಾಸ್ಟನ್ ಹಾಗೂ ಚಿಕಾಗೊ ನಗರಗಳಲ್ಲಿ ಹುಟ್ಟು ಹಾಕಿ ಬೆಳೆಸುವ ಪ್ರಯತ್ನದಲ್ಲಿ

ತತ್ತರಿಸಿ ಹೋಗಿದ್ದ ನನಗೆ ಆ ಬಳ್ಳಿ ಹುಲುಸಾಗಿ ಬೆಳೆದು ಸಂಸಾರದಲ್ಲಿ ಸುಖ, ಸಂತೋಷ, ನೆಮ್ಮದಿಗಳನ್ನು ತರುವುದೋ ಇಲ್ಲವೋ ಎಂಬ ತಲ್ಲಣ ಒಂದು ಕಡೆ. ತಲಾ ಏಳು ಡಾಲರುಗಳ ವಿದೇಶೀ ವಿನಿಮಯದೊಂದಿಗೆ ಅನ್ಯ ದೇಶಕ್ಕೆ ಪ್ರವೇಶ ಮಾಡಿದ ನಮಗೆ ವೃತ್ತಿರಂಗದಲ್ಲಿ ಕೆಲಸದ ಅಭದ್ರತೆ ಇನ್ನೊಂದು ಕಡೆ. ಆರ್ಥಿಕ ಮುಗ್ಗಟ್ಟು ಮಗುದೊಂದು ಕಡೆ. ಇತ್ತ ಭಾರತೀಯರಾಗಿ ಉಳಿಯಲೂ ಆಗದೆ, ಅತ್ತ ಅಮೆರಿಕನ್ನರಾಗಿ ಪರಿವರ್ತಿತ ರಾಗಲೂ ಇಚ್ಛಿಸದೆ 'ಐಡೆಂಟಿಟಿ ಕ್ರೈಸಿಸ್'ನ ಪರದಾಟ ಬೇರೆ. ನಮ್ಮ ಸಂಸ್ಕೃತಿಗೆ ಬಲವಾಗಿ ತೆಕ್ಕೆ ಬಿದ್ದಿದ್ದ ನನಗೆ ಇಲ್ಲಿನ ವಿಭಿನ್ನ ರೀತಿ ನೀತಿಗಳ ಜನ ಜೀವನಕ್ಕೆ ಹೊಂದಿಕೊಳ್ಳುವುದು ಸುಲಭ ಸಾಧ್ಯವಾದ ಮಾತಾಗಿರಲಿಲ್ಲ. ಕನ್ನಡ ಕವಿಗಳ, ಸಾಹಿತಿಗಳ ಬಗ್ಗೆ ತಿಳಿದುಕೊಳ್ಳಲು ಆ ಸಮಯದಲ್ಲಿ ಗಣಕ ಯಂತ್ರವಾಗಲಿ, ವಿದ್ಯುತ್ ಅಂಚೆಯಾಗಲಿ, ಅಂತರ್ಜಾಲದ ಸೌಲಭ್ಯವಾಗಲಿ ಎಲ್ಲಿತ್ತು? ಈ ದುಃಸ್ಥಿತಿಯಲ್ಲಿ ನಾವಿದ್ದಾಗ ಅಮೆರಿಕ ದೇಶಕ್ಕೆ ಕನ್ನಡಿಗರ ಆಗಮನ ಕ್ರಮೇಣ ಬೆಳೆಯತೊಡಗಿ ಸಂಗೀತಗಾರರ, ಕವಿಗಳ, ಸಾಹಿತಿಗಳ ಬಗ್ಗೆ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಸುದ್ದಿ ಕಿವಿಗೆ ಬೀಳಲಾರಂಭಿಸಿದಾಗ ಮಂಕಾಗಿದ್ದ ನನ್ನ ಕನ್ನಡ ಹಣತೆಗೆ ಸ್ವಲ್ಪ ಚೇತನ ಬಂದಿತ್ತು.

ನಾವೆಲ್ಲಾ ಸೇರಿ ವಿದ್ಯಾರಣ್ಯ ಹೆಸರಿನ ಕನ್ನಡ ಸಂಘವೊಂದನ್ನು ಸ್ಥಾಪಿಸಿದಮೇಲೆ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಏರ್ಪಾಡು ಮಾಡಲು ತೊಡಗಿದೆವು. ಆಗೊಬ್ಬರು ಈಗೊಬ್ಬರು ಕನ್ನಡ ಕವಿಗಳು, ಸಾಹಿತಿಗಳು ಇಲ್ಲಿಗೆ ಬರಲಾರಂಭಿಸಿದಾಗ ನಮ್ಮ ಸಿರಿ ಗಂಧದ ಗುಡಿಯ ಮಾಹಿತಿಯ ಕೊರತೆ ನೀಗಿ, ನನ್ನಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಲಾರಂಭಿಸಿತ್ತು. ನಮ್ಮ ಬಾಳ ಬಳ್ಳಿ ೧೯೮೦ರ ವೇಳೆಗೆ ಅಮೆರಿಕದ ನೆಲದಲ್ಲಿ ಬೇರೂರಿ ಸೊಂಪಾಗಿ ಬೆಳೆಯತೊಡಗಿತು. ನಾನು ಆ ಸಂಘದ ಅಧ್ಯಕ್ಷೆಯಾಗಿ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ನೆರವೇರಿಸಿದ ಹೆಮ್ಮೆ ನನಗಿದೆ.

ನನ್ನ ತವರೂರು ಯಲಹಂಕದ ಸಮೀಪ ಇರುವ ದೇವನಹಳ್ಳಿ ನಿಸಾರರ ಜನ್ಮಸ್ಥಳ ವಾದುದರಿಂದ ಅವರು ನಮ್ಮೂರಿನ ಕಡೆಯವರೆಂದು ನನಗೆ ಬಹಳ ಅಭಿಮಾನ. ತಾಯಿ ಹಮೀದಾ ಬೇಗಂ ಅವರ ಶಿಸ್ತು, ತಂದೆ ಕೆ. ಎಸ್. ಹೈದರ್ ಅವರ ಪ್ರೋತ್ಸಾಹ ತಮ್ಮ ಬದುಕು ಬರಹಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ ಎಂದು ಹೇಳಿರುವ ನಿಸಾರರು ಪದ್ಮನಾಭನಗರದಲ್ಲಿ ಈಗ ವಾಸಿಸುತ್ತಿರುವ ತಮ್ಮ ಮನೆಗೆ 'ಹಮೀದಾ ಹೈದರ್' ಎಂದೇ ಹೆಸರಿಟ್ಟಿರುವುದು ಅವರು ತಂದೆ ತಾಯಿಯರ ಮೇಲೆ ಇಟ್ಟಿರುವ ಭಕ್ತಿ, ಪ್ರೀತಿಗಳನ್ನು ಎತ್ತಿ ತೋರಿಸುತ್ತದೆ. ಎಲ್ಲ ಮಕ್ಕಳಂತೆ ಬಾಲ್ಯದಲ್ಲಿ ಮುಗ್ಧತೆಯ ಸಾಕಾರ ಮೂರ್ತಿಯಾಗಿದ್ದ ಇವರು ಮಾವಳ್ಳಿ ಪ್ರಾಥಮಿಕ ಶಾಲೆಯಲ್ಲಿ ನೆಲದಲ್ಲಿ ಕುಳಿತು ಪಾಠ ಕಲಿಯುತ್ತಿದ್ದರಂತೆ. ಒಂದು ದಿನ ಯಾರೋ ಒಬ್ಬ ಕಿಡಿಗೇಡಿ ಸಹಪಾಠಿ 'ಲಾಲ್‌ಬಾಗಿನ ಗ್ಲಾಸ್ ಹೌಸ್ ಬಳಿ ಸರ್ಕಾರದವರು ಆನೆಗೆ ಚಡ್ಡಿ ತೊಡಿಸುತ್ತಿದ್ದಾರಂತೆ' ಎಂದು ಹೇಳಿದ ತಕ್ಷಣ ಅಲ್ಲಿಗೆ ದೌಡಾಯಿಸಿ, ಮಾಲಿಯಿಂದ ಮೂದಲಿಕೆಯ ಮಂಗಳಾರತಿಯನ್ನು ಎತ್ತಿಸಿಕೊಂಡು ಹಿಂತಿರುಗಿದರಂತೆ. ಇತರ ಅನೇಕರಂತೆ ಇವರೂ ಕೂಡ ಪ್ರೌಢಶಾಲೆಯ ವಿದ್ಯಾರ್ಥಿ ಯಾಗಿದ್ದಾಗ ಸಾಹಿತ್ಯ ರಚನೆಯತ್ತ ಮನಸ್ಸು ಮಾಡಿ ಮೊತ್ತಮೊದಲ ಕವನ 'ಜಲಪಾತ'

ವನ್ನು ೧೯೪೯ರಲ್ಲಿ ಬರೆದಿದ್ದಾರೆ. 'ಆಗಿನ ಬರವಣಿಗೆಗೆ ಯಾವುದೇ ಘನೋದ್ದೇಶವಿರಲಿಲ್ಲ ವಾದರೂ ಕಾವ್ಯಾರಂಭದ ಕಾಲದಲ್ಲಿ ಕವಿ ಎಂದು ಎಲ್ಲರ ಕಣ್ಣಿಗೆ ಬೀಳಬೇಕು, ಬೆನ್ನು ತಟ್ಟಿಸಿಕೊಳ್ಳಬೇಕು ಎಂಬ ಅಭಿಲಾಷೆ ಸಾಹಿತ್ಯ ರಚನೆಗೆ ಪ್ರೇರೇಪಣೆಯಾಯಿತು' ಎಂದು ಅವರೇ ಹೇಳಿಕೊಂಡಿದ್ದಾರೆ. ಜನ ಮನ್ನಣೆಗಾಗಿ ಬರೆಯಹೊರಟ ಈ ಕವಿ ಹಲವರ ಪ್ರಭಾವ, ಉತ್ತೇಜನಗಳಿಗೆ ಒಳಗಾಗಿ ಯಾವ ಪಂಥದ ಪಟ್ಟಿಯನ್ನೂ ಅಂಟಿಸಿಕೊಳ್ಳದೆ ನವೋದಯ-ನವ್ಯ ಎರಡು ಮಾರ್ಗಗಳಲ್ಲೂ ಕಾವ್ಯ ರಚಿಸುತ್ತಾ ಅತ್ಯುತ್ತಮ ಅಂಶಗಳನ್ನು ಮೈಗೂಡಿಸಿಕೊಂಡು ತಮ್ಮ ಕವಿತೆಗಳಲ್ಲಿ ಒಳ್ಳೆಯ ಛಾಪು ಮೂಡಿಸಿದ್ದಾರೆ. ಒಂದೆರಡು ಸಂಕಲನಗಳಲ್ಲಿ ಕನ್ನಡ ಕಾವ್ಯ ಭಾಷೆಗೆ ಉರ್ದು ಮತ್ತು ಆಂಗ್ಲ ಪದಗಳನ್ನು ಬೆರೆಸಿ ಹೊಸ ಕಸುವು ನೀಡಿದ ಹಿರಿಮೆಯೂ ಇವರದಾಗಿದೆ.

ಸುಮಾರು ಐದು ದಶಕಗಳ ಹಿಂದೆ (೧೯೫೫) ನಡೆದ ಕವಿಗೋಷ್ಠಿಯಲ್ಲಿ ನಿಸಾರ್ ಅವರು ತಾವು ರಚಿಸಿದ ಕವಿತೆಯೊಂದನ್ನು ಓದಿದಾಗ ಸಮ್ಮೇಳನದ ಅಧ್ಯಕ್ಷರಾಗಿದ್ದ ವರ ಕವಿ ದ. ರಾ. ಬೇಂದ್ರೆಯವರಿಂದ 'ಈ ಹುಡುಗನಲ್ಲಿ ಅಹಂ ಮತ್ತು ಮದ ಎರಡೂ ನಿಸ್ಸಾರ ಆಗೇದ. ಹಾಗೆಯೇ ಇವನ ಪದ್ಯದಲ್ಲಿ ಅಪಾರ ಸಾರ ಅದೆ' ಎಂದು ಹೊಗಳಿಸಿಕೊಂಡ ನಿಸಾರರು ಪುಣ್ಯಶಾಲಿಗಳು. ನಿಸಾರರಿಗೆ ರಾಷ್ಟ್ರಕವಿ ಕುವೆಂಪು ಅವರ ಭೇಟಿ ಆಗಿದ್ದು ೧೯೫೭ರಲ್ಲಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅಂತಿಮ ಬಿ.ಎಸ್ಸಿ. ಆನರ್ಸ್ ಓದುತ್ತಿದ್ದಾಗ. ತಪಾಸಣೆಗಾಗಿ ಬಂದಿದ್ದಾಗ ಕುಲಪತಿಯಾಗಿದ್ದ ಕುವೆಂಪು ಅವರು ನಿಸಾರರಿಗೆ 'ನಕ್ಷತ್ರ ಪರಿವೃತ ತುಂಬು ಚಂದ್ರನಂತೆ' ಕಂಡರಂತೆ. 'ನವ್ಯ ಕಾವ್ಯ ಬರೆದರೂ ಜನರಿಗೆ ಅರ್ಥವಾಗುವಂಥ ಕವನಗಳನ್ನು ಬರೆದವರು ನಿಸಾರ್' ಎಂದು ಕುವೆಂಪು ಅವರು ನಿಸಾರ ರನ್ನು ಪ್ರಶಂಸೆ ಮಾಡಿದ್ದಾರೆ.

ದ್ರೋಣಾಚಾರ್ಯರು ಏಕಲವ್ಯನಿಗೆ ಹೇಗೆ ನೇರವಾಗಿ ಗುರುಗಳಾಗಲಿಲ್ಲವೋ ಅದೇ ರೀತಿ ಕುವೆಂಪು ಅವರು ನಿಸಾರ್ ಅವರಿಗೆ ನೇರವಾಗಿ ಗುರುಗಳಾಗಿರದಿದ್ದರೂ ಕವನ ಸೃಷ್ಟಿಗೆ ಮುಖ್ಯ ಪ್ರೇರಕರಲ್ಲಿ ಒಬ್ಬರಾಗಿ ಆಶೀರ್ವದಿಸಿದ ಗುರುವರ್ಯರೆಂದೇ ಹೇಳಬಹುದು. ಅಂದು ನಿಸಾರರನ್ನು ಹೊಗಳಿದ್ದ ಅದೇ ಕುವೆಂಪು ಅವರ ಹೊನ್ನಿನ ಬಣ್ಣದ ಪುತ್ಥಳಿಯ ಅನಾವರಣವನ್ನು 'ಕನ್ನಡ ಕಟ್ಟೆ' ಬಳಗದವರು ೨೦೦೫ನೆಯ ಇಸವಿ ಡಿಸೆಂಬರ್ ೨೯ನೆಯ ತಾರೀಖು, 'ಕುವೆಂಪು ಶತಮಾನ'ದ ಸಂದರ್ಭದಲ್ಲಿ ಕುವೆಂಪು ಜನ್ಮದಿನದಂದೇ, ಬೆಂಗಳೂರಿನ ಶಂಕರಪುರದಲ್ಲಿರುವ ಶಂಕರ ಮಠದ ಹತ್ತಿರ ನಾಲ್ಕು ರಸ್ತೆಗಳು ಸೇರುವ ತಾಣದಲ್ಲಿ ತಮ್ಮ ಕೈಯ್ಯಲ್ಲೇ ಮಾಡಿಸಿ, ಅದರ ಕೀರ್ತಿ ಮತ್ತು ಗೌರವಕ್ಕೆ ಪಾತ್ರರಾಗುವ ಒಂದು ಸೌಭಾಗ್ಯವನ್ನು ದೊರಕಿಸಿಕೊಡುತ್ತಾರೆಂಬುದನ್ನು ನಿಸಾರರು ಬಹುಶಃ ಕನಸಿನಲ್ಲೂ ನೆನೆಸಿರಲಾರರು. ಇದನ್ನೇ ಅಲ್ಲವೇ ನಾವು ದೈವೇಚ್ಛೆ ಎನ್ನುವುದು!

'ಬದುಕು ನನಗೆ ಕಲಿಸಿದ ಹಲವು ಪಾಠಗಳಲ್ಲಿ ಒಂದೆಂದರೆ, ಸಾಹಿತ್ಯ ಕಲೆಗಷ್ಟೇ ಅಲ್ಲ, ಯಾವುದೇ ಸಾಧನೆಗೆ ಆಶಿಸುವಾತ ನಿರಂತರವಾಗಿ ಅಭ್ಯಾಸ ಮತ್ತು ಅಧ್ಯಯನ ಎಂಬ ಶ್ರದ್ಧಾಸಕ್ತಿಗಳಿಂದ ತನ್ನನ್ನು ತಾನು ಅನವರತ ಜೀವಂತವಾಗಿರಿಸಿಕೊಳ್ಳಬೇಕು. ಇಂಥ

ವ್ರತಶೀಲತೆ ಇಲ್ಲದವನು ಅಥವಾ ಹಿಂದೊಮ್ಮೆ ಅದು ಇದ್ದು ತಾನು ಪಾರಂಗತನಾಗಿ ಬಿಟ್ಟಿದ್ದೇನೆ, ಈಗ ಅದರ ಅಗತ್ಯವಿಲ್ಲ ಎಂದು ಭಾವಿಸಿಕೊಂಡವನು ಸಾಹಿತ್ಯ ಕಲಾಸೇವೆಯಲ್ಲಿ ತೊಡಗಿದರೆ ಅವನಿಗೆ ಶ್ರೇಯಸ್ಸಾಗುವುದಿಲ್ಲವೆಂಬ ತಥ್ಯವನ್ನು ಬದುಕು ಹಲವು ನಿದರ್ಶನಗಳೊಂದಿಗೆ ನನಗೆ ತೋರಿಸಿದೆ. ನಮ್ಮ ಬಾಹ್ಯ ಪ್ರದರ್ಶನಕ್ಕೆ ತಕ್ಕ ಅಂತಃಸತ್ವವನ್ನು ಮೈಗೂಡಿಸಿಕೊಳ್ಳುತ್ತಾ ಮುಂದುವರಿಯುತ್ತಿರಬೇಕು. ಈ ಒಳ-ಹೊರ ಹೊಂದಾಣಿಕೆ, ಸುಸಂಗತ್ವವಿಲ್ಲದಿದ್ದರೆ ಅಂಥವನ ಸಾಧನೆ ಮತಾಪು, ಬಾಣ ಬಿರುಸುಗಳಂತೆ ಒಂದು ಕ್ಷಣ ಕಣ್ಣು ಕೋರೈಸಿದರೂ ಅಲ್ಪಾಯುಷಿ. ಪಟಾಕಿಯಾಗಲೀ ಗುಡುಗು-ಮಿಂಚುಗಳಾಗಲೀ ಎಷ್ಟೇ ಆರ್ಭಟಿಸಿದರೂ ಅವುಗಳ ಬದುಕು ಅರೆ ಕ್ಷಣವೇ!' ಎಂದು ನಿಸಾರರು ನಿರೂಪಿಸಿದ್ದಾರೆ. ಒಂದು ಬಗೆಯ ಸಾರ್ಥಕ ಜೀವನವನ್ನು ಸಾಗಿಸುತ್ತಿರುವ ನಿಸಾರರು ತಮಗೆ ಅತ್ಯಂತ ಪ್ರಿಯವಾದ ಬೆಂಗಳೂರಿನ ಬಗ್ಗೆ 'ಯಾವುದೇ ಊರಿನ ಬಗ್ಗೆ ನಿವಾಸಿಗಳಾದ ನಮಗಿರುವ ನಂಟು ಮನುಷ್ಯ ಸಂಬಂಧದಂತೆ ಸಾವಯವ ಸ್ವರೂಪದ್ದು. ನನ್ನ ಜೀವಮಾನದ ಎಪ್ಪತ್ತು ವರ್ಷಗಳಲ್ಲಿ ೧೦-೧೧ ವರ್ಷಗಳನ್ನು ಬಿಟ್ಟರೆ, ಉಳಿದ ಕಾಲವನ್ನು ನಾನು ಕಳೆದಿರುವುದು ಬೆಂಗಳೂರಿನಲ್ಲಿ. ಬಾಲ್ಯದಿಂದ ಅದರ ಚಲನವಲನಗಳನ್ನು, ಅದರ ಚಿತ್ತ ಭಂಗಿಗಳನ್ನು ಗಮನಿಸುತ್ತಾ ಬಂದಿದ್ದೇನೆ. ಅದು ಕಾಲ ಕಾಲಕ್ಕೆ ತೀವ್ರವಾಗಿ ಬದಲಾಗುತ್ತಾ ನವೋನವವಾಗಿ ಕಾಣಿಸಿಕೊಳ್ಳಲು ತವಕಿಸುವುದನ್ನು ಮನಗಂಡಿದ್ದೇನೆ. ಹೀಗಿದ್ದೂ, ಅದರ ಅಂತಸ್ಸತ್ವ ನನಗಿನ್ನೂ ನಿಗೂಢವಾಗಿಯೇ ಉಳಿದಿದೆ' ಎಂದು ಹೇಳಿದ್ದಾರೆ.

ನಿಸಾರ್ ಅವರು ೨೦೦೨ನೆಯ ಇಸವಿಯಲ್ಲಿ ಅಮೆರಿಕಾಗೆ ಪ್ರವಾಸ ಬರಲು ಬಾಸ್ಟನ್ ಬಳಿ ವಾಸವಾಗಿರುವ ಡಾ. ಡಿ. ಆರ್. ಗೋವಿಂದರಾಜು ಅವರು ಕಾರಣ. ನಿಸಾರರ ಒಂದು ಕವಿತೆಯಲ್ಲಿ ಮಹಾತ್ಮ ಗಾಂಧಿಯವರ ಬಗ್ಗೆ 'ಇಳೆಯ ಕೊಳೆಯನು ತೊಳೆಯಲಿಳಿದು ಬಂದ ದೇವರೂರ ಸೋಪು / ನಮ್ಮ ಬಾಪು' ಎಂದು ಬರೆದಿದ್ದುದನ್ನು ಓದಿದ ಮೇಲಂತೂ ಗೋವಿಂದರಾಜು ಅವರು ನಿಸಾರರನ್ನು ಬಹಳ ಮೆಚ್ಚಿಕೊಂಡಿದ್ದರು. 'ಅಕ್ಕ' ಸಂಸ್ಥೆಯ ಅಧ್ಯಕ್ಷರಾಗಿದ್ದ ಶ್ರೀ ಅಮರನಾಥ ಗೌಡರ ಸಂಪರ್ಕ ಮಾಡಿ 'ವಿಶ್ವ ಕನ್ನಡ ಸಮ್ಮೇಳನ'ಕ್ಕೆ ನಿಸಾರ್ ಅವರನ್ನು ಆಹ್ವಾನಿಸಲು ಬಿನ್ನವಿಸಿಕೊಂಡರು. ನಾಲ್ಕು ಜನ ಕನ್ನಡ ನಾಡು-ನುಡಿಗಳ ಬಗ್ಗೆ ಅಪಾರ ಗೌರವ, ಅಕ್ಕರೆ ಇರುವ ಅಮೇರಿಕನ್ನಡಿಗರು ಹಾಗೂ ಕೆಲವು ಕನ್ನಡ ಕೂಟಗಳು ಸೇರಿ ನಿಸಾರರನ್ನು ಸ್ಪಾನ್ಸರ್ ಮಾಡಿದರು.

ಕಿಕ್ಕಿರಿದಿದ್ದ ಸಭೆಯಲ್ಲಿ ಸಮ್ಮೇಳನದ ಎರಡನೆಯ ದಿನ, 'ಸ್ಪಂದನ' ವಿಶೇಷ ಸಂಚಿಕೆಯನ್ನು ನಿಸಾರ್ ಅವರು ಬಿಡುಗಡೆ ಮಾಡಿದಾಗ ಸಾವಿರಾರು ಅಮೆರಿಕನ್ನಡಿಗರು ಚಪ್ಪಾಳೆಯ ಸುರಿಮಳೆಯನ್ನೇ ಸುರಿಸಿದ್ದರು. ಅದೇ ದಿನದ 'ಕನ್ನಡದ ಮುನ್ನಡೆ' ಎಂಬ ಕಾರ್ಯಕ್ರಮದಲ್ಲಿ 'ಕನ್ನಡ ಮತ್ತು ಸಾಹಿತ್ಯದ ಮಹತ್ವ'ದ ಬಗ್ಗೆ ನಿಸಾರ್ ಅವರು ನಿರರ್ಗಳವಾಗಿ ಮಾತನಾಡಿ ನಮ್ಮೆಲ್ಲರನ್ನೂ ಸಿರಿಗನ್ನಡ ಮಾತೆಯ ದೇಗುಲಕ್ಕೆ ಕರೆದೊಯ್ದು ಅವಿಸ್ಮರಣೀಯವಾದ ಅನುಭವವನ್ನು ದೊರಕಿಸಿಕೊಟ್ಟರು. ಅವರ ಮಾತು ಮುಗಿದಿದ್ದೇ ತಡ ಸಭೆಯಲ್ಲಿದ್ದ ಶ್ರೋತೃಗಳೆಲ್ಲರೂ ಎದ್ದು ನಿಂತು (ಸ್ಟಾಂಡಿಂಗ್ ಓವೇಷನ್) ಮಾಡಿದ

ಕರ ತಾಡನ ವಿಶಾಲವಾದ ಇಡೀ ಕಟ್ಟಡದಲ್ಲೇ ಪ್ರತಿಧ್ವನಿಸಿತ್ತು! ಆ ಗಳಿಗೆಯನ್ನು ನೆನೆಸಿಕೊಂಡರೆ ಈಗಲೂ ನನ್ನ ಮೈ ನವಿರೇಳುತ್ತದೆ.

ನಿಸಾರ್ ಅವರಲ್ಲಿ ಅಪಾರ ಆಸಕ್ತಿ, ಗೌರವ ಇಟ್ಟುಕೊಂಡಿದ್ದವರಲ್ಲಿ ಸೀಡರ್ ಫಾಲ್ಸ್, ಅಯೋವಾದಲ್ಲಿರುವ ಶ್ರೀ ಸಿ. ಕೃಷ್ಣಶಾಸ್ತ್ರಿಗಳೂ ಒಬ್ಬರು. ದೂರದ ಸ್ಥಳಗಳಿಗೆಲ್ಲ ವಿಮಾನ ಪ್ರಯಾಣದ ಏರ್ಪಾಡು ಮಾಡುತ್ತಾ, ಹತ್ತಿರದ ಜಾಗಗಳಿಗೆ ನಿಸಾರ್ ಅವರನ್ನು ತಾವೇ ಕರೆದು ಕೊಂಡು ಹೋಗುತ್ತಾ ಅವರು ಅಮೇರಿಕಾಗೆ ಕಾಲಿಟ್ಟ ದಿನದಿಂದ ಭಾರತಕ್ಕೆ ವಾಪಸ್ಸು ಮರಳುವವರೆಗಿನ ಪ್ರವಾಸವನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ಕೃಷ್ಣಶಾಸ್ತ್ರಿಗಳು ಅಹರ್ನಿಶಿ ದುಡಿದಿದ್ದಾರೆ. ಅವರನ್ನು ನಾವು ಕೃತಜ್ಞತೆಯಿಂದ ನೆನೆಯಲೇಬೇಕು.

ಈ ದೇಶದ ೨೭ ರಾಜ್ಯಗಳಲ್ಲಿನ ೩೮ ನಗರಗಳ ಕನ್ನಡ ಕೂಟಗಳು ಮತ್ತು ಮನೆಗಳಲ್ಲಿ ಉಪನ್ಯಾಸಗಳನ್ನು ಮಾಡಿ ಎಲ್ಲ ಕಡೆಯಲ್ಲೂ ನಿಸಾರ್ ಅವರು ಸನ್ಮಾನ ಪಡೆದಿದ್ದಾರೆ. ಸಾವಿರಾರು ಅಮೆರಿಕನ್ನಡಿಗರು ನಿಸಾರ್ ಅವರನ್ನು ತಮ್ಮ ಊರುಗಳಿಗೆ ಬರುವಂತೆ ಆಹ್ವಾನಗಳನ್ನು ಇತ್ತಿದ್ದರೂ ಸಮಯದ ಅಭಾವದಿಂದ ಎಲ್ಲ ಕಡೆಗಳಿಗೂ ಹೋಗಲಾಗದಿದ್ದುದು ವಿಷಾದದ ಸಂಗತಿ. ಭಾರತದಿಂದ ಮೊತ್ತ ಮೊದಲ ಬಾರಿಗೆ ಅಮೇರಿಕಾ ದೇಶಕ್ಕೆ ಪ್ರವಾಸ ಬಂದಿರುವ ಕನ್ನಡ ಕವಿಗಳಲ್ಲಿ ಯಾರೂ ಇವರಷ್ಟು ಉಪನ್ಯಾಸಗಳನ್ನು ಕೊಟ್ಟಿರಲಾರರು. ಇಷ್ಟೊಂದು ಬಿರುದು ಬಾವಲಿಗಳನ್ನು ಪಡೆದಿರಲಾರರು ಎಂದು ನನ್ನ ಅನಿಸಿಕೆ.

ಅದುವರೆಗೆ ಇಲ್ಲಿ ಹಲವಾರು ಕನ್ನಡ ಕವಿ, ಸಾಹಿತಿಗಳನ್ನು ಸಂಧಿಸಿ ಸಂತೋಷಪಟ್ಟಿದ್ದರೂ ಮೊತ್ತ ಮೊದಲ ಬಾರಿಗೆ ಇಲ್ಲಿಗೆ ಬಂದ ನಮ್ಮ ಜನಪ್ರಿಯ ಕವಿ ನಿಸಾರ್ ಅಹಮದ್ ಅವರನ್ನು ಡೆಟ್ರಾಯಿಟ್‌ನ 'ಅಕ್ಕ ವಿಶ್ವ ಕನ್ನಡ ಸಮ್ಮೇಳನ'ದಲ್ಲಿ ನಾನು ಪ್ರತ್ಯಕ್ಷವಾಗಿ ಕಂಡಾಗ ರೋಮಾಂಚನಗೊಂಡಿದ್ದೆ. ತಾಯಿಯ ಗರ್ಭದಲ್ಲಿದ್ದಾಗಿನಿಂದ ಉರ್ದು ಭಾಷೆಯನ್ನು ಆಲಿಸಿದ್ದರೂ ಅನ್ಯ ಭಾಷೆಯಲ್ಲಿ ಸಿದ್ಧಿ ಪಡೆದು ಪ್ರಸಿದ್ಧರಾದ ನಿಸಾರ್ ಅವರ ಬಗ್ಗೆ ನನಗೆ ವಿಶಿಷ್ಟವಾದ ಅಭಿಮಾನ ಇದೆ. ಕೊಲಂಬಸ್ ಪಟ್ಟಣದಿಂದ ಚಿಕಾಗೊಗೆ ಬಂದ ಒಂದು ದಿನ ಓಹೇರ್ ವಿಮಾನ ನಿಲ್ದಾಣದಿಂದ ನಿಸಾರರನ್ನು ಅವರ ಮಗಳ ಮನೆಗೆ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ಕೃಷ್ಣಶಾಸ್ತ್ರಿಗಳು ನಮ್ಮ ಗೆಳೆಯರೊಬ್ಬರಿಗೆ ವಹಿಸಿದ್ದರು. ನಿಸಾರರಿಗೆ 'ಅಳಿಲ ಭಕ್ತಿ, ಮಳಲ ಸೇವೆ' ಮಾಡಲು ನನ್ನ ಒಳ ಮನಸ್ಸು ಪ್ರೇರೇಪಿಸುತ್ತಿದುದರಿಂದ ನಾನೇ ಆ ಕಾರ್ಯವನ್ನು ನಿರ್ವಹಿಸಲು ನಿರ್ಧರಿಸಿ ಏರ್ ಪೋರ್ಟ್‌ಗೆ ಹೋದೆ. ೨೦೦೧ನೆಯ ಇಸವಿಯಲ್ಲಿ ನ್ಯೂಯಾರ್ಕ್ ನಗರದಲ್ಲಿ ನಡೆದ ಭೀಕರ ದುರಂತದ ಅನಂತರ ಎಲ್ಲ ವಿಮಾನ ನಿಲ್ದಾಣಗಳಲ್ಲೂ ಪ್ರಯಾಣಿಕರನ್ನು ಬಿಟ್ಟು ಬೇರೆ ಯಾರನ್ನೂ ಗೇಟ್ ಬಳಿ ಹೋಗಲು ಬಿಡುತ್ತಿರಲಿಲ್ಲ. ನಿಸಾರರು ಬರಬೇಕಾಗಿದ್ದ ವಿಮಾನದ ಪ್ರಯಾಣಿಕರ ಪಟ್ಟಿಯಲ್ಲಿ ಅವರ ಹೆಸರಿದೆಯೇ ಎಂಬುದನ್ನು ವಿಚಾರಿಸಲು ಕೌಂಟರ್ ಬಳಿ ಹೋದಾಗ ನಿಸಾರ್ ಎಂಬುದು ಅವರ ಮೂಲ ನಾಮಧೇಯ, ಅಹಮದ್ ಎಂಬುದು ಅವರ ಫ್ಯಾಮಿಲಿ ನೇಮ್ ಎಂದುಕೊಂಡು ಅಲ್ಲಿ ವಿಚಾರಿಸಿದಾಗ ಆ ಹೆಸರು ಪ್ರಯಾಣಿಕರ

ಪಟ್ಟಿಯಲ್ಲಿರಲಿಲ್ಲ. ನಿಸಾರ್ ಅವರ ಹೆಸರನ್ನು ಫ್ಯಾಮಿಲಿ ನೇಮ್ ಮಾಡಿ, ಅಹಮದ್ ಎಂಬುದನ್ನು ಮೂಲ ನಾಮಧೇಯವಾಗಿ ಉಪಯೋಗಿಸಿದಾಗಲೂ ಅವರ ಹೆಸರು ಪಟ್ಟಿಯಲ್ಲಿರಲಿಲ್ಲ.

ಅವರ ಕೆ.ಎಸ್. ಇನಿಷಿಯಲ್ಸ್‌ನ ವಿವರ ನನಗೆ ಗೊತ್ತಿಲ್ಲದೆ ನಾನು ಆ ಅಮೆರಿಕನ್ನಳ ಬಳಿ 'ನೋಡಿ, ಈ ಪ್ರಯಾಣಿಕರಿಗೆ ಸಾಕಷ್ಟು ವಯಸ್ಸಾಗಿದೆ. ಇಡೀ ಪ್ರಪಂಚದಲ್ಲೇ ಬ್ಯುಸಿಯೆಸ್ಟ್ ಏರ್‌ಪೋರ್ಟ್ ಆದ ಇಲ್ಲಿ ಅವರಿಗೆ ಕನ್‌ಫ್ಯೂಸ್ ಆಗುವ ಸಂಭವ ಇದೆ. ಅವರಿಗೆ ಇಂಗ್ಲಿಷ್ ಭಾಷೆ ಬರುವುದಿಲ್ಲ' ಎಂದು ಸುಳ್ಳು ಹೇಳಿ ಅವಳನ್ನು ಒತ್ತಾಯಿಸಿ, ಅನುಮತಿ ಪಡೆದು ಗೇಟ್ ಬಳಿ ಹೋದಾಗ ಅಲ್ಲಿ ನಿಸಾರ್ ಅವರು ಇರಲಿಲ್ಲ. ಗಾಬರಿಗೊಂಡ ನಾನು ಬ್ಯಾಗೇಜ್ ಏರಿಯಾದಲ್ಲೇನಾದರೂ ಇದ್ದಾರೇನೋ ನೋಡೋಣ ಎಂದು ಅಲ್ಲಿಂದ ದಡ ದಡನೆ ಓಡುತ್ತಾ ಬ್ಯಾಗೇಜ್ ಏರಿಯಾಗೆ ಬಂದೆ. ಅಲ್ಲಿ ಪ್ರಶಾಂತರಾಗಿ ಕುಳಿತಿದ್ದ ಅವರನ್ನು ಕಂಡ ತಕ್ಷಣ ನನ್ನ ಆತಂಕ ಕಡಿಮೆಯಾಯಿತು. ಅವರಿಗೆ ನಮಸ್ಕರಿಸಿ ನಡೆದುದನ್ನೆಲ್ಲಾ ಹೇಳಿದ ಮೇಲೆ 'ಸಾರ್, ಹೊರಗಡೆ ತುಂಬಾ ಚಳಿ ಇದೆ. ನೀವು ಇಲ್ಲೇ ಕುಳಿತಿರಿ. ಪಾರ್ಕಿಂಗ್ ಗ್ಯಾರೇಜ್‌ನಿಂದ ಕಾರನ್ನು ಇಲ್ಲಿಗೇ ತರುತ್ತೇನೆ' ಎಂದು ಎಷ್ಟು ಹೇಳಿದರೂ ಕೇಳದೆ ಅವರು ನನ್ನೊಡನೆ ನಡೆದುಕೊಂಡೇ ಬಂದರು. ದಾರಿಯಲ್ಲಿ 'ಸಾರ್, ನೀವು ಬೆಳಗಿನ ಜಾವವೇ ಹೊರಟಿರುವುದರಿಂದ ಹಸಿವಾಗಿರಬಹುದು, ಒಂದು ರೆಸ್ಟೋರೆಂಟ್‌ನಲ್ಲಿ ಏನನ್ನಾದರೂ ತಿನ್ನೋಣ' ಎಂದು ಎಷ್ಟು ಬಲಾತ್ಕಾರ ಮಾಡಿದರೂ ಅವರು ಕಾಫಿ ಕುಡಿಯಲು ಸಹ ಒಪ್ಪಲಿಲ್ಲ. ಆ ಕವಿ ಪುಂಗವರೊಡನೆ ಅಳುಕುತ್ತಾ ಸಂಭಾಷಣೆ ಆರಂಭಿಸಿದ ನಾನು ಅವರ ಸುಸರಳ ಮನೋಭಾವವನ್ನು ಗಮನಿಸಿ ಅವರೊಡನೆ ಸುಮಾರು ಅರ್ಧ ತಾಸು ಮಾತನಾಡುವ ಹೊತ್ತಿಗೆ ನಮ್ಮಿಬ್ಬರಿಗೂ ಎಷ್ಟೋ ವರ್ಷಗಳಿಂದ ಒಬ್ಬರಿಗೊಬ್ಬರ ಗುರುತಿದೆಯೇನೋ ಎಂಬಂತೆ ಆತ್ಮೀಯ ಗೆಳೆಯರಾಗಿಬಿಟ್ಟಿದ್ದೆವು. ನಿಸಾರ್ ಅವರ ವ್ಯಕ್ತಿತ್ವವೇ ಹಾಗೆ. ಮೊದಲ ಪರಿಚಯದಲ್ಲೇ ಅಂತರಂಗಕ್ಕೆ ನಿಕಟವಾಗಿ ಬಿಡುತ್ತಾರೆ. ನಿಜ ಹೇಳಬೇಕೆಂದರೆ ನಿಸಾರರು ಹುಟ್ಟಿದ ವರ್ಷವೇ, ಫೆಬ್ರವರಿ ತಿಂಗಳು ೧೯ನೆಯ ತಾರೀಖು ಹುಟ್ಟಿದ್ದ ನನ್ನ ಎರಡನೆಯ ಅಣ್ಣನಿಗೆ ೨೦೦೦ರ ಇಸವಿ ಜುಲೈ ತಿಂಗಳಿನಲ್ಲಿ ಹೃದಯಾಘಾತವಾಗಿತ್ತು. ೧೯೭೦ನೆಯ ಇಸವಿಯಿಂದ ಬಾಸ್ಟನ್‌ನಲ್ಲಿದ್ದ ಅವರು ೨೦೦೧ನೆಯ ಇಸವಿ ಫೆಬ್ರವರಿಯಲ್ಲಿ ಅಸು ನೀಗಿದ್ದರು. ಅದೇ ಅಣ್ಣ ನಿಸಾರರ ರೂಪದಲ್ಲಿ ಬಂದಿದ್ದಾರೆಂದು ಪರಿಗಣಿಸಿದ್ದ ನಾನು, ನಿಸಾರರನ್ನು ಅವರ ಮಗಳು ತನ್‌ವೀರ್‌ಳ ಮನೆಯಲ್ಲಿ ಬಿಟ್ಟು ನಮ್ಮ ಮನೆಗೆ ವಾಪಸ್ಸು ಬರುತ್ತಿದ್ದಾಗ ನನಗೆ ಕಳೆದು ಹೋಗಿದ್ದ ಅಣ್ಣ ಬದುಕಿ ಬಂದಷ್ಟು ಖುಶಿಯಾಗಿತ್ತು!

ನಮ್ಮ 'ವಿದ್ಯಾರಣ್ಯ ಕನ್ನಡ ಕೂಟ'ದ ಉಪಾಧ್ಯಕ್ಷೆ ಶ್ರೀಮತಿ ವಿಜಯ ಭಟ್‌ರ ಮನೆಯಲ್ಲಿ ನಿಸಾರರ ಉಪನ್ಯಾಸದ ಏರ್ಪಾಡು ಮಾಡಿದ್ದರು. ಕಾರ್ಯಕ್ರಮ ಆರಂಭವಾಗುವ ಮೊದಲು ನಾವು ಗೆಳತಿಯರು ಸೇರಿ 'ನಿತ್ಯೋತ್ಸವ' (ಜೋಗದ ಸಿರಿ ಬೆಳಕಿನಲ್ಲಿ) ಹಾಡನ್ನು ಹಾಡಿ ಅವರನ್ನು ಬೆರಗುಗೊಳಿಸಿದ್ದೆವು. ಅವರ ಮುದ್ದಿನ ಮಡದಿಯ

ಬಗ್ಗೆ, ಮದುವೆಯ ಅನಂತರದ ಹಲವು ವೃತ್ತಾಂತಗಳ ಬಗ್ಗೆ, ಅವರು ಕನ್ನಡದ ಕವಿಯಾಗಲು ನಿಶ್ಚಯಿಸಿದಾಗ ಅವರ ಮುಸ್ಲಿಂ ಗೆಳೆಯರ ಪ್ರತಿಕ್ರಿಯೆಗಳ ಬಗ್ಗೆ ಮಾತನಾಡಿ ತಿಳಿ ಹಾಸ್ಯದ ನಿದರ್ಶನಗಳನ್ನು ಹೇಳಿ ಸಭಿಕರ ಮನವನ್ನು ರಂಜಿಸಿದ್ದರು. ಆಮೇಲೆ ನಮ್ಮ ಮನೆಯಲ್ಲಿ ನಾನು ಪ್ರತ್ಯೇಕವಾಗಿ ಒಂದು ಉಪನ್ಯಾಸವನ್ನು ಏರ್ಪಡಿಸಿದಾಗ ಕನ್ನಡ ಭಾಷೆಯಲ್ಲಿ ಅವರು ಬೆಳೆಸಿಕೊಂಡ ಆಸಕ್ತಿಯ ಬಗ್ಗೆ, ತಮ್ಮ ಕವನಗಳನ್ನು ರಚಿಸಿದ ಸಂದರ್ಭ ಹಿನ್ನೆಲೆಗಳನ್ನು ವಿವರಿಸಿ, ಕನ್ನಡ ನುಡಿ ಮತ್ತು ಸಂಸ್ಕೃತಿಯ ಸಿರಿವಂತಿಕೆಯ ಮತ್ತು ಹಳಮೆಯ ಬಗ್ಗೆ ಚಾರಿತ್ರಿಕ ಆಧಾರಗಳನ್ನು ಉಲ್ಲೇಖಿಸಿದರು. ಹಾಸ್ಯಭರಿತ ನಿದರ್ಶನಗಳನ್ನು ನಿರೂಪಿಸಿ ನೆರೆದಿದ್ದ ಸುಮಾರು ಐವತ್ತು ಮಂದಿ ಕನ್ನಡಿಗರಿಗೆ ಸಾರಸ್ವತ ಲೋಕದ ಅಪೂರ್ವ ಕಲ್ಪನಾವಿಹಾರ ಮಾಡಿಸಿದರು. ಬೆಂಗಳೂರಿನಲ್ಲಿ ವಾಸಿಸುತ್ತಿರುವ ಬೇರೆ ಭಾಷೆಯ ಜನಗಳಿಗೆ ಹೋಲಿಸಿದರೆ ನಮ್ಮ ಕನ್ನಡಿಗರಿಗಿರುವ ಭಾಷಾಭಿಮಾನದ ಶೂನ್ಯತೆಯ ಬಗ್ಗೆ, ಸಿರಿಗನ್ನಡ ನುಡಿಯನ್ನು ಅಸಡ್ಡೆ ಮಾಡಿ ಸಂಭಾಷಣೆಗಳಲ್ಲಿ ಇಂಗ್ಲಿಷನ್ನು ಅನಾವಶ್ಯಕವಾಗಿ ಹೆಚ್ಚಾಗಿ ಉಪಯೋಗಿಸುತ್ತಾ ಬೀಗುತ್ತಿರುವ ಕನ್ನಡಿಗರ ಬಗ್ಗೆ ಮಾತನಾಡಿ, 'ಇದು ಬದಲಾಗಬೇಕು' ಎಂದು ಕಳಕಳಿಯಿಂದ ಹೇಳಿದರು. ಗೆಳೆಯ ಗೆಳತಿಯರು ಮಾಡಿಕೊಂಡು ಬಂದಿದ್ದ ಹಲವಾರು ಬಗೆಯ ಅಡಿಗೆಗಳನ್ನು (pot-luck cooking) ನೋಡಿ ನಿಸಾರ್ ಅವರು, 'ಏನ್ರೀ, ಇಷ್ಟೊಂದು ಬಗೆಯ ನಳಪಾಕ ಇದೆ?' ಎಂದು ಅಚ್ಚರಿಪಟ್ಟು ಸುಗ್ರಾಸ ಭೋಜನವನ್ನುಂಡು ಸವಿದಿದ್ದರು. ಆ ದಿನ ಅವರಿಗೆ ನಮ್ಮ ಮನೆಯಲ್ಲಿ ಶಾಲು ಹೊದಿಸಿ ಸನ್ಮಾನಿಸುವ ಸದವಕಾಶ ಸಿಕ್ಕಿದ್ದು ನಮ್ಮ ಅದೃಷ್ಟವೇ ಸರಿ!

೨೦೦೩ನೆಯ ಇಸವಿ ಫೆಬ್ರುವರಿ ೨೨ನೆಯ ತಾರೀಖು ನಿಸಾರರಿಗೆ ಬೆಂಗಳೂರಿನಲ್ಲಿ ದೊರೆತ ಭಾಗೀರಥಿ ಬಾಯಿ ನಾರಾಯಣರಾವ್ ಮಾನೆ ವಿದ್ಯಾ ಸಂಸ್ಥೆಯ ಪ್ರಪ್ರಥಮ 'ಭಾಗೀರಥಿ ಸಾಹಿತ್ಯ ಪುರಸ್ಕಾರ'ದ ಕಾರ್ಯಕ್ರಮಕ್ಕೆ ನಿಸಾರ್ ಅವರು ನನಗೂ ಆಹ್ವಾನ ನೀಡಿದ್ದುದರಿಂದ ಅದರಲ್ಲಿ ಭಾಗಿಯಾಗುವ ಸದವಕಾಶ ನನಗೆ ಸಿಕ್ಕಿತ್ತು. ನಿವೃತ್ತ ನ್ಯಾಯಾಧೀಶರಾಗಿದ್ದ ಶತಾಯುಷಿ ದಿವಂಗತ ನಿಟ್ಟೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ನಡೆದ ಈ ವಿಶೇಷ ಸಮಾರಂಭದ ದಿನ ನಿಸಾರ್ ಅವರು ಮಾತನಾಡುವಾಗ ಅಲ್ಲಿ ನೆರೆದಿದ್ದ ನೂರಾರು ಸಾಹಿತ್ಯಾಭಿಮಾನಿಗಳ ಹಾಗೂ ಕಾವ್ಯಾಸಕ್ತರ ಎದುರಿನಲ್ಲಿ ಅಮೆರಿಕನ್ನಡಿಗರು ತಮಗೆ ನೀಡಿದ ಉತ್ತೇಜನ ಮತ್ತು ಮಾಡಿದ ಸಹಾಯವನ್ನು ಸ್ಮರಿಸಿದುದು ಅವರ ಹೃದಯದ ಉನ್ನತ ಗುಣವನ್ನು ಎತ್ತಿ ತೋರಿಸುತ್ತದೆ. ಚಿಕಾಗೊನಲ್ಲಿ ನಾನು ಮಾಡಿದ ಕಿಂಚಿತ್ ಸಹಾಯವನ್ನು ನೆನೆಸಿಕೊಂಡು ಅವರ ಭಾಷಣದಲ್ಲಿ ನನ್ನ ಹೆಸರನ್ನು ಎರಡು ಬಾರಿ ಹೇಳಿದಾಗಂತೂ ನನಗೆ ಒಂದು ಬಗೆಯ ಸಂಕೋಚವೇ ಆಗಿತ್ತು. ಇಡೀ ಅಮೆರಿಕದಲ್ಲೇ ಅವರಿಗೆ ತೃಣಮಾತ್ರದಷ್ಟು ಸಹಾಯ ಮಾಡಿದವರ ಹೆಸರುಗಳನ್ನೂ ಈ ಇಳಿ ವಯಸ್ಸಿನಲ್ಲಿ ಅವರು ನೆನಪಿಟ್ಟುಕೊಂಡು ಹೊಗಳಿದ್ದು ಅವರ ಅಪಾರವಾದ ಜ್ಞಾಪಕ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ. ಜೊತೆಗೆ, ಅಲ್ಲಿದ್ದ ಅಮೇರಿಕನ್ನಡಿಗರು ವೇದಿಕೆಯ ಮೇಲೆ ಹೋಗಿ ನಿಸಾರರಿಗೆ ಪುಷ್ಪಗುಚ್ಛವನ್ನಿತ್ತು ಅಭಿನಂದಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದರಿಂದ ನಾನೂ ವೇದಿಕೆಯ ಮೇಲೆ ಹೋಗಿ ಶತಾಯುಷಿಗಳ ಎದುರು ನಿಸಾರರಿಗೆ ಪುಷ್ಪಗುಚ್ಛವನ್ನು

ಕೊಟ್ಟಾಗಲಂತೂ ನನ್ನ ಜೀವನ ಪಾವನ ಎನ್ನಿಸಿತು! ೨೦೦೫ನೆಯ ಜನವರಿ ತಿಂಗಳು ೧೯ನೇ ತಾರೀಖು ನಿಸಾರ್ ಅವರ ಮನೆಯಲ್ಲೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದವರು ಅವರಿಗೆ ಗೌರವ ಡಾಕ್ಟರೇಟ್ ಪದವಿ ಕೊಡುವ ಒಂದು ಉಲ್ಲಾಸದ ಸಮಾರಂಭಕ್ಕೆ ನಾನೂ ಹೋಗಿದ್ದೆ. ನನ್ನ ಭಾವನವರ ಸೊಸೆ ಮತ್ತು ಮೊಮ್ಮಗ ನನ್ನನ್ನು ಕಾರಿನಿಂದ ಅವರ ಮನೆಯ ಮುಂದೆ ಇಳಿಸಿ ಹೊರಡಲು ಸಜ್ಜಾಗುತ್ತಿದ್ದಾಗ ಹೊರ ಬಾಗಿಲಲ್ಲಿ ನಿಂತಿದ್ದ ನಿಸಾರ್ ಅವರು ಅಪರಿಚಿತರಾದ ಅವರಿಬ್ಬರನ್ನೂ ಬಲವಂತವಾಗಿ ಒಳಕ್ಕೆ ಕರೆದದ್ದು, ಆತಿಥ್ಯ ನೀಡಿದ್ದು ಅವರ ಹೃದಯ ವೈಶಾಲ್ಯವನ್ನು ಎತ್ತಿ ತೋರಿಸುತ್ತದೆ. ಅನೇಕ ಕವಿಗಳ, ಸಾಹಿತಿಗಳ, ಪತ್ರಕರ್ತರ, ದೂರದರ್ಶನ ಸಿಬ್ಬಂದಿಯವರ ಸಮ್ಮುಖದಲ್ಲಿ ಆ ದಿನ ನಿಸಾರ್ ಜೋಡಿ ಹಕ್ಕಿ(ದಂಪತಿ)ಗಳಿಗೆ ಶಾಲು ಹೊದಿಸುವ ಸಡಗರದಲ್ಲಿ ಆನಂದತುಂದಿಲಳಾಗಿದ್ದೆ.

ನನ್ನ ಕನ್ನಡ ಬರವಣಿಗೆಯಲ್ಲಿ ಸುಧಾರಣೆ ಕಂಡು ಬಂದ ಮೇಲೆ ನನ್ನ ಆತ್ಮಕಥನ ವನ್ನು ಬರೆಯಲಾರಂಭಿಸಿ 'ಪಯಣ' ಎಂಬ ನನ್ನ ಚೊಚ್ಚಲ ಕೃತಿಯನ್ನು ೨೦೦೫ನೆಯ ಇಸವಿ ಫೆಬ್ರುವರಿ ತಿಂಗಳ ೧೪ರಂದು 'ಪ್ರೇಮಿಗಳ ದಿನಾಚರಣೆ'ಯ ದಿನ ಬಿಡುಗಡೆ ಮಾಡಿಸಿದೆ. ಅದೇ ಫೆಬ್ರುವರಿ ತಿಂಗಳಿನಲ್ಲಿ ನಿಸಾರರ ೭೦ನೆಯ ಹುಟ್ಟುಹಬ್ಬದ ಪ್ರಯುಕ್ತ ಹಲವಾರು ಸನ್ಮಾನ ಸಮಾರಂಭಗಳಿಗೆ ಹೋಗುವ ಅತಿ ಮುಖ್ಯವಾದ ಕಾರ್ಯಕ್ರಮ ಗಳಿದ್ದರೂ ಬಿಡುವು ಮಾಡಿಕೊಂಡು 'ನಲ್ನುಡಿ'ಯನ್ನು ಬರೆದುಕೊಟ್ಟಿರುವುದಕ್ಕೆ ಅವರಿಗೆ ನಾನು ಚಿರಋಣಿಯಾಗಿ ದ್ದೇನೆ.

೨೦೦೫ನೆಯ ಇಸ್ವಿ ಆಗಸ್ಟ್ ತಿಂಗಳಿನಲ್ಲಿ ಅವರು ನನಗೊಂದು ಧನ್ಯವಾದ ಸಲ್ಲಿಸುವ ಪ್ರಶಂಸಾಪತ್ರ ಬರೆದಿದ್ದರು. ಅವರ ಸನ್ಮಾನ ಸಮಾರಂಭಕ್ಕೆ ನಾನು ಬಂದಿದ್ದಕ್ಕೆ ಕೃತಜ್ಞತೆ ಸೂಚಿಸುವ ಪತ್ರ ಅದು. ಆ ಉತ್ಕೃಷ್ಟ ಕವಿವರೇಣ್ಯರು ಹುಲು ಮನುಜಳಾದ ನನಗೆ ಇಷ್ಟೊಂದು ಹೊಗಳಿ ಪತ್ರವನ್ನು ಬರೆಯುತ್ತಾರೆಂದು ನಾನು ಕನಸು ಮನಸಿನಲ್ಲೂ ನೆನೆಸಿರಲಿಲ್ಲ. ನಿಸಾರರದು ಎಂತಹ ಸೌಶೀಲ್ಯ, ಎಂತಹ ಸೌಜನ್ಯ! ನಮ್ಮ ಮನೆಗೆ ಬಂದು ಆದರಾತಿಥ್ಯವನ್ನು ಪಡೆದು ಭಾರತಕ್ಕೆ ವಾಪಸ್ಸು ಹೋಗಿರುವ ಮಾಜಿ ಪ್ರಧಾನಿ, ಮಂತ್ರಿ, ವಿಧಾನ ಸಭಾ ಸದಸ್ಯ, ಚಲನಚಿತ್ರ ನಟಿ, ಸಾಹಿತಿ, ಕವಿ, ಸಂಗೀತಗಾರರುಗಳಲ್ಲಿ ಯಾರೂ ಈ ರೀತಿ ಉಪಕಾರ ಸ್ಮರಣೆಯನ್ನು ಮಾಡಿಲ್ಲ, ಧನ್ಯವಾದಗಳ ಪತ್ರವನ್ನು ಬರೆದಿಲ್ಲ. ಆದರೆ ಸದ್ಗುಣ ಸಂಪನ್ನರಾದ ನಿಸಾರರ ಪತ್ರವನ್ನು ಓದಿದಾಗ ನನ್ನ ಕಣ್ಣುಗಳು ಆನಂದ ಬಾಷ್ಪ ಗಳಿಂದ ತೇವಗೊಂಡಿದ್ದವು.

ಸಾಹಿತ್ಯ ಮಾನವ ಜೀವನೋತ್ಕರ್ಷಕಾರಿಯಾದದ್ದರಿಂದ ಅದು ವಿಜ್ಞಾನದ ವೈಚಾರಿಕತೆಯನ್ನೂ ಶುದ್ಧ ಧರ್ಮದ ನೀತ್ಯಾಧಾರಿತ ಸದಾಚಾರ ಮತ್ತು ಆತ್ಮೋನ್ನತಿಗಳನ್ನು ಸಮನ್ವಯಿಸಿಕೊಂಡ ದೃಷ್ಟಿಯಿಂದ ಕ್ರಿಯಾಶೀಲವಾಗ ಬೇಕು.

(ಸಾಹಿತ್ಯದ ಸಮಗ್ರ ಸ್ವರೂಪ)



ನಮ್ಮೊಂದಿಗಿದ್ದು ನಲಿವಿತ್ತ ಒಲವಿನ ಕವಿ ನಿಸಾರ್

◆ *ಲಕ್ಷ್ಮಿ ಎಂ. ಕೃಷ್ಣಮೂರ್ತಿ*
ರ್‍ಯಾಂಚೊ ಕ್ಯುಕಮೋಂಗ (ಕ್ಯಾಲಿಫೋರ್ನಿಯ)

ಈ ಲೇಖನ ಬರೆಯುವುದಕ್ಕೆ ಮುಂಚೆ ಒಂದಿಷ್ಟು ನನ್ನ ಪರಿಚಯವನ್ನು ಮಾಡ ಬಯಸುತ್ತೇನೆ. ದಕ್ಷಿಣ ಕ್ಯಾಲಿಫೋರ್ನಿಯದ ಬಿ.ಐ. ಟೆಕ್ನಾಲಜೀಸ್‌ನಲ್ಲಿ ನಾನು ಪೇರೋಲ್ ಮ್ಯಾನೆಜರ್ ಆಗಿ ಕೆಲಸ ಮಾಡಿದ್ದೇನೆ. ಈಗ ಗೃಹಿಣಿ. ೨೦೦೨ರಲ್ಲಿ ಅಮೇರಿಕದ ಡೆಟ್ರಾಯಿಟ್‌ನಲ್ಲಿ 'ಅಕ್ಕ' (ಅಮೇರಿಕ ಕನ್ನಡ ಕೂಟಗಳ ಆಗರ) ವಿಶ್ವ ಕನ್ನಡ ಸಮ್ಮೇಳನ ಏರ್ಪಾಟಾಗಿತ್ತು. ಅದು ಮೂರು ದಿವಸಗಳ ಸಂಭ್ರಮಯುತ ಕನ್ನಡಿಗರ ಒಡನಾಟದ ಮಹಾಮೇಳ. ಆಗಸ್ಟ್ ೩೦, ೩೧ ಮತ್ತು ಸೆಪ್ಟೆಂಬರ್ ೧ರಂದು ಆ ಸಮ್ಮೇಳನ ಅಮೇರಿಕಾದ ಆದ್ಯಂತದಿಂದ ಮತ್ತು ಭಾರತವೂ ಸೇರಿದಂತೆ ಜಗತ್ತಿನ ಇತರ ಕೆಲವೆಡೆಗಳಿಂದ ಕನ್ನಡಿಗರು ಪಾಲ್ಗೊಳ್ಳಲಿದ್ದರು. ಎರಡು ವರ್ಷಕ್ಕೊಮ್ಮೆ ಜರುಗುವ ಈ ವಿಶಿಷ್ಟ ಕನ್ನಡ ಸಮಾವೇಶಕ್ಕೆ ಕನಿಷ್ಠ ನಾಲ್ಕು ನಾಲ್ಕೂವರೆ ಸಹಸ್ರ ಗಂಡಸರು-ಹೆಂಗಸರು ಬರುವ ಅಂದಾಜಿತ್ತು. ಮುಖ್ಯ ಅತಿಥಿಯಾಗಿ ಕರ್ನಾಟಕದಿಂದ ಯಾರಾದರೂ ಹಿರಿಯ ಮತ್ತು ಜನ ಮನ್ನಣೆ ಪಡೆದ ಲೇಖಕರನ್ನು ಕರೆಸುವ ವಾಡಿಕೆ. ಈ ಸಮ್ಮೇಳನಕ್ಕೆ ಯಾವ ಸೂಕ್ತ ಸಾಹಿತಿಯನ್ನು ಆಹ್ವಾನಿಸಬೇಕೆಂದು 'ಅಕ್ಕ'ದ ಸದಸ್ಯರಲ್ಲಿ ಜಿಜ್ಞಾಸೆ ನಡೆದಿತ್ತು. ನನ್ನ ಪತಿವರ್ಯ ಎಂ. ಕೃಷ್ಣಮೂರ್ತಿ ಅವರು 'ಅಕ್ಕ'ದ ಖಜಾಂಚಿ ಆಗಿದ್ದಾರೆ. ಅವರು ದಕ್ಷಿಣ ಕ್ಯಾಲಿಫೋರ್ನಿಯದ ಮೆಟ್ರೊ ಪಾಲಿಟನ್ ವಾಟರ್

ಡಿಸ್ಟ್ರಿಕ್ಟ್‌ನಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದವರು. ಕನ್ನಡದ ಕಾರ್ಯಕ್ರಮಗಳಲ್ಲಿ ತುಂಬು ಆಸಕ್ತಿಯಿಂದ ತೊಡಗಿಸಿ ಕೊಳ್ಳುವವರು.

ಸದಸ್ಯರಲ್ಲೊಬ್ಬರಾದ ಬಾಸ್ಟನ್ ನಗರದ ನಿವಾಸಿ ಹಾಗೂ ವಿಜ್ಞಾನಿ ಡಾ. ಡಿ. ಆರ್. ಗೋವಿಂದರಾಜು ಅವರು, ನಾವು ವಾಸವಾಗಿದ್ದ ಕ್ಯಾಲಿಫೋರ್ನಿಯದ ರ್‍ಯಾಂಚೊ ಕ್ಯುಕಮೋಂಗಾದ ಮನೆಗೆ ದೂರವಾಣಿಯಲ್ಲಿ ಮಾತನಾಡಿ ಪ್ರೊ. ನಿಸಾರ್ ಅಹಮದ್ ಅವರ ಹೆಸರನ್ನು ಸೂಚಿಸಿ, 'ಅಕ್ಕ'ದ ಮುಂದಿನ ಸಭೆಯಲ್ಲಿ ತಾವು ಇದನ್ನು ಪ್ರಸ್ತಾಪಿಸಲಿರುವ ಸಂಗತಿಯನ್ನು ತಿಳಿಸಿದರು. ಎಂ. ಕೃಷ್ಣಮೂರ್ತಿ ಅವರಿಗೆ ಇದು ಸರಿಯೆನ್ನಿಸಿದ್ದರಿಂದ, ಗೋವಿಂದರಾಜು ಅವರನ್ನು ಅನುಮೋದಿಸಿದ್ದಲ್ಲದೆ, 'ಅಕ್ಕ' ಸಂಸ್ಥೆಗೆ ನಿಕಟವಾಗಿದ್ದ ಮತ್ತಿಬ್ಬರು ಮಿತ್ರರಾದ—ಆರಿಜೋನ ರಾಜ್ಯದ ಫೀನಿಕ್ಸ್ ನಗರದಲ್ಲಿರುವ ಸ್ಟ್ರಕ್ಚರಲ್ ಇಂಜಿನಿಯರ್ ಶ್ರೀ ವಿ. ಸೀತಾರಾಮಯ್ಯ ಮತ್ತು ಅಯೋವಾ ರಾಜ್ಯದ ಸೀಡರ್ ಫಾಲ್ಸ್‌ನಲ್ಲಿ ನೆಲಸಿರುವ ಹಾಗೂ ಜಾನ್‌ಡೀರ್ ಟ್ರ್ಯಾಕ್ಟರ್ ಕಂಪನಿಯಲ್ಲಿ ಹಿರಿಯ ವ್ಯವಸ್ಥಾಪಕ ಇಂಜಿನಿಯರ್ ಆಗಿರುವ ಶ್ರೀ ಸಿ. ಕೃಷ್ಣಶಾಸ್ತ್ರಿ ಅವರಿಗೂ ವಿಷಯ ತಿಳಿಸಿ ಅವರ ಬೆಂಬಲ ಪಡೆದರು. ಒಮ್ಮತದಿಂದ ಮುಖ್ಯ ಅತಿಥಿಯಾಗಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಆಯ್ಕೆ ಏನೋ ಆಯಿತು. ಆದರೆ ಭಾರತದಿಂದ ಅವರನ್ನು ಕರೆಸಲು, ಇಲ್ಲಿ ಅವರ ಪ್ರವಾಸಕ್ಕೆ ಅಣಿಮಾಡಲು ಹಾಗೂ ಸತ್ಕರಿಸಲು ಆರ್ಥಿಕ ನೆರವು ಮುಖ್ಯವಷ್ಟೆ? 'ಅಕ್ಕ' ಸಂಸ್ಥೆಯಲ್ಲಿ ಆಗ ಈ ಅನುಕೂಲವಿರಲಿಲ್ಲ. ಹೀಗಾಗಿ, ಮುಖ್ಯವಾಗಿ ಈ ನಾಲ್ಕು ಜನ ಮಿತ್ರರು ಹಾಗೂ ಅಮೇರಿಕದ ಕೆಲವು ಕನ್ನಡ ಕೂಟಗಳು ಮತ್ತು ವ್ಯಕ್ತಿಗಳು ಹಣವನ್ನು ಪೂರೈಸಲು ಮುಂದಾಗಿ, ನಿಸಾರ್ ಅವರನ್ನು 'ಸ್ಪಾನ್ಸರ್' ಮಾಡಿದರು.

ನಿಸಾರ್ ಅಹಮದ್ ಅವರ ಹೆಸರನ್ನು ನಾನು ಹಲವು ಬಾರಿ ಕೇಳಿದ್ದೆ. ಅವರ ಗೀತೆಗಳನ್ನು ಆಲಿಸಿ ಸಂತೋಷಪಟ್ಟಿದ್ದೆ. ಆದರೆ ಅವರ ಮುಖತಃ ಪರಿಚಯ ನನಗೆ ಇರಲಿಲ್ಲ. ನನ್ನ ಪತಿಯವರು ಸಮ್ಮೇಳನ ನಡೆದ ಡೆಟ್ರಾಯಿಟ್ ಡೌನ್‌ಟೌನ್‌ನ ಪ್ರತಿಷ್ಠಿತ ಬೃಹತ್ ಕೋಬೋ ಹಾಲ್‌ನಲ್ಲಿ ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜ್ ಹಳೆಯ ವಿದ್ಯಾರ್ಥಿಗಳಿಂದ ನಿಯೋಜಿತವಾದ ಬೂತ್‌ನ ಎದುರು ಸೂಟು ಟೈಧಾರಿ ನಿಸಾರರನ್ನು ಪರಿಚಯಿಸಿದರು. 'ಓ! ಇವರೇನಾ? 'ಜೋಗದ ಸಿರಿ', 'ಕುರಿಗಳು, ಸಾರ್...', 'ಬೆಣ್ಣೆಕದ್ದ', 'ಬರುವನೇನೆ ಸಖಿ ಚೆಲುವ?', 'ಈ ಗಳಿಗೆಯೆ ಮೈತಾಳಿತು', 'ಕನ್ನಡವೆಂದರೆ'—ಮುಂತಾದ ಕನ್ನಡ ಮಹತ್ವದ ಭಾವಗೀತೆಗಳನ್ನು ಬರೆದ ಮಹಾನುಭಾವರು' ಎನ್ನಿಸಿ, ನಮಸ್ಕರಿಸಿದೆ. ಆಕರ್ಷಕವಾಗಿ ಮುಗುಳ್ನಕ್ಕು ನಯವಾಗಿ ಮಾತಾಡಿಸಿದರು. ತಮ್ಮನ್ನು ಇಲ್ಲಿಗೆ ಸ್ಪಾನ್ಸರ್ ಮಾಡಿ ಕರೆಸಿದ್ದಕ್ಕೆ ನಮ್ಮ ಪತಿಯವರಿಗೆ ಮತ್ತು ಅವರ ಉಳಿದ ಮೂವರು ಮಿತ್ರರಿಗೆ ಕೃತಜ್ಞತೆ ಸಲ್ಲಿಸಿದರು. ನಿಸಾರರ ಗುಣವೇ ಅಂಥದ್ದೆಂದು ಆಮೇಲಿನ ಅವರೊಂದಿಗಿನ ಒಡನಾಟದಿಂದ ನಮಗೆಲ್ಲ ಮನವರಿಕೆಯಾಯಿತು. ಅಮೇರಿಕದಲ್ಲಿ ಅವರು ಮಾಡಿದ ಭಾಷಣಗಳಲ್ಲಿ ತಪ್ಪದೆ ಇದನ್ನು ಪ್ರಸ್ತಾಪಿಸುತ್ತಿದ್ದರು. ಅಷ್ಟೇ ಅಲ್ಲ, ಅವರನ್ನು ಹೈಸ್ಕೂಲು, ಕಾಲೇಜಿನ ವಿದ್ಯಾರ್ಥಿ ದೆಸೆಯಲ್ಲಿ ಪ್ರೋತ್ಸಾಹಿಸಿದ ಗುರುಗಳನ್ನೂ ನೆನೆಯುತ್ತಿದ್ದರು.

ಡಾ. ಎಚ್. ನರಸಿಂಹಯ್ಯನವರ ಬಗೆಗೆ ನಿಸಾರರು ಬರೆದ ಪದ್ಯವೊಂದರಲ್ಲಿ 'ಕಣದಷ್ಟು ಗುಣ ಕಂಡರೆ ಮಣದಷ್ಟು ಹೊಗಳಿಕೆಯನ್ನು' ಹೇರುವ ಔದಾರ್ಯವನ್ನು ಸ್ವತಃ ನಿಸಾರರಿಗೇ ಅನ್ವಯಿಸಬಹುದು.

ಸಮ್ಮೇಳನ ನಡೆದ ಸಭಾಂಗಣಕ್ಕೆ ಸನಿಹದಲ್ಲಿದ್ದ ನಿಸಾರರನ್ನು ಇರಿಸಿದ್ದ ವೈಭವಯುತ ಡೌನ್‌ಟೌನ್ ಮೇರಿಯಟ್ ಹೋಟೆಲಿನಲ್ಲಿ ನಾವೂ ವಾಸವಿದ್ದದ್ದರಿಂದ, ಸಮ್ಮೇಳನಕ್ಕೆ ಜೊತೆಗೆ ಹೋಗಿ ವಾಪಸ್ಸು ಬರುತ್ತಿದ್ದೆವು. ಒಮ್ಮೆ ಅಲ್ಲಿನ ಅಂಗಡಿಯಲ್ಲಿ ಅಮೇರಿಕದ ತಿಂಡಿಗಳಾದ ಮಫಿನ್ ಮತ್ತು ಫ್ರೆಂಚ್ ಫ್ರೈಅನ್ನು ಅವರಿಗೆ ಕೊಡಿಸಿದ ನೆನಪು ನನಗಿದೆ. ಅವರು ಹಲವು ಸಲ ಇತರರಿಗೆ ನನ್ನನ್ನು ಪರಿಚಯಿಸುವಾಗ, 'ಮಫ್‌ಗಳು ಮೆಲುಕುವ ಮಫಿನ್‌ಅನ್ನು ಮೊದಲಿಗೆ ಮುಲಾಖಾತ್ ಮಾಡಿಸಿದ ಮಹಾ ಮಹಿಳೆ ಈಕೆ' ಎಂದು ಛೇಡಿಸುತ್ತಿದ್ದರು.

'ಅಕ್ಕ' ಸಮ್ಮೇಳನದಲ್ಲಿ ಅನಿರೀಕ್ಷಿತವಾಗಿ ಹೆಚ್ಚುವರಿ ಅಮೇರಿಕನ್ನಡಿಗರು ಪಾಲ್ಗೊಂಡದ್ದರಿಂದ ಕಾರ್ಯಕ್ರಮಗಳಲ್ಲಿ ಹಾಗೂ ಊಟ ತಿಂಡಿಗಳ ವ್ಯವಸ್ಥೆಯಲ್ಲಿ ಏರುಪೇರಾದದ್ದು ನಿಜ. ಸಮ್ಮೇಳನವನ್ನು ಉದ್ಘಾಟಿಸಬೇಕಾಗಿದ್ದ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ಬಾರದೆ ಹೋದದ್ದು, ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡಿ ಮುಖ್ಯ ಅತಿಥಿ ಆದಿಯಾಗಿ ಕರ್ನಾಟಕ ಹಾಗೂ ಇತರ ಕಡೆಯಿಂದ ಬಂದಿದ್ದ ಕೆಲವರನ್ನು ಮಾನ್ಯ ಮಾಡದೆ ಅಲಕ್ಷಿಸಿದ್ದು ಡೆಟ್ರಾಯಿಟ್‌ನ 'ಅಕ್ಕ' ಸಮ್ಮೇಳನದ ಲೋಪವೆಂದು ಒಪ್ಪಲೇ ಬೇಕು. ಹೀಗಿದ್ದರೂ, ನಿಸಾರ್ ಅವರು ಇದಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಕನ್ನಡ ನಾಡು-ನುಡಿ-ಸಾಹಿತ್ಯದ ಬಗ್ಗೆ ತುಂಬ ಸ್ವಾರಸ್ಯವಾಗಿ ಭಾಷಣ ಮಾಡಿದರು. ಅಲ್ಲಿ ನೆರೆದಿದ್ದ ಅಪಾರ ಜನಸ್ತೋಮದ ಹರ್ಷೋದ್ಗಾರ ಮತ್ತು ಚಪ್ಪಾಳೆಗಳಿಗೆ ಪ್ರೇರಣೆಯಾದರು. ಇಡೀ ಸಭೆ ೨-೩ ನಿಮಿಷ ಎದ್ದು ನಿಂತು ಒಕ್ಕೊರಲಿನಿಂದ (standing ovation) ನಿಸಾರರನ್ನು ಹಾರೈಸಿ ಶ್ಲಾಘಿಸಿದ ದೃಶ್ಯವಂತೂ ಅಭೂತಪೂರ್ವ. ಹಾಗೆಯೇ ಅಮೇರಿಕನ್ನಡಿಗರ ಹೃದಯ ದಲ್ಲಿ ಬೇರೆ ಯಾರೇ ಕನ್ನಡ ಸಾಹಿತಿಗಿಂತ, ಅಧಿಕವಾದ ಅಕ್ಕರೆ ಅಭಿಮಾನಗಳಿಗೆ ಭಾಜನ ರಾದವರು ನಿಸಾರ್ ಅಹಮದ್ ಅನ್ನುವುದು ಕೂಡ ಅಂದು ಸಾಧಿತವಾಯಿತು. ಇದನ್ನು ಘೋಷಿಸುವ ಹಾಗೆ, ಅವರು ಅನಂತರ ಕೈಗೊಂಡ ಅಮೇರಿಕದ ವಿವಿಧ ರಾಜ್ಯಗಳ ನಲವತ್ತು ನಗರ ಹಾಗೂ ಊರುಗಳಲ್ಲಿ ಸಂಪಾದಿಸಿದ ಜನಾದರಣೀಯತೆ ಈ ತನಕ ಅಮೇರಿಕಕ್ಕೆ ಬಂದ ಯಾವ ಕವಿ-ಸಾಹಿತಿಗೂ ಲಭಿಸಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಮೂರೂವರೆ ತಿಂಗಳುಗಳ ಪ್ರವಾಸದಲ್ಲಿ ಒಂದು ದಿನವೂ ಪೋಲಾಗದಂತೆ ಅವರು ಸುಮಾರು ಇಪ್ಪತ್ತು ಸಹಸ್ರ ಮೈಲಿಗೂ ಹೆಚ್ಚು ಪ್ರವಾಸ ಮಾಡಿ ಅಮೇರಿಕದ ನಾನಾ ಕಡೆಗಳಲ್ಲಿ ಕನ್ನಡಿಗರ ಹೃನ್ಮನಗಳನ್ನು ತಣಿಸಿದ್ದನ್ನು ಇಲ್ಲಿನವರು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ. ಅವರ ಉಪನ್ಯಾಸಗಳು ಮತ್ತು ಸ್ವಂತ ಕವನಗಳ ವಾಚನ ಎಷ್ಟು ಚಿತ್ತಾಕರ್ಷಕವಾಗಿತ್ತೋ ಅಷ್ಟೇ ಅವರ ನಿರಾಡಂಬರ, ನೇರ ಹಾಗೂ ಪ್ರೀತಿ ಆದರಗಳ ನಡೆನುಡಿಯೂ ಪರಿಣಾಮಕಾರಿಯಾಗಿ ಇಲ್ಲಿನ ಕನ್ನಡಿಗರ ಮೇಲೆ ಪ್ರಭಾವ ಬೀರಿತು.

ಸಮ್ಮೇಳನ ನಡೆದ ಮೂರು ದಿವಸವೂ ಅವರೇ 'ಹೀರೋ'! ಮಕ್ಕಳು, ಹೆಂಗಸರು, ಗಂಡಸರು, ವೃದ್ಧರು ಸಿಕ್ಕಸಿಕ್ಕಲ್ಲಿ ಅವರನ್ನು ಸುತ್ತುವರೆದು ಸಂಭಾಷಣೆಯಲ್ಲಿ ತೊಡಗುತ್ತಿದ್ದದ್ದು, ಅವರ ಜೊತೆ ಫೋಟೊ ತೆಗೆಸಿಕೊಳ್ಳುತ್ತಿದ್ದದ್ದು, ಅವರ ಪುಸ್ತಕಗಳ ಮತ್ತು ದನಿಸುರುಳಿಗಳ ಮೇಲೆ ಅವರ ಸಹಿಯನ್ನು ಪಡೆಯುತ್ತಿದ್ದದ್ದು ಸರ್ವೇಸಾಧಾರಣ ದೃಶ್ಯವಾಗಿತ್ತು. ಇಂತಹ ಜನಮನ್ನಣೆಗೆ, ಅಮಿತವಾದ ಅಕ್ಕರೆಗೆ ಕನ್ನಡ ತಾಯಿಯ ಕೃಪೆ ಕಾರಣವೆಂದು ನಿಸಾರರು ಯಾವುದೇ ಕೃತಕತೆಯ 'ಪೋಸ್' ಇಲ್ಲದೆ ಹೇಳುತ್ತಿದ್ದರು. ತಾವು ಅಮೇರಿಕಕ್ಕೆ ಬರಲು ಮುಖ್ಯ ಕಾರಣರಾದವರನ್ನು ಜನರ ಮುಂದೆ ಆಗಿಂದಾಗ್ಗೆ ನೆನಪಿಸಿಕೊಳ್ಳುತ್ತಿದ್ದರು.

ನಿಸಾರ್ ಅಹಮದ್ ಅವರು ಅಮೇರಿಕದ ದೂರ ದೂರದ ಪ್ರಾಂತಗಳಿಗೂ ಹೋಗಿ ಅಲ್ಲಿನ ಕನ್ನಡ ಕೂಟಗಳಲ್ಲಿ ಮತ್ತು ಅನೇಕ ಮನೆಗಳಲ್ಲಿ ಭಾಷಣ ಮತ್ತು ಕವನ ವಾಚನ ಮಾಡಿದರೆಂದು ಮುಂಚೆ ಸೂಚಿಸಿದೆನಷ್ಟೆ. ಬಹುಶಃ ಇವರಷ್ಟು ಅಮೇರಿಕದ ಉದ್ದಗಲ ಸಂಚರಿಸಿದ ಕನ್ನಡದ, ಅಷ್ಟೇಕೆ ಭಾರತದ ಇತರ ಭಾಷೆಗಳ ಯಾವ ಸಾಹಿತಿಯೂ ಇರಲಾರ. ಇಪ್ಪತ್ತು-ಮೂವತ್ತು ವರ್ಷಗಳಿಂದ ಇಲ್ಲೇ ನೆಲಸಿರುವ ನಾವು ಕನ್ನಡಿಗರೇ ಅಷ್ಟೊಂದು ಜಾಗಗಳನ್ನು ನೋಡಿರುವೆವೋ ಇಲ್ಲವೋ! ಆಯಾ ನಗರದ ಕನ್ನಡ ಕೂಟಗಳ ಕಾರ್ಯಕರ್ತರು ನಿಸಾರರಿಗೆ ಇನ್ನೊಂದು ಲಾಭದ ಬೋನಸ್ಸನ್ನು ನೀಡಿದ್ದರು. ಅಲ್ಲಿಗೆ ಹತ್ತಿರವಾದ ಯಾವುದಾದರೂ ವಿಶ್ವವಿಖ್ಯಾತ ಪ್ರೇಕ್ಷಣೀಯ ಸ್ಥಳಗಳನ್ನು ದರ್ಶನ ಮಾಡಿಸುವುದು. ಕೆಲವು ಸ್ಥಳಗಳು ತಮ್ಮ ಊರಿನಿಂದ ಇನ್ನೂರು-ಮುನ್ನೂರು ಮೈಲಿಗಳ ದೂರವಿದ್ದರೂ ನಿಸಾರರನ್ನು ಅಕ್ಕರೆಯಿಂದ ಅಲ್ಲಿಗೆ ಕರೆದೊಯ್ಯುತ್ತಿದ್ದುದನ್ನು ಅವರು, ಬೆಂಗಳೂರಿಗೆ ನಾನೂ ಸೇರಿದಂತೆ ಹಲವು ಅಮೇರಿಕನ್ನಡಿಗರು ಆಮೇಲೆ ಹೋಗಿದ್ದಾಗ, ಅವರ ಮನೆಗೆ ಭೇಟಿ ಕೊಟ್ಟಾಗ ತುಂಬು ಅಭಿಮಾನ ಮತ್ತು ಕೃತಜ್ಞತೆಯಿಂದ ಜ್ಞಾಪಿಸಿಕೊಂಡರು. 'ನಾನು ಹೈಸ್ಕೂಲು, ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಿಂದಲೇ ಅಮೇರಿಕದ ಜಗದ್ವಿಖ್ಯಾತ ಎಡೆಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ ಅರಿತಿದ್ದೆ. ಈ ಜನ್ಮದಲ್ಲಿ ಅವುಗಳನ್ನು ನೋಡುವುದು ಸಾಧ್ಯವೆ? ಎಂದು ಅಂದುಕೊಳ್ಳುತ್ತಿದ್ದೆ. ನನ್ನ ಪ್ರವಾಸ ಕಾಲದಲ್ಲಿ ಅಮೇರಿಕನ್ನಡಿಗರು ನನ್ನ ಕನಸನ್ನು ನನಸುಗೊಳಿಸಿದ್ದು ನಿಜಕ್ಕೂ ನನ್ನ ಸುಕೃತ' ಎಂದು, ತಾವು ನೋಡಿ ಅನುಭವಿಸಿದ ಇಲ್ಲಿನ ಸ್ಥಳಗಳನ್ನು ಜ್ಞಾಪಿಸಿಕೊಳ್ಳುತ್ತ ಭಾವವಶರಾದರು. ಅವರು ನಿರರ್ಗಳವಾಗಿ ಹೇಳುತ್ತಾ ಹೋದ ಸ್ಥಳಗಳನ್ನು ನಾನು ತತ್‌ಕ್ಷಣ ಬರಹದಲ್ಲಿ ಪಟ್ಟಿ ಮಾಡುತ್ತಾ ಹೋದೆ. ಕೆಲವು ತಾಣಗಳ ಬಗೆಗಿನ ಅವರ ರಸವತ್ತಾದ ವಿವರಣೆ ನನ್ನ ಹಾಗೆ ಇತರರಿಗೂ ತುಂಬು ಕುತೂಹಲ ಮೂಡಿಸಿರಲಿಕ್ಕೆ ಸಾಕು. ಅವರ ಜ್ಞಾಪಕ ಶಕ್ತಿಯ ಬಗ್ಗೆ hats off! ನಾನು ಸರಸರನೆ ಗೀಚಿಕೊಂಡಿದ್ದ ಅವರ ವೀಕ್ಷಣೆಯ ಜಾಗಗಳಲ್ಲಿ ಬಹಳ ಮುಖ್ಯವಾದುವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ: ನಯಾಗರ ಜಲಪಾತ, ಡಿಯರ್‌ಬಾರ್ನ್‌ನಲ್ಲಿರುವ ಫೋರ್ಡ್ ಮೋಟಾರುಗಳ ಇತಿಹಾಸ, ವೈವಿಧ್ಯ ಮತ್ತು ಬೆಳವಣಿಗೆ ಮುಂತಾದ ಸಂಗತಿಗಳ ಅದ್ಭುತವನ್ನು ಕಣ್ಣೆದುರು ತೆರೆದಿಡುವ ಮ್ಯೂಸಿಯಂ ಹಾಗೂ ವಿಶ್ವದ ಅದರ ಮುಖ್ಯ ಕಛೇರಿ: ಚಿಕಾಗೊ ನಗರದ ಸಾಗರೋಪಮ ಮಿಚಿಗನ್ ಸರೋವರ, ಒಂದು ಕಾಲಕ್ಕೆ ವಿಶ್ವದ

ಅತ್ಯುನ್ನತ ಕಟ್ಟಡವೆಂದು ಖ್ಯಾತಿವೆತ್ತ ಸಿಯರ್ಸ್ ಟವರ್, ಫೀಲ್ಡ್ ಮ್ಯೂಸಿಯಂ, ಸ್ವಾಮಿ ವಿವೇಕಾನಂದ ಅವರು ವಿಶ್ವಧರ್ಮ ಸಮ್ಮೇಳನವನ್ನು ಉದ್ದೇಶಿಸಿ ಉಪನ್ಯಾಸ ಮಾಡಿದ ಚಾರಿತ್ರಿಕ ಸ್ಥಳ (ಈಗ ಮ್ಯೂಸಿಯಂ ಆಗಿದೆ), ಜಗತ್ತಿನ ಅತ್ಯಂತ ಬೃಹತ್ ವಸ್ತುಪ್ರದರ್ಶನದ ಕಟ್ಟಡವಾದ ಮ್ಯಾಕ್ ಕಾರ್ಮಿಕ್ ಬಿಲ್ಡಿಂಗ್; ಮಿಸಿಸಿಪಿ ನದಿಯ ಲಾಕ್ ಅಂಡ್ ಡ್ಯಾಮ್ ಎಂಬ ಅಪೂರ್ವ ವ್ಯವಸ್ಥೆ, ಮಾಲಿನ್‌ನ ಹಾಗೂ ವಾಟರ್‌ಲೂನಲ್ಲಿರುವ ಲೋಕ ಪ್ರಸಿದ್ಧ ಜಾನ್‌ಡೀರ್ ಟ್ರ್ಯಾಕ್ಟರ್ ತಯಾರಿಕೆ ಕಂಪೆನಿಯ ಕಾರ್ಯಾಚರಣೆ; ಮಿನ್ನೆಸೋಟದಲ್ಲಿರುವ ಬೃಹತ್ ಅಮೇರಿಕನ್ ಮಾಲ್, ವಿಸ್ಕಾನ್ಸಿನ್‌ನ ಹೌಸ್ ಆನ್ ದಿ ರಾಕ್ (ನಮ್ಮ ದೇಶದ ಹೈದರಾಬಾದ್‌ನಲ್ಲಿರುವ ಸಾಲಾರ್‌ಜಂಗ್‌ನಂಥ ಏಕವ್ಯಕ್ತಿಯ ಅಪೂರ್ವ ವಸ್ತುಸಂಗ್ರಹವನ್ನು ಹೋಲುವಂಥದ್ದು); ಆರ್ಲಂಡೋವಿನ ವಾಲ್ಟ್ ಡಿಸ್ನಿಯ ಎಪ್ಕಾಟ್ ಸಂಗ್ರಹಾಲಯ; ನ್ಯೂಯಾರ್ಕ್‌ನ ಎಂಪೈರ್ ಸ್ಟೇಟ್ ಕಟ್ಟಡ, ಲಿಬರ್ಟಿ ಪ್ರತಿಮೆ, ಬಾಂಬಿಗೆ ದಾಳಿಯಾದ ಜೋಡಿ ವಿಶ್ವ ವಾಣಿಜ್ಯ ಬೃಹನ್ನಿಮಿತಿ(9/11 ಖ್ಯಾತಿ)ಯ ಸ್ಥಳ; ನ್ಯೂಜೆರ್ಸಿಯ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ (ಐನ್‌ಸ್ಟೀನ್‌ನಂಥ ವಿಶ್ವವಿಖ್ಯಾತ ವಿಜ್ಞಾನಿಗಳು ಪ್ರಯೋಗ ನಡೆಸಿದ ಜಾಗ); ಫಿಲಿಡೆಲ್ಫಿಯಾದಲ್ಲಿರುವ ಅಮೇರಿಕ ಸ್ವಾತಂತ್ರ್ಯ ಘೋಷಣ ಕಟ್ಟಡ; ವರ್ಜಿನಿಯಾದ ರಮ್ಯಾದ್ಭುತ ಲ್ಯೂರೆ ಅಂತರ್ಗುಹೆ; ಅಮೇರಿಕದ ಅಧ್ಯಕ್ಷ ಜೆಫರ್‌ಸನ್ ಹುಟ್ಟಿದ ಸ್ಥಳ ಮತ್ತು ಅವನ ಕಛೇರಿ; ವಾಷಿಂಗ್‌ಟನ್ ಡಿ.ಸಿ.ಯ ಕ್ಯಾಪಿಟಲ್ ಕಟ್ಟಡ, ವಾಷಿಂಗ್ಟನ್‌ನ ಭವ್ಯೋನ್ನತ ಜೆಫರ್‌ಸನ್ ಲಿಂಕನ್ನರ ಸ್ಮಾರಕಗಳು, ಸ್ಮಿತ್ಸೋನಿಯನ್ ವಸ್ತು ಮತ್ತು ಕಲಾ ಸಂಗ್ರಹಾಲಯಗಳು, ಏರ್ ಅಂಡ್ ಸ್ಪೇಸ್ ಮ್ಯೂಸಿಯಂ; ಬಾಸ್ಟನ್ ಬಳಿಯ ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮ ಉಗಮದ ಚಾರಿತ್ರಿಕ ಸ್ಮಾರಕಗಳು, ಜಾನ್. ಎಫ್. ಕೆನೆಡಿ ಸ್ಮಾರಕ ಮ್ಯೂಸಿಯಂ, ಪ್ರಖ್ಯಾತ ಹಾರ್ವರ್ಡ್ ವಿಶ್ವವಿದ್ಯಾಲಯ ಹಾಗೂ ಎಂ.ಐ.ಟಿ. (ಮ್ಯಾಸಚುಸೆಟ್ಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ); ಆಂಹರ್ಸ್ಟ್‌ನಲ್ಲಿರುವ ಕವಿ ರಾಬರ್ಟ್ ಫ್ರಾಸ್ಟ್‌ನ ಮನೆ, ಕವಯಿತ್ರಿ ಎಮಿಲಿ ಡಿಕಿನ್‌ಸನಳ ಮನೆ ಗೋರಿ ಹಾಗೂ ವೆರ್ಮಾಂಟ್ ಪ್ರದೇಶದ ಮಾಗಿ ಕಾಲದ ವರ್ಣೋಜ್ವಲ ಸಸ್ಯ ವೈಭವ; ಸಿಯಾಟಲ್‌ನ ಮಾಹಿತಿ ತಂತ್ರಜ್ಞಾನ(Microsoft)ದ ತಿಮಿಂಗಿಲ ಬಿಲ್‌ಗೇಟ್ಸ್‌ನ ಸಾಮ್ರಾಜ್ಯ, ಕರಾಟೆ ಪಟು ಬ್ರೂಸ್ ಲೀ ಮತ್ತು ಅವನ ಪುತ್ರ ಬ್ರಾಂಡನ್ ಲೀಯ ಅಕ್ಕಪಕ್ಕದ ಗೋರಿಗಳು; ಅಲ್ಲಿಂದ ಸುದೂರದಲ್ಲಿರುವ ಕ್ರಿಯಾಶೀಲ ಜ್ವಾಲಾಮುಖಿಗಳಾದ ವೆರ್ನಿಯರ್ ಮತ್ತು ಮೌಂಟ್ ಸೆಂಯಿಟ್ ಹೆಲೆನ; ಸ್ಯಾನ್‌ಫ್ರಾನ್ಸಿಸ್ಕೊನ ಗೋಲ್ಡನ್ ಗೇಟ್ ಸೇತುವೆ, ಮ್ಯೂರ್‌ನ ರೆಡ್‌ವುಡ್ ವನ, ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯ; ಲಾಸ್‌ಆಂಜಲೀಸ್‌ನ ವಾಲ್ಟ್ ಡಿಸ್ನಿ ವಂಡರ್ ವರ್ಲ್ಡ್, ಹಾಲಿವುಡ್, ಚೀನಿಯರಿಂದ ನಿರ್ಮಾಣಗೊಂಡ ಬೃಹತ್ ಬೌದ್ಧ ದೇವಾಲಯ; ಲಾಸ್ ವೇಗಾಸ್‌ನ ಉನ್ಮಾದಕ ಮಾಯಾಲೋಕ, ಹೂವರ್ ಅಣೆಕಟ್ಟು; ಫೀನಿಕ್ಸ್ ಸಿಟಿಯ ಬಳಿಯಿರುವ ಗ್ರಾಂಡ್ ಕ್ಯಾನ್ಯನ್, ಟುಸಾನ್ ಸನಿಹದ ಕ್ಯಾಕ್ಟಸ್ ಕಾನನ; ಹ್ಯೂಸ್ಟನ್‌ನ ನಾಸಾ; ಇಲಿನಾಯ್ಸ್‌ನ ಸ್ಪ್ರಿಂಗ್ ಫೀಲ್ಡ್‌ನಲ್ಲಿರುವ ಅಬ್ರಹಾಂ ಲಿಂಕನ್‌ನ ಮನೆ, ಕಛೇರಿ ಹಾಗೂ ಸಮಾಧಿ; ಸೈಂಟ್ ಲೂಯಿಸ್‌ನ ಮಿಸಿಸಿಪಿ ನದಿ ಬಳಿಯ ಗ್ರೇಟ್ ಆರ್ಚ್‌ವೇ;ಜೆಸ್ಸಿ ಜೇಮ್ಸ್ ಹೆಸರಿನ ಕುಖ್ಯಾತ ದರೋಡೆಕೋರನ ಅಡಗುದಾಣವಾಗಿದ್ದ

ಮನಮೋಹಕ ಮೆರಮಕ್ ಗುಹೆ; ಇಂಡಿಯಾನಾಪಾಲಿಸ್‌ನ ಜಗತ್‌ಕೀರ್ತಿಯ ಮೋಟಾರ್ ರೇಸ್‌ನ ವಿಸ್ತೃತ ಕ್ರೀಡಾಂಗಣ; ಜಗತ್ತಿನ ಮೊದಲನೆಯ ಜೆರಾಕ್ಸ್ ಯಂತ್ರ ರೂಪಿಸಿದ ಸಂಶೋಧನ ಸಂಸ್ಥೆ—ಇತ್ಯಾದಿ!

ನಿಸಾರ್ ಅಹಮದ್ ಅವರು ಅಮೇರಿಕದಲ್ಲಿ ಸುಮಾರು ಮೂರೂವರೆ ತಿಂಗಳು ತಂಗಿದ್ದು, ದೇಶಾದ್ಯಂತ ಪ್ರವಾಸ ಮಾಡಿ ಕನ್ನಡ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡಲು ಅನುಕೂಲವಾಗುವಂತೆ ನಮ್ಮ ಯಜಮಾನರ ಸಹಪಾಠಿ ಮತ್ತು ಅಯೋವಾದ ಸೀಡರ್ ಫಾಲ್ಸ್ ಊರಿನ ನಿವಾಸಿ ಕೃಷ್ಣಶಾಸ್ತ್ರಿಗಳು ಹಲವಾರು ದಿವಸಗಳು ಬಿಡುವಿಲ್ಲದೆ ಕಂಪ್ಯೂಟರ್ ಮುಖೇನ ಶ್ರಮಿಸಿ ನಿಸಾರರ ಸಂಚಾರ ಹಾಗೂ ವಾಸ್ತವ್ಯ ಸುಗಮವಾಗಲು ಪ್ರಯತ್ನಿಸಿದ್ದರು. ಅಲ್ಲದೆ, ಡೆಟ್ರಾಯಿಟ್ ಸಮ್ಮೇಳನದಲ್ಲಿ ಸ್ವತಃ ಶಾಸ್ತ್ರಿಗಳೇ ತುಂಬ ಶ್ರಮ ವಹಿಸಿ ನಿಸಾರರ ಪುಸ್ತಕಗಳು, ಪ್ರಶಸ್ತಿಯ ದಾಖಲೆಗಳು, ದನಿ ಸುರುಳಿ, ಸಿಡಿಗಳು ಹಾಗೂ ಅಪೂರ್ವವಾದ ಭಾವಚಿತ್ರಗಳ ಒಂದು ಪ್ರದರ್ಶನಾಲಯವನ್ನು ಏರ್ಪಡಿಸಿದ್ದರು. ಸ್ವತಃ ತಾವೂ, ಸೋದರರಾದ ಶೈಲಶಾಸ್ತ್ರಿ ಹಾಗೂ ಭಾವಮೈದುನರಾದ ನರಸಿಂಹಸ್ವಾಮಿ ಮತ್ತು ಅಳಿಯ ರವಿಯೊಂದಿಗೆ ಹಗಲಿರುಳು ಅಲ್ಲಿ ನಿಂತು ಸಮ್ಮೇಳನಕ್ಕೆ ಬಂದವರಿಗೆ ನಿಸಾರರ ಸಾಧನೆಗಳ ಬಗೆಗೆ ವಿವರಗಳನ್ನು ನೀಡುತ್ತಿದ್ದರು. ಆ ಪ್ರದರ್ಶನಾಲಯದ ಎದುರು 'ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಅಮೇರಿಕದ ಪ್ರವಾಸ' ಎಂಬ ಬ್ಯಾನರ್ ಕಟ್ಟಿ, ಎಲ್ಲರನ್ನೂ ಅಲ್ಲಿಗೆ ಆಕರ್ಷಿಸಿ ಸೆಳೆದಿದ್ದರು. ತಮ್ಮತಮ್ಮ ಊರಿನ ಕನ್ನಡ ಸಂಘಗಳಿಗೆ ನಿಸಾರರನ್ನು ಆಹ್ವಾನಿಸಲು ಸಂಬಂಧಪಟ್ಟವರು ಸೂಕ್ತವಾದ ದಿನಾಂಕಗಳನ್ನು ಗೊತ್ತುಪಡಿಸಿಕೊಂಡು ಶಾಸ್ತ್ರಿಗಳ ಜೊತೆ ವಿಚಾರ ವಿನಿಮಯ ಮಾಡುತ್ತಿದ್ದರು. ಅಲ್ಲಿಯೇ, ನಿಸಾರರ ಅಮೇರಿಕದ ವಿವಿಧ ಕಡೆಗಳ ಪ್ರವಾಸದ ಮುಕ್ಕಾಲು ಭಾಗದ ಮುಂಗಡ ಬುಕ್ಕಿಂಗ್ ಪೂರ್ತಿಯಾಗಿತ್ತು.

ನಮ್ಮ 'ದಕ್ಷಿಣ ಕ್ಯಾಲಿಫೋರ್ನಿಯದ ಕನ್ನಡ ಕೂಟ'ಕ್ಕೆ ಅವರು ಅಕ್ಟೋಬರ್ ತಿಂಗಳಿನ ಕೊನೆಯ ಹೊತ್ತಿಗೆ ಬರುವುದೆಂದು ನಿರ್ಧಾರವಾಗಿತ್ತು. ಇದರಲ್ಲಿ ಮುಖ್ಯವಾಗಿ ನನ್ನ ಪತಿಯವರ ವಿಶೇಷ ಆಸಕ್ತಿ ಇತ್ತು. ಜೊತೆಗೇ ನಮ್ಮ ಕನ್ನಡ ಸಂಘದ ಅಧ್ಯಕ್ಷ ಹಾಗೂ ಆಪ್ತಮಿತ್ರ ಬಿ. ಎನ್. ನಾಗರಾಜ ಅವರ ಉತ್ಸಾಹವೂ ಕೈಗೂಡಿಸಿತ್ತು. ನಾನು ನಿಸಾರರನ್ನು ಲಾಸ್ ಆಂಜಲೀಸ್ ವಿಮಾನ ನಿಲ್ದಾಣದಲ್ಲಿ ಭೇಟಿಮಾಡಿ, ಅಲ್ಲಿಂದ ಐವತ್ತು ಮೈಲಿ ದೂರದ, ರ್‍ಯಾಂಚೊ ಕ್ಯುಕಮೋಂಗಾ ಊರಿನ ನಮ್ಮ ಮನೆಯಲ್ಲಿ ಐದಾರು ದಿನ ಉಳಿಸಿ ಕೊಳ್ಳುವುದೆಂದು ಮಾತಾಗಿತ್ತು. ಹೀಗಾಗಿ, ನಾನು ನಿಗದಿತ ದಿನದಂದು ಲಾಸ್ ಆಂಜಲೀಸ್ ವಿಮಾನ ನಿಲ್ದಾಣಕ್ಕೆ ಮಧ್ಯಾಹ್ನದ ಹೊತ್ತಿಗೆ ಹೋದೆ. ಇದಕ್ಕೂ ಮುಂಚೆ ಉತ್ತರ ಕ್ಯಾಲಿಫೋರ್ನಿಯದ ಸ್ಯಾನ್‌ಫ್ರಾನ್ಸಿಸ್ಕೊ ನಗರದಿಂದ ನಿಸಾರರ ಆತಿಥೇಯರಾದ ಡಾ ರವಿ ಸುಬ್ಬರಾವ್ ಅವರು ದೂರವಾಣಿಯಲ್ಲಿ ನನ್ನನ್ನು ಸಂಪರ್ಕಿಸಿ ನಿಸಾರರು ಬರಲಿರುವ ವಿಮಾನದ ಸಂಖ್ಯೆ, ಸಮಯ ಇತ್ಯಾದಿಗಳನ್ನು ತಿಳಿಸಿದ್ದರು. ಮೊದಲು ಅಮೆರಿಕನ್ ಏರ್‌ಲೈನ್ಸ್‌ನ ಮುಖ್ಯದ್ವಾರದ ಬಳಿ ಅವರನ್ನು ಸಂಧಿಸಿ ಆಮೇಲೆ 'ಲಗೇಜ್ ಪಿಕ್‌ಅಪ್'ಗೆ ಹೋಗಿ ಎಂದು ಹೇಳಿದ್ದರು. ನಾನು ವಿಶೇಷ ಅನುಮತಿ ಪಡೆದು, ಸೂಚಿಸಿದ ಬಾಗಿಲಿನ ಬಳಿ ಹೋಗುವಷ್ಟರಲ್ಲೇ ನಿಸಾರರು ನೇರವಾಗಿ 'ಲಗೇಜ್ ಪಿಕಪ್' ಬಳಿ ಹೊರಟು ಹೋಗಿದ್ದರು.

ಆಮೇಲೆ ಸೂಟ್‌ಕೇಸ್, ಕಿಟ್ ಬ್ಯಾಗ್ ತೆಗೆದುಕೊಂಡು ಆ ವಿಶಾಲ ಹಾಗೂ ಜನರಿಂದ ಸದಾ ಕಾಲ ತುಂಬಿ ತುಳುಕುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನನ್ನನ್ನು ಹುಡುಕಲು ಪ್ರಾರಂಭಿಸಿ ಎಲ್ಲೆಲ್ಲೋ ಅಲೆದಾಡತೊಡಗಿದ್ದರು. ಮೊದಲೇ ಅಪರಿಚಿತ ಸ್ಥಳ, ಜೊತೆಗೆ ದಿಗ್ಗೆಡಿಸುವ ವಾತಾವರಣ. ಅರ್ಧ ಮುಕ್ಕಾಲು ಗಂಟೆ ಕಳೆದರೂ ನಾವಿಬ್ಬರು ಭೇಟಿಯಾಗ ಲಿಲ್ಲ. ಅವರು ನಮ್ಮ ಮನೆಗೆ ಫೋನ್ ಮಾಡಿದರೆ ಅಲ್ಲಿ ಉತ್ತರಿಸಲು ಯಾರೂ ಇಲ್ಲ. ಫೋನ್ ಮಾಡಲು ಅವರ ಕಿಸೆಯಲ್ಲಿ ಚಿಲ್ಲರೆ ಹಣ ಇರಲಿಲ್ಲವಂತೆ. ಇದ್ದದ್ದು ಬರಿಯ ನೂರು ಡಾಲರ್ ನೋಟುಗಳು. ಹೀಗಾಗಿ, ಅಲ್ಲೇ ಕುಳಿತಿದ್ದ ಬಿಳಿಯ ಹೆಣ್ಣುಮಗಳ ಸೆಲ್‌ಫೋನ್ ಮೂಲಕ ನಮ್ಮ ಮನೆಗೆ ಸಂಪರ್ಕಿಸಿದ್ದಾರೆ. ಆಮೇಲೆ ಆಫ್ರಿಕನ್ ಅಮೇರಿಕನ್ (ಕರಿಯ)ಯುವಕನೊಬ್ಬನಿಗೆ ಪರಿಸ್ಥಿತಿಯನ್ನು ವಿವರಿಸಿ ಅವನಿಂದ ಚಿಲ್ಲರೆ ಪಡೆದು ಫೋನ್ ಮಾಡಿದ್ದಾರೆ. ಪ್ರಯತ್ನ ಫಲಕಾರಿಯಾಗದೆ ಗೊಂದಲಗೆಟ್ಟು ಅಲ್ಲಿಂದಿಲ್ಲಿಗೆ ಶತಪಥ ಮಾಡಿದ್ದಾರೆ.

ನಾನು ಆಪರೇಟರ್‌ಗಳನ್ನು ವಿಚಾರಿಸಿದಾಗ ಸ್ಯಾನ್‌ಫ್ರಾನ್ಸಿಸ್ಕೊನಿಂದ ವಿಮಾನ ಬಂದು ಆಗಲೇ ಅರ್ಧ-ಮುಕ್ಕಾಲು ಗಂಟೆಯಾಗಿದೆ. 'ಅರೈವಲ್ ಮಾನಿಟರ್'ನಲ್ಲಿ ವಿವರಗಳು ಕಾಣಿಸದಿರುವ ಕಾರಣವನ್ನು ತಿಳಿಸಿದಳು. ನನಗೆ ದಿಕ್ಕು ತೋಚದಾಯಿತು. ಆ ಬೃಹತ್ ಕಟ್ಟಡದ ಸಂಕೀರ್ಣದಲ್ಲಿ, ಆ ಜನ ಜಂಗುಳಿಯಲ್ಲಿ ನಿಸಾರರನ್ನು ಪತ್ತೆ ಹಚ್ಚಲಾಗದೆ ಹತಾಶಳಾಗಿ, ಅವರ ಹೆಸರನ್ನು ಹಲವು ಬಾರಿ ಧ್ವನಿವರ್ಧಕದ ಮೂಲಕ ಘೋಷಣೆ ಮಾಡಿಸಿದೆ. ಆ ಶಬ್ದ ಸಾಗರದಲ್ಲಿ ಈ ಧ್ವನಿ ನಿಸಾರರಿಗೆ ಹೇಗೆ ಕೇಳಿಸಬೇಕು? ಅವರು ಅದೆಷ್ಟು ದೂರವಿದ್ದರೊ! ಹೀಗೆಯೇ ಒಂದು ಗಂಟೆಗೂ ಹೆಚ್ಚು ಕಾಲ ಕಳೆದಿದೆ. ಕೈಚೆಲ್ಲಿ ಒಂದು ಕಡೆ ನಿಂತಿದ್ದಾಗ, ಆ ಮಹಾನುಭಾವ ದೂರದಿಂದ ಕೈ ಬೀಸಿ ನನಗೆ ಸನ್ನೆ ಮಾಡಿದ್ದು ಕಾಣಿಸಿತು. 'ಸದ್ಯ ಬದುಕಿದೆ' ಎಂದುಕೊಂಡು ದಿಡಿದಿಡಿ ಅವರತ್ತ ಧಾವಿಸಿದೆ. ಅವರೂ ಸಮಾಧಾನದ ನಿಟ್ಟುಸಿರು ಬಿಟ್ಟರು. ನಾನು ಕಾರ್ ಡ್ರೈವ್ ಮಾಡುತ್ತಿದ್ದರೆ ದಾರಿಯುದ್ದಕ್ಕೂ ನಿಸಾರರು ವಿಮಾನ ನಿಲ್ದಾಣದಲ್ಲಿ ತಾವು ಪಟ್ಟ ಪಡಿಪಾಟಲನ್ನು ಬಣ್ಣಿಸುತ್ತಿದ್ದರು. ಅವರಿಗೆ ಸೆಲ್‌ಫೋನ್ ಕೊಟ್ಟ ಅಪರಿಚಿತ ಹೆಣ್ಣು ಮತ್ತು ಚಿಲ್ಲರೆ ಹಣ ಒದಗಿಸಿದ ಕರಿಯ ಯುವಕನನ್ನು ಮನಸಾರ ವಂದಿಸಿದರು. 'ಅಮೇರಿಕದ ಹೊಲಸು ರಾಜಕಾರಣಿಗಳಿಗೂ ಇಲ್ಲಿನ ಸಾಮಾನ್ಯ ಜನತೆಗೂ ಎಂತಹ ಅಂತರ ನೋಡಿ' ಎಂದು ಉದ್ಗರಿಸಿದರು.

ನ್ಯೂಜೆರ್ಸಿಯಿಂದ ಬಾಸ್ಟನ್ ನಗರಕ್ಕೆ 'ಆ್ಯಮ್‌ಟ್ರಾಕ್' ರೈಲಿನಲ್ಲಿ ಪ್ರಯಾಣ ಮಾಡಿದಾಗಲೂ ಅಲ್ಲಿನ ನಿಲ್ದಾಣದಲ್ಲಿ ಪಟ್ಟ ಇಂಥದೇ ಗೊಂದಲ, ಬವಣೆಗಳನ್ನು ನಿಸಾರರು ಮುಂದೊಮ್ಮೆ ಸವಿವರವಾಗಿ ಬಣ್ಣಿಸಿದ್ದರು. ನನ್ನ ಹಾಗೆಯೇ, 'ಟ್ರಾಫಿಕ್ ಜಾಂ'ನ ದೆಸೆಯಿಂದ ಸಮಯಕ್ಕೆ ಸರಿಯಾಗಿ ಬಾರದ ಡಾ. ಗೋವಿಂದರಾಜು ಅವರೂ ನಿಸಾರರಿಗೆ ಆದ ಅನನುಕೂಲಕ್ಕೆ ತುಂಬ ವ್ಯಥೆ ಪಟ್ಟಿದ್ದರಂತೆ.

ನಿಸಾರರು ನಮ್ಮ ಮನೆಯಲ್ಲಿದ್ದಷ್ಟು ದಿವಸವೂ ನಮ್ಮ ಜೊತೆ ತುಂಬು ಆತ್ಮೀಯತೆಯಿಂದ ವ್ಯವಹರಿಸಿದ್ದರು. ನಮ್ಮ 'ದಕ್ಷಿಣ ಕ್ಯಾಲಿಫೋರ್ನಿಯ ಕನ್ನಡ

ಸಂಘ'ದಲ್ಲಿ ಅವರ ಭಾಷಣವಿದ್ದ ದಿವಸ ಸಭಾಂಗಣ ಕಿಕ್ಕಿರಿದಿತ್ತು. ಅವರ ನಾಲ್ಕೈದು ಭಾವಗೀತೆಗಳನ್ನು ಇಲ್ಲಿನ ಹೆಂಗಳೆಯರು ಮತ್ತು ಪುರುಷರು ವಾದ್ಯ ಸಮೇತ ಮಧುರವಾಗಿ ಹಾಡಿದ ಮೇಲೆ ನಿಸಾರರು ಭಾಷಣ ಮಾಡಿದರು. ನನಗೆ ವೈಯಕ್ತಿಕವಾಗಿ ಅವರು ಡೆಟ್ರಾಯಿಟ್ ವಿಶ್ವ ಕನ್ನಡ ಸಮ್ಮೇಳನದಲ್ಲಿ ಆಡಿದ ಮಾತುಗಳ ಎದುರು ಇಲ್ಲಿನದು ಅಷ್ಟು ಪ್ರಭಾವ ಬೀರಲಿಲ್ಲ. ನಿಸಾರರು ಎಷ್ಟು ವಿನಯವಂತರೋ ಅಷ್ಟೇ ನಿಷ್ಠುರವಾದಿಗಳು. ಇದನ್ನು ಕೆಲವೊಮ್ಮೆ ಅವರ ಬಿಚ್ಚು ಮಾತುಗಳಿಂದ ನಾನು ಅರಿತಿದ್ದೇನೆ. 'ಎಲ್ಲಾ ಸರಿ, ಇಷ್ಟೆಲ್ಲ ಸೊಗಸಾಗಿ, ಅದ್ಧೂರಿಯಾಗಿ ನೀವು ಈ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದೀರಿ. ಆದರೆ 'ಕನ್ನಡ ಕೂಟ' ಎಂಬ ಹೆಸರನ್ನು ಇಟ್ಟುಕೊಂಡು ಫಲಕವನ್ನು ಇಂಗ್ಲಿಷಿನಲ್ಲಿ ಯಾಕೆ ಬರೆಸಿದ್ದೀರಿ? ಮುಂದೆ ಇಂತಹ ಅಚಾತುರ್ಯಕ್ಕೆ ಎಡೆ ಮಾಡಿಕೊಡಬೇಡಿ' ಎಂದು ಮುನ್ನೆಚ್ಚರಿಕೆ ನೀಡಿದರು. ಅಂದಿನ ಎರಡು ವಿಷಯಗಳನ್ನು ಹೇಳಲೇಬೇಕು. ನಮ್ಮ ಪತಿವರ್ಯರು ನಿಸಾರರಿಗೆ ಅರಿವಿಲ್ಲದೆಯೇ ಅವರ ಹಾಡುಗಳ ವಿಡಿಯೊ ಕ್ಯಾಸೆಟ್ಟುಗಳನ್ನು ಮಾಡಿಸಿ, ಆಚೆ ನಡಗುವ ಚಳಿಯಲ್ಲಿ ಮಾರುತ್ತಿದ್ದದ್ದು. ಇದರಿಂದ ನಿಸಾರರು ಎಷ್ಟು ಕನಿಕರಪಟ್ಟರೆಂಬುದನ್ನು, ನಮ್ಮ ಪತಿಗಳ ಈ ನಿಃಸ್ವಾರ್ಥ ಕಾರ್ಯವನ್ನು ಎಷ್ಟು ಶ್ಲಾಘಿಸಿದರೆಂಬುದನ್ನು ಅವರು ಅನಂತರ ಅಮೇರಿಕದ ಹಲವು ಕಡೆಯ ಕನ್ನಡಿಗರೊಂದಿಗೆ ಆಡಿದ ಮಾತುಗಳಿಂದ ಸುವ್ಯಕ್ತವಾಗುತ್ತಿತ್ತು.

ಜೊತೆಗೇ, ಇಲ್ಲಿನ ಪ್ರಖ್ಯಾತ ಸಿದ್ಧ ಉಡುಪು ತಯಾರಿಕೆಯ ಸಂಸ್ಥೆ 'ಟಾಮ್ ಜೇಮ್ಸ್'(Tom James)ನಲ್ಲಿ ಹಿರಿಯ ಅಧಿಕಾರಿಯಾಗಿರುವ ಭಾಸ್ಕರ್ ಎನ್ನುವವರು ನಿಸಾರರ ಭಾಷಣ ಮತ್ತು ಅವರ ಪದ್ಯಗಳ ಓದುವಿಕೆಯಿಂದ ಎಷ್ಟು ಪ್ರಭಾವಿತರಾದರೆಂದರೆ, ಕಾರ್ಯಕ್ರಮ ಮುಗಿದ ಮೇಲೆ ನಿಸಾರರನ್ನು ಹೊರಗಡೆ ಭೇಟಿಮಾಡಿ ಮುಕ್ತವಾಗಿ ಶ್ಲಾಘಿಸಿದ್ದಲ್ಲದೆ, ಜೇಬಿನಿಂದ ಟೇಪನ್ನು ತೆಗೆದು, ನಿಸಾರರು ಬೇಡ ಬೇಡವೆಂದರೂ ಕೇಳದೆ, ಅವರ ಸೂಟಿನ ಅಳತೆಯನ್ನು ತೆಗೆದುಕೊಂಡರು. ಅಪರಿಚಿತ ಕನ್ನಡಿಗರೊಬ್ಬರ ಇಂತಹ ಅವ್ಯಾಜವಾದ ಅಕ್ಕರೆಗೆ ನಿಸಾರರ ಕಣ್ಣುಗಳು ಹನಿಗೂಡಿದ್ದವು. ಭಾಸ್ಕರ್ ಅವರು ಮೂಲತಃ ಬೆಂಗಳೂರಿನವರು. ಇಲ್ಲಿ ನೆಲಸಿ ಮೂವತ್ತು ವರ್ಷಗಳಾಗಿವೆ. ಉದ್ಯಮ ಕ್ಷೇತ್ರದಲ್ಲಿದ್ದು ಸಾಹಿತ್ಯದಲ್ಲಿ ಹೆಚ್ಚಿನ ಪರಿಶ್ರಮವಿಲ್ಲದವರನ್ನೂ ನಿಸಾರರ ವ್ಯಕ್ತಿತ್ವ, ಮಾತುಗಳು ಹಾಗೂ ಹಾಡುಗಳು ಎಂತಹ ಮೋಡಿ ಹಾಕಬಲ್ಲವು ಎನ್ನುವುದನ್ನು ಈ ನಿದರ್ಶನ ಸಾರುತ್ತದೆ. ಭಾಸ್ಕರ್ ಅವರು ನಿಸಾರರ ಚಿಕಾಗೊವಿನ ಮಗಳ ವಿಳಾಸಕ್ಕೆ ಸೊಗಸಾದ ಬೆಲೆ ಬಾಳುವ ನೀಲಿ ಸೂಟ್, ಅನುರೂಪವಾದ ಅಮೇರಿಕದ ಧ್ವಜ ಚಿಹ್ನೆಗಳಿರುವ ಟೈ ಹಾಗೂ ಇವುಗಳಿಗೆ 'ಮ್ಯಾಚ್' ಆಗುವ ಷರ್ಟನ್ನು ಹದಿನೈದು ದಿವಸಗಳ ಒಳಗೆ ಪಾರ್ಸೆಲ್ ಮಾಡಿದರು. ಬೆಂಗಳೂರಿನ ವಿಶೇಷ ಸಮಾರಂಭದಲ್ಲಿ ಹಾಗೂ ಟಿ.ವಿ.ಯ ಸಂದರ್ಶನವೊಂದರ ಸಮಯದಲ್ಲಿ ಅವುಗಳನ್ನು ತೊಟ್ಟ ನಿಸಾರರು ತಪ್ಪದೇ ಭಾಸ್ಕರ್ ಅವರನ್ನು ತುಂಬು ಕೃತಜ್ಞತೆಯಿಂದ ನೆನೆದು ಹೊಗಳಿದ್ದರು.

ನಾನು ಒಂದು ದಿನ ನನ್ನ ಸಮೀಪದ ಬಂಧು ಶ್ರೀಮತಿ ಸುಲೋಚನ ಆರ್ಯ ಅವರ

ಜೊತೆ ನಿಸಾರರನ್ನು ಲಾಸ್ ಆಂಜಲೀಸ್‌ನ ಬಳಿಯ ಅನಹೈಮ್‌ನಲ್ಲಿರುವ ಲೋಕಪ್ರಸಿದ್ಧ ಡಿಸ್ನಿಲ್ಯಾಂಡ್‌ಗೆ ಕರೆದೊಯ್ದೆ. ಇಡೀ ದಿವಸ ನಾವು ಅಲ್ಲಿನ ಅದ್ಭುತಗಳನ್ನು ವೀಕ್ಷಿಸುತ್ತ, ಆ ಮಾಯಾ ಜಗತ್ತಿನ ಮೋಡಿಗೆ ಮಾರು ಹೋಗುತ್ತ ಕಾಲವನ್ನು ಕಳೆದೆವು. ಸದಾ ದೊಡ್ಡವರು ಮಕ್ಕಳೆನ್ನದೆ ಲೆಕ್ಕವಿರದಷ್ಟು ದೇಶವಿದೇಶದ ಜನರಿಂದ ಕಿಕ್ಕಿರಿದಿರುವ ಪ್ರತಿಭಾಶಾಲಿ ವಾಲ್ಟ್ ಡಿಸ್ನಿಯ ಈ ಅದ್ಭುತ ಮನೋರಂಜನೆಯ ವಿಸ್ತಾರವಾದ ತಾಣ ಅನೇಕ ರೀತಿಯ ಆಕರ್ಷಣೆಗಳನ್ನು ಹೊಂದಿದೆ. ಅದರಲ್ಲೂ ಮಕ್ಕಳಿಗೆ ಇದೊಂದು ಯಕ್ಷಲೋಕದಂತೆ ಬೆರಗು, ಸಂತೋಷ, ಮೋಜುಗಳನ್ನು ನೀಡುವ ಅದ್ವಿತೀಯ ಸ್ಥಳವಾಗಿದೆ. ಇದು ಸ್ಥಾಪಿತವಾಗಿ ಏಳೆಂಟು ದಶಕಗಳು ಕಳೆದಿದ್ದರೂ ಅದರ ಹಿರಿಮೆ ಹಾಗೂ ಜನಪ್ರಿಯತೆ ಇನ್ನೂ ಕುಗ್ಗಿಲ್ಲ. ಮಿಕ್ಕಿ ಮೌಸ್ ಮತ್ತು ಡೊನಾಲ್ಡ್ ಡಕ್‌ನಂಥ ಅಸದೃಶ ಪ್ರಾಣಿ ಪಾತ್ರಗಳ ವ್ಯಂಗ್ಯ ಚಲಚ್ಚಿತ್ರಗಳನ್ನು ಸೃಷ್ಟಿಸಿ ಹೊಸ ಶಕೆ ಆರಂಭಿಸಿದ ಮಹಾ ಮೇಧಾವಿ ವಾಲ್ಟ್ ಡಿಸ್ನಿಯ ಈ ಕೌತುಕದ ಸೃಷ್ಟಿಯೂ ಸಹ ಅನನ್ಯ ಮತ್ತು ನಿತ್ಯ ಆಕರ್ಷಕ ರಂಜನಾ ಕೇಂದ್ರ. ಇಂಥ ಒಂದು ಭ್ರಾಮಕ (fantasy) ಲೋಕವನ್ನು ತಮ್ಮ ತಮ್ಮ ದೇಶಗಳಲ್ಲಿ ಇನ್ನೂ ಅತ್ಯಾಧುನಿಕವಾಗಿ ಮತ್ತು ಸುಧಾರಿತವಾಗಿ ನಿರ್ಮಿಸಲು ಲೆಕ್ಕವಿರದಷ್ಟು ಆಗರ್ಭ ಶ್ರೀಮಂತರೂ ಸರ್ಕಾರಗಳೂ ಕಳೆದ ಐದಾರು ದಶಕಗಳಿಂದ ಪ್ರಯತ್ನಿಸಿದರೂ ಅನಹೈಮ್‌ನಲ್ಲಿರುವ ಈ ವಂಡರ್ ಲ್ಯಾಂಡ್ ಅನ್ನು ಜನಪ್ರಿಯತೆಯಲ್ಲಿ ಸರಿಗಟ್ಟಲು ಸಾಧ್ಯವಾಗಿಲ್ಲ. ನಿಸಾರರು ಇದರ ಬಗೆಗೆ ತಾವು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಿನಿಂದ ಕೇಳಿದ್ದರಂತೆ. ಅದನ್ನು ಅನೇಕ ಬಾರಿ ಕಲ್ಪಿಸಿ ಕೊಂಡು ಸುಖಪಟ್ಟಿದ್ದರಂತೆ. ಅದನ್ನು ಪ್ರತ್ಯಕ್ಷ ಕಾಣುವ ಹಂಬಲವನ್ನು ತಳೆದಿದ್ದರಂತೆ. ಈ ದಿನ ಅದು ಕೈಗೂಡಿದ್ದಕ್ಕೆ ನಮಗೆಲ್ಲ ಕೃತಜ್ಞತೆ ಸಲ್ಲಿಸಿದರು. ರಾತ್ರಿ ಸಮೀಪಿಸುತ್ತಿದ್ದಂತೆ ಅಲ್ಲಿರುವ ಮುಖ್ಯ ಮಾರ್ಗದ ಉದ್ದಕ್ಕೂ ಮಕ್ಕಳು ಮತ್ತು ಅವರ ಪೋಷಕರು ಅಸಂಖ್ಯ ಸಂಖ್ಯೆಯಲ್ಲಿ ಜಮಾಯಿಸುತ್ತಾರೆ. ಐತಿಹಾಸಿಕ ಮತ್ತು ಪೌರಾಣಿಕವಾದ ವಿವಿಧ ವಿನೋದಾವಳಿಯ ಒಂದು ವರ್ಣರಂಜಿತ ಪೆರೇಡ್‌ಅನ್ನು ಡಿಸ್ನಿಲ್ಯಾಂಡ್‌ನವರು ಏರ್ಪಡಿಸುತ್ತಾರೆ. ಅದು ರಾತ್ರಿ ಸುಮಾರು ಹೊತ್ತಿನ ತನಕ ನಡೆಯುತ್ತದೆ. ನಿಸಾರ್ ಅವರಿಗೆ ಅದನ್ನು ನೋಡುವ ಆಸೆ, ಕುತೂಹಲ. ಆದರೆ ಅದು ಕತ್ತಲಾದರೂ ಇನ್ನೂ ಶುರುವಾಗಿರಲಿಲ್ಲ. ನನಗೋ ನಮ್ಮ ಮನೆಗೆ ಸಾಕಷ್ಟು ದೂರವಿರುವ ಈ ಜಾಗವನ್ನು ಆದಷ್ಟು ಬೇಗ ಬಿಡುವ ತವಕ. ಬೇಗ ಹೋಗಿ ರಾತ್ರಿ ಅಡುಗೆ ಮಾಡಬೇಕು. ಮಾರನೆಯ ದಿವಸ ದೂರದ ಮತ್ತೊಂದು ಮಹಾದ್ಭುತ ಮೋಜಿನ ಮಾಯಾ ನಗರಿಯಾದ ಲಾಸ್ ವೇಗಾಸ್‌ಗೆ ಇವರನ್ನು ಕರೆದುಕೊಂಡು ಹೋಗಲು ಪೂರ್ವಭಾವಿ ವ್ಯವಸ್ಥೆ ಮಾಡಿಕೊಳ್ಳಬೇಕು. ಹೀಗಾಗಿ, ನಿಸಾರರಿಗೆ ಮನಸ್ಸಿಲ್ಲದಿದ್ದರೂ ಅಸಮಾಧಾನವಾಗಿದ್ದರೂ ವಾಲ್ಟ್ ಡಿಸ್ನಿಲ್ಯಾಂಡ್‌ಗೆ ವಿದಾಯ ಹೇಳಲೇ ಬೇಕಾಯಿತು. ದಾರಿಯಲ್ಲಿ ಅವರಿಗೆ, ಕತ್ತಲಲ್ಲಿ ಅಸ್ಪಷ್ಟವಾಗಿ ಕಂಡರೂ ಇನ್ನೊಂದು ವಿಶೇಷವನ್ನು ತೋರಿಸಿಕೊಂಡು ಬಂದೆ. ಅದು ಗಾಜಿನ ಚರ್ಚು (Crystal Cathedral). ಇಡೀ ಕಟ್ಟಡವನ್ನು ಅತ್ಯಂತ ಮನೋಹರವಾಗಿ ಹಾಗೂ ಆಧುನಿಕ ರೀತಿಯಲ್ಲಿ ನಿರ್ಮಿಸಿರುವ ಕೌಶಲ ವಿಸ್ಮಯಗೊಳಿಸುತ್ತದೆ.

ಈ ಮಧ್ಯೆ ಒಂದು ದಿನ ನಮ್ಮ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಬಿ. ಎನ್.

ನಾಗರಾಜ ಅವರ ಮನೆಯಲ್ಲಿ ನಿಸಾರರಿಗೆ ಔತಣವೇರ್ಪಟ್ಟಿತ್ತು. ಅದನ್ನು ಮುಗಿಸಿದ ಅನಂತರ, ನಾನು ನಾಗರಾಜ ಅವರಿಗೆ 'ನಾನು ಮತ್ತು ಕೃಷ್ಣಮೂರ್ತಿಯವರು ಕೊಂಚ 'ಬಿಸಿ' ಆಗಿದ್ದೇವೆ. ದಯವಿಟ್ಟು ನಿಸಾರರನ್ನು ಹಾಲಿವುಡ್, ಲಾಸ್ ಆಂಜಲೀಸ್ ಡೌನ್ ಟೌನ್ ಮತ್ತು ಅಲ್ಲೇ ಸಮೀಪವಿರುವ ಹೊಸದಾಗಿ ನಿರ್ಮಿತವಾಗಿರುವ ಚೀನೀಯರ ಬೃಹತ್ ದೇವಾಲಯದ ಸಂಕೀರ್ಣವನ್ನು ತೋರಿಸಿಕೊಂಡು ಬನ್ನಿ' ಎಂದು ಕೋರಿದೆ. ಅವರು, ಕೊಂಚ ಆರೋಗ್ಯ ಸರಿಯಿರದಿದ್ದರೂ 'ಖಂಡಿತಾ ಕರೆದುಕೊಂಡು ಹೋಗುತ್ತೇನೆ' ಎಂದವರೆ 'ಡೌನ್‌ಟೌನ್ ಮತ್ತು ಚೀನೀ ದೇವಾಲಯವನ್ನು ಈಗಲೇ ನೋಡೋಣ. ನಾಳೆ ಬೆಳಿಗ್ಗೆ ಹೊರಟು ಮಧ್ಯಾಹ್ನದವರೆಗೂ ಹಾಲಿವುಡ್ ಮತ್ತು ಅಲ್ಲಿನ ಬೂಲ್‌ವಾ (Hollywood Boulevard) ರಸ್ತೆಯಲ್ಲಿರುವ ಹಲವಾರು ವಿಶೇಷಗಳನ್ನು ಹಾಗೂ ಯೂನಿವರ್ಸಲ್ ಸ್ಟುಡಿಯೋ, ಅದರ ಸುತ್ತಮುತ್ತಲನ್ನು ವೀಕ್ಷಿಸಿಕೊಂಡು ಬರುತ್ತೇನೆ' ಎಂದರು. ನಿಸಾರರು ನಮ್ಮ ಊರನ್ನು ಬಿಟ್ಟು ಹೋದಮೇಲೂ ಇಲ್ಲಿ ಅನೇಕರಿಗೆ ನಾಗರಾಜ್ ಅವರು 'ನಿಸಾರ್ ಅಹಮದ್ ಅದೆಷ್ಟು ವಿಷಯಗಳನ್ನು ತಿಳಿದಿದ್ದಾರೆ. ಅದರಲ್ಲೂ ಕನ್ನಡ ಸಾಹಿತ್ಯದ ಅವರ ಜ್ಞಾನ ವಿಸ್ಮಯಕರ. ಅವರು ಕನ್ನಡದ ಹಲವು ಹಿರಿಯ ಕವಿಗಳ ಕವನಗಳ ಸಾಲುಗಳನ್ನು ಕೋಟ್ ಮಾಡಿ ವಿವರಿಸುತ್ತಿದ್ದರೆ, ನನಗಂತೂ ನಮ್ಮ ಕನ್ನಡ ಲಿಟರೇಚರ್‌ನಲ್ಲಿ ಇಷ್ಟೊಂದು ರಿಚ್‌ನೆಸ್ ಇದೆಯೆ! ಎಂದು ಆಶ್ಚರ್ಯವಾಯಿತು. ಅದರಲ್ಲೂ ಡಿ.ವಿ. ಗುಂಡಪ್ಪನವರ ಮತ್ತು ನಮ್ಮ ಫೋಕ್ ಲಿಟರೇಚರ್‌ನ ಕೆಲವು ಪದ್ಯಗಳನ್ನು ಅವರು ಅನಾಯಾಸವಾಗಿ ತಡವರಿಸದೆ ಹೇಳಿ, ಅವುಗಳ ಸ್ವಾರಸ್ಯವನ್ನು ವರ್ಣಿಸಿ ಹೇಳುತ್ತಿದ್ದರೆ, ಮೈಗಾಡ್, ಈ ವ್ಯಕ್ತಿ ಎಷ್ಟು ತಿಳಿದುಕೊಂಡಿದ್ದಾರಲ್ಲ ಎಂದು ಸಂತೋಷ ಮತ್ತು ಸೋಜಿಗ ಪಟ್ಟೆ. ಜೊತೆಗೇ ಅನೇಕ ಮೈಲಿಗಳ ಡ್ರೈವಿಂಗ್‌ನ ಆಯಾಸವೇ ನನಗಾಗದಷ್ಟು ಬಹಳ ಬೇಗ ಸಮಯ ಕಳೆದುಹೋಯಿತು. ಈ ಮನುಷ್ಯನ ಜೊತೆ ಇನ್ನಷ್ಟು ಹೊತ್ತು ಕಳೆಯುವ ಅವಕಾಶ ಸಿಗುವುದಿಲ್ಲ ಎಂದು ವಿಷಾದಪಟ್ಟೆ. ನನಗೆ ಆ ದಿವಸ ಆದ ಲಾಭ, ಸುಖಗಳನ್ನು ನಾನೆಂದೂ ಮರೆಯುವ ಹಾಗೇ ಇಲ್ಲ. ನಾನು ಅವರಿಗೆ ತೋರಿಸಿದ ಪ್ರೇಕ್ಷಣೀಯ ಸ್ಥಳಗಳಿಗಿಂತ ಅವರು ದರ್ಶನ ಮಾಡಿಸಿದ ಭಾವನಾಲೋಕ ಮಾರ್ವೆಲಸ್!' ಎಂದು ಹೃದಯ ತುಂಬಿ ಉದ್ಗರಿಸುತ್ತಿದ್ದರು. ನಿಸಾರರ ಎದುರು ಹೀಗೆ ಅವರು ಹೇಳಿದಾಗ 'ನನಗೆ ಗೊತ್ತಿರುವುದು ತುಂಬ ಕಡಿಮೆ. ನಮ್ಮ ಹಳೆಯ ಹಾಗೂ ಹೊಸ ಸಾಹಿತ್ಯದಲ್ಲಿ ನಾನು ಹೇಳಿದ್ದಕ್ಕಿಂತ ಸಾವಿರ ಪಟ್ಟು ಸ್ವಾರಸ್ಯಕರವಾದ ಮತ್ತು ವಿಚಾರವನ್ನು ಕೆರಳಿಸುವ ವಿಷಯಗಳಿವೆ. ನಾನೇ ಇನ್ನೂ ಕಲಿಯುವುದು ಬ್ರಹ್ಮಾಂಡದಷ್ಟಿದೆ' ಎಂದು ವಿನಮ್ರವಾಗಿ ನುಡಿದಿದ್ದನ್ನು ನಾನೇ ಸ್ವತಃ ಕೇಳಿಸಿಕೊಂಡಿದ್ದೇನೆ—ನಮ್ಮ ಮನೆಯಲ್ಲಿ ನಿಸಾರರ ಗೌರವಾರ್ಥ ಸುತ್ತಮುತ್ತಲಿನ ಹಲವು ಆಪ್ತ ಕನ್ನಡಿಗರ ಕುಟುಂಬಗಳನ್ನು ಕರೆದು ಔತಣಕೂಟ ಏರ್ಪಡಿಸಿದ ಸಂದರ್ಭದಲ್ಲಿ. ನಮ್ಮ ಮನೆಯಲ್ಲಿ ಜರುಗಿದ ಆ ಸಂಭ್ರಮದ ಆದರೋಪಚಾರದ ಕಾರ್ಯಕ್ರಮದಲ್ಲಿ ನಿಸಾರರು ಹೃದಯ ತುಂಬಿ ಮಾತನಾಡಿದರು. ಅವರ ಕವಿತೆಗಳನ್ನು ಓದಿ ಮುದ ನೀಡಿದರು. ನಾವೂ ಸೇರಿದಂತೆ ಕೆಲವರು ನಿಸಾರರಿಗೆ ಪ್ರೀತಿಯ ನೆನಪಿನ ಕಾಣಿಕೆಗಳನ್ನು ನೀಡಿ ತಮ್ಮ ಮೆಚ್ಚಿನ ಕವಿಗೆ ಮರ್ಯಾದೆ ಸಲ್ಲಿಸಿದರು. ನಿಸಾರರಿಗೆ

ಶಿಷ್ಯಸದೃಶರಾದ 'ಕನ್ನಡ ದಾಸ' ಬಿರುದಾಂಕಿತ ಡಾ. ರಾಘವರೆಡ್ಡಿ ಅವರು 'ನಿತ್ಯೋತ್ಸವ' ಗೀತೆಯನ್ನು ಅನುಕರಿಸಿ ತಾವೇ ರಚಿಸಿದ, ಅಮೇರಿಕದ ಸ್ಥಳಗಳನ್ನು ಸೂಚಿಸುವ ಒಂದು ಹಾಡನ್ನು ಸ್ವತಃ ತಾವೇ ಹಾಡಿ ಕವಿ ನಮನ ಸಲ್ಲಿಸಿದರು. ಈ ಸಂತೋಷ ಕೂಟದಲ್ಲಿ ಬೆಂಗಳೂರಿನಿಂದ ಬಂದಿದ್ದ ಸುಗಮ ಸಂಗೀತ ಗಾಯಕಿ ಬಿ. ಕೆ. ಸುಮಿತ್ರ ಕೂಡ ಪಾಲ್ಗೊಂಡಿದ್ದರು.

ಅಂದು ಮಧ್ಯಾಹ್ನ ಲಾಸ್ ವೇಗಾಸ್‌ಅನ್ನು ನೋಡಿಕೊಂಡು ಬರುವ ಕಾರ್ಯಕ್ರಮ ನಿಗದಿಯಾಗಿತ್ತು. ಮಧ್ಯಾಹ್ನದ ಊಟದ ಬಳಿಕ ನಾನೂ ಸುಲೋಚನ ಆರ್ಯ ಅವರೂ, ನಮಗೆ ಪರಿಚಿತರಾದ ಶ್ರೀ ವಲ್ಲೀಶ ಶಾಸ್ತ್ರಿ ಅವರ ಕಾರಿನಲ್ಲಿ ನಮ್ಮ ಮನೆಯಿಂದ ಹೊರಟೆವು. ಜೊತೆಗೆ ಶಾಸ್ತ್ರಿಯವರ ಮಡದಿ ವಿದ್ಯಾ ಮತ್ತು ಬೆಂಗಳೂರಿನ ಗಾಯಕರಾದ ಬಿ. ಕೆ. ಸುಮಿತ್ರ ಮತ್ತು ನಾಗರಾಜ ಹವಾಲ್ದಾರ್ ಬಂದರು. ನೂರಾರು ಮೈಲಿ ಮೊಜಾವೊ (Mojavo) ಹೆಸರಿನ ಬೆಂಗಾಡಿನಲ್ಲಿ ಪ್ರಯಾಣ. ಹದಿನೈದು ಇಪ್ಪತ್ತು ಮೈಲಿ ಇರಲಿ, ಐವತ್ತು ಮೈಲಿ ಸಂಚರಿಸಿದರೂ ಜನದಟ್ಟಣೆಯ ಒಂದಾದರೂ ಊರು ಎದುರಾಗದು. ಈ ಮರುಭೂಮಿಯ ನೀಳವಾದ ಮತ್ತು ನಿರ್ಜನವಾದ ಹೆದ್ದಾರಿಯ ಅತ್ತಿತ್ತ ಸಾಲಾಗಿ ಬೆಟ್ಟಗುಡ್ಡಗಳ ಸಾಲು. ಅಲ್ಲಲ್ಲಿ 'ವಿನ್‌ಯಾರ್ಡ್'ಗಳು (Vineyard-ದ್ರಾಕ್ಷಾವನ). ಅವೂ ಸಹ ಕುರುಚಲು ಕಳೆಯಂತೆ ಕಾಣಿಸುತ್ತಿದ್ದವು. ನಿಸಾರರು ಯಾಕೋ ಏನೋ ಸುಮಾರು ಅರ್ಧಮುಕ್ಕಾಲು ಗಂಟೆ ಕಾಲ ಮೌನವ್ರತವನ್ನು ಆಚರಿಸಿದ್ದರು. ಕಾರಿನ ಆಚೆಗೆ ದೃಷ್ಟಿಯನ್ನು ನೆಟ್ಟು ಯಾವುದೋ ಯೋಚನೆಯಲ್ಲಿರುವಂತೆ ಕಂಡುಬಂದರು. ನಾವೆಲ್ಲ ಎಡೆಬಿಡದೆ ಅದೂ ಇದೂ ಹರಟುತ್ತಿದ್ದಾಗ ನಿಸಾರರು ಪಾಲ್ಗೊಳ್ಳದೆ ಸುಮ್ಮನಿದ್ದದ್ದು ವಿಲಕ್ಷಣವಾಗಿ ತೋರಿತ್ತು. ವಲ್ಲೀಶ ಶಾಸ್ತ್ರಿ, ಒಂದು ಕಾಲದಲ್ಲಿ ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ನಿಸಾರರ ವಿದ್ಯಾರ್ಥಿಯಾಗಿದ್ದರಂತೆ. ಆಗೀಗ ನಾಟಕದ ಪಾತ್ರಧಾರಿ ಯಾಗಿಯೂ ರಂಜನೆ ನೀಡುವುದುಂಟು. ತುಂಬಾ ಮಾತಾಡುವ ಮನುಷ್ಯ. ಉದ್ದಕ್ಕೂ ಯಾವು ಯಾವುದೋ ಜೋಕುಗಳನ್ನು ಹೇಳುತ್ತ, ಡ್ರೈ ಮಾಡುತ್ತ ಎಲ್ಲರನ್ನೂ ನಗಿಸುತ್ತಿದ್ದರು. ನಿಸಾರರು ಮೌನವನ್ನು ಮುರಿದಾಗ ನಮಗೆಲ್ಲ ಸಮಾಧಾನವಾಯಿತು. ಆದರೆ ಅವರ ಈ ವ್ರತಕ್ಕೆ ಕಾರಣ ಮಾತ್ರ ನಾವು ಯಾರೂ ಕೇಳಲಿಲ್ಲ. ಅವರೂ ಹೇಳಲಿಲ್ಲ. ಬಹುಶಃ ಕವಿಯ ಅಂತರ್ಮುಖಿ ಚಿಂತನೆಯಿರಬಹುದೆ? ಅಥವಾ ದೂರದ ತಮ್ಮ ಮಡದಿ ಮಕ್ಕಳ ನೆನಪೆ? ಗೊತ್ತಿಲ್ಲ. ಅವರು 'ಈ ಮಹಾ ಮರುಭೂಮಿಯನ್ನು ಕುರಿತು ಹಿಂದೊಮ್ಮೆ, ಸುಮಾರು ನಲವತ್ತು ವರ್ಷಗಳಿಗೆ ಮುಂಚೆ USISನ ಗ್ರಂಥಾಲಯದ ಪುಸ್ತಕವೊಂದರಲ್ಲಿ ವಿವರವಾಗಿ ಓದಿದ್ದೆ. ಕೆಲವೊಂದು ಬಣ್ಣದ ಫೋಟೊಗಳನ್ನು ನೋಡಿದ್ದೆ. ಇಷ್ಟು ವರ್ಷಗಳು ಕಳೆದರೂ ಇದು ಯಾವುದೇ ಅಭಿವೃದ್ಧಿ ಕಾಣದೆ ಹಾಗೆಯೇ ಇರುವುದು, ಅದೂ ಅಮೇರಿಕದಂತಹ ಪ್ರಗತಿಪರ ದೇಶದಲ್ಲಿ ಆಶ್ಚರ್ಯವೆನ್ನಿಸುತ್ತದೆ. ಅಷ್ಟೇ ಅಲ್ಲದೆ, ನಾನು ದುಬೈ, ಅಬುದಾಭಿ, ಫ್ಯುಜೇರ, ಷಾರ್ಜಾ ಮೊದಲಾದ ಕೊಲ್ಲಿ ರಾಷ್ಟ್ರಗಳಲ್ಲಿ ಬೇಕಾದಷ್ಟು ಸುತ್ತಾಡಿದ್ದೇನೆ. ಅಲ್ಲಿ ಕಣ್ಣು ಹಾಯಿಸುವ ತನಕ ಬರಿಯ ಮರಳೇ ಮರಳು. ಕುರುಚಲು, ಕ್ಯಾಕ್ಟಸ್‌ಗಳು ಇಲ್ಲಿರುವಂತೆ ನನಗೆ ಅಲ್ಲಿ ಕಂಡಿಲ್ಲ. ಹೀಗಿದ್ದೂ ಇವೆರಡರ

ವೈವಿಧ್ಯ ನನಗೆ ವಿಸ್ಮಯ ತರಿಸಿದೆ. ಕೊಲ್ಲಿ ದೇಶದ ಮರುಳ್ಗಾಡಿನಲ್ಲಿ ಆಗಾಗ್ಗೆ ಎದುರಾಗುವ ಒಂಟೆಗಳಾಗಲಿ, ಮರಳುದಿಬ್ಬ(Sand dunes)ಗಳಾಗಲಿ ಇಲ್ಲಿ ಇಲ್ಲದಿರುವುದೂ ಪ್ರಕೃತಿಯ ವೈಚಿತ್ರ್ಯ ಅಲ್ಲವೆ?' ಎಂದರು. ನಮಗೆ ಇವೆಲ್ಲ ಹೊಳೆದೇ ಇಲ್ಲವಲ್ಲ ಎಂದು ಸೋಜಿಗವಾಯಿತು. ಈ ಮನುಷ್ಯನ ವೀಕ್ಷಣಾ ಸಾಮರ್ಥ್ಯ ಮತ್ತು ಸೂಕ್ಷ್ಮ ವಿವರಗಳ ಗ್ರಹಿಕೆ ನಮಗೆ ಹೆಮ್ಮೆ ಮೂಡಿಸಿದವು. ಅಷ್ಟಲ್ಲದೆ ಹೇಳುತ್ತಾರೆಯೆ? 'ರವಿ ಕಾಣದ್ದನ್ನು ಕವಿ ಕಂಡ' ಎಂದು!

ನಾವು ತಂದಿದ್ದ ಕುರುಕಲು ತಿಂಡಿಗಳಾದ ಕೋಡುಬಳೆ, ನಿಪ್ಪಟ್ಟು, ರವೆಉಂಡೆ, ಚಕ್ಕುಲಿಗಳನ್ನು ಕಬಳಿಸುತ್ತ ಇದ್ದಾಗ ನಿಸಾರ್ ಅವರು ಮಾತನ್ನು ಮುಂದುವರಿಸಿದ್ದರು. 'ಈ ಮೊಜಾವೊ ಮರಳುಭೂಮಿಯ ಒಂದು ಭಾಗವಾಗಿ ಕುಖ್ಯಾತ ಡೆತ್ ವ್ಯಾಲಿ (ಸಾವಿನ ಕಣಿವೆ) ಇರುವುದು ನಿಮಗೆ ಗೊತ್ತಿರಬೇಕು. ಅದೆಲ್ಲೋ ಇಲ್ಲಿಯೇ ಸಮೀಪದಲ್ಲಿ ಇರಬೇಕೆಂದು ಕಾಣುತ್ತದೆ...' ಅವರು ಮಾತು ಮುಂದುವರಿಸುತ್ತಿರುವಾಗ ತಡೆದು ವಲ್ಲೀಶ ಶಾಸ್ತ್ರಿ, 'ಸಾರ್! ಇನ್ನು ಐದಾರು ಮೈಲಿ ಮುಂದೆ ಸಾಗಿದರೆ, Road to Death Valley (ಸಾವಿನ ಕಣಿವೆಗೆ ದಾರಿ) ಎಂಬ ಬೋರ್ಡ್ ಸಿಕ್ಕುತ್ತೆ. ಅದಿರಲಿ, ನೀವು ಹಿಂದೆ ಇಲ್ಲಿಗೆಲ್ಲ ಬಂದಿಲ್ಲ. ನಿಮಗೆ ಅದು ಇಲ್ಲೇ ಹತ್ತಿರ ಇರೋದು ಹೇಗೆ ಗೊತ್ತಾಯಿತು?' ಎಂದು ಅಚ್ಚರಿಯಿಂದ ಪ್ರಶ್ನಿಸಿದರು. 'ಶಾಸ್ತ್ರಿ, ಅದು sheer intuition ಅಷ್ಟೆ. ಅಥವಾ ಕಾಕತಾಳೀಯಾನೂ ಇರಬಹುದು. ಯಾಕೋ ಅದರ ವಿಷಯ ದಿಢೀರೆಂದು ಹೊಳೆಯಿತು' ಎಂದು ತಾವು ಹಿಂದೊಮ್ಮೆ ಓದಿದ್ದ ಆ 'ಡೆತ್ ವ್ಯಾಲಿ'ಯ ವಿಲಕ್ಷಣತೆಗಳನ್ನು ಒಂದೊಂದಾಗಿ ಹೇಳುತ್ತಾ ಹೋದರು. ಅಲ್ಲಿನ ದುಸ್ಸಹನೀಯ ತಾಪಮಾನ, ಬಿಕೋತನ, ಸಮುದ್ರ ಮಟ್ಟಕ್ಕಿಂತ ಕೆಳಗಿರುವ ಅದರ ವೈಶಿಷ್ಟ್ಯಗಳು, ಅಲ್ಲಿ ಹೋದವರು ಬದುಕಿ ವಾಪಸ್ಸು ಬರಲಾರರು ಎಂಬ ಸತ್ಯ ಸಂಗತಿ, ಸರ್ಕಾರ ಅಲ್ಲಿಗೆ ಯಾರನ್ನೂ ಹೋಗಲು ಬಿಡದ ಕಟ್ಟುನಿಟ್ಟಿನ ನಿರ್ಬಂಧ ಮೊದಲಾದವುಗಳನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾ ಹೋದರು. ನಿಸಾರರ ಓದಿನ ಜೊತೆಗೆ ನೆನಪಿನ ಶಕ್ತಿಯ ಬಗೆಗೂ ನಮಗೆ ಆಶ್ಚರ್ಯ ಮತ್ತು ಅಭಿಮಾನ ಮೂಡಿತು.

ಲಾಸ್ ವೇಗಾಸ್ ಇನ್ನು ಸುಮಾರು ನಲವತ್ತು-ಐವತ್ತು ಮೈಲಿಗಳಷ್ಟು ದೂರವಿದೆ ಅನ್ನುವಾಗ ಅಲ್ಲೊಂದು ಚಿಕ್ಕದಾದ ಊರು ಸಿಕ್ಕುತ್ತದೆ. ಅದರ ಹೆಸರು ಬೇಕರ್. ಅಲ್ಲಿನ ಮರುಭೂಮಿಯ ತಾಪಮಾನವನ್ನು ಅಳೆಯುವ ಸಂಕೇತವೋ ಎನ್ನುವಂತೆ ಊರಿನ ಮಧ್ಯೆ ಒಂದು ಉದ್ದನೆಯ ಥರ್ಮಾಮೀಟರ್‌ಅನ್ನು ನೆಟ್ಟಿದ್ದಾರೆ. ಇಪ್ಪತ್ತೈದು-ಮೂವತ್ತು ಅಡಿಗಳಷ್ಟು ಎತ್ತರವಿರಬಹುದು. ಅಲ್ಲೇ ನಾಮ ಫಲಕವೂ ಇದೆ: 'ಇದು ಪ್ರಪಂಚದ ಅತ್ಯಂತ ದೊಡ್ಡ ಥರ್ಮಾಮೀಟರ್'. ಅಮೇರಿಕದಲ್ಲಿ ಹೀಗೆ, ಅನೇಕ ಕಡೆಗಳಲ್ಲಿ 'ವಿಶ್ವದಲ್ಲೇ ಅತಿ ದೊಡ್ಡದಾದ', 'ವಿಶ್ವದಲ್ಲೇ ಅತಿ ಉದ್ದನೆಯ', 'ವಿಶ್ವದಲ್ಲೇ ಮೊಟ್ಟ ಮೊದಲನೆಯ' ಇತ್ಯಾದಿ ಫಲಕಗಳು ಕಾಣಸಿಗುತ್ತವೆ. ಅವು ಪ್ರವಾಸಿಗರನ್ನು ಸೆಳೆಯುವ ಅಯಸ್ಕಾಂತ ಸಮ ಜಾಹೀರಾತುಗಳು. ಕಲೆ, ಸಾಹಿತ್ಯ, ವಾಸ್ತು, ಇತಿಹಾಸ, ಜಲಪಾತ-ಕಣಿವೆ-ನದಿ-ಕಡಲ ತೀರ-ಗುಹೆ-ಮರಗಿಡ-ಸೇತುವೆ-ಕೊನೆಗೆ ಜೀವಂತ ವಸ್ತುವಾದ

ಮನುಷ್ಯನನ್ನೂ ಮಾರುಕಟ್ಟೆಯ ಸರಕಾಗಿ ಮಾರ್ಪಡಿಸುವ ನಿಸ್ಸೀಮರು ಅಮೇರಿಕನ್ನರು. ನಮ್ಮ ಭಾರತ ದೇಶದ ಸರಕಾರ ಮನಸ್ಸು ಮಾಡಿದರೆ ಇಂತಹ ಅದೆಷ್ಟು ಫಲಕಗಳನ್ನು ಊರೂರಿನಲ್ಲೂ ತೂಗಬಹುದೊ! ನಿಸಾರರು ಇದನ್ನು ನೋಡಿ ಸಂತೋಷಪಡುತ್ತಿದ್ದಂತೆ 'ಅರೆ! My God...' ಎಂದು ಅಲ್ಲೇ ಇದ್ದ ಬೃಹತ್ ಪೋಸ್ಟರ್ ಒಂದರ ಕಡೆ ಗಮನ ಸೆಳೆದರು. ನಾವೆಲ್ಲ ಅತ್ತ ನೋಡಿದಾಗ, ನಿಸಾರರು 'ನೋಡಿ, ಈ ಕೌಬಾಯ್ ಬಫೆಲೊ ಬಿಲ್ ಇದ್ದಾನಲ್ಲ, ಇವನ ಬಗೆಗೆ ನಲವತ್ತೈದು ವರ್ಷಗಳ ಹಿಂದೆಯೇ ನಾನು ಬಹಳಷ್ಟು ಓದಿದ್ದೆ. ಇವನು ಇಲ್ಲಿನವನು ಅಂತ ಗೊತ್ತಿರಲಿಲ್ಲ. What a surprise discovery to me. ಇವನು ಎಂತಹ ಪ್ರಚಂಡ ಗುರಿಕಾರ ಎಂದರೆ, ಕಣ್ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ತನ್ನ ವೈರಿಗಳನ್ನಿರಲಿ, ಹಾರುವ ಹಕ್ಕಿಗಳನ್ನೂ ಹೊಡೆದು ಉರುಳಿಸಿ ಬಿಡುತ್ತಿದ್ದ. ಇವನನ್ನು ಕುರಿತು ಚಿಕಾಗೊ ನಿವಾಸಿಯಾಗಿದ್ದ E. E. Cummings ಎಂಬ ಶಬ್ದ ಚಮತ್ಕಾರದ ಕವಿ ಚಿಕ್ಕದಾದರೂ ವ್ಯಂಗ್ಯ, ವಿಷಾದಗಳಿಂದ ನಿಬಿಡವಾದ ಸುಂದರವಾದ ಪದ್ಯವನ್ನು ಬರೆದಿದ್ದಾನೆ. 'Buffalo Bill is defunct' ಎಂದು ಪ್ರಾರಂಭವಾಗುವ ಆ ಪದ್ಯವನ್ನು ನಾನು ಆ ಕಾಲಕ್ಕೇ ಕನ್ನಡಕ್ಕೆ ರೂಪಾಂತರದ ರೀತಿಯಲ್ಲಿ ಅಳವಡಿಸಲು ಪ್ರಯತ್ನಿಸಿದ್ದೆ. 'ಸುಂಕೇನಹಳ್ಳಿ ಸಿದ್ದ, ನೆಗೆದು ಬಿದ್ದ' ಎಂದು ಶುರುವಾಗುವ ಪದ್ಯವನ್ನು ಹಿರಿಯ ಮಿತ್ರರಾದ ವೈಯೆನ್ಕೆ ಅವರಿಗೆ ಹುರುಪಿನಿಂದಲೇ ತೋರಿಸಿದೆ. ಅವರು 'ನಿಸಾರ್, ಆ ಒರಿಜಿನಲ್ ಪೊಯೆಮ್‌ನ ಪಂಚ್ ಆಗಲಿ, ಪದಗಳನ್ನು ಒಡೆಯುವ ಚಾತುರ್ಯವಾಗಲಿ ಈ ಅನುವಾದದಲ್ಲಿ ಕಂಡುಬರುತ್ತಿಲ್ಲ' ಎಂದು ಪ್ರಾಮಾಣಿಕವಾಗಿ ನುಡಿದರು. ಅದನ್ನು ಅವರ ಮುಂದೆಯೇ ಹರಿದು ಬಿಸಾಡಿದೆ' ಎಂದು, ಹಳೆಯದನ್ನು ಜ್ಞಾಪಿಸಿಕೊಳ್ಳುವಾಗ ಮೈಮರೆತವರಂತೆ ಬಣ್ಣಿಸಿದರು.

ಅದೂ ಇದೂ ಮಾತನಾಡುತ್ತ, ನಗುತ್ತಾ, ದೀರ್ಘ ಪ್ರಯಾಣ ಕೊನೆಯ ಹಂತಕ್ಕೆ ಬರುತ್ತಿದ್ದದ್ದು ಅರಿವಾಗಲೇ ಇಲ್ಲ. ಹತ್ತಾರು ಮೈಲಿಗಳವರೆಗೂ ಸಮತಟ್ಟಾದ ಮರುಭೂಮಿಯ ನಡುವಣ ನೇರ ಹೆದ್ದಾರಿಯಲ್ಲಿ ನಮ್ಮ ವಾಹನ ಮುಂದುವರಿಯುತ್ತಿದ್ದಂತೆ, ವಲ್ಲೀಶ ಶಾಸ್ತ್ರಿ 'ಅಗೋ ನೋಡಿ, ದೂರದಲ್ಲಿ ಲಾಸ್ ವೇಗಾಸ್‌ನ ದೀಪಗಳು ಮಸುಕಾಗಿ ಕಾಣುತ್ತಿವೆ!' ಎಂದರು. ಆ ಹೊತ್ತಿಗಾಗಲೇ ರಾತ್ರಿಯ ಅಂಧಕಾರ ಆವರಿಸಿತ್ತು. ಅಸ್ಪಷ್ಟ ಗೋಚರವಾಗಿದ್ದ ದೀಪಗಳು ಐದಾರು ಮೈಲಿ ಮುಂದುವರಿದಂತೆ ಸ್ವಲ್ಪಮಟ್ಟಿಗೆ ಸ್ಪಷ್ಟವಾಗತೊಡಗಿದವು. ಇನ್ನೂ ಸುಮಾರು ಹತ್ತು-ಹನ್ನೆರಡು ಮೈಲಿಗಳಿರುವಂತೆ ಆ ಕತ್ತಲೆಯಲ್ಲಿ ವಜ್ರದ ಹಾರವೊಂದನ್ನು ಎಸೆದಂತೆ ವಿದ್ಯುದ್ದೀಪಗಳು ಹೆಚ್ಚು ತೇಜಸ್ಸಿನಿಂದ ಝಗಮಗಿಸತೊಡಗಿದವು. ನಡುವೆ ಒಂದು ಲೇಸರ್ ಪ್ರಕಾಶದ ಬೃಹತ್ತಾದ ಪಟ್ಟೆಯೊಂದು ಲಾಸ್ ವೇಗಾಸ್‌ನಿಂದ ಹೊಮ್ಮಿ ನಿಧಾನವಾಗಿ ಆಕಾಶದಲ್ಲಿ ಸುತ್ತುತ್ತಿರುವಂತೆ ಸುಮಾರು ಇಪ್ಪತ್ತು ಮೈಲಿ ದೂರದಿಂದಲೇ ಕಾಣಿಸುತ್ತದೆ.

ಈ ಬೆಂಗಾಡಿನಲ್ಲಿ ಇದ್ದಕ್ಕಿದ್ದಂತೆ ಬೆಳಕುಗಳ ಜಾತ್ರೆಯಂತೆ ಅರಳಿ ನಿಂತಿರುವ ಲಾಸ್ ವೇಗಾಸ್‌ನ ನೂರಾರು ವೈಭವೋಪೇತ ಕಸಿನೋಗೆಳು (ಜೂಜಿನ ತಾಣಗಳು), ಹೋಟೆಲ್

ಗಳು, ಮೋಜಿನ ಮನೆಗಳು, ವಸತಿ ಸಮುಚ್ಚಯಗಳು ಮತ್ತು ಇರುಳಿಡೀ ಸಂಚರಿಸುವ ಸಹಸ್ರಾರು ಜನ, ಕಾರು, ಬೈಕು ಮತ್ತಿತರ ವಾಹನಗಳು ಇತ್ಯಾದಿ ಇತ್ಯಾದಿಗಳನ್ನು ಬಣ್ಣಿಸಲು ಶಕ್ಯವಾಗದೆ ಕಲ್ಪನೆ ಸೋಲುತ್ತದೆ; ಲೇಖನಿ ತೊದಲಿ ತಡವರಿಸುತ್ತದೆ. ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ, ಕುಖ್ಯಾತವಾದ ಕಾಮಿನೀ ಕಾಂಚನಗಳ ಬೇಟೆಯ ಮೋಜುದಾಣ ಈ ಲಾಸ್ ವೇಗಾಸ್. ಅಮೇರಿಕ, ಎರಡನೆಯ ಮಹಾಯುದ್ಧದ ಹೊತ್ತಿಗೆ ಆರ್ಥಿಕವಾಗಿ ದಿವಾಳಿಯೆದ್ದು ಎಲ್ಲೆಲ್ಲೂ ನಿರುದ್ಯೋಗ, ಹಣದುಬ್ಬರ, ಕೊಲೆ ಮಾರಾಮಾರಿ, ಅಕ್ರಮ ಅನ್ಯಾಯಗಳು ಪರಾಕಾಷ್ಠೆಗೇರಿದ್ದಾಗ ಈ ಮರುಭೂಮಿಯಲ್ಲಿ ನಂದನ ವನ ಅರಳುವಂತೆ ಈ sin city (ಪಾಪದ ಪಟ್ಟಣ) ತಲೆಯೆತ್ತಿದ್ದರ ಹಿಂದೆ ಒಂದು ಇತಿಹಾಸವೇ ಇದೆ. ನೆವಾಡ ರಾಜ್ಯದ ಈ ಪ್ರದೇಶದಲ್ಲಿ ಭೋರ್ಗರೆಯುತ್ತ ಹರಿಯುವ ಕೊಲರೆಡೊ ಹೆಸರಿನ ತಿಕ್ಕಲು ನದಿಯ ದಿಕ್ಕನ್ನು ಬದಲಿಸಿ ಅಲ್ಲೊಂದು ಬೃಹತ್ ಅಣೆಕಟ್ಟೆಯನ್ನೂ ಹೆಚ್ಚುವರಿ ನೀರನ್ನು ಸುಮ್ಮನೆ ಹರಿಯಬಿಡದೆ ಒಂದು ಅದ್ಭುತ ಬಗೆಯ ಕೃತಕ 'ಮೀಡ್' ಹೆಸರಿನ ಸರೋವರವನ್ನೂ ನಿರ್ಮಿಸುವ ಮೂಲಕ ಕೊಂಚ ಮಟ್ಟಿನ ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸಬಹುದೆಂಬ ಉದ್ದೇಶದಿಂದ ಆಗಿನ ಸರ್ಕಾರ ಕಾರ್ಯಪ್ರವೃತ್ತವಾಯಿತು. ಹಾಗೆಯೇ ಅಮೇರಿಕದ ಉದ್ದಗಲಕ್ಕೂ ಹಲವಾರು ಹೆದ್ದಾರಿಗಳನ್ನು ನಿರ್ಮಿಸಿ, ಆ ನಿಟ್ಟಿನಲ್ಲೂ ಉದ್ಯೋಗ ಸೃಷ್ಟಿಸಿ ಜನರ ಸಂಕಷ್ಟ ನಿವಾರಣೆಯತ್ತ ಸಂಕಲ್ಪಿಸಿತು. ಇದಕ್ಕಾಗಿ ಧಾವಿಸಿ ಬಂದ ಸಹಸ್ರಾರು ಜನ ಕೂಲಿಯಾಳುಗಳ, ಶ್ರಮಿಕರ ಸೌಕರ್ಯಕ್ಕಾಗಿ ಕೆಲವು ಮನೆಗಳು ಎದ್ದು ಸಣ್ಣ ಊರಾಯಿತು. ಊರೆಂದ ಮೇಲೆ ಹೊಲಗೇರಿ ಇರದಿದ್ದರೆ ಹೇಗೆ? ಸರಿ ದಿನವಿಡೀ ಮೈ ಮುರಿದು ದುಡಿಯುವ ಕಾರ್ಮಿಕರ ಮನೋಲ್ಲಾಸಕ್ಕಾಗಿ ಪಬ್‌ಗಳು, ಬಾರ್‌ಗಳು, ಇಸ್ಪಿಟಾಟ ಮುಂತಾದ ಜೂಜಿನ ಕಟ್ಟೆಗಳೂ ಜೊತೆಗೇ ವೇಶ್ಯಾಗೃಹಗಳೂ ತಲೆಯೆತ್ತಿದ್ದವು. ಹೀಗೇ ಬೆಳೆಯುತ್ತ ಬೆಳೆಯುತ್ತ ಬಂಡವಾಳಶಾಹಿಗಳ ದಂಡೇ ಇಲ್ಲಿಗೆ ಧಾವಿಸಿ, ದೊಡ್ಡ ದೊಡ್ಡ ಅತ್ಯಾಧುನಿಕ ಕಸಿನೋಗಳು, ವೈಭವಯುತ ಹೋಟೆಲ್‌ಗಳು ಮತ್ತಿತರ ಮೋಜು-ಮಜಗಳ ತಾಣಗಳು ನಿಮಿರಿ ನಿಂತವು. ಇಂದಂತೂ ಇಲ್ಲಿನ ದಿನವಹಿ ವ್ಯವಹಾರ ಎಷ್ಟು ಸಾವಿರ ಕೋಟಿ ಡಾಲರುಗಳೋ, ಆ ಭಗವಂತನಿಗೂ ಗೊತ್ತಿದೆಯೋ ಇಲ್ಲವೋ. ತಿಂಗಳಿಗೆ ಲಕ್ಷಾಂತರ ದೇಶ ವಿದೇಶೀಯರು ಇಲ್ಲಿಗೆ ಬಂದು ತಮ್ಮ ಕೈಲಾದಷ್ಟು ಪಾಪವನ್ನು ಈ ನಗರಿಗೆ ಧಾರೆಯೆರೆದು ಮರಳುತ್ತಾರೆ. ಪ್ರಪಂಚದ ಅತ್ಯಂತ ಶ್ರೀಮಂತರ ಕೂಟವೇ ಇಲ್ಲಿ ಜಮಾಯಿಸಿ ವ್ಯವಹಾರ ವಿಸ್ತರಣೆಯ ಕಳ್ಳ ಒಳದಾರಿಗಳನ್ನು ಹುಡುಕುವ ಯೋಜನೆಗಳನ್ನು ತಯಾರಿಸುತ್ತದೆ. ಏನೇ ಇರಲಿ, ಕೊನೆಯ ಪಕ್ಷ ಅಮೇರಿಕಕ್ಕೆ ಬಂದವರು ಒಂದು ಸಲ ಭೂಲೋಕದ ಮೋಜು ಮೇಜವಾನಿಗಳ ಮಹಾಮೇಳವಾಗಿರುವ ಲಾಸ್ ವೇಗಾಸ್‌ಅನ್ನು ನೋಡದಿದ್ದರೆ, ಈ ದೇಶದ ಸಂಪೂರ್ಣ ಪರಿಚಯವನ್ನು ಪಡೆಯಲಾರರು.

ಕಣ್ಣುಕುಕ್ಕುವ ನಗರಿಯನ್ನು ಪ್ರವೇಶಿಸಿ ನಾವು ಮೊದಲೇ ಕಾದಿರಿಸಿದ್ದ ಕೊಠಡಿಗಳ ಸುವಿಖ್ಯಾತ ಹೋಟೆಲ್ ಫ್ಲೆಮಿಂಗೊವನ್ನು ಹೊಕ್ಕೆವು. ರಾತ್ರಿ ಎಂಟರ ಸಮಯವಿರಬೇಕು. ಬಹಳ ವಿಸ್ತಾರವಾದ ಮತ್ತು ಅತ್ಯಂತ ಆಯಕಟ್ಟಿನಲ್ಲಿರುವ ಈ ಹೋಟೆಲು ಪ್ರಾರಂಭವಾದದ್ದು ಲಾಸ್ ವೇಗಾಸ್‌ನ ಹುಟ್ಟಿನ ಜೊತೆಯಲ್ಲೇ. ಆದರೆ ಅದೆಷ್ಟು ಸಲ

ಆಧುನಿಕೀಕರಣದ ಕಾಯಕಲ್ಪ ಇದಕ್ಕಾಗಿದೆಯೋ. ನಮ್ಮ ಸಾಮಾನುಗಳನ್ನು ರೂಮುಗಳಲ್ಲಿ ಎಸೆದು ಕ್ಯಾಮರಾ, ವಿಡಿಯೋ ಹ್ಯಾಂಡ್ ಕ್ಯಾಂ ಅನ್ನು ಹೆಗಲಿಗೇರಿಸಿಕೊಂಡು ಹೊರಟೆವು. ಲಾಸ್ ವೇಗಾಸ್‌ಅನ್ನು ಪೂರ್ತಿ ನೋಡಿ ಅನುಭವಿಸಬೇಕಾದರೆ ಕನಿಷ್ಠ ಐದಾರು ದಿನಗಳು (ಅಲ್ಲ, ರಾತ್ರಿಗಳು) ಬೇಕೇಬೇಕು. ಜೊತೆಗೇ, ನಿಮ್ಮ ಸೂಟ್‌ಕೇಸ್‌ನಂಥ ಹತ್ತು ಸೂಟ್‌ಕೇಸು ತುಂಬಾ ಕಾಂಚಾಣ ಝಣಝಣಿಸುತ್ತಿರಬೇಕು. ಮೊದಲು ಫ್ಲೆಮಿಂಗೊದ ಕಸಿನೋದಲ್ಲಿ ನಮ್ಮ ಯೋಗ್ಯತಾನುಸಾರ (ಅಂದರೆ ಐವತ್ತು-ನೂರು ಡಾಲರುಗಳ ಒಳಗೆ) ಜೂಜನ್ನು ಆಡಿದೆವು. ಆಮೇಲೆ ಬೆಲಾಜಿಯೋ ಎಂಬ ಇಟಲಿ ಮೂಲದ ಮತ್ತೊಂದು ಮಯ ನಿರ್ಮಿತ ಮಾಯಾ ಭವನವನ್ನು ವೀಕ್ಷಿಸಿದೆವು. ಅದರೆದುರು ಇರುವ ಕಾರಂಜಿಯ ಬೃಹತ್ ಕೊಳದ ಬಳಿ ಕುಳಿತು ಲಾಸ್ ವೇಗಾಸ್‌ನ ವಿದ್ಯುದುನ್ಮಾದವನ್ನು ನೋಡಿ ನಲಿಯುವುದೇ ಒಂದು ವಿಶಿಷ್ಟವಾದ ಅನುಭವ. ಆಮೇಲೆ ಸೀಸರ್ಸ್ ಪ್ಯಾಲೆಸ್‌ಗೆ ದಾಳಿಯಿಟ್ಟೆವು. ಪ್ರತಿಯೊಂದು ದ್ಯೂತ ಭವನದ ಒಳ ಹೊರಗೆ ಫೋಟೋಗಳ ಹಿಡಿಸುವಿಕೆ, ವಿಡಿಯೊ ರೆಕಾರ್ಡಿಂಗ್ ತಪ್ಪದೆ ಸಾಗಿತ್ತು. ಸೀಸರ್ಸ್ ಪ್ಯಾಲೆಸ್‌ನಲ್ಲಿ, ಪ್ರಾಚೀನ ಕಾಲದ ರೋಮನ್ ವೈಭವವೇ ಮೈತಳೆದಂತೆ ಪುತ್ಥಳಿಗಳು, ಸ್ತಂಭಗಳು, ಅಲಂಕೃತಗೊಂಡ ಗೋಡೆಗಳು ಕಣ್ಸೆಳೆದಿದ್ದವು. ಹೀಗೆಯೇ, ಇನ್ನೂ ಎರಡು ಮೂರು ಕಸಿನೋಗಳ ದರ್ಶನವಾಯಿತು. ಎಲ್ಲೆಲ್ಲೂ ವಿವಿಧ ವೇಷದ, ಭಾಷೆಯ, ಬಣ್ಣದ ಜನ. ಎಲ್ಲರಲ್ಲೂ ಏನೋ ಉಮೇದು, ಲವಲವಿಕೆ, ಕಿಲಕಿಲ; ತಿನ್ನುವ, ಕುಡಿಯುವ, ಜೂಜಾಡುವ ಚಪಲ. ಜೊತೆಗೇ, ಕೆಲವು ಕಸಿನೋಗಳ ಎದುರು ಕಡಲ್ಗಳ್ಳರನ್ನು ಆಧರಿಸಿದ ನಾಟಕಾಭಿನಯ, ಜ್ವಲಂತ ಜ್ವಾಲಾಮುಖಿಯ ಅಗ್ನಿಸ್ಫೋಟ. ಇನ್ನು ಕೆಲವೆಡೆ ಕ್ರಿಶ್ಚಿಯನ್ನರಂತೆಯೋ ಪ್ರಾಚೀನ ಈಜಿಪ್ಟ್, ರೋಮನ್, ಗ್ರೀಕ್‌ರಂತೆಯೋ, ರೆಡ್ ಇಂಡಿಯನ್‌ರಂತೆಯೋ ವೇಷ ತೊಟ್ಟ ವಧೂವರರ ನೂರಾರು ಜೋಡಿಗಳು. ಮದುವೆಯಾಗಲೆಂದೇ ಲಕ್ಷಾಂತರ ಡಾಲರ್ ವೆಚ್ಚ ಮಾಡಿ ದೂರದ ರಾಷ್ಟ್ರಗಳಿಂದ ಇಲ್ಲಿಗೆ ಬಂದಿರುತ್ತಾರೆ. ಆಯಾ ಧರ್ಮ, ಜನಾಂಗದ ಪ್ರಕಾರ ಮದುವೆ ಮಾಡಿಸುವ ಸಂಸ್ಥೆಗಳೂ ಇಲ್ಲಿವೆ. ಐದು ನಿಮಿಷದ ಕಿರು ಅವಧಿಯಲ್ಲಿ ಅತ್ಯಂತ ಬೆಲೆ ಬಾಳುವ ಇಪ್ಪತ್ತೆಂಟು ಲಿಮೋಸಿನ್ ಲಂಬೋದರ ಕಾರುಗಳನ್ನು ನಿಸಾರರು ಎಣಿಸಿ, 'It is simply unbelievable!' ಎಂದು ಉದ್ಗರಿಸಿದ್ದು ನೆನಪಾಗುತ್ತಿದೆ. ಒಂದು ಕಸಿನೋ ದ್ವಾರದಲ್ಲಿ ಇಬ್ಬರು ಅರೆ ನಗ್ನ ಸುಂದರಿಯರು ನಿಸಾರರ ಅಕ್ಕಪಕ್ಕ ನಿಂತು ಫೋಟೋ ಹಿಡಿಸಿಕೊಂಡಿದ್ದಂತೂ ನಮಗೆಲ್ಲಾ ವಿನೋದದ ವಿಷಯವಾಗಿತ್ತು. ಆ ಹೆಣ್ಣುಗಳು ಯಾವುದೇ ನಾಚಿಕೆ ಹಿಂಜರಿಕೆಯಿಲ್ಲದೆ ನಿಸಾರರನ್ನು ಚುಂಬಿಸಿ ನಕ್ಕ ಫೋಟೋವನ್ನು ಕ್ಲಿಕ್ಕಿಸಿದಾಗ, 'ನಿಮ್ಮ ಹೆಂಡತಿಗೆ ಈ ಫೋಟೋವನ್ನು ಪೋಸ್ಟ್ ಮಾಡ್ತೇವೆ. ಮುಂದೆ ನಿಮಗೆ ಕಾದಿದೆ ಹಬ್ಬ' ಎಂದು ವಲ್ಲೀಶ ಶಾಸ್ತ್ರಿ ಮತ್ತು ಅವರ ಪತ್ನಿ ವಿದ್ಯಾ ಛೇಡಿಸಿದ್ದು, ನಿಸಾರರ ಮುಖದ ನೀರಿಳಿದಿದ್ದು ಇನ್ನೂ ನೆನಪಿನಲ್ಲಿ ಹಚ್ಚಗಿದೆ. ಈ ಹೊತ್ತಿಗೆ ರಾತ್ರಿ ಹನ್ನೆರಡಾಗಿತ್ತು. ಅಲೆದಾಡಿ ನಮಗೆಲ್ಲಾ ಸುಸ್ತಾಗಿ ನಿದ್ದೆ ಬರಲು ಶುರುವಾಗಿತ್ತು. ಜೊತೆಗೇ ದೀರ್ಘ ಕಾರು ಪ್ರಯಾಣದ ಆಯಾಸ ಬೇರೆ. ನಾವು ನಾಲ್ಕು ಜನ ಹೆಂಗಸರು ಮತ್ತು ನಾಗರಾಜ ಹವಾಲ್ದಾರ್ ಹೋಟೆಲ್ ರೂಂ ಸೇರಿ ನಿದ್ದೆಗೆ ಅಣಿಯಾಗುತ್ತಿರಬೇಕಾದರೆ, ನಿಸಾರರು.

'ಶಾಸ್ತ್ರಿ, ಮತ್ತೆ ಇಲ್ಲಿಗೆ ನಾನು ಬರುತ್ತೇನೋ ಇಲ್ಲವೋ. ನಾನು ನೋಡಿದ್ದು ಅತ್ಯಲ್ಪ. ಇನ್ನೂ ಎಷ್ಟೋ ಸ್ಥಳಗಳನ್ನು ನೋಡುವುದಿದೆ. ನನ್ನ ಜೊತೆಗೆ ಬನ್ನಿ. ವಿಡಿಯೋ ಕ್ಯಾಮೆರಾ ಹೆಗಲಿಗೇರಿಸಿ ಸಿದ್ಧವಾಗಿ' ಎಂದರು. ಮೇಷ್ಟರ ಮಾತಿಗೆ ಎದುರು ಹೇಳದೆ, 'ಓಕೆ ಸಾರ್! ನಾನು ರೆಡಿ. ನಾನು ಅನೇಕ ಸಲ ಇಲ್ಲಿ ಬಂದಿದ್ದೇನೆ. ನಿಮಗೆ ಹೊಸದು. ನಿಮಗೋಸ್ಕರ ಬರುತ್ತೇನೆ ನಡೆಯಿರಿ' ಎಂದು ಇಬ್ಬರೂ ಹೊರಗೆ ನಡೆದವರು, ಬೆಳಗಿನ ಝಾವ ಮರಳಿದರು. ಅದೇನು ನಿದ್ದೆ ಮಾಡಿದರೋ ಏನು ಕಥೆಯೋ, ಬೇಗ ಎದ್ದು ಬೆಳಗಿನ ಉಪಾಹಾರಕ್ಕಾಗಿ ಮತ್ತೊಂದು ಅನುಪಮವಾದ ಹೋಟೆಲ್ ಮತ್ತು ಕಸಿನೋ ಹೆಸರಿನ ನಿರ್ಮಿತಿಯಾದ ಲಕ್ಸಾರ್ (Luxor) ಹೊಕ್ಕೆವು. ಈಜಿಪ್ಟ್‌ಗೆ ಪ್ರವಾಸ ಹೋಗಿ ಪ್ರಾಚೀನ ಶಿಲ್ಪಗಳಾದ ಸ್ಫಿಂಕ್ಸ್ ಮತ್ತಿತರ ಕಲಾಕೃತಿಗಳ ಎದುರು ನಿಂತಿದ್ದೆವೆಯೋ ಎನ್ನಿಸಿತ್ತು. ಜೊತೆಗೆ ಈಜಿಪ್ಟ್‌ನ ಪಿರಮಿಡ್ಡನ್ನು ತದ್ವತ್ ಹೋಲುವ ಆಕಾರದ ಕಟ್ಟಡದ ಒಳಗಿನ ವೈಭವವನ್ನು ಬಣ್ಣಿಸಲು ಮಾತುಗಳು ಸಾಲವು. ಅಲ್ಲಿ ನಿಸಾರರಿಗೆ ಅಪರೂಪವಾದ ಉಪಾಹಾರವನ್ನು ಕೊಡಿಸಿದೆ. ತುಂಬಾ ಸಂತೃಪ್ತಿಯಿಂದ ಸವಿದರು. ರಾತ್ರಿಯಿಡೀ ಓಡಾಡಿದ್ದೂ ಸಹ ಹಸಿವನ್ನು ಹೆಚ್ಚಿಸಿರಬೇಕು—ಚೂರನ್ನೂ ಬಿಡದೆ ತಿಂದು ಮುಗಿಸಿದರು. ಅಲ್ಲಿಂದ ಅಕ್ಕಪಕ್ಕದ ವಿವಿಧ ಆಕಾರದ ವೈಭವಯುತ ಹೋಟೆಲುಗಳನ್ನು ವೀಕ್ಷಿಸಿ, ಲಾಸ್ ವೇಗಾಸ್‌ನ ಅತ್ಯದ್ಭುತ ನೋಟಗಳನ್ನು ನೆನೆದು ಪ್ರಶಂಸಿಸುತ್ತಾ ಹೂವರ್ ಅಣೆಕಟ್ಟನ್ನು ನೋಡಲು ಕಾರನ್ನೇರಿದೆವು. 'ಲಕ್ಷ್ಮಿ ಅವರೆ, ಲಾಸ್ ವೇಗಾಸ್‌ಅನ್ನು ಹಾಲಿವುಡ್‌ನ ಚಲಚ್ಚಿತ್ರಗಳಲ್ಲಿ, ಒಂದೆರಡು ಬಾರಿ ಟಿ.ವಿ.ಯಲ್ಲಿ ಮಾತ್ರ ನೋಡಿದ್ದೆ. ನಿಮ್ಮ ಮತ್ತು ಕೃಷ್ಣಮೂರ್ತಿಗಳ ಕೃಪೆಯಿಂದ ಪ್ರತ್ಯಕ್ಷವಾಗಿ ಕಂಡು ಅನುಭವಿಸಿದಂತಾಯಿತು. ಈ ಪ್ರವಾಸದಲ್ಲಿ ನನಗೆ ಆದ ಸುಖಾನುಭವವನ್ನು ನಾನು ಎಂದಿಗೂ ಮರೆಯುವುದಿಲ್ಲ. ನಿಮ್ಮಿಬ್ಬರಿಗೂ ಅನಂತ ಧನ್ಯವಾದಗಳು' ಎಂದು ನಿಸಾರರು ಭಾವಪರವಶರಾಗಿ ನುಡಿದರು. ನಾನು 'ಹಾಗೇಕೆ ಹೇಳುತ್ತೀರಿ. ನೀವು ನಮ್ಮ ಅತಿಥಿಗಳು. ಇಂಥದ್ದನ್ನು ನೆರವೇರಿಸಬೇಕಾದ್ದು ನಮ್ಮ ಕರ್ತವ್ಯ' ಎಂದೆ. ವಲ್ಲೀಶ ಶಾಸ್ತ್ರಿ, ಕೀಟಲೆಗೆ 'ಏನ್ ಸಾರ್! ನನ್ನನ್ನ ಮರೆತೇಬಿಟ್ರಲ್ಲ. ನಾನು ಯಾವ ಪಾಪ ಮಾಡಿದ್ದೆ? ನೂರಾರು ಮೈಲಿ ಡ್ರೈವ್‌ಮಾಡಿ ಕರೆ ತಂದವನಿಗೆ ಕಾಂಪ್ಲಿಮೆಂಟ್ ಬೇಡವೆ?' ಎಂದು ಛೇಡಿಸಿದಾಗ, ನಿಸಾರರು ಬೇಂದ್ರೆಯವರ ಕವನದ ಸಾಲೊಂದನ್ನು ಉದ್ಧರಿಸುತ್ತ 'ಶಾಸ್ತ್ರಿ! ಈ ಸಾಲಿನ ಅರ್ಥ ತಿಳಿಯಿತೆ? ಲಕ್ಷ್ಮಿ, ಕೃಷ್ಣಮೂರ್ತಿ ಅವರಿಗೆ ಹೇಳಿದ್ದು ನಿಮಗೂ, ವಿದ್ಯಾ ಅವರಿಗೂ ಅನ್ವಯಿಸುತ್ತೆ. ಮೂರ್ತಿಗೆ ಮುಗಿದ ಕೈ, ದೇವಸ್ಥಾನಕ್ಕೂ ಸಲ್ಲುತ್ತೆ' ಎಂದರು. ಶಾಸ್ತ್ರಿ, 'ತಮಾಷೆಗೆ ಅಂದೆ ಸಾರ್' ಎಂದು ಕಾರನ್ನು ಹೂವರ್ ಡ್ಯಾಂ ಬಳಿ ತಂದು ನಿಲ್ಲಿಸಿದರು.

ಹೂವರ್ ಡ್ಯಾಂನ ಸೆಂಟರ್ ಸ್ಪ್ರೆಡ್ ಪುಟದ ವಿವರವಾದ ದೊಡ್ಡ ಬಣ್ಣದ ಫೋಟೋವನ್ನು ನಿಸಾರರು ೧೯೬೧ನೆಯ ಇಸ್ವಿಯಲ್ಲಿ Life ಮ್ಯಾಗಜೈನ್‌ನಲ್ಲಿ ನೋಡಿ, ಅದರ ಬಗೆಗಿನ ಬರವಣಿಗೆಯನ್ನು ಓದಿ, ಆ ಅಣೆಕಟ್ಟಿನ ವೈಶಿಷ್ಟ್ಯಗಳ ಬಗೆಗೆ ವಿಸ್ಮಯಪಟ್ಟಿದ್ದರಂತೆ. ಅದನ್ನೀಗ, ನಲವತ್ತೊಂದು ವರ್ಷಗಳ ಬಳಿಕ ನೋಡುತ್ತಿರುವುದು ಎಂಥ ಅದೃಷ್ಟ ಎಂದು ಉದ್ಗರಿಸಿದರು. ಸುಮಾರು ಅರ್ಧ ಗಂಟೆಯ ಕಾಲದ ಅದರ ಎತ್ತರ,

ಆಳ, ಆಕಾರ, ತಾಂತ್ರಿಕ ಕೌಶಲ ಇತ್ಯಾದಿಗಳನ್ನೂ ಆಸುಪಾಸಿನ ಬೋಳು ಬೆಟ್ಟಗುಡ್ಡಗಳ ವಿವಿಧ ಭಂಗಿಗಳನ್ನೂ ಮೀಡ್ ಸರೋವರದ ದಿಕ್ಕನ್ನೂ ಅನುಭವಿಸಿದ ಮೇಲೆ ಅಲ್ಲಿಂದ ಮರಳಿದೆವು. ಆರೇಳು ದಶಕಗಳ ಹಿಂದೆ ಇಂತಹ ಇಂಜಿನಿಯರಿಂಗ್ featಅನ್ನು ಮಾಡಿರುವ ತಂತ್ರಜ್ಞರ ಮೇಧಾವಿತನವನ್ನು ಹೊಗಳಿದರು. ಇವೊತ್ತು ಅಷ್ಟೊಂದು ವಿಶೇಷವಾಗಿ ತೋರಿ ಬರದ ಹೂವರ್ ಡ್ಯಾಂ, ಆ ಕಾಲಕ್ಕೆ ಕೋಪೋದ್ರಿಕ್ತ ನದಿಯ ದಿಕ್ಕನ್ನೇ ಬದಲಾಯಿಸಿದ, ಬೆಂಗಾಡನ್ನು ಸಸ್ಯ ಸಮೃದ್ಧಗೊಳಿಸಿದ ಹಾಗೂ ಲಾಸ್ ವೇಗಾಸ್ ಮತ್ತಿತರ ನಗರಗಳನ್ನೇ ನಿರ್ಮಿಸಲು ಕಾರಣವಾದ ಹಾಗೂ ಪ್ರವಾಸೀ ಆಕರ್ಷಣೆಗಳಿಗೆ ನಿಮಿತ್ತವಾಗಿ ಸರಕಾರದ ಬೊಕ್ಕಸವನ್ನು ಕೊಬ್ಬಿಸಿದ ಮಹತ್ಕಾರ್ಯಗಳನ್ನು ಎಸಗಿದ ಸಂಕೇತವಾಗಿ ನಿಮಿರಿ ನಿಂತಿದೆ. ಇಷ್ಟೆಲ್ಲಾ ಉಪಕಾರ ಮಾಡಿದರೂ ಸೌಮ್ಯರೂಪಿಯಾದ ಸಂತನಂತೆ ಗಂಭೀರ ಮೌನಿಯಾಗಿ ನಿಂತಿದೆ. ಅಲ್ಲಿಂದ ಲಾಸ್ ವೇಗಾಸ್ ಊರಿನಲ್ಲಿ ವಾಸವಾಗಿರುವ ನನ್ನ ಬಾಲ್ಯ ಸ್ನೇಹಿತೆ ಮತ್ತು ಸಹಪಾಠಿ ಶಾಂತಾ ರಾವ್ ಮನೆಯಲ್ಲಿ ಮಧ್ಯಾಹ್ನ ನಮ್ಮೆಲ್ಲರಿಗೂ ಮೃಷ್ಟಾನ್ನ ಭೋಜನ ವಾಯಿತು. ಕರ್ನಾಟಕ ಶೈಲಿಯ ಪಲ್ಯ ಪರಿಕರಗಳು, ತಿಳಿ ಸಾರು ಮುಂತಾದವು ಅಮೇರಿಕನ್ ಜಂಕ್ ಫುಡ್ ತಿಂದು ಕರಟಾಗಿದ್ದ ನಾಲಗೆಗೆ ತುಂಬಾ ಆಪ್ಯಾಯಮಾನ ವೆನ್ನಿಸಿದವು. ಅಲ್ಲಿಂದ ಯಥಾಪ್ರಕಾರ ಹರಟೆ ಹೊಡೆಯುತ್ತ ರಾತ್ರಿಯ ವೇಳೆಗೆ ಮನೆ ತಲಪಿದೆವು. ನಿಸಾರ್ ಅಹಮದ್ ಅವರು ಮಾರನೆಯ ದಿವಸ ಬೆಳಿಗ್ಗೆ ಆರಿಜೋನಾ ರಾಜ್ಯದ ಫೀನಿಕ್ಸ್ ಪಟ್ಟಣಕ್ಕೆ ವಿ. ಸೀತಾರಾಮಯ್ಯನವರ ಅತಿಥಿಗಳಾಗಿ ಹೋಗಬೇಕಿತ್ತು. ಏಕೆಂದರೆ, ನಾಳೆ ಸಂಜೆ ಅಲ್ಲಿನ ಕನ್ನಡ ಕೂಟದಲ್ಲಿ ಅವರ ಭಾಷಣ, ಸನ್ಮಾನಗಳಿದ್ದವು. ಆದ್ದರಿಂದ ಬೇಗ ಎದ್ದು ಅವರಿಗೆ ಲಘು ಉಪಾಹಾರ ನೀಡಿ ಲಾಸ್ ಆಂಜಲಿಸ್ ಏರ್‌ಪೋರ್ಟಿಗೆ ನಾನು ಕೃಷ್ಣಮೂರ್ತಿಗಳೊಂದಿಗೆ ಡ್ರೈವ್‌ಮಾಡಿ ಕರೆದೊಯ್ದೆ. ನಮ್ಮ ಮನೆಯನ್ನು ಬಿಡುವಾಗ ಅವರ ಹೃದಯ ಭಾರವಾದಂತೆ ಭಾಸವಾಗಿತ್ತು. ಹೆಚ್ಚು ಮಾತಾಡಲಿಲ್ಲ. ಹೊಸ್ತಿಲ ಬಳಿ ಬಂದಾಗ ಮತ್ತೆ ಹಿಂದೆ ಬಂದು ನಮ್ಮ ಪ್ರೀತಿಯ ನಾಯಿ 'ಪೀಟಿ'ಯನ್ನು ಮುದ್ದು ಮಾಡಲು ಮರೆಯಲಿಲ್ಲ!

ಏರ್‌ಪೋರ್ಟ್‌ನಲ್ಲಿ ನಿಸಾರರು ಎಷ್ಟೇ ಬೇಡವೆಂದರೂ ಕೇಳದೆ ನಾನು ಅವರಿಗೆ ಸ್ಯಾಂಡ್‌ವಿಚ್ ಮತ್ತು ಅವರ ಪರಿಚಯವಾದಾಗ ಡೆಟ್ರಾಯಿಟ್‌ನಲ್ಲಿ ಮೊಟ್ಟಮೊದಲನೆಯ ಸಲ ರುಚಿ ತೋರಿಸಿದ್ದ ಮಫಿನ್ ಕೊಡಿಸಿದೆ. ಅವರ ಮುಖದಲ್ಲಿ ಮುಗುಳ್ನಗೆ ತೇಲಿತ್ತು. ಆದರೆ ಈ ಸಲ ನನ್ನನ್ನು 'ಮಫ್‌ಗಳು ಮೆಲ್ಲುವ ಮಫಿನ್ ಅನ್ನು...' ಎಂಬ ಮೊದಲಿಕೆಯ ವಾಕ್ಯದಿಂದ ಹಂಗಿಸಲಿಲ್ಲ. ವಿಶೇಷ ಅನುಮತಿ ಪಡೆದು ಕೊನೆಯ ಗೇಟ್‌ವರೆಗೂ ಹೋಗಿ ಅವರು ವಿಮಾನದ ಬಳಿ ಹೋಗುವವರೆಗೂ ನಿಂತಿದ್ದು, ಬೀಳ್ಕೊಟ್ಟು ಬಂದೆ. ಅವರು ಅಲ್ಲಿಂದಲೇ ಕೈ ಬೀಸಿದರು. ನಾನೂ ಕೃಷ್ಣಮೂರ್ತಿಗಳೂ ಮರಳಿದಾಗ ಮನೆ ಬಿಕೋ ಎನ್ನಿಸುತ್ತಿತ್ತು. ನಮಗೆ ತುಂಬಾ ಮೆಚ್ಚಿಕೆಯಾಗಿರುವ ನಿಸಾರ್ ಅವರ ಕವನಗಳಲ್ಲಿ ಒಂದಾದ 'ಮತ್ತದೇ ಬೇಸರ' ಪದೇ ಪದೇ ನೆನಪಿಗೆ ಬಂದು ಮನಸ್ಸನ್ನು ಕಾಡಿತ್ತು.



ನನ್ನ ಮೆಚ್ಚಿನ ಮೇಷ್ಟ್ರ ಮತ್ತು ಸೂಟುಧಾರಿ ಕವಿ

♦ ಡಾ. ಸುರೇಶ್ ರಾಮಚಂದ್ರ
ಪೊಟೊಮ್ಯಾಕ್ (ಮೇರಿಲ್ಯಾಂಡ್ ಪ್ರಾಂತ್ಯ)

೧೯೬೮ನೆಯ ಇಸ್ವಿ. ಆಗಿನ್ನೂ ನಾನು ಹೈಸ್ಕೂಲು ವಿದ್ಯಾರ್ಥಿ. ಬೆಂಗಳೂರಿನ ನಮ್ಮ ಮನೆಯ ಸಮೀಪದಲ್ಲಿ ಕನ್ನಡ ರಾಜ್ಯೋತ್ಸವದ ಸಲುವಾಗಿ ಮೈಸೂರು ಅನಂತಸ್ವಾಮಿ ಯವರಿಂದ 'ಕುರಿಗಳು, ಸಾರ್, ಕುರಿಗಳು' ಹಾಡು ಮೂಡಿಬರು ತ್ತಿದೆ. ಅದಾದ ಅನಂತರ 'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ'—ಹೀಗೆ ಒಂದಾದ ಅನಂತರ ಒಂದು ಸುಮಧುರ ಗಾಯನ. ಅನಂತಸ್ವಾಮಿ ಸಾಮಾನ್ಯವಾಗಿ ಹಾಡಿನ ಕವಿಗಳ ಹೆಸರು ಹೇಳುತ್ತಿರಲಿಲ್ಲ. ಕಾರ್ಯಕ್ರಮ ಮುಗಿದ ಮೇಲೆ ನಾನು ಅವರನ್ನೇ ಕೇಳಿದೆ. ಅವರು ಈ ಹಾಡುಗಳನ್ನು ಬರೆದವರು ಕೆ. ಎಸ್. ನಿಸಾರ್ ಅಹಮದ್ ಎಂದು ಹೇಳಿದಾಗ ನನಗೆ ಆಶ್ಚರ್ಯವಾಯಿತು. ಮುಸಲ್ಮಾನ ರಾಗಿ ಇಷ್ಟು ಸೊಗಸಾದ ಕನ್ನಡ ಗೀತೆಗಳನ್ನು ರಚಿಸಿದ್ದಾರೆ ಎಂದು ಸಂತೋಷಪಟ್ಟೆ. ಏಕೆಂದರೆ ನನಗಿದ್ದ ಹೈಸ್ಕೂಲಿನ ಮುಸ್ಲಿಂ ಗೆಳೆಯರ ಕನ್ನಡ ಪ್ರಪಂಚ ತುಂಬಾ ಕಿರಿದಾಗಿತ್ತು. ನನಗೆ ನಿಸಾರ್ ಅವರ ಪರಿಚಯ ಸುಗಮ ಸಂಗೀತದ ಭಾವ ಗಾಯನದಿಂದ ಆದದ್ದು ಹೀಗೆ.

ಹೈಸ್ಕೂಲು ಮುಗಿಸಿ ನಾನು ಸರ್ಕಾರಿ ವಿಜ್ಞಾನ ಕಾಲೇಜು ಸೇರಿದೆ. ಅದು ಆಗಿನ ಕಾಲದಲ್ಲಿ 'ಗ್ಯಾಸ್ ಕಾಲೇಜು' ಎಂದೇ ಪ್ರಸಿದ್ಧಿಯಾಗಿತ್ತು. ವರ್ಷದಲ್ಲಿ ಕನಿಷ್ಠಪಕ್ಷ ಮೂರು ತಿಂಗಳು ವಿದ್ಯಾರ್ಥಿ ಚಳವಳಿ ನಡೆಯುತ್ತಿತ್ತು. ಕಾರಣಗಳೇನೂ

ಬೇಕಾಗಿರಲಿಲ್ಲ. ಸೆಪ್ಟೆಂಬರ್ ತಿಂಗಳನ್ನು 'ಮುಷ್ಕರದ ತಿಂಗಳು' ಎಂದೇ ಪರಿಗಣಿಸಲಾಗಿತ್ತು. ಈ ವಾತಾವರಣದಲ್ಲಿ ಒಂದು ಅತ್ಯಂತ ಒಳ್ಳೆಯ ಸುದ್ದಿ ಎಂದರೆ, ಬಹಳ ಉನ್ನತ ಮಟ್ಟದ ಪ್ರಾಧ್ಯಾಪಕರಿದ್ದದ್ದು. ಅವರಲ್ಲಿ ಕೆಲವರನ್ನು ಇಲ್ಲಿ ನೆನೆಯಬೇಕು. ಕನ್ನಡದಲ್ಲಿ ಜಿ. ಅಶ್ವತ್ಥ ನಾರಾಯಣ, ಇಂಗ್ಲಿಷ್‌ನಲ್ಲಿ ಶಂಕರ ಸ್ವಾಮಿ, ಪ್ರಿನ್ಸಿಪಾಲರಾದ ಪ್ರೊ. ಓ. ಪಿ. ಇಸ್ರೇಲ್ ಮತ್ತು ರಸಾಯನ ವಿಭಾಗದ ಪ್ರೊ. ಮೂಡಲ ಗಿರಿಯಪ್ಪನವರು ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾದವರು. ನಾನು ಕಾಲೇಜಿನಲ್ಲಿ ಮುಖ್ಯ ವಿಷಯವಾಗಿ ಭೂ ವಿಜ್ಞಾನವನ್ನು ಆರಿಸಿ ಕೊಂಡಿದ್ದೆ. ಪ್ರೊ. ಮೊಹಮ್ಮದ್ ಖಾನ್ ಎಂಬ ಹಿರಿಯರು ವಿಭಾಗದ ಮುಖ್ಯಸ್ಥ ರಾಗಿದ್ದರು. ಇವರು ಒಳ್ಳೆಯ ಶಿಸ್ತಿನ ಮನುಷ್ಯ ಹಾಗೂ ಒಳ್ಳೆಯ ಅಧ್ಯಾಪಕರು. ಈ ವಿಭಾಗದಲ್ಲೇ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅಧ್ಯಾಪಕರಾಗಿದ್ದರು. ನಿಸಾರರೊಂದಿಗೆ ನನ್ನ ಮೊದಲನೆಯ ಭೇಟಿ: ಕನ್ನಡದ ಕವಿಯೆಂದು ಪ್ರಖ್ಯಾತರಾಗಿರುವ ನಿಸಾರರನ್ನು ನಾನು ಕಲ್ಪಿಸಿಕೊಂಡಿದ್ದು ಪಂಚೆ ಅಥವಾ ಪಾಯಜಾಮ ಮತ್ತು ಜುಬ್ಬಾಧಾರಿಯಾಗಿ; ಹೆಗಲಿನಲ್ಲೊಂದು ಬ್ಯಾಗು ಹಾಕಿಕೊಂಡ ವ್ಯಕ್ತಿಯಾಗಿ. ಆದರೆ ನನ್ನ ನಿರೀಕ್ಷೆ ಪೂರ್ತಿ ಸುಳ್ಳಾಗಿತ್ತು. ಮೊದಲನೆಯ ದಿನ ನಿಸಾರ್ ಅಹಮದ್ ಅವರನ್ನು ತರಗತಿಯಲ್ಲಿ ನೋಡಿದ್ದು ಸೂಟುಧಾರಿಯಾಗಿ. ಯಾವಾಗಲೂ ಸೂಟಿನಲ್ಲೇ ಮಿಂಚುತ್ತಿದ್ದ ಇವರು ತುಂಬಾ ಠಾಕು-ಠೀಕಿನ ಮನುಷ್ಯ. ಇವರು ತರಗತಿಯಲ್ಲಿ ಎಂದೂ ನಕ್ಕಿದ್ದು ನನಗೆ ನೆನಪಿಲ್ಲ. ಆದರೆ ಶಿಲಾಶಾಸ್ತ್ರದ ಪಾಠವನ್ನು ಚೆನ್ನಾಗಿ ಮಾಡಿ ನಿರರ್ಗಳವಾಗಿ ನೋಟ್ಸ್ ಕೊಡುತ್ತಿದ್ದರು. ಹೀಗೆ, ಮೂರು ವರ್ಷಗಳ ಕಾಲ (೧೯೭೨-೭೫) ಅವರನ್ನು ಸಮೀಪದಿಂದ ನೋಡಿ ಮಾತಾಡುವ ಅವಕಾಶ ನನಗೆ ಸಿಕ್ಕಿತ್ತು. ಈ ಸಮಯದಲ್ಲಿ ಅವರಿಂದ ನಾನು ಕನ್ನಡ ಕಲಿಯಲಿಲ್ಲ. ಆದರೆ ಹಲವು ಬಾರಿ ತರಗತಿಯಲ್ಲಿ ಕವಿತೆಗಳು ಮತ್ತು ಕುವೆಂಪು ಅವರ ಬಗ್ಗೆ ಮಾತನಾಡಿದ ನೆನಪಿದೆ. ನಿಸಾರರಿಗೆ ನಮ್ಮಣ್ಣ ನಾಗರಾಜನ ಸ್ನೇಹ ನಿಕಟವಾಗಿ ಇತ್ತು. ಸಂಜೆ ಗಾಂಧಿ ಬಜಾರಿನಲ್ಲಿ ಗೆಳೆಯರ ಗುಂಪು ಸೇರುತ್ತಿತ್ತು, ಎಂದು ಕೇಳಿದ್ದೆ. ಅನಂತಸ್ವಾಮಿಯನ್ನು 'ದೊರೆ' ಎಂದು ಕರೆಯುತ್ತಿದ್ದರು. ನಿಸಾರರಿಗೆ ನಮ್ಮಣ್ಣನ ಹೆಸರು ಹೇಳಿದ ಮೇಲೆ ಅವರು ಸ್ವಲ್ಪ ಸಲಿಗೆಯಿಂದ ಮಾತನಾಡುತ್ತಿದ್ದರು. ಅವರ ಸೂಟುಧಾರಿ ವ್ಯಕ್ತಿತ್ವ ಮಾತ್ರ ಇಂದಿಗೂ ಬದಲಾವಣೆಯಾಗಲಿಲ್ಲ. ನನ್ನ ಮೂರು ವರ್ಷಗಳ ಆಪ್ತ ಸಂಪರ್ಕ ಕಾಲೇಜಿನ ಓದಿನ ಅನಂತರ ಮುಗಿಯಿತು.

ಕಾಲೇಜಿನ ದಿನಗಳಲ್ಲಿ ಕನ್ನಡ ಕವಿತೆಗಳನ್ನು ಓದುವ, ಕೇಳುವ ಅಭ್ಯಾಸವೂ ರೂಢಿ ಆಯಿತು. ಅಂದಿನ ಕಾಲದಲ್ಲಿ ಈಗಿನ ಹಾಗೆ ಧ್ವನಿ ಸುರುಳಿ ಅಥವಾ ಸಿಡಿ ರಾಮ್ (ಹಾಡುವ ತಟ್ಟೆ) ಇರಲಿಲ್ಲ. ಅವುಗಳನ್ನು ಕೇವಲ ರೇಡಿಯೋ ಮತ್ತು ಸಾರ್ವಜನಿಕ ಕಾರ್ಯಕ್ರಮ ಗಳಲ್ಲಿ ಕೇಳಬೇಕಾಗಿತ್ತು. ಪರಿಸ್ಥಿತಿ ಹೀಗಿರುವಾಗ ನಮ್ಮಣ್ಣ ಒಂದು ದಿನ ನನಗೆ 'ನಿತ್ಯೋತ್ಸವ' ಧ್ವನಿ ಸುರುಳಿಯ ಬಿಡುಗಡೆ ಕಾರ್ಯಕ್ರಮದ ವಿಷಯ ತಿಳಿಸಿದ. ಹೀಗೆ ೧೯೭೮ರಲ್ಲಿ ಕನ್ನಡದ ಪ್ರಪ್ರಥಮ ಧ್ವನಿ ಸುರುಳಿ 'ನಿತ್ಯೋತ್ಸವ'ದ ಬಿಡುಗಡೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕಲಾಪೂರ್ಣವಾಗಿ ನಡೆಯಿತು. ಶ್ರೀ ಮೈಸೂರು ಅನಂತಸ್ವಾಮಿಯವರು ಕೆಲವು ಗೀತೆಗಳನ್ನು ಹಾಡಿದ ಅನಂತರ ಕನ್ನಡದಲ್ಲಿ ಇತಿಹಾಸ

ಸೃಷ್ಟಿಸಲಿದ್ದ ಧ್ವನಿ ಸುರುಳಿ ಬಿಡುಗಡೆಯಾಯಿತು. ಇಂದಿಗೂ ಅದು ಕನ್ನಡದ ಧ್ವನಿ ಸುರುಳಿಗಳಲ್ಲೇ ಅತಿ ಹೆಚ್ಚಿನ ಜನರ ಮೆಚ್ಚುಗೆ, ಅಭಿಮಾನಕ್ಕೆ ಪಾತ್ರವಾಗಿದೆ.

ಗ್ಯಾಸ್ ಕಾಲೇಜಿನ ವ್ಯಾಸಂಗದ ಬಳಿಕ ನಾನು ಸೆಂಟ್ರಲ್ ಕಾಲೇಜಿಗೆ ಸೇರಿ ಓದು ಮುಂದುವರಿಸಿದೆ. ಅಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಸಂಶೋಧನೆ ಮಾಡುತ್ತಿದ್ದ ಕಾಲದಲ್ಲಿ ನನ್ನ ಗೆಳೆಯ ಪ್ರೊ. ನಾಗರಾಜ್ ಅವರ ಬಳಿ ಟೇಪ್ ರೆಕಾರ್ಡರ್ ಇದ್ದಿದ್ದರಿಂದ, ಅನೇಕ ಧ್ವನಿ ಸುರುಳಿಗಳ ಹಾಡುಗಳನ್ನು ಕೇಳುವ ಅವಕಾಶ ದೊರೆಯಿತು. ಅದರಲ್ಲಿ ನನ್ನ ನೆಚ್ಚಿನ ಗೀತೆ ನಿಸಾರ್ ವಿರಚಿತ 'ಮತ್ತದೇ ಬೇಸರ, ಅದೇ ಸಂಜೆ, ಅದೇ ಏಕಾಂತ' ಸಹ ಒಂದು. ರತ್ನಮಾಲಾ ಪ್ರಕಾಶ್ ಅವರ ಧ್ವನಿಯಲ್ಲಿ ಹಾಡಿದ ಈ ಮಧುರ ಗೀತೆ ಯಾವ ಕಾಲಕ್ಕೂ ಶ್ರೇಷ್ಠವೇ ಸರಿ. ಅನೇಕ ಬಾರಿ ನನಗೆ 'ಈ ಗೀತೆಯನ್ನು ಬರೆದಾಗ ಕವಿಯ ಮನದಲ್ಲಿ ಅನುಭವ ಏನಿದ್ದಿರಬಹುದು?' ಎಂಬ ಆಲೋಚನೆ ಮೂಡುತ್ತಿತ್ತು. ಈ ಪ್ರಶ್ನೆಗೆ ಉತ್ತರ ಸಿಗಲು ಅನೇಕ ವರ್ಷಗಳೇ ನಾನು ಕಾಯಬೇಕಾಯಿತು.

ನಾನು ಬೆಂಗಳೂರನ್ನು ಬಿಟ್ಟು ಅಮೇರಿಕಾಗೆ ಬಂದಿದ್ದು ೧೯೮೩ರ ಜನವರಿಯಲ್ಲಿ. ನಾನು ಅಮೇರಿಕಾಗೆ ಬಂದಾಗ ತಂದ ಕೆಲವೇ ಅಮೂಲ್ಯ ವಸ್ತುಗಳಲ್ಲಿ 'ನಿತ್ಯೋತ್ಸವ' ಧ್ವನಿ ಸುರುಳಿಯೂ ಒಂದು. ಈ ಮಧ್ಯೆ ಅನೇಕ ಬಾರಿ ಬೆಂಗಳೂರಿಗೆ ಹೋಗಿ ಬಂದರೂ ನಿಸಾರರನ್ನು ಭೇಟಿಯಾಗಲು ಅವಕಾಶವಾಗಲಿಲ್ಲ. ೧೯೮೭ರಲ್ಲಿ ಶ್ರೀ ಮೈಸೂರು ಅನಂತ ಸ್ವಾಮಿಯವರು ಅಮೇರಿಕಾ ಪ್ರವಾಸ ಕೈಗೊಂಡು, ಅಮೇರಿಕಾದ ರಾಜಧಾನಿ ವಾಷಿಂಗ್ಟನ್‌ನಲ್ಲಿ ಹಾಡುಗಾರಿಕೆಯ ಕಾರ್ಯಕ್ರಮವನ್ನು ಕೊಟ್ಟಾಗ ಮತ್ತೆ ಸುಗಮ ಸಂಗೀತದ ಸವಿಯನ್ನು ಅನುಭವಿಸುವ ಅವಕಾಶ ಸಿಕ್ಕಿತು. ಆಗ ನಿಸಾರರ ಬಗ್ಗೆ ವಿಚಾರಿಸಿದೆ. ಈ ಸಮಯದಲ್ಲಿ 'ಭಾವ ಸಂಗಮ' ಎಂಬ ಮತ್ತೊಂದು ಧ್ವನಿ ಸುರುಳಿಯ ಮೂಲಕ ನಿಸಾರರ ಕೆಲವು ಗೀತೆಗಳನ್ನು ಕೇಳುವ ಅವಕಾಶ ದೊರೆಯಿತು. 'ಬೆಣ್ಣೆ ಕದ್ದ ನಮ್ಮ ಕೃಷ್ಣ' ಎಂಬ ನಿಸಾರರ ಗೀತೆ ಅನಂತಸ್ವಾಮಿಯವರ ಮಧುರ ಕಂಠದಿಂದ ಎಲ್ಲರನ್ನೂ ಆಕರ್ಷಿಸಿತ್ತು.

ನಿಸಾರರ ಭೇಟಿಯಾಗಿದ್ದು ಮತ್ತೆ ೨೦೦೩ರಲ್ಲಿ. ೨ನೆಯ ವಿಶ್ವಕನ್ನಡ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಅವರು ಬರಲಿದ್ದಾರೆ ಎಂಬ ವಿಷಯ ತಿಳಿದು ಬಹಳ ಸಂತೋಷವಾಯಿತು. ನಾನು, ನನ್ನ ಸಂಸಾರ ಸಮೇತ ಡೆಟ್ರಾಯಿಟ್ ನಗರದ ಸಮ್ಮೇಳನಕ್ಕೆ ಹೊರಟೆ. ಆಗಸ್ಟ್ ಶನಿವಾರ ರಂಗದ ಮೇಲೆ ಅವರ ಭಾಷಣ ಕೇಳಿ ಹೆಮ್ಮೆಯಾಯಿತು. ಕಾರ್ಯಕ್ರಮದ ನಂತರ ಭೇಟಿ ಮಾಡಿ ನಿಮಗೆ ನನ್ನ ನೆನಪಿದೆಯೇ ಎಂದು ಕೇಳಿದೆ. ಅವರು 'ಇಲ್ಲಪ್ಪಾ, ಜ್ಞಾಪಕಕ್ಕೆ ಬರುತ್ತಿಲ್ಲ' ಎಂದಾಗ 'ನಾನು 'ಚಿಕ್ಕ' (ನಾಗರಾಜ)ನ ತಮ್ಮ ಸಾರ್' ಎಂದಾಗ ಅವರ ಮುಖ ಅರಳಿ, 'ಅಯ್ಯೋ ನನ್ನನ್ನು ಕ್ಷಮಿಸಿಬಿಡಪ್ಪಾ, ನಿನ್ನ ಜ್ಞಾಪಕಶಕ್ತಿ ಚೆನ್ನಾಗಿದೆ. ಆದರೆ ನಾನು ಅನೇಕ ವರ್ಷಗಳ ಕಾಲ ನಿನ್ನನ್ನು ನೋಡಿಲ್ಲ. ಆದ್ದರಿಂದ ತಿಳಿಯಲಿಲ್ಲ' ಎಂದರು. ಅನಂತರ ೩೦ ನಿಮಿಷ ಹರಟೆ ಹೊಡೆದು, 'ನೀವು ಹಿಂದಿನ ಹಾಗೆಯೇ ಇನ್ನೂ ಸೂಟಿನಲ್ಲಿದ್ದೀರಿ—ಸಾರ್' ಎಂದೆ. ಅವರ ಪ್ರವಾಸದ ನಡುವೆ ವಾಷಿಂಗ್ಟನ್‌ಗೆ ಬರಲು ಆಹ್ವಾನ ನೀಡಿದೆ.

ಆಮೇಲೆ ಒಂದು ತಿಂಗಳ ಬಳಿಕ ವಾಷಿಂಗ್ಟನ್‌ಗೆ ಮೇಷ್ಟ್ರು ಬಂದು ನನ್ನ ಮನೆಯಲ್ಲಿ ಒಂದು ವಾರ ಇದ್ದರು. ನಮ್ಮ ಮನೆಯಲ್ಲಿದ್ದಾಗ ಚೆನ್ನಾಗಿ ಹರಟೆ ಹೊಡೆದೆವು. ಕೊನೆಗೂ ನನ್ನ ಹಳೆಯ ಪ್ರಶ್ನೆಗೆ ಉತ್ತರ ದೊರೆಯಿತು. 'ಮತ್ತದೇ ಬೇಸರ' ಅವರು ಬೆಂಗಳೂರಿಂದ ದೂರದ ಶಿವಮೊಗ್ಗದಲ್ಲಿ ಒಬ್ಬರೇ ಇದ್ದಾಗ ತುಂಬ ಬೇಸರವಾಗುತ್ತಿತ್ತಂತೆ. ಆ ಸಮಯದಲ್ಲಿ ಮನಸ್ಸನ್ನು ಗೆಲವಾಗಿಸಿಕೊಳ್ಳಲು ಬರೆದ ಗೀತೆ ಇದು. ಅವರಿಗೆ ವಾಷಿಂಗ್ಟನ್ ತೋರಿಸಿ ನಮ್ಮ 'ಕಾವೇರಿ ಸಂಘ'ದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿದೆ. ಅಲ್ಲಿ ಅವರ ಗೀತೆಗಳ ಅನಂತರ ಸೊಗಸಾದ ಭಾಷಣ ಮಾಡಿದರು. ನಮ್ಮ ಮನೆಯಲ್ಲಿ ಒಂದು ದಿನ ಅವರ ಗೌರವಾರ್ಥ ಭೋಜನ ಸಮಾರಂಭ ಏರ್ಪಡಿಸಿದ್ದೆ. ಅವರನ್ನು ವಿಮಾನ ಹತ್ತಿಸಿ ಬೀಳ್ಕೊಟ್ಟಾಗ ಇಬ್ಬರ ಹೃದಯ ಭಾರವಾಗಿತ್ತು.

ಮೇಷ್ಟರಿಗೆ ಬಹಳ ಸಂತೋಷವಾದದ್ದು ನಮ್ಮ ಮನೆಯಲ್ಲಿ ನಾನು ಏರ್ಪಡಿಸಿದ್ದ ಅವರ ಉಪನ್ಯಾಸ ಹಾಗೂ ಕವನ ವಾಚನಗಳ ಕಾರ್ಯಕ್ರಮ. ಅದು ಅವರ ಯಾವುದೇ ಸಾರ್ವಜನಿಕ ಕಾರ್ಯಕ್ರಮಕ್ಕಿಂತ ಕಡಿಮೆಯಾಗಿರಲಿಲ್ಲವೆಂದು ಅವರು ಹಲವು ನನಗೆ ಮತ್ತು ನನ್ನ ಮಿತ್ರರಿಗೆ ಹೇಳಿದ್ದುಂಟು. ಅವರ ಅನೇಕ ವರ್ಷಗಳ ಹಂಬಲವಾಗಿದ್ದ ವಾಷಿಂಗ್‌ಟನ್‌ನ ಜಗತ್ಪ್ರಖ್ಯಾತ ಸ್ಮಾರಕಗಳ ದರ್ಶನವನ್ನು ಮಾಡಿಸಿದ ಹೆಮ್ಮೆ ನನ್ನದು. ಸ್ಮಿತ್ಸೋನಿಯನ್ ಕಲಾ ಭವನ, ಅಮೇರಿಕನ್ ಹೆರಿಟೇಜ್ ಪ್ರದರ್ಶನಾಲಯ, ಏರ್ ಅಂಡ್ ಸ್ಪೇಸ್ ಮ್ಯೂಸಿಯಂ, ಕ್ಯಾಪಿಟಲ್ ಕಟ್ಟಡ, ಭವ್ಯೋನ್ನತವಾದ ವಾಷಿಂಗ್ಟನ್, ಜೆಫರ್‌ಸನ್ ಹಾಗೂ ಲಿಂಕನ್ ಸ್ಮಾರಕಗಳನ್ನು ಅವರಿಗೆ ತೋರಿಸಿದೆ. ಅಲ್ಲೆಲ್ಲಾ ಅವರು ಭಾವ ತನ್ಮಯರಾಗಿ ಅವುಗಳನ್ನು ವೀಕ್ಷಿಸುತ್ತ ನಡುವೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಿದ್ದ ಚಿತ್ರ ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದಿದೆ. ಪ್ರಥಮ ಬಾರಿಗೆ ಮೆಟ್ರೊ ಟ್ರೈನ್ ಅಥವ ಸಬ್‌ವೇ ಟ್ರೈನ್ (ಭೂಗತ ರೈಲು)ನಲ್ಲಿ ಅವರನ್ನು ವಾಷಿಂಗ್‌ಟನ್‌ಗೆ ಕರೆದೊಯ್ದಾಗ ಹಾಗೂ ಅದರಲ್ಲಿ ವಾಪಸ್ಸು ಬಂದಾಗ ಅವರು ಪಡುತ್ತಿದ್ದ ಖುಷಿ ಮತ್ತು ವ್ಯಕ್ತಪಡಿಸುತ್ತಿದ್ದ ಮೆಚ್ಚುಗೆಯ ಭಾವ ಮಾತುಗಳಿಗೆ ಮೀರಿದ್ದು. ಹಾಗೆಯೇ, ಅವರನ್ನು ನಾನು ಮೇರಿಲ್ಯಾಂಡ್ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ಒಂದು ರಾತ್ರಿ ಕರೆದುಕೊಂಡು ಹೋದಾಗ ಅಲ್ಲಿನ ಬೃಹತ್ ಕಟ್ಟಡಗಳ ಶ್ರೇಣಿಯನ್ನು ಮತ್ತು ವಸತಿ ಸಮುಚ್ಚಯವನ್ನು ಕಂಡು ವಿಸ್ಮಯದಿಂದ 'ಸುರೇಶ್, ಈ ವಿಶ್ವವಿದ್ಯಾನಿಲಯದ ಆವರಣ ಎಷ್ಟು ಸೊಗಸಾಗಿದೆ. ಇದೇ ಒಂದು ಸುಂದರ ನಗರ ಇದ್ದಹಾಗಿದೆ' ಎಂದು ಉದ್ಗರಿಸಿದ್ದು ಸಹ ಇನ್ನೂ ನನ್ನ ನೆನಪಿನಲ್ಲಿದೆ. ನಮ್ಮ ಮನೆಯಲ್ಲಿ ಇದ್ದಷ್ಟು ದಿನವೂ ನನ್ನ ಮಡದಿ ರೋಹಿಣಿಯೊಂದಿಗೆ, ನನ್ನ ಮಕ್ಕಳಾದ ತೇಜಸ್ ಮತ್ತು ಮಿಥುನ್‌ರೊಂದಿಗೆ ಅವರು ವ್ಯವಹರಿಸುತ್ತಿದ್ದ ಆತ್ಮೀಯ ರೀತಿ ನಮಗೆಲ್ಲ ಸಂತೋಷ ನೀಡಿತ್ತು.

ತರುವಾಯ ಬೆಂಗಳೂರಿಗೆ ಸುಮಾರು 3-4 ಸಲ ಹೋದಾಗ ಅವರನ್ನು ಭೇಟಿ ಮಾಡುವ ಸದವಕಾಶ ದೊರೆಯಿತು. ಒಮ್ಮೆ ಅವರಿಗೆ ಕಾಲೇಜೊಂದರಲ್ಲಿ ಸನ್ಮಾನ ಸಮಾರಂಭ ಏರ್ಪಟ್ಟಿದ್ದಾಗ ಅಲ್ಲಿಗೆ ಹೋಗುವ ಅದೃಷ್ಟವೂ ನನ್ನದಾಗಿತ್ತು. ಅವರನ್ನು ಪ್ರತಿ ಸಲ ಭೇಟಿ ಮಾಡಿದಾಗಲೂ ಅನೇಕ ಹೊಸ ವಿಷಯಗಳನ್ನು ಚರ್ಚೆ ಮಾಡಿ ಲಾಭ

ಪಡೆದಿದ್ದೇನೆ. ನಮ್ಮ ಈ ಗೆಳೆತನ, ಗುರು-ಶಿಷ್ಯ ಪರಂಪರೆ ಹೀಗೆಯೇ ಮಧುರವಾಗಿರಲಿ ಹಾಗೂ ಮುಂದುವರಿಯುತ್ತಿರಲಿ ಎಂದು ಹಾರೈಸುತ್ತೇನೆ. ಇಂತಹ ಕನ್ನಡದ ಅತ್ಯಂತ ಪ್ರತಿಭಾವಂತ ಕವಿ ನನ್ನ ಜೀವನದಲ್ಲಿ ಪರಿಚಯ ಆಗಿದ್ದು ನನ್ನ ಭಾಗ್ಯವೇ ಸರಿ! ನಿಸಾರರು ನೂರು ವರ್ಷ ಕಾಲ ಬಾಳಿ, ಬದುಕಿ ಕನ್ನಡ ಸಾಹಿತ್ಯ ಸೇವೆಯನ್ನು ಮಾಡುತ್ತಾರೆ ಎಂದು ನಂಬಿದ್ದೇನೆ.

ಕೊನೆಯದಾಗಿ ಇನ್ನೊಂದು ಸ್ವಕೀಯ ಸಂಗತಿಯನ್ನು ನಿವೇದಿಸಿ ನನ್ನ ಲೇಖನವನ್ನು ಮುಗಿಸುತ್ತೇನೆ. ನಾನು ಮಾಡಿದ ಒಂದು ಸಂಶೋಧನೆಗೆ ದೊಡ್ಡ ಆರ್ಥಿಕ ಮೊತ್ತದ ಪ್ರತಿಷ್ಠಿತ ಪುರಸ್ಕಾರ ದೊರೆತದ್ದನ್ನು, ವಿಶ್ವಪ್ರಸಿದ್ಧ 'ನಾಸಾ'(Nasa)ಕ್ಕೆ ನನ್ನ ಪರಿಶ್ರಮದ ವೈಜ್ಞಾನಿಕ ವಿಷಯವೊಂದಕ್ಕೆ ಸಲಹೆಗಾರ (Consultant) ಆಗಿರುವುದನ್ನು, ಮತ್ತು ನನ್ನದೇ ಆದ ಸ್ವಂತ ಕಾರ್ಯಾಲಯವನ್ನು ನಡೆಸುತ್ತಿರುವುದನ್ನು ತಿಳಿದು ಮೇಷ್ಟರು ನನ್ನನ್ನು ಹಲವು ಸಲ ಹೃದಯಪೂರ್ವಕವಾಗಿ ಅಭಿನಂದಿಸಿ ಶ್ಲಾಘಿಸಿದ್ದಾರೆ, ಆಶೀರ್ವಾದ ಮಾಡಿದ್ದಾರೆ. ಅವರ ಈ ಉತ್ತೇಜನಕ್ಕೆ ಆಭಾರಿ.

'ಡಾಕ್ಟರ್', 'ಇಂಜಿನಿಯರ್' ಹಾಗೂ ಖಾಸಗಿ ಮತ್ತು ಸರಕಾರಿ ಕಛೇರಿಗಳ ಉದ್ಯೋಗಿಗಳ ಸಂಬಳಾಧಾರಿತ ಜೀತವನ್ನು 'ಸೇವೆ' (Service) ಎಂದು ನಿರ್ದೇಶಿಸುವುದು ಸರ್ವಥಾ ತಪ್ಪು. ಅದೊಂದು ಕರ್ತವ್ಯ (Duty) ಮಾತ್ರ. ಮಾಡುವ ಕೆಲಸಕ್ಕೆ ಪ್ರತಿಯಾಗಿ ಅವರು ಹಣ ಮತ್ತಿತರ ಸೌಲಭ್ಯಗಳನ್ನು ಪಡೆಯುತ್ತಾರೆ. 'ಸೇವೆ' ಎನ್ನುವುದು ನಿಃಸ್ವಾರ್ಥ, ಪವಿತ್ರ ಮತ್ತು ಶ್ರೇಯಸ್ಕರ ಕಾಯಕ. ಅದು ಮಹಾತ್ಮರ ಹುಟ್ಟುಗುಣ. ಅಲ್ಲಿ ಪರೋಪಕಾರಕ್ಕೆ ಮಾತ್ರ ಪರಮ ಪಟ್ಟ. ಗಾಂಧಿ ತೆರೆಸ ವಿನೋಬಾ ಭಾವೆಯಂತಹ ಸೇವಾನಿಷ್ಠರು ತತ್‌ಕ್ಷಣಕ್ಕೆ ಹೊಳೆಯುತ್ತಾರೆ. ಇಂಥವರು ವಿರಳರಾದರೂ ಸಂಖ್ಯೆಯಲ್ಲಿ ಅಗಣ್ಯರೇನಲ್ಲ.

(ಕರ್ತವ್ಯ ಮತ್ತು ಸೇವೆಯ ನಡುವಣ ವ್ಯತ್ಯಾಸ)

✧ ✧ ✧

ಸಂಸ್ಕೃತಿಯ ವಹಿವಾಟು ದ್ವಿಮುಖ ಸಂಚಾರಿ: ಸಂಸ್ಕೃತಿ ಪೋಷಕವಾದ ಸಾಹಿತ್ಯ ಕಲಾದಿಗಳು ಅವುಗಳನ್ನು ಸಾಧಿಸಿಕೊಂಡವರಿಗೆ ಹೇಗೋ ಹಾಗೆಯೇ ಆಸ್ವಾದಿಸುವ ಹೃದಯಸಂಪನ್ನರಿಗೂ ಸಂತೋಷ ನೀಡುತ್ತವೆ.

(ಸಂಸ್ಕೃತಿಯ ಲಾಭ)



ಅತಿಥಿಯಾಗಿ ಬಂದು ಆಪ್ತೇಷ್ಟರಾದವರು

♦ *ಡಾ. ಛಾಯಾ ಗೋಪಾಲನ್*

ಆಗಸ್ಟ್-ಸೆಪ್ಟೆಂಬರ್ ತಿಂಗಳ ೨೦೦೨ರಲ್ಲಿ ಡೆಟ್ರಾಯಿಟ್‌ನಲ್ಲಿ 'ಅಕ್ಕ' ಆಯೋಜಿಸಿದ ವಿಶ್ವ ಕನ್ನಡ ಸಮ್ಮೇಳನಕ್ಕೆ ನಿಸಾರ್ ಅಹಮದ್ ಆಹ್ವಾನಿತರಾಗಿದ್ದರು. ಅವರು ಇಲ್ಲಿ ಸ್ವಲ್ಪ ಹೆಚ್ಚು ಸಮಯ ಉಳಿಯಲಿದ್ದಾರೆ ಎಂಬ ಸುದ್ದಿ ನಮಗೆಲ್ಲಾ ಸಂಭ್ರಮ ತಂದಿತ್ತು. ಹಾಗಾಗಿ ಅವರನ್ನು ಕನ್ನಡ ರಾಜ್ಯೋತ್ಸವದ ಆಚರಣೆಗೂ ಅತಿಥಿ ಭಾಷಣಕಾರರಾಗಿ ಆಹ್ವಾನಿಸಲು ಮಿಸ್ಸೋರಿ ಪ್ರಾಂತದ ಸೆಯಿಂಟ್ ಲೂಯಿಸ್ ನಗರದ ಕನ್ನಡ ಕೂಟದವರು ಉತ್ಸುಕರಾಗಿದ್ದರು. ನಾನು ಆ ಕೂಟದ ಅಧ್ಯಕ್ಷೆ ಆಗಿದ್ದರಿಂದ ನನಗೂ ಅವರನ್ನು ಕರೆಯಲು ತುಂಬ ಆಸೆಯಿತ್ತು. ಕನ್ನಡ ಸಾಹಿತ್ಯಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿರುವ ಅವರನ್ನು ಮುಖ್ಯ ಅತಿಥಿಯಾಗಿ ಬರಮಾಡಿಕೊಳ್ಳುವುದು ನಮಗೆಲ್ಲ ಅತ್ಯಂತ ಸೂಕ್ತವಾಗಿ ಕಂಡಿತ್ತು.

ನಿಸಾರ್ ಅಹಮದ್ ಅವರು ನಮ್ಮ ಮನೆಗೆ ಅತಿಥಿಯಾಗಿ ಬಂದು ನಾಲ್ಕೈದು ದಿವಸ ತಂಗಿದ್ದುದು ನಮಗೆ ಸಂದ ಗೌರವವೆನ್ನಿಸಿದೆ. ಅವರ ಸರಳ ಸ್ವಭಾವ ನಮ್ಮನ್ನೆಲ್ಲಾ ಅಚ್ಚರಿಗೊಳಿಸಿತು. ಅವರು ಬಹಳ ಬೇಗ ನಮ್ಮ ಮನೆಯವರಲ್ಲಿ ಒಬ್ಬರಾಗಿಬಿಟ್ಟರು. ಅಲ್ಲದೆ ಪ್ರತಿಯೊಬ್ಬರನ್ನೂ ಅವರ ಹೆಸರುಗಳಿಂದ ಗುರುತಿಸಲು ಶುರು ಮಾಡಿದರು. ಅವರವರ ವೈಯಕ್ತಿಕ ಆಸಕ್ತಿಗಳ ಬಗ್ಗೆಯೂ ತಿಳಿದುಕೊಂಡು ನಾಲ್ಕು ಉತ್ತೇಜನದ ಮಾತುಗಳನ್ನು ಆಡಿ ಹುರಿದುಂಬಿಸಿದ್ದರು.

ನಿಸಾರ್ ಅಹಮದ್ ಅವರು ಇಲ್ಲಿನ ಬಿಡುವಿಲ್ಲದ, ಎಡೆಬಿಡದ ಕೆಲಸಗಳ ಜೀವನ ಶೈಲಿಯನ್ನು ಬಹಳ ಬೇಗ ಗ್ರಹಿಸಿದರಲ್ಲದೆ, ಅದಕ್ಕೆ ಹೊಂದಿಕೊಂಡು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ನಮಗೆ ನೆರವಾಗಲೂ ಮುಂದಾದರು. ನಾನು ಮಾಡಿದ ಭಕ್ಷ್ಯ ಭೋಜ್ಯಗಳ ಊಟವನ್ನು ಇಷ್ಟಪಟ್ಟರು. ಅವರ ಜೊತೆಗಿನ ಬೌದ್ಧಿಕ ಸಂಭಾಷಣೆಯಲ್ಲಿ ಮಧ್ಯರಾತ್ರಿ ವರೆಗೂ ಎಚ್ಚರವಿದ್ದು ಪಾಲ್ಗೊಳ್ಳುತ್ತಿದ್ದ ನಾವು ಅವರ ಅಪೂರ್ವ ಆಲೋಚನೆಗಳ ನಿಧಿಯನ್ನು ಈಗಲೂ ಜತನದಿಂದ ಕಾಯ್ದುಕೊಂಡಿದ್ದೇವೆ.

ನಿಸಾರ್ ಅಹಮದ್ ಅವರ ಭೇಟಿಯ ಸಮಯದಲ್ಲಿ ನಾವು ಆಚರಿಸಿದ ಕನ್ನಡ ರಾಜ್ಯೋತ್ಸವದ ಈ ವರ್ಷದ 'ಥೀಮ್' ಆದ ಜಾನಪದವನ್ನು ಪ್ರಮುಖ ಕಾಳಜಿಯನ್ನಾಗಿ ಬಳಸುವಂತೆ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಸಮಾರಂಭವನ್ನು ಅಲ್ಲಿನ ನಗರಾಂತ್ಯದ ಪ್ರದೇಶದಲ್ಲಿದ್ದ ಗಾಂಧಿ ಸ್ಮಾರಕ ಭವನದಲ್ಲಿ ಏರ್ಪಡಿಸಲಾಗಿತ್ತು. ಕಿಕ್ಕಿರಿದು ತುಂಬಿದ ಸಭೆಯಲ್ಲಿ ಗಂಡಸರು ಹೆಂಗಸರು ಕೊನೆಗೆ ಮಕ್ಕಳೂ ಸಹ ನಮ್ಮ ಕರ್ನಾಟಕದ ಹಳ್ಳಿಗಳ ಜನ ಉಡುವ ರೀತಿಯ ಬಟ್ಟೆಗಳನ್ನು ಧರಿಸಿ ಬಂದಿದ್ದರು. ಕೆಲವರನ್ನು ಆ ಉಡುಪಿನಲ್ಲಿ ತಕ್ಷಣ ಗುರುತು ಹಿಡಿಯುವುದೇ ಕಷ್ಟವಾಗಿತ್ತು!

ವೇಷ ಭೂಷಣದ ಜೊತೆಗೆ ಅಲಂಕಾರ, ಆಹಾರ, ಮನ ರಂಜನೆ—ಪ್ರತಿಯೊಂದೂ ಕೂಡಾ ಜಾನಪದ ಶೈಲಿಯಲ್ಲೇ ವಿನ್ಯಾಸಗೊಂಡಿತ್ತು. ನಮ್ಮ ನಾಡಿನ ರಾಗಿ ಹಿಟ್ಟು, ಸೊಪ್ಪಿನ ಸಾರು, ಜೋಳದ ಭಕ್ರಿ, ಎಣ್ಣೆಗಾಯಿ, ಗಂಜಿಯೂಟ ಇತ್ಯಾದಿಗಳು ಎಲ್ಲರನ್ನೂ ತಣಿಸಿದ್ದವು. ಭಾಗವಹಿಸುವವರೆಲ್ಲ ಬಹಳ ಸ್ಫೂರ್ತಿ, ಉತ್ಸಾಹದಿಂದ ಇದ್ದರು. ಇಂತಹ ಗ್ರಾಮೀಣ ವಾತಾವರಣವನ್ನು ಸೃಷ್ಟಿ ಮಾಡಲು ಪ್ರತಿಯೊಬ್ಬರೂ ಬಹಳಷ್ಟು ಶ್ರಮಿಸಿದ್ದರು. ನಿಸಾರ್ ಅಹಮದ್ ಅವರು ನಮ್ಮ ಈ ಉತ್ಸಾಹವನ್ನು ನೋಡಿ ತುಂಬಾ ಮೆಚ್ಚಿಕೊಂಡರು. ಜೊತೆಗೇ ತಮ್ಮ ಸೂಟು ಬೂಟಿನ ವೇಷ ಭೂಷಣ ನಮ್ಮ 'ಜಾನಪದ' ಶೈಲಿಗೆ ಸರಿ ಹೊಂದುತ್ತಿಲ್ಲವಲ್ಲ ಎಂದು ನೊಂದರಲ್ಲದೆ, ಸಭಿಕರ ಕ್ಷಮೆಯನ್ನು ಕೋರಿದರು. ಅವರ ಭಾಷಣವಂತೂ ಅಲ್ಲಿ ಸೇರಿದವರಿಗೆಲ್ಲ ಮೃಷ್ಟಾನ್ನ ಭೋಜನಕ್ಕೂ ಮಿಗಿಲಾಗಿತ್ತು. ಅಮೇರಿಕದ ನಮ್ಮ ಕೂಟಗಳಲ್ಲಿ ಅಂತಹ ಹಿರಿಯ ಸಾಹಿತಿಗಳ ವಿಚಾರಗಳನ್ನು ಆಲಿಸುವ ಸದವಕಾಶ ನಮಗೆ ಸಿಕ್ಕುವುದು ತುಂಬಾ ದುರ್ಲಭ.

ನಿಸಾರ್ ಅಹಮದ್ ಅವರು ವೇದಿಕೆಯ ಮೇಲೆ ಕಟ್ಟಿದ್ದ ಫಲಕವನ್ನು ಗಮನಿಸಿ ಅದು ಇಂಗ್ಲಿಷಿನಲ್ಲಿ ಇದ್ದುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಕನ್ನಡ ಕೂಟದ ಕಾರ್ಯಕ್ರಮ ದಲ್ಲಿ ಲಕ್ಷಣವಾಗಿ ಕನ್ನಡದಲ್ಲಿ 'ಸಂಗಮ—ಸೇಯಿಂಟ್ ಲೂಯಿಸ್ ಕನ್ನಡ ಸಂಘ' ಎಂದು ಬರೆದರೆ ಆಗುತ್ತಿರಲಿಲ್ಲವೆ? ಎಂದು ಪ್ರಶ್ನಿಸಿದರು. ನಾವು ಆ ನಿಟ್ಟಿನಲ್ಲಿ ಯೋಚಿಸಿಯೇ ಇರಲಿಲ್ಲ. ಅವರು ನೀಡಿದ ಸಲಹೆ ನಮ್ಮ ಕಾರ್ಯಕರ್ತರ ಮನಸ್ಸಿನಲ್ಲಿ ಆಳವಾಗಿ ನಾಟಿತ್ತು. ಮುಂದಿನ ತಿಂಗಳು ನಮ್ಮ ಮಿತ್ರರೊಬ್ಬರು ಬೆಂಗಳೂರಿಗೆ ಭೇಟಿ ಇತ್ತಾಗ ಕನ್ನಡದಲ್ಲಿ ಅಂದವಾದ ಬ್ಯಾನರನ್ನು ಬರೆಯಿಸಿ ತಂದರು. ಈಗ ಅದನ್ನು ನಾವು ನಿಯಮಿತವಾಗಿ ಬಳಸುತ್ತ ಬಂದಿದ್ದೇವೆ.

ನಿಸಾರ್ ಅಹಮದ್ ಅವರನ್ನು ನಮ್ಮಲ್ಲಿಗೆ ತಮ್ಮ ಕಾರಿನಲ್ಲಿ ಕರೆ ತಂದವರು ಇಲ್ಲಿನಾಯ್ ರಾಜ್ಯದ ಸ್ಪ್ರಿಂಗ್ ಫೀಲ್ಡ್ ಊರಿನ ಶ್ರೀ ಸುರೇಶ್ ಮತ್ತು ಅವರ ಮಡದಿ ಗಾಯತ್ರಿ. ಅವರು ನಮ್ಮ ಮನೆಯನ್ನು ತಲಪಿದಾಗಲೇ ರಾತ್ರಿ ಒಂಭತ್ತರ ಸಮಯವಾಗಿತ್ತು. ನಮ್ಮ ಮನೆಯ ನೆಲ ಮಾಳಿಗೆಯಲ್ಲಿ ಅವರಿಗೆ ಪ್ರತ್ಯೇಕ ಹಾಗೂ ವಿಶಾಲವಾದ ಕೊಠಡಿಯನ್ನು ಕೊಟ್ಟಿದ್ದೆವು. ಅವರ ಕೊಠಡಿಯ ಹೊರಗೆ ಮರ ಗಿಡಗಳಿಂದ ಆವೃತವಾದ ವಿಸ್ತಾರವಾದ ತೋಟದ ನೋಟ ಆಪ್ಯಾಯಮಾನವಾಗಿತ್ತು. ನಿಸಾರರ ಏಕಾಂತಕ್ಕೆ ಕೊಂಚವೂ ಧಕ್ಕೆ ಬರದಂತೆ ನೋಡಿಕೊಂಡಿದ್ದೆವು. ಆದರೆ ಅವರು ಮೂಲತಃ ಸ್ನೇಹಜೀವಿಗಳು. ಅವರಿಗೆ ಯಾರದಾದರೂ ಜೊತೆ ಬೇಕಾಗಿತ್ತು. ಹೀಗಾಗಿ, ನನ್ನ ಮಗಳು ವರ್ಷಾಳ ಜೊತೆ ಅವಳ ಭರತ ನಾಟ್ಯದ ಅಭ್ಯಾಸದ ಬಗೆಗೆ, ಶಾಲಾ ವ್ಯಾಸಂಗದ ಬಗೆಗೆ ಮಾತನಾಡುತ್ತಲೋ, ಮಗ ಋಷಭ್‌ನೊಂದಿಗೆ ಅವನ ಕಥೆ ಬರೆಯುವ ಹವ್ಯಾಸದ ಬಗ್ಗೆ ತಿಳಿಯುತ್ತ ಸಲಹೆ ನೀಡುತ್ತಲೋ ಕಾಲ ಕಳೆಯುತ್ತಿದ್ದರು. ಜೊತೆಗೆ ನನ್ನ ಪತಿವರ್ಯ ಡಾ. ಗೋಪಾಲನ್ ರೊಡನೆ, ಇಲ್ಲವೇ ಅಡುಗೆ ಕೆಲಸದಲ್ಲಿ ನಿರತಳಾಗಿದ್ದ ನನ್ನ ಸಂಗಡ ಸಂಭಾಷಿಸುತ್ತಲೋ ಇದ್ದರು. ನಮ್ಮ ಇಲ್ಲಿನ ಉದ್ಯೋಗ, ಸ್ನೇಹಿತರು, ಕನ್ನಡ ಕೂಟದ ಚಟುವಟಿಕೆಗಳು, ಊರಿನಲ್ಲಿರುವ ನಮ್ಮ ತಂದೆ ತಾಯಿ ಬಂಧುಬಳಗ—ಹೀಗೆ ಅವರಿಗೆ ಏನೆಲ್ಲವನ್ನೂ ತಿಳಿದುಕೊಳ್ಳುವ ಕುತೂಹಲಾಸಕ್ತಿ. ನಮಗೋ, ನಮ್ಮ ಬಗೆಗೆ ಇಷ್ಟೆಲ್ಲಾ ವಿಚಾರಿಸಿಕೊಳ್ಳುತ್ತಾರಲ್ಲ ಎನ್ನುವ ಹೆಮ್ಮೆ. ಅಂತೂ, ಇದ್ದಷ್ಟು ದಿವಸ ನಿಸಾರ್ ಅಹಮದ್ ಅವರು ನಮ್ಮ ಮನೆಯವರೇ ಎಂಬ ಭಾವನೆಯನ್ನು ಬೇರೂರಿಸಿಬಿಟ್ಟರು.

ಕೆಲವೊಮ್ಮೆ ಅವರು ನಮ್ಮೊಡನೆ ತಮಾಷೆ ಸಹ ಮಾಡುತ್ತಿದ್ದರು. 'ರೀ, ಗೋಪಾಲ್, ಇದೇನ್ರಿ ತಮಿಳರೊ ಮಲೆಯಾಳಿಗಳೊ ಇಟ್ಟುಕೊಂಡಂತೆ ಗೋಪಾಲನ್ ಅಂತ ಹೆಸರಿಟ್ಟುಕೊಂಡಿದ್ದೀರಿ. ಕನ್ನಡಿಗರಾಗಿ ಗೋಪಾಲ್ ಎಂದು ಯಾಕ್ರಿ ಇಟ್ಕೊಂಡಿಲ್ಲ' ಎಂದು ನಮ್ಮ ಯಜಮಾನರನ್ನು ನೇರವಾಗಿ ಕೇಳಿದಾಗ ಅವರೋ ತಬ್ಬಿಬ್ಬು. ಆಮೇಲೆ ಅವರು ಸಾವರಿಸಿಕೊಂಡು 'ಅದು ನಾನು ಇಟ್ಕೊಂಡ ಹೆಸರಲ್ಲ ಸಾರ್. ನಮ್ಮ ಚಿಕ್ಕಪ್ಪನವರಿಂದ ದೊರೆತ ಬಳುವಳಿ. ಅವರಿಗೆ ಕಮ್ಯುನಿಸ್ಟ್ ನಾಯಕ ಎ. ಕೆ. ಗೋಪಾಲನ್ ಅಂದರೆ ಅಚ್ಚುಮೆಚ್ಚು. ಹಾಗಾಗಿ, ಗೋಪಾಲ ಅಂತ ಇದ್ದ ನನ್ನ ಹೆಸರನ್ನು ಬದಲಾಯಿಸಿ, ಶಾಲೆಗೆ ಸೇರಿಸುವಾಗ ಗೋಪಾಲನ್ ಅಂತ ಬರೆಸಿಬಿಟ್ಟರು. ಅದೇ ಮುಂದೆ ಖಾಯಂ ಆಗಿಹೋಯ್ತು' ಎಂದು ವಿವರಣೆ ನೀಡಿದಾಗ, 'ಓಹೋ! ಹಾಗೋ ಸಮಾಚಾರ. ಸರಿ. ಆದರೆ ನಾನು ಮಾತ್ರ ನಿಮ್ಮನ್ನ ಗೋಪಾಲ್ ಅಂತಲೇ ಕರೆಯೋದು' ಎಂದಿದ್ದರು.

ನಮ್ಮ ಮನೆಯಲ್ಲಿ ಅವರು ಇದ್ದಾಗ, ಅವರನ್ನು ಕಂಡು ಮಾತನಾಡಿಸಲು ಕೆಲವು ಕನ್ನಡದ ಕುಟುಂಬಗಳು ಬಂದಿದ್ದವು. ತಾನೊಬ್ಬ ಹೆಸರಾಂತ ಕವಿ ಎನ್ನುವುದನ್ನು ಮರೆತು ಅವರೊಡನೆ ಎಷ್ಟೋ ವರ್ಷಗಳ ಸಂಪರ್ಕವಿದ್ದಂತೆ ಲೋಕಾಭಿರಾಮವಾಗಿ ಸಂಭಾಷಣೆಯಲ್ಲಿ ತೊಡಗಿದ್ದುದು ಬಂದವರಿಗೆ ಸಂತಸವನ್ನುಂಟುಮಾಡಿತ್ತು. 'ನಾನು ನಿಸಾರರ ಬಗೆಗೆ ಹೆಚ್ಚು ತಿಳಿದುಕೊಳ್ಳಲು ಬಂದರೆ, ಅವರು ನಮ್ಮ ಬಗೆಗೇ ಹೆಚ್ಚು ಅರಿತುಕೊಳ್ಳಲು ಪ್ರಯತ್ನಿಸಿದರಲ್ಲ. ಅದು ಅವರ ದೊಡ್ಡಗುಣ' ಎಂದು ಆಗಮಿಸಿದ್ದವರು ಆಗಾಗ

ನೆನಪಿಸಿಕೊಳ್ಳುತ್ತಾರೆ.

ನಿಸಾರ್ ಅವರ ಬಗೆಗೆ ಇಲ್ಲಿನ ಕೆಲವು ಕನ್ನಡಿಗರಿಗೆ ಎಷ್ಟು ಅಭಿಮಾನವೆಂದರೆ, ಸೆಯಿಂಟ್ ಲೂಯಿಸ್‌ನಂಥ ದೊಡ್ಡ ನಗರದ ಹೊರ ವಲಯದಲ್ಲಿ ಬಹು ದೂರ ವಾಸಿಸುತ್ತಿದ್ದರೂ ನಿಸಾರರನ್ನು ತಮ್ಮ ಮನೆಗೆ ಕರೆದು ಔತಣವೇರ್ಪಡಿಸಿ ಉಪಚರಿಸುವ ಮಹದಾಸೆ. 'ನಮ್ಮ ಜನ ಪ್ರೀತಿಯಿಂದ ಕರೆಯುವುದು ಹೆಚ್ಚೊ, ನಾನು ಹೋಗುವುದು ಹೆಚ್ಚೊ? ಎಷ್ಟೇ ದೂರವಿರಲಿ, ನನಗೆ ಆಯಾಸವಾದರೂ ಆಗಲಿ, ಅವರ ಆಸೆಯನ್ನು ಪೂರೈಸುವುದು ನನ್ನ ಕರ್ತವ್ಯ' ಎನ್ನುತ್ತಿದ್ದರು. ಅವರು ಸೆಯಿಂಟ್ ಲೂಯಿಸ್‌ನಲ್ಲಿದ್ದ ನಾಲ್ಕೈದು ದಿವಸಗಳಲ್ಲಿ ಡಾ. ಅಶ್ವತ್ಥರಾವ್ ಅವರ, ಶೇಷಾದ್ರಿ ಅವರ, ಡಾ. ಅರವಿಂದ ಉಪಾಧ್ಯಾಯರ, ಡಾ. ಗುರುರಾಜ್ ಅವರ ಅತಿಥಿಗಳಾಗಿ ಅವರ ಮನೆಗಳಿಗೆ ಹೋಗಿ ಸತ್ಕಾರ ಪಡೆದು, ಆತಿಥೇಯರಿಗೆ ಸಂತೋಷ ನೀಡಿದರು.

ಒಂದು ಪ್ರಾತಃಕಾಲ ನಮ್ಮ ನಗರದ ಕನ್ನಡ ಬಾಲ-ಬಾಲಕಿಯರ ಮತ್ತು ಪೋಷಕರ ಸಭೆ ನಗರದ ಖ್ಯಾತ ಗ್ರಂಥಾಲಯದಲ್ಲಿ ನಡೆಯಿತು. ಅದರ ಉದ್ದೇಶ ನಿಸಾರ್ ಅಹಮದ್ ಅವರೊಡನೆ ಸಂವಾದ. ನಿಸಾರರು, ಕನ್ನಡದಲ್ಲಿ ಹೆಚ್ಚು ಪರಿಶ್ರಮವಿಲ್ಲದ, ಇಂಗ್ಲಿಷಿನಲ್ಲೇ ಸರ್ವ ವ್ಯವಹಾರಗಳನ್ನು ನಡೆಸುವ ಮತ್ತು ಆ ಭಾಷೆಯನ್ನು ಬಿಳಿಯರ ಮಕ್ಕಳಂತೆಯೇ ನಿರರ್ಗಳವಾಗಿ ಮಾತನಾಡುವ ನಮ್ಮ ಮಕ್ಕಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಅವರಿಗೆ ಕನ್ನಡ ಮತ್ತು ಕರ್ನಾಟಕದ ಬಗೆಗೆ ಅಭಿಮಾನ ಮೂಡಿಸುವ ಕೆಲವು ಸಂಗತಿಗಳನ್ನು ಸ್ವಾರಸ್ಯವಾದ ಉದಾಹರಣೆಗಳೊಂದಿಗೆ ನುಡಿದರು. ಕೇಳಿದ ಮಕ್ಕಳಿಗೆ ಖುಷಿಯಾಗಿತ್ತು. ಇದನ್ನು ಗಮನಿಸಿದ ಪೋಷಕರಿಗೆ ಇನ್ನೂ ಹೆಚ್ಚಿನ ಹರ್ಷ ಉಂಟಾಗಿತ್ತು. ಕೊನೆಯಲ್ಲಿ ನಿಸಾರರು 'ಇಲ್ಲಿ ಇಂಗ್ಲಿಷ್ ಕಲಿಕೆ ಅತಿ ಅನಿವಾರ್ಯ. ಅದಿಲ್ಲದೆ ಈ ದೇಶದಲ್ಲಿ ಇರಲು ಸಾಧ್ಯವೇ ಇಲ್ಲ. ಆದ್ದರಿಂದ ಅದನ್ನು ಚೆನ್ನಾಗಿ ಕಲಿಯಿರಿ. ಜೊತೆಗೆ, ಮನೆಯಲ್ಲಿ ಮತ್ತು ಕನ್ನಡ ಕುಟುಂಬಗಳ ಜೊತೆಯಲ್ಲಿ ವ್ಯವಹರಿಸಬೇಕಾದರೆ ಅಧಿಕವಾಗಿ ನಮ್ಮ ನುಡಿಯನ್ನೇ ಬಳಸಿ. ನೀವು ತಪ್ಪುತಪ್ಪಾಗಿ ಮಾತನಾಡಿದರೂ ಪರವಾಗಿಲ್ಲ, ಬರಬರುತ್ತ ಸರಿಹೋಗುತ್ತೆ. ನಾನು ನಿಮಗೆ ನಮ್ಮ ನಾಡಿನ ಬಗೆಗೆ, ಅಲ್ಲಿನ ಕೆಲವು ಮಹಾವ್ಯಕ್ತಿಗಳ ಬಗೆಗೆ ಪ್ರಶ್ನೆ ಕೇಳಿದಾಗ 'ಗೊತ್ತಿಲ್ಲ' ಎಂದಿರಿ. ಇಲ್ಲಿನವರ ಬಗ್ಗೆ ಎಷ್ಟು ಸೊಗಸಾಗಿ ನಿಮ್ಮ ತಿಳಿವನ್ನು ಪ್ರದರ್ಶಿಸಿದಿರಿ. ಇದನ್ನು ತಪ್ಪೆಂದು ನಾನು ಹೇಳುತ್ತಿಲ್ಲ. ಆದರೆ ಥಾಮಸ್ ಆಲ್ವ ಎಡಿಸನ್ ಬಗೆಗೆ ನೀವು ತಿಳಿದುಕೊಂಡಿರುವಷ್ಟನ್ನು ನಮ್ಮ ವಿಶ್ವೇಶ್ವರಯ್ಯನವರ ಬಗೆಗೂ ಅರಿಯಬೇಕೆಂದು ನನ್ನ ಆಸೆ. ಮಕ್ಕಳಿಗೆ, ದಿನವಿಡೀ ಹೊರಗಡೆ ಇರುವ ತಂದೆಗಿಂತ, ಮನೆಯಲ್ಲಿ ನಿಕಟವಾಗಿರುವ ತಾಯಿ ಹೆಚ್ಚು ಆತ್ಮೀಯಳಾಗಿರುತ್ತಾಳೆ. ಆಕೆ ಮಕ್ಕಳಿಗೆ ನಮ್ಮ ನಾಡು-ನುಡಿ, ಸಂಸ್ಕೃತಿಗಳ ಪರಿಚಯ ಮಾಡಲು ಶ್ರಮಿಸಬೇಕು. ಇದು ನನ್ನ ಕಳಕಳಿಯ ಮನವಿ' ಎಂದು ಸಂವಾದವನ್ನು ಮುಗಿಸಿದರು. ಬಂದಿದ್ದ ಪೋಷಕರಿಗೆ ನಿಸಾರರ ಮಾತುಗಳು ಹಿತವಾದವನ್ನು ನುಡಿದದ್ದಲ್ಲದೆ, ಎಚ್ಚರಿಕೆ ಗಂಟೆಯಾಗಿದ್ದವು.

ಉದ್ಯೋಗಸ್ಥರಾದ ನನ್ನ ಪತಿ ಡಾ. ಗೋಪಾಲನ್ ಅವರಿಗಾಗಲಿ ನನಗಾಗಲಿ

ಕೊಂಚವೂ ಬಿಡುವು ದೊರಕುತ್ತಿರಲಿಲ್ಲ. ಅಂಥದ್ದರಲ್ಲೂ ನನ್ನ ಪತಿಯವರು ನಿಸಾರ್ ಅವರನ್ನು ಐವತ್ತು ಮೈಲಿ ದೂರವಿರುವ ಸುಪ್ರಸಿದ್ಧ ಮೆರಮೆಕ್ (Meramec Caves) ಅಂತರ್ಗುಹೆಗಳ ದರ್ಶನಕ್ಕೆ ಕಾರಿನಲ್ಲಿ ಕರೆದುಕೊಂಡು ಹೋಗಿದ್ದರು. ಆಗಷ್ಟೇ ಈ ಪ್ರದೇಶದಲ್ಲಿ ಮಾಗಿ ಕಾಲ (Fall) ಪ್ರಾರಂಭವಾಗಿ, ಮರ ಗಿಡಗಳ ಎಲೆಗಳೆಲ್ಲ ಅನೇಕ ಬಣ್ಣಗಳನ್ನು ಧರಿಸಿ ಕಣ್ಮನಗಳನ್ನು ಸೂರೆಗೊಳ್ಳುತ್ತಿದ್ದವು. ಅವರು ಸಾಗಿದ ದಾರಿಯುದ್ದಕ್ಕೂ ಬಿಡುವು ಕೊಡದ ಚೇತೋಹಾರಿಯಾದ ವರ್ಣರಂಜಿತ ದೃಶ್ಯ. ಅದನ್ನು ನೋಡಿ ಖುಷಿಪಟ್ಟಿದ್ದನ್ನು ಕಂಡು ನಮ್ಮ ಯಜಮಾನರಿಗೂ ಬಹಳ ಸಂತೋಷವಾಗಿತ್ತು. ಮೆರಮೆಕ್ ಗುಹೆಗಳ ಬಳಿ ಒಂದು ದೊಡ್ಡ ಫಲಕದಲ್ಲಿ 'Jessy James Hideout' ಎಂದು ಬರೆದಿದೆ. ಅದನ್ನು ಓದಿದ ತಕ್ಷಣ ನಿಸಾರರು ಮೈ ಮರೆತು ಉದ್ಗರಿಸಿದರಂತೆ 'My God, ಗೋಪಾಲ್ ನನ್ನನ್ನ ಎಂಥ ಜಾಗಕ್ಕೆ ಅನಿರೀಕ್ಷಿತವಾಗಿ ಕರೆದುಕೊಂಡುಬಂದಿರಿ. ನಾನು ನಲವತ್ತು ವರ್ಷಗಳ ಹಿಂದೆಯೇ ಜೆಸ್ಸಿ ಜೇಮ್ಸ್ ಬಗ್ಗೆ ಓದಿದ್ದೆ. ನಾನು ಮೆಚ್ಚಿದ ದರೋಡೆಕೋರ ಹಾಗೂ 'ಹೂಡ್‌ಲಮ್' (Hoodlum)ಗಳಲ್ಲಿ ಇಬ್ಬರು ನನಗೆ ಇಷ್ಟ. ಒಬ್ಬ ಅಲ್ ಕಪೋನ್, ಇನ್ನೊಬ್ಬ ಜೆಸ್ಸಿ ಜೇಮ್ಸ್. ಇವನು ಈ ಪ್ರದೇಶದವನೆಂದು ಗೊತ್ತಿರಲಿಲ್ಲ. ಬ್ಯಾಂಕುಗಳ, ರೈಲುಗಳ ಲೂಟಿಗಳಲ್ಲಿ ಇವನನ್ನು ಮೀರಿಸುವವರು ಇರಲಿಲ್ಲ. ದೀರ್ಘಾಯುಷಿಯಾಗಿ ಬದುಕಿದವನು, ಬಡಬಗ್ಗರಿಗೆ ಕೈಲಾದ ಸಹಾಯ ಮಾಡಿದವನು. ಇವನ ಪತ್ತೆ ನೀಡಿದವರಿಗೆ ಸರಕಾರ ಎಷ್ಟೋ ಲಕ್ಷ ಡಾಲರುಗಳ ಬಹುಮಾನವನ್ನು ಘೋಷಿಸಿತ್ತು. ದಶಕಗಳವರೆಗೆ ಇವನನ್ನು ಹುಡುಕಿದರೂ ಹಿಡಿಯಲಾಗಲಿಲ್ಲ. ಇವನು ಗುಹೆಗಳಲ್ಲಿ ಅಡಗಿರುತ್ತಿದ್ದ ಎಂದು ಕೇಳಿದ್ದೆ. ಆದರೆ ಇವೇ ಆ ಗುಹೆಗಳು ಎಂದು ಗೊತ್ತಿರಲಿಲ್ಲ. ಇದನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ' ಎಂದರಂತೆ.

ಸುಮಾರು ಅರ್ಧ ಮೈಲಿಗೂ ಉದ್ದವಿರುವ ಆ ಗುಹೆಗಳನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿರುವ ಸರ್ಕಾರದ ಯೋಜನೆ ನಿಜಕ್ಕೂ ಅಭಿನಂದನೀಯ. ಇಂತಹ ಅಸಂಖ್ಯಾತ ಅಂತರ್ಗುಹೆಗಳು ಅಮೇರಿಕದ ಆದ್ಯಂತ ಇವೆ. ಅವುಗಳನ್ನು ವೀಕ್ಷಿಸಲು ಪ್ರವಾಸಿಗಳು ಮುಗಿಬೀಳುತ್ತಾರೆ. ಅಂತಹ ಸುವ್ಯವಸ್ಥೆಯನ್ನು ಅಲ್ಲಿನವರು ಮಾಡಿರುತ್ತಾರೆ. ನಮ್ಮ ದೇಶದಲ್ಲಿ ಹೀಗೆ ಆಗುವುದು ಯಾವಾಗ? ಎಂದು ನಿಸಾರರು ವ್ಯಥೆಪಟ್ಟರಂತೆ. ಈ ಗುಹೆಗಳು ನಿರ್ಮಾಣವಾಗುವುದು ಸುಣ್ಣಕಲ್ಲಿನ (Limestone) ಪ್ರದೇಶಗಳಲ್ಲಿ. ಅಂತರ್ಜಲ ತಾನು ಅರಗಿಸಿಕೊಂಡಿರುವ ಸುಣ್ಣಕಲ್ಲಿನ ಸೂಕ್ಷ್ಮಕಣಗಳನ್ನು ತಾನೇ ಕೊರೆದಿರುವ ಗುಹೆಗಳ ಮೇಲ್ಭಾಗದಿಂದ ತೊಂಗಲು ರೂಪದಲ್ಲಿ, ಕೆಳಗಿನ ಭಾಗದಿಂದ ಸ್ತಂಭಗಳ ರೂಪದಲ್ಲಿ ನಿಕ್ಷೇಪಿಸಿ ನಯನ ಮನೋಹರವಾದ ಆಕಾರಗಳಿಂದ ಆಕರ್ಷಿಸುತ್ತದೆ. ಕೋಟ್ಯಂತರ ವರ್ಷಗಳ ಈ ನೈಸರ್ಗಿಕ ಪ್ರಕ್ರಿಯೆಯಿಂದ ಒಂದು ಮಹಾದ್ಭುತ 'ಫ್ಯಾಂಟಸಿಯ' ಲೋಕ ಸೃಷ್ಟಿಯಾಗುತ್ತದೆ. ನಿಸಾರರು ಭೂ ವಿಜ್ಞಾನದ ಪ್ರಾಧ್ಯಾಪಕರಾಗಿದ್ದುದರಿಂದ, ಗುಹೆಗಳನ್ನು ವರ್ಣಿಸುತ್ತಿದ್ದ ನಿರೂಪಕಿಗಿಂತ ಹೆಚ್ಚು ವಿಚಾರಗಳನ್ನು ತಿಳಿದಿದ್ದರು. ಕೆಲವು ವಿಷಯಗಳಲ್ಲಿ ಅವಳ ವರ್ಣನೆಯ ತಪ್ಪುಗಳನ್ನೂ ತಿದ್ದಿದ್ದರು. ಇದನ್ನು ಗಮನಿಸಿದ ನನ್ನ ಪತಿ ಗೋಪಾಲನ್ ಹಾಗೂ ಇತರ ಪ್ರವಾಸಿಗರಿಗೆ ವಿಸ್ಮಯ ಉಂಟಾಯಿತಂತೆ. ಸುಮಾರು ಒಂದು

ಗಂಟೆಗೂ ಹೆಚ್ಚು ಕಾಲ ಮೆರಮೆಕ್ ಗುಹೆಗಳನ್ನು ನೋಡಿಬಂದ ಮೇಲೆ ಗೋಪಾಲನ್ ಅವರಿಗೆ ನುಡಿದರಂತೆ: 'ಇಲ್ಲಿನ ಅಚ್ಚುಕಟ್ಟು, ವೈಶಾಲ್ಯ, ಅನುಕೂಲ ಇತ್ಯಾದಿಗಳನ್ನು ಮೆಚ್ಚಲೇಬೇಕು. ಆದರೆ, ನಾನು ಕೆಲವು ದಿವಸಗಳ ಹಿಂದೆ ವೀಕ್ಷಿಸಿದ ವರ್ಜಿನಿಯಾ ರಾಜ್ಯದ ಲ್ಯೂರೆ(Luray)ಅಂತರ್ಗುಹೆಗಳಿಗೆ ಹೋಲಿಸಿದರೆ ಮೆರಮೆಕ್ (Meramec) ಗುಹೆಗಳು ಅಷ್ಟು ಆಕರ್ಷಣೀಯವಲ್ಲ. ಅಲ್ಲಿನ ಸುಣ್ಣದಕಲ್ಲಿನ ವಿವಿಧಾಕೃತಿಗಳು ವರ್ಣಮಯ—ಗುಲಾಬಿ ಮತ್ತು ತೆಳುಗೆಂಪು ಬಣ್ಣದವು. ಇಲ್ಲಿನವಕ್ಕೆ ಹೇಳಿಕೊಳ್ಳುವ ವರ್ಣ ವೈವಿಧ್ಯವಿಲ್ಲ. ಬಹುತೇಕ ಎಲ್ಲವೂ ಬಿಳಿಯ ಬಣ್ಣದವು. ಬಹುಶಃ ಈ ಕಾರಣಕ್ಕೆ ಅಂತ ಕಾಣುತ್ತೆ, ಇದಕ್ಕೆ ಜೆಸ್ಸಿ ಜೇಮ್ಸ್‌ನ ಹೆಸರನ್ನೂ ತಳುಕೆ ಹಾಕಿ ಜನಪ್ರಿಯಗೊಳಿಸಲು ಪ್ರಯತ್ನಿಸಿರುವುದು.' ವೀಕ್ಷಣೆ, ವಿಶ್ಲೇಷಣೆ, ವಿಚಾರ ನಿರೂಪಣೆ—ನಿಸಾರ್ ಅಹಮದ್ ಅವರಿಗೆ ರಕ್ತಗತ ಗುಣಗಳೆಂದು ತೋರುತ್ತದೆ.

ನಮ್ಮೂರಿನ ಇನ್ನೊಂದು ಪ್ರಸಿದ್ಧ ಸ್ಮರಣೀಯ ಸ್ಥಳವನ್ನು ಗೋಪಾಲನ್ ಅವರು ನಿಸಾರರಿಗೆ ತೋರಿಸಿಕೊಂಡು ಬಂದರು. ಇದು ಬೃಹನ್ನದಿ ಮಿಸಿಸಿಪಿಯ ಬದಿಯಲ್ಲಿರುವ ಮಾನವ ನಿರ್ಮಿತ ದೊಡ್ಡ ಕಮಾನು(Gateway Arch)ದ್ವಾರ. ಈ ಎಡೆಯಿಂದಲೇ ಕ್ಲಾರ್ಕ್ ಮತ್ತು ಲೂಯಿಸ್ ಹೆಸರಿನ ಸಾಹಸಿಗರು ಈಗ್ಗೆ ಇನ್ನೂರು ವರ್ಷಗಳ ಹಿಂದೆ ಅಮೇರಿಕದ ಅಸಂಶೋಧಿತ ಪಶ್ಚಿಮ ಪ್ರದೇಶವನ್ನು ಸಣ್ಣ ಹಾಯಿದೋಣಿಯಲ್ಲಿ ಸಾಗಿ ಕಂಡುಹಿಡಿದದ್ದು.

ಪ್ರಾಣವನ್ನು ಒತ್ತೆಯಿಟ್ಟು ಅವರು ಕೈಕೊಂಡ ಸಾಹಸ ಯಾತ್ರೆ, ಎದುರಿಸಿದ ಪ್ರಾಕೃತಿಕ ಹಾಗೂ ರೆಡಿಂಡಿಯನ್ನರ ಗಂಡಾಂತರಗಳು, ಚಳಿ ಮಳೆ ಬಿಸಿಲು ಗಾಳಿಗಳಲ್ಲದೆ ಜ್ವರ, ತಲೆ ಶೂಲೆ ಇನ್ನಿತರ ವ್ಯಾಧಿಗಳು—ಈ ಕಥೆ ರೋಚಕ, ರೋಮಾಂಚಕ. ಈ ಸಾಹಸದ ಸ್ಮರಣೆಗಾಗಿ ನಿರ್ಮಿಸಿರುವ ಗಗನ ಚುಂಬಿ ಕಮಾನಿನೊಳಗೆ, ಕೆಳಗಿನಿಂದ ಮೇಲಕ್ಕೆ ಹೋಗಲು ಕ್ಯಾಪ್ಸೂಲ್ ರೂಪದ ಟ್ರಾಂಗಳಿವೆ. ಮೇಲಿನಿಂದ ನೋಡಿದರೆ ಸೆಯಿಂಟ್ ಲೂಯಿಸ್ ನಗರದ ಸುಂದರ ಕಟ್ಟಡಗಳ ಮತ್ತು ಸೇತುವೆಗಳಿಂದ ಅಲಂಕೃತವಾದ ಮಹಾ ನದಿ ಮಿಸಿಸಿಪಿಯ ಭವ್ಯ ದರ್ಶನ ಮನಸ್ಸಿಗೆ ಕೃತಾರ್ಥತೆಯ ಭಾವನೆಯನ್ನು ನೀಡುತ್ತದೆ. ಇಲ್ಲಿಂದ ಅನೇಕ ಫೋಟೋಗಳನ್ನು ನಿಸಾರ್ ತೆಗೆಸಿಕೊಂಡರು. ಈ ಉಕ್ಕಿನ ಮಹೋನ್ನತ ಕಮಾನಿನೊಳಗೆ ಭೂಮಿಯ ತಳ ಭಾಗದಲ್ಲಿ ಸಹಸ್ರಾರು ಜನರು ತಂಗುವಷ್ಟು ವಿಶಾಲವಾದ ಸ್ಥಳವಿದೆ. ಅಲ್ಲಿ ಸ್ಮರಣಿಕೆ, ಪುಸ್ತಕ, ತಿಂಡಿತಿನಿಸುಗಳ ಅಂಗಡಿಗಳಷ್ಟೇ ಅಲ್ಲ, ಅಮೇರಿಕದ ಇತಿಹಾಸದ ಒಂದು ಇಣುಕು ನೋಟವನ್ನೂ ನೀಡಬಲ್ಲ ವಿಸ್ತೃತವಾದ ಪ್ರದರ್ಶನಾಲಯವೂ ಇದೆ. ಅಂತೂ ಅಮೇರಿಕದಲ್ಲಿರುವ ಪ್ರೇಕ್ಷಣೀಯ ಸ್ಥಳಗಳಲ್ಲಿ ಈ 'ಗೇಟ್ ವೇ ಆರ್ಚ್' (Gateway Arch)ಗೂ ಮಹತ್ತರ ಸ್ಥಾನವಿದೆ. ಇದನ್ನೇರಿ ವಿಹಂಗಮ ನೋಟವನ್ನು ದಕ್ಕಿಸಿಕೊಳ್ಳಲು ದೇಶ ವಿದೇಶಗಳ ಸಹಸ್ರಾರು ಪ್ರವಾಸಿಗರು 'ಕ್ಯೂ'ಗಳಲ್ಲಿ ಕಿಕ್ಕಿರಿದಿರುತ್ತಾರೆ. ಇದರ ತಳದ ಬಳಿಯ ಅಗಲ 630 ಅಡಿ, ತೂಕ 43,000 ಟನ್‌ಗಳು! ನಿಸಾರರು ಇದನ್ನು 'ಮನುಷ್ಯ ಸಾಹಸದ ಪರಿಕಲ್ಪನೆಗೆ ವಿಜ್ಞಾನ ಬೆಂಬಲ ತೋರಿ ದಯಪಾಲಿಸಿರುವ ಉಕ್ಕಿನ,

ಬೃಹದಾಕಾರ' ಎಂದು ಪ್ರಶಂಸಿಸಿದರು. ಇದರ ತಾಂತ್ರಿಕ ಕೌಶಲಕ್ಕೆ ನಿಬ್ಬೆರಗಾಗಿ, 'ಮಾನವನ ಬುದ್ಧಿಮತ್ತೆಗೆ, ನವಾನ್ವೇಷಣೆಯ ಪ್ರತಿಭೆಗೆ ಇದಕ್ಕಿಂತ ಮಹತ್ತರ ಸಾಕ್ಷಿ ಬೇಕೆ?' ಎಂದು ಉದ್ಗರಿಸಿದರು. ಮೆರಮೆಕ್ ಗುಹೆಗಳು ಮತ್ತು ಈ ಕಮಾನು ದ್ವಾರವನ್ನು ಬಿಡುವೇ ಇರದಿದ್ದರೂ ಗೋಪಾಲನ್ ಅವರು ನಿಸಾರರನ್ನು ಕರೆದೊಯ್ದು ತೋರಿಸಿದ್ದಕ್ಕೆ ಅವರಿಗೆ ತುಂಬು ಕೃತಜ್ಞತೆಗಳನ್ನು ಸಲ್ಲಿಸಿದರು.

ಒಟ್ಟಿನಲ್ಲಿ ನಿಸಾರ್ ಅಹಮದ್ ಅಂತಹ ಅಪರೂಪದ ವ್ಯಕ್ತಿಯೊಬ್ಬರು ಅತಿಥಿಗಳಾಗಿ ನಮ್ಮ ಮನೆಯಲ್ಲಿ ತಂಗಿದ್ದರೆಂಬುದೇ ನಮಗೆಲ್ಲ ಹೆಮ್ಮೆ ಮತ್ತು ಹಿಗ್ಗಿನ ವಿಚಾರ. ಅತ್ಯಲ್ಪ ಸಮಯದಲ್ಲಿ ಅವರಿಂದ ನಾವು ಕಲಿತದ್ದು ಬಹಳ. ಅವರ ಸೌಜನ್ಯ, ವಿನಯಗಳ ವ್ಯಕ್ತಿತ್ವ ನನಗೆ, ನಮ್ಮ ಮನೆಯವರೆಲ್ಲರಿಗೆ ಹಾಗೂ ಸೆಯಿಂಟ್ ಲೂಯಿಸ್‌ನ ಕನ್ನಡಿಗರಿಗೆ ಸದಾ ಸ್ಮರಣೀಯ.ಇದಕ್ಕೆ ಇಂಬುಗೊಡುವಂತೆ ಅವರ ಜೊತೆ ನಾವು ಬೇರೆ ಬೇರೆ ಸಂದರ್ಭಗಳಲ್ಲಿ ಹಿಡಿಸಿಕೊಂಡ ಫೋಟೋಗಳು ನಮ್ಮ ಬಳಿ ಜೋಪಾನವಾಗಿ ಇವೆ.

ಸೆಯಿಂಟ್ ಲೂಯಿಸ್‌ನಿಂದ ನಿಸಾರರು ಕಾರಿನಲ್ಲಿ ಇಂಡಿಯಾನಾ ಪಾಲಿಸ್ ನಗರಕ್ಕೆ ಹೊರಟಾಗ, ನಮಗೆ ವರ್ಷಾನುಗಟ್ಟಲೆಯ ಒಬ್ಬ ಅತ್ಯಂತ ಆಪ್ತ ವ್ಯಕ್ತಿಯನ್ನು ಅಗಲಿದಂತೆ ಭಾಸವಾಗಿತ್ತು. ನಮ್ಮ ಅಂತರಂಗಗಳನ್ನು ಅವ್ಯಕ್ತವಾದ ಮೂಕ ವೇದನೆಯೊಂದು ಕೀಟದಂತೆ ಕೊರೆದಿತ್ತು.

ಪಾಶ್ಚಾತ್ಯರಿಗೆ ಹೋಲಿಸಿದರೆ ನಮ್ಮಲ್ಲಿ ಯಾವುದರ ಕೊರತೆಯಿದೆಯೋ ಅದಕ್ಕಾಗಿ ಮರುಗೋಣ. ಅದನ್ನು ತುಂಬಿಕೊಳ್ಳುವ ಉಪಾಯಗಳನ್ನು ಆಲೋಚಿಸೋಣ. ಆದರೆ ಇರುವುದನ್ನು ನೆನೆದು ಹೆಮ್ಮೆ ಪಡಲು ಮರೆಯದಿರೋಣ. ಅಭಾವದ ಬಗೆಗಿನ ಅಳಲಿಗಿಂತ ಅಸ್ತಿತ್ವದಲ್ಲಿರುವುದರ ಅಜ್ಞಾನ ಅಧಿಕ ಆತಂಕಕಾರಿ. ಹಾಗೆಯೇ, ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರನ್ನ ಸ್ವಾದಿಷ್ಟ.

(ನಮ್ಮದು-ಪರರದು)

✧ ✧ ✧

ಮಾನವ ಜೀವಿತದ ಮೂಲಭೂತ ಸಮಸ್ಯೆ ಮತ್ತು ಕಾಳಜಿಗಳು; ಅವನ ಅಂತಃಪ್ರವೃತ್ತಿಯಲ್ಲಿ ನಿಹಿತವಾಗಿರುವ ವಿಲಕ್ಷಣ ರಾಗಭಾವಾದಿಗಳು ಎಲ್ಲ ಕಾಲಕ್ಕೂ ಒಂದೇನೇ. ಅವು ನಮ್ಮ ಭೂಪಟಗಳ ಹಾಗೆ: ಒಟ್ಟಾರೆಯಾಗಿ ಸ್ಥಿರ, ಅಪರಿವರ್ತನೀಯ. ನಮ್ಮ ಬಾಲ್ಯದಲ್ಲಿ ಇದ್ದ ಹಾಗೆ ಈಗಲೂ ಇವೆ. ಭೂಖಂಡಗಳಾಗಲಿ ಸಾಗರ ನದಿ ಗಳಾಗಲಿ ಸ್ಥಾನಾಂತರಗೊಂಡು ಬದಲಾಗಿಲ್ಲ. ಕೆಲವು ದೇಶಗಳು ವಿಭಜಿತಗೊಂಡಿರಬಹುದು ಅಷ್ಟೆ.

(ಮಾನವನ ಅಂತಃಪ್ರವೃತ್ತಿಗಳು ಸಾರ್ವಕಾಲಿಕ)



ನಿಸಾರರೊಂದಿಗೆ ಒಡನಾಟ ಸಂತಸ, ಸಂಭ್ರಮಗಳ ಒಕ್ಕೂಟ

♦ ವಿ. ಸೀತಾರಾಮಯ್ಯ
ಫೀನಿಕ್ಸ್ (ಆರಿಜೋನ)

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಮುಖ ಪರಿಚಯ ನನಗೆ ಮೊಟ್ಟ ಮೊದಲು ಆದದ್ದು ಮಿಷಿಗನ್ ರಾಜ್ಯದ ಡೆಟ್ರಾಯಿಟ್ ಪಟ್ಟಣದಲ್ಲಿ, ೨೦೦೨ರ 'ಅಕ್ಕ'ದ ವಿಶ್ವ ಕನ್ನಡ ಸಮ್ಮೇಳನದಲ್ಲಿ. ಅದಕ್ಕೂ ಮುಂಚೆ ಅವರ ಹೆಸರನ್ನು ಮತ್ತು ಕೆಲವು ಹಾಡುಗಳನ್ನು ಕೇಳಿದ್ದೆ. 'ಅಕ್ಕ'ದ ಸಂಸ್ಥಾಪಕರಲ್ಲಿ ಒಬ್ಬನಾಗಿದ್ದ ನಾನು ನಿಸಾರ್ ಅವರನ್ನು ಮುಖ್ಯ ಅತಿಥಿಯಾಗಿ 'ಅಕ್ಕ' ನಡೆಸುವ ದ್ವಿವಾರ್ಷಿಕ ಸಮ್ಮೇಳನಕ್ಕೆ ಆಹ್ವಾನಿಸುವ ಹಂಬಲ ಕೆಲ ವರ್ಷಗಳಿಂದ ಇತ್ತಾದರೂ ೨೦೦೨ರ ವರೆಗೆ ಕಾಲ ಕೂಡಿ ಬಂದಿರಲಿಲ್ಲ. ಆ ವರ್ಷ 'ಅಕ್ಕ'ದ ಪರವಾಗಿ ಅವರಿಗೆ ಡಾ. ಡಿ. ಆರ್. ಗೋವಿಂದರಾಜು ಅವರ ಮೂಲಕ ಆಮಂತ್ರಣ ಕಳಿಸಿ, ನಾವು ನಾಲ್ಕೈದು ಜನ ಮಿತ್ರರು ಪ್ರಯಾಣಕ್ಕೆ ತಗಲುವ ಖರ್ಚು ವೆಚ್ಚವನ್ನು ವಹಿಸಿಕೊಂಡಿದ್ದೆವು. ಅವರು ಒಪ್ಪಿ ಬಂದಿದ್ದು ನಮಗೆ ಸಂತೋಷ ನೀಡಿತ್ತು. ಮೊದಲ ಭೇಟಿಯಲ್ಲೇ ನಿಸಾರ್ ಅಹಮದ್ ನನಗೆ ಆತ್ಮೀಯರಾಗಿಬಿಟ್ಟರು. ಸೂಟು ಬೂಟು ಧರಿಸಿ ನೀಟಾಗಿ, ಠಾಕುಠೀಕಾಗಿ ಕಾಣಿಸುತ್ತ, ಪಾದರಸದಂತೆ ಚುರುಕಾಗಿ ಓಡಾಡುತ್ತ, ಸಮ್ಮೇಳನಕ್ಕೆ ಬಂದಿದ್ದವರ ದೃಷ್ಟಿ ಕೇಂದ್ರವಾಗಿದ್ದರು ನಿಸಾರ್. ಪರಿಚಯವಾದಾಗ, ಅಮೇರಿಕಕ್ಕೆ ಕರೆಸಿಕೊಂಡದ್ದಕ್ಕಾಗಿ ನನ್ನನ್ನು ವಂದಿಸುತ್ತ ಕುಶಲವನ್ನು ವಿಚಾರಿಸಿದರು. ಆಗ ಅವರ ಜೊತೆಯಲ್ಲಿ ಇನ್ನೂ ಮೂರು ಜನ 'ಸ್ಪಾನ್ಸರ್' ಮಾಡಿದ ಮಿತ್ರರಿದ್ದರು: ಡಾ. ಡಿ. ಆರ್.

ಗೋವಿಂದರಾಜು, ಶ್ರೀಯುತರಾದ ಸಿ. ಕೃಷ್ಣಶಾಸ್ತ್ರಿ ಮತ್ತು ಎಂ. ಕೃಷ್ಣಮೂರ್ತಿ. ಸಮ್ಮೇಳನ ನಡೆದಿದ್ದ ವಿಶಾಲವಾದ ಕೋಬೋ ಹಾಲ್‌ನ ಹೊರಗಣ ಪ್ರಾಂಗಣದಲ್ಲಿ, ಸಭೆಗೆ ಆಗಮಿಸಿದ್ದ ಹೆಂಗಸರು-ಗಂಡಸರ ಆ ಗಜಿಬಿಜಿಯಲ್ಲೂ ನಾವು ಅನೇಕ ವಿಷಯಗಳನ್ನು ಕುರಿತು ಚರ್ಚಿಸಿದ್ದೆವು. ನಿಸಾರರ ಸರಳತೆ, ಮಾತುಗಳಲ್ಲಿನ ನೇರತನ ಮತ್ತು ಮುಚ್ಚುಮರೆ ಇರದ ಸ್ಪಷ್ಟತೆ ಹಾಗೂ ಜೀವನದ ಬಗೆಗಿನ ಅವರ ಗಂಭೀರವಾದ ದೃಷ್ಟಿ—ನನಗೆ ಹಿಡಿಸಿದವು. ಸಮಾಜದ ಕೆಲವು ಸಂಗತಿಗಳ ಬಗೆಗೆ ನಾನು ತುಂಬ ನಿಷ್ಠುರ ಹಾಗೂ ಖಂಡಿತವಾದಿಯೆಂದು ನನ್ನ ಗೆಳೆಯರ ಅಭಿಪ್ರಾಯ. ಯಾವುದನ್ನೂ ಪೂರ್ವ ಚಿಂತನೆ ಮಾಡದೆ ಒಪ್ಪಿಕೊಳ್ಳಬಾರದೆಂಬುದು ಮೊದಲಿನಿಂದ ನನ್ನ ಅಚಲವಾದ ಅಭಿಮತ. ಹಿಂದಿನಿಂದ ಬಂದಿರುವ ರೀತಿ ರಿವಾಜುಗಳನ್ನಾಗಲಿ, ಆಚಾರ-ವಿಚಾರಗಳನ್ನಾಗಲಿ, ಮನುಷ್ಯರ ನಡುವಣ ಭೇದ ಗಣನೆಯನ್ನಾಗಲಿ ಇಂದಿನ ನಮ್ಮ ಒಟ್ಟು ಸಮಾಜ ಹಿತದ ದೃಷ್ಟಿಯಿಂದ ಆಲೋಚಿಸಿ ತಿದ್ದಿ ಅಥವಾ ತಿರಸ್ಕರಿಸಿ ಒಪ್ಪಿಕೊಳ್ಳಬೇಕೇ ಹೊರತು, ನಮ್ಮ ಹಿಂದಿನವರು ಆ ಕಾಲದಲ್ಲಿ ಮಾಡಿರುವ ಕೆಲವು ವಿಧಿ ವಿಧಾನಗಳನ್ನು ಕಣ್ಣು ಮುಚ್ಚಿ ಇವೊತ್ತು ಸಾರಾಸಗಟಾಗಿ ಅಂಗೀಕರಿಸಿ ಚಾಲ್ತಿಗೆ ತರಬಾರದು—ಎನ್ನುವುದು ನನ್ನ ದೃಢವಾದ ನಿಲವು. ಈ ದೃಷ್ಟಿಯಲ್ಲಿ ಸರ್ವ ಸಮಾನತೆ, ಸರ್ವೋದಯ, ಸರ್ವರ ಉದ್ಧಾರವಾದಾಗಲೇ ನಮ್ಮ ಸಾಮಾಜಿಕ ಬಾಳು ಅರ್ಥಪೂರ್ಣವಾಗಬಲ್ಲುದು ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಉದಾರ ದೃಷ್ಟಿ ನನಗೆ ಅತಿ ಮೆಚ್ಚು. ನಿಸಾರರೊಂದಿಗೆ ನಾನು ಭೇಟಿಯಾದ ಸಂದರ್ಭದಲ್ಲೇ ನನ್ನ ದೃಷ್ಟಿ ಧೋರಣೆ, ನಿಲವುಗಳು ಅವರಿಗೆ ಅರ್ಥವಾದವು; ಜೊತೆಗೇ ನನ್ನ ಕೆಲವು ವಿಚಾರಗಳು ಸೂಕ್ತವೆನ್ನಿಸಿದವು. 'ನೀವು ಮನಸ್ಸಾಕ್ಷಿಗೆ ತಕ್ಕನಾಗಿ ನಡೆಯುವುದು ನನಗೆ ಮೆಚ್ಚಿಕೆಯಾಗಿದೆ' ಎಂದು ಮನಃಪೂರ್ವಕವಾಗಿ ಶ್ಲಾಘಿಸಿದರು. ಅವರ ಕೆಲವು ಅಭಿಪ್ರಾಯಗಳಿಗೂ ನನ್ನವಕ್ಕೂ ತಾಳೆಯಿಲ್ಲದ್ದನ್ನು ಅನಂತರದ ನಮ್ಮ ಚರ್ಚೆಗಳಲ್ಲಿ ಗ್ರಹಿಕೆಯಾದರೂ ಅವರು ತಾಳ್ಮೆಯನ್ನು ಕಳೆದುಕೊಳ್ಳದೆ ಸಹಾನುಭೂತಿಯಿಂದ ಎಲ್ಲವನ್ನೂ ವಿವೇಚಿಸಿ ನನ್ನ ಅಭಿಪ್ರಾಯಗಳ ಪ್ರಾಮಾಣಿಕತೆಯ ಬಗ್ಗೆ ವಿಶ್ವಾಸ ಮತ್ತು ಸಂತಸವನ್ನು ವ್ಯಕ್ತಪಡಿಸಿದರು. ನಾನು ಅವರಲ್ಲಿ ಗುರುತಿಸಿದ ಹಿರಿಯ ಗುಣವೆಂದರೆ ಸಹನೆ, ಪರಾನುಕಂಪೆ.

ಮುಂದೆ ಅವರು ಅಮೇರಿಕದ ವಿವಿಧ ರಾಜ್ಯಗಳ ಪ್ರವಾಸ ಕೈಕೊಂಡಾಗ, ನಾನು ವಾಸವಾಗಿರುವ ಆರಿಜೋನ ಪ್ರಾಂತದ ನಗರವಾದ ಫೀನಿಕ್ಸ್‌ಗೆ ಬರಲು ಅವರನ್ನು ಶ್ರೀ ಕೃಷ್ಣಶಾಸ್ತ್ರಿ ಅವರ ಮೂಲಕ ಆಮಂತ್ರಣ ನೀಡಿದೆ. ಅಲ್ಲಿ ಅವರಿಗೆ ನಮ್ಮ 'ದಕ್ಷಿಣ ಆರಿಜೋನ ಕನ್ನಡ ಕೂಟ'ದಲ್ಲಿ ಮಾತ್ರವಲ್ಲದೆ, ಕೆಲವು ಕನ್ನಡಿಗರ ಮನೆಗಳಲ್ಲೂ ಭಾಷಣ, ಪದ್ಯ ವಾಚನ, ಸನ್ಮಾನಗಳ ಏರ್ಪಾಟಾಗಿತ್ತು. ಇವೆಲ್ಲದರ ಜೊತೆಗೆ, ನಿಸಾರರನ್ನು ವಿದ್ಯಾರ್ಥಿ ದೆಸೆಯಿಂದ ಆಕರ್ಷಿಸಿದ್ದ ಜಗತ್ತಿನ ಅತ್ಯದ್ಭುತ ನೈಸರ್ಗಿಕ ಪ್ರೇಕ್ಷಣೀಯ ಸ್ಥಳವಾದ ಗ್ರಾಂಡ್ ಕಾನ್ಯನ್(ಮಹಾ ಕಂದರ)ಗೂ ಕರೆದೊಯ್ಯುವುದು ನನ್ನ ಸಂಕಲ್ಪವಾಗಿತ್ತು. ೨೦೦೨ರ ಅಕ್ಟೋಬರ್ ತಿಂಗಳಿನ ಕೊನೆಯ ಹೊತ್ತಿಗೆ ನಿಸಾರ್ ಅವರು ಕ್ಯಾಲಿಫೋರ್ನಿಯದ ಲಾಸ್ ಏಂಜಲಿಸ್ ವಿಮಾನ ನಿಲ್ದಾಣದಿಂದ ಫೀನಿಕ್ಸ್‌ಗೆ ಮಧ್ಯಾಹ್ನ ಬಂದಿಳಿದರು. ಅವರನ್ನು ನಾನು ಬರಮಾಡಿಕೊಂಡು ನಮ್ಮ ಮನೆಯಲ್ಲಿ ತಂಗುವ ವ್ಯವಸ್ಥೆ ಮಾಡಿದೆ. ನನ್ನ ಮಡದಿ

ಮ್ಯಾಡಲೀನ್ ಮತ್ತು ನಾನು ಅವರಿಗೆ ಬಲು ಬೇಗ ಆಪ್ತರಾಗಿಬಿಟ್ಟೆವು. ನನ್ನ ಪತ್ನಿ ಮ್ಯಾಡಲೀನ್ ಮೂಲತಃ ಫ್ರೆಂಚ್ ಮಹಿಳೆ, ಕೆನಡದ ಕ್ವಿಬೆಕ್ (Quebec) ಪ್ರದೇಶದವಳು. ಸಾಹಿತ್ಯ ಸಂಸ್ಕೃತಿಗಳ ಅಧ್ಯಯನದ ಬಗೆಗೆ ಗಣನೀಯ ಆಸಕ್ತಿ ಉಳ್ಳವಳು, ಜೊತೆಗೆ ಸದ್ಗೃಹಿಣಿ. ಭಾರತೀಯ ಜೀವನ ರೀತಿಯ ಬಗ್ಗೆ ಪ್ರೀತಿ ಗೌರವ ಉಳ್ಳವಳು. ಆಕೆಯ ನಡೆ-ನುಡಿಗಳು ನಿಸಾರರಿಗೆ ಬಹಳ ಇಷ್ಟವಾದವು. ಬಿಡುವಿನ ವೇಳೆಯಲ್ಲಿ ಆಕೆಯೊಂದಿಗೆ ಯಾವು ಯಾವುದೋ ವಿಷಯಗಳನ್ನು ಕುರಿತು ನಿಸಾರ್ ಚರ್ಚಿಸುತ್ತಿದ್ದರು. ಮ್ಯಾಡಲೀನ್ ತನಗೂ ಕನ್ನಡವನ್ನು ಬರೆಯುವುದಕ್ಕೆ ಬರುವುದೆಂದು, ನಾನು ಕಲಿಸಿದ್ದ ಕೆಲವು ಅಕ್ಷರಗಳನ್ನೂ ಆಕೆಯ ಹೆಸರನ್ನೂ ತನ್ನದೇ ಆದ ರೀತಿಯಲ್ಲಿ ಕನ್ನಡದಲ್ಲಿ ಬರೆದು ತೋರಿಸಿದಾಗ ನಿಸಾರರು ಸಂತೋಷದಿಂದ ಕುಣಿದಾಡಿಬಿಟ್ಟರು. ಆಕೆಯನ್ನು ಮುಕ್ತವಾಗಿ ಹೊಗಳಿದರು. ನಾವಿಬ್ಬರೇ ಇರುವ ಮನೆಗೆ ನಿಸಾರ್ ಬಂದದ್ದು ತುಂಬು ಕಳೆ ಮತ್ತು ಖುಷಿ ಬಂದಿತ್ತು. ನನ್ನಾಕೆಗೆ ಅಣ್ಣನೊಬ್ಬ ದೊರಕಿದಷ್ಟು ಸಂಭ್ರಮ ಮೂಡಿತ್ತು. ನಿಸಾರರು ನಮ್ಮ ಮನೆಯಲ್ಲಿ ಸುಮಾರು ಒಂದು ವಾರವಿದ್ದರು. ನನ್ನ ಮತ್ತು ನನ್ನ ಹೆಂಡತಿಯ ಪೂರ್ವೋತ್ತರಗಳನ್ನು; ನಮ್ಮ ಮೊದಲ ಭೇಟಿ, ಪರಸ್ಪರ ಮೆಚ್ಚುಗೆ, ಮದುವೆ, ಮಕ್ಕಳು ಮರಿ ಎಲ್ಲವನ್ನೂ ವಿವರವಾಗಿ ವಿಚಾರಿಸಿಕೊಂಡರು. ನಡುವೆ ನಮ್ಮ ಮಧ್ಯೆ ಚರ್ಚೆಯ ಭಯಂಕರ ವಾಗ್ಯುದ್ಧವೂ ಸಹ ಜರುಗುತ್ತಿತ್ತು; ಏರು ದನಿಯಲ್ಲಿ ವಾದ ವಿವಾದ ನಡೆಯುತ್ತಿತ್ತು. ಆದರೆ, ಅದೆಲ್ಲ ಕೆಲವು ಕ್ಷಣಗಳಷ್ಟೆ. ವಿರಸವಿಲ್ಲದೆ ಎಲ್ಲವೂ ಶಾಂತವಾಗಿ ಕೊನೆಗೊಳ್ಳುತ್ತಿತ್ತು. ನಿಸಾರರ ಇಚ್ಛೆಯಂತೆ, ನನ್ನಾಕೆ ಪ್ರಖ್ಯಾತ ಅರ್ಥತಜ್ಞ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ನ್ಯಾಷ್‌ನ ರೋಮಾಂಚಕಾರಿ ಜೀವನ ಚರಿತ್ರೆಯನ್ನು ಆಧರಿಸಿದ 'ಎ ಬ್ಯೂಟಿಫುಲ್ ಮೈಂಡ್' ಚಲಚ್ಚಿತ್ರದ ವಿಡಿಯೋ ಕ್ಯಾಸೆಟ್ ತಂದು ತೋರಿಸಿದ್ದಳು. ಅದನ್ನು ನೋಡಿ ಅವರಿಗೆ ಎಷ್ಟು ಆನಂದಾಯಿತೆಂದರೆ, 'ಮ್ಯಾಡೆಲೀನ್, ಎಂತಹ ಅದ್ಭುತವಾದ ಮೂವಿಯನ್ನು ತೋರಿಸಿದಿರಿ. ನಿಜಕ್ಕೂ ಇದೊಂದು ಅಪೂರ್ವವಾದ ಅನುಭವ. ಇದಕ್ಕಾಗಿ ನಿಮಗೆ ಧನ್ಯವಾದಗಳು' ಎಂದು ಭಾವಭರಿತರಾಗಿ ಉದ್ಗರಿಸಿದ್ದರು. ಮುಂದೊಮ್ಮೆ ಆಕೆ ನಿಸಾರರನ್ನು ತನ್ನ ಕಾರಿನಲ್ಲಿ ಫೀನಿಕ್ಸ್ ನಗರವನ್ನು ಸುತ್ತಿಸಿ, ಆರಿಜೋನ ರಾಜ್ಯ ವಿಶ್ವವಿದ್ಯಾಲಯ, ಡೌನ್ ಟೌನ್, ಮೆಕ್ಸಿಕೊ ಮತ್ತು ಅಮೇರಿಕನ್ ಇಂಡಿಯನ್ (ರೆಡ್ ಇಂಡಿಯನ್) ಮೂಲ ನಿವಾಸಿಗಳ ಬದುಕು ರೀತಿ ರಿವಾಜು, ಉಡುಗೆ ತೊಡಿಗೆ ಮುಂತಾದವನ್ನು ಪರಿಚಯಸುವ ವಿಶಿಷ್ಟವಾದ ಮ್ಯೂಸಿಯಂಅನ್ನು ತೋರಿಸಿಕೊಂಡು ಬಂದದ್ದಲ್ಲದೆ, ನಮ್ಮ ಭಾರತೀಯ ಸರದಾರಜಿಯ ಹೋಟೆಲೊಂದರಲ್ಲಿ ರಚಿಕರವಾದ ಮಾಂಸಾಹಾರವನ್ನೂ ಕೊಡಿಸಿದ್ದಳು. ಅಂದಹಾಗೆ, ಆ ಹೋಟೆಲ್ ಕೆಲವೇ ತಿಂಗಳಿನ ಹಿಂದೆ ಜಗತ್ಪ್ರಸಿದ್ಧವಾಗಿತ್ತು. ಅದರ ಮಾಲೀಕ, ಹೋಟೆಲ್ ಮುಂದಿನ ಹೂವಿನ ಗಿಡಗಳಿಗೆ ನೀರನ್ನು ಎರೆಯುತ್ತಿದ್ದಾಗ, ಅಮೇರಿಕನ್ ಕ್ರುದ್ಧ ಯುವಕನೊಬ್ಬ ಅವನನ್ನು ಗುಂಡಿಕ್ಕಿ ಕೊಂದಿದ್ದ. ಕಾರಣ, ಆತನ ತಲೆಯ ರುಮಾಲು ಮತ್ತು ಗಡ್ಡ. ಅವನನ್ನು ಮುಸ್ಲಿಮನೆಂದು ತಪ್ಪಾಗಿ ಭಾವಿಸಿ ಈ ದುಷ್ಕೃತ್ಯವೆಸಗಿದ್ದ. ಒಂದು ವರ್ಷದ ಮುಂಚೆಯಷ್ಟೇ ನ್ಯೂಯಾರ್ಕ್‌ನ ಅವಳಿ ವಿಶ್ವ ವಾಣಿಜ್ಯ ಕಟ್ಟಡಗಳನ್ನು ಭಯೋತ್ಪಾದಕರು ನೆಲಸಮ ಮಾಡಿದ್ದರು (9/11). ತಪ್ಪು

ಕಲ್ಪನೆಯಿಂದ ಆ ಅಮೇರಿಕನ್ ಯುವಕ ಈ ಬಡಪಾಯಿ ಸರದ್ದಾರಜಿಯ ಮೇಲೆ ಸೇಡು ತೀರಿಸಿಕೊಂಡಿದ್ದ. ಅದು 9/11 ಘಟನೆಯ ಅನಂತರದಲ್ಲಿ ಅಮೇರಿಕದಲ್ಲಿ ವ್ಯಕ್ತವಾದ ಮೊಟ್ಟಮೊದಲನೆಯ ಪ್ರತಿಕ್ರಿಯೆಯ ಘಟನೆಯಾಗಿತ್ತು. ಲೋಕದಾದ್ಯಂತ ಟಿ.ವಿ.ಗಳಲ್ಲಿ, ಪತ್ರಿಕೆಗಳಲ್ಲಿ ಭಾವಚಿತ್ರದ ಸಮೇತ ಈ ದುರಂತದ ಸುದ್ದಿ ಪ್ರಸಾರಗೊಂಡಿತ್ತು. ಈ ಬಗ್ಗೆ ಅಮೇರಿಕ ಮತ್ತು ಇತರ ಕಡೆ ಸಿಖ್ ಜನಾಂಗದವರಿಂದ ತೀವ್ರ ಪ್ರತಿಭಟನೆ ಕೂಡ ನಡೆದಿತ್ತು. ಆ ಭಾರತೀಯ ಸಿಖ್ ವ್ಯಕ್ತಿಯ ಭಾವಚಿತ್ರ ಹೋಟೆಲಿನ ಗೋಡೆಯ ಮೇಲೆ ಮೂಕ ಸಾಕ್ಷಿಯಾಗಿ ತೂಗಿದೆ—ಅವನ ದಯಾಪೂರ್ಣ ಶೂನ್ಯ ದೃಷ್ಟಿ ತಾನು ಹತ್ಯೆಯಾದ ತಾಣವನ್ನು ದಿಟ್ಟಿಸುತ್ತ. ಆ ವ್ಯಕ್ತಿಯ ಮಗನಿಗೆ ನಿಸಾರ್ ಸಾಂತ್ವನ ನುಡಿದರಂತೆ. ತನ್ನ ತಂದೆ ಗುಂಡಿಗೆ ಆಹುತಿಯಾದ ಜಾಗವನ್ನು ತೋರಿಸುವಾಗ ಅವನು ನಿಸಾರರಂತೆಯೇ ಭಾವೋದ್ವಿಗ್ನನಾಗಿದ್ದನಂತೆ.

ನಿಸಾರರಿಗೆ ನಮ್ಮ ಮನೆಯಲ್ಲಿ ಮೆಚ್ಚಾದದ್ದು ನಮ್ಮ ಪುಸ್ತಕಗಳ ಆಲ್ಮೈರಾಗಳು, ಸಾಧು ನಾಯಿ ಹನುಮ, ಮನೆಯೆದುರು ನಾವು ನೆಟ್ಟು ಬೆಳೆಸುತ್ತಿರುವ ಉದ್ದನೆಯ ಕವಲೊಡೆದ ಕ್ಯಾಕ್ಟಸ್ ಗಿಡ. ಆರಿಜೋನ ರಾಜ್ಯದ ಉದ್ದಗಲದಲ್ಲಿ ಈ ಮರಳುಗಾಡಿನ ವೃಕ್ಷ ರಾಜನೇ ಏಕಚಕ್ರಾಧಿಪತಿ. ಅದರದೇ ದೌಲತ್ತಿನ ದರ್ಬಾರು. ಕಾಲಿಟ್ಟಲ್ಲಿ ಈ ಕೊಬ್ಬಿದ ಕಳ್ಳಿ ಗಿಡಗಳು ಎದುರಾಗುತ್ತವೆ. ಫೀನಿಕ್ಸ್‌ನಿಂದ ಸುಮಾರು ನೂರಿನ್ನೂರು ಮೈಲಿ ದೂರದಲ್ಲಿರುವ ಟ್ಯುಸಾನ್ (Tucson) ಎಂಬ ಪಟ್ಟಣದ ಸುತ್ತಮುತ್ತ ಕ್ಯಾಕ್ಟಸ್‌ನ ಅರಣ್ಯವೇ ಇದೆ. ನೂರಾರು ವರ್ಷಗಳ ಹಿಂದಿನ ಕೋಟ್ಯಂತರ ಕ್ಯಾಕ್ಟಸ್ ಮರಗಳು ಅಲ್ಲಿ ವಿಜೃಂಭಿಸಿವೆ—ಪ್ರವಾಸಿಗರ ಮೆಚ್ಚಿನ ಪ್ರೇಕ್ಷಣೀಯ ತಾಣವಾಗಿ. ನಿಸಾರ್ ಅವರಿಗೆ ನಮ್ಮೂರಿನ ಕನ್ನಡಿಗ ಮಿತ್ರ ಜಗದೀಶ್ ಸಾಗರ್ ಆ ಕಳ್ಳಿಗಳ ಕಾನನದ ಅಪರೂಪದ ದರ್ಶನವನ್ನು ಮಾಡಿಸಿದರು. ಅದನ್ನು ನಿಸಾರರು 'ಕ್ಯಾಕ್ಟಸ್‌ಗಳ ಮಲೆನಾಡು' ಎಂದು ಕರೆದು ಮೆಚ್ಚಿಗೆ ವ್ಯಕ್ತಪಡಿಸಿದ್ದರು.

'ದಕ್ಷಿಣ ಆರಿಜೋನ ಕನ್ನಡ ಕೂಟ'ದಲ್ಲಿ ನಿಸಾರರು ಕನ್ನಡ ನಾಡು-ನುಡಿ ಮತ್ತು ನಮ್ಮ ಸಾಹಿತ್ಯದ ಪ್ರಾಚೀನತೆಯನ್ನು ಕುರಿತು ಉಪನ್ಯಾಸವನ್ನು ಮಾಡಿದರು. ಅವರ ಹಾಡುಗಳನ್ನು ನಮ್ಮ ಊರಿನ ಹೆಂಗಳೆಯರು ಮತ್ತು ಗಂಡಸರು ಹಿನ್ನೆಲೆಯ ವಾದ್ಯಗಳ ಸಹಿತ ಸೊಗಸಾಗಿ ಹಾಡಿದ್ದಲ್ಲದೆ, ಅವರಿಗೆ ಸನ್ಮಾನವೂ ಆಯಿತು. ನಿಸಾರ್, 'ಇದಕ್ಕೆಲ್ಲ ಕಾರಣ ಸನ್ಮಿತ್ರ ವಿ. ಸೀತಾರಾಮಯ್ಯ ಅವರು. ಅವರ ಪ್ರೀತಿ ಇಲ್ಲದಿದ್ದರೆ ನಾನು ನಿಮ್ಮ ಫೀನಿಕ್ಸ್ ಸಿಟಿಗೆ ಇರಲಿ, ಅಮೇರಿಕಕ್ಕೂ ಬರಲು ಸಾಧ್ಯವಾಗುತ್ತಿರಲಿಲ್ಲ' ಎಂದು ಭಾವುಕರಾಗಿ ನುಡಿದರು. ನಮ್ಮ ಅಮೇರಿಕನ್ನಡಿಗರು ಅವರ ಬಗೆಗೆ ತೋರಿಸಿದ ಪ್ರೀತಿ ವಿಶ್ವಾಸಗಳನ್ನು ಪ್ರತ್ಯಕ್ಷ ಕಂಡ ನನ್ನಲ್ಲಿ ಅವರನ್ನು ಆಹ್ವಾನಿಸಿದ್ದಕ್ಕೆ ಸಾರ್ಥಕತೆಯ ಭಾವನೆ ಮೂಡಿತ್ತು. ಕಾರ್ಯಕ್ರಮ ಮುಗಿದ ಬಳಿಕ ಭಾರತೀಯ ಮೂಲದ ಹೋಟೆಲಿನಲ್ಲಿ ಎಲ್ಲ ಸದಸ್ಯರೊಂದಿಗೆ ನಿಸಾರರಿಗೆ ಔತಣ ಕೂಟ ಏರ್ಪಾಟಾಗಿತ್ತು. ನಮ್ಮ 'ಕನ್ನಡ ಕೂಟ'ದ ಅಧ್ಯಕ್ಷರಾದ ಡಾ. ರಾಮಕೃಷ್ಣ ಈ ಕಾರ್ಯಕ್ರಮದ ಸಲುವಾಗಿ ಕುಟುಂಬ ಸಮೇತ ದೂರದ

ಊರಿನಿಂದ ಬಂದಿದ್ದರು. ಕಾರ್ಯಕ್ರಮದ ಯಶಸ್ಸಿನಿಂದ ಅವರು ಸುಪ್ರೀತರಾಗಿದ್ದರು.

ನಿಸಾರರ ಮಾತುಕತೆಗಳಲ್ಲಿ, ವರ್ತನೆಯಲ್ಲಿ ಎದ್ದು ತೋರುವ ಗುಣವೆಂದರೆ ಅವರ ಮಾನವೀಯತೆ. ಅವರ ಬರವಣಿಗೆಯಲ್ಲೂ ಅದು ನಿಚ್ಚಳವಾಗಿ ಪ್ರತಿಬಿಂಬಿತವಾಗಿದೆ. ಯಾರಿಗೇ ಆಗಲಿ ಅನ್ಯಾಯವೋ, ಅಪಮಾನವೋ ಆಗಿದೆ ಎಂದರೆ ಅವರು ತೀವ್ರ ಭಾವಾತ್ಮಕತೆಯಿಂದ ಪ್ರತಿಕ್ರಿಯಿಸುತ್ತಾರೆ; ಮಾನಸಿಕ ನೋವನ್ನು ಅನುಭವಿಸುತ್ತಾರೆ. ಅಲ್ಲದೆ, ಜಾತಿ ಮತಧರ್ಮಗಳ ಎಲ್ಲೆಗಳನ್ನು ದಾಟಿ ಎಲ್ಲರೂ ಸಹ ಮಾನವರೆಂಬ ಭಾವನೆ ಯನ್ನು ತಳೆದಿರುವುದು ಅವರ ಅಗ್ಗಳಿಕೆ. ಅನ್ಯಧರ್ಮ ಸಹಿಷ್ಣುತೆಯ ಈ ವಿಶೇಷ ಗುಣದ ಕಾರಣದಿಂದಾಗಿಯೇ ಅವರು ಯಾವುದೇ ಧರ್ಮವಿರಲಿ, ಅದರಲ್ಲಿರುವ ಒಳ್ಳೆಯ ಅಂಶ ಗಳನ್ನು ಮೆಚ್ಚಿ ಆದರಿಸುತ್ತ, ಬದುಕಿನಲ್ಲಿ ಅಳವಡಿಸುವ ಉದಾರ ಸ್ವಭಾವವನ್ನು ರೂಢಿಸಿ ಕೊಂಡಿರುವುದನ್ನು ನಾನು ಗುರುತಿಸಿದ್ದೇನೆ. ಪರರ ಧಾರ್ಮಿಕ ವಿಚಾರಗಳನ್ನು ಪ್ರಾಮಾಣಿಕ ಸಹಾನುಭೂತಿಯಿಂದ ಅರ್ಥಮಾಡಿಕೊಂಡಾಗ ಮಾತ್ರ, ವ್ಯಕ್ತಿಗೆ ಸ್ವಂತ ಧರ್ಮದ ತಿರುಳು ಅರ್ಥವಾಗುವುದೆಂದು ಅವರು ನಂಬಿರುವಂತೆ ನನಗೆ ತೋರುತ್ತದೆ.

ಅವರು ಆಗಾಗ್ಗೆ ನನ್ನ ಪೂರ್ವಾಪರಗಳನ್ನು ವಿಚಾರಿಸುತ್ತಿದ್ದರು. ನಾನು ಕಮ್ಮಸಂದ್ರ ವೆಂಬ ಹಳ್ಳಿಯ ಸಾಮಾನ್ಯ ಕುಟುಂಬದಿಂದ ಬಂದವನೆಂದೂ ನನ್ನ ಮಾತೃಶ್ರೀಯವರಾದ ಶ್ರೀಮತಿ ತಾಯಮ್ಮ ನನ್ನನ್ನು ಬಾಲ್ಯದಿಂದ ರೂಪಿಸಿ, ಈ ಮೇಲ್ಮೆಯ ಹಂತವನ್ನು ತಲಪಲು ಕಾರಣರಾದವರೆಂದು ನಾನು ನುಡಿದಾಗ, ನಿಸಾರ್ ನನ್ನ ಬಗ್ಗೆ ಇಮ್ಮಡಿ ಹೆಮ್ಮೆ ಪಟ್ಟಿದ್ದರು; ನನ್ನ ತಾಯಿಯ ಕಷ್ಟಸಹಿಷ್ಣುತೆ, ತ್ಯಾಗಗಳ ಬಗ್ಗೆ ಅಪಾರ ಗೌರವವನ್ನು ವ್ಯಕ್ತಪಡಿಸಿದ್ದರು. ಈ ಊರಿನಲ್ಲಿ ಇಂಜಿನಿಯರ್ ಆಗಿ ನಾನು ನಿರ್ಮಿಸಿದ ಹೆದ್ದಾರಿಯ ಸೇತುವೆಯನ್ನು ತೋರಿಸಿದಾಗಲಂತೂ ಹರ್ಷದಿಂದ ಉಬ್ಬಿ ಹೋದರು. 'ಸೀತಾರಾಮಯ್ಯನವರೆ, ನಮ್ಮಂಥವರದು ಕಾಗದದ ಮೇಲಿನ ಹಗುರ ಕಾವ್ಯ. ಆದರೆ ನಿಮ್ಮದು ಗಟ್ಟಿ ಹಾಗೂ ಭಾರವಾದ, ಜನರಿಗೆ ನಿತ್ಯ ಉಪಯೋಗಕ್ಕೆ ಬರುವ ಘನವಂತಿಕೆಯ ಸಾರ್ಥಕ ಕಾವ್ಯ' ಎಂದು ಪ್ರಶಂಸಿಸಿದ್ದರು.

ನಿಸಾರರಿಗೆ ನಮ್ಮ ಊರಿನ ಕೆಲವು ಕನ್ನಡ ಕುಟುಂಬಗಳು ತಮ್ಮ ಮನೆಗೆ ಕರೆದು ಔತಣವೇರ್ಪಡಿಸಿ, ಅವರ ಭಾಷಣ ಹಾಗೂ ಪದ್ಯಗಳನ್ನು ಆಲಿಸಿ ಸನ್ಮಾನಿಸಿದರು. ಆಯಾ ಮನೆಯವರು ತಮಗೆ ಆಪ್ತರಾದ ಕೆಲವು ಕುಟುಂಬಗಳನ್ನು ನಿಸಾರರ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದರು. ಹಿರಿಯ ಇಂಜಿನಿಯರ್ ಡಾ. ಕೃಷ್ಣಮೂರ್ತಿ ಮತ್ತು ಶ್ರೀಮತಿ ಗಿರಿಜಾ ಕೃಷ್ಣಮೂರ್ತಿ ಅವರ ಮನೆಯಲ್ಲಿ ಆ ರಾತ್ರಿ ಸುಮಾರು ಇಪ್ಪತ್ತೈದು-ಮೂವತ್ತು ಕುಟುಂಬಗಳು ಹಾಜರಿದ್ದು ನಿಸಾರರ ಮಾತುಗಳಿಗೆ ಮತ್ತು ಕವನಗಳ ಓದುವಿಕೆಗೆ ಹರ್ಷೋದ್ಗಾರದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಅವರ ಮನೆಯ ಕಾರ್ಯಕ್ರಮ ಚಿರ ಸ್ಮರಣೀಯ. ಅಮೇರಿಕದ ದಕ್ಷಿಣದ ಕೊನೆಯಲ್ಲಿರುವ ನಮ್ಮ ಊರಿಗೆ ಕನ್ನಡದ ಕವಿ-ಸಾಹಿತಿಗಳು ಬರುವುದೇ ತೀರಾ ಅಪರೂಪ. ಹಾಗೆ ಬಂದಾಗ ಇಲ್ಲಿನ ನಮ್ಮ ಕನ್ನಡಿಗರಿಗೆ ಅವರ ಮಾತುಗಳನ್ನು ಕೇಳುವ, ಅವರೊಡನೆ ಸಂವಾದಿಸುವ ಸುಯೋಗ ಒದಗುತ್ತದೆ.

ಯಾವ ಬಿಂಕ ಬಿಗುಮಾನಗಳೂ ಇಲ್ಲದ, ಸಾದಾಸೀದಾ ಸರಳ ವ್ಯಕ್ತಿತ್ವದ ಉನ್ನತ ವಿಚಾರಗಳ ಈ ಕವಿ ಬಲು ಬೇಗ ಎಲ್ಲರ ಅಕ್ಕರೆ ಗೌರವಗಳಿಗೆ ಪಾತ್ರರಾದದ್ದು ಆಶ್ಚರ್ಯವೇನಲ್ಲ. ಯಾವ ಕಾರ್ಯಕ್ರಮಕ್ಕೇ ಹೋಗಲಿ, ಯಾರ ಮನೆಗೇ ಹೋಗಲಿ ಅವರ ಕವನಗಳನ್ನು ಅನೇಕ ಸ್ತ್ರೀ-ಪುರುಷರು ವಯಸ್ಸಿನ ಗಣನೆಯಿಲ್ಲದೆ ಹಾಡಿ ಕವಿಯ ಮೆಚ್ಚುಗೆಯನ್ನು ಗಳಿಸುತ್ತಿದ್ದರು. ನಿಸಾರರನ್ನು ಅಮೇರಿಕನ್ನಡಿಗರು ನೇರವಾಗಿ ನೋಡುವುದಕ್ಕಿಂತ ಹತ್ತಾರು ವರ್ಷಗಳ ಮುಂಚೆಯೇ ಅವರ ಅನೇಕ ಭಾವಗೀತೆಗಳು ಪರಿಚಯವಾಗಿವೆ. ಅವರ 'ನಿತ್ಯೋತ್ಸವ', 'ಕುರಿಗಳು, ಸಾರ್, ಕುರಿಗಳು', 'ಬೆಣ್ಣೆ ಕದ್ದ', 'ನಾಡ ದೇವಿಯೆ', 'ಮತ್ತದೇ ಬೇಸರ', 'ಎಲ್ಲ ಮರೆತಿರುವಾಗ' ಇತ್ಯಾದಿ ಹಲವಾರು ಪದ್ಯಗಳು ನಮ್ಮ ಕನ್ನಡ ಕೂಟಗಳ ಹಾಗೂ 'ಅಕ್ಕ'ದ ಸಮ್ಮೇಳನಗಳಲ್ಲಿ ತಪ್ಪದೆ ಹಾಡಲ್ಪಡುತ್ತಿರುತ್ತವೆ.

ಇಂಜಿನಿಯರ್ ಆದರೂ ಕೃಷ್ಣಮೂರ್ತಿ ಸಾಹಿತ್ಯಪ್ರಿಯರು. ಅವರ ಶ್ರೀಮತಿ ಗಿರಿಜಾ ಅವರು ಕೆಲ ಕಾಲ ಶಿವಮೊಗ್ಗೆಯಲ್ಲಿ ಇಂಗ್ಲೀಷ್ ಅಧ್ಯಾಪಕಿ ಆಗಿದ್ದವರು; ನಿಸಾರ್ ಅವರ ಅಭಿಮಾನಿ. ಅವರ ಮನೆಗೆ ನಿಸಾರರನ್ನು ನಾನು ಕರೆದೊಯ್ದಾಗ ಏಳೆಂಟು ಜನ ಮುತ್ತೈದೆಯರು ಆರತಿ ಬೆಳಗಿ, ಹಾಡಿ, ತಮ್ಮ ಅಕ್ಕರೆಯ ಕವಿಯನ್ನು ಬರ ಮಾಡಿಕೊಂಡದ್ದಂತೂ ಯಾರಿಗಾದರೂ ಮೈ ಮರೆಸುವ ಅನುಭವ. ಇಷ್ಟೊಂದು ಜನರ ಪ್ರೀತಿಗೆ ಪಾತ್ರನಾಗಿರುವ ಕವಿ ನಿಜಕ್ಕೂ ಧನ್ಯ ಎನ್ನುವ ಭಾವನೆ ಆ ವೇಳೆ ನನ್ನಲ್ಲಿ ಸುಳಿದು ಹೋಯಿತು. ನಿಸಾರರಂತೂ ಮಾತು ಹೊರಡದೆ ಕಂಬದಂತೆ ನಿಂತುಬಿಟ್ಟರು. ಅವರ ಕಣ್ಣುಗಳಲ್ಲಿ ಕೃತಜ್ಞತೆಯ ಹನಿಗಳು ಮಿನುಗುತ್ತಿದ್ದವು. 'ತಾಯಂದಿರ, ನೀವು ಹೆಣ್ಣುಗಳಲ್ಲಮ್ಮ, ಸಾಕ್ಷಾತ್ ದೇವಿಯರು' ಎಂದು ಗದ್ಗದ ಕಂಠದಿಂದ ಉದ್ಗರಿಸಿದ್ದು ನನಗಿನ್ನೂ ನೆನಪಿದೆ.

ಹಾಗೆಯೇ, ಮತ್ತೊಂದು ದಿನ ಶ್ರೀ ಹೇಮಂತ ಕುಮಾರ್ ಮತ್ತು ಅವರ ಶ್ರೀಮತಿ ರಶ್ಮಿ ಅವರ ಆದರಾತಿಥ್ಯ ನೆರವೇರಿತು. ಅಲ್ಲಿ ಸಹ ಅದೇ ಅಕ್ಕರೆ, ಪ್ರೀತಿ ಆದರಗಳ ತುಂಬು ಹೊಳೆ. ತಮ್ಮ ನೆಚ್ಚಿನ ಕವಿಯ ಜೊತೆ ಸಾಹಿತ್ಯ, ಸಂಸ್ಕೃತಿ, ಭಾಷೆ, ದೇಶ ಇತ್ಯಾದಿ ಕುರಿತು ಮಾತುಕತೆ; ಅವರ ಹಾಡುಗಳನ್ನು ಕೇಳುವ ತವಕ. ಎಲ್ಲೆಲ್ಲೂ ಅದೇ ಪುನಶ್ಚರಣೆ.

ಇನ್ನೊಂದು ದಿವಸ ನನ್ನ ಮಾನ್ಯ ಸ್ನೇಹಿತರಾದ ಮೈಸೂರು ಸುರೇಶ್ ಅವರ ಮನೆಯಲ್ಲಿ ಸ್ನೇಹ ಸಮಾರಂಭ. ಅವರ ಪತ್ನಿ ಶ್ರೀಮತಿ ಉಷಾ ಮತ್ತು ಮಗಳು ರುಚಿಯಾದ ಅಡುಗೆಯನ್ನು ಮಾಡಿ, ಬಡಿಸಿ ಸತ್ಕರಿಸಿದರು. ಊಟವಾದ ಬಳಿಕ ಪ್ರಶ್ನೋತ್ತರಗಳ ಸರದಿ. ಕೇಳಿದ ಪ್ರಶ್ನೆಗಳಿಗೆ ಸಾವಧಾನದ ಸಮಾಧಾನಕರ ಉತ್ತರಗಳನ್ನು ಕವಿಗಳು ನೀಡುತ್ತಿದ್ದರು. ಜೊತೆಗೆ ಸಮಯೋಚಿತವಾದ ಹಾಸ್ಯ ಚಟಾಕಿಗಳಿಗೂ ಕನ್ನಡದ ಹಿರಿಯ ಕವಿಗಳ ಕವನಗಳ ಸಾಲುಗಳಿಗೂ ಕೊರತೆಯಿರುತ್ತಿರಲಿಲ್ಲ. ಒಬ್ಬ ವ್ಯಕ್ತಿ, ಬಹುಶಃ ಉತ್ತರ ಕರ್ನಾಟಕದವರು ಎಂದು ತೋರುತ್ತದೆ; ಮುಂಬಯಿಯಲ್ಲೋ, ಪುಣೆಯಲ್ಲೋ ಬಹಳ ಕಾಲ ಇದ್ದವರು. ನನಗೆ ಹೆಚ್ಚು ಪರಿಚಯವಿಲ್ಲದವರು, ಮಾತಿನ ನಡುವೆ ಉಚ್ಚಾರಣೆಯನ್ನು ಕುರಿತಂತೆ ಕನ್ನಡ ನುಡಿಯನ್ನು ಮರಾಠಿಗೆ ಹೋಲಿಸುತ್ತ ಒಂದೆರಡು ಅಹಿತವಾದ

ಮಾತುಗಳನ್ನು ಆಡಿದರು. ಆ ಮಾತುಗಳು ಭಾವಾವೇಶದ್ದಾಗಿದ್ದವೇ ಹೊರತು ತರ್ಕಸಮ್ಮತದ್ದಾಗಿರಲಿಲ್ಲ. ನಾನು ಅವರ ಉದ್ವೇಗದ ಮಾತುಗಳನ್ನು ವಿರೋಧಿಸಿ, ನಮ್ಮ ತಾಯ್ನುಡಿಯ ಹಿರಿಮೆಯನ್ನು ವಿವರಿಸತೊಡಗಿದೆ. ಆ ವ್ಯಕ್ತಿ, ಕನ್ನಡವನ್ನು ಹೈ ಪಿಚ್‌ನಲ್ಲಿ ಉಚ್ಚರಿಸಲು ಆಗದು ಎಂದು ಏನೇನೋ ಅಸಂಬದ್ಧವಾಗಿ ಪ್ರಲಾಪಿಸತೊಡಗಿದರು.

ಆತನಕ ತಾಳ್ಮೆಯಿಂದ ನಮ್ಮ ಚರ್ಚೆಯನ್ನು ಸೌಮ್ಯವಾಗಿಯೇ ಆಲಿಸುತ್ತಿದ್ದ ನಿಸಾರರು ನನ್ನ ಅಭಿಪ್ರಾಯಗಳನ್ನು ಸಮರ್ಥಿಸುವಂತೆ ವಾದಿಸುತ್ತ, ಟೀಕಿಸಿದ ವ್ಯಕ್ತಿಯನ್ನು ಕುರಿತು, 'ನೀವು 'ಪಿಚ್ ಪಿಚ್' ಎಂದು ಪುನರುಚ್ಚರಿಸಿದಿರಲ್ಲ, ಅದು ತೆಲುಗಿನ 'ಪಿಚ್' ಇರಬೇಕು. ಮೊದಲು ಯಾರಾದರೂ ತಜ್ಞವೈದ್ಯನಿಂದ ಚಿಕಿತ್ಸೆ ಪಡೆದು ಅದರಿಂದ ಮುಕ್ತರಾಗಿ. ಆಮೇಲೆ ತಾನೇ ತಾನಾಗಿ ನಿಮಗೆ ಎಚ್ಚರ, ವಿವೇಕ ಮೂಡುತ್ತೆ' ಎಂದರು. ಆಗ, ಅಲ್ಲಿದ್ದ ಹಳೆಯ ಮೈಸೂರಿನ ಹೆಂಗಸರು-ಗಂಡಸರು 'ಹೋ' ಎಂದು ನಗಲು ಪ್ರಾರಂಭಿಸಿದರು—ಅವರಿಗೆ ಕೊಂಚ ಮಟ್ಟಿಗೆ ತೆಲುಗು ಭಾಷೆ ಅರ್ಥವಾಗುತ್ತಿತ್ತು. 'ಪಿಚ್' ಎಂದ ವ್ಯಕ್ತಿ 'ಪೆಚ್' ಆಗಿ ಮಿಕಿಮಿಕಿ ನೋಡ ಹತ್ತಿದ್ದರು. ಕನ್ನಡ ನಾಡು-ನುಡಿಗಳ ಬಗೆಗೆ ಯಾರೇ ಕೀಳಾಗಿ ಮಾತಾಡಿದರೂ ನಿಸಾರರು ತಕ್ಷಣ ಮುಟ್ಟಿ ನೋಡಿಕೊಳ್ಳುವಂತೆ ಪ್ರತಿಕ್ರಿಯಿಸುತ್ತಾರೆ. ಅವರ ಈ ಅಭಿಮಾನವನ್ನು ನೆನೆದರೆ ನನಗೆ ಅವರ ಬಗೆಗೆ ಅಕ್ಕರೆ ಅಧಿಕವಾಗುತ್ತದೆ.

ನಿಸಾರರನ್ನು ಗ್ರಾಂಡ್ ಕಾನ್ಯನ್‌ನ ದರ್ಶನ ಮಾಡಿಸಿದಾಗ ಮಾತ್ರ ನಮ್ಮ ಫೀನಿಕ್ಸ್ ನಗರಕ್ಕೆ ಅವರನ್ನು ಆಹ್ವಾನಿಸಿದ್ದು ಅರ್ಥಪೂರ್ಣವಾಗುವುದು ಎಂದು ನಂಬಿದ್ದ ನಾನು ಒಂದು ದಿವಸ ೨೫೦ ಮೈಲಿ ದೂರದಲ್ಲಿರುವ ಆ ಸ್ಥಳಕ್ಕೆ ಹೋಗಲು ಅಣಿಯಾದೆ. ಬೆಳಗಿನ ಉಪಾಹಾರ ಮುಗಿಸಿ ನನ್ನ ಮರ್ಸಿಡಿಸ್ ಕಾರನ್ನು ಏರಿ ಉತ್ತರ ದಿಕ್ಕಿನಲ್ಲಿ ಹೊರಟೆವು. ಹೋಗುವಾಗ ನನ್ನ ಮಡದಿ ಏನೋ ಜ್ಞಾಪಿಸಿಕೊಂಡವಳಂತೆ ಮನೆಯೊಳಗೆ ಹೋಗಿ ನಿಸಾರರಿಗೆ ಚರ್ಮದ ಬೆಚ್ಚನೆಯ ಜರ್ಕಿನ್ ದಪ್ಪನೆಯ ಕೈಗವುಸು ಮತ್ತು ತಲೆ, ಮುಖಗಳನ್ನು ಮುಚ್ಚುವ ಉಣ್ಣೆಯ ಕುಲಾವಿಯನ್ನು ಕೊಟ್ಟಳು. ನಿಸಾರರು, 'ಇದೆಲ್ಲಾ ಯಾಕೆ? ಇಲ್ಲೇ ಇಷ್ಟು ಸೆಖೆಯಿದೆಯಲ್ಲ' ಎಂದಾಗ, 'ದಯವಿಟ್ಟು ಇದನ್ನು ಜೊತೆಗೆ ತೆಗೆದುಕೊಂಡು ಹೋಗಿ, ಅಲ್ಲಿನ ಹವಾಮಾನ ಹೀಗೇ ಅಂತ ಹೇಳುವುದಕ್ಕಾಗೊಲ್ಲ. ಈಗಂತೂ ವಿಪರೀತ ಚಳಿಯಿರುತ್ತೆ' ಎಂದು ಬಲವಂತವಾಗಿ ಅವುಗಳನ್ನು ನೀಡಿದಳು. ನಿಸಾರರು, ಆಮೇಲೆ ಈ ವಸ್ತುಗಳ ಹಿರಿಮೆ ಮತ್ತು ಮಹತ್ವವನ್ನು ಸ್ವತಃ ಮನಗಂಡು ಮ್ಯಾಡಲೀನ್‌ಳನ್ನು ಅದೆಷ್ಟು ಬಾರಿ ಕೃತಜ್ಞತೆಯಿಂದ ನೆನೆದರೋ! ಗ್ರಾಂಡ್ ಕ್ಯಾನನ್ ಬಳಿ ಗವುಸನ್ನು ಹಾಕಿಕೊಂಡು ಜರ್ಕಿನ್‌ನ ಬೆಚ್ಚನೆಯ ಜೇಬಿನೊಳಗೆ ಕೈ ದೂರಿಸಿದರೂ ಅವು ಸೆಡೆತು ಮರವಟ್ಟ ಹಾಗೆ ಭಾಸವಾಗಿದ್ದವು. ಇಡೀ ಮೈ ಗಡಗಡ ನಡುಗುತ್ತಿತ್ತು. ಅವುಗಳಿಲ್ಲದೆ ಬರುತ್ತಿದ್ದರೆ, ಗ್ರಾಂಡ್ ಕಾನ್ಯನ್‌ಅನ್ನು ತೀರಾ ಹತ್ತಿರದಿಂದ ವೀಕ್ಷಿಸುವ ಭಾಗ್ಯ ಅವರಿಗೆ ದೊರಕುತ್ತಿತ್ತೋ ಇಲ್ಲವೋ.

ಪೂರ್ವಭಾವಿಯಾಗಿ ಈ ಭವ್ಯಾದ್ಭುತ ಸೃಷ್ಟಿ ವಿಶೇಷದ ಬಗೆಗೆ ಕೆಲವು ಸಂಗತಿಗಳನ್ನು

ತಿಳಿಯುವುದು ಸಂದರ್ಭೋಚಿತ ಹಾಗೂ ಉಪಯುಕ್ತವೆನ್ನಿಸುತ್ತದೆ: ಗ್ರಾಂಡ್ ಕಾನ್ಯನ್ (Grand Canyon) ಎಂದು ಹೆಸರಾಗಿರುವ ಮಹಾ ಕಂದರ ಜಗತ್ತಿನ ವಿರಾಟ್ ರೂಪದ ನೈಸರ್ಗಿಕ ದೃಶ್ಯಗಳಲ್ಲೇ ಅದ್ವಿತೀಯವಾದದ್ದು. ನೋಡುಗರಲ್ಲಿ ಅದು ಉಂಟು ಮಾಡುವ ಭಯಾಶಂಕೆಯ ವಿಸ್ಮಯ ಭಾವ, ಭೂಮಾನುಭವ ಬಣ್ಣಿಸಲು ಅಸದಳ. ಕೆಲವೆಡೆಯಲ್ಲಿ ಅದರ ಆಳ ಒಂದು ಮೈಲಿಯಷ್ಟೋ ಅಥವಾ ೧.೬ ಕಿಲೋಮೀಟರ್‌ನಷ್ಟೋ ಇದ್ದರೆ, ಮಿಕ್ಕ ಕಡೆಗಳಲ್ಲಿ ೧೫೦೦ ಮೀಟರ್ ಅಥವಾ ೫೦೦೦ ಅಡಿಗಳ ಪಾತಾಳ ಸಾಮಾನ್ಯ. ೪೪೬ ಕಿ.ಮೀ. (೨೭೭ ಮೈಲಿ) ಉದ್ದ, ೨೯ ಕಿ.ಮಿ. (೧೮ ಮೈಲಿ) ಅಗಲದ ಈ ಬೃಹತ್ ಕೊಳ್ಳದ ಒಟ್ಟಾರೆ ದರ್ಶನ ಯಾರಿಗೂ ದುಸ್ಸಾಧ್ಯವೇ. ಅಸಂಖ್ಯಾತ ಪ್ರಸ್ಥಭೂಮಿಗಳೂ (ಇವುಗಳಲ್ಲಿ ಕೊಕೊನಿನೊ ಮತ್ತು ಕೈಬಾಬ್ ಪ್ಲೇಟೂಗಳು ಹೆಸರಾಂತವಾದವು), ಶಿಲಾ ಗೋಪುರಗಳು, ಕಣಿವೆ, ಗಿರಿಗಳು ಇದ್ದು, ಪ್ರಪಂಚದ ಅತ್ಯಂತ ಚಕಿತಗೊಳಿಸುವ ಭೂದೃಶ್ಯಗಳಲ್ಲೇ ಅದು ಮುಂಚೂಣಿಯಲ್ಲಿದೆ. ಅದರ ಭೀಮ ಸದೃಶವಾದ ಭೀಷಣ ರಮಣೀಯ ಸೌಂದರ್ಯ ಎಂತಹ ಅರಸಿಕನನ್ನೂ ವಿಸ್ಮಯಾನಂದಗಳಿಂದ, ಮಹಿಮಾಸ್ಪದ ಮಹತ್ತರತೆಯಿಂದ ಮೂಕ ಗೊಳಿಸದೆ ಇರಲಾರದು. ಅದರ ಪ್ರಪ್ರಾಚೀನವಾದ ಸಂಕೀರ್ಣ ಭೂ ವೈಜ್ಞಾನಿಕ ಕ್ರಿಯೆಗಳ ಇತಿಹಾಸ, ವರ್ತಮಾನ ಕಾಲದ ವಿವಿಧಾಕಾರಗಳ ದೈತ್ಯಸಮ ಹರವು, ಮುಗಿವಿಲ್ಲದ ಜನಾಕರ್ಷಣೆ ಮಾತಿಗೆ ನಿಲುಕದ್ದು. ರಾಷ್ಟ್ರಕವಿ ಕುವೆಂಪು ಅವರು ಶ್ರೀ ಗೊಮ್ಮಟೇಶ್ವರನ ಸಾನ್ನಿಧ್ಯದಲ್ಲಿ ಮೊಟ್ಟಮೊದಲು ನಿಂತಾಗ 'ಯಾರೊ ತೆಕ್ಕನೆ ತುಡುಕಿ ಬಾಯ್ಮುಚ್ಚಿ ಹಿಡಿದಂತೆ, ಮೂರ್ಛೆ ಹೋಗಿದೆ ಮಾತು' ಎಂದು ಹೊಮ್ಮಿಸಿದ ಭಾವೋದ್ಗಾರದ ಹಿಂದಿನ ಭವ್ಯತಾ ಅನುಭೂತಿಯ ಹಲವು ಪಟ್ಟು ಮಹಾನ್ ಅನುಭವ ವೀಕ್ಷಕರಿಗೆ ಆಗುತ್ತದೆ—ಕಾಲ ಸಾವಧಾನವಾಗಿ ರೂಪಾರಿಸಿರುವ ಈ ನಿಸ್ಸೀಮ ಕಂದರವನ್ನು ಕಂಡಾಗ. ಅಮೇರಿಕದ ಆರಿಜೋನ ರಾಜ್ಯದ ದುರ್ಗಮ ಹಾಗೂ ಅಜ್ಞಾತ ಭಾಗದಲ್ಲಿರುವ ಈ ನೈಸರ್ಗಿಕ ಮಹಾದ್ಭುತ ದೃಶ್ಯಾವಳಿ, ಸಾಲಿಯಾನ ೫೦ ಲಕ್ಷ (೫ ಮಿಲಿಯನ್) ಪ್ರವಾಸಿಗಳನ್ನು ಆಕರ್ಷಿಸಿ ತನ್ನತ್ತ ಬರಮಾಡಿಕೊಳ್ಳುತ್ತದೆ. ಜಗತ್ತಿನ ಬಲು ದೂರದ ಪ್ರದೇಶಗಳಿಂದ ಅಮೇರಿಕಕ್ಕೆ ಬರುವ ಜನರಲ್ಲಿ ಸರಿಸುಮಾರು ಸಂಖ್ಯೆಯ ಪ್ರವಾಸಿಗರು ಈ ತಾಣವನ್ನು ಕಾಣದೆ ಹಿಂದಿರುಗುವುದಿಲ್ಲ. ಹಾಗೆ ಬಂದದ್ದಕ್ಕೆ, ಈ ಮಹಾ ಕಂದರ ಅವರನ್ನು ನಿರಾಶೆಗೊಳಿಸಿ ಕಳಿಸುವ ಸಂಭವ ಕಡಮೆ. ಗ್ರಾಂಡ್ ಕಾನ್ಯನ್‌ನ ಒಂದು ಮೈಲಿಯ ಆಳಕ್ಕೆ ಇಳಿದು, ಈ ಕಂದರದ ನಿರ್ಮಾಣಕ್ಕೆ ಮುಖ್ಯ ಕಾರಣವಾದ, ಅಲ್ಲಿ ಹರಿದಿರುವ ಕೊಲೊರೆಡೊ ನದಿಯ ಜಲರಾಶಿಯ ಭೋರ್ಗರೆತವನ್ನು ವೀಕ್ಷಿಸುವುದೇ ಒಂದು ಅಪೂರ್ವ ವಾದ ಮಹದನುಭವ. ಕಣ್ಣು ದಣಿಯುವ ತನಕ, ಕತ್ತು ನೋವನ್ನು ಸಹಿಸಿಕೊಂಡಿರುವ ತನಕ ಒಂದರ ಮೇಲೊಂದು ನೀಟಾಗಿ, ವ್ಯವಸ್ಥಿತವಾಗಿ ಪದರ ಪದರವಾಗಿ ಅರ್ಧ ಕಿಲೋಮೀಟರ್‌ನಷ್ಟು ಎತ್ತರಕ್ಕೆ ಪೇರಿಸಿಟ್ಟಿರುವ ಅಲ್ಲಿನ ಬೃಹತ್ ಶಿಲಾಖಂಡಗಳನ್ನು ದಿಟ್ಟಿಸುವುದು ಸ್ವರ್ಗೀಯ ಸದೃಶವಾದ ವಿರಾಟ್ ಅನುಭವ. ಹಾಗೆಯೇ, ಕೊಚ್ಚಿ ಹರಿಯುವ ಕೊಲೊರೆಡೊ ನದಿಯ ಮೇಲಿನ ದೋಣಿಯ ವಿಹಾರದ ಸಾಹಸಾನುಭವ ವರ್ಣನಾತೀತ, ಹೃದಯಮಾತ್ರವೇದ್ಯ.

ಕೊಲೊರೆಡೊ ನದಿ ಅರ್ಧ ಬಿಲಿಯನ್ ವರ್ಷಗಳ ಹಿಂದೆ ಅಲ್ಲಿನ ಸುಣ್ಣಶಿಲೆ, ಮರಳುಶಿಲೆ ಮತ್ತು ಜೇಡಿಶಿಲೆಗಳನ್ನು ಕೊಚ್ಚಿ, ಕೊರೆದು, ಸವೆಸಿ, ಚಿತ್ರ ವಿಚಿತ್ರವಾದ ಆಕಾರಗಳ ಸಾವಿರಾರು ಬೃಹತ್ ಶಿಲಾಖಂಡಗಳನ್ನು ನಿರ್ಮಿಸಿದೆ. ಇದೊಂದು ನಿಸರ್ಗದ ಅಪ್ರತಿಮವಾದ ಮ್ಯೂಸಿಯಂ: ಅಸಾಮಾನ್ಯ ವಸ್ತುಪ್ರದರ್ಶನಾಲಯ. ಶಿಲೆಗಳ ಸವಕಳಿಯ ನಿಧಾನಗತಿಯ ಕ್ರಿಯೆಯಲ್ಲಿ ತೊಡಗಿಕೊಂಡ ಕೊಲೊರೆಡೊ ನದಿಗೆ ನೆರವಾಗಿ ಕಾರ್ಯೋದ್ಯುಕ್ತವಾದವು ಗಾಳಿ, ಮಳೆ ಮತ್ತು ಸೂರ್ಯನ ಬಿಸಿಲು. ಗ್ರಾಂಡ್ ಕಾನ್ಯನ್‌ನ ಶಿಲೆಗಳ ಕೆಂಪು, ಕಂದು, ಕಿತ್ತಳೆ ಹಳದಿ, ಬೂದು, ಬಿಳಿ ಬಣ್ಣಗಳ ವಿನ್ಯಾಸ, ದೈತ್ಯ ಕುಂಚದಿಂದ ಸೃಷ್ಟಿಯಾದ ಮಹಾ ವರ್ಣಚಿತ್ರ ಪಟದಂತೆ ತೋರುತ್ತದೆ. ಅದರ ಸುವಿಸ್ತಾರವಾದ ಕಣಿವೆಗಳ ನಡುನಡುವೆ ದಿಢೀರನೆ ಮೇಲೆದ್ದು ಮೆರೆದಿರುವ ವಿವಿಧಾಕಾರದ ಕೋಡುಗಲ್ಲುಗಳ ಭವ್ಯಾತಿಭವ್ಯ ದೃಶ್ಯ ಪರಿಸರದಲ್ಲಿ ಎಂತೆಂತಹ ಸಸ್ಯ ಹಾಗೂ ಪ್ರಾಣಿ ವಿಶೇಷಗಳು ಬಾಳಿ, ಮೆರೆದು ಮರೆಯಾಗಿವೆಯೋ. ಇಂದಿಗೂ ಅದರ ಸುತ್ತಮುತ್ತ ಇರುವ ನಿತ್ಯ ಹರಿದ್ವರ್ಣದ ಜ್ಯೂನಿಪರ್ ಮತ್ತು ಪಿನೋನ್ ವೃಕ್ಷಗಳ ದಟ್ಟ ಕಾಡು, ಮೈ ಚಾಚಿದ ಸಮತಟ್ಟಾದ ಪ್ರಸ್ಥಭೂಮಿಗಳು ತಮ್ಮ ಅಪೂರ್ವವಾದ ಜೀವ ವೈವಿಧ್ಯಕ್ಕೆ ಸಾಕ್ಷಿಯಾಗಿ ವಿಜೃಂಭಿಸಿವೆ. ಹಿಂದಿನ ಕಾಲದಲ್ಲಿ ರೆಡ್ ಇಂಡಿಯನ್ ಜನಾಂಗದ ಕೆಲವು ಪಂಗಡಗಳು ರಕ್ಷಣೆಯ ಕಾರಣಕ್ಕೆಈ ಮಹಾ ಕಂದರದಲ್ಲಿ ವಾಸವಾಗಿದ್ದುದರ ಕುರುಹುಗಳು ಈಗಲೂ ಇವೆ. ಹೆಲಿಕಾಪ್ಟರಿನ ಮೂಲಕ ಈ ಪ್ರಾಕೃತಿಕ ಬೃಹನ್ನಿರ್ಮಿತಿಯ ಹಕ್ಕಿನೋಟಕ್ಕೆ ಸಮನಾದ ದಿವ್ಯಾನುಭವ ಲೋಕದಲ್ಲಿ ಮತ್ತೊಂದಿರದು.

ಗ್ರಾಂಡ್ ಕಾನ್ಯನ್‌ನ ಹತ್ತಿರದಲ್ಲೇ ಹೋಟೆಲ್‌ಗಳು, ತಂಗುವುದಕ್ಕೆ ಪ್ರವಾಸೀ ಧಾಮಗಳು, ವಿವಿಧ ವಸ್ತುಗಳ ಅಂಗಡಿ, ಮಳಿಗೆಗಳು ಇದ್ದು ಜನರಿಗೆ ಅಲ್ಲಿಗೆ ಬರಲು, ಉಳಿಯಲು ಯಾವುದೇ ಕೊರತೆಯಿದೆ ಎನ್ನಿಸುವುದಿಲ್ಲ. ಹೀಗಾಗಿ, ಅನೇಕರು ಹಲವಾರು ದಿನಗಳನ್ನು ಈ ಎಡೆಯಲ್ಲಿ ಕಳೆದು ನೂರಾರು ಮೈಲಿಯ ತನಕ ಗ್ರಾಂಡ್ ಕಾನ್ಯನ್‌ನ ದರ್ಶನ ಮಾಡಿ ಆನಂದಿಸುವುದುಂಟು. ಇಂತಹ ಏರ್ಪಾಟು ನಮ್ಮ ಭಾರತದ ಎಷ್ಟೋ ವೈವಿಧ್ಯಮಯ ಪ್ರೇಕ್ಷಣಾರ್ಹ ಸ್ಥಳಗಳಿಗೆ ಇಲ್ಲದಿರುವುದು ದುರ್ದೈವದ ವಿಚಾರ. ಹೀಗಾಗಿ ಪ್ರವಾಸೋದ್ಯಮ ಇಲ್ಲಿನಷ್ಟು ನಮ್ಮಲ್ಲಿ ಮುಂದುವರಿದಿಲ್ಲ ಎನ್ನಬೇಕು.

ನಾವು ಗ್ರಾಂಡ್ ಕಾನ್ಯನ್‌ನತ್ತ ಪಯಣ ಬೆಳೆಸಿದಾಗ ಹವಾಮಾನ ಹಿತಕರವಾಗಿತ್ತು. ಕ್ಯಾಕ್ಟಸ್ ಮತ್ತು ಕೆಲವೊಂದು ಕುರುಚಲು ಗಿಡಗಳನ್ನು ಬಿಟ್ಟರೆ ಉಳಿದಂತೆ ಹೆಚ್ಚು ಸಸ್ಯ ಸಮೃದ್ಧಿಯಿಲ್ಲದ, ಬಯಲು ಹಾಗೂ ಸಣ್ಣ ಬೆಟ್ಟಗುಡ್ಡಗಳ ಪ್ರದೇಶ. ಅಮೇರಿಕನ್ ಇಂಡಿಯನ್ (ರೆಡ್ ಇಂಡಿಯನ್) ಜನಾಂಗದ ಒಂದು ಕಾಲೋನಿಯಂತಿರುವ ಸ್ಕಾಟ್‌ಡೇಲ್ ಎಂಬ ಊರನ್ನು ದಾಟಿ ಮುನ್ಸಾಗಿದೆವು. ಉದ್ದಕ್ಕೂ ನಿಸಾರರ ಜೊತೆ ನಮ್ಮ ದೇಶದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳ ಬಗೆಗೆ ಮಾತುಗಳು, ವಾದ-ವಿವಾದ. ಎಷ್ಟೋ ವಿಷಯಗಳಲ್ಲಿ ನಮ್ಮಿಬ್ಬರ ಮನಸ್ಸು ತಾಳೆಯಾಗುತ್ತಿದ್ದರೂ ಕೆಲವು ಸಂಗತಿಗಳಲ್ಲಿ ನಮ್ಮಲ್ಲಿ ಒಮ್ಮತವಿರಲಿಲ್ಲ. ನಿಸಾರ್ ಅವರು 'ಸೀತಾರಾಮಯ್ಯ, ನಿಮ್ಮ

ಅಭಿಪ್ರಾಯಗಳು ಬಹಳ ದಿಟ್ಟವಾದವು ಮತ್ತು ಬಂಡಾಯ ಸ್ವರೂಪದವು. ನಿಮಗೆ ಹೋಲಿಸಿದರೆ ನಾನು ನಿಜಕ್ಕೂ ಸೌಮ್ಯವಾದಿ ಎನ್ನಬೇಕು. ನೀವು, ನಮ್ಮ ರಾಷ್ಟ್ರದಲ್ಲಿ ಹಿಂದಿನಿಂದ ಬಂದಿರುವ ಅಸಮಾನತೆ, ಭೇದದ ಎಣಿಕೆ ಮತ್ತು ಶೋಷಣೆಯನ್ನು ಖಂಡಿಸುತ್ತೀರಿ, ಪುರೋಹಿತಶಾಹಿಯನ್ನು ಮತ್ತು ಖೋಟಾ ಪುಢಾರಿಗಳನ್ನು ಖಂಡಿಸುತ್ತೀರಿ. ನಿಮ್ಮ ಅನ್ನಿಸಿಕೆಗಳು ತರ್ಕಸಮ್ಮತ ಮತ್ತು ವಿಚಾರಪರ ನಿಜ. ಆದರೆ, ಹಲವು ಶತಮಾನಗಳಿಂದ ಗಟ್ಟಿಯಾಗಿ ಬೇರೂರಿರುವ ಅನ್ಯಾಯ ಅಕ್ರಮಗಳನ್ನು ಕೊನೆಗಾಣಿಸಿ ದಿಢೀರಾಗಿ ಆಮೂಲಾಗ್ರವಾದ ಸಾಮಾಜಿಕ ಪರಿವರ್ತನೆಯನ್ನು ತಂದು ಸರ್ವೋದಯ, ಸರ್ವೋದ್ಧಾರ, ಸರ್ವ ಸಮಾನತೆಯನ್ನು ನೆಲೆಗೊಳಿಸಲು ಶಕ್ಯವೆ? ಎಂಬುದು ನನ್ನ ಸಂದೇಹ. ವ್ಯವಸ್ಥಿತವಾಗಿ, ಸಾವಧಾನವಾಗಿ ಆಗಬೇಕಾದ ಸಮಾಜ ಹಿತಕಾರಿ ಕಾರ್ಯ ಇದು. ಆದರೆ ಒಂದು ಸಂಗತಿಯಂತೂ ನಿಜ. ನೀವು ಆಡುವ ಆವೇಶದ ಮಾತುಗಳ ಹಿಂದೆ ಇರುವ ಪ್ರಾಮಾಣಿಕ ಕಳಕಳಿ, ವೈಚಾರಿಕ ಎಚ್ಚರ ಮತ್ತು ಮಾನವೀಯ ಅಂಶಗಳನ್ನು ನಾನು ಮೆಚ್ಚುತ್ತೇನೆ. ನಮ್ಮಿಬ್ಬರ ದೃಷ್ಟಿಯಿರುವುದು ಸಮಾನ ಗುರಿಯ ಮೇಲೆ; ದಾರಿ ಮಾತ್ರ ಬೇರೆ'—ಎಂದು ಮನಸ್ಸು ಬಿಚ್ಚಿ ನುಡಿಯುತ್ತಿದ್ದರು.

ಎರಡು ಗಂಟೆಗಳ ಪ್ರಯಾಣದ ಅನಂತರ ನಾವು ಸಿಡೋನ (Sedona) ಎಂಬ ಸಣ್ಣ ಊರನ್ನು ತಲಪಿದೆವು. ಇದೂ ಕೂಡ ಒಂದು ಪ್ರಖ್ಯಾತ ಪ್ರವಾಸಿ ತಾಣವೆಂದೇ ಪರಿಗಣಿತವಾಗಿದೆ. ಊರಿಗೇ ಅಂಟಿಕೊಂಡಂತೆ ಹೃದಯಸ್ಪರ್ಶಿ ರೋಜ ಬಣ್ಣದ ಮರಳು ಶಿಲೆಗಳ ಹಾಗೂ ಸುಣ್ಣಶಿಲೆಗಳ ಕಿರಿದಾದ ಗುಡ್ಡಗಳು ಕಾಲರಾಯನ ಮರ್ಜಿಯನ್ನು ಬೇಡುತ್ತಾ ನಿಂತಂತಿವೆ. ಸುತ್ತಲೂ ವಿಶಾಲವಾದ ಬೆಂಗಾಡು ಇದ್ದರೂ ನಡುನಡುವೆ ಕಂಗೊಳಿಸಿರುವ ಈ ವರ್ಣಮಯ ಶಿಲಾ ರಚನೆಗಳು ಮನಸ್ಸಿಗೆ ನೀಡುವ ಮುದ, ವೈಶಾಲ್ಯ ಹಾಗೂ ವೈವಿಧ್ಯದ ಭಾವನೆ ಹೃದಯಂಗಮವಾದದ್ದು. ಪ್ರಕೃತಿಯ ನಿರಾಭರಣ ಚೆಲುವಿನ ವಸ್ತು ಪ್ರದರ್ಶನದಂತಿದೆ ಇಲ್ಲಿನ ನೆಲ.

ಸಿಡೋನದಿಂದ ಕೆಲವು ಮೈಲಿಗಳ ದೂರದಲ್ಲಿ ಮಾಂಟೆಜುಮ (Montezuma) ಎಂಬ ಬೆಟ್ಟಗುಡ್ಡಗಳ ಪ್ರದೇಶದಲ್ಲಿರುವ ಹಿಂದಿನ ಕಾಲದ ರೆಡ್ ಇಂಡಿಯನ್ ಬುಡಕಟ್ಟಿನ ವಸತಿಗಳಿಗೆ ನಿಸಾರರನ್ನು ಕರೆದೊಯ್ದೆ. ಶತ್ರುಗಳು, ಪ್ರಾಣಿಗಳು, ಮಳೆ ಬಿಸಿಲು ಗಾಳಿಗಳಿಂದ ಆಸರೆ ಪಡೆಯಲು ಗುಡ್ಡಗಳ ಎತ್ತರದ ತುದಿಯಲ್ಲಿ ಅವರು ತಮ್ಮ ವಾಸಸ್ಥಳಗಳನ್ನು ನಿರ್ಮಿಸಿರುವುದು, ಕಡಿದಾದ ಭಾಗಗಳಿಂದ ಅಲ್ಲಿಗೆ ಏರಿ ಇಳಿಯಲು ಮಾಡಿಕೊಂಡಿರುವ ಏಣಿಗಳಂಥ ವ್ಯವಸ್ಥೆ ನಿಜಕ್ಕೂ ಕುತೂಹಲಕಾರಿಯಾಗಿದೆ. ಅಮೇರಿಕದ ಇಂದಿನ ವಿಜ್ಞಾನ-ತಂತ್ರಜ್ಞಾನಗಳ ಮುಂದುವರಿದ ಜೀವನ ಶೈಲಿಯೆದುರು ಇಂತಹ ಗತ ಕಾಲದ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮಹತ್ವದ ಪಳೆಯುಳಿಕೆಗಳು ಎಲ್ಲ ರಾಜ್ಯಗಳಲ್ಲೂ ಇವೆ. ಇವುಗಳ ವೈವಿಧ್ಯ, ವಿಶಿಷ್ಟತೆ ಗಮನಾರ್ಹವಾದದ್ದು. ನಿಸಾರರಿಗೆ ಈ ಮೂಲ ನಿವಾಸಿಗಳ ಬಗೆಗೆ ನನಗೆ ತಿಳಿದಿದ್ದನ್ನು ಹೇಳಿದಾಗ, ಅವರು ಸಹಜಾಸಕ್ತಿಯಿಂದ ಆಲಿಸುತ್ತಿದ್ದುದಲ್ಲದೆ, ಅವರ ಇವೊತ್ತಿನ ಜೀವನದ ದಾರುಣತೆ ಮತ್ತು ಕರುಣಾಜನಕ ಸ್ಥಿತಿಗೆ ಮರುಗುತ್ತಿದ್ದರು. ಮಾದಕ ವ್ಯಸನಿಗಳಾಗಿ, ಸೋಮಾರಿಗಳಾಗಿ, ಕಸಿನೋ (Casino) ಮುಂತಾದ ಜೂಜಿನ ಅಡ್ಡೆಗಳನ್ನು

ನಡೆಸುವವರಾಗಿ ಅವರು ಅನುಭವಿಸುತ್ತಿರುವ ಕಂಗಾಲು ಬದುಕು ನಿಜಕ್ಕೂ ಮರುಕ ಮತ್ತು ಸಹಾನುಕಂಪೆಯನ್ನು ಹುಟ್ಟಿಸುವಂಥದು. ಸರ್ಕಾರ, ಈ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುತ್ತಿರುವ ರೀತಿ ನ್ಯಾಯಸಮ್ಮತವಲ್ಲ ಎನ್ನಿಸದೆ ಇರದು.

ಅಲ್ಲಿಂದ ನಾವು ಫ್ಲಾಗ್‌ಸ್ಟಾಫ್ (Flag Staff) ಎಂಬ ನಗರದ ಮೂಲಕ ಪ್ರಯಾಣ ಬೆಳೆಸಬೇಕಿತ್ತು. ಆ ಊರು ಹದಿನೈದು-ಇಪ್ಪತ್ತು ಮೈಲಿಗಳಿದೆ ಎನ್ನುವ ಹಾಗೆ ಬೆಂಗಾಡನ್ನು ಸವಾಲಿಗೆ ಒಡ್ಡುವಂತೆ ಇದ್ದಕ್ಕಿದ್ದ ಹಾಗೆ ಮರ ಗಿಡಗಳ ದಟ್ಟ ಹಸುರಿನಿಂದ ಆವೃತವಾದ ಕಡಿದಾದ ಘಾಟ್ ಪ್ರದೇಶ ಸಿಕ್ಕುತ್ತದೆ. ಸುತ್ತು ಬಳಸಿನ ಆ ಕಡಿದಾದ ರಸ್ತೆಯಲ್ಲಿ ಕಾರನ್ನು ಓಡಿಸುವಾಗ ನಮ್ಮ ಮಲೆನಾಡು ಪ್ರದೇಶದ ಶಿರಾಡಿ ಘಾಟ್ ಇಲ್ಲವೇ ಮಡಿಕೇರಿ ಬಳಿಯ ಸಂಪಾಜೆ ಘಾಟ್ ನೆನಪಿಗೆ ಬರುತ್ತದೆ. ಇಂತಹ ಹಸುರಿನ ಮೆರವಣಿಗೆ ಕಾಣಿಸಿಕೊಂಡಾಗಲೆಲ್ಲ ನಿಸಾರ್ ಅಹಮದ್ ಹರ್ಷೋದ್ವೇಗಕ್ಕೆ ಒಳಗಾಗಿ, ಮಾತನ್ನು ನಿಲ್ಲಿಸಿ ಅದನ್ನು ವೀಕ್ಷಿಸುವುದರಲ್ಲಿ ತಲ್ಲೀನರಾಗಿಬಿಡುತ್ತಿದ್ದರು. ನಾನೂ ಕೊಂಚ ಸಮಯ ಅವರನ್ನು ಅವರ ಪಾಡಿಗೆ ಬಿಟ್ಟು ನನ್ನ ಸ್ವಂತ ವಿಷಯಗಳ ಬಗ್ಗೆ ಚಿಂತಿಸುತ್ತಿದ್ದೆ.

ಆಗ ಹಠಾತ್ತನೆ ನೆನಪಿಗೆ ಬಂತು ನೋಡಿ, ಹಿಂದೆ ಎರಡು ಮೂರು ಬಾರಿ ಗ್ರ್ಯಾಂಡ್ ಕ್ಯಾನ್ಯನ್‌ಗೆ ನಮ್ಮ ಕರ್ನಾಟಕದ ಸಾಹಿತಿ, ಕಲಾವಿದರನ್ನು ಕರೆದೊಯ್ಯುವಾಗ ನಡೆದ ಘಟನೆ. ಅದನ್ನು ನಾನು ನಿಸಾರರಿಗೆ ನಿವೇದಿಸಿದೆ: 'ಒಂದೆರಡು ವರ್ಷಗಳ ಮುಂಚೆ ಈ ಹಾದಿಯಲ್ಲಿ ನನಗೆ ಎರಡು ಮೂರು ಸಲ ಅಡಚಣೆ ಉಂಟಾಗಿದೆ. ನಾನು ಇದನ್ನು ಯಾವುದೋ ಕೆಟ್ಟ ಪ್ರಕೃತಿ ಶಕ್ತಿಯ ಆಟ ಎಂದು ಭಾವಿಸುವುದಿಲ್ಲ. ಅಂಥದ್ದರಲ್ಲಿ ನನಗೆ ನಂಬಿಕೆಯಿಲ್ಲ. ಕಾಕತಾಳೀಯವಾಗಿದ್ದಿರಬಹುದು. ಅಂತೂ ಪ್ರತಿ ಸಲ ಅತಿಥಿಗಳಿಗೆ ಗ್ರ್ಯಾಂಡ್ ಕ್ಯಾನ್ಯನ್‌ಅನ್ನು ತೋರಿಸಲು ಬಂದಾಗ ಒಂದಲ್ಲ ಒಂದು ಅನಾಹುತ ಆಗಿದೆ. ಕಳೆದ ಸಲವಂತೂ ಕಾರು ಅಪಘಾತಕ್ಕೆ ಒಳಗಾಗಿ, ಉರುಳಿ ನಾವೆಲ್ಲ ಉಳಿದದ್ದೇ ಹೆಚ್ಚು. ಹೀಗೇಕೆ ಆಗುತ್ತದೆ? ಎನ್ನುವ ಕುತೂಹಲ ನನ್ನನ್ನು ಅನೇಕ ಸಲ ಗಂಭೀರವಾಗಿ ಆಲೋಚಿಸುವಂತೆ ಮಾಡಿದೆ' ಎಂದೆ. ನಿಸಾರರು ನಸು ನಗುತ್ತ ತಮಾಷೆಗಾಗಿ, 'ಯಾವುದಾದರೂ ಭೂತ ಪಿಶಾಚಿಯ ಕೈವಾಡ ಇರಬೇಕು. ಹೋಗಿ, ಹೋಗಿ ನಿಮ್ಮಂಥ ಮೊಂಡು ವಿಚಾರವಾದಿಯನ್ನು ಗೋಳು ಹೊಯ್ಯುತ್ತಿದೆಯಲ್ಲ' ಎಂದರು.

—ಹೀಗೆ ಹೇಳಿದ ಮೇಲೆ ಒಂದೆರಡು ನಿಮಿಷಗಳಲ್ಲೇ ತಿರುವೊಂದರಲ್ಲಿ ನನ್ನ ಮರ್ಸಿಡೀಸ್ ವಾಹನ ಗಕ್ಕನೆ ನಿಂತುಬಿಡಬೇಕೆ? ಸ್ಟಾರ್ಟ್ ಮಾಡಲು ಎಷ್ಟು ಪ್ರಯತ್ನ ಪಟ್ಟರೂ ಫಲಕಾರಿಯಾಗಲಿಲ್ಲ. ದೈವವಶಾತ್ ನಾವು ಘಾಟ್ ಪ್ರದೇಶದ ಕೊನೆಗೆ ಬಂದಿದ್ದೆವು, ಸಮತಟ್ಟಾದ ಜಾಗ ಸ್ವಲ್ಪವೇ ದೂರವಿತ್ತು. ಕೈಚೆಲ್ಲಿ ನಿಂತಿದ್ದಾಗ, ಆ ರಸ್ತೆಯಲ್ಲಿ ಕಾರಿನಲ್ಲಿ, ವ್ಯಾನು ಮತ್ತು ಟ್ರಕ್ಕುಗಳಲ್ಲಿ ಹಾದುಹೋಗುವ ಗಂಡಸರು-ಹೆಂಗಸರು, ಕಾರು ನಿಲ್ಲಿಸಿ 'Do you want any help?' ಎಂದು ಪ್ರಶ್ನಿಸುತ್ತಿದ್ದರು. 'No. thanks' ಎಂದು ಹೇಳುತ್ತಿದ್ದೆ. 'ಇನ್ನು ಕೊಂಚವೇ ದೂರದಲ್ಲಿ ಸಮತಲವಾದ ನೆಲ ಸಿಗುತ್ತಲ್ಲ, ಅಲ್ಲಿಯವರೆಗೆ ನೂಕೋಣ?' ಎಂದ ನಿಸಾರರಿಗೆ, 'ತಡೀರಿ, ಇನ್ನೊಂದು ಸಲ

ಪ್ರಯತ್ನಿಸ್ತೀನಿ' ಎಂದು ಕಾರನ್ನು ಸ್ಟಾರ್ಟ್ ಮಾಡಲು ಶುರು ಮಾಡಿದೆ, ನನ್ನ ಅದೃಷ್ಟಕ್ಕೆ ಅದು 'ನಾನು ಸಿದ್ಧವಾಗಿದ್ದೀನಿ, ನಡೆಸು!' ಎಂದು ಗೊರಗೊರ ಶಬ್ದ ಮಾಡಿತು. ಕಾರನ್ನು ಚಲಿಸಿದಾಗ ಅದು ಘಾಟಿಯ ಮೇಲಕ್ಕೆ ಒಂದು ಪೂರ್ವನಿಯೋಜಿತ ಸಂಕಲ್ಪದಂತೆ ಮತ್ತೆ ದಿಢೀರನೆ ನಿಂತುಬಿಡುವುದೆ? ಎಷ್ಟೇ ಪ್ರಯತ್ನಿಸಿದರೂ ಸ್ಟಾರ್ಟ್ ಆಗಲಿಲ್ಲ. ಎದುರುಗಡೆ ಮತ್ತು ಹಿಂದೆ ಮರಗಿಡಗಳ ದಟ್ಟಣೆಯ ಅರಣ್ಯ. ಆಗೀಗ ಕಾರೊ, ಟ್ರಕ್ಕೊ ಭರ್ರೆಂದು ಹಾದು ಹೋಗುವ ಶಬ್ದ; ಉಳಿದಂತೆ ಮಹಾ ಮೌನ ಹಾಗೂ ಅಸಹನೀಯ ಏಕಾಂತ. ಸುಮಾರು ಒಂದು ಗಂಟೆಯ ಕಾಲ ಹತಾಶರಾಗಿ ಏನು ಮಾಡಬೇಕೆಂದು ತೋಚದೆ ಅಲ್ಲೇ ನಿಂತಿದ್ದಾಗ, ಕಾಡಿನೊಳಗಿನಿಂದ ಒಂದು ಜಿಂಕೆಯ ಹಿಂಡು ನಮ್ಮ ಲಕ್ಷ್ಯವೇ ಇಲ್ಲದ ಹಾಗೆ ಪಕ್ಕದಲ್ಲೇ ಹಾದು ಹೋಯಿತು. ಅಂದಹಾಗೆ, ಅಮೇರಿಕಾದಲ್ಲಿ ಈ ಪ್ರಾಣಿಗಳ ಸಂಖ್ಯೆ ಅಪರಿಮಿತ, ಎಲ್ಲೆಂದರಲ್ಲಿ ಅವು ಕಾಣಸಿಗುತ್ತವೆ; ಕೆಲವೊಮ್ಮೆ ಮನೆಗಳ ಹಿತ್ತಲಿನ ಪ್ರದೇಶ(Backyard) ನಲ್ಲಿ ಕೂಡ ಆರಾಮಾಗಿ ಪವಡಿಸಿರುವುದುಂಟು. ಅವುಗಳನ್ನು ಕೊಲ್ಲುವಂತಿಲ್ಲ. ಆದರೆ ಸರ್ಕಾರವೇ ವರ್ಷಕ್ಕೆ ಒಂದೆರಡು ದಿನಗಳ ಮಟ್ಟಿಗೆ ಅವುಗಳನ್ನು ಲೈಸೆನ್ಸ್ ಇರುವ ಕೋವಿದಾರರು ಬೇಕಾದ ಹಾಗೆ ಬೇಟೆಯಾಡಬಹುದು ಎಂಬ ಆದೇಶವಿತ್ತಿದೆ. ಇದು ಅವುಗಳ ಮಿತಿ ಮೀರಿದ ಸಂಖ್ಯೆಯ ಉಚ್ಛ್ರಾಯಕ್ಕೆ ಕಡಿವಾಣ ಹಾಕುವ ವಿಧಾನ; ನಿಯಂತ್ರಣ ದಲ್ಲಿ ಇಟ್ಟು ಸಲಹುವ ರೀತಿ. ಆಗ ಅವುಗಳ ಬೇಟೆಯಾಡಿ, ಮಾಂಸವನ್ನು ತಿಂಗಳಾನು ಗಟ್ಟಲೆ ಫ್ರಿಜ್ಜಿನಲ್ಲಿಟ್ಟು ವಿವಿಧ ಭಕ್ಷ್ಯಗಳ ದ್ವಾರಾ ಮೆಲ್ಲುವರಲ್ಲದೆ, ಉಳಿದವರಿಗೂ ಹಂಚಿ ತೃಪ್ತಿ ಪಡುತ್ತಾರೆ. ಈ ಕೆಲಸವನ್ನು ನಮ್ಮ ಭಾರತದಲ್ಲಿ ಅಕ್ರಮವಾಗಿ ನಮ್ಮ ಬಾಲಿವುಡ್ ನಟರಲ್ಲಿ ಒಂದಿಬ್ಬರು 'ಧನೋನ್ಮತ್ತ ದೌಲತ್ತಿಗರು' (ನಿಸಾರ್ ಅವರು ಗದ್ಯ ಬರಹ ವೊಂದರಲ್ಲಿ ಬಳಸಿರುವ ಪದಾವಳಿ) ರಾಜಾರೋಷವಾಗಿ ನೆರವೇರಿಸುತ್ತಾರೆ!

ದಿಕ್ಕು ತೋಚದೆ ನಿಂತು, ಅದೂ ಇದೂ ಮಾತಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಟ್ರಕ್ ನಡೆಸುತ್ತ ಬಂದವನು, ಇಳಿದು ನಮ್ಮ ಕಾರನ್ನು ಪರೀಕ್ಷಿಸಿ, 'ಕೆಲವು ಮೈಲಿಗಳಾದ ಮೇಲೆ ಸಿಕ್ಕುವ ಫ್ಲಾಗ್‌ಸ್ಟಾಫ್ ಪಟ್ಟಣದಲ್ಲಿ 'Ken's Garage' (ಕೆನ್ಸ್ ಗ್ಯಾರೇಜ್) ಎನ್ನುವ ವಾಹನ ದುರಸ್ತಿಯ ಕಾರ್ಯಾಗಾರವಿದೆ. ಮರ್ಸಿಡೀಸ್ ಕಾರಿನ ರಿಪೇರಿಯನ್ನು ಅಲ್ಲಿ ಮಾತ್ರ ಮಾಡಲಾಗುತ್ತದೆ; ಉಳಿದಂತೆ ಈ ಜರ್ಮನ್ ಕಾರಿಗೆ ಬೇರೆ ಗ್ಯಾರೆಜ್ ಇಲ್ಲ. ನನ್ನ ಬಳಿ ಎಳೆದೊಯ್ಯುವ ಕಬ್ಬಿಣದ ಸರಪಣಿ ಇದೆ. ಅಲ್ಲಿಯವರೆಗೆ ನಿಮ್ಮನ್ನು ಸಾಗಿಸುತ್ತೇನೆ, ಬನ್ನಿ' ಎಂದ. ವಿಧಿಯಿಲ್ಲದೆ ನಾನು ಅವನಿಗೆ ತೊಂದರೆ ಕೊಡಬೇಕಾಯಿತು. ಸರಿ, ಅವನ ಟ್ರಕ್ಕಿನಲ್ಲಿ ನಿಸಾರರನ್ನು ಕೂರಿಸಿ, ಸ್ಟೈಯಿರಿಂಗ್ ಹಿಡಿದು ನಾನು ನನ್ನ ಕಾರಿನಲ್ಲಿ ಸಾಗಿದೆ. 'ಕೆನ್ಸ್ ಕಾರ್ಯಾಗಾರ'ದ ಬಳಿ ನಮ್ಮನ್ನು ಬಿಟ್ಟಾಗ ಟ್ರಕ್‌ನವನಿಗೆ ಧನ್ಯವಾದವನ್ನು ಅರ್ಪಿಸಿ, ಅವನ ಉಪಕಾರಕ್ಕೆಂದು ನನ್ನ ಪರ್ಸ್ ತೆಗೆದು ಐವತ್ತು ಡಾಲರ್ ನೋಟನ್ನು ಬಲವಂತವಾಗಿ ನೀಡಲು ಪ್ರಯತ್ನಿಸಿದರೆ, ಆತ ಸುತರಾಂ ಒಪ್ಪಲಿಲ್ಲ. 'ಥ್ಯಾಂಕ್ಸ್. Have a nice day' ಎಂದು ಹೊರಟು ಹೋದ. ಅಮೇರಿಕನ್ನರ ಈ ಅವ್ಯಾಜವಾದ ಪರೋಪಕಾರದ ಗುಣ ನನಗೆ ಮೊದಲಿನಿಂದ ಮೆಚ್ಚು. ಆ ಗ್ಯಾರೇಜ್‌ನಲ್ಲಿ ನನ್ನ ಕಾರಿನ ಒಂದು ಗಂಟೆಯ ತಪಾಸಣೆ ನಡೆದು ' 'ಫ್ಯೂಷನ್' ಎಂಬ ಕಾರಿನ ಭಾಗ ಕೆಟ್ಟಿದೆ, ಹೊಸದು ಇಲ್ಲಿ ಸಿಗುವುದಿಲ್ಲ,

ಫೀನಿಕ್ಸ್‌ನಿಂದ ತರಿಸಬೇಕು. ನಿಮ್ಮ ಕಾರನ್ನು ನಾಳೆ ಹೊತ್ತಿಗೆ ರೆಡಿ ಮಾಡಿಕೊಡುತ್ತೇನೆ' ಎಂದ ಆ ಮಾಲಿಕ. ಆ ಹೊತ್ತಿಗಾಗಲೇ ಇಳಿಹೊತ್ತು ಸಮೀಪಿಸಿತ್ತು. ಇನ್ನು ಗ್ರಾಂಡ್ ಕ್ಯಾನ್ಯನ್‌ನ ದರ್ಶನದ ಆಸೆಯನ್ನು ಕೈಬಿಡುವುದೇ ಒಳ್ಳೆಯದು, ಕಾರನ್ನು ಬೇರೊಂದು ವಾಹನದಿಂದ ಟೋ (Tow) ಮಾಡಿ ಎಳೆದುಕೊಂಡು ಫೀನಿಕ್ಸ್‌ಗೆ ವಾಪಸ್ಸಾಗುವುದೇ ಉಳಿದಿರುವ ಮಾರ್ಗ ಎನ್ನಿಸಿತು. ನಿಸಾರರಿಗೂ ಈ ಮಾತನ್ನು ಹೇಳಿದೆ. ಅವರ ಮುಖದ ಮೇಲೆ ನಿರಾಸೆಯ ನೆರಳು ಕವಿಯುತ್ತಿದ್ದರೂ ತೋರಗೊಡದೆ. 'ಸರಿ, ಹಾಗಾದರೆ ಮರಳಿ ಹೋಗೋಣ ನಡೆಯಿರಿ. ನಾನು ಕಾಲೇಜ್ ದಿನಗಳಿಂದ ನನ್ನ ಭೂ ವಿಜ್ಞಾನದ ಮತ್ತು ಇತರ ಪುಸ್ತಕಗಳಲ್ಲಿ ಓದಿ, ನೋಡುವ ಕನಸು ಕಂಡಿದ್ದ ಆ ಮಹಾ ಕಂದರದ ಸುಕೃತ್‌ದರ್ಶನ ಸಾಧ್ಯವಿಲ್ಲವೆಂದು ದೈವವೇ ಎಣಿಸಿರುವಾಗ, ನಮ್ಮದೇನಿದೆ?' ಎಂದಾಗ, ಅವರ ಅಂತರಂಗದ ಕಳವಳ ನನಗೆ ಅರ್ಥವಾಗಿತ್ತು. 'ಏನಾದರಾಗಲಿ, ಒಂದು ರಾತ್ರಿ ಗ್ರಾಂಡ್ ಕಾನ್ಯನ್ ಬಳಿಯ ಹೋಟಲಲ್ಲಿ ತಂಗಿದರೂ ಸರಿಯೇ, ನಿಸಾರ್ ಅವರ ಸ್ವಪ್ನವನ್ನು ನಿಜವಾಗಿಸಬೇಕು' ಎನ್ನುವ ಸಂಕಲ್ಪ ನನ್ನಲ್ಲಿ ಮೂಡಿತು.

ಸರಿ, ನಮ್ಮ ಕಾರನ್ನು ಈ ಗ್ಯಾರೇಜಿನಲ್ಲಿಯೇ ಬಿಟ್ಟು, ಬಾಡಿಗೆಯ ಕಾರೊಂದನ್ನು ಗೊತ್ತುಮಾಡಿಕೊಂಡು ಮಹಾ ಕಂದರಾಭಿಮುಖವಾಗಿ ಸಾಗಿದೆವು. ಪ್ರಪ್ರಾಚೀನ ಕಾಲದ ಜ್ವಾಲಾಮುಖಿಗಳ ಶಿಲಾದ್ರವ ಹೆಪ್ಪುಗಟ್ಟಿ ನಿರ್ಮಿಸಿದ ಬೆಟ್ಟ ಹಾಗೂ ಅರಣ್ಯ ನಿಬಿಡ ಭೂಮಿಯ ನಡುವೆ ಹಾದು ಹೊರಟ ನಮ್ಮ ಕಾರು ಗ್ರಾಂಡ್ ಕಾನ್ಯನ್ ಹೆಸರಿನ ಸಣ್ಣ ಊರನ್ನು ತಲಪಿದಾಗ ರಾತ್ರಿ ಏಳು ಗಂಟೆಯಾಗಿತ್ತು. ಅಲ್ಲಿಂದ ಆ ಮಹಾ ಕೊಳ್ಳದ ಪ್ರೇಕ್ಷಣೀಯ ಸ್ಥಳದ ಪ್ರಾರಂಭ ಸುಮಾರು ಎಂಟು ಮೈಲಿ. ನಾವು ಆ ರಾತ್ರಿ ತಂಗಿದ್ದು '8-Mile Motel' ಎಂಬ ವಸತಿ ಗೃಹದಲ್ಲಿ. ಬೆಳಿಗ್ಗೆ ಸೂರ್ಯೋದಯಕ್ಕೆ ಮುಂಚೆ ಎದ್ದು ಅಲ್ಲಿಗೆ ಹೊರಟೆವು. ಆ ಕಂದರದ ಉತ್ತರ ಭಾಗದ ಬಳಿಯಿರುವ ಹೋಟೆಲಿನಲ್ಲಿ ಉಪಾಹಾರ ಮಾಡಲು ಹೋದಾಗ, ಆಗಲೇ ಅಲ್ಲಿ ವಿವಿಧ ರಾಷ್ಟ್ರಗಳ ಪ್ರವಾಸಿಗರು ಕಿಕ್ಕಿರಿದಿದ್ದರು. ನಾವು ಕುಳಿತಿದ್ದ ಟೇಬಲ್ ಬಳಿಯಿಂದ ವ್ಯಕ್ತಿಯೊಬ್ಬರು ಬಂದು ನಿಸಾರರನ್ನು ಗುರುತಿಸಿ 'ನಮಸ್ಕಾರ ಸಾರ್' ಎಂದಾಗ, ನಿಸಾರರು ಪ್ರಶ್ನಾರ್ಥಕ ದೃಷ್ಟಿಯಿಂದ 'ಯಾರು?' ಎಂದರು. 'ನನ್ನ ಪರಿಚಯ ನಿಮಗಿಲ್ಲ. ನನ್ನ ಹೆಸರು ಗೋಪಾಲಕೃಷ್ಣ ಶ್ರೀನಿವಾಸ್. ಆದರೆ ನಾನು ನಿಮ್ಮ ಕವನಗಳ ಅಭಿಮಾನಿ. ಹತ್ತು ವರ್ಷಗಳಿಂದ ಸಿಂಗಪುರದಲ್ಲಿ ಇದ್ದೇನೆ. ಜರ್ಮನಿಯ ಡ್ಯೂಚ್ ಬ್ಯಾಂಕ್(Deutsche Bank)ನ ಉಪ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ಈಕೆ ನನ್ನ ಹೆಂಡತಿ, ತಮಿಳೆ' ಎಂದು ಪರಿಚಯಿಸಿಕೊಂಡರು. 'ಎಂತಹ ಆಶ್ಚರ್ಯ ನೋಡಿ, ಅಮೇರಿಕಾದ ಅಜ್ಞಾತ ಮೂಲೆಯೊಂದರ ಈ ತಾಣದಲ್ಲಿ ನನ್ನನ್ನು ಗುರುತಿಸಿ ಪ್ರೀತಿಯಿಂದ ಮಾತಾಡಿಸಿದ್ದು. ಇದಕ್ಕೆ ಮುಖ್ಯ ಕಾರಣ, ನಾನು ಕನ್ನಡದಲ್ಲಿ ಬರೆಯುತ್ತಿರುವುದು. ಇಲ್ಲದಿದ್ದರೆ ನಾನು ಯಾರೋ, ನೀವು ಯಾರೋ. ಇದಕ್ಕಾಗಿ ನಾನು ಕನ್ನಡ ತಾಯಿಗೆ ಕೃತಜ್ಞ. ನಾನು ಅಮೇರಿಕಕ್ಕೆ ಬರುವುದಕ್ಕೆ ಸಹ ಆ ತಾಯಿಯ ಕೃಪೆಯೇ ಕಾರಣ' ಎಂದಾಗ, ಅವರ ಕಣ್ಣುಗಳಲ್ಲಿ ಹನಿ ತುಳುಕಿದ್ದನ್ನು, ಗಂಟಲು ಗದ್ಗದಿತವಾದದ್ದನ್ನು ಗುರುತಿಸಿದೆ. ಇಂತಹ ಕೀರ್ತಿಯನ್ನು ಪಡೆದ ಈ ನಮ್ಮ ಕನ್ನಡ ತಾಯಿಯ ಸುಪುತ್ರ, ಖ್ಯಾತ

ಕವಿ ನಿಜಕ್ಕೂ ಧನ್ಯ ಎನ್ನಿಸಿತು.

ಆಚೆ ವಿಪರೀತ ಚಳಿ. ಬೆಚ್ಚಗಿನ ವಸ್ತ್ರಗಳನ್ನು ಧರಿಸಿ, ಕಣ್ಣು ಮಾತ್ರ ಕಾಣಿಸುವಂತೆ ತಲೆ, ಮುಖವನ್ನು ಉಣ್ಣೆಯ ಕುಲಾವಿಯಿಂದ ಮುಚ್ಚಿಕೊಂಡರೂ ತಾಳಲಾಗದ ಕೊರೆತ—ಮಂಜುಗಡ್ಡೆಯಿಂದ ಮೈ ತಿಕ್ಕಿಕೊಂಡ ಅನುಭವ. ಜೊತೆಗೇ ಜೋರಾಗಿ ಬೀಸುವ ಗಾಳಿ ಬೇರೆ. ನಾವು ಆ ಕಂದರದ ಅಟ್ಟಣಿಗೆಯಂಥ ಜಾಗಕ್ಕೆ ಬಂದು ನಿಂತಾಗ, ಏಕಾಏಕಿ ಎದುರಾಗುವ ಅದರ ಪಾತಾಳ ಸದೃಶ ಆಳ, ಮೈಲಿಯಷ್ಟು ಕೆಳಗಡೆ ಬೆಳ್ಳಿಯ ಉಡುದಾರ ದಂತೆ ಕಾಣಿಸಿ ಹರಿದಿರುವ ಕೊಲೊರೆಡೊ ನದಿಯ ಮಿಂಚಿನ ಜಲ ರೇಖೆ, ಕಣ್ಣು ಹಾಯಿಸಿದ ಕಡೆಯಲ್ಲೆಲ್ಲ ಹಬ್ಬಿರುವ ಅಗಣಿತ ವರ್ಣಮಯ ದೈತ್ಯ ಶಿಲಾಕೃತಿಗಳು. ಆಗಷ್ಟೇ ಆದ ಸೂರ್ಯೋದಯದ ನಿಮಿತ್ತ ಅದರ ಕಿರಣಗಳು ಅಲ್ಲಲ್ಲಿ ಬಿದ್ದು, ಮೊದಲೇ ಭೂದೇವಿಯ ಪುಲಕಿತಗೊಂಡ ಮುದ್ದುಗೆನ್ನೆಯಂತೆ ಕೆಂಪಾದ ಶಿಲಾಖಂಡಗಳನ್ನು ಬಂಗಾರದ ಲೇಪನದಿಂದ ಮತ್ತಷ್ಟು ಮನೋಹರವಾಗಿ, ಆಪ್ಯಾಯಮಾನವಾಗಿ ಚೆಲುವಾಗಿಸಿದ್ದವು. ನಾವು ಮಾತನ್ನು ನಿಲ್ಲಿಸಿ ಮೂಕವಾಗಿ ಅದೆಷ್ಟು ಹೊತ್ತು ಆ ಸ್ವರ್ಗೀಯ ವಿರಾಟ್ ದೃಶ್ಯವನ್ನು ದಿಟ್ಟಿಸುತ್ತ ನಿಂತಿದ್ದೆವೋ ಗೊತ್ತಿಲ್ಲ. ನಿಸಾರ್ ಅವರಂತೂ ಬಹು ಕಾಲದ ಹೆಬ್ಬಯಕೆಯೊಂದು ಪೂರೈಕೆಯಾದಂತೆ, ಪ್ರಕೃತಿಯ ಅಪ್ರತಿಮವಾದ ಒಂದು ಮಹಾ ನಿಧಿಯೇ ಸಿಕ್ಕಿದಂತೆ ಸಂತೋಷಭರಿತರಾಗಿ, ಸಂತೃಪ್ತರಾಗಿ, ಆ ಭೂಮಾದ್ಭುತ ಮಹಾದೃಶ್ಯದಲ್ಲಿ ತನ್ಮಯರಾಗಿ ಬಿಟ್ಟಿದ್ದರು. ಮೈಯನ್ನು ಪ್ರಾಣ ಹೋಗುವಂತೆ ಕೊರೆದಿದ್ದ ಚಳಿಯ ಪರಿವೆಯೂ ನಮಗಿರಲಿಲ್ಲ. ರಾಷ್ಟ್ರಕವಿ ಕುವೆಂಪು ಅವರು 'ಮಾತಿಲ್ಲಿ ಮೈಲಿಗೆ, ಸುಮ್ಮನಿರಿ ಮಿತ್ರರಿರ' ಎಂದು ನುಡಿದ ಸಾಲುಗಳು ಈ ಎಡೆಯಲ್ಲಿ ಅತ್ಯಂತ ಅರ್ಥವತ್ತಾಗಿ, ಮಹತ್ವದ್ದಾಗಿ ಭಾಸವಾದವು. ಅವರಂಥ ರಸಯೋಗಿಗಳು ಇದನ್ನು ದರ್ಶಿಸಿದ್ದರೆ, ಯಾವ ದಿವ್ಯಾನುಭೂತಿಗೆ ಒಳಗಾಗುತ್ತಿದ್ದರೋ, ಎಂತಹ ಭವ್ಯವಾದ ಕಾವ್ಯ ಅವರಿಂದ ಹೊಮ್ಮುತ್ತಿತ್ತೋ ಎಂದು ಒಂದು ಕ್ಷಣ ನನಗೆ ಅನ್ನಿಸದೆ ಇರಲಿಲ್ಲ. ಈ ಮಹಾ ಕಂದರದ ಒಂದರೆಡು ಶಿಲಾಖಂಡದ ಬೃಹತ್ತಾದ ಆಕೃತಿಗಳಿಗೆ ನಮ್ಮ ಭಾರತೀಯ ಹೆಸರುಗಳೂ ಇರುವುದನ್ನು ತಿಳಿದು ಹಿಂದೊಮ್ಮೆ ನನಗೆ ಮಹದಾಶ್ಚರ್ಯವಾಗಿತ್ತು—ವಿಷ್ಣು, ಶಿವ, ಬ್ರಹ್ಮ, ಬುದ್ಧ. ಇದನ್ನು ನಿಸಾರರಿಗೆ ತಿಳಿಸಿದಾಗ, ಅವರ ಈ ಕುತೂಹಲವನ್ನು ಪರಿಹರಿಸುವಂತೆ, ನಾನು ಕೆಲವು ವರ್ಷಗಳ ಹಿಂದೆ ಓದಿ ಅರಿತ ಸಂಗತಿಯೊಂದನ್ನು ಅರುಹಿದೆ. ನೂರಿಪ್ಪತ್ತು-ನೂರೈವತ್ತು ವರ್ಷಗಳ ಮುಂಚೆ ಇವುಗಳನ್ನು 'ಕಂಡುಹಿಡಿದ' ಮೇಲೆ, ಈ ಮಹಾ ಕಂದರದ ಸರ್ವೇಕ್ಷಣ (Survey) ಕಾರ್ಯ ಪ್ರಾರಂಭವಾಯಿತು. ಇದರ ಉದ್ದಗಲ, ವ್ಯಾಪ್ತಿ ಮುಂತಾದವನ್ನು ತಿಳಿಯಲು ಸರ್ವೇಕ್ಷಣಾಧಿಕಾರಿ ಇಂಜಿನಿಯರ್‌ಗಳ ಒಂದು ದಂಡೇ ಇಲ್ಲಿ ತಿಂಗಳಾನುಗಟ್ಟಲೆ ಠಿಕಾಣಿ ಹಾಕಿತ್ತು. ಆ ತಂಡದಲ್ಲಿ ನಮ್ಮ ಭಾರತದ ಒಂದಿಬ್ಬರು ವ್ಯಕ್ತಿಗಳೂ ಇದ್ದರು. ಅವರು ಇಲ್ಲಿನ ಕೆಲವೊಂದು ಶಿಲಾಖಂಡಗಳ ಬೃಹತ್ತು, ನಿಗೂಢತೆ, ಭವ್ಯತೆ ಹಾಗೂ ಅವು ಉಂಟುಮಾಡುವ ಭಯಭಕ್ತಿ ಗೌರವ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಅವಕ್ಕೆ ನಮ್ಮ ದೇಶದ ಈ ನಾಮಕರಣಗಳನ್ನು ಮಾಡಿದರಂತೆ.

—ನಾವು ಹೀಗೇ ಮೈಮರೆತು ನಿಂತಿದ್ದಾಗ, ನಮ್ಮ ಹಿಂದೆ ಜಮಾಯಿಸಿದ್ದ ಅನೇಕ

ದೇಶ ವಿದೇಶದ ಪ್ರವಾಸಿ ಕುಟುಂಬಗಳ ನಡುವೆ ಯಾರೋ ಕನ್ನಡ ಮಾತನಾಡುತ್ತಿದ್ದದ್ದು ಕೇಳಿಸಿ, ಇಬ್ಬರೂ ಹಿಂತಿರುಗಿ ನೋಡಿದೆವು. ನಾವು ತೊಟ್ಟಿದ್ದ ಕುಲಾವಿಯ ದೆಸೆಯಿಂದ ನಮ್ಮ ಮುಖದ ಗುರುತು ನಮಗೇ ಸಿಕ್ಕುತ್ತಿರಲಿಲ್ಲ! ಒಂದು ಗಳಿಗೆ ಅವುಗಳನ್ನು ತೆಗೆದಾಗ, ಆ ಗುಂಪಿನ ನಡುವಿನಿಂದ ಬಂದ ಇಪ್ಪತ್ತು-ಇಪ್ಪತ್ತೆರಡು ವಯಸ್ಸಿನ ಮಹಿಳೆಯೊಬ್ಬರು ನಿಸಾರರನ್ನು ಗುರುತು ಹಿಡಿದು 'ನೀವು ಕವಿ ನಿಸಾರ್ ಅಹಮದ್ ಅಲ್ವ?' ಎಂದು ಪ್ರಶ್ನಿಸಿದರು. 'ಹೌದು' ಎಂದು ಅವರು ಉತ್ತರಿಸಿದಾಗ, ತನ್ನ ಜೊತೆಯಲ್ಲಿ ಬಂದಿದ್ದ ಗಂಡ ಮತ್ತು ಮಾವನವರನ್ನು ಪರಿಚಯಿಸುತ್ತ, 'ನಾವು ಸದ್ಯಕ್ಕೆ ನ್ಯೂಜೆರ್ಸಿಯಲ್ಲಿ ವಾಸ ವಾಗಿದ್ದೇವೆ. ನನ್ನ ಹಸ್ಬೆಂಡ್ ಸಾಫ್ಟ್‌ವೇರ್ ಇಂಜಿನಿಯರ್. ನನ್ನ ಮಾವನವರು ಮೈಸೂರಿನಿಂದ ಬಂದಿದ್ದಾರೆ. ಅವರಿಗೆ ಅಮೇರಿಕದ ಕೆಲವು ಮುಖ್ಯವಾದ ಪ್ರವಾಸೀ ಕ್ಷೇತ್ರಗಳನ್ನು ತೋರಿಸಲು ಹೊರಟಿದ್ದೇವೆ. ಹೀಗಾಗಿ ಇಲ್ಲಿಗೂ ಬರಬೇಕಾಯಿತು' ಎಂದು ನುಡಿದು, 'ಕಾಲೇಜಿನಲ್ಲಿ ಡಿಗ್ರಿ ಓದುತ್ತಿದ್ದಾಗಲೇ ನಿಮ್ಮ ಕವನಗಳನ್ನು ಟೆಕ್ಸ್ಟ್‌ಬುಕ್ಸ್ ಗಳಲ್ಲಿ ಓದಿದ್ದೆ. ಆಮೇಲೆ ನಿಮ್ಮ ಹಾಡುಗಳ ಕ್ಯಾಸೆಟ್‌ಗಳನ್ನು ಕೇಳಿ, ಮೆಚ್ಚಿ ನಿಮ್ಮ ಅಭಿಮಾನಿಯಾದೆ. ಈಗಲೂ ನಮ್ಮ ಮನೆಯಲ್ಲಿ ನಿಮ್ಮ ಕ್ಯಾಸೆಟ್ ಮತ್ತು ಪುಸ್ತಕಗಳಿವೆ. ನಾನು ಕನಸು-ಮನಸಿನಲ್ಲೂ ನಿಮ್ಮನ್ನು ಇಲ್ಲಿ ಭೇಟಿ ಮಾಡುತ್ತೇನೆ ಅಂದುಕೊಂಡಿರಲಿಲ್ಲ' ಎಂದು ಆನಂದಭರಿತ ಧ್ವನಿಯಲ್ಲಿ ಆ ಮಹಿಳೆ ಉದ್ಗರಿಸಿದರು. ಕೈ ಚೀಲದಿಂದ ಕಾಗದದ ತುಣುಕೊಂದನ್ನು ತೆಗೆದು ನಿಸಾರರ ಹಸ್ತಾಕ್ಷರವನ್ನು ಪಡೆದುಕೊಂಡರು. ಕೊಂಚ ಹೊತ್ತು ಮಾತಾಡಿದ ಮೇಲೆ ಅವರು ನಮ್ಮನ್ನು ಬೀಳ್ಕೊಟ್ಟರು. ಅರ್ಧ ಗಳಿಗೆಯಲ್ಲೇ ಆಕೆ ನಿಸಾರರ ಬಳಿಗೆ ಮರಳಿ ಬಂದು ಪಕ್ಕಕ್ಕೆ ಕರೆದು ಏನೋ ಹೇಳಿದರು. ಜೊತೆಗೆ ಚೀಟಿಯಲ್ಲಿ ಏನೋ ಬರೆದು ಕೈಗಿತ್ತು, 'ಥ್ಯಾಂಕ್ಸ್' ಎಂದು ಹೇಳಿ ಗಂಡ ಮತ್ತು ಮಾವನವರನ್ನು ಸೇರಿಕೊಂಡರು. ನಿಸಾರರು ನನಗೆ, ಆ ಹೆಣ್ಣುಮಗಳು ಚೊಚ್ಚಲು ಬಸುರಿಯೆಂದೂ ಆಕೆಗೆ ಚೆನ್ನಾಗಿರುವ ಒಂದೆರಡು ಗಂಡು-ಹೆಣ್ಣುಮಕ್ಕಳ ಹೆಸರುಗಳನ್ನು ತಿಳಿಸಬೇಕೆಂದೂ ಕೋರಿಕೊಂಡು, ಸಣ್ಣ ಚೀಟಿಯೊಂದರಲ್ಲಿ ತಮ್ಮ ಮನೆಯ ಫೋನ್ ನಂಬರನ್ನು ಬರೆದು ಕೊಟ್ಟಿರುವುದಾಗಿ ತಿಳಿಸಿದರು. 'ತುಂಬಾ ಒಳ್ಳೆಯದಾಯ್ತು ಬಿಡಿ. ಒಳ್ಳೆಯ ಹೆಸರುಗಳನ್ನು ಯೋಚಿಸಿ, ಆಕೆಗೆ ತಿಳಿಸಿ. ಇದೆಲ್ಲ ಅನಿರೀಕ್ಷಿತವಾದರೂ ಎಷ್ಟು ಅರ್ಥಪೂರ್ಣ ಮತ್ತು ಗೂಢತಮವಾದದ್ದು ನೋಡಿ' ಎಂದೆ.

ದುರದೃಷ್ಟವಶಾತ್, ಆ ಚೀಟಿಯನ್ನು ಜರ್ಕಿನ್ನಿನ ಕಿಸೆಯಲ್ಲಿ ಇಟ್ಟಿದ್ದವರು, ಷೂಸಿನ ಲೇಸನ್ನು ಕಟ್ಟಲು ಬಾಗಿದಾಗ, ಅದು ಕೆಳಗೆ ಬಿದ್ದು ರಭಸವಾಗಿ ಬೀಸುತ್ತಿದ್ದ ಗಾಳಿಗೆ ಹಾರಿ ಕಂದರದ ಆಳಕ್ಕೆ ತೇಲಿ ತೇಲಿ ಹೊರಟುಹೋಯಿತು. ಆಮೇಲೆ ನಿಸಾರರು ಪಟ್ಟ ವಿಷಾದ, ಮೌನವಾಗಿ ಅನುಭವಿಸಿದ ದುಗುಡ ಅವರೊಬ್ಬರಿಗೇ ವೇದ್ಯ. ಈ ಘಟನೆಯನ್ನು ಕುರಿತು ನಿಸಾರ್, ಸ್ವದೇಶಕ್ಕೆ ಮರಳಿದ ಮೇಲೆ ಒಂದು ಅರ್ಥಗರ್ಭಿತ ಕವಿತೆಯನ್ನು ಬರೆದರು. 'ಗ್ರಾಂಡ್ ಕಾನ್ಯನ್ ಮತ್ತು ಗರ್ಭಿಣಿ' ಎಂದು ಅದರ ಹೆಸರು. ಕೆಲ ವರ್ಷಗಳ ಹಿಂದೆ ಅದು ದೀಪಾವಳಿ ವಿಶೇಷಾಂಕವೊಂದರಲ್ಲಿ ಪ್ರಕಟವಾದ ನೆನಪು. ಅದರಲ್ಲಿ ಅವರು ಈ ಘಟನೆಯನ್ನು ನಿಮಿತ್ತವಾಗಿಟ್ಟುಕೊಂಡು ಜೀವನದ ಗಹನತೆ, ಮನುಷ್ಯ ಸಂಬಂಧಗಳ

ತಾತ್ತ್ವಿಕತೆ ಮುಂತಾದವುಗಳ ಬಗ್ಗೆ 'ಫಿಲಾಸಫೈಸ್' ಮಾಡಿ ಬರೆದಿದ್ದಾರೆ. ಇಷ್ಟಾಗಿ, ನಿಸಾರರು ಆಕೆಯ ಹೆಸರನ್ನು ವಿಚಾರಿಸಲಿಲ್ಲ. ಆತುರ, ಗಡಿಬಿಡಿಯಲ್ಲಿದ್ದ ಆಕೆಗೂ ಅದನ್ನು ತಿಳಿಸಲು ಹೊಳೆದಿರಲಿಲ್ಲ. ಇದು ಎಂಥ ವಿಚಿತ್ರ ನೋಡಿ!

ಅಲ್ಲಿಂದ ಮರಳಿದಾಗ, ರಸ್ತೆಯಲ್ಲಿ ಸಿಕ್ಕಿದ ಐಮಾಕ್ಸ್ (Imax) ಥಿಯೇಟರ್‌ನಲ್ಲಿ ನಿಸಾರರಿಗೆ ಗ್ರಾಂಡ್ ಕಾನ್ಯನ್‌ಅನ್ನು ಕುರಿತ ಒಂದು ಸ್ವಾರಸ್ಯಕರವಾದ ಸಂಶೋಧನಾತ್ಮಕ ಸಾಕ್ಷ್ಯಚಿತ್ರವನ್ನು ತೋರಿಸಿದೆ. ನಿಸಾರರಿಗೆ ಅದು ತುಂಬಾ ಮೆಚ್ಚಿಗೆಯಾಗಿ ನನಗೆ ಹಲವು ಬಾರಿ ಥ್ಯಾಂಕ್ಸ್ ಹೇಳಿದರು. 'ಸೀತಾರಾಮಯ್ಯನವರೆ, ನೀವು ನನ್ನನ್ನು ಸೋದರನಿಗಿಂತ ಹೆಚ್ಚಾಗಿ ನೋಡಿಕೊಂಡು, ಧಾರಾಳವಾಗಿ ಸತ್ಕರಿಸಿದ್ದೀರಿ. ನಿಮ್ಮ ಧರ್ಮಪತ್ನಿ ಮ್ಯಾಡಲೀನ್ ಅಂತೂ ನನಗೆ ಊಟೋಪಚಾರಗಳಿರಲಿ, ಔಷಧಿಗಳೂ ಒದಗುವಂತೆ ಆಪ್ತವಾಗಿ ನೋಡಿ ಕೊಂಡಿದ್ದಾರೆ. ನಿಮ್ಮಿಂದ ಫೀನಿಕ್ಸ್ ನಗರಕ್ಕೆ ಬಂದು ಇಲ್ಲಿನ ಕನ್ನಡಿಗರ ಪ್ರೀತ್ಯಾದರಗಳನ್ನು ಸವಿಯುವಂತಾಗಿದೆ. ಇದಕ್ಕಾಗಿ ನಿಮಗೆ ಕೃತಜ್ಞ. ಇವುಗಳ ಜೊತೆಗೆ, ಒಂದು ಕೈ ಮಿಗಿಲಾಗಿ ಈ ನೈಸರ್ಗಿಕ ಪವಾಡದ ದರ್ಶನ ಮಾಡಿಸಿದ್ದಂತೂ ಎಂದೆಂದೂ ಮರೆಯಲಾಗದ ಅಪರೂಪದ ಅನುಭವ. ಗ್ರಾಂಡ್ ಕಾನ್ಯನ್‌ನ ಹೊರಗಿನ ಬೆರಗಿನ ಸ್ವರೂಪವನ್ನು ನಿಮ್ಮ ಜೊತೆಗೆ ಅಲ್ಲಿ ನಿಂತು ವೀಕ್ಷಿಸಿದೆ. ಈ ಸಾಕ್ಷ್ಯಚಿತ್ರದ ಮೂಲಕ ಆ ಕೊಳ್ಳದ ಅಂತರಂಗದ ದರ್ಶನ ನನಗಾಯಿತು. ಅದು ತನ್ನ ಒಡಲಿನಲ್ಲಿ ಅಡಗಿಸಿಕೊಂಡಿರುವ ಎಷ್ಟೊಂದು ಗುಟ್ಟುಗಳ, ವೈವಿಧ್ಯಗಳ, ಪ್ರಾಗೈತಿಹಾಸಿಕ ಸಂಗತಿಗಳ ಪರಿಚಯವನ್ನು ಈ ಚಿತ್ರ ನನಗೆ ಮಾಡಿಸಿತು. ಇದಕ್ಕಾಗಿ ನಿಮಗೆ ಹೆಚ್ಚು ಋಣಿ' ಎಂದು ನುಡಿದ ಹೃದಯಾಂತರಾಳದ ಮಾತುಗಳು ನನಗೆ ಆಗಾಗ ನೆನಪಾಗುತ್ತವೆ. ನಿಸಾರರ ಕೃತಜ್ಞತಾಶೀಲ ಸ್ವಭಾವ ಅವರ ಬಗೆಗಿನ ಮೆಚ್ಚುಗೆಯನ್ನು ಹೆಚ್ಚಿಸುತ್ತದೆ.

ನಾವು ವಾಪಸ್ಸಾಗುವಾಗ ಕಾಡಿನ ನಡುವಿನ ಹಾದಿಯಲ್ಲಿ ಜಿಂಕೆಗಳ ಹಿಂಡು ಮತ್ತು ಕಯೋಟಿ (Coyote) ಎಂಬ ಕುಳ್ಳನೆಯ ತೋಳದಂಥ ಕಾಡುನಾಯಿಯ ಜಾತಿಯ ಪ್ರಾಣಿಗಳು ಪದೇ ಪದೇ ಎದುರಾದವು. ನಮ್ಮ ಮಾತುಕತೆ, ಈ ದೇಶದ ಪ್ರಾಣಿ ವೈಶಿಷ್ಟ್ಯ ವನ್ನು ಕುರಿತು ಕೊಂಚ ಸಮಯ ಸಾಗಿತು. ಫ್ಲಾಗ್‌ಸ್ಟಾಫ್ ತಲಪುವ ವೇಳೆಗೆ ಮಧ್ಯಾಹ್ನ ವಾಗಿತ್ತು. ಕೆಟ್ಟು ನಿಂತಿದ್ದ ನನ್ನ ಮರ್ಸಿಡೀಸ್ ಕಾರನ್ನು ಕೆನ್ಸ್ ಗ್ಯಾರೇಜಿನಿಂದ ಟ್ರಕ್ಕೊಂದಕ್ಕೆ ಏರಿಸಿ ನಾವು ಫೀನಿಕ್ಸ್‌ನತ್ತ ಪ್ರಯಾಣ ಬೆಳೆಸಿದೆವು. ಹೋಗುವಾಗ, ಒಂದು ಮಳಿಗೆಯ ಬಳಿ ಸಾವಿರಾರು ದೊಡ್ಡ ಗಾತ್ರದ ಹಳದಿ ಮತ್ತು ನಸು ಕಿತ್ತಳೆ ಬಣ್ಣದ ಕುಂಬಳಕಾಯಿಗಳನ್ನು ಪೇರಿಸಿದ್ದರು. ಬೇರೆ ಯಾವುದೇ ರೀತಿಯ ತರಕಾರಿ ಅಲ್ಲಿರಲಿಲ್ಲ. ನಿಸಾರರು ಆಶ್ಚರ್ಯದಿಂದ ವಿಚಾರಿಸಿದಾಗ, ನಾನು ಅವರಿಗೆ ವಿವರಿಸಿದೆ: ಅಮೇರಿಕನ್ನರು 'ಹಾಲೋವಿನ್' (Halloween) ಎಂಬ ಸಂಭ್ರಮದ ಹಬ್ಬವನ್ನು ಆಚರಿಸುತ್ತಾರೆ. ಆ ಹಬ್ಬ ರೈತಾಪಿ ಜನಗಳ ಕೃಷಿ ಬದುಕಿಗೆ ಸಂಬಂಧಿಸಿದ್ದು. ಅದು ಇವೊತ್ತು ರಾತ್ರಿ ಅಂದರೆ, ಅಕ್ಟೋಬರ್ ೩೧ರಂದು 'ಆಲ್ ಸೇಯಿಂಟ್ಸ್ ಡೇ'ಯ ರಾತ್ರಿ ಆಚರಣೆಗೆ ಬರುತ್ತದೆ. ಕುಂಬಳ ಕಾಯಿಯಿಂದ ಹಲವು ಬಗೆಯ ಆಕೃತಿಗಳನ್ನು ರಚಿಸುವರಲ್ಲದೆ, ರಾತ್ರಿ ಮಕ್ಕಳು ಹಾಗೂ ಹರಯದ ಹುಡುಗರು ಗುಂಪುಗೂಡಿ ಮನೆ ಮನೆಗೂ ಹೋಗಿ 'Trick or treat' ಎನ್ನುತ್ತಾರೆ. ಆಗ ಮನೆಯವರು

ಯಾವುದಾದರೂ ಚಮತ್ಕಾರದ ಹಾಸ್ಯಮಯ ಮಾತನ್ನು ಹೇಳಬೇಕು, ಇಲ್ಲವೇ ಅದಕ್ಕೆ ಪರ್ಯಾಯವಾಗಿ ಚಾಕೊಲೇಟ್ ಮುಂತಾದ ಸಿಹಿಯನ್ನು ಕೊಟ್ಟು ಕಳಿಸಬೇಕು. ಕೆಲವು ಕಡೆ ಅಲ್ಲಲ್ಲಿ ಹಳೆಯ ಸಾಮಾನುಗಳನ್ನು, ಕಟ್ಟಿಗೆಗಳನ್ನು ಒಡ್ಡಿ—ನಮ್ಮೂರಿನ ಹೋಳಿ ಹಬ್ಬದಂತೆ—ಬೆಂಕಿಯಿಡುವುದುಂಟು. ಗುಂಪಾಗಿ ಬರುವ ಪೋರ, ಪೋರಿಯರೆಲ್ಲ ವಿಚಿತ್ರವಾದ ವೇಷಗಳನ್ನು ಧರಿಸಿರುತ್ತಾರೆ. ಮುಖ ಮತ್ತು ಮೈಗೆ ಮಸಿಯನ್ನೊ ಇತರ ಬಣ್ಣವನ್ನೊ ಬಳಿದುಕೊಳ್ಳುತ್ತಾರೆ. ಅಂತೂ 'ಹಾಲೋವಿನ್' ಜಾನಪದೀಯ ಹಿನ್ನೆಲೆಯ ವಿಶಿಷ್ಟವಾದ ನಕ್ಕು ನಲಿಯುವ ಸಡಗರದ ಅಮೇರಿಕನ್ ಹಬ್ಬ. ಆ ರಾತ್ರಿ ನಮ್ಮ ಊರಿನಲ್ಲಿ ನಾನು ವಿವರಿಸಿದ ವಿಷಯಗಳ ಪ್ರತ್ಯಕ್ಷ ಅನುಭವ ನಿಸಾರರಿಗೆ ಆಯಿತು. ಊರಿನ ತುಂಬ ಪೋರ ಪೋರಿಯರ, ಬೆಳೆದ ಹುಡುಗ ಹುಡುಗಿಯರ ಗೌಜು ಗದ್ದಲ, ನಗೆ ಕೇಕೆಗಳ ಕೋಲಾಹಲ. ಪ್ರತ್ಯೇಕವಾದ ಮನೆಯನ್ನು ಮಾಡಿಕೊಂಡು ವಾಸವಾಗಿರುವ ನನ್ನ ಮಗಳು ಶ್ರುತಿ ಕೂಡ ಆ ದಿವಸ ಅಮೇರಿಕದ ಮೂಲ ನಿವಾಸಿಯ ವೇಷ ಧರಿಸಿ ಮನೆಗಳಿಗೆ ಹೋಗಲು ಸಜ್ಜಾಗಿದ್ದಳು. 'ಹೇಗೆ ಕಾಣಿಸುತ್ತೇನೆ?' ಎಂದು ನಿಸಾರರನ್ನು ಕೇಳಿದಾಗ, ಅವರು ನಕ್ಕು 'Awefully wonderful' ಎಂದರು.

ಮರುದಿನ ಅವರನ್ನು ಟೆಕ್ಸಾಸ್ ರಾಜ್ಯದ ಹ್ಯೂಸ್ಟನ್ ಪಟ್ಟಣಕ್ಕೆ ಹೋಗುವ ವಿಮಾನವನ್ನು ಹತ್ತಿಸಿ ಬಂದೆ. ಅಲ್ಲಿ ಅವರು ರಾಜ್ಯೋತ್ಸವದ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸುವುದಿತ್ತು. ಮರಳಿ ಮನೆಗೆ ಬಂದಾಗ ಮನೆ, ಮನಸ್ಸು ಎರಡೂ ಬಿಕೋ ಎನ್ನಿಸಿದ್ದವು. ಐದಾರು ದಿನಗಳ ನಿಸಾರರ ಎಡೆಬಿಡದ ಒಡನಾಟದಲ್ಲಿ ನನಗಾಗಲಿ, ಮ್ಯಾಡೆಲೀನ್‌ಗಾಗಲಿ ಸಮಯ ಸರಿದಿದ್ದೇ ಗೊತ್ತಾಗಲಿಲ್ಲ. ಪ್ರತಿ ದಿನವೂ ನಮಗೆ ಸಾಹಿತ್ಯ ಸಂಸ್ಕೃತಿಗಳ ಅನೇಕ ಹೊಸ ಸಂಗತಿಗಳ ಸಮಾರಾಧನೆಯಾಗುತ್ತಿತ್ತು. ಜೊತೆಗೇ ಮಿತ್ರ ನಿಸಾರ್ ಅವರ ಸರಳ ನಿರಾಡಂಬರ ಸ್ವಭಾವದ ಮತ್ತು ವ್ಯಕ್ತಿತ್ವದ ಶ್ರೀಮಂತ ಗುಣಗಳ ನಿಚ್ಚಳವಾದ ಪರಿಚಯವೂ ಆಗಿ ಮನಸ್ಸು ಪ್ರಸನ್ನಗೊಳ್ಳುತ್ತಿತ್ತು. ಅಂತೂ, ನಾನು ಭೇಟಿಯಾದ ತುಂಬು ಆತ್ಮೀಯ, ಅಪರೂಪದ ವ್ಯಕ್ತಿ ನಮ್ಮ ಕವಿ ಮಿತ್ರ ನಿಸಾರ್.

ಕಾಲದ ಬದಲಾವಣೆಯಿಂದ ಬದುಕಿನ ರೀತಿಯೂ ಮಾರ್ಪಡುವುದೇನೋ ನಿಜ. ಆದರೆ ಮಾರ್ಪಾಡಾದದ್ದರಲ್ಲಿ ಯಾವುದು ಒಳ್ಳೆಯದು, ಹಿತಕರವಾದದ್ದು; ಯಾವುದಲ್ಲ ಎನ್ನುವ ವಿವೇಕ ಬಹಳ ಮುಖ್ಯ. ಮಾರ್ಪಟ್ಟದ್ದೆಲ್ಲ ಮುತ್ತು, ಗತಕಾಲದ್ದೆಲ್ಲ ಗಾಜು ಎನ್ನುವಂತಿಲ್ಲ. ಹಿಂದಿನ ಸಾತ್ವಿಕ ಅಗ್ರಹಾರಗಳಲ್ಲಿ ಪಂಜಾಬಿ ಧಾಬಾ, ಕೆಂಟಕಿ ಚಿಕನ್, ಬೀರಾಲಯಗಳು ವಿಜೃಂಭಿಸಿದ್ದರೆ ಕಾಲ ಮಹಿಮೆ ಎನ್ನುವ ಒಂದೇ ಕಾರಣಕ್ಕೆ ಅವುಗಳನ್ನು ಸಮರ್ಥಿಸಿ ಅಂಗೀಕರಿಸುವುದು ಎಷ್ಟು ಉಚಿತ?

(ಜೀವನ ಪರಿವರ್ತನೆ)



ಬದುಕಿನಲಿ ಉಳಿಯುವುದು ಎಲ್ಲ ಕಾಲಕು / ಸುಮಧುರ ಸ್ಮರಣೆಗಳ ಸವಿ ಮೆಲುಕು

♦ *ಡಾ. ತೇಜೋಮೂರ್ತಿ ಕರ್ತಾಳ್*
ಡೆಟ್ರಾಯಿಟ್ (ಮಿಷಿಗನ್ ಪ್ರಾಂತ್ಯ)

ಮೊನ್ನೆ ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ನಿಧನರಾದ ಸುದ್ದಿಯನ್ನು ತಿಳಿದ ಮೇಲೆ ಉದಯ ಟಿವಿಯಲ್ಲಿ ಅವರ ಅಂತಿಮ ದರ್ಶನದ ದೃಶ್ಯವನ್ನು ವೀಕ್ಷಿಸುತ್ತಿದ್ದಾಗ ಹಿರಿಯರಾದ ಪ್ರೊ. ಕೆ.ಎಸ್. ನಿಸಾರ್ ಅಹಮದ್‌ರವರ ತುಣುಕು ಸಂದರ್ಶನವನ್ನು ನೋಡಿದೆ. ಆಗ ಅನ್ನಿಸಿದ್ದು 'ಜೀವನದಲ್ಲಿ ಕೊನೆಯವರೆವಿಗೂ ಉಳಿಯುವುದು ಮೆಲುಕು ಹಾಕುವಂತಹ ನೆನಪುಗಳು ಮಾತ್ರ'. ಈ ಮಾತುಗಳು ಡಾ. ರಾಜ್ ಅವರು ನಿಧನರಾದ ಶೋಕಮಯ, ವಿಷಾದದ ಸಮಯದಲ್ಲಿ ಕ್ಲೀಷೆಯೆನ್ನಿಸಿದರೂ ನನ್ನ ಮಟ್ಟಿಗೆ ಮಾತ್ರ ಅದು ಸತ್ಯ. ಹಿರಿಯರಾದ ನಿಸಾರ್ ಅಹಮದ್‌ರವರಿಗೆ ಕೂಡಲೇ ಫೋನ್ ಕರೆ ಮಾಡಿ, ಅಲ್ಲಿಯ ವಾತಾವರಣವನ್ನು ತಿಳಿಯೋಣವೆನ್ನಿಸಿತು. ಭಾರತ ಮತ್ತು ಅಮೇರಿಕ ದೇಶಗಳ ನಡುವೆ ಇರುವ ಸಮಯದ ವ್ಯತ್ಯಾಸದಿಂದ ತಕ್ಷಣ ಕರೆ ಮಾಡಲಾಗದಾದರೂ ಎರಡು ದಿನಗಳ ಅನಂತರ ಫೋನಾಯಿಸಿದೆ. ಸ್ವತಃ ನಿಸಾರ್‌ರವರೇ ಫೋನ್ ತೆಗೆದುಕೊಂಡರು. 'ಹಲೋ' ಎಂದಾಗ ಆ ಕಡೆಯಿಂದ ಕೇಳಿದ್ದು ಅದೇ ಆತ್ಮೀಯ ಧ್ವನಿ! ಸಹಜವಾಗಿಯೇ ಡಾ. ರಾಜ್ ಬಗ್ಗೆ ಮಾತನಾಡಿದೆವು. ಸುಮಾರು ಹತ್ತು ನಿಮಿಷಗಳ ಬಳಿಕ ನಿಸಾರ್‌ರವರ ಬಗೆಗೆ ಹೊರಬರುತ್ತಿರುವ ಅಭಿನಂದನ ಗ್ರಂಥದ ಬಗ್ಗೆ ತಿಳಿದು ಅವರ ಅಭಿಮಾನಿಯಾದ ನನಗೆ ಪರಮ ಹರ್ಷವಾಯಿತು. ಹಿರಿಯರಾದ ನಿಸಾರ್ ಅಹಮದ್ ಮತ್ತು

ನನ್ನ ಪರಿಚಯ ಮೂರೂವರೆ-ನಾಲ್ಕು ವರ್ಷಗಳ ಹಿಂದಿನದಾದರೂ ಅವರೊಡನೆ ನಾನು ಕಳೆದ ಕೆಲವು ದಿನಗಳ ಸವಿ ನೆನಪುಗಳ ಬಗ್ಗೆ ಒಂದಷ್ಟು ಸಂಗತಿಗಳನ್ನು ಬರೆಯಬೇಕೆನ್ನಿಸಿತು.

ನಾನು ನಿಸಾರರ ಸಾಹಿತ್ಯವನ್ನು ಮೈಸೂರಿನಲ್ಲಿದ್ದಾಗ ಹಿಂದೆ ಓದಿದ್ದರೂ ಅವರ ಮುಖಾಮುಖಿ ಭೇಟಿಯಾಗಿರಲಿಲ್ಲ. ಅವರನ್ನು ಮೊದಲು ನೋಡಿದ್ದು ನಾನು ವಾಸವಾಗಿರುವ ಮಿಷಿಗನ್ ರಾಜ್ಯದ ಡೆಟ್ರಾಯಿಟ್ ನಗರದಲ್ಲಿ, ೨೦೦೨ ವಿಶ್ವ ಕನ್ನಡ ಸಮ್ಮೇಳನ ನಡೆದಾಗ. ಅವರೆಗೂ ನನಗೆ ಯಾವ ಪ್ರಸಿದ್ಧ ಸಾಹಿತಿಯನ್ನೂ ಪ್ರತ್ಯಕ್ಷವಾಗಿ ಭೇಟಿಯಾಗುವ ಅವಕಾಶ ಸಿಕ್ಕಿರಲಿಲ್ಲ. ಕುವೆಂಪುರವರನ್ನು ಮೈಸೂರಿನಲ್ಲಿ ಅವರು ಸಂಜೆ ವಾಯು ವಿಹಾರಕ್ಕೆ ಹೊರಟಾಗ ದೂರದಿಂದ ನೋಡಿದ್ದುಂಟು. ಸಮ್ಮೇಳನದ ಹೊರಗೆ ಪುಸ್ತಕದ ಮಳಿಗೆಯಲ್ಲಿ ನಿಸಾರರು ಹಲವರಿಗೆ ತಮ್ಮ ಹಸ್ತಾಕ್ಷರವನ್ನು ನೀಡುತ್ತಿದ್ದರು. ನಾನು ನನ್ನ ನಮಸ್ಕಾರಗಳನ್ನು ತಿಳಿಸಿ, ಅವರ 'ನಿತ್ಯೋತ್ಸವ' ಮತ್ತು 'ಹಿರಿಯರು ಹರಸಿದ ಹೆದ್ದಾರಿ' ಪುಸ್ತಕಗಳಿಗೆ ಅವರಿಂದ ಹಸ್ತಾಕ್ಷರವನ್ನು ಪಡೆದು ಮತ್ತೆ ಅವರನ್ನು ಮುಖತಃ ಭೇಟಿಯಾಗಲು ಕೋರಿದೆ. ಅದಕ್ಕೆ ಅವರು, 'ಈ ವಿಶ್ವ ಕನ್ನಡ ಸಮ್ಮೇಳನ ಮುಗಿದ ಅನಂತರ ನಾನು ಮೂರುವರೆ ತಿಂಗಳು ಅಮೇರಿಕ ಪ್ರವಾಸದಲ್ಲಿ ಇರುತ್ತೇನೆ. ಭಾರತಕ್ಕೆ ವಾಪಸ್ಸು ಹೋಗುವಾಗ ಡೆಟ್ರಾಯಿಟ್ ಮಾರ್ಗವಾಗಿಯೇ ಹೋಗಬೇಕು. ಆಗ ಖಂಡಿತ ನಿಮ್ಮನ್ನು ಭೇಟಿ ಮಾಡುತ್ತೇನೆ. ಯಾವುದಕ್ಕೂ ಒಮ್ಮೆ ಮಿತ್ರರಾದ ಸಿ. ಕೃಷ್ಣಶಾಸ್ತ್ರಿಯವರಿಗೆ ತಿಳಿಸಿ' ಎಂದರು. ಕೃಷ್ಣಶಾಸ್ತ್ರಿಯವರು ಆಗ ನಿಸಾರರ ಅಮೇರಿಕ ಪ್ರವಾಸದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಅಯೋವ ನಿವಾಸಿಗಳಾದ ಸಿ. ಕೃಷ್ಣಶಾಸ್ತ್ರಿಯವರಿಂದ ನಿಸಾರರ ಪ್ರವಾಸದ ವಿವರಗಳನ್ನು ಪಡೆದು, ೨೦೦೨ ನವೆಂಬರ್ ಕೊನೆಯ ವಾರದಲ್ಲಿ ನಮ್ಮ ಡೆಟ್ರಾಯಿಟ್ ಮನೆಯಲ್ಲಿ ಕೆಲ ಕಾಲ ಇರಬೇಕೆಂದು ಕೇಳಿಕೊಂಡೆ.

ನಿಗದಿಯಂತೆ ನವೆಂಬರ್ ಕೊನೆಯ ವಾರ ನಿಸಾರರು ಕೃಷ್ಣಶಾಸ್ತ್ರಿಯವರೊಡನೆ ರಾತ್ರಿ ಸುಮಾರು ೯ ಗಂಟೆಗೆ ಚಿಕಾಗೋ ನಗರದಿಂದ ನಮ್ಮ ಮನೆಗೆ ಬಂದರು. ಸುಮಾರು ಆರೇಳು ಗಂಟೆಯ ಕಾರು ಪ್ರಯಾಣದಿಂದ ದಣಿದಿದ್ದರು ಎನ್ನಿಸುತ್ತದೆ. ಆ ರಾತ್ರಿ ಹೆಚ್ಚು ಮಾತನಾಡಲಿಲ್ಲ. ನಾನು ಹಿಂದೆ ಹೇಳಿದಂತೆ ಯಾವ ಸಾಹಿತಿಗಳನ್ನೂ ಬಹಳ ಹತ್ತಿರದಿಂದ ನೋಡಿದವನಲ್ಲ. ನಾನು ಆಗ ಕವಿಗಳೆಂದರೆ ಹೀಗೆಯೇನೋ, ಬಹುಶಃ ಹೆಚ್ಚು ಮಾತನಾಡಲಿಕ್ಕಿಲ್ಲ ಎಂದುಕೊಂಡೆ. ಮಾರನೆಯ ಬೆಳಿಗ್ಗೆ ಅವರು ನಮ್ಮ ಮನೆಯ ಕೆಳ ಅಂತಸ್ತಿನಲ್ಲಿ ನಡೆದಾಡುತ್ತಾ ಸಣ್ಣದಾಗಿ ವ್ಯಾಯಾಮ ಮಾಡುತ್ತಿದ್ದರು. ಆಗ ನಾನು ಅವರೊಡನೆ ಮಾತಿಗಿಳಿದೆ. ಆಗ ನನಗೆ ನಿಜಕ್ಕೂ ಸೋಜಿಗವೆನ್ನಿಸಿದ್ದು ಅವರ ಮಾತಿನ ನಿರರ್ಗಳತೆ. ರಾತ್ರಿ ನೋಡಿದ ಪ್ರಸಿದ್ಧ ಕವಿ ನಿಸಾರ್ ಇವರೇನಾ ಎನ್ನಿಸಿತು! ಕರ್ನಾಟಕ, ಕನ್ನಡ ಸಾಹಿತ್ಯ, ಅಮೇರಿಕ, ಬೆಂಗಳೂರು ಜೀವನ, ಜಾಗತೀಕರಣ—ಹೀಗೆ ಹಲವು ವಿಚಾರಗಳ ಬಗ್ಗೆ ಸುಮಾರು ಎರಡು ಗಂಟೆ ಮಾತನಾಡಿದೆವು. ನಿಸಾರರು ನನಗೆ ವಯಸ್ಸಿನಲ್ಲಿ ಸುಮಾರು ೩೦ ವರ್ಷ ಹಿರಿಯರು. ಆದರೆ ನನಗೆ ಆ ಕ್ಷಣದಲ್ಲಾಗಲಿ ಅಥವಾ ಮುಂದೆ ಹಲವಾರು ಸಮಯಗಳಲ್ಲಿ ಆಗಲಿ ನಾವು ಯಾವುದೇ ವಿಷಯಗಳ ಬಗ್ಗೆ ಮಾತನಾಡುವಾಗ, ನಮ್ಮಿಬ್ಬರ ಮಧ್ಯೆ ನಮ್ಮ ವಯಸ್ಸಾಗಲಿ, ವಿದ್ಯಾಭ್ಯಾಸವಾಗಲಿ, ಅವರ ಸಾಹಿತ್ಯಕ

ವಿದ್ವತ್ತಾಗಲಿ ನುಸುಳದಂತೆ ಚೆನ್ನಾಗಿ ನಡೆಸಿಕೊಂಡಿದ್ದಾರೆ. ಅವರ ಜೊತೆ ಅಮೇರಿಕದಲ್ಲಾಗಲಿ ಅಥವಾ ಆಮೇಲೆ ಬೆಂಗಳೂರಿನಲ್ಲಾಗಲಿ ನಾನು ಕಾಲ ಕಳೆದಾಗ ನನಗೆ ಯಾವುದೇ ಬಗೆಯ ಮುಜುಗರ, ಹಿಂಜರಿಕೆ ಉಂಟಾಗಲಿಲ್ಲ. ಇದು ನಿಸಾರರು ಇತರರ ಬಗ್ಗೆ ತೋರುವ ಕನಿಷ್ಠ ಮಾನವೀಯ ಗೌರವ ಮತ್ತು ಪರಸ್ಪರ ವಿಶ್ವಾಸ. ಬಿ.ಎಂ.ಶ್ರೀ.ಯವರು ಹಳಗನ್ನಡ ಕಾವ್ಯವೊಂದರಿಂದ ಆರಿಸಿದ 'ಸಾರಿಗೆ' ಎಂಬ ಪದ, ಈಗ ಜನ ಸಾಮಾನ್ಯರಲ್ಲಿ ಚಾಲ್ತಿಗೆ ಬಂದು ಹೇಗೆ ಸರ್ವವ್ಯಾಪಿ ಬಳಕೆಯನ್ನು ಹೊಂದಿದೆ ಎಂಬುದನ್ನು ಅವರು ವಿವರಿಸಿದರು. ಇದಕ್ಕೆ ವ್ಯತಿರಿಕ್ತವಾಗಿ ಇತ್ತೀಚೆಗೆ ಕನ್ನಡ ಭಾಷೆ ಸಹಜವಾಗಿ ಬೆಳೆಯಲು, ಹೇಗೆ ಕೆಲವು ಕೃತಕ ಮತ್ತು ಅಸಾಧುವಾದ ಪದಗಳು ತೊಡಕಾಗಿವೆಯೆಂದು ಉದಾಹರಣೆಗಳೊಂದಿಗೆ ಪ್ರಸ್ತಾಪಿಸಿ ದರು. ನಿದರ್ಶನಾರ್ಥವಾಗಿ, ಜನ ಸಾಮಾನ್ಯರಲ್ಲಿ ಬಳಕೆಯಲ್ಲಿರುವ ಪೊಲೀಸು ಮತ್ತು ಇತ್ತೀಚೆಗೆ ಕೆಲವರು ಚಾಲ್ತಿಗೆ ತರಲು ಪ್ರಯತ್ನಿಸುತ್ತಿರುವ ಆರಕ್ಷಕ; ಹಾಗೆಯೇ ಇಂಜಿನಿಯರು ಮತ್ತು ಅಭಿಯಂತರ ಇತ್ಯಾದಿ. ಮುಂದೆ ೨೦೦೮ರಲ್ಲಿ ಅವರನ್ನು ಬೆಂಗಳೂರಿ ನಲ್ಲಿ ಭೇಟಿ ಮಾಡಿದಾಗ ಅದೇ ಹಿಂದಿನ ಆತ್ಮೀಯತೆಯಿಂದ ಬರಮಾಡಿಕೊಂಡರು. ಸುಮಾರು ಒಂದು ಗಂಟೆ ಮಾತನಾಡಿದ ಮೇಲೆ ನನಗವರು ಉಡುಗೊರೆಯಾಗಿ ಕೊಟ್ಟದ್ದು ಹಿರಿಯರಾದ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರ 'ಮಲ್ಲಿಗೆಯ ಮಾಲೆ' ಮತ್ತು ತಾವು ಬರೆದ ಗದ್ಯ ಸಂಕಲನ 'ಅಚ್ಚುಮೆಚ್ಚು'. ಓದಲು ಹೇಳಿದ್ದು ಡಿ.ವಿ.ಜಿ., ಕುವೆಂಪು, ಕಾರಂತ, ಮಾಸ್ತಿ, ರಾಜರತ್ನಂ, ಸ್ವಾಮಿ ಸುಖಬೋಧಾನಂದ ಮುಂತಾದವರ ಬರಹಗಳನ್ನು.

ನಿಸಾರ್ ಅವರು ನಮ್ಮ ಕುಟುಂಬದ ಎಲ್ಲರೊಡನೆ, ಅನೇಕ ವರ್ಷಗಳ ಪರಿಚಯ ವಿದ್ದವರಂತೆ ಅತ್ಯಂತ ಆಪ್ತತೆಯಿಂದ ಸಂತೋಷಚಿತ್ತರಾಗಿ ವ್ಯವಹರಿಸಿದರು. ನಮ್ಮ ಮನೆಯ ವಾಸ್ತವ್ಯ ಮತ್ತು ಆತಿಥ್ಯವನ್ನು ಮನಸಾ ಶ್ಲಾಘಿಸಿದರು. ಡೆಟ್ರಾಯಿಟ್ ನಗರ ದಲ್ಲಿದ್ದಾಗ ಹಲವಾರು ಕಡೆ ಅವರೊಟ್ಟಿಗೆ ಸುತ್ತಾಡಿದೆ. ಅವುಗಳಲ್ಲಿ ಇರಾನ್-ಇರಾಕ್ ಯುದ್ಧದ ಸಮಯದಲ್ಲಿ ಸುಮಾರು ೩೦ ವರ್ಷಗಳ ಹಿಂದೆ ಅಮೇರಿಕೆಗೆ ವಲಸೆ ಬಂದು ನೆಲಸಿರುವ ಪೂರ್ವ ಪ್ರಾಚ್ಯನಿವಾಸಿಗಳ ಡಿಯರ್‌ಬಾರ್ನ್‌ನಲ್ಲಿಯ ಬಡಾವಣೆಗಳು, ಅಲ್ಲಿರುವ ಶಠೀಲಾ ಬೇಕರಿ, ಹೆನ್ರಿ ಫೋರ್ಡ್ ವಸ್ತು ಸಂಗ್ರಹಾಲಯ ಮುಂತಾದವು ಮುಖ್ಯವಾದವು. ಡಿಯರ್‌ಬಾರ್ನ್‌ನಲ್ಲಿರುವ ಕೆಲವು ವ್ಯಾಪಾರ ಮಳಿಗೆಗಳ ಮೇಲಿರುವ ಅರಬ್ಬೀ ನಾಮ ಫಲಕಗಳನ್ನು ನೋಡಿ ಅಚ್ಚರಿಪಟ್ಟರು. ಮತ್ತೊಮ್ಮೆ ನಿಸಾರರು, ನಾನು ಮತ್ತು ನನ್ನ ತಮ್ಮ ಮೋಹನ ಸಂಜೆ ಡೌನ್‌ಟೌನ್‌ಗೆ ಹೋಗಿ ವಾಪಸ್ಸು ಮನೆಗೆ ಬರುವಾಗ, ಅಲ್ಲಿನ ಎಂ.ಜಿ.ಎಂ. ಕಸೀನೊದಲ್ಲಿ ಕೆಲ ಗಂಟೆಗಳ ಕಾಲ ಕಳೆದೆವು. ನಿಸಾರರು ಅಲ್ಲಿನ ವಿಲಾಸಮಯ ವಾತಾವರಣವನ್ನು ತಮ್ಮ ಎಂದಿನ ಆಶ್ಚರ್ಯಮಿಶ್ರಿತ ಕಂಗಳಿಂದ ಸವಿಯು ತ್ತಿದ್ದರು. ನಾನು ಇದೇ ಸಮಯದಲ್ಲಿ, ಇವರಿಬ್ಬರನ್ನೂ ಸಂಪೂರ್ಣ ಮರೆತು ಅಲ್ಲಿನ 'ಸ್ಲಾಟ್ ಮೆಷಿನ್'ನಲ್ಲಿ ಸ್ವಲ್ಪ ಹಣವನ್ನು ಪಣವಿಟ್ಟು ಆಟವಾಡುತ್ತಿದ್ದೆ. ಇಬ್ಬರೂ ಸುಮಾರು ಒಂದೂವರೆ ಗಂಟೆ ನನ್ನನ್ನು ಎಲ್ಲೆಲ್ಲೋ ಹುಡುಕಿದರಂತೆ! ಕಡೆಗೂ ನನ್ನನ್ನು ಅವರು ಪತ್ತೆ ಹಚ್ಚಿದಾಗ ನಿಸಾರರಿಗೆ ಬಹುಶಃ ಅನ್ನಿಸಿರಬೇಕು: ಆ ಮಹಾಭಾರತದ ಧರ್ಮರಾಯನ ಮುಂದೆ ಇದು ಅಲ್ಪಾಪರಾಧವೆಂದು!

ಇನ್ನು ಮನೆಯಲ್ಲಿ ಅವರ ಜೊತೆ ನಾನು, ನನ್ನ ಹೆಂಡತಿ ನಂದಿನಿ, ಮಕ್ಕಳಾದ ತನ್ವಿ, ಸಂಜನಾ ಕಳೆದ ಕಾಲ ಅವಿಸ್ಮರಣೀಯ. ಅವರ ಸ್ನೇಹಪೂರ್ಣ ನಡವಳಿಕೆಗೆ ನಾವೆಲ್ಲರೂ ಬಹಳ ಸಂತೋಷ ಪಟ್ಟೆವು. ಅವರ ಸ್ಮರಣ ಶಕ್ತಿಯಂತೂ ಅದ್ಭುತ. ಉದಾಹರಣೆಗೆ, ಅವರು 'ನಿತ್ಯೋತ್ಸವ' ಪದ್ಯವನ್ನು ಬರೆಯುವಾಗಿನ ಸಂದರ್ಭವನ್ನು ಕೇಳಿದಾಗ, ವಿವರಿಸಿದ್ದು: ಆಗ ಅವರಿದ್ದ ಜಯನಗರ 'ಟಿ' ಬ್ಲಾಕ್ ಮನೆಯ ಮಾಳಿಗೆಯ ಮೇಲೆ ರಾತ್ರಿ ಹತ್ತರ ಸಮಯದಲ್ಲಿ ಶತಪಥ ತಿರುಗುತ್ತಿದ್ದಾಗ ಹುಟ್ಟಿದ್ದು, 'ನಿತ್ಯೋತ್ಸವ ತಾಯೆ ನಿತ್ಯೋತ್ಸವ' ಎಂದು ಶುರುವಾದ ಪದ್ಯದ ಆ ಜನಾದರಣೀಯ ಸಾಲುಗಳು. ಮತ್ತೊಮ್ಮೆ ಚೀಣೀಯರು ಭಾರತವನ್ನು ೧೯೬೦ರ ದಶಕದಲ್ಲಿ ಆಕ್ರಮಿಸಿಕೊಂಡ ಸಮಯದಲ್ಲಿ ಹೇಗೆ ಅಂದಿನ ರಾಜಕಾರಣಿಗಳು ಪ್ರಜೆಗಳನ್ನು ಕುರಿಗಳಾಗಿ ನಡೆಸಿಕೊಂಡರು ಎಂದು ನಿಸಾರರು ವೈಯಕ್ತಿಕವಾಗಿ ಬಹಳ ದುಃಖಿಗೊಂಡಿದ್ದಾಗ, ಒಂದು ಸಾಯಂಕಾಲ ಗಾಂಧಿಬಜಾರ್‌ನ ಹತ್ತಿರ ಕುರಿಯ ಮಂದೆಯನ್ನು ನೋಡಿದ್ದು, ಆ ಕ್ಷಣ ಹುಟ್ಟಿದ 'ಕುರಿಗಳು, ಸಾರ್, ಕುರಿಗಳು' ಸಾಲುಗಳು—ಇವೆಲ್ಲವನ್ನೂ ಒಂದೂ ವಿವರ ಬಿಡದಂತೆ ನಿನ್ನೆಯೋ ಮೊನ್ನೆಯೋ ನಡೆದ ಘಟನೆಗಳಂತೆ ವಿವರಿಸಿದರು. ಇನ್ನೊಮ್ಮೆ ಹೀಗೇ ಲೋಕಾಭಿರಾಮವಾಗಿ ಮಾತ ನಾಡುತ್ತಿರುವಾಗ, ಅಲ್ಲೇ ಸುಳಿದ ನಾಲ್ಕು ವರ್ಷದ ನನ್ನ ಮಗಳು ತನ್ವಿಗೆ ತಕ್ಷಣವೇ ಕುವೆಂಪುರವರ ಕೆಲವು ಸಾಲುಗಳನ್ನು ಯಥಾವತ್ತಾಗಿ ಬರೆದುಕೊಟ್ಟು ಶುಭ ಹಾರೈಸಿದರು. ಚಿಕ್ಕ ವಯಸ್ಸಿನಲ್ಲಿ ನಮಗೆಲ್ಲಾ ಕೆಲವು ಪದ್ಯಗಳು ಹಲವು ಕಾಲ ನೆನಪಿನಲ್ಲಿದ್ದರೂ ನಿಸಾರ ರಿಗೆ ಈ ವಯಸ್ಸಿನಲ್ಲಿಯೂ ಹೃದ್ಗತವಾಗಿರುವ ರೀತಿಯನ್ನು ನೋಡಿ ಬೆರಗಾಗಿ ಹೋದೆ.

ನಿಸಾರರ ಸಾಹಿತ್ಯದ ಬಗ್ಗೆ ಬರೆಯುವಷ್ಟು, ಕೂಲಂಕಷವಾಗಿ ಪರಾಮರ್ಶಿಸುವಷ್ಟು ನಾನು ಪರಿಣತನಲ್ಲದಿದ್ದರೂ ವೈಯಕ್ತಿಕವಾಗಿ ನನಗನ್ನಿಸಿದ್ದನ್ನು ತೋಡಿಕೊಳ್ಳುತ್ತೇನೆ: ನಿಸಾರರು ಮುಖ್ಯವಾಗಿ ಅಂತರ್ಮುಖಿ, ಭಾವಜೀವಿ. ಭಾವನಾತ್ಮಕವಾಗಿ ಸ್ಪಂದಿಸುವ, ಆಂತರಿಕವಾಗಿ ಕವಿಯಾಗಿ ತಳಮಳಿಸುವ ತುಂಬು ಅಂತಃಕರಣದ ಸಹೃದಯಿ. ಕನ್ನಡಿಗ ರೆಲ್ಲರಿಗೂ ಗೊತ್ತಿರುವಂತೆ ನಿಸಾರರು ಕಳೆದ ಐದು ದಶಕಗಳಿಂದ ಕಾವ್ಯಕ್ಷೇತ್ರದಲ್ಲಿ ಪ್ರಯೋಗಶೀಲರಾಗಿ, ಅಭಿಜಾತ ಕವಿಯಾಗಿ, ವಿಮರ್ಶಕರಾಗಿ, ಕನ್ನಡ ಸಾಹಿತ್ಯಕ್ಕೆ ಅಸಾಧಾರಣ ಕೊಡುಗೆಯನ್ನು ನೀಡಿದ್ದಾರೆ. ಇವರ ಭಾವಗೀತೆಗಳಲ್ಲಿ ಅರ್ಥಪೂರ್ಣವಾಗಿ ಮೂಡಿ ಬರುವ ಲವಲವಿಕೆಯ ಲಯ ಮತ್ತು ಕಮನೀಯ ಗೇಯ ಗುಣಗಳು ಅನನ್ಯ. ಇವರ ಪದ್ಯಗಳಲ್ಲಿ ವ್ಯಕ್ತವಾಗುವ ನವುರಾದ ನುಡಿಗಾರಿಕೆ, ಪದ ಲಾಲಿತ್ಯ ಮತ್ತು ಹೃದಯಂಗಮ ಪ್ರತಿಮೆಗಳು ಭಾವಪೂರ್ಣವಾಗಿ ನಮ್ಮೆಲ್ಲರಿಗೂ ಆಪ್ತವೆನಿಸುತ್ತವೆ. ನಾನು ಭಾರತದಲ್ಲಿದ್ದಾಗ ಕವನಗಳನ್ನು ಓದುತ್ತಿದ್ದುದು ಬಹಳ ಕಡಿಮೆ. ಅವುಗಳನ್ನು ಆಗಾಗ 'ಮಯೂರ', 'ಪ್ರಜಾವಾಣಿ', 'ಸುಧಾ', ಮೊದಲಾದ ವಿಶೇಷಾಂಕಗಳಲ್ಲಿ ಮಾತ್ರ ಓದುತ್ತಿದ್ದೆ. ಭಾರತೀಯ ಭಾಷೆಗಳಲ್ಲೇ ಮೊಟ್ಟ ಮೊದಲೆನ್ನಿಸಿದ ಇವರ 'ನಿತ್ಯೋತ್ಸವ' ಭಾವಗೀತೆಗಳ ಕ್ಯಾಸೆಟ್‌ಅನ್ನು ಕುತೂಹಲಕ್ಕಾಗಿ ಕೊಂಡು ತಂದು ಕೇಳಿದಾಗ ಅದರ ಕವಿತೆಗಳಲ್ಲಿನ ತನ್ಮಯಕರ ಗೇಯ ಗುಣ, ಸುಲಲಿತ ಲಯ ಮತ್ತು ಮನಮೋಹಕ ಉಪಮೆ ಮತ್ತು ರೂಪಕಗಳನ್ನು ಒಬ್ಬ ಸಾಮಾನ್ಯ ಕೇಳುಗನಾಗಿ ಬಹಳ ಆನಂದಿಸಿದೆ. ಇದೊಂದು ರೀತಿ ನನಗೆ

ಕಾವ್ಯದ ಬಗೆಗೆ ನಿಜವಾದ ಆಸಕ್ತಿಯನ್ನು ಮೂಡಿಸಲು ಕಾರಣವಾಯಿತೆನ್ನಬೇಕು. ಮುಂದೆ ಇವರ ಮತ್ತು ಹಲವು ಕನ್ನಡ ಕವಿಗಳ ಕಾವ್ಯಗಳನ್ನು ಗಮನವಿಟ್ಟು ಓದಲು 'ನಿತ್ಯೋತ್ಸವ' ದನಿ ಸುರುಳಿ ನಾಂದಿಯಾಯಿತು. ಇವರ ಗದ್ಯದಲ್ಲಿ ಎದ್ದು ಕಾಣುವುದು ಇವರ ಭಾಷಾಶುದ್ಧಿ ಮತ್ತು ಭಾಷಾ ಮರ್ಯಾದೆ. ಸ್ವತಃ ನಿಸಾರರೇ ಹೇಳಿಕೊಂಡಂತೆ ಇವರ ಗದ್ಯ ಬರವಣಿಗೆಯ ಮೇಲೆ ಕುವೆಂಪು ಮತ್ತು ಡಿ.ವಿ.ಜಿ., ವಿ.ಸೀ., ಮಾಸ್ತಿ, ಎ.ಆರ್.ಕೃ., ಪು.ತಿ.ನ. ಮುಂತಾದವರು ಪ್ರಭಾವ ಬೀರಿದ್ದಾರೆ. ನಮ್ಮ ಮನೆಯಲ್ಲಿದ್ದಾಗ ಅವರ 'ಅಮೇರಿಕ, ಅಮೇರಿಕ', 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ರಾಮನ್ ಸತ್ತ ಸುದ್ದಿ', 'ರಂಗೋಲಿ ಮತ್ತು ಮಗ' ಮುಂತಾದ ಕವನಗಳನ್ನು ನಿಸಾರರು ತಮ್ಮೆಲ್ಲಾ ಆಂಗಿಕ ಹಾವಭಾವಗಳಿಂದ, ದನಿಯ ಏರಿಳಿತಗಳಿಂದ ಸೊಗಸಾಗಿ, ಅರ್ಥವತ್ತಾಗಿ ವಾಚಿಸಿದರು. ಜೊತೆಗೇ ಅವುಗಳ ಹಿನ್ನೆಲೆ, ಸಾಂಕೇತಿಕತೆ ಮತ್ತು ಸಂದರ್ಭಗಳನ್ನು ವಿವರಿಸಿದರು.

ನಾನು ನಿಸಾರರ ಜೊತೆ ಕಳೆದ ಕೆಲ ದಿವಸಗಳ ಅಲ್ಪ ಸಮಯದಲ್ಲಿ ಗಮನಿಸಿದ್ದು ಅವರ ಮಗುವಿನಂತಹ ಅದಮ್ಯ ಕುತೂಹಲ ಮತ್ತು ಪ್ರಕೃತಿ ಪ್ರೇಮ. ಅದಕ್ಕಾಗಿಯೇನೋ ಎಂಬಂತೆ ಅವರು ಭಾರತಕ್ಕೆ ಹೊರಡುವ ದಿನವಾದ ಡಿಸೆಂಬರ್ ಎರಡರಂದು, ಡೆಟ್ರಾಯಿಟ್‌ನಲ್ಲಿ ೨೦೦೨ರ ಪ್ರಥಮ ಹಿಮಪಾತ ಬೆಳಿಗ್ಗೆಯಿಂದಲೇ ಶುರುವಾಯಿತು. ನಿಸಾರರು ಎವೆಯಿಕ್ಕದೆ ಆಶ್ಚರ್ಯಚಕಿತರಾಗಿ ಆ ಮಂಜಿನ ಅಗಾಧತೆ ಮತ್ತದರ ಸರ್ವವ್ಯಾಪಿ ಭವ್ಯತೆಯನ್ನು ತಮ್ಮ ರೂಮಿನ ಕಿಟಕಿಯಿಂದ 'ಬೆಚ್ಚಗೆ' ತದೇಕಚಿತ್ತರಾಗಿ ಬಹಳ ಹೊತ್ತು ಆಸ್ವಾದಿಸತೊಡಗಿದರು. ನಮಗೆಲ್ಲಾ ಈ ದೃಶ್ಯ ಆವರೆವಿಗೂ ಸರ್ವೇಸಾಮಾನ್ಯವೆನ್ನಿಸಿದರೂ ಕವಿಯಾಗಿ ಅವರು ಉದ್ಗರಿಸಿದ್ದು: 'ಈ ಭೂಮಾಶ್ಚರ್ಯಕರ ದೃಶ್ಯವಂತೂ ಅನಿರ್ವಚನೀಯ. ದೃಷ್ಟಿ ಹಾಯುವವರೆಗೂ ದಿಗಂತ ಪರ್ಯಂತ ಹಬ್ಬಿರುವ ಈ ಬೆಳ್ಪನೆಯ ಹಾಲ್ಗಡಲು ಪೌರಾಣಿಕ ಪರಿಸರವನ್ನು ಸೃಷ್ಟಿಸಿದೆ.'—ಅಷ್ಟೇ ಅಲ್ಲದೆ, ಮೈ ಕೊರೆಯುವ ಆ ಚಳಿಯಲ್ಲೂ ಮನೆಯಿಂದ ಹೊರಬಂದು ಚಿಕ್ಕ ಮಕ್ಕಳಂತೆ ಮಂಜನ್ನು ಕೈಯಲ್ಲಿ ಹಿಡಿದು ರೋಮಾಂಚನಗೊಂಡರು, ಸಂಭ್ರಮಿಸಿದರು! ಇದೆಲ್ಲದರ ನಡುವೆ ಅವರು ನನ್ನನ್ನು ಬೀಳ್ಕೊಂಡು ಭಾರತಕ್ಕೆ ಹೊರಡುವ ಮುನ್ನ ನನ್ನ ಕೋರಿಕೆಯ ಮೇರೆಗೆ ಒಂದು ಚಿಕ್ಕ ಸಂದರ್ಶನವನ್ನೂ ನಡೆಸಿಕೊಟ್ಟರು. ಸುಮಾರು ಒಂದೂವರೆ ಗಂಟೆಗಳ ಕಾಲ ಅವರ ಸಾಹಿತ್ಯಾಸಕ್ತಿ ಬೆಳೆದ ಸಂದರ್ಭ, ಪ್ರಭಾವ ಬೀರಿದ ವ್ಯಕ್ತಿಗಳು, ಕಾವ್ಯದ ಒಳ ಸುಳುಹುಗಳು, ಮಾಸ್ತಿಯವರ ಸಣ್ಣಕತೆಗಳಲ್ಲಿರುವ ನೈಜ ಪಾತ್ರಗಳು, ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ ಹಾಗೂ ಅದರ ಇದುವರೆಗಿನ ಸಂಕ್ರಮಣದ ಅವಧಿಗಳು—ಹೀಗೆ ಹಲವು ವಿಷಯಗಳ ಬಗ್ಗೆ ನನ್ನಂತಹ ಅಲ್ಪಸ್ವಲ್ಪ ಸಾಹಿತ್ಯಾಸಕ್ತಿಯಿರುವ ಸಾಮಾನ್ಯನೊಡನೆ ಯಾವುದೇ ಸಂಕೋಚ ಹಿಡಿತವಾಗಲಿ, ಬಿಗುಮಾನವಾಗಲಿ ಇಲ್ಲದೆ ಹಂಚಿಕೊಂಡರು. ಮೇಲೆ ವರ್ಣಿಸಿದ ಕಾರಣಗಳಿಗಾಗಿಯೇ ನಾನು ಈ ಲೇಖನದ ಪ್ರಾರಂಭದಲ್ಲಿ ಹೇಳಿದ್ದು 'ಜೀವನದಲ್ಲಿ ಕೊನೆಯವರೆವಿಗೂ ಉಳಿಯುವುದು ಮೆಲುಕು ಹಾಕುವಂತಹ ನೆನಪುಗಳು ಮಾತ್ರ.'

ಅವರ ಬಗ್ಗೆ ಇಷ್ಟನ್ನು ಬರೆದಾದ ಮೇಲೆ ಅವರ ಚಲನಶೀಲ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವಂತಹ ಅವರ ನಿಲವಿನ ಬಗ್ಗೆ ಅವರೊಡನೆ ನಡೆಸಿದ ಸಂದರ್ಶನದ ಈ

ಮಾತುಗಳು ಉಲ್ಲೇಖಾರ್ಹ ಅನ್ನಿಸುತ್ತವೆ: ನಾನು ನಿಸಾರ್ ಅವರನ್ನು ಕುರಿತು 'ನೀವು ಇತ್ತೀಚಿನ ಅಗಾಧ ತಾಂತ್ರಿಕ ಬೆಳವಣಿಗೆಗಳನ್ನು ನೋಡುತ್ತಿದ್ದೀರಿ. ಈ ಜಾಗತೀಕರಣದ ಸಂದರ್ಭದಲ್ಲಿ ಕಾಲ್ಪನಿಕವಾಗಿ, ನಿಮಗೆ ಕಾಲಚಕ್ರದಲ್ಲಿ ಹಿಂದೆ ಅಥವಾ ಮುಂದೆ ಹೋಗುವ ಅವಕಾಶ ಸಿಕ್ಕರೆ ಯಾವುದನ್ನು ಆಯ್ದುಕೊಳ್ಳುತ್ತೀರಿ?' ಎಂದ ಕೇಳಿದೆ.

ಅದಕ್ಕೆ ಅವರು 'ಹಿಂದಿನ ಉದಾಹರಣೆಗಳನ್ನು ನಿದರ್ಶನವಾಗಿಟ್ಟುಕೊಂಡು ಮುಂದೆ ಸಾಗುವುದೇ ಜೀವನ. ಯಾಕೆಂದರೆ ಈ ವಯಸ್ಸಿನಲ್ಲಿ ನಾವು, ನಮ್ಮ ತಾಯಿಯ ಹೊಟ್ಟೆ (ಗರ್ಭ) ಹಿಂದೊಮ್ಮೆ ಬೆಚ್ಚಗಿತ್ತೆಂದು ಹಿಂದಕ್ಕೆ ಹೋಗಿ ಅದರಲ್ಲಿ ಮಲಗಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಭೂತಕಾಲದ ಹಿತಕರ ಸ್ಥಿತಿಯನ್ನು ಆವಾಹಿಸಿಕೊಂಡು ಜೀವಿಸುವುದು ಅಶಕ್ಯ. ದೂರದ ಭವಿಷ್ಯ ಹೇಗೋ ಹಾಗೆ, ಸಂದುಹೋದ ಭೂತಕಾಲವೂ ಸಹ ಅಮೂರ್ತವಾದದ್ದು; ನಮಗೆ ಸದ್ಯಕ್ಕೆ ಎಟುಕದ್ದು. ಮನುಷ್ಯ ವರ್ತಮಾನದ ಕ್ಷಣದಲ್ಲಿ ಮಾತ್ರ ಬದುಕಲು ಸಾಧ್ಯ. ಇತಿಹಾಸ ನಮಗೆ ಕಲಿಸುವುದು ಒಳ್ಳೆಯದಕ್ಕಿಂತ ಕೆಟ್ಟದ್ದೇ. ಹಿಂದೆ ಬಹಳಷ್ಟು ಶೋಷಣೆ, ಅವಮಾನ, ಅತ್ಯಾಚಾರ, ಅನ್ಯಾಯ, ಕೊಲೆ, ರಕ್ತಪಾತ ನಡೆದಿವೆ. ಹಿಂದೆ ಇದ್ದಿರಬಹುದಾದಂತಹ ರಾಮರಾಜ್ಯವನ್ನು ಪುನಃ ಸ್ಥಾಪಿಸುತ್ತೇವೆ ಎನ್ನುವುದು ಒಂದು ರೀತಿಯ ಅಸಂಭವವಾದ ಪೊಳ್ಳು ಆದರ್ಶ. ಅಂದರೆ ಇತಿಹಾಸದಿಂದ ನಾವು ಕಲಿಯ ಬೇಕಾದುದು ಒಳಿತಿಗಿಂತ ಮಿಗಿಲಾಗಿ ಎಚ್ಚರಿಕೆಯನ್ನು, ಮುಂಜಾಗ್ರತೆಯನ್ನು. ಹಾಗಾಗಿ ನಾವು ತಿದ್ದಿಕೊಂಡು ಮಾನವೀಯ ಅನುಕಂಪ ಮತ್ತು ಸೌಹಾರ್ದವನ್ನು ಬೆಳೆಸಿಕೊಳ್ಳಬೇಕು. ಇದನ್ನೇ ನಾವು ಭವಿಷ್ಯದಲ್ಲಿ ಮಾಡಬೇಕಾದದ್ದು. ಹೀಗಾಗಿ, ನಾವು ಎಲ್ಲಾ ರೀತಿಯಲ್ಲೂ ಪ್ರಗತಿ ಪರವಾಗಿ ಚಿಂತಿಸಬೇಕು. ಕಾಲ ಧರ್ಮದ ಫಲವಾಗಿ ಯಾವುದೇ ತಾಂತ್ರಿಕ ಮತ್ತು ವೈಜ್ಞಾನಿಕ ಸವಲತ್ತುಗಳು ಜನ ಸಾಮಾನ್ಯರಿಗೂ ತಲಪವುಂತಾಗಬೇಕು. ಅಂಥ ಒಂದು ಭವಿಷ್ಯದ ದರ್ಶನವನ್ನು ಪಡೆದ, ಹಿಂದಿನಿಂದ ಪಾಠ ಕಲಿತು ಮುಂದೆ ಮುಂದೆ ಹೆಜ್ಜೆಯಿಡುವ ವ್ಯಕ್ತಿಯಾಗಲು ನಾನು ಬಯಸುತ್ತೇನೆ.' ಮೂಡಿರುವ ಹೊಸ ಹೊಸ ಪರಿಸ್ಥಿತಿಗಳನ್ನು,ಆವಿಷ್ಕಾರಗಳನ್ನು ಸ್ವೀಕರಿಸಬೇಕು. ಆದರೆ ಅವು ನಮ್ಮ ಮೂಲಭೂತವಾದ ಸದ್ಗುಣ, ಸಚ್ಛೀಲ ಹಾಗೂ ಸದಾಚಾರಗಳನ್ನು ಪೂರ್ತಿ ಆಹುತಿ ತೆಗೆದುಕೊಳ್ಳದಂಥ ಹಾಗೂ ಕೇವಲ ವ್ಯವಹಾರಮಾನ್ಯವಾದ ಅಸ್ತಿತ್ವವನ್ನು ಜನಗಳ ನಡುವೆ ಬೇರೂರಿಸಿದಂಥ ಹುಷಾರಿಯನ್ನು ವಹಿಸಬೇಕು.

ನಿಸಾರರನ್ನು ಬೀಳ್ಕೊಟ್ಟ ಸಂಜೆಯ ಮುಖ ಮಂಜಿನಿಂದ ಬಿಳಿಚಿಹೋಗಿತ್ತು. ನಾನು ಕಾರನ್ನು ಚಲಿಸುತ್ತಿದ್ದಾಗ ನಿಸಾರರು ಹೆಚ್ಚು ಮಾತನಾಡದೆ ಆಚೆ ಮೈಲಿಗಟ್ಟಲೆ ಮನೆ, ಕಟ್ಟಡ, ವಾಹನ, ರಸ್ತೆ ಏನೆಲ್ಲವನ್ನೂ ತನ್ನ ಕಬಂಧ ಬಾಹುಗಳಲ್ಲಿ ಅವುಚಿ ಹಿಡಿದು ಇಡೀ ಪರಿಸರಕ್ಕೆ ಉಸಿರು ಸಿಕ್ಕಿಸಿದಂತಿದ್ದ ಹಿಮ ದೈತ್ಯನ ರುದ್ರಾಟ್ಟಹಾಸವನ್ನು ಗಮನಿಸುವುದರಲ್ಲಿ ತಲ್ಲೀನರಾಗಿದ್ದರು. ಜೊತೆಗೇ, ಬಹುಶಃ ತಾವು ದೀರ್ಘ ಕಾಲದವರೆಗೆ ಪ್ರವಾಸ ಮಾಡಿದ ಅಮೇರಿಕದ ವಿವಿಧ ನಗರಗಳಲ್ಲಿ ಭೇಟಿಯಾದ ವ್ಯಕ್ತಿಗಳ, ಸ್ಥಳಗಳ ನೆನಪಿನ ಉಮ್ಮಳಿಕೆಯೂ ಅವರಿಗೆ ಆಗಿದ್ದಿರಬಹುದು. ವಿಮಾನ ನಿಲ್ದಾಣಕ್ಕೆ ಅವರನ್ನು ತಲಪಿಸಿ ಶುಭ ಪ್ರಯಾಣ ಕೋರಿ ಮನೆಗೆ ಮರಳಿದಾಗ ಕತ್ತಲಾವರಿಸಿತ್ತು; ಜೊತೆಗೆ ಮನಸ್ಸಿಗೂ ಸಹ.



ಪ್ರವಾಸಿಯಾಗಿ ಬಂದು ಹೃನ್ಮನಗಳ ನಿವಾಸಿಯಾದವರು

♦ ಎಚ್. ಎಸ್. ಜಯಸ್ವಾಮಿ
ಚಿಕಾಗೊ (ಇಲಿನಾಯ್ ಪ್ರಾಂತ್ಯ)

ಕವಿ ಕೆ. ಎಸ್. ನಿಸಾರ್ ಅಹಮದ್ ಅವರ ಬಗ್ಗೆ ನನಗೆ, ನಾನು ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದಾಗಿನಿಂದಲೂ ಅಭಿಮಾನ. ಸಿವಿಲ್ ಇಂಜಿನಿಯರ್ ಆಗುವವರಿಗೆ 'ಭೂ ವಿಜ್ಞಾನ' (ಜಿಯಾಲಜಿ) ಒಂದು ವಿಷಯ.ಇದರಲ್ಲಿ ಥಿಯರಿ ಮತ್ತು ಪ್ರಾಕ್ಟಿಕಲ್ (ಬೋಧನೆ ಮತ್ತು ಪ್ರಾತ್ಯಕ್ಷಿಕತೆ) ತರಗತಿ ಗಳು ಇದ್ದವು. ನಮ್ಮ 'ಯು. ಸಿ. ಇ. ಕಾಲೇಜಿನಲ್ಲಿ (ಈಗ ಯು. ವಿ. ಸಿ. ಇ.) ಈ ವಿಜ್ಞಾನದ ತರಗತಿಗಳನ್ನು ಸೆಂಟ್ರಲ್ ಕಾಲೇಜಿನ ಪ್ರಾಧ್ಯಾಪಕರು ನಡೆಸುತ್ತಿದ್ದರು. ಪ್ರಾತ್ಯಕ್ಷಿಕತೆಗೆ ಸೆಂಟ್ರಲ್ ಕಾಲೇಜಿನ ಪ್ರಯೋಗಾಲಯಕ್ಕೆ ಹೋಗುತ್ತಿದ್ದೆವು. ಅಲ್ಲಿ ನಮಗೆ ಪ್ರಾಕ್ಟಿಕಲ್ ಪಾಠ ಮಾಡುತ್ತಿದ್ದವರು ನಿಸಾರ್ ಅಹಮದ್‌ರವರು.

ಆಗ 'ಕೈಲಾಸ' ವಾರ ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ಕುರಿಗಳು, ಸಾರ್, ಕುರಿಗಳು' ಎಂಬ ಪದ್ಯವನ್ನು ಓದಿದ್ದ ನಾವು ಕೆಲವು ವಿದ್ಯಾರ್ಥಿ ಮಿತ್ರರು, ಅವರನ್ನು ಕೇಳಿದೆವು, 'ನೀವೇ ಏನು ಸಾರ್ ಆ ಪದ್ಯ ಬರೆದಿದ್ದು?' 'ಹೌದು, ನಾನೇ' ಎಂದು ಅವರ ಉತ್ತರ. ಅವರು ತಮ್ಮ ಹೆಸರನ್ನು ಹೇಳಿ ಪರಿಚಯಿಸಿ ಕೊಂಡಾಗ ನಾವು ಕೇಳಿದ ಪ್ರಶ್ನೆ ಅದು. ಆ ಪದ್ಯ ಆಮೇಲೆ ಮೈಸೂರು ಅನಂತಸ್ವಾಮಿಯವರಿಂದ ತುಂಬಾ ಜನಪ್ರಿಯ ವಾಯಿತು.

ಈ ಸಂದರ್ಭವನ್ನು ನಾನು ಮತ್ತೆ ನೆನಪಿಸಿದೆ

ಶ್ರೀ ನಿಸಾರ್ ಅಹಮದ್ ಅವರಿಗೆ, ಅವರು ಚಿಕಾಗೋಗೆ ಬಂದಿದ್ದಾಗ; ಶ್ರೀ ಪಿ. ನಂಜಪ್ಪ, ಸಿದ್ಧಲಿಂಗಯ್ಯನವರ ಮನೆಯಲ್ಲಿ ಭೇಟಿಯಾದಾಗ. ಆಗ ಅವರು ಕಷ್ಟಪಟ್ಟು ಜ್ಞಾಪಿಸಿಕೊಂಡರು. ಕಾರಣ ಆ ಪ್ರಕರಣ ನಡೆದದ್ದು, ಅವರು ತಮ್ಮ ಉಪನ್ಯಾಸಕತ್ವವನ್ನು ಪ್ರಾರಂಭಿಸಿದ್ದ ಕಾಲ. ಇದು ನಡೆದದ್ದು ಕಳೆದ ಶತಮಾನದ ಅರವತ್ತರ ದಶಕದ ಆರಂಭದಲ್ಲಿ. ಎಷ್ಟೋ ವರ್ಷಗಳ ಅನಂತರ, ಎಷ್ಟೋ ವಿದ್ಯಾರ್ಥಿಗೆ ಪಾಠ ಹೇಳಿದ ಅನಂತರ ನೆನಪಿಗೆ ಬರುವುದು ಸುಲಭವಲ್ಲ. ಅಲ್ಲದೆ, ಇದೊಂದು ಸಾಧಾರಣ ವಿಷಯ ಅವರಿಗೆ; ಆದರೆ ವಿಶೇಷ ವಿಷಯ ನನಗೆ.

ಅವರು ಜನಪ್ರಿಯ ಕವಿಗಳು, ಸಾಮಾನ್ಯರಿಗೆ ಸಂತೋಷವನ್ನು ತರುವಂತಹ ಕವಿತೆಗಳನ್ನು ಬರೆದವರು. ಮೇಲಾಗಿ, ಕನ್ನಡದಲ್ಲಿ ಪ್ರಪ್ರಥಮವಾಗಿ 'ಧ್ವನಿ ಸುರುಳಿ' ಬಂದದ್ದು ಅವರ ಕವಿತೆಗಳನ್ನು ಒಳಗೊಂಡು. ಬೆಂಗಳೂರಿಗೆ ನಾನು ಬಹುಶಃ 1979ರಲ್ಲಿ ಒಮ್ಮೆ ಬಂದಿದ್ದಾಗ, ಆ ಧ್ವನಿ ಸುರುಳಿಯ ಬಗ್ಗೆ ಜನ ಮಾತನಾಡುತ್ತಿದ್ದರು. ಆಗ ಅಂಗಡಿಗಳಲ್ಲಿ ದೊರಕುತ್ತಿದ್ದುದು ಅದೊಂದೇ ಭಾವಗೀತೆಗಳ ಸುರುಳಿ. ಅನಂತರ ಬೇರೆ ಬೇರೆ ಕವಿಗಳ ಕವಿತೆಗಳು ಧ್ವನಿ ಸುರುಳಿಯ ಮುಖಾಂತರ ಪ್ರಚಾರಗೊಂಡವು.

ಇಂತಹ ಜನಪ್ರಿಯ ಕವಿಗಳನ್ನು ಅಮೇರಿಕಕ್ಕೆ ಕರೆಸಬೇಕೆಂದು ನನ್ನ ಹಂಬಲವಿತ್ತು. ನನಗೆ ಉಪನ್ಯಾಸಕರಾಗಿದ್ದರಿಂದ ಅವರನ್ನು ಕರೆಸಬೇಕೆಂಬ ಆಸಕ್ತಿ, ಕುತೂಹಲ. 'ವಿದ್ಯಾರಣ್ಯ ಕನ್ನಡ ಕೂಟ', ಚಿಕಾಗೋದ ಅಧ್ಯಕ್ಷನಾದಾಗ ಕನ್ನಡ ಕೂಟಕ್ಕೆ 25ನೇ ವರ್ಷ. ಭಾರತಕ್ಕೆ ಸ್ವಾತಂತ್ರ್ಯ ಬಂದು 50ನೇ ವರ್ಷ. ಅಂದರೆ 1997ನೇ ಇಸವಿ. ಹಾಗಾಗಿ, ಆ ವರ್ಷದ ಆಗಸ್ಟ್ ತಿಂಗಳಲ್ಲಿ ನಿಸಾರ್ ಅವರನ್ನು ಚಿಕಾಗೋಗೆ, ಸಮಾರಂಭದ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದೆ. ಆ ಸಮಯದಲ್ಲಿ ಬೆಂಗಳೂರಿನಲ್ಲಿದ್ದ ನಮ್ಮ ಕಾರ್ಯದರ್ಶಿ, ಶ್ರೀಮತಿ ಮೇನಕಾ ಶೆಟ್ಟಿಯವರು ಅವರೊಡನೆ ಮಾತನಾಡಿ ಆಮಂತ್ರಣವನ್ನಿತ್ತರು. ಆ ಸಂದರ್ಭದಲ್ಲಿ ಅವರ ಆರೋಗ್ಯದ ನಿಮಿತ್ತವೋ ಅಥವಾ ಇತರೇ ಕಾರಣಗಳಿಂದಲೋ ಅವರು ನಮ್ಮ ಆಹ್ವಾನವನ್ನು ಅಂಗೀಕರಿಸಲಿಲ್ಲ.

ಆ ಎರಡು ದಿನಗಳ ನಮ್ಮ ರಜತ ಮಹೋತ್ಸವ ಮತ್ತು ಭಾರತದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವಕ್ಕೆ ಆಹ್ವಾನಿಸಿದ್ದ ಹಾಸನದ ರಾಜಾರಾವ್, ಮಾಸ್ಟರ್ ಹಿರಣ್ಣಯ್ಯ, ಗಾಂಧೀ ಸ್ಮಾರಕ ಸಂಸ್ಥೆಯ ಪ್ರೊ|| ಶ್ರೀನಿವಾಸಯ್ಯ, ಕರ್ನಾಟಕದ ಶಿಲ್ಪಗಳ ಬಗ್ಗೆ ಸಂಶೋಧನೆ ನಡೆಸಿದ್ದ ಅರ್‌ಕಾನ್‌ಸಾಸ್ ಯೂನಿವರ್ಸಿಟಿ ಪ್ರೊಫೆಸರ್ ಡಾ|| ರೋಹನ್, ಕನ್ನಡದಲ್ಲಿ ಆಡಳಿತ ನಡೆಸಿದ ಎನ್. ಜಿ. ಇ. ಎಫ್. ಜನರಲ್ ಮ್ಯಾನೇಜರ್ ತ. ರಂ. ಕೃಷ್ಣೇಗೌಡ ಮೊದಲಾದವರು ಭಾಗವಹಿಸಿ ಕಾರ್ಯಕ್ರಮಗಳು ತುಂಬಾ ಯಶಸ್ವಿಯಾದವು. ಕಾರ್ಯಕ್ರಮಗಳು ಆಗಸ್ಟ್ 30,31ರಲ್ಲಿ ನಡೆದವು. ಡಾ||ರಾಜಾರಾವ್ ಅವರು ಅಸ್ವಸ್ಥರಾಗಿದ್ದರಿಂದ, ವಿಮಾನ ಪ್ರಯಾಣ ಮಾಡಬಾರದೆಂದು ವೈದ್ಯರು ಸಲಹೆ ಕೊಟ್ಟ ಮೇರೆಗೆ ಅವರು ಬರಲಾಗಲಿಲ್ಲ. ಆದರೆ ಅವರು ಬರೆದು ಕಳುಹಿಸಿದ್ದ ಭಾಷಣವನ್ನು ಸಭೆಯಲ್ಲಿ ಪ್ರಸ್ತುತ ಪಡಿಸಲಾಯಿತು. ಆದರೂ ಪ್ರೊ|| ನಿಸಾರ್ ಅಹಮದ್ ಅವರು

ಬರಲಿಲ್ಲವೆಂಬ ವಿಷಯ ನನ್ನಲ್ಲಿ ಒಂದು ಕೊರತೆಯನ್ನುಂಟುಮಾಡಿತ್ತು.

೨೦೦೦ದಲ್ಲಿ ಪ್ರಥಮ ಅಕ್ಕ ವಿಶ್ವ ಸಮ್ಮೇಳನ-ಹ್ಯೂಸ್ಟನ್‌ನಲ್ಲಿ ನಡೆದದ್ದು. ಇದಕ್ಕೆ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ. ಯು. ಆರ್. ಅನಂತಮೂರ್ತಿ ಮತ್ತು ಗಿರೀಶ್ ಕಾರ್ನಾಡರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲಾಯಿತು. ಆನಂತರ ಎರಡನೆಯ ಅಕ್ಕ ವಿಶ್ವ ಸಮ್ಮೇಳನ ಡೆಟ್ರಾಯಿಟ್‌ನಲ್ಲಿ ನಡೆಯಿತು. ಆ ಸಮ್ಮೇಳನಕ್ಕೆ ನಿಸಾರ್ ಅಹಮದ್‌ರವರನ್ನು ಕರೆಸಬೇಕೆಂದು, ಸಮ್ಮೇಳನ ಸಮಿತಿಯವರಿಗೆ ಸಲಹೆಯನ್ನು ಕೊಟ್ಟೆ. ತಗಲಬಹುದಾದ ಖರ್ಚುಗಳನ್ನು ಭರಿಸಲು ಏರ್ಪಾಡು ಮಾಡಲಾಯಿತು. ಇದರ ಜವಾಬ್ದಾರಿಯನ್ನು ಶ್ರೀ ಗೋವಿಂದ ರಾಜು ಮತ್ತು ಶ್ರೀ ಕೃಷ್ಣಶಾಸ್ತ್ರಿಗಳು ತುಂಬಾ ಸಂತೋಷದಿಂದ ಹೊತ್ತು ಅತ್ಯಾದರದಿಂದ ಬರಮಾಡಿಕೊಂಡು, ಡೆಟ್ರಾಯಿಟ್ ಸಮ್ಮೇಳನ ಮುಗಿದ ಅನಂತರ ಅಮೇರಿಕಾದ್ಯಂತ ನಾನಾ ಕನ್ನಡ ಕೂಟಗಳಿರುವ ನಗರಗಳಿಗೆ ಭೇಟಿ ಕೊಟ್ಟು, ಭಾಷಣಗಳನ್ನು ಮಾಡುವ ಏರ್ಪಾಡನ್ನು ತುಂಬಾ ವ್ಯವಸ್ಥಿತವಾಗಿ ನೆರವೇರಿಸಿದರು. ಭಾರತದಿಂದ ಅಮೇರಿಕಕ್ಕೆ ಬಂದು ಅನಂತರ ಹಿಂದಿರುಗುವ ವ್ಯವಸ್ಥೆಯನ್ನು ಶ್ರೀ ಗೋವಿಂದರಾಜು ಅವರು ಮತ್ತು ಅಮೇರಿಕದ ನಾನಾ ರಾಜ್ಯಗಳಲ್ಲಿ ಸಂಚಾರ, ತಂಗುವ ವ್ಯವಸ್ಥೆ, ಭಾಷಣಗಳ ಏರ್ಪಾಡನ್ನು ಶ್ರೀ ಕೃಷ್ಣಶಾಸ್ತ್ರಿಗಳು ಬಹಳ ಅಚ್ಚುಕಟ್ಟಾಗಿ ನಡೆಸಿ ಕೊಟ್ಟರು. ಈ ಸುವ್ಯವಸ್ಥಿತ ಸ್ಥಿತಿಯನ್ನು ನೋಡಿ ಅನುಭವಿಸಿದ ಶ್ರೀ ನಿಸಾರ್ ಅಹಮದ್ ರವರಿಗೆ ತಾವು 'ಎಲ್ಲಿದ್ದೇನೆ' ಎಂಬುದೇ ಅರಿವಿಗೆ ಬರದಂತಾಯಿತು. ಇದು ಇಂಡಿಯಾವೆ? ಇಲ್ಲವೇ ಅಮೇರಿಕವೇ? ಎಂಬುದಾಗಿ ಆಲೋಚಿಸುವಂತಾಯಿತು.

ಅಮೇರಿಕ ಪ್ರವಾಸ ಕಾಲದಲ್ಲಿ ಶ್ರೀ ನಿಸಾರ್ ಅವರು ಭೇಟಿಕೊಟ್ಟ ಪ್ರತಿಯೊಂದು ಊರಿನಲ್ಲೂ ತಮ್ಮ ಅಮೋಘವಾದ ಭಾಷಣದಿಂದ ಕನ್ನಡ ಅಭಿಮಾನವನ್ನೂ, ಕನ್ನಡದ ಹಿರಿಮೆಯನ್ನೂ, ಶ್ರೋತೃಗಳಿಗೆ ಮನದಟ್ಟಾಗುವಂತೆ ಮಾಡಿದರು. ಭಾಷಣಪೂರ್ವ ಮತ್ತು ಭಾಷಣಾನಂತರ ಪರಸ್ಪರ ಮಾತುಕತೆ ನಡೆಸುವಾಗ, ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಕೇಳುವವರು ಒಪ್ಪುವಂತೆ ಹೇಳುತ್ತಿದ್ದುದು,-ಕೇಳುಗರ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಗಳನ್ನು ಕೊಡುತ್ತಿದ್ದುದು ಬಹಳ ಜನಪ್ರಿಯವಾಗಿತ್ತು. ಹೋದ ಕಡೆಯಲ್ಲೆಲ್ಲಾ ಅವರು ಮಿತ್ರರನ್ನು ಗಳಿಸಿದರು. ಮತ್ತೊಮ್ಮೆ ಅವರನ್ನು ಕರೆಸಬೇಕೆಂಬ ಆಸಕ್ತಿಯನ್ನು ಕೆರಳಿಸಿದರು. ಅನೇಕ ಸಂದರ್ಭಗಳಲ್ಲಿ ಕನ್ನಡದ ಪ್ರಾಚೀನತ್ವ, ಅದರ ವ್ಯಾಪಕತೆ ಮತ್ತು ಈಗ ಬಂದೊದಗಿರುವ ಕನ್ನಡ ಭಾಷೆಯ ದುಃಸ್ಥಿತಿಯ ಬಗ್ಗೆ ಮನಮುಟ್ಟುವಂತೆ ವಿವರಿಸಿದರು. ಅವರೇ ರಚಿಸಿರುವ ಕವಿತೆಗಳಿಂದ ಅವರ ವಾದವನ್ನು ಪುಷ್ಟೀಕರಿಸಿದರು.

ಅವರ ಮಾತುಗಳನ್ನು ಆಲಿಸಿದ ಜನಗಳು, ಅನೇಕ ದಿನಗಳವರೆಗೆ ಆ ಮಾತುಗಳನ್ನು ಮತ್ತೆ ಮತ್ತೆ ನೆನಪಿಸಿಕೊಂಡು, ಚರ್ಚಿಸಿ ಸಂತೋಷ ಪಡುತ್ತಿದ್ದರು. ಅದರಂತೆಯೇ ನಿಸಾರ್ ಅಹಮದ್‌ರವರಿಗೂ ಇಲ್ಲಿನ ಸ್ನೇಹಪೂರ್ಣ ವಾತಾವರಣ ಮುದ ಕೊಟ್ಟು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುವಂತೆ ಮಾಡಿದ್ದರೆ ಆಶ್ಚರ್ಯವಿಲ್ಲ.

ಚಿಕಾಗೋದಲ್ಲಿ ಅವರನ್ನು, ಅವರ ಭಾಷಣಕ್ಕೆ ಮುಂಚೆ ಸಭೆಗೆ ಪರಿಚಯಿಸುವಾಗ,

ನಾನು ಅವರನ್ನು ಸೆಂಟ್ರಲ್ ಕಾಲೇಜಿನಲ್ಲಿ ಪ್ರಪ್ರಥಮವಾಗಿ ಭೇಟಿಯಾಗಿದ್ದನ್ನು ತಿಳಿಸಿದ ನಂತರ, ತಕ್ಷಣವೇ ನೆನಪಿಗೆ ಬಂದ ಟಿ.ಪಿ. ಕೈಲಾಸಂರವರ ಬಗ್ಗೆ ಪ್ರಸ್ತಾಪಿಸಿದೆ. ಇವರಿಬ್ಬರೂ ಜಿಯಾಲಜಿ ಅಂದರೆ ಭೂ ವಿಜ್ಞಾನದಲ್ಲಿ ಪದವಿ ಪಡೆದವರು. ಇಬ್ಬರೂ ಬೆಂಗಳೂರಲ್ಲೇ ಹೆಚ್ಚು ಸಮಯ ಕಳೆದವರು. (ಕೈಲಾಸಂರವರು ಸ್ವಲ್ಪ ಸಮಯ ಕೋಲಾರದ ಚಿನ್ನದ ಗಣಿಗೆ ಸಂಬಂಧಪಟ್ಟ ಜಿಯಾಲಜಿ ಇಲಾಖೆಯಲ್ಲಿ ಕೆಲಸ ಮಾಡಿದ್ದರೆಂದು ತಿಳಿದಿದ್ದೇನೆ). ಆಮೇಲೆ ನನಗೆ ತಿಳಿದುಬಂದ ಸಮಾಚಾರದ ಪ್ರಕಾರ ನಿಸಾರ್ ಅಹಮದ್ ಅವರೂ ಅದೇ ಇಲಾಖೆಯಲ್ಲಿ (ಮೈಸೂರು ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆ) ಗುಲ್ಬರ್ಗದಲ್ಲಿ ಸಹಾಯಕ ಭೂ ವಿಜ್ಞಾನಿಯಾಗಿ ಸ್ವಲ್ಪ ಸಮಯ ಕೆಲಸ ಮಾಡಿದ್ದರಂತೆ. ಸಾಮಾನ್ಯರಿಗೆ ಅರ್ಥವಾಗುವಂತೆ ಕವಿತೆಗಳನ್ನು ಬರೆಯುವವರು, ಕಣ್ಣಿಗೆ ಪ್ರತ್ಯಕ್ಷ ಕಂಡ ವಿಷಯಗಳನ್ನು ಮನಮುಟ್ಟುವಂತೆ ಆಡುಮಾತುಗಳನ್ನು ಬಳಸಿ ಕವನ ರಚಿಸುವವರು ನಿಸಾರ್ ಅವರು ಎಂಬುದನ್ನು ಆ ದಿವಸ ಸಭೆಗೆ ತಿಳಿಸಿದೆ.

ಇನ್ನೊಂದು ನನಗೆ ಸಂತೋಷ ತರುವ ವಿಷಯವೆಂದರೆ, ಅವರು ನಮ್ಮ ತಾಲ್ಲೂಕಿನಲ್ಲೇ, ಅಂದರೆ ದೇವನಹಳ್ಳಿಯಲ್ಲಿ ಜನಿಸಿದವರು. ಅಲ್ಲೇ ಹೈದರಾಲಿಯ ಮಗ ಟಿಪ್ಪು ಸುಲ್ತಾನ್ ಹುಟ್ಟಿದ್ದೆಂದು ನಾನು ತಿಳಿದಿದ್ದೆ. ಪ್ರಖ್ಯಾತ ಕನ್ನಡ ಸಾಹಿತ್ಯ ಋಷಿ ಡಿ.ವಿ.ಜಿ.ಯವರು ದೇವನಹಳ್ಳಿಯವರು. ನನ್ನ ಮಾತಿಗೆ ನಿಸಾರ್ ಅಹಮದ್‌ರವರು ಈ ರೀತಿ ಉತ್ತರ ಕೊಟ್ಟರು. 'ನಾನು ಹುಟ್ಟಿದ್ದೇನೋ ದೇವನಹಳ್ಳಿಯಲ್ಲಿ. ಅದು ನಮ್ಮ ತಾಯಿಯ ತವರೂರು. ಬೆಳೆದದ್ದೆಲ್ಲಾ ಬೆಂಗಳೂರಿನಲ್ಲಿ.'


ಅವರ ಅಮೇರಿಕ ಪ್ರವಾಸ ಅತ್ಯಂತ ಯಶಸ್ವಿಯಾಗಿತ್ತು. ನಮಗೂ ಸಂತೋಷ ತಂದಿತು. ಕನ್ನಡ ವಿಶ್ವ ಸಮ್ಮೇಳನಕ್ಕೂ ಕಳೆಬಂದಿತು. ಇಂತಹ ಹಸನ್ಮುಖಿ, ಜನಪ್ರಿಯ ಕನ್ನಡದ ಕವಿಯನ್ನು ಪಡೆದ ಕನ್ನಡ ನಾಡು ನಿಜಕ್ಕೂ ಧನ್ಯ.

ತಡೆಯೇ ಇಲ್ಲದ ಪೈಪೋಟಿ, ತಿಕ್ಕಾಟ, ಅವಕಾಶ ಸಾಧನೆ, ದ್ವೇಷಾಸೂಯೆ, ಚಿತಾವಣೆ ತದಿತರ ಪಾಶವೀ ಭಾವಗಳ ಕಗ್ಗಾಡಾಗಿರುವ ಜೀವನವನ್ನು ಉದ್ಯಾನ ವನದಂತೆ ಕಂಗೊಳಿಸುವ ಪ್ರಯತ್ನ ನಿರಂತರ ನಡೆಯುತ್ತಿರಬೇಕಾಗುತ್ತದೆ. ಕಾರ್ಮೋಡದ ದಟ್ಟೈಸಿಕೆಯ ನಡುವೆ ಕಾಮನಬಿಲ್ಲಿಗೊಂದಿಷ್ಟು ಎಡೆ, ಸತತ ಕಲ್ಲೋಲದ ಮಧ್ಯೆ ಒಂದಷ್ಟು ಸೌಂದರ್ಯ ನಿರಾಳಗಳ ನಡುಗಡ್ಡೆ, ದೈನಂದಿನ ಏಕರಾಗತೆಯ ದಟ್ಟ ಹೆರಳಿಗೆ ವೈವಿಧ್ಯದ ಕಲೆ ಸಿಂಚಿಸುವ ಕೆಂಗುಲಾಬಿ— ಇಂಥವುಗಳಿಗೆ ಅವಕಾಶ ಕಲ್ಪಿಸಲು ಶ್ರಮಿಸಬೇಕಾಗುತ್ತದೆ. ಆಗಷ್ಟೇ ಜೀವನ ಒಂದಷ್ಟು ಸಹ್ಯವೆನ್ನಿಸೀತು: ಸೊಗಸಿನಿಂದ ಬೀಗೀತು.

(ಜೀವನದಲ್ಲಿ ಸೌಂದರ್ಯ ಪ್ರಜ್ಞೆಯ ಆವಶ್ಯಕತೆ)

ಭಾಗ–೬

ನಿಸಾರರನ್ನು ಕುರಿತ ಕವಿತೆಗಳು



ಕವಿಮಿತ್ರ ನಿಸಾರ್ ಅಹಮದ್

• ಡಾ. ಚೆನ್ನವೀರ ಕಣವಿ

ಸೂಟಿನಲಿ ನೀಟಾಗಿ ಹೊರಟದ್ದು ಸಾಹೇಬಕಿ
ಮೆರೆಯಲಿಕ್ಕಲ್ಲ: ತನ್ನ ಪದ್ಯದ ಛಂದ-ಧಾಟಿ
ಬದ್ಧತೆಗೆ. ಬಹಿರಂತರದ ಗೀತಕ್ಕೆ ಸಾಟಿ:
ಗಾಳಿಯಾಡುವ ಸರಳ ಸೊಗಸಾದ ಬಿಳಿಯಂಗಿ.
ಭಾಷೆಯನು ಮಿದ್ದಿ ಹದಗೊಳಿಸಿ ಚಿಗುರಿದ ಮೀಸೆ.
ಪರಕೀಯನಾಗಿ ತಲೆಯೆತ್ತಿ ನಿಲ್ಲುವ ಕಷ್ಟ
ಹಗುರಗೊಳಿಸಿದ್ದು ಪರಸ್ಪರ ಬೆರೆವ ತುಡಿತ—
ಒರಟಾಗಿ ಕಂಡದ್ದು ಬರಿಯ ಮಾತಿನ ವರಸೆ.
ಗುಂಪಿನಿಂದೊಂದಿಷ್ಟು ದೂರ ಉಳಿದಿದ್ದರೂ
ಗಾಂಧೀ ಬಜಾರಿಗೆ ಮತ್ತೆ ಸುತ್ತು ಹೊಡೆಯುವದು
ತಪ್ಪಿದ್ದಲ್ಲ. ಕಾಲಿಗೊತ್ತಿದ ಗಾಜಿನ ಚೂರು
ದೂರಕೆಸೆದು ಸಾಗಿದ ಮಾಸ್ತಿ-ಸಂಸ್ಕೃತಿಗಿವರು
ಮಣಿದವರು. ಆಗು-ಹೋಗುಗಳ ಮಾಗಿಸಲೆಂದೆ
ಏಕಾಂತ; ಸಾಧನೆಗೆ ಮೂಲ ಅಂತರ್ಮುಖತೆ.

☆ ☆ ☆

ಗೆಳೆಯನಿಗೆ ಕಿವಿ ಮಾತು

• ಪ್ರೊ. ಕ. ವೆಂ. ರಾಜಗೋಪಾಲ

ಹಾದಿಯ ಎರಡೂ ಬದಿಗೆ ಗಟಾರದ ಸಾಕ್ಷೀಭೂತದಲ್ಲಿ
ಇಂದು-ಈಗಲೂ ಗಾಂಧೀ ಬಜಾರೆಂಬ ಬೆಂಗಳೂರಿನ—
ಸದಾ ಜನಜನಿತ ಮಹಿಮಾತೀತ ಮುಗುಳು ನಗೆಯಲ್ಲಿ
ದಿ. ಮಾಸ್ತಿಯವರ ಸರಳ ತೋರುಬೆರಳಿನ ನೆರಳು—
ಇಂದು-ಈಗಲೂ ಸರಿದಾಡುವ ತರಕಾರಿ ವಾಸನೆಯಲ್ಲಿ
ಅದೇ—ದಿನ ನಿತ್ಯದ ಸಂಜೆ ಮುಂಜಾನೆಗಳ ತಪ್ಪೀಲು—
ಇಲ್ಲಿ ಸುಳಿದಾಡಿದ ವಿ.ಸೀ-ಗಡಿಯಾರದಂಗಡಿಯಲ್ಲಿ
ಕೆಎಸ್‌ನ-ಭೂಮಿಗೀತದ ಅಡಿಗರಲ್ಲದೆ ಮಾತು ಮಾತು-
ಮಾತಿನ ಗೆಳೆಯ ಶರ್ಮ—ಎಲ್ಲ ನವ್ಯ ನಿರಾಕಾರದಲ್ಲಿ
ಮೈಮರೆತ ನಾಡಿಗ-ನಾನು-ನೀನು-ಲಂಕೇಶ ಮತ್ತೆ-
ವೈಎನ್‌ಕೆ ಇತ್ಯಾದಿ: ಕವಿತೆಗಳ ಗಡಿ ದಾಟುತಿರುವಲ್ಲಿ
ಭಾವಗೀತೆಯ ಮೈಗೆ ನವ್ಯದುಡಿಗೆ ತೊಡಿಸಿದ್ದು—
ಬಾಜಾರಿಗಿಟ್ಟು ಮುಖವಾಡಗಳ ಹಚ್ಚುತಿರುವಲ್ಲಿ
ಸಹ್ಯಾದ್ರಿಯ ಸಿರಿ ಜೋಗದಲ್ಲಿ ಕನ್ನಡ ತಾಯಿಗೆ ಕೈಮುಗಿದು—
ಲಾಲ್‌ಬಾಗಿನ ಹಾದಿಯ ಚಹಾದ ಬಿಸಿಬಿಸಿ ರುಚಿಯಲ್ಲಿ
ಬದುಕಿನ ಕಾವ್ಯಕ್ಕೆ ಕಾಮನ ಬಿಲ್ಲು ಜೋಡಿಸಿದ್ದು—
ಮಾತು ಒಂದೇ ಎರಡೇ ನೆನಪುಗಳ ಚಟಾಕಿಯಲ್ಲಿ?
ನಿಸಾರ್—ಈ ಬದುಕು ನೆನಪಿನಂಗಳದ ಚಿತ್ತಾರವಾಯಿತು
ಕನ್ನಡ ಕವಿತೆಯಲ್ಲಿ ಬದುಕಿನ ಹೂವರಳಿ ಕಲೆ ಮೂಡಿತು.

☆ ☆ ☆

ಕವಿ ಕೆ. ಎಸ್. ನಿಸಾರ್ ಅಹಮದ್

● ಡಾ. ಎಚ್. ಎಸ್. ವೆಂಕಟೇಶಮೂರ್ತಿ

ಶಿವಮೊಗ್ಗೆಯಲ್ಲಿ ಸಂಜೆ ಐದರ ಜಿಟಿ ಜಿಟಿ ಮಳೆ
ಬಂಡೆಗಳ ನಡುವೆ ತಣ್ಣಗೆ ಹರಿಯುವ ತುಂಗೆ ಹೊಳೆ
ಹನುಮಲಿಯ ಪೊದೆಯಲ್ಲಿ ಶ್ರುತಿ ಹಿಡಿದು ಕೂಗುವ ಕೋಗಿಲೆ
ನೆಲದ ತುಂಬ ಅಲೆ ಮೂಡಿಸುವ ಬೆಳ್ಳಿ ಕೊಕ್ಕಿನ ನೇಗಿಲು
ತಂಗಾಳಿ ನಾಜೂಕಾಗಿ ತೆರೆಯುವ ಎರಡೆಲಗದ ಬಾಗಿಲು

'ಎಲೆ ಮಳೆಯೇ ಹೊಳೆಯೇ ಕೋಗಿಲೆಯೇ ತಂಬೆಲರೇ
ಕವಿ ನಿಸಾರರ ವಿಳಾಸ ನೀವಾದರೂ ಹೇಳಿರೇ...'

ಹೊಳೆ ಬಯಲಲ್ಲಿ ಗುರಿಯಿರದೆ ಸಾಗುವ ಕುರಿ ಮಂದೆ
ಗೋಣಿತಟ್ಟಿನಲ್ಲಿ ಮಸೆದ ಮಚ್ಚ ಮರೆಸಿದ ಕುರುಬ ಅದರ ಹಿಂದೆ
ಕೆಸರು ಗದ್ದೆಯಲ್ಲಿ ರಾಮನ್ನರ ಹೆಸರರಿಯದ ಹನುಮಣ್ಣ
ತೊಟ್ಟಿ ಮನೆಯಲ್ಲಿ ಬೆಳ್ಳಿ ತಾಟಿನ ತುಂಬ ಮೊಸರನ್ನ

'ಹೇ ಕುರಿಯೇ ಕುರಿ ಕಾಯುವ ದನಿಯೇ ಪೊದೆಯಡಿಯ ಕಂಬನಿಯೇ
ಕವಿ ನಿಸಾರರ ವಿಳಾಸ ನೀವಾದರೂ ಹೇಳಿರೇ...'

ಆಟದ ಬಯಲಲ್ಲಿ ಮೂತಿ ಊದಿಸಿ ಕೂತ ಮುಗ್ಧ ಕಂದಾ!
ಸದ್ಭಾವವನ್ನ ಅಕ್ಕರಾಸ್ತೆಯಿಂದ ತಬ್ಬಿಕೊಳ್ಳುವ ಛಂದಾ!
ಚಿಲ್ಲರೆ ತುಂಬಿಟ್ಟ ಡಬ್ಬಿ: ಕಬ್ಬಿನ ಗದ್ದೆಯಲ್ಲಿ ಚಿಲಿಮಿಲಿ ಗುಬ್ಬಿ
ನಭ ಜಗಿದುಗಿದ ತಾಂಬೂಲದುಂಡೆ ಸೂರ್ಯ
ಬಟ್ಟಂಬಯಲ ರಸ್ತೆ ಗುಟ್ಟಿರದ ಕಟ್ಟಾ ಪ್ರಾಯಸ್ತೆ!

ಹೋದಿಗೆರೆಯಿಂದ ಬಂದಿದೇನೆ; ಎರಡು ಹನಿ ಆನಂದ ಬಾಷ್ಪ ತಂದಿದೇನೆ
ಸಂಜೆಯಾದರೆ ತುಂಗೆಯಲ್ಲಿ ತೇಲುವ ಬಂಗಾರದ ಹಡಗೇ
ಶಬ್ದದ ಹಿಂದೆ ಅವಿತಿಟ್ಟುಕೊಂಡ ನಿಶ್ಶಬ್ದದ ಬೆಡಗೇ
ಕವಿ ನಿಸಾರರ ವಿಳಾಸ ದಯವಿಟ್ಟು ನೀವಾದರೂ ಹೇಳಿರೇ...

☆ ☆ ☆

ನಮ್ಮವರು

• ಬಿ. ಆರ್. ಲಕ್ಷ್ಮಣರಾವ್

ಅಂದು
ಬಿಂಕ, ಬಿಗುಮಾನದಿಂದ ಬೀಗುತ್ತಿದ್ದ
ಕನ್ನಡ ಕಾವ್ಯ ಕನ್ನಿಕೆಯ
ಟೊಂಕಕ್ಕೆ ಕಚಗುಳಿಯಿಟ್ಟು
ಕಿಲಕಿಲ ನಗೆ ಅರಳಿಸಿದವರೇ,
ನನ್ನಂಥ ಪಡ್ಡೆ ಹೈದರ ಗಮನವನ್ನೂ
ಅವಳತ್ತ ಹೊರಳಿಸಿದವರೇ,
ನಿಮ್ಮದೇ ತಾಜಾ ವಿನ್ಯಾಸದ
ಉಡುಗೆ, ತೊಡುಗೆ ಅವಳಿಗೆ
ಕೊಡುಗೆ ಕೊಟ್ಟವರೇ,
ಕಾಸಗಲ ಕುಂಕುಮಕ್ಕೆ ಬದಲು
ನಗರದ ಬಗೆ ಬಗೆ ಬಿಂದಿ
ಅವಳ ಹಣೆಗಿಟ್ಟವರೇ,
ಹೊಸ ನಡೆ, ನುಡಿ, ವಿಚಾರ
ರಾಗ, ಭಾವ ಸಂಚಾರ
ಅವಳಿಗೆ ನೀಡಿದವರೇ,
'ನಿತ್ಯೋತ್ಸವ' ಮಾಡಿದವರೇ,
ರಸಿಕರೆದೆಯಲ್ಲಿ
ಬಿಡಾರ ಹೂಡಿದವರೇ,
ಇಂದು
'ನಿಮ್ಮೊಡನಿದ್ದೂ ನಿಮ್ಮಂತಾಗದೆ'
ಎಂದೇಕೆ ಮಿಡುಕುವಿರಿ?
ನಿಮ್ಮ ಜನ ಮನ್ನಣೆಯ ಸಿರಿಗೆ

ಕರುಬಿ
ನಂಜು ಕಾರುವ
ಮಂದಿಯ ಕಂಡು
ಎಷ್ಟಾದರೂ ನಾನು 'ಪರಕೀಯ'ನೆಂದು
ಹೀಗೇಕೆ ಸಿಡುಕುವಿರಿ?
ಮನುಜ ಮತದಲ್ಲಿ ಭದ್ರ ನೆಲೆ ನಿಂತ
ಆಧುನಿಕ ಸಂತ
ಶರೀಫರು ನೀವು.
ನಿಮ್ಮ ನಿಷ್ಠೆಯನ್ನು ಅನುಮಾನಿಸಿದ
ಹುಲು ಮಾನವರು
ತಮ್ಮನ್ನೇ ಅವಮಾನಿಸಿಕೊಂಡರು,
ಅಷ್ಟೇ.
ನೀವು ನಮ್ಮವರಿಗಿಂತಲೂ
ಅಪ್ಪಟ
ನಮ್ಮವರು.
ನಮಸ್ತೇ.

☆ ☆ ☆

ಹೆಚ್ಚಾಗಲಿ ಆಯುಸ್ಸು...

● ಸವಿತಾ ನಾಗಭೂಷಣ

ನೀವು ಶಿವಮೊಗ್ಗೆಯಲ್ಲಿದ್ದ ಹೊತ್ತು—
ನಾವು ಆಗತಾನೆ ಕಣ್ಣು ಬಿಟ್ಟಿದ್ದೆವು—ಪುಟ್ಟ ಸಸಿಗಳು

ಸಹ್ಯಾದ್ರಿಯ ಸಂಜೆ ಐದರ ಮಳೆಯಲ್ಲಿ
ತೇಲಿಬಿಟ್ಟ ಕಾಗದದ ದೋಣಿ
ಕೆಸರುಗಾಲಲ್ಲೆ ಲಾಗಾ ಹಾಕಿದ್ದೆವು!

ನೀವು ಕವಿಯೆಂದು, ನಿಮ್ಮ ಕರೆಯ ಮನ್ನಿಸಿ
ಸುರಿದ ಮಳೆಯೆಂದು ನಮಗೇನು ಗೊತ್ತು?

ಹ್ಞಾಂ! ಮಳೆಯ ಅನಂತರ ಮೂಡಿತು ನೋಡಿ
ಬಣ್ಣದ ಕಾಮನ ಬಿಲ್ಲು—
ಮಾರನೆಯ ದಿನ ಹಚ್ಚ ಹಸಿರು ಹುಲ್ಲಿನ ನಡುವೆ
ಲಕಲಕಿಸುವ ಹಳದಿ ಹೂವುಗಳು

ನೀವು ಶಿವಮೊಗ್ಗೆಯಲ್ಲಿದ್ದ ಹೊತ್ತು
ನಾವು ಆಗತಾನೆ ತೊದಲು ನುಡಿಯುತ್ತಿದ್ದೆವು—ಪುಟ್ಟ ಬಾಲಕಿಯರು

ನನ್ನೂರ ಜೋಗವ್ವ ಸಿರಿವಂತೆಯಾದಳು ನಿಮ್ಮಿಂದ
ತುಂಗೆಗೆ ಪ್ರಾಣ ತುಂಬಿದಿರಿ, ಬಾಗಿ ಬಳುಕಿದಳವಳು ಸ್ವಚ್ಛಂದ

ನೀವು ಕವಿಯೆಂದು, ಅದು ನಿಮ್ಮದೇ ಕವಿತೆಯೆಂದು...
..................ನಮಗೇನು ಗೊತ್ತು?

'ನೀ ನುಡಿಯದಿರಲೇನು... ಬಯಲಾಗಿಹುದು ಎಲ್ಲ...'
ಕೇಳಿದವರು ತಲೆದೂಗುವಂತೆ ಹಾಡಿ ಗಿಟ್ಟಿಸಿದೆವು ಬಹುಮಾನ

‘ಕುರಿಗಳು, ಸಾರ್, ಕುರಿಗಳು...’ ನಿಮ್ಮದೇ ಪದ್ಯ ಥೂ ಬಿಟ್ಟು
ಕಳೆದೆವು ಹುಡುಗರ ಮಾನ!

ಲಂಗ-ದಾವಣಿಯ ಮೊಂಡು ಹುಡುಗಿಯರು ನಾವು—
ಸಭೆಗೆ ನಿಮ್ಮದೇ ಅಧ್ಯಕ್ಷತೆ, ಭಾಷಣ ಕೇಳುವ ಶಿಕ್ಷೆ!
ಹಿಂದಿನ ಬೆಂಚಿಗೆ ಆತು, ಮೂಲೆಯಲ್ಲೆಲ್ಲೋ ಕೂತು
ಕೋಟು-ಬೂಟಿನ ನಿಮ್ಮ ನಿತ್ಯ ವೇಷಕ್ಕೆ ಹ್ಯಾಟೂ ಕಲ್ಪಿಸಿ;
ಘನವಾದ ನಿಮ್ಮ ಪಂಡಿತ ಕನ್ನಡ ಭಾಷಣಕ್ಕೆ
ಕಚ್ಚೆ-ಪಂಚೆ, ಜುಬ್ಬಾ ಹೊಲಿಸಿ, ನಾವು ಎಳೆದು
ಮುಸಿ ಮುಸಿ ನಕ್ಕಿದ್ದೆವು

‘ನಿಮ್ಮೊಡನಿದ್ದೂ ನಿಮ್ಮಂತಾಗದೆ...’
ತೆಗೆದುಕೊಳ್ಳಿ ನಿಮ್ಮ ಮಾತ ವಾಪಸ್ಸು
ನಮ್ಮೊಡನೆ ಇರಿ ಸದಾ ಹೆಚ್ಚಾಗಲಿ ಆಯುಸ್ಸು.

☆ ☆ ☆

ನಿಸಾರರಿಗೆ ನಮಸ್ಕಾರ

● ಜರಗನಹಳ್ಳಿ ಶಿವಶಂಕರ್

— ೧ —

ಖನಿಜದೊಳಗಿನ ನಿಜವೆ
ಲೋಹದದಿರ ಉತ್ತುಂಗದ ನಿಲವೆ
ನಾಡ ದೇವಿಗೆ ಅರ್ಪಿಸಿದ ಕವಿಯೆ
ಇದೋ ನಿಮಗೆ ಅಭಿವಂದನೆ.

— ೨ —

ನೀವು ಗುರುತಿಸಿದ ಕುರಿ
ಅದರ ಮುಂದಿನ ಗುರಿ
ಎಲ್ಲವೂ ಸಾಗಿದೆ ಬರೋಬರಿ
ಜೊತೆಗೆ ಹುಟ್ಟಿದೆ
ಈಗ ಕೊಸರಿಗೆ ಅಯೋನಿ ಕುರಿ ಮರಿ
ಉಳ್ಳವರ ಹಬ್ಬಕ್ಕೆ ಹೊಸ ಗರಿ
ಪಾಪ ಇವೇ ಹರಕೆಯ ಕುರಿ
ಕೊಂದವರು ಕೊಬ್ಬುತ್ತಲೇ ಇದ್ದಾರೆ
ಉಳಿದು ಉಬ್ಬುತ್ತಲೇ ಇದ್ದಾರೆ
ಸದಾ ಕಾಲಕ್ಕು ಇವರೇ ದೊರೆ
ನಿಮ್ಮಂತಹ ಕವಿ ಮಹಾಶಯರು ಬಿಟ್ಟರೆ
ಯಾರು ತಾನೆ ಚಕಾರ ಎತ್ತುತ್ತಾರೆ
ಪಾಪ ಕುರಿಗಳ ಬಗ್ಗೆ
ಧನ್ಯವಾದಗಳು ನಿಮಗೆ.

— ೩ —

ಮರಗಳನ್ನು ಎಲ್ಲರೂ ನೆಡಬಹುದು
ನೀರೆರೆದು ಪ್ರೀತಿಯಿಂದ ಬೆಳೆಸಬಹುದು

ನೆರಳಿಗೆ ಬೇಲಿ ಹಾಕಲು
ಯಾರಿಗೆ ತಾನೆ ಸಾಧ್ಯ?
ಬೆಳೆಸುವವರು ಒಬ್ಬರು
ಅನುಭವಿಸುವವರು ಮತ್ತೊಬ್ಬರು
—ಹೀಗೇ ಅಲ್ಲವೆ ನಮ್ಮ ಮಕ್ಕಳು
ನೆರಳಿಗೆ ನೆನಪಾಗುವುದಿಲ್ಲ
ನೆಲದಲ್ಲಿರುವ ತಮ್ಮ ಬೇರುಗಳು.
ಹೌದು:
ಕವಿಯ ಮನೆಯ ಮುಂದಿನ ನೆರಳೂ
ತಿಳಿಸುತ್ತದೆ ಬಾಳಿನ ತಿರುಳು.

— ೪ —

ನಗರ ಎಂದರೆ ಶ್ರೀಮಂತಿಕೆಯ ಆಗರ
ಯಾರಿಗೆ ಯಾರೋ! ಜನ ನಿಬಿಡ ಸಾಗರ
ಕಾರು ಬಾರು ಬಂಗಲೆ ಬೆಳ್ಳಿ ಬಂಗಾರ
ವ್ಯಾಪಾರ ವ್ಯವಹಾರ ಅವರವರದೇ ಸಡಗರ
ಮಾಸ್ತಿ ಕವಿಗೆ ಅಮೂಲ್ಯ ಆಸ್ತಿ
ಅವರಂಥ ಆದರ್ಶವೇ ಕಾವ್ಯ ಕೃಷಿಗೆ ಸ್ಫೂರ್ತಿ;
ಮಾಸ್ತಿ ಕನ್ನಡದ ಆಸ್ತಿಯಾದರೆ
ನೀವು ಕನ್ನಡದ ಕೀರ್ತಿ.

— ೫ —

ಕಲಿತದ್ದು, ಬೋಧಿಸಿದ್ದು ಭೂಮಿಯ ಬಗ್ಗೆ,
ಬೆಲೆ ಬಾಳುವ ಖನಿಜ ನಿಕ್ಷೇಪಗಳ ಬಗ್ಗೆ
ಬಗೆದದ್ದು ಬರೆದದ್ದು ಹೃದಯ ಸಂಪತ್ತಿನ ಬಗ್ಗೆ
ಆಚಾರ ವಿಚಾರ ನೆಲದ ನುಡಿಯ ಬಗ್ಗೆ
ಬರವಣಿಗೆಯ ತುಂಬ ಜಲವೆಲ್ಲ
ಪಾವನ ತೀರ್ಥವಾದ ಬುಗ್ಗೆ.

— ೬ —

ಧರ್ಮವ ಮೀರಿದ ಭಾಷೆಯ ಮೀರಿದ
ನಿತ್ಯೋತ್ಸವವ ಅರ್ಪಿಸಿದ ಕವಿಗೆ
ನಮ್ಮ ನಲ್ಮೆಯ ನಮಸ್ಕಾರ.

☆ ☆ ☆

ಕಾವ್ಯ ಲೋಕದ ಕನಕ

● ಎಚ್. ಡುಂಡಿರಾಜ್

ಮೂರು ದಶಕಗಳ ಹಿಂದೆ
ನವ್ಯ ಕವನವೆಂಬ ಒಡಪನ್ನು
ಒಡೆಯಲಾಗದೆ
ಮಣ್ಣಿನ ವಾಸನೆಯ ಕಾವ್ಯ
ಘನ್ನಿಯನ್ನು ಕುಡಿಯಲಾಗದೆ
ಆದರೂ ಕಾವ್ಯ ಓದಬೇಕು
ಬರೆಯಬೇಕು ಎಂಬ ತುಡಿತ
ತಡೆಯಲಾಗದೆ ಚಡಪಡಿಸುತ್ತ
ದಿಕ್ಕೆಟ್ಟು ನಿಂತ ನನ್ನಂಥವರನ್ನು
ಕಣ್ಣು ಹೊಡೆದು ಕರೆದು
ದಾರಿ ತೋರಿದ್ದು ನಿಸಾರ್ ಕವಿತೆ
ಧ್ರುವತಾರೆಯಂತೆ!

ಪ್ರಾಸಾನುಪ್ರಾಸ, ತಿಳಿ ಹಾಸ್ಯ
ಹೊಸ ಹೊಸ ಮಟ್ಟು, ಲಯ
ತಮ್ಮದೆ ಆದ ಲವಲವಿಕೆಯ
ಶೈಲಿಯನ್ನು ರೂಢಿಸಿಕೊಂಡವರು
ಲಕ್ಷಾಂತರ ಓದುಗರ
ಹೃದಯ ಸಿಂಹಾಸನದಲ್ಲಿ
ಪಟ್ಟಾಭಿಷೇಕ ಮಾಡಿಸಿಕೊಂಡವರು
ಒಂದು ಮಾತಿಗೆ ಹಲವು ಅರ್ಥಗಳ
ಕಾಣಿಸಿದವರು
ಕನ್ನಡಮ್ಮನ ಕರಿ ಮಣಿ ಸರದಲ್ಲಿ
ಉರ್ದು ಶಬ್ದಗಳ ಚೆಂಬವಳ ಪೋಣಿಸಿದವರು

ಕವಿತೆಯ ಕಡೆಗೋಲಿನಿಂದ
ಹೊಸ ಹೊಸ ಪದಗಳ ನವನೀತ
ಕಡೆದು ತೆಗೆದ ಧೀಮಂತ
ನುಡಿಯನ್ನು ಆವೆ ಮಣ್ಣಿನಂತೆ
ಮಣಿಸಿದ ಈ ಗುಡಿಗಾರ
ನಿರ್ಮಿಸಿದ ನೂರಾರು ಮೂರ್ತಿಗಳಿಂದ
ಕನ್ನಡ ಕಾವ್ಯಲೋಕ ಶ್ರೀಮಂತ

ನಿಸಾರರ ಕಾವ್ಯವೆಂದರೆ ಕೇವಲ
ರಂಜಕವಲ್ಲ
ಕಾವ್ಯ ಕೃಷಿಕರ ಪಾಲಿಗೆ ಅದು
ಸಾರಜನಕವೂ ಹೌದು
ಅಧಿಕೃತವಾಗಿ ನಾಡೋಜರಾಗುವ ಮೊದಲೆ
ನನ್ನಂಥ ಅನೇಕರಿಗೆ ನಿಸಾರರು
ಕಾವ್ಯ ಗುರು, ಬೆರಳು ಬೇಡದ ದ್ರೋಣರು
ನಿಸಾರ್ ಎಂಬ ಹೆಸರಲ್ಲೆ ಉಂಟಲ್ಲ
ಸಾರ್ ಎಂಬ ಬಿರುದು!

ಓದಿದ್ದು, ಬೋಧಿಸಿದ್ದು ಜಿಯಾಲಜಿ
ಆದರೇನಂತೆ? ಮನಸ್ಸಿನೊಳಗೆ
ಸದಾ ಸಾಹಿತ್ಯದ ಬಗ್ಗೆ ಕಾಳಜಿ
ಪದ್ಯದ ಜತೆಗೆ ಸಾಕಷ್ಟು
ಗದ್ಯವನ್ನೂ ಬರೆದವರು
ಅಕಾಡೆಮಿಯ ಅಧ್ಯಕ್ಷರಾಗಿ
ದಕ್ಷತೆಯನ್ನು ಮೆರೆದವರು

ಸೂಟು ಬೂಟು ತೊಟ್ಟು
ಟೈ ಕಟ್ಟುವ ಶಿಸ್ತಿನ ಮನುಷ್ಯ
ಹಾಗಂತ ಹತ್ತಿರ ಹೋಗಲು
ಪಡಬೇಕಾಗಿಲ್ಲ ಭಯ
ಇವರಲ್ಲ ಪರಕೀಯ
ಕೋಟಿನ ಕೋಟೆ ಬಾಗಿಲು
ದಾಟಿದರೆ ಕಾಣುವುದು

ಎಪ್ಪತ್ತರಲ್ಲೂ ಮುಪ್ಪಡರದ
ಪ್ರೀತಿ ತುಂಬಿದ ಹೃದಯ

ಇರಬಹುದು ನಿಸಾರರ
ಕಾವ್ಯದ ತಿರುಳನ್ನು ತಿರಸ್ಕರಿಸಿ
ಸಿಪ್ಪೆಯನ್ನು ಅಗಿಯುವವರು
ಉಗಿಯುವವರು
ಕೂದಲು ಸಿಗಿಯುವವರು
ಮತ್ಸರದಿಂದ ಅಪಸ್ವರ
ತೆಗೆಯುವವರು
ವಿನಾಕಾರಣ ಕೆಸರು ಎರಚುವವರು
ಬ್ಯಾ ಬ್ಯಾ ಎಂದು ಅರಚುವವರು

ಇರಲಿ ಬಿಡಿ ಅವರು
ಕುರಿಗಳು ಸಾರ್ ಕುರಿಗಳು
ಪಡಬೇಕು ಅಂಥವರ ಬಗ್ಗೆ ಮರುಕ
ರಸಿಕರಿಗೆ ಗೊತ್ತು ನಿಸಾರ್
ಕಾವ್ಯ ಲೋಕದ ಕನಕ

☆ ☆ ☆

ನಿಸಾರ್—ಎಪ್ಪತ್ತರ ಹೊಸ್ತಿಲಲ್ಲಿ

● ಎಂ. ಆರ್. ಕಮಲ

— ೧ —

ಎಪ್ಪತ್ತರ ದಶಕದಲ್ಲಿ ಇಪ್ಪತ್ತರ ಹುಡುಗಿಯ
ಮನದಂಗಳದಲ್ಲಿ, ಕಾವ್ಯದ ಬಳ್ಳಿ
ನೆಟ್ಟ ನಿಸಾರರು ಎಪ್ಪತ್ತರ ಹೊಸ್ತಿಲಲ್ಲಿ!
ಬನ್ನಿ, ಶುಭ ಕೋರೋಣ, ನಿತ್ಯೋತ್ಸವದ ಕವಿಗೆ.

— ೨ —

ಎಷ್ಟು ಬಾರಿ ನಿಮಗೆ ನಾನು ಆಭಾರಿ
ಪಾಠ ಹೇಳದೆಯೆ ಗುರುವಾದಿರಿ.
ನವ್ಯದ ಕಗ್ಗತ್ತಲ ಕಾಡು, ಅರಿಯದೆ ಜಾಡು
ಅಲೆವ ನಮ್ಮ ಪಾಡು ಕಂಡವರಂತೆ
ಹರಿಸಿದಿರಿ ಸಿರಿ ಬೆಳಕಿನ ಹಾಡು.
ಕಲ್ಲಲ್ಲಿ ಸಿರಿ ನೆಲದಲ್ಲಿ ಝರಿ
ಕಾಡೊಳಗೂ ದಾರಿ ತೋರಿದಿರಿ.
ಅಡಿಗಡಿಗು ಕೌತುಕ, ಖುಷಿ,
ಅನಿರೀಕ್ಷ್ಯ ಘಟಿತಗಳನೂಡಿ
ನಗೆಯ ಷಾಮಿಯಾನವನ್ನೇ ತೆರೆದಿರಿ.

— ೩ —

ಮಾತು, ಮಾತು, ಮಾತಿನದೇ ಗೈರತ್ತು—
ಅವರಿವರ ಶೈಲಿಯ ದಗಲ್ಬಾಜಿಸಿ
ಗಬಕಾಯಿಸಿದ್ದಲ್ಲ, ಸ್ವಂತ ಮೆಹನತ್ತಿನ ಗಮ್ಮತ್ತು.
ಸುತ್ತಲಿನ ಗಬ್ಬು ಗಲೀಜಿಗೆ
ಮೂಗು, ಮನಸ್ಸನ್ನು ರಾಜಿಗೊಳಿಸದೆ

ಠಕ್ಕು ಮಾತುಗಳ ಕಕ್ಕುವವರ ದಬಾಯಿಸಿ
ಒಳಗೊಳಗೆ ಬೇರು ಕೊಯ್ದು, ಮೇಲೆ
ನೀರು ಹುಯ್ಯುವ ಜನರ ನಿಭಾಯಿಸಿ
ಎರಡು ಧರ್ಮಗಳ ನಡುವೆ ಸೇತುವಾದಿರಿ.

— ೪ —

ಬೇರೆಯವರಂತಲ್ಲ ನೀವು—
ಸಿಕ್ಕಿದಾಗೆಲ್ಲ ವಿಚಾರಿಸುತ್ತ ಕುಶಲವನ್ನು
ಕಣದಷ್ಟು ಗುಣ ಕಂಡರೂ ಮಣದಷ್ಟು
ಹೊಗಳಿಕೆಯ ಹೇರಿದಿರಿ.
ಅಂದು ನನ್ನ ಕಾವ್ಯ ಪ್ರವೇಶಕ್ಕೆ
ಉಡುಗೊರೆಯಾಗಿ ನೀವೇ ಕೊಟ್ಟ
ಕಾವ್ಯ ಮಲ್ಲಿಗೆಯ ಅಂಟು ಚಿಗುರಿ,
ಹಬ್ಬಿ, ಹಂದರವಾಗಿ ರಾಶಿ ಹೂವು!
ಈ ಅಂಟಿನ ನೆಂಟು ಬಯಸಿ
ಬಂದವರೆಲ್ಲ ಮುರಿದೊಯ್ದಿದ್ದಾರೆ,
ತಮ್ಮ ಮನೆಯಂಗಳದಲ್ಲಿ ನೆಟ್ಟಿದ್ದಾರೆ.
ಅಲ್ಲೆಲ್ಲ ಈಗ ಕಾವ್ಯದ್ದೇ ಸಂಭ್ರಮ;
ಒಳ ಹೊರಗೆಲ್ಲ ಘಮ ಘಮ.

★ ★ ★

ನಿಸಾರ್ ಅಹಮದರಿಗೆ ನಮನ

● ಡಾ. ವೈ. ಆರ್. ಮೋಹನ್
ಟಸ್ಕಲೂಸ (ಅಲಬಾಮ, ಅಮೇರಿಕ)

ಹೆಸರಾಂತ ಕನ್ನಡ ಕವಿಗಳಲಿ
ನನಗೆ ಪರಿಚಯದವರು ಇವರು ಮಾತ್ರ.
ಓದಿದ್ದು ಭೂಗರ್ಭಶಾಸ್ತ್ರ
ಹೊಕ್ಕಿದ್ದು ಕನ್ನಡ ಕಾವ್ಯ ಗಣಿಯ ಪಾತ್ರ
ಹೊರ ತೆಗೆದಿದ್ದು ಭವ್ಯ ಕವನಗಳ ಸರಣಿ
ಕವನ ಮಾಧುರ್ಯಕ್ಕೆ ಪುಳಕಗೊಂಡಿತು ಕನ್ನಡ ಧರಣಿ.
ಪ್ರಾಯ ಎಪ್ಪತ್ತೊಂದು ತಾಗುವಂತಿದ್ದರೂ
ಕನ್ನಡವನುಳಿಸಿ ಬೆಳೆಸಲು ದುಡಿಯುತಿಹರು.
ಕನ್ನಡ ಕವಿತೆಗೆ ಹೊಸ ಹೊಳಪು ಕೊಟ್ಟು,
ಕನ್ನಡ ಕಸ್ತೂರಿಯ ಕಂಪನೆಲ್ಲೆಡೆಗೆ ಬೀರುತಿಹರು.
ಇಸ್ಲಾಂ ಮತದಲ್ಲಿ ಹುಟ್ಟಿ ಬೆಳೆದರೂ
ಸನಾತನ ಧರ್ಮವನು ಮೈಗೂಡಿಸಿಕೊಂಡು
'ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ'
ಕನ್ನಡಾಂಬೆಗೆ ನಿತ್ಯೋತ್ಸವ ನಡೆವುದನ್ನು
ಕನ್ನಡಿಗರಿಗೆ ದರ್ಶನ ಮಾಡಿಸಿದವರು.

ಯೌವನದಲಿವರ ಮನಸ್ಸು ಗಾಂಧಿ ಬಜಾರು
ಆ ಮನಸು ಹದವಾಗಿ ಮಾಗಿ, ಪಕ್ವವಾಗಿ
ಕನ್ನಡ ತಾಯಿಗೆ ಸಲ್ಲಿಸಿತು ಕವನಗಳ ನಜರು.
ಎರಡು ಸಂಸ್ಕೃತಿಗಳ ಸುಧೆಯ ಹೀರಿ
ಸಂಪ್ರದಾಯಸ್ಥ ಗೊಡ್ಡು ನಂಬಿಕೆಗಳ ಮೀರಿ,
ಆತ್ಮಜ್ಞಾನದ ಹಿಮಗಿರಿಯ ಶಿಖರವೇರಿ,
ಮತಾಂಧರ ಕಣ್ತೆರೆಸಿ, ಕಾವ್ಯ ದೀವಿಗೆ ಹಿಡಿದು

ತೋರಿದಿರಿ ಮತ ಸಹಿಷ್ಣುತೆಯ ದಾರಿ
ಕನ್ನಡ ಕಾವ್ಯ ಮಾಧುರ್ಯವನು ಮೊದಲ ಬಾರಿಗೆ
ಧ್ವನಿ ಸುರುಳಿಯಲಿ ದೇಶ ವಿದೇಶಗಳಿಗೆ ಕಳಿಸಿ ಇವರು
ಕಡಲಾಚೆಯ ಕನ್ನಡಿಗರ ಮನ ತಣಿಸಿದವರು.

ಬಿರುದು ಬಾವಲಿಗಳಿಗೆ ಆಸೆ ಪಡದೆ
ಬೆಂಗಳೂರಲಿ ಕನ್ನಡಕೆ ಎತ್ತಂಗಡಿಯಾಗಲು ಬಿಡದೆ,
ಬೇರೆ ಭಾಷೆಗಳ ಬಾಲ ಮೂಸಿ ಹಿಂಬಾಲಿಸುವ
ಕನ್ನಡದ ಕುರಿಗಳಿಗೆ ಸ್ವಾಭಿಮಾನದ ಮದ್ದು ಕುಡಿಸಿದವರು.
ಹಿಂದುತ್ವವಾದಿಗಳೆ ಇರಲಿ, ಇಸ್ಲಾಂ 'ಜಿಹಾದಿ'ಗಳೆ ಸಿಗಲಿ
ಎಲ್ಲ ಕಡೆಯಲ್ಲಿ ಕನ್ನಡತನದ ಬೀಜ ಬಿತ್ತುವವರು
ಬೀಜಗಳು ಮೊಳೆತು ಗಿಡವಾಗಿ, ಮರವಾಗಿ,
ಎಲ್ಲ ಜಾತಿಯ ಗಿಡಮರಗಳೊಂದಾಗಿ
ಕಣ್ಮನ ತಣಿಸುವ ಕಾಡಾಗುವಂತೆ,
ಕನ್ನಡ ನಾಡು ಭಾವ ಸಮನ್ವಯದ ಬೀಡಾಗುವಂತೆ
ಎಡೆಬಿಡದೆ ಶ್ರಮಿಸಿದವರು.

ಅಡಗಿಹುದಿವರ ಕವನಗಳಲಿ ಕುವೆಂಪು ಕಾವ್ಯದ ಪೆಂಪು
ಬೇಂದ್ರೆ ಕವನಗಳ ಸೊಂಪು,
ಮೈಸೂರು ಮಲ್ಲಿಗೆಯ ನವಿರಾದ ಕಂಪು.
ಪದ್ಯದಂತೆಯೇ ಹೃದ್ಯ ಇವರ ಗದ್ಯ,
ಗದ್ಯ ಬರವಣಿಗೆಗೆ ಮಾದರಿ.
ಇವರ 'ಅಚ್ಚುಮೆಚ್ಚು'
ಗದ್ಯದಲಿ ಕಾಣುವುದಿವರ ಮುಚ್ಚುಮರೆಯಿಲ್ಲದ
ನಿರೂಪಣೆಯ ಕೆಚ್ಚು!
ಅಭಿವ್ಯಕ್ತಿಗೊಳಿಸುವುದಿವರ ಕಾವ್ಯ
ಎಲ್ಲ ಮತಸ್ಥಾಪಕರ ಬೋಧನೆಯ ಸಾರ;
ಕನ್ನಡ ನಾಡು, ನುಡಿಗೆ ಇವರ ಕೊಡುಗೆ ಅಪಾರ.

ಜಾತಿ ಮತ ಭೇದಗಳನಳಿಸಿ
ಭಾವ ಸಮನ್ವಯತೆಯ ಬಳಸಿ,
ದೇಶ ವಿದೇಶಗಳಲಿ ನೆಟ್ಟು ಕನ್ನಡ ಕಂಪಿನ ದವನ
ನಾಡು ನುಡಿಗಾಗಿ ನಡೆಸಿಹರು ನಿತ್ಯವೂ ಕದನ.
ಕರ್ನಾಟಕದ ಈ ಧೀರ ಧೀಮಂತ ಕವಿ-ಚಿಂತನಕಾರ
ನಮ್ಮ ನೆಚ್ಚಿನ ನಿಸಾರ ಅಹಮದರಿಗೆ
ಅರ್ಪಿತ ಕಡಲಾಚೆ ಕನ್ನಡಿಗರ ಹೃತ್ಪೂರ್ವಕ ನಮನ.

☆ ☆ ☆

ನಿತ್ಯೋತ್ಸವದ ಕವಿಗೆ—೭೧

● ಡಾ. ಶಾಂತಲಕ್ಷ್ಮಿ

ಎತ್ತರೆತ್ತರದೊಳಾಡಬಯಸುವ ಸ್ವಚ್ಛತೆಯ ಸಂಕೇತದ ಬೆಳ್ಳಕ್ಕಿ,
ಕಡಲಾಳದ ಮೇಲೆ ಮೇಲೆ ಉದ್ದಗಲ ಹಾರಬಯಸುವ ಕಡಲ ಹಕ್ಕಿ.
ನಿತ್ಯ ಮಿನುಮಿನುಗುವ ದಿಗಂತದ ಬೆಳ್ಳಿಯ ಚುಕ್ಕಿ,
ಕವಿತೆಯ ಆಕಾಶಕ್ಕೆ ಸರಹದ್ದುಗಳಿಲ್ಲ; ಬಯಕೆಗೆ ಎಲ್ಲೆಗಳಿಲ್ಲ.
ಪ್ರತಿ ತಾರೆಯಲ್ಲೂ ಪ್ರತಿಬಿಂಬದ ಹಂಬಲ.
ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಕನ್ನಡ ತಾಯಿಗೆ ನಿತ್ಯೋತ್ಸವ ಹಾಡಿದ ಕವಿ,
ಬದುಕಿನ ಸಾರ್ಥಕತೆಯ ಸಾರಿ ಸಾರಿ ಹೇಳಿದ ಕವಿ.
ಕವಿತೆಯೇ ಮೊದಲನೆಯ ಒಲವು ಹೇಗೋ ಹಾಗೆ
ಕೊನೆಯುಸಿರೂ ಸಹ.

ಸದಾ ಇವರು ಹೀಗೆಯೇ!
ಈ ಟೈ-ಸೂಟುಧಾರಿಯ ಸ್ವಾಭಿಮಾನದ ಗತ್ತು,
ಗಾಂಭೀರ್ಯ, ಠೀವಿ, ಘನತೆ, ಗೌರವದ
ಹೂ ನಗೆಯ ಮೊಗದ, ಮಾತುಗಳ ಕರಾಮತ್ತು
ಮರೆಯಲು ಸಾಧ್ಯವೆ ಯಾರಿಗಾದರು?
ಒಮ್ಮೆಯಷ್ಟೇ ಅವರ ನೋಡಿದ್ದರು?

ಜಾಜ್ವಲ್ಯಮಾನ ಜ್ವಾಲಾಮುಖಿಗಳ ನಡುವೆ,
ಮುಳ್ಳಿಡಿದ ಮರದಲ್ಲಿ ಹಚ್ಚ ಹಸಿರ ಕನಸಿದ ಕವಿ,
ಸಂಕಟದ ಸಾಮ್ರಾಜ್ಯದಲ್ಲಿ, ಮೃಗೀಯ ಹದ್ದುಗಳಿಗೆ,
ಗಾಳಿಗುದ್ದುಗಳಿಗೆ, ತೂಫಾನಿಗೆ ಅಂಜದ, ಬೆದರದ ಧೀರ ಪಥಿಕ.
ಜಾತಿ-ಮತಗಳ ಖೆಡ್ಡಾದಲ್ಲಿ, ಉಭಯ ಕಷ್ಟಗಳ ನಡುವೆ
ಬದುಕಿನ ಕುಲುಮೆಯಲ್ಲಿ ಪುಟವಿಟ್ಟ ಬಂಗಾರ,
ತೇದಂತೆ ಕಂಪು ಹರಡುವ ಶ್ರೀಗಂಧ.

ಬಂಧನವ ತೊರೆದು ಎಲ್ಲ ಮರೆತಿರುವಾಗ,
ಇಲ್ಲಸಲ್ಲದ ನೆಪವ ಹೂಡಿ ಬರುವ
ನೆನಪುಗಳ ತಣಿಸಿದ ಕವಿ.
ಗುಡ್ಡ-ಬೆಟ್ಟ, ಮಳೆ-ಬಿಸಿಲುಗಳ ಹಾದು
ಹೆದ್ದಾರಿಯಲ್ಲಿ ಜಗದ ಪಡಿನೆಳಲಾದ ಜೀವ.
ರಾಮನ್ ಸತ್ತ ಸುದ್ದಿಯಿಂದ ಸಂತಪಿಸಿದ ಸಹೃದಯಿ.
ಹಿರಿಯರಲಿ ವಿನೀತ ಗೌರವ, ಕಾಣದ ದೈವಕ್ಕೆ ನಮನ.

ನಾಡದೇವಿಯ ಮಡಿಲಲ್ಲಿ ಕಂಡ ದೃಶ್ಯಗಳಿಗೆ
ಹಪಹಪಿಸಿ ಕಂಬನಿ ಮಿಡಿದ ಜೀವ.
'ಕುರಿಗಳು, ಸಾರ್, ಕುರಿಗಳು',
'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎನ್ನುತ್ತಲೇ
ತಾವು ತಾವೇ ಆಗಿ, ಮನಸು ಗಾಂಧಿ ಬಜಾರಿನಲಿ ನಲಿದ ಕವಿ.

ಈ ನೆಲದಲ್ಲೇ ಹೋರಾಡುವ ಪರಕೀಯನಲ್ಲದ, ಪರಕೀಯನಾಗದ ಕವಿ.
ತಮ್ಮ ದನಿಯಲ್ಲಿ, ತಮ್ಮದೇ ದನಿಯಲಿ ಮನಸಾರ
ಹೊಸ-ಹೊಸ ಹಾಡುಗಳ-ಪಾಡುಗಳ ಕಾಣಿಸಿದ ಹರಿಕಾರ.
ಹಿರಿತನದ ಎದುರಲ್ಲಿ ಮೌನವೇ ಆಭರಣ
ಎಂಬಂಥ ನಡೆನುಡಿಯ ಸದ್ಗುಣದ ಚಿದ್ಘನ
ಕನ್ನಡಮ್ಮನ ನುಡಿಯ ಗುಡಿಯ ನಿತ್ಯೋತ್ಸವದಲ್ಲಿ
ಇವರೂ ನಿತ್ಯ ಉರಿಯುತ್ತಿರುವ ದೀಪ: ಚೆಂಬೆಳಕ ಸ್ತವನ;
ಎಪ್ಪತ್ತು ವಸಂತಗಳನ್ನು ದಾಟಿ ಮಾಗಿರುವ, ಮುನ್ಸಾಗಿರುವ
ಈ ಹಿರಿಯ ಕವಿ ಚೇತನಕ್ಕೆ ನಮ್ಮೆಲ್ಲರ ನುಡಿ-ನಮನ.

☆ ☆ ☆

ಕನ್ನಡದ ಚಿರ ಯುವಕ

● ಬಸವರಾಜ ವಕ್ಕುಂದ

ಸರಳ ಪದಬಂಧಗಳಲಿ ನಿತ್ಯ ಉತ್ಸವದ ಬೆಳಕ
ಚಿಮ್ಮುತ್ತ, ಹೊಮ್ಮಿಸಿ ಮೈಯೊಳಗೆ ಮಿಂಚು ಪುಳಕ
ಈ ನೆಲದ ಸಂಸ್ಕೃತಿ ಸಂಸ್ಕಾರಗಳ ಹೊಳಪ
ಸೂಟು ಬೂಟಿನ ನಡಿಗೆ ಲಯ ಛಂದಗಳಲಿ
ಅಳವಡಿಸಿ ಹೊಯ್ದು ಭಾವ ಬುದ್ಧಿಗಳ ಎರಕ
ಲೀಲಾಜಾಲ ಕವಿತೆ ಕಟ್ಟಿದ ಕನ್ನಡದ ಚಿರ ಯುವಕ
ತೆರೆದು ತೋರಿದ್ದಷ್ಟೇ ಅಲ್ಲ ಮತ ಮೌಢ್ಯಗಳ ಹುಳುಕ
ಧಿಕ್ಕರಿಸಿ, ಲೇವಡಿಸಿ; ಸ್ನೇಹ ಪ್ರೀತಿ ಸೌಹಾರ್ದಗಳ ಸಂಧಿ
ಸಮಾಸಗಳ ಸೇತುವೆಗಳ ನಿರ್ಮಿಸಿ ಓಡಾಡಿದಿರಿ
ಎಚ್ಚರಿಸಿ ನವೋದಯ ನವ್ಯ ಬಂಡಾಯ ಸಾರಗಳ
ಸಾರದಲೆ ಒಳಗೊಂಡು ಜೀವ ಸಾರಗಳ ಸಾರಿ
ಹಾರಿ ತಣಿಸುವ ಹಕ್ಕಿಗಳಿಗೆ ಹಚ್ಚಿ ರೆಕ್ಕೆ ಪುಕ್ಕ
ಕಾಲ ದೇಶದ ಬಯಲೊಳಗೆ ಹಾರಿಸಿದ ನಿಮಗೆ ಕನ್ನಡವೆ ಮೆಕ್ಕಾ
ಸ್ವೀಕರಿಸಿರಿ ಅಭಿನಂದನೆ ಎಪ್ಪತ್ತ ಒಂದಕ್ಕೆ; ಬಾರಿಸಿರಿ ಶತಕ.

☆ ☆ ☆

ಅಭಿನಂದನ ಗೀತೆ

● ಡಾ. ದೊಡ್ಡರಂಗೇಗೌಡ

ವಾಙ್ಮಯ ಲೋಕದ ವಿಶ್ವಾಸಿ ಕವಿಯೇ
ನಿಮ್ಮ ಅನನ್ಯ ಸಾಧನೆಗೆ ನನ್ನ ನಮನ;
ವಾಗ್ದೇವಿಯ ಕೃಪೆ ಗಳಿಸಿದ ಸಹೃದಯ ಜೀವಿಯೇ
ನಿಮ್ಮ ಅಪೂರ್ವ ಅಭಿವ್ಯಕ್ತಿಗೆ ನನ್ನ ನಮನ.

ತಾಯ್ನುಡಿ ಕನ್ನಡ; ಹೃದ್ಭಾಷೆ ಕನ್ನಡ; ಸಾಹಿತ್ಯ ನಿಮ್ಮ ಸ್ನೇಹ ಸಂಪದ.
ಓದಿದ್ದು ವಿಜ್ಞಾನ; ಬರೆದದ್ದು ಸುಜ್ಞಾನ; ಆಡಿದ್ದು ಅಭಿರುಚಿ ಕಂಡ ಮುದ.
ವಿಚಾರ ವಾಹಿನಿ ಬೆನ್ನು ಹತ್ತಿ ಹೊರಟರೂ ಕಾವ್ಯಾಭಿವ್ಯಕ್ತಿ ನವ್ಯ ಶಿಖರ;
ನವ್ಯ ನಾಲಗೆಯಲ್ಲೂ ರಮ್ಯದ ಇಂಚರ, ಮಿದು ನುಡಿಯಲ್ಲೂ ವ್ಯಂಗ್ಯ ಪ್ರಹಾರ.

ಹೊಸ ನುಡಿಗಟ್ಟನು ಕನ್ನಡ ಭಾಷೆಗೆ
ಕಸಿ ಮಾಡಿದ ಋಷಿ ಕಾವ್ಯ ಕರ್ಮಿಯೇ,
ಬದುಕಿನನುಭವಕೆ ವಾಗರ್ಥ ಲೇಪನವನಿತ್ತ
ಪ್ರಕಾಂಡ ಬುದ್ಧಿಯ ಸತ್ಸಂಗ ಸ್ನೇಹಿಯೇ—

ನಿಮ್ಮದು ಹೊಸ ಅಲೆ; ಹಿರಿಯರಿಗೆ ಬಾಗಿ ತಲೆ, ಕಂಡಿರಿ ಸಮನ್ವಯದ ನೆಲೆ;
ಹುಟ್ಟಿದ್ದು ಈ ಮಣ್ಣು, ಮುಟ್ಟಿದ್ದು ವಿಶ್ವಮೈತ್ರಿ; ತಂದಿರಿ ಸಿರಿಗನ್ನಡಕ್ಕೆ ಬೆಲೆ.
ಏನೆಲ್ಲ ಪಂಥಗಳು ಬಂದಿಲ್ಲಿ ಮೆರೆದರೂ ಸ್ವಸ್ಥ ಚಿತ್ತದ ಕಾವ್ಯ ಕೃಷಿ ಮೆರೆಸಿದಿರಿ
ಸುಗಮ ಸಂಗೀತ ಸ್ವರ್ಣೇತಿಹಾಸ ಪುಟದಲ್ಲಿ ಬಂಗಾರ ಗೆರೆಯ ಮಿಂಚಿಸಿದಿರಿ.

★ ★ ★

ಸೌಜನ್ಯದ ಅರಳು

● ಡಾ. ಲತಾ ರಾಜಶೇಖರ್

ಮಂದಸ್ಮಿತ ಮೊಗದಲ್ಲಿ ಸಂಜೆ ಐದರ ಬಿಸಿಲು
ಬಹಿರಂತರದಲ್ಲೂ ಒಂದೇ, ಹಚ್ಚ ಹಸಿರ ಬಯಲು!

ಎದೆಯ ಬನದಲ್ಲಿ ಮರದ ಸಾಲಿನ ನೆರಳು
ವಿನಯ ಬಳ್ಳಿಯ ತುಂಬ ಸೌಜನ್ಯದ ಅರಳು!

ನಿಜ, ಆಕಾಶಕ್ಕೆ ಸರಹದ್ದುಗಳಿಲ್ಲ, ಇರುವುದು ಮಿತಿ ಭೂಮಿಗೆ
ಚಿಂತನೆಯ ಬೆಳ್ಳಿಮಿಂಚು ಹೊಳೆದಿಹುದು ಬಾನಂಚಿಗೆ!

ಸುವರ್ಣ ಕರ್ನಾಟಕಕ್ಕೆ ನಿತ್ಯೋತ್ಸವದ ಕೊಡುಗೆ
ಕಾವ್ಯಸಾಗರದಿ ತೇಲುವ ಸ್ವರ್ಣನಾವೆ ನೀವೇ!

ಎಪ್ಪತ್ತೊಂದರ ಹರೆಯದೆತ್ತರದಲಿ ಇಪ್ಪತ್ತರ ಉತ್ಸಾಹ
ಮನದ ಅಂತಃಕರಣಕೆ ಆಗಸದ ವಿಸ್ತಾರ!

ಅನುಭಾವದ ಪರಿಮಳವಿದೆ ಆಂತರ್ಯದ ಅಲರಿಗೆ
ಹಾಡುಹಕ್ಕಿಯ ಕೊರಳಿದೆ ಕವಿತೆಯ ಗೂಡಿನೊಳಗೆ!

ನೆಲಸಿಹಿರಿ ಸಾಹಿತ್ಯದಾಗಸದಲಿ ಎಂದೂ ಧ್ರುವತಾರೆಯಾಗಿ
ಇರುವಂತಾಗಲಿ ನೀವು ನಗುನಗುತ ಶತಾಯುಷಿಯಾಗಿ.

☆ ☆ ☆

ಎರಡು ಚಿತ್ರಗಳು

● ಡಾ. ಶ್ರೀನಿವಾಸ ಕುಲಕರ್ಣಿ

— ೧ —

ಕಾಂಕ್ರೀಟು ಕಾನನದ
ಕೃತಕ ಉಸಿರಾಟದ
ಬದುಕಿನ ಜಂಜಾಟದೊಳಗೊಂದು
ನೇಹ-ಜೀವ ಸಂಜೀವಿನಿ.
ಶುಷ್ಕ ಮಾತಿನ ಮರಳುಗಾಡಿನ
ರಣಗುಡುವ ಬಿಸಿಲಿನೊಳಗೊಂದು
'ಒಯಾಸಿಸ್' ಈ ತಿಳಿ ಕಾಸಾರ
ನಮ್ಮ ನಿಸಾರ್!

— ೨ —

ಪುಸ್ತಕದ ಪುಟಗಳಲಿ
ಕೇಸರಿಯ ಎಸಳುಗಳು
ಚಿತ್ರ-ಚಿತ್ತಾರದ ನವಿರು, ನವಿರು
ನವಿಲಗರಿಗಳು
ಗರಿಗೆದರಿದಾಗೆಲ್ಲ
ಸೂಸುವ ಸುಗಂಧದ
ಕೇತಕಿಯ ಬನಗಳು.
ಕಾವ್ಯಾರಾಮದ ಪಕ್ಷಿ ಸಂಕುಲದ
ಕಲರವದ ಮಧ್ಯದಲಿ
ಮೀಟುವ
ಸುಸ್ವರಗಳು
ನಿಸಾರ್ ಭಾವೋಪವನದ ಕೋಗಿಲೆಯ
ಇಂಚರಗಳು.

☆ ☆ ☆

ಬನ್ನಿ ಗಾಂಧಿ ಬಜಾರಿಗೆ

● ಎಂ. ಎನ್. ವ್ಯಾಸರಾವ್

೧

ಸಹೃದಯನ ಸಾರ ಹೀರಿದ ಕವಿ
ನೀವು ನಿಸಾರ : ಅಹಂ ಇಲ್ಲದ ಮದವಿಲ್ಲದ
ಅಹಮದ!
ಸರಳತೆಯ ಉಸಿರಾಗಿ ಚಿಂತನೆಗೆ ಪಕ್ಕಾಗಿ
ಧನ್ಯತೆಯ ಪಡೆದ ನಿಮ್ಮ ಕಾವ್ಯ ಅಚ್ಚುಮೆಚ್ಚು
ಸವಿದಂತೆ ಬೆಲ್ಲದಚ್ಚು
ಎರಡು ಧರ್ಮದ ಹಳಿಗಳ ಮೇಲೆ
ಸಮಾನಾಂತರ ಸಾಗಿದ ನೀವು
ಸೀರೆ ಬುರ್ಕಾಗಳಿಗೆ ನೆಂಟು ಬಿತ್ತಿದವರು;
ರಂಗೋಲಿಯನು ಕಂಡು ರಂಗವಲ್ಲಿಗೆ
ಪದ್ಮರೇಖೆಯ ತಿಳಿಸಿದವರು;
ಆಕಾಶ ಮೋಡದ ಬುರ್ಕಾ ತೆಗೆದೊಡನೆ
ಇಳೆಯಲ್ಲಿ ಸಂಜೆ ಐದರ ಮಳೆ
ಗಾಂಧಿ ಬಜಾರಿನಲ್ಲಿ ಛತ್ರಿಗಳ ಸಂತೆ
ಛತ್ರಿ ಕೆಳಗೆ ನೀವು!
ನಿಮ್ಮ ಮನಸ್ಸು ಗಾಂಧಿ ಬಜಾರು
ಮಾಸ್ತಿ ಬಂದವರು ನಿಮ್ಮ ಕಂಡವರು
ಕೇಳಿದರು ಏನು ಇಲ್ಲಿ?
ನೀವು ಹೇಳಿದಿರಿ ನಿಮ್ಮ ನೋಡಿದೊಡನೆ
ಮಾತು ಮೂಕವಿಲ್ಲಿ!
ಹೋಟೆಲಿನ ಆ ತಿರುವಿನಲ್ಲಿ
ಮರೆಯಾದರು ಮಾಸ್ತಿ

ನೆಲೆಸಿದರು ನಿಮ್ಮಂತರಂಗದಲ್ಲಿ
ಮುಂದೊಂದು ದಿನ ತಾವಾಗೆ ಬಂದರು
ನಿಮ್ಮ ಕವಿತೆಯಲ್ಲಿ.

೨

ರಾಮನ್ ಸತ್ತಾಗಲೂ ನಿಮ್ಮದು ಇದೇ ಸೂಟು
ರಹೀಮನ ಜೊತೆ ಇದ್ದಾಗಲೂ ಅದೇ ಬೂಟು
ಸುದ್ದಿ ಬದಲಾಗಬಹುದಷ್ಟೆ
ಅಸಲಿ ವೇಷಕ್ಕೆ ಬದಲುಂಟೆ!
ಹೊಲದಲ್ಲಿ ಉಳುವ ನೇಗಿಲ ಯೋಗಿ
ದಿನವೂ ತನ್ನ ಕಾಯಕದಲ್ಲಿ ತಲ್ಲೀನ
ಏನೇ ಬಂದರೂ ಏನೇ ಹೋದರೂ
ಮಣ್ಣಿ ಭರವಸೆ ಕಡೆಗೆ ಯಾನ
ತಾಯಿ ಕೊಟ್ಟಿದ್ದು ಮೂಟೆಗಟ್ಟಲೆ ತಾನೆ
ಹಾಡಿತ್ತು ನಿಮ್ಮೆದೆಯ ಕೋಗಿಲೆ ಮುಕ್ತವಾಗಿ
ಒಂದೊಂದು ದನಿಯೂ
ಮಲೆನಾಡ ಬಿರುಮಳೆಯ ಭೂಮಿಗೀತ

೩

ಗಾಂಧಿ ಬಜಾರಿನ ಹೋಟೆಲಿನ ಪಕ್ಕದ ವಸತಿಯಲ್ಲಿ
ವಿಶ್ರಾಂತಿ ಪಡೆದ ಕಾಲದಿಂದಲೂ ಇದ್ದ ಗೆಳೆಯರು
ಅವರೇ ನಾಲ್ಕು ಮಂದಿ
ಪಾಚು ರಾಮಸ್ವಾಮಿ ಗೋಪಿನಾ? ಬಾಕಿನಾ?
ಬೈಟು ಕಾಫಿಯಂತೆ ಎಲ್ಲರಿಗೂ ಹಂಚಿ
ರವಷ್ಟು ಕುಡಿದ ಮೇಲೆ ಕಾಡು ಹರಟೆ
ಕವಿ ಕಾವ್ಯ ಖನಿಜ ಇತ್ಯಾದಿ
ಇದ್ದೇ ಇತ್ತು ಜೊತೆಗೆ ಕರದಿ ಮೆಣಸಿನ ಬಜ್ಜಿ!
ಗಾಂಧಿ ಬಜಾರಿನ ಮರಗಳಲ್ಲಿ ಬಂದಿಳಿವ
ಹಕ್ಕಿಗಳಿಗೆ ಗೊತ್ತಿಲ್ಲವೆ ಮಾಸ್ತಿ?
ಹಾಗೆಯೆ ಗೊತ್ತಿದ್ದಿರಿ ನೀವೂ!
ನಿಮ್ಮ ಆಗಮನಕ್ಕೆ ಮರಮರದಲ್ಲಿ ಚಿಲಿಪಿಲಿ ಗಮ್ಮತ್ತು
ಪಕ್ಷಪಾತವಿಲ್ಲದೆ ಬೀಳುತ್ತಿದ್ದ ಪಕ್ಷಿ ಪಾತ
ತಪ್ಪಿಸಿಕೊಳ್ಳದಿದ್ದರೆ ಮಾತ್ರ ಆಪತ್ತು!

೪

ಈಗ ಗಾಂಧಿ ಬಜಾರಿನಲ್ಲಿ ಸಂಜೆ ಇಳಿಯುತ್ತಿದೆ
ಹಳೆಯವು ಬಿದ್ದು ಹೊಸ ಕಟ್ಟಡ ತಲೆ ಎತ್ತಿವೆ
ನಿಮ್ಮ ವಿಶ್ರಾಂತಿಯ ವಸತಿ ಬಣ್ಣ ಬದಲಾಯಿಸಿದೆ
ಆದರೂ ಹೂವು ಹಣ್ಣು ತರಕಾರಿ ವ್ಯಾಪಾರಿಗಳು
ಅಲ್ಲಲ್ಲೇ ಗಾಡಿ ಇಟ್ಟು ಪಾದಚಾರಿಗಳ ಕರೆಯುತ್ತಾರೆ
ಸರ್ಕಲ್ ಲಂಚ್‌ಹೋಂನ ಹೊಳ್ಳರು ನಿಮ್ಮನ್ನು ಬಲ್ಲರು
ಕೇಳುತ್ತಾ ಇರುತ್ತಾರೆ ನಿಮ್ಮ ಯೋಗಕ್ಷೇಮ
ಇದೇ ಸೂಟಿನಲ್ಲಿ ಇದೇ ಹಾಸದಲ್ಲಿ ಅದೇ ಕನಸಿನಲ್ಲಿ
ಬನ್ನಿ ಗಾಂಧಿ ಬಜಾರಿಗೆ
ನಿಮಗಾಗಿ ಕಾಯುತ್ತಿದ್ದಾರೆ
'ನಿಮ್ಮೊಡನಿದ್ದೂ ನಿಮ್ಮಂತಾಗದವರು'

☆ ☆ ☆

ಶುಭ ಕೋರುವೆ ನಿಸಾರರಿಗೆ

• ಎಸ್. ಸೋಮನಾಥ್

ದೂರದ ಮರಳುಗಾಡಿನಲ್ಲೆಲ್ಲೊ ಬೆಳಗಿರುವ ರತ್ನ ರಾಶಿ
ಈ ನಾಡ ಗಿರಿವನಗಳಲ್ಲುದಿಸಿ ಮೆರೆದಿರುವ ಸಿರಿ ಸ್ವರ್ಣ ದೀಪ್ತಿ
ಎರಡನೂ ಮೇಳವಿಸಿ ಸೃಜಿಸಿದನುಪಮ ಸೂಕ್ತಿ
ಹೊಸ ಭಾವ ಚಿಂತನೆಯ ಅಪ್ರತಿಮ ಲಾವಣ್ಯ
ಕನ್ನಡದ ವಾಙ್ಮಯದ ಭಂಡಾರದಲ್ಲೆ ಅನನ್ಯ.
ಆ ವಾಗ್ವೈಖರಿಯ ಮಹದೈಸಿರಿಯ ಮುಂದೆ
ಮಣಿದು ಕೈ ಮುಗಿದು ನಮೋ ಎಂದೆ.

ಆರ್ಷ ಸತ್ವಸಾರದ ಅಮೃತಗಾನಗಳ ಅನುಭಾವಿ
ನೀವಿತ್ತಿರುವ ನಾದಮಯ ಮಂತ್ರಸದೃಶ ಸ್ತವನ,
ನಾಡದೇವಿಗೆ ನಲ್ಮೆಯಲಿ ಎತ್ತಿರುವ ನಿತ್ಯೋತ್ಸವದ ಆರತಿಯ
ಜೊತೆಗೆ ಪರಿಮಳದಮಿತ ಭಾವಪೂರಿತ ನಮನ,
ಹೆಜ್ಜೇನಿನನುಪಮ ಮಧುರತರ ನೈವೇದ್ಯ
ಸವಿದವರಿಗಷ್ಟೆ ಸುವೇದ್ಯ.

'ನುಡಿಗೊಂದು ಸಿಂಗರದ ಇಳೆ ಎದ್ದು ನಿಲುತಿರಲು'
ಎಂದ ಕವಿ ಗುರು ನುಡಿಯನಾದರಿಸಿ ಗೌರವದಿ
ಅವರುಕ್ತಿಯನು ಕಾವ್ಯದಲಿ ಸಾಕಾರಿಸಿದ ಪ್ರಾಜ್ಞಮತಿ
ಕವಿವರ್ಯ, ನಿಮಗೆಲ್ಲಿ ವಿಭಾವನೆಯ ಇತಿಮಿತಿ?
ನವ್ಯ ಕ್ಷೇತ್ರದೊಳೆಂತೊ ಅಂತೆ ಗೀತೆಯ ಹೊಲದಿ
ನೀವು ಕೃಷಿಗೈದಿರುವ ಸಂಗೀತ ಕೃತಿ ರಾಶಿ
ಗಾಯಕರ ಪಾಲಿಗೆ ಸರ್ವದಾ ಅವಿನಾಶಿ.

ಆ ಭಾವ-ಆಲೋಚನೆಯ ನವೋಲ್ಲಾಸದ ಸೊಂಪು
ಆ ನುಡಿಯ ಜಾಣ್ಮೆ, ಆ ರೂಪಕಗಳ ನರುಗಂಪು


ದಶದಿಶೆಗಳು ಪಸರಿಸುತ ನಲಿಸಿಹುದು ನಾಡ
ಬೆಂಗಾಡ ನಂದನಿಸುವಂತೆ ಜಡಿಮಳೆ ಮೋಡ.

ಕನ್ನಡದ ಕಂಕಣವ ಕಟ್ಟಿ ಮುನ್ನಡೆದಿರುವ
ಅಪ್ರತಿಮ ವೀರ, ನಿಮಗೆ ಮುಗಿವೆನು ಕರವ,
ತಾಯಿ ಭುವನೇಶ್ವರಿಯ ಭಕ್ತಿಯಲಿ ಬೇಡುತ್ತ
ನಿಮಗೆ ಕರುಣಿಸಲೆಂದು ದೀರ್ಘಾಯುರಾರೋಗ್ಯ,
ಜೊತೆಗಧಿಕ ನಾಡು-ನುಡಿ ಸೇವೆಗೈಯ್ಯುವ ವರವ.

☆ ☆ ☆

ಭಾಗ-೨

ಅನುಬಂಧ



ಕೆ. ಎಸ್. ನಿಸಾರ್ ಅಹಮದ್

ಪ್ರವರ–ವಿವರ

ಕೌಟುಂಬಿಕ :

ಹುಟ್ಟು	:	೦೫.೦೨.೧೯೩೬, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ
ವಯಸ್ಸು	:	೭೧ ವರ್ಷ
ಹೆತ್ತವರು	:	ಕೆ. ಎಸ್. ಹೈದರ್—ಹಮೀದಾ ಬೇಗಂ
ಒಡಹುಟ್ಟಿದವರು	:	ನಾಲ್ಕು ಜನ ತಮ್ಮಂದಿರು, ಐದು ಜನ ತಂಗಿಯರು (ಒಬ್ಬ ತಮ್ಮ ಮತ್ತು ಒಬ್ಬಳು ತಂಗಿ ತೀರಿಕೊಂಡಿದ್ದಾರೆ)
ಮದುವೆ	:	೧೭.೦೪.೧೯೬೬
ಮಡದಿ	:	ಷಹನವಾಜ್ ಬೇಗಂ (ನಿವೃತ್ತ ಮುಖ್ಯೋಪಾಧ್ಯಾಯಿನಿ)
ಕರುಳಿನ ಕುಡಿಗಳು	:	ನವೀದ್ ನಿಸಾರ್, ಫರೀದ್ ನಿಸಾರ್ (ಗಂಡು ಮಕ್ಕಳು); ತನ್ವೀರ್ ಫಾತಿಮಾ, ಫರ್ಹೀನ್ ಫಾತಿಮಾ (ಹೆಣ್ಣು ಮಕ್ಕಳು)
ಮೊಮ್ಮಕ್ಕಳು	:	ಆಖಿಬ್ ನಿಸಾರ್, ಯಾಸೀನ್ ಅಜ್‌ಹರ್
ಜನ್ಮದಾತರ ವಿಯೋಗ	:	ತಂದೆ : ೨೬.೦೧.೧೯೮೦; ತಾಯಿ: ೧೯.೦೧.೧೯೯೦

* * *

ಓದು :

ಪ್ರಾಥಮಿಕ	:	ಬೆಂಗಳೂರಿನ ಮಾವಳ್ಳಿ ಸರ್ಕಾರಿ ಪ್ರೈಮರಿ ಸ್ಕೂಲ್ (೧೯೪೦-೧೯೪೪)
ಮಾಧ್ಯಮಿಕ	:	ಬೆಂಗಳೂರಿನ ವಿಶ್ವೇಶ್ವರಪುರ ಸರ್ಕಾರಿ ಮಿಡ್ಲ್ ಸ್ಕೂಲ್ (೧೯೪೫-೧೯೪೯)
ಪ್ರೌಢ	:	ಹೊಸಕೋಟೆಯ ಮುನಿಸಿಪಲ್ ಹೈಸ್ಕೂಲ್ (೧೯೪೯-೧೯೫೨)

ಕಾಲೇಜು	:	ಬೆಂಗಳೂರಿನ ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜ್ (೧೯೫೨-೧೯೫೪) ಬೆಂಗಳೂರಿನ ಸೆಂಟ್ರಲ್ ಕಾಲೇಜ್ (೧೯೫೪-೧೯೫೯)
ಮುಖ್ಯ ವಿಷಯ	:	ಭೂವಿಜ್ಞಾನ
ಸ್ನಾತಕೋತ್ತರ ಪದವಿ	:	ಬಿ.ಎಸ್ಸಿ. (ಆನರ್ಸ್) : ೧೯೫೭ ಎಂ.ಎಸ್ಸಿ : ೧೯೫೯

* * *

ಹುದ್ದೆ :

ಮೊದಲನೆಯದು	:	ಮೈಸೂರು ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಸಹಾಯಕ ಭೂವಿಜ್ಞಾನಿಯಾಗಿ ನೇಮಕ—ಗುಲ್ಬರ್ಗದಲ್ಲಿ (೧೯೫೮)
ಆಮೇಲಿನದು	:	ಮೈಸೂರು ವಿ.ವಿ.ಯಲ್ಲಿ ಭೂವಿಜ್ಞಾನದ ಉಪನ್ಯಾಸಕ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ (೧೯೫೯)
ಸೇವೆ ಸಲ್ಲಿಸಿದ ಸ್ಥಳಗಳು	:	ಬೆಂಗಳೂರಿನ ಸೆಂಟ್ರಲ್ ಕಾಲೇಜ್ (೧೯೫೯-೧೯೬೦) ಚಿತ್ರದುರ್ಗದ ಪ್ರಥಮ ದರ್ಜೆ ಸರ್ಕಾರಿ ಕಲಾ-ವಿಜ್ಞಾನ ಕಾಲೇಜ್ (೧೯೬೦-೧೯೬೨) ಬೆಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಲಾ-ವಿಜ್ಞಾನ ಕಾಲೇಜ್ (೧೯೬೨-೧೯೬೭) ಶಿವಮೊಗ್ಗೆಯ ಪ್ರಥಮ ದರ್ಜೆ ಸಹ್ಯಾದ್ರಿ ಕಾಲೇಜ್ (೧೯೬೭-೧೯೭೨) ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜ್ (೧೯೭೨-೧೯೭೫) ಶಿವಮೊಗ್ಗೆಯ ಪ್ರಥಮ ದರ್ಜೆ ಸಹ್ಯಾದ್ರಿ ಕಾಲೇಜ್ (೧೯೭೫-೧೯೭೮) ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜ್ (೧೯೭೮-೧೯೯೪) (ಒಟ್ಟು ೩೪ ವರ್ಷಗಳ ಅಧ್ಯಾಪನ ಸೇವೆ)

ನಿವೃತ್ತಿ : ಪ್ರಾಧ್ಯಾಪಕರಾಗಿ ೧೯೯೪ (ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಿಂದ)

ಇತರೆ ಕರ್ತವ್ಯಗಳು : ಎನ್.ಸಿ.ಸಿ. ೧೯೬೩-೧೯೭೦ (ಇನ್‌ಫೆಂಟ್ರಿ) ಅಧಿಕಾರಿ (ಲೆಫ್ಟಿನೆಂಟ್) ೧೯೮೪-೧೯೮೭ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷ:

* * *

ಮೈಲಿಗಲ್ಲುಗಳು :

- ಮೊದಲನೆಯ ಪದ್ಯ ರಚನೆ: 'ಜಲಪಾತ' (ಹೈಸ್ಕೂಲಿನಲ್ಲಿ: ೧೯೪೯)
- ಮೊದಲನೆಯ ಕವನ ಸಂಗ್ರಹ ಪ್ರಕಟನೆ 'ಮನಸು ಗಾಂಧಿ ಬಜಾರು': ೧೯೬೦
- 'ನಿತ್ಯೋತ್ಸವ' ಭಾವಗೀತೆಗಳ ಪ್ರಕಟನೆ: ೧೯೭೬
- 'ಆಯ್ದ ಕವಿತೆಗಳು': ೧೯೭೪
- 'ಸಮಗ್ರ ಕವಿತೆಗಳು': ೧೯೯೧
- 'ಪ್ರಾತಿನಿಧಿಕ ಕವಿತೆಗಳು': ೨೦೦೨
- ಕನ್ನಡದ ಮೊಟ್ಟಮೊದಲನೆಯ ಸುಗಮ ಸಂಗೀತ ದನಿ ಸುರುಳಿ 'ನಿತ್ಯೋತ್ಸವ'ದ ಬಿಡುಗಡೆ (೧೯೭೮)
- ವಿದೇಶದಲ್ಲಿ ಬಿಡುಗಡೆಯಾದ ಮೊಟ್ಟ ಮೊದಲನೆಯ ಕನ್ನಡದ ಕ್ಯಾಸೆಟ್‌ಗಳು: 'ಸುಮಧುರ' ಮತ್ತು 'ನವೋಲ್ಲಾಸ' (೧೯೯೪) ಕೊಲ್ಲಿ ರಾಷ್ಟ್ರದ ದುಬೈ ಮತ್ತು ಅಬುದಾಭಿ ಪಟ್ಟಣಗಳ ಕರ್ನಾಟಕ ಸಂಘದಲ್ಲಿ.
- ಕನ್ನಡದ ಮೊದಲನೆಯ ಜೋಡಿ ಕ್ಯಾಸೆಟ್: 'ನವೋಲ್ಲಾಸ' (೧೯೯೪)
- ಷೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' (೧೯೭೩) ಮತ್ತು 'ಒಥೆಲೊ' (೧೯೭೫) ನಾಟಕಾನುವಾದಗಳ ಮತ್ತು ಅತ್ಯಂತ ಯಶಸ್ವಿಯಾದ ಮೊತ್ತ ಮೊದಲನೆಯ ಪಕ್ಕಾ ಕನ್ನಡ ರಂಗ ಪ್ರದರ್ಶನ (ಬೆಂಗಳೂರಿನ 'ನಟರಂಗ'ದಿಂದ)

* * *

ಹೊಣೆಗಾರಿಕೆ :

- ವಿದ್ಯಾರ್ಥಿ ದೆಸೆಯಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಪ್ರತಿಷ್ಠಿತ ಕರ್ನಾಟಕ ಸಂಘದ ಕಾರ್ಯದರ್ಶಿ (೧೯೫೪-೧೯೫೫)
- ರಾಜ್ಯ ಸಾಹಿತ್ಯ ಅಕೆಡೆಮಿಯ ಸದಸ್ಯ (೧೯೭೩-೧೯೭೫)
- ಕೇಂದ್ರ ಚಲನಚಿತ್ರ ಸೆನ್ಸಾರ್ ಮಂಡಲಿಯ ಸದಸ್ಯ
- ಆಕಾಶವಾಣಿ ಕಾರ್ಯಕ್ರಮ ಸುಧಾರಣೆಯ ಸದಸ್ಯ
- ದೂರದರ್ಶನ ಕಾರ್ಯಕ್ರಮ ಸಲಹಾ ಸಮಿತಿಯ ಸದಸ್ಯ
- ಕರ್ನಾಟಕ ಸರ್ಕಾರದ ಉನ್ನತ ಮಟ್ಟದ 'ಕನ್ನಡ ಕಾವಲು ಸಮಿತಿ'ಯ ಸದಸ್ಯ
- ಕರ್ನಾಟಕ ಸರ್ಕಾರದ ಉನ್ನತ ಪುರಸ್ಕಾರ 'ಪಂಪ ಪ್ರಶಸ್ತಿ'ಯ ಆಯ್ಕೆ ಸಮಿತಿಯ ಸದಸ್ಯ
- ಕರ್ನಾಟಕ ಸರ್ಕಾರದ ಗ್ರಂಥಾಲಯ ಇಲಾಖೆಯ ಪುಸ್ತಕಗಳ ಸಗಟು ಖರೀದಿಯ ಸಮಿತಿಯ ಸದಸ್ಯ.
- ಕರ್ನಾಟಕ ಸರ್ಕಾರದ ಕನ್ನಡ-ಸಂಸ್ಕೃತಿ ನಿರ್ದೇಶನಾಲಯದ 'ಜನಪ್ರಿಯ ಪುಸ್ತಕ ಮಾಲೆ'ಯ ಸಲಹಾ ಸಮಿತಿಯ ಸದಸ್ಯ
- ಕರ್ನಾಟಕ ಸರ್ಕಾರದ 'ಕಾನೂನು ಶಬ್ದಕೋಶ' ಸಂಪಾದಕ ಮಂಡಲಿಯ ಸದಸ್ಯ
- ಮೈಸೂರು ವಿ.ವಿ.ಯ ವತಿಯಿಂದ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆ ಏರ್ಪಡಿಸಿದ್ದ 'ವಿಜ್ಞಾನ ಬರಹಗಾರರ ಕಮ್ಮಟ'ದ ನಿರ್ದೇಶಕ
- ಮೈಸೂರು ವಿ.ವಿ.ಯ ಪ್ರಸಾರಾಂಗದ ಪ್ರಕಟನೆ 'ರತ್ನ ಸಂಪುಟ' ಕಾವ್ಯ ಸಂಗ್ರಹದ ಹೆಬ್ಬೊತ್ತಗೆಯ ಸಂಪಾದಕ ಮಂಡಲಿಯ ಸದಸ್ಯ
- ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಗೆ ಒಳಪಟ್ಟ 'ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್' (ಸಿಐಐಎಲ್)ನ ಸಲಹಾ ಸಮಿತಿಗೆ ಕರ್ನಾಟಕದ ಸದಸ್ಯ ಪ್ರತಿನಿಧಿ.
- ಕರ್ನಾಟಕ ಸರ್ಕಾರದ ರಾಜ್ಯಮಟ್ಟದ 'ರಾಷ್ಟ್ರಕವಿ ಕುವೆಂಪು ಜನ್ಮ ಶತಮಾನೋತ್ಸವ ಸಮಿತಿ'ಯ ಸದಸ್ಯ

* * *

ಬರಹದ ಬದುಕಿಗೆ ಬಳುವಳಿ :

- ೧೯೬೭ ಮತ್ತು ೧೯೮೫ರಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನವ ದೆಹಲಿಯಲ್ಲಿ ನಡೆದ ಅಖಿಲ ಭಾರತ ಆಕಾಶವಾಣಿಯ ಕವಿ ಸಮ್ಮೇಳನದಲ್ಲಿ ಕನ್ನಡದ ಪ್ರತಿನಿಧಿ
- ೧೯೭೭ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ
- ೧೯೮೧ರಲ್ಲಿ ಮುಂಬೈ ಕರ್ನಾಟಕ ಸಂಘ ನಡೆಸಿದ ಅಂತರ್ಭಾಷಾ ಕವಿ ಸಮ್ಮೇಳನದ ಅಧ್ಯಕ್ಷ
- ೧೯೯೫ರಲ್ಲಿ ವಿಜಯಪುರದಲ್ಲಿ ಜರುಗಿದ ಕಸಾಪದ ೪ನೆಯ ಬೆಂಗಳೂರು ಜಿಲ್ಲಾ ಗ್ರಾಮಾಂತರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ
- ೨೦೦೨ರಲ್ಲಿ ಅಮೇರಿಕದ ಡೆಟ್ರಾಯಿಟ್ ಪಟ್ಟಣದಲ್ಲಿ 'ಅಕ್ಕ' (AKKA)—ಅಮೇರಿಕ ಕನ್ನಡ ಕೂಟಗಳ ಆಗರ—ನಡೆಸಿದ ವಿಶ್ವ ಕನ್ನಡ ಸಮ್ಮೇಳನದ ಮುಖ್ಯ ಅತಿಥಿ
- ಬೆಂಗಳೂರು ವಿ.ವಿ.ಯ ಒಬ್ಬರು, ಗುಲ್ಬರ್ಗ ವಿ.ವಿ.ಯ ಒಬ್ಬರು ನಿಸಾರರ ಬದುಕು ಬರಹಗಳ ಮೇಲೆ ಪಿಎಚ್.ಡಿ., ಮಹಾ ಪ್ರಬಂಧವನ್ನು ಬರೆದು ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ.
- ೨೦೦೬ರ ಡಿಸೆಂಬರ್ ಮೂರನೆಯ ವಾರದಲ್ಲಿ ಶಿವಮೊಗ್ಗೆಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಪರಿಷತ್ತಿನ ೭೩ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

* * *

ಮೆಚ್ಚು, ಮರ್ಯಾದೆ :

- ೧೯೮೧ ಸಾಲಿನ ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ'
- ೧೯೯೧ರಲ್ಲಿ ಕರ್ನಾಟಕ ಸಾಹಿತ್ಯ ಅಕೆಡೆಮಿಯ 'ಗೌರವ ಪ್ರಶಸ್ತಿ'
- ೧೯೯೩ರಲ್ಲಿ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಪ್ರಶಸ್ತಿ
- ೧೯೯೪ರಲ್ಲಿ ಕರ್ನಾಟಕ ನಾಟಕ ಅಕೆಡೆಮಿಯ ಫೆಲೋಷಿಪ್
- ೧೯೯೪ರ ಬೆಂಗಳೂರು ಮಹಾನಗರ ಪಾಲಿಕೆಯ 'ಕೆಂಪೇಗೌಡ ಪ್ರಶಸ್ತಿ'

- ೧೯೯೬ರಲ್ಲಿ ರಾಷ್ಟ್ರಕವಿ ಕುವೆಂಪು ಹೆಸರಿನಲ್ಲಿ ನೀಡುವ. ಮೈಸೂರಿನ ಡಾ. ದೇಜಗೌ ಟ್ರಸ್ಟ್‌ನ 'ವಿಶ್ವ ಮಾನವ ಪ್ರಶಸ್ತಿ'
- ೨೦೦೧ರ ಸಾಲಿನ 'ಡಾ. ಅನಕೃ-ನಿರ್ಮಾಣ್ ಪ್ರಶಸ್ತಿ'
- ೨೦೦೨ರಲ್ಲಿ ವಿಶ್ವವಿಖ್ಯಾತ ಭೌತವಿಜ್ಞಾನಿ ಡಾ. ತಾತಾಚಾರಿ ಅವರ ಹೆಸರಿನಲ್ಲಿ ಮೈಸೂರಿನ 'ಮಾಧುರಿ ಸಂಸ್ಥೆ' ನೀಡುವ ಸಾಹಿತ್ಯ ಪುರಸ್ಕಾರ
- ೨೦೦೩ರಲ್ಲಿ ಮಂಗಳೂರಿನ 'ಸಂದೇಶ ಸಾಹಿತ್ಯ ಪ್ರಶಸ್ತಿ'
- ೨೦೦೩ರ ಸಾಲಿನ ಹಂಪಿಯ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ ಪ್ರಶಸ್ತಿ'
- ೨೦೦೫ರಲ್ಲಿ ಧಾರವಾಡದ ಕರ್ನಾಟಕ ವಿ.ವಿ.ಯ ಗೌರವ ಡಾಕ್ಟರೇಟ್ ಪುರಸ್ಕಾರ
- ೨೦೦೬ರ ಪ್ರತಿಷ್ಠಿತ 'ಮಾಸ್ತಿ ಪ್ರಶಸ್ತಿ'
- ಕರ್ನಾಟಕ ಸರ್ಕಾರ ನೀಡುವ ೨೦೦೬ರ ಸಾಲಿನ ಡಿ. ದೇವರಾಜ ಅರಸು ಪ್ರಶಸ್ತಿ
- ಸಂಗೀತ ಗಂಗಾ ಸಂಸ್ಥೆಯ 'ಸಹ್ಯಾದ್ರಿ ಕವಿವರ' ಪುರಸ್ಕಾರ (೨೦೦೬)
- ಬೆಂಗಳೂರು ಮಹಾನಗರ ಪಾಲಿಕೆಯ ನಾಡಪ್ರಭು ಕೆಂಪೇಗೌಡರ ಸೊಸೆ ಲಕ್ಷ್ಮೀದೇವಿ ಪ್ರಶಸ್ತಿ (೨೦೦೬)

[ಇವಲ್ಲದೆ ವಿವಿಧ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ ಸಂಸ್ಥೆಗಳಿಂದ 'ಕರ್ನಾಟಕ ಜ್ಯೋತಿ', 'ಆಚಾರ್ಯ ಬಿ.ಎಂ.ಶ್ರೀ. ಪ್ರಶಸ್ತಿ', 'ಚುಂಚ ಪ್ರಶಸ್ತಿ', 'ಕನ್ನಡ ಕಾವ್ಯಶಿರೋರತ್ನ', 'ಕನ್ನಡ ಕಂಪು', 'ಆದರ್ಶ ಸುಗಮ ಸಂಗೀತ ರತ್ನ', 'ಸುಗಮ ಸಂಗೀತದ ಹರಿಕಾರ', 'ಸಾರ್ಥಕ ಸಾಹಿತ್ಯ ಸಾಧನಶೀಲ', 'ಉತ್ಕೃಷ್ಟ ಸಾಹಿತ್ಯ ಸೇವಾಧುರಂಧರ', 'ನಿತ್ಯ ವಸಂತ', 'ಛತ್ರಪತಿ ಶಿವಾಜಿ ರಾಜ್ಯ ಪ್ರಶಸ್ತಿ', 'ಆರ್ಯಭಟ ಪ್ರಶಸ್ತಿ'—ಇತ್ಯಾದಿಗಳು ನಿಸಾರರಿಗೆ ದೊರಕಿರುವುದಲ್ಲದೆ, ದುಬೈ, ಅಬುದಾಭಿಯ ಕರ್ನಾಟಕ ಸಂಘಗಳು, ಅಮೇರಿಕದ ವಿವಿಧ ರಾಜ್ಯಗಳ ಹಲವಾರು ಕನ್ನಡ ಕೂಟಗಳು, ಬೆಂಗಳೂರಿನ ಅನೇಕ ಕಾರ್ಖಾನೆಗಳು ಮತ್ತು ಸಂಘ ಸಂಸ್ಥೆಗಳು ಹಾಗೂ ಕರ್ನಾಟಕದ ಅನೇಕ ನಗರಗಳ ಕನ್ನಡ ಸಂಘಟನೆಗಳು ಶ್ರೀಯುತರನ್ನು ಗೌರವಿಸಿವೆ.]

* * *

ಹೆಮ್ಮೆಯ ಹೆಗ್ಗಳಿಕೆ :

- ೧೯೭೭ರಲ್ಲಿ 'ಹಕ್ಕಿಗಳು' ಪುಸ್ತಕಕ್ಕೆ ದೆಹಲಿಯ ಎನ್.ಸಿ.ಇ.ಆರ್.ಟಿ. (NCERT) ರಾಷ್ಟ್ರೀಯ ಬಹುಮಾನ
- ಅದೇ ವರ್ಷ 'ಹಕ್ಕಿಗಳು' ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಪ್ರಶಸ್ತಿ
- ೧೯೮೧ರಲ್ಲಿ 'ಹೆಜ್ಜೆ ಗುರುತು' ಕೃತಿಗೆ ಸೋವಿಯಟ್ ಲ್ಯಾಂಡ್-ನೆಹರು ಅಂತರ್ರಾಷ್ಟ್ರೀಯ ಬಹುಮಾನ
- ೧೯೮೧ರಲ್ಲಿ 'ಇದು ಬರಿ ಬೆಡಗಲ್ಲೋ ಅಣ್ಣ' ಗ್ರಂಥಕ್ಕೆ ವಿಮರ್ಶೆಯ ಪ್ರಕಾರದಲ್ಲಿ ಕರ್ನಾಟಕ ಸಾಹಿತ್ಯ ಅಕೆಡೆಮಿಯಿಂದ ಬಹುಮಾನ
- ೧೯೮೨ರಲ್ಲಿ 'ಅನಾಮಿಕ ಆಂಗ್ಲರು' ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಪುರಸ್ಕಾರ
- ೧೯೯೧ರಲ್ಲಿ 'ಮನದೊಂದಿಗೆ ಮಾತುಕತೆ' ಗದ್ಯ ಸಾಹಿತ್ಯ ಕೃತಿಗೆ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಸೃಜನೇತರ ವಿಭಾಗದ ಪುಸ್ತಕಗಳಲ್ಲೇ ಅತ್ಯುತ್ಕೃಷ್ಟವೆಂಬ ಬಹುಮಾನ
- ೧೯೯೨ರಲ್ಲಿ 'ಹಿರಿಯರು ಹರಸಿದ ಹೆದ್ದಾರಿ' ವೈಚಾರಿಕ ಗದ್ಯ ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಅಕೆಡೆಮಿಯ ಬಹುಮಾನ.

* * *

ಲಿಖಾವಟ್ಟು ಮತ್ತು ಕ್ಯಾಸೆಟ್ಟು :

ಒಟ್ಟು :	(i)	✦ ಕವನ ಸಂಗ್ರಹಗಳು	:	೧೨
		✦ ಗದ್ಯ ಬರಹಗಳು	:	೫ [ವೈಚಾರಿಕ, ವಿಮರ್ಶಾತ್ಮಕ]
		✦ ತರ್ಜುಮೆ	:	೪
		✦ ಮಕ್ಕಳ ಸಾಹಿತ್ಯ	:	೫
		✦ ಸಂಪಾದನೆ	:	೧೨
	(ii)	✦ ದನಿ ಸುರುಳಿ	:	೮
		✦ ಸಾಂದ್ರಿಕೆ (ಸಿಡಿ)	:	೫

* * *

ತಲೆ ಬರಹಗಳ ತಪಶೀಲು :

(ಲಿಖಾವಟ್ಟು)

೧. ಕವನ ಸಂಗ್ರಹ :

೧.	ಮನಸು ಗಾಂಧಿ ಬಜಾರು	೧೯೬೦	
೨.	ನೆನೆದವರ ಮನದಲ್ಲಿ	೧೯೬೪	
೩.	ಸುಮುಹೂರ್ತ	೧೯೬೭	
೪.	ಸಂಜೆ ಐದರ ಮಳೆ	೧೯೭೦	ನಾಲ್ಕನೆಯ ಆವೃತ್ತಿ
೫.	ನಾನೆಂಬ ಪರಕೀಯ	೧೯೭೨	
೬.	ಆಯ್ದ ಕವಿತೆಗಳು	೧೯೭೪	ಐದನೆಯ ಆವೃತ್ತಿ
೭.	ನಿತ್ಯೋತ್ಸವ	೧೯೭೬	ಹದಿನಾಲ್ಕನೆಯ ಆವೃತ್ತಿ
೮.	ಸ್ವಯಂಸೇವೆಯ ಗಿಳಿಗಳು	೧೯೭೭	
೯.	ಅನಾಮಿಕ ಆಂಗ್ಲರು	೧೯೮೨	
೧೦.	ಬಹಿರಂತರ	೧೯೯೦	
೧೧.	ಸಮಗ್ರ ಕವಿತೆಗಳು	೧೯೯೧	
೧೨.	ನವೋಲ್ಲಾಸ	೧೯೯೪	
೧೩.	ಆಕಾಶಕ್ಕೆ ಸರಹದ್ದುಗಳಿಲ್ಲ	೧೯೯೮	
೧೪.	ಅರವತ್ತೈದರ ಐಸಿರಿ	೨೦೦೧	
೧೫.	ಸಮಗ್ರ ಭಾವಗೀತೆಗಳು	೨೦೦೧	
೧೬.	ಪ್ರಾತಿನಿಧಿಕ ಕವನಗಳು	೨೦೦೨	

೨. ವಿಮರ್ಶೆ ಮತ್ತು ವಿಚಾರ ಸಾಹಿತ್ಯ :

೧.	ಇದು ಬರಿ ಬೆಡಗಲ್ಲೋ ಅಣ್ಣ	೧೯೮೦
೨.	ಮನದೊಂದಿಗೆ ಮಾತುಕತೆ	೧೯೯೧
೩.	ಹಿರಿಯರು ಹರಸಿದ ಹೆದ್ದಾರಿ	೧೯೯೨
೪.	ಅಚ್ಚುಮೆಚ್ಚು	೧೯೯೫
೫.	ವಿಚಾರ ವಿಹಾರ	೧೯೯೮
೬.	ಸಮಗ್ರ ಗದ್ಯ ಬರಹಗಳು	೨೦೦೨

೭.	ಅಚ್ಚುಮೆಚ್ಚು (ಆಯ್ದ ಲೇಖನಗಳು)	೨೦೦೪	
೮.	ಸ-ಸರಸೋಕ್ತಿಗಳ ಸಂಗಾತಿ	೨೦೦೪	

೩. ಅನುವಾದ

೧.	ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್	೧೯೭೪	ನಾಲ್ಕನೆಯ ಆವೃತ್ತಿ
೨.	ಒಥೆಲೊ	೧೯೭೭	ಐದನೆಯ ಆವೃತ್ತಿ
೩.	ಹೆಜ್ಜೆ ಗುರುತು	೧೯೮೧	
೪.	ಬರೀ ಮರ್ಯಾದಸ್ಥರೆ (ಲ್ಯಾಟಿನ್ ಅಮೇರಿಕದ ಸ್ಪ್ಯಾನಿಷ್ ಕವಿ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ಪಾಬ್ಲೊ ನೆರುಡನ ಪರಿಚಯ ಮತ್ತು ೪೩ ಕವಿತೆಗಳ ಅನುವಾದ)	೧೯೮೩	

☆ ☆ ☆

ಲೇಖಕರ ವಿಳಾಸಗಳು

೧. **ಪ್ರೊ. ಜಿ. ವೆಂಕಟಸುಬ್ಬಯ್ಯ**
೫೮, ೩೧ನೆಯ ಕ್ರಾಸ್,
೭ನೆಯ ಬ್ಲಾಕ್, ಜಯನಗರ,
ಬೆಂಗಳೂರು–೫೬೦ ೦೮೨.

೨. **ಡಾ. ದೇ. ಜವರೇಗೌಡ**
‘ಕಲಾನಿಲಯ ಕುಟೀರ’, ಚಂದ್ರಕಲಾ ಆಸ್ಪತ್ರೆ ಆವರಣ,
ಜಯಲಕ್ಷ್ಮೀಪುರ,
ಮೈಸೂರು–೫೭೦ ೦೧೨.

೩. **ಪ್ರೊ. ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್** (ಎಚ್ಚೆಸ್ಕೆ)
೪೧, ೭ನೆಯ ಮುಖ್ಯ ರಸ್ತೆ, ಸರಸ್ವತೀಪುರ,
ಮೈಸೂರು–೫೭೦ ೦೦೯.

೪. **ಶ್ರೀ ವ್ಯಾಸರಾಯ ಬಲ್ಲಾಳ**
೧೦೬೪, ‘ಉತ್ತರಾಯಣ’,
ಕುಮಾರಸ್ವಾಮಿ ಬಡಾವಣೆ ಮೊದಲನೆ ಹಂತ,
ಬೆಂಗಳೂರು–೫೬೦ ೦೭೮.

೫. **ಡಾ. ಪ್ರಭುಶಂಕರ**
೧೦೦೬, ಉದಯರವಿ ರಸ್ತೆ,
‘ಇ’ ಮತ್ತು ‘ಎಫ್’ ಬ್ಲಾಕ್, ಕುವೆಂಪುನಗರ,
ಮೈಸೂರು–೫೭೦ ೦೨೩.

೬. **ಡಾ. ಜಿ. ಎಸ್. ಆಮೂರ**
‘ಜಾನಕಿ’, ೧೪/ಎ ಅಡ್ಡರಸ್ತೆ, ನವೋದಯನಗರ,
ಧಾರವಾಡ–೫೮೦ ೦೦೩.

೭. **ಡಾ. ಗಿರಡ್ಡಿ ಗೋವಿಂದರಾಜ**
'ಸರೋಜ', ನವೋದಯನಗರ,
ಧಾರವಾಡ–೫೭೮ ೦೦೩.

೮. **ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ**
೨೦೩, ೭ನೆಯ 'ಎ' ಮುಖ್ಯ ರಸ್ತೆ,
ವಿಜಯನಗರ ೨ನೆಯ ಹಂತ,
ಬೆಂಗಳೂರು–೫೬೦ ೦೪೦.

೯. **ಪ್ರೊ. ಎಂ. ಎಚ್. ಕೃಷ್ಣಯ್ಯ**
೧೮೨, ೭ನೆಯ ಅಡ್ಡರಸ್ತೆ, ೧ನೆಯ 'ಎನ್' ಬ್ಲಾಕ್
ರಾಜಾಜಿನಗರ, ಬೆಂಗಳೂರು–೫೬೦ ೦೧೦.

೧೦. **ಡಾ. ಬಿ. ಎನ್. ಸುಮಿತ್ರಾಬಾಯಿ**
೫೦೯, ೧೬ನೆಯ ಮುಖ್ಯ ರಸ್ತೆ,
ಬನಶಂಕರಿ ಮೊದಲನೆಯ ಹಂತ, ಶ್ರೀನಗರ,
ಬೆಂಗಳೂರು–೫೬೦ ೦೫೦.

೧೧. **ಶ್ರೀ ಜಿ. ಎನ್. ರಂಗನಾಥರಾವ್**
೨೬೬, 'ಸ್ನೇಹ', ೩ನೆಯ ಮುಖ್ಯ ರಸ್ತೆ,
೮ನೆಯ ಬ್ಲಾಕ್, ಕೋರಮಂಗಲ ಬಡಾವಣೆ,
ಬೆಂಗಳೂರು–೫೬೦ ೦೫೯.

೧೨. **ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ**
೨೨೭೩, ೨೨ನೆಯ ಅಡ್ಡ ರಸ್ತೆ,
ಬನಶಂಕರಿ ೨ನೆಯ ಹಂತ,
ಬೆಂಗಳೂರು–೫೬೦ ೦೭೦.

೧೩. **Dr. K. V. Tirumalesh**
501, V Floor, Siddhartha Ashiyana Apartment,
12–12–9, Ravindranagar,
Sitaphal Mandi,
Secunderabad–500 061. [A.P.]

೧೪. **ಡಾ. ವಿಜಯಾ ಸುಬ್ಬರಾಜ್**
೫೧, 'ಹಂಸಿ', ೧ನೆಯ 'ಎ' ಕ್ರಾಸ್,
ಭವಾನಿ ಹೌಸಿಂಗ್ ಬಡಾವಣೆ,
ಅತ್ತಿಮಬ್ಬೆ ರಸ್ತೆ,
೩ನೆಯ ಮುಖ್ಯ ರಸ್ತೆ,
ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦ ೦೭೮.

೧೫. **ಡಾ. ಎಚ್. ಜೆ. ಲಕ್ಕಪ್ಪಗೌಡ**
೧೫೩೬, 'ಹೊನ್ನಾರು',
ಅನಿಕೇತನ ರಸ್ತೆ, 'ಸಿ' ಮತ್ತು 'ಡಿ' ಬ್ಲಾಕ್,
ಕುವೆಂಪುನಗರ,
ಮೈಸೂರು–೫೭೦ ೦೨೩.

೧೬. **ಪ್ರೊ. ಎಂ. ರಾಮಚಂದ್ರ**
'ಅಕ್ಷರ', ತೆಳ್ಳಾರ್ ಕ್ರಾಸ್ ರಸ್ತೆ,
ಕಾರ್ಕಳ–೫೭೪ ೧೦೪.
[ದಕ್ಷಿಣ ಕನ್ನಡ ಜಿಲ್ಲೆ]

೧೭. **ಪ್ರೊ. ಎಸ್. ಜಿ. ಸಿದ್ಧರಾಮಯ್ಯ**
೩, 'ನವಮಿ ಜ್ಯೋತ್ಸ್ನಾ',
ಮಾಡೆಲ್ ಎಲ್.ಐ.ಸಿ. ಕಾಲೋನಿ,
೧ನೆಯ 'ಬಿ' ಅಡ್ಡರಸ್ತೆ,
ಬಸವೇಶ್ವರನಗರ,
ಬೆಂಗಳೂರು–೫೬೦ ೦೭೯.

೧೮. **ಡಾ. ಎಸ್. ವಿ. ಪ್ರಭಾವತಿ**
೩೦೧, ೩ನೆಯ ಮಹಡಿ,
ಪಲ್ಲವ ಟೆರೇಸ್,
ಯಡಿಯೂರು ಕೆರೆಯ ಎದುರು,
ಜಯನಗರ ೬ನೆಯ ಬ್ಲಾಕ್,
ಬೆಂಗಳೂರು–೫೬೦ ೦೮೨.

೧೯. **ಡಾ. ಡಿ. ಕೆ. ರಾಜೇಂದ್ರ**
'ವಂದನ', # ೪೮, ಮಾರುತಿ ದೇವಸ್ಥಾನದ ರಸ್ತೆ,
ಸರಸ್ವತೀಪುರ,
ಮೈಸೂರು–೫೭೦ ೦೦೯.

೨೦. **ಶ್ರೀ ದೇಶ ಕುಲಕರ್ಣಿ**
೧೯೨, ಸಿ.ಎಚ್.ಬಿ.ಎಸ್. ಬಡಾವಣೆ,
ಮಾಗಡಿ ಕಾರ್ಡ್ ರಸ್ತೆ,
ಬೆಂಗಳೂರು–೫೬೦ ೦೪೦.

೨೧. **ಡಾ. ಪಿ. ವಿ. ನಾರಾಯಣ**
೩೦, 'ತಂಗಾಳಿ', ಆರ್.ಬಿ.ಪಿ. ಕಾಲೋನಿ,
ಜಯನಗರ ೩ನೆಯ ಬ್ಲಾಕ್,
ಬೆಂಗಳೂರು–೫೬೦ ೦೧೧.

೨೨. **ಡಾ. ಕೆ. ಆರ್. ಸಂಧ್ಯಾ ರೆಡ್ಡಿ**
೧೦೪೪, 'ಸಮಯ', ೪ನೆಯ ಮುಖ್ಯ ರಸ್ತೆ,
೮ನೆಯ ಅಡ್ಡ ರಸ್ತೆ, ಶ್ರೀನಿವಾಸನಗರ,
ಬೆಂಗಳೂರು–೫೬೦ ೦೫೦.

೨೩. **ಶ್ರೀ ಟಿ. ಆರ್. ಅನಂತರಾಮು**
೫೩೪, 'ಧಾತ್ರಿ',
೭ನೆಯ ಅಡ್ಡ ರಸ್ತೆ
೧೪ನೆಯ ಮುಖ್ಯ ರಸ್ತೆ,
ಕುಮಾರಸ್ವಾಮಿ ಬಡಾವಣೆ, ೧ನೆಯ ಹಂತ,
ಬೆಂಗಳೂರು–೫೬೦ ೦೭೮.

೨೪. **ಡಾ. ಎಲ್. ಹನುಮಂತಯ್ಯ**
೨೦೭–ಎ, ೨ನೆಯ ಬ್ಲಾಕ್
೨ನೆಯ 'ಡಿ' ಅಡ್ಡ ರಸ್ತೆ,
ಬಸವೇಶ್ವರನಗರ,
ಬೆಂಗಳೂರು–೫೬೦ ೦೭೯.

೨೫. **ಡಾ. ನಾ. ದಾಮೋದರ ಶೆಟ್ಟಿ**
'ಪ್ರಸಾಧನ' ಭಾರತಿನಗರ,ಬಿಜೈ
ಮಂಗಳೂರು–೫೭೫ ೦೦೪
ದಕ್ಷಿಣ ಕನ್ನಡ

೨೬. **ಶ್ರೀ ಸ. ಗಿರಿಜಾ ಶಂಕರ**
ಸಂಪಾದಕರು, 'ಜನಮಿತ್ರ' (ದೈನಿಕ),
ಆಂಜನೇಯ ಬೀದಿ,
ವಿಜಯಪುರ ಬಡಾವಣೆ,
ಚಿಕ್ಕಮಗಳೂರು–೫೭೭ ೧೦೧.

೨೭. **ಡಾ. ಕಮಲಾ ಹೆಮ್ಮಿಗೆ**
೫೦, 'ಆಶೀರ್ವಾದ', ಶಿವಗಿರಿ,
ಧಾರವಾಡ–೫೮೦ ೦೦೪.

೨೮. **ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ**
೭೮೮, 'ರನ್ನಿ ಮನೆ',
ಕಲ್ಯಾಣ್ ಹೌಸಿಂಗ್ ಸೊಸೈಟಿ ಬಡಾವಣೆ,
ಭುವನೇಶ್ವರಿನಗರ,
(ಜ್ಞಾನ ಭಾರತಿ ಅಂಚೆ),
ಬೆಂಗಳೂರು–೫೬೦ ೦೫೬.

೨೯. **ಡಾ. ಚಿಂತಾಮಣಿ ಕೊಡ್ಲೆಕೆರೆ**
ಸಿ–೨–೨, ಡಬ್ಲ್ಯು.ಎಂ.ಎಸ್. ಕಾಂಪೌಂಡ್,
೪೭ನೆಯ ಅಡ್ಡ ರಸ್ತೆ, ೯ನೆಯ ಮುಖ್ಯ ರಸ್ತೆ,
ಜಯನಗರ ೫ನೆಯ ಬ್ಲಾಕ್,
ಬೆಂಗಳೂರು–೫೬೦ ೦೪೧.

೩೦. **Dr. H. S. Shivaprakash**
Associate Professor,
School of Arts & Aesthetics,
Jawaharlal Nehru University,
New Delhi–110 667.

೩೧. **ಡಾ. ಎಚ್. ಎಸ್. ಮುರಳೀಧರ**
೯೯೬, 'ಶ್ರೀಪಾದ', ೧೫ನೆಯ ಅಡ್ಡ ರಸ್ತೆ,
ಕುಮಾರಸ್ವಾಮಿ ಬಡಾವಣೆ ೧ನೆಯ ಹಂತ,
ಬೆಂಗಳೂರು–೫೬೦ ೦೭೮.

೩೨. **ಡಾ. ಎಚ್. ಎಲ್. ಪುಷ್ಪ**
೩೭/೨, 'ನಿಸರ್ಗ',
ನಾಗರಭಾವಿ ರಸ್ತೆ, ವಿಜಯನಗರ,
ಬೆಂಗಳೂರು–೫೬೦ ೦೪೦.

೩೩. **ಶ್ರೀ ಬಿ. ಆರ್. ಲಕ್ಷ್ಮಣರಾವ್**
'ಮಾರುತಿ ಸ್ಟುಡಿಯೊ',
ಕೆ. ಆರ್. ಬಡಾವಣೆ,
ಚಿಂತಾಮಣಿ–೫೬೩ ೧೨೫.
ಕೋಲಾರ ಜಿಲ್ಲೆ

೩೪. **ಶ್ರೀಮತಿ ಎಂ. ಆರ್. ಕಮಲ**
೪೦೫, 'ಉಮಾಶಂಕರ',
೧ನೆಯ 'ಎನ್' ಬ್ಲಾಕ್,
೧೯ನೆಯ 'ಜಿ' ಮುಖ್ಯ ರಸ್ತೆ,
ರಾಜಾಜಿನಗರ,
ಬೆಂಗಳೂರು–೫೬೦ ೦೧೦.

೩೫. **ಪ್ರೊ. ಎನ್. ಬಿ. ಚಂದ್ರಮೋಹನ್**
೪೦೬, ಎ–೨,
ಶರಾವತಿ ಬ್ಲಾಕ್,
ರಾಷ್ಟ್ರೀಯ ಕ್ರೀಡಾ ಗ್ರಾಮ,
ಕೋರಮಂಗಲ,
ಬೆಂಗಳೂರು–೫೬೦ ೦೩೭.

೩೬. **Dr. Purushottama Bilimale**
6098/8, D–6,
Vasanth Kunj,
New Delhi–110 070.

೩೭. **ಪ್ರೊ. ಶಿವರಾಮು ಕಾಡನಕುಪ್ಪೆ**
೧೨೫೬, 'ನೇಸರ', ೪ನೆಯ ಅಡ್ಡ ರಸ್ತೆ,
ಪಡುವಣ ರಸ್ತೆ, ಟಿ.ಕೆ. ಲೇಔಟ್
೪ನೆಯ ಹಂತ, ಕುವೆಂಪುನಗರ,
ಮೈಸೂರು–೫೭೦ ೦೨೩.

೩೮. **ಪ್ರೊ. ಮಾಲತಿ ಪಟ್ಟಣಶೆಟ್ಟಿ**
ಫ್ಲಾಟ್ ನಂ. ೩,
ಶ್ರೀ ಗಣೇಶ ಅಪಾರ್ಟ್‌ಮೆಂಟ್ಸ್,
ರಜತಗಿರಿ,
ಧಾರವಾಡ–೫೮೦ ೦೦೪.

೩೯. **ಶ್ರೀ ಆರ್ಯ**
೯ನೆಯ ಅಡ್ಡ ರಸ್ತೆ, ಕಲ್ಯಾಣನಗರ,
ಧಾರವಾಡ–೫೮೦ ೦೦೭.

೪೦. **ಪ್ರೊ. ಸ. ಉಷಾ**
'ಚಿತ್ತಾರ', ಮಾರುತಿನಗರ,
ಅರಸೀಕೆರೆ–೫೭೩ ೧೦೩.
ಹಾಸನ ಜಿಲ್ಲೆ.

೪೧. **ಪ್ರೊ. ಎಂ. ಎಸ್. ರಘುನಾಥ್**
ಎಚ್.ಐ.ಜಿ.–೪೦, ೬ನೆಯ ಮುಖ್ಯ ರಸ್ತೆ,
ಕೆ.ಎಚ್.ಬಿ. ಕಾಲೋನಿ, ೨ನೆಯ ಹಂತ,
ಬಸವೇಶ್ವರನಗರ,
ಬೆಂಗಳೂರು–೫೬೦ ೦೭೯.

೪೨. **ಪ್ರೊ. ಎಚ್. ಪಿ. ರಾಜಶೇಖರ ಶೆಟ್ಟಿ**
ನಿವೃತ್ತ ಕನ್ನಡ ಪ್ರಾಧ್ಯಾಪಕರು,
೧೧೯, ಮೊದಲನೆಯ 'ಎ' ಅಡ್ಡರಸ್ತೆ
೩ನೆಯ ಮುಖ್ಯರಸ್ತೆ,
ದೊಮ್ಮಲೂರು ೨ನೆಯ ಹಂತ,
ಬೆಂಗಳೂರು–೫೬೦ ೦೭೧

೪೩. **ಡಾ. ಶಾಂತಲಕ್ಷ್ಮಿ**
೪೨೨, ೩ನೆಯ ಮುಖ್ಯ ರಸ್ತೆ, ಸದಾಶಿವನಗರ
ಬೆಂಗಳೂರು–೫೬೦ ೦೮೦.

೪೪. **Smt. Nalini Maiaya**
18 W 194, Holly Avenue, Darina,
Illinois–60561 [US].

೪೫. **ಡಾ. ರಹಮತ್ ತರೀಕೆರೆ**
ಕನ್ನಡ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ–೫೮೩ ೨೭೬.
(ಹೊಸಪೇಟೆ)
[ಬಳ್ಳಾರಿ ಜಿಲ್ಲೆ]

೪೬. **ಡಾ. ವಿಜಯ ದಬ್ಬೆ**

೪೭. **ಶ್ರೀಮತಿ ಬಿ. ಎಸ್. ವೆಂಕಟಲಕ್ಷ್ಮಿ**
ಸಿ–೩೦೨, ಪ್ರೈಡ್ ಅಪಾರ್ಟ್‌ಮೆಂಟ್ಸ್,
ಬಿಳೇಕಹಳ್ಳಿ, ಬನ್ನೇರುಘಟ್ಟ ಮುಖ್ಯ ರಸ್ತೆ,
ಬೆಂಗಳೂರು–೫೬೦ ೦೭೬.

೪೮. **ಡಾ. ದೊಡ್ಡರಂಗೇಗೌಡ**
೧೪೦, 'ಶ್ರೀ ಸನ್ನಿಧಿ',
೩ನೆಯ ಮುಖ್ಯ ರಸ್ತೆ,
ಕತ್ತ್ರಗುಪ್ಪೆ (ಪೂರ್ವ), ೪ನೆಯ ಫೇಸ್,
ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦ ೦೮೫.

೪೯. **ಶ್ರೀ ಎಸ್. ದಿವಾಕರ**
೪೭೧, ೨೨ನೆಯ ಅಡ್ಡ ರಸ್ತೆ,
ಬಿಎಸ್‌ಕೆ ೨ನೆಯ ಹಂತ,
ಬೆಂಗಳೂರು–೫೬೦ ೦೭೦.

೫೦. **ಪ್ರೊ. ಚಂದ್ರಶೇಖರ ಪಾಟೀಲ**
'ಸಂಕ್ರಮಣ ಪ್ರಕಾಶನ', ಜ್ಯೋತಿ ಬಡಾವಣೆ,
ಯಲಚೇನಹಳ್ಳಿ,
ಜೆ.ಪಿ. ನಗರ,
ಬೆಂಗಳೂರು–೫೬೦ ೦೭೮.

೫೧. **ಶ್ರೀ ಎಂ. ಎಸ್. ವ್ಯಾಸರಾವ್**
'ಚೈತ್ರ', # ೩೨೬, ೫ನೆಯ ಅಡ್ಡ ರಸ್ತೆ,
೩ನೆಯ ಘಟ್ಟ, ೩ನೆಯ ಹಂತ,
ಕತ್ತರಿಗುಪ್ಪೆ, ಬನಶಂಕರಿ,
ಬೆಂಗಳೂರು–೫೬೦ ೦೭೮.

೫೨. **ಶ್ರೀ ಎಚ್. ಡುಂಡಿರಾಜ್**
ಹಿರಿಯ ವ್ಯವಸ್ಥಾಪಕರು,
ಕಾರ್ಪೊರೇಷನ್ ಬ್ಯಾಂಕ್
(ವಲಯ ಕಛೇರಿ),
ಪೈ ಕಾಂಪ್ಲೆಕ್ಸ್, ನೆಹರುನಗರ,
ಬೆಳಗಾವಿ–೫೯೦ ೦೧೦.

೫೩. **ಶ್ರೀಮತಿ ಎಚ್. ಆರ್. ಲೀಲಾವತಿ**
೭೬, ಮಾರುತಿ ದೇವಸ್ಥಾನದ ರಸ್ತೆ,
ಸರಸ್ವತೀಪುರಂ,
ಮೈಸೂರು–೫೭೦ ೦೦೯.

೫೪. **ಶ್ರೀ ಶಿವಮೊಗ್ಗ ಸುಬ್ಬಣ್ಣ**
'ಶ್ರೀ ಗಣೇಶ', ೯ನೆಯ ಮುಖ್ಯರಸ್ತೆ
ಬನಶಂಕರಿ ೩ನೆಯ ಹಂತ
ಬೆಂಗಳೂರು-೫೬೦ ೦೭೦

೫೫. **ಡಾ. ಜಯಶ್ರೀ ಅರವಿಂದ್**
ಅರವಿಂದ್ ರೆಕಾರ್ಡಿಂಗ್ ಸ್ಟುಡಿಯೊ,
೬೦೭, ೩ನೆಯ ಅಡ್ಡ ರಸ್ತೆ, ಹನುಮಂತನಗರ
ಬೆಂಗಳೂರು–೫೬೦ ೦೧೯.

೫೬. **ಡಾ. ಪಿ. ಎಸ್. ರಾಮಾನುಜಂ**
೫೭೩, ೨೦ನೆಯ ಮುಖ್ಯ ರಸ್ತೆ,
೮ನೆಯ ಬ್ಲಾಕ್, ಕೋರಮಂಗಲ,
ಬೆಂಗಳೂರು–೫೬೦ ೦೩೪.

೫೭. **ಡಾ. ಎಸ್. ವಿದ್ಯಾಶಂಕರ**
೧೩೮, ೭ನೆಯ 'ಸಿ' ಮುಖ್ಯ ರಸ್ತೆ,
ವಿಜಯನಗರ ೨ನೆಯ ಹಂತ,
ಬೆಂಗಳೂರು–೫೬೦ ೦೪೦.

೫೮. **ಶ್ರೀ ಸುಬ್ರಾಯ ಚೊಕ್ಕಾಡಿ**
ಚೊಕ್ಕಾಡಿ–೫೭೪ ೨೧೨. (ದಕ್ಷಿಣ ಕನ್ನಡ)

೫೯. **ಡಾ. ಸಿ. ಎನ್. ರಾಮಚಂದ್ರನ್**
೮೯, ಜೆ.ಪಿ. ನಗರ, ೪ನೆಯ ಫೇಸ್,
ಡಾಲರ್ಸ್ ಕಾಲೋನಿ,
ಬೆಂಗಳೂರು–೫೬೦ ೦೭೮.

೬೦. **ಡಾ. ಎಲ್. ಜಿ. ಮೀರಾ**
೧೪೯, ೭ನೆಯ ಅಡ್ಡ ರಸ್ತೆ,
೫ನೆಯ ಮುಖ್ಯ ರಸ್ತೆ,
ವಿಜಯನಗರ ೨ನೆಯ ಹಂತ,
ಬೆಂಗಳೂರು–೫೬೦ ೦೪೦.

೬೧. **ಪ್ರೊ. ಡಿ. ಲಿಂಗಯ್ಯ**
೬೯೦, ೧ನೆಯ 'ಬಿ' ಮುಖ್ಯ ರಸ್ತೆ,
7ನೆಯ ಬ್ಲಾಕ್, ೨ನೆಯ ಫೇಸ್,
ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦ ೦೮೫.

೬೨. **ಶ್ರೀ ಚಂದ್ರಶೇಖರ ಆಲೂರು**
೬೪೧, ಮೊದಲನೆಯ ಮುಖ್ಯ ರಸ್ತೆ ಎದುರು,
ಭಾರತ್ ಹೌಸಿಂಗ್ ಸೊಸೈಟಿ ಬಡಾವಣೆ, ಉತ್ತರಹಳ್ಳಿ,
ಬೆಂಗಳೂರು–೫೬೦ ೦೬೧.

೬೩. **ಶ್ರೀಮತಿ ಕೆ. ಎಂ. ವಿಜಯಲಕ್ಷ್ಮಿ**
೫೯, ೪೦ನೆಯ ಅಡ್ಡ ರಸ್ತೆ,
೬ನೆಯ ಮುಖ್ಯ ರಸ್ತೆ,
ಜಯನಗರ ೫ನೆಯ ಬ್ಲಾಕ್,
ಬೆಂಗಳೂರು–೫೬೦ ೦೪೧.

೬೪. **ಶ್ರೀ ಬಾಬು ಕೃಷ್ಣಮೂರ್ತಿ**
೨೧, ೮ನೆಯ ಮುಖ್ಯ ರಸ್ತೆ,
ಎನ್. ಎಸ್. ಪಾಳ್ಯ, ಬಿ.ಟಿ.ಎಂ. ಬಡಾವಣೆ
೨ನೆಯ ಹಂತ, (ಕುವೆಂಪು ನಗರ),
ಬೆಂಗಳೂರು–೫೬೦ ೦೭೬.

೬೫. **ಡಾ. ವಿ. ವಸಂತ ಶ್ರೀ**
ಮಾಸ್ತಿ ಅಧ್ಯಯನ ಪೀಠ,
'ಮಾಸ್ತಿ ಮನೆ',
ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ರಸ್ತೆ,
ಗವೀಪುರಂ ವಿಸ್ತರಣ,
ಬೆಂಗಳೂರು–೫೬೦ ೦೧೯.

೬೬. **Dr. G. V. Kulkarni**
8–A/15, Jawahar Society,
Govind Nagar, Borivali (West),
Mumbai–400 092

೬೭. **ಡಾ. ವೈ. ಸಿ. ಭಾನುಮತಿ**
ಸಂಶೋಧನ ಸಹಾಯಕಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ,
ಮೈಸೂರು–೫೭೦ ೦೦೬.

೬೮. **ಡಾ. ಸುಶೀಲಾ ನೆಲ್ಲಿಸರ**
ಅಧ್ಯಾಪಕರು, ನ್ಯಾಷನಲ್ ಕಾಲೇಜ್,
ಶಂಕರಘಟ್ಟ–೫೭೭ ೪೫೧೮.
ಬಿ. ಆರ್. ಪ್ರಾಜೆಕ್ಟ್ (ಶಿವಮೊಗ್ಗ ಜಿಲ್ಲೆ)

೬೯. **ಶ್ರೀ ಅರವಿಂದ ಚೊಕ್ಕಾಡಿ**
ಅಂಚೆ: ಕೊಡಂಗಲ್ಲು
ಮೂಡುಬಿದರೆ–೫೭೪ ೧೯೭. (ದ.ಕ.)

೭೦. **ಶ್ರೀಮತಿ ಸ್ನೇಹಲತಾ ರೋಹಿಡೇಕರ್**
೬೬, ೧ನೆಯ ಅಡ್ಡ ರಸ್ತೆ, ೫ನೆಯ ಮುಖ್ಯ ರಸ್ತೆ,
(ಕೋ–ಆಪರೇಟಿವ್ ಟ್ರೈನಿಂಗ್ ಕಾಲೇಜ್ ಎದುರು)
ಪದ್ಮನಾಭನಗರ,
ಬೆಂಗಳೂರು–೫೬೦ ೦೭೦.

೭೧. **Smt. Vasantha Kalbagal**
3–531, Mt. Albert Road, Three Kings,
Auckland–01004 (New Zeland).

೭೨. **ಡಾ. ಕೆ. ಮರುಳ ಸಿದ್ಧಪ್ಪ**
೧೩೭, ೧೨ನೆಯ ಅಡ್ಡ ರಸ್ತೆ,
ಜೆ.ಪಿ. ನಗರ ೨ನೆಯ ಹಂತ,
ಬೆಂಗಳೂರು–೫೬೦ ೦೭೮.

೭೩. **ಶ್ರೀ ಸಿ. ಆರ್. ಸಿಂಹ**
'ಗುಹೆ', ನೂರು ಅಡಿ ವರ್ತುಲ ರಸ್ತೆ,
ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦ ೦೫೮.

೭೪. **ಶ್ರೀ ಎಸ್. ವಿ. ಶ್ರೀನಿವಾಸರಾವ್**
೪೩೦, 'ಸೌರಭ',
೧೭ನೆಯ ಮುಖ್ಯ ರಸ್ತೆ,
ಶ್ರೀನಗರ,
ಬೆಂಗಳೂರು–೫೬೦ ೦೫೦.

೭೫. **ಪ್ರೊ. ಅ. ರಾ. ಮಿತ್ರ**
ಬಿ–೬, ಕೆ.ಎಚ್.ಬಿ. ಕಾಲೋನಿ,
ಪುಟ್ಟೇನಹಳ್ಳಿ, ಯಲಹಂಕ,
ಬೆಂಗಳೂರು–೫೬೦ ೦೬೪.

೭೬. **ದಿವಂಗತ ಪ್ರೊ. ವೇಣುಗೋಪಾಲ ಸೊರಬ**

೭೭. **ಡಾ. ಎಚ್. ಎಸ್. ವೆಂಕಟೇಶಮೂರ್ತಿ**
೩೦, 'ಸಂಕಲ್ಪ', ಪುಷ್ಪಗಿರಿನಗರ, ಹೊಸಕೆರೆಹಳ್ಳಿ,
ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦ ೦೮೫.

೭೮. **ಪ್ರೊ. ಬರಗೂರು ರಾಮಚಂದ್ರಪ್ಪ**
'ಸಂವೇದನೆ', # ೨೭೫, ೧೧ನೆಯ 'ಬಿ' ಅಡ್ಡ ರಸ್ತೆ,
ಜೆ.ಪಿ. ನಗರ ೨ನೆಯ ಹಂತ,
ಬೆಂಗಳೂರು–೫೬೦ ೦೭೮.

೭೯. **ಪ್ರೊ. ರಾಘವೇಂದ್ರ ಪಾಟೀಲ**
'ಬಲರಾಮ', ಅಧ್ಯಾಪಕರ ಕಾಲೋನಿ,
ಮಲ್ಲಾಡಿಹಳ್ಳಿ,
ಚಿತ್ರದುರ್ಗ–೫೭೭ ೫೩೧.

೮೦. **ಶ್ರೀ ಶರತ್ ಕಲ್ಕೋಡ್**
ಪತ್ರಕರ್ತರು, ಎಂ.ಐ.ಜಿ.–ಎ ೧/೭, ನಂದಿನಿ ಬಡಾವಣೆ,
ಬೆಂಗಳೂರು–೫೬೦ ೦೯೬.

೮೧. **Dr. Taltaje Vasantha Kumar**
12/'C'–3, University Teachers Quarters,
Vidyanagari,
Mumbai–400 098. (Maharashtra)

೮೨. **Dr. Arthikaje Krishna Bhatta**
A–8, Shanthi Apts., # 13 (Old: 5),
Balakrishna Street, Mylapore,
Chennai. (Tamil Nadu)-600 005

೮೩. **ಡಾ. ಚೆನ್ನಣ್ಣ ವಾಲೀಕಾರ**
C/o ಲಕ್ಷ್ಮಿ ಮುದ್ರಣ, ೫ನೆಯ ಮುಖ್ಯ ರಸ್ತೆ,
ಚಾಮರಾಜಪೇಟೆ,
ಬೆಂಗಳೂರು–೫೬೦ ೦೧೮.

೮೪. **ಡಾ. ಶಶಿಕಲಾ ವೀರಯ್ಯಸ್ವಾಮಿ**
೩೮೪, ಕಣಬರ್ಗಿ ಬಡಾವಣೆ,
ರಾಮತೀರ್ಥನಗರ,
ಬೆಳಗಾಂವಿ–೫೯೦ ೦೦೨.

೮೫. **ಪ್ರೊ. ಚಂದ್ರಶೇಖರ ತಾಳ್ಯ**
'ಪಲ್ಲವಿ', ಕಾಲೇಜು ರಸ್ತೆ, ಬಸವ ಬಡಾವಣೆ,
ಹೊಳಲ್ಕೆರೆ–೫೭೭ ೫೨೬. (ಚಿತ್ರದುರ್ಗ ಜಿಲ್ಲೆ)

೮೬. **ಶ್ರೀ ಮಹಾಬಲಮೂರ್ತಿ ಕೊಡ್ಲೆಕೆರೆ**
೧೦೧೦/೧೧, ೧೨ನೆಯ ಮುಖ್ಯ ರಸ್ತೆ,
(ಎಂ.ಕೆ. ಇಂದಿರಾ ರಸ್ತೆ), ಹನುಮಂತನಗರ,
ಬೆಂಗಳೂರು–೫೬೦ ೦೧೯.

೮೭. **ಶ್ರೀ ಸತ್ಯನಾರಾಯಣರಾವ್ ಅಣತಿ**
'ರಚನ', ಹೊಸಮನೆ ಬಡಾವಣೆ,
ಚರ್ಚ್ ಪಕ್ಕ, ಶರಾವತಿ,
ಶಿವಮೊಗ್ಗ–೫೭೭ ೨೦೧.

೮೮. **ಡಾ. ಕೃಷ್ಣಮೂರ್ತಿ ಹನೂರು**
೨, 'ಎಚ್' ಬ್ಲಾಕ್, ರಾಮಕೃಷ್ಣನಗರ,
ಮೈಸೂರು–೫೭೦ ೦೨೨.

೮೯. **ಶ್ರೀ ರಂಜಾನ್ ದರ್ಗಾ**
ಮುಖ್ಯ ವರದಿಗಾರರು, 'ಪ್ರಜಾವಾಣಿ',
ಎನ್.ವಿ. ಕಾಂಪ್ಲೆಕ್ಸ್, ಎಸ್.ಬಿ. ಟೆಂಪಲ್ ರಸ್ತೆ,
ಗುಲ್ಬರ್ಗಾ–೫೮೫ ೧೦೩.

೯೦. **ಡಾ. ಪ್ರಹ್ಲಾದ ಅಗಸನಕಟ್ಟೆ**
೬, ಬ್ಲಾಕ್–೨,
ಪೈ ಹೋಟೆಲ್ ಎದುರು,
ಕಿಮ್ಸ್ ಕ್ವಾರ್ಟರ್ಸ್,
ಹುಬ್ಬಳ್ಳಿ–೫೮೦ ೦೩೨

೯೧. **ಡಾ. ಜಯಪ್ರಕಾಶ ಮಾವಿನಕುಳಿ**
ಪ್ರೊಫೆಸರ್ ಮತ್ತು ಮುಖ್ಯಸ್ಥರು,
ರಾಜ್ಯಶಾಸ್ತ್ರ ವಿಭಾಗ, ಶ್ರೀ ಮಹಾವೀರ ಕಾಲೇಜು,
ಮೂಡುಬಿದಿರೆ–೫೭೪ ೧೯೭.
(ದ.ಕ. ಜಿಲ್ಲೆ)

೯೨. **ಶ್ರೀ ಎಂ. ವಿ. ವೆಂಕಟೇಶಮೂರ್ತಿ** (ಸುಮನಾ)
೨೫, 'ವಸುಂಧರಾ',
'ಸಿ' ಅಡ್ಡ ರಸ್ತೆ, ರಾಜೀವನಗರ,
ಬನಶಂಕರಿ ೩ನೆಯ ಹಂತ, ೪ನೆಯ ಫೇಸ್,
ಬೆಂಗಳೂರು–೫೬೦ ೦೮೫.

೯೩. **ಶ್ರೀ ಎಚ್. ಆನಂದರಾಮ ಶಾಸ್ತ್ರೀ**
೧೨೫೧, ೪ನೆಯ 'ಎ' ಮುಖ್ಯ ರಸ್ತೆ,
೩ನೆಯ ಬ್ಲಾಕ್, ಬಿ.ಇ.ಎಲ್. ಬಡಾವಣೆ,
ವಿದ್ಯಾರಣ್ಯಪುರ.
ಬೆಂಗಳೂರು–೫೬೦ ೦೯೭.

೯೪. **ಶ್ರೀ ಮಾವಿನಕೆರೆ ರಂಗನಾಥನ್**
೨೧, ಪುರೋಗಾಮಿ ಸಾಹಿತ್ಯ ಪ್ರಕಾಶನ,
೧೦–'ಸಿ' ಅಡ್ಡ ರಸ್ತೆ,
ಎಲ್ಲಪ್ಪ ಗಾರ್ಡನ್, ಮಲ್ಲೇಶ್ವರಂ,
ಬೆಂಗಳೂರು–೫೬೦ ೦೦೩.

೯೫. **Dr. Tamil Selvie**
Lecturer in Kannada,
University of Madras,
Marina Campus,
Chennai–600 005. (T.N.)

೯೬. **ಶ್ರೀ ರವಿ ಉಪಾಧ್ಯ**
೨೯೫, 'ಚಕ್ರೇಶ್ವರಿ',
೧ನೆಯ ಹಂತ, ರಾಣಿ ಚೆನ್ನಮ್ಮ ನಗರ,
ಬೆಳಗಾವಿ–೫೯೦ ೦೦೬.

೯೭. **ಡಾ. ಎಚ್. ಆರ್. ಪ್ರಭಾ**
ಕನ್ನಡ ರೀಡರ್,
೯೭೫, ೬೬ನೆಯ ಅಡ್ಡ ರಸ್ತೆ,
೫ನೆಯ ಬ್ಲಾಕ್, ರಾಜಾಜಿನಗರ,
ಬೆಂಗಳೂರು–೫೬೦ ೦೧೦.

೯೮. **ಡಾ. ರಾಮಚಂದ್ರ ಗಣಾಪೂರ**
ಕನ್ನಡ ಉಪನ್ಯಾಸಕರು,
ಗುಲ್ಬರ್ಗ ವಿ.ವಿ.ಯ ಸ್ನಾತಕೋತ್ತರ ಕೇಂದ್ರ,
ನಂದಿಹಳ್ಳಿ, ಸೊಂಡೂರು–೫೮೩ ೧೧೯,
ಬಳ್ಳಾರಿ ಜಿಲ್ಲೆ.

೯೯. **ಡಾ. ಕೆ. ಆರ್. ಇಕ್ಬಾಲ್ ಅಹಮದ್**
೧೦೦/೨೬'ಎ', ೧೯ನೆಯ ಅಡ್ಡ ರಸ್ತೆ,
೨೦ನೆಯ ಮುಖ್ಯ ರಸ್ತೆ, ಎಸ್.ಎಂ. ಗಾರ್ಡನ್,
ಜೆ.ಪಿ. ನಗರ ೫ನೆಯ ಫೇಸ್,
ಬೆಂಗಳೂರು–೫೬೦ ೦೭೮.

೧೦೦. **ಶ್ರೀಮತಿ ಯಶೋದಾ ರಾಮಸ್ವಾಮಿ**
ಕನ್ನಡ ರೀಡರ್,
೧೬, ಮೊದಲನೆಯ ಅಡ್ಡ ರಸ್ತೆ,
ಟಾಟಾ ಸಿಲ್ಕ್ ಫಾರಂ,
ಬಸವನಗುಡಿ,
ಬೆಂಗಳೂರು–೫೬೦ ೦೦೪.

೧೦೧. **ಶ್ರೀಮತಿ ಡಿ. ಬಿ. ರಜಿಯಾ**
೬೬೦, ೬ನೆಯ ಅಡ್ಡ ರಸ್ತೆ,
೫ನೆಯ ಬ್ಲಾಕ್, ೧ನೆಯ ಹಂತ,
ಎಚ್.ಬಿ.ಆರ್. ಬಡಾವಣೆ,
ಬೆಂಗಳೂರು–೫೬೦ ೦೪೩.

೧೦೨. **ದಿವಂಗತ ಡಾ. ಕೆ. ಎಸ್. ನರಸಿಂಹಸ್ವಾಮಿ**

೧೦೩. **ಶ್ರೀಮತಿ ವತ್ಸಲಾ ಮೋಹನ್**
ಕನ್ನಡ ಉಪನ್ಯಾಸಕಿ, ಸುರಾನಾ ಮಹಾವಿದ್ಯಾಲಯ,
ನಿಟ್ಟೂರು ಶ್ರೀನಿವಾಸರಾವ್ ರಸ್ತೆ,
(ಸೌತ್ ಎಂಡ್ ವೃತ್ತದ ಬಳಿ)
ಬಸವನಗುಡಿ,
ಬೆಂಗಳೂರು–೫೬೦ ೦೦೪.

೧೦೪. **ದಿವಂಗತ ಎನ್. ಎಸ್. ವೆಂಕಟರಾಮ್**

೧೦೫. **ಶ್ರೀ ಎ. ಆರ್. ಮಣಿಕಾಂತ**
ಉಪ ಸಂಪಾದಕ, 'ವಿಜಯ ಕರ್ನಾಟಕ'
#೪, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು–೫೬೦ ೦೧೮.

೧೦೬. **ದಿವಂಗತ ಡಾ. ಶಾಂತಿನಾಥ ದೇಸಾಯಿ**

೧೦೭. **ಡಾ. ಡಿ. ಮಂಗಳಾ ಪ್ರಿಯದರ್ಶಿನಿ**
೯೯೨, 'ಅನುಗ್ರಹ', ೧೧ನೆಯ ಮುಖ್ಯ ರಸ್ತೆ,
೩ನೆಯ ಹಂತ, ೧ನೆಯ ಬ್ಲಾಕ್, ಬಸವೇಶ್ವರನಗರ,
ಬೆಂಗಳೂರು–೫೬೦ ೦೭೯.

೧೦೮. **ಶ್ರೀ ಎಂ. ಕೆ. ಗೋಪಿನಾಥ್**
ಟಿ–೧೨೭, ಜಯನಗರ ೪ನೆಯ 'ಟಿ' ಬ್ಲಾಕ್,
ಬೆಂಗಳೂರು–೫೬೦ ೦೪೧.

೧೦೯. **ದಿವಂಗತ ಡಾ. ಪು. ತಿ. ನರಸಿಂಹಾಚಾರ್**

೧೧೦. **ಶ್ರೀ ಬಾ.ಕಿ.ನ.**
'ಲಿಪಿ ಮುದ್ರಣ', # ೨೬/೩, ರತ್ನ ವಿಲಾಸ ರಸ್ತೆ,
ಬಸವನಗುಡಿ,
ಬೆಂಗಳೂರು–೫೬೦ ೦೦೪.

೧೧೧. **ಡಾ. ಗೀತಾ ರಾಮಾನುಜಂ**
ಪ್ರಿನ್ಸಿಪಾಲ್, ಜಯನಗರ ನ್ಯಾಷನಲ್ ಕಾಲೇಜ್
೭ನೆಯ ಬ್ಲಾಕ್, ಜಯನಗರ
ಬೆಂಗಳೂರು–೫೬೦ ೦೮೨

೧೧೨. **ಡಾ. ಕೆ. ಪಿ. ಮಂಜುಳಾ ರೆಡ್ಡಿ**
ಕನ್ನಡ ರೀಡರ್, # ೧೩ 'ಸಿ', ೧೩ನೆಯ ಅಡ್ಡ ರಸ್ತೆ,
ಶ್ರೀನಿಧಿ ಬಡಾವಣೆ, ಕೋಣನಕುಂಟೆ,
ಬೆಂಗಳೂರು–೫೬೦ ೦೬೨.

೧೧೩. **ಶ್ರೀಮತಿ ಎಸ್. ಬಿ. ರವಿಕಲಾ**
ಕನ್ನಡ ರೀಡರ್, # ೨೪, 'ಮಧುಮತಿ', ೧ನೆಯ 'ಎ' ಅಡ್ಡ ರಸ್ತೆ,
ಚಿಕ್ಕಬೊಮ್ಮಸಂದ್ರ, ಜೆ.ಕೆ.ವಿ.ಕೆ. ಅಂಚೆ,
ನ್ಯೂಟೌನ್, ಯಲಹಂಕ,
ಬೆಂಗಳೂರು–೫೬೦ ೦೬೫.

೧೧೪. **ಡಾ. ಲತಾಗುತ್ತಿ**
೮೭೨, ೯ನೆಯ 'ಬಿ' ಮುಖ್ಯ ರಸ್ತೆ,
ಇಸ್ರೋ ಬಡಾವಣೆ,
ಬೆಂಗಳೂರು–೫೬೦ ೦೭೦.

೧೧೫. **ಡಾ. ಜಿ. ರಾಮಕೃಷ್ಣ**
೨–ಎಫ್, 'ಪವನ ಪರಂಜ್ಯೋತಿ',
೨೨/೧, ೪ನೆಯ ಅಡ್ಡ ರಸ್ತೆ,
ಕಾವೇರಿನಗರ (ಕತ್ರಿಗುಪ್ಪೆ ವಾಟರ್ ಟ್ಯಾಂಕ್ ಬಳಿ),
ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦ ೦೮೫.

೧೧೬. **ಶ್ರೀ ಶ್ರೀಕಾಂತ**
C/o 'ಕೆಂಬಾವುಟ' (ವಾರಪತ್ರಿಕೆ), ಘಾಟ್ಗೆ ಭವನ,
ಗಾಯತ್ರಿ ದೇವಿ ಪಾರ್ಕ್ ಬಡಾವಣೆ, ಮಲ್ಲೇಶ್ವರ,
ಬೆಂಗಳೂರು–೫೬೦ ೦೦೩.

೧೧೭. **ಶ್ರೀಮತಿ ಉಷಾ ಪಿ. ರೈ**
३೪೫, 'ಸಮೃದ್ಧ', ಲಕ್ಷ್ಮೀ ರಸ್ತೆ,
೭ನೆಯ ಅಡ್ಡ ರಸ್ತೆ, ಶಾಂತಿನಗರ,
ಬೆಂಗಳೂರು–೫೬೦ ೦೨೭.

೧೧೮. **ಶ್ರೀ ನೀಲತ್ತಹಳ್ಳಿ ಕಸ್ತೂರಿ**
೨೯, 'ಮಿಥಿಲಾ',
೪ನೆಯ ದೇವಸ್ಥಾನದ ರಸ್ತೆ,
೧೫ನೆಯ ಅಡ್ಡ ರಸ್ತೆ, ಮಲ್ಲೇಶ್ವರ,
ಬೆಂಗಳೂರು–೫೬೦ ೦೦೩.

೧೧೯. **ಶ್ರೀ ಚಿರಂಜೀವಿ**
ಪತ್ರಕರ್ತರು, # ३೩೯೦/೪೯, ३ನೆಯ ಅಡ್ಡ ರಸ್ತೆ,
೫ನೆಯ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,
ವಿಜಯನಗರ ೨ನೆಯ ಹಂತ
ಬೆಂಗಳೂರು–೫೬೦ ೦೪೦.

೧೨೦. **ಶ್ರೀ ಈಶ್ವರಚಂದ್ರ**
೧३३/೨, 'ಪಂಚವಟಿ',
೧ನೆಯ ಮಹಡಿ, ३ನೆಯ ಮುಖ್ಯ ರಸ್ತೆ,
ಗೃಹಲಕ್ಷ್ಮಿ ಕಾಲೋನಿ, ೨ನೆಯ ಹಂತ,
ಕಮಲಾನಗರ,
ಬೆಂಗಳೂರು–೫೬೦ ೦೭೯.

೧೨೧. **Sri Vishwanath Hulikal**
1177, Garden Side Line,
Cupertino,
California–95014 (US).

೧೨೨. **ಶ್ರೀ ಎಸ್. ಆರ್. ರಾಮಸ್ವಾಮಿ**
ಸಂಪಾದಕರು, 'ಉತ್ಥಾನ' (ಮಾಸಪತ್ರಿಕೆ),
'ಕೇಶವಶಿಲ್ಪ', ಕೆಂಪೇಗೌಡನಗರ,
ಬೆಂಗಳೂರು–೫೬೦ ೦೧೯.

೧೨೩. **ದಿವಂಗತ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್**

೧೨೪. **ಡಾ. ಪ್ರಧಾನ ಗುರುದತ್ತ**
೭೩೪, ಇ ಮತ್ತುಎಫ್ ಬ್ಲಾಕ್,
೪ನೆಯ ತಿರುವು, ಮನುಜ ಪಥ ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩.

೧೨೫. **ಶ್ರೀ ಎ. ಎಸ್. ಪ್ರಸನ್ನ**
೨೬, ೧೧ನೆಯ ಮುಖ್ಯ ರಸ್ತೆ,
ಆಂಜನೇಯ ದೇವಾಲಯದ ಬಳಿ,
ಪದ್ಮನಾಭನಗರ,
ಬೆಂಗಳೂರು–೫೬೦ ೦೭೦.

೧೨೬. **ಶ್ರೀ ಜೆ. ಪಿ. ಬಸವರಾಜು**
ಸಂಪಾದಕರು, 'ಮಯೂರ' (ಮಾಸಪತ್ರಿಕೆ),
೭೫, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–೫೬೦ ೦೦೧.

೧೨೭. **ಶ್ರೀ ವಿ. ಎಸ್. ಕೃಷ್ಣ ಅಯ್ಯರ್**
ಮಾಜಿ ಸಚಿವರು,
ಸಿ–೨೩, ಶಂಕರ ಪಾರ್ಕ್,
ಶಂಕರಪುರ,
ಬೆಂಗಳೂರು–೫೬೦ ೦೦೪.

೧೨೮. **ಶ್ರೀ ಎಚ್. ಎಸ್. ದೊರೆಸ್ವಾಮಿ**
ಸ್ವಾತಂತ್ರ್ಯ ಹೋರಾಟಗಾರರು
೧೫೬೩, ೩೯–'ಎಫ್'ಅಡ್ಡ ರಸ್ತೆ, 'ಟಿ' ಬ್ಲಾಕ್, ಜಯನಗರ,
ಬೆಂಗಳೂರು–೫೬೦ ೦೪೧.

೧೨೯. **ಶ್ರೀ ಜಿ. ನಾರಾಯಣ**
C/o 'ವಿನೋದ' ಕಾರ್ಯಾಲಯ,
೩, ಬಿಸಿಸಿ ಬ್ಯಾಂಕ್ ಕಟ್ಟಡ,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು–೫೬೦ ೦೧೮.

೧೩೦. **ದಿವಂಗತ ನಟ ಸಾರ್ವಭೌಮ ಡಾ. ರಾಜಕುಮಾರ್**

೧೩೧. **ಡಾ. ಪಾಟೀಲ ಪುಟ್ಟಪ್ಪ**
ಸಂಪಾದಕರು, 'ಪ್ರಪಂಚ', 'ವಿಶ್ವವಾಣಿ',
ಕಿತ್ತೂರು ಚೆನ್ನಮ್ಮ ರಾಣಿ ವರ್ತುಲ,
ಹುಬ್ಬಳ್ಳಿ–೫೮೦ ೦೨೯.

೧೩೨. **ಡಾ. ಯು. ಆರ್. ಅನಂತಮೂರ್ತಿ**
ಜ್ಞಾನಪೀಠ ಪುರಸ್ಕೃತರು,
೪೯೮, 'ಸುರಗಿ', ೬–ಎ ಮುಖ್ಯ ರಸ್ತೆ,
ಎಚ್.ಐ.ಜಿ. ಕಾಲೋನಿ,
ಆರ್.ಎಂ.ವಿ. ೨ನೆಯ ಹಂತ,
ಬೆಂಗಳೂರು–೫೬೦ ೦೯೪.

೧೩೩. **ಶ್ರೀ ಎಂ. ವೀರಪ್ಪ ಮೊಯಿಲಿ**
ಮಾಜಿ ಮುಖ್ಯಮಂತ್ರಿಗಳು
೧, 'ಕೌಸ್ತುಭ', ಆರ್.ಟಿ. ನಗರ,
ಬೆಂಗಳೂರು–೫೬೦ ೦೩೨.

೧೩೪. **ಶ್ರೀ ಟಿ. ಮಹಾಬಲೇಶ್ವರ ಭಟ್ಟ**
'ಗುರುಕೃಪಾ', ಬೇದೂರು, ಕಲ್ಮನೆ ಅಂಚೆ, ಸಾಗರ,
ಶಿವಮೊಗ್ಗ ಜಿಲ್ಲೆ–೫೭೭ ೨೦೧.
(ಕರ್ನಾಟಕ)

೧೩೫. **ಶ್ರೀ ಮತ್ತೂರು ಕೃಷ್ಣಮೂರ್ತಿ**
ನಿರ್ದೇಶಕರು, ಭಾರತೀಯ ವಿದ್ಯಾಭವನ
೨೧-೨೨, ಚಿತ್ರಕೂಟ ಅಪಾರ್ಟ್‌ಮೆಂಟ್
೧೮ನೆಯ ಅಡ್ಡರಸ್ತೆ, ಮಲ್ಲೇಶ್ವರ
ಬೆಂಗಳೂರು–೫೬೦ ೦೦೩.

೧೩೬. **ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ**
'ಬ್ರಾಹ್ಮೀ', # ೬೮/ಬಿ,
ಆಶ್ರಮದ ರಸ್ತೆ, ಜಯಲಕ್ಷ್ಮೀಪುರ,
ಮೈಸೂರು–೫೭೦ ೦೧೨.

೧೩೭. **ಶ್ರೀ ಎಂ. ಬಿ. ಸಿಂಗ್**
ನಿವೃತ್ತ ಸಂಪಾದಕರು, 'ಪ್ರಜಾವಾಣಿ', 'ಸುಧಾ'
೧೮೨, ೨ನೆಯ ಮುಖ್ಯ ರಸ್ತೆ,
'ಸಿ' ಬ್ಲಾಕ್, ಸಿಕ್ಯುಎವಲ್ ಬಡಾವಣೆ,
ಸಹಕಾರನಗರ, ಬೆಂಗಳೂರು–೫೬೦ ೦೯೨.

೧೩೮. **ಡಾ. ಬಿ. ಎ. ವಿವೇಕ ರೈ**
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ–೫೮೩ ೨೭೬,
ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

೧೩೯. **ದಿವಂಗತ ಶ್ರೀ ಪಿ. ಆರ್. ತಿಪ್ಪೇಸ್ವಾಮಿ**

೧೪೦. **ಶ್ರೀ ಎಚ್. ಜಿ. ಸೋಮಶೇಖರರಾವ್**
೮೦, 'ಶ್ರೀನಿವಾಸ', ೧೧ನೆಯ ಮುಖ್ಯ ರಸ್ತೆ,
ಶ್ರೀನಗರ,
ಬೆಂಗಳೂರು–೫೬೦ ೦೫೦.

೧೪೧. **ಶ್ರೀ ಕೆ. ಜಿ. ಸುಬ್ರಹ್ಮಣ್ಯ**
(ಮಾಜಿ ರೋಟರಿ ಗವರ್ನರ್ ಮತ್ತು
ಮಾಜಿ ಅಧ್ಯಕ್ಷರು, ಕರ್ನಾಟಕ ಸಂಘ)
'ದತ್ತ ಕೃಪ', ಡಾ. ಎಸ್. ಪಿ. ಮುಖರ್ಜಿ ರಸ್ತೆ,
ಶಿವಮೊಗ್ಗ–೫೭೭ ೨೦೧.

೧೪೨. **ಶ್ರೀ ಹೊ. ರಾ. ಸತ್ಯನಾರಾಯಣರಾವ್**
೧೨೩–'ಬಿ', ಬಾಪೂಜಿನಗರ, (ಮೈಸೂರು ರಸ್ತೆ),
ಬೆಂಗಳೂರು–೫೬೦ ೦೨೬.

೧೪೩. **ಶ್ರೀ ಅ. ನಾ. ಪ್ರಹ್ಲಾದರಾವ್**
ಸಾರ್ವಜನಿಕ ಸಂಪರ್ಕ ಅಧಿಕಾರಿಗಳು,
ಬೆಂಗಳೂರು ಜಲ ಮಂಡಳಿ, ಕಾವೇರಿ ಭವನ,
(ಮೈಸೂರು ಬ್ಯಾಂಕ್ ವೃತ್ತದ ಬಳಿ), ೨ನೆಯ ಮಹಡಿ,
ಬೆಂಗಳೂರು–೫೬೦ ೦೦೯.

೧೪೪. **ಡಾ. ವಿಜಯಾ**
C/o ಇಳಾ ಪ್ರಿಂಟರ್ಸ್,
೩೬, ೪೦ ಅಡಿ ರಸ್ತೆ,
ರಾಘವನಗರ,
ನ್ಯೂ ಟಿಂಬರ್‌ಯಾರ್ಡ್ ಲೇಔಟ್,
ಬೆಂಗಳೂರು–೫೬೦ ೦೨೬.

೧೪೫. **ಶ್ರೀಮತಿ ಬಿ. ಟಿ. ಲಲಿತಾ ನಾಯಕ್**
ಮಾಜಿ ಸಚಿವೆ
'ಕ್ರಾಂತಿ ಪಥ', ೧ನೆಯ ಮುಖ್ಯ ರಸ್ತೆ,
೨ನೆಯ ಅಡ್ಡ ರಸ್ತೆ,
ಜ್ಯುಡಿಷಿಯಲ್ ಆಫೀಸರ್ಸ್ ಕಾಲೋನಿ,
ರಾಜಮಹಲ್ ವಿಲಾಸ ಬಡಾವಣೆ ೨ನೆಯ ಹಂತ,
ಬೆಂಗಳೂರು–೫೬೦ ೦೯೪.

೧೪೬. **ಶ್ರೀಮತಿ ಭವಾನಿ ಗಂಗಾಧರ್**
೨೩೭೦, 'ಗುರುಪ್ರದ',
ಕುಮಾರಸ್ವಾಮಿ ಬಡಾವಣೆ 2ನೆಯ ಹಂತ,
ಪೈಪ್ ಲೈನ್ ರಸ್ತೆ, (ಜೆ.ಪಿ. ನಗರ ಅಂಚೆ),
ಬೆಂಗಳೂರು–೫೬೦ ೦೭೮.

೧೪೭. **ಡಾ. ಎ. ಕುಮಾರ್**
ದಂತ ವೈದ್ಯರು,
೪೨, ೩ನೆಯ ಮುಖ್ಯ ರಸ್ತೆ,
ಚನ್ನಮ್ಮನ ಕೆರೆ ಅಚ್ಚುಕಟ್ಟು,
ಬನಶಂಕರಿ ೩ನೆಯ ಹಂತ, ೩ನೆಯ ಫೇಸ್,
ಬೆಂಗಳೂರು–೫೬೦ ೦೮೫.

೧೪೮. **ಶ್ರೀ ಶೇಷನಾರಾಯಣ**
೯, ೧ನೆಯ ಅಡ್ಡ ರಸ್ತೆ, ಲಕ್ಕಪ್ಪ ಬಡಾವಣೆ,
ಸಿಂಗಾಪುರ, ವಿದ್ಯಾರಣ್ಯಪುರ ಅಂಚೆ,
ಬೆಂಗಳೂರು–೫೬೦ ೦೯೭.

೧೪೯. **ಶ್ರೀ ಜಗನ್ನಾಥರಾವ್ ಬಹುಳೆ**
'ಅಂಬುಜಾ ನಿಲಯ', ತ್ಯಾಗರಾಜ ರಸ್ತೆ,
ಆನೇಕಲ್ಲು–೫೬೨ ೧೦೬.
(ಬೆಂಗಳೂರು ಗ್ರಾಮಾಂತರ ಜಿಲ್ಲೆ)

೧೫೦. **Smt. Shanta Mysore Ananthaswami**
C/o Purandarabaru, # 8080,
Heritage Drive, Alburtis,
Pennsylvania–18011. (US)

೧೫೧. **ಶ್ರೀ ಎಂ. ಎನ್. ಮಂಜೇಗೌಡ**
ಪೊಲೀಸ್ ಇನ್ಸ್‌ಪೆಕ್ಟರ್,
೧೫೬/೮೦೨, ೨೧ನೆಯ ಅಡ್ಡ ರಸ್ತೆ,
ಹುಳಿಮಾವು ಮುಖ್ಯ ರಸ್ತೆ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–೫೬೦ ೦೭೬.

೧೫೨. **ಶ್ರೀ ಬಿ. ಎ. ಕೆದಿಲಾಯ**
೮೦೫, ಮೊದಲನೆಯ ಮುಖ್ಯ ರಸ್ತೆ,
೮ನೆಯ ಅಡ್ಡ ರಸ್ತೆ, ಎಚ್.ಎಂ.ಟಿ. ಬಡಾವಣೆ,
ನೆಲಗದರನಹಳ್ಳಿ, ನಾಗಸಂದ್ರ,
ಬೆಂಗಳೂರು–೫೬೦ ೦೭೩.

೧೫೩. **ಶ್ರೀಮತಿ ಜಯಾ ಮಂಡೀರ ಅಪ್ಪಣ್ಣ**
'ಮೈಕ್ರೊಮಿನ್', ಅಂಚೆ ಪೆಟ್ಟಿಗೆ ಸಂಖ್ಯೆ: ೭೬೩೨,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು–೫೬೦ ೦೭೬.

೧೫೪. **ಶ್ರೀ ಎಸ್. ಡಿ. ವೆಂಕಟೇಶ್**
ನಿವೃತ್ತ ನ್ಯಾಯಾಧೀಶರು
ಕರ್ನಾಟಕ ಉಚ್ಚ ನ್ಯಾಯಾಲಯ
೪೧೨, ೧೩ನೆಯ ಮುಖ್ಯ ರಸ್ತೆ,
ರಾಜಮಹಲ್ ವಿಲಾಸ ಬಡಾವಣೆ
ಬೆಂಗಳೂರು–೫೬೦ ೦೮೦

೧೫೫. **ಶ್ರೀ ವ. ರಾ. ಕುಲಕರ್ಣಿ**
ನಿವೃತ್ತ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
೭, 'ಶ್ರೀರಮಣ', ೧ನೆಯ ಅಡ್ಡ ರಸ್ತೆ,
೧ನೆಯ ಮುಖ್ಯ ರಸ್ತೆ,
ಡಾಲರ್ ಬಡಾವಣೆ,
ಜೆ.ಪಿ.ನಗರ ೪ನೆಯ ಹಂತ
ಬೆಂಗಳೂರು–೫೬೦ ೦೭೮.

೧೫೬. **Smt. Rama Raman**
C/o E.P.S. Raman,
Senior Engineer,
Al–Ahmadiya Contracting Co.,
P.B. No.: 2596, Satwa,
DUBAI. (UAE)

೧೫೭. **ಶ್ರೀ ಆನೇಕಲ್ಲು ನಾಗರಾಜ್**
ಪತ್ರಕರ್ತರು ಮತ್ತು ನಿವೃತ್ತ ಪ್ರಾಂಶುಪಾಲರು,
ಶ್ರೀರಾಮ ದೇವಸ್ಥಾನದ ಬಳಿ,
ಹೊಸಪೇಟೆ, (ಸಿಂಡಿಕೇಟ್ ಬ್ಯಾಂಕ್ ಪಕ್ಕ)
ಆನೇಕಲ್ಲು–೫೬೨ ೧೦೬.
(ಬೆಂಗಳೂರು ಗ್ರಾಮಾಂತರ)

೧೫೮. **ಪ್ರೊ. ಜಿ. ಟಿ. ನಾರಾಯಣರಾವ್**
'ಅತ್ರಿ', # ೮, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ,
ಮೈಸೂರು–೫೭೦ ೦೦೯.

೧೫೯. **ಪ್ರೊ. ಜಿ. ಎಂ. ಬಸವರಾಜ್**
೨೩೮೬/೨, 'ಶಾಂತಿ ನಿಕೇತನ',
೨ನೆಯ ಅಡ್ಡ ರಸ್ತೆ, ೯ನೆಯ ಮುಖ್ಯ ರಸ್ತೆ,
ಎಂ.ಸಿ.ಸಿ.–'ಎ' ಬ್ಲಾಕ್,
ದಾವಣಗೆರೆ–೫೭೭ ೭೦೪.

೧೬೦. **ಡಾ. ಕೆ. ವಿ. ಸೋಮಶೇಖರ್**
ನಿವೃತ್ತ ಪ್ರಾಧ್ಯಾಪಕ, (ಭೂವಿಜ್ಞಾನ)
#೨೫೪, ೩೬ನೆಯ ಅಡ್ಡ ರಸ್ತೆ,
೬ನೆಯ ಮುಖ್ಯ ರಸ್ತೆ,
ಜಯನಗರ ೪ನೆಯ ಬ್ಲಾಕ್,
ಬೆಂಗಳೂರು–೫೬೦ ೦೧೧.

೧೬೧. **ಪ್ರೊ. ಜೆ. ಎಸ್. ಪರಶಿವಮೂರ್ತಿ**
ಮಾಜಿ ನಿರ್ದೇಶಕರು,
ಅಂಚೆ ಮತ್ತು ತೆರಪಿನ ಶಿಕ್ಷಣ,
೩೭ 'ಎ', 'ತುಂಬೆ',
ಕ್ಲಾಸಿಕ್ ಆರ್ಚರ್ಚ್ಸ್,
ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಸ್ಥಾನದ ಹಿಂಬದಿ,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು–೫೬೦ ೦೭೬.

೧೬೨. **ಶ್ರೀ ಎಸ್. ಆರ್. ವಿಜಯ್,** ಐ.ಎ.ಎಸ್.
ನಿವೃತ್ತ ಅಧ್ಯಕ್ಷರು, ಬಿ.ಡಿ.ಎ.
೨೬, 'ಅಲಿವೇಲು', ೨ನೆಯ ಅಡ್ಡ ರಸ್ತೆ,
ಕೋರಮಂಗಲ ೫ನೆಯ ಬ್ಲಾಕ್,
ಬೆಂಗಳೂರು–೫೬೦ ೦೯೫.

೧೬೩. **ಡಾ. ಸಾ. ಶಿ. ಮರುಳಯ್ಯ**
೩, 'ರಾಗಿಣಿ', ಸರ್ವಿಸ್ ರಸ್ತೆ,
ಆರ್.ಪಿ.ಸಿ. ಬಡಾವಣೆ,
ವಿಜಯನಗರ ಪೂರ್ವ,
ಬೆಂಗಳೂರು–೫೬೦ ೦೪೦.

೧೬೪. **ಶ್ರೀ ಎಸ್. ಶ್ರೀನಿವಾಸ್**
ಮಾಜಿ ಪ್ರಿನ್ಸಿಪಾಲ್ ಮತ್ತು ಪುರಸಭೆ ಅಧ್ಯಕ್ಷರು,
'ಸಿದ್ಧೇಶ್ವರ ನಿಲಯ',
ಬೆಂಗಳೂರು–ಮಡಿಕೇರಿ ರಸ್ತೆ,
ಹುಣಸೂರು. (ಮೈಸೂರು ಜಿಲ್ಲೆ)

೧೬೫. **ಪ್ರೊ. ಎಸ್. ಕೆಂಡಗಣ್ಣ ಸ್ವಾಮಿ**
ವಿಶ್ರಾಂತ ನಿರ್ದೇಶಕರು, 'ಪ್ರಸಾರಾಂಗ',
ಬೆಂಗಳೂರು ವಿಶ್ವವಿದ್ಯಾಲಯ,
೨೯೬, ೫ನೆಯ ಮುಖ್ಯ ರಸ್ತೆ,
ಮಹಾಲಕ್ಷ್ಮಿ ಬಡಾವಣೆ,
ಬೆಂಗಳೂರು–೫೬೦ ೦೮೬.

೧೬೬. **ಶ್ರೀ ಲಕ್ಷ್ಮೀಪತಿ ಮಾವಳ್ಳಿ**
೩೨, ಅಪ್ಪಯ್ಯಣ್ಣ ಗಲ್ಲಿ, ದೊಡ್ಡ ಮಾವಳ್ಳಿ,
ಬೆಂಗಳೂರು–೫೬೦ ೦೦೪.

೧೬೭. **ಡಾ. ಕೆ. ಸತ್ಯನಾರಾಯಣ ಸಿಂಗ್**
ನಿವೃತ್ತ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., # ೨, ೮ನೆಯ ಅಡ್ಡರಸ್ತೆ,
೧ನೆಯ ಮುಖ್ಯರಸ್ತೆ, ಪ್ರಶಾಂತನಗರ,
ಬೆಂಗಳೂರು–೫೬೦ ೦೭೯.

೧೬೮. **ಶ್ರೀ ಸಾವಕಾರ್ ರಾಮಕೃಷ್ಣ**
ಜಂಟಿ ನಿರ್ದೇಶಕರು (ನಿ.)
ಕರ್ನಾಟಕ ಗಣಿ ಮತ್ತು ಭೂ ವಿಜ್ಞಾನ ಇಲಾಖೆ,
೨೯೨, ೫ನೆಯ ಬ್ಲಾಕ್ ಜಯನಗರ,
೩೮ನೆಯ 'ಎ' ಅಡ್ಡ ರಸ್ತೆ, ೧೦ನೆಯ ಮುಖ್ಯ ರಸ್ತೆ,
ಬೆಂಗಳೂರು–೫೬೦ ೦೪೧.

೧೬೯. **ಡಾ. ಸಿ. ವಿ. ವಿಶ್ವೇಶ್ವರ**
ಭೌತ ವಿಜ್ಞಾನಿ, # ೯೨, ೧ನೆಯ ಮುಖ್ಯ ರಸ್ತೆ,
ಆರ್.ಎಂ.ವಿ. ೨ನೆಯ ಹಂತ, ೧ನೆಯ ಬ್ಲಾಕ್,
ಬೆಂಗಳೂರು–೫೬೦ ೦೯೪.

೧೭೦. **ಡಾ. ಎಲ್. ಜಿ. ಸುಮಿತ್ರ**
ನಿವೃತ್ತ ನಿರ್ದೇಶಕರು, ಆಕಾಶವಾಣಿ,
೧೧೫೭, ೩ನೆಯ ಮುಖ್ಯ ರಸ್ತೆ,
೨ನೆಯ ಫೇಸ್, ಗಿರಿನಗರ,
ಬೆಂಗಳೂರು–೫೬೦ ೦೮೫.

೧೭೧. **ಪ್ರೊ. ಎಸ್. ಬಿ. ರಂಗನಾಥ್**
ನಿವೃತ್ತ ಪ್ರಾಂಶುಪಾಲರು
೧೧೫೭/೨೮, 'ಸರಸ್ವತಿ',
೪ನೆಯ ಮುಖ್ಯ ರಸ್ತೆ,
ತರಳುಬಾಳು ಬಡಾವಣೆ ೧ನೆಯ ಹಂತ,
ದಾವಣಗೆರೆ–೫೭೭ ೦೦೫.

೧೭೨. **ಶ್ರೀ ವೈ. ಜಿ. ಗಿರಿಶಾಸ್ತ್ರಿ**
ಪತ್ರಕರ್ತರು, ಎಲ್. ಎಫ್. ೧೫/೭,
ಮೊದಲನೆಯ ಮಹಡಿ,
ಬಿಡಿಎ ಕಟ್ಟಡಗಳು, ಬಿ.ಟಿ.ಎಂ. ಬಡಾವಣೆ,
ಬೆಂಗಳೂರು–೫೬೦ ೦೭೬.

೧೭೩. **ಡಾ. ವೈ. ಲಿಂಗರಾಜು**
ಮಾಜಿ ನಿರ್ದೇಶಕ,
ದೂರಸಂವೇದಿ ತಂತ್ರಜ್ಞಾನ ಆನ್ವಯಿಕ ಕೇಂದ್ರ
೪೧, ೪ನೆಯ ಅಡ್ಡ ರಸ್ತೆ,
ನ್ಯೂ ಬ್ಯಾಂಕ್ ಕಾಲೋನಿ, ಕೋಣನಕುಂಟೆ,
ಬೆಂಗಳೂರು–೫೬೦ ೦೬೨.

೧೭೪. **ಶ್ರೀ ಎಸ್. ಸೀತಾರಾಮು**
ಅಸಿಸ್ಟೆಂಟ್ ಜನರಲ್ ಮ್ಯಾನೇಜರ್,
ಸಿಂಡಿಕೇಟ್ ಬ್ಯಾಂಕ್, ಗಾಂಧಿನಗರ,
ಬೆಂಗಳೂರು–೫೬೦ ೦೦೯.

೧೭೫. **Sri C. Krishna Sastry**
Senior Manager,
John Deere Company,
726, Maucker Road, Cedar Falls,
Iowa–50613–6349. (US)

೧೭೬. **Dr. D. R. Govindaraju**
4, Marshall Road, Lexington,
Massachusetts–02420. (US)

೧೭೭. **Dr. H. Y. Rajagopal**
604, Autumn Lane,
Media,
Pennsylvania–19063. (US)

೧೭೮. **Dr. Chayapathi V. Mirle**
6132, Brittany Court,
Troy,
Michigan–48085 (US)

೧೭೯. **Smt. Sandhya Ravindranath**
874, Strickroth Drive, Milpitas,
California–95035. (US)

೧೮೦. **Smt. Alamelu Iyengar**
12781, Miller Avenue,
Saratoga,
California–95070. (US)

೧೮೧. **Dr. G. Harish**
5222, Kanawha Avenue, SE,
Charleston,
West Viriginia–25304.

೧೮೨. **Smt. Sharada Byanna**
1493, Sandburg Drive,
Schaumburg,
Illinois–60173. (US)

೧೮೩. **Smt. Lakshmi M. Krishna Murthy**
6865, Coventry Court,
Rancho Cucamonga,
California–91739. (US)

೧೮೪. **Dr. Suresh Ramachandra**
11201, Albermyrtle Road,
Potomac,
Maryland–20854. (US)

೧೮೫. **Dr. Chaya Gopalan**
12742, Corum Way Drive, St. Louis,
Missouri–63141. (US)

೧೮೬. **Sri V. Seetharamaiah**
4636–E, Carmen Street, Phoenix,
Arizona–85044. (US)

೧೮೭. **Sri Tejomurthy Kartal**
35268, Pennington Drive,
Farmington Hills,
Michigan–48335. (US)

೧೮೮. **Sri H. S. Jayaswamy**
Lake Forest,
Illinois. (US)

೧೮೯. **ಡಾ. ಚೆನ್ನವೀರ ಕಣವಿ**
'ಚೆಂಬೆಳಕು', ಕಲ್ಯಾಣನಗರ,
ಧಾರವಾಡ–೫೮೦ ೦೦೭.

೧೯೦. **ಪ್ರೊ. ಕ. ವೆಂ. ರಾಜಗೋಪಾಲ**
ಎಂ.ಐ.ಜಿ. ೪೧, ೮೦ ಅಡಿ ರಸ್ತೆ,
೨ನೆಯ ಹಂತ, ಕೆಂಗೇರಿ ಉಪನಗರ,
ಬೆಂಗಳೂರು–೫೬೦ ೦೬೦.

೧೯೧. **ಶ್ರೀಮತಿ ಸವಿತಾ ನಾಗಭೂಷಣ**
ಎಚ್.ಐ.ಜಿ.–೫, 'ನುಡಿ', ಕೆ.ಎಚ್.ಬಿ. ಕಾಲೋನಿ,
ಕಲ್ಲಹಳ್ಳಿ ಬಡಾವಣೆ, ವಿನೋಬನಗರ,
ಶಿವಮೊಗ್ಗ–೫೭೭ ೨೦೪.

೧೯೨. **ಶ್ರೀ ಜರಗನಹಳ್ಳಿ ಶಿವಶಂಕರ್**
ಶುಭದ ಪ್ರಕಾಶನ, ಜರಗನಹಳ್ಳಿ, ಜೆ.ಪಿ. ನಗರ,
ಬೆಂಗಳೂರು–೫೬೦ ೦೭೮.

೧೯೩. **Dr. Y. R. Mohan**
1826, 37th Street,
NE, Tuscaloosa,
Alabama–35406. (US)

೧೯೪. **ಶ್ರೀ ಬಸವರಾಜ ವಕ್ಕುಂದ**
೧೭/೫, ವಸ್ತ್ರದ ಬಿಲ್ಡಿಂಗ್, ಬಾಲ ಬಳಗ ಎದುರು
ಮಹಿಷಿ ರಸ್ತೆ, ಮಾಳಮಡ್ಡಿ,
ಧಾರವಾಡ–೫೮೦ ೦೦೭.

೧೯೫. **ಡಾ. ಲತಾ ರಾಜಶೇಖರ್**
C/o ರಾಜಶೇಖರ್ ಮೆಡಿಕಲ್ ಫೌಂಡೇಶನ್ ಮತ್ತು ಆಸ್ಪತ್ರೆ,
ಟಿ. ನರಸೀಪುರ ರಸ್ತೆ,
ಲಲಿತ ಮಹಲ್ ಹತ್ತಿರ,
ಮೈಸೂರು–೫೭೦ ೦೧೦.

೧೯೬. **Dr. Srinivasa Kulkarni,**
5, Vaibhav Laxmi Apts.,
Survey No. 16/2, Anandnagar,
Simhgad Road,
Pune–411 051.

೧೯೭. **ಶ್ರೀ ಎಸ್. ಸೋಮನಾಥ್**
ಹಿರಿಯ ಜಂಟಿ ನಿರ್ದೇಶಕರು (ನಿ.),
ಒರಿಸ್ಸಾ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆ,
೩೫೯, 'ವಿಜಯ',
೭ನೆಯ ಅಡ್ಡ ರಸ್ತೆ, ಪದ್ಮನಾಭನಗರ,
ಬೆಂಗಳೂರು–೫೬೦ ೦೭೦.

ನಾಡೋಜ ಪ್ರೊ. ಕೆ. ಎಸ್. ನಿಸಾರ್ ಅಹಮದ್ ತಮ್ಮ ಬದುಕಿನ ೭೦ ಸಂವತ್ಸರಗಳನ್ನು ಪೂರೈಸಿ, ೭೧ರಲ್ಲಿ (೨೦೦೬) ಮುನ್ನಡೆದಿರುವ ಈ ಶುಭ ಸಂದರ್ಭದಲ್ಲಿ ಅವರ ಸ್ನೇಹಿತರು, ಹಿತೈಷಿಗಳು ಪ್ರೀತ್ಯರ್ಥವಾಗಿ ಅಭಿನಂದನ ಗ್ರಂಥವೊಂದನ್ನು ಅರ್ಪಿಸುವ ಸದುದ್ದೇಶದಿಂದ ಹೊರತಂದಿರುವ ಬೃಹತ್ಸಂಪುಟ 'ನಿಸಾರ್ ನಿಮಗಿದೋ ನಮನ'.

ನಮ್ಮೆಲ್ಲರ ಗೌರವಾದರದ ಉತ್ಕೃಷ್ಟ ಕವಿ-ವಿಮರ್ಶಕ, ವೈಚಾರಿಕ ಲೇಖಕ, ಸಮರ್ಥ ಅನುವಾದಕ ಮತ್ತು ಸುಸಂಸ್ಕೃತ ವ್ಯಕ್ತಿ ನಿಸಾರ್ ಅಹಮದ್‌ರಷ್ಟು ಕನ್ನಡದ ಜನ ಮನವನ್ನು ಗೆದ್ದಿರುವ ಬರಹಗಾರ ಪ್ರಸಕ್ತ ಕಾಲದಲ್ಲಿ ಮತ್ತೊಬ್ಬರು ದುರ್ಲಭವೆಂದರೆ ಅತ್ಯುಕ್ತಿಯಾಗದು.

ಈ ಹೆಬ್ಬೊತ್ತಿಗೆಯಲ್ಲಿ ನಮ್ಮ ಭಾಷೆಯ ಅನೇಕ ಶ್ರೇಷ್ಠ ಬರಹಗಾರರು, ಕವಿ-ವಿಮರ್ಶಕ-ಚಿಂತಕರು, ವಿವಿಧ ಸಾಮಾಜಿಕ ಕ್ಷೇತ್ರಗಳ ಗಣ್ಯ ಮಹನೀಯರು ನಿಸಾರರ ಗದ್ಯ-ಪದ್ಯ ಪ್ರಕಾರಗಳ ಮೌಲಿಕವಾದ ಬೌದ್ಧಿಕ ವಿವೇಚನೆಯನ್ನು, ಅವರ ವೈವಿಧ್ಯಮಯ ಜೀವನದ ಕೆಲವೊಂದು ಅಪರೂಪದ ಇಣುಕು ನೋಟಗಳನ್ನು ಪ್ರಸ್ತಾಪಿಸಿದ್ದಾರೆ. ಅವುಗಳ ಪ್ರಸ್ತುತತೆ ಮತ್ತು ಸಾಮಾಜಿಕ ಬದ್ಧತೆಗಳನ್ನು ಮನಗಾಣಿಸಿದ್ದಾರೆ.

ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಹು ಕಾಲದ ಒಂದು ಕೊರತೆ ಎನ್ನಿಸಿದ್ದ ನಿಸಾರರ ಬದುಕು-ಬರಹಗಳ ಬಗೆಗಿನ ಮೌಲ್ಯಯುತ ಸಮಾಲೋಚನೆ, 'ನಿಸಾರ್ ನಿಮಗಿದೋ ನಮನ' ಗೌರವ ಗ್ರಂಥದ ಮೂಲಕ ನೀಗಿದಂತಾಗಿರುವುದು ಅವರ ಅಪಾರ ಸಂಖ್ಯೆಯ ತುಂಬು ಅಭಿಮಾನದ ಮೆಚ್ಚುಗೆಗಾರರಿಗೆ ಹರ್ಷದಾಯಕ ವಿಚಾರವಾಗಿದೆ.

ನಿಸಾರರ ಸಾಹಿತ್ಯ ಸಾಧನೆಯ ಹೆಚ್ಚುಗಾರಿಕೆಯನ್ನು ಕುರಿತು, ಅದಕ್ಕೆ ಪೂರಕವಾದ ಬದುಕಿನ ಕೆಲವು ಅಪೂರ್ವ ಘಟನೆಗಳನ್ನು ಕುರಿತು ಅಧ್ಯಯನ ಮಾಡಬಯಸುವವರಿಗೆ, ಬರೆಯಲು ಇಚ್ಛಿಸುವವರಿಗೆ, ಉಪನ್ಯಸಿಸಲು ಅಪೇಕ್ಷಿಸುವವರಿಗೆ ಅತ್ಯುಪಯುಕ್ತವಾದ ಆಕರಪ್ರಾಯವೂ ಸಮಗ್ರ ಪರಾಮರ್ಶನ ಸ್ವರೂಪದ್ದೂ ಆದ ಉತ್ಕೃತಿಯಾಗಿ ಇದು ನೆರವಾಗುವುದರಲ್ಲಿ ಸಂದೇಹವಿಲ್ಲ.

ಕನ್ನಡ ವಿಮರ್ಶನ ಕ್ಷೇತ್ರಕ್ಕೆ ಬೆಲೆಯುಳ್ಳ ಬಳುವಳಿ, 'ನಿಸಾರ್ ನಿಮಗಿದೋ ನಮನ'.

• ಸಂಪಾದಕರು

SINCE 1967 Sapna

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009

ದೂರವಾಣಿ : 40114455

ISBN : 81-280-0573-1

ಬೆಲೆ ರೂ.1200/-

9 798128 005731

Shop online :

www.sapnaonline.com